ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಹರಿವಂಶಪರ್ವ - ವಿಷ್ಣುಪರ್ವ - ಭವಿಷ್ಯಪರ್ವ

ಶ್ರೀಮದುತ್ತರಾದಿಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ 1008

ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ

ಪ್ರವಚನ ಸುರುಳಿಯ ಲಿಖಿತ ರೂಪ

ಸೇವಾವ್ರತಿ

ಡಾ. ರವೀಂದ್ರ ಅ ಕುಷ್ಟಗಿ

ತಿರುಮಲ ತಿರುಪತಿ ದೇವಸ್ಥಾನಗಳು

ತಿರುಪತಿ

HARIVAMSA

(SRIMAN MAHABHARATADA KHILABHAAGA)

Compiled by
Dr. Ravindra A Kushtagi

Editor
Dr. Akella Vibhishana Sarma
Special Officer
Publications Division

T.T.D. Religious Publications Series No. 1484

© All Rights Reserved

First Edition : 2024
Copies : 250

Published by
Sri J. Syamala Rao, I.A.S.,
Executive Officer
Tirumala Tirupati Devasthanams
Tirupati - 517 507.

DTP
Publications Division
T.T.D, Tirupati.

Printed at
Tirumala Tirupati Devasthanams Press
Tirupati - 517 507.





FOREWORD

The Mahabharatha and Ramayana are two of India's greatest epics that have influenced the hindu way of thinking and belief system. The two epics are believed to be partially based on historical events and are considered to be Ithihasa in Sanskrit which means historical texts.

Among them Sriman Mahabharatha is one of the best and dicisive in sakala shastras, in line with extended part is **Harivamsha Sriman Mahabharatada Khilabhaaga.** The Harivamsha Purana of Vedavyasa contains thousands of Sanskrit metrical verses (Shlokas) and consists of three sections Harivamsha Parva, Vishnu Parva and Bhavishya Parva.

Sriman Mahabharata is arguably the best of all scriptures. Harivamsa is a part of such Sriman Mahabharata. **Harivamsha** is a great grantha which narrates creator of this universe where Lord Sri Krishna paramatma avatara Yadu Vamshada Charitre (Itihasa) incarnated by the Supreme Lord Sri Krishna who bestows creation-stiti-laya-niyamana-knowledge-ignorance-bandha moksha to the entire world and and it describes many interesting divine stories (leelas)about the life and glories of Lord Sri Krishna (Hari) which are not available in other scriptures.

Harivamsha is also the source of inspiration for Bhakti scriptures such as Srimad Bhagavatam. The Harivamsha Parva of the Harivamsha Granth presents the anecdotes of Adya kings like Adisrishti, Srishtivistara, Manu etc. The rite of patriarchy also presents stories about greatness. It also narrates the ancient story of Lord Krishna's lineage. The second one, Vishnu Parva, is especially devoted to the biographies of Lord Krishna. The third Bhavishyaparva narrates the northern part of Lord Krishna's life and presents Yuga Dharma and the stories of Lord's various incarnations. Vratakathas are found in all Parvas. Despite all this we note that it is mainly Krishnakathamruta.

If one listens or reads to the Harivamsha with devotion and declares that whether one writes that book one becomes blessed, one gets merit.


Tirumala Tirupati Devasthanam, as part of its campaign to propagate Sanatana Dharma, is publishing spiritual texts in various languages. For this, it has set up a **Publications Division** to bring out new publications in different languages for all age group of readers.

This book with the title **Harivamsha Sriman Mahabharatada Khilabhaaga** has been written in simple Kannada by **Dr. Ravindra A Kushtagi.** I hope that this book, which in itself is a form of Vishnu, will be appreciated by the devotees and make them ecstatic.

Let the Lord's favour and protection be on the readers! Wishing and praying that **Dr. Ravindra A Kushtagi** would be blessed with the divine grace of Lord Venkateshwara all the time.


I appreciate **Dr. Akella Vibhishana Sarma,** Special Officer, Publications Division for selecting this book as TTD Publication.

In the Service of Lord Venkateshwara



Executive Officer

Tirumala Tirupati Devasthanams, Tirupati.



।। श्रीदिग्विजयरामो विजयते ।।

श्रीमत्परमहंसपारिव्राजकाचार्यत्वाद्यनेकगुणगणालङ्कृत श्रीमन्मूलसीतासमेतश्रीमन्मूलरामदिग्विजयरामवेदव्यासादिपादपद्माराधक

श्रीमद्वैष्णवसिद्धान्तप्रतिष्ठापनाचार्यजगद्गुरुश्रीमन्मध्वाचार्यमूलमहासंस्थान

श्रीमदुत्तरादिमठाधीश

श्री श्री १००८ श्रीसत्याभिज्ञतीर्थकरकमलसञ्जात श्री श्री १००८ श्रीसत्यप्रमोदतीर्थवरकुमार

श्री श्री १००८ श्रीसत्यात्मतीर्थश्रीपादानां

No. :
Camp : ಹೊಳೆಹೊನ್ನೂರು

अनुग्रहसन्देशः

शुभदिनम् : ಶೋಭನ-ಭಾದ್ರಪದ-ಶುಕ್ಲ-ಚತುರ್ಥಿ
Date : 19/09/2023

ಶ್ರೀಮನ್ಮಹಾಭಾರತವು ನಿರ್ಣೇಯವಾದ ಸಕಲ ಶಾಸ್ತ್ರಗಳಲ್ಲಿ ಅತ್ಯಂತ ಉತ್ತಮವಾದದ್ದು. ಅಂತಹ ಶ್ರೀಮನ್ಮಹಾಭಾರತದ ಖಿಲಭಾಗವೇ ಹರಿವಂಶ. ಸಮಸ್ತ ಜಗತ್ತಿಗೆ ಸೃಷ್ಟಿ-ಸ್ಥಿತಿ-ಲಯ-ನಿಯಮನ-ಜ್ಞಾನ-ಅಜ್ಞಾನ-ಬಂಧ ಮೋಕ್ಷಗಳನ್ನು ನೀಡುವ ಸರ್ವೋತ್ತಮನಾದ ಶ್ರೀಕೃಷ್ಣ ಪರಮಾತ್ಮನು ಅವತಾರ ಮಾಡಿದ ಯದು ವಂಶದ ಚರಿತ್ರೆಯನ್ನು ತಿಳಿಸುವ ಮತ್ತು ಶ್ರೀಕೃಷ್ಣ ಪರಮಾತ್ಮನ ದಿವ್ಯವಾದ ಲೀಲೆಗಳನ್ನು ವರ್ಣನೆ ಮಾಡುವ ಶ್ರೇಷ್ಠವಾದ ಗ್ರಂಥ **ಹರಿವಂಶ. ಹರಿವಂಶ**ದ ಶ್ರವಣವನ್ನು ಭಕ್ತಿಯಿಂದ ಮಾಡಿದರೆ, ಉತ್ತಮವಾದ ಸಂತಾನದ ಪ್ರಾಪ್ತಿಯಾಗಿ ವಂಶಾಭಿವೃದ್ಧಿಯಾಗುವುದು ಎಂದು ಫಲಶೃತಿಯಲ್ಲಿ ತಿಳಿಸಿದ್ದಾರೆ. ಪ್ರಧಾನವಾಗಿ ಶ್ರೀಹರಿಯಲ್ಲಿ ಭಕ್ತಿ, ಉತ್ತಮವಾದ ಜ್ಞಾನ, ಜಗತ್ತಿನ ವಿಷಯದಲ್ಲಿ ವೈರಾಗ್ಯ, ಶತ್ರುಗಳ ಜಯ, ಉತ್ತಮ ಸಂತಾನ ಹಾಗೂ ಅನೇಕ ಇಷ್ಟಾರ್ಥಗಳ ಪ್ರಾಪ್ತಿ ಹರಿವಂಶದ ಶ್ರವಣ ಮತ್ತು ಪಠಣಗಳಿಂದ ಆಗುತ್ತದೆ. ಅಶ್ವಮೇಧ, ವಾಜಪೇಯ ಮೊದಲಾದ ಎಲ್ಲ ಯಜ್ಞ ಯಾಗಾದಿಗಳನ್ನು ಮಾಡಿದ ಫಲ ಹರಿವಂಶದ ಶ್ರವಣದಿಂದ ಬರುತ್ತದೆ. ಅಂತಹ ಶ್ರೇಷ್ಠವಾದ **ಹರಿವಂಶ**ದ ಪ್ರವಚನವನ್ನು ನಾವು ಸುವರ್ಣಪುರಿ(ಸೋನ್) ಕ್ಷೇತ್ರದಲ್ಲಿ ಇರುವಾಗ ಮಾಡಿ, ಗುರುಗಳ ದ್ವಾರಾ ವಾಯು ದೇವರ ದ್ವಾರಾ ಭಗವಂತನಿಗೆ ಅರ್ಪಣೆಯನ್ನು ಮಾಡಿದ್ದೆವು. ಆ ಪ್ರವಚನದ ವಿಷಯಗಳನ್ನು ನಮ್ಮ ಪ್ರಿಯ ಶಿಷ್ಯರಾದ ಶ್ರೀಯುತರಾದ **ರವೀಂದ್ರ ಕುಷ್ಟಗಿ** ಇವರು ಬಹಳ ಚೆನ್ನಾಗಿ ಲೇಖನ ರೂಪದಲ್ಲಿ ವಿಶೇಷವಾಗಿ ಓದುಗರಿಗೆ ಅನುಕೂಲವಾಗುವಂತೆ ಸಂಗ್ರಹಿಸಿ ಉತ್ತಮವಾದ ಸೇವೆಯನ್ನು ಮಾಡಿದ್ದಾರೆ. ಈಗಾಗಲೇ **ಕೃಷ್ಣಕಥಾಮೃತ ಶ್ರೀಮದ್ಭಾಗವತ ದಶಮಸ್ಕಂಧ**ದ ಪ್ರವಚನವನ್ನು ಇದೇ ರೀತಿಯಲ್ಲಿ ಸಂಗ್ರಹಿಸಿ ಪ್ರಕಾಶನ ಮಾಡಿ ವೇದವ್ಯಾಸ ದೇವರ ಸೇವೆಯನ್ನು ಮಾಡಿದ್ದಾರೆ. ಈಗ ಪುನಃ **ಹರಿವಂಶ ಶ್ರೀಮನ್ಮಹಾಭಾರತದ ಖಿಲಭಾಗ** ಪ್ರವಚನದ ಸಂಗ್ರಹವನ್ನೂ ಮಾಡಿ, ಪ್ರಕಾಶನ ಮಾಡುತ್ತಿರುವುದು ಬಹಳ ಸಂತೋಷದ ಸಂಗತಿ. ಇವರು ಲೌಕಿಕ ವೃತ್ತಿಯಲ್ಲಿ ಇದ್ದರೂ ಕೂಡ, ಆಧ್ಯಾತ್ಮಿಕ ವಿಷಯದಲ್ಲಿ ಅತ್ಯಂತ ಆಸಕ್ತಿಯನ್ನು ಶ್ರದ್ಧೆಯನ್ನೂ ಇಟ್ಟುಕೊಂಡು ಹಗಲಿರುಳು ಅನುವಾದದ ಸಂಗ್ರಹದ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು, ವೇದವ್ಯಾಸ ದೇವರ ಉತ್ತಮವಾದ ಸೇವೆಯನ್ನು ಮಾಡಿದ್ದಾರೆ. ಈ ಗ್ರಂಥದ ಸದುಪಯೋಗವನ್ನು ಎಲ್ಲ ಸಜ್ಜನರು ಪಡೆದುಕೊಳ್ಳಬೇಕು. ನಮ್ಮ ಗುರುಗಳಲ್ಲಿ ಅಂತರ್ಯಾಮಿಯಾದ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಮೂಲಸೀತಾಸಮೇತ - ಶ್ರೀಮನ್ಮೂಲರಾಮ - ಶ್ರೀದಿಗ್ವಿಜಯರಾಮ - ಶ್ರೀವೇದವ್ಯಾಸ - ಶ್ರೀವಂಶರಾಮ - ಪ್ರಸನ್ನವಿಠಲ ದೇವರು ಜ್ಞಾನ-ಭಕ್ತಿ-ವೈರಾಗ್ಯ-ಆಯುರಾರೋಗ್ಯಾದಿಗಳನ್ನು ಕರುಣಿಸಿ, ಇದೇ ತರಹದ ಆಧ್ಯಾತ್ಮಿಕವಾದ ಶಾಸ್ತ್ರದ ಸೇವೆಯನ್ನು ಮಾಡುವ ವಿಶೇಷವಾದ ಸೌಭಾಗ್ಯವನ್ನು ಇವರಿಗೆ ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ.

श्रीमत्सत्यात्मतीर्थ: उत्तरादिमठः

श्री सत्यात्मतीर्थश्रीपादंगळवरु
श्रीमदुत्तरादिमठ

ಪ್ರಾಸ್ತಾವಿಕ



ಪಂಚಮ ವೇದವೆಂದೇ ಪ್ರಖ್ಯಾತವಾದ ಶ್ರೀಮನ್ಮಹಾಭಾರತದ ಖಿಲಭಾಗವೆಂದೇ ಅಷ್ಟೇ ಮಹತ್ವದ ಗ್ರಂಥವಾಗಿ ಭಾರತೀಯ ವ್ಯಾಸರಚಿತ ಗ್ರಂಥ ಪರಂಪರೆಯಲ್ಲಿ ಬಂದಿರುವ **ಹರಿವಂಶ** ಸಹಸ್ರಾರು ವರ್ಷಗಳಿಂದ ಕೋಟ್ಯಂತರ ಜನರನ್ನು ಉದ್ದರಿಸಿರುವ ಶ್ರೇಷ್ಠ ಗ್ರಂಥವೆಂದೇ ಪರಿಗಣಿತವಾಗಿದೆ. **ಹರಿವಂಶ** ಶ್ರವಣ ಮಾಡುವವರ ಕಾಮಧೇನು, ಮನನ ಮಾಡುವವರ ಕಲ್ಪವೃಕ್ಷ, ಇದು ಒಂದು ಪುಸ್ತಕವಲ್ಲ ಸಾಕ್ಷಾತ್ ಪರಮಾತ್ಮನ ಶಬ್ದ ರೂಪ ಪ್ರತಿಮೆ. ಹರಿವಂಶವನ್ನು ಶ್ರದ್ದೆ ಭಕ್ತಿಯಿಂದ ಶ್ರವಣ ಮಾಡಿದಾಗ ಶಬ್ದ ರೂಪದಲ್ಲಿ ಭಗವತ್ ಸಾನ್ನಿಧ್ಯ ಕವಿಯೊಳಗಿನಿಂದ ನಮ್ಮ ದೇಹದೊಳಗೆ ಹರಿದು ಬರುವ ಅನುಭಾವವಾಗುತ್ತದೆ.

ಸಜ್ಜನರಿಗೆ, ಸಾತ್ವಿಕರಿಗೆ, ಸಾಮಾನ್ಯರಿಗೂ ಮಹಾಭಾರತ ಹಾಗೂ ಹರಿವಂಶ ಭಕ್ತಿಗೆ, ಮುಕ್ತಿಗೆ ಪ್ರವೇಶ ದ್ವಾರವಿದ್ದಂತೆ. **ಹರಿವಂಶ ಶ್ರೀಮನ್ಮಹಾಭಾರತದ ಖಿಲಭಾಗ** ಓದಿದ ಮೇಲೆ ಭಗವಂತನ ವಂಶಾವಳಿಯ ವಿರಾಟ್ ದರ್ಶನದ ಭಾವ, ಅನುಭವ, ಅನುಭಾವವಾಗುತ್ತದೆ. **ಹರಿವಂಶ** ಬರೆದವರ, ಹೇಳುವವರ, ಶ್ರವಣ ಮಾಡುವವರ ಮನೆಯಲ್ಲಿ ಭಾಗ್ಯ ದೇವತೆ ಬಂದು ಶಾಶ್ವತವಾಗಿ ನೆಲೆಸುತ್ತಾಳೆ. ನಮ್ಮ ಬದುಕಿನಲ್ಲಿ ಗೊತ್ತಿದ್ದೋ ಗೊತ್ತಿಲ್ಲದೆಯೋ ಜನ್ಮ ಜನ್ಮಾಂತರದಿಂದ ಮಾಡಿದ ಪಾಪಗಳು **ಹರಿವಂಶ** ಶ್ರವಣ ಮಾತ್ರದಿಂದ ಸುಟ್ಟು ಭಸ್ಮವಾಗುತ್ತದೆ, ಅಧೈರ್ಯ ಹೋಗುತ್ತದೆ, ಮನಸ್ಸು ನಿರ್ಮಲವಾಗುತ್ತದೆ. ಹಾಗಾಗಿ ನಮ್ಮ ಎಲ್ಲ ಪಾಪ ಪರಿಹಾರವಾಗಿ ನಾವು ಚಿಂತಾಸಂತಾಪಗಳಿಂದ ಮುಕ್ತರಾಗಬೇಕೆಂದರೆ **ಹರಿವಂಶ** ಶ್ರವಣ ಮಾಡಬೇಕು. **ಹರಿವಂಶ** ಪವಿತ್ರ ಹಾಗೂ ದಿವ್ಯ ಅಧಿಷ್ಠಾನದಿಂದ ಬಂದಾಗ ಅದರ ಮೌಲ್ಯ ಮಹತಿ ಮತ್ತಷ್ಟು ಹೆಚ್ಚುತ್ತದೆ. 2021ರಲ್ಲಿ ಸುವರ್ಣಪುರಿ (ಸೋನ್) ಕ್ಷೇತ್ರದಲ್ಲಿ ಚಾತುರ್ಮಾಸ್ಯದಲ್ಲಿ ಪರಮಪೂಜ್ಯ ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರು ವಿಶೇಷ ಪ್ರವಚನ ನಡೆಸಿಕೊಟ್ಟಿದ್ದರು. ಆ ಪ್ರವಚನದ ಧ್ವನಿ ಸುರುಳಿಯನ್ನು ಏಕಾಗ್ರಚಿತ್ತರಾಗಿ ಆಲಿಸಿ ತಕ್ಷಣವೇ ಕಾರ್ಯ ಪ್ರವೃತ್ತರಾಗಿ ಇಂತಹ ಅದ್ಭುತ ಶ್ರೇಷ್ಠ ಗ್ರಂಥವನ್ನು ರಚಿಸಿ ಪ್ರಕಟಿಸುತ್ತಿರುವ **ಶ್ರೀ ರವೀಂದ್ರ ಕುಷ್ಟಗಿ** ಅವರು ಧನ್ಯರು, ಮಾನ್ಯರು ಹಾಗೂ ಮಹಾಸಾಧಕರು.

ಶ್ರೀಯುತ **ರವೀಂದ್ರ ಕುಷ್ಟಗಿ** ಅವರು ಈಗಾಗಲೇ ಪೂಜ್ಯ ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರ **ಶ್ರೀಕೃಷ್ಣಕಥಾಮೃತ ಶ್ರೀಮದ್ಭಾಗವತ ದಶಮಸ್ಕಂಧ** ಹಾಗೂ ಪೂಜ್ಯ ಶ್ರೀ ಸುವಿದ್ವೇಂದ್ರತೀರ್ಥ ಶ್ರೀಪಾದಂಗಳವರ **ಶ್ರೀಮದ್ಭಾಗವತ ಸಪ್ತಾಹ ಕ್ರಮದಲ್ಲಿ** ದ್ವನಿಸುರುಳಿ ಕೇಳಿ ಅವನ್ನೂ ಅದ್ಭುತವಾಗಿ ಗ್ರಂಥ ರೂಪಕ್ಕೆ ತಂದಿದ್ದಾರೆ. ಆ ಎರಡೂ ಗ್ರಂಥಗಳು ಧಾರ್ಮಿಕ ಆಧ್ಯಾತ್ಮಿಕ ವಲಯಗಳಲ್ಲಿ ಈಗಾಗಲೇ ಅತ್ಯಂತ ಜನಪ್ರಿಯವಾಗಿದ್ದು, ಅವುಗಳ ಪ್ರಥಮ ಮುದ್ರಣಗಳು ಮುಗಿದಿವೆ.

ವೇದವ್ಯಾಸರ ಭಾವಗರ್ಭವನ್ನು, ಶ್ರೀಸತ್ಯಾತ್ಮತೀರ್ಥರ ಹಾರ್ದವನ್ನು, ಅತ್ಯಂತ ಸಮರ್ಥವಾಗಿ ಅಕ್ಷರಗಳಲ್ಲಿ ತುಂಬಿಕೊಟ್ಟು ಈ ಕೃತಿಯನ್ನು ಮೌಲಿಕ ಮಾಡುವಲ್ಲಿ **ರವೀಂದ್ರ ಕುಷ್ಟಗಿ** ಅವರು ಯಶಸ್ವಿಯಾಗಿದ್ದಾರೆ. **ಹರಿವಂಶ**ದಂತಹ ವಿಶಿಷ್ಟ ವ್ಯಾಸ ಗ್ರಂಥವನ್ನು ಜನಸಾಮಾನ್ಯ ಭಕ್ತರು ಓದಿ ಅರ್ಥೈಸಿಕೊಳ್ಳಬಹುದಾದ ಇಲ್ಲಿಯ ಶೈಲಿ ಮನನೀಯವಾಗಿದೆ. ಹಾಗೆಯೇ ಮೂಲ ಶ್ಲೋಕಗಳನ್ನು ಸಂದರ್ಭೋಚಿತವಾಗಿ ಆಕರವಾಗಿ ಅಧಿಕೃತತೆಯನ್ನೊದಗಿಸಿದ್ದಾರೆ. ಅಷ್ಟೇ ಅಲ್ಲ ಪಂಡಿತ ಮಂಡಳಿಗೂ ಕೃತಿಗೆ ಲೇಖಕನ ಅತ್ಯುಪಯುಕ್ತವಾಗುವಂತೆ ಭಾಷಾಪ್ರೌಢಿಮೆ, ವಿಚಾರ ಪುಷ್ಟಿ ಅಭಿವ್ಯಕ್ತವಾಗಿದೆ. ಓದುಗರಿಗೆ ಸುಲಭವಾಗಿ ಅರ್ಥವಾಗುವಂತೆ, ಸಹಜ ಲಲಿತ ಭಾಷೆಯಲ್ಲಿ, ಲವಲವಿಕೆ ಉತ್ಸಾಹ ಪುಟಿಯುವಂತೆ ಸ್ಪುಟವಾಗಿ ಮೂಲದ


ಅರ್ಥರಸ ಹಾಗೂ ಭಾವಪುಷ್ಟಿಯನ್ನು ಉಳಿಸಿಕೊಂಡು, ಶ್ರೀಸತ್ಯಾತ್ಮತೀರ್ಥರು ಸ್ಪುರಿಸಿರುವ ಪ್ರಮೇಯ ತತ್ವಗಳನ್ನು ಅರಗಿಸಿಕೊಂಡು, ಗ್ರಂಥದಲ್ಲಿ ಅಡಗಿಸಿಕೊಂಡು **ರವೀಂದ್ರ ಕುಷ್ಟಗಿ** ಅವರು ವಿಷಯಗಳನ್ನು ಸ್ವಾರಸ್ಯವಾಗಿ ನಿರೂಪಿಸಿರುವ ಪರಿ ಅನನ್ಯವಾಗಿದೆ. ಪರಮಾತ್ಮನ ಸರ್ವೋತ್ತಮತ್ವವನ್ನು, ಜಗತ್ಕಾರಣತ್ವಾದಿ ಕಲ್ಯಾಣ ಗುಣಗಳನ್ನು ಶ್ಲೋಕಗಳಲ್ಲಿ ವಾಚ್ಯವಾಗಿಯೂ, ಸಂದರ್ಭಗಳಲ್ಲಿ ಸುಚ್ಯವಾಗಿಯೂ ಹರಿವಂಶ ನಿರೂಪಿಸುತ್ತದೆ. ಅದರ ಗರ್ಭದಲ್ಲಿ ಅನೇಕ ಪ್ರಮೇಯ ಭರಿತ ಅರ್ಥ ರತ್ನಗಳು ಅಡಗಿವೆ. ಕಥಾ ನಿರೂಪಣೆಯ ಜೊತೆಯಲ್ಲೇ ಈ ಪ್ರಮೇಯ ತತ್ವಗಳನ್ನು ಪ್ರತಿಪಾದಿಸುತ್ತಾ, ಇಡೀ ಗ್ರಂಥಕ್ಕೆ ಸಾಂದ್ರತೆಯನ್ನು **ರವೀಂದ್ರ ಕುಷ್ಟಗಿ** ಒದಗಿಸಿ ಕೊಟ್ಟಿದ್ದಾರೆ.

ವ್ಯಾಸ ವಾಙ್ಮಯದ ವಿಶಿಷ್ಟ ಗ್ರಂಥವೊಂದನ್ನು, ಜನಸಾಮಾನ್ಯರಿಗೂ ಸ್ಪಂದಿಸುವಂತೆ ಈ ಕೃತಿಯನ್ನು ಸುಂದರವಾಗಿ ಒಡಮೂಡಿಸಿರುವ **ಶ್ರೀ ರವೀಂದ್ರ ಕುಷ್ಟಗಿ** ಅವರ ಶ್ರಮ ಸಫಲವಾಗಿದೆ. ಹಾಗಾಗಿಯೇ ಅವರು ವಿಶೇಷವಾಗಿ ಅಭಿನಂದನಾರ್ಹರು. ಮಹಾಭಾರತವನ್ನು ಜನಮೇಜಯ ರಾಜನಿಗೆ ಹೇಳುವ ವೈಶಂಪಾಯನರೇ ಹರಿವಂಶವನ್ನೂ ಹೇಳುತ್ತಾ ಕಡೆಯಲ್ಲಿ ಫಲಶ್ರುತಿಯನ್ನು ಸ್ಪಷ್ಟ ಮಾಡುತ್ತಾರೆ. ಹದಿನೆಂಟು ಪುರಾಣಗಳನ್ನು ಶ್ರವಣ ಮಾಡಿದರೆ ಬರುವ ಫಲ ಹರಿವಂಶ ಶ್ರವಣದಿಂದ ಒದಗುತ್ತದೆ. ಪುತ್ರಾಪೇಕ್ಷೆ ಇರ ಸ್ತ್ರೀಯರು ಶ್ರವಣ ಮಾಡಿದರೆ ಸುಪುತ್ರರನ್ನು ಪಡೆಯುವಲ್ಲಿ ಸಂದೇಹವಿಲ್ಲ. ಯಾರು **ಹರಿವಂಶ** ಶ್ರವಣ ಮಾಡುತ್ತಾರೋ ಅವರು ತಾವು ಉದ್ಧಾರವಾಗುವುದಷ್ಟೇ ಅಲ್ಲದೆ ತಮ್ಮ ಪಿತೃಗಳ, ಮಕ್ಕಳ ಇಡೀ ಪರಂಪರೆಯ ಉದ್ಧಾರ ಮಾಡುತ್ತಾರೆ. ಹರಿವಂಶ ಶ್ರವಣದಿಂದ ಬಹ್ಮಹತ್ಯಾದಿ ದೋಷಗಳು ಸಕಲ ಪಾಪಗಳು ಪರಿಹಾರವಾಗಿ ಧನಕನಕ ಭೋಗ ಭಾಗ್ಯಗಳು ಪ್ರಾಪ್ತಿಯಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಅತಿ ಶ್ರೇಷ್ಠ ಹಾಗೂ ಪವಿತ್ರವಾದ ಜ್ಞಾನಪ್ರಾಪ್ತಿಯಾಗಿ ಆ ಜ್ಞಾನದ್ವಾರಾ ಭಗವಂತನ ಪದದ ಪ್ರಾಪ್ತಿಯಾಗುತ್ತದೆ.

ವಿಷ್ಣುವಿನ ಮಹಿಮಾತಿಶಯಗಳನ್ನು ವಿಶೇಷವಾಗಿ ಪ್ರಕಟಿಸುವ **ಹರಿವಂಶ ಶ್ರೀಮನ್ಮಹಾಭಾರತದ ಖಿಲಭಾಗ**ವನ್ನು ಉತ್ತಮ ಶಾಸ್ತ್ರೀಯ ಹಾಗೂ ಮನನೀಯ ಗ್ರಂಥವಾಗಿ ನೀಡಿರುವ ಭಕ್ತಶ್ರೇಷ್ಠ **ಶ್ರೀ ರವೀಂದ್ರ ಕುಷ್ಟಗಿ** ಈ ಕೃತಿ ರಚನೆಯ ಮೂಲಕ ಜನ್ಮ ಸಾರ್ಥಕ ಮಾಡಿಕೊಂಡಿದ್ದಾರೆ. ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರ ಪರಮಾನುಗ್ರಹಕ್ಕೆ ಪಾತ್ರರಾಗಿದ್ದಾರೆ. ಸಾಧನ ಮಾಡಿಸುವವರಿಗೆ ಗ್ರಂಥ ದೀವಟಿಗೆಯಾಗಿದ್ದಾರೆ.

ವಿದ್ಯಾವಾಚಸ್ಪತಿ ಡಾ. ಅರಳುಮಲ್ಲಿಗೆ ಪಾರ್ಥಸಾರಥಿ
ಸಂಸ್ಥಾಪಕರು: ಗ್ಲೋಬಲ್ ವಿಷ್ಣುಸಹಸ್ರನಾಮ ಸತ್ಸಂಗ ಫೆಡರೇಷನ್ (ರಿ.)
ಚೇರ್‌ಮನ್: ಹರಿದಾಸ ಅಕಾಡೆಮಿ, ಬೆಂಗಳೂರು.

ಸೇವಾವ್ರತಿ ಸಮರ್ಪಣೆ



ಶ್ರೀಮಜ್ಜಗದ್ಗುರುಮಧ್ವಾಚಾರ್ಯ ಮೂಲಮಹಾಸಂಸ್ಥಾನ ಶ್ರೀಮದುತ್ತರಾದಿ ಮಠಾಧೀಶರಾದ, ಶ್ರೀಜಯತೀರ್ಥ ವಿದ್ಯಾಪೀಠದ ಪೋಷಕರಾದ ಪರಮಪೂಜ್ಯ ಶ್ರೀ ಶ್ರೀ 1008 ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರು 26ನೆಯ ಚಾತುರ್ಮಾಸ್ಯದ ಈ ಪರಮ ಪವಿತ್ರವಾದಂತಹ ಪರ್ವಕಾಲದಲ್ಲಿ 2021 ಸುವರ್ಣಪುರಿ (ಸೋನ್) ಕ್ಷೇತ್ರದಲ್ಲಿ ಸರ್ವ ಶಾಸ್ತ್ರೋಕ್ತವಾದ ಮಾಡಿದ **ಹರಿವಂಶ ಶ್ರೀಮನ್ಮಹಾಭಾರತದ ಖಿಲಭಾಗ** ಮಹಾಭಾರತದ್ದೆ ಮುಂದುವರೆದಂತಹ ಭಾಗದ ಆಶೀರ್ವಚನವನ್ನು ಉಪನ್ಯಾಸವನ್ನು ನಾವುಗಳು ಶ್ರವಣ ಮನನ ಮಾಡುತ್ತ ಇರುವಾಗ ಲಿಖಿತರೂಪದಲ್ಲಿ ಹೊರತಂದು ಈ ರೀತಿ ಶ್ರೀಪಾದಂಗಳವರ ಚರಣಗಳಿಗೆ ಭಕ್ತಿಯಿಂದ ಶ್ರದ್ಧೆಯಿಂದ ಸಮರ್ಪಣೆ ಮಾಡೋಣ ಅಂತ ಪ್ರೇರಣೆ ಆಯಿತು.

ಹರಿವಂಶವನ್ನು ಬರೆದವರು ವೇದವ್ಯಾಸ ದೇವರು, ಅದನ್ನು ಉಪದೇಶ ಮಾಡಿದವರು ವೈಶಂಪಾಯನರು, ಅದನ್ನ ಪ್ರಶ್ನೆಯ ರೂಪದಲ್ಲಿ ಕೇಳಿ ಸಮಗ್ರ ಲೋಕಕ್ಕೆ ಉಪಕಾರವನ್ನ ಮಾಡಿದವನು ಜನಮೇಜಯ. ಇವರೆಲ್ಲರ ಉಪಕಾರವನ್ನ ನಾವು ಎಷ್ಟು ಸ್ಮರಣೆ ಮಾಡಿದರೂ ಕಡಿಮೆ ಅನಂತ ಆ ಭಗವಂತನ ಉಪಕಾರ ಇದೆ. ಆ ಉಪಕಾರಕ್ಕೆ ಪ್ರತಿಯಾಗಿ ವೇದವ್ಯಾಸ ದೇವರು ತಿಳಿಸಿಕೊಟ್ಟಂತಹ ಆ ತತ್ವಗಳನ್ನು, ದಿವ್ಯ ಮಂಗಲಮಯವಾದ ಆ ಚರಿತ್ರೆಗಳನ್ನು ಹಾಗೆ ನಮಗೆ ನೇರವಾಗಿ ಉಪದೇಶ ಮಾಡಿ ತಿಳಿಸಿಕೊಡುವವರು ನಮ್ಮ ಗುರುಗಳು. ಆ ಗುರುಗಳಲ್ಲಿ ಅಂತರ್ಯಾಮಿಯಾಗಿ ವೈಶಂಪಾಯನರು, ವೇದವ್ಯಾಸ ದೇವರೇ ನಮಗೆ ಉಪದೇಶ ಮಾಡಿದ್ದಾರೆ ಅಂತನ್ನುವ ಭಕ್ತಿ ಅನುಸಂಧಾನಗಳಿಂದ ಶ್ರೀಪಾದಂಗಳವರಿಗೆ ನಾವು ಅನಂತ ಸಾಷ್ಟಾಂಗ ಪ್ರಣಾಮಗಳನ್ನು ಸಲ್ಲಿಸಬೇಕು.

ಹರಿವಂಶದಲ್ಲಿ ಬರುವ ಸಣ್ಣ ಪುಟ್ಟ ಸಂವಾದಗಳು ಶ್ರೀಕೃಷ್ಣ ಪರಮಾತ್ಮ ಮಡಿಕೆ ಒಡೆದಿದೆಯಾ ಅಂತ ಕೇಳಿದ, ಹಗ್ಗ ಇದೆಯಾ ಅಂತ ಕೇಳಿದ ಅಷ್ಟು ಮಾತ್ರ ಅಲ್ಲ, ಅಲ್ಲಿ ಬರುವಂತಹ ಯುದ್ಧದ ಪ್ರಸಂಗಗಳು ಯಾರು ಯಾವ ಅಸ್ತ್ರವನ್ನು ಬಿಟ್ಟರು, ಎಷ್ಟು ಅಸ್ತ್ರವನ್ನು ಬಿಟ್ಟರು ಯಾವ ಸಣ್ಣ ಅಂಶವನ್ನೂ ಬಿಡದೇನೆ ಪೂರ್ಣವಾಗಿ ಆ ಹರಿವಂಶವನ್ನು ಉಪದೇಶ ಮಾಡಿದ್ದಾರೆ. ಇದು ಒಂದು ಅತಿ ದೊಡ್ಡದಾದಂತಹ ಸೌಭಾಗ್ಯ, ನಾವೆಲ್ಲಾ ಪರಮ ಧನ್ಯರು.

ಹರಿವಂಶದಲ್ಲಿ ಬರುವಂತಹ ಮಾತುಗಳು ಶ್ರೀಮದಾಚಾರ್ಯರ ಸಣ್ಣ ಶಬ್ದದಿಂದ ಹರಿವಂಶದಲ್ಲಿ ಹತ್ತಾರು ಶ್ಲೋಕಗಳಿಂದ ನಿರ್ಣೀತವಾದ ತತ್ವವನ್ನು ಶ್ರೀಮದಾಚಾರ್ಯರು ಹೇಗೆ ಸಂಗ್ರಹ ಮಾಡಿ ಒಂದೇ ಒಂದು ಸಣ್ಣ ಶಬ್ದದಿಂದ ಸೂಚನೆ ಮಾಡಿದ್ದಾರೆ ಅನ್ನುವುದನ್ನ ಪದೇ ಪದೇ ಅನೇಕ ಬಾರಿ ಹರಿವಂಶದಲ್ಲಿ ಬರುವ ಪ್ರತಿಯೊಂದು ಕಥೆಗಳಿಗೂ ಶ್ರೀಮದಾಚಾರ್ಯರು ಯಾವ ರೀತಿಯಾಗಿ ನಿರ್ಣಯ ಮಾಡಿದ್ದಾರೆ, ಶ್ರೀಮದಾಚಾರ್ಯರ ಶಬ್ದದಲ್ಲಿ ಆ ಹರಿವಂಶದ ಕಥೆಗಳು ಅಡಕವಾಗಿವೆ ಅನ್ನುವುದನ್ನ ಪರಮಪೂಜ್ಯ ಶ್ರೀಪಾದಂಗಳವರು ತಿಳಿಸಿಕೊಟ್ಟದ್ದು ನಿಜವಾಗಿಯೂ ನಮ್ಮೆಲ್ಲರ ಮೇಲೆ ಅವರು ಮಾಡಿದಂತಹ ದೊಡ್ಡ ಅನುಗ್ರಹ.

ಇತರ ಪುರಾಣಗಳು ಬ್ರಹ್ಮವೈವರ್ತ ಪುರಾಣ, ಸ್ಕಂದ ಪುರಾಣ, ಶ್ರೀಮದ್ಭಾಗವತ ಇತ್ಯಾದಿ ಬೇರೆ ಬೇರೆ ಪುರಾಣಗಳಲ್ಲಿ ಬರುವಂತಹ ಮಾತುಗಳು, ಶ್ರೀಮದ್ಭಗವದ್ಗೀತಾದಲ್ಲಿ ಬರುವಂತಹ ಮಾತುಗಳು ಹಾಗೂ ಹರಿವಂಶದಲ್ಲಿ ಇರುವ ಮಾತುಗಳು ಅವುಗಳಿಗೆ ಯಾವ ರೀತಿಯಾಗಿ ಯೋಚನೆಯನ್ನು ಮಾಡಬೇಕು ಅನ್ನುವುದನ್ನು ಶ್ರೀಪಾದಂಗಳವರು ನಮಗೆ ತಿಳಿಸಿಕೊಟ್ಟಿದ್ದಾರೆ. ಈ ಎಲ್ಲದಕ್ಕೂ ದೊಡ್ಡದಾದದ್ದು ಇದೆಲ್ಲ ಒಂದು ಕಡೆಗೆ ಇದೆಲ್ಲವೂ ಈ ಮಹತ್ವದ ವಿಷಯವೇ ಆದರೆ ಇದೆಲ್ಲದಕ್ಕೂ ಪ್ರಧಾನವಾದದ್ದು ಭಾಗವತ ಹೇಳಿದಂತೆ

ನೋತ್ಪಾದಯೇದ್ಯದಿ ರತಿಂ ಶ್ರಮ ಏವ ಹಿ ಕೇವಲಂ (01.2.8 ಭಾಗವತ)

ಅಂತ ಹೇಳಿದ ಹಾಗೆ ಶ್ರೀಪಾದಂಗಳವರು ಪ್ರತಿಯೊಂದು ಹೆಜ್ಜೆ ಹೆಜ್ಜೆಗೆ ಆ ಭಗವಂತನ ಸರ್ವೋತ್ತಮತ್ವ, ಭಗವಂತನ ಮಹಿಮೆ, ಅವನು ಮಾಡಿದ ಉಪಕಾರಗಳು ಇವುಗಳನ್ನ ಭಾವಪೂರ್ಣವಾಗಿ, ಭಕ್ತಿಪೂರ್ಣವಾಗಿ ಕೇಳುವವರ ಮನಸ್ಸಿನಲ್ಲಿ ಅಚ್ಚು ಮೂಡಬೇಕು ಆ ರೀತಿಯಾಗಿ ಶ್ರೀಪಾದಂಗಳವರು ತಿಳಿಸಿಕೊಟ್ಟಿದ್ದಾರೆ ಹಾಗೂ ಫಲಶ್ರುತಿಗಳನ್ನು ಸಹ ತಿಳಿಸಿದ್ದಾರೆ.

ಈಗಾಗಲೇ ಪ್ರಕಟಿಸಿ ಪ್ರಸ್ತುತ ಪಡಿಸಿದ ಶ್ರೀಮದುತ್ತರಾದಿ ಮಠಾಧೀಶರಾದ ಶ್ರೀ ಶ್ರೀ 1008 ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರು ಸತ್ತಿಯಲ್ಲಿ ಮಾಡಿದ ಪ್ರವಚನ **ಶ್ರೀಕೃಷ್ಣಕಥಾಮೃತ ಶ್ರೀಮದ್ಭಾಗವತ ದಶಮಸ್ಕಂಧ** ಹಾಗೂ ಶ್ರೀ ಶ್ರೀ ಸುವಿದ್ಯೇಂದ್ರತೀರ್ಥ ಶ್ರೀಪಾದಂಗಳವರು ಕೆಲವರ್ಷಗಳ ಹಿಂದೆ ಅವರ ಪೂರ್ವಾಶ್ರಮದಲ್ಲಿ ಮಾಡಿದ್ದ **ಶ್ರೀಮದ್ಭಾಗವತ ಸಪ್ತಾಹ ಕ್ರಮದಲ್ಲಿ** ಪ್ರವಚನಗಳ ಲಿಖಿತ ರೂಪಗಳನ್ನು ಮುಂದುವರೆಸುತ್ತಾ ಈಗ **ಹರಿವಂಶ ಶ್ರೀಮನ್ಮಹಾಭಾರತದ ಖಿಲಭಾಗ** ಗ್ರಂಥ ಸಜ್ಜನರಿಗೆ ಪ್ರಸ್ತುತಗೊಳಿಸುತ್ತಿದ್ದೇನೆ.

ಶ್ರೀ ಶ್ರೀ 1008 ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರ ಪ್ರೇರಣೆಯಂತೆ ಲಿಖಿತವನ್ನು ಪ್ರಾರಂಭಿಸುವುದಕ್ಕೂ ಮುಂಚೆ ತಿರುಕೊಯಿಲೂರಿನಲ್ಲಿ ಶ್ರೀ ಶ್ರೀ 1008 ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರ ಆಶೀರ್ವಾದವನ್ನು ಪಡೆದು, ಶ್ರೀಕೃಷ್ಣ ಪರಮಾತ್ಮನ ಅನುಗ್ರಹದಿಂದ ಮತ್ತು ಮತ್ತು ಶ್ರೀಪಾದಂಗಳವರ ಶ್ರೀರಕ್ಷೆಯಿಂದ ಈಗ **ಹರಿವಂಶ ಶ್ರೀಮನ್ಮಹಾಭಾರತದ ಖಿಲಭಾಗ** ಗ್ರಂಥ ಪೂರ್ಣಗೊಂಡಿದೆ. ಲಿಖಿತ ರೂಪಕ್ಕೆ ಅಳವಡಿಸಿ ಪ್ರಕಟಿಸಿದ ಈ ಸೇವಾವ್ರತಿಯನ್ನು ಶ್ರೀಪಾದಂಗಳವರ ಅಡಿದಾವರೆಗಳಲ್ಲಿ ಭಕ್ತಿಪೂರ್ವಕವಾಗಿ ಸಮರ್ಪಣೆ ಮಾಡುತ್ತಾ ಇದ್ದೇನೆ. ಇದರಿಂದ ಇನ್ನೂ ಎಷ್ಟೋ ಸಜ್ಜನರಿಗೆ ಶ್ರೀಗಳವರ **ಹರಿವಂಶ**ದ ಸಂದೇಶ ಮುಟ್ಟಬೇಕು, ತಲುಪಬೇಕು ಅವರೂ ಪುನೀತರಾಗಬೇಕು, ಅವರೂ ಧನ್ಯರಾಗಬೇಕು ಅಂತನ್ನುವ ಒಂದು ಕಳಕಳಿಯೇ ಇದರ ಉದ್ದೇಶ್ಯ.

ಈ ಸೇವಾವ್ರತಿ **ಹರಿವಂಶ ಶ್ರೀಮನ್ಮಹಾಭಾರತದ ಖಿಲಭಾಗ** ನಮ್ಮ ಕುಲದೇವರು ಶ್ರೀಲಕ್ಷ್ಮೀವೇಂಕಟೇಶ ದೇವರ ಪಾದಾರವಿಂದಗಳಲ್ಲಿ ಭಕ್ತಿಪರವಶನಾಗಿ ಸಮರ್ಪಿಸುತ್ತೇನೆ. ಈ ಸೇವಾವ್ರತಿ ಪ್ರಕಾಶನ ಹಾಗೂ ಮುದ್ರಣಗೊಳ್ಳುತ್ತಿರುವುದು ತಿರುಮಲ ತಿರುಪತಿ ದೇವಸ್ಥಾನಗಳು, ತಿರುಪತಿ ಇದು ವೇಂಕಟೇಶ ದೇವರ ಅನುಗ್ರಹದಿಂದಲೇ, ಇದು ನನ್ನ ಸೌಭಾಗ್ಯ. ಈ ಸೇವಾವ್ರತಿಯನ್ನು ಸ್ವತಃ ತಾವೇ ಪ್ರಕಟಿಸಲು ಸ್ವೀಕಾರ ಮಾಡಿದ, TTD Executive Officer ಅವರಿಗೆ ಧನ್ಯವಾದಗಳು. ಡಾ. ಶ್ರೀ ಎ.ವಿ.ಎಸ್.ಎಸ್. ವಿಭೀಷಣ ಶರ್ಮಾ, ವಿಶೇಷ ಅಧಿಕಾರಿಗಳು ಹಾಗೂ ಡಾ. ಶ್ರೀ ಎನ್. ನರಸಿಂಹ ಆಚಾರ್ಯ, ಉಪಸಂಪಾದಕರು, Publications Division TTD, ಅವರಿಗೆ ನನ್ನ ಕೃತಜ್ಞತಾಪೂರ್ವಕ ಧನ್ಯವಾದಗಳು.

ಇದು ಸಾಧ್ಯವಾದದ್ದು ನಮ್ಮ ತಂದೆ ತಾಯಿಗಳಾದ ದಿ. ಶ್ರೀ ಅನಂತಾಚಾರ್ಯ ಮತ್ತು ಶ್ರೀಮತಿ ಸೀತಾಬಾಯಿ ಕುಷ್ಟಗಿ ಹಾಗೂ ಎಲ್ಲಾ ಹಿರಿಯರ ಆಶೀರ್ವಾದದಿಂದಲೇ.

ಪ್ರಸ್ತುತ ಸೇವಾವ್ರತಕ್ಕೆ **ಅನುಗ್ರಹ ಸಂದೇಶ**ವನ್ನು ಕರುಣಿಸಿದ, ನನ್ನನ್ನು ಆಶೀರ್ವದಿಸಿದ ಶ್ರೀ ಶ್ರೀ 1008 ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರ ಚರಣಕಮಲಗಳಿಗೆ ನನ್ನ ಭಕ್ತಿ ಪೂರ್ವಕವಾದ ಅನಂತ ಶಿರಸಾಷ್ಟಾಂಗ ಪ್ರಣಾಮಗಳನ್ನು ಅರ್ಪಿಸುತ್ತೇನೆ.

ಈ ಸೇವಾವ್ರತಕ್ಕೆ ನನ್ನನ್ನು ಆಶೀರ್ವದಿಸಿದ ಶ್ರೀ ಶ್ರೀ 1008 ಶ್ರೀರಘುವಿಜಯತೀರ್ಥ ಶ್ರೀಪಾದಂಗಳವರು, ಶ್ರೀಕೂಡ್ಲಿ ಆರ್ಯ ಅಕ್ಷೋಭ್ಯತೀರ್ಥ ಮಠ, ಕೂಡ್ಲಿ, ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು, ಶ್ರೀಪಲಿಮಾರು ಮಠ, ಉಡುಪಿ, ಶ್ರೀ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು, ಶ್ರೀಪೇಜಾವರ ಅದೋಕ್ಷಜ ಮಠ, ಉಡುಪಿ ಮತ್ತು ಶ್ರೀ ಶ್ರೀ 1008 ಶ್ರೀ ಸುವಿದ್ಯೇಂದ್ರತೀರ್ಥ ಶ್ರೀಪಾದಂಗಳವರ ಚರಣಗಳಿಗೆ ನನ್ನ ಭಕ್ತಿ ಪೂರ್ವಕವಾದ ಅನಂತ ಶಿರಸಾಷ್ಟಾಂಗ ಪ್ರಣಾಮಗಳನ್ನು ಅರ್ಪಿಸುತ್ತೇನೆ.

ನನ್ನ ಎಲ್ಲ ಸತ್ಕಾರ್ಯಗಳಿಗೆ ಪ್ರೇರಕರಾದ, ಪ್ರೋತ್ಸಾಹಿಸಿದ ನನ್ನ ಆತ್ಮೀಯರಾದ ವಿದ್ಯಾವಾಚಸ್ಪತಿ ಶ್ರೀಯುತ ಡಾ. ಅರಳುಮಲ್ಲಿಗೆ ಪಾರ್ಥಸಾರಥಿ ಅವರು ಈ ಸೇವಾವ್ರತಿಗೆ ಪ್ರಾಸ್ತಾವಿಕ ಬರೆದುದಕ್ಕೆ ನನ್ನ ಹೃದಯಪೂರ್ವಕ ಧನ್ಯವಾದಗಳು. ಅವರು ಕೊಟ್ಟ ಪ್ರೋತ್ಸಾಹ ನಾನು ಎಂದಿಗೂ ಮರೆಯಲು ಸಾಧ್ಯವಿಲ್ಲ.

ನನ್ನ ಲಿಖಿತರೂಪದಲ್ಲಿ ಮಾರ್ಗದರ್ಶನ ಮಾಡಿದ ಮಹನೀಯರಾದ ವಿದ್ವಾನ್ ಶ್ರೀಯುತ ವಿದ್ಯಾಧೀಶಾಚಾರ್ಯ ಗುತ್ತಲ ಹಾಗೂ ವಿದ್ವಾನ್ ಶ್ರೀ ಸತ್ಯಧ್ಯಾನಾಚಾರ್ಯ ಕಟ್ಟಿ ಅವರುಗಳು ಹುರಿದುಂಬಿಸಿದ್ದಕ್ಕೆ ಈ ಸೇವಾವ್ರತಿ ಬರಲು ಕಾರಣವಾಗಿದೆ. ಅವರಿಗೆ ನನ್ನ ಕೃತಜ್ಞತಾ ಪೂರ್ವಕ ಪ್ರಣಾಮಗಳನ್ನು ಅರ್ಪಿಸುತ್ತೇನೆ.

ಈ ಸೇವಾವ್ರತಿಯ ಪರಿಶೋಧನೆಯ ಕಾರ್ಯದಲ್ಲಿ ಪಂಡಿತ ಶ್ರೀಯುತ ವಾದಿರಾಜಾಚಾರ್ಯ ಕರಣಮ್ ಹಾಗೂ ಪಂಡಿತ ಶ್ರೀಯುತ ಜಯತೀರ್ಥಾಚಾರ್ಯ ಬೊಜ್ಜಿ ಅವರುಗಳು ಇದು ಶ್ರೀವೇದವ್ಯಾಸರ ಹಾಗೂ ಯತಿಗಳ ಸೇವೆ ಎಂದು ವಿಶೇಷ ಮಾರ್ಗದರ್ಶನವನ್ನು ಮಾಡಿ, ಆಶೀರ್ವದಿಸಿದ ಅವರಿಗೆ ನನ್ನ ಕೃತಜ್ಞತಾ ಪೂರ್ವಕ ನಮಸ್ಕಾರಗಳು.

ಈ ಸೇವಾವ್ರತಿಯನ್ನು ಓದಿ ತಮ್ಮ **ಅನಿಸಿಕೆ**ಗಳನ್ನು ವ್ಯಕ್ತಪಡಿಸಿದ ನನ್ನ ಸಹೋದರಿ (ಅಕ್ಕ) ಶ್ರೀಮತಿ ಪರಿಮಳಾ ಸತ್ಯಬೋಧ ಬಾಡಗಿ ಹಾಗೂ **ಬೆನ್ನುಡಿ** ಬರೆದ ನನ್ನ ಚಿಕ್ಕಪ್ಪ ಶ್ರೀಯುತ ಡಾ. ಪ್ರಹ್ಲಾದ ಕುಷ್ಟಗಿ ಅವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು.

ಈ ಸೇವಾವ್ರತಿ ಹಾಗೂ ಪ್ರಕಟಣಾ ಕಾರ್ಯದಲ್ಲಿ ಅನೇಕ ಸಲಹೆ ಸೂಚನೆಗಳನ್ನು ಕೊಟ್ಟು ಉಪಕರಿಸಿದ ನನ್ನ ಪತ್ನಿ ಶ್ರೀಮತಿ ಲಕ್ಷ್ಮೀ ಕುಷ್ಟಗಿ, ಮಕ್ಕಳಾದ ರೋಹನ್, ಅಂಕಿತಾರಿಗೆ, ತಾಂತ್ರಿಕ ಸಲಹೆ ನೀಡಿದ ಅಳಿಯ ಸುಮಂತ ಮ ರಾವ್, ಸೊಸೆ ಸ್ನೇಹಾರಿಗೆ, ಮುದ್ದು ಮೊಮ್ಮಕ್ಕಳಾದ ಕುಮಾರಿ ಅನ್ವಿಕಾ ಹಾಗೂ ವಿಯೋನಾರಿಗೆ ಹರಿವಾಯು ಗುರುಗಳು ಅನುಗ್ರಹಿಸಲಿ ಎಂದು ಪರಮಾತ್ಮನಲ್ಲಿ ಪ್ರಾರ್ಥಿಸುವೆ.

ಈ ಸೇವಾವ್ರತಿ ಕಾರ್ಯದಲ್ಲಿ ಯಾವಾಗಲೂ ಪ್ರೋತ್ಸಾಹನೆಯನ್ನು ನೀಡಿದ ಹಿರಿಯರಾದ ನನ್ನ ಅತ್ತೆ ಶ್ರೀಮತಿ ಪ್ರಮೀಳಾ ಬಾಯಿ ಉರ್ಫ ಕಲಾವತಿ ಬಾಯಿ ಅವರಿಗೂ ಹಾಗೂ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿಯೂ ಸಹಕರಿಸಿದ ಎಲ್ಲ ಬಂಧು ಮಿತ್ರರಿಗೂ ನನ್ನ ತುಂಬು ಹೃದಯದ ಪ್ರಣಾಮಗಳು.

ಅರ್ಥೈಸುವುದರಲ್ಲಿ ತಪ್ಪುಗಳಿದ್ದರೆ ಕ್ಷಮೆ ಇರಲಿ.

ಪ್ರಕಟಿಸಿದ ಈ ಸೇವಾವ್ರತಿಯಿಂದ ಶ್ರೀಹರಿವಾಯುಗಳು ಸುಪ್ರೀತರಾಗಲಿ.

ಹರಯೇ ನಮಃ

ವೈಕುಂಠ ಏಕಾದಶೀ **ರವೀಂದ್ರ ಅ ಕುಷ್ಟಗಿ**

23.12.2023

ಬೆಂಗಳೂರು.

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಹರಿವಂಶಪರ್ವ - ವಿಷ್ಣುಪರ್ವ - ಭವಿಷ್ಯಪರ್ವ ಮತ್ತು ಇತರ

ಶ್ಲೋಕಗಳ ಅನುಕ್ರಮಣಿಕೆ

❁ ❁ ❁

ಭಾರತ ದರ್ಶನ ಪ್ರಕಾಶನದ **ಹರಿವಂಶ ಶ್ರೀಮನ್ಮಹಾಭಾರತದ ಖಿಲಭಾಗ** ಗ್ರಂಥದಿಂದ ಹರಿವಂಶದ ಶ್ಲೋಕಗಳನ್ನು ತೆಗೆದುಕೊಳ್ಳಲಾಗಿದೆ ಮತ್ತು ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತ ಸರ್ವಮೂಲಗ್ರಂಥಗಳು ಶ್ರೀಮದ್ಭಾಗವತ, ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯದಿಂದ ಸಾಧ್ಯವಾದಷ್ಟು ಅದರಂತೆ ಅಳವಡಿಲಾಗಿದೆ. ಸಂಖ್ಯೆ ನಮೂದಿಸಿಲ್ಲದ ಕಡೆ ಮಂತ್ರಸ್ತೋತ್ರಗಳು, ವೇದಮಂತ್ರಗಳು, ಶಾಸ್ತ್ರಗಳು, ಸುಭಾಷಿತಗಳನ್ನು ವಿದ್ವಾಂಸರ ಸಲಹೆ ಪಡೆದು ಅಥವಾ ಅಂತರ್ಜಾಲದಿಂದ ಪಡೆದು ಲಿಖಿತಿಸಲಾಗಿದೆ.

ಪ್ರವಚನಗಳಲ್ಲಿ ಶ್ಲೋಕಗಳ ಪಕ್ಕದಲ್ಲಿ ಕೆಳಗಿನಂತೆ ನಮೂದಿಸಲಾಗಿದೆ ಅದನ್ನು ಈ ರೀತಿ ಅರ್ಥೈಸಿಕೊಳ್ಳಬೇಕು

ಹರಿವಂಶಮಹಾತ್ಮ್ಯಮ್ : ಹರಿವಂಶಮಹಾತ್ಮ್ಯಮ್	ಹರಿವಂಶಪರ್ವ : ಹರಿವಂಶಪರ್ವ
ವಿಷ್ಣುಪರ್ವ : ವಿಷ್ಣುಪರ್ವ	ಭವಿಷ್ಯಪರ್ವ : ಭವಿಷ್ಯಪರ್ವ
ಭಾಗವತ : ಶ್ರೀಮದ್ಭಾಗವತ	ಭ ಗೀತಾ: ಶ್ರೀಮದ್ಭಗವದ್ಗೀತಾ

ಭಾಗವತ SD : ಶ್ರೀಮದ್ಭಾಗವತ Sanskrit Documents Website ಇಂದ ಶ್ಲೋಕದ ಸಂಖ್ಯೆ.

ಮಭಾತಾನಿರ್ಣಯ : ಮಹಾಭಾರತ ತಾತ್ಪರ್ಯ ನಿರ್ಣಯ

ಶ್ಲೋಕ ಸಂಖ್ಯೆ	ಅಂತ ತಿಳಿಯಬೇಕು
(1.1 ಹರಿವಂಶಮಹಾತ್ಮ್ಯಮ್)	ಹರಿವಂಶಮಹಾತ್ಮ್ಯಮ್ ಪ್ರಥಮೋಧ್ಯಾಯ 1. ಶ್ಲೋಕ ಸಂಖ್ಯೆ 1
(1.1 ಹರಿವಂಶಪರ್ವ)	ಹರಿವಂಶಪರ್ವ ಪ್ರಥಮೋಧ್ಯಾಯ 1. ಶ್ಲೋಕ ಸಂಖ್ಯೆ 1
(1.1 ವಿಷ್ಣುಪರ್ವ)	ವಿಷ್ಣುಪರ್ವ ಪ್ರಥಮೋಧ್ಯಾಯ 1. ಶ್ಲೋಕ ಸಂಖ್ಯೆ 1
(1.1 ಭವಿಷ್ಯಪರ್ವ)	ಭವಿಷ್ಯಪರ್ವ ಪ್ರಥಮೋಧ್ಯಾಯ 1. ಶ್ಲೋಕ ಸಂಖ್ಯೆ 1
(01.1.1 ಭಾಗವತ)	ಶ್ರೀಮದ್ ಭಾಗವತ ಪ್ರಥಮಸ್ಕಂಧ 01. ಪ್ರಥಮೋಧ್ಯಾಯ 1. ಶ್ಲೋಕ ಸಂಖ್ಯೆ 1
(1.1 ಮಭಾತಾನಿರ್ಣಯ)	ಶ್ರೀಮಹಾಭಾರತ ತಾತ್ಪರ್ಯ ನಿರ್ಣಯ ಅಧ್ಯಾಯ 1. ಶ್ಲೋಕ ಸಂಖ್ಯೆ 1
(1.1 ಭ ಗೀತಾ)	ಶ್ರೀಮದ್ ಭಗವದ್ಗೀತಾ ಅಧ್ಯಾಯ 1. ಶ್ಲೋಕ ಸಂಖ್ಯೆ 1
(1.1 ದ್ವಾದಶ ಸ್ತೋತ್ರ)	ದ್ವಾದಶ ಸ್ತೋತ್ರ ಅಧ್ಯಾಯ 1. ಶ್ಲೋಕ ಸಂಖ್ಯೆ 1

✣ ✣ ✣

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಹರಿವಂಶಪರ್ವ - ವಿಷ್ಣುಪರ್ವ - ಭವಿಷ್ಯಪರ್ವ

ವಿಷಯಾನುಕ್ರಮಣಿಕೆ

ಕ್ರಮಗಳ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

ಹರಿವಂಶಪರ್ವ

ಹರಿವಂಶಪರ್ವ-1 **1-15**

* ಹರಿವಂಶಮಹಾತ್ಮ್ಯ

ಹರಿವಂಶಪರ್ವ-2 **16-31**

* ಮಂಗಳಾಚರಣೆ: ಶೌನಕ ಉಗ್ರಶ್ರವರ ಸಂವಾದ: ವೃಷ್ಣಿ ವಂಶದ ವಿಸ್ತೃತ ಚರಿತ್ರೆಯನ್ನು ಕೇಳಲು ಜನಮೇಜಯನ ಪ್ರಾರ್ಥನೆ: ಆದಿಸೃಷ್ಟಿಯ ವರ್ಣನೆ,
* ಸ್ವಾಯಂಭುವ ಮನುವಿನ ವಂಶದ ವರ್ಣನೆ ಮತ್ತು ದಕ್ಷಪ್ರಜಾಪತಿಯ ಜನ್ಮವೃತ್ತಾಂತ.

ಹರಿವಂಶಪರ್ವ-3 **32-44**

* ದಕ್ಷಪ್ರಜಾಪತಿಯ ಮೂಲಕವಾಗಿ ಸೃಷ್ಟಿಯ ವಿಸ್ತಾರ: ನಾರದರು ದಕ್ಷನ ಪುತ್ರರನ್ನು ವಿರಕ್ತರನ್ನಾಗಿ ಮಾಡಿದುದು: ದಕ್ಷನ ಅರವತ್ತು ಕನ್ಯೆಯರ ಮತ್ತು ಅವರ ಸಂತಾನಗಳ ವರ್ಣನೆ.
* ಪೃಥುವಿನ ಉಪಾಖ್ಯಾನ: ರಾಜ್ಯ ವಿಸ್ತರಣೆ ಮತ್ತು ದಿಕ್ಪಾಲರ ಸ್ಥಾಪನೆ.
* ಪೃಥುವಿನ ಉಪಾಖ್ಯಾನ: ವೇನನು ತನ್ನ ಅತ್ಯಾಚಾರದಿಂದ ತಾನೇ ವಿನಾಶದೊಂದಿದುದು ಪೃಥುವಿನ ಜನ್ಮ ವೃತ್ತಾಂತ.
* ಪೃಥುವಿನ ಉಪಾಖ್ಯಾನ: ಪೃಥುವು ಭೂದೇವಿಯನ್ನು ತನ್ನ ಮಗಳನ್ನಾಗಿ ಮಾಡಿಕೊಂಡುದು : ಧೇನುರೂಪಳಾಗಿ ಪೃಥ್ವಿದೇವಿಯು ನಾನಾ ಪ್ರಕಾರವಾದ ಹಾಲುಗಳನ್ನು ಕರೆದುದು.

ಹರಿವಂಶಪರ್ವ-4 **45-62**

* ಮನ್ವಂತರಗಳ, ಮನುಗಳ, ದೇವತೆಗಳ ಮತ್ತು ಋಷಿಗಳ ಪ್ರತ್ಯೇಕ ವರ್ಣನೆ.

ಹರಿವಂಶಪರ್ವ-5 **63-79**

* ಬ್ರಹ್ಮನ ನಾಲ್ಕು ಯುಗಗಳು, ಮನ್ವಂತರಗಳ ಮತ್ತು ದಿನ - ವರ್ಷಗಳ ಪರಿಮಾಣ.
* ವೈವಸ್ವತ ಮನು, ಯಮ, ಯಮೀ (ಯಮುನಾ), ಅಶ್ವಿನೀಕುಮಾರರು ಮತ್ತು ಶನೈಶ್ಚರ-ಇವರ ಹುಟ್ಟು.

ಕ್ರಮಗಳ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
ಹರಿವಂಶಪರ್ವ-6		**80-96**
*	ವೈವಸ್ವತ ಮನುವಿನ ವಂಶದಲ್ಲಿ ಹುಟ್ಟಿದವರ ವರ್ಣನೆ : ಪುರೂರವನ ಉತ್ಪತ್ತಿ.	
*	ದುಂಧುಮಾರನ ಕಥೆ ವಂಶವರ್ಣನೆ : ಗಾಲವನ ಜನ್ಮ.	
ಹರಿವಂಶಪರ್ವ-7		**97-114**
*	ತ್ರಿಶಂಕುವಿನ ಚರಿತ್ರೆ : ಅವನ ವಂಶೀಯರಾದ ಹರಿಶ್ಚಂದ್ರಾದಿಗಳ ಜನ್ಮವೃತ್ತಾಂತ.	
*	ಸಗರನ ಜನ್ಮ ಮತ್ತು ಚರಿತ್ರೆ : ಸಗರನ ಮಕ್ಕಳ ಪ್ರಯತ್ನದಿಂದ ಸಾಗರದ ನಿರ್ಮಾಣ.	
*	ಸೂರ್ಯವಂಶದ ವರ್ಣನೆ.	
*	ಶ್ರಾದ್ಧಕಲ್ಪ : ಜನಮೇಜಯನು ಪಿತೃ ಸ್ವರೂಪವನ್ನೂ ಮತ್ತು ಶ್ರಾದ್ಧಕಲ್ಪವನ್ನೂ ಪ್ರಶ್ನಿಸಿದುದು: ಶಂತನುವು ಭೀಷ್ಮನಿಂದ ಕೈಚಾಚಿ ಪಿಂಡವನ್ನು ಸ್ವೀಕರಿಸಿದುದು.	
ಹರಿವಂಶಪರ್ವ-8		**115-129**
*	ಪಿತೃಕಲ್ಪ : ಭೀಷ್ಮ- ಮಾರ್ಕಂಡೇಯ ಸಂವಾದ : ಮಾರ್ಕಂಡೇಯ - ಸನತ್ಕುಮಾರರ ಸಂಭಾಷಣೆ.	
*	ಪಿತೃಕಲ್ಪ : ಮಾರ್ಕಂಡೇಯ - ಸನತ್ಕುಮಾರರ ಸಂವಾದದಲ್ಲಿ ಪಿತೃಗಣಗಳು, ಲೋಕ, ಶಕ್ತಿ ಮತ್ತು ಕನ್ಯೆಯರ ವರ್ಣನೆ: ಪಿತೃಗಳ ಪ್ರಭಾವವನ್ನು ನೋಡುವ ಸಲುವಾಗಿ ಮಾರ್ಕಂಡೇಯನಿಗೆ ದಿವ್ಯದೃಷ್ಟಿ ಪ್ರಾಪ್ತಿ.	
ಹರಿವಂಶಪರ್ವ-9		**130-148**
*	ಪಿತೃಕಲ್ಪ-ಭರದ್ವಾಜನ ಮಕ್ಕಳ ಕಥೆ: ಯೋಗ ಭ್ರಷ್ಟರಾದ ಪುರುಷರ ಗತಿ: ಯೋಗ ಸಿದ್ಧಿಗೆ ಅಧಿಕಾರಿಗಳಾದ ಪುರುಷರ ಲಕ್ಷಣ: ಮಾರ್ಕಂಡೇಯ-ಸನತ್ಕುಮಾರ ಸಂವಾದದ ಸಮಾಪ್ತಿ.	
*	ಪಿತೃಕರ್ತ: ಬ್ರಹ್ಮದತ್ತ ಮತ್ತು ಉಗ್ರಾಯುಧರ ವಂಶದ ವರ್ಣನೆ: ಪತ್ನಿಯ ಮೂಲಕ ಶುಕನೀತಿಯ ಕಥನ.	
*	ಪಿತೃಕಲ್ಪ-ಮಾರ್ಕಂಡೇಯರು ಶ್ರಾದ್ಧದ ಮಹಿಮೆಯನ್ನು ಹೇಳಿದುದು: ಶ್ರಾದ್ಧದ ಫಲದಿಂದ ಕೌಶಿಕ ಪುತ್ರರಿಗೆ ಉತ್ತಮ ಜನಪ್ರಾಪ್ತಿ.	
*	ಪಿತೃಕಲ್ಪ-ಶುಚಿವಾಕ್ ಎಂಬ ಪಕ್ಷಿಯು ಸ್ವತಂತ್ರವೇ ಮೊದಲಾದ ಮೂರು ಹಂಸಗಳಿಗೆ ತಾಪವನ್ನಿತ್ತುದು: ಸುಮನಾ ಎಂಬ ಹಂಸವು ಅನುಗ್ರಹ ಪೂರ್ವಕವಾಗಿ ಅವುಗಳನ್ನು ಶಾಪದಿಂದ ವಿಮೋಚನಗೊಳಿಸಿದುದು.	
*	ಶಾಪಗ್ರಸ್ತವಾದ ಮೂರು ಹಂಸಪಕ್ಷಿಗಳೂ ಕಾಂಪಿಲ್ಯನಗರದಲ್ಲಿ ರಾಜ ಮತ್ತು ಮಂತ್ರಿಗಳಾಗಿ ಜನ್ಮತಾಳಿದುದು: ಉಳಿದ ನಾಲ್ಕು ಹಂಸಗಳು ತಂದೆಯ ಆಜ್ಞಾನುಸಾರ ಮುಕ್ತರಾದುದು.	
*	ಬ್ರಹ್ಮದತ್ತನಿಗೆ ವಿಭ್ರಾಜನೆಂಬ ಮಗನು ಹುಟ್ಟಿದುದು ಪತ್ನಿಯಾದ ಸನ್ನತಿಯೊಡನೆ ಬ್ರಹ್ಮದತ್ತನ ಮನಸ್ತಾಪ : ವಿಪ್ರನೊಬ್ಬನು ಹೇಳಿದ ಶ್ಲೋಕದಿಂದಾಗಿ ಬ್ರಹ್ಮದತ್ತ-ಪಾಂಚಲ್ಯ- ಕಂಡರೀಕರು ತಮ್ಮ ಪೂರ್ವಜನ್ಮದ ಸ್ಮರಣೆಯನ್ನು ಪಡೆದು ಸಂಸಾರವನ್ನು ಪರಿತ್ಯಜಿಸಿ ತಪಶ್ಚರಣೆಯಿಂದ ಮುಕ್ತರಾದುದು.	

ಕ್ರಮಗಳ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

ಹರಿವಂಶಪರ್ವ-10 **149-169**

* ಚಂದ್ರನ ಉತ್ಪತ್ತಿ : ರಾಜಸೂಯಯಾಗ : ದೇವಾಸುರರ ಯುದ್ಧ : ಬುಧನ ಉತ್ಪತ್ತಿ.
* ಪುರುರವ ಮಹಾರಾಜನ ಚರಿತ್ರೆ : ಅವನ ವಂಶದ ವರ್ಣನೆ : ಪುರುರವನು ತ್ರೇತಾಗ್ನಿಗಳನ್ನು ರಚಿಸಿದುದು : ಗಂಧರ್ವರ ಲೋಕಕ್ಕೆ ಪ್ರಯಾಣ.
* ಪುರುರವನ ಎರಡನೆಯ ಮಗನಾದ ಅಮಾ ವಂಶವರ್ಣನೆ : ವಿಶ್ವಾಮಿತ್ರ ಮತ್ತು ಪರಶುರಾಮರ ಜನನ.
* ರಾಜನಾದ ರಜಿ ಮತ್ತು ಅವನ ಮಕ್ಕಳ ಚರಿತ್ರೆ : ಇಂದ್ರನು ತನ್ನ ಸ್ಥಾನದಿಂದ ಭ್ರಷ್ಟನಾಗಿ ಪುನಃ ಪದವಿಯನ್ನು ಪಡೆದುಕೊಂಡುದು.
* ಅನೇನಸನ ವಂಶದ ವರ್ಣನೆ : ಕಾಶೀ ರಾಜನಾದ ಧನ್ವನಿಗೆ ಧನ್ವಂತರಿಯು ಮಗನಾಗಿ ಅವತರಿಸಿದುದು : ದಿವೋದಾಸನ ರಾಜ್ಯಭಾರದ ಸಮಯದಲ್ಲಿ ಭಗವಾನ್ ಶಂಕರನ ಆಜ್ಞೆಯಂತೆ ಗಣೇಶ್ವರನಾದ ನಿಕುಂಭಕನು ವಾರಾಣಾಸಿಯನ್ನು ಜನಶೂನ್ಯವನ್ನಾಗಿ ಮಾಡಲು ಪ್ರಯತ್ನಿಸಿದುದು: ಅಲ್ಲಿಯೇ ಪಾರ್ವತೀ – ಪರಮೇಶ್ವರರು ನಿವಾಸ ಮಾಡಿದುದು, ವಾರಣಾಸಿಯ ಮೇಲೆ ದಿವೋದಾಸನ ಅಧಿಕಾರ : ಅಲರ್ಕನ ಪ್ರಶಂಸೆ.
* ನಹುಷ ಮತ್ತು ಯಯಾತಿಗಳ ವಂಶ ವರ್ಣನೆ ಮತ್ತು ಯಯಾತಿಯ ಚರಿತ್ರೆ.

ಹರಿವಂಶಪರ್ವ-11 **170-185**

* ಪುರುವಿನ ವಂಶಾವಳಿಯ ವರ್ಣನೆ.
* ಪುರುವಿನ ವಂಶದಲ್ಲಿ ಅಂತರ್ಗತವಾದ ಋಚೇಯುವಿನ ವಂಶ ಪರಂಪರೆ : ಅಜಮೀಢ – ಪಾಂಚಾಲ – ಸೋಮಕರ ವಂಶಗಳು :ಕೌರವ ವಂಶ–ತುರ್ವಸು–ದ್ರುಹ್ಯ ಮತ್ತು ಅನು ಇವರ ಸಂತತಿಯ ವರ್ಣನೆ.
* ಯದುವಂಶದ ವರ್ಣನೆ : ಕಾರ್ತವೀರ್ಯನ ಜನನ ಮತ್ತು ಅವನ ಚರಿತ್ರೆ : ಯಯಾತಿಯ ಐವರು ಮಕ್ಕಳ ವಂಶಾವಳಿಯನ್ನು ಕೇಳುವುದರಿಂದ ಉಂಟಾಗುವ ಫಲ.

ಹರಿವಂಶಪರ್ವ-12 **186-204**

* ವೃಷ್ಣಿ ವಂಶದ ವರ್ಣನೆ : ಅಕ್ರೂರ, ವಸುದೇವ, ಕುಂತೀ, ಸಾತ್ಯಕಿ, ಉದ್ಧವ, ಚಾರುದೇಷ್ಣ ಏಕಲವ್ಯ ಇವರೇ ಮುಂತಾದವರ ಪರಿಚಯ.
* ಶ್ರೀಕೃಷ್ಣನ ಅವತಾರ : ಶ್ರೀಕೃಷ್ಣನ ಅಣ್ಣ–ತಂಗಿಯರ ಉತ್ಪತ್ತಿಯ ವರ್ಣನೆ : ಕಾಲಯವನನ ಆವಿರ್ಭಾವ.
* ಕ್ರೋಷ್ಟುವಿನ ವಂಶದ ವರ್ಣನೆ : ಪುರೋಹಿತರ ಮತ್ತು ಕ್ಷತ್ರಿಯರ ಗೋತ್ರಗಳ ವಿನಿಮಯ.
* ಬಭ್ರು ವಂಶದ ವರ್ಣನೆ.
* ಭಜಮಾನ ವಂಶದ ವರ್ಣನೆ : ಸ್ಯಮಂತರ ಮಣಿಯ ಕಥೆ.
* ಸ್ಯಮಂತಕ ಮಣಿಯ ಕಾರಣದಿಂದಾಗಿ ಪ್ರಸೇನ, ಸತ್ರಾಜಿತ ಮತ್ತು ಶತಧನ್ವರ ಮರಣ: ಬಲರಾಮ ದೇವರು ದುರ್ಯೋಧನ, ಭೀಮಸೇನ ದೇವರಿಗೆ ಗದಾಯುದ್ಧ ನೈಪುಣ್ಯವನ್ನು ಕಲಿಸಿದುದು : ಅಕ್ರೂರನು ಶ್ರೀಕೃಷ್ಣನಿಗೆ ಮಣಿಯನ್ನು ಕೊಟ್ಟುದು : ಶ್ರೀಕೃಷ್ಣನು ಮಣಿಯನ್ನು ಪುನಃ ಅಕ್ರೂರನಿಗೇ ಹಿಂದಿರುಗಿಸಿದುದು.

ಕ್ರಮಗಳ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

ಹರಿವಂಶಪರ್ವ-13 **205-224**

* ಜನಮೇಜಯನು ವರಾಹ, ನರಸಿಂಹ, ಪರಶುರಾಮ, ಶ್ರೀಕೃಷ್ಣ ಮುಂತಾದ ಅವತಾರಗಳ ರಹಸ್ಯವನ್ನು ಪ್ರಶ್ನಿಸಿದುದು.
* ಮಹಾವಿಷ್ಣುವಿನ ವರಾಹ, ನರಸಿಂಹ, ವಾಮನ, ದತ್ತಾತ್ರೇಯ, ಪರಶುರಾಮ, ಶ್ರೀರಾಮ, ಶ್ರೀ ಕೃಷ್ಣ, ವ್ಯಾಸ ಮತ್ತು ಕಲ್ಕೀ ಅವತಾರಗಳ ಸಂಕ್ಷಿಪ್ತ ವರ್ಣನೆ.
* ವಿಷ್ಣುವಿನ ಈಶ್ವರತ್ವದ ವರ್ಣನೆ : ಅದ್ಭುತವಾದ ತಾರಕಾಮಯ ಸಂಗ್ರಾಮದ ಕಥೆ : ದೇವತೆಗಳೊಡನೆ ಯುದ್ಧ ಮಾಡಲು ಸನ್ನದ್ಧವಾಗಿದ್ದ ದೈತ್ಯ ಸೇನೆಯ ವರ್ಣನೆ.
* ಆಶ್ಚರ್ಯಕರವಾದ ತಾರಕಾಮಯ ಸಂಗ್ರಾಮದಲ್ಲಿ ದೇವತೆಗಳ ಯುದ್ಧ ಸಿದ್ಧತೆ.

ಹರಿವಂಶಪರ್ವ-14 **225-239**

* ದೇವಾಸುರರ ಯುದ್ಧ : ಔರ್ವಾಗ್ನಿಯ ಉತ್ಪತ್ತಿ.
* ಇಂದ್ರನಿಂದ ಚಂದ್ರನ ಸ್ತುತಿ : ಚಂದ್ರ - ವರುಣರಿಂದ ದೈತ್ಯ ಸೈನ್ಯ ಸಂಹಾರ : ಮಯನಿಂದ ಚಂದ್ರ - ವರುಣರ ಮೇಲೆ ಮಾಯಾ ಪ್ರಯೋಗ : ದೈತ್ಯ ಸೈನ್ಯದೊಡನೆ ವಾಯ್ವಗ್ನಿಗಳ ಯುದ್ಧ : ರಣರಂಗಕ್ಕೆ ಕಾಲನೇಮಿಯ ಆಗಮನ.
* ಕಾಲನೇಮಿಯ ಯುದ್ಧ ಮತ್ತು ಪ್ರಭಾವ.
* ಕಾಲನೇಮಿ ಮತ್ತು ಮಹಾವಿಷ್ಣುಗಳ ಸಂವಾದ :ಮಹಾವಿಷ್ಣುವಿನಿಂದ ಕಾಲನೇಮಿಯ ಸಂಹಾರ : ವಿಷ್ಣುವು ದೇವತೆಗಳನ್ನು ಆಶ್ವಾಸಿಸಿ ಬ್ರಹ್ಮ ಲೋಕಕ್ಕೆ ತೆರಳಿದುದು.
* ಬ್ರಹ್ಮಲೋಕದಲ್ಲಿ ಮಹಾವಿಷ್ಣುವಿಗೆ ಸತ್ಕಾರ.
* ನಾರಾಯಣಾಶ್ರಮದಲ್ಲಿ ಮಹಾವಿಷ್ಣುವು ಪವಡಿಸಿದುದು : ಬ್ರಹ್ಮಾದಿಗಳು ತನ್ನ ಬಳಿಗೆ ಬಂದೊಡನೆಯೇ ಮೇಲೆದ್ದು ಅವರ ಆಗಮನದ ಕಾರಣವನ್ನು ಕೇಳಿದುದು.
* ಬ್ರಹ್ಮನು ವಿಷ್ಣುವಿಗೆ ಪ್ರಪಂಚದ ಸದ್ಯದ ಪರಿಸ್ಥಿತಿಯನ್ನು ವಿವರಿಸಿ ಹೇಳುತ್ತಾ ಭೂಭಾರವನ್ನು ಇಳಿಸುವಂತೆ ಒತ್ತಾಯಿಸಿದುದು.
* ಭಗವಂತನಾದ ಮಹಾವಿಷ್ಣುವೂ ಮತ್ತು ದೇವತೆಗಳೂ ಮೇರು ಪರ್ವತದಲ್ಲಿ ಸಭೆ ಸೇರಿದುದು : ಪೃಥ್ವಿ ದೇವಿಯು ತನ್ನ ಭಾರವನ್ನಿಳಿಸಲು ಭಗವಂತನನ್ನು ಕೇಳಿಕೊಂಡುದು.
* ಬ್ರಹ್ಮನ ಆಜ್ಞೆಯಂತೆ ದೇವತೆಗಳ ಅಂಶಾವತರಣ.
* ಭಗವಂತನಾದ ಮಹಾ ವಿಷ್ಣುವಿನೊಡನೆ ನಾರದರ ಸಂಭಾಷಣೆ : ಭೂಲೋಕದಲ್ಲಿನ ದುರವಸ್ಥೆಯನ್ನು ವಿವರಿಸಿ ದುಷ್ಟ ನಿಗ್ರಹಕ್ಕಾಗಿ ಅವತರಿಸುವಂತೆ ಪ್ರಚೋದಿಸಿದುದು.
* ಮಹಾವಿಷ್ಣುವು ನಾರದರಿಗೆ ಉತ್ತರಿಸಿದುದು : ಬ್ರಹ್ಮನು ಮಹಾವಿಷ್ಣುವು ಅವತರಿಸಲು ಯೋಗ್ಯವಾದ ಸ್ಥಾನವನ್ನು ತಿಳಿಸಿ ಅವನು ಭಾವಿ ತಂದೆ-ತಾಯಿಗಳನ್ನು ಪರಿಚಯಿಸಿದುದು.

ಕ್ರಮಗಳ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

ವಿಷ್ಣುಪರ್ವ

ವಿಷ್ಣುಪರ್ವ-15 **240-262**

* ನಾರದರು ಮಥುರೆಗೆ ಹೋಗಿ ಕಂಸನಿಗೆ ಮುಂದೆ ಒದಗಲಿರುವ ಭಯದ ಸೂಚನೆಯನ್ನಿತ್ತುದು : ಕಂಸನು ಸೇವಕರ ಎದುರಿನಲ್ಲಿ ತನ್ನ ಪ್ರತಾಪವನ್ನು ಕೊಚ್ಚಿಕೊಂಡುದು.
* ಕಂಸನು ದೇವಕಿಯ ಗರ್ಭವನ್ನು ವಿನಾಶಗೊಳಿಸಲು ಪ್ರಯತ್ನಿಸಿದುದು : ವಿಷ್ಣುವು ಪಾತಾಳ ಲೋಕದಲ್ಲಿದ್ದ ಷಡ್ಗರ್ಭರೆಂಬ ಹೆಸರಿನ ದೈತ್ಯರ ಜೀವಗಳನ್ನು ಆಪಕರ್ಷಣೆ ಮಾಡಿ ಅವನ್ನು ನಿದ್ರಾ ದೇವಿಗೆ ಕೊಟ್ಟುದು : ಆ ಆರು ಜೀವಗಳನ್ನೂ ಅನುಕ್ರಮವಾಗಿ ದೇವಕಿಯ ಗರ್ಭದಲ್ಲಿ ಸ್ಥಾಪಿಸಲು ಹೇಳಿದುದು.
* ಆರ್ಯೆಯ ಸ್ತುತಿ.
* ಕಂಸನು ದೇವಕಿಯಲ್ಲಿ ಹುಟ್ಟಿದ ಮಕ್ಕಳೆಲ್ಲರನ್ನೂ ಸಂಹರಿಸಿದುದು : ಏಳನೆಯ ಗರ್ಭದಲ್ಲಿ ಸಂಕರ್ಷಣನೂ ಅನಂತರ ಶ್ರೀಕೃಷ್ಣನೂ ಹುಟ್ಟಿ ಯೋಗಮಾಯೆಯ ಮೂಲಕವಾಗಿ ನಂದನ ಅರಮನೆಗೆ ಪ್ರವೇಶಿಸಿದುದು : ಕಂಸನು ದೇವಕಿಯ ಬಳಿಯಲ್ಲಿದ್ದ ನಂದನ ಕನ್ಯೆಯನ್ನು ದುರ್ಗೆಯನ್ನ (ಯೋಗಮಾಯೆಯನ್ನು) ವಧಿಸಲು ಪ್ರಯತ್ನಿಸಿದುದು : ಯೋಗಮಾಯೆಯು ತನ್ನ ದಿವ್ಯರೂಪವನ್ನು ಕಂಸನಿಗೆ ತೋರಿದುದು : ಕಂಸನು ದೇವಕಿಯ ಕ್ಷಮೆಯನ್ನು ಯಾಚಿಸಿದುದು : ದೇವಕಿಯು ಕಂಸನನ್ನು ಕ್ಷಮಿಸಿದುದು : ಗೋಕುಲದ ವರ್ಣನೆ, ಗೋಕುಲಕ್ಕೆ ನಂದಗೋಪನ ಆಗಮನ.

ವಿಷ್ಣುಪರ್ವ-16 **263-283**

* ಶಕಟಭಂಜನ – ಪೂತನಿಯ ವಧೆ.
* ಯಮಲಾರ್ಜುನ ವೃಕ್ಷಭಂಗ.
* ಶ್ರೀಕೃಷ್ಣ- ಬಲರಾಮರ ಬಾಲಲೀಲೆಗಳು.
* ಶ್ರೀಕೃಷ್ಣನು ಗೋವ್ರಜವನ್ನು ಬಿಟ್ಟುಹೋಗಲು ನಿಶ್ಚಯಿಸಿ ತನ್ನ ಶರೀರದಿಂದ ತೋಳಗಳನ್ನು ಸೃಷ್ಟಿಸಿ ಗೋವ್ರಜದ ಜನರನ್ನು ಭಯಗೊಳಿಸಿದುದು.
* ತೋಳಗಳ ಉಪಟಳದಿಂದಾಗಿ ವ್ರಜವಾಸಿಗಳು ಗೋವ್ರಜವನ್ನು ಬಿಟ್ಟು ವೃಂದಾವನಕ್ಕೆ ತೆರಳಿದುದು.
* ವರ್ಷ ಋತುವಿನ ವರ್ಣನೆ.
* ಶ್ರೀಕೃಷ್ಣನ ಅಂಗಸೌಂದರ್ಯ : ಭಾಂಡೀರವಟ : ಯಮುನೆಯ ವರ್ಣನೆ : ಕಾಳಿಂಗಸರ್ಪದ ಅರ್ಭಟ.
* ಶ್ರೀಕೃಷ್ಣನಿಂದ ಕಾಲಿಯ ದಮನ : ಕಾಲಿಯನು ಸಮುದ್ರಕ್ಕೆ ತೆರಳಿದುದು : ಗೋಪಾಲಕರಿಗೆ ಶ್ರೀಕೃಷ್ಣನ ಮಾಹಾತ್ಮೆಯ ಅನುಭವ.

ವಿಷ್ಣುಪರ್ವ-17 **284-302**

* ಬಲರಾಮನಿಂದ ಧೇನುಕಾಸುರನ ಸಂಹಾರ : ನಿರ್ಧಯವಾದ ತಾಲವನದಲ್ಲಿ ಗೋವುಗಳ ಮತ್ತು ಗೋಪಾಲಕರ ಸಂಚಾರ.

ಕ್ರಮಗಳ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

* ಬಲರಾಮನಿಂದ ಪ್ರಲಂಬಾಸುರನ ವಧೆ.
* ಇಂದ್ರೋತ್ಸವದ ವಿಷಯದಲ್ಲಿ ಶ್ರೀಕೃಷ್ಣನ ಜಿಜ್ಞಾಸೆ : ವೃದ್ಧ ಗೋಪಾಲಕನಿಂದ ಉತ್ಸವದ ಆವಶ್ಯಕತೆಯ ಪ್ರತಿಪಾದನೆ.
* ಶ್ರೀಕೃಷ್ಣನು ಗಿರಿಯಜ್ಞದ ಮತ್ತು ಗೋಪೂಜೆಯ ಪ್ರಸ್ತಾಪ ಮಾಡಿದುದು : ಶರದೃತುವಿನ ವರ್ಣನೆ.
* ಶ್ರೀಕೃಷ್ಣನ ಮಾತಿಗೆ ಗೋಪಾಲಕರ ಸಮ್ಮತಿ : ಗಿರಿಯಜ್ಞಾನುಷ್ಠಾನ : ಭಗವಂತನಿಂದ ದಿವ್ಯ ರೂಪಧಾರಣೆ ಮತ್ತು ವರಪ್ರದಾನ.
* ಇಂದ್ರನು ಸಂವರ್ತಕ ಮೇಘಗಳ ಮೂಲಕವಾಗಿ ಮಳೆಗರೆದು ಗೋವುಗಳನ್ನೂ ಗೋಪಾಲಕರನ್ನೂ ಕಷ್ಟಕ್ಕೀಡು ಮಾಡಿದುದು : ಶ್ರೀಕೃಷ್ಣನು ಗೋವರ್ಧನ ಪರ್ವತವನ್ನೆತ್ತಿದುದು : ಗೋವುಗಳಿಂದ ಪರ್ವತದ ಅಡಿಯಲ್ಲಿ ಆಶ್ರಯವನ್ನು ಪಡೆದುದು.
* ದೇವರಾಜನಾದ ಇಂದ್ರನ ಆಗಮನ : ಇಂದ್ರನು ಶ್ರೀಕೃಷ್ಣನನ್ನು ಗೋವಿಂದನ ಸ್ಥಾನದಲ್ಲಿ ಅಭಿಷೇಕ ಮಾಡಿದುದು : ಇಂದ್ರನು ಶ್ರೀಕೃಷ್ಣನಿಗೆ ಮುಂದೆ ಮಾಡಬೇಕಾಗಿರುವ ಕಾರ್ಯವನ್ನು ಹೇಳಿ ಅರ್ಜುನನನ್ನು ನೋಡುವಂತೆ ಸಲಹೆಯನ್ನಿತ್ತುದು : ಶ್ರೀಕೃಷ್ಣನ ಸಮ್ಮತಿ.
* ಶ್ರೀಕೃಷ್ಣನ ಅಲೌಕಿಕವಾದ ಚರಿತ್ರೆಯನ್ನು ನೋಡಿ ಆಶಂಕಿತರಾದ ಗೋಪರು ಶ್ರೀಕೃಷ್ಣನನ್ನು ಪ್ರಶ್ನಿಸಿದುದು : ಶ್ರೀಕೃಷ್ಣನ ಉತ್ತರ : ರಾಸಲೀಲೆಯ ಸಂಕ್ಷಿಪ್ತ ವರ್ಣನೆ.
* ಅರಿಷ್ಟಾಸುರನ ವಧೆ.
* ಕಂಸನ ಆಶಂಕೆ : ರಾತ್ರಿಯಲ್ಲಿ ಯದು ವಂಶೀಯರನ್ನು ಮಹಾಸಭೆಗೆ ಆಹ್ವಾನಿಸಿ ಶ್ರೀಕೃಷ್ಣನ ಮತ್ತು ಮಹಾವಿಷ್ಣುವಿನ ಪ್ರಭಾವವನ್ನು ವಿವರಿಸಿ ಹೇಳಿದುದು : ವಸುದೇವನನ್ನು ಆಕ್ಷೇಪಿಸುತ್ತಾ ಶ್ರೀಕೃಷ್ಣನೇ ಮೊದಲಾದವರನ್ನು ಕರೆತರಲು ವ್ರಜಭೂಮಿಗೆ ಅಕ್ರೂರನನ್ನು ಕಳುಹಿಸಿಕೊಟ್ಟುದು.
* ಕಂಸನಿಗೆ ಅಂಧಕನ ಉತ್ತರ.
* ಕೇಶಿಯ ಅತ್ಯಾಚಾರ : ಶ್ರೀಕೃಷ್ಣನಿಂದ ಅವನ ವಧೆ.

ವಿಷ್ಣುಪರ್ವ-18 **303-320**

* ಅಕ್ರೂರನು ವ್ರಜಭೂಮಿಗೆ ಬಂದು ಶ್ರೀಕೃಷ್ಣನನ್ನು ಸಂದರ್ಶಿಸಿದುದು : ಅಕ್ರೂರ-ಕೃಷ್ಣರ ಮಾತುಕತೆ.
* ಅಕ್ರೂರನು ಗೋಪರಿಗೆ ಕಂಸನ ಆದೇಶವನ್ನು ತಿಳಿಸಿದುದು : ವಸುದೇವ - ದೇವಕಿಯರ ದಯನೀಯ ಸ್ಥಿತಿಯನ್ನು ವಿವರಿಸಿದುದು : ಶ್ರೀಕೃಷ್ಣ - ಬಲರಾಮರಿಗೆ ಮಥುರಾ ಪಟ್ಟಣಕ್ಕೆ ಬರುವಂತೆ ಪ್ರೇರಿಸಿದುದು : ಶ್ರೀಕೃಷ್ಣ - ಬಲರಾಮರೊಡನೆ ಅಕ್ರೂರನ ಪ್ರಯಾಣ : ಹಾದಿಯಲ್ಲಿ ಅಕ್ರೂರನು ಯಮುನೆಯ ನೀರಿನಲ್ಲಿ ಆಶ್ಚರ್ಯಕರವಾದ ನಾಗಲೋಕವನ್ನೂ, ಪೂಜ್ಯನಾದ ಅನಂತನನ್ನೂ ಅವನ ತೊಡೆಯ ಮೇಲಿದ್ದ ಶ್ರೀಕೃಷ್ಣನನ್ನೂ ಕಂಡುದು.
* ಶ್ರೀಕೃಷ್ಣ - ಬಲರಾಮರ ಮಥುರಾ ಪ್ರವೇಶ : ರಜಕನ ವಧೆ : ಮಾಲಿಗೆ ವರದಾನ : ಕುಬ್ಜೆಗೆ ಅನುಗ್ರಹ : ಕಂಸನ ಧನುರ್ಭಂಜನ.

ಕ್ರಮಗಳ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

* ಕಂಸನ ಚಿಂತೆ : ಕಂಸನು ರಂಗಶಾಲೆಯನ್ನು ಸಜ್ಜುಗೊಳಿಸಲು ಆಜ್ಞಾಪಿಸಿದುದು; ಚಾಣೂರ – ಮುಷ್ಟಿಕರಿಗೂ ಕುವಲಯಾಪೀಡ ಎಂಬ ಆನೆಯ ಮಾವುತನಿಗೂ ಶ್ರೀಕೃಷ್ಣ– ಬಲರಾಮರನ್ನು ವಧಿಸುವಂತೆ ಆಜ್ಞೆ ಮಾಡಿದುದು : ಕಂಸನ ಹುಟ್ಟು.
* ತುಂಬಿರುವ ರಂಗಶಾಲೆಯ ಸೊಬಗು : ಕಂಸ – ಮಲ್ಲರ ಆಗಮನ : ರಂಗ ದ್ವಾರಕ್ಕೆ ಶ್ರೀಕೃಷ್ಣ – ಬಲರಾಮರ ಆಗಮನ : ಕುವಲಯಾಪೀಡ, ಮಾವುತಿಗ ಮತ್ತು ಆನೆಯ ಪಾದರಕ್ಷಕರ ಸಂಹಾರ : ಬಳಿಕ ಬಲರಾಮ – ಕೃಷ್ಣರಿಂದ ರಂಗಭೂಮಿಯ ಪ್ರವೇಶ.
* ರಂಗ ಶಾಲೆಯಲ್ಲಿ ಮಲ್ಲ ಯುದ್ಧದ ವಿಷಯದಲ್ಲಿ ಶ್ರೀಕೃಷ್ಣನ ಅಭಿಪ್ರಾಯ : ಕೃಷ್ಣ – ಬಲರಾಮರಿಂದ ಚಾಣೂರ–ಮುಷ್ಟಿಕರೇ ಮೊದಲಾದ ಮಲ್ಲರ ಸಂಹಾರ : ಕಂಸ ವಧೆ : ಶ್ರೀಕೃಷ್ಣನು ತಂದೆ – ತಾಯಿಗಳಿಗೆ ನಮಸ್ಕರಿಸಿ ಅವರ ಭವನಕ್ಕೆ ತೆರಳಿದುದು.
* ಕಂಸನ ಪತ್ನಿಯರ ಮತ್ತು ತಾಯಿಯ ಗೋಳಾಟ.
* ಶ್ರೀಕೃಷ್ಣನು ಕಂಸನ ವಧೆಗೆ ಪಶ್ಚಾತ್ತಾಪವನ್ನು ಸೂಚಿಸುತ್ತಾ ತಾನು ಮಾಡಿದ ಕಾರ್ಯವನ್ನು ಸಮರ್ಥಿಸಿಕೊಂಡುದು : ಉಗ್ರಸೇನನು ಸಮಸ್ತವನ್ನೂ ಶ್ರೀಕೃಷ್ಣನಿಗೆ ಸಮರ್ಪಣೆ ಮಾಡಿ ಕಂಸನ ಅಂತ್ಯೇಷ್ಟಿಗೆ ವ್ಯವಸ್ಥೆಗೊಳಿಸುವಂತೆ ಪ್ರಾರ್ಥಿಸಿದುದು: ಶ್ರೀಕೃಷ್ಣನು ಉಗ್ರಸೇನನನ್ನು ಸಮಾಧಾನಗೊಳಿಸಿ ಅವನಿಗೆ ರಾಜ್ಯದ ಪಟ್ಟಾಭಿಷೇಕ ಮಾಡಿದುದು ; ಕಂಸನೇ ಮೊದಲಾದವರಿಗೆ ಅಂತ್ಯೇಷ್ಟಿ ಸಂಸ್ಕಾರ.

ವಿಷ್ಣುಪರ್ವ-19 **321-335**

* ಸಾಂದೀಪನಿ ಮುನಿಯ ಬಳಿಯಲ್ಲಿ ಬಲರಾಮ – ಕೃಷ್ಣರ ವಿದ್ಯಾಭ್ಯಾಸ: ಗುರುದಕ್ಷಿಣೆಗಾಗಿ ಮುನಿಯ ಸತ್ತುಹೋಗಿದ್ದ ಮಗನನ್ನು ಬದುಕಿಸಿ ಮಥುರಾ ಪಟ್ಟಣಕ್ಕೆ ರಾಮ ಕೃಷ್ಣರ ಪ್ರತ್ಯಾಗಮನ.
* ಜರಾಸಂಧನು ತನ್ನ ಅಪಾರವಾದ ಸೈನ್ಯದೊಡನೆ ನಾಲ್ಕು ಕಡೆಗಳಿಂದಲೂ ಮಥುರಾ ಪಟ್ಟಣಕ್ಕೆ ಮುತ್ತಿಗೆ ಹಾಕಿದುದು.
* ಜರಾಸಂಧನ ಸೇನೆಯ ವರ್ಣನೆ: ಯಾದವ ಸೈನ್ಯದೊಡನೆ ಜರಾಸಂಧನ ಸೈನ್ಯದ ಭಯಂಕರ ಯುದ್ಧ : ಶ್ರೀರಾಮ–ಕೃಷ್ಣರ ಪರಾಕ್ರಮದಿಂದಾಗಿ ಜರಾಸಂಧನ ಪ್ರೋತ್ಸಾಹ : ಪುನಃ ಎರಡು ಸೈನ್ಯಗಳ ನಡುವೆ ಭಯಂಕರವಾದ ಯುದ್ಧ.
* ಬಲರಾಮನೊಡನೆ ಗದಾಯುದ್ಧ: ಜರಾಸಂಧನ ಪಲಾಯನ.
* ಜರಾಸಂಧನ ಆಕ್ರಮಣವನ್ನು ಪುನಃ ಶಂಕಿಸಿದ ಯಾದವರ ಸಭೆಯಲ್ಲಿ ವಿಕದ್ರುವಿನ ಭಾಷಣ : ಹರ್ಯಶ್ವರಾಜನ ಚರಿತ್ರೆ : ಯಾದವರ ಉತ್ಪತ್ತಿಯ ವರ್ಣನೆ.
* ವಿಕದ್ರುವಿನ ಮೂಲಕ ಯದು ಸಂತತಿಯ ವರ್ಣನೆ.
* ಮಥುರಾ ಪಟ್ಟಣವನ್ನೂ ಮತ್ತು ಪ್ರಜೆಗಳನ್ನೂ ಜರಾಸಂಧನ ಉಪಟಳದಿಂದ ರಕ್ಷಿಸುವುದಕ್ಕಾಗಿ ಮಥುರಾ ಪಟ್ಟಣದ ದಕ್ಷಿಣ ದಿಕ್ಕಿಗೆ ಬಲರಾಮ – ಕೃಷ್ಣರ ಪ್ರಯಾಣ : ಪರಶುರಾಮನೊಡನೆ ಸಮಾಗಮ : ಗೋಮಂತಕ ಪರ್ವತಕ್ಕೆ ಹೋಗಲು ಬಲರಾಮನ ಸಲಹೆ.

ಕ್ರಮಗಳ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
ವಿಷ್ಣುಪರ್ವ-20		**336-351**
	* ಶ್ರೀಕೃಷ್ಣ - ಬಲರಾಮ - ಪರಶುರಾಮರಿಂದ ಗೋಮಂತ ಪರ್ವತದ ಆರೋಹಣ : ಪರಶುರಾಮರು ಶ್ರೀಕೃಷ್ಣನಿಗೆ ಯುದ್ಧ ಮಾಡಲು ಪ್ರೋತ್ಸಾಹಿಸಿ ಅಲ್ಲಿಂದ ಹೊರಟುದು.	
	* ಬಲರಾಮನ ಬಳಿಗೆ ವಾರುಣೀ, ಕಾಂತಿ ಮತ್ತು ಶ್ರೀ ಇವರ ಆಗಮನ : ಗರುಡನ ಮೂಲಕ ಶ್ರೀಕೃಷ್ಣನಿಗೆ ಮಹಾವಿಷ್ಣುವಿನ ಕಿರೀಟ ಪ್ರಾಪ್ತಿ.	
	* ಜರಾಸಂಧನ ಸೈನ್ಯದ ವರ್ಣನೆ : ಪರ್ವತವನ್ನು ಆಕ್ರಮಿಸಲು ಜರಾಸಂಧನು ಸೈನ್ಯಕ್ಕೆ ಆಜ್ಞೆ ಮಾಡಿದುದು : ಶಿಶುಪಾಲನ ತಂದೆ ಚೇದಿ ರಾಜನ ಸಲಹೆಯಂತೆ ಗೋಮಂತ ಪರ್ವತಕ್ಕೆ ಬೆಂಕಿ ಹಚ್ಚಿದುದು : ಬಲರಾಮ - ಕೃಷ್ಣರು ಪರ್ವತದ ಮೇಲಿನಿಂದ ಧುಮಕಿ ಜರಾಸಂಧನ ಸೈನ್ಯದೊಳಗೆ ನುಗ್ಗಿದುದು.	
	* ಕೃಷ್ಣ-ಬಲರಾಮ ಮತ್ತು ಸೈನ್ಯ ಸಮೇತನಾದ ಜರಾಸಂಧ ಇವರ ಯುದ್ಧ : ಜರಾಸಂಧನ ಪರಾಜಯ ಮತ್ತು ಪಲಾಯನ : ಕರವೀರಪುರಕ್ಕೆ ಚೇದಿ ರಾಜನಾದ ದಮಘೋಷನೊಡನೆ ಶ್ರೀ ಕೃಷ್ಣ - ಬಲರಾಮರ ಪ್ರಯಾಣ.	
	* ಶ್ರೀಕೃಷ್ಣನಿಂದ ಶೃಗಾಲ ವಾಸುದೇವನ ಸಂಹಾರ : ಅವನ ಮಗನಿಗೆ ಕರವೀರಪುರದ ರಾಜ್ಯಾಭಿಷೇಕ.	
	* ಮಥುರೆಗೆ ಬಲರಾಮ-ಕೃಷ್ಣರ ಪ್ರತ್ಯಾಗಮನ : ಪೌರ ಸ್ವಾಗತ.	
	* ಬಲರಾಮನ ಗೋಕುಲಕ್ಕೆ ಯಾತ್ರೆ : ಹಲಾಯುಧದಿಂದ ಯಮುನಾ ನದಿಯ ಆಕರ್ಷಣೆ.	
	* ರುಕ್ಮಿಣಿಯ ಸ್ವಯಂವರಕ್ಕಾಗಿ ಕುಂಡಿನಪುರಕ್ಕೆ ಶ್ರೀಕೃಷ್ಣನ ಪ್ರಯಾಣ : ಕೈಶಿಕ ರಾಜನ ಸತ್ಕಾರ.	
	* ಶ್ರೀಕೃಷ್ಣನ ಆಗಮನದಿಂದ ರಾಜರು ಚಿಂತಿತರಾದುದು : ರಾಜಸಭೆಯಲ್ಲಿ ಜರಾಸಂಧನ ಸಭೆ.	
	* ದಂತವಕ್ತ್ರ ಮತ್ತು ಸಾಲ್ವರ ಭಾಷಣವನ್ನು ಕೇಳಿದ ಭೀಷ್ಮಕನು ಶ್ರೀಕೃಷ್ಣನನ್ನು ಪ್ರಸನ್ನಗೊಳಿಸಲು ನಿಶ್ಚಯಿಸಿದುದು.	
	* ಕ್ರಥ ಮತ್ತು ಕೈಶಿಕರು ಶ್ರೀಕೃಷ್ಣನಿಗೆ ತಮ್ಮ ರಾಜ್ಯಗಳನ್ನು ಅರ್ಪಿಸಿದುದು : ಇಂದ್ರನ ಆದೇಶದಂತೆ ಎಲ್ಲ ರಾಜರೂ ಶ್ರೀಕೃಷ್ಣನನ್ನು ಚಕ್ರವರ್ತಿಯ ಪದವಿಯಲ್ಲಿ ಪಟ್ಟಾಭಿಷೇಕ ಮಾಡಿದುದು : ಶ್ರೀಕೃಷ್ಣನ ಅಭಯಪ್ರದಾನ.	
ವಿಷ್ಣುಪರ್ವ-21		**352-359**
	* ಶ್ರೀಕೃಷ್ಣ-ಭೀಷ್ಮಕರ ಸಂವಾದ : ಭೀಷ್ಮಕನಿಂದ ಶ್ರೀಕೃಷ್ಣನ ಸ್ತುತಿ : ಶ್ರೀಕೃಷ್ಣನ ಮಥುರಾ ಪ್ರಯಾಣ.	
ವಿಷ್ಣುಪರ್ವ-22		**360-372**
	* ಸಾಲ್ವನು ಹೇಳಿದಂತೆ ಜರಾಸಂಧನ ಮೊದಲಾದ ರಾಜರು ಸಾಲ್ವನನ್ನೇ ಕಾಲಯವನನ ಬಳಿಗೆ ದೂತನನ್ನಾಗಿ ಕಳುಹಿಸಿದುದು.	
	* ಕಾಲಯವನನ ವೈಶಿಷ್ಟ್ಯ: ಸಾಲ್ವನು ರಾಜರ ದೂತನಾಗಿ ಕಾಲಯವನನ ಬಳಿಗೆ ಹೋಗಿ ಜರಾಸಂಧನ ಸಂದೇಶವನ್ನು ತಿಳಿಸಿದುದು.	
	* ರಾಜರ ಪ್ರೇರಣೆಯಂತೆ ಕಾಲಯವನನು ಶ್ರೀಕೃಷ್ಣನನ್ನು ಜಯಿಸಲು ಮಥುರೆಗೆ ಹೋದುದು.	
	* ಶ್ರೀಕೃಷ್ಣನು ವಾಸ ಮಾಡಲು ಯೋಗ್ಯವಾದ ಪ್ರದೇಶವನ್ನು ಹುಡುಕುವ ಸಲುವಾಗಿ ಗರುಡನ ಪ್ರಯಾಣ : ಮಥುರಾ ಪಟ್ಟಣದಲ್ಲಿ ರಾಜೇಂದ್ರನಾದ ಶ್ರೀಕೃಷ್ಣನಿಗೆ ಭವ್ಯ ಸ್ವಾಗತ : ಉಗ್ರಸೇನನಿಗೂ ಮಥುರೆಯ	

ಕ್ರಮಗಳ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

ಪ್ರಜೆಗಳಿಗೂ ಶ್ರೀಕೃಷ್ಣನಿಂದ ಸತ್ಕಾರ : ಗರುಡನು ಹಿಂದಿರುಗಿ ಬಂದು ಕುಶಸ್ಥಲಿಯು ವಾಸಕ್ಕೆ ಯೋಗ್ಯವಾಗಿರುವುದೆಂದು ಶ್ರೀಕೃಷ್ಣನಿಗೆ ಹೇಳಿದುದು.

* ಶ್ರೀಕೃಷ್ಣನ ಸಲಹೆಯಂತೆ ಯಾದವರೆಲ್ಲರೂ ದ್ವಾರಾವತಿಗೆ ತೆರಳಿದುದು.
* ಕಾಲಯವನನ ವಧೆ.
* ವಿಶ್ವಕರ್ಮನ ಮೂಲಕ ದ್ವಾರವತಿಯ ನಿರ್ಮಾಣ: ನಿಧಿಗಳಿಗೆ ಅಧಿಪತಿಯಾದ ಶಂಖನನ್ನು ಕರೆಸಿದುದು: ಸುಧರ್ಮಾ ಕಥೆಯನ್ನು ತಂದುದು: ಶ್ರೀಕೃಷ್ಣನು ವ್ಯವಸ್ಥಾಪೂರ್ವಕವಾಗಿ ಯಾದವರನ್ನು ನೆಲೆಗೊಳಿಸಿದುದು: ಬಲರಾಮನೊಡನೆ ರೇವತಿಯ ವಿವಾಹ.

ವಿಷ್ಣುಪರ್ವ-23 **373-378**

* ಶ್ರೀಕೃಷ್ಣನಿಂದ ರುಕ್ಮಿಣಿಯ ಅಪಹರಣ: ಜರಾಸಂಧ-ಶಿಶುಪಾಲರ ಮತ್ತು ಯಾದವರ ನಡುವೆ ಘೋರ ಯುದ್ಧ.
* ಶ್ರೀಕೃಷ್ಣನಿಂದ ರುಕ್ಮಿಯ ಪರಾಜಯ : ರುಕ್ಮಿಣಿಯೇ ಮೊದಲಾದವರೊಡನೆ ಶ್ರೀಕೃಷ್ಣನ ವಿವಾಹ : ಅವರ ಸಂತಾನದ ಸಂಕ್ಷಿಪ್ತ ಪರಿಚಯ.

ವಿಷ್ಣುಪರ್ವ-24 **379-389**

* ಪ್ರದ್ಯುಮ್ನನು ರುಕ್ಮಿಯ ಮಗಳಾದ ಶುಭಾಂಗಿಯನ್ನು ಸ್ವಯಂವರದಲ್ಲಿ ವರಿಸಿದುದು : ರುಕ್ಮಿಯ ಮೊಮ್ಮಗಳಾದ ರುಕ್ಮವತಿಯೊಡನೆ ಪ್ರದ್ಯುಮ್ನನ ಮಗನಾದ ಅನಿರುದ್ಧನ ವಿವಾಹ : ಬಲರಾಮನಿಂದ ರುಕ್ಮಿಯ ಸಂಹಾರ.
* ಬಲರಾಮನ ಮಹಿಮೆ ಮತ್ತು ಅವನ ಅದ್ಭುತ ಕಾರ್ಯಸಾಧನೆ.
* ನರಕಾಸುರನ ಪರಿಚಯ : ದ್ವಾರಕಾ ಪಟ್ಟಣಕ್ಕೆ ಇಂದ್ರನ ಆಗಮನ: ನರಕಾಸುವನ ವಧೆಗಾಗಿ ಶ್ರೀಕೃಷ್ಣನಲ್ಲಿ ಇಂದ್ರನ ಪ್ರಾರ್ಥನೆ : ಪ್ರಾಗ್ಜ್ಯೋತಿಷಪುರಕ್ಕೆ ಪ್ರಯಾಣ : ಮರು - ನಿಸುಂದ - ಹಯಗ್ರೀವ - ವಿರೂಪಾಕ್ಷ-ಪಂಚನಾದ ಮತ್ತು ನರಕಾಸುರನ ಸಂಹಾರ.

ವಿಷ್ಣುಪರ್ವ-25 **390-408**

* ಶ್ರೀಕೃಷ್ಣನು ನರಕಾಸುರನ ಅರಮನೆಯನ್ನು ಪ್ರವೇಶಿಸಿ ಅಲ್ಲಿದ್ದ ಸಕಲೈಶ್ವರ್ಯಗಳನ್ನೂ ಮತ್ತು ಹದಿನಾರು ಸಾವಿರ ಕನ್ಯೆಯರನ್ನೂ ದ್ವಾರಕೆಗೆ ಕಳುಹಿಸಿದುದು : ದೇವಲೋಕಕ್ಕೆ ಹೋಗಿ ಅದಿತಿಗೆ ಕುಂಡಲಗಳನ್ನು ಸಮರ್ಪಿಸಿ ಸ್ವರ್ಗದಿಂದ ಪಾರಿಜಾತ ವೃಕ್ಷವನ್ನು ತಂದುದು.
* ರೈವತಕ ಪರ್ವತದಲ್ಲಿ ರುಕ್ಮಿಣಿಯ ವ್ರತೋದ್ಯಾಪನೆಯ ಉತ್ಸವ : ಅಲ್ಲಿ ಶ್ರೀಕೃಷ್ಣನು ಪಾರಿಜಾತದ ಪುಷ್ಪವನ್ನು ಕೊಟ್ಟು ರುಕ್ಮಿಣಿಯನ್ನು ಸಮಾನಿಸಿದುದು : ನಾರದರಿಂದ ರುಕ್ಮಿಣಿಯ ಸರ್ವಾಧಿಕ ಸೌಭಾಗ್ಯದ ಪ್ರಶಂಸೆ : ಸತ್ಯಭಾಮೆಯ ಕೋಪ ಭವನದ ಪ್ರವೇಶ.
* ಶ್ರೀಕೃಷ್ಣನು ಸತ್ಯಭಾಮೆಯನ್ನು ಸಮಾಧಾನ ಗೊಳಿಸಿದುದು : ಸತ್ಯಭಾಮೆಯು ಮಾನಸಿಕವಾದ ಖೇದವನ್ನು ಪ್ರಕಟ ಪಡಿಸುತ್ತಾ ತಪಸ್ಸಿಗೆ ಅನುಮತಿಯನ್ನು ಕೋರಿದುದು.
* ಶ್ರೀಕೃಷ್ಣನ ಪ್ರಶ್ನೆಗೆ ಸತ್ಯಭಾಮೆಯು ತನ್ನ ದುಃಖಕ್ಕೂ-ಖೇದಕ್ಕೂ ಕಾರಣವನ್ನು ತಿಳಿಸಿದುದು: ಪಾರಿಜಾತ ಪುಷ್ಪವನ್ನು ತಂದು ಕೊಡುವುದಾಗಿ ಆಶ್ವಾಸನೆಯನ್ನಿತ್ತು ಶ್ರೀಕೃಷ್ಣನು ಸತ್ಯಭಾಮೆಯನ್ನು ಸಮಾಧಾನ ಪಡಿಸಿದುದು:

ಕ್ರಮಗಳ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

ಸತ್ಯಭಾಮಾ– ಕೃಷ್ಣರಿಂದ ನಾರದರಿಗೆ ಸತ್ಕಾರ : ನಾರದರಿಂದ ಪಾರಿಜಾತದ ಉತ್ಪತ್ತಿ ಮತ್ತು ಮಹಿಮೆಗಳ ವರ್ಣನೆ.

* ಪಾರಿಜಾತ ವೃಕ್ಷವನ್ನು ಕೊಡುವಂತೆ ಇಂದ್ರನನ್ನು ಪ್ರಾರ್ಥಿಸುವ ಸಲುವಾಗಿ ಶ್ರೀಕೃಷ್ಣನು ನಾರದರನ್ನು ಕಳುಹಿಸಿ ಕೊಟ್ಟುದು.
* ಸ್ವರ್ಗದಲ್ಲಿ ಮಹಾದೇವನ ಪರಿವಾರದ ಸಂತೋಷಾರ್ಥವಾಗಿ ನೃತ್ಯ ಗೀತಗಳ ಸಂಭ್ರಮ : ನಾರದರು – ಶ್ರೀಕೃಷ್ಣನ ಸಂದೇಶವನ್ನು ಇಂದ್ರನಿಗೆ ಹೇಳಿದುದು : ಇಂದ್ರನು ನಾನಾ ಕಾರಣಗಳನ್ನು ಮುಂದೆ ಮಾಡಿ ಪಾರಿಜಾತ ವೃಕ್ಷವನ್ನು ಕೊಡಲು ನಿರಾಕರಿಸಿದುದು.
* ಪಾರಿಜಾತ ವೃಕ್ಷವನ್ನು ಕೊಡದಿದ್ದರೆ ಗದಾ ಪ್ರಹಾರ ಮಾಡುವುದಾಗಿ ಹೇಳಿ ಕಳುಹಿಸಿದ ಶ್ರೀಕೃಷ್ಣನ ವಿಷಯದಲ್ಲಿ ಇಂದ್ರನ ಕೋಪ : ಯುದ್ಧವಿಲ್ಲದೇ ಪಾರಿಜಾತ ವೃಕ್ಷವನ್ನು ಕೊಡಲಾರೆನೆಂದು ಇಂದ್ರನ ನಿಶ್ಚಯ.
* ನಾರದರು ಶ್ರೀಕೃಷ್ಣನ ಮಹಿಮೆಯನ್ನು ಪುನಃ ಪ್ರತಿಪಾದಿಸಿದರೂ, ಇಂದ್ರನು ಪಾರಿಜಾತ ವೃಕ್ಷವನ್ನು ಕೊಡಲು ನಿರಾಕರಿಸಿದುದು.
* ಅಮರಾವತಿಯ ಮೇಲೆ ಆಕ್ರಮಣ ನಡೆಸುವುದು ನಿಶ್ಚಯವೆಂದು ಹೇಳಿ ಶ್ರೀಕೃಷ್ಣನು ನಾರದರ ಮೂಲಕ ಇಂದ್ರನಿಗೆ ಸಂದೇಶವನ್ನು ಕಳುಹಿಸಿ ಕೊಟ್ಟುದು : ಇಂದ್ರ–ಬೃಹಸ್ಪತಿಗಳ ಸಂಭಾಷಣೆ : ಬೃಹಸ್ಪತಿಯು ಕಶ್ಯಪನಿಗೆ ಈ ಯುದ್ಧ ವಾರ್ತೆಯನ್ನು ತಿಳಿಸಿದುದು : ಶಾಂತಿಯ ಸ್ಥಾಪನೆಗಾಗಿ ಕಶ್ಯಪನಿಂದ ರುದ್ರ ದೇವರಿಗೆ ಪ್ರಾರ್ಥನೆ.

ವಿಷ್ಣುಪರ್ವ–26 **409–426**

* ಇಂದ್ರ–ಕೃಷ್ಣರ, ಜಯಂತ–ಪ್ರದ್ಯುಮ್ನರ ಪ್ರವರ–ಸಾತ್ಯಕಿಗಳ ಮತ್ತು ಐರಾವತ–ಗರುಡರ ಘೋರ ಯುದ್ಧ.
* ಶ್ರೀಕೃಷ್ಣನು ರಾತ್ರಿಯಲ್ಲಿ ಯುದ್ಧವನ್ನು ಸ್ಥಗಿತಗೊಳಿಸಿ ಪಾರಿಯಾತ್ರ ಪರ್ವತಕ್ಕೆ ವರವನ್ನಿತ್ತುದು : ಗಂಗೆಯ ಸ್ಮರಣೆ : ಬಿಲ್ವಪತ್ರೆಯಲ್ಲಿಯೂ ಮತ್ತು ಗಂಗೆಯಲ್ಲಿಯ ಮಹಾದೇವನನ್ನು ಆವಾಹಿಸಿ ಬಿಲ್ವೋದಕೇಶ್ವರನ ಪೂಜೆಯನ್ನೂ ಮತ್ತು ಸ್ತೋತ್ರವನ್ನೂ ಮಾಡಿದುದು ; ರುದ್ರ ದೇವರು ಶ್ರೀಕೃಷ್ಣನಿಗೆ ಅಭೀಷ್ಟವಾದ ವರವನ್ನಿತ್ತು ದೈತ್ಯರನ್ನು ಸಂಹರಿಸಲು ಆದೇಶವನ್ನಿತ್ತುದು ; ಪಾರಿಯಾತ್ರ ಪರ್ವತದ ಮೇಲೆ ಭಗವಂತನು ನಿವಾಸ ಮಾಡಿದುದು; ಅವನ ಪ್ರತಿಮೆಯ ಪೂಜಾ ಮಹಿಮೆ.
* ಪುನಃ ಇಂದ್ರೋಪೇಂದ್ರರ ಯುದ್ಧ : ಉತ್ಪಾತಗಳ ಪರಂಪರೆ : ಬ್ರಹ್ಮನ ಆಜ್ಞೆಯಂತೆ ಅದಿತಿ ಮತ್ತು ಕಶ್ಯಪರು ಮಧ್ಯೆ ಬಂದು ಇಂದ್ರೋಪೇಂದ್ರರ ಯುದ್ಧವನ್ನು ನಿಲ್ಲಿಸಿದುದು; ಸ್ವರ್ಗಾಭಿಗಮನ : ಅದಿತಿಯ ಆಜ್ಞೆಯಂತೆ ಶ್ರೀಕೃಷ್ಣನು ಶಚೀದೇವಿಯಿಂದ ಉಪಹಾರವನ್ನು ಸ್ವೀಕರಿಸಿ ಪಾರಿಜಾತ ವೃಕ್ಷದೊಡನೆ ದ್ವಾರಕೆಗೆ ಬಂದುದು : ಪಾರಿಜಾತದ ಆಗಮನದಿಂದ ದ್ವಾರಕಾ ನಗರವಾಸಿಗಳಿಗೆ ಆನಂದ : ಸತ್ಯಭಾಮೆಯು ಮಾಡಿದ್ದ ಪುಣ್ಯಕ ವ್ರತದ ಸಮಾಪ್ತಿಯ ಕಾಲದಲ್ಲಿ ದಾನವನ್ನು ಪ್ರತಿಗ್ರಹಿಸುವ ಸಲುವಾಗಿ ಶ್ರೀಕೃಷ್ಣನು ನಾರದರನ್ನು ಸ್ಮರಿಸಿದುದು.
* ಪುಣ್ಯಕ ವ್ರತದ ಸಾದ್ಗುಣ್ಯಕ್ಕಾಗಿ ಸತ್ಯಭಾಮೆಯು ಶ್ರೀಕೃಷ್ಣನನ್ನು ನಾರದರಿಗೆ ದಾನ ಮಾಡಿದುದು : ಯಥಾಯೋಗ್ಯವಾದ ಕ್ರಯವನ್ನು ಪಡೆದು ನಾರದರು ಶ್ರೀಕೃಷ್ಣನನ್ನು ಬಿಟ್ಟುಕೊಟ್ಟುದು : ನಾರದರು ಶ್ರೀಕೃಷ್ಣನಿಂದ ವರವನ್ನು ಬೇಡಿದುದು : ಶ್ರೀಕೃಷ್ಣನು ತನ್ನ ಬಾಂಧವರೆಲ್ಲರಿಗೂ ಪಾರಿಜಾತ ವೃಕ್ಷವನ್ನು ತೋರಿಸಿ ಅದನ್ನು ಸ್ವರ್ಗಕ್ಕೆ ಕಳುಹಿಸಿಕೊಟ್ಟುದು.
* ಪುಣ್ಯಕ ವ್ರತದ ವಿಧಿಯ ವರ್ಣನೆ.

ಕ್ರಮಗಳ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

ವಿಷ್ಣುಪರ್ವ-27 **427-440**

* ಉಮಾ ದೇವಿಯಿಂದ ಸ್ತ್ರೀ ಮಹತ್ತ್ವದ ವರ್ಣನೆ : ಪುಣ್ಯಕ ವ್ರತದ ವಿಧಿಯ ಉಪದೇಶ.
* ಪುಣ್ಯಕ ವ್ರತಕ್ಕೆ ಸಂಬಂಧಿಸಿದ ನಿಯಮಗಳು : ದಾನದ ವರ್ಣನೆ : ಪುತ್ರಪ್ರಾಪ್ತಿಯ ಸಲುವಾಗಿ ಮಾಡುವ ಇತರ ವ್ರತಗಳ ವರ್ಣನೆ.
* ನಾನಾ ಪ್ರಕಾರವಾದ ವ್ರತಗಳ ವಿಧಿ-ನಿಯಮಗಳು.
* ಉಮಾದೇವಿಯಿಂದ ವ್ರತಗಳ ನಿರೂಪಣೆ : ನಾರದರು ದೇವಿಯರು ಮಾಡಿದ ವ್ರತಗಳನ್ನು ಏವರಿಸಿ ಹೇಳಿದುದು: ಶ್ರೀಕೃಷ್ಣನ ಪತ್ನಿಯರು ವ್ರತಗಳನ್ನು ಆಚರಿಸಿಕೊಟ್ಟ ದಾನಗಳ ವಿವರಣೆ.

ವಿಷ್ಣುಪರ್ವ-28 **441-454**

* ಷಟ್ಪುರ ವಾಸಿಗಳಾದ ಅಸುರರ ಸಂಕ್ಷಿಪ್ತ ಚರಿತ್ರೆ : ಅವರಿಗೆ ರುದ್ರದೇವರ ವರದಾನ.
* ಬ್ರಹ್ಮದತ್ತನ ಯಜ್ಞಕ್ಕೆ ವಸುದೇವ-ದೇವಕಿಯರ ಆಗಮನ : ದೈತ್ಯರಿಂದ ಬ್ರಹ್ಮದತ್ತನ ಕನ್ಯೆಯರ ಅಪಹರಣ : ಪ್ರದ್ಯುಮ್ನನಿಂದ ಕನ್ಯೆಯರ ರಕ್ಷಣೆ : ನಾರದರ ಸಲಹೆಯಂತೆ ದೈತ್ಯರು ಕ್ಷತ್ರಿಯ ರಾಜರನ್ನು ತಮ್ಮ ಪಕ್ಷಕ್ಕೆ ಸೇರಿಸಿ ಕೊಂಡುದು : ಷಟ್ಪುರಕ್ಕೆ ಶ್ರೀಕೃಷ್ಣನ ಆಗಮನ.
* ಶ್ರೀಕೃಷ್ಣನು ಯಾದವ ಸೈನಿಕರನ್ನು ಯುದ್ಧದಲ್ಲಿ ನಿಯೋಜಿಸಿದುದು : ದಾನವರು ಷಟ್ಪುರದಿಂದ ಹೊರಟುದು : ನಿಕುಂಭನು ಹಲವಾರು ಯದುವೀರರನ್ನು ಗುಹೆಯಲ್ಲಿ ಬಂಧಿಸಿದುದು : ಶ್ರೀಕೃಷ್ಣನಿಂದ ದಾನವ ಸೈನಿಕರ ಸಂಹಾರ : ಪ್ರದ್ಯುಮ್ನನು ರಾಜರ ಸೈನ್ಯವನ್ನು ಗುಹೆಯಲ್ಲಿಯೇ ನಿರೋಧಿಸಿದುದು : ಬ್ರಹ್ಮದತ್ತನ ಸಾಂತ್ವವಚನ.
* ನಿಕುಂಭನು ಜಯಂತನಿಂದ ಪರಾಜಿತನಾಗಿ ಶ್ರೀಕೃಷ್ಣನೊಡನೆ ಯುದ್ಧಕ್ಕೆ ಹೋದುದು : ಶ್ರೀಕೃಷ್ಣನು ಅರ್ಜುನನಿಗೆ ನಿಕುಂಭನ ಚರಿತ್ರೆಯನ್ನು ಹೇಳಿದುದು : ಶ್ರೀಕೃಷ್ಣನು ಸುದರ್ಶನ ಚಕ್ರದಿಂದ ನಿಕುಂಭನನ್ನು ಸಂಹರಿಸಿದುದು : ಬ್ರಹ್ಮದತ್ತನು ಷಟ್ಪುರದಲ್ಲಿ ಸುಖವಾಗಿರುವುದನ್ನು ನೋಡಿ ಶ್ರೀಕೃಷ್ಣನು ದ್ವಾರಕೆಗೆ ಹಿಂದಿರುಗಿದುದು.

ವಿಷ್ಣುಪರ್ವ-29 **455-470**

* ಅಂಧಕಾಸುರನ ಜನನ ಮತ್ತು ದುರಾಚಾರಗಳ ವರ್ಣನೆ : ಅವನ ವಧೆಗಾಗಿ ಋಷಿಗಳ ಸಮಾಲೋಚನೆ : ನಾರದರು ಮಂದಾರ ಪುಷ್ಪದ ಮಾಲೆಯನ್ನು ಧರಿಸಿ ಅಂಧಕನ ಅರಮನೆಗೆ ಹೋಗಿ ಅವನಿಗೆ ಮಂದಾರವನದ ಮಹತ್ತ್ವವನ್ನು ವರ್ಣಿಸಿ ಹೇಳಿದುದು.
* ಮಂದಾರಪರ್ವತಕ್ಕೆ ಹೋದ ಅಂಧಕಾಸುರನನ್ನು ರುದ್ರದೇವರು ವಧಿಸಿದುದು.
* ಶ್ರೀಕೃಷ್ಣ ಮತ್ತು ಯಾದವರ ಜಲವಿಹಾರ.
* ಬಲರಾಮ ಮತ್ತು ಶ್ರೀಕೃಷ್ಣರ ಮೊದಲಾದವರ ಜಲಕ್ರೀಡಾದಿಗಳ ವರ್ಣನೆ.

ವಿಷ್ಣುಪರ್ವ-30 **471-488**

* ನಿಕುಂಭನಿಂದ ಭಾನುಮತಿಯ ಅಪಹರಣ : ಕೃಷ್ಣಾರ್ಜುನ- ಪ್ರದ್ಯುಮ್ನರೊಡನೆ ನಿಕುಂಭನ ಯುದ್ಧ : ಗೋಕರ್ಣ ತೀರ್ಥದಲ್ಲಿ ನಿಕುಂಭನ ಪತನ : ಪ್ರದ್ಯುಮ್ನನು ಭಾನುಮತಿಯನ್ನು ಕರೆದುಕೊಂಡು ದ್ವಾರಕೆಗೆ ಹಿಂದಿರುಗಿದುದು : ಪುನಃ ನಿಕುಂಭನೊಡನೆ ಕೃಷ್ಣಾರ್ಜುನ - ಪ್ರದ್ಯುಮ್ನರ ಯುದ್ಧ : ನಿಕುಂಭಾಸುರನ ಮಾಯಾ ಯುದ್ಧದ ವರ್ಣನೆ : ಶ್ರೀಕೃಷ್ಣನಿಂದ ನಿಕುಂಭನ ಸಂಹಾರ.

ಕ್ರಮಗಳ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

* ವಜ್ರನಾಭನ ತಪಸ್ಸು : ವರಪ್ರಾಪ್ತಿ : ಮೂರು ಲೋಕಗಳನ್ನೂ ಜಯಿಸಲು ವಜ್ರನಾಭನ ಪ್ರಯತ್ನ : ಇಂದ್ರನಿಗೆ ಶ್ರೀಕೃಷ್ಣನ ಸಂದೇಶ : ಭದ್ರನಾಭನೆಂಬ ನಟನಿಗೆ ಮುನಿಗಳಿಂದ ವರಪ್ರದಾನ : ಇಂದ್ರನು ಮಾಡಬೇಕಾದ ಕರ್ತವ್ಯವನ್ನು ತಿಳಿಸಿ ಹಂಸಗಳನ್ನು ವಜ್ರನಾಭನ ಪುರಕ್ಕೆ ಕಳುಹಿಸಿಕೊಟ್ಟುದು.
* ವಜ್ರನಾಭಪುರದಲ್ಲಿ ಹಂಸಗಳ ನಿವಾಸ : ಹಂಸಿಯು ಪ್ರಭಾವತಿಯನ್ನು ಪ್ರದ್ಯುಮ್ನನಲ್ಲಿ ಅನುರಕ್ತಳಾಗುವಂತೆ ಮಾಡಿದುದು : ಪ್ರಭಾವತಿಯು ಪ್ರದ್ಯುಮ್ನನನ್ನು ಕರೆತರುವಂತ ಹಂಸಿಗೆ ಹೇಳಿದುದು: ಹಂಸೀ – ವಜ್ರನಾಭರ ಸಂವಾದ : ಹಂಸಿಯಿಂದ ಎಲ್ಲ ಸಮಾಚಾರಗಳನ್ನು ಕೇಳಿ ಶ್ರೀಕೃಷ್ಣನು ಪ್ರದ್ಯುಮ್ನನೇ ಮೊದಲಾದ ಯದುವೀರರನ್ನು ನಟರ ವೇಷದಲ್ಲಿ ವಜ್ರಪುರಕ್ಕೆ ಕಳುಹಿಸಿಕೊಟ್ಟದು.
* ನಟವೇಷಧಾರಿಗಳಾದ ಯಾದವರು ಸುಪುರದಲ್ಲಿಯೂ, ವಜ್ರಪುರದಲ್ಲಿಯೂ ಅಭಿನಯಿಸಿ ದಾನವರಿಗೆ ಆನಂದವನ್ನುಂಟು ಮಾಡಿದುದು : ಕಾಣಿಕೆಗಳ ಸ್ವೀಕಾರ : ಪ್ರದ್ಯುಮ್ನನು ಪ್ರಭಾವತಿಯ ಅಂತಃಪುರವನ್ನು ಪ್ರವೇಶಿಸಿದುದು.
* ಪ್ರದ್ಯುಮ್ನ ಪ್ರಭಾವತಿಯರ, ಗದ – ಚಂದ್ರವತಿಯರ ಮತ್ತು ಸಾಂಬ – ಗುಣವತಿಯರ ಗಾಂಧರ್ವ ವಿವಾಹ.
* ಪ್ರದ್ಯುಮ್ನನು ವರ್ಷಾಕಾಲದ ವರ್ಣನ ಮಾಡುತ್ತಾ ಪ್ರಭಾವತಿಗೆ ತನ್ನ ಕುಲದ ಪರಿಚಯ ಮಾಡಿಕೊಟ್ಟುದು.
* ಕಶ್ಯಪರು ತಡೆದರೂ ವಜ್ರನಾಭನು ಮೂರು ಲೋಕಗಳ ವಿಜಯಕ್ಕಾಗಿ ಹೊರಟುದು : ಇಂದ್ರೋಪೇಂದ್ರರು ಪ್ರದ್ಯುಮ್ನನಿಗೆ ಸಂದೇಶವನ್ನು ಕಳುಹಿಸಿದುದು : ಅವರ ವಂಶದ ಪ್ರಭಾವವನ್ನು ಉಲ್ಲೇಖಿಸಿದುದು : ಪ್ರಭಾವತಿಯೇ ಮೊದಲಾದವರು ತಮ್ಮ ಗಂಡಂದಿರಿಗೆ ಆಯುಧಗಳನ್ನು ಕೊಟ್ಟು ಯುದ್ಧಕ್ಕಾಗಿ ಕಳುಹಿಸಿಕೊಟ್ಟುದು : ಇಂದ್ರನ ಸಹಾಯ : ಪ್ರದ್ಯುಮ್ನನ ಅದ್ಭುತ ಪರಾಕ್ರಮ.
* ಪ್ರದ್ಯುಮ್ನನಿಂದ ವಜ್ರನಾಭನ ಸಂಹಾರ : ಪ್ರದ್ಯುಮ್ನನ ಮಕ್ಕಳಿಗೆ ರಾಜ್ಯಾಭಿಷೇಕ.

ವಿಷ್ಣುಪರ್ವ-31 **489-508**

* ಇಂದ್ರನ ಆಜ್ಞೆಯಂತೆ ವಿಶ್ವಕರ್ಮರು ಪುನರ್ನಿರ್ಮಾಣ' ಮಾಡಿದ ದ್ವಾರಕಾ ಪಟ್ಟಣದ ವರ್ಣನೆ.
* ಶ್ರೀಕೃಷ್ಣನು ಅಂತಃಪುರವನ್ನು ಪ್ರವೇಶಿಸಿದುದು : ಮಣಿಪರ್ವತ ಮತ್ತು ಪಾರಿಜಾತ ವೃಕ್ಷಗಳನ್ನು ಯಥೋಚಿತವಾದ ಸ್ಥಾನಗಳಲ್ಲಿ ಸ್ಥಾಪಿಸಿದುದು.
* ಯಾದವರನ್ನು ಸನ್ಮಾನಿಸಲು ಶ್ರೀಕೃಷ್ಣನು ಸಭೆಯನ್ನು ಏರ್ಪಡಿಸಿದುದು.
* ಶ್ರೀಕೃಷ್ಣನಿಂದ ಯಾದವರಿಗೆ ಸತ್ಕಾರ : ನಾರದರು ಆ ಮಹಾಸಭೆಯಲ್ಲಿ ಶ್ರೀಕೃಷ್ಣನ ಪ್ರಭಾವವನ್ನು ವರ್ಣಿಸಿದುದು.
* ನಾರದರಿಂದ ಶ್ರೀಕೃಷ್ಣನ ಅದ್ಭುತ ಕರ್ಮಗಳ ವರ್ಣನೆ.
* ಶ್ರೀಕೃಷ್ಣನ ಸಂತತಿಯ ವರ್ಣನೆ : ವೃಷ್ಣಿ ವಂಶದ ಉಪಸಂಹಾರ.
* ಪ್ರದ್ಯುಮ್ನನ ಜನ್ಮ, ಶಂಬರಾಸುರನು ಸೂತಿಕಾ ಗೃಹದಿಂದಲೇ ಪ್ರದ್ಯುಮ್ನನನ್ನು ಅಪಹರಿಸಿದುದು : ಪ್ರದ್ಯುಮ್ನ – ಮಾಯಾವತಿಯರ ಸಂವಾದ : ಶಂಬರಾಸುರನ ನೂರು ಮಕ್ಕಳೊಡನೆ ಪ್ರದ್ಯುಮ್ನನ ಯುದ್ಧ.
* ಪ್ರದ್ಯುಮ್ನನು ಶಂಬರಾಸುರನ ಸೈನಿಕರನ್ನೂ ಮಂತ್ರಿಗಳನ್ನೂ ಸಂಹರಿಸಿದುದು.

ಕ್ರಮಗಳ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

* ಶಂಬರಾಸುರ–ಪ್ರದ್ಯುಮ್ನರ ಮಾಯಾಮಯವಾದ ಯುದ್ಧ : ಶಂಬರನ ಚಿಂತೆ : ದೇವ ರಾಜನಾದ ಇಂದ್ರನ ಆಜ್ಞೆಯಂತೆ ನಾರದರು ಪ್ರದ್ಯುಮ್ನನಿಗೆ ಅವನ ಹಿಂದಿನ ಜನ್ಮದ ಸ್ಮರಣೆಯನ್ನು ಮಾಡಿಕೊಟ್ಟುದು.
* ಪ್ರದ್ಯುಮ್ನನಿಂದ ಶಂಬರಾಸುನ ವಧೆ.
* ಮಾಯಾವತಿಯ ಸಮೇತನಾಗಿ ಪ್ರದ್ಯುಮ್ನು ದ್ವಾರಕೆಗೆ ಆಗಮಿಸಿ ರುಕ್ಮಿಣಿಯ ಭವನಕ್ಕೆ ತೆರಳಿದುದು.

ವಿಷ್ಣುಪರ್ವ–32 **509–521**

* ಬಲರಾಮನು ಪ್ರದ್ಯುಮ್ನನಿಗೆ ಆಹ್ನಿಕ ಸ್ತೋತ್ರವನ್ನು ಉಪದೇಶಿಸಿದುದು.
* ಸಾಂಬನ ಜನನ ಮತ್ತು ವಿದ್ಯಾಭ್ಯಾಸ: ರಾಜರ ಮಧ್ಯದಲ್ಲಿ ನಾರದರು ಶ್ರೀಕೃಷ್ಣನ ಮಹಿಮೆಯನ್ನು ಪ್ರತಿಪಾದಿಸಿದುದು.

ವಿಷ್ಣುಪರ್ವ–33 **522–533**

* ಶ್ರೀಕೃಷ್ಣನ ಮಹಿಮೆ : ಅರ್ಜುನನು ಶ್ರೀಕೃಷ್ಣನ ಅನುಜ್ಞೆಯನ್ನು ಪಡೆದು ಬ್ರಾಹ್ಮಣ ಬಾಲಕನನ್ನು ರಕ್ಷಿಸಲು ಹೋದುದು.
* ಬ್ರಾಹ್ಮಣ ಬಾಲಕನನ್ನು ಅರ್ಜುನನಿಗೆ ರಕ್ಷಿಸಲು ಸಾಧ್ಯವಾಗದೇ ಇದ್ದುದಕ್ಕಾಗಿ ಬ್ರಾಹ್ಮಣನ ತಿರಸ್ಕಾರ : ಶ್ರೀಕೃಷ್ಣನೊಡನೆ ಉತ್ತರದೇಶ ಗಮನ.
* ಶ್ರೀಕೃಷ್ಣನು ಬ್ರಾಹ್ಮಣ ಬಾಲಕನನ್ನು ಹಿಂದಕ್ಕೆ ತಂದುದು.
* ಭಗವಾನ್ ಶ್ರೀಕೃಷ್ಣನು ಅರ್ಜುನನಿಗೆ ತನ್ನ ಯಥಾವತ್ತಾದ ರೂಪವನ್ನು ಪರಿಚಯ ಮಾಡಿಕೊಟ್ಟುದು.

ವಿಷ್ಣುಪರ್ವ–34 **534–556**

* ಶ್ರೀಕೃಷ್ಣನ ಪರಾಕ್ರಮಗಳ ಸಂಕ್ಷೇಪ ವರ್ಣನೆ.
* ಶಿವ–ಪಾರ್ವತಿಯರು ಬಾಣಾಸುರನನ್ನು ತಮ್ಮ ಮಗನನ್ನಾಗಿ ಅಂಗೀಕರಿಸಿದುದು : ಯುದ್ಧ ಮಾಡಲು ಬಾಣಾಸುರನು ವರವನ್ನು ಪಡೆದುಕೊಂಡುದು : ಬಾಣನ ಮಂತ್ರಿಯಾದ ಕುಂಭಾಂಡಕನ ಚಿಂತೆ.
* ಶಿವ–ಪಾರ್ವತಿಯರ ಕ್ರೀಡಾ ವಿಹಾರ : ಪಾರ್ವತಿಯು ಉಷಾ ದೇವಿಗೆ ಪತಿಯ ಸಮಾಗಮವಾಗುವಂತೆ ವರ ಕೊಟ್ಟುದು : ಉಷಾ ದೇವಿಯ ವಿರಹದ ವರ್ಣನೆ.
* ಸ್ವಪ್ನದಲ್ಲಿ ಉಷಾ ದೇವಿಯು ಪತಿಯೊಡನೆ ಸಮಾಗಮವಾದುದು: ಉಷಾ ದೇವಿಯು ಚಿಂತೆ : ಸಖಿಯರಿಂದ ಸಾಂತ್ವನ: ಮಂತ್ರಿಯಾದ ಕುಂಭಾಂಡನ ಮಗಳ ಸಲಹೆಯಂತೆ ಉಷೆಯು ಚಿತ್ರಲೇಖೆಯನ್ನು ಕರೆಯಿಸಿ ತನ್ನ ಕಷ್ಟವನ್ನು ಹೇಳಿಕೊಂಡುದು : ಚಿತ್ರಲೇಖೆಯು ಸಿದ್ಧಪಡಿಸಿದ್ದ ಚಿತ್ರಗಳಿಂದ ತನ್ನ ಕನಸಿನಲ್ಲಿ ಆಗಮಿಸಿದ್ದ ಅನಿರುದ್ಧನನ್ನು ಉಷೆಯು ಗುರುತಿಸಿದುದು: ಅವನನ್ನು ಕರೆತರುವ ಸಲುವಾಗಿ ದ್ವಾರಕೆಗೆ ಚಿತ್ರಲೇಖೆಯ ಪ್ರಯಾಣ.
* ಚಿತ್ರಲೇಖಾ ಮತ್ತು ನಾರದ ಮಹರ್ಷಿಗಳ ಸಂವಾದ : ಚಿತ್ರಲೇಖೆಯು ನಾರದರಿಂದ ತಾಮಸೀ ವಿದ್ಯೆಯ ಉಪದೇಶವನ್ನು ಪಡೆದು ಅದರ ಪ್ರಭಾವದಿಂದ ಅನಿರುದ್ಧನನ್ನು ಶೋಣಿತಪುರಕ್ಕೆ ಕೊಂಡೊಯ್ದುದು : ಉಷಾ ಮತ್ತು ಅನಿರುದ್ಧರ ಗಾಂಧರ್ವ ವಿವಾಹ : ಅನಿರುದ್ಧನೊಡನೆ ಬಾಣಾಸುರನ ಮತ್ತು ಅವನ ಸೈನಿಕರ ಯುದ್ಧ : ಅನಿರುದ್ಧನನ್ನು ನಾಗಪಾಶದಿಂದ ಬಂಧಿಸಿ ಬಂದಿಯನ್ನಾಗಿ ಮಾಡಿದುದು : ನಾರದರ ದ್ವಾರಕಾ ಪ್ರಯಾಣ.

ಕ್ರಮಗಳ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

* ಅನಿರುದ್ಧನು ದುರ್ಗಾ ದೇವಿಯನ್ನು ಸ್ತೋತ್ರ ಮಾಡಿದುದು : ದೇವಿಯು ಪ್ರಸನ್ನಳಾಗಿ ಆತನನ್ನು ಸರ್ಪ ಬಂಧನದಿಂದ ವಿಮುಕ್ತಿಗೊಳಿಸಿದುದು.
* ಅನಿರುದ್ಧನ ಅಪಹರಣದಿಂದ ಆಂತಃಪುರದಲ್ಲಿ ಶೋಕ : ಶ್ರೀಕೃಷ್ಣನ ಮತ್ತು ಯಾದವರ ಚಿಂತೆ : ಗುಪ್ತಚಾರರಿಂದಲೂ ಅನಿರುದ್ಧನ ವಿಷಯವು ತಿಳಿಯದೇ ಇದ್ದುದು : ನಾರದರ ಆಗಮನ : ಅನಿರುದ್ಧನ ಸಮಾಚಾರವನ್ನು ನಾರದರು ಶ್ರೀಕೃಷ್ಣನಿಗೆ ತಿಳಿಸಿದುದು : ಶ್ರೀಕೃಷ್ಣನು ಗರುಡನನ್ನು ಆಹ್ವಾನಿಸಿದುದು : ಶ್ರೀಕೃಷ್ಣನಿಂದ ಗರುಡನ ಸ್ತುತಿ : ಗರುಡನು ಶ್ರೀಕೃಷ್ಣನನ್ನು ಸ್ತುತಿಸಿದುದು : ಶ್ರೀಕೃಷ್ಣನು ಶೋಣಿತಪುರಕ್ಕೆ ಹೋದುದು.
* ಶ್ರೀಕೃಷ್ಣ-ಬಲರಾಮ ಪ್ರದ್ಯುಮ್ನರು ಶೋಣಿತಪುರಕ್ಕೆ ಪ್ರಯಾಣ ಮಾಡಿದುದು : ಗರುಡನು ಆಹವನೀಯಾಗ್ನಿಯನ್ನು ಶಾಂತಗೊಳಿಸಿದುದು : ಶ್ರೀಕೃಷ್ಣನು ಅಗ್ನಿಗಣಗಳನ್ನು ಪರಾಜಯಗೊಳಿಸಿದುದು : ಬಾಣಾಸುರ ಸೈನಿಕರೊಡನೆ ಶ್ರೀಕೃಷ್ಣನೇ ಮೊದಲಾದವರ ಯುದ್ಧ : ತ್ರಿಶಿರ – ಜ್ವರಾಸುರನ ಆಕ್ರಮಣ : ಶ್ರೀಕೃಷ್ಣನೊಡನ ಜ್ವರಾಸುರನ ಯುದ್ಧ.
* ಪರಾಜಿತನಾದ ಜ್ವರನು ಶ್ರೀಕೃಷ್ಣನಿಗೆ ಶರಣಾದುದು : ಶ್ರೀಕೃಷ್ಣನ ಆಜ್ಞೆಯನ್ನು ಶಿರಸಾವಹಿಸಿ ರಣಭೂಮಿಯಿಂದ ನಿರ್ಗಮಿಸಿದುದು.
* ಬಾಣಾಸುರನ ಸೈನ್ಯದ ಪಲಾಯನ : ಭಗವಾನ್ ರುದ್ರರು ತನ್ನ ಗಣಗಳೊಡನೆ ಆಗಮಿಸಿದುದು : ಶ್ರೀಕೃಷ್ಣ-ರುದ್ರರ ಯುದ್ಧ : ಬಾಣಾಸುರನಿಂದ ರಣರಂಗ ಪ್ರವೇಶ.
* ಶ್ರೀಕೃಷ್ಣನ ಜೃಂಭಣಾಸ್ತ್ರಕ್ಕೆ ರುದ್ರರು ವಶೀಭೂತನಾದುದು : ಶಿವ ಮತ್ತು ವಿಷ್ಣು ಇಬ್ಬರೂ ಒಬ್ಬರೇ ಎಂಬುದನ್ನು ಬ್ರಹ್ಮನು ರುದ್ರರಿಗೆ ಸ್ಮರಣೆ ಮಾಡಿಕೊಟ್ಟುದು: ಯುಕ್ತವಾದ ಸ್ತೋತ್ರಗಳನ್ನು ವರ್ಣಿಸಿ ಹೇಳಿದುದು.
* ಶ್ರೀಕೃಷ್ಣ-ಬಾಣಾಸುರರ ಯುದ್ಧ : ಶ್ರೀಕೃಷ್ಣನಿಂದ ಬಾಣಾಸುರನ ಸಾವಿರ ತೋಳುಗಳ ಭೇದನ: ಮಹಾದೇವನಿಂದ ಬಾಣಾಸುರನಿಗೆ ವರದಾನ.
* ದ್ವಾರಕೆಯಲ್ಲಿ ಉತ್ಸವ: ಉಷಾ ದೇವಿಯ ಅಂತಃಪುರ ಪ್ರವೇಶ : ಶ್ರೀಕೃಷ್ಣನ ಮಹಿಮೆ : ವಿಷ್ಣುಪರ್ವದ ಮಹಿಮೆ : ಪರ್ವದ ಉಪಸಂಹಾರ.

ಭವಿಷ್ಯಪರ್ವ

ಭವಿಷ್ಯಪರ್ವ-35 **557-569**

* ಜನಮೇಜಯನ ಸಂತತಿ : ಕೌರವ ಮತ್ತು ಪಾಂಡವರ ವಂಶೀಯರ ಹಿರಿಮೆಯ ವರ್ಣನೆ.
* ಜನಮೇಜಯ ರಾಜನು ಆಶ್ವಮೇಧ ಯಜ್ಞ ಮಾಡಲು ಯೋಚಿಸಿದುದು: ವೇದವ್ಯಾಸ ದೇವರ ಆಗಮನ : ರಾಜನಿಂದ ಅವರ ಸತ್ಕಾರ: ಪಾಂಡವರಿಗೆ ರಾಜಸೂಯ ಯಜ್ಞ ಮಾಡದಿರಲು ಏಕೆ ಸಲಹೆ ನೀಡಲಿಲ್ಲವೆಂಬ ಜನಮೇಜಯನ ಪ್ರಶ್ನೆಗೆ ವೇದವ್ಯಾಸ ದೇವರ ಉತ್ತರ.
* ಮಹರ್ಷಿಗಳಾದ ವೇದವ್ಯಾಸ ದೇವರು ಕಲಿಯುಗದ ಸ್ಥಿತಿಯನ್ನು ವರ್ಣಿಸಿದುದು.

ಕ್ರಮಗಳ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

* ಕಲಿಯುಗದ ವರ್ಣನೆ.
* ವೇದವ್ಯಾಸ ದೇವರೇ ಮೊದಲಾದವರ ನಿರ್ಗಮನ : ಜನಮೇಜಯನ ಯಜ್ಞಕ್ಕೂ ಇಂದ್ರನು ವಿಘ್ನವನ್ನುಂಟು ಮಾಡಿದುದು : ಇಂದ್ರನಿಗೆ ಜನಮೇಜಯನ ಶಾಪ : ಋತ್ವಿಜರನ್ನು ಕಳುಹಿಸಿ ಕೊಟ್ಟುದು : ಪತ್ನಿಯನ್ನು ಗದರಿಸಿಕೊಂಡುದು : ವಿಶ್ವಾವಸುವು ಜನಮೇಜಯನನ್ನು ಸಮಾಧಾನ ಗೊಳಿಸಿದುದು.
* ಜನಮೇಜಯನು ಸಂತುಷ್ಟನಾಗಿ ರಾಜ್ಯ ಶಾಸನ ಮಾಡುವುದು : ಈ ಗ್ರಂಥದ ಪಠನ ಮತ್ತು ಶ್ರವಣಗಳ ಮಹಿಮೆ.

ಭವಿಷ್ಯಪರ್ವ-36 **570-589**

* ಪುಷ್ಕರದ ಪ್ರಾದುರ್ಭಾವದ ವಿಷಯದಲ್ಲಿ ಜನಮೇಜಯನ ಪ್ರಶ್ನೆ : ವೈಶಂಪಾಯನರ ಉತ್ತರ : ಭಗವಾನ್ ನಾರಾಯಣನ ಮಹಿಮೆಯ ಪ್ರತಿಪಾದನೆ.
* ಸತ್ಯಯುಗವೇ ಮೊದಲಾದ ಯುಗಗಳ ಪರಿಮಾಣ ವರ್ಣನೆ.
* ಪ್ರಳಯಾನಂತರ ಏಕಾರ್ಣವವಾದ ನೀರಿನಲ್ಲಿ ಶ್ರೀಮನ್ನಾರಾಯಣನು ಪವಡಿಸಿರುವುದು.
* ಏಕಾರ್ಣವದಲ್ಲಿ ವಿಷ್ಣು-ಮಾರ್ಕಂಡೇಯರ ಸಂವಾದ.
* ಪರಮಾತ್ಮನಿಂದ ಪ್ರಾಣಿಗಳ ಸೃಷ್ಟಿ : ಬ್ರಹ್ಮನು ಹುಟ್ಟಲು ಪರಮಾತ್ಮನ ನಾಭಿ ಕಮಲದಿಂದ ಕಮಲದ ಪ್ರಾದುರ್ಭಾವ.
* ನಾರಾಯಣನ ನಾಭಿ ಕಮಲದ ದಳಗಳಲ್ಲಿ ಸಮಸ್ತ ಲೋಕಗಳ ಕಲ್ಪನೆ.
* ಬ್ರಹ್ಮನೊಡನೆ ಮಧು-ಕೈಟಭರ ಸಂವಾದ : ವಿಷ್ಣುವಿನಿಂದ ಮಧು-ಕೈಟಭರ ಸಂಹಾರ.
* ಬ್ರಹ್ಮನ ಮೂವರು ಮಾನಸ ಪುತ್ರರಿಗೆ ಪರಮ ಪದದ ಪ್ರಾಪ್ತಿ: ಪುನಃ ಅವನಿಂದ ಮೈಥುನೀ ಸೃಷ್ಟಿಯ ವಿಸ್ತಾರ : ದಕ್ಷ ಮತ್ತು ದಕ್ಷ ಕನ್ಯೆಯರ ಸಂತಾನದ ವರ್ಣನೆ.
* ಜನಮೇಜಯನು ಮಹಾಭಾರತದಲ್ಲಿ ವರ್ಣಿಸಲ್ಪಟ್ಟಿರುವ ಚರಿತ್ರೆಗಳನ್ನು ಪ್ರಶಂಸಿಸಿದುದು.
* ಸೃಷ್ಟಿಗೆ ಸಂಬಂಧಿಸಿದ ವರ್ಣನೆಯ ಪ್ರಸಂಗದಲ್ಲಿ ಜ್ಞಾನ ಮತ್ತು ಯೋಗದ ವಿಚಾರ.
* ಮೈನಾಕಪರ್ವತದ ಸ್ಥಿತಿ : ಬ್ರಹ್ಮನು ಪ್ರಕಟವಾದುದು : ಮೇರುರ್ವತದ ಮೇಲೆ ಪರಮಾತ್ಮನಿಂದ ಮೇರುವಿನ ವಿಸ್ತಾರ : ಬ್ರಹ್ಮನ ಮೂಲಕವಾಗಿ ಸೃಷ್ಟಿ : ಬ್ರಹ್ಮಾ ಮತ್ತು ಬ್ರಹ್ಮರ ಸ್ವರೂಪ ವರ್ಣನೆ : ಗಂಗೆಯ ಪ್ರಾದುರ್ಭಾವ : ಸೋಮನ ಉತ್ಪತ್ತಿ: ಧರ್ಮದ ಪಾದಗಳು : ಯೋಗಸಾಧನೆ : ಐಶ್ವರ್ಯದಿಂದುಂಟಾಗುವ ಹಾನಿ: ವೇದಗಳ ಪ್ರಕಟನೆ : ಯಜ್ಞಪುರುಷನ ವರ್ಣನೆ : ಯೋಗವಿದನ ಮಹಿಮೆ: ಮೋಕ್ಷ ಸಂಬಂಧವಾದ ಕರ್ಮಗಳನ್ನು ಮಾಡುವ ವಿಧಾನ : ಕರ್ಮಫಲದ ತ್ಯಾಗದಿಂದ ಮುಕ್ತಿ.

ಭವಿಷ್ಯಪರ್ವ-37 **590-602**

* ಯೋಗದ ಉಪಸರ್ಗ : ಯೋಗಿಗೆ ವಿಷ್ಣು ರೂಪದಲ್ಲಿ ಸ್ಥಿತಿ : ಕರ್ಮಲಯದಿಂದ ಮುಕ್ತಿ: ಸಕಾಮ ಕರ್ಮಿಗಳಿಗೆ ಧೂಮ ಮಾರ್ಗದ ಗತಿ ಮತ್ತು ಪುನರಾವೃತ್ತಿ: ಜ್ಞಾನಿ ಮತ್ತು ಯೋಗಿಗೆ ತತ್ವದ ಸಾಕ್ಷಾತ್ಕಾರ : ಬ್ರಹ್ಮಯುಗದ ವರ್ಣನೆ.
* ಯೋಗಿಯ ಸ್ಥಿತಿ ಮತ್ತು ಅವನಿಗೆ ಒದಗಿಬರುವ ವಿಘ್ನಗಳ ವರ್ಣನೆ.

ಕ್ರಮಗಳ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

* ಬ್ರಹ್ಮನು ಯೋಗಧಾರಣ ಪೂರ್ವಕವಾಗಿ ಮಾಡಿದ ಮಾನಸಿಕ ಸೃಷ್ಟಿಯ ವರ್ಣನೆ.
* ಕ್ಷತ್ರಯುಗದ ಪ್ರಸಂಗದಲ್ಲಿ ಬ್ರಾಹ್ಮಣರ ವರ್ಣನೆ : ದಕ್ಷಪ್ರಜಾಪತಿಯ ಮೂಲಕವಾಗಿ ಪ್ರಾಣಿಗಳ ಮತ್ತು ನಾಲ್ಕು ವರ್ಣಗಳ ಸೃಷ್ಟಿ.
* ದಕ್ಷನು ತನ್ನ ಅರ್ಧಭಾಗವನ್ನು ಸ್ತ್ರೀರೂಪವನ್ನಾಗಿ ಕನ್ಯೆಯರನ್ನು ಸೃಷ್ಟಿಸಿದ್ದು : ಕಶ್ಯಪನಿಗೂ ಸೋಮನಿಗೂ ಕನ್ಯಾ ಪ್ರದಾನ ಮಾಡಿದ್ದು : ಕಶ್ಯಪ ಮತ್ತು ದಕ್ಷ ಕನ್ಯೆಯರ ಸಂತಾನದ ವರ್ಣನೆ.
* ಬ್ರಹ್ಮನ ಮಹಾಯಜ್ಞದ ವರ್ಣನೆ.
* ಬ್ರಹ್ಮನ ಯಜ್ಞ ಸ್ಥಳದ ಪುಣ್ಯ ಪ್ರದೇಶದಲ್ಲಿ ವಾಸಮಾಡಲು ವಿಪ್ರರು ಇಚ್ಛಿಸಿದುದು.

ಭವಿಷ್ಯಪರ್ವ-38 **603-616**

* ನಾರದನೇ ಮೊದಲಾದವರಿಂದ ವಿಪ್ರರಿಗೆ ಮತ್ತು ಬ್ರಹ್ಮನಿಗೂ ಸತ್ಕಾರ : ಬ್ರಹ್ಮನು ಕಶ್ಯಪನಿಗೆ ಯಜ್ಞ ಮಾಡಲು ಆದೇಶವನ್ನಿತ್ತುದು : ದೇವ - ದಾನವರ ಯುದ್ಧ : ವಿಷ್ಣುವಿನಿಂದ ಮಧು ರಾಕ್ಷಸನ ಪರಾಜಯ.
* ಮಧು-ವಿಷ್ಣು - ಇವರ ಘೋರಯುದ್ಧ : ದೇವರ್ಷಿಗಳಿಂದ ವಿಷ್ಣುವಿನ ಸ್ತುತಿ: ಹಯಗ್ರೀವ ರೂಪಧರನಾದ ವಿಷ್ಣುವಿನಿಂದ ಮಧು ರಾಕ್ಷಸನ ಸಂಹಾರ : ಪೃಥ್ವಿಗೆ ಮೇದಿನೀ ಎಂಬ ಹೆಸರು ಬಂದುದು.
* ಮಧುವಿನ ಸಂಹಾರದಿಂದಾಗಿ ಸಮಸ್ತ ಪ್ರಾಣಿಗಳ ಹರ್ಷ : ಪರ್ವತಗಳ ಮತ್ತು ವಸಂತ ಋತುವಿನ ವರ್ಣನೆ : ಮಧುವಾಹಿನೀ ಎಂಬ ನದಿಯು ಪ್ರಕಟವಾದುದು : ಗೌರೀ ಸಿದ್ಧಿಯ ಮಹಿಮೆ.
* ಪುಷ್ಕರದಲ್ಲಿ ವಿಷ್ಣು ಪ್ರಮುಖರಾದ ದೇವತೆಗಳು ತಪಸ್ಸು ಮಾಡಿದ್ದು : ತಪಸ್ಸಿನ ಪ್ರಭಾವದ ವರ್ಣನೆ.
* ತಪಸ್ಸಿನ ಪ್ರಭಾವದಿಂದ ದೇವತೆಗಳ ಉತ್ಕರ್ಷ.

ಭವಿಷ್ಯಪರ್ವ-39 **617-640**

* ಪೃಥುವಿನ ರಾಜ್ಯಾಭಿಷೇಕ : ದೇವ-ದಾನವರಿಂದ ಸಮುದ್ರಮಂಥನ : ಸಮುದ್ರದಲ್ಲಿ ಇತರ ರತ್ನಗಳೊಡನೆ ಅಮೃತವೂ ಪ್ರಕಟವಾದುದು : ರಾಹುವಿನ ಶಿರಚ್ಛೇದ.
* ಬಲಿ ಚಕ್ರವರ್ತಿಯ ಯಜ್ಞದ ಸಮಯದಲ್ಲಿ ವಾಮನನು ಬಲಿ ಚಕ್ರವರ್ತಿಗೆ ಸೇರಿದ್ದ ಮೂರು ಲೋಕಗಳನ್ನು ಅಪಹರಿಸಿದುದು : ಕಾಲಾಂತರದಲ್ಲಿ ದೇವತೆಗಳಿಂದ ಬಲಿ ಚಕ್ರವರ್ತಿಯ ರಾಜ್ಯಾಭಿಷೇಕ.
* ದಕ್ಷ ಯಜ್ಞ ವಿಧ್ವಂಸನ.
* ವರಾಹಾವತಾರದ ಉಪಕ್ರಮ.
* ಭಗವಾನ್ ಯಜ್ಞ ವರಾಹ ದೇವರು ಪೃಥ್ವಿಯನ್ನು ಉದ್ಧರಿಸಿದುದು.
* ಭಗವಾನ್ ವರಾಹ ದೇವರು ವಿಭಿನ್ನ ದಿಕ್ಕುಗಳಲ್ಲಿ ಹಲವಾರು ಪರ್ವತಗಳನ್ನೂ ನದಿಗಳನ್ನೂ ನಿರ್ಮಿಸಿದುದು.
* ಜಗತ್ ಸೃಷ್ಟಿಯ ವರ್ಣನೆ.
* ಬ್ರಹ್ಮನು ವಿಭಿನ್ನ ಅಧಿಪತಿಗಳನ್ನು ನಿಯಮಿಸಿದುದು.
* ದೇವಾಸುರ ಸಂಗ್ರಾಮ : ಹಿರಣ್ಯಾಕ್ಷನಿಂದ ಇಂದ್ರನ ಸ್ತಂಭನ.

ಕ್ರಮಗಳ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

* ಭಗವಾನ್ ವರಾಹ ದೇವರಿಂದ ಹಿರಣ್ಯಾಕ್ಷನ ಸಂಹಾರ.
* ದೇವತೆಗಳಿಗೆ ಅವರವರ ಪ್ರಭುತ್ವದ ಪುನಃ ಪ್ರಾಪ್ತಿ: ದೇವರಾಜನಾದ ಇಂದ್ರನು ಸಮಸ್ತ ಲೋಕಗಳಿಗೂ ಅಧಿಪತಿಯಾದುದು : ಸದಸತ್ಪರುಷರಿಗೆ ಯಥೋಚಿತವಾದ ಗತಿಯನ್ನು ಹೊಂದಿಸುವಂತೆ ಆದೇಶ ನೀಡಿ ಭಗವಂತನು ಅಂತರ್ಹಿತನಾದುದು : ದೇವೇಂದ್ರನು ಪರ್ವತಗಳ ರೆಕ್ಕೆಗಳನ್ನು ಕತ್ತರಿಸಿದುದು.

ಭವಿಷ್ಯಪರ್ವ-40 **641-653**

* ಹಿರಣ್ಯಕಶಿಪುವಿನ ತಪಸ್ಸು : ವರ ಪ್ರಾಪ್ತಿ: ಅತ್ಯಾಚಾರ : ದೇವತೆಗಳಿಗೆ ಬ್ರಹ್ಮನ ಆಶ್ವಾಸನೆ : ನರಸಿಂಹಾವತಾರ : ಹಿರಣ್ಯಕಶಿಪುವಿನ ಸಭಾ ಪ್ರವೇಶ : ಸಭೆಯ ವರ್ಣನೆ.
* ಭಗವಾನ್ ನರಸಿಂಹ ದೇವರು ದೇವ-ಗಂಧರ್ವ ಅಪ್ಸರೆಯರಿಂದಲೂ ದೈತ್ಯರಿಂದಲೂ ಸೇವಿಸಲ್ಪಡುತ್ತಿದ್ದ ಹಿರಣ್ಯಕಶಿಪುವನ್ನು ಕಂಡುದು.
* ನರಸಿಂಹ ದೇವರ ಶರೀರದಲ್ಲಿ ಪ್ರಹ್ಲಾದನು ಮೂರು ಲೋಕಗಳನ್ನೂ ನೋಡಿದುದು.
* ಹಿರಣ್ಯಕಶಿವು ಮತ್ತು ಅವನ ಅನುಯಾಯಿಗಳು ನರಸಿಂಹ ದೇವರ ಮೇಲೆ ನಾನಾ ಪ್ರಕಾರವಾದ ಅಸ್ತ್ರಗಳನ್ನು ಪ್ರಯೋಗಿಸಿದುದು.
* ದೈತ್ಯರ ಪ್ರಹಾರ ಮತ್ತು ಅವರ ಮಾಯೆಗಳು ನಿಷ್ಫಲವಾದುದು.
* ದೈತ್ಯರ ವಿನಾಶಸೂಚಕವಾದ ಉತ್ಪಾತಗಳು : ಹಿರಣ್ಯಕಶಿಪುವು ಗದೆಯನ್ನೆತ್ತಿಕೊಂಡು ನರಸಿಂಹ ದೇವರನ್ನು ಆಕ್ರಮಿಸಲು ಹೋದುದು : ಹೆಜ್ಜೆಗಳ ಗಡುಸಿನಿಂದ ಪೃಥ್ವಿ-ಪರ್ವತ-ನದಿ-ದಿಕ್ಕುಗಳು.
* ದೇವತೆಗಳ ಪ್ರಾರ್ಥನೆಯಂತೆ ನರಸಿಂಹ ದೇವರು ಹಿರಣ್ಯಕಶಿಪುವನ್ನು ಸಂಹರಿಸಿದುದು : ಬ್ರಹ್ಮಪುರಸ್ಸರರಾದ ದೇವತೆಗಳು ಮಾಡಿದ ನರಸಿಂಹ ಸ್ತೋತ್ರ.
* ವಾಮನಾವತಾರದ ಉಪಕ್ರಮ : ಬಲಿ ಚಕ್ರವರ್ತಿಯ ಪಟ್ಟಾಭಿಷೇಕ : ಮೂರು ಲೋಕಗಳನ್ನೂ ಜಯಿಸಲು ದೈತ್ಯರು ಬಲಿಯನ್ನು ಪ್ರೋತ್ಸಾಹಿಸಿದುದು.
* ದೇವತೆಗಳೊಡನೆ ಯುದ್ಧ ಮಾಡಲು ದೈತ್ಯರ ಸಿದ್ಧತೆ.
* ಪುಲೋಮಾ, ಹಯಗ್ರೀವ, ಪ್ರಹ್ಲಾದ ಮತ್ತು ಶಂಬರಾಸುರರಿಂದ ಯುದ್ಧಕ್ಕೆ ಸಿದ್ಧತೆ.
* ಇಂದ್ರನೇ ಮೊದಲಾದ ಲೋಕಪಾಲಕರಿಂದ ಯುದ್ಧಕ್ಕೆ ಸಿದ್ಧತೆ ಮತ್ತು ಪ್ರಯಾಣ.

ಭವಿಷ್ಯಪರ್ವ-41 **654-678**

* ಅನುಹ್ಲಾದ, ವಿರೋಚನ,ಕುಜಂಭ, ಅಸಿಲೋಮಾ, ವೃತ್ರ, ಏಕಚಕ್ರ, ವೃತ್ರಭ್ರಾತಾ, ರಾಹು, ವಿಪ್ರಚಿತ್ತ, ಕೇಶಿ, ವೃಷಪರ್ವಾ ಮತ್ತು ಬಲಿ-ಇವರು ಯುದ್ಧ ಸನ್ನದ್ಧರಾಗಿ ರಣಭೂಮಿಗೆ ತರಳಿದುದು.
* ಇಂದ್ರನೇ ಮೊದಲಾದ ಲೋಕಪಾಲಕರಿಂದ ಯುದ್ಧಕ್ಕೆ ಸಿದ್ಧತೆ ಮತ್ತು ಪ್ರಯಾಣ.
* ದೇವತೆಗಳಿಗೂ ಅಸುರರಿಗೂ ದ್ವಂದ್ವ ಯುದ್ಧ: ಭಯಂಕರವಾದ ಉತ್ಪಾತಗಳು: ಬ್ರಹ್ಮ-ಸನಕಾದಿ ಯೋಗೇಶ್ವರರು ಯುದ್ಧವನ್ನು ನೋಡುವ ಸಲುವಾಗಿ ಆಗಮಿಸಿದುದು.

ಕ್ರಮಗಳ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

* ಯಜ್ಞದ ರೂಪದಲ್ಲಿ ದೇವಾಸುರರ ಯುದ್ಧದ ವರ್ಣನೆ : ಎರಡು ಸೈನ್ಯದ ನಡುವೆ ಭಯಂಕರವಾದ ಯುದ್ಧ ವರ್ಣನೆ.
* ನಮುಚಿಯಿಂದ ಧರ ಎಂಬ ಹೆಸರಿನ ವಸುವಿನ ಪರಾಜಯ : ಮಯಾಸುರನಿಂದ ತ್ವಷ್ಟುವಿನ ಪರಾಜಯ : ವಾಯು ದೇವನಿಂದ ಪುಲೋಮನ ಪರಾಜಯ : ಹಯಗ್ರೀವನಿಂದ ಪೂಷನ ಪರಾಜಯ : ಶಂಬರಾಸುರನಿಂದ ಭಗನ ಪರಾಜಯ : ಚಂದ್ರದೇವನಿಂದ ನಮುಚಿ ಮತ್ತು ದೈತ್ಯ ಸೈನ್ಯದ ಪರಾಜಯ.
* ದೇವ-ದಾನವರ ಘೋರ ಸಂಗ್ರಾಮ: ವಿರೋಚನ - ವಿಷ್ವಕ್ಸೇನರ ಯುದ್ಧ : ಕುಜಂಭನು ಅಂಶ ದೇವತೆಯೊಡನೆ ಯುದ್ಧ ಮಾಡುತ್ತಾ ತನ್ನ ಘೋರವಾದ ಪರಾಕ್ರಮವನ್ನು ಪ್ರಕಟಿಸಿದುದು.
* ದೇವಾಸುರ ಸಂಗ್ರಾಮದಲ್ಲಿ ಕುಜಂಭ ಅಸಿಲೋಮಾ ಮತ್ತು ವೃತ್ರಾಸುರರ ಉತ್ಕರ್ಷದ ವರ್ಣನೆ : ಹರಿ ಮತ್ತು ಅಶ್ವಿನೀಕುಮಾರರ ಪರಾಜಯ.
* ದೇವ ಶ್ರೇಷ್ಠನಾದ ರಣಾಜಿಗೂ ಮತ್ತು ದೈತ್ಯ ಶ್ರೇಷ್ಠನಾದ ಏಕಚಕ್ರನಿಗೂ ಮೃಗವ್ಯಾಧನಿಗೂ ಮತ್ತು ಬಲಾಸುರನಿಗೂ ಅಜೈಕಪಾದನಿಗೂ ಮತ್ತು ರಾಹುವಿಗೂ-ಸುಧೂಮ್ರಾಕ್ಷನಿಗೂ ಮತ್ತು ಕೇಶಿಗೂ ನಡೆದ ಯುದ್ಧಗಳ ವರ್ಣನೆ.
* ವೃಷಪರ್ವನಿಗೂ ಮತ್ತು ನಿಷ್ಕುಂಭನೆಂಬ ಹೆಸರಿನ ವಿಶ್ವೇದೇವತೆಗೂ ಪ್ರಹ್ಲಾದನಿಗೂ ಮತ್ತು ಕಾಲನಿಗೂ ನಡೆದ ಘೋರ ಯುದ್ಧದ ವರ್ಣನೆ.
* ಕುಬೇರ ಮತ್ತು ಅನುಹ್ಲಾದರ ಭಯಂಕರ ಯುದ್ಧ.
* ವರುಣ ಮತ್ತು ವಿಪ್ರಚಿತ್ತಿ ಇವರ ಯುದ್ಧ: ವರುಣನ ಪರಾಜಯ.
* ಅಗ್ನಿಯಿಂದ ದೈತ್ಯರ ಪರಾಜಯ : ಬೃಹಸ್ಪತಿಯು ಮಾಡಿದ ಅಗ್ನಿಸ್ತೋತ್ರ.
* ಬಲಿ ಮತ್ತು ಪ್ರಹ್ಲಾದರ ಸಂಭಾಷಣೆ : ಬಲಿಯು ದೇವ ಸೇನೆಯನ್ನು ಆಕ್ರಮಿಸಿದುದು.
* ಬಲಿ ಮತ್ತು ಇಂದ್ರರ ಯುದ್ಧ: ರಣರಂಗದಿಂದ ಇಂದ್ರನ ಪಲಾಯನ.
* ವಿಜಯಗಳಿಸಿದ ಬಲಿರಾಜನ ಬಳಿಗೆ ರಾಜಲಕ್ಷ್ಮಿಯೇ ಮೊದಲಾದ ವೈಭವಗಳು ಆಗಮಿಸಿದುದು.
* ಅದಿತಿ ಮತ್ತು ಕಶ್ಯಪರ ಜೊತೆಯಲ್ಲಿ ದೇವತೆಗಳು ಬ್ರಹ್ಮಲೋಕಕ್ಕೆ ಹೋದುದು.
* ಬ್ರಹ್ಮನ ಆಜ್ಞೆಯಂತೆ ಕಶ್ಯಪನೂ ಮತ್ತು ಅದಿತಿ ಸಹಿತರಾದ ದೇವತೆಗಳೂ ಕ್ಷೀರಸಾಗರದ ಉತ್ತರ ತೀರಕ್ಕೆ ಹೋಗಿ ತಪಸ್ಸಿನಲ್ಲಿ ಮಗ್ನರಾದುದು.
* ಕಶ್ಯಪನು ಮಾಡಿದ ಪರಮ ಪುರುಷ ಪರಮಾತ್ಮನ ಸ್ತೋತ್ರ.
* ಅದಿತಿ ಕಶ್ಯಪ ಪ್ರಮುಖರಾದ ದೇವತೆಗಳಿಗೆ ಭಗವಂತನ ವರದಾನ : ಅದಿತಿಯ ಗರ್ಭದಲ್ಲಿ ಭಗವಂತನು ಪ್ರಕಟವಾದುದು.
* ಋಷಿಗಳು ಮತ್ತು ವಿವಿಧ ದೇವತೆಗಳು ವಾಮನನಿಗೆ ನಮಸ್ಕಾರ ಮಾಡಿದುದು : ಭಗವಂತನ ವೈಶಿಷ್ಟ್ಯದ ವರ್ಣನೆ : ದೇವತೆಗಳಿಂದ ಅವರ ಮನೋರಥವೇನೆಂಬುದನ್ನು ತಿಳಿದು ಭಗವಂತನು ಬೃಹಸ್ಪತಿಯೊಡನೆ ಬಲಿಯ ಯಾಗ ಶಾಲೆಗೆ ಹೋದುದು: ಅಲ್ಲಿ ತನ್ನ ಮಾತಿನ ಮೋಡಿಯಿಂದ ಸಮಸ್ತರನ್ನೂ ಚಕಿತಗೊಳಿಸಿದುದು : ಬಲಿಯನ್ನು ಪರಿಚಯ ಮಾಡಿಕೊಂಡುದು : ಬಲಿಯು ವಾಮನನ ಆಗಮನದ ಕಾರಣವನ್ನು ಕೇಳಿದುದು.

ಕ್ರಮಗಳ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

* ವಾಮನನಿಂದ ಯಜ್ಞದ ಪ್ರಶಂಸೆ : ಬಲಿಯು ವರವನ್ನು ಕೇಳುವಂತೆ ವಾಮನನಿಗೆ ಹೇಳಲು ವಾಮನನು ಮೂರು ಹೆಜ್ಜೆಗಳಷ್ಟು ಭೂಮಿಯನ್ನು ಬಲಿಯಿಂದ ಯಾಚಿಸಿದುದು: ಶುಕ್ರಾಚಾರ್ಯ-ಪ್ರಹ್ಲಾದರು ದಾನ ಕೊಡದಂತೆ ಬಲಿಯನ್ನು ತಡೆದುದು : ಬಲಿಯು ದಾನ ಕೊಡುವುದನ್ನು ಸಮರ್ಥಿಸಿ ಮೂರು ಹೆಜ್ಜೆಗಳಷ್ಟು ಭೂಮಿಯನ್ನು ವಾಮನನಿಗೆ ದಾನವಾಗಿ ಕೊಟ್ಟುದು: ವಾಮನನ ವಿರಾಟ್ ರೂಪದ ಪ್ರದರ್ಶನ.
* ಭಗವಂತನು ತನ್ನ ಹೆಜ್ಜೆಯಿಂದ ಮೂರು ಲೋಕಗಳನ್ನೂ ಅಳೆದು ವಿಭಾಗಿಸಿ ಕೊಟ್ಟುದು : ಬಲಿಗೆ ಪಾತಾಳಲೋಕವನ್ನು ಕೊಟ್ಟು ಅಲ್ಲಿಯೇ ಇರುವಂತೆ ಹೇಳಿ ಕಳುಹಿಸಿಕೊಟ್ಟುದು ಮತ್ತು ಅವನ ಜೀವನದ ವ್ಯವಸ್ಥೆ ಮಾಡಿದುದು : ನಾರದರಿಂದ ಬಲಿಗೆ ಮೋಕ್ಷವಿಂಶಕ ಸ್ತೋತ್ರದ ಉಪದೇಶ : ಆ ಸ್ತೋತ್ರದ ಪ್ರಭಾವದಿಂದ ಬಲಿಯು ಬಂಧನದಿಂದ ಮುಕ್ತನಾದುದು: ಸ್ತೋತ್ರದ ಮಹಿಮೆ.

ಭವಿಷ್ಯಪರ್ವ-42 **679-708**

* ರುಕ್ಮಿಣಿ ದೇವಿಯು ಪುತ್ರಪ್ರಾಪ್ತಿಗಾಗಿ ಶ್ರೀಕೃಷ್ಣನನ್ನು ಪ್ರಾರ್ಥಿಸಿದುದು : ಭಗವಂತನು ಆಶ್ವಾಸನೆ ನೀಡಿ ಕೈಲಾಸಕ್ಕೆ ಹೋಗಲು ನಿಶ್ಚಯಿಸಿದುದು.
* ಭಗವಾನ್ ಶ್ರೀಕೃಷ್ಣನು ಯಾದವರ ಸಭೆಯಲ್ಲಿ ತನ್ನ ಕೈಲಾಸ ಯಾತ್ರೆಯ ಸಮಾಚಾರವನ್ನು ಪ್ರಕಟಪಡಿಸಿದುದು : ನಗರದ ರಕ್ಷಣೆಯ ವಿಷಯದಲ್ಲಿ ಜಾಗರೂಕರಾಗಿರಬೇಕೆಂದು ಯಾದವರಿಗೆ ಆದೇಶ ನೀಡಿದುದು.
* ನಗರದ ರಕ್ಷಣೆಯ ವಿಷಯದಲ್ಲಿ ಶ್ರೀಕೃಷ್ಣ ಸಾತ್ಯಕಿ ಮತ್ತು ಉದ್ಧವರ ಮಾತುಕತೆ : ಬಲರಾಮನೇ ಮೊದಲಾದ ಯಾದವರಿಗೆ ಪಟ್ಟಣದ ರಕ್ಷಣಾ ಭಾರವನ್ನು ವಹಿಸಿಕೊಟ್ಟು ಶ್ರೀಕೃಷ್ಣನು ಕೈಲಾಸ ಯಾತ್ರೆಗೆ ಸಿದ್ಧನಾದುದು.
* ಗರುಡಾರೂಢನಾಗಿ ಶ್ರೀಕೃಷ್ಣನು ಬದರಿಕಾಶ್ರಮಕ್ಕೆ ತೆರಳಿದುದು : ಮಾರ್ಗದಲ್ಲಿ ದೇವತೆಗಳು ಮತ್ತು ಮುನಿಗಳು ಶ್ರೀಕೃಷ್ಣನನ್ನು ಸ್ತುತಿಸಿದುದು.
* ದೇವತೆಗಳಿಂದ ಸಹಿತನಾಗಿದ್ದ ಶ್ರೀಕೃಷ್ಣನು ಅಲ್ಲಿದ್ದ ಋಷಿ-ಮುನಿಗಳಿಂದ ಸತ್ಕೃತನಾದುದು.
* ಭಗವಾನ್ ಶ್ರೀಕೃಷ್ಣನ ಸಮಾಧಿಯೋಗ : ಕೋಲಾಹಲ : ಅವನ ಬಳಿಗೆ ಮೃಗ-ಪಕ್ಷಿಗಳೆಲ್ಲವೂ ಧಾವಿಸಿ ಬಂದುದು.
* ಶ್ರೀಕೃಷ್ಣನ ಸನ್ನಿಧಿಗೆ ಎರಡು ಪಿಶಾಚಗಳ ಆಗಮನ.
* ಘಂಟಾಕರ್ಣ- ಶ್ರೀಕೃಷ್ಣರ ಪರಸ್ಪರ ಪರಿಚಯ : ಘಂಟಾಕರ್ಣನ ವಿಷ್ಣುಸ್ತುತಿ ಮತ್ತು ಸಮಾಧಿ ಪ್ರಾಪ್ತಿ.
* ಪಿಶಾಚಕ್ಕೆ ಸಮಾಧಿ ಸ್ಥಿತಿಯಲ್ಲಿ ಭಗವಂತನ ಸಾಕ್ಷಾತ್ಕಾರವಾದುದು.
* ಘಂಟಾಕರ್ಣನಿಂದ ಶ್ರೀಹರಿಯ ಸ್ತುತಿ.
* ಘಂಟಾಕರ್ಣನು ಭಗವಂತನಿಗೆ ಉಪಹಾರವನ್ನು ಸಮರ್ಪಿಸಿದುದು : ಶ್ರೀಕೃಷ್ಣನಿಂದ ಪಿಶಾಚಿಗೆ ವರದಾನ.

ಭವಿಷ್ಯಪರ್ವ-43 **709-726**

* ಶ್ರೀಕೃಷ್ಣನು ಕೈಲಾಸಪರ್ವತಕ್ಕೆ ಹೋಗಿ ಅಲ್ಲಿ ಹನ್ನೆರಡು ವರ್ಷಗಳ ಕಾಲ ಘೋರವಾದ ತಪಸ್ಸನ್ನು ಆಚರಿಸಿದುದು.
* ತಪಸ್ಸನ್ನು ಮಾಡುತ್ತಿದ್ದ ಶ್ರೀಕೃಷ್ಣನ ಬಳಿಗೆ ಇಂದ್ರನೇ ಮೊದಲಾದ ದೇವತೆಗಳೂ ಉಮಾಸಮೇತನಾಗಿ ರುದ್ರ ದೇವರು ಆಗಮಿಸಿದುದು.

ಕ್ರಮಗಳ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

* ಪಿಶಾಚಗಳೊಡನೆಯೂ, ಮುನಿಗಳೊಡನೆಯೂ, ಅಪ್ಸರೆಯರೊಡನೆಯೂ ಕೂಡಿಕೊಂಡು ಉಮಾ ಸಹಿತನಾದ ರುದ್ರ ದೇವರೂ ಶ್ರೀಕೃಷ್ಣನ ಬಳಿಗೆ ಹೋದುದು.
* ಶ್ರೀಕೃಷ್ಣನ ರುದ್ರ ದೇವರ ಸ್ತೋತ್ರ.
* ರುದ್ರ ದೇವರು ಮಾಡಿದ ವಿಷ್ಣುಸ್ತೋತ್ರ.
* ರುದ್ರ ದೇವರು ಋಷಿಗಳಿಗೆ ಶ್ರೀಕೃಷ್ಣ ತತ್ವವನ್ನು ಉಪದೇಶಿಸಿದುದು.
* ರುದ್ರ ದೇವರು ಮಾಡಿದ ಶ್ರೀಕೃಷ್ಣ ಸ್ತೋತ್ರ : ಶ್ರೀಕೃಷ್ಣನು ಕೈಲಾಸದಿಂದ ಬದರಿಕಾಶ್ರಮಕ್ಕೆ ಪ್ರಯಾಣ ಮಾಡಿದುದು.

ಭವಿಷ್ಯಪರ್ವ-44 **727-740**

* ಪೌಂಡ್ರಕನು ರಾಜರ ಸಭೆಯಲ್ಲಿ ಶಂಖ-ಚಕ್ರಗಳನ್ನು ಧರಿಸಿ ತಾನೇ ವಾಸುದೇವನೆಂದು ಘೋಷಿಸಿದುದು.
* ಪೌಂಡ್ರಕನ ಅರಮನೆಗೆ ನಾರದರ ಆಗಮನ ಮತ್ತು ಅವನೊಡನೆ ಮಾತುಕತೆ.
* ನಾರದರು ಶ್ರೀಕೃಷ್ಣನ ಬಳಿಗೆ ಹೋದುದು : ಪೌಂಡ್ರಕನಿಂದ ದ್ವಾರಕೆಯ ಆಕ್ರಮಣ.
* ಯಾದವ ಸೈನಿಕರಿಂದ ಪೌಂಡ್ರಕನ ಸೈನಿಕರ ಸಂಹಾರ : ಏಕಲವ್ಯನಿಂದ ಯಾದವ ಸೈನಿಕರ ಮರ್ದನ.
* ಪೌಂಡ್ರಕನು ದ್ವಾರಕಾ ಪಟ್ಟಣದ ಪೂರ್ವದ್ವಾರವನ್ನು ಭೇದಿಸಲು ಪ್ರಯತ್ನಿಸಿದುದು : ಸಾತ್ಯಕಿಯೇ ಮೊದಲಾದ ಯದುವೀರರು ದ್ವಾರಕೆಯ ರಕ್ಷಣೆಗಾಗಿ ಹೊರಟುದು : ಸಾತ್ಯಕಿಯು ವಾಯವ್ಯಾಸ್ತ್ರದ ಮೂಲಕ ಪೌಂಡ್ರಕನ ಸೇನೆಯು ಪಲಾಯನ ಮಾಡುವಂತೆ ಮಾಡಿದುದು: ಪೌಂಡ್ರಕನು ಯದುವೀರರನ್ನು ಯುದ್ಧಕ್ಕೆ ಆಹ್ವಾನಿಸಿದುದು : ಪೌಂಡ್ರಕನ ಗರ್ವಯುಕ್ತವಾದ ಮಾತುಗಳು.
* ಪೌಂಡ್ರಕ-ಸಾತ್ಯಕಿಯರ ಯುದ್ಧ.
* ಸಾತ್ಯಕಿ-ಪೌಂಡ್ರಕರ ಯುದ್ಧ.
* ಬಲರಾಮ ಮತ್ತು ಏಕಲವ್ಯರ ಯುದ್ಧ : ಬಲರಾಮನಿಂದ ನಿಷಾದರ ಸಂಹಾರ.
* ಏಕಲವ್ಯ-ಬಲರಾಮರ ಯುದ್ಧ; ಪೌಂಡ್ರಕ-ಸಾತ್ಯಕಿಗಳ ಯುದ್ಧ.
* ದ್ವಾರಕೆಗೆ ಶ್ರೀಕೃಷ್ಣನ ಆಗಮನ : ಪೌಂಡ್ರಕ ವಾಸುದೇವನೊಡನೆ ಮಾತುಕತೆ.
* ಪೌಂಡ್ರಕ-ಶ್ರೀಕೃಷ್ಣರ ಯುದ್ಧ : ಪೌಂಡ್ರಕನ ವಧೆ.
* ಏಕಲವ್ಯನ ದ್ವೀಪಾಂತರಗಮನ : ಶ್ರೀಕೃಷ್ಣನು ಯಾದವರಿಗೆ ತನ್ನ ಕೈಲಾಸ ಯಾತ್ರೆಯ ವೃತ್ತಾಂತವನ್ನು ಸಂಕ್ಷೇಪವಾಗಿ ತಿಳಿಸಿದುದು.
* ಅಂತಃಪುರದಲ್ಲಿ ರುಕ್ಮಿಣೀ-ಸತ್ಯಭಾಮೆಯರೊಡನೆ ಸೇರಿ ಯಾದವರನ್ನು ಸಂತೋಷಗೊಳಿಸಿದುದು.

ಭವಿಷ್ಯಪರ್ವ-45 **741-764**

* ಹಂಸ ಮತ್ತು ಡಿಭಿಕರ ವಿಷಯದಲ್ಲಿ ಜನಮೇಜಯನ ಪ್ರಶ್ನೆ.
* ಬ್ರಹ್ಮದತ್ತ ರಾಜನು ಭಗವಾನ್ ರುದ್ರ ದೇವನನ್ನು ಆರಾಧಿಸಿ ಹಂಸ-ಡಿಭಿಕರೆಂಬ ಇಬ್ಬರು ಮಕ್ಕಳನ್ನು ಪಡೆದುಕೊಂಡುದು : ರಾಜ ಸಖನಾದ ವಿಪ್ರ ಶ್ರೇಷ್ಯನಾದ ಮಿತ್ರಸಹನು ವಿಷ್ಣು ಭಗವಂತನನ್ನು ಆರಾಧಿಸಿ ಜನಾರ್ದನ ಎಂಬ ಹೆಸರಿನ ಮಗನನ್ನು ಪಡೆದುಕೊಂಡುದು.

ಕ್ರಮಗಳ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

* ಹಂಸ-ಡಿಭಿಕರ ತಪಸ್ಸು : ವರಪ್ರಾಪ್ತಿ : ಜನಾರ್ದನ ಸಹಿತವಾಗಿ ಆ ಇಬ್ಬರು ರಾಜಕುಮಾರರಿಗೂ ವಿವಾಹ ಮಹೋತ್ಸವ ನ ಮೂವರು ಕುಮಾರರ ಧರ್ಮನಿಷ್ಠೆ.
* ರಾಜಕುಮಾರರ ಬೇಟೆ.
* ಹಂಸ-ಡಿಭಿಕರು ಸೇನಾಸಮೇತರಾಗಿ ಪುಷ್ಕರದ ದಂಡೆಯಲ್ಲಿ ವಿಶ್ರಾಂತರಾದುದು : ಮಹರ್ಷಿಗಳಾದ ಕಶ್ಯಪರು ಮಾಡುತ್ತಿದ್ದ ಯಜ್ಞ ಮಂಟಪಕ್ಕೂ ಮತ್ತು ದುರ್ವಾಸರೇ ಮುಂತಾದ ಯತಿಗಳ ಬಳಿಗೂ ಹೋಗಿ ಅವರಲ್ಲಿ ಮತ್ತು ಅವರ ಕರ್ಮಗಳಲ್ಲಿ ಆ ಶ್ರದ್ಧೆಯನ್ನು ತೋರ್ಪಡಿಸಿದುದು.
* ಹಂಸ-ಡಿಭಿಕರಿಂದ ಸನ್ಯಾಸ ಧರ್ಮದ ನಿಂದೆ : ಜನಾರ್ದನನಿಂದ ಸನ್ಯಾಸ ಧರ್ಮದ ಪ್ರಶಂಸೆ.
* ದುರ್ವಾಸರ ಕೋಪ : ಹಂಸನ ತಿರಸ್ಕಾರ : ಹಂಸ-ಡಿಭಿಕರಿಗೆ ದುರ್ವಾಸರ ಶಾಪ : ಸತ್ಪುರುಷನಾದ ಜನಾರ್ದನನಿಗೆ ವರದಾನ.
* ದುರ್ವಾಸರೇ ಮೊದಲಾದ ಮಹರ್ಷಿಗಳು ದ್ವಾರಕೆಗೆ ತೆರಳಿದುದು.
* ಶ್ರೀಕೃಷ್ಣನ ಗೋಲಕ್ರಿಡೆ : ದುರ್ವಾಸರು ತನ್ನ ಶಿಷ್ಯರೊಡನೆ ಸುಧರ್ಮಾ ಸಭೆಯನ್ನು ಪ್ರವೇಶಿಸಿದುದು : ಶ್ರೀಕೃಷ್ಣ ಪ್ರಮುಖರಾದ ಯಾದವರಿಂದ ಅವರಿಗೆ ಯಥೋಚಿತ ಸತ್ಕಾರ : ದುರ್ವಾಸರ ಆಗಮನದ ಕಾರಣವನ್ನು ಶ್ರೀಕೃಷ್ಣನು ಪ್ರಶ್ನಿಸಿದುದು : ದುರ್ವಾಸರಿಂದ ಭಗವಂತನ ಸ್ತುತಿ : ಶ್ರೀಕೃಷ್ಣನ ಪ್ರಶ್ನೆಗಳಿಗೆ ದುರ್ವಾಸರ ಉತ್ತರ: ತಮಗೊದಗಿರುವ ದುರ್ದಶೆಯ ವೃತ್ತಾಂತವನ್ನು ದುರ್ವಾಸರು ಶ್ರೀಕೃಷ್ಣನಿಗೆ ತಿಳಿಸಿದುದು.
* ಶ್ರೀಕೃಷ್ಣ ಭಗವಂತನು ಹಂಸ - ಡಿಭಿಕರನ್ನು ಸಂಹರಿಸುವುದಾಗಿ ಪ್ರತಿಜ್ಞೆ ಮಾಡಿದುದು : ದುರ್ವಾಸರಿಂದ ಕ್ಷಮೆಯನ್ನು ಪ್ರಾರ್ಥಿಸಿ ಯತಿಗಳೆಲ್ಲರಿಗೂ ಭೋಜನ ಮಾಡಿಸಿದುದು.

ಭವಿಷ್ಯಪರ್ವ-46 **765-787**

* ಜನಾರ್ದನನು ಹಂಸ ರಾಜಕುಮಾರನನ್ನು ಸಮಾಧಾನಗೊಳಿಸಿದುದು : ಜನಾರ್ದನನ ಮಾತಿಗೆ ಹಂಸನ ತಿರಸ್ಕಾರ : ಜನಾರ್ದನನನ್ನು ದೂತನನ್ನಾಗಿ ದ್ವಾರಕೆಗೆ ಕಳುಹಿಸಿದುದು.
* ಜನಾರ್ದನನಿಗೆ ಜನಾರ್ದನನನ್ನು ದರ್ಶನ ಮಾಡುವ ಉತ್ಸುಕತೆ.
* ಜನಾರ್ದನನು ಸುಧರ್ಮಾ ಸಭೆಗೆ ಹೋಗಿ ಶ್ರೀಕೃಷ್ಣನನ್ನು ಸಂದರ್ಶಿಸಿ ಸಂತುಷ್ಟನಾದುದು : ಶ್ರೀಕೃಷ್ಣನ ಆಜ್ಞೆಯಂತೆ ಶ್ರೀಕೃಷ್ಣನ ಸ್ತೋತ್ರದ ಮೂಲಕವಾಗಿ ಹಂಸ-ಡಿಭಿಕರ ಸಂದೇಶವನ್ನು ಶ್ರೀಕೃಷ್ಣನಿಗೆ ಒಪ್ಪಿಸಿದುದು : ಸಂದೇಶವನ್ನು ಕೇಳಿದ ಯಾದವರ ಅಪಹಾಸ್ಯ.
* ಶ್ರೀಕೃಷ್ಣನಿಂದ ಸಂದೇಶವನ್ನು ಪಡೆದು ಜನಾರ್ದನನು ಹಿಂದಿರುಗಿದುದು.
* ಸಾತ್ಯಕಿಯೊಡನೆ ಜನಾರ್ದನನು ಸಾಲ್ವನಗರಕ್ಕೆ ಹೋದುದು : ಹಂಸನ ಭೇಟಿ: ಕಾರ್ಯ ಸಿದ್ಧಿಯ ವಿಷಯವಾಗಿ ಹಂಸನು ಜನಾರ್ದನನನ್ನು ಪ್ರಶ್ನಿಸಿದುದು.
* ಜನಾರ್ದನನು ಹಂಸ ರಾಜಕುಮಾರನಿಗೆ ಶ್ರೀಕೃಷ್ಣನ ದಿವ್ಯ ದರ್ಶನದಿಂದ ಉಂಟಾದ ಆನಂದವನ್ನು ವರ್ಣಿಸಿ ಹೇಳಿದುದು: ದ್ವಾರಕೆಯಲ್ಲಿ ಹಂಸನ ಸಂದೇಶದಿಂದುಂಟಾದ ಪ್ರತಿಕ್ರಿಯೆಯನ್ನು ತಿಳಿಸಿ ರಾಜಸೂಯ ಯಾಗವನ್ನು ಮಾಡದಿರುವಂತೆ ಸಲಹೆ ನೀಡಿದುದು : ಹಂಸನು ಜನಾರ್ದನನ ಸಲಹೆಯನ್ನು ಕ್ರೋಧ ಪೂರ್ವಕವಾಗಿ ತಿರಸ್ಕರಿಸಿದುದು : ಸಾತ್ಯಕಿಯು ಶ್ರೀಕೃಷ್ಣನ ಸಂದೇಶವನ್ನು ಹಂಸನಿಗೆ ತಿಳಿಸಿದುದು.

ಕ್ರಮಗಳ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

* ಹಂಸ-ಡಿಭಿಕರು ಸಾತ್ಯಕಿಯೊಡನೆ ಕ್ರೋಧ ಪೂರ್ವಕವಾಗಿ ಮಾತನಾಡಿದುದು : ದ್ವಾರಕೆಗೆ ಸಾತ್ಯಕಿಯ ಪ್ರಯಾಣ.
* ಸೇನಾ ಸಮೇತನಾದ ಶ್ರೀಕೃಷ್ಣನು ಪುಷ್ಕರ ಕ್ಷೇತ್ರದಲ್ಲಿ ಹಂಸ-ಡಿಭಿಕರನ್ನು ಪ್ರತೀಕ್ಷಿಸುತ್ತಿದ್ದುದು.
* ಪುಷ್ಕರ ಕ್ಷೇತ್ರಕ್ಕೆ ಹಂಸ-ಡಿಭಿಕರ ಆಗಮನ.
* ಎರಡು ಪಕ್ಷದ ಸೈನ್ಯಗಳ ನಡುವೆ ಘೋರ ಯುದ್ಧ.
* ಶ್ರೀಕೃಷ್ಣ ಮತ್ತು ವಿಚಕ್ರರ ಘೋರ ಯುದ್ಧ : ವಿಚಕ್ರನ ಸಂಹಾರ.

ಭವಿಷ್ಯಪರ್ವ-47 **788-811**

* ಹಂಸ-ಬಲರಾಮರ ಘೋರ ಯುದ್ಧ.
* ಸಾತ್ಯಕಿ ಮತ್ತು ಡಿಭಿಕರ ಯುದ್ಧ.
* ಹಿಡಿಂಬನೊಡನೆ ವಸುದೇವ ಉಗ್ರಸೇನರ ಯುದ್ಧ : ಬಲಭದ್ರನಿಂದ ಹಿಡಿಂಬನ ಸಂಹಾರ.
* ಗೋವರ್ಧನ ಪರ್ವತದ ಸಮೀಪದಲ್ಲಿ ಯದುವೀರರೊಡನೆ ಹಂಸ-ಡಿಭಿಕರ ಯುದ್ಧ : ಶ್ರೀಕೃಷ್ಣನಿಂದ ಭೂತೇಶ್ವರರ ಪರಾಜಯ : ಶ್ರೀಕೃಷ್ಣ ಮತ್ತು ಹಂಸರ ಘೋರಯುದ್ಧ.
* ಶ್ರೀಕೃಷ್ಣನಿಂದ ಹಂಸನ ಸಂಹಾರ.
* ಡಿಭಿಕನ ಆತ್ಮಹತ್ಯೆ.
* ಗೋಪ-ಗೋಪಿಯರೊಡನೆ ನಂದ ಯಶೋದೆಯರು ಗೋವರ್ಧನ ಪರ್ವತಕ್ಕೆ ಬಂದು ಶ್ರೀಕೃಷ್ಣ - ಬಲರಾಮರನ್ನು ಸಂಧಿಸಿದುದು.
* ದ್ವಾರಾಕೆಗೆ ಪ್ರಯಾಣ ಮಾಡುತ್ತಿದ್ದ ಶ್ರೀಕೃಷ್ಣನು ಮಧ್ಯದಲ್ಲಿ ಸಿಕ್ಕಿದ ಪುಷ್ಕರ ಕ್ಷೇತ್ರಕ್ಕೆ ತೆರಳಿದುದು : ಋಷಿಗಳನ್ನು ಸಂಧಿಸಿದುದು: ಋಷಿಗಳಿಂದ ಶ್ರೀಕೃಷ್ಣನ ಸ್ತೋತ್ರ.
* ಭಾರತ ಮತ್ತು ಹರಿವಂಶಗಳ ಶ್ರವಣ ವಿಧಿ ಮತ್ತು ಫಲ : ವಾಚಕನಿಗಿರಬೇಕಾದ ಗುಣಗಳು : ಪ್ರತ್ಯೇಕ-ಪ್ರತ್ಯೇಕ ಪರ್ವಗಳ ಶ್ರವಣಾ ನಂತರದಲ್ಲಿ ಕೊಡಬೇಕಾದ ದಾನ-ದಕ್ಷಿಣೆಗಳು : ಒಂದರಿಂದ ಹಿಡಿದು ಹತ್ತು ಪಾರಾಯಣ-ಪಾರಣೆಗಳ ಮಹತ್ವ ಮಹಾಭಾರತ ಮತ್ತು ಹರಿವಂಶಗಳ ಮಾಹಾತ್ಮ್ಯ.
* ತ್ರಿಪುರಾಸುರ ಸಂಹಾರ.
* ಹರಿವಂಶದಲ್ಲಿ ವರ್ಣಿಸಿರುವ ವೃತ್ತಾಂತಗಳ ಸಂಗ್ರಹ.
* ಹರಿವಂಶ ಶ್ರವಣಾ ನಂತರ ವಾಚಕನಿಗೆ ಕೊಡಬೇಕಾದ ದಕ್ಷಿಣೆ : ಹರಿವಂಶ ಶ್ರವಣದ ಫಲ : ಹರಿವಂಶದ ಮಾಹಾತ್ಮ್ಯಮ್.

ಹರಿವಂಶ ವಂಶಾವಳಿ ಸೃಷ್ಟಿಯ ಚಿತ್ರಣ ಪಟ್ಟಿ **812 - 821**

* * *

: ಶ್ರೀ :

॥ ಶ್ರೀದಿಗ್ವಿಜಯ ರಾಮೋ ವಿಜಯತೇ ॥

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಪ್ರತಿ ಹರಿವಂಶಪರ್ವ – ವಿಷ್ಣುಪರ್ವ – ಭವಿಷ್ಯಪರ್ವ ಪಠಿಸುವ ಮೊದಲು ಈ ಕೆಳಗಿನ ಶ್ಲೋಕಗಳ / ಸ್ತೋತ್ರಗಳ ಸ್ಮರಣೆ ಮತ್ತು ಗುರುಗಳ ಸ್ಮರಣೆ ಮಾಡಿ ಪ್ರಾರಂಭ ಮಾಡಬೇಕು.

॥ ಶ್ರೀಗುರುಭ್ಯೋನಮಃ ಹರಿಃ ॥

ನಾರಾಯಣಂ ಸುರಗುರುಂ ಜಗದೇಕನಾಥಂ
ಭಕ್ತಪ್ರಿಯಂ ಸಕಲಲೋಕನಮಸ್ಕೃತಂ ಚ ।
ತ್ರೈಗುಣ್ಯವರ್ಜಿತಮಜಂ ವಿಭುಮಾದ್ಯಮೀಶಂ
ವಂದೇ ಭವಘ್ನಮಮರಾಸುರಸಿದ್ಧವಂದ್ಯಮ್ ॥ (2.56 ಮಭಾತಾನಿರ್ಣಯ)

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್ ॥ (1.1 ಹರಿವಂಶಮಹಾತ್ಮ್ಯಮ್)

ಜಯತಿ ಪರಾಶರಸೂನುಃ ಸತ್ಯವತೀ ಹೃದಯನನ್ದನೋ ವ್ಯಾಸಃ ।
ಯಸ್ಯಾಸ್ಯಕಮಲಗಲಿತಂ ವಾಙ್ಮಯಮಮೃತಂ ಸತ್ಯಂ ಜಗತ್ ಪಿಬತಿ ॥ (1.2 ಹರಿವಂಶಮಹಾತ್ಮ್ಯಮ್)

ನಾರಾಯಣಾಯ ಪರಿಪೂರ್ಣಗುಣಾರ್ಣವಾಯ
ವಿಶ್ವೋದಯಸ್ಥಿತಿಲಯೋನ್ನಿಯತಿಪ್ರದಾಯ ।
ಜ್ಞಾನಪ್ರದಾಯ ವಿಬುದಾಸುರ ಸೌಖ್ಯದುಃಖ
ಸತ್ಕಾರಣಾಯ ವಿತತಾಯ ನಮೋ ನಮಸ್ತೇ ॥

ಧರ್ಮ ವಿಜ್ಞಾನ ವೈರಾಗ್ಯ ಪರಮೈಶ್ವರ್ಯ ಶಾಲಿನಃ ।
ಆನಂದತೀರ್ಥ ಭಗವತ್ಪಾದಾನ್ ವಂದೇ ನಿರಂತರಂ ॥

ಭವತಿ ಯದನುಭಾವಾದೇಡಮೂಕೋಪಿ ವಾಗ್ಮಿ ।
ಜಡಮತಿರಪಿ ಜಂತುರ್ಜಾಯತೇ ಪ್ರಾಜ್ಞಮೌಲಿಃ ॥
ಸಕಲವಚನಚೇತೋದೇವತಾ ಭಾರತೀ ಸಾ
ಮಮ ವಚಸಿ ನಿಧತ್ತಾಂ ಸನ್ನಿಧಿಂ ಮಾನಸೇ ಚ ॥ (ಶ್ರೀಭಾರತಿ ಸ್ತೋತ್ರ)

ನಮೋಸ್ತು ತಾತ್ವಿಕಾ ದೇವಾಃ ವಿಷ್ಣು ಭಕ್ತಿ ಪರಾಯಣಾಃ ।
ಧರ್ಮಮಾರ್ಗೇ ಪ್ರೇರಯಂತು ಭವಂತಃ ಸರ್ವ ಏವ ಹಿ ॥ (10 ನಿತ್ಯಾನುಷ್ಠಾನ ಸಂಗ್ರಹ)

ನೌಮಿ ನ್ಯಾಯಸುಧಾದಿ ಕೃಜ್ಜಯಮುನೀನ್ ಶ್ರೀಪಾದರಾತ್ವನ್ಮಣೀನ್ ।
ವ್ಯಾಸಾರ್ಯಾನ್ ವಿವಿಧಾಗಮಾಬ್ಧಿವಿಹರಾನ್ ಶ್ರೀವಾದಿರಾಜಾನಪಿ ॥

ವಂದೇ ಹಂಸವರಾನ್ ರಘೂತ್ತಮಗುರೂನ್ ವೈಧಧ್ಯ ವರಾನ್ ।
ನಿಧೀನ್ ಶ್ರೀಸತ್ಯವ್ರತ ರಾಘವೇಂದ್ರ ಮುನಿಪಾನ್ ಸಧ್ಬೋಧಸಧ್ಯಾನಪಾನ್ ॥

ಸತ್ಯಾಭಿಜ್ಞ ಕರಾಬ್ಜೋತ್ಥಾನ್ ಪಂಚಾಶದ್ವರ್ಷ ಪೂಜಕಾನ್ ।
ಸತ್ಯಪ್ರಮೋದತೀರ್ಥಾರ್ಯಾನ್ ನೌಮಿ ನ್ಯಾಯಸುಧಾರತಾನ್ ॥

ಸ್ವಸ್ತಿಸ್ತು ಅಶೇಷಸನ್ಮಂಗಲಾನಿ ಸಂತು ಶ್ಲೋಕೈಕ ಶ್ರವಣ ಪಠಣ ಮಾತ್ರೇಣ
ಕಥಾವಸ್ತುಶ್ಚ ಶ್ರೋತೃಣಾಂ ನಿಖಿಲಕಲೀಕೃತ ಕಲ್ಮಷಾಪನೋದನ ಪಟುತರೇ
ಧರ್ಮಾದ್ಯಖಿಲಪುರುಷಾರ್ಥ ಸಾಧನೀಭೂತೇ ಶ್ರೀಮನ್ಮಹಾಭಾರತೇ
ಹರಿವಂಶೇ ಹರಿವಂಶಪರ್ವಣಿ / ವಿಷ್ಣುಪರ್ವಣಿ / ಭವಿಷ್ಯಪರ್ವಣಿ
ಅದ್ಯಕಥಾಪ್ರಸಕ್ತೌ ಕಿಂಚಿತ್ ಪೂರ್ವಪ್ರಸಕ್ತ ಪ್ರಮೇಯಾನುವಾದಃ ಹರಿಃ ಓಂ ॥

ಹರಿವಂಶೋ ಹರತ್ಯೇನಃ ಜನ್ಮಜನ್ಮಸು ಸಂಚಿತಮ್ ।
ಅಪುತ್ರಂ ಪುತ್ರಿಣಂ ಕುರ್ಯಾತ್ ವಂಶಂ ಉನ್ನಾಮಯೇತ್ ಸದಾ ॥ (ಹರಿವಂಶಪರ್ವ)

* * *

ಪ್ರತಿ ಹರಿವಂಶಪರ್ವ – ವಿಷ್ಣುಪರ್ವ – ಭವಿಷ್ಯಪರ್ವ ॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥ ಆದಮೇಲೆ ಈ ಕೆಳಗೆ ತಿಳಿಸಿದ ದೇವರುಗಳ ಪ್ರಾರ್ಥನೆಯನ್ನು ಮಾಡಬೇಕು.

ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ ।
ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ ॥
ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ ।
ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ ॥
ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ ।
ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ ॥

ನರಸಿಂಹ ನರಸಿಂಹ ನರಸಿಂಹ ನರಸಿಂಹ ನರಸಿಂಹ ।
ನರಸಿಂಹ ನರಸಿಂಹ ನರಸಿಂಹ ನರಸಿಂಹ ನರಸಿಂಹ ॥
ನರಸಿಂಹ ನರಸಿಂಹ ನರಸಿಂಹ ನರಸಿಂಹ ನರಸಿಂಹ ।
ನರಸಿಂಹ ನರಸಿಂಹ ನರಸಿಂಹ ನರಸಿಂಹ ನರಸಿಂಹ ॥
ನರಸಿಂಹ ನರಸಿಂಹ ನರಸಿಂಹ ನರಸಿಂಹ ನರಸಿಂಹ ।
ನರಸಿಂಹ ನರಸಿಂಹ ನರಸಿಂಹ ನರಸಿಂಹ ನರಸಿಂಹ ॥

ವಿಠ್ಠಲ ವಿಠ್ಠಲ ವಿಠ್ಠಲ ವಿಠ್ಠಲ ವಿಠ್ಠಲ ವಿಠ್ಠಲ ವಿಠ್ಠಲ ।
ವಿಠ್ಠಲ ವಿಠ್ಠಲ ವಿಠ್ಠಲ ವಿಠ್ಠಲ ವಿಠ್ಠಲ ವಿಠ್ಠಲ ವಿಠ್ಠಲ ॥
ವಿಠ್ಠಲ ವಿಠ್ಠಲ ವಿಠ್ಠಲ ವಿಠ್ಠಲ ವಿಠ್ಠಲ ವಿಠ್ಠಲ ವಿಠ್ಠಲ ।
ವಿಠ್ಠಲ ವಿಠ್ಠಲ ವಿಠ್ಠಲ ವಿಠ್ಠಲ ವಿಠ್ಠಲ ವಿಠ್ಠಲ ವಿಠ್ಠಲ ॥
ವಿಠ್ಠಲ ವಿಠ್ಠಲ ವಿಠ್ಠಲ ವಿಠ್ಠಲ ವಿಠ್ಠಲ ವಿಠ್ಠಲ ವಿಠ್ಠಲ ।
ವಿಠ್ಠಲ ವಿಠ್ಠಲ ವಿಠ್ಠಲ ವಿಠ್ಠಲ ವಿಠ್ಠಲ ವಿಠ್ಠಲ ವಿಠ್ಠಲ ॥

ಗೋವಿಂದ ಗೋವಿಂದ ಗೋವಿಂದ ಗೋವಿಂದ ಗೋವಿಂದ ।
ಗೋವಿಂದ ಗೋವಿಂದ ಗೋವಿಂದ ಗೋವಿಂದ ಗೋವಿಂದ ॥
ಗೋವಿಂದ ಗೋವಿಂದ ಗೋವಿಂದ ಗೋವಿಂದ ಗೋವಿಂದ ।
ಗೋವಿಂದ ಗೋವಿಂದ ಗೋವಿಂದ ಗೋವಿಂದ ಗೋವಿಂದ ॥
ಗೋವಿಂದ ಗೋವಿಂದ ಗೋವಿಂದ ಗೋವಿಂದ ಗೋವಿಂದ ।
ಗೋವಿಂದ ಗೋವಿಂದ ಗೋವಿಂದ ಗೋವಿಂದ ಗೋವಿಂದ ॥

* * *

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ
ಹರಿವಂಶಪರ್ವ-1

* * *

ಶ್ರೀಮನ್ಮಹಾಭಾರತದ ಮಹಿಮೆಯನ್ನು ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಗೀತಾ ಭಾಷ್ಯ, ಗೀತಾ ತಾತ್ಪರ್ಯಗಳಲ್ಲಿ ಹಾಗೂ ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ತಿಳಿಸಿಕೊಟ್ಟಿದ್ದಾರೆ.

ಭಾರತಂ ಸರ್ವ ಶಾಸ್ತ್ರೇಷು ಭಾರತೇ ಗೀತಿಕಾ ವರಾ ।

ವಿಷ್ಣೋಸಹಸ್ರನಾಮಾಪಿ ಜ್ಞೇಯಂ ಪಾಠ್ಯಂ ಚ ತದ್ವ್ಯಯಮ್ ।। (ಗೀತಾ ಜಯಂತೀ ಭಗವದ್ಗೀತೆ)

ನಿರ್ಣಯವಾದ ಸಕಲ ಶಾಸ್ತ್ರಗಳಲ್ಲಿ ಮಹಾಭಾರತ ಇದು ಹಿರಿದಾದದ್ದು **'ವೇದದಪ್ಯುತ್ತಮಂ ಚಕ್ರೇ'** ವೇದಗಳಿಗಿಂತಲೂ ಶ್ರೇಷ್ಠವಾದದ್ದು ಮಹಾಭಾರತ, ಭಗವಂತನ ಪರಿಪೂರ್ಣವಾದ ಜ್ಞಾನದಿಂದ ತಾನು ತಿಳಿದಿದ್ದನ್ನು ವೇದಗಳಿಗಿಂತಲೂ ಮಿಗಿಲಾಗಿ ಇಲ್ಲಿ ತುಂಬಿದ್ದಾನೆ ಕೇವಲ **'ಈಶ್ವರ ಜ್ಞಾನದೃಷ್ಟಾರ್ಥಯುಕ್ತಂ'** ಎಂಬುದಾಗಿ ಶ್ರೀಮದಾಚಾರ್ಯರು ಹೇಳುತ್ತಾರೆ ಅಂತಹ ಮಹಾಭಾರತ.

ಮಹತ್ವಾತ್ಭಾರವತ್ವಾಚ್ಚ ಮಹಾಭಾರತಮುಚ್ಯತೇ ।

ನಿರುಕ್ತಮಸ್ಯ ಯೋ ವೇದ ಸರ್ವಪಾಪೈಃ ಪ್ರಮುಚ್ಯತೇ ।। (2.11 ಮಭಾತಾನಿರ್ಣಯ)

ಶ್ರೀಮನ್ಮಹಾಭಾರತದ ನಾಮದ ನಿರ್ವಚನವನ್ನ ತಿಳಿದರೇನೆ ಎಲ್ಲ ಪಾಪಗಳ ಪರಿಹಾರವಾಗುತ್ತೆ ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ ಹೀಗಿರಬೇಕಾದರೆ ಆ ಮಹಾಭಾರತದ ಮಹಿಮೆ ಎಷ್ಟು ಅಂತ ನಾವು ಅರ್ಥ ಮಾಡಿಕೊಳ್ಳಬಹುದು. ಯಾವ ಮಹಾಭಾರತದ ನಾಮವನ್ನು ಕೇಳಿದರೇನೆ, ನಾಮದ ಅರ್ಥವನ್ನು ತಿಳಿದರೇನೆ ಪಾಪಗಳ ಪರಿಹಾರವಾಗುತ್ತದೆ ಅಂತ ಇರುವಾಗ ಅಂತಹ ಮಹಾಭಾರತದ ಕಥೆಗಳನ್ನು, ಮಹಾಭಾರತದಲ್ಲಿ ಹೇಳಿದ ತತ್ವಗಳನ್ನು ತಿಳಿದರೆ ಪಾಪಗಳ ಪರಿಹಾರವಾಗುತ್ತೆ, ಉದ್ಧಾರವಾಗುತ್ತೆ ಅನ್ನುವುದರಲ್ಲಿ ಯಾವುದೇ ಸಂಶಯವಿಲ್ಲ ಆ ಮಹಾಭಾರತದ ಖಿಲಭಾಗ ಹರಿವಂಶ ಮಹಾಪುರಾಣ ಎಂಬುದಾಗಿಯೂ ಹೇಳುತ್ತಾರೆ. ಇದು ಮಹಾಭಾರತದ ಒಂದು ಭಾಗ, ಆದಿಪರ್ವದಲ್ಲಿ ಎಲ್ಲ ಪರ್ವಗಳ ಬಗ್ಗೆ ಹೇಳುವಾಗ ಈ ಹರಿವಂಶದ ಬಗ್ಗೆಯೂ ವೇದವ್ಯಾಸ ದೇವರು ಉಲ್ಲೇಖ ಮಾಡುತ್ತಾರೆ. ಅನೇಕ ಕಡೆಗೆ ಈ ಹರಿವಂಶದ ಉಲ್ಲೇಖ ಇದೆ ಶ್ರೀಮದಾನಂದತೀರ್ಥ

ಭಗವತ್ಪಾದಾಚಾರ್ಯರು ಹರಿವಂಶವನ್ನ, ಹರಿವಂಶದ ಅನೇಕ ವಚನಗಳ ಉದಾಹರಣೆಯನ್ನು ಅಲ್ಲಲ್ಲಿ ಮಾಡುತ್ತಾರೆ **'ಇತಿ ಹರಿವಂಶೇಶು'** ಅಂತ **'ಇತಿ ಭವಿಷ್ಯತ್ ಪರ್ವಣಿ'** ಅಂತ ಹೇಳುತ್ತಾರೆ ಅಲ್ಲಲ್ಲಿ. ಈ ಹರಿವಂಶದ ಅನೇಕ ಶ್ಲೋಕಗಳನ್ನು, ಅನೇಕ ಪ್ರಮೇಯಗಳನ್ನು ಅಲ್ಲಲ್ಲಿ ಉದಾಹರಣೆ ಮಾಡಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಭಗವಂತನ ಮಹಿಮೆಯನ್ನು ತಿಳಿಸಿಕೊಡುತ್ತಾರೆ. ಅಂತಹ ಹರಿವಂಶ ಅನೇಕ ದೋಷಗಳ ಪರಿಹಾರಕ್ಕಾಗಿ ಈ ಹರಿವಂಶದ ಶ್ರವಣವನ್ನು ಮಾಡಬೇಕು ಅಂತ ಹರಿವಂಶದಲ್ಲಿ ಹೇಳುವುದಲ್ಲದೆ ಬೇರೆ ಜ್ಯೋತಿಷ್ಯ ಗ್ರಂಥಗಳಲ್ಲಿಯೂ ಕೂಡ ಬೃಹತ್ ಪಾರಾಷಾರ ಹೋರಾಶಾಸ್ತ್ರ, ಮಂತ್ರ ಮಹಾರ್ಣವ, ವೃದ್ಧ ಸೂರ್ಯಾರ್ಣವ ಮೊದಲಾದ ಅನೇಕ ಗ್ರಂಥಗಳೂ ಕೂಡ ಶ್ರೇಷ್ಠವಾದ ಸಂತಾನದ ಪ್ರಾಪ್ತಿಗೆ, ಸಂತಾನ ಪ್ರತಿಬಂಧಕ ದೋಷಗಳ ಪರಿಹಾರಕ್ಕೆ, ಬೇರೆ ಬೇರೆ ಜಪ, ಹೋಮ-ಹವನಗಳನ್ನು ಹೇಳುವುದರ ಜೊತೆಗೆ ಹರಿವಂಶದ ಶ್ರವಣವನ್ನು ವಿಧಾನ ಮಾಡಿವೆ. ಅಂತಹ ಸಾಕ್ಷಾತ್ ವೇದವ್ಯಾಸ ದೇವರಿಂದ ರಚಿತವಾದಂತಹ ದಿವ್ಯವಾದ ಶ್ರೇಷ್ಠವಾದ ಗ್ರಂಥ ಈ ಹರಿವಂಶ.

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।

ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್ ॥ (1.1 ಹರಿವಂಶಮಹಾತ್ಮ್ಯಮ್)

ಹರಿವಂಶದ ಮಹಾತ್ಮ್ಯವನ್ನು ಮೊದಲಿಗೆ ತಿಳಿಸುತ್ತಾರೆ. ಸರ್ವೋತ್ತಮನಾದ ಗ್ರಂಥ ಪ್ರತಿಪಾದ್ಯನಾದಂತಹ ನಾರಾಯಣ ಆ ನಾರಾಯಣನ ಪಾದಕಮಲಗಳಿಗೆರಗಿ ಗ್ರಂಥಕರ್ತೃಗಳಾದಂತಹ ಉಪದೇಶ ಮಾಡಿದ ವೇದವ್ಯಾಸ ದೇವರಿಗೆ ನಮಸ್ಕಾರವನ್ನು ಮಾಡಿ ಆನಂತರದಲ್ಲಿ ದೇವೀ, ಮಹಾಲಕ್ಷ್ಮೀ ದೇವಿ, ವಾಂಛ್ಞನಸ ದೇವತೆ, ಯಾವ ಲಕ್ಷ್ಮೀ ದೇವಿಯ ಅನುಗ್ರಹ ಇದ್ದರೆ ಮಾತ್ರ ವೇದವ್ಯಾಸ ದೇವರ ವಾಣಿಯ ಭಾವವನ್ನು ತಿಳಿಯುವುದಕ್ಕೆ ಸಾಧ್ಯ ಅಂತಹ ಮಹಾಲಕ್ಷ್ಮೀ ದೇವಿಯ ನಮನವನ್ನು ಮಾಡಿ, ಆನಂತರದಲ್ಲಿ ನರೋತ್ತಮರಾದ, ಜೀವತ್ತೋಮರಾದಂತಹ ವಾಯು ದೇವರು, ಶುದ್ಧವಾದ ತತ್ವಜ್ಞಾನವನ್ನು ನೀಡುವ ವಾಯು ದೇವರು ಆಮೇಲೆ ಸರಸ್ವತಿ, ಆನಂತರ ನರ ಷೌರುಷೇಯ ಗ್ರಂಥಗಳಿಗೆ ಅಭಿಮಾನಿ ದೇವತೆಯೂ ಆದ ಷೌರುಷೇಯ ಗ್ರಂಥಗಳ ಜ್ಞಾನವನ್ನು ನೀಡುವ, ಪಾಠ ಪ್ರವಚನಗಳನ್ನು ಮಾಡುವ ಶಕ್ತಿಯನ್ನು ಕೊಡುವಂತಹ ಶೇಷ ದೇವರ ಅವತಾರನಾದ ನರ, ಪರಮಾತ್ಮನ, ವಾಯು ದೇವರ ವಿಶೇಷ ಸನ್ನಿಧಾನಕ್ಕೆ ಪಾತ್ರನಾಗಿ ಇರುವಂತಹ ನರ.

ವಿಷ್ಣೋರ್ ವಾಯೋರ್ ಅನಂತಸ್ಯ ತ್ರಿಭಿರೌಂಶೈರ್ ನರಃ ಸ್ಮೃತಃ ।

ಅಂತ ಶ್ರೀಮದಾಚಾರ್ಯರು ಭಾಗವತ ತಾತ್ಪರ್ಯದಲ್ಲಿ ತಿಳಿಸುತ್ತಾರೆ. ಪರಮಾತ್ಮನ ಸನ್ನಿಧಾನ ಇದೆ, ವಾಯು ದೇವರ ಸನ್ನಿಧಾನ ಇದೆ, ಸ್ವಯಂ ಶೇಷಾವತಾರ ನರ ಭಗವಂತನ ವಿಶೇಷ ಸನ್ನಿಧಾನಕ್ಕೆ ಪಾತ್ರನಾದ ಅಂತಹ ನರನ ಸ್ಮರಣೆಯನ್ನು ಮಾಡಿ ಅವನಿಗೆ ನಮಸ್ಕಾರಗಳನ್ನು ಮಾಡಿ ಸೂತಾಚಾರ್ಯರು ಈ ಸೌತಿಗಳು ಉಗ್ರಶ್ರವ ಅವರು ಶೌನಕರಿಗೆ ಉಪದೇಶವನ್ನು ಮಾಡುತ್ತಾರೆ, ವೈಶಂಪಾಯನರು ಜನಮೇಜಯನಿಗೆ ಇದನ್ನು ತಿಳಿಸಿಕೊಡುತ್ತಾರೆ. ವೇದವ್ಯಾಸ ದೇವರ ಸ್ಮರಣೆಯನ್ನು ಹರಿವಂಶದ ಪ್ರಾರಂಭದಲ್ಲಿಯೂ, ಹರಿವಂಶದ ಮಹಾತ್ಮ್ಯದ ಪ್ರಾರಂಭದಲ್ಲಿಯೂ ಕೂಡ ಮಾಡುತ್ತಾರೆ.

ಜಯತಿ ಪರಾಶರಸೂನುಃ ಸತ್ಯವತೀ ಹೃದಯ ನನ್ದನೋವ್ಯಾಸಃ ।

ಯಸ್ಯಾಸ್ಯಕಮಲಗಲಿತಂ ವಾಙ್ಮಯಮಮೃತಂ ಸತ್ಯಂ ಜಗತ್ ಪಿಬತಿ ॥ (1.2 ಹರಿವಂಶಮಹಾತ್ಮ್ಯಮ್)

ವೇದವ್ಯಾಸ ದೇವರ ಅನುಗ್ರಹ ಎಷ್ಟು ದೊಡ್ಡದು ಅಂತ ಇವತ್ತು ಪ್ರಪಂಚದ ಎಲ್ಲ ವಾಙ್ಮಯವಾದ ಅಮೃತ ಅದು ವೇದವ್ಯಾಸ ದೇವರಿಂದ ಬಂದದ್ದು. ವೇದಗಳನ್ನು ವಿಭಾಗ ಮಾಡಿ ಉಪದೇಶ ಮಾಡಿಕೊಟ್ಟರು, ವೇದಗಳ ಪ್ರವರ್ತನೆ ಮಾಡುವುದಕ್ಕೆ ತಮ್ಮ ಶಿಷ್ಯರನ್ನು ಸಿದ್ಧಪಡಿಸಿದರು, ವೇದಾರ್ಥ ನಿರ್ಣಯ ಮಾಡುವಂತಹ ಬ್ರಹ್ಮಸೂತ್ರಗಳ ರಚನೆಯನ್ನು ಮಾಡಿದರು, ಯುಕ್ತಿಗಳಿಂದ ವೇದಾರ್ಥದ ನಿರ್ಣಯ ಮಾಡುವ ಬ್ರಹ್ಮಸೂತ್ರಗಳು, ದೃಷ್ಟಾಂತಗಳ ಮೂಲಕ ವೇದಾರ್ಥಗಳ ನಿರ್ಣಯವನ್ನು ಮಾಡುವ, ವೇದಾರ್ಥಗಳ ಪೋಷಣೆಯನ್ನು ಮಾಡುವ ತಿಳಿ ಹೇಳುವ ಇತಿಹಾಸ ಪುರಾಣಗಳ ನಿರ್ಮಾಣವನ್ನು ಮಾಡಿದರು, ಸ್ವಯಂ ಎಲ್ಲರ ಹೃದಯದೊಳಗೂ ಇದ್ದು **'ರಜಿಸ್ಟೋ ಬಾದರಾಯಣಃ'** ಆ ವೇದಗಳ ಜ್ಞಾನ ಆಗುವಂತೆ ಅನುಗ್ರಹ ಮಾಡಿದರು. ಗುರುಗಳಲ್ಲಿದ್ದು ಉಪದೇಶ ಮಾಡಿಸುವವರು ಇವರೇ, **'ಗುರುಷು ಸ್ಥಿತ್ವಾ ತದ್ಧ್ಯಾ ಜ್ಞಾನೋಪದೇಷ್ಟೇ'**[1] ಗುರುಗಳಲ್ಲಿದ್ದು ಜ್ಞಾನೋಪದೇಶವನ್ನು ಮಾಡುವವರು, ಹೃದಯದಲ್ಲಿದ್ದು ಜ್ಞಾನೋದಯವಾಗುವಂತೆ ಮಾಡುವವರು, ಗ್ರಂಥಗಳ ರಚನೆ ಮಾಡಿಕೊಟ್ಟವರು, ವೇದಗಳ ಪ್ರವರ್ತನೆ ಮಾಡಿದವರು **'ಜಗದ್ಗುರೂಣಾಂ ಗುರುಮಂಜಸೈವ'** ಅಂತ ಹೇಳಿದ ರೀತಿಯಲ್ಲಿ ಬ್ರಹ್ಮಾದಿ ದೇವತೆಗಳಿಗೆ ಉಪದೇಶ ಮಾಡಿ ಈ ಒಂದು ಪರಂಪರೆಯನ್ನು ಪ್ರವರ್ತನ ಮಾಡಿದವರು, ಒಂದೇ ಎರಡೇ ವೇದವ್ಯಾಸ ದೇವರು ಮಾಡಿದಂತಹ ಅನುಗ್ರಹ ಅಪಾರವಾದದ್ದು, ಅವರು ಮಾಡಿದ ಉಪದೇಶಾಮೃತವನ್ನೇ ಇವತ್ತು ಇಡೀ ಪ್ರಪಂಚ ಸವಿದು ಜ್ಞಾನವನ್ನು ಪಡೆಯುತ್ತೆ. ಜ್ಞಾನದಿಂದ ಉದ್ಧಾರ ಆಗಬೇಕು, ವೇದವ್ಯಾಸ ದೇವರಿಗೆ ಶರಣು ಹೋಗಬೇಕು, ವೇದವ್ಯಾಸ ದೇವರು ಮಾಡಿದ ಗ್ರಂಥಗಳಿಗೆ ಶರಣು ಹೋಗಬೇಕು, ಮಹಾಭಾರತ ಭಾಗವತಾದಿಗಳಿಗೆ ಶರಣು ಹೋಗಬೇಕು. ಬೇರೆ ಗತಿ ಇಲ್ಲ ಅನ್ನುವ ರೀತಿಯಲ್ಲಿ ಭಗವಂತ ಜಗತ್ತಿನ ಸೃಷ್ಟಿಯನ್ನು ಮಾತ್ರ ಮಾಡಿ ತಾನು ಹುಟ್ಟಿಸಿದ ಜೀವರಾಶಿಗಳ ಉದ್ಧಾರಕ್ಕೆ ದಾರಿಯನ್ನು ತೋರದೇ ಅವರನ್ನು ಕತ್ತಲೆಯಲ್ಲಿ ಹಾಗೆಯೇ ಬಿಟ್ಟು ನನ್ನ ಕೆಲಸ ಆಯಿತು ಸೃಷ್ಟಿ ಮಾಡಿ, ಮುಂದಿನದು ನಿಮ್ಮದು ಅಂತ ಹೇಳದಂತೆ ಜ್ಞಾನವನ್ನು ನೀಡಿ ಈ ಸಂಸಾರವನ್ನು ಕಳೆದುಕೊಂಡು ಶಾಶ್ವತವಾದ ಮೋಕ್ಷವನ್ನು ಹೊಂದುವುದಕ್ಕೆ ಬೇಕಾದ ತತ್ವಜ್ಞಾನವನ್ನು ಕರುಣೆಯಿಂದ ನೀಡಿದ ಮಹಾನುಭಾವ ವೇದವ್ಯಾಸ ದೇವರು ಎಂಬುದಾಗಿ ಆ ವೇದವ್ಯಾಸ ದೇವರ ಸ್ಮರಣೆಯನ್ನು ಮಾಡುತ್ತಾರೆ. ಅಜ್ಞಾನದ ಕತ್ತಲೆಯಿಂದ ಕುರುಡರಾದ ನಮಗೆ ಉತ್ತಮವಾದ ದಿವ್ಯದೃಷ್ಟಿಯನ್ನು ಕೊಟ್ಟು ಜ್ಞಾನವನ್ನು ನೀಡುವವರೇ ಗುರುಗಳು.

ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ ಚಕ್ಷುರ್ ।
ಉನ್ಮೀಲಿತಂ ಯೇನ ತಸ್ಮೈ ಶ್ರೀ ಗುರುವೇ ನಮಃ ॥ (ಗುರು ವಂದನಾ ಸ್ತೋತ್ರ)

ಅಂತ ಸಕಲ ಜಗದ್ಗುರುಗಳಾದಂತಹ ವೇದವ್ಯಾಸ ದೇವರಿಗೆ ನಮಸ್ಕಾರವನ್ನು ಮಾಡುತ್ತಾರೆ. ಜನಮೇಜಯ ವೈಶಂಪಾಯನರಿಗೆ ಪ್ರಶ್ನೆ ಕೇಳುತ್ತಾ ಇದ್ದಾನೆ ಹರಿವಂಶದ ಶ್ರವಣವನ್ನು ಮಾಡಬೇಕು – ಅದರ ಮೊದಲು ಆ ಹರಿವಂಶದ ಶ್ರವಣ ಮಾಡುವ ರೀತಿ, ಅದರ ವಿಧಾನ ಹೇಗೆ, ಯಾವ ರೀತಿ ಶ್ರವಣ ಮಾಡಬೇಕು, ನಿಯಮಗಳು ಏನು, ಅದರ ಮಹಾತ್ಮೆ ಏನು, ಶ್ರವಣ ಮಾಡಿದರೆ ಅದರ ಫಲ ಏನು ಇವುಗಳನ್ನು ನಮಗೆ ತಿಳಿಸಿ ಹೇಳಿದರೆ ಸಕ್ರಮವಾಗಿ, ಶಾಸ್ತ್ರೋಕ್ತವಾಗಿ ಭಕ್ತಿಪೂರ್ವಕವಾಗಿ ವಿಧ್ಯುಕ್ತವಾದ ರೀತಿಯಲ್ಲಿ ನಾವು ಶ್ರವಣ ಮಾಡುವುದಕ್ಕೆ ಸಾಧ್ಯ ಅದರಿಂದ ನಮ್ಮ ಯೋಗ್ಯತೆಗೆ ಅನುಗುಣವಾದ ಫಲವನ್ನು ನಾವು ಪಡೆಯುವುದಕ್ಕೆ ಆಗುತ್ತೆ ಅಂತ ಪ್ರಾರ್ಥನೆ ಮಾಡಿಕೊಂಡಾಗ ವೈಶಂಪಾಯನರು ಹೇಳುತ್ತಾರೆ.

1. ಮಂತ್ರಸ್ತೋತ್ರಸಂಗ್ರಹ

ಬ್ರಹ್ಮವಿಷ್ಣುಮಹೇಶಾನಾಂ ಹರಿವಂಶಂ ಜಗುರ್ವಪುಃ ।

ಶಬ್ದಬ್ರಹ್ಮಮಯಂ ವಿದ್ಧಿ ಹರಿವಂಶಂ ಸನಾತನಮ್ ॥ (1.6 ಹರಿವಂಶಮಹಾತ್ಮ್ಯಮ್)

ಹರಿವಂಶ ಇದು ಭಗವಂತನ ಒಂದು ಶಬ್ದಮಯವಾದ ಪ್ರತಿಮೆ ಇದ್ದಂತೆ ಪಂಚಲೋಹದ ಪ್ರತಿಮೆ, ಮಣ್ಣಿನ ಪ್ರತಿಮೆ, ಬಂಗಾರದ ಬೆಳ್ಳಿಯ ಪ್ರತಿಮೆಗಳು, ಶಿಲಾಮಯವಾದ ಪ್ರತಿಮೆ ಎಲ್ಲ ಹೇಗೆ ಇರುತ್ತದಲ್ಲ ಹಾಗೆ ಇದು ವಾಙ್ಮಯವಾದ, ಶಬ್ದಮಯವಾದಂತಹ ಒಂದು ಪ್ರತಿಮೆ. ಇಡೀ ಜಗತ್ತಿನ ಸೃಷ್ಟಿ ಮಾಡಿದ ಬ್ರಹ್ಮ ದೇವರಲ್ಲಿ ಅಂತರ್ಯಾಮಿಯಾದ ಬ್ರಹ್ಮನಾಮಕನಾದ ಪರಮಾತ್ಮ, ಸ್ವಯಂ ಜಗತ್ತಿನ ರಕ್ಷಣೆ ಮಾಡುವ ವಿಷ್ಣು ಎಂಬ ಹೆಸರಿನ ಭಗವಂತ, ಶಿವನಲ್ಲಿ ಅಂತರ್ಯಾಮಿಯಾಗಿ ಶಿವನಾಮಕನಾಗಿ ಜಗತ್ತಿನ ಸಂಹಾರವನ್ನು ಮಾಡುವ ಭಗವಂತ. ಅಂತಹ ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣನಾದ ಪರಮಾತ್ಮನ ವಾಙ್ಮಯ ಪ್ರತಿಮೆ, ಶಬ್ದಮಯ ಪ್ರತಿಮೆ ಎಂದರೆ ಅದು ಹರಿವಂಶ ಶ್ರದ್ಧೆಯಿಂದ ಹರಿವಂಶವನ್ನು ಕೇಳಬೇಕು. ಶಬ್ದಗಳು ನಮ್ಮ ಕಿವಿಯಲ್ಲಿ ಪ್ರವೇಶ ಮಾಡುತ್ತವೆ ಅಂದರೆ ಶಬ್ದಗಳ ರೂಪದಲ್ಲಿ ಶಬ್ದಾಂತರ್ಯಾಮಿಯಾಗಿ ಭಗವಂತನೇ ನಮ್ಮಲ್ಲಿ ಸನ್ನಿಹಿತನಾಗಿ ಅನುಗ್ರಹ ಮಾಡುತ್ತಾನೆ ಎಂಬ ದೃಷ್ಟಿಯಲ್ಲಿ ಇದರ ಶ್ರವಣವನ್ನು ಮಾಡಬೇಕು.

ಕಾಯಿಕಂ ವಾಚಿಕಂ ಪಾಪಂ ಮನಸಾ ಸಮುಪಾರ್ಜಿತಮ್ ।

ತತ್ ಸರ್ವಂ ನಾಶಮಾಯಾತಿ ತಮಃ ಸೂರ್ಯೋದಯೇ ಯಥಾ ॥ (1.8 ಹರಿವಂಶಮಹಾತ್ಮ್ಯಮ್)

ಸೂರ್ಯೋದಯವಾದಾಗ ತಮಸ್ಸು ಉಳಿಯೋದಿಲ್ಲ ಹೇಗೋ ದೈಹಿಕವಾಗಿ, ಮಾನಸಿಕವಾಗಿ, ವಾಚಿಕವಾಗಿ ಈ ಜನ್ಮದಲ್ಲಿ ಜನ್ಮಾಂತರಗಳಲ್ಲಿ ಎಷ್ಟು ಪಾಪಗಳನ್ನು ಮಾಡಿದ್ದೇವೆ ಅನ್ನೋದಕ್ಕೆ ಲೆಕ್ಕನೇ ಇಲ್ಲ ಆ ಎಲ್ಲ ಪಾಪಗಳೆಂಬ ಕತ್ತಲೆ ಈ ಹರಿವಂಶದ ಪುರಾಣ ಶ್ರವಣದಿಂದ ಬಂದ ಪುಣ್ಯದಿಂದ, ಈ ಪುಣ್ಯ ಸೂರ್ಯನಿಂದ, ಜ್ಞಾನ ಸೂರ್ಯನಿಂದ ದೂರವಾಗಿ ಹೋಗುತ್ತೆ ನಾಶವಾಗಿ ಹೋಗುತ್ತೆ. ಹದಿನೆಂಟು ಪುರಾಣಗಳ ಶ್ರವಣವನ್ನು ಮಾಡಬೇಕು, ಆರು ಸಾತ್ವಿಕ ಪುರಾಣಗಳು, ಆರು ರಾಜಸ ಪುರಾಣಗಳು, ಆರು ತಾಮಸ ಪುರಾಣಗಳು ಅಂತ ಸ್ವಯಂ ವೇದವ್ಯಾಸ ದೇವರೇ ವಿಭಾಗ ಮಾಡಿಕೊಡುತ್ತಾರೆ. ಅಂತಹ ಸಾತ್ವಿಕ ಪುರಾಣಗಳಲ್ಲಿ ಹೇಳಿದ ರೀತಿಯಲ್ಲಿ ಆ ನಿರ್ಣಯಕ್ಕೆ ಅನುಗುಣವಾಗಿ ರಾಜಸ, ತಾಮಸ ಪುರಾಣಗಳ ಮಾತುಗಳಿಗೂ, ಅಲ್ಲಿರುವ ಪ್ರಸಂಗಗಳಿಗೂ ನಾವು ಅರ್ಥ ಮಾಡಿಕೊಂಡು ಆ ಸಾತ್ವಿಕ ಪುರಾಣದಲ್ಲಿ ಹೇಳಿದಂತಹ ನಿರ್ಣಯಗಳನ್ನು ಚೆನ್ನಾಗಿ ತಿಳಿದು ವಿಷ್ಣುವಿನ ಸರ್ವೋತ್ತಮತ್ವವನ್ನು ಮಹಿಮೆಯನ್ನು ತಿಳಿದು ಅನುಸಂಧಾನ ಮಾಡಿದರೆ ಏನು ಮಹಾಪುಣ್ಯ ಬರಬೇಕು ಆ ಪುಣ್ಯ ಹರಿವಂಶದ ಶ್ರವಣದಿಂದ ಬರುತ್ತೆ. ಸ್ಕಂದಪುರಾಣ ಒಂದು ಕಡೆಗೆ ಹೇಳುತ್ತದೆ ಅಷ್ಟಾದಶ ಪುರಾಣಗಳ ಶ್ರವಣದ ಫಲ ಏನು, ಹರಿಯ ಭಕ್ತಿ, ಹರಿಪದ ಪ್ರಾಪ್ತಿಯೇ ಫಲ ಅಂತ ತಾಮಸ ಪುರಾಣ ಎಂಬುದಾಗಿ ಪ್ರಸಿದ್ಧವಾದ ಸ್ಕಂದಪುರಾಣ ಇಷ್ಟು ಸ್ಪಷ್ಟವಾಗಿ ಈ ಸಕಲ ಪುರಾಣಗಳ ಸಾರಸರ್ವಸ್ವ ಶ್ರೀಹರಿಯ ಸರ್ವೋತ್ತಮತ್ವ ಅನ್ನುವುದನ್ನು ಸಾರಿ ಹೇಳುತ್ತದೆ. ಅಂತಹ,

ಅಷ್ಟಾದಶಪುರಾಣಾನಾಂ ಶ್ರವಣಾದ್ ಯತ್ ಫಲಂ ಲಭೇತ್ ।

ತತ್ ಫಲಂ ಸಮವಾಪ್ನೋತಿ ವೈಷ್ಣವೋ ನಾತ್ರ ಸಂಶಯಃ ॥ (1.9 ಹರಿವಂಶಮಹಾತ್ಮ್ಯಮ್)

ವಿಷ್ಣು ಭಕ್ತಿ ಇರಬೇಕು ಮಾತ್ರ, ಏನು ಹೇಳಿದ್ದಾರೆ ಕೇಳೋಣ ಅಂತನ್ನುವ ಕೇವಲ ಕುತೂಹಲದಿಂದ ಮಾತ್ರ ಕೇಳಿದರೆ ಸಾಲದು, ಕಥೆಯ ಬಗ್ಗೆ ಕುತೂಹಲ ತಪ್ಪಲ್ಲ ಆದರೆ ಕೇವಲ ಕುತೂಹಲ ಅಲ್ಲ ಭಕ್ತಿ ಇರಬೇಕು, ವಿಷ್ಣು

ಭಕ್ತಿಯಿಂದ ಶ್ರವಣ ಮಾಡಿದರೆ ಮಹಾಫಲ ಇದೆ ಎಂಬುದಾಗಿ ತಿಳಿಸಿಕೊಡುತ್ತಾರೆ. ಇದರ ಶ್ರವಣ ಮಾಡುವ ಭಾಗ್ಯ ಸಿಗುವುದೇ ಬಹಳ ಕಷ್ಟ ಆದರೂ ಕೂಡ ಕಲಿಯುಗದಲ್ಲಿ ಪುಣ್ಯವಂತರಿಗೆ ಶ್ರವಣ ಮಾಡುವ ಭಾಗ್ಯ ಸಿಗುತ್ತೆ, ಭಕ್ತಿಯಿಂದ ಶ್ರವಣ ಮಾಡಬೇಕು, ಸ್ತ್ರೀಯರು, ಪುರುಷರು ಎಲ್ಲರೂ ಕೂಡ ಶ್ರವಣವನ್ನು ಮಾಡಬಹುದು ಎಂಬುದಾಗಿ ಹೇಳುತ್ತಾರೆ. ಕಾರಣಾಂತರಗಳಿಂದ ಅನೇಕ ಜನರಿಗೆ ಸಂತಾನವಾಗಿರುವುದಿಲ್ಲ ಅನೇಕ ರೀತಿಯ ದೋಷಗಳಿರುತ್ತೆ. ಫಲ ಪುಷ್ಪಗಳನ್ನು ನಾಶ ಮಾಡುವವರು, ಇನ್ನೊಬ್ಬರ ಮಕ್ಕಳನ್ನು ನಾಶ ಮಾಡಿದವರು ಅಥವಾ ಇನ್ನೊಬ್ಬರ ಮಕ್ಕಳಿಗೂ, ತಂದೆ, ತಾಯಿಗಳಿಗೂ ವಿಯೋಗವಾಗುವಂತೆ ಮಾಡಿದವರು, ಗರ್ಭಸ್ರಾವ ಆಗುವಂತೆ ಮಾಡುವವರು, ಈ ತರಹದ ದುಷ್ಕೃತ್ಯಗಳನ್ನು ಮಾಡುವವರ ಸಹವಾಸ ಮಾಡುವವರು ಇಂಥವರಿಗೆಲ್ಲ ನಾನಾ ವಿಧವಾದ ಪಾಪಗಳು ಜನ್ಮಾಂತರದಲ್ಲಿ ಮಾಡಿದ್ದು ಸೇರಿದ್ದರೆ ಅವರಿಗೆ ಸಂತಾನದ ಪ್ರತಿಬಂಧ ಆಗುತ್ತಾ ಇರುತ್ತೆ. ಮಕ್ಕಳು ಆಗುವ ಅರ್ಹತೆಯನ್ನು ಪಡೆಯುವುದಿಲ್ಲ, ಪುಷ್ಪವತಿಯರೇ ಆಗುವುದಿಲ್ಲ, ಹುಟ್ಟಿದ ಮಕ್ಕಳು ಸಾಯುತ್ತಾರೆ, ಒಂದು ಮಗು ಆಗುತ್ತೆ ಮತ್ತೆ ಸಂತಾನ ಆಗುವುದಿಲ್ಲ, ಈ ರೀತಿ ಗರ್ಭಸ್ರಾವ ಆಗುತ್ತೆ, ಪುತ್ರ ಸಂತಾನ ಇರುವುದಿಲ್ಲ ಅನೇಕ ರೀತಿಯ ಕಷ್ಟಗಳಿಂದ ಒದ್ದಾಡುವಂತಹ ಜನರು ಇರುತ್ತಾರೆ.

ಅಪುಷ್ಪಾ ಮೃತವತ್ಸಾಶ್ಚ ಕಾಕವನ್ಧ್ಯಸ್ತಥೈವ ಚ ।
ಕನ್ಯಾಪುಜಾತ್ವಂ ಚ ತಥಾ ಸ್ರಾವಯುಕಾತಿಃ ಸ್ವಪಾತಕೈಃ ॥ (1.16 ಹರಿವಂಶಮಹಾತ್ಮ್ಯಮ್)

ತಾಸಾಂ ದೋಷಾಪಹಾರಾರ್ಥಂ ಹರಿವಂಶೋಭಿಗರ್ಜತೀ ।
ಮದೀಯಶ್ರವಾಣಾತ್ ಸದ್ಯೋ ದೋಷಾ ನಶ್ಯನ್ತಿ ಸತ್ವರಮ್ ॥ (1.17 ಹರಿವಂಶಮಹಾತ್ಮ್ಯಮ್)

ಈ ತರಹದ ನಾನಾ ತರಹದ ದೋಷಗಳನ್ನೆಲ್ಲ ಪರಿಹಾರ ಮಾಡಿ ಉತ್ತಮವಾದಂತಹ ಶ್ರೇಷ್ಠವಾದ ಸಂತಾನವನ್ನ ನೀಡುವುದಕ್ಕೆ ನಾನು ಸಿದ್ಧನಿದ್ದೇನೆ ಅಂತ ಹರಿವಂಶ ಗರ್ಜನೆಯನ್ನು ಮಾಡುತ್ತಂತೆ, ಹರಿವಂಶಾಭಿಮಾನಿ ದೇವತೆಗಳು ಪೌರುಷೇಯ ಗ್ರಂಥಾಭಿಮಾನಿಗಳಾದಂತಹ ಶೇಷ ದೇವರು, ವಾಯು ದೇವರು, ಸಾಕ್ಷಾತ್ ಭಗವಂತ ಶ್ರೀಕೃಷ್ಣ ಪರಮಾತ್ಮ ಆ ಹರಿವಂಶದಲ್ಲಿ ಅಂತರ್ಯಾಮಿಯಾಗಿ ಭಗವಂತ ಗರ್ಜನೆ ಮಾಡುತ್ತಾನೆ ಎಂಬುದಾಗಿ ನಾವು ತಿಳಿಯಬೇಕು. ಯಥಾಶಕ್ತಿ ಶ್ರವಣವನ್ನು ಮಾಡಬೇಕು, ಸುವರ್ಣ ದಾನಾದಿಗಳನ್ನು ಮಾಡುತ್ತಾ, ಗ್ರಂಥ ದಾನ, ಘೃತದಾನ, ಸುವರ್ಣ ದಾನಾದಿಗಳನ್ನು ಮಾಡಿ ಹತ್ತು ಬಾರಿ ಇದರ ಶ್ರವಣವನ್ನು ಮಾಡುವುದು ಉತ್ತಮ, ಏಳು ಬಾರಿ ಶ್ರವಣವನ್ನು ಮಾಡಬಹುದು, ಐದು ಬಾರಿ, ಮೂರು ಬಾರಿ ಒಬ್ಬೊಬ್ಬರಿಗೆ ಒಂದೊಂದು ರೀತಿ ಹೇಳಿದ್ದಾರೆ. ಪುಷ್ಪವತಿಯೇ ಆಗದಿದ್ದವರು ಹತ್ತು ಬಾರಿ, ಮಕ್ಕಳನ್ನು ಕಳೆದುಕೊಂಡವರು ಏಳು ಬಾರಿ, ಗರ್ಭಸ್ರಾವ ಆಗುತ್ತಾ ಇದ್ದರೆ ಐದು ಬಾರಿ, ಒಂದು ಮಗುವಾಗಿ ಮತ್ತೆ ಆಗದೆ ಪುನಃ ಸಂತಾನದ ಅಪೇಕ್ಷೆ ಇದ್ದರೆ ಮೂರು ಬಾರಿ, ಪುತ್ರ ಸಂತಾನ ಆಗಬೇಕು ಅನ್ನುವ ಅಪೇಕ್ಷೆ ಇದ್ದರೆ ಒಂದು ಬಾರಿ ಈ ರೀತಿ ಶ್ರವಣವನ್ನು ಮಾಡಬೇಕು ಎಂಬುದಾಗಿ ಹೇಳಿದ್ದಾರೆ. ಇಷ್ಟೇ ಮಾಡಬೇಕು ಅಂತ ತಾತ್ಪರ್ಯವಲ್ಲ, ಕನಿಷ್ಟ ಪಕ್ಷ ಇಷ್ಟು ಮಾಡಬೇಕು, ಇದಕ್ಕೂ ಹೆಚ್ಚು ಮಾಡಬಹುದು, ಯಥಾಶಕ್ತಿ ಹರಿವಂಶದ ಶ್ರವಣವನ್ನು ಮಾಡಬೇಕು ಅನ್ನುವುದು ತಾತ್ಪರ್ಯ. ಕೇವಲ ಶ್ಲೋಕಗಳ ಶ್ರವಣ ಮಾಡಿದರು ಸಾಕು ಭಕ್ತಿಯಿಂದ ಅದರಿಂದಲೂ ಉತ್ತಮವಾದ ಸಂತಾನ ಆಗುತ್ತದೆ. ಅರ್ಥಾನುಸಂಧಾನ ಪೂರ್ವಕವಾಗಿ ಕೇಳಿದರಂತೂ ಇನ್ನೂ ಉತ್ತಮ ಅನ್ನುತ್ತಾರೆ.

ಉತ್ತಮಂ ಸಾರ್ಧಪಾಠಂ ಚ ಮಧ್ಯಮಂ ಚ ನಿರರ್ಧಕಮ್ । (1.21 ಹರಿವಂಶಮಹಾತ್ಮ್ಯಮ್)

ಅರ್ಥವನ್ನು ಶ್ರವಣ ಮಾಡದೆ ಕೇವಲ ಶ್ಲೋಕಗಳ ಶ್ರವಣ ಮಾಡಿದರು ಸಾಕ್ಷಾತ್ ವೇದವ್ಯಾಸ ದೇವರ ವಾಣಿ ಆ ವಾಣಿಯೇ ನಮ್ಮ ಶ್ರವಣೇಂದ್ರಿಯದಿಂದ ಮನಸ್ಸಿಗೆ ಹೋಗಿ ಮನಸ್ಸಿನಲ್ಲಿ ನೆಲೆಸಿದರೆ ಸಾಕು ಮಹಾಪುಣ್ಯ ಬರುತ್ತದೆ, ಸಕಲ ಪಾಪಗಳ ಪರಿಹಾರವಾಗಿ ಇಷ್ಟಾರ್ಥಗಳು ಸಿದ್ಧಿ ಆಗುತ್ತದೆ ಎಂಬುದಾಗಿ ತಿಳಿಸುತ್ತಾರೆ. ಒಂಭತ್ತೇ ದಿನದಲ್ಲಿ ಸಂಪೂರ್ಣ ಶ್ರವಣ ಮಾಡುವುದು ಉತ್ತಮ, ಇಪ್ಪತ್ತೊಂದು ದಿನಗಳಲ್ಲಿ ಮಾಡುವುದು ಮಧ್ಯಮ, ಮೂವತ್ತೊಂದು ದಿನಗಳಲ್ಲಿ ಮಾಡುವುದು ಕೂಡ ಕೊನೆ ಪಕ್ಷ ಯಥಾಶಕ್ತಿ. ಕೊನೆಗೆ ಒಂದು ಮಾತು ಹೇಳುತ್ತಾರೆ ಶ್ರವಣ ಮಾಡಬೇಕಾದದ್ದು ಉತ್ತಮ ಉಳಿದ ನಿಯಮಗಳು ಗೌಣ, ಎಷ್ಟು ಶಕ್ಯವೋ ಅಷ್ಟು ಶ್ರವಣವನ್ನು ಮಾಡಬೇಕು ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ.

ಗೋವ್ರತ ಪೂರ್ವಕವಾಗಿ ಶ್ರವಣವನ್ನು ಮಾಡುತ್ತಾ ಇದ್ದರಂತೆ ಪ್ರಾಚೀನರು, ಇವತ್ತಿನ ಕಾಲದಲ್ಲಿ ಅದೆಲ್ಲ ಬಹಳ ಕಷ್ಟ. ಗೋವನ್ನು ಮೇಯಿಸಲಿಕ್ಕೆ ಬೆಳಿಗ್ಗೆ ಕಳಿಸುವುದು, ಆಕಳು ಸಾಯಂಕಾಲದವರೆಗೆ ಎಲ್ಲಾ ಮೇಯಿದುಕೊಂಡು ಮತ್ತೆ ಮನೆಗೆ ಬಂದು ಕೊಟ್ಟಡಿಯಲ್ಲಿ ತಾನು ನಿಂತ ಮೇಲೆ ಅದಕ್ಕೆ ಪೂಜೆಯನ್ನು ಮಾಡಿ ಆಮೇಲೆ ಭೋಜನವನ್ನು ಮಾಡುವುದು. ಈ ರೀತಿ ಇದನ್ನು ಶುಕ್ಲಪಕ್ಷ ಚತುರ್ಥೀ ದಿನ ಪ್ರಾರಂಭ ಮಾಡಬೇಕು ಈ ರೀತಿ ಪ್ರಾರಂಭವನ್ನು ಮಾಡಿ ಒಂದು ತಿಂಗಳು ಬರುವ ಶುಕ್ಲಪಕ್ಷ ಚತುರ್ಥೀಯವರೆಗೆ ಒಂದು ತಿಂಗಳು ಸಂಪೂರ್ಣವಾದ ವ್ರತವನ್ನು ಮಾಡಿ ಆ ವ್ರತಪೂರ್ವಕವಾಗಿ ಈ ಮೂವತ್ತೊಂದು ದಿನಗಳ ಹರಿವಂಶ ಪುರಾಣದ ಶ್ರವಣವನ್ನು ಮಾಡಬೇಕು ಎಂಬುದಾಗಿ ಹೇಳಿದ್ದಾರೆ.

ಶ್ರೀಮದ್ಭಾಗವತದಲ್ಲಿಯೂ ನೀವೆಲ್ಲ ಕೇಳಿದ್ದೀರಿ, ಭಾಗವತ ಮಹಾತ್ಮ್ಯದಲ್ಲಿ ಅನೇಕ ನಿಯಮಗಳನ್ನು ಹೇಳುತ್ತಾರೆ. ಕೊನೆಗೆ ಒಂದು ಮಾತು ಹೇಳುತ್ತಾರೆ ಉಪವಾಸ ಶ್ರವಣ ಮಾಡಿ, ಫಲಹಾರವನ್ನು ಮಾಡಿ, ಏಕ ಭುಕ್ತ ಅಥವಾ ಬೇರೆ ಬೇರೆ ರೀತಿಯ ಹೇಳಿ ಕೊನೆಗೆ ಹೇಳುತ್ತಾರೆ – ಭೋಜನವನ್ನು ಮಾಡಿ ವ್ಯವಸ್ಥಿತವಾಗಿ ನೀವು ಶ್ರವಣ ಮಾಡಿದರೂ ತಪ್ಪಿಲ್ಲ ಭಕ್ತಿಯಿಂದ ಶ್ರವಣ ಮಾಡಿರಿ. ಉಪವಾಸ ಮಾಡಬೇಕು ಅಂತ ಕಥಾ ವಿಘ್ನ ಆಗುವುದಾದರೆ, ನಿದ್ರೆ ಬರುವುದಾದರೆ, ಆಯಾಸ ಆಗುವುದಾದರೆ ಪ್ರಯೋಜನ ಇಲ್ಲ, ಶಕ್ತಿ ಇದ್ದವರು ಮಾಡಬೇಕು, ಇಲ್ಲದಿದ್ದವರು ಊಟ ಮಾಡಿಯಾದರೂ ತಪ್ಪಿಲ್ಲ ಆದರೆ ಶುದ್ಧವಾದ ರೀತಿಯಲ್ಲಿ ಭಕ್ತಿಯಿಂದ ಶ್ರದ್ಧೆಯಿಂದ ಶ್ರವಣ ಮಾಡಬೇಕು ಎಂಬುದಾಗಿ ತಿಳಿಸಿಕೊಡುತ್ತಾರೆ. ಭಾದ್ರಪದ, ಆಶ್ವಿಜ, ಕಾರ್ತಿಕ, ಮಾರ್ಗಶಿರ ಮಾಸಗಳಲ್ಲಿಯೂ ಶ್ರವಣ ಮಾಡಬಹುದು, ಆಷಾಢ, ಶ್ರಾವಣಗಳಲ್ಲಿಯೂ ಕೂಡ ಶ್ರವಣವನ್ನು ಮಾಡಬಹುದು ಎಂಬುದಾಗಿ ತಿಳಿಸುತ್ತಾರೆ.

ಭಾಗವತ ಮಹಾತ್ಮೆ ಹಾಗೂ ಹರಿವಂಶ ಮಹಾತ್ಮೆಗಳು ಪ್ರಾಯಃ ಒಂದೇ ತರಹ ನಾವು ಕೇಳುತ್ತೇವೆ. ಭಾಗವತ ಮಹಾತ್ಮ್ಯದಲ್ಲಿಯೂ ಹೇಳುತ್ತಾರೆ ಒಬ್ಬರೇ ಕೇಳಬಾರದಂತೆ. ಎಲ್ಲರಿಗೆ ಪತ್ರವನ್ನು ಬರೆದು ಈ ರೀತಿ ಹರಿವಂಶದ ಶ್ರವಣ ನಡೀತಾ ಇದೆ ಶ್ರೀಮದ್ಭಾಗವತದ ಶ್ರವಣ ನಡೀತಾ ಇದೆ ಅಂತ ಸಜ್ಜನರಿಗೆಲ್ಲ ಆಹ್ವಾನ ಕೊಟ್ಟು ಆ ಎಲ್ಲ ಸಜ್ಜನರ ಜೊತೆಗೆ ತಾನು ಕೇಳಬೇಕು. ಅಷ್ಟೆಲ್ಲ ಸಜ್ಜನರಿಗೆ ಹರಿಮಹಾತ್ಮ್ಯದ ಶ್ರವಣ ಮಾಡಿಸಿದ ಪುಣ್ಯವೂ ತನಗೆ ಬರುತ್ತದೆ ತಾನು ಶ್ರವಣ ಮಾಡಿದ ಪುಣ್ಯವೂ ತನಗೆ ಬರುತ್ತದೆ ಆ ಒಂದು ದೊಡ್ಡ ಪುಣ್ಯದ ಲೋಭ. ಹತ್ತು ಸಲ ಹೇಳಬೇಕಾಗಿಲ್ಲವಲ್ಲ, ಹೇಳುವ ಆಚಾರ್ಯರು ಒಬ್ಬರೇ. ಒಂದೇ ಪುರಾಣ ಒಬ್ಬರೇ ಆಚಾರ್ಯರು ಹೇಳಿದಾಗ ನಾವೊಬ್ಬರೇ ಕೇಳಿದರೆ ಸ್ವಲ್ಪ ಪುಣ್ಯ ಬರುವುದು ಅದೇ ಪ್ರವಚನದಿಂದಲೇನೆ ನಾವು ಬಹಳ ಪುಣ್ಯ ಗಳಿಸಬೇಕಾದರೆ ಹತ್ತು ಜನರಿಂದ ಹೇಳಿಸಬೇಕಾದದ್ದಿಲ್ಲ, ಹತ್ತು ಬಾರಿ ಕೇಳಬೇಕಾಗದದ್ದಿಲ್ಲ ಒಮ್ಮೆ ಕೇಳುವಾಗಲೇ ಹತ್ತು ಜನರ ಜೊತೆಗೆ ಕೇಳಿದರೆ ಆ ಹತ್ತು ಜನರಿಗೆ ಕೇಳಿಸಿದ ಪುಣ್ಯವು ಸೇರಿಕೊಂಡಂತೆ ನಮಗೆ ಪುಣ್ಯ ಬರುತ್ತಲ್ಲ ಅದರಿಂದ ನಾವು ವಂಚಿತರಾಗಬಾರದು ಅನ್ನುವ ಮಹಿಮೆಯನ್ನು ತಿಳಿಸಿಕೊಡುತ್ತೆ.

ದೊಡ್ಡದಾದಂತಹ ಸ್ಥಾನದಲ್ಲಿ ವಿಶಿಷ್ಟವಾದ ರೀತಿಯಲ್ಲಿ ಅಲಂಕಾರವನ್ನು ಮಾಡಬೇಕಂತೆ, ಏಳು ಸ್ತರಗಳಲ್ಲಿ ಸ್ಥಾನಗಳನ್ನು ಮಾಡಿ ಇಟ್ಟಿರಬೇಕಂತೆ. ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಹೇಳುವ ತಾರತಮ್ಯದ ಸಿದ್ಧಾಂತ ಮಹಾಭಾರತ, ರಾಮಾಯಣಾದಿಗಳಲ್ಲಿ, ಇತಿಹಾಸ ಪುರಾಣಗಳಲ್ಲಿ ಹರಿವಂಶಾದಿಗಳಲ್ಲಿ ಎಷ್ಟು ಚೆನ್ನಾಗಿ ಬರುತ್ತೆ ನೋಡಿ. ಒಂದು ಪುರಾಣದ ಶ್ರವಣ ಮಾಡುವಾಗಲೂ ಆ ಭಗವಂತನ ಭಕ್ತರು ಯಾರೋ ಅವರ ಸ್ಥಾನ, ಮಾನ, ಜ್ಞಾನ, ವಯಸ್ಸು ಅವರ ಗುಣಗಳಿಗೆ ತಕ್ಕಂತೆ ಅವರನ್ನು ಕೂಡಿಸಬೇಕಂತೆ. ಆಚಾರ್ಯರಿಗೆ, ಪ್ರವಚನ ಮಾಡುವವರಿಗೆ ಉನ್ನತವಾದಂತಹ ಆಸನ ಪೀಠ ಇರುತ್ತೆ, ಶ್ರವಣ ಮಾಡುವವರಿಗೂ ಹದಿನಾಲ್ಕು ಮಜಲುಗಳನ್ನು ಮಾಡಿ ಆ ತಾರತಮ್ಯಕ್ಕೆ ಅತೀ ಉತ್ತಮರಾದ ಜ್ಞಾನ ವೃದ್ಧರನ್ನು ಮೇಲೆ ಕೂಡಿಸಿರಬೇಕು, ಸ್ವಲ್ಪ ಅವರಿಗಿಂತಲೂ ಚಿಕ್ಕವರನ್ನು ಕೆಳಗೆ ಹೀಗೆ ಕೂಡಿಸುತ್ತಾ ಕೂಡಿಸುತ್ತಾ ಆಮೇಲೆ ಹದಿನಾಲ್ಕು ಲೋಕಗಳ ಕಲ್ಪನೆ ಸತ್ಯಲೋಕವನ್ನು ಆರಂಭ ಮಾಡಿಕೊಂಡು ಪಾತಾಳ ಲೋಕದವರೆಗೆ.

ಸಾಮಾನ್ಯರು ಕೇವಲ ಭಕ್ತಿ ಶ್ರದ್ಧೆಗಳಿಂದ ಶ್ರವಣ ಮಾಡುವವರು ವಿಶೇಷವಾಗಿ ಅಧ್ಯಯನಾದಿಗಳನ್ನು ಮಾಡದೆ, ಜ್ಞಾನವನ್ನು ಪಡೆದುಕೊಳ್ಳದೆ ಇದ್ದವರೆಲ್ಲ ಕೆಳಗಿನ ಲೋಕಗಳಲ್ಲಿ ಅತಲ, ವಿತಲಾದಿ ಲೋಕಗಳಲ್ಲಿ, ಲೋಕಗಳಲ್ಲಿ ಅಂದರೆ ಆ ಲೋಕಗಳು ಅಂತ ಕಲ್ಪನೆ ಮಾಡಿಕೊಂಡು ಮಾಡಿದಂತಹ ಆಸನಗಳಲ್ಲಿ ಅವರನ್ನು ಕೂಡಿಸಬೇಕಂತೆ. ಹಾಗೆ ಅನೇಕ ಜನರು ಅಂದರೆ ಇವತ್ತಿನ ಕಾಲದೊಳಗೆ ದೂರದಲ್ಲಿ ಕುಳಿತಾಗ ಬಹಳ ಹಿಂದೆ ಇದ್ದವರಿಗೆ ಮುಖನೇ ಕಾಣಿಸುವುದಿಲ್ಲ. ಅಂತ ಎತ್ತರದ ವ್ಯವಸ್ಥೆಗಳನ್ನೆಲ್ಲ ಮಾಡಿರುತ್ತಾರಲ್ಲ ಆ ರೀತಿ ಕಲ್ಪನೆ ಪ್ರಾಚೀನ ಕಾಲದಲ್ಲಿಯೂ ಇತ್ತು ಅನ್ನುವುದನ್ನು ನೀವು ಗಮನಿಸಿ. ಅಂದರೆ ದೂರದಿಂದಲೂ ಎಲ್ಲರಿಗೂ ಶ್ರವಣ ಆಗಬೇಕು, ದರ್ಶನ ಆಗಬೇಕು ಆ ರೀತಿಯ ಒಂದು ಕಲ್ಪನೆ, ಜೊತೆಗೆ ತಾರತಮ್ಯ ಆ ತಾರತಮ್ಯದ ಕ್ರಮದಲ್ಲಿ ಆ ಎಲ್ಲ ಸಜ್ಜನರನ್ನು ಕೂಡಿಸಿ ತಾನು ಶ್ರವಣವನ್ನು ಮಾಡಬೇಕು.

ಪೂರ್ವಾಭಿಮುಖವಾಗಿ ಪ್ರವಚನಕಾರರು ಕುಳಿತರೆ ಉತ್ತರಾಭಿಮುಖವಾಗಿ ಶ್ರೋತೃಗಳು, ಉತ್ತರಾಭಿಮುಖವಾಗಿ ಪ್ರವಚನಕಾರರು ಇದ್ದರೆ ಪೂರ್ವಾಭಿಮುಖವಾಗಿ ಶ್ರೋತೃಗಳು ಅಂತೂ ಆ ರೀತಿಯಾಗಿ ಕುಳಿತು ಶ್ರವಣವನ್ನು ಮಾಡಬೇಕು ಎಂಬುದಾಗಿ ತಿಳಿಸಿಕೊಡುತ್ತ ಇದ್ದಾರೆ. ಶ್ರೇಷ್ಠವಾದ ಸ್ಥಾನದಲ್ಲಿ ಕುಳಿತುಕೊಂಡು ಶುದ್ಧವಾಗಿ ಈ ಹೇಳುವಂತಹ ಆಚಾರ್ಯರು ಕೂಡ ಉತ್ತಮವಾದ ದೀಕ್ಷೆಯನ್ನು ತೆಗೆದುಕೊಂಡು ಶುದ್ಧನಾಗಿ ಶ್ರೇಷ್ಠವಾದ ಮುಹೂರ್ತದಲ್ಲಿ ದೈಹಿಕವಾದ ಶುದ್ಧಿ, ಮಾನಸಿಕವಾದ ಶುದ್ಧಿ, ಪ್ರಾಣಾಯಾಮಾದಿಗಳನ್ನು ಮಾಡಿಕೊಂಡು ಸಂಕಲ್ಪ ಪೂರ್ವಕವಾಗಿ ಕಥಾ ಪ್ರಾರಂಭವನ್ನು ಮಾಡಬೇಕು.

ಗಣಪತ್ಯಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ವಿಶ್ವಂಭರಾಯ ನಮಃ ॥

ಆ ಕಥಾ ನಿರ್ವಿಘ್ನವಾಗಿ ಸಾಗುವುದಕ್ಕೆ ಗಣಪತಿಯ ಪೂಜೆಯನ್ನು ಮಾಡಿ ಗಣಪತ್ಯಂತರ್ಗತನಾದ ಭಾರತೀರಮಣ ಮುಖ್ಯಪ್ರಾಣಾಂತರ್ಗತನಾದ ವಿಶ್ವಂಭರನನ್ನು ಸ್ಮರಣೆ ಮಾಡಬೇಕು. ಮುಖ್ಯವಾಗಿ ಪ್ರತಿಪಾದ್ಯನಾದಂತಹ ಸ್ವಾಮಿ ಶ್ರೀಕೃಷ್ಣ ಪರಮಾತ್ಮ, ಕೃಷ್ಣ ಪರಮಾತ್ಮನ ಮಹಿಮೆಯನ್ನು, ಕೃಷ್ಣ ಪರಮಾತ್ಮನ ವಂಶ ಆ ವಂಶದ ಎಲ್ಲ ಮಹಾನುಭಾವರಲ್ಲಿ ಅಂತರ್ಯಾಮಿಯಾಗಿ ದೇವರು ತೋರಿದ ಮಹಿಮೆ, ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮ ತನ್ನ ಅವತಾರದಲ್ಲಿ ತೋರಿದ ಲೀಲೆಗಳು ಇವುಗಳನ್ನು ತಿಳಿಸುವುದಕ್ಕಾಗಿ ಹೊರಟದ್ದು ಹರಿವಂಶ.

ಜನ್ಮ ಕರ್ಮ ಚ ಮೇ ದಿವ್ಯಮ್ ಏವಂ ಯೋ ವೇತ್ತಿ ತತ್ತ್ವತಃ ।
ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿ ಮಾಮೇತಿ ಸೋಽರ್ಜುನ ॥ (4.9 ಭ ಗೀತಾ)

ಎಂಬುದಾಗಿ ಹೇಳಿದಂತೆ ಆ ಭಗವಂತನ ಅವತಾರ ಲೀಲೆಗಳನ್ನು ಕೇಳಿದರೆ ನಮ್ಮ ಈ ಸಂಸಾರದ ಬಂಧನವೇ ಪರಿಹಾರವಾಗುತ್ತೆ. ನೋಡಿ, ಅವನ ಜನ್ಮವನ್ನ ಕೇಳಿದರೆ ನಮಗೆ ಜನ್ಮವೇ ಬರದೆ ಇದ್ದಂತೆ ಮಾಡುತ್ತಾನೆ, ಜನ್ಮ ಅಂದರೆ ಅವತಾರ ಅವನ ಅವತಾರದ ಲೀಲೆಗಳನ್ನು ಕೇಳಿ ತಿಳಿದರೆ ಮತ್ತೆ ನಮಗೆ ಜನ್ಮ ಮರಣಗಳೇ ಬರದಂತೆ ಈ ಸಂಸಾರದಿಂದ ಉದ್ಧಾರ ಮಾಡುತ್ತಾನೆ ಆ ಭಗವಂತ. ಜನ್ಮವೇ ಇಲ್ಲದ ನನಗೆ ಜನ್ಮವನ್ನು ತಿಳೀತಿಯಾ ಅಂತ ಮತ್ತೆ ನಮಗೆ ಜನ್ಮವನ್ನು ಕೊಡುವುದಿಲ್ಲ, ಜನ್ಮವೇ ಇಲ್ಲದ ಭಗವಂತನಿಗೆ ಅವತಾರ ರೂಪವಾದ ಜನ್ಮ ಇದೆ ಅಂತ ಸತ್ಯವಾದ ಸಂಗತಿಯನ್ನು ತಿಳಿದು ಅವನ ಮಹಿಮೆಯನ್ನು ಉಪಾಸನೆ ಮಾಡಿದರೆ ನಮ್ಮ ನಿಜವಾದ ಜನ್ಮವನ್ನು ಪರಿಹಾರ ಮಾಡುತ್ತಾನೆ. ಎಷ್ಟು ವಿಚಿತ್ರ ನೋಡಿ ಜನ್ಮ ಇಲ್ಲ ಅವನಿಗೆ, ಜನ್ಮ ಇಲ್ಲದವನಿಗೆ ಜನ್ಮ ಇದೆ ಆರ್ಥಾತ್ ಅವತಾರ ರೂಪವಾದ ಪ್ರಾಧುರ್ಭಾವ ರೂಪವಾದ ಜನ್ಮ ಇದೆ ಅಂತ ತಿಳಿದರೆ ಅವನ ಅವತಾರದ ಲೀಲೆಗಳು, ಅವುಗಳೇ ಅವನ ಕರ್ಮಗಳು, ಜನ್ಮ ಕರ್ಮ ಇವುಗಳನ್ನು ತಿಳಿದರೆ ನಮ್ಮ ನಿಜವಾದ ಏನು ಹುಟ್ಟು ಸಾವುಗಳಿವೆ, ನಮ್ಮ ನಿಜವಾದ ಏನು ಕರ್ಮ ಇದೆ ಪ್ರಾರಬ್ಧ ಕರ್ಮ ಅಪ್ರಾರಬ್ಧ ಕರ್ಮಗಳು ಆ ಎಲ್ಲ ಕರ್ಮಗಳನ್ನು ಆ ಭಗವಂತ ಪರಿಹಾರ ಮಾಡುತ್ತಾನೆ, ಪ್ರಾರಬ್ಧ ಕರ್ಮಗಳ ಉಪಮರ್ದ ಮಾಡಿ, ಅಪ್ರಾರಬ್ಧ ಕರ್ಮಗಳನ್ನು ಸಂಪೂರ್ಣವಾಗಿ ನಾಶ ಮಾಡಿ ನಮ್ಮನ್ನು ಉದ್ಧಾರ ಮಾಡುತ್ತಾನೆ ಎಂಬುದಾಗಿ ತಿಳಿಸಿಕೊಡುತ್ತಾರೆ.

ಅದಕ್ಕಾಗೇನೆ ದೊಡ್ಡವರು ಪ್ರಾರ್ಥನೆ ಮಾಡಿದ್ದುಂಟು ಕೆಲವರು ಪರಮಾತ್ಮನಿಗೆ, ಪರಮಾತ್ಮ ಇಷ್ಟು ದಿವಸ ನಿನ್ನ ಉಪಾಸನೆ ಮಾಡಿದ್ದಕ್ಕೆ ನನಗೆ ಏನು ವರ ಕೊಡಬೇಕು ಅಂದರೆ ಒಂದು ನಿಮಿಷ, ನಿನಗೆ ವರ ಕೊಡಬೇಕು ಅಂದರೆ ನೀನು ಸರಿಯಾಗಿ ನಾನು ಹೇಳಿದ ಹಾಗೆ ನಡೆದಿದ್ದರೆ ವರ ಕೊಡಬೇಕು, ನಾನು ಹೇಳಿದಂತೆ ನೀನು ನಡೆದುಕೊಂಡಿದ್ದೀಯಾ ಅನ್ನುವುದೇ ಇನ್ನೂ ನಿಶ್ಚಿತವಾಗಿಲ್ಲ ಅಲ್ಲ ವರ ಹೇಗೆ ಕೊಡುವುದು ಅಂತ ಅದಕ್ಕೆ ಈ ಭಕ್ತ ಬಹಳ ಬುದ್ಧಿವಂತಿಕೆಯಿಂದ ದೇವರಿಗೆ ಅಂದನಂತೆ. ದೇವರೇ, ನಾನು ಸರಿ ಮಾಡಿದ್ದೇನೋ ಮಾಡಿಲ್ಲವೋ ಹೇಳಿ, ನೀನೇನು ಸರಿ ಮಾಡಿಲ್ಲ ನಾನು ಹೇಳಿದ ಹಾಗೆ ನೀನು ವರ್ತನೆ ಮಾಡಿಲ್ಲ, ಶಾಸ್ತ್ರೋಕ್ತವಾದ ರೀತಿಯಲ್ಲಿ ನೀನು ಜೀವನವನ್ನು ನಡೆಸಿಲ್ಲ ಆ ತರಹದ ತಪಸ್ಸು ಉಪಾಸನೆ ಯಾವುದನ್ನು ನೀನು ಮಾಡಿಲ್ಲ ಹೌದು ತಾನೆ. ಹಾಗಾದರೆ ಇಷ್ಟು ಬಾರಿ ನನಗೆ ಜನ್ಮವನ್ನು ಕೊಟ್ಟಿದ್ದೀ, ಇಷ್ಟು ಬಾರಿ ಜನ್ಮ ಕೊಟ್ಟಾಗಲೂ ನಾನು ಚೆನ್ನಾಗಿ ಸಾಧನೆ ಮಾಡಿಲ್ಲ ತಾನೆ, ನಿನ್ನ ಮನಸ್ಸಿಗೆ ಬಂದ ಹಾಗೆ ನಾನು ಇಲ್ಲ ತಾನೆ ಅಂದಮೇಲೆ ನನಗೆ ಮತ್ಯಾಕೆ ಅವಕಾಶ ಕೊಡುತ್ತಿಯಾ, ಪುನಃ ಈ ರಂಗಮಂಚದ ಮೇಲೆ ನನಗೆ ಹುಟ್ಟುವುದಕ್ಕೆ ಅವಕಾಶನೇ ಕೊಡಬೇಡ. ಅಂದರೆ ನಾಟಕದ ಒಂದು ಕಂಪನಿ ಇದ್ದರೆ ಒಂದು ನಾಲ್ಕು ಸಲ ಟ್ರೈಯಲ್ ಮಾಡುತ್ತಾರೆ ಅವನೇನು ಸರಿಯಾಗಿ ಮಾತಾಡುವುದಿಲ್ಲ, ಸರಿಯಾಗಿ ಡೈಲಾಗ್ಸ್ ಆಡಲಿಕ್ಕೆ ಬರುವುದಿಲ್ಲ, ಅಂದರೆ ಅವನನ್ನು ಕಿತ್ತಿ ಎಸೆಯುತ್ತಾರೆ ನನ್ನನ್ನು ಕಿತ್ತಿ ಹಾಕಿಬಿಡು, ಯಾವುದರಿಂದ ಈ ಸಂಸಾರದ ರಂಗಮಂಚದ ಮೇಲೆ ಕುಣಿದಾಡುವ ಕೆಲಸದಿಂದಲೇ ನನ್ನನ್ನು ಕಿತ್ತಿ ಹಾಕು ಅಂತ ಅಂದರೆ ಮೋಕ್ಷ ಕೊಡು ಅಂತ ಅರ್ಥ. ಹೇಳುವ ತಾತ್ಪರ್ಯ ಭಕ್ತ ಭಗವಂತನಿಗೆ ಆ ರೀತಿ ಪ್ರಾರ್ಥನೆಯನ್ನು ಮಾಡುತ್ತಾನೆ ಹಾಗೆ ಆ ಭಗವಂತನನ್ನು ಪ್ರಾರ್ಥನೆ ಮಾಡಿ ಈ ಕಥಾ ಶ್ರವಣವನ್ನು ಮಾಡಬೇಕಂತೆ, ಗ್ರಹಸ್ಥನಾದ ವ್ಯಕ್ತಿ ಈ ರೀತಿ ಸಂಕಲ್ಪವನ್ನು ಮಾಡಬೇಕು, ಸಂಕಲ್ಪವನ್ನೂ ಕೂಡ ಸ್ವತಃ ಹರಿವಂಶ ಪುರಾಣ ಹೇಳುತ್ತದೆ.

ಅಮುಕ ಗೋತ್ರಸ್ಯ ಅಮುಕ ಪ್ರವರಸ್ಯ ಅಮುಕಶರ್ಮಾಣಃ ಸಪತ್ನೀಕಃ
ಅಸ್ಮಿನ್ ಜನ್ಮನಿ ಸಂಚಿತ ಮಹಾಪಾತಕ ನಾಶಪೂರ್ವಕಂ ತೇನ
ಪಾಪಸಂಚಯೇನ ಕೃತಸಂತಾನ ಬಾಧಕತಾ ವಿನಾಶಪೂರ್ವಕಂ ಇಹ
ಜನ್ಮನಿ ಸಂತಾನೋತ್ಪತ್ತಿ ಹೇತವೇ ತಸ್ಯ ಸಂತಾನಸ್ಯ ಶರದಾಂ ಶತಂ

ಆಯುಷೋ ವೃದ್ಧ್ಯರ್ಥಂ ಆತ್ಮನಃ ಸಕಲ ಸುಖಾ ವಾಪ್ತಿ ಹೇತವೇ
ಶರೀರ ಶುದ್ಧ್ಯರ್ಥ್ಯ ಪರತ್ರ ಚೇ ಇಂದ್ರಾದಿ ಲೋಕಾತಿ ಕ್ರಮಣಪೂರ್ವಕ
ಶ್ರೀಮದ್ವಿಷ್ಣುಭಕ್ತ್ಯುದ್ರೇಕ ಜನಿತ ಕಲ್ಪಾವಧಿ ತಲ್ಲೋಕ ಗಮನ ತತ್ರ
ವಾಸಪೂರ್ವಕ ತತ್ಸ್ವರೂಪಾವಾಪ್ತಿ ಹೇತವೇ ಆವಾಂ ದಮ್ಪತಿ
ಶ್ರೀಮದ್ ಹರಿವಂಶ ಪುರಾಣ ಶ್ರವಣಂ ಕರಿಷ್ಯವಹೇ ಅಥವಾ ಕರಿಷ್ಯೇ ಕರಿಷ್ಯಾವಹೇ ಇತಿ ಸಂಕಲ್ಪಃ ।

ಅಂತ ಸ್ವಯಂ ಮಹಾನುಭಾವರಾದ ವೇದವ್ಯಾಸ ದೇವರು ಸಂಕಲ್ಪದ ಕ್ರಮವನ್ನು ತಿಳಿಸುತ್ತಾರೆ. ಜನ್ಮ ಜನ್ಮಾಂತರಗಳಲ್ಲಿ ಮಾಡಿದ ಪಾಪ ಪಟಲಗಳೆಲ್ಲ ನಾಶವಾಗಿ, ಉತ್ತಮ ಸಂತಾನವಾಗಿ ಆ ಸಂತಾನಕ್ಕೆ ದೀರ್ಘ ಆಯುಷ್ಯ, ಆರೋಗ್ಯಾದಿಗಳೆಲ್ಲ ಲಭಿಸಿ, ಶುದ್ಧವಾದ ಧರ್ಮಜ್ಞಾನಗಳ ಪ್ರಾಪ್ತಿಯಾಗಿ ಉತ್ತಮ ಲೋಕ ಪ್ರಾಪ್ತಿಯಾಗಬೇಕು, ಮುಖ್ಯವಾಗಿ ವಿಷ್ಣು ಭಕ್ತಿಗೆ ಉದ್ರೇಕ ಆಗಬೇಕು. ಆ ವಿಷ್ಣು ಭಕ್ತಿ ಉದ್ರೇಕದಿಂದ ಸರ್ವೋತ್ತಮನಾದ ಶ್ರೀಹರಿಯ ಪ್ರಾಪ್ತಿ ನಮಗೆ ಆಗಬೇಕು ಆ ರೀತಿಯ ಒಂದು ಮಹಾಫಲವನ್ನು ನೀಡುವುದಕ್ಕೋಸ್ಕರ ಶ್ರವಣ ಮಾಡುತ್ತಾ ಇದ್ದೇವೆ ಅಂತ ಸಂಕಲ್ಪ ಮಾಡಬೇಕು. ನಿಷ್ಕಾಮವಾಗಿ ಶ್ರವಣವನ್ನು ಮಾಡುವಂಥವರು ವಿಷ್ಣು ಭಕ್ತಿ ಉದ್ರೇಕವಾಗಿ ಶ್ರೀಹರಿಯ ಪ್ರಸಾದವಾಗಲಿ ಎಂಬ ಉದ್ದೇಶ್ಯದಿಂದ **'ವಿಷ್ಣುಪ್ರೇರಣಯಾ ವಿಷ್ಣುಪ್ರೀತ್ಯರ್ಥಂ'** ಎಂಬುದಾಗಿ ಸಂಕಲ್ಪವನ್ನು ಮಾಡಬೇಕು ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ. ಆ ಬ್ರಾಹ್ಮಣರ ಪ್ರವಚನವನ್ನು ಮಾಡುವಂತಹ ಆಚಾರ್ಯರ ವರ್ಣವನ್ನು ಮಾಡಿ, ಅವರ ಪೂಜೆಯನ್ನು ಮಾಡಿ ಯಥಾಶಕ್ತಿ ದಾನಾದಿಗಳನ್ನೆಲ್ಲ ಮಾಡಬೇಕು ವೇದವ್ಯಾಸ ದೇವರಿಗೆ ನಮನವನ್ನು ಮಾಡಬೇಕು ಅಂತ. ದಾನಾದಿಗಳ ಬಗ್ಗೆ ಬಹಳ ವಿಸ್ತಾರವಾಗಿ ವರ್ಣನೆಯನ್ನು ಮಾಡಿದ್ದಾರೆ. ವ್ಯಾಸರ ಸ್ಮರಣೆಯನ್ನು ಮಾಡಬೇಕು.

ನಮಸ್ತೇ ಭಗವನ್ ವ್ಯಾಸ ಸರ್ವಶಾಸ್ತ್ರಾರ್ಥಕೋವಿದ ।
ಬ್ರಹ್ಮವಿಷ್ಣುಮಹೇಶಾನಮೂರ್ತೇ ಸತ್ಯವತೀಸುತ ॥ (2.30 ಹರಿವಂಶಮಹಾತ್ಮ್ಯಮ್)

ಜಗತ್ತಿನ ಸೃಷ್ಟಿ ಸ್ಥಿತಿ ಲಯ ಇವುಗಳ ಬಗ್ಗೆ ವರ್ಣನೆ ಮಾಡುವ ಇತಿಹಾಸವನ್ನು ರಚನೆ ಮಾಡುವ ವೇದವ್ಯಾಸ ದೇವರಿಗೆ ಅದು ಅತ್ಯಂತ ಲೀಲಾಜಾಲ. ಯಾಕೆ ಅಂದರೆ ಇವರೇ ಬ್ರಹ್ಮ ದೇವರಲ್ಲಿ ಅಂತರ್ಯಾಮಿಯಾಗಿ ಸೃಷ್ಟಿ ಮಾಡುವುದು, ವಿಷ್ಣುವಾಗಿ ರಕ್ಷಣೆ ಮಾಡುವುದು, ರುದ್ರ ದೇವರಲ್ಲಿ ಅಂತರ್ಯಾಮಿಯಾಗಿ ಸಂಹಾರ ಮಾಡುವುದು ಅವುಗಳ ವರ್ಣನೆಯನ್ನು ಮಾಡುವುದಕ್ಕೆ ವೇದವ್ಯಾಸ ದೇವರನ್ನು ಬಿಟ್ಟರೆ ಪ್ರಪಂಚದಲ್ಲಿ ಇನ್ಯಾರು ಸಮರ್ಥರು ಅನ್ನುವ ದೃಷ್ಟಿಯಲ್ಲಿ ಆ ವೇದವ್ಯಾಸ ದೇವರಿಗೆ ನಮಸ್ಕಾರವನ್ನು ಮಾಡಬೇಕು. ಪುರಾಣವನ್ನು ಹೇಳುವ ವ್ಯಕ್ತಿಯ ವಯಸ್ಸನ್ನು ಗಮನಿಸಿದಂತೆ ಆ ಪುರಾಣದ ಪೀಠದಲ್ಲಿ ಕುಳಿತಾಗ ಅತ್ಯಂತ ಶ್ರದ್ಧೆಯಿಂದ ಆ ಪುರಾಣವನ್ನು ಹೇಳುವ ಆಚಾರ್ಯ ಪುರುಷರನ್ನು ನೋಡಬೇಕು, ವೇದವ್ಯಾಸ ದೇವರ ಅನುಸಂಧಾನವನ್ನು ಮಾಡಿ ಆ ಪುರಾಣವನ್ನು ಹೇಳುವಂತಹ ವ್ಯಕ್ತಿಗೆ ಗೌರವವನ್ನು ಸಲ್ಲಿಸಿ ಅದನ್ನು ಕೇಳಬೇಕು ಎಂಬುದಾಗಿ ಹೇಳುತ್ತಾರೆ. ವ್ಯಾಸಾಸನದಲ್ಲಿ ಕುಳಿತಾಗ ಅವರಲ್ಲಿ ವೇದವ್ಯಾಸ ದೇವರ ಸನ್ನಿಧಾನ ಇರುತ್ತೆ.

ವ್ಯಾಸಾಸನಸಮಾರೂಢೋ ಯದಾ ಪೌರಾಣಿಕೋ ದ್ವಿಜಃ ।
ಅಸಮಾಪ್ತೇಃ ಪ್ರಸಂಗಸ್ಯ ನಮಸ್ಕುರ್ಯಾನ್ನ ಕಸ್ಯಚಿತ್ ॥ (2.37 ಹರಿವಂಶಮಹಾತ್ಮ್ಯಮ್)

ಅಂತ ಅಷ್ಟು ವೇದವ್ಯಾಸ ದೇವರ ವಿಶೇಷ ಸನ್ನಿಧಾನ ಅವರಲ್ಲಿ ಇರುತ್ತೆ. ಪ್ರವಚನ ಕೇಳುವಾಗ ಹರಟೆ ಹೊಡೆಯಬಾರದು, ಊರಿನ ಸುದ್ದಿಯನ್ನೆಲ್ಲ ಮಾತನಾಡಬಾರದು, ಅತ್ಯಂತ ಶ್ರದ್ಧೆಯಿಂದ ಏಕಾಗ್ರ ಮನಸ್ಸಿನಿಂದ ಶ್ರವಣವನ್ನು ಮಾಡಬೇಕು ಎಂಬುದಾಗಿ ತಿಳಿಸುತ್ತಾರೆ. ಕೇವಲ ಪಾರಾಯಣಕ್ಕಿಂತಲೂ ಶ್ರವಣ ಮಾಡುವುದು ಬಹಳ ಶ್ರೇಷ್ಠ, ಸಮಗ್ರವಾದ ಪ್ರವಚನದ ಶ್ರವಣವನ್ನು ಮಾಡಿದ ಮೇಲೆ ಶ್ರೀಕೃಷ್ಣ ಪರಮಾತ್ಮನ ಪ್ರತಿಮೆ ಎಂಬುದಾಗಿ ತಿಳಿದು ಆ ಪುರಾಣ, ಪುರಾಣ ಮಂಟಪ, ಪುಸ್ತಕ ಇವುಗಳಿಗೆ ಪ್ರದಕ್ಷಿಣೆ ನಮಸ್ಕಾರಾದಿಗಳನ್ನು ಮಾಡಬೇಕು.

ಸಂಸಾರಸಾಗರೇ ಮಗ್ನಂ ದೀನಂ ಮಾಂ ಕರುಣಾನಿಧೇ ।

ಕರ್ಮಗ್ರಾಹಗೃಹೀತಾಂಗಂ ಮಾಮುದ್ಧರ ಭವಾರ್ಣವಾತ್ ॥ (00.6.27 ಭಾಗವತಮಹಾತ್ಮ್ಯಮ್)

ಅಂತ ಪ್ರಾರ್ಥನೆಯನ್ನು ಮಾಡಬೇಕು. ಪೂಜೆಯನ್ನು ಮಾಡಿದ ಮೇಲೆ ಸಂಸಾರ ಸಾಗರದಲ್ಲಿ ಮುಳುಗಿದ ನಾನಾ ವಿಧವಾದ ಕರ್ಮಗಳೆಂಬಂತಹ ಜಲಚರ ಪ್ರಾಣಿಗಳ ಬಾಯಿಗೆ ಸಿಕ್ಕ ನನ್ನನ್ನು ಉದ್ಧಾರ ಮಾಡು ಅಂತ ಶ್ರೀಕೃಷ್ಣ ಪರಮಾತ್ಮನಿಗೆ ಪ್ರಾರ್ಥನೆಯನ್ನು ಮಾಡುತ್ತಾ ಆ ಪುರಾಣವನ್ನು ಶ್ರವಣ ಮಾಡಬೇಕು ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ.

ವ್ಯಾಸರೂಪ ಪ್ರಬೋಧಜ್ಞ ಸರ್ವಶಾಸ್ತ್ರವಿಶಾರದ ।

ಏತತ್ಕಥಾಪ್ರಕಾಶೇನ ಮದಜ್ಞಾನಂ ವಿನಾಶಯ ॥ (3.9 ಹರಿವಂಶಮಹಾತ್ಮ್ಯಮ್)

ಅಂತ ಆ ಪುರಾಣವನ್ನು ಹೇಳುವ ಆಚಾರ್ಯರಿಗೆ ಪ್ರಾರ್ಥನೆಯನ್ನು ಮಾಡಬೇಕು ಹೀಗೆ ಈ ಪುರಾಣದ ಶ್ರವಣದ ರೀತಿಯನ್ನೆಲ್ಲ ತಿಳಿಸಿಕೊಟ್ಟಿದ್ದಾರೆ. ಆಹಾರದ ನಿಯಮವನ್ನು ತಿಳಿಸುತ್ತಾರೆ ಅಲ್ಪಾಹಾರವನ್ನು ಸ್ವೀಕಾರ ಮಾಡಬೇಕು.

ಮಲಮೂತ್ರಜಯಾರ್ಥಂ ಹಿ ಲಘ್ವಾಹಾರಃ ಸುಖಾವಹಃ ॥ (4.3 ಹರಿವಂಶಮಹಾತ್ಮ್ಯಮ್)

ಹವಿಷ್ಯಾನ್ನೇನ ಕರ್ತವ್ಯಮೇಕವಾರಂ ಕಥಾರ್ಥಿನಾ । (4.4 ಹರಿವಂಶಮಹಾತ್ಮ್ಯಮ್)

ಅಥವಾ ಒಂಬತ್ತು ದಿನ ಉಪವಾಸ ಮಾಡಬಹುದು, ತುಪ್ಪವನ್ನ ಸ್ವೀಕಾರ ಮಾಡಿ ಶ್ರವಣ ಮಾಡಬಹುದು, ಕೇವಲ ಹಾಲು ಕುಡಿದು ಶ್ರವಣ ಮಾಡಬಹುದು, ಕೇವಲ ಹಣ್ಣು ಸ್ವೀಕಾರ ಮಾಡಬಹುದು, ಒಪ್ಪೊತ್ತು ಊಟ ಮಾಡಬಹುದು. ಕೊನೆಗೆ ಹೇಳುತ್ತಾರೆ

ಸುಖಸಾಧ್ಯಂ ಭವೇದ್ ಯತ್ತು ಕರ್ತವ್ಯಂ ಶ್ರವಣಾಯ ತತ್ ।

ಭೋಜನಂ ತು ವರಂ ಮನ್ಯೇ ಕಥಾಶ್ರವಣಕಾರಕಮ್॥ (4.6 ಹರಿವಂಶಮಹಾತ್ಮ್ಯಮ್)

ನೋಪವಾಸೋ ವರಃ ಪ್ರೋಕ್ತೋ ಕಥಾವಿಘ್ನಕರೋ ಯದಿ । (4.7 ಹರಿವಂಶಮಹಾತ್ಮ್ಯಮ್)

ಕಥಾ ಶ್ರವಣವನ್ನು ಭಕ್ತಿಯಿಂದ ಮಾಡುವುದಕ್ಕೆ ಆಗುವುದಿಲ್ಲ, ಗಮನ ಬರುವುದಿಲ್ಲ, ನಿದ್ರೆ ಬರುತ್ತೆ, ಆಯಾಸವಾಗುತ್ತೆ ಅಂತಾದರೆ ಭೋಜನವನ್ನು ಮಾಡಿ ಭಕ್ತಿಯಿಂದ ಶ್ರವಣ ಮಾಡುವುದೇ ಬಹಳ ಶ್ರೇಷ್ಠವಾದದ್ದು ಎಂಬುದಾಗಿ ತಿಳಿಸಿಕೊಡುತ್ತಾರೆ. ನಿಷಿದ್ಧವಾದ ಪದಾರ್ಥಗಳಾದ ಉಳ್ಳಾಗಡ್ಡಿ, ಬೆಳ್ಳುಳ್ಳಿ, ಬದನೆಕಾಯಿ ಇತ್ಯಾದಿಗಳನ್ನು ಎಂದಿಗೂ ಭಕ್ಷಣ ಮಾಡಲೇಬಾರದು, ಇಂತಹ ಶ್ರೇಷ್ಠವಾದ ಪುರಾಣಗಳ ಶ್ರವಣ ಮಾಡುವಾಗಲಂತಲೂ ಸರ್ವಥಃ

ಅಂತಹ ನಿಷಿದ್ಧ ಪದಾರ್ಥಗಳ ಸೇವನೆಯನ್ನು ಮಾಡಬಾರದು. ಶುದ್ಧವಾದ ಶಾಸ್ತ್ರವಿಹಿತವಾದ ಆಹಾರಗಳನ್ನೇ ಸ್ವೀಕಾರ ಮಾಡಬೇಕು. ಕಾಮಕ್ರೋಧಾದಿ ಮಾನಸ ದೋಷಗಳನ್ನು ಬಿಡಬೇಕು, ಬರೀ ಬಾಹ್ಯವಾದ ನಿಷಿದ್ಧ ಪದಾರ್ಥಗಳಲ್ಲ. ಮನಸ್ಸಿನಲ್ಲಿ ಯಾವ ಭಾವನೆಗಳು ನಿಷಿದ್ಧ ಅವುಗಳಿಗೆ ಮನಸ್ಸಿನಲ್ಲಿಯೂ ಅವಕಾಶ ಕೊಡದಂತೆ, ಹೊಟ್ಟೆಯಲ್ಲಿ ಸ್ವೀಕಾರ ಮಾಡುವುದಕ್ಕೆ ಯಾವುದು ನಿಷಿದ್ಧ ಅವುಗಳನ್ನು ಹೊಟ್ಟೆಗೆ ಹಾಕಿಕೊಳ್ಳದಂತೆ ದೈಹಿಕ ಮಾನಸಿಕ ಉಭಯ ವಿಧವಾದ ಪಾವಿತ್ರ್ಯವನ್ನೂ ಪಡೆದುಕೊಂಡು ಶುದ್ಧ ಮನಸ್ಸು, ಶುದ್ಧ ದೇಹಗಳಿಂದ ಹರಿವಂಶದ ಶ್ರವಣವನ್ನು ಮಾಡಬೇಕು ಎಂಬುದಾಗಿ ತಿಳಿಸಿಕೊಡುತ್ತಾರೆ.

ಕಾಮಂ ಕ್ರೋಧಂ ಮದಂ ಮಾನಂ ಮತ್ಸರಂ ಲೋಭ ಮೇವ ಚ ॥ (4.16 ಹರಿವಂಶಮಹಾತ್ಮ್ಯಮ್)

ದಮ್ಭಂ ಮೋಹಂ ತಥಾ ದ್ವೇಷಂ ದೂರಯೇಚ್ಚ ಕಥಾವ್ರತೀ । (4.17 ಹರಿವಂಶಮಹಾತ್ಮ್ಯಮ್)

ವೇದಗಳ ನಿಂದೆ ಮಾಡುವುದು, ಸಜ್ಜನರ ನಿಂದೆ, ವಿಷ್ಣು ಭಕ್ತರ ನಿಂದೆಯನ್ನು ಮಾಡುವುದು, ಗುರುಗಳ ನಿಂದೆ, ಗೋವ್ರತ ಮಾಡುವವರ ನಿಂದೆ, ಸ್ತ್ರೀಯರು, ರಾಜರು, ಮಹಾನುಭಾವರು ಅಂಥವರ ನಿಂದೆಯನ್ನು ಮಾಡಬಾರದು, ಅವರೆಲ್ಲರಲ್ಲಿ ಭಗವಂತನು ಇದ್ದಾನೆ ಎಂಬುದಾಗಿ ತಿಳಿಯಬೇಕು. ಯಾರು ಅಪವಿತ್ರರೋ, ಮೈಲಿಗೆಯಲ್ಲಿ ಇರುತ್ತಾರೆ, ಅಪವಿತ್ರರಾಗಿರುತ್ತಾರೆ, ಮಹಾಪಾಪಗಳನ್ನು ಮಾಡಿದ್ದಾರೆ, ಪಾಪಿಗಳು, ಪಾತಕಿಗಳು, ದುಷ್ಟರು, ದೇವರನ್ನು, ವೇದಗಳನ್ನು, ಶಾಸ್ತ್ರಗಳನ್ನು ನಿಂದೆ ಮಾಡುವವರು ಅಂಥವರ ಜೊತೆಗೆ ಮಾತನ್ನೂ ಆಡಬಾರದು. ಕಥಾ ಶ್ರವಣ ಮಾಡುವಂತಹ ವ್ಯಕ್ತಿ ಸಜ್ಜನರ ಜೊತೆಗೆ ಮಾತನಾಡಬೇಕು, ಹರಿಕಥೆಯ ಮಹಿಮೆಯನ್ನು ಕೊಂಡಾಡುವಂತಹ ಜನರ ಜೊತೆಗೇನೆ ಹಿರಿಹಿರಿ ಹಿಗ್ಗಿ ಮಾತನಾಡಬೇಕೆ ಹೊರತು ಹರಿಕಥೆಯ ಬಗ್ಗೆ ನಿಂದೆ ಮಾಡುವ ಜನ ಇದರಲ್ಲೇನಿದೆ ಇದೆಲ್ಲ ಸುಳ್ಳು ಕಥೆ ಹೇಳುತ್ತಾರೆ ಅಂತ ಹೇಳುವವರ ಜೊತೆಗೆ ಮಾತನಾಡುತ್ತಾ ಆ ಅಶ್ರದ್ಧೆಯನ್ನು ತಲೆಯಲ್ಲಿ ತುಂಬಿಕೊಂಡು ಕಥೆಯನ್ನು ಕೇಳಿದರೆ ಪ್ರಯೋಜನವೇನು, ಸರ್ವಥಃ ಅಂಥವರ ಜೊತೆಗೆ ಸಹವಾಸವನ್ನೇ ಮಾಡಬಾರದು. ಸಜ್ಜನರ ಜೊತೆಗೆ ಮಾತ್ರ ಮಾತನಾಡುತ್ತಾ ಸತ್ಯ, ಶೌಚ, ದಯಾ, ಮೌನ ಮೊದಲಾದ ಸದ್ಗುಣಗಳನ್ನು ಅಳವಡಿಸಿಕೊಂಡವನಾಗಿ ಮೌನದಿಂದ ಕಥಾ ಶ್ರವಣವನ್ನು ಮಾಡಬೇಕು ಎಂಬುದಾಗಿ ತಿಳಿಸಿಕೊಡುತ್ತಾರೆ. ಕಥೆ ನಡೆಯುತ್ತ ಇರುವಾಗ ಆ ಕಥೆಗೆ ತಿರಸ್ಕಾರವನ್ನು ಮಾಡಿ ಎದ್ದು ಹೋಗುತ್ತಾರೆ ಅಂಥವರಿಗೆ ಜನ್ಮಾಂತರದಲ್ಲಿ ತಾವೇನು ಅಪೇಕ್ಷೆ ಪಟ್ಟು ಭೋಗವನ್ನು ಮಾಡಬೇಕು, ಸುಖವಾಗಿ ಇರಬೇಕು ಅಂತ ಬಯಸುತ್ತಾರೆ ಆ ರೀತಿಯ ಸುಖವನ್ನ ಅನುಭವಿಸಲಿಕ್ಕೆ ಆಗುವುದಿಲ್ಲ. ಯಾವ ಯಾವ ತರಹದ ಸುಖವನ್ನ ಬಯಸಿ ಭೋಗ ಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ ಆ ಸುಖವನ್ನು ಅನುಭವಿಸುವ ಮಧ್ಯದಲ್ಲಿಯೇ ವಿಘ್ನವಾಗಿ ಅವರು ಕಷ್ಟ ಪಡುವಂತಹ ಸಂದರ್ಭ ಬರುತ್ತೆ. ಯಾಕೆಂದರೆ ಹರಿಕಥಾ ಶ್ರವಣ ಮಾಡುವಾಗ ಅರ್ಧಕ್ಕೆ ಬಿಟ್ಟು ಹೋಗಿದ್ದೀಯಲ್ಲ, ನಿನಗೆ ಈ ದೇಹ, ಇಂದ್ರಿಯ, ಮನಸ್ಸುಗಳನ್ನೆಲ್ಲ ಕೊಟ್ಟು ಸುಖವನ್ನು ಅನುಭವಿಸುವ ಶಕ್ತಿಯನ್ನು ನೀಡಿದ ಆ ಪರ ಶಕ್ತಿಯ ಮಹಿಮೆಯನ್ನ ಕೇಳುವುದಕ್ಕೇ ನಿನಗೆ ಅವಕಾಶ ಇಲ್ಲ ಅಂದರೆ ಹಾಗಾದರೆ ನೀನು ಸುಖವನ್ನು ಅನುಭವಿಸುವುದಕ್ಕೆ ನಾನಾದರೂ ಯಾಕೆ ನಿನಗೆ ಅವಕಾಶ ಕೊಡಬೇಕು ಅಂತ ಪರಮಾತ್ಮ ಇವನಿಗೆ ಆ ಸುಖ ಅನುಭವ ಮಾಡುವುದಕ್ಕೆ ಆಗದೆ ಇರುವ ಹಾಗೆ ಮಾಡುತ್ತಾನಂತೆ.

ಕಥಾಯಾಂ ಕೀರ್ತ್ಯಮಾನಾಯಾಂ ಯೇ ಗಚ್ಛನ್ತ್ಯನ್ಯತೋ ನರಾಃ ॥ (4.23 ಹರಿವಂಶಮಹಾತ್ಮ್ಯಮ್)

ಭೋಗಾನ್ತರೇ ಪ್ರಣಶ್ಯನ್ತಿ ತೇಷಾಂ ದಾರಾಶ್ಚ ಸಮ್ಪದಃ । (4.24 ಹರಿವಂಶಮಹಾತ್ಮ್ಯಮ್)

ಇನ್ನು ತಲೆಗೆ ರುಮಾಲು ಸುತ್ತಿಕೊಂಡು, ಪೇಟಾ ಸುತ್ತಿಕೊಂಡು ಟೊಪ್ಪಿಗೆ ಹಾಕಿಕೊಂಡು ಕೆಲವರು ಕೇಳುತ್ತಾರೆ ಆ ರೀತಿಯಾಗಿ ಕೇಳಬಾರದು ಹಾಗೆ ಕೇಳಿದರೆ ಪಕ್ಷಿಯ ಜನ್ಮ ಅವನಿಗೆ ಬರುತ್ತದೆ ಬಾತುಕೋಳಿಯಾಗಿ ಹುಟ್ಟುತ್ತಾನೆ. ಬಾಯಿಯಲ್ಲಿ ತಾಂಬೂಲವನ್ನು ಹಾಕಿಕೊಂಡು ಚರ್ವಣ ಮಾಡುತ್ತಾ ಮಾಡುತ್ತಾ ಕೆಲವರು ಕಥೆಯನ್ನು ಕೇಳುತ್ತಾರೆ ಹಾಗೆ ಕೇಳಬಾರದು ಅವರೆಲ್ಲರಿಗೆ ಹೊಲಸು ತಿನ್ನುವ ಪರಿಸ್ಥಿತಿ ಬರುತ್ತದೆ, ನರಕದಲ್ಲಿ ಯಮಕಿಂಕರರು ಅವರನ್ನು ಚೆನ್ನಾಗಿ ಹೊಡೆದು ಹೊಲಸು ತಿನ್ನು ಅಂತ ಹೇಳುತ್ತಾರೆ.

ಸ್ವವಿಷ್ಠಾಂ ಖಾದಯನ್ತ್ಯೇತಾನ್ನರಕೇ ಯಮಕಿಙ್ಕರಾಃ । (4.26 ಹರಿವಂಶಮಹಾತ್ಮ್ಯಮ್)

ಆದ್ದರಿಂದ ಸರ್ವಥಃ ತಾಂಬೂಲ ಭಕ್ಷಣಾದಿಗಳನ್ನು ಮಾಡುತ್ತಾ ಕೇಳಬಾರದು. ಪ್ರವಚನವನ್ನು ಮಾಡುವ ಆಚಾರ್ಯರಿಗೆ ಉನ್ನತ ಸ್ಥಾನ ಇರಬೇಕು. ಅವರಿಗಿಂತಲೂ ಉನ್ನತ ಸ್ಥಾನದಲ್ಲಿ ಕುಳಿತು ಯಾರು ಶ್ರವಣ ಮಾಡುತ್ತಾರೋ, ಓ ಮೇಲೆ ಕುಳಿತು ಕೇಳುವ ಅಪೇಕ್ಷೆ ನಿಮಗಿದೆಯೋ ಹಾಗಾದರೆ ಹಾಗೆ ಮಾಡುತ್ತೇನೆ ಅಂತ ಪರಮಾತ್ಮ ಜನ್ಮಾಂತರದಲ್ಲಿ ಅವನನ್ನು ಕಾಗೆಯಾಗಿ ಹುಟ್ಟಿಸುತ್ತಾನೆ, ಮೇಲೆ ಕುಳಿತಿರುತ್ತದಲ್ಲ ಗಿಡದ ಮೇಲೆ, ಇನ್ನೂ ಮೇಲೆ ಹೋಗು, ಇಷ್ಟು ಮೇಲೆ ಯಾಕೆ ಇನ್ನೂ ಮೇಲೆ ಕುಳಿತು ಕೇಳು ಅಂತ **'ತೇ ಭವನ್ತ್ಯೇವ ವಾಯಸಾಃ'.**[1] ಆ ರೀತಿಯಾಗಿ ಕೇಳಬಾರದು. ಹಾಸಿಗೆಯ ಮೇಲೆ ಮಲಗಿ ವೀರಾಸನದಲ್ಲಿ ಕುಳಿತು ಹೀಗೆಲ್ಲ ಕೇಳಬಾರದು, ಅರ್ಜುನ ಅಂತ ಹೆಸರಿನ ಒಂದು ವೃಕ್ಷ ಆ ಗಿಡವಾಗಿ ಹುಟ್ಟುವ ಪ್ರಸಂಗ ಬರುತ್ತೆ ಅವನಿಗೆ. ಇನ್ನು ಪ್ರವಚನವನ್ನು ಮಾಡುವ ಆಚಾರ್ಯರು ಯಾರು ಇರುತ್ತಾರೋ ಅವರಿಗೆ ನಮಸ್ಕಾರವನ್ನು ಮಾಡಿ, ಗ್ರಂಥಕ್ಕೆ ನಮಸ್ಕಾರ ಮಾಡಿ ಕೇಳಬೇಕು, ಗ್ರಂಥಕ್ಕೆ ನಮಸ್ಕಾರ ಮಾಡದೇ ಪ್ರವಚನವನ್ನು ಹೇಳುವವರಿಗೆ ನಮಸ್ಕಾರ ಮಾಡದೇ ಕೇಳಿದರೆ ವಿಷವೃಕ್ಷ ಆಗುತ್ತಾರೆ ಅಂತ, ಮಲಗಿ ಕೇಳಿದರೆ ಅಜಗರ ಸರ್ಪವಾಗಿ ಹುಟ್ಟುತ್ತಾರೆ ಅಂತ ಹೇಳುತ್ತಾರೆ. ಅನೇಕ ಬಾರಿ ನೀವು ತಿಳಿದಿದ್ದೀರಿ ಪಾಪ ಹೇಗಿರುತ್ತೋ ಎಂತಹ ಕರ್ಮಗಳಿಂದ ಇವನು ಆ ಪಾಪವನ್ನು ಮಾಡಿರುತ್ತಾನೆ ಆ ತರಹದ ಫಲವನ್ನು ಸಾಮಾನ್ಯವಾಗಿ ಭಗವಂತ ಕೊಡುತ್ತಾ ಇರುತ್ತಾನೆ, ಮಲಗಿ ಕೇಳುತ್ತೀಯಲ್ಲ ಮಲಗಿಯೇ ಇರು ಅಜಗರ ಸರ್ಪವಾಗಿ ಅಂತ. ಸಮಾನಾಸನದಲ್ಲಿ ಕುಳಿತು ವಕ್ರದೃಷ್ಟಿಯಿಂದ ನೋಡುತ್ತಾ ಯಾರು ಕೇಳುತ್ತಾರೋ ಅವರಿಗೆ ಗುರುತಲ್ಪ ಮಾಡಿದ ಮಹಾಪಾಪ ಬರುತ್ತದೆ. ಇದನ್ನೆಲ್ಲ ಹೇಳುವುದರ ತಾತ್ಪರ್ಯ ಅಷ್ಟು ಭಕ್ತಿ ಶ್ರದ್ಧೆಗಳಿಂದ ವಿನೀತನಾಗಿ ನಮಸ್ಕಾರ ಪೂರ್ವಕವಾಗಿ ಹರಿವಾಯು ಗುರುಗಳಲ್ಲಿ ಶ್ರದ್ಧೆಯನ್ನಿಟ್ಟು ಪುರಾಣವನ್ನು ಹೇಳುವವರಲ್ಲಿಯೂ ಭಕ್ತಿಯನ್ನು ಮಾಡುತ್ತಾ, ಶ್ರದ್ಧೆಯನ್ನು ಮಾಡುತ್ತಾ ಶ್ರವಣ ಮಾಡಬೇಕು ಅನ್ನುವುದು ಬಹಳ ಮುಖ್ಯ. ಮಧ್ಯ ಮಧ್ಯದಲ್ಲಿ ಆ ಪ್ರವಚನ ಮಾಡುವವರಿಗೆ ಏನೇನೋ ಅಡ್ಡ ಅಡ್ಡ ಭಕ್ತಿಯಿಂದ, ಶ್ರದ್ಧೆಯಿಂದ, ಜಿಜ್ಞಾಸೆಯಿಂದ ಪ್ರಶ್ನೆ ಕೇಳಿದರೆ ತಪ್ಪಲ್ಲ ಆದರೆ ನಾಸ್ತಿಕ್ಯ ಮನೋಭಾವನೆಯಿಂದ ಕುಯುಕ್ತಿಗಳನ್ನು ಹೇಳುತ್ತಾ ಅವರು ಹೇಳುವ ತತ್ವಗಳಿಗೆ ಅಡ್ಡಡ್ಡಾಗಿ ಮಾತನಾಡುವಂತಹ ದುರತ್ತರವನ್ನು ನೀಡುವ ವ್ಯಕ್ತಿಗಳು ಏನಿದ್ದಾರೋ ಅವರೆಲ್ಲ ಕತ್ತೆಗಳಾಗಿ, ಓತೀಕಾಟಾಗಿ ಹುಟ್ಟುತ್ತಾರೆ ಅಂತ ಹೇಳುತ್ತಾರೆ. ಈ ರೀತಿಯಾಗಿ ಶ್ರದ್ಧೆಯಿಂದ ಪ್ರಶ್ನೆ ಮಾಡಲೇಬೇಕು ಅದನ್ನು ಕೃಷ್ಣನೇ ಹೇಳಿದ್ದಾನೆ.

ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ । (4.34 ಭ ಗೀತಾ)

ಶ್ರದ್ಧಾ ಭಕ್ತಿಗಳಿಂದ ತತ್ವ ಜಿಜ್ಞಾಸೆಯಿಂದ ಪ್ರಶ್ನೆಗಳನ್ನು ಮಾಡಿ ಉತ್ತರಗಳನ್ನು ಪಡೆದು ವಿಚಾರ ವಿನಿಮಯಗಳನ್ನು ಮಾಡುವುದರಲ್ಲಿ ತಪ್ಪಿಲ್ಲ ಆದರೆ ದುರಾಗ್ರಹ, ದುರ್ಬುದ್ಧಿ, ಕುಯುಕ್ತಿಗಳಿಂದ ಅವನು ಆ ಭಗವತ್ ತತ್ವಗಳ ಬಗ್ಗೆ

1. 4.27 ಹರಿವಂಶಮಹಾತ್ಮ್ಯಮ್

ಅಪಲಾಪವನ್ನು ಮಾಡಬಾರದು ಅನ್ನುವುದನ್ನು ಇಲ್ಲಿ ನಾವು ಅರ್ಥ ಮಾಡಿಕೊಳ್ಳಬೇಕಾದದ್ದು. ವಿಘ್ನವನ್ನು ಮಾಡಬಾರದು, ಕಥೆಯನ್ನು ತಾನು ಕೇಳಲಿಕ್ಕಾಗದಿದ್ದರೂ ಪರವಾಗಿಲ್ಲ ಕೇಳುವವರಿಗೆ ವಿಘ್ನವನ್ನು ಮಾಡಬಾರದು ಎಂಬುದಾಗಿ ತಿಳಿಸುತ್ತಾರೆ. ಮಧ್ಯದಲ್ಲಿ ಹರಟೆ ಹೊಡೆಯಬಾರದು, ಮಕ್ಕಳನ್ನು ಆಟ ಆಡಿಸಬಾರದು, ಶಾಂತವಾದ ರೀತಿಯಲ್ಲಿ ಎಲ್ಲರೂ ಕೂಡ

ಕಥಾಯಾಂ ಶ್ರೂಯಮಾಣಾಯಾಂ ನ ಕುರ್ಯಾಚ್ಛಿಶುಲಾಲನಮ್ ॥ (4.35 ಹರಿವಂಶಮಹಾತ್ಮ್ಯಮ್)

ನರ್ಮವಾದಾನ್ ವದೇನ್ನೈವ । (4.36 ಹರಿವಂಶಮಹಾತ್ಮ್ಯಮ್)

ಚೇಷ್ಟೆ ಮಾಡುತ್ತಾ ಕೂಡುವುದು, ಹರಟೆ ಹೊಡೆಯುವುದು ಹೆಂಡತಿಯ ಜೊತೆಗೆ ಮಾತನಾಡುವುದು ಇವುಗಳು ಯಾವುದನ್ನು ಮಾಡಬಾರದು ಅಂತ ಬಹಳ ವಿಸ್ತೃತವಾಗಿ ಹರಿವಂಶ ಹೇಳುತ್ತದೆ. ಒಬ್ಬ ಜನಸ್ಥಾನ ಅಂತ ಆ ಜನಸ್ಥಾನ ಪ್ರದೇಶದಲ್ಲಿ ಇರತಕ್ಕಂತಹ ಒಬ್ಬ ಶ್ರೇಷ್ಠನಾದಂತಹ ಬ್ರಾಹ್ಮಣ ಬಹಳ ಭಕ್ತಿ ಅವನಿಗೆ ಪುರಾಣ ಅಂದರೆ ಅಷ್ಟು ಶ್ರದ್ಧೆಯಿಂದ ಕೇಳುತ್ತಾ ಇದ್ದ ನಿತ್ಯದಲ್ಲಿ ಗಂಗಾ ಸ್ನಾನವನ್ನು ಮಾಡಿ ತನ್ನ ಆಹ್ನಿಕವನ್ನು ಎಲ್ಲ ಮುಗಿಸಿಕೊಂಡು ಕಥಾ ಶ್ರವಣ ಮಾಡುವುದಕ್ಕೆ ಕೂಡುತ್ತಾ ಇದ್ದ. ಕಥಾ ಶ್ರವಣ ಮಾಡುವುದಕ್ಕೆ ಅವನು ಕುಳಿತದ್ದೆ ತಡ ಬಂದು ಹೆಂಡತಿ ಅವನಿಗೆ ನಾನಾ ರೀತಿಯಿಂದ ವಿಘ್ನವನ್ನು ಮಾಡುತ್ತ ಇದ್ದಳು ಮನೆಯಲ್ಲಿ ಯಾವ ವಿಧವಾದ ಉಣ್ಣುವುದಕ್ಕೆ, ತಿನ್ನುವುದಕ್ಕೆ ಅಕ್ಕಿ ಇಲ್ಲ, ಬೇಳೆ ಇಲ್ಲ, ತರಕಾರಿ ಇಲ್ಲ, ಹಾಲು ಇಲ್ಲ, ಮೊಸರು ಇಲ್ಲ, ತುಪ್ಪ ಇಲ್ಲ ಮಕ್ಕಳೆಲ್ಲ ಉಪವಾಸ ಇದ್ದಾರೆ, ನೀವು ಬಂದು ಇಲ್ಲಿ ಪ್ರವಚನವನ್ನು ಕೇಳುತ್ತಾ ಇದ್ದೀರಿ ಇದನ್ನೆಲ್ಲಾ ನೋಡುವವರು ಯಾರು ಅಂತ. ಮನೆಯಲ್ಲಿ ಏನು ಬೇಕೋ ಅಷ್ಟು ಹಾಲು, ಮೊಸರು, ತುಪ್ಪ, ಬೆಣ್ಣೆ, ಅಕ್ಕಿ, ಬೇಳೆ ಎಲ್ಲ ತಂದಿಟ್ಟು ವ್ಯವಸ್ಥೆ ಮಾಡಿ, ಯಾವುದಕ್ಕೆ ಕೊರತೆ ಇಲ್ಲದೆ ಇರುವ ಹಾಗೆ ಮಾಡಿ ಇವನು ಪ್ರವಚನಕ್ಕೆ ಬಂದು ಕೂಡುತ್ತಾ ಇದ್ದ ಪಾಪ. ಇಷ್ಟು ಮಾಡಿದರು ಕೂಡ ಅವಳಿಗೆ ತನಗೆ ಊಟಕ್ಕೆ ಗತಿ ಇಲ್ಲ ಅನ್ನುವ ಪ್ರಶ್ನೆ ಇಲ್ಲ, ಪುರಾಣ ಕೇಳಬಾರದು ಅಂತ ಏನಾದರೂ ಮಾಡಿ ಈ ಪುರಾಣಕ್ಕೆ ವಿಘ್ನ ಮಾಡಬೇಕು ಅನ್ನುವ ದುರ್ಬುದ್ಧಿ.

ದಧಿ ದುಗ್ಧಂ ಸಮಾನೀಯ ಶರ್ಕರಾಗುಡಮೇವ ಚ ॥ (4.43 ಹರಿವಂಶಮಹಾತ್ಮ್ಯಮ್)

ಈ ರೀತಿ ಇವನ್ನೆಲ್ಲ ತಾನು ಯಥೇಚ್ಛವಾಗಿ ತಿಂದು ತೃಪ್ತಳಾಗಿ ಹೊಟ್ಟೆ ತುಂಬ ಉಂಡು ತಿಂದು ಏನಿಲ್ಲ ಮನೆಯಲ್ಲಿ ತಿನ್ನಲಿಕ್ಕೆ, ಉಣ್ಣಲಿಕ್ಕೆ ಅಂತ ಬಂದು ಇವನಿಗೆ ತೊಂದರೆಯನ್ನು ಕೊಡುತ್ತ ಇದ್ದಾಳೆ ಆ ರೀತಿ ಅಂತಹ ದುಷ್ಟಳಾದಂತಹ ಸ್ತ್ರೀ. ಇವನು ಮಾತ್ರ ನಿಶ್ಚಲನಾಗಿ ಏಕಾಗ್ರ ಮನಸ್ಸಿನಿಂದ ಶ್ರವಣ ಮಾಡುತ್ತ ಇದ್ದಾನೆ ಏನಾದರೂ ಮಾಡು ನನ್ನ ಕರ್ತವ್ಯ ನಾನು ಮಾಡಿದ್ದೇನೆ. ಮಾಡಿಕೊಂಡ ಹೆಂಡತಿ, ಮಕ್ಕಳಿಗೆ ಊಟದ ವ್ಯವಸ್ಥೆಯನ್ನು ಮಾಡದೆ ಇರಬಾರದು ಶಾಸ್ತ್ರ ಹೇಳುತ್ತೆ ವ್ಯವಸ್ಥೆ ಮಾಡಿ ಕೊಟ್ಟಿದ್ದೇನೆ ಎಲ್ಲ ಮಾಡಿಕೊಟ್ಟು ನೈವೇದ್ಯ ಮಾಡಿ, ಊಟಕ್ಕೆ ವ್ಯವಸ್ಥೆ ಮಾಡಿ ನನ್ನಷ್ಟಕ್ಕೆ ನಾನು ಪುರಾಣಕ್ಕೆ ಬಂದಮೇಲೂ ನೀನು ಇಷ್ಟು ಮಾತನಾಡುತ್ತೀಯಾ ಅಂದರೆ ನಾನೇನು ಅದರ ಬಗ್ಗೆ ಆಲೋಚನೆಯನ್ನು ಮಾಡುವುದಿಲ್ಲ ಅಂತ ಇವನು ನಿಶ್ಚಿಂತೆಯಿಂದ ಪುರಾಣದ ಶ್ರವಣವನ್ನು ಮಾಡುತ್ತ ಇದ್ದ.

ಈ ರೀತಿ ಎಷ್ಟೋ ದಿನಗಳು ಕಳೆದಿದೆ ಒಂದು ದಿನ **'ಕರಾಲ ರಭಸಃ ಕಾಲಃ'** ಅವಳು ಮೃತಳಾಗಿದ್ದಾಳೆ. ಯಮ ದೂತರು ಯಮ ದೇವರ ಆಜ್ಞೆಯಂತೆ ನಾನಾ ವಿಧವಾದ ನರಕಯಾತನೆಯನ್ನು ಅವಳಿಗೆ ನೀಡಿದ್ದಾರೆ. ಕಾರಣ ಇಷ್ಟೇ ಪುರಾಣಕ್ಕೆ ನೀನು ವಿಘ್ನವನ್ನು ಮಾಡಿದ್ದಿ, ನೀನು ಕೇಳಿಲ್ಲ ಕೇಳುವ ಗಂಡನಿಗೆ ತೊಂದರೆ ಕೊಡುತ್ತಾ ಇದ್ದಿ ಆದ್ದರಿಂದ ನೀನು ನರಕಯಾತನೆಯನ್ನು ಅನುಭವಿಸಬೇಕು ಅಂತ ಎಷ್ಟೋ ಕಾಲದವರೆಗೆ ನರಕದ ಯಾತನೆಯನ್ನು ಅನುಭವಿಸಿ

ಆಮೇಲೆ ರಾಕ್ಷಸಿಯಾಗಿ ಹುಟ್ಟಿದ್ದಾಳೆ. ನೀರಿಲ್ಲದ ಪ್ರದೇಶದೊಳಗೆ ಹಸಿವೆ ನೀರಡಿಕೆಗಳಿಂದ ವಿಲಿವಿಲಿ ಒದ್ದಾಡುತ್ತಾ ರಾಕ್ಷಸಿಯಾಗಿ ಎಷ್ಟೋ ಕಾಲವನ್ನು ಕಳೆದಿದ್ದಾಳೆ ಪುರಾಣದ ವಿಘ್ನ ಮಾಡಿದ ಕಾರಣ.

ತಸ್ಮಾದ್ ವಿಘ್ನಂ ನ ಕರ್ತವ್ಯಂ ಭಾರ್ಯಯಾ ಪುರುಷೇಣ ವಾ । (4.64 ಹರಿವಂಶಮಹಾತ್ಮ್ಯಮ್)

ಆದ್ದರಿಂದ ಗಂಡ ಶ್ರವಣ ಮಾಡುವಾಗ ಹೆಂಡತಿ, ಹೆಂಡತಿ ಶ್ರವಣ ಮಾಡುವಾಗ ಗಂಡ ಪರಸ್ಪರವಾಗಿ ಯಾರೂ ಕೂಡ ಕಥಾ ವಿಘ್ನವನ್ನು ಮಾಡಬಾರದು ಎಂಬುದಾಗಿ ತಿಳಿಸಿಕೊಡುತ್ತಾರೆ. ಇಷ್ಟು ಶ್ರೇಷ್ಠವಾದಂತಹ ಮಹಿಮೆ ಇದೆ. ಶ್ರೀಕೃಷ್ಣ ಜನ್ಮಾಷ್ಟಮಿಯ ಉತ್ಸವವನ್ನು ಎಷ್ಟು ವೈಭವದಿಂದ ಮಾಡಬೇಕೋ ಅಷ್ಟು ವೈಭವದಿಂದ ಆ ಕೃಷ್ಣ ಪರಮಾತ್ಮನ ಅವತಾರದ ಲೀಲೆಯನ್ನು ವರ್ಣನೆ ಮಾಡುವ ಹರಿವಂಶದ ಈ ಪುರಾಣದ ಶ್ರವಣ ಮಾಡುವಾಗ ಅಷ್ಟು ಉತ್ಸಾಹದಿಂದ ಉತ್ಸವವನ್ನು ಮಾಡಬೇಕು ಎಂಬುದಾಗಿ ತಿಳಿಸಿಕೊಡುತ್ತ ಇದ್ದಾರೆ. ಶ್ರವಣ ಮಾಡಿದಂತಹ ವ್ಯಕ್ತಿಗಳಿಗೆಲ್ಲ ಪ್ರಸಾದವನ್ನು ನೀಡಬೇಕು, ತುಲಸಿ ಮಾಲೆಯನ್ನು ಕೊಡಬೇಕು ಅನ್ನುತ್ತಾರೆ ಶ್ರೋತೃಗಳಿಗೆಲ್ಲ

ಪ್ರಸಾದತುಲಸೀಮಾಲಾ ಶ್ರೋತೃಭ್ಯಶ್ಚಾಥ ದೀಯತಾಮ್ । (5.4 ಹರಿವಂಶಮಹಾತ್ಮ್ಯಮ್)

ಈ ರೀತಿ ಆ ಕೃಷ್ಣ ಪರಮಾತ್ಮನಿಗೆ ಜೈ ಜೈಕಾರವನ್ನು ಹೇಳಬೇಕು, ನಮಸ್ಕಾರವನ್ನು ಹೇಳಬೇಕು, ಶಂಖ ಧ್ವನಿಯಿಂದ ಆ ಭಗವಂತನ ಸರ್ವೋತ್ತಮತ್ವವನ್ನು ಹಾಡಬೇಕು ಹೊಗಳಬೇಕು, ನರ್ತನ ಮಾಡಬೇಕು, ಯಥೇಚ್ಛವಾಗಿ ಸಜ್ಜನರಿಗೆ ಶ್ರವಣ ಮಾಡುವಂತಹ ಭಗವದ್ಭಕ್ತರಿಗೆ ಅನ್ನ ದಾನಾದಿಗಳನ್ನೆಲ್ಲ ಮಾಡಬೇಕು ಎಂಬುದಾಗಿ ತಿಳಿಸಿಕೊಡುತ್ತ ಇದ್ದಾರೆ. ಮಾಡಿ ನಾನಾ ವಿಧವಾದ ಅನ್ನ ದಾನಾದಿಗಳನ್ನು ಮಾಡುವುದಲ್ಲದೆ ಆ ಪುರಾಣವನ್ನು ಹೇಳಿದಂತಹ ವ್ಯಕ್ತಿಗೆ ಅನೇಕ ವಿಧವಾದಂತಹ ದಾನಾದಿಗಳನ್ನೆಲ್ಲ ಮಾಡಿ ಸಂತೋಷವನ್ನು ಪಡಿಸಬೇಕು ಅಂತ ತಿಳಿಸಿಕೊಟ್ಟಿದ್ದಾರೆ. ಸಮಗ್ರ ಪುರಾಣ ಶ್ರವಣ ಆದಮೇಲೆ ಪುನಃ ಪ್ರಾರಂಭದಲ್ಲಿ ಯಾವ ರೀತಿ ಗಣಪತಿಯ ಪೂಜೆಯನ್ನು ಮಾಡಿ ಪ್ರಾರಂಭವನ್ನು ಮಾಡಿರುತ್ತಾರೋ ಆ ರೀತಿ ಪುನಃ ಗಣಪತಿ ಪೂಜಾದಿಗಳನ್ನು ಮಾಡಿ ಉತ್ತಮವಾದ ಶ್ರೇಷ್ಠವಾದಂತಹ ಶುಭ ದಿನದಂದು ಅದರ ಮಂಗಳ ಮಹೋತ್ಸವವನ್ನು ಮಾಡಬೇಕು. ಗೋದಾನ, ಭೂದಾನ, ಗೃಹದಾನ, ಸ್ವರ್ಣದಾನ, ರಜತದಾನ, ವಸ್ತ್ರದಾನ ಹಾಗೂ ನಾನಾ ವಿಧವಾದಂತಹ ಪಾಯಸ ಇತ್ಯಾದಿಗಳನ್ನು ದಾನ ಮಾಡಬೇಕು ಎಂಬುದಾಗಿ ತಿಳಿಸುತ್ತಾರೆ. ಇಂತಹ ದಾನ ಧರ್ಮಾದಿಗಳನ್ನು ಮಾಡಿ ಯಥಾಶಕ್ತಿ ದಾನ ಧರ್ಮಾದಿಗಳನ್ನು ಮಾಡುವ ವಿಷಯದಲ್ಲಿ ಎಲ್ಲ ಶಾಸ್ತ್ರಗಳು ಹೇಳುವುದು ಅವರವರ ಶಕ್ತಿಗೆ ಅನುಗುಣವಾಗಿ ಮಾಡಬೇಕು. ಯಥಾಶಕ್ತಿಯಾಗಿ ಮಾಡಿ ಪರಮಾತ್ಮನಿಗೆ ಯಾರು ಸಮರ್ಪಣೆ ಮಾಡುತ್ತಾರೋ

ಅಪುತ್ರಃ ಪುತ್ರಮಾಪ್ನೋತಿ ಹ್ಯಧನೋ ಧನಮಾಪ್ನುಯಾತ್ ।

ನರಮೇಧಾಶ್ವಮೇಧಾಭ್ಯಾಂ ಯತ್ ಫಲಂ ಪ್ರಾಪ್ಯತೇ ನರೈಃ ॥ (6.51 ಹರಿವಂಶಮಹಾತ್ಮ್ಯಮ್)

ತತ್ ಫಲಂ ಲಭ್ಯತೇ ಸರ್ವಂಪುರಾಣ ಶ್ರವಣಾದ್ಧರೇಃ ॥ (6.52 ಹರಿವಂಶಮಹಾತ್ಮ್ಯಮ್)

ಅಶ್ವಮೇಧಾದಿ ಯಾಗಗಳನ್ನು ಮಾಡಿದರೆ ಏನು ಫಲವೋ ಆ ಫಲವನ್ನು ಪಡೆಯುತ್ತಾನೆ, ಶ್ರೇಷ್ಠವಾದ ಪುತ್ರ ಸಂತಾನದ ಪ್ರಾಪ್ತಿ, ಧನದ ಅಪೇಕ್ಷೆ ಇದ್ದವರಿಗೆ ಶ್ರೇಷ್ಠವಾದ ಧನ ಪ್ರಾಪ್ತಿಯಾಗುತ್ತೆ. ಉತ್ತಮವಾದಂತಹ ಜ್ಞಾನ ಸಂಪತ್ತು ಆ ಜ್ಞಾನ ಸಂಪತ್ತು ಬೇಕು, ಭಕ್ತಿ ವೈರಾಗ್ಯಗಳ ಅಭಿವೃದ್ಧಿಯಾಗಬೇಕು, ಶಾಸ್ತ್ರಗಳ ಶ್ರವಣ ಮಾಡುವ ಸೌಭಾಗ್ಯ

ಸಿಗಬೇಕು ಆ ಎಲ್ಲ ಅಪೇಕ್ಷೆಗಳು ಕೂಡ ಪರಿಪೂರ್ಣವಾಗುತ್ತವೆ ಎಂಬುದಾಗಿ ಶ್ರೀಕೃಷ್ಣ ಪರಮಾತ್ಮನ ಅವತಾರ ಲೀಲೆಗಳನ್ನು ವರ್ಣನೆ ಮಾಡುವಂತಹ ಹರಿವಂಶ ಮಹಾತ್ಮ್ಯದ ಶ್ರವಣದ ಮಹಿಮೆಯನ್ನು ಇಲ್ಲಿ ತಿಳಿಸಿಕೊಟ್ಟಿದ್ದಾರೆ. ಇಂತಹ ಹರಿವಂಶದ ಶ್ರವಣವನ್ನು ಯಥಾಶಕ್ತಿಯಾಗಿ ಎಲ್ಲ ಭಗವದ್ಭಕ್ತರು ಮಾಡಬೇಕು/ ಓದಬೇಕು. ಹರಿವಂಶವನ್ನು ಹೇಳುವುದಕ್ಕೆ ಮಹಾನುಭಾವರು ಜ್ಞಾನಿಗಳು ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು, ಶ್ರೀಮದ್ ಟೀಕಾಕೃತ್ಪಾದರೇ ಮಹಾಜ್ಞಾನಿಗಳು ನಿರ್ಣಯವನ್ನು ಮಾಡಿ ಈ ಹರಿವಂಶದ ನಿರೂಪಣೆಯನ್ನು ಮಾಡಬೇಕು. ಅಂತಹ ಜ್ಞಾನಿವರೇಣ್ಯರು ಹೇಳಬೇಕಾದದ್ದು ಆದರೆ **'ನಭಃಪತಂತ್ಯಾತ್ಮಸಮಂ ಪತತ್ರಿಣಃ'** ಅಂತ ಹೇಳಿದ ಹಾಗೆ ತಮ್ಮ ತಮ್ಮ ಯೋಗ್ಯತೆಗೆ ತಕ್ಕಂತೆ ಪಕ್ಷಿಗಳು ಆಗಸದಲ್ಲಿ ಹಾರುವ ರೀತಿಯಲ್ಲಿ ಯಥಾಶಕ್ತಿ ಆ ಹರಿವಂಶದ ಅಭಿಪ್ರಾಯ ನಮ್ಮ ಬುದ್ಧಿಗೆ ಗೋಚರವಾದಷ್ಟು ನಮ್ಮ ಶಕ್ತಿಯಿದ್ದಷ್ಟು ಹೇಳುವ/ಓದುವ ಪ್ರಯತ್ನವನ್ನು ಮಾಡೋಣ. ಭಕ್ತಿ ಶ್ರದ್ಧೆಗಳಿಂದ ಕೇಳಿ/ ಓದಿ ಶ್ರೀಹರಿಯ ಮಹಾತ್ಮ್ಯವನ್ನು ಪ್ರಧಾನವಾಗಿ ತಿಳಿದುಕೊಂಡು ಆ ಭಗವಂತನ ಅನುಗ್ರಹಕ್ಕೆ ಎಲ್ಲರೂ ಕೂಡ ಪಾತ್ರರಾಗಬೇಕು ಎಂಬುದಾಗಿ ತಿಳಿಸುತ್ತಾ ಇದ್ದೇವೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ
ಹರಿವಂಶಪರ್ವ-2

* * *

ಪರಮ ಪವಿತ್ರವಾದ ಮಹಾಭಾರತದ ಖಿಲಭಾಗದ ಹರಿವಂಶ ಆ ಹರಿವಂಶ ಎಂಬ ಗ್ರಂಥದಲ್ಲಿ ಹರಿವಂಶಪರ್ವ, ವಿಷ್ಣುಪರ್ವ, ಭವಿಷ್ಯಪರ್ವ ಎಂಬುದಾಗಿ ಮೂರು ಪರ್ವಗಳು ಪ್ರಧಾನವಾಗಿ ಅಂತಹ ಹರಿವಂಶಪರ್ವದ ಪ್ರಾರಂಭದಲ್ಲಿ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್ ।। (1.1 ಹರಿವಂಶಮಹಾತ್ಮ್ಯಮ್)

ಎಂಬುದಾಗಿ ಮಂಗಲವನ್ನು ಹೇಳಿ ಶ್ರೀಮನ್ಮಹಾಭಾರತದ ಮಹಿಮೆಯನ್ನು ಶ್ರೀಮನ್ಮಹಾಭಾರತವೇ ಕೊಂಡಾಡುತ್ತೆ.

ದ್ವೈಪಾಯನೋಷ್ಠಪುಟನಿಃಸೃತಮಪ್ರಮೇಯಂ ಪುಣ್ಯಂ ಪವಿತ್ರಮಥ ಪಾಪಹರಂ ಶಿವಂ ಚ ।
ಯೋ ಭಾರತಂ ಸಮಧಿಗಚ್ಛತಿ ವಾಚ್ಯಮಾನಂ ಕಿಂ ತಸ್ಯ ಪುಷ್ಕರಜಲೈರಭಿಷೇಚನೇನ ।।

(1.2 ಹರಿವಂಶಪರ್ವ)

ಅತ್ಯಂತ ಪ್ರಾಚೀನವಾದ ಪವಿತ್ರವಾದ ಶ್ರೇಷ್ಠವಾದ ಕ್ಷೇತ್ರ ಪುಷ್ಕರ ಕ್ಷೇತ್ರ, ಶ್ರೇಷ್ಠವಾದ ತೀರ್ಥ ಪುಷ್ಕರ ತೀರ್ಥ. ಅಂತಹ ಪುಷ್ಕರ ತೀರ್ಥದಲ್ಲಿ ಸ್ನಾನ ಮಾಡಿದರೆ, ಆ ಕ್ಷೇತ್ರಕ್ಕೆ ಹೋಗಿ ವಾಸ ಮಾಡಿದರೆ ಕೋಟಿ ಕೋಟಿ ಜನ್ಮಗಳಲ್ಲಿ ಮಾಡಿದಂತಹ ಪಾಪಗಳ ಪರಿಹಾರ ಅಲ್ಲಿ ಮಾಡಿದ ದಾನ, ಅಲ್ಲಿ ಮಾಡಿದ ಯಜ್ಞ, ಅಲ್ಲಿ ಮಾಡಿದ ತಪಸ್ಸು, ಅಲ್ಲಿ ಮಾಡಿದ ಅಧ್ಯಯನ ಎಲ್ಲದಕ್ಕೂ ಅತ್ಯದ್ಭುತವಾದ ಪುಣ್ಯವನ್ನು ಹೇಳಿದ್ದಾರೆ ಮಹಾಫಲವನ್ನು ಹೇಳಿದ್ದಾರೆ. ಅಂತಹ ಪುಷ್ಕರ ಕ್ಷೇತ್ರದ ಯಾತ್ರೆ, ಪುಷ್ಕರ ತೀರ್ಥದ ಸ್ನಾನ ಮಾಡಿದರೆ ಏನು ಫಲ ಬೇಕೋ ಅದಕ್ಕಿಂತಲೂ ಕೋಟಿ ಕೋಟಿ ಪಟ್ಟು ಮಹಾಫಲ ಶ್ರೀಮನ್ಮಹಾಭಾರತದ ಅಧ್ಯಯನವನ್ನು ಮಾಡಿದರೆ ಬರುತ್ತದೆ, ಶ್ರವಣವನ್ನು ಮಾಡಿದರೆ ಬರುತ್ತದೆ ಅಷ್ಟು ಮಹಾಫಲ ಶ್ರೀಮನ್ಮಹಾಭಾರತವನ್ನು ಭಕ್ತಿಯಿಂದ ಶ್ರವಣ ಮಾಡಬೇಕು ಸಾಕ್ಷಾತ್ ವೇದವ್ಯಾಸ ದೇವರ ವಾಣಿ, ಸರ್ವೋತ್ತಮನಾದ ಶ್ರೀಹರಿ ಅಂತಹ ಪರಮಾತ್ಮನ ವಾಣಿ. ಎಷ್ಟೆಷ್ಟೋ ಜನರ ವಾಣಿಯನ್ನು ನಾವು ಇವತ್ತು

ರಿಕಾರ್ಡಗಳ ಮೂಲಕ ಕೇಳುವುದಕ್ಕೆ ಸಿಗುತ್ತೆ ಅಂದರೆ ಬಹಳ ಉತ್ಸಾಹದಿಂದ ಅದನ್ನು ಕೇಳುತ್ತಾರೆ ಬಹಳ ದೊಡ್ಡ ವ್ಯಕ್ತಿಗಳು, ಬಹಳ ದೊಡ್ಡ ರಾಜರು, ಮಿನಿಸ್ಟರು, ರಾಷ್ಟ್ರಪತಿಗಳು ಅವರ ಧ್ವನಿಯನ್ನು ನಾವು ನೇರವಾಗಿ ಕೇಳುತ್ತೇವೆ ಅಂತ ಇದು ಮಾನವರ ಮಾತನ್ನು ಕೇಳುವುದಕ್ಕೆ ಇರುವ ಉತ್ಸಾಹ ಅತ್ಯಂತ ಸಾಧಾರಣವಾದದ್ದು. ಸರ್ವೋತ್ತಮನಾದ ಶ್ರೀಹರಿ ಸರ್ವತಂತ್ರ ಸ್ವತಂತ್ರ ಸಕಲ ಜಗನ್ನಿಯಾಮಕನಾದ ಪರಮಾತ್ಮ ಯಾವ ಭಗವಂತನ ಇಚ್ಛೆಯಿಂದ ನಮಗೆ ಬಂಧ ಅಂತಹ ಬಂಧವನ್ನು ಕಳೆದು ಮೋಕ್ಷವನ್ನು ಕೊಡುವುದಕ್ಕೆ ಸಮರ್ಥನಾದ ಪರಮಾತ್ಮ ಮೋಕ್ಷ ಮಾರ್ಗವನ್ನ, ಧರ್ಮವನ್ನ, ಅರ್ಥಕಾಮಗಳನ್ನೂ ತಿಳಿಸಿಕೊಡುತ್ತಾನೆ. **'ಧರ್ಮೇಚ ಅರ್ಥೇಚ ಕಾಮೇಚ ಮೋಕ್ಷೇಚ ಭರತರ್ಷಭ'** ಆ ಚತುರ್ವಿಧ ಪುರುಷಾರ್ಥಗಳಿಗೆ ಸಾಧನವಾದದ್ದನ್ನೂ ತಿಳಿಸಿಕೊಟ್ಟು ಮುಖ್ಯವಾಗಿ ಮೋಕ್ಷದ ಮಾರ್ಗವನ್ನ ತೋರಿಸುವುದಕ್ಕಾಗಿರುವ ಆ ಶ್ರೀಮನ್ಮಹಾಭಾರತದ ವಾಣಿಗೆ ಸಮಾನವಾದಂತಹ ವಾಣಿ ಇಲ್ಲ ಅಂತಹ ಶ್ರೇಷ್ಠವಾದದ್ದು ಅಂತ.

ಜಯತಿ ಪರಾಶರಸೂನುಃ ಸತ್ಯವತೀ ಹೃದಯನನ್ದನೋ ವ್ಯಾಸಃ ।

ಯಸ್ಯಾಸ್ಯಕಮಲಗಲಿತಂ ವಾಙ್ಮಯಮಮೃತಂ ಸತ್ಯಂ ಜಗತ್ ಪಿಬತಿ ॥ (1.2 ಹರಿವಂಶಮಹಾತ್ಮ್ಯಮ್)

ಗೋದಾನ ಮಾಡಿದ ಫಲ, ಉತ್ತಮವಾದ ಸಾಲಂಕೃತವಾದ ಬಂಗಾರದ ಕವಚಗಳನ್ನು ಹಾಕಿದ ಕೋಡುಗಳಿಂದ ಕೂಡಿದಂತಹ ನೂರಾರು ಆಕಳುಗಳನ್ನು, ಸಾವಿರಾರು ಆಕಳುಗಳನ್ನು ದಾನ ಮಾಡಿದರೆ ಬರುವ ಪುಣ್ಯ ಒಂದು ಕಡೆಗೆ ಮಹಾಭಾರತದ ಶ್ರವಣವನ್ನು ಮಾಡಿದರೆ ಬರುವಂತಹ ಪುಣ್ಯ ಮತ್ತೊಂದು ಕಡೆಗೆ ಅಷ್ಟು ಶ್ರೇಷ್ಠವಾದಂತಹ ಪುಣ್ಯ ಮಹಾಭಾರತದ ಶ್ರವಣಕ್ಕೆ ಇದೆ. ನೂರಾರು ಅಶ್ವಮೇಧ ಯಾಗಗಳನ್ನು ಮಾಡಿದ ಪುಣ್ಯ, ಸಹಸ್ರಾರು ಜನರಿಗೆ ಅನ್ನದಾನವನ್ನು ಮಾಡಿದರೆ ಬರತಕ್ಕಂತಹ ಪುಣ್ಯ, ಇಂದ್ರ ದೇವರು ತಾವು ನೂರು ಅಶ್ವಮೇಧ ಯಾಗಗಳನ್ನು ಮಾಡಿ ಏನು ಪುಣ್ಯವನ್ನು ಪಡೆದರೋ ಆ ಎಲ್ಲ ಪುಣ್ಯವೂ ಕೂಡ ಈ ಹರಿವಂಶದ ಪುಸ್ತಕವನ್ನು ದಾನ ಮಾಡಿದರೆ, ಹರಿವಂಶದ ಕಥೆಗಳನ್ನು ಅಲ್ಲಿರುವ ತತ್ವಗಳನ್ನು ಉಪದೇಶ ಮಾಡಿ ಆ ರೂಪದಲ್ಲಿ ಹರಿವಂಶದ ದಾನವನ್ನು ಮಾಡಿದರೂ ಕೂಡ ನೂರಾರು ಅಶ್ವಮೇಧ ಯಾಗಗಳ, ಸಹಸ್ರಾರು ಜನರಿಗೆ ಅನ್ನದಾನವನ್ನು ಮಾಡಿದ ಮಹಾಫಲವನ್ನು ಪಡೆಯುವುದಕ್ಕೆ ಸಾಧ್ಯ ಇದೆ ಎಂಬುದಾಗಿ ತಿಳಿಸಿಕೊಡುತ್ತಾರೆ ವೇದವ್ಯಾಸ ದೇವರು. ವಾಜಪೇಯಾದಿ ಯಾಗಗಳನ್ನು ಮಾಡಿದಂತಹ ಮಹಾಫಲ ಇದೆ ಹರಿವಂಶದ ಲೇಖನವನ್ನು ಮಾಡಿದರೆ ಸಾಕ್ಷಾತ್ ಪರಮಾತ್ಮನ ಪದವಿಯನ್ನೇ ಆ ಭಗವಂತನ ಸ್ಥಾನವನ್ನೇ ಹೊಂದಬಹುದು, ಮೋಕ್ಷವನ್ನೇ ಪರಮಾತ್ಮ ಕರುಣಿಸುತ್ತಾನೆ ಎಂಬುದಾಗಿ ತಿಳಿಸಿಕೊಡುತ್ತಾರೆ. ಇಂತಹ ಶ್ರೇಷ್ಠವಾದದ್ದು ಈ ಹರಿವಂಶ. ಪರಮಾತ್ಮ ತಾನೇ ತನಗೆ ಆರನೆಯದವನಾಗಿ ಈ ಹರಿವಂಶವನ್ನು ರಚನೆ ಮಾಡಿದ್ದು ನಾರಾಯಣ, ಬ್ರಹ್ಮ, ವಸಿಷ್ಠ, ಶಕ್ತಿ, ಪರಾಶರ, ವೇದವ್ಯಾಸ, ನಾರಾಯಣನಿಗೆ ನಾರಾಯಣನೇ ಆರನೆಯದವನು ವ್ಯಾಸ ರೂಪದಿಂದ.

ಪಿತಾಮಹಾದ್ಯಂ ಪ್ರವದನ್ತಿ ಷಷ್ಠಂ ಮಹರ್ಷಿಮಕ್ಷಯ್ಯವಿಭೂತಿಯುಕ್ತಮ್ । (1.8 ಹರಿವಂಶಪರ್ವ)

ತನ್ನದೇ ಆದ ನಾರಾಯಣ ರೂಪದಿಂದ ತಾನೇ ಆರನೆಯದವನಾಗಿ ವ್ಯಾಸನಾಗಿ ಪ್ರಾದುರ್ಭೂತನಾಗಿ ರಚನೆ ಮಾಡಿದ್ದು ಶ್ರೇಷ್ಠವಾದ ಈ ಮಹಾಭಾರತ ಗ್ರಂಥವನ್ನ ಅಂತಹ ಆ ಭಗವಂತನ ಸೃಷ್ಟಿಯ ವರ್ಣನೆಯನ್ನು ಮಾಡುತ್ತಾರೆ ಪ್ರಾರಂಭದಲ್ಲಿ, ಹರಿವಂಶವನ್ನೇ ಹೇಳುವುದಕ್ಕೆ ಹೊರಟದ್ದು ಈ ಹರಿವಂಶ ಗ್ರಂಥ ಆ ಶ್ರೀಹರಿಯ ವಂಶವನ್ನ, ಶ್ರೀಹರಿ ಇಂದ ಸೃಷ್ಟಿ ಹೇಗೆ ನಡೆದು ಬಂದದ್ದು ಆ ಭಗವಂತನ ಸೃಷ್ಟಿ ನಡೆದು ಬಂದ ರೀತಿಯನ್ನು ತಿಳಿಸುತ್ತಾರೆ.

ಆದ್ಯಂ ಪುರುಷಮೀಶಾನಂ ಪುರುಹೂತಂ ಪುರುಷ್ಟುತಮ್ ।

ಋತಮೇಕಾಕ್ಷರಂ ಬ್ರಹ್ಮ ವ್ಯಕ್ತಾವ್ಯಕ್ತಂ ಸನಾತನಮ್ ॥ (1.9 ಹರಿವಂಶಪರ್ವ)

ಸಕಲ ಜಗತ್ತಿಗೆ ಆದಿ ಕಾರಣವಾದಂತಹ ಪರಿಪೂರ್ಣವಾದ ಷಡ್ಗುಣಗಳಿಂದ ಕೂಡಿದ ಸರ್ವೋತ್ತಮನಾದ ಸರ್ವ ನಿಯಾಮಕನಾದಂತಹ ಸ್ವಾಮಿ ಭಗವಂತ **'ಈಶಾನ'**. ಇಂತಹ ದೊಡ್ಡ ಜಗತ್ತಿನ ಸೃಷ್ಟಿಯನ್ನು ಮಾಡುವ ಆ ಪರಮಾತ್ಮನಿಗೆ ತಲೆ ಬೇಸರ, ಬಹಳಷ್ಟು ಶ್ರಮ ಆಯಾಸ ಆಗಿರಬಹುದು ಅಂತ ಚಿಂತನ ಮಾಡಬೇಡಿ ಅವನು **'ಈಶಾನ'** ಸರ್ವನಿಯಾಮಕನಾಗಿದ್ದಾನೆ. ಎಲ್ಲವೂ ಅವನ ಆಧೀನವಾದದ್ದರಿಂದ ಅವನಿಗೆ ಯಾವುದೇ ವಿಧವಾದ ಶ್ರಮ ಇಲ್ಲ, ಸಂತಾಪ ಇಲ್ಲ, ಚಿಂತೆ ಇಲ್ಲ ಅಂತಹ ನಿರ್ದೋಷನಾದ ವ್ಯಕ್ತಿ ಭಗವಂತ. ಎಲ್ಲರೂ ತಾವು ಮಾಡುವ ಕಾರ್ಯಗಳಿಗೆ ಯಶಸ್ಸು ಬೇಕು ಅಂದರೆ ಈ ಭಗವಂತನನ್ನೇ ಕರೆಯಬೇಕು, ತಾವೇನಾದರೂ ಸಿದ್ಧಿಯನ್ನು ಪಡೆಯಬೇಕು ಅಂದರೆ ಈ ಪರಮಾತ್ಮನ ಅನುಗ್ರಹವನ್ನು ಪಡೆಯಬೇಕು ಅಂತಹ ಪುರು ಹೂತ ಎಲ್ಲರಿಂದಲೂ ಸ್ತುತ ಪುರುಷ್ಟುತ್ತ ಅವನೇ ಜಗತ್ತಾಗಿ ಪರಿಣಾಮವನ್ನು ಹೊಂದಿದ್ದಾನೆ ಅಂತ ತಿಳಿಯಬೇಡಿ.

ಋಗತಾವಿತಿ ಧಾತೋಸ್ತು ಪೂರ್ವಾವಗತವತ್ಸದಾ ।

ಸ್ಥಿತೇಃ ಬ್ರಹ್ಮರ್ತಮಿತ್ಯುಕ್ತಮನೃತಂ ಪರಿಣಾಮತಃ ॥ (ತತ್ತ್ವೋದ್ಯೋತ)

ಏಕಪ್ರಕಾರನಾಗಿ ಅನಾದ್ಯನಂತ ಕಾಲದಲ್ಲಿ ಇದ್ದಾನೆ ಪರಮಾತ್ಮ ಜಗತ್ತು ಸೃಷ್ಟಿಯನ್ನು ಪಡೆಯುತ್ತದೆ ಪುನಃ ನಾಶವನ್ನು ಹೊಂದುತ್ತದೆ. ಸೃಷ್ಟಿ ಲಯಗಳ ಚಕ್ರದಲ್ಲಿ ಜಗತ್ತು ಸಿಕ್ಕರೆ ಈ ಜಗತ್ತನ್ನು ಹುಟ್ಟಿಸಿದ ಪರಮಾತ್ಮ ಮಾತ್ರ ಏಕಪ್ರಕಾರನಾಗಿದ್ದಾನೆ, ನಾಶರಹಿತನಾಗಿ ಕಾರ್ಯ ಕಾರಣಗಳಲ್ಲಿ ತಾನೇ ಅಂತರ್ಯಾಮಿಯಾಗಿದ್ದು ಈ ಜಗತ್ತಿನ ಸೃಷ್ಟಿಯನ್ನು ಮಾಡುತ್ತಾನೆ ಪ್ರಕೃತಿಯಲ್ಲಿ ಅವನೇ, ಮಹತ್ತತ್ವದಲ್ಲಿಯೂ ಅವನೇ. ಪ್ರಕೃತಿ ತತ್ವದಲ್ಲಿ ಇದ್ದು ಮಹತ್ತತ್ವದ ರೂಪದಲ್ಲಿ ವಿಕಾರವನ್ನು ಹೊಂದುವ ಶಕ್ತಿಯನ್ನ ಪ್ರಕೃತಿ ತತ್ವಕ್ಕೆ ಕೊಡುತ್ತಾನೆ ಆ ಪ್ರಕೃತಿಯಿಂದ ಉಪಚಿತವಾಗಿ ತಾನು ಮಹತ್ತತ್ವ ಬೆಳೆದು ನಿಲ್ಲುವ ಯೋಗ್ಯತೆಯನ್ನು ಪಡೆಯುವುದು ಆ ಭಗವಂತನ ಸನ್ನಿಧಾನದಿಂದ. ಅಂತಹ ವ್ಯಕ್ತಾವ್ಯಕ್ತನಾಗಿ ಸಕಲವೇದ ಪ್ರತಿಪಾದ್ಯನಾಗಿ ಭಗವಂತ ಈ ಜಗತ್ತಿನ ಸೃಷ್ಟಿಯನ್ನು ಮೊದಲು ಮಾಡುತ್ತಾನೆ ಮೊದಲು ನೀರಿನ ಸೃಷ್ಟಿ ಮಾಡಿದನಂತೆ.

ಅಪ ಏವ ಸಸರ್ಜಾದೌ ತಾಸು ವೀರ್ಯಮವಾಸೃಜತ್ ॥ (1.35 ಹರಿವಂಶಪರ್ವ)

ಭಗವಂತ ನೀರಿನ ಸೃಷ್ಟಿಯನ್ನು ಮಾಡಿದನಂತೆ ಆ ನೀರಿನಲ್ಲಿ ತನ್ನ ವೀರ್ಯವನ್ನು ಪರಮಾತ್ಮ ಸೃಷ್ಟಿ ಮಾಡಿದ. ಏನೆಲ್ಲ ಪ್ರಲಯಕಾಲದೊಳಗೆ ಭಗವಂತ ಎಲ್ಲ ತತ್ವಗಳನ್ನು ತನ್ನ ಉದರದಲ್ಲಿ ಹಾಕಿಕೊಂಡಿದ್ದ ಆ ತತ್ವಗಳನ್ನೇ ಜಡವಾದ ತತ್ವಗಳು, ಪರಮಾತ್ಮ ಶುದ್ಧವಾದ ಸಚ್ಚಿದಾನಂದಾತ್ಮಕವಾದ ದೇಹ ಅಂತಹ ದೇಹವನ್ನು ಪಡೆದವನು ಭಗವಂತ. **'ನಾರಾಯಣಂ ನಿಖಿಲಪೂರ್ಣಗುಣೈಕ ದೇಹಂ'**[1] ಅಂತಹ ಪೂರ್ಣ ಗುಣಸ್ವರೂಪನಾದ ಪರಮಾತ್ಮ ತನ್ನ ಆ ಸಚ್ಚಿದಾನಂದಾತ್ಮಕವಾದಂತಹ ವೀರ್ಯವನ್ನ ನೀರಿನಲ್ಲಿ ಇಟ್ಟದ್ದಲ್ಲ, ಜಡವಾದ ಪದಾರ್ಥಗಳನ್ನ ಪ್ರಲಯಕಾಲದಲ್ಲಿ ತನ್ನ ಉದರದೊಳಗೆ ತಾನು ಇಟ್ಟುಕೊಂಡದ್ದನ್ನೇ ವೀರ್ಯ ರೂಪದಲ್ಲಿ ಅದನ್ನು ಪರಿಣಾಮಗೊಳಿಸಿ ನೀರಿನಲ್ಲಿ ಇಟ್ಟಿದ್ದಾನೆ ಅದರಿಂದ ಈ ಬ್ರಹ್ಮಾಂಡದ ಸೃಷ್ಟಿಯನ್ನು ಮಾಡಿದ್ದಾನೆ. ಅರ್ಥಾತ್ ಈ ಪಂಚ ಮಹಾಭೂತಾದಿಗಳೆಲ್ಲ ಸೇರಿಕೊಂಡದ್ದೆ

1. ತತ್ವವಾದ



ಭಗವಂತನ ಉದರಲ್ಲಿದ್ದದ್ದು ಅದನ್ನು ಪರಮಾತ್ಮ ಆ ರೂಪದಲ್ಲಿ ಹೊರಗೆ ತೆಗೆದು ಅದರಿಂದ ಹಿರಣ್ಮಯವಾದಂತಹ ಅಂಡವನ್ನ ನಿರ್ಮಾಣ ಮಾಡಿದ್ದಾನೆ. ಆ ನೀರಿನಲ್ಲಿಯೇ ತಾನೇ ಸೃಷ್ಟಿ ಮಾಡಿದ ನೀರು, ತಾನು ಸೃಷ್ಟಿ ಮಾಡಿದ ನೀರಿನೊಳಗೇ ಪರಮಾತ್ಮ ತಾನಿದ್ದಾನೆ ಅನ್ನುವುದಕ್ಕೆ ಅವನಿಗೆ **'ನಾರಾಯಣ'** ಎಂಬುದಾಗಿ ಕರೆಯುವದು.

ಆಪೋ ನಾರಾ ಇತಿ ಪ್ರೋಕ್ತಾ ಆಪೋ ವೈ ನರಸೂನವಃ ।

ಅಯನಂ ತಸ್ಯ ತಾಃ ಪೂರ್ವಂ ತೇನ ನಾರಾಯಣಃ ಸ್ಮೃತಃ ॥ (1.36 ಹರಿವಂಶಪರ್ವ)

ಮಹಾಭಾರತದಲ್ಲಿ ಅದರ ಒಂದು ಭಾಗವಾದ ಹರಿವಂಶದಲ್ಲಿ ಹಾಗೂ ಅನೇಕ ಪುರಾಣಗಳಲ್ಲಿ, ಅನೇಕ ಸ್ಮೃತಿಗಳಲ್ಲಿ ಮನುಸ್ಮೃತಿ ಮೊದಲಾದ ಅನೇಕ ಗ್ರಂಥಗಳಲ್ಲಿ ಈ ಶ್ಲೋಕವನ್ನು ನಾವು ಕಾಣುತ್ತೇವೆ ಆ ಭಗವಂತನ ನಾರಾಯಣತ್ವ ಹೇಗೆ ಅನ್ನುವುದನ್ನು ವಿವರಿಸುವಂತಹ ಶ್ಲೋಕ. **'ಆಪೋ ನಾರಾ ಇತಿ ಪ್ರೋಕ್ತಾಃ'** ನೀರಿಗೆ **'ನಾರಾ'** ಅಂತ ಕರೀತಾರೆ ಯಾಕೆ ಅಂದರೆ **'ನರ'** ಅಂದರೆ ಸ್ವಯಂ ಪರಮಾತ್ಮ ಎಂದಿಗೂ ನಾಶ ಇಲ್ಲದಿರುವ ಭಗವಂತ, ನಾಶವೇ ಇಲ್ಲದ ಪರಮಾತ್ಮನಿಗೆ **'ನರ'** ಅಂತ ಕರೀತಾರೆ. ಅನಾದಿ ನಿತ್ಯನಾದ ಪರಮಾತ್ಮನಿಗೆ **'ನರ'** ಆ ನರನಿಂದ ಬಂದದ್ದು **'ನಾರಾ'** ಅಂದರೆ ನೀರು **'ಅಯನ'** ಅಂದರೆ ಆಶ್ರಯ ಆ ನೀರಿನೊಳಗೆ ಪರಮಾತ್ಮ ಇರುತ್ತಾನೆ ಅನ್ನುವುದಕ್ಕೆ ಆ ಭಗವಂತನಿಗೆ ನಾರಾಯಣ ಎಂಬುದಾಗಿ ಕರೀತಾರೆ. ಇಲ್ಲಿ ಇನ್ನೊಂದು ರೀತಿಯಾಗಿ ನಾವು ತಿಳಿಯಬೇಕು ವಿಷ್ಣು ಸಹಸ್ರನಾಮದಲ್ಲಿ ನೀವು ಎರಡನ್ನೂ ಕಾಣುತ್ತೀರಾ **'ಮಹೋದಧಿಶಯೋಽಂತಕಃ'** ಸಮುದ್ರಶಾಯಿಯಾಗಿದ್ದಾನೆ ಪರಮಾತ್ಮ ನೀರಿನೊಳಗಿದ್ದಾನೆ ಆದ್ದರಿಂದ ನಾರಾಯಣ, **'ನಾರಾ'** ನೀರು ಅಲ್ಲಿ ವಾಸ ಮಾಡಿದ್ದವ ನಾರಾಯಣ. ಇನ್ನೊಂದು **'ಅಪಾಂನಿಧಿರಧಿಷ್ಠಾನಮಪ್ರಮತ್ತಃ ಪ್ರತಿಷ್ಠಿತಃ'** ನೀರಿನೊಳಗಿದ್ದವ ನಾರಾಯಣ ಮಾತ್ರ ಅಲ್ಲ ನೀರು ನಾರಾಯಣನೊಳಗೆ ಇದೆ, ನಾರಾಯಣ ನೀರಿನೊಳಗೋ ನೀರು ನಾರಾಯಣನೊಳಗೋ ಎರಡೂ ಸತ್ಯ. ನೀರಿನಲ್ಲಿ ಪರಮಾತ್ಮ ಇದ್ದಾನೆ ಆದ್ದರಿಂದಲೂ ಅವನು ನಾರಾಯಣ, ನೀರು ನಾರಾಯಣನನ್ನ ಆಶ್ರಯಿಸಿದೆ ನಿಜವಾಗಿ ಅವನು **'ಅಪಾಂನಿಧಿಃ'** ಆದ್ದರಿಂದ ಆ ಪರಮಾತ್ಮನನ್ನ ನಾರಾಯಣ ಅಂತ. **'ಅಯನಂ ತಸ್ಯ ತಾಃ ಪೂರ್ವಂ ತೇನ ಸಪ್ತಸುತ್ ಪ್ರಥಮಾ'** **'ತಾಃ'** ಅನ್ನುವುದಕ್ಕೆ **'ತಾಸಾಂ'** ಅಂತ ಅರ್ಥ, **'ಅಯನಂ'** ಅಂದರೆ ಅಯನತ್ವಂ **'ಭಾವಪ್ರಧಾನೋ ನಿರ್ದೇಶಃ ತಾಸಾಂ ಅಯನತ್ವಂ ತಸ್ಯ'** ನರನಿಂದ ಹುಟ್ಟಿದ ನೀರು ಇದು ನಾರಾ **'ಅಯನಮ್ ತಸ್ಯ ತಾಃ ಪೂರ್ವಂ'** ಆ ನೀರಿಗೆ ಆಶ್ರಯನಾದವನು ಪರಮಾತ್ಮ ಆದ್ದರಿಂದ ಅವನಿಗೆ ನಾರಾಯಣ ಎಂಬುದಾಗಿ ಕರೀತಾರೆ ಅಂತ ಆ ಶ್ಲೋಕದ ಆಂತರ್ಯ. **'ಅಪಾಂ ನಿಧಿಃ'** ಎಂಬ ವಿಷ್ಣು ಸಹಸ್ರನಾಮಕ್ಕೆ ಅನುಗುಣವಾಗಿ **'ತಾಃ ತಸ್ಯ ಅಯನಂ'** ಅಂದರೆ **'ತಾಸಾಂ ಅಯನತ್ವಂ ತಸ್ಯ ನಾರಾಯಣಸ್ಯ'** ಆ ನೀರಿಗೆ ಆಶ್ರಯನಾಗಿದ್ದಾನೆ ಪರಮಾತ್ಮ ಅನ್ನುವುದಕ್ಕಾಗಿ ಆ ಭಗವಂತನಿಗೆ ನಾರಾಯಣ ಅನ್ನುತ್ತಾರೆ.

ಇನ್ನೊಂದು **'ಆಪಃ'** ಅನ್ನುವುದಕ್ಕೆ ಈ ನೀರಿನ ಸೃಷ್ಟಿಯನ್ನು ಮಾಡಿದ ಅಂತ ಹೇಳುವ ಸಂದರ್ಭದಲ್ಲಿ ಸಂಗತವಾಗುವಂತೆ ಇದೊಂದು ಅರ್ಥವಾದರೆ ಇನ್ನೊಂದು ಪರಮಾತ್ಮ ಸೃಷ್ಟಿಯನ್ನು ಮಾಡಲು ಹೊರಟಿದ್ದಾನೆ. ಪ್ರಪಂಚದ ಸೃಷ್ಟಿಯನ್ನು ಮಾಡುವುದಕ್ಕೆ ಇರುವ ಅನೇಕ ಕಾರಣಗಳಲ್ಲಿ ಒಂದು ಕಾರಣ ಅದು ಜೀವರ ಪುಣ್ಯ ಪಾಪಗಳು, ಅದೃಷ್ಟ. ಜಗತ್ತಿನಲ್ಲಿ ದೇವರು ಮಾಡುವಂತಹ ಸೃಷ್ಟಿಗೆ ಹೇಗೆ ಪ್ರಕೃತಿ ಒಂದು ಕಾರಣ, ಉಪಾದಾನ ಕಾರಣ, ದೇಶ ಇದು ಕಾರಣ, ಕಾಲ ಇದು ಕಾರಣ ಹಾಗೆ ಜೀವರ ಅದೃಷ್ಟ ಇದು ಕಾರಣ. ಹೀಗಾಗಿ ಆ ಸೃಷ್ಟಿಯ ಆದಿಯಲ್ಲಿ ಹೇಳುತ್ತಾ ಇದ್ದಾರೆ **'ಆಪೋ ನಾರಾ ಇತಿ ಪ್ರೋಕ್ತಾಃ'** **'ಆಪಃ'** ಅಂದರೆ ಕರ್ಮಗಳು. ಜೀವರು ಮಾಡಿದಂತಹ ಏನೆಲ್ಲ ಪುಣ್ಯ ಪಾಪ ಕರ್ಮಗಳಿವೆ ಅವುಗಳಿಗೆಲ್ಲ **'ನಾರಾ'** ಅಂತ ಕರೀತಾರೆ ಯಾಕೆ ಅಂದರೆ ಅವೆಲ್ಲ

'ನರಸೂನವಃ' ಆ ಎಲ್ಲ ಕರ್ಮಗಳು ಕೂಡ ದೇವರೇ ಮಾಡಿಸುವುದು ಜೀವರೊಳಗಿದ್ದು. ಜೀವರೊಳಗಿದ್ದು ಅವರವರ ಯೋಗ್ಯತೆಗೆ ತಕ್ಕಂತೆ ಪುಣ್ಯ ಕರ್ಮಗಳನ್ನು ಪಾಪ ಕರ್ಮಗಳನ್ನು ಮಾಡಿಸುವವನು ಭಗವಂತ **'ನರ'** ಆ ನರನೇ ಈ ಎಲ್ಲ ಕರ್ಮಗಳನ್ನು ಮಾಡಿಸುತ್ತಾನೆ ಅನ್ನುವುದಕ್ಕಾಗಿ ಆ ಕರ್ಮಗಳಿಗೆ **'ನಾರಾ'** ಅಂತ ಕರೀತಾರೆ. ಅಂತಹ ಎಲ್ಲ ಕರ್ಮಗಳಿಗೂ ಆಶ್ರಯನಾದವನು ಆ ಎಲ್ಲ ಕರ್ಮಗಳು ಯಾವ ಪರಮಾತ್ಮನ ಪ್ರೇರಣೆಯಿಂದ ಆಗುತ್ತೆ, ಅದರಲ್ಲಿರುವ ಎಲ್ಲ ಶುಭ ಕರ್ಮಗಳು ಯಾವ ಪರಮಾತ್ಮನಿಗೆ ಸಮರ್ಪಿತವಾಗುತ್ತವೆ ಸಜ್ಜನರಿಂದ ಆ ಎಲ್ಲ ಕರ್ಮಗಳಿಗೆ ನಿಧಿ **'ಅಪಾಂ ನಿಧಿಃ'.**

ಇನ್ನೊಂದು ಅರ್ಥ ಎಲ್ಲ ಕರ್ಮಗಳಿಗೂ ಆ ಪರಮಾತ್ಮನೇ ನಿಧಿ, ಎಲ್ಲಾ ಕರ್ಮಗಳನ್ನೂ ನಾವು ಆ ಭಗವಂತನಲ್ಲಿಯೇ ಸಮರ್ಪಣೆ ಮಾಡುವುದು. ಇವತ್ತು ನಮಗೆ ನಿಮಗೆ ಎಲ್ಲ ಗೊತ್ತಿದ್ದದ್ದು ನಿಧಿ ಅಂದರೆ ಬ್ಯಾಂಕುಗಳು, ನಾವು ಹಣವನ್ನ ಅಲ್ಲಿ ಇಟ್ಟರೆ ನಮಗೆ ಬೇಕಾದಾಗ ಆ ಹಣವನ್ನ ಸುರಕ್ಷಿತವಾಗಿ ಮತ್ತೆ ಮರಳಿ ನೀಡುತ್ತಾರೆ ಅನ್ನುವ ಒಂದು ವಿಶ್ವಾಸ ಅದಕ್ಕೋಸ್ಕರ ಹಣವನ್ನ ಅಲ್ಲಿ ಇಟ್ಟಿರುತ್ತಾರೆ. ಆದರೆ ನಾವು ಮಾಡುವ ಕರ್ಮಗಳೆಂಬ ಸಂಪತ್ತು ಇದೆಯೆಲ್ಲಾ ಇದೇ ನಿಜವಾದ ಸಂಪತ್ತು, ಇನ್ನುಳಿದ ಸಂಪತ್ತನ್ನೆಲ್ಲ ಬಿಟ್ಟು ಹೋಗುವುದು, ಜೊತೆಗೆ ಒಯ್ಯುವ ಸಂಪತ್ತು ಅದು ಕರ್ಮವೇ ಅದು ಪುಣ್ಯವೇ. ಆ ಪುಣ್ಯವೆಂಬ ಸಂಪತ್ತನ್ನು, ಕರ್ಮವೆಂಬ ಸಂಪತ್ತನ್ನು ಯಾವ ನಿಧಿಯಲ್ಲಿ ಇಡಬೇಕು ಯಾವ ನಿಧಿಯವರು ಅದನ್ನು ಇಟ್ಟುಕೊಳ್ಳಲು ಸಿದ್ಧರಾಗುತ್ತಾರೆ, ಬೇಕಾದಾಗ ನಮಗೆ ಕೊಡುತ್ತಾರೆ ಯಾರಿಗೂ ಕಾಣುವುದೇ ಇಲ್ಲ ಇಟ್ಟುಕೊಳ್ಳುವುದು ಏನು, ಕೊಡುವುದು ಏನು ಅಸಾಧ್ಯವಾದ ಮಾತು. ಹಾಗಾದರೆ ಆ ಕರ್ಮಗಳೆಂಬ ಸಂಪತ್ತನ್ನು ತನ್ನಲ್ಲಿ ಇಟ್ಟುಕೊಂಡು ಬೇಕು ಬೇಕಾದಾಗೆಲ್ಲ ನಮಗೆ ಕೊಟ್ಟು ಅರ್ಥಾತ್ ಆ ಕರ್ಮದ ಫಲವನ್ನು, ಸುಖವನ್ನು, ಶರೀರವನ್ನು, ಇಂದ್ರಿಯಗಳನ್ನು ಭೋಗ್ಯ ವಸ್ತುಗಳನ್ನು ನಮಗೆ ನೀಡಿ ಆ ಕರ್ಮದ ಫಲವಾಗಿ ನಮ್ಮಿಂದ ಸಾಧನೆಯನ್ನು ಮಾಡಿಸುವಂತಹ ಸ್ವಾಮಿ ಪರಮಾತ್ಮ ಆದ್ದರಿಂದ ಅವನಿಗೆ **'ಅಪಾಂ ನಿಧಿಃ'** ಅದೇ ಕಾರಣಕ್ಕೆ ನಾರಾಯಣ. **'ನರ'** ಪರಮಾತ್ಮ ಅವನು ಮಾಡಿಸುವ ಕರ್ಮಗಳು **'ನಾರಾ'** ಆ ನಾರಗಳಿಗೆ **'ಅಯನ'** ಅವನೇ ಆಶ್ರಯ ಪ್ರೇರಕ ಅವನೇ ಉದ್ದೇಶ್ಯನಾಗಿದ್ದಾನೆ ಅನ್ನುವುದಕ್ಕೋಸ್ಕರ ಅವನಿಗೆ ನಾರಾಯಣ ಎಂಬುದಾಗಿ ಕರೆಯುತ್ತಾರೆ ಅನ್ನುವುದು ಕೂಡ ಈ ಶ್ಲೋಕದ ಭಾವ. ಸೃಷ್ಟಿಯ ಪ್ರಸಂಗದಲ್ಲಿ ಇದನ್ನು ಹೇಳುವ ಅಗತ್ಯವೇನಿತ್ತು ಅಂತ ಭಾವಿಸುವುದಲ್ಲ, ನೀರಿನ ಸೃಷ್ಟಿಯನ್ನು ಮಾಡಿದ ಅನ್ನುವುದಕ್ಕೋಸ್ಕರ ನೀರಿನಲ್ಲಿದ್ದ ಮಹಿಮೆಯನ್ನು ಹೇಳುವದು ಹೇಗೆ ಸಂಗತವೋ ಹಾಗೆ ಸೃಷ್ಟಿಯ ಮೊದಲು ಸೃಷ್ಟಿಗೆ ಕಾರಣವಾದ ಸಕಲ ಕರ್ಮಗಳಿಗೆ ಅವನೇ ಪ್ರೇರಕ, ಕರ್ಮಗಳು ಅವನಿಗೆ ಪ್ರೇರಕವಲ್ಲ ಅನ್ನುವ ಅವನ ಮಹಿಮೆಯನ್ನು ತಿಳಿದುಕೊಳ್ಳುವುದು ಕೂಡ ಅಷ್ಟೆ ಅವಶ್ಯಕವಾದದ್ದು ಆದ್ದರಿಂದ ಅವನು ನಾರಾಯಣ.

ಈ ಸೃಷ್ಟಿಗೆ ಬೇಕಾದ ಏನೆಲ್ಲ ತತ್ವಗಳಿವೆ ಆ ತತ್ವಗಳ ಸೃಷ್ಟಿಯ ಜೊತೆಗೆ ತತ್ವಾಭಿಮಾನಿಗಳ ಸೃಷ್ಟಿಯನ್ನೂ ಮಾಡಿದ, ಅವರಿಗೂ ಆಶ್ರಯನಾಗಿ ಪ್ರೇರಕನಾಗಿ ಪರಮಾತ್ಮನಿದ್ದಾನೆ ಆದ್ದರಿಂದಲೂ ನಾರಾಯಣ **'ಆಪೋ ನಾರಾ ಇತಿ ಪ್ರೋಕ್ತಾಃ'.** ಇತರೇಯ ಉಪನಿಷತ್ತಿನಲ್ಲಿ ಪರಮಾತ್ಮನ ಮಕ್ಕಳಾದ ದೇವತೆಗಳಿಗೆಲ್ಲ **'ಆಪಃ'** ಅಂತ ಕರೀತಾರೆ ಅಂತ ಹೇಳಿದ್ದಾರೆ ಯಾಕೆ ಅಂದರೆ ಆ ಪಾಲನಾದ **'ಆಪಃ'** ಸಕಲ ಜಗತ್ತಿನ ರಕ್ಷಣೆಯನ್ನು ಮಾಡುತ್ತಾನೆ ಪರಮಾತ್ಮ ಆದ್ದರಿಂದ ದೇವರಿಗೆ **'ಆಪಃ'** ಅನ್ನುತ್ತಾರೆ, ಅನಂತ ರೂಪಗಳಿಗೆ **'ಆಪಃ'** ಅಂತ ಕರೀತಾರೆ. ಅಂತಹ ಪರಮಾತ್ಮನ ಮಕ್ಕಳಾದದ್ದರಿಂದ ಪರಮಾತ್ಮನ ಆದೇಶದಂತೆ ಅವನ ಅನುಗ್ರಹದಿಂದ ನಮ್ಮೆಲ್ಲರ ರಕ್ಷಣೆಯನ್ನು ಮಾಡುತ್ತಾರೆ ಅನ್ನುದಕ್ಕಾಗಿಯೂ ದೇವತೆಗಳಿಗೆ **'ಆಪಃ'** ಅನ್ನುತ್ತಾರೆ **'ಆಪೋ ವೈ ನರಸೂನವಃ'**. ಆ ಭಗವಂತನ ಪುತ್ರರಾದ ದೇವತೆಗಳೆಲ್ಲ **'ಆಪಃ'** ಅವರಿಗೆ **'ಅಯನ'** ಆಶ್ರಯನಾಗಿದ್ದಾನೆ ಪರಮಾತ್ಮ ಆದ್ದರಿಂದಲೂ ಅವರ ದ್ವಾರಾ ಈ ಸೃಷ್ಟ್ಯಾದಿ ಕರ್ಮಗಳನ್ನು



ಮಾಡಿಸುತ್ತಾನೆ ಅನ್ನುವುದಕ್ಕಾಗಿಯೂ ನಾರಾಯಣ ಎಂಬುದಾಗಿ ಕರೆಯುತ್ತಾರೆ ಅಂತ ಈ **'ಆದಾವಂತೆ ಚ ಮಧ್ಯೇ ಚ ವಿಷ್ಣುಃ ಸರ್ವತ್ರ ಗೀಯತೇ'**[1] ಸೃಷ್ಟಿಯ ಆದಿಯಲ್ಲಿ, ಹರಿವಂಶದ ಆದಿಯಲ್ಲಿ ಆ ನಾರಾಯಣನ ಮಹಿಮೆಯನ್ನು ನಾವು ತಿಳಿಯಬೇಕು. ಆ ಅಂಡದಲ್ಲಿ ಪರಮಾತ್ಮ ಬ್ರಹ್ಮ ದೇವರ ಸೃಷ್ಟಿಯನ್ನು ಮಾಡಿದ್ದಾನೆ. ವಿರಾಣ್ ನಾಮಕರಾದಂತಹ ಬ್ರಹ್ಮ ದೇವರು ಆ ಅಂಡವನ್ನ ಎರಡು ಭಾಗ ಮಾಡಿದ್ದಾನೆ ಅದರಲ್ಲಿ ಮೇಲ್ಭಾಗ ಮೇಲಿನ ಲೋಕಗಳು, ಕೆಳಗಿನ ಭಾಗ ಕೆಳಗಿನ ಲೋಕಗಳು ಹೀಗೆ ಹದಿನಾಲ್ಕು ಲೋಕಗಳಿಗೆ ಅಲ್ಲಿ ಅವಕಾಶ ಆಗುವಂತೆ ಕಲ್ಪನೆ ಮಾಡಿಕೊಟ್ಟಿದ್ದಾನೆ ಭಗವಂತ. ಕಾಲ, ಮನಸ್ಸು, ವಾಕ್, ಕಾಮ ಕ್ರೊಧಾದಿ ಭಾವಗಳು ಹೀಗೆ ಅನೇಕ ಪದಾರ್ಥಗಳ ಸೃಷ್ಟಿಯನ್ನು ಪರಮಾತ್ಮ ಮಾಡುತ್ತಾ ಇದ್ದಾನೆ. ಆ ಬ್ರಹ್ಮ ದೇವರ ಮೂಲಕ ಮರೀಚಿ, ಅತ್ರಿ, ಅಂಗಿರಸ, ಪುಲಸ್ತ್ಯ ಮತ್ತು ವಸಿಷ್ಠ ಎಂಬ ಸಪ್ತಋಷಿಗಳ ಸೃಷ್ಟಿಯನ್ನು ಮಾಡಿಸಿದ್ದಾನೆ ಪರಮಾತ್ಮ. ಅವರೆಲ್ಲರೂ ಭಗವದ್ಭಕ್ತರು ನಾರಾಯಣನೇ ಆತ್ಮ ಸ್ವಾಮಿ ಎಂಬುದಾಗಿ ತಿಳಿದು ಉಪಾಸನೆಯನ್ನು ಮಾಡುವಂತಹ ಪರಮ ಭಗವದ್ಭಕ್ತರಾದ

ನಾರಾಯಣಾತ್ಮಕಾನಾಂ ವೈ ಸಪ್ತಾನಾಂ ಬ್ರಹ್ಮಜನ್ಮನಾಮ್ ॥ (1.42 ಹರಿವಂಶಪರ್ವ)

ನಾರಾಯಣನಲ್ಲಿಯೇ ಮನಸ್ಸನ್ನಿಟ್ಟು ಸದಾ ಭಗವಂತನ ಚಿಂತನೆಯನ್ನು ಮಾಡುವಂತಹ ಶುದ್ಧ ವಿಷ್ಣು ಭಕ್ತರಾದ ಸಾತ್ವಿಕರಾದ ಏಳು ಜನರನ್ನು ಸೃಷ್ಟಿ ಮಾಡಿದ್ದಾರೆ ಬ್ರಹ್ಮ ದೇವರು. ಆನಂತರ ಬ್ರಹ್ಮದೇವರು ಸನಕಾದಿಗಳ ಸೃಷ್ಟಿಯನ್ನು ಮಾಡಿದ್ದಾರೆ ಅವರಿಗೆ ಪುನಃ ಪ್ರಜೆಗಳ ಉತ್ಪಾದನೆಗೆ ಆಜ್ಞೆಯನ್ನು ಮಾಡಿದಾಗ ವಿರಕ್ತರಾಗಿ ಸನ್ಯಾಸಿಗಳಾಗಿ ಅವರು ಬ್ರಹ್ಮ ದೇವರಿಗೆ ಪ್ರಾರ್ಥನೆಯನ್ನು ಮಾಡಿಕೊಂಡು ತಮ್ಮ ಸನ್ಯಾಸ ಧರ್ಮದ ಪರಿಪಾಲನೆಗೆ ಅಂತ ಅವರು ತೆರಳಿದಾಗ ಬ್ರಹ್ಮ ದೇವರು ಸಿಟ್ಟಿಗೆ ಬಂದವರಂತೆ ತೋರಿಸಿದ್ದಾರೆ. ಆ ಬ್ರಹ್ಮ ದೇವರ ಕ್ರೋಧದಿಂದಲೇ ರುದ್ರ ದೇವರ ಸೃಷ್ಟಿ ಆಗಿದೆ **'ರುದ್ರಂ ರೋಷಾತ್ಮಸಮ್ಭವಮ್'**[2] ಅಂತಹ ರುದ್ರ ದೇವರನ್ನು ಸೃಷ್ಟಿ ಮಾಡಿದ್ದಾರೆ, ನಾರದರ ಸೃಷ್ಟಿಯಾಗಿದೆ, ಸನಕ, ಸನಂದನ, ಸನಾತನ, ಸನತ್ಕುಮಾರ ಇವರ ಸೃಷ್ಟಿಯನ್ನೂ ಮಾಡಿದ್ದಾರೆ. ಇದರಲ್ಲಿ ರುದ್ರ ದೇವರು ಹಾಗೂ ಈ ಮರೀಚಿ, ಅತ್ರಿ, ಅಂಗಿರಸ ಮೊದಲಾದವರು ಮಾತ್ರ ಬ್ರಹ್ಮ ದೇವರ ಆದೇಶದಂತೆ ಸೃಷ್ಟಿಯನ್ನು ಮಾಡುತ್ತಾ ಇದ್ದಾರೆ. ಸನಕಾದಿಗಳೆಲ್ಲ ವಿರಕ್ತರಾಗಿ ಅವರು ಸನ್ಯಾಸ ಧರ್ಮವನ್ನು ಪರಿಪಾಲನೆ ಮಾಡುತ್ತಾ ಇದ್ದಾರೆ. ಅದರಲ್ಲಿಯೂ ವಿಶೇಷವಾಗಿ ಸನತ್ಕುಮಾರರು ಹಾಗೂ ಸ್ಕಂದ ಇವರಿಬ್ಬರು **'ತೇಜಃ ಸಂಕ್ಷಿಪ್ಯ ತಿಷ್ಠತಃ'**[3] ತಮ್ಮ ತೇಜಸ್ಸನ್ನು ವಿಶೇಷವಾಗಿ ಅದನ್ನು ಅಂತರ್ಮುಖಿಯಾಗಿ ಮಾಡಿಕೊಂಡು ಸೃಷ್ಟ್ಯಾದಿ ಕರ್ಮಗಳನ್ನು ಮಾಡದಂತೆ ಭಗವಂತನ ಚಿಂತನದಲ್ಲಿ ರತರಾಗಿದ್ದಾರೆ, ಸನತ್ಕುಮಾರರು, ಸ್ಕಂದ ಇಬ್ಬರು ಕಾಮನ ಅವತಾರರೇ. ಆ ರೀತಿಯಾಗಿ ಬ್ರಹ್ಮ ದೇವರ ಸೃಷ್ಟಿ ಮುಂದುವರೆದಿದೆ. ಮೇಘಾದಿಗಳ ಸೃಷ್ಟಿಯನ್ನು ಮಾಡಿದ್ದಾರೆ, ಪಕ್ಷಿಗಳು, ಪರ್ಜನ್ಯ, ಋಗ್ವೇದಾದಿಗಳೆಲ್ಲ ವಿಶೇಷವಾಗಿ ಪ್ರವೃತ್ತವಾಗುವಂತೆ ಮಾಡಿದ್ದಾರೆ. ಅಪೌರುಷೇಯವಾದ ವೇದಗಳು ಪ್ರತಿ ಕಲ್ಪದಲ್ಲಿಯೂ ಹಯಗ್ರೀವ ರೂಪದಿಂದ ಪರಮಾತ್ಮ ಅದರ ಸೃಷ್ಟಿಯನ್ನು ಮಾಡುತ್ತಾನೆ, ಪ್ರತಿ ಕಲ್ಪದಲ್ಲಿಯೂ ಹಯಗ್ರೀವ ರೂಪದಿಂದ ಪರಮಾತ್ಮ ಆ ಋಗ್ವೇದಾದಿಗಳ ಉಚ್ಚಾರಣೆಯನ್ನು ಮಾಡುತ್ತಾನೆ. ಶ್ರೀಮದಾಚಾರ್ಯರು ಋಗ್ಭಾಷ್ಯಗಳಲ್ಲಿ ವರ್ಣನೆ ಮಾಡುತ್ತಾರೆ ಒಂದು ಬಾರಿ ಉಪದೇಶ ಮಾಡಿದರಂತೆ ಹಯಗ್ರೀವ ದೇವರು ಬ್ರಹ್ಮ ದೇವರಿಗೆ, ಒಂದೇ ಸಲ ಉಚ್ಚಾರಣೆಯನ್ನು ಮಾಡಿದ್ದಕ್ಕೆ ಪೌರುಷೇಯ ಅಪೌರುಷೇಯ ಸಕಲ ವಿದ್ಯೆಗಳನ್ನು ಬ್ರಹ್ಮ ದೇವರು ಪಡೆದುಕೊಂಡಿದ್ದಾರೆ. ಅವರಿಗೆ ಪರಿಪೂರ್ಣವಾದ ಪರೋಕ್ಷ ಜ್ಞಾನ ಅನಾದಿ ಕಾಲದಿಂದಲೇ ಇದೆ ಕೇವಲ ಪರಮಾತ್ಮನ ಮುಖಕಮಲದಿಂದ ಶ್ರವಣ ಮಾಡಿದರೆ ಮಹಾ ಅದೃಷ್ಟ ಲಾಭ ಅನ್ನುವುದಕ್ಕೋಸ್ಕರವಾಗಿ ಆ ಪರಮಾತ್ಮನ ಮುಖದಿಂದ ಬ್ರಹ್ಮ ದೇವರು ಆ ಸಕಲ

1. ಭಕ್ತಿಭಾವಾಮೃತ ; 2. 1.43 ಹರಿವಂಶಪರ್ವ ; 3. 1.44 ಹರಿವಂಶಪರ್ವ

ವೇದಾದಿ ಸಚ್ಛಾಸ್ತ್ರಗಳ ಶ್ರವಣವನ್ನು ಮಾಡಿ ಅದರ ಪ್ರವರ್ತನವನ್ನು ಮಾಡಿದ್ದಾರೆ. ಮುಖದಿಂದ ದೇವತೆಗಳನ್ನ, ವಕ್ಷಸ್ಥಲದಿಂದ ಪಿತೃಗಳನ್ನ, ಜನನೇಂದ್ರಿಯದಿಂದ ಮನುಷ್ಯರನ್ನ, ಪೃಷ್ಠ ಭಾಗದಿಂದ ಅಸುರರನ್ನ ಸೃಷ್ಟಿ ಮಾಡಿದ್ದಾರೆ ಬ್ರಹ್ಮ ದೇವರು.

ಈ ರೀತಿ ನಾನಾ ವಿಧವಾದ ಸೃಷ್ಟಿ ಕಾರ್ಯಗಳನ್ನು ಮಾಡುತ್ತಾ ಮುಂದೆ ಮೈಥುನ ಕ್ರಮದಲ್ಲಿ ಸೃಷ್ಟಿಯನ್ನು ವಿಶೇಷವಾಗಿ ಬೆಳೆಸಬೇಕು ಭಗವಂತನ ಅಪಾರವಾದ ಅನುಗ್ರಹ, ತಮ್ಮ ವಿಶಿಷ್ಟವಾದ ಸಾಮರ್ಥ್ಯ, ದೇವರು ಕೊಟ್ಟ ಸಾಮರ್ಥ್ಯದಿಂದ ತಾವು ಸೃಷ್ಟಿ ಮಾಡಿದಂತೆ ಮನಸ್ಸಿನಿಂದ, ತಮ್ಮ ಅಂಗಾಂಗಗಳಿಂದ ಈ ಎಲ್ಲ ದೇವತೆಗಳನ್ನು, ಋಷಿಗಳನ್ನು, ಮನುಷ್ಯರನ್ನು ಸೃಷ್ಟಿ ಮಾಡಿದಂತೆ ಮುಂದೆ ಮಾಡುವುದಕ್ಕೆ ಸಾಧ್ಯ ಇಲ್ಲ. ಈ ತರಹದ ಸೃಷ್ಟಿಯನ್ನು ಮಾಡುತ್ತಾ ಹೋದರೆ ವಿಶೇಷವಾದ ಸೃಷ್ಟಿಯ ಅಭಿವೃದ್ಧಿ ಆಗುವುದಿಲ್ಲ ಅನ್ನುವುದಕ್ಕಾಗಿ ತಾವೇ ತಮ್ಮ ಶರೀರದಿಂದ ಸ್ವಾಯಂಭುವ ಮನು ಹಾಗೂ ಶತರೂಪಾ ಇಬ್ಬರ ಸೃಷ್ಟಿಯನ್ನು ಮಾಡಿದ್ದಾರೆ. ಆ ಬ್ರಹ್ಮ ದೇವರ ಶರೀರವೇ ಸ್ವಾಯಂಭುವ ಮನು, ಶತರೂಪಾ ಈ ರೂಪದಲ್ಲಿ ಎರಡು ಭಾಗವಾಗಿದೆ ಅಂತ ಶ್ರೀಮದ್ಭಾಗವತದಲ್ಲಿಯೂ ವರ್ಣನೆ ಬರುತ್ತದೆ ಇಲ್ಲಿಯೂ ಕೂಡಾ ಆ ವರ್ಣನೆಯನ್ನು ಕಾಣುತ್ತೇವೆ. ಆ ರೀತಿಯಾಗಿ ಸ್ವಾಯಂಭುವ ಮನು, ಶತರೂಪಾ ಇವರ ಸೃಷ್ಟಿಯನ್ನು ಮಾಡಿ ಅವರ ಮೂಲಕ ಅನೇಕ ಸೃಷ್ಟಿಯನ್ನು ಮುಂದುವರೆಸಿದ್ದಾರೆ ಅಂತ ಪ್ರಥಮಾಧ್ಯಾಯದಲ್ಲಿ ತಿಳಿಸುತ್ತಾರೆ. ಇದು ಪರಮಾತ್ಮ ಬ್ರಹ್ಮ ದೇವರ ಸೃಷ್ಟಿಯನ್ನು ಮಾಡಿ ಅವರ ಮೂಲಕ ಸಪ್ತ ಋಷ್ಯಾದಿಗಳ ಸೃಷ್ಟಿಯನ್ನು ಮಾಡಿ, ಸ್ವಾಯಂಭುವ ಮನು, ಶತರೂಪಾ ಇವರ ಸೃಷ್ಟಿಯನ್ನು ಮಾಡಿದ ಈ ಕಥೆಯನ್ನು ಯಾರು ಕೇಳುತ್ತಾರೆ ಅವರಿಗೆ ಉತ್ತಮವಾದ ಆಯುಷ್ಯ, ಕೀರ್ತಿ ಮೊದಲಾದ ಎಲ್ಲ ಸೌಭಾಗ್ಯಗಳು ಸಿಗುತ್ತೆ ಅಂತ ಹೇಳುತ್ತಾರೆ.

ಆಯುಷ್ಮಾನ್ ಕೀರ್ತಿಮಾನ್ ಧನ್ಯಃ ಪ್ರಜಾವಾಞ್ಶ್ರುತವಾಂಸ್ತಥಾ ।
ಆದಿಸರ್ಗಂ ವಿದಿ ತ್ವೇಮಂ ಯಥೇಷ್ಟಂ ಗತಿಮಾಪ್ನುಯಾತ್ ॥ (1.54 ಹರಿವಂಶಪರ್ವ)

ಮುಂದಿನ ಸೃಷ್ಟಿಯನ್ನು ಹೇಳುತ್ತಾರೆ. ಆ ಸ್ವಾಯಂಭುವ ಮನು, ಶತರೂಪಾ ಬ್ರಹ್ಮ ದೇವರಿಂದ ಹುಟ್ಟಿದವರು ಇವರಿಬ್ಬರು, ಎಂಥವರಿಂದ ಹುಟ್ಟಿದ್ದಾರೆ ಅನ್ನುವುದನ್ನು ನೋಡಿಕೊಳ್ಳಿ. ಅದು ವಿಶೇಷವಾಗಿ ಅನುಗ್ರಹ ಬುದ್ಧಿಯಿಂದ ಇವರಿಂದ ಮುಂದೆ ಪ್ರಜಾಭಿವೃದ್ಧಿಯಾಗಬೇಕು, ಧರ್ಮದ ಸಂರಕ್ಷಣೆಯಾಗಬೇಕು, ಪ್ರಜೆಗಳ ಸಂರಕ್ಷಣೆಯಾಗಬೇಕು ಇವನು ಪ್ರಜೆಗಳಿಗೆ ರಾಜನಾಗಿ ಆಳಬೇಕು ಒಂದು ಮನ್ವಂತರದ ಕಾಲ ಸಂಪೂರ್ಣವಾಗಿ ಎಪ್ಪತ್ತೊಂದು ಮಹಾಯುಗಗಳು. ನಾಲ್ಕು ಯುಗಗಳು ಸೇರಿದರೆ ಒಂದು ಮಹಾಯುಗವಾದರೆ ಎಪ್ಪತ್ತೊಂದು ಮಹಾಯುಗಗಳ ಕಾಲ ಮೇಲೆ ಹದಿನೆಂಟುವರೆ ಲಕ್ಷ ವರ್ಷಗಳವರೆಗೆ ಇವನು ರಾಜ್ಯವನ್ನು ಆಳಬೇಕು ಅಂತಹ ಅದ್ಭುತವಾದ ಸಾಮರ್ಥ್ಯವುಳ್ಳ ವ್ಯಕ್ತಿಯನ್ನು ಸೃಷ್ಟಿ ಮಾಡಬೇಕು ಅಂತ ಸಂಕಲ್ಪ ಮಾಡಿ ಸೃಷ್ಟಿ ಮಾಡಿದ್ದಾರೆ ಆ ಸ್ವಾಯಂಭುವ ಮನುವನ್ನ. ಅವನಿಗೆ ಸರಿಯಾಗಿ ತಕ್ಕ ಪತ್ನಿಯಾಗಿ ಇರಬೇಕು ಅಂತ ಶತರೂಪಾಳನ್ನು ಸೃಷ್ಟಿ ಮಾಡಿದ್ದಾರೆ ಅಂದಮೇಲೆ ಅವರು ಹೇಗಿರಬಹುದು ಅಂತ ಊಹಿಸಿಕೊಳ್ಳಿ ಅಂತ ಹರಿವಂಶ ಹೇಳುತ್ತದೆ. ಬ್ರಹ್ಮ ದೇವರನ್ನು ಆಪವಾ ಆಪವಾ ಅನ್ನುತ್ತಾರೆ ಯಾಕೆಂದರೆ ನೀರನ್ನು ಮೊದಲು ಸೃಷ್ಟಿ ಮಾಡಿದನಲ್ಲ ದೇವರು ಆ ನೀರಿನಲ್ಲಿ ಹಿರಣ್ಮಯವಾದ ಅಂಡವನ್ನ ಸೃಷ್ಟಿ ಮಾಡಿ ಅಲ್ಲಿ ಈ ವೈರಾಜ ಪುರುಷರಾದ ಬ್ರಹ್ಮ ದೇವರನ್ನು ಪರಮಾತ್ಮ ಸೃಷ್ಟಿ ಮಾಡಿದ್ದಕ್ಕೆ ಇವರನ್ನು ನೀರಿನೊಳಗೆ ಹುಟ್ಟಿದರು ಅಂತ ಆಪವಾ ಅಂತ.

ಆಪವಸ್ಯ ಮಹಿಮ್ನಾ ತು ದಿವಮಾವೃತ್ಯ ತಿಷ್ಠತಃ । (2.2 ಹರಿವಂಶಪರ್ವ)



ಅಂತಹ ಬ್ರಹ್ಮ ದೇವರ ವಿಶಿಷ್ಟವಾದ ಅನುಗ್ರಹದಿಂದ ಸಾಮರ್ಥ್ಯದಿಂದ ಇವಳು ಶತರೂಪಾ, ಶತರೂಪಾ ಅನ್ನುವ ಹೆಸರು ಅನ್ವರ್ಥಕವಾಗಿತ್ತು ಶತರೂಪಾ ದೇವಿಗೆ. ನಾನಾ ವಿಧವಾದ ರೂಪಗಳನ್ನ ತೆಗೆದುಕೊಳ್ಳುವ ಸಾಮರ್ಥ್ಯ ಅವಳಿಗೆ ಇತ್ತು ಆ ರೀತಿ ಅವಳಿದ್ದಾಳೆ. ಸ್ವಾಯಂಭುವ ಮನುವಿನಿಂದ ತಾನು ಉತ್ತಮ ಸಂತಾನವನ್ನು ಪಡೆಯಬೇಕು ಅಂತ ಶತರೂಪಾ ಹತ್ತು ಸಾವಿರ ವರ್ಷಗಳವರೆಗೆ ತಪಸ್ಸು ಮಾಡಿದ್ದಾಳೆ. ಉತ್ತಮವಾದ ಸಂತಾನವನ್ನು ಪಡೆಯಬೇಕು ಅಂದರೆ ಉತ್ತಮವಾದಂತಹ ಪುಣ್ಯವನ್ನು ಪಡೆಯಬೇಕು ಅಂತಹ ಉತ್ತಮವಾದ ಪುಣ್ಯವನ್ನು ಪಡೆಯುವುದಕ್ಕೆ ಹತ್ತು ಸಾವಿರ ವರ್ಷಗಳವರೆಗೆ ತಪಶ್ಚರ್ಯವನ್ನು ಮಾಡಿ ಆನಂತರ ಸ್ವಾಯಂಭುವ ಮನುವಿನಿಂದ ಶ್ರೇಷ್ಠವಾದ ಸಂತಾನವನ್ನು ಪಡೆದಿದ್ದಾಳೆ.

ಹರಿವಂಶದಲ್ಲಿ ಹೇಳುವ ಅನೇಕ ವಿಷಯಗಳು ಇಲ್ಲಿ ಬರುವಂತಹ ವಂಶದ ಒಂದು ಕ್ರಮ, ಶ್ರೀಮದ್ಭಾಗವತದಲ್ಲಿ ಬರುವಂತಹ ವಂಶದ ಕ್ರಮ ಇವುಗಳಲ್ಲಿ ಸ್ವಲ್ಪ ವ್ಯತ್ಯಾಸವಾಗಿ ತೋರುತ್ತೆ. ಅನೇಕ ರೀತಿಯಿಂದ ಮಹಾಭಾರತದಲ್ಲಿ, ಭಾಗವತಾದಿ ಪುರಾಣಗಳಲ್ಲಿ ಅವುಗಳನ್ನು ನಿರೂಪಣೆ ಮಾಡಿರುತ್ತಾರೆ ಶ್ರೀಮದಾಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಹೇಳುತ್ತಾರೆ ವೇದವ್ಯಾಸ ದೇವರು ಬಳಸುವ ಭಾಷೆಗಳು ಅನೇಕ. ಅನೇಕ ರೀತಿಯಿಂದ ವೇದವ್ಯಾಸ ದೇವರು ನಿರೂಪಣೆ ಮಾಡುತ್ತಾರೆ ಕಲ್ಪಭೇದದಿಂದ ಹೇಳುತ್ತಾರೆ, ನಾಮೌ ವ್ಯತ್ಯಾಸ, ಪುರುಷೌ ವ್ಯತ್ಯಾಸಾದಿಗಳನ್ನು ಮಾಡಿ ನಾನಾ ರೀತಿಯಿಂದ ವೇದವ್ಯಾಸ ದೇವರು ಹೇಳುವಂತಹ ರೀತಿಗಳಿರುತ್ತೆ ಅದರೊಳಗಿನ ಸಾರವನ್ನ, ತತ್ವವನ್ನ ಪ್ರಧಾನವಾದ ತತ್ವವನ್ನ ಮಾತ್ರ ನಾವು ತಿಳಿಯಬೇಕು. ಶ್ರೀಮದ್ಭಾಗವತದಲ್ಲಿ ಬಂದಂತಹ ಕಥೆ ಹಾಗೂ ಇಲ್ಲಿ ಬಂದಂತಹ ಕಥೆ ಎರಡನ್ನು ನಾವು ಚೆನ್ನಾಗಿ ತಿಳಿದುಕೊಂಡು ಆ ಭಗವಂತನ ಮಹಿಮೆಯನ್ನು ಪ್ರಧಾನವಾಗಿ ಇಲ್ಲಿ ನಾವು ಅರ್ಥ ಮಾಡಿಕೊಳ್ಳಬೇಕು.

ಸ್ವಾಯಂಭುವ ಮನು ಹಾಗೂ ಶತರೂಪಾ ಇವರಿಬ್ಬರಲ್ಲಿ ಪ್ರಿಯವ್ರತ ಹಾಗೂ ಉತ್ತಾನಪಾದ ಎಂಬ ಇಬ್ಬರು ಗಂಡಸು ಮಕ್ಕಳು, ಆಕುತಿ, ದೇವಹೂತಿ, ಪ್ರಸೂತಿ ಎಂಬ ಮೂರು ಜನ ಕನ್ಯೆಯರು ಅಲ್ಲಿ ಜನಿಸಿದರು ಅಂತ ಶ್ರೀಮದ್ಭಾಗವತದಲ್ಲಿ ನಾವು ಕೇಳುತ್ತೇವೆ. ಹರಿವಂಶ ಪುರಾಣ ಹೇಳುತ್ತದೆ ಸ್ವಾಯಂಭುವ ಮನು, ಶತರೂಪಾ ಇವರಿಬ್ಬರಲ್ಲಿ ಅವತಾರ ಮಾಡಿದವನು ಹುಟ್ಟಿದವನು ವೀರ ಅಂತ ಒಬ್ಬ ರಾಜ ಎಂಬುದಾಗಿ ಹೇಳುತ್ತಾರೆ. ನರಸಿಂಹ ದೇವರ ಹೆಸರನ್ನು ಪಡೆದುಕೊಂಡಂತಹ ವೀರ ಉಗ್ರಂ ವೀರಂ ಅವನಿಗೆ ವೀರ ಅಂತೇನೆ ಹೆಸರು ಯಾರು ಕೈಗೆತ್ತಿಕೊಂಡ ಕೆಲಸವನ್ನು ಪೂರ್ಣ ಮಾಡುತ್ತಾರೆ ಅವರಿಗೆ ವೀರ ಅನ್ನುತ್ತಾರೆ. ಅಂತಹ ತಾನು ಮಾಡಿದ ಸಂಕಲ್ಪವನ್ನು ಪೂರ್ಣಗೊಳಿಸುವ ಸರ್ವೋತ್ತಮನಾದ ಭಗವಂತ ವೀರ ಆ ವೀರನ ಹೆಸರನ್ನು ಇಟ್ಟುಕೊಂಡ ಮಗ ಈ ವೀರ ಅಂತಹ ವೀರ ಎಂಬ ಮಗ ಅಲ್ಲಿ ಹುಟ್ಟಿದ್ದಾನೆ. ಆ ವೀರನಿಂದ ಪ್ರಿಯವ್ರತ ಹಾಗೂ ಉತ್ತಾನಪಾದ ಎಂಬ ಇಬ್ಬರು ಮಕ್ಕಳು ಹುಟ್ಟುತ್ತಾರೆ. ಸ್ವಾಯಂಭುವ ಮನುವಿನ ಮಕ್ಕಳು ಪ್ರಿಯವ್ರತ ಹಾಗೂ ಉತ್ತಾನಪಾದರು ಭಾಗವತದ ಪ್ರಕಾರ, ಹರಿವಂಶದ ಪ್ರಕಾರ ಪ್ರಿಯವ್ರತ ಹಾಗೂ ಉತ್ತಾನಪಾದರು ಸ್ವಾಯಂಭುವ ಮನುವಿನ ಮೊಮ್ಮಕ್ಕಳು, ಮಗ ವೀರ ಅವನ ಮಕ್ಕಳು ಪ್ರಿಯವ್ರತ ಹಾಗೂ ಉತ್ತಾನಪಾದ. ಇದು ಏನೇನೋ ಹೆಸರುಗಳನ್ನೆಲ್ಲ ಇಡುತ್ತಾರಲ್ಲ ನಮಗೆಲ್ಲ ಹೇಳುತ್ತೀರಿ ದೇವರ ಹೆಸರುಗಳನ್ನೇ ಇಡಬೇಕು ಅಂತ ಇದು ಏನೇನೋ ಹೆಸರು ಇಡುತ್ತಾರೆ ಅಂತ ತಿಳಿದುಕೊಳ್ಳಬೇಡಿ ಎಲ್ಲವೂ ಭಗವಂತನ ನಾಮಗಳೇ. ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಹೇಳುತ್ತಾರೆ

ಅಸ್ಮದಿಷ್ಟೈಕಕಾರ್ಯಾಯ ಪೂರ್ಣಾಯ ಹರಯೇ ನಮಃ ॥ (2.9 ದ್ವಾದಶಸ್ತೋತ್ರ)

ನಮಗೆ ಯಾವುದು ಹಿತ ಯಾವುದು ಇಷ್ಟ ಅದನ್ನೇ ಮಾಡುತ್ತಾನೆ ದೇವರು ಅದನ್ನು ನಾವು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು ಅಷ್ಟೇ ಆದದ್ದೆಲ್ಲ ಒಳಿತೆ ಆಯಿತು ಅಂತ ದಾಸರಾಯರು ಹಾಡುತ್ತಾರೆ ಹಾಗಾಗಿ ಪ್ರಿಯಾ ಅಂದರೆ ಇಷ್ಟ, ವ್ರತ ಅಂದರೆ ಕರ್ಮ. **'ಪ್ರಿಯವ್ರತ ಅಸ್ಮ ದಿಷ್ಟೈಕ ಕಾರ್ಯಾಯ'** ನಮಗೆ ಯಾವುದು ಪ್ರಿಯ ಯಾವುದು ಇಷ್ಟ ಅರ್ಥಾತ್ ಯಾವುದು ಹಿತ ಅದನ್ನೇ ಮಾಡುತ್ತಾನೆ ಪರಮಾತ್ಮ ಎಂದಿಗೂ ನಮಗೆ ಅನಿಷ್ಟವನ್ನು ಮಾಡುವುದಿಲ್ಲ, ಅಹಿತವನ್ನು ಮಾಡುವುದಿಲ್ಲ **'ಹಿತಾ ಚ್ಯ ಹಿತ ತಮಃ'** ಅನ್ನುತ್ತಾರೆ ಶ್ರೀಮದಾಚಾರ್ಯರು ಆದ್ದರಿಂದ ಆ ಪ್ರಿಯವ್ರತ. ಉತ್ತಾನಪಾದ ವಾಮನ ರೂಪಿಯಾದ ಪರಮಾತ್ಮ ತ್ರಿವಿಕ್ರಮನಾಗಿ ತನ್ನ ಒಂದು ಪಾದವನ್ನ ಮೇಲೆತ್ತಿ ಆ ವಾಮ ಪಾದದ ಅಂಗುಷ್ಠದಿಂದ ಗಂಗೆಯನ್ನೇ ಧರೆಗೆ ಇಳಿಸಿದವನು ಪರಮಾತ್ಮ.

ವಾಮಪಾದಾಂಗುಷ್ಠ ನಖ ನಿರ್ಭಿನ್ನೋರ್ಧ್ವಾಂಡಕಟಾಹವಿವರೇಣಾ ॥

ನೋಡಿ ಅಂದರೆ ಉತ್ತಾನಪಾದ ತ್ರಿವಿಕ್ರಮ ರೂಪಿಯಾದ ಭಗವಂತ ಆ ಉತ್ತಾನಪಾದನ ಹೆಸರನ್ನು ಇಟ್ಟುಕೊಂಡಿದ್ದಾನೆ ಈ ಉತ್ತಾನಪಾದ. ಸ್ವಾರಸ್ಯವನ್ನು ಗಮನಿಸಿ, ಗಂಗೆಯ ವರ್ಣನೆಯನ್ನು ಮಾಡುವಾಗ ಧ್ರುವ ರಾಜ ಆ ಗಂಗಾಜಲವನ್ನು ಯಾವಾಗಲೂ ತಲೆಯಮೇಲೆ ಧಾರಣೆ ಮಾಡುತ್ತಾನೆ ಅಂತ ಹೇಳುವಾಗ ಏನು ಹೇಳುತ್ತಾರೆ.

ಯತ್ಪರವಹುವಾಗ ವೀರ್ಯವ್ರತಃ ಔತ್ತಾನಪಾದಿಃ ಪರಮ ಭಾಗವತಃ ।

ಅಸ್ಮತ್ ಕುಲದೇವತಾ ಚರಣಾರವಿಂದೋದಕಮಿತಿ ॥ (3 ಯುಕ್ತ ಮಲ್ಲಿಕಾ)

ಉತ್ತಾನಪಾದನ ಮಗನಾದ ಧ್ರುವ ನಮ್ಮ ಕುಲದೇವತೆಯಾದ ಪರಮಾತ್ಮನ ಚರಣಾರವಿಂದೋದಕ ಇದು ಅಂತ ಭಕ್ತಿಯಿಂದ ಧಾರಣೆ ಮಾಡುತ್ತಾನೆ ಅಂತ ಅಲ್ಲಿ ಬಳಿಸಿದ ಶಬ್ದ ಬರೀ ಧ್ರುವ ಅಂದರೆ ಸಾಕಾಗಿತ್ತಲ್ಲ **'ಔತ್ತಾನಪಾದಿಃ'** ಅಂತ. ಅಂದರೆ ಬರೀ ತಮ್ಮಪ್ಪ ಉತ್ತಾನಪಾದ ಅಲ್ಲ ಆ ಉತ್ತಾನಪಾದ ಯಾವ ಉತ್ತಾನಪಾದನಾದ ತ್ರಿವಿಕ್ರಮ ರೂಪಿಯಾದ ಪರಮಾತ್ಮನ ಹೆಸರು ಇಟ್ಟುಕೊಂಡಿದ್ದಾನೋ ಆ ಉತ್ತಾನಪಾದನ ಪಾದದಿಂದಲೆ ಹರಿದು ಬಂದದ್ದು ಗಂಗೆ ಅನ್ನುವ ಸೂಚನೆ ಮಾಡುವಂತೆ ಭಾಗವತ ಆ ಸಂದರ್ಭದಲ್ಲಿ ಧ್ರುವ ರಾಜನನ್ನು **'ಔತ್ತಾನಪಾದಿಃ'** ಅಂತ ಕರೆದಿದೆ. ಅಂತಹ ಉತ್ತಾನಪಾದನಾದ ಪರಮಾತ್ಮನ ಪಾದದಿಂದ ಹರಿದು ಬಂದ ಗಂಗೆಯನ್ನ ಆ ಉತ್ತಾನಪಾದನ ಹೆಸರನ್ನು ಇಟ್ಟುಕೊಂಡ ಅವನ ವಿಶೇಷ ಸನ್ನಿಧಾನಕ್ಕೆ ಪಾತ್ರನಾದ ಉತ್ತಾನಪಾದನ ಮಗನಾದ ಧ್ರುವ ತಾನು ಶಿರಸಾಧಾರಣೆ ಮಾಡಿದ ಅನ್ನುವುದು ಶ್ರೀಮದ್ಭಾಗವತದ ಆಂತರ್ಯ. ಅಂತಹ ಪ್ರಿಯವ್ರತ ಹಾಗೂ ಉತ್ತಾನಪಾದ ಇವರಿಬ್ಬರೂ ಕೂಡ ವೀರನ ಹೆಂಡತಿ ಕಾಮ್ಯಾ ಅನ್ನುವವಳಲ್ಲಿ ಹುಟ್ಟಿದ್ದಾರೆ, ವಸಿಷ್ಠರ ಮಗಳು ಕಾಮ್ಯಾ ಅಂತ ವಾಯುಪುರಾಣ ಹೇಳುತ್ತದೆ.

ವಸಿಷ್ಠ ತನಯಾಯಾಂತು ಕಾಮ್ಯಾಯಾಂ ಪುತ್ರಮಿಚ್ಛಿತಂ ।

ವೀರೋವೈ ಜನಯಾಮಾಸಾ ಪ್ರಿಯವ್ರತ ಉದಾರಧಿಃ ॥ (ವಾಯುಪುರಾಣ)

ವಸಿಷ್ಠ ಋಷಿಗಳ ಮಗಳು ಕಾಮ್ಯಾ ಆ ಕಾಮ್ಯಾಳಲ್ಲಿ ವೀರ ಇವರಿಬ್ಬರನ್ನು ಪಡೆಯುತ್ತಾನೆ ಪ್ರಿಯವ್ರತ ಹಾಗೂ ಉತ್ತಮಪಾದರನ್ನ. ಇನ್ನೊಬ್ಬ ಕಾಮ್ಯಾ, ಕರ್ದಮ ಪ್ರಜಾಪತಿಯ ಮಗಳೊಬ್ಬಳು ಕಾಮ್ಯಾ ಆ ಕಾಮ್ಯಾಳಲ್ಲಿ ಪ್ರಿಯವ್ರತ ಅವನು ನಾಲ್ಕು ಜನ ಮಕ್ಕಳನ್ನು ಪಡೆಯತ್ತಾನೆ. ಅಂದರೆ ಪ್ರಿಯವ್ರತನ ತಾಯಿ ಕಾಮ್ಯಾ ವಸಿಷ್ಠರ ಮಗಳು,

ಪ್ರಿಯವ್ರತನ ಹೆಂಡತಿ ಕಾಮ್ಯಾ ಕರ್ದಮ ಪ್ರಜಾಪತಿಯ ಮಗಳು ಅಲ್ಲಿ ಹುಟ್ಟಿದವರು ನಾಲ್ಕು ಸಮ್ರಾಟ್, ಕುಕ್ಷಿ, ರ್ವಿರಾಟ್, ಪ್ರಭು. ಒಂದೇ ಮನೆಯಲ್ಲಿ ಒಂದೇ ಹೆಸರಿನವರು ಇಬ್ಬರು ಇರಬಾರದು ಅಂತ ಏನಿಲ್ಲ ತಾಯಿಯ ಹೆಸರು ಕಾಮ್ಯಾ, ಹೆಂಡತಿಯ ಹೆಸರು ಕಾಮ್ಯಾ. ಹಾಗೆ ಒಂದೇ ಗುರುಕುಲದಲ್ಲಿ ಇದ್ದ ಇಬ್ಬರು ಶಿಷ್ಯರಿಗೂ ಒಂದೇ ಹೆಸರು ಇರಬಹುದು, ಒಂದು ಹೆಸರಿನ ಇಬ್ಬರು ಶಿಷ್ಯರು ಇರುವುದಕ್ಕೆ ಸಾಧ್ಯ ಇಲ್ಲ ಅನ್ನುವ ಕೆಲವರ ಚಿಂತನ ಇದೆ.

ಕಾಮ್ಯಾಪುತ್ರಾಸುತಿ ಚತ್ವಾರಃ ಸಮ್ರಾಟ್ ಕುಕ್ಷಿರ್ವಿರಾಟ್ ಪ್ರಭುಃ । (2.6 ಹರಿವಂಶಪರ್ವ)

ಆ ಉತ್ತಾನಪಾದನನ್ನ ಅತ್ರಿ ಋಷಿಗಳು ತಮ್ಮ ಮಗನನ್ನಾಗಿ ಸ್ವೀಕಾರ ಮಾಡಿದರಂತೆ. ಆ ಉತ್ತಾನಪಾದನಿಗೆ ಸೂನೃತಾ ಅನ್ನುವ ಹೆಸರಿನ ಹೆಂಡತಿಯಲ್ಲಿ ನಾಲ್ಕು ಜನ ಮಕ್ಕಳು ಆಗುತ್ತಾರೆ. ಆ ಪ್ರಿಯವ್ರತನಿಗೂ ನಾಲ್ಕು ಜನ ಮಕ್ಕಳು. ಆ ಸೂನೃತಾ ಯಾರ ಮಗಳು ಅಂದರೆ ಧರ್ಮನ ಮಗಳು, ಧರ್ಮ ಅಶ್ವಮೇಧ ಯಾಗವನ್ನು ಮಾಡಿದ. ಆ ಯಮಧರ್ಮ ರಾಜ ಅಶ್ವಮೇಧ ಯಾಗವನ್ನು ಮಾಡಿದಾಗ ಆ ಯಾಗದಲ್ಲಿ ಪ್ರಾದುರ್ಭೂತಳಾದವಳು ಸೂನೃತಾ. ಆ ಸೂನೃತಾಳನ್ನು ಉತ್ತಾನಪಾದ ಮದುವೆಯಾಗಿ ಅಲ್ಲಿ ನಾಲ್ಕು ಜನ ಮಕ್ಕಳನ್ನು ಪಡೆಯುತ್ತಾನೆ ಅದರಲ್ಲಿಯೇ ಒಬ್ಬ ಮಹಾನುಭಾವ ಧ್ರುವ.

ಧ್ರುವಂ ಚ ಕೀರ್ತಿಮನ್ತಂ ಚ ಶಿವಂ ಶಾನ್ತಮಯಸ್ಪತಿಮ್ ॥ (2.9 ಹರಿವಂಶಪರ್ವ)

ಶಾಂತಂ ಅನ್ನುವುದು ವಿಶೇಷಣ, ಶಾಂತನಾದ ಅಯಸ್ಪತಿ, ಶಿವ, ಕೀರ್ತಿಮಾನ್, ಧ್ರುವ ಅನುಕ್ರಮವಾಗಿ ಹೇಳಿದೆ ಧ್ರುವ, ಕೀರ್ತಿಮಾನ್, ಶಿವ, ಅಯಸ್ಪತಿ ಅಂತ ಅಥವಾ ಇನ್ನೊಂದು ಪಾಠ ಆಯುಷ್ಮಾನ್, ವಸು ಎಂಬುದಾಗಿ ನಾಲ್ಕು ಜನ ಮಕ್ಕಳನ್ನು ಪಡೆದಿದ್ದಾನೆ ಅದರಲ್ಲಿ ದೊಡ್ಡವನೇ ಧ್ರುವ ಮಹಾರಾಜ. ಅಲ್ಲಿ ಧ್ರುವ, ಉತ್ತಮ ಸುನೀತಿ, ಸುರೂಚಿ ಅಂತ ಸೂರೂಚಿಯಲ್ಲಿ ಉತ್ತಮ, ಸುನೀತಿಯಲ್ಲಿ ಧ್ರುವ ಅಂತನ್ನುವ ಕಥೆಯನ್ನು ಶ್ರೀಮದ್ಭಾಗವತದಲ್ಲಿ ಕೇಳುತ್ತೇವೆ. ಇಲ್ಲಿ ಧ್ರುವ ರಾಜನ ತಾಯಿಯ ಹೆಸರು ಸುನೀತಿ ಅನ್ನುವ ಹೆಸರು ಇರಬಹುದು ಅದರ ಜೊತೆಗೆ ಸೂನೃತಾ ಅನ್ನುವ ಹೆಸರನ್ನು ಇಲ್ಲಿ ಹೇಳುತ್ತಾ ಇದ್ದಾರೆ, ಧರ್ಮನ ಮಗಳು ಸೂನೃತಾ, ಅವಳು ಧ್ರುವ ರಾಜನ ತಾಯಿ. ಈ ಧ್ರುವ ತಪಸ್ಸು ಮಾಡಿದ್ದಾನೆ, ಪರಮಾತ್ಮನನ್ನು ಕಂಡಿದ್ದಾನೆ, ಎಷ್ಟು ವರ್ಷ ತಪಸ್ಸು ಮಾಡಿದ ಶ್ರೀಮದ್ಭಾಗವತ ಹೇಳುತ್ತದೆ ಐದು ವರ್ಷದ ಪುಟ್ಟ ಬಾಲಕ ಐದು ತಿಂಗಳು ತಪಸ್ಸು ಮಾಡಿದ ಅಂತ. ಹರಿವಂಶ ಹೇಳುತ್ತದೆ ದೇವ ಮಾನದಿಂದ, ಮನುಷ್ಯ ಮಾನದಿಂದ ಅಲ್ಲ, ಮನುಷ್ಯರ ಒಂದು ವರ್ಷ ಅಂದರೆ ದೇವತೆಗಳಿಗೆ ಒಂದು ದಿವಸ ಈ ಲೆಕ್ಕದೊಳಗೆ ಮೂರು ಸಾವಿರ ವರ್ಷಗಳವರೆಗೆ ಧ್ರುವ ರಾಜ ತಪಸ್ಸು ಮಾಡಿದ್ದಾನೆ.

ಧ್ರುವೋ ವರ್ಷಸಹಸ್ರಾಣಿ ತ್ರೀಣಿ ದಿವ್ಯಾನಿ ಭಾರತ । (2.10 ಹರಿವಂಶಪರ್ವ)

ಹೀಗೂ ಹೇಳುವುದುಂಟು ಧ್ರುವ ರಾಜರು ಪೂರ್ವಜನ್ಮದಲ್ಲಿಯೂ ಕೂಡ ವಿಶೇಷವಾಗಿ ತಪಸ್ಸು ಮಾಡಿದ್ದಾರೆ. ಆ ತಪಸ್ಸು ಮಾಡಿ, ಸಾಧನೆ ಮಾಡಿ ದೇವರನ್ನು ಕಾಣುವುದಕ್ಕೆ ಸಿದ್ಧಿಯನ್ನು ಪಡೆಯುವುದಕ್ಕೆ ಒಂದು ಐದು ತಿಂಗಳಿನ ತಪಸ್ಸು ಮಾತ್ರ ಬಾಕಿ ಇತ್ತು ಅಷ್ಟನ್ನು ಈ ಧ್ರುವ ಜನ್ಮದಲ್ಲಿ ಪೂರ್ಣಗೊಳಿಸಿಕೊಂಡು ಭಗವಂತನನ್ನು ಕಂಡಿದ್ದಾರೆ. ಐದೇ ತಿಂಗಳಿನ ತಪಸ್ಸು ಸಾಕಾಯಿತು ಅಂತ ಭಾವಿಸಬೇಡಿ ಅವರು ಜನ್ಮಾಂತರದಲ್ಲಿ ಮಾಡಿದ ತಪಸ್ಸು ಇತ್ತು ಈ ಐದು ತಿಂಗಳು ಮಾಡಿದ ತಪಸ್ಸು ಸೇರಿದೆ, ಸೇರಿ ಆ ಭಗವಂತನ ದರ್ಶನವಾಗಿದೆ ಅಂತ. ಆ ರೀತಿಯಲ್ಲಿ ಆ ಧ್ರುವ ಮಹಾರಾಜರು ಮಹಾತಪಸ್ಸನ್ನು ಆಚರಣೆ ಮಾಡಿದ್ದಾರೆ, ಪರಮಾತ್ಮ ಪ್ರತ್ಯಕ್ಷನಾಗಿದ್ದಾನೆ.

ತಪಸ್ತೇಪೇ ಮಹಾರಾಜ ಪ್ರಾರ್ಥಯನ್ ಸುಮಹದ್ ಯಶಃ ॥ (2.10 ಹರಿವಂಶಪರ್ವ)

ಬಹಳ ಕೀರ್ತಿಯನ್ನು ಬಯಸಿ ಅವರು ತಪಸ್ಸು ಮಾಡಿದರು ಅಂತ ಅರ್ಥ ತೋರುತ್ತದೆ. ಚತುರ್ಧರ ವಂಶದಲ್ಲಿ ಬಂದಂತಹ ನೀಲಕಂಠರು **'ಸುಮಹದ್ ಯಶಃ'** ಅನ್ನುವುದಕ್ಕೆ ಸಾಕ್ಷಾತ್ ಶ್ರೀಮನ್ ನಾರಾಯಣ ಅಂತ ಅರ್ಥ ಮಾಡುತ್ತಾರೆ. ಯಾಕೆ ಅಂದರೆ ವೇದ ಹೇಳುತ್ತದೆ **'ತಸ್ಯನಾಮ ಸುಮಹದ್ ಯಶಃ'** ನಾರಾಯಣನಿಗೆ **'ಸುಮಹದ್ ಯಶಃ'** ಅಂತ ಹೆಸರಿದೆ ಹೀಗಾಗಿ **'ಮಹದ್ಯಶಃ ಪ್ರಾರ್ಥಯನ್'** ಅಂದರೆ ಅನಂತವಾದಂತಹ ಯಶಸ್ಸು ಕೀರ್ತಿಯನ್ನು ಪಡೆದ ಸರ್ವೋತ್ತಮನಾದ ಶ್ರೀಹರಿ ಶ್ರೀಮನ್ನಾರಾಯಣನನ್ನ ಪ್ರಾರ್ಥನೆ ಮಾಡುತ್ತಾ ತಪಸ್ಸನ್ನು ಮಾಡಿದ್ದಾನೆ.

ತಸ್ಮೈ ಬ್ರಹ್ಮಾ ದದೌ ಪ್ರೀತಃ ಸ್ಥಾನಮಪ್ರತಿಮಂ ಭುವಿ ॥ (2.11 ಹರಿವಂಶಪರ್ವ)

ಅಂತಹ ಧ್ರುವ ರಾಜನಿಗೆ ಬ್ರಹ್ಮ, ಬ್ರಹ್ಮ ಅಂದರೆ ಸಾಕ್ಷಾತ್ ಶ್ರೀಮನ್ನಾರಾಯಣ ಪರಬ್ರಹ್ಮ ಅವನು ಬಂದು ಪ್ರಸನ್ನನಾಗಿ ವರವನ್ನು ಕೊಟ್ಟಿದ್ದಾನೆ. ಪುಲ್ಲಿಂಗದ ಬ್ರಹ್ಮ ಶಬ್ದ ಇದ್ದರೆ ಚತುರ್ಮುಖ ಬ್ರಹ್ಮನನ್ನು, ನಪುಂಸಕಲಿಂಗ ಬ್ರಹ್ಮ ಶಬ್ದ ಇದ್ದರೆ ಪರಬ್ರಹ್ಮನಾದ ನಾರಾಯಣನನ್ನು ಹೇಳುತ್ತದೆ ಅಂತ ಸಾಮಾನ್ಯವಾಗಿ ತಿಳಿದಿದ್ದಾರೆ. ಅದು ಸರಿ ಆದರೆ ಪುಲ್ಲಿಂಗದ ಬ್ರಹ್ಮ ಶಬ್ದ ಕೇವಲ ಚತುರ್ಮುಖ ಬ್ರಹ್ಮನನ್ನು ಹೇಳುತ್ತದೆ ಅಂತ ಮಾತ್ರ ಅಲ್ಲ, ಪುಲ್ಲಿಂಗದಲ್ಲಿರುವ ಬ್ರಹ್ಮ ಶಬ್ದವೂ ಪರಬ್ರಹ್ಮನಾದ ನಾರಾಯಣನನ್ನು ಹೇಳುತ್ತದೆ ಎಂಬುದಾಗಿ ನಾವು ಇಲ್ಲಿ ಸ್ಪಷ್ಟವಾಗಿ ತಿಳಿಯಬೇಕು ವ್ಯಾಖ್ಯಾನಕಾರರು ಹಾಗೆ ವ್ಯಾಖ್ಯಾನವನ್ನು ಮಾಡುತ್ತಾರೆ. ಧ್ರುವ ರಾಜನ ತಪಸ್ಸಿಗೆ ಮೆಚ್ಚಿ ಪರಮಾತ್ಮ ವಿಶೇಷವಾಗಿ ಅನುಗ್ರಹವನ್ನು ಮಾಡಿ ಸ್ಥಿರವಾದ ಸ್ಥಾನವನ್ನು ಕೊಟ್ಟಿದ್ದಾನೆ, ಯಾವ ಸ್ಥಾನದಲ್ಲಿ ಧ್ರುವ ರಾಜರು ಇದ್ದರೆ ಎಲ್ಲ ಗ್ರಹಗಳು ಪ್ರದಕ್ಷಿಣೆ ಹಾಕಬೇಕು ಅಂತಹ ಸ್ಥಾನವನ್ನು ಧ್ರುವ ರಾಜರಿಗೆ ಕೊಟ್ಟಿದ್ದಾನೆ ಅವರ ತಪಸ್ಸಿಗೆ ಮೆಚ್ಚಿ, ಅಷ್ಟು ಅದ್ಭುತವಾದಂತಹ ತಪಸ್ಸನ್ನು ಧ್ರುವ ರಾಜರು ಮಾಡಿದ್ದಾರೆ. ಧ್ರುವ ರಾಜರು ಐದು ತಿಂಗಳಿನ ತಪಸ್ಸು ಮಾಡುವುದೊಂದು ಅರಣ್ಯದೊಳಗಿದ್ದು ಪುಟ್ಟ ಬಾಲಕರಾಗಿ, ಅವರು ಸುಧೀರ್ಘವಾದ ರಾಜ್ಯವನ್ನು ಆಳಿದ್ದಾರಲ್ಲ 36,000 ವರ್ಷದ ದೀರ್ಘವಾದ ರಾಜ್ಯ ಅದು ಒಂದು ದೊಡ್ಡ ತಪಸ್ಸೇ. **'ತದ್ಧಿ ತಪಸ್ ತದ್ಧಿ ತಪಃ'** ಅಂತ ಹೇಗೆ ಪಾಠ ಪ್ರವಚನಗಳು ತಪಸ್ಸೋ ಬ್ರಾಹ್ಮಣನಾಗಿ ಪಾಠ ಪ್ರವಚನಗಳನ್ನು ನಿರಂತರವಾಗಿ ಮಾಡಬೇಕು ಅಂತ ಇದೆ ಹಾಗೆ ಕ್ಷತ್ರಿಯರು ತಾವು ಮಾಡಬೇಕಾದ ಪ್ರಜಾಪಾಲನೆಯನ್ನು ಚೆನ್ನಾಗಿ ಧರ್ಮದಿಂದ ಮಾಡಿದರೆ, ಆ ಪ್ರಜೆಗಳಲ್ಲಿ ಅಂತರ್ಯಾಮಿಯಾದ ಭಗವಂತನ ಉಪಾಸನೆಯನ್ನು ಮಾಡಿದರೆ ಅದೇ ಒಂದು ದೊಡ್ಡ ತಪಸ್ಸು, ಆ ತರಹದ ಒಂದು ದೊಡ್ಡ ತಪಸ್ಸನ್ನೂ ಕೂಡ ಆಚರಣೆ ಮಾಡಿದ್ದಾನೆ ಧ್ರುವ ರಾಜ ಅಂತ ನಾವು ತಿಳಿಯಬೇಕು. ಕೇವಲ ಭೋಗವನ್ನು ಮಾಡಿದ ರಾಜ್ಯವನ್ನು ಆಳುವುದು ಅಂದರೆ ಭೋಗ ಮಾಡುವುದು ಅಂತ ಸರ್ವಥಃ ಅಲ್ಲ ಅದನ್ನೂ ತಪಸ್ಸಾಗಿ ಆಚರಣೆ ಮಾಡಿದಂತಹ ಮಹಾನುಭಾವ ಧ್ರುವ ರಾಜ ಎಂಬುದಾಗಿ ತಿಳಿಯಬೇಕು.

ಮುಂದೆ ಅವನ ವಂಶವನ್ನು ವಿಸ್ತಾರವಾಗಿ ಹೇಳುತ್ತಾರೆ ಅವನ ವಂಶದಲ್ಲಿ ಬರುವವನೇ ಮುಂದೆ ಅಂಗರಾಜ, ಸುನೀತ ಅಂತ ಅವನ ಮಡದಿ. ಆ ಅಂಗರಾಜನಿಗೆ ಅವನು ಯಜ್ಞ ಮಾಡಿದಾಗ ದೇವತೆಗಳು ಆಹುತಿಯನ್ನು ಸ್ವೀಕಾರ ಮಾಡುವುದಿಲ್ಲ, ನಿನಗೆ ಮಕ್ಕಳಿಲ್ಲ ನೀನು ಕೊಡುವ ಆಹುತಿಯನ್ನು ಸ್ವೀಕಾರ ಮಾಡುವುದಿಲ್ಲ, ನೀನು ಮೊದಲು ಪುತ್ರಕಾಮೇಷ್ಟಿಯಾಗವನ್ನು ಮಾಡಿ ಪುತ್ರನನ್ನು ಪಡಿ ಆಮೇಲೆ ಇನ್ನುಳಿದ ಯಜ್ಞಗಳನ್ನು ಮಾಡು ಆಗ ನಾವು ನಿನ್ನ ಆಹುತಿಗಳನ್ನು ಸ್ವೀಕಾರ ಮಾಡುತ್ತೇವೆ ಅಂತ ಹೇಳುತ್ತಾರೆ. ಶ್ರೀಮದಾಚಾರ್ಯರು ಶ್ರೀಮದ್ಭಾಗವತದ



ತಾತ್ಪರ್ಯದಲ್ಲಿ ನಿರ್ಣಯವನ್ನು ಹೇಳುತ್ತಾರೆ **'ಅನಪತ್ಯೋಪಿ ಸದ್ಧರ್ಮಾ ಲೋಕಜಿನ್ನಾತ್ರ ಸಂಶಯಃ'**[1] ಮಕ್ಕಳಾಗಿಲ್ಲ ಅಂದ ಮಾತ್ರಕ್ಕೆ ಸದ್ಗತಿ ಆಗುವುದಿಲ್ಲ ಅನ್ನುವುದು ಸರಿಯಲ್ಲ, ಮಕ್ಕಳಾಗದಿದ್ದರೂ ತನ್ನ ವರ್ಣಾಶ್ರಮಗಳಿಗೆ ವಿಹಿತವಾದ ಧರ್ಮಗಳನ್ನು ಚೆನ್ನಾಗಿ ಮಾಡಿದರೆ ಆ ಧರ್ಮಗಳಿಂದ ಪ್ರಸನ್ನನಾದ ಪರಮಾತ್ಮ ಧರ್ಮಾಧ್ಯಕ್ಷನಾದ ಭಗವಂತ ಅವನಿಗೆ ಸದ್ಗತಿಯನ್ನು ಕೊಟ್ಟೆ ಕೊಡುತ್ತಾನೆ. ಹಾಗಾದರೆ ಯಾಕೆ ದೇವತೆಗಳು ಇವನಿಗೆ ಆಹುತಿಯನ್ನು ಸಮರ್ಪಣೆ ಮಾಡುವುದಕ್ಕೆ ಬೇಡ ಅಂದದ್ದು ಅಂದರೆ ಇವನಿಂದ ಮುಂದೆ ಪೃಥು ರಾಜನ ಅವತಾರ ಆಗಬೇಕಾಗಿದೆ, ದೊಡ್ಡ ಕಾರ್ಯ ಆಗಬೇಕಾಗಿದೆ ಅನ್ನುವುದಕ್ಕಾಗಿ ಒಂದು ನೆಪ ಮಾಡಿದರು ಅಷ್ಟೇ.

ಆ ಅಂಗರಾಜನ ಮಗನಾಗಿ ವೇನ ಹುಟ್ಟಿದ್ದಾನೆ. ಭಾರೀ ದುಷ್ಟ ಧರ್ಮ ಕಾರ್ಯಗಳನ್ನು ಮಾಡುವುದಕ್ಕೆ ಬಿಡುತ್ತಾ ಇಲ್ಲ, ನಾನೇ ದೇವರು ನನ್ನನ್ನು ಕುರಿತು ಯಜ್ಞ್ಯಾದಿಗಳನ್ನು ಮಾಡಿ, ನನ್ನನ್ನು ಬಿಟ್ಟು ಇನ್ಯಾರನ್ನು ಕುರಿತು ನೀವು ಯಜ್ಞ್ಯಾದಿಗಳನ್ನು ಮಾಡತಕ್ಕದ್ದಲ್ಲ ಅಂತ ಎಲ್ಲರಿಗೆ ಪೀಡೆಯನ್ನು ಕೊಡುವಾಗ ಉಪದೇಶ ಮಾಡಿದ್ದಾರೆ. ಕೇಳಲಿಲ್ಲ ಹೇಳಿದ ಮಾತನ್ನು, ಕೇವಲ ತಮ್ಮ ಹೂಂಕಾರದಿಂದ ನಾಶ ಮಾಡಿದ್ದಾರೆ ಋಷಿಗಳು ಅವರ ತಪಸ್ಸು, ಅವರ ಕ್ರೋಧಾಗ್ನಿಗೆ ಭಸ್ಮವಾಗಿ ಹೋಗಿದ್ದಾನೆ ಅರ್ಥಾತ್ ಮೃತನಾಗಿ ಹೋಗಿದ್ದಾನೆ ಭಸ್ಮವಾಗಿಲ್ಲ ಅವನ ಶರೀರ ಹಾಗೆ ಇದೆ ಆ ಶರೀರವನ್ನು ಮಥನ ಮಾಡಿದ್ದಾರೆ ಯಾಕೆ ಅಂದರೆ ಮುಂದೆ ರಾಜ ಯಾರಾದರೂ ಬೇಕು ರಾಜವಂಶ ನಿಲ್ಲಬಾರದು ಅಂತ. ಏನು ಅದ್ಭುತವಾದ ಋಷಿಗಳ ಜ್ಞಾನ ಅವರ ಯೋಗ ಸಾಮರ್ಥ್ಯ ನೋಡಿ, ಅವನ ಶರೀರವನ್ನು ಮಥನ ಮಾಡಿ ಅವನ ಶರೀರದಿಂದಲೇ ಒಂದು ಹೊಸ ಅಪತ್ಯ ಉತ್ಪತ್ತಿಯನ್ನು ಮಾಡುವ ಒಂದು ಅದ್ಭುತವಾದ ಜ್ಞಾನವನ್ನು ಪಡೆದುಕೊಂಡವರು ಋಷಿಗಳು. ಅವನ ತೊಡೆಯನ್ನು ಮಥನ ಮಾಡಿದ್ದಕ್ಕೆ ಅಲ್ಲಿ ನಿಶಾದ ಹುಟ್ಟಿದ್ದಾನೆ. ಅವನಿಗೆ ರಾಜ್ಯವನ್ನು ಆಳುವ ಅರ್ಹತೆ ಯೋಗ್ಯತೆ ಶಕ್ತಿ ಸಾಮರ್ಥ್ಯ ತಿಳುವಳಿಕೆ ಇಲ್ಲ ಅಂತ ಅನ್ನಿಸಿತು ಋಷಿಗಳಿಗೆ ನಿಶೀದ ಅಂದರು ನೀನು ಸುಮ್ಮನೆ ಕುಳಿತುಕೋ ಅಂತ. ಸುಮ್ಮನೆ ಕುಳಿತುಕೋ ಅಂದಿದ್ದಕ್ಕೆ ಅವನಿಗೆ ನಿಶಾದ ಅಂತ ಹೆಸರು ಬಂತು, ಅವನು ಅರಣ್ಯಕ್ಕೆ ಹೋಗಿದ್ದಾನೆ.

ಪುನಃ ಅವನ ಬಲ ಭುಜವನ್ನ ಮಥನ ಮಾಡಿದ್ದಾರೆ ಆ ಭುಜವನ್ನು ಮಥನ ಮಾಡಿದಾಗ ಅಲ್ಲಿ ಪೃಥು ರಾಜ ಎಂಬ ಗಂಡು ಹಾಗೂ ಅರ್ಚಿರ್ ಎಂಬ ಹೆಣ್ಣು ಇಬ್ಬರೂ ಕೂಡ ಅಲ್ಲಿ ಅವತಾರ ಮಾಡಿದ್ದಾರೆ. ಪೃಥು ರಾಜ ಸಾಕ್ಷಾತ್ ಭಗವಂತನ ಅವತಾರ ಅಲ್ಲ, ಪರಮಾತ್ಮನ ವಿಶೇಷವಾದ ಸನ್ನಿಧಾನವನ್ನು ಪಡೆದಂತಹ ಚಕ್ರವರ್ತಿ ಅವನು. ಅದರಂತೆ ಅರ್ಚಿರ್ ದೇವಿಯಲ್ಲಿಯೂ ಲಕ್ಷ್ಮೀ ದೇವಿಯ ಸನ್ನಿಧಾನ ಇದೆ, ಲಕ್ಷ್ಮೀನಾರಾಯಣರ ಸನ್ನಿಧಾನವನ್ನು ಪಡೆದ ಪೃಥು ಚಕ್ರವರ್ತಿ ಹಾಗೂ ಅರ್ಚಿರ್ ದೇವಿ ಅಲ್ಲಿ ಅವತಾರ ಮಾಡಿದ್ದಾರೆ. ಶ್ರೀಮದಾಚಾರ್ಯರು ನಿರ್ಣಯವನ್ನು ಕೊಡುತ್ತಾರೆ ಮೂರು ಅಂಶಗಳು ಇವನಲ್ಲಿ ಸಾತ್ವಿಕ ರಾಜಸ ತಾಮಸ ಆ ವೇನನೊಳಗಿನ ಸಾತ್ವಿಕ ಅಂಶವೇ ಪೃಥುವಾಗಿ ಹೊರಗೆ ಬಂದ, ತಾಮಸ ಅಂಶವೇ ನಿಶಾದನಾಗಿ ಹೊರಗೆ ಬಂದ, ರಾಜಸವಾದ ಒಂದು ಅಂಶ ಇತ್ತು ಅದು ಪೃಥು ರಾಜ ಮಾಡಿದ ಪುಣ್ಯದಿಂದ ಸ್ವರ್ಗಕ್ಕೆ ಹೋಯಿತು. ರಾಜಸವಾದ ಅಂಶ ಅದು ಸ್ವರ್ಗಕ್ಕೆ ಹೋಗಿದೆ, ತಾಮಸವಾದ ಅಂಶ ನಿಶಾದನಾಗಿ ಅರಣ್ಯಕ್ಕೆ ತೆರಳಿದೆ, ಸಾತ್ವಿಕವಾದ ಅಂಶವೆ ಪೃಥು ಆಯಿತು. ಸ್ವಯಂ ವೇನ ಅವನು ಮಹಾ ತಾಮಸ ದೇವರ, ಧರ್ಮದ ದ್ರೋಹಿಯಾದವನು ಅಂಧಃತಮಸ್ಸಿಗೆ ಹೋಗಿದ್ದಾನೆ ಎಂಬುದಾಗಿ ಶ್ರೀಮದಾಚಾರ್ಯರು ನಿರ್ಣಯವನ್ನು ನೀಡುತ್ತಾರೆ. ಆ ರೀತಿಯಾಗಿ ಆ ಪೃಥು ರಾಜನ ಮಹಿಮೆಯನ್ನು ಹೇಳುತ್ತಾರೆ.

---

1. ತತ್ವವಾದ;

ಮುಂದೆ ಅಲ್ಲಿ ಯಜ್ಞದೊಳಿಗೇನೆ ಸೂತರು, ಮಾಗಧರು ರಾಜರ ಸ್ತೋತ್ರವನ್ನ ಮಾಡುವ ಸೂತರು, ರಾಜರ ವಂಶಾವಳಿಯನ್ನೆಲ್ಲಾ ಹೇಳುವಂಥವರು ಮಾಗಧರು ಬಹಳ ವಿಚಿತ್ರವಾದದ್ದು. ಇವತ್ತಿನ ಜನರಿಗೆ ತಮ್ಮ ವಂಶ ಏನು ಅಂತೆ ಗೊತ್ತಿರುವುದಿಲ್ಲ. ಆ ವಂಶವನ್ನು ಚೆನ್ನಾಗಿ ತಿಳಿಸಬೇಕು ಅನ್ನುವುದಕ್ಕಾಗಿಯೇ ಅವರು ಇರುತ್ತಾರಂತೆ ಮಾಗಧರು. ಅವರ ಕಾಯವೇ ಅದು ನಿಮ್ಮ ವಂಶ ಇಂಥಹದ್ದು, ನಿಮ್ಮ ವಂಶದ ಹಿರಿಯರೆಲ್ಲ ಇಂತಹ ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡಿದ್ದಾರೆ, ಸಾಧನೆಗಳನ್ನು ಮಾಡಿದ್ದಾರೆ, ತ್ಯಾಗವನ್ನು ಮಾಡಿದ್ದಾರೆ ನೀವೂ ಆ ರೀತಿಯಲ್ಲಿ ತ್ಯಾಗ ಮಾಡಬೇಕು, ಪ್ರಜೆಗಳ ರಕ್ಷಣೆ ಮಾಡಬೇಕು, ದೇವರ ಸೇವೆ ಮಾಡಬೇಕು ಅಂತ. ರಾಜರಿಗೆ ಸ್ತೋತ್ರ ಮಾಡುವುದರ ಜೊತೆಗೆ ಈ ಎಚ್ಚರವನ್ನು ಕೊಡುವುದಕ್ಕಾಗಿ ಅಂತ ಒಂದು ಗುಂಪು, ಅವರೇ ಮಾಗಧರು, ರಾಜರು ಮಾಡಿದ್ದಕ್ಕೆ ಪ್ರೋತ್ಸಾಹನೆಯನ್ನು ನೀಡುವಂತಹ ಸ್ತೋತ್ರ ಮಾಡುವ ಸೂತರು. ಇವರೆಲ್ಲ ಅಲ್ಲಿ ಉತ್ಪನ್ನರಾಗಿ ಬಂದಿದ್ದಾರಂತೆ ಸ್ತೋತ್ರ ಮಾಡುವುದಕ್ಕೆ ಅಂತ ಪೃಥು ರಾಜ ಬೇಡ ಅಂತ ನನ್ನ ಸ್ತೋತ್ರ ಯಾಕೆ ಮಾಡುತ್ತೀರಿ ನಾನು ಈಗ ಹುಟ್ಟಿದ್ದು, ನನ್ನಲ್ಲಿ ಏನು ಕಂಡಿದ್ದೀರಿ ಅಂತ ಸ್ತೋತ್ರ ಮಾಡುತ್ತೀರಿ.

ಹೇ ಸೂತ ಹೇ ಮಾಗಧ ಸೌಮ್ಯ ಬಂದಿನ್ಲೋಕೇಽಧುನಾಽಸ್ಪಷ್ಟಗುಣಸ್ಯ ಮೇ ಸ್ಯಾತ್ ।
ಕಿಮಾಶ್ರಯೋ ವಃ ಸ್ತವ ಏಷ ಯೋಜ್ಯತಾಂಮಾ ಮಯ್ಯಭೂವನ್ ವಿತಥಾ ಗಿರೋ ವಃ ॥

(04.15.19 ಭಾಗವತ)

ದೇವರ ಸ್ತೋತ್ರವನ್ನು ಮಾಡಿ, ನನ್ನ ಸ್ತೋತ್ರವನ್ನು ಮಾಡಿ ಏನು ಮಾಡುತ್ತೀರಿ ಅಂತ ಪೃಥು ಚಕ್ರವರ್ತಿ ಹೇಳಿದ ಅಂತ ಹೇಳುತ್ತಾರೆ ಆದರ ಸೂಚನೆ ಮಹಾಭಾರತದ ಹರಿವಂಶದಲ್ಲಿಯೂ ಬರುತ್ತದೆ, ಶ್ರೀಮದ್ಭಾಗವತದಲ್ಲಿಯೂ ವಿಸ್ತಾರವಾಗಿ ಬರುತ್ತದೆ. ಆನಂತರ ಪೃಥ್ವಿ ಏನು ಮಾಡಿದರೂ ಧಾನ್ಯವನ್ನು ಕೊಡುತ್ತಾ ಇಲ್ಲ, ಎಷ್ಟು ಬೀಜಗಳನ್ನು ಬಿತ್ತಿದರೂ ಎಲ್ಲವನ್ನೂ ಒಳಗೆ ನುಂಗುತ್ತಾ ಇದ್ದಾಳೆ ಎಲ್ಲ ಕಡೆಗೂ ದುರ್ಭಿಕ್ಷೆ ಆಯಿತು. ಪೃಥು ಚಕ್ರವರ್ತಿ ಧನುರ್ಬಾಣಗಳನ್ನು ತೆಗೆದುಕೊಂಡು ಹೊರಟ ಗೋರೂಪದಲ್ಲಿ ಆಕಳಿನ ರೂಪದಲ್ಲಿರುವ ಆ ಪೃಥ್ವಿ ದೇವಿಯನ್ನೇ ನಾನು ಶಾಸನ ಮಾಡುತ್ತೇನೆ ಅಂತ ಆ ಪೃಥು ಚಕ್ರವರ್ತಿಯಲ್ಲಿ ಅಂತರ್ಯಾಮಿಯಾದ ಭಗವಂತನ ಸಾಮರ್ಥ್ಯ ಅದು. ಆ ಭಗವಂತನ ಅಧೀನಳಾದ ಆ ಪೃಥ್ವಿ ದೇವಿಯನ್ನು ತಾನು ದಮನ ಮಾಡಿ, ಅವಳನ್ನು ನಿಗ್ರಹ ಮಾಡಿ ಸಮೃದ್ಧವಾದ ಧಾನ್ಯಗಳನ್ನು ಕೊಡುವಂತೆ, ಸುಭಿಕ್ಷೆಯನ್ನು ಕೊಡುವಂತೆ ನಾನು ಮಾಡುತ್ತೇನೆ ಅಂತ ಪೃಥು ಚಕ್ರವರ್ತಿ ಹೊರಟಾಗ ಪೃಥ್ವಿ ದೇವಿ ಹೇಳುತ್ತಾಳೆ. ನಾನು ಒಂದು ಹೆಣ್ಣು ನನ್ನನ್ನು ಈ ರೀತಿಯ ಸಂಹಾರ ಮಾಡುವುದು ಸರಿಯಲ್ಲ ನಾನು ಯಾಕೆ ಧಾನ್ಯಗಳನ್ನು ಕೊಡುತ್ತಾ ಇಲ್ಲ, ಯಾಕೆ ಬೀಜಗಳನ್ನು ಮೇಲೆ ಬೆಳೆಯುತ್ತಾ ಇಲ್ಲ, ನುಂಗುತ್ತಾ ಇದ್ದೇನೆ ಅದನ್ನು ನೀನು ಕೇಳಬೇಕೋ ಬೇಡವೋ ನೀನು, ಸುಮ್ಮನೆ ನನಗೆ ಶಿಕ್ಷೆ ಕೊಟ್ಟರೆ ಕಾರಣ ಇದೆ. ನಿಮ್ಮಪ್ಪ ವೇನ ಒಂದು ಯಜ್ಞ ಇಲ್ಲ, ಯಾಗ ಇಲ್ಲ, ಧರ್ಮ ಇಲ್ಲ, ಕರ್ಮ ಇಲ್ಲ, ಶ್ರಾದ್ಧ ಇಲ್ಲ ಯಾವ ಪುಣ್ಯ ಕರ್ಮಗಳನ್ನು ಮಾಡುವುದಕ್ಕೆ ಅವಕಾಶ ಕೊಡದಂತೆ ಎಲ್ಲ ಕಡೆಗೂ ಅಧರ್ಮ ಅನ್ಯಾಯಗಳು ಇವುಗಳನ್ನು ಮಾಡುತ್ತಾ ಇದ್ದ, ಧರ್ಮಕ್ಕೆ ಅವಕಾಶವನ್ನೆ ನೀಡಲಿಲ್ಲ ಹೀಗಾಗಿ ಯಾಕೆ ನಾನು ಧಾನ್ಯಗಳನ್ನು ಕೊಡಬೇಕು, ನಾನು ಯಾಕೆ ಬೆಳೆಗಳನ್ನು ಬೆಳೆಯಬೇಕು.

ನಾನು ಹುಟ್ಟಿದ್ದು ಪರಮಾತ್ಮನ ಮುಖದಿಂದ, ಭಗವಂತನ ಮುಖದಿಂದ ಹುಟ್ಟಿದ ನಾನು ದೇವರ ಮುಖಕ್ಕೆ ನೈವೇದ್ಯವನ್ನು ಅರ್ಪಣೆ ಮಾಡುವುದಕ್ಕೆ ಆಹುತಿಗಳನ್ನು ಸಮರ್ಪಣೆ ಮಾಡುವುದಕ್ಕೆ ಧಾನ್ಯಗಳನ್ನು ಸೃಷ್ಟಿ ಮಾಡುತ್ತೇನೆ, ಅಗ್ನಿ ಹುಟ್ಟಿದ್ದು ದೇವರ ಮುಖದಿಂದ ಅನ್ನುವುದಕ್ಕಾಗಿ ಅಗ್ನಿ ಬೇಯಿಸಿ ಕೊಡುತ್ತಾನೆ ನಮ್ಮಿಬ್ಬರ ಕೆಲಸವೇ ಇದು.



ಹೀಗಿರುವಾಗ ಆ ದೇವರ ಪೂಜೆ ಇಲ್ಲ, ಯಜ್ಞ ಯಾಗಗಳು ಇಲ್ಲ ಅಂತಾದರೆ ನಾವು ಯಾಕೆ ಧಾನ್ಯಗಳನ್ನು ಸೃಷ್ಟಿ ಮಾಡಬೇಕು ಅನ್ನುವುದಕ್ಕೆ ಇಲ್ಲಿ ನಾನು ದುರ್ಭಿಕ್ಷೆಯನ್ನು ಮಾಡಿದ್ದೆ. ಈಗ ನೀನು ಸಜ್ಜನ ಸಾತ್ವಿಕನಾದ ರಾಜ ಬಂದಿದ್ದೀ ಬಹಳ ಸಂತೋಷ ಪುನಃ ಎಲ್ಲ ಕಡೆಗೆ ಯಜ್ಞ ಯಾಗಾದಿಗಳು, ಧರ್ಮಗಳು ನಡೆಯುವಂತೆ ಮಾಡು. ಅತ್ಯಂತ ಧಾರ್ಮಿಕರಾದ, ಶ್ರೇಷ್ಠರಾದ, ಸಾತ್ವಿಕರಾದ, ಶುದ್ಧರಾದ ಜನರನ್ನ ನನ್ನ ಮುಂದೆ ತಂದು ನಿಲ್ಲಿಸು ಅವರ ಮುಖವನ್ನು ನೋಡಿ ನಾನು ಹಾಲು ಕೊಡುತ್ತೇನೆ ಹಾಲಿನ ರೂಪದಲ್ಲಿ ನಾನಾ ವಿಧವಾದ ನಿನಗೆ ಅಪೇಕ್ಷೆ ಇರುವ ಎಲ್ಲ ವಸ್ತುಗಳನ್ನು ಕೊಡುತ್ತೇನೆ ಅಂತ. ಹೀಗೆ ಆ ಪೃಥು ರಾಜನಿಗೆ ಹೇಳಿದಾಗ ಸ್ವಾಯಂಭುವ ಮನುವೇ ಮೊದಲಾದವರನ್ನೇ ಕರುವನ್ನಾಗಿ ಮಾಡಿ ಮುಂದೆ ನಿಲ್ಲಿಸಿದಾಗ, ಬೇಡಿದ್ದನ್ನೆಲ್ಲ ಬಯಸಿದ್ದನ್ನೆಲ್ಲ ಅವರವರಿಗೆ ಬೇಕಾದದ್ದನ್ನೆಲ್ಲಾ ಹಾಲಿನ ರೂಪದಲ್ಲಿ ಪೃಥ್ವಿ ದೇವಿ ತಾನು ಕೊಟ್ಟು ಆ ವಸ್ತುವಿನ ರೂಪದಲ್ಲಿ ಆ ಹಾಲು ಆವರಿಗೆ ವಿಕಾರವಾಗಿ ಸಿಗುವಂತೆ ಮಾಡಿದ್ದಾನೆ ಭಗವಂತ ತನ್ನ ಅಚಿಂತ್ಯವಾದ ಅದ್ಭುತವಾದ ಶಕ್ತಿ ಸಾಮರ್ಥ್ಯಗಳಿಂದ ಅಂತ ಶ್ರೀಮದ್ಭಾಗವತದಲ್ಲಿಯೂ ವರ್ಣನೆ ಬರುತ್ತದೆ. ಇದು ಆ ಪೃಥು ಚಕ್ರವರ್ತಿಯ ಮಹಾಮಹಿಮೆ.

ಇದೇ ಪೃಥು ಚಕ್ರವರ್ತಿಯ ವಂಶದಲ್ಲಿ ಬರುವವರೇ ಪ್ರಾಚೀನಬರ್ಹಿ ಅಂತನ್ನುವ ರಾಜ. ಅವನ ಹೆಸರೇ ಪ್ರಾಚೀನಬರ್ಹಿ, ಪ್ರಾಚೀನ ಬರ್ಹಿ ಪೂರ್ವ ದಿಕ್ಕಿಗೆ ಅಗ್ರ ಮಾಡಿ ದರ್ಭಗಳನ್ನು ಹಾಸುವುದು, ಯಜ್ಞ ಮಾಡುವುದು ಹೀಗೆ ಇಡೀ ಭೂಮಿಯೊಳಗೆ ಕಂಡಕಂಡಲ್ಲೆಲ್ಲ ದರ್ಭ ಹಾಸುವುದು ಯಜ್ಞ ಮಾಡುವುದು ಅಷ್ಟು ಯಜ್ಞಗಳನ್ನು ಮಾಡುವುದರಲ್ಲಿ ಅವನಿಗೆ ಶ್ರದ್ಧೆ. ಅವನು ಆ ರೀತಿ ಯಜ್ಞ ಮಾಡುವುದನ್ನು ನೋಡಿ ಅವನಿಗೆ ಪ್ರಾಚೀನಬರ್ಹಿ ಅಂತ ಹೆಸರಿಟ್ಟರೋ, ಪ್ರಾಚೀನಬರ್ಹಿ ಅಂತ ಹೆಸರಿಟ್ಟಿದ್ದಕ್ಕೆ ಆ ರೀತಿ ಅವನು ಯಜ್ಞ ಮಾಡುತ್ತಾ ಇದ್ದನೋ ಅಂತೂ ಭಾರೀ ಯಜ್ಞ ಯಾಗಾದಿಗಳನ್ನು ಮಾಡುವಂತಹ ಶ್ರದ್ಧೆ ಅವನಿಗೆ. ನಾರದರು ಬಂದು ಅವನಿಗೆ ಪುರಂಜನೋಪಾಖ್ಯಾನವನ್ನು ಉಪದೇಶ ಮಾಡಿ ಈ ರೀತಿ ಕೇವಲ ಸಕಾಮ ಕರ್ಮಗಳನ್ನು ಮಾಡುತ್ತಾ ಕಾಲವನ್ನು ಕಳೆಯಬೇಡ, ನಿಷ್ಕಾಮ ಕರ್ಮಗಳನ್ನು ಮಾಡು, ಜ್ಞಾನವನ್ನು ಸಂಪಾದನೆ ಮಾಡು ಕೇವಲ ಕರ್ಮಗಳಿಂದ ಮೋಕ್ಷ ಇಲ್ಲ. ನಿಷ್ಕಾಮ ಕರ್ಮಗಳನ್ನು ಮಾಡಿ ಜ್ಞಾನವನ್ನು ಸಂಪಾದನೆ ಮಾಡಿ ಆ ಜ್ಞಾನದಿಂದ ಮೋಕ್ಷವನ್ನು ಪಡೆಯಬೇಕು ಅದರೊಳಗೆ ನಿನಗೆ ಆಸಕ್ತಿ ಇರಲಿ ಅಂತ ಅವನಿಗೆ ಉಪದೇಶವನ್ನು ಮಾಡಿದ್ದಾರೆ.

ಆ ಪ್ರಾಚೀನಬರ್ಹಿಯ ಮಕ್ಕಳು ಹತ್ತು ಜನ ಪ್ರಾಚೇತಸರು ಅಂತ. ಆ ಹತ್ತು ಜನ ಪ್ರಾಚೇತಸರು ಕೂಡ ಹತ್ತು ಸಾವಿರ ವರ್ಷಗಳವರೆಗೆ ಉಪ್ಪಿನ ಸಮುದ್ರದೊಳಗೆ ಮುಳುಗಿ ತಪಸ್ಸು ಮಾಡುತ್ತಾರೆ ಅಂತಹ ಅದ್ಭುತವಾದ ತಪಸ್ಸನ್ನು ಮಾಡಿ ಪರಮಾತ್ಮನ ವಿಶೇಷವಾದ ಅನುಗ್ರಹವನ್ನು ಪಡೆಯುತ್ತಾರೆ. ದೇವರು ಪ್ರತ್ಯಕ್ಷನಾದರೆ ಹತ್ತು ಸಾವಿರ ವರ್ಷ ಅನ್ನ ಇಲ್ಲ, ಒಂದು ದಿನ ಏಕಾದಶೀಯ ಉಪವಾಸವನ್ನು ಮಾಡಿದರೆ ನಾವು ಬಹಳ ದೊಡ್ಡ ವ್ರತ ಮಾಡಿದಂತೆ ಆಯಿತು, ಭಾರೀ ಸಾಧನೆ ನಮ್ಮ ಸಮಾನ ಯಾರು ಇಲ್ಲ ಅಂತ ತಿಳೀತಾರೆ ಹತ್ತು ಸಾವಿರ ವರ್ಷ ಉಪವಾಸ ಮಾಡಿದ್ದಾರೆ. ಅನ್ನ ಇಲ್ಲ, ನೀರಿಲ್ಲಾ ನೀರಿನೊಳಗೆ ಮುಳುಗಿ, ನೀರಿನೊಳಗೆ ಮುಳುಗಿ ಒಂದು ಐದು ನಿಮಿಷ ಇರಲಿಕ್ಕೆ ಆಗುವುದಿಲ್ಲ ಅಂತಹದ್ದು ಹತ್ತು ಸಾವಿರ ವರ್ಷ ನೀರಿನೊಳಗೆ ಕುಳಿತು ತಪಸ್ಸು ಮಾಡಿದ್ದಾರೆ ಮಹಾನುಭಾವರು ಪ್ರಾಚೇತಸರು ಅವರ ಯೋಗ್ಯತೆ ಎಷ್ಟು ದೊಡ್ಡದು ಅಂತ ಆಲೋಚನೆ ಮಾಡಿ ಅಂತಹ ಮಹನೀಯರು. ಇಷ್ಟಾದರೆ ದೇವರು ಪ್ರತ್ಯಕ್ಷ ಆದಾಗ, ಪ್ರತ್ಯಕ್ಷನಾಗೋದೆ ತಡ, ಪ್ರತ್ಯಕ್ಷ ಆಗೋದೆ ಬೇಡ ಇನ್ನೂ ನಾವು ವ್ರತ ಶುರುವು ಮಾಡುವುದಕ್ಕಿಂತ ಮೊದಲೇನೇ ನಮಗೆ ಏನೇನು ಬೇಕು ಅನ್ನುವ ಲಿಸ್ಟಗಳು ನಮ್ಮದು ರೆಡಿ ಇರುತ್ತದೆ. ಹತ್ತು ಸಾವಿರ ವರ್ಷ ತಪಸ್ಸು ಮಾಡಿ ದೇವರು ಎದುರಿಗೆ ಬಂದು ನಿಂತು ಬೇಡಿದ್ದನ್ನು ಕೊಡುತ್ತೇನೆ ಅಂತ ಹೇಳಿದರೆ ಏನೂ ಕೇಳಲಿಲ್ಲ ಇವರು ನಿನ್ನ ಅನುಗ್ರಹ ಒಂದೇ ಸಾಕು ಅಂತ ಹೇಳಿದರು ಕೈಮುಗಿದು ಬಿಟ್ಟರು ಅಷ್ಟೆ.

ಯನ್ನಃ ಸ್ವಧೀತಂ ಗುರವಃ ಪ್ರಸಾದಿತಾವಿಪ್ರಾಶ್ಚ ವೃದ್ಧಾಶ್ಚ ಸದಾऽನುವೃತ್ಯಾ।
ಆರ್ಯಾ ನತಾಃ ಸುಹೃದೋ ಭ್ರಾತರಶ್ಚ ಸರ್ವಾಣಿ ಭೂತಾನ್ಯನಸೂಯಯೈವ ॥

(04.30.39 ಭಾಗವತ)

ನಾವು ಏನೇನು ಅಧ್ಯಯನ ಮಾಡಿದ್ದೇವೆ, ಹಿರಿಯರ ದೊಡ್ಡವರ ಸೇವೆಯನ್ನು ಮಾಡಿದ್ದೇವೆ, ಅನಾಥರಿಗೆ ಸೇವೆಯನ್ನು ಮಾಡಿದ್ದೇವೆ ಉಪಕಾರವನ್ನು ಮಾಡಿದ್ದೇವೆ ಅದೆಲ್ಲ ಪುಣ್ಯವನ್ನು ಸೇರಿ

ಯನ್ನಃ ಸುತಪ್ತಃ ತಪ ಏತದೀಶ ನಿರಂಧಸಾಂ ಕಾಲಮದಭ್ರಮಪ್ಪು ।
ಸರ್ವಂ ತದೇತತ್ ಪುರುಷಸ್ಯ ಭೂಮ್ನೋ ವೃಣೇಮಹೇ ತೇ ಪರಿತೋಷಣಾಯ ॥

(04.30.40 ಭಾಗವತ)

ಈಗ ಹತ್ತು ಸಾವಿರ ವರ್ಷಗಳವರೆಗೆ ಮಾಡಿದಂತಹ ತಪಸ್ಸು, ಹಿಂದೆ ನಾವು ಬ್ರಹ್ಮಚಾರಿಗಳಾಗಿ ಅಧ್ಯಯನ ಮಾಡಿದ್ದು, ಗುರುಗಳ ಸೇವೆ ಮಾಡಿದ್ದು, ತಂದೆಯ ಸೇವೆ ಮಾಡಿದ್ದು, ತಾಯಿಯ ಸೇವೆ ಮಾಡಿದ್ದು, ಅಣ್ಣ ತಮ್ಮಂದಿರ ಸೇವೆ ಮಾಡಿದ್ದು, ಅನಾಥರಿಗೆ ಉಪಕಾರ ಮಾಡಿದ್ದು ಎಲ್ಲಾ ಜೀವರಾಶಿಗಳಲ್ಲಿಯೂ ಅಂತರ್ಯಾಮಿಯಾಗಿ ಪರಮಾತ್ಮ ಇದ್ದಾನೆ ಅಂತ ಯಾರನ್ನೂ ದ್ವೇಷ ಮಾಡದೇ, ಅಸೂಯೆ ಮಾಡದೇ ಪ್ರೀತಿಯಿಂದ ಕಂಡದ್ದು. **'ಸರ್ವಾಣಿ ಭೂತಾನ್ಯನಸೂಯಯೈವ'** ಗಮನದಲ್ಲಿ ಇಟ್ಟುಕೊಳ್ಳಿ ದ್ವೇಷಾಸೂಯೆಗಳನ್ನು ಮಾಡದಂತೆ ಪ್ರೀತಿಯಿಂದ ಜನರನ್ನು ಕಾಣುವುದು ಒಂದು ದೊಡ್ಡದಾದ ಸೇವೆ, ದೊಡ್ಡದಾದ ತಪಸ್ಸು ಅನ್ನುತ್ತಾರೆ. ಈ ಎಲ್ಲ ಸಾಧನೆಗಳನ್ನು ಮಾಡಿದ್ದಕ್ಕೆ ಒಟ್ಟು ಸೇರಿ ನೀನೇನಾದರೂ ಫಲ ಕೊಡುವುದಾದರೆ ಒಂದೇ ಒಂದು ನಿನ್ನ ಅನುಗ್ರಹ. ನೋಡಿ, ಒಂದೊಂದಕ್ಕೆ ಒಂದೊಂದನ್ನು ಕೇಳಲಿಲ್ಲ, ಒಂದೊಂದು ದಿನದ ತಪಸ್ಸಿಗೆ ಒಂದೊಂದಲ್ಲ, ಗುರುಗಳ ಸೇವೆಗೆ ಒಂದು, ತಂದೆಯ ಸೇವೆಗೆ ಒಂದು, ತಾಯಿಯ ಸೇವೆಗೆ ಒಂದು ಅಲ್ಲ ಎಲ್ಲಾ ಸೇವೆಯಿಂದ ಬಂದ, ಎಲ್ಲಾ ಸಾಧನೆಯಿಂದ ಬಂದ ಪುಣ್ಯದ ಫಲ ಒಂದೇ ಒಂದು ಅದು ಶ್ರೀಹರಿಯ ಪ್ರಸಾದ.

ಕಿಮಲಭ್ಯಂ ಭಗವತಿ ಪ್ರಸನ್ನೇ ಶ್ರೀನಿಕೇತನೇ । (10.1.37.2 ಭಾಗವತ)

ಸರ್ವೋತ್ತಮನಾದ ಪರಮಾತ್ಮನ ಪ್ರಸಾದ ಒಂದಾದರೆ ಇನ್ನೇನು ಬೇಕು ಅಷ್ಟೇ ಸಾಕು ಅಂತ ಕೇಳಿದ ಮಹಾನುಭಾವರು ಈ ಪ್ರಾಚೇತಸರು. ಅಷ್ಟೆಲ್ಲಾ ತಪಸ್ಸು ಮಾಡಿ ಹೊರಗೆ ಬರಬೇಕು ಅಂತ ನೋಡುತ್ತಾರೆ ಸಮುದ್ರದ ಹೊರಗೆ ಕಾಲಿಡುವುದಕ್ಕೆ ಸ್ಥಳ ಇಲ್ಲ ಅಷ್ಟು ಗಿಡಗಳು ಬೆಳೆದಿವೆ ಇವರೇ ರಾಜರು, ಪ್ರಾಚೀನಬರ್ಹಿಯ ಮಕ್ಕಳು, ಇವರು ರಾಜರು ಆಗಬೇಕು, ರಾಜ್ಯವನ್ನು ಆಳಬೇಕು ತಪಸ್ಸು ಮಾಡುತ್ತಾ ಕುಳಿತಿದ್ದಾರೆ ಹತ್ತು ಸಾವಿರ ವರ್ಷ ಹೀಗಾಗಿ ಎಲ್ಲ ಕಡೆಗೆ ಗಿಡಗಳು ಬೆಳೆದಿವೆ. ಬಹಳ ಸಿಟ್ಟು ಬಂದಿದೆ ತಮ್ಮ ಮುಖದಿಂದಲೇ ಅಗ್ನಿಯನ್ನು ಸೃಷ್ಟಿ ಮಾಡಿದ್ದಾರೆ ಆ ಅಗ್ನಿ ಹರಡುವುದಕ್ಕೆ ವಾಯುವನ್ನು ಸೃಷ್ಟಿ ಮಾಡಿದ್ದಾರೆ ಎಲ್ಲ ಗಿಡಗಳ ನಾಶವನ್ನು ಮಾಡುತ್ತಾ ಇದ್ದಾರೆ, ಸುಟ್ಟು ಹಾಕುತ್ತಾ ಇದ್ದಾರೆ. ಚಂದ್ರ ಅಲ್ಲಿ ಬರುತ್ತಾನೆ ಏನು ಮಾಡುತ್ತಾ ಇದ್ದೀರಿ ಆ ರೀತಿ ವೃಕ್ಷದ ಸಂತತಿಯನ್ನು ನಾಶ ಮಾಡಬಾರದು **'ಕಾಡಿದ್ದರೆ ನಾಡು'** ಈ ವೃಕ್ಷಗಳೆಲ್ಲ ಇರಬೇಕು. ಅವುಗಳಿಂದ ಪ್ರಜೆಗಳಿಗೆ ಹಿತವಾಗುತ್ತದೆ, ಅವುಗಳಿಂದ ಎಲ್ಲ ವಿಧವಾಗಿರುವ ವಾತಾವರಣದಲ್ಲಿ ಶುದ್ಧಿ ಇರುತ್ತದೆ, ಮಳೆ ಆಗುತ್ತದೆ ಎಲ್ಲದಕ್ಕೂ ವೃಕ್ಷಗಳು ಕಾರಣ ಅರಣ್ಯ ಇದು ಇರಲೇಬೇಕು ಸಾಕು ಇಷ್ಟು ನಾಶ ಮಾಡಿದ್ದು ಸಾಕು. ನಿಮ್ಮ ಪಟ್ಟಣಗಳನ್ನು ಮಾಡಿಕೊಂಡು ನೀವು

ವಾಸ ಮಾಡುವುದಕ್ಕೆ ಎಷ್ಟು ಬೇಕೋ ಅಷ್ಟು ಅವಕಾಶ ನಿಮಗಾಗಿದೆ ಇನ್ನು ಮುಂದೆ ನಾಶ ಮಾಡಬೇಡಿ ಇಷ್ಟಕ್ಕೆ ನಿಲ್ಲಿಸಿ ಅಂತ ಚಂದ್ರ ಸ್ವಯಂ ತಾನು ಬಂದು ಆದೇಶ ಮಾಡಿದ್ದಕ್ಕೆ ಮರ್ಯಾದೆಯನ್ನು ಕೊಟ್ಟು ಒಪ್ಪಿಕೊಂಡಿದ್ದಾರೆ ಶಾಂತರಾಗಿದ್ದಾರೆ.

ಆಮೇಲೆ ಚಂದ್ರ ಹೇಳಿದ ಯಾವ ವೃಕ್ಷಗಳನ್ನು ನೀವು ಇಷ್ಟು ಹೊತ್ತು ಸುಟ್ಟಿದ್ದೀರಲ್ಲ ಇದೇ ವೃಕ್ಷಗಳು ಇಲ್ಲಿರುವ ಅಭಿಮಾನಿ ದೇವತೆಗಳು, ವನ ದೇವತೆಗಳು ಶ್ರೇಷ್ಠವಾದ ಒಂದು ಕನ್ಯೆಯನ್ನು ಬೆಳೆಸಿದ್ದಾರೆ ಮಾರಿಷಾ ಅಂತ ಅವಳ ಹೆಸರು ಅವಳನ್ನೇ ನೀವು ಮದುವೆಯಾಗಿ ಅಂತ. ಅವಳು ಯಾರು ಅಂದರೆ ಕಂಡು ಎಂಬ ಋಷಿಯಿಂದ ಪ್ರಮ್ಲೋಚ ಎಂಬ ಅಪ್ಸರಾ ಸ್ತ್ರೀಯಲ್ಲಿ ಹುಟ್ಟಿದವಳು ಮಾರಿಷಾ. ವಿರಕ್ತರಾದ ಆ ಕಂಡು ಋಷಿಗಳು ಇವಳನ್ನು ಇಲ್ಲಿಯೇ ಬಿಟ್ಟು ತಾವು ತಪಸ್ಸಿಗೆ ಹೊರಟಾಗ ವನ ದೇವತೆಗಳೇ ಆ ಮಾರಿಷಾಳನ್ನು ರಕ್ಷಣೆ ಮಾಡುತ್ತಾರೆ, ಬೆಳೆಸುತ್ತಾರೆ. ಹಾಲು ಕುಡಿಸುವುದಕ್ಕೆ ಸ್ವತಃ ಚಂದ್ರ ತಾನೇ ಬಂದು ತನ್ನ ತೋರು ಬೆರಳನ್ನ ಇವಳ ಬಾಯಿಯಲ್ಲಿ ಇಟ್ಟು ಅಮೃತದ ವರ್ಷಣವನ್ನೇ ಮಾಡುತ್ತಾನೆ ಶ್ರೇಷ್ಠವಾದಂತಹ ಹಾಲನ್ನು ಕೊಟ್ಟು ಅಮೃತವನ್ನೇ ಕೊಟ್ಟು ಅವಳನ್ನು ಬೆಳೆಸುತ್ತಾನೆ. ಹೀಗಾಗಿ ಕಂಡು ಋಷಿಯ ಮಗಳು ಪ್ರಮ್ಲೋಚ ಎಂಬ ಅಪ್ಸರಾ ಸ್ತ್ರೀಯ ಮಗಳು, ವನ ದೇವತೆಗಳ ಸಾಕು ಮಗಳು, ಚಂದ್ರನ ಹಾಲನ್ನು ಕುಡಿದ ಮಗಳು. ಇಂತಹ ಒಬ್ಬ ಶ್ರೇಷ್ಠ ಮಾರಿಷಾ ಅಲ್ಲಿ ಇಂದ್ರ ದೇವರು ಮಾಂಧಾತಾ ಅವನಿಗೆ ಹಾಲು ಕುಡಿಸಿ ಬೆಳೆಸಿದರು ಮಾಂಧಾತಾ ನಿನಗೆ ಹಾಲು ಕುಡಿಸುವವರು ಯಾರಿಲ್ಲ ಅಂತ ಚಿಂತನ ಮಾಡಬೇಡ ಧಾತಾ ಅಂದರೆ ಪಾನ ಮಾಡುವವನು ಅಂತ ಅರ್ಥ. ಮಾಂ ಧಾತಾ ನಾನು ಕುಡಿಸುವ ಹಾಲನ್ನು ಕುಡಿದು ನೀನು ಬೆಳೆದು ದೊಡ್ಡ ಚಕ್ರವರ್ತಿ ಆಗು ಅಂತ ಇಂದ್ರ ದೇವರು ಆಶೀರ್ವಾದ ಮಾಡಿದ ರೀತಿಯಲ್ಲಿ ಇಲ್ಲಿ ಮಾ ರಿಷಾ. ಅತ್ತು ಅತ್ತು ಇನ್ನೇನು ಸಾಯುವ ಸ್ಥಿತಿ ಯಾರು ಹಾಲು ಕುಡಿಸುವವರು ಇಲ್ಲ ಅಂತ ಮಾ ರಿಷಾ ನೀನು ಹಿಂಸೆಗೆ ಒಳಗಾಗಬೇಡ ಸಾಯಬೇಡ ನಾನು ಹಾಲು ಕುಡಿಸುತ್ತೇನೆ ಅಂತ ಅನುಗ್ರಹ ಮಾಡಿ ಚಂದ್ರ ಹಾಲು ಕುಡಿಸಿ ಬೆಳೆಸಿದ್ದಕ್ಕೆ ಅವಳು ಮಾರಿಷಾ ಎಂಬುದಾಗಿ ಬೆಳೆದಿದ್ದಾಳೆ ಅಂತಹ ಮಾರಿಷಾಳನ್ನು ಈ ಪ್ರಾಚೇತಸರಿಗೆ ಕೊಟ್ಟು ಮದುವೆ ಮಾಡಿದ್ದಾನೆ ಚಂದ್ರ ಹಾಗೂ ವನ ದೇವತೆಗಳು. ಆ ಮಾರಿಷಾಳಲ್ಲಿ ಪ್ರಾಚೇತಸರಿಂದ ಮಾನಸ ಸೃಷ್ಟಿ, ಹತ್ತೂ ಜನ ಪ್ರಾಚೇತಸರರು ಕೇವಲ ತಮ್ಮ ಮನಸ್ಸಿನಿಂದ ಈ ಮಾರಿಷಾಳಲ್ಲಿ ದಕ್ಷಪ್ರಜಾಪತಿಯನ್ನು ಪಡೆದಿದ್ದಾರೆ. ಆ ದಕ್ಷಪ್ರಜಾಪತಿ ನೋಡಿದರೆ ದಕ್ಷಪ್ರಜಾಪತಿ ಸಾಕ್ಷಾತ್ ಬ್ರಹ್ಮ ದೇವರ ಅಂಗುಷ್ಠದಿಂದ ಜನಿಸಿದ ಮಹಾನುಭಾವ ಆದರೆ ಅಂತಹ ದಕ್ಷಪ್ರಜಾಪತಿಯೂ ಕೂಡ ರುದ್ರ ದೇವರಿಗೆ ಅವಮಾನ ಮಾಡಿದ್ದಕ್ಕೆ, ರುದ್ರ ದೇವರ ತಿರಸ್ಕಾರ ಮಾಡಿದ್ದಕ್ಕೆ ಮಹಾನುಭಾವರು ರುದ್ರ ದೇವರು, ಮಾವ ಆಗಿರಬಹುದು ಆದರೂ ಯೋಗ್ಯತೆಯಲ್ಲಿ ರುದ್ರ ದೇವರು ದೊಡ್ಡವರು. ಅಂತಹ ದೊಡ್ಡವರಾದ ರುದ್ರ ದೇವರ ತಿರಸ್ಕಾರ ಮಾಡಿದ್ದಕ್ಕೆ ಬ್ರಹ್ಮ ಪುತ್ರನಾದ ದಕ್ಷಪ್ರಜಾಪತಿ ಮಾರಿಷಾಳಲ್ಲಿ ಪ್ರಾಚೇತಸರಿಂದ ಮತ್ತೆ ಹುಟ್ಟುವ ಪ್ರಸಂಗ ಬಂತು. ಶ್ರೀಮದ್ಭಾಗವತ ಹೇಳುತ್ತದೆ

ಯಸ್ಯಾಂ ಮಹದವಜ್ಞಾನಾದಜನ್ಯಜನಯೋನಿಜಃ ॥ (04.30.48 ಭಾಗವತ)

ಸಾಕ್ಷಾತ್ ಬ್ರಹ್ಮ ಪುತ್ರನಾದ ದಕ್ಷಪ್ರಜಾಪತಿ ಇಲ್ಲಿ ಪುನಃ ಹುಟ್ಟುವ ಪ್ರಸಂಗ ಬಂತು ಎಂಬುದಾಗಿ ಹೇಳುತ್ತಾರೆ. ಆ ದಕ್ಷಪ್ರಜಾಪತಿಯ ವಂಶವನ್ನು ಮುಂದೆ ಮತ್ತೆ ವಿಸ್ತಾರವಾಗಿ ತಿಳಿಸಿಕೊಡುತ್ತಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಹರಿವಂಶಪರ್ವ-3

* * *

ದಕ್ಷಪ್ರಜಾಪತಿ ಪ್ರಾಚೇತಸರ ಒಂದು ವಿಶೇಷವಾದ ತಪಸ್ಸಾಮರ್ಥ್ಯದಿಂದ ಕೇವಲ ಮನಸಾ ಸಂಕಲ್ಪ ಮಾಡುವುದರಿಂದ ಮಾರಿಷಾಳಲ್ಲಿ ಪುನಃ ಹುಟ್ಟಿ ಬಂದಿದ್ದಾನೆ. ದಕ್ಷಪ್ರಜಾಪತಿ ಬ್ರಹ್ಮಪುತ್ರ ಈಗ ಬ್ರಹ್ಮ ದೇವರ ಅನುಗ್ರಹಕ್ಕೆ ಪಾತ್ರರಾದ ಬ್ರಹ್ಮಜ್ಞಾನಿಗಳಾದ ತಪಸ್ವಿಗಳಾದ ಪ್ರಾಚೇತಸರಿಂದ ಮತ್ತೆ ಹುಟ್ಟಿ ಬಂದಿದ್ದಾನೆ. ಇವರು ಮಹಾನುಭಾವರೆ ಪ್ರಾಚೇತಸರು, ಮಹಾಜ್ಞಾನಿಗಳು ಆದರೆ ಬ್ರಹ್ಮ ದೇವರಿಗಿಂತಲೂ ಬಹಳ ಚಿಕ್ಕವರು ಅಂತಹ ದೊಡ್ಡ ಸ್ಥಾನವನ್ನು ಪಡೆದಂತಹ ದಕ್ಷಪ್ರಜಾಪತಿ ಈ ರೀತಿ ಆಗುವುದಕ್ಕೆ ಕಾರಣ ಆ ರುದ್ರ ದೇವರ ದ್ರೋಹ. ರುದ್ರ ದೇವರ ತಿರಸ್ಕಾರ ಮಾಡಿದ್ದಕ್ಕೆ ಅಂತಹ ಒಂದು ಉತ್ತಮವಾದ ಉನ್ನತವಾದ ಸ್ಥಾನವನ್ನು ಕಳೆದುಕೊಂಡು ಇಂತಹ ಪ್ರಾಚೇತಸರಿಂದ ಹುಟ್ಟ ಬೇಕಾಗಿದೆ. ಆದರೂ ಒಂದನ್ನು ಗಮನಿಸಿ ಪ್ರಾಚೇತಸರು ಮಹಾಜ್ಞಾನಿಗಳು ಉತ್ತಮರ ದ್ರೋಹ ಮಾಡಿದ್ದಕ್ಕೆ ಬ್ರಹ್ಮ ದೇವರ ಮಗನಾಗಿದ್ದ ದಕ್ಷಪ್ರಜಾಪತಿ ಪ್ರಾಚೇತಸರ ಮಗನಾದ ಹೊರತು ಇನ್ಯಾವುದೋ ದುಷ್ಟರ ಮಗನಾಗಿ ಅಂತೂ ಹುಟ್ಟಲಿಲ್ಲ. ಯಾಕೆ ಅಂದರೆ ಆನಂತರದಲ್ಲಿ ಪುನಃ ರುದ್ರ ದೇವರಿಗೆ ಶರಣು ಹೋಗಿದ್ದಾನೆ, ತಾನು ಮಾಡಿದ ತಪ್ಪನ್ನು ತಿಳಿದುಕೊಂಡು ಒಪ್ಪಿಕೊಂಡು ಅವರಿಗೆ ಕ್ಷಮಾಯಾಚನೆಯನ್ನು ಮಾಡಿದ್ದಾನೆ. ಬ್ರಹ್ಮ ದೇವರಿಗೆ, ಪರಮಾತ್ಮನಿಗೆ, ರುದ್ರ ದೇವರಿಗೆ ಕ್ಷಮಾಯಾಚನೆಯನ್ನು ಮಾಡಿದ್ದಕ್ಕೆ ಅವನಿಗೆ ಈ ರೀತಿಯಾದ ಒಂದು ಜನ್ಮವನ್ನು ಕರುಣಿಸಿದ್ದಾನೆ ಪರಮಾತ್ಮ ಎಂಬುದಾಗಿ ನಾವು ಅರ್ಥ ಮಾಡಿಕೊಳ್ಳಬೇಕು. ಅಂತಹ ದಕ್ಷಪ್ರಜಾಪತಿಯ ಚರಿತ್ರೆಯನ್ನು ತಿಳಿಸುತ್ತಾ ಇದ್ದಾರೆ.

ದಕ್ಷಪ್ರಜಾಪತಿ ತನ್ನ ಮಡದಿಯಾದ ಅಸಿಕ್ನಿ ಆ ಅಸಿಕ್ನಿ ಯಾರು ಅಂತ. ಅಸಿಕ್ನಿ ಇವಳು ಪಂಚಜನನ ಮಗಳು ಎಂಬುದಾಗಿ ಶ್ರೀಮದ್ಭಾಗವತ ಹೇಳುತ್ತದೆ, ಹರಿವಂಶದ ಪ್ರಕಾರ ವೀರಣ ಅಂತನ್ನುವ ರಾಜ. ಈ ಮೊದಲೇ ತಿಳಿದಂತೆ ಅನೇಕ ವಿವಕ್ಷಗಳಿಂದ ಕಲ್ಪಭೇಧಾದಿ ವಿವಕ್ಷಗಳು ಬೇರೆ ಬೇರೆ ಅಭಿಪ್ರಾಯಗಳಿಂದ ಬೇರೆ ಬೇರೆ ಹೆಸರುಗಳನ್ನು ತಿಳಿಸುತ್ತಾ ಇರುತ್ತಾರೆ ಎಂಬುದಾಗಿ ನಾವು ಅರ್ಥ ಮಾಡಿಕೊಳ್ಳಬೇಕು. ವೀರಣ ಅಥವಾ ಪಂಚಜನ ಅನ್ನುವವನ ಪುತ್ರಿ ಅಸಿಕ್ನಿ ಆ ಅಸಿಕ್ನಿಯನ್ನು ವಿವಾಹವಾಗಿದ್ದಾನೆ ದಕ್ಷಪ್ರಜಾಪತಿ ದಕ್ಷನಾದ ಸರ್ವಸಮರ್ಥನಾದಂತಹ ಸರ್ವೋತ್ತಮನಾದ ಶ್ರೀಹರಿ ಅವನಿಗೆ ದಕ್ಷ ಅಂತ ಕರೆಯುತ್ತಾರೆ. ಆ ಸಕಲ ಕಾರ್ಯಗಳನ್ನು ಮಾಡುವುದರಲ್ಲಿ ಪರಮ ದಕ್ಷನಾದ ಭಗವಂತನ ವಿಶೇಷ ಅನುಗ್ರಹಕ್ಕೆ ಪಾತ್ರನಾಗಿ ಅವನ ಉಪಾಸನೆಯನ್ನು ಮಾಡುವಂತಹ ಈ ಪ್ರಜಾಪತಿಗೂ ಕೂಡ

ದಕ್ಷ ಎಂಬ ಹೆಸರನ್ನು ಇಟ್ಟಿದ್ದಾರೆ. ಅಂತಹ ದಕ್ಷಪ್ರಜಾಪತಿ ಅಸಿಕ್ನಿಯನ್ನು ವಿವಾಹವಾಗಿ ಅವಳಲ್ಲಿ ಹತ್ತು ಸಾವಿರ ಜನ ಮಕ್ಕಳನ್ನು ಪಡೆದು ಅವರೆಲ್ಲರಿಗೂ ನೋಡಿ, ಪ್ರತ್ಯೇಕ ಪ್ರತ್ಯೇಕ ಹೆಸರು ಎಲ್ಲಿ ಇಡುವುದು ಅಂತ ಹರ್ಯಶ್ವರು ಅಂತ ಒಂದೇ ಹೆಸರಿಟ್ಟಿದ್ದಾನೆ

ಶ್ರೀಮದ್ಭಾಗವತದ ಪ್ರಕಾರ ಹತ್ತು ಸಾವಿರ ಜನ ಹರ್ಯಶ್ವರನ್ನು ಹಾಗೂ ಹರಿಪಂಶದ ಪ್ರಕಾರ ಐದು ಸಾವಿರ ಜನ ಹರ್ಯಶ್ವರನ್ನು ಪಡೆದಿದ್ದಾನೆ. ಆ ಹರ್ಯಶ್ವರೆಲ್ಲ ಇನ್ನು ಮುಂದೆ ಮಾಡಬೇಕಾದ ಕರ್ತವ್ಯ ಏನು ಅಂತ ಕೇಳಿದರೆ ನೀವೆಲ್ಲ ತಪಸ್ಸು ಮಾಡಿ, ತಪಸ್ಸು ಮಾಡಿಕೊಂಡು ಬಂದು ಆ ಪುಣ್ಯವನ್ನು ಸಂಪಾದನೆ ಮಾಡಿ ಇದೇ ರೀತಿ ಪ್ರಜೆಗಳ ಅಭಿವೃದ್ಧಿಯನ್ನು ಮಾಡಬೇಕು ಅಂತ ನೋಡಿ, ಆ ಸಂದರ್ಭ ಇದು ಪ್ರಜಾಭಿವೃದ್ಧಿಯನ್ನು ಮಾಡುವಂತಹ ಪ್ರಸಂಗ. ಪ್ರಜೆಗಳ ಅಭಿವೃದ್ಧಿ ಆಗಬಾರದು ಅಂತನ್ನುವ ಆಲೋಚನೆ ಇವತ್ತಿನವರಿಗೆ ಇದೆ ಆದರೆ ಅಂದು ಅದು ಇನ್ನೂ ಸೃಷ್ಟಿಯ ಪ್ರಾರಂಭದ ಕಾಲ ಆದ್ದರಿಂದ ವಿಶೇಷವಾಗಿ ಪ್ರಜಾಭಿವೃದ್ಧಿಯಾಗಬೇಕು, ಪ್ರಜೆಗಳೆಲ್ಲ ತಮ್ಮದೇ ಆದಂತಹ ಸಾಧನೆಗಳನ್ನು ಮಾಡಿಕೊಂಡು ತಮ್ಮ ತಮ್ಮ ಗತಿಯನ್ನು ಅವರು ಹೊಂದಬೇಕು. ಆ ರೀತಿಯ ಅವರವರ ಸಾಧನೆಯನ್ನು ಮಾಡಿಕೊಂಡು ತಮ್ಮ ತಮ್ಮ ಗತಿಯನ್ನ ಹೊಂದುವುದಕ್ಕೆ ನಾವೆಲ್ಲ ಸೇವೆ ಮಾಡಬೇಕು, ದೇವರು ನಮಗೆ ಅದೇ ಕಾರ್ಯವನ್ನು ಒಪ್ಪಿಸಿದ್ದಾನೆ ಪ್ರಜಾಪತಿಗಳು ನಾವು. ಪ್ರಜೆಗಳ ಸೃಷ್ಟಿಯನ್ನು ಮಾಡಬೇಕು, ಅವರ ರಕ್ಷಣೆಯನ್ನು ಮಾಡಬೇಕು ಅವರಿಂದ ಸಾಧನೆಯನ್ನು ಮಾಡಿಸಿ ಅವರಿಗೆ ಸದ್ಗತಿ ಆಗುವಂತೆ ಮಾಡುವುದೇ ನಮ್ಮ ಕರ್ತವ್ಯ.

ಮಕ್ಕಳೇ ನೀವೆಲ್ಲ ಅತ್ಯಂತ ಸಜ್ಜನರು, ಸಾತ್ವಿಕರು ಬಹಳ ವಿನೀತರಾಗಿದ್ದೀರಿ ತಪಶ್ಚರ್ಯವನ್ನು ಮಾಡಿ ವಿಶೇಷವಾಗಿ ಪುಣ್ಯ ಸಂಪಾದನೆ ಮಾಡಿಕೊಂಡು ಮತ್ತೆ ಬಂದು ಇಲ್ಲಿ ಪ್ರಜಾಭಿವೃದ್ಧಿಯನ್ನು ಮಾಡಬೇಕು ಅಂತ ಆದೇಶವನ್ನು ಮಾಡಿದ್ದಾನೆ ಹೊರಟಿದ್ದಾರೆ. ಮಧ್ಯದಲ್ಲಿ ನಾರದರು ಬೇಟಿಯಾಗಿ ಹರ್ಯಶ್ವರ ಜೊತೆಗೆ ಮಾತನಾಡಿಸಿ ಆ ಹರ್ಯಶ್ವರನ್ನು ಸಂಬೋಧನೆ ಮಾಡಿ ನಾರದರು ಹೇಳುತ್ತಾರೆ. ಹರ್ಯಶ್ವರೇ ತಪಸ್ಸನ್ನು ಮಾಡಿ ಪ್ರಜಾಭಿವೃದ್ಧಿಯನ್ನು ಮಾಡುತ್ತೇವೆ, ರಾಷ್ಟ್ರದ ಅಭಿವೃದ್ಧಿಯನ್ನು ಮಾಡುತ್ತೇವೆ ಅಂತ ಹೊರಟಿದ್ದೀರಲ್ಲ ನಿಮಗೆಲ್ಲಾ ಕೆಲವು ಸಂಗತಿಗಳು ಗೊತ್ತಾ, ಯಾವ ರೀತಿಯ ತಿಳುವಳಿಕೆ ಇದ್ದರೆ ಈ ಕಾರ್ಯವನ್ನು ಮಾಡಲಿಕ್ಕೆ ಮುಂದುವರಿಯಬಹುದೋ ಅದೆಲ್ಲ ನಿಮಗೆ ಗೊತ್ತಾ. ಇಲ್ಲ ಗುರುಗಳೇ ತಾವು ಹೇಳಬೇಕು, ತಾವು ಜ್ಞಾನಿಗಳು ಉಪದೇಶ ಮಾಡಬೇಕು ಅಂತ ಕೇಳಿದಾಗ ನಾರದರು ಅಂದರು ನಾನು ಉಪದೇಶ ಮಾಡುವುದಿಲ್ಲ ಪ್ರಶ್ನೆ ಕೇಳುತ್ತೇನೆ ನಿಮಗೆ ಆಲೋಚನೆ ಇದ್ದರೆ ಆ ಉತ್ತರವನ್ನು ನೀವೇ ಹೇಳಬಹುದು ಅಂತ. ಶ್ರೀಮದ್ಭಾಗವತದ ಪ್ರಕಾರ

ಅದೃಷ್ಟ್ವಾಂತಂ ಭುವೋ ಯೂಯಂ ಬಾಲಿಶಾ ಬತ ಪಾಲಕಾಃ । (06.5.6 ಭಾಗವತ)

ಭೂಮಿಯನ್ನು ನೀವು ಆಳುವುದಕ್ಕೆ ಹೊರಟಿದ್ದೀರಿ, ಈ ಭೂಮಿಯ ಮೇಲೆ ಪ್ರಜಾಭಿವೃದ್ಧಿಯನ್ನು ಮಾಡುವುದಕ್ಕೆ ಹೊರಟಿದ್ದೀರಿರಲ್ಲ ಈ ಭೂಮಿಯ ಅಂತ ಹೇಗೆ ಅನ್ನುವುದು ನಿಮಗೆ ಗೊತ್ತಾ. ಅವರೂ ಆಲೋಚನೆ ಮಾಡಿದ್ದಾರೆ ಅವರೇನು ಸಾಮಾನ್ಯರಲ್ಲ, ಹೆಸರು ಹೇಗಿದೆ ನೋಡಿ ಹರ್ಯಶ್ವರು ಅಂತ ಹರಿ ಶ್ರೀಹರಿ, ಅಶ್ವ ಅಂದರೆ ಕುದುರೆಗಳು. ವೇದದ ಭಾಷೆಯಲ್ಲಿ ಕುದುರೆಗಳು ಅಂದರೆ ಇಂದ್ರಿಯಗಳು ಅಂತ ಅರ್ಥ **'ಇಂದ್ರಿಯಾಣಿ ಹಯಾನ್ಯಾಹುಃ'** [1] ಇವರೆಲ್ಲರ ಇಂದ್ರಿಯಗಳು ಹೇಗಿದ್ದವು ಅಂದರೆ ಹರ್ಯಶ್ವ, ಶ್ರೀಹರಿಯ ಚಿಂತನ ಮಾಡುವುದರೊಳಗೆ ಅವರ ಮನಸ್ಸು, ಶ್ರೀಹರಿಯ ಕೈಂಕರ್ಯವನ್ನು ಮಾಡುವುದರೊಳಗೆ ಇನ್ನೆಲ್ಲ ಇಂದ್ರಿಯಗಳು

1. 1.3.4 ಪ್ರಥಮ ಅಧ್ಯಾಯ ತೃತೀಯಾ ವಲ್ಲೀ 4ನೇ ಶ್ಲೋಕ ಕಾಠಕೋಪನಿಷದ್ಭಾಷ್ಯ

ಕೂಡ ಹೀಗೆ ಒಟ್ಟು ಅವರ ಜ್ಞಾನೇಂದ್ರಿಯಗಳು ಹಾಗೂ ಕರ್ಮೇಂದ್ರಿಯಗಳು. ಭಗವಂತನ ರೂಪವನ್ನು ನೋಡುವುದಕ್ಕೆ ಕಣ್ಣು, ಭಗವಂತನ ನಿರ್ಮಾಲ್ಯನವನ್ನು ಆಘ್ರಾಹಣ ಮಾಡುವುದಕ್ಕೆ ಘಾಣೇಂದ್ರಿಯ, ಭಗವದರ್ಪಿತವಾದಂತಹ ನೈವೇದ್ಯವನ್ನು ಸ್ವೀಕಾರ ಮಾಡುವುದಕ್ಕೆ ರಸನೇಂದ್ರಿಯ, ಆ ಭಗವಂತನ ಭಗವದ್ಭಕ್ತರ ಸ್ಪರ್ಶ, ಭಗವಂತನ ಅಧಿಷ್ಠಾನಗಳಾದ ಶಾಲಿಗ್ರಾಮಾದಿಗಳ ಸ್ಪರ್ಶ, ಭಗವದ್ಭಕ್ತರ ಪಾದಸ್ಪರ್ಶ ಇವುಗಳನ್ನು ಮಾಡುವುದಕ್ಕೆ ತ್ವಗಿಂದ್ರಿಯ, ಅಂಬರೀಷ ಚಕ್ರವರ್ತಿಯ ವರ್ಣನೆಯನ್ನು ಭಾಗವತದಲ್ಲಿ ಮಾಡುತ್ತಾರಲ್ಲ ಆ ರೀತಿ ಅದರಂತೆ ಕರ್ಮೇಂದ್ರಿಯಗಳೆಲ್ಲ ಭಗವಂತನ ಸೇವೆಗೆ.

ಕರೌ ಹರೇರ್ ಹರೇರ್ಮಂದಿರ ಮಾರ್ಜನಾದಿಶು । (ಶ್ರೀಕೃಷ್ಣಕಥಾಮೃತಾ)

ಆ ರೀತಿಯಲ್ಲಿ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳನ್ನು ಹಾಗೂ ಮನಸ್ಸನ್ನು ವಿಶೇಷವಾಗಿ ಭಗವಂತನಲ್ಲಿ ತೊಡಗಿಸಿಕೊಂಡಂಥಹ ಇವರೆಲ್ಲ ಹರ್ಯಶ್ವರು ಹೀಗಾಗಿ ಆ ಜನ್ಮಾಂತರದ ಸಂಸ್ಕಾರ, ಸ್ವರೂಪ ಯೋಗ್ಯತೆ ಚಿಂತನ ಮಾಡಿದ್ದಾರೆ. ಅವರಿಗೆ ನಾರದರ ಅಭಿಪ್ರಾಯ ಏನು ಅಂತ ಅರ್ಥ ಆಯಿತು ಭೂಮಿಯ ಅಂತ ಅಂದರೆ ಈ ಭೂಮಿಯ ಅಂತವನ್ನು ಕೇಳುತ್ತಾ ಇಲ್ಲ ನಾರದರು, ಭೂಮಿ ಅಂದರೆ ಈ ಲಿಂಗ ಶರೀರ. ಯಾವ ತರಹದ ಸಾಧನೆಯನ್ನು ಮಾಡಿದರೆ ಜೀವ ತನ್ನ ಲಿಂಗ ಶರೀರದ ಭಂಗವನ್ನು ಮಾಡಿಕೊಳ್ಳಬಹುದು ಅದು ನಿಮಗೆ ಗೊತ್ತಾ, ಯಾವುದಕ್ಕೋಸ್ಕರ ನಾವಿಲ್ಲಿ ಹುಟ್ಟಿ ಬಂದಿದ್ದೇವೆ ಅನ್ನುವುದು ನಿಮಗೆ ಗೊತ್ತಾ, ಸಾಧನ ಶರೀರವಿದು ಶ್ರೀಹರಿ ದಯದಿಕೊಟ್ಟದ್ದು. ಅಂತಹ ಈ ಸಾಧನ ಶರೀರ ನಮಗೆ ಬಂದಾಗ ಸಾಧನೆಯನ್ನು ಮಾಡಿ, ತಪಸ್ಸನ್ನು ಮಾಡಿ, ಜ್ಞಾನವನ್ನು ಪಡೆದು ಈ ಲಿಂಗ ಶರೀರದ ಭಂಗವಾಗುವುದಕ್ಕೆ ಏನು ಪ್ರಯತ್ನ ಮಾಡಬೇಕೋ ಅದನ್ನು ಮಾಡಿ ಅದನ್ನು ಬಿಟ್ಟು ಕೇವಲ ಲೌಕಿಕವಾದಂತಹ ಪ್ರಜಾಭಿವೃದ್ಧಿಯನ್ನು ಮಾತ್ರ ಮಾಡುವ ಆಲೋಚನೆಯನ್ನು ಇಟ್ಟುಕೊಳ್ಳಬೇಡಿ ಇದು ನಾರದರ ಅಭಿಪ್ರಾಯ ಅಂತ ಅವರಿಗೆ ಗೊತ್ತಾಯಿತು.

ಇನ್ನೊಂದು ಪ್ರಶ್ನೆಯನ್ನು ಕೇಳುತ್ತಾರೆ **'ತಥೈಕಪುರುಷಂ ರಾಜ್ಯಂ'**[1] ಒಬ್ಬನೇ ಒಬ್ಬ ಮಹಾಪುರುಷ ಇಡೀ ರಾಜ್ಯವನ್ನು ಆಳುತ್ತಾನೆ, ಸರ್ವಾಧಿಕಾರ ಅವನಿಗಿದೆ ಸರ್ವತಂತ್ರ ಸ್ವತಂತ್ರ ಅಂತಹ ಒಬ್ಬ ರಾಜನಿರುವ ಒಂದು ರಾಜ್ಯ ಇದೆ ಆ ರಾಜ್ಯ ಗೊತ್ತಾ ಅಂತ ಗೊತ್ತು ಅಂದರು ಅವರು. **'ಈಶ್ವರಸ್ತುರೀಯೇವ'** ತುರೀಯ ನಾಮಕನಾದಂತಹ ಪರಮಾತ್ಮ ಮೋಕ್ಷಪ್ರದನಾದಂತಹ ಸ್ವಾಮಿ ಸಕಲ ಜಗತ್ತಿನಲ್ಲಿ ವ್ಯಾಪ್ತನಾಗಿರುವ ಆ ಭಗವಂತ ಅವನೇ ಈಶ್ವರ. ಎಲ್ಲ ಕಡೆಗೆ ವ್ಯಾಪ್ತನಾದ ಬಹಿಷ್ಯನಾದ ಪರಮಾತ್ಮ ಅವನಿಗೆ ಈಶ್ವರ ಅಂತ ಕರೆಯುತ್ತಾರೆ, ಹೃದಯದೊಳಗೆ ಇದ್ದ ಭಗವಂತನಿಗೆ ಪುರುಷ ಅನ್ನುತ್ತಾರೆ. **'ಪುರುಷೇತಿ ಪುರುಷಃ ಇತಿ'** ದೇಹದೊಳಗಿದ್ದ ಪರಮಾತ್ಮ ಪುರುಷ, ಎಲ್ಲ ಕಡೆಗೆ ವ್ಯಾಪ್ತನಾದಂತಹ ಜಗನ್ ನಿಯಾಮಕನಾದ ಭಗವಂತ ಅವನು ಈಶ್ವರ. ಆ ಈಶ್ವರರ ರಾಜ್ಯ ಇದು ಅಂತ ತಿಳಿದಿದ್ದಾರೆ.

'ಬಿಲಂ ಚಾದೃಷ್ಟನಿರ್ಗಮಮ್'[2] ಒಂದು ಬಿಲ ಇದೆ ಅಲ್ಲಿ ಹೋದರೆ ಮತ್ತೆ ಬರುವಂತೆ ಇಲ್ಲ ಅದು ಗೊತ್ತಾ, ಗೊತ್ತು ವೈಕುಂಠಾದಿ ಲೋಕಗಳು. **'ಯದ್ಗತ್ವಾ ನ ನಿವರ್ತಂತೇ ತದ್ಧಾಮ ಪರಮಂ ಮಮ'**[3] ಹಾಗಾದರೆ ಅಂತಹ ಶ್ರೇಷ್ಠವಾದ ಮೋಕ್ಷವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು ಅನ್ನುವುದು ತಮ್ಮ ಅಭಿಪ್ರಾಯ ಅಂತ ತಿಳಿದಿದ್ದಾರೆ.

---

1. 06.5.7 ಭಾಗವತ ; 2. 06.5.7 ಭಾಗವತ ; 3. 15.6 ಭ ಗೀತಾ



ಇನ್ನು ಬಹುರೂಪಳಾದ ಸ್ತ್ರೀ ಅವಳ ಪರಿಚಯ ಇದೆಯಾ ಅಂತ ಏನು ಹೀಗೆ ಕೇಳುತ್ತಾ ಇದ್ದಾರೆ ಬಹುರೂಪಳಾದ ಸ್ತ್ರೀ ಯಾರಿರಬಹುದು ಅಂತ ಆಲೋಚನೆ ಮಾಡಿ ಆ ಬಹುರೂಪಳಾದಂತಹ ಸ್ತ್ರೀ ಅಂದರೆ ಬುದ್ಧಿ. ಮನುಷ್ಯರ ಮನಸ್ಸಿನಲ್ಲಿ ನಾನಾ ವಿಧವಾದ ಆಲೋಚನೆಗಳು ಬರುತ್ತದೆ, ಮನುಷ್ಯ ತನ್ನ ಬುದ್ಧಿಯಿಂದ ವಿವಿಧ ಆಲೋಚನೆಗಳನ್ನೆಲ್ಲ ಮಾಡುತ್ತಾನೆ ಆ ತರಹದ ಆಲೋಚನೆಗಳನ್ನು ಮಾಡುವ ಮನುಷ್ಯನ ಬುದ್ಧಿ ಅದಕ್ಕೆ ಬಹುರೂಪಳಾದ ಸ್ತ್ರೀ. ಅಂತಹ ಬಹುರೂಪವಾದ ಬುದ್ಧಿಯನ್ನು ಹತ್ತು ಹಲವು ವಿಷಯಗಳಲ್ಲಿ ಹರಡದಂತೆ ಏಕಾಗ್ರವಾಗಿ ಆ ಈಶ್ವರನ ಪಾದಗಳಲ್ಲಿ ನೆಲೆಸುವಂತೆ ಮಾಡಬೇಕು ಅನ್ನುವುದು ನಾರದರ ಅಭಿಪ್ರಾಯ ಅಂತ ತಿಳಿದುಕೊಂಡಿದ್ದಾರೆ. ಅಂತಹ ಒಂದು ಪೂಶ್ಚಲಿಯಂತೆ ಇರುವ, ಸ್ಪೈರಿಣಿಯಂತೆ ಇರುವ ಆ ಬುದ್ಧಿಗೆ ಒಬ್ಬ ಪತಿ ಯಾರು ಅವನೇ ಜೀವ.

'ನದೀಮುಭಯತೋವಾಹಾಂ' [1] ಒಂದು ಕಡೆಗೆ ಹರಿಯುತ್ತಾ ಇರುತ್ತದೆ ನದಿ, ಎರಡು ಕಡೆಗೆ ಹರಿಯುವ ನದಿಯನ್ನು ಕಂಡಿದ್ದೀರಾ ಅಂತ, ಅದು ಭಗವದಿಚ್ಛೆ. ಅದು ಸೃಷ್ಟಿಯನ್ನು ಮಾಡುವುದಕ್ಕೆ ಕಾರಣ, ಪ್ರಲಯವನ್ನು ಮಾಡುವುದಕ್ಕೂ ಕಾರಣ ಅಂತಹ ಜಗತ್ತಿನ ಸೃಷ್ಟ್ಯಾದಿಗಳನ್ನು ಮಾಡುವಂತಹ ಭಗವಂತನ ಮಹಾ ಮಹಿಮೆಯನ್ನು ತಿಳಿಯಬೇಕು.

'ಪಂಚಪಂಚಾದ್ಭುತಂ ಗೃಹಮ್'[2] ಇಪ್ಪತ್ತೈದು ವಸ್ತುಗಳಿಂದ ಕೂಡಿದ ಒಂದು ಶ್ರೇಷ್ಠವಾದ ಮನೆ ಈ ಶರೀರವೇ. ಪಂಚ ಜ್ಞಾನೇಂದ್ರಿಯ, ಪಂಚ ಕರ್ಮೇಂದ್ರಿಯ, ಪಂಚ ಮಹಾಭೂತಗಳು, ಪಂಚ ತನ್ಮಾತ್ರಾಗಳು, ಪ್ರಕೃತಿ ಮಹತತ್ತ್ವ, ಅಹಂಕಾರತತ್ತ್ವ, ಮನಸ್ಸು, ಜೀವ ಇವರಿಂದ ಕೂಡಿರತಕ್ಕಂತಹ ಈ ಶರೀರ ಈ ಶರೀರದ ಒಡೆಯನಾಗಿ ಪುರುಷ ನಾಮಕನಾಗಿ ಪರಮಾತ್ಮ ಅಂತರ್ಯಾಮಿಯಾಗಿ ಒಳಗಿದ್ದಾನೆ. ಆ ವ್ಯಾಪ್ತನಾದ ಈಶ್ವರನನ್ನ ಅಂತರ್ಯಾಮಿಯಾದ ಪುರುಷನನ್ನ ತಿಳಿದು, ಇಬ್ಬರೂ ಒಂದೇ ಅಂತ ತಿಳಿಯಬೇಕು ಪುರುಷ ಬೇರೆಯಲ್ಲ, ಈಶ್ವರ ಬೇರೆಯಲ್ಲ ಅವರಿಬ್ಬರಲ್ಲಿ ಐಕ್ಯ ಚಿಂತನ ಮಾಡಿ ಉಪಾಸನೆಯನ್ನು ಮಾಡಬೇಕು, ಬಿಂಬರೂಪಿಯಾದ ಪರಮಾತ್ಮನ ಉಪಾಸನೆಯನ್ನು ಮಾಡಬೇಕು ಅನ್ನುವುದು ನಾರದರ ಅಭಿಪ್ರಾಯ. ಅದಕ್ಕೆ ಮೊದಲು ಏನು ಮಾಡಬೇಕು **'ಕ್ವಚಿದ್ಧಂಸಂ ಚಿತ್ರಕಥಂ'**[3] ಭಾರೀ ಚೆನ್ನಾಗಿ ಕಥೆಯನ್ನು ಹೇಳುವ ಹಂಸ ಪಕ್ಷಿ ಇದೆ ಗೊತ್ತಾ, ಎಂದಾದರು ನೋಡಿದ್ದೀರಾ. ಆ ಹಂಸ ಅಂದರೆ ಬೇರೆ ಯಾವುದಲ್ಲ ಶುದ್ಧವಾದಂತಹ ನಮ್ಮ ದೋಷಗಳನ್ನು ಹಂತಿ ನಾಶ ಮಾಡುವಂತಹದ್ದು ಮತ್ತು ಸಾರರೂಪವಾದ ವಸ್ತುವನ್ನು ತಿಳಿಸುವ ಶಾಸ್ತ್ರಗಳು ಆ ವೇದಾದಿ ಸಕಲ ಸಚ್ಛಾಸ್ತ್ರಗಳೇ ಹಂಸ ಪಕ್ಷಿ ಇದ್ದಂತೆ, ಹಂಸ ಹೇಗೆ ಶುಭ್ರ ಹಾಗೆ ಶಾಸ್ತ್ರಗಳು ಶುದ್ಧ. ಹಂಸ ಪಕ್ಷಿ ಇದು ನೀರು ಹಾಲು ಬೇರೆ ಬೇರೆ ಮಾಡಿಕೊಡುವ ಸಾಮರ್ಥ್ಯವನ್ನು ಪಡೆದುಕೊಂಡಿರುತ್ತದೆ ಎರಡನ್ನೂ ಸೇರಿಸಿ ಇಟ್ಟಾಗ ಹಾಗೆ ಯಾವುದು ನಮಗೆ ದುಃಖ ಸಾಧನ, ಯಾವುದು ಸುಖ ಸಾಧನ ಇದನ್ನು ಚೆನ್ನಾಗಿ ತಿಳಿಸಿಕೊಟ್ಟು ದುಃಖ ಸಾಧನವಾದದ್ದನ್ನು ಮಾಡಬೇಡಿ, ಸುಖ ಸಾಧನವಾದದ್ದನ್ನು ಮಾಡಿ ಅಂತ ತಿಳಿಸಿಕೊಡುವಂತಹದ್ದೆ ಶಾಸ್ತ್ರ, ಅದೇ ಹಂಸ. ಪರಮಾತ್ಮನಿಗೂ ಹಂಸ ಅಂತಾರೆ ಕಾರಣ ನಮ್ಮ ದೋಷಗಳನ್ನೆಲ್ಲ ಹನನ ಮಾಡುತ್ತಾನೆ, ಸಾರರೂಪನಾಗಿದ್ದಾನೆ ಸರ್ವೋತ್ತಮನಾಗಿದ್ದಾನೆ ಆದ್ದರಿಂದ ದೇವರಿಗೆ ಹಂಸ ಎಂಬುದಾಗಿ ಕರೆಯುತ್ತಾರೆ. ಅಂತಹ ಪರಮಾತ್ಮನಿಂದ ಉಪದಿಷ್ಟವಾದ ಶಾಸ್ತ್ರಗಳು ಇಲ್ಲಿ ಹಂಸ.

'ಕ್ಷುರಾಂತಂ ಚ ಸ್ವಯಂ ಭ್ರಮಿಮ್'[4] ಭಾರೀ ಚೂಪಾದಂತಹ ಅರಗಳಿಂದ ಹಲ್ಲುಗಳಿಂದ ಕೂಡಿರುವ ಚಕ್ರ ಅದು ಯಾವುದು ಅಂದರೆ ಅದು ಕಾಲಚಕ್ರ. ಹಾಗಾದರೆ ಒಟ್ಟು ನಾರದರ ಸಾರ ಕಾಲಚಕ್ರ ಬಹಳ ಸೂಕ್ಷ್ಮವಾದದ್ದು,

1. 06.5.8 ಭಾಗವತ ; 2. 06.5.8 ಭಾಗವತ ; 3. 06.5.8 ಭಾಗವತ ; 4. 06.5.8 ಭಾಗವತ

ಅತ್ಯಂತ ತೀಕ್ಷ್ಣವಾದದ್ದು, ಅತ್ಯಂತ ರಭಸದಿಂದ ಓಡುವಂತಹ ಕಾಲಚಕ್ರ ಅಂತಹ ಕಾಲಚಕ್ರದೊಳಗೆ ನಾವಿದ್ದೇವೆ ಒಂದು ಕ್ಷಣವನ್ನೂ ವ್ಯರ್ಥ ಮಾಡಿದರೂ ಮತ್ತೆ ಬೇಕು ಅಂದರೆ ಸಿಗುವುದಿಲ್ಲ, ಅಪರೂಪಕ್ಕೆ ಸಿಕ್ಕಂತಹ ಸಾಧನಾ ಶರೀರವನ್ನು ಸಾರ್ಥಕ ಮಾಡಿಕೊಳ್ಳಬೇಕು. ಹೃದಯದಲ್ಲಿ ಅಂತರ್ಯಾಮಿಯಾದ ಜಗತ್ತಿನಲ್ಲಿ ವ್ಯಾಪ್ತನಾದ ಆ ಭಗವಂತನ ತತ್ವಜ್ಞಾನವನ್ನು ಪಡೆದುಕೊಂಡು ಉಪಾಸನೆ ಮಾಡಿ ಅಪರೋಕ್ಷ ಜ್ಞಾನವನ್ನು ಹೊಂದಿ, ಪುನಃ ತಿರುಗಿ ಬರದೆ ಇರುವಂತಹ ಶ್ರೇಷ್ಠವಾದ ಮೋಕ್ಷವನ್ನು ಪಡೆಯಬೇಕು, ವೈಕುಂಠಾದಿ ಲೋಕಗಳನ್ನು ಪಡೆಯಬೇಕು ಅನ್ನುವುದು ಇವರ ಸಂದೇಶ. ಹಾಗಾದರೆ ನಾವು ಮರಳಿ ರಾಜ್ಯಕ್ಕೆ ಹೋಗುವುದೇ ಬೇಡ ಇಲ್ಲಿಯೇ ತಪಸ್ಸು ಮಾಡೋಣ ಅಂತ ನಾರಾಯಣ ಸರಸ್ ಅಲ್ಲಿಯೇ ತಪಸ್ಸನ್ನು ಮಾಡುತ್ತಾ ವಿರಕ್ತರಾಗಿದ್ದಾರೆ ಹರ್ಯಶ್ವರು.

ಮತ್ತೆ ಶಬಲಾಶ್ವ ಅಂತ ಒಂದು ಸಾವಿರ ಜನ ಮಕ್ಕಳನ್ನು ಪಡೆದಿದ್ದಾರೆ, ಹತ್ತು ಸಾವಿರ ಜನರನ್ನು ಮೊದಲು ಪಡೆದಿದ್ದ, ಈಗ ಒಂದು ಸಾವಿರ ಶಬಲಾಶ್ವರನ್ನು ಪಡೆದಿದ್ದಾರೆ ಇದೇ ತರಹ ಅವರಿಗೂ ಉಪದೇಶ ಮಾಡಿ ತಪಸ್ಸಿಗೆ ಅಂತ ಕಳಿಸಿದ ತಪಸ್ಸು ಮಾಡಿ ಮರಳಿ ಬಂದು ಪ್ರಜಾಭಿವೃದ್ಧಿ ಮಾಡಬೇಕು ಅಂತ. ನಾರದರು ಅವರಿಗೂ ಉಪದೇಶ ಮಾಡಿದ್ದಾರೆ ಅವರೂ ವಿರಕ್ತರಾಗಿ ಮತ್ತೆ, ನೋಡಿ ಶಬಲಾಶ್ವರು **'ಶ'** ಸುಖ, **'ಬ'** ಬಲ ಸುಖ ಹಾಗೂ ಬಲ ಸ್ವರೂಪನಾದಂತಹ ಅನಂತ ಸುಖ ಸ್ವರೂಪನಾದ, ಅನಂತ ಬಲ ಸ್ವರೂಪನಾದ ಆ ಭಗವಂತನ ಕಡೆಗೆ ಇವರ ಅಶ್ವಗಳು, ಇಂದ್ರಿಯಗಳು ಇವರೂ ಶಬಲಾಶ್ವರು. ಭಗವಂತನ ಚಿಂತನೆ ಒಳಗೆ ಆಸಕ್ತರಾಗಿ ವಿರಕ್ತರಾಗಿ ಹೊರಟು ಹೋಗಿದ್ದಾರೆ.

ಆಗ ದಕ್ಷಪ್ರಜಾಪತಿ ಆಲೋಚನೆ ಮಾಡಿದ ಇನ್ನು ಹೀಗೆ ಮಾಡಿದರೆ ನಾರದರು ಸುಮ್ಮನೆ ಬಿಡುವುದಿಲ್ಲ ನಾರದರಿಗೆ ಶಾಪ ಕೊಟ್ಟಿದ್ದಾನೆ ನೀವು ಒಂದು ಕಡೆ ಇರುವುದೇ ಬೇಡ ಅಂತ ಹೀಗಾಗಿ ನಾರದರು ಅಂದರು ಇದು ನನಗೆ ಬೇಕಾದದ್ದೆ, ಈಗ ವರ ಸಿಕ್ಕಾಗೆ ಆಗಿದೆ, ಇದು ಶಾಪ ಅಲ್ಲ, ನನಗೆ ತ್ರಿಲೋಕ ಸಂಚಾರ ಮಾಡಬೇಕು, ಎಲ್ಲ ಕಡೆಗೆ ಹರಿಭಕ್ತಿಯ ಪ್ರಸಾರ ಮಾಡಬೇಕು, ಭಗವಂತನ ಮಹಿಮೆಯನ್ನು ಉಪದೇಶ ಮಾಡಬೇಕು, ಹರಿನಾಮ ಸಂಕೀರ್ತನೆಯ ಮಹಿಮೆಯನ್ನ ಹೇಳಬೇಕು. ಅದಕ್ಕಾಗಿ ನಾನು ಸಂಚಾರ ಮಾಡಬೇಕಾದದ್ದು ನನ್ನ ಅಪೇಕ್ಷೆಯೇ ಅದಕ್ಕೆ ತಕ್ಕಂತೆ ದೇವರು ವರವನ್ನೇ ಕೊಡಿಸಿದ್ದಾನೆ ಅನ್ನುವ ರೀತಿಯಲ್ಲಿ ಅವರು ಭಾವಿಸಿದ್ದಾರೆ. ಈ ದಕ್ಷಪ್ರಜಾಪತಿಯ ಹೆಂಡತಿಯ ತಂಗಿಯಲ್ಲಿ ಪುನಃ ಹುಟ್ಟಿ ಬಂದಿದ್ದಾರೆ ನಾರದರು. ಭಾಗವತದಲ್ಲಿ ಕೇವಲ ತ್ರಿಲೋಕ ಸಂಚಾರ ಮಾಡುವ ಅನ್ನುವ ಒಂದೇ ಶಾಪ ಇದೆ ಇಲ್ಲಿ ಅಖಂಡ ಸಂಚಾರವನ್ನು ಮಾಡಬೇಕು ಅನ್ನುವುದರ ಜೊತೆಗೆ ನೀವು ಭೂಮಿಯಲ್ಲಿ ಹುಟ್ಟಿ ಬರಬೇಕು ಅಂತ ಶಾಪ ಕೊಟ್ಟಿದ್ದಕ್ಕೆ ಅವರು ಪುನಃ ಭೂಮಿಯಲ್ಲಿ ಈ ದಕ್ಷಪ್ರಜಾಪತಿಯ ಹೆಂಡತಿಯ ತಂಗಿಯಲ್ಲಿಯೇನೆ ಹುಟ್ಟಿ ಬರುತ್ತಾರೆ ಅಂತನ್ನುವ ಮಾತನ್ನು ಕೂಡ ಇಲ್ಲಿ ತಿಳಿಸುತ್ತಾರೆ. ಆ ರೀತಿಯಾಗಿ ನಾರದರು ಸರಿ ಭಗವಂತನ ಸಂಕಲ್ಪ ಅಂತ ಇದನ್ನು ಸ್ವೀಕಾರ ಮಾಡಿದ್ದಾರೆ.

ಈ ಕಡೆಗೆ ದಕ್ಷಪ್ರಜಾಪತಿ ಅಸಿಕ್ನಿಯಲ್ಲಿ ಹೆಣ್ಣುಮಕ್ಕಳನ್ನು ಪಡೆಯೋಣ, ಪುರುಷರನ್ನು ಪಡೆದರೆ ಈ ರೀತಿಯಾಗಿ ಇವರು ತಪಸ್ಸಿಗೆ ಕಳಿಸುತ್ತಾರೆ ಹಾಗಾದರೆ ಹೆಣ್ಣುಮಕ್ಕಳನ್ನು ಪಡೆಯೋಣ ಅಂತ ಅರವತ್ತು ಜನ ಹೆಣ್ಣುಮಕ್ಕಳನ್ನು ಪಡೆಯುತ್ತಾನೆ. ಅದರಲ್ಲಿ ಹತ್ತು ಜನರನ್ನ ಯಮಧರ್ಮ ರಾಜನಿಗೆ ಕೊಡುತ್ತಾನೆ, ಹದಿಮೂರು ಜನರನ್ನ ಕಶ್ಯಪ ಪ್ರಜಾಪತಿಗೆ, ಇಪ್ಪತ್ತೇಳು ಜನರನ್ನು ಚಂದ್ರನಿಗೆ ಕೊಡುತ್ತಾನೆ. ಆಮೇಲೆ ಪುನಃ ಮತ್ತೆ ನಾಲ್ಕು ಜನರನ್ನ ಕಶ್ಯಪರಿಗೆ ಕೊಡುತ್ತಾನೆ ಒಟ್ಟು ಹದಿನೇಳು ಜನರನ್ನ ಕಶ್ಯಪರಿಗೆ ಕೊಡುತ್ತಾನೆ, ಭೃಗುಪುತ್ರಾಯ ಎರಡು, ಆಂಗರಸ್ಯರಿಗೆ ಎರಡು, ಕೃಶಾಶ್ವನಿಗೆ ಎರಡು ಈ ರೀತಿ ಅರವತ್ತು ಜನರನ್ನು ಮದುವೆ ಮಾಡಿಕೊಡುತ್ತಾನೆ. ಅದರ ವಿಶೇಷವಾದಂತಹ ಸಂತತಿಯ ವರ್ಣನೆಯನ್ನೆಲ್ಲ ಮಾಡಿದ್ದಾರೆ ಅದರಲ್ಲಿ ಅರುಂಧತಿ, ವಸು ಇತ್ಯಾದಿಗಳು ಆ ವಸು ಎಂಬ ಹೆಸರಿನ

ಯಮಧರ್ಮ ರಾಜನ ಹೆಂಡತಿಯಲ್ಲೇನೆ ವಸು ದೇವತೆಗಳೆಲ್ಲ ಅವತಾರ ಮಾಡುತ್ತಾರೆ. ವಿಶ್ವೆ ದೇವತೆಗಳು ವಿಶ್ವ ಅನ್ನುವವಳಲ್ಲಿ, ಸಾಧ್ಯ ಅನ್ನುವವಳಲ್ಲಿ ಸಾಧ್ಯರು, ಮರುತ್ವತಿ ಅನ್ನುವವಳಲ್ಲಿ ಮರುತ್ವಂತರು ಹೀಗೆಲ್ಲಾ ಅವತಾರ ಮಾಡುತ್ತಾರೆ. ಆಪ, ಧ್ರುವ, ಸೋಮ, ಧರ, ಅನಿಲ, ಅನಲ, ಪ್ರತ್ಯೂಷ, ಪ್ರಭಾಸ ಅಂತ ಅಷ್ಟವಸುಗಳು. ಬೃಹಸ್ಪತಿಯ ತಂಗಿ ಅವಳೇ ಅತ್ಯಂತ ವಿರಕ್ತಳಾದವಳು, ಶೇಷ್ಠಳಾದಂತಹ ಭಗವಂತನ ಭಕ್ತಳು, ಭಗವದ್ ಧ್ಯಾನದಲ್ಲಿ ಆಸಕ್ತಳಾಗಿ ಒಂದರ್ಥದಲ್ಲಿ ತಪಸ್ವಿನಿಯಂತೆ ಇದ್ದವಳು ಆದರೂ ಕೂಡ ಈ ಅಷ್ಟವಸುಗಳ ಪೈಕಿ ಒಬ್ಬರಾದ ಪ್ರಭಾಸನ ವಿಶೇಷವಾದ ಗುಣಗಳನ್ನು ಕಂಡು ಅವನನ್ನು ಮದುವೆಯಾಗಿ ಅಲ್ಲಿ ವಿಶ್ವಕರ್ಮನನ್ನು ಪಡೆಯುತ್ತಾಳೆ. ಆ ವಿಶ್ವಕರ್ಮ ಪ್ರಸಿದ್ಧನಾದಂತಹ ದೇವತೆ, ಎಲ್ಲ ದೇವತೆಗಳ ಎಲ್ಲಾ ಶಿಲ್ಪಗಳನ್ನು ಮಾಡುವುದಕ್ಕೆ ಸಮರ್ಥನಾದವನು, ಅವರ ಭೂಷಣಗಳನ್ನು ಆಭರಣಗಳನ್ನೆಲ್ಲ ಮಾಡಿಕೊಡುವಂತಹ ವ್ಯಕ್ತಿ, ಅವರ ವಿಮಾನಗಳನ್ನೆಲ್ಲ ನಿರ್ಮಾಣ ಮಾಡುತ್ತಾನೆ.

ಭೂಷಣಾನಾಂ ಚ ಸರ್ವೇಷಾಂ ಕರ್ತಾ ಶಿಲ್ಪವತಾಂ ವರಃ । (3.47 ಹರಿವಂಶಪರ್ವ)

ಯಃ ಸರ್ವೇಷಾಂ ವಿಮಾನಾನಿ ದೇವತಾನಾಂ ಚಕಾರ ಹ ॥ (3.48 ಹರಿವಂಶಪರ್ವ)

ಅಂತಹ ಮನುಷ್ಯರಿಗೂ, ದೇವತೆಗಳಿಗೂ, ಋಷಿಗಳಿಗೂ ಎಲ್ಲರಿಗೂ ಉಪಕಾರವನ್ನು ಮಾಡುವಂತಹ ಮಹಾನುಭಾವನಾದ ವಿಶ್ವಕರ್ಮನೆಂಬ ದೇವತೆ ಈ ಪ್ರಭಾಸ ಎಂಬ ವಸುವಿನಿಂದ ಹುಟ್ಟಿದ್ದಾನೆ ಎಂಬುದಾಗಿ ತಿಳಿಸುತ್ತಾರೆ.

ಆಮೇಲೆ ಕಶ್ಯಪರು ಸುರಭಿ ಅನ್ನುವವಳಲ್ಲಿ ಏಕಾದಶ ರುದ್ರರನ್ನು ಪಡೆಯುತ್ತಾರೆ. **'ಅಜೈಕಪಾದಹಿರ್ಬುಧ್ನ್ಯೋ'**[1] ಇತ್ಯಾದಿಗಳು. 1. ಹರ, 2. ಬಹುರೂಪ, 3. ತ್ರ್ಯಂಬಕ, 4. ಅಪರಾಜಿತ, 5. ವೃಷಾಕಪಿ, 6. ಶಂಭು, 7. ಕಪರ್ದೀ, 8. ರೈವತ, 9. ಮೃಗವ್ಯಾಧ 10. ಸರ್ಪ, 11. ಕಪಾಲೀ ಎಂಬ ಹೆಸರಿನ ರುದ್ರರನ್ನು ಪಡೆಯುತ್ತಾರೆ ಎಂಬುದಾಗಿ. ಅದಿತಿಯಲ್ಲಿ ದ್ವಾದಶ ಆದಿತ್ಯರು 1. ವಿಷ್ಣು, 2. ಅರ್ಯಮಾ, 3. ಧಾತಾ, 4. ತ್ವಷ್ಟಾ, 5. ಪೂಷಾ, 6. ವಿವಸ್ವಾನ್, 7. ಸವಿತಾ, 8. ಮಿತ್ರ, 9. ವರುಣ, 10. ಅಂಶ, 11. ಭಗ, 12. ಇಂದ್ರ ಹೀಗೆ ವಸು, ರುದ್ರ, ಆದಿತ್ಯರ ಅವತಾರವಾಗಿದೆ ಎಂಬ ವಿಷಯವನ್ನು ಇಲ್ಲಿ ತಿಳಿಸುತ್ತಾರೆ. ಇದಲ್ಲದೇ ಅನೇಕ ಅವರ ವಂಶದ ದಿತಿಯಲ್ಲಿ ದೈತ್ಯರು, ದನುವಿನಲ್ಲಿ ದಾನವರು ಹೀಗೆಲ್ಲ ಹುಟ್ಟುತ್ತಾ ಬರುತ್ತಾರೆ. ಅಲ್ಲಿ ದಿತಿಯಲ್ಲಿ ಹುಟ್ಟಿದ ಹಿರಣ್ಯಕಶಿಪುವಿನಲ್ಲಿ ಪ್ರಹ್ಲಾದ ರಾಜರು ಪರಮ ಭಗವದ್ಭಕ್ತರು ಆ ಪ್ರಹ್ಲಾದ ರಾಜರ ಮೇಲೆ ಅನುಗ್ರಹವನ್ನು ಮಾಡುವುದಕ್ಕಾಗಿ ನರಸಿಂಹ ದೇವರು ಅವತಾರ ಮಾಡಿದ್ದನ್ನು ಇಲ್ಲಿ ಸೂಚನೆ ಮಾಡುತ್ತಾರೆ. ಅವರ ತಮ್ಮ ಸಹ್ಲಾದ ಆ ಸಹ್ಲಾದನ ಕುಲದಲ್ಲಿ ನಿವಾತಕವಚರು ಅಂತ ಹುಟ್ಟುತ್ತಾರೆ ಆ ನಿವಾತಕವಚರನ್ನು ಮುಂದೆ ಅರ್ಜುನ ಸಂಹಾರವನ್ನು ಮಾಡುತ್ತಾನೆ ಅಂತನ್ನುವ ವಿಷಯವನ್ನು ನಾವು ತಿಳಿಯುತ್ತೇವೆ. ಈ ರೀತಿ ಇವರ ವಂಶ ಎಲ್ಲ ಬರುತ್ತೆ.

ದಿತಿ ದೇವಿ ಒಂದು ಬಾರಿ ಕಶ್ಯಪರಿಗೆ ಪ್ರಾರ್ಥನೆಯನ್ನು ಮಾಡುತ್ತಾಳೆ. ದೇವತೆಗಳು ನಮ್ಮ ಮಕ್ಕಳಾದ ದೈತ್ಯರನ್ನೆಲ್ಲ ಸೋಲಿಸಿ ರಾಜ್ಯವನ್ನು ಸ್ವೀಕಾರ ಮಾಡಿದ್ದಾರೆ ನಮ್ಮ ಮಕ್ಕಳಿಗೆ ರಾಜ್ಯ ಸಿಗಬೇಕು ಅಂತ. ಬೇಕಾದಷ್ಟು ಉಪದೇಶ ಮಾಡಿದ್ದಾರೆ ಕಶ್ಯಪರು ಆ ತರಹವೆಲ್ಲ ವಿಚಾರ ಮಾಡಬೇಡ, ಭಗವಂತನ ಸಂಕಲ್ಪದಂತೆ ಯಾವ ಯಾವ ಕಾಲಕ್ಕೆ ಯಾರಿಗೆ ರಾಜ್ಯ ಸಿಗಬೇಕೋ ಸಿಗುತ್ತೆ. ಇಷ್ಟು ದಿನಗಳವರೆಗೆ ನಿನ್ನ ಮಕ್ಕಳು ರಾಜ್ಯ ಆಡಿದ್ದಾರೆ ಈಗ ಅವರನ್ನು ಸೋಲಿಸಿ ದೇವತೆಗಳು ರಾಜ್ಯವನ್ನು ಪಡೆದಿದ್ದಾರೆ, ಭಗವಂತನ ಸಂಕಲ್ಪದಂತೆ ಅವರವರಿಗೆ ಯೋಗ್ಯವಾದದ್ದು

1. 06.6.18 ಭಾಗವತ

ಯೋಗ್ಯವಾದ ಕಾಲದಲ್ಲಿ ಸಿಗುತ್ತೆ ಅಂತ ತಿಳಿದು ಸಂತೋಷ ಪಡಬೇಕು, ಅಸೂಯೆ ಪಡುವುದು ಬೇಡ ಅಂತ ಎಷ್ಟು ಉಪದೇಶ ಮಾಡಿದರೂ ಕೇಳಿಲ್ಲ, ಏನಾದರೂ ಇಂದ್ರನನ್ನು ಸಂಹಾರ ಮಾಡುವಂತಹ ಒಬ್ಬ ಮಗ ನನಗೆ ಬೇಕು ಆ ರೀತಿ ನೀವು ನನಗೆ ಅನುಗ್ರಹವನ್ನು ಮಾಡಿ ಏನಾದರೂ ಉಪದೇಶವನ್ನು ಮಾಡಬೇಕು ಅಂತ ಹೇಳಿದಾಗ ಪುಂಸವನ ವ್ರತವನ್ನು ಮಾಡಬೇಕು ಅಂತ ಹೇಳಿದ್ದಾರೆ. ಆ ಪುಂಸವನ ವ್ರತವನ್ನು ನೀನು ಮಾಡಬೇಕು ಆದರೆ ಬಹಳ ಶುದ್ದಿಯನ್ನು ಕಾಪಾಡಿಕೊಳ್ಳಬೇಕು. ನಿತ್ಯದಲ್ಲಿಯೂ ಶುದ್ಧರಾಗಿಯೇ ದೇವರ ಸೇವೆಯನ್ನು ಮಾಡಬೇಕು ಅದರಲ್ಲಿಯೂ ವಿಶೇಷವಾಗಿ ವ್ರತ ನಿಯಮಾದಿಗಳನ್ನು ಮಾಡುವಾಗ ಇನ್ನಷ್ಟು ಶುದ್ದಿಯನ್ನು ಕಾಪಾಡಿಕೊಳ್ಳಬೇಕು ಅದು ನಿನಗೆ ಮಾಡುವುದಕ್ಕಾಗುವುದಾದರೆ ಈ ವ್ರತವನ್ನು ಮಾಡಬಹುದು ಅಂತ ಅವಶ್ಯವಾಗಿ ಮಾಡುತ್ತೇನೆ ಎಂದು ಒಪ್ಪಿಕೊಂಡಿದ್ದಾಳೆ ದಿತಿ ದೇವಿ. ಸರಿ ಕಶ್ಯಪರು ಉಪದೇಶ ಮಾಡಿದರು ಯಾವ ಕ್ರಮದಲ್ಲಿ ಮಾಡಬೇಕು ಅಂತ ಎಲ್ಲ ತಿಳಿಸಿಕೊಟ್ಟಿದ್ದಾರೆ. ಅವರು ಸೂಚನೆ ಮಾಡಿದ, ಆದೇಶ ಮಾಡಿದ ರೀತಿಯಲ್ಲಿ ವ್ರತವನ್ನು ಅನುಷ್ಠಾನ ಮಾಡುತ್ತಾ ಇದ್ದಾಳೆ.

ಒಂದು ದಿನ ಭೋಜನವನ್ನು ಮಾಡಿ ಅರ್ಥಾತ್ ಏನನ್ನೋ ತಿಂದು ಸ್ವೀಕಾರ ಮಾಡಿ ಕೈಕಾಲು ತೊಳೆಯದೇ ಹಾಗೆ ಉಚ್ಚಿಷ್ಟಳಾಗಿ ಮಲಗಿಬಿಟ್ಟಿದ್ದಾಳೆ, ವರ್ಷ ಇಡೀ ಮಾಡಿದಂತಹ ವ್ರತ, ನಿಷ್ಠೆಯಿಂದ ಮಾಡಿದ್ದಾಳೆ, ಒಂದು ದೋಷವು ಇಲ್ಲದೆ ಇದ್ದ ಹಾಗೆ ತಪ್ಪು ಇಲ್ಲದೆ ಇರುವ ಹಾಗೆ ವ್ರತವನ್ನು ಆಚರಣೆ ಮಾಡಿದ್ದಾಳೆ, ಇಷ್ಟಾದರೂ ಒಂದು ಸಣ್ಣ ತಪ್ಪು. ಇಂದ್ರ ದೇವರು ಕಾಯುತ್ತಾ ಇದ್ದರು ಇದಕ್ಕಾಗಿಯೇ, ಗೊತ್ತು ಅವರಿಗೆ ನನ್ನನ್ನು ಸಂಹಾರ ಮಾಡುವಂತಹ ಒಬ್ಬ ಮಗ ಬೇಕು ಅಂತ ಇವಳು ವ್ರತ ಮಾಡುತ್ತಾ ಇದ್ದಾಳೆ ಅಂತ ಇಷ್ಟು ಗೊತ್ತಾದರೂ ಇಂದ್ರ ದೇವರು ಸೇವೆಗೆ ಅಂತ ಬಂದಿದ್ದಾರೆ. ನೀನು ಬಹಳ ದೊಡ್ಡ ವ್ರತ ಮಾಡುತ್ತಾ ಇದ್ದೀಯಂತೆ ಈ ವ್ರತಕ್ಕೆ ನಾನು ನಿನ್ನ ಮಗನಾಗಿ ಸೇವೆಯನ್ನು ಮಾಡುತ್ತೇನೆ ಅಂತ ಅವಳಿಗೂ ಆಶ್ಚರ್ಯ ಅನ್ನಿಸಿತು ಇಂದ್ರನನ್ನೆ ಕೊಲ್ಲುವ ಮಗ ಬೇಕು ಅಂತ ನಾನು ವ್ರತ ಮಾಡಿದರೆ ಅವನು ಸೇವೆ ಮಾಡುವುದಕ್ಕೆ ಬರುತ್ತಾನೆ ಅಂದರೆ ಇಂದ್ರನ ಔದಾರ್ಯ ಇದು ಅದ್ಭುತ ಆಶ್ಚರ್ಯ ಅಂತ ಅನ್ನಿಸಿದೆ, ಸರಿ ಭಗವಂತನ ಇಚ್ಛೆ ಅಂತ ಸುಮ್ಮನಿದ್ದಾಳೆ. ಅಂತಹ ಮೂರು ಲೋಕಗಳ ಒಡೆಯನಾದಂತಹ ಇಂದ್ರ, ತತ್ವಾಭಿಮಾನಿ ದೇವತೆ ಅಂತಹ ಮಹಾನುಭಾವನಾಗಿದ್ದರೂ ಕೂಡ ಇವಳಲ್ಲಿ ತಪ್ಪು ಇಲ್ಲದೆ ಇದ್ದರೆ ಇವಳ ಅಪೇಕ್ಷೆಗೆ ವಿರುದ್ಧವಾಗಿ ಮಾಡುವುದಕ್ಕೆ ಅವನಿಗೂ ಸಾಧ್ಯ ಇರಲಿಲ್ಲ, ಕಾಯುತ್ತಾ ಇದ್ದಾನೆ ಹೊರತು ಏನೋ ತನ್ನ ಇಚ್ಛೆಗೆ ಬಂದದ್ದು ಮಾಡಲಿಕ್ಕೆ ಆಗಲಿಲ್ಲ. ಅರ್ಥ ಮಾಡಿಕೊಳ್ಳಿ ನಾವು ನಮಗೆ ವಿಹಿತವಾದ ಧರ್ಮವನ್ನು, ಕರ್ಮಗಳನ್ನು ಚೆನ್ನಾಗಿ ಮಾಡುತ್ತಾ ಇದ್ದರೆ ದೇವತೆಗಳೂ ಮಹಾ ಸಮರ್ಥರಾಗಿದ್ದರೂ ನಮಗೆ ಪೀಡೆ ಕೊಡುವುದಿಲ್ಲ. ನಮ್ಮಲ್ಲಿ ಏನಾದರೂ ಲೋಪದೋಷಗಳಿದ್ದರೆ ಮಾತ್ರ ಆಗ ದೇವತೆಗಳು ನಮಗೆ ಶಿಕ್ಷೆಯನ್ನು ಕೊಡುತ್ತಾರೆ, ಅಸುರರು ಇದೊಂದು ಅವಕಾಶ ಅಂತ ತಿಳಿದು ನಾನಾ ರೀತಿಯಿಂದ ನಮಗೆ ಪೀಡೆಯನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅದಕ್ಕಾಗಿ ಮನುಷ್ಯ ಶಾಸ್ತ್ರೋಕ್ತವಾದ ರೀತಿಯಲ್ಲಿ ತನ್ನ ಕರ್ತವ್ಯ ಕರ್ಮಗಳನ್ನು ಮಾಡುವುದರ ವಿಷಯದಲ್ಲಿ ಬಹಳ ಜಾಗರೂಕನಾಗಿರಬೇಕು ಅನ್ನುವುದನ್ನು ಹರಿವಂಶ ಹಾಗೂ ಶ್ರೀಮದ್ಭಾಗವತಗಳು ನಮಗೆ ತಿಳಿಸಿಕೊಡುತ್ತಾ ಇವೆ.

ಅಕೃತ್ವಾ ಪಾದಯೋಃ ಶೌಚಂ ದಿತಿಃ ಶಯನಮಾವಿಶತ್ ॥ (3.132 ಹರಿವಂಶಪರ್ವ)

ಅಷ್ಟೆ. ಪಾದವನ್ನು ತೊಳೆದು, ಕೈ ತೊಳೆದು ಎಲ್ಲಾ ಒರಿಸಿಕೊಂಡು ಮಲಗಬೇಕಾಗಿತ್ತು ಅಷ್ಟನ್ನು ಮರೆತ್ತಿದ್ದಾಳೆ. ಹಾಗಾದರೆ ವ್ರತಾಚರಣೆಯನ್ನು ಮಾಡಬೇಕಾದಾಗ ಮಾಡಬೇಕಾದ ಕರ್ತವ್ಯ ಕರ್ಮಗಳನ್ನು ಮಾಡಿಲ್ಲ ಅನ್ನುವುದಕ್ಕೋಸ್ಕರ ಇಂದ್ರ ದೇವರು ಉದರಯಲ್ಲಿಯೇ ಪ್ರವೇಶ ಮಾಡಿ ಸೂಕ್ಷ್ಮರೂಪದಿಂದ ಆ ಗರ್ಭವನ್ನು ಏಳು



ಭಾಗ ಮಾಡಿದ್ದಾರೆ. ಅವುಗಳು ಅಳುವುದಕ್ಕೆ ಪ್ರಾರಂಭ ಮಾಡಿದರೆ ಒಂದೊಂದರಲ್ಲಿ ಮತ್ತೆ ಏಳು ಭಾಗ ಮಾಡಿದರು ನಲವತ್ತೊಂಬತ್ತು ಜನ **'ಮರುತ್ ಮಾರೋದೀಃ'** ಅಳಬೇಡ ಅಳಬೇಡ ಅಂತ ಅವರಿಗೆ ಹೇಳಿದ್ದಕ್ಕೆ ಮರುತ್ ಎಂಬ ಹೆಸರನ್ನು ಪಡೆದುಕೊಂಡು ಅವರೆಲ್ಲ ಹುಟ್ಟಿ ಬಂದಿದ್ದಾರೆ. ಆಶ್ಚರ್ಯ ಆಗಿದೆ ದಿತಿ ದೇವಿಗೆ ಒಬ್ಬ ಮಗನಾಗಬೇಕು ಅಂತ ನಾನು ವ್ರತ ಮಾಡಿದರೆ ನಲವತ್ತೊಂಬತ್ತು ಜನ ಹುಟ್ಟಿದ್ದಾರಲ್ಲ ಅಂತ ಅವರೆಲ್ಲರೂ ಕೂಡ ದೇವತೆಗಳು. ಅವರು ಮೂಲತಃ ಇವರೆಲ್ಲ ಭಾರತೀ ದೇವಿಯಿಂದ ಹುಟ್ಟಿದವರು, ವಾಯು ದೇವರಿಂದ ಭಾರತೀ ದೇವಿಯಲ್ಲಿ ಹಿಂದೊಮ್ಮೆ ಜನಿಸಿದವರೆ ಪುನಃ ಈಗ ಕಶ್ಯಪರಿಂದ ದಿತಿಯಲ್ಲಿ ಹುಟ್ಟಿ ಬರುತ್ತಾ ಇದ್ದಾರೆ. ಋಗ್ಭಾಷ್ಯದಲ್ಲಿ ಬಹು ಅದ್ಭುತವಾಗಿ ಇವರ ಬಗ್ಗೆ ಶ್ರೀಮದಾಚಾರ್ಯರು ಎಲ್ಲ ವರ್ಣನೆ ಮಾಡಿದ್ದಾರೆ. ಮಹಾಜ್ಞಾನಿಗಳು, ಮಹಾಸಮರ್ಥರು, ಪರ್ವತಗಳನ್ನೂ ಎತ್ತಿ ಹಾಕುವ ಸಾಮರ್ಥ್ಯ, ನಾನಾ ವಿಧವಾದಂತಹ ಕಾರ್ಯಗಳನ್ನು ಮಾಡುವ ಶಕ್ತಿ ಸಾಮರ್ಥ್ಯಗಳಿವೆ. ಜ್ಞಾನದಲ್ಲಿಯೂ, ಬಲದಲ್ಲಿಯೂ, ವೀರ್ಯದಲ್ಲಿಯೂ ಎಲ್ಲ ಗುಣಗಳಲ್ಲಿಯೂ ಅತೀ ಉತ್ತಮರು ಯಾಕೆ ಅನ್ನುವುದಕ್ಕೆ ಶ್ರೀಮದಾಚಾರ್ಯರು ಕಾರಣ ಕೊಡುತ್ತಾರೆ ತಂದೆ ತಾಯಿ ಎಂಥವರು ಇದ್ದಾರೆ ನೋಡಿ ಅಂತ. ಸಾಕ್ಷಾತ್ ಜೀವೋತ್ತಮರಾದ ವಾಯು ದೇವರು ಹಾಗೂ ಭಾರತೀ ದೇವಿ ಅಂಥವರ ಪುತ್ರರು ಅಂದಮೇಲೆ ಇವರ ಸಾಮರ್ಥ್ಯ ಎಷ್ಟು ಅದ್ಭುತ ಅಂತ ಅಂತಹ ಮಹಾನುಭಾವರು. ಅವರು ಕಶ್ಯಪರಿಂದ ದಿತಿ ದೇವಿಯಲ್ಲಿ ಪುನಃ ಜನಿಸಿ ಬಂದಿದ್ದಾರೆ ಇಂದ್ರನ ಅನುಚರರಾಗಿ ದೇವತೆಗಳ ಗಣದಲ್ಲಿ ಸೇರಿಕೊಂಡು ಇಂದ್ರನಿಗೆ ಸಹಾಯಕರಾಗಿ ಹೋಗಿದ್ದಾರೆ. ಇಂದ್ರನ ವಿರೋಧ ಮಾಡುವುದು, ಸಂಹಾರ ಮಾಡುವುದಂತೂ ದೂರ ಉಳಿಯಿತು, ವಿರೋಧ ಪಕ್ಷದಲ್ಲಿಯೂ ಇಲ್ಲದಂತೆ ಇಂದ್ರನ ಅನುಚರರಾಗಿ ಸಹಾಯಕರಾಗಿ ದೇವಗಣಕ್ಕೆ ಸೇರಿಕೊಂಡು ಮರುತ್ ದೇವತೆಗಳೆಲ್ಲ ಹೊರಟಿದ್ದಾರೆ. ದಿತಿ ದೇವಿಗೆ ಬಹಳ ಆಶ್ಚರ್ಯ ಆಗಿದೆ ಭಗವಂತನ ಸಂಕಲ್ಪ ಹೇಗಿದೆ ನಾವು ಅಂದುಕೊಂಡದ್ದು ಒಂದು, ಭಗವಂತನ ಸಂಕಲ್ಪ ಒಂದು. ಸರಿ, ನನ್ನಿಂದ ಏನೋ ಒಂದು ದೊಡ್ಡ ಅಪರಾಧ ಆಗುತ್ತಾ ಇತ್ತು ಅದನ್ನು ದೇವರು ತಪ್ಪಿಸಿದ ಅಂತ ಸಂತೋಷ ಪಟ್ಟಿದ್ದಾಳೆ ಈ ರೀತಿ ಆ ಮರುತ್ ದೇವತೆಗಳ ಅವತಾರವಾಗಿದೆ ಅಂತ ತಿಳಿಸುತ್ತಾರೆ.

ಮರುತಾಂ ಚ ಶುಭಂ ಜನ್ಮ ಶೃಣ್ವತಃ ಪಠತೋಽಪಿ ವಾ ।

ನಾವೃತ್ತಿಭಯಮಸ್ತೀಹ ಪರಲೋಕಭಯಂ ಕುತಃ ॥ (3.140 ಹರಿವಂಶಪರ್ವ)

ಈ ಮರುತ್ ದೇವತೆಗಳ ಅವತಾರದ ಕಥೆಯನ್ನು ಕೇಳಿದರೆ ಯಾವುದೇ ವಿಧವಾಗಿ ಇರತಕ್ಕಂತಹ ಭಯ ಇಲ್ಲ, ನರಕಾದಿ ಭಯ ಇಲ್ಲ, ಪುನರ್ಜನ್ಮದ ಭಯವೇ ಇಲ್ಲ ಅಷ್ಟು ಉತ್ತಮವಾದಂತಹ ಸ್ಥಾನ ಆ ಮರುತ್ ದೇವತೆಗಳ ಅನುಗ್ರಹದಿಂದ ಸಿಗುತ್ತೆ ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ.

ಹಿಂದೆ ಪೃಥು ಚಕ್ರವರ್ತಿಯ ಕಥೆಯನ್ನು ಸಂಕ್ಷೇಪವಾಗಿ ಹೇಳಿದ್ದರು ಅದರ ಬಗ್ಗೆ ವಿಸ್ತಾರವಾಗಿ ಮತ್ತೆ ತಿಳಿಸುತ್ತಾ ಇದ್ದಾರೆ. ಬ್ರಹ್ಮ ದೇವರು ಪೃಥು ಚಕ್ರವರ್ತಿಗೆ ದೊಡ್ಡದಾದ ರಾಜ್ಯವನ್ನು ಕೊಟ್ಟರು. ಆ ವೇನನ ಶರೀರವನ್ನ ಮಥನ ಮಾಡಿದಾಗ ಪೃಥು ಹಾಗೂ ಅರ್ಚಿರ್ ಇವರಿಬ್ಬರು ಅವತಾರ ಮಾಡಿದ್ದಾರೆ. ಪೃಥುವಿನಲ್ಲಿ ಪರಮಾತ್ಮನ, ಅರ್ಚಿಯಲ್ಲಿ ಲಕ್ಷ್ಮೀ ದೇವಿಯ ಸನ್ನಿಧಾನ ಅಂತಹ ಪೃಥು ಚಕ್ರವರ್ತಿಗೆ ದೊಡ್ಡದಾದ ರಾಜ್ಯದ ಜವಾಬ್ದಾರಿಯನ್ನು ಒಪ್ಪಿಸಿ ಬ್ರಹ್ಮ ದೇವರು ಆದೇಶ ಮಾಡಿದ್ದಾರೆ ಚೆನ್ನಾಗಿ ರಾಜ್ಯವನ್ನು ಪರಿಪಾಲನೆ ಮಾಡಬೇಕು ಅಂತ. ಇದೇ ಸಂದರ್ಭದಲ್ಲಿ ಬ್ರಹ್ಮ ದೇವರು ಅನೇಕರಿಗೆ ರಾಜ್ಯಗಳನ್ನು ಕೊಟ್ಟಿದ್ದಾರೆ ಅವರವರಿಗೆ ಒಂದೊಂದು ಒಂದೊಂದು ರಾಜ್ಯವನ್ನು ಒಪ್ಪಿಸಿದ್ದಾರೆ ಯಾರು ಯಾವುದಕ್ಕೆ ರಾಜರು, ಯಾರು ಯಾವುದಕ್ಕೆ ನಿಯಾಮಕರೂ ಅವರೆಲ್ಲರ

ಅನುಸಂಧಾನವನ್ನ ನಾವು ಮಾಡಬೇಕು. ಈ ಪೃಥ್ವಿಯನ್ನ ಪೃಥ್ವಿ ಅಂತ ಕರಿಯುವುದು ಈ ಪೃಥು ರಾಜ ಈ ಪೃಥ್ವಿಯಲ್ಲಿ ಏರುಪೇರೆಲ್ಲಾ ಇತ್ತು, ತಗ್ಗು ದಿನ್ನೆಗಳು ಅವುಗಳೆಲ್ಲವನ್ನ ಸಮವಾಗಿ ಮಾಡಿ ಪಟ್ಟಣ, ಗ್ರಾಮ ಇವುಗಳ ವ್ಯವಸ್ಥೆಯನ್ನು ಮಾಡಿ ಒಂದು ವ್ಯವಸ್ಥಿತ ರೀತಿಯಲ್ಲಿ ಪೃಥ್ವಿಯ ಮೇಲೆ ಜೀವನವನ್ನ ನಡೆಸುವಂತೆ ಮಾಡಿದವನೇ ಇವನು ಅನ್ನುವುದಕ್ಕೆ ಇವನ ಹೆಸರಿನಿಂದ ಅದಕ್ಕೆ ಪೃಥ್ವಿ ಅಂತ ಹೆಸರು ಬಂತು. ಹರಿವಂಶ ಹೇಳುತ್ತದೆ ಇವನು ಮಾಡಿದ ಚರಿತ್ರೆಯೆಲ್ಲ ಪ್ರಾತಃಸ್ಮರಣೀಯ ಅಂತ ಅಷ್ಟು ಭಗವಂತನ ವಿಶೇಷ ಸನ್ನಿಧಾನ ಇರುವುದರಿಂದ ಆ ಪೃಥು ಚಕ್ರವರ್ತಿ ಮಾಡಿದ ಅದ್ಭುತ ಕಾರ್ಯಗಳು ಏನಿವೆ ಅವುಗಳನ್ನು ಪ್ರಾತಃ ಸ್ಮರಣೆ ಮಾಡಬೇಕು ಅಂತೆ. ಅಷ್ಟೆಲ್ಲ ಸ್ಮರಣೆ ಮಾಡಲಿಕ್ಕೆ ಎಲ್ಲಿ ಆಗುತ್ತೆ ನೋಡಿ, ಪೃಥ್ವಿಯ ಸ್ಮರಣೆ ಮಾಡಿಬಿಟ್ಟರೆ ಆ ಪೃಥ್ವಿ ಅನ್ನುವ ಹೆಸರಿನೊಳಗೆ ಪೃಥುವಿನ ಸ್ಮರಣೆಯು ಬಂತು ಅದಕ್ಕಾಗಿ ಪ್ರಾತಃ ಕಾಲದಲ್ಲಿ ಎದ್ದು ಪೃಥ್ವಿ ದೇವಿಯ ಸ್ಮರಣೆಯನ್ನು ನಾವು ಮಾಡಿದರೆ ಪೃಥು ರಾಜನ ಸ್ಮರಣೆಯೂ ಬಂದಂತೆನೆ. ಪೃಥ್ವಿ ದೇವಿಯ ವಿಶೇಷವಾದ ವ್ಯವಸ್ಥೆಯನ್ನ ಮಾಡಿ ಒಂದು ಸುವ್ಯವಸ್ಥಿತವಾದ ಕಲ್ಪನೆಯನ್ನು ಮಾಡಿಕೊಟ್ಟಂತಹ ವ್ಯಕ್ತಿ ಆ ಪೃಥು ಚಕ್ರವರ್ತಿ ಎಂಬುದಾಗಿ ನಾವು ಚಿಂತನ ಮಾಡಬೇಕು ಅಂತ ಹೇಳಿದ್ದಾರೆ.

ಬ್ರಾಹ್ಮಣರಿಗೆ ಹಾಗೂ ನಕ್ಷತ್ರಗಳಿಗೆ ಗ್ರಹಗಳಿಗೆ ಎಲ್ಲ ಬಳ್ಳಿಗಳು ಯಜ್ಞ ತಪಸ್ಸು ಇವುಗಳೆಲ್ಲದಕ್ಕೂ ರಾಜನಾಗಿ, ಒಡೆಯನಾಗಿ ಚಂದ್ರನನ್ನು ನಿಯಮನ ಮಾಡಿದ್ದಾರೆ. ಚೆನ್ನಾಗಿ ನಾವು ಚಿಂತನ ಮಾಡಬೇಕು ಬ್ರಾಹ್ಮಣರೆಲ್ಲಾ ನಮ್ಮ ಬ್ರಾಹ್ಮಣ್ಯವನ್ನು ಚೆನ್ನಾಗಿ ಉಳಿಸಿಕೊಳ್ಳಬೇಕು ಅಂತಾದರೆ ಆ ಚಂದ್ರನ ವಿಶೇಷವಾದ ಅನುಗ್ರಹವನ್ನು ಪಡೆಯಬೇಕು, ಬ್ರಾಹ್ಮಣರ ರಾಜ. ಬ್ರಾಹ್ಮಣರು ತಮಗೆ ಬಂದ ಕಷ್ಟಗಳ ಪರಿಹಾರವನ್ನು ಮಾಡಿಕೊಳ್ಳುವುದಕ್ಕೋಸ್ಕರವಾಗಿಯೂ ಚಂದ್ರನಿಗೆ ಶರಣು ಹೋಗಬೇಕು, ತಮ್ಮ ಬ್ರಾಹ್ಮಣ್ಯದ ಸಂರಕ್ಷಣೆಗಾಗಿಯೂ ಚಂದ್ರನಿಗೆ ಶರಣು ಹೋಗಬೇಕು. ಬ್ರಹ್ಮ ಜ್ಞಾನವನ್ನು ಸಂಪಾದನೆ ಮಾಡುವಂತಹ ಬ್ರಾಹ್ಮಣನಾಗಿ ಹುಟ್ಟಿ ಮಾಡಬೇಕಾದಂತಹ ಕರ್ತವ್ಯಗಳನ್ನು ಮಾಡುವುದಕ್ಕೋಸ್ಕರವಾಗಿಯೂ ಕೂಡ ಆ ಚಂದ್ರನಿಗೆ ಶರಣು ಹೋಗಬೇಕು ಅನ್ನುವುದರ ಸೂಚನೆಯನ್ನು ನೀಡುತ್ತಾ ಇದ್ದಾರೆ, ದ್ವಿಜ ರಾಜ ಅಂತ ಕರೆಯುವುದು ಅದಕ್ಕಾಗಿಯೇ ಚಂದ್ರನನ್ನ. ಅದರಂತೆ ಎಲ್ಲ ವನಸ್ಪತಿಗಳಿಗೆ, ನಕ್ಷತ್ರಾದಿಗಳಿಗೂ ಅವನು ರಾಜನಾಗಿದ್ದಾನೆ, ಯಜ್ಞಗಳಿಗೆ, ತಪಸ್ಸುಗಳಿಗೆ ರಾಜನಾಗಿದ್ದಾನೆ. ನಾವು ಜೀವನದಲ್ಲಿ **'ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್'**[1] ಅಂತ ಶ್ರೀಕೃಷ್ಣ ಪರಮಾತ್ಮ ಹೇಳಿದ್ದಾನೆ ಯಜ್ಞ, ದಾನ, ತಪಸ್ಸನ್ನು ಎಲ್ಲರೂ ಮಾಡಲೇಬೇಕು **'ನ ತ್ಯಾಜ್ಯಂ ಕಾರ್ಯಮೇವ ತತ್'**[2] ಅಂತ. ಅಂತಹ ಯಜ್ಞ, ದಾನ, ತಪಸ್ಸುಗಳನ್ನು ಮಾಡಬೇಕು ಅಂತಾದರೆ ಚಂದ್ರ ದೇವರಿಗೆ ವಿಶೇಷವಾಗಿ ನಾವು ಪ್ರಾರ್ಥನೆಯನ್ನು ಮಾಡಬೇಕು ಅಂತ ನಾವಿಲ್ಲಿ ತಿಳಿಯಬೇಕು. ಶ್ರೀಮದಾಚಾರ್ಯರು ಕೂಡ ಐತರೇಯ ಭಾಷ್ಯದಲ್ಲಿ ಹೇಳಿದ ಹಾಗೆ ಯಜ್ಞದ ಪ್ರೇರಕ ಹಾಗೆ ಇಂದ್ರ ಯಜ್ಞ ಸಾಧನಗಳ ಬಗ್ಗೆ, ಯಜ್ಞ ಸಾಧನಗಳ ಸಂಭಾರಗಳನ್ನ ನಾವು ಸಂಗ್ರಹ ಮಾಡುವುದಕ್ಕೆ ಚಂದ್ರ ದೇವರ ವಿಶೇಷವಾದ ಅನುಗ್ರಹ ಬೇಕು, ಚಂದ್ರ ದೇವರು ನಮ್ಮ ಮನಸ್ಸಿಗೆ ಪ್ರಚೋದನೆಯನ್ನು ಮಾಡಬೇಕು ಆ ಯಜ್ಞ ಸಾಧನಗಳನ್ನೆಲ್ಲ. ನಮ್ಮ ಜೀವನವೇ ಒಂದು ಯಜ್ಞ ಹಾಗೂ ಜೀವನದಲ್ಲಿ ಮಾಡುವಂತಹ ನಾನಾ ವಿಧ ಯಜ್ಞಗಳು ದ್ರವ್ಯಯಜ್ಞ, ಜ್ಞಾನಯಜ್ಞ ಮೊದಲಾದ ಯಜ್ಞಗಳು ಆ ತರಹದ ಯಜ್ಞಗಳನ್ನ ಮಾಡುವುದಕ್ಕೆ, ಯಜ್ಞ ಸಾಧನಗಳನ್ನ ಸಂಗ್ರಹಿಸುವುದಕ್ಕೆ ಆ ಪ್ರವೃತ್ತಿ ನಮ್ಮಲ್ಲಿ ಬರುವುದಕ್ಕೆ ಚಂದ್ರ ದೇವರ ವಿಶೇಷವಾದಂತಹ ಅನುಗ್ರಹ ನಮಗಿರಬೇಕು ಅನ್ನುವುದನ್ನು ಇಲ್ಲಿ ತಿಳಿಯಬೇಕು.

1. 18.5 ಭ ಗೀತಾ; 2. 18.5 ಭ ಗೀತಾ



ಸಮಗ್ರವಾದ ಜಲತತ್ವಕ್ಕೆ ವರುಣ ದೇವರನ್ನು ರಾಜನನ್ನಾಗಿ ಮಾಡಿದ್ದಾನೆ, ಅಭಿಮಾನಿ ದೇವತೆಯನ್ನಾಗಿ ಮಾಡಿದ್ದಾರೆ. ಅದರಂತೆ ಎಲ್ಲ ರಾಜರಿಗೆ ಕುಬೇರ ಅವನು ರಾಜನಾಗಿದ್ದಾನೆ, ರಾಜ ರಾಜ ಅದಕ್ಕಾಗಿಯೇನೆ **'ರಾಜ ರಾಜಾಯತೇ'** ಅಂತ ಅನ್ನುತ್ತಾರೆ. ರಾಜ ರಾಜ ಅಂತ ಕುಬೇರ ಯಾಕೆ ಅಂದರೆ ರಾಜರಿಗೆಲ್ಲಾ ಅವನು ರಾಜ ಅನ್ನುವುದಕ್ಕೆ ಅವನಿಗೆ ರಾಜ ರಾಜ ಅಂತ ಕರೆಯುವುದು **'ರಾಜ್ಞಾಂ ಪ್ರಭುಂ ವೈಶ್ರವಣಂ ಚ ತದ್ವತ್'**[1] ಅವನು ರಾಜರಿಗೂ ರಾಜ. ಉಳಿದವರಿಗೆ ಬೃಹಸ್ಪತಿ ರಾಜನಾಗಿದ್ದಾನೆ, ಅದರಂತೆ ಶುಕ್ರಾಚಾರ್ಯರು ಎಲ್ಲ ಭೃಗುಗಳಿಗೆ, ಆದಿತ್ಯರಿಗೆ ವಿಷ್ಣು, ಅಷ್ಟ ವಸುಗಳಲ್ಲಿ ಅಗ್ನಿ, ಪ್ರಜಾಪತಿಗಳಿಗೆ ದಕ್ಷಪ್ರಜಾಪತಿ, ಮರುತ್ ದೇವತೆಗಳಿಗೆಲ್ಲ ಇಂದ್ರ, ದೈತ್ಯ ದಾನವರಿಗೆಲ್ಲ ಪ್ರಹ್ಲಾದ ಇವನು ರಾಜನಾಗಿದ್ದಾನೆ, ಪಿತೃಗಳಿಗೆ ಯಮ, ಸಾಧ್ಯರಿಗೆ ಸರ್ವೋತ್ತಮನಾದ ನಾರಾಯಣ ಸರ್ವನಿಯಾಮಕ. ವಿಶೇಷವಾಗಿ ಈ ಸಂದರ್ಭದಲ್ಲಿ ಭಗವಂತ ಒಂದು ರಾಜ್ಯವನ್ನ ತಾನು ತೆಗೆದುಕೊಂಡವನಂತೆ ಉಳಿದವರಿಗೆಲ್ಲಾ ಹಂಚಿಕೊಟ್ಟು ಹಾಗೆ ತಾನು.

ಮಾತೄಣಾಂ ಚ ವ್ರತನಾಂ ಚ ಮನ್ತ್ರಾಣಾಂ ಚ ತಥಾ ಗವಾಮ್ ॥ (4.6 ಹರಿವಂಶಪರ್ವ)

ಗೋವುಗಳಿಗೆ, ಮಂತ್ರಗಳಿಗೆ, ವ್ರತಗಳಿಗೆ ಹಾಗೂ ಯಕ್ಷರಿಗೆ ಎಲ್ಲ ತರಹದ ಜೀವರಾಶಿಗಳಿಗೆ ಪರಮಾತ್ಮ ತಾನು ಅನಾದಿಕಾಲದಿಂದ ಅನಂತಕಾಲದವರೆಗೆ ರಾಜನಾಗಿಯೇ ಇದ್ದಾನೆ ವಿಶೇಷವಾಗಿ ಅದನ್ನು ತೋರಿಸಿಕೊಂಡಿದ್ದಾನೆ. ರುದ್ರರಿಗೆಲ್ಲ ಮಹಾರುದ್ರ ದೇವರು ಏಕಾದಶ ರುದ್ರರಲ್ಲಿ ಪ್ರಧಾನ ರುದ್ರರಾಗಿ ಶಂಕರ ಅವರು ರಾಜರಾಗಿದ್ದಾರೆ ಹೀಗೆ ಅನೇಕರು ವಿವಿಧ ಕ್ಷೇತ್ರಗಳಲ್ಲಿ ರಾಜರಾಗಿದ್ದಾರೆ ಎಂಬುದಾಗಿ ಇಲ್ಲಿ ತಿಳಿಸುತ್ತಾರೆ.

ಪೂರ್ವಾದಿ ದಿಕ್ಕುಗಳಿಗೆ ಪಾಲಕರನ್ನು ಮಾಡಿದ್ದಾನೆ. ಪೂರ್ವ ದಿಕ್ಕಿಗೆ ಸುಧನ್ವ, ದಕ್ಷಿಣ ದಿಕ್ಕಿಗೆ ಶಂಖ, ಪಶ್ಚಿಮ ದಿಕ್ಕಿಗೆ ಕೇತುಮಾನ್, ಉತ್ತರ ದಿಕ್ಕಿನಲ್ಲಿ ಹಿರಣ್ಯರೋಮ ಅಂತ ಹೀಗೆ ನಾಲ್ಕು ದಿಕ್ಕುಗಳಿಗೆ ನಾಲ್ಕು ಜನರನ್ನ ನಿಯಾಮಕರನ್ನಾಗಿ ವ್ಯವಸ್ಥೆ ಮಾಡಿದ್ದಾರೆ ಬ್ರಹ್ಮ ದೇವರು ಅಂತ ಸಂಕ್ಷಿಪ್ತವಾಗಿ ಜನಮೇಜಯನಿಗೆ ವೈಶಂಪಾಯನರು ಹೇಳಿದಾಗ ಪೃಥು ರಾಜನ ಚರಿತ್ರೆಯನ್ನು ನನಗೆ ಸಂಕ್ಷಿಪ್ತವಾಗಿ ಕೇಳಿದ್ದಕ್ಕೆ ತೃಪ್ತಿ ಇಲ್ಲ ವಿಸ್ತೃತವಾಗಿ ವರ್ಣನೆ ಮಾಡಬೇಕು ಎಂಬುದಾಗಿ ಕೇಳಿದ್ದಾರೆ.

ಶುದ್ಧವಾಗಿ ಕೇಳಬೇಕಪ್ಪ ಜನಮೇಜಯ ಅತಿ ಶುದ್ಧರಾಗಿ, ಬಹಳ ಪರಿಶುದ್ಧವಾದ, ಉದಾರವಾದ ಹೃದಯದಿಂದ ಭಕ್ತಿ ಶ್ರದ್ಧೆಗಳಿಂದ ಆ ಪೃಥು ರಾಜನ ಚರಿತ್ರೆಯನ್ನು ಕೇಳಬೇಕು ಶ್ರದ್ಧೆಯಿಂದ ಕೇಳು ಅಂತ ಪೃಥು ರಾಜನ ಚರಿತ್ರೆಯನ್ನು ವರ್ಣನೆ ಮಾಡುತ್ತಾರೆ ಈ ಮೊದಲು ನೀವೆಲ್ಲ ತಿಳಿದಿದ್ದೀರಿ. ಆ ಪೃಥು ರಾಜ ತಾನು ಪೃಥ್ವಿ ಸುಭಿಕ್ಷೆಯನ್ನು ನೀಡದಾಗ ಪೃಥ್ವಿಯನ್ನು ನಿಗ್ರಹ ಮಾಡುವುದಕ್ಕೆ ಹೊರಟು ಪೃಥ್ವಿಯ ಸೂಚನೆಯಂತೆ ಆ ಧರಾ ದೇವಿ ಗೋ ರೂಪದಲ್ಲಿ ಬಂದು ಇವನಿಗೆ ಸೂಚನೆ ಕೊಟ್ಟ ರೀತಿಯಲ್ಲಿ ಅತ್ಯಂತ ಶುದ್ಧರಾದ ಧಾರ್ಮಿಕರಾದಂತಹ ವ್ಯಕ್ತಿಗಳು, ಅವರನ್ನು ನೀನು ಕರೆದುಕೊಂಡು ಬಂದರೆ ಅವರನ್ನು ನೋಡಿ ನಾನು ಹಾಲು ಕೊಡುತ್ತೇನೆ. ಶ್ರೀಮದ್ಭಾಗವತದಲ್ಲಿಯೂ ಈ ವಿಷಯ ಬರುತ್ತದೆ ಚತುರ್ಥಸ್ಕಂಧದಲ್ಲಿ ಹರಿವಂಶದಲ್ಲಿಯೂ ಬರುತ್ತದೆ. ಕೊಟ್ಟದ್ದು ಹಾಲು, ಅವರು ಬಯಸಿದ್ದು ಬೇರೆ ಬೇರೆ ಪದಾರ್ಥಗಳನ್ನು ಹೇಗೆ ಅವರಿಗೆ ಬೇರೆ ಬೇರೆ ಪದಾರ್ಥಗಳು ಸಿಕ್ಕದ್ದು ಅಂತ ಅದಕ್ಕೆ ಶ್ರೀಮದ್ಭಾಗವತದ ವ್ಯಾಖ್ಯಾನದಲ್ಲಿ ಯಾದವಾರ್ಯರು ಹೇಳುತ್ತಾರೆ. ಗೋರೂಪದಲ್ಲಿ ಇದ್ದ ಪೃಥ್ವಿ ತಾನು ಹಾಲನ್ನು ನೀಡಿದರೂ ಕೂಡ ಅದು ಅವರವರಿಗೆ ಬೇಕಾದ ವಸ್ತುವಿನ ರೂಪದಲ್ಲಿ ಪರಿಣಾಮವನ್ನು ಹೊಂದಿ ಅವರಿಗೆ ಲಭಿಸಿದೆ. ಅಂತಹ ಒಂದು ವಿಶಿಷ್ಟವಾದ ಭಗವಂತನ ಅಚಿಂತ್ಯವಾದ ಅದ್ಭುತವಾದ ಶಕ್ತಿಯಿಂದ ಆ ಹಾಲು

1. 1.7.70 ಪದ್ಮಪುರಾಣ

ಅವರವರಿಗೆ ಬೇಕಾದ ವಸ್ತುವಿನ ರೂಪದಲ್ಲಿ ಪರಿಣಾಮಗೊಂಡಿದೆ ಎಂಬುದಾಗಿ ಇಲ್ಲಿ ತಿಳಿಸುತ್ತಾರೆ. ಯಾರು ಉತ್ತಮರಾದವರು ವತ್ಸದ ರೂಪದಲ್ಲಿ ಬಂದರು ಅಂತ ಸ್ವಾಯಂಭುವ ಮನು, ಸ್ವಾಯಂಭುವ ಮನುವನ್ನೆ ಕರುವನ್ನಾಗಿ ಎದುರಿಗೆ ನಿಲ್ಲಿಸಿದ್ದಾನೆ ಪೃಥು ಚಕ್ರವರ್ತಿ, ಬೇಡಿದ ಸಸ್ಯಗಳು ಸಂಪತ್ತಿ ಸಮೃದ್ಧವಾದಂತಹ ಸಸ್ಯಸಂಪತ್ತು ಬೆಳೆಯುವಂತೆ ಪೃಥ್ವಿ ದೇವಿ ತಾನು ಹಾಲನ್ನು ನೀಡಿದ್ದಾಳೆ. ಅದೇ ರೀತಿ ದೇವತೆಗಳು ಇಂದ್ರ ದೇವರನ್ನು ಮುಂದೆ ಮಾಡಿಕೊಂಡು ಬಂದಿದ್ದಾರೆ, ಯೋಗ್ಯವಾದಂತಹ ಅನ್ನವನ್ನು ದೇವತೆಗಳಿಗೆ ಕೊಟ್ಟಿದ್ದಾಳೆ, ಪಿತೃಗಳಿಗೆ ಸ್ವಧಾ ಎಂಬಂತಹ ಅನ್ನ ಹೀಗೆ ಅವರವರಿಗೆ ಬೇಕಾದ ಅನ್ನ, ಅವರವರಿಗೆ ಬೇಕಾದ ಸ್ಥಾನ, ಅವರವರಿಗೆ ಬೇಕಾದಂತಹ ಗುಣಗಳು ಶಕ್ತಿ ಸಾಮರ್ಥ್ಯಗಳು ಇವುಗಳೆನ್ನೆಲ್ಲಾ ಕೊಟ್ಟಿದ್ದಾರೆ ಅಂತ ಹೇಳುತ್ತಾರೆ.

ಯಮ ದೇವರು ಬಂದಿದ್ದಾರೆ, ಎಲ್ಲರನ್ನು ಸಂಹಾರ ಮಾಡುವ ಶಕ್ತಿಯನ್ನು ಯಮ ದೇವರಿಗೆ ನೀಡಿದ್ದಾಳೆ. ನಾಗಗಳು ಬಂದಿವೆ ಅವುಗಳಿಗೆ ವಿಷವನ್ನೇ ಕೊಟ್ಟಿದ್ದಾಳಂತೆ ಎಷ್ಟು ವಿಚಿತ್ರ ಇದೆ ನೋಡಿ. ಭಗವಂತನ ಸಂಕಲ್ಪದಂತೆ ಅವರವರಿಗೆ ಯೋಗ್ಯವಾದ ಕಾಲದಲ್ಲಿ ಆಯುಷ್ಯ ತೀರಿದಾಗ ಅವರನ್ನು ಕಚ್ಚಬೇಕು, ಅವರಿಗೆ ವಿಷದಿಂದ ಬಾಧೆಯಾಗಬೇಕು ಅಥವಾ ವಿಷದಿಂದ ಮರಣ ಆಗದಿದ್ದರೂ ಇನ್ನಿತರ ಬಾಧೆಗಳು ಆಗಬೇಕು ಅಂತ ಅವರವರ ಪಾಪ ಕರ್ಮಗಳಿಗೆ ತಕ್ಕಂತೆ ಆ ಶಿಕ್ಷೆಯನ್ನು ಕೊಡುವುದಕ್ಕೆ ವಿಷ ನಾಗಗಳಿಗೆ ಬೇಕು ಅನ್ನುವುದಕ್ಕೋಸ್ಕರ ಅನೇಕ ಜನ ಇತ್ತೀಚೆಗೆ ಹೇಳುತ್ತಾ ಇರುತ್ತಾರೆ ಇವತ್ತಿನ ಕಾಲದಲ್ಲಿ ಎಲ್ಲವೂ ಕೂಡ ಕಲಬೆರಕೆಯಾದ ವಸ್ತುಗಳೇ, ಶುದ್ಧ ವಸ್ತುಗಳು ಸಿಗುವುದಿಲ್ಲ ಅಂತ. ಎಷ್ಟರ ಮಟ್ಟಿಗೆ ಅಂತ ಸಾಯಬೇಕು ಅಂತ ಕೆಲವರು ವಿಷ ತೆಗೆದುಕೊಂಡರೂ ಸಾಯುವುದಿಲ್ಲ ಅಂತೆ ಯಾಕೆಂದರೆ ಅದು ಶುದ್ಧವಾದ ವಿಷ ಸಿಗುವುದಿಲ್ಲ ಇವತ್ತು ಅಂತ ಆ ಪರಿಸ್ಥಿತಿ ಯಾವತ್ತು ಬಂದಿತ್ತು. ವಿಷವೂ ಶುದ್ಧವಾದ ರೀತಿಯಲ್ಲಿ ಪಡೆದುಕೊಳ್ಳದೇ ಇರುವ ಪರಿಸ್ಥಿತಿ ಬಂದಾಗ ಪೃಥ್ವಿ ದೇವಿ ಆ ತಕ್ಷಕನನ್ನು ಮುಂದೆ ಮಾಡಿಕೊಂಡು ಬಂದಂತಹ ನಾಗಗಳಿಗೆ ವಿಷವನ್ನೇ ಹಾಲಿನ ರೂಪದಲ್ಲಿ ಕೊಟ್ಟಿದ್ದಾಳೆ. ಹೀಗೆ ನಾನಾ ವಿಧವಾದಂತಹ ಅಸುರರಿಗೆ ಮಾಯಾಶಕ್ತಿ, ಮಾಯಾಶಕ್ತಿ ಇದೆ ಅಸುರರಿಗೆ ಅನ್ನುವದಕ್ಕಾಗಿ ದೇವತೆಗಳಿಗೆ ಬೆಲೆ ಇದೆ ಆ ಎಲ್ಲ ಮಾಯೆಗಳನ್ನು ಗೆದ್ದು ದೇವತೆಗಳು ರಾಜ್ಯವನ್ನು ಆಳುತ್ತಾರೆ, ಭಕ್ತರಿಗೆ ಬಂದ ನಾನಾ ವಿಧವಾದಂತಹ ಅಸುರೀ ಶಕ್ತಿಗಳ ಪೀಡೆಯನ್ನ ತಮ್ಮ ಉಪಾಸನೆ ಮಾಡಿದವರಿಗೆ ಪರಿಹಾರ ಮಾಡುತ್ತಾರೆ ಅನ್ನುವುದಕ್ಕಾಗಿ **'ಹರಿಸ್ಮೃತಿಃ ಸರ್ವ ವಿಪದ್ವಿಮೋಕ್ಷಿಣಿ'.**

ನಾನಾ ವಿಧವಾದ ಮಾಯಾ ಯುದ್ಧಗಳನ್ನು ಆಡುತ್ತಾರೆ ದೇವತೆಗಳ ಜೊತೆಗೆ ದೈತ್ಯರು, ಕೇವಲ ಹರಿಸ್ಮರಣೆಯನ್ನು ಮಾಡಿ ಆ ಎಲ್ಲ ಮಾಯೆಯನ್ನು ಗೆಲ್ಲುತ್ತಾರೆ. ಇಡೀ ಜಗತ್ತನ್ನೇ ತನ್ನ ಮಾಯೆಯಿಂದ ಬಂಧಿಸಿದ ಭಗವಂತನಿಗೆ ಈ ಸಾಮಾನ್ಯವಾದ ಅಸುರರ ಮಾಯೆಯನ್ನು ಗೆಲ್ಲುವುದು ಯಾವುದೇ ದೊಡ್ಡ ಮಹತ್ವದ ವಿಷಯವಲ್ಲ. ಅಂತಹ ಮಾಯೆಯನ್ನು ಮೀರಿ ಪರಮಾತ್ಮ ಭಕ್ತರಿಗೆ ಅನುಗ್ರಹವನ್ನು ಮಾಡುತ್ತಾನೆ ಅನ್ನುವ ಒಂದು ವೈಶಿಷ್ಟ್ಯ ತಿಳಿಯಬೇಕಾದರೆ ಮಾಯೆ ಇದ್ದರೆ ತಾನೇ. ಹಸಿವಿದ್ದರೆ ಊಟಕ್ಕೆ ಮಹತ್ವ, ರಾತ್ರಿ ಇದ್ದರೆ ಹಗಲಿಗೆ ಮಹತ್ವ, ಮರಣ ಇದ್ದರೆ ಜೀವನಕ್ಕೆ ಮಹತ್ವ ಹಾಗೆ ಆ ಮಾಯೆ ಇದ್ದರೆ ಸಾತ್ವಿಕ ಗುಣಗಳಿಂದ ಸಜ್ಜನರು ಆ ಮಾಯೆಯನ್ನು ಗೆಲ್ಲುತ್ತಾರೆ ಭಗವಂತನ ಅನುಗ್ರಹದಿಂದ ಅನ್ನುವುದಕ್ಕೆ ಮಹತ್ವ ಇದೆ. ಅಂತಹ ಮಾಯಾ ಶಕ್ತಿಯನ್ನು ಕೂಡ ಅಸುರರಿಗೆ ನೀಡಿದ್ದಾಳೆ ಪೃಥ್ವಿ ದೇವಿ ಅಂತ ಹೇಳುತ್ತಾರೆ. ಹೀಗೆ ಇನ್ನು ವಿವಿಧ ಜನರಿಗೆ ಅವರವರಿಗೆ ಯೋಗ್ಯವಾಗಿ ಇರತಕ್ಕಂತಹ ಪದಾರ್ಥಗಳನ್ನು ನೀಡುತ್ತಾ ಹೋಗಿದ್ದಾಳೆ.

ಈ ಪೃಥ್ವಿ ಹೇಗೆ ನಿರ್ಮಾಣವಾಯಿತು. ಪೃಥ್ವಿ ಅಭಿಮಾನಿ ದೇವತೆಯಾದ ಧರಾ ದೇವಿ ತನ್ನ ಸಾಮರ್ಥ್ಯದಿಂದ ಹಾಲು ನೀಡುವ ಮೂಲಕ ಅವರವರಿಗೆ ಬೇಕಾದ ಯೋಗ್ಯವಾದ ವಸ್ತುಗಳನ್ನು ಭಗವತ್ ಸಂಕಲ್ಪಕ್ಕೆ ತಕ್ಕಂತೆ



ಕೊಟ್ಟಿದ್ದಾಳೆ ಅನ್ನುವುದು ನಿಜ ಆ ಪೃಥ್ವಿಯ ನಿರ್ಮಾಣ ಹೇಗಾಯಿತು ಈ ಜಡವಾದ ಪೃಥ್ವಿಯ ನಿರ್ಮಾಣ ಅದನ್ನು ಹೇಳುತ್ತಾರೆ.

ಮಧುಕೈಟಭಯೋಃ ಕೃತ್ಸ್ನಾ ಮೇದಸಾಭಿಪರಿಪ್ಲುತಾ ।
ತೇನೇಯಂ ಮೇದಿನೀ ದೇವೀ ಪ್ರೋಚ್ಯತೇ ಬ್ರಹ್ಮವಾದಿಭಿಃ ॥ (6.45 ಹರಿವಂಶಪರ್ವ)

ಇದಕ್ಕೆ ಮೇದಿನಿ ಅಂತ ಹೆಸರು ಪೃಥ್ವಿಗೆ ಯಾಕೆ ಮೇದಿನಿ ಅನ್ನುತ್ತಾರೆ ಅಂದರೆ ಮೇದಸ್ಸಿನಿಂದ ನಿರ್ಮಾಣವಾದದ್ದರಿಂದ ಮೇದಿನಿ ಅಂತ ಶರೀರದೊಳಗಿನ ಒಂದು ಧಾತು ಮೇದಸ್ಸು ಎಂಬ ಧಾತು, ಯಾರ ಮೇದಸ್ಸು ಮಧು-ಕೈಟಭರೆಂಬ ಅಸುರರನ್ನು ಪರಮಾತ್ಮ ಸಂಹಾರ ಮಾಡುತ್ತಾನೆ. ಆ ಮಧು-ಕೈಟಭರ ಸಂಹಾರವನ್ನು ಮಾಡಿ ಅವರ ಶರೀರವನ್ನು ಚೆನ್ನಾಗಿ ತನ್ನ ತೊಡೆಯ ಮೇಲೆ ಹೊಸೆದು ಅವರ ದೇಹದೊಳಗಿನ ಆ ಮೇದಸ್ಸಿನಿಂದ ಈ ಪೃಥ್ವಿಯ ವಿಶೇಷವಾದ ಉಪಚಯವನ್ನು ಮಾಡುತ್ತಾನೆ. ಅವರ ಮೇದಸ್ಸಿನಿಂದ ಮೆತ್ತಿದ್ದಕ್ಕೆ ಇದಕ್ಕೆ ಮೇದಿನಿ ಎಂಬ ಹೆಸರು ಬಂದಿದೆ. ಪೃಥು ರಾಜ ವಿಶೇಷವಾಗಿ ಇದರ ವ್ಯವಸ್ಥೆಯನ್ನು ಮಾಡಿದ ಅನ್ನುವುದಕ್ಕೆ

ಪೃಥೋರ್ವೈನ್ಯಸ್ಯ ಭಾರತ ದುಹಿತೃತ್ವಮನುಪ್ರಾಪ್ತಾ ದೇವೀ ಪೃಥ್ವೀತಿ ಚೋಚ್ಯತೇ । (6.46 ಹರಿವಂಶಪರ್ವ)

ಆದ್ದರಿಂದ ಪೃಥ್ವಿ ಎಂಬ ಹೆಸರು ಕೂಡ ಇದಕ್ಕೆ ಬಂದಿದೆ ಎಂಬುದಾಗಿ ತಿಳಿಸಿಕೊಡುತ್ತಾರೆ. ಇಂತಹ ಈ ಪೃಥು ರಾಜನನ್ನ ವಿಶೇಷವಾಗಿ ನಿತ್ಯದಲ್ಲಿ ಸ್ಮರಣೆ ಮಾಡಬೇಕು, ಪ್ರಾತಃಕಾಲದಲ್ಲಿ ಸ್ಮರಣೆ ಮಾಡಬೇಕು. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು ಎಲ್ಲ ವರ್ಣದವರು ಕೂಡ ಪೃಥು ರಾಜನ ಸ್ಮರಣೆಯನ್ನು ಮಾಡಿದರೆ ಅವರವರಿಗೆ ಬೇಕಾಗಿರುವಂತಹ ಸೌಭಾಗ್ಯವನ್ನು ಅವರು ಪಡೆಯುತ್ತಾರೆ ಅಂತ.

ಬ್ರಾಹ್ಮಣೈಶ್ಚ ಮಹಾಭಾಗೈರ್ವೇದ ವೇದಾಙ್ಗಪಾರಗೈಃ । (6.48 ಹರಿವಂಶಪರ್ವ)
ಪೃಥುರೇವ ನಮಸ್ಕಾರ್ಯೋ ಬ್ರಹ್ಮಯೋನಿಃ ಸನಾತನಃ ॥ (6.49 ಹರಿವಂಶಪರ್ವ)

ಕ್ಷತ್ರಿಯರು ನಮಸ್ಕಾರವನ್ನು ಮಾಡಿದರೆ, ಅವನ ಸ್ಮರಣೆಯನ್ನು ಮಾಡಿದರೆ ಯುದ್ಧದಲ್ಲಿ ವಿಜಯವನ್ನು ಪಡೆದುಕೊಳ್ಳಬಹುದು, ವೈಶ್ಯರು ವಿಶೇಷವಾಗಿ ತಮ್ಮ ವ್ಯಾಪಾರದಲ್ಲಿ ಅಭಿವೃದ್ಧಿಯನ್ನು ಪಡೆಯಬಹುದು, ಉಳಿದವರು ಕೂಡ ತಮಗೆ ಬೇಕಾದಂತಹ ಎಲ್ಲ ಇಷ್ಟಾರ್ಥಗಳನ್ನು ಪಡೆಯುವುದಕ್ಕೆ ಸಾಧ್ಯ ಇದೆ. ಚತುರ್ವರ್ಣದವರಿಗೂ ಸೌಭಾಗ್ಯವನ್ನು ನೀಡುವಂತಹ ಮಹಾನುಭಾವ ಈ ಪೃಥು ಚಕ್ರವರ್ತಿ ಆ ಪೃಥು ಚಕ್ರವರ್ತಿಯಲ್ಲಿ ಅಂತರ್ಯಾಮಿಯಾದ ಭಗವಂತ ಅಂತ ಶ್ರೀಮದಾಚಾರ್ಯರು ತಿಳಿಸಿಕೊಡುತ್ತಾರೆ. ಪೃಥಿವಿ ಅನ್ನುವ ಹೆಸರು ಬರುವುದಕ್ಕೆ ಕಾರಣ ಪೃಥು ಚಕ್ರವರ್ತಿ ಅಂತ ಇಲ್ಲಿ ಹೇಳಿದ್ದು ನಿಜ ಆದರೆ ಇನ್ನೂ ಒಂದು ಕಾರಣವನ್ನು ಪ್ರಧಾನವಾಗಿ ಪರಮಾತ್ಮ ಪೃಥು ಅನಂತಗುಣಗಳಿಂದ ಪರಿಪೂರ್ಣನಾದದ್ದರಿಂದ ಸಕಲ ದೇಶಗಳಲ್ಲಿ ವ್ಯಾಪ್ತನಾದದ್ದರಿಂದ ನಿಜವಾದ ಪೃಥು ಆ ಪರಮಾತ್ಮ. ಅಂತಹ ಪರಮಾತ್ಮನ ಸನ್ನಿಧಾನವಿದ್ದದ್ದಕ್ಕೆ ಆ ಪರಮಾತ್ಮ ಇದನ್ನು ಎಲ್ಲ ಕಡೆಗೆ ಹರಡಿ ಎಲ್ಲರಿಗೆ ಆಶ್ರಯವಾಗುವ ರೀತಿಯಲ್ಲಿ ಇರುವ ಹಾಗೆ ಮಾಡಿದ್ದಾನೆ ಅನ್ನೋದಕ್ಕೋಸ್ಕರ ಇದನ್ನು ಪೃಥ್ವಿ ಎಂಬುದಾಗಿ ಕರೆಯುತ್ತಾರೆ ಅಂತ ಶ್ರೀಮದಾಚಾರ್ಯರು ತಿಳಿಸಿಕೊಟ್ಟಿದ್ದಾರೆ. ಅಂತಹ ಆ ಪೃಥುನಾಮಕನಾದ ಪೃಥುವಿನಲ್ಲಿ ಸನ್ನಿಹಿತನಾದ ಪರಮಾತ್ಮ ಹಾಗೂ ಸ್ವಯಂ ಸರ್ವತ್ರ ವ್ಯಾಪ್ತವಾದ ಆ ಭಗವಂತನ

ವಿಶೇಷ ಸನ್ನಿಧಾನದಿಂದ ಇದು ಪೃಥಿವಿ ಎಂಬ ಹೆಸರನ್ನು ಪಡೆದುಕೊಂಡಿದೆ ಎಂಬುದಾಗಿ ನಾವು ಅರ್ಥ ಮಾಡಿಕೊಳ್ಳಬೇಕು.

ಪರಮಾತ್ಮನನ್ನ ಕೃಷ್ಣ ಎಂಬುದಾಗಿ ಹೇಳುತ್ತಾರೆ ಹರಿವಂಶದ ಮುಖ್ಯ ಪ್ರತಿಪಾದ್ಯನಾದ ಭಗವಂತ ಕೃಷ್ಣ. ಆ ಭಗವಂತನನ್ನು ಕೃಷ್ಣ ಎಂಬುದಾಗಿ ಕರೆಯುವುದಕ್ಕೆ ಕಾರಣ **'ಕೃಷಿರ್ಭೂವಾಚಕಃ ಶಬ್ದಃ ಣಶ್ಚನಿರ್ವೃತಿ ವಾಚಕಃ'**[1] ಶ್ರೀಮನ್ಮಹಾಭಾರತದಲ್ಲಿಯೇನೆ ಕೃಷ್ಣ ಶಬ್ದದ ವ್ಯಾಖ್ಯಾನವನ್ನು ತಿಳಿಸುತ್ತಾರೆ **'ಕೃಷಿರ್ಭೂವಾಚಕಃ ಶಬ್ದಃ'** ಅನೇಕ ಅರ್ಥಗಳಿವೆ. ಉತ್ತಮವಾದಂತಹ ಸುಖಕ್ಕೆ **'ಣ'** ಎಂಬುದಾಗಿ ಕರೆಯುತ್ತಾರೆ **'ಣಶ್ಚನಿರ್ವೃತಿ ವಾಚಕಃ'** ನಿರ್ವೃತಿ ಅಂದರೆ ಸುಖ ಶ್ರೇಷ್ಠವಾದ ಸುಖಕ್ಕೆ **'ಣ'** ಎಂಬುದಾಗಿ ಕರೆಯುವುದು. ಕೃಷಿ ಅಂದರೆ ಎಲ್ಲಿ ಕೃಷಿ ಮಾಡುತ್ತಾರಲ್ಲ ಅಂತಹ ಭೂಮಿ ಇದು ಕೃಷಿ ಎಂಬ ಶಬ್ದದ ಅರ್ಥ. ಭೂಮಿಯಲ್ಲಿದ್ದು ಸಾಧನೆ ಮಾಡುವ ಜೀವರಿಗೆ ಉತ್ತಮವಾದ ಸುಖ ಸಾಧನೆ ಮಾಡುವುದು ಹೇಗೆ ಅಂತ ದಾರಿ ತೋರಿ ಒಳಗಿದ್ದು ತಾನು ಮಾಡಿಸಿ ಆ ಸುಖವನ್ನು ಅವರು ಪಡೆಯುವಂತೆ ಮಾಡುತ್ತಾನೆ ಭೂಭಾರಹರಣಕ್ಕಾಗಿಯೇ ಅವತಾರ ಮಾಡಿ, ಭೂಮಿಯ ಮೇಲಿರುವ ಸಜ್ಜನರಿಗೆ ಸುಖ ಸಾಧನೆಯನ್ನು ಮಾಡಿಸಿ ಅವರಿಗೆ ಅನುಗ್ರಹವನ್ನು ಮಾಡುತ್ತಾನೆ ಅನ್ನುವುದಕ್ಕೋಸ್ಕರ ಅವನಿಗೆ **'ಕೃಷ್ಣ'** ಎಂಬುದಾಗಿ ಕರೆಯುವುದು. ಇನ್ನೊಂದು ಅರ್ಥ **'ಭೂ'** ಅನ್ನುವುದಕ್ಕೆ ಆಶ್ರಯ, ಅನಂತ ಸುಖಕ್ಕೆ ಆಶ್ರಯನಾಗಿದ್ದಾನೆ ಆದ್ದರಿಂದಲೂ **'ಕೃಷ್ಣ' 'ಣ'** ಸುಖ ಅದಕ್ಕೆ ಭೂಮಿಯಂತೆ ಆಶ್ರಯನಾಗಿದ್ದಾನೆ ಅನ್ನೋದಕ್ಕಾಗಿಯೂ **'ಕೃಷ್ಣ'** ಭೂಮಿಯ ಮೇಲಿರುವ ಜನರಿಗೆ ಸುಖ ಸಾಧನೆಯನ್ನು ಮಾಡಿಸಿ ಸುಖ ಬರುವಂತೆ ಮಾಡುತ್ತಾನೆ ಅನ್ನುವುದಕ್ಕಾಗಿಯೂ ಆ ಭಗವಂತನನ್ನು **'ಕೃಷ್ಣ'** ಎಂಬುದಾಗಿ ಕರೆಯುತ್ತಾರೆ ಅಂತ ಮಹಾಭಾರತದಲ್ಲಿಯೇ ತಿಳಿಸಿಕೊಟ್ಟಿದ್ದಾರೆ ಶ್ರೀಕೃಷ್ಣ ಪರಮಾತ್ಮನ ಮಹಿಮೆಯನ್ನು. ಅಂತಹ ಶ್ರೀಕೃಷ್ಣ ಪರಮಾತ್ಮನ ಈ ಹರಿವಂಶವನ್ನ ಹರಿವಂಶದಲ್ಲಿ ಬರುವ ಅನೇಕ ರಾಜರುಗಳ ಕಥೆಯನ್ನು ಕೇಳುವಾಗ ಪ್ರತಿಯೊಂದು ಸಂದರ್ಭದಲ್ಲಿಯೂ ಭಗವಂತನ ಮಹಿಮೆಯನ್ನು ತಿಳಿದು ಭಗವದ್ಭಕ್ತಿಯ ಉದ್ರೇಕವಾಗುವುದಕ್ಕೆ ಅದನ್ನು ನಾವು ಕಾರಣವನ್ನಾಗಿ ಮಾಡಿಕೊಂಡರೆ ಮಾತ್ರ ಅದನ್ನು ಕೇಳಿದ್ದು ಸಾರ್ಥಕ. ಅಂತಹ ಪರಮಾತ್ಮನ ಸ್ಮರಣೆಯನ್ನು ಮಾಡಿ ವಿಶೇಷವಾಗಿ ಭಗವಂತನ ಅನುಗ್ರಹವನ್ನು ಪಡೆಯಬೇಕು.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

1. 68 ಮಹಾಭಾರತ ಉದ್ಯೋಗ ಪರ್ವ

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಹರಿವಂಶಪರ್ವ-4

* * *

ಭಗವಂತನ ಅದ್ಭುತವಾದ ಸೃಷ್ಟಿಯ ವೈಚಿತ್ರ್ಯವನ್ನು ವರ್ಣನೆ ಮಾಡುತ್ತಾ ಇದೆ ಹರಿವಂಶ. ಭಗವದ್ಭಕ್ತರಾದ ಅನೇಕ ರಾಜರು, ಋಷಿಗಳು, ದೇವತೆಗಳು ಇವರೆಲ್ಲ ಯಾವ ರೀತಿ ಭಗವಂತನ ಅನುಗ್ರಹವನ್ನು ಪಡೆದು ಭಗವದನುಗ್ರಹದಿಂದ ಶಕ್ತಿ ಸಾಮರ್ಥ್ಯಗಳನ್ನು ತುಂಬಿಕೊಂಡು ಜಗತ್ತಿನ ರಕ್ಷಣೆಯನ್ನು ಮಾಡಿ ಭಗವಂತನ ಸೇವೆಯನ್ನು ಮಾಡುತ್ತಾರೆ ಅಂತ ಹರಿವಂಶ ಪುರಾಣ ನಮಗೆ ತಿಳಿಸುವ ಮೂಲಕ ಆ ಭಗವಂತನ ಮಹಾಮಹಿಮೆಯನ್ನು ನಮ್ಮ ಅನುಸಂಧಾನಕ್ಕೆ ತಂದುಕೊಡುತ್ತದೆ. ಜನಮೇಜಯನ ಪ್ರಶ್ನೆಗೆ ವೈಶಂಪಾಯನರು ಉತ್ತರವನ್ನು ನೀಡುತ್ತಾ ಇದ್ದಾರೆ ಮನ್ವಂತರಗಳ ಚರಿತ್ರೆಯನ್ನು ಹೇಳಬೇಕು, ಮನ್ವಂತರಗಳ ಇತಿವೃತ್ತವನ್ನು ತಿಳಿಸಿ ಕೊಡಬೇಕು ಅಂತ ಜನಮೇಜಯ ಪ್ರಶ್ನೆಯನ್ನು ಕೇಳುತ್ತಾನೆ. ಒಂದು ಮನ್ವಂತರದ ಬಗ್ಗೆ ಕಲ್ಪನೆಯನ್ನು ಕೊಡಬೇಕು ಅಂದರೆ ಮುಖ್ಯವಾಗಿ ಮನು ಯಾರು, ದೇವತೆಗಳು ಯಾರು, ಆ ಮನುವಿನ ಮಕ್ಕಳು ಯಾರು, ಇಂದ್ರ ಯಾರು, ಋಷಿಗಳು ಯಾರು, ಪರಮಾತ್ಮನ ಅವತಾರ ಏನು ಅಂತ ಆರು ಅಂಶಗಳನ್ನು ಹೇಳಿದರೆ ಒಂದು ಮನ್ವಂತರದ ಬಗ್ಗೆ ಸಾಮಾನ್ಯ ಪರಿಚಯ ಮಾಡಿಕೊಟ್ಟಂತೆ. ಹದಿನಾಲ್ಕು ಮನ್ವಂತರಗಳು ಅದರಲ್ಲಿ ಒಬ್ಬೊಬ್ಬ ಮನು ಎಷ್ಟತ್ತೊಂದು ಮಹಾಯುಗಗಳವರೆಗೆ ರಾಜ್ಯವನ್ನು ಆಳುತ್ತಾನೆ ಆ ಒಬ್ಬೊಬ್ಬ ಎಷ್ಟತ್ತೊಂದು ಮಹಾಯುಗ ಮೇಲೆ ಕೆಲವು ವರ್ಷಗಳು ಆ ರೀತಿಯ ಆ ಮನುವಿನ ಆಳ್ವಿಕೆಯಲ್ಲಿ ಏನೆಲ್ಲ ನಡೆಯುತ್ತೆ ಅಂತ ಪೂರ್ಣವಾಗಿ ಬಣ್ಣಿಸುವುದು ಕಷ್ಟ, ವಿಶೇಷವಾಗಿ ಈ ಆರು ಸಂಗತಿಗಳನ್ನು ತಿಳಿಯಬೇಕು ಅನ್ನುತ್ತಾರೆ.

ಮನ್ವಂತರಂ ಮನುರ್ದೇವಾ ಮನುಪುತ್ರಾಃ ಸುರೇಶ್ವರಾಃ ।
ಋಷಯೋಂಽಶಾವತಾರಾಶ್ಚ ಹರೇಃ ಷಡ್ವಿಧಮುಚ್ಯತೇ ।। (12.7.15 ಭಾಗವತ)

ಈ ರೀತಿ ಮನ್ವಂತರದ ಆರು ಅಂಶಗಳು ಅವುಗಳ ಬಗ್ಗೆ ನಾವು ತಿಳಿದುಕೊಂಡರೆ ಮನ್ವಂತರದ ಸಾಮಾನ್ಯ ಪರಿಚಯ ಆದಂತೆ ಈ ಆರು ತರಹದ ಮನ್ವಂತರದ ಅಂಶಗಳನ್ನು ನಮ್ಮ ಮನಸ್ಸಿನ ಅಂತರದಲ್ಲಿ ಚೆನ್ನಾಗಿ ತಿಳಿದುಕೊಂಡು ಆ ಭಗವಂತನನ್ನು ಚಿಂತನ ಮಾಡಬೇಕು. ಹರಿವಂಶ ಮನ್ವಂತರಗಳ ಪಟ್ಟಿಯನ್ನು ನಮ್ಮೆಲ್ಲರ ಮನಸ್ಸಿನಲ್ಲಿ ಕಟ್ಟುವಂತೆ ಚೆನ್ನಾಗಿ ತಿಳಿಸಿಕೊಡುತ್ತದೆ ಸ್ವಾಯಂಭುವ, ಸ್ವಾರೋಚಿಷ, ಉತ್ತಮ, ತಾಮಸ,ತಾಪಸ, ರೈವತ,

ಚಾಕ್ಷುಷ, ವೈವಸ್ವತ, ಸಾವರ್ಣಿ, ಭೌತ್ಯ, ರೌಚ್ಯ, ಬ್ರಹ್ಮಸಾವರ್ಣಿ, ರುದ್ರಸಾವರ್ಣಿ, ಮೇರುಸಾವರ್ಣಿ, ದಕ್ಷಸಾವರ್ಣಿ ಅಂತ. ಮೊದಲು ಎಂಟು ಮನ್ವಂತರಗಳ ಹೆಸರು ಹರಿವಂಶದಲ್ಲಿ ಹಾಗೂ ಭಾಗವತದಲ್ಲಿ ಬಂದದ್ದು ಒಂದೇ ಪ್ರಾಯಃ ಸ್ವಾಯಂಭುವ, ಸ್ವಾರೋಚಿಷ, ಉತ್ತಮ, ತಾಪಸ ಅವನಿಗೆ ಕೆಲವು ಪುರಾಣಗಳಲ್ಲಿ ತಾಮಸ ಅಂತ ಕರೆದದ್ದು, ರೈವತ, ಚಾಕ್ಷುಷ, ವೈವಸ್ವತ, ಸಾವರ್ಣಿ ಈ ಎಂಟು ಜನ ಮನುಗಳ ಹೆಸರು ಒಂದೇ ಇದೆ. ಮುಂದೆ ಮಾತ್ರ ಭೌತ್ಯ, ರೌಚ್ಯ, ಬ್ರಹ್ಮಸಾವರ್ಣಿ, ರುದ್ರಸಾವರ್ಣಿ, ಮೇರುಸಾವರ್ಣಿ, ದಕ್ಷಸಾವರ್ಣಿ ಅಂತ ಹರಿವಂಶದಲ್ಲಿ, ಸ್ವಲ್ಪ ವಿಪರೀತವಾಗಿ ದಕ್ಷಸಾವರ್ಣಿ, ಬ್ರಹ್ಮಸಾವರ್ಣಿ, ಧರ್ಮಸಾವರ್ಣಿ, ಮೇರುಸಾವರ್ಣಿ, ದೇವಸಾವರ್ಣಿ, ಇಂದ್ರಸಾವರ್ಣಿ ಎಂಬುದಾಗಿ ಶ್ರೀಮದ್ಭಾಗವತದಲ್ಲಿ ಆ ಹೆಸರುಗಳ ವರ್ಣನೆ ಇದೆ.

ಇಲ್ಲಿ ಮೊದಲು ಸ್ವಾಯಂಭುವ ಮನ್ವಂತರದ ಬಗ್ಗೆ ನಾವು ತಿಳಿಯಬೇಕು. ಸ್ವಯಂಭು ಸ್ವಯಂ ಸ್ವತಂತ್ರನಾಗಿರುವಂತಹ ಭಗವಂತ ಯಾರ ಅಪೇಕ್ಷೆ ಇಲ್ಲದೆ ತನ್ನಷ್ಟಕ್ಕೆ ತಾನೆ ಇರುವಂತಹ ಭಗವಂತನಿಗೆ ಸ್ವಯಂಭು ಸ್ವಯಂ ಎಂಬುದಾಗಿ ಕರೆಯುವರು, ಅವನಿಂದ ಜನಿಸಿದವರು ಬ್ರಹ್ಮ ದೇವರು ಸ್ವಯಂಭು ಆ ಬ್ರಹ್ಮ ದೇವರಿಂದ ಹುಟ್ಟಿದವ ಸ್ವಾಯಂಭುವ ಮನು. ಬ್ರಹ್ಮ ದೇವರ ದೇಹದಿಂದ ಜನಿಸಿದ್ದರಿಂದ ಅವನು ಸ್ವಾಯಂಭುವ, ಅವನು ಮೊಟ್ಟ ಮೊದಲನೆಯ ಮನು, ಎಪ್ಪತ್ತೊಂದು ಮಹಾಯುಗಗಳವರೆಗೆ ರಾಜ್ಯವನ್ನು ಆಳಿದ ಮಹಾನುಭಾವ ಶ್ರೀಮದ್ಭಾಗವತದ ತೃತೀಯಸ್ಕಂಧದಲ್ಲಿ ವರ್ಣನೆ ಮಾಡುತ್ತಾರೆ. ಯಾವ ಯಾವ ಕಾಲವನ್ನೂ ಕೂಡ ವ್ಯರ್ಥವಾಗಿ ಕಳೆದಿಲ್ಲ ನಿರಂತರವಾಗಿ ಹರಿಭಜನ, ಹರಿಸ್ಮರಣ, ಸಚ್ಛಾಸ್ತ್ರಗಳ ಚಿಂತನ, ಯಜ್ಞ ಯಾಗಾದಿಗಳು, ಪರೋಪಕಾರ, ಪ್ರಜೆಗಳ ರಕ್ಷಣೆ, ಸ್ಪಹಿತ ಕರ್ಮಾನುಷ್ಠಾನ ಇವುಗಳನ್ನು ಮಾಡುವುದರಲ್ಲಿಯೇ ತೊಡಗಿದಂತಹ ಮಹಾನುಭಾವ ಸ್ವಾಯಂಭುವ ಮನು. **'ಕಾಲಾಸ್ವಾಂತರಯಾಪನಾ'** ಯಾವಾಗಲೂ ಸತ್ಕಾಲಕ್ಷೇಪವನ್ನು ಮಾಡುತ್ತಾ ಇದ್ದ ಎಂಬುದಾಗಿ ವರ್ಣನೆಯನ್ನು ನಾವು ಕೇಳುತ್ತೇವೆ ಮಹಾನುಭಾವನಾದಂತಹ ಸ್ವಾಯಂಭುವ ಮನು.

ಆ ಸ್ವಾಯಂಭುವ ಮನು, ಅನಿರುದ್ಧ, ದಕ್ಷಪ್ರಜಾಪತಿ, ಬೃಹಸ್ಪತ್ಯಾಚಾರ್ಯರು, ಶಚಿ ದೇವಿ ಹಾಗೂ ರತಿ ದೇವಿ ಇವರೆಲ್ಲ ಹತ್ತನೆಯ ಕಕ್ಷೆಯಲ್ಲಿ ಬರುವವರು ತಾರತಮ್ಯದಲ್ಲಿ. ಉತ್ತಮವಾದಂತಹ ಬ್ರಹ್ಮಚರ್ಯ, ಬ್ರಹ್ಮಚಾರಿಗಳೇ ಎಲ್ಲ ಯುವಕರೇ ಚೆನ್ನಾಗಿ ಕೇಳಿ ಉತ್ತಮವಾದಂತಹ ಬ್ರಹ್ಮಚರ್ಯ, ನೈಷ್ಠಿಕವಾದಂತಹ ಬ್ರಹ್ಮಚರ್ಯ ಇಂದ್ರಿಯ ನಿಗ್ರಹವನ್ನು ಮಾಡತಕ್ಕಂತಹ ಒಂದು ಶಕ್ತಿ, ಆ ಯೋಗ, ಆ ಸಾಮರ್ಥ್ಯ ನಮಗೆ ಲಭಿಸಬೇಕು ಅಂದರೆ ಸ್ವಾಯಂಭುವ ಮನುವಿನ ವಿಶೇಷವಾದಂತಹ ಪ್ರಾರ್ಥನೆಯನ್ನು ಮಾಡಿಕೊಳ್ಳಿ. ಸ್ವಾಯಂಭುವ ಮನು ಒಬ್ಬ ರಾಜ, ಬಹಳ ದೊಡ್ಡ ಇತಿಹಾಸದೊಳಗೆ ಬಂದಂತಹ ಒಬ್ಬ ದೊಡ್ಡ ವ್ಯಕ್ತಿ ಅಂತ ಮಾತ್ರ ತಿಳಿಯಬೇಡಿ ಅವನು ಒಬ್ಬ ತತ್ವಾಭಿಮಾನಿ ದೇವತೆ. ಅಂತಹ ಸ್ವಾಯಂಭುವ ಮನು ನಮ್ಮ ಇಂದ್ರಿಯದ ನಿಗ್ರಹವನ್ನು ಮಾಡುವ ಸಾಮರ್ಥ್ಯವನ್ನು ನೀಡಬೇಕು ಅಂತ ಎಲ್ಲ ಯುವಕರು, ಬ್ರಹ್ಮಚಾರಿಗಳು ಹಾಗೂ ಗ್ರಹಸ್ಥರು ಎಲ್ಲರೂ ಕೂಡ ಅವರಿಗೆ ವಿಹಿತವಾಗಿರುವಂತಹ ಬ್ರಹ್ಮಚರ್ಯವನ್ನು ಪರಿಪಾಲನೆ ಮಾಡುವುದಕ್ಕೋಸ್ಕರ ಈ ಸ್ವಾಯಂಭುವ ಮನುವಿನ ಚಿಂತನವನ್ನು ಮಾಡಬೇಕು ಅನ್ನುವುದನ್ನು ಈ ಸಂದರ್ಭದಲ್ಲಿ ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕಾದದ್ದು. ಅಂತಹ ಮಹಾನುಭಾವ ಸ್ವಾಯಂಭುವ ಮನು, ಅವನ ಮಡದಿ ಶತರೂಪಾ ಬ್ರಹ್ಮ ದೇವರಿಂದಲೇ ಜನಿಸಿದವಳು.

ಈ ಮನ್ವಂತರದೊಳಗೆ ಋಷಿಗಳು ಯಾರು ಅಂತ ತತ್ವಜ್ಞಾನದ ದೊಡ್ಡ ಹೊಣೆಯನ್ನು ಹೊತ್ತು ಬಹಳ ದೊಡ್ಡದಾದಂತಹ ಸಾಧನೆಯನ್ನು ಮಾಡುವವರು ಋಷಿಗಳು ಋಷಿಗಳ ಬಗ್ಗೆ ಮತ್ತೆ ಮುಂದೆ ಹರಿವಂಶದಲ್ಲಿ ತಿಳಿಯೋಣ. ಯಾರು ಋಷಿಗಳು ಅಂದರೆ ಮರೀಚಿ, ಅತ್ರಿ, ಅಂಗಿರಸ್, ಪುಲಹ, ಪುಲಸ್ತ್ಯ ಕ್ರತು, ವಸಿಷ್ಠ ಇವರು

ಇಲ್ಲಿ ಋಷಿಗಳಾಗಿದ್ದಾರೆ ಸಪ್ತಋಷಿಗಳು. ಶ್ರೀಮದ್ಭಾಗವತದಲ್ಲಿ ಹೇಳಿದ ಋಷಿಗಳು, ಹರಿವಂಶದಲ್ಲಿ ಹೇಳಿದ ಋಷಿಗಳು ಒಬ್ಬರೇ.

ಈ ಮನ್ವಂತರದಲ್ಲಿ ಬಂದ ದೇವತೆಗಳ ಹೆಸರು ಯಾಮಾ ಎಂಬುದಾಗಿ. ಮಹಾನುಭಾವರಾದ ಆ ಎಲ್ಲ ದೇವತೆಗಳು ಯಜ್ಞನಾಮಕನಾದಂತಹ ಪರಮಾತ್ಮನ ಅನುಚರರಾಗಿ ಸೇವಕರಾಗಿ ದಾಸರಾಗಿ ಆ ಮನ್ವಂತರದಲ್ಲಿ ತಮ್ಮ ಸಾಧನೆಯನ್ನು ಮಾಡಿಕೊಂಡಿದ್ದಾರೆ. ಈ ಮನ್ವಂತರದೊಳಗೆ ಭಗವಂತನ ಅವತಾರ ಯಜ್ಞನಾಮಕನಾದ ಪರಮಾತ್ಮ. ಸ್ವಾಯಂಭುವ ಮನುವಿನ ಹೆಣ್ಣು ಮಕ್ಕಳು ಮೂರು ಜನ ಆಕೂತಿ, ದೇವಹೂತಿ, ಪ್ರಸೂತಿ, ಆಕೂತಿಯನ್ನು ರುಚಿಪ್ರಜಾಪತಿಗೆ ಕೊಡುತ್ತಾನೆ, ದೇವಹೂತಿಯನ್ನು ಕರ್ದಮಪ್ರಜಾಪತಿಗೆ ಕೊಡುತ್ತಾನೆ, ಪ್ರಸೂತಿಯನ್ನು ದಕ್ಷಪ್ರಜಾಪತಿಗೆ ಕೊಡುತ್ತಾನೆ. ಆ ಆಕೂತಿಯಲ್ಲಿ ರುಚಿಪ್ರಜಾಪತಿಯಿಂದ ಅವತಾರ ಮಾಡಿದ ಮಹಾನುಭಾವನೇ ಯಜ್ಞನಾಮಕನಾದ ಪರಮಾತ್ಮ **'ಯದ್ಯ ದಸ್ತಿ ತದ್ದ ಜಾನಾತಿ'** ಆದ್ದರಿಂದ ಯಜ್ಞಃ, ಏನಿದೆ ಜಗತ್ತಿನೊಳಗೆ ಎಲ್ಲವೂ ಅವನಿಗೆ ಗೊತ್ತು ಆದ್ದರಿಂದ ಅವನು ಯಜ್ಞ. **'ಯಜ್ ದೇವಪೂಜಾ ಸಂಗತಿಕರಣ ದಾನೇಶು'**[1] ಪರಮಾತ್ಮ ಎಲ್ಲರಿಂದಲೂ ಇಜ್ಯನಾಗಿದ್ದಾನೆ, ಪೂಜ್ಯನಾಗಿದ್ದಾನೆ ಆದ್ದರಿಂದಲೂ ಅವನು ಯಜ್ಞ, ಅನೇಕ ವಸ್ತುಗಳ ಸಮಾಗಮವಾಗುವಂತೆ ಮಾಡುತ್ತಾನೆ ಆದ್ದರಿಂದಲೂ ಯಜ್ಞ, ಎಲ್ಲರ ಸಮಾಗಮ ಅವನಲ್ಲಿ ಆಗುತ್ತೆ ಯಾಗ ಧಾತುವಿಗೆ ಸಮಾಗಮ ಅಂತ ಅರ್ಥ ಪ್ರಯಾಗ ಅಂತ ಹೆಸರನ್ನು ನೀವು ಎಲ್ಲ ಕೇಳಿದ್ದೀರಿ ಅಲ್ವಾ ಏನದು ಪ್ರಯಾಗ, ಸಂಗಮ. ಗಂಗಾ, ಯಮುನಾ, ಸರಸ್ವತೀ ನದಿಗಳ ಸಂಗಮ ಆಗುತ್ತದೆ ಆದ್ದರಿಂದ ಅದಕ್ಕೆ ಪ್ರಯಾಗ ಅಂತ ಕರೀತಾರೆ. ಅನೇಕ ಪ್ರಯಾಗಗಳನ್ನು ಬದರಿಗೆ ಹೋಗುವಾಗ ಷಟ್ ಪ್ರಯಾಗಗಳು ಅಂತ ನದಿಗಳ ಸಂಗಮ ಅಂತ ಅರ್ಥ. ಆ ಭಗವಂತನಲ್ಲಿ ಜಗತ್ತಿನೊಳಗಿನ ಎಲ್ಲಾ ಚೇತನಾ ಚೇತನರ ಸಂಗಮ ಆಗುತ್ತದೆ, ಮಹಾಸಂಗಮ ಅದು, ಎಲ್ಲಾ ದೇವತೆಗಳ, ಎಲ್ಲಾ ಋಷಿಗಳ, ಎಲ್ಲಾ ಮುನಿಗಳ, ಎಲ್ಲಾ ನದಿಗಳ, ಎಲ್ಲಾ ಕ್ಷೇತ್ರಗಳ, ಎಲ್ಲಾ ಸಂಗಮ ಆ ಭಗವಂತನಲ್ಲಿ ಇದೆ ಅಂತಹ ಪರಮಾತ್ಮ ಅವನು ಯಜ್ಞ, ಸರ್ವ ಸಂಗಮ ಪಾತ್ರ.

ಇನ್ನು ಕೊನೆಗೆ ದಾನ **'ಬಹುಲೌದಾರ್ಯ ವೀರ್ಯಾದಿ ದೇಹಂ'**[2] ಟೀಕಾಕೃತ್ಪಾದರು ಹೇಳುವಂತೆ ಎಲ್ಲವನ್ನೂ ಕೊಟ್ಟಿದ್ದಾನೆ ಆದ್ದರಿಂದ ಅವನು ಯಜ್ಞ, ಪರಮ ಔದಾರ್ಯ ಶೀಲನಾದದ್ದರಿಂದ ಯಜ್ಞ. ಇದ್ದದ್ದೆಲ್ಲ ತಿಳಿದವ, ಎಲ್ಲರಿಂದಲೂ ಪೂಜ್ಯ, ಎಲ್ಲವೂ ತನ್ನೊಳಗೆ ಇರುವಂತೆ ಮಾಡಿಕೊಂಡವ, ಯಾರೊಬ್ಬರಿಗೆ ನಮಿಸಿದರೆ ಎಲ್ಲರಿಗೂ ನಮಿಸಿದಂತೆ, ಎಲ್ಲರಿಗೂ ಬೇಕಾದದ್ದನ್ನು ಎಲ್ಲ ಹೊತ್ತಿಗೂ ಕೊಡುವವ ಆದ್ದರಿಂದ ಆ ಭಗವಂತ ಯಜ್ಞ. ಅಂತಹ ಯಜ್ಞನಾಮಕನಾದಂತಹ ಪರಮಾತ್ಮ ತನ್ನ ಮಗಳ ಮಗ ಸ್ವಾಯಂಭುವ ಮನುವಿಗೆ ಆದರೆ ತನ್ನ ಮಗನನ್ನಾಗಿ ಸ್ವೀಕಾರ ಮಾಡಿದ ಮಗಳ ಮಗನನ್ನೇ. ಅನೇಕ ಜನ ಯಾತುಧಾನರು ಸ್ವಾಯಂಭುವ ಮನುವಿಗೆ ಪೀಡೆಯನ್ನು ಕೊಟ್ಟಾಗ ತನ್ನ ಮಗಳ ಮಗ ದೌಹಿತ್ರನಾಗಿದ್ದರೂ ಕೂಡ ಸಾಕ್ಷಾತ್ ಭಗವಂತ ಅನ್ನುವುದಕ್ಕೋಸ್ಕರ ಆ ಯಜ್ಞ ನಾಮಕ ಪರಮಾತ್ಮನಿಗೆ ಶರಣು ಹೋಗುತ್ತಾನೆ ಸ್ವಾಯಂಭುವ ಮನು. **'ಈಶಾವಾಸ್ಯಮಿದಂ ಸರ್ವಂ ಆತ್ಮಾವಾಸ್ಯಮಿದಂ ಸರ್ವಂ'** ಇತ್ಯಾದಿ ಮಂತ್ರಗಳಿಂದ ಆ ಪರಮಾತ್ಮನ ಸ್ತುತಿಯನ್ನು ಮಾಡಿದಾಗ ಭಗವಂತ ಅವನನ್ನು ರಕ್ಷಣೆ ಮಾಡುತ್ತಾನೆ, ಎಲ್ಲ ಅಸುರರ ಭಾದೆಯನ್ನು ಪರಿಹಾರ ಮಾಡುತ್ತಾನೆ. ನೀವೆಲ್ಲ ಸಜ್ಜನರು ಆ ಭಗವಂತನ ಮಹಿಮೆಯನ್ನು ತಿಳಿದು ಭಕ್ತಿಯಿಂದ ಶ್ರೀಮದ್ಭಾಗವತದಲ್ಲಿ ಬರುವಂತಹ ಸ್ತುತಿ ಅಥವಾ ಈಶಾವಾಸ್ಯ ಮಂತ್ರಗಳ ಅರ್ಥವನ್ನು ಅನುಸಂಧಾನ ಮಾಡಿಕೊಂಡು ಪಠಣ ಮಾಡಿದರೆ ಎಲ್ಲ ದುಷ್ಟ ರಾಕ್ಷಸರ, ಭೂತ ಪ್ರೇತ ಪಿಶಾಚಗಳ ಬಾಧ ದೂರ ಆಗುತ್ತದೆ ಅನ್ನುವುದನ್ನು ಚೆನ್ನಾಗಿ ಈ ಮೂಲಕವಾಗಿ ಅರ್ಥ ಮಾಡಿಕೊಳ್ಳಬಹುದು ಅಂತಹ

1. ವೇದಮಂತ್ರ 2. ತತ್ಪ್ರಕಾಶಿಕ ಟೀಕಾ

ಮಹಾನುಭಾವ ಯಜ್ಞನಾಮಕ ಪರಮಾತ್ಮ. ಈ ಮನ್ವಂತರದೊಳಗೆ ಇಂದ್ರನೂ ಅವನೇ ಪರಮಾತ್ಮನ ಅವತಾರ ಆರು ಹೇಳಬೇಕಲ್ಲ ಒಂದು ಮನ್ವಂತರ ಅಂದರೆ ಇಲ್ಲಿ ಎರಡು ಸೇರಿ ಒಂದಾಯಿತು, ಇಂದ್ರನೂ ಯಜ್ಞನೇ, ಭಗವದವತಾರವೂ ಕೂಡ ಯಜ್ಞ.

ಆಮೇಲೆ ಮನುವಿನ ಮಕ್ಕಳು ಯಾರು ಅಂತ ಹೇಳುತ್ತಾರೆ. ಅಗ್ನೀಧ್ರ, ಅಗ್ನಿಬಾಹು, ಮೇಧಾ, ಮೇಧಾತಿಥಿ, ವಸು, ಜ್ಯೋತಿಷ್ಮಾನ್, ದ್ಯುತಿಮಾನ್, ಹವ್ಯ, ಸವನ, ಪುತ್ರ ಅಂತ ಅವನ ಹೆಸರೇ ಪುತ್ರ ಅಂತ ಹರಿವಂಶ ಹೇಳುತ್ತದೆ. ಒಬ್ಬನ ಹೆಸರು ಮಗನಿಗೆ ಮಗ ಅಂತೇ ಹೆಸರು ಇಟ್ಟ ಪುತ್ರ ಮತ್ಸ್ಯಪುರಾಣದ ಪ್ರಕಾರ ಋಭು ಅಂತ ಇನ್ನು ಭಾಗವತದ ಪ್ರಕಾರ ಮನುವಿನ ಪುತ್ರರು ಪ್ರಿಯವ್ರತ ಹಾಗೂ ಉತ್ತಾನಪಾದ ಎಂಬುದಾಗಿ. ಸತ್ಯಧರ್ಮತೀರ್ಥ ಶ್ರೀಪಾದಂಗಳವರು ಈ ಸಂದರ್ಭದಲ್ಲಿ ಒಂದು ಮಾತು ಹೇಳುತ್ತಾರೆ ಭಾಗವತದಲ್ಲಿ ಹೇಳಿದ ವಿಷಯಗಳು ಹೀಗಿವೆ ಅಂತ ತಿಳಿಯಿರಿ ಅಂತ ಹೇಳುವುದಕ್ಕೆ ಹೊರತು ಹರಿವಂಶದಲ್ಲಿ ಅಥವಾ ಮತ್ಸ್ಯಪುರಾಣದಲ್ಲಿ, ವಿಷ್ಣುಪುರಾಣದಲ್ಲಿ, ವಿಷ್ಣುರಹಸ್ಯದಲ್ಲಿ ಹೇಳಿದಂತಹ ಪ್ರಮೇಯಗಳನ್ನು ಅಲ್ಲಗಳೆಯುವುದಕ್ಕೋಸ್ಕರ ಅಲ್ಲ. ಅಲ್ಲಿ ಹೇಳಿದ ವಿಚಾರಗಳು ಸರಿ, ಭಾಗವತದಲ್ಲಿ ಹೇಳಿದ ರೀತಿಯಲ್ಲಿ ತಿಳಿದುಕೊಳ್ಳಿ ಅಂತ ತಾತ್ಪರ್ಯವೇ ಹೊರತು ಇತರ ನಿಷೇಧದಲ್ಲಿ ತಾತ್ಪರ್ಯ ಅಲ್ಲ ಆದ್ದರಿಂದ ಆಗ್ನೀಧ್ರಾದಿ ಪುತ್ರರನ್ನು ಹೇಳಿದ್ದು ಹರಿವಂಶ ಪುರಾಣದಲ್ಲಿ ಅದನ್ನೂ ಸ್ವೀಕಾರ ಮಾಡಬೇಕು ಪ್ರಿಯವ್ರತ, ಉತ್ತಾನಪಾದರನ್ನು ಮಕ್ಕಳು ಎಂಬುದಾಗಿ ತಿಳಿಯಬೇಕು.

ಪ್ರಸಿದ್ಧ ಮಾತ್ರ ಕಥನಂ ಭಾಗವತೇ ನಾನ್ಯ ನಿಷೇಧೇ ತಾತ್ಪರ್ಯಂ ಕಲ್ಪಭೇಧೇನವಾ ವ್ಯವಸ್ಥಾ।

ಎಂಬುದಾಗಿ ಎರಡು ರೀತಿ ಸತ್ಯಧರ್ಮತೀರ್ಥರು ಸಮಾಧಾನವನ್ನು ಈ ಸಂದರ್ಭದಲ್ಲಿ ಶ್ರೀಮದ್ಭಾಗವತದ ವ್ಯಾಖ್ಯಾನ ಮಾಡುವಾಗ ನಮಗೆ ತಿಳಿಸಿಕೊಟ್ಟಿದ್ದಾರೆ. ಹೀಗೆ ಸ್ವಾಯಂಭುವ ಮನ್ವಂತರದ ಒಂದು ಸಾಮಾನ್ಯವಾದ ಪರಿಚಯ. ಇಲ್ಲಿ ಅನೇಕ ಯಾಮನಾಮಕರಾದ ದೇವತೆಗಳು ಭಗವಂತನ ವಿಶೇಷವಾದ ಸೇವೆಯನ್ನು ಮಾಡುತ್ತಾರೆ ಅಂತ ನೀವು ತಿಳಿದಿದ್ದೀರಿ.

ಇನ್ನು ಸ್ವಾರೋಚಿಷ ಎಂಬ ಎರಡನೆಯ ಮನ್ವಂತರ ಇವನು ಅಗ್ನಿಪುತ್ರ. **'ಸ್ವರೋಚಿಷ್ ಸ್ವಪ್ರಕಾಶ ಅಗ್ನಿ'** ಪದಾರ್ಥಗಳನ್ನು ನೋಡುವುದಕ್ಕೆ ಬೇರೊಂದು ಬೆಳಕು ಬೇಕು, ಅಗ್ನಿಯನ್ನು ನೋಡುವುದಕ್ಕೆ ಮತ್ತೊಂದು ಬೆಳಕು ಬೇಕಾಗಿಲ್ಲ ಅವನು ಸ್ವರೋಚಿಷ್ ಅವನ ಮಗ ಸ್ವಾರೋಚಿಷ ಮನು. ಈ ಮನುವಿನ ಆಳ್ವಿಕೆಯಲ್ಲಿ ಈ ಮನ್ವಂತರದೊಳಗೆ ಇರುವಂತಹ ಋಷಿಗಳು ಯಾರು ಅಂದರೆ ಹರಿವಂಶ ಹೇಳುತ್ತದೆ **'ವಾಯುಪ್ರೋಕ್ತ'** [1] ಅಂತ ಹರಿವಂಶ ಉದಾಹರಣೆ ಮಾಡುತ್ತದೆ. ಶ್ರೀಮದಾಚಾರ್ಯರು ಅಲ್ಲಲ್ಲಿ ವಾಯುಪ್ರೋಕ್ತೆ, ವಾಯುಪ್ರೋಕ್ತೆ ಅಂತ ಅನ್ನುತ್ತಾರೆ ಹಾಗೆ ಹರಿವಂಶ ಪುರಾಣ ಹೇಳುತ್ತದೆ **'ವಾಯುಪ್ರೋಕ್ತಾ ಋಷಯಃ'** ವಾಯು ದೇವರು ಹೇಳಿದಂತಹ ಋಷಿಗಳು ಇವರೆಲ್ಲ ಔರ್ವ, ಸ್ತಮ್ಭ, ಕಾಶ್ಯಪ, ಪ್ರಾಣಾ, ಬ್ರಹಸ್ಪತಿ, ದತ್ತ, ನಿಶ್ಚ್ಯವನ ಎಂಬ ಏಳು ಜನ ಸಪ್ತ ಋಷಿಗಳು ಸ್ವಾರೋಚಿಷ ಮನ್ವಂತರದಲ್ಲಿ ಹರಿವಂಶದ ಪ್ರಕಾರ. ಶ್ರೀಮದ್ಭಾಗವತ ಹಾಗೂ ವಿಷ್ಣು ಪುರಾಣಗಳಲ್ಲಿ ಹೇಳಿದ ರೀತಿಯಲ್ಲಿ ನೋಡುವುದಾದರೆ ಊರ್ಜಸ್ತಮ್ಭ, ಪ್ರಾಯಃಸ್ತಮ್ಭ ಅವನೇ ಇಲ್ಲಿ ಊರ್ಜಸ್ತಮ್ಭ ಎಂಬುದಾಗಿ ಕರೆಯಲ್ಪಟ್ಟಿರಬಹುದು. ಪ್ರಾಣಾ ಅಲ್ಲಿ ದತ್ತ ಇಲ್ಲಿ ದಂತ, ಅಗ್ನಿ, ವೃಷಭ, ನಿಶ್ಚರ, ನಿಶ್ಚ್ಯವನ ಅಂತ ಅಲ್ಲಿ ಬಂದದ್ದನ್ನೆ ಪ್ರಾಯಃ ಇಲ್ಲಿ ನಿಶ್ಚರ ಅಂತ ಕರೆದಿದ್ದಾರೆ ಚಾರ್ವರೀವಾನ್ ಭಾಗವತ ಹಾಗೂ ವಿಷ್ಣು ಪುರಾಣಗಳ ಪ್ರಕಾರ ಈ ಸಪ್ತ ಋಷಿಗಳು ಸ್ವಾರೋಚಿಷ ಮನ್ವಂತರದಲ್ಲಿ ಇದ್ದಾರೆ.

1. 07.13 ಹರಿವಂಶರ್ವ



ಇಲ್ಲಿರುವ ದೇವತೆಗಳ ಹೆಸರು ಅಲ್ಲಿ ದೇವತೆಗಳ ಹೆಸರು ಯಾಮಾ, ಎರಡನೆಯ ಮನ್ವಂತರದಲ್ಲಿ ತುಷಿತಾದಿ ದೇವತೆಗಳು, ತುಷಿತರೆ ಮೊದಲಾದ ದೇವತೆಗಳು ಸ್ವಾರೋಚಿಷ ಮನ್ವಂತರದಲ್ಲಿ ಇದ್ದಾರೆ. ಇಲ್ಲಿರುವಂಥವರು ಮನುವಿನ ಮಕ್ಕಳು ಯಾರು ಅಂದರೆ ಹವಿರ್ಧ್ರ, ಸುಕೃತಿ, ಜ್ಯೋತಿ, ಆಪ, ಮೂರ್ತಿ, ಅಯಸ್ಮಯ, ಪ್ರಥಿಥ, ನಭಸ್ಯ, ನಭ, ಊರ್ಜ ಅಂತ ಮನು ಪುತ್ರರು ಇದ್ದಾರೆ ಹರಿವಂಶದ ಪ್ರಕಾರ. ಶ್ರೀಮದ್ಭಾಗವತದಲ್ಲಿ ಎಲ್ಲ ಹೆಸರುಗಳನ್ನು ಹೇಳುವುದಿಲ್ಲ ದ್ಯುಮತ್ಸೇನ, ರೋಚಿಷ್ಮಾನ್ ಮೊದಲಾದವರು ಮಕ್ಕಳು ಅಂತ ಭಾಗವತ ಹೇಳುತ್ತದೆ ಇವರೆಲ್ಲ ಮನು ಪುತ್ರರು. ಸ್ವಲ್ಪ ಸ್ವಾರೋಚಿಷ ಮನು ಅಗ್ನಿಪುತ್ರನಾದದ್ದರಿಂದ ಆ ಅಗ್ನಿಯ ಪೌತ್ರರ ಹೆಸರು ಅಗ್ನಿಗೆ ಸಂಬಂಧಪಟ್ಟಂತೆ ಇವೆ ಸ್ವಲ್ಪ ಹವಿರ್ಧ್ರ ಅಂತ, ಜ್ಯೋತಿ ಅಂತ ಈ ರೀತಿಯಾಗೆಲ್ಲ ಪ್ರಾಯಃ ಸ್ವಲ್ಪ ಅವನ ತಮ್ಮ ತಾತನ, ತಂದೆಯ ಗುಣಗಳಿಗೆ ಹೋಲುವಂತೆ ಹೆಸರುಗಳನ್ನು ಇಟ್ಟಿದ್ದಾರೆ. ತಾತನ ಹೆಸರಿಗೆ ತಕ್ಕಂತೆ, ಅವರ ಗುಣಗಳಿಗೆ ತಕ್ಕಂತೆ ಮೊಮ್ಮಕ್ಕಳು ಚೆನ್ನಾಗಿ ಗುಣವಂತರಾಗಬೇಕು, ಕೀರ್ತಿವಂತರಾಗಬೇಕು, ಒಳ್ಳೆಯ ಹೆಸರು ತರಬೇಕು. ತಂದೆ ತಾತ ಅವರ ಮುಖಕ್ಕೆ ಮಸಿ ಬಳಿಯುವ ಕೆಲಸ ಮಾಡಬಾರದು, ಅವರ ಕೀರ್ತಿಯ ಪತಾಕೆಯನ್ನು ಹಾರಿಸುವಂತಹ ಮಕ್ಕಳಾಗಬೇಕು, ಮೊಮ್ಮಕ್ಕಳಾಗಬೇಕು ಅನ್ನುವುದರ ಸೂಚನೆ ಹೆಸರಿನ ಮೂಲಕವೇ ಹರಿವಂಶ, ಭಾಗವತಗಳು ನಮಗೆ ತಿಳಿಸಿಕೊಡುತ್ತಾ ಇವೆ. ಅಂತಹ ಶ್ರೇಷ್ಠರಾದ ಮೊಮ್ಮಕ್ಕಳಾಗಿದ್ದರು ಅಂತ ನಾವು ತಿಳಿಯಬೇಕು ಮನು ಪುತ್ರರು ಅಗ್ನಿಯ ಪೌತ್ರರು.

ಈ ಮನ್ವಂತರದೊಳಗೆ ರೋಚನ ಅನ್ನುವ ಇಂದ್ರ, ಯಾರು ಈ ರೋಚನ ಸಾಕ್ಷಾತ್ ವಾಯು ದೇವರು ಜೀವೋತ್ತಮರಾದ ವಾಯು ದೇವರು. ಒಂದನೆಯ ಮನ್ವಂತರದಲ್ಲಿ ಸರ್ವೋತ್ತಮನಾದ ಶ್ರೀಹರಿ ಯಜ್ಞ ಅವನು ಇಂದ್ರ, ಎರಡನೆಯ ಮನ್ವಂತರದಲ್ಲಿ ಜೀವೋತ್ತಮರಾದ ವಾಯು ದೇವರೇ ಇಂದ್ರರು. ಅವರೇ ಭೀಮಸೇನ ದೇವರಾಗಿ ಅವತಾರ ಮಾಡುತ್ತಾರೆ ಮುಂದೆ **'ಪೂರ್ವೇಂದ್ರಾಃ'** ಅಂತ ಶ್ರೀಮದಾಚಾರ್ಯರು ಮಹಾಭಾರತದ ತಾತ್ಪರ್ಯ ನಿರ್ಣಯದಲ್ಲಿ ಹೇಳುತ್ತಾರೆ. ಇನ್ನು ಸಾಕ್ಷಾತ್ ಪರಮಾತ್ಮ ಈ ಮನ್ವಂತರದಲ್ಲಿ ಅವತಾರ ಮಾಡಿದ್ದಾನೆ ವಿಭು ಎಂಬ ಹೆಸರಿನಿಂದ. ಯುವಕರೇ ಪುನಃ ಚೆನ್ನಾಗಿ ಕೇಳಿ ಹೇಗೆ ಉಪಸ್ಥೇಂದ್ರಿಯಕ್ಕೆ ಅಭಿಮಾನಿಯಾಗಿ ಬ್ರಹ್ಮಚರ್ಯವನ್ನು ನೀಡುವುದಕ್ಕೆ ಸ್ವಾಯಂಭುವ ಮನು ಎಂಬ ದೇವತೆಯ ಉಪಾಸನೆಯನ್ನು ಮಾಡಬೇಕು, ಪ್ರಾರ್ಥನೆ ಮಾಡಬೇಕು ಅವನಲ್ಲಿ ಅಂತರ್ಯಾಮಿಯಾದ ಮುಖ್ಯಪ್ರಾಣನಲ್ಲಿ ಅಂತರ್ಯಾಮಿಯಾಗಿ ಇರುವಂತಹ ಈ ವಿಭುನಾಮಕನಾದ ಪರಮಾತ್ಮ. ಈ ವಿಭುನಾಮಕನಾದ ಪರಮಾತ್ಮ ಅವತಾರ ಮಾಡಿ ಮಾಡಿದಂತಹ ಕಾರ್ಯ ಅದು ಉಪದೇಶ, ಏನು ಉಪದೇಶ ಒಬ್ಬರಿಗಲ್ಲ ಇಬ್ಬರಿಗಲ್ಲ 88,000 ಜನ ಮುನಿಗಳಿಗೆ ಬ್ರಹ್ಮಚರ್ಯ ಹೇಗೆ ಅಂತ ಕಲಿಸಿಕೊಟ್ಟಿದ್ದಾನೆ ಮಹಾನುಭಾವ. ಇವನ ತಂದೆ ವೇದಶಿರಸ್ ಎಂಬ ಋಷಿ, ತಾಯಿ ತುಷಿತಾ ಎಂಬ ಹೆಸರಿನ ತಾಯಿ ಆ ತುಷಿತಾಳಲ್ಲಿ ವೇದಶಿರಸ್ ಎಂಬ ಋಷಿಯಿಂದ ಅವತಾರ ಮಾಡಿದ ಈ ವಿಭು ನಾಮಕನಾದ ಪರಮಾತ್ಮ 88,000 ಜನ ಮುನಿಗಳಿಗೆ ತನ್ನ ಶಿಷ್ಯರನ್ನಾಗಿ ಮಾಡಿಕೊಂಡು, ಎಲ್ಲರೂ ದೇವರ ಶಿಷ್ಯರೇ, ವಿಶೇಷವಾಗಿ ತನ್ನ ಶಿಷ್ಯರನ್ನಾಗಿ ಮಾಡಿಕೊಂಡು ಅವರೆಲ್ಲರಿಗೆ ನೈಷ್ಠಿಕ ಬ್ರಹ್ಮಚರ್ಯದಿಂದ ಯಾವ ರೀತಿ ಜೀವನವನ್ನು ಸಾಗಿಸಬೇಕು ಅಂತ ತಿಳಿಸಿ, ಕಲಿಸಿ ಆ ಶಕ್ತಿಯನ್ನು ಕೊಟ್ಟು ಮಹಾಬ್ರಹ್ಮಚರ್ಯದ ಮಹಾಪರಂಪರೆಯನ್ನು ಪ್ರವರ್ತನ ಮಾಡಿದಂತಹ ಮಹಾನುಭಾವ ವಿಭು ಎಂಬಂತಹ ಭಗವಂತ. ಆ ವಿಭುವಿನ ಸ್ಮರಣೆಯನ್ನು ಮಾಡಿ, ಬ್ರಹ್ಮಚರ್ಯದಿಂದ ಅಧ್ಯಯನವನ್ನು ಮಾಡಿ ಅತ್ತ-ಇತ್ತ ಮನಸ್ಸು ಹರದಾಡುವಂತೆ ಮಾಡಿಕೊಳ್ಳಬೇಡಿ **'ವಿಭವೇ ನಮಃ'.** ಅಂತಹ ವಿಭು ಎಂಬ ಅವತಾರವನ್ನು ಪರಮಾತ್ಮ ಮಾಡುತ್ತಾನೆ ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ.

ಇದಾದ ಮೇಲೆ ಮೂರನೆಯ ಮನ್ವಂತರ ಮನು ಯಾರು ಉತ್ತಮ, ಮೊದಲನೆಯದಾಗಿ ಮನು ಯಾರು ಉತ್ತಮ, ಸ್ವಾಯಂಭುವ, ಸ್ವಾರೋಚಿಷ, ಉತ್ತಮ. ಈ ಉತ್ತಮ ಸ್ವಾಯಂಭುವ ಮನುವಿನ ಮಗನಾದ ಪ್ರಿಯವ್ರತನ ಮಗ ಉತ್ತಮ, ತಾಪಸ, ರೈವತ ಅಂತ ಮೂರು ಜನ ಪ್ರಿಯವ್ರತನ ಮಕ್ಕಳು, ಸ್ವಾಯಂಭುವ ಮನುವಿನ ಮೊಮ್ಮಕ್ಕಳು, ಏನು ಆ ಸ್ವಾಯಂಭುವ ಮನುವಿನ ಭಾಗ್ಯ ಅಂದರೆ ಅದ್ಭುತವಾದದ್ದು ಎಷ್ಟು ಅವತಾರಗಳು. ಆ ಸ್ವಾಯಂಭುವ ಮನುವಿನ ಸಾಕ್ಷಾತ್ ಮೊಮ್ಮಕ್ಕಳಾಗಿ ಈ ಕಡೆಗೆ ಯಜ್ಞ, ಆ ಕಡೆಗೆ ಕಪಿಲನಾಮಕ ಪರಮಾತ್ಮ, ಈ ಕಡೆಗೆ ದತ್ತಾತ್ರೇಯ ಇವರೆಲ್ಲ ಮಕ್ಕಳು, ಮೊಮ್ಮಕ್ಕಳು ಅವನ ವಂಶದಲ್ಲಿ ನರ ನಾರಾಯಣಾದಿ ರೂಪದಿಂದ ಅನೇಕ ರೂಪಗಳಿಂದ ಪರಮಾತ್ಮ ಅವತಾರ ಮಾಡುತ್ತಾನೆ ಆ ಸ್ವಾಯಂಭುವ ಮನುವಿನ ವಂಶದಲ್ಲಿ, ಇರಲಿ. ಈ ಕಡೆಗೆ ಭಗವದ್ಭಕ್ತರಾದ ಮಕ್ಕಳು ಕೂಡ, ಮೊಮ್ಮಕ್ಕಳು ಎಷ್ಟು ಜನ ಪ್ರಿಯವ್ರತ, ಉತ್ತಾನಪಾದರು ಅವನ ಮಕ್ಕಳಾದರೆ ಆ ಪ್ರಿಯವ್ರತನಿಗೆ ಉತ್ತಮ, ತಾಪಸ, ರೈವತ ಅಂತ ಮೂರು ಜನ ಮಕ್ಕಳು ಅದರಲ್ಲಿ ತಾಪಸ ಮತ್ತೆ ಸಾಕ್ಷಾತ್ ಪರಮಾತ್ಮನೇ ವಿಷ್ಣುವೇ ಆ ಉತ್ತಮ ಪ್ರಿಯವ್ರತನ ಮಗ.

ಅಲ್ಲಿ ಋಷಿಗಳು ವಸಿಷ್ಠ ಪುತ್ರರು ಮೊದಲು ಹಿರಣ್ಯಗರ್ಭನ ಪುತ್ರರಾದವರು ಅಂತ ಉದಾಹರಣೆ ಮಾಡುತ್ತದೆ ಹರಿವಂಶ ಅವರೇ ಪುನಃ ವಸಿಷ್ಠರ ಪುತ್ರರಾಗಿ ಅವತಾರ ಮಾಡುತ್ತಾರೆ ಅಂತ ಅವರ ಎಲ್ಲ ಏಳು ಜನರ ಹೆಸರುಗಳನ್ನು ಉದಾಹರಣೆ ಮಾಡುವುದಿಲ್ಲ. ಪ್ರಮದಾದಿಗಳು ಅಂತ ಭಾಗವತದಲ್ಲಿ ಹೇಳುತ್ತಾರೆ ಪ್ರಮದನೇ ಮೊದಲಾದಂತಹ ಏಳು ಜನ ಋಷಿಗಳು ಉತ್ತಮ ಮನ್ವಂತರದಲ್ಲಿ ಇದ್ದಾರೆ.

ಮನು ಪುತ್ರರು ಯಾರು ಅಂತ. ಹರಿವಂಶ ಹೇಳುತ್ತದೆ ಇಷ, ಊರ್ಜ, ನೋಡಿ ಮತ್ತೆ ತನುಜ ಅಂತ, ತನುಜ ಅಂದರೆ ಮಗ ಮಗ ಅಂತೇ ಒಂದು ಹೆಸರು ತನುಜ ಅಂತ ಅವನಿಗೆ ಹೆಸರು ಇಟ್ಟರು ಮಧು, ಮಾರ್ಧವ, ಶುಚಿ, ಶುಕ್ರ, ಸಹ, ನಭಸ್ಯ, ನಭ ಅಂತ ಹತ್ತು ಜನ ಮಕ್ಕಳನ್ನು ಪಡೆದಿದ್ದಾನೆ ಉತ್ತಮ.

ಈ ಮನ್ವಂತರದೊಳಗೆ ಮಹಾನುಭಾವರಾದ ದೇವತೆಗಳು ಯಾರು ಅಂದರೆ ಭಾನು ಎಂಬ ಹೆಸರಿನ ದೇವತೆಗಳು ಅಂತ ಹರಿವಂಶ ಹೇಳುತ್ತದೆ. ದೇವತೆಗಳಲ್ಲಿ ಅವಾಂತರ ಗುಂಪುಗಳು, ಪ್ರಭೇದಗಳು, ಗಣಗಳನ್ನು ಹೇಳುತ್ತದೆ ಭಾಗವತ ಅಲ್ಲಲ್ಲಿ ಸತ್ಯಾ, ವೇದಶೃತಾ, ಭದ್ರಾ ಎಂಬ ಹೆಸರಿನ ಅನೇಕ ದೇವತೆಗಳು ಈ ಮನ್ವಂತರದಲ್ಲಿ ಆಗಿಹೋಗಿದ್ದಾರೆ. ಸತ್ಯವಾದ ವಚನದ ಮಹಿಮೆಯನ್ನು ತಿಳಿದು ಯಾವಾಗಲೂ ಸತ್ಯನಿಷ್ಠವಾದವರು, ಸಕಲ ವೇದಗಳ ಅಧ್ಯಯನವನ್ನು ಮಾಡಿದ ಮಹಾನುಭಾವರು, ಯಥಾ ಯೋಗ್ಯವಾಗಿ ಭದ್ರವಾದ ಮಂಗಲವಾದ ಗತಿಯನ್ನು ಸಜ್ಜನರಿಗೆ ಕರುಣಿಸುವವರು ಅಂತಹ ಸತ್ಯರು, ವೇದಶೃತರು, ಭದ್ರರು ಉತ್ತಮ ಮನ್ವಂತರದ ದೇವತೆಗಳು.

ಇಲ್ಲಿ ಇಂದ್ರ ಯಾರು ಸಾಕ್ಷಾತ್ ಯಮಧರ್ಮ ರಾಜನೇ ಸತ್ಯಜಿತ್ ಎಂಬ ಹೆಸರಿನಿಂದ ಇಂದ್ರನಾಗಿ ಈ ಮನ್ವಂತರದೊಳಗೆ ಮೂರು ಲೋಕಗಳ ರಾಜ್ಯವನ್ನು ಆಳುತ್ತಾನೆ ಅವನೇ ಮುಂದೆ ಪಂಚಪಾಂಡವರಲ್ಲಿ ಹಿರಿಯನಾಗಿ ಯುಧಿಷ್ಠಿರನಾಗಿ ಅವತಾರ ಮಾಡುತ್ತಾನೆ. ಈ ಮನ್ವಂತರದಲ್ಲಿ ದೇವರ ಅವತಾರ ಸತ್ಯಸೇನ ಅಂತ ಅಂತೂ ನೋಡಿ ದೇವತೆಗಳ ಹೆಸರು ಸತ್ಯ, ಇಂದ್ರನ ಹೆಸರು ಸತ್ಯಜಿತ್, ಪರಮಾತ್ಮನ ಅವತಾರ ಸತ್ಯಸೇನ ಅಂತ. ಈ ಉತ್ತಮ ಮನ್ವಂತರದಲ್ಲಿ ಆ ಸತ್ಯ ಸತ್ಯ ಸತ್ಯ ಅನ್ನುವುದನ್ನ ನಾವು ವಿಶೇಷವಾಗಿ ದೇವತೆಗಳು ಇಂದ್ರ ಹಾಗೂ ಪರಮಾತ್ಮನ ಅವತಾರ ಮೂರರಲ್ಲಿಯೂ ಬಂದದ್ದನ್ನು ನಾವು ಕಾಣುತ್ತೇವೆ. ಈ ಸತ್ಯಸೇನನಾಮಕನಾದ ಪರಮಾತ್ಮ ಹೇಗೆ ಅವತಾರ ಮಾಡಿದ, ಒಂದು ಸ್ವಾರಸ್ಯ ಇದೆ ನೋಡಿ, ದೇವತೆಗಳ ಹೆಸರು ಸತ್ಯ, ದೇವತೆಗಳೆಲ್ಲ ಭಗವಂತನ ಸೈನ್ಯ, ಸತ್ಯರೇ



ಸೇನೆಯಾಗಿ ಉಳ್ಳವನು ಸತ್ಯಸೇನ. ಆ ಎಲ್ಲ ದೇವತೆಗಳು ಭಗವಂತನ ಸೇನೆ ಅವನು ವಿಶ್ವಕ್ಸೇನ ಎಲ್ಲ ಕಡೆಗೂ ತನ್ನ ಸೈನ್ಯವನ್ನು ಇಟ್ಟಿದ್ದಾನೆ ಅಭಿಮಾನಿ ದೇವತೆಗಳನ್ನು ಅವನು ಸತ್ಯಸೇನ ಎಷ್ಟು ಚೆನ್ನಾಗಿದೆ ನೋಡಿ ಹೆಸರು. ಇಂತಹ ಹೆಸರುಗಳನ್ನೆ ಇಡಿ ಮಕ್ಕಳಿಗೆ ಒಳ್ಳೆಯ ಒಳ್ಳೆಯ ದೇವರ ಹೆಸರುಗಳನ್ನು ಇಡಬೇಕು, ವಾಯು ದೇವರ ಹೆಸರುಗಳನ್ನು, ದೇವತೆಗಳ ಹೆಸರುಗಳನ್ನು, ಋಷಿಗಳ ಹೆಸರುಗಳನ್ನು ಇಡಬೇಕು, ಯಾವುದೋ ಟಿಂಕು, ಪಿಂಕು ಅಂತೆಲ್ಲಾ ಹೆಸರುಗಳನ್ನು ಇಡಬಾರದು. ಎಂತಹ ಶ್ರೇಷ್ಠವಾದ ಹೆಸರುಗಳು ಸತ್ಯಸೇನ ಅತ್ಯಂತ ಸತ್ಯವಂತರಾದ, ಪ್ರಾಮಾಣಿಕರಾದ, ನಿಷ್ಠಾವಂತರಾದ, ಉತ್ತಮ ಸಹಾಯಕರು, ಮಿತ್ರರು, ಅನುಚರರು ಸಿಗುತ್ತಾರೆ ನಿಮ್ಮ ಮಕ್ಕಳಿಗೆ ಸತ್ಯಸೇನ ಅಂತ ಹೆಸರು ಇಟ್ಟರೆ ಹುಟ್ಟಿದ ಮೇಲೆ ಈ ರೀತಿ. ಅವನ ತಂದೆ ಧರ್ಮ, ತಾಯಿ ಸೂನೃತಾ ಆ ಧರ್ಮ ಎಂಬ ಹೆಸರಿನ ತಂದೆಯಿಂದ ಧರ್ಮರಾಜನಿಂದ ಸೂನೃತಾ ಅನ್ನುವವಳಲ್ಲಿ ಪರಮಾತ್ಮ ಸತ್ಯಸೇನನಾಗಿ ಅವತಾರ ಮಾಡುತ್ತಾನೆ. ಅನೇಕ ಜನ ದುಷ್ಟರಾದ ರಾಕ್ಷಸರು, ಭೂತಗಳು, ಪಿಶಾಚಿಗಳು ಇವುಗಳೆಲ್ಲ ಸಜ್ಜನರಿಗೆ ಬಾಧೆಗಳನ್ನು ಕೊಡುವಾಗ ಹಿಂದೆ ಹೇಗೆ ಯಜ್ಞನಾಮಕ ಪರಮಾತ್ಮ ಆ ಎಲ್ಲ ರಾಕ್ಷಸರನ್ನು ಸಂಹಾರ ಮಾಡಿ ಸಜ್ಜನರ ರಕ್ಷಣೆ ಮಾಡಿದ ಹಾಗೆ ಈ ಸತ್ಯಸೇನನೂ ಕೂಡ ದುಷ್ಟರಾದ ರಾಕ್ಷಸರ ಬಾಧೆಗಳನ್ನೆಲ್ಲ ಪರಿಹಾರ ಮಾಡಿ ಸಜ್ಜನರ ರಕ್ಷಣೆಯನ್ನು ಮಾಡುತ್ತಾನೆ. ಹೀಗೆ ಮೂರನೆಯ ಮನ್ವಂತರದ ಬಗ್ಗೆ ಹೇಳತಕ್ಕಂಥವರಾಗುತ್ತಾ ಇದ್ದಾರೆ.

ಇನ್ನು ನಾಲ್ಕನೆಯ ಮನ್ವಂತರ ತಾಪಸ. ಕೆಲವು ಕಡೆಗೆ ಹರಿವಂಶದಲ್ಲಿ, ವಿಷ್ಣುರಹಸ್ಯದಲ್ಲಿ, ಮಾರ್ಕಂಡೇಯ ಪುರಾಣದಲ್ಲಿ ಈ ಮನುವನ್ನು ತಾಮಸ ಎಂಬುದಾಗಿ ಕರೆದದ್ದು ಉಂಟು. ಸತ್ಯಧರ್ಮತೀರ್ಥ ಶ್ರೀಪಾದಂಗಳವರು ಶ್ರೀಮದ್ಭಾಗವತದ ವ್ಯಾಖ್ಯಾನದಲ್ಲಿ ಆ ಎಲ್ಲ ಪ್ರಮಾಣ ವಚನಗಳ ಉದಾಹರಣೆಯನ್ನು ಮಾಡಿ ತಾಮಸ ಎಂಬ ಹೆಸರೂ ಉಂಟು ಆ ಒಂದು ವಿಪ್ಪತ್ತಿಯನ್ನೂ ತೋರಿಸಿಕೊಟ್ಟಿದ್ದಾರೆ. ದೇವರಲ್ಲಿ ತಮೋಗುಣ ಇದೆ ಅಂತನ್ನುವ ಅರ್ಥವಲ್ಲ ತಾಯಿ ತಾಮಸ ಯೋನಿಯನ್ನು ಹೊಂದಿದಾಗ ಅವಳಲ್ಲಿ ಅವತಾರ ಮಾಡಿದವ ಅನ್ನುವದಕ್ಕಾಗಿ ಇವನಿಗೆ ತಾಮಸ, ಜಗತ್ತಿನಲ್ಲಿ ತಮಸ್ಸು ಕವಿದಾಗ ಅದರ ಪರಿಹಾರಕ್ಕಾಗಿ ಅವತಾರ ಮಾಡಿದವ ಇವನು ತಾಮಸ. ಇವನಿಗೆ ತಮಸ್ಸಿಲ್ಲ ತಮಸ್ಸಿನಿಂದ ಆವೃತವಾದಾಗ ಅದರ ಪರಿಹಾರಕ್ಕೋಸುಗ ಅವತಾರ ಮಾಡಿದವನು ಆದದ್ದರಿಂದ ಇವನು ತಾಮಸ ಆದರೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಮಾತ್ರ ಭಾಗವತ ತಾತ್ಪರ್ಯದಲ್ಲಿ ಹೇಳುವಾಗ

ಹರಿಸ್ತಾಪಸನಾಮಾಸೌ ಜಾತಸ್ತಪಸಿ ವೈ ಮನುಃ ।

ಗಜೇಂದ್ರಂ ಮೋಚಯಾಮಾಸ ಸಸರ್ಜ ಚ ಜಗದ್ ವಿಭುಃ ॥ (ಮತ್ಸ್ಯಪುರಾಣ)

ಅಂತ ಮತ್ಸ್ಯಪುರಾಣದ ವಚನವನ್ನು ಕೊಟ್ಟು ಶ್ರೀಮದಾಚಾರ್ಯರು ತಾಪಸ ಎಂಬ ಹೆಸರನ್ನು ತಿಳಿಸಿಕೊಟ್ಟಿದ್ದಾರೆ. ಪ್ರಿಯವ್ರತ ವಿಶೇಷವಾಗಿ ತಪಸ್ಸು ಮಾಡುತ್ತಾ ಇರುವಾಗ ಅವನ ತಪಸ್ಸಿಗೆ ಮೆಚ್ಚಿ ಒಲಿದು ಇಳಿದು ಬಂದವನಾದದ್ದರಿಂದ ಇವನಿಗೆ ತಾಪಸ ಅಂತ ತಂದೆ ಪ್ರಿಯವ್ರತ ತಪಸ್ಸು ಮಾಡಿದಾಗ ಅವನ ತಪಸ್ಸಿಗೆ ಒಲಿದು ಬಂದದ್ದಕ್ಕೋಸ್ಕರ ಇವನಿಗೆ ತಾಪಸ ಮನು ಎಂಬ ಹೆಸರು. ಹಾಗಾದರೆ ತಾಮಸ ಎಂಬ ಹೆಸರಿದೆ ಕೆಲವು ಪುರಾಣಗಳಲ್ಲಿ ಹರಿವಂಶದಲ್ಲಿಯೂ ಸೇರಿದಂತೆ ಭಾಗವತದಲ್ಲಿ ತಾಪಸ ಅಂತ ಇದೆ ಶ್ರೀಮದಾಚಾರ್ಯರು ಭಾಗವತ ತಾತ್ಪರ್ಯದಲ್ಲಿ ತಪಸ್ಸು ಮಾಡಿದಾಗ ಅವತಾರ ಮಾಡಿದ್ದರಿಂದ ಇವನು ತಾಪಸ ಅಂತ ಹೇಳುತ್ತಾರೆ ಆದರೆ ಇನ್ನುಳಿದ ಕಡೆಗೆ ಹೇಳಿದ ತಾಮಸ ಅನ್ನುವುದರ ಬಗ್ಗೆ ಆಚಾರ್ಯರು ಯಾಕೆ ಹೇಳಲಿಲ್ಲ ಅಂತ ಪ್ರಶ್ನೆ ಮಾಡಿಕೊಂಡು ಸತ್ಯಧರ್ಮತೀರ್ಥರು ಉತ್ತರ ಕೊಡುತ್ತಾರೆ. ಭಗವಂತನಲ್ಲಿ ಗುಣಗಳ ಉಪಾಸನೆಯನ್ನು ಮಾಡಬೇಕು ತಾಮಸ ಅಂತ ಹೇಳಿದಾಗ ಸಾಮಾನ್ಯ ಜನರಿಗೆ ಇದೇನಿದು ತಾಮಸ ಹಾಗಾದರೆ ದೇವರಲ್ಲಿ ತಮೋಗುಣವಿದೆಯೋ ಅಂತ

ಭ್ರಾಂತಿ ಬಂದೀತು ಅಂತ ಅನ್ನುವುದಕ್ಕೋಸ್ಕರ ತಲೆಕೆಡಿಸಿಕೊಳ್ಳುವುದು ಬೇಡ ಅದನ್ನು ಹಾಗೆ ಇಡಿ ತಾಪಸ ಎಂಬುದಾಗಿ ಪರಮಾತ್ಮನ ಉಪಾಸನೆಯನ್ನು ಮಾಡಿ, ತಪಸ್ಸು ಮಾಡಿದಾಗ ಪ್ರಾದುರ್ಭೂತ ಅಂತ ಅದು ನಿಮಗೆ ಸುಲಭವಾಗಿ ಗೋಚರವಾಗುವಂತಹದ್ದು. ಪ್ರಾಜ್ಞರು ಬೇರೆ ಪುರಾಣಗಳಲ್ಲಿ ಬಂದಂತಹ ತಾಮಸ ಅನ್ನುವುದಕ್ಕೂ ದೇವರ ದೋಷ ಅಲ್ಲ ಅದು ಜಗತ್ತಿನೊಳಗಿನ ತಮಸ್ಸನ್ನು ಪರಿಹಾರ ಮಾಡುವುದಕ್ಕಾಗಿ ಅವತಾರ ಮಾಡಿದವ ಎಂಬುದಾಗಿ ತಿಳಿದು ಪ್ರಾಜ್ಞರು, ವಿಜ್ಞರು, ಸುಜ್ಞರು ಉಪಾಸನೆಯನ್ನು ಮಾಡಲಿ, ನೀವು ತಾಪಸ ಎಂಬುದಾಗಿ ಸುಲಭ ಉಪಾಸನೆಯನ್ನು ಮಾಡಿ ಅಂತ ಹೇಳುವದಕ್ಕೋಸ್ಕರ ಒಂದು ನಿರ್ವಚನವನ್ನು ಶ್ರೀಮದಾಚಾರ್ಯರು ತೋರಿಸಿದ್ದಾರೆ ಅಂತ ಸತ್ಯಧರ್ಮತೀರ್ಥ ಶ್ರೀಪಾದಂಗಳವರು ತಿಳಿಸಿಕೊಡುತ್ತಾರೆ. ಅಂತಹ ಪ್ರಿಯವ್ರತನ ಮಗನಾಗಿ ಅವತಾರ ಮಾಡಿದಂತಹ ಪರಮಾತ್ಮ ತಾಪಸ ಮನು.

ಈ ಮನ್ವಂತರದಲ್ಲಿ ಋಷಿಗಳು ಯಾರು ಕಾವ್ಯ, ಪೃಥು, ಅಗ್ನಿ, ಜನ್ಯು, ಧಾತಾ, ಕಪೀವಾನ್, ಅಕಪೀವಾನ್ ಎಂಬ ಋಷಿಗಳು. ಭಾಗವತ ಹೇಳುತ್ತದೆ **'ಜ್ಯೋತಿರ್ಧಾಮಾದಯಃ'** ಅಂತ ಹೆಸರು ಎಲ್ಲಾ ಉದಾಹರಿಸುವುದಿಲ್ಲ ಜ್ಯೋತಿರ್ಧಾಮಾದಿ ಋಷಿಗಳು ಅಂತ ಹರಿವಂಶ ಮಾತ್ರ ಏಳು ಜನರ ಹೆಸರುಗಳನ್ನು ಹೇಳುತ್ತದೆ.

ಈ ಮನ್ವಂತರದ ದೇವತೆಗಳ ಹೆಸರು ಏನು ಅಂತ. ಈ ಮನ್ವಂತರದ ದೇವತೆಗಳ ಹೆಸರು ಸತ್ಯಾ ಅಂತ ಹಿಂದಿನ ಮನ್ವಂತರದೊಳಗೂ ಭಾಗವತದ ಪ್ರಕಾರ ಸತ್ಯ ಎಂಬ ಹೆಸರಿನ ದೇವತೆಗಳು ಇದ್ದಾರೆ ಹರಿವಂಶದ ಪ್ರಕಾರ ಭಾನು ಎಂಬ ಹೆಸರಿನ ದೇವತೆಗಳು ಇದ್ದರು. ಹರಿವಂಶದ ಪ್ರಕಾರ ತಾಪಸ ಮನ್ವಂತರದೊಳಗೆ ಇರುವ ದೇವತೆಗಳ ಹೆಸರು ಸತ್ಯಾ, ಭಾಗವತದ ಪ್ರಕಾರ ಮತ್ತೆ ನಾಲ್ಕು ತರಹದ ದೇವತೆಗಳು ಇಲ್ಲಿ ಸತ್ಯಕಾ, ಹರಿ, ವೀರಾ, ವೈಧೃತಯ ಅಂತ ಹೀಗೆ ನಾಲ್ಕು ಗುಂಪಿನ ದೇವತೆಗಳು ತಾಪಸ ಮನ್ವಂತರದಲ್ಲಿ ಇದ್ದಾರೆ. ವೈಧೃತಯ ಅಂತ ಕರೆಯುವುದಕ್ಕೆ ಕಾರಣ ಏನು ಅಂದರೆ ವಿಧೃತಿ ಅಂತ ತಾಯಿಯ ಹೆಸರು, ಅವಳ ಮಕ್ಕಳಾಗಿ ಹುಟ್ಟಿದ್ದರಿಂದ ದೇವತೆಗಳಿಗೆ ವೈಧೃತಿಗಳು ಅಂತ. ಇನ್ನೊಂದು ಕಾರಣವನ್ನೂ ಹೇಳುತ್ತಾರೆ ಒಂದು ಶಬ್ದಕ್ಕೆ ಒಂದೇ ಅರ್ಥ ಹೇಳಬೇಕು ಅಂತ ಕೆಲವರೆಲ್ಲಾ ತಿಳಿದಿದ್ದಾರೆ ಸರಿ ಯಾವುದಾದರೂ ಒಂದು ಹೇಳಿ ಎರಡೆರಡು ಯಾಕೆ ಅಂತ ತಲೆ ಕೆಡಿಸಿಕೊಳ್ಳುತ್ತಾರೆ. ಪುರಾಣಗಳಲ್ಲಿ ಇತಿಹಾಸಗಳಲ್ಲೇನೆ ಒಂದೊಂದು ಶಬ್ದಗಳಿಗೆ ಅನೇಕ ಅರ್ಥಗಳನ್ನು ಹೇಳುವುದು ಉಂಟು ದೇವರ ಮಹಿಮೆಯನ್ನು ಕೊಂಡಾಡುವ ಶಬ್ದಗಳಿಗೆ ಅನೇಕ ಅರ್ಥಗಳನ್ನು ಹೇಳುವುದು ಮಾತ್ರ ಅಲ್ಲ ಐತಿಹಾಸಿಕವಾದ ನಾಮಗಳಿಗೆ ಐತಿಹಾಸಿಕ ವ್ಯಾಖ್ಯಾನಗಳನ್ನು ಅನೇಕ ರೀತಿಯಾಗಿ ಮಾಡಿದ್ದು ಉಂಟು, ಮಹಿಮೆಗಳ ಪರವಾಗಿ ಮಾತ್ರ ಅಲ್ಲ. ವಿಧೃತಿಯ ಮಕ್ಕಳು ಆದದ್ದರಿಂದಲೂ ಇವರು ವೈಧೃತಿಗಳು, ವೇದಗಳೆಲ್ಲ ಕಾಲ ಬಲದಿಂದ ಉತ್ಛನ್ನವಾದಾಗ ಆ ವೇದಗಳನ್ನು ವಿಶೇಷವಾಗಿ ಅಧ್ಯಯನ ಮಾಡಿ ಅವುಗಳ ವಿಧಾರಣೆ ಮಾಡಿದ್ದಕ್ಕೆ ಇವರು ವೈಧೃತಿಗಳು ಎಂಬುದಾಗಿಯೂ ಕೂಡ ಶ್ರೀಮದ್ಭಾಗವತ ತಿಳಿಸಿಕೊಡುತ್ತದೆ **'ವಿಧೃತಿ ಪುತ್ರಾಃ ವಿಧೃತ ವೇದಾಶ್ಚ'** ಆದ್ದರಿಂದ ಇವರು ವೈಧೃತಿಗಳು ಅಂತ. ಅರ್ಥ ಆಯಿತಲ್ಲ ವ್ಯತಿಪಾತ, ವೈಧೃತಿ ಇವುಗಳೆಲ್ಲ ಮುಹೂರ್ತಗಳಲ್ಲಿ ವರ್ಜ್ಯ ಅಂತ ಆ ವೈಧೃತಿ ಬೇರೆ, ಇದು ವೈಧೃತಿಗಳು ಅಂದರೆ ಇಲ್ಲಿ ದೇವತೆಗಳು, ತಾಪಸ ಮನು ಅವನ ಅನುಚರರಾದ ದೇವತೆಗಳು ಇವರೆಲ್ಲ ತಿಳಿದುಕೊಳ್ಳಿ.

ಈ ಮನುವಿನ ಮಕ್ಕಳು ಸಾಕ್ಷಾತ್ ತಾಪಸ ನಾಮಕನಾದ ಪರಮಾತ್ಮನ ಮಕ್ಕಳು, ಒಂದು ಗಮನಿಸಿ, ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ತಾಮಸ, ತಾಪಸ ಅಂತ ಎರಡು ಹೆಸರುಗಳು ಪುರಾಣಗಳಲ್ಲಿ ಕಂಡು ಬಂದಾಗಲೂ ತಾಪಸ ಎಂಬ ಹೆಸರಿನ ನಿರ್ವಚನವನ್ನು ಮಾಡಿದ್ದಾರೆ ವಿಶೇಷವಾಗಿ ಅಂತ ಸತ್ಯಧರ್ಮರು ತೋರಿಸಿಕೊಟ್ಟರು. ಸ್ವಾರಸ್ಯ ಏನು ಅಂದರೆ ತಂದೆ ಪರಮಾತ್ಮನ ಹೆಸರು ತಾಮಸ ಅಂತ ಹರಿವಂಶ ಹೇಳಿದರೂ



ಮಕ್ಕಳ ಹೆಸರೆಲ್ಲ ನೋಡಿದರೆ ತಪಸ್, ತಪಸ್, ತಪಸ್, ತಪಸ್ ಅಂತ ಬರುತ್ತದೆ ಅಂದರೆ ದೇವರ ಹೆಸರು ತಾಪಸ ಅಂತೂ ಒಂದು ಉಂಟು, ತಾಮಸ ಅಂತೂ ಉಂಟು ಅಂತನ್ನುವ ಏನು ಒಂದು ಮತ್ಸ್ಯ ಪುರಾಣದ ಆಧಾರದ ಮೇಲೆ, ಭಾಗವತದ ಆಧಾರದ ಮೇಲೆ ಶ್ರೀಮದಾಚಾರ್ಯರು ವ್ಯಾಖ್ಯಾನ ಮಾಡಿದ್ದಾರಲ್ಲ ಅದು ಹರಿವಂಶದೊಳಗೂ ಹೇಗೆ ಒಂದಂಶವಾಗಿ ಸೇರಿಕೊಂಡಿದೆ ಅಂತನ್ನುವುದನ್ನು ನೀವೆಲ್ಲ ಚೆನ್ನಾಗಿ ಗಮನಿಸಿ ನೋಡಿ ಮನು ಪುತ್ರರ ಹೆಸರುಗಳನ್ನು ಹೇಳುತ್ತಾರೆ. ದ್ಯುತಿ, ತಪಸ್ಯ, ಸುತಪಾ, ತಪೋಮೂಲ, ತಪೋಧನ, ತಪೋರತಿ, ಅಕಲ್ಮಾಷ, ತನ್ವೀ, ಧನ್ವೀ, ಪರಂತಪ ಹೀಗೆ ಹತ್ತು ಜನರಲ್ಲಿ ಆರು ಜನರ ಹೆಸರಿನೊಳಗೆ ತಪಸ್, ತಪಸ್, ತಪಸ್ ತಪ ಎಂಬುದಾಗಿ ಸೇರಿಕೊಂಡಿದೆ. ಹೀಗಾಗಿ ತಂದೆಯ ಹೆಸರು ತಪಸ್ ಇತ್ತು ತಾಪಸನಿಂದ ಬಂದವರು ಆದ್ದರಿಂದಲೇ ಇವರೆಲ್ಲಾ ಈ ಹೆಸರುಗಳನ್ನು ಪಡೆದಿದ್ದಾರೆ ಅಂತನ್ನುವುದರ ಸೂಚನೆ ಅಲ್ಲಿ ಸಿಗುತ್ತದೆ.

ಅಂದರೆ ಶ್ರೀಮದಾಚಾರ್ಯರ ಆ ಸರ್ವಮೂಲ ಗ್ರಂಥಗಳ ಅಧ್ಯಯನವನ್ನು ನಾವು ಸೂಕ್ಷ್ಮದೃಷ್ಟಿಯಿಂದ ಮಾಡಿದಾಗ ಎಷ್ಟು ಸ್ಪಾರಸ್ಯವಾಗಿ ಶ್ರೀಮದಾಚಾರ್ಯರು ನಮಗೆ ತತ್ವಗಳನ್ನು ತಿಳಿಸಿಕೊಟ್ಟಿದ್ದಾರೆ ಪುರಾಣಗಳ ಇತಿಹಾಸಗಳ ಮರ್ಮವನ್ನು ನಮಗೆ ತಿಳಿಸಿಕೊಟ್ಟಿದ್ದಾರೆ ಅಂತ ಅರ್ಥ ಮಾಡಿಕೊಂಡರೆ ಎಂತಹ ಧನ್ಯತೆಯ ಅನುಭವ ಆಗುತ್ತದೆ ಹಾಗೆಲ್ಲ ನಿಜವಾಗಿ ಹೇಳುತ್ತಾ ಹೋದರೆ ಒಂದೊಂದು ವಿಷಯಗಳ ಬಗ್ಗೆಯೂ ಬಹಳ ಹೇಳಬೇಕಾದದ್ದು ಉಂಟು. ಹೆಸರುಗಳು ಇಡುವುದರಿಂದಲೇನೆ ಸಂದೇಶಗಳನ್ನು ಕೊಡುತ್ತಾರೆ ನಮಗೆ, ದೇವರು ನೇರವಾಗಿ ತನ್ನಲ್ಲಿ ಹುಟ್ಟಿದ ಮಕ್ಕಳಿಗೆ ಹೆಸರು ಇಟ್ಟ ಅವನು ಹೆಸರು ಇಡದೇ ಇನ್ನು ಯಾರಿಡಬೇಕು ಎಲ್ಲರ ಮಕ್ಕಳಿಗೆ ಹೆಸರು ಇಡುವುದು ಅವನೇ.

ಜೀವನದೊಳಗೆ ನೀವು ಹೇಗಿರಬೇಕು, ಹೇಗಿದ್ದರೆ ನೀವು ಮಾಡಿದಂತಹ ಎಲ್ಲ ಕಾರ್ಯಗಳಿಗೆ ಪರಿಪೂರ್ಣವಾದ ಫಲ ಸಿಗುತ್ತೆ ಅಂತ ಎಲ್ಲಾ ಶಬ್ದಗಳ ಅರ್ಥ ಹೇಳುವುದಿಲ್ಲ ಸುಮ್ಮನೆ ಕೆಲವು ಸುತಪಃ ಜೀವನದಲ್ಲಿ ಉತ್ತಮವಾದ ತಪಸ್ಸನ್ನು ಮಾಡಿ ನೀವು, ನೀವು ಮಾಡುವ ಎಲ್ಲ ಕರ್ಮಗಳ ಹಿಂದೆ ತಪಸ್ಸು ಇರಲಿ ತಪೋಮೂಲ ನಿಮ್ಮ ಎಲ್ಲಾ ಕಾರ್ಯಗಳು. ಮದುವೆಯಾಗಬೇಕು ತಪಸ್ಸು, ಮಕ್ಕಳಾಗಬೇಕು ತಪಸ್ಸು, ಪಾಠ ಪ್ರವಚನ ಮಾಡಬೇಕು ತಪಸ್ಸು ಆ ತಪಸ್ಸಿನಿಂದ ಪುಣ್ಯದಿಂದ ನೀವು ಯಾವುದೇ ಕರ್ಮಗಳನ್ನು ಮಾಡಿದರೆ ಅದು ಫಲಪ್ರದವಾಗುತ್ತದೆ, ವೀರ್ಯಪ್ರದವಾಗುತ್ತದೆ, ಉತ್ತಮವಾದಂತಹ ಶ್ರೇಷ್ಠ ಧಾರ್ಮಿಕರಾದ ಮಕ್ಕಳು ಹುಟ್ಟುತ್ತಾರೆ. ಪಾಠ ಪ್ರವಚನವನ್ನು ಮಾಡಿದರೆ ಉತ್ತಮ ಜ್ಞಾನವನ್ನು ನೀಡುತ್ತದೆ, ಮೋಕ್ಷ ಸಾಧನವಾದ ಜ್ಞಾನ ನಿಮಗೆ ಲಭಿಸುವಂತೆ ಮಾಡುತ್ತದೆ ಆ ಹಿಂದೆ ತಪಸ್ಸು ಬೇಕು ಅದಕ್ಕಾಗಿಯೇನೆ **'ತಸ್ಯೈ ತಪೋ ದಮಃ ಕರ್ಮೇತಿ ಪ್ರತಿಷ್ಠಾ'**[1] ಎಂಬುದಾಗಿ ಹೇಳುತ್ತಾರೆ.

ತಪಸ್ಸು ಇದು ಬಹಳ ಮಹತ್ವದ್ದು ಅಂತಹ ತಪಸ್ಸನ್ನು ಮಾಡಬೇಕು ತಪಸ್ಸಿನಿಂದ ಎಲ್ಲವನ್ನು ಸಾಧಿಸಬೇಕು, ಜೀವನದೊಳಗೆ ಏನಾದರೂ ಗಳಿಸಿ ಇಟ್ಟಿದ್ದೇವೆ ಸಂಪತ್ತು, ನಿಧಿ ಇದೆ ಅಂದರೆ ಅದು ತಪಸ್ಸಿನ ನಿಧಿ ಇರಬೇಕು ಅನ್ನುತ್ತಾರೆ. ತಪೋಧನ, ತಪೋಮೂಲ ನೀವು ಸುತಪಸ್ವಾಗಿ ಇರಿ ತಪಸ್ಸಿನೊಳಗೆ ಆಸಕ್ತಿ ಇರಲಿ, ಏನೋ ಮಾಡಬೇಕಪ್ಪಾ ಉಪವಾಸ ಬಿಡುವ ಹಾಗಿಲ್ಲ ಚಾತುರ್ಮಾಸ್ಯ ವ್ರತ ಏನು ಮಾಡುವುದು ಅಂತ ಮುಖ ಕಿವುಚಿ ಮಾಡಬೇಡಿ. ಆ ಮಾಡುವ ತಪಸ್ಸಿನೊಳಗೆ ರತಿ ಇರಲಿ, ಸಂತೋಷ ಇರಲಿ, ತೃಪ್ತಿ ಇರಲಿ, ಉತ್ಸಾಹ ಇರಲಿ, ತಪಸ್ಸಿನೊಳಗೆ ರತಿ ಇರಬೇಕು. ಇದೆಲ್ಲ ಆ ಹೆಸರುಗಳಿಂದ ನಮಗೆ ಸಂದೇಶವನ್ನು ನೀಡುತ್ತಾ ಇದ್ದಾರೆ ಅಂತ ಸೂಚನೆ ಮಾತ್ರ.

---

1. 8 ಕೇನೋಪನಿಷತ್

ಈ ಮನ್ವಂತರದೊಳಗೆ ಇಂದ್ರ ತ್ರಿಶಿಖ ಅಂತ ಹೆಸರಿನ ಇಂದ್ರ, ಇವನು ಯಾರು ಅಂದರೆ ಅಶ್ವಿನಿ ದೇವತೆಗಳ ಪೈಕಿ ಒಬ್ಬ ನಾಸತ್ಯ. ಇಬ್ಬರು ಅಶ್ವಿ ದೇವತೆಗಳು ನಾಸತ್ಯ, ದಸ್ರ ಅದರೊಳಗಿನ ನಾಸತ್ಯ ಎಂಬಂತಹ ದೇವತೆ ಅವನು ತ್ರಿಶಿಖ ಎಂಬ ಹೆಸರಿನಿಂದ ಇಂದ್ರನಾಗಿ ತಾಪಸ ಮನ್ವಂತರದಲ್ಲಿ ಸೇವೆಯನ್ನು ಮಾಡಿದ್ದಾರೆ ಪರಮಾತ್ಮನಿಗೆ. ಇವನೇ ನಕುಲನಾಗಿ ಮುಂದೆ ಪಾಂಡವರಲ್ಲಿ ಅವತಾರ ಮಾಡಿದ್ದು ಅರ್ಥಾತ್ ಪಾಂಡವರೊಳಗೆ ಒಬ್ಬನಾಗಿ ಅವತಾರ ಮಾಡಿದ್ದು. ಈ ಮನ್ವಂತರದೊಳಗೆ ದೇವರ ಅವತಾರ ಪ್ರತ್ಯೇಕ ಇಲ್ಲ ತಾಪಸ ಅನ್ನುವುದೇ ಹರಿ ಎಂಬ ಅವತಾರ ಇದೆ ಆ ಹರಿ ಎಂಬ ಅವತಾರವೇ ಗಜೇಂದ್ರ ಮೋಕ್ಷವನ್ನು ಮಾಡಿದ್ದು ಈ ಮನ್ವಂತರದಲ್ಲಿ ಅಂತ ಕೆಲವರ ಅಭಿಪ್ರಾಯ. ಶ್ರೀಮದ್ ಟೀಕಾಕೃತ್ಪಾದರು ಗೀತಾಭಾಷ್ಯ ಪ್ರಮೇಯದೀಪಿಕಾ ಗ್ರಂಥದಲ್ಲಿ ಅದು ಪ್ರತ್ಯೇಕ ಅವತಾರ ಅಲ್ಲ ತಾಪಸ ಮನ್ವಂತರದಲ್ಲಿ **'ಹರಿಣ್ಯಾಂ ಹರಿಮೇಧಸಃ'** ಅಂತ ಬರುತ್ತದೆ. ಆ ರೀತಿ ಹರಿಮೇಧಸ್ ಅನ್ನುವವನಿಂದ ಹರಿಣಿ ಅನ್ನುವವಳಲ್ಲಿ ಹರಿ

ತತ್ರಾಪಿ ಜಜ್ಞೇ ಭಗವಾನ್ ಹರಿಣ್ಯಾಂ ಹರಿಮೇಧಸಃ ।

ಹರಿರಿತ್ಯಾಹುತೋ ಯೇನ ಗಜೇಂದ್ರೋ ಮೋಚಿತೋ ಗ್ರಹಾತ್ ॥ (08.1.30 ಭಾಗವತ)

ಆ ಪಾಠ ಇಲ್ಲ ಅಂತ ಅನ್ನುತ್ತಾರೆ ಟೀಕಾಕೃತ್ಪಾದರು, ಸತ್ಯಧರ್ಮತೀರ್ಥ ಶ್ರೀಪಾದಂಗಳರೂ ಕೂಡ ಆ ಒಂದು ವಾಕ್ಯ ಇಲ್ಲ. **'ತತ್ರಾಪಿ ಜಜ್ಞೇ ಭಗವಾನ್ ಹರಿಣ್ಯಾಂ ಹರಿಮೇಧಸಃ'** ಅಂತ ಅದು ಪ್ರತ್ಯೇಕ ಅವತಾರ ಅಲ್ಲ, ಅದು ಶುದ್ಧ ಪಾಠವಲ್ಲ, ಮೂಲ ಪಾಠ ಭಾಗವತದಲ್ಲಿ ಇದ್ದದ್ದು.

ಚತುರ್ಥ ಉತ್ತಮಭ್ರಾತಾ ಮನುರ್ನಾಮ್ನಾ ಚ ತಾಪಸಃ । (08.1.27 ಭಾಗವತ)

ಹರಿರಿತ್ಯಾಹುತೋ ಯೇನ ಗಜೇಂದ್ರೋ ಮೋಚಿತೋ ಗ್ರಹಾತ್ ॥ (08.1.30 ಭಾಗವತ)

ಆ ತಾಪಸನೇ ಗಜೇಂದ್ರನ ಮೋಚನೆಯನ್ನು ಮಾಡಿದ್ದೆ ಹೊರತು ಮತ್ತೊಬ್ಬ ಹರಿ ಅಂತ ಅವತಾರ ಇಲ್ಲ ಅಂತ. ಸತ್ಯಧರ್ಮತೀರ್ಥರು ಇನ್ನೂ ಕೆಲವರ ವ್ಯಾಖ್ಯಾನ ಹೀಗಿದೆ ಅಂತ ಉದಾಹರಣೆ ಮಾಡುತ್ತಾರೆ ಇದು ಟೀಕಾಕೃತ್ಪಾದರ ವ್ಯಾಖ್ಯಾನ. ಕೆಲವರ ವ್ಯಾಖ್ಯಾನ ಏನು ಅಂದರೆ ಬರೀ ಪ್ರತ್ಯೇಕ ಅವತಾರ ಇಲ್ಲ ಅಂತ ಒಪ್ಪುತ್ತೇವೆ ಆದರೆ ಆ ತಾಪಸನಿಗೆ ಹರಿ ಅಂತ ಒಂದು ಹೆಸರು ಈ ಹರಿಣಿ ಹರಿಮೇಧಸ್ ಅನ್ನುವುದು ಕೂಡ ಪ್ರಿಯವ್ರತ ಅವನ ಹೆಂಡತಿಯ ಹೆಸರಲ್ಲೇ ಇರಬಹುದು ಅಂತ ಹೀಗೂ ಕೆಲವರ ವ್ಯಾಖ್ಯಾನ ಅಂತೂ ಇಂತೂ ಅವತಾರ ಒಂದೇ ತಾಪಸ ಅಂತ. ಕೆಲವರ ಪ್ರಕಾರ ಹರಿಯೆಂಬ ಪ್ರತ್ಯೇಕ ಅವತಾರವೂ ಇದೆ ಅಂತ ಹೇಳುತ್ತಾರೆ ಅದು ಬೇರೆ ವಿಷಯ ಆದರೆ ಟೀಕಾಕೃತ್ಪಾದರು, ಸತ್ಯಧರ್ಮತೀರ್ಥ ಶ್ರೀಪಾದಂಗಳವರು ಈ ವಿಷಯವನ್ನು ನಮಗೆ ನಿರ್ಣಯ ಮಾಡಿಕೊಟ್ಟು ಅನುಗ್ರಹ ಮಾಡಿದ್ದಾರೆ ತಾಪಸ. ಹಾಗಾದರೆ ಆರು ಬೇಕಲ್ಲ ಯಾರಾದರು ಒಬ್ಬ ಅವತಾರ ಬೇಕಲ್ಲ ಯಾಕೆ ಬೇಕು ಮೊದಲನೆಯ ಮನ್ವಂತರದೊಳಗೂ ಇಂದ್ರ ಬೇರೆ ಇಲ್ಲ, ಅವತಾರ ಬೇರೆ ಇಲ್ಲ, ಇಂದ್ರ – ಯಜ್ಞ, ಅವತಾರ – ಯಜ್ಞ ಹಾಗೆ ಇಲ್ಲಿ ಮನು – ತಾಪಸ, ಅವತಾರ – ತಾಪಸ ಎಲ್ಲ ಕಡೆಗೆ ಆರು ಇರಲೇಬೇಕು ಅಂತ ಏನಿಲ್ಲ ಆದ್ದರಿಂದ ತಾಪಸನಾಮಕನಾದ ಪರಮಾತ್ಮ ಇಲ್ಲಿ ಗಜೇಂದ್ರ ಮೋಚನವನ್ನು ಮಾಡಿದ್ದಾನೆ. ಈ ತಾಪಸ ಮನ್ವಂತರದಲ್ಲಿ ಆದಂತಹ ಕಥೆ ಅದೇ ಪ್ರಸಿದ್ಧವಾದ ಗಜೇಂದ್ರ ಮೋಕ್ಷ, ಪ್ರಾತಃಕಾಲದಲ್ಲಿ ಎದ್ದು ಸ್ಮರಣೆ ಮಾಡಬೇಕಾದಂತಹ ಕಥೆ. ನಾವೆಲ್ಲ ಈ ಸಂಸಾರದೊಳಗೆ ನಾನಾ ವಿಧವಾದಂತಹ ಪಾಶಗಳಿಗೆ



ಪುತ್ರಾದಿ ನಕ್ರನಿಗೃಹೀತ ಶರೀರ ಕಸ್ಯ ।
ವಾಸಿಷ್ಮ ಕೃಷ್ಣ ಮಮ ದೇಹಿ ಕರಾವಲಂಬಂ ॥ (ಸ್ತೋತ್ರ)

ಅಂತಹ ನಾನಾ ವಿಧವಾದ ಪಾಶಗಳಿಗೆ ಸಿಲುಕಿ ಒದ್ದಾಡುವಂಥವರಿಗೆ ಆ ಬಂಧನದಿಂದ ಮೋಚನೆ ಮಾಡಿ ಉತ್ತಮವಾದ ಜ್ಞಾನವನ್ನು ನೀಡಿ ಉದ್ಧಾರ ಮಾಡಬೇಕು ದೇವರು ಅನ್ನುವುದಕ್ಕೋಸ್ಕರ ಏಳುತ್ತಾ ಏಳುತ್ತಾ ಗಜೇಂದ್ರ ಮೋಕ್ಷದ ಸ್ಮರಣೆಯನ್ನು ಮಾಡಬೇಕು ಅಂತ ಹೇಳಿದ್ದಾರೆ.

ಅಂತಃಸರಸ್ಯುರುಬಲೇನ ಪದೇ ಗೃಹೀತೋ ಗ್ರಾಹೇಣ ಯೂಥಪತಿರಂಬುಜಹಸ್ತ ಆರ್ತಃ ।
ಅಹೇದಮಾದಿಪುರುಷಾಖಿಲಲೋಕನಾಥ ತೀರ್ಥಶ್ರವಃ ಶ್ರವಣಮಂಗಳನಾಮಧೇಯ ॥

(02.7.15 ಭಾಗವತ)

ಸ್ಮೃತ್ವಾ ಹರಿಸ್ತಮರಣಾರ್ಥಿನಮಪ್ರಮೇಯಶ್ಚಕ್ರಾಯುಧಃ ಪತಗರಾಜಭುಜಾಧಿರೂಢಃ ।
ಚಕ್ರೇಣ ನಕ್ರವದನಂ ವಿನಿಪಾಟ್ಯ ತಸ್ಮಾದ್ ಹಸ್ತೇ ಪ್ರಗೃಹ್ಯ ಭಗವಾನ್ ಕೃಪಯೋಜ್ಜಹಾರ ॥

(02.7.16 ಭಾಗವತ)

ಆ ರೀತಿ ಪರಮಾತ್ಮ ಉದ್ಧಾರ ಮಾಡಿದ ಅಂತ ಆ ಗಜೇಂದ್ರ ಮೋಕ್ಷದ ಚಿಂತನವನ್ನು ಮಾಡಬೇಕು ಆ ಭಗವಂತ ತಾಪಸ ಮನು ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ.

ಐದನೆಯ ಮನ್ವಂತರ. ಐದನೆಯ ಮನ್ವಂತರದ ಹೆಸರು ರೈವತ ಇವನೂ ಕೂಡ ಪ್ರಿಯವ್ರತನ ಪುತ್ರ ರೈವತ ಮನು, ಮೂರನೆಯ ಮಗ ಉತ್ತಮ, ತಾಪಸ, ರೈವತ. ಈ ಮನ್ವಂತರದಲ್ಲಿ ಋಷಿಗಳು ಹರಿವಂಶದಲ್ಲಿ ಹೇಳಿದ ರೀತಿಯಲ್ಲಿ ವೇದಬಾಹು, ಯದುರ್ಧ, ವೇದಶಿರಾ, ಹಿರಣ್ಯರೋಮ, ಪರ್ಜನ್ಯ, ಸೋಮನಿಂದ ಹುಟ್ಟಿದ ಊರ್ಧ್ವಬಾಹು, ಅತ್ರಿಯಿಂದ ಹುಟ್ಟಿದ ಸತ್ಯನೇತ್ರ ಅಂತನ್ನುವ ಏಳು ಜನ ಋಷಿಗಳು. ಭಾಗವತದ ಪ್ರಕಾರ ಕೆಲವರ ಹೆಸರನ್ನು ಹೇಳಿ ಹಿರಣ್ಯರೋಮ, ವೇದಶಿರಾ, ಊರ್ಧ್ವಬಾಹು ಮೊದಲಾದವರು ಅಂತ ಹೇಳುತ್ತದೆ, ಹರಿವಂಶದಲ್ಲಿ ಬಂದ ಹೆಸರುಗಳನ್ನೇ ಹೇಳಿ ಇನ್ನುಳಿದವರ ಹೆಸರುಗಳನ್ನು ಆದಿಪದೇನ ಸ್ವೀಕಾರ ಮಾಡಿಕೊಳ್ಳಿ ಅಂತ ಶ್ರೀಮದ್ಭಾಗವತ ನಮಗೆ ತಿಳಿಸಿಕೊಡುತ್ತದೆ. ಮತ್ಸ್ಯಪುರಾಣ ಹೇಳುವಾಗ ಹಿರಣ್ಯರೋಮ, ವೇದಶ್ರೀ, ಊರ್ಧ್ವಜಾನು ಇತ್ಯಾದಿ ಹೆಸರುಗಳನ್ನು ಸ್ವೀಕಾರ ಮಾಡಿ ಅಂತ ಈ ರೀತಿ ಋಷಿಗಳ ಹೆಸರುಗಳನ್ನು ನಮಗೆ ತಿಳಿಸಿಕೊಟ್ಟಿದ್ದಾರೆ. ಅಂದರೆ ಅವರು ಒಂದೆರಡು ಹೆಸರುಗಳ ಸ್ವಾರಸ್ಯವನ್ನು ತಿಳಿಯಿರಿ ವೇದಬಾಹು ಅಂತ ಅಂದರೆ ವೇದೋಕ್ತವಾದ ಕರ್ಮಗಳನ್ನು ಮಾಡುವುದಕ್ಕೋಸ್ಕರವಾಗಿಯೇ ಯಾವಾಗಲೂ ತಮ್ಮ ಬಾಹುಗಳನ್ನು ಮೀಸಲಾಗಿ ಇಟ್ಟವರು, ಆ ವೇದಶಾಸ್ತ್ರಗಳ ಗ್ರಂಥಗಳನ್ನೇ ಯಾವಾಗಲೂ ತಮ್ಮ ಕೈಯಲ್ಲಿ ಇಟ್ಟುಕೊಂಡವರು. ಕೇವಲ ಕೈಯಲ್ಲಿ ಇಟ್ಟುಕೊಂಡವರಲ್ಲ ಕೆಲವರ ವೇದಶಿರಾಃ ತಲೆಯಲ್ಲಿ ವೈದಿಕ ಜ್ಞಾನವನ್ನು ತುಂಬಿಕೊಂಡವರು, ವೇದೋಕ್ತ ಕರ್ಮಗಳನ್ನು ಮಾಡಿ ವೇದಗಳ ಜ್ಞಾನವನ್ನು, ವೇದಾರ್ಥದ ಜ್ಞಾನವನ್ನು ತಲೆಯಲ್ಲಿ ತುಂಬಿಕೊಳ್ಳಿ, ದೇವರ ಸರ್ವೋತ್ತಮತ್ವವನ್ನು ಸ್ಥಾಪನೆ ಮಾಡುವುದಕ್ಕೆ ನಾಚಿಕೆ ಬೇಡ ಎರಡು ಕೈಗಳನ್ನು ಮೇಲೆತ್ತಿ ಸಾರಿ ಹೇಳಿ ಊರ್ಧ್ವಬಾಹು ಅಂತ.

ಸತ್ಯಂ ಸತ್ಯಂ ಪುನಃ ಸತ್ಯಮುದ್ಧೃತ್ಯ ಭುಜಮುಚ್ಯತೇ ।
ವೇದಶಾಸ್ತ್ರಾತ್ ಪರಂ ನಾಸ್ತಿ ನ ದೈವಂ ಕೇಶವಾತ್ ಪರಮ್ ॥ (2.70 ಮಭಾತಾನಿರ್ಣಯ)

ವೇದಶಾಸ್ತ್ರಗಳಿಗೆ ಸಮಾನವಾದ ಶಾಸ್ತ್ರ ಇಲ್ಲ, ವಿಷ್ಣುವಿಗೆ ಸಮಾನವಾದ ದೇವತೆ ಇಲ್ಲ ಸರ್ವೋತ್ತಮನಾದವನು ಶ್ರೀಹರಿ ಕೇಶವ, ವೇದಗಳು, ಸರ್ವಶ್ರೇಷ್ಠವಾದ ಶಾಸ್ತ್ರಗಳು ಎಂಬುದಾಗಿ ಭುಜ ಎತ್ತಿ, ಬಾಹು ಎತ್ತಿ ಧೈರ್ಯದಿಂದ ಸಾರಿ ಸಾರಿ ಹೇಳಿ ಆ ಕಂಸಾರಿಯ ಅನುಗ್ರಹದಿಂದ ಸಂಸಾರವನ್ನು ಕಳೆದುಕೊಳ್ಳಿ ಅಂತ ಸೂಚನೆ ಮಾಡುವುದಕ್ಕೋಸ್ಕರ ಊರ್ಧ್ವಬಾಹು ಅಂತ ಹೆಸರಿಟ್ಟಿದ್ದಾರೆ ಹೀಗೆಲ್ಲ ಅನೇಕ ಹೆಸರುಗಳನ್ನು.

ದೇವತೆಗಳು ಯಾರು ರೈವತ ಮನ್ವಂತರದಲ್ಲಿ ಭೂತರಜಸ್ ಎಂಬ ಹೆಸರಿನ ದೇವತೆಗಳು ಇರುತ್ತಾರಂತೆ ಹರಿವಂಶದ ಪ್ರಕಾರ, ಭೂತರಯಾ ಮೊದಲಾದ ದೇವತೆಗಳು ಇರುತ್ತಾರೆ ಅಂತ ಭಾಗವತ ಹೇಳುತ್ತದೆ. ಅಭೂತರಜಸ್ ಎಂಬ ಹೆಸರಿನ ದೇವತೆಗಳೂ ಕೆಲವರು ಇರುತ್ತಾರೆ ಅಂತ, ಪಾರಿಪ್ಲವ, ರೈಭ್ಯ ಎಂಬ ಕೆಲವು ದೇವತಾ ಗಣಗಳು ಇರುತ್ತವೆ ಅಂತ ಹರಿವಂಶದಲ್ಲಿ ತಿಳಿಸಿಕೊಡುತ್ತಾರೆ.

ಇಂದ್ರ ಯಾರು ವಿಭು ಎಂಬ ಹೆಸರಿನ ಇಂದ್ರ. ಸ್ವಾರೋಚಿಷ ಮನ್ವಂತರದಲ್ಲಿ ಅವತಾರ ಮಾಡಿದ ವಿಭು ಎಂಬ ಪರಮಾತ್ಮ ಇದ್ದನಲ್ಲವೋ ಅವನ ಹೆಸರನ್ನು ಇಟ್ಟುಕೊಂಡವನು ಈ ಇಂದ್ರ ವಿಭು. ಇವನು ಯಾರು ಅಶ್ವಿ ದೇವತೆಗಳೊಳಗೆ ಎರಡನೆಯದವನಾದ ದಸ್ರ ಅವನು ವಿಭು ಎಂಬ ಹೆಸರಿನ ಇಂದ್ರನಾಗಿ ಇಲ್ಲಿ ಕಾರ್ಯವನ್ನು ಮಾಡುತ್ತಾನೆ ಅಂತ ಚಲಾರಿ ಆಚಾರ್ಯರು ಭಾಗವತದ ವ್ಯಾಖ್ಯಾನದಲ್ಲಿ ತಿಳಿಸಿಕೊಡುತ್ತಾರೆ. ಇವನೇ ಸಹದೇವನಾಗಿ ಪಾಂಡವರ ಮಧ್ಯದಲ್ಲಿ ಅವತಾರ ಮಾಡುತ್ತಾನೆ.

ಇನ್ನು ಮನುವಿನ ಪುತ್ರರು ಯಾರು. ಈ ರೈವತ ಮನುವಿನ ಪುತ್ರರು ಧೃತಿಮಾನ, ಅವ್ಯಯಾ, ಯುಕ್ತ, ತತ್ವದರ್ಶಿ, ನಿರುತ್ಸುಕ, ಅರಣ್ಯ, ಪ್ರಕಾಶ, ನಿರ್ಮೋಹ, ಸತ್ಯವಾಕ್, ಕವಿ ಅಂತ ಹರಿವಂಶ ಹೇಳುತ್ತದೆ, ಬಲಿ ಅಥವಾ ಬಲವಿಂದ್ಯಾ, ಅರ್ಜುನ ಇತ್ಯಾದಿಗಳು ಅಂತ ಭಾಗವತ ಹೇಳುತ್ತದೆ, ನೋಡಿ ಎಷ್ಟು ಸುಂದರವಾದ ಹೆಸರುಗಳೆಲ್ಲ ಒಂದೆರಡು ಹೆಸರುಗಳನ್ನು ನೋಡಿ. ತತ್ವದರ್ಶಿ ಉತ್ತಮವಾದಂತಹ ತತ್ವಜ್ಞಾನವನ್ನು ಶ್ರೀಮದಾಚಾರ್ಯರ ಹೆಸರುಗಳಲ್ಲಿ ಒಂದು **'ತತ್ವಜ್ಞಃ ವೈಷ್ಣವಾಚಾರ್ಯಃ'** ತತ್ವಜ್ಞ ಶುದ್ಧವಾದ ತತ್ವವನ್ನು ತಿಳಿದುಕೊಳ್ಳುವ ಪ್ರವೃತ್ತಿ ಬೇಕು, ಆ ಜಿಜ್ಞಾಸೆ ಬೇಕು ಅದಕ್ಕಾಗಿ ಪ್ರಯತ್ನ ಮಾಡಬೇಕು, ಶುದ್ಧವಾದ ತತ್ವಜ್ಞಾನವನ್ನು ಪಡೆದುಕೊಳ್ಳಬೇಕು. ಸಂಸಾರಿಕವಾದ ಭೋಗಗಳನ್ನು ಮಾಡುವುದರೊಳಗೆ ಉತ್ಸಾಹ ಇರಬಾರದು, ವೈಷಯಿಕವಾದ ಭೋಗವನ್ನು ಮಾಡುವುದರೊಳಗೆ ನಿರುತ್ಸಾಹ ಇರಬೇಕು ಅಂತ ನಿರುತ್ಸುಕ ಅಂತ ಅವನ ಹೆಸರು, ನಿರ್ಮೋಹ, ಸತ್ಯವಾದದ್ದನ್ನೆ ಮತಾಡಬೇಕು ಅನ್ನುವುದಕ್ಕೆ ಸತ್ಯವಾಕ್. ಹೀಗೆಲ್ಲ ಮಕ್ಕಳಿಗೆ ಹೆಸರುಗಳನ್ನು ಇಡುವ ಮೂಲಕ ಆ ಮಕ್ಕಳಿಗೆ ನಾವು ಹೇಗಿರಬೇಕು ಅಂತ ಅವರಿಗೆ ತಿಳಿಸುವುದು ಮಾತ್ರ ಅಲ್ಲ ಮುಂಬರುವ ಇತಿಹಾಸವನ್ನು ಓದುವ ಜನರಿಗೂ ಕೂಡ ತಮ್ಮ ಕರ್ತವ್ಯ ಏನು ಅಂತ ತಿಳಿಸುವ ರೀತಿಯಲ್ಲಿ ಹೆಸರುಗಳನ್ನು ಇಟ್ಟಿದ್ದಾರೆ ಅಂತ ಮತ್ತೆ ಮತ್ತೆ ಗಮನಿಸಿ. ಈ ಐದನೆಯ ಮನ್ವಂತರದಲ್ಲಿ ಶುಭ್ರ ಎಂಬ ಹೆಸರಿನ ತಂದೆಯಿಂದ ವಿಕುಂಠಾ ಎಂಬ ಹೆಸರಿನ ತಾಯಿಯಲ್ಲಿ ವೈಕುಂಠನಾಮಕನಾಗಿ ಪರಮಾತ್ಮ ಅವತಾರ ಮಾಡುತ್ತಾನೆ. ಈ ಭಗವದವತಾರಗಳ ವಿಚಾರಗಳನ್ನು ಹರಿವಂಶದಲ್ಲಿ ಹೇಳಿಲ್ಲ, ಅಲ್ಲಿ ದೇವತೆಗಳು, ಋಷಿಗಳು, ಮನು ಪುತ್ರರು ಇಷ್ಟನ್ನು ಮಾತ್ರ ನಾವು ಕಾಣುತ್ತೇವೆ. ಇಂದ್ರ ಮತ್ತು ಅವತಾರ ಇವುಗಳ ಬಗ್ಗೆ ಶ್ರೀಮದ್ಭಾಗವತದ ಅಷ್ಟಮಸ್ಕಂಧದಿಂದಲೇ ನಾವು ತಿಳಿಯಬೇಕಾದದ್ದು.



ರಮಾ ದೇವಿಯೇ ಮಡದಿ ಆ ಲಕ್ಷ್ಮೀ ದೇವಿ ಆ ವಿಕುಂಠಾ ತನ್ನ ಗಂಡನಾದ ವೈಕುಂಠನಿಗೆ ಲಕ್ಷ್ಮೀ ದೇವಿ ಪ್ರಾರ್ಥನೆ ಮಾಡುತ್ತಾಳಂತೆ ಮದುವೆ ಮಾಡಿಕೊಂಡಿದ್ದೀಯಲ್ಲಪ್ಪಾ. ಹೌದು, ಮುಂದೆ ಒಂದು ಉತ್ತಮವಾದಂತಹ ಮನೆ ಕಟ್ಟಿಕೊಡು ಅಂತ ಅವಳಿಗೋಸ್ಕರ ಅವಳ ಪ್ರಾರ್ಥನೆಗಾಗಿ ಪರಮಾತ್ಮ ವೈಕುಂಠ ಅನ್ನುವ ಒಂದು ಸ್ಥಾನವನ್ನು ಮಾಡಿದನಂತೆ ಎಂಬುದಾಗಿ ತಿಳಿಸಿಕೊಡುತ್ತಾರೆ ಇದರ ಅರ್ಥ ಶ್ರೀಮದಾಚಾರ್ಯರು ಗೀತಾ ತಾತ್ಪರ್ಯದಲ್ಲಿ ಹೇಳಿಕೊಡುತ್ತಾರೆ.

ಈಶ್ವರಃ ಸರ್ವಭೂತಾನಾಂ ಹೃದ್ದೇಶೇऽರ್ಜುನ ತಿಷ್ಠತಿ ।
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥ (18.61 ಭ ಗೀತಾ)

ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ।
ತತ್ಪ್ರಸಾದಾತ್ಪರಾಂ ಶಾಂತಿಮ್ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್ ॥ (18.62 ಭ ಗೀತಾ)

ಅಂತ ಬರುತ್ತದೆ ಶಾಶ್ವತವಾದ ಸ್ಥಾನಗಳಿವು ಇವುಗಳಿಗೆ ಸೃಷ್ಟಿ ಪ್ರಲಯಗಳಿಲ್ಲ, ಶ್ವೇತದ್ವೀಪ ಅನಂತಾಸನ ವೈಕುಂಠಗಳೆಲ್ಲ ಶಾಶ್ವತ ಸ್ಥಾನಗಳು ಹಾಗಾದರೆ ನಿರ್ಮಿತ ಅನ್ನುವುದಕ್ಕೆ ಅರ್ಥ ಅಭಿವ್ಯಕ್ತಿಗೊಳಿಸಿದ ಅಂತ ಲಕ್ಷ್ಯಾತ್ಮಕವಾದ ಸ್ಥಾನಗಳೇ ಅವು. ಆ ಲಕ್ಷ್ಮೀ ರೂಪವಾಗಿ ಇರುವಂತಹ ಸ್ಥಾನಗಳು, ಶ್ವೇತದ್ವೀಪ ಅನಂತಾಸನ ವೈಕುಂಠಗಳು ಅಂತಹ ಆ ಲಕ್ಷ್ಯಾತ್ಮಕವಾದ ಲೋಕಗಳನ್ನು ಪ್ರಲಯ ಕಾಲದೊಳಗೆ ಉದರದೊಳಗೆ ಹಾಕಿಕೊಂಡು ಸೃಷ್ಟಿಕಾಲದೊಳಗೆ ಮತ್ತೆ ಹೊರಗೆ ತೆಗೆಯುತ್ತಾನೆ ಪರಮಾತ್ಮ. ಈಗ ಈ ರೈವತ ಮನ್ವಂತರದಲ್ಲಿ ರಮಾ ಪ್ರಾರ್ಥನೆಯಿಂದ ಆ ವೈಕುಂಠ ಲೋಕದ ನಿರ್ಮಾಣ ಮಾಡಿದ ಎಂಬ ಭಾಗವತ ವಚನದ ಅಭಿಪ್ರಾಯ ಅದಕ್ಕೆ ಒಂದು ವಿಶೇಷವಾದಂತಹ ಅಭಿವ್ಯಕ್ತಿಯನ್ನು ಮತ್ತೆ ಕೊಟ್ಟ ಅಂತ ನಾವು ತಿಳಿದುಕೊಳ್ಳಬಹುದು. ಶ್ರೀಮದ್ಭಾಗವತದ ಹೇಳುತ್ತದೆ

ತಸ್ಯಾನುಭಾವಃ ಕಥಿತೋ ಗುಣಾಶ್ಚ ಪರಮೋದಯಾಃ ।
ಭೌಮಾನ್ ರೇಣೂನ್ ಸ ವಿಮಮೇ ಯೋ ವಿಷ್ಣೋರ್ವರ್ಣಯೇದ್ ಗುಣಾನ್ ॥

(08.5.6 ಭಾಗವತ)

ಆ ಪರಮಾತ್ಮನ ಮಹಿಮೆ ಇಡೀ ವೇದಾದಿ ಸಕಲ ಸಚ್ಛಾಸ್ತ್ರಗಳಲ್ಲಿ ವರ್ಣಿತವಾಗಿದೆ ಅವನ ಗುಣಗಳ ವರ್ಣನೆ ಇದೆ ಏನು ಗುಣಗಳು ಹೇಳಿ ಕೇಳುತ್ತೇವೆ, ಎಲ್ಲಾ ಗುಣಗಳನ್ನು ವೇದಗಳಲ್ಲಿ, ಶಾಸ್ತ್ರಗಳಲ್ಲಿ ಹೇಳಿದ್ದಾರೆ ತಾನೇ ಅಂತ ಕೇಳಿದ್ದಕ್ಕೆ ಭಾಗವತವು ಉತ್ತರ ಕೊಡುತ್ತದೆ **'ಭೌಮಾನ್ ರೇಣೂನ್ ಸ ವಿಮಮೇ ಯೋ ವಿಷ್ಣೋರ್ವರ್ಣಯೇದ್ ಗುಣಾನ್'** **'ಯಃ'** ಅನ್ನುವುದಕ್ಕೆ ಸತ್ಯಧರ್ಮತೀರ್ಥರು **'ಕಃ'** ಅಂತ ಅರ್ಥ ಮಾಡುತ್ತಾರೆ. ಭೂಮಿಯ ಕಣ ಕಣಗಳನ್ನೆಲ್ಲ ಬಿಡಿಸಿ ಬಿಡಿಸಿ ಎಣಿಸಿ ಮುಗಿಸಬಹುದು ಆದರೆ ವಿಷ್ಣುವಿನ ಗುಣಗಳನ್ನು **'ಕೋವರ್ಣಯೇದ್'** ಯಾರೂ ವರ್ಣನೆ ಮಾಡಲಿಕ್ಕೆ ಸಾಧ್ಯ, ಯಾರೂ ಕೂಡ ಪರಮಾತ್ಮನ ಗುಣಗಳನ್ನು ವರ್ಣನೆ ಮಾಡಲಿಕ್ಕೆ ಸಾಧ್ಯ ಇಲ್ಲ. ಅನಂತ ಅನಂತ ಗುಣಗಳಿಂದ ಪರಿಪೂರ್ಣನಾದವನು ಭಗವಂತ ಅವನೇ ವೈಕುಂಠ ಎಂಬುದಾಗಿ ಈ ವೈಕುಂಠನ ವರ್ಣನೆಯನ್ನು ಶ್ರೀಮದ್ಭಾಗವತ ಮಾಡಿದೆ ಎಂಬುದಾಗಿ ನಾವು ತಿಳಿಯಬೇಕು. ಅಂತಹ ವೈಕುಂಠ ರೂಪಿಯಾದ ಪರಮಾತ್ಮನ ವಿಶೇಷವಾದ ಸ್ಮರಣೆಯನ್ನು ಮಾಡಿ ಅಂತಹ ಪರಮಾತ್ಮನ ಅನುಗ್ರಹ ಆಗಿ ಅವನ ಸಾಕ್ಷಾತ್ಕಾರ

ಆಗುವುದಕ್ಕೆ ಬೇಕಾದ ಶ್ರವಣ ಮನನ ನಿಧಿಧ್ಯಾಸನಗಳು ನಮ್ಮಿಂದ ನಡೆಯಬೇಕು ಅಂತ ಆ ವೈಕುಂಠನಲ್ಲಿ ನಾವು ಪ್ರಾರ್ಥನೆಯನ್ನು ಮಾಡಬೇಕು.

ಇನ್ನು ಆರನೆಯ ಮನ್ವಂತರ ಚಾಕ್ಷುಷ ಮನು. ಈ ಚಾಕ್ಷುಷ ಮನುವಿನ ಆಳ್ವಿಕೆಯಲ್ಲಿರುವ ಋಷಿಗಳು ಭೃಗು, ನಭ, ವಿವಸ್ವಾನ್, ಸುಧಾಮಾ, ವಿರಜಾ, ಅತಿನಾಮಾ, ಸಹಿಷ್ಣು ಅಂತ ಹರಿವಂಶ ಹೇಳುತ್ತದೆ, ಭಾಗವತದ ಪ್ರಕಾರ ವೈರಾಜಾ, ಹರಿಮಾನ್, ವೀರಕಾ ಇತ್ಯಾದಿ ಋಷಿಗಳು ವಿರಜಾ, ವೈರಾಜಾ ಸ್ವಲ್ಪ ಸಾಮ್ಯ ಇದೆ ಹೆಸರಿನಲ್ಲಿ.

ಇಲ್ಲಿರುವ ದೇವತೆಗಳ ಹೆಸರನ್ನು ಹರಿವಂಶ ಹೇಳುತ್ತದೆ ಆದ್ಯಾ ಗೌಡ ಪಾಠದ ಪ್ರಕಾರ, ಮಹಾಭಾರತದ ಹರಿವಂಶದ ಗೌಡ ಸಂಪ್ರದಾಯದ ಪಾಠದ ಪ್ರಕಾರ ಆಪ್ಯಾ ಅಥವಾ ಆಸ್ತಾ ಎಂಬ ಹೆಸರಿನ ದೇವತೆಗಳು. ಪ್ರಚಲಿತ ಪಾಠದ ಪ್ರಕಾರ ಆಪ್ಯಾ, ಪ್ರಭೂತಾ, ಋಭು, ಪೃಥಗ್ಭಾವ, ಲೇಖಾ ಅಂತ ಒಟ್ಟು ಐದು ಗಣದ ದೇವತೆಗಳು ಚಾಕ್ಷುಷ ಮನ್ವಂತರದಲ್ಲಿ ಇದ್ದಾರೆ ಇವರೆಲ್ಲ ಅಂಗಿರಸ್ ಋಷಿಗಳ ಪುತ್ರರು ಎಂಬುದಾಗಿ ಹೇಳುತ್ತಾರೆ. ಭಾಗವತಕ್ಕೂ ಹರಿವಂಶಕ್ಕೂ ಸಾಮ್ಯ ಇದೆ ಭಾಗವತ ಎಲ್ಲರ ಹೆಸರು ಹೇಳುವುದಿಲ್ಲ ಆಪ್ಯಾದಯಾ ಗೌಡ ಪಾಠಕ್ಕೆ ಅನುಗುಣವಾಗಿ ಭಾಗವತ ಹೇಳುತ್ತದೆ ಅರ್ಥಾತ್ ಭಾಗವತಕ್ಕೆ ಅನುಗುಣವಾಗಿ ಗೌಡ ಪಾಠ ಇದೆ ಆಪ್ಯಾದಯಾ ಆಪ್ಯರೇ ಮೊದಲಾದ ಐದು ಗಣಗಳ ದೇವತೆಗಳು ಚಾಕ್ಷುಷ ಮನ್ವಂತರದಲ್ಲಿ ಇದ್ದಾರೆ ಅಂತ. ಮತ್ಸ್ಯಪುರಾಣದಲ್ಲಿ ಹೇಳುತ್ತಾರೆ ಲೇಖಾ, ರುಜು, ರಭಾಧಿಗಳು, ಪರಿಸೂತ, ದಿವೌಕಸ್ ಎಂಬುದಾಗಿ ಐದು ಗಣದ ದೇವತೆಗಳು ಅಂತ ಮತ್ಸ್ಯಪುರಾಣ ಹೇಳುತ್ತದೆ. ಸತ್ಯಧರ್ಮತೀರ್ಥರು ಅನ್ನುತ್ತಾರೆ ಅದರೊಳಗಿನ ರಭಾಧಿಗಳು ಅಂತ ಏನು ಆದಿಪದ ಇಟ್ಟಿದ್ದಾರೆ ಅದರೊಳಗೆ ಆಪ್ಯರನ್ನೂ ಸೇರಿಸಿಕೊಳ್ಳಿ ಭಾಗವತಕ್ಕೂ ಮತ್ಸ್ಯಪುರಾಣಕ್ಕೂ ವಿರೋಧ ಬರುವುದಿಲ್ಲ ಅಂತ ಸತ್ಯಧರ್ಮತೀರ್ಥ ಶ್ರೀಪಾದಂಗಳವರು ತಿಳಿಸಿಕೊಡುತ್ತಾರೆ. ಹೀಗೆ ಚಾಕ್ಷುಷ ಮನ್ವಂತರದ ದೇವತೆಗಳ ಹೆಸರುಗಳು.

ಮನು ಪುತ್ರರು ಯಾರು ಅಂದರೆ ಎಲ್ಲರ ಹೆಸರುಗಳನ್ನು ಹರಿವಂಶವವೂ ಹೇಳುವುದಿಲ್ಲ, ಭಾಗವತವೂ ಹೇಳುವುದಿಲ್ಲ. ಊರು ಮೊದಲಾದವರು ಮಕ್ಕಳು ಅಂತ ಹರಿವಂಶ ಹೇಳುತ್ತದೆ, ಪುರು, ಪುರುಷ, ಸುದ್ಯುಮ್ನ ಮೊದಲಾದವರೇ ಮನುವಿನ ಮಕ್ಕಳು ಅಂತ ಭಾಗವತ ಹೇಳುತ್ತದೆ. ನಾಡ್ವಲ ಅಂತ ಅವನ ಹೆಂಡತಿಯ ಹೆಸರು ನಾಡ್ವಲೇಯರು ಅಂತ ಇವರನ್ನು ಕರೆಯುತ್ತಾರೆ ಚಾಕ್ಷುಷ ಮನುವಿನ ಮಕ್ಕಳು ಇವರೆಲ್ಲ ಇದ್ದಾರೆ ಅನೇಕ ಜನ.

ಇಂದ್ರ ಮಂದ್ರದ್ಯುಮ್ನ ಅಂತನ್ನುವ ಇಂದ್ರ, ಮಂದ್ರದ್ಯುಮ್ನ ಅಂತ ಕೆಲವು ಕಡೆಗೆ ಪಾಠ ಇದೆ ಛಂದೋಭಂಗವಾಗುತ್ತದೆ ಮಂದ್ರದ್ಯುಮ ಅಂತ ಸತ್ಯಧರ್ಮತೀರ್ಥರು ಹೇಳುತ್ತಾರೆ. ಸಾಕ್ಷಾತ್ ಅಜಿತನಾಮಕನಾದ ಪರಮಾತ್ಮ ಅವತಾರ ಮಾಡುತ್ತಾನೆ ಈ ಚಾಕ್ಷುಷ ಮನ್ವಂತರದಲ್ಲಿ ಸಂಭೂತಿ ತಾಯಿ, ವೈರಾಜ ತಂದೆ ವೈರಾಜನಿಂದ ಸಂಭೂತಿಯಲ್ಲಿ ಅಜಿತನಾಮಕನಾಗಿ ಈ ಪರಮಾತ್ಮ ಅವತಾರ ಮಾಡುತ್ತಾನೆ. ಚಾಕ್ಷುಷ ಮನ್ವಂತರದೊಳಗಿನ ಋಷಿ ವೈರಾಜ,ವೈರಾಜನ ಮಗನಾಗಿ ಅವತಾರ ಮಾಡುತ್ತಾನೆ ಅಜಿತ ಋಷಿ ಪುತ್ರನಾಗಿ ಅವತಾರ ಮಾಡುತ್ತಾನೆ. ಈ ಅಜಿತನಾಮಕನಾದ ಪರಮಾತ್ಮ ಮಾಡಿದ ದೊಡ್ಡ ಕಾರ್ಯ ಸಮುದ್ರಮಥನ. ದೇವತೆಗಳು ಅಸುರರಿಂದ ಪರಾಭೂತರಾದಾಗ ಅವರಿಗೆ ಸಂಧಾನವನ್ನು ಮಾಡಿಸಿ

ಅರಯೋಽಪಿ ಹಿ ಸಂಧೇಯಾಃ ಸತಿ ಕಾರ್ಯಾರ್ಥಗೌರವೇ । (08.06.20 ಭಾಗವತ)

ಅಸುರರ ಜೊತೆಗೆ ಸಂಧಾನವನ್ನು ಮಾಡಿಕೊಳ್ಳಿ ಅಂತ ಉಪದೇಶ ಮಾಡಿ ಸಮುದ್ರಮಥನವನ್ನು ಮಾಡುವಾಗ ಅಸುರರಿಗೆ ಮಥನ ಮಾಡುವುದಕ್ಕೆ ದೇವತೆಗಳಿಗೆ, ಅಸುರರಿಗೆ ಶಕ್ತಿ ಸಾಕಾಗದೇ ಇದ್ದಾಗ ಸ್ವಯಂ ತಾನು ಅಜಿತ



ನಾಮಕನಾಗಿ ಪರಮಾತ್ಮ ನಿಂತು ಸಮುದ್ರಮಥನವನ್ನು ಮಾಡುತ್ತಾನೆ. ತಾನೇ ಕೂರ್ಮ ರೂಪವನ್ನು ಧಾರಣೆ ಮಾಡಿ ಮಂದರ ಪರ್ವತ ಕೆಳಗೆ ಮುಳುಗದೇ ಇದ್ದ ಹಾಗೆ ಧಾರಣೆಯನ್ನು ಮಾಡಿ ಮೇಲೆ ಹಾರದೇ ಇದ್ದ ಹಾಗೂ ಆ ಪರ್ವತವನ್ನು ಹಿಡಿದು, ಪರ್ವತ ನುಚ್ಚು ನೂರಾಗದಂತೆ ತಾನು ತುಂಬಿ ಆ ವಾಸುಕಿ ಸಾಯದೇ ಇರುವ ಹಾಗೆ ಅವನ ಒಳಗೆ ಪ್ರವೇಶ ಮಾಡಿ ಶಕ್ತಿಯನ್ನು ಕೊಟ್ಟು, ದೇವಾಸುರರ ಒಳಗೂ ಶಕ್ತಿಯನ್ನು ಕೊಟ್ಟು ಅವರ ಬುದ್ಧಿ, ಮನಸ್ಸು, ಪ್ರಯತ್ನ ಎಲ್ಲದರಲ್ಲಿಯೂ ಪ್ರವೇಶ ಮಾಡಿ ಕೊನೆಗೆ ತಾನೇ ಧನ್ವಂತರಿಯಾಗಿ ಅಮೃತವನ್ನು ಕೈಯಲ್ಲಿ ತಂದು, ತಾನೇ ಮೋಹಿನಿಯಾಗಿ ಅದನ್ನು ಉಣಬಡಿಸಿ, ಅವರೆಲ್ಲರಿಗೆ ಪುನಃ ದೈತ್ಯರ ಜೊತೆಗೆ ಯುದ್ಧ ಮಾಡುವಾಗ ಶಕ್ತಿಯನ್ನು ಕೊಟ್ಟು ದೇವತೆಗಳಿಗೆ ವಿಜಯವನ್ನು ಕೊಟ್ಟಂತ ಸ್ವಾಮಿ ಆ ಭಗವಂತ. ಅಂತಹ ಪರಮಾತ್ಮನಿಗೆ ಈ ಮನ್ವಂತರದಲ್ಲಿ ಅಜಿತ ಎಂಬುದಾಗಿ ಹೇಳುತ್ತಾರೆ ಯಾರೂ ಅವನನ್ನು ಸೋಲಿಸುವಂತಿಲ್ಲ ಅನ್ನುವ ದೃಷ್ಟಿಯಲ್ಲಿ ಅವನು ಅಜಿತ ಎಂಬ ಹೆಸರಿನಿಂದ ಪ್ರಸಿದ್ಧನಾಗಿದ್ದಾನೆ.

ಇಲ್ಲಿ ಮುಂದಿನ ಇನ್ನೂ ಅನೇಕ ಮನ್ವಂತರಗಳ ಬಗ್ಗೆ ತಿಳಿಯಬೇಕಾಗಿದೆ ಹರಿವಂಶ ಋಷಿಗಳ ಬಗ್ಗೆ ಕೆಲವು ಮಾತುಗಳನ್ನು ನಮಗೆ ತಿಳಿಸಿಕೊಡುತ್ತದೆ. ಈ ಎಲ್ಲ ಮನ್ವಂತರಗಳಲ್ಲಿ ಋಷಿಗಳ ಬಗ್ಗೆ ಹೇಳುತ್ತಾ ಹೋಗುತ್ತಾ ಇದ್ದಾರೆ ಸಪ್ತರ್ಷಿಗಳು ಸಪ್ತರ್ಷಿಗಳು ಅಂತ ಎಲ್ಲ ಮನ್ವಂತರಗಳಲ್ಲಿ ಏನು ಮಾಡುತ್ತಾರೆ ಅವರು, ಯಾಕೆ ಋಷಿಗಳು ಬೇಕು ಏನು ಕೆಲಸ. ಮನು ರಾಜ್ಯವನ್ನು ಆಳುತ್ತಾನೆ, ಇಂದ್ರ ದೇವರು ಮೂರು ಲೋಕಗಳ ಒಡೆಯನಾಗಿರುತ್ತಾನೆ, ಬಂದ ಆಪತ್ತುಗಳನ್ನು ಪರಿಹಾರ ಮಾಡಿ ಭೂಭಾರಹರಣ ಮಾಡುವುದಕ್ಕೆ ದೇವರು ಅವತಾರ ಮಾಡಿರುತ್ತಾನೆ ಋಷಿಗಳದು ಏನು ಕೆಲಸ ಅಂತ. ಕೇವಲ ಹೊಟ್ಟೆ, ಬಟ್ಟೆಗಳನ್ನು ಮಾತ್ರ ನೋಡಿದರೆ ಸಾಲದು ತಲೆಗೆ ಬೇಕಾದಂತಹ ಆಹಾರ, ತತ್ವಜ್ಞಾನದ ಆಹಾರವನ್ನು ಕೊಡಬೇಕಲ್ಲ, ಎಲ್ಲ ಪ್ರಜೆಗಳಿಗೆ ತತ್ವಜ್ಞಾನದ ಆಹಾರವನ್ನು ಕೊಡುವುದಕ್ಕೆ ಆ ಶುದ್ಧವಾದ ವೇದದ ಪರಂಪರೆಯನ್ನು ಉಳಿಸುವುದಕ್ಕೆ ಈ ಸಪ್ತರ್ಷಿಗಳನ್ನು ಪರಮಾತ್ಮ ಸೃಷ್ಟಿ ಮಾಡಿರುತ್ತಾನೆ. ಅದಕ್ಕಾಗಿಯೇ ಮುಂದಿನ ಮನ್ವಂತರವೇ ವೈವಸ್ವತ ಮನ್ವಂತರ ಇದು ಚಾಕ್ಷುಷ ಮನ್ವಂತರವನ್ನು ಕೇಳಿದ್ದೇವೆ ಚಾಕ್ಷುಷ ಮನ್ವಂತರದ ಕೊನೆಗೆ ಮತ್ಸ್ಯಾವತಾರ. ಆ ಮತ್ಸ್ಯಾವತಾರದೊಳಗೆ ವೈವಸ್ವತ ಮನುವಿಗೆ ಕೈಯಲ್ಲಿ ಒಂದು ಸಣ್ಣ ಮೀನು ಬರುತ್ತೆ, ಬಿಡುವುದಕ್ಕೆ ಹೊರಟರೆ ಬೇಡ ದೊಡ್ಡ ಮೀನುಗಳು ನುಂಗಿಬಿಡುತ್ತವೆ ನನ್ನನ್ನು ಅಂತ ನಿನ್ನ ಕಮಂಡಲುವಿನಲ್ಲಿ ಹಾಕಿಕೋ ಅನ್ನುತ್ತದೆ. ಕಮಂಡಲ ತುಂಬುತ್ತದೆ, ದೊಡ್ಡ ಪಾತ್ರೆ ಆಮೇಲೆ ಭಾವಿ, ಸರೋವರ ಕೊನೆಗೆ ಸಮುದ್ರದೊಳಗೆ ಒಯ್ದು ಹಾಕುವ ಪ್ರಸಂಗ ಬರುತ್ತದೆ ಕಾರಣ ಅಷ್ಟು ದೊಡ್ಡ ಮೀನವಾಗಿ ಪರಮಾತ್ಮ ತನ್ನ ರೂಪವನ್ನು ಅಭಿವ್ಯಕ್ತಿಗೊಳಿಸುತ್ತಾನೆ ಅವನ ತಲೆಗೆ ಒಂದು ಕೋಡು ಇರುತ್ತದೆ. ಇನ್ನು ಕೆಲವೇ ದಿನಗಳಲ್ಲಿ ಪ್ರಲಯವಾಗುತ್ತದೆ ಆ ಪ್ರಲಯದೊಳಗೆ ಎಲ್ಲ ಕಡೆಗೆ ನೀರು ಬರುತ್ತದೆ, ನಾನು ಬರುತ್ತೇನೆ ನನ್ನ ತಲೆಗೆ ಕೋಡು ಇರುತ್ತದೆ ಅದೇ ನಿನಗೆ ಗುರುತು ಆ ಕೋಡಿಗೆ ಹಗ್ಗವನ್ನು ಕಟ್ಟಿ ಒಂದು ನೌಕೆಯಲ್ಲಿ ನೀನು ಮುಂದಿನ ಮನ್ವಂತರಕ್ಕೆ ನಿನ್ನ ವೈವಸ್ವತ ಮನ್ವಂತರ ಪ್ರಾರಂಭವಾದಾಗ ಮೊಟ್ಟಮೊದಲು ಬೀಜ ಬಿತ್ತೋದಕ್ಕೆ ಬೀಜ ಬೇಕಲ್ಲ ಈ ಮನ್ವಂತರ ಬೀಜಗಳನ್ನು ಆ ದೋಣಿಯಲ್ಲಿ ತುಂಬಿಟ್ಟುಕೋ. ಹೊಟ್ಟೆಗೆ ಬೇಕಾದ ಆಹಾರಕ್ಕೆ ಬೀಜ ಒಂದು ಕಡೆಗೆ ಇಟ್ಟರೆ ಇನ್ನೊಂದು ಪಕ್ಕ ಸಪ್ತರ್ಷಿಗಳನ್ನು ಕೂಡಿಸು ಅವರು ತತ್ವಜ್ಞಾನದ ಬೀಜವನ್ನು ಬಿತ್ತುತ್ತಾರೆ, ಜ್ಞಾನವನ್ನು ಕೊಡುತ್ತಾರೆ. ಈ ರೀತಿಯಾಗಿ ಆ ಮತ್ಸ್ಯರೂಪಿಯಾದ ಪರಮಾತ್ಮ ಆದೇಶ ಮಾಡಿದ್ದನ್ನು ಶ್ರೀಮದ್ಭಾಗವತದಲ್ಲಿ ನಾವು ಕೇಳುತ್ತೇವೆ ಅಂತಹ ಮಹಾನುಭಾವರಾದ ಋಷಿಗಳ ಬಗ್ಗೆ ಹೇಳುತ್ತದೆ.

ಬ್ರಹ್ಮಣಃ ಸದೃಶಾಶ್ಚೈತೇ ಧನ್ಯಾಃ ಸಪ್ತರ್ಷಯಃ ಸ್ಮೃತಾಃ । (7.49 ಹರಿವಂಶಪರ್ವ)

ಈ ಸಪ್ತರ್ಷಿಗಳು ಅಂದರೆ ಆ ಪರಮಾತ್ಮನ ವಿಶೇಷವಾದ ಅನುಗ್ರಹದಿಂದ ಬ್ರಹ್ಮ ದೇವರು ಯಾವ ರೀತಿ ತತ್ವಜ್ಞಾನದ ಪ್ರವರ್ತನವನ್ನು ಮಾಡುತ್ತಾರೋ ಅವರ ಅನುಗ್ರಹದಿಂದ ಅವರ ಸನ್ನಿಧಾನಕ್ಕೆ ಪಾತ್ರರಾಗಿ, ಅವರ ಪ್ರೇರಣೆಯಿಂದ ಇವರೆಲ್ಲ ತತ್ವಜ್ಞಾನದ ಪ್ರವರ್ತಕರಾಗುತ್ತಾರೆ. ಇವರು ಹುಟ್ಟಿದ ಮೇಲೆ ಕಷ್ಟಪಟ್ಟು ವಿದ್ಯೆ ಓದಿ ಆಮೇಲೆ ದೊಡ್ಡವರು ಆಗುತ್ತಾರೆ ಅಂತ ತಿಳಿಯಬೇಡಿ ಅದಂತೂ ಸರಿ ಅವರು ಜನ್ಮಜಾತವಾಗಿಯೇ ಒಂದು ವಿಶಿಷ್ಟವಾದ ಶಕ್ತಿಯನ್ನು ಪಡೆದುಕೊಂಡಿರುತ್ತಾರೆ. **'ಅಭಿಜಾತ್ಯಾಥ ತಪಸಾ'** ತಪಸ್ಸಿನಿಂದಲೂ ತಮ್ಮ ವಿಶಿಷ್ಟವಾದಂತಹ ಸಾಮರ್ಥ್ಯವನ್ನು ಪಡೆಯುತ್ತಾರೆ, **'ಮನ್ತ್ರವ್ಯಾಕರಣೈಸ್ತಥಾ'** ಉತ್ತಮವಾದಂತಹ ಮಂತ್ರಜ್ಞಾನ ಆ ಮಂತ್ರಗಳ ವ್ಯಾಖ್ಯಾನವನ್ನು ಮಾಡುತ್ತಾರೆ, ಮಂತ್ರಗಳ ಪ್ರವರ್ತನವನ್ನು ಮಾಡುತ್ತಾರೆ, ಮಂತ್ರಗಳ ದರ್ಶನವನ್ನು ಮಾಡಿಕೊಳ್ಳುತ್ತಾರೆ.

ಉಚ್ಚೈರ್ಗರ್ಗತಿರ್ಜಗತಿಸಿದ್ಯತಿ ಧರ್ಮತಶ್ಚೈತ್ ।
ತಸ್ಯ ಪ್ರಮಾಚ ವಚನೈಃ ಕೃತಕೇತರೈಶ್ಚೈತ್ ॥
ತೇಷಾಂ ಪ್ರಕಾಶನದಶಾ ಚ ಮಹೀಸುರೈಶ್ಚೈತ್ ।
ತಾನಂತರೇಣ ನಿಪಾತೇತ ಕ್ವನುಮತ್ಪ್ರಣಾಮಃ ॥ (ವೇದ ಸಾರ ಸಂಗ್ರಹ)

'ಧರ್ಮೋ ರಕ್ಷತಿ ರಕ್ಷಿತಃ' ಇಡೀ ಜಗತ್ತಿನ ರಕ್ಷಣೆಯಾಗಬೇಕು ಧರ್ಮದಿಂದ ರಕ್ಷಣೆಯಾಗಬೇಕು,ಆ ಧರ್ಮದ ಜ್ಞಾನ ನಮಗೆ ಬರಬೇಕು ವೇದಗಳಿಂದ ಬರಬೇಕು, ವೇದಗಳ ಸಂರಕ್ಷಣೆಯಾಗಬೇಕು ಋಷಿಗಳಿಂದ ಇಂತಹ ಋಷಿಗಳ ಪಾದಕಮಲಗಳಿಗೆ ನಮಸ್ಕಾರ ಮಾಡದೇ ಇನ್ಯಾರಿಗೆ ನಮಸ್ಕಾರ ಮಾಡಬೇಕು ಅಂತ. **'ತಾನಂತರೇಣ ನಿಪಾತೇತ ಕ್ವನುಮತ್ಪ್ರಣಾಮಃ'** ಏನು ನಮ್ಮ ಭಾರತ ದೇಶದ ದೊಡ್ಡದಾದಂತಹ ಭಾಗ್ಯ ಎಂತೆಂತಹ ಋಷಿಗಳು ಆಗಿದ್ದಾರೆ, ಎಂತೆಂತಹ ಗ್ರಂಥಗಳನ್ನು ರಚನೆ ಮಾಡಿದ್ದಾರೆ, ಎಂತಹ ಅನುಚಾನವಾದ ವೇದದ ಪರಂಪರೆಯನ್ನು ಉಳಿಸಿಕೊಂಡು ಬಂದಿದ್ದಾರೆ ಇವತ್ತು ಉಪಲಬ್ಧವಾದಂತಹ ಎಷ್ಟೋ ವೇದಗಳನ್ನು, ಎಷ್ಟೋ ವೇದದ ಶಾಖೆಗಳನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ ಉಪಲಬ್ಧವಾಗಿಲ್ಲ, ಇವತ್ತು ಉಪಲಬ್ಧವಾದ ವೈದಿಕ ಸಾಹಿತ್ಯವನ್ನು ನೀವು ಒಂದು ಕಡೆಗೆ ಸೇರಿಸಿದರೇನೆ ಸಂಹಿತೆಗಳು, ಉಪನಿಷತ್ತುಗಳು, ಬ್ರಾಹ್ಮಣಗಳು, ಆರಣ್ಯಕೆಗಳು ಎಲ್ಲವನ್ನೂ ಸೇರಿಸಿದರೆ ಎಷ್ಟು ದೊಡ್ಡದಾದಂತಹ ವೈದಿಕ ಸಾಹಿತ್ಯ ಅಂತಹ ಸಮಗ್ರವಾದ ವೈದಿಕ ಸಾಹಿತ್ಯ ಇವತ್ತಿನವರೆಗೆ ಉಳಿದು ಬಂದದ್ದು ಈ ತರಹದ ಪುಸ್ತಕಗಳಿಂದ ಅಂತ ತಿಳಿದಿದ್ದರೆ ಅದು ಭ್ರಮೆ. ಮುಖದಿಂದ ಮುಖಕ್ಕೆ ಬಂದದ್ದು, ಕಂಠಪಾಠ ಮಾಡಿ ವೇದಗಳನ್ನು ಗುರುಗಳು ಶಿಷ್ಯರಿಗೆ ಕಲಿಸಿದ್ದು, ಅವರು ತಮ್ಮ ಶಿಷ್ಯರಿಗೆ, ಅವರು ತಮ್ಮ ಶಿಷ್ಯರಿಗೆ ಈ ಕ್ರಮದಲ್ಲಿ ಅನಾದಿ ಕಾಲದಿಂದ ಅನುಚಾನ ಪರಂಪರೆಯಲ್ಲಿ ನಡೆದುಕೊಂಡು ಬಂದದ್ದು ಈ ವೈದಿಕ ಪರಂಪರೆ. ಇವತ್ತಿನ ಕಾಲದಲ್ಲಿ ಇದೆಲ್ಲ ಪುಸ್ತಕ ನೋಡಿ ಅಧ್ಯಯನವನ್ನು ಮಾಡುತ್ತಾ ಇದ್ದದ್ದು ಪುಸ್ತಕಗಳು ಮೊದಲನಿಂದ ಇತ್ತು, ಮೊದಲು ಪುಸ್ತಕಗಳೇ ಇರಲಿಲ್ಲ, ಗ್ರಂಥಗಳು ಅಂತ ಇರಲಿಲ್ಲ, ಲಿಪಿಗಳೇ ಇರಲಿಲ್ಲ ಅಂತ ಕೆಲವರ ಚಿಂತನೆ ಇದೆ. ಹಯಗ್ರೀವ ದೇವರು ತಮ್ಮ ಕೈಯಲ್ಲಿಯೇ ಪುಸ್ತಕವನ್ನು ಹಿಡಿದಿದ್ದಾರೆ ಅಂತ ಶ್ರೀಮದಾಚಾರ್ಯರು ತಿಳಿಸಿಕೊಡುತ್ತಾರೆ, ಸರಸ್ವತಿ ತನ್ನ ಕೈಯಲ್ಲಿ ಪುಸ್ತಕವನ್ನು ಧಾರಣ ಮಾಡಿದ್ದಾಳೆ.

'ಶಂಕಾಕ್ಷ ಪುಸ್ತಕ ಸುಭೋಧಯುತಾಬ್ಜ ಬಾಹುಂ' ಹಯಗ್ರೀವ ದೇವರ ಕೈಯಲ್ಲಿ ಪುಸ್ತಕ ಇದೆ. ಅನೇಕ ಪುರಾಣ ಗ್ರಂಥಗಳಲ್ಲಿ ಪುಸ್ತಕದ ದಾನದ ಮಹಿಮೆಯನ್ನು ವರ್ಣನೆ ಮಾಡುತ್ತಾರೆ, ಇದೇ ಹರಿವಂಶದೊಳಗೆ ಹರಿವಂಶ ಪುಸ್ತಕ ದಾನದ ಮಹಿಮೆಯನ್ನು ವರ್ಣನೆ ಮಾಡುತ್ತಾರೆ, ಅನೇಕ ಭಾಗವತ ಪುಸ್ತಕದ ದಾನ, ಭಾಗವತ ಗ್ರಂಥದ ಪೂಜೆ



ಇವುಗಳೆಲ್ಲ ಹೇಳುತ್ತದೆ. ಕೇವಲ ಬಾಯಿಯಿಂದ ಬಾಯಿಗೆ ಮಾತ್ರ ಬರುತ್ತಾ ಇತ್ತು ಲಿಪಿಗಳೇ ಇರಲಿಲ್ಲ ಅಂತಾದರೆ ಆ ಎಲ್ಲ ಕಾಲದಲ್ಲಿ ಈ ತರಹದ ಕೇವಲ ಈ ಗಣಪತಿ ಮಹಾಭಾರತವನ್ನು ಬರೆದ ಏನೊಂದು ಕಥೆ ಆದಿಪರ್ವದ ಪ್ರಾರಂಭದಲ್ಲಿ ಮಹಾಭಾರತದಲ್ಲಿ ಬರುತ್ತದೆ ಅದು ಪ್ರಕ್ಷಿಪ್ತ ಅಂತ ಹೇಳುವಂತಹ ಆಲೋಚನೆ ಕೆಲವರದು ಆಗಿದೆ ಅದೊಂದು ಮಾತ್ರ ಪ್ರಕ್ಷಿಪ್ತ ಅಲ್ಲ ಅಂತಹ ಘಟನೆಗಳು,ಅಂತಹ ಕಥೆಗಳು ಪುರಾಣದಲ್ಲಿ ಹೇರಳವಾಗಿವೆ. ಪುಸ್ತಕದ ವರ್ಣನೆ, ಪುಸ್ತಕ ದಾನದ ಮಹಿಮೆ, ಪುಸ್ತಕವನ್ನು ಧಾರಣೆ ಮಾಡಿದ ದೇವತೆಗಳ ವರ್ಣನೆ ಬೇಕಾದಷ್ಟು ಇವೆ ಆದರೆ ಪುಸ್ತಕವನ್ನೇ ಆಧಾರವಾಗಿ ಇಟ್ಟುಕೊಂಡು ತಲೆಯಲ್ಲಿ ಗ್ರಂಥಗಳ ಜ್ಞಾನವನ್ನು ತುಂಬಿಕೊಳ್ಳದೇ ಇರಬಾರದು ಅನ್ನುವ ದೃಷ್ಟಿಯಲ್ಲಿ ಆ ಪುಸ್ತಕಗಳ ಅನಿವಾರ್ಯತೆ ಇಟ್ಟುಕೊಳ್ಳಬೇಡಿ ಅಂತ ಹೇಳಿದ್ದು, ಗ್ರಂಥವನ್ನು ಮುಖೋದ್ಗತ ಮಾಡಿಕೊಳ್ಳಿ ಅನ್ನುವುದರೊಳಗೆ ತಾತ್ಪರ್ಯ. **'ಗೀತಿ ಶೀಘ್ರ ಶಿರಕಂಪೀ ತಥಾ ಲಿಖಿತ ಪಾಠಕಃ'** ಅಂತ ಬರೆದದ್ದನ್ನು ಮಾತ್ರ ಪಾಠ ಮಾಡಿ ತಲೆಯಲ್ಲಿ ತುಂಬಿಕೊಳ್ಳದೇ ಇರಬಾರದು ಮುಖೋದ್ಗತವಾಗಿ ವೇದಗಳನ್ನು ಹೇಳಬೇಕು ಅಂತ ಬರೆಯುವ ಕ್ರಮವೇ ಇಲ್ಲದೆ ಇದ್ದರೇ ಲಿಖಿತ ಪಾಠದ ನಿಷೇಧವನ್ನೂ ಮಾಡುವ ಅವಶ್ಯಕತೆ ಇರಲಿಲ್ಲ ಇತ್ಯಾದಿ. ಆದ್ದರಿಂದ ಇದೆಲ್ಲ ಪ್ರಾಚೀನವಾಗಿ ಇರುವಂತಹ ಕ್ರಮ ಅನ್ನುವುದನ್ನು ನಾವು ತಿಳಿಯಬೇಕಾದದ್ದು ಪ್ರಕೃತ ಅಂತಹ ಮಂತ್ರಗಳನ್ನೆಲ್ಲ ಅಪಾರವಾದ ವೈದಿಕ ವಾಂಙ್ಮಯವನ್ನೆಲ್ಲ ತಲೆಯಲ್ಲಿ ತುಂಬಿಕೊಂಡು ಇವತ್ತಿನವರೆಗೆ ಮುಟ್ಟಿಸಿದ ಮಹಾನುಭಾವರು ಋಷಿಗಳು. ಏನೋ ಬ್ರಹ್ಮಯಜ್ಞದೊಳಗೆ ಕೆಲವರೆಲ್ಲ ತರ್ಪಣ ಕೊಟ್ಟುಬಿಟ್ಟರೆ ಮುಗಿದು ಹೋಯಿತು ಆ ಋಷಿಗಳನ್ನು ಉದ್ಧಾರ ಮಾಡಿದಿವಿ ಅಂತ ತಿಳಿದುಕೊಳ್ಳುತ್ತಾರೆ, ನೀವು ಉದ್ಧಾರ ಮಾಡುವುದಲ್ಲ ಆ ಋಷಿಗಳು ಮಾಡಿದಂತಹ ಉಪಕಾರ ಅಪಾರ ಅಪಾರ ಇದೆ ಅವರ ಅನುಗ್ರಹ ನಮ್ಮ ಮೇಲೆ ಆಗಲಿ ಎಂದು ಪ್ರಾರ್ಥನೆ ಮಾಡಿಕೊಳ್ಳಬೇಕು. ಅದಕ್ಕಾಗಿ ಹೇಳುತ್ತಾರೆ **'ಮನ್ವ್ಯಾಕರಣೈಸ್ತಥಾ'** ಆ ಮಂತ್ರಗಳ ವ್ಯಾಖ್ಯಾನ ಮಾಡುವ ಮೂಲಕವಾಗಿ ಪ್ರಸಿದ್ಧವಾದ ವ್ಯಾಕರಣ ಅಂದರೆ ಆ ವ್ಯಾಕರಣದ,ಆ ಮಂತ್ರದ ಅರ್ಥವನ್ನು ತಿಳಿದುಕೊಳ್ಳುವುದಕ್ಕೆ ಬೇಕಾದ ವ್ಯಾಕರಣದ ಸಂಪ್ರದಾಯವನ್ನು ಪ್ರವರ್ತನೆ ಮಾಡುವ ಮೂಲಕ ಇವರೆಲ್ಲ ನಮಗೆ ಉತ್ತಮವಾದಂತಹ ಒಂದು ಉಪಕಾರವನ್ನು ಮಾಡಿದ್ದಾರೆ ಅಂತ ತಿಳಿಯಬೇಕು.

ಅಭಿಜಾತ್ಯಾಥ ತಪಸಾ ಮನ್ವ್ಯಾಕರಣೈಸ್ತಥಾ । (7.50 ಹರಿವಂಶಪರ್ವ)

ವ್ಯಾಕರಣವನ್ನು ಮಾಡಿದ ಅನೇಕ ಸೂತ್ರಕಾರರ, ಋಷಿಗಳ ಹೆಸರುಗಳನ್ನೆಲ್ಲ ನೀವು ಕೇಳುತ್ತೀರಿ ಪಾಣಿನಿ ಪ್ರಸಿದ್ಧವಾದಂತಹ ಹೆಸರು ಅದಲ್ಲದೇ ಪಾಣಿನಿ ಉದಾಹರಣೆ ಮಾಡುವ ಅನೇಕ ಹೆಸರುಗಳಿವೆ. ಶಾಕಟಾಯನ ಅದರಂತೆ ವಾರ್ತಿಕದಲ್ಲಿ ಬರುವಂತಹ ಪೋಷ್ಕರಸಾದಿ, ಭರದ್ವಾಜ, ಗಾರ್ಗ್ಯ, ಗಾಲವ, ಶಾಕಲ್ಯ, ಸ್ಫೋಟಾಯನ, ಆಪಿಷಲಿ ಇತ್ಯಾದಿ ಹೀಗೆ ಅನೇಕ ವಿವಿಧ ವಯ್ಯಾಕರಣರ ಹೆಸರುಗಳನ್ನೆಲ್ಲ ಉದಾಹರಣೆ ಮಾಡುತ್ತಾರೆ. ಬ್ರಹ್ಮವೈವರ್ತ ಪುರಾಣದಲ್ಲಿ ಪಾಣಿನಿಯ ಹೆಸರು ಸುಮಾರು ಹತ್ತಾರು ಬಾರಿ ಬರುತ್ತದೆ, ಅನೇಕ ಋಷಿಗಳ ಗಣನೆಯನ್ನು ಮಾಡುವಾಗ ಪಾಣಿನಿಯ ಹೆಸರನ್ನು ಬ್ರಹ್ಮವೈವರ್ತ ಪುರಾಣ ಬಹಳಷ್ಟು ಬಾರಿ ಉದಾಹರಣೆಯನ್ನು ಮಾಡುತ್ತದೆ. ಆ ರೀತಿ ವ್ಯಾಕರಣದ ಒಂದು ವಿಶಿಷ್ಟವಾದ ಸಂಪ್ರದಾಯವನ್ನು ಪ್ರವರ್ತನ ಮಾಡುವ ಮೂಲಕ ವೇದಗಳ ವ್ಯಾಖ್ಯಾನವನ್ನು, ವೇದಗಳ ಅರ್ಥವನ್ನು ತಿಳಿದುಕೊಳ್ಳುವುದಕ್ಕೆ ದಾರಿ ಮಾಡಿಕೊಟ್ಟಂಥವರೂ ಕೂಡ ಮಹಾನುಭಾವರು ಅನೇಕ ಜನ ಇದ್ದಾರೆ, ಜೊತೆಗೆ ಇವರಿಗೆಲ್ಲ ತ್ರಿಕಾಲ ಜ್ಞಾನ ಇರುತ್ತದೆ **'ಭೂತಭವ್ಯಭವಜ್ಞಾನಂ'**[1] ಚೆನ್ನಾಗಿ ತಿಳಿದುಕೊಂಡು ಅದನ್ನು ಉಪದೇಶ ಮಾಡುತ್ತಾರೆ ಶಿಷ್ಯರಿಗೆ.

1. 7.51 ಹರಿವಂಶಪರ್ವ

ತಪಸಾ ವೈ ಪ್ರಸಿದ್ಧಾ ಯೇ ಸಂಗತಾಃ ಪ್ರವಿಚಿನ್ತಕಾಃ । (7.51 ಹರಿವಂಶಪರ್ವ)

ಅವರ ಪ್ರಸಿದ್ಧಿ ಅವರ ಮನೆಯಿಂದಲ್ಲ, ಅವರ ಆಸ್ತಿಯಿಂದಲ್ಲ, ಅವರ ವೈಭವದಿಂದಲ್ಲ ಅವರ ತಪಸ್ಸಿನಿಂದ ಅವರ ಪ್ರಸಿದ್ಧಿ, ಇವರು ಇಷ್ಟು ತಪಸ್ವಿಗಳು, ಇವರು ಇಷ್ಟು ತಪಸ್ವಿಗಳು ಅಂತ, ಇವರು ಇಷ್ಟು ಸಾವಿರ ವರ್ಷ ತಪಶ್ಚರ್ಯ ಮಾಡಿದ್ದಾರೆ ಅಂತ ಹಾಗೆ ತಪಸ್ಸಿನಿಂದ ಪ್ರಸಿದ್ಧರಾದವರು ಆ ಎಲ್ಲ ಋಷಿಗಳು. ದೀರ್ಘವಾದ ಆಯುಷ್ಯ ಇವರದು, ದೀರ್ಘವಾದಂತಹ ಜ್ಞಾನ

ದೀರ್ಘಾಯುಷೋ ಮನ್ತ್ರಕೃತ ಈಶ್ವರಾ ದೀರ್ಘಚಕ್ಷುಷಃ । (7.53 ಹರಿವಂಶಪರ್ವ)

ಬುದ್ಧ್ಯಾ ಪ್ರತ್ಯಕ್ಷ ಧರ್ಮಾಣೋ ಗೋತ್ರಪ್ರಾವರ್ತಕಾಸ್ತಥಾ ॥ (7.54 ಹರಿವಂಶಪರ್ವ)

ಇವರೆಲ್ಲ ಹೇಗಿರುತ್ತಾರೆ ದೀರ್ಘವಾದ ಆಯುಷ್ಯ ಉಳ್ಳವರು, ಮಂತ್ರ ದ್ರಷ್ಟಾರರು, ಭಾರೀ ಸಾಮರ್ಥ್ಯ ಉಳ್ಳವರು, ದೀರ್ಘ ದೃಷ್ಟಿ ಇದ್ದವರು, ಎಲ್ಲವನ್ನೂ ಪ್ರತ್ಯಕ್ಷವಾಗಿ ಕಾಣುವವರು ತಮ್ಮ ಯೋಗ ಸಾಮರ್ಥ್ಯದಿಂದ ಹಿಂದೆ ಆದದ್ದು ಮುಂದೆ ಆಗುವುದು, ಹತ್ತಿರ ಇದ್ದದ್ದು ದೂರ ಇದ್ದದ್ದು ಎಲ್ಲವನ್ನೂ ಕಾಣುವಂತಹ ಸಾಮರ್ಥ್ಯ ಇದ್ದವರು ಗೋತ್ರ ಪ್ರವರ್ತಕರಾದಂತಹ ಮಹಾನುಭಾವರು ಇವರೆಲ್ಲ, ಇವರ ಗೋತ್ರದಲ್ಲಿಯೇ ಮುಂದೆ ಬಂದಂಥವರು ಅನೇಕ ಜನ. ಯಾವುದೇ ಸಂದರ್ಭದಲ್ಲಿ ವೇದಗಳಲ್ಲಿ ಶೈಥಿಲ್ಯ ಬಂತು, ಮಂತ್ರಗಳಲ್ಲಿ ಶೈಥಿಲ್ಯ ಬಂತು, ತತ್ವಜ್ಞಾನದ ಲೋಪ ಆಯಿತು ಅಂದರೆ ಪುನಃ ಇವರು ಬಂದು ಅದನ್ನು ಊರ್ಜಿತವಾದ ಅವಸ್ಥೆಗೆ ತೆಗೆದುಕೊಂಡು ಹೋಗುತ್ತಾರೆ. ಅಂತಹ ಮಹಾನುಭಾವರು ಈ ಸಪ್ತರ್ಷಿಗಳು ವರ್ಣಾಶ್ರಮ ಧರ್ಮಗಳ ಪರಿಪಾಲನೆ ಮಾಡುವವರು, ವರ್ಣಾಶ್ರಮ ಧರ್ಮಗಳ ಸಂರಕ್ಷಣೆ ಮಾಡುವವರು ಸಪ್ತರ್ಷಿಗಳು ಅಂತ ಆ ಸಪ್ತರ್ಷಿಗಳ ಮಹಿಮೆಯನ್ನು ತಿಳಿದುಕೊಳ್ಳಿ ಅವರ ಉಪಕಾರವನ್ನು ಸ್ಮರಿಸಿಕೊಳ್ಳಿ ಅಂತ ನಮಗೆ ತಿಳಿಸಿಕೊಟ್ಟಿದ್ದಾರೆ. ಇಂತಹ ಸಪ್ತರ್ಷಿಗಳು ಪ್ರತಿ ಮನ್ವಂತರದೊಳಗೂ ಕೂಡ ಇರುತ್ತಾರೆ ಅಂತ ಹೇಳುತ್ತಾ ಆರು ಮನ್ವಂತರಗಳ ಬಗ್ಗೆ ತಿಳಿಸಿಕೊಟ್ಟಿದ್ದಾರೆ. ಇನ್ನುಳಿದ ಮನ್ವಂತರಗಳ ಬಗ್ಗೆ ಮತ್ತೆ ಮುಂದೆ ತಿಳಿಯೋಣ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

॥ ಶ್ರೀ ದಿಗ್ವಿಜಯ ರಾಮೋ ವಿಜಯತೇ ॥

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಹರಿವಂಶಪರ್ವ-5

* * *

ಭಗವಂತನ ಅದ್ಭುತವಾದ ಮಹಿಮೆಯನ್ನು ತಿಳಿಸಿಕೊಡುವುದಕ್ಕೋಸ್ಕರವಾಗಿ ಭಗವದ್ಭಕ್ತರ ಮಹಿಮೆಯನ್ನು ನಿರೂಪಣೆ ಮಾಡುತ್ತಾರೆ. ಮನುಗಳೆಲ್ಲ ಪರಮಾತ್ಮನ ಭಕ್ತರು ಭಗವಂತನೇ ತಾಪಸ ಮನು ಆಗಿದ್ದಾನೆ ಅವನನ್ನು ಬಿಟ್ಟರೆ ಉಳಿದವರೆಲ್ಲಾ ಆ ಭಗವಂತನ ಭಕ್ತರು ದಾಸಾನುದಾಸರು. ಎಪ್ಪತ್ತೊಂದು ಮಹಾಯುಗಗಳವರೆಗೆ ಇಂತಹ ಸಮಗ್ರವಾದ ರಾಜ್ಯವನ್ನು ಆಳುವ ಅವರ ಮಹಿಮೆ ಇದು ದೇವರ ಮಹಿಮೆ, ಅವರ ಅಂತರ್ಯಾಮಿಯಾಗಿ ದೇವರು ಮಾಡಿಸುವ ಒಂದು ದೊಡ್ಡದಾದ ಕಾರ್ಯ. ಏಳು ಜನ ಮನುಗಳ ಮನ್ವಂತರಗಳ ಸಾಮಾನ್ಯ ಪರಿಚಯವನ್ನು ನಾವು ಮಾಡಿಕೊಂಡಿದ್ದೇವೆ.

ಎಂಟನೆಯ ಮನ್ವಂತರ ಸಾವರ್ಣಿ ಮನ್ವಂತರ ಅಂತ ಈ ಸಾವರ್ಣಿ ಸೂರ್ಯಪುತ್ರ, ಸೂರ್ಯನಿಂದ ಛಾಯಾ ದೇವಿಯಲ್ಲಿ ಹುಟ್ಟಿದಂತಹ ಮನು ಅವನು ಸಾವರ್ಣಿ ಮನು. ವೈವಸ್ವತ ಮನು ಅವನೂ ಕೂಡ ಸೂರ್ಯಪುತ್ರನೇ, ಸೂರ್ಯನಿಂದ ಸಂಜ್ಞಾದೇವಿಯಲ್ಲಿ ಹುಟ್ಟಿದ ಮನು ಅವನು ಶ್ರಾದ್ಧದೇವ ಅವನಿಗೇನೆ ವೈವಸ್ವತ ಮನು ಎಂಬುದಾಗಿ ಕರೆಯುವುದು ಮುಂದಿನ ಭಾಗದಲ್ಲಿ ಇದರ ವಿವರಣೆಯನ್ನು ತಿಳಿಯುವವರಿದ್ದೀರಿ. ಸಾವರ್ಣಿ ಮನು ಸೂರ್ಯನಿಂದ ಛಾಯಾ ದೇವಿಯಲ್ಲಿ ಹುಟ್ಟಿದವನು.

ಈ ಸಾವರ್ಣಿ ಮನ್ವಂತರದ ಋಷಿಗಳು ಯಾರು ಅಂತ ಹೇಳುತ್ತಾರೆ ಹರಿವಂಶದಲ್ಲಿ ಗಾಲವ, ದೀಪ್ತಿಮಾನ್, ರಾಮ, ವ್ಯಾಸ, ಅಶ್ವತ್ಥಾಮ, ಕೃಪ, ರುರು ಎಂಬ ಋಷಿಗಳು ಅಂತ, ಇದೇ ಹೆಸರಿನ ಋಷಿಗಳನ್ನೇ ಶ್ರೀಮದ್ಭಾಗತವೂ ಕೂಡ ಹೇಳುತ್ತದೆ ಅಷ್ಟಮಸ್ಕಂಧದಲ್ಲಿ. ರುರು ಎಂಬುದಾಗಿ ಹರಿವಂಶದಲ್ಲಿ ಕರೆದರೆ ಋಷ್ಯಶೃಂಗ ಎಂಬುದಾಗಿ ಶ್ರೀಮದ್ಭಾಗತವು ಹೇಳುತ್ತದೆ ಅನ್ನುವುದನ್ನು ಬಿಟ್ಟರೆ ಉಳಿದ ಎಲ್ಲ ಹೆಸರುಗಳು ಭಾಗವತ ಹಾಗೂ ಹರಿವಂಶಗಳಲ್ಲಿ ಒಂದೇ ರೀತಿಯ ಹೆಸರುಗಳು ಋಷಿಗಳಿಗೆ ಇವೆ ಅಂತ ತಿಳಿಸಿಕೊಟ್ಟಿದ್ದಾರೆ. ಈ ಸಾವರ್ಣಿ ಮನ್ವಂತರದಲ್ಲಿ ದ್ರೋಣ ಪುತ್ರರಾದ ಅಶ್ವತ್ಥಾಮಾಚಾರ್ಯರು ಅವರೇ ವೇದಗಳ ವಿಭಾಗವನ್ನು ಮಾಡುತ್ತಾರೆ ಅವರಿಗೆ ಗುರುಗಳಾಗಿ ವೇದವ್ಯಾಸ ದೇವರು ಸಾಕ್ಷಾತ್ ಶ್ರೀಹರಿ ಸರ್ವೋತ್ತಮನಾದ ಭಗವಂತ ನಾರಾಯಣ ತಾನು ಅವರಿಗೆ ಗುರುವಾಗಿ ಮುಂದಿನ ಮನ್ವಂತರದಲ್ಲಿ ಉಪದೇಶವನ್ನು ಮಾಡುತ್ತಾನೆ ಎಂಬುದಾಗಿ ನಾವು ತಿಳಿಯಬೇಕು.

ಮನು ಪುತ್ರರು ಹರಿವಂಶ ಹೇಳುತ್ತದೆ ವರೀಯಾನ್, ಅವರೀಯಾನ್, ವಾಜ, ಸುಮತಿರೇವ, ದ್ಯುತಿಮಾನ್, ವಸು, ಚರಿಷ್ಣು, ಅಧೃಷ್ಣು, ಸುಮತಿ ಎಂಬುದಾಗಿ, ಭಾಗವತ ಹೇಳುತ್ತದೆ ನಿರ್ಮೋಹ, ವಿರಜಸ್ಕ ಮೊದಲಾದಂತಹ ಅನೇಕ ಮಕ್ಕಳು ಸಾವರ್ಣಿ ಮನುವಿಗೆ ಆಗಿದ್ದಾರೆ. ನೀವೆಲ್ಲಾ ಮೇಲಿಂದ ಮೇಲೆ ಕಥೆಯನ್ನು ಕೇಳಿರುತ್ತೀರಿ ವಾಮನ ರೂಪಿಯಾಗಿರುವ ಪರಮಾತ್ಮ ಬಲಿ ಚಕ್ರವರ್ತಿಯಿಂದ ರಾಜ್ಯವನ್ನು ಕಸೆದುಕೊಂಡು ಪುರಂದರನಿಗೆ ಅದನ್ನು ಒಪ್ಪಿಸಿ ಆ ಇಂದ್ರ ಪದವಿಯಲ್ಲಿ ಆ ಪುರಂದರನನ್ನು ಸ್ಥಿರವಾಗಿ ರಾಜ್ಯ ಆಳುವಂತೆ ಅನುಗ್ರಹ ಮಾಡುತ್ತಾನೆ ಎಂಬುದಾಗಿ. ಬಲಿ ಚಕ್ರವರ್ತಿ ಬೇಕಾದಷ್ಟು ಸಾಧನೆ ಮಾಡಿದ್ದಾನೆ ಅವನು ನೂರು ಅಶ್ವಮೇಧ ಯಾಗಗಳನ್ನು ಮಾಡಿದ, ಪುಣ್ಯವಂತ, ವಿಷ್ಣು ಭಕ್ತ ಅವನಿಗೆ ಏಕೆ ದೇವರು ಅನುಗ್ರಹ ಮಾಡಿಲ್ಲ ಅನ್ನುವುದಕ್ಕೆ ಶ್ರೀಮದ್ಭಾಗವತ ಹೇಳುತ್ತದೆ ಬರುವ ಮನ್ವಂತರದಲ್ಲಿ ಸಾವರ್ಣಿ ಮನ್ವಂತರದಲ್ಲಿ ಬಲಿ ಚಕ್ರವರ್ತಿಯನ್ನು ಇಂದ್ರ ಪದವಿಯಲ್ಲಿ ಪರಮಾತ್ಮ ಕೂಡಿಸುವವನಿದ್ದಾನೆ. ಯಾವ ಭಗವಂತ ಬಲಿ ಚಕ್ರವರ್ತಿಯ ರಾಜ್ಯವನ್ನು ತಾನು ವಾಮನನಾಗಿ ಹೋಗಿ ಯಾಚನೆ ಮಾಡಿ, ತ್ರಿವಿಕ್ರಮನಾಗಿ ಬೆಳೆದು ನಿಂತು, ಸಮಗ್ರವಾದ ಎಲ್ಲ ಲೋಕಗಳು ತನ್ನ ವಶದಲ್ಲಿಯೇ ಇದ್ದದ್ದನ್ನು ವಶದಲ್ಲಿ ಇವೆ ಅಂತ ತೋರಿಸಿಕೊಟ್ಟು, ಅವನ ತಲೆಯ ಮೇಲೆ ಕಾಲಿಟ್ಟು, ಬಲಿ ಚಕ್ರವರ್ತಿಯನ್ನು ಸುತಲಕ್ಕೆ ಕಳಿಸಿ ಆ ರಾಜ್ಯವನ್ನು ಪುರಂದರನಿಗೆ ಒಪ್ಪಿಸಿದ ಇದೇ ಪರಮಾತ್ಮ ಬರುವ ಮನ್ವಂತರದಲ್ಲಿ ಆ ಪುರಂದರನಿಂದ ರಾಜ್ಯವನ್ನು ತೆಗೆದುಕೊಂಡು ಬಲಿ ಚಕ್ರವರ್ತಿಗೆ ಕೊಡುತ್ತಾನೆ. ಯಾಕೆ ಅಂದರೆ ಒಂದು ಮನ್ವಂತರ ಮಾತ್ರ ನಿನ್ನ ರಾಜ್ಯ ಆ ರಾಜ್ಯವನ್ನು ಆಳಿ ಆಗಿದೆ ಇನ್ನು ಮುಂದೆ ನಿನ್ನ ಸಾಧನೆಯನ್ನು ನೀನು ಮಾಡಿಕೋ ಆದರೆ ಈ ಅಮರಾವತಿಯಲ್ಲಿ ಇದ್ದು ಮೂರು ಲೋಕಗಳ ಒಡೆತನವನ್ನು ಮಾಡುವ ಏನೊಂದು ಪದವಿಯ ಕಾರ್ಯ ಇದೆ ಇದನ್ನು ಮಾತ್ರ ಬಲಿ ಚಕ್ರವರ್ತಿ ಇನ್ನು ಮೇಲೆ ಮಾಡಬೇಕು ಅಂತ ಆ ಪರಮಾತ್ಮ ಪುನಃ ಅದನ್ನು ಬಲಿ ಚಕ್ರವರ್ತಿಗೆ ಕೊಡುತ್ತಾನೆ ಆ ಭಗವಂತನ ಹೆಸರೇ ಸಾರ್ವಭೌಮ ಅಂತ. ಇಲ್ಲಿ ವಾಮನ ಮುಂದಿನ ಮನ್ವಂತರದಲ್ಲಿ ದೇವರು ಅವತಾರ ಮಾಡಿದಾಗ ಅವನು ಸಾರ್ವಭೌಮ ಎಂಬ ಹೆಸರಿನಿಂದ ಅವತಾರ ಮಾಡುತ್ತಾನೆ ದೇವಗುಹ್ಯ ಎಂಬ ಪುರುಷನಿಂದ, ಸರಸ್ವತಿ ಎಂಬ ತಾಯಿಯಲ್ಲಿ ಪರಮಾತ್ಮ ಅವತಾರ ಮಾಡುತ್ತಾನೆ. ಆ ದೇವಗುಹ್ಯ, ಸರಸ್ವತಿಯರ ಪುತ್ರನಾಗಿ ಅವತಾರ ಮಾಡಿ ಸಾರ್ವಭೌಮ ಎಂಬ ಹೆಸರಿನಿಂದ ಆ ಸಾರ್ವಭೌಮತ್ವವನ್ನು ಪುರಂದರನಿಂದ ತೆಗೆದುಕೊಂಡು ಬಲಿಚಕ್ರವರ್ತಿಗೆ ಪರಮಾತ್ಮ ಕರುಣಿಸುತ್ತಾನೆ.

ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ । (2.16 ಭ ಗೀತಾ)

ಬಲಿಚಕ್ರವರ್ತಿ ಮಾಡಿದ ಸತ್ಕರ್ಮಗಳಿಗೆ ಫಲ ಕೊಟ್ಟಿಲ್ಲ ಅಂತಲ್ಲ, ಕೊಟ್ಟೇ ಕೊಡುತ್ತಾನೆ ಕಾಲ ಬರಬೇಕು, ಕಾಲ ಪಕ್ವ ಆದಾಗ ಅದಕ್ಕೆ ಫಲವನ್ನು ಕೊಡುತ್ತಾನೆ ಪರಮಾತ್ಮ ಎಂಬುದಾಗಿ ನಾವಿಲ್ಲಿ ತಿಳಿಯಬೇಕು.

ಈ ಮನ್ವಂತರದೊಳಗೆ ದೇವತೆಗಳ ಹೆಸರು ಸುತಪಸಾ, ವಿರಜಾ, ಅಮಿತಪ್ರಜಾ ಎಂಬುದಾಗಿ ಶ್ರೀಮದ್ಭಾಗವತ ಮೂರು ತರಹದ ದೇವತೆಗಳ ಹೆಸರನ್ನು ಸಾವರ್ಣಿ ಮನ್ವಂತರದಲ್ಲಿ ತಿಳಿಸಿಕೊಡುತ್ತಾರೆ.

ಇನ್ನು ಒಂಬತ್ತನೆಯ ಮನ್ವಂತರ. ಶ್ರೀಮದ್ಭಾಗವತ ಹೇಳುತ್ತದೆ ದಕ್ಷಸಾವರ್ಣಿ ಅಂತ ಒಂಬತ್ತನೆಯ ಮನ್ವಂತರ. ಇವನು ವರುಣ ಪುತ್ರ ಒಂಬತ್ತನೆಯ ಮನು ಇವನು ವರುಣ ಪುತ್ರ. ಋಷಿಗಳು ಹರಿವಂಶ ಹೇಳುವ ಪ್ರಕಾರ ಪುಲಸ್ತ್ಯರ ಮಗನಾದ ಮೇಧಾತಿಥಿ, ಕಶ್ಯಪರ ಮಗನಾದ ವಸು, ಭೃಗು ಪುತ್ರನಾದ ಜ್ಯೋತಿಷ್ಮಾನ್, ಅಂಗಿರಸ್ ಪುತ್ರನಾದ ದ್ಯುತಿಮಾನ್, ವಸಿಷ್ಠ ಪುತ್ರನಾದ ಸಾವನ, ಅತ್ರಿ ಪುತ್ರನಾದ ಹವ್ಯವಾಹನ, ಹಾಗೂ ಪುಲಹ ಪುತ್ರ ಹೀಗೆ ಏಳು ಜನ ಋಷಿಗಳು ದಕ್ಷಸಾವರ್ಣಿ ಮನ್ವಂತರದಲ್ಲಿ ಒಂಬತ್ತನೆಯ ಮನ್ವಂತರದಲ್ಲಿ ಇದ್ದಾರೆ. ದ್ಯುತಿಮಾನ್

ಮೊದಲಾದ ಋಷಿಗಳು ಅಂತ ಮಾತ್ರ ಭಾಗವತ ಹೇಳುತ್ತದೆ ಆ ಏಳು ಜನರ ಹೆಸರುಗಳನ್ನು ಹರಿವಂಶ ಉಲ್ಲೇಖವನ್ನು ಮಾಡುತ್ತದೆ. ಈ ಮೊದಲು ಸತ್ಯಧರ್ಮತೀರ್ಥರು ಹೇಳಿದ ಮಾತನ್ನು ಕೇಳಿದ್ದೀರಿ ಪ್ರಸಿದ್ಧರಾದ ಕೆಲವರ ಹೆಸರನ್ನು ಹೇಳಿ ಇನ್ನುಳಿದವರ ಹೆಸರನ್ನು ಗ್ರಂಥಾತರದಿಂದ ತಿಳಿದುಕೊಳ್ಳಿ ಅಂತ ಭಾಗವತ ನಮಗೆ ಅವಕಾಶವನ್ನು ಕೊಡುತ್ತದೆ. ದ್ಯುತಿಮಾನ್ ಎಂಬ ಅಂಗಿರಸ್ ಪುತ್ರನಾದ ಋಷಿಯನ್ನು ಹರಿವಂಶವೂ ಹೇಳುತ್ತದೆ ಅವನೊಬ್ಬನ ಹೆಸರನ್ನು ಹೇಳಿ ಈ ಮೊದಲಾದವರನ್ನೆಲ್ಲ ನೀವು ತಿಳಿದುಕೊಳ್ಳಿ ಅಂತ ಭಾಗವತ ಹೇಳುತ್ತದೆ '**ದ್ಯುತಿಮತ್ ಪ್ರಮುಖಃ**' ಅಂತ.

ಶ್ರೀಮನ್ ಟೀಕಾಕೃತ್ಪಾದರು ಅನುವ್ಯಾಖ್ಯಾನಕ್ಕೆ ವ್ಯಾಖ್ಯಾನ ಮಾಡುವಾಗ ನ್ಯಾಯವಿವರಣದ ವ್ಯಾಖ್ಯಾನ ಮಾಡುವುದಿಲ್ಲ, ನ್ಯಾಯಮಾಲಾ ಬಂದರೆ ಇದರ ವ್ಯಾಖ್ಯಾನವನ್ನ ನ್ಯಾಯವಿವರಣದ ಗ್ರಂಥವನ್ನು ಓದಿ ತಿಳಿದುಕೊಳ್ಳಿ ಅನ್ನುತ್ತಾರೆ. ಯಾಕೆ ಅಂದರೆ ಅದನ್ನೂ ಇಲ್ಲಿಯೇ ಸುಧಾ ಗ್ರಂಥದಲ್ಲಿಯೇ ಅನುವ್ಯಾಖ್ಯಾನದ ವ್ಯಾಖ್ಯಾನ ಮಾಡಿದಂತೆ ನ್ಯಾಯಮಾಲಾದ ವ್ಯಾಖ್ಯಾನ ಮಾಡಿದರೆ ನ್ಯಾಯವಿವರಣದ ಗ್ರಂಥವನ್ನು ಓದುವ ಸಂಪ್ರದಾಯವನ್ನೇ ನೀವು ಬಿಡಬಹುದು, ನ್ಯಾಯವಿವರಣದ ಗ್ರಂಥವನ್ನು ನೀವು ಓದಲೇಬೇಕು ಅನ್ನುವುದಕ್ಕೋಸ್ಕರ ಅಲ್ಲಿಯೇ ನೋಡಿಕೊಳ್ಳಬೇಕು ಅನ್ನುವ ದೃಷ್ಟಿಯಲ್ಲಿ ಟೀಕಾಕೃತ್ಪಾದರು ಇಲ್ಲಿ ಅದರ ವ್ಯಾಖ್ಯಾನ ಮಾಡುವುದಿಲ್ಲ ಎಂಬುದಾಗಿ ವ್ಯಾಖ್ಯಾನಕಾರರು ತಿಳಿಸಿಕೊಡುತ್ತಾರೆ. ಆ ರೀತಿಯಲ್ಲಿ ಹರಿವಂಶಾದಿ ಸಕಲ ಸಚ್ಛಾಸ್ತ್ರಗಳ ಅಧ್ಯಯನವನ್ನು ಮಾಡಬೇಕು ಅನ್ನುವುದಕ್ಕೆ ಶ್ರೀಮದ್ಭಾಗವತ ಹರಿವಂಶಾದಿಗಳಲ್ಲಿ ನೋಡಿಕೊಳ್ಳಿ ಅಂತ, ಕೆಲುವುದನ್ನು ಭಾಗವತಾದಿಗಳಲ್ಲಿ ವಿಸ್ತೃತವಾಗಿ ಹೇಳಿರುತ್ತಾರೆ ಅಲ್ಲಿ ನೋಡಿಕೊಳ್ಳಿ ಅಂತ ಎಲ್ಲ ಗ್ರಂಥಗಳ ಅಧ್ಯಯನವನ್ನು ಯಥಾಶಕ್ತಿಯಾಗಿ ಮಾಡಬೇಕು ಅನ್ನುವುದರ ಸೂಚನೆ ಈ ಮೂಲಕವಾಗಿ ನಮಗೆ ವೇದವ್ಯಾಸ ದೇವರು ತಿಳಿಸಿಕೊಡುತ್ತಾರೆ ಅಂತ ನಾವು ಅರ್ಥ ಮಾಡಿಕೊಳ್ಳಬೇಕು.

ಇನ್ನು ದಕ್ಷಸಾವರ್ಣಿ ಮನ್ವಂತರದ ದೇವತೆಗಳು ಮೂರು ಗಣದಲ್ಲಿ ಇದ್ದಾರೆ ಅಂತ ಮಾತ್ರ, ನೋಡಿ ಇಲ್ಲಿ ಹರಿವಂಶ ಸಂಕ್ಷೇಪ ಮಾಡಿತು ಮೂರು ಗಣದಲ್ಲಿ ದೇವತೆಗಳಿದ್ದಾರೆ ಅಂತ ಮಾತ್ರ ಹೇಳುತ್ತದೆ. '**ಪಾರಾ ಮರೀಚಿ ಗರ್ಭಾದ್ಯಾಃ**' ಅಂತ ಸ್ವಲ್ಪ ವಿವರಣೆಯನ್ನು ಶ್ರೀಮದ್ಭಾಗವತ ನಮಗೆ ನೀಡುತ್ತದೆ. ಈ ದೇವತೆಗಳೆಲ್ಲ ದಕ್ಷನ ದೌಹಿತ್ರನಾದಂತಹ ರೋಹಿತನ ಪುತ್ರರು ಎಂಬುದಾಗಿ ಹರಿವಂಶ ಹೇಳುತ್ತದೆ. ಈ ಮನ್ವಂತರದ ಇಂದ್ರನ ಹೆಸರು ಬಹಳ ಅದ್ಭುತವಾಗಿದೆ ಏನು ಅದ್ಭುತ ಎಂಬ ಹೆಸರಿನ ಇಂದ್ರ ದಕ್ಷಸಾವರ್ಣಿ ಮನ್ವಂತರದಲ್ಲಿ ಇಂದ್ರ. ಇಲ್ಲಿ ದೃಷ್ಟಕೇತು ಪಞ್ಚಹೋತ್ರ ನಿರಾಕೃತಿ ಪೃಥು ಶ್ರವ ಭೂರಿಧಾಮಾ ಋಚೀಕೇತ ಅಷ್ಟಹತ ಗಯ ಎಂಬುದಾಗಿ ಮನು ಪುತ್ರರನ್ನು ತಿಳಿಸಿಕೊಡುತ್ತಾರೆ. ಶ್ರೀಮದ್ಭಾಗವತ ಕೆಲವರ ಹೆಸರುಗಳನ್ನು ಹೇಳುತ್ತದೆ ಭೂತಕೇತು, ದೀಪ್ತಕೇತು ಮೊದಲಾದವರೆಲ್ಲ ಮನು ಪುತ್ರರು ಅಂತ ಇಲ್ಲಿ ಪರಮಾತ್ಮನ ಅವತಾರ ಅದು ಪ್ರಧಾನ ಶ್ರೀಮದ್ಭಾಗವತ ಹೇಳುತ್ತದೆ ಋಷಭನಾಮಕನಾದ ಪರಮಾತ್ಮ ಅವತಾರ ಮಾಡುತ್ತಾನೆ. ಪಂಚಮಸ್ಕಂಧದಲ್ಲಿ ಬರುವ ಋಷಭನಾಮಕ ಪರಮಾತ್ಮ ಬೇರೆ, ಅದು ಈ ಮನ್ವಂತರದಲ್ಲಿಯೇನೆ ಅವತಾರ ಮಾಡಿದ್ದು ಋಷಭನಾಮಕ ಪರಮಾತ್ಮ. ಇದು ಋಷಭನಾಮಕನಾಗಿ ಇರತಕ್ಕಂತಹ ಪರಮಾತ್ಮ ಆಯುಷ್ಮಾನ್ ಮತ್ತು ಅಂಭುಧಾರ ಇವರಲ್ಲಿ ಅವತಾರ ಮಾಡಿದ್ದಾನೆ. ಪಂಚಮಸ್ಕಂಧದಲ್ಲಿ ಬರುವಂತಹ ಋಷಭನಾಮಕನಾದ ಪರಮಾತ್ಮ ವಿಶೇಷವಾಗಿ ಎಲ್ಲ ಆಶ್ರಮ ಧರ್ಮಗಳ ಆಚರಣೆಯನ್ನು ಯಾವ ರೀತಿಯಾಗಿ ಮಾಡಬೇಕು ಅನ್ನುವುದನ್ನು ತೋರಿಸಿದ್ದಾನೆ ಅಂತ ಅಲ್ಲಿ ತಿಳಿಸುತ್ತಾರೆ. ಪ್ರಿಯವ್ರತ, ಅವನ ಮಗ ಆಗ್ನೀಧ್ರ, ಅವನ ಮಗ ನಾಭಿ ಆ ನಾಭಿಯ ಪುತ್ರನಾಗಿ ಪರಮಾತ್ಮ ಋಷಭನಾಮಕನಾಗಿ ಅಲ್ಲಿ ಅವತಾರ ಮಾಡಿದ್ದು ಎಂಬುದಾಗಿ ನಾವು ಕೇಳುತ್ತೇವೆ. ಆ ರೀತಿಯ

ಋಷಭನಾಮಕನಾಗಿ ಇರುವಂತಹ ಪರಮಾತ್ಮ ಇಲ್ಲಿ ಆಯುಷ್ಮಾನ್ ಮತ್ತು ಅಂಭುಧಾರ ಅನ್ನುವವರಲ್ಲಿ ಅವತಾರ ಮಾಡುತ್ತಾನೆ ಅಂತ.

ಇನ್ನು ಹತ್ತನೆಯ ಮನ್ವಂತರ ಬ್ರಹ್ಮಸಾವರ್ಣಿ. ಅಲ್ಲಿ ಋಷಿಗಳು ಪುಲಹರ ಮಗನಾದ ಹಯಗ್ರೀವಾನ್, ಭೃಗು ಪುತ್ರನಾದ ಸುಕೃತಿ, ಆತ್ರಿ ಪುತ್ರ ಆಪೋಮೂರ್ತಿ, ವಸಿಷ್ಠ ಪುತ್ರ ಅಷ್ಟಮ, ಪುಲಸ್ತ್ಯ ಪುತ್ರನಾದ ಪ್ರಮಿತಿ, ಕಶ್ಯಪ ಪುತ್ರ ನಭೋಗ ಅಂತ ಆಮೇಲೆ ನಭಸ್ಸಿನ ಪುತ್ರನಾದ ಸತ್ಯ ಅಂತ ಹರಿವಂಶ ಹೇಳುತ್ತದೆ. ಹಯಗ್ರೀವಾನ್, ಸುಕೃತ, ಸತ್ಯ, ಜಯ, ಮೂರ್ತಿ ಇತ್ಯಾದಿಗಳು ಅಂತ ಸ್ವಲ್ಪ ಹೆಸರಿನಲ್ಲಿ ಸಂಕ್ಷೇಪವನ್ನು ಮಾಡಿ ಭಾಗವತವು ಕೂಡ ತಿಳಿಸುತ್ತದೆ. ದಕ್ಷಿಣಾಯಣ ಹಾಗೂ ಉತ್ತರಾಯಣಗಳಿಗೆ ಅಭಿಮಾನಿಗಳಾದ ದೇವತೆಗಳು ಈ ಒಂದು ಮನ್ವಂತರದಲ್ಲಿ ವಿಶೇಷವಾಗಿ ದೇವ ಪದವಿಯಲ್ಲಿ ಇರುತ್ತಾರೆ ಅಂತ ಹರಿವಂಶ ಹೇಳುತ್ತದೆ. ಸುವಾಸನ, ವಿಬುದ್ಧಾ ಮೊದಲಾದಂತಹ ಹೆಸರಿನ ದೇವತೆಗಳು ಇರುತ್ತಾರೆ ಅಂತ ಭಾಗವತ ಹೇಳುತ್ತದೆ. ಈ ಮನ್ವಂತರದ ಇಂದ್ರನ ಹೆಸರು ಶಂಭು ಎಂಬುದಾಗಿ. ಅವತಾರ ವಿಷ್ವಕ್ಸೇನ ಎಂಬ ಹೆಸರಿನಿಂದ ಪರಮಾತ್ಮ ಅವತಾರ ಮಾಡುತ್ತಾನೆ ಅಂತ ಸತ್ಯಧರ್ಮತೀರ್ಥರ ವ್ಯಾಖ್ಯಾನ. ವಿಷ್ವಕ್ಸೇನ ಎಂಬ ತಂದೆಯಿಂದ ವಿಷೂಚಿ ಎಂಬ ತಾಯಿಯಲ್ಲಿ ಶಾಂತ ಎಂಬ ಹೆಸರಿನಿಂದ ಅವತಾರ ಮಾಡುತ್ತಾನೆ ಅಂತ ಲಿಂಗೇರಿ ಆಚಾರ್ಯರು ವ್ಯಾಖ್ಯಾನ ಮಾಡುತ್ತಾರೆ. ವಿಷ್ವಕ್ಸೇನ ಎಂಬ ಹೆಸರಿನ ಪರಮಾತ್ಮನೇ ಅವತಾರ ಮಾಡುತ್ತಾನೆ ಎಂಬುದಾಗಿ ಸತ್ಯಧರ್ಮತೀರ್ಥರು ಶ್ರೀಮದ್ಭಾಗವತದ ವ್ಯಾಖ್ಯಾನದಲ್ಲಿ ನಮಗೆ ತಿಳಿಸಿಕೊಡುತ್ತಾರೆ. ಇನ್ನು ಮನು ಪುತ್ರರು ಇಲ್ಲಿ ನೋಡಿ, ಈ ಮೊದಲು ಒಂದೆರಡು ಬಂತು ಪುತ್ರ ಅಂತ ಹೆಸರು ತನುಜ ಅಂತ ಹಾಗೆ ಇಲ್ಲಿ ಮನುಪುತ್ರ ಅಂತೇ ಒಬ್ಬನಿಗೆ ಹೆಸರು ಮನುಸುತ, ಉತ್ತಮೌಜ, ನಿಕುಷಞ್ಜ, ವೀರ್ಯವಾನ್, ಶತಾನೀಕ, ನಿರಾಮಿತ್ರ, ವೃಷಸೇನ, ಜಯದ್ರಥ, ಭೂರಿದ್ಯುಮ್ನ ಸುವರ್ಚಾ ಎಂಬುದಾಗಿ ಬ್ರಹ್ಮಸಾವರ್ಣಿ ಮನುವಿನ ಮಕ್ಕಳ ಹೆಸರನ್ನು ಹರಿವಂಶ ಹೇಳುತ್ತದೆ, ಭಾಗವತ ಸಂಕ್ಷಿಪ್ತವಾಗಿ ಭೂರಿಶೇಣಾದಿಗಳು ಮನು ಪುತ್ರರು ಅಂತ ಹೇಳುತ್ತಾರೆ.

ಇನ್ನು ಧರ್ಮಸಾವರ್ಣಿ ಎಂಬುದಾಗಿ ಸ್ವಲ್ಪ ಮನ್ವಂತರದ ಹೆಸರುಗಳಲ್ಲಿಯೂ ಹರಿವಂಶ ಹಾಗೂ ಭಾಗವತಗಳಲ್ಲಿ ಸ್ವಲ್ಪ ವ್ಯತ್ಯಾಸವಾಗಿದೆ. ಹನ್ನೊಂದನೆಯ ಮನ್ವಂತರ ರುದ್ರಸಾವರ್ಣಿ ಅಂತ ಇಲ್ಲಿಯ ಹರಿವಂಶದ ವ್ಯಾಖ್ಯಾನದಲ್ಲಿ ತಿಳಿಸುತ್ತಾರೆ ಆದರೆ ಭಾಗವತದಲ್ಲಿ ಧರ್ಮಸಾವರ್ಣಿ ಇದು ಹನ್ನೊಂದನೆಯ ಮನ್ವಂತರ ಅಂತ ಭಾಗವತದ ಪ್ರಕಾರ ನಾವು ತಿಳಿಯೋಣ. ಋಷಯಃ ಕಶ್ಯಪ ಪುತ್ರನಾದ ಹವಿಷ್ಮಾನ್, ಇನ್ನೊಬ್ಬ ಹವಿಷ್ಮಾನ್ ಭೃಗು ಪುತ್ರನಾದ ಹವಿಷ್ಮಾನ್ ಸಪ್ತರ್ಷಿಗಳಲ್ಲಿ ಇಬ್ಬರ ಹೆಸರು ಒಂದೇ ಇದೆ ಹವಿಷ್ಮಾನ್ ಹವಿಷ್ಮಾನ್ ಎಂಬುದಾಗಿ. ಸಪ್ತಋಷಿಗಳು ಅಂತ ಒಂದು ಗುಂಪು. ಆ ಜ್ಞಾನಿಗಳ ಗುಂಪಿನಲ್ಲಿ ಒಂದೇ ಹೆಸರಿನವರು ಇಬ್ಬರು ಒಂದೇ ಮನ್ವಂತರದೊಳಗೆ ಇದ್ದಾರೆ ಅನ್ನುವುದನ್ನು ಗಮನಿಸಿ. ಒಂದೇ ಆಶ್ರಮದಲ್ಲಿ ಒಂದೇ ಗುರುಕುಲದಲ್ಲಿ ಇಬ್ಬರಿಗೆ ಒಂದೇ ಹೆಸರನ್ನು ಇಡಬಾರದು ಅಂತೇನಿಲ್ಲ ಒಂದು ವಿಶಿಷ್ಟವಾದ ವಿವಕ್ಷ ಎಂದರು ಇದೊಂದು ತರಹದ ಇವರದೊಂದು ಗುಂಪು, ಒಂದು ವರ್ಗ. ಆ ಸಪ್ತರ್ಷಿಗಳಲ್ಲಿ ಇಬ್ಬರು ಹವಿಷ್ಮಾನ್ ಪುತ್ರರು ಕಶ್ಯಪ ಪುತ್ರ ಹವಿಷ್ಮಾನ್, ಭೃಗು ಪುತ್ರ ಹವಿಷ್ಮಾನ್, ಆತ್ರಿ ಪುತ್ರ ತರುಣ, ವಸಿಷ್ಠ ಪುತ್ರ ಅನಘ, ಅಂಗೀರಸ್ ಪುತ್ರ ದಧಿಷ್ಣ, ಪುಲಸ್ತ್ಯ ಪುತ್ರ ನಿಶ್ಚರ ಹಾಗೂ ಅಗ್ನಿ ಸಮವಾದ ತೇಜಸ್ಸು ಉಳ್ಳಂತಹ ಪುಲಹ ಅಥವಾ ಪುಲಹರ ಪುತ್ರ ಅಗ್ನಿತೇಜಸ್ಸು ಎಂಬಂತಹ ಋಷಿ ಹೀಗೆ ಅಲ್ಲಿ ಋಷಿಗಳಿದ್ದಾರೆ, ಅರುಣಾದಿಗಳು ಋಷಿಗಳು ಅಂತ ಸಂಕ್ಷಿಪ್ತವಾಗಿ ಭಾಗವತ ಹೇಳುತ್ತದೆ. ಮನು ಪುತ್ರರು ಹರಿವಂಶ ಹೇಳುತ್ತದೆ ಸಂವರ್ತಕ ದೇವಾನಿಕಾ ಕ್ಷೇಮಧನ್ವಾ ಧೃಡಾಯು ಆದರ್ಶ ಪಣ್ಡಕ ಮನು ಅಂತ, ಸತ್ಯಧರ್ಮಾದಿಗಳು ಮಕ್ಕಳು ಅಂತ ಭಾಗವತ ಹೇಳುತ್ತದೆ. ಇನ್ನು ದೇವತೆಗಳು ಬ್ರಹ್ಮಸುತರು ಮೂರು ಗಣದಲ್ಲಿ ಇದ್ದಾರೆ ಅಂತ ಮಾತ್ರ



ಹರಿವಂಶ ಹೇಳುತ್ತದೆ. ಮೂರು ಗುಣಗಳ ಹೆಸರನ್ನು ಭಾಗವತ ಉಲ್ಲೇಖ ಮಾಡುತ್ತದೆ ವಿಹಂಗಮ, ಕಾಮಗಮ, ನಿರ್ವಾಣು ರುಚಿ ಎಂಬ ಹೆಸರಿನ ಮೂರು ಗಣದ ದೇವತೆಗಳು ಅಲ್ಲಿ ಇರುತ್ತಾರೆ. ಹನ್ನೊಂದನೆಯ ಮನ್ವಂತರದಲ್ಲಿ ಇಲ್ಲಿ ಇಂದ್ರ ವೈಧೃತ ಅಂತ ವೈಧೃತ ಅನ್ನುವವಳಲ್ಲಿ ಆರ್ಯಕ ಎಂಬ ಪುರುಷನಿಂದ ಪರಮಾತ್ಮ ಧರ್ಮಸೇತು ಎಂಬ ಹೆಸರಿನಿಂದ ಅವತಾರ ಮಾಡುತ್ತಾನೆ.

ಹನ್ನೆರಡನೆಯ ಮನ್ವಂತರ ಮೇರುಸಾವರ್ಣಿ ಅಂತ ಹರಿವಂಶದ ವ್ಯಾಖ್ಯಾನಕಾರರು ಹೇಳುವುದು ರುದ್ರಸಾವರ್ಣಿ ಅಂತ ವ್ಯಾಖ್ಯಾನಕಾರರು ಅಂತ ಹೇಳುವ ಉದ್ದೇಶ್ಯ ಹರಿವಂಶದಲ್ಲಿ ಎಂಟು ಮನ್ವಂತರಗಳವರೆಗೆ ಕ್ರಮವಾಗಿ ಹೆಸರು ಹೇಳಿ ಒಂಭತ್ತನೆಯ ಮನ್ವಂತರದಿಂದ ಮುಂದೆ ಹದಿನಾಲ್ಕು ಮನ್ವಂತರದವರೆಗೆ ಒಟ್ಟು ಸೇರಿ ಹೇಳಿದ್ದಾರೆ ಎಷ್ಟನೆಯ ಮನ್ವಂತರ ಯಾವುದು ಅಂತ ಹೆಸರನ್ನು ಹರಿವಂಶದ ಮೂಲದಲ್ಲಿ ಉಲ್ಲೇಖ ಮಾಡಿಲ್ಲ. ವ್ಯಾಖ್ಯಾನಕಾರರು ಒಂದು ರೀತಿಯ ಅಭಿಪ್ರಾಯ ಕೊಟ್ಟದ್ದಕ್ಕೆ ಅನುಗುಣವಾಗಿ ತಿಳಿಯುವುದಾದರೆ ಹನ್ನೆರಡನೆಯ ಮನ್ವಂತರ ಮೇರುಸಾವರ್ಣಿ ಆಗುತ್ತದೆ ಆದರೆ ಭಾಗವತದ ಪ್ರಕಾರ ರುದ್ರಸಾವರ್ಣಿ. ಅಲ್ಲಿ ಋಷಿಗಳು ವಸಿಷ್ಠ ಪುತ್ರ ದ್ಯುತಿ, ಅತ್ರಿ ಪುತ್ರ ಸುತಪಾ, ಅಂಗಿರಸ ಪುತ್ರ ತಪೋಮೂರ್ತಿ, ಕಶ್ಯಪ ಪುತ್ರ ತಪಸ್ವಿ, ಪುಲಸ್ತ್ಯ ಪುತ್ರ ತಪೋಶನ, ಪುಲಹ ಪುತ್ರ ತಪೋರವಿ, ಭೃಗು ಪುತ್ರ ಧೃತಿ, ಭಾಗವತದ ಪ್ರಕಾರ ಇದನ್ನೇ ಸಂಕ್ಷೇಪವಾಗಿ ತಪೋಮೂರ್ತಿ ತಪಸ್ವಿ ಅಗ್ನೀಧ್ರಕಾದಯಾ ಎಂಬುದಾಗಿ ಭಾಗವತ ಹೇಳುತ್ತದೆ. ದೇವತೆಗಳು ಐದು ಗಣದಲ್ಲಿ ಇದ್ದಾರೆ ಅಂತ ಹೇಳುತ್ತದೆ ಬ್ರಹ್ಮ ದೇವರ ಮನಸ್ಸಿನಿಂದ ಹುಟ್ಟಿದವರು ಇವರೆಲ್ಲಾ ದೇವತೆಗಳು ಅಂತ ಹರಿವಂಶ ಐದು ಗಣದವರು ಅಂತ ಹೇಳುತ್ತದೆ, ಐದೂ ಗಣದ ಹೆಸರನ್ನು ಭಾಗವತವೂ ಹೇಳುವುದಿಲ್ಲ ಹರಿತಾದಿ ದೇವತೆಗಳು ಇದ್ದರು ಅಂತ ಮಾತ್ರ ಭಾಗವತ ಉಲ್ಲೇಖ ಮಾಡುತ್ತದೆ. ಈ ಮಹಾನುಭಾವನಾದ ಹನ್ನೆರಡನೆಯ ಮನುವಿನ ಪುತ್ರರು ಯಾರು ದೇವವಾಯು, ಅದೂರ, ದೇವಶ್ರೇಷ್ಠ, ವಿದೂರಥ ಮಿತ್ರವಾನ್, ಮಿತ್ರದೇವ, ಮಿತ್ರಸೇನ, ಮಿತ್ರಕೃತ್, ಮಿತ್ರಬಾಹು, ಸುವರ್ಚಾ, ಭಾಗವತದ ಪ್ರಕಾರ ದೇವವಾನ್ ಉಪದೇವಾ ದೇವಶ್ರೇಷ್ಠ ಮೊದಲಾದವರು ಅಂತ. ನೋಡಿ ಇಂದ್ರ ಋತಧಾಮ ಎಂಬ ಹೆಸರಿನ ಇಂದ್ರ ಅಲ್ಲಿ ಇದ್ದಾನೆ. ಅವತಾರ ಯಾರು ಪರಮಾತ್ಮನ ಅವತಾರ ಸ್ವಧಾಮ ಎಂಬ ಹೆಸರಿನಿಂದ ಪರಮಾತ್ಮ ಅವತಾರ ಮಾಡುತ್ತಾನೆ. ಯಾರಲ್ಲಿ ಸತ್ಯಮಹಸ್ ಎಂಬ ಹೆಸರಿನ ಶ್ರೇಷ್ಠನಾದ ಪುರುಷನಿಂದ ಸೂನೃತಾ ಅನ್ನುವವಳಲ್ಲಿ ಪರಮಾತ್ಮ ಸ್ವಧಾಮ ಎಂಬ ಹೆಸರಿನಿಂದ ಅವತಾರವನ್ನು ಮಾಡುತ್ತಾನೆ. ಹಿಂದೊಮ್ಮೆ ಪರಮಾತ್ಮ ಸೂನೃತಾ ಎಂಬ ಹೆಸರಿನ ತಾಯಿಯಲ್ಲಿ ಅವತಾರ ಮಾಡಿದ್ದನು ಎಂಬುದನ್ನು ಈ ಮೊದಲು ಕೇಳಿದ್ದೀರಿ ಅದೇ ತರಹದ ಹೆಸರಿರುವ ಸೂನೃತಾ ಎಂಬುವವಳಲ್ಲಿ ಸತ್ಯಮಹಸ್ ಎಂಬುವವನಿಂದ ಸ್ವಧಾಮ ಎಂಬ ಹೆಸರಿನಿಂದ ಪರಮಾತ್ಮ ಅವತಾರವನ್ನು ಮಾಡುತ್ತಾನೆ.

ಇನ್ನು ದೇವಸಾವರ್ಣಿ ಮನ್ವಂತರ. ಹರಿವಂಶದ ಪ್ರಕಾರ ರೌಚ್ಯ ಮನ್ವಂತರ ಅಂತ ರೌಚ್ಯ ಅಂದರೆ ರುಚಿ ಪ್ರಜಾಪತಿಯ ಪುತ್ರ ಅನ್ನುವ ಅರ್ಥದಲ್ಲಿ ರೌಚ್ಯ ಅಂತ ದೇವಸಾವರ್ಣಿ ಮನ್ವಂತರ ಅಂತ ಭಾಗವತ ಹೇಳುತ್ತದೆ. ಅಲ್ಲಿ ಋಷಿಗಳು ಅಂಗೀರಸನ ಪುತ್ರ ಧೃತಿಮಾನ್, ಪುಲಸ್ತ್ಯ ಪುತ್ರ ಹವ್ಯಪಸ್ತು, ಪುಲಹ ಪುತ್ರ ತತ್ತ್ವದರ್ಶಿ, ಭೃಗು ಪುತ್ರ ನಿರುತ್ಸುಕ, ಅತ್ರಿ ಪುತ್ರ ನಿಷ್ಪ್ರಕಮ್ಪ, ಕಶ್ಯಪ ಪುತ್ರ ನಿರ್ಮೋಹ, ವಸಿಷ್ಠ ಪುತ್ರ ಸ್ತುಪಾಃ ಅಂತ. ಭಾಗವತ **'ನಿರ್ಮೋಕತತ್ತ್ವದರ್ಶಾದ್ಯಾ'**[1] ಅಂತ ಸಂಕ್ಷಿಪ್ತವಾಗಿ ಹೇಳುತ್ತದೆ. ದೇವತೆಗಳು ಮೂರು ಗಣದಲ್ಲಿ ಇದ್ದಾರೆ ಅಂತ ಸುಕರ್ಮ, ಸುತ್ರಾಮ ಮೊದಲಾದ ಹೆಸರಿನವರು ಅಂತ ಭಾಗವತ ಹೇಳುತ್ತದೆ. ದಿವಸ್ಪತಿ ಇಲ್ಲಿ ಇಂದ್ರನಾಗಿ ಇರುತ್ತಾನೆ. ಚಿತ್ರಸೇನ, ವಿಚಿತ್ರ, ನಯಾ, ಧರ್ಮಭೃತಾ, ಧೃತ, ಸುನೇತ್ರಾ, ಸುತಪಾ, ಕ್ಷತ್ರವೃದ್ಧಿ, ಸುತಪಾ, ನಿರ್ಭಯ

1. 08.12.32 ಭಾಗವತ

ಧೃಡ ಮನುವಿನ ಮಕ್ಕಳು ಅಂತ ಹರಿವಂಶ ಹೇಳುತ್ತದೆ, ಚಿತ್ರಸೇನ, ವಿಚಿತ್ರಾಧ್ಯಾ ಅಂತ ಭಾಗವತ ಹೇಳುತ್ತದೆ. ಇಲ್ಲಿ ಪರಮಾತ್ಮನ ಅವತಾರ ಯೋಗೇಶ್ವರ, ದೇವಹೋತ್ರ ಎಂಬುವವನಿಂದ ಬ್ರಹತಿ ಎಂಬ ತಾಯಿಯಲ್ಲಿ ಯೋಗೇಶ್ವರ ನಾಮಕನಾಗಿ ಪರಮಾತ್ಮ ಅವತಾರ ಮಾಡುತ್ತಾನೆ.

ಹದಿನಾಲ್ಕನೆಯ ಮನ್ವಂತರ ಹರಿವಂಶದ ವ್ಯಾಖ್ಯಾನದ ಪ್ರಕಾರ ಭೌತ್ಯ, ಭೌತ್ಯ ಅಂದರೆ ಭೂತಿಯ ಮಗ ಅಂದರೆ ಗಂಡ ಹೆಂಡತಿ ಇಬ್ಬರೂ ಮಾತಾಡಿಕೊಂಡ ಹಾಗೆ ಇದೆ. ರುಚಿ ಪ್ರಜಾಪತಿ ತನ್ನ ಹೆಸರು ಮಗನಿಗೆ ಬೇಕು ಅಂತ ತನ್ನ ಹೆಸರಿನಲ್ಲಿ ರೌಚ್ಯ ಅಂತ ಪ್ರಸಿದ್ಧ ಮಾಡಿದ ಅದೇ ರುಚಿ ಪ್ರಜಾಪತಿಯಿಂದಲೇ ಭೂತಿಯಲ್ಲಿ ಹುಟ್ಟಿದಾಗ ತಾಯಿಯ ಹೆಸರಿನಿಂದ ಅವನನ್ನು ಭೌತ್ಯ ಅಂತ ಕರೆದರು,ಇಬ್ಬರೂ ರುಚಿಯ ಮಕ್ಕಳೇ, ಆ ಭೌತ್ಯ ಮನ್ವಂತರ ಅಂತ ಭಾಗವತದ ಪ್ರಕಾರ ಇಂದ್ರಸಾವರ್ಣಿ ಮನ್ವಂತರ. ಋಷಿಗಳು ಭಾರ್ಗವ, ಹ್ಯತಿಬಾಹು,ಅಂಗೀರಸ ಪುತ್ರ ಶುಚಿ, ಅತ್ರಿ ಪುತ್ರ ಯುಕ್ತ, ವಸಿಷ್ಠ ಪುತ್ರ ಶುಕ್ರ, ಪುಲಹ ಪುತ್ರ ಅಜಿತ ಎಂಬುದಾಗಿ ಹರಿವಂಶ, ಅಗ್ನಿರ್ಬಾಹು, ಶುಚಿ, ಶುದ್ಧ ಮಾನಸಾದಿಗಳು ಅಂತ ಭಾಗವತ. ತರಂಗಭೀರು, ವಪ್ರ, ತರಸ್ವಾನ್, ಉಗ್ರ, ಅಭಿಮಾನಿ, ಪ್ರವೀಣ, ಜಿಷ್ಣು, ಸಕ್ರಂದನ, ತೇಜಸ್ವಿ, ಸಬಲ ಎಂಬುದಾಗಿ ಮನು ಪುತ್ರರು ಅಂತ ಹರಿವಂಶ ಹೇಳುತ್ತದೆ, ಜಂತು, ಧೀರವ, ವರ್ಯಾಧ್ಯಾಃ ಅಂತ ಭಾಗವತ ಸಂಕ್ಷೇಪವಾಗಿ ಹೇಳುತ್ತದೆ. ದೇವತೆಗಳು ಐದು ಗಣದಲ್ಲಿ ಇದ್ದಾರೆ ಅಂತ ಹರಿವಂಶ, ವಿಚಿತ್ರಾ, ಚಾಕ್ಷುಷಾ ಮೊದಲಾದ ಹೆಸರಿನ ದೇವತೆಗಳು ಅಂತ ಭಾಗವತ ಹೇಳುತ್ತದೆ. ಇಂದ್ರ ಶುಚಿ, ಪರಮಾತ್ಮ ಬೃಹದ್ಭಾನು ಎಂಬ ಹೆಸರಿನಿಂದ ಅವತಾರ ಮಾಡುತ್ತಾನೆ, ಸತ್ರಾಯಣ ಎಂಬುವವನಿಂದ ವಿತಾನಾ ಅನ್ನುವವಳಲ್ಲಿ ಪರಮಾತ್ಮ ಬೃಹದ್ಭಾನು ಆಗಿ ಅವತಾರ ಮಾಡುತ್ತಾನೆ ಅಂತ ಹದಿನಾಲ್ಕು ಮನ್ವಂತರಗಳ ಸಾಮಾನ್ಯವಾದ ಪರಿಚಯವನ್ನು ಮಾಡಿಕೊಟ್ಟಿದ್ದಾರೆ ಯಾವ ಯಾವ ರೂಪದಿಂದ ಭಗವಂತ ಅವತಾರ ಮಾಡುತ್ತಾನೆ ಅನ್ನುವುದನ್ನು ತಿಳಿಸಿಕೊಟ್ಟಿದ್ದಾರೆ ಇವರೆಲ್ಲರ ಕೆಲಸ ಏನು ಅಂತ ಹೇಳುವುದಕ್ಕಾಗಿಯೇನೆ ಶ್ರೀಮದ್ಭಾಗವತದ ಎಂಟನೆಯಸ್ಕಂಧದಲ್ಲಿ ಒಂದು ಅಧ್ಯಾಯ ಇದೆ. ಮನು ರಾಜ್ಯವನ್ನು ಆಳಿದರೆ ಆ ಮನುವಿಗೆ ಅನುಗ್ರಹ ಮಾಡುವುದಕ್ಕಾಗಿ, ಇಂದ್ರನಿಗೆ ಅನುಗ್ರಹ ಮಾಡುವುದಕ್ಕೋಸ್ಕರವಾಗಿ ಪರಮಾತ್ಮ ಅವತಾರ ಮಾಡಿರುತ್ತಾನೆ, ಅವರಿಗೆ ಬಂದ ಎಲ್ಲ ಬಾಧೆಗಳನ್ನು ಪರಿಹಾರ ಮಾಡಿ, ಕಷ್ಟಗಳನ್ನು ಪರಿಹಾರ ಮಾಡಿ, ಅಸುರರನ್ನು ಸಂಹಾರ ಮಾಡಿ ಸಜ್ಜನರ ರಕ್ಷಣೆಯನ್ನು ಮಾಡಿ ಧರ್ಮದ ಸ್ಥಾಪನೆಯನ್ನು ಮಾಡುವದಕ್ಕಾಗಿ ಪರಮಾತ್ಮ ಅವತಾರ ಮಾಡಿರುತ್ತಾನೆ.

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।

ಅಭ್ಯುತ್ಥಾನಮಧರ್ಮಸ್ಯ ತದಾऽತ್ಮಾನಂ ಸೃಜಾಮ್ಯಹಮ್ ॥ (4.7 ಭ ಗೀತಾ)

ಅದಕ್ಕಾಗಿ ಭಗವಂತನ ಅವತಾರ. ಮೂರು ಲೋಕಗಳನ್ನ ಆಳಿ ಆ ಅಸುರರನ್ನು ನಿಗ್ರಹ ಮಾಡಿ ದೇವತೆಗಳ ಪಕ್ಷಕ್ಕೆ ವಿಜಯವನ್ನು ತಂದುಕೊಟ್ಟು ಪರಮಾತ್ಮನ ಅನುಗ್ರಹದಿಂದ ಆ ಮೂರು ಲೋಕಗಳ ರಾಜ್ಯವನ್ನು ಆಳುವುದಕ್ಕೆ ಇಂದ್ರ ದೇವರು ಇರುತ್ತಾರೆ. ಎಲ್ಲ ಕಡೆಗೆ ತತ್ವಜ್ಞಾನದ ಪ್ರಚಾರವನ್ನು ಮಾಡುವುದಕ್ಕೆ, ವೇದ ಮೊದಲಾದ ಸಕಲ ಸಚ್ಛಾಸ್ತ್ರಗಳ ಪರಂಪರೆಯ ರಕ್ಷಣೆಗಾಗಿ, ಧರ್ಮದ ರಕ್ಷಣೆಗಾಗಿ, ಧರ್ಮದ ಭೋದನೆಗಾಗಿ ಋಷಿಗಳೆಲ್ಲ ಇರುತ್ತಾರೆ. ಹೀಗೆ ಮನು ಪುತ್ರರು, ಆ ಇಡೀ ಮನ್ವಂತರದೊಳಗೆ ಆ ಪುತ್ರಪೌತ್ರಾದಿ ಪರಂಪರೆಯಲ್ಲಿ ಆ ರಾಜ್ಯವನ್ನು ಆಳುವದಕ್ಕೋಸ್ಕರ ಮನು ಪುತ್ರರೆಲ್ಲ ಇರುತ್ತಾರೆ. ತಮ್ಮ ಸಾಧನೆಯನ್ನು ಮಾಡಿಕೊಳ್ಳುವುದರ ಜೊತೆಗೆ ಭೂಮಿಯಲ್ಲಿರುವ ಎಲ್ಲ ಮಾನವರಿಗೂ ಬೇಕಾದಂತಹ ಎಲ್ಲ ವ್ಯವಸ್ಥೆಗಳನ್ನು ಮಾಡಿಕೊಡುವುದಕ್ಕಾಗಿ, ಮಳೆ, ಬೆಳೆ ಎಲ್ಲವನ್ನೂ ಮಾಡುವುದಕ್ಕಾಗಿ ದೇವತೆಗಳೆಲ್ಲ ಅಲ್ಲಿ ಅವತಾರ ಮಾಡಿರುತ್ತಾರೆ ಎಂಬುದಾಗಿ ಅವರವರ



ಕಾರ್ಯಗಳನ್ನೆಲ್ಲ ತಿಳಿಸಿಕೊಟ್ಟಿದ್ದಾರೆ. ಅಂತಹ ಹದಿನಾಲ್ಕು ಮನ್ವಂತರಗಳಿಗೆ ಮುಖ್ಯ ನಿಯಾಮಕನಾಗಿರುವಂತಹ ಆ ಪರಮಾತ್ಮನ ವಿಶೇಷವಾದಂತಹ ಸ್ಮರಣೆಯನ್ನು ನಾವು ಮಾಡಬೇಕು ಎಂಬುದಾಗಿ ಈ ಸಂದರ್ಭದಲ್ಲಿ ನಾವು ಇಲ್ಲಿ ತಿಳಿದುಕೊಳ್ಳಬೇಕು.

ಇಷ್ಟೆಲ್ಲ ಹೆಸರುಗಳನ್ನು ಉದ್ದಾಗಿ ಹೇಳುತ್ತಾ ಹೋದಿರಿ, ಏನಾದರೂ ಕಥೆಗಳು ಚೆನ್ನಾಗಿ ಕೇಳುವ ಹಾಗಿದ್ದರೆ ಅಂತಹ ಕಥೆಗಳನ್ನು ಪ್ರವಚನದಲ್ಲಿ ಹೇಳುವುದು ಹೆಚ್ಚು ಸೂಕ್ತ, ಬರೀ ಹೆಸರುಗಳನ್ನು ಕೇಳಿದರೆ ನಮಗೆ ಏನು ಲಾಭ ಅಂತ ಹರಿವಂಶ ಪುರಾಣ ಹೇಳುತ್ತದೆ.

ಏತೇಷಾಂ ಕಲ್ಯ ಉತ್ಥಾಯ ಕೀರ್ತನಾತ್ ಸುಖಮೇಧತೇ ।
ಯಶಶ್ಚಾಪ್ನೋತಿ ಸುಮಹದಾಯುಷ್ಮಾಂಶ್ಚ ಭವೇನ್ನರಃ ॥ (7.85 ಹರಿವಂಶಪರ್ವ)

ಅತೀತಾನಾಗತಾನಾಂ ವೈ ಮಹರ್ಷೀಣಾಂ ಸದಾ ನರಃ ।
ದೇವತಾನಾಂ ಗಣಾಃ ಪ್ರೋಕ್ತಾಃ ಪಞ್ಚ ವೈ ಭರತರ್ಷಭ ॥ (7.86 ಹರಿವಂಶಪರ್ವ)

ಇತ್ಯಾದಿಯಾಗಿ ಪ್ರಾತಃಕಾಲದಲ್ಲಿ ಎದ್ದು ಹಿಂದಿನ ಮನ್ವಂತರಗಳಲ್ಲಿ ಆಗಿರುವ ಋಷಿಗಳು ದೇವತೆಗಳು ಹಾಗೂ ಈ ಮನ್ವಂತರದ ಋಷಿಗಳು ದೇವತೆಗಳು, ಮುಂದಿನ ಮನ್ವಂತರಗಳಲ್ಲಿ ಬರುವ ಋಷಿಗಳು ದೇವತೆಗಳು ಮುಖ್ಯವಾಗಿ ಭಗವದವತಾರಗಳು ಇನ್ನುಳಿದ್ದನ್ನು ತಿಗೆದುಕೊಳ್ಳಬೇಕು, ಮನು, ಮನು ಪುತ್ರರ ಹೆಸರುಗಳನ್ನು ಸ್ಮರಣೆ ಮಾಡಿದರೆ ಸಾಕು ಉತ್ತಮವಾದ ಕೀರ್ತಿ, ಉತ್ತಮವಾದ ಆಯುಷ್ಯ, ಆರೋಗ್ಯ, ಶ್ರೇಷ್ಠವಾದಂತಹ ಜ್ಞಾನ ಆ ಭಗವಂತನ ಸೇವೆಯನ್ನು ಮಾಡುವ ಸೌಭಾಗ್ಯ ಮನುಷ್ಯನಿಗೆ ಸಿಗುತ್ತೆ ಅನ್ನುವ ದೃಷ್ಟಿಯಲ್ಲಿ ಇವರೆಲ್ಲರ ಸ್ಮರಣೆಯನ್ನು ಮಾಡುತ್ತಾ ಇರಬೇಕು ಎಂಬುದಾಗಿ ಹರಿವಂಶ ನಮಗೆ ತಿಳಿಸಿಕೊಡುತ್ತದೆ.

ಈ ಮನ್ವಂತರದ ಆಳ್ವಿಕೆ ಆ ಮನುಗಳಿಗೆ ಇರುತ್ತಲ್ಲ ಅದು ಎಷ್ಟು ವರ್ಷಗಳ ಕಾಲ ಅವರು ಆಳುತ್ತಾರೆ ಅನ್ನುವುದರ ಬಗ್ಗೆ ಒಂದು ಸಾಮಾನ್ಯ ಪರಿಚಯವನ್ನು ಕೊಡುತ್ತಾರೆ. ಹದಿನೈದು ನಿಮೇಷಗಳು ಸೇರಿದರೆ ಒಂದು ಕಾಷ್ಠಾ, ಮೂವತ್ತು ಕಾಷ್ಠಾಗಳು ಸೇರಿದರೆ ಒಂದು ಕಲಾ, ಮೂವತ್ತು ಕಲಾಗಳು ಸೇರಿದರೆ ಒಂದು ಮುಹೂರ್ತ, ಮೂವತ್ತು ಮುಹೂರ್ತಗಳು ಸೇರಿದರೆ ಒಂದು ಅಹೋರಾತ್ರ. ಇಂತಹ ಅಹೋರಾತ್ರಗಳು ಹದಿನೈದಾದರೆ ಅದು ಒಂದು ಪಕ್ಷ, ಎರಡು ಪಕ್ಷಗಳಾದರೆ ಒಂದು ಮಾಸ, ಎರಡು ಮಾಸಗಳಾದರೆ ಒಂದು ಋತು, ಮೂರು ಋತುಗಳಾದರೆ ಒಂದು ಅಯನ, ಎರಡು ಅಯನಗಳಾದರೆ ಒಂದು ಸಂವತ್ಸರ. ಒಂದು ಮಾಸ ಈ ಮನುಷ್ಯ ಮಾನದ ಪ್ರಕಾರ ಒಂದು ಮಾಸ ಅಂದರೆ ಅದು ಪಿತೃಗಳ ಒಂದು ಅಹೋರಾತ್ರ. ಪಿತೃದೇವತೆಗಳಿಗೆ, ಮನುಷ್ಯರಿಗೆ ಒಂದು ತಿಂಗಳು ಕಳೆದರೆ ಪಿತೃಗಳಿಗೆ ಒಂದು ದಿನ ಕಳೆದಿರುತ್ತದೆ ಅಂದರೆ ಮನುಷ್ಯ ಮಾನದ ಸಂಪೂರ್ಣವಾದ ಒಂದು ಕೃಷ್ಣಪಕ್ಷ ಅವರಿಗೆ ಹಗಲು, ಇವರ ಕೃಷ್ಣಪಕ್ಷ ಅವರಿಗೆ ಹಗಲು, ಇವರ ಶುಕ್ಲಪಕ್ಷ ಪಿತೃಗಳಿಗೆ ರಾತ್ರಿ ಅಂತ ಅನಿಸಿಕೊಳ್ಳುತ್ತದೆ.

ಕೃಷ್ಣಪಕ್ಷಸ್ತ್ವಹಸ್ತೇಷಾಂ ಶುಕ್ಲಪಕ್ಷಸ್ತು ಶರ್ವರೀ । (8.8 ಹರಿವಂಶಪರ್ವ)

ಇನ್ನು ದೇವತೆಗಳು ಮಾನ ಹೇಗೆ ಅಂದರೆ ಮನುಷ್ಯ ಮಾನದಿಂದ ಒಂದು ವರ್ಷ ಕಳೆದರೆ, ಒಂದು ತಿಂಗಳು ಕಳೆದರೆ ಪಿತೃಗಳಿಗೆ ಅಹೋರಾತ್ರ, ಒಂದು ವರ್ಷ ಕಳೆದರೆ ದೇವತೆಗಳ ಒಂದು ದಿನ ಒಂದು ಅಹೋರಾತ್ರ ಈ ರೀತಿ

ತಿಳಿದುಕೊಳ್ಳಬೇಕು. ಇನ್ನು ಮನುಗಳ ಲೆಕ್ಕದಲ್ಲಿ ತೆಗೆದುಕೊಂಡರೆ **'ದಿವ್ಯಮರ್ಧಂ ದಶಗುಣಂ'** ಆ ದಿವ್ಯ ಮಾನದಿಂದ ದೇವ ಮಾನದಿಂದ ಹತ್ತು ವರ್ಷಗಳಾದರೆ ಅದು ಮನುವಿಗೆ ಒಂದು ಅಹೋರಾತ್ರ, ಹತ್ತು ಅಹೋರಾತ್ರಗಳಾದರೆ ಒಂದು ಪಕ್ಷ, ಹತ್ತು ಪಕ್ಷ ಅಂತಾದರೆ ಒಂದು ಮಾಸ, ಮಾಸದ ಲೆಕ್ಕ ಸ್ವಲ್ಪ ವ್ಯತ್ಯಾಸವಾಗಿದೆ ಮನುಗಳದು, ಹನ್ನೆರಡು ಮಾಸಗಳು ಕಳೆದರೆ ಆಗ ಒಂದು ಋತು, ಆ ರೀತಿಯ ಋತುಗಳು ಮೂರಾದರೆ ಅಯನ, ಎರಡು ಅಯನಗಳಾದರೆ ವತ್ಸರ ಈ ರೀತಿ ಮನುಗಳ ಕಾಲಮಾನವನ್ನು ತಿಳಿಸಿಕೊಟ್ಟಿದ್ದಾರೆ. ದೇವಮಾನದಿಂದ ನಾಲ್ಕು ಸಾವಿರ ವರ್ಷಗಳು ಕಳೆದರೆ ಆಗ ಅದಕ್ಕೆ ಒಂದು ಯುಗ, ಕೃತಯುಗ ನಾಲ್ಕು ನೂರು ವರ್ಷ ಇದು ಸಂಧಿಕಾಲ. ಆಮೇಲೆ ಮೂರು ಸಾವಿರ ವರ್ಷ ತ್ರೇತಾಯುಗ ಮುನ್ನೂರು ವರ್ಷ ಸಂಧಿಕಾಲ, ಎರಡು ಸಾವಿರ ವರ್ಷ ದ್ವಾಪರಯುಗ ಎರಡು ನೂರು ವರ್ಷ ಸಂಧಿಕಾಲ, ಕಲಿಯುಗ ಒಂದುವರೆ ಸಾವಿರ ವರ್ಷ ಸಂಧಿಕಾಲ ಒಂದು ನೂರು ವರ್ಷ ಅಂತ ಈ ರೀತಿಯಾಗಿ ಒಟ್ಟು ಹನ್ನೆರಡು ಸಾವಿರ ವರ್ಷ ಸಂಧಿಕಾಲ ಸಹಿತವಾಗಿ ಹನ್ನೆರಡು ಸಾವಿರ ವರ್ಷ ಅಂದರೆ ದೇವ ಮಾನದಿಂದ ನಾಲ್ಕು ಯುಗಗಳು ಆಗುತ್ತದೆ ಮನುಷ್ಯನಿಗೆ. ಮನುಷ್ಯ ಮಾನದಿಂದ ನಾಲ್ಕು ಯುಗ ಕಳೆಯುವುದು ಅಂದರೆ ದೇವತೆಗಳಿಗೆ ಹನ್ನೆರಡು ಸಾವಿರ ವರ್ಷ ಆಗಿರುತ್ತದೆ ಎಂಬುದಾಗಿ ಹೇಳುತ್ತಾರೆ. ಈ ನಾಲ್ಕು ಯುಗಗಳು ಸೇರಿದರೆ ಅದಕ್ಕೆ ಮಹಾಯುಗ ಅಂತ ಹೆಸರು ಇಂತಹ ಎಪ್ಪತ್ತೊಂದು ಮಹಾಯುಗಗಳು ಮೇಲೆ ಕೆಲವು ವರ್ಷಗಳ ಕಳೆದರೆ ಅದು ಒಂದು ಮನ್ವಂತರ ಎಂಬುದಾಗಿ ಹೇಳಲ್ಪಡುತ್ತದೆ ಇಂತಹ ಹದಿನಾಲ್ಕು ಮನ್ವಂತರಗಳು ಕಳೆದರೆ ಅದು ಬ್ರಹ್ಮ ದೇವರ ಒಂದು ಹಗಲು ಅಷ್ಟೇ ಒಂದು ರಾತ್ರಿ ಎಂಬುದಾಗಿ ತಿಳಿಸಿಕೊಡುತ್ತಾರೆ. ಎಷ್ಟು ವರ್ಷಗಳು ಆಗುತ್ತದೆ ಅಂದರೆ ಹದಿನಾಲ್ಕು ಮನ್ವಂತರಗಳು ಅಂದರೆ ಒಂದು ಸಹಸ್ರ ಮಹಾಯುಗಗಳು ಕಳೆದರೆ ಅದು ಬ್ರಹ್ಮ ದೇವರ ಒಂದು ಹಗಲು ಅಷ್ಟೇ ಬ್ರಹ್ಮ ದೇವರ ಒಂದು ರಾತ್ರಿ ಈ ರೀತಿ ಆ ಹಗಲು ರಾತ್ರಿಗಳ ಕಲ್ಪನೆಯನ್ನು ನಮಗೆ ತಿಳಿಸಿಕೊಟ್ಟಿದ್ದಾರೆ. ಇಲ್ಲಿ ಒಟ್ಟು ಬ್ರಹ್ಮ ದೇವರ ಮಾನದಿಂದ ಒಂದು ವರ್ಷ ಆಗಬೇಕು ಅಂತಾದರೆ ಅದಕ್ಕೆ ಹೇಳುತ್ತಾರೆ ಹತ್ತು ಸಾವಿರದ ಎಂಭತ್ತು ಮನುಗಳು ಕಳೆದರೆ ಆಗ ಬ್ರಹ್ಮ ದೇವರ ಒಂದು ಸಂವತ್ಸರ ಅಂತ ಆಗುತ್ತದೆ ಸಂಪೂರ್ಣವಾಗಿ. ಈ ರೀತಿಯ ಆ ಬ್ರಹ್ಮ ದೇವರ ಮಾನ ಅಂತ ಅನ್ನುವುದು ಉಂಟು. ಪ್ರತಿ ಮನ್ವಂತರಕ್ಕೂ ಒಂದು ಅಲ್ಪವಾದ ಪ್ರಲಯವಾಗುತ್ತದೆ ಚಾಕ್ಷುಷ ಮನ್ವಂತರದ ಕೊನೆಗೆ ಪ್ರಲಯವಾಗಿ ಅದೇ ಸಂದರ್ಭದಲ್ಲಿ ವೈವಸ್ವತ ಮನುವಿಗೆ ಮತ್ಸ್ಯರೂಪಿಯಾದ ಪರಮಾತ್ಮ ಬಂದು ಉಪದೇಶ ಮಾಡಿದ್ದು ಅನ್ನುವುದನ್ನು ಕೇಳುತ್ತೀರಿ ಅದು ಸಣ್ಣದಾದ ಪ್ರಲಯ.

ಸಶೇಷಾಸ್ತತ್ರ ತ್ರಿಷ್ಠನ್ತಿ ದೇವಾಃ ಸಪ್ತರ್ಷಿಭಿಃ ಸಹ । (8.28 ಹರಿವಂಶಪರ್ವ)

ದೇವತೆಗಳು ಇರುತ್ತಾರೆ, ಋಷಿಗಳು ಇರುತ್ತಾರೆ ಪ್ರತಿವಾದಿಗಳು ಇರುತ್ತವೆ ಕೇವಲ ಪೃಥ್ವಿಯಲ್ಲಿ ಇರತಕ್ಕಂತಹ ಜನರಿಗೆ ಲಯವಾಗುತ್ತೆ ಮಾತ್ರ ಅಷ್ಟೇ ಆದರೆ ಬ್ರಹ್ಮ ದೇವರ ಒಂದು ದಿನ ಕಳೆದಾಗ ಮೂರು ಲೋಕಗಳ ಲಯವಾಗುತ್ತದೆ, ಸಮಗ್ರವಾದಂತಹ ಬ್ರಹ್ಮ ದೇವರ ನೂರು ವರ್ಷದ ಆಯುಷ್ಯ ಮುಗಿದಮೇಲೆ ಆಗ ಮಹಾ ಪ್ರಲಯವಾಗುತ್ತದೆ ಎಂಬುದಾಗಿ ಮೂರು ತರಹದ ಪ್ರಲಯವನ್ನು ನೀವು ತಿಳಿದುಕೊಳ್ಳಬೇಕು ಅಂತ ತಿಳಿಸಿಕೊಟ್ಟಿದ್ದಾರೆ. ಇಂತಹ ಬ್ರಹ್ಮ ದೇವರ ಸಂಪೂರ್ಣವಾದ ಒಂದು ಆಯುಷ್ಯ ಇದು ಪರಮಾತ್ಮನಿಗೆ ಒಂದು ನಿಮೇಷ ಮಾತ್ರ ಅಂತ ತಿಳಿಸಿಕೊಟ್ಟಿದ್ದಾರೆ. ಈ ತರಹದ ಆ ಭಗವಂತನ ಅದ್ಭುತವಾದ ಆ ಸೃಷ್ಟಿ.

ಈದೃಶಾನಂತಸಂಖ್ಯಾನಾಂ ಶಿವಾನಾಂ ಬ್ರಹ್ಮಣಾಮಪಿ ।
ರಮಾಯಾ ಅಪಿ ಯದ್ವೀಕ್ಷಾಂ ವಿನಾ ನ ಚಲಿತುಂ ಬಲಂ ॥ (22.270 ಮಭಾತಾನಿರ್ಣಯ)



ಆ ಪರಮಾತ್ಮನ ಕಾಲದಲ್ಲಿ ಅನಂತ ಬ್ರಹ್ಮರು, ಅನಂತ ರುದ್ರರು ಆಗಿ ಹೋಗುತ್ತಾರೆ ಕಣ್ಣು ಮುಚ್ಚಿ ತೆರೆಯುವುದರೊಳಗೆ ಒಬ್ಬ ಬ್ರಹ್ಮನ ಆಯುಷ್ಯ ಮುಗಿಯಿತು. ಈ ತರಹ ಅನಂತ ಬ್ರಹ್ಮರು, ಅನಂತ ರುದ್ರರು, ಅನಂತಾನಂತ ದೇವತೆಗಳು ಯಾವ ಪರಮಾತ್ಮನ ಉಪಾಸನೆಯನ್ನು ಮಾಡುತ್ತಾರೆ ಅಂತಹ ಭಗವಂತನ ಮಹಿಮೆ ಎಷ್ಟು ಅದ್ಭುತ, ಅವನ ಶಕ್ತಿ ಎಷ್ಟು ಅದ್ಭುತ ಇಷ್ಟೆಲ್ಲ ಜನರ ಸೃಷ್ಟಿ ಸ್ಥಿತ್ಯಾದಿಗಳನ್ನು ಮಾಡುತ್ತಾನೆ ಅನ್ನುವುದಾಗಿ ನಾವು ಅರ್ಥ ಮಾಡಿಕೊಳ್ಳಬೇಕು.

ಮುಂದೆ ಶ್ರೀಕೃಷ್ಣ ಪರಮಾತ್ಮನ ಚರಿತ್ರೆಯನ್ನು ಹೇಳಬೇಕಾಗಿದೆ. ವೃಷ್ಣೀ ವಂಶವನ್ನು ನಿರೂಪಣೆ ಮಾಡುವುದಕ್ಕೋಸ್ಕರ ಹರಿವಂಶದ ಪ್ರಾರಂಭ ಆದದ್ದು, ಅದಕ್ಕೆ ಪೂರ್ವಭಾವಿಯಾಗಿ ಆ ವೈವಸ್ವತ ಮನ್ವಂತರ ಅದರ ವಿಶೇಷವಾದ ವರ್ಣನೆ ಆಗಬೇಕು. ಪೂರ್ವಪೀಠಿಕೆಯ ರೂಪದಲ್ಲಿ ಹದಿನಾಲ್ಕು ಮನ್ವಂತರಗಳ ವರ್ಣನೆ ಮಾಡಿದರು ವಿಶೇಷವಾಗಿ ವೈವಸ್ವತ ಮನ್ವಂತರದ ವರ್ಣನೆ, ಆ ವೈವಸ್ವತ ಮನುವಿನ ಉತ್ಪತ್ತಿ ಈ ಎಲ್ಲ ಕಥೆಯನ್ನು ಹೇಳಬೇಕು ಅನ್ನುವುದಕ್ಕೋಸ್ಕರ ವೈಶಂಪಾಯನರು ಹೇಳುತ್ತಾರೆ. ದಕ್ಷಪ್ರಜಾಪತಿಯ ಮಗಳಾದ ಅದಿತಿಯಲ್ಲಿ ಕಶ್ಯಪ ಋಷಿಗಳಿಂದ ವಿವಸ್ವಾನ್ ಸೂರ್ಯ ಜನಿಸುತ್ತಾನೆ ಆದ್ದರಿಂದಲೇ ಅವನಿಗೆ ಆದಿತ್ಯ ಅದಿತಿ ಪುತ್ರ ಆದಿತ್ಯನಾಗಿ ಸೂರ್ಯ ಹುಟ್ಟುತ್ತಾನೆ. **'ಆದಾನಾದ್ ಆಯುಷಾಂ ಚೈವ'** ಅಂತ ಶ್ರೀಮದಾಚಾರ್ಯರು ವ್ಯಾಖ್ಯಾನ ಮಾಡುತ್ತಾರೆ. ಎಲ್ಲರ ಆಯುಷ್ಯವನ್ನು ಒಂದೊಂದು ದಿನ ಕಳೆದಂತೆ ಆಯುಷ್ಯವನ್ನು ಹರಣ ಮಾಡುತ್ತಾ ಹೋಗುತ್ತಾನೆ, ಆದಾನಾ ಮಾಡುತ್ತಾನೆ ಆಯುಷ್ಯವನ್ನು ಅನ್ನುವುದಕ್ಕಾಗಿ ಅವನಿಗೆ ಆದಿತ್ಯ ಅಂತ ಕರೀತಾರೆ. ಜೊತೆಗೆ ಭೂಮಿಯಲ್ಲಿ ಇರುವಂತಹ ನೀರನ್ನು ಮಳೆಯ ರೂಪದಲ್ಲಿ ಮತ್ತೆ ನಮಗೆ ಕೊಡಬೇಕು ಅಂತ ಮೇಘದಲ್ಲಿ ಅದನ್ನು ಇಡುವುದಕ್ಕೋಸ್ಕರ ಆದಾನಾ ಮಾಡುತ್ತಾನೆ ಆದ್ದರಿಂದಲೂ ಕೂಡ ಸೂರ್ಯನಿಗೆ ಆದಿತ್ಯ ಅಂತ ಕರೀತಾರೆ. ಅದಿತಿ ಪುತ್ರನಾದಿದ್ದರಿಂದಲೂ ಆದಿತ್ಯ ಎಂಬುದಾಗಿ ಕರೀತಾರೆ ಅಂತಹ ಆದಿತ್ಯನಾಮಕನಾದ ಪರಮಾತ್ಮನ ಸನ್ನಿಧಾನಕ್ಕೆ ಪಾತ್ರನಾದ ಆದಿತ್ಯ, ಕಶ್ಯಪರಿಂದ ಅದಿತಿ ದೇವಿಯಲ್ಲಿ ಜನಿಸಿದ. ಅವನಿಗೆ ಸಂಜ್ಞಾ ಎಂಬ ತ್ವಷ್ಟುವಿನ ಮಗಳಾದ ಸಂಜ್ಞಾ ದೇವಿಯನ್ನು ಕೊಟ್ಟು ಮದುವೆ ಮಾಡುತ್ತಾರೆ ಅವಳಿಗೆ ಇನ್ನೊಂದು ಹೆಸರು ಸುರೇಣು ಅಂತ ಸಂಜ್ಞಾ ಸುರೇಣು ಎಂಬ ಹೆಸರಿನ ತ್ವಷ್ಟ ಪುತ್ರಿಯನ್ನು ಆದಿತ್ಯನಿಗೆ ಕೊಟ್ಟು ವಿವಾಹ ಮಾಡುತ್ತಾರೆ. **'ಸಾ ವೈ ಭಾರ್ಯಾ ಭಗವತೀ'**[1] ಸೂರ್ಯನಿಗೆ ಮಾರ್ತಂಡ ಅಂತ ಹೆಸರು.

ನ ಖಲ್ವಯಂ ಮೃತೋಽಣ್ಡಸ್ಥ ಇತಿ ಸ್ನೇಹಾದಭಾಷತ । (9.5 ಹರಿವಂಶಪರ್ವ)

ಅಂತ. ಒಂದು ಸಲ ಅದಿತಿ ದೇವಿಗೆ ಭಿಕ್ಷೆಯನ್ನು ಬೇಡುವುದಕ್ಕೋಸ್ಕರ ಬುಧ ಬರುತ್ತಾನೆ ಭಿಕ್ಷೆ ಹಾಕಬೇಕು ಅಂತ ಅದಿತಿ ದೇವಿ ಗರ್ಭಿಣಿ ಇರುತ್ತಾಳೆ ಹೊಟ್ಟೆಯಲ್ಲಿ ಸೂರ್ಯ ಇದ್ದಾನೆ. ಸೂರ್ಯನನ್ನ ಗರ್ಭದಲ್ಲಿ ಧಾರಣೆ ಮಾಡಿದ ಅದಿತಿ ದೇವಿ ಭಿಕ್ಷೆ ಬೇಡುವುದಕ್ಕೆ ಬಂದ ಬುಧನಿಗೆ ಭಿಕ್ಷೆ ಹಾಕುವುದಕ್ಕೆ ಸ್ವಲ್ಪ ತಡವಾಗುತ್ತದೆ, ಹಾಕುವುದಿಲ್ಲ ಅಂತ ಹೇಳುವುದಿಲ್ಲ. ಗರ್ಭಿಣಿ ಆದದ್ದರಿಂದ ನಿಧಾನವಾಗಿ ಬಂದು ಭಿಕ್ಷೆಯನ್ನು ಹಾಕುವ ಪ್ರಸಂಗ ಇದೆ, ಸ್ವಲ್ಪ ತಡ ಆದದ್ದಕ್ಕೆ ಆ ಬುಧನಿಗೆ ಕೋಪ ಬರುತ್ತದೆ. ಕೋಪ ಬಂದು ಅವನು ಶಾಪ ಕೊಡುತ್ತಾನೆ **'ತವಗರ್ಭೋ ಮ್ರಿಯತಾಂ'** ನಿನ್ನ ಗರ್ಭ ಇದು ಒಳಗೆ ಮೃತವಾಗಿ ಹೋಗಲಿ ಅಂತ ಶಾಪ ಕೊಡುತ್ತಾನೆ ಅವಳಿಗೆ ಬಹಳ ಮನಸ್ಸಿಗೆ ನೋವಾಗುತ್ತದೆ. ಏನು ಹೀಗೆ ಶಾಪ ಕೊಟ್ಟುಬಿಟ್ಟನಲ್ಲ ನಾನೇನು ಭಿಕ್ಷೆ ಹಾಕುವುದಿಲ್ಲ ಅಂತ ಅಂದಿರಲಿಲ್ಲ ಭಿಕ್ಷೆ ಹಾಕುವುದಕ್ಕೆ ಸ್ವಲ್ಪ ವಿಳಂಬವಾದ ಮಾತ್ರಕ್ಕೆ ನನಗೆ ಶಾಪವೇ ಅಂತ ಮನಸ್ಸಿಗೆ ನೊಂದುಕೊಂಡಾಗ ಕಶ್ಯಪರು ಬಂದು

1. 9.2 ಹರಿವಂಶಪರ್ವ

ಅನುಗ್ರಹ ಮಾಡುತ್ತಾರೆ. ನೀನೇನು ಚಿಂತೆ ಮಾಡಬೇಡ ಏನೂ ಆಗುವುದಿಲ್ಲ ಅದು ಸಾಯುವುದಿಲ್ಲ ಗರ್ಭ, ಸುಖವಾಗಿ ಇರುತ್ತದೆ ಚಿಂತೆ ಮಾಡಬೇಡ ಅಂತ ಹೇಳುತ್ತಾರೆ. ಆಗ ಕಶ್ಯಪರು ತಮ್ಮದೇ ಆದಂತಹ ಒಂದು ವಿಶಿಷ್ಟವಾದ ಶಕ್ತಿಯಿಂದ ಸಾಮರ್ಥ್ಯದಿಂದ ಆ ಬುಧ ನೀಡಿದ ಶಾಪವನ್ನು ಪರಿಹಾರ ಮಾಡಿ ಇವಳಿಗೆ ವಿಶೇಷವಾಗಿ ಅದಿತಿ ದೇವಿಗೆ ಅನುಗ್ರಹ ಮಾಡುತ್ತಾರೆ ಸುಖವಾಗಿ ಈ ಗರ್ಭ ಬೆಳೆಯುತ್ತೆ, ನಿನಗೆ ಸುಖ ಪ್ರಸವವಾಗುತ್ತೆ, ಯಾವ ಚಿಂತೆಯನ್ನು ಮಾಡಬೇಡ ಅಂತ ಹೇಳುತ್ತಾರೆ ಕಶ್ಯಪರು. ಆದರೆ ಇವಳು ತಿಳಿದದ್ದು ಇವನ ಶಾಪದ ಪ್ರಕಾರ ನನ್ನ ಒಳಗಿನ ಅಂಡ ಮೃತವಾಯಿತು ಅಂತ ಭಾವಿಸುತ್ತಾಳೆ ಮೃತವಾಗಿರುವುದಿಲ್ಲ, ಕಶ್ಯಪರ ಅನುಗ್ರಹದಿಂದ ಅದು ಮೃತವಾಗುವುದಿಲ್ಲ, ಆದರೆ ಮೃತವಾಗಿದೆ ಅಂತ ಅಂದುಕೊಳ್ಳುತ್ತಾಳೆ. ಕಶ್ಯಪರು ಹೇಳುತ್ತಾರೆ

ನ ಖಲ್ವಯಂ ಮೃತೋಽಣ್ಡಸ್ಥ ಇತಿ ಸ್ನೇಹಾದಭಾಷತ । (9.5 ಹರಿವಂಶಪರ್ವ)

ಆದರೆ ಇವಳ ಅಜ್ಞಾನದಿಂದ ಅದು ಮೃತಾಂಡ ಅಂತ ಅನಿಸಿರುತ್ತದೆ ಹೀಗಾಗಿ ಮುಂದೆ ಹುಟ್ಟಿ ಬಂದ ಸೂರ್ಯನಿಗೆ, ಮೃತವಾದ ಅಂಡದಿಂದ ಬಂದ ಅನ್ನುವುದಕ್ಕೆ ಅವನಿಗೆ ಮಾರ್ತಂಡ ಅಂತ ಮೃತವಾದ ಅಂಡದಿಂದ ಬಂದವನಲ್ಲ, ಮೃತವಾದ ಅಂಡ ಅಂತ ಯಾವುದರ ಬಗ್ಗೆ ತಿಳುವಳಿಕೆ ಬಂದಿತ್ತೋ ಅದಿತಿಗೆ ಅಂತಹ ಅಂಡದಿಂದ ಪ್ರಾದುರ್ಭೂತನಾದ, ಹುಟ್ಟಿದ ಅನ್ನುವುದಕ್ಕೋಸ್ಕರ ಸೂರ್ಯನಿಗೆ ಮಾರ್ತಂಡ ಎಂಬುದಾಗಿ ಹೆಸರು ಬಂದಿದೆ.

ಅಜ್ಞಾನಾತ್ ಕಶ್ಯಪಸ್ತಸ್ಮಾನ್ಮಾರ್ತಾಣ್ಡ ಇತಿ ಚೋಚ್ಯತೇ । (9.5 ಹರಿವಂಶಪರ್ವ)

ಇಂತಹ ಅತ್ಯದ್ಭುತವಾದಂತಹ ತೇಜಸ್ಸು, ಕಶ್ಯಪರ ವಿಶೇಷವಾದ ಅನುಗ್ರಹದಿಂದ ಶಾಪ ತಾಕದಂತೆ ಸಾಯುವ ಪ್ರಸಂಗ ಇದ್ದರೂ ಸಾಯದಂತೆ ಹುಟ್ಟಿ ಬಂದು ತೇಜೋಮಯನಾಗಿ ಜಗತ್ತಿನಲ್ಲಿ ಪ್ರಕಾಶಮಾನವಾಗಿ ಸೂರ್ಯ ಎಲ್ಲ ಕಡೆಗೆ ಶೋಭಾಯಮಾನನಾಗಿ ಇದ್ದಾನೆ. ಇಂತಹ ಸೂರ್ಯ ತನ್ನ ಮಡದಿಯಾದಂತಹ ಸಂಜ್ಞಾ ದೇವಿಯಲ್ಲಿ ವೈವಸ್ವತ ಮನು ಅರ್ಥಾತ್ ಶ್ರಾದ್ಧದೇವ ಅಂತ ಅವನಿಗೆ ಹೆಸರು ವಿವಸ್ವಾನ್ ಸೂರ್ಯ, ಅವನ ಮಗ ಅನ್ನುವುದಕ್ಕೆ ವೈವಸ್ವತ ಅಂತ ಹೆಸರು ಆದರೆ ಅವನ ನಿಜವಾದ ಹೆಸರು ಶ್ರಾದ್ಧದೇವ ಅಂತ. ಶ್ರಾದ್ಧದೇವ ಎಂಬಂತಹ ಒಬ್ಬ ಮನುವನ್ನು ಹಾಗೂ ಯಮ ದೇವರನ್ನು ಮತ್ತು ಯಮುನಾ ದೇವಿಯನ್ನು ಇಬ್ಬರು ಕನ್ಯೆಯರು, ಒಬ್ಬ ಮನು ಇಷ್ಟು ಜನರನ್ನು ಸೂರ್ಯ ಸಂಜ್ಞಾ ದೇವಿಯಲ್ಲಿ ಅಥವಾ ಸುರೇಣು ದೇವಿಯಲ್ಲಿ ಪಡೀತಾನೆ.

ಆ ಸಂಜ್ಞಾ ದೇವಿ ಸೂರ್ಯನ ಜೊತೆಗೆ ಸಂಸಾರ ಮಾಡುವುದಕ್ಕೆ ಬಹಳ ಕಷ್ಟಪಡುತ್ತಾಳೆ ಭಾರೀ ಪ್ರಖರವಾದ ತೇಜಸ್ಸು, ಅತ್ಯಂತ ಪ್ರಖರವಾದ ಆ ತೇಜಸ್ಸು, ಆ ಉಗ್ರವಾದ ರೂಪ ಹೇಗೆ ಆ ತಾಪವನ್ನು ಸಹನೆ ಮಾಡಿಕೊಳ್ಳುವುದು ಅನ್ನುವುದೇ ಅವಳಿಗೆ ಗೊತ್ತಾಗುವುದಿಲ್ಲ ಅಷ್ಟು ಕಷ್ಟವಾಗುತ್ತದೆ. ಹೇಗೋ ಸಂಸಾರವನ್ನು ಮಾಡುತ್ತಾಳೆ ಮೂರು ಜನ ಮಕ್ಕಳನ್ನು ಪಡೆಯುತ್ತಾಳೆ ಶ್ರಾದ್ಧದೇವ, ಯಮ, ಯಮುನಾ. ಇನ್ನು ಮುಂದೆ ಅವನ ಜೊತೆಗೆ ಸಂಸಾರ ಮಾಡುವುದು ಬಹಳ ಕಷ್ಟ ಅಂತ ನಾನು ತವರು ಮನೆಗೆ ಹೋಗುತ್ತೇನೆ ಅಂತ ಹೊರಟು ಬಿಡುತ್ತಾಳೆ ಸಂಜ್ಞಾ ದೇವಿ ತ್ವಷ್ಟುವಿನ ಮನೆಗೆ. ಆದರೆ ಹೋಗುವಾಗ ತವರು ಮನೆಗೆ ಹೋಗಿದ್ದೇನೆ ಅಂತ ಗೊತ್ತಾದರೆ ಹುಡುಕಿಕೊಂಡು ಬರುವುದಕ್ಕೆ ಏನು ಕಷ್ಟ ಇಲ್ಲಲ್ಲ ಸೂರ್ಯ ಅವನಿಗೆ ಎಲ್ಲವೂ ಕಾಣಿಸುತ್ತದೆ. ಹೀಗಾಗಿ ಆ ಸೂರ್ಯನಿಗೆ ನಾನೆಲ್ಲಿ ಹೋಗಿದ್ದೇನೆ ಅಂತ ಗೊತ್ತಾಗಿ ಮತ್ತೆ ಬೇಗ ಕರೆಸಿಕೊಳ್ಳಬಹುದು ಅದಕ್ಕಾಗಿ ನಾನು ಹೋಗಿದ್ದೇನೆ ಅಂತ ಅನ್ನಿಸಲೇಬಾರದು ಸೂರ್ಯನಿಗೆ ಹಾಗೆ ನನ್ನ ಇನ್ನೊಂದು ಪ್ರತಿರೂಪವನ್ನು ಇಲ್ಲಿ ಇಟ್ಟಿ ಹೋಗುತ್ತೇನೆ ಅಂತ ಛಾಯಾ ತನ್ನದೇ ಆದಂತಹ ಒಂದು ಛಾಯಾ ಅನ್ನುವ ಒಂದು ರೂಪವನ್ನ ತನ್ನ ಒಂದು ಪಾತಿವ್ರತ್ಯದ ಸಾಮರ್ಥ್ಯದಿಂದ ಛಾಯಾ ಅನ್ನುವ ರೂಪವನ್ನು ಸೃಷ್ಟಿ ಮಾಡಿ ಅಲ್ಲಿ ಇಡುತ್ತಾಳೆ.



ಅಸಹನ್ತೀ ಚ ಸ್ವಾಂ ಛಾಯಾಂ ಸವರ್ಣಾಂ ನಿರ್ಮಮೇ ತತಃ । (9.9 ಹರಿವಂಶಪರ್ವ)

ಆ ಛಾಯಾಳನ್ನು ನಿರ್ಮಾಣ ಮಾಡಿ ಆ ಛಾಯಾ ಕೇಳುತ್ತಾಳೆ ನನ್ನನ್ನು ಸೃಷ್ಟಿ ಮಾಡಿದೆಯಲ್ಲ ಏನು ಕೆಲಸ ನನಗೆ ಯಾಕೆ ಸೃಷ್ಟಿ ಮಾಡಿದಿ ನೀನು ಅಂತ ಕೇಳುತ್ತಾಳೆ ಅವಳು. ಕೇಳಿದರೆ ಸಂಜ್ಞಾ ಹೇಳುತ್ತಾಳೆ ನಾನು ನನ್ನ ತವರು ಮನೆಗೆ ಹೋಗಬೇಕಾಗಿದೆ, ನನ್ನ ಪರವಾಗಿ ನೀನು ಈ ಸೂರ್ಯನ ಜೊತೆಗೆ ಸಂಸಾರವನ್ನು ಮಾಡಬೇಕು, ನನಗೆ ಈಗಾಗಲೇ ಮಕ್ಕಳಾಗಿದ್ದಾರೆ ಆ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳಬೇಕು ನೀನು. ಈ ಇಬ್ಬರು ಗಂಡುಮಕ್ಕಳು ಯಮ ಮತ್ತು ಶ್ರಾದ್ಧದೇವ, ಯಮುನಾ ಒಬ್ಬ ಹೆಣ್ಣು ಈ ಮೂರು ಜನರನ್ನು ಚೆನ್ನಾಗಿ ನೀನು ನೋಡಿಕೊಳ್ಳಬೇಕು ಅಂತ ಸಂಜ್ಞಾ ದೇವಿ ಛಾಯಾ ದೇವಿಗೆ ಹೇಳುತ್ತಾಳೆ. ಛಾಯಾ ದೇವಿ ನಿನಗೇನಾಗಿದೆಯೋ ಆ ಪರಿಸ್ಥಿತಿ ನನಗೂ ಬರುವ ಸಾಧ್ಯತೆ ಇದೆ ಆದರೆ ನೀನು ನನ್ನನ್ನು ಹುಟ್ಟಿಸಿದ್ದೀಯಾ ಅಂತ ಅನ್ನುವುದಕ್ಕೋಸ್ಕರ ನಿನ್ನ ಮಾತಿಗೆ ಬೆಲೆಕೊಟ್ಟು ನಾನಿರುತ್ತೇನೆ. ಒಂದು ಕರಾರು ಯಾವಾಗ ಸೂರ್ಯ ನನ್ನ ಕೂದಲು ಹಿಡಿದು ಸಿಟ್ಟಿನಿಂದ ಶಾಪ ಕೊಡುತ್ತಾನೋ ಆ ಕ್ಷಣಕ್ಕೆ ನಾನು ಬಿಟ್ಟು ಹೋಗುತ್ತೇನೆ ಅಲ್ಲಿಯವರೆಗೆ ನಾನು ಇರುತ್ತೇನೆ. ಬಿಟ್ಟು ಹೋಗುತ್ತೇನೆ ಅಂತ ಅನ್ನುವುದಕ್ಕಿಂತಲೂ ಅವಳು ಹೇಳುವುದು ಬಿಟ್ಟು ಹೋಗುವುದೇ ಇದ್ದರೂ, ಏನು ಸತ್ಯವಾದ ವಿಷಯ ಅನ್ನುವುದನ್ನು ಹೇಳಿಬಿಡುತ್ತೇನೆ. ನಾನೇ ಸಂಜ್ಞಾ ಅಂತ ಹೇಳಿಕೊಂಡು ಇಲ್ಲಿ ಇರಬೇಕು ಅಂತ ನಿನ್ನ ಹೆಸರಿನಿಂದ, ಅವಳ ಹೆಸರು ಸಂಜ್ಞಾ ಆ ಸಂಜ್ಞಾ ಅನ್ನುವ ಸಂಜ್ಞಾದಿಂದಲೇ ಇಲ್ಲಿ ಇರಬೇಕು ಅಂತ ನೀನು ಹೇಳುತ್ತಾ ಇದ್ದೀ ಇರುತ್ತೇನೆ. ಇವರು ನನ್ನ ಮಕ್ಕಳು ಅಂತ ಹೇಳಿಕೊಳ್ಳುತ್ತೇನೆ ಆದರೆ ಯಾವಾಗ ಶಾಪ ಕೊಡುವುದಕ್ಕೆ ಸೂರ್ಯ ಮುಂದಾಗುತ್ತಾನೆ, ನನ್ನ ಕೂದಲು ಹಿಡಿದು ಸಿಟ್ಟಿನಿಂದ ನನ್ನನ್ನು ಬೈಯುತ್ತಾನೆ ಅವತ್ತು ಮಾತ್ರ ಸತ್ಯ ಸಂಗತಿ ಏನು ಅಂತ ನಾನು ಹೇಳುತ್ತೇನೆ. ನಾನು ಛಾಯ ನಾನು ಸಂಜ್ಞಾ ಅಲ್ಲ, ಸಂಜ್ಞಾ ತವರು ಮನೆಗೆ ಹೋಗಿದ್ದಾಳೆ ಸಂಜ್ಞಾನ ಮಕ್ಕಳು ಇವರೆಲ್ಲಾ ಇಷ್ಟು ಸ್ಪಷ್ಟವಾಗಿ ನಾನು ಹೇಳಿಬಿಡುತ್ತೇನೆ. ಅಲ್ಲಿಯವರೆಗೂ ಮಾತ್ರ ನಾನು ಸಹನೆ ಮಾಡಿಕೊಂಡು ಇರುತ್ತೇನೆ ಆಯಿತು ಆ ಪ್ರಸಂಗ ಏನು ಬರಲಿಕ್ಕಿಲ್ಲ ಅಲ್ಲಿಯವರೆಗೂ ಅಂತೂ ಮಾತ್ರ ನೀನು ಸಹನೆ ಮಾಡಿಕೊಂಡು ಇರು ಸಂಜ್ಞಾ ದೇವಿ ಹೇಳಿದ್ದೇ ತಡ ತಾನು ತವರು ಮನೆಗೆ ತ್ವಷ್ಟುವಿನ ಹತ್ತಿರ ಹೊರಟು ಹೋಗಿದ್ದಾಳೆ. ಇಲ್ಲಿ ಛಾಯಾ ದೇವಿ ಅತ್ಯಂತ ಭಕ್ತಿ, ಶ್ರದ್ಧೆಗಳಿಂದ, ಪಾತಿವ್ರತ್ಯದಿಂದ ಸೂರ್ಯ ದೇವರ ಸೇವೆಯನ್ನು ಮಾಡುತ್ತಾ ಅಲ್ಲಿದ್ದಾಳೆ.

ಈ ಕಡೆಗೆ ತ್ವಷ್ಟುವಿನ ಮನೆಗೆ ಬಂದಳು ತಂದೆಯ ಮನೆಗೆ ಪ್ರೀತಿಯಿಂದ ಮಗಳನ್ನೇನೋ ಸ್ವಾಗತ ಮಾಡಿದ, ಕೂಡಿಸಿದ, ಆದರ, ಆತಿಥ್ಯ, ಉಪಚಾರ ಎಲ್ಲಾ ಆಯಿತು ನಡಿ ಗಂಡನ ಮನೆಗೆ ಅಂದ ತ್ವಷ್ಟು. ಇವತ್ತಿನ ಕಾಲದ ತವರು ಮನೆ ಇದ್ದ ಹಾಗಲ್ಲ, ಏನೋ ಒಂದು ಸಣ್ಣ ಕಾರಣಕ್ಕಾಗಿ ಗಂಡನ ಮನೆಯಲ್ಲಿ ಜಗಳ ಆಡಿಕೊಂಡು ಬಂದರೆ ಹೌದಾ ನಿನಗೆ ಬಯ್ದರಾ, ಕೂಡು ಅಂದರಾ ನಿನಗೆ, ನಿಲ್ಲು ಅಂದರಾ ಅಂತ ಇಷ್ಟೇ ಕಾರಣಕ್ಕೋಸ್ಕರ ಅವರ ಮೇಲೆ ಕೇಸ್ ಸಾಕೋಣ ಏನು ಚಿಂತೆ ಮಾಡಬೇಡ ನೀನು ಅಲ್ಲಿ ಹೋಗೋದೇ ಕಾರಣ ಇಲ್ಲ, ಇಲ್ಲಿಯೇ ಇದ್ದು ಬಿಡು ಅಂತ ಹೇಳಿ ಪೋಷಣೆ ಮಾಡುತ್ತಾರೆ. ತಿಳುವಳಿಕೆ ಹೇಳಬೇಕು ಬುದ್ಧಿವಾದ ಹೇಳಬೇಕು ಆದಷ್ಟು ಎಲ್ಲರೂ ಪ್ರೀತಿಯಿಂದ ಸ್ನೇಹದಿಂದ ಕೂಡಿ ಇರುವ ಹಾಗೆ ಪ್ರಯತ್ನ ಮಾಡಬೇಕೇ ಹೊರತು ಜಗಳ ಆಡುವ ಹಾಗೆ ಜಗಳವನ್ನು ಬೆಳೆಸುವ ಹಾಗೆ ಪ್ರಯತ್ನ ಮಾಡಬಾರದು. ಇವತ್ತಿನ ಕಾಲದ ಜನರಲ್ಲಿ ಎರಡೂ ಪಕ್ಷದಲ್ಲಿಯೂ ಅದು ಬಹಳ ನ್ಯೂನತೆ ಕಾಣಿಸುತ್ತಾ ಇದೆ, ಲೋಪ ಕಾಣಿಸುತ್ತಾ ಇದೆ. ಪ್ರಾಚೀನ ಕಾಲದಲ್ಲಿ ತ್ವಷ್ಟ ಒಬ್ಬ ಹೆಣ್ಣಿನ ತಂದೆಯಾಗಿ ಹೇಳುತ್ತಾನೆ ನಿನಗೇನೇ ಕಷ್ಟ ಆದರೂ ಆ ಕಷ್ಟದ ಪರಿಹಾರ ಮಾಡುವುದಕ್ಕೆ ಬೇಕಾದರೆ ಎಲ್ಲರೂ ಸೇರಿ ಪ್ರಯತ್ನ ಮಾಡೋಣ, ನಿನಗೆ ತೊಂದರೆ ಆಗದೇ ಇದ್ದ ಹಾಗೆ ನೋಡಿಕೊಳ್ಳಬೇಕು ಅಂದರೆ ನಾವೆಲ್ಲ ಸೇರಿ ಪ್ರಯತ್ನ ಮಾಡೋಣ. ಅದನ್ನು ಬಂದು ನನಗೆ ಹೇಳು ನನಗೆ ಇಂತಹ ಸಮಸ್ಯೆ ಆಗಿದೆ ಅದಕ್ಕೆ ಏನಾದರೂ ಉಪಾಯ ಹೇಳಿ

ಅಂತ ಅದು ಬಿಟ್ಟು ನಾನು ಗಂಡನ ಮನೆಗೆ ಹೋಗೋದಿಲ್ಲ ಅನ್ನುವುದು ಸರಿಯಲ್ಲ. ಇದು ವೈದಿಕ ಧರ್ಮ ಸನಾತನ ಧರ್ಮ ಒಂದು ಸಲ ಮದುವೆಯಾದ ಮೇಲೆ ಪ್ರೀತಿಯಿಂದ ಕೊನೆಯವರೆಗೆ ಗಂಡನ ಜೊತೆಗೆ ಇರಬೇಕಾದದ್ದು ಅದೇ ಧರ್ಮ, ನೀನು ಅಲ್ಲಿಯೇ ಹೋಗಬೇಕು ಅಂತ ಹೇಳಿದ್ದಾನೆ ತ್ವಷ್ಟ.

ಪಿತುಃ ಸಮೀಪಗಾ ಸಾ ತು ಪಿತ್ರಾ ನಿರ್ಭರ್ತ್ಸಿತಾ ತದಾ ।

ಭರ್ತುಃ ಸಮೀಪಂ ಗಚ್ಛೇತಿ ನಿಯುಕ್ತಾ ಚ ಪುನಃ ಪುನಃ ॥ (9.16 ಹರಿವಂಶಪರ್ವ)

ಏನು ಮಾಡಬೇಕು ತಂದೆ ಹೇಳುವ ಮಾತು ಮನಸ್ಸಿಗೆ ಸರಿ ಅಂತ ಅನಿಸುತ್ತಾ ಇದೆ ಆದರೆ ಆ ಸೂರ್ಯನ ತಾಪ, ಅವನ ಬಿಸಿ ಇದನ್ನು ನೆನೆಸಿಕೊಂಡರೆ ಅಲ್ಲಿ ಹೋಗುವುದಕ್ಕೆ ಕಷ್ಟ ಅಂತ ಅನಿಸುತ್ತಾ ಇದೆ ಇದು ಎರಡು ಗೊತ್ತಾಗದೆ ಏನು ಮಾಡಬೇಕು ಎಂದು ತೋಚದೇ ಅವಳು ಒಂದು ಹೆಣ್ಣು ಕುದುರೆಯ ರೂಪವನ್ನು ತೆಗೆದುಕೊಂಡಿದ್ದಾಳೆ. ವಡವ ಎಂಬ ರೂಪವನ್ನು ತೆಗೆದುಕೊಂಡು ಉತ್ತರ ಕುರುವರುಷದಲ್ಲಿ ಹೋಗಿ ಅಲ್ಲಿ ಆ ಕುದುರೆಯ ರೂಪದಿಂದ ಹುಲ್ಲು ಮೇಯುತ್ತ ಅಲ್ಲಿಯೇ ವಿಹಾರ ಮಾಡುತ್ತಾ ಇದ್ದಾಳೆ. ಈ ಕಡೆಗೆ ಸೂರ್ಯನ ಮನೆಗೂ ಹೋಗಲಿಲ್ಲ, ತಂದೆಯ ಮನೆಗೂ ಹೋಗಲಿಲ್ಲ ಉತ್ತರ ಕುರುವರುಷಗಳಲ್ಲಿ ತೃಣಗಳನ್ನು ತಿನ್ನುತ್ತಾ

ಕುರೂನಥೋತ್ತರಾನ್ ಗತ್ವಾ ತೃಣಾನ್ಯೇವ ಚಚಾರ ಹ । (9.17 ಹರಿವಂಶಪರ್ವ)

ಹುಲ್ಲನ್ನು ತಿನ್ನುತ್ತಾ ತಾನು ಜೀವನವನ್ನು ಮಾಡುತ್ತಾ ಇದ್ದಾಳೆ. ಈ ಕಡೆಗೆ ಈ ಛಾಯಾ ದೇವಿಯನ್ನೇ ಸಂಜ್ಞಾ ದೇವಿ ಅಂತ ತಿಳಿದುಕೊಂಡು ಸೂರ್ಯ ಆ ಛಾಯಾ ದೇವಿಯಲ್ಲಿ ಪುನಃ ಮಕ್ಕಳನ್ನು ಪಡೆದಿದ್ದಾನೆ ಅಲ್ಲಿ ಹುಟ್ಟಿದಂತಹ ಮಗನೇ ಈ ಸಾವರ್ಣಿ ಮನು ಅಂತ ಎಂಟನೆಯ ಮನು ಅಂತ ಕೇಳಿದ್ದೀರಲ್ಲ ಸಾವರ್ಣಿ ಮನು ಸಾವರ್ಣಿ ಮನ್ವಂತರ ಅಂತ. ಯಾವ ಮನ್ವಂತರದಲ್ಲಿ ಬಲಿ ಚಕ್ರವರ್ತಿ ಇಂದ್ರನಾಗುತ್ತಾನೆ, ಸಾರ್ವಭೌಮ ಎಂಬ ಹೆಸರಿನಿಂದ ಪರಮಾತ್ಮ ಅವತಾರ ಮಾಡುತ್ತಾನೆ ಆ ಮನು ಸಾವರ್ಣಿ ಮನು ಅವನು ಸೂರ್ಯನಿಂದಲೇ ಛಾಯೆಯಲ್ಲಿ ಹುಟ್ಟಿದವ. ಇವನಿಗೆ ಸಾವರ್ಣಿ ಮನು ಅಂತ ಹೆಸರು ಯಾಕೆ ಬಂತು ಅಂದರೆ ಹಿಂದೆ ಹುಟ್ಟಿದ ಶ್ರಾದ್ಧದೇವ ಎಂಬ ಮನು ಹೇಗಿದ್ದನೋ ಅವನ ಹಾಗೆ ಇವನಿದ್ದ ಸವರಣನಾಗಿದ್ದ ಇದ್ದದ್ದಕ್ಕೆ ಇವನು ಸಾವರ್ಣ. ನೀನು ಅವನ ಹಾಗೆ ಇದ್ದಿ ಅವನ ಹಾಗೆ ಇದ್ದಿ ಅಂತ ಕರೆಯಲಿಕ್ಕೆ ಶುರುವು ಮಾಡಿದರು ಹುಟ್ಟಿದ ಕೂಡಲೇ ಅದೇ ಹೆಸರು ಬಿತ್ತು ಅವನಿಗೆ ಸಾವರ್ಣ ಅಂತ.

ಸವರ್ಣತ್ವಾನ್ಮನೋರ್ಭೂಯಃ ಸಾವರ್ಣ ಇತಿ ಚೋಕ್ತವಾನ್ । (9.19 ಹರಿವಂಶಪರ್ವ)

ಪೂರ್ವದಲ್ಲಿ ಹುಟ್ಟಿದ ಮನುವಿನ ಸವರಣನಾಗಿ ನೀನು ಹುಟ್ಟಿದ್ದಿ ಅಂತ ಸಾವರ್ಣ ಅಂತ ಅವನಿಗೆ ಹೆಸರು ಸಾವರ್ಣಿ ಅಂತೂ ಹೆಸರು ಅವನಿಗೆ ಬಂತು. ನೋಡಿ ಸೂರ್ಯನ ಇಬ್ಬರು ಮಕ್ಕಳು ಮನುಗಳಾಗಿದ್ದಾರೆ ಶ್ರಾದ್ಧದೇವ ಏಳನೆಯ ಮನು, ಸಾವರ್ಣಿ ಎಂಟನೆಯ ಮನು ಅಂತಹ ಒಂದು ವಿಶಿಷ್ಟವಾದ ಸೂರ್ಯನ ಅನುಗ್ರಹ ಆ ಮಕ್ಕಳ ಮೇಲೆ ಇದೆ.

ಮನುರೇವಾಭವನ್ನಾಮ್ನಾ ಸಾವರ್ಣ ಇತಿ ಚೋಚ್ಯತೇ । (9.20 ಹರಿವಂಶಪರ್ವ)



ಇನ್ನು ಎರಡನೆಯ ಮಗ ಅದೇ ಛಾಯಾ ದೇವಿಯಲ್ಲಿ ಇನ್ನೊಬ್ಬ ಮಗ ಹುಟ್ಟಿದ ಅವನೇ ಶನೈಶ್ಚರ ಮೊದಲನೆಯ ಮಗ ಸಾವರ್ಣಿ ಮನು, ಎರಡನೆಯ ಮಗ ಶನೈಶ್ಚರ ಅಲ್ಲಿ ಹುಟ್ಟಿದ್ದಾನೆ.

ಸಂಜ್ಞಾ ತು ಪಾರ್ಥಿವೀ ತಾತ ಸ್ವಸ್ಯ ಪುತ್ರಸ್ಯ ವೈ ತದಾ ॥ (9.21 ಹರಿವಂಶಪರ್ವ)

ಶನೈಶ್ಚರ ಅಲ್ಲಿ ಅವತಾರ ಮಾಡಿದ್ದಾನೆ ಸೂರ್ಯನಿಂದ ಛಾಯಾ ದೇವಿಯಲ್ಲಿ. ಇಷ್ಟಾದ ಮೇಲೆ ಮುಂದೆ ಏನಾಯಿತು ಅಂದರೆ ಶನೈಶ್ಚರ ಮತ್ತು ಸಾವರ್ಣಿ ಮನು ಅಥವಾ ಸಾವರ್ಣಿ ಮನು ಮತ್ತು ಶನೈಶ್ಚರ ಇವರಿಬ್ಬರು ಹುಟ್ಟುವವರೆಗೆ ಸಂಜ್ಞಾ ದೇವಿ ಸವತಿಯ ಮಕ್ಕಳಾದ ಶ್ರಾದ್ಧದೇವ, ಯಮ ಹಾಗೂ ಯಮುನಾರನ್ನು ಅತ್ಯಂತ ಪ್ರೀತಿಯಿಂದಲೇ ನೋಡಿಕೊಂಡಿದ್ದಾಳೆ ಛಾಯಾದೇವಿ. ಯಾವಾಗ ತನಗೆ ಮಕ್ಕಳಾದರೋ ಸಾವರ್ಣಿ ಮನು ಹಾಗೂ ಶನೈಶ್ಚರ ಆಗ ಸಂಜ್ಞಾ ದೇವಿಯ ಮಕ್ಕಳ ಮೇಲೆ ಸ್ವಲ್ಪ ಪ್ರೀತಿಯನ್ನು ಮಾಡುವುದನ್ನು ಕಡಿಮೆ ಮಾಡಿದ್ದಾಳೆ ಹೆಚ್ಚು ಇವರ ಕಡೆಗೆ ಗಮನ ಕೊಡುವುದು ಇವರ ಮೇಲೆ ಪ್ರೀತಿ ತೋರಿಸುವುದು ಇವರ ಆರೈಕೆಯನ್ನು ಮಾಡುವುದೇ ಹೆಚ್ಚಾಗಿದೆ. ಆ ವೈವಸ್ವತ ಮನು ಶ್ರಾದ್ಧದೇವ ಹಿರಿಯ ಮಗ ಅವನು ಅದನ್ನು ಬಹಳ ತಲೆ ಕೆಡಿಸಿಕೊಂಡಿಲ್ಲ ಆಯಿತು ಇರಲಿ ಪರವಾಗಿಲ್ಲ ಅಂದುಬಿಟ್ಟ. ಈ ಯಮ ದೇವರು ಇದ್ದರು ಯಮಾ, ಯಮಿ ಇವರಿಬ್ಬರೂ ಅವಳಿ-ಜವಳಿ. ಆ ಯಮ ದೇವರು, ಯಮುನಾ ದೇವಿಯೂ ಸುಮ್ಮನೆ ಇದ್ದಾಳೆ, ಶ್ರಾದ್ಧದೇವ ಸುಮ್ಮನೆ ಇದ್ದಾನೆ, ಆಯಿತು ಎಷ್ಟು ಪ್ರೀತಿ ಮಾಡುತ್ತಾಳೆ ಮಾಡುತ್ತಾಳೆ, ನಮ್ಮ ಆರೈಕೆಯನ್ನು ನಾವೇ ಮಾಡಿಕೊಂಡರಾಯಿತು ಅನ್ನುವ ದೃಷ್ಟಿಯಲ್ಲಿ ಅವರು ಸುಮ್ಮನಿದ್ದಾರೆ. ಯಮ ದೇವರು ಭಾರೀ ಜೋರು, ಉಗ್ರ ಹೀಗಾಗಿ ಯಮ ದೇವರು ಅನ್ನುತ್ತಾರೆ ಯಾಕೆ ಮೊದಲು ಪ್ರೀತಿ ಮಾಡಿದ ಹಾಗೆ ಇವಳು ಬೇರೆ ಅಂತ ಗೊತ್ತೇ ಇಲ್ಲ ಅದೇ ವೇಷದೊಳಗೆ ಇದ್ದಾಳೆ, ಸಂಜ್ಞಾ ದೇವಿಯ ವೇಷದಲ್ಲಿಯೇ ಇವಳು ಇದ್ದಾಳೆ ಮೊದಲು ಎಷ್ಟು ಚೆನ್ನಾಗಿ ಪ್ರೀತಿ ಮಾಡುತ್ತಾ ಇದ್ದಿ ಈಗ ಯಾಕೆ ಮಾಡುವುದಿಲ್ಲ. ನಾವೂ ನಿನ್ನ ಮಕ್ಕಳೇ, ಅವರೂ ನಿನ್ನ ಮಕ್ಕಳೇ ಆದರೆ ಆ ಸಾವರ್ಣಿ ಮನು, ಶನೈಶ್ಚರನನ್ನು ಮಾತ್ರ ಯಾಕೆ ವಿಶೇಷವಾಗಿ ನೀನು ಪ್ರೀತಿ ಮಾಡುತ್ತೀಯಾ ನಮ್ಮ ಮೇಲೆ ಯಾಕೆ ಪ್ರೀತಿ ಮಾಡುವುದಿಲ್ಲ ಎಂಬುದಾಗಿ ಬಹಳ ಜೋರಾಗಿ ಜಗಳ ಆಡಿದ್ದಾನೆ ಛಾಯಾ ದೇವಿಯ ಜೊತೆಗೆ. ಜಗಳ ಆಡುವುದಷ್ಟೇ ಅಲ್ಲ ಸಿಟ್ಟಿನಿಂದ ಕಾಲೆತ್ತಿದ್ದಾನೆ ಒದ್ದಿಲ್ಲ ಆ ಸಿಟ್ಟಿನ ಭರದಲ್ಲಿ ಕಾಲು ಮೇಲೆತ್ತಿದ್ದಾನೆ ಯಮ ತಾಯಿಯಾದ ಛಾಯಾ ದೇವಿಗೆ ಅವಳು ಶಾಪ ಕೊಟ್ಟಿದ್ದಾಳೆ ನಿನ್ನ ಕಾಲು ಬಿದ್ದು ಹೋಗಲಿ ಅಂತ. ಶಾಪ ಕೊಟ್ಟ ಆ ಕ್ಷಣಕ್ಕೆ ಓಡಿಬಂದ ಸೂರ್ಯ ದೇವರ ಹತ್ತಿರ ಯಮ ನಾನು ತಪ್ಪು ಮಾಡಿದ್ದು ನಿಜ, ಏನೋ ಸಿಟ್ಟಿನೊಳಗೆ ಏನು ಆದರೂ ತಮ್ಮಂದಿರಿಗೇನೆ ವಿಶೇಷವಾಗಿ ನೋಡಿಕೊಳ್ಳುತ್ತಾಳೆ ತಾಯಿ, ನಮ್ಮ ಮೇಲೆ ಪ್ರೀತಿ ಮಾಡುವುದಿಲ್ಲ, ನಮ್ಮ ಕಡೆಗೆ ಗಮನ ಕೊಡುವುದಿಲ್ಲ ಅನ್ನುವ ದುಃಖದಿಂದ ಒಂದೆರಡು ಮಾತು ಹೆಚ್ಚಾಡಿದೆ, ಒದ್ದಿಲ್ಲ ಕಾಲು ಎತ್ತುವುದು ತಪ್ಪು ಅನ್ನುವುದು ನನಗೆ ಗೊತ್ತು. ತಪ್ಪು ಆಗಿದೆ ಇಲ್ಲ ಅಂತ ಅಲ್ಲ ಆದರೆ ಇಷ್ಟು ದೊಡ್ಡ ಶಿಕ್ಷೆ ಕೊಡಬೇಕಾ ಅದಕ್ಕೆ ಕಾಲೇ ಬಿದ್ದು ಹೋಗಲಿ ಅಂತ, ಮಕ್ಕಳು ತಪ್ಪು ಮಾಡಿದರೂ ತಾಯಂದಿರು ಕ್ಷಮಿಸಬೇಕಲ್ಲ.

ಅಪತ್ಯಂ ದುರಪತ್ಯಂ ಸ್ಯಾನ್ನಾಮ್ಬಾ ಕುಜನನೀ ಭವೇತ್ । (9.28 ಹರಿವಂಶಪರ್ವ)

ಕೆಟ್ಟ ಮಕ್ಕಳು ಅಂತ ಇರಬಹುದು ಕೆಟ್ಟ ತಾಯಿ ಇರುವದಿಲ್ಲವಲ್ಲ ನಾನು ತಪ್ಪು ಮಾಡಿದರೆ ಅವಳು ಕ್ಷಮಾ ಮಾಡಬೇಕಾಗಿತ್ತು ಯಾಕೆ ಹೀಗೆ ಶಾಪ ಕೊಡಬೇಕಾಗಿತ್ತು ಅಂತ ಆಗ ಸೂರ್ಯ ದೇವರು ಅಂದರು. ನೀನು ತಪ್ಪು ಮಾಡಿದ್ದು ನಿಜ ಕಾಲು ಎತ್ತುವುದು ತಪ್ಪೇ ದೊಡ್ಡವರ ಎದುರಿನಲ್ಲಿ ಆದರೆ ಒದೆಯುವ ಉದ್ದೇಶ್ಯದಿಂದ ನೀನು ಕಾಲು ಎತ್ತಿಲ್ಲ ಏನೋ ಸಿಟ್ಟಿನ ಭರದಲ್ಲಿ ಆ ರೀತಿ ಮಾಡಿದ್ದೀ ಅದಕ್ಕಾಗಿ ನಿನ್ನ ತಾಯಿ ಕೊಟ್ಟ ಶಾಪ ನಿನಗೆ ಏನೂ ಹತ್ತದೇ

ಇರುವ ಹಾಗೆ ಮಾಡಲಿಕ್ಕೆ ನನಗೆ ಆಗುವುದಿಲ್ಲ ಸ್ವಲ್ಪ ಅದರಲ್ಲಿ ಕಡಿಮೆ ಮಾಡುತ್ತೇನೆ. ನಿನ್ನ ಕಾಲಿಗೆ ಹುಳ ಆಗುತ್ತವೆ ಆ ಹುಳಗಳೆಲ್ಲ ನಿನ್ನ ಕಾಲಿನ ಮಾಂಸವನ್ನ ತಿಂದು ಭೂಮಿಯಲ್ಲಿ ಸೇರಿಕೊಳ್ಳುತ್ತವೆ ಹೀಗಾಗಿ ತಾಯಿಯ ತಾಪವೂ ಸತ್ಯ ಆಯಿತು ಆದರೆ ಕಾಲು ಪೂರ್ಣ ಬಿದ್ದು ಹೋಗುವುದಿಲ್ಲ ಕಾಲು ಇರುತ್ತೆ ಆದರೆ ಕಾಲಿನೊಳಗಿನ ಮಾಂಸಗಳನ್ನು ಮಾತ್ರ ಹುಳಗಳು ತಿಂದು ಭೂಮಿಯನ್ನು ಸೇರುತ್ತವೆ.

ಕೃಮಯೋ ಮಾಂಸಮಾದಾಯ ಯಾಸ್ಯನ್ತಿ ಧರಣೀತಲಮ್ । (9.31 ಹರಿವಂಶಪರ್ವ)

ತವ ಪಾದಾನ್ಮಹಾಪ್ರಾಜ್ಞ ತತಸ್ತ್ವಂ ಪ್ರಾಪ್ಸ್ಯಸೇ ಸುಖಮ್ । (9.32 ಹರಿವಂಶಪರ್ವ)

ಆಮೇಲೆ ಮತ್ತೆ ಮೊದಲಿನಂತೆ ನೀನು ಸುಖವಾಗಿ ಇರುತ್ತಿಯಾ ಏನು ಚಿಂತೆ ಮಾಡಬೇಡ ಅಂತ ಸೂರ್ಯ ಆ ಮಗನಿಗೆ ಯಮ ದೇವರಿಗೆ ವಿಶೇಷವಾಗಿ ಈ ಒಂದು ಶಾಪದ ಮೋಚನೆಯನ್ನು ಮಾಡಿದ್ದಾನೆ ಎಂಬುದಾಗಿ ಇಲ್ಲಿ ನಾವು ತಿಳಿಯಬೇಕು.

ಕಕ್ಷಾ ತಾರತಮ್ಯದಲ್ಲಿ ಸೂರ್ಯ, ಚಂದ್ರ, ಯಮ ದೇವರು, ಶತರೂಪ ಇವರೆಲ್ಲ ಒಂದೇ ಹನ್ನೆರಡನೆಯ ಕಕ್ಷೆಯಲ್ಲಿಯೇ ಬರುತ್ತಾರೆ ಆದರೂ ವಿಶೇಷ ಸ್ವಲ್ಪ ಸೂರ್ಯ ಆ ಯಮ ದೇವರಿಗೆ ಈ ರೀತಿಯ ಒಂದು ವಿಶೇಷವಾದಂತಹ ಸಹಾಯವನ್ನು ಮಾಡಿದ್ದಾನೆ ಮಗನಾಗಿ ಹುಟ್ಟಿದ್ದ ಕಾರಣ ಅಂತ ನಾವು ತಿಳಿಯಬೇಕು. ಸಾವರ್ಣಿ ಮನು ಇವರೆಲ್ಲ ಹತ್ತೊಂಬತ್ತನೆಯ ಕಕ್ಷೆಯಲ್ಲಿ ಬರುತ್ತಾರೆ, ವೈವಸ್ವತ ಮನು ಮಾತ್ರ ಉತ್ತಮ ಅವನು ಋಷಿಗಳ ಜೊತೆಗೆ ಬರುತ್ತಾನೆ ಹದಿನಾರನೆಯ ಕಕ್ಷೆಯಲ್ಲಿ ಬರುತ್ತಾನೆ, ಸಾವರ್ಣಿ ಮನು ಹತ್ತೊಂಬತ್ತನೆಯ ಕಕ್ಷೆಯಲ್ಲಿ ಬರುತ್ತಾನೆ, ಯಮ ದೇವರು ಹನ್ನೆರಡನೆಯ ಕಕ್ಷೆಯಲ್ಲಿ ಬರುತ್ತಾರೆ ಎಂಬುದಾಗಿ ನಾವು ತಿಳಿಯಬೇಕು. ಸೂರ್ಯನು ಕೂಡ ಹನ್ನೆರಡನೆಯ ಕಕ್ಷೆಯಲ್ಲಿ ಆ ಆ ತಾರತಮ್ಯಕ್ಕೆ ತಕ್ಕಂತೆ ಅವರ ವಿಶೇಷವಾಗಿ ಇರತಕ್ಕಂತಹ ಮಹಿಮೆಯನ್ನು ತಿಳಿದು ಅವರ ಉಪಾಸನೆಯನ್ನು ಮಾಡಿ ಅನುಗ್ರಹವನ್ನು ನಾವು ಪಡೆಯಬೇಕು.

ಸರಿ, ಇಷ್ಟಾದ ಮೇಲೆ ಇನ್ನು ಅವಳನ್ನು ಕರೆದ, ಯಮ ದೇವರ ಶಾಪವನ್ನು ಮೋಚನೆ ಮಾಡಿ, ಯಮ ದೇವರನ್ನು ಆಚೆಗೆ ಕೊಟ್ಟು ಕಳುಹಿಸಿ ಹೆಂಡತಿಯನ್ನು ಕರೀತಾನೆ, ಆವನು ಸಂಜ್ಞಾ ಅಂತೇ ತಿಳಿದುಕೊಂಡಿದ್ದಾನೆ ಛಾಯಾ ದೇವಿ ಅಂತ ಗೊತ್ತಿದ್ದರೂ ನಾಟಕ ಮಾಡುತ್ತಾ ಇರಬಹುದು. ಆ ಛಾಯಾ ದೇವಿಯನ್ನು ಅರ್ಥಾತ್ ಸಂಜ್ಞಾ ದೇವಿಯನ್ನು ಕರೆದು ಯಾಕೆ ಈ ರೀತಿ ಮಕ್ಕಳಲ್ಲಿ ವೈಷಮ್ಯ ಮಾಡುತ್ತಾ ಇದ್ದಿ ಎಲ್ಲರೂ ನಿನ್ನ ಮಕ್ಕಳಲ್ಲ ಅಂತ ಹೇಳುತ್ತಾ ಹೇಳುತ್ತಾ ಸೂರ್ಯನಿಗೆ ಸಿಟ್ಟು ಬಂತು, ಸಿಟ್ಟು ಬಂದದ್ದೆ ತಡ ಸೂರ್ಯ ಅವಳ ಕೂದಲು ಹಿಡಿದು ಕೇಳುತ್ತಾ ಇದ್ದಾನೆ ಶಾಪ ಕೊಡುತ್ತೇನೆ ನಿನಗೆ ಅಂತ. ಅವಳು ಹಿಂದೆ ಮಾತು ಕೊಟ್ಟಿದ್ದಳು ಎಲ್ಲಿಯವರೆಗೆ ಕೂದಲು ಹಿಡಿದು ಬೈಯುವುದಿಲ್ಲ ಅಲ್ಲಿಯವರೆಗೆ ನಾನು ರಹಸ್ಯವನ್ನು ಮುಚ್ಚಿ ಇಟ್ಟಿರುತ್ತೇನೆ ಆಮೇಲೆ ಮಾತ್ರ ನಾನು ಹೇಳುತ್ತೇನೆ ಅಂತ ಈಗ ಎಲ್ಲವನ್ನು ಹೇಳಿಬಿಟ್ಟಿದ್ದಾಳೆ. ಈ ರೀತಿ ನಾನು ಮತ್ತೆ ಛಾಯಾ ನಿನ್ನ ನಿಜವಾದ ಹೆಂಡತಿ ಸಂಜ್ಞಾ ಅವಳು ತವರು ಮನೆಗೆ ಹೋಗಿದ್ದಾಳೆ, ನನ್ನನ್ನು ನಿರ್ಮಾಣ ಮಾಡಿ ನಿನಗೆ ಕೊಟ್ಟಿದ್ದಾಳೆ ಎಂಬುದಾಗಿ ಹೇಳಿದಾಗ ಆಗ ಸೂರ್ಯ ನೇರವಾಗಿ ತ್ವಷ್ಟುವಿನ ಮನೆಗೆ ಹೋಗಿದ್ದಾನೆ, ಮಾವನ ಮನೆಗೆ, ಸಂಜ್ಞಾ ದೇವಿ ನಿನ್ನ ಮಗಳು, ನನ್ನ ಮಡದಿ ನಿನ್ನ ಮನೆಗೆ ಬಂದಿದ್ದಾಳೆ ಅಂತೆ ಕೊಟ್ಟು ಕಳಿಸು ಅಂತ ಕೇಳುತ್ತಾನೆ. ಅವನು ಹೇಳಿದ ನಾನು ಅವತ್ತೆ ಕೊಟ್ಟು ಕಳಿಸಿದ್ದೇನೆ ಅಂತ ಹೇಳಿದ, ಯಾವ ದಿನ ಮನೆಗೆ ಬಂದಳೋ ಆ ದಿನವೇ ಮನೆಯಿಂದ ನಾನು ಕೊಟ್ಟು ಕಳಿಸಿದ್ದೇನೆ ಗಂಡನ ಮನೆಗೆ ಹೋಗು ಅಂತ.



ಆದರೆ ನಿನ್ನ ಈ ಉಗ್ರವಾದ ರೂಪವನ್ನು ಸಹಿಸಿಕೊಳ್ಳಲಾಗದೇ ಅವಳು ಹೆಣ್ಣು ಕುದುರೆಯ ರೂಪವನ್ನು ತೆಗೆದುಕೊಂಡು ಶಾಂತವಾಗಿ ಹಸಿರು ಹುಲ್ಲು ಇರುವಂತಹ ಉತ್ತರ ಕುರುವರುಷಗಳಲ್ಲಿ ಹುಲ್ಲು ಮೇಯುತ್ತಾ ಇದ್ದಾಳೆ, ನೀನು ಅಲ್ಲಿ ಹೋಗಿ ಅವಳನ್ನು ಮನೆಗೆ ಕರೆದುಕೊಂಡು ಹೋಗು ಅಂತ ತ್ವಷ್ಟ ಹೇಳಿದ, ಹೇಳುವುದರ ಜೊತೆಗೆ ಒಂದು ಮಾತನ್ನು ಸೂರ್ಯನಿಗೆ ಹೇಳುತ್ತಾನೆ. ಸೂರ್ಯ, ಕಾರಣ ಏನು ನಿನ್ನ ಈ ರೂಪವನ್ನು ಅವಳಿಗೆ ಸಹನೆ ಮಾಡಿಕೊಳ್ಳುವುದಕ್ಕೆ ಆಗುತ್ತಾ ಇಲ್ಲ ನಾನೊಬ್ಬ ಶಿಲ್ಪಿ ನಿನಗೆ ನೀನು ಅನುಮತಿ ಕೊಟ್ಟರೆ ಚೆನ್ನಾಗಿ ರೂಪ ನಿನಗೆ ಬರುವ ಹಾಗೆ ಮಾಡುತ್ತೇನೆ, ಶಾಂತರೂಪನಾಗುವ ಹಾಗೆ ಮಾಡುತ್ತೇನೆ. ಹೆಂಡತಿಗೆ, ನೋಡಿ ಇದೀಗ ತಿಳಿದಿದ್ದೀಲಲ್ಲ ಏನಾದರೂ ಮನಸ್ತಾಪಗಳಿದ್ದರೆ, ಜಗಳ ಇದ್ದರೆ, ಸಮಸ್ಯೆಗಳಿದ್ದರೆ ಬಗೆಹರಿಸುವ ಪ್ರಯತ್ನವನ್ನು ಮಾಡಬೇಕೆ ಹೊರತು ಸರಿ ಬಿಟ್ಟುಬಿಡು ನಾನು ನೋಡಿಕೊಳ್ಳುತ್ತೇನೆ, ನನ್ನ ಹತ್ತಿರ ಬೇಕಾದಷ್ಟು ಹಣ ಇದೆ, ಕಾಸು ಇದೆ, ನಿನ್ನ ಸಾಕುವುದಕ್ಕೆ ನನಗೇನು ಕಡಿಮೆನಾ ಹೀಗೆಲ್ಲ ಮಾತನಾಡಿ ಮನೆಯಲ್ಲಿ ಇಟ್ಟುಕೊಳ್ಳುವುದರೊಳಗೆ ಪೌರುಷ ಇಲ್ಲ, ಬುದ್ಧಿವಂತಿಕೆಯಿಂದ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಮಹತ್ವ ಇದೆ ಅದು ದೊಡ್ಡದಾದ ಕೌಶಲ, ಅದು ದೊಡ್ಡ ಧರ್ಮ, ಅದು ದೊಡ್ಡದಾದ ಆದರ್ಶ ಅದನ್ನು ತ್ವಷ್ಟ ಇಲ್ಲಿ ತೋರಿಸುತ್ತಾ ಇದ್ದಾನೆ. ಏನು ದೇವರು ಕೊಟ್ಟಂತಹ ಶಕ್ತಿ ನೋಡಿ ದೇವತೆಗಳಿಗೆ ಆ ಅದ್ಭುತವಾದಂತಹ ಸೂರ್ಯನ ರೂಪ ಅವನನ್ನು ಒಂದು ಚಕ್ರದೊಳಗೆ ಕೂಡಿಸಿದ್ದಾನೆ ಸೂರ್ಯನೊಳಗೆ ಆ ಚಕ್ರದ ಭ್ರಮಣವನ್ನ ಮಾಡುವ ಮೂಲಕ ಆ ಸೂರ್ಯನ ರೂಪವನ್ನೆಲ್ಲ ಸರಿಯಾಗಿ ಸುಂದರವಾಗುವಂತೆ ಶಾಂತವಾಗುವಂತೆ ಮಾಡಿದ್ದಾನೆ ತ್ವಷ್ಟ. ಅದಕ್ಕೆ ಸೂರ್ಯ ಯಾವ ರೀತಿ ನನ್ನ ರೂಪವನ್ನ ಮಾಡುವುದರಿಂದ ನಿನ್ನ ಮಗಳಿಗೆ ಸಂತೋಷ ಆ ರೀತಿ ಮಾಡು ನನಗೆ ಏನೂ ತೊಂದರೆ ಇಲ್ಲ ಅಂತ ಒಪ್ಪಿಗೆ ಕೊಟ್ಟಿದ್ದಾನೆ ಅದಕ್ಕೆ ತಕ್ಕಂತೆ ತ್ವಷ್ಟ ಅದನ್ನು ಚೆನ್ನಾಗಿ ಸುಂದರವಾದ ಅವನ ರೂಪವನ್ನು ಮಾಡಿದ್ದಾನೆ.

ಭ್ರಮಿಮಾರೋಪ್ಯ ತತ್ ತೇಜಃ ಶಾತಯಾಮಾಸ ಭಾರತ ॥ (9.44 ಹರಿವಂಶಪರ್ವ)

ಕಾನ್ತಾತ್ ಕಾನ್ತತರಂ ದ್ರಷ್ಟುಮಧಿಕಂ ಶುಶುಭೇ ತರಾ । (9.45 ಹರಿವಂಶಪರ್ವ)

ಆಮೇಲೆ ಸೂರ್ಯ ಆ ವಡವಾ, ವಡವಾ ಅಂದರೆ ಹೆಣ್ಣು ಕುದುರೆಯ ರೂಪದಲ್ಲಿರುವ ಸಂಜ್ಞಾ ದೇವಿಯ ಹತ್ತಿರ ಉತ್ತರ ಕುರುವರುಷಗಳಿಗೆ ಹೋಗಿದ್ದಾನೆ. ಹೋಗುವಾಗ ಅವಳು ಕುದುರೆಯ ರೂಪದಲ್ಲಿ ಇದ್ದಾಳೆ ಅಂತ ಗೊತ್ತಾಗಿ ತಾನೂ ಗಂಡು ಕುದುರೆಯ ರೂಪವನ್ನು ತೆಗೆದುಕೊಂಡು ಹೋಗುತ್ತಾನೆ ಸೂರ್ಯ. ಹೋಗಿ ಆ ಹೆಣ್ಣು ಕುದುರೆಯ ರೂಪದಲ್ಲಿ ಇರುವಂತಹ ಸಂಜ್ಞಾ ದೇವಿಯ ಜೊತೆಗೆ ಸಂಗವನ್ನು ಮಾಡಿದಾಗ, ಅವಳಿಗೆ ಗೊತ್ತಿಲ್ಲ ಇವನು ಸೂರ್ಯನೇ ಈ ರೂಪದಲ್ಲಿ ಬಂದಿದ್ದಾನೆ ಅಂತ. ತಾನು ಕುದುರೆಯ ರೂಪದೊಳಗೆ ಇದ್ದರೂ ಕೂಡ ಒಂದು ಗಂಡು ಕುದುರೆ ಬಂದು ತನ್ನ ಸಂಗವನ್ನು ಮಾಡುತ್ತೆ ಅಂದರೆ ಪರಪುರುಷ ಸಂಗ ಮಾಡಿದ ದೋಷ ಬರುತ್ತದೆ ಅಂತ ಅವಳು ಆ ಗಂಡು ಕುದುರೆ ಈ ಹೆಣ್ಣು ಕುದುರೆಯ ರೂಪದಲ್ಲಿರುವ ವಡವಾ ದೇವಿಯಲ್ಲಿ ವೀರ್ಯಧಾನ ಮಾಡಿದರೂ ಕೂಡ ಅದನ್ನು ಹೊರಗೆ ವಾಂತಿಯನ್ನು ಮಾಡಿ ಪುನಃ ಆ ಗಂಡು ಕುದುರೆಯ ಮೂಗಿನಲ್ಲೇನೆ ಹಾಕಿಬಿಡುತ್ತದೆ ಆ ಮೂಗಿನಿಂದ ಹುಟ್ಟಿದವರೇ ಅಶ್ವಿ ದೇವತೆಗಳು. ಸೂರ್ಯನಿಂದ ಸಂಜ್ಞಾ ದೇವಿ ಹೆಣ್ಣು ಕುದುರೆಯ ರೂಪದೊಳಗೆ ಇದ್ದಾಗ ಆ ಸೂರ್ಯನ ನಾಸಿಕಾದಿಂದಲೇನೆ ಹುಟ್ಟಿದ್ದರಿಂದಲೇ ನಾಸತ್ಯ ಅಂತ ಕರೀತಾರೆ ಅವರು ಘಾಣೇಂದ್ರಿಯಕ್ಕೆ ಅಭಿಮಾನಿ ದೇವತೆಗಳು ಹೌದು ಎಷ್ಟು ವಿಚಿತ್ರವಾಗಿದೆ ನೋಡಿ. ಅವರು ನಮ್ಮೆಲ್ಲರ ಘಾಣೇಂದ್ರಿಯಕ್ಕೆ ಅಭಿಮಾನಿ ದೇವತೆಗಳು ಅಶ್ವಿ ದೇವತೆಗಳು ವಿಶೇಷವಾಗಿ ಈಗ ಅವರ ಸ್ಮರಣೆಯನ್ನು ಮಾಡಬೇಕು ಎಲ್ಲರೂ ಕೂಡ. ಅನಾರೋಗ್ಯದ ಭೀತಿಯಿಂದ ಎಲ್ಲರೂ ಬಳಲುತ್ತಾ ಇದ್ದಾರೆ ಆ ಅನಾರೋಗ್ಯವನ್ನು ಪರಿಹರಿಸಿ

ಉತ್ತಮವಾದ ಆರೋಗ್ಯ ಭಾಗ್ಯವನ್ನು ಕರುಣಿಸುವಂತಹ ದೇವತೆಗಳು ಅಶ್ವಿ ದೇವತೆಗಳು. ಭಗವಂತನ ನಿರ್ಮಾಲ್ಯವನ್ನು, ದೇವರಿಗೆ ಅರ್ಪಿತವಾದ ಗಂಧವನ್ನು ಆಘ್ರಾಹಣನ ಮಾಡುವಂತಹ ಪವಿತ್ರವಾದ ಕಾರ್ಯವನ್ನೇ ನಮ್ಮ ಘಾನೇಂದ್ರಿಯದಿಂದ ಮಾಡಿಸಲಿ, ದೇವರಿಗೆ ಅನಿವೇದಿತವಾದ ಪುಷ್ಪ, ದೇವರಿಗೆ ಅನಿವೇದಿತವಾದ ಗಂಧ ಮೊದಲಾದವುಗಳನ್ನು ಆಘ್ರಾಹಣನೇ ಮಾಡಿಸಬಾರದು ನಮ್ಮ ಘಾನೇಂದ್ರಿಯದಿಂದ ಎಂಬುದಾಗಿ ಆ ಅಶ್ವಿ ದೇವತೆಗಳಿಗೆ ನಾವು ಪ್ರಾರ್ಥನೆಯನ್ನು ಮಾಡಬೇಕು ಜೊತೆಗೆ ದೇವಲೋಕದ ವೈದ್ಯರು ಅವರು ನಮಗೆ ಉತ್ತಮವಾದಂತಹ ಆರೋಗ್ಯವನ್ನು ಕರುಣಿಸಬೇಕು ಎಂಬುದಾಗಿ ಆ ಅಶ್ವಿ ದೇವತೆಗಳಲ್ಲಿ ಪ್ರಾರ್ಥನೆಯನ್ನು ಸಲ್ಲಿಸಬೇಕು. ಅವರು ಸೂರ್ಯ ಪುತ್ರರು, ಸೂರ್ಯ ಆರೋಗ್ಯಪ್ರದದೇವ **'ಆರೋಗ್ಯಂ ಭಾಸ್ಕರಾದಿಚ್ಛೇತ್'**[1] ಅಂತಹ ಆರೋಗ್ಯಪ್ರದನಾದ ದೇವ ಸೂರ್ಯ ಆ ಸೂರ್ಯನಿಂದ ಜನಿಸಿದ ಅಶ್ವಿ ದೇವತೆಗಳು ಅವರೂ ಕೂಡ ಆರೋಗ್ಯಪ್ರದರು, ಈ ಅಶ್ವಿ ದೇವತೆಗಳು ಲಯ ಹೊಂದುವುದು ವರುಣನಲ್ಲಿ ಅವನೂ ಆರೋಗ್ಯಪ್ರದನು. **'ತಟಿತುಪರಿ ಮುಕ್ತಾ ಮಯೋ ವಿರಾಜತೇ'** ಅಂತ ಭಾಷ್ಯದಲ್ಲಿ ಹೇಳುತ್ತಾರೆ ಶ್ರೀಮದಾಚಾರ್ಯರು ಯಾವ ಆಮಯ ರೋಗಗಳು ಕೂಡ ವರುಣ ಲೋಕದಲ್ಲಿ ಇಲ್ಲವಂತೆ ಅಲ್ಲಿ ಯಾವ ರೋಗದ ಸಂಬಂಧವೇ ಇಲ್ಲ ಅಷ್ಟು ಶುದ್ಧವಾದ ರೀತಿಯಲ್ಲಿ ಆ ವರುಣ ಲೋಕ ಇದೆ ಅಂತ ಯಾಕೆಂದರೆ ಆರೋಗ್ಯಪ್ರದನಾಗಿದ್ದಾನೆ ವರುಣ.

ಅಪ್ಸುಮೇ ಸೋಮೋ ಅಬ್ರವೀತ್ ಅಂತರ್ವಿಶ್ವಾನಿ ಭೇಷಜಾ । (ವೇದಮಂತ್ರ)

ಅಂತ ಎಲ್ಲಾ ಔಷಧಿಗಳು ನೀರಿನಲ್ಲಿ ಇದೆ ವರುಣ ದೇವರು ಅದಕ್ಕೆ ನಿಯಾಮಕನಾಗಿದ್ದಾನೆ ಅಂತ ಅಂದರೆ ಇದೊಂದು ವಿಚಿತ್ರ ನೋಡಿ. ಸೂರ್ಯನಿಂದ ಹುಟ್ಟಿದವರು ಅಶ್ವಿ ದೇವತೆಗಳು, ವರುಣನಲ್ಲಿ ಲಯವನ್ನು ಹೊಂದುತ್ತಾರೆ, ಸೂರ್ಯ ಆರೋಗ್ಯಪ್ರದ, ಅಶ್ವಿ ದೇವತೆಗಳು ಆರೋಗ್ಯಪ್ರದ, ವರುಣ ದೇವರು ಆರೋಗ್ಯಪ್ರದ ಇದೊಂದು ಆರೋಗ್ಯಮಾಲೆ ಸೂರ್ಯ ಅಶ್ವಿ ಹಾಗೂ ವರುಣ. ಅಂದರೆ ಅತ್ಯಂತ ಬಿಸಿ ಸೂರ್ಯ, ಅತೀ ತಂಪು ವರುಣ, ಬಿಸಿಯೂ ಬೇಕು ಆರೋಗ್ಯಕ್ಕೆ ತಂಪೂ ಬೇಕು ಇದೆರಡೂ ಇದ್ದಾಗ ಬರೀ ಬಿಸಿ ಬರೀ ತಂಪು ಅಲ್ಲ, ಔಷಧಿ ಗಳು ಬೇಕು ಅಶ್ವಿ ದೇವತೆಗಳು ಇದ್ದಾರೆ. ಔಷಧಿಗಳನ್ನು ಕೊಡುವುದಕ್ಕೆ ಅಶ್ವಿ ದೇವತೆಗಳು, ತಂಪು ಕೊಡುವುದಕ್ಕೆ ನೀರಿನ ಮೂಲಕ ಎಲ್ಲ ದೋಷಗಳ ನಿವಾರಣೆ ಮಾಡುವುದಕ್ಕೆ ವರುಣ, ತನ್ನ ಶಾಖದಿಂದ ಎಲ್ಲ ರೋಗಾಣುಗಳನ್ನೆಲ್ಲ ಭಸ್ಮ ಮಾಡಿ, ಬೂದಿ ಮಾಡಿ ಶುದ್ಧವಾದ ಆರೋಗ್ಯ ಭಾಗ್ಯವನ್ನ ಕೊಡುವುದಕ್ಕೆ ಸೂರ್ಯ ಇದ್ದಾನೆ. ಅತೀ ಪ್ರಖರ, ಅತೀ ಶಾಂತ ಇವರಿಬ್ಬರ ಮಧ್ಯದಲ್ಲಿ ಇದ್ದವರು ಅಶ್ವಿ ದೇವತೆಗಳು ಅಂತಹ ಅಶ್ವಿ ದೇವತೆಗಳನ್ನು ಇಲ್ಲಿ ಸೂರ್ಯ ದೇವರು ಹುಟ್ಟಿಸಿದ್ದಾರೆ ಅಂತನ್ನುವ ಕಥೆಯನ್ನು ಇಲ್ಲಿ ತಿಳಿಸುತ್ತಾರೆ. ಇಂತಹ ಸೂರ್ಯ ದೇವರಿಗೆ ಯಾವಾಗ ಆ ತ್ವಷ್ಟ ಸುಂದರವಾದ ಒಂದು ರೂಪವನ್ನ ಕಲ್ಪಿಸಿ ಕೊಟ್ಟನಲ್ಲ ಆಗ ಸೂರ್ಯ ದೇವರಿಂದ ಹನ್ನೆರಡು ಸೂರ್ಯರು ಅದರಲ್ಲಿ ವಿಶೇಷವಾಗಿ ಸಾಕ್ಷಾತ್ ಪರಮಾತ್ಮನೂ ಇದ್ದಾನೆ ಅವನಿಗೆ ಜನ್ಮ ಇಲ್ಲ ಪ್ರಾದರ್ಭೂತನಾಗಿದ್ದಾನೆ ಉಳಿದವರೆಲ್ಲ ಹುಟ್ಟಿದ್ದಾರೆ ಅಂತ ತಿಳಿಸುತ್ತಾರೆ.

ಆದಿತ್ಯಾ ದ್ವಾದಶೈವೇಹ ಸಮ್ಭೂತಾ ಮುಖಿಸಮ್ಭವಾಃ ।
ಧಾತಾರ್ಯಮಾ ಚ ಮಿತ್ರಶ್ಚ ವರುಣೋಂಽಶೋ ಭಗಸ್ತಥಾ ॥ (9.47 ಹರಿವಂಶಪರ್ವ)

1. ಸ್ತೋತ್ರ ಸಂಹಿತಾ



ಇನ್ದ್ರೋ ವಿವಸ್ವಾನ್ ಪೂಷಾ ಚ ಪರ್ಜನ್ಯೋ ದಶಮಸ್ತಥಾ ।
ತತಸ್ತ್ವಷ್ಟಾ ತತೋ ವಿಷ್ಣುರಜಘನ್ಯೋ ಜಘನ್ಯಜಃ ॥ (9.48 ಹರಿವಂಶಪರ್ವ)

ವಿಷ್ಣು ಅವತಾರ ಇನ್ನುಳಿದವರೆಲ್ಲ ಅಲ್ಲಿ ಹುಟ್ಟಿದ್ದಾರೆ ಸೂರ್ಯನಿಂದ ಅಂತ ತಿಳಿಸಿಕೊಡುತ್ತಾರೆ. ಈ ರೀತಿ ಈ ಸೂರ್ಯನ ಪುತ್ರರೆಲ್ಲ ಏನೇನು ಆಗಿದ್ದಾರೆ ಅಂತ ಇವರಿಬ್ಬರೂ ಅಶ್ವಿ ದೇವತೆಗಳು ದೇವಲೋಕದ ವೈದ್ಯರಾದರು, ಸಾವರ್ಣಿ ಎಂಟನೆಯ ಮನು ಆದ, ಶ್ರಾದ್ಧದೇವ ಏಳನೆಯ ಮನು ಆದ, ಯಮ ಪಿತೃ ದೇವತೆಗಳಿಗೆ ಅಧಿಪತಿಯಾದ ಸಂಹಾರ ದೇವತೆ ಅಂತ ಅನ್ನಿಸಿಕೊಂಡ, ಯಮುನಾ ನದಿಯಾಗಿ ಹರಿದಳು, ಶನೈಶ್ಚರ ಒಂದು ಗ್ರಹನಾಗಿ ಅವರವರ ಯೋಗ್ಯವಾದ ಕರ್ಮಗಳಿಗೆ ತಕ್ಕ ಫಲವನ್ನು ಕೊಡುವುದಕ್ಕೆ ಅವನು ಒಂದು ಗ್ರಹತ್ವವನ್ನು ಹೊಂದಿದ ಹೀಗೆ ಎಲ್ಲರೂ ಕೂಡ ಆ ಸೂರ್ಯ ಪುತ್ರರು ಜಗತ್ತಿಗೆ ಮಾನ್ಯರಾಗಿದ್ದಾರೆ ಪೂಜ್ಯರಾಗಿದ್ದಾರೆ ಎಂಬುದಾಗಿ ತಿಳಿಸಿಕೊಡುತ್ತಾರೆ. ಇದೇನು ಒಂದು ಸೂರ್ಯನ ತೇಜಸ್ಸನ್ನೆಲ್ಲ ಚೆನ್ನಾಗಿ ಕೊರೆದು ಆ ಮಂಡಲವನ್ನೆಲ್ಲ ಕೊರೆದು ಸುಂದರವನ್ನಾಗಿ ಮಾಡಿ ಒಂದು ವಿಶಿಷ್ಟವಾದ ತೇಜಸ್ಸನ್ನು ಹೊರಗೆ ತೆಗೆದ ಆ ತೇಜಸ್ಸಿನಿಂದ ಒಂದು ಆಯುಧವನ್ನು ಮಾಡಿ ಅದನ್ನು ಚಕ್ರವನ್ನಾಗಿ ಮಾಡಿ ವಿಷ್ಣುವಿಗೆ ಅರ್ಪಣೆ ಮಾಡಿದ ತ್ವಷ್ಟ ಎಂಬುದಾಗಿ ಬರುತ್ತದೆ. ಸಾಕ್ಷಾತ್ ಭಗವಂತನ ಸ್ವರೂಪಭೂತವಾದ, ದುರ್ಗಾ ದೇವಿಯಿಂದ ಅಭಿಮನ್ಯಮಾನವಾದ ಒಂದು ಸುದರ್ಶನ ಚಕ್ರ ಇದೆ, ಕಾಮದೇವನಿಂದ ಅಭಿಮನ್ಯಮಾನವಾದ ಚಕ್ರ ಅಂತನ್ನುವುದು ಇದೆ ಪರಮಾತ್ಮನಲ್ಲಿ ಅದರ ಜೊತೆಗೆ ಈ ಒಂದು ವಿಶೇಷವಾದ ರೀತಿಯ ತೇಜಸ್ಸಿನ ಒಂದು ಆಯುಧವನ್ನು ತ್ವಷ್ಟ ಅವನೂ ಕೂಡ ಸಮರ್ಪಣೆ ಮಾಡಿದ ಎಂಬುದಾಗಿ ನಾವು ಅರ್ಥ ಮಾಡಿಕೊಳ್ಳಬೇಕು. ಹೀಗೆ ಆ ವೈವಸ್ವತ ಮನುವಿನ ಉತ್ಪತ್ತಿಯಾಗಿದೆ ಸೂರ್ಯನಿಂದ ಎಂಬ ಕಥೆಯನ್ನು ತಿಳಿಸಿಕೊಡುತ್ತಾ ಇದ್ದಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಹರಿವಂಶಪರ್ವ-6

* * *

ಅನಂತಗುಣ ಪರಿಪೂರ್ಣನಾದ ಸರ್ವೋತ್ತಮನಾದ ಶ್ರೀಹರಿಯ ವಿಶೇಷ ಸನ್ನಿಧಾನಕ್ಕೆ ಪಾತ್ರನಾದ ಮಹಾನುಭಾವ ಸೂರ್ಯ ಆದಿತ್ಯ ವಿವಸ್ವಾನ್ ಅಂತಹ ಸೂರ್ಯನ ಹಾಗೂ ಸಂಜ್ಞಾಳ ಪುತ್ರನಾಗಿ ಎಪ್ಪತ್ತೊಂದು ಮಹಾಯುಗಗಳ ಕಾಲ ಈ ಮನ್ವಂತರವನ್ನು ಈಗ ಆಳುತ್ತಾ ಇದ್ದಾನೆ ವೈವಸ್ವತ ಮನು ಅದರೊಳಗೆ ಎಪ್ಪತ್ತೊಂದು ಮಹಾಯುಗಗಳಲ್ಲಿ ಇಪ್ಪತ್ತೆಂಟನೆಯ ಮಹಾಯುಗ ನಡೆಯುತ್ತಾ ಇದೆ ಅದರಲ್ಲಿ ಕೃತ, ತ್ರೇತ, ದ್ವಾಪರ ಮುಗಿದು ಕಲಿಯುಗದೊಳಗೆ ನಾವಿದ್ದೇವೆ ಅಂತಹ ಮಹಾನುಭಾವ. ಯಾವ ವೈವಸ್ವತ ಮನುವಿನ ರಾಜ್ಯದಲ್ಲಿ ನಾವು ನೀವೆಲ್ಲ ಈಗ ಇದ್ದೇವೆ, ಭಗವದನುಗ್ರಹದಿಂದ ಯಥಾಶಕ್ತಿ ಸಾಧನೆಯನ್ನು ಮಾಡುತ್ತಾ ಇದ್ದೇವೆ ನಾವು ನೀವೆಲ್ಲ ಮಾಡುವ ಈ ಸಾಧನೆಗೆ ರಕ್ಷಕನಾಗಿ ಪೋಷಕನಾಗಿ ವೈವಸ್ವತ ಮನು ರಾಜ್ಯವನ್ನು ಆಳುತ್ತಾ ಇದ್ದಾನೆ ಎಂಬುದಾಗಿ ನಾವು ಭಾವಿಸಬೇಕು. ದೊಡ್ಡ ಯೋಗ್ಯತೆಯನ್ನು ಪಡೆದ ತಾರತಮ್ಯದಲ್ಲಿ ಹದಿನಾರನೆಯ ಕಕ್ಷೆಯಲ್ಲಿ ಇರುವಂತಹ ಒಬ್ಬ ಮಹಾನುಭಾವ ಅಂತಹ ಮಹಾನುಭಾವನಾದ ವೈವಸ್ವತ ಮನುವಿನ ವಿಶೇಷಾನುಗ್ರಹ ನಮ್ಮೆಲ್ಲರ ಮೇಲೆ ಆಗಬೇಕು. ಮನು, ಸರ್ವಜ್ಞನಾದಂತಹ ಭಗವಂತ ಆ ಭಗವಂತನ ಸನ್ನಿಧಾನ ಇವರಲ್ಲಿ ಇರುತ್ತೆ ಅನ್ನುವುದಕ್ಕೋಸ್ಕರ ಇವರೆಲ್ಲ ಇಂತಹ ದೊಡ್ಡ ರಾಜ್ಯವನ್ನು ಆಳುವುದಕ್ಕೆ ಸಾಧ್ಯ. ಈ ವೈವಸ್ವತ ಮನುವಿಗೆ ಹತ್ತು ಜನ ಮಕ್ಕಳು ಶ್ರೀಮದ್ಭಾಗವತ ಹೇಳುತ್ತದೆ, ಹರಿವಂಶ ಪುರಾಣ ಒಂಬತ್ತು ಜನ ಮಕ್ಕಳನ್ನು ಹೇಳುತ್ತದೆ. ಹಿಂದೆ ಸತ್ಯಧರ್ಮತೀರ್ಥರು ತಿಳಿಸಿದಂತೆ ಒಂದು ಗ್ರಂಥದಲ್ಲಿ ಹೇಳಿದ ವಿಷಯ ಇನ್ನೊಂದು ಗ್ರಂಥದಲ್ಲಿ ಹೇಳಿದ್ದರ ನಿಷೇಧ ಮಾಡುವುದಕ್ಕೆ ಕಾರಣ ಅಲ್ಲ ಒಂಭತ್ತು ಜನ ಮಕ್ಕಳಿದ್ದಾರೆ ಅನ್ನುವುದರಲ್ಲಿ ತಾತ್ಪರ್ಯ ಹತ್ತನೆಯ ಮಗ ಇಲ್ಲ ಅನ್ನುವುದರೊಳಗೆ ತಾತ್ಪರ್ಯ ಅಲ್ಲ. ಯಾರು ಅಂತ ಹೇಳುತ್ತಾರೆ ಇಕ್ಷ್ವಾಕು, ನಾಭಾಗ, ಧೃಷ್ಣು, ಶರ್ಯಾತಿ, ನರಿಷ್ಯ, ಪ್ರಾಂಶು, ಕುರೂಷ, ಪ್ರಶಧ್ರ, ನಾಭಾಗಾರಿಷ್ಟ ಅಥವಾ ಅವನನ್ನೆ ದಿಷ್ಟ ಅಂತ ಭಾಗವತ ಕರೆಯುತ್ತದೆ ಅಂತ ವ್ಯಾಖ್ಯಾನಕಾರರು ತಿಳಿಸುತ್ತಾರೆ ಇಲ್ಲಿ ನೃಗನನ್ನು ಬಿಟ್ಟಿದ್ದಾರೆ.

ಇಕ್ಷ್ವಾಕುನೃಗಶರ್ಯಾತಿದಿಷ್ಟಧೃಷ್ಟಕರೂಶಕಾನ್ ।
ನರಿಷ್ಯಂತಂ ವೃಷಧ್ರಂ ಚ ನಾಭಾಗಂ ಚ ನಭಂ ವಿಭುಮ್ ।। (09.1.12 ಭಾಗವತ)



ಎಂಬುದಾಗಿ ಶ್ರೀಮದ್ಭಾಗವತ ನೃಗ ರಾಜನನ್ನು ಸೇರಿಸಿಕೊಂಡು ಹತ್ತು ಜನರನ್ನು ಹೇಳುತ್ತದೆ. ಆ ನೃಗ ರಾಜನನ್ನ ಬಿಟ್ಟು ಒಂಭತ್ತು ಜನರನ್ನು ಇಲ್ಲಿ ಹೇಳಿದ್ದಾರೆ ಅದರಲ್ಲಿಯೂ ದಿಷ್ಟ ಅಂತ ಅಲ್ಲಿ ಕರೆದವನನ್ನು ಇಲ್ಲಿ ನಾಭಾಗಾರಿಷ್ಟ ಅಂತ ಕರೆದಿದ್ದಾರೆ. ಒಬ್ಬನೇ ವೈವಸ್ವತ ಮನು ಅವನ ಮಕ್ಕಳು ಒಂಭತ್ತು ಜನ ಅದರಲ್ಲಿ ಒಬ್ಬನಿಗೆ ನಾಭಾಗ ಇನ್ನೊಬ್ಬನಿಗೆ ನಾಭಾಗಾರಿಷ್ಟ ಒಂದೇ ಮನೆಯಲ್ಲಿ ಇಬ್ಬರಿಗೆ ಒಂದೇ ತರಹದ ಹೆಸರನ್ನು ಇಟ್ಟಿದ್ದಾರೆ. ಈ ರೀತಿ ಇವರಿಗೆ ಅದ್ಭುತವಾದ ಸಾಮರ್ಥ್ಯ ಇದೆ ಒಬ್ಬೊಬ್ಬರ ಚರಿತ್ರೆಯೂ ಬಹಳ ಅದ್ಭುತವಾದದ್ದು ಭಗವಂತನ ವಿಶೇಷ ಸನ್ನಿಧಾನಕ್ಕೆ ಪಾತ್ರರಾದಂತಹ ಮಹಾನುಭಾವರು. ಈ ಒಂಭತ್ತು ಜನ ಅಥವಾ ಹತ್ತು ಜನ ಮಕ್ಕಳು ಹುಟ್ಟುವ ಮೊದಲು ವೈವಸ್ವತ ಮನು ಉತ್ತಮ ಸಂತಾನವಾಗಬೇಕು ಅಂತ ತಪಶ್ಚರ್ಯವನ್ನು ಮಾಡುತ್ತಾನೆ ತಪಶ್ಚರ್ಯ ಮಾಡುವುದರ ಜೊತೆಗೆ ಒಂದು ಪುತ್ರಕಾಮೇಷ್ಟಿಯನ್ನು ಮಾಡುತ್ತಾನೆ, ವಸಿಷ್ಠರೇ ಆ ಯಜ್ಞವನ್ನು ಮಾಡಿಸುತ್ತಾರೆ. ಆ ಪುತ್ರಕಾಮೇಷ್ಟಿ ಯಾಗವನ್ನು ಮಾಡಿ ಶ್ರೇಷ್ಠ ಪುತ್ರ ಸಂತಾನವನ್ನು ಪಡೆಯಬೇಕು ಅನ್ನುವ ಅಪೇಕ್ಷೆಯಿಂದ ಮಿತ್ರ ಹಾಗೂ ವರುಣ ಈ ಇಬ್ಬರನ್ನು ಉದ್ದೇಶಿಸಿ ಮೈತ್ರಾವರುಣೇಷ್ಟಿ ಅಂತ ಮಾಡುತ್ತಾರೆ. ಆ ಮೈತ್ರಾವರುಣೇಷ್ಟಿಯನ್ನು ಮಾಡಿದಂತಹ ಪ್ರಸಂಗದಲ್ಲಿ ಎಲ್ಲರೂ ಕೂಡ ಇವನು ಮಾಡುವಂತಹ ಯಜ್ಞ, ಇವನ ಭಕ್ತಿ, ಇವನ ಶ್ರದ್ಧೆ ಇವನ ಹೆಸರೇ ಶ್ರಾದ್ಧದೇವ ಅಂತ ಹೆಂಡತಿ ಶ್ರದ್ಧಾದೇವಿ. ಶ್ರದ್ಧಾದೇವಿ ಶ್ರಾದ್ಧದೇವ ಇವರಿಗಿರುವ ಶ್ರದ್ಧೆ, ಇವರಿಗಿರುವ ಭಕ್ತಿ ಇದಕ್ಕೆ ಮೆಚ್ಚಿ ದೇವತೆಗಳು ಋಷಿಗಳು ಎಲ್ಲರೂ ಕೂಡ ಕೊಂಡಾಡಿದ್ದಾರಂತೆ.

ಅಹೋಽಸ್ಯ ತಪಸೋ ವೀರ್ಯಮಹೋಽಸ್ಯ ಶ್ರುತಮದ್ಭುತಮ್ ॥ (10.6 ಹರಿವಂಶಪರ್ವ)

ತತ್ರ ದಿವ್ಯಾಮ್ಬರಧರಾ ದಿವ್ಯಾಭರಣಭೂಷಿತಾ ॥ (10.7 ಹರಿವಂಶಪರ್ವ)

ಎಷ್ಟು ಜ್ಞಾನ ಇದೆ, ಎಷ್ಟು ತಪಸ್ಸು, ಎಂತಹ ಪರಾಕ್ರಮ ಇವನದು, ಎಷ್ಟು ಭಕ್ತಿಯಿಂದ ಯಜ್ಞವನ್ನು ಮಾಡುತ್ತಾ ಇದ್ದಾನೆ ಅಂತ ಕೊಂಡಾಡಿದ್ದಾರೆ ಅಲ್ಲಿ ಈ ಯಜ್ಞವನ್ನು ಮಾಡಿದಾಗ ಒಂದು ಹೆಣ್ಣು ಮಗು ಆಗುತ್ತೆ ಇಲಾ ಎಂಬುದಾಗಿ ಅವಳಿಗೆ ಹೆಸರನ್ನು ಇಡುತ್ತಾರೆ. ಶ್ರೀಮದ್ಭಾಗವತದಲ್ಲಿ ಕೆಲವು ವಿಷಯಗಳನ್ನು ಹೇಳುತ್ತಾರೆ ಇಲಾ ಹುಟ್ಟಿದಾಗ ಇವನು ಹೋಗಿ ಕೇಳುತ್ತಾನೆ ವಸಿಷ್ಠರಿಗೆ ಗಂಡು ಮಗು ಆಗಬೇಕು ಅಂತ ಸಂಕಲ್ಪ ಮಾಡಿ ಯಜ್ಞವನ್ನು ಮಾಡಿಸಿದ್ದು ಹೆಣ್ಣು ಮಗು ಆಯಿತಲ್ಲ. ನನಗೆ ಹೆಣ್ಣು ಮಗು ಆಯಿತು ಅನ್ನುವ ದುಃಖಕ್ಕಿಂತಲೂ ನೀವು ಯಜ್ಞವನ್ನು ಮಾಡಿಸಿದ್ದೀರಿ ವಸಿಷ್ಠರು ನಿಮ್ಮ ಮಂತ್ರ, ನಿಮ್ಮ ತಂತ್ರಗಳು ಅತ್ಯಂತ ಶುದ್ಧವಾದ ರೀತಿಯಲ್ಲಿ ಇರುವ ಕ್ರಮ ಹೀಗಿರುವಾಗ ನೀವು ನಿಮ್ಮ ಅಧೀನರಾದ ನಿಮ್ಮ ಶಿಷ್ಯರಾದ ಋತ್ವಿಜರು ಎಲ್ಲರೂ ಅಷ್ಟು ಚೆನ್ನಾಗಿ ಯಜ್ಞವನ್ನು ಮಾಡಿಸಿದಾಗ ನನ್ನ ಸಂಕಲ್ಪಕ್ಕೆ ತಕ್ಕಂತೆ ಗಂಡು ಮಗು ಆಗಬೇಕಾಗಿತ್ತಲ್ಲ ಯಾಕೆ ಆಗಿಲ್ಲ ಅಂತ ಕೇಳಿದಾಗ ಹೋತೃವಿಗೆ ಕೇಳುತ್ತಾರೆ. ನೀನು ಏನು ಅಂತ ಪ್ರಾರ್ಥನೆ ಮಾಡಿದಿ ಹೇಗೆ ಮಂತ್ರವನ್ನು ಹೇಳಿದಿ ಅಂತ ಅವನು ಹೇಳಿದ ಹೆಣ್ಣು ಮಗು ಆಗಬೇಕು ಅಂತ ನಾನು ಪ್ರಾರ್ಥನೆ ಮಾಡಿದ್ದು ದೇವರಿಗೆ ಯಾಕೆ ಅಂದರೆ ಶ್ರದ್ಧಾದೇವಿ ಮನುವಿನ ಪತ್ನಿ ಹಾಗೆ ಬಂದು ನನಗೆ ಪ್ರಾರ್ಥನೆ ಮಾಡಿಕೊಂಡಿದ್ದಾಳೆ. ಅವಳ ಪ್ರಾರ್ಥನೆಗೆ ತಕ್ಕಂತೆ ನಾನು ಮಂತ್ರ ಹೇಳಿದ್ದು, ಹೆಣ್ಣು ಮಗು ಆದದ್ದು ತಪ್ಪೇನಿಲ್ಲ ಅದರೊಳಗೆ ಅಂತ ಆಗ ವಸಿಷ್ಠರು ಸತ್ಯ ಸಂಗತಿಯನ್ನು ವೈವಸ್ವತ ಮನುವಿಗೆ ತಿಳಿಸುತ್ತಾರೆ ಮಂತ್ರದ ದೋಷ ಅಲ್ಲ, ಋತ್ವಿಜನ ತಪ್ಪಲ್ಲ, ನಿನ್ನ ಹೆಂಡತಿ ಆ ರೀತಿ ಅಪೇಕ್ಷೆ ಪಟ್ಟದ್ದಕ್ಕೆ ಹೆಣ್ಣು ಮಗು ಆಗಿದೆ. ಸರಿ, ಈಗ ನನಗೆ ಗಂಡು ಮಗು ಬೇಕು ಅಂತ ವೈವಸ್ವತ ಮನು ಪ್ರಾರ್ಥನೆ ಮಾಡಿದಾಗ ಆ ಮಿತ್ರ ವರುಣರಲ್ಲಿ ಅಂತರ್ಯಾಮಿಯಾದ ಮಿತ್ರನಾಮಕನಾದ, ವರುಣನಾಮಕನಾದ ಪರಮಾತ್ಮನಿಗೆ ಶರಣು ಹೋಗುತ್ತಾರೆ ವಸಿಷ್ಠರು.

'ಮಾನಾತ್ ತ್ರಾತೀತಿ ಮಿತ್ರಃ' ಜ್ಞಾನವನ್ನು ಕೊಟ್ಟು ರಕ್ಷಣೆ ಮಾಡುತ್ತಾನೆ ಆದ್ದರಿಂದ ಪರಮಾತ್ಮನಿಗೆ ಮಿತ್ರ ಅನ್ನುತ್ತಾರೆ, ಸರ್ವಶ್ರೇಷ್ಠವಾದ ಸುಖ ಬಲ ಪರಮಾತ್ಮನಿಗೆ ಇದೆ ಆದ್ದರಿಂದ ಅವನಿಗೆ ವರುಣ ಎಂಬುದಾಗಿ ಭಗವಂತನನ್ನು ಕರೆಯುತ್ತಾರೆ. ಆ ಮಿತ್ರ ವರುಣರಲ್ಲಿ ಅಂತರ್ಯಾಮಿಯಾದ ಭಗವಂತನಿಗೆ ವಸಿಷ್ಠರು ಶರಣು ಹೋಗಿ ಇವನು ಪುತ್ರನಾಗಬೇಕು ಅಂತ ಪ್ರಾರ್ಥನೆ ಮಾಡಿದಾಗ ಇಲ ಪೌರುಷವನ್ನು ಪಡೆಯತ್ತಾಳೆ ಆಗ ಅವನಿಗೆ ಸುದ್ಯುಮ್ನ ಎಂಬ ನಾಮಕರಣವನ್ನು ಮಾಡುತ್ತಾರೆ. ಮತ್ತೆ ಒಂದು ದಿನ ರುದ್ರ ದೇವರು ಇಲಾವ್ರತ ಖಂಡದಲ್ಲಿ ಇದ್ದಾರೆ ಅಲ್ಲಿ ಇವನು ತನ್ನ ಎಲ್ಲಾ ಪರಿವಾರದೊಂದಿಗೆ ಹೋಗುತ್ತಾನೆ ಪುನಃ ಹೆಣ್ಣು ಆಗುತ್ತಾನೆ, ಇವನು ಮಾತ್ರ ಅಲ್ಲ ಇವನ ಜೊತೆಗೆ ಹೋದಂತಹ ಎಲ್ಲ ಸೈನಿಕರು, ಕುದುರೆಗಳು ಕೂಡ ಹೆಣ್ಣು ಆಗುತ್ತವೆ ಯಾಕೆಂದರೆ ಯಾರು ಇಲ್ಲಿ ಬರುತ್ತಾರೋ ಅವರೆಲ್ಲ ಹೆಣ್ಣಾಗಬೇಕು ಅಂತ ರುದ್ರ ದೇವರ ಶಾಪ ಇದೆ. ಯಾವಾಗಲೂ ಕೂಡ ಪಾರ್ವತಿಯ ಜೊತೆಗೆ ಏಕಾಂತದಲ್ಲಿ ವಾಸವಾಗಿರುವಾಗ ಒಂದು ಬಾರಿ ಋಷಿಗಳು, ಮುನಿಗಳು ಹೇಳದೇ ಕೇಳದೇ ಒಳಗೆ ಪ್ರವೇಶ ಮಾಡಿದಾಗ ಪಾರ್ವತಿಗೆ ಸಂಕೋಚವಾಗುತ್ತೆ ಆಗ ಅವಳು ಇಲ್ಲಿ ಬಂದವರೆಲ್ಲ ಹೆಣ್ಣಾಗಬೇಕು ಅಂತ ಹೀಗಾಗಿ ಇವನು ಮತ್ತೆ ಹೆಣ್ಣು ಆಗುತ್ತಾನೆ. ಮತ್ತೆ ಇವನು ಪುನಃ ವಸಿಷ್ಠರರಿಗೆ ಶರಣು ಹೋದಾಗ ವಸಿಷ್ಠರು ಈ ಬಾರಿ ರುದ್ರಾಂತರ್ಯಾಮಿಯಾದ ರುದ್ರನಾಮಕನಾದ ಪರಮಾತ್ಮನಿಗೆ ಶರಣು ಹೋಗುತ್ತಾರೆ ಯಾಕೆಂದರೆ ರುದ್ರ ದೇವರ ಶಾಪದಿಂದ ಹೀಗಾಗಿದೆ.

ಋಜಂ ದ್ರಾವ್ಯತೆ ಯಸ್ಮಾತ್ ರುದ್ರಃ ತಸ್ಮಾತ್ ಜನಾರ್ದನಃ ॥ (ತತ್ವ ಮಂಜರಿ)

ಎಲ್ಲ ವಿಧವಾದ ರೋಗಗಳ ಪರಿಹಾರ ಮಾಡುತ್ತಾನೆ ಅನ್ನುವುದಕ್ಕೋಸ್ಕರ ರುದ್ರನಾಮಕನಾದಂತಹ ರುದ್ರಾಂತರ್ಯಾಮಿಯಾದ ಭಗವಂತ ಅಂತಹ ಪರಮಾತ್ಮನಿಗೆ ಯಾವಾಗ ಶರಣು ಹೋಗುತ್ತಾರೋ ಆಗ ರುದ್ರ ದೇವರು ಹೇಳುತ್ತಾರೆ ನಾನು ಪೂರ್ಣವಾಗಿ ಶಾಪವನ್ನು ವಿಮೋಚನೆ ಮಾಡಲಿಕ್ಕೆ ಸಾಧ್ಯ ಇಲ್ಲ ಒಂದು ತಿಂಗಳು ಗಂಡು ಒಂದು ತಿಂಗಳು ಹೆಣ್ಣು ಆಗುತ್ತಾನೆ ಅಂತ ಒಂದು ತಿಂಗಳು ರಾಜ್ಯ ಆಳುತ್ತಾ ಇದ್ದ ಇನ್ನೊಂದು ತಿಂಗಳು ಅಂತಃಪುರದಲ್ಲಿ ಇರುತ್ತಾ ಇದ್ದ. ಪ್ರಜೆಗಳಿಗೆ ಅಷ್ಟು ಸಂತೋಷವಾಗಲಿಲ್ಲ ಇಂತಹ ರಾಜನಿದ್ದು ಏನು ಪ್ರಯೋಜನ ನಿರಂತರವಾಗಿ ನಮಗೆ ಎಲ್ಲ ಕಷ್ಟಗಳ ಪರಿಹಾರ ಮಾಡುವ ರಾಜನು ಬೇಕು ಅಂತ ಅದಕ್ಕಾಗಿ ಈ ಮಗನಿಂದ ಕಾರ್ಯ ಸರಿ ಆಗುವುದಿಲ್ಲ ಅಂತ ಪುನಃ ತಪಸ್ಸು ಮಾಡಿ ಈ ಇಕ್ಷ್ವಾಕು ನೃಗ, ಶರ್ಯಾತಿ ಮೊದಲಾದಂತಹ ಹತ್ತು ಜನ ಮಕ್ಕಳನ್ನು ವೈವಸ್ವತ ಮನು ಪಡೀತಾನೆ ಅಂತ ಭಾಗವತದಲ್ಲಿ ಕಥೆ ಬರುತ್ತದೆ. ಹರಿವಂಶದಲ್ಲಿ ಆ ಎಲ್ಲ ವಿಚಾರಗಳನ್ನು ಸ್ಪಷ್ಟವಾಗಿ ನಿರೂಪಣೆ ಮಾಡಿಲ್ಲ, ಆ ಇಲ ಹುಟ್ಟಿದ ಮೇಲೆ ಮಿತ್ರಾ ವರುಣರ ಹತ್ತಿರ ಹೋಗುತ್ತಾಳೆ ಮಿತ್ರಾ ವರುಣರೇ, ನಿಮ್ಮ ಪ್ರೇರಣೆಯಂತೆ, ನಿಮ್ಮ ಆಜ್ಞೆಯಂತೆ ನಾನು ಜನಿಸಿದ್ದೇನೆ ನನ್ನ ಕರ್ತವ್ಯ ಏನು, ನಾನೇನು ಮಾಡಬೇಕು ಹೇಳಿ ಅಂತ. ಆಗ ಅವರಿಬ್ಬರೂ ಹೇಳುತ್ತಾರೆ ನೀನು ಈ ವೈವಸ್ವತ ಮನುವಿನ ವಂಶಧರ ಪುತ್ರನಾಗಿ ರಾಜ್ಯವನ್ನು ಆಳಿ ದೊಡ್ಡ ಸೇವೆಯನ್ನು ಮಾಡಬೇಕು ಇದೇ ನಮ್ಮ ಆದೇಶ ಅದಕ್ಕಾಗಿಯೇ ನಿನ್ನನ್ನು ನಾವು ಹುಟ್ಟಿಸಿದ್ದೇವೆ, ನೀನು ನಿಮ್ಮ ತಂದೆಯ ಹತ್ತಿರನೇ ಹೋಗು ಅಂತ ಕೊಟ್ಟು ಕಳಿಸುತ್ತಾರೆ ಮಿತ್ರಾ ಹಾಗೂ ವರುಣರು.

ಮನೋರ್ವಂಶಧರಃ ಪುತ್ರಸ್ತ್ವಮೇವ ಚ ಭವಿಷ್ಯಸಿ । (10.14 ಹರಿವಂಶಪರ್ವ)

ಅವರೇ ಹೇಳುತ್ತಾರೆ ನೀನು ಈಗ ಹೆಣ್ಣಾಗಿದ್ದೀ, ಮುಂದೆ ನಿಮ್ಮ ಮನುವಿನ ವಂಶವನ್ನ ಧಾರಣೆ ಮಾಡುವ ಪ್ರವರ್ತನೆ ಮಾಡುವ ಮಗನಾಗುತ್ತೀಯಾ ನೀನು ಅಂತ ಆ ಮಿತ್ರಾ, ವರುಣರು ಹೇಳಿರುತ್ತಾರೆ. ಮಿತ್ರಾ,



ವರುಣರು ಆ ರೀತಿ ಇಲಾ ದೇವಿಗೆ ಹೇಳಿದ್ದಾರೆ ಅನ್ನುವ ಮಾತು ಮಾತ್ರ ಇಲ್ಲಿ ಬರುತ್ತದೆ ಭಾಗವತದಲ್ಲಿ ಹೇಳಿದ ವಿಷಯವನ್ನು ಇಲ್ಲಿ ನಾವು ಸೇರಿಸಿಕೊಂಡರೆ ಈ ಮಧ್ಯದಲ್ಲಿ ಮನು ವಸಿಷ್ಠರಿಗೆ ಮಾಡಿದ ಪ್ರಾರ್ಥನೆ, ವಸಿಷ್ಠರು ಮಿತ್ರಾ ವರುಣರಿಗೆ ಮಾಡಿದ ಪ್ರಾರ್ಥನೆ. ಮಿತ್ರಾ ವರುಣರಲ್ಲಿ ಅಂತರ್ಯಾಮಿಯಾದ ಭಗವಂತನಿಗೆ ಸಲ್ಲಿಸಿದಂತಹ ಪ್ರಾರ್ಥನೆ ಅದಕ್ಕನುಗುಣವಾಗಿ ಮಿತ್ರಾ ವರುಣರು ಇವಳಿಗೆ ನೀನು ಗಂಡಸು ಆಗು ಅಂತ ವರ ಕೊಟ್ಟದ್ದು. ಇದನ್ನು ನಾವು ಜೋಡಿಸಿಕೊಂಡರೆ ಆ ಮಧ್ಯದಲ್ಲಿ ಮಾಡಿದ ವಸಿಷ್ಠರ ತಪಸ್ಸು, ಅವರ ಪ್ರಾರ್ಥನೆಗೆ ಮಿತ್ರಾ ವರುಣರು ಸಂತುಷ್ಟರಾಗಿ ಇವಳಿಗೆ ನೀನು ಗಂಡಸು ಆಗು, ಪೌರುಷವನ್ನು ಹೊಂದು ಎಂಬುದಾಗಿ ಅನುಗ್ರಹ ಮಾಡಿದ್ದಾರೆ ಅಂತ ನಾವು ತಿಳಿಯಬೇಕು. ಆ ರೀತಿ ಸುದ್ಯುಮ್ನ ತಾನು ಪೌರುಷವನ್ನು ಪಡೆದಿದ್ದಾನೆ ಒಂದು ತಿಂಗಳು ಗಂಡು, ಒಂದು ತಿಂಗಳು ಹೆಣ್ಣು, ಹೆಣ್ಣಾದಾಗ ಚಂದ್ರನ ಮಗನಾದ ಬುಧ ಇವಳಲ್ಲಿ ಪುರುರವಸ್ ಎಂಬ ಮಗನನ್ನು ಪಡೆಯುತ್ತಾನೆ ಎಂಬುದಾಗಿ ಹೇಳುತ್ತಾರೆ. ಈ ಸುದ್ಯುಮ್ನ ಗಂಡು ಆದಾಗ ಇವನಿಗೆ ಮೂರು ಜನ ಮಕ್ಕಳು ಉತ್ಕಲ, ಗಯ, ವಿನತಾಶ್ವ ಅಂತ ಉತ್ಕಲ ದೇಶ ಅಂತ ಆ ಉತ್ಕಲನಿಂದ ಪ್ರಸಿದ್ಧವಾಗುತ್ತೆ, ವಿನತಾಶ್ವ ಪಶ್ಚಿಮ ದೇಶದಲ್ಲಿ, ಗಯ ಪೂರ್ವ ದೇಶದಲ್ಲಿ ರಾಜನಾಗಿ ರಾಜ್ಯವನ್ನು ಆಳುತ್ತಾನೆ ಎಂಬುದಾಗಿ ಈ ಸುದ್ಯುಮ್ನನ ಚರಿತ್ರೆಯನ್ನು ತಿಳಿಸುತ್ತಾರೆ.

ಇಕ್ಷ್ವಾಕು ಮೊದಲಾದ ಹತ್ತು ಜನರಲ್ಲಿ ಆ ಇಕ್ಷ್ವಾಕು ಮಧ್ಯ ದೇಶವನ್ನು ಆಳುತ್ತಾನೆ. ಈ ಸುದ್ಯುಮ್ನನಿಗೆ ಪ್ರತಿಷ್ಠಾನ ಅನ್ನುವ ಪಟ್ಟಣದಲ್ಲಿ ರಾಜ್ಯವನ್ನು ಆಳುವುದಕ್ಕೆ ಕೊಡುತ್ತಾರೆ ಪ್ರಯಾಗ ಕ್ಷೇತ್ರದ ಹತ್ತಿರದಲ್ಲಿ ಇರುವಂಥಹದ್ದು ಪ್ರತಿಷ್ಠಾನ ಎಂಬಂತಹ ಪುರ. ಇವತ್ತಿಗೂ ಆ ಪ್ರತಿಷ್ಠಾನಪುರದ ಅವಶೇಷಗಳು ಆ ಪ್ರಾಚೀನವಾದ ಪ್ರತಿಷ್ಠಾನಪುರ ಅನ್ನುವಂತಹ ಹೆಸರು ಅಲ್ಲಲ್ಲಿ ಪ್ರಯಾಗದ ಸಮೀಪದ ಕ್ಷೇತ್ರದಲ್ಲಿ ಶಿಲಾ ಲೇಖಗಳಲ್ಲಿ ನಮಗೆ ಸಿಗುತ್ತದೆ ಅಂತಹ ಆ ಪ್ರತಿಷ್ಠಾನಪುರದಲ್ಲಿ ಅವನು ವಾಸವಾಗಿದ್ದಾನೆ. ಈ ಸುದ್ಯುಮ್ನನ ಮಗನಾದ ಉತ್ಕಲನಿಗೆ ಧೃಷ್ಟಕ, ಅಂಬರೀಷ, ದಂಡಕ ಅನ್ನುವ ಮಕ್ಕಳಾಗಿದ್ದಾರೆ ಆ ದಂಡಕನಿಂದಲೇ ದಂಡಕಾರಣ್ಯ ಅಂತ ಪ್ರಸಿದ್ಧವಾದದ್ದು. ಆ ದಂಡಕಾರಣ್ಯದ ಮಹಿಮೆಯನ್ನು ಒಂದು ಮಾತಿನಲ್ಲಿ ಹರಿವಂಶ ತಿಳಿಸುತ್ತದೆ.

ವನಂ ತಲ್ಲೋಕವಿಖ್ಯಾತಂ ತಾಪಸಾನಾಮನುತ್ತಮಮ್ । (10.25 ಹರಿವಂಶಪರ್ವ)

ತತ್ರ ಪ್ರವಿಷ್ಟಮಾತ್ರಸ್ತು ನರಃ ಪಾಪಾತ್ ಪ್ರಮುಚ್ಯತೇ ॥ (10.26 ಹರಿವಂಶಪರ್ವ)

ದಂಡಕಾರಣ್ಯೇ ಅಂತ ನಾವೆಲ್ಲ ಈಗ ಸಂಕಲ್ಪ ಮಾಡುತ್ತೇವೆ ಅಂತಹ ದಂಡಕಾರಣ್ಯದೊಳಗೆ ಪ್ರವೇಶ ಮಾಡುವ ಮಾತ್ರದಿಂದ ಪಾಪಗಳ ಪರಿಹಾರವಾಗುತ್ತದೆ ಅಷ್ಟು ಜನ ತಪಸ್ವಿಗಳು ತಪಸ್ಸು ಮಾಡಿದ ತಪೋಭೂಮಿ ಇದು ದಂಡಕಾರಣ್ಯ ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ.

ಮುಂದೆ ಇದೇ ವೈವಸ್ವತ ಮನುವಿನ ಮತ್ತೊಬ್ಬ ಮಗ ಶರ್ಯಾತಿ. ಆ ಶರ್ಯಾತಿಗೆ ಆನರ್ತ ಅಂತ ಒಬ್ಬ ಮಗ, ಸುಕನ್ಯಾ ಅಂತ ಮಗಳು ಆ ಸುಕನ್ಯೆಯ ವಿಸ್ತಾರವಾದ ಕಥೆ ಭಾಗವತದಲ್ಲಿ ಬಂದಿದೆ. ಚ್ಯವನ ಋಷಿಗಳ ಆಶ್ರಮದಲ್ಲಿ ಇವರೆಲ್ಲ ಪ್ರವೇಶ ಮಾಡಿದಾಗ ಚ್ಯವನ ಋಷಿಗಳ ಎರಡು ತೇಜೋಮಯವಾದ ಕಣ್ಣುಗಳು ಇವಳಿಗೆ ವಿಶೇಷವಾದ ಕುತೂಹಲವನ್ನ ಕೆರಳಿಸಿದೆ. ಹುತ್ತು, ಹುತ್ತಿನಲ್ಲಿ ಕುಳಿತು ತಪಸ್ಸು ಮಾಡುತ್ತಾ ಇದ್ದಾರೆ ಕಣ್ಣುಗಳು ಮಾತ್ರ ಕಾಣಿಸುತ್ತಾ ಇದೆ ಬಹಳ ತೇಜಸ್ವಿಯಾದ ಕಣ್ಣುಗಳು ಏನಿರಬಹುದು ಅಂತ ಕುತೂಹಲದಿಂದ ಮುಳ್ಳಿನಿಂದ ಚುಚ್ಚಿದ್ದಾಳೆ ರಕ್ತ ಹರಿದು ಬರುತ್ತಾ ಇದೆ ಗಾಬರಿಯಾಗಿ ಓಡಿ ಬಂದಿದ್ದಾಳೆ. ಆದರೆ ಶರ್ಯಾತಿ ರಾಜ, ಮಂತ್ರಿ, ಸೈನಿಕರು ಎಲ್ಲರಿಗೂ ಉದರ ರೋಗ ಆಗಿದೆ ಮಲಮೂತ್ರಗಳ ನಿರೋಧವಾಗಿದೆ ಬಹಳ ಉದರ ರೋಗವಾಗಿ ಒದ್ದಾಡುತ್ತಾ

ಇರುವಾಗ ಯಾರು ಏನು ಅಪರಾಧ ಮಾಡಿದ್ದೀರಿ ಹೇಳಿ ಮುಚ್ಚಿಟ್ಟುಕೊಳ್ಳಬೇಡಿ ಅಂತ ಕೇಳುತ್ತಾನೆ. ವೈದ್ಯರನ್ನು ಕರೆಸುವ ಪ್ರಮೇಯವೇ ಇಲ್ಲ ಒಬ್ಬರಿಗೆ ಇಬ್ಬರಿಗೆ ಆಗಬಹುದು ಇಷ್ಟೆಲ್ಲ ಜನರಿಗೆ ಒಂದೇ ತರಹದ ಸಮಸ್ಯೆ ಇದೆ ಅಂದರೆ ಏನೋ ಒಂದು ಅಪರಾಧ ಆಗಿದೆ. ಏನು ಅಪರಾಧ ಮಾಡಿದ್ದೀರಿ ಹೇಳಿ ಅಂತ ಕೇಳಿದಾಗ ಸುಕನ್ಯೆ ಇದ್ದ ಸಂಗತಿಯನ್ನು ಹೇಳಿದಾಗ ಚ್ಯವನ ಋಷಿಗಳಿಗೆ ಶರಣು ಹೋಗಿ ಆ ಸುಕನ್ಯೆಯನ್ನೇ ಕೊಟ್ಟು ಮದುವೆ ಮಾಡಿದರೇ ನಾನು ಇದಕ್ಕೆ ಕ್ಷಮಾ ಮಾಡುತ್ತೇನೆ ಅಂತ ಅವರು ಹೇಳಿದ್ದಾರೆ ಹಿಂದೆ ಮುಂದೆ ಆಲೋಚನೆ ಮಾಡದೆ ಸುಕನ್ಯೆಯನ್ನು ಕೊಟ್ಟು ಮದುವೆ ಮಾಡಿದ್ದಾನೆ. ಅವರು ವೃದ್ಧರು, ಇವಳು ತರುಣಿ ಆದರೂ ಕೂಡ ತಂದೆಯ ಹಿತಕ್ಕೆ, ರಾಜ್ಯದ ಹಿತಕ್ಕಾಗಿ ಅವಳು ತ್ಯಾಗ ಮಾಡಿದ್ದಾಳೆ ಮದುವೆ ಮಾಡಿಕೊಂಡಿದ್ದಾಳೆ ಆದರೆ ಅವಳ ಭಕ್ತಿ, ಅವಳ ಶ್ರದ್ಧೆ, ಅವಳ ಪಾತಿವ್ರತ್ಯಕ್ಕೆ ಒಲಿದು ದೇವರು ಅಶ್ವಿ ದೇವತೆಗಳ ದ್ವಾರಾ ಆ ಚ್ಯವನ ಋಷಿಗಳಿಗೆ ಉತ್ತಮವಾದ ತಾರುಣ್ಯವನ್ನು ಕೊಡಿಸಿ ಉತ್ತಮ ತರುಣರಾಗಿ ಇವಳ ಜೊತೆಗೆ ಸುಖವಾಗಿರುತ್ತಾರೆ ಎಂಬ ವಿಷಯವನ್ನು ಶ್ರೀಮದ್ಭಾಗವತ ನಮಗೆ ತಿಳಿಸುತ್ತದೆ.

ಇವನ ಮಗ ಆನರ್ತ, ಆನರ್ತನ ಮಗ ರೇವ, ರೇವನ ಮಗ ರೈವತ ಅವನಿಗೆ ಕಕುದ್ಮೀ ಎಂಬುದಾಗಿ ಕರೀತಾರೆ, ನೂರು ಜನ ಮಕ್ಕಳು ಅದರಲ್ಲಿ ಹಿರಿಯ ಕಕುದ್ಮೀ ರೈವತ ಅಂತೂ ಅವನಿಗೆ ಹೆಸರು. ಅವನು ತನ್ನ ಮಗಳಾದ ರೇವತಿ ಅವಳಿಗೆ ಮದುವೆಯಾಗಬೇಕು ವರ ಯಾರು ಅಂತ ಬ್ರಹ್ಮ ದೇವರಿಗೆ ಕೇಳಿಕೊಂಡು ಬರುತ್ತೇನೆ ಅಂತ ಬ್ರಹ್ಮ ದೇವರ ಹತ್ತಿರ ಹೋಗುತ್ತಾನೆ. ಬ್ರಹ್ಮ ದೇವರ ಹತ್ತಿರ ಹೋಗಿ ಒಂದೇ ಒಂದು ಮುಹೂರ್ತ ಅಲ್ಲಿ ಸಂಗೀತ ಕಾರ್ಯಕ್ರಮ, ಗಂಧರ್ವರು ಸಂಗೀತವನ್ನು ಹೇಳುತ್ತಾ ಇರುತ್ತಾರೆ, ಭಗವಂತನ ಗುಣಗಾನವನ್ನು ಮಾಡುತ್ತಾ ಇರುತ್ತಾರೆ. ಆ ಭಗವಂತನ ಗುಣಗಾನವನ್ನು ಮಾಡುವಂತಹ ಗಂಧರ್ವರ ಸಂಗೀತ ಮುಗಿದ ಮೇಲೆ ಬ್ರಹ್ಮ ದೇವರನ್ನು ಮಾತನಾಡಿಸೋಣ ಅಂತ ಸ್ವಲ್ಪ ಹೊತ್ತು ನಿಂತು ಆನಂತರ ಬ್ರಹ್ಮ ದೇವರನ್ನ ಆಲೋಚನೆ ಮಾಡುವಾಗ ಎಷ್ಟೋ ಯುಗಗಳು ಕಳೆದುಹೋಗಿರುತ್ತದೆ. ಇವನು ಅನೇಕ ರಾಜಕುಮಾರರ ಹೆಸರುಗಳನ್ನು ಹೇಳುತ್ತಾನೆ ಬ್ರಹ್ಮ ದೇವರ ಅನ್ನುತ್ತಾರೆ ಆ ರಾಜಕುಮಾರರು ಇಲ್ಲ, ಅವರ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಯಾರೂ ಇಲ್ಲ, ಎಷ್ಟೋ ಯುಗಗಳು ಕಳೆದು ಹೋಗಿವೆ ಈಗ. ಈಗ ಬಲರಾಮ ದೇವರು ಇದ್ದಾರೆ, ಶ್ರೀಕೃಷ್ಣ ಪರಮಾತ್ಮನ ಅಣ್ಣ ಆ ಬಲರಾಮನಿಗೆ ಕೊಟ್ಟು ಮದುವೆ ಮಾಡು ಯದ್ಯಪಿ ವಯಸ್ಸಿನ ವ್ಯತ್ಯಾಸ ಇದೆ, ಯುಗಗಳ ವ್ಯತ್ಯಾಸ ಆಗಿ ಹೋಗಿದೆ ಆದರೂ ನಿನ್ನ ಪರಿಸ್ಥಿತಿಯನ್ನು ನೋಡಿ ನಾನು ವಿಶೇಷವಾಗಿ ಅನುಗ್ರಹವನ್ನು ಮಾಡುತ್ತೇನೆ ಅಂತ ಹೇಳಿದಾಗ ಬಲರಾಮನಿಗೆ ತನ್ನ ಮಗಳಾದ ರೇವತಿಯನ್ನು ಕೊಟ್ಟು ಮದುವೆ ಮಾಡುತ್ತಾನೆ. ಬಲರಾಮ ದೇವರು ಶುಕ್ಲ ಕೇಶಾವೇಶ, ಪರಮಾತ್ಮನ ವಿಶೇಷ ಸನ್ನಿಧಾನ, ಸ್ವಯಂ ಶೇಷ ದೇವರು ಬ್ರಹ್ಮಾಂಡವನ್ನೇ ತಲೆಯ ಮೇಲೆ ಹೊತ್ತಂತಹ ಮಹಾನುಭಾವರು, ಜೀವಾಭಿಮಾನಿ ದೇವತೆಗಳು, ಅಹಂಕಾರ ತತ್ವಾಭಿಮಾನಿ ದೇವತೆಗಳು, ಮಹಾಸಾಮರ್ಥ್ಯ ಹೀಗಾಗಿ ಅವಳು ಪೂರ್ವಯುಗದ ಪ್ರಮಾಣದವಳು ಎತ್ತರ ಇದ್ದರೂ ಕೂಡ ತನಗೆ ಯೋಗ್ಯವಾಗುವ ರೀತಿಯಲ್ಲಿ ಅವಳನ್ನು ಹಲಾಯುಧದಿಂದ ಸರಿ ಮಾಡಿಕೊಂಡು ಅವಳ ಜೊತೆಗೆ ಸುಖವಾಗಿ ಇದ್ದಾರೆ ಬಲರಾಮ ದೇವರು ಎಂಬ ವಿಚಾರವನ್ನು ತಿಳಿಸುತ್ತಾರೆ.

ಬಲರಾಮ ದೇವರ ಅದ್ಭುತವಾದ ಮಹಿಮೆಯನ್ನು ಭಾಗವತ ಬೇಕಾದಷ್ಟು ಕೊಂಡಾಡುತ್ತದೆ. ಯಮುನಾ ದೇವಿ ತಾನು ವಿಹಾರ ಮಾಡುವ ಸ್ಥಳದಲ್ಲಿ ಬರಬೇಕು ಅಂತ ಹಲಾಯುಧವನ್ನು ಹಾಕಿ ಆ ಯಮುನಾ ನದಿಯನ್ನೇ ಹತ್ತಿರ ಎಳೆದಂತಹ ಮಹಾನುಭಾವರು, ತಮ್ಮ ಹತ್ತಿರ ಹರಿಯುವಂತೆ ಮಾಡಿಕೊಂಡವರು, ಹಸ್ತಿನಾವತಿಯನ್ನೇ

ಸೆಳೆದು ಗಂಗೆಯಲ್ಲಿ ಮುಳಿಗುಸುತ್ತೇನೆ ಅಂತ ಹೊರಟಂತಹ ಮಹಾನುಭಾವರು. ಬ್ರಹ್ಮಾಂಡವನ್ನೇ ಹೊತ್ತವರಿಗೆ ಇದೆಲ್ಲ ಬಹಳ ದೊಡ್ಡದೇನಲ್ಲ ಅಂತಹ ಬಲರಾಮ ದೇವರ ಒಂದು ವಿಶಿಷ್ಟವಾದ ಮಹಿಮೆಯನ್ನು ಇಲ್ಲಿ ತಿಳಿಸಿಕೊಡುತ್ತಾರೆ.

ಜನಮೇಜಯ ವೈಶಂಪಾಯನರಿಗೆ ಕೇಳುತ್ತಾನೆ ಎಷ್ಟೋ ಯುಗಗಳು ಕಳೆದಿತ್ತು ಅನ್ನುತ್ತೀರಿ ಅವಳು ಮದುವೆಯಾಗಿ ಮುದುಕಿಯಾಗಿ ಹೋಗಬೇಕು ಅವಳು ಹಾಗೆಯೇ ತರುಣಿಯಾಗಿ ಹೇಗೆ ಇದ್ದಳು ಅಂತ ಅದಕ್ಕೆ ವೈಶಂಪಾಯನರು ಹೇಳುತ್ತಾರೆ.

ನ ಜರಾ ಕ್ಷುತ್ಪಿಪಾಸೇ ವಾ ನ ಮೃತ್ಯುರ್ಭರತರ್ಷಭ ।
ಋತುಚಕ್ರಂ ನ ಭವತಿ ಬ್ರಹ್ಮಲೋಕೇ ಸದಾನಘ ॥ (11.3 ಹರಿವಂಶಪರ್ವ)

ಆ ಬ್ರಹ್ಮ ಲೋಕದ ಒಂದು ವೈಶಿಷ್ಟ್ಯ ಅಲ್ಲಿದ್ದರೆ ಮುಪ್ಪು, ಹಸಿವೆ, ನೀರಡಿಕೆ, ಮರಣ ಯಾವ ಕಾಲದ ವಿಕಾರ ಏನೂ ಆಗುವುದಿಲ್ಲ ಅನ್ನುವುದಕ್ಕೋಸ್ಕರ ಇವನು ಅದೇ ಯುಗಗಳನ್ನು ಈ ಲೋಕದಲ್ಲಿ ಕಳೆದಿದ್ದರೆ ಇವನಿಗೆ ಆ ಅಲ್ಲ ವಿಕಾರಗಳು ಅನಿವಾರ್ಯ. ಆದರೆ ಬ್ರಹ್ಮ ಲೋಕದಲ್ಲಿದ್ದ ಅನ್ನುವುದಕ್ಕೋಸ್ಕರ ಅಷ್ಟು ಯುಗಗಳು ಉರುಳಿದರೂ ಕೂಡ ತರುಣನಾಗಿದ್ದಾನೆ ಯುವಕನಾಗಿದ್ದಾನೆ ದಷ್ಟಪುಷ್ಟನಾಗಿ ಇದ್ದಾನೆ ರೈವತ ರಾಜ ಹಾಗೂ ರೇವತಿ ಇಬ್ಬರೂ ಚೆನ್ನಾಗಿದ್ದಾರೆ ಎಂಬುದಾಗಿ ವೈಶಂಪಾಯನರು ಉತ್ತರವನ್ನು ತಿಳಿಸುತ್ತಾರೆ. ಆ ಲೋಕದಲ್ಲಿ ಇದ್ದವರೇ ಹೀಗೆ ಅಂದರೆ ಬ್ರಹ್ಮಾದಿ ದೇವತೆಗಳಿಗೆ ಯಾವುದೇ ತರಹದ ಈ ಕಾಲಕೃತವಾದ ವಿಕಾರ ಇಲ್ಲ ಅನ್ನುವುದನ್ನು ಚೆನ್ನಾಗಿ ನಾವು ತಿಳಿಯಬೇಕು ಅದು ಆ ದೇವತೆಗಳ ಮಹಾಮಹಿಮೆ.

ಈ ಕಕುದ್ಮೀ-ರೈವತ ಇವನ ತಮ್ಮಂದಿರು ಇವನು ನೂರು ಜನರಿಗೆ ಹಿರಿಯ ಅಣ್ಣ ಆದರೆ ಇವನ ತಮ್ಮಂದಿರೆಲ್ಲ ಇದ್ದರಲ್ಲ ಅವರೆಲ್ಲ ಕುಶಸ್ಥಲೀ ಅದು ಪ್ರಾಚೀನವಾದದ್ದೇ ಇವನ ಕಾಲದಲ್ಲಿ ಆದದ್ದು ಆದರೆ ಶ್ರೀಕೃಷ್ಣ ಪರಮಾತ್ಮ ಪುನಃ ಅದರ ವಿಶೇಷವಾದ ಉದ್ಧಾರವನ್ನು ಮಾಡಿದ್ದಾನೆ ಅಂತ ಸತ್ಯಧರ್ಮತೀರ್ಥ ಶ್ರೀಪಾದಂಗಳರು ನವಮಸ್ಕಂಧ ವ್ಯಾಖ್ಯಾನದಲ್ಲಿ ತಿಳಿಸುತ್ತಾರೆ ಆ ಕುಶಸ್ಥಲೀ ಅನ್ನುವ ಪಟ್ಟಣ ಮೊದಲು ಇತ್ತು ಅಂತ. ಅಲ್ಲಿ ಇರುವಂತಹ ಇವನ ತಮ್ಮಂದಿರನ್ನೆಲ್ಲಾ ರಾಕ್ಷಸರು ಸೋಲಿಸುತ್ತಾರೆ, ಓಡಿಸಿ ಬಿಡುತ್ತಾರೆ ಆ ರಾಕ್ಷಸರ ಭಯದಿಂದ ಇವರೆಲ್ಲ ದೇಶವನ್ನು ಬಿಟ್ಟು ದೂರ ದೂರ ಸೇರಿಕೊಳ್ಳುತ್ತಾರೆ. ಶರ್ಯಾತಿಯ ಕುಲದಲ್ಲಿ ಬಂದದ್ದರಿಂದ ಇವರಿಗೆ ಶಾರ್ಯಾತರು ಅಂತ ಅರಣ್ಯದಲ್ಲಿ, ಪರ್ವತದಲ್ಲಿ ಗುಹೆಗಳಲ್ಲಿ ಎಲ್ಲಿ ಅವಕಾಶ ಸಿಗುತ್ತದೆ ಅಲ್ಲಿ ಸೇರಿಕೊಳ್ಳುತ್ತಾರೆ ಆದರೆ ಎಲ್ಲರೂ ಪರಮ ಧಾರ್ಮಿಕರು ಸಜ್ಜನರು, ಭಗವದ್ಭಕ್ತರು ಇವರೆಲ್ಲ ಶರ್ಯಾತಿಯ ವಂಶದಲ್ಲಿ ಬಂದ ಈ ಕಕುದ್ಮೀಯ ತಮ್ಮಂದಿರು ಅಲ್ಲಲ್ಲಲ್ಲಿ ಸೇರಿಕೊಂಡು ವಾಸವಾಗಿರುತ್ತಾರೆ ಅಂತ ತಿಳಿಸುತ್ತಾರೆ.

ಮುಂದೆ ಇನ್ನೊಬ್ಬ ಮನುವಿನ ಮಗ ಪೃಷಧ್ರ ಅಂತ ಆ ಪೃಷಧ್ರ-ವೃಷಧ್ರ ಎಂಬುದಾಗಿ ಎರಡೂ ಹೆಸರುಗಳು ಅವನಿಗೆ ಮಹಾಭಾರತದಲ್ಲಿಯೂ ಭಾಗವತದಲ್ಲಿಯೂ ಉಂಟು. ಆ ಪೃಷಧ್ರ ತಾನು ಮನು ಪುತ್ರನಾದರೂ ಕೂಡ ಗುರುಕುಲದಲ್ಲಿ ವಾಸ ಮಾಡಿ ವಿದ್ಯಾಭ್ಯಾಸವನ್ನು ಮಾಡುತ್ತಾನೆ ನಾನು ರಾಜಕುಮಾರ ಅಂತ ನಾನಿದ್ದಲ್ಲಿಯೇ ಬಂದು ಪಾಠ ಹೇಳಬೇಕು ಗುರುಗಳು ಅಂತ ಬಯಸುವುದಿಲ್ಲ ಆ ರೀತಿ ವೈವಸ್ವತ ಮನುವೂ ಅಪೇಕ್ಷೆ ಪಡುವುದಿಲ್ಲ ವಸಿಷ್ಠರ ಆಶ್ರಮದಲ್ಲಿ ಸೇವೆ ಮಾಡಿಕೊಂಡು ವಸಿಷ್ಠರ ಅನುಗ್ರಹವನ್ನು ಪಡೆದು ವಿದ್ಯೆಯನ್ನು ಪಡೆದುಕೋ ಅಂತ ಕೊಟ್ಟುಕಳಿಸುತ್ತಾನೆ. **'ಗುರು ಶುಶ್ರುಯಯಾ ವಿದ್ಯಾ'** ಗುರುಗಳ ಸೇವೆಯನ್ನು ಮಾಡಿದರೆ ಉತ್ತಮವಾದಂತಹ

ವಿದ್ಯೆಯನ್ನು ಪಡೆಯುವುದಕ್ಕೆ ಸಾಧ್ಯ, ಗುರುಗಳ ಅನುಗ್ರಹದಿಂದ ವಿದ್ಯೆ ಚೆನ್ನಾಗಿ ಬರುತ್ತದೆ ಕೇವಲ ಪಾಠ ಕಲಿತರೆ ಮಾತ್ರ ವಿದ್ಯೆ ಬರುವುದಿಲ್ಲ ಅಂತ ಅಷ್ಟು ಭಕ್ತಿ ಶ್ರದ್ಧೆಗಳಿಂದ ಗುರುಗಳ ಸೇವೆಯನ್ನು ಮಾಡುತ್ತಾ ಇರುತ್ತಾನೆ ಸಜ್ಜನ ಸಾತ್ವಿಕ ಆದರೆ ಒಂದು ದಿನ ಗೋವುಗಳ ರಕ್ಷಣೆಯನ್ನು ಮಾಡು ಅಂತ ವಸಿಷ್ಠರು ಇವನಿಗೆ ಆಜ್ಞೆಯನ್ನು ಮಾಡಿರುತ್ತಾರೆ. ರಾತ್ರಿ ಗೋವುಗಳನ್ನು ಕಾಯುವುದಕ್ಕೆ ಅಂತ ಕುಳಿತಿರುತ್ತಾನೆ ಹುಲಿ ಸಿಂಹ ಮೊದಲಾದವುಗಳು ಬಂದು ಗೋವುಗಳನ್ನು ಪೀಡಿಸಬಾರದು ಅಂತ ಖಡ್ಗವನ್ನು ಹಿಡಿದುಕೊಂಡು ಗೋವುಗಳ ರಕ್ಷಣೆ ಮಾಡುತ್ತಾ ರಾತ್ರಿಯೆಲ್ಲಾ ಗೋಷ್ಯವನ್ನು ಸುತ್ತುತ್ತಾ ಇರುತ್ತಾನೆ. ಆ ಸಂದರ್ಭದಲ್ಲಿ ಇದ್ದಕ್ಕಿದ್ದ ಹಾಗೆ ಹುಲಿ ಬರುತ್ತದೆ ಆ ಹುಲಿಯ ಧ್ವನಿ ಕೇಳಿ ಕೂಡಲೇ ಖಡ್ಗವನ್ನು ತೆಗೆದುಕೊಂಡು ಹೋಗಿ ಆ ಹುಲಿಯನ್ನು ಸಂಹಾರ ಮಾಡಬೇಕು ಅಂತ ಖಡ್ಗದಿಂದ ಪ್ರಹಾರ ಮಾಡುತ್ತಾನೆ ರಾತ್ರಿಯಾಗಿದೆ ಕತ್ತಲು ಕಣ್ಣಿಗೆ ಕಂಡಿಲ್ಲ ಹುಲಿಗೆ ಬೀಳಬೇಕಾದ ಪೆಟ್ಟು ಆಕಳಿಗೆ ಬಿದ್ದಿದೆ ಹುಲಿಯ ಕಿವಿ ಮಾತ್ರ ಕತ್ತರಿಸಿದೆ ಹುಲಿ ತಪ್ಪಿಸಿಕೊಂಡು ಹೋಗಿದೆ. ಆಕಳಿನ ಕುತ್ತಿಗೆಗೆ ಪೆಟ್ಟು ಬಿದ್ದು ಆಕಳು ಸತ್ತು ಹೋಯಿತು ಬೆಳಕಾದ ಮೇಲೆ ನೋಡುತ್ತಾನೆ ಗೋಹತ್ಯೆ ಆಗಿದೆ ವಸಿಷ್ಠರಿಗೆ ಹೋಗಿ ನಿವೇದನೆ ಮಾಡಿಕೊಂಡ ನನ್ನಿಂದ ಅಪರಾಧ ಆಗಿದೆ ಅಂತ ತಾನು ಮಾಡಿದ ತಪ್ಪನ್ನು ಮುಚ್ಚಿ ಇಟ್ಟುಕೊಂಡಿಲ್ಲ. ವಸಿಷ್ಠರಿಗೆ ಹೋಗಿ ಪ್ರಾರ್ಥನೆ ಮಾಡಿಕೊಂಡ ನಿವೇದನೆ ಮಾಡಿಕೊಂಡ ವಸಿಷ್ಠರು ಹೇಳಿದರು ಗೋಹತ್ಯೆಯನ್ನು ಮಾಡಿದ್ದಿ ಮಹಾಪಾಪ ಇದು ಅಜ್ಞಾನದಿಂದಾದರೂ ಇದು ಪಾಪ ಆದ್ದರಿಂದ ನೀನು ಪ್ರಾಯಶ್ಚಿತ್ತ ಮಾಡಿಕೊಳ್ಳಲೇಬೇಕು ನೀನು ಗುರುಕುಲದಲ್ಲಿ ಇರುವುದು ಬೇಡ, ಅರಣ್ಯಕ್ಕೆ ಹೊರಟುಹೋಗು ಅಂತ ವಸಿಷ್ಠರು ಹೇಳಿದ್ದಾರೆ. ಎರಡು ಮಾತಾಡಿಲ್ಲ ನನ್ನಿಂದ ತಪ್ಪಾಗಿದೆ ಪಾಪ ನಡೆದಿದೆ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಲೇಬೇಕು ನಾನು ಅರಣ್ಯದಲ್ಲಿ ಹೋಗಿ ತಪಸ್ಸು ಮಾಡುತ್ತೇನೆ ಅಂತ ಅಲ್ಲಿ ತಪಸ್ಸು ಮಾಡಿ ಅಲ್ಲಿ ಉತ್ತಮರಾದ ಒಬ್ಬ ಉಪದೇಶಕರು ಇವನಿಗೆ ದೊರಕಿದ್ದಾರೆ ವ್ಯಾಪಕರು. ಅಂತಹ ಭಗವಂತನ ವಿಶಿಷ್ಟವಾದ ಮಂತ್ರಗಳ ಜಪವನ್ನು ಮಾಡಿಕೊಂಡು ಸಿದ್ಧಿಯನ್ನು ಪಡೆದುಕೊಂಡ ಗುರುಗಳ ಉಪದೇಶಕ್ಕೆ ತಕ್ಕಂತೆ ತಾನೂ ಸಾಧನೆಯನ್ನು ಮಾಡಿಕೊಂಡು ಉತ್ತಮವಾದ ಗತಿಯನ್ನು ಹೊಂದಿದ್ದಾನೆ ಎಂಬುದಾಗಿ ಶ್ರೀಮದ್ಭಾಗವತ ಅವನ ಬಗ್ಗೆ ತಿಳಿಸಿಕೊಡುತ್ತದೆ.

ವೈವಸ್ವತ ಮನುವಿನ ಇನ್ನೊಬ್ಬ ಮಗ ಇಕ್ಷ್ವಾಕು ಅಂತ ವೈವಸ್ವತ ಮನು ಜೋರಾಗಿ ಸೀನಿದಾಗ ಹುಟ್ಟಿದವನು **'ಇಕ್ಷ್ವಾಕುಃ ಕ್ಷುವತೋ ಮನೋಃ'.** ಆ ಇಕ್ಷ್ವಾಕು ಪರಮಧಾರ್ಮಿಕ ಮಹಾಪರಾಕ್ರಮಿ ಅವನಿಗೆ ನೂರು ಜನ ಮಕ್ಕಳು ಅದರಲ್ಲಿ ಜೇಷ್ಠ ಪುತ್ರ ವಿಕುಕ್ಷಿ ಅಂತ ಆ ವಿಕುಕ್ಷಿ, ಇನ್ನೂ ಐವತ್ತು ಜನ ಅವರು ಉತ್ತರ ದೇಶದ ರಕ್ಷಕರಾಗಿದ್ದಾರೆ, ನಲವತ್ತೆಂಟು ಜನ ದಕ್ಷಿಣ ದೇಶದ ರಕ್ಷಕರಾಗಿ ಆ ಇಕ್ಷ್ವಾಕುವಿನ ಮಕ್ಕಳು ಉತ್ತರ ಹಾಗೂ ದಕ್ಷಿಣ ದಿಕ್ಕುಗಳಲ್ಲಿ ರಾಜ್ಯವನ್ನು ಹಂಚಿಕೊಂಡಿದ್ದಾರೆ ರಾಜ್ಯವನ್ನು ಆಳುತ್ತಾ ಇದ್ದಾರೆ. ಈ ಇಕ್ಷ್ವಾಕು ಚಿಕ್ಕವನಾದಾಗ ಒಂದು ದಿನ ಶ್ರಾದ್ಧಕ್ಕಾಗಿ ಪದಾರ್ಥಗಳನ್ನು ತೆಗೆದುಕೊಂಡು ಬರಬೇಕು ಅಂತ ಇಕ್ಷ್ವಾಕು ಕೊಟ್ಟುಕಳಿಸುತ್ತಾನೆ ವಿಕುಕ್ಷಿಯನ್ನು ಅಷ್ಟಕಾ ಶ್ರಾದ್ಧ, ಷಣ್ಯವತಿ ಶ್ರಾದ್ಧಗಳಲ್ಲಿ ಅಷ್ಟಕಾ ಶ್ರಾದ್ಧವನ್ನು ಮಾಡಬೇಕಾಗಿರುತ್ತದೆ ಅದಕ್ಕೋಸ್ಕರ ಬೇಕಾದ್ದನ್ನು ತೆಗೆದುಕೊಂಡು ಬಾ ಅಂತ ವಿಕುಕ್ಷಿಯನ್ನು ಕೊಟ್ಟು ಕಳಿಸುತ್ತಾನೆ ಇಕ್ಷ್ವಾಕು ನೋಡಿ, ಶ್ರಾದ್ಧಕ್ಕೆ ಬೇಕಾದ ಪದಾರ್ಥವನ್ನು ತರುವುದಕ್ಕೆ ಸ್ವತಃ ರಾಜಕುಮಾರನನ್ನೇ ಕೊಟ್ಟು ಕಳಿಸುತ್ತಾನೆ ಇಕ್ಷ್ವಾಕು ಅಂತಹ ದೊಡ್ಡ ಮಹಾನುಭಾವ. ತನ್ನ ಮಗನನ್ನೇ ಕೊಟ್ಟು ಕಳಿಸುತ್ತಾನೆ ಪಿತೃಗಳ ಸೇವೆಯನ್ನು ಮಾಡಬೇಕು, ದೇವರ ಸೇವೆ, ಪಿತೃಗಳ ಸೇವೆಯನ್ನು ಮಕ್ಕಳು ಮಾಡಬೇಕು ಸೇವಕರಿಗೆ ಏನು ಕೊರತೆಯಿಲ್ಲ ರಾಜರಿಗೆ ಆದರೆ ದೇವತೆಗಳ ಪಿತೃಗಳ ಸೇವೆಯನ್ನು ಮಕ್ಕಳು ಮಾಡಿ ಅನುಗ್ರಹವನ್ನು ಪಡೆಯಬೇಕು, ಆಶೀರ್ವಾದವನ್ನು ಪಡೆಯಬೇಕು ಅದರಿಂದ ಕಲ್ಯಾಣವಾಗುತ್ತದೆ ಜಗತ್ತಿಗೊಂದು ಪಾಠವನ್ನು ಕಲಿಸುತ್ತಾ ಇದ್ದಾನೆ ಇಕ್ಷ್ವಾಕು.



ಇವತ್ತಿನ ಎಲ್ಲ ಸಜ್ಜನರು ತಮ್ಮ ತಮ್ಮ ಮಕ್ಕಳಿಗೆ ಶ್ರಾವಣ ಮಾಸ ಅನೇಕ ಹಬ್ಬಗಳು, ಅನೇಕ ದೇವತೆಗಳ ಪೂಜೆಗಳೆಲ್ಲ ಆಗುತ್ತದೆ ಆ ದೇವತೆಗಳ ಪೂಜೆಯ ಮಹತ್ವ ಏನು ಅದರಿಂದ ಆಗುವ ಲಾಭ ಏನು ಅಂತ ತಿಳಿಸಿಕೊಟ್ಟು ಸೇವೆಯನ್ನು ಮಾಡುವುದಕ್ಕೆ ಮಕ್ಕಳಿಗೆ ಹೇಳಬೇಕು, ಕಲಿಸಿಕೊಡಬೇಕು. ನೀವೇನು ಮಾಡಬೇಡಿ ಅಂತ ಕೇವಲ ಮಾಡಿದಂತಹ ತಿಂಡಿಯನ್ನು ಸಿಹಿಯನ್ನು ತಿನ್ನುವುದಕ್ಕೆ ಮಾತ್ರ ಮಕ್ಕಳಿಗೆ ಕರೆದುಕೊಟ್ಟು ಆ ಉತ್ಸವದಲ್ಲಿ ಸೇವೆಯನ್ನು ಮಾಡುವ ಒಂದು ಅವಕಾಶವನ್ನು ಕೊಡದಿದ್ದರೆ, ಆ ನೀತಿಯನ್ನು ಕಲಿಸದೇ ಇದ್ದರೆ ಅವರು ಅದರಿಂದ ವಂಚಿತರಾಗುತ್ತಾರೆ ಅಂತನ್ನುವ ಮಾತನ್ನು ನಮಗೆ ಇಲ್ಲಿ ಇಕ್ಷ್ವಾಕು ಮಹಾರಾಜ ತೋರಿಸಿ ಕೊಡುತ್ತಾ ಇದ್ದಾನೆ ಪಿತೃಗಳ ಸೇವೆಯನ್ನು ಮಾಡು, ಹೋಗಿ ತೆಗೆದುಕೊಂಡು ಬಾ ಅಂತ. ತೆಗೆದುಕೊಂಡು ಬರುವುದಕ್ಕೆ ಏನೋ ಹೋಗಿದ್ದಾನೆ ಆದರೆ ಚಿಕ್ಕ ಹುಡುಗ ಹಸಿವೆ ಆಗಿದೆ ಸ್ವಲ್ಪ ತಿಂದು ಬಿಟ್ಟಿದ್ದಾನೆ ಮಧ್ಯದಲ್ಲಿ, ತಿಂದು ತಂದು ಕೊಟ್ಟ. ಇಕ್ಷ್ವಾಕುವಿಗೆ ಅದು ಗೊತ್ತಾಯಿತು, ಇಕ್ಷ್ವಾಕು ಅವನನ್ನು ಮನೆಯಿಂದ ಹೊರಗೇ ಕಳಿಸಿದ್ದಾನೆ. ನೋಡಿ, ಇದು ಒಂದು ವಿಚಿತ್ರ ಸೇವೆ ಮಾಡುವುದಕ್ಕೆ ಅವಕಾಶ ಕೊಡುವುದು ಒಂದು ಪಾಠ ಕಲಿಸಿದರೆ, ಅವನು ತಪ್ಪು ಮಾಡಿದ ಅಂತ ರಾಜಕುಮಾರ ಅಂತ ಹೇಳಿ ಪ್ರೀತಿಯ ಮಗ ಅಂತ ಅವನು ಮಾಡಿದ ತಪ್ಪಿಗೆ ಉದಾಸೀನ ಮಾಡಲಿಲ್ಲ, ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಂಡು ಬಾ ಅಂತ ನೀನು ಹೋಗು ಅರಣ್ಯಕ್ಕೆ ಅಂತ ಕೊಟ್ಟು ಕಳಿಸಿದ್ದಾನೆ. ಅವನು ಹೋಗಿ ಅರಣ್ಯದಲ್ಲಿ ಪಿತೃದೇವತೆಗಳ ದ್ರೋಹ ಆಯಿತು, ಅವರಿಗೆ ಸಮರ್ಪಣೆ ಮಾಡುವದಕ್ಕಿಂತಲೂ ಮೊದಲೇನೆ ತಿಂದಿದ್ದೇನೆ ಈ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು ಅಂತ ಎಷ್ಟೋ ವರ್ಷಗಳವರೆಗೆ ವಸಿಷ್ಠರ ಆದೇಶದಂತೆ, ಅವರ ಉಪದೇಶದಂತೆ ಅಲ್ಲಿ ಜಪ ಮಾಡಿ, ಸಾಧನೆ ಮಾಡಿ ಪ್ರಾಯಶ್ಚಿತ್ತ ಮಾಡಿಕೊಂಡು, ಇಕ್ಷ್ವಾಕು ಇರುವವರೆಗೆ ಅವನು ರಾಜ್ಯಕ್ಕೆ ಬಂದಿಲ್ಲ. ಅವನು ಹೊರಟ ಮೇಲೆ ರಾಜ್ಯವನ್ನು ಆಳಿದ್ದಾನೆ ಎಂಬುದಾಗಿ ಹೇಳುತ್ತಾರೆ ಈ ರೀತಿ ಆ ವಿಕುಕ್ಷಿಯ ಕಥೆಯನ್ನು ತಿಳಿಸುತ್ತಾರೆ.

ಇದೇ ವಂಶದಲ್ಲಿ ಇವನ ಮಗನೇ ಕಕುತ್ಸ್ಥ ಎಂಬ ರಾಜ ಬರುತ್ತಾನೆ ಅವನು ಇಂದ್ರ ದೇವರ ಸೇವೆಯನ್ನು ಮಾಡುತ್ತಾನೆ. ಇಂದ್ರ ದೇವರು ಹೇಳುತ್ತಾರೆ ಅಸುರರ ಜೊತೆಗೆ ಯುದ್ಧ ಆಡಬೇಕಾಗಿದೆ ನೀನು ಬರಬೇಕು ಅಂತ ಇಂದ್ರಾದಿ ದೇವತೆಗಳಿಗೇನು ಸಾಮರ್ಥ್ಯ ಕಡಿಮೆ ಇಲ್ಲ ಭಗವಂತನ ಅನುಗ್ರಹ ಇದೆ. ಆ ಪರಮಾತ್ಮನ ಅನುಗ್ರಹದಿಂದ, ವಾಯು ದೇವರ ಅನುಗ್ರಹದಿಂದ ಮಹಾಸಮರ್ಥರು ಇಂದ್ರಾದಿ ದೇವತೆಗಳು, ಅಸುರರನ್ನು ಗೆಲ್ಲುವುದಕ್ಕೆ ಅಸುರರ ಜೊತೆಗೆ ಯುದ್ಧ ಮಾಡುವುದಕ್ಕೆ ಮಹಾಸಾಮರ್ಥ್ಯ ಶಕ್ತಿಗಳನ್ನು ಪಡೆದುಕೊಂಡವರು ಇವನಿಗೆ ಒಂದು ಕೀರ್ತಿ ಕೊಡಬೇಕಾಗಿದೆ. ದೇವತೆಗಳ ಸೇವೆಯನ್ನು ಮಾಡುವ ಒಂದು ಭಾಗ್ಯವನ್ನ ಇವನಿಗೆ ಕೊಡಬೇಕು ಆ ಒಂದು ವಿಶೇಷವಾದಂತಹ ಯೋಗ ಇವನಿಗೆ ಇದೆ ಇವನ ಮೇಲೆ ಅನುಗ್ರಹ ಮಾಡುವುದಕ್ಕೆ ಅಂತ ಕರೆದಿದ್ದಾರೆ. ಅಸುರರ ಜೊತೆಗೆ ಯುದ್ಧ ಮಾಡುವುದಕ್ಕೆ ನನಗೊಂದು ವಾಹನ ಬೇಕು ಅಂತ ಕೇಳಿದ್ದಕ್ಕೆ ಇಂದ್ರ ದೇವರು ತಾವೇ ಎತ್ತಾಗಿ ತಮ್ಮ ಬೆನ್ನಿನ ಮೇಲೆ ನಿಂತು ನೀನು ಯುದ್ಧ ಮಾಡು ಅಂತ ಹೇಳುತ್ತಾರೆ. ಆ ಎತ್ತಿನ ಮೇಲಿನ ಭಾಗದ ಮೇಲೆ ನಿಂತು ಯುದ್ಧ ಮಾಡಿದ ಅನ್ನುವುದಕ್ಕೆ ಇವನಿಗೆ ಕಕುತ್ಸ್ಥ ಎಂಬುದಾಗಿ ಹೆಸರು ಬರುತ್ತದೆ ಅಂತಹ ಮಹಾನುಭಾವ ಈ ಕಕುತ್ಸ್ಥ.

ಈ ಕಕುತ್ಸ್ಥನ ವಂಶದಲ್ಲಿಯೇನೆ ಬೃಹದಶ್ವ ಅಂತ ರಾಜ, ಅವನ ಮಗ ಕುವಲಾಶ್ವ ಅಂತ ಆ ಕುವಲಾಶ್ವ ಧುಂಧು ಎಂಬ ಒಬ್ಬ ದೊಡ್ಡ ದೈತ್ಯನನ್ನು ಸಂಹಾರ ಮಾಡಿ ಧುಂಧುಮಾರ ಎಂಬ ಹೆಸರನ್ನು ಪಡೆಯುತ್ತಾನೆ. ಜನಮೇಜಯ ಕೇಳುತ್ತಾನೆ ಯಾರು ಧುಂಧು, ಯಾಕೆ ಇವನಿಗೆ ಧುಂಧುಮಾರ ಎಂಬ ಹೆಸರು ಬಂತು ಅದರ ಕಥೆಯನ್ನು ಸ್ವಲ್ಪ ತಿಳಿಸಿ ಹೇಳಿ ಅಂತ ಕೇಳಿದಾಗ ಹೇಳುತ್ತಾರೆ ವೈಶಂಪಾಯನರು. ಕುವಲಾಶ್ವನಿಗೆ ನೂರು ಜನ ಮಕ್ಕಳು

ಎಲ್ಲರೂ ಮಹಾವಿದ್ಯಾವಂತರು ಧಾರ್ಮಿಕರು ಮಹಾಬಲಿಷ್ಠರು ಅಂತಹ ನೂರು ಜನ ಮಕ್ಕಳನ್ನು ಪಡೆದ ಕುವಲಾಶ್ವನನ್ನ ರಾಜ್ಯದಲ್ಲಿ ಕುಳ್ಳಿರಿಸಿ ಅವನ ತಂದೆಯಾದ ಬೃಹದಶ್ವ ತಾನು ಅರಣ್ಯಕ್ಕೆ ತಪಸ್ಸು ಮಾಡುವುದಕ್ಕೆ ಅಂತ ಹೊರಡುತ್ತಾನೆ. ಇದು ಪ್ರಾಚೀನ ರಾಜರ ಪದ್ಧತಿ, ತಾವು ಮಕ್ಕಳು ವಯಸ್ಸಿಗೆ ಬರುವವರೆಗೆ ರಾಜ್ಯವನ್ನು ಆಳಿ ಅವರು ಕೈಗೆ ಬಂದ ಮೇಲೆ ರಾಜ್ಯವನ್ನೆಲ್ಲ ಅವರಿಗೆ ಒಪ್ಪಿಸಿ ತಾವು ಏಕಾಂತದಲ್ಲಿ ಅರಣ್ಯದೊಳಗಿದ್ದು ತಪಸ್ಸು ಮಾಡಿ ತಮ್ಮ ಆತ್ಮೋದ್ಧಾರದ ಸಾಧನೆಯನ್ನು ಮಾಡಿಕೊಳ್ಳುತ್ತಾ ಇದ್ದರು. ಕೊನೆ ಉಸಿರಿರುವವರೆಗೂ ನಾನು ನನ್ನದು ಅನ್ನುವ ಅಭಿಮಾನದೊಳಗಿದ್ದು ಕೇವಲ ಕಾರ್ಯಕಲಾಪಗಳಲ್ಲಿ ತೊಡಗಿ ಸಾಧನೆಯಿಂದ ವಂಚಿತರಾಗಬಾರದು, ಪ್ರಜೆಗಳ ಪಾಲನೆ ಮಾಡುವುದು ಒಂದು ಧರ್ಮವೇ ಅದನ್ನೂ ವಿಷ್ಣು ಪೂಜೆ ಎಂಬ ಅನುಸಂಧಾನದಿಂದಲೇ ರಾಜರು ಮಾಡುತ್ತಾ ಇದ್ದರು. ಆದರೂ ಕೂಡ ಮುಂದಿನ ಪರಂಪರೆ ನಡೆಯಬೇಕು, ರಾಜ್ಯದ ಭಾರವನ್ನು ನೋಡುವುದಕ್ಕೆ ಮಗ ಇದ್ದಾನೆ ಅಂತಾದರೆ ತಾನು ಜಪ ತಪಸ್ಸು ಭಗವಂತನ ಧ್ಯಾನ ಇವುಗಳನ್ನು ಮಾಡಿ ಇನ್ನೂ ವಿಶೇಷವಾದಂತಹ ಸಾಧನೆಯನ್ನು ಮಾಡಿಕೊಂಡು ಜನ್ಮವನ್ನು ಸಾರ್ಥಕ ಮಾಡಿಕೊಳ್ಳಬೇಕು ಅನ್ನುವುದು ಪ್ರಾಚೀನರ ಉದ್ದೇಶ್ಯ ಹೀಗಾಗಿ ಅವನು ಹೊರಟ ಅರಣ್ಯಕ್ಕೆ. ಆ ಸಂದರ್ಭದಲ್ಲಿ ಉತ್ತಙ್ಕ ಎಂಬ ಋಷಿ, ಮಹಾಭಾರತದ ಆದಿಪರ್ವದಲ್ಲಿ ವಿಶೇಷವಾಗಿ ಇವನ ವರ್ಣನೆ ಬರುತ್ತದೆ,ಗುರು ದಕ್ಷಿಣೆಯನ್ನು ಕೊಟ್ಟ ಮಹಾನುಭಾವ ಉತ್ತಙ್ಕ ಅಂತಹ ಉತ್ತಙ್ಕ ಎಂಬ ಋಷಿ ಅಲ್ಲಿ ಬರುತ್ತಾರೆ. ಆ ಋಷಿಗಳು ಹೇಳುತ್ತಾರೆ ಬೃಹದಶ್ವ ನೀನು ಅರಣ್ಯಕ್ಕೆ ಹೋಗಬೇಡ, ನಾವೆಲ್ಲ ಬಹಳ ಕಷ್ಟದಲ್ಲಿದ್ದೇವೆ ಅಲ್ಲ ನಾನು ಸಾಧನೆ ಮಾಡಬೇಕು, ತಪಸ್ಸು ಮಾಡಬೇಕು ಅಂತನ್ನುವ ಒಂದು ಪವಿತ್ರವಾದ ಕಾರ್ಯಕ್ಕೆ ಹೊರಟಾಗ ನಿಮ್ಮಂತಹ ಪವಿತ್ರಾತ್ಮರು ಋಷಿಗಳು ಅದಕ್ಕೆ ಪ್ರೋತ್ಸಾಹನೆ ಕೊಡುವುದು ಬಿಟ್ಟು ಯಾಕೆ ನಿಷೇಧ ಮಾಡುತ್ತಾ ಇದ್ದೀರಿ ಅಂತ ಕೇಳಿದರೆ ಅವರು ಹೇಳುತ್ತಾರೆ.

ಪಾಲನೇ ಹಿ ಮಹಾನ್ ಧರ್ಮಃ ಪ್ರಜಾನಾಮಿಹ ದೃಶ್ಯತೇ ।

ನ ತಥಾ ದೃಶ್ಯತೇಽರಣ್ಯೇ ಮಾ ತೇಽ ಭೂದ್ ಬುದ್ಧಿರೀದೃಶೀ ॥ (11.30 ಹರಿವಂಶಪರ್ವ)

ಪ್ರಜೆಗಳನ್ನು ರಕ್ಷಣೆ ಮಾಡಿ ಧರ್ಮದಿಂದ ಆ ಪ್ರಜೆಗಳು ವರ್ತನೆ ಮಾಡುವಂತೆ ಅವರಿಗೆ ಅನುಕೂಲ ಮಾಡಿಕೊಟ್ಟರೆ ಏನು ಪುಣ್ಯ ಬರುತ್ತೋ ಆ ಪುಣ್ಯ ನೀನು ಅರಣ್ಯದಲ್ಲಿ ಹೋಗಿ ತಪಸ್ಸು ಮಾಡಿದರೆ ಬರುವುದಿಲ್ಲ. ಪ್ರಜೆಗಳೆಲ್ಲ ಸುಖವಾಗಿ ಇದ್ದಾರೆ, ಧರ್ಮದಿಂದ ರಾಜ್ಯ ನಡೆಯುತ್ತ ಇದೆ ಏನು ಸಮಸ್ಯೆ ಇಲ್ಲ ಅಂದರೆ ಆಗ ನೀನು ಅರಣ್ಯಕ್ಕೆ ಹೋಗಿ ತಪಸ್ಸು ಮಾಡಬಹುದು. ನಾವೆಲ್ಲ ಕಷ್ಟದೊಳಗೆ ಇದ್ದೇವೆ, ನಮ್ಮ ಕಷ್ಟಗಳ ಪರಿಹಾರ ಮಾಡು ಅದೇ ದೊಡ್ಡ ಧರ್ಮ ಅದರಿಂದ ನಿನಗೆ ಮಹಾಪುಣ್ಯ ಬರುತ್ತೆ.

ಪ್ರಜಾನಾಂ ಪಾಲನೇ ಯೋ ವೈ ಪುರಾ ರಾಜರ್ಷಿಭಿಃ ಕೃತಃ ।

ರಕ್ಷಿತವ್ಯಾಃ ಪ್ರಜಾ ರಾಜ್ಞಾ ತಾಸ್ತ್ವಂ ರಕ್ಷಿತುಮರ್ಹಸಿ ॥ (11.31 ಹರಿವಂಶಪರ್ವ)

ಪ್ರಜೆಗಳ ಪಾಲನೆ ಮಾಡಿದರೆ ಎಂತಹ ಧರ್ಮವನ್ನು ಪ್ರಾಚೀನರು ತಿಳಿಸಿಕೊಟ್ಟಿದ್ದಾರೋ ಅದು ಕೇವಲ ಅರಣ್ಯದಲ್ಲಿ ಕುಳಿತು ತಪಸ್ಸು ಮಾಡಿದರೆ ಬರುವುದಿಲ್ಲ ಅಂತ ಆ ಉತ್ತಙ್ಕ ಋಷಿಗಳು ಹೇಳುತ್ತಾರೆ ಸರಿ, ನಿಮಗೆ ಆದ ಸಮಸ್ಯೆಯಾದರೂ ಏನು ಹೇಳಿ ಅಂತ ಕೇಳುತ್ತಾನೆ. ಆಗ ಉತ್ತಙ್ಕರು ಹೇಳುತ್ತಾರೆ ನನ್ನ ಆಶ್ರಮದ ಹತ್ತಿರದಲ್ಲಿಯೇನೆ ಸಮುದ್ರದ ಸಮೀಪದಲ್ಲಿ ನಮ್ಮ ಆಶ್ರಮ ಆ ಸಮುದ್ರದ ನೀರೆಲ್ಲ ಒಣಗುವಂತೆ ಮಾಡಿ ಕೇವಲ ಉಸುಕು, ಅಲ್ಲಿ ನೀರೇ ಇಲ್ಲ ಆ ಉಸುಕಿನ ಕೆಳಗೆ ಮಲಗಿ ತಪಸ್ಸು ಮಾಡುತ್ತ ಇದ್ದಾನೆ ಒಬ್ಬ ಅಸುರ ಅವನು ಧುಂಧು ಅಂತ ಅಸುರ. ಅವನು ತಪಶ್ಚರ್ಯ ಮಾಡುವುದು ಅಂದರೆ ಉಗ್ರವಾದ ತಪಸ್ಸು ಅದು ಸಾತ್ವಿಕ ತಪಸ್ಸಲ್ಲ ತಾಮಸವಾದ ತಪಸ್ಸು



ಜಗತ್ತಿನ ನಾಶವಾಗಲಿ ಅಂತ ಮಾಡುವ ತಪಸ್ಸದು, ಎಲ್ಲರಿಗೆ ಪೀಡೆ ಕೊಡಬೇಕು ಅಂತ ಮಾಡುವ ತಪಸ್ಸು, ಸಾತ್ವಿಕವಾದ ತಪಸ್ಸಿನಿಂದ ಜಗತ್ತಿಗೆ ಕ್ಷೇಮವಾಗುತ್ತದೆ, ಇಂತಹ ತಾಮಸವಾದ ತಪಸ್ಸಿನಿಂದ ಜಗತ್ತಿಗೆ ಕ್ಷೋಭವಾಗುತ್ತದೆ. ಒಂದು ವರ್ಷ ಸುಮ್ಮನೆ ಇರುತ್ತಾನೆ ವರ್ಷದ ಕೊನೆಯ ಭಾಗದಲ್ಲಿ ಜೋರಾಗಿ ಶ್ವಾಸ ಬಿಟ್ಟ ಅಂದರೆ ಆ ಉಸುಕೆಲ್ಲ ಮೇಲೆ ಹಾರುತ್ತದೆ, ಮೇಲೆ ಹಾರುವುದು ಅಂದರೆ ಬರೇ ಉಸುಕಲ್ಲ ಅವನ ಮುಖದಿಂದ ಅಗ್ನಿಯೂ ಹೊರಗೆ ಬರುತ್ತದೆ ಗಾಳಿ ಮಾತ್ರ ಅಲ್ಲ, ಗಾಳಿ ಗಾಳಿಯ ಜೊತೆಗೆ ಅಗ್ನಿ. ಹೀಗಾಗಿ ಉಸುಕೆಲ್ಲ ಮೇಲೆ ಸಿಡಿಯುತ್ತೆ, ಕೆಂಡ ಮೇಲೆ ಬರುತ್ತೆ, ಕಿಡಿಗಳು ಹಾರುತ್ತದೆ, ಹೊಗೆ ಬರುತ್ತದೆ, ಸುತ್ತಮುತ್ತಲಿನ ಪರಿಸರದೊಳಗಿದ್ದ ಜನರು ಪ್ರಾಣಿಗಳು ಪಶುಗಳು ಪಕ್ಷಿಗಳೆಲ್ಲ ಸಂತ್ರಸ್ತವಾಗಿ ಹೋಗುತ್ತವೆ, ಆಶ್ರಮವಾಸಿಗಳಾದ ನಾವೆಲ್ಲಾ ಬಹಳ ತಪ್ತವಾಗುತ್ತೇವೆ. ಹೀಗೆ ಪ್ರತಿವರ್ಷವೂ ನಮ್ಮ ಹಣೆಬರಹ ಅದನ್ನು ಸುಧಾರಿಸಿಕೊಳ್ಳುವುದರ ಒಳಗೆ ಮತ್ತೆ ಒಂದು ವರ್ಷ ಆಗಿರುತ್ತದೆ ಹೇಗಾದರೂ ಮಾಡಿ ಆ ಧುಂಧುವಿನ ಸಂಹಾರ ಮಾಡು ಆಮೇಲೆ ಬೇಕಾದರೆ ನೀನು ಅರಣ್ಯಕ್ಕೆ ಹೋಗು ತಪಸ್ಸು ಮಾಡು. ಆಗ ಬೃಹದಶ್ವ ಹೇಳುತ್ತಾನೆ ನಾನು ರಾಜ್ಯವನ್ನು ಬಿಟ್ಟು ಹೊರಟಾಯಿತು ತುಲಸಿದಳ ಇಟ್ಟು ಕೃಷ್ಣಾರ್ಪಣ ಹೇಳಿ ಈ ಕಡೆಗೆ ಮುಖ ಮಾಡಿದ್ದೇನೆ ಅರಣ್ಯದ ಕಡೆಗೆ, ಇನ್ನು ಮತ್ತೇ ಆ ಮಾಯಾ ಮೋಹ ಮಮತೆಗಳ ಪಾಶದಲ್ಲಿ ಸಿಲುಕುವುದಕ್ಕೆ ನಾನು ತಯಾರಿಲ್ಲ. ನನಗೆ ವೈರಾಗ್ಯ ಬಂದಿದೆ ಆದರೆ ನನ್ನ ಕರ್ತವ್ಯ ನಿಮಗೆ ಬಂದ ಈ ಸಮಸ್ಯೆಯ ಪರಿಹಾರ ಮಾಡುವುದು ನನ್ನ ಧರ್ಮ, ನಾನು ಅದನ್ನು ಮಾಡಿಸುತ್ತೇನೆ ನನ್ನ ಮಗನಿಂದ ಮಾಡಿಸುತ್ತೇನೆ ಅಂತ ಹೇಳುತ್ತಾನೆ ಆಯಿತು ಅನ್ನುತ್ತಾರೆ ಉತ್ತಙ್ಕರು.

ಆಗ ಮಗನಾದಂತಹ ಕುವಲಾಶ್ವನನ್ನು ಕರೆದು ಹೇಳುತ್ತಾನೆ ಬೃಹದಶ್ವ ಹೀಗೆ ಇವರಿಗೆ ಸಮಸ್ಯೆ ಇದೆ, ನೀನು ನಿನ್ನ ನೂರೂ ಜನ ಮಕ್ಕಳನ್ನು ಕರೆದುಕೊಂಡು ಹೋಗಿ ಆ ಧುಂಧುವಿನ ಸಂಹಾರ ಮಾಡಿ ಉತ್ತಙ್ಕರ ಆಶ್ರಮದಲ್ಲಿ ಯಾವ ಆತಂಕವೂ ಇಲ್ಲದಂತೆ ನೀನು ವ್ಯವಸ್ಥೆಯನ್ನು ಮಾಡಬೇಕು ಅಂತ ಇವನಿಗೆ ಆದೇಶವನ್ನು ಮಾಡುತ್ತಾನೆ. ಸರಿ ಅಂತ ಭಕ್ತಿಯಿಂದ ತಂದೆಯ ಮಾತನ್ನು ಸ್ವೀಕಾರ ಮಾಡುತ್ತಾನೆ ನೂರು ಜನ ಮಕ್ಕಳನ್ನು ಕರೆದುಕೊಂಡು ಹೊರಡುತ್ತಾನೆ. ಪರಮಾತ್ಮ ಅಲ್ಲಿ ನೋಡುತ್ತಾ ಇದ್ದಾನೆ ಸರ್ವೋತ್ತಮನಾದ ಶ್ರೀಹರಿ ನಾರಾಯಣ ಇವನು ಭಗವದ್ಭಕ್ತ. ಭಗವದ್ಭಕ್ತನಾದಂತಹ ಸಜ್ಜನನಾದ, ಶ್ರದ್ಧಾಲುವಾದಂತಹ ಕುವಲಾಶ್ವ ಆ ಧುಂಧುವಿನ ಸಂಹಾರಕ್ಕೆ ಹೊರಟಿದ್ದಾನೆ ಈ ಕಾರ್ಯ ಯಶಸ್ವಿಯಾಗಬೇಕು. ಆ ಉತ್ತಙ್ಕರು ಗುರುಭಕ್ತರು, ಗುರುಗಳಲ್ಲಿ ದೇವರನ್ನು ಕಂಡವರು ಅಂತಹ ಗುರುಭಕ್ತರು, ಹರಿಭಕ್ತರು ಇವನೂ ಹರಿಭಕ್ತ ಈ ಕಾರ್ಯ ಯಶಸ್ವಿಯಾಗಬೇಕು ಅಂತ ಸ್ವಯಂ ಪರಮಾತ್ಮ ಕುವಲಾಶ್ವನಲ್ಲಿ ಪ್ರವೇಶ ಮಾಡಿದ್ದಾನೆ ವಿಶೇಷವಾಗಿ ಸನ್ನಿಹಿತನಾಗಿದ್ದಾನೆ. **'ತಮಾವಿಶತ್ ತದಾ ವಿಷ್ಣು'** ಅವನ ಹೆಸರೇ ವಿಷ್ಣು ಅಲ್ಲವಾ ಭಕ್ತರ ರಕ್ಷಣೆಗಾಗಿ ಭಕ್ತರಲ್ಲಿ ಪ್ರವೇಶ ಮಾಡುತ್ತಾನೆ ಆದ್ದರಿಂದಲೇ ವಿಷ್ಣು.

ತಮಾವಿಶತ್ ತದಾ ವಿಷ್ಣುರ್ಭಗವಾಂಸ್ತೇಜಸಾ ಪ್ರಭುಃ । (11.45 ಹರಿವಂಶಪರ್ವ)

ತನ್ನ ಅದ್ಭುತವಾದ ತೇಜಸ್ಸಾಮರ್ಥ್ಯಗಳ ಅಭಿವ್ಯಕ್ತಿಯನ್ನು ಮಾಡುತ್ತಾ ಇವನಲ್ಲಿ ಪ್ರವೇಶ ಮಾಡಿದ್ದಾನೆ ಪರಮಾತ್ಮ. ಆ ಕುವಲಾಶ್ವನಿಗೆ ಸ್ವಯಂ ಭಗವದನುಗ್ರಹದಿಂದ ಮೊದಲು ಸಾಮರ್ಥ್ಯ ಇತ್ತು ಇನ್ನೂ ಆ ಕಾಲದಲ್ಲಿ ವಿಶೇಷವಾಗಿ ದೇವರ ಸನ್ನಿಧಾನ ಬಂದದ್ದರಿಂದ ಮಹಾಶಕ್ತಿ ಪರಾಕ್ರಮ ಎಲ್ಲವೂ ಅವನಲ್ಲಿ ತುಂಬಿಕೊಂಡಿದೆ. ದೇವತೆಗಳೆಲ್ಲ ಆಶೀರ್ವಾದ ಮಾಡಿದ್ದಾರೆ, ಮಾಲ್ಯದ ವೃಷ್ಟಿಯನ್ನು ಮಾಡಿದ್ದಾರೆ, ಹೂವಿನ ಮಾಲೆಗಳ ವೃಷ್ಟಿ ಪುಷ್ಪವೃಷ್ಟಿ ಅಂತ ಕೆಲವು ಕಡೆಗೆ ಬರುತ್ತದೆ. ಇಲ್ಲಿ ಹೇಳುತ್ತಾರೆ

ದಿವ್ಯೈರ್ಮಾಲ್ಯೈರ್ವೃತಂ ದೇವಾಃ ಸಮನ್ತಾತ್ ಸಮವಾಕಿರನ್ । (11.47 ಹರಿವಂಶಪರ್ವ)

ಅದ್ಭುತವಾದ ಪುಷ್ಪಗಳ ಮಾಲೆಗಳ ವೃಷ್ಟಿಯನ್ನು ಮಾಡಿ ಇವನಿಗೆ ವಿಜಯವಾಗಲೇಬೇಕು ಅನ್ನುವುದಕ್ಕೋಸ್ಕರ ಮೊದಲೇ ವಿಜಯ ಮಾಲೆಯನ್ನು ಇವನ ಕೊರಳಿಗೆ ಹಾಕಿದ ರೀತಿಯಲ್ಲಿ ದೇವತೆಗಳೆಲ್ಲ ಆಶೀರ್ವಾದ ಮಾಡಿದ್ದಾರೆ. ಆ ಎಲ್ಲ ದೇವತೆಗಳ ಆಶೀರ್ವಾದ, ದೇವತೆಗಳಲ್ಲಿ ಅಂತರ್ಯಾಮಿಯಾದ ಸಾಕ್ಷಾತ್ ವಿಷ್ಣುವಿನ ಅನುಗ್ರಹ ಹಾಗೂ ವಿಷ್ಣುವಿನ ಪ್ರವೇಶ ಇದೆಲ್ಲ ಇವನಲ್ಲಿ ಆಗಿದೆ ಅಷ್ಟೆಲ್ಲ ಸಾಮರ್ಥ್ಯವನ್ನು ತುಂಬಿಕೊಂಡು ದೇವತಾನುಗ್ರಹವನ್ನು ಪಡೆದು ಅಸುರನ ಸಂಹಾರಕ್ಕೆ ಮುಂದಾಗಿದ್ದಾನೆ. ಯಾವುದೇ ಒಂದು ಸತ್ಕಾರ್ಯ ಮಾಡಬೇಕಾದರೆ ಪರಮಾತ್ಮನ, ವಾಯು ದೇವರ, ದೇವತೆಗಳ, ಗುರುಗಳ ಅನುಗ್ರಹವನ್ನು ಪಡೆದು ನಾವು ಮುಂದಾಗಬೇಕು ಅನ್ನುವುದನ್ನು ತೋರಿಸಿಕೊಡುತ್ತಾರೆ.

ಆ ನೂರು ಜನ ಮಕ್ಕಳಿಗೆ ಹೇಳಿದ, ನೋಡಿ ಮತ್ತೆ ಕೆಲಸದವರನ್ನು ಕರಿಯಲಿಲ್ಲ ಸ್ವಂತ ತನ್ನ ಮಕ್ಕಳಿಗೆ ಹೇಳುತ್ತಾನೆ ಆ ಎಲ್ಲ ಉಸುಕನ್ನ ಕಿತ್ತಿ ತೆಗೆಯಿರಿ ಒಳಗಿರುವ ಅಸುರನ ಸಂಹಾರ ಮಾಡಬೇಕು ಅಂತ ಆ ಭೂಮಿಯನ್ನು ಖನನ ಮಾಡುವುದಕ್ಕೆ, ಮೇಲೆ ಇದ್ದ ಉಸುಕನ್ನ ಎತ್ತಿ ಆಚೆಗೆ ಎಸೆಯುವುದಕ್ಕೆ ತನ್ನ ಕರ್ಮಕಾರಕರಿಗೆ ಹೇಳುವುದಿಲ್ಲ, ಸ್ವಂತ ಮಕ್ಕಳಿಗೆ ಹೇಳುತ್ತಾನೆ ರಾಜಕುಮಾರರಿಗೆ ಈ ಅಸುರನ ಸಂಹಾರ ಇದು ದೇವರ ಸೇವೆ. ಆ ಋಷಿಗಳ ಆಶ್ರಮದಲ್ಲಿ ಬಂದ ಆತಂಕದ ಪರಿಹಾರ ಮಾಡುವುದು ಒಂದು ದೊಡ್ಡ ದೇವರ ಸೇವೆ ಇದು, ನೀವು ಸ್ವಂತ ಮಾಡಿ, ಪ್ರಾಣ ಹೋದರೂ ಅಡ್ಡಿಯಿಲ್ಲ ನೀವು ಮಾಡಿ ಅನ್ನುತ್ತಾನೆ. ಅದು ಹಾಗೆ ಆಗುತ್ತೆ, ಅವನು ಭಾರೀ ಉಗ್ರವಾದ ತನ್ನ ಜ್ವಾಲೆಯನ್ನು ಹೊರಗೆ ಬಿಡುತ್ತಾನೆ, ನೀರನ್ನೂ ಬಿಡುತ್ತಾನೆ ಆ ಜ್ವಾಲೆಯಿಂದ ಸುಟ್ಟು ನೀರಿನಲ್ಲಿ ಮುಳುಗಿ ಇವರೆಲ್ಲ ಸತ್ತು ಹೋಗುತ್ತಾರೆ. ನೂರು ಜನ ಮಕ್ಕಳಲ್ಲಿ ತೊಂಭತ್ತೇಳು ಜನ ಮಕ್ಕಳು ಅವನ ಅಗ್ನಿ ಹಾಗೂ ಜಲದಿಂದ ನಷ್ಟರಾಗಿ ಹೋಗುತ್ತಾರೆ, ಮೂರೇ ಮೂರು ಜನ ಧೃಢಾಶ್ವ, ಚಂದ್ರಾಶ್ವ, ಕಪಿಲಾಶ್ವ ಅಂತ ಮೂರು ಜನ ಮಕ್ಕಳು ಮಾತ್ರ ಉಳಿಯುತ್ತಾರೆ. ಕುವಲಾಶ್ವ ಮಾತ್ರ ಗಟ್ಟಿಯಾಗಿ ಇದ್ದಾನೆ ಮಕ್ಕಳೆಲ್ಲ ಮೃತರಾದರು ಅಂತ ನಿರಾಶನಾಗಿ ಹತಾಶನಾಗಿ ಓಡಿ ಹೋಗುವುದಿಲ್ಲ, ಬಂದ ಕಾರ್ಯವನ್ನು ಪೂರ್ಣ ಮಾಡಲೇಬೇಕು ಅಂತ ಹಾಗೆ ಧೈರ್ಯದಿಂದ ಇರುತ್ತಾನೆ ತಾನು ಆ ಧುಂಧುವನ್ನು ಸಂಹಾರ ಮಾಡುತ್ತಾನೆ ಪರಮಾತ್ಮನ ವಿಶಿಷ್ಟವಾದ ಅಗ್ನಿಯಿಂದ. ಅವನೇನು ನೀರಿನ ಸೃಷ್ಟಿ ಮಾಡಿ ಎಲ್ಲ ಕಡೆಗೂ ಯಾರೂ ಹತ್ತಿರ ಬರದೇ ಇರುವ ಹಾಗೆ ಮಾಡಿ ಒಂದು ಅರ್ಥದೊಳಗೆ ತನ್ನ ದೇಹದಿಂದಲೇ ನೀರನ್ನು ಸೃಷ್ಟಿ ಮಾಡಿ ಆ ಮಧ್ಯದೊಳಗೆ ತಾನು ಜಲದುರ್ಗದೊಳಗೆ ಇದ್ದ ಹಾಗೆ ಇರುತ್ತಾನೆ ಆ ನೀರನ್ನೆಲ್ಲಾ ಇವನು ಕುಡಿದು ಬಿಡುತ್ತಾನೆ ಕುವಲಾಶ್ವ, ಅವನು ಭಾರೀ ಅಗ್ನಿಯ ಸೃಷ್ಟಿಯನ್ನು ಮಾಡಿರುತ್ತಾನೆ, ತನ್ನ ತಪಸ್ಸಾಮರ್ಥ್ಯದಿಂದ ಅಗ್ನಿಯೆಲ್ಲ ಶಾಂತ ಮಾಡುತ್ತಾನೆ, ಸುಲಭವಾಗಿ ಸಿಕ್ಕು ಬಿಡುತ್ತಾನೆ ಆ ಧುಂಧು ಅವನನ್ನು ಸಂಹಾರ ಮಾಡುತ್ತಾನೆ ಈ ಕುವಲಾಶ್ವ. **'ಕ'** ಅಂದರೆ ಸುಖ, **'ಕು'** ಅಂದರೆ ಅನಂತ ಸುಖ ಪರಿಪೂರ್ಣನಾದ ಪರಮಾತ್ಮ **'ತೃತೀಯಃ ಅತಿಶಯೇ'**[1] ಆ ಅನಂತ ಸುಖ ಪರಿಪೂರ್ಣನಾದ ಪರಮಾತ್ಮನಿಂದ ಬಲವನ್ನ ಪಡೆದುಕೊಂಡಂತಹ ಅಶ್ವ ಇಂದ್ರಿಯಗಳು ಹಾಗೂ ದೇಹ ಉಳ್ಳವನು ಕುವಲಾಶ್ವ. **'ಕು'** ಪರಮಾತ್ಮನಿಂದ ಬಲ ಪಡೆದುಕೊಂಡ ಅಶ್ವಗಳನ್ನು, ಇಂದ್ರಿಯ ಮತ್ತು ದೇಹಗಳನ್ನ ಪಡೆದು ಕೊಂಡವನಾದದ್ದರಿಂದ ಕುವಲಾಶ್ವ ಹೀಗಾಗಿ ಇಂತಹ ಮಹಾಕ್ರೂರನಾದ ಉಗ್ರನಾದಂತಹ ಧುಂಧುವನ್ನು ಸಂಹಾರ ಮಾಡುವುದಕ್ಕೆ ಅವನಿಗೆ ಸಾಧ್ಯವಾಯಿತು. ಅವನನ್ನು ಸಂಹಾರ ಮಾಡಿದ ಉತ್ತಙ್ಕ ವರ ಕೊಡುತ್ತಾ ಇದ್ದಾನೆ ಉತ್ತಮವಾದಂತಹ ಸಂಪತ್ತು ನಿನಗೆ ಬರಲಿ, ಯಾವ ಸಂಪತ್ತಿನಿಂದ ಮೋಕ್ಷ ಸಾಧನೆಯನ್ನು ಮಾಡಬಹುದೋ ಅಂತಹ ಶ್ರೇಷ್ಠವಾದ ಸಂಪತ್ತು **'ಧನಂ ಹಿ ಧರ್ಮೈಕ ಫಲಂ'** ಧರ್ಮಕ್ಕೆ ಉಪಯುಕ್ತವಾಗುವ ದೇವರ ಅನುಗ್ರಹವಾಗುವುದಕ್ಕೆ ಸಾಧನವಾಗುವಂತಹ ಶುದ್ಧ ಸಂಪತ್ತು ನಿನಗೆ ಬರಲಿ, ಎಂದಿಗೂ ಶತ್ರುಗಳಿಂದ ಪರಾಜಯವಾಗುವುದು ಬೇಡ **'ಧರ್ಮೇ ರತಿಂ ಚ ಸತತಂ'**[2]

1. ಯುಕ್ತಿ ಮಲ್ಲಿಕಾ 2. 11.57 ಹರಿವಂಶಪರ್ವ

ಯಾವಾಗಲೂ ಧರ್ಮದಲ್ಲಿ ಹೀಗೆ ಆಸಕ್ತಿ ಇರಲಿ, ಸ್ಥಿರವಾಗಿ ಸ್ವರ್ಗದಲ್ಲಿ ವಾಸ ನಿನಗೆ ಮುಂದೆ ಸಿಗಲಿ. ಈಗ ತೊಂಭತ್ತೇಳು ಜನ ನನಗೋಸ್ಕರ ನಮ್ಮೆಲ್ಲರಿಗೋಸ್ಕರ ಋಷಿಗಳಿಗಾಗಿ ಪ್ರಾಣ ಕೊಟ್ಟಿದ್ದಾರಲ್ಲ ಅವರಿಗೆ ಅಕ್ಷಯವಾದ ಸ್ವರ್ಗವಾಸ ಸಿಗಲಿ, ಬಹುಕಾಲದವರೆಗೆ ಸ್ವರ್ಗಲೋಕ ಅವರಿಗಾಗಲಿ ಎಂಬುದಾಗಿ ಐದು ವರಗಳನ್ನು ಉತ್ತಙ್ಕ ಅವನಿಗೆ ಕೊಟ್ಟಿದ್ದಾನೆ. ಈ ರೀತಿ ಇವನ ವಂಶವನ್ನು ಹೇಳುತ್ತಾರೆ.

ಇವನ ಮಗನಾದ ದೃಢಾಶ್ವನ ವಂಶದಲ್ಲಿ ಪ್ರಸೇನಜಿತ್ ಎಂಬ ಒಬ್ಬ ರಾಜ ಬರುತ್ತಾನೆ. ಅವನಿಗೆ ಉತ್ತಮ ಪತಿವ್ರತೆಯಾದ ಗೌರೀ ಎನ್ನುವ ಒಬ್ಬಳು ಹೆಂಡತಿ ಅವಳಿಗೆ ಅವನು ಶಾಪ ಕೊಟ್ಟಾಗ ಅವಳು ಬಾಹುದಾ ಎಂಬ ಹೆಸರಿನ ನದಿಯಾಗಿ ಹರಿಯುತ್ತಾಳೆ ಅಂತ. ಶಂಖ ಮತ್ತು ಲಿಖಿತರು ಅಂತ ಇಬ್ಬರು ಋಷಿಗಳು ಅದರಲ್ಲಿ ಶಂಖ ಅಣ್ಣ, ಲಿಖಿತ ತಮ್ಮ ಅಣ್ಣನ ಮನೆಗೆ ಅಂತ ಲಿಖಿತ ಬಂದಿರುತ್ತಾನೆ, ಅಣ್ಣ ಮನೆಯಲ್ಲಿ ಇರುವುದಿಲ್ಲ, ಹಸಿವೆಯಾಗುತ್ತೆ ಗಿಡದಲ್ಲಿ ಇರುವ ಹಣ್ಣನ್ನು ತೆಗೆದುಕೊಂಡು ತಿನ್ನುತ್ತಾನೆ ಆಗ ಅಣ್ಣ ಬರುತ್ತಾನೆ. ಅಣ್ಣ, ಹಸಿವೆ ಬಹಳ ಆಗಿತ್ತು ನೀನು ಬರುವದು ಹೊತ್ತಾಯಿತು ಅಂತ ಮನೆಯೊಳಗಿರುವ ಹಣ್ಣನ್ನು ತೆಗೆದುಕೊಂಡು ತಿಂದಿದ್ದೇನೆ ಕಳ್ಳತನ ಮಾಡಿದ ಪಾಪ ಬಂತು ಆದ್ದರಿಂದ ನನಗೆ ಏನಾದರೂ ಶಿಕ್ಷೆಯನ್ನು ಕೊಡು ಅಂತ. ಅವನು ಅನ್ನುತ್ತಾನೆ ನೀನು ತಮ್ಮ, ನಾನು ಅಣ್ಣ ನನ್ನ ಮನೆಯಲ್ಲಿ ಇರುವ ಅದು ಹಸಿವೆಯಾದಾಗ ತೆಗೆದುಕೊಂಡಿದ್ದೀ, ನೀನು ತೆಗೆದುಕೊಳ್ಳುವುದು ನನಗೆ ಸಮ್ಮತವೇ ಆದರಲ್ಲಿ ತಪ್ಪೇನಿದೆ ತಿಂದಿದ್ದೀಯಾ ಏನು ತಪ್ಪಿಲ್ಲ ಅಂತ ಎಷ್ಟು ಹೇಳಿದರೂ ಅವನು ಕೇಳುವುದಿಲ್ಲ, ಇಲ್ಲ ನಾನು ಕೇಳದೇ ತಿನ್ನಬಾರದು ಅಸ್ತೇಯ. ಅಹಿಂಸ ಸತ್ಯ, ಅಸ್ತೇಯ ಬ್ರಹ್ಮಚರ್ಯ ಇವುಗಳೆಲ್ಲ ಯಮ ಅಂತ ಹೇಳುತ್ತಾರೆ ಅಪರೋಕ್ಷ ಜ್ಞಾನಕ್ಕೆ ಸಾಧನವಾದ ಯಮ ನಿಯಮಗಳಲ್ಲಿ ಒಂದಾದದ್ದು ಅಸ್ತೇಯ. ಯಾದುವಾರ್ಯರು ವ್ಯಾಖ್ಯಾನ ಮಾಡುವಾಗ ಹೇಳುತ್ತಾರೆ **'ಸ್ವಾಮ್ಯನನುಜ್ಞಾತಸ್ಯ ತೃಣಾದೇರತ್ ವ್ಯಪರಿಗ್ರಹಃ'** ಸ್ವಾಮಿಯ ಅನುಜ್ಞೆ ಇಲ್ಲದಂತೆ ಹುಲ್ಲುಕಡ್ಡಿಯನ್ನು, ಹುಲ್ಲಿನ ದೊಡ್ಡದಾದ ಹೊರೆಯಲ್ಲ, ಹುಲ್ಲುಕಡ್ಡಿಯನ್ನು ತೆಗೆದುಕೊಳ್ಳಬಾರದು ಅಂತ ಅಷ್ಟು ಸೂಕ್ಷ್ಮ ಇದೆ ಧರ್ಮ ಆದ್ದರಿಂದ ದಯಮಾಡಿ ನೀನು ನನಗೆ ಏನಾದರೂ ಶಿಕ್ಷೆಯನ್ನು ಕೊಡಲೇಬೇಕು. ಅವನು ಅಂದ ಶಿಕ್ಷೆಯನ್ನು ಕೊಡಲಿಕ್ಕೆ ನಾನೇನು ರಾಜ ಅಲ್ಲ, ನಾನೊಬ್ಬ ಬ್ರಾಹ್ಮಣ ನಿನಗೆ ಅಷ್ಟು ಅಪೇಕ್ಷೆ ಇದ್ದರೆ ರಾಜರ ಹತ್ತಿರ ಹೋಗು ಅಂತ ರಾಜರು ಇದೇ ಮಾತು ಹೇಳಿದ್ದಾರೆ ಏನೋ ನಿನ್ನ ಅಣ್ಣನ ಮನೆಯಲ್ಲಿಯೇ ತಿಂದಿದ್ದೀಯಲ್ಲ ಏನೂ ತಪ್ಪಿಲ್ಲ ಬಿಡು ಅಂತ ಆದರೂ ಇವನು ಶಿಕ್ಷೆ ಕೊಡಲೇಬೇಕು ಅಂತ ತನ್ನ ಎರಡೂ ಕೈಗಳನ್ನು ಮುಂದೆ ಮಾಡಿದ್ದಾನೆ ಎರಡೂ ಕೈಗಳನ್ನು ಕತ್ತರಿಸಿದ್ದಾರೆ. ಆಗ ದೇವತೆಗಳೆಲ್ಲ ಇವನಿಗೆ ವಿಶೇಷ ಅನುಗ್ರಹ ಮಾಡಿದ್ದಾರೆ ಅಲ್ಲಿಯೇ ಪಕ್ಕದಲ್ಲಿ ಇರುವ ನದಿಯಲ್ಲಿ ನೀನು ಸ್ನಾನ ಮಾಡಿದರೆ ಪುನಃ ನಿನಗೆ ಬಾಹುಗಳು ಬರುತ್ತವೆ ಅಂತ ಹೇಳಿದ್ದರಿಂದ ಸ್ನಾನ ಮಾಡುತ್ತಾನೆ ಆಗ ಪುನಃ ಅವನ ಬಾಹುಗಳು ಚಿಗುರುತ್ತವೆ ಆ ನದಿಗೆ ಬಾಹುದಾ ಎಂಬ ಹೆಸರು ಬರುತ್ತದೆ ಅಂತ ಹೇಳುತ್ತಾರೆ. ಅಂತಹ ಆ ಬಾಹುದಾ ನದಿಯಾಗಿ ಹರಿಯುತ್ತಾಳೆ ಈ ಪ್ರಸೇನಜಿತ್ ಎಂಬ ರಾಜನ ಮಡದಿ ಎಂಬುದಾಗಿ ತಿಳಿಸುತ್ತಾರೆ.

ಇವನ ಮಗನೇ ಯುವನಾಶ್ವ, ಆ ಯುವನಾಶ್ವನಿಗೆ ಮಕ್ಕಳಿರುವುದಿಲ್ಲ ಅಂತ ಯಜ್ಞ ಮಾಡುತ್ತಾನೆ, ಯಜ್ಞ ಮಾಡಿದಾಗ ಅಭಿಮಂತ್ರಣ ಮಾಡಿ ನೀರನ್ನು ತುಂಬಿ ಇಟ್ಟಿರುತ್ತಾರೆ ಮಾರನೆಯ ದಿವಸ ಮಡದಿಗೆ ಕುಡಿಸಬೇಕು ಅಂತ. ರಾತ್ರಿ ಎದ್ದ ನೀರಡಿಕೆ ಆಯಿತು, ಯಾರು ಸೇವಕರು ಹತ್ತಿರ ಕಾಣಿಸಲಿಲ್ಲ ನೀರು ನೀರು ಅಂತ ನೋಡಿದ ಒಂದು ತಂಬಿಗೆಯಲ್ಲಿ ನೀರಿತ್ತು ಗಟಗಟ ಅಂತ ಕುಡಿದು ಮಲಗಿದ. ಬೆಳಿಗ್ಗೆ ಎದ್ದು ನೋಡುತ್ತಾರೆ ಋಷಿಗಳು ಅಲ್ಲಿ ನೀರೇ ಇಲ್ಲ, ಇಪ್ಪೆಲ್ಲಾ ಮಂತ್ರ ಜಪ ಮಾಡಿ ಅಭಿಮಂತ್ರಣ ಮಾಡಿ ಇಟ್ಟಂತಹ ನೀರನ್ನು ಯಾರು ಕುಡಿದರು ಅಂತ ನಾನೇ ಕುಡಿದೆ ಅನ್ನುತ್ತಾನೆ. ಹಾಗಾದರೆ ನಿನಗೆ ಮಕ್ಕಳು ಆಗುತ್ತಾರೆ ಅದು ಗರ್ಭ ಆಗಬೇಕು ಅದು ನಿನ್ನ ಹೆಂಡತಿ

ಗರ್ಭಣಿ ಆಗಬೇಕು ಆ ಶಕ್ತಿ ಸಾಮರ್ಥ್ಯಗಳು ಅವಳಿಗೆ ಬರಬೇಕು ಅಂತ ನಾವು ನೀರು ಇಟ್ಟರೆ ನೀನು ಕುಡಿದಿದ್ದೀಯಲ್ಲ ಮಹಾರಾಯ ನೀನೇ ಗರ್ಭಧಾರಣೆ ಮಾಡಬೇಕಾಗುತ್ತದೆ **'ರಹೋ ದೈವಬಲಂ ಬಲಮ್'** ಅನ್ನುತ್ತಾರೆ ದೇವರ ಸಂಕಲ್ಪ ನಾವೇನು ಮಾಡುವುದು ಅಂತ. ನೋಡಿ ಎಷ್ಟು ವಿಚಿತ್ರ ಆ ರೀತಿಯ ಅದ್ಭುತವಾದ ಮಂತ್ರದ ಸಾಮರ್ಥ್ಯ, ತಪಸ್ಸಿನ ಸಾಮರ್ಥ್ಯ ಹೆಣ್ಣುಮಕ್ಕಳಿಗಿರುವ ಗರ್ಭಧಾರಣ ಸಾಮರ್ಥ್ಯ ಈ ಪುರುಷನಿಗೆ ಬರುತ್ತದೆ. ಗರ್ಭದಾರಣೆ ಮಾಡುತ್ತಾನೆ ಆದರೆ ಕೂಸು ಹೇಗೆ ಹೊರಗೆ ಬರಬೇಕು ಇವನ ಹೊಟ್ಟೆ ಹರೆದು ಹೊರಗೆ ಬರುತ್ತಾನೆ ಆದರೂ ಇವನು ಸಾಯುವುದಿಲ್ಲ ಅದು ಭಗವಂತನ ಅದ್ಭುತವಾದ ಲೀಲೆ. ಮುಂದೆ ಹಾಲು ಕುಡಿಸುವವರು ಯಾರು, ಸ್ವತಃ ಇಂದ್ರ ದೇವರು ಬಂದು ನನ್ನ ಪ್ರೀತಿಗಾಗಿ ಯಜ್ಞವನ್ನು ಮಾಡಿದ್ದೀರಿ ಅಂತ ತಮ್ಮ ಬೆರಳಿನಿಂದಲೇ ಹಾಲಿನ ಸೃಷ್ಟಿಯನ್ನು ಮಾಡಿ ಹಾಲನ್ನು ಕುಡಿಸುತ್ತಾರೆ. ಇದೆಲ್ಲ ಅದ್ಭುತವಾದ ದೇವತೆಗಳ ಲೀಲೆ, ದೇವತೆಗಳ ಶಕ್ತಿ ಸಾಮರ್ಥ್ಯ. ನನ್ನ ಬೆರಳಿನ ಹಾಲನ್ನು ಕುಡಿದು ನೀನು ಬೆಳಿ ಅಂತ ಅವನಿಗೆ ಭರವಸೆ ಕೊಡುತ್ತಾನೆ ಮಾಂ ಧಾತಾ, ನನ್ನ ಬೆರೆಳಿನಿಂದ ಹಾಲನ್ನು ಕುಡಿ ಅಂತ ಹೇಳಿದ್ದಕ್ಕೆ ಅವನಿಗೆ ಮಾಂಧಾತಾ ಅಂತ ಹೆಸರು ಬಂತು, ಧಾತಾ ಅಂದರೆ ಹಾಲು ಕುಡಿಯುವವನು ಅಂತ ಅರ್ಥ. ಈ ಮಾಂಧಾತಾ ಮಹಾಭಾರತದ ಮತ್ತೊಂದು ಭಾಗದಲ್ಲಿ ಹೇಳುತ್ತಾರೆ ಹನ್ನೆರಡು ದಿವಸದಲ್ಲಿ ಸಂಪೂರ್ಣ ಪೃಥ್ವಿಯನ್ನು ತನ್ನ ವಶದಲ್ಲಿ ತೆಗೆದುಕೊಳ್ಳುತ್ತಾನೆ ಅಂತಹ ಮಹಾಪರಾಕ್ರಮಿ, ಇವನ ರಾಜ್ಯದೊಳಗೆ ಸೂರ್ಯಾಸ್ತವೇ ಇಲ್ಲ.

ಯಾವತ್ಸೂರ್ಯ ಉದೇತಿಸ್ಮ ಯಾವತ್ ಚಂದ್ರ ಪ್ರತಿತಿಸ್ಥತಿ ।
ಸರ್ವಂ ತದ್ಯೌವನಾಶ್ವಸ್ಯ ಮಾಂಧಾತುಃ ಕ್ಷೇತ್ರ ಮುಚ್ಯತೇ ॥ (ವಿಷ್ಣುಪುರಾಣ)

ಅಷ್ಟು ರಾಜ್ಯದ ವಿಸ್ತಾರವನ್ನು ಮಾಡಿದ್ದಾನೆ ಎಲ್ಲಿ ನೋಡಿದರೂ ಮಾಂಧಾತುವಿನ ರಾಜ್ಯ. ಅದಕ್ಕಾಗಿಯೇ ಕವಿ ಹೇಳಿದ ಇಂತಹ ದೊಡ್ಡ ರಾಜ ಆದರೆ ಇವತ್ತಿಲ್ಲ ನಾನು ನಾನು ಅಂತ ಅನ್ನುವ ಅಹಂಕಾರದೊಳಗೆ ಸಾಧನೆಯನ್ನು ಮಾಡದಂತೆ ವ್ಯರ್ಥ ಕಾಲಹರಣ ಮಾಡಬೇಡಿ **'ಮಾಂಧಾತಾ ಚ ಮಹಿಪತಿಃ ಕೃತಯುಗಾಲಂಕಾರ ಭೂತೋ ಗತಃ'** ಅಂತಹ ಮಾಂಧಾತಾ ರಾಜ. ಇವನ ಹೆಂಡತಿ ಬಿಂದುಮತೀ ಅಂತ ಬಹಳ ಉತ್ತಮವಾದಂತಹ ಸೌಂದರ್ಯ ಇದೆ, ಪಾತಿವ್ರತ್ಯ ಇದೆ ಸದ್ಗುಣಗಳಿಂದ ಕೂಡಿದವಳು ಅವಳು ಎಷ್ಟು ಜನರ ಅಕ್ಕ ಅವಳ ತಮ್ಮಂದಿರು ಎಷ್ಟು ಅಂದರೆ ಇವನ ಶಾಲಕರು ಎಷ್ಟು ಜನ ಇದ್ದರು ಅಂದರೆ ಹತ್ತು ಸಾವಿರ ಜನ ಇದ್ದರಂತೆ. ಹತ್ತು ಸಾವಿರ ಜನ ತಮ್ಮಂದಿರನ್ನು ಪಡೆದ ಬಿಂದುಮತೀ ಎಂಬ ಶಶಬಿಂದುವಿನ ಮಗಳು ಅವಳನ್ನು ಇವನು ಮದುವೆಯಾಗಿದ್ದಾನೆ ಅವಳಲ್ಲಿ ಪುರುಕುತ್ಸಾ, ಮುಚುಕುಂದ ಅಂತ ಇಬ್ಬರು ಮಕ್ಕಳು. ಆ ಮುಚುಕುಂದ ಹಿಂದೆ ಹೀಗೆ ಕಕುತ್ಸ್ಥ ದೇವತೆಗಳ ಸೇವೆ ಮಾಡಿದ ಹಾಗೆ ಮುಚುಕುಂದನೂ ಕೂಡ ದೇವಾಸುರ ಸಂಗ್ರಾಮದಲ್ಲಿ ದೇವತೆಗಳ ಸೇವೆಯನ್ನು ಮಾಡುತ್ತಾನೆ ದೇವತೆಗಳು ವರ ಕೇಳು ಅಂತ ಹೇಳುತ್ತಾರೆ. ನನಗೆ ದೀರ್ಘವಾದ ನಿದ್ರೆ ಬೇಕು, ಯಾರು ನನ್ನನ್ನು ಎಬ್ಬಿಸುತ್ತಾರೋ ಅವರನ್ನು ನಾನು ನೋಡಿದಾಕ್ಷಣ ಅವರು ಸುಟ್ಟು ಬೂದಿಯಾಗಬೇಕು ಅಂತ ತಥಾಸ್ತು ಅಂತ ದೇವತೆಗಳು ವರ ಕೊಡುತ್ತಾರೆ ಆದರೆ ಮನಸ್ಸಿನಲ್ಲಿ ದೇವರಿಗೆ ಪ್ರಾರ್ಥನೆ ಮಾಡುತ್ತಾರೆ. ನಾವು ಕೊಟ್ಟ ವರ ಬರೀ ನಿದ್ರೆಗೆ ಅವನು ಅಸುರನಾಗಿದ್ದರೆ ಬೇರೆ ಇವನೊಬ್ಬ ವಿಷ್ಣುಭಕ್ತ ಸಜ್ಜನ ಸಾತ್ವಿಕ ಆದರೆ ಇಂತಹ ತಾಮಸ ವರ ಬೇಡಿದ್ದಾನೆ. ವರವನ್ನು ಏನೋ ನಾವು ಕೊಟ್ಟಿದ್ದೇವೆ ಆದರೆ ಮುಂದೊಮ್ಮೆ ಈ ವರ ಒಂದು ಸತ್ಕಾರ್ಯಕ್ಕೆ ಉಪಯೋಗ ಆಗುವ ಹಾಗೆ ಆಗಲಿ ಅದರಿಂದ ವರ ಕೊಟ್ಟ ನಮಗೂ ಒಂದು ಪುಣ್ಯ ಬರಲಿ ಅಂತ ಹೀಗಾಗಿ ಶ್ರೀಕೃಷ್ಣ ಪರಮಾತ್ಮ ಕಾಲಯವನನನ್ನು ಇವನ ಹತ್ತಿರ ಕರೆದುಕೊಂಡು ಬರುತ್ತಾನೆ. ಇವನು ಮಲಗಿದಾಗ ಇವನೇ ಕೃಷ್ಣ ಅಂತ ತಿಳಿದು

ಒದ್ದು ಮುಸುಕನ್ನು ಎಳೀತಾನೆ ಮುಚುಕುಂದ ಕಣ್ಣು ತೆಗೆದು ನೋಡಿದಾಕ್ಷಣಕ್ಕೆ ಕಾಲಯವನ ಸುಟ್ಟು ಬೂದಿಯಾಗುತ್ತಾನೆ. ಒಬ್ಬ ದುಷ್ಟ, ಧರ್ಮದ್ರೋಹಿ ಪರಮಾತ್ಮನ ದ್ರೋಹಿ ಶ್ರೀಕೃಷ್ಣನ ದ್ರೋಹ ಮಾಡುವಂತಹ ಒಬ್ಬ ಮಹಾ ಪಾಪಿಷ್ಟನಾದ ಕಾಲಯವನನನ್ನು ಸಂಹಾರ ಮಾಡಿದ ಒಂದು ಪರಮ ಪವಿತ್ರವಾದ ಪುಣ್ಯಕಾರ್ಯ ಇವನಿಂದ ನಡೆಯಿತು ದೇವತೆಗಳು ಕೊಟ್ಟ ವರದಿಂದ ಜೊತೆಗೆ ಶ್ರೀಕೃಷ್ಣನ ದರ್ಶನ ಆಯಿತು ಹೀಗಾಗಿ ದೇವತೆಗಳಿಗೆ ಸಂತೋಷ ಆಯಿತು ನಾವು ಕೊಟ್ಟ ವರ ಸಾರ್ಥಕ ಆಯಿತು ಅಂತ. **'ನ ದೇವ ತೋಷಣಂಮೃಧಾ'** ದೇವತೆಗಳನ್ನು ಸಂತೋಷ ಪಡಿಸಿದ್ದು ಅದು ವ್ಯರ್ಥ ಆಗಲಿಲ್ಲ, ಬರೀ ನಿದ್ರೆಗೆ ಕಾರಣವಾಗಲಿಲ್ಲ ಒಬ್ಬ ದುಷ್ಟನ ಸಂಹಾರಕ್ಕೆ ಕಾರಣವಾಗಿ ಸಾಕ್ಷಾತ್ ಭಗವಂತನ ದರ್ಶನ ಮಾಡುವ ಸೌಭಾಗ್ಯ ಮುಚುಕುಂದನಿಗೆ ಬಂದಿದೆ ಎಂಬುದಾಗಿ ತಿಳಿಸಿಕೊಡುತ್ತಾರೆ ಅಂತಹ ಮುಚುಕುಂದ ಇವನ ಮಗ.

ಈ ವಂಶದಲ್ಲಿ ತ್ರಯ್ಯಾರುಣ ಅಂತ ಒಬ್ಬ ರಾಜ. ಆ ತ್ರಯ್ಯಾರುಣನಿಗೆ ಸತ್ಯವ್ರತ ಅಂತ ಒಬ್ಬ ಮಗ ಅವನು ಒಳ್ಳೆಯ ಪರಾಕ್ರಮಿ, ವಿದ್ಯಾವಂತ, ಒಳ್ಳೆಯ ತಾರುಣ್ಯ ಆ ತಾರುಣ್ಯದ ಮದದಲ್ಲಿ, ಕಾಮದ ಭರದಲ್ಲಿ ಒಂದು ತಪ್ಪು ಕೆಲಸ ಮಾಡಿದ್ದಾನೆ. ಒಬ್ಬ ಬ್ರಾಹ್ಮಣ ಒಂದು ಮದುವೆಯನ್ನು ಮಾಡಿಕೊಳ್ಳುತ್ತಾ ಇದ್ದ ಆ ಮದುವೆ ನಿಶ್ಚಯ ಆಗಿದೆ ಮದುವೆ ಪ್ರಾರಂಭ ಆಗಿದೆ ಆ ಸಂದರ್ಭದಲ್ಲಿ ಹೋಗಿ ಆ ಕನ್ಯೆಯನ್ನು ಅಪಹಾರ ಮಾಡಿಕೊಂಡು ಬಂದು ಮದುವೆಯಾಗಿದ್ದಾನೆ ತಾನು ಸತ್ಯವ್ರತ. ಪಾಣಿಗ್ರಹಣ ಮಂತ್ರಗಳನ್ನು ಹೇಳುತ್ತಾ ಇದ್ದಾರೆ ಹೇಳುವಾಗ ಆ ಮಂತ್ರವನ್ನು ಹೇಳಲಿಕ್ಕೆ ಕೊಡದೇ ಅದನ್ನು ತಡೆದು ಮಂತ್ರ ಎಲ್ಲ ಹೇಳಿಬಿಟ್ಟರೆ ಮದುವೆ ಪೂರ್ಣ ಆದರೆ ಆಮೇಲೆ ತಾನು ಮದುವೆ ಮಾಡಿಕೊಳ್ಳುವುದು ಕಷ್ಟ ಅನ್ನುವ ಒಂದು ಧರ್ಮಪ್ರಜ್ಞೆಯೂ ಅಡ್ಡ ಬರುತ್ತಾ ಇದೆ ಆದರೆ ಕಾಮೋದ್ರೇಕದಿಂದ ತಾನು ಅವಳನ್ನು ಅಪಹಾರ ಮಾಡಿಕೊಂಡು ಬಂದು ಮದುವೆ ಮಾಡಿಕೊಂಡಿದ್ದಾನೆ. ತ್ರಯ್ಯಾರುಣನಿಗೆ ಇದು ಗೊತ್ತಾಯಿತು ನೋಡಿ ಎಂತಹ ರಾಜರು, ವಿಚಾರನೇ ಮಾಡಲಿಲ್ಲ ನೀನು ಮಾಡಿದ್ದು ಘೋರ ಅಪರಾಧ, ನಿನಗೆ ಉತ್ತಮವಾದ ಕನ್ಯೆಯನ್ನು ನಾನು ತಂದು ಮದುವೆ ಮಾಡಿಕೊಡುತ್ತಾ ಇದ್ದೆ. ಇನ್ನೊಬ್ಬರು ಮಾಡಿಕೊಳ್ಳುವ ಕನ್ಯೆಯನ್ನು ಅಪಹಾರ ಮಾಡಿಕೊಂಡು ಬಂದು ಮದುವೆ ಮಾಡಿಕೊಳ್ಳುವ ಅವಶ್ಯಕತೆ ಏನಿತ್ತು ಘೋರವಾದ ಅಪರಾಧವನ್ನು ನೀನು ಮಾಡಿದ್ದೀ ಆದ್ದರಿಂದ ನೀನು ನನ್ನ ರಾಜ್ಯದಲ್ಲಿ ಇರಬೇಡ ಹೋಗು ಆಚೆಗೆ ಅಂತ ಶಾಪ ಕೊಟ್ಟ ಹೊರಗೆ ಹಾಕಿದ್ದಾನೆ ಬಹಿಷ್ಕಾರ ಹಾಕಿದ್ದಾನೆ. ಆ ಸತ್ಯವ್ರತ ತಾನು ಮಾಡಿದ ತಪ್ಪನ್ನು ಒಪ್ಪಿಕೊಳ್ಳುತ್ತಾನೆ ಹೌದು ನನ್ನಿಂದ ತಪ್ಪಾಗಿದೆ ಆದರೆ ಎಲ್ಲಿ ಹೋಗಬೇಕು ಅಂತ ಹೇಳುತ್ತೀಯಾ ನೀನು, ಹೊರಗೆ ಹೋಗು ಅಂತ ಹೇಳಿದೆಯೆಲ್ಲ ಎಲ್ಲಿ ಹೋಗಲಿ. ಅವನು ಹೇಳಿದ ಶ್ವಪಾಕರ ಜೊತೆಗೆ ಶ್ವಪಚರು ಎಲ್ಲಿ ಇರುತ್ತಾರೋ ಅವರ ಜೊತೆಗೆ ನೀನು ವಾಸ ಮಾಡಿಕೊಂಡು ಇರು ಅಂತ ಕೊಟ್ಟು ಕಳಿಸುತ್ತಾನೆ ಆಯಿತು ಅಲ್ಲಿಯೇ ಇರುತ್ತೇನೆ ಅಂತ ಹೊರಟ. ಊರು ಹೊರಗೆ ಶ್ವಪಾಕರ ಶ್ವಪಚರು ಎಲ್ಲಿರುತ್ತಾರೋ ಅಲ್ಲಿ ವಾಸ ಮಾಡಿಕೊಂಡು ಅವರ ಜೊತೆಗೆ ತಾನು ಇದ್ದಾನೆ.

ಮಗ ತಪ್ಪು ಮಾಡಿದ, ತಂದೆ ಅವನನ್ನು ಹೊರಗೆ ಹಾಕುತ್ತಾ ಇದ್ದಾನೆ ಕುಲಗುರುಗಳಾದ ವಸಿಷ್ಠರು ಸುಮ್ಮನೆ ಪ್ರೇಕ್ಷಕರಾಗಿ ಇದ್ದಾರೆ ಯಾಕೆ ಅಂದರೆ ವಸಿಷ್ಠರು ಸೂಕ್ಷವಾದ ವಿಮರ್ಶೆಯನ್ನು ಮಾಡಿದ್ದಾರೆ. ಇದು ಒಂದರ್ಥದಲ್ಲಿ ಅಧರ್ಮನೇ ಯಾಕೆಂದರೆ ಒಬ್ಬ ಮದುವೆ ಮಾಡಿಕೊಳ್ಳಲು ಹೊರಟಿದ್ದಾನೆ ಸಂಕಲ್ಪ ಆಗಿದೆ ನಿಶ್ಚಯವಾಗಿದೆ ಪೂರ್ವಭಾಗ ಎಲ್ಲಾ ಆಗಿದೆ ಇನ್ನೇನು ಸಪ್ತಪದಿ ಆಗಬೇಕು ಆ ಸಂದರ್ಭದಲ್ಲಿ ಸಪ್ತಪದಿ ಮಂತ್ರಗಳನ್ನು ಹೇಳುವುದಕ್ಕೆ ವಿಘ್ನ ಮಾಡಿ ಇವನು ಅಪಹಾರ ಮಾಡಿಕೊಂಡು ಹೋಗಿದ್ದಾನೆ. ಸಪ್ತಪದಿ ಆಗಿಲ್ಲ ಪಾಣಿಗ್ರಹಣ ಪೂರ್ಣ ಆಗಿಲ್ಲ ಹೀಗಾಗಿ ಅವಳು ಇನ್ನೊಬ್ಬನ ಹೆಂಡತಿ ಅಂತ ಅನ್ನಿಸಿಕೊಂಡಿಲ್ಲ ಇನ್ನೂ ಕನ್ಯಾವಸ್ಥೆಯೇ ಇದ್ದ ಹಾಗೆ ಆ ಸಂದರ್ಭದಲ್ಲಿ

ಮದುವೆ ಆಗಿದ್ದಾನೆ. ಹಾಗಾದರೆ ಮದುವೆ ಆಗುವುದಕ್ಕೆ ಪ್ರಾರಂಭವಾಗಿದೆ ಆ ಸಂದರ್ಭದಲ್ಲಿ ಮದುವೆ ಆಗಿದ್ದಾನೆ ಅನ್ನುವುದು ತಪ್ಪೇ ಆದರೆ ಪೂರ್ಣ ಸಪ್ತಪದಿ ಆಗಿರಲಿಲ್ಲ ಅನ್ನುವುದಕ್ಕೆ ಪರಪತ್ನಿಯನ್ನು ಸ್ವೀಕಾರ ಮಾಡಿದಂತೆಯೂ ಅಲ್ಲ. ತಪ್ಪು ಹೌದು ಆದರೆ ಸಣ್ಣ ತಪ್ಪು ಇದಕ್ಕೆ ಒಂದು ಹನ್ನೆರಡು ವರ್ಷಗಳವರೆಗೆ ಇವನು ತಪಸ್ಸು ಮಾಡಿ ತನ್ನ ಪಾಪಗಳನ್ನೆಲ್ಲ ಪರಿಹಾರ ಮಾಡಿಕೊಂಡ ಅಂದರೆ ಆಮೇಲೆ ರಾಜ್ಯದಲ್ಲಿ ಇವನನ್ನು ಕೂಡಿಸಿ ಪಟ್ಟಾಭಿಷೇಕ ಮಾಡೋಣ ಅಲ್ಲಿಯವರಿಗೆ ಇವನು ತಪಸ್ಸು ಮಾಡಲಿ, ಪ್ರಾಯಶ್ಚಿತ್ತ ಮಾಡಿಕೊಳ್ಳಲಿ ಅಂತ ಅವರ ಮನಸ್ಸಿನಲ್ಲಿರುವ ಉದ್ದೇಶ ಅವರು ಏನು ಬಾಯಿ ಬಿಟ್ಟು ಹೇಳಿಲಿಲ್ಲ, ಗಂಭೀರವಾಗಿ ಕುಳಿತಿದ್ದಾರೆ ವಸಿಷ್ಠರು. ಇವನಿಗೆ ಅದು ಗೊತ್ತಿಲ್ಲ ನನ್ನದೇನು ತಪ್ಪು ಇರಲಿಲ್ಲ, ಇನ್ನೂ ಅವಳು ಕನ್ಯೆ ಮದುವೆ ಪೂರ್ಣ ಆಗದೆ ಇರುವಾಗ ನಾನು ಮದುವೆಯಾಗಿದ್ದೀನಲ್ಲ ಹಾಗಾದರೆ ಇದೇನು ಅಂತಹ ತಪ್ಪಲ್ಲ ಅಂತ ವಸಿಷ್ಠರು ಹೇಳಬಹುದಿತ್ತು ಹೇಳಲಿಲ್ಲ ಅಂತ ವಸಿಷ್ಠರ ಮೇಲೆ ಸ್ವಲ್ಪ ಸಿಟ್ಟು ಅವನಿಗೆ. ಸಿಟ್ಟು ಮಾಡಿಕೊಂಡರೆ ಮಾಡಿಕೊಳ್ಳಲಿ ನಾನಂತೂ ಅಧರ್ಮ ಮಾಡುವುದಿಲ್ಲ ಅನ್ಯಾಯ ಮಾಡುವುದಿಲ್ಲ ತಪ್ಪು ಮಾಡಿದ್ದಾನೆ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಲಿ ಆಮೇಲೆ ನಾನು ಅವನನ್ನು ಉದ್ಧಾರ ಮಾಡಬೇಕು ಅಂತ ವಸಿಷ್ಠರು ಮನಸ್ಸಿನಲ್ಲಿ ಸಂಕಲ್ಪ ಮಾಡಿಕೊಂಡಿದ್ದಾರೆ. ಇವನು ಈಚೆಗೆ ಊರು ಹೊರಗೆ ಬಂದ ಶ್ವಪಚರ ಮಧ್ಯದಲ್ಲಿ ವಾಸ, ಅವರೆಲ್ಲ ಮಾಂಸ ಭಕ್ಷಣಾದಿಗಳನ್ನು ಮಾಡುತ್ತಾ ಇದ್ದಾರೆ ಅವರ ಜೊತೆಗೆ ಇವನು ವಾಸ ಮಾಡಿ ಕಾಲ ಕಳೆಯುತ್ತಾ ಇದ್ದಾನೆ.

ಇತ್ತ ವಿಶ್ವಾಮಿತ್ರರು ಸಮುದ್ರ ದಡದಲ್ಲಿ ಅವರು ತಪಸ್ಸು ಮಾಡುವುದಕ್ಕೆ ಅಂತ ಹೊರಟಿದ್ದಾರೆ ತಮ್ಮ ಹೆಂಡತಿ ಮಕ್ಕಳು ಎಲ್ಲರನ್ನು ಕೂಡ ಈ ಅಯೋಧ್ಯೆಯಲ್ಲಿ ರಾಜನ ಹತ್ತಿರ ಈ ತ್ರಯ್ಯಾರುಣನ ಒಂದು ಸುಪರ್ದಿಯಲ್ಲಿ ಅವರನ್ನು ರಕ್ಷಣೆ ಮಾಡುವುದಕ್ಕೆ ಅಂತ ಇಟ್ಟು ತಾವು ತಪಸ್ಸಿಗೆ ಹೋಗಿದ್ದಾರೆ. ನೋಡಿ, ಇವನು ಇನ್ನೊಬ್ಬರ ಹೆಂಡತಿ ಆಗಬೇಕಾದವಳನ್ನು, ಇನ್ನು ಹೆಂಡತಿ ಆಗಿಲ್ಲ ಆದರೂ ಹೆಂಡತಿಯಾಗುವ ನಿಶ್ಚಯವಾದವಳನ್ನು ಮದುವೆ ಪ್ರಾರಂಭವಾದ ನಂತರ ಅಪಹಾರ ಮಾಡಿಕೊಂಡು ಹೋದ ಒಂದು ಅಪರಾಧಕ್ಕೆ ಇವನ ಮೇಲೆ ಕುಪಿತನಾಗಿ ಇಂದ್ರ ದೇವರು ಹನ್ನೆರಡು ವರ್ಷ ಮಳೆಯೇ ಕೊಟ್ಟಿಲ್ಲ ಆ ಊರಿಗೆ ದುರ್ಭಿಕ್ಷೆ.

ಸಮಾ ದ್ವಾದಶ ರಾಜೇನ್ದ್ರ ತೇನಾಧರ್ಮಣ ವೈ ತದಾ । (12.19 ಹರಿವಂಶಪರ್ವ)

ಆ ಅಧರ್ಮದಿಂದಾಗಿ ಇಂದ್ರ ದೇವರು ಮಳೆಯನ್ನೇ ಕೊಡಲಿಲ್ಲ, ಎಲ್ಲ ಕಡೆಗೆ ದುರ್ಭಿಕ್ಷೆ, ಹೊಟ್ಟೆಗೆ ಬಟ್ಟೆಗೆ ಗತಿಯಿಲ್ಲ ಹಾಹಾಕಾರವಾಗಿದೆ. ವಿಶ್ವಾಮಿತ್ರರು ಮನೆಯಲ್ಲಿ ಇದ್ದರೆ, ಆಶ್ರಮದಲ್ಲಿ ಇದ್ದರೆ ಏನಾದರೂ ವ್ಯವಸ್ಥೆ ಮಾಡಬಹುದಾಗಿತ್ತು, ವಿಶ್ವಾಮಿತ್ರರು ತಪಸ್ಸಿಗೆ ಹೋಗಿದ್ದಾರೆ ಹೆಣ್ಣುಮಗಳು ಮಾತ್ರ, ಮಕ್ಕಳಿದ್ದಾರೆ. ಅವರೆಲ್ಲರ ಪೋಷಣೆ ಹೇಗೆ ಆಗಬೇಕು ಅಂತ ಒಬ್ಬ ಮಗನನ್ನ ತನ್ನ ಕೊರಳಿಗೆ ಬಟ್ಟೆಯನ್ನು ಕಟ್ಟಿಕೊಂಡು, ಆ ಮಗುವನ್ನು ಹಾಕಿಕೊಂಡು ಆ ವಿಶ್ವಾಮಿತ್ರರ ಹೆಂಡತಿ ಎಲ್ಲ ಕಡೆಗೆ ಓಡಾಡುತ್ತಾ ಇದ್ದಾಳೆ. ಯಾರು ಈ ಮಗುವನ್ನು ಕೊಂಡು ತೆಗೆದುಕೊಳ್ಳುತ್ತಿರೋ ಒಂದು ನೂರು ಆಕಳನ್ನು ಕೊಡಬೇಕು ಅಂದರೆ ನನ್ನ ಒಂದು ಮಗುವನ್ನು ಕೊಡುತ್ತೇನೆ ಅಂತ. ಆ ಆಕಳುಗಳಿಂದ ಹಾಲು ಪಡೆದು ಇನ್ನುಳಿದ ನೂರು ಜನ ಮಕ್ಕಳನ್ನು ಪೋಷಣೆ ಮಾಡೋಣ ಅಂತ ಅವಳ ಚಿಂತನ. ಒಂದು ಎಲ್ಲರೂ ಸಾಯುವದಕ್ಕಿಂತಲೂ ಒಬ್ಬ ಮಗುವನ್ನು ಮಾರಿ ಆ ಮಗುವಿನಿಂದ ಬಂದ, ಆಗಿನ ಕಾಲದ ಸಂಪತ್ತು ಅಂದರೆ ಗೋಸಂಪತ್ತೇ ಸಂಪತ್ತು, ಗೋವುಗಳಿಂದ ಉಳಿದವರನ್ನು ರಕ್ಷಣೆ ಮಾಡೋಣ ಅಂತ ಆ ಮಗುವನ್ನ ಕೊರಳಿಗೆ ಕಟ್ಟಿಕೊಂಡು, ಗಲಕ್ಕೆ ಕಟ್ಟಿಕೊಂಡು ತಿರುಗುತ್ತಿದ್ದಳು ಅನ್ನುವುದಕ್ಕೆ ಆ ಋಷಿಗಳಿಗೆ ಮುಂದೆ ಗಾಲವ ಎಂಬ ಹೆಸರು ಬಂತು.



ಈ ಸತ್ಯವ್ರತ ನೋಡಿದ ಅದನ್ನು ಇವನು ಯದ್ಯಪಿ ಊರು ಹೊರಗೆ ಇದ್ದ ಆದರೂ ವಿಶ್ವಾಮಿತ್ರರ ಪತ್ನಿ ಹೀಗೆ ಒಂದು ಮಗುವನ್ನು ಕೊರಳಿಗೆ ಕಟ್ಟಿಕೊಂಡು ಯಾರು ತೆಗೆದುಕೊಳ್ಳುತ್ತೀರಾ ಮಾರಾಟಕ್ಕೆ ಅಂತ ಕೇಳುತ್ತಾ ಅಲಿಯುತ್ತಾ ಇರುವುದನ್ನು ನೋಡಲಿಕ್ಕಾಗದೇ ತಾನು ಹೇಗೋ ಮಾಡಿ ಸಂಪತ್ತನ್ನು ಕೊಟ್ಟು ನೀವು ಸುಖವಾಗಿ ನಿಮ್ಮ ಮನೆಯಲ್ಲಿ ಇರಿ ಯಾರನ್ನು ಮಾರುವುದು ಬೇಡ, ಕಳೆದುಕೊಳ್ಳುವುದು ಬೇಡ ನಿಮ್ಮ ಮನೆಯಲ್ಲಿ ನೀವು ಧನ ಧಾನ್ಯದಿಂದ ಸುಖವಾಗಿ ಇರಿ ಅಂತ ತನಗೆ ಕೈಲಾದಷ್ಟು ಧನ ಧಾನ್ಯಾದಿಗಳನ್ನು ಕೊಟ್ಟು ಅವರ ರಕ್ಷಣೆಯನ್ನು ಮಾಡಿದ್ದಾನೆ. ಅವನಿಗೆ ಮುಂದಾಲೋಚನೆ ಇದೆ ಒಂದು ಸ್ವಾರ್ಥ ವಸಿಷ್ಠರು ನಾನು ತಪ್ಪು ದೊಡ್ಡದನ್ನು ಮಾಡದಿದ್ದರೂ ನನ್ನನ್ನು ಹೊರಗೆ ಹಾಕಿದ್ದಾರೆ ಅಥವಾ ಹೊರಗೆ ನಮ್ಮಪ್ಪ ಹಾಕುವಾಗ ಸುಮ್ಮನೆ ಕುಳಿತಿದ್ದಾರೆ ಹೀಗಾಗಿ ಆ ವಸಿಷ್ಠರ ಎದುರು ಪಕ್ಷದವರು ವಿಶ್ವಾಮಿತ್ರರು ಈ ವಿಶ್ವಾಮಿತ್ರರ ಪ್ರೀತಿಯನ್ನು ನಾನು ಸಂಪಾದನೆ ಮಾಡಿದರೆ ನನಗೆ ಮುಂದೆ ಎಲ್ಲಾ ಒಳ್ಳೆಯದಾಗುತ್ತೆ ಅಂತ. ವಿಶ್ವಾಮಿತ್ರರು ಈಗ ಇಲ್ಲ ಆದರೆ ಅವರ ಹೆಂಡತಿ, ಮಕ್ಕಳು ದುರ್ಭಿಕ್ಷೆಯಿಂದ ಪೀಡಿತರಾಗಿ ಕಷ್ಟದಲ್ಲಿ ಇದ್ದಾಗ ನಾನು ಸಹಾಯ ಮಾಡಿದರೆ ನನಗೆ ಮುಂದೆ ವಿಶ್ವಾಮಿತ್ರರು ಸಹಾಯ ಮಾಡುತ್ತಾರೆ ಅನ್ನುವ ಆಲೋಚನೆ ಆ ಆಲೋಚನೆಯಿಂದ ಇಷ್ಟು ಸಹಾಯವನ್ನು ಮಾಡಿದ್ದಾನೆ.

ಆಮೇಲೆ ಮುಂದೆ ಸತ್ಯವ್ರತನಿಗೆ ಬಹಳ ಹಸಿವೆಯಾಗಿದೆ ಆಚೆ ಈಚೆ ನೋಡುತ್ತಾ ನೋಡುತ್ತಾ ವಸಿಷ್ಠರ ಆಶ್ರಮಕ್ಕೆ ಬಂದು ಅವರ ಗೋವನ್ನೇ ಹತ್ಯೆ ಮಾಡಿ ಅದನ್ನು ತಿಂದು ಬಿಟ್ಟಿದ್ದಾನೆ ಗೋಮಾಂಸ ಭಕ್ಷಣ ಮಾಡಿದ್ದಾನೆ. ವಸಿಷ್ಠರಿಗೆ ಬಹಳ ಕೋಪ ಬಂತು ವಸಿಷ್ಠರು ಅಂದರು ನೀನು ಒಂದು ಸಣ್ಣ ತಪ್ಪು ಮಾಡಿದ್ದಿ, ಇನ್ನೊಬ್ಬರ ಕನ್ಯೆಯನ್ನು ತಂದು ಮದುವೆಯಾದಿ ಆ ತಪ್ಪಿಗೆ ಹನ್ನೆರಡು ವರ್ಷ ಪ್ರಾಯಶ್ಚಿತ್ತ ಮಾಡಿಕೊಂಡ ಮೇಲೆ ನಿನ್ನನ್ನು ಕರೆದುಕೊಂಡು ಬಂದು ರಾಜ್ಯದಲ್ಲಿ ಪಟ್ಟಾಭಿಷೇಕ ಮಾಡಬೇಕು ಅಂತ ನಾನು ದಾರಿ ಕಾಯುತ್ತ ಕುಳಿತಿದ್ದೆ. ಆ ಮಾಡಿದ ಅಪರಾಧವನ್ನು ಪರಿಹಾರ ಮಾಡಿ ಉದ್ಧಾರ ಮಾಡೋಣ ಅಂತ ಆದರೆ ಇನ್ನೆರಡು ಅಪರಾಧವನ್ನು ಮಾಡಿದ್ದಿ ಗೋಹತ್ಯೆ ಮಾಡಿದ್ದೀ, ಗೋಮಾಂಸ ಭಕ್ಷಣ ಮಾಡಿದ್ದೀ ಇನ್ನು ನಿನ್ನನ್ನು ಉದ್ಧಾರ ಮಾಡಲಿಕ್ಕೆ ನನಗೆ ಸಾಧ್ಯ ಇಲ್ಲ. ಒಂದು ಅಪರಾಧ ಮಾಡಿದ್ದೀ ಈಗ ಮೂರು ಅಪರಾಧಗಳಿಗೆ ಶಂಕು ಅಂತ ಕರೆಯುತ್ತಾರೆ ಪಾಪಕೃತ್ಯಾ ದುಷ್ಕೃತ್ಯ ಮೂರು ಶಂಕುಗಳು ಮೂರು ಅಪರಾಧಗಳು ನಿನ್ನಿಂದ ನಡೆದಿವೆ ಆದ್ದರಿಂದ ನೀನು ತ್ರಿಶಂಕು ನಿನ್ನ ಉದ್ಧಾರ ನಾನು ಮಾಡಲಿಕ್ಕೆ ಆಗುವುದಿಲ್ಲ ಹೋಗು ಅಂತ ಹೇಳಿದ್ದಾರೆ. ಆಗ ಆ ತ್ರಿಶಂಕು ವಿಶ್ವಾಮಿತ್ರರಿಗೆ ಶರಣು ಹೋಗಿದ್ದಾನೆ ಅಷ್ಟೊತ್ತಿಗೆ ವಿಶ್ವಾಮಿತ್ರರು ಬಂದಿದ್ದಾರೆ. ನನ್ನ ಹೆಂಡತಿ, ಮಕ್ಕಳು ಸಾಯುವ ಸ್ಥಿತಿಯಲ್ಲಿ ಇದ್ದಾಗ ಅವರಿಗೆ ನೀನು ಆಹಾರದ ವ್ಯವಸ್ಥೆಯನ್ನು ಮಾಡಿ ಬದುಕುವಂತೆ ಮಾಡಿದ್ದೀ ಆದ್ದರಿಂದ ಏನು ವರ ಬೇಕು ಕೇಳು ಅವನಂದ ನನಗೆ ಸಾಕು ಈ ಭೂಮಿಯಲ್ಲಿ ವಾಸ ಮಾಡಿ ಇದೇ ಶರೀರದಿಂದ ನಾನು ಸ್ವರ್ಗಕ್ಕೆ ಹೋಗುವಂತೆ ಮಾಡಿ ಅಂತ ಸರಿ ಆಗಲಿ ಅಂತ. ಇಲ್ಲಿ ಇಷ್ಟೇ ಕಥೆ ಬಂದಿದೆ.

ರಾಮಾಯಣದಲ್ಲಿ ಬಂದದ್ದು ನಿಮಗೆಲ್ಲ ಗೊತ್ತು. ಮೊದಲು ಈ ಸಶರೀರವಾಗಿ ಸ್ವರ್ಗಕ್ಕೆ ಹೋಗಬೇಕು ಅಂತ ವಸಿಷ್ಠರಿಗೆ ಕೇಳುತ್ತಾನೆ ಅದು ಸಾಧ್ಯವಿಲ್ಲದ ಮಾತು ಅಂತ ವಸಿಷ್ಠರು ಹೇಳುತ್ತಾರೆ, ವಸಿಷ್ಠರ ಮಕ್ಕಳಿಗೆ ಕೇಳುತ್ತಾನೆ ಅವರೂ ಸಾಧ್ಯ ಇಲ್ಲ ಅನ್ನುತ್ತಾರೆ ಆಗ ವಿಶ್ವಾಮಿತ್ರರಿಗೆ ಕೇಳುತ್ತಾನೆ ಅಂತ ರಾಮಾಯಣದಲ್ಲಿ ಕಥೆ ಬರುತ್ತದೆ. ವಿಶ್ವಾಮಿತ್ರರು ಸರಿ ಅಂತ ಅವನನ್ನು ಸಶರೀರವಾಗಿ ಸ್ವರ್ಗಕ್ಕೆ ಕಳಿಸುತ್ತಾರೆ. ಇಂದ್ರ ದೇವರು ನಿನಗೆ ಒಳಗೆ ಪ್ರವೇಶವೇ ಇಲ್ಲ ಹೋಗು ಆಚೆಗೆ ಅನ್ನುತ್ತಾರೆ ವಿಶ್ವಾಮಿತ್ರರು ತಮ್ಮ ತಪಸ್ಸಿನಿಂದ ನನ್ನನ್ನು ಸಶರೀರವಾಗಿ ಕಳಿಸಿದ್ದಾರೆ ಕಳಿಸಿದ್ದಾರೆ ಬಂದಾಯಿತಲ್ಲ ಆದರೆ ನೀನು ಇರುವುದಕ್ಕೆ ಸಾಧ್ಯ ಇಲ್ಲ ಯಾಕೆ ವಿಶ್ವಾಮಿತ್ರರ ಅನುಗ್ರಹ ಇಲ್ಲವಾ, ವಿಶ್ವಾಮಿತ್ರರ ತಪಸ್ಸಿನ ಬಲಕ್ಕೆ ಬೆಲೆ ಇಲ್ಲವಾ. ಬೆಲೆ ಇದೆ ಅನ್ನುತ್ತಾನೆ ಇಂದ್ರ ಬೆಲೆ ಇದೆ ಅಂತನ್ನುವುದಕ್ಕೆ ಇಲ್ಲಿಯವರೆಗೆ ನೀನು

ಬಂದಿದ್ದೀಯಾ ಆದರೆ ನಿನ್ನ ಕುಲಗುರುಗಳು ಯಾರು ವಸಿಷ್ಠರು. ವಿಶ್ವಾಮಿತ್ರರೂ ತಪಸ್ವಿಗಳು ವಸಿಷ್ಠರೂ ಮಹಾತಪಸ್ವಿಗಳು ಇಬ್ಬರೂ ಭಗವದ್ಭಕ್ತರು ವಿಷ್ಣು ಭಕ್ತರು ಸಜ್ಜನರು ಮಹಾನುಭಾವರು ಮಂತ್ರದೃಷ್ಟಾರರು ಎಲ್ಲವೂ ನಿಜ ಆದರೆ ವಿಶ್ವಾಮಿತ್ರರು ಎಷ್ಟೇ ದೊಡ್ಡವರಾಗಿದ್ದರೂ ಅವರು ನಿನ್ನ ಕುಲಗುರುಗಳಲ್ಲ, ನಿನ್ನ ಕುಲಗುರುಗಳು ವಸಿಷ್ಠರು ಆ ವಸಿಷ್ಠರ ದ್ರೋಹವನ್ನು ನೀನು ಮಾಡಿ ಬಂದಿದ್ದೀಯಾ ಅಂದರೆ ಸ್ವರ್ಗದಲ್ಲಿ ನಿನಗೆ ವಾಸ ಇಲ್ಲ.

'ಗುರು ಶಾಪ ಹತೋ ಮೂಢಃ ಪತ ಭೂಮಿಮ ವಾಕ್ಷಿರಾಃ' ತಲೆ ಕೆಳಗಾಗಿ ಬೀಳು ನೀನು ಇಂದ್ರ ದೇವರು ಅವನನ್ನು ಕೆಳಗೆ ಅಟ್ಟುತ್ತಾರೆ. ಗುರುಗಳ ಮಹತ್ವ ಎಷ್ಟಿದೆ ನೋಡಿ **'ಗುರುವಿನ ಗುಲಾಮನಾಗದ ತನಕ ದೊರೆಯದಣ್ಣ ಮುಕುತಿ'** ಗುರು ಅನುಗ್ರಹ ಇದ್ದರೆ ಮಾತ್ರ ದೇವತೆಗಳು ಸ್ವೀಕಾರ ಮಾಡುತ್ತಾರೆ, ಗುರು ಅನುಗ್ರಹ ಇದ್ದರೆ ಮಾತ್ರ ಪರಮಾತ್ಮ ಸ್ವೀಕಾರ ಮಾಡುತ್ತಾನೆ. ವಿಶ್ವಾಮಿತ್ರರು ಏನು ಕಡಿಮೆ, ವಸಿಷ್ಠರು ಏನು ಕಡಿಮೆ ಇಬ್ಬರು ದೊಡ್ಡವರೇ, ಇಬ್ಬರು ಋಷಿಗಳೇ ಎಲ್ಲವೂ ಸಮಾನ ಅಂತನ್ನುವ ರೀತಿಯಲ್ಲಿ ದೇವತೆಗಳು ಕಾಣಲಿಲ್ಲ. ವಸಿಷ್ಠರು ಯೋಗ್ಯತೆಯಲ್ಲಿ ವಿಶ್ವಾಮಿತ್ರರು ಸಮಾನ ಆಗಿರಬಹುದು ಆದರೆ ಇವನ ಕುಲಗುರುಗಳು ವಸಿಷ್ಠರು ವಿಶ್ವಾಮಿತ್ರರು ಅಲ್ಲ. ಗುರುಗಳ ಅನುಗ್ರಹಕ್ಕೆ ನೀನು ಪಾತ್ರನಾಗದೆ ಅವರ ವಿರೋಧವನ್ನು ಮಾಡಿದ್ದೀ, ಅವರ ಶಾಪಕ್ಕೆ ಗುರಿಯಾಗಿದ್ದಿ ಸ್ವರ್ಗದಲ್ಲಿ ನಿನಗೆ ವಾಸ ಇಲ್ಲ ಅಂತ ಮತ್ತೊಂದು ಸ್ವರ್ಗವನ್ನೇ ನಿರ್ಮಾಣ ಮಾಡುತ್ತೇವೆ ಅಂತ ಇನ್ನೊಂದು ಸ್ವರ್ಗವನ್ನು ನಿರ್ಮಾಣ ಮಾಡಿ ಅಲ್ಲಿ ತ್ರಿಶಂಕು ಇರುವಂತೆ ಮಾಡಿದರೇ ಹೊರತು ನಿಜವಾದ ಸ್ವರ್ಗದಲ್ಲಿ ತ್ರಿಶಂಕು ಇರುವುದಕ್ಕೆ ಸಾಧ್ಯವಾಗಿಲ್ಲ. ಇದು ಗುರುಗಳ ಮಹತ್ವ ಎಂಬುದಾಗಿ ರಾಮಾಯಣದಿಂದ ನಾವು ಅರ್ಥ ಮಾಡಿಕೊಳ್ಳಬೇಕು. ಆ ರೀತಿ ಆ ತ್ರಿಶಂಕುವನ್ನು ಕೃತ್ರಿಮವಾದ ಸ್ವರ್ಗದಲ್ಲಿ ಇರುವಂತೆ ಮಾಡಿದ್ದಾರೆ ವಿಶ್ವಾಮಿತ್ರರು. ಇವನ ವಂಶದಲ್ಲಿ ಮುಂದೆ ಹರಿಶ್ಚಂದ್ರ, ರೋಹಿತಾಶ್ವ ಇತ್ಯಾದಿಗಳೆಲ್ಲ ಬರುತ್ತಾರೆ ಎಂಬುದಾಗಿ ಈ ಸೂರ್ಯವಂಶದ ವರ್ಣನೆಯನ್ನು ಜನಮೇಜಯನಿಗೆ ವೈಶಂಪಾಯನರು ತಿಳಿಸುತ್ತಾ ಇದ್ದಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ
ಹರಿವಂಶಪರ್ವ-7

* * *

ಸೂರ್ಯವಂಶದ ಪರಮ ಭಗವದ್ಭಕ್ತರಾದಂತಹ ಅನೇಕ ಮಹನೀಯರಾದ ರಾಜರುಗಳ ಚರಿತ್ರೆಯನ್ನು ಅವರ ಮಹಿಮೆಯನ್ನು ವೈಶಂಪಾಯನರು ಜನಮೇಜಯನಿಗೆ ತಿಳಿಸುತ್ತಾ ಇದ್ದಾರೆ.

ಚರಿತಂ ವೈಷ್ಣವಾನಾಂತು ವಿಷ್ಣೂದ್ರೇಕಾಯ ಕಥ್ಯತೇ ।। (2.129 ಮಭಾತಾನಿರ್ಣಯ)

ಎಂಬುದಾಗಿ ಹೇಳಿದಂತೆ ವಿಷ್ಣು ಭಕ್ತರ ಚರಿತ್ರೆಯ ವರ್ಣನೆ ವಿಷ್ಣು ಭಕ್ತಿಯ ಉದ್ರೇಕಕ್ಕಾಗಿ. ಕಥೆಗಳನ್ನು ಕೇಳಿ ಕಾಲ ಕಲಿಯುವುದಕ್ಕಾಗಿ ಮಾತ್ರ ಅಲ್ಲ ಆ ಕಥೆಗಳಲ್ಲಿ ಭಗವಂತ ಯಾವ ರೀತಿ ವಿಷ್ಣು ಭಕ್ತರ ಮೇಲೆ ಅನುಗ್ರಹ ಮಾಡಿದ ಅವರಿಂದ ಎಂತಹ ದೊಡ್ಡ ಸಾಧನೆಯನ್ನು ಮಾಡಿಸಿದ ಇದನ್ನು ತಿಳಿದು ಆ ಭಗವಂತನ ವಿಶೇಷವಾದ ಸ್ಮರಣೆಯನ್ನು ಮಾಡುತ್ತಾ ಅವನಲ್ಲಿ ಭಕ್ತಿಯ ಉದ್ರೇಕವನ್ನು ಮಾಡಿಕೊಳ್ಳುವುದಕ್ಕೋಸ್ಕರ ಆ ವಿಷ್ಣು ಭಕ್ತರ ಕಥೆಯನ್ನು ಹೇಳುತ್ತಾರೆ. ಈ ಮೊದಲು ಕೇಳಿದ್ದೀರಿ ಕುವಲಾಶ್ವ ಧುಂಧು ಎಂಬ ಅಸುರನನ್ನು ಸಂಹಾರ ಮಾಡಿ ಧುಂಧುಮಾರ ಎಂಬ ಹೆಸರು ಪಡೆದು ಕೀರ್ತಿಗೆ ಪಾತ್ರನಾದ ಒಳಗೆ ಶ್ರೀಮನ್ನಾರಾಯಣ ವಿಷ್ಣು ಪ್ರವೇಶ ಮಾಡಿ ಅವನೊಳಗಿದ್ದು ತಾನೆ ಆ ಎಲ್ಲ ಕಾರ್ಯವನ್ನು ಮಾಡಿಸಿದ. ಮಹಾನುಭಾವರಾದ ಜೀವೋತ್ತಮರಾದ ಹನುಮಂತ ದೇವರು, ಭೀಮಸೇನ ದೇವರು ಮಾಡುವಂತಹ ಅಸುರ ಸಂಹಾರಾದಿ ಕಾರ್ಯಗಳು ಕೂಡ ಸ್ವತಂತ್ರವಾಗಿ ಅಲ್ಲ, ಒಳಗಿದ್ದು ಭಗವಂತನೇ ಆ ಎಲ್ಲ ಕಾರ್ಯಗಳನ್ನು ಮಾಡಿಸುತ್ತಾನೆ. ಪಂಚ ಪಾಂಡವರಲ್ಲಿ ನಿಂತು ಕೌರವರ ಸಂಹಾರವನ್ನು ಮಾಡಿಸಿ ಕೌರವರ ಸೈನ್ಯದ ಸಂಹಾರವನ್ನು ಮಾಡಿಸಿ ಅವರಿಗೆ ವಿಜಯವನ್ನು ಕೊಟ್ಟವನು ಪರಮಾತ್ಮನೇ ಎಂಬುದಾಗಿ ಶ್ರೀಮದಾಚಾರ್ಯರು ಮಹಾಭಾರತದ ತಾತ್ಪರ್ಯ ನಿರ್ಣಯದಲ್ಲಿ, ಯಮಕ ಭಾರತದಲ್ಲಿ ತಿಳಿಸಿಕೊಡುತ್ತಾರೆ. ಅಂತಹ ಆ ಪರಮಾತ್ಮನ ಚರಿತ್ರೆಯೇ ಭಗವದ್ಭಕ್ತರ ಚರಿತ್ರೆಯ ಮೂಲಕ ನಮಗೆ ಇತಿಹಾಸ ಪುರಾಣಗಳು ತಿಳಿಸಿಕೊಡುತ್ತಾ ಇವೆ ಅನ್ನುವ ಅನುಸಂಧಾನ ನಮ್ಮಲ್ಲಿ ಇರಬೇಕು. ಆ ದೃಷ್ಟಿಯಲ್ಲಿ ಮುಂದೆ ಜನಮೇಜಯ ಪ್ರಶ್ನೆ ಕೇಳುತ್ತಾನೆ ಈ ತ್ರಿಶಂಕುವಿನ ವಂಶದಲ್ಲಿ ಮುಂದೆ ಕ್ರಮವಾಗಿ ಹರಿಶ್ಚಂದ್ರ ರೋಹಿತ ಇವರೆಲ್ಲ ಬರುತ್ತಾ ಸಗರನ ಉತ್ಪತ್ತಿಯಾಗಿದೆ ಅಂತ ತಿಳಿಸಿದ್ದಾರೆ. ಆ ಸಗರನ ಚರಿತ್ರೆಯನ್ನು ವಿಶೇಷವಾಗಿ ತಿಳಿಯಬೇಕು ಯಾಕೆ ಅಂದರೆ ಸಗರನ ಬಗ್ಗೆ ಹೇಳುವಾಗ ಅವನು ಗರದಿಂದ ಸಹಿತನಾಗಿ ಹುಟ್ಟಿದ ಅದಕ್ಕಾಗಿ ಅವನನ್ನು ಸಗರ ಅಂತ ಕರೆದರು ಅಂತ ಹಿಂದೆ ಬಂತು.

ಸಗರಸ್ತು ಸುತೋ ಬಾಹೋರ್ಜಜ್ಞೇ ಸಹ ಗರೇಣ ಚ । (13.32 ಹರಿವಂಶಪರ್ವ)

ಗರ ಅಂದರೆ ವಿಷ, ವಿಷದಿಂದ ಸಹಿತವಾಗಿ ಅವನು ಹುಟ್ಟಿದ ಅದಕ್ಕಾಗಿ ಅವನಿಗೆ ಸಗರ ಅಂತ ಇದು ಏನು ವಿಚಿತ್ರ ವಿಷದಿಂದ ಸಹಿತವಾಗಿ ಹುಟ್ಟುವುದು ಅಂದರೆ ಏನು ಯಾಕೆ ಆ ಪ್ರಸಂಗ ಬಂದಿತು. ನಾನಾ ತರಹದ ವಿವಿಧ ದೇಶದ ಹೈಹಯ ಸ್ತಾಲಜಜ್ಞಾ ಮೊದಲಾದ ಅನೇಕ ಕ್ಷತ್ರಿಯರನ್ನೆಲ್ಲ ಸೋಲಿಸಿ ಅವರೆಲ್ಲರನ್ನು ಶಾಸನ ಮಾಡಿ ತನ್ನದೇ ಆದಂತಹ ರಾಜ್ಯದ ವಿಸ್ತಾರವನ್ನು ಮಾಡಿದ ಅಂತ ಸಂಕ್ಷೇಪವಾಗಿ ವೈಶಂಪಾಯನರು ಹೇಳಿದ್ದನ್ನು ಕೇಳಿ ಜನಮೇಜಯ ಕೇಳುತ್ತಾ ಇದ್ದಾನೆ ಹೇಗೆ ಅವನು ವಿಷದಿಂದ ಸಹಿತನಾಗಿ ಹುಟ್ಟಿದ ಅನ್ನುವುದು ಒಂದು ಪ್ರಶ್ನೆ, ಇವರೆಲ್ಲರನ್ನ ಯಾಕೆ ಅವನು ಶಾಸನ ಮಾಡಿದ ಅಂತ ಅದಕ್ಕೆ ವೈಶಂಪಾಯನರು ಅನ್ನುತ್ತಾರೆ. ಇವನ ತಂದೆ ಬಾಹು ರಾಜ ಸಜ್ಜನ, ಪರಾಕ್ರಮಿ ಹೆಸರಿಗೆ ತಕ್ಕಂತೆ ಬಾಹು ಬಾಹುಬಲ ಚೆನ್ನಾಗಿದೆ ಆದರೂ ಮನುಷ್ಯ ವಿಷಯ ಲಂಪಟನಾದ, ಭೋಗಾಸಕ್ತನಾದ, ವ್ಯಸನಗಳಿಗೆ ಬಲಿಯಾದ ಅಂದರೆ ಎಂತಹ ಜ್ಞಾನ ಇದ್ದರೂ, ಎಂತಹ ಬಲ ಇದ್ದರೂ, ಎಷ್ಟು ಜನರ ಸಹಾಯ ಇದ್ದರೂ ಕೂಡ ಅದೆಲ್ಲ ವ್ಯರ್ಥವಾಗುತ್ತದೆ.

ಬಾಹೋರ್ವ್ಯಸನಿನಸ್ತಾತ ಹೃತಂ ರಾಜ್ಯಮಭೂತ್ ಕಿಲ । (14.3 ಹರಿವಂಶಪರ್ವ)

ಮಹಾಪರಾಕ್ರಮಿಯಾಗಿದ್ದರೂ ವ್ಯಸನಗಳಿಗೆ ಬಲಿಯಾಗಿದ್ದ ಅನ್ನುವುದಕ್ಕೆ ಇದೇ ಒಂದು ಅವಕಾಶ ಅಂತ ತಿಳಿದು ಹೈಹಯ ಸ್ತಾಲಜಜ್ಞಾ ಶಕ ಯವನ ಪಾರದ ಕಾಂಭೋಜ ಪಹ್ಲವ ಖಸ ಹೀಗೆ ಅನೇಕ ಶತ್ರುಗಳು ಸೇರಿ ಆಕ್ರಮಣ ಮಾಡಿ ಇವನ ರಾಜ್ಯವನ್ನು ಅಪಹಾರ ಮಾಡಿದ್ದಾರೆ. ಏನು ಮಾಡಬೇಕು ಅಂತ ತೋಚದೇ ಹೆಂಡತಿಯನ್ನು ಕರೆದುಕೊಂಡು ಅರಣ್ಯಕ್ಕೆ ಹೋಗೋಣ ಸಾಧನೆ ಮಾಡೋಣ ದೇವರ ಉಪಾಸನೆಯನ್ನು ಮಾಡೋಣ ರಾಜ್ಯವನ್ನಂತು ಕಳೆದುಕೊಂಡಾಯಿತು ಇನ್ನೇನು ಮಾಡಬೇಕು ಅಂತ ಅಲ್ಲಿಂದ ಹೊರಟಿದ್ದಾರೆ. ಅರಣ್ಯದಲ್ಲಿ ಇದ್ದಾನೆ ನಾನಾ ವಿಧವಾದ ವ್ಯಸನಗಳಿಗೆ ಬಲಿಯಾಗಿದ್ದ ಹಿಂದೆ ಅನ್ನುವ ಕಾರಣಕ್ಕಾಗಿ ಸಾಧ್ಯವಾದಷ್ಟು ದಿನಗಳವರೆಗೆ ಸಾಧನೆಯನ್ನು ಮಾಡಿ ತಪಸ್ಸನ್ನು ಮಾಡಿ ಪ್ರಾಯಶ್ಚಿತ್ತವನ್ನು ಮಾಡಿಕೊಂಡು ಪ್ರಾಣವನ್ನು ತ್ಯಾಗ ಮಾಡಿದ್ದಾನೆ.

ಹೆಂಡತಿ ಒಬ್ಬಳೇ ಇದ್ದಾಳೆ ಏನು ಮಾಡಬೇಕು ಅಂತ ತೋಚಲಿಲ್ಲ. ಸರಿ ಗಂಡ ಪ್ರಾಣವನ್ನು ಕಳೆದುಕೊಂಡ ಮೇಲೆ ನಾನಾದರೂ ಇದ್ದು ಏನು ಮಾಡಬೇಕು ಒಬ್ಬಳೇ ಈ ಕಾಡಿನಲ್ಲಿ ಅಂತ ತಾನೂ ಪ್ರಾಣ ತ್ಯಾಗವನ್ನು ಮಾಡಬೇಕು ಅಂತ ಹೊರಟಾಗ ಮಹಾನುಭಾವರಾದಂತಹ ಔರ್ವ ಎಂಬ ಋಷಿಗಳು ಅಲ್ಲಿ ಬಂದಿದ್ದಾರೆ. ಆ ಋಷಿಗಳು ಹೇಳುತ್ತಾರೆ ನೀನು ಈಗ ಪ್ರಾಣ ತ್ಯಾಗವನ್ನು ಸರ್ವಥಃ ಮಾಡತಕ್ಕದ್ದಲ್ಲ, ನಿನ್ನ ಗಂಡ ನಿನ್ನಲ್ಲಿ ಗರ್ಭಾದಾನವನ್ನು ಮಾಡಿದ್ದಾನೆ. ಗರ್ಭಾಧಾರಣೆ ಆಗಿದೆ, ಉತ್ತಮವಾದಂತಹ ಸಂತಾನದ ಉತ್ಪತ್ತಿಯಾಗಬೇಕು ಅವನಿಂದ ಮುಂದೆ ದೊಡ್ಡ ಕೆಲಸ ಆಗಬೇಕಾಗಿದೆ. ಅದಕ್ಕೋಸ್ಕರ ನೀನು ಪ್ರಾಣವನ್ನು ಸಂರಕ್ಷಣೆ ಮಾಡಿಕೊಳ್ಳಲೇಬೇಕು ಆ ಮಗುವಿಗೆ ಜನ್ಮವನ್ನು ಕೊಟ್ಟು ಅವನನ್ನು ಬೆಳೆಸಿ ಅವನಿಂದ ಈ ದೇಶದ ರಕ್ಷಣೆಯನ್ನು ಮಾಡಬೇಕು. ಉತ್ತಮವಾದಂತಹ ಶುದ್ಧವಾದ, ಸನಾತನದ ವೈದಿಕ ಧರ್ಮದ ಸಂರಕ್ಷಣೆ ಆಗಬೇಕು, ಪ್ರಜೆಗಳ ಸಂರಕ್ಷಣೆ ಆಗಬೇಕು, ಧರ್ಮದಿಂದ ಜೀವನ ಮಾಡುವಂತಾಗಬೇಕು ಆ ರೀತಿ ನೀನು ವ್ಯವಸ್ಥೆಯನ್ನು ಮಾಡಬೇಕು. ಅದಕ್ಕಾಗಿ ನೀನು ಸಹನಶೀಲತೆಯಿಂದ, ತಾಳ್ಮೆಯಿಂದ ಇರಬೇಕು ನಿನಗೆ ಬೇಕಾದ ಎಲ್ಲ ರಕ್ಷಣೆಯನ್ನು ನಮ್ಮ ಆಶ್ರಮದಲ್ಲಿ ಕೊಡುತ್ತೇವೆ. ಆಶ್ರಮದಲ್ಲಿ ಇರುವಂತಹ ಸ್ತ್ರೀಯರು ನಿಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ ಯಾವುದೇ ವಿಧವಾದ ಚಿಂತನೆಯನ್ನು ಮಾಡಬೇಕಾದದ್ದಿಲ್ಲ ಅಂತ ತಮ್ಮ ಆಶ್ರಮದಲ್ಲಿ ಆ ರಾಜ ಪತ್ನಿಗೆ ಉತ್ತಮವಾದ ಒಂದು

ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದಾರೆ. ಅಲ್ಲಿರುವಂತಹ ಋಷಿ ಪತ್ನಿಯರು ಇನ್ನುಳಿದವರೆಲ್ಲಾ ವಿಶೇಷವಾಗಿ ಆರೈಕೆಯನ್ನು ಮಾಡುತ್ತಾ ಇದ್ದಾರೆ.

ಇವಳಿಗೆ ಮೊದಲೇ ಸವತಿಯರು ವಿಷ ಹಾಕಿದ್ದರು, ತಮಗೆ ಮಕ್ಕಳಾಗಿಲ್ಲ ಇವಳಲ್ಲಿ ಮಾತ್ರ ಗರ್ಭಧಾರಣೆ ಆಗಿದೆ ಅಂತ ಇವಳ ಮೇಲೆ ವಿಶೇಷವಾದ ಅಭಿಮಾನವನ್ನು ರಾಜ ಮಾಡುತ್ತಾನೆ ಅಂತ ತಿಳಿದಂತಹ ಸವತಿಯರು ವಿಷ ಹಾಕಿದ್ದಾರೆ. ಆ ವಿಷ ಹೊಟ್ಟೆಯಲ್ಲಿ ಇದೆ ಹಾಗಿದ್ದರೂ ಕೂಡ ಇವರು ತಮ್ಮ ವಿಶೇಷವಾದಂತಹ ಸಾಮರ್ಥ್ಯದಿಂದ ಆ ವಿಷದ ಭಾದೆ ಏನೂ ಆಗದಂತೆ ಆ ಮಗುವಿನ ಜನನ ಆಗುವ ಹಾಗೆ ದೇವರಲ್ಲಿ ಪ್ರಾರ್ಥನೆಯನ್ನು ಮಾಡಿಕೊಂಡು ಅನುಗ್ರಹವನ್ನು ಮಾಡಿ ಪುತ್ರೋತ್ಸವ ಆಗುವಂತೆ ಮಾಡಿದ್ದಾರೆ. ವಿಷ ಇದ್ದರೂ ಹುಟ್ಟಿದ, ಸಾಯದೇ ಹುಟ್ಟಿದ, ಗರ ಸಹಿತನಾಗಿ ಹುಟ್ಟಿದ ಆದ್ದರಿಂದ ಅವನಿಗೆ ಸಗರ ಎಂಬ ಹೆಸರನ್ನು ಇಟ್ಟಿದ್ದಾರೆ. ಜಾತಕರ್ಮ ನಾಮಕರ್ಣಾದಿಗಳನ್ನೆಲ್ಲ ಆಶ್ರಮದಲ್ಲಿಯೇ ಮಾಡುವುದಲ್ಲದೆ ಆ ಮಗು ದೊಡ್ಡದಾದ ಮೇಲೆ ಅವನಿಗೆ ವಿದ್ಯಾಭ್ಯಾಸವನ್ನು ಮಾಡಿಸಿದ್ದಾರೆ, ವೇದ ಶಾಸ್ತ್ರಗಳ ಅಧ್ಯಯನವನ್ನು ಮಾಡಿಸಿದ್ದಾರೆ. ಉಪನಯನ ಸಂಸ್ಕಾರವಾದ ಮೇಲೆ. ಮುಖ್ಯವಾಗಿ ಆಗ್ನೇಯ ಅಸ್ತ್ರವನ್ನು ಉಪದೇಶ ಮಾಡಿದ್ದಾರೆ ಎಂತಹ ಶತ್ರುಗಳು ಬಂದರೂ ಅವರನ್ನು ಸೋಲಿಸಬೇಕು, ಅವರನ್ನು ನಿರ್ನಾಮ ಮಾಡಬೇಕು, ಧರ್ಮದ ರಾಜ್ಯವನ್ನು ಸ್ಥಾಪನೆ ಮಾಡಬೇಕು ಅಂತಹ ಒಂದು ಮಹಾಶಕ್ತಿಯನ್ನು ಅವನಿಗೆ ನೀಡಿದ್ದಾರೆ ಆಗ್ನೇಯಾಸ್ತ್ರವನ್ನು ಕೊಟ್ಟಿದ್ದಾರೆ.

ಆಗ್ನೇಯಂ ತು ಮಹಾಘೋರಮಮರೈರಪಿ ದುಃಸಹಮ್ । (14.10 ಹರಿವಂಶಪರ್ವ)

ಅಂತಹ ಅಸ್ತ್ರವನ್ನು ಕೊಟ್ಟದ್ದೇ ತಡ ಹೊರಟಿದ್ದಾನೆ ಯುದ್ಧಕ್ಕೆ ಯಾರು ತನ್ನ ತಂದೆಯನ್ನು ಸೋಲಿಸಿ ಅವನನ್ನು ರಾಜ್ಯದಿಂದ ಹೊರಗೆ ಹಾಕಿದ್ದರೋ ಅಂತಹ ಹೈಹಯರು ಸ್ತಾಲಜಜ್ಘರು ಶಕ ಯವನರು ಪಾರದರು ಕಾಂಭೋಜರು, ಪಹ್ಲವರು ಖಸರು ಇವರೆಲ್ಲರನ್ನು ಕೂಡ ಸೋಲಿಸಿದ್ದಾನೆ. ಅವರೆಲ್ಲರನ್ನೂ ಸೋಲಿಸುವುದು ಮಾತ್ರ ಅಲ್ಲ ಸಂಹಾರ ಮಾಡುವುದಕ್ಕೆ ಹೊರಟಿದ್ದಾನೆ ಸಾಕಷ್ಟು ಜನರನ್ನು ಸಂಹಾರ ಮಾಡಿದ್ದಾನೆ ಹಾಗೆ ಸಂಹಾರ ಮಾಡುತ್ತ ಇದ್ದಾನೆ. ಯಾರು ಯಾರು ವಿರೋಧಿಗಳಿದ್ದರೋ, ಯಾರು ಯಾರು ಇವನ ತಂದೆಗೆ ದ್ರೋಹ ಮಾಡಿದ್ದರೋ, ಇವನನ್ನು ಹೊರಗೆ ಹಾಕಿದ್ದರೋ, ರಾಜ್ಯವನ್ನು ಕಸಿದು ಕೊಂಡಿದ್ದರೋ ಆ ಎಲ್ಲ ಶತ್ರುಗಳನ್ನು ಸೋಲಿಸಿ ಮತ್ತೆ ಮರಳಿ ರಾಜ್ಯವನ್ನು ಪಡೆಯಬೇಕು ಅಂತ ಹೊರಟಿದ್ದಾನೆ. ಅವರೆಲ್ಲ ಶತ್ರುಗಳು ಇವನ ಬಲ, ಇವನ ಪರಾಕ್ರಮ, ಇವನ ವಿದ್ಯೆ, ಅಸ್ತ್ರ ವಿದ್ಯೆ ಇದರ ಮುಂದೆ ನಾವು ನಿಲುವುದಕ್ಕೆ ಸಾಧ್ಯ ಇಲ್ಲ ಅಂತ ಗೊತ್ತಾಗಿ ಆಲೋಚನೆ ಮಾಡಿದ್ದಾರೆ ಇವನನ್ನು ತಡೆಯುವುದಕ್ಕೆ ಇರುವ ಉಪಾಯ ಏನು.

ಈ ಇಕ್ಷ್ವಾಕು ವಂಶದಲ್ಲಿ ಬಂದ ಈ ಎಲ್ಲ ಸೂರ್ಯವಂಶದ ರಾಜರು ಧರ್ಮದಲ್ಲಿ ಶ್ರದ್ಧೆ ಇದ್ದವರು, ನಿಷ್ಠೆ ಇದ್ದವರು ಗುರುಗಳಲ್ಲಿ ಭಕ್ತಿಯನ್ನು ಮಾಡುವವರು, ಗುರುವಿನ ಆಜ್ಞೆಯನ್ನು ಉಲ್ಲಂಘನೆ ಮಾಡುವವರಲ್ಲ ಅಂತ ಅವರಿಗೆ ಗೊತ್ತು ರಣರಂಗವನ್ನು ಬಿಟ್ಟು ನೇರವಾಗಿ ವಸಿಷ್ಠರ ಆಶ್ರಮಕ್ಕೆ ಓಡಿ ಹೋಗಿ ವಸಿಷ್ಠರಿಗೆ ಶರಣಾಗತರಾದರು. ವಸಿಷ್ಠರಿಗೆ ಗೊತ್ತು ಇವರೆಲ್ಲ ನಮ್ಮ ರಾಜ್ಯದ ಶತ್ರುಗಳು ಅಂತ ಆದರೂ ಕೂಡ ಶರಣಾಗತರ ರಕ್ಷಣೆಯನ್ನು ಮಾಡಬೇಕು ಅನ್ನುವುದು ಒಂದು ಧರ್ಮ.

ವಸಿಷ್ಠಸ್ತಥ ತಾನ್ ದೃಷ್ಟ್ವಾ ಸಮಯೇನ ಮಹಾದ್ಯುತಿಃ । (14.14 ಹರಿವಂಶಪರ್ವ)

ಸಮಯ ಅಂದರೆ ನಿಯಮ, ಶಾಸ್ತ್ರದಲ್ಲಿ ಹೇಳಿದ ನಿಯಮ ಶರಣಾಗತರನ್ನು ರಕ್ಷಣೆ ಮಾಡಬೇಕು, ಅವರಿಗೆ ಅಭಯ ನೀಡಬೇಕು ಅಂತ ಇವರೆಲ್ಲ ಶರಣಾಗತರಾಗಿದ್ದಾರೆ ಆದ್ದರಿಂದ ಇವರನ್ನು ಸಂಹಾರ ಮಾಡುವುದು ಸರಿಯಲ್ಲ ಅಂತ ವಸಿಷ್ಠರು ಸಗರನಿಗೆ ಆಜ್ಞೆಯನ್ನು ಮಾಡಿದ್ದಾರೆ. ಗುರುಗಳ ಆಜ್ಞೆ ಅಂದಮೇಲೆ ಅದನ್ನು ಸ್ವೀಕಾರ ಮಾಡಿದ್ದಾನೆ ತಾವು ಹೇಗೆ ಹೇಳುತ್ತೀರೋ ಹಾಗೆ ಮಾಡುತ್ತೇನೆ ಆದರೆ ಇವರು ಬಹಳ ಉನ್ಮತ್ತರಾಗಿದ್ದಾರೆ, ದುಷ್ಟರಾಗಿದ್ದಾರೆ ಏನು ಮಾಡಬೇಕು ಅಂತ ಶಾಸನ ಮಾಡು ಸಂಹಾರ ಮಾಡಬೇಡ ಅಂತ ಹೇಳಿದ್ದಾರೆ. ಹೇಳಿದಾಗ ಏನು ಶಾಸನ ಮಾಡಿದ್ದಾನೆ ಅಂದರೆ ಅವರನ್ನು ವಿಕೃತಗೊಳಿಸಿದ್ದಾನೆ ಕೆಲವರಿಗೆ ಅರ್ಧ ತಲೆ ಬೋಳಿಸಿದ್ದಾನೆ, ಕೆಲವರಿಗೆ ಪೂರ್ಣವಾಗಿ ತಲೆ ಬೋಳಿಸಿದ್ದಾನೆ, ಒಬ್ಬೊಬ್ಬರನ್ನು ಒಂದೊಂದು ರೀತಿ ಮಾಡಿದ್ದಾನೆ, ವಿಚಿತ್ರ ವಿಚಿತ್ರ ವೇಷಗಳು ಕೆಲವರಿಗೆ ಒಳ ಬಟ್ಟೆಯಿಲ್ಲ, ಹೊರ ಬಟ್ಟೆಯಿಲ್ಲ ಹೀಗೆ ಭಾಗವತದಲ್ಲಿಯೂ ವರ್ಣನೆ ಬರುತ್ತದೆ ಆ ತರಹದ ವಿಚಿತ್ರ ವೇಷ, ವಿಚಿತ್ರ ಕೇಶ ಇವುಗಳನ್ನು ಮಾಡಿದ್ದಾನೆ ಅವರಿಗೆ. ಯವನರ ಸಂಪೂರ್ಣವಾದ ತಲೆ ಬೋಳಿಸಿದ್ದಾನೆ, ಶಕರಿಗೆ ಅರ್ಧ ತಲೆ ಬೋಳಿಸಿದ್ದಾನೆ, ಪಹ್ಲವರು ಕೇವಲ ಮೀಸೆಯನ್ನು ಧಾರಣೆ ಮಾಡುವಂತೆ, ಪಾರದರು ತಲೆ ತುಂಬ ಕೂದಲನ್ನು ಹಾಗೇ ಬಿಟ್ಟುಕೊಳ್ಳುವಂತೆ ಹೀಗೆಲ್ಲ ಮಾಡಿದ್ದಾನೆ ಏನು ಇದೆಲ್ಲಾ ಇದು ಏನು ದೊಡ್ಡ ಶಿಕ್ಷೆ ಅಂತ. ಪ್ರಾಚೀನರ ಒಂದು ವ್ಯವಸ್ಥೆ ನೋಡಿ ಭಾಗವತದ ನವಮಸ್ಕಂಧದಲ್ಲಿ ಹಾಗೂ ಹರಿವಂಶಪರ್ವ ಮಹಾಭಾರತದ ಖಿಲಭಾಗದಲ್ಲಿ ಈ ವಿಷಯವನ್ನು ಹೇಳುತ್ತಾ ಇದ್ದಾರೆ. ವಿಕೃತ ವೇಷ, ವಿಕೃತ ಕೇಶ ಯಾವಾಗ ಅವರಿಗಾಯಿತೋ ಆಗ ಅವರು ವೇದಾಧ್ಯಯನದ ಅಧಿಕಾರವನ್ನು ಕಳೆದುಕೊಂಡರು ಅಂತ ಕ್ಷತ್ರಿಯರು ಆಗಿದ್ದರೂ ಕೂಡ.

ನಿಃಸ್ವಾಧ್ಯಾಯವಷಟ್‌ಕಾರಾಃ ಕೃತಾಸ್ತೇನ ಮಹಾತ್ಮನಾ । (14.17 ಹರಿವಂಶಪರ್ವ)

ಇವನು ಸೋಲಿಸಿ ಕಳಿಸಿದ ಮೇಲೆ ಅವರು ತಮ್ಮ ಮನೆಯಲ್ಲಿ ತಾವು ಏನಾದರೂ ಮಾಡಿಕೊಳ್ಳಬಹುದಾಗಿತ್ತಲ್ಲ ಅಂತ ಧರ್ಮ ಅಷ್ಟು ನಿಷ್ಠುರವಾಗಿತ್ತು ಅವತ್ತಿನ ಕಾಲದಲ್ಲಿ. ತಾವು ಯಾವ ರೀತಿಯ ಕೇಶಧಾರಣೆ ಮಾಡಬೇಕೋ ಹಾಗೆ ಮಾಡದಂತೆ ವಿಕೃತ ಕೇಶಧಾರಣೆ ಮಾಡಿದ್ದಕ್ಕೆ, ವಿಕೃತ ವೇಷಧಾರಣೆ ಮಾಡಿದ್ದಕ್ಕೆ ಇನ್ನು ಮುಂದೆ ವೇದಾದಿ ಸಚ್ಛಾಸ್ತ್ರಗಳ ಅಧ್ಯಯನವನ್ನು ನಾವು ಮಾಡುವುದಕ್ಕೆ ಸಾಧ್ಯ ಇಲ್ಲ, ತ್ರೈವರ್ಣಿಕರಾದ ನಮಗೆ ಅಧಿಕಾರ ಇದ್ದರೂ ಇನ್ನು ಮುಂದೆ ನಾವು ಮಾಡುವಂತಿಲ್ಲ ಅಂತ ಅನಿವಾರ್ಯವಾಗಿ ಅವರು ಬಿಡಬೇಕಾಯಿತು. ಬಿಟ್ಟದ್ದಕ್ಕೆ ಅವರ ಶಕ್ತಿ ಕಡಿಮೆಯಾಯಿತು, ಅವರ ಸತ್ವ ಕಡಿಮೆಯಾಯಿತು ಆ ರೀತಿಯಲ್ಲಿ ಅವರನ್ನು ಸೋಲಿಸಿ ಆಧ್ಯಾತ್ಮಿಕವಾದ ಶಿಕ್ಷೆಯನ್ನು ಕೊಟ್ಟಿದ್ದಾನೆ ಅಂತ ಹೇಳಬೇಕಾದರೆ ಇವತ್ತಿನ ಜನರು ಎಷ್ಟು ಚೆನ್ನಾಗಿ ಇದನ್ನು ಅರ್ಥ ಮಾಡಿಕೊಳ್ಳಬೇಕು ಅಂತ. ಯಾವ ವೇಷವಿದ್ದರೇನು, ಯಾವ ರೀತಿಯ ಕೇಶಧಾರಣೆಯಾದರೇನು ಮನಸ್ಸು ಮಾತ್ರ ಶುದ್ಧವಿದ್ದರೆ ಸಾಕಲ್ಲ ಅನ್ನುವಂತಹ ಒಂದು ವಾದ ಇದೆ ಆದರೆ ಮನಸ್ಸಿನ ಶುದ್ಧಿಗೆ ಪ್ರಾಶಸ್ತ್ಯವನ್ನು ಶಾಸ್ತ್ರ ನೀಡಿದ್ದು ಅತ್ಯಂತ ಸತ್ಯ. ಆದರೆ ವೇಷಭೂಷಣಗಳು, ಕೇಶಧಾರಣೆ ಯಾವ ಕ್ರಮದಲ್ಲಿ ಶಾಸ್ತ್ರ ಹೇಳಿದೆ ಆ ಕ್ರಮದಲ್ಲಿ ನಾವು ಅದನ್ನು ಧಾರಣೆ ಮಾಡಿದರೆ ಮಾತ್ರ ಸಚ್ಛಾಸ್ತ್ರಗಳ ಅಧ್ಯಯನವನ್ನು ಮಾಡುವಂತಹ ಒಂದು ವಿಶಿಷ್ಟವಾದ ಅಧಿಕಾರ, ಅಧ್ಯಯನ ಮಾಡಿದ್ದರ ವಿಶಿಷ್ಟವಾದ ಫಲ ಒಂದು ಉತ್ತಮವಾದ ಶುದ್ಧವಾದಂತಹ ಜ್ಞಾನಿಗಳಿಗೆ ಸಮ್ಮತವಾದ ಸಾಂಪ್ರದಾಯಿಕವಾದ ಶುದ್ಧವಾದ ಪರಿಜ್ಞಾನ ಬರುವುದಕ್ಕೆ ಸಾಧ್ಯ. ಇಲ್ಲದಿದ್ದರೆ ಅವ್ಯವಸ್ಥಿತವಾದಂತಹ ಜ್ಞಾನವನ್ನು ಪಡೆದು ಭಗವಂತನ ಪ್ರೀತಿಗೆ ಸಾಧನವಾಗದೆ ಇರುವಂತಹ ಪ್ರಸಂಗ ಬಂದೀತು ಅನ್ನುವ ಎಚ್ಚರವನ್ನು ಮಹಾಭಾರತ, ಭಾಗವತಗಳು ಒಕ್ಕೊರಲಿನಿಂದ ಹೇಳುತ್ತಾ ಇವೆ ಅನ್ನುವುದನ್ನು ಗಮನಿಸಬೇಕು.

ನಿಃಸ್ವಾಧ್ಯಾಯವಷಟ್‌ಕಾರಾಃ ಕೃತಾಸ್ತೇನ ಮಹಾತ್ಮನಾ । (14.17 ಹರಿವಂಶಪರ್ವ)

ಅವರೆಲ್ಲ ಶಕರು ಯವನ ಕಾಂಭೋಜ ಪಾರದ ಕೋಲಿಸರ್ಪ ಮಹಿಷಾ ದಾರ್ವ್ಯ ಚೋಲ ಕೇರ ಮೊದಲಾಗಿರುವಂತಹ ದೇಶಗಳಲ್ಲಿ ಇದ್ದಂಥವರೆಲ್ಲ ನಿಜವಾಗಿ ಅವರು ಕ್ಷತ್ರಿಯರೇ ಸ್ವಾಧ್ಯಾಯಾದಿಗಳನ್ನು ಮಾಡುವವರೇ.

ಸರ್ವೇ ತೇ ಕ್ಷತ್ರಿಯಾಸ್ತಾತ ಧರ್ಮಸ್ತೇಷಾಂ ನಿರಾಕೃತಃ । (14.19 ಹರಿವಂಶಪರ್ವ)

ಈ ವೇಷ ಕೇಶಗಳ ವ್ಯತ್ಯಾಸದಿಂದ ಅವರ ಧರ್ಮ ನಶಿಸಿ ಹೋಗಿದೆ, ಅವರ ಬಲ ಕುಂದಿದೆ ಮತ್ತೆ ಮುಂದೆ ಅವರು ಯೋಗ್ಯರಾದ ಜೀವರಾಗಿದ್ದರೆ ಕಾಲಾಂತರದಲ್ಲಿ ಪುನಃ ಧರ್ಮಾನುಷ್ಠಾನವನ್ನು ಮಾಡಿ ಸಾಧನೆಯನ್ನು ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಶ್ರೀಮದಾಚಾರ್ಯರು ಚತುರ್ಥಸ್ಕಂಧ ಭಾಗವತದ ತಾತ್ಪರ್ಯದಲ್ಲಿ ಶಾಪದ ಬಗ್ಗೆ ಹೇಳುವಾಗ ಧರ್ಮ, ಜ್ಞಾನ ಇವುಗಳು ಕೊನೆಯವರೆಗೂ ಲೋಪವಾಗಲಿ ಅನ್ನುವಂತೆ ಯಾರೂ ಮಾಡುವ ಹಾಗಿಲ್ಲ. ತಾತ್ಕಾಲಿಕವಾಗಿ ಅವರಿಗೆ ಆ ಶಿಕ್ಷೆಯಾದರೂ ಪುನಃ ಅವರು ಯೋಗ್ಯ ಜೀವರು ಅದರೊಳಗಿದ್ದವರು ಸಜ್ಜನರ ಸಹವಾಸದಿಂದ ಪುನಃ ಕಾಲಾಂತರದಲ್ಲಿ, ಜನ್ಮಾಂತರದಲ್ಲಿ ಧರ್ಮಾನುಷ್ಠಾನುವನ್ನು ಮಾಡಿ ಅವರು ಸದ್ಗತಿಯನ್ನು ಹೊಂದುವುದಕ್ಕೆ ಸಾಧ್ಯ ಇರುತ್ತೆ ಅದು ಅವರವರ ಯೋಗ್ಯತೆಗೆ ತಕ್ಕಂತೆ ವ್ಯವಸ್ಥೆ.

ಹೀಗೆ ಸಾಲ್ವರು ವಜ್ರರು ಕೌಂತಲರು ಕೌಜ್ಜಣರು ಇವರೆಲ್ಲರನ್ನು ಸೋಲಿಸಿ ತನ್ನ ರಾಜ್ಯದ ವಿಸ್ತಾರವನ್ನು ಮಾಡಿಕೊಂಡಿದ್ದಾನೆ ಹಾಗಾದರೆ ಎಲ್ಲ ಕಡೆಗಿರುವ ರಾಜರನ್ನು ಸೋಲಿಸಿ ರಾಜ್ಯದ ವಿಸ್ತಾರವಾದ ಮೇಲೆ ಸುಮ್ಮನೆ ಕೂಡುವುದು ಏಕೆ ಅಶ್ವಮೇಧ ಯಾಗವನ್ನೇ ಮಾಡಬಹುದಲ್ಲ ಅಂತ. ಎಲ್ಲರನ್ನು ಸೋಲಿಸಿ ಮಾಡಬೇಕಾದದ್ದು ಹೇಗೂ ಸೋಲಿಸಿಯಾಗಿದೆ ಇನ್ನು ಅಶ್ವವನ್ನು ಕಳಿಸಿ ತರಿಸುವುದು ಏನು ಅಷ್ಟು ದೊಡ್ಡ ಕೆಲಸ ಅಲ್ಲ ಸುಲಭವಾಗಿ ನಾವು ಅಶ್ವಮೇಧ ಯಾಗವನ್ನು ಮಾಡಬಹುದು ಅಂತ ಅಶ್ವಮೇಧ ಯಾಗವನ್ನು ಮಾಡುತ್ತ ಇದ್ದಾನೆ. ಆ ಅಶ್ವಮೇಧ ಯಾಗವನ್ನು ಮಾಡುವಂತಹ ಸಂದರ್ಭದಲ್ಲಿ ಇವನಿಗೆ ಅರವತ್ತು ಸಾವಿರ ಜನ ಮಕ್ಕಳು ಅದರ ಬಗ್ಗೆ ಮುಂದೆ ವರ್ಣನೆ ಇದೆ ಹೀಗಾಗಿ ಆ ಎಲ್ಲಾ ಮಕ್ಕಳನ್ನು ಕೊಟ್ಟು ಕಳಿಸಿದ ಅವರೆಲ್ಲ ಹೋಗಿದ್ದಾರೆ. ಆ ಎಲ್ಲ ಮಕ್ಕಳನ್ನು ಕೊಟ್ಟು ಕಳಿಸಿ ಎಲ್ಲ ಕಡೆಗೆ ಕುದುರೆಯನ್ನು ಸುತ್ತಿಸಿಕೊಂಡು ಬಂದು ಯಜ್ಞಕ್ಕೆ ಕರೆದುಕೊಂಡು ಬರಬೇಕು ಅಂತ ಸರಿ ಅಂತ ಅವರು ಕರೆದುಕೊಂಡು ಹೋಗಿದ್ದಾರೆ. ಆ ಅಶ್ವ ಒಂದು ಸಮುದ್ರತೀರಕ್ಕೆ ಹೋದಾಗ ಮಾಯವಾಗಿದೆ, ಕಾಣಿಸುತ್ತಾ ಇಲ್ಲ

ವೇಲಾಸಮೀಪೇऽಪಹೃತೋ ಭೂಮಿಂ ಚೈವ ಪ್ರವೇಶಿತಃ । (14.22 ಹರಿವಂಶಪರ್ವ)

ಭೂಮಿಯಲ್ಲಿ ಪ್ರವೇಶ ಮಾಡಿಬಿಟ್ಟಿದೆ. ಅಶ್ವದ ಜೊತೆಗೆ ಹೋದವರು ಅಶ್ವ ಮಾಯವಾಯಿತು, ಅಂತರ್ ಹಿತವಾಯಿತು ಅಂತ ಹೇಳಿಬಿಟ್ಟರು. ಹಾಗಾದರೆ ನೀವೆಲ್ಲಾ ಮಕ್ಕಳು ಸೇರಿ ಅದನ್ನು ಹುಡುಕಿಕೊಂಡು ಬನ್ನಿ ಅಂತ ಸಗರ ರಾಜ ಹೇಳಿದ. ಅರವತ್ತು ಸಾವಿರ ಜನ ಮಕ್ಕಳು ಒಬ್ಬರಲ್ಲ ಇಬ್ಬರಲ್ಲ ಹೋಗಿದ್ದಾರೆ. ಯಾವ ಪ್ರದೇಶದಲ್ಲಿ ಕುದುರೆ ಅಂತರ್ಹಿತವಾಯಿತೋ, ಭೂಗತವಾಯಿತೋ ಆ ಭೂಮಿಯನ್ನು ಖನನ ಮಾಡುತ್ತ ಇದ್ದಾರೆ. ಖನನ ಮಾಡುತ್ತ, ಮಾಡುತ್ತ, ಮಾಡುತ್ತ ಹೋದರೆ ಕೆಳಗೆ ಸಾಕ್ಷಾತ್ ಕಪಿಲನಾಮಕನಾದ ಪರಮಾತ್ಮನ ದರ್ಶನವಾಗಿದೆ.

ತಮಾದಿಪುರುಷಂ ದೇವಂ ಹರಿಂ ಕೃಷ್ಣಂ ಪ್ರಜಾಪತಿಮ್ ।
ವಿಷ್ಣುಂ ಕಪಿಲರೂಪೇಣ ಸ್ವಪನ್ತಂ ಪುರುಷೋತ್ತಮಮ್ ॥ (14.24 ಹರಿವಂಶಪರ್ವ)

ಪರಮಾತ್ಮ ಕಪಿಲ ರೂಪನಾಗಿ ಅಲ್ಲಿ ಇದ್ದಾನೆ ಸರ್ವೋತ್ತಮನಾದ ಶ್ರೀಹರಿ ಕೃಷ್ಣ ಅನ್ನುತ್ತಾರೆ, ಕೃಷ್ಣ ವಸುದೇವ ದೇವಕಿಯರಲ್ಲಿ ಅವತಾರ ಮಾಡಿದ ಕೃಷ್ಣ ಮಾತ್ರ ಕೃಷ್ಣನಲ್ಲ ಎಲ್ಲ ಅವತಾರಗಳಿಗೂ ಕೃಷ್ಣ ಅನ್ನುತ್ತಾರೆ, ಮೂಲರೂಪಕ್ಕೂ ಕೃಷ್ಣ ಅಂತ ಕರೆಯುತ್ತಾರೆ. ಆ ಕೃಷ್ಣ ಎಂಬ ಶಬ್ದ ಭಗವಂತನ ಮೂಲರೂಪಕ್ಕೂ ಇರುವುದರಿಂದ ಆ ಮೂಲರೂಪದಿಂದ ಅವತಾರ ಮಾಡಿದ ರೂಪಗಳಿಗೆಲ್ಲ ಕೃಷ್ಣ ಅಂತ ಹೇಳುವುದು ಹೀಗಾಗಿ **'ತಮಾದಿಪುರುಷಂ ದೇವಂ ಹರಿಂ ಕೃಷ್ಣಂ ಪ್ರಜಾಪತಿಮ್'** ಭಕ್ತರ ಪಾಪಗಳನ್ನೆಲ್ಲ ಕರ್ಷಣೆ ಮಾಡುವಂತಹ ಅವರ ಮನಸ್ಸನ್ನು ತನ್ನ ಕಡೆಗೆ ಕರ್ಷಣೆ ಮಾಡುವ ಸೆಳೆದುಕೊಳ್ಳುವ ಕೃಷ್ಣ ಈ ಕಪಿಲ. ಕಪಿಲನಾಮಕನಾದ ಪರಮಾತ್ಮನ ದೊಡ್ಡ ಅನುಗ್ರಹ ಸಕಲ ಜೀವರಾಶಿಗಳ ಮೇಲೆ ಎಲ್ಲರೂ ಮಾಡಿದ ಕರ್ಮಗಳಿಗೆ ಫಲ ಕೊಡುವ ಮಹಾನುಭಾವನೇ ಕಪಿಲ. ಅನಂತ ಸುಖ ಪರಿಪೂರ್ಣನಾದದ್ದರಿಂದ ಅವನಿಗೆ **'ಕ'** ಅನ್ನುತ್ತಾರೆ, ಎಲ್ಲರನ್ನೂ ರಕ್ಷಣೆ ಮಾಡುತ್ತಾನೆ ತಾನು ಸುಖವಾಗಿದ್ದಾನೆ ಮಾತ್ರವಲ್ಲ ನಮ್ಮೆಲ್ಲರ ಪಾಲನೆ ಮಾಡುತ್ತಾನೆ ಆದ್ದರಿಂದ **'ಪಿ'**, ಒಂದೊಮ್ಮೆ ಸಂಹಾರವನ್ನೂ ಮಾಡುತ್ತಾನೆ, ಪ್ರಲಯವನ್ನೂ ಮಾಡುತ್ತಾನೆ ಆದ್ದರಿಂದ ಅವನಿಗೆ **'ಲ'** ಕಪಿಲ ಎಂಬುದಾಗಿ ಕರೆಯುತ್ತಾರೆ **'ಸುಖಾದಾನಂತಾತ್ ಪಾಲನಾತ್ ಲೀಯನಾಚ್ಚ'** ಅಂತ. ಅಂತಹ ಕಪಿಲನಾಮಕನಾದ ಪರಮಾತ್ಮ ನೋಡಿ, ಸುಖವಾಗಿ ತಾನಿದ್ದಾನೆ ನಿತ್ಯ ಸುಖಪರಿಪೂರ್ಣ ಸ್ವಪಂತಂ ಅಂತ ಹೇಳುತ್ತಾರೆ. ಯೋಗನಿದ್ರೆ ಅಷ್ಟೆ ನೋಡುವವರಿಗೆ ನಿದ್ರೆ ಮಾಡಿದಂತೆ ಕಾಣುತ್ತ ಇತ್ತು, ಅವನಿಗೆಲ್ಲಿ ನಿದ್ರೆ **'ಅಸುಪ್ತಸ್ಸುಪ್ತಾ ನಭಿಶಾಕಶೀತಿ'** ಎಂದಿಗೂ ನಿದ್ರೆ ಇಲ್ಲದೆ ಇದ್ದವ ಯೋಗನಿದ್ರೆಯನ್ನು ಮಾಡುತ್ತ ಇದ್ದಾನೆ ನೋಡುವವರಿಗೆ ನಿದ್ರೆ ಮಾಡಿದಂತೆ ನಾಟಕ ಮಾತ್ರ.

ಯದಸುಪ್ತಿಗತೋಽಪಿ ಹರಿಃ ಸುಖವಾನ ಸುಖರೂಪಿಣಮಾಹುರತೋ ನಿಗಮಾಃ ।

(4.2 ದ್ವಾದಶ ಸ್ತೋತ್ರ)

ಅವನಿಗೆ ಸುಪ್ತಿ ಇಲ್ಲ ಅನ್ನುವ ಮಾತು ಆ **'ಕ'** ಎಂಬ ಶಬ್ದದಿಂದಲೇ ಗೊತ್ತಾಗುತ್ತೆ ನಿತ್ಯ ಸುಖಪೂರ್ಣ, ಮಲಗಿ ಸುಖ ಪಡಬೇಕಾದ ಅವಶ್ಯಕತೆ ಅವನಿಗಿಲ್ಲ ಇದು ಕೇವಲ ನಾಟಕ ಅಂತನ್ನುವ ಮಾತು ಆ ಕಪಿಲ ಎಂಬ ಕಡೆಗಿರುವ **'ಕ'** ಶಬ್ದದಿಂದಲೇ ನಮಗೆ ತಿಳಿದು ಬರುತ್ತದೆ ಅಂತಹ ಸುಖಪರಿಪೂರ್ಣನಾದ ಭಗವಂತ ಸ್ವಾತ್ಮಧ್ಯಾನದಲ್ಲಿ ಇದ್ದಾನೆ ನಿತ್ಯ ಸುಖಪರಿಪೂರ್ಣನಾದ ದೇವರು. ನೀವೇ ಇದನ್ನು ಕಳ್ಳತನ ಮಾಡಿದ್ದು, ಕುದುರೆಯನ್ನು ಅಪಹಾರ ಮಾಡಿಕೊಂಡು ಹೋದದ್ದು ಅಂತ ಅವರ ಮೇಲೆ ಆರೋಪಣೆಯನ್ನು ಇವರು ಮಾಡಿದ್ದಾರೆ ತಪ್ಪು ತಿಳುವಳಿಕೆಯಿಂದ ಆಗ ಕಣ್ಣು ತೆರೆದು ನೋಡಿದ್ದೇ ತಡ ಅರವತ್ತು ಸಾವಿರ ಜನರೂ ಕೂಡ ಭಸ್ಮಸಾಥ ಆಗಿದ್ದಾರೆ. ಶ್ರೀಮದ್ಭಾಗವತ ಹೇಳುತ್ತದೆ ತಾವು ಮಾಡಿದ ಅಪರಾಧದಿಂದಲೇ ಇವರು ಭಸ್ಮ ಆಗಿದ್ದಾರೆ, ದೇವರ ಕ್ರೋಧಾಗ್ನಿ ಇಂದ ಅಲ್ಲ ಶುದ್ಧವಾದಂತಹ ಆನಂದ ರೂಪಿಯಾದ ಪರಮಾತ್ಮನಿಗೆ ಕ್ರೋಧವೆಲ್ಲಿ ಅನ್ನುತ್ತಾರೆ. ಅದಕ್ಕೆ ನಾವು ತಿಳಿಯಬೇಕಾದದ್ದು ಭಗವಂತನಿಗೆ ಕ್ರೋಧ ಇದೆ ಅಥವಾ ಇಲ್ಲ, ಕ್ರೋಧ ಇಲ್ಲ ಸಂತಾಪ ರೂಪವಾದ ಕ್ರೋಧ ಭಗವಂತನಿಗೆ ಇಲ್ಲ ಆದರೆ ಪ್ರತಿಪಬುದ್ಧಿ, ತಪ್ಪು ಮಾಡಿದವರಿಗೆ ಶಿಕ್ಷೆಯನ್ನು ಕೊಡಬೇಕು ಅನ್ನುವಂತಹ ಒಂದು ಸಂಕಲ್ಪವನ್ನು ಮಾಡಿ ಅವರಿಗೆ ಶಿಕ್ಷೆಯನ್ನು ಕೊಡುತ್ತಾನೆ. ಆ ತರಹದ ಒಂದು ಸಂಕಲ್ಪವನ್ನು ಏನು ಪರಮಾತ್ಮ ಮಾಡುತ್ತಾನೋ ಅದು ಉಂಟು ದೇವರಿಗೆ ಅಂತಹ ಕ್ರೋಧ ಉಂಟು ಅಂತ ಯಾದುವಾರ್ಯರು ತಿಳಿಸುತ್ತಾರೆ. ಆ ತರಹದ ಕ್ರೋಧದಿಂದ ಆನಂದ ರೂಪವಾದ ಇವರು ತಪ್ಪು ಮಾಡಿದ್ದಕ್ಕೆ ಶಿಕ್ಷೆ ಕೊಡಬೇಕು ಅನ್ನುವಂತಹ ಸಂಕಲ್ಪ ಯಾವಾಗ ದೇವರು ಮಾಡಿದನೋ ಭಸ್ಮಸಾಥ ಆಗಿ ಹೋಗಿದ್ದಾರೆ **'ದಗ್ಧಾಸ್ತೇ ವೈ ಮಹಾರಾಜ'**[1].

1. 14.25 ಹರಿವಂಶಪರ್ವ



ನಾಲ್ಕೇ ನಾಲ್ಕು ಜನ ಉಳಿದಿದ್ದಾರೆ ಬರ್ಹಕೇತು, ಸುಕೇತು ಧರ್ಮರಥ, ಪಞ್ಚ ಜನ ಅಂತ ಇನ್ನುಳಿದವರೆಲ್ಲ ಭಸ್ಮ ಆಗಿ ಹೋಗಿದ್ದಾರೆ ಪರಮಾತ್ಮ ಇವರಿಗೆ ವರ ಕೊಟ್ಟಿದ್ದಾನೆ ಅಂತ ಹೇಳುತ್ತಾರೆ. ನಾಲ್ಕು ಜನ ಉಳಿದಿದ್ದರು ಪ್ರಾಯಃ ಅವರು ಆರೋಪಣೆ ಮಾಡಿದವರಲ್ಲ, ಅವರು ಶರಣಾಗತರಾದವರು, ಸಜ್ಜನರು ಅನ್ನುವುದಕ್ಕೋಸ್ಕರ ಅವರಿಗೆ ಪರಮಾತ್ಮ ವರ ಕೊಟ್ಟಿದ್ದಾನೆ. ಸಗರ ರಾಜನ ಯಜ್ಞ ಪೂರ್ಣವಾಗಲಿ, ಇವರೆಲ್ಲರ ಉದ್ಧಾರವಾಗಲಿ, ಇವರಿಗೂ ಸದ್ಗತಿಯಾಗಲಿ ಮುಂದೆ ಇವರಿಗೆ ಉತ್ತಮವಾದಂತಹ ಲೋಕ ಪ್ರಾಪ್ತಿಯಾಗಲಿ ಎಂಬುದಾಗಿ ವರವನ್ನು ಕೊಟ್ಟಿದ್ದಾನೆ. ಸಮುದ್ರ ರಾಜನಾಗಿ, ಸಮುದ್ರದ ತಂದೆ ಆನ್ನಿಸಿಕೊಳ್ಳುವ ರೀತಿಯಲ್ಲಿ ಅವನಿಗೆ ಸಾಗರ ಅಂತ ಹೆಸರು ಬರಲಿ ನಿಮ್ಮ ತಂದೆಗೆ. ಸಗರ ಅವನಿಂದ ಸಮುದ್ರದ ವಿಸ್ತಾರ ಆದದ್ದರಿಂದ ಇವರೆಲ್ಲ ಭೂಖನನ ಮಾಡಿದ್ದಕ್ಕೆ ಸಮುದ್ರದ ವಿಸ್ತಾರವಾದದ್ದರಿಂದ ಒಂದರ್ಥದಲ್ಲಿ ಸಾಗರಕ್ಕೆ ಜನ್ಮ ಕೊಟ್ಟ ತಂದೆ ಅನ್ನುವ ಅರ್ಥದೊಳಗೆ ಅವನ ಪ್ರಸಿದ್ಧಿಯಾಗಲಿ.

ಪುತ್ರಂ ಸಮುದ್ರಂ ಚ ವಿಭುಃ ಸ್ವರ್ಗವಾಸಂ ತಥಾಕ್ಷಯಮ್ । (14.28 ಹರಿವಂಶಪರ್ವ)

ಮುಂದೆ ಉತ್ತಮವಾದ ಸ್ವರ್ಗವನ್ನು ಪಡೆಯಲಿ, ಮಕ್ಕಳಿಗೂ ಉತ್ತಮವಾದ ಲೋಕ ಪ್ರಾಪ್ತಿಯಾಗಲಿ ಎಂಬುದಾಗಿ ವಿಶೇಷವಾಗಿ ಸಮುದ್ರನೇ ಬಂದು ಆ ಸಗರ ರಾಜನಿಗೆ ವಿಶೇಷವಾಗಿ ಎಲ್ಲ ರೀತಿಯ ಮಾನ ಸನ್ಮಾನಗಳನ್ನು ಮಾಡುವಂತಾಗಲಿ, ಅಶ್ವಮೇಧ ಯಾಗ ಪರಿಪೂರ್ಣವಾಗಲಿ ಅಂತ ಪರಮಾತ್ಮ ಅನುಗ್ರಹವನ್ನೂ ಮಾಡಿದ್ದಾನೆ. ಆದರೆ ಆ ಎಲ್ಲ ಮಕ್ಕಳ ಉದ್ಧಾರವಾಗಲಿ ಅಂತ ದೇವರು ಅನುಗ್ರಹ ಮಾಡಿದ, ಉದ್ಧಾರವಾದ ಬಗೆ ಹೇಗೆ ಆದಕ್ಕೆ ಯಾವ ಕ್ರಮದಲ್ಲಿ ಉದ್ಧಾರವಾಯಿತು ಅದನ್ನು ಜನಮೇಜಯ ಕೇಳಿದ್ದಕ್ಕೆ ವೈಶಂಪಾಯನರು ಹೇಳುತ್ತಾ ಇದ್ದಾರೆ ಪೂರ್ಣವಾದ ಇತಿಹಾಸವನ್ನು ಹೇಳುತ್ತಾರೆ ಮತ್ತೆ.

ಸಗರ ರಾಜನಿಗೆ ಇಬ್ಬರು ಹೆಂಡಂದಿರು ಕೇಶಿನೀ ಅಂತ ದೊಡ್ಡವಳು, ಚಿಕ್ಕವಳು ಈಲಿನೀ ಅಂತ ಮಹಾಭಾರತದ ವ್ಯಾಖ್ಯಾನದಲ್ಲಿ ತಿಳಿಸುತ್ತಾರೆ, ಶ್ರೀಮದ್ಭಾಗವತದಲ್ಲಿ ಸುಮತಿ ಎಂಬ ಹೆಸರಿದೆ, ಇಲ್ಲಿ ಕೇಶಿನೀ, ಈಲಿನೀ ಅಂತ. ಆ ಕೇಶಿನೀ, ಆ ಈಲಿನೀ ಅಥವಾ ಸುಮತಿ ಇವಳು ಅರಿಷ್ಟನೇಮಿಯ ಅರ್ಥಾತ್ ಕಶ್ಯಪರ ಮಗಳು ಇವರಿಬ್ಬರಿಗೂ ಕೂಡ ಒಂದು ವಿಶೇಷವಾದ ವರವನ್ನು ಔರ್ವ ಋಷಿಗಳು ಕೊಟ್ಟಿರುತ್ತಾರೆ. ಯಾಕೆಂದರೆ ಸಗರ ರಾಜ ಹುಟ್ಟಿದ್ದೇ ಔರ್ವರ ಆಶ್ರಮದಲ್ಲಿ ಅವರೇ ಇವನಿಗೆ ಉತ್ತಮವಾದ ವಿದ್ಯೆಯನ್ನು ಕೊಟ್ಟದ್ದು, ಆಗ್ನೇಯಾಸ್ತ್ರವನ್ನು ಉಪದೇಶ ಮಾಡಿದ್ದು ಹೀಗಾಗಿ ಮದುವೆಯಾದ ಮೇಲೆ ಒಂದರ್ಥದಲ್ಲಿ ಸಾಕುಮಗ ಇವನು, ಇವರಿಬ್ಬರು ಸೊಸೆಯರಿದ್ದಂತೆ ಶಿಷ್ಯನ ಪತ್ನಿಯರು. ಹೀಗಾಗಿ ಇವರಿಬ್ಬರಿಗೂ ಉತ್ತಮವಾದ ಆಶೀರ್ವಾದವನ್ನು ಮಾಡಿ ವರವನ್ನು ಕೊಟ್ಟಿರುತ್ತಾರೆ ಅವರು ನೀವು ನನ್ನ ಶಿಷ್ಯನ ಕೈ ಹಿಡಿಯುತ್ತಾ ಇದ್ದೀರಾ, ಧಾರ್ಮಿಕರಾಗಿದ್ದೀರಿ, ಧರ್ಮದಲ್ಲಿ ಶ್ರದ್ಧೆ ಇದೆ, ಭಕ್ತಿ ಇದೆ ಆದ್ದರಿಂದ ಉತ್ತಮ ಪುತ್ರ ಸಂತಾನ ನಿಮಗಾಗಲಿ ಅಂತ ನಾನು ವರ ಕೊಡುತ್ತೇನೆ. ಆದರೆ ಆ ಪುತ್ರ ಸಂತಾನವಾಗುವ ಬಗೆ ಹೇಗೆ ಅಂದರೆ ಒಬ್ಬ ಮಗ ಆಗುತ್ತಾನೆ ಇದು ಒಂದು ವರ ಅಥವಾ ಅರವತ್ತು ಸಾವಿರ ಮಕ್ಕಳು ಆಗುತ್ತಾರೆ. ಇಬ್ಬರಲ್ಲಿ ಯಾರು ಯಾವುದನ್ನು ಆರಿಸಿಕೊಳ್ಳುತ್ತೀರೋ ಅವರಿಗೆ ನಾನು ಆ ವರವನ್ನು ಕೊಡುತ್ತೇನೆ ನನ್ನ ಸಂಕಲ್ಪ ಹೀಗಿದೆ. ಆಗ ಕೇಶಿನೀ ಹೇಳುತ್ತಾಳೆ ನನಗೆ ಒಬ್ಬ ಮಗ ಸಾಕು ಉತ್ತಮನಾದ, ಯೋಗ್ಯನಾದ, ಸಜ್ಜನ, ಧಾರ್ಮಿಕನಾದ ಒಬ್ಬ ಮಗ ಆದರೆ ಸಾಕು ಅಂತ, ಸುಮತಿ ನನಗೆ ಅರವತ್ತು ಸಾವಿರ ಜನ ಮಕ್ಕಳಾಗಬೇಕು ಅಂತ ಬಯಸಿದ್ದಾಳೆ. ಸರಿ, ಅದು ನಿಮ್ಮ ಇಷ್ಟ ಹಾಗೆ ಆಗಲಿ ಅಂತ ಆಶೀರ್ವಾದವನ್ನು ಮಾಡಿ ಅನುಗ್ರಹವನ್ನು ಮಾಡಿದ್ದಾರೆ.

ಅಲ್ಲಿ ಕೇಶಿನೀಯಲ್ಲಿ ಹುಟ್ಟಿದವನೇ ಅಸಮಂಜಸ ಅಂತ ಅವನ ಕಥೆ ಭಾಗವತದಲ್ಲಿ ಬರುತ್ತದೆ. ಆ ಅಸಮಂಜಸ ಏನು ಮಾಡುತ್ತಾ ಇದ್ದ ಅಂದರೆ ಹೆಸರಿಗೆ ತಕ್ಕಂತೆ ಅಸಮಂಜಸ ಅವನು, ಮಹಾಭಾರತದಲ್ಲಿ ಅವನಿಗೆ ಇನ್ನೊಂದು ಹೆಸರನ್ನೂ ಕೊಟ್ಟಿದೆ ಅಸಮಂಜಸ ಎಂಬ ಹೆಸರನ್ನೂ ಹೇಳಿ ಜೊತೆಗೆ ಪಞ್ಚಜನ ಅನ್ನುವ ಒಂದು ಹೆಸರು ಅವನಿಗೆ ಇತ್ತು ಅಂತ ಮಹಾಭಾರತ, ಹರಿವಂಶ ಉಲ್ಲೇಖ ಮಾಡುತ್ತದೆ. ಹುಟ್ಟಿದ ಚಿಕ್ಕ ಚಿಕ್ಕ ಮಕ್ಕಳನ್ನೆಲ್ಲ, ತನ್ನ ಜೊತೆಗೆ ಆಟಕ್ಕೆ ಅಂತ ಬಂದ ಊರಿನ ಮಕ್ಕಳನ್ನೆಲ್ಲ ಒಯ್ದು, ಇಕ್ಷ್ವಾಕು ವಂಶದ ರಾಜರಲ್ಲವಾ ಇವರು ಅಯೋಧ್ಯೆಯಲ್ಲಿ ಇದ್ದಾರೆ, ಸರಯೂ ನದಿಯಲ್ಲಿ ಮುಳುಗಿಸುತ್ತಾ ಇದ್ದ. ಊರಿನ ಜನರೆಲ್ಲಾ ಬಂದು ಗೋಳು ಹೇಳಿಕೊಳ್ಳಬೇಕು ರಾಜನಿಗೆ, ಏನು ಹೀಗೆ ಮಾಡುತ್ತಾ ಇದ್ದೀಯಾ ಅಂತ ಒಂದು ದಿನ ಬೈಯ್ದು ಹೇಳಿದ ಕೇಳಲಿಲ್ಲ, ಎಷ್ಟು ಬಾರಿ ಹೇಳಿದರೂ ಇವನು ಕೇಳುವುದಿಲ್ಲ ಹಾಗಾದರೆ ನೀನು ಹೊರಟು ಹೋಗು ಅಂತ ಅವನನ್ನು ರಾಜ್ಯದಿಂದ ಹೊರಗೆ ಕಳಿಸಿಬಿಡುತ್ತಾನೆ ಅಂತನ್ನುವ ಮಾತು ಬರುತ್ತದೆ. ಆದರೆ ಹೋಗು ಅಂತ ಹೇಳಿದಾಗ ಸುಮ್ಮನೆ ಹೋಗುವುದಿಲ್ಲ ಅವನು ಯಾರೆಲ್ಲ ಆ ಸರಯೂ ನದಿಯಲ್ಲಿ ಮುಳುಗಿ ಪ್ರಾಣ ಕಳೆದುಕೊಂಡಿದ್ದರು ಅವರನ್ನೆಲ್ಲ ಬದುಕಿಸಿ ಮತ್ತೆ ಒಪ್ಪಿಸಿ ಹೋಗುತ್ತಾನೆ. ಅಯ್ಯೋ ಇಂತಹ ಮಹಾತಪಸ್ವಿಯೇ ನೀನು ಸತ್ತವರನ್ನು ಬದುಕಿಸುವ ಸಾಮರ್ಥ್ಯ ನಿನಗೆ ಉಂಟೋ ಅಂತಹ ಯೋಗಿ, ಅಂತಹ ತಪಸ್ಸಿ ಹಾಗಾದರೆ ನಮ್ಮ ರಾಜ್ಯ ಬಿಟ್ಟು ನೀನು ಹೋಗುವುದು ಬೇಡ ನಮ್ಮ ರಾಜ್ಯದಲ್ಲಿಯೇ ಇರು, ನೀನು ಇಷ್ಟು ದೊಡ್ಡ ಮಹಾನುಭಾವ ಅಂತ ನಮಗೆ ಗೊತ್ತಿರಲಿಲ್ಲ ಅಂತ ಅವನು ಹೇಳುತ್ತಾನೆ ನಾನು ಇಲ್ಲಿಂದ ಹೊರಡುವುದಕ್ಕೇನೆ ಇದು ಒಂದು ಉಪಾಯ ಮಾಡಿದೆ. ನನಗೆ ಸಾಕಾಗಿದೆ ಈ ಸಂಸಾರ, ಅವನಿಗೆ ಮದುವೆ ಆಗಿತ್ತು, ಮಕ್ಕಳಾಗಿದ್ದರು ಹೀಗಾಗಿ ನನಗೆ ಸಾಕಾಗಿದೆ ಈ ಸಂಸಾರ ನಾನು ಅರಣ್ಯಕ್ಕೆ ಹೋಗಿ ತಪಸ್ಸು ಮಾಡುತ್ತೇನೆ ಅಂತ ಇದೇ ಒಂದು ನಿಮಿತ್ಯ ಮಾಡಿಕೊಂಡು ಅವನು ಹೊರಟು ಹೋಗುತ್ತಾನೆ ಸಾಧನೆಯನ್ನು ಮಾಡಿಕೊಳ್ಳುತ್ತಾನೆ ಅನ್ನುವ ವಿಚಾರ ಶ್ರೀಮದ್ಭಾಗವತದಲ್ಲಿ ಬರುತ್ತದೆ.

ಇನ್ನೊಬ್ಬಳು ಸುಮತಿ ಆ ಸುಮತಿ ಅಥವಾ ಈಲಿನೀಗೆ ಆ ಒಂದು ತುಂಬಿ ಫಲ, ಉದ್ದಾಗಿರುವ ಸೋರೆಕಾಯಿ, ಗುಂಡಾಗಿದ್ದರೆ ಬೇರೆ, ಇದು ಉದ್ದಾಗಿರುವಂತಹ ಒಂದು ತರಹದ ಸೋರೆಕಾಯಿ ಅದು ಹೇಗೆ ಅನೇಕ ಬೀಜಗಳಿಂದ ತುಂಬಿ ಕೊಂಡದ್ದಾಗಿರಬೇಕೋ ಹಾಗೆ ಇದು ಅರವತ್ತು ಸಾವಿರ ಸೂಕ್ಷ್ಮವಾದ ಒಂದು ಎಳ್ಳಿನ ಕಾಳಿನಷ್ಟು ಸಣ್ಣ ಸಣ್ಣ ಜೀವಗಳಿಂದ ತುಂಬಿಕೊಂಡಂತಹ ಗರ್ಭಗಳನ್ನು ಪಡೆದುಕೊಂಡು ಒಂದು ಗರ್ಭದ ಪಿಂಡ ಹುಟ್ಟಿದೆ ಅಷ್ಟೆ.

ತತ್ರ ಷಷ್ಟಿಸಹಸ್ರಾಣಿ ಗರ್ಭಾಸ್ತೇ ತಿಲಸಮ್ಮಿತಾಃ । (15.8 ಹರಿವಂಶಪರ್ವ)

ಸಣ್ಣ ಎಳ್ಳಿನಷ್ಟು ಚಿಕ್ಕ ಚಿಕ್ಕದಾದಂತಹ ಗರ್ಭಗಳಿದ್ದವು. ಅದನ್ನು ಪ್ರತ್ಯೇಕ ಪ್ರತ್ಯೇಕವಾದ ತುಪ್ಪದ ಕೊಡದಲ್ಲಿ ಹಾಕಿದ್ದಾನೆ ಸಗರ ರಾಜ ಆ ಒಂದೊಂದು ಕೊಡದಲ್ಲಿ ಆ ಗರ್ಭಗಳನ್ನು ಚೆನ್ನಾಗಿ ಆರೈಕೆ ಮಾಡಿ ಅವತ್ತಿನ ಕಾಲದ ವಿಜ್ಞಾನದಂತೆ ಆ ವೈದ್ಯರ ಸೂಚನೆಯಂತೆ ಯಾವ ರೀತಿಯ ರಾಸಾಯನಿಕವಾದ ವ್ಯವಸ್ಥೆಯನ್ನು ಅಲ್ಲಿ ಮಾಡುವುದರಿಂದ ಚೆನ್ನಾಗಿ ಅವುಗಳು ಬೆಳೆಯಬಹುದೋ ಹಾಗೆ ಬೆಳೆಸಿ ನೋಡಿಕೊಳ್ಳುವುದಕ್ಕೆ ಒಬ್ಬಬ್ಬ ದಾಸಿಯರನ್ನು ಇಟ್ಟಿದ್ದಾನೆ, ಧಾತ್ರೀ ಅದನ್ನು ನೋಡಿಕೊಳ್ಳುವುದಕ್ಕೆ. ಅರವತ್ತು ಸಾವಿರ ಗರ್ಭಗಳನ್ನು ಬೆಳೆಸುವುದಕ್ಕೆ ಒಬ್ಬಳು ಸುಮತಿ ಏನು ನೋಡಿಕೊಳ್ಳುವುದಕ್ಕೆ ಆಗುತ್ತದೆ ಅರವತ್ತು ಸಾವಿರ ಜನ ಹೆಣ್ಣುಮಕ್ಕಳಿಗೆ ಅದನ್ನು ಚೆನ್ನಾಗಿ ನೋಡಿಕೊಂಡು ಬೆಳೆಸುವುದಕ್ಕೆ ವ್ಯವಸ್ಥೆ ಮಾಡಿದ್ದಾನೆ. ಕೆಲವು ಕಾಲದ ನಂತರ ಹತ್ತು ತಿಂಗಳು ಕಳೆದ ಮೇಲೆ ಒಳ್ಳೆಯ ಉತ್ತಮವಾದಂತಹ ಶಿಶುಗಳು ಹೊರಗೆ ಬಂದಿವೆ ಆ ಒಂದೊಂದು ಕೊಡದಿಂದಲೂ ಕೂಡ.



ತತೋ ದಶಸು ಮಾಸೇಷು ಸಮುತ್ತಸ್ಥುರ್ಯಥಾಸುಖಮ್ ।

ಕುಮಾರಾಸ್ತೇ ಯಥಾಕಾಲಂ ಸಗರಪ್ರೀತಿವರ್ಧನಾಃ । (15.10 ಹರಿವಂಶಪರ್ವ)

ಉತ್ತಮರಾದಂತಹ ಪುತ್ರರು ಉತ್ಪತ್ತಿ ಆಗಿದೆ ಹೀಗೆ ಅರವತ್ತು ಸಾವಿರ ಜನ ಮಕ್ಕಳನ್ನು ಇನ್ನೊಬ್ಬಳಲ್ಲಿ ಪಡೆದಿದ್ದಾನೆ. ಪ್ರತ್ಯೇಕ ಪ್ರತ್ಯೇಕವಾಗಿ ಅಷ್ಟೆಲ್ಲ ಜನರನ್ನ ಪ್ರಸವ ಮಾಡುವುದು ಅಂದರೆ ಒಬ್ಬ ವ್ಯಕ್ತಿಗೆ ಹೇಗೆ ಸಾಧ್ಯ ಅನ್ನುವ ಪ್ರಶ್ನೆಗೆ ಮಹಾಭಾರತ, ಹರಿವಂಶವೇ ಉತ್ತರ ಕೊಡುತ್ತಾ ಇದೆ. ಅವಳು ಪಡೆದದ್ದು ಒಂದೇ ಗರ್ಭವನ್ನು ಹೊರಗೆ ಆದರೆ ಅದರಲ್ಲಿ ಇದ್ದದ್ದು ಅರವತ್ತು ಸಾವಿರ ಸೂಕ್ಷ್ಮವಾದ ಭಾಗಗಳು ಅವುಗಳನ್ನು ಬಿಡಿಸಿ ಬಿಡಿಸಿ ಪ್ರತ್ಯೇಕವಾದ ಘಟಗಳಲ್ಲಿ ಬೆಳೆಸಿದ್ದಾರೆ.

ತೇಷಾಂ ನಾರಾಯಣಂ ತೇಜಃ ಪ್ರವಿಷ್ಟಾನಾಂ ಮಹಾತ್ಮನಾಮ್ । (15.12 ಹರಿವಂಶಪರ್ವ)

ಅವರೆಲ್ಲರಲ್ಲಿಯೂ ಭಗವಂತನ ಒಂದು ವಿಶಿಷ್ಟವಾದ ತೇಜಸ್ಸು, ವಿಶಿಷ್ಟವಾದ ಸಾಮರ್ಥ್ಯ ಹೇಗೆ ಕುವಲಾಶ್ವನಲ್ಲಿ ವಿಶೇಷವಾದ ದೇವರ ಸನ್ನಿಧಾನ ಇತ್ತು ಅಂತ ಹರಿವಂಶ ಹೇಳಿತೋ ಹಾಗೆ ಈ ಅರವತ್ತು ಸಾವಿರ ಜನ ಹಾಗೂ ಪಞ್ಚಜನ ಇವರೆಲ್ಲರಲ್ಲಿಯೂ ಕೂಡ ಆ ಭಗವಂತನ ಒಂದು ವಿಶೇಷವಾದಂತಹ ಸನ್ನಿಧಾನ ಇದೆ. ಆ ಪಞ್ಚಜನನಿಂದ ಅಂಶುಮಾನ್ ಎಂಬಂತಹ ಮಗ ಹುಟ್ಟುತ್ತಾನೆ, ಆ ಅಂಶುಮಾನ್ ಅನ್ನುವವನಿಗೆ ದಿಲೀಪ ಅನ್ನುವ ಮಗ ಆ ದಿಲೀಪನಿಗೇನೆ ಖಟ್ವಾಙ್ಗ ಎಂಬಂತಹ ಹೆಸರಿತ್ತು ಅಂತ ಹರಿವಂಶ ಹೇಳುತ್ತದೆ, ಭಾಗವತದ ಪ್ರಕಾರ ಖಟ್ವಾಙ್ಗ ಸ್ವಲ್ಪ ಮುಂದೆ ಹುಟ್ಟಿ ಬರುತ್ತಾನೆ ಅಂತ ಇದೆ ಕಲ್ಪಭೇಧಾದಿನ ವ್ಯತ್ಯಾಸವನ್ನು ತಿಳಿದುಕೊಳ್ಳಬೇಕು. ಆ ದಿಲೀಪ ಎಂಬ ಹೆಸರು ಹಾಗೂ ಖಟ್ವಾಙ್ಗ ಎಂಬ ಹೆಸರು ಇನ್ನೊಬ್ಬ ದಿಲೀಪ ಬರುತ್ತಾನೆ ಮತ್ತೆ ಮುಂದೆ ಅವನು ಬೇರೆ, ಈ ಖಟ್ವಾಙ್ಗ ಇವನೂ ಕೂಡ ದೇವಲೋಕಕ್ಕೆ ಹೋಗಿ ದೇವತೆಗಳ ಸೇವೆಯನ್ನು ಮಾಡುತ್ತಾನೆ. ಆ ದೇವತೆಗಳ ಸೇವೆಯನ್ನು ಮಾಡಿದಾಗ ದೇವತೆಗಳು ಏನು ಬೇಕೋ ವರ ಕೇಳು ಅಂದಾಗ ನನ್ನ ಆಯುಷ್ಯ ಎಷ್ಟು ಹೇಳಿ ಅಂತ ಕೇಳುತ್ತಾನೆ ಒಂದು ಮುಹೂರ್ತ ಮಾತ್ರ ಅಂತ ಹೇಳುತ್ತಾರೆ ಅವರು. ಅಷ್ಟು ತಿಳಿದದ್ದೇ ತಡ ತನ್ನ ಸ್ಥಾನಕ್ಕೆ ಬಂದು ಸರ್ವಸಂಗ ಪರಿತ್ಯಾಗ ಮಾಡಿ ಯಾವ ಮಾಯಾ ಮೋಹಗಳನ್ನು, ಮಮತೆಗಳನ್ನು ರಾಜ್ಯದ ಮೇಲೆ, ಬಂಧು ಭಾಂಧವರ ಮೇಲೆ, ಹೆಂಡತಿ-ಮಕ್ಕಳ ಮೇಲೆ ಇಟ್ಟುಕೊಳ್ಳದಂತೆ ಏಕಾಗ್ರ ಮನಸ್ಸಿನಿಂದ ಭಗವಂತನ ಧ್ಯಾನವನ್ನು ಮಾಡಿ ಉತ್ತಮವಾದ ಸದ್ಗತಿಯನ್ನು ಹೊಂದುತ್ತಾನೆ ಈ ಮಹಾನುಭಾವ. ಪರೀಕ್ಷಿತ್ ರಾಜರಿಗೆ ಶುಕಾಚಾರ್ಯರು ಇವನ ದೃಷ್ಟಾಂತವನ್ನೇ ಕೊಡುತ್ತಾರೆ.

ಖಟ್ವಾಂಗೋ ನಾಮ ರಾಜರ್ಷಿಃ ಜ್ಞಾತ್ವೇಯತ್ತಾಮಿಹಾಯುಷಃ । (02.1.13 ಭಾಗವತ)

ತನ್ನ ಆಯುಷ್ಯ ಎಷ್ಟು ಇದೆ ಅಂತ ತಿಳಿದ ಎರಡನೆಯ ಕ್ಷಣ ಸಾಧನೆಯನ್ನು ಮಾಡಿ ಒಂದು ಮುಹೂರ್ತದೊಳಗೇನೆ ಉತ್ತಮವಾದ ಭಗವದ್ ಧ್ಯಾನವನ್ನು ಮಾಡಿ ಶ್ರೇಷ್ಠವಾದ ಸದ್ಗತಿಯನ್ನು ಹೊಂದಿದ್ದಾನೆ. ಹಾಗಾದರೆ ಮನುಷ್ಯನಿಗೆ ಸಮಯ ಇಲ್ಲ ಅಂತ ಹೇಳುವುದು ಸರಿಯಲ್ಲ, ಸಮಯವನ್ನು ಸಾರ್ಥಕ ಮಾಡಿಕೊಳ್ಳುವುದಕ್ಕೆ ಗೊತ್ತಿಲ್ಲ. ಸಮಯವನ್ನು ಸಾರ್ಥಕ ಮಾಡಿಕೊಂಡರೆ ಖಟ್ವಾಙ್ಗನಂತೆ ಶ್ರೇಷ್ಠವಾದ ಸದ್ಗತಿಯನ್ನು ಹೊಂದಬಹುದು ಅಂತ ಶಾಸ್ತ್ರ ನಮಗೆ ತಿಳಿಸಿಕೊಡುತ್ತದೆ. ಅಂತಹ ಮಹಾನುಭಾವ ಆದರ ಉಲ್ಲೇಖವನ್ನು ಮಹಾಭಾರತ, ಹರಿವಂಶವು ಮಾಡುತ್ತದೆ.

ಯೇನ ಸ್ವರ್ಗಾದಿಹಾಗತ್ಯ ಮುಹೂರ್ತಂ ಪ್ರಾಪ್ಯ ಜೀವಿತಮ್ ।

ತ್ರಯೋಽನುಸಂಧಿತಾ ಲೋಕಾ ಬುದ್ಧ್ಯಾ ಸತ್ಯೇನ ಚಾನಘ ॥ (15.14 ಹರಿವಂಶಪರ್ವ)

ಆ ಒಂದೇ ಮುಹೂರ್ತದೊಳಗೆ ಪರಮಾತ್ಮನ ಧ್ಯಾನವನ್ನು ಮಾಡಿ ಸದ್ಗತಿಯನ್ನು ಹೊಂದಿದ್ದಾನೆ.

ಈ ವಂಶದಲ್ಲಿ ಈ ದಿಲೀಪನ ಮಗನಾಗಿಯೇ ಭಗೀರಥ ಬರುತ್ತಾನೆ. ಅಂಶುಮಾನ್ ಪ್ರಯತ್ನ ಮಾಡಿದ ಅವನಿಗೆ ಆಗಲಿಲ್ಲ, ದಿಲೀಪ ಪ್ರಯತ್ನ ಮಾಡುತ್ತಾನೆ ಗಂಗೆಯನ್ನು ತಂದು ಆ ಹಿಂದೆ ಅರವತ್ತು ಸಾವಿರ ಜನರೆಲ್ಲ ಏನು ಭಸ್ಮ ಆಗಿದ್ದಾರೋ ಅವರನ್ನು ಉದ್ಧಾರ ಮಾಡುವುದಕ್ಕೆ ಅವನಿಗೂ ಆಗುವುದಿಲ್ಲ. ಭಗೀರಥ ಮಾತ್ರ ಬಹಳ ಪ್ರಯತ್ನವನ್ನು ಮಾಡುತ್ತಾನೆ, ಭಗೀರಥ ಪ್ರಯತ್ನ ಅಂತ ಜಗತ್ತಿನಲ್ಲಿ ಪ್ರಸಿದ್ಧ ಅಂತಹ ಪ್ರಯತ್ನವನ್ನು ಮಾಡಿ ತಪಸ್ಸು ಮಾಡಿ ಗಂಗೆಯನ್ನು ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾನೆ. ನಾನು ಕೆಳಗಿಳಿದು ಬಂದರೆ ವೇಗದಿಂದ ಆ ರಭಸವನ್ನು ಭೂಮಿ ತಡೆದುಕೊಳ್ಳುವುದಕ್ಕೆ ಆಗುವುದಿಲ್ಲ ಅಂತ ಕೇಳಿದರೆ ಮತ್ತೆ ರುದ್ರ ದೇವರನ್ನು ಕುರಿತು ತಪಸ್ಸು ಮಾಡಿ ರುದ್ರ ದೇವರನ್ನು ಒಲಿಸಿಕೊಂಡು ಇವನ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷರಾಗಿ ಏನು ಬೇಕೋ ವರ ಕೇಳು ಅಂದರೆ ಹೇಳಿದ್ದಾನೆ ಈ ರೀತಿ ಗಂಗೆಯನ್ನು ಧಾರಣೆ ಮಾಡಿ ಭೂಮಿಗೆ ಬಿಡಬೇಕು ಅಂತ ತಥಾಸ್ತು ಅಂದಿದ್ದಾರೆ ಆದರೆ ಗಂಗೆ ಬರುವಾಗ ಸ್ವಲ್ಪ ಅಹಂಕಾರದಿಂದ ಬಂದಳು ಅಂತ ನನ್ನ ರಭಸವನ್ನು ಇವರಿಗಾದರೂ ತಡೆಯುವುದಕ್ಕೆ ಆಗುತ್ತೋ ಇಲ್ಲವೋ ಅಂತ. ಹಾಗಾದರೆ ತೋರಿಸಿ ಬಿಡುತ್ತೇನೆ ನನ್ನ ಸಾಮರ್ಥ್ಯವನ್ನು ಅಂತ ರುದ್ರ ದೇವರು ಒಂದು ತೊಟ್ಟು ನೀರು ಕೂಡ ಕೆಳಗೆ ಬೀಳದೇ ಇರುವ ಹಾಗೆ ಸಂಪೂರ್ಣವಾಗಿ ತಮ್ಮ ಜಟಾಜೂಟದಲ್ಲಿ ಧಾರಣೆ ಮಾಡಿದ್ದಾರೆ. ಏನು ಆ ರುದ್ರ ದೇವರ ಮಹಾಮಹಿಮೆ, ಅವರ ಸಾಮರ್ಥ್ಯ, ಅವರ ತಪಸ್ಸು, ಅವರ ಶಕ್ತಿ ಅದ್ಭುತವಾದ ಐಶ್ವರ್ಯ ಊಹೆ ಮಾಡುವುದಕ್ಕೆ ಸಾಧ್ಯವಿಲ್ಲ ಆ ಸಮಗ್ರವಾದ ಗಂಗೆಯ ಜಲವನ್ನೆ ತಮ್ಮ ಜಟಾಜೂಟದಲ್ಲಿ ಧಾರಣೆ ಮಾಡಿದ್ದಾರೆ. ಆಗ ಪುನಃ ಭಗೀರಥ ತಪಸ್ಸು ಮಾಡಿ, ಪ್ರಾರ್ಥನೆ ಮಾಡಿ ಕೇಳಿಕೊಂಡದ್ದಕ್ಕೆ ಆ ಗಂಗಾ ದೇವಿಯನ್ನು ಬಿಟ್ಟಿದ್ದಾರೆ ಭೂಮಿಯ ಮೇಲೆ ಬಂದಿದ್ದಾಳೆ.

ಗಂಗಾ ಗಂಗಾ ಗಂಗೇತಿ ಯೋ ಬ್ರೂಯಾತ್ ಯೋಜನಾನಾಂ ।

ಶತೈರಪಿ ಮುಚ್ಯತೇ ಸರ್ವಪಾಪೇಭ್ಯೋ ವಿಷ್ಣುಲೋಕಂ ಸ ಗಚ್ಛತಿ ॥ (ಸ್ತೋತ್ರ)

ಎಂಬುದಾಗಿ ಹೇಳಿದಂತೆ ಗಂಗಾ ಸ್ಮರಣೆ ಮಾಡುವ ಮಾತ್ರದಿಂದ ಪಾಪಗಳ ಪರಿಹಾರ ಆಗುತ್ತದೆ. ದರ್ಶನ ಮಾತ್ರದಿಂದ ಪಾಪದ ಪರಿಹಾರ ಇನ್ನು ಸ್ನಾನ ಮಾಡಿದರೆ ಏನು ಕೇಳಬೇಕು

ಅಂಬತ್ವದ್ ದರ್ಶನಾನ್ ಮುಕ್ತಿಃ ನ ಜಾನೇ ಸ್ನಾನಗಂ ಫಲಂ ।

ದರ್ಶನ ಮಾತ್ರದಿಂದಲೇ ಮೋಕ್ಷ, ಪಾಪಗಳಿಂದ ಮೋಕ್ಷ ಆಗುತ್ತದೆ, ಪಾಪಗಳ ಮೋಚನೆ ಆಗುತ್ತದೆ. ಅಂತಹ ಪರಮ ಪವಿತ್ರವಾದ ಗಂಗೆಯನ್ನು ತಂದು ಆ ಸಗರನ ಅರವತ್ತು ಸಾವಿರ ಜನ ಪುತ್ರರ ಭಸ್ಮದ ಮೇಲೆ

ಭಸ್ಮೀಭೂತಾಂಗಸಂಗೇನ ಸ್ವರ್ಯಾತಾಃ ಸಗರಾತ್ಮಜಾಃ ।

ಕಿಂ ಪುನಃ ಶ್ರದ್ಧಯಾ ದೇವೀಂ ಯೇ ಸೇವಂತೇ ಧೃತವ್ರತಾಃ ॥ (09.8.44 ಭಾಗವತ)

ಭಾಗವತ ಹೇಳುತ್ತದೆ. ಕೇವಲ ಅವರ ಭಸ್ಮದ ಮೇಲೆ ಗಂಗೆ ಹರೆದು ಹೋದದ್ದಕ್ಕೆ ಅರವತ್ತು ಸಾವಿರ ಜನರೂ ಕೂಡ ಶ್ರೇಷ್ಠವಾದ ಸದ್ಗತಿಯನ್ನು ಹೊಂದಿದ್ದಾರೆ ಇನ್ನು ಭಕ್ತಿಯಿಂದ ಬದುಕಿದ್ದಾಗ ಶ್ರದ್ಧಾಪೂರ್ವಕವಾಗಿ ಸಂಕಲ್ಪ ಪೂರ್ವಕವಾಗಿ

ಯೋಸೌ ಸರ್ವಗತೋ ವಿಷ್ಣುಃ ಚಿತ್ಸ್ವರೂಪೀ ನಿರಂಜನಃ

ಸ ಏವ ದ್ರವ ರೂಪೇಣ ಗಂಗಾಂಭೋ ನಾತ್ರ ಸಂಶಯಃ ॥

ಎಂಬಂತೆ ಕಣ ಕಣಗಳಲ್ಲಿ ಚೈತನ್ಯ ರೂಪಿಯಾಗಿ ಪರಮಾತ್ಮ ಸನ್ನಿಹಿತನಾಗಿದ್ದಾನೆ ಎಂಬ ಅನುಸಂಧಾನದಿಂದ ಸ್ನಾನ ಮಾಡುವವರಿಗೆ ಮಹಾಪುಣ್ಯ ಬರುತ್ತೆ ಅಂತ ಏನು ಹೇಳುವುದು ಎಂಬುದಾಗಿ ಭಾಗವತ ವರ್ಣನೆ ಮಾಡುತ್ತದೆ. ನೋಡಿ ಅಂದರೆ ಕಪಿಲನಾಮಕ ಪರಮಾತ್ಮ ಕೇವಲ ಇವರೆಲ್ಲರಿಗೆ ಸದ್ಗತಿಯಾಗುತ್ತದೆ ಅಂತ ಅನುಗ್ರಹ ಮಾಡಿದ್ದ, ಆಶೀರ್ವಾದ ಮಾಡಿದ್ದ ಅನ್ನೋದಕ್ಕಾಗಿ ಭಗೀರಥನಿಗೆ ಆ ಅದ್ಭುತವಾದ ತಪಸ್ಸು ಮಾಡುವ ಶಕ್ತಿ ನಿರ್ವಿಘ್ನವಾಗಿ ಆ ತಪಸ್ಸಿನ ಪರಿಸಮಾಪ್ತಿಯಾಗುವ ಯೋಗ, ಗಂಗೆ ಧರೆಗೆ ಇಳಿದು ಬರುವುದು, ರುದ್ರ ದೇವರು ಅದನ್ನು ಧಾರಣೆ ಮಾಡಿ ಪುನಃ ಭೂಮಿಗೆ ಹರಿಯುವಂತೆ ಮಾಡಿದ್ದು ಅದು ಪಾತಾಲದವರಿಗೆ ಹೋಗಿ ಆ ಸಗರನ ಪುತ್ರರ ಭಸ್ಮದ ಮೇಲೆ ಹರಿಯುವಂತೆ ಮಾಡುವಷ್ಟು ಶಕ್ತಿ ಭಗೀರಥನಿಗೆ ಬಂದದ್ದು ಇದೆಲ್ಲವೂ ಕೂಡ ಆ ಭಗವಂತನ ವಚನದ ಸಾಮರ್ಥ್ಯದಿಂದ. ಅಷ್ಟೆಲ್ಲಾ ಸಾಧನೆಯನ್ನು ಮಾಡಿ ಭಗೀರಥ ತಮ್ಮ ಪಿತೃಗಳ ಒಂದು ಉದ್ಧಾರವನ್ನು ಮಾಡಿದ್ದಾನೆ.

ಈ ವಂಶದಲ್ಲಿ ಅನೇಕ ಜನ ರಾಜರಾಗಿದ್ದಾರೆ ಋತಪರ್ಣ ಅಂತ ಋತಪರ್ಣ ರಾಜ, ನಲ ರಾಜನ ಸಖ ಅದ್ಭುತವಾದಂತಹ ಆ ಜೂಜಾಟದಲ್ಲಿ ಪರಿಜ್ಞಾನ ಇದ್ದವರು. ಆ ಋತಪರ್ಣ ಮುಂದೆ ಅವನ ವಂಶದಲ್ಲಿ ಸುದಾಸ ಅನ್ನುವ ರಾಜ ಅವನೂ ಕೂಡ ಇಂದ್ರ ದೇವರ ವಿಶೇಷವಾದಂತಹ ಸೇವೆಯನ್ನು ಮಾಡಿದವ, ಅವನ ಮಗ ಸೌದಾಸ ಅಂತ. ಆ ಸೌದಾಸ ಸಜ್ಜನನೇ ಒಂದು ದಿನ ಶ್ರಾದ್ಧಕ್ಕೆ ವಸಿಷ್ಠರನ್ನು ಕರೆದಿದ್ದಾನೆ ಬಡಿಸುವಾಗ ಅಡಿಗೆಯವ ಅವರಿಗೆ ನರಮಾಂಸವನ್ನು ಹಾಕಿದ ಇವನಿಗೆ ಗೊತ್ತಿಲ್ಲದಂತೆ, ರಾಜನಿಗೆ ಗೊತ್ತಿಲ್ಲದೇ ಯಾಕೆ ಅಂದರೆ ಇವನು ಅರಣ್ಯದೊಳಗೆ ಒಬ್ಬ ರಾಕ್ಷಸನನ್ನು ಸಂಹಾರ ಮಾಡಿದ್ದಾನೆ ಸೌದಾಸ. ಅವನ ತಮ್ಮ ತನ್ನ ಅಣ್ಣನಾದ ರಾಕ್ಷಸನನ್ನು ಕೊಂದ ಅನ್ನುವ ದ್ವೇಷದಿಂದ ಅಡಿಗೆಯವನ ವೇಷದಲ್ಲಿ ಇವನ ಮನೆಯೊಳಗೆ ಸೇರಿಕೊಂಡು ಆ ರಾಕ್ಷಸ ನರಮಾಂಸವನ್ನು ತಂದು ವಸಿಷ್ಠರಿಗೆ ಬಡಿಸಿದ್ದಾನೆ. ನಾನು ಹೀಗೆ ಮಾಡಿದರೆ ವಸಿಷ್ಠರು ನಿಶ್ಚಿತವಾಗಿಯೂ ಇವನಿಗೆ ಶಾಪ ಕೊಡುತ್ತಾರೆ ಇವನು ಸಾಯುತ್ತಾನೆ ನನ್ನ ಉದ್ದೇಶ್ಯ. ನಾನು ಸೋಲಿಸುವುದಕ್ಕೆ, ಸಾಯಿಸುವುದಕ್ಕೆ ನನಗೆ ಶಕ್ತಿ ಇಲ್ಲ ಹಾಗಾಗಿ ವಸಿಷ್ಠರ ಶಾಪದಿಂದ ಇವನನ್ನು ಕೊಲ್ಲಿಸೋಣ ಗುರುಗಳ ಶಾಪದಿಂದಲೇ ಹತನಾಗಲಿ ಅಂತ ಈ ಒಂದು ಉಪಾಯ ಮಾಡಿರುತ್ತಾನೆ ಆ ದುಷ್ಟ ರಾಕ್ಷಸ. ವಸಿಷ್ಠರು ಶಾಪ ಕೊಡುತ್ತಾರೆ ಯಜಮಾನನಾಗಿ ಆಲೋಚನೆ ಮಾಡದೇ ಈ ತರಹದ ನರಮಾಂಸವನ್ನು ನನಗೆ ಬಡಿಸಿದ್ದಾನೆ ನಿಮ್ಮ ಪಾಚಕ, ನೀನು ಅದನ್ನು ವಿಚಾರ ಮಾಡಲಿಲ್ಲ, ಮೃತನಾಗಿ ಹೋಗು ಅಂತ ಶಾಪ ಕೊಡುವುದಕ್ಕೆ, ನೀನು ರಾಕ್ಷಸನಾಗು ಅಂತ ಬರೀ ಮೃತನಾಗುವುದಲ್ಲ ಈ ಶರೀರವನ್ನು ತ್ಯಾಗ ಮಾಡಿ ರಾಕ್ಷಸನಾಗು ಅಂತ ಶಾಪ ಕೊಡುತ್ತಾರೆ. ಆಗ ಇವನಿಗೆ ಬಹಳ ಗಾಬರಿ ಆಗುತ್ತೆ, ಕ್ರೋಧವೂ ಬರುತ್ತೆ ನಾನೇನು ತಪ್ಪು ಮಾಡಿಲ್ಲ ನನಗೆ ಗೊತ್ತೇ ಇಲ್ಲವಲ್ಲ ಈ ವಿಚಾರ, ಗೊತ್ತಿಲ್ಲದೇ ಇರುವಾಗ ಅಜ್ಞಾನದಿಂದ ಈ ಘಟನೆ ನಡೆದಾಗ ನನಗೆ ಇಂತಹ ಘೋರವಾದ ಶಾಪವನ್ನು ಕೊಡಬೇಕಾಗಿತ್ತೇ, ನಾನೂ ಶಾಪ ಕೊಡುತ್ತೇನೆ ನಿಮಗೆ ಅಂತ ಹೊರಟ.

ಮದಯಂತಿ ಹೆಂಡತಿ ಕೈಹಿಡಿದಿದ್ದಾಳೆ ಏನು ಕೆಲಸ ಮಾಡುತ್ತ ಇದ್ದೀರಿ ಅವರು ನಿಮ್ಮ ಕುಲಗುರುಗಳು, ನಿಮಗಲ್ಲ ನಿಮ್ಮ ತಂದೆ, ತಾತ, ಮುತ್ತಾತ ಎಲ್ಲರಿಗೂ ಅವರು ಗುರುಗಳು ಅಂತಹ ಮಹಾನುಭಾವರು, ಕುಲಗುರುಗಳು ತಪ್ಪು ಮಾಡಿದಾಗ ಶಿಕ್ಷೆಯನ್ನು ಕೊಡೋದೆ ಅವರ ಕರ್ತವ್ಯ ಅವರು ಶಿಕ್ಷೆಯನ್ನು ಕೊಟ್ಟರೆ ಶಿರಸಾವಹಿಸಿ ಅದನ್ನು ಸ್ವೀಕಾರ ಮಾಡಬೇಕು ಆ ರೀತಿ ಪ್ರತಿ ಶಾಪವನ್ನು ಕೊಡಬಾರದು ಅಂತ. ನೋಡಿ, ಯಾರು ಹೇಳುತ್ತಾ ಇದ್ದಾರೆ ಈ ಮಾತು ಯಾರೋ ದಾರಿಯಲ್ಲಿ ಹೋಗುವವರಲ್ಲ, ದಾರಿಯಲ್ಲಿ ಹೋಗುವವರು ಏನು ಬೇಕಾದ್ದು ಉಪದೇಶ ಮಾಡುತ್ತಾರೆ ಸ್ವಂತ ಹೆಂಡತಿ ತನ್ನ ಗಂಡನಿಗೆ ರಾಕ್ಷಸನಾಗು ಅಂತ ಶಾಪವಾಗಿದೆ, ನಾಳೆಯಿಂದ ಗಂಡ ಮನೆಯಲ್ಲಿ ಇರುವುದಿಲ್ಲ ರಾಕ್ಷಸನಾಗಿ ಅರಣ್ಯಕ್ಕೆ ಹೋಗುತ್ತಾನೆ, ತಾನು ಇಲ್ಲಿ ಅನಾಥಳಾಗುತ್ತಾಳೆ, ರಾಜ್ಯ ಅನಾಥವಾಗುತ್ತದೆ ಮುಂದಿನ ಗತಿ ಏನು ಇದೆಲ್ಲ ದೊಡ್ಡ ಚಿಂತೆ ಇದೆ ಇಷ್ಟಿದ್ದರೆ ಅದು ಯಾವುದನ್ನು ಆಲೋಚನೆ ಮಾಡದೆ ಇದ್ದಂತೆ ಅವಳು ಹೇಳುತ್ತಾಳೆ ಪ್ರತಿಶಾಪವನ್ನು ಕೊಡಬೇಡ. ಅವನು ಅಂದ ನಾನು ಅಭಿಮಂತ್ರವನ್ನು ಮಾಡಿಬಿಟ್ಟಿದ್ದೇನೆ ನೀರನ್ನು ಏನು ಮಾಡಲಿ ಅಂತ ನಿಮ್ಮ ಕಾಲ ಮೇಲೆ ಹಾಕಿಕೊಳ್ಳಿರಿ ಅಂತ ಹೇಳುತ್ತಾಳೆ ಹೆಂಡತಿ, ಕಾಲ ಮೇಲೆ ಹಾಕಿಕೊಂಡರೆ ಕಾಲು ಎಲ್ಲ ಕಪ್ಪಾಗಿ ಹೋಗುತ್ತದೆ. ಹೀಗಾಗಿ ಅವನಿಗೆ ಕಲ್ಮಾಷಪಾದ ಕಲ್ಮಾಷಾಂಘ್ರಿ ಕಲ್ಮಾಷಪಾದ ಅಂತ ಹೆಸರು ಬಂತು ಸುದಾಸನ ಮಗನಾದದ್ದರಿಂದ ಸೌದಾಸ, ಕಲ್ಮಾಷಪಾದ, ಮಿತ್ರಸಹ ಅನ್ನುವ ಹೆಸರೂ ಅವನಿಗಿತ್ತು. ಮುಂದೆ ಅವನಿಗೆ ಗೊತ್ತಾಗದೆ ನನ್ನಿಂದ ನಡೆದಿದೆ ಅಂತ ಕ್ಷಮೆ ಕೇಳಿದ್ದಕ್ಕೆ ಸಂಪೂರ್ಣ ರಾಕ್ಷಸನಾಗುವುದು ಬೇಡ ಹನ್ನೆರಡು ವರ್ಷಗಳವರೆಗೆ ರಾಕ್ಷಸನಾಗಿ ಮತ್ತೆ ನೀನು ರಾಜನಾಗಬಹುದು ಅಂತ ಅವನಿಗೆ ವಿಶಾಪವನ್ನು ಕೊಟ್ಟಿದ್ದಾರೆ.

ಹನ್ನೆರಡು ವರ್ಷದೊಳಗೆ ಇವನು ಒಂದು ಕಡೆಗೆ ರಾಕ್ಷಸನಾಗಿ ತಿರುಗುವಾಗ ಒಬ್ಬ ಬ್ರಾಹ್ಮಣನನ್ನು ಭಕ್ಷಣ ಮಾಡಿಬಿಡುತ್ತಾನೆ. ನೀನು ರಾಜ, ನಮ್ಮ ದೇಶವನ್ನು ಆಳುವ ರಾಜ ನೀನು, ಶಾಪದಿಂದ ರಾಕ್ಷಸನಾಗಿದ್ದೀಯಪ್ಪಾ ಈ ತರಹ ತಿನಬೇಡ ಅಂತ ಆ ಬ್ರಾಹ್ಮಣನ ಹೆಂಡತಿ ಪರಿಪರಿಯಾಗಿ ಕೇಳಿಕೊಳ್ಳುತ್ತಾಳೆ ಆದರೆ ಆ ರಾಕ್ಷಸನಾದಾಗ ಇವನಿಗೆ ಆ ಮನುಷ್ಯ ಬುದ್ಧಿ ಇರೋದೇ ಇಲ್ಲ ತಿಂದುಬಿಡುತ್ತಾನೆ. ಶಾಪ ಕೊಡುತ್ತಾಳೆ ನೀನು ಇದೇ ರೀತಿ ಹೆಂಡತಿಯ ಸಂಗವನ್ನು ಬಯಸಿದರೆ ಮರಣವನ್ನು ಹೊಂದುತ್ತೀಯಾ ಹೀಗಾಗಿ ರಾಕ್ಷಸ ಜನ್ಮವನ್ನು ತ್ಯಾಗ ಮಾಡಿ ಹನ್ನೆರಡು ವರ್ಷಗಳಾದ ಮೇಲೆ ಮತ್ತೆ ಇವನು ರಾಜನಾದರೂ ಕೂಡ ಹೆಂಡತಿಯ ಜೊತೆಗೆ ಸಂಗ ಮಾಡುವ ಹಾಗಿರುವುದಿಲ್ಲ. ಅದು ಶಾಪವಾದದ್ದು ಹೆಂಡತಿಗೆ ಗೊತ್ತಿರುತ್ತದೆ ಹಾಗಾದರೆ ಏನು ಮಾಡಬೇಕು ಅಂತ ಮತ್ತೆ ಗುರುಗಳಿಗೇನೆ ಶರಣು ಹೋದಾಗ ವಸಿಷ್ಠರ ಅನುಗ್ರಹದಿಂದ ಅವಳಿಗೆ ಗರ್ಭಧಾರಣೆಯಾಗುತ್ತದೆ. ಏಳು ವರ್ಷಗಳು ಕಳೆದರೂ ಗರ್ಭ ಹೊರಗೇ ಬರುವುದಿಲ್ಲ. ಆಗ ಜೋರಾಗಿ ಕಲ್ಲಿನಿಂದ ಹೊಟ್ಟೆಯನ್ನು ಕುಟ್ಟಿಕೊಂಡಿದ್ದಕ್ಕೆ ಅಶ್ಮಕ ಎಂಬ ಗಂಡು ಮಗು ಹುಟ್ಟುತ್ತದೆ. ಅಶ್ಮ ಅಂದರೆ ಕಲ್ಲು, ಕಲ್ಲಿನಿಂದ ಗರ್ಭವನ್ನು ಕುಟ್ಟಿಕೊಂಡದ್ದಕ್ಕೆ ಹೊರಗೆ ಬಂತು ಅನ್ನುವುದಕ್ಕೆ ಅಶ್ಮಕ ಅಂತ ಭಾಗವತ ಹೇಳುತ್ತದೆ. ಹರಿವಂಶ ಸರ್ವಕರ್ಮ ಪ್ರಾಯಃ ಇಟ್ಟು ಕಲ್ಲಿನಿಂದ ಹೊಡೆದುಕೊಂಡದ್ದಕ್ಕೆ ಅಶ್ಮಕ ಅನ್ನುವ ಹೆಸರೂ ಬಂದಿರಬಹುದು ಅಶ್ಮಕ, ಸರ್ವಕರ್ಮ ಅನ್ನುವ ಹೆಸರಿನ ಮಗ ಹುಟ್ಟುತ್ತಾನೆ ಅಂತ ಹೇಳುತ್ತಾರೆ.

ದಿಲೀಪಸ್ತನಯಸ್ತಸ್ಯ ರಾಮಪ್ರಪ್ರಪಿತಾಮಹಃ । (15.24 ಹರಿವಂಶಪರ್ವ)

ಮುಂದೆ ಇದೇ ವಂಶದಲ್ಲಿ ಅನೇಕರು ಹುಟ್ಟುತ್ತಾ ದೀರ್ಘಬಾಹು, ದಿಲೀಪ ಅಂತ ಶ್ರೀರಾಮಚಂದ್ರನ ಪ್ರಪಿತಾಮಹನಾಗಿ ಮತ್ತೊಬ್ಬ ದಿಲೀಪ ಹುಟ್ಟುತ್ತಾನೆ. ಆ ದಿಲೀಪನಿಗೆ ರಘು ರಾಜ ಹುಟ್ಟುತ್ತಾನೆ ಅವನಿಗೇನೆ

ದೀರ್ಘಬಾಹು ಅನ್ನುವ ಇನ್ನೊಂದು ಹೆಸರು ಅಂತ ಹರಿವಂಶ ಹೇಳುತ್ತದೆ, ದೀರ್ಘಬಾಹುವಿಗೆ ರಘು ಎಂಬ ಮಗ ಹುಟ್ಟಿದ ಅಂತ ಭಾಗವತ ಹೇಳುತ್ತದೆ ಆ ಭಾಗವತದ ಮಾತನ್ನು ಅವಕಾಶ ಮಾಡಿಕೊಳ್ಳಬಹುದು.

ಖಟ್ವಾಂಗಾದ್ದೀರ್ಘಬಾಹುಶ್ಚ ರಘುಸ್ತಸ್ಮಾತ್ ಪೃಥುಶ್ರವಾಃ । (09.08.83 ಭಾಗವತ)

ಅಂತ ಭಾಗವತದ ವಾಕ್ಯ ಇದೆ. ಖಟ್ವಾಙ್ಗನಿಂದ ದೀರ್ಘಬಾಹು ಹುಟ್ಟಿದ ಅವನಿಂದ ರಘು ಹುಟ್ಟಿದ ಅಂತ ಅಲ್ಲಿ ರಘು ಎಂಬ ಹೆಸರಿನ ದೀರ್ಘಬಾಹು ಹುಟ್ಟಿದ ಅಂತ ಕದಾಚಿತ್ ಸಂಕೋಚ ಮಾಡಬಹುದು ಕಲ್ಪಭೇದನೆಯ ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯ ಇದೆ. ದೀರ್ಘಬಾಹು - ರಘು ಅವನಿಂದ ಅಜ, ಅಜನ ಮಗ ದಶರಥ, ದಶರಥನ ಮಗನೇ ಸಾಕ್ಷಾತ್ ಶ್ರೀರಾಮಚಂದ್ರ. ದಶರಥ ಸ್ವಾಯಂಭುವ ಮನುವಿನ ಅವತಾರ ಪದ್ಮ ಪುರಾಣದ ವಚನದ ಪ್ರಕಾರ, ವಾಮನ ಪುರಾಣದ ವಚನದ ಪ್ರಕಾರ ವೈವಸ್ವತ ಮನುವಿನ ಆವೇಶ ಸ್ವಾಯಂಭುವ ಮನುವಿನ ಅವತಾರ ಎಂಬುದಾಗಿ ಸತ್ಯಧರ್ಮತೀರ್ಥ ಶ್ರೀಪಾದಂಗಳವರು ತಿಳಿಸಿಕೊಟ್ಟಿದ್ದಾರೆ, ಅಂಶಾವತಾರ ನಿರ್ಣಯದಲ್ಲಿಯೂ ಕೂಡ ಪಂಡಿತಾಚಾರ್ಯರು ತಿಳಿಸಿಕೊಟ್ಟಿದ್ದಾರೆ. ಸ್ವಾಯಂಭುವ ಮನುವಿನ ಅವತಾರನಾಗಿದ್ದಾನೆ ದಶರಥ ಅಂತಹ ದಶರಥನ, ನೋಡಿ ಹಿಂದೆ ಕೇಳಿದ್ದೀರಿ ಸ್ವಾಯಂಭುವ ಮನುವಿನ ಮಹಿಮೆ ಅವನ ಸೌಭಾಗ್ಯ ಎಷ್ಟು ದೊಡ್ಡದು ಅಂತ ಸಾಕ್ಷಾತ್ ಶ್ರೀರಾಮಚಂದ್ರ ಆ ಸ್ವಾಯಂಭುವ ಮನುವಿನ ಅವತಾರನಾದ ದಶರಥನಲ್ಲಿ ಅವತಾರ ಮಾಡುತ್ತಾ ಇದ್ದಾನೆ.

ಶ್ರೀರಾಮಚಂದ್ರ ಅವತಾರ ಮಾಡಿ ವಿಶ್ವಾಮಿತ್ರರ ಯಜ್ಞವನ್ನು ಸಂರಕ್ಷಣೆ ಮಾಡಿ, ಸುಭಾವುವನ್ನು ಸಂಹಾರ ಮಾಡಿ, ಮಾರೀಚನನ್ನು ಓಡಿಸಿ, ಸೀತೆಯನ್ನು ವಿವಾಹ ಮಾಡಿಕೊಂಡು ಮುಂದೆ ತಂದೆಯ ಅಪೇಕ್ಷೆಯಂತೆ, ತಾಯಿಯ ಮಾತಿನಂತೆ ಅರಣ್ಯಕ್ಕೆ ಹೋಗಿ ಎಲ್ಲ ರಾಕ್ಷಸರನ್ನು ಸಂಹಾರ ಮಾಡಿ ಅಲ್ಲಿರುವ ಋಷಿ ಮುನಿಗಳಿಗೆ ಅಭಯವನ್ನು ನೀಡಿ, ಸೀತೆಯ ಆಕೃತಿಯನ್ನು ಅಪಹಾರ ಮಾಡಿದ ರಾವಣನನ್ನು ಸಂಹಾರ ಮಾಡಿ ಸೀತೆಯನ್ನು ಪುನಃ ಮೂಲ ಸೀತೆಯನ್ನು ಕರೆದುಕೊಂಡು ಬಂದು ಆ ಸೀತಾಕೃತಿಯನ್ನು ಪುನಃ ತನ್ನ ಲೋಕಕ್ಕೆ ಕಳಿಸಿ ಉತ್ತಮವಾದಂತಹ ರಾಜ್ಯವನ್ನು ಪರಮಾತ್ಮ ಹನ್ನೊಂದು ಸಾವಿರ ವರ್ಷದವರೆಗೆ, ನಕ್ಷತ್ರಮಾನದ ಪ್ರಕಾರ ಹದಿಮೂರು ಸಾವಿರ ವರ್ಷದವರೆಗೆ ರಾಜ್ಯವನ್ನು ಆಳಿದ್ದಾನೆ ಎಂಬ ವಿಷಯವನ್ನು ತಿಳಿಸಿಕೊಡುತ್ತಾರೆ. ಅಂತಹ ಶ್ರೀರಾಮಚಂದ್ರನ ಅವತಾರವಾದದ್ದಕ್ಕೇನೆ ಈ ಸೂರ್ಯವಂಶಕ್ಕೆ ಅಷ್ಟು ಮಹಾಮಹಿಮೆ. ಶ್ರೀಕೃಷ್ಣ ಪರಮಾತ್ಮನ ಅವತಾರವಾಗಿದೆ ಅಂತ ಚಂದ್ರವಂಶಕ್ಕೆ ಮಹಿಮೆ, ಶ್ರೀರಾಮಚಂದ್ರನ ಅವತಾರವಾದದ್ದಕ್ಕೆ ಸೂರ್ಯವಂಶದ ಮಹಿಮೆ ಬಹಳ ದೊಡ್ಡದು ಎಂಬುದಾಗಿ ವರ್ಣನೆ ಮಾಡುತ್ತಾರೆ. ಇಂತಹ ರಾಮನ ಪುತ್ರನಾಗಿ ಕುಶ ಸಾಕ್ಷಾತ್ ಇಂದ್ರ ದೇವರು ಕುಶನಾಗಿ ಅವತಾರ ಮಾಡಿದ್ದಾರೆ, ಅಗ್ನಿ ಲವನಾಗಿ ಅವತಾರ ಮಾಡಿದ್ದಾನೆ. ಆ ಲವನ ಅವತಾರವನ್ನು ಹರಿವಂಶ ಹೇಳಿಲ್ಲ ಭಾಗವತದಲ್ಲಿದೆ, ರಾಮಾಯಣದಲ್ಲಿದೆ ಯಾಕೆ ಹೇಳಿಲ್ಲ ಅನ್ನುವುದಕ್ಕೆ ಹರಿವಂಶವೇ ಕೊನೆಗೆ ನಿರ್ಣಯವನ್ನು ನೀಡುತ್ತದೆ.

ಇಕ್ಷ್ವಾಕುವಂಶಪ್ರಭವಾಃ ಪ್ರಾಧಾನ್ಯೇನೇಹ ಕೀರ್ತಿತಾಃ । (15.36 ಹರಿವಂಶಪರ್ವ)

ಎಲ್ಲರ ಹೆಸರನ್ನು ನಾವು ಹೇಳಿಲ್ಲ ಕೆಲವರ ಹೆಸರನ್ನು ಮಾತ್ರ ಹೇಳಿದ್ದೇವೆ ಅಂತ. ಹೀಗೆ ಮುಂದೆ ಆ ಕುಶನಿಂದ ವಂಶ ಮುಂದುವರಿಯುತ್ತದೆ ಅನೇಕ ಸಜ್ಜನರು ರಾಜರಾಗಿ ಅವತಾರ ಮಾಡುತ್ತಾರೆ.

ಏತೇ ವಿವಸ್ವತೋ ವಂಶೇ ರಾಜಾನೋ ಭೂರಿತೇಜಸಃ । (15.36 ಹರಿವಂಶಪರ್ವ)

ಪ್ರಜಾವಾನೇತಿ ಸಾಯುಜ್ಯಮಾದಿತ್ಯಸ್ಯ ವಿವಸ್ವತಃ ।
ವಿಪಾಪ್ಮಾ ವಿರಜಾಶ್ಚೈವ ಆಯುಷ್ಮಾಂಶ್ಚ ಭವತ್ಯುತ ॥ (15.38 ಹರಿವಂಶಪರ್ವ)

ಇವರೆಲ್ಲ ಮಹಾನುಭಾವರು ಪರಮಾತ್ಮನ ವಿಶೇಷ ಸನ್ನಿಧಾನಕ್ಕೆ ಪಾತ್ರರು ಇವರ ಹೆಸರುಗಳನ್ನು ಕೇಳಿದರೆ ಚರಿತ್ರೆಯನ್ನು ಕೇಳಿದರೆ ಸಾಕು ಪಾಪಗಳನ್ನು ಕಳೆದುಕೊಂಡು, ರಾಗದ್ವೇಷಾದಿ ದ್ವೇಷಗಳನ್ನೂ ಕಳೆದುಕೊಂಡು ಉತ್ತಮವಾದಂತಹ ಪುತ್ರ ಸೌಭಾಗ್ಯವನ್ನು ಪಡೆದು ಶ್ರೇಷ್ಠವಾದ ಸದ್ಗತಿಯನ್ನು ಹೊಂದುತ್ತಾರೆ ಎಂಬುದಾಗಿ ಈ ಎಲ್ಲ ರಾಜರ ಕಥೆಯನ್ನು ಕೇಳಿದ್ದರ ಫಲಶ್ರುತಿಯನ್ನು ತಿಳಿಸುತ್ತಾರೆ.

ಮುಂದೆ ಜನಮೇಜಯ ಪ್ರಶ್ನೆ ಕೇಳುತ್ತಾನೆ. ಹಿಂದೆ ವೈಶಂಪಾಯನರು ಹೇಳುವಾಗ

ಶ್ರಾದ್ಧದೇವಸ್ಯ ದೇವಸ್ಯ ಪ್ರಜಾನಾಂ ಪುಷ್ಟಿದಸ್ಯ ಚ । (15.37 ಹರಿವಂಶಪರ್ವ)

ಅಂತ ಸೂರ್ಯನಿಗೆ ವಿಶೇಷಣ ಕೊಟ್ಟರು. ಶ್ರಾದ್ಧದೇವನಾದಂತಹ, ಪ್ರಜೆಗಳಿಗೆ ದೇವನಾದ, ಪುಷ್ಟಿಪ್ರದನಾದ ಸೂರ್ಯನ ವಂಶವನ್ನು ಕೇಳಿದವರಿಗೆ ಇಂತಹ ಮಹಾಫಲ ಇದೆ ಅಂತ ಅದೇನು ಹೆಸರು ಹೇಳಿದಿರಿ ಶ್ರಾದ್ಧದೇವ ಅಂತ ಯಾಕೆ ಅಂತ ಕೇಳುತ್ತಾನೆ. ಜಿಜ್ಞಾಸೆ ಅಂದರೆ ಹೀಗಿರಬೇಕು ಒಬ್ಬ ವ್ಯಕ್ತಿಯ ಇಂತಹ ಸಾತ್ವಿಕವಾದ ಜಿಜ್ಞಾಸೆ ಮುಂದೆ ಬರುವಂತಹ ಸಹಸ್ರಾರು ಕೋಟಿ ಕೋಟಿ ಸಜ್ಜನರಿಗೆ ಎಂತಹ ದೊಡ್ಡದಾದ ತತ್ವಜ್ಞಾನವನ್ನು ಕೊಡುತ್ತದೆ. ಏನೋ ಹೇಳಿರಬಹುದು ಬಿಡು, ಯಾಕೋ ಹೇಳಿರಬಹುದು ಹೆಸರನ್ನ ಅಂತ ಉದಾಸೀನ ಮಾಡಲಿಲ್ಲ ಅವನು ಯಾಕೆ ಶ್ರಾದ್ಧದೇವ ಅಂತ ಕರೆದದ್ದು

ಕಥಂ ವೈ ಶ್ರಾದ್ಧದೇವತ್ವಮಾದಿತ್ಯಸ್ಯ ವಿವಸ್ವತಃ । (16.1 ಹರಿವಂಶಪರ್ವ)

ಅದರ ಬಗ್ಗೆ ನನಗೆ ತಿಳಿಸಿ ಹೇಳಬೇಕು ಅಂತ ಕೇಳುತ್ತಾನೆ, ಪಿತೃಗಳ ಸೃಷ್ಟಿಯನ್ನು ತಿಳಿಸಿ ಅವರಿಗೆ ಯಾಕೆ ಪಿತೃಗಳು ಅಂತ ಕರೆಯುತ್ತಾರೆ.

ಸ್ವರ್ಗಸ್ಥಾಃ ಪಿತರೋ ಯೇ ಚ ದೇವಾನಾಮಪಿ ದೇವತಾಃ ।
ಇತಿ ವೇದವಿದಃ ಪ್ರಾಹುರೇತದಿಚ್ಛಾಮಿ ವೇದಿತುಮ್ ॥ (16.3 ಹರಿವಂಶಪರ್ವ)

ದೇವತೆಗಳಿಗೂ ದೇವತೆಗಳವರು ಅಂತ ಅನ್ನುತ್ತಾರೆ, ದೇವತೆಗಳಿಗೂ ಪಿತೃಗಳು ಅನ್ನುತ್ತಾರೆ ಏನು ಆ ಪಿತೃಗಳ ಮಹತ್ವ, ಶ್ರಾದ್ಧ ಯಾರಿಗೋಸ್ಕರ ಮಾಡುವುದು, ಅವರ ಮಹತ್ವ ಏನು, ಅದು ಅವರಿಗೆ ಹೇಗೆ ಸೇರುತ್ತದೆ ಇದೆಲ್ಲವನ್ನು ತಿಳಿಸಿಕೊಡಬೇಕು ಅಂತ ಜನಮೇಜಯ ಪ್ರಶ್ನೆ ಕೇಳುತ್ತಾನೆ. ಅದಕ್ಕೆ ವೈಶಂಪಾಯನರು ಅನ್ನುತಾರೆ ಬಹಳ ಉತ್ತಮವಾದ ಪ್ರಶ್ನೆಯನ್ನು ಕೇಳಿದ್ದೀಯಪ್ಪ ಬಹಳ ದೊಡ್ಡದಾದ ವಿಷಯ ಇದು, ಇದರ ಬಗ್ಗೆ ಒಂದು ಪರಂಪರೆಯೇ ಇದೆ. ಹಿಂದೆ ಸನತ್ಕುಮಾರರು ಮಾರ್ಕಂಡೇಯರಿಗೆ ಈ ತತ್ವವನ್ನು ಹೇಳಿದರು, ಮಾರ್ಕಂಡೇಯ ಋಷಿಗಳು ಭೀಷ್ಮಾಚಾರ್ಯರಿಗೆ ಈ ವಿಷಯವನ್ನು ಹೇಳುತ್ತಾರೆ, ಆ ಭೀಷ್ಮಾಚಾರ್ಯರು ಯುಧಿಷ್ಠಿರನಿಗೆ ಈ ತತ್ವದ ಬಗ್ಗೆ



ಉಪದೇಶ ಮಾಡಿದ್ದಾರೆ ಅದನ್ನು ಏನು ಹೇಳಿದರೋ ಅದನ್ನೆ ನಾನು ನಿನಗೆ ಹೇಳುತ್ತೇನೆ ಅಂತ ಜನಮೇಜಯನಿಗೆ ವೈಶಂಪಾಯನರು ಹೇಳುತ್ತಾರೆ.

ಪುಷ್ಟಿಕಾಮೇನ ಧರ್ಮಜ್ಞ ಕಥಂ ಪುಷ್ಟಿರವಾಪ್ಯತೇ । (16.9 ಹರಿವಂಶಪರ್ವ)

ಯುಧಿಷ್ಠಿರ ಪ್ರಶ್ನೆ ಕೇಳುತ್ತಾನೆ ಭೀಷ್ಮಾಚಾರ್ಯರಿಗೆ ಜೀವನದಲ್ಲಿ ಉತ್ತಮವಾದ ಪುಷ್ಟಿ ಸಿಗಬೇಕು ಅಂದರೆ ಏನು ಮಾಡಬೇಕು ಅಂತ ಭೀಷ್ಮಾಚಾರ್ಯರು ಹೇಳಿದರು ಮಾಡಬೇಕಾದ ಶ್ರಾದ್ಧಾದಿ ಕರ್ಮಗಳನ್ನು ಚೆನ್ನಾಗಿ ಮಾಡಿ ಪಿತೃಗಳಿಗೆ ಸಂತೋಷವಾಗುವಂತೆ ಮಾಡಿದರೆ ಆ ಪಿತೃಗಳ ಅನುಗ್ರಹದಿಂದ ಜೀವನದಲ್ಲಿ ಎಲ್ಲವೂ ಸುಖವಾಗಿ ಇರುತ್ತೆ.

ಪಿತರೋ ಧರ್ಮಕಾಮಸ್ಯ ಪ್ರಜಾಕಾಮಸ್ಯ ಚ ಪ್ರಜಾಮ್ ।
ಪುಷ್ಟಿಕಾಮಸ್ಯ ಪುಷ್ಟಿಂ ಚ ಪ್ರಯಚ್ಛನ್ತಿ ಯುಧಿಷ್ಠಿರ ॥ (16.11 ಹರಿವಂಶಪರ್ವ)

ಧರ್ಮ ಚೆನ್ನಾಗಿ ನಡೆಯಬೇಕು, ಧರ್ಮ ಕಾರ್ಯಗಳು ಮನೆಯಲ್ಲಿ ಚೆನ್ನಾಗಿ ನಡೀತಾ ಇಲ್ಲ ಪಿತೃಗಳನ್ನು ಸಂತೋಷ ಪಡಿಸಿ ಅವರ ಅನುಗ್ರಹದಿಂದ ಧರ್ಮ ಕಾರ್ಯಗಳ ಅಭಿವೃದ್ಧಿ ಆಗುತ್ತದೆ, ಉತ್ತಮವಾದ ಪುತ್ರ ಸಂತಾನ ಬೇಕು ಪಿತೃಗಳ ಸಂತೋಷ ಪಡಿಸಿ ಪುತ್ರ ಸಂತಾನವಾಗುತ್ತದೆ, ಪುಷ್ಟಿ ಬೇಕು ಪುಷ್ಟಿ ಸಿಗುತ್ತೆ, ಏನು ಅಪೇಕ್ಷೆ ಇದೆ ಆ ಎಲ್ಲಾ ಅಪೇಕ್ಷೆಗಳನ್ನೂ ಪೂರ್ಣ ಮಾಡುವ ಸಾಮರ್ಥ್ಯವನ್ನು ಪಿತೃಗಳಿಗೆ ಸಕಲ ಜಗತ್ತಿಗೆ ಪಿತಾ ಜನಿತಾ ಅಂತ ಅನ್ನಿಸಿಕೊಂಡ ಪರಮಾತ್ಮ ಕೊಟ್ಟಿದ್ದಾನೆ. ಆ ಪಿತೃ ದೇವತೆಗಳಲ್ಲಿ ಅಂತರ್ಯಾಮಿಯಾಗಿ ಇದ್ದು ಭಗವಂತ ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ರೂಪಗಳಿಂದ ಸನ್ನಿಹಿತನಾಗಿದ್ದು ಆ ಎಲ್ಲ ಇಷ್ಟಾರ್ಥಗಳನ್ನು ಪೂರ್ಣವನ್ನು ಮಾಡುತ್ತಾನೆ ಅದಕ್ಕೋಸ್ಕರ ಪಿತೃ ದೇವತೆಗಳ ಆರಾಧನೆಯನ್ನು ಮಾಡಬೇಕು ಅಂತ ಭೀಷ್ಮಾಚಾರ್ಯರು ಯುಧಿಷ್ಠಿರರನಿಗೆ ಹೇಳುತ್ತಾರೆ. ಆಗ ಯುಧಿಷ್ಠಿರ, ಯುಧಿಷ್ಠಿರ ಯಮಧರ್ಮನ ಅವತಾರ ಧರ್ಮರಾಜ ಅವನಿಗೆಲ್ಲಾ ಗೊತ್ತು ಈ ವಿಷಯಗಳು ಸಾಕ್ಷಾತ್ ಪಿತೃಗಳಿಗೆ ನಿಯಾಮಕನಾದ ದೇವತೆ ಅವನು ಯಮ. ಅಂತಹ ದೇವತೆಗೆ ಪಿತೃಗಳ ಬಗ್ಗೆ ಚೆನ್ನಾಗಿ ಗೊತ್ತಿಲ್ಲ ಅಂತ ಹೇಳುವುದಕ್ಕೆ ಸಾಧ್ಯವೋ ನಮ್ಮಂಥವರಿಗೋಸ್ಕರ ಮುಂದೆ ಬರುವ ಅಜ್ಞಾನಿಗಳಿಗೆ ಇದರ ಬಗ್ಗೆ ಸರಿಯಾದ ತಿಳುವಳಿಕೆ ಬೇಕು ಅಂತ ಭೀಷ್ಮಾಚಾರ್ಯರಿಗೆ ಪ್ರಶ್ನೆಯನ್ನು ಕೇಳುತ್ತಾನೆ. ಪಿತೃಗಳೆಲ್ಲಾ ನರಕದಲ್ಲಿ ಇರುತ್ತಾರೆ, ಏನೇನೋ ಪಾಪಗಳನ್ನು ಮಾಡಿರುತ್ತಾರೆ ಪಿತೃ, ಪಿತಾಮಹ, ಪ್ರಪಿತಾಮಹಾದಿಗಳು ಅವರೆಲ್ಲಾ ನರಕದೊಳಗೆ ಇದ್ದು ತಾವೇ ಒದ್ದಾಡುತ್ತ ಇರುತ್ತಾರೆ, ದುಃಖದಲ್ಲಿ ಇರುತ್ತಾರೆ ನಾವು ಅವರ ಪೂಜೆ ಮಾಡಿದರೆ ನಮಗೆ ಸುಖ ಕೊಡುವಂತಹ ಶಕ್ತಿ ಸಾಮರ್ಥ್ಯಗಳು ಅವರಿಗೆಲ್ಲಿಂದ.

ವರ್ತನ್ತೇ ಪಿತರಃ ಸ್ವರ್ಗೇ ಕೇಷಾಂಚಿನ್ನರಕೇ ಪುನಃ । (16.12 ಹರಿವಂಶಪರ್ವ)

ಇನ್ನು ಕೆಲವರು ಬೇರೆ ಬೇರೆ ಕಡೆಗೆ ಹುಟ್ಟಿ ಬಂದಿರುತ್ತಾರೆ, ತಮ್ಮ ತಮ್ಮ ಕರ್ಮಫಲವನ್ನು ಭೋಗ ಮಾಡುತ್ತ ಇರುತ್ತಾರೆ, ಶ್ರಾದ್ಧವನ್ನು ಮಾಡಿದರೆ ಅವರಿಗೆ ಸೇರುವುದಾದರೂ ಹೇಗೆ, ಸೇರಿದರೆ ಅವರು ತೃಪ್ತರಾಗಿ ಫಲ ಕೊಡುವ ಸಾಮರ್ಥ್ಯವನ್ನು ಎಲ್ಲಿ ಪಡೆದುಕೊಂಡಿರುತ್ತಾರೆ. ಪಿತೃಗಳ ಸೇವೆಯನ್ನು ಮಾಡಿದರೆ ನಿಮ್ಮ ಉದ್ಧಾರವಾಗುತ್ತದೆ, ಎಲ್ಲಾ ಪುಷ್ಟಿ ಸಿಗುತ್ತೆ, ಸುಖವಾಗುತ್ತೆ ಅಂತ ಹೇಳುತ್ತೀರಲ್ಲ ಇದನ್ನು ಹೇಗೆ ನಂಬುವುದು. ಅದಕ್ಕೆ ಭೀಷ್ಮಾಚಾರ್ಯರು ಉತ್ತರ

ಕೊಡುತ್ತಾರೆ, ನೋಡಪ್ಪ ಯುಧಿಷ್ಠಿರ ಇದರ ಬಗ್ಗೆ ಹಿಂದೆ ಒಂದು ಪ್ರಸಂಗ ನಡೆಯಿತು ನಿನಗೆ ಹೇಳುತ್ತೇನೆ ಕೇಳು. ನಾನು ಸ್ವತಃ ನಮ್ಮ ತಂದೆಯಾದ ಶಂತನುವಿನ ಶ್ರಾದ್ಧವನ್ನು ಮಾಡುತ್ತ ಇದ್ದೆ. ತಂದೆಯಾದ ಶಂತನುವಿನ ಶ್ರಾದ್ಧವನ್ನು ನಾನು ಮಾಡುವಾಗ ಎಲ್ಲಿ ದರ್ಭದ ಮೇಲೆ ಇವನ ಪಿಂಡವನ್ನು ಇಡಬೇಕೋ ಆ ಸ್ಥಳವನ್ನ ಭೇಧನ ಮಾಡಿ ಒಳಗನಿಂದ ಕೈ ಬಂದು ತನ್ನ ಕೈಗಳನ್ನು ಮೇಲೆತ್ತಿ ನನ್ನ ಕೈಯಲ್ಲಿ ಪಿಂಡವನ್ನು ಕೊಟ್ಟುಬಿಡು ಅಂತ ಶಂತನು ಕೈಮಾಡಿ ಕೇಳುತ್ತಾನೆ. ಆ ಕೈ ನೋಡಿದರೆ ತನ್ನ ತಂದೆಯ ಕೈ ಅಂತ ಗುರುತು ಸಿಗುತ್ತದೆ ಇವನಿಗೆ ಅದೇ ತರಹದ ದಷ್ಟ ಪುಷ್ಟವಾದ ಕೆಂಪಾದ ಕೈ, ಅವನು ನನ್ನ ತಲೆಯ ಮೇಲೆ ಕೈಇಟ್ಟು ಆಶೀರ್ವಾದವನ್ನು ಮಾಡುತ್ತಾ ಇದ್ದ, ಉಣ್ಣುವುದಕ್ಕೆ ತಿನ್ನುವುದಕ್ಕೆ ಕೈಯೆತ್ತಿ ಕೊಡುತ್ತ ಇದ್ದ ಆ ಸಂದರ್ಭದಲ್ಲಿ ನನ್ನ ತಂದೆಯ ಕೈಯನ್ನು ನೋಡಿದ್ದು ಚೆನ್ನಾಗಿ ನನಗೆ ನೆನಪು. ಭೀಷ್ಮಾಚಾರ್ಯರು ಅನ್ನುತ್ತಾರೆ ನಾನು ಕೊಡುವುದಿಲ್ಲ ಅಂತ ಏನು ತಂದೆ ನಾನು ಸ್ವತಃ ಬಂದು ಕೈಚಾಚಿ ಬೇಡುತ್ತಾ ಇದ್ದೇನೆ ಯಾರಿಗೋಸ್ಕರ ಶ್ರಾದ್ಧ ಮಾಡುತ್ತಾ ಇದ್ದೀ ಅಂತಹ ನನಗೆ ನೀನು ಪಿಂಡ ಕೊಡುವುದಿಲ್ಲ ಅಂತೀಯಾ ಅಂತ. ಕೊಡುವುದಿಲ್ಲ, ಯಾಕೆ ಶಾಸ್ತ್ರ ಹೇಳಿದೆ ದರ್ಭದ ಮೇಲೆ ಪಿಂಡ ಇಡಬೇಕು ಅಂತ ಶಾಸ್ತ್ರದ ವಚನ ಮುಖ್ಯ ನಿನ್ನ ಮಾತು ಮುಖ್ಯ ಅಲ್ಲ ನನಗೆ. ನಿನಗೇ ಪಿಂಡ ಕೊಡುವುದು ಆದರೆ ದರ್ಭದ ಮೇಲೆ, ವಿಷ್ಣು ಪಾದದ ಮೇಲೆ ಹೊರತು ನಿನ್ನ ಕೈಯಲ್ಲಿ ಅಲ್ಲ, ಅದು ನಿಮಗೆ ಯಾವ ರೀತಿ ಸೇರಿಸಬೇಕೋ ಹಾಗೆ ಪಿತೃ ದೇವತೆಗಳು ನಿಮಗೆ ಸೇರಿಸುತ್ತಾರೆ ಆದರೆ ನಾನು ನಿನ್ನ ಕೈಯಲ್ಲಿ ಕೊಡುವುದಿಲ್ಲ ಅಂತ. ಬಹಳ ಸಂತೋಷವಾಗುತ್ತದೆ ಶಂತನುವಿಗೆ. ಪರೀಕ್ಷೆ ಮಾಡುವುದಕ್ಕೆ ಬಂದಿದ್ದ ಅವನು. ನಿಜವಾದ ಧರ್ಮಶಾಸ್ತ್ರದ ತಿಳುವಳಿಕೆ ಇವನಿಗೆ ಇದೆ ಗೊತ್ತು, ಐದುನೂರಾ ಇಪ್ಪತ್ತುನಾಲ್ಕು ವರ್ಷ ಅಧ್ಯಯನ ಮಾಡಿದ್ದಾರೆ ಭೀಷ್ಮಾಚಾರ್ಯರು, ತಿಳುವಳಿಕೆ ಕಡಿಮೆ ಇರಲಿಲ್ಲ ಆದರೆ ಆ ಧರ್ಮದಲ್ಲಿ ನಿಷ್ಠೆ ಇದೆಯಾ ಅಂತ. ಪ್ರತ್ಯಕ್ಷಕ್ಕೆ ಬಹಳ ಮಹತ್ವ ಕೊಡುವುದು ಯಾವ ತಂದೆಗೆ ಶ್ರಾದ್ಧ ಮಾಡಬೇಕೋ ಆ ತಂದೆ ಪ್ರತ್ಯಕ್ಷವಾಗಿ ಬಂದು ಕೇಳುತ್ತ ಇದ್ದಾನೆ ಅಂದಮೇಲೆ ಅಂತಹ ದೃಗ್ಗೋಚರನಾದಂತಹ ತಂದೆಗೆ ನಾನು ಕೈಯಲ್ಲಿ ಪಿಂಡವನ್ನು ಕೊಡುವುದು ಉತ್ತಮ ಅಲ್ಲವಾ ಅಂತನ್ನುವ ಯುಕ್ತಿವಾದದಿಂದ ಕೈಯಲ್ಲಿ ಕೊಟ್ಟು ಬಿಡುತ್ತಾನೋ, ಶಾಸ್ತ್ರವನ್ನು ನಂಬುತ್ತಾನೋ ಅಂತ. ಆ ಪರೀಕ್ಷೆಯಲ್ಲಿ ನೀನು ಉತ್ತೀರ್ಣರಾಗಿದ್ದೀ ದೃಗ್ಗೋಚರವಾದ ಕೈಯಲ್ಲಿಯೂ ನೀನು ಪಿಂಡವನ್ನು ಇಡದಂತೆ, ಶಾಸ್ತ್ರದ ಮೇಲೆ ನಂಬಿಕೆಯನ್ನು ಇಟ್ಟಿದ್ದೀಯಲ್ಲ ಬಹಳ ಸಂತೋಷ ಯಾಕೆ ಅಂದರೆ ನೀವು ಶಾಸ್ತ್ರವನ್ನು ಚೆನ್ನಾಗಿ ಅನುಷ್ಠಾನದಲ್ಲಿ ತಂದರೆ ಪ್ರಜೆಗಳೆಲ್ಲ ತರುತ್ತಾರೆ.

ಪ್ರಮಾಣಂ ಯದ್ಧಿ ಕುರುತೇ ಧರ್ಮಾಚಾರೇಷು ಪಾರ್ಥಿವಃ ।
ಪ್ರಜಾಸ್ತದನುವರ್ತನ್ತೇ ಪ್ರಮಾಣಾಚರಿತಂ ಸದಾ ॥ (16.26 ಹರಿವಂಶಪರ್ವ)

'ನೈಶಕಲ್ಪೇ ವಿಧಿರ್ ದೃಷ್ಟಃ' ಭೀಷ್ಮಾಚಾರ್ಯರು ಅನ್ನುತ್ತಾರೆ. ಯಾವ ಸೂತ್ರಗಳಲ್ಲಿ, ಯಾವ ಧರ್ಮ ಶಾಸ್ತ್ರಗಳಲ್ಲಿಯೂ ಕೂಡ ಈ ತರಹ ವಿಧಾನ ಇಲ್ಲ ಕೈಯಲ್ಲಿ ಕೊಡಬೇಕು ಅಂತ ನಾನು ಕೊಡುವುದಿಲ್ಲ ಅಂತ. ಆ ಕಲ್ಪ ಶಾಸ್ತ್ರದಲ್ಲಿ, ಸೂತ್ರಗಳಲ್ಲಿ ಈ ರೀತಿ ವಿಧಾನ ಇಲ್ಲ ಅಂತ ನೀನು ಅಂದೆಯಲ್ಲ ಇದು ಬಹಳ ದೊಡ್ಡ ಮಾತು ಇದನ್ನು ಎಲ್ಲ ಪ್ರಜೆಗಳು ಅನುಸರಣೆ ಮಾಡುತ್ತಾರೆ ಹೀಗೆ ನೀನು ಧರ್ಮ ನಿಷ್ಠನಾಗಿ ಇರಬೇಕು ಬಹಳ ಸಂತೋಷ. ಸರಿ, ನಿನಗೆ ನಾನು ವರ ಕೊಡುತ್ತೇನೆ, ನೀನೇನು ಕೇಳಿಲ್ಲ ನಾನೇ ವರ ಕೊಡುತ್ತೇನೆ **'ಸ್ವಚ್ಛಂದ ಮೃತ್ಯುತ್ವ ವರ'** ನಿನಗೆ ಬೇಕಾದಾಗ ಮೃತ್ಯುವನ್ನು ಕರೆಯಬಹುದು ನೀನು, ಮೃತ್ಯು ನಿನ್ನನ್ನು ಬಂದು ಸೆಳೆದುಕೊಂಡು ಹೋಗುವುದಿಲ್ಲ, ನೀನು ಬೇಕಾದಾಗ ಸಾಯಬಹುದು **'ಸ್ವಚ್ಛಂದ ಮೃತ್ಯುತ್ವ ವರ'** ಎಂತಹ ವರ ಅದು ಅಂದರೆ ನೀವು ಅನ್ನಬಹುದು ಬೇರೆಯವರಿಗೆ ಬದಲು ನಮಗೆ ಈ ವರ ಸಿಕ್ಕಿಬಿಟ್ಟಿದ್ದರೆ ಚೆನ್ನಾಗಿ ಇರುತ್ತಿತ್ತು ಅಂತ. ಅವರು ನೋಡಿ ತಮ್ಮ ಅವತಾರ



ಕಾರ್ಯ ಎಷ್ಟೋ ಅಷ್ಟಿದ್ದಾರೆ ಆಮೇಲೆ **'ಸ್ವಚ್ಛಂದ ಮೃತ್ಯುತ್ವ ವರ'** ಇದೆ ಅಂತ ಸುಮ್ಮನೆ ಇಲ್ಲ ತಮ್ಮ ಅವತಾರ ಕಾರ್ಯ ಮುಗಿದ ಮೇಲೆ ಯಾವುದಕ್ಕೋಸ್ಕರ ಅವತಾರ ಮಾಡಿದ್ದರೋ ಆ ಕಾರ್ಯ ಮುಗಿದ ಮೇಲೆ ಮೃತ್ಯುವನ್ನು ಸ್ವಾಗತ ಮಾಡಿ ಉತ್ತರಾಯಣ ಬಂದಾಗ ಮೃತ್ಯುವನ್ನು ಹೊಂದಿದ್ದಾರೆ ಭೀಷ್ಮಾಚಾರ್ಯರು. ಹಾಗೆ ತಾವು ಕೊನೆವರೆಗೂ ಇದ್ದು ಬಿಡುವುದಿಲ್ಲ ನಾನು ವರ ಕೊಟ್ಟಿದ್ದೇನೆ ಅಂತ ತಮ್ಮ ಕಾರ್ಯಮುಗಿದಮೇಲೆ ಅವರು ಹೊರಡುತ್ತಾರೆ ಅನ್ನುವುದು ಗೊತ್ತಿತ್ತು ಶಂತನುವಿಗೆ ಅನ್ನುವುದಕ್ಕೆ ಆ ವರವನ್ನು ಕೊಟ್ಟಿದ್ದಾನೆ ಶಂತನು ಮಹಾನುಭಾವ ಮಹಾತಪಸ್ವಿ ಅವನು. ಭಾರೀ ಭಾರೀ ರೋಗಗಳಿಂದ ಬಳಲುವ ಜನರಿಗೆ ಸುಮ್ಮನೆ ಹೀಗೆ ಕೈ ಮುಟ್ಟಿದರೆ ಸಾಕಾಗಿತ್ತು ಅವರ ರೋಗಗಳ ಪರಿಹಾರ ಆಗುತ್ತದೆ ಅಂತಹ ಮಹಾನುಭಾವರು. ವರುಣ ಈ ಮೊದಲೇ ಕೇಳಿದ್ದೀರಿ ಎಲ್ಲ ರೋಗಗಳ ಪರಿಹಾರ ಮಾಡುವ ಸಾಮರ್ಥ್ಯ ವರುಣನಿಗೆ ಅಂತಹ ಆ ವರುಣನ ಅವತಾರನಾದದ್ದರಿಂದ ಅಂತಹ ಮಹಾಸಾಮರ್ಥ್ಯ ಆ ವರುಣನಿಗೆ ಅನ್ನುವುದಕ್ಕೋಸ್ಕರ ಆ ತರಹದ ವರವನ್ನು ದ್ಯುನಾಮಕ ವಸುವಿಗೆ ಅರ್ಥಾತ್ ಭೀಷ್ಮಾಚಾರ್ಯರಿಗೆ ಅವನು ಕೊಟ್ಟಿದ್ದಾನೆ ಸ್ವಚ್ಛಂದ ಮೃತ್ಯುತ್ವ ವರವನ್ನು.

ಇನ್ನೇನಾದರೂ ಬೇಕಾದರೆ ವರ ಕೇಳು ಅನ್ನುತ್ತಾನೆ. ಇನ್ನೇನು ಬೇಕು ನೀನು ದರ್ಶನವನ್ನು ಕೊಟ್ಟಿದ್ದೀಯಾ, ಎಲ್ಲ ಒಳ್ಳೆಯದಾಗಲಿ ಅಂತ ಆಶೀರ್ವಾದ ಮಾಡಿದ್ದೀಯಾ ಸಾಕು ವಿಶೇಷವಾಗಿ ಧರ್ಮಾನುಷ್ಠಾನ ಮಾಡುವ ವಿಷ್ಣು ಭಕ್ತಿಯನ್ನು ಮಾಡುವಂತಹ ವರವನ್ನು ಕೊಟ್ಟರೆ ಸಾಕು ಇನ್ನೇನು ನನಗೆ ಬೇಕಾಗಿಲ್ಲ ಸರಿ ತಥಾಸ್ತು ಅಂತ ಕೊಟ್ಟಿದ್ದಾನೆ. ಆದರೆ ಒಂದು ಜಿಜ್ಞಾಸೆ ಇದೆ ನನ್ನ ಪ್ರಶ್ನೆಗೆ ಉತ್ತರ ಕೊಡು ಅಂತ ಭೀಷ್ಮಾಚಾರ್ಯರು ಶಂತನುವಿಗೆ ಕೇಳುತ್ತಾ ಇದ್ದಾರೆ. ಶಂತನು ಕಾಣಿಸುತ್ತಾ ಇಲ್ಲ ಕೇವಲ ಕೈ ಹೊರಗೆ ಬಂದಿದೆ ಅಷ್ಟೆ ಮಾತನಾಡುತ್ತಾ ಇದ್ದಾನೆ ಕೇಳಿಸುತ್ತಾ ಇದೆ ಅಂತರ್ಹಿತನಾದ ಶಂತನುವಿಗೇನೆ ಪ್ರಶ್ನೆ ಕೇಳುತ್ತಾ ಇದ್ದಾರೆ ಪಿತೃ ದೇವತೆಗಳ ಬಗ್ಗೆ ನನಗೆ ಚೆನ್ನಾಗಿ ಪರಿಚಯವನ್ನು ಮಾಡಿಸಿಕೊಡು. ದೇವತೆಗಳಿಗಿಂತಲೂ ಪಿತೃಗಳು ಉತ್ತಮರು ಅಂತ ಕೆಲವು ಕಡೆಗೆ ಅನ್ನುತ್ತಾರೆ, ದೇವತೆಗಳೇ ಪಿತೃಗಳು, ಪಿತೃಗಳೇ ದೇವತೆಗಳು ಅಂತ ಕೆಲವು ಕಡೆಗೆ ಹೇಳುತ್ತಾರೆ, ಈ ಪಿತೃ, ಪಿತೃಪಿತಾಮಹ, ಪ್ರಪಿತಾಮಹಾದಿಗಳು ಯಾರು ಮೃತರಾಗಿರುತ್ತಾರೋ ಇವರಿಗೂ ಆ ದೇವತೆಗಳಿಗೂ ಏನು ಸಂಬಂಧ, ಇವರೇನಾ ಪಿತೃಗಳು ಹೀಗೆಲ್ಲ ನನಗೆ ಸಂಶಯಗಳಿವೆ ಇದರ ಬಗ್ಗೆ ನೀನು ಉತ್ತರವನ್ನು ಹೇಳಬೇಕು ಅಂದಾಗ ಪಿತೃ ದೇವತೆಗಳು ಅಂದರೆ ಇವರಲ್ಲ ತಂದೆ, ಪಿತೃ, ಪಿತೃಪಿತಾಮಹ, ಪ್ರಪಿತಾಮಹಾದಿಗಳು ಬೇರೆ, ಪಿತೃ ದೇವತೆಗಳು ಅಂದರೆ ಅವರೆಲ್ಲ ಬ್ರಹ್ಮ ದೇವರಿಂದ ಹುಟ್ಟಿದ್ದಾರೆ.

ಆದಿದೇವಸುತಾಸ್ತಾತ ಪಿತರೋ ದಿವಿ ದೇವತಾಃ ॥ (16.40 ಹರಿವಂಶಪರ್ವ)

ಆದಿ ದೇವರಾದ ಬ್ರಹ್ಮ ದೇವರಿಂದ ಅವರೆಲ್ಲ ಜನಿಸಿದವರು. ಈ ಪಿತೃ ದೇವತೆಗಳ ಪ್ರೀತಿಗಾಗಿ ಪಿತೃ ಕಾರ್ಯವನ್ನು ದೇವತೆಗಳು ಅಸುರರು ಮನುಷ್ಯರು ಯಕ್ಷರು ಸರ್ಪಗಳು ನಾಗಗಳು ಕಿನ್ನರರು ಗಂಧರ್ವರು ಎಲ್ಲರೂ ಆ ಪಿತೃ ದೇವತೆಗಳ ಆರಾಧನೆಯನ್ನು ಮಾಡುತ್ತಾರೆ. ಆ ಪಿತೃ ದೇವತೆಗಳನ್ನು ಸಂತೋಷ ಪಡಿಸಿದರೆ ಆ ಪಿತೃ ದೇವತೆಗಳು ಈ ಪಿತೃ, ಪಿತೃಪಿತಾಮಹ, ಪ್ರಪಿತಾಮಹರು ಏನು ಇರುತ್ತಾರೋ ನಿಮಗೆ ಅವರನ್ನು ಸಂತೋಷ ಪಡಿಸುತ್ತಾರೆ, ಇವರೆಲ್ಲಾ ಆ ಸೋಮನನ್ನು ಸಂತೋಷ ಪಡಿಸುತ್ತಾರೆ ಸೋಮ ಎಲ್ಲ ಜಗತ್ತಿಗೆ ಉತ್ತಮವಾದಂತಹ ವನಸ್ಪತಿ ಔಷಧಿಗಳನ್ನು ಕೊಟ್ಟು ಸುಭಿಕ್ಷೆಯನ್ನು ಕೊಡುತ್ತಾನೆ ಎಲ್ಲರನ್ನು ಸಂತೋಷ ಪಡಿಸುತ್ತಾನೆ ಹೀಗೆ ಇದು ಚಕ್ರ ಇದೆ. ಆದ್ದರಿಂದ ಪಿತೃ ದೇವತೆಗಳ ಆರಾಧನೆಯನ್ನು ಮಾಡಬೇಕಪ್ಪ ಆ ಪಿತೃ ದೇವತೆಗಳ ಸಂತೋಷದಿಂದ ಜಗತ್ತಿಗೆಲ್ಲ ಸುಭಿಕ್ಷೆ ಆಗುತ್ತದೆ, ಮಂಗಲವಾಗುತ್ತದೆ, ಶ್ರೇಯಸ್ಸು ಆಗುತ್ತದೆ.

ತೇ ತೇ ಶ್ರೇಯೋ ವಿಧಾಸ್ಯನ್ತಿ ಸರ್ವಕಾಮ ಫಲಪ್ರದಾಃ ॥ (16.43 ಹರಿವಂಶಪರ್ವ)

ಆಗ ಇವರಿಗೆ ಜಿಜ್ಞಾಸೆ ಪೂರ್ಣ ಶಾಂತವಾಗಲಿಲ್ಲ ಇನ್ನಷ್ಟು ವಿಸ್ತೃತವಾಗಿ ನನಗೆ ಪಿತೃ ದೇವತೆಗಳ ಬಗ್ಗೆ ಎಲ್ಲ ಕೇಳಬೇಕು ಅಂತ ಇದೆ ಅಂತ ಹೇಳಿದಾಗ ನಾನು ಹೆಚ್ಚು ಹೇಳುವುದಿಲ್ಲ ಈಗ ನಿನ್ನ ಶ್ರಾದ್ಧಕ್ಕೆ ಅಂತ ಇಲ್ಲಿ ಬ್ರಾಹ್ಮಣರು ಬಂದಿದ್ದಾರಲ್ಲ, ಯಾರು ಮಾರ್ಕಂಡೇಯರೇ ಬಂದಿದ್ದಾರಲ್ಲ ಅವರು ನಿನಗೆ ಇದರ ಬಗ್ಗೆ ಉಪದೇಶ ಮಾಡುತ್ತಾರೆ. ಹೆಚ್ಚಿನ ವಿಚಾರಗಳನ್ನೆಲ್ಲ ಮಾರ್ಕಂಡೇಯರಿಂದ ನೀನು ತಿಳಿದುಕೊಳ್ಳಬೇಕು ಅಂತ ಭೀಷ್ಮಾಚಾರ್ಯರಿಗೆ ಶಂತನು ತಾನು ಹೇಳಿ ಅಂತರ್ಧಾನ ಹೊಂದಿದ್ದಾನೆ. ಆ ಪಿತೃ ದೇವತೆಗಳ ಬಗ್ಗೆ ಸ್ವಲ್ಪ ಪರಿಚಯವನ್ನು ಕೊಟ್ಟು ಜಿಜ್ಞಾಸೆಯನ್ನು ಇನ್ನಷ್ಟು ಕೆರಳಿಸಿ ತಾನು ಅಂತರ್ಹಿತನಾಗಿದ್ದಾನೆ ಮುಂದಿನ ವಿಚಾರ ಎಲ್ಲ ನಿನ್ನ ಗುರುಗಳಾದ ಇಲ್ಲಿ ಸನ್ನಿಹಿತರಾದ ಮಾರ್ಕಂಡೇರಿಂದ ನೀನು ತಿಳಿದುಕೊಳ್ಳು ಅಂತ ಹೇಳಿದ್ದಾರೆ. ಮುಂದೆ ಮಾರ್ಕಂಡೇಯರು ತಮಗೆ ಸನತ್ಕುಮಾರರು ಏನೆಲ್ಲ ಉಪದೇಶ ಮಾಡಿದರೋ ಆ ಎಲ್ಲ ವಿಚಾರಗಳನ್ನು ಭೀಷ್ಮಾಚಾರ್ಯರಿಗೆ ಉಪದೇಶ ಮಾಡುತ್ತಾರೆ ಅನ್ನುವುದನ್ನು ತಿಳಿಸುತ್ತಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

॥ ಶ್ರೀ ದಿಗ್ವಿಜಯ ರಾಮೋ ವಿಜಯತೇ ॥

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಹರಿವಂಶಪರ್ವ-8

* * *

ಭೀಷ್ಮಾಚಾರ್ಯರಿಗೆ ಮಾರ್ಕಂಡೇಯರು ಉಪದೇಶ ಮಾಡಿದ ಪಿತೃ ದೇವತೆಗಳ ಮಹಿಮೆಯನ್ನು ಭೀಷ್ಮಾಚಾರ್ಯರು ಯುಧಿಷ್ಠಿರನಿಗೆ ತಿಳಿಸುತ್ತಾ ಇದ್ದಾರೆ. ಅದನ್ನು ವೈಶಂಪಾಯನರು ಜನಮೇಜಯನಿಗೆ ಹೇಳುತ್ತಾ ಇದ್ದಾರೆ. ಮಾರ್ಕಂಡೇಯರು ಭೀಷ್ಮಾಚಾರ್ಯರಿಗೆ ತಮ್ಮ ಪೂರ್ವ ವೃತ್ತಾಂತವನ್ನು ತಿಳಿಸುತ್ತಾರೆ. ಪಿತೃಗಳ ವಿಶೇಷವಾದ ಅನುಗ್ರಹದಿಂದ ಮೃಕಂಡು ಋಷಿಗಳ ವಿಶೇಷವಾದ ಕೃಪೆಯಿಂದ ನಾನು ದೀರ್ಘವಾದ ಆಯುಷ್ಯವನ್ನು ಪಡೆದಿದ್ದೇನೆ.

ಅಹಂ ಪಿತೃಪ್ರಸಾದಾದ್ ವೈ ದೀರ್ಘಾಯುಷ್ಟ್ವಮವಾಪ್ತವಾನ್ । (17.3 ಹರಿವಂಶಪರ್ವ)

ಇವರ ತಂದೆ ಮೃಕಂಡು ಋಷಿಗಳು ಇವರಿಗೆ ಹೇಳಿದ್ದರು ಯಾರು ಆಶ್ರಮಕ್ಕೆ ಹಿರಿಯರು ಬಂದರೂ, ಜ್ಞಾನಿಗಳು ಬಂದರೂ ಅವರಿಗೆ ಸಾಷ್ಟಾಂಗ ಪ್ರಣಾಮಗಳನ್ನು ಮಾಡಿ ಅವರ ಅನುಗ್ರಹವನ್ನು, ಆಶೀರ್ವಾದವನ್ನು ಪಡೆಯಬೇಕು ಅಂತ ಬಂದ ಜ್ಞಾನಿಗಳಿಗೆ, ಋಷಿಗಳಿಗೆ ಇವರು ತಪ್ಪದೇ ಚಿಕ್ಕ ಬಾಲಕರಾಗಿ ಇರುವಾಗ ನಮಸ್ಕಾರವನ್ನು ಮಾಡುತ್ತಾ ಇದ್ದು ಅವರ ಆಶೀರ್ವಾದವನ್ನು ಪಡೆಯುತ್ತಾ ಇದ್ದರು. ಆ ಋಷಿಗಳು ನೋಡುತ್ತಾರೆ ಇವನಿಗಾದರೋ ಅಲ್ಪ ಆಯುಷ್ಯ ಇದೆ ಹೀಗಿರುವಾಗ ನಾವೇನೋ ದೀರ್ಘಾಯುಷ್ಯವಂತನಾಗು ಆಯುಷ್ಮಾನ್ ಭವ ಎಂಬುದಾಗಿ ನಾವು ಆಶೀರ್ವಾದವನ್ನು ಮಾಡಿದ್ದೇವೆ ಅಂತ ಬ್ರಹ್ಮ ದೇವರಿಗೆ ಹೋಗಿ ಪ್ರಾರ್ಥನೆ ಮಾಡಿದ್ದಾರೆ ದೀರ್ಘಯುಷ್ಯ ಬರುವಂತೆ ಮಾಡಿ ಅವನಿಗೆ ಅಲ್ಪಾಯುಷ್ಯವಿದೆ ಅಂತ. ಅವನು ಎಲ್ಲ ಜ್ಞಾನಿಗಳಿಗೆ ವಿಶೇಷವಾಗಿ ಭಕ್ತಿಯಿಂದ ನಮಸ್ಕಾರ ಮಾಡಿ ಆಶೀರ್ವಾದವನ್ನು ಪಡೆದಿದ್ದಾನೆ ಅಷ್ಟೆಲ್ಲ ಜ್ಞಾನಿಗಳ ಮಾತು ಸುಳ್ಳಾಗದಂತೆ ಅವನಿಗೆ ನೀವು ಆಶೀರ್ವಾದ ಮಾಡಬೇಕು ಅಂತ ಆ ಋಷಿಗಳು ಬ್ರಹ್ಮ ದೇವರಿಗೆ ಪ್ರಾರ್ಥನೆ ಮಾಡಿದಾಗ ಅವನು ಉತ್ತಮ ಆಯುಷ್ಯ, ಆರೋಗ್ಯವಂತನಾಗುವಂತೆ ಮಾಡುತ್ತಾರೆ. ಅದಕ್ಕೆ ಮೂಲ ಕಾರಣ ಆ ರೀತಿ ಜ್ಞಾನಿಗಳಿಗೆ ನಮಸ್ಕಾರ ಮಾಡಿ ಆಶೀರ್ವಾದ ಪಡೆದುಕೊಳ್ಳಬೇಕು ಅಂತ ಹೇಳಿದ ಇವರ ತಂದೆ ಆದ್ದರಿಂದ ಆ ತಂದೆಯ ಒಂದು ವಿಶೇಷವಾದಂತಹ ಕೃಪೆಯಿಂದ, ಅವರ ಅನುಗ್ರಹದಿಂದ ಈ ಸೌಭಾಗ್ಯವನ್ನು ನಾನು ಪಡೆದಿದ್ದೇನೆ ಅಂತ. ರುದ್ರ ದೇವರ ವಿಶೇಷವಾದಂತಹ ಉಪಾಸನೆಯನ್ನು ಮಾಡಿ ಆ ಮೃತ್ಯುಂಜಯರಾದ ರುದ್ರ ದೇವರ ಅನುಗ್ರಹದಿಂದ

ಇವರು ಮೃತ್ಯುವನ್ನು ಗೆಲ್ಲುತ್ತಾರೆ, ದೀರ್ಘಾಯುಷ್ಯವನ್ನು ಪಡೆಯುತ್ತಾರೆ ಅನ್ನುವ ಮಾತನ್ನೂ ನಾವು ಪುರಾಣದಲ್ಲಿ ಕೇಳುತ್ತೇವೆ.

ನರಸಿಂಹ ಪುರಾಣ ಹೇಳುವಂತೆ ವಿಶೇಷವಾಗಿ ರುದ್ರಾಂತರ್ಗತ, ಮುಖ್ಯಪ್ರಾಣಾಂತರ್ಗತ ನರಸಿಂಹ ದೇವರ ವಿಶೇಷವಾದ ಉಪಾಸನೆಯನ್ನು ಮಾಡಿ ಇವರು ಮೃತ್ಯುವನ್ನು ಗೆಲ್ಲುತ್ತಾರೆ ಅನ್ನುವ ಮಾತನ್ನೂ ನಾವು ನರಸಿಂಹ ಪುರಾಣದಿಂದ ತಿಳಿಯುತ್ತೇವೆ. ಹೀಗಾಗಿ **'ಅಹಂ ಪಿತೃಪ್ರಸಾದಾದ್ ವೈ'** ತಂದೆಯ ಅನುಗ್ರಹ ಎಲ್ಲರಿಗೆ ಈ ದೇಹವನ್ನ ಕೊಡುವುದಕ್ಕೆ ಕಾರಣರಾದಂತಹ ಪಾಂಚಭೌತಿಕ ಶರೀರ ಬರುವುದಕ್ಕೆ ಕಾರಣರಾದ, ಪಂಚಭೂತಗಳಿಗೆ ಮೂಲಭೂತವಾದ ಅಹಂಕಾರ ತತ್ವಕ್ಕೆ ಅಭಿಮಾನಿಗಳಾದ ರುದ್ರ ದೇವರೂ ಕೂಡ ಎಲ್ಲರಿಗೆ ಪಿತೃಗಳೇ ಹೀಗಾಗಿ ಆ ಪಿತೃ ಪ್ರಸಾದ ಅಂದರೆ ರುದ್ರ ದೇವರ ಅನುಗ್ರಹ. ಪಿತ ಅಂದರೆ ಸಕಲ ಜಗತ್ತಿಗೆ ಪಿತ **'ಹರಿರೇವ ಜಗತ್ಪಿತೃಮಾತೃ ಗತಿಃ'**[1] ಅಂತಹ ಜಗತ್ ಪಿತೃವಾದ ಪರಮಾತ್ಮ, ಜಗತ್ತಿಗೆ ಪಿತೃವಾದ ಪರಮಾತ್ಮ ನರಸಿಂಹ, ಪಿತೃವಾದ ರುದ್ರ ಹಾಗೂ ತಮ್ಮ ಪಿತೃಗಳು ಇವರೆಲ್ಲರ ಅನುಗ್ರಹದಿಂದ, ಬ್ರಹ್ಮ ದೇವರ ಅನುಗ್ರಹದಿಂದ ದೀರ್ಘಾಯುಷ್ಯವನ್ನು ಹೊಂದಿದ್ದೇನೆ ನಾನು. ಎಷ್ಟೋ ಸಾವಿರ ವರ್ಷಗಳವರೆಗೆ ಮೇರು ಪರ್ವತದಲ್ಲಿ ತಪಶ್ಚರ್ಯ ಮಾಡಿದೆ, ತಪಶ್ಚರ್ಯ ಮಾಡಿದಾಗ ಒಂದು ಸೂರ್ಯನಂತೆ ಹೊಳೆಯುವ ಶ್ರೇಷ್ಠವಾದಂತಹ ದಿವ್ಯವಾದಂತಹ ತೇಜೋಮಯವಾದಂತಹ ವಿಮಾನ ಆ ಪರ್ವತದ ಉತ್ತರ ಭಾಗಕ್ಕೆ ಬಂದಿದೆ. ಆ ವಿಮಾನದಲ್ಲಿ ಒಂದು ಹೆಬ್ಬರಳಿನಷ್ಟು ಮಾತ್ರ ಸಣ್ಣ ಗಾತ್ರ ಪುಟ್ಟ ಗಾತ್ರದ ಅಗ್ನಿಯಂತೆ ಹೊಳೆಯುತ್ತಾ ಇರುವ ಒಬ್ಬ ವ್ಯಕ್ತಿ ದಿವ್ಯ ಪುರುಷ ಕುಳಿತಿದ್ದಾನೆ.

ಅಪಶ್ಯಂ ತತ್ರ ಚೈವಾಹಂ ಶಯಾನಂ ದೀಪ್ತತೇಜಸಮ್ । (17.6 ಹರಿವಂಶಪರ್ವ)

ಅಙ್ಗುಷ್ಠಮಾತ್ರಂ ಪುರುಷಮಗ್ನಾವಗ್ನಿಮಿವಾಹಿತಮ್ । (17.7 ಹರಿವಂಶಪರ್ವ)

ಆ ವಿಮಾನವೇ ಸೂರ್ಯನಂತೆ ಫಳ ಫಳ ಹೊಳೆಯುತ್ತಾ ಇದೆ ಅದು ಒಂದು ಅಗ್ನಿ ಇದ್ದಂತೆ, ಒಳಗೆ ಈ ಜ್ಞಾನಿಗಳಿದ್ದಾರೆ ಅಂಗುಷ್ಠದ ಪರಿಮಾಣದ ಜ್ಞಾನಿಗಳು ಗಂಭೀರವಾಗಿ ಮಲಗಿದ್ದಾರೆ ಅರ್ಥಾತ್ ಯೋಗ ನಿದ್ರೆಯಲ್ಲಿ ಇದ್ದಂತೆ. ಮಲಗಿ ಅಗ್ನಿಯಂತೆ ತೋರುತ್ತಾ ಇದ್ದಾರೆ, ಅಗ್ನಿಯೊಳಗೆ ಅಗ್ನಿ ಇದ್ದಂತೆ ಕಾಣುತ್ತಾ ಇದೆ ಅವರಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿ ತಲೆ ಬಾಗಿ ವಿನಯದಿಂದ ನಿಂತು ನಾನು ಕೇಳುತ್ತಾ ಇದ್ದೇನೆ ತಾವು ಯಾರು, ಮಹಾನುಭಾವರು ಬಂದಿದ್ದೀರಿ ವಿಮಾನಾರೂಢರಾಗಿ, ದಿವ್ಯವಾದಂತಹ ತೇಜಸ್ಸಿದೆ. ತಾವು ಮಹಾನುಭಾವರು ಇಷ್ಟು ಗೊತ್ತು ಆದರೆ ತಾವು ಯಾರು ಅಂತ ತಮ್ಮ ವಿಶೇಷವಾದ ಪರಿಚಯವನ್ನು ಮಾಡಿಕೊಡಬೇಕು ಅಂತ ಪ್ರಾರ್ಥನೆ ಮಾಡಿದ್ದಾರೆ ಮಾರ್ಕಂಡೇಯರು.

ತಪೋವೀರ್ಯಾತ್ ಸಮುತ್ಪನ್ನಂ ನಾರಾಯಣಗುಣಾತ್ಮಕಮ್ ।
ದೈವತಂ ಹ್ಯಸಿ ದೇವಾನಾಮಿತಿ ಮೇ ವರ್ತತೇ ಮತಿಃ ॥ (17.9 ಹರಿವಂಶಪರ್ವ)

ಒಬ್ಬ ಋಷಿಯಾಗಿ ತಪಸ್ಸು ಮಾಡಿ ನಾನು ಊಹೆ ಮಾಡುತ್ತಾ ಇರುವುದು ನೀವು ಸಾಮಾನ್ಯರಲ್ಲ, ಭಗವಂತನ ವಿಶೇಷ ಸನ್ನಿಧಾನಕ್ಕೆ ಪಾತ್ರರಾದ ಮಹಾತಪಸ್ವಿಗಳು, ದೇವತೆಗಳಿಗೂ ಅನೇಕರಿಗೆ ಪೂಜ್ಯರಾದಂತಹ ವ್ಯಕ್ತಿಗಳು ತಾವು ಅಂತನ್ನುವ ಭಾವನೆ ನನಗೆ ಉಂಟು. ತಾವು ಇದರ ಬಗ್ಗೆ ಸ್ಪಷ್ಟವಾಗಿ ತಿಳಿಸಿ ನಮಗೆ ಉಪದೇಶವನ್ನು ಮಾಡಬೇಕು

1. 3.1 ದ್ವಾದಶಸ್ತೋತ್ರ

ಎಂಬುದಾಗಿ ಮಾರ್ಕಂಡೇಯರು ಆ ವಿಮಾನಾರೂಢರಾಗಿ ಬಂದಂತಹ ಮಹಾನುಭಾವರಿಗೆ ಕೇಳಿದ್ದಾರೆ. ಒಂದು ಕ್ಷಣಮಾತ್ರದಲ್ಲಿ ಹೆಬ್ಬರಳಿನಷ್ಟು ಸಣ್ಣ ಗಾತ್ರವನ್ನ ತೆಗೆದುಕೊಂಡು ಬಂದ ಆ ಮಹಾನುಭಾವರು ದೊಡ್ಡದಾದಂತಹ ದೇಹವನ್ನು ತೆಗೆದುಕೊಂಡಿದ್ದಾರೆ.

ಕ್ಷಣೇನೈವ ಪ್ರಮಾಣಂ ಸ ಬಿಭ್ರದನ್ಯದನುತ್ತಮಮ್ । (17.11 ಹರಿವಂಶಪರ್ವ)

ಅವರು ಹೇಳುತ್ತಾ ಇದ್ದಾರೆ ಬಂದವರು ನಾವು ನಿಮ್ಮ ತಪಸ್ಸಿಗೆ ಮೆಚ್ಚಿ ಸನತ್ಕುಮಾರರು, ಬ್ರಹ್ಮ ದೇವರ ಮಾನಸ ಪುತ್ರರಾದಂತಹ ಸನಕ, ಸನಂದನ, ಸನಾತನ ಸನತ್ಕುಮಾರರು ಅದರೊಳಗಿನ ಸನತ್ಕುಮಾರರು ನಾವು, ನೀವು ಪ್ರಾರ್ಥನೆ ಮಾಡಿದ್ದಿರಿ, ತಪಶ್ಚರ್ಯವನ್ನು ಮಾಡಿದ್ದಿರಿ ಅದಕ್ಕೋಸ್ಕರ ಅನುಗ್ರಹ ಮಾಡುವುದಕ್ಕೆ ನಾವು ಬಂದಿದ್ದೇವೆ. ಇವರು ಹೇಳಿದ ಮಾತನ್ನೇ ಅವರು ಪುನುರುಚ್ಚಾರಣೆ ಮಾಡುತ್ತಾರೆ ನೀವು ತಪೋವೀರ್ಯ ಸಮುತ್ಪನ್ನರು ನಾರಾಯಣ ಗುಣಾತ್ಮಕರು ಅಂತ ನಾನು ಅಂದುಕೊಂಡಿದ್ದೇನೆ ಅಂತ ಹೌದು ಅನ್ನುತ್ತಾರೆ.

ತಪೋವೀರ್ಯಸಮುತ್ಪನ್ನಂ ನಾರಾಯಣಗುಣಾತ್ಮಕಮ್ ॥ (17.12 ಹರಿವಂಶಪರ್ವ)
ಸನತ್ಕುಮಾರ ಇತಿ ಯಃ ಶ್ರುತೋ ದೇವೇಷು ವೈ ಪುರಾ । (17.13 ಹರಿವಂಶಪರ್ವ)

ನಮಗೆ ಸನತ್ಕುಮಾರ ಅಂತ ಹೇಳುತ್ತಾರೆ. ತಪೋವೀರ್ಯದಿಂದ ಬ್ರಹ್ಮ ದೇವರ ಒಂದು ವಿಶಿಷ್ಟವಾದ ತಪಸ್ಸಿನಿಂದ, ಅವರ ಅನುಗ್ರಹದಿಂದ ನಾವು ಹುಟ್ಟಿ ಬಂದವರು, ನಾರಾಯಣ ಗುಣಾತ್ಮಕರು, ಭಗವದನುಗ್ರಹದಿಂದ ಗುಣವನ್ನ ಪಡೆದವರು ನಾವು ಸನತ್ಕುಮಾರ ಅಂತ. ಸನತ್ ಯಾವಾಗಲೂ ಕೂಡ ಕುಮಾರ, ಕುಮಾರರಂತೆ ಕಾಮ-ಕ್ರೋಧ-ಲೋಭ-ಮೋಹ-ಮದ-ಮಾತ್ಸರ್ಯಾದಿ ದೋಷಗಳು ಹೇಗೆ ಪುಟ್ಟ ಮಕ್ಕಳಿಗೆ ಇರುವುದಿಲ್ಲ, ಆ ರೀತಿ ಇವರಿಗೆ ಎಂದಿಗೂ ಕಾಮ ಕ್ರೋಧ ಲೋಭಾದಿ ದೋಷಗಳಿಲ್ಲ ಅನ್ನುವ ಅರ್ಥದಲ್ಲಿ ಸನತ್ ಕುಮಾರ.

ಪಂಚಷಡ್ಢಾಯನಾರ್ಭಾಭಾಃ ಪೂರ್ವೇಷಾಮಪಿ ಪೂರ್ವಜಾಃ । (07.1.38 ಭಾಗವತ)

ಅಂತ ಭಾಗವತ ಹೇಳುತ್ತದೆ ಐದಾರು ವರ್ಷದ ಪುಟ್ಟ ಮಕ್ಕಳಂತೆ ಇರುತ್ತಾರೆ ಆದರೆ ಅತ್ಯಂತ ಪ್ರಾಚೀನರು ಬ್ರಹ್ಮ ದೇವರ ಪುತ್ರರು ಅವರು. ಆದರೆ ಆ ಪುಟ್ಟ ಬಾಲಕರಂತೆಯೇ ಇರುತ್ತಾರೆ, ಮನಸ್ಸೂ ಪುಟ್ಟ ಬಾಲಕರಂತೆಯೇ ಇರುತ್ತೆ, ನಿಷ್ಕಲ್ಮಶವಾದಂತಹ ಹೃದಯ ಆದ್ದರಿಂದ ಅವರಿಗೆ ಸನತ್ಕುಮಾರರು ಎಂಬುದಾಗಿ ಹೇಳುತ್ತಾರೆ. ಇಲ್ಲಿ ನಾರಾಯಣ ಗುಣಾತ್ಮಕರು ಸನತ್ಕುಮಾರರು ಅಂತನ್ನುವುದಕ್ಕೆ ನಾರಾಯಣನ ಗುಣಗಳ ಸಾಕ್ಷಾತ್ ಸ್ವರೂಪರು ಅಂತ ತಿಳಿಯಬಾರದು. **'ನಿಖಿಲಪೂರ್ಣಗುಣೈಕ ದೇಹಂ'**[1] ಭಗವಂತನ ಗುಣಗಳು ಭಗವತ್ ಸ್ವರೂಪ ಹಾಗಾದರೆ ಭಗವಂತನ ಗುಣಗಳಿಗೆ ಸದೃಶವಾದಂತಹ ಗುಣಗಳು ಇವರ ಸ್ವರೂಪಭೂತವಾದದ್ದುಂಟು. ಗುಣ ಗುಣಿಗಳಿಗೆ ಅಭೇದವನ್ನು ಶ್ರೀಮದಾಚಾರ್ಯರು ತಿಳಿಸಿಕೊಟ್ಟಿದ್ದಾರೆ ಆ ಮಾತನ್ನು ಇಲ್ಲಿ ಹೇಳುತ್ತಾರೆ **'ನಾರಾಯಣ ಗುಣಾತ್ಮಕಂ'** ನಾರಾಯಣನ ಅಧೀನವಾದ, ನಾರಾಯಣನ ಗುಣಗಳಿಗೆ ಸದೃಶವಾದ ಗುಣಗಳ ಸ್ವರೂಪಭೂತರಾದವರು ಈ ಸನತ್ಕುಮಾರರು ಅಂತ. ಜೊತೆಗೆ ನಾರಾಯಣನ ಗುಣ ಅಂದರೆ ಅಪ್ರಧಾನ ನಾರಾಯಣನಿಗೆ ಗುಣರಾದವರು, ದಾಸರಾದವರು ವಾಯು ದೇವರು ಆ ವಾಯು ದೇವರೇ ಆತ್ಮ ಸ್ವಾಮಿಯಾಗಿ ಉಳ್ಳವರು. ನಾರಾಯಣನಿಗೆ ಪರಮಾತ್ಮನಿಗೆ ಗುಣ, ಗುಣ ಅಂದರೆ ದಾಸ, ಗುಣ ಅನ್ನುವುದಕ್ಕೆ ಶೇಷ ಅಂತ ಅರ್ಥ ಇದೆ ಗುಣ-ಗುಣಿ,

1. ತತ್ತ್ವವಾದ

ಶೇಷ-ಶೇಷಿ ಅಂತ ಹೀಗಾಗಿ ಗುಣ ಅಂದರೆ ಅಪ್ರಧಾನ ಶೇಷ ಆ ಶೇಷ ದೇವರೇ ಆತ್ಮ ಸ್ವಾಮಿ ಯಾಗಿದ್ದವರು ಸನತ್ಕುಮಾರರು ಅಂತ ಯಾಕೆ ಅಂದರೆ ಸನತ್ಕುಮಾರರು ಅಂದರೆ ಕಾಮನ ಅವತಾರ. ಕಾಮನಿಗೆ ಲಯ ಶೇಷ ದೇವರಲ್ಲಿದೆ ವಾರುಣಿಯ ದ್ವಾರಾ ಹೀಗಾಗಿ ನಾರಾಯಣ ಗುಣಾತ್ಮಕ ಆ ಶೇಷ ದೇವರನ್ನು ಸ್ವಾಮಿಯಾಗಿ ಪಡೆದವರು, ವಾಯು ದೇವರನ್ನು ಸ್ವಾಮಿಯಾಗಿ ಪಡೆದವರು ಇವರು ಆದ್ದರಿಂದ ನಾರಾಯಣ ಗುಣಾತ್ಮಕರು ಅಂತ. ಯಾವಾಗಲೂ ಭಗವಂತನ ಚಿಂತನ ಮಾಡುವುದರೊಳಗೇ ಇವರಿಗೆ ಆಸಕ್ತಿ, ಇವರ ಎಲ್ಲ ಇಂದ್ರಿಯಗಳು ದೇವರಲ್ಲಿ ಪ್ರವಣ, ಇವರು ಏನೇ ಭೋಗವನ್ನು ಮಾಡಿದರೂ ದೇವರಿಗೆ ಸಮರ್ಪಿತವಾದದ್ದನ್ನೆ ಸ್ವೀಕಾರ ಮಾಡುವುದು ಆದ್ದರಿಂದಲೂ ನಾರಾಯಣ ಗುಣಾತ್ಮಕರು ಅಂತ ಗುಣ ಅನ್ನುವುದಕ್ಕೆ ಇಂದ್ರಿಯ, ಗುಣ ಅನ್ನುವುದಕ್ಕೆ ವಿಷಯಗಳು ಅಂತ ಅರ್ಥ ಇದೆ.

ಗುಣಾ ಗುಣೇಷು ವರ್ತಂತ ಇತಿ ಮತ್ವಾ ನ ಸಜ್ಜತೇ । (3.28 ಭ ಗೀತಾ)

ಹೀಗಾಗಿ ನಾರಾಯಣ ಪ್ರವಣವಾದ ಗುಣ ಇಂದ್ರಿಯಗಳು, ನಾರಾಯಣನಿಗೆ ಸಮರ್ಪಿತವಾದಂತಹ ಗುಣ ಭೋಗ್ಯವಾದ ವಸ್ತುಗಳು ಅವುಗಳನ್ನೇ ಇವರು ಸ್ವೀಕಾರ ಮಾಡುತ್ತಾರೆ. ಭೋಗ್ಯವಾದ ವಿಷಯಗಳನ್ನು ಆಗುತ್ತೆ ಆದ್ದರಿಂದ ಆತ್ಮ, ನಾರಾಯಣನಿಗೆ ಯಾವಾಗಲೂ ಸೇವೆಯನ್ನು ಮಾಡುವಂತಹ ಇಂದ್ರಿಯಗಳಿಗೆ ಇವರು ಆತ್ಮಸ್ವಾಮಿ ಆಗಿದ್ದಾರೆ ಆದ್ದರಿಂದ ನಾರಾಯಣ ಗುಣಾತ್ಮಕ ಎಂಬುದಾಗಿ ನಾವು ಅರ್ಥವನ್ನು ಮಾಡಿಕೊಳ್ಳಬೇಕು ಅಂತಹ ಮಹಾನುಭಾವರು ಇವರು. ಇವರು ಅನ್ನುತ್ತಾರೆ,

ಯೇ ತ್ವನ್ಯೇ ಬ್ರಹ್ಮಣಃ ಪುತ್ರಾ ಯವೀಯಾಂಸಸ್ತು ತೇ ಮಮ । (17.14 ಹರಿವಂಶಪರ್ವ)

ಇನ್ನು ಬ್ರಹ್ಮ ದೇವರ ಪುತ್ರರು ಇದ್ದಾರಲ್ಲ ಮರೀಚಿ, ಅತ್ರಿ, ಅಂಗಿರಸ್, ಕ್ರತು, ಪುಲಸ್ತ್ಯ ಅವರೆಲ್ಲ ನಮಗಿಂತಲೂ ಚಿಕ್ಕವರು ಅಂತ ಅವರೆಲ್ಲ ಯವೀಯಾಂಸ ಅಂತ ಅವರಿಗೆಲ್ಲ ನಾವು ಹಿರಿಯರು ಅವರೆಲ್ಲ ನಮಗೆ ಚಿಕ್ಕವರು ಎಂಬುದಾಗಿ ಇವರು ತಿಳಿಸಿಕೊಡುತ್ತಾರೆ.

ಯೇ ತ್ವನ್ಯೇ ಬ್ರಹ್ಮಣಃ ಪುತ್ರಾ ಯವೀಯಾಂಸಸ್ತು ತೇ ಮಮ ।
ಭ್ರಾತರಃ ಸಪ್ತ ದುರ್ಧರ್ಷಾಸ್ತೇಷಾಂ ವಂಶಾಃ ಪ್ರತಿಷ್ಠಿತಾಃ ॥ (17.14 ಹರಿವಂಶಪರ್ವ)

ನೋಡಿ ಇಲ್ಲಿ ಆ ಏಳು ಜನ ಋಷಿಗಳು ನಮಗಿಂತಲೂ ಚಿಕ್ಕವರು ಅಂತ. ಇಲ್ಲಿ ಈ ಸಪ್ತ ಯವೀಯಾಂಸಃ ಏಳು ಜನ ಋಷಿಗಳು ನಮಗಿಂತಲೂ ಚಿಕ್ಕವರು ಅಂತ ಒಂದರ್ಥ, ಏಳು ಜನ ಋಷಿಗಳು ಯವೀಯಾಂಸರು ನಮಗಿಂತಲೂ ಚಿಕ್ಕವರು ಎಷ್ಟು ಚಿಕ್ಕವರು ಅಂದರೆ ಸಪ್ತ ಏಳು ಕಕ್ಷೆಗಳಿಂದ ಚಿಕ್ಕವರು ಅಂತ ಅರ್ಥ. ಇಂದ್ರ, ಕಾಮ ಇವರು ಎಂಟನೆಯ ಕಕ್ಷೆ, ಸನತ್ಕುಮಾರರು ಕಾಮನ ಅವತಾರ ಅಂದರೆ ಎಂಟನೆಯ ಕಕ್ಷೆ, ಮರೀಚಿ, ಅತ್ರಿ, ಅಂಗಿರಸ್, ಕ್ರತು, ಪುಲಸ್ತ್ಯ ವಸಿಷ್ಠ ಇವರು ಹದಿನಾರನೆಯ ಕಕ್ಷೆ, ಮಧ್ಯದಲ್ಲಿ ಏಳು ಕಕ್ಷೆಗಳು ಬಂತು ಸಪ್ತ ಏಳು ಕಕ್ಷೆಗಳಿಂದ ಯವೀಯಾಂಸ ಚಿಕ್ಕವರಾಗಿದ್ದಾರೆ ಈ ಸಪ್ತ ಏಳು ಜನ ಋಷಿಗಳು ಅಂತ ಒಳಗಿನ ಆಂತರ್ಯ ಸನತ್ಕುಮಾರರಿಗೆ ಅಂತಹ ಮಹಾನುಭಾವರು ಸನತ್ಕುಮಾರರು. ಅವರು ಹೇಳುತ್ತಾರೆ ಹಿಂದೆ ಬ್ರಹ್ಮ ದೇವರು ಎಲ್ಲ ದೇವತೆಗಳ ಸೃಷ್ಟಿ ಮಾಡಿದರಂತೆ ಆ ದೇವತೆಗಳ ಸೃಷ್ಟಿಯನ್ನು ಮಾಡಿದ ಮೇಲೆ ದೇವತೆಗಳೆಲ್ಲ ಬ್ರಹ್ಮ ದೇವರ

ಪೂಜೆಯನ್ನು ಮಾಡಬೇಕಾಗಿತ್ತು. ಅವರೆಲ್ಲ ಪರಮ ಭಗವದ್ಭಕ್ತರೇ ಮಹಾನುಭಾವರು ದೇವತೆಗಳು ಆದರೆ ಸ್ವಲ್ಪ ಹೊತ್ತು ತಮ್ಮ ಪೂಜೆಯನ್ನ ತಾವು ಮಾಡಿಕೊಂಡರಂತೆ ಅರ್ಥಾತ್ ತಮ್ಮ ಭೋಗದಲ್ಲಿ, ತಮ್ಮ ವಿಹಾರದಲ್ಲಿ ತಾವು ಆಸಕ್ತರಾದರು. ಬ್ರಹ್ಮ ದೇವರಿಗೆ, ಪರಮಾತ್ಮನಿಗೆ ಮಾಡಬೇಕಾದಂತಹ ಪೂಜೆಯನ್ನ ಸಲ್ಲಿಸದೇ ಇರುವಾಗ ಬ್ರಹ್ಮ ದೇವರಿಗೆ ಕೋಪ ಬಂತು ಆಗ ಬ್ರಹ್ಮ ದೇವರು ಅವರೆಲ್ಲರಿಗೆ ಶಾಪವನ್ನು ಕೊಟ್ಟಿದ್ದಾರೆ. ಏನಂತ, ನೀವೆಲ್ಲ ಹೋಗಿ ನಿಮ್ಮ ಮಕ್ಕಳಿಗೆ ಪ್ರಶ್ನೆ ಕೇಳಿ ಅವರಿಂದ ಜ್ಞಾನ ಪಡೆಯುವಂತಾಗಲಿ ಅಂತ ಇದೊಂದು ಶಾಪವೇ ಅಲ್ಲವಾ. ಮಹಾನುಭಾವರಾದ ದೇವತೆಗಳು ತಾವು ತಮ್ಮ ತಂದೆಯಾದ ಬ್ರಹ್ಮ ದೇವರ ಪೂಜೆಯನ್ನು ಮಾಡದೇ, ಕೆಲಕಾಲ ಆತ್ಮ ಸಂಭಾವನೆಯಲ್ಲಿ, ಆತ್ಮ ಪೂಜೆಯಲ್ಲಿ ರತರಾದದ್ದರಿಂದ ಬ್ರಹ್ಮ ದೇವರು ಶಾಪ ಕೊಡುತ್ತಾರಂತೆ. ಈ ರೀತಿ ನಿಮ್ಮ ತಂದೆಗೆ ನೀವು ಸರಿಯಾಗಿ ಗೌರವ ಸಲ್ಲಿಸಿಲ್ಲ ಹಾಗಾದರೆ ನೀವು ನಿಮ್ಮ ಮಕ್ಕಳಿಂದ ಅವಮಾನಕ್ಕೆ ಗುರಿಯಾಗುವಂತೆ ಅರ್ಥಾತ್ ಅವರಿಂದ ಜ್ಞಾನ ಪಡೆಯುವಂತೆ, ಉಪದೇಶ ಪಡೆಯುವಂತೆ ಆಗಲಿ ಅಂತ ಶಾಪ ಕೊಟ್ಟದ್ದಾರೆ. ಈ ಮಾಡಿದ ಅಪರಾಧಕ್ಕೆ ಏನು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು ಅನ್ನುವುದನ್ನು ನಾನು ಹೇಳುವುದಿಲ್ಲ, ನಿಮ್ಮ ಮಕ್ಕಳಿಗೆ ಕೇಳಿ ಅಂತ ಆಗ ಅವರು ಬಂದು ಮಕ್ಕಳಿಗೆ ಕೇಳುತ್ತಾರೆ. ಕಾಯಿಕವಾಗಿ ಪ್ರದಕ್ಷಿಣೆ ನಮಸ್ಕಾರಾದಿಗಳು, ಮಾನಸಿಕವಾಗಿ ಧ್ಯಾನ, ವಾಚನಿಕವಾಗಿ ಸ್ತೋತ್ರ ಏನೇನು ಮಾಡಬೇಕು ಯಾವ ತರಹದ ಸ್ತೋತ್ರ, ಯಾವ ತರಹದ ಧ್ಯಾನ, ಯಾವ ತರಹದ ದೈಹಿಕವಾದ ಕೈಂಕರ್ಯ ಸೇವೆಗಳನ್ನು ಮಾಡಿ ಪ್ರಾಯಶ್ಚಿತ್ತಗಳನ್ನು ಮಾಡಿಕೊಳ್ಳಬೇಕು ಅಂತ ತ್ರಿವಿಧವಾದ ಪ್ರಾಯಶ್ಚಿತ್ತಗಳನ್ನೂ ಮಕ್ಕಳು ಹೇಳುತ್ತಾರೆ ದೇವತೆಗಳಿಗೆ.

ಪ್ರಾಯಶ್ಚಿತ್ತಗಳನ್ನೆಲ್ಲ ಹೇಳಿದ ಮೇಲೆ ಸುಮ್ಮನೆ ಕೂಡಬೇಕಲ್ಲ ಅವರು ಹೋಗಿ ಬನ್ನಿ ಮಕ್ಕಳೇ ಅಂತ ಕರೆಯುತ್ತಾರೆ. ತಮ್ಮ ತಂದೆಯ ಸ್ಥಾನದಲ್ಲಿದ್ದವರು ಅಂತಹ ಮಹಾನುಭಾವರು ಅವರೆಲ್ಲ ಮರೀಚಿ, ಅತ್ರಿ, ಅಂಗಿರಸ್ ಇವರೆಲ್ಲರ ಮಕ್ಕಳು ಅವರೆಲ್ಲ ಹೀಗಾಗಿ ದೇವತೆಗಳಿಗೆ ಮಕ್ಕಳಂತೆ ಇದ್ದವರು. ಮಕ್ಕಳಂತೆ ಇದ್ದವರು ದೇವತೆಗಳಿಗೆ ಪಿತೃ ಸ್ಥಾನದಲ್ಲಿ ಇದ್ದವರಿಗೆ ಹೇಳುತ್ತಾರೆ ಮಕ್ಕಳೇ ಪ್ರಾಯಶ್ಚಿತ್ತ ಎಲ್ಲ ಚೆನ್ನಾಗಿ ಅರ್ಥ ಆಯಿತಲ್ಲ ಹೋಗಿ ಬನ್ನಿ ಅಂತ ದೇವತೆಗಳಿಗೆ ಬಹಳಷ್ಟು ಕಸಿವಿಸಿ ಆಯಿತು. ಹೋಗಿ ಬ್ರಹ್ಮ ದೇವರಿಗೆ ಕೇಳುತ್ತಾರೆ ಏನು ಬ್ರಹ್ಮ ದೇವರೇ ಇದು ನಮ್ಮ ಹಣೆಬರಹ ಹೀಗಾಯಿತಲ್ಲ ಅವರು ನಮ್ಮನ್ನು ಮಕ್ಕಳು ಅಂತ ಕರೆದುಬಿಟ್ಟರಲ್ಲ ಅಂತ ಬ್ರಹ್ಮ ದೇವರು ಅಂದರು ಏನೂ ತಪ್ಪಿಲ್ಲ ಅದರೊಳಗೆ ಅಂತ. ಕಾರಣ ನೀವು ಜನ್ಮವನ್ನು ಕೊಟ್ಟ ಕಾರಣಕ್ಕೆ ತಂದೆ ಅಂತ ಅನ್ನಿಸಿಕೊಂಡಿದ್ದರೂ ಕೂಡ ಅವರು ನಿಮಗೆ ಜ್ಞಾನವನ್ನು ಕೊಟ್ಟಿದ್ದಾರೆ ಆದ್ದರಿಂದ ಒಂದರ್ಥದಲ್ಲಿ ಅವರು ತಂದೆಯೇ. ಯಾರು ಬ್ರಹ್ಮಜ್ಞಾನವನ್ನು ಮಾಡಿಕೊಂಡಿರುತ್ತಾರೋ, ಬ್ರಹ್ಮೋಪದೇಶವನ್ನು ಮಾಡುತ್ತಾರೋ ಅವರು ತಂದೆ ಇದ್ದ ಹಾಗೇನೆ ಆದ್ದರಿಂದ ಅವರು ಹೇಳಿದ್ದು ತಪ್ಪಲ್ಲ ನೀವು ಅವರಿಗೆ ಪಿತೃಗಳು, ಅವರು ನಿಮಗೆ ಪಿತೃಗಳು ಅಂತ.

ಯೂಯಂ ಶರೀರಕರ್ತಾರಸ್ತೇಷಾಂ ದೇವಾ ಭವಿಷ್ಯಥ ।

ತೇ ತು ಜ್ಞಾನಪ್ರದಾತಾರಃ ಪಿತರೋ ವೋ ನ ಸಂಶಯಃ ॥ (17.31 ಹರಿವಂಶಪರ್ವ)

ನೀವು ಶರೀರ ಕೊಟ್ಟವರು ಅವರು ಜ್ಞಾನ ಕೊಟ್ಟವರು ಪರಸ್ಪರವಾಗಿ ನೀವು ಪಿತೃಗಳಾಗಿದ್ದೀರಿ ಯಾವುದೇ ಅಸಮಾಧಾನ ಬೇಡ ಅಂತ ಬ್ರಹ್ಮ ದೇವರು ಹೇಳಿ ಕಳಿಸಿದ್ದಾರೆ. ಆಗ ಆ ದೇವತೆಗಳು ಎಷ್ಟು ಪ್ರಾಮಾಣಿಕರು ನೋಡಿ ಕೋಪಿಸಿಕೊಂಡು ಹೋದವರು ಮತ್ತೆ ಮಕ್ಕಳ ಹತ್ತಿರ ಬಂದು ಬ್ರಹ್ಮ ದೇವರು ಹೇಳಿದ್ದಾರೆ ನೀವೂ ಪಿತೃಗಳಂತೆ ನಾವೂ ಪಿತೃಗಳಂತೆ ಆದ್ದರಿಂದ ಯಾವುದೇ ರೀತಿಯ ಬೇಸರ ಬೇಡ ನಮಗೆ ಯಾವುದೇ ತರಹದ ಅಸಮಾಧಾನ ಇಲ್ಲ, ಅಷ್ಟು ಮಾತ್ರ ಅಲ್ಲ ನಾವು ಬ್ರಹ್ಮ ದೇವರ ಪೂಜೆಯನ್ನು ಮಾಡದೆ ಇದ್ದದ್ದಕ್ಕೆ ಏನು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು

ಅಂತ ನೀವು ಉಪದೇಶ ಮಾಡಿದ್ದೀರಲ್ಲ ಆ ಕಾರಣಕ್ಕಾಗಿ ನಿಮಗೆ ನಾವು ವರ ಕೊಡುತ್ತೇವೆ. ಏನು ವರ ನೀವು ಪಿತೃಗಳು ಅಂತ ಅನ್ನಿಸಿಕೊಳ್ಳಿ, ನಿಮಗೆ ಎಲ್ಲರೂ ಪೂಜೆಯನ್ನು ಮಾಡಬೇಕು, ಪೂಜೆ ಮಾಡಬೇಕು ಇಷ್ಟೇ ಅಲ್ಲ ಮಾಡದಿದ್ದರೆ ಅವರಿಗೆ ಅನಿಷ್ಟವಾಗುತ್ತದೆ, ನಿಮ್ಮ ಪೂಜೆ ಮಾಡಿದರೆ ಮಾತ್ರ ಅವರ ಎಲ್ಲ ಇಷ್ಟಾರ್ಥಗಳು ಪೂರ್ಣವಾಗುತ್ತದೆ.

ಯೋಽನಿಷ್ಟ್ವಾತು ಪಿತೃಇಜ್ಞಾದ್ಧೈಃ ಕ್ರಿಯಾಃ ಕಾಶ್ಚಿತ್ ಕರಿಷ್ಯತಿ ।
ರಾಕ್ಷಸಾ ದಾನವಾ ನಾಗಾಃ ಫಲಂ ಪ್ರಾಪ್ಸ್ಯನ್ತಿ ತಸ್ಯ ತತ್ ॥ (17.36 ಹರಿವಂಶಪರ್ವ)

ಪಿತೃ ದೇವತೆಗಳ ಪೂಜೆಯನ್ನು ಮಾಡದೆ ಬೇರೆ ಸತ್ಕಾರ್ಯಗಳನ್ನು ಮಾಡಿದರೆ ಆ ಫಲವನ್ನು ರಾಕ್ಷಸರು, ದಾನವರು, ನಾಗಗಳು ಇವರೆಲ್ಲ ಸ್ವೀಕಾರ ಮಾಡಿಕೊಂಡು ಹೋಗಲಿ, ಅವರಿಗೆ ಆ ಫಲ ಸಿಗುವುದು ಬೇಡ. ನಿಮ್ಮ ಪೂಜೆಯನ್ನು ಮಾಡಲೇಬೇಕು ಅದಕ್ಕಾಗಿಯೇ ದೇವತಾಕಾರ್ಯ ಮಾಡುವಾಗಲೂ ಪಿತೃ ದೇವತೆಗಳ ಸ್ಮರಣೆ ಅವರ ಪೂಜೆ ಇರುತ್ತದೆ, ಶ್ರಾದ್ಧಾದಿ ಕರ್ಮಗಳನ್ನು ಮಾಡುವ ಸಂದರ್ಭದಲ್ಲಿಯಂತೂ ವಿಶೇಷವಾಗಿ ಪಿತೃಗಳ ಪೂಜೆ ನಡೆದು ಬಂದದ್ದು ಇದೆ. ಈ ರೀತಿ ನೀವು ಆ ಎಲ್ಲಾ ಪಿತೃಗಳಿಗೆ ಅವರವರ ಪಿತೃ, ಪಿತಾಮಹ, ಪ್ರಪಿತಾಮಹಾದಿಗಳಿಗೆ ನೀವು ಸಂತೋಷ ಪಡಿಸಬೇಕು ನಿಮ್ಮ ಆರಾಧನೆಯನ್ನು ಮಾಡುತ್ತಾರೆ, ನೀವು ಆ ಜೀವರಾಶಿಗಳ ಪಿತೃ, ಪಿತಾಮಹ, ಪ್ರಪಿತಾಮಹಾದಿಗಳು ಯಾವ ಯೋನಿಯಲ್ಲಿ ಹೇಗೆ ಇರುತ್ತಾರೋ ಆ ಯೋನಿಯಲ್ಲಿ ಇದ್ದ ಅವರಿಗೆ ಆ ರೀತಿಯಲ್ಲಿ ಆಹಾರವನ್ನು ಒದಗಿಸಿ ಸುಖವನ್ನು ನೀಡಬೇಕು. ಅವರೆಲ್ಲ ಆ ಸೋಮನಿಗೆ ವಿಶೇಷವಾಗಿ ಸಂತೋಷವನ್ನು ನೀಡುತ್ತಾರೆ, ಸೋಮನಿಗೆ ಅಭಿವೃದ್ಧಿಯನ್ನು ಉಂಟು ಮಾಡುತ್ತಾರೆ ಆ ಸೋಮನಿಂದ ಸಮಸ್ತವಾದ ಜಗತ್ತಿಗೆ ಕ್ಷೇಮವಾಗುತ್ತದೆ ಎಂಬುದಾಗಿ ದೇವತೆಗಳು ಪಿತೃಗಳಿಗೆ ವರವನ್ನು ಕೊಟ್ಟಿದ್ದಾರೆ.

ತೇಭ್ಯಃ ಪುಷ್ಟಿಂ ಪ್ರಜಾಶ್ಚೈವ ದಾಸ್ಯನ್ತಿ ಪಿತರಃ ಸದಾ ॥ (17.39 ಹರಿವಂಶಪರ್ವ)

ಯಾರು ಶ್ರಾದ್ಧವನ್ನು ಮಾಡಿ ಪಿತೃಗಳಿಗೆ ಸಂತೋಷ ಪಡಿಸುತ್ತಾರೆ ಅವರಿಗೆ ಉತ್ತಮವಾದ ಪುಷ್ಟಿ, ಉತ್ತಮವಾದ ಸಂತಾನ ಎಲ್ಲವನ್ನೂ ಕೊಟ್ಟು ಅನುಗ್ರಹವನ್ನು ಮಾಡುತ್ತಾರೆ ಎಂಬುದಾಗಿ ದೇವತೆಗಳು ಪಿತೃಗಳಿಗೆ ವರವನ್ನು ಕೊಟ್ಟಿದ್ದಾರೆ ಹೀಗೆ ಅವರಿಬ್ಬರೂ ಪರಸ್ಪರ ಪಿತೃ ಭಾವವನ್ನು ಹೊಂದಿದ್ದಾರೆ ಅಂತ ತಿಳಿಸಿಕೊಡುತ್ತಾರೆ.

ಮುಂದೆ ಮಾರ್ಕಂಡೇಯರು ಸನತ್ಕುಮಾರರಿಗೆ ಪ್ರಶ್ನೆ ಮಾಡುತ್ತಾರೆ ಎಷ್ಟು ಜನ ಪಿತೃಗಳಿದ್ದಾರೆ, ಪಿತೃಗಣಗಳು ಎಷ್ಟಿವೆ, ಎಲ್ಲಿ ಇರುತ್ತಾರೆ ಅವರು, ಹೇಗೆ ಅವರ ಕಾರ್ಯ, ಅವರ ಮಹತ್ವ ಏನು, ಅವರ ಇತಿಹಾಸ ಏನು ಸ್ವಲ್ಪ ತಿಳಿಸಿ ಕೊಡಿ ಅಂತ ಮಹಾನುಭಾವರಾದ ಸನತ್ಕುಮಾರರು ಉಪದೇಶವನ್ನು ಮಾಡುತ್ತ ಇದ್ದಾರೆ. ಏಳು ಜನ ಸಪ್ತ ಪಿತೃ ಗಣಗಳಿವೆ ಅದರಲ್ಲಿ ಪ್ರತ್ಯಕ್ಷವಾಗಿ ಕಾಣುವ ಶರೀರವನ್ನು ಪಡೆದಂತಹ ಮೂರ್ತರಾದ ನಾಲ್ಕು ಗಣಗಳು, ಅಮೂರ್ತವಾದ ಗಣಗಳು ಮೂರು. ಸುಕಾಲಾ, ಆಂಗಿರಸ, ಸುಸ್ವಧ, ಸೋಮಪ ಅಂತ ನಾಲ್ಕು ಜನ ಉತ್ತಮವಾದ ಕರ್ಮದಿಂದ ಬಂದಂತಹ ದಿವ್ಯವಾದ ಶರೀರವನ್ನು ಪಡೆದವರು ಮೂರ್ತರಾಗಿ ಇದ್ದವರು. ಇನ್ನು ಅದೃಶ್ಯರಾಗಿ ಇದ್ದವರು ಅಮೂರ್ತವಾಗಿ ಇದ್ದವರು, ಅಮೂರ್ತ ಶರೀರದಲ್ಲಿ ಇದ್ದವರು ಮೂರು ಜನ ವೈರಾಜ, ಅಗ್ನಿಶ್ವಾತ್ತ, ಬರ್ಹಿಷದ ಒಟ್ಟು ಏಳು ಗಣಗಳಲ್ಲಿ ಈ ಪಿತೃಗಳು ಇದ್ದಾರೆ ಅಂತ ತಿಳಿಸಿಕೊಡುತ್ತಾರೆ. ಇದರಲ್ಲಿ ಮೊದಲನೆಯದಾಗಿ ವಿರಾಜ ಎಂಬ ಪ್ರಜಾಪತಿಯಿಂದ ಹುಟ್ಟಿದಂಥವರು ವೈರಾಜರು ಅಂತ ಅವರು ಪ್ರಸಿದ್ಧರಾಗಿದ್ದಾರೆ. ಇವರು ಮಹಾನುಭಾವರು, ಮಹಾತಪಸ್ವಿಗಳು, ಮಹಾಯೋಗಿಗಳು ವಿರಾಜ ಪ್ರಜಾಪತಿಯ ಪುತ್ರರು ಆದರೆ ಯಾವುದೋ



ಒಂದು ಪ್ರಾರಬ್ಧ ಕರ್ಮವಶಾತ್ ಆ ತಮ್ಮ ಯೋಗದಿಂದ ಭ್ರಷ್ಟರಾಗಿರುತ್ತಾರೆ. ಎಷ್ಟೋ ಸಾವಿರ ವರ್ಷಗಳವರೆಗೆ ತಪಶ್ಚರ್ಯ ಮಾಡಿ ಪುನಃ ಆ ಯೋಗ ಸಾಮರ್ಥ್ಯವನ್ನು ಪಡೆದು ಬ್ರಹ್ಮಜ್ಞಾನವನ್ನು ಪಡೆದು ಉತ್ತಮವಾದಂತಹ ಸಾಂಖ್ಯ ಶುದ್ಧವಾದಂತಹ ಸಾಕ್ಷಾತ್ ಕಪಿಲನಾಮಕ ಪರಮಾತ್ಮನಿಂದ ರಚಿತವಾದಂತಹ ಶುದ್ಧವಾದ ಸಾಂಖ್ಯ ತತ್ವಜ್ಞಾನ ಏನಿದೆ ಆ ತತ್ವಜ್ಞಾನವನ್ನು ಪಡೆದುಕೊಂಡು ಅವರೆಲ್ಲ ಮೋಕ್ಷವನ್ನು ಮುಂದೆ ಪಡೆಯುತ್ತಾರೆ ಆದರೆ ಈಗ ಮಾತ್ರ ತಾತ್ಕಾಲಿಕವಾಗಿ ಅವರು ಕರ್ಮವಶಾತ್ ಯೋಗ ಭ್ರಷ್ಟರಾಗಿದ್ದಾರೆ. ಆದರೆ ಮಹಾತಪಸ್ವಿಗಳು, ಮಹಾಜ್ಞಾನಿಗಳು, ಮಹಾನುಭಾವರು ಎಂಬುದಾಗಿ ಅವರ ಬಗ್ಗೆ ತಿಳಿಸಿಕೊಡುತ್ತಾರೆ.

ಏತೇ ಸ್ಯುಃ ಪಿತರಸ್ತಾತ ಯೋಗಿನಾಂ ಯೋಗವರ್ಧನಾಃ ।

ಆಪ್ಯಾಯಯನ್ತಿ ಯೇ ಪೂರ್ವಂ ಸೋಮಂ ಯೋಗಬಲೇನ ಚ ॥ (18.11 ಹರಿವಂಶಪರ್ವ)

ಇವರೆಲ್ಲ ವಿಶೇಷವಾಗಿ ಯೋಗಿಗಳಿಗೆ ಯೋಗ ಸಾಮರ್ಥ್ಯವನ್ನು ನೀಡುವವರು, ಸೋಮನಿಗೂ ತಮ್ಮ ಯೋಗ ಬಲದಿಂದ ಸಂತೋಷವನ್ನು ಕೊಡುವವರು, ಸೋಮನ ಕಲೆಯನ್ನು ಪೂರ್ಣಗೊಳಿಸುವವರು ಅಂತಹ ಮಹಾನುಭಾವರು ಇವರು ಸಾಮಾನ್ಯರಲ್ಲ. ಇವರಿಗೆ ಒಬ್ಬಳು ಮಾನಸೀ ಕನ್ಯಾ, ತಮ್ಮ ಮನಸ್ಸಿನಿಂದಲೇ ಒಂದು ಕನ್ಯೆಯನ್ನು ಸೃಷ್ಟಿ ಮಾಡಿದ್ದಾರೆ. ವೈರಾಜ ಎಂಬ ಹೆಸರಿನ ಅಮೂರ್ತರಾದ ಪಿತೃಗಳು ಇವರು ಅಮೂರ್ತ ಶರೀರದಲ್ಲಿ ಇರುವಂತಹ ಕಾರಣದೆ ಇರುವಂತಹ ಈ ಮಹಾನುಭಾವರು ಮಾನಸೀ ಕನ್ಯೆಯನ್ನು ಸೃಷ್ಟಿ ಮಾಡಿದ್ದಾರೆ ಅವಳಿಗೆ ಹೆಸರು ಮೇನಾ ಅಂತ. ಆ ಮೇನಾ ಎಂಬ ಕನ್ಯೆಯನ್ನು ಹಿಮಾಲಯಕ್ಕೆ ಅಭಿಮಾನಿ ದೇವತೆ ಹಿಮಾಲಯ ಅವನಿಗೆ ಕೊಟ್ಟು ಮದುವೆ ಮಾಡಿದ್ದಾರೆ ಅಲ್ಲಿ ಹುಟ್ಟಿದವನೇ ಮೈನಾಕ ಅಂತ. ಮೈನಾಕ ಎಂಬ ಪರ್ವತಕ್ಕೆ ಅಭಿಮಾನಿ ದೇವತೆ ಮೈನಾಕ ಅವನು ಈ ಎಲ್ಲ ವೈರಾಜ ಎಂಬ ಪಿತೃಗಳ ಮಾನಸ ಕನ್ಯೆಯಾದ ಮೇನೆಯಲ್ಲಿ ಹಿಮಾಲಯ ಅಭಿಮಾನಿ ದೇವತೆಯಿಂದ ಜನಿಸಿದವನೇ ಮೈನಾಕ. ಆ ಮೈನಾಕ ಪರ್ವತಕ್ಕೆ ಅಭಿಮಾನಿಯಾದ ಮೈನಾಕನೇ ಹನುಮಂತ ದೇವರು ಮಹೇಂದ್ರ ಪರ್ವತದಿಂದ ಲಂಕಾ ಪಟ್ಟಣಕ್ಕೆ ಹಾರುವಂತಹ ಸಂದರ್ಭದಲ್ಲಿ ಇಲ್ಲಿ ವಿಶ್ರಾಂತಿಯನ್ನು ಪಡೆದು ತಾವು ಮುಂದೆ ಹೋಗಬೇಕು ಅಂತ ಪ್ರಾರ್ಥನೆ ಮಾಡಿಕೊಂಡದ್ದು, ಅವರಿಗೆ ಯಾವುದೇ ರೀತಿಯಾದಂತಹ ಶ್ರಮ ಇಲ್ಲ.

ನೈವಾತ್ರ ವಿಶ್ರಮಣಮೈಚ್ಛದವಿಶ್ರಮೋಽಸೌ

ನಿಸ್ಸೀಮಪೌರುಷಬಲಸ್ಯ ಕುತಃ ಶ್ರಮೋಽಸ್ಯ । (ಸುಂದರಕಾಂಡ ರಾಮಾಯಣ)

ಇವರಿಗೆ ಇಂದ್ರ ದೇವರು ಎಲ್ಲ ಪರ್ವತಗಳ ರೆಕ್ಕೆಗಳನ್ನು ಕತ್ತರಿಸುವಾಗ ವಾಯು ದೇವರು ಈ ಮೈನಾಕ ಪರ್ವತದ ಮೇಲೆ ವಿಶೇಷವಾದ ಪ್ರೀತಿಯಿಂದ ಅವನು ಮಾಡಿದ ಪ್ರಾರ್ಥನೆಗೆ ಅನುಗುಣವಾಗಿ ಅವನನ್ನು ಸುರಕ್ಷಿತವಾಗಿ ಇಲ್ಲಿ ಇಟ್ಟಿರುತ್ತಾರೆ ಸಮುದ್ರದಲ್ಲಿ ಅನ್ನುವುದಕ್ಕೋಸ್ಕರ ಆ ಉಪಕಾರದ ಸ್ಮರಣೆ ಮಾಡೋಣ ಅಂತ ಮೈನಾಕ ಹನುಮಂತ ದೇವರಿಗೆ ಸ್ವಲ್ಪ ಹೊತ್ತು ನಮ್ಮಲ್ಲಿ ವಿಶ್ರಮಿಸಿ ಹೋಗಬೇಕು ಅಂತ. ಶ್ರಮವೇ ಇಲ್ಲ ವಿಶ್ರಾಂತಿ ಯಾಕೆ ಅಂತ ಹನುಮಂತ ದೇವರು ಆದರೆ ಅವನಿಗೆ ಆಲಿಂಗನವನ್ನು ಕೊಟ್ಟು ಅನುಗ್ರಹವನ್ನು ಮಾಡಿ ಹೋಗಿದ್ದಾರೆ ಅನ್ನುವುದನ್ನು ನಾವು ತಿಳಿಯಬೇಕು. ಆ ಮೈನಾಕ ಪರ್ವತದ ಅಭಿಮಾನಿ ದೇವತೆ ಅವನ ಹೆಸರು ಮೈನಾಕ, ಮೈನಾಕನ ಮಗ ಕ್ರೌಞ್ಚ ಅಂತ ಆ ಕ್ರೌಞ್ಚ ಅಂತು ಒಂದು ಪರ್ವತ ಇದೆ ಆ ಪರ್ವತಾಭಿಮಾನಿ ದೇವತೆ ಈ ಮೈನಾಕನ ಮಗ. ಹಿಮಾಲಯ ಅವನ ಮಗ ಮೈನಾಕ, ಮೈನಾಕನ ಮಗ ಕ್ರೌಞ್ಚ ಅಂತ ಈ ರೀತಿ ಇವರ ಪರಂಪರೆ ಇದಕ್ಕೆ ಮೂಲ ಆ ಮೇನ.

ತಿಸ್ರಃ ಕನ್ಯಾಸ್ತು ಮೇನಾಯಾಂ ಜನಯಾಮಾಸ ಶೈಲರಾಟ್ । (18.15 ಹರಿವಂಶಪರ್ವ)

ಆ ಮೇನೆಯಲ್ಲಿ ಹಿಮಾಲಯನಿಂದ ಮೈನಾಕ ಇವನು ಗಂಡು ಮಗನನ್ನು ಬಿಟ್ಟು ಇನ್ನೂ ಮೂರು ಜನ ಹೆಣ್ಣುಮಕ್ಕಳಾಗಿದ್ದಾರೆ ಅಪರ್ಣಾ, ಏಕಪರ್ಣಾ, ಏಕಪಾಟಲಾ ಅಂತ. ಆ ಏಕಪರ್ಣಾ ಅಂತನ್ನುವ ಮಗಳು ಹೆಸರಿಗೆ ತಕ್ಕಂತೆ ಇದ್ದಳು ಅವಳು ಎಂತಹ ನಿಷ್ಠುರವಾದ ತಪಸ್ಸು ಅವಳದು ಅಂದರೆ ಏಕಪರ್ಣಾ.

ಆಹಾರಮೇಕಪರ್ಣೇನ ಏಕಪರ್ಣಾ ಸಮಾಚರತ್ । (18.17 ಹರಿವಂಶಪರ್ವ)

ಒಂದೇ ಎಲೆಯನ್ನು ತಿಂದು ತಪಸ್ಸು ಮಾಡುತ್ತಾ ಇದ್ದಳು ಏನೂ ಆಹಾರ ಇಲ್ಲ ದಿನಕ್ಕೆ ಒಂದು ಎಲೆ ತಿನ್ನುವುದು ಅಷ್ಟೇ ಏಕಪರ್ಣಾ ಅಂತ ಅವಳ ಹೆಸರು. ಇನ್ನೊಬ್ಬಳು ಏಕಪಾಟಲಾ, ಪಾಟಲಾ ಪುಷ್ಪ ಅಂತ ಒಂದು ಹೂವು ಆ ಒಂದು ಹೂವನ್ನು ಮಾತ್ರ ಸ್ವೀಕಾರ ಮಾಡಿ ಅವಳು ದಿನಕ್ಕೆ ಒಂದು ಹೂವು ಅಷ್ಟೇ ಹಾಗೆ ತಪಶ್ಚರ್ಯವನ್ನು ಮಾಡಿದವಳು ಏಕಪಾಟಲಾ ಅಂತ. ಇನ್ನು ಅಪರ್ಣಾ ಪಾರ್ವತಿ ದೇವಿ ಮಹಾನುಭಾವಳು **'ಅಪರ್ಣಾ ಪಾರ್ವತೀ ದುರ್ಗಾ'** ಆ ಅಪರ್ಣಾ ಹೆಸರೇ ಹೇಳುವಂತೆ ಏನೂ ಇಲ್ಲ ಹೂವು ಇಲ್ಲ, ಎಲೇನೂ ಇಲ್ಲ ಅಪರ್ಣಾ, ನಿರಾಹಾರ ಉಪವಾಸವನ್ನು ಮಾಡಿ ತಪಸ್ಸನ್ನು ಮಾಡುವಂತಹ ಮಹಾನುಭಾವಳು ಪಾರ್ವತೀ ದೇವಿ. ಆ ಪಾರ್ವತಿ ದೇವಿ ಇಷ್ಟು ನಿಷ್ಠುರವಾದ ಉಪವಾಸವನ್ನು ಮಾಡುವುದನ್ನು ನೋಡಿ ಮೇನಾ ದೇವಿಗೆ ಸಹಿಸಿಕೊಳ್ಳುವುದಕ್ಕಾಗದೇ ಸಾಕು ತಪಸ್ಸನ್ನು ಮುಗಿಸು ಬೇಗ ಅಂತ **'ಉ' 'ಮಾ'** ಅಂತ ಹೇಳುತ್ತಾಳೆ. **'ಉ'** ಅಂತ ಆ ದುಃಖದಿಂದ ಜೋರಾಗಿ ಸಂಭೋಧನೆ **'ಮಾ'** ಅಂದರೆ ಬೇಡ **'ಉ' 'ಮಾ'** ಸಾಕು ತಪಸ್ಸನ್ನು ನಿಲ್ಲಿಸು ಅಂತ ಅವಳಿಗೆ ಹಾಗೆ ಹೆಸರು ಬಿತ್ತು ಮುಂದೆ ಉಮಾ ಅಂತ ಉಮಾ ದೇವಿ ಅಂತ ಅವಳಿಗೆ ಹೆಸರಾಯಿತು.

'ಉ' 'ಮಾ' ಇತಿ ನಿಶೇಧನ್ತೀ ಮಾತೃಸ್ನೇಹೇನ ದುಃಖಿತಾ । (18.18 ಹರಿವಂಶಪರ್ವ)

ಉಮೇತ್ಯೇವಾಭವತ್ ಖ್ಯಾತಾ ತ್ರಿಷು ಲೋಕೇಷು ಸುನ್ದರೀ ॥ (18.19 ಹರಿವಂಶಪರ್ವ)

ಅಪರ್ಣಾ ಅಂತ ಅವಳ ಹೆಸರು ಏನೂ ಇಲ್ಲದೆ ಉಪವಾಸ ಮಾಡಿದ್ದಕ್ಕೆ ನಿರಾಹಾರ ಉಪವಾಸ ಮಾಡಿದ್ದಕ್ಕೆ ಆದರೆ ತಾಯಿ ಉಮಾ ಅಂತ ಹೇಳಿದ್ದಕ್ಕೆ ಅವಳಿಗೆ ಉಮಾ ಅಂತನ್ನುವ ಹೆಸರು ಬಂತು. ಇವರೆಲ್ಲ ಹೆಣ್ಣುಮಕ್ಕಳು ಹೇಗಿದ್ದರೂ ಅಂತಂದರೆ ಸುಮ್ಮನೆ ಏನೋ ಆಟ ಆಡಿಕೊಂಡಿದ್ದು ಇದ್ದವರಲ್ಲ ಇವರು **'ತಪಃಶರೀರಾಸ್ತಾಃ ಸರ್ವಾಸ್ತಿಸ್ರೋ'**[1] ಇಂತಹ ಘೋರವಾದ ತಪಸ್ಸನ್ನು ಮಾಡಿ ಪರಮ ಪವಿತ್ರವಾದ ಶರೀರವನ್ನು ಪಡೆದವರು, ಯೋಗ ಸಾಮರ್ಥ್ಯವನ್ನು ಪಡೆದವರು, ಬ್ರಹ್ಮಜ್ಞಾನವನ್ನು ಪಡೆದವರು.

ಸ್ತಿಸ್ರೋ ಯೋಗಬಲಾನ್ವಿತಃ

ಸರ್ವಾಶ್ಚ ಬ್ರಹ್ಮವಾದಿನ್ಯಃ ಸ್ರವಾಶ್ಚೈವೋರ್ಧ್ವರೇತಸಃ ॥ (18.21 ಹರಿವಂಶಪರ್ವ)

ಅಂತಹ ನೈಷ್ಠಿಕವಾದ ಒಂದು ಬ್ರಹ್ಮಚರ್ಯವನ್ನು ಮುಂದೆ ಮದುವೆ ಮಾಡಿಕೊಂಡಿದ್ದಾರೆ ಆದರೆ ಮದುವೆ ಆಗುವವರೆಗೆ ಅಷ್ಟು ಬ್ರಹ್ಮಚರ್ಯವನ್ನು ಪರಿಪಾಲನೆ ಮಾಡಿದಂತಹ ಮಹಾನುಭಾವರು ಇವರೆಲ್ಲ.

ಉಮಾ ತಾಸಾಂ ವರಿಷ್ಠಾ ಚ ಜ್ಯೇಷ್ಠಾ ಚ ವರವರ್ಣಿನೀ । (18.22 ಹರಿವಂಶಪರ್ವ)

1. 18.21 ಹರಿವಂಶಪರ್ವ

ಇವರೆಲ್ಲರಲ್ಲಿ ಶ್ರೇಷ್ಠಳಾದವಳು ಗುಣಗಳಿಂದಲೂ ಹಾಗೂ ವಯಸ್ಸಿನಿಂದಲೂ ಉತ್ತಮಳಾದವಳು ಉಮಾ ದೇವಿ ಅಂತ ಹೇಳುತ್ತಾರೆ. ಶ್ರೀಮದಾಚಾರ್ಯರು ತಿಳಿಸಿಕೊಡುತ್ತಾರೆ. **'ಉಮಾ ಸುಪರ್ಣೇ ಚ ಮಹತ್ತತ್ತ್ವ ಗತಂ ಹರಿಂ'** ಅಂತ. ಪರಮಾತ್ಮನ ಉಪಾಸನೆ ಬ್ರಹ್ಮವಾದಿನ್ಯಃ ಅನ್ನುತ್ತಾರೆ. ಆ ಪರಮಾತ್ಮನನ್ನ ವೇದಾದಿ ಸಚ್ಛಾಸ್ತ್ರಗಳನ್ನು ತಿಳಿದವರು ಅಂತ ಮಾತ್ರ ಅಲ್ಲ ಆ ಪರಬ್ರಹ್ಮನ ಉಪಾಸನೆಯನ್ನೂ ಮಾಡು ಎಲ್ಲಿಯವರೆಗೆ ಅಂತ ಹತ್ತು ಕೋಟಿ ಕೋಟಿ ಯೋಜನದವರೆಗೆ. ಬ್ರಹ್ಮಾಂಡ ಐವತ್ತು ಕೋಟಿ ಯೋಜನವಾದರೆ ಅದರ ಹೊರಗೆ ಹತ್ತು ಕೋಟಿ ಕೋಟಿ ಯೋಜನದವರೆಗೆ ವಿಸ್ತೀರ್ಣವಾಗಿ ಹರಡಿದ ಮಹತ್ತತ್ತ್ವದ ಆವರಣದಲ್ಲೆಲ್ಲ ತುಂಬಿಕೊಂಡಂತಹ ಪರಮಾತ್ಮನ ಉಪಾಸನೆಯನ್ನು ಮಾಡಿ ದರ್ಶನವನ್ನು ಮಾಡಿಕೊಳ್ಳುವ ಮಹಾನುಭಾವರು ಉಮಾ ದೇವಿಯರು ಆ ರೀತಿಯಾಗಿ ತಿಳಿಸಿಕೊಡುತ್ತಾರೆ. ಪರಮಾತ್ಮನನ್ನು ಅನಂತಗುಣಗಳಿಂದ ಉಪಾಸನೆ ಮಾಡುತ್ತಾರೆ ರುದ್ರ ದೇವರು ಅಂತಹ ರುದ್ರ ದೇವರಿಗಿಂತಲೂ ಸ್ವಲ್ಪ ಕಡಿಮೆಯಾದರೂ ಪರಮಾತ್ಮನನ್ನ ಸರ್ವ ವೇದೋಕ್ತವಾದಂತಹ ಗುಣಗಳ ಉಪಾಸನೆಯನ್ನು ಮಾಡದೇ ಇದ್ದರೂ ಕೂಡ ಅನಂತ ಗುಣಗಳ ಉಪಾಸನೆಯನ್ನು ಮಾಡುತ್ತಾಳೆ. ಪರಮಾತ್ಮನ ಅನಂತ ರೂಪಗಳನ್ನು ಸಕಲ ವೇದೋಕ್ತವಾಗಿರುವಂತಹ ಅವತಾರಗಳನ್ನು, ರೂಪಗಳನ್ನು ಉಪಾಸನೆ ಮಾಡುತ್ತಾಳೆ ಮಹಾನುಭಾವಳು ಉಮಾ ದೇವಿ ಎಂಬುದಾಗಿ ಅನುವ್ಯಾಖ್ಯಾನದಲ್ಲಿ ಶ್ರೀಮದಾಚಾರ್ಯರು ತಿಳಿಸಿಕೊಡುತ್ತಾರೆ. ಆ ರೀತಿ ಮಹಾನುಭಾವಳಾದ ಉಮಾ ದೇವಿ ರುದ್ರ ದೇವರನ್ನು ಮದುವೆಯಾಗಿದ್ದಾಳೆ, ಏಕಪರ್ಣಾ ಇವಳು ಅಸಿತಾ ಎಂಬ ಋಷಿಗಳನ್ನು ಮದುವೆಯಾಗಿದ್ದಾಳೆ, ಏಕಪಾಟಲಾ ಅನ್ನುವವಳು ರುದ್ರಾಂಶ ಸಂಭೂತರಾದ ಜೈಗೀಷರನ್ನು ಮದುವೆಯಾಗಿದ್ದಾಳೆ. ಈ ರೀತಿ ಮೂರು ಜನ ಮೂರು ಜನರನ್ನು ಮದುವೆಯಾಗಿದ್ದಾರೆ ಅಂತ ಇಷ್ಟು ವೈರಾಜ ಎಂಬ ಪಿತೃಗಳು ಆ ಪಿತೃಗಳಿಂದ ಹುಟ್ಟಿದ ಮಾನಸೀ ಕನ್ಯೆ ಅವಳ ಸಂತತಿ ಮೇನಾ ಅವಳ ಸಂತತಿ ಇಷ್ಟನ್ನು ನಿರೂಪಣೆ ಮಾಡಿದ್ದಾರೆ.

ಇನ್ನು ಮುಂದೆ ಅಮೂರ್ತರಾದ ಮೂರು ತರಹದ ಪಿತೃಗಳಲ್ಲಿ ಮೂರು ಗಣಗಳಲ್ಲಿ ಎರಡನೆಯ ಗಣವನ್ನು ಹೇಳುತ್ತಾರೆ **ಅಗ್ನಿಷ್ವಾತ್ತ ಅಗ್ನೀಷೂ ಆತ್ತಃ.** ಅಗ್ನಿ ಇಂದ ಮಾಡುವ ಏನೆಲ್ಲ ಕಾರ್ಯಗಳಿವೆ ಅವುಗಳಲ್ಲಿ ಇವರು ವಿಶಿಷ್ಟವಾಗಿ ಆ ಪಿತೃ ಸಂಬಂಧಿಯಾದ ಯಜ್ಞಗಳಲ್ಲಿ ಮತ್ತೆ ಇವರಿಗೆ ಆಹುತಿಗಳನ್ನು ಸಮರ್ಪಣೆ ಮಾಡುತ್ತಾರೆ ಆದ್ದರಿಂದ ಇವರು ಆತ್ತರು ಅಂದರೆ ಸ್ವೀಕೃತರು ಅಗ್ನೀಷೂ ಆತ್ತರು ಆದದ್ದರಿಂದ ಅಗ್ನಿಷ್ವಾತ್ತ ಅಂತ ಅನ್ನಿಸಿಕೊಂಡಂತಹ ಮಹಾನುಭವರು. ಇವರೂ ಕೂಡ ಸಾಮಾನ್ಯರಲ್ಲ ಮರೀಚಿಯ ಮಕ್ಕಳು ಇವರೆಲ್ಲ ಮರೀಚಿ ಋಷಿಗಳ ಮಕ್ಕಳು, ಉತ್ತಮವಾದ ತೇಜಸ್ಸಿನಿಂದ ಸಂಪನ್ನರಾದವರು, ಮಹಾಜ್ವಾಲಿಗಳು ಇವರಿಗೂ ಒಬ್ಬಳು ಮಾನಸೀ ಕನ್ಯೆ ಅಚ್ಛೋದ ಅಂತ ಅವಳ ಹೆಸರು. ಅವಳು ನೋಡಿ ಹಿಂದಿನ ಪಿತೃಗಳ ಮಾನಸೀ ಕನ್ಯೆ ಅವಳೊಂದು ಪರ್ವತದ ಅಭಿಮಾನಿ ದೇವತೆಯ ಮಡದಿಯಾದರೆ ಇವಳು ಒಂದು ನದಿಗೆ ಅಭಿಮಾನಿ ದೇವತೆ ಆಗುತ್ತಾಳೆ. **'ಅಚ್ಛೋದಾ ನಾಮ ನಿಮ್ನಗಾ'**[1] ಇವಳಿಂದ ಒಂದು ಅಚ್ಛೋದಾ ಅನ್ನುವ ಸರೋವರವೂ ಕೂಡ ನಿರ್ಮಾಣವಾಗುತ್ತದೆ ಅಂತ ಹೇಳುತ್ತಾರೆ ಆದರೆ ಇವಳ ಜೀವನದಲ್ಲಿ ಒಂದು ವಿಶಿಷ್ಟವಾದ ಘಟನೆ ನಡೆಯಿತು. ಇವರು ಅಮೂರ್ತರು ಕಾಣಿಸುವುದಿಲ್ಲ ಕಣ್ಣಿಗೆ ತಮ್ಮ ಮನಸ್ಸಿನಿಂದ ತಪಸ್ಸಿನಿಂದ ವರ್ಚಸ್ಸಿನಿಂದ ಇವಳನ್ನು ಹುಟ್ಟಿಸಿದ್ದಾರೆ ಆದರೆ ತಂದೆಯ ದರ್ಶನನೆ ಇಲ್ಲ ಇವಳಿಗೆ ಕಾಣಿಸುವುದಿಲ್ಲ, ತಂದೆ ತಂದೆ ತಂದೆ ಅಪ್ಪ ಎಲ್ಲಿ ಹುಡುಕುತ್ತಾಳೆ ಕಾಣಿಸುವುದಿಲ್ಲ ಆಗ ಅಲ್ಲಿ ಆಯುವಿನ ಮಗನಾದ ಅಮಾವಸು ಅಲ್ಲಿ ಬಂದಿರುತ್ತಾನೆ. ಆದ್ರಿಕಾ ಎಂಬ ಅಪ್ಸರಾ ಸ್ತ್ರೀಯಿಂದ ಕೂಡಿಕೊಂಡು ಅಮಾವಸು ಅಂತನ್ನುವಂತಹ ಆಯುವಿನ ಮಗ ಅಲ್ಲಿ ವಿಮಾನದಲ್ಲಿ ಬರುತ್ತಾ ಇರುತ್ತಾನೆ ಅವನು ಕಾಣಿಸುತ್ತಾನೆ. ಕಂಡಾಕ್ಷಣಕ್ಕೆ ನನ್ನ ತಂದೆ

1. 18.26 ಹರಿವಂಶಪರ್ವ

ಯಾರು, ನನಗೆ ಯಾರು ತಂದೆ ಇಲ್ಲ, ನಾನು ಒಬ್ಬಳೇ ಇದ್ದೇನೆ, ನೀನೇ ನನ್ನ ತಂದೆಯಾಗು, ನನ್ನನ್ನು ಮಗಳಾಗಿ ಸ್ವೀಕರಿಸು ಅಂತ ಆ ಅಮಾವಸುವಿಗೆ ಇವಳು ಅಚ್ಚೋದಾ ಪ್ರಾರ್ಥನೆಯನ್ನು ಮಾಡುತ್ತಾಳೆ ಆಗಲಿ ಅಂತ ಅವನು ಹೇಳುತ್ತಾನೆ. ಅವನಿಗೇನು ಗೊತ್ತು ಆಯಿತು ಯಾವುದೋ ಹೆಣ್ಣು ತಂದೆಯನ್ನು ಕಳೆದುಕೊಂಡಿದ್ದಾಳೆ ಕಾಣುತ್ತೆ ತಂದೆಯಂತೆ ಸಾಕಬೇಕು ಅಂತ ಕೇಳಿಕೊಳ್ಳುತ್ತಾಳೆ ಸಾಕೋಣ ಅನ್ನುವ ದೃಷ್ಟಿಯಲ್ಲಿ ಆಯಿತು ಅಂದ. ಆಗ ಈ ಅಗ್ನಿಷ್ವಾತ್ತರು ಶಾಪ ಕೊಡುತ್ತಾರೆ ಪಿತೃಗಳು ನಿಜವಾದ ತಂದೆಗಳು ನಾವಿರುವಾಗ, ನಾವೆಲ್ಲ ಸೇರಿ ಮನಸ್ಸಿನಿಂದ ನಿನ್ನನ್ನು ಸೃಷ್ಟಿ ಮಾಡಿದಾಗ ನಮ್ಮನ್ನು ಅತಿಕ್ರಮಿಸಿ ಇನ್ನೊಬ್ಬನನ್ನು ತಂದೆ ಎಂಬುದಾಗಿ ನೀನು ಸ್ವೀಕಾರ ಮಾಡುತ್ತಾ ಇದ್ದೀಯಲ್ಲ ನೀನು ಮಾಡಿದ್ದು ದೊಡ್ಡ ಅಪರಾಧ

ಪಿತರಂ ಪ್ರಾರ್ಥಯಿತ್ವಾನ್ಯಂ ಯೋಗಭ್ರಷ್ಟಾ ಪಪಾತ ಹ ॥ (18.31 ಹರಿವಂಶಪರ್ವ)

ಯೋಗ ಭ್ರಷ್ಟಳಾಗು ಅಂತ. ಅವಳು ಮಹಾನುಭಾವಳು, ಮಹಾಯೋಗ ಸಾಮರ್ಥ್ಯವನ್ನು ಪಡೆದವಳು ಇಂಥವರ ಮಗಳಾಗಿ ಹುಟ್ಟಿದ್ದಾಳೆ ಅಂದರೆ ಹುಟ್ಟುವಾಗಲೇ ಸಹಜವಾದ ವಿಶಿಷ್ಟವಾದ ಶಕ್ತಿ ಸಾಮರ್ಥ್ಯವನ್ನು ಪಡೆದವಳು ಜನ್ಮಾಂತರದ ಕರ್ಮ, ಜನ್ಮಾಂತರದ ಪುಣ್ಯ. ಅದರಿಂದಾಗಿ ಉತ್ತಮವಾದ ಯೋಗವನ್ನು ಪಡೆದವಳಾಗಿದ್ದರೂ ಪಿತೃಗಳ ಅತಿಕ್ರಮಣವನ್ನು ಮಾಡಿದ್ದರಿಂದ, ನಿಜವಾದ ಪಿತೃಗಳನ್ನು ಬಿಟ್ಟು ಮತ್ತೊಬ್ಬರನ್ನು ತಂದೆ ಅಂತ ಆರಿಸಿಕೊಂಡದ್ದಕ್ಕೆ ಯೋಗ ಭ್ರಷ್ಟಳಾಗಿ ಕೆಳಗೆ ಬೀಳುತ್ತಾ ಇದ್ದಾಳೆ ತಲೆ ಕೆಳಗೆ ಮಾಡಿ. ಬೀಳುವಾಗ ಮೂರು ವಿಮಾನಗಳು ಕಾಣಿಸಿವೆ ಎಷ್ಟು ಸಣ್ಣ ವಿಮಾನಗಳು ಅಂದರೆ ತ್ರಸರೇಣುವಿನಷ್ಟು, ಬಿಸಿಲು ಬಿದ್ದಾಗ ಕಿಡಕಿಯಲ್ಲಿ ಸಣ್ಣ ಸಣ್ಣ ಧೂಳಿಯ ಕಣಗಳು ಕಾಣಿಸುತ್ತಾವಲ್ಲ ಅದಕ್ಕೆ ತ್ರಸರೇಣು ಅನ್ನುತ್ತಾರೆ ಅಂತಹ ತ್ರಸರೇಣುವಿನಷ್ಟು ಸಣ್ಣ ವಿಮಾನಗಳು ಆ ವಿಮಾನಗಳಲ್ಲಿ ಈ ಪಿತೃಗಳು ಕುಳಿತಿದ್ದಾರೆ.

ತ್ರಸರೇಣುಪ್ರಮಾಣಾನಿ ಸಾಪಶ್ಯತ್ ತೇಷು ತಾನ್ ಪಿತೄನ್ ॥ (18.32 ಹರಿವಂಶಪರ್ವ)

ತನ್ನ ನಿಜವಾದ ಪಿತೃಗಳು ಏನಿದ್ದರೋ ಅಗ್ನಿಷ್ವಾತ್ತರು ಅವರು ಆ ಸೂಕ್ಷ್ಮವಾದ ತ್ರಸರೇಣುವಿನಲ್ಲಿ ಇರುವಂತಹ ತ್ರಸರೇಣು ಸಮಾನವಾದ ವಿಮಾನಗಳಲ್ಲಿ ಕುಳಿತಿದ್ದಾರೆ. ಅವರನ್ನು ನೋಡಿದ್ದಾಳೆ, ಬಹಳ ಸೂಕ್ಷ್ಮವಾದಂತಹ ಶರೀರ ರಕ್ಷಣೆ ಮಾಡಿ ನಮ್ಮನ್ನು ನಾನು ಕೆಳಗೆ ಬೀಳುತ್ತಾ ಇದ್ದೇನೆ ಏನು ಅಪರಾಧ ಆಯಿತು ನನ್ನಿಂದ ಗೊತ್ತಿಲ್ಲ ಕ್ಷಮಾ ಮಾಡಿರಿ, ನಾನು ಮಾಡಿದಂತಹ ತಪ್ಪನ್ನು ಕ್ಷಮಿಸಿ ಉದ್ಧಾರ ಮಾಡಬೇಕು ಅಂತ ಪಿತೃಗಳಿಗೆ ಕೇಳಿಕೊಂಡಾಗ ಪಿತೃಗಳು ಹೇಳುತ್ತಾರೆ. ಕ್ಷಮಾ ಮಾಡುತ್ತೇವೆ ನೀನು ಮಾಡಿದಂತಹ ಕರ್ಮಗಳಿಗೆ ನೀನು ಫಲವನ್ನು ಅನುಭವಿಸಲೇಬೇಕು, ಪ್ರಾಯಶ್ಚಿತ್ತವನ್ನು ಮಾಡಿಕೊಂಡರೂ, ತಪಸ್ಸು ಮಾಡಿದರೂ ಅದರ ಫಲವನ್ನು ಮತ್ತೆ ಜನ್ಮಾಂತರದಲ್ಲಿ ಅನುಭವಿಸಬೇಕು. ಅದಕ್ಕೆ ಒಂದು ನಿಯಮ ಹೇಳುತ್ತಾರೆ ದೇವತೆಗಳು ಮನುಷ್ಯರು, ದೇವತೆಗಳು ಯಾವ ಜನ್ಮದಲ್ಲಿ ಕರ್ಮ ಮಾಡುತ್ತಾರೋ ಅದೇ ಜನ್ಮದಲ್ಲಿ ಫಲವನ್ನು ಅನುಭವಿಸುವುದಕ್ಕೆ ಸಾಧ್ಯವಿದೆ, ಮನುಷ್ಯರು ಜನ್ಮಾಂತರದಲ್ಲಿ ಫಲವನ್ನು ಅನುಭವಿಸುತ್ತಾರೆ.

ಸದ್ಯಃ ಫಲನ್ತಿ ಕರ್ಮಾಣಿ ದೇವತ್ವೇ ಪ್ರೇತ್ಯ ಮಾನುಷೇ । (18.37 ಹರಿವಂಶಪರ್ವ)

ಆದ್ದರಿಂದ ಜನ್ಮಾಂತರದಲ್ಲಿ ನೀನು ಮಾಡಿದ ಸತ್ಕರ್ಮಗಳ ಫಲವನ್ನ ಅವಶ್ಯವಾಗಿ ಅನುಭವಿಸುತ್ತೀಯಾ ಈಗ ಮಾತ್ರ ನೀನು ಸಾಧನೆಯನ್ನು ಮಾಡಿಕೋ ಎಂಬುದಾಗಿ ಪಿತೃಗಳು ಹೇಳುತ್ತಾರೆ ಹೇಳಿ ಒಂದು ದೊಡ್ಡ ಸೌಭಾಗ್ಯವನ್ನೂ



ಕೊಡುತ್ತಾರೆ. ನೀನು ಪರಾಶರ ಋಷಿಗಳಿಂದ ಉತ್ತಮವಾದಂತಹ ಶ್ರೇಷ್ಠನಾದ ಸರ್ವೋತ್ತಮನಾದ ಪರಮಾತ್ಮನನ್ನೇ ಮಗನನ್ನಾಗಿ ಪಡೀತಿಯಾ ಅರ್ಥಾತ್ ವೇದವ್ಯಾಸ ದೇವರು, ಯಾರು ಹರಿವಂಶ ಪುರಾಣದ ರಚನೆ ಮಾಡಿದರೋ, ಮಹಾಭಾರತವನ್ನು ರಚನೆ ಮಾಡಿದ ಮಹಾನುಭಾವರು, ಸರ್ವಜ್ಞ ಶಿಖಾಮಣಿಗಳು ಸರ್ವೋತ್ತಮರಾದಂತಹ ವೇದವ್ಯಾಸ ದೇವರು ಅವರು ನಿನ್ನಲ್ಲಿ ಅವತಾರ ಮಾಡುತ್ತಾರೆ.

ಪರಾಶರಸ್ಯ ದಾಯಾದಂ ತ್ವಂ ಪುತ್ರಂ ಜನಯಿಷ್ಯಸಿ ।
ಸ ವೇದಮೇಕಂ ಬ್ರಹ್ಮರ್ಷಿಶ್ಚತುರ್ಧಾಃ ವಿಭಜಿಷ್ಯತಿ ॥ (18.41 ಹರಿವಂಶಪರ್ವ)

ಮತ್ತೆ ಅಮಾವಸು ಅಂತ ವಿಮಾನದಲ್ಲಿ ಹೊಂಟಂತಹ ಅದ್ರಿಕ ಎಂಬ ಅಪ್ಸರಾ ಸ್ತ್ರೀಯ ಜೊತೆಗೆ ಹೊಂಟಂತಹ ಒಬ್ಬ ಅಮಾವಸು ಅಂತ ಅನ್ನುವವನನ್ನ ನನ್ನ ತಂದೆ ಅಂತ ನೀನು ಗುರುತಿಸಿದೆಯಲ್ಲ ಅವನ ಮಗಳಾಗಿಯೇ ನೀನು ಹುಟ್ಟುತ್ತೀಯಾ. ಇಪ್ಪತ್ತೆಂಟನೆಯ ದ್ವಾಪರಯುಗದಲ್ಲಿ ಅವನ ಮಗಳಾಗಿಯೇ ನೀನು ಹುಟ್ಟುತ್ತೀಯಾ ಎಷ್ಟು ವಿಚಿತ್ರ ನೋಡಿ ಆದರೆ ಹುಟ್ಟುವುದು ಮತ್ಸ್ಯಯೋನಿಯಲ್ಲಿ ನಿನ್ನನ್ನು ಬೆಳೆಸುವುದು ದಾಶರಾಜ, ನಿನ್ನಲ್ಲಿ ಪರಾಶರರಿಂದ ವೇದವ್ಯಾಸ ದೇವರು ಅವತಾರ ಮಾಡುತ್ತಾರೆ. ಮುಂದೆ ಶಂತನುವಿನಿಂದ ಚಿತ್ರಾಂಗದ, ವಿಚಿತ್ರವೀರ್ಯ ಅನ್ನುವವರು ನಿನ್ನಲ್ಲಿ ಅವತಾರ ಮಾಡುತ್ತಾರೆ ಈ ರೀತಿ ನಿನ್ನ ಘಟನೆ ಆಗುತ್ತದೆ ಆಮೇಲೆ ನೀನು ಮೂಲರೂಪಕ್ಕೆ ನೀನು ಸೇರಿಕೊಳ್ಳುತ್ತೀಯಾ ಎಂಬುದಾಗಿ ತಿಳಿಸಿಕೊಡುತ್ತಾರೆ. ನೀವೆಲ್ಲಾ ಆದರ ಕಥೆಯನ್ನು ಮಹಾಭಾರತದ ತಾತ್ಪರ್ಯ ನಿರ್ಣಯದಲ್ಲಿ ತಿಳಿದಿರುತ್ತೀರಾ ಉಪರಿಚರ ವಸು ಎಂಬುದಾಗಿ ಈ ವಸು ಹುಟ್ಟಿಬರುತ್ತಾನೆ. ಆ ಉಪರಿಚರ ವಸು ತಾನು ಮನಸ್ಸಿನಿಂದ ತನ್ನ ಮಡದಿಯನ್ನು ನೆನೆದಾಗ ಸ್ಖಲನವಾದಾಗ ಅದನ್ನು ಶ್ವೇನ ಪಕ್ಷಿಗೆ ಕೊಡುತ್ತಾನೆ ಅದು ಮಧ್ಯದಲ್ಲಿ ಬಿದ್ದಾಗ ಒಂದು ಮತ್ಸ್ಯ ಹೆಣ್ಣು ಮೀನು ಇವನ ವೀರ್ಯವನ್ನು ನುಂಗಿ ಬಿಡುತ್ತದೆ. ಅಲ್ಲಿ ಎರಡು ಮಿಥುನ ಹುಟ್ಟುತ್ತದೆ ಅದರಲ್ಲಿ ಗಂಡನ್ನು ತಾನು ಇಟ್ಟುಕೊಳ್ಳುತ್ತಾನೆ ವಸು, ಹೆಣ್ಣನ್ನು ಆ ಮೀನುಗಾರರಿಗೇನೆ ಕೊಟ್ಟುಬಿಡುತ್ತಾನೆ ಇದನ್ನು ನೀವೇ ಬೆಳೆಸಿಕೊಳ್ಳಿ ಅಂತ. ಇಷ್ಟು ಪ್ರಾಮಾಣಿಕವಾಗಿ ಆ ಮೀನದ ಗರ್ಭದಲ್ಲಿ ಹುಟ್ಟಿದ ಒಂದು ಗಂಡು-ಹೆಣ್ಣು ಜೋಡಿಗಳನ್ನ ತಂದು ರಾಜರಿಗೆ ಒಪ್ಪಿಸಬೇಕು ಅನ್ನುವ ಔದಾರ್ಯ ನಿಮಗಿದೆಯಲ್ಲ ಇವನ ಮಗನೇ ಅದು, ಇವನ ಮಕ್ಕಳೇ ಇವನಿಗೆ ಗೊತ್ತಿಲ್ಲ ಔದಾರ್ಯದಿಂದ ಕೊಟ್ಟಿದ್ದೀರಲ್ಲ ಹೆಣ್ಣನ್ನು ನೀವು ಇಟ್ಟುಕೊಳ್ಳಿ, ಗಂಡನ್ನು ನಾವು ಇಟ್ಟುಕೊಳ್ಳುತ್ತೇವೆ ಅಂತ. ಆ ಹೆಣ್ಣೇ ಸತ್ಯವತೀ ದಾಶರಾಜ ಬೆಳೆಸಿದ್ದು ಮಾತ್ರ ಈ ಉಪರಿಚರ ವಸುವಿನ ಮಗಳೇ ಸತ್ಯವತೀ ಅದಕ್ಕಾಗೇನೆ ಸತ್ಯವತೀಗೆ ವಾಸವೀ ಎಂಬುದಾಗಿ ಕರೆಯುವುದು ವೇದವ್ಯಾಸ ದೇವರಿಗೆ ವಾಸವೀನಂದನ ಅಂತ ಹೇಳುವುದು. ಆ ವಸುವಿನ ಪುತ್ರಿ, ದಾಶರಾಜನ ಸಾಕುಮಗಳು, ಮತ್ಸ್ಯಯೋನಿಯಲ್ಲಿ ಜನಿಸಿದವಳು, ಪರಾಶರರಿಂದ ವೇದವ್ಯಾಸ ದೇವರನ್ನು ಪಡೆದವಳು ಪುನಃ ಪರಾಶರರು ಉತ್ತಮವಾದ ಅನುಗ್ರಹವನ್ನು ಮಾಡಿ ಅವಳ ಕನ್ಯಾತ್ವವನ್ನು ಹಾಗೆ ಉಳಿಸಿರುತ್ತಾರೆ. ಅಲ್ಲಿ ಶಂತನುವಿನ ಜೊತೆಗೆ ಪುನಃ ಮದುವೆಯಾಗಿ ಅಲ್ಲಿ ವಿಚಿತ್ರವೀರ್ಯ, ಚಿತ್ರಾಂಗದ ಎಂಬ ಇಬ್ಬರು ಮಕ್ಕಳನ್ನು ಪಡೆಯುತ್ತಾರೆ ಅಂತನ್ನುವ ಮಾತನ್ನು ನಾವು ಕೇಳುತ್ತೇವೆ ಆಮೇಲೆ ನೀನು ಪುನಃ ಉದ್ಧಾರವನ್ನು ಹೊಂದುತ್ತಿಯಾ ಅಂತ ಪಿತೃಗಳು ಹೇಳುತ್ತಾರೆ ಅಗ್ನಿಷ್ವಾತ್ತರು.

ಆಮೇಲೆ ಮೂರನೆಯದವರು ಬರ್ಹಿಷದರು ಅಂತ. ಭಾರೀ ಸೂರ್ಯನಂತೆ ಹೊಳೆಯುವಂತಹ ಲೋಕಗಳು **'ವೈಭ್ರಾಜಾ ನಾಮ ತೇ ಲೋಕಾ'**[1] ಸೂರ್ಯ ಸಂಬಂಧಿ ಆದ್ದರಿಂದ ಅವುಗಳಿಗೆ ವೈಭ್ರಾಜಾ ಲೋಕಗಳು

1. 18.46 ಹರಿವಂಶಪರ್ವ

ಅಂತ ಕರೆಯುತ್ತಾರೆ ಅಲ್ಲಿ ಆ ಬರ್ಹಿಷದ ಎಂಬ ಹೆಸರಿನ ಪಿತೃಗಳು ಇರುತ್ತಾರೆ. ಈ ಎಲ್ಲ ಪಿತೃಗಳೂ ಕೂಡ ಪುಲಸ್ತ್ಯ ಋಷಿಗಳ ಮಕ್ಕಳು ಎಲ್ಲ ದೇವತೆಗಳು, ಯಕ್ಷರು, ರಾಕ್ಷಸರು, ಗಂಧರ್ವರು, ನಾಗಗಳು, ಸರ್ಪಗಳು, ಸುಪರ್ಣಾಃ ಇವುಗಳೆಲ್ಲವೂ ಕೂಡ ಈ ಬರ್ಹಿಷದ ಪಿತೃಗಳ ವಿಶೇಷವಾದ ಸೇವೆಯನ್ನು ಮಾಡುತ್ತಾರೆ, ಇವರ ಪೂಜೆಯನ್ನು ಮಾಡುತ್ತಾರೆ ಅಂತಹ ಪುಲಸ್ತ್ಯ ಮಕ್ಕಳು ವೈಭ್ರಾಜ ಲೋಕದಲ್ಲಿ ಇದ್ದವರು ಬರ್ಹಿಷದ ಎಂಬ ಹೆಸರಿನ ಈ ಪಿತೃಗಳು. ಇವರೂ ಕೂಡ ಒಬ್ಬ ಮಾನಸೀ ಕನ್ಯೆಯನ್ನು ಸೃಷ್ಟಿ ಮಾಡುತ್ತಾರೆ ಮೊದಲನೆದವರು ಮೇನ, ಎರಡನೆದವರು ಅಚ್ಛೋದ, ಇವರು ಪೀವರೀ ಅನ್ನುವ ಹೆಸರಿನ ಒಂದು ಕನ್ಯೆಯನ್ನು ಸೃಷ್ಟಿ ಮಾಡುತ್ತಾರೆ. ಇವಳೂ ಮಹಾನುಭಾವಳೇ ಯೋಗಿಪತ್ನಿ, ಯೋಗಿಮಾತಾ, ಸ್ವಯಂ ತಾನು ಮಹಾಯೋಗಿನಿ, ಮಹಾಯೋಗ ಸಾಮರ್ಥ್ಯವನ್ನು ಪಡೆದವಳು ಅವಳ ಮಕ್ಕಳು ಯೋಗಿಗಳೇ, ಗಂಡನೂ ಯೋಗಿಯೇ ಅಂತಹ ಮಹಾನುಭಾವಳು ಪೀವರೀ ಅಂತ. ಈ ಪೀವರೀ ಅನ್ನುವವಳ ಕೈಯನ್ನು ಹಿಡಿದಂತಹ ಯೋಗಿಗಳು ಯಾರು ಅಂದರೆ ಆ ಹಿಂದಿನ ಮಾನಸೀ ಕನ್ಯೆ ಅಗ್ನಿಷ್ವಾತ್ತರ ಮಾನಸೀ ಕನ್ಯೆ ಆದಂತಹ ಅಚ್ಛೋದ ಅವಳೇ ಸತ್ಯವತೀ. ಸತ್ಯವತೀಯಲ್ಲಿ ಅವತಾರ ಮಾಡಿದ ಸರ್ವೋತ್ತಮರಾದ ವೇದವ್ಯಾಸ ದೇವರಿದ್ದಾರಲ್ಲ ಆ ವೇದವ್ಯಾಸ ದೇವರು ಅರಣಿಮಥನ ಮಾಡುವ ಕಾಲದಲ್ಲಿ ಉತ್ಪನ್ನರಾದಂತಹ ಶುಕಾಚಾರ್ಯರು ಆ ಶುಕಾಚಾರ್ಯರೇ ಈ ಪೀವರೀ ಎಂಬ ಕನ್ಯೆಯನ್ನು ಮದುವೆಯಾಗಿದ್ದಾರೆ. ಆ ಪೀವರೀ ಎಂಬ ಕನ್ಯೆಯಲ್ಲಿ ಕೃಷ್ಣ, ಗೌರ, ಪ್ರಭು, ಶಂಭು ಎಂಬ ನಾಲ್ಕು ಗಂಡು ಮಕ್ಕಳನ್ನ, ಕೃತ್ವೀ ಎಂಬ ಹೆಣ್ಣು ಮಗಳನ್ನ ಪಡೆದಿದ್ದಾರೆ. ಆ ಕೃತ್ವೀ ಎಂಬ ಹೆಣ್ಣುಮಗಳಲ್ಲಿ ಬ್ರಹ್ಮದತ್ತ ಅನ್ನುವ ತ್ವಣುಹನ ಪತ್ನಿ ಬ್ರಹ್ಮದತ್ತನ ತಾಯಿ ಕೃತ್ವೀ ಅನ್ನುವವಳು ಬ್ರಹ್ಮದತ್ತನಿಗೆ ತಾಯಿಯಾಗಿದ್ದಾಳೆ, ತ್ವಣುಹನಿಗೆ ಮಡದಿಯಾಗಿದ್ದಾಳೆ ಎಂಬುದಾಗಿ ತಿಳಿಸಿಕೊಡುತ್ತಾರೆ. ಇವರು ಆ ಪೀವರೀಯನ್ನು ಮದುವೆಯಾಗಿ ನಾಲ್ಕು ಜನ ಗಂಡು ಮಕ್ಕಳನ್ನು ಒಂದು ಹೆಣ್ಣನ್ನು ಹುಟ್ಟಿಸಿ ಆನಂತರದಲ್ಲಿ ಅತ್ಯಂತ ವಿರಕ್ತರಾಗಿ ವಿಶೇಷವಾಗಿ ವೇದವ್ಯಾಸ ದೇವರಿಂದ ತತ್ವಜ್ಞಾನವನ್ನು ಪಡೆದು ಇಡೀ ಜಗತ್ತಿಗೆ ತತ್ವಜ್ಞಾನದ ಉಪದೇಶವನ್ನು ಮಾಡಿದ್ದಾರೆ. ಸಾಕ್ಷಾತ್ ರುದ್ರಾವತಾರರು, ಪರಮವಿರಕ್ತ ಶಿಖಾಮಣಿಗಳು, ವೈಷ್ಣವೋತ್ತಮರು, ಮಹಾನುಭಾವರು ಶುಕಾಚಾರ್ಯರು ಅಂತಹ ಶುಕಾಚಾರ್ಯರು ನಿರಂತರವಾಗಿ ಆ ಪರಬ್ರಹ್ಮನ ಧ್ಯಾನದಲ್ಲಿ, ಪರಮಾತ್ಮನ ಧ್ಯಾನದಲ್ಲಿ ಆಸಕ್ತರಾಗಿದ್ದಾರೆ ಎಂಬುದಾಗಿ ತಿಳಿಸಿಕೊಡುತ್ತಾರೆ.

ಇದಾದ ಮೇಲೆ ಇನ್ನು ಅಮೂರ್ತರಾದ ಮೂರು ತರಹದ ಪಿತೃಗಳ ಗಣವನ್ನು ತಿಳಿಸಿದರು. ಇನ್ನು ಮೂರ್ತರಾದ ಪಿತೃಗಳ ಬಗ್ಗೆ ಹೇಳುತ್ತಾರೆ. ನಾಲ್ಕು ತರಹದ ಪಿತೃಗಳು ಮೊದಲನೆಯದವರು ವಸಿಷ್ಠ ಪ್ರಜಾಪತಿಗಳ ಮಕ್ಕಳು ಸುಕಾಲಾ ಎಂಬ ಹೆಸರಿನ ಪಿತೃಗಳು ಇವರೆಲ್ಲ ದಿವ್ಯವಾದಂತಹ, ಜ್ಯೋತಿರ್ಮಯವಾದಂತಹ ಲೋಕಗಳಲ್ಲಿ ವಾಸವಾಗಿರುತ್ತಾರೆ, ಸುಕಾಲಾ ಪಿತೃಗಳ ವಿಶೇಷ ಪೂಜೆಯನ್ನು ಬ್ರಾಹ್ಮಣರು ಮಾಡುತ್ತಾರೆ. ಇವರಿಗೂ ಒಬ್ಬ ಮಾನಸೀ ಕನ್ಯೆ ಅವಳಿಗೆ ಗೌ ಅಂತ ಹೆಸರು ಏಕಶೃಂಗಾ ಅಂತೂ ಒಂದು ಹೆಸರಿದೆ ಅವಳಿಗೆ. ಸಾಧ್ಯರಿಗೆಲ್ಲ ವಿಶೇಷವಾಗಿ ಅಸಾಧ್ಯವಾದ ಕೀರ್ತಿಯನ್ನು ಕೊಟ್ಟಂತಹ ಒಂದು ವಿಶಿಷ್ಟವಾದ ಶ್ರೇಯಸ್ಸು ಇವಳದು ಅಂತಹ ಮಹಾನುಭಾವಳು. ಇವಳೂ ಕೂಡ ಶುಕಾಚಾರ್ಯರನ್ನೇ ಮದುವೆಯಾಗತ್ತಾಳೆ ಪೀವರೀ ಅನ್ನುವವಳು ಯಾವ ರೀತಿ ಶುಕಾಚಾರ್ಯರ ಕೈಯನ್ನು ಹಿಡಿದಿದ್ದಾಳೋ ಅದೇ ರೀತಿ ಈ ಗೌ ಎಂಬ ಹೆಸರಿನ ಏಕಶೃಂಗಾ ಎಂಬ ಹೆಸರಿನ ಕನ್ಯೆಯೂ ಕೂಡ ಪಿತೃಕನ್ಯೆ ಶುಕಾಚಾರ್ಯರನ್ನೇ ಮದುವೆಯಾಗಿದ್ದಾಳೆ ಎಂಬ ಮಾತನ್ನು ತಿಳಿಸುತ್ತಾರೆ.

ಮರೀಚಿಗರ್ಭಾಂ ಸ್ತಾಲ್ಲೋಕಾನ್ ಸಮಾಶ್ರಿತ್ಯ ವ್ಯವಸ್ಥಿತಾಃ । (18.59 ಹರಿವಂಶಪರ್ವ)

ಇದಾದ ಮೇಲೆ ಆಂಗೀರಸರು ಅಂತ ಮೂರ್ತರಾದ ಪಿತೃಗಣದಲ್ಲಿ ಎರಡನೆಯ ಪಿತೃಗಣ ಸುಕಾಲಾ ಒಂದು ಎರಡನೆಯದು ಆಂಗೀರಸ ಇವರೆಲ್ಲ ತೇಜೋಮಯವಾದಂತಹ ಲೋಕದಲ್ಲಿ ವಾಸ ಮಾಡುತ್ತ ಇದ್ದವರು ಅಂಗೀರಸ ಋಷಿಗಳ ಪುತ್ರರಾದದ್ದರಿಂದಲೇ ಇವರನ್ನು ಆಂಗೀರಸರು ಅಂತ ಕರೆಯುತ್ತಾರೆ. ಇವರನ್ನು ಪೂಜೆ ಮಾಡುವವರು ಕ್ಷತ್ರಿಯರು ಸುಕಾಲರನ್ನು ಬ್ರಾಹ್ಮಣರು ಪೂಜೆ ಮಾಡುತ್ತಾರೆ, ಆಂಗೀರಸ ಪಿತೃಗಳನ್ನು ಕ್ಷತ್ರಿಯರು ಪೂಜೆ ಮಾಡುತ್ತಾರೆ. ಇವರಿಗೂ ಒಬ್ಬಳು ಮಾನಸೀ ಕನ್ಯೆ ಯಶೋದಾ ಅಂತ ಆ ಯಶೋದಾ ವೃದ್ಧ ಎಂಬ ಹೆಸರಿನ ರಾಜಋಷಿ ಅವನ ಮಗ ವಿಶ್ವಮಹಾನ್ ಅಂತ ಅವನ ಮಡದಿ ಆಗುತ್ತಾಳೆ. ವೃದ್ಧನ ಸೊಸೆ ವಿಶ್ವಮಹಾನ್ ಅನ್ನುವವನ ಮಡದಿಯಾಗಿ ದಿಲೀಪ ರಾಜನ ತಾಯಿಯಾಗಿ ಇವಳು ವಿಶೇಷವಾಗಿ ಪುರಾಣದಲ್ಲಿ ಪ್ರಸಿದ್ಧಳಾಗಿದ್ದಾಳೆ ಎಂಬುದಾಗಿ ಹೇಳುತ್ತಾರೆ. ಈ ಯಶೋದೆಯ ಮಗ ದಿಲೀಪ ರಾಜ ಅವನ ಹೆಂಡತಿ ವಿಶ್ವಮಹತ್ ಅವನು ಹೇಗಿದ್ದ ಅಂದರೆ ಅವನು ಅಶ್ವಮೇಧ ಯಾಗವನ್ನು ಮಾಡಿದರೆ ಯಜ್ಞಕ್ಕೆ ಬಂದಂತಹ ಋಷಿಗಳು ಅವನ ಯಜ್ಞವನ್ನು ಕೊಂಡಾಡುತ್ತಾರೆ,

ಅಗ್ನೇರ್ಜನ್ಮ ತಥಾ ಶ್ರುತ್ವಾ ಶಾಣ್ಡಿಲ್ಯಸ್ಯ ಮಹಾತ್ಮನಃ ।
ದಿಲೀಪಂ ಯಜಮಾನಂ ಯೇ ಪಶ್ಚನ್ತಿ ಸುಸಮಾಹಿತಾಃ ।
ಸತ್ಯವನ್ತಂ ಮಹಾತ್ಮಾನಂ ತೇಽಪಿ ಸ್ವರ್ಗಜಿತೋನರಾಃ ॥ (18.63 ಹರಿವಂಶಪರ್ವ)

ಯಜ್ಞ ಮಾಡುವುದು ಬೇಡಪ್ಪಾ ನೀವು ಜನಗಳೇ ಆ ಶಾಣ್ಡಿಲ್ಯ ವಂಶದಲ್ಲಿ ಬಂದ ಅಗ್ನಿ ಹಾಗೂ ಈ ದಿಲೀಪ ಮಹಾರಾಜ ಇವನನ್ನ ನೋಡಿಬಿಡಿ ಆ ದಿಲೀಪ ಕುಳಿತು ಯಜ್ಞ ಮಾಡುವುದನ್ನ, ಆ ಜ್ವಲಿಸುವ ಅಗ್ನಿಯನ್ನ ನೋಡಿದರೆ ಸಾಕು ನೀವು ಸ್ವರ್ಗಕ್ಕೆ ಹೋಗುತ್ತೀರಾ ನೀವು ಯಜ್ಞ ಮಾಡುವುದು ಬೇಕಾಗಿಲ್ಲ ಅವನು ಮಾಡುವ ಯಜ್ಞವನ್ನು ಬರೀ ಭಕ್ತಿಯಿಂದ ನೋಡಿ ಸಾಕು ಅಂತ ಈ ರೀತಿ ಇವನ ಯಜ್ಞವನ್ನು, ಇವನ ವರ್ಚಸ್ಸನ್ನು ಕೊಂಡಾಡಿದವರು ಋಷಿಗಳು. ಅಂತಹ ಮಹಾನುಭಾವನಾದ ದಿಲೀಪನಿಗೆ ಜನ್ಮವನ್ನು ಕೊಟ್ಟವಳು ಈ ಯಶೋದಾ ಅಂತ ಅವಳು ಆಂಗೀರಸ ಎಂಬ ಪಿತೃಗಳ ಮಾನಸೀ ಕನ್ಯೆ.

ಇನ್ನು ಮೂರನೆಯದವರು ಸುಸ್ವಧಾ ಅಂತ ಕರ್ದಮ ಪ್ರಜಾಪತಿಗಳ ಪಿತೃಗಳು ಪುಲಹ ಎಂಬ ಋಷಿಯ ಮಕ್ಕಳು ಕರ್ದಮ ಪ್ರಜಾಪತಿಯ ತಂದೆ ಅಂತ ಅನ್ನಿಸಿಕೊಂಡವರು ಪಿತೃಗಳು ಅಂತ ಅನ್ನಿಸಿಕೊಂಡವರು ಸುಸ್ವಧಾ ಅನ್ನುವ ಹೆಸರಿನ ಪಿತೃಗಳು. ಇವರೂ ಕೂಡ ದಿವ್ಯವಾದ ಲೋಕದಲ್ಲಿ ಇರುತ್ತಾರೆ ಇವರನ್ನು ಪೂಜೆ ಮಾಡುವವರು ವೈಶ್ಯರು ವೈಶ್ಯರಿಂದ ಪೂಜಿತರಾಗುವ ಪಿತೃಗಳು ಇವರು ಸುಸ್ವಧಾ ಅಂತನ್ನುವ ಹೆಸರಿನ ಪಿತೃಗಳು. ಇವರಿಗೂ ವಿರಜಾ ಅನ್ನುವ ಒಬ್ಬ ಮಾನಸೀ ಕನ್ಯೆ ಇದ್ದಾಳೆ. ಈ ವಿರಜಾ ಅನ್ನುವ ಕನ್ಯೆಯನ್ನು ನಹುಷನಿಗೆ ಕೊಟ್ಟು ಮದುವೆ ಮಾಡುತ್ತಾರೆ ಅಲ್ಲಿ ಹುಟ್ಟಿದವನೇ ಯಯಾತಿ ನಹುಷನ ಮಗನೇ ಯಯಾತಿ ಅಂತ ಹೇಳುತ್ತಾರೆ. ನೋಡಿ ಇವನು ಯಯಾತಿ, ವಿರಜಾ ತಾಯಿ ಯಾತಿ ಅಂತ ಅವಳು ಕರೆಯುತ್ತಾ ಇದ್ದಳು ತಾಯಿ ಅಂತ ಇವನು ಕರೆಯುತ್ತಾ ಇದ್ದನು ಯಯಾತಿ, ವಿರಜಾಳ ಮಗ ಇವನ ತಾಯಿಯೇ ವಿರಜಾ **'ತ್ರಯ ವಿತೇ ಗಣಾಃ ಪ್ರೋಕ್ತಾ'**[1]

ಇನ್ನು ಕೊನೆಯದಾಗಿ ಸೋಮಪ ಅನ್ನುವ ಹೆಸರಿನ ಮೂರ್ತರಾದಂತಹ ಪಿತೃಗಳು. ಆ ಸೋಮಪರು ಇವರು ಯಾರು ಅಂದರೆ ಕವಿ ಅನ್ನುವಂತಹ ಒಬ್ಬ ಜ್ಞಾನಿಯ ಮಗಳು ಸ್ವಧಾ ಅವಳಲ್ಲಿ ಉತ್ಪನ್ನರಾದವರು ಇವರೆಲ್ಲ.

1. 18.67 ಹರಿವಂಶಪರ್ವ

ಹಿರಣ್ಯಗರ್ಭ ಅಂದರೆ ಅಗ್ನಿ **'ಹಿರಣ್ಯಗರ್ಭಸ್ಯ ಸುತಾಃ'**[1] ಹಿರಣ್ಯಗರ್ಭನಾಮಕನಾದ ಅಗ್ನಿಯ ಮಕ್ಕಳು ಅಗ್ನಿಯಿಂದ ಸ್ವಧಾ ದೇವಿಯಲ್ಲಿ ಹುಟ್ಟಿದವರು ಸೋಮಪರು. ಆ ಸ್ವಧಾ ದೇವಿ ಹುಟ್ಟಿದ್ದು ಯಾರಿಂದ ಅಂದರೆ ಕವಿ ಪುತ್ರಳಾದ ಸ್ವಧಾ ದೇವಿಯಲ್ಲಿ ಹುಟ್ಟಿದಂತಹ ಮಹಾನುಭಾವರು ಈ ಸೋಮಪರು. ಇವರೂ ಒಂದು ಮಾನಸೀ ಕನ್ಯೆಯನ್ನು ಸೃಷ್ಟಿ ಮಾಡುತ್ತಾರೆ ನರ್ಮದಾ ಅಂತನ್ನುವ ಮಾನಸೀ ಕನ್ಯೆ ಅವಳೊಂದು ನದಿಯಾಗಿ ಹರಿಯುತ್ತಾಳೆ ನರ್ಮದಾ ನದಿ ಪ್ರಸಿದ್ಧವಾದದ್ದು. ಇವಳು ಪುರುಕುತ್ಸನ ಹೆಂಡತಿಯಾಗಿ ತ್ರಸದ್ವಸ್ಸುವಿನ ತಾಯಿಯಾಗುತ್ತಾಳೆ. ಈ ರೀತಿ ಏಳು ಪಿತೃಗಳ ವಾರ್ತೆಯನ್ನು ತಿಳಿಸಿಕೊಟ್ಟಿದ್ದಾರೆ ಪಿತೃ ಗಣಗಳು ಒಬ್ಬೊಬ್ಬರ ಹೆಸರಲ್ಲ ಇದು ಒಂದೊಂದು ಗಣದ ಹೆಸರು.

ಪಿತೃಣಾಮಾದಿಸರ್ಗೇಣ ಸರ್ವೇಷಾಂ ದ್ವಿಜಸತ್ತಮ ।

ತಸ್ಮಾದೇನಂ ಸ್ವಧರ್ಮೇಣ ಶ್ರಾದ್ಧದೇವಂ ವದನ್ತಿ ವೈ ॥ (18.71 ಹರಿವಂಶಪರ್ವ)

ಈ ಎಲ್ಲ ಪಿತೃಗಳಿಗೆ ನಾಯಕ ಯಮ ಅವನಿಗೆ ಶ್ರಾದ್ಧದೇವ ಅಂತ ಕರೆಯುತ್ತಾರೆ. ಆ ಯಮನ ತಂದೆ ಸೂರ್ಯ ಅವನೂ ಶ್ರಾದ್ಧದೇವ, ಅವನ ಮಗನಾಗಿ ಹುಟ್ಟಿದ್ದಕ್ಕೆ ವೈವಸ್ವತ ಮನು ಅವನಿಗೂ ಶ್ರಾದ್ಧದೇವ ಅಂತ ಕರೆಯುತ್ತಾರೆ.

ಪಿತೃಗಳಿಗೆ ವಿಶೇಷವಾಗಿ ರಜತ ಪಾತ್ರೆಯನ್ನ ಬಳಸಬೇಕು **'ಸರ್ವೇಷಾಂ ರಾಜತಂ ಪಾತ್ರಮಥ'**[2] ಅಷ್ಟು ಶೀಮಂತಿಕೆ ಇಲ್ಲ ಅಂದರೆ ರಜತ ಬೆರಿಸಿದ ಪಾತ್ರೆಯನ್ನಾದರೂ ಉಪಯೋಗಿಸಬೇಕು ಅಥವಾ ರಜತಾನ್ವಿತಮ್ ದೇವರು ಭಾಗ್ಯವನ್ನು ಕೊಟ್ಟಿದ್ದರೆ ರಜತಮಯವಾದ ಪಾತ್ರೆಗಳನ್ನು ಉಪಯೋಗಿಸಿ ಪಿತೃಗಳ ಕಾರ್ಯವನ್ನು ಮಾಡಬೇಕು. ಇಲ್ಲ ಅಂದರೆ ರಜತ ಮಿಶ್ರವಾದಂತಹ ಪಾತ್ರೆಗಳಿಂದಾದರೂ ಪಿತೃ ಕಾರ್ಯವನ್ನು ಮಾಡಿದರೆ ಅವರಿಗೆ ವಿಶೇಷವಾದಂತಹ ಸಂತೋಷವಾಗುತ್ತೆ.

ದತ್ತಂ ಸ್ವಧಾಂ ಪುರೋಧಾಯ ಶ್ರಾದ್ಧಂ ಪ್ರೀಣಾತಿ ವೈ ಪಿತೄನ್ ॥ (18.72 ಹರಿವಂಶಪರ್ವ)

ಆ ಪಿತೃಗಳಿಗೆ ಸಂತೋಷವಾದರೆ ಅವರು ಸೋಮನಿಗೆ ಸಂತೋಷಗೊಳಿಸುತ್ತಾರೆ ಸೋಮನ ಕಲೆಗಳನ್ನು ಪೂರ್ಣಗೊಳಿಸುತ್ತಾರೆ ಮತ್ತು ಉದಗಯನ ದಕ್ಷಿಣಾಯನ ಅಂತ. ಸ್ವಧಾಂತವಾದ ಆಹುತಿಗಳನ್ನ ಸ್ವಧಾ ಎಂಬ ಶಬ್ದವನ್ನು ಉಚ್ಚಾರಣೆ ಮಾಡುತ್ತ ಆಹುತಿಗಳನ್ನು ಕೊಡುವಾಗ ಉತ್ತರದಿಂದ ದಕ್ಷಿಣಕ್ಕೆ ಆಹುತಿಯನ್ನು ಮುಗಿಸಬೇಕು, ಸ್ವಕಾರವನ್ನು ಹೇಳುತ್ತ ಇರುವಾಗ ದಕ್ಷಿಣದಿಂದ ಉದಗಪರ್ವವಾಗಿ ಆಹುತಿಗಳನ್ನು ಕೊಡಬೇಕು ಎಂಬುದಾಗಿ ಹೇಳುತ್ತಾರೆ. ಆ ರೀತಿಯ ಆಹುತಿಗಳನ್ನೆಲ್ಲ ಕೊಟ್ಟು ಈ ಪಿತೃ ದೇವತೆಗಳ ಆರಾಧನೆಯನ್ನು ಯಾರು ಮಾಡುತ್ತಾರೆ

ಪಿತೄನ್ ಪ್ರೀಣಾತಿ ಯೋ ಭಕ್ತ್ಯಾ ಪಿತರಃ ಪ್ರೀಣಯನ್ತಿ ತಮ್ ।

ಯಚ್ಛನ್ತಿ ಪಿತರಃ ಪುಷ್ಟಿಂ ಪ್ರಜಾಶ್ಚ ವಿಪುಲಾಸ್ತಥಾ ॥ (18.74 ಹರಿವಂಶಪರ್ವ)

ಸಮೃದ್ಧವಾದ ಪುಷ್ಟಿಯನ್ನು, ಪ್ರಜೆಗಳನ್ನು ಎಲ್ಲರನ್ನೂ ಕೊಟ್ಟು ಉದ್ಧಾರ ಮಾಡುತ್ತಾರೆ. ಬರೀ ಪುಷ್ಟಿ ಅಲ್ಲ ದೈಹಿಕ ಕೇವಲ ಮಕ್ಕಳನ್ನು ಕೊಡುವುದಲ್ಲ ಸ್ವರ್ಗವನ್ನು, ಆರೋಗ್ಯವನ್ನು ಇನ್ನೇನು ಬಯಸುತ್ತಾರೋ ತಮ್ಮ ಸಂತಾನದಲ್ಲಿ ಬಂದವರು ಭಕ್ತಿಯಿಂದ ಶ್ರಾದ್ಧಾದಿ ಕರ್ಮಗಳನ್ನು ಮಾಡಿ ಆ ಪಿತೃ ದೇವತೆಗಳಲ್ಲಿ ಅಂತರ್ಗತನಾದಂತಹ ಭಾರತೀರಮಣ ಮುಖ್ಯಪ್ರಾಣಾಂತರ್ಗತನಾದ ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ರೂಪಿಯಾದ ಪರಮಾತ್ಮನ

1. 18.69 ಹರಿವಂಶಪರ್ವ, 2. 18.72 ಹರಿವಂಶಪರ್ವ



ಉಪಾಸನೆಯನ್ನು ಮಾಡಿದವರಿಗೆ ಏನು ಬೇಕೋ ಅದೆಲ್ಲವನ್ನು ಕೊಡುತ್ತಾನೆ ಪರಮಾತ್ಮ **'ಯದನ್ಯದಪಿ ಚೇಪ್ಸಿತಮ್'**[1] ದೇವಕಾರ್ಯವನ್ನು ಭಕ್ತಿ ಶ್ರದ್ಧೆಗಳಿಂದ ಮಾಡಬೇಕು, ಶುದ್ಧವಾದ ರೀತಿಯಲ್ಲಿ ಮಾಡಬೇಕು, ಪಿತೃಕಾರ್ಯವನ್ನು ಇನ್ನಷ್ಟು ಶುದ್ಧವಾದ ರೀತಿಯಲ್ಲಿ, ಇನ್ನಷ್ಟು ಭಕ್ತಿಯಿಂದ ಶ್ರದ್ಧೆಯಿಂದ ಮಾಡಬೇಕು ಪಿತೃಕಾರ್ಯವನ್ನು ಉದಾಸೀನ ಮಾಡಬಾರದು.

ದೇವಕಾರ್ಯಾದಪಿ ಮುನೇ ಪಿತೃಕಾರ್ಯಂ ವಿಶಿಷ್ಯತೇ । (18.75 ಹರಿವಂಶಪರ್ವ)

ದೇವತಾನಾಂ ಹಿ ಪಿತರಃ ಪೂರ್ವಮಾಪ್ಯಾಯನಂ ಸ್ಮೃತಮ್ ॥ (18.76 ಹರಿವಂಶಪರ್ವ)

ಹಿಂದೆ ಕಥೆ ಕೇಳಿದಿರಿ ದೇವತೆಗಳಿಗೆ ಇವರು ಜ್ಞಾನವನ್ನು ಕೊಟ್ಟವರು ಅನ್ನುವ ಅರ್ಥದಲ್ಲಿ ಬ್ರಹ್ಮ ದೇವರ ಶಾಪದಿಂದ ಇವರು ಪಿತೃಗಳು ಅಂತ ಅನ್ನಿಸಿಕೊಂಡವರು ಆದ್ದರಿಂದ ವಿಶೇಷವಾಗಿ ಇವರ ಆರಾಧನೆಯನ್ನು ಮಾಡಿ ಸಂತೋಷವನ್ನು ಪಡಿಸಬೇಕು. ಒಂದು ಗುಣ ಏನು ಶೀಘ್ರದಲ್ಲಿ ಪ್ರಸಾದ **'ಶೀಘ್ರಪ್ರಸಾದಾ ಹ್ಯಕ್ರೋಧಾ'**[2] ಕೋಪ ಮಾಡಿಕೊಳ್ಳುವುದಿಲ್ಲ, ಶೀಘ್ರದಲ್ಲಿ ಪ್ರಸಾದವನ್ನು ಮಾಡುತ್ತಾರೆ, ಸ್ಥಿರವಾದ ಪ್ರಸಾದವನ್ನು ಕೊಡುತ್ತಾರೆ. ಆದ್ದರಿಂದ ಆ ಪಿತೃಗಳ ಸೇವೆಯನ್ನು ಮಾಡಿ ಶೀಘ್ರದಲ್ಲಿ ಅವರ ಅನುಗ್ರಹವನ್ನು ಪಡೆದು, ಜ್ಞಾನಾದಿಗಳನ್ನೂ ಪಡೆದು ಉತ್ತಮವಾದಂತಹ ಸಂತಾನಾದಿ ಸೌಭಾಗ್ಯಗಳನ್ನು ಪಡೆಯಬಹುದು ಎಂಬುದಾಗಿ ಮಾರ್ಕಂಡೇಯರು ತಾವು ಸನತ್ಕುಮಾರ ಋಷಿಗಳಿಂದ ಕೇಳಿದ ವಿಚಾರಗಳು ಇದೆಲ್ಲ ಆ ಸನತ್ಕುಮಾರರು ನನಗೆ ಉಪದೇಶ ಮಾಡಿದರು ಅಂತ ಭೀಷ್ಮಾಚಾರ್ಯರಿಗೆ ಹೇಳುತ್ತಾ ಇದ್ದಾರೆ.

ಸನತ್ಕುಮಾರರು ಮಾರ್ಕಂಡೇಯರಿಗೆ ಅನ್ನುತ್ತಾರೆ ಕಥೆ ಕೇಳಿದ ಹಾಗೆ ಎಲ್ಲಾ ಕೇಳಿದ್ದೀ ಆದರೆ ನೀವು ಇನ್ನು ಮುಂದೆ ಉಳಿದವರಿಗೆ ಉಪದೇಶ ಮಾಡಬೇಕಲ್ಲ ಅದಕ್ಕೋಸ್ಕರ ನಿಮಗೆ ದಿವ್ಯ ದೃಷ್ಟಿಯನ್ನು ಕೊಡುತ್ತೇನೆ ಆ ಪಿತೃಗಳನ್ನು ನೀವು ನೋಡಬಹುದು. ಈಗ ನನ್ನ ಮಾತಿನಿಂದ ತಿಳಿದಿದ್ದೀರಾ ಇದು ಶಾಬ್ದಭೋಧ, ಪ್ರತ್ಯಕ್ಷವಾಗಿ ನೀವು ಕಾಣಬಹುದು ಆ ಪಿತೃಗಳನ್ನು, ಅಹುದಾ ಎಲ್ಲಿ ತೋರಿಸಿ ಅಂದರೆ ಹೀಗೆಲ್ಲ ಈ ಮಾಂಸದ ಕಣ್ಣಿಗೆ ಕಾಣಿಸುವುದಿಲ್ಲ ಅವರು, ನಿಮಗೆ ಬೇರೆ ದೃಷ್ಟಿಯನ್ನು ಕೊಡುತ್ತೇನೆ, ದಿವ್ಯದೃಷ್ಟಿಯನ್ನು ಕೊಡುತ್ತೇನೆ. ನೋಡಿ, ನಾನು ಏನು ಹೇಳಿದ್ದೇನೆ ಆ ಎಲ್ಲ ಲಕ್ಷಣಗಳಿಂದ ಯುಕ್ತರಾದ ಪಿತೃಗಳ ದರ್ಶನವನ್ನು ಮಾಡಿ ಅನುಗ್ರಹವನ್ನು ಪಡೆದುಕೊಳ್ಳಿ. ಮುಂದೆ ಬರುವ ಜನರಿಗೆ ಭೀಷ್ಮಾಚಾರ್ಯರೇ ಮೊದಲಾದವರಿಗೆಲ್ಲಾ ಈ ತತ್ವವನ್ನು ಪ್ರತ್ಯಕ್ಷವಾಗಿ ಕಂಡು ಉಪದೇಶ ಮಾಡಿ ಅಂತ ಹೇಳಿ ಮಹಾನುಭಾವರು ಸನತ್ಕುಮಾರರು ದಿವ್ಯದೃಷ್ಟಿಯನ್ನು ಕೊಟ್ಟು ತಾವು ಅಂತರ್ಧಾನವನ್ನು ಹೊಂದಿದ್ದಾರೆ ನೀವು ನೋಡಿಕೊಳ್ಳಿ ಇನ್ನು ಮುಂದೆ ಅಂತ. ಪ್ರತ್ಯಕ್ಷವಾಗಿ ಅವರು ಹೇಳಿದ್ದನ್ನೆಲ್ಲ ಕಂಡು ದೃಢಪಡಿಸಿದಾಗ ಅದನ್ನು ಈಗ ನಾವು ನಿನಗೆ ಉಪದೇಶ ಮಾಡುತ್ತಾ ಇದ್ದೇವೆ ಅಂತ ಮಾರ್ಕಂಡೇಯರು ಭೀಷ್ಮಾಚಾರ್ಯರಿಗೆ ಹೇಳುತ್ತಾರೆ. ಇಂತಹ ಮಹತ್ವ ಆ ಪಿತೃ ದೇವತೆಗಳಿಗೆ ಇದೆ, ಆ ಸಪ್ತ ಪಿತೃ ಗಣಗಳ ಒಂದು ವಿಶೇಷವಾದ ಸ್ಮರಣೆಯನ್ನು ಮಾಡಿ ತದಗಂತರ್ಗತನಾದ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಪ್ರದ್ಯುಮ್ನ, ಸಂಕರ್ಷಣ, ವಾಸುದೇವಾದಿ ರೂಪಿಯಾದಂತಹ ಪರಮಾತ್ಮ ಅನಿರುದ್ಧ ಪ್ರದ್ಯುಮ್ನ ಸಂಕರ್ಷಣ ವಾಸುದೇವ ರೂಪಿಯಾದಂತಹ ಭಗವಂತನನ್ನು ಸ್ಮರಣೆ ಮಾಡಿ ಅವನ ಅನುಗ್ರಹವನ್ನು ಎಲ್ಲರೂ ಪಡೆಯಬೇಕು.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

1. 18.75 ಹರಿವಂಶಪರ್ವ, 2. 18.76 ಹರಿವಂಶಪರ್ವ

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಹರಿವಂಶಪರ್ವ-9

* * *

ಮಾರ್ಕಂಡೇಯರು, ಮಹಾನುಭಾವರಾದ ಬ್ರಹ್ಮ ಮಾನಸ ಪುತ್ರರಾದಂತಹ ಸನತ್ಕುಮಾರರು ಉಪದೇಶ ಮಾಡಿದ ತತ್ವವನ್ನು ಭೀಷ್ಮಾಚಾರ್ಯರಿಗೆ ತಿಳಿಸುತ್ತಾ ಇದ್ದಾರೆ, ಸನತ್ಕುಮಾರರ ವಾಕ್ಯದಲ್ಲಿ ಅವರು ಮಾಡಿದ ಉಪದೇಶವನ್ನು ಮಾರ್ಕಂಡೇಯರು ಯಥಾಶ್ರುತವಾಗಿ ಉಪದೇಶ ಮಾಡುತ್ತಾ ಇದ್ದಾರೆ. ಭೀಷ್ಮಾಚಾರ್ಯರು ಮಾರ್ಕಂಡೇಯರ ಎದುರಿನಲ್ಲಿ ಕುಳಿತಾಗ ಮಾರ್ಕಂಡೇಯರು ತಾವು ಪ್ರತ್ಯಕ್ಷವಾಗಿ ಸನತ್ಕುಮಾರರು ಕೊಟ್ಟ ದಿವ್ಯದೃಷ್ಟಿಯ ಬಲದಿಂದ ಯಾವುದನ್ನು ಕಂಡಿದ್ದಾರೆ ಹಾಗೂ ಸನತ್ಕುಮಾರರ ಮುಖಕಮಲದಿಂದ ಯಾವ ಉಪದೇಶವನ್ನು ಪಡೆದಿದ್ದಾರೆ ಅಂತಹ ತತ್ವಗಳನ್ನು ತಿಳಿಯುತ್ತಾ ಇದ್ದಾರೆ ಭೀಷ್ಮಾಚಾರ್ಯರರು.

ಆಸನ್ ಪೂರ್ವಯುಗೇ ತಾತ ಭರದ್ವಾಜಾತ್ಮಜಾ ದ್ವಿಜಾಃ । (19.1 ಹರಿವಂಶಪರ್ವ)

ಸನತ್ಕುಮಾರರು ಹೇಳಿದ ಮಾತನ್ನು ಮಾರ್ಕಂಡೇಯರು ಹೇಳುತ್ತಾರೆ ಭರದ್ವಾಜರ ಆತ್ಮಜರು ಅನೇಕ ಮಹಾಜ್ಞಾನಿಗಳು, ಮಹಾನುಭಾವರು, ಯೋಗಿಗಳು ಕಾರಣಾಂತರಗಳಿಂದ ಕೆಲವು ಅಪರಾಧಗಳಿಂದಾಗಿ ಯೋಗ ಭ್ರಷ್ಟರಾಗಿದ್ದಾರೆ ಅವರೆಲ್ಲಾ ಮುಂದೆ **'ಕೌಶಿಕದಾಯಾದಾಃ'**[1] ವಿಶ್ವಾಮಿತ್ರರ ಮಕ್ಕಳಾಗಿ ಹುಟ್ಟಿದ್ದಾರೆ. ಕುರುಕ್ಷೇತ್ರದಲ್ಲಿ ವಿಶ್ವಾಮಿತ್ರರ ಮಕ್ಕಳಾಗಿದ್ದು ಪುನಃ ಅಲ್ಲಿ ತಾವು ಮಾಡಿದಂತಹ ತಪ್ಪಿನಿಂದಾಗಿ ಅನೇಕ ಕುತ್ಸಿತವಾದ ಯೋನಿಗಳನ್ನೆಲ್ಲ ಹೊಂದಿದ್ದಾರೆ. ಮುಂದೆ ಕ್ರಮವಾಗಿ ಉತ್ತಮವಾದಂತಹ ಬ್ರಾಹ್ಮಣ್ಯವನ್ನು ಹೊಂದಿ ಶ್ರೇಷ್ಠವಾದಂತಹ ಸ್ಥಾನವನ್ನು ಹೊಂದಿದ್ದಾರೆ ಅಂತ ಸಂಕ್ಷಿಪ್ತವಾಗಿ ಮಾರ್ಕಂಡೇಯರು ತಿಳಿಸುತ್ತಾ ಇದ್ದಾರೆ.

ಯೋಗೋ ಹಿ ದುರ್ಲಭೋ ನಿತ್ಯಮಲ್ಪಪ್ರಜ್ಞೈಃ ಕದಾಚನ ।
ಲಬ್ಧ್ವಾಪಿ ನಾಶಯನ್ತ್ಯೇನಂ ವ್ಯಸನೈಃ ಕಟುತಾಮಿತಾಃ ।।
ಅಧರ್ಮೇಷ್ವೇವ ವರ್ತನ್ತೇ ಪ್ರಾರ್ದಯನ್ತೇ ಗುರೂನಪಿ । (19.10 ಹರಿವಂಶಪರ್ವ)

---

1. 19.4 ಹರಿವಂಶಪರ್ವ



ಯೋಗದ ಮಹತ್ವವನ್ನು ತಿಳಿಸುತ್ತಾರೆ ಉತ್ತಮವಾದಂತಹ ಯೋಗ ಸಾಧನೆಯನ್ನು ಮಾಡಿ ಯೋಗ ಸಾಮರ್ಥ್ಯವನ್ನು ಪಡೆದುಕೊಳ್ಳುವುದು ಬಹಳ ಬಹಳ ಕಷ್ಟ. ಯೋಗ ಸಾಮರ್ಥ್ಯವನ್ನು ಪಡೆದುಕೊಂಡ ಮೇಲೆ ಆ ಯೋಗದಿಂದ ಭ್ರಷ್ಟರಾಗುವುದಕ್ಕೆ ಬಹಳ ದಾರಿಗಳಿವೆ ಇನ್ನೊಬ್ಬರಿಗೆ ಅವಮಾನವನ್ನು ಮಾಡಿದರೆ, ತಿರಸ್ಕಾರವನ್ನು ಮಾಡಿದರೆ ಯೋಗ ಭ್ರಷ್ಟರಾಗುತ್ತಾರೆ. ಯೋಗವನ್ನು ಉಳಿಸಿಕೊಳ್ಳಬೇಕು ಅನ್ನುವ ಅಪೇಕ್ಷೆ ಇದ್ದವರು ಎಂದಿಗೂ ಯಾರಿಗೆ ಯಾಚನೆ ಮಾಡಬಾರದೋ ಅಂತಹ ಪಾಪಿಷ್ಟರನ್ನು ಕುರಿತು ಎಂದಿಗೂ ಯಾಚನೆ ಮಾಡಬಾರದು, ಶರಣಾಗತ ರಕ್ಷಣೆಯನ್ನು ಮಾಡಬೇಕು, ಎಂದಿಗೂ ಕೂಡ ದೀನರನ್ನು ತಿರಸ್ಕಾರ ಮಾಡಬಾರದು, ಉನ್ಮಾದದಿಂದ ಯಾರಿಗೂ ಅವಮಾನ ಮಾಡಬಾರದು. ವಿಹಿತವಾದ ಆಹಾರ ವಿಹಾರಗಳನ್ನು ಮಾಡುತ್ತಾ ಧ್ಯಾನ ಅಧ್ಯಯನ ಪಾಠ ಪ್ರವಚನಾದಿಗಳಲ್ಲಿ ಆಸಕ್ತರಾಗಿಬೇಕು. ಮಾಂಸಭಕ್ಷಣ, ಮದ್ಯಪಾನ ಮೊದಲಾದ ಕಾರ್ಯಗಳಲ್ಲಿ ಆಸಕ್ತರಾಗಿರಬಾರದು, ಸಜ್ಜನರಿಗೆ ಜ್ಞಾನಿಗಳಿಗೆ ದ್ರೋಹವನ್ನು ಮಾಡಬಾರದು, ಕೇವಲ ಆತ್ಮಸ್ತುತಿ ಅದರಲ್ಲಿ ಆಸಕ್ತರಾಗಿ ಉತ್ತಮರ ದ್ರೋಹ, ಉತ್ತಮರ ನಿಂದೆ, ಆತ್ಮಶ್ಲಾಘನೆ ತನ್ನನ್ನು ತಾನು ಹೊಗಳಿಕೊಳ್ಳುವುದು, ದೊಡ್ಡವರ ನಿಂದೆಯನ್ನು ಮಾಡುವುದು ಇಂಥವುಗಳನ್ನು ಎಂದಿಗೂ ಮಾಡಬಾರದು. ಈ ರೀತಿ ಯಾರು ನಿಯಮಗಳನ್ನು ಪರಿಪಾಲನೆ ಮಾಡುತ್ತಾರೆ ಅಂಥವರು ಆ ಯೋಗವನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯ ಇದೆ ಆದ್ದರಿಂದ ಆ ಎಲ್ಲ ಮಹಾನುಭಾವರು ಪೂರ್ವದಲ್ಲಿ ಭರದ್ವಾಜರ ಪುತ್ರರಾಗಿ, ವಿಶ್ವಾಮಿತ್ರರ ಪುತ್ರರಾಗಿ ಅನೇಕ ಪಕ್ಷಿ ಮೊದಲಾದ ಯೋನಿಗಳನ್ನು ಹೊಂದಿ ಕೊನೆಗೆ ಮೃಗ ಪಕ್ಷಿ ಇತ್ಯಾದಿ ಯೋನಿಗಳಲ್ಲಿ ಬಂದು ಪುನಃ ಉತ್ತಮವಾದ ಬ್ರಾಹ್ಮಣ್ಯವನ್ನು ಪಡೆದು ಸದ್ಗತಿಯನ್ನು ಹೊಂದಿದ್ದಾರೆ ಅನ್ನುವ ಕಥೆಯನ್ನು ಕೇಳಿ ನೀನು ತಿಳಿಯಬೇಕಾದದ್ದು ಭೀಷ್ಮಾಚಾರ್ಯ ಎಂದಿಗೂ ಕೂಡ ಯೋಗವನ್ನು ಕಳೆದುಕೊಳ್ಳುವುದು ಬೇಡ ಆ ಯೋಗ ಸಾಮರ್ಥ್ಯವನ್ನು ಚೆನ್ನಾಗಿ ಉಳಿಸಿಕೊಳ್ಳಬೇಕು ಎಂಬುದಾಗಿ ತಿಳಿಸಿದ್ದಾರೆ. ಹದಿನೆಂಟು ವರ್ಷಗಳವರೆಗೆ ಸತತವಾಗಿ ಸನತ್ಕುಮಾರರು ಮಾರ್ಕಂಡೇಯರಿಗೆ ಉಪದೇಶ ಮಾಡಿದ್ದು, ಮಾರ್ಕಂಡೇಯರಿಗೆ ಅದು ಒಂದೇ ದಿನ ಅಂತ ಅನಿಸಿದೆಯಂತೆ.

ಅಷ್ಟಾದಶೈವ ವರ್ಷಾಣಿ ತ್ವೇಕಾಹಾಮಿವ ಮೇಽಭವತ್ ॥ (19.20 ಹರಿವಂಶಪರ್ವ)

ಕಾರಣ ಏನು ಅಂದರೆ ಅಷ್ಟು ಏಕಾಗ್ರ ಮನಸ್ಸಿನಿಂದ ಕೇಳುತ್ತಾ ಇದ್ದಾರೆ ಹಸಿವೆ ಇಲ್ಲ, ನೀರಡಿಕೆ ಇಲ್ಲ, ಪರೀಕ್ಷಿತ್ ರಾಜರು ಏಳು ದಿನಗಳವರೆಗೆ ಹೇಗೆ ಅವ್ಯಾಹತವಾಗಿ ಶ್ರೀಮದ್ಭಾಗವತದ ಶ್ರವಣವನ್ನು ಮಾಡಿದರೋ ಹಾಗೆ ಹದಿನೆಂಟು ವರ್ಷಗಳವರೆಗೆ ಆ ಸನತ್ಕುಮಾರರು ಉಪದೇಶ ಮಾಡಿದ ತತ್ವಗಳನ್ನು ಮಾರ್ಕಂಡೇಯರು ಕೇಳಿದ್ದಾರೆ. ಶಿಷ್ಯರು ಬಂದು ಹೇಳಿದರಂತೆ ಹದಿನೆಂಟು ವರ್ಷಗಳಾಯಿತು ಅಂತ ಆಗ ಗೊತ್ತಾಗಿದೆ ಅವರಿಗೆ ಅಷ್ಟು ಮೈಮೇಲೆ ಎಚ್ಚರ ಇಲ್ಲದಂತೆ ನಿರಂತರವಾಗಿ ಆ ಭಗವಂತನ ಮಹಿಮೆಯನ್ನು, ಈ ಎಲ್ಲ ಪಿತೃ ದೇವತೆಗಳ ಮಹಿಮೆಯನ್ನು ಚೆನ್ನಾಗಿ ತಿಳಿದಿದ್ದಾರೆ ಎಂಬುದಾಗಿ ತಿಳಿಸುತ್ತಾರೆ. ಮುಂದೆ ಸನತ್ಕುಮಾರರು ಹದಿನೆಂಟು ವರ್ಷಗಳ ಉಪದೇಶವನ್ನು ಮಾಡಿ ಅದೃಶ್ಯರಾದ ಮೇಲೆ ಪ್ರತ್ಯಕ್ಷವಾಗಿ ನಾನು ಅದನ್ನೆಲ್ಲ ಕಂಡಿದ್ದೇನೆ ಕುರುಕ್ಷೇತ್ರದಲ್ಲಿ ಆ ಎಲ್ಲ ವಿಪ್ರರನ್ನ.

ಬ್ರಹ್ಮದತ್ತೋಽಭವದ್ ರಾಜಾ ಯಸ್ತೇಷಾಂ ಸಪ್ತಮೋ ದ್ವಿಜಃ ।
ಪಿತೃವರ್ತೀತಿ ವಿಖ್ಯಾತೋ ನಾಮ್ನಾ ಶೀಲೇನ ಕರ್ಮಣಾ ॥ (20.3 ಹರಿವಂಶಪರ್ವ)

ಅಲ್ಲಿ ಬ್ರಹ್ಮದತ್ತ ಅಂತ ಒಬ್ಬ ರಾಜ ಈ ಏಳು ಜನರ ಪೈಕಿ ಒಬ್ಬ ಏಳನೆಯ ಜನ್ಮದಲ್ಲಿ ಅವನು ಬ್ರಹ್ಮದತ್ತ ಅಂತ ಆಗಿ ಹುಟ್ಟಿರುತ್ತಾನೆ ಅದರ ಹಿಂದಿನ ವೃತ್ತಾಂತವನ್ನೆಲ್ಲ ಮುಂದೆ ತಿಳಿಸುತ್ತಾರೆ. ಹಿಂದೆ ಹೇಳಿದ ಹಾಗೆ ಅಣುಹ ಎಂಬ

ರಾಜನಿಂದ ಕೃತ್ವೀ ಎಂಬ ಶುಕಾಚಾರ್ಯರ ಮಗಳಲ್ಲಿ ಈ ಬ್ರಹ್ಮದತ್ತ ಹುಟ್ಟಿರುತ್ತಾನೆ ಕಾಮ್ಪಿಲ್ಯ ನಗರದಲ್ಲಿ ಅವನ ವಂಶವನ್ನೆಲ್ಲ ಹೇಳುತ್ತಾರೆ. ಈ ಅಣುಹ ಯಾರು, ಯಾರ ಕಾಲದಲ್ಲಿ ಇದ್ದ ಅಂತ ಕೇಳಿದಾಗ ಅದಕ್ಕೆಲ್ಲ ಭೀಷ್ಮಾಚಾರ್ಯರು ಉತ್ತರವನ್ನು ಕೊಡುತ್ತಾರೆ ಯುಧಿಷ್ಠಿರನಿಗೆ ಪ್ರತೀಪ ರಾಜನ ಕಾಲದಲ್ಲಿ ಇದ್ದಂತಹ ರಾಜ. ಪ್ರತೀಪ ರಾಜ ಅಂದರೆ ಭೀಷ್ಮಾಚಾರ್ಯರ ಪಿತಾಮಹ, ಭೀಷ್ಮಾಚಾರ್ಯರ ತಂದೆ ಶಂತನು ಮಹಾರಾಜ ವರುಣ ದೇವರ ಅವತಾರ ಅವನು ಯಾರನ್ನು ಮುಟ್ಟುತ್ತಾ ಇದ್ದ ಅವರಿಗೆ ರೋಗಗಳ ಪರಿಹಾರವಾಗುತ್ತಾ ಇತ್ತು ಅಂತಹ ಮಹಾನುಭಾವ ಶಂತನು ಮಹಾರಾಜ. ಆ ಶಂತನುವಿನ ತಂದೆ ಪ್ರತೀಪ ರಾಜ, ಪ್ರತೀಪ ರಾಜನ ಕಾಲದಲ್ಲಿ ಇರುವಂತಹ ಈ ಮಹಾನುಭಾವ ಈ ಬ್ರಹ್ಮದತ್ತ. ಈ ಬ್ರಹ್ಮದತ್ತನ ಒಂದು ದೊಡ್ಡ ಶಕ್ತಿ ಅಂದರೆ ಎಲ್ಲ ಪಶು ಪಕ್ಷಿ ಕ್ರಿಮಿಕೀಟಗಳ ಭಾಷೆ ಅವನಿಗೆ ಗೊತ್ತಿತ್ತು ಶ್ರೀಪಾದರಾಜರ ಕಥೆಯಲ್ಲಿ ನಾವು ಕೇಳುತ್ತೇವೆ ಶ್ರೀಪಾದರಾಜರಿಗೆ ಎಲ್ಲ ಪ್ರಾಣಿಗಳ ಭಾಷೆ ಗೊತ್ತಿತ್ತು ಅಂತ. ವ್ಯಾಸರಾಜರು ಶ್ರೀಪಾದರಾಜರ ಹತ್ತಿರ ಅಧ್ಯಯನಕ್ಕೆ ಇರುವಾಗ ಅವರು ಚಿಂತನವನ್ನು ಮಾಡುತ್ತಾ ಇರುವಾಗ ಸರ್ಪ ಬಂದರೆ ಆ ಸರ್ಪದ ಭಾಷೆಯಲ್ಲಿ ಸರ್ಪಕ್ಕೆ ಮಾತನಾಡಿ ಕೊಟ್ಟು ಕಳುಹಿಸುತ್ತಿದ್ದರಂತೆ ಶ್ರೀಪಾದರಾಜರು. **'ಸರ್ಪಾದಿತಿರ್ಯಗ್ಭಾಷಾವೇದಿನೇ ನಮಃ'** ಅಂತ ಶ್ರೀಪಾದರಾಜರ ಬಗ್ಗೆ ಒಂದು ವಿಶಿಷ್ಟವಾದ ಶ್ಲಾಘನೆ ಇದೆ ಅಂತಹ ಮಹಾನುಭಾವರು ಅಂತ ಕೇಳುತ್ತೇವೆ ಹಾಗೆ ಈ ಬ್ರಹ್ಮದತ್ತ ರಾಜನಿಗೆ ಎಲ್ಲ ಪ್ರಾಣಿಗಳ ಭಾಷೆ ಎಲ್ಲ ಗೊತ್ತಿತ್ತು. ಎಲ್ಲರಿಗೂ ಹಿತವನ್ನು ಬಯಸುವಂತಹ ಶ್ರೇಷ್ಠನಾಗಿರುವಂತಹ ರಾಜ ಇವನಿಗೆ ಶ್ರೇಷ್ಠರಾದ ಗಾಲವರು, ಉತ್ತಮವಾದಂತಹ ಯೋಗಾಚಾರ್ಯರು ಅವರು ಜೊತೆಗಿದ್ದಾರೆ, ಕಂಡರೀಕ ಅಂತನ್ನುವ ಒಬ್ಬ ಮಂತ್ರಿ ಇವನ ಜೊತೆಗಿದ್ದಾನೆ. ಈ ರೀತಿ ಇವರೆಲ್ಲರ ಜೊತೆಗೆ ಈ ಬ್ರಹ್ಮದತ್ತ ರಾಜ್ಯವನ್ನು ಆಳುತ್ತಾ ಇದ್ದಾನೆ.

ಮುಂದೆ ಇವನ ವಂಶದಲ್ಲಿ ಹಸ್ತೀ ಅಂತನ್ನುವ ರಾಜ ಬರುತ್ತಾನೆ ಅವನಿಂದಲೇ ಹಸ್ತಿನಾವತಿ ಪಟ್ಟಣ ಆಯಿತು ಅಂತ ಹೇಳುತ್ತಾರೆ. ಇದೇ ವಂಶದಲ್ಲಿ ಮುಂದೆ ನೀಪ ಅನೇಕ ರಾಜರುಗಳ ಹೆಸರು ಹೇಳಿದ್ದಾರೆ ನೀಪ ಅಂತ ಒಬ್ಬ ರಾಜ ಆಗುತ್ತಾನೆ, ನೀಪನಿಗೆ ನೂರಾ ಒಂದು ಜನ ಮಕ್ಕಳು ಆಗುತ್ತಾರೆ, ಅವರೆಲ್ಲರಿಗೂ ನೀಪರು ಅಂತ ಕರೆಯುತ್ತಾರೆ. ಅದೇ ವಂಶದಲ್ಲಿ ಸಮರ ಅಂತ ಅವನು ಹೆಸರಿಗೆ ತಕ್ಕ ಹಾಗೆ ಯುದ್ಧದಲ್ಲಿ ಬಹಳ ಪ್ರೀತಿ ಅವನಿಗೆ ಅಂತಹ ಸಮರ ಎಂಬ ರಾಜ ಇದೆ ಕಾಂಪಿಲ್ಯ ನಗರದಲ್ಲಿ ಆಗುತ್ತಾನೆ. ಆವನ ವಂಶದಲ್ಲಿಯೇನೆ ಮುಂದೆ ವಿಭ್ರಾಜ ಅನ್ನುವ ರಾಜ ಆ ವಿಭ್ರಾಜನ ಮಗನೇ ಅಣುಹ ಅಂದರೆ ಈ ಬ್ರಹ್ಮದತ್ತ ಎಂಬಂತಹ ರಾಜ ಬ್ರಹತ್ಕ್ಷತ್ರನ ವಂಶದಲ್ಲಿ ಬಂದಿದ್ದಾನೆ ಎಂಬ ಮಾತನ್ನು ತಿಳಿಸುತ್ತಾ ಇದ್ದಾರೆ. ಬ್ರಹತ್ಕ್ಷತ್ರನ ವಂಶದಲ್ಲಿ ಬಂದವನೇ ಹಸ್ತೀ, ಹಸ್ತಿಯ ಹೆಸರಿನಲ್ಲಿ ಹಸ್ತಿನಾವತಿ ಆಯಿತು, ಮುಂದೆ ಬಂದವ ನೀಪ, ಆ ನೀಪನ ವಂಶದಲ್ಲಿ ಬಂದಂಥವನು ವಿಭ್ರಾಜ, ವಿಭ್ರಾಜನ ಮಗ ಅಣುಹ, ಅಣುಹನ ಹೆಂಡತಿ ಕೃತ್ವೀ ಶುಕಾಚಾರ್ಯರ ಮಗಳು ಆ ಶುಕಾಚಾರ್ಯರ ಮಗಳಲ್ಲಿ ಅಣುಹನಿಂದ ಹುಟ್ಟಿದವನೇ ಈ ಬ್ರಹ್ಮದತ್ತ. ಅವನು ಪ್ರತೀಪ ರಾಜನ ಕಾಲದಲ್ಲಿ ಇದ್ದಂತಹ ರಾಜ ಎಲ್ಲ ಪ್ರಾಣಿಗಳ ಭಾಷೆಯನ್ನು ತಿಳಿದುಕೊಂಡಂತಹ ಅತ್ಯಂತ ಶ್ರೇಷ್ಠನಾದಂಥಹ ರಾಜ ಇವನು.

ಆ ವಿಭ್ರಾಜ ಇವನು ಪುನಃ ಬ್ರಹ್ಮದತ್ತನ ಮಗನಾಗಿ ಹುಟ್ಟುತ್ತಾನೆ ಅಂದರೆ ತನ್ನ ಮೊಮ್ಮಗನ ಮಗನಾಗಿ ಹುಟ್ಟುತ್ತಾನೆ ಮತ್ತೆ ವಿಭ್ರಾಜನ ಮಗನೇ ಅಣುಹ, ಅಣುಹನ ಮಗ ಬ್ರಹ್ಮದತ್ತ, ಬ್ರಹ್ಮದತ್ತನ ಮಗನಾಗಿ ಪುನಃ ವಿಭ್ರಾಜ ವಿಶಕ್ಷೇನ ಎಂಬ ಹೆಸರಿನಿಂದ ಮತ್ತೆ ಹುಟ್ಟಿ ಬರುತ್ತಾನೆ. ಆ ಬ್ರಹ್ಮದತ್ತನಿಗೆ ಮತ್ತೊಬ್ಬ ಮಗ ಸರ್ವಸೇನ ಅಂತ ವಿಶಕ್ಷೇನ ಅಂತ ತನ್ನ ಪಿತಾಮಹನೇ ಹುಟ್ಟಿ ಬಂದದ್ದು ಜೊತೆಗೆ ಸರ್ವಸೇನ ಅಂತ ಮಗ ಇರುತ್ತಾನೆ. ಆ ಸರ್ವಸೇನ ಎಂಬಂತಹ ಮಗನಿಗೆ ಒಂದು ಗುಬ್ಬಿ ಎರಡು ಕಣ್ಣುಗಳನ್ನು ಕಿತ್ತಿ ಅವನನ್ನು ಕುರುಡನನ್ನಾಗಿ ಮಾಡಿಬಿಡುತ್ತದೆ ಅಂತಹ ಶ್ರೇಷ್ಠನಾದ ರಾಜಕುಮಾರ ಆದರೆ ಪೂಜನೀಯ ಎಂಬ ಹೆಸರಿನ ಒಂದು ಗುಬ್ಬಿ ಅವನ ಕಣ್ಣುಗಳನ್ನು ಕಿತ್ತಿ ಹಾಕುತ್ತದೆ ಅಂತನ್ನುವ ಮಾತನ್ನು ಇಲ್ಲಿ ತಿಳಿಸುತ್ತಾರೆ ಅದರ ಕಥೆಯನ್ನು ಮುಂದೆ ಹೇಳುತ್ತಾರೆ.

ಈ ವಂಶದಲ್ಲಿ ಬಂದಂತಹ ಈ ನೀಪರನ್ನ ಸಮಗ್ರವಾಗಿ ಉಗ್ರಾಯುಧ ಅನ್ನುವಂತಹ ಒಬ್ಬ ರಾಜ ನಿರ್ಮೂಲನೆ ಮಾಡಿಬಿಡುತ್ತಾನೆ ಅಂತ ಹೇಳುತ್ತಾರೆ ಯಾಕೆ ಅಂತ ಯುಧಿಷ್ಠಿರರು ಪ್ರಶ್ನೆ ಕೇಳಿದ್ದಕ್ಕೆ ಆ ಉಗ್ರಾಯುಧ ಯಾರು, ಯಾಕೆ ಇವರನ್ನು ನಾಶ ಮಾಡುವ ಪ್ರಸಂಗ ಬಂತು ಇದನ್ನೆಲ್ಲ ಭೀಷ್ಮಾಚಾರ್ಯರು ಹೇಳುತ್ತಾರೆ. ಅಜಮೀಢ ವಂಶದಲ್ಲಿ ಬಂದ ಕೃತನೆಂಬ ರಾಜ ಕೌಶಲರಾದ ಗುರುಗಳಾದ ಹಿರಣ್ಯನಾಭರಿಂದ ಇಪ್ಪತ್ತನಾಲ್ಕು ತರಹದ ಸಾಮ ಸಂಹಿತೆಗಳನ್ನು ತಮ್ಮ ಗುರುಗಳಿಂದ ಅಧ್ಯಯನ ಮಾಡಿರುತ್ತಾನೆ. ಕಾರ್ತಿ ಸಾಮಗಳು ಅಂತ ಅವುಗಳು ಪ್ರಸಿದ್ಧವಾಗುತ್ತವೆ ಅಂತಹ ಕಾರ್ತಿ ಆ ಕೃತನ ಮಗನೇ ಉಗ್ರಾಯುಧ ಅಂತ ಆ ಉಗ್ರಾಯುಧ ಪೃಷತ ರಾಜನ ಪಿತಾಮಹನಾದಂತಹ ನೀಪನನ್ನ ಸಂಹಾರ ಮಾಡುತ್ತಾನೆ. ಪೃಷತ ರಾಜ ಅಂದರೆ ದ್ರುಪದ ರಾಜನ ತಂದೆ, ದ್ರುಪದ ರಾಜನ ತಂದೆ ಪೃಷತ ಆ ಪೃಷತನ ಪಿತಾಮಹ ನೀಪ, ಆ ನೀಪನನ್ನ ಅನೇಕ ನೀಪರಲ್ಲಿ ಒಬ್ಬ ನೀಪ ಅವನನ್ನ ಸಂಹಾರ ಮಾಡುತ್ತಾನೆ ಆ ಉಗ್ರಾಯುಧ ಸಂಹಾರ ಮಾಡಿ ಆ ಕಾಂಪಿಲ್ಯ ರಾಜ್ಯವನ್ನು ತಾನು ತನ್ನ ವಶದಲ್ಲಿ ಇಟ್ಟುಕೊಳ್ಳುತ್ತಾನೆ.

ಅದೇ ಸಂದರ್ಭದಲ್ಲಿ ಈ ಕಡೆಗೆ ಶಂತನು ಮೃತನಾಗಿರುತ್ತಾನೆ, ಶಂತನುವಿನ ಮರಣ ಆಗಿದೆ, ಪ್ರತೀಪ ರಾಜನ ಮಗ ಶಂತನು, ಶಂತನುವಿನ ಮಗ ಭೀಷ್ಮಾಚಾರ್ಯರು ಶಂತನು ಮೃತನಾಗಿದ್ದಾನೆ ಭೀಷ್ಮಾಚಾರ್ಯರು ಅಶೌಚದಲ್ಲಿದ್ದಾರೆ ಇನ್ನು. ಆ ಸಂದರ್ಭದಲ್ಲಿ ಈ ಉಗ್ರಾಯುಧ ಬಹಳ ಉನ್ಮತ್ತನಾಗಿ ತನ್ನ ದೂತನನ್ನು ಕೊಟ್ಟು ಕಳಿಸುತ್ತಾನೆ ಭೀಷ್ಮಾಚಾರ್ಯರ ಹತ್ತಿರ. ಯಾಕೆ ಅಂತ ಕೇಳಿದರೆ ಕೂಡಲೇ ನಿಮ್ಮ ತಾಯಿಯಾದ ಅರ್ಥಾತ್ ಮಲತಾಯಿಯಾದ ನಿಜವಾದ ಭೀಷ್ಮಾಚಾರ್ಯರ ತಾಯಿ ಗಂಗಾ ದೇವಿ ಆದರೆ ಶಂತನುವಿನ ಎರಡನೆಯ ಹೆಂಡತಿ ಸತ್ಯವತೀ ಆ ಸತ್ಯವತೀಯನ್ನು ಕೊಟ್ಟು ಕಳಿಸಬೇಕು. ಶಂತನು ಮೃತನಾಗಿದ್ದಾನೆ ನಿಮ್ಮ ತಾಯಿಯನ್ನು ನಾನು ಮದುವೆಯಾಗುತ್ತೇನೆ ಕೊಟ್ಟು ಕಳಿಸು ಇಲ್ಲದೇ ಇದ್ದರೆ ನಿನ್ನ ಸಂಪೂರ್ಣವಾದ ರಾಜ್ಯವನ್ನು ಧ್ವಂಸ ಮಾಡುತ್ತೇನೆ ಅಂತ ಆ ಉಗ್ರಾಯುಧ ಭೀಷ್ಮಾಚಾರ್ಯರಿಗೆ ದೂತನನ್ನು ಕೊಟ್ಟು ಸಂದೇಶ ಕಳಿಸುತ್ತಾನೆ. ಭೀಷ್ಮಾಚಾರ್ಯರಿಗೆ ಬಹಳ ಕೋಪ ಬರುತ್ತದೆ ವಿಚಿತ್ರವೀರ್ಯ ಇದ್ದಾನೆ ಅವನನ್ನು ಕೊಟ್ಟು ಕಳುಹಿಸಬಹುದು ಆದರೆ ಇನ್ನೂ ಚಿಕ್ಕ ಹುಡುಗ ಆದ್ದರಿಂದ ನಾನೇ ಹೋಗಿ ಯುದ್ಧ ಮಾಡಿ ಅವನನ್ನು ಸಂಹಾರ ಮಾಡಬೇಕು ಮಹಾ ಉನ್ಮತ್ತನಾಗಿದ್ದಾನೆ. ಈ ರೀತಿ ಪರಸ್ತ್ರೀ ಕಾಮುಕನಾಗಿ, ಯಾವುದೇ ತರಹದ ನಾಚಿಕೆ ಇಲ್ಲದೇ ಇದ್ದಂತೆ ಅದು ಸ್ವಂತ ಮಗನಾದ ನನ್ನನ್ನು ಕುರಿತು ಇಂತಹ ನೀಚವಾದ ಸಂದೇಶವನ್ನು ಕಳಿಸುತ್ತಾ ಇದ್ದಾನೆ ಅವನಿಗೆ ಸಂಹಾರವನ್ನು ಮಾಡಿ ಸರಿಯಾದ ಪಾಠವನ್ನು ಕಲಿಸಬೇಕು ಅಂತ ಭೀಷ್ಮಾಚಾರ್ಯರು ಯುದ್ಧಕ್ಕೆ ಹೊರಡುತ್ತಾರೆ.

ಎಲ್ಲ ದೊಡ್ಡ ದೊಡ್ಡ ಮಂತ್ರಿಗಳು ಹಾಗೂ ಎಲ್ಲ ಪುರೋಹಿತರು ಎಲ್ಲರೂ ಬಂದು ಭೀಷ್ಮಾಚಾರ್ಯರಿಗೆ ಹೇಳುತ್ತಾರೆ ಭೀಷ್ಮಾಚಾರ್ಯರೇ, ಎದಕ್ಕೆ ಹೊರಟಿದ್ದೀರಿ, ಯುದ್ಧಕ್ಕೆ ಅವನನ್ನು ಸಂಹಾರ ಮಾಡಲಿಕ್ಕೆ ಯುದ್ಧದಲ್ಲಿ ಅಸ್ತ್ರಗಳ ಪ್ರಯೋಗ ಮಾಡಬೇಕಲ್ಲವಾ ಮಾಡಬೇಕು ಮತ್ತೆ ಮಂತ್ರಗಳ ಪಠಣ ಮಾಡಬೇಕಾಗುತ್ತದೆ ಮತ್ತೆ ಅಶೌಚ ಇದೆ. ಯುದ್ಧ ನಡೆದಾಗ ಎಷ್ಟೋ ಜನ ಸಾಯುತ್ತಾರೆ ಆಗ ಅಶೌಚ ಇರುವುದಿಲ್ಲ ಆದರೆ ಈಗ ಇನ್ನೂ ಯುದ್ಧ ಪ್ರಾರಂಭ ಆಗಿಲ್ಲ, ನಿಮಗೆ ಅಶೌಚದ ವಾರ್ತೆ ಮೊದಲೇ ಗೊತ್ತಾಗಿದೆ. ಈ ಸಂದರ್ಭದಲ್ಲಿ ಮೊದಲೇ ಅಶೌಚದ ವಾರ್ತೆ ನಿಮಗೆ ಗೊತ್ತಿರುವಾಗ ವೇದಮಂತ್ರಗಳ ಪಠಣ ಮಾಡಿ ಅಸ್ತ್ರಗಳ ಪ್ರಯೋಗ ಮಾಡುವುದು ಹೇಗೆ, ಮಾಡುವ ಪ್ರಸಂಗ ಬಂದರೆ ಯುದ್ಧದಲ್ಲಿ ಮಾಡದೆ ಇರುವುದಕ್ಕೆ ಆಗುವುದಿಲ್ಲ ಮಾಡಲೇಬೇಕಾಗುತ್ತದೆ. ಸ್ವಲ್ಪ ತಡೆಯಿರಿ ಅಶೌಚದ ನಿವೃತ್ತಿಯಾಗಲಿ, ಪಿತೃಕಾರ್ಯ ಎಲ್ಲ ಮುಗಿಯಲಿ, ಶುದ್ಧಿ ಪುಣ್ಯಾಹವಾಚನಾದಿಗಳನ್ನು ಮಾಡಿಕೊಂಡ ಮೇಲೆ ಯುದ್ಧಕ್ಕೆ ಹೋಗಬಹುದು, ಹೌದು ಅಲ್ಲಿಯವರೆಗೂ ಅವನು ಕಾಯಬೇಕಲ್ಲ ಅವನು

ಆಕ್ರಮಣ ಮಾಡಿದರೆ ಅದಕ್ಕೆ ನಾವೆಲ್ಲ ಉಪಾಯ ಮಾಡುತ್ತೇವೆ ಅಂತ ಸ್ವಲ್ಪ ಕಾಲಾವಕಾಶ ತೆಗೆದುಕೊಂಡಿದ್ದಾರೆ. ಸಾಮ, ದಾನ, ಭೇದ, ದಂಡ ನಾವೆಲ್ಲ ಮಾಡುತ್ತ ಇರುತ್ತೇವೆ ಮೊದಲು ಸಾಮೋಯವನ್ನು ಮಾಡುತ್ತೇವೆ ದಾನ ಇವೆಲ್ಲ ಮಾಡುತ್ತಾ ಇರುತ್ತೇವೆ ಅಷ್ಟೊತ್ತಿಗೆ ನಿಮ್ಮ ಆಶೌಚ ಮುಗಿಯುತ್ತದೆ ಆಮೇಲೆ ನೀವು ದಂಡವನ್ನು ಮಾಡಬಹುದು ಅಂತ. ಅದೇ ರೀತಿ ಭೀಷ್ಮಾಚಾರ್ಯರು ಎಷ್ಟೇ ಸಿಟ್ಟು ಬಂದಿದ್ದರೂ ಕೂಡ ದೊಡ್ಡವರ ಮಾತು ವೃದ್ಧರಾದ ಹಿರಿಯರ, ಮಂತ್ರಿಗಳ, ಜ್ಞಾನಿಗಳ, ಪುರೋಹಿತರ ಎಲ್ಲರ ಮಾತಿಗೆ ಬೆಲೆಯನ್ನು ಕೊಟ್ಟು ಶಾಂತವಾಗಿ ಇರುತ್ತಾರೆ.

ಪ್ರಾಜ್ಞಾನಾಂ ವಚನಂ ಕಾಲೇ ವೃದ್ಧಾನಾಂ ಚ ವಿಶೇಷತಃ ।
ಶ್ರೋತವ್ಯಮಿತಿ ತಚ್ಛ್ರುತ್ವಾ ನಿವೃತ್ತೋಽಸ್ಮಿ ನರಾಧಿಪ ॥ (20.64 ಹರಿವಂಶಪರ್ವ)

ಯುಧಿಷ್ಠಿರನಿಗೆ ಹೇಳುತ್ತಾರೆ ಭೀಷ್ಮಾಚಾರ್ಯರು ನೋಡಪ್ಪಾ ನಮಗೆ ಕ್ರೋಧ ಇದೆ ಅಂತ ತಲೆಗೆ ಬಂದದ್ದನ್ನು ಮಾಡಬಾರದು. ದೊಡ್ಡವರ ಮಾತನ್ನು, ಜ್ಞಾನಿಗಳ ಮಾತನ್ನು ಕೇಳಬೇಕು ಅದು ನಮಗೆ ಹಿತವಾಗುತ್ತದೆ ಅವರು ದೂರದೃಷ್ಟಿಯಿಂದ ಆಲೋಚನೆಯನ್ನು ಮಾಡಿ ಹೇಳಿರುತ್ತಾರೆ. ಆದ್ದರಿಂದ ನಾನು ಯುದ್ಧಕ್ಕೆ ಹೋಗಲಿಲ್ಲ ಎಲ್ಲ ಕಾರ್ಯಗಳನ್ನು ಮುಗಿಸಿಕೊಂಡಮೇಲೆ **'ಕೃತಶೌಚಃ ಕೃತಸ್ವಸ್ತ್ಯಯನೋ ವಿಪ್ರೈಃ'**[1] ಪುಣ್ಯಾಹವಾಚನಾದಿಗಳನ್ನೆಲ್ಲಾ ಮಾಡಿಕೊಂಡು ಆಮೇಲೆ ಯುದ್ಧಕ್ಕೆ ಹೋಗಿ ಎಲ್ಲ ಅಸ್ತ್ರಗಳ ಪ್ರಯೋಗವನ್ನು ಮಾಡಿ ಆ ಉಗ್ರಾಯುಧನ ಸಂಹಾರವನ್ನು ಮಾಡಿದ್ದೇನೆ ಅಂತ ಭೀಷ್ಮಾಚಾರ್ಯರು ಹೇಳಿಕೊಡುತ್ತಾರೆ.

ಪೃಷತ ರಾಜ ಅವನ ಪಿತಾಮಹನಾಗಿರುವಂತಹ ನೀಪನನ್ನು ಈ ಉಗ್ರಾಯುಧ ಕೊಂದು ಆ ಕಾಂಪಿಲ್ಯ ನಗರವನ್ನು ತನ್ನ ವಶಕ್ಕೆ ತೆಗೆದುಕೊಂಡದಕ್ಕೆ ರಾಜ್ಯವಿಲ್ಲದೇ ಇದ್ದಂತೆ ದೂರ ಇದ್ದ. ಯಾವಾಗ ಭೀಷ್ಮಾಚಾರ್ಯರು ಆ ಉಗ್ರಾಯುಧನು ಮಾಡಿದ ಈ ತಪ್ಪಿಗಾಗಿ ಪರಸ್ತ್ರೀ ಕಾಮನೆಯ ಒಂದು ದೊಡ್ಡ ತಪ್ಪಿಗಾಗಿ ಅವನನ್ನು ಸಂಹಾರ ಮಾಡಿದರೋ ಪೃಷತ ರಾಜನಿಗೆ ಬಹಳ ಸಂತೋಷ ಆಯಿತು ತನ್ನ ರಾಜ್ಯ ತನಗೆ ಸಿಕ್ಕಿತು. ಆ ಉಗ್ರಾಯುಧ ತಮ್ಮ ಅಜ್ಜನ ರಾಜ್ಯವನ್ನು ಕಸಿದುಕೊಂಡಿದ್ದ, ಅಪಹಾರ ಮಾಡಿದ್ದ ಆ ಸಿಂಹಾಸನ ಖಾಲಿಯಾಯಿತು ತಮ್ಮ ರಾಜ್ಯ ತಮಗೆ ಮತ್ತೆ ಸಿಕ್ಕಿತು ಅಂತ ಪೃಷತ ರಾಜ ಬಂದು ಅಲ್ಲಿ ರಾಜ್ಯವನ್ನು ಆಳುತ್ತಾ ಇದ್ದಾನೆ.

ಹತೇ ನೀಪೇಶ್ವರೇ ಚೈವ ಹತೇ ಚೋಗ್ರಾಯುಧೇ ನೃಪೇ । (20.72 ಹರಿವಂಶಪರ್ವ)
ಅಹಿಚ್ಛತ್ರಂ ಸ್ವಕಂ ರಾಜ್ಯಂ ಪಿತ್ರ್ಯಂ ಪ್ರಾಪ ಮಹಾದ್ಯುತಿಃ ॥ (20.73 ಹರಿವಂಶಪರ್ವ)

ತಮ್ಮ ಪಿತ್ರಾರ್ಜಿತವಾದಂತಹ ಆ ರಾಜ್ಯವನ್ನು ಪುನಃ ಪಡೆದುಕೊಂಡಿದ್ದಾನೆ ಎಂಬುದಾಗಿ ಹೇಳುತ್ತಾರೆ ಅಹಿಚ್ಛತ್ರ ನಗರಿ ಸಂಬಂಧಿಯಾದಂತಹ ಆ ದೇಶ ಅದನ್ನು ಅವನು ಪಡೆದುಕೊಂಡಿದ್ದಾನೆ. ಮುಂದೆ ಇದರಲ್ಲಿ ಎರಡು ಭಾಗ ಪಾಂಚಾಲ ದೇಶದಲ್ಲಿ ಎರಡು ಭಾಗ ಉತ್ತರ ಪಾಂಚಾಲ, ದಕ್ಷಿಣ ಪಾಂಚಾಲ ಎಂಬುದಾಗಿ. ಅಹಿಚ್ಛತ್ರ ನಗರಿಗೆ ಸಂಬಂಧ ಪಟ್ಟಂತಹ ಏನೊಂದು ದೇಶ ಇದೆ ಅದಕ್ಕೆ ಉತ್ತರ ಪಾಂಚಾಲ ಎಂಬುದಾಗಿ ಕರೆಯುತ್ತಾರೆ ಇನ್ನೊಂದು ದಕ್ಷಿಣ ಪಾಂಚಾಲ ಅಂತ ಕಾಂಪಿಲ್ಯ ಅಂತ. ಇದೆರಡನ್ನೂ ಯಾವಾಗ ದ್ರುಪದ ರಾಜನನ್ನ ಮುಂದೆ ಅರ್ಜುನ ಸೋಲಿಸುತ್ತಾನೆ, ಆ ದ್ರುಪದ ರಾಜನನ್ನು ಕಟ್ಟಿ ತಂದು ದ್ರೋಣಾಚಾರ್ಯರ ಪಾದಕ್ಕೆ ಹಾಕುತ್ತಾನೆ ಆ ಸಂದರ್ಭದಲ್ಲಿ ದ್ರೋಣಾಚಾರ್ಯರು ಈ ದ್ರುಪದ ರಾಜನಿಂದ ಎರಡನ್ನೂ ಗೆದ್ದು ತೆಗೆದುಕೊಳ್ಳುತ್ತಾರೆ ಉತ್ತರ ಪಾಂಚಾಲ, ದಕ್ಷಿಣ

1. 20.69 ಹರಿವಂಶಪರ್ವ



ಪಾಂಚಾಲಗಳನ್ನು ಅಹಿಚ್ಛತ್ರ, ಕಾಂಪಿಲ್ಯ ಎಲ್ಲವನ್ನೂ ಸ್ವೀಕಾರ ಮಾಡುತ್ತಾರೆ. ಸ್ವೀಕಾರ ಮಾಡಿ ಪುನಃ ನೀನು ಇಟ್ಟಿಕೋ ಅಂತ ದಕ್ಷಿಣ ಪಾಂಚಾಲವನ್ನು ಅವನಿಗೆ ಕೊಡುತ್ತಾರೆ ತಾವು ಉತ್ತರ ಪಾಂಚಾಲವನ್ನು ಮಾತ್ರ ಇಟ್ಟುಕೊಳ್ಳುತ್ತಾರೆ ದ್ರೋಣಾಚಾರ್ಯರು ಅಂತ ಮುಂದಿನ ಕಥೆಯನ್ನು ಅರ್ಥಾತ್ ಆನಂತರ ನಡೆದದ್ದನ್ನು ಯುಧಿಷ್ಠಿರನಿಗೆ ಭೀಷ್ಮಾಚಾರ್ಯರು ತಿಳಿಸುತ್ತಾ ಇದ್ದಾರೆ. ಇದಕ್ಕೆಲ್ಲ ಮೂಲ ಆ ಉಗ್ರಾಯುಧನನ್ನ ಸಂಹಾರ ಮಾಡಿ ಆ ರಾಜ್ಯವನ್ನು ನಾನು ಅರ್ಥಾತ್ ಭಗವಂತ ನನ್ನಲ್ಲಿದ್ದು ಪ್ರೇರಣೆ ಮಾಡಿ ಆ ಒಂದು ರಾಜ್ಯವನ್ನು ಮರಳಿ ಪಡೆದುಕೊಂಡದ್ದಕ್ಕೆ ಅದು ದ್ರುಪದ ರಾಜನಿಗೆ ಸಿಕ್ಕಿತು, ದ್ರೋಣಾಚಾರ್ಯರಿಗೂ ಅದರೊಳಗೆ ಒಂದು ಭಾಗ ಸಿಗುವುದಕ್ಕೆ ಸಾಧ್ಯ ಆಯಿತು. ಇಲ್ಲದಿದ್ದರೇ ಆ ದುಷ್ಟನಾದ ಉಗ್ರಾಯುಧನೇ ಆ ಸಂಪೂರ್ಣವಾದಂತಹ ಪಾಂಚಾಲ ದೇಶವನ್ನು ಆಳುತ್ತಾ ಇರುವಂತಹ ಪ್ರಸಂಗ ಇತ್ತು ಎಂಬುದಾಗಿ ಭೀಷ್ಮಾಚಾರ್ಯರು ತಿಳಿಸುತ್ತಾರೆ.

ಸರಿ ಈ ಬ್ರಹ್ಮದತ್ತ ಯಾರ ಕಾಲಕ್ಕೆ ಇದ್ದ ಅನ್ನುವುದು ಗೊತ್ತಾಯಿತು ಪ್ರತೀಪ ರಾಜನ ಕಾಲಕ್ಕೆ ಇದ್ದ ಅಂತ ನಿಮ್ಮ ತಾತನ ಕಾಲಕ್ಕೆ ಸರಿ ಆಯಿತು. ಉಗ್ರಾಯುಧ ಅಜಮೀಢ ವಂಶದಲ್ಲಿ ಬಂದಂಥವನು ಇವರ ದ್ರೋಹ ಮಾಡಿದ ಅನ್ನುವುದಕ್ಕಾಗಿ ಅವರನ್ನು ಸಂಹಾರ ಮಾಡಿ ಆ ಪಾಂಚಾಲ ದೇಶದ ರಾಜ್ಯವನ್ನು ಪುನಃ ದ್ರುಪದ ರಾಜನಿಗೆ ಅರ್ಥಾತ್ ಪೃಷತ ರಾಜನಿಗೆ ಅವನ ಮಗನಾದ ದ್ರುಪದ ರಾಜನಿಗೆ ನೀವು ಒಪ್ಪಿಸಿದ್ದೀರಿ ಅಂತನ್ನುವ ಕಥೆಯೂ ತಿಳಿಯಿತು. ಆದರೆ ಆ ಒಂದು ಗುಬ್ಬಿ ಈ ಬ್ರಹ್ಮದತ್ತನೆಂಬ ರಾಜನ ಕೂಸಿನ ಸರ್ವಸೇನನ ಕಣ್ಣುಗಳನ್ನು ಕಿತ್ತಿ ಹಾಕಿತು ಅಂತ ಹೇಳಿದಿರಲ್ಲ ಅದು ಯಾಕೆ ಅಂತ ಅದರ ಕಥೆಯನ್ನು ನಮಗೆ ತಿಳಿಸಬೇಕು ಅಂತ ಕೇಳಿದಾಗ ಭೀಷ್ಮಾಚಾರ್ಯರು ಹೇಳುತ್ತಾರೆ. ಈ ಬ್ರಹ್ಮದತ್ತ ರಾಜನ ಮನೆಯಲ್ಲಿ ಒಂದು ಗುಬ್ಬಿ ಇತ್ತು, ಶುಭ್ರವಾದ ರೆಕ್ಕೆಗಳು, ಕೆಂಪು ತಲೆ, ಕಪ್ಪು ಬೆನ್ನು, ಶುಭ್ರವಾದ ಹೊಟ್ಟೆ

ಶಿತಿಪಕ್ಷಾ ಶೋಣಶಿರಾಃ ಶಿತಿಪೃಷ್ಠಾ ಶಿತೋದರೀ ॥ (20.81 ಹರಿವಂಶಪರ್ವ)

ಶಿತಿ ಅನ್ನುವುದಕ್ಕೆ ಬಿಳಿ ಕಪ್ಪು ಎರಡೂ ಅರ್ಥ ಇದೆ ಈ ರೀತಿ ಇರುವಂತಹ ಆ ಗುಬ್ಬಿ ಬಹಳ ಸುಂದರವಾದ ಸಾಧುವಾದಂತಹ ಗುಬ್ಬಿ. ಈ ಬ್ರಹ್ಮದತ್ತನಿಗೆ ಅದರ ಮೇಲೆ ಬಹಳ ಪ್ರೀತಿ ಮನೆಯಲ್ಲಿಯೇ ಗೂಡು ಕಟ್ಟಿದೆ ದಿವಸಾ ಅಲ್ಲಿಯೇ ಇರುತ್ತಾ ಇತ್ತು, ಒಳ್ಳೆಯ ಮಾತುಗಳು ಬರುತ್ತಾ ಇತ್ತು ಅದಕ್ಕೆ ಚೆನ್ನಾಗಿ ಹರಟೆ ಹೊಡೆಯುತ್ತಾ ಇತ್ತು. ಯಾಕೆ ಅಂದರೆ ಎಲ್ಲಾ ನಾನಾ ವಿಧವಾದಂತಹ ಸಮುದ್ರ ತೀರದಲ್ಲಿರುವಂತಹ ಅನೇಕ ವನಗಳು, ಪರ್ವತಗಳು ಎಲ್ಲ ಕಡೆಗೆ ಸಂಚಾರ ಮಾಡಿ ಬರಬೇಕು ಎಲ್ಲೆಲ್ಲಿ ಏನೇನು ಸುದ್ದಿ ಇದೆ ಅದು ಒಂದು ರೀತಿ ನೋಡಿದರೆ ಇವತ್ತಿನ ಕಾಲದಲ್ಲಿ ಹೇಗೆ ಕುಳಿತಲ್ಲಿಯೇನೆ ಎಲ್ಲವನ್ನು ನೋಡುವುದಕ್ಕೆ ಅನೇಕ ಈ ತರಹದ ಮಾಧ್ಯಮಗಳೆಲ್ಲ ಬಂದಿವೆ ಆ ತರಹ ಅಲ್ಲಲ್ಲಿ ಹೋಗಿ ಅಲ್ಲಲ್ಲಿ ಇರುವಂತಹ ಕ್ಷತ್ರಿಯರ ಬ್ರಾಹ್ಮಣರ ನಾನಾ ತರಹದ ರಾಜರುಗಳ ಪ್ರಜೆಗಳ ಋಷಿ ಮುನಿಗಳ ಪಕ್ಷಿಗಳ ಪಶುಗಳ ಎಲ್ಲ ವಾರ್ತೆಗಳನ್ನು ಬಂದು ರಾಜನಿಗೆ ಸುದ್ದಿ ಹೇಳಬೇಕು ಅದು ಅದನ್ನೆಲ್ಲ ಕಥೆ ಕೇಳಬೇಕು ರಾಜ. ತಾನೇನು ಅದಕ್ಕೆ ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳುತ್ತ ಇದ್ದ ಸಂತೋಷ ಪಡುವ ವಿಷಯವಾದರೆ ಸಂತೋಷ ಪಡುತ್ತಾ ಇದ್ದ ಹೀಗೆ ಎಷ್ಟೋ ದಿನಗಳವರೆಗೆ ನಡೆದಿದೆ. ಒಂದು ಪ್ರಸಂಗದಲ್ಲಿ ಈ ಕಡೆಗೆ ರಾಜನಿಗೂ ಒಂದು ಪುತ್ರೋತ್ಸವ ಆಯಿತು ಸರ್ವಸೇನ ಅಂತ ಹೆಸರಿಟ್ಟಿದ್ದಾರೆ. ಗೂಡಿನಲ್ಲಿ ಅದು ಅನೇಕ ಅಂಡಗಳನ್ನು ಇಟ್ಟಿದೆ ಅದರಲ್ಲಿ ಒಂದು ಅಂಡ ಒಡೆದು ಒಂದು ಸಣ್ಣ ಪಕ್ಷಿ ಗುಬ್ಬಿಯ ಮರಿ ಹುಟ್ಟಿದೆ ಕೈಕಾಲುಗಳು ಶ್ರೀಮದ್ಭಾಗವತದಲ್ಲಿ ಏಕಾದಶ ಸ್ಕಂಧದಲ್ಲಿ ಬರುತ್ತದೆ.

ಶಕ್ತಿಭಿರ್ದುರ್ವಿಭಾವ್ಯಾಭಿಃ ಕೋಮಲಾಂಗತನೂರುಹಾಃ । (11.7.58 ಭಾಗವತ)

ಆ ಭಗವಂತನ ಅತ್ಯದ್ಭುತವಾದ ಅಚಿಂತ್ಯವಾದ ಶಕ್ತಿ ಆ ಪುಟ್ಟ ಅಂಡದಲ್ಲಿ ಎಷ್ಟು ಅದ್ಭುತವಾದ ಬಣ್ಣದ ಪಕ್ಷಿಗಳು ಹುಟ್ಟುತ್ತವೆ ಅದರ ರೆಕ್ಕೆಗಳು, ಅದರ ಬಣ್ಣಗಳು, ಅದರ ಚುಂಚು ಅತಿ ವಿಚಿತ್ರವಾದಂತಹ ಸೃಷ್ಟಿ. ಬಭ್ರುವಕ್ಕ ಕೆಂಪು ಮಿಶ್ರವಾದಂತಹ ಕಂದು ಬಣ್ಣದ ಮುಖ, ಕೈಕಾಲುಗಳೆಲ್ಲ ಪುಟ್ಟ ಪುಟ್ಟ ಕೈಕಾಲುಗಳು, ಕಣ್ಣು ಇನ್ನು ಬಂದಿಲ್ಲ ಕೆಲವು ದಿನಗಳ ನಂತರ ಕಣ್ಣೂ ಬಂತು ಈ ರೀತಿ ನಿಧಾನವಾಗಿ ರೆಕ್ಕೆಗಳು ಪುಟ್ಟ ಪುಟ್ಟ ರೆಕ್ಕೆಗಳು ಚಿಗುರುತ್ತಾ ಇವೆ ಆ ರೀತಿ ಆ ಗುಬ್ಬಿಯ ಮರಿ ಅಲ್ಲಿ ಹುಟ್ಟಿದೆ. ಈ ಕಡೆಗೆ ಇವನಿಗೊಂದು ಮಗ ಹುಟ್ಟಿದ್ದಾನೆ ಸರ್ವಸೇನ ಅಂತ ಆ ಪಕ್ಷಿ ಇಷ್ಟು ದಿನ ಸುಮ್ಮನೆ ಹರಟೆ ಹೊಡೆಯುತ್ತಾ ಇತ್ತು, ಈಗ ಮರಿ ಆಯಿತು ಆ ಮರಿಗೆ ಆಹಾರ ಕೊಡಬೇಕು ಅಂತ ನಿತ್ಯ ಹೋಗಿ ಆಹಾರವನ್ನು ತರಬೇಕು. ಆಹಾರ ತರುವಾಗ ತನ್ನ ಮರೀಗೂ ತರುತ್ತಾ ಇತ್ತು, ಈ ರಾಜನ ಮಗನಿಗೂ ತರುತ್ತಾ ಇದೆ ಅಷ್ಟು ರಾಜನ ಸಖ್ಯ ಏನೇ ಹಣ್ಣು ಹಂಪಲೂ ಏನು ತಂದರೂ ಕೂಡ ತನ್ನ ಮರಿಗೆ ಒಂದು, ರಾಜಕುಮಾರನಿಗೂ ಒಂದು ಹೀಗೆ ಎಷ್ಟೋ ದಿನಗಳವರೆಗೆ ನಡೆದಿದೆ. ಅಲ್ಲಿರುವಂತಹ ದಾಸಿ ಈ ಪಕ್ಷಿ ಹೊರಗೆ ಹೋದಾಗ ಆ ಪುಟ್ಟ ಗುಬ್ಬಿಯ ಮರಿಯನ್ನು ತಂದು ಈ ಮಗನಿಗೆ ಸರ್ವಸೇನನಿಗೆ ಆಟ ಆಡುವುದಕ್ಕೆ ಅಂತ ಕೊಟ್ಟಿದ್ದಾಳೆ ಅವನು ಆಟ ಆಡುತ್ತಾ ಇದ್ದಾನೆ. ಹೇಳಿ ಕೇಳಿ ಕೂಸು ಅದಕ್ಕೆ ಏನು ತಿಳಿಯಬೇಕು, ಆಟ ಆಡುತ್ತಾ ಆಡುತ್ತಾ ಆ ಗುಬ್ಬಿಯ ಮರಿಯ ಕುತ್ತಿಗೆಯನ್ನು ಹಿಡಿದು ಒತ್ತಿಬಿಟ್ಟಿದ್ದಾನೆ ಅದು ಸತ್ತು ಹೋಗಿದೆ. ಗುಬ್ಬಿ ಬರುತ್ತದೆ ಎಲ್ಲಾ ಕಡೆಗೆ ಸುತ್ತಾಡಿ ಪಾಪ ಆಹಾರ ತಂದು, ಬಂದು ನೋಡುತ್ತದೆ ಮರಿ ಇಲ್ಲವೇ ಇಲ್ಲ ಅಳುತ್ತಾ ಇದೆ ಗುಬ್ಬಿ. ನಿತ್ಯವೂ ಬಂದಾಕ್ಷಣಕ್ಕೆ ಎಷ್ಟು ಉತ್ಸಾಹದಿಂದ ಪುಟು ಪುಟು ಅಂತ ಇನ್ನೂ ಹಾರಲಿಕ್ಕೆ ಬರುತ್ತಾ ಇರಲಿಲ್ಲ ಬೇಗ ಬೇಗ ಹೆಜ್ಜೆಯನ್ನಿಟ್ಟು ಮುಂದೆ ಬಂದು ಕೆಂಪು ನಾಲಿಗೆಯನ್ನು ಚಾಚಿ ಕೊಡುವ ಆಹಾರವನ್ನು ಯಾವಾಗ ಬಾಯಿಯಲ್ಲಿ ಹಾಕುತ್ತೇನೋ ಅಂತ ಕಾಯುತ್ತಾ ಬಾಯಿ ತೆಗೆದು ಕುಳಿತಿರಬೇಕು ಅದಕ್ಕೆ ಕಣ್ಣೂ ಇರುವುದಿಲ್ಲ. ಕ್ರಮವಾಗಿ ಕಣ್ಣು ಬಂತು ಅಂತ ಹೇಳಿದರು ಆದರೆ ಹುಟ್ಟಿದ ಕೂಡಲೇ ಕಣ್ಣು ಕಾಣಿಸುತ್ತಾ ಇರುವುದಿಲ್ಲ ಮಹಾಭಾರತವೇ ಹೇಳುವಂತೆ.

ಪ್ರತ್ಯಕ್ಷವಾಗಿ ನಾವು ಒಂದು ಬಾರಿ ನೋಡುವ ಪ್ರಸಂಗ ಇತ್ತು ತೀರ್ಥಯಾತ್ರೆಯನ್ನು ಮಾಡುವಾಗ ನರ್ಮದಾ ತೀರದಲ್ಲಿ ಒಂದು ಆಶ್ರಮದಲ್ಲಿ ಇಳಿದುಕೊಂಡಿದ್ದೆವು ರಾಮದೇವರ ಪೂಜೆ ಮಾಡುವಂತಹ ಪ್ರಸಂಗ ಸ್ವಲ್ಪ ಪಕ್ಕದಲ್ಲಿಯೇನೆ ಒಂದು ಗುಬ್ಬಿಯ ಗೂಡು. ಇದೇ ತರಹದ ಸಂದರ್ಭ ಪುಟ್ಟ ಪುಟ್ಟ ಮರಿಗಳು ತಾಯಿ ಬಂದೇ ಇಲ್ಲ ಇನ್ನೂ ಆಹಾರ ತರುವುದಕ್ಕೆ ಹೋಗಿರುತ್ತದೆ ಆದರೆ ಇವೆಲ್ಲ ಮರಿಗಳು ಬಾಯಿ ತೆಗೆದುಕೊಂಡು ಕೂತಿರುತ್ತವೆ ಯಾವಾಗ ತಾಯಿ ಬರುತ್ತಾಳೋ ಯಾವಾಗ ಆಹಾರ ಹಾಕುತ್ತದೋ ಗೊತ್ತಿಲ್ಲ ಅವುಗಳಿಗೆ ಬಾಯಿ ತೆಗೆದುಕೊಂಡೇ ಕೂತಿರುತ್ತವೆ ಅದು ಯಾವಾಗೋ ಬಂದು ಎಲ್ಲದರ ಬಾಯಿಯಲ್ಲಿ ಚೂರುಚೂರು ಆಹಾರ ಹಾಕುತ್ತೆ ಮತ್ತೆ ಹೋಗುತ್ತಾ ಇರುತ್ತದೆ.

ಶಕ್ತಿಭಿರ್ದುರ್ವಿಭಾವ್ಯಾಭಿಃ ಕೋಮಲಾಂಗತನೂರುಹಾಃ । (11.7.58 ಭಾಗವತ)

ಭಗವಂತನ ಅತ್ಯದ್ಭುತವಾಗಿರುವಂತಹ ಲೀಲೆ, ಅವನ ಅಚಿಂತ್ಯದ್ಭುತವಾದ ಶಕ್ತಿ, ಅವನ ಕರುಣೆ ಆ ತರಹದ ಆಹಾರವನ್ನು ಅಲ್ಲಲ್ಲಿ ಆಹಾರ ಒದಗಿಸುತ್ತಾನೆ ಅಂತ ದಾಸರು ಹೇಳತ್ತಾರಲ್ಲ ಹಾಗೆ ವಿಚಿತ್ರವಾದ ರೀತಿಯಲ್ಲಿ ಆ ಎಲ್ಲ ತಾಯಿ ತಂದೆ ಎಲ್ಲರಿಗೂ ಪ್ರೇರಣೆಯನ್ನು ಮಾಡಿ ಮಕ್ಕಳಿಗೆ ರಕ್ಷಣೆಯನ್ನು ಮಾಡುತ್ತಾನೆ ಪರಮಾತ್ಮ. ಹಾಗೆ ಪಾಪ ಇದು ನಿತ್ಯ ಬಂದಾಗ ಅದು ಓಡೋಡಿ ಬರಬೇಕು ಇವತ್ತು ಬರಲೇ ಇಲ್ಲ ನೋಡುತ್ತದೆ ಮೃತವಾಗಿ ಬಿದ್ದಿದೆ ಬಹಳ ದುಃಖ ಆಯಿತು ವಿಷಯ ತಿಳಿದಿದೆ. ವಿಷಯ ತಿಳಿದಾಕ್ಷಣಕ್ಕೆ ಬಹಳ ದುಃಖದಿಂದ ಸಿಟ್ಟಿನಿಂದ ಬಂದು ಆ ಸರ್ವಸೇನನ

ಎರಡೂ ಕಣ್ಣುಗಳನ್ನು ಕಿತ್ತಿ ಹಾಕಿದೆ **'ದಶಧರ್ಮಗತಾಸತೀ'** ಅಂತ ಹರಿವಂಶ ಮೇಲಿಂದ ಮೇಲೆ ಈ ಶಬ್ದವನ್ನು ಬಳಸುತ್ತದೆ. ದಶಧರ್ಮಗಳನ್ನು ಪಡೆದು ಅಂತ ದಶಧರ್ಮ ಅಂದರೆ

ಮತ್ತಃ ಪ್ರಮತ್ತ ಉನ್ಮತ್ತಃ ಶ್ರಾಂತಃ ಕ್ರುದ್ಧೋ ಬುಭುಕ್ಷಿತಃ ।
ತ್ವರಮಾಣಶ್ಚ ಭೀತಶ್ಚ ಲುಬ್ಧಃ ಕಾಮೀ ಚ ತೇ ದಶ ॥ (ವಿದುರನೀತಿ)

ಅತಿಯಾದ ಉನ್ಮಾದ ಅಥವಾ ಅನವಧಾನ, ಹುಚ್ಚು, ಅತಿ ಶ್ರಮ, ಅತಿಯಾದ ಕ್ರೋಧ, ಹಸಿವೆ, ಅತಿಯಾದ ಅವಸರ, ಭಯ, ಲೋಭ, ಕಾಮ ಇವುಗಳಿಗೆ ಪರವಶನಾಗಿರುವಂತಹ ವ್ಯಕ್ತಿ ಏನು ಮಾಡುತ್ತಾನೆ ಅಂತ ಗೊತ್ತಾಗುವುದಿಲ್ಲ ಅವಿವೇಕ ಇರುತ್ತದೆ ವಿವೇಕ ಕಳೆದುಕೊಂಡಿರುತ್ತಾನೆ ಅದರೊಳಗೆ ಇವಳಿಗೆ ಅತಿಯಾದ ಕ್ರೋಧ ಇದೆ ಹೀಗಾಗಿ ವಿವೇಕ ಹೋಗಿದೆ. ಇಷ್ಟು ತಾನು ಪ್ರೀತಿ ಮಾಡುತ್ತಾ ಇದ್ದರೂ ಕೂಡ ಆ ರಾಜನ ಮೇಲೆ, ರಾಜಕುಮಾರನ ಮೇಲೆ ತನ್ನ ಮಗನನ್ನು ಈ ಕೂಸು ಕೊಂದಿದೆ ಅಂತನ್ನುವ ಕ್ರೋಧದಲ್ಲಿ ವಿವೇಕವನ್ನು ಕಳೆದುಕೊಂಡು ಕಣ್ಣುಗಳನ್ನು ಕಿತ್ತಿ ಹಾಕಿದೆ ಆದರೆ ನೋಡಿ ಆ ರಾಜನಿಗೆ ಎಷ್ಟು ವಿವೇಕ ಆ ಬ್ರಹ್ಮದತ್ತ ಮಹಾನುಭಾವ ಅವನು ಹೇಳುತ್ತಾನೆ. ನೋಡಿ ಅದಕ್ಕೆ ಹೇಳಿದರು ಎಲ್ಲರ ಎಲ್ಲ ಪಶುಪಕ್ಷಿಗಳ ಭಾಷೆಯೂ ಅವನಿಗೆ ಗೊತ್ತಿತ್ತು ಅನ್ನುವುದಕ್ಕೆ ಈ ಪಕ್ಷಿ ಮಾತನಾಡಿದ ಕಥೆಯನ್ನೆಲ್ಲ ಕೇಳುತ್ತಾ ಇದ್ದ ಅವನು ಹೀಗಾಗಿ ಆ ಪಕ್ಷಿಯ ಭಾಷೆಯಲ್ಲಿಯೇ ಪಕ್ಷಿಗೆ ಹೇಳುತ್ತಾನೆ ಬ್ರಹ್ಮದತ್ತ. ನೀನು ಮಾಡಿದ್ದು ಒಳ್ಳೆಯ ಕೆಲಸ ಮಾಡಿದಿ ನನ್ನ ಮಗ ಮಾಡಿದ್ದು ತಪ್ಪು ಅವನೇನು ಪಾಪ ಕೂಸು ಅದಕ್ಕೆ ಏನು ತಿಳಿಯುತ್ತದೆ ನೀನು ಯಾಕೆ ಹೀಗೆ ಮಾಡಿದೆ ಅಂತ ಆ ಗುಬ್ಬಿಗೆ ಹೊಡೆಯಲಿಲ್ಲ ಇವನು. ನನ್ನ ಕೂಸು ನನ್ನ ಮಗು ಮಾಡಿದ್ದು ತಪ್ಪು ಅದಕ್ಕೆ ನಿನ್ನ ಮಗುವಿನ ಪ್ರಾಣವನ್ನೇ ಅವನು ಹೀರಿದ್ದಾನೆ, ನೀನು ಪ್ರಾಣ ಅಂತು ತೆಗೆದುಕೊಂಡಿಲ್ಲ ಕೇವಲ ಕಣ್ಣುಗಳನ್ನು ಕಿತ್ತಿ ಹಾಕಿದ್ದೀ ಒಂದರ್ಥದಲ್ಲಿ ನಿನ್ನ ದೊಡ್ಡಸ್ತಿಕೆಯನ್ನೇ ತೋರಿಸಿದ್ದೀ ಅವನನ್ನು ಅಂಧನನ್ನಾಗಿ ಮಾಡಿ ಶಿಕ್ಷೆ ಕೊಟ್ಟದ್ದು ಬಹಳ ಒಳ್ಳೆಯ ಕೆಲಸ ಅಂದ ಮಾತ್ರಕ್ಕೆ ನಾನು ನಿನ್ನ ಮೇಲೆ ಕೋಪ ಮಾಡಿಕೊಂಡಿದ್ದೇನೆ ಅಂತ ತಿಳಿದುಕೊಳ್ಳಬೇಡ ನನಗೆ ಯಾವ ಕೋಪವೂ ಇಲ್ಲ ನಾನು ಮಾಡಿದ ತಪ್ಪಿಗೆ ಶಿಕ್ಷೆ ಆಗಿದೆ ಅಂತ ಭಾವಿಸಿದ್ದೇನೆ. ಅವನು ಮಾಡಿದ ತಪ್ಪು ಅಂದರೆ ನಾನು ಮಾಡಿದ ತಪ್ಪು ಇದ್ದ ಹಾಗೆ ಅವನಿಗೆ ಕಣ್ಣು ಹೋಯಿತು ಕಣ್ಣು ಹೋಗಿದೆ ಮಗನಿಗೆ ಅನ್ನುವ ದುಃಖ ನನಗಾಯಿತು. ನನಗೆ ಆಗಬೇಕಾದ ಶಿಕ್ಷೆ ನನಗೆ ಆಗಿದೆ ಆದರೆ ನಮ್ಮಿಬ್ಬರ ಸಖ್ಯಕ್ಕೆ ಮಾತ್ರ ಯಾವುದೇ ಅಡ್ಡಿ ಆತಂಕಗಳು ಬರಬಾರದು ನೀನು ಇಲ್ಲಿಯೇ ಇರಬೇಕು ಗೂಡಿನಲ್ಲಿ ನಿತ್ಯದಲ್ಲಿ ಹೀಗೆ ಎಲ್ಲ ಕಡೆಗೆ ಸಂಚಾರ ಮಾಡಿಕೊಂಡು ಬಾ ಇನ್ನನೇಕ ಮರಿಗಳನ್ನು ಮತ್ತೆ ಇಲ್ಲಿಯೇ ಪಡೆಯಬಹುದು ನೀನು ಸುಖವಾಗಿ ಇರು ನನ್ನಿಂದ ನಿನಗೆ ಯಾವುದೇ ತೊಂದರೆ ಆಗುವುದಿಲ್ಲ ಅಂತ ಬೇಕಾದಷ್ಟು ಬ್ರಹ್ಮದತ್ತ ಕೇಳಿಕೊಂಡಿದ್ದಾನೆ ಪೂಜನೀಯು ಅದಕ್ಕೆ ಒಪ್ಪುತ್ತಾ ಇಲ್ಲ ಆ ಗುಬ್ಬಿ ಹೇಳುತ್ತದೆ.

ಆತ್ಮೌಪಮ್ಯೇನ ಜಾನಾಮಿ ಪುತ್ರಸ್ನೇಹಂ ತವಾಪ್ಯಹಮ್ । (20.118 ಹರಿವಂಶಪರ್ವ)

ನನ್ನ ಮಗುವಿನ ಪ್ರಾಣ ಹೋದದ್ದಕ್ಕೆ ಎಷ್ಟು ನನಗೆ ದುಃಖವಾಗಿದೆ ನಿನ್ನ ಕೂಸಿನ ಕಣ್ಣು ಹೋದದ್ದಕ್ಕೆ ನಿನಗೂ ದುಃಖವಾಗೇ ಆಗಿರುತ್ತೆ. ನನ್ನ ಮೇಲಿನ ಒಂದು ವಿಶೇಷ ಅಭಿಮಾನದಿಂದ ಏನೋ ಈಗ ನೀನು ಹತ್ತಿರ ಇರು ಅಂತ ಹೇಳಬಹುದು ನಿಜ ಆದರೆ ಯಾವುದೋ ಒಂದು ಸಂದರ್ಭದಲ್ಲಿ ನನ್ನ ಮಗನ ಕಣ್ಣನ್ನು ಕಿತ್ತಿದ ಗುಬ್ಬಿ ಇದು ಅಂತ ನಿನ್ನ ಮನಸ್ಸಿನಲ್ಲಿ ಬಂದೇ ಬರುತ್ತದೆ ಅದರಿಂದ ನನಗೆ ಏನಾದರೂ ಪೀಡೆ ಆಗುವ ಸಾಧ್ಯತೆ ಇದೆ, ಅದು ಬೇಡ ನಿನ್ನಷ್ಟಕ್ಕೆ ನೀನು ಸುಖವಾಗಿರು ನನ್ನಷ್ಟಕ್ಕೆ ನಾನು ಎಲ್ಲಿಯೋ ಸುಖವಾಗಿ ಇರುತ್ತೇನೆ. ಶುಕ್ರಾಚಾರ್ಯರು ಇದರ ಬಗ್ಗೆ ಸಾಕಷ್ಟು ಮಾತುಗಳನ್ನು ಹೇಳಿದ್ದಾರೆ ಶುಕ್ರನೀತಿಯಲ್ಲಿ,

ಕುಮಿತ್ರಂ ಚ ಕುದೇಶಂ ಚ ಕುರಾಜಾನಂ ಕುಸೌಹೃದಮ್ ।

ಕುಪುತ್ರಂ ಚ ಕುಭಾರ್ಯಾಂ ಚ ದೂರತಃ ಪರಿವರ್ಜಯೇತ್ ॥ (20.119 ಹರಿವಂಶಪರ್ವ)

ಕುಮಿತ್ರ, ಕುದೇಶ, ಕುರಾಜಾ, ಕುಸೌಹೃದ ಅಂದರೆ ಕೆಟ್ಟ ಮಿತ್ರ, ಕೆಟ್ಟ ದೇಶ, ಕೆಟ್ಟರಾಜ, ಕೆಟ್ಟ ಮೈತ್ರಿ, ಕೆಟ್ಟ ಪುತ್ರ, ಕೆಟ್ಟ ಹೆಂಡತಿ ಇವರ ಜೊತೆಗೆ ಸಹವಾಸವನ್ನು ಮಾಡಬಾರದು ಅಂತ ಶುಕ್ರಾಚಾರ್ಯರು ಹೇಳುತ್ತಾರೆ ಯಾಕೆ ಅಂದರೆ ಯಾವುದೋ ಒಂದು ಕಾರಣಕ್ಕಾಗಿ ತೋರಿಕೆಗೆ ಮಿತ್ರನಾದವನಲ್ಲಿ ನಿಜವಾದ ಸೌಹಾರ್ದ ಇರುವುದಿಲ್ಲ. **'ಕುಮಿತ್ರೇ ಸೌಹೃದಂ ನಾಸ್ತಿ'**[1] ದುಷ್ಟಳಾದ ಹೆಂಡತಿಯಿಂದ ಸುಖ ಇಲ್ಲ, ದುಷ್ಟನಾದ ಮಗನಿದ್ದರೆ ಅವನಿಂದ ಯಾವುದೇ ವಿಧವಾದಂತಹ ಕುಲದ ಉದ್ಧಾರ ಆಗುವ ಕಾರ್ಯಗಳು ನಡೆಯುವುದಿಲ್ಲ. ಇನ್ನು ದುಷ್ಟನಾದ ರಾಜನಿದ್ದರೆ ಅವನಿಂದ ನ್ಯಾಯ, ಸತ್ಯ, ಧರ್ಮ ಇದು ಸಮಾಜಕ್ಕೆ ಒದುಗುವುದಿಲ್ಲ, ಪ್ರಜೆಗಳಿಗೆ ಸಿಗುವುದಿಲ್ಲ ಅನ್ನುವುದಕ್ಕಾಗಿ ಅಂಥವರ ಸಹವಾಸವನ್ನು ಮಾಡಬಾರದು ಎಂಬುದಾಗಿ ಹೇಳುತ್ತಾರೆ.

ನ ವಿಶ್ವಸೇದವಿಶ್ವಸ್ತೇ ವಿಶ್ವಸ್ತೇ ನಾತಿವಿಶ್ವಸೇತ್ ।

ವಿಶ್ವಾಸಾದ್ ಭಯಮುತ್ಪನ್ನಂ ಮೂಲಾನ್ಯಪಿ ನಿಕೃನ್ತತಿ ॥ (20.123 ಹರಿವಂಶಪರ್ವ)

ಎಷ್ಟು ವಿಶ್ವಾಸ ಮಾಡಬೇಕೋ ಅಷ್ಟು ಮಾಡಬೇಕು ವಿಶ್ವಾಸ ಮಾಡದೆ ಇದ್ದವನಲ್ಲಿ ವಿಶ್ವಾಸ ಮಾಡಲೇಬಾರದು, ವಿಶ್ವಾಸ ಮಾಡುವವನಲ್ಲಿಯೂ ಅತಿಯಾದ ವಿಶ್ವಾಸವನ್ನು ಮಾಡಬಾರದು ಅಂತ ಇದೆ ಆದ್ದರಿಂದ ಇಷ್ಟು ದಿನಗಳವರೆಗೆ ನಿನ್ನ ಹತ್ತಿರ ವಾಸ ಮಾಡಿದ್ದು ಸಾಕು ಇನ್ನು ನನ್ನ ದಾರಿಯನ್ನು ನಾನು ನೋಡಿಕೊಳ್ಳುತ್ತೇನೆ ಅಂತ ಅದು ಹೇಳಿ ಅಲ್ಲಿಂದ ಹೊರಟಿದೆ ಎಂಬುದಾಗಿ ತಿಳಿಸುತ್ತಾರೆ. ಬಹಳ ವಿಸ್ತೃತವಾಗಿ ಶುಕ್ರನೀತಿಯ ಉಪದೇಶವನ್ನು ಮಾಡುತ್ತದೆ ಅದು.

ಅಮಿತ್ರಾದುನ್ನತಿಂ ಪ್ರಾಪ್ಯ ನೋನ್ನತೋಽಸ್ಮೀತಿ ವಿಶ್ವಸೇತ್ ।

ತಸ್ಮಾತ್ ಪ್ರಾಪ್ಯೋನ್ನತಿಂ ನಶ್ಯೇತ್ ಪ್ರಾವಾರ ಇವ ಕೀಟಕಃ ॥ (20.136 ಹರಿವಂಶಪರ್ವ)

ಶತ್ರುವಿನಿಂದ ತನಗೇನೋ ಲಾಭ ಆಯಿತು ಅಂತ ಹೇಳಿ ಆ ಶತ್ರುವಿನ ಹತ್ತಿರ ಹೋಗಬಾರದು ಪ್ರಾರಂಭದಲ್ಲಿ ಉನ್ನತಿ ಅಂತ ಅನ್ನಿಸಿದರೂ ಕೂಡ ಯಾವ ಹೊತ್ತಿಗೆ ಅವನತಿಯಾಗುತ್ತದೆ ಹೇಳಲಿಕ್ಕೆ ಬರುವುದಿಲ್ಲ, ಒಂದು ಪ್ರಾವಾರ ಅಂದರೆ ಒಂದು ತರಹದ ರೆಕ್ಕೆ ಇರುವಂತಹ ಇರುವೆ ಆದು ರೆಕ್ಕೆ ಬಂದಾಗ ಹಾರುತ್ತೆ ಹಾರಿ ಬಿದ್ದು ಬಿಡುತ್ತದೆ ಮತ್ತೆ ರೆಕ್ಕೆ ಇಲ್ಲದೇ ಇರುವಾಗ ಎಲ್ಲಿಯೋ ಒಂದು ಕಡೆಗೆ ಇರುತ್ತದೆ ರೆಕ್ಕೆ ಬಂದಿದೆ ಅಂತ ಹಾರಿ ಹೋಗಬೇಕು ಅಂತ ಹೋಗುತ್ತದೆ ಹೆಚ್ಚು ಹಾರಲಿಕ್ಕೆ ಆಗುವುದಿಲ್ಲ ಅದಕ್ಕೆ ಬೇರೆ ಪಕ್ಷಿಗಳ ಹಾಗೆ ಸ್ವಲ್ಪ ಹಾರಿ ಆ ರೆಕ್ಕೆಗಳ ಶಕ್ತಿ ಅಷ್ಟೇ ಮುಗಿದು ಹೋಯಿತು ಮತ್ತೆ ಬಿದ್ದು ಹೋಗುತ್ತದೆ, ಪಕ್ಷಿಗಳು ಬಂದು ಅದನ್ನು ತಿಂದುಬಿಡುತ್ತವೆ. ಹಾಗೆ ಶತ್ರುಗಳ ಸಹಾಯದಿಂದ ಪ್ರಾರಂಭದಲ್ಲಿ ಸ್ವಲ್ಪ ಉನ್ನತಿ ಆದ ಹಾಗೆ ಮತ್ತೆ ಅನ್ನಿಸುತ್ತದೆ ಯಾವಾಗ ಬಂದು ಆಕ್ರಮಣ ಮಾಡುತ್ತಾರೆ ಅಂತ ಹೇಳಿಲಿಕ್ಕೆ ಗೊತ್ತಾಗುವುದಿಲ್ಲ ಆದ್ದರಿಂದ ಬಹಳ ಎಚ್ಚರದಿಂದ ಇರಬೇಕು ಅದಕ್ಕೋಸ್ಕರವಾಗಿ ನಾನು ಇಲ್ಲಿ ಹೆಚ್ಚು ಹೊತ್ತು ಇರೋದಿಲ್ಲ ಅಂತ ಅಲ್ಲಿಂದ ಹೊರಟು ಹೋಗಿದ್ದಾಳೆ. ಈ ರೀತಿ ಆ ಪೂಜನೀ ಎಂಬಂತಹ ಗುಬ್ಬಿ ಯಾವ ಕಾರಣಕ್ಕೋಸ್ಕರ ಇದೇ ಬ್ರಹ್ಮದತ್ತನ ಮಗನಾದ ಸರ್ವಸೇನನ ಕಣ್ಣನ್ನು ಕಿತ್ತಿದ್ದು ಅಂತ ಭೀಷ್ಮಾಚಾರ್ಯರು ಯುಧಿಷ್ಠಿರರನಿಗೆ ತಿಳಿಸಿಕೊಟ್ಟಿದ್ದಾರೆ.

---

1. 20.120 ಹರಿವಂಶಪರ್ವ



ಅದಾದ ಮೇಲೆ ಮತ್ತೆ ಮುಂದೆ ಹೇಳುತ್ತಾರೆ ಹಿಂದೆ ಭಾರದ್ವಾಜರ ಮಕ್ಕಳು ಮೊದಲನೆಯ ಜನ್ಮದಲ್ಲಿ ಮಾಡಿದ ಯಾವುದೋ ತಪ್ಪಿನಿಂದಾಗಿ ಯೋಗ ಭ್ರಷ್ಟರಾಗಿ ಮುಂದಿನ ಜನ್ಮದಲ್ಲಿ ಕುರುಕ್ಷೇತ್ರದೊಳಗೆ ವಿಶ್ವಾಮಿತ್ರರ ಮಕ್ಕಳಾಗಿ ಹುಟ್ಟುತ್ತಾರೆ. ಅದರಲ್ಲಿ ವಿಶ್ವಾಮಿತ್ರರ ಮಕ್ಕಳಲ್ಲಿಯೂ ಐವತ್ತು ಜನ ವಿಶ್ವಾಮಿತ್ರರ ಆಜ್ಞೆಯನ್ನು ಪರಿಪಾಲನೆ ಮಾಡುತ್ತಾರೆ ಆ ಶುನಶ್ಯೇಫನನ್ನು ಅಣ್ಣ ಅಂತ ಸ್ವೀಕಾರ ಮಾಡುತ್ತಾರೆ. ಅವರಿಗೆ ಅನುಗ್ರಹ ಮಾಡುತ್ತಾರೆ ವಿಶ್ವಾಮಿತ್ರರು ತಮ್ಮ ಆಜ್ಞೆಯನ್ನು ಪರಿಪಾಲನೆ ಮಾಡಿದ್ದಕ್ಕೆ ಯಾರು ಆಜ್ಞೆಯನ್ನು ಪರಿಪಾಲನೆ ಮಾಡುವುದಿಲ್ಲ ಅಂತಹ ಐವತ್ತು ಜನ ಮಕ್ಕಳಿಗೆ ಶಾಪವನ್ನು ಕೊಡುತ್ತಾರೆ. ಆ ಶಾಪಗ್ರಸ್ಥರಾದಂತಹ ವಿಶ್ವಾಮಿತ್ರರ ಪುತ್ರರಲ್ಲಿ ಈ ಏಳು ಜನ ಭರದ್ವಾಜರ ಮಕ್ಕಳಾಗಿ ಹಿಂದಿನ ಜನ್ಮದಲ್ಲಿ ಹುಟ್ಟಿದವರು ಈಗ ವಿಶ್ವಾಮಿತ್ರರ ಏಳು ಜನ ಮಕ್ಕಳಾಗಿ ಕುರುಕ್ಷೇತ್ರದಲ್ಲಿ ಹುಟ್ಟುತ್ತಾರೆ. ವಾಗ್ದುಷ್ಟ, ಕ್ರೋಧನ, ಹಿಂಸ್ರ, ಪಿಶುನ, ಕವಿ, ಖಸೃಮ, ಪಿತೃವರ್ತಿ ಅನ್ನುವ ಹೆಸರಿನಿಂದ ಏಳು ಜನ ಅಂದರೆ ಇವರ ಹಿಂದಿನ ವೃತ್ತಾಂತವನ್ನು ಹೇಳುತ್ತಾರೆ. ಬ್ರಹ್ಮದತ್ತನ ಕಥೆಯನ್ನು ಹೇಳಿದರಲ್ಲ ಇದು ಕೊನೆಯ ಜನ್ಮ ಇದು ಏಳನೆಯ ಜನ್ಮ ಈ ಪಿತೃವರ್ತಿಯೇ ಬ್ರಹ್ಮದತ್ತನಾದದ್ದು. ಈಗ ಮೊದಲಿನಿಂದ ಭರದ್ವಾಜರ ಮಕ್ಕಳಾಗಿ ಮೊದಲನೆಯ ಜನ್ಮ, ಎರಡನೆಯ ಜನ್ಮ ವಿಶ್ವಾಮಿತ್ರರ ಪುತ್ರರಾಗಿ ಹಿಂದಿನ ವೃತ್ತಾಂತ ಎಲ್ಲ ನನಗೆ ಕಣ್ಣಾರೆ ಕಂಡಿದೆ ಅದನ್ನು ಹೇಳುತ್ತೇನೆ ಕೇಳು ಅಂತ ಮಾರ್ಕಂಡೇಯರು ಹೇಳುತ್ತಾ ಇದ್ದಾರೆ. ಇವರೆಲ್ಲ ಕೌಶಿಕರ, ವಿಶ್ವಾಮಿತ್ರರ ಮಕ್ಕಳು, ಗಾರ್ಗ್ಯರ ಶಿಷ್ಯರು ವಿಶ್ವಾಮಿತ್ರರು ಶಾಪ ಕೊಟ್ಟು ಆಚೆಗೆ ಹೊರಟು ಹೋಗಿದ್ದಾರೆ ಇವರೆಲ್ಲ ಗಾರ್ಗ್ಯ ಋಷಿಗಳ ಆಶ್ರಮದಲ್ಲಿ ಬ್ರಹ್ಮಚರ್ಯದಿಂದ ಇದ್ದು ಅಧ್ಯಯನವನ್ನು ಮಾಡಿದ್ದಾರೆ.

ಒಂದು ಬಾರಿ ಗಾರ್ಗ್ಯ ಋಷಿಗಳು ಒಂದು ಆಕಳನ್ನು ಕೊಟ್ಟರು ಮೇಯಿಸಿಕೊಂಡು ಬನ್ನಿ ಅಂತ ಈ ಏಳು ಜನ ಇಷ್ಟೊತ್ತು ಹೆಸರು ಕೇಳಿದರಲ್ಲ ವಾಗ್ದುಷ್ಟ ಮೊದಲಾದವರೆಲ್ಲ ಆ ಜನ ಎಲ್ಲ ಅಲ್ಲಿಂದ ಹೊರಟಿದ್ದಾರೆ. ಅವರೆಲ್ಲ ಸ್ವಲ್ಪ ಹೆಸರಿಗೆ ತಕ್ಕ ಹಾಗೇನೆ ಇದ್ದರು ವಾಗ್ದುಷ್ಟ ಮಾತು ಸ್ವಲ್ಪ ಕೆಟ್ಟದ್ದು ನಿಷ್ಠುರ ಭಾಷಣ ಮಾಡುವ, ಕ್ರೋಧನ ಸಿಟ್ಟು ಬಹಳ, ಹಿಂಸ್ರ ಹಿಂಸೆ ಮಾಡುವ ಸ್ವಭಾವ, ಪಿಶುನ ಚಾಡಿಕೋರ, ಕವಿ ಇವನು ಮಾತ್ರ ಪರಲೋಕದ ಭಯ ಉಳ್ಳವ ಸ್ವಲ್ಪ ಅಯ್ಯೋ ಹೀಗೆಲ್ಲ ಮಾಡಬಾರದು, ಪಾಪ ಬಂದರೆ ಹೇಗೆ ಅನ್ನುವ ಭಯ ಇದ್ದವ, ಖಸೃಮ ಖ ಅಂದರೆ ಆಕಾಶ ಖಸೃಮ ಅಂದರೆ ಸ್ವಲ್ಪ ಪರಲೋಕ ಸಾಧನೆಯನ್ನು ಮಾಡೋಣ ಅಂತನ್ನುವ ಚಿಂತನ ಇದ್ದವ, ಪಿತೃವರ್ತಿ ತಂದೆಗೆ ಅನುವರ್ತನೆ ಮಾಡಿಕೊಂಡು ಇದ್ದಂತಹ ವ್ಯಕ್ತಿ ಕೊನೆಯವ ಏಳನೆಯದವ ಹೀಗೆ ಏಳು ಜನ ಹೆಸರಿಗೆ ತಕ್ಕಂತೆ ಇದ್ದವರು. ಈ ಏಳು ಜನರೂ ಕೂಡ ಗಾರ್ಗ್ಯ ಋಷಿಗಳ ಆಶ್ರಮದಲ್ಲಿ ಇದ್ದಾಗ ಆಕಳನ್ನು ಮೇಯಿಸಿಕೊಂಡು ಬನ್ನಿ ಅಂತ ಕೊಟ್ಟುಕೊಳಿಸಿದರು, ಚಿಕ್ಕ ಮಕ್ಕಳು ಆಕಳನ್ನು ಮೇಯಿಸಿಕೊಂಡು ಬರುವುದಕ್ಕೆ ಅಂತ ಹೋಗಿದ್ದಾರೆ. ಬರುವಾಗ ಅವರಿಗೆ ಬಹಳ ಹಸಿವೆ ಆಯಿತು ಇದೀಗ ಹೇಳಿದ ಹಾಗೆ **'ದಶಧರ್ಮಗತಃ'** ಬುಭುಕ್ಷ ಅಂದರೆ ಹತ್ತು ತರಹ ತಪ್ಪು ಮಾಡುವ ವ್ಯಕ್ತಿ ವಿವೇಕ ಕಳೆದುಕೊಳ್ಳುವ ವ್ಯಕ್ತಿ ಒಟ್ಟು ಹತ್ತು ಪ್ರಸಂಗಗಳನ್ನು ಹಿಂದೆ ಹೇಳಿದರಲ್ಲ ಅದರಲ್ಲಿ ಒಂದು ಪ್ರಸಂಗ ಬುಭುಕ್ಷ ಅತಿಯಾದ ಹಸಿವೆ. ಹಸಿವೆ ಬಹಳ ಆಗಿದೆ ಏನು ಮಾಡುವುದು ಅಂತ ಆಕಳು ಕರುವನ್ನು ಮೇಯಿಸಿಕೊಂಡು ಬರುವುದಕ್ಕೆ ಹೊರಟಂತಹ ಈ ಮಹಾನುಭಾವರು,ನೋಡಿ ಆ ಕಡೆಗೆ ವಿಶ್ವಾಮಿತ್ರರ ಶಾಪ ಅದರ ಪ್ರಭಾವವೋ ಏನೋ ಅನ್ನುವ ಹಾಗೆ ಆ ಗೋಹತ್ಯೆಯನ್ನು ಮಾಡಿದ್ದಾರೆ. ಗೋಹತ್ಯೆಯನ್ನು ಮಾಡಿ ಆದೇ ಮಾಂಸವನ್ನು ಭಕ್ಷಣೆ ಮಾಡಿದ್ದಾರೆ ಬಂದು ಗಾರ್ಗ್ಯರಿಗೆ ಸುಳ್ಳು ಹೇಳಿದ್ದಾರೆ ಒಂದು ಹುಲಿ ಬಂದು ಈ ಆಕಳನ್ನು ತಿಂದು ಹೋಗಿಬಿಟ್ಟಿತು ನಾವೇನು ಮಾಡೋಣ ಕರು ಒಂದಿದೆ ತೆಗೆದುಕೊಳ್ಳಿ ಅಂತ, ಸರಿ ಅಂತ ಹೇಳಿ ಗಾರ್ಗ್ಯರು ಸುಮ್ಮನಾಗಿದ್ದಾರೆ.

ಆದರೆ ಇವರಿಗೆ ಮಾತ್ರ ಆ ಮಹಾಪಾಪ ಗೋಹತ್ಯೆಯನ್ನು ಮಾಡಿದ ಮಹಾಪಾಪ, ಗೋಮಾಂಸ ಭಕ್ಷಣ ಮಾಡಿದ ಮಹಾಪಾಪ, ಗುರುಗಳ ಎದುರಿಗೆ ಸುಳ್ಳು ಹೇಳಿದಂತಹ ಪಾಪ ಆ ಮಹಾಪಾಪ ಇವರಿಗೆ ಬಂದಿದೆ.

ಅದರಲ್ಲಿಯೇ ಮಧ್ಯದೊಳಗೆ ಕವಿ ಮತ್ತು ಖಸೃಮ ಅವರಿಬ್ಬರೂ ನಿಷೇಧ ಮಾಡುವ ಪ್ರಯತ್ನ ಮಾಡಿದ್ದಾರೆ ಅವರಿಗೆ ಸ್ವಲ್ಪ ಪಾಪ ಭೀತಿ ಇತ್ತು ಅಲ್ಲ ಖಸೃಮ ಅವನಿಗೆ ಪರಲೋಕದ ಸಾಧನೆ ಮಾಡಬೇಕು ಅನ್ನುವ ಅಪೇಕ್ಷೆ ಇದ್ದವರು, ಅವರಿಬ್ಬರೂ ವಿರೋಧ ಮಾಡಲು ಪ್ರಯತ್ನ ಮಾಡಿದ್ದಾರೆ ಅವರ ಮಾತು ನಡೆಯಲಿಲ್ಲ. ಈ ಏಳನೆಯವ ಪಿತೃವರ್ತೀ ಇವನು ನಿತ್ಯ ಶ್ರಾದ್ಧವನ್ನು ಮಾಡತಕ್ಕಂತಹ ವ್ಯಕ್ತಿ ಪಿತೃವರ್ತೀ ಅಂತ ಅವನ ಹೆಸರು ಇದ್ದ ಹಾಗೆ ತಕ್ಕ ಹಾಗೆ ವಿಶೇಷವಾಗಿ ಅವನಿಗೆ ಪಿತೃಭಕ್ತಿ ಶ್ರಾದ್ಧಾನ್ನಿಕ ಅಂತ ಹರಿವಂಶ ಅವನನ್ನು ಕರೆಯುತ್ತದೆ. ಅವನಿಗೆ ಪಿತೃಭಕ್ತಿ ಬಹಳ ಇರುವುದರಿಂದ ಅವನು ಹೇಳಿದ ಇದನ್ನು ಪಿತೃ ದೇವತೆಗಳಿಗೆ ವೇದಮಂತ್ರದಿಂದ ಅರ್ಪಣೆಯನ್ನಾದರೂ ಮಾಡಿ, ಪ್ರೋಕ್ಷಣೆಯನ್ನು ಮಾಡಿ ಆಮೇಲೆ ಸ್ವೀಕಾರ ಮಾಡರಿ ಅಂತ. ಗೋಮಾಂಸ ಭಕ್ಷಣೆಯನ್ನೇ ಮಾಡಬಾರದು, ಗೊಹತ್ಯೆಯನ್ನೇ ಮಾಡಬಾರದು ಕನಿಷ್ಟ ಪಕ್ಷ ಇದನ್ನ ಪ್ರೋಕ್ಷಣೆ ಮಾಡಿ ಪಿತೃ ದೇವತೆಗಳಿಗೆ ಅರ್ಪಣೆ ಮಾಡಿಯಾದರೂ ತೆಗೆದುಕೊಳ್ಳಿ ಅಂತ ಅವನು ಉಪದೇಶ ಮಾಡಿದ. ಅಂತೂ ಮಾಡುವ ಅಧರ್ಮದಲ್ಲಿಯೇ ಏನೋ ಒಂದು ಸ್ವಲ್ಪ ದೇವರ ಸ್ಮರಣೆಯನ್ನು ಮಾಡಿದ್ದಾರೆ, ಪಿತೃ ದೇವತೆಗಳ ಸ್ಮರಣೆಯನ್ನು ಮಾಡಿ ಅದನ್ನು ಭಕ್ಷಣೆ ಮಾಡಿದ್ದಾರೆ ಅದು ಮಹಾಪಾಪ ಅವರಿಗೆ ಬಂದಿದೆ. ಈ ರೀತಿ ಗುರು ದ್ರೋಹವನ್ನು ಮಾಡಿದ್ದಕ್ಕೆ ಗೋಹತ್ಯೆಯನ್ನು ಮಾಡಿದ್ದಕ್ಕೆ ಇವರೆಲ್ಲರೂ ಕೂಡ ಪಶುಗಳ, ಹಿಂಸೆಯನ್ನು ಮಾಡುವಂತಹ ವ್ಯಾಧನ ಪುತ್ರರಾಗಿ ದಶಾರ್ಣ ದೇಶದಲ್ಲಿ ಹುಟ್ಟಿದ್ದಾರೆ.

ಜಾತಾ ವ್ಯಾಧಾ ದಶಾರ್ಣೇಷು ಸಪ್ತ ಧರ್ಮವಿಚಕ್ಷಣಾಃ ॥ (21.18 ಹರಿವಂಶಪರ್ವ)

ಆದರೆ ನೋಡಿ ಎಷ್ಟು ವಿಚಿತ್ರ ಗುರು ದ್ರೋಹ ಮಾಡಿದ್ದಾರೆ ಅನ್ನುವುದಕ್ಕೋಸ್ಕರ ಗೋಹತ್ಯೆ ಮಾಡಿದ್ದಾರೆ ಆ ಮಹಾ ಪಾಪ ಮಾಡಿದ್ದಾರೆ, ಗೋಮಾಂಸ ಭಕ್ಷಣ ಮಾಡಿದ್ದಾರೆ ಅನ್ನುವುದಕ್ಕೋಸ್ಕರ ಈ ರೀತಿ ಅವರು ಮೃತರಾಗಿ ಜನ್ಮಾಂತರದಲ್ಲಿ ವ್ಯಾಧ ಪುತ್ರರಾಗಿ ಹುಟ್ಟಿದ್ದಾರೆ. ಯಾಕೆ ಅಂದರೆ ಹಿಂಸೆ ಮಾಡುವುದೇ ನಿಮ್ಮ ಪ್ರವೃತ್ತಿಯಾದ ಮೇಲೆ ಆ ತರಹದ ಕಾರ್ಯವನ್ನೇ ಮಾಡಿ ಹಾಗಾದರೆ ಅನ್ನುವ ರೀತಿಯಲ್ಲಿ ಭಗವಂತ ಅವರನ್ನು ವ್ಯಾಧ ಪುತ್ರರನ್ನಾಗಿ ಹುಟ್ಟಿಸಿದ್ದಾನೆ. ಆದರೆ ಆ ಗೋವಿಗೆ ಪ್ರೋಕ್ಷಣೆಯನ್ನು ಮಾಡಿ ಪಿತೃ ದೇವತೆಗಳ ಸ್ಮರಣೆಯನ್ನೊಂದು ಮಾಡಿದ್ದಾರಲ್ಲ ಅದೊಂದು ಸ್ವಲ್ಪ ಪುಣ್ಯವೂ ಇತ್ತು, ಪಾಪ ಇದೆ ಪಾಪದ ಜೊತೆಗೆ ಪುಣ್ಯವೂ ಒಂದು ಸ್ವಲ್ಪ ಸೇರಿಕೊಂಡಿದೆ.

ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ । (2.16 ಭ ಗೀತಾ)

ಆ ಅಲ್ಪವಾದ ಪುಣ್ಯಕ್ಕೂ ಫಲ ಕೊಡದೆ ಇರಬಾರದು ಅನ್ನುವುದಕ್ಕೋಸ್ಕರ ಪರಮಾತ್ಮ ಅವರಿಗೆ ಪೂರ್ವಜನ್ಮದ ಸ್ಮರಣೆಯನ್ನು ಕೊಟ್ಟಿದ್ದಾನೆ ಅದೇ ಒಂದು ದೊಡ್ಡ ಸೌಭಾಗ್ಯ. ಆ ಪೂರ್ವಜನ್ಮದ ಸ್ಮರಣೆ ಏನು ಕೆಲಸ ಮಾಡಿಸಿದೆ ಅಂದರೆ ಅಯ್ಯೋ ಜನ್ಮಾಂತರದಲ್ಲಿ ನಾವು ಮಹಾಪಾಪ ಮಾಡಿ ಇಂತಹ ಪರಿಸ್ಥಿತಿ ಬಂತು ಇನ್ನು ಮೇಲೆ ನಾವು ತಪ್ಪು ಮಾಡುವುದು ಬೇಡ, ಸಾತ್ವಿಕರಾಗಿ ಇರೋಣ ಅನ್ನುವ ಭಾವನೆ. ನೋಡಿ ವ್ಯಾಧರಾಗಿ ಇಂತಹ ಉತ್ತಮ ಋಷಿ ಪುತ್ರರಾಗಿ ಹುಟ್ಟಿದಾಗಲೂ ಅಧರ್ಮವನ್ನು ಮಾಡಿದ್ದಾರೆ ಆದರೆ ವ್ಯಾಧ ಪುತ್ರರಾಗಿ ಹುಟ್ಟಿದರೂ ಕೂಡ ಅತ್ಯಂತ ಧಾರ್ಮಿಕರಾಗಿದ್ದಾರೆ. ಯಾಕೆ, ಆ ಪೂರ್ವಜನ್ಮದ ಸ್ಮರಣ ಇದೆ ತಾವು ಮಾಡಿದ ತಪ್ಪಿನ ಅರಿವಾಗಿದೆ ಅವರಿಗೆ ಹೀಗಾಗಿ

ಸ್ವಕರ್ಮನಿರತಾಃ ಸರ್ವೇ ಲೋಭಾನೃತವಿವರ್ಜಿತಾಃ । (21.19 ಹರಿವಂಶಪರ್ವ)

ಲೋಭ ಇಲ್ಲ, ಸುಳ್ಳು ಮಾತನಾಡುವುದಿಲ್ಲ, ತಮಗೆ ವಿಹಿತವಾದ ಕರ್ಮಗಳನ್ನಷ್ಟೇ ಮಾಡುತ್ತಾ ಇದ್ದಾರೆ. ಪ್ರಾಣಧಾರಣೆ ಬದುಕುವುದಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರ ತಮ್ಮ ವ್ಯಾಧ ವೃತ್ತಿಯನ್ನ ಆಶ್ರಯಣ ಮಾಡಿ ಪಶು,

ಪಕ್ಷಿ, ಮೃಗ ಇತ್ಯಾದಿಗಳನ್ನು ಹಿಂಸೆ ಮಾಡಿ ಅಷ್ಟರಿಂದ ತಾವು ಜೀವನವನ್ನು ಮಾಡುತ್ತಾ ಇದ್ದಾರೆ ಹೆಚ್ಚಿನ ಹಿಂಸೆಯನ್ನು ಮಾಡುತ್ತಾ ಇಲ್ಲ ಇನ್ನುಳಿದ ಕಾಲ ಎಲ್ಲ ದೇವರ ಧ್ಯಾನ ಮಾಡುತ್ತಾ ಇದ್ದರಂತೆ.

ಶೇಷಂ ಧ್ಯಾನಪರಾಃ ಕಾಲಮನುಧ್ಯಾಯನ್ತಿ ಕರ್ಮ ತತ್ । (21.20 ಹರಿವಂಶಪರ್ವ)

ಈ ರೀತಿ ಹಿಂದಿನ ಹೆಸರು ಕೇಳಿದ್ದೀರಿ ವಾಗ್ದುಷ್ಟ, ಕ್ರೋಧನ, ಹಿಂಸ್ರ ಅಂತ ಬ್ರಾಹ್ಮಣ ಪುತ್ರರಾದಾಗ ಈ ಹೆಸರುಗಳು. ವ್ಯಾಧ ಪುತ್ರರಾದಾಗ ಪೂರ್ವಜನ್ಮದ ಸ್ಮರಣೆಯಿಂದ ಸಾತ್ವಿಕ ವೃತ್ತಿಯನ್ನು ಆಶ್ರಯಣ ಮಾಡಿದ್ದರಾದ್ದರಿಂದ ಅವರ ಹೆಸರುಗಳು ಹೇಗಿತ್ತು ಅಂದರೆ ನಿರ್ವೈರ, ನಿರ್ವೃತಿ, ಶಾಂತ, ನಿರ್ಮನ್ಯು, ಕೃತಿ, ವೈಧಸ, ಮಾತ್ರವರ್ತೀ ಅಂತಹ ಶ್ರೇಷ್ಠವಾದ ಶ್ರೇಷ್ಠವಾದ ಹೆಸರುಗಳನ್ನು ಪಡೆದಿದ್ದಾರೆ. ಆ ರೀತಿ ಅವರು ಜೀವನವನ್ನು ಮಾಡುತ್ತಾ ಇದ್ದಾರೆ ಎಂಬುದಾಗಿ ಹೇಳುತ್ತಾರೆ. **'ಹಿಂಸಾಧರ್ಮರತೈಃ'**[1] ಅಂತ ಒಂದು ಮಾತನ್ನು ಹರಿವಂಶ ಹೇಳುತ್ತದೆ ಹಿಂಸೆ ಅಂದಮೇಲೆ ಧರ್ಮ ಏನು ಅಂತ ಅದಕ್ಕೆ ವ್ಯಾಖ್ಯಾನಕಾರರು ಅನ್ನುತ್ತಾರೆ. ಹಿಂಸೆ ಮಾಡುವಾಗಲೂ ಪುಟ್ಟ ಪುಟ್ಟ ಮರಿಗಳ ಹಿಂಸೆ ಮಾಡಬಾರದಂತೆ, ಗರ್ಭಿಣಿಯಾದ ಪಕ್ಷಿಗಳೋ, ಮೃಗಗಳೋ ಇದ್ದರೆ ಮೃಗಿ ಅವುಗಳ ಹಿಂಸೆಯನ್ನು ಮಾಡಬಾರದು, ಮೈಥುನದಲ್ಲಿ ಆ ಪಶು ಪಕ್ಷಿಗಳು ಆಸಕ್ತವಾದಾಗ ಹಿಂಸೆ ಮಾಡಬಾರದು ಅಂತ ವ್ಯಾಧರಿಗೂ ಕೆಲವು ಧರ್ಮಗಳಿವೆ. **'ಬಾಲ ಗರ್ಭಿಣೀ ಮೈಥುನಾಸಕ್ತ್ಯಾದಿ ವರ್ಜನಂ'** ಈ ತರಹದ ಧರ್ಮಗಳನ್ನೆಲ್ಲಾ ಅನುಷ್ಠಾನದಲ್ಲಿ ಇಟ್ಟುಕೊಂಡು ಎಷ್ಟು ಅನುವಾರ್ಯವೋ ಅಷ್ಟು ಮಾತ್ರ ಹಿಂಸೆಯನ್ನು ಮಾಡಿ ಇನ್ನುಳಿದ ಹೊತ್ತು ತಂದೆ-ತಾಯಿಗಳ ಸೇವೆಯನ್ನು ಮಾಡುತ್ತಾರೆ, ದೇವರ ಧ್ಯಾನವನ್ನು ಮಾಡುತ್ತಾರೆ.

ಮಾತಾ ಚ ಪೂಜಿತಾ ವೃದ್ಧಾ ಪಿತಾ ಚ ಪರಿತೋಷಿತಃ । (21.22 ಹರಿವಂಶಪರ್ವ)

ತಂದೆ-ತಾಯಿಗಳ ವಿಶೇಷವಾದ ಸೇವೆಯನ್ನು ಮಾಡಿ ಅನುಗ್ರಹ ಪಡೆದಿದ್ದಾರೆ, ಭಗವಂತನ ಧ್ಯಾನವನ್ನು ಮಾಡಿ ಪರಮಾತ್ಮನ ಅನುಗ್ರಹವನ್ನು ಪಡೆದಿದ್ದಾರೆ ಈ ಒಂದು ಪುಣ್ಯದ ಪ್ರಭಾವದಿಂದ ಮುಂದಿನ ಜನ್ಮದಲ್ಲಿ ಕಾಲಂಜರ ಪರ್ವತದೊಳಗೆ ಮೃಗಗಳಾಗಿ ಹುಟ್ಟಿದ್ದಾರೆ. **'ಜಾತಿಸ್ಮರಾ ಮೃಗಾಃ'**[2] ಮತ್ತೆ ಯಥಾ ಪ್ರಕಾರ ಆ ತಂದೆ-ತಾಯಿಗಳ ಸೇವೆಯ ಮಹಾಪುಣ್ಯದ ಫಲವಾಗಿ ಪೂರ್ವಜನ್ಮದ ಸ್ಮರಣೆ ಮತ್ತೆ ಇದೆ ಅವರಿಗೆ. ಆ ಪೂರ್ವಜನ್ಮದ ಸ್ಮರಣೆ ಇದೆ ಆದರೆ ಮಾಡಿದ ಪಾಪವೂ ಸ್ವಲ್ಪ ಇತ್ತು ಅನ್ನುವುದಕ್ಕೋಸ್ಕರ ಆ ಹಿಂಸೆಯ ಪಾಪದಿಂದ ಸ್ವಲ್ಪ ದುಃಖವನ್ನು ಅನುಭವಿಸುತ್ತಾರೆ. ಆದರೆ ತಂದೆ-ತಾಯಿಗಳ ಸೇವೆ, ಹರಿ ಧ್ಯಾನ ಮಾಡಿದ ವಿಶೇಷವಾದ ಆ ಪುಣ್ಯ, ಆ ತಪಸ್ಸಿನ ಫಲವಾಗಿ ಅವರು ಪೂರ್ವಜನ್ಮದ ಸ್ಮರಣೆ ಇದ್ದು ಹೆಚ್ಚಿನ ಕುಕೃತ್ಯಗಳನ್ನು ಮಾಡದಂತೆ ಆ ಮೃಗ ಜನ್ಮದಲ್ಲಿಯೂ ಭಗವದ್ಧ್ಯಾನಾಸಕ್ತರಾಗಿ ಇದ್ದಾರೆ. ಏನು ಅವರ ಹೆಸರು ಉನ್ಮುಖ ಮೇಲೆ ಮುಖ ಅಂದರೆ ಆಹಾರ ತಿನ್ನುವುದು ಬಹಳ ಕಷ್ಟ ಆಗುತ್ತಾ ಇತ್ತು ಬಗ್ಗಿ ಯಾಕೆ ಅಂದರೆ ಅವನು ಹಿಂದಿನ ಜನ್ಮದಲ್ಲಿ ಅಂದರೆ ಈಗ ವ್ಯಾಧನಾಗುವಕ್ಕಿಂತಲೂ ಮೊದಲಿನ ಜನ್ಮದಲ್ಲಿ ವಿಶ್ವಾಮಿತ್ರನ ಪುತ್ರನಾದಾಗ ವಾಗ್ದುಷ್ಟನಾಗಿದ್ದ. ಆ ವಾಗ್ದುಷ್ಟ ಎರಡನೆಯ ಜನ್ಮದಲ್ಲಿ ನಿರ್ವೈರನಾಗಿ ಈಗ ಮತ್ತೆ ಉನ್ಮುಖನಾಗಿದ್ದಾನೆ ಆ ಹಿಂದಿನ ಜನ್ಮದಲ್ಲಿ ಏನು ಮಾತಿನಿಂದ ಎಲ್ಲರಿಗೆ ತೊಂದರೆ ಕೊಟ್ಟನಲ್ಲ ಅನ್ನುವುದಕ್ಕೋಸ್ಕರ ಉನ್ಮುಖನಾಗಿ ಈಗ ಹುಟ್ಟಿದ್ದಾನಂತೆ. ಆಮೇಲೆ ಕ್ರೋಧನ ಹೋದ ಜನ್ಮದಲ್ಲಿ ಈಗ ನಿತ್ಯ ಸಂತ್ರಸ್ತನಾಗಿದ್ದಾನೆ, ಪಿಶುನ ಚಾಡಿಕೋರ ಈಗ ಸ್ತಬ್ಧಕರ್ಣ ಕಿವಿನೇ ಕೇಳಿಸುವುದಿಲ್ಲ ಅವನಿಗೆ ಬರೀ ಚಾಡಿ ಹೇಳಿ ಹೇಳಿ ಆ ಪಾಪದಿಂದ ಈಗ ಕಿವುಡನಾಗಿ ಹುಟ್ಟಿದ್ದಾನೆ. ಹಿಂಸ್ರ ಅಂತ ಹಿಂದಿನ ಜನ್ಮದಲ್ಲಿ ಈಗ ಅವನು

1. 21.22 ಹರಿವಂಶಪರ್ವ, 2. 21.24 ಹರಿವಂಶಪರ್ವ

ಕಣ್ಣು ಕಳೆದುಕೊಂಡಿದ್ದಾನೆ. ಆಗ ಕವಿ ವಿಶೇಷವಾಗಿ ಪರಲೋಕಕ್ಕೆ ಹೆದರುವಂತಹ ವ್ಯಕ್ತಿ ಈಗ ಪಂಡಿತನಾಗಿ ಹುಟ್ಟಿದ್ದಾನೆ. ಖಿಸೃಮ ಅಂತ ಅಂದರೆ ಪರಲೋಕ ಸಾಧನೆ ಮಾಡಬೇಕು ಅಂತ ಅಪೇಕ್ಷೆ ಇದ್ದಂತಹ ವ್ಯಕ್ತಿ ಸ್ವಲ್ಪ ಧಾರ್ಮಿಕ ಅವನು ಈಗ ಘಸ್ಮರನಾಗಿ ಹುಟ್ಟಿದ್ದಾನೆ. ಘಸ್ಮರ ಅಂದರೆ ಯಥೇಚ್ಛವಾಗಿ ಭಕ್ಷಣೆ ಮಾಡುವ ಯೋಗ ಯಾಕೆಂದರೆ ಅವನು ಒಳ್ಳೆಯವನಿದ್ದ ಯಥೇಷ್ಟ ಆಹಾರ. ಇನ್ನು ಪಿತೃವರ್ತೀ ಅವನು ಈಗ ಭೋಕ್ತ ಆಗಿ ಹುಟ್ಟಿದ್ದಾನೆ ನಾದೀ ಅಂತ ಅನ್ನಿಸಿಕೊಂಡು ವಿಶೇಷವಾಗಿ ಸುಗಮವಾದ ಸಂಗೀತದ ಶ್ರವಣವನ್ನು ಮಾಡಿ ಆನಂದ ಪಡುತ್ತ ಇದ್ದ ಮೃಗನಾದರೂ ಸಂಗೀತ ಶ್ರವಣ ಮಾಡಿ ಆನಂದ ಪಡುವ ಸೌಭಾಗ್ಯ ಕಾರಣ ಪಿತೃಗಳ ಸೇವೆಯನ್ನು ಮಾಡಿದ್ದಕ್ಕೆ ಹೀಗೆ ಅವರವರ ಕರ್ಮಗಳಿಗೆ ತಕ್ಕಂತೆ ಜನ್ಮವನ್ನು ಪಡೆದಿದ್ದಾರೆ.

ನಾವೆಲ್ಲ ಎಷ್ಟು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು ಯಾವ ರೀತಿ ದೊಡ್ಡವರ ಸೇವೆಯನ್ನು ಮಾಡುತ್ತೇವೆ ಆ ರೀತಿಯ ಶುಭಫಲವನ್ನು ಪಡೆಯುತ್ತೇವೆ. ದೊಡ್ಡವರ ದ್ರೋಹವನ್ನು ಮಾಡಿದರೆ, ಜ್ಞಾನಿಗಳ ದ್ರೋಹ, ತಂದೆ-ತಾಯಿಗಳ ದ್ರೋಹವನ್ನು ಮಾಡಿದರೆ ಅದಕ್ಕೆ ತಕ್ಕಂತೆ ನರಕದಲ್ಲಿಯೂ ದುಃಖವನ್ನು ಅನುಭವಿಸ ಬೇಕಾಗುತ್ತದೆ, ಹುಟ್ಟಿ ಬಂದ ಮೇಲೆ ಜನ್ಮಾಂತರದಲ್ಲಿಯೂ ಕೂಡ ದುಃಖವನ್ನು ಅನುಭವಿಸಬೇಕು ಅನ್ನುವುದನ್ನು ಹರಿವಂಶ ಈ ರೀತಿ ತಿಳಿಸುತ್ತಾ ಇದೆ. ಸರಿ, ಅದೆಲ್ಲ ಮತ್ತೆ ಯಥಾ ಪ್ರಕಾರ ಜಾತಿಸ್ಮರಣ ಇದೆ ಅವರೆಲ್ಲ ಮೃಗ ಆಗಿ ಹುಟ್ಟಿದರೂ ಕೂಡ ಹೀಗಾಗಿ ಆ ಜಾತಿಸ್ಮರಣವನ್ನು ಪಡೆದಂಥವರು. ಹಿಂದೆ ಅಂದರೆ ಭಾಗವತದಲ್ಲಿಯೂ ಕೂಡ ಬರುತ್ತದಲ್ಲ ಆ ಭರತ ಚಕ್ರವರ್ತಿ ಮೃಗ ಆ ಜಿಂಕೆಯ ಸಹವಾಸದಿಂದ ಜಿಂಕೆಯ ಮೇಲೆ ಬಹಳ ಪ್ರೀತಿಯನ್ನು ಮಾಡಿ ಅದನ್ನೇ ನೋಡುತ್ತಾ ಪ್ರಾಣ ಬಿಟ್ಟದ್ದಕ್ಕೆ ತಾನೂ ಜಿಂಕೆಯಾಗಿ ಹುಟ್ಟಿದ ಆದರೆ ಜಾತಿಸ್ಮರಣ ಅಂದರೆ ಪೂರ್ವಜನ್ಮದ ಸ್ಮರಣ ಇತ್ತು ಅಂತ ಅನ್ನುವುದಕ್ಕೋಸ್ಕರ ಈ ಕಾಲಞ್ಜರ ಪರ್ವತದಲ್ಲಿ ಮೃಗನಾಗಿ ಹುಟ್ಟಿದರೂ ಹೆಚ್ಚು ಆಹಾರಾದಿಗಳ ಸೇವನೆಯನ್ನು ಮಾಡದೆ ಶೀಘ್ರದಲ್ಲಿ ಪ್ರಾಣವನ್ನು ಪರಿತ್ಯಾಗ ಮಾಡಿದ ಅಂತ.

ಆಸನ್ ವನಚರಾಃ ಕ್ಷಾನ್ತಾ ನಿರ್ದ್ವನ್ದ್ವಾ ನಿಷ್ಪರಿಗ್ರಹಾಃ । (21.26 ಹರಿವಂಶಪರ್ವ)

ಆ ರೀತಿ ಇವರೂ ಕೂಡ ಯಾವ ರಾಗದ್ವೇಷಾಧಿಗಳಿಲ್ಲದೇ ಇದ್ದಂತೆ, ಬದುಕುವುದಕ್ಕೆ ಎಷ್ಟು ಬೇಕೋ ಅದಕ್ಕೂ ಹೆಚ್ಚಿನ ಆಹಾರದ ಸಂಗ್ರಹವನ್ನು ಮಾಡದೆ ಇದ್ದಂತೆ ಎಲ್ಲ ಏಳು ಜನರು ಕೂಡ ಮೃಗಗಳಾಗಿ ಧರ್ಮಾಸಕ್ತವಾಗಿ ಇವೆ. ಮನುಷ್ಯರಾಗಿಯೂ ಧರ್ಮಾಸಕ್ತರಾಗಿ ಇರುವುದಿಲ್ಲ ಆದರೆ ಇವುಗಳು ಜನ್ಮಾಂತರದ ಸಂಸ್ಕಾರ ತಂದೆ-ತಾಯಿಗಳ ಸೇವೆಯ ಫಲ ಹೀಗಾಗಿ ವಿಶೇಷವಾಗಿ ಧರ್ಮಾಸಕ್ತವಾಗಿ ಇವೆ ಅರ್ಥಾತ್ ಶುಭ ಕರ್ಮಗಳನ್ನು ಮಾಡಿಕೊಂಡು **'ಯೋಗಧರ್ಮಮನುಪ್ರಾಪ್ತಾ'**[1] ಆಮೇಲೆ ಮರುಭೂಮಿಯಲ್ಲಿ ಹೋಗಿ ನೀರಿಲ್ಲದೆ ಇದ್ದಂತಹ ಸ್ಥಳದಲ್ಲಿ ಓಡಾಡಿ ಸಾಧ್ಯವಾದಷ್ಟು ಬೇಗ ಈ ಜನ್ಮವನ್ನು ಬಿಟ್ಟು ಬಿಡೋಣ ಅಂತ ಆ ಜನ್ಮವನ್ನು ಬಿಟ್ಟು ಬಿಟ್ಟಿದ್ದಾರೆ. ಹರಿವಂಶ ಹೇಳುತ್ತದೆ ಆ ಮರುಭೂಮಿಯಲ್ಲಿ ಈ ಮಹಾನುಭಾವರು ಏನು ಏಳು ಜನ ಅಲ್ಲಿ ಓಡಾಡಿದರೋ ಇವರ ಪಾದ ಚಿಹ್ನೆಗಳು ಇವತ್ತಿಗೂ ನೋಡುವುದಕ್ಕೆ ಸಿಗುತ್ತೆ ಕಾಲಞ್ಜರ ಪರ್ವತದಲ್ಲಿ ಅಂತ ಹೇಳುತ್ತದೆ.

ತೇಷಾಂ ಮರುಂ ಸಾಧಯತಾಂ ಪದಸ್ಥಾನಾನಿ ಭಾರತ ।
ತಥೈವಾದ್ಯಾಪಿ ದೃಶ್ಯನ್ತೇ ಗಿರೌ ಕಾಲಞ್ಜರೇ ನೃಪ ॥ (21.28 ಹರಿವಂಶಪರ್ವ)

1. 21.24 ಹರಿವಂಶಪರ್ವ



ಆ ಹೆಜ್ಜೆಯ ಗುರುತುಗಳು ಇವತ್ತಿಗೂ ಅಲ್ಲಿವೆ. ಆ ರೀತಿ ಅಲ್ಲಿ ಪ್ರಾಣವನ್ನು ಕಳೆದುಕೊಂಡು ಮುಂದೆ ಚಕ್ರವಾಕ ಪಕ್ಷಿಯಾಗಿ ಹುಟ್ಟಿದ್ದಾರೆ ಈ ಏಳು ಜನ ಶರದ್ವೀಪ ಅನ್ನುವಂತಹ ಕ್ಷೇತ್ರದಲ್ಲಿ ಶರದ್ವೀಪ ಜಲದ್ವೀಪ ಅಂತ ಕರೆಯುತ್ತಾರೆ ಶರ ಅಂದರೆ ಜಲ ಅಂತಹ ಶರದ್ವೀಪದಲ್ಲಿ ಇವರು ಹುಟ್ಟಿದ್ದಾರೆ. ಈಗ ನಿಃಸ್ಪೃಹ, ನಿರ್ಮಮ, ಕ್ಷಾನ್ತಾ, ನಿರ್ದ್ವನ್ದ್ವ, ನಿಷ್ಪರಿಗ್ರಹ ನಿರ್ವ್ಯತ್ತಿ, ನಿಭೃತ ಎಂಬಂತಹ ಹೆಸರುಗಳನ್ನು ಪಡೆದುಕೊಂಡು ಅವರೆಲ್ಲ ಹುಟ್ಟಿದ್ದಾರೆ. ಈ ಜನ್ಮದಲ್ಲಿಯೂ ಹೆಚ್ಚಿನ ಆಹಾರಾದಿ ಸೇವನೆಯನ್ನು ಮಾಡದೆ ಇದ್ದಂತೆ ಅಲ್ಪಾಹಾರ ಜನ್ಮಾಂತರದ ಸ್ಮರಣೆ ಇದೆ ಬೇಗನೇ ಈ ಜನ್ಮವನ್ನು ಕಳೆದುಕೊಳ್ಳೋಣ ಅಂತ ಉಪವಾಸವನ್ನು ಮಾಡಿ ಅಲ್ಪ ಆಹಾರವನ್ನು ಸ್ವೀಕಾರ ಮಾಡಿ ಪ್ರಾಣವನ್ನು ತ್ಯಾಗ ಮಾಡಿದ್ದಾರೆ ಆಮೇಲೆ ಮಾನಸ ಸರೋವರದಲ್ಲಿ ಹಂಸ ಪಕ್ಷಿಗಳಾಗಿ ಹುಟ್ಟಿದ್ದಾರೆ ಈ ಏಳು ಜನ. ಭರದ್ವಾಜ ಪುತ್ರರಾಗಿ, ವಿಶ್ವಾಮಿತ್ರ ಪುತ್ರರಾಗಿ, ವ್ಯಾಧ ಪುತ್ರರಾಗಿ ಆಮೇಲೆ ಮೃಗಗಳಾಗಿ, ಚಕ್ರವಾಕ ಪಕ್ಷಿಗಳಾಗಿ ಆರನೆಯ ಜನ್ಮ ಹಂಸ ಪಕ್ಷಿಗಳಾಗಿ. ಆಗ **'ಹಂಸಾ ಮಾನಸಚಾರಿಣಃ'**[1] ಏಳು ಹಂಸಗಳು ನೋಡಿದರೆ ಹಂಸ ಪಕ್ಷಿಗಳವು ಆ ಹಂಸ ಪಕ್ಷಿಗಳಾಗಿ ಹುಟ್ಟಿದರೂ ಹಂಸೀ ಹೆಣ್ಣು ಹಂಸಗಳ ಜೊತೆಗೆ ವಿಹಾರವನ್ನು ಮಾಡದಂತೆ ಬ್ರಹ್ಮಚರ್ಯದಿಂದ ಈ ಏಳು ಜನ ಇದ್ದಾರೆ ಹಂಸ ಜನ್ಮದಲ್ಲಿಯೂ ಕೂಡ **'ಸಪ್ತೈವ ಬ್ರಹ್ಮಚಾರಿಣಃ'**[2] ಆ ಬ್ರಾಹ್ಮಣರಾಗಿ ವಿಶ್ವಾಮಿತ್ರರ ಪುತ್ರರಾಗಿ ಹುಟ್ಟಿದಾಗ ಆ ಗಾರ್ಗ್ಯ ಋಷಿಗಳ ದ್ರೋಹ ಮಾಡಿದ ಕಾರಣ ಗೋಹತ್ಯೆ ಮಾಡಿದ ಪಾಪ, ಗುರುಗಳಿಗೆ ಸುಳ್ಳು ಹೇಳಿದ ಪಾಪ, ವ್ಯಾಧ ಪುತ್ರರಾಗಿ, ಮೃಗಗಳಾಗಿ, ಪಕ್ಷಿಗಳಾಗಿ ಹುಟ್ಟುವಂತಹ ಪ್ರಸಂಗ ಬಂತು ಎರಡು ತರಹದ ಪಕ್ಷಿಗಳಾಗಿ ಚಕ್ರವಾಕ, ಹಂಸ ಇಷ್ಟೆಲ್ಲಾ ಅನುಭವಿಸ ಬೇಕಾಯಿತು ಅಂತ ಹೇಳುತ್ತಾರೆ ಮಾರ್ಕಂಡೇಯರು

ವಿಪ್ರಯೋನೌ ಯತೋ ಮೋಹಾನ್ಮಿಥ್ಯೋಪಚರಿತೋ ಗುರುಃ ।
ತಿರ್ಯಗ್ಯೋನೌ ತತೋ ಜಾತಾಃ ಸಂಸಾರೇ ಪರಿಬಭ್ರಮುಃ ॥ (21.34 ಹರಿವಂಶಪರ್ವ)

ಅದಕ್ಕೆ ಈ ರೀತಿ ಅದು ಕಾರಣವಾಗಿದೆ ಎಂಬುದಾಗಿ ತಿಳಿಸುತ್ತಾರೆ.

ಯತಶ್ಚ ಪಿತೃವಾಕ್ಯಾರ್ಥಃ ಕೃತಃ ಸ್ವಾರ್ಥೇ ವ್ಯವಸ್ಥಿತೈಃ । (21.35 ಹರಿವಂಶಪರ್ವ)

ತಂದೆಯ ಸೇವೆಯನ್ನು ಮಾಡಿದ್ದಕ್ಕೆ, ತಂದೆಯ ಮೇಲೆ ಪ್ರೀತಿಯನ್ನು ಮಾಡಿದ್ದಕ್ಕೆ, ತಾಯಿಯ ಸೇವೆಯನ್ನು ಮಾಡಿದ್ದಕ್ಕೆ ಜನ್ಮಾಂತರದ ಸ್ಮರಣವೂ ಇವರಿಗಿದೆ ಪೂರ್ವ ಜನ್ಮದಲ್ಲಿ ಮಾಡಿದ ಕಾರಣ, ದ್ರೋಹವನ್ನು ಮಾಡಿದ ಕಾರಣ ಈ ತರಹದ ಪಕ್ಷಿಗಳಾಗಿ ಹುಟ್ಟುವಂತಹ ಪ್ರಸಂಗ ಅವರಿಗೆ ಬಂದಿದೆ.

ಸುಮನಾಃ ಶುಚಿವಾಕ್ಕುದ್ಧಃ ಪಞ್ಚಮಶ್ಚಿದ್ರದರ್ಶನಃ ।
ಸುನೇತ್ರಶ್ಚ ಸ್ವತನ್ತ್ರಶ್ಚ ಶಕುನಾ ನಾಮತಃ ಸ್ಮೃತಾಃ ॥ (21.36 ಹರಿವಂಶಪರ್ವ)

ಈ ರೀತಿ ಆ ಹಂಸ ಪಕ್ಷಿಗಳ ಹೆಸರನ್ನು ತಿಳಿಸುತ್ತಾರೆ ಈ ಹೆಸರಿನಿಂದ ಆ ಎಲ್ಲ ಹಂಸ ಪಕ್ಷಿಗಳು ಅಲ್ಲಿ ಹುಟ್ಟಿವೆ.

ಪಶ್ಚಿಮಃ ಪಾಞ್ಚಾಕಸ್ತತ್ರ ಸಪ್ರಜಾತಿಷ್ವ ಜಾಯತ ।
ಷಷ್ಠಸ್ತು ಕಣ್ಡರೀಕೋಽಭೂದ್ ಬ್ರಹ್ಮದತ್ತಸ್ತು ಸಪ್ತಮಃ ॥ (21.37 ಹರಿವಂಶಪರ್ವ)

---

1. 21.33 ಹರಿವಂಶಪರ್ವ, 2. 21.33 ಹರಿವಂಶಪರ್ವ

ಆರನೆಯ ಜನ್ಮ ಹಂಸ ಪಕ್ಷಿಯ ಜನ್ಮ ಆದರೆ ಏಳನೆಯ ಜನ್ಮದಲ್ಲಿ ನಾಲ್ಕು ಜನ ಶ್ರೇಷ್ಠ ಬ್ರಾಹ್ಮಣರಾಗಿ ದರಿದ್ರನಾದ ಒಬ್ಬ ಬ್ರಾಹ್ಮಣನ ಮಕ್ಕಳಾಗಿ ಹುಟ್ಟಿ ಉತ್ತಮ ಯೋಗ ಸಾಧನೆಯನ್ನು ಮಾಡಿಕೊಂಡಿದ್ದಾರೆ. ಇನ್ನೂ ಮೂರು ಜನ ಮಾತ್ರ ಮತ್ತೆ ಅವರ ಕರ್ಮ ಸ್ವಲ್ಪ ಇತ್ತು ನೋಡಿ ಪ್ರಾರಬ್ಧಕರ್ಮ ಹೀಗಾಗಿ ಅದರಲ್ಲಿ ಒಬ್ಬ ಪಾಞ್ಚಕನಾಗಿ, ಇನ್ನೊಬ್ಬ ಕಣ್ಡರೀಕನಾಗಿ, ಏಳನೆಯದವ ಪಿತೃವರ್ತೀ ಅವನೇ ಬ್ರಹ್ಮದತ್ತನಾಗಿ ಈಗ ಹುಟ್ಟಿದ್ದಾನೆ. ಇಷ್ಟು ಹೊತ್ತು ಆ ಬ್ರಹತ್ಕ್ಷತ್ರನ ವಂಶದಲ್ಲಿ ಬ್ರಹ್ಮದತ್ತ ಎಂಬ ರಾಜ ಬಂದ ಅಂತ ಕೇಳಿದಿರಲ್ಲ ಅಣುಹನ ಮಗನಾಗಿ ಕೃತ್ವೀ ಎಂಬ ಶುಕಾಚಾರ್ಯರ ಮಗಳ ಮಗನಾಗಿ ಬ್ರಹ್ಮದತ್ತ ಹುಟ್ಟಿದ ಅವನಿಗೆ ವಿಶ್ವಕ್ಸೇನ, ಸರ್ವಸೇನ ಅಂತ ಇಬ್ಬರು ಮಕ್ಕಳು, ಸರ್ವಸೇನನಿಗೆ ಆ ಗುಬ್ಬಿ ಕಣ್ಣನ್ನು ಕಿತ್ತಿದೆ ಅಂತ ಆ ಬ್ರಹ್ಮದತ್ತ ಅಂದರೆ ಈ ಏಳು ಜನ ಏನು ಭರದ್ವಾಜ ಪುತ್ರರು ಇದ್ದಾರೆ ಅದರಲ್ಲಿಯ ಏಳನೆಯದವ ಆ ಏಳನೆಯದವನ ಏಳನೆಯ ಜನ್ಮ ಅದು ಬ್ರಹ್ಮದತ್ತ. ಅವನಿಗೆ ಮಂತ್ರಿಗಳಾಗಿ ಈ ಕಣ್ಡರೀಕ ಮತ್ತು ಪಾಞ್ಚಕ ಅನ್ನುವವರು ಇರುತ್ತಾರೆ. ಇವರಲ್ಲಿ ಒಬ್ಬ ಋಗ್ವೇದವನ್ನು ತಿಳಿದಂಥವ ಇನ್ನೊಬ್ಬ ದ್ವಿವೇದಿ ಸಾಮವೇದ ಹಾಗೂ ಯಜುರ್ವೇದ ಎರಡನ್ನೂ ತಿಳಿದುಕೊಂಡು ಆಧ್ವರ್ಯವಕರ್ಮ ಹಾಗೂ ಔದ್ಗಾತ್ರಕರ್ಮ ಎರಡನ್ನೂ ಕೂಡ ಮಾಡತಕ್ಕಂಥವನಾಗಿ ಆ ಬ್ರಹ್ಮದತ್ತನಿಗೆ ಸಹಾಯಕರಾಗಿ ಇವರಿಬ್ಬರು ಇರುತ್ತಾರೆ.

ಏನು ಪ್ರಸಂಗ ಅಂತಂದರೆ ಈ ನೀಪ ವಂಶದಲ್ಲಿ ಬಂದಂತಹ ವಿಭ್ರಾಜ ಎಂಬ ರಾಜ ಇವನ ತಾತ ಅರಣ್ಯಕ್ಕೆ ಬಂದಿರುತ್ತಾರೆ ಏಳು ಹಂಸ ಪಕ್ಷಿಗಳ ಪೈಕಿ ಸ್ವತಂತ್ರ ಎಂಬ ಹೆಸರಿನ ಏಳನೆಯ ಪಕ್ಷಿ ಅವನನ್ನು ನೋಡುತ್ತದೆ. ಆ ಸ್ವತಂತ್ರ ಎಂಬ ಪಕ್ಷಿ ತನ್ನ ಸ್ವತಂತ್ರವಾದ ದೃಷ್ಟಿಕೋನದಿಂದ ಆ ಮಾನಸ ಸರೋವರದ ಹತ್ತಿರ ತಪಸ್ಸಿಗೆ ಅಂತ ಬಂದಂತಹ ಅರಣ್ಯದಲ್ಲಿ ಪ್ರವೇಶ ಮಾಡಿದ ವಿಭ್ರಾಜ ಎಂಬ ರಾಜನ ವಿಭ್ರಾಜಮಾನವಾದ ವೈಭವವನ್ನು ಕಂಡು ನಾನ್ಯಾಕೆ ಇವನ ಹಾಗೆ ರಾಜನಾಗಬಾರದು ಅಂತ ಆಲೋಚನೆ ಮಾಡುತ್ತದೆ. **'ಸ್ಪೃಹಯಾಮಾಸ'**[1] ನಾನೂ ರಾಜನಾಗಬೇಕು ಅಂತ ಅಪೇಕ್ಷೆ ಪಡುತ್ತೆ, ವ್ಯರ್ಥವಾಗಿ ಉಪವಾಸದಿಂದ ನಾವು ಒದ್ದಾಡಿ ಏನು ಪ್ರಯೋಜನ ಏನಾದರೂ ಜನ್ಮಾಂತರದಲ್ಲಿ ಮಾಡಿದ ಪುಣ್ಯ ಇದ್ದರೆ, ತಪಸ್ಸು ಇದ್ದರೆ, ವ್ರತ ನಿಯಮಾದಿಗಳಿದ್ದರೆ ಅದರ ಫಲವಾಗಿ ಇವನ ಹಾಗೆ ನಾನು ರಾಜನಾಗಬೇಕು, ವೈಭವದಿಂದ ಮೆರೆಯಬೇಕು ಅಂತ ಆ ಸ್ವತಂತ್ರ ಎಂಬ ಹಂಸ ಪಕ್ಷಿ ಆಲೋಚನೆ ಮಾಡುತ್ತಾ ಇದೆ. ಇನ್ನೆರಡು ಅವನ ಜೊತೆಗೆ ಪಕ್ಷಿಗಳು ಹೇಳಿವೆ ನೀನು ರಾಜನಾದರೆ ನಾವು ಮಂತ್ರಿ ಆಗುತ್ತೇವೆ, ನಾವು ಮಂತ್ರಿ ಆಗಿ ನಿನಗೆ ಸಹಾಯ ಮಾಡುತ್ತೇವೆ ಅಂತ ಇನ್ನಿಬ್ಬರು ಹೇಳಿದ್ದಾರೆ. ಆ ರೀತಿ ಅವರ ಮಾತುಗಳು ಅಲ್ಲಿ ನಡೆದಿದೆ.

ರಾಜಾ ತ್ವಂ ಭವಿತಾ ತಾತ ಕಾಮ್ಪಿಲ್ಯೇ ನಾತ್ರ ಸಂಶಯಃ ।
ಭವಿಷ್ಯತಃ ಸಖಾಯೌ ಚ ದ್ವಾವಿಮೌ ಸಚಿವೌ ತವ ॥ (22.4 ಹರಿವಂಶಪರ್ವ)

ಈ ನಾಲ್ಕು ಜನ ಇದ್ದರಲ್ಲ ಒಟ್ಟು ಏಳು ಜನ ಅದರಲ್ಲಿ ಏಳನೆಯದವ ರಾಜನಾಗಬೇಕು ಅಂತ ಅಪೇಕ್ಷೆ ಪಟ್ಟ, ಐದು ಹಾಗೂ ಆರನೆಯದವರು ಅವನಿಗೆ ಸಹಾಯವಾಗಿ ಮಂತ್ರಿಗಳಾಗಿ ಬರುತ್ತೇವೆ ಅಂತ ಒಪ್ಪಿಕೊಂಡರು. ಈ ಮೊದಲನೆಯ ನಾಲ್ಕು ಜನ ಇದ್ದರಲ್ಲ ಒಂದು ಎರಡು ಮೂರು ನಾಲ್ಕು ಸುಮನಾ, ಶುಚಿವ, ಶುದ್ಧ, ಛಿದ್ರದರ್ಶನ ಇವರೆಲ್ಲ ಹೇಳುತ್ತಾರೆ ನೀವು ಇಂತಹ ಅಪೇಕ್ಷೆಯನ್ನು ಪಡುತ್ತಾ ಇದ್ದೀರಿ ನಾವು ಮೂಲತಃ ಋಷಿ ಪುತ್ರರು, ಏನೋ ತಪ್ಪು ಮಾಡಿದ್ದಕ್ಕೆ ನಾನಾ ಯೋನಿಗಳಲ್ಲಿ ಹುಟ್ಟಿ ಬಂದಿದ್ದೇವೆ ಇದು ಆರನೆಯ ಜನ್ಮ. ಇನ್ನು ಮುಂದಿನ ಜನ್ಮದಲ್ಲಿಯಾದರೂ ನಾವು ಸಾಧನೆಯನ್ನು ಮಾಡಿಕೊಂಡು ಸದ್ಗತಿಯನ್ನು ಹೊಂದಬೇಕು ಅಂತ ಅಪೇಕ್ಷೆ ಪಡುವುದನ್ನು ಬಿಟ್ಟು ಮತ್ತೆ ಈ ರಾಜನಾಗಿ ಮೆರೆಯಬೇಕು ಅನ್ನುವ ಲೌಕಿಕ ಕಾಮನೆಯನ್ನು ಇಟ್ಟುಕೊಂಡು ಒದ್ದಾಡುತ್ತಾ ಇದ್ದೀರಲ್ಲ

1. 21.43 ಹರಿವಂಶಪರ್ವ

ಎಷ್ಟರ ಮಟ್ಟಿಗೆ, ನಿಮಗೆ ಬಹಿಷ್ಕಾರ ಹಾಕುತ್ತೇವೆ ಇನ್ನು ಮೇಲೆ ನಿಮ್ಮ ಜೊತೆಗೆ ಮಾತಾಡುವುದಿಲ್ಲ ಅನ್ನುತ್ತಾರೆ. ಮಾತನಾಡುವುದಕ್ಕೂ ನೀವು ಯೋಗ್ಯರಲ್ಲ ನಮ್ಮ ಜೊತೆಗೆ ಯಾಕೆ ಅಂದರೆ ನಿಮ್ಮ ಜೊತೆಗೆ ಮಾತನಾಡಿದರೆ ನಿಮ್ಮಂಥವರ ಭೋಗಾಸಕ್ತರ, ವಿಷಯಾಸಕ್ತರ ಜೊತೆಗೆ ಒಡನಾಟ ಮಾಡಿದರೆ, ಹರಟೆ ಹೊಡೆದರೆ ನಮಗೂ ಎಲ್ಲಾದರೂ ಭೋಗಾಸಕ್ತಿ ಬಂದೀತು **'ಶಪ್ತ್ವಾ ಚಾನಭಿಭಾಷ್ಯಾಂಸ್ತಾಂಶ್ಚತ್ತ್ವಾ'**[1] ನಿಮ್ಮ ಜೊತೆಗೆ ಮಾತನಾಡುವುದಿಲ್ಲ ಅಂತ ಅವರಿಗೆ ಶಾಪ ಕೊಡುತ್ತಾರೆ. ಆಗ ಆ ಮೂರು ಜನ ಯೋಗ ಭ್ರಷ್ಟರಾಗುತ್ತಾರೆ ಈ ರೀತಿ ಅವರ ಚರಿತ್ರೆಯನ್ನು ಮುಂದೆ ತಿಳಿಸುತ್ತಾರೆ.

ಆಗ ಏನಾದರೂ ಮಾಡಿ ವಿಶೇಷವಾಗಿ ಅನುಗ್ರಹವನ್ನು ಮಾಡಬೇಕು ಅಂತ ಕೇಳಿದಾಗ ಹೇಳುತ್ತಾರೆ ಇದು ಬಹಳ ದಿವಸ ಏನು ಇರುವುದಿಲ್ಲ ಸ್ವಲ್ಪ ದಿನಗಳವರೆಗೆ ಮಾತ್ರ ನಿಮಗೆ ಶಾಪ. ಕೊನೆವರೆಗೂ ನೀವು ಹೀಗೆ ಯೋಗ ಭ್ರಷ್ಟರಾಗಿ ಹಾಳಾಗಿ ಹೋಗುತ್ತೀರಿ ಅಂತ ಏನೂ ಅಂದುಕೊಳ್ಳಬೇಡಿ ರಾಜನಾಗುತ್ತೀಯಾ, ಇವರು ಉತ್ತಮ ವೇದಜ್ಞರಾದ ಮಂತ್ರಿಗಳಾಗುತ್ತಾರೆ. ಸ್ವಲ್ಪ ದಿನಗಳವರೆಗೆ ಹಾಗೇ ಇರುತ್ತೀರಿ ಆದರೆ ಒಂದು ಸಲ ನಿಮಗೆ ಉತ್ತಮವಾದಂತಹ ಯೋಗ ಬರುತ್ತೆ, ಒಂದು ಶ್ಲೋಕವನ್ನು ನಾವು ಹೇಳುತ್ತೇವೆ ಆ ಶ್ಲೋಕದ ಶ್ರವಣ ನಿಮಗೆ ಯಾರಿಂದಾದರೂ ಆದರೆ ಸರಿ ಆಗ ನಿಮಗೆ ಆ ಜನ್ಮದಿಂದ ಉದ್ಧಾರವಾಗುತ್ತದೆ ಅಷ್ಟೇ ಮಾಡಿದ ತಪ್ಪಿಗೆ ಶಾಪ. ಶಾಪವನ್ನು ಅನುಭವಿಸಿ ಏನು ಶಾಪ ಅಂದರೆ ಬೇರೆ ಏನೂ ಅಲ್ಲ ರಾಜನಾಗಿ ಹುಟ್ಟೋದೆ ಒಂದು ಶಾಪ ಅದೇನು ವೈಭವವನ್ನು ಭಾರೀ ಭೋಗವನ್ನು ಮಾಡುವುದು ಶಾಪವೇ ಹೌದು. ಮೋಕ್ಷವನ್ನು ಹೊಂದುವಂತಹ ಉತ್ತಮ ಸಾಧನೆಯನ್ನು ಮಾಡದಂತೆ ಭೋಗಾಸಕ್ತರಾಗಿ ಇರುವುದು ಒಂದರ್ಥದಲ್ಲಿ ಆ ಸಾಧಕರ ದೃಷ್ಟಿಯಲ್ಲಿ ಅದು ಶಾಪವೇ ಆ ಶಾಪದಿಂದ ನೀವು ಮುಕ್ತರಾಗುತ್ತೀರಿ ಒಂದು ಶ್ಲೋಕವನ್ನು ನಾನು ಹೇಳುತ್ತೇನೆ ಅಂತ ಈ ರೀತಿ ಅವರಿಗೆ ಹೇಳಿ ಈ ನಾಲ್ಕು ಜನ ಹೊರಟು ಹೋಗಿದ್ದಾರೆ. ಮುಂದೆ ಈ ಬ್ರಹ್ಮದತ್ತ ಆ ಏಳನೆಯದವ ಪಿತೃವರ್ತೀ ರಾಜನಾಗಬೇಕು ಅಂತ ಏನು ಬಯಸಿದ್ದನ್ನಲ್ಲ ಅವನೇ ಈ ಬ್ರಹ್ಮದತ್ತನಾಗಿ ಇಲ್ಲಿ ಅವತಾರ ಮಾಡಿದ್ದಾನೆ ಎಂಬುದಾಗಿ ಹೇಳುತ್ತಾರೆ.

ಈ ನಾಲ್ಕು ಜನ ಒಬ್ಬ ದರಿದ್ರ ಬ್ರಾಹ್ಮಣನಲ್ಲಿ ಹುಟ್ಟಿದ್ದಾರೆ ಇನ್ನು ನಾಲ್ಕು ಜನ ಈ ರಾಜನಾಗಬೇಕು, ಮಂತ್ರಿಯಾಗಬೇಕು ಅಂತೆಲ್ಲ ಅಪೇಕ್ಷೆ ಇಟ್ಟುಕೊಳ್ಳದೇ ಸಾತ್ವಿಕವಾಗಿ ಇದ್ದವರು, ಅವನು ಬಹಳ ದರಿದ್ರ, ಇವರು ಸಾಧನೆ ಮಾಡುವುದಕ್ಕೆ ಅಂತ ಅರಣ್ಯಕ್ಕೆ ಹೊರಟರು ಇವರೆಲ್ಲರಿಗೂ ಏಳನೆಯ ಜನ್ಮ ಆಗಿದೆ ಕೊನೆಯ ಜನ್ಮ. ಅರಣ್ಯಕ್ಕೆ ಹೊರಟು ನಿಂತಾಗ ತಂದೆ ಅನ್ನುತ್ತಾನೆ ದರಿದ್ರ ನಾನು ನೀವು ನಾಲ್ಕು ಜನ ಇಂತಹ ಉತ್ತಮ ವಿದ್ವಾಂಸರು ಜ್ಞಾನಿಗಳಾಗಿದ್ದೀರಿ, ಅಧ್ಯಯನ ಸಂಪನ್ನರಾಗಿದ್ದೀರಿ ಇಷ್ಟು ಜನ ಮಕ್ಕಳಿದ್ದು ಒಂದು ಹೊಟ್ಟೆಗೆ ವ್ಯವಸ್ಥೆ ಮಾಡದೆ ನೀವು ತಪಸ್ಸು ಮಾಡುತ್ತೇನೆ ಅಂತ ಹೊರಟುಬಿಟ್ಟರೆ ನನ್ನ ಗತಿ ಏನು ಅಂತ ತಂದೆ ಕೇಳಿದಾಗ ಅವರು ಅಂದಿದ್ದಾರೆ. ನಿಜ ತಂದೆ-ತಾಯಿಗಳ ಯೋಗಕ್ಷೇಮವನ್ನು ನೋಡಿಕೊಳ್ಳಬೇಕಾದದ್ದು ನಮ್ಮ ಕರ್ತವ್ಯ ನಿಮಗೆ ವ್ಯವಸ್ಥೆ ಮಾಡದೆ ನಾವು ಹೋಗುವುದಿಲ್ಲ ನಿಮಗೊಂದು ವ್ಯವಸ್ಥೆ ಮಾಡಿಕೊಟ್ಟೇನೆ ನಾವು ತಪಸ್ಸಿಗೆ ಹೋಗುತ್ತೇವೆ ಅಂತ ಅವರು ಕೊನೆಯ ಜನ್ಮ, ತಪಸ್ಸು ಮಾಡಿ ಸಾಧನೆ ಮಾಡಿಕೊಳ್ಳಬೇಕು ಅಂತ ಹೊರಟಿದ್ದಾರೆ. ನಿಮಗೆ ವ್ಯವಸ್ಥೆ ಮಾಡಿ ಹೋಗುತ್ತೇವೆ ಅಂತ ಒಂದು ಶ್ಲೋಕವನ್ನು ಹೇಳಿಕೊಡುತ್ತೇವೆ ಆ ಶ್ಲೋಕವನ್ನು ನೀವು ಹೇಳಿದರೆ ಸಾಕು ನಿಮಗೆ ಉತ್ತಮವಾದಂತಹ

ಸಪ್ತ ವ್ಯಾಧಾ ದಶಾರ್ಣೇಷು ಮೃಗಾಃ ಕಾಲಞ್ಜರೇ ಗಿರೌ ।
ಚಕ್ರವಾಕಾಃ ಶರದ್ವೀಪೇ ಹಂಸಾಃ ಸರಸಿ ಮಾನಸೇ ॥ (24.20 ಹರಿವಂಶಪರ್ವ)

1. 22.5 ಹರಿವಂಶಪರ್ವ

ತೇऽಭಿಜಾತಾಃ ಕುರುಕ್ಷೇತ್ರೇ ಬ್ರಾಹ್ಮಣಾ ವೇದಪಾರಗಾಃ ।

ಪ್ರಸ್ಥಿತಾ ದೀರ್ಘಮಧ್ವಾನಂ ಯೂಯಂ ಕಿಮನಸೀದಥ ॥ (24.21 ಹರಿವಂಶಪರ್ವ)

ಇಷ್ಟು ಶ್ಲೋಕ ಇದೆ ಇದನ್ನು ಚೆನ್ನಾಗಿ ಕಂಠಪಾಠ ಮಾಡಿ ಅಂತ ಮಕ್ಕಳು ಅಪ್ಪನಿಗೆ ಹೇಳುತ್ತಾ ಇದ್ದಾರೆ ಈ ಶ್ಲೋಕವನ್ನು ನೀನು ಕಂಠಪಾಠ ಮಾಡು. ಕಂಠಪಾಠ ಮಾಡಿ ನಮ್ಮ ದೇಶದ ರಾಜ ಇದ್ದಾನಲ್ಲ ಕಾಮ್ಬಿಲ್ಯ ದೇಶದ ರಾಜ ಬ್ರಹ್ಮದತ್ತ ಆ ಬ್ರಹ್ಮದತ್ತ ರಾಜನ ಹಾಗೂ ಅವನ ಇಬ್ಬರು ಮಂತ್ರಿಗಳ ಕಿವಿಗೆ ಬೀಳುವ ಹಾಗೆ ಈ ಶ್ಲೋಕವನ್ನು ಹೇಳಿಬಿಡಿ ಸಾಕು ನಿನಗೆ ಎಷ್ಟು ಬೇಕೋ ಅಷ್ಟು ಸಂಪತ್ತನ್ನು ಅವರು ಕೊಡುತ್ತಾರೆ. ಏನು ವಿಚಿತ್ರ ನೋಡಿ **'ಇಂದಿರೇಶ ನಿನ್ನದೊಂದೇ ಕ್ರಿಯಾ ದ್ವಂದ್ವವಾಯಿತು'** ಅಂತ ಹೇಳುವ ಹಾಗೆ ಆ ಇಂದಿರೇಶನ ಭಕ್ತರಾದ ಈ ನಾಲ್ಕು ಜನ ಯೋಗಿಗಳು ಒಂದೇ ಉಪಾಯವನ್ನು ಮಾಡಿ ಎರಡು ಕೆಲಸ ಸಾಧಿಸಿದ್ದಾರೆ. ಈ ಕಡೆಗೆ ತನ್ನ ತಂದೆ ತಾಯಿಗೆ ಒಂದು ವೃತ್ತಿಯ ಕಲ್ಪನೆ, ಸಮೃದ್ಧವಾದ ಸಂಪತ್ತು, ದಾರಿದ್ರ್ಯ ನಿವಾರಣೆ ಯಥೇಚ್ಛವಾದ ಧನ ಧಾನ್ಯಾದಿ ಸಂಪತ್ತಿನ ಲಾಭ ಅವರಿಗೆ ಆಗಿರಬೇಕು. ಈ ಕಡೆಗೆ ತಮ್ಮ ಮೂರು ಜನ ತಮ್ಮಂದಿರಿದ್ದಾರೆ ಒಬ್ಬ ರಾಜನಾಗಿದ್ದಾನೆ, ಇನ್ನಿಬ್ಬರು ಅವನಿಗೆ ಮಂತ್ರಿಗಳಾಗಿ ಲೌಕಿಕ ವಿಷಯಗಳಲ್ಲಿ ಆಸಕ್ತರಾಗಿ ಮೋಕ್ಷ ಸಾಧನೆಯನ್ನು ಮಾಡದಂತೆ ಸುಮ್ಮನೆ ರಾಜ್ಯ ರಾಜ್ಯ ಅಂತ ಒದ್ದಾಡುತ್ತಾ ಇದ್ದಾರೆ ಅವರು ಉದ್ಧಾರ ಆಗಬೇಕು, ಈ ಕಡೆಗೆ ಈ ತಂದೆ ತಾಯಿಗಳಿಗೆ ಸಂಪತ್ತು ಬರಬೇಕು ಯಾಕೆಂದರೆ ಇವರಿಗೆ ಇನ್ನೂ ಉದ್ಧಾರದ ಸಮಯ ಬಂದಿಲ್ಲ ಇವರಿಗೆ ಸಾಮಾನ್ಯ ಲೌಕಿಕ ಧನ ಧಾನ್ಯಾದಿ ಸಂಪತ್ತು ಸಮೃದ್ಧಿ ಸಿಕ್ಕರೆ ಸಾಕು ಅವರು ಸುಖವಾಗಿ ಇರುತ್ತಾರೆ. ಅವರ ಸಾಧನೆ ಎಲ್ಲ ಮುಗಿದಿದೆ ಇನ್ನು ಹೆಚ್ಚಿನ ಸಾಧನೆಯನ್ನು ಮಾಡಿಕೊಳ್ಳಬೇಕು ನಮ್ಮ ಜೊತೆಗೆ ಬಂದು ಅವರು ನಾವೆಲ್ಲ ಏಳು ಜನ ಒಂದು ಗುಂಪು ಅವರು ಮೂರು ಜನ ಬೇರೆಯಾಗಿದ್ದಾರೆ ನಾವು ನಾಲ್ಕು ಜನರ ಬೇರೆಯಾಗಿದ್ದೇವೆ. ಆ ಮೂರು ಜನರು ನಮ್ಮ ಮಾರ್ಗಕ್ಕೆ ಬರಬೇಕು ಸಾಧನೆ ಮಾಡಬೇಕು ಅದಕ್ಕೆ ಈ ಶ್ಲೋಕ ಏನು ಅಂತ ಗೊತ್ತಾಯಿತಲ್ಲ ಪೂರ್ಣವಾದ ಇತಿಹಾಸ. ಆ ಇತಿಹಾಸವನ್ನು ಹೇಳುವಂತಹ ಶ್ಲೋಕವನ್ನು ಹೇಳಿಬಿಟ್ಟರೆ ಅವರ ಉದ್ಧಾರ ಆಗುತ್ತದೆ ಅಂತ ಅವರ ತಂದೆಗೆ ಹೇಳಿಕೊಟ್ಟು ತಾವು ಅರಣ್ಯಕ್ಕೆ ತಪಸ್ಸಿಗೆ ಅವರು ಹೊರಟು ಹೋಗಿದ್ದಾರೆ.

ಈ ಕಡೆಗೆ ಬ್ರಹ್ಮದತ್ತನ ಚರಿತ್ರೆಯನ್ನು ಹೇಳುತ್ತಾರೆ ಅಷ್ಟು ಶ್ಲೋಕವನ್ನು ಕಲಿಸಿ ಅವನು ಹೊರಟು ಹೋಗಿದ್ದಾನೆ. ಬ್ರಹ್ಮದತ್ತ ಒಂದು ದಿವಸ ತನ್ನ ಮಡದಿಯನ್ನು ಕರೆದುಕೊಂಡು ಹೋಗಿ ಅರಣ್ಯದಲ್ಲಿ ವಿಹಾರ ಮಾಡುತ್ತಾ ಇದ್ದಾನೆ. ಆ ಅರಣ್ಯದಲ್ಲಿ ವಿಹಾರ ಮಾಡುವಂತಹ ಪ್ರಸಂಗದೊಳಗೆ ಅಲ್ಲಿ ಇದ್ದಕ್ಕಿದ್ದ ಹಾಗೆ ನಕ್ಕುಬಿಟ್ಟ ಬ್ರಹ್ಮದತ್ತ, ಹೆಂಡತಿಗೆ ಬಹಳ ದುಃಖ ಆಗಿದೆ, ಕೋಪ ಬಂದಿದೆ ಯಾಕೆ ನಕ್ಕಿದ್ದೀಯಾ ಕಾರಣ ಹೇಳು ಅಂತ ಇವನೇನು ಹೇಳಲಿಲ್ಲ. ಅವಳು ಊಟ ಬಿಟ್ಟಿದ್ದಾಳೆ, ನಿದ್ರೆ ಬಿಟ್ಟಿದ್ದಾಳೆ, ಕೃಷಳಾಗಿದ್ದಾಳೆ ನೀನು ಕಾರಣ ಹೇಳಿದರೆ ಸರಿ ಇಲ್ಲದಿದ್ದರೆ ನಾನು ಪ್ರಾಣ ಬಿಡುತ್ತೇನೆ ಅಂತ ಅಷ್ಟು ಹಠ ಮಾಡುತ್ತಾ ಇದ್ದಾಳೆ. ಆಗ ಅವನು ಹೇಳಿದ ಬೇರೆ ಏನು ಕಾರಣ ಇರಲಿಲ್ಲ ಅವನಿಗೆ ಎಲ್ಲ ಭಾಷೆಗಳು ಬರುತ್ತಾ ಇತ್ತು ಅಲ್ಲಿ ಗಂಡು-ಹೆಣ್ಣು ಎರಡು ಇರುವೆಗಳು ಏನೋ ಮಾತಾಡುತ್ತಾ ಇದ್ದವು. ಆ ಗಂಡು-ಹೆಣ್ಣು ಎರಡು ಇರುವೆಗಳು ಮಾತನಾಡುವಾಗ ಅವುಗಳ ಮಾತನ್ನೇನೋ ಕೇಳಿಕೊಂಡು ಇವನು ನಕ್ಕಿದ್ದ ಅದು ಏನೋ ಹೇಳಿತು ಇದು ಏನೋ ಕೇಳಿತು. ಇವಳ ಸಲುವಾಗಿ ನಕ್ಕದ್ದು ಅಲ್ಲ ಆದರೆ ಇವಳಿಗೋಸ್ಕರನೇ ನಕ್ಕದ್ದು ಅಂತ. ಅವಳು ತಿಳಿದು ಎಲ್ಲ ರೀತಿಯ ಅನ್ನ, ನೀರು ಎಲ್ಲವನ್ನು ತ್ಯಾಗ ಮಾಡಿದ್ದಾಳೆ. ವಿಶೇಷವಾಗಿ ಏನು ಮಾಡಬೇಕು ಅಂತ ಇವನಿಗೆ ಅರ್ಥ ಆಗಲಿಲ್ಲ ಈ ತರಹದ ಪರಿಸ್ಥಿತಿ ಬಂತಲ್ಲ ದೇವರಿಗೆ ಶರಣು ಹೋಗಬೇಕು ಅಂತ.



ಶರಣ್ಯಂ ಸರ್ವಭೂತೇಶಂ ಭಕ್ತ್ಯಾ ನಾರಾಯಣಂ ಹರಿಮ್ ।

ಸಮಾಹಿತೋ ನಿರಾಹಾರಃ ಪಡ್ ರಾತ್ರೇಣ ಮಹಾಯಶಾಃ ॥ (24.12 ಹರಿವಂಶಪರ್ವ)

ತಾನು ಆರು ದಿವಸ ಪೂರ್ಣ ನಿರಾಹಾರ ಉಪವಾಸವನ್ನು ಮಾಡಿ ದೇವರಿಗೆ ಶರಣು ಹೋಗಿದ್ದಾನೆ. ದೇವರು ಪ್ರಸನ್ನನಾಗಿ, ಪ್ರತ್ಯಕ್ಷನಾಗಿ ಇವನ ಭಕ್ತಿಗೆ ಬ್ರಹ್ಮದತ್ತನಿಗೆ ಏನಪ್ಪಾ ಏನಾಗಿದೆ ಸಮಸ್ಯೆ ಅಂತ ಆಗ ಇವನೆಲ್ಲ ಹೇಳಿಕೊಂಡ ನೀನೇನು ಚಿಂತೆ ಮಾಡಬೇಡ ನಾಳೆ ಬೆಳಗ್ಗೆ ಎಲ್ಲ ಸುಖವಾಗುತ್ತೆ ಹೋಗು.

ಬ್ರಹ್ಮದತ್ತ ಪ್ರಭಾತೇ ತ್ವಂ ಕಲ್ಯಾಣಂ ಸಮವಾಪ್ಸ್ಯಸಿ । (24.14 ಹರಿವಂಶಪರ್ವ)

ನಾಳೆ ಬೆಳಗ್ಗೆ ಅನ್ನುವದರೊಳಗೆ ನಿನಗೆ ಎಲ್ಲ ಮಂಗಲವಾದ ಕಲ್ಯಾಣವಾದಂತಹ ವಾರ್ತೆ ಬರುತ್ತದೆ, ನಿನ್ನ ಮಡದಿಗೂ ಸಮಾಧಾನವಾಗುತ್ತದೆ ನೀನೇನು ಚಿಂತೆ ಮಾಡಬೇಡ ಅಂತ ಹೇಳಿದ್ದಾರೆ ಇಷ್ಟು ಈ ಬ್ರಹ್ಮದತ್ತನ ಕಥೆ.

ಈ ಕಡೆಗೆ ಈ ಬ್ರಾಹ್ಮಣ ಕಾಯುತ್ತಾ ಇದ್ದಾನೆ ದರಿದ್ರ ಬ್ರಾಹ್ಮಣ ಯಾವಾಗ ರಾಜನ ಎದುರಿಗೆ ಹೋಗಿ ನಾನು ಈ ಶ್ಲೋಕ ಹೇಳಬೇಕು ಅಂತ ಅವನು. ರಾಜರು ಅಷ್ಟು ಸುಲಭವಾಗಿ ಸಿಗುತ್ತಾರಾ ಹೋಗಿ ರಾಜ ಯಾವುದೋ ಒಂದು ಪ್ರಸಂಗದೊಳಗೆ ಸಿಗಬೇಕಲ್ಲ ಅವನಿಗೆ ಸಿಕ್ಕರೆ ಆ ಶ್ಲೋಕ ಹೇಳಬೇಕು ಅವನು ಸಂಪತ್ತು ಕೊಡುತ್ತಾನೆ ಅಂತ ಇವನು ಕಾಯುತ್ತಾ ಇದ್ದಾನೆ ಅವನಿಗೆ ಸಮಯನೇ ಸಿಗುತ್ತಾ ಇಲ್ಲ. ಇವನಾದರೋ ತನ್ನ ಸಮಸ್ಯೆಯೊಳಗೆ ಇದ್ದಾನೆ ಹೆಂಡತಿ ಉಪವಾಸ, ತಾನು ಉಪವಾಸ ದೇವರನ್ನು ಕುರಿತು ತಪಸ್ಸು ಮಾಡಿದ ಎಲ್ಲ ಮಾಡಿದ. ಆಮೇಲೆ ರಾಜ ವಿಶೇಷವಾಗಿ ಆ ಎಲ್ಲ ತಪಸ್ಸನ್ನು ಮಾಡಿ ದೇವರ ಹತ್ತಿರ ವರ ತೆಗೆದುಕೊಂಡು ತಿರುಗಿ ಬರುವಾಗ ಈ ಇಬ್ಬರು ಮಂತ್ರಿಗಳಿದ್ದರು ಪೂರ್ವ ಜನ್ಮದಲ್ಲಿ ಅವನ ಇಬ್ಬರೂ ಅಣ್ಣಂದಿರೆ ಅವರು ಐದು, ಆರು, ಏಳು. ಆ ಇಬ್ಬರು ಅಣ್ಣಂದಿರಿಂದ ಕೂಡಿಕೊಂಡು ಅರ್ಥಾತ್ ಈಗ ಅವರು ಮಂತ್ರಿಗಳಾಗಿ ಹುಟ್ಟಿದ್ದಾರೆ ಆ ಕಣ್ಡರೀಕ, ಪಾಞ್ಚಕ್ಕ ಅವರಿಂದ ಸಹಿತನಾಗಿ ಇವನು ಬರುತ್ತಾ ಇದ್ದಾನೆ. ಬಾಭ್ರವ್ಯ, ಕಣ್ಡರೀಕ ಅಂತ ಅವರು ಚಾಮರ, ವ್ಯಜನಗಳನ್ನು ಹಾಕುತ್ತಾ ಇದ್ದಾರೆ ರಾಜ ಮಧ್ಯದಲ್ಲಿ ಕುಳಿತಿದ್ದಾನೆ ಬ್ರಾಹ್ಮಣ ನೋಡಿದ ಓಹೋ ಮೂರೂ ಜನ ಒಂದೇ ರಥದೊಳಗೆ ಸಿಕ್ಕರು ಇದೇ ಸಂದರ್ಭ ನಾನು ಶ್ಲೋಕ ಹೇಳಿಬಿಡಬೇಕು ಅಂತ ಶ್ಲೋಕವನ್ನು ಒದರಿದ್ದಾನೆ ಜೋರಾಗಿ.

ಸಪ್ತ ವ್ಯಾಧಾ ದಶಾರ್ಣೇಷು ಮೃಗಾಃ ಕಾಲಞ್ಜರೇ ಗಿರೌ ।

ಚಕ್ರವಾಕಾಃ ಶರದ್ವೀಪೇ ಹಂಸಾಃ ಸರಸಿ ಮಾನಸೇ ॥ (24.20 ಹರಿವಂಶಪರ್ವ)

ತೇऽಭಿಜಾತಾಃ ಕುರುಕ್ಷೇತ್ರೇ ಬ್ರಾಹ್ಮಣಾ ವೇದಪಾರಗಾಃ ।

ಪ್ರಸ್ಥಿತಾ ದೀರ್ಘಮಧ್ವಾನಂ ಯೂಯಂ ಕಿಮನಸೀದಥ ॥ (24.21 ಹರಿವಂಶಪರ್ವ)

ವ್ಯಾಧರಾಗಿ ಅದಕ್ಕೂ ಮೊದಲು ಭರದ್ವಾಜ ಪುತ್ರರಾಗಿ, ವಿಶ್ವಾಮಿತ್ರ ಪುತ್ರರಾಗಿ, ಆನಂತರ ದಶಾರ್ಣ ದೇಶದಲ್ಲಿ ವ್ಯಾಧ ಪುತ್ರರಾಗಿ, ಕಾಲಞ್ಜರ ಪರ್ವತದಲ್ಲಿ ಮೃಗಗಳಾಗಿ, ಶರದ್ವೀಪದಲ್ಲಿ ಚಕ್ರವಾಕಗಳಾಗಿ, ಮಾನಸ ಸರೋವರದಲ್ಲಿ ಹಂಸ ಪಕ್ಷಿಗಳಾಗಿ ಏಳೂ ಜನ ಕೂಡಿ ಹುಟ್ಟುತ್ತಾ ಬಂದಿದ್ದೀರಿ ಆದರೆ ಆರು ಜನ್ಮ ಹೀಗಾಯಿತು. ಏಳನೆಯ ಜನ್ಮದಲ್ಲಿ ಮಾತ್ರ ಆ ನಾಲ್ಕು ಜನ ಅತ್ಯಂತ ಶ್ರೇಷ್ಠವಾದಂತಹ ಬ್ರಹ್ಮಜ್ಞಾನ ಸಾಧನೆಯನ್ನು ಮಾಡಿಕೊಂಡು ಮೋಕ್ಷ ಮಾರ್ಗವನ್ನು ಅನುಸರಣೆ ಮಾಡಿ ಹೊರಟಿದ್ದಾರೆ ತಮ್ಮ ಶ್ರೇಷ್ಠವಾದ ಸದ್ಗತಿಯನ್ನು ಹೊಂದುತ್ತಾ ಇದ್ದಾರೆ. ನೀವೇನು ಇಲ್ಲಿ

ರಾಜರಾಗಿ ಮಂತ್ರಿಗಳಾಗಿ ವ್ಯರ್ಥ ಕಾಲಹರಣ ಮಾಡಿ **'ಯೂಯಂ ಕಿಮನಸೀದಥ'** ಯಾಕೆ ಕಷ್ಟಪಡುತ್ತಾ ಇದ್ದೀರಿ ಇಲ್ಲಿ ಹೋಗಿ ನಿಮ್ಮ ಸಾಧನೆಯನ್ನು ನೀವು ಮಾಡಿಕೊಳ್ಳಿ ಅಂತ ಅರ್ಥ ಅದು ಆ ಅರ್ಥ ಬ್ರಾಹ್ಮಣನಿಗೆ ಗೊತ್ತಿಲ್ಲ ಮಕ್ಕಳು ಹೇಳಿದ್ದರು ಅಂತ ಹೇಳಿಬಿಟ್ಟ. ಹೇಳಿದಾಕ್ಷಣಕ್ಕೆ ಬ್ರಹ್ಮದತ್ತನಿಗೆ ಎಲ್ಲ ನೆನಪಾಗಿದೆ ಆ ಇಬ್ಬರೂ ಮಂತ್ರಿಗಳಿಗೂ ನೆನಪಾಗಿದೆ ಇಷ್ಟು ದಿವಸ ಹಿಂದಿನ ಜನ್ಮಗಳಲ್ಲಿ ಹೇಗೆ ಪೂರ್ವ ಜನ್ಮದ ಸ್ಮರಣ ಇತ್ತೋ ಹಾಗೆ ಇಷ್ಟರವರೆಗೆ ಈ ಮೂವರಿಗೆ ಮಾತ್ರ ಇರಲಿಲ್ಲ ಈಗ ಇವರಿಗೆ ಆ ಶ್ಲೋಕ ಕೇಳಿದ ಮೇಲೆ ಪೂರ್ವಜನ್ಮದ ಸ್ಮರಣ ಬಂದಿದೆ ಬಹಳ ದುಃಖವಾಗಿದೆ. ದುಃಖವಾಗಿ ಸರಿ ರಾಜ್ಯವನ್ನೆಲ್ಲ ಮಗನಿಗೆ ಅರ್ಥಾತ್ ನೀವು ಆವಾಗ ಕೇಳಿದ್ದೀರಿ ವಿಭ್ರಾಜ ಅವನ ಮಗ ಅಣುಹ, ಅಣುಹನ ಮಗ ಬ್ರಹ್ಮದತ್ತ ಆ ಬ್ರಹ್ಮದತ್ತನಿಗೆ ವಿಭ್ರಾಜನೇ ಮತ್ತೆ ವಿಶ್ವಕ್ಸೇನನಾಗಿ ಮಗನಾಗಿ ಹುಟ್ಟಿದ್ದನಲ್ಲ ಆ ವಿಶ್ವಕ್ಸೇನನಿಗೇನೆ ರಾಜ್ಯವನ್ನು ಒಪ್ಪಿಸಿ ತಾನು ಹೊರಟುಬಿಡುತ್ತೇನೆ ಅಂತ ಮೂವರು ಸೇರಿ ವಿರಕ್ತರಾಗಿ ನಾವೂ ಸಾಧನೆಯನ್ನು ಮಾಡುವುದಕ್ಕೆ ಹೊರಡೋಣ ಅಂತ ಹೊರಡುತ್ತಾರೆ.

ಆಗ ಹೆಂಡತಿ ಸನ್ನತಿ ಅಂತ ಅವಳ ಹೆಸರು ಉಪವಾಸ ಕುಳಿತಿದ್ದಳಲ್ಲ ಅವಳು ಅನ್ನುತ್ತಾಳೆ ನಗಲಿಕತ್ತಳು ಯಾಕೆ ನಗುತ್ತಾ ಇದ್ದೀ ಅಂತ ಕೇಳಿದರೆ ನಾನು ಇಷ್ಟು ಹೊತ್ತು ಮಾಡಿದ್ದೆಲ್ಲ ನಾಟಕ ಅಂತ ಹೇಳಿಬಿಟ್ಟಳು. ನನಗೆ ಗೊತ್ತಿತ್ತು ನಿನಗೆ ಎಲ್ಲ ಭಾಷೆಗಳು ಗೊತ್ತು, ನೀನು ಇರುವೆಯ ಮಾತು ಕೇಳಿ ನಕ್ಕಿದ್ದಿಯಾ, ನನ್ನನ್ನು ನೋಡಿ ನಕ್ಕಿಲ್ಲ ಅಂತ ನನಗೆ ಚೆನ್ನಾಗಿ ಗೊತ್ತು ಆದರೂ ನನ್ನನ್ನು ನೋಡಿಯೇ ನೀನು ನಕ್ಕಿರಬಹುದು ಅಂತ ಸಂಶಯ ಪಟ್ಟವರಂತೆ ನಾಟಕ ಮಾಡಿ, ಉಪವಾಸ ಮಾಡಿ ನಾನು ಒದ್ದಾಡಿದ್ದಕ್ಕೆ ತಾನೆ ನೀನು ಹೋಗಿ ತಪಸ್ಸು ಮಾಡಿ ನಾರಾಯಣನನ್ನು ಕಂಡು ಬಂದಿ ಇಲ್ಲ ಅಂದರೆ ನೀನು ಯಾಕೆ ತಪಸ್ಸು ಮಾಡುತ್ತಾ ಇದ್ದೀ. ತಪಸ್ಸು ಮಾಡಿ ನಾರಾಯಣನನ್ನ ಕಂಡೀ ನಾರಾಯಣ ವರ ಕೊಟ್ಟ ದೇವರು ನಿನಗೆ ನಾಳೆ ಬೆಳಗ್ಗೆ ಕಲ್ಯಾಣ ಆಗುತ್ತದೆ ಅಂತ ಆ ಕಲ್ಯಾಣ ಅಂದರೆ ಏನು ಈ ಬ್ರಾಹ್ಮಣನ ಮೂಲಕ ಈ ಎರಡು ಶ್ಲೋಕಗಳು ನಿನ್ನ ಕಿವಿಗೆ ಬಿತ್ತು. ಕಿವಿಗೆ ಬಿದ್ದದ್ದಕ್ಕೆ ಈ ಸಂಸಾರದಲ್ಲಿ ವಿರಕ್ತನಾಗಿ ಮೋಕ್ಷ ಸಾಧನೆಯನ್ನು ಮಾಡುವುದಕ್ಕೆ ಹೊರಟಿದ್ದೀಯಲ್ಲ ಇದಕ್ಕೋಸ್ಕರ ನಾನು ಮಾಡಿದ ನಾಟಕ ಅಂತ ನೋಡಿ ಹೇಗಿರುತ್ತಾರೆ ಪತಿವ್ರತಾ ಸ್ತ್ರೀಯರು ಮಹಾನುಭಾವರು. ವಿಷಯಗಳಲ್ಲಿ, ಭೋಗಗಳಲ್ಲಿ ಆಸಕ್ತರಾಗಬೇಕು ಅಂತ ಸಂಸಾರದೊಳಗೆ ಎಳೆಯದಂತೆ ಮೋಕ್ಷ ಮಾರ್ಗದಲ್ಲಿ ತನ್ನ ಪತಿ ಹೋಗಬೇಕು ಅನ್ನುವುದಕ್ಕೆ ಪ್ರಚೋದನೆಯನ್ನು ಮಾಡುವಂತಹ ಪುರಂದರದಾಸರಿಗೆ ಹೇಗೆ ವೈರಾಗ್ಯಕ್ಕೆ ಕಾರಣಳಾದಳು ಅಂತ **'ಹೆಂಡತಿ ಸಂತತಿ ಸಾವಿರವಾಗಲಿ'** ಅಂತ ಹೇಳುತ್ತಾರಲ್ಲ ಹಾಗೆ ಉತ್ತಮವಾದ ವೈರಾಗ್ಯದ ಸಾಧನೆಯನ್ನು ಮಾಡುವುದಕ್ಕೆ ಸಹಾಯಕಳಾದಳು ಅಂತ ಆ ಮಡದಿಯನ್ನು ಪ್ರಶಂಸೆ ಮಾಡುವ ರೀತಿಯಲ್ಲಿ ಈ ಬ್ರಹ್ಮದತ್ತ ಮಡದಿಯನ್ನು ವಿಶೇಷವಾಗಿ ಪ್ರಶಂಸೆ ಮಾಡಿದ್ದಾನೆ ಎಲ್ಲರೂ ಕೂಡ ವಿರಕ್ತರಾಗಿ ವಿಶೇಷವಾಗಿ ತಮ್ಮ ಸಾಧನೆಯನ್ನು ಮಾಡಿಕೊಂಡಿದ್ದಾರೆ ಈ ರೀತಿ ಇವರ ಚರಿತ್ರೆ ಇದೆ. ಯೋಗದ ಮಹತ್ವ ಇಷ್ಟಿದೆ ಆದ್ದರಿಂದ ನೀನು ಕೂಡ ಉತ್ತಮವಾದ ಯೋಗ ಸಾಧನೆಯನ್ನು ಮಾಡಿ ಗುರು ದ್ರೋಹ, ಪಿತೃ ದ್ರೋಹ, ಮಾತೃ ದ್ರೋಹ, ಜ್ಞಾನಿ ದ್ರೋಹ, ಗೋವುಗಳ ದ್ರೋಹಗಳನ್ನು ಮಾಡದಂತೆ ಯೋಗ ಭ್ರಷ್ಟನಾಗದಂತೆ ಆ ಯೋಗ ಸಾಮರ್ಥ್ಯವನ್ನು ಚೆನ್ನಾಗಿ ರಕ್ಷಣೆ ಮಾಡಿಕೊಂಡು ಭಗವಂತನ ಅನುಗ್ರಹವನ್ನು ಪಡೆಯಬೇಕು ಎಂಬುದಾಗಿ ಭೀಷ್ಮಾಚಾರ್ಯರು ಮಾರ್ಕಂಡೇಯರಿಂದ ಉಪದಿಷ್ಟವಾದ ತತ್ವವನ್ನು ಯುಧಿಷ್ಠಿರನಿಗೆ ಹೇಳಿದ್ದಾರೆ ಎಂಬುದಾಗಿ ವೈಶಂಪಾಯನರು ಜನಮೇಜಯನಿಗೆ ತಿಳಿಸುತ್ತಾರೆ ಎಂಬುದಾಗಿ ಸೂತಾಚಾರ್ಯರು ತಿಳಿಸುತ್ತಾ ಇದ್ದಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಹರಿವಂಶಪರ್ವ-10

* * *

ವೈಶಂಪಾಯನ ಉವಾಚ:

ಪಿತಾ ಸೋಮಸ್ಯ ವೈ ರಾಜನ್ ಜಜ್ಞೇಽತ್ರಿರ್ಭಗವಾನೃಷಿಃ ।

ಬ್ರಹ್ಮಣೋ ಮಾನಸಾತ್ ಪೂರ್ವಂ ಪ್ರಜಾಸರ್ಗಂ ವಿಧಿತ್ಸತಃ ।। (25.01 ಹರಿವಂಶಪರ್ವ)

ಜೀವೋತ್ತಮರಾದ ಜಗತ್ತಿನ ವಿಧಾತೃಗಳು ಅಂತ ಪ್ರಸಿದ್ಧರಾದ ಬ್ರಹ್ಮ ದೇವರ ಮಾನಸಪುತ್ರರಾಗಿ ಅತ್ರಿ ಋಷಿಗಳು ಜನಿಸಿದ್ದಾರೆ. ಆ ಅತ್ರಿ ಋಷಿಗಳು ವಿಶೇಷವಾಗಿ ತಮ್ಮ ಪುತ್ರರಿಂದಲೂ ಸಹಿತರಾಗಿ ಕಾಯಿಕ ವಾಚಿಕ ಮಾನಸಿಕವಾದ ಶುಭ ಕರ್ಮಗಳನ್ನೇ ಆಚರಣೆ ಮಾಡುತ್ತಾ ಇದ್ದಾರೆ.

ಕರ್ಮಣಾ ಮನಸಾ ವಾಚಾ ಶುಭಾನ್ಯೇವ ಚಚಾರ ಸಃ ।। (25.02 ಹರಿವಂಶಪರ್ವ)

ಶಾಸ್ತ್ರ ವಿಹಿತವಾದ ಶುದ್ಧವಾದ ವಿಹಿತವಾದ ಪವಿತ್ರವಾದ ಕರ್ಮಗಳನ್ನೇ ಮಾಡುತ್ತಾ ಭಗವಂತನ ವಿಶೇಷವಾದಂತಹ ಅನುಗ್ರಹವನ್ನು ಪಡೆದಿದ್ದಾರೆ. ಮೂರು ಸಾವಿರ ದಿವ್ಯ ವರ್ಷಗಳವರೆಗೆ ಅಖಂಡವಾಗಿ ಮೌನದಿಂದ ಇದ್ದು ತಪಸ್ಸು ಮಾಡಿದ್ದಾರೆ **'ಅನುತ್ತರಂ ನಾಮ ತಪೋ'**[1] ಅಂತಹ ಶ್ರೇಷ್ಠವಾದ ಮೌನದ ತಪಶ್ಚರ್ಯವನ್ನು ಮಾಡಿ ಭಗವದ್ ಧ್ಯಾನರಥರಾಗಿ ಬ್ರಹ್ಮಚರ್ಯದಿಂದ ಅಖಂಡವಾಗಿ ತಪಸ್ಸು ಮಾಡಿದ್ದಾರೆ. ಆ ರೀತಿಯ ತಪಸ್ಸನ್ನು ಮಾಡುವಂತಹ ಆ ಅತ್ರಿ ಋಷಿಗಳಲ್ಲಿ ಒಂದು ವಿಶಿಷ್ಟವಾದ ತೇಜಸ್ಸು, ಚಂದ್ರನಿಗೆ ಯಾವ ತರಹದ ಒಂದು ಶುಕ್ಲವಾದ ಶುಭ್ರವಾದ ಹೊಳಪಿನ ರೂಪ ಇದೆ ಆ ತರಹ ಶ್ರೇಷ್ಠವಾದಂತಹ ರೂಪ ಅವರಿಗೆ ಬಂದಿದೆ. ವಿಶಿಷ್ಟವಾದ ತೇಜಸ್ಸಿನ ಸಂಚಾರ ಆಗಿದೆ ಮೈಯಲ್ಲಿ ಅಂತಹ ಪ್ರಸಂಗದಲ್ಲಿ ಅವರ ಕಣ್ಣಿನಿಂದ ನೀರು ಬರುತ್ತಾ ಇದೆ ಆ ನೀರನ್ನು ಹತ್ತು ದಿಕ್ಕುಗಳಿಗೆ ಅಭಿಮಾನಿಗಳಾದಂತಹ ದೇವತೆಗಳು, ಸ್ತ್ರೀಯರು, ಆ ದೇವಿಯರು ಅದನ್ನು ಧಾರಣೆ ಮಾಡಿದ್ದಾರೆ. ಧಾರಣೆ ಮಾಡುವಂತಹ ಶಕ್ತಿ ಅವರಿಗಿಲ್ಲದಂತೆ ಅದನ್ನು ಕೆಳಗೆ ಹಾಕಿದ್ದಾರೆ ಆ ಸಂದರ್ಭದಲ್ಲಿ

---

1. 25.04 ಹರಿವಂಶಪರ್ವ

ಅಲ್ಲಿ ಹುಟ್ಟಿದಂತಹ ವ್ಯಕ್ತಿಯೇ ಚಂದ್ರ ಅದಕ್ಕಾಗಿಯೇ ಅವನನ್ನು ಅತ್ರಿನೇತ್ರ ಸಮುದ್ಭವ ಅಂತ. ಅತ್ರಿ ಋಷಿಗಳು ಮೂರು ಸಾವಿರ ವರ್ಷಗಳವರೆಗೆ ತಪಸ್ಸು ಮಾಡಿ ವಿಶೇಷವಾಗಿ ಭಗವಂತನ ಅನುಗ್ರಹವನ್ನು ಪಡೆಯುತ್ತಾರೆ ಪರಮಾತ್ಮನೇ ವರ ಕೊಡುತ್ತಾನೆ. **'ದತ್ತಂ ದೂರ್ವಾಸಸಂ ಸೋಮಂ ಆತ್ಮೇಶಬ್ರಹ್ಮ ಸಂಭವಾನ್'** ಬ್ರಹ್ಮಾಂತರ್ಯಾಮಿ ಬ್ರಹ್ಮ, ವಿಷ್ಣು ಹಾಗೂ ಶಿವಾಂತರ್ಯಾಮಿ ಶಿವ ಈ ಮೂರು ರೂಪಗಳಿಂದ ಪರಮಾತ್ಮನೇ ಅವತಾರ ಆಗಬೇಕು ಅಂತ ಬಯಸಿರುತ್ತಾರೆ. ವಿಷ್ಣು ಸಾಕ್ಷಾತ್ ದತ್ತಾತ್ರೇಯನಾಗಿ ಅವತಾರ ಮಾಡುತ್ತಾನೆ, ಶಿವ ದುರ್ವಾಸರಾಗಿ ಅವತಾರ ಮಾಡುತ್ತಾನೆ, ಆ ಬ್ರಹ್ಮಾಂತರ್ಯಾಮಿಯಾದ ಬ್ರಹ್ಮ ರೂಪಿಯಾದ ಪರಮಾತ್ಮ ಬ್ರಹ್ಮ ದೇವರ ಜೊತೆಗೆ ಈ ಸೋಮನಲ್ಲಿ ವಿಶೇಷವಾಗಿ ಆವೇಶವನ್ನು ಮಾಡುತ್ತಾನೆ ಬ್ರಹ್ಮ ದೇವರಿಗೆ ಪ್ರತ್ಯೇಕ ಅವತಾರ ಇಲ್ಲ.

'ಬ್ರಹ್ಮಣೋ ನಾವತಾರೋಸ್ತಿ ಸನ್ನಿಧಾನಂ ತು ಕೇವಲಂ' ಆ ದೃಷ್ಟಿಯಲ್ಲಿ ಬ್ರಹ್ಮ ದೇವರ ವಿಶೇಷ ಸನ್ನಿಧಾನದಕ್ಕೆ ಪಾತ್ರನಾದಂತಹ ಸೋಮ ಆ ಬ್ರಹ್ಮ ದೇವರಲ್ಲಿ ಬ್ರಹ್ಮನಾಮಕನಾದ ಪರಮಾತ್ಮನ ಸನ್ನಿಧಾನ ಅಂತಹ ಸೋಮ ಅತ್ರಿ ಋಷಿಗಳ ಶರೀರದಲ್ಲಿ ಪ್ರವೇಶ ಮಾಡಿ ಅವರ ಕಣ್ಣುಗಳಿಂದ ಧಾರಾಕಾರವಾಗಿ ಆ ತಪಸ್ಸಿನ ಜಲ ಹೊರಗಡೆಗೆ ಬರುತ್ತಾ ಇದ್ದರೆ ಅದನ್ನು ಆ ದೇವತಾಸ್ತ್ರೀಯರು ಧಾರಣೆ ಮಾಡಿದ್ದಾರೆ, ಧಾರಣೆ ಮಾಡಲಾಗದೆ ಅವರು ಆ ಗರ್ಭವನ್ನು ಕೆಳಗೆ ಹಾಕಿದಾಗ ಅಲ್ಲಿಂದ ಸೋಮನ ಉತ್ಪತ್ತಿಯಾಗಿದೆ ಎಂಬುದಾಗಿ ತಿಳಿಸುತ್ತಾರೆ. ಬ್ರಹ್ಮ ದೇವರು ಆ ಎಲ್ಲ ಅನೇಕ ವೇದಾಭಿಮಾನಿ ದೇವತೆಗಳೇ ಮಾಡಿದಂತಹ ವೇದಮಯವಾದ ಒಂದು ಸಾವಿರ ಶುಭ್ರವಾದ ಕುದುರೆಗಳಿಂದ ಕೂಡಿದಂತಹ ಶ್ರೇಷ್ಠವಾದಂತಹ ಅವರ ಸನ್ನಿಧಾನದಿಂದ ಕೂಡಿದ ರಥದಲ್ಲಿ ತಮ್ಮ ವಿಶೇಷ ಆವೇಶದಿಂದ ಕೂಡಿದ ಸೋಮನನ್ನು ಪ್ರೀತಿಯಿಂದ ಕೂಡಿಸಿಕೊಂಡು ಹೊರಟಿದ್ದಾರೆ. ಸೋಮನಿಗಿಂತಲೂ ಚಿಕ್ಕ ದೇವತೆಗಳು ಹಾಗೂ ಭೃಗು ಋಷಿಗಳು, ಆಂಗೀರಸರು, ಎಲ್ಲ ಋಷಿಗಳು ಕೂಡ ಎಲ್ಲರೂ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದಗಳಿಂದ ಸ್ತೋತ್ರ ಮಾಡಿದ್ದಾರೆ. ಸೋಮನಿಗೆ ಯೋಗ್ಯವಾದಂತಹ ಮಂತ್ರಗಳಿಂದ ಸೋಮನ ಸ್ತುತಿ, ಅಂತರ್ಯಾಮಿಯಾದ ಬ್ರಹ್ಮ ದೇವರ ಸ್ತುತಿ ಅಲ್ಲಿ ಅಂತರ್ಯಾಮಿಯಾದ ಬ್ರಹ್ಮನಾಮಕ ಪರಮಾತ್ಮನ ಸ್ತುತಿಯನ್ನ ಆ ಎಲ್ಲ ಋಷಿ ಮುನಿಗಳು ಮಾಡಿದ್ದಾರೆ. ಹಾಗೆಲ್ಲ ಋಷಿಗಳಿಂದ ಸ್ತುತರಾಗಿ ಬ್ರಹ್ಮ ದೇವರು ಹಾಗೂ ಸೋಮ ಆ ರಥದಲ್ಲಿ ಕುಳಿತುಕೊಂಡು ಇಪ್ಪತ್ತೊಂದು ಬಾರಿ ಸಮಗ್ರವಾದ ಭೂಪ್ರದಕ್ಷಿಣೆಯನ್ನು ಮಾಡಿದ್ದಾರೆ.

ತ್ರಿಃಸಪ್ತಕೃತ್ವೋऽತಿಯಶಾಶ್ಚಕ್ಕಾರಾಭಿಪ್ರದಕ್ಷಿಣಮ್ । (25.15 ಹರಿವಂಶಪರ್ವ)

ಆ ಭೂಪ್ರದಕ್ಷಿಣೆ ಮಾಡುವಾಗ ಆ ಸೋಮನ ಒಂದು ವಿಶಿಷ್ಟವಾದ ತೇಜಸ್ಸು ಅದು ಧಾರಾಕಾರವಾಗಿ ಜಲದ ರೂಪದಲ್ಲಿ, ಅಮೃತದ ರೂಪದಲ್ಲಿ ಎಲ್ಲೆಲ್ಲಿ ಸೇಚನ ಆಯಿತೋ ಸಂಚಾರ ಮಾಡುವಾಗ ಕೆಳಗೆ ಬಿತ್ತೋ ಅಲ್ಲಿ ಓಷಧಿಗಳ ಉತ್ಪತ್ತಿಯಾಯಿತು ಓಷಧಿಗಳ ರಾಜ ಅಂತ ಆದಕ್ಕಾಗಿಯೇ ಸೋಮನಿಗೆ ಹೇಳುವುದು. ಆ ಸೋಮನ ವಿಶಿಷ್ಟವಾಗಿರುವಂತಹ ಅಮೃತಮಯವಾದಂತಹ ಏನು ಧಾರಾ ಇದೆ ಅದರ ಸೇಚನ ಆದ ಸ್ಥಳದಲ್ಲೆಲ್ಲಾ ಒಂದು ಅದ್ಭುತವಾದ ಓಷಧಿಗಳ ಉತ್ಪತ್ತಿಯಾಗಿದೆ ಆ ಸೋಮನ ಕಿರಣಗಳಿಂದ ಓಷಧಿ ವನಸ್ಪತಿಗಳ ಅಭಿವೃದ್ಧಿಯಾಗುತ್ತೆ ಅಂತನ್ನುವುದು ಎಲ್ಲರಿಗೂ ತಿಳಿದಂತಹ ವಿಷಯ **'ಓಷಧ್ಯಸ್ತಾಃ ಸಮುದ್ ಭೂತಾ'**[1] ಆ ರೀತಿ ಬ್ರಹ್ಮ ದೇವರು ವಿಶೇಷವಾಗಿ ಮಾಡಿದ್ದಾರೆ. ಈ ಸೋಮ ಬ್ರಹ್ಮ ದೇವರ ವಿಶೇಷ ಅನುಗ್ರಹವನ್ನು ಪಡೆದು ಭೂಪ್ರದಕ್ಷಿಣೆಯನ್ನು ಮಾಡಿ ಜನರೆಲ್ಲರ ಬದುಕಿಗೆ ಅತ್ಯಂತ ಅವಶ್ಯಕವಾದಂತಹ ಓಷಧಿ ವನಸ್ಪತಿಗಳ ಸೃಷ್ಟಿಯನ್ನು ಮಾಡುವುದರ ಜೊತೆಗೆ

1. 25.16 ಹರಿವಂಶಪರ್ವ



ತಾನು ತನ್ನ ವಿಶೇಷವಾದಂತಹ ಸಾಧನೆಯನ್ನು ಮಾಡಿಕೊಳ್ಳುವುದಕ್ಕಾಗಿ ಅಪರೋಕ್ಷ ಜ್ಞಾನಿಗಳೇ ದೇವತೆಗಳು ಆಗುವುದು. **'ನೈವ ದೇವಪದಂ ಪ್ರಾಪ್ತಾಃ ಬ್ರಹ್ಮ ದರ್ಶನ ವರ್ಜಿತಾಃ'** ಅಂದಮೇಲೆ ಅವರಿಗೆ ಮೋಕ್ಷವಾಗುವುದು ನಿಶ್ಚಿತ ಆದರೆ ಮೋಕ್ಷದಲ್ಲಿ ವಿಶೇಷವಾದ ಆನಂದದ ಅಭಿವೃದ್ಧಿಗಾಗಿ ಹೆಚ್ಚಿನ ಸಾಧನೆಯನ್ನು ಮಾಡುತ್ತಾರೆ ಅಂತಹ ಚಂದ್ರ ತಾನು ತಪಸ್ಸು ಮಾಡಿದ್ದಾನೆ ಅಪರೋಕ್ಷ ಜ್ಞಾನಿ ಆಗಿದ್ದರೂ ಕೂಡಾ.

ತಪಸ್ತೇಪೇ ಮಹಾಭಾಗ ಪದ್ಮಾನಾಂ ದಶತೀರ್ದಶ ॥ (25.18 ಹರಿವಂಶಪರ್ವ)

ಒಂದು ಸಾವಿರ ಪದ್ಮ ಸಂವತ್ಸರಗಳವರೆಗೆ ಜಪ ಮಾಡಿದ್ದಾನೆ ಅಂದರೆ ಒಂದು ಲಕ್ಷ ಕೋಟಿ ಅಂದರೆ ಒಂದು ಶಂಕು, ಒಂದು ಲಕ್ಷ ಶಂಕು ಎಂದರೆ ಒಂದು ಮಹಾಶಂಕು ಅಂತಹ ಲಕ್ಷ ಮಹಾಶಂಕು ಅಂದರೆ ಒಂದು ಪದ್ಮ ಅಂತಹ ಸಾವಿರ ಪದ್ಮ ವರ್ಷಗಳವರೆಗೆ ತಪಶ್ಚರ್ಯವನ್ನು ಮಾಡಿದ್ದಾನೆ. ಭಗವಂತನ ಪ್ರೀತಿಗಾಗಿ, ಕಾಯಿಕವಾಗಿ ಭಗವಂತನ ಸೇವೆ, ಮಾನಸಿಕವಾಗಿ ಧ್ಯಾನ, ವಾಚನಿಕವಾಗಿ ಭಗವಂತನ ಸ್ತುತಿ ಈ ರೀತಿಯ ಮಹಾ ತಪಸ್ಸನ್ನು ಆಚರಣೆ ಮಾಡಿದ್ದಾನೆ ಮಹಾನುಭಾವನಾದಂತಹ ಸೋಮ ಎಂತಹ ದೊಡ್ಡ ಯೋಗ್ಯತೆ ನೋಡಿ, ಒಂದು ಘಂಟೆ ಚೆನ್ನಾಗಿ ಧ್ಯಾನವನ್ನು ಮಾಡುವುದು ಅಂದರೆ ಕಷ್ಟ ಮಾನವರಿಗೆ ದೇವತೆಗಳಿಗೂ ಮಾನವರಿಗೂ ಎಷ್ಟು ಅಂತರ. ಒಂದು ಸಾವಿರ ಪದ್ಮ ವರ್ಷಗಳವರೆಗೆ ನಿರಂತರವಾಗಿ ಭಗವಂತನ ಧ್ಯಾನವನ್ನು ಮಾಡಬೇಕು ಆ ಪರಮಾತ್ಮನ ಸೇವೆಯನ್ನು ಮಾಡಬೇಕು ಅಂದರೆ ಅವರಿಗಿರುವ ಭಕ್ತಿ, ಶ್ರದ್ಧೆ, ಯೋಗ್ಯತೆ, ಶಕ್ತಿ, ನಿಷ್ಠೆ ಎಷ್ಟು ಅದ್ಭುತವಾದದ್ದು ಅದರಿಂದ ಬರುವ ಪುಣ್ಯ ಎಷ್ಟು, ಅದರಿಂದ ಆಗುವ ಆನಂದದ ಅಭಿವೃದ್ಧಿ ಎಂತಹದ್ದು ಅದ್ಭುತವಾದದ್ದು. ಈ ರೀತಿ ವಿಶೇಷವಾಗಿ ತಪಶ್ಚರ್ಯವನ್ನು ಮಾಡಿದ್ದಾರೆ. ಇವನಿಗೆ **'ಅಪಾಂನಿಧಿಃ'** ಅಂತ ಎಲ್ಲ ನೀರುಗಳಿಗೆ ವಿಶೇಷವಾಗಿ ಆ ಜಲತತ್ವಕ್ಕೂ ವಿಶೇಷವಾಗಿ ಆಶ್ರಯನಾಗಿದ್ದಾನೆ, ಬೀಜಗಳಿಗೆ ಓಷಧಿಗಳಿಗೆ ಬ್ರಾಹ್ಮಣರಿಗೆ ಹಾಗೂ ನೀರಿಗೆ ಇವನು ಅಧಿಪತಿ ಅಂತ ರಾಜ ಅಂತ ಪಟ್ಟಾಭಿಷೇಕ ಮಾಡಿದ್ದಾರೆ ಬ್ರಹ್ಮ ದೇವರು.

ತತಸ್ತಸ್ಮೈ ದದೌ ರಾಜ್ಯಂ ಬ್ರಹ್ಮಾ ಬ್ರಹ್ಮವಿದಾಂ ವರಃ ।
ಬೀಜೌಷಧೀನಾಂ ವಿಪ್ರಾಣಾಮಪಾಂ ಚ ಜನಮೇಜಯ ॥ (25.20 ಹರಿವಂಶಪರ್ವ)

ಓಷಧಿ ವನಸ್ಪತಿಗಳಿಗೆ ರಾಜ, ಬೀಜಗಳಿಗೆ ರಾಜ, ಬ್ರಾಹ್ಮಣರಿಗೆ ರಾಜ ಜೊತೆಗೆ ನೀರುಗಳಿಗೂ ರಾಜ ಎಂಬುದಾಗಿ ಇವನನ್ನು ವರುಣ ದೇವರು ನೀರಿಗೆ ಅಭಿಮಾನಿ ದೇವತೆಗಳು ವರುಣ ದೇವರು ನೀರಿಗೆ ಅಭಿಮಾನಿ ದೇವತೆಗಳು ಅನ್ನುವುದು ಸತ್ಯವಾದರೂ ಕೂಡ ಚಂದ್ರನಿಗೂ ಕೂಡ ಆ ನೀರಿನ ನಿಯಾಮಕತ್ವವನ್ನು ಕೊಟ್ಟಿದ್ದಾರೆ. ವರುಣ ದೇವರಿಗಿಂತಲೂ ಚಂದ್ರ ಒಂದು ಕಕ್ಷೆಯಿಂದ ಉತ್ತಮ ಆದ್ದರಿಂದ ಕೆಳಗಿನ ದೇವತೆಗಳು ಯಾವುದಕ್ಕೆ ಅಭಿಮಾನಿಗಳೋ ಅದಕ್ಕೆ ಮೇಲಿನ ದೇವತೆಗಳು ಅಭಿಮಾನಿಗಳು ಆಗಿಯೇ ಇರುತ್ತಾರೆ ಅಂತ ಶ್ರೀಮದಾಚಾರ್ಯರು ತಿಳಿಸಿದ್ದಾರೆ. ವಿಶೇಷವಾಗಿ ಚಂದ್ರನಿಗೆ ಆ ನೀರಿನ ಅಭಿಮಾನಿತ್ವವನ್ನು ಕೊಟ್ಟಿದ್ದಾರೆ ಬ್ರಹ್ಮ ದೇವರು ಈ ರೀತಿ ಆ ಬ್ರಹ್ಮ ದೇವರಿಂದ ರಾಜ್ಯವನ್ನು ಪಡೆದು ಚೆನ್ನಾಗಿ ಎಲ್ಲ ರಾಜ್ಯವನ್ನು ಚೆನ್ನಾಗಿ ನಿಭಾಯಿಸುತ್ತ ಇದ್ದಾರೆ. ಯಜ್ಞದ ಸಾಧನಗಳನ್ನು ಸಂಪಾದನೆ ಮಾಡಬೇಕು ಅನ್ನುವಂತಹ ಒಂದು ಶ್ರದ್ಧೆ ನಮ್ಮಲ್ಲಿ ಬರಬೇಕು ಅಂದರೆ ಚಂದ್ರ ದೇವರ ವಿಶೇಷವಾದ ಅನುಗ್ರಹ ಬೇಕು ಅಂತ ಐತರೇಯ ಭಾಷ್ಯದಲ್ಲಿ ಶ್ರೀಮದಾಚಾರ್ಯರು ತಿಳಿಸುತ್ತಾರೆ.

ತನ್ನ ಇಪ್ಪತ್ತೇಳು ಜನ ಹೆಣ್ಣು ಮಕ್ಕಳನ್ನು ಕೊಟ್ಟು ದಕ್ಷಪ್ರಜಾಪತಿ ಮದುವೆ ಮಾಡಿದ್ದಾನೆ ಅಶ್ವಿನೀ, ಭರಣೀ ಇತ್ಯಾದಿ ನಕ್ಷತ್ರಾದಿಭಿಮಾನಿ ದೇವತೆಗಳನ್ನು. ಇವನು ರಾಜಸೂಯ ಯಾಗವನ್ನು ಪ್ರಾರಂಭ ಮಾಡಿದ. ಅದ್ಭುತವಾದ

ರಾಜಸೂಯ ಯಾಗ, ದಕ್ಷಿಣೆ ಅಂದರೆ ಒಂದೊಂದು ಲಕ್ಷ ರೂಪಾಯಿ ದಕ್ಷಿಣೆ ಏನು ಇವತ್ತಿನ ಕಾಲದ ನೋಟುಗಳಲ್ಲ ಲಕ್ಷ ರೂಪಾಯಿ ಅಂದರೆ ಅವತ್ತಿನ ಕಾಲದ ಶ್ರೇಷ್ಠವಾದ, ಶುದ್ಧವಾದಂತಹ ಸುವರ್ಣಮಯವಾದ ದಕ್ಷಿಣೆ ಅಂತಹ **'ಸಹಸ್ರಶತದಕ್ಷಿಣಮ್'**[1] ಆ ರೀತಿಯ ಲಕ್ಷ ಲಕ್ಷ ರೂಪಾಯಿಯ ದಕ್ಷಿಣೆಯನ್ನು ಕೊಡುತ್ತಾ ಶ್ರೇಷ್ಠವಾದಂತಹ ಯಜ್ಞವನ್ನು ಮಾಡಿದ್ದಾನೆ. ಅತ್ರಿ ಋಷಿಗಳೇ ಸ್ವತಃ ತಂದೆ ಹೋತ್ರುಗಳಾಗಿದ್ದಾರೆ, ಭೃಗು ಋಷಿಗಳು ಅಧ್ವರ್ಯುಗಳಾಗಿದ್ದಾರೆ, ಹಿರಣ್ಯಗರ್ಭಾ ಅಂಗಿರಸ್ ಋಷಿಗಳು ಉದ್ಗಾತ್ರವಾಗಿದ್ದಾರೆ, ವಸಿಷ್ಠರಂತೂ ಅರ್ಥ ಬರೆಯುತ್ತಾರೆ, ವಸಿಷ್ಠರು ಅಥವಾ ಬ್ರಹ್ಮ ದೇವರೇ ಬ್ರಹತ್ವವನ್ನು ಸ್ವೀಕಾರ ಮಾಡಿದ್ದಾರೆ, ಸಾಕ್ಷಾತ್ ಶ್ರೀಮನ್ನಾರಾಯಣ ಸದಸ್ಯನಾಗಿದ್ದಾನೆ, ಸನತ್ಕುಮಾರಾದಿ ಋಷಿಗಳಿದ್ದಾರೆ ಇಂತಹ ಅದ್ಭುತವಾದ ಯಜ್ಞವನ್ನು ಮಾಡಿದ್ದಾನೆ. ಒಂದು ಸಾವಿರ ಪದ್ಮ ವರ್ಷಗಳ ಮಹಾತಪಸ್ಸು, ಭಾರೀ ಉತ್ತಮ ಕಲ್ಪದಲ್ಲಿ ರಾಜಸೂಯ ಯಾಗ ಇವೆರಡನ್ನೂ ಮಾಡಿರತಕ್ಕಂತಹ ಆ ಚಂದ್ರ ಇಷ್ಟು ಪುಣ್ಯವನ್ನು ಸಂಪಾದನೆ ಮಾಡಿದ್ದಾನೆ. ದೇವತೆಗಳಿಗೆ ಒಂದೊಂದು ಲೆಕ್ಕ ಎಲ್ಲರಿಗೂ ಇರುತ್ತೆ ವಿಶೇಷವಾಗಿ ದೇವತೆಗಳಿಗೆ ಬ್ರಹ್ಮ ದೇವರ ಒಂದು ದಿನದಲ್ಲಿ ಇಷ್ಟು ಸಾಧನೆಯನ್ನು ಮಾಡಬೇಕು ಅಂತ ಇರುತ್ತೆ, ಇನ್ನೊಂದು ದಿನದಲ್ಲಿ ಇಷ್ಟು ಸಾಧನೆ ಅಂತ. ಹೀಗೆ ಸಂಪೂರ್ಣ ಬ್ರಹ್ಮ ದೇವರ ಒಂದು ನೂರು ವರ್ಷಗಳವರೆಗೆ ದಿನಕ್ಕಿಷ್ಟು ಅಂತ ಅವರವರ ಯೋಗ್ಯತೆಗೆ ತಕ್ಕ ಹಾಗೆ ಸಾಧನೆಯನ್ನು ಮಾಡುತ್ತಾ ಮಾಡುತ್ತಾ ಮಾಡುತ್ತಾ ಸಾಧನೆ ಪೂರ್ತಿಯಾದ ಮೇಲೆ ಬ್ರಹ್ಮ ದೇವರ ಜೊತೆಗೆ ಮೋಕ್ಷಕ್ಕೆ ಹೋಗಬೇಕು. ಈ ದಿನ ಇಷ್ಟು ಸಾಧನೆ ಮಾಡಬೇಕು ಅಂತ ಒಂದು ಲೆಕ್ಕ ದೇವರು ಕೊಟ್ಟಿದ್ದರೆ ಅದಕ್ಕಿಂತ ಜಾಸ್ತಿ ಸಾಧನೆ ಮಾಡಿದರೆ ಅವರ ಯೋಗ್ಯತೆಗೆ ಮೀರಿ ಆನಂದವನ್ನು ಕೊಡಬೇಕಾಗುತ್ತದೆ ಮೋಕ್ಷದಲ್ಲಿ **'ಏಧಮಾನದ್ವಿಟ್'** ಅದನ್ನು ಕೊಡುವ ಹಾಗಿಲ್ಲ ಅವರವರ ಯೋಗ್ಯತೆಗೆ ತಕ್ಕ ಹಾಗೆ ಆನಂದ ಕೊಡಬೇಕು. ಅದಕ್ಕೋಸ್ಕರ ಪರಮಾತ್ಮ ಅವರು ಯೋಗ್ಯತೆಗೆ ಮೀರಿ ಸಾಧನೆಯನ್ನು ಮಾಡಿದರೆ

ಸ್ವಾಧೀಕಾರಾಧಿಕೋ ಯತ್ನಃ ಕಥಂಚಿನ್ನೋಪಪದ್ಯತೇ ।
ಕಥಂಚಿದಧಿಕೇ ಯತ್ನೇ ದೋಷಃ ಕಶ್ಚಿತ್ ಸಮಾಪತೇತ್ ॥ (ಶ್ರೀನಿವಾಸತೀರ್ಥೀಯ ಟಿಪ್ಪಣಿ)

ಅಕಸ್ಮಾತ್ ಆ ದಿನ ಅವರು ಅವತ್ತು ಮಾಡಬೇಕಾದಷ್ಟು ಸಾಧನೆಗಿಂತಲೂ ಹೆಚ್ಚಿನ ಸಾಧನೆಯನ್ನು ಮಾಡಿದರೆ ಏನಾದರೂ ಒಂದು ದೋಷವನ್ನು ಮಾಡಿಸಿ ಅವರ ಯೋಗ್ಯತೆಗೆ ಎಷ್ಟು ಸರಿಯೋ ಅಷ್ಟು ಮಾತ್ರ ಸಾಧನೆಯನ್ನು ಉಳಿಸುತ್ತಾನೆ ಉಳಿದ ಸಾಧನೆಯನ್ನು ಅದರಿಂದ ಬರಬೇಕಾದ ಪ್ರಸಕ್ತವಾದ ಆನಂದವನ್ನು ಬರದೇ ಇರುವ ಹಾಗೆ ದೇವರು ವ್ಯವಸ್ಥೆ ಮಾಡುತ್ತಾನೆ ಅಂತ ಹೇಳುತ್ತಾರೆ. ಹೀಗಾಗಿ ಚಂದ್ರ ದೇವರು ಈ ಬ್ರಹ್ಮ ದಿನದಲ್ಲಿ ಮಾಡುವ ಸಾಧನೆಗಿಂತಲೂ ಮಿಗಿಲಾದ ಸಾಧನೆಯನ್ನು ಮಾಡಿ ಪುಣ್ಯವನ್ನು ಗಳಿಸಿದ್ದಾರೆ ಅಷ್ಟು ಪುಣ್ಯ ಅವರಿಗೆ ಬೇಕಾಗಿರಲಿಲ್ಲ. ಹೀಗೆ ಯಾಕೆ ಮಾಡಿಸುತ್ತಾನೆ ಹೆಚ್ಚು ಮಾಡಿಸಿ ಕಡಿಮೆ ಮಾಡುವುದು ಯಾಕೆ ಅಂದರೆ ಎಂತಹ ದೊಡ್ಡ ಸ್ಥಾನದೊಳಗೆ ಇದ್ದವರು ತಪ್ಪು ಮಾಡಿದರೆ ಅವರಿಗೆ ಒಂದು ತರಹದ ಶಿಕ್ಷೆ ತಪ್ಪಿಲ್ಲ ಅಂದಮೇಲೆ ಇನ್ನುಳಿದವರೆಲ್ಲ ಎಷ್ಟು ಜಾಗರೂಕರಾಗಿ ಇರಬೇಕು ಅಂತ ಎಲ್ಲರಿಗೂ ಒಂದು ಎಚ್ಚರಿಕೆಯ ಗಂಟೆಯನ್ನು ಬಾರಿಸುವುದಕ್ಕೆ ಪರಮಾತ್ಮ ಆ ರೀತಿಯಾಗಿ ಮಾಡುತ್ತಾನೆ.

ಬೃಹಸ್ಪತಿಯ ಮಡದಿಯನ್ನು ಅಪೇಕ್ಷೆ ಪಟ್ಟಿದ್ದಾನೆ ಆ ಒಂದು ಕಾರಣಕ್ಕಾಗಿ ಅಪರಾಧಕ್ಕಾಗಿ ಚಂದ್ರನಿಗೆ ಎಷ್ಟು ಪುಣ್ಯ ಇರಬೇಕೋ ಅಷ್ಟು ಪುಣ್ಯವನ್ನು ದೇವರು ಅವಶ್ಯ ಉಳಿಸಿದ್ದಾನೆ. ಯೋಗ್ಯತೆಗೆ ಮೀರಿ ಬಂದ ಪುಣ್ಯವನ್ನು

1. 25.23 ಹರಿವಂಶಪರ್ವ

ಮಾತ್ರ ಖರಾಸ ಮಾಡಿ ಅದರಿಂದ ಸಿಗಬೇಕಾದ ಆನಂದವನ್ನು ಅವನಿಗೆ ಕೊಡದಂತೆ ಮೋಕ್ಷದಲ್ಲಿ ಆನಂದದ ಖರಾಸವನ್ನು ಮಾಡಿದ್ದಾನೆ ಎಂಬುದಾಗಿ ಶ್ರೀಮದಾಚಾರ್ಯರು ಅನುವ್ಯಾಖ್ಯಾನದಲ್ಲಿ ತಿಳಿಸುತ್ತಾರೆ. ಆ ರೀತಿ ಅಪಹಾರವನ್ನು ಮಾಡಿದಾಗ ಚಂದ್ರನ ಪಕ್ಷದಲ್ಲಿ ಶುಕ್ರಾಚಾರ್ಯರು ನಿಂತಿದ್ದಾರೆ ಯಾಕೆಂದರೆ ಇನ್ನೊಬ್ಬರ ಮಡದಿಯ ಅಪೇಕ್ಷೆಯನ್ನು ಮಾಡುವುದು ಅಸುರ ಸ್ವಭಾವ ಅದು ಇವನಲ್ಲಿ ಬಂದಿದೆ ಅಂತಾದರೆ ಈಗ ನಾನು ಅವನನ್ನು ನೋಡಿಕೊಳ್ಳಬೇಕು ಅನ್ನುವ ಅರ್ಥದೊಳಗೆ ಅಸುರ ಗುರುಗಳಾದ ಶುಕ್ರಾಚಾರ್ಯರು ಚಂದ್ರನ ಪಕ್ಷ ವಹಿಸಿದ್ದಾರೆ, ಮಹಾನುಭಾವರಾದಂತಹ ರುದ್ರ ದೇವರು ಬೃಹಸ್ಪತಿಯ ಪಕ್ಷವನ್ನು ವಹಿಸಿದ್ದಾರೆ. ದೊಡ್ಡದಾದ ಯುದ್ಧ ದೇವಾಸುರ ಯುದ್ಧ ತಾರಕಾಮಯ ಯುದ್ಧ ಅಂತೆ ಪ್ರಸಿದ್ಧ ಆ ತಾರಾ ದೇವಿಯಗೋಸ್ಕರವಾಗಿ ಮಾಡುವಂತಹ ಯುದ್ಧ, ಬೃಹಸ್ಪತಿಯ ಮಡದಿಯನ್ನು ಬೃಹಸ್ಪತಿಗೆ ಒಪ್ಪಿಸಬೇಕು ಅಂತ ದೇವತೆಗಳು, ಅಸುರರೆಲ್ಲ ಚಂದ್ರನ ಪಕ್ಷವನ್ನು ಕಟ್ಟಿ ಘನಘೋರವಾದಂತಹ ಯುದ್ಧವಾಗಿದೆ.

ಆಗ ಬ್ರಹ್ಮ ದೇವರು ಅಲ್ಲಿ ಬರುತ್ತಾರೆ ಬಂದು ಆ ಯುದ್ಧವನ್ನು ಶಾಂತಗೊಳಿಸಿದ್ದಾರೆ. ಯುದ್ಧವನ್ನು ಮಾಡುವುದು ಸಾಕು ಚಂದ್ರನಿಗೆ ಆದೇಶವನ್ನು ಮಾಡಿದ್ದಾರೆ ನೀನು ಮಾಡಿದ್ದು ತಪ್ಪು ತಪ್ಪನ್ನು ಒಪ್ಪಿಕೋ ತಿದ್ದಿಕೋ, ಇದು ಅಪರಾಧ. ನಿನಗಿಂತಲೂ ಉತ್ತಮರಾಗಿ ಇರತಕ್ಕಂತಹ ಮಹಾನುಭಾವರು ಬೃಹಸ್ಪತ್ಯಾಚಾರ್ಯರು ದೇವತಾ ಗುರುಗಳು, ನಿನಗೂ ಗುರುಗಳು ತಾರತಮ್ಯದಲ್ಲಿಯೂ ಉತ್ತಮರು ಅಂತಹ ಮಹಾನುಭಾವರು. ಇವನು ಹನ್ನೆರಡನೆಯ ಕಕ್ಷೆ ಅವರು ಹತ್ತನೆಯ ಕಕ್ಷೆ ಬೃಹಸ್ಪತ್ಯಾಚಾರ್ಯರು ಅಂತಹ ಉತ್ತಮರ ಪತ್ನಿಯನ್ನು ನೀನು ಅಪೇಕ್ಷೆ ಪಟ್ಟದ್ದೇ ತಪ್ಪು ಅದನ್ನು ಒಪ್ಪಿಸಿ ಕೊಡಬೇಕು ಎಂಬುದಾಗಿ ಬ್ರಹ್ಮ ದೇವರು ಹೇಳಿದ್ದಾರೆ. ಈ ರೀತಿಯಾಗಿ ಹೇಳಿ ಆ ತಾರಕಾಮಯ ಯುದ್ಧವನ್ನ ಶಾಂತಗೊಳಿಸಿ ಇಬ್ಬರಿಗೂ ಸಮಾಧಾನವನ್ನು ಮಾಡಿದ್ದಾರೆ ಆ ಚಂದ್ರನಿಂದ ಹುಟ್ಟಿದಂತಹ ಬುಧನನ್ನ ಚಂದ್ರನಿಗೇನೆ ಒಪ್ಪಿಸಿದ್ದಾರೆ. ಚಂದ್ರನಿಗೆ ರಾಜಯಕ್ಷ್ಮ ರೋಗವಾಗಿದೆ ಆ ಸಂದರ್ಭದಲ್ಲಿ ಅತ್ರಿ ಋಷಿಗಳಿಗೆ ಶರಣು ಹೋದಾಗ ಅತ್ರಿ ಋಷಿಗಳು ತಮ್ಮ ತಪಸ್ಸಾಮರ್ಥ್ಯದಿಂದ ಅದನ್ನು ಉಪಶಮನ ಮಾಡಿದ್ದಾರೆ. ಚಂದ್ರನೂ ಕೂಡ ವಿಶೇಷವಾಗಿ ತಪಶ್ಚರ್ಯವನ್ನು ಮಾಡಿ ಪ್ರಾಯಶ್ಚಿತ್ತಾದಿಗಳನ್ನು ಮಾಡಿಕೊಂಡು ಅದರ ಪರಿಹಾರವನ್ನು ಮಾಡಿಕೊಂಡಿದ್ದಾನೆ ಎಂಬುದಾಗಿ ತಿಳಿಸಿಕೊಡುತ್ತಾರೆ. ಇಂತಹ ಮಹಾನುಭಾವ ಚಂದ್ರ ಮಹಾತಪಸ್ವಿ, ನೀರಿಗೂ ಓಷಧಿ ವನಸ್ಪತಿಗಳಿಗೂ ಅಭಿಮಾನಿ ದೇವತೆ ಶುದ್ಧವಾದಂತಹ ತತ್ವಜ್ಞಾನವನ್ನು ಕೊಡಲಿ, ತಪಸ್ಸಿನಲ್ಲಿ ಆಸಕ್ತಿ ನಿಷ್ಠೆಯನ್ನು ಕೊಡಬೇಕು, ಯಜ್ಞಾದಿ ಸತ್ಕರ್ಮಗಳನ್ನು ಮಾಡಿಸುವಂತಹ ಒಂದು ಶ್ರದ್ಧೆಯನ್ನು ಆ ಪ್ರೇರಣೆಯನ್ನು ಪ್ರಚೋದನೆಯನ್ನು ಮಾಡಿ ಸಮ್ಮನ್ನು ಉದ್ಧಾರ ಮಾಡಬೇಕು ಎಂಬುದಾಗಿ ಕೇಳಿಕೊಳ್ಳಬೇಕು.

ಈ ಸೋಮ ವಂಶದಲ್ಲಿಯೇ ಮುಂದೆ ಶ್ರೀಕೃಷ್ಣ ಪರಮಾತ್ಮ ಅವತಾರ ಮಾಡುವವನಿದ್ದಾನೆ ಅನ್ನುವುದಕ್ಕೋಸ್ಕರ ಸೋಮನಿಂದ ಆ ಎಲ್ಲ ಇತಿಹಾಸವನ್ನು ವೈಶಂಪಾಯನರು ಹೇಳುತ್ತಾ ಇದ್ದಾರೆ ಈ ಸೋಮನ ಮಗನಾದವನೇ ಬುಧ. ಆ ಬುಧ ಅತ್ಯಂತ ಶ್ರೇಷ್ಠನಾದಂತಹ ವ್ಯಕ್ತಿ ಅವನೂ ನೀರಿಗೆ ಅಭಿಮಾನಿ ದೇವತೆ, ವರುಣ ಉತ್ತಮ ಅಭಿಮಾನಿಯಾದರೆ, ಸೋಮನ ನಂತರ ವರುಣ, ವರುಣನ ನಂತರ ಬುಧನೂ ಕೂಡ ನೀರಿಗೆ ಅಭಿಮಾನಿಯಾದಂತಹ ದೇವತೆ ಮಹಾನುಭಾವ. ಬುಧ ವರುಣರಲ್ಲಿ ಅಂತರ್ಯಾಮಿಯಾದಂತಹ ಭಾರತೀರಮಣ ಮುಖ್ಯಪ್ರಾಣಾಂತರ್ಗತನಾದ ಮತ್ಸ್ಯ ತ್ರಿವಿಕ್ರಮಾದಿ ರೂಪಿಯಾದ ಪರಮಾತ್ಮನ ಸ್ಮರಣೆಯನ್ನು ಮಾಡುತ್ತಾನೆ ನೀರಿನಲ್ಲಿ ಸ್ನಾನ ಮಾಡುವುದು, ನೀರಿನಿಂದ ಅಭಿಷೇಕ ಮಾಡುವುದು ಆ ಎಲ್ಲ ಸಂದರ್ಭಗಳಲ್ಲಿ ಈ ದೇವತೆಗಳ ಸ್ಮರಣವನ್ನು ಮಾಡಬೇಕು ಎಂಬುದಾಗಿ ತಿಳಿಸಿದ್ದಾರೆ. ಬುಧ, ಹಿಂದೆ ಕಥೆ ಕೇಳಿದ್ದೀರಿ ಬುಧನಿಗೆ ಇಕ್ಷ್ವಾಕುವಿನ ಮಗಳಾದ ಇಲ ಅವಳಲ್ಲಿ ಪುರೂರವಸ್ ಎಂಬಂತಹ ರಾಜ ಮಗ ಹುಟ್ಟಿದ್ದಾನೆ ಮಹಾನುಭಾವ,

ಅತ್ಯಂತ ಧಾರ್ಮಿಕನಾದವನು, ಸತ್ಯವಾದಿ, ಉತ್ತಮವಾದ ತತ್ವಜ್ಞಾನಿ ವೇದಶಾಸ್ತ್ರಗಳನ್ನು ತಿಳಿದಂತಹ ಮಹಾನುಭಾವ ಸೌಂದರ್ಯವೂ ಅತ್ಯದ್ಭುತ. ದೇವ ಲೋಕದ ಅಪ್ಸರಾ ಸ್ತ್ರೀಯಾಗಿ ಊರ್ವಶಿ ದೇವಿ ಮನುಷ್ಯ ಲೋಕದಲ್ಲಿ ಇರುವಂತಹ ಈ ಪುರೂರವಸ್‌ನ ಮದುವೆಯಾಗಬೇಕು ಅಂತ ಅಪೇಕ್ಷೆ ಪಟ್ಟಿದ್ದಾಳೆ ಇವನ ಜೊತೆಗೆ ಸಂಗವನ್ನು ಮಾಡಬೇಕು ಅಂತ ಬಯಸಿದ್ದಾಳೆ ಅಂದರೆ ಇವನಲ್ಲಿರುವ ಸೌಂದರ್ಯ, ಇವನಲ್ಲಿರುವ ಪರಾಕ್ರಮ, ಇವನ ಸದ್ಗುಣಗಳು ಎಷ್ಟಿತ್ತು ಅಂತ ಊಹಿಸಿಕೊಳ್ಳಬಹುದು. ಹರಿವಂಶ ಹೇಳುತ್ತದೆ

ಊರ್ವಶೀ ವರಯಾಮಾಸ ಹಿತ್ವಾ ಮಾನಂ ಯಶಸ್ವಿನೀ ॥ (26.4 ಹರಿವಂಶಪರ್ವ)

ತಾನು ದೇವಲೋಕದ ಸ್ತ್ರೀ ಅನ್ನುವ ಅಹಂಕಾರವನ್ನೂ ಬಿಟ್ಟು ಧರೆಗಿಳಿದು ಇವನನ್ನು ವರಿಸಿದ್ದಾಳೆ ಅಂತಾದರೆ ಇವನ ಯೋಗ್ಯತೆ ಎಷ್ಟು ಅಂತ ನೋಡಿಕೊಳ್ಳಿ ನಾನಾ ರೀತಿಯಲ್ಲಿ ಅನೇಕ ಎಂಟು ವನಗಳಲ್ಲಿ ಇವನು ವಿಹಾರ ಮಾಡಿದ್ದಾನೆ ಅವಳ ಜೊತೆಗೆ. ಹತ್ತು ವರ್ಷ, ಐದು ವರ್ಷ, ಐದು ವರ್ಷ, ಆರು ವರ್ಷ, ಏಳು ವರ್ಷ, ಎಂಟು ವರ್ಷ, ಹತ್ತು ವರ್ಷ, ಎಂಟು ವರ್ಷ ಈ ಕ್ರಮದಲ್ಲಿ ಚೈತ್ರರಥವನ, ಮಂದಾಕಿನೀ ತೀರ, ಅಲಕಾ, ವಿಶಾಲಾ, ನಂದನಾ, ಉತ್ತರ ಕುರು ವರುಷ ಹಾಗೂ ಗಂಧಮಾದನ ಮತ್ತು ಮೇರು ಪರ್ವತ ಇಷ್ಟು ಕಡೆಗೆ ಮೇಲೆ ಹೇಳಿದ ಲೆಕ್ಕದಲ್ಲಿ ಒಂದೊಂದು ಕಡೆಗೆ ಅಷ್ಟಷ್ಟು ವರ್ಷಗಳವರೆಗೆ ಇವನು ವಿಹಾರ ಮಾಡಿದ್ದಾನೆ ಅವಳ ಜೊತೆಗೆ. ಇಷ್ಟು ವಿಹಾರವನ್ನು ಮಾಡಿ ಕಾಲವನ್ನು ಕಳೆದಿದ್ದಾನೆ ಆಯು, ಅಮಾವಸು, ವಿಶ್ವಾಯು, ಶ್ರುತಾಯು, ದೃಢಾಯು, ವನಾಯು, ಶತಾಯು ಅಂತ ಮಕ್ಕಳು ಇವನಿಗೆ ಮುಂದೆ ಆಗುತ್ತಾರೆ ಆ ವಿಷಯವನ್ನು ತಿಳಿಸುತ್ತಾರೆ.

ಯಾಕೆ ಇಲ್ಲಿ ಬರಬೇಕಾಯಿತು ಊರ್ವಶಿ, ಏನು ಕಡಿಮೆ ಇತ್ತು ದೇವ ಲೋಕದಲ್ಲಿ, ಮನುಷ್ಯ ಲೋಕಕ್ಕೆ ಬಂದು ಇವನನ್ನು ಆರಿಸುವುದಕ್ಕೆ ಏನಾದರೂ ಕಾರಣ ಇತ್ತೇ ಅಥವಾ ಕೇವಲ ಇವನ ಸೌಂದರ್ಯಕ್ಕೆ ಮೋಹಿತಳಾಗಿ ಬಂದಳೇ ಅಂದರೆ ಒಂದು ಪ್ರಸಂಗದಲ್ಲಿ ಇವಳು ಮಾಡಿದ ಒಂದು ತಪ್ಪಿಗಾಗಿ ಬ್ರಹ್ಮ ದೇವರ ಶಾಪ ಇತ್ತು. ನೀನು ಮನುಷ್ಯ ಲೋಕಕ್ಕೆ ಹೋಗಬೇಕು, ಅಲ್ಲಿ ಇರುವಂತಹ ಪುರುಷನ ಸಂಗ ನೀನು ಮಾಡಬೇಕು ಅನ್ನುವ ಒಂದು ಬ್ರಹ್ಮ ದೇವರ ಶಾಪದ ಕಾರಣಕ್ಕಾಗಿ ಅವಳು ಅವಶ್ಯವಾಗಿ ಬರಲೇಬೇಕಾಗಿತ್ತು. ಬರುವುದೇ ಆದರೆ ಇನ್ಯಾರನ್ನೋ ಅಯೋಗ್ಯರನ್ನು ಬಯಸುವದಕ್ಕಿಂತಲೂ ಸಾಕ್ಷಾತ್ ಚಂದ್ರನ ಪುತ್ರ ಬುಧ, ಬುಧನ ಪುತ್ರ ಪುರೂರವ ಚಂದ್ರ ಪೌತ್ರ ಅಂತಹ ಶ್ರೇಷ್ಠನಾದಂತಹ ಒಂದು ದೇವತೆಯ ಮೊಮ್ಮಗ ಮನುಷ್ಯ ಲೋಕದಲ್ಲಿದ್ದರೂ ದೇವತೆಯ ಮೊಮ್ಮಗ ಅನ್ನುವ ಒಂದು ವಿಶಿಷ್ಟವಾದ ಖ್ಯಾತಿ ಅವನಿಗೆ ಇದೆ ಅನ್ನುವುದಕ್ಕೆ ನಾನು ಅವನನ್ನು ಬಯಸಿದರೆ ಲೇಸು ಅನ್ನುವ ದೃಷ್ಟಿಯಲ್ಲಿ ಊರ್ವಶಿ ಈ ಪೂರುವಸ್‌ನ ಜೊತೆಯಲ್ಲಿ ಸಂಗವನ್ನು ಮಾಡಿದಳು ಎಂಬುದಾಗಿ ವೈಶಂಪಾಯನರು ಜನಮೇಜಯನಿಗೆ ತಿಳಿಸುತ್ತಾ ಇದ್ದಾರೆ. ಆದರೆ ಅವಳಿಗೆ ಶಾಪ ಮುಗಿಯುವವರೆಗೆ ಮಾತ್ರ ಇಲ್ಲಿ ಇರಬೇಕಾಗಿತ್ತು ಹೆಚ್ಚು ಹೊತ್ತು ಇಲ್ಲಿ ಮನುಷ್ಯ ಲೋಕದಲ್ಲಿ ಇರುವ ಅಪೇಕ್ಷೆ ಅವಳಿಗೆ ಇರಲಿಲ್ಲ ಅನ್ನುವುದಕ್ಕಾಗಿ ಕರಾರು ಹಾಕಿ ಬಂದಿದ್ದಾಳೆ. ನಿನ್ನನ್ನು ನಗ್ನವಾದ ಅವಸ್ಥೆಯಲ್ಲಿ ನಾನು ನೋಡಬಾರದು, ನನ್ನ ಎರಡು ಮೇಕೆಗಳಿವೆ ಅವುಗಳನ್ನು ಸುರಕ್ಷಿತವಾಗಿ ನೀನು ಇಟ್ಟುಕೊಳ್ಳಬೇಕು ಅವುಗಳ ಅಪಹಾರ ಏನಾದರೂ ಆದರೆ ನಾನು ನಿನ್ನ ಜೊತೆಗೆ ಇರುವುದಿಲ್ಲ, ಆಹಾರ ಮಾತ್ರ ಕೇವಲ ಶುದ್ಧವಾದ ಗೋಘೃತ, ತುಪ್ಪ ಅದನ್ನು ಬಿಟ್ಟರೆ ನಾನು ಇನ್ನು ಯಾವ ಆಹಾರವನ್ನು ಸ್ವೀಕಾರ ಮಾಡುವುದಿಲ್ಲ, ಇದರಲ್ಲಿ ಯಾವ ಒಂದು ಕರಾರನ್ನು ತಪ್ಪಿದರೂ ನಾನು ನಿನ್ನನ್ನು ಬಿಟ್ಟು ಹೋಗುತ್ತೇನೆ ಅಂತ. ಹಾಗೆಯೇ ಅವನು ವ್ಯವಸ್ಥೆಯನ್ನು ಮಾಡಿದ್ದಾನೆ ಯಾವುದೇ ರೀತಿಯ ಆಹಾರಕ್ಕೂ ತೊಂದರೆ ಮಾಡಿಲ್ಲ, ಆ ಮೇಕೆಗಳನ್ನು ಚೆನ್ನಾಗಿ ರಕ್ಷಣೆ ಮಾಡಿಕೊಂಡು ಬಂದಿದ್ದಾನೆ ಹೀಗೆ ಐವತ್ತೊಂಬತ್ತು ವರ್ಷಗಳವರೆಗೆ ಅವಳ ಜೊತೆಗೆ ಸುಖವಾಗಿ ಇದ್ದ.



ಆಗ ಗಂಧರ್ವರೆಲ್ಲ ಆಲೋಚನೆ ಮಾಡಿದರು ಎಷ್ಟು ದಿವಸ ಆಯಿತು ಊರ್ವಶಿ ದೇವಲೋಕದಲ್ಲಿ ಇಲ್ಲ ಹೇಗಾದರೂ ಕರೆದುಕೊಂಡು ಬರಬೇಕು ಅಂದಾಗ ವಿಶ್ವಾವಸು ಎಂಬಂತಹ ಗಂಧರ್ವ ನಾನು ಇದಕ್ಕೆ ಉಪಾಯ ಮಾಡುತ್ತೇನೆ ನೀವೆಲ್ಲ ಸುಮ್ಮನೆ ಇರಿ ಅಂತ ಬರುತ್ತಾನೆ ಬಂದು ರಾತ್ರಿ ಪುರೂರವಸ್ ಮಲಗಿದಾಗ ಆ ಎರಡು ಮೇಕೆಗಳಲ್ಲಿ ಒಂದು ಮೇಕೆಯನ್ನು ಅಪಹಾರ ಮಾಡಿಕೊಂಡು ಹೋದ. ಊರ್ವಶಿ ಹೇಳುತ್ತಾಳೆ ನನ್ನ ಕರಾರು ಇತ್ತು ಮೇಕೆಗಳನ್ನು ಅಪಹಾರ ಮಾಡಿಕೊಂಡು ಹೋಗಬಾರದು ಅಂತ ಅದು ನೋಡು ಮೇಕೆಗಳನ್ನು ಒಯುತ್ತಾ ಇದ್ದಾನೆ ನೀನು ರಕ್ಷಣೆ ಮಾಡಬೇಕು ಅಂತ ಪುರೂರವಸ್ ಏನು ಎದ್ದು ಹೋಗಲಿಲ್ಲ. ಸರಿ, ಆ ವಿಶ್ವಾವಸು ಮತ್ತೆ ಬಂದು ಇನ್ನೊಂದು ಮೇಕೆಯನ್ನು ಅಪಹಾರ ಮಾಡಿಕೊಂಡು ಹೋಗಿದ್ದಾನೆ ಆಗ ಊರ್ವಶಿ ಭಾರೀ ಜೋರಾಗಿ ಗಲಾಟೆಯನ್ನು ಮಾಡಿದರೆ ಇವನಿಗೆ ಏನು ದಾರಿ ತೋಚದೇ ಅದೇ ಅವಸ್ಥೆಯಲ್ಲಿ ಹೊರಟಿದ್ದಾನೆ ಹೋಗಿ ಆ ಮೇಕೆಗಳನ್ನು ತರಬೇಕು ಅಂತ ಹೋಗುವುದರೊಳಗೆ ಊರ್ವಶಿ ಅದೃಶ್ಯಳಾಗಿದ್ದಾಳೆ. ಮೈಮೇಲೆ ವಸ್ತ್ರಗಳಿರಲಿಲ್ಲ ನಾನು ಕರಾರು ಮಾಡಿದ್ದೆ ನಗ್ನವಾದ ಅವಸ್ಥೆಯಲ್ಲಿ ನಿನ್ನನ್ನು ನೋಡಬಾರದು ಅಂತ ನೀನು ಕಾಣಿಸಿದ್ದಿ, ಅವುಗಳ ಅಪಹಾರವೂ ಆಗಿದೆ ಮಾತನಾಡುವುದಕ್ಕೆ ಅಲ್ಲಿ ಇಲ್ಲವೇ ಇಲ್ಲ ಊರ್ವಶಿ ಅದೃಶ್ಯಳಾಗಿ ಬಿಟ್ಟಿದ್ದಾಳೆ. ಇವನಿಗೆ ಹುಚ್ಚು ಹಿಡಿದಂತಾಗಿದೆ ಎಲ್ಲ ಕಡೆಗೆ ಹುಡುಕುತ್ತಾ ಇದ್ದಾನೆ ಎಷ್ಟೋ ದಿವಸಗಳಾದ ಮೇಲೆ ಪ್ಲಕ್ಷ ತೀರ್ಥದಲ್ಲಿ ಊರ್ವಶಿ ಐದು ಜನ ತನ್ನ ಸಖಿಯರ ಜೊತೆಗೆ ವಿಹಾರ ಮಾಡುವುದನ್ನು ಕಂಡಿದ್ದಾನೆ. ದೂರದಿಂದಲೇ ಅವಳು ಮಾತನಾಡಿಸಿದ್ದಾಳೆ ಒಂದು ದಿನ ಮಾತ್ರ ಮತ್ತೆ ನಿನಗೆ ನಾನು ಸಂಗವನ್ನು ಕೊಡುತ್ತೇನೆ, ನಿನ್ನ ಗರ್ಭ ನನ್ನಲ್ಲಿದೆ ಹುಟ್ಟಿದ ಮಕ್ಕಳನ್ನು ನಿನಗೆ ಒಪ್ಪಿಸುತ್ತೇನೆ ಅಂತ ಹೇಳಿ ಇದೀಗ ಹೇಳಿದಂತೆ ಆಯು, ಅಮಾವಾಸು ಇತ್ಯಾದಿ ಜನ ಆ ಎಲ್ಲ ಮಕ್ಕಳನ್ನೂ ಕೂಡ ಒಪ್ಪಿಸುತ್ತೇನೆ ಅಂತ ಹೇಳಿರುತ್ತಾಳೆ ಒಂದು ದಿನ ಅವನ ಜೊತೆಗೆ ಇದ್ದು ಆ ಎಲ್ಲ ಮಕ್ಕಳನ್ನು ಒಪ್ಪಿಸಿ ಅವಳು ಹೊರಟು ಹೋಗುತ್ತಾಳೆ.

ನೀನು ಮತ್ತೆ ಪುನಃ ನನ್ನನ್ನು ಪಡೆಯಬೇಕಾಗಿದ್ದರೆ ಗಂಧರ್ವರಿಗೆ ಪ್ರಾರ್ಥನೆ ಮಾಡು ಅಂತ ಗಂಧರ್ವರಿಗೆ ಹೋಗಿ ಬೇಡಿಕೊಳ್ಳುತ್ತಾನೆ ಗಂಧರ್ವರು ಒಂದು ಅಗ್ನಿಸ್ಥಾಲಿಯನ್ನು ಕೊಡುತ್ತಾರೆ ಅದನ್ನು ತೆಗೆದುಕೊಂಡು ಒಂದು ಕಡೆಗೆ ಇಟ್ಟು ಮನೆಗೆ ಬರುತ್ತಾನೆ. ಅವರು ಅಗ್ನಿ ಪಾತ್ರವನ್ನ ಕೊಟ್ಟದ್ದು ಕೃತಯುಗದ ಕೊನೆಯ ದಿನ ಬೆಳಗ್ಗೆ ಏಳುವುದರೊಳಗ ತ್ರೇತಾಯುಗ ಪ್ರಾರಂಭವಾಗಿದೆ ಆದರೆ ಎಲ್ಲಿ ತಾನು ಅಗ್ನಿಸ್ಥಾಲಿಯನ್ನು ಇಟ್ಟಿದ್ದ ಅಲ್ಲಿ ಇರಲಿಲ್ಲ ಅದು ಅಲ್ಲಿ ಒಂದು ಶಮೀಗರ್ಭ ಅಶ್ವತ್ಥ ವೃಕ್ಷ ಬೆಳೆದಿದೆ. ಏನು ಮಾಡಬೇಕು ಅಂತ ಗೊತ್ತಾಗಲಿಲ್ಲ ಆಗ ಹೇಳಿದರು ಇದೇ ಅಶ್ವತ್ಥ ವೃಕ್ಷದ ಕಟ್ಟಿಗೆಗಳನ್ನು ತೆಗೆದುಕೊಂಡು ಮಥನ ಮಾಡಿದರೆ ಅಲ್ಲಿ ಪುನಃ ಅಗ್ನಿ ಉತ್ಪನ್ನ ಆಗುತ್ತದೆ. ನಿನಗೆ ಏನು ಅಗ್ನಿಸ್ಥಾಲಿ ಕೊಟ್ಟಿದ್ದೆವು ಅದು ಅಗ್ನಿ ಇದರೊಳಗೆ ಪ್ರವೇಶ ಮಾಡಿದೆ ಆ ಅಗ್ನಿಯ ಮಥನ ಮಾಡಿ ಆ ಅಗ್ನಿಯಲ್ಲಿ ನೀನು ಯಜ್ಞ ಮಾಡಿದರೆ ಯಜ್ಞದಿಂದ ಸ್ವರ್ಗ ಆಗುತ್ತದೆ ಸ್ವರ್ಗದಲ್ಲಿ ಪುನಃ ಊರ್ವಶಿಯನ್ನು ನೀನು ಪಡೆಯಬಹುದು ಅಂತ. ಕೇಳಿದ್ದು ಊರ್ವಶಿಯನ್ನ ಅವರು ಕೊಟ್ಟಿದ್ದು ಅಗ್ನಿಯ ಪಾತ್ರೆಯನ್ನ ಒಂದಕ್ಕೊಂದು ಸಂಬಂಧ ಏನು ಅಂತ ಅರ್ಥವಾಗಿರಲಿಲ್ಲ ಅದನ್ನು ಅವರೇ ಬಿಡಿಸಿ ಹೇಳುತ್ತಾರೆ ಅಂತ ಇಲ್ಲಿ ಇದೆ, ಭಾಗವತದಲ್ಲಿ ಅವನೇ ಆಲೋಚನೆಯನ್ನು ಮಾಡುತ್ತಾನೆ ಅವನಿಗೆ ಸ್ಫುರಣ ಆಗುತ್ತದೆ, ದೇವತೆಗಳ ವಿಶೇಷವಾದ ಅನುಗ್ರಹದಿಂದ ಸ್ಫುರಣವಾಗುತ್ತದೆ. ಆ ರೀತಿ ಯಜ್ಞ ಯಾಗಾದಿಗಳನ್ನು ಮಾಡಿ ಪುನಃ ಉತ್ತಮವಾದಂತಹ ಶ್ರೇಷ್ಠವಾದ ಲೋಕಗಳನ್ನ ಹೊಂದಿ ಅಲ್ಲಿ ಊರ್ವಶಿಯನ್ನು ಪಡೆಯುತ್ತಾನೆ ಎಂಬ ವಿಷಯವನ್ನು ತಿಳಿಸುತ್ತಾರೆ. ಒಂದು ಅಗ್ನಿ ಇತ್ತು ಇವನು ಮೂರು ಅಗ್ನಿಗಳನ್ನು ಮಾಡಿ ಯಜ್ಞವನ್ನು ಮಾಡಿದ ಹೀಗಾಗಿ ಅದು ತ್ರೇತಾಗ್ನಿ ತ್ರೇತಾಯುಗದ ಮೊದಲನೆಯ ದಿನ

ಆದ ಕೆಲಸ ಅದು ತ್ರೇತಾಗ್ನಿ ಅಂತ ಆಯಿತು ಮೂರು ಅಗ್ನಿಗಳಾದವು ದಾಕ್ಷಿಣಾಗ್ನಿ, ಆಹವನಿಯಾಗ್ನಿ, ಘಾರಪತ್ಯಾಗ್ನಿ ಅಂತ ಅಗ್ನಿಗಳನ್ನು ಮಾಡಿಕೊಂಡು ಯಜ್ಞಗಳನ್ನು ಮಾಡಿದ ಎಂಬುದಾಗಿ ತಿಳಿಸಿಕೊಡುತ್ತಾರೆ.

ಏಕೋऽಗ್ನಿಃ ಪೂರ್ವಮೇವಾಸೀದ್ಯೆಲಸ್ತ್ರೇತಾಮಕಾರಯತ್ । (26.47 ಹರಿವಂಶಪರ್ವ)

ಇವನ ಅನೇಕ ಮಕ್ಕಳಲ್ಲಿ ಒಬ್ಬ ಅಮಾವಸು ಅಂತನ್ನುವ ಮಗ ಇವನ ಕಥೆ ಹಿಂದೆ ಬಂದಿದೆ. ಅಮಾವಸು, ಅಧ್ರಿಕಾ ಅಂತ ಅವನ ಮಗಳು ಅಚ್ಛೋದ ಅಂತ ಮುಂದೆ ಸತ್ಯವತೀ ಆಗುತ್ತಾಳೆ ಇತ್ಯಾದಿ ಆ ಅಮಾವಸುವಿನ ವಂಶದಲ್ಲಿ ಅನೇಕ ರಾಜರುಗಳ ಹೆಸರುಗಳಿವೆ ಜಹ್ನು ರಾಜ ಬರುತ್ತಾನೆ ಪ್ರಸಿದ್ಧನಾದವನು. ಆ ಜಹ್ನು ರಾಜನನ್ನ ಬಯಸಿ ಗಂಗಾ ದೇವಿ ಅವನಿಗೆ ಕೇಳುತ್ತಾಳೆ ಅವನು ಅದಕ್ಕೆ ನಿಷೇಧ ಮಾಡುತ್ತಾನೆ, ನಿಷೇಧ ಮಾಡಿದ್ದಕ್ಕೆ ಸಿಟ್ಟಿನಿಂದ ಅವನ ಯಜ್ಞವಾಟವನ್ನೇ ಸಂಪೂರ್ಣವಾಗಿ ಕೊಚ್ಚಿಕೊಂಡು ಹೋಗಬೇಕು ಅಂತ ಮಹಾ ರಭಸದಿಂದ ಗಂಗಾ ದೇವಿ ಹರಿದು ಬರುತ್ತಾ ಇದ್ದರೆ ಜಹ್ನು ರಾಜ ಒಂದು ಹನೀನೂ ಉಳಿಸದೇ ಇದ್ದ ಹಾಗೆ ಪಾನ ಮಾಡಿಬಿಡುತ್ತಾನೆ ಆ ಗಂಗೆಯನ್ನ. ಏನು ತಪಶ್ಚರ್ಯ ನೋಡಿ ಅವನು ರಾಜ ರಾಜನಾದರೂ ಮಹಾತಪಸ್ವಿ, ರಾಜಋಷಿ ಅವನು, ಭಾರೀ, ಮಹಾಶಾಸ್ತ್ರಜ್ಞ, ಆ ತಪೋಬಲ, ಯೋಗ ಸಾಮರ್ಥ್ಯ ಗಂಗಾ ನದಿಯ ಜಲವನ್ನು ಅಗಸ್ತ್ಯ ಹೇಗೆ ಸಮುದ್ರ ಪಾನ ಮಾಡುತ್ತಾರೆ ಹಾಗೆ ಈ ಮಹಾನುಭಾವ ಜಹ್ನು ಋಷಿ ಗಂಗೆಯನ್ನೆ ಪಾನ ಮಾಡಿಬಿಡುತ್ತಾನೆ ಕಾಣಿಸುವುದೇ ಇಲ್ಲ ಅಲ್ಲಿ ಗಂಗೆ. ಮತ್ತೆ ಎಲ್ಲರೂ ಬೇಡಿಕೊಂಡಾಗ ಆ ಗಂಗೆಯನ್ನು ಮತ್ತೆ ಹಾಗೆ ಹೊರಗೆ ತಾನು ಬಿಡುತ್ತಾನೆ ಅನ್ನುವುದಕ್ಕೋಸ್ಕರವಾಗಿಯೇ ಜಾಹ್ನವಿ, ಜಹ್ನುವಿನಿಂದ ಅವಳು ಬಂದದ್ದಕ್ಕೆ ಜಹ್ನುವಿನ ಭಾರ್ಯೆ ಆಗಬೇಕು ಅಂತ ಬಯಸಿದರೆ ಜಹ್ನು ತನ್ನ ಮಗಳನ್ನಾಗಿ ಅವನನ್ನ ತನ್ನ ಶರೀರದಿಂದ ಪುನಃ ಅವಳನ್ನು ಹೊರಗೆ ಕಳಿಸುತ್ತಾನೆ ಆದ್ದರಿಂದ ಅವಳು ಜಾಹ್ನವಿ ಅಂತ ಆಗುತ್ತಾಳೆ. ಅವಳೇ ತನ್ನ ಒಂದು ವಿಶಿಷ್ಟ ಸಾಮರ್ಥ್ಯದಿಂದ ಇನ್ನೊಂದು ಪ್ರತಿರೂಪವನ್ನು ಹುಟ್ಟಿಸುತ್ತಾಳೆ ಅವಳೇ ಕಾವೇರಿ ಅಂತ ಆ ಕಾವೇರಿಯನ್ನು ಜಹ್ನು ರಾಜ ಮದುವೆಯಾಗಿ ಅವಳಲ್ಲಿ ಅಜಕ ಅನ್ನುವಂತಹ ಮಗನನ್ನು ಪಡೆಯುತ್ತಾನೆ ಅವನ ವಂಶ ಮತ್ತೆ ಮುಂದೆ ಪ್ರಾರಂಭವಾಗುತ್ತದೆ ಅಂತ ಈ ರೀತಿಯಾಗಿ ಹೇಳುತ್ತಾರೆ.

ಆ ಅಮಾವಸುವಿನ ವಂಶದಲ್ಲಿಯೇನೆ ಮುಂದೆ ಕುಶಿಕ ಅನ್ನುವ ರಾಜ ಬರುತ್ತಾನೆ. ಅವನೂ ಮಹಾತಪಸ್ವಿ ಭಾರೀ ತಪಶ್ಚರ್ಯವನ್ನು ಮಾಡುತ್ತಾನೆ, ತಪಶ್ಚರ್ಯವನ್ನು ಮಾಡಿ ಏನು ಬಯಸುತ್ತಾನೆ ಅಂದರೆ ಇಂದ್ರನಂತಹ ಮಗ ನನಗೆ ಆಗಬೇಕು ಅಂತ, ಇಂದ್ರ ದೇವರೇ ಪ್ರತ್ಯಕ್ಷರಾಗುತ್ತಾರೆ ಏನು ಬೇಕಪ್ಪಾ ಅಂತ. ಆಗ ಕುಶಿಕ ರಾಜ ಹೇಳುತ್ತಾನೆ ನಿನ್ನಂತಹ ಮಗ ನನಗೆ ಬೇಕು ಅಂತ ಇಂದ್ರ ದೇವರು ಆ ಕುಶಿಕನ ಪ್ರಾರ್ಥನೆಗೆ ತಾವು ಆಲೋಚನೆಯನ್ನು ಮಾಡಿ ಭಗವಂತನ ಸಂಕಲ್ಪವನ್ನು ತಿಳಿದು ತಾವೇ ಆ ಕುಶಿಕನಲ್ಲಿ ಪ್ರವೇಶ ಮಾಡುತ್ತಾರೆ ಇಂದ್ರ ದೇವರು. ಇಂದ್ರ ದೇವರೇ ಸ್ವತಃ ಕುಶಿಕನಲ್ಲಿ ಪ್ರವೇಶ ಮಾಡಿ ತಾವೇ ಒಂದಂಶದಿಂದ ಅವನಿಂದ ಹುಟ್ಟಿ ಬರುತ್ತಾರೆ ಗಾಧಿ ಎಂಬ ಹೆಸರಿನಲ್ಲಿ **'ಗಾಧೀತಿ ಶಕ್ರಃ ತನುಜೋಸ್ಯ ಚಾಸೀತ್'** ಅಂತ ಶ್ರೀಮದಾಚಾರ್ಯರು ತಿಳಿಸುತ್ತಾರೆ. ಆ ಗಾಧಿ ರಾಜ ಅಂದರೆ ಇಂದ್ರ ದೇವರ ಅವತಾರ ಕುಶಿಕ ಮಾಡಿದ ತಪಸ್ಸಿಗೆ ಪ್ರಸನ್ನರಾಗಿ ಸ್ವತಃ ಇಂದ್ರ ದೇವರೇ ಕುಶಿಕನಿಂದ ಗಾಧಿ ಎಂಬ ಹೆಸರಿನಿಂದ ಪೌರುಕುತ್ಸಿ ಅಂತ ಕುಶಿಕನ ಹೆಂಡತಿ ಆ ಕುಶಿಕನ ಹೆಂಡತಿಯಲ್ಲಿ ಗಾಧಿ ಅವತಾರ ಮಾಡುತ್ತಾನೆ. ಅವನಲ್ಲಿ ಸತ್ಯವತೀ ಅನ್ನುವ ಒಬ್ಬ ಮಗಳು ಆಗುತ್ತಾಳೆ ಭೃಗು ಪುತ್ರರಾದಂತಹ ಋಚಿಕ ಋಷಿಗಳಿಗೆ ಕೊಟ್ಟು ಮದುವೆಯನ್ನು ಮಾಡುತ್ತಾನೆ. ಆ ಋಚಿಕ ಋಷಿಗಳಿಗೆ ಕೊಟ್ಟು ಮದುವೆಯನ್ನು ಮಾಡಿದ ಮೇಲೆ ಋಚಿಕ ಋಷಿಗಳು ವಿಶೇಷವಾಗಿ ತನ್ನ ಮಡದಿಗೆ ಅಭಿಮಂತ್ರಣ ಮಾಡಿ ಉತ್ತಮವಾದ ಸಂತಾನವಾಗಬೇಕು ಅಂತನ್ನುವುದಕ್ಕೋಸ್ಕರ ಚರುವನ್ನು ಇಡುತ್ತಾರೆ. ಅದರ ಜೊತೆಗೆ ತನ್ನ ಅತ್ತೆ ಪೌರುಕುತ್ಸಿ ಅವಳಿಗೂ ಕೂಡ ವಿಶೇಷವಾದ



ಉತ್ತಮ ಸಂತಾನವಾಗಲಿ ಅನ್ನುವ ದೃಷ್ಟಿಯಲ್ಲಿ ಕ್ಷತ್ರಿಯರವರು, ಕ್ಷತ್ರಿಯ ಕುಲಕ್ಕೆ ಯೋಗ್ಯವಾಗಿರುವಂತಹ ಮಹಾಧೀರ, ಉಗ್ರ, ಪರಾಕ್ರಮಿ, ಶತ್ರುಗಳ ದಮನ ಮಾಡುವ ಸಾಮರ್ಥ್ಯ ಇದ್ದವನು ಅಲ್ಲಿ ಹುಟ್ಟಿ ಬರಬೇಕು ಅಂತ ಹಾಗೆ ಅಭಿಮಂತ್ರಣವನ್ನು ಮಾಡುತ್ತಾರೆ. ಇಲ್ಲಿ ಶಮ, ದಮ, ಇತೀಕ್ಷಾ ಮೊದಲಾದ ಶಾಂತಿಯ ಗುಣಗಳೆಲ್ಲ ಇರಬೇಕು ಪಾಠ ಪ್ರವಚನಾದಿಗಳು ವೇದಾಧ್ಯಯನದಾದಿ ಸಂಪನ್ನನಾದಂತಹ ಸೌಮ್ಯನಾದ ವ್ಯಕ್ತಿ ಇರಬೇಕು ಅಂತ ಅಭಿಮಂತ್ರಣ ಮಾಡಿ ತನ್ನ ಮಡದಿಗೆ ಕೊಟ್ಟಿದ್ದಾರೆ.

ಅದನ್ನು ಕೊಟ್ಟು ಅವರು ತಮ್ಮ ಸ್ನಾನ ಅಹ್ನಿಕಾದಿಗಳನ್ನು ಮಾಡುವುದಕ್ಕೆ ಅಂತ ಹೊರಟಿದ್ದಾರೆ ಆದರೆ ಇವರು ತಾಯಿ-ಮಗಳು ವ್ಯತ್ಯಾಸ ಮಾಡಿ ತೆಗೆದುಕೊಂಡಿದ್ದಾರೆ ಚರುವನ್ನ ತಾಯಿ ತೆಗೆದು ಕೊಳ್ಳಬೇಕಾದದ್ದನ್ನು ಮಗಳು, ಮಗಳು ತೆಗೆದು ಕೊಳ್ಳಬೇಕಾದದ್ದನ್ನು ತಾಯಿ. ಕ್ಷತ್ರಿಯರಿಗೆ ಬ್ರಾಹ್ಮಣರಿಗೋಸ್ಕರ ಅಂತ ಅಭಿಮಂತ್ರಣ ಮಾಡಿದ ಚರು ಅದು ಹೋಗಿದೆ ಅತ್ತೆಗೆ, ಇವಳಿಗೆ ಕ್ಷತ್ರಿಯರಿಗಾಗಿ ಅಂತ ಅಭಿಮಂತ್ರಣ ಮಾಡಿದ ಚರು ಅದು ಮಗಳಿಗೆ ಬಂದಿದೆ ಅದನ್ನು ಸ್ವೀಕಾರ ಮಾಡಿದ್ದಾರೆ. ಇವಳ ಮುಖವನ್ನು ನೋಡಿಯೇನೆ ಋಚಿಕ ಋಷಿಗಳು ಬಂದಾಕ್ಷಣಕ್ಕೆ ಕೇಳಿದರು ವ್ಯತ್ಯಾಸ ಮಾಡಿದ್ದೀರಿ ನೀವು ಚರುವಿನಲ್ಲಿ, ನಿನ್ನ ಮುಖದ ಮೇಲಿನ ತೇಜಸ್ಸು ಬೇರೆ ಇದೆ ಕ್ಷಾತ್ರ ತೇಜಸ್ಸು ಕಾಣಿಸುತ್ತಾ ಇದೆ ಭಾರೀ ಉಗ್ರನಾದಂತಹ, ಕ್ರೂರನಾದಂತಹ ಪ್ರಚಂಡನಾದ ಮಗ ನಿನ್ನಲ್ಲಿ ಹುಟ್ಟುತ್ತಾನೆ, ಅಲ್ಲಿ ಅತ್ಯಂತ ಉಗ್ರನಾದ ಎಲ್ಲ ಶತ್ರುಗಳ ದಮನ ಮಾಡುವ ಮಗ ಬೇಕಾಗಿತ್ತು ಅಲ್ಲಿ ಒಬ್ಬ ಶಾಂತಮೂರ್ತಿ ಹುಟ್ಟುತ್ತಾನೆ ಅನುಭವಿಸಿ ನಿಮ್ಮ ಹಣೆಬರಹ. ಆಗ ಅವಳು ಪರಿಪರಿಯಾಗಿ ಬೇಡಿಕೊಂಡಿದ್ದಾಳೆ ಹೇಗಾದರೂ ಮಾಡಿ ನಾನು ಮಾಡಿದ ತಪ್ಪನ್ನು ಕ್ಷಮಿಸಿ ನಾವು ಬ್ರಾಹ್ಮಣರು ಉತ್ತಮವಾದಂತಹ ಶಮದಮಾದಿ ಸಂಪತ್ತಿನಿಂದ ಕೂಡಿದ ಸ್ವಾಧ್ಯಾಯ ಪ್ರವಚನಾದಿಗಳನ್ನು ಮಾಡುವಂತಹ ಶಾಂತಮೂರ್ತಿ ಆದಂತಹ ಪುತ್ರನಾಗುವ ಹಾಗೆ ಅನುಗ್ರಹ ಮಾಡಿ, ಬೇಕು ಅಂದರೆ ಮೊಮ್ಮಗ ಉಗ್ರನಾಗಲಿ ಆದರೆ ಮಗ ಮಾತ್ರ ಶಾಂತನಾಗಿರಬೇಕು. ಮೊಮ್ಮಗನ ವಿಚಾರಗಳನ್ನು ಮಕ್ಕಳು ನೋಡಿಕೊಳ್ಳುತ್ತಾರೆ ಅಂತ ಅಷ್ಟಕ್ಕೆ ಆಗಬಹುದು ಅಂತ. ಋಷಿಕರು ಒಪ್ಪಿದ್ದಾರೆ ಆವಾಗ ಸತ್ಯವತೀ ಒಂದು ಮಾತನ್ನು ಋಷಿಕರಿಗೆ ಹೇಳುತ್ತಾಳೆ.

ಇಚ್ಛಲ್ಲೋಕಾನಪಿ ಮುನೇ ಸೃಜೇಥಾಃ ಕಿಂ ಪುನಃ ಸುತಮ್ । (27.32 ಹರಿವಂಶಪರ್ವ)

ನಿಮ್ಮಂತಹ ತಪಸ್ವಿಗಳು ಮನಸ್ಸು ಮಾಡಿದರೆ ಹೊಸ ಲೋಕವನ್ನು ಸೃಷ್ಟಿ ಮಾಡುತ್ತೀರಾ, ವಿಶ್ವಾಮಿತ್ರರು ಹೊಸ ಸ್ವರ್ಗ ಸೃಷ್ಟಿ ಮಾಡಿದರು ಅಂತಹ ಸಾಮರ್ಥ್ಯ ನಿಮಗೆ ಇದೆ, ಬೇಕು ಅಂದರೆ ಇನ್ನೊಂದು ಲೋಕವನ್ನೇ ಸೃಷ್ಟಿ ಮಾಡಬಲ್ಲರು ಒಂದು ಸಣ್ಣ ಪುತ್ರನನ್ನ ಸೃಷ್ಟಿಯನ್ನು ಮಾಡಲಿಕ್ಕೆ ಆಗುವುದಿಲ್ಲವೇ ನಮಗೆ ಬೇಕಾದಂತಹ ಪುತ್ರನನ್ನ. ಈ ಲೋಕ ಅನ್ನುವ ಶಬ್ದಕ್ಕೆ ಲೋಕಗಳು ಅಂತೂ ಅರ್ಥ ಇದೆ ಲೋಕ ಅಂದರೆ ಮಗ ಅಂತನೂ ಅರ್ಥ ಇದೆ ಆದ್ದರಿಂದ ಆ ಅರ್ಥದೊಳಗೆ. ಮರಾಠಿಯಲ್ಲಿ ಲೋಂಕ ಅಂತ ಅನ್ನುತಾರೆ ತಂಜಾವೂರು ಮರಾಠಿಯಲ್ಲಿ, ಹೀಗಾಗಿ ಆ ಲೋಕವನ್ನ ಸೃಷ್ಟಿ ಮಾಡಬಹುದಾದಂತಹ ನಿನಗೆ ಒಂದು ಮಗುವನ್ನು ಸೃಷ್ಟಿ ಮಾಡಲಿಕ್ಕೆ ಆಗುವುದಿಲ್ಲವೇ ಆ ರೀತಿ ಹೇಳಿದಾಗ ಸರಿ ಅಂತ ಅನುಗ್ರಹ ಮಾಡಿದ್ದಾರೆ ಅತ್ಯಂತ ಶಾಂತರಾದಂತಹ ಜಮದಗ್ನಿ ಋಷಿಗಳು ಇವಳಲ್ಲಿ ಅವತಾರ ಮಾಡಿದ್ದಾರೆ. ರುದ್ರ ಭಯಾನಕ ಭಯಂಕರನಾಗಿರತಕ್ಕಂತಹ ಮಗ ಹುಟ್ಟಬೇಕು ಅಂತ ಏನು ಅವರು ಅಭಿಮಂತ್ರಣ ಮಾಡಿ ಆ ರುದ್ರ ದೇವರ ಪ್ರಾರ್ಥನೆಯನ್ನು ಮಾಡಿ ಅಭಿಮಂತ್ರಣೆ ಮಾಡಿ ಇಟ್ಟಿದ್ದರೋ ಆ ಭಯಂಕರನಾದ ಮಗ ಹುಟ್ಟದಂತೆ ಜಮದಗ್ನಿ ಋಷಿಗಳು ಹುಟ್ಟಿ ಜಮದಗ್ನಿಗಳಿಂದ ಮುಂದೆ ಪರಶುರಾಮ ದೇವರು ಅವತಾರ ಮಾಡಿದ್ದಾರೆ ಎಂಬುದಾಗಿ ತಿಳಿಸುತ್ತಾರೆ.

ಆ ಕಡೆಗೆ ವಿಶೇಷವಾದಂತಹ ವಿಷ್ಣುವಿನ ಪ್ರಾರ್ಥನೆಯನ್ನು ಮಾಡಿ ಶಾಂತಮೂರ್ತಿಯಾದವನು ಹುಟ್ಟಬೇಕು ಅಂತ ಕೇಳಿಕೊಂಡಿದ್ದರಲ್ಲ ಮಹಾತಪಸ್ವಿಯಾದ ವ್ಯಕ್ತಿ ಅಲ್ಲಿ ವಿಶ್ವಾಮಿತ್ರರು ಗಾಧಿ ರಾಜನಿಂದ ಹುಟ್ಟಿದ್ದಾರೆ ಎಂಬುದಾಗಿ ತಿಳಿಸಿಕೊಡುತ್ತಾರೆ. ಆ ಜಮದಗ್ನಿ ಋಷಿಗಳ ಹೆಂಡತಿ ರೇಣು ಎಂಬ ರಾಜನ ಮಗಳಾದ ರೇಣುಕಾ ಕಾಮಲೀ ಎಂಬ ಹೆಸರಿದೆ ರೇಣುವಿನ ಮಗಳಾದ್ದರಿಂದ ರೇಣುಕಾ ಎಂಬುದಾಗಿ ಕರೆಯುತ್ತಾರೆ ಅಲ್ಲಿ ಪರಶುರಾಮ ದೇವರು ಅವತಾರವನ್ನು ಮಾಡುತ್ತಾರೆ ಎಂಬುದಾಗಿ ಹೇಳುತ್ತಾರೆ. ಗಾಧಿ ರಾಜರಲ್ಲಿ ವಿಶ್ವಾಮಿತ್ರರು ಅವತಾರವನ್ನು ಮಾಡಿದ್ದಾರೆ ಹೀಗೆ ಆ ವಿಶ್ವಾಮಿತ್ರರಿಂದ ಹುಟ್ಟಿದಂತಹ ಸಂತಾನ ಅನೇಕ ಗೋತ್ರ ಪ್ರವರ್ತಕರು ಪ್ರವರವನ್ನ ಪ್ರವರ್ತನೆ ಮಾಡಿದ ಮಹಾನುಭಾವರಾದ ಋಷಿಗಳೆಲ್ಲಾ ಆ ವಿಶ್ವಾಮಿತ್ರರ ಸಂತತಿಯಲ್ಲಿ ಮುಂದೆ ಬರುತ್ತಾರೆ ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ ಹೀಗೆ ಇವನ ಸಂತತಿ ಮುಂದುವರೆಯುತ್ತದೆ.

ಈ ಕಡೆಗೆ ಆಯುವಿಗೆ ಅನೇಕ ಮಕ್ಕಳು ಅದರಲ್ಲಿ ನಹುಷ, ರಂಭ, ರಜಿ, ಅನೇನ ಮತ್ತು ವೃದ್ಧಶರ್ಮ ಹೀಗೆ ಐದು ಜನ ಮಕ್ಕಳಾಗಿದ್ದಾರೆ ಅದರಲ್ಲಿ ರಜಿಯ ಕಥೆಯನ್ನು ಹೇಳುತ್ತಾರೆ. ರಜಿ ಅಂತ ಅವನು ಆಯುವಿನ ಒಬ್ಬ ಮಗ ಆ ರಜಿ ಅವನಿಗೆ ಐದುನೂರು ಜನ ಮಕ್ಕಳಾಗಿದ್ದಾರೆ ರಾಜೇಯ ಸಂತತಿ ಅಂತ ಅದಕ್ಕೆ ಪ್ರಸಿದ್ಧಿ. ದೇವಾಸುರ ಸಂಗ್ರಾಮ ಆಯಿತು ಭಾರೀ ಸಂಗ್ರಾಮ ಯಾರು ಗೆಲ್ಲುತ್ತಾರೆ ಯಾರು ಸೋಲುತ್ತಾರೆ ಗೊತ್ತಾಗದೇ ಇರುವ ಹಾಗೆ ನಡೀತಾ ಇದೆ ಇಬ್ಬರೂ ಬ್ರಹ್ಮ ದೇವರ ಹತ್ತಿರ ಹೋದರು. ನೋಡಿ ಹೇಗಿದೆ, ನೋಡಿದರೆ ಬ್ರಹ್ಮ ದೇವರು ಸ್ವಯಂ ದೇವತೆಗಳು ಆದರೆ ಎಲ್ಲರಿಗೂ ಪಿತಾಮಹರಲ್ಲವಾ ಅನ್ನುವುದಕ್ಕೋಸ್ಕರ ಅವರಿಂದ ನ್ಯಾಯವನ್ನು ಪಡಿಯೋಣ ಅಂತ ಬ್ರಹ್ಮ ದೇವರ ಹತ್ತಿರ ಹೋದರು. ಬ್ರಹ್ಮ ದೇವರು ಹಾಗೆ ನೋಡಿದರೆ ಪ್ರಪಿತಾಮಹ ಕಶ್ಯಪರ ತಂದೆ ಮರೀಚಿಗಳು ಅವರು ಪಿತಾಮಹ, ಮರೀಚಿ ಋಷಿಗಳ ತಂದೆ ಬ್ರಹ್ಮ ದೇವರು ಇವರೆಲ್ಲರಿಗೂ ಪ್ರಪಿತಾಮಹ, ನಮ್ಮಿಬ್ಬರಲ್ಲಿ ಯಾರು ಗೆಲ್ಲುತ್ತಾರೆ ಅಂತ ಬ್ರಹ್ಮ ದೇವರಿಗೆ ಪ್ರಶ್ನೆ ಕೇಳುತ್ತಾರೆ. ಏನು ಹೇಳಬೇಕು ಬ್ರಹ್ಮ ದೇವರು ಸರ್ವಜ್ಞರು ಆದರೆ ನೀವು ಸೋಲುತ್ತೀರಾ ಅಂತ ಹೇಳಿದರೆ ಮತ್ತೆ ಜಗಳ ಆಡುತ್ತಾರೆ ಅಸುರರು ಅದಕ್ಕೆ ಅವರು ಇಷ್ಟೇ ಹೇಳಿದರು ರಜಿ ಯಾರ ಪಕ್ಷದಲ್ಲಿ ಬರುತ್ತಾನೋ ಅವರು ಗೆಲ್ಲುತ್ತೀರಾ ಅಂತ ಅಂತಹ ಪರಾಕ್ರಮಿ ಈ ರಜಿ. ದೇವಾಸುರರ ಸಂಗ್ರಾಮ ಅಲ್ಲಿ ನಡೆದಾಗ ಯಾರಿಗೆ ಗೆಲುವು ಎಂಬ ಪ್ರಶ್ನೆಗೆ ರಜಿ ಎಲ್ಲಿದೆ ಅಲ್ಲಿ ವಿಜಯ ಅಂತ ಬ್ರಹ್ಮ ದೇವರು ಹೇಳಬೇಕಾಗಿದ್ದರೆ ಇವನ ಪರಾಕ್ರಮ ಎಷ್ಟು.

ಯೇಷಾಮರ್ಥಾಯ ಸಂಗ್ರಾಮೇ ರಜಿರಾತ್ತಾಯುಧಃ ಪ್ರಭುಃ ।

ಯೋತ್ಸ್ಯತೇ ತೇ ಜಯಷ್ಯನ್ತಿ ತ್ರೀಂಲ್ಲೋಕಾನ್ನಾತ್ರ ಸಂಶಯಃ ॥ (28.6 ಹರಿವಂಶಪರ್ವ)

ಇಷ್ಟು ಹೇಳಿದ್ದೇ ತಡ ದೇವತೆಗಳು, ಅಸುರರು ಎಲ್ಲರೂ ರಜಿ ಹತ್ತಿರ ಬರುತ್ತಾರೆ. ರಜಿ ದೇವತೆಗಳಿಗೆಲ್ಲ ನಮಸ್ಕಾರ ಮಾಡಿದ ಏನು ಮಹಾನುಭಾವರು ತಾವೆಲ್ಲ ಬಂದು ದರ್ಶನ ಕೊಟ್ಟಿದ್ದೀರಿ ಅಹೋಭಾಗ್ಯ ಅಂತ ಅದೆಲ್ಲ ಭಾಗ್ಯ ಇರಲಿ ನೀನು ಯುದ್ಧಕ್ಕೆ ಬರುತ್ತೀಯಾ ನಮಗೆ ಸಹಾಯ ಮಾಡುತ್ತೀಯಾ ಅಂತ ನಮಗೆ ಸಹಾಯ ಮಾಡುತ್ತೀಯಾ ಅಂತ ಏಕಕಾಲಕ್ಕೆ ಕೇಳುತ್ತಾ ಇದ್ದಾರೆ ದೇವತೆಗಳು, ಅಸುರರು. ಏನು ಹೇಳಬೇಕು ಅವನು ಒಂದು ಕರಾರು ಹಾಕಿದ ನಿಮಗೆ ಯುದ್ಧದೊಳಗೆ ನಾನು ಗೆದ್ದು ಕೊಟ್ಟರೆ ನನ್ನನ್ನೇ ನೀವು ರಾಜನನ್ನಾಗಿ ಮಾಡಿಕೊಳ್ಳುತ್ತೀರಾ, ನಾನೇ ಇಂದ್ರನಾಗಬೇಕು ಒಡೆಯ ಹಾಗಾದರೆ ನಾನು ನಿಮಗೆ ಸಹಾಯ ಮಾಡುತ್ತೇನೆ ಆಯಿತು ಅಂತ ದೇವತೆಗಳು ಒಪ್ಪಿಕೊಂಡಿದ್ದಾರೆ. ಅಸುರರು ಒಪ್ಪಲಿಲ್ಲ ನಮಗೆ ಏನಿದ್ದರೂ ಪ್ರಹ್ಲಾದನೇ ರಾಜ, ಅಸುರರಿಗೆ ರಾಜ ಪ್ರಹ್ಲಾದ ಆ ಪೋಸ್ಟ್ ನಾವು ಇನ್ನೊಬ್ಬರಿಗೆ ಕೊಡುವುದಿಲ್ಲ. ಅದಕ್ಕೆ ನೀನು ಒಪ್ಪಿಕೊಂಡು ಇನ್ನೇನಾದರೂ ಬೇರೆ ಕೇಳುವುದಾದರೆ

ನಾವು ಕೊಡಬಹುದು ಆದರೆ ನಮ್ಮ ಅಸುರರ ರಾಜ್ಯವನ್ನು ಮಾತ್ರ ನಿನಗೆ ಒಪ್ಪಿಸುವುದಿಲ್ಲ ಹಾಗಾದರೆ ನಿಮ್ಮ ಸಹಾಯಕ್ಕೆ ಬರುವುದಿಲ್ಲ ಅಂತ ಹೇಳಿದ ದೇವತೆಗಳ ಸಹಾಯಕ್ಕೆ ಬಂದಿದ್ದಾನೆ. ದೇವತೆಗಳು ಮಹಾಸಮರ್ಥರು, ತತ್ವಾಭಿಮಾನಿ ದೇವತೆಗಳು ಅವರೆಲ್ಲ ಇವರಿಗೆಲ್ಲ, ದೇವೇಂದ್ರಾದಿಗಳಿಗೆ ಪ್ರೇರಕರು ಶಕ್ತಿಯನ್ನು ಕೊಡುವವರೇ ಅವರು. ಇವನಿಗೆ ಒಂದು ವಿಶೇಷ ಕೀರ್ತಿಯನ್ನು ಕೊಡಬೇಕಾಗಿದೆ ಚಂದ್ರ ವಂಶದಲ್ಲಿ ಬಂದಂತಹ ರಾಜ ವಿಶಿಷ್ಟವಾದ ಸಾಮರ್ಥ್ಯ ಚಂದ್ರ ಒಬ್ಬ ದೇವತೆ ಇವನ ಕೀರ್ತಿ ಅಂದರೆ ಅದು ಚಂದ್ರನ ಕೀರ್ತಿ ತಮಗೆ ಕೀರ್ತಿ ಇದ್ದ ಹಾಗೆ ಒಂದರ್ಥದಲ್ಲಿ ತಮ್ಮ ಸಂತತಿಯೇ ಇದು ಅಣ್ಣ ತಮ್ಮಂದಿರ ಮಕ್ಕಳಿದ್ದ ಹಾಗೆ. ಆ ಭಗವದ್ಭಕ್ತರಾದ, ತಪಸ್ವಿಗಳಾದ, ಯೋಗ ಸಾಮರ್ಥ್ಯವನ್ನು ಪಡೆದುಕೊಂಡಂತಹ ಸಜ್ಜನರಿಗೆ ಕೀರ್ತಿಯನ್ನು ಕೊಟ್ಟರೆ ಇನ್ನು ಹತ್ತು ಜನ ನೂರು ಸಾವಿರ ಲಕ್ಷ ಜನ ಆ ಯೋಗ ಮಾರ್ಗಕ್ಕೆ, ತಪೋ ಮಾರ್ಗಕ್ಕೆ, ಸಾಧನೆಯನ್ನು ಮಾಡುವುದಕ್ಕೆ ಮುಂದಾಗುತ್ತಾರೆ ಅನ್ನುವುದಕ್ಕೆ ಋಷಿಗಳಿಗೆ, ರಾಜರಿಗೆ, ಭಗವದ್ಭಕ್ತರಿಗೆ ಅವರು ಚಿಕ್ಕವರಾದರೂ ಅವರಿಗೆ ಕೀರ್ತಿಯನ್ನು ಕೊಡುವ ಒಂದು ಉತ್ತಮವಾದ ಸಂಕಲ್ಪವನ್ನು ದೇವತೆಗಳು ಇಟ್ಟುಕೊಂಡಿರುತ್ತಾರೆ ಅದಕ್ಕೋಸ್ಕರ ಇದೆಲ್ಲ ನಾಟಕ. ಸರಿ, ರಜಿ ಅಂದ ಮತ್ತೆ ಕರಾರಿನ ಪ್ರಕಾರ ನಾನು ಇಂದ್ರ ಹೌದು ನೀನೇ ಇಂದ್ರ ಈಗ ನಾವೆಲ್ಲ ನಿನ್ನ ಮಕ್ಕಳಿದ್ದ ಹಾಗೆ ನೀನೇ ಎಲ್ಲವನ್ನು ಆಳುವುದು ಅಂತನ್ನುವ ತರಹ ರಜಿಗೆ ಹೇಳಿದ್ದಾರೆ.

ಇನ್ದ್ರೋऽಸಿ ತಾತ ದೇವಾನಾಂ ಸರ್ವೇಷಾಂ ನಾತ್ರ ಸಂಶಯಃ ।
ಯಸ್ಯಾಹಮಿನ್ದ್ರಃ ಪುತ್ರಸ್ತೇ ಖ್ಯಾತಿಂ ಯಾಸ್ಯಾಮಿ ಕರ್ಮಭಿಃ ॥ (28.20 ಹರಿವಂಶಪರ್ವ)

ನಿನ್ನ ಮಕ್ಕಳಿದ್ದ ಹಾಗೆ ಮಕ್ಕಳು ಹೋದಮೇಲೆ ನಾವೆಲ್ಲ ನೋಡಿಕೊಳ್ಳುತ್ತೇವೆ ನೀನು ಹಿರಿಯ, ನೀನು ಸುಮ್ಮನೆ ಇರು ಅಂತ ಹೇಳಿ ಮಾತಿನ ಮೋಡಿಯಲ್ಲಿ ಅವನನ್ನು ಸಿಲುಕಿಸಿ ಅವನಿಗೆ ರಾಜ್ಯವನ್ನು ಕೊಟ್ಟಂತೆ ಆದರೆ ರಾಜ್ಯವನ್ನು ಪುರಂದರ ತಾನೆ ಇಂದ್ರನಾಗಿ ನಿಜವಾಗಿ ಆಳುತ್ತಾ ಇದ್ದಾನೆ ಇದು ರಜಿಯ ಐದುನೂರು ಜನ ಮಕ್ಕಳಿಗೆ ಸಹನೆಯಾಗಲಿಲ್ಲ. ರಜಿ ಹೆಚ್ಚು ಮಿಜಿಮಿಜಿ ಮಾಡದಂತೆ ಸುಮ್ಮನಿದ್ದ ಆದರೆ ಅವನ ಮಕ್ಕಳೆಲ್ಲ ಇದನ್ನು ತಮ್ಮ ಹೊಕ್ಕಳಲ್ಲಿ ಹಾಕಿಕೊಳ್ಳದೇ ಯುದ್ಧಕ್ಕೆ ಬಂದಿದ್ದಾರೆ ಯುದ್ಧಕ್ಕೆ ಬಂದು ಘೋರವಾದಂತಹ ಯುದ್ಧವಾಗುತ್ತಾ ಇದೆ. ದೇವತೆಗಳು ಮತ್ತೆ ನೋಡಿ ಮಹಾಪರಾಕ್ರಮಿಗಳು, ಮಹಾನುಭಾವರು **'ಅಚಿಂತ್ಯಶಕ್ಟಯಸ್ತಾಸಾಂ'** ಅಚಿಂತ್ಯ ಶಕ್ತಿ ಸಂಪನ್ನರು. ಹಾಗಿದ್ದರೂ ಕೂಡ ಭಗವತ್ ಸಂಕಲ್ಪವನ್ನು ತಿಳಿದು ಈಗ ಅವರಿಗೆ ಸ್ವಲ್ಪ ಅವಕಾಶ ಕೊಡೋಣ ಅಂತ ಅವರಿಂದ ಸೋತವರಂತೆ ನಾಟಕವನ್ನು ಮಾಡಿ ಇಂದ್ರ ದೇವರು ಬೃಹಸ್ಪತ್ಯಾಚಾರ್ಯರು ಹತ್ತಿರ ಬರುತ್ತಾರೆ. ಏನು ಹೀಗೆ ಆ ರಜಿ ಪುತ್ರರೆಲ್ಲ ಬಂದು ನಮಗೆಲ್ಲಾ ಸ್ಥಾನಭ್ರಷ್ಟರನ್ನಾಗಿ ಮಾಡಿಬಿಟ್ಟರಲ್ಲ ಏನು ಮಾಡಬೇಕು ಈಗ ನಾವು ಅಂತ ಆಗ ಬೃಹಸ್ಪತ್ಯಾಚಾರ್ಯರು ಹೇಳಿದರು. ನೀವು ಇಂತಹ ಎಲ್ಲ ಕೆಲಸ ಮಾಡಬಾರದಾಗಿತ್ತು ಮೊದಲೇ ಈ ವಿಷಯದ ಬಗ್ಗೆ ನಮಗೆ ಹೇಳಿದ್ದರೆ ನೀವು ಸೋಲದೇ ಇರುವ ಹಾಗೆ ಮಾಡಿಬಿಡುತ್ತಾ ಇದ್ದೆ ನಾನು, ಸೋತ ಮೇಲೆ ಬರುತ್ತೀರಲ್ಲ. ಆಚೆಯಿಂದ ರಜಿ ಪುತ್ರರು ನಮ್ಮ ಹತ್ತಿರ ಬರುತ್ತಾ ಇದ್ದಾರೆ ಯುದ್ಧಕ್ಕೆ ಅಂದಾಗ ಒಂದು ಮಾತು ಹೇಳಿದ್ದರೆ ಅವರು ಬರದೇ ಇರುವ ಹಾಗೆ, ಬಂದರೂ ಸೋಲುವ ಹಾಗೆ, ಶರಣಾಗತರಾಗುವ ಹಾಗೆ ನಾನು ಮಂತ್ರ ಮಾಡುತ್ತಾ ಇದ್ದೆ ಅದಕ್ಕೆ ನಿಮಗೆ ಉಪಾಯ ಹೇಳುತ್ತಾ ಇದ್ದೆ ಹಾಗೆ ಯಾಕೆ ಮಾಡಲಿಲ್ಲ. ಸರಿ, ಈಗ ಇದ್ದದ್ದೇನು ಉಪಾಯ **'ನಾರಾಯಣಂ ಕುಲಪತಿಂ ಶರಣಂ ವ್ರಜೇಮ'** ನಾರಾಯಣನಿಗೆ ಶರಣು ಹೋಗಿದ್ದಾರೆ.

ನಾರಾಯಣನ ಪ್ರೇರಣೆ **'ಹೃದಿಸ್ಥೋ ಬಾದರಾಯಣಃ'** ಬೃಹಸ್ಪತ್ಯಾಚಾರ್ಯರಿಗೆ ಪರಮಾತ್ಮನ ಆಜ್ಞೆ ಹೃದಯದಲ್ಲಿ ನೀವು ಈ ಎಲ್ಲ ರಜಿ ಪುತ್ರರಿಗೆ ಚಾರ್ವಾಕ ಶಾಸ್ತ್ರ ಆದು ಮುಂದೆ ಚಾರ್ವಾಕ ಶಾಸ್ತ್ರ ಅಂತ ಪ್ರಸಿದ್ಧ

ಆಯಿತು ನೀವು ಒಂದು ಶಾಸ್ತ್ರವನ್ನು ರಚನೆ ಮಾಡಿ ಅವರಿಗೆ ಕೊಟ್ಟುಬಿಡಿ. ಆ ಶಾಸ್ತ್ರವನ್ನು ನೋಡಿ ಅವರು ಧರ್ಮ ಭ್ರಷ್ಟರಾದರು ಅಂದರೆ ಪರಾಜಯ ನಿಶ್ಚಿತ ಆ ಸಂದರ್ಭದಲ್ಲಿ ಬೃಹಸ್ಪತ್ಯಾಚಾರ್ಯರು ಒಂದು ಶಾಸ್ತ್ರವನ್ನು ನಾಸ್ತಿಕ ಶಾಸ್ತ್ರವನ್ನು ರಚನೆ ಮಾಡುತ್ತಾರೆ. ದೇವರಿಲ್ಲ, ಧರ್ಮ ಇಲ್ಲ, ಯಜ್ಞ ಯಾಗಾದಿಗಳನ್ನು ಮಾಡಬೇಕಾಗಿಲ್ಲ. **'ಭಸ್ಮೀ ಭೂತಸ್ಯ ದೇಹಸ್ಯ ಪುನರಾಗಮನಂ ಕುತಃ'** ಈ ಶರೀರವೇ ಆತ್ಮ ಶರೀರ ಬಿಟ್ಟು ಪ್ರತ್ಯೇಕ ಆತ್ಮ ಇಲ್ಲ **'ಋಣಂ ಕೃತ್ವಾ ಘೃತಂ ಪಿಬೇತ್'** ಯಥೇಷ್ಟವಾಗಿ ಸುಖವನ್ನು ಪಡಬೇಕಷ್ಟೇ ಈ ಎಲ್ಲ ಶಾಸ್ತ್ರಗಳನ್ನು ರಚನೆ ಮಾಡಿಬಿಟ್ಟಿದ್ದಾರೆ. ಬೃಹಸ್ಪತ್ಯಾಚಾರ್ಯರು ಅನ್ನುತ್ತಾರೆ ಏನು ಪರಿಸ್ಥಿತಿ ತಂದು ಇಟ್ಟಿರಿ **'ಅಕರ್ತವ್ಯಂ ಮಮಾನಘ'**[1] ಎಂದೆಂದಿಗೂ ವಿಷ್ಣು ವಿರೋಧಿಯಾದ ಶಾಸ್ತ್ರವನ್ನು ನಾನು ಮಾಡಬಾರದು, ಹೇಳಬಾರದು ಆದರೂ ಈಗ ಅನಿವಾರ್ಯವಾಗಿ ನನಗೆ ಆ ಪ್ರಸಂಗ ನನಗೆ ತಂದು ಬಿಟ್ಟಿರಲ್ಲ ಅಂತ ದೇವತೆಗಳಿಗೆ ಅನ್ನುತ್ತಾರೆ. ಸರಿ, ನೋಡಿ ಯಾರಿಗಾದರೂ ಭೋಗವನ್ನು ಮಾಡರಿ ಅಂತ ಹೇಳಿದರೆ ರುಚಿಸಿ ಬಿಡುತ್ತದೆ ಆ ರಜಿ ಪುತ್ರರು ಐದನೂರು ಜನ ಇದಕ್ಕೆ ಒಗ್ಗಿ ಹೋಗಿದ್ದಾರೆ ಧರ್ಮವನ್ನು ಬಿಟ್ಟರು. ಇನ್ನೇನು ಬೇಕು ದೇವತೆಗಳಿಗೆ ಹಿಂದೆ ಕಥೆ ಕೇಳಿದ್ದೀರಲ್ಲ ದಿತಿ ದೇವಿ ಒಂದು ದಿನ ತಾನು ಕಾಲು ತೊಳೆಯದೇ ಹಾಗೇ ಮಲಗಿದ್ದಕ್ಕೆ ಒಳಗೆ ಹೋಗಿ ಗರ್ಭವನ್ನು ಏಳು ಭಾಗ ಮಾಡಿ ಮತ್ತೆ ಏಳು ಭಾಗ ಮಾಡಿದ ಇಂದ್ರ ದೇವರು ಅಂತ ಒಂದು ತಪ್ಪು ಸಿಕ್ಕರೆ ಸಾಕು ಅವರು ತಾವು ತಮ್ಮ ಸ್ಥಾನದಿಂದ ಚ್ಯುತರಾಗುತ್ತಾರೆ, ಉದ್ದೇಶ್ಯದಿಂದ ಚ್ಯುತರಾಗುತ್ತಾರೆ. ಇವರಂತೂ ನಾಸ್ತಿಕರೇ ಆಗಿಬಿಟ್ಟ ಮೇಲೆ ದೇವತೆಗಳಿಗೆ ಇವರನ್ನು ಸೋಲಿಸುವುದು ಸುಲಭ ಆಯಿತು ಸೋಲಿಸಿದ್ದಾರೆ ತಮ್ಮ ರಾಜ್ಯವನ್ನು ತಾವು ಪಡೆದಿದ್ದಾರೆ. ಈ ರೀತಿ ಆ ರಜಿಯ ವಂಶ ಮುಂದೆ ಸಾಗಿದೆ.

ಇನ್ನು ರಂಭ ಅಂತ ಇನ್ನೊಬ್ಬ ಅವನಿಗೆ ಮಕ್ಕಳೇ ಆಗಲಿಲ್ಲ, ಅನೇನ ಅನ್ನುವವನ ವಂಶವನ್ನು ಹೇಳುತ್ತಾರೆ. ಆಮೇಲೆ ಅನೇಕ ರಾಜರ ಹೆಸರುಗಳನ್ನೆಲ್ಲ ಹೇಳುತ್ತಾರೆ ಕ್ಷತ್ರವೃದ್ಧ ಅಂತ ಮತ್ತೊಬ್ಬ ಆಯುವಿನ ಮಗ ಅವನ ವಂಶವನ್ನು ತಿಳಿಸುತ್ತಾರೆ. ಕ್ಷತ್ರವೃದ್ಧನ ವಂಶದಲ್ಲಿ ಮುಂದೆ ಅವನ ಮಗನೇ ಸುನಹೋತ್ರ ಅಂತ ಸುನಹೋತ್ರನಿಗೆ ಮೂರು ಜನ ಮಕ್ಕಳು ಕಾಶ, ಶಲ ಮತ್ತು ಗೃತ್ಸಮದ ಅಂತ ಗೃತ್ಸಮದರ ಮಗನೇ ಶುನಕ, ಶುನಕನ ಮಗನೇ ಶೌನಕರು. ಎಷ್ಟು ಪುರಾಣಗಳು, ಪಾಠ ಪ್ರವಚನಗಳು ನಿರಂತರವಾಗಿ ನೈಮಿಷಾರಣ್ಯದಲ್ಲಿ ಸೂತಾಚಾರ್ಯರಿಂದ ಆ ಶೌನಕಾದಿಗಳ ಪ್ರಶ್ನೆಯ ಮೂಲಕ ಇಡೀ ಜಗತ್ತಿಗೆ ದೊಡ್ಡದಾದ ಧರ್ಮ ಸಂಹಿತೆ ಸಿಕ್ಕಿದೆ ಮಹಾನುಭಾವರು ಶೌನಕರು. ಅವರ ಸ್ಮರಣೆಯನ್ನು ಎಷ್ಟು ಮಾಡಿದರೂ ಕಡಿಮೆ ಇದೆ ಅವರ ಮೂಲಕ, ಅವರು ಮಾಡಿದ ಪ್ರಶ್ನೆಗಳ ಮೂಲಕ ನಮಗೆ ಉತ್ತರವಾಗಿ ಈ ಎಲ್ಲ ಇತಿಹಾಸ ಪುರಾಣಗಳು ಸಿಕ್ಕದ್ದು.

ಇನ್ನು ಈ ಕಾಶನ ಮಗ ಕಾಶಿ, ಕಾಶಿಯ ಮಗ ದೀರ್ಘತಪ, ದೀರ್ಘತಪನ ಮಗನೇ ಧನ್ವಂತರಿ ಅಂತ ಒಂದು ಪಾಠ, ದೀರ್ಘತಪನ ಮಗ ಧನ್ವ, ಧನ್ವನ ಮಗ ಸಾಕ್ಷಾತ್ ಧನ್ವಂತರಿ ರೂಪಿಯಾಗಿರುವಂತಹ ಪರಮಾತ್ಮ. ಧನ್ವಂತರಿ ಸಮುದ್ರಮಥನ ಕಾಲದಲ್ಲಿ ಸಮುದ್ರದಿಂದ ಸ್ವಯಂ ಪ್ರಾದುರ್ಭೂತನಾಗಿದ್ದಾನೆ ಅಲ್ಲಿ ಯಾರು ತಂದೆ ಇಲ್ಲ, ತಾಯಿ ಇಲ್ಲ. ಕೇವಲ ಸಚ್ಚಿದಾನಂದ ರೂಪಿಯಾಗಿರುವಂತಹ ಪರಮಾತ್ಮ ತನ್ನ ಇಚ್ಛೆಯಿಂದ ಸಕಲ ದೇವತೆಗಳಿಗೆ ಅನುಗ್ರಹ ಮಾಡುವುದಕ್ಕಾಗಿ, ಮುಂದೆ ಬರುವ ಸಕಲ ಸಜ್ಜನರಿಗೂ ಅನುಗ್ರಹವನ್ನು ಮಾಡುವುದಕ್ಕಾಗಿ ಧನ್ವಂತರಿ ಆಗಿ ಪ್ರಾದುರ್ಭೂತನಾಗಿದ್ದಾನೆ ಪರಮಾತ್ಮ ಒಂದು ಬಾರಿ ಅಮೃತ ಕಲಶವನ್ನು ಧಾರಣ ಮಾಡಿಕೊಂಡು ದೇವತೆಗಳಿಗೆಲ್ಲ ಅಮೃತವನ್ನು ಕೊಟ್ಟ. ಆ ಪರಮಾತ್ಮ ಪುನಃ ಇವನಲ್ಲಿ

1. 28.27 ಹರಿವಂಶಪರ್ವ

ಪುನರ್ಧನ್ವನ್ತರಿರ್ದೇವೋ ಮಾನುಷೇಷ್ವಿಹ ಜಜ್ಞಿವಾನ್ ॥ (29.10 ಹರಿವಂಶಪರ್ವ)

ಪುನಃ ಈ ಚಂದ್ರವಂಶದಲ್ಲಿ ಚಂದ್ರನಿಗೂ-ಧನ್ವಂತರಿಗೂ ವಿಶೇಷ ಸಂಬಂಧ. ಚಂದ್ರವಂಶದಲ್ಲಿ ಧನ್ವಂತರಿಯ ಅವತಾರ ಆಗಿದೆ ಎರಡನೆಯ ಬಾರಿ, ಮೊದಲನೆಯ ಬಾರಿ ಸ್ವಯಂ ಪ್ರಾದುರ್ಭೂತ ಎರಡೂ ಸಚ್ಚಿದಾನಂದಾತ್ಮಕ ವಿಗ್ರಹ ಪರಮಾತ್ಮನದು ಇರುವುದು ಧನ್ವಂತರಿ ಚಂದ್ರ ಮಂಡಲದಲ್ಲಿ, ಚಂದ್ರ ಮಂಡಲದಲ್ಲಿ ಧನ್ವಂತರಿಯ ವಾಸ ಆ ಚಂದ್ರವಂಶದಲ್ಲಿ ಪ್ರಾದುರ್ಭೂತನಾಗಿದ್ದಾನೆ. ಚಂದ್ರನಂತೆ ಚಂದ್ರನಿಗಿಂತಲೂ ಅನಂತ ಪಟ್ಟು ಮಿಗಿಲಾದಂತಹ ಅತ್ಯದ್ಭುತವಾದ ಶ್ರೇಷ್ಠವಾದ ಅಮೃತಮಯವಾದ ಕಿರಣಗಳನ್ನು ಜಗತ್ತಿನಲ್ಲೆಲ್ಲ ಹರಡಿಸಿದ್ದಾನೆ ಅನ್ನುತ್ತಾರೆ ಶ್ರೀಮದಾಚಾರ್ಯರು. ಆ ಚಂದ್ರನ ಕಿರಣಗಳು ಹೇಗೆ ಎಲ್ಲ ಕಡೆಗೆ ಇವೆ ಹಾಗೆ ಧನ್ವಂತರಿಯ ಕಿರಣಗಳು ಎಲ್ಲ ಕಡೆಗೆ ಇವೆ ಇದನ್ನು ಈ ಮೊದಲು ತಿಳಿದಿದ್ದೀರಿ ಹಾಗಾದರೆ ಎಲ್ಲ ಕಡೆಗೂ ಧನ್ವಂತರಿಯ ಕಿರಣಗಳು ಇದ್ದರೆ ನಮಗೆ ರೋಗನೇ ಬರಬಾರದಲ್ಲ, ಅದಕ್ಕೆ ವಿಷ್ಣು ಸಹಸ್ರನಾಮ ಉತ್ತರ ಕೊಡುತ್ತೆ ನಿಜ ಧನ್ವಂತರಿ ಎಲ್ಲ ಕಡೆಗೆ ಇದ್ದಾನೆ, ಧನ್ವಂತರಿಯ ಕಿರಣಗಳೂ ಎಲ್ಲ ಕಡೆಗೆ ಇವೆ ಆ ಧನ್ವಂತರಿಯ ಅನುಗ್ರಹವನ್ನು ಪಡೆದಂತಹ ಅಶ್ವಿ ದೇವತೆಗಳು, ಸೋಮ ಇವರೆಲ್ಲರೂ ಎಲ್ಲ ಕಡೆಗೆ ಇದ್ದು ನಮಗೆ ಅನುಗ್ರಹ ಮಾಡಲಿಕ್ಕೆ ಸಿದ್ಧರು ಆದರೆ ನಾವು ಅವರನ್ನು ತಿಳಿದು ಉಪಾಸನೆ ಮಾಡಿದರೆ ಕೆಲಸ ಮಾಡುತ್ತಾರೆ ಇಲ್ಲದೆ ಇದ್ದರೆ ಮಾಡುವುದಿಲ್ಲ ಅವರು.

'ವೇದ್ಯೋ ವೈದ್ಯಃ ವೇದ್ಯಶ್ಚೇತ್ ವೈದ್ಯಃ' ಅವನು ವೇದ್ಯ ಆದರೆ ವೈದ್ಯ, ಇಲ್ಲ ಅಂದರೆ ವೈದ್ಯ ಅಲ್ಲ ಅವನು. ಆ ಧನ್ವಂತರಿ ನಮ್ಮ ಸುತ್ತಮುತ್ತ ಇದ್ದಾನೆ ಅಂದರೆ ವೇದ್ಯ ಅಂದರೆ ಬರೀ ವೇದ್ಯ ಯಾವಾಗಲೂ ಹೌದೇ ಹೌದು ವಿದಿತ ಅನ್ನುವ ಅಭಿಪ್ರಾಯದಲ್ಲಿ ಇದು ವೇದ್ಯ ಅನ್ನುವ ಪ್ರಯೋಗ ವೇದ್ಯನಾದ ಭಗವಂತ ವಿದಿತ ಆದರೆ ದೇವರು ಇದ್ದಾನೆ ನಮ್ಮ ರಕ್ಷಣೆಗೆ ಅಂತ ನಾವು ಸ್ಮರಿಸಿದರೆ ರಕ್ಷಣೆಯನ್ನು ಮಾಡುತ್ತಾನೆ ಅಷ್ಟೇ. ಪಕ್ಕದಲ್ಲಿ ಔಷಧಿ ಇಟ್ಟುಕೊಂಡು ಕುಳಿತಿದ್ದೇವೆ ತೊಡೆಯ ಮೇಲೆ ಇದ್ದರೆ ನಿನ್ನೆಯಿಂದ ಔಷಧಿ ಇನ್ನು ಜೋರಾಗಿ ಕಡಿಮೆ ಆಗಬೇಕು, ತೊಡೆಯ ಮೇಲೆ ಇಟ್ಟುಕೊಂಡರೆ ಯಾಕೆ ಕಡಿಮೆ ಆಗುತ್ತದೆ ಅದು ಬಾಯಿಯಲ್ಲಿ ಹೋಗಬೇಕು ಅಲ್ವಾ. ಹಾಗೆ ದೇವರು ಸುತ್ತಮುತ್ತ ಇದ್ದಾನೆ ಆದರೆ ಇದ್ದ ಮಾತ್ರಕ್ಕೆ ಪ್ರಯೋಜನವಿಲ್ಲ ಅವನು ನಮ್ಮ ಮನಸ್ಸಿಗೆ ಹೋಗಬೇಕು ಅಂದಾಗ ದೇವರು ನಮಗೆ ವೈದ್ಯನಾಗಿ ಕಾರ್ಯವನ್ನು ಮಾಡುತ್ತಾನೆ ಎಂಬುದಾಗಿ ಶಾಸ್ತ್ರ ತಿಳಿಸುತ್ತದೆ ವಿಷ್ಣು ಸಹಸ್ರನಾಮ ಆದ್ದರಿಂದ ಅಂತಹ ಧನ್ವಂತರಿ ರೂಪಿಯಾದ ಪರಮಾತ್ಮ ಅಲ್ಲಿ ಅವತಾರ ಮಾಡಿದ್ದಾನೆ ಅಂತ ತಿಳಿಸಿಕೊಡುತ್ತಾರೆ. ಆಯಿತಲ್ಲ ಒಂದು ಸಲ ಸಮುದ್ರಮಥನ ಕಾಲದಲ್ಲಿ ಅವತಾರ ಮಾಡಿದ್ದರೆ ಕೆಲಸ ಆಗುತ್ತಿತ್ತು ಈಗ ಮತ್ತೆ ಯಾಕೆ ಅವತಾರ ಮಾಡಿದ ಅಂತ ಅದಕ್ಕೆ ಹೇಳುತ್ತಾರೆ. ಸಮುದ್ರಮಥನ ಕಾಲದಲ್ಲಿ ಅವತಾರ ಮಾಡಿದಾಗ ಅವನಿಗೆ ಅಬ್ಜ ಅಂತ ಅಪ ಅಂದರೆ ಸಮುದ್ರ ನೀರು ಅಲ್ಲಿ ಅವತಾರ ಮಾಡಿದ್ದರಿಂದ ಅಬ್ಜ ಅಂತ ಅವನಿಗೆ ಹೆಸರು. ಸ್ವಯಂ ಪರಮಾತ್ಮ ವಿಷ್ಣು ಅವನೂ ಇದ್ದನಲ್ಲ ಸಮುದ್ರಮಥನ ಕಾಲದಲ್ಲಿ ಅಲ್ಲಿ ಅಜಿತನಾಮಕನಾದ ಪರಮಾತ್ಮ ಆ ವಿಷ್ಣು ಬಂದು ಹೇಳುತ್ತಾನೆ ತನ್ನದೇ ಇನ್ನೊಂದು ರೂಪ **'ಅಬ್ಜಿಮಿತಿ ಹೋವಾಚ'**[1] ಅಬ್ಜ ಅಂತ ಸಂಭೋಧನೆ ಮಾಡಿದಾಗ ಆ ಅಬ್ಜನಾದ ಧನ್ವಂತರಿ ವಿಷ್ಣುವಿಗೆ ಹೇಳುತ್ತಾನೆ ನಾನು ನಿನ್ನ ಅವತಾರನೇ, ನಿನ್ನ ಅವತಾರನೇ ನಾನು, ನಿನ್ನ ಒಂದು ಅಂಶವೇ ನಾನು, ನಾವಿಬ್ಬರೂ ಒಂದೇ ತಾನೇ ನನಗೂ ಯಜ್ಞದಲ್ಲಿ ವಿಶೇಷವಾದ ಭಾಗವನ್ನು ಕೊಡಬೇಕು ಅಂತ ಎಲ್ಲ ನಾಟಕ ವರಾಹ ದೇವರು, ಶ್ರೀನಿವಾಸ ದೇವರು ಮಾತಾಡಿದ ಹಾಗೆ ಧನ್ವಂತರಿ ಬೇರೆಯಲ್ಲ ವಿಷ್ಣು ಬೇರೆಯಲ್ಲ. ವಿಷ್ಣು, ನೀನು ಅಬ್ಜ ಅಂತ ಹೇಳಿದರೆ ನಾನು ನಿನ್ನ ಮಗ ನಿನ್ನ ಒಂದು ಅಂಶದಿಂದಲೇ ನಾನು ಅವತಾರ ಮಾಡಿದ್ದು ಅಂತ ಸರಿ, ನನಗೆ ಯಜ್ಞ ಭಾಗವನ್ನು ಕೊಡಬೇಕು ಅಂತ ಯಜ್ಞ ಭಾಗ ಎಲ್ಲ ಕೊಟ್ಟಾಗಿದೆ ದೇವತೆಗಳಿಗೆ ಹಂಚಿ ಆಯಿತು ಖಾಲಿ ಇಲ್ಲ

1. 29.14 ಹರಿವಂಶಪರ್ವ

ಅನ್ನುತ್ತಾನೆ ವಿಷ್ಣು ಯಜ್ಞ ಭಾಗ ಎಲ್ಲ ಕೊಟ್ಟಾಯಿತು. ಇನ್ನು ಉಪ ಹೋಮಗಳಲ್ಲಿ ನಿನಗೆ ಅವಕಾಶ ಕೊಡಬಹುದು ಆದರೆ ನೀನು ಸರ್ವೋತ್ತಮ ಸರ್ವೋತ್ತಮನಾದಂತಹ ನಿನಗೆ ಉಪ ಹೋಮಗಳಲ್ಲಿ ಅವಕಾಶ ಕೊಟ್ಟರೆ ನಿನ್ನ ಸ್ಥಾನಕ್ಕೆ ಗೌರವ ಅಲ್ಲ, ಪ್ರಧಾನ ಹೋಮಗಳ ಆಹುತಿಗಳನ್ನೆಲ್ಲ ಯಾರು ಯಾರಿಗೆ ಹಂಚಿಕೊಡಬೇಕೋ ಹಂಚಿ ಕೊಟ್ಟಾಗಿದೆ. ಅದಕ್ಕೆ ಒಂದು ಕಾರ್ಯವನ್ನು ಮಾಡಬಹುದು ನೀನು ಮತ್ತೆ ಅವತಾರ ಮಾಡು ಮುಂದೆ ಚಂದ್ರವಂಶದಲ್ಲಿ ಆಗ ನಿನಗೆ ವಿಶೇಷವಾಗಿ ಇರುವಂತಹ ಮಂತ್ರ, ವ್ರತ, ಜಪ, ಯಜ್ಞ ಯಾಗಾದಿಗಳಿಂದ ಬ್ರಾಹ್ಮಣರು ವಿಶೇಷವಾಗಿ ನಿನ್ನ ಆರಾಧನೆಯನ್ನು ಮಾಡುವಂತಾಗಲಿ.

ಚರುಮನ್ತ್ರೈರ್ವ್ರತೈರ್ಜ್ಞಾಪ್ಯೈರ್ಯಕ್ಷ್ಯನ್ತಿ ತ್ವಾಂ ದ್ವಿಜಾತಯಃ ॥ (29.19 ಹರಿವಂಶಪರ್ವ)

ಯಾವಾಗ ಮುಂದೆ ನೀನು ಮತ್ತೆ ಅವತಾರ ಮಾಡಿದಾಗ ಅಂತ ಹೇಳಿದ್ದರಿಂದ ಅರ್ಥಾತ್ ತನ್ನದೇ ಸಂಕಲ್ಪದಿಂದ ದೇವರು ತಾನು ಪುನಃ ಧನ್ವಂತರಿಯಾಗಿ ಇಲ್ಲಿ ಅವತಾರ ಮಾಡಿ ವಿಶೇಷವಾಗಿ ಯಜ್ಞ ಯಾಗಾದಿಗಳಿಂದ ಪೂಜ್ಯನಾಗಿದ್ದಾನೆ ಎಂಬುದಾಗಿ ತಿಳಿಸುತ್ತಾರೆ. ಈ ಧನ್ವಂತರಿ ಇವನಿಂದ ಧೀರ್ಘತಪಸ್ ಅಥವಾ ಧನ್ವನಿಂದ ಅವತಾರ ಮಾಡುವುದಕ್ಕೆ ಸುಮ್ಮನೆ ಹಾಗೆ ಅವತಾರ ಮಾಡಿದ ಅಂತ ತಿಳಿಯಬೇಡಿ ಎಷ್ಟೋ ದಿನಗಳವರೆಗೆ ಅವನು ತಪಸ್ಸು ಮಾಡಿದ್ದಾನೆ, ಅವನ ಹೆಸರಿಗೆ ತಕ್ಕಂತೆ ಧೀರ್ಘತಪಸ್ ಆ ತಪಸ್ಸು ಮಾಡಿದ್ದಕ್ಕೆ ಪ್ರಸನ್ನನಾಗಿ ಪರಮಾತ್ಮ ಧನ್ವಂತರಿಯಾಗಿ ಅವತಾರ ಮಾಡಿದ. ಧನ್ವ ಅಂದರೆ ಪಾಪಗಳು ಆ ಪಾಪಗಳಿಂದ ನಮ್ಮನ್ನು ದಾಟಿಸುತ್ತಾನೆ ಹೇಗೆ ನಾವಿಕ ನದಿಯನ್ನು ದಾಟಿಸಿ ನಮ್ಮನ್ನು ಈಚೆಯಿಂದ ಆ ದಡಕ್ಕೆ ಕರೆದುಕೊಂಡು ಹೋಗುತ್ತಾನೆ, ನಾವು ಎಷ್ಟೋ ಜನ್ಮಗಳಲ್ಲಿ ಮಾಡಿದ ಪಾಪಗಳ ಫಲವಾಗಿ ರೋಗಗಳನ್ನು ಅನುಭವಿಸುತ್ತಾ ಇರುತ್ತೇವೆ ಆ ಪಾಪಗಳನ್ನು ದಾಟಿಸಿ ಅನಾರೋಗ್ಯದಿಂದ, ರೋಗದಿಂದ ಆರೋಗ್ಯದ ಕಡೆಗೆ ನಮ್ಮನ್ನು ಕರೆದುಕೊಂಡು ಹೋಗುತ್ತಾನೆ ಅನ್ನುವುದಕ್ಕೋಸ್ಕರ ಅವನನ್ನು ಧನ್ವಂತರಿ ಎಂಬುದಾಗಿ ಹೇಳುವುದು. ಈ ಧನ್ವ ಅನ್ನುವನ ಮಗನಾಗಿ ಅವತಾರ ಮಾಡಿದ ಅಂತನ್ನುವ ಪಾಠವನ್ನು ಇಟ್ಟುಕೊಂಡಾಗ ತಾನು ಅವತಾರ ಮಾಡುವ ಮೂಲಕ ತಪಸ್ಸು ಮಾಡಿ ತನ್ನನ್ನು ಪಡೆದ ತನ್ನ ತಂದೆಯಾದ ಆ ಧನ್ವನನ್ನ ಸಂಸಾರದಿಂದ ತಾರಣ ಮಾಡಿ ಅವನನ್ನು ಉದ್ಧಾರ ಮಾಡಿದ ಅನ್ನುವುದಕ್ಕೋಸ್ಕರವಾಗಿಯೂ ಕೂಡ ಧನ್ವಂತರಿ ಎಂಬುದಾಗಿ ಕರೆಯುತ್ತಾರೆ ಅಂತ ನಾವು ಅರ್ಥ ಮಾಡಿಕೊಳ್ಳಬಹುದು. ಇನ್ನೊಂದು ಧನ್ವಾ ಅನ್ನುವ ಶಬ್ದಕ್ಕೆ ಮರುಭೂಮಿ ಅಂತ ಅರ್ಥ ನೀರಿಲ್ಲದ ಪ್ರದೇಶ ಅಂತ ನೀರಿಲ್ಲದ ಪ್ರದೇಶದಿಂದ ನೀರಿರುವ ಪ್ರದೇಶಕ್ಕೆ ನಮ್ಮನ್ನು ಕರೆದುಕೊಂಡು ಬರುತ್ತಾನೆ. ನೀರಿಲ್ಲದ ಪ್ರದೇಶದಲ್ಲಿ ನೀರಿಲ್ಲದೆ ದುಃಖದಿಂದ ಒದ್ದಾಡುವವರನ್ನು ಆ ಪ್ರದೇಶದಿಂದ ದಾಟಿಸಿ ನೀರಿರುವ ಪ್ರದೇಶಕ್ಕೆ ಕರೆದುಕೊಂಡು ಬರುತ್ತಾನೆ ಅಂತ ಅನ್ನುವುದಕ್ಕಾಗಿ ಧನ್ವಂತರಿ ಅಂತ. ಸರಿ, ನೀರಿಲ್ಲದವರಿಗೆ ನೀರು ಕೊಡುತ್ತಾನೆ ಅನ್ನುವುದು ಸರಿ ಅವನು ಅಬ್ಜ ಅಹುದು, ಅಪಾಂನಿಧಿಯು ಅಹುದು, ನೀರು ಕೊಡುತ್ತಾನೆ ಬಹಳ ಸಂತೋಷ ಅಪಾಂನಿಧಿ ಅಂತ ಚಂದ್ರನಿಗೆ ಕರೆದರು ಹಿಂದೆ ಅಂತಹ ಚಂದ್ರವಂಶದಲ್ಲಿ ಬಂದವನು ಸ್ವಯಂ ತಾನು ಸಕಲ ಜಲಾಧಾರ, ನಾರಾ, ನೀರು ಅದಕ್ಕೆ ಅಯನ, ಆಶ್ರಯ, ಅಪಾಂನಿಧಿ, ಅಧಿಷ್ಠಾನಂ ಇದೆಲ್ಲ ಸರಿ ಆದರೆ ಆರೋಗ್ಯ ಕೊಡುವ ಧನ್ವಂತರಿ ನೀರಿಗೆ ಆಶ್ರಯ ಅಂತ ಹೇಳುವುದರೊಳಗೆ ಏನು ಔಚಿತ್ಯ ಇದೆ ಅಂತ.

ಆಪ್ಸು ಮೇ ಸೋಮೋ ಅಬ್ರವೀದ್ ಅಂತರ್ ವಿಶ್ವಾನಿ ಭೇಷಜಾ । (ವೇದಸಂಹಿತೆ)

ಅಂತ ನೀರಿನೊಳಗೆ ಎಲ್ಲಾ ಔಷಧಿಗಳ ಗುಣಗಳಿವೆ ಅಂತ ಸೋಮ ಹೇಳಿದ್ದಾನೆ ಅಂತ ವೇದ ಹೇಳುತ್ತದೆ ಆದ್ದರಿಂದ ಅಂತಹ ಸಕಲ ಔಷಧಿಯ ಗುಣಗಳನ್ನು ಪಡೆದುಕೊಂಡ ನೀರನ್ನು ನಮಗೆ ಕೊಟ್ಟು ನೀರಿನ ಮೂಲಕ ಎಲ್ಲ ರೋಗಗಳನ್ನೂ ಪರಿಹಾರ ಮಾಡಿ ನಮ್ಮನ್ನು ಅನುಗ್ರಹಿಸುವಂಥವನು ಆದ್ದರಿಂದ ಧನ್ವಂತರಿ. ನಿರ್ಜಲ ಪ್ರದೇಶದಿಂದ



ಸಜಲ ಪ್ರದೇಶಕ್ಕೆ, ಜಲವಿಲ್ಲದ ಪರಿಸ್ಥಿತಿಯಿಂದ ಜಲವಿರುವ ಪರಿಸ್ಥಿತಿಗೆ, ರೋಗದಿಂದ ಆರೋಗ್ಯಕ್ಕೆ ನಮ್ಮನ್ನು ಕರೆದುಕೊಂಡು ಬರುತ್ತಾನೆ ಅನ್ನುವುದಕ್ಕೋಸ್ಕರ ಇವನು ಧನ್ವಂತರಿ. ನೋಡಿ, ಭಕ್ತಿ ಇಲ್ಲದೇ ಗಂಟೆಗಟ್ಟಲೆ ಜಪ ಮಾಡಿದರೂ ಪ್ರಯೋಜನ ಇಲ್ಲ ಕೊನೆಗೆ ಒಂದು ಮಾತು ಹೇಳುತ್ತಾರೆ ಶ್ರೀಮದಾಚಾರ್ಯರು **'ಮನಸಾ ಯದಿ ಭಕ್ತಿ ನಮ್ರಾಃ'** ಭಕ್ತಿ ನಮ್ರನಾಗಿ ಜಪ ಮಾಡಿದರೆ ಪಾಪಗಳನ್ನು ಪರಿಹಾರ ಮಾಡಿ ಪಾಪಾಗಪೈತಿ ಪಾಪಗಳನ್ನು ಕಳೆದು ನಮ್ಮನ್ನು ರೋಗಗಳಿಂದಲೂ ಮುಕ್ತನನ್ನಾಗಿ ಮಾಡುತ್ತಾನೆ ಎಂಬುದಾಗಿ ಶ್ರೀಮದಾಚಾರ್ಯರು ತಿಳಿಸಿದ್ದಾರೆ. ನೋಡಿ, ಶಾಸ್ತ್ರದಲ್ಲಿ ನೀರು ಅಂದರೆ ಸ್ನೇಹ, ಸ್ನೇಹ ಅಂದರೆ ಭಕ್ತಿ ಅಂತನ್ನುವ ಅರ್ಥದಲ್ಲಿ ಬಳಸುತ್ತಾರೆ **'ಅಂಬೋ ಅಗ್ರಹಣಾತ್ತು'** ಅಂತ. ಆ ನೀರು ಅಂದರೆ ಸ್ನೇಹ,ಸ್ನೇಹ ಅಂದರೆ ಭಕ್ತಿ, ಧನ್ವ ಅಂದರೆ ಮರುಭೂಮಿ, ಮರುಭೂಮಿ ಅಂದರೆ ಭಕ್ತಿ ಇಲ್ಲದ ಅವಸ್ಥೆ. ಮರುಭೂಮಿಯಿಂದ ನೀರಿರುವ ಪ್ರದೇಶಕ್ಕೆ ಕರೆದುಕೊಂಡು ಬರುತ್ತಾನೆ ಅಂದರೆ ಭಕ್ತಿ ಇಲ್ಲದ ಅವಸ್ಥೆಯಿಂದ ಭಕ್ತಿ ಇರುವ ಅವಸ್ಥೆಗೆ ಕರೆದುಕೊಂಡು ಬರುತ್ತಾನೆ ನಮ್ಮನ್ನು ಆ ಅವಸ್ಥೆಯಿಂದ ದಾಟಿಸಿ, ಭಕ್ತಿ ಇರುವ ಅವಸ್ಥೆಯ ಕಡೆಗೆ ಕರೆದುಕೊಂಡು ಬರುತ್ತಾನೆ ಅಂದರೆ ಭಕ್ತಿವಂತಾಗಿರುವಂತೆ ಮಾಡಿ ನಮ್ಮನ್ನು ಆ ಭಕ್ತ್ಯ ಮೂಲಕ ನಮ್ಮೆಲ್ಲ ಪಾಪಗಳನ್ನ ಕಳೆದು ಉತ್ತಮವಾದಂತಹ ಆರೋಗ್ಯವನ್ನು ಕೊಟ್ಟು ದೇವರು ಉದ್ಧಾರ ಮಾಡುತ್ತಾನೆ ಅನ್ನುವ ಅರ್ಥದಲ್ಲಿ ಅವನನ್ನು ಧನ್ವಂತರಿ ಎಂಬುದಾಗಿ ಕರೆಯುತ್ತಾರೆ ಅಂತ ನಾವಿಲ್ಲಿ ಚಿಂತನವನ್ನು ಮಾಡಬಹುದು.

ಧನ್ವಂತರಿಯ ವಂಶದಲ್ಲಿ ಮುಂದೆ ಆ ಧನ್ವಂತರಿಯ ಮಗ ಕೇತುಮಾನ್ ಅಂತ ಒಬ್ಬನ ಹೆಸರನ್ನಾದರೂ ಕೇಳೋಣ ಸಾಕ್ಷಾತ್ ದೇವರಿಂದ ಹುಟ್ಟಿದ ಮಹಾನುಭಾವ ಅವನು ಕೇತುಮಾನ್ ಮುಂದೆ ಅವನ ಮಗ ಭೀಮರಥ, ಭೀಮರಥನ ಮಗ ದಿವೋದಾಸ ಅಂತ ಆ ದಿವೋದಾಸ ವಾರಾಣಾಸೀಗೆ ರಾಜನಾಗಿರುತ್ತಾನೆ. ಇವತ್ತು ಏನು ಭಾರೀ ಪ್ರಸಿದ್ಧವಾದಂತಹ ವಾರಣಾಸಿ ಕ್ಷೇತ್ರ, ವಿಶ್ವನಾಥನ ಕ್ಷೇತ್ರ, ಬಿಂದುಮಾಧವನ ಕ್ಷೇತ್ರ ಅಂತಹ ಕ್ಷೇತ್ರ ಆ ವಾರಣಾಸಿಯ ಕ್ಷೇತ್ರಕ್ಕೆ ಅಧಿಪತಿಯಾಗಿರುತ್ತಾನೆ ದಿವೋದಾಸ. ಭದ್ರಶ್ರೇಣ್ಯ ಅಂತ ಆ ವಾರಣಾಸಿಯ ರಾಜ ಮೊದಲು ನೋಡಿದರೆ ಆ ಭದ್ರಶ್ರೇಣ್ಯನಿಗೆ ನೂರು ಜನ ಮಕ್ಕಳು ಇರುತ್ತಾರೆ. ಧನ್ವಂತರಿಯ ಮರಿ ಮಗನಾದಂತಹ ಈ ದಿವೋದಾಸ ಅವರೇನು ಭದ್ರಶ್ರೇಣ್ಯನ ನೂರು ಜನ ಮಕ್ಕಳಿರುತ್ತಾರೆ ವಾರಾಣಸಿಯ ರಾಜನ ಮಕ್ಕಳು ಅವರೆಲ್ಲರನ್ನು ಸೋಲಿಸಿ ತಾನು ಆ ರಾಜ್ಯವನ್ನು ವಶಕ್ಕೆ ತೆಗೆದು ಕೊಂಡಿರುತ್ತಾನೆ.

ಈಚೆಗೆ ಒಂದು ಘಟನೆ ನಡೆಯುತ್ತೆ ಅತ್ತೆ ಮಾವಂದಿರಾದ ಮೇನಾ ದೇವಿ ಹಿಮಾಲಯ ರಾಜನ ಮನೆಗೆ ಅಂತ ರುದ್ರ ದೇವರು ಬಂದಿರುತ್ತಾರೆ ಅವರ ಜೊತೆಗೆ ಪಾರ್ವತಿ ಪರಮೇಶ್ವರರು ಇಬ್ಬರೂ ಕೂಡ ಇದ್ದಾರೆ. ಅದೇನೋ ಭಗವತ್ ಸಂಕಲ್ಪ ಮೇನಾ ದೇವಿ ಸುಮ್ಮನಿರದಂತೆ ಸ್ವಲ್ಪ ರುದ್ರ ದೇವರ ಬಗ್ಗೆ ಹಗುರಾಗಿ ಮಾತನಾಡುತ್ತಾಳೆ ಪಾರ್ವತಿಯ ಎದುರಿಗೆ ರುದ್ರ ದೇವರ ಎದುರಿನಲ್ಲಲ್ಲ. ಇವರೇನು ಸ್ಮಶಾನದಲ್ಲಿ ವಾಸ ಮಾಡುತ್ತಾರೆ, ಭೂತಗಳ, ಗಣಗಳ ಮಧ್ಯದಲ್ಲಿ ಇರುತ್ತಾರೆ ಹಾಗೆ ಹೀಗೆ ಅಂತ ಏನೇನೋ ಮಾತನಾಡುತ್ತಾ ಇದ್ದರೆ ಪಾರ್ವತಿಗೆ ಸಹನೆ ಆಗಲಿಲ್ಲ. ಸಹನೆ ಆಗದೇ ನೇರವಾಗಿ ರುದ್ರ ದೇವರ ಹತ್ತಿರ ಹೋಗಿ ಹೇಳಿದ್ದಾಳೆ ರುದ್ರ ದೇವರೇ ದಯವಿಟ್ಟು ನಮ್ಮ ಮನೆಗೆ ನಾವು ಬೇಗ ಹೋಗೋಣ ಸಾಕು ತವರು ಮನೆಯ ವಾಸ ಯಾಕೆ ಅಂತ. ಅದಕ್ಕೆ ವ್ಯಾಖ್ಯಾನಕಾರರು ಅನ್ನುತ್ತಾರೆ ಹಿಂದಿನ ಜನ್ಮದಲ್ಲಿ ತಂದೆ ದಕ್ಷಪ್ರಜಾಪತಿ ಏನೋ ಮಾತನಾಡಿದ ನಿಮಗೆ ಅಂತ ಸಿಟ್ಟಾಗಿ ನಾನು ದೇಹವನ್ನು ಬಿಟ್ಟೆ ಆ ದಕ್ಷಪ್ರಜಾಪತಿಯ ಸಂಹಾರನೂ ಆಯಿತು ಒಂದರ್ಥದೊಳಗೆ ನಾನೂ ಪ್ರಾಣ ಬಿಟ್ಟೆ ತಂದೆಗೂ ಕೊಲ್ಲಿಸುವ ಪ್ರಸಂಗವೂ ಬಂತು. ಇನ್ನು ಈ ಜನ್ಮದೊಳಗೆ ತಾಯಿ ನಿಮ್ಮ ನಿಂದೆ ಮಾಡುತ್ತಾಳೆ ಅಂತ ತಾಯಿಯನ್ನು ಕೊಲ್ಲಿಸುವ ಪ್ರಸಂಗ ಬರುವುದು ಬೇಡ ಆದಷ್ಟು ಬೇಗ ನಾವು ಇಲ್ಲಿಂದ ಜಾಗ ಖಾಲಿ ಮಾಡೋಣ, ಹೊರಟು ಬಿಡೋಣ ಅಂತ ಆಗ ಸರಿ ಅಂತ ರುದ್ರ ದೇವರು ಅಲ್ಲಿಂದ ಹೊರಟಿದ್ದಾರೆ.

ನೇಹ ವತ್ಸ್ಯಾಮ್ಯಹಂ ದೇವ ನಯ ಮಾಂ ಸ್ವಂ ನಿಕೇತನಮ್ । (29.42 ಹರಿವಂಶಪರ್ವ)

ಎಲ್ಲಾ ಕಡೆಗೆ ರುದ್ರ ದೇವರು ಆಲೋಚನೆ ಮಾಡಿದ್ದಾರೆ ಎಲ್ಲಿ ಹೋಗಬೇಕು ಅಂತ ಇದೆಲ್ಲಾ ನಮ್ಮನ್ನು ಉದ್ಧಾರ ಮಾಡುವುದಕ್ಕಾಗಿ ರುದ್ರ ದೇವರು ಆಲೋಚನೆ ಮಾಡಿದ್ದಾರೆ ಅಂತ ತಿಳಿದುಕೊಳ್ಳಬೇಕು ಅಷ್ಟೇ ನಾನು ಎಲ್ಲಿ ವಾಸ ಮಾಡಬೇಕು ಅಂತ ಅವರು ಚಿಂತೆ ಮಾಡಬೇಕಾ ರುದ್ರ ದೇವರು. ಅಹಂಕಾರ ತತ್ವಾಭಿಮಾನಿ ದೇವತೆಗಳು, ಪಂಚ ಮಹಾಭೂತಗಳಿಂದ ನಿರ್ಮಿತವಾದ ಬ್ರಹ್ಮಾಂಡದಲ್ಲಿ ಎಲ್ಲ ಕಡೆಗೂ ಅವರಿರಬಹುದು ಅಂತಹ ಮಹಾನುಭಾವರು ಅವರು ಇದ್ದಾರೆ. ಇರಬಹುದಲ್ಲ ಎಲ್ಲ ಕಡೆಗೆ ವಾಸ ಮಾಡುವಂತಹ ವ್ಯಾಪ್ತರಾದ ದೇವತೆಗಳು ಆದರೆ ಲೋಕಾನುಗ್ರಹಕ್ಕೋಸ್ಕರವಾಗಿ ಜನರಿಗೆ ತೋರುವಂತೆ ಇದ್ದು ಎಲ್ಲರಿಗೆ ಹೇಗೆ ಅನುಗ್ರಹ ಮಾಡಲಿ ಅನ್ನುವ ದೃಷ್ಟಿಯಲ್ಲಿ ರುದ್ರ ದೇವರು ಸ್ಥಾನವನ್ನು ನೋಡಿದರಂತೆ ನಾನು ಎಲ್ಲಿ ವಾಸ ಮಾಡಿದರೆ ಚೆನ್ನಾಗಿರುತ್ತೆ ಅಂತ ವಾರಾಣಾಸಿ. ವಾರಾಣಾಸಿ ಕ್ಷೇತ್ರದಲ್ಲಿ ನಾನು ವಾಸ ಮಾಡಿದರೆ ಬಹಳ ಚೆನ್ನಾಗಿ ಇರುತ್ತದೆ ಅಲ್ಲಿ ನಾನು ವಾಸ ಮಾಡಬೇಕು ಅಂತ ಸಂಕಲ್ಪ ಮಾಡಿದರು. ಆದರೆ ಅಲ್ಲಿ ಅಷ್ಟೊತ್ತಿಗೆ ಈ ದಿವೋದಾಸ ಈಗ ಕಥೆ ಕೇಳಿದರಲ್ಲ ಆ ಭದ್ರಶ್ರೇಣ್ಯನ ನೂರು ಜನ ಮಕ್ಕಳನ್ನು ಕೊಂದು ಆ ವಾರಣಾಸಿಯ ರಾಜ್ಯವನ್ನು ಕೈಗೆ ವಶ ಮಾಡಿಕೊಂಡಿದ್ದಾನೆ ಈ ಧನ್ವಂತರಿಯ ಮರಿ ಮಗ ದಿವೋದಾಸ ಅಲ್ಲಿ ವಾಸ ಮಾಡಬೇಕು ಅಂತ ರುದ್ರ ದೇವರು ಸಂಕಲ್ಪ ಮಾಡುತ್ತಾ ಇದ್ದಾರೆ ಹಿಮಾಲಯದಿಂದ ಬಂದು. ಮಾಡಬಹುದಾಗಿತ್ತು ಆದರೆ ಹಾಗೆ ರುದ್ರ ದೇವರಿಗೆ ಮಾಡುವ ಮನಸ್ಸಿಲ್ಲ ಪೂರ್ಣವಾಗಿ ವಾರಾಣಾಸಿ ತಮ್ಮ ವಶದಲ್ಲಿ ತೆಗೆದುಕೊಳ್ಳಬೇಕಾಗಿದೆ ಏನು ಮಾಡಬೇಕು ಈ ದಿವೋದಾಸನನ್ನು ಅಲ್ಲಿಂದ ಓಡಿಸಬೇಕು ಹೇಗೆ ಅಂತ. ಚಪ್ಪಾಳೆ ಬಾರಿಸಿದ್ದಾರೆ ನಿಕುಮ್ಭ ಅಂತ ಒಬ್ಬ ಪಾರ್ಶ್ವದ ಅಲ್ಲಿ ಬಂದು ನಿಂತಿದ್ದಾನೆ ದೂತ ಗಣೇಶ್ವರ ಗಣನಾಯಕ ಆಜ್ಞೆ ಆಗಬೇಕು ಅಂತ ಕೇಳಿದ್ದಾನೆ ರುದ್ರ ದೇವರಿಗೆ. ರುದ್ರ ದೇವರು ಹೇಳಿದ್ದಾರೆ ನೋಡಪ್ಪ ವಾರಾಣಾಸಿಯಲ್ಲಿ ನಾನು ವಾಸ ಮಾಡಬೇಕು ಅಂತ ಸಂಕಲ್ಪ ಮಾಡಿದ್ದೇನೆ ವ್ಯವಸ್ಥೆ ಮಾಡು ಅಂತ ಇಷ್ಟು ಹೇಳಿಬಿಟ್ಟರು ಅಷ್ಟೇ ಆಯಿತು ಸ್ವಾಮಿ ನಿಮ್ಮ ಮನಸ್ಸಿನ ಅಭಿಪ್ರಾಯ ತಿಳಿಯಿತು ತಮ್ಮ ಆಜ್ಞೆ ನೆರವೇರುತ್ತದೆ ಅಂತ ಹೇಳಿ ಹೊರಟವನೇ ಒಬ್ಬನ ಕನಸಿನಲ್ಲಿ ಹೋದ. ತೈವಸನಾಮಕ ಪರಮಾತ್ಮನಿಗೆ ಪ್ರಾರ್ಥನೆಯನ್ನು ಮಾಡಿ ಆ ಭಗವಂತನ ಅನುಗ್ರಹದಿಂದ ಒಬ್ಬ ನಾಪಿತ ಅವನ ಹೆಸರು ಕಣ್ಡುಕ ಅಂತ ಆ ಕಣ್ಡುಕ ಎಂಬಂತಹ ನಾಪಿತನನ್ನು ಕಂಡು ಅವನಲ್ಲಿ ಪ್ರವೇಶ ಮಾಡಿದ ಸ್ವಪ್ನದಲ್ಲಿ. ಅವನಿಗೆ ಸೂಚನೆ ಕೊಟ್ಟ ನೋಡಪ್ಪ ಅಗಸೀ ಭಾಗದಲ್ಲಿ ನನ್ನದೊಂದು ಚೆನ್ನಾಗಿ ಪ್ರತಿಮೆಯನ್ನು ಕೂಡಿಸು ಆ ಪ್ರತಿಮೆಗೆ ಪೂಜೆಯನ್ನು ಮಾಡಬೇಕು ಎಲ್ಲರೂ ಕೂಡ ಯಾರು ಪೂಜೆ ಮಾಡುತ್ತಾರೋ ಅವರಿಗೆ ಏನು ಬೇಕೋ ಬೆಳ್ಳಿ, ಬಂಗಾರ, ಮುತ್ತು, ರತ್ನ, ಮಕ್ಕಳು, ಮದುವೆ, ಮನೆ, ಅಧಿಕಾರ ಯಾರು ಏನು ಬೇಡುತ್ತಾರೋ ಆ ವರವನ್ನು ನಾನು ಕೊಡುತ್ತೇನೆ ನೀನು ಪೂಜೆ ಮಾಡಬೇಕು ಎಲ್ಲರಿಗೂ ಪ್ರಚಾರ ಮಾಡಬೇಕು ಸರಿ ಅಂದ ಅವನು. ಸ್ವಪ್ನದಲ್ಲಿ ಸೂಚನೆಯಾಯಿತು ಮತ್ತೆ ಗಾಬರಿಯಾದ ಬೆಳಗ್ಗೆ ಎದ್ದವನೇ ಒಂದು ಪ್ರತಿಷ್ಠಾಪನೆ ಮಾಡಿಬಿಟ್ಟ ಸ್ವಪ್ನದಲ್ಲಿ ಯಾವ ರೀತಿ ಅವನು ಲಕ್ಷಣಗಳನ್ನು ಹೇಳಿದ್ದನೋ ಅಂತಹ ಒಂದು ನಿಕುಮ್ಭನ ಪ್ರತಿಮೆ ಅಲ್ಲಿ ಸೃಷ್ಟಿ ಆಯಿತು ನಿಕುಮ್ಭನ ಪೂಜಾ ಪ್ರಾರಂಭ. ಏನು ಭಕ್ತರು ಬೇಡುತ್ತಾರೋ ಆ ವರ ಇಮ್ಮೀಡೀಯೇಟ್ ಆಗಿ ಕೊಡುತ್ತಾ ಇದ್ದಾನೆ ಭಾರೀ ವರಗಳನ್ನ ಗಂಧ, ಧೂಪ, ಮಾಲ್ಯಗಳಿಂದ ಪೂಜೆ ಮಾಡೋದೆ ಮಾಡೋದು ಅವನಿಗೆ.

ತತೋ ವರಸಹಸ್ರಂ ತು ನಾಗರಣಾಂ ಪ್ರಯಚ್ಛತಿ ।

ಪುತ್ರಾನ್ ಹಿರಣ್ಯಮಾಯುಶ್ಚ ಸರ್ವಾನ್ ಕಾಮಾಂಸ್ತಥೈವ ಚ ॥ (29.51 ಹರಿವಂಶಪರ್ವ)

ಯಾರು ಏನು ಬೇಡುತ್ತಾರೋ ಅದನ್ನು ವರ ಕೊಡುತ್ತಾ ಇದ್ದಾನೆ ಈ ಭೂತ ಭೂತ ಗಣಾಧಿಪ ನಿಕುಮ್ಭ ಅಷ್ಟೊತ್ತಿಗೆ ಈ ಸುದ್ದಿ ಅರಮನೆಗೆ ಹೋಯಿತು ಆ ದಿವೋದಾಸನ ಮಡದಿ ಸುಯಶಾಳಿಗೆ ಗೊತ್ತಾಗಿದೆ. ಅವಳಿಗೆ ಶ್ರೇಷ್ಠ ಸತ್ಪುತ್ರನಾಗಬೇಕು ಅಂತನ್ನುವ ಅಪೇಕ್ಷೆಯಿತ್ತು ಅವಳೂ ಬಂದು ಈ ನಿಕುಮ್ಭನ ಪೂಜೆಯನ್ನು ಮಾಡಿ ನನಗೂ ಒಂದು ಶ್ರೇಷ್ಠನಾದ ಪುತ್ರನನ್ನ ಕೊಡು ಅಂತ. ಏನು ಉಳಿದವರಿಗೆಲ್ಲ ಹೀಗೆ ಅವರು ಕೇಳೋದಕ್ಕೇನೆ ಅವರ ಅಪೇಕ್ಷಿತವಾದ ಫಲ ಈಡೇರಬೇಕು, ಇವಳು ಒಂದು ಸಲ ಬಂದಳು, ಎರಡು ಪೂಜೆ ಆಯಿತು, ಮೂರು ಪೂಜೆ ಆಯಿತು ಏನು ವರನೇ ಕೊಡುತ್ತಾ ಇಲ್ಲ ದಿವೋದಾಸನಿಗೆ ಈ ವಿಷಯವನ್ನು ಹೇಳಿದಳು ಊರಿನೊಳಗಿದ್ದ ಎಲ್ಲರಿಗೂ ವರ ಕೊಟ್ಟಾಯಿತು ಈ ಮಹಾನುಭಾವ ನಾನು ರಾಣಿ ನನಗೆ ವರ ಕೊಡುತ್ತಾ ಇಲ್ಲ ಏನು ಮಾಡಬೇಕು ಅಂತ. ಆಗ ಬಂದವನೇ ಬಂದು ದಿವೋದಾಸ ಯಾರು ಅವನು ಭೂತಗಣ ಏನೋ ನಿಕುಮ್ಭ ಎಲ್ಲರಿಗೂ ವರ ಕೊಟ್ಟು ನನ್ನ ಮಡದಿಗೆ ಯಾಕೆ ನೀನು ವರ ಕೊಡುತ್ತಾ ಇಲ್ಲ, ನನ್ನ ರಾಜ್ಯದೊಳಗೆ ಬಂದು ನನ್ನ ಸ್ಥಾನದೊಳಗೆ ಇದ್ದು ನಮಗೆ ನೀನು ವರ ಕೊಡುವುದಿಲ್ಲವಾ. ನಿನಗೆ ಸ್ಥಾನವನ್ನೇ ಇಲ್ಲಿ ಕಲ್ಪಿಸಿ ಕೊಡುವುದಿಲ್ಲ ಅಂತ ಹೇಳಿ ನಾಶ ಮಾಡಿಬಿಡುತ್ತೇನೆ ಅಂತ ಅಲ್ಲಿ ಇರತಕ್ಕಂತಹ ಪ್ರತಿಮೆಯನ್ನೆಲ್ಲಾ ಬೀಳಿಸಿ ಪೂಜೆಯನ್ನೆಲ್ಲಾ ನಿಲ್ಲಿಸಿ ಧ್ವಂಸ ಮಾಡಿಬಿಟ್ಟ ದಿವೋದಾಸ. ಅವನಿಗೆ ಅಷ್ಟೇ ಬೇಕಾಗಿತ್ತು ಅದಕ್ಕಾಗಿಯೇನೆ ಎಲ್ಲರಿಗೂ ವರ ಕೊಟ್ಟು ಇವಳಿಗೆ ವರ ಕೊಡದೇ ಸಿಟ್ಟಿಗೆ ತರಿಸಿ ಅವನು ಬಂದು ಸ್ಥಾನ ಧ್ವಂಸ ಮಾಡಿಸಿ ಕಾಯುತ್ತ ಇದ್ದ ತಪ್ಪು ಮಾಡಿದಿ ತಪ್ಪಿನಲ್ಲಿ ಇಷ್ಟು ದಿವಸ ಸಿಕ್ಕಿರಲಿಲ್ಲ ತಪ್ಪು ಮಾಡಿದಿ ಹಾಗಾದರೆ ಶಾಪ ಕೊಡುತ್ತೇನೆ ಅಂತ. ಏನು ಶಾಪ ಒಂದು ಸಾವಿರ ವರ್ಷಗಳವರೆಗೆ ಈ ಸಂಪೂರ್ಣವಾದ ವಾರಾಣಸಿ ಶೂನ್ಯವಾಗಿ ಹೋಗಲಿ ಅಂತ ಏನು ಅವನ ಶಾಪ ಹಿಂದೆ ರುದ್ರ ದೇವರ ಅನುಗ್ರಹ ಇದೆ. ಆ ಹಿಂದೆ ಆ ರುದ್ರ ದೇವರ ಅನುಗ್ರಹ ಇರುವುದರಿಂದ ಇವನು ಶಾಪ ಕೊಡೋದೇ ತಡ ಏನು ಅನ್ನಿಸಿತೋ ಏನೋ ಗೊತ್ತಿಲ್ಲ ಯಾರಿಗೂ ಡಂಗುರ ಸಾರಿಲ್ಲ, ಸುದ್ದಿ ಹೇಳಿಲ್ಲ, ದೂತರನ್ನು ಕೊಟ್ಟು ಕಳಿಸಿಲ್ಲ ಇದಕ್ಕಿದ್ದ ಹಾಗೆ ಎಲ್ಲರೂ ಕೈಯಲ್ಲಿ ಚೀಲ ತೆಗೆದುಕೊಂಡರು ಊರು ಬಿಟ್ಟು ಹೋಗೇ ಬಿಟ್ಟರು ಇವನು ಅರಮನೆಗೆ ಬರುವುದರೊಳಗೆ ಇಡೀ ಊರು ಖಾಲಿ. ಆ ರುದ್ರ ದೇವರ ಪ್ರೇರಣೆಯಿಂದ ಬಂದ ಶಾಪ ಅಷ್ಟು ಘೋರ ಇಡೀ ವಾರಣಾಸಿ ಖಾಲಿ ಆಗಿದೆ ಮತ್ತೆ ಎಲ್ಲಾರೂ ಹೋದಮೇಲೆ ಇವನು ಏನು ಮಾಡಬೇಕು ಇವನೂ ಅಲ್ಲಿಂದ ಹೊರಟು ಹೋಗಿದ್ದಾನೆ. ಹೊರಟು ಹೋಗಿ ಅಲ್ಲಿ ಗೋಮತಿ ತೀರದೊಳಗೆ ಒಂದು ಬೇರೆ ಪಟ್ಟಣವನ್ನು ಮಾಡಿಕೊಂಡು ಅಲ್ಲಿ ವಾಸ ಮಾಡಲಿಕ್ಕೆ ಪ್ರಾರಂಭ ಮಾಡಿದ ವಾರಾಣಸಿ ಖಾಲಿಯಾಗಿ ಹೋಯಿತು. ಅದೇ ಬೇಕಾಗಿತ್ತು ರುದ್ರ ದೇವರಿಗೆ ಶಾಂತವಾಯಿತು, ಸ್ವಚ್ಛವಾದ ವಾತಾವರಣ ಬಂದು ರುದ್ರ ದೇವರು ಅಲ್ಲಿ ನೆಲೆಸಿದ್ದಾರೆ ಮಹಾನುಭಾವರು ವಿಶ್ವನಾಥ ಅಂತಹ ರುದ್ರ ದೇವರು ಅಲ್ಲಿ ಬಂದು ವಾಸ ಮಾಡಿದ್ದಾರೆ ಎಂಬುದಾಗಿ ತಿಳಿಸುತ್ತಾರೆ ಹೀಗೆ ಅದು ನಡೆದುಹೋಗುತ್ತದೆ.

ಈ ಒಂದು ಕೆಲಸ ಏನು ಮಾಡಿದ್ದ ಅಂದರೆ ಈ ಭದ್ರಶ್ರೇಣ್ಯನ ನೂರು ಜನ ಮಕ್ಕಳನ್ನು ಸಂಹಾರ ಮಾಡಿದ್ದ ದಿವೋದಾಸ ಒಬ್ಬನನ್ನು ಬಿಟ್ಟಿದ್ದ ಶತ್ರುಶೇಷ ದುರ್ದಮ ಅಂತ ಸಣ್ಣ ಹುಡುಗ ಇದ್ದ ಅವನು, ಹೋಗಲಿ ಬಿಡು ಸಣ್ಣ ಹುಡುಗ ಅವನು ಏನು ಮಾಡುತ್ತಾನೆ ಅಂತ ಅವನು ಮುಂದೆ ದೊಡ್ಡವನಾಗಿ ಬಿಟ್ಟ. ತನ್ನ ತಂದೆಯ ಹಾಗೂ ತನ್ನ ಅಣ್ಣಂದಿರ ಸಂಹಾರ ಮಾಡಿದ್ದು, ರಾಜ್ಯವನ್ನು ಕಸಿದು ಕೊಂಡಿದ್ದು ಅವನಿಗೆಲ್ಲ ಮನಸ್ಸಿನಲ್ಲಿ ಇತ್ತು ಸೇಡು ತೀರಿಸಿಕೊಳ್ಳಬೇಕು ಅಂತ ಅವನು ತಾನು ಪುನಃ ಭಾರೀ ಪರಾಕ್ರಮಿಯಾಗಿ ಬಂದು ಇವನನ್ನು ಸೋಲಿಸಿ

ಭದ್ರಶ್ರೇಣ್ಯಸ ಪುತ್ರೇಣ ದುರ್ದಮೇನ ಮಹಾತ್ಮನಾ ।
ವೈರಸ್ಯಾನ್ತಂ ಮಹಾರಾಜ ಕ್ಷತ್ರಿಯೇಣ ವಿಧಿತ್ಸತಾ ॥ (29.71 ಹರಿವಂಶಪರ್ವ)

ಆಗ ಪುನಃ ಇವನಿಂದ ಆ ರಾಜ್ಯವನ್ನು ಅಪಹಾರ ಮಾಡಿಕೊಂಡಿದ್ದಾನೆ. ದಿವೋದಾಸನ ಮಗನಾಗಿರುವಂತಹ ಪ್ರತರ್ದನ ಪುನಃ ಆ ದುರ್ದಮ ಅಪಹಾರ ಮಾಡಿಕೊಂಡ ರಾಜ್ಯವನ್ನು ಪುನಃ ಇವನು ಮತ್ತೆ ಮರಳಿ ಪಡೆದಿದ್ದಾನೆ.

ಮುಂದೆ ಅವನ ವಂಶದಲ್ಲಿ ಅಲರ್ಕ ಅಲರ್ಕ ಅಂತ ಒಬ್ಬ ರಾಜನಾಗುತ್ತಾನೆ ಗಮನಿಸಿ ಆ ಅಲರ್ಕ ಅರವತ್ತು ಸಾವಿರದ ಆರು ನೂರು ವರ್ಷಗಳವರೆಗೆ ರಾಜ್ಯವನ್ನು ಆಳುತ್ತಾನೆ.

ಷಷ್ಟಿವರ್ಷಸಹಸ್ರಾಣಿ ಷಷ್ಟಿಂ ವರ್ಷಶತಾನಿ ಚ । (29.75 ಹರಿವಂಶಪರ್ವ)

ಭಾರೀ ರೂಪ ಸಂಪನ್ನನಾದವನು ಮಹಾಪರಾಕ್ರಮಿ ಆಗಸ್ಯ ಋಷಿಗಳ ಪತ್ನಿಯಾದ ಲೋಪಾಮುದ್ರೆಯು ಇವನು ಮಾಡಿದ ಸೇವೆಗೆ ಪ್ರಸನ್ನಳಾಗಿ ಅನುಗ್ರಹ ಮಾಡಿ ದೀರ್ಘವಾದಂತಹ ಆಯುಷ್ಯ, ಆರೋಗ್ಯಗಳನ್ನು ಪಡೆದವನು ಈ ಅಲರ್ಕ ಅಲರ್ಕ ಅನ್ನುವಂತಹ ರಾಜ. ಮುಂದೆ ಇವನ ವಂಶದಲ್ಲಿ ಅನೇಕ ರಾಜರಾಗುತ್ತಾರೆ ಅಂತ ಈ ರೀತಿಯಾಗಿ ಕಥೆಯನ್ನು ತಿಳಿಸುತ್ತಾರೆ.

ಆಮೇಲೆ ಇನ್ನು ನಹುಷನ ವಂಶವನ್ನು ಹೇಳುತ್ತಾರೆ ನಿಮಗೆಲ್ಲ ಗೊತ್ತಿದ್ದದ್ದು ಅನೇಕ ಜನ ಯತಿ, ಯಯಾತಿ ಮೊದಲಾದ ಅನೇಕ ಜನ ಮಕ್ಕಳು. ಅದರಲ್ಲಿ ಯಯಾತಿ ಸೂರ್ಯವಂಶದ ರಾಜ ಕಾಕುತ್ಸ್ಥನ ಮಗಳಾದಂತಹ ಗಾಂ ಎಂಬ ಹೆಸರಿನ ಒಂದು ಕನ್ಯೆಯನ್ನು ಮದುವೆಯಾಗುತ್ತಾನೆ ಅದಲ್ಲದೇ ಶುಕ್ರಾಚಾರ್ಯರ ಮಗಳಾದ ದೇವಯಾನೀಯನ್ನು ಮದುವೆ ಆಗುತ್ತಾನೆ ವಿಸ್ತೃತವಾದ ಕಥೆ ಶ್ರೀಮದ್ಭಾಗವತದಲ್ಲಿ ಬಂದಿದೆ. ಶುಕ್ರಾಚಾರ್ಯರ ಹತ್ತಿರ ಕಚ ಎಂಬ ವಿದ್ಯೆಯನ್ನು ಪಡೆಯಬೇಕು ಅಂತ ಬಂದವನನ್ನು ಮದುವೆ ಆಗಬೇಕು ಅಂತ ಬಯಸುತ್ತಾಳೆ ಅವನು ಒಪ್ಪುವುದಿಲ್ಲ ಆಗ ನಿನಗೆ ವಿದ್ಯೆ ಮರೆತು ಹೋಗಲಿ ಅಂತ ಇವಳು ಶಾಪ ಕೊಡುತ್ತಾಳೆ, ನಿನಗೆ ನಿನ್ನ ಸವರ್ಣ ವರ ಸಿಗದೆ ಕ್ಷತ್ರಿಯನಾದಂತಹ ವರ ಸಿಗಬೇಕು ಅಂತ ಅವನು ಶಾಪ ಕೊಟ್ಟಿರುತ್ತಾನೆ ಅನ್ನುವುದಕ್ಕೋಸ್ಕರ ಯಯಾತಿ ಕ್ಷತ್ರಿಯ ಶುಕ್ರಾಚಾರ್ಯರ ಮಗಳು ದೇವಯಾನೀಯನ್ನು ಮದುವೆ ಆಗುತ್ತಾನೆ.

ಒಂದು ಸಲ ದೇವಯಾನೀ, ಶರ್ಮಿಷ್ಠಾ ಹಾಗೂ ಅನೇಕ ಸಖಿಯರು ಸೇರಿ ವಿಹಾರ ಮಾಡುತ್ತಾ ಇರುತ್ತಾರೆ. ರುದ್ರ ದೇವರು ಬರುತ್ತಾರೆ ಅಂತನ್ನುವುದಕ್ಕೋಸ್ಕರವಾಗಿ ಎಲ್ಲರೂ ಕೂಡ ಶೀಘ್ರದಲ್ಲಿ ದೊಡ್ಡವರು ಬಂದಾಗ ತಾವು ಅತ್ಯಂತ ಗೌರವದಿಂದ ಆದರ ಸಲ್ಲಿಸಬೇಕು ಅಂತ ಬೇಗ ತಮ್ಮ ತಮ್ಮ ವಸ್ತ್ರಗಳ ಧಾರಣೆಯನ್ನು ಮಾಡುವಾಗ ಶರ್ಮಿಷ್ಠಾ ದೇವಯಾನೀಯ ವಸ್ತ್ರವನ್ನು ಧಾರಣೆ ಮಾಡಿಬಿಡುತ್ತಾಳೆ. ದೇವಯಾನೀಗೆ ಕೋಪ ಬರುತ್ತದೆ ನಾವು ಗುರು ಕುಲ, ಗುರು ವಂಶದವರು, ಗುರು ಪುತ್ರಿ ನೀವು ನಮ್ಮ ಶಿಷ್ಯ ವಂಶದವರು ಅಂಥವರು ನನ್ನ ವಸ್ತ್ರವನ್ನ ಧಾರಣೆ ಮಾಡುವುದು ಸರಿಯಲ್ಲ ಅಂತ ಅವಳು ಅನ್ನುತ್ತಾಳೆ ನೀವು ಭಿಕ್ಷುಕರಿದ್ದ ಹಾಗೆ ನಾವು ಕೊಟ್ಟರೆ ನೀವು ಬದುಕುತ್ತೀರಾ, ಭಿಕ್ಷುಕರ ಮಕ್ಕಳಿದ್ದ ಹಾಗೆ ನೀವು ನನಗೇನು ಬೈಯ್ಯುತ್ತೀಯ ಅಂತ ಜಗಳ ಶುರುವಾಗಿದೆ ಸಿಟ್ಟು ಬಂದಾಗ ಹೇಳಿ ಕೇಳಿ ಇವಳು ರಾಜ ಪುತ್ರಿ ರಾಜಕುಮಾರಿ ಭಾರೀ ಸಮರ್ಥಳು ಆ ದೇವಯಾನೀಯನ್ನು ಬಾವಿಯಲ್ಲಿ ನುಗಿಸಿ ತಾನು ಹೋಗಿಬಿಡುತ್ತಾಳೆ. ಯಯಾತಿ ಆ ಮಾರ್ಗದಲ್ಲಿ ಹೋಗುವಾಗ ಅವಳ ಆಕ್ರಂದನವನ್ನು ಕೇಳಿ ಕೈಯನ್ನು ಕೊಟ್ಟು ಮೇಲೆ ಎತ್ತುತ್ತಾನೆ ಪಾಣಿಗ್ರಹಣ ಮಾಡಿದ್ದಕ್ಕೆ ನೀನೇ ನನ್ನನ್ನು ಮದುವೆ ಆಗಬೇಕು ಅಂತ ಅವಳು ಹೇಳುತ್ತಾಳೆ. ಆಗುವುದಿಲ್ಲ ಅಂತ ಅಂದಾಗ ಕಾಞ್ಚನ ಶಾಪ ಇದೆ ನೀನು ಏನಿದ್ದರೂ ಮದುವೆ ಆಗಲೇಬೇಕು ಅಂತ ಹೇಳಿದಾಗ ಸರಿ ಅಂತ ಒಪ್ಪಿಕೊಂಡಿದ್ದಾನೆ ದೇವಯಾನೀಯನ್ನು ಯಯಾತಿ ಮದುವೆ ಆಗಿದ್ದಾನೆ. ಆದರೆ ಕರಾರು ಏನಿತ್ತು ಅಂದರೆ ಇಲ್ಲಿಂದ ಹೊರಟು ಹೋಗೋಣ ಅಂತ ಶುಕ್ರಾಚಾರ್ಯರು ಅಸುರ ರಾಜ್ಯವನ್ನು ಬಿಟ್ಟು ಹೊರಡುವಾಗ ವೃಷಪ ರಾಜರು ಬಂದು ಕಾಲಿಗೆ ಬಿದ್ದು ಪ್ರಾರ್ಥನೆ ಮಾಡುತ್ತಾನೆ ಹಾಗಾದರೆ ಒಂದು ಕರಾರು ನಿನ್ನ ಮಗಳು ನನ್ನ ಮಗಳು ಮದುವೆ ಮಾಡಿಕೊಂಡು ಎಲ್ಲಿ ಹೋಗುತ್ತಾಳೋ ಅಲ್ಲಿ ಹೋಗಿ ದಾಸಿಯಾಗಿ ಸೇವೆ ಮಾಡಬೇಕು ಅಂತ ಆಗಲಿ ಅಂತ ಒಪ್ಪಿಕೊಂಡಿದ್ದಾನೆ. ಶರ್ಮಿಷ್ಠಾ ದಾಸಿಯಾಗಿ ದೇವಯಾನೀಯ ಯಯಾತಿಯ ಸೇವೆಯನ್ನು ಮಾಡುತ್ತಾ

ಇದ್ದಾಳೆ ಆದರೆ ಒಂದು ದಿನ ಶರ್ಮಿಷ್ಠೆಯಲ್ಲಿಯೂ ಕೂಡ ಇವನು ಸಂಗವನ್ನು ಮಾಡಿ ಅವಳಲ್ಲಿಯೂ ಸಂತಾನವನ್ನು ಪಡೆದಿದ್ದಾನೆ. ಅದು ಗೊತ್ತಾಗಿದೆ ಶುಕ್ರಾಚಾರ್ಯರು ಯಯಾತಿಗೆ ಶಾಪವನ್ನು ಕೊಟ್ಟಿದ್ದಾರೆ ನಿನಗೆ ವಾರ್ಧಕ್ಯ ಬಂದು ಹೋಗಲಿ ಅಂತ ಅನ್ನುವ ಶಾಪವನ್ನು ಕೊಡುತ್ತಾರೆ ಈ ಎಲ್ಲ ಕಥೆ ಶ್ರೀಮದ್ಭಾಗವತದಲ್ಲಿ ವಿಸ್ತೃತವಾಗಿ ಬರುತ್ತದೆ. ಇಲ್ಲಿ ಅದನ್ನು ಸಂಕ್ಷೇಪವಾಗಿ ತಿಳಿಸುತ್ತಾರೆ

ಇವನಿಗೆ ಅನೇಕ ಜನ ಮಕ್ಕಳು ಯದು, ತುರ್ವಸು ದೇವಯಾನೀಯಲ್ಲಿ, ದ್ರುಹ್ಯು, ಅನು, ಪೂರು ಶರ್ಮಿಷ್ಠೆಯಲ್ಲಿ ಮಕ್ಕಳಾಗುತ್ತಾರೆ. ಶುಕ್ರಾಚಾರ್ಯರು ಇವನಿಗೆ ಒಂದು ಶ್ರೇಷ್ಟವಾದ ರಥವನ್ನು ಕೊಡುತ್ತಾರಂತೆ ಭಾರೀ ರಥ ಎಲ್ಲ ಕಡೆಗೂ ಓಡಾಡಲು ಸಮರ್ಥವಾದಂತಹ ಬಂಗಾರದ ಶ್ರೇಷ್ಠವಾದ ರಥ, ಶ್ರೇಷ್ಠವಾದ ಮನೋವೇಗದಿಂದ ಹೋಗುವ ಕುದುರೆಗಳಿಂದ ಕೂಡಿದ ರಥ. ಆ ರಥವನ್ನು ತೆಗೆದುಕೊಂಡು **'ಷಡ್ ರಾತ್ರೇಣಾಜಯನ್ಮಹೀಮ್'**[1] ಸಂಪೂರ್ಣ ಭೂಮಂಡಲವನ್ನು ಆರೇ ದಿವಸಗಳಲ್ಲಿ ಗೆದ್ದು ಬರುತ್ತಾನೆ ಯಯಾತಿ ಅಂತಹ ಅದ್ಭುತವಾದಂತಹ ರಥವನ್ನು ಇವನಿಗೆ ಅವರು ಕೊಟ್ಟಿರುತ್ತಾರೆ.

ಜಗಾಮ ಸ ರಥೋ ನಾಶಂ ಶಾಪಾದ್ ಗಾರ್ಗ್ಯಸ್ಯ ಧೀಮತಃ । (30.9 ಹರಿವಂಶಪರ್ವ)

ಮುಂದೆ ಕ್ರಮೇಣ ಈ ರಥ ಇದು ಜನಮೇಜಯ ಅಂತ ಇವನ ವಂಶದಲ್ಲಿ ಬರುವಂತಹ ಒಬ್ಬ ರಾಜನ ಹತ್ತಿರ ಬರುತ್ತದೆ ಆಗ ಅದು ಗಾರ್ಗ್ಯರ ಶಾಪದಿಂದ ನಾಶವಾಗಿ ಹೊಗುತ್ತದೆ. ಯಾಕೆ ಶಾಪ ಆಯಿತು ಅಂದರೆ ಆ ಗಾರ್ಗ್ಯರ ಪುತ್ರ ಸ್ವಲ್ಪ ನಿಷ್ಠುರ ಭಾಷಿ ಬಹಳ ನಿಷ್ಠುರವಾಗಿ ಮಾತನಾಡುತ್ತಾನೆ ಅಂತ ಹೇಳಿ ಈ ವಂಶದಲ್ಲಿ ಬಂದ ಒಬ್ಬ ಜನಮೇಜಯ ಅನ್ನುವ ರಾಜ ಅವನನ್ನ ಹೊಡೆಯುತ್ತಾರೆ ಹೊಡೆದರೆ ಅವನು ಸತ್ತೇ ಹೋಗಿಬಿಡುತ್ತಾನೆ. ಬ್ರಹ್ಮಹತ್ಯಾ ದೋಷ ಬಂತು ತನ್ನ ಮಗನನ್ನೇ ಸಂಹಾರ ಮಾಡಿದ ಅಂತ ಕುಪಿತರಾಗಿ ಗಾರ್ಗ್ಯ ಋಷಿಗಳು ಇವನಿಗೆ ಶಾಪ ಕೊಡುತ್ತಾರೆ ಆ ಶಾಪ ಕೊಟ್ಟಾಗ ಈ ರಥ ಹೋಗಿಬಿಡುತ್ತದೆ. ಈ ರಥ ಇದೆ ಅನ್ನುವುದಕ್ಕೆ ನಿಮಗೆ ಇಷ್ಟು ಅಹಂಕಾರ ಅಲ್ಲವಾ ಆ ರಥವೇ ನಿಮ್ಮಿಂದ ದೂರ ಆಗಲಿ ಅಂತ ಶಾಪವನ್ನು ಕೊಟ್ಟಿರುತ್ತಾರೆ ಹೀಗಾಗಿ ಆ ರಥ ಅಂದಿನಿಂದ ಸಿಗುವುದಿಲ್ಲ. ರಥ ಹೋಗುವುದು ಅಷ್ಟೇ ಅಲ್ಲದೇ ಲೋಹಗಂಧಿ ಅಂತ ಲೋಹ ಅಂದರೆ ಅತ್ಯಂತ ಹೊಲಸು ವಾಸನೆ ಪತಿತರಾದವರೂ ಎಲ್ಲರೂ ಕೂಡ ಅವನು ಮಾಡಿದ ಅಪರಾಧಕ್ಕೆ ಯಾವ ವ್ಯಕ್ತಿಯನ್ನು ಅತ್ಯಂತ ದೂರದಲ್ಲಿ ಇಟ್ಟಿರುತ್ತಾರೋ ಅಂತಹ ವ್ಯಕ್ತಿಗೆ ಲೋಹ ಲೋಹ ಅಂತ ಕರೆಯುವುದು ಲೋಹ ಅಂದರೆ ಕಬ್ಬಿಣ ಅಂತ ಅರ್ಥ ಅಲ್ಲ ಇಲ್ಲಿ. ಲೋಹ ಅಂದರೆ ಯಾವ ವ್ಯಕ್ತಿ ಅಪರಾಧ ಮಾಡಿದ ಕಾರಣಕ್ಕಾಗಿ ಸಮಾಜದಿಂದ ದೂರ ಇರುತ್ತಾನೋ ಅಂಥವನು ಲೋಹ ಅವನು ಯಾವ ರೀತಿಯ ದುರ್ಗಂಧಯುಕ್ತನಾಗಿ ಇರಬೇಕು ಆ ತರಹ ನೀವು ಎಲ್ಲ ದುರ್ಗಂಧಯುಕ್ತರಾಗಿ ಇರಿ ಅಂತ ಅರ್ಥಾತ್ ಇವನಿಗೆ ದುರ್ಗಂಧಯುಕ್ತನಾಗಿ ಇರು ಅಂತ ಶಾಪ ಕೊಟ್ಟಿದ್ದಾರೆ. ಅವನು ಇಂದ್ರೋತ ಅಂತ ಹೆಸರಿನ ಆ ಶೌನಕರಿಗೆ ಬಂದು ಶರಣು ಹೋದಾಗ ಅಶ್ವಮೇಧ ಯಾಗವನ್ನು ಮಾಡಿಸಿ ಅವನಿಗೆ ಬಂದ ಆ ಲೋಹಗಂಧ ಅಪವಿತ್ರವಾದ ಗಂಧ ಏನಿತ್ತೋ ದುರ್ಗಂಧ ಅದನ್ನೆಲ್ಲ ಪರಿಹಾರ ಮಾಡಿದ್ದಾರೆ ರಥ ಮಾತ್ರ ಅದು ಸಿಕ್ಕಿಲ್ಲ.

ಆ ರಥವನ್ನು ಕುರಿತು, ಇಂದ್ರ ದೇವರನ್ನು ಕುರಿತು ತಪಸ್ಸು ಮಾಡಿ ಬೃಹದ್ರಥ ಪಡೆದುಕೊಳ್ಳುತ್ತಾನೆ, ಬೃಹದ್ರಥನ ವಂಶದಲ್ಲಿ ಬಂದದ್ದರಿಂದ ಜರಾಸಂಧನಿಗೆ ಹೋಗುತ್ತದೆ, ಜರಾಸಂಧನನ್ನು ಸಂಹಾರ ಮಾಡಿದಾಗ ಆ ರಥವನ್ನು ಭೀಮಸೇನ ದೇವರು ಶ್ರೀಕೃಷ್ಣ ಪರಮಾತ್ಮನಿಗೆ ಸಮರ್ಪಣೆ ಮಾಡುತ್ತಾರೆ. ಹೀಗೆ ಯಯಾತಿಗೆ

1. 30.7 ಹರಿವಂಶಪರ್ವ

ಶುಕ್ರಾಚಾರ್ಯರು ಕೊಟ್ಟ ರಥ ಅದು ಜನಮೇಜಯನವರೆಗೆ ಬಂದು, ಗಾರ್ಗ್ಯರ ಶಾಪದಿಂದ ಮತ್ತೆ ಅದು ಇಂದ್ರನಿಗೆ ಹೋಗಿ, ಪುನಃ ಅದು ಬೃಹದ್ರಥ ತಪಸ್ಸು ಮಾಡಿ ಪಡೆದು ಜರಾಸಂಧನಿಗೆ ಬಂದು, ಭೀಮನಿಗೆ ಸಿಕ್ಕು ಶ್ರೀಕೃಷ್ಣನಿಗೆ ಸಮರ್ಪಿತವಾಗುತ್ತದೆ ಅಂತನ್ನುವ ರಥದ ಇತಿಹಾಸವನ್ನು ತಿಳಿಸಿಕೊಡುತ್ತಾರೆ. ಅವರೆಲ್ಲರಿಗೆ ಒಂದೊಂದು ಕಡೆಗೆ ರಾಜ್ಯವನ್ನು ಒಪ್ಪಿಸಿದ್ದಾನೆ ಆಗ್ನೇಯ ದಿಕ್ಕಿನಲ್ಲಿ ತುರ್ವಸು, ಪಶ್ಚಿಮದಲ್ಲಿ ದ್ರುಹ್ಯ, ಉತ್ತರದಲ್ಲಿ ಅನು, ಈಶಾನ್ಯದಲ್ಲಿ ಯದು, ಮಧ್ಯಭಾಗದಲ್ಲಿ ಪೂರು ರಾಜ ಹೀಗೆ ಎಲ್ಲರಿಗೂ ರಾಜ್ಯವನ್ನು ಒಪ್ಪಿಸಿದ. ಆ ಮಧ್ಯದಲ್ಲಿ ಈ ಎಲ್ಲ ಜಗಳ ಎಲ್ಲ ಆಗಿತ್ತು ಹೀಗಾಗಿ ಶಾಪವಾಗಿದೆ ನನ್ನ ವಾರ್ಧಕ್ಯವನ್ನು ಯಾರಾದರೂ ತೆಗೆದುಕೊಂಡು ನನಗೆ ಸ್ವಲ್ಪ ತಾರುಣ್ಯವನ್ನು ಕೊಡಿತೀರಾ ಅಂತ ಒಬ್ಬೊಬ್ಬರಿಗೆ ಕೇಳುತ್ತಾನೆ ಯಾರೂ ಅದಕ್ಕೆ ಒಪ್ಪುವುದಿಲ್ಲ. ಯದು ಅನ್ನುತ್ತಾನೆ ಈ ಕಾರಣ ಭಾಗವತದಲ್ಲಿ ಸ್ಪಷ್ಟವಾಗಿ ಬಂದಿಲ್ಲ ಇಲ್ಲಿ ಹೇಳುತ್ತಾನೆ ನಾನು ಒಬ್ಬ ಬ್ರಾಹ್ಮಣನಿಗೆ ವಚನ ಕೊಟ್ಟಿದ್ದೇನೆ ಅವನು ಏನೋ ನನಗೆ ಕೇಳಲಿಕ್ಕೆ ಬಂದ, ನೀನು ಏನು ಕೇಳಿದ್ದೀಯೋ ಅದನ್ನು ನಾನು ಕೊಡುತ್ತೇನೆ ಅಂತ ಅವನಿಗೆ ವಚನವನ್ನು ಕೊಟ್ಟಿದ್ದೇನೆ ಇನ್ನು ಪೂರ್ಣ ಅವನು ಕೇಳಿದ್ದನ್ನು ಕೊಟ್ಟಿಲ್ಲ ಅವನ ಕೆಲಸ ಮಾಡಿಕೊಟ್ಟಿಲ್ಲ ನಾನು ಈಗ ಮುದುಕನಾಗಿ ಕುಳಿತರೆ ನಾನು ಆ ಕೆಲಸ ಮಾಡುವುದು ಹೇಗೆ ಅದು ದೊಡ್ಡ ಅಪರಾಧ ಅದಕ್ಕಾಗಿ ನನ್ನ ತಾರುಣ್ಯವನ್ನು ನಾನು ಕೊಡುವುದಿಲ್ಲ ಅನ್ನುತ್ತಾನೆ.

ಜನಿರ್ದಿಷ್ಟಾ ಮಯಾ ಭಿಕ್ಷಾ ಬ್ರಾಹ್ಮಣಸ್ಯ ಪ್ರತಿಶ್ರುತಾ ।
ಅನಪಾಕೃತ್ಯ ತಾಂ ರಾಜನ್ ನ ಗ್ರಹೀಷ್ಯಾಮಿ ತೇ ಜರಾಮ್ ॥ (30.24 ಹರಿವಂಶಪರ್ವ)

ನಿರಂತರವಾಗಿ ನಿನಗೆ ಭಿಕ್ಷಾದಿಗಳನ್ನು ಕೊಡುತ್ತೇನೆ ಅಂತ ಅನಿರ್ದಿಷ್ಟ ಕಾಲದವರೆಗೆ ಅವನಿಗೆ ನಾನು ವಚನ ಕೊಟ್ಟಿದ್ದೆನೆ ಅಂದಮೇಲೆ ಅದನ್ನು ಕೊಡದೆ ನಾನೇ ಈ ರೀತಿ ಮತ್ತೆ ಮುಪ್ಪನ್ನು ಪಡೆಯುವುದು ಸರಿ ಅಲ್ಲ ಅಂತ ಅವನು ಒಂದು ಕಾರಣ ಹೇಳಿ ತಪ್ಪಿಸಿಕೊಂಡ. ಸರಿ, ಯದು ಎದ್ದು ಹೋಗಿದ್ದಾನೆ, ತುರ್ವಸು ತುರಿಸಿಕೊಂಡು ಹೋದ, ದ್ರುಹ್ಯುವು ದ್ರೋಹ ಬಗೆದ, ಅನುವು ಅನುಸರಿಸಲಿಲ್ಲ, ಪೂರು ಮಾತ್ರ ಇವನ ವಚನವನ್ನು ಪೂರ್ಣ ಮಾಡಿದ್ದಾನೆ. ತಂದೆ, ತಾಯಿ ನೀವೇ ಕೊಟ್ಟದ್ದು ಈ ದೇಹವನ್ನ, ದೇಹ ಹುಟ್ಟಿದ ಮೇಲೆ ತಾನೆ ತಾರುಣ್ಯ ಬಂದದ್ದು, ದೇಹ ಕೊಟ್ಟದ್ದು ನೀವು ತಾರುಣ್ಯ ಬರುವುದಕ್ಕೆ ಬೇಕಾದ ಆಹಾರವನ್ನು ಕೊಟ್ಟು ಈ ದೇಹವನ್ನು ಬೆಳೆಸಿದ್ದು ನೀವು, ನಿಮಗೆ ಈ ತಾರುಣ್ಯವನ್ನು ಕೊಡದೆ ನಾನು ತಿರಸ್ಕಾರವನ್ನು ಮಾಡಿದರೆ ಎಂತಹ ಕೃತಘ್ನನಾಗುತ್ತೇನೆ ಸರ್ವಥಃ ನಾನು ನಿಷೇಧ ಮಾಡುವುದಿಲ್ಲ ಅವಶ್ಯವಾಗಿ ಕೊಡುತ್ತೇನೆ ಅಂತ ಒಂದೇ ಮಾತಿಗೆ ಪೂರು ಒಪ್ಪಿದ್ದಾನೆ. ಅವನು ತಾರುಣ್ಯವನ್ನು ತೆಗೆದುಕೊಂಡು ಕೆಲಕಾಲ ಭೋಗವನ್ನು ಮಾಡಿದ್ದಾನೆ, ಭೋಗವನ್ನು ಮಾಡಿದ ಮೇಲೆ ಪುನಃ ಆ ತಾರುಣ್ಯವನ್ನು ಅವನಿಗೆ ಕೊಟ್ಟು ಪೂರು ಪುನಃ ತಾನು ಮರಳಿ ಪಡೆದಿದ್ದಾನೆ. ಈಗ ಭೋಗ ಮಾಡುವಾಗ ದೇವಯಾನೀಯ ಜೊತೆಗೆ ಭೋಗವನ್ನು ಮಾಡಿದ, ವಿಹಾರವನ್ನು ಮಾಡಿದ ಅಂತ ಭಾಗವತದಲ್ಲಿ ಬರುತ್ತದೆ ಅದರ ನಿಷೇಧ ಇಲ್ಲಿ ಬಂದಿಲ್ಲ ಆದರೆ ವಿಶ್ವಾಸೀ ಅನ್ನುವ ಹೆಸರಿನ ಆ ಕಕುತ್ಸ್ಯ ರಾಜನ ಮಗಳಿದ್ದಳಲ್ಲ ಗೋ ಎಂಬ ಹೆಸರಿನವಳು ಅವಳ ಜೊತೆಗೆ ಚೈತ್ರರಥಾದಿ ವನಗಳಲ್ಲಿ ವಿಹಾರವನ್ನು ವಿಶೇಷವಾಗಿ ಮಾಡಿದ ಅಂತ ಇಲ್ಲಿ ಬರುತ್ತದೆ. ಅಷ್ಟೆಲ್ಲ ಮಾಡಿ ಕೊನೆಗೆ ವಿರಕ್ತನಾಗಿ ಎಲ್ಲವನ್ನು ಪುನಃ ತಿರುಗಿ ತಾರುಣ್ಯವನ್ನು ಕೊಟ್ಟು ತಾನು ವಾರ್ಧಕ್ಯವನ್ನು ಪಡೆದು ಎರಡು ಉಪದೇಶವನ್ನು ಮಾಡುತ್ತಾನೆ ಇಡೀ ಜಗತ್ತಿಗೆ. ನೋಡಿ ಯಾರೂ ಈ ತರಹ ನನ್ನ ಹಾಗೆ ಇನ್ನು ಮೇಲೆ ಮಾಡಬೇಡಿ, ನಾನೊಂದು ರೀತಿಯ ಟ್ರೈಯಲ್ ಮಾಡಿದೆ ಭೋಗ ಮಾಡಿ ಮಾಡಿ ಮಾಡಿ ಮಾಡಿ ವಿರಕ್ತರಾಗಬಹುದೋ ಅಂತ ಸಾಕಪ್ಪಾ ಅಂತ ಅನ್ನಿಸುತ್ತದೆ ಅಂತ ಅನಿಸುವುದೇ ಇಲ್ಲ ಯಾರಿಗೂ.

ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ ।

ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ ॥ (30.38 ಹರಿವಂಶಪರ್ವ)

ಎಷ್ಟು ತುಪ್ಪ ಹಾಕುತ್ತಿರೋ ಅಷ್ಟು ಅಗ್ನಿ ಪ್ರಜ್ವಲಿಸುತ್ತದೆ ಹೊರತು ಶಾಂತ ಆಗುವುದಿಲ್ಲ, ಅಗ್ನಿ ಶಾಂತವಾಗಬೇಕು ನೀರು ಹಾಕಬೇಕು ತುಪ್ಪ ಅಲ್ಲ ಹಾಗೆ ವೈರಾಗ್ಯವೆಂಬ ನೀರಿನಿಂದ ಈ ಕಾಮಾಗ್ನಿಯನ್ನು ಶಾಂತಗೊಳಿಸಬೇಕೆ ಹೊರತು ಭೋಗ ಎಂಬಂತಹ ತುಪ್ಪದಿಂದ ಇದನ್ನು ಶಾಂತಗೊಳಿಸಿವುದಕ್ಕೆ ಸಾಧ್ಯ ಇಲ್ಲ. ಇಡೀ ಪೃಥ್ವಿಯಲ್ಲಿ ಇರುವಂತಹ ಎಲ್ಲ ಧನ, ಧಾನ್ಯ, ಪಶು ಮೊದಲಾದ ಸಕಲ ಸಂಪತ್ತನ್ನು ತಂದು ಎದುರಿಗೆ ಹಾಕಿದರೂ ಸಾಕು ಅಂತ ಅನ್ನಿಸುವುದಿಲ್ಲ, ತೃಪ್ತಿ ಇರುವುದಿಲ್ಲ ಮನುಷ್ಯನಿಗೆ.

ಯತ್ ಪೃಥಿವ್ಯಾಂ ವ್ರೀಹಿಯವಂ ಹಿರಣ್ಯಂ ಪಶವಃ ಸ್ತ್ರಿಯಃ ।

ನಾಲಮೇಕಸ್ಯ ತತ್ ಸರ್ವಮಿತಿ ಪಶ್ಯನ್ನ ಮುಹ್ಯತಿ ॥ (30.39 ಹರಿವಂಶಪರ್ವ)

ಆದ್ದರಿಂದ ವಿರಕ್ತರಾಗಿ ಸಾಧನೆಯನ್ನು ಮಾಡಿಕೊಳ್ಳಬೇಕು ಆಸೆ ಎಂದೂ ಜೀರ್ಣರಾಗುವುದಿಲ್ಲ ನಾವು ಜೀರ್ಣರಾಗುತ್ತೇವೆ.

ಯಾ ದುಸ್ತ್ಯಜಾ ದುರ್ಮತಿಭಿರ್ಯಾ ನ ಜೀರ್ಯತಿ ಜೀರ್ಯತಃ । (30.42 ಹರಿವಂಶಪರ್ವ)

ಅಂತಹ ಆಸೆಯನ್ನು ಬಿಟ್ಟು ನಾವು ವಿರಕ್ತರಾಗಿ ಸಾಧನೆಯನ್ನು ಮಾಡಬೇಕು ಎಂಬುದಾಗಿ ಯಯಾತಿ ಮಕ್ಕಳಿಗೂ, ಜಗತ್ತಿಗೂ ಉಪದೇಶವನ್ನು ಮಾಡಿ ತಾನು ವಿರಕ್ತನಾಗಿ ಸಾಧನೆಯನ್ನು ಮಾಡಿ ಭೃಗುತುಂಗದಲ್ಲಿ ತಪಶ್ಚರ್ಯವನ್ನು ಮಾಡಿ ಮುಂದೆ ಸ್ವರ್ಗವನ್ನು ಹೊಂದಿದ್ದಾನೆ ಎಂಬ ಮಾತನ್ನು ತಿಳಿಸುತ್ತಾರೆ.

ಮುಂದೆ ಅವರ ವಂಶ ಎಲ್ಲ ಬೆಳೆದಿದೆ ಅದರಲ್ಲಿ ಯದು ಅವನೂ ಕೂಡ ಉತ್ತಮನಾದ ಧಾರ್ಮಿಕ ಆ ಯದು ವಂಶದಲ್ಲಿಯೇ ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮ ಅವತಾರ ಮಾಡುತ್ತಾನೆ. ಶ್ರೀಕೃಷ್ಣ ಪರಮಾತ್ಮನ ಅವತಾರದ ವರ್ಣನೆಯನ್ನು ಮಾಡಬೇಕು ಅಂತನ್ನುವುದು ಮುಖ್ಯವಾದ ಪ್ರಾರ್ಥನೆ ಅದಕ್ಕೋಸ್ಕರ ಈ ಪೂರ್ವ ಪೀಠಿಕೆಯನ್ನು ಹೇಳಿ ಯದುವಂಶದವರೆಗೆ ಬಂದಿದ್ದಾರೆ. ಇನ್ನು ಮುಂದೆ ಈ ಯದುವಂಶವನ್ನು ಯಾರು ಕೇಳುತ್ತಾರೋ

ಯದೋಸ್ತು ಶೃಣು ರಾಜರ್ಷೇರ್ವಂಶಂ ರಾಜರ್ಷಿಸತ್ಕೃತಮ್ ।

ಯತ್ರ ನಾರಾಯಣೋ ಜಜ್ಞೇ ಹರಿರ್ವೃಷ್ಣಿಕುಲೋದ್ವಹಃ ॥ (30.48 ಹರಿವಂಶಪರ್ವ)

ಧನ್ಯಃ ಪ್ರಜಾವಾನಾಯುಷ್ಮಾನ್ ಕೀರ್ತಿಮಾಂಶ್ಚ ಭವೇನ್ನರಃ । (30.49 ಹರಿವಂಶಪರ್ವ)

ಉತ್ತಮವಾದಂತಹ ಧನ್ಯತೆಯನ್ನು ಅನುಭವಿಸುತ್ತಾನೆ, ಉತ್ತಮವಾದ ಸಂತಾನವಾಗುತ್ತದೆ, ಕೀರ್ತಿ, ಆಯುಷ್ಯ, ಆರೋಗ್ಯ, ಜ್ಞಾನ ಭಕ್ಯಾದಿ ಸಕಲ ಸೌಭಾಗ್ಯವೂ ಕೂಡ ಅವನಿಗೆ ಕೂಡ ಅವನಿಗೆ ಸಿಗುತ್ತದೆ ಎಂಬುದಾಗಿ ಆ ಯದು ವಂಶದ ಮಹಿಮೆಯನ್ನು ತಿಳಿಸಿಕೊಡುತ್ತಾ ಇದ್ದಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

॥ ಶ್ರೀ ॥

॥ ಶ್ರೀ ದಿಗ್ವಿಜಯ ರಾಮೋ ವಿಜಯತೇ ॥

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಹರಿವಂಶಪರ್ವ-11

* * *

ಜನಮೇಜಯ ಉವಾಚ

ಪುರೋರ್ವಂಶಮಹಂ ಬ್ರಹ್ಮಞ್ಶ್ರೋತುಮಿಚ್ಛಾಮಿ ತತ್ತ್ವತಃ ।
ದುಹ್ಯೋಶ್ಚಾನೋರ್ಯದೋಶ್ಚೈವ ತುರ್ವಸೋಶ್ಚ ಪೃಥಕ್ ಪೃಥಕ್ ॥ (31.1 ಹರಿವಂಶಪರ್ವ)

ಪರಮ ಭಗವದ್ಭಕ್ತನಾದಂತಹ ಸಾಕಷ್ಟು ಸುಖವನ್ನು ಅನುಭವಿಸಿ ಆನಂತರದಲ್ಲಿ ಈ ಸಂಸಾರದಲ್ಲಿ ಸಾರ ಇಲ್ಲ ಅಂತ ತಿಳಿದಂತಹ ಪರಮ ವಿರಕ್ತನು ಆದಂತಹ ಮಹಾನುಭಾವ ಯಯಾತಿ. ಆ ಯಯಾತಿಯ ಪುತ್ರರಲ್ಲಿ ಐದು ಜನರಲ್ಲಿ ಯದು, ತುರ್ವಸು, ದ್ರುಹ್ಯು, ಅನು, ಪೂರು ಎಲ್ಲರ ವಂಶದ ವಿಸ್ತಾರವನ್ನು ಕೂಡ ನನಗೆ ತಿಳಿಸಿಕೊಡಬೇಕು ಎಂಬುದಾಗಿ ಜನಮೇಜಯ ವೈಶಂಪಾಯನರಿಗೆ ಪ್ರಾರ್ಥನೆಯನ್ನು ಮಾಡುತ್ತಾ ಇದ್ದಾನೆ. ವೈಶಂಪಾಯನರು ಹೇಳುತ್ತಾರೆ ಮಹಾನುಭಾವನಾದ ಪೂರು ತನ್ನ ತಂದೆಯ ಅಪೇಕ್ಷೆಯನ್ನು ಪೂರ್ಣ ಮಾಡಿದಂತಹ ಅನ್ನುವುದಕ್ಕಾಗಿಯೇ ತಂದೆಯ ಆಶೀರ್ವಾದವನ್ನು ಪೂರ್ಣವಾಗಿ ಪಡೆದಂತಹ ಪೂರು ಎಂಬ ರಾಜ ಅವನಿಗೆ ಜನಮೇಜಯ ಅಂತ ರಾಜನಾಗುತ್ತಾನೆ ಈಗ ಎದುರಿಗೆ ಕುಳಿತು ಕೇಳುವವನು ಜನಮೇಜಯನೇ. ಅಂತಹ ಮೂಲ ಪೂರು ರಾಜನ ಮಗ ಜನಮೇಜಯ ಅಂತ, ಮುಂದೆ ಅವನ ವಂಶದಲ್ಲಿ ರೌದ್ರಾಶ್ವ ಅಂತ ರಾಜನಾಗುತ್ತಾನೆ ಅನೇಕ ರಾಜರುಗಳು ಮಧ್ಯದಲ್ಲಿ ಬರುತ್ತಾರೆ, ಆ ರೌದ್ರಾಶ್ವ ಎಂಬ ರಾಜ ಘೃತಾಚೀ ಎಂಬ ಅಪ್ಸರಾ ಸ್ತ್ರೀ ಅವಳಲ್ಲಿ ಹತ್ತು ಜನ ಗಂಡು ಮಕ್ಕಳನ್ನು, ಹತ್ತು ಜನ ಹೆಣ್ಣು ಮಕ್ಕಳನ್ನು ಪಡಿಯುತ್ತಾನೆ. ಋಚೇಯು, ಕೃಕಣೇಯು, ಕಕ್ಷೇಯು, ಸ್ಥಂಡಿಲೇಯು, ಸನ್ನತೆಯು, ದಶಾರ್ಣೇಯು, ಜಲೇಯು, ಸ್ಥಲೇಯು, ಧನೇಯು, ವನಯು ಎಂಬ ಹತ್ತು ಜನ ಗಂಡು ಮಕ್ಕಳು ರುದ್ರಾ, ಶೂದ್ರಾ, ಭದ್ರಾ, ಮಲದಾ, ಮಲಹಾ, ಖಲದಾ, ನಲದಾ, ಸುರಸಾ, ಗೋಚಪಲಾ, ಸ್ತ್ರೀರತ್ನಕೂಟಾ ಅಂತ ಹತ್ತು ಜನ ಹೆಣ್ಣು ಮಕ್ಕಳು ಆಗುತ್ತಾರೆ.

ಇಲ್ಲಿ ಕೂಟಾ ಕೂಟಾ ಅನ್ನುವ ಶಬ್ದಕ್ಕೆ ಹೀನಾ ಅಂತ ಅರ್ಥ. ಸ್ತ್ರೀರತ್ನಗಳು ಅಂತ ಜಗತ್ತಿನಲ್ಲಿ ಏನಿವೆ ಉತ್ತಮರಾದಂತಹ ಶ್ರೇಷ್ಠರಾದ, ಗುಣವಂತರಾದ, ಲಕ್ಷಣವಂತರಾದ ಸ್ತ್ರೀಯರು ಅವರೆಲ್ಲರೂ ಯಾವಳಿಗಿಂತಲೂ

ಕೂಟರು ಹೀನರೋ ಅವಳು ಸ್ತ್ರೀರತ್ನಕೂಟಾ ಅಂತ. ಅದರ ತಾತ್ಪರ್ಯ ಅಷ್ಟು ಉತ್ತಮವಾದಂತಹ ಗುಣಗಳನ್ನು ಪಡೆದುಕೊಂಡವಳಾಗಿದ್ದಳು ಅನ್ನುವ ಅರ್ಥದಲ್ಲಿ ಅವಳಿಗೆ ಸ್ತ್ರೀರತ್ನಕೂಟಾ ಎಂಬ ಹೆಸರನ್ನು ಇಟ್ಟಿದ್ದರು ಅಂತ ವ್ಯಾಖ್ಯಾನಕಾರರು ತಿಳಿಸುತ್ತಾರೆ. ಈ ರೀತಿ ಇವರ ಒಂದು ಪೂರುವಿನ ವಂಶವನ್ನು ಹೇಳುತ್ತಾರೆ. ಪೂರುವಿನ ವಂಶದಲ್ಲಿ ಬಂದಂತಹ ಈ ರೌದ್ರಾಶ್ವನ ಮಕ್ಕಳು ಇವರೆಲ್ಲ ಇಪ್ಪತ್ತು ಜನ ಅದರಲ್ಲಿ ಅತ್ರಿ ವಂಶದಲ್ಲಿ ಬಂದ ಮಹಾನುಭಾವ ಪ್ರಭಾಕರ ಎಂಬ ಋಷಿ ಈ ರೌದ್ರಾಶ್ವನ ಮಗಳಾದ ರುದ್ರಾ ಅನ್ನುವವಳನ್ನು ಮದುವೆಯಾಗುತ್ತಾನೆ. ಅವನಿಗೆ ಪ್ರಭಾಕರ ಎಂಬ ಹೆಸರು ಅತ್ಯಂತ ಅನ್ವರ್ಥಕವಾದದ್ದು, ಸಾರ್ಥಕವಾದದ್ದು ಯಾಕೆ ಅಂದರೆ ಒಂದು ಪ್ರಸಂಗದಲ್ಲಿ ರಾಹು ಸೂರ್ಯನ ಜೊತೆಗೆ ಯುದ್ಧವನ್ನು ಮಾಡಿ ಸೂರ್ಯನನ್ನು ಕೆಳಗೆ ಬೀಳಿಸುವಂತಹ ಪ್ರಸಂಗದೊಳಗೆ ಈ ಪ್ರಭಾಕರ ಎಂಬ ಮುನಿ ಆ ಸೂರ್ಯನನ್ನು ನೀನು ಹಾಗೇ ನಿಲ್ಲು ಅಂತ ಹೇಳುತ್ತಾನೆ. ಸ್ಥಸ್ಯಸ್ತು ಅನ್ನುತ್ತಾನೆ

ಸ್ಥಸ್ತಿ ತೇಽಸ್ತ್ವಿತಿ ಚೋಕ್ತೋ ವೈ ಪತಮಾನೋ ದಿವಾಕರಃ ।
ವಚನಾತ್ ತಸ್ಯ ವಿಪ್ರರ್ಷೇರ್ನ ಪಪಾತ ದಿವೋ ಮಹೀಮ್ ॥ (31.14 ಹರಿವಂಶಪರ್ವ)

ಆ ರಾಹುವಿನ ಜೊತೆಗೆ ಆಡುವ ಯುದ್ಧದೊಳಗೆ ಸೂರ್ಯ ಸ್ವರ್ಗದಿಂದ ಭೂಮಿಗೆ ಬೀಳುವ ಪ್ರಸಂಗ ಇತ್ತು ಆ ಸಂದರ್ಭದಲ್ಲಿ ಈ ಪ್ರಭಾಕರ ಋಷಿಗಳು **'ಸ್ಥಸ್ತಿ ತೇಽಸ್ತ್ವಿತಿ'** ಅಂತ ಸೂರ್ಯನ ಬಗ್ಗೆ ಸ್ವಸ್ತಿ ಚಿಂತನೆಯನ್ನು ಮಾಡಿದ್ದಕ್ಕೆ ಸೂರ್ಯ ಸ್ಥಿರವಾಗಿ ನಿಲ್ಲುತ್ತಾನೆ. ಆ ರೀತಿಯ ಪ್ರಭಾಕರನ ಸೇವೆ ಮಾಡಿದ್ದರಿಂದ ಪ್ರಭಾಕರನಾದ ಸೂರ್ಯ ಕೆಳಗೆ ಇದ್ದರೆ ಭೂಮಿ ಭಸ್ಮವಾಗುತ್ತಾ ಇತ್ತು ಮುಂದೆ ಬೆಳಕೂ ಇರುತ್ತಿರಲಿಲ್ಲ ಆದರೆ ಇವನು ಆ ಸೂರ್ಯನಿಗೆ ಸ್ಥಿರವಾಗಿ ನಿಲ್ಲುವಂತೆ ಮಾಡಿ ಪ್ರಭಾ ಎಲ್ಲ ಕಡೆಗೆ ನಿರಂತರವಾಗಿ ಬರುವಂತೆ ಮಾಡಿದ್ದಕ್ಕೆ, ಪ್ರಭಾಕರನ ಸೇವೆ ಮಾಡಿದ್ದಕ್ಕೆ ಅವನು ಪ್ರಭಾಕರ ಎಂಬ ಹೆಸರನ್ನು ಪಡೆದಿದ್ದಾನೆ ಈ ರೌದ್ರಾಶ್ವನ ಅಳಿಯ. ಈ ರೀತಿಯ ಒಂದು ಮಹಾಮಹಿಮೆ ಆ ಪ್ರಭಾಕರ ಮುನಿಗೆ ಇದೆ ಅಂತ ಹೇಳುತ್ತಾರೆ. ಇಲ್ಲಿ ಚೆನ್ನಾಗಿ ತಿಳಿಯಬೇಕು ಭಗವಂತನ ಒಂದು ವಿಶಿಷ್ಟವಾದ ಪರಮಾನುಗ್ರಹದಿಂದ

ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ಸೂರ್ಯಾಚಂದ್ರಮಸೌ ವಿಧೃತೌ ತಿಷ್ಠತಸ್ ।
(9 ಬೃಹದಾರಣ್ಯಕೋಪನಿಷತ್)

ಅಂತ ಹೇಳಿದ ರೀತಿಯಲ್ಲಿ ಆ ಸೂರ್ಯ ಚಂದ್ರಾದಿಗಳ ಧಾರಣೆಯನ್ನು ಮಾಡತಕ್ಕಂತಹ ಅವರಿಗೆ ಸ್ಥೈರ್ಯವನ್ನು ಕೊಡತಕ್ಕಂತಹ ಮಹಾಸ್ವಾಮಿ ಆ ಭಗವಂತನೇ ಸರ್ವೋತ್ತಮನಾದ ಶ್ರೀಹರಿ ನಾರಾಯಣನೇ. ಈ ಒಂದು ಪ್ರಸಂಗದಲ್ಲಿ ಈ ಋಷಿಗಳಿಗೆ ಒಂದು ವಿಶೇಷವಾದ ಕೀರ್ತಿಯನ್ನು ಕೊಡುವುದಕ್ಕೆ ಆ ಪ್ರಭಾಕರರಲ್ಲಿ ಆ ಮಹಾ ಪ್ರಭಾಕರನಾದ ಪರಮಾತ್ಮನೇ ಅಂತರ್ಯಾಮಿಯಾಗಿ ಇದ್ದು ಸೂರ್ಯನಿಗೆ ಸ್ವಸ್ತಿ ಚಿಂತನವನ್ನು ಮಾಡಿ ಆ ಋಷಿಗಳಿಗೆ ಒಂದು ಕೀರ್ತಿಯನ್ನು ತಂದುಕೊಟ್ಟ ಅಂತ ನಾವು ಭಾವಿಸಬೇಕೇ ಹೊರತು ಋಷಿಗಳು ಸೂರ್ಯನಿಗಿಂತಲೂ ದೊಡ್ಡವರು ಎಂಬುದಾಗಿ ನಾವು ತಿಳಿಯುವುದಿಲ್ಲ. ಭಗವಂತನ ಅನುಗ್ರಹದಿಂದಲೇ ಸೂರ್ಯ ಚಂದ್ರಾದಿಗಳೆಲ್ಲ ತಮ್ಮ ತಮ್ಮ ಸ್ಥಾನದಲ್ಲಿ ಇದ್ದದ್ದು, ಬಂದ ಎಲ್ಲ ಆಪತ್ತುಗಳನ್ನು ಪರಿಹಾರ ಮಾಡಿಕೊಳ್ಳುವುದು ಕೂಡ ಆ ಪರಮಾತ್ಮನ ಅನುಗ್ರಹದಿಂದ ಆದರೆ ಪರಮಾತ್ಮ ಒಂದು ವಿಶೇಷವಾದ ಆ ತಪಸ್ಸಿನ ಮಹಿಮೆಯನ್ನು ಇವರಲ್ಲಿ ಅಂತರ್ಯಾಮಿಯಾಗಿ ತೋರಿಸಿದ್ದಾನೆ. ಇವರ ವಂಶದಲ್ಲಿ ಅನೇಕ ಗೋತ್ರ ಪ್ರವರ್ತಕರಾದ ಮಹಾನುಭಾವರೆಲ್ಲ ಆಗಿದ್ದಾರೆ ಅತ್ರಿ ಗೋತ್ರದಲ್ಲಿ ಬಂದವರು ಇವರು ಪ್ರಭಾಕರ ಮುನಿಗಳು ಹೀಗಾಗಿ ಇವರ ಮಕ್ಕಳು ಎಲ್ಲ ಅನೇಕ ಜನ

ಗೋತ್ರ ಪ್ರವರ್ತಕರಾಗಿದ್ದಾರೆ. ಹೀಗೆ ಇವರ ವಂಶ ಮುಂದುವರೆದಿದೆ ಅಂತ ಹೇಳುತ್ತಾರೆ.

'ಸ ತಾಸು ಜನಯಾಮಾಸ'[1] ಪ್ರಭಾಕರ ಋಷಿಗಳು ಕೂಡ ಆ ರುದ್ರಾ ಎಂಬುವವಳಲ್ಲಿ ಗೋತ್ರ ಪ್ರವರ್ತಕರಾದಂತಹ ಹತ್ತು ಜನ ಮಕ್ಕಳನ್ನು ಪಡೆದಿದ್ದಾರೆ. ಅವರಿಗೆಲ್ಲ ಹೆಸರು ಏನು ಅಂದರೆ ಸ್ವಸ್ತಾತ್ರೇಯಾ ಅಂತ ಯಾಕೆ ಅಂದರೆ ಇವರ ಮೂಲಪುರುಷ ಸ್ವಸ್ತಿ ಅಂತ ಸೂರ್ಯನಿಗೆ ಹೇಳಿ ಸೂರ್ಯನನ್ನು ಸ್ಥಿರವಾಗಿ ನಿಲ್ಲಿಸಿದ್ದಾನೆ ಕಾರಣ ಈ ವಂಶದಲ್ಲಿ ಬಂದವರಿಗೆ ಸ್ವಸ್ತಾತ್ರೇಯರು ಅಂತ ಇವರಿಗೆ ಹೆಸರು ವಿಶಿಷ್ಟವಾಗಿ ಇರತಕ್ಕಂತಹ ಒಂದು ಮಹಿಮೆ ಈ ಅತ್ರಿ ಗೋತ್ರದಲ್ಲಿ ಬಂದಂತವರಿಗೆ ಇದೆ ಅಂತ. ಅದಕ್ಕಾಗಿ ಅತ್ರಿ ಗೋತ್ರದಲ್ಲಿ ಬಂದಂತಹ ಯಾವುದೇ ರೀತಿಯ ಸಜ್ಜನರ ದ್ರೋಹವನ್ನು ಮಾಡಿದರೆ ಬ್ರಹ್ಮಹತ್ಯಾ ಪಾಪ ಬರುತ್ತದೆ ಅಂತ ಧರ್ಮ ಶಾಸ್ತ್ರಗಳಲ್ಲಿ ಹೇಳುತ್ತಾರೆ ಮತ್ತು ಯಜ್ಞದಲ್ಲಿ ಎಲ್ಲಾ ಬ್ರಾಹ್ಮಣರಿಗೆ ದಕ್ಷಿಣೆ ಕೊಡುವುದು ಒಂದು ಬೇರೆ ಅತ್ರೇಯನಾದ ಬ್ರಾಹ್ಮಣ ಯಾರು ಅಂತ ಹೇಳಿ ಅವನಿಗೆ ಒಂದು ವಿಶಿಷ್ಟವಾದ ಸ್ಥಾನವನ್ನು ಕೊಟ್ಟು ದಕ್ಷಿಣೆಯನ್ನು ಕೊಡುತ್ತಾರೆ.

ಆತ್ರೇಯಾಯ ಬ್ರಾಹ್ಮಣಾಯ ಸ್ವಾತಂತ್ರೇಣ ದಕ್ಷಿಣಾ ವಿಧಾನಾತ್ ।

ವಿಶೇಷವಾದ ದಕ್ಷಿಣೆಯನ್ನು ಕೊಟ್ಟು ಅವರಿಗೆ ಗೌರವವನ್ನು ಸಲ್ಲಿಸುತ್ತಾರೆ ಕಾರಣ ಆ ಅತ್ರಿ ಗೋತ್ರದ ಮೂಲ ಪುರುಷರಾಗಿರತಕ್ಕಂತಹ ಮಹಾನುಭಾವರು ಅರ್ಥಾತ್ ಅತ್ರಿ ಋಷಿಗಳೇ ಆ ಮಧ್ಯದಲ್ಲಿ ಬಂದಂತಹ ಈ ಪ್ರಭಾಕರ ಮುನಿಗಳು ಆ ಪ್ರಭಾಕರನ ಒಂದು ಸ್ಥಿರವಾದ ಅವಸ್ಥಿತಿಗೆ ಕಾರಣರಾಗಿ ಆ ಸೂರ್ಯನ ಅಧೀನವಾಗಿ ತಾನೇ ಈ ಎಲ್ಲ ಯಜ್ಞ ಯಾಗಾದಿಗಳು ನಡೆಯುವುದು ಅವನಿಂದಲೇ ಕಾಲ ನಿರ್ಣಯವಾಗುವುದು ಹೀಗಾಗಿ ಯಜ್ಞದಲ್ಲಿ ಈ ಅತ್ರಿ ಗೋತ್ರದವರಿಗೆ ವಿಶೇಷವಾದಂತಹ ಸ್ಥಾನ ಇದೆ ಅಂತ ಹೇಳುತ್ತಾರೆ. ಆದರೆ ಏನು ಇವನ ಹತ್ತು ಜನ ಮಕ್ಕಳು ಈ ಪ್ರಭಾಕರ ರುದ್ರಾ ಪುತ್ರರು ಇದ್ದರಲ್ವಾ ಅವರಿಗೆ ಅತ್ರಿ ವಂಶದಲ್ಲಿ ಹುಟ್ಟಿದರೂ ಆಸ್ತಿ ಬರುವುದಿಲ್ಲ **'ಕಿಂ ತತ್ತ್ರಿಂಧನವರ್ಜಿತಾಃ'**[2] ಯಾಕೆ ಅಂದರೆ ಆ ರೌದ್ರಾಶ್ವ ಪುತ್ರಿಕಾಪುತ್ರ ಧರ್ಮದಿಂದ ಅವರನ್ನು ತಾನು ಸ್ವೀಕಾರ ಮಾಡಿಬಿಡುತ್ತಾನೆ. ಆದ್ದರಿಂದ ಆ ರೌದ್ರಾಶ್ವನ ಆಸ್ತಿ ಬರುತ್ತದೆ ಹೊರತು ಅತ್ರಿ ಋಷಿಗಳ ಆಸ್ತಿ ಬರುವುದಿಲ್ಲ ಆದರೆ ವಿಶಿಷ್ಟವಾದಂತಹ ಒಂದು ಸ್ಥಾನ ಮಾನಗಳು ಅವರಿಗೆ ಇರುತ್ತದೆ ಎಂಬುದಾಗಿ ಹೇಳುತ್ತಾರೆ. ಹೀಗೆ ಇದು ಈ ರೌದ್ರಾಶ್ವನ ಮಗಳಾದ ರುದ್ರಾ ಅವಳ ಮಕ್ಕಳ ಕಥೆ ಆಯಿತು. ಇನ್ನು ರೌದ್ರಾಶ್ವನ ಗಂಡು ಮಗ ಕಕ್ಷೇಯು ಅಂತ ಆ ಕಕ್ಷೇಯುವಿನ ವಂಶವನ್ನು ಹೇಳುತ್ತಾರೆ ಅನೇಕ ರಾಜರು ಮಹಾರಾಜರುಗಳೆಲ್ಲ ಆ ವಂಶದಲ್ಲಿ ಮಹಾನುಭಾವರೆಲ್ಲ ಬಂದಿದ್ದಾರೆ.

ಇದೇ ವಂಶದಲ್ಲಿ ಅತ್ಯಂತ ಪ್ರಸಿದ್ಧನಾದಂತಹ ದಾನಶೂರ ಶಿಬಿ ರಾಜ ಕುಶೀಂದ್ರ ದೇಶದ ರಾಜ ಶಿಬಿ. ಪಾರಿವಾಳದ ರಕ್ಷಣೆಗೋಸ್ಕರವಾಗಿ ಗಿಡುಗ ಪಕ್ಷಿ ಬಂದು ಪಾರಿವಾಳವನ್ನು ತಿನ್ನಬೇಕು ಅಂತ ಪ್ರಯತ್ನ ಮಾಡಿದರೆ ಆ ಪಾರಿವಾಳಕ್ಕೋಸ್ಕರ ಇವನು ರಕ್ಷಣೆಯನ್ನು ಕೊಡುತ್ತಾನೆ ಶರಣಾಗತ ರಕ್ಷಕ ಪಾರಿವಾಳ ಇವನ ರಕ್ಷಣೆಗೆ ಪ್ರಾರ್ಥನೆ ಮಾಡುತ್ತೆ. ಸರಿ, ಆ ಪಕ್ಷಿಯನ್ನು ರಕ್ಷಣೆ ಮಾಡಬೇಕು ಅಂದರೆ ನನ್ನ ಆಹಾರವನ್ನು ನೀನು ಕಸಿದುಕೊಂಡು ಇನ್ನೊಂದನ್ನು ರಕ್ಷಣೆ ಮಾಡಿ ಏನು ಮಾಡಿದ ಹಾಗಾಯಿತು ಅಂತ **'ಜೀವೋ ಜೀವಸ್ಯ ಜೀವನಂ'** ನಾನು ಅದನ್ನು ತಿಂದೇ ಬದುಕಬೇಕು ಅಂತ. ಸರಿ, ಅದಕ್ಕೆ ಸರಿ ತೂಗುವಷ್ಟು ನಿನಗೆ ಏನು ಬೇಕೋ ಅದನ್ನು ಕೊಡುತ್ತೇನೆ ಅಂತ ಬೇರೆ ಏನು ಕೊಟ್ಟರೂ ನಡೆಯುವುದಿಲ್ಲ, ಹಾಗಾದರೆ ಏನು ಕೊಡಬೇಕು ನಿನ್ನ ಮಾಂಸವೇ ಕೊಡು, ಸರಿ ಅಂತ ಆ ಪಾರಿವಾಳದ ತೂಕದಷ್ಟು ತನ್ನ ಮಾಂಸವನ್ನು ತೆಗೆದು ಇಡುತ್ತಾನೆ ಎಂತಹ ತ್ಯಾಗ ನೋಡಿ. ತನ್ನವರಿಗೋಸ್ಕರನೇ ಇಷ್ಟು

1. 31.16 ಹರಿವಂಶಪರ್ವ, 2. 31.17 ಹರಿವಂಶಪರ್ವ

ಯಾರೂ ಮಾಡುವುದಿಲ್ಲ ಹೆಂಡತಿ ಮಕ್ಕಳಿಗೋಸ್ಕರನೇ ಇನ್ನು ಹಾರಿ ಬಂದು ಕುಳಿತು ಒಂದು ಪಾರಿವಾಳದ ರಕ್ಷಣೆಗೆ ತನ್ನ ಮೈಯೊಳಗಿನ ಮಾಂಸವನ್ನು ಕತ್ತರಿಸಿ ಕೊಡುತ್ತಾನೆ ಅಂದರೆ ಏನು ಅತ್ಯದ್ಭುತವಾದಂತಹ ಔದಾರ್ಯ ಎಂತಹ ಮಹಾನುಭಾವರೆಲ್ಲ ಆಗಿಹೋಗಿದ್ದಾರೆ ನಮ್ಮ ಭಾರತ ದೇಶದಲ್ಲಿ. ಅದು ಸರಿ ಹೋಗುವುದೇ ಇಲ್ಲ ತೂಕ ಒಂದಾಯಿತು, ಎರಡಾಯಿತು, ಮೂರಾಯಿತು ಎಲ್ಲಾ ಕತ್ತರಿಸಿ ಕತ್ತರಿಸಿ ಕೈ ಕೊನೆಗೆ ಆ ಪಾರಿವಾಳಕ್ಕೆ ಸರಿಯಾಗುತ್ತೋ ಅಂತ ತಾನೇ ಸಂಪೂರ್ಣವಾಗಿ ತಕ್ಕಡಿಯಲ್ಲಿ ಕೂಡುತ್ತಾನೆ ಆಗ ವಿಶೇಷವಾಗಿ ಅನುಗ್ರಹ ಮಾಡುತ್ತಾರೆ. ಬಂದವರು ಯಾರಲ್ಲ ಅದು ಆ ಪಾರಿವಾಳ ಗಿಡುಗು ಅಂದರೆ ಅಗ್ನಿ ಇಂದ್ರ ಇವನ ಪರೀಕ್ಷೆಗೆ ಬಂದಿರುತ್ತಾರೆ ಅಷ್ಟೇ ಇವನಿಗೆ ವರ ಕೊಡುತ್ತಾರೆ ಉತ್ತಮವಾದಂತಹ ಸೌಭಾಗ್ಯವನ್ನು ಕೊಡುತ್ತಾರೆ ಅಂತ ಕೇಳುತ್ತೇವೆ. ಅಂತಹ ಮಹಾನುಭವ ಶಿಬಿ ರಾಜ ಈ ವಂಶದಲ್ಲಿ ಬರುತ್ತಾನೆ ಇನ್ನು ಅನೇಕ ಜನ ಮಹಾನುಭಾವರು ಇಲ್ಲೆಲ್ಲ ಬರುತ್ತಾರೆ.

ಮುಂದೆ ಒಬ್ಬ ಫೇನ ಅಂತ ರಾಜ ಬರುತ್ತಾನೆ ಅವನ ಮಗ ಸುತಪಾ, ಸುತಪಸ್ಸನ ಮಗನಾಗಿ ಬಲಿ ಚಕ್ರವರ್ತಿ. ಆ ಬಲಿ ಚಕ್ರವರ್ತಿ ಮತ್ತೊಮ್ಮೆ ಹುಟ್ಟುತ್ತಾನೆ ಹಿಂದೆ ಅಸುರನಾಗಿ ಅರ್ಥಾತ್ ಪ್ರಹ್ಲಾದ ರಾಜರ ಮಗ ವಿರೋಚನ, ವಿರೋಚನನ ಮಗನಾಗಿ ಬಲಿ ಒಮ್ಮೆ ಹುಟ್ಟಿದ್ದಾನೆ ಅದು ಅಸುರ ಯೋನಿಯಲ್ಲಿ, ಈಗ ಮನುಷ್ಯ ಯೋನಿಯಲ್ಲಿ ಪುನಃ ಆ ಬಲಿ ಚಕ್ರವರ್ತಿ ಮತ್ತೆ ಬರುತ್ತಾನೆ.

ಜಾತೋ ಮಾನುಷಯೋನೌ ತು ಸ ರಾಜಾ ಕಾಞ್ಚನೇಷುಧಿಃ ॥ (31.32 ಹರಿವಂಶಪರ್ವ)

ಬಂಗಾರದ ಬತ್ತಳಿಕೆ, ಭಾರೀ ಯೋಗಸಾಮರ್ಥ್ಯ, ಅತ್ಯದ್ಭುತವಾಗಿ ಇರತಕ್ಕಂತಹ ಶಕ್ತಿ ಸಾಮರ್ಥ್ಯಗಳು ಯೋಗ್ಯತೆ ದೊಡ್ಡದು ಮುಂದೆ ಇಂದ್ರನಾಗುತ್ತಾನೆ ಸಾವರ್ಣಿ ಮನ್ವಂತರದಲ್ಲಿ ಅಂತಹ ಮಹಾನುಭಾವ ಬಲಿ ಚಕ್ರವರ್ತಿ ಪರಮಾತ್ಮನ ಪರಮ ಭಕ್ತ ವಿಷ್ಣುವಿನ ವಿಶೇಷ ಸನ್ನಿಧಾನಕ್ಕೆ ಪಾತ್ರ ಅಸುರ ವಂಶದಲ್ಲಿ ಹುಟ್ಟಿದವನೂ ಅಂತ ಅವನ ಬಗ್ಗೆ ತಪ್ಪು ತಿಳಿಯಬಾರದು ಪರಮ ಭಗವದ್ಭಕ್ತ ಅವನು ಅಂತಹ ಬಲಿ ಚಕ್ರವರ್ತಿ. ಆ ಬಲಿ ಚಕ್ರವರ್ತಿ ಐದು ಜನ ಮಕ್ಕಳನ್ನು ಪಡೆಯುತ್ತಾನೆ ಅಂಗ, ವಂಗ, ಸುಹ್ಮ, ಪುಂಡ್ರ, ಕಲಿಂಗ ಅಂತ ಅದೇ ಹೆಸರಿನ ದೇಶಗಳು ಆಗುತ್ತವೆ ಮುಂದೆ ಅಂಗ, ವಂಗ, ಪುಂಡ್ರ, ಕಲಿಂಗ ಎಂಬ ದೇಶಗಳು ಕೂಡ ಮುಂದೆ ಆಗುತ್ತವೆ ಈ ಬಲಿ ಚಕ್ರವರ್ತಿಯ ಮಕ್ಕಳವರು. ಕೆಲವು ಜನ ಈ ಬಲಿ ಚಕ್ರವರ್ತಿಯ ಮಕ್ಕಳು ಬ್ರಾಹ್ಮಣರಾಗುತ್ತಾರೆ ವಿಶ್ವಾಮಿತ್ರರು ಹೇಗೆ ಕ್ಷತ್ರಿಯರಾಗಿ ಹುಟ್ಟಿದರೂ ತಪಸ್ಸಿನಿಂದ ಬ್ರಾಹ್ಮಣ್ಯವನ್ನು ಪಡೆದರೋ ಹಾಗೆ ಎಷ್ಟೋ ಜನ ಈ ವಂಶದಲ್ಲಿ ಬಂದಂಥವರು ಬ್ರಾಹ್ಮಣರಾಗುತ್ತಾರೆ ಅಂತ. ಮುಂದೆ ಇವನು ಬ್ರಹ್ಮ ದೇವರನ್ನು ಕುರಿತು ತಪಸ್ಸು ಮಾಡಿ ಅನೇಕ ವರಗಳನ್ನು ಪಡೆಯುತ್ತಾನೆ.

ಮಹಾಯೋಗಿತ್ವಮಾಯುಶ್ಚ ಕಲ್ಪಸ್ಯ ಪರಿಮಾಣತಃ । (31.36 ಹರಿವಂಶಪರ್ವ)

ಮಹಾಯೋಗ ಸಾಮರ್ಥ್ಯ, ಒಂದು ಕಲ್ಪದವರೆಗೆ ದೀರ್ಘವಾದ ಆಯುಷ್ಯ, ಯುದ್ಧದಲ್ಲಿ ಯಾವಾಗಲೂ ಗೆಲ್ಲಬೇಕು ಯಾರಿಂದಲೂ ಸೋಲಬಾರದು ಅಂತ, ವಿಶೇಷವಾಗಿ ಜೀವನದಲ್ಲಿ ಧರ್ಮಾನುಷ್ಠಾನವನ್ನು ಅತ್ಯಂತ ಅಧಿಕವಾಗಿ ಮಾಡಬೇಕು ಅಂತ, ಮೂರು ಲೋಕಗಳಲ್ಲಿ ಇರುವಂತಹ ಯಾವ ವಸ್ತುವನ್ನಾದರೂ ಕುಳಿತಲ್ಲಿಯೇ ನೋಡಬಹುದು ತ್ರೈಲೋಕ್ಯ ದರ್ಶನ, ವಂಶದಲ್ಲಿ ಬಂದವರೆಲ್ಲರೂ ಭಾರೀ ಉತ್ತಮರಾದ ವ್ಯಕ್ತಿಗಳೇ ಹುಟ್ಟಬೇಕು ಅಂತ. ಮತ್ತೊಂದು ವಶೀತ್ವ ಎಲ್ಲರೂ ತನ್ನ ಅಧೀನವಾಗಿರಬೇಕು ಅನ್ನುವಂತಹ ವರ, ಅಪ್ರತಿಮವಾದ ಬಲ,

ಶ್ರೇಷ್ಠವಾದ ಧರ್ಮ ತತ್ವಾರ್ಥ ದರ್ಶನ, ನಾಲ್ಕೂ ವರ್ಣಗಳನ್ನು ಚೆನ್ನಾಗಿ ಪರಿಪಾಲನೆ ಮಾಡತಕ್ಕಂತಹ ಸಾಮರ್ಥ್ಯ ವರಗಳ ಲಿಸ್ಟ್ ಎಷ್ಟು ದೊಡ್ಡದಿದೆ ನೋಡಿ ಇಷ್ಟೆಲ್ಲ ವರಗಳನ್ನು ಬ್ರಹ್ಮ ದೇವರಿಂದ ಪಡೆಯುತ್ತಾನೆ ಆ ಮಹಾನುಭಾವನಾಗಿ ಇರತಕ್ಕಂತಹ ಆ ಬಲಿ ಚಕ್ರವರ್ತಿ. ಮುಂದೆ ಇದೇ ರೀತಿ ಇವನ ವಂಶದಲ್ಲಿ ಅನೇಕ ಸಜ್ಜನರು ಹುಟ್ಟುತ್ತಾರೆ.

ಆಮೇಲೆ ಅಂಗನ ವಂಶವನ್ನು ಹೇಳುತ್ತಾರೆ ಇವನ ಐದು ಜನ ಮಕ್ಕಳಲ್ಲಿ ಅಂಗ, ವಂಗ, ಸುಹ್ಮ, ಪುಂಡ್ರ, ಕಲಿಂಗ ಹೇಳಿದ್ದರಲ್ಲ ಆ ಬಲಿಯ ಮಕ್ಕಳು ಅದರೊಳಗಿನ ಅಂಗ ಆ ಅಂಗನ ವಂಶದಲ್ಲಿ ಅಂಗವನ ಮಗ ಮಹಾನಾ, ಮಹಾನನ ಮಗ ದಧಿವಾಹನ ಹೀಗೆ ಇದು ವಂಶ ಮುಂದೆ ಹೋಗುತ್ತದೆ. ಇಲ್ಲಿ ಒಬ್ಬ ಚಿತ್ರರಥ ಅಂತ ರಾಜ ಮಧ್ಯದಲ್ಲಿ ಬರುತ್ತಾನೆ ಆ ಚಿತ್ರರಥನ ಮಹತ್ವ ಏನು ಎಂದರೆ ಹಿಂದೆ ಇಂದ್ರ ದೇವರ ಜೊತೆಗೆ ಯಜ್ಞ ಮಾಡುವಂತಹ ಸಂದರ್ಭದೊಳಗೆ ಸೋಮಪಾನವನ್ನು ಮಾಡುತ್ತಾನೆ. ಸೋಮಪಾನವನ್ನು ಮಾಡತಕ್ಕಂಥವರು ದೇವತೆಗಳು ಆ ಒಂದು ವಿಶಿಷ್ಟವಾದ ದೇವತೆಗಳ ಅನುಗ್ರಹ ಆಶೀರ್ವಾದದಿಂದ ದೇವತೆಗಳ ಜೊತೆಗೆ ಸೋಮಪಾನ ಮಾಡುವುದಕ್ಕೆ ಅವಕಾಶ ಕೊಡುತ್ತಾರೆ. ಹೇಗೆ ಹಿಂದೆ ಅನೇಕ ರಾಜರುಗಳಿಗೆ ಕಕುತ್ಸ್ಯ ಮೊದಲಾದವರಿಗೆ ದೇವಲೋಕಕ್ಕೆ ಯುದ್ಧಕ್ಕೆ ಕರೆದು ಅವರಿಗೆ ಅನೇಕ ವರಗಳನ್ನೆಲ್ಲ ಕೊಟ್ಟರು ದೇವತೆಗಳು ಹಾಗೆ ಇವನಿಗೊಂದು ವಿಶೇಷ ಕೀರ್ತಿಯನ್ನು ಕೊಡುವುದಕ್ಕೆ ಇವನ ಸೇವೆಯನ್ನು ತೆಗೆದುಕೊಂಡು ಅದಕ್ಕೆ ಮೆಚ್ಚಿ ಸೋಮಪಾನವನ್ನು ಮಾಡುವಂತಹ ಯೋಗ್ಯತೆಯನ್ನು ಆ ಚಿತ್ರರಥನಿಗೆ ಕೊಡುತ್ತಾರೆ. ಅಂತಹ ಮಹಾನುಭಾವರು ಈ ಅಂಗ ವಂಶದಲ್ಲಿ ಹುಟ್ಟುತ್ತಾರೆ.

ಮುಂದೆ ಈ ಚಿತ್ರರಥನ ಮಗನಾಗಿ ದಶರಥ ಹುಟ್ಟುತ್ತಾನೆ ಇನ್ನೊಬ್ಬ ದಶರಥ ಅವನಿಗೆ ಲೋಮಪಾದ ಅಂತೂ ಹೆಸರು. ಆ ಲೋಮಪಾದ ಎಂಬ ಹೆಸರಿನ ದಶರಥನಿಗೆ ಶಾಂತಾ ಅಂತ ಮಗಳು ಆ ಶಾಂತಾ ದೇವಿಯನ್ನು ಋಷ್ಯಶೃಂಗನಿಗೆ ಕೊಟ್ಟು ಮದುವೆ ಮಾಡುತ್ತಾನೆ ಈ ದಶರಥ. ಅಲ್ಲಿ ಆ ಋಷ್ಯಶೃಂಗನಿಗೆ ಕೊಟ್ಟು ಶಾಂತಾಳನ್ನು ಯಾವಾಗ ಮದುವೆ ಮಾಡುತ್ತಾನೋ ದಶರಥನಿಗೆ ಗಂಡು ಮಕ್ಕಳು ಇರುವುದಿಲ್ಲ, ಆಳಿಯನಾಗಿ ಋಷ್ಯಶೃಂಗನು ಬಂದ ಒಂದು ಕಾಲ್ಗುಣದಿಂದ ಅವನಿಗೆ ಶ್ರೇಷ್ಠನಾದಂತಹ ಚತುರಙ್ಗ ಅನ್ನುವ ಮಗನಾಗುತ್ತಾನೆ ಆ ಋಷ್ಯಶೃಂಗನ ತಪಸ್ಪ್ರಭಾವದಿಂದ. ಆ ಋಷ್ಯಶೃಂಗನು ಕಾಲಿಟ್ಟರೆ ಮಳೆ ಇಲ್ಲದೆ ಇದ್ದಲ್ಲಿ ಅಲ್ಲಿ ಮಳೆಯಾಗುತ್ತಾ ಇತ್ತು ಜೊತೆಗೆ ಅವರ ತಪಸ್ಸಾಮರ್ಥ್ಯದಿಂದ ಮಳೆಯಾಗುವುದು ಮಾತ್ರ ಅಲ್ಲ ಉತ್ತಮವಾದ ಸಂತಾನವೂ ಕೂಡ ದಶರಥನಿಗೆ ಆಗಿದೆ, ಋಷ್ಯಶೃಂಗನಿಗೆ ಶಾಲಕ ಹುಟ್ಟಿದ್ದಾನೆ ಚತುರಙ್ಗ ಅಂತ. ಆ ಚತುರಙ್ಗನ ಮಗ ಪೃತುಲಾಕ್ಷ, ಅವನ ಮಗ ಚಂಪಾ, ಚಂಪಾನ ಮಗ ಹರ್ಯಂಗ ಅಂತ ಚಂಪಾನಿಗೂ ಮಕ್ಕಳಿರುವುದಿಲ್ಲ, ಪೂರ್ಣಭದ್ರ ಅನ್ನುವಂತಹ ಮುನಿಗಳು ವಿಶೇಷವಾಗಿ ಪೂರ್ಣವಾದ, ಭದ್ರವಾದ ಆಶೀರ್ವಾದವನ್ನು ಅವನಿಗೆ ಮಾಡುತ್ತಾರೆ. ಅಲ್ಲಿ ಹರ್ಯಂಗ ಶ್ರೀಹರಿಯ ಸೇವೆಯನ್ನು ಮಾಡುವುದಕ್ಕೆ ಅಂಗನಾದಂತಹ ಹರ್ಯಂಗ ಅನ್ನುವ ಉತ್ತಮನಾದಂತಹ ಸತ್ಪುತ್ರ ಅಲ್ಲಿ ಹುಟ್ಟುತ್ತಾನೆ. ಆ ಸತ್ಪುತ್ರನಿಗೆ ಈ ಋಷ್ಯಶೃಂಗರು ವಿಶೇಷವಾಗಿ ಅನುಗ್ರಹವನ್ನು ಮಾಡಿ ಅವನ ಅಪೇಕ್ಷೆಗೆ ತಕ್ಕ ಹಾಗೆ ಇಂದ್ರನ ಐರಾವತವನ್ನು ಕೆಳಗೆ ಇಳಿಸುತ್ತಾನೆ ಅವನು ಬೇಡುತ್ತಾನೆ ಐರಾವತದ ಮೇಲೆ ನಾನು ಕೂಡಬೇಕು ಅಂತ. ಏನೆಲ್ಲಾ ನೋಡಿ ಇಂದ್ರನ ಜೊತೆಗೆ ಸೋಮಪಾನವನ್ನು ಮಾಡಿದವರು ಇವರ ಹಿಂದಿನ ಪಿತಾಮಹರು ಚಿತ್ರರಥ ಆದರೆ ಅವರ ವಂಶದಲ್ಲಿ ಬಂದಂತಹ ಈ ಹರ್ಯಂಗ ಇಂದ್ರನ ಐರಾವತವನ್ನು ಕೆಳಗೆ ಇಳಿಸಿಕೊಂಡು ಕೂಡುತ್ತಾನೆ ತನ್ನ ಸಾಮರ್ಥ್ಯದಿಂದ ಅಲ್ಲ, ಋಷ್ಯಶೃಂಗರು ತಪಸ್ಸಾಮರ್ಥ್ಯದಿಂದ. ನೋಡಿ ಮಳೆ ಕೊಡುತ್ತಾರೆ, ವಾಹನ ಕೊಡುತ್ತಾರೆ, ಸಂತಾನವನ್ನು ಕೊಡುತ್ತಾರೆ ಅವರು ತಾವು ಮದುವೆಯಾಗುವ ಮೊದಲು ನೈಷ್ಠಿಕವಾದ ಬ್ರಹ್ಮಚರ್ಯವನ್ನು ಪರಿಪಾಲನೆ ಮಾಡಿದ್ದರ ಪ್ರಭಾವ ಇದು. ಮದುವೆ ಆದಮೇಲೂ ಗ್ರಹಸ್ಥರಿಗೆ ವಿಹಿತವಾದಂತಹ ಏನು ಒಂದು

ಏಕಪತ್ನೀ ವ್ರತಸ್ತತ್ವ ಋತುಕಾಲದಲ್ಲಿ ಮಾತ್ರ ಗಮನ ಮಾಡತಕ್ಕಂತಹ ಬ್ರಹ್ಮಚರ್ಯ ಆ ಬ್ರಹ್ಮಚರ್ಯವನ್ನೂ ಪರಿಪಾಲನೆ ಮಾಡಿದ್ದರ ಮಹತ್ವ ಈ ರೀತಿ ಕೇಳಿದ ವರವನ್ನು ಕೊಡುವಂತಹ ಸಾಮರ್ಥ್ಯ ಅವರಿಗೆ ಬಂದಿದೆ ಎಂಬುದಾಗಿ ನಾವಿಲ್ಲಿ ಅರ್ಥ ಮಾಡಿಕೊಳ್ಳಬೇಕು.

ಇದೇ ವಂಶದಲ್ಲಿ ಬೃಹನ್ಮನಾ ಅಂತ ಬರುತ್ತಾನೆ ಆ ಬೃಹನ್ಮನಸ್ಸಿಗೆ ಇಬ್ಬರು ಹೆಂಡಂದಿರು ಯಶೋದೇವಿ, ಸತ್ಯಾ. ಯಶೋದೇವಿಯಲ್ಲಿ ವಿಜಯ, ವಿಜಯನ ಮಗ ಧೃತಿ, ಧೃತಿಯ ಮಗ ಧೃತರ್ವತ, ಧೃತರ್ವತನ ಮಗನೇ ಸತ್ಯಕರ್ಮಾ, ಸತ್ಯಕರ್ಮನ ಮಗ ಅಧಿರಥ, ಅಧಿರಥನ ಮಗನೇ ಕರ್ಣ, ಸಾಕು ಮಗ ಕರ್ಣ ಕುಂತಿಯ ಮಗನೇ ಸೂರ್ಯನಿಂದ ಕುಂತಿಯಲ್ಲಿ ಅವತಾರ ಮಾಡಿದವ ಸಾಕ್ಷಾತ್ ಸೂರ್ಯಾವತಾರ ಮಹಾನುಭಾವ, ಎಲ್ಲರ ಚಕ್ಷುರಿಂದ್ರಿಯಕ್ಕೆ ಅಭಿಮಾನಿ ದೇವತೆ ಎಲ್ಲರಿಗೆ ಬಾಹ್ಯ ಬೆಳಕನ್ನು ಕೊಡುವವನು ಸೂರ್ಯ ಹೇಗೋ ಎಲ್ಲರೂ ಕೂಡ ಆ ಬೆಳಕಿನ ಸಹಾಯದಲ್ಲಿ ಪದಾರ್ಥಗಳನ್ನು ನೋಡುವುದಕ್ಕೆ ಬೇಕಾದ ಚಕ್ಷುರಿಂದ್ರಿಯವನ್ನು ನಿಯಾಮನ ಮಾಡುವ ಮಹಾನುಭಾವ ಸೂರ್ಯ. **'ಪ್ರತಿದೃಶಮಿವ ನೈಕಧಾऽರ್ಕಮೇಕಂ'**[1] ಪ್ರತಿಯೊಬ್ಬರ ಕಣ್ಣಿನಲ್ಲಿಯೂ ಕೂಡ ಅಭಿಮಾನಿಯಾಗಿ ಇದ್ದು ಎಲ್ಲರಿಗೂ ಆ ಪದಾರ್ಥಗಳನ್ನು ತೋರಿಸಿ ಅದೆಲ್ಲವೂ ದೇವರ ಸೇವೆ ಅಂತ ಚಿಂತನ ಮಾಡುವ ಮಹಾನುಭಾವ. ಕಂಡ ಕಂಡದ್ದನ್ನೆಲ್ಲಾ ಕಮಲನಾಭನ ಮೂರ್ತಿ ಅಂತನ್ನುವ ಅನುಸಂಧಾನವನ್ನು ಒಳಗಿದ್ದು ಮಾಡುವಂತಹ ಮಹನೀಯ ಆ ಮಹಾನುಭಾವನಾಗಿರತಕ್ಕಂತಹ ಸೂರ್ಯ ಅಂತಹ ಸೂರ್ಯಾವತಾರ ಆಗಿದ್ದಾನೆ ಕರ್ಣ. ಅವನನ್ನು ಅಧಿರಥ ತಾನು ಸ್ವೀಕಾರ ಮಾಡಿ ರಕ್ಷಣೆ ಮಾಡುತ್ತಾನೆ ಎಂಬುದಾಗಿ ತಿಳಿಸಿಕೊಡುತ್ತಾರೆ. ಹೀಗೆ ಇದು ಒಂದು ವಂಶ, ಇದು ಕಕ್ಷೇಯು ಅಂತನ್ನುವ ಏನು ಆ ರೌದ್ರಾಶ್ವನ ಮಗ ಇದ್ದ ಅವನ ವಂಶ.

ಇನ್ನು ಋಚೇಯು ಅಂತ ಒಬ್ಬ ಇದ್ದನಲ್ಲ ಅವನ ವಂಶವನ್ನು ಹೇಳುತ್ತಾರೆ ಆ ಋಚೇಯು ತಕ್ಷಕನ ಮಗಳು ಜ್ವಲನಾ ಅಂತ ಆ ಜ್ವಲನಾಳನ್ನು ಮದುವೆ ಆಗಿದ್ದಾನೆ ಈ ಋಚೇಯು ಆ ತಕ್ಷಕನ ಮಗಳು ಜ್ವಲನಾ ಅನ್ನುವವಳಲ್ಲಿ ಮತಿನಾರ ಅನ್ನುವ ಮಗನನ್ನು ಪಡೆದಿದ್ದಾನೆ. ಅವನ ಮತಿ ನಾರಾ ಅಂದರೆ ಭಗವಂತನ ಗುಣಗಳು ಯಾವಾಗಲೂ ಭಗವಂತನ ಗುಣಗಳಲ್ಲಿ ಅವನ ಮತಿ ಇದ್ದದ್ದರಿಂದ ನಾರದಲ್ಲಿ ಮತಿ ಇದ್ದದ್ದರಿಂದ ಮತಿನಾರಾ ಅಂತ ಹೆಸರು ಇಟ್ಟಿರಬಹುದು ಅಂತಹ ಶ್ರೇಷ್ಠನಾದಂತಹ ಮತಿನಾರಾ ಎಂಬ ಮಗನಾಗಿದ್ದಾನೆ. ಅವನಿಗೆ ತಂಸು, ಪ್ರತಿರಥ, ಸುಬಾಹು ಅಂತ ಮೂರು ಜನ ಗಂಡುಮಕ್ಕಳು, ಗೌರೀ ಅನ್ನುವಂತಹ ಹೆಣ್ಣುಮಗಳು ಆ ಗೌರೀಯನ್ನೇ ಯುವನಾಶ್ವನಿಗೆ ಕೊಟ್ಟು ಮದುವೆ ಮಾಡಿದ್ದಾರೆ ಅಲ್ಲಿ ಮಾಂಧಾತೃ ಅಂತನ್ನುವ ರಾಜ ಹುಟ್ಟುತ್ತಾನೆ ಈ ರೀತಿ ಹೇಳುತ್ತಾರೆ.

ಮುಂದೆ ಇದೇ ವಂಶದಲ್ಲಿ ಕಣ್ವ ಅಂತನ್ನುವ ಒಬ್ಬ ರಾಜ ಅವನ ಮಗ ಮೇಧಾತಿಥಿ ಇದೇ ಕಣ್ವಾಯನರು ಅಂತ ಮುಂದೆ ಪ್ರಸಿದ್ಧರಾಗುತ್ತಾರೆ ಅಂತ ಹೇಳಿ ಕೊಡುತ್ತಾರೆ. ಈ ತಂಸು ಅಂತ ಏನು ಗಂಡುಮಗ ಇದ್ದನಲ್ಲ ಆ ತಂಸುವಿನ ಹೆಂಡತಿ ಈಲಿನೀ ಅಂತ ಈಲಿನಾ ಅಂತ ಒಬ್ಬ ರಾಜ ಈಲಿನನ ಮಗಳು ಈಲಿನೀ ಆ ಈಲಿನೀಯಲ್ಲಿ ಈ ತಂಸು ಸುರೋಧ ಅನ್ನುವಂತಹ ಮಗನನ್ನು ಪಡೆಯುತ್ತಾನೆ, ಸುರೋಧ ಉಪದಾನವೀ ಅನ್ನುವಂತಹ ಹೆಂಡತಿಯಲ್ಲಿ ದುಷ್ಯಂತನನ್ನು ಪಡೆಯುತ್ತಾನೆ ದುಷ್ಯಂತನ ಮಗನೇ ಭರತ ಚಕ್ರವರ್ತಿ. ಅವನಿಗೆ ಮೊದಲ ಹೆಸರು ಸರ್ವದಮನ ಅಂತ ಕಣ್ವರ ಆಶ್ರಮದಲ್ಲಿ ಶಕುಂತಲೆ ಇರುವಾಗ ಅಲ್ಲಿ ದುಷ್ಯಂತ ಆ ಶಕುಂತಲೆಯ ಜೊತೆಗೆ ಗಾಂಧರ್ವ ವಿವಾಹವನ್ನು ಮಾಡಿಕೊಂಡು ಆ ಸರ್ವದಮನನ್ನು ಪಡೆಯುತ್ತಾನೆ. ಆ ಸರ್ವದಮನ ಹೆಸರಿಗೆ ತಕ್ಕಂತೆ ಹುಲಿಯ

1. 42 ಭೀಷ್ಮಸ್ತುತಿ

ಬಾಯಿಯನ್ನು ತೆಗೆದು ಹಲ್ಲುಗಳನ್ನು ಎಣಿಸುತ್ತಿದ್ದನಂತೆ ಅವನು ಅದಕ್ಕೆ ಅವನಿಗೆ ಸರ್ವದಮನ ಅಂತ ಎಲ್ಲರೂ ಅನ್ನುವುದು ಅಂತಹ ಮಹಾನುಭಾವ ಭರತ ಚಕ್ರವರ್ತಿ ಸರ್ವದಮನ. ಮುಖ್ಯವಾಗಿ ಋಷಭನಾಮಕ ಪರಮಾತ್ಮನ ಮಗನಾದ ಭರತ ಅಂತ ಏನಿದ್ದಾನೆ ಭರತ ಚಕ್ರವರ್ತಿ ದೇವರ ಮಗ ಭಾಗವತದ ಪಂಚಮಸ್ಕಂಧದಲ್ಲಿ ಬರುತ್ತದೆ ಅವನ ಹೆಸರಿನಲ್ಲಿ ಈ ನಮ್ಮ ದೇಶಕ್ಕೆ ಭಾರತ ದೇಶ ಅಂತ ಹೆಸರು ಬಂದದ್ದು. ಆನಂತರದಲ್ಲಿ ಈ ಭರತನ ಹೆಸರೂ ಅದಕ್ಕೆ ಸೇರಿಕೊಂಡಂತೆ **'ಯಸ್ಯ ನಾಮ್ನಾ ಸ್ಮ ಭಾರತಾಃ'**[1] ಭಾರತರು ಅಂತ ಇವರಿಗೆಲ್ಲ ಕರೆಯುವುದು ಜನಮೇಜಯನಿಗೆ ಹೇಳುತ್ತಾ ಇದ್ದಾರೆ ವೈಶಂಪಾಯನರು ನಿಮಗೆಲ್ಲಾ ಭಾರತರು ಅಂತ ಕರೆಯುವುದು ಆ ಭರತನಿಂದ ಅಂತ ಅಂತಹ ಆ ಮಹಾನುಭಾವ. ನಮ್ಮ ಭಾರತ ದೇಶದ ಹೆಸರು ಬರುವುದಕ್ಕೆ ಇವನ ಹೆಸರೂ ಕಾರಣವಾಗಿದೆಯಲ್ಲಾ ಅಂತಹ ಈ ಭರತ ಸರ್ವದಮನನಾಗಿದ್ದಾನೆ ನಮ್ಮ ದೇಶವೂ ಕೂಡ ಸರ್ವದಮನ ಎಲ್ಲ ದೇಶಗಳನ್ನೂ ಗೆದ್ದು ಧಾರ್ಮಿಕವಾಗಿ, ಆಧ್ಯಾತ್ಮಿಕವಾಗಿ ಸಾಧನೆಯನ್ನು ಮಾಡುವುದರಲ್ಲಿ ಅತ್ಯಂತ ಅನುಚಾನವಾದ ಪ್ರಾಚೀನವಾದಂತಹ ಸಂಪ್ರದಾಯವನ್ನು ಪಡೆದುಕೊಂಡು ಬಂದಂತಹ ನಮ್ಮ ದೇಶ. ಎಲ್ಲದರೊಳಗೂ ಆಧ್ಯಾತ್ಮಿಕವಾದ ತತ್ವಜ್ಞಾನದೊಳಗೂ ಸರಿ, ರಾಜ್ಯದ ಪರಂಪರೆಯಲ್ಲಿಯೂ ಸರಿ, ಎಲ್ಲಾ ವಿಧವಾದ ವಿಜ್ಞಾನಗಳಲ್ಲಿಯೂ ಸರಿ ಅದು ಭೂಗೋಲ ಇರಬಹುದು, ಖಗೋಲ ವಿಜ್ಞಾನ ಇರಬಹುದು, ರಸಾಯನ ವಿಜ್ಞಾನ ಇರಬಹುದು, ಭೂತ ವಿಜ್ಞಾನ ಇರಬಹುದು, ಜ್ಯೋತಿಷ್ಯ ಇರಬಹುದು, ಯೋಗಶಾಸ್ತ್ರ ಇರಬಹುದು, ವೈದ್ಯಶಾಸ್ತ್ರ ಇರಬಹುದು, ತತ್ವಶಾಸ್ತ್ರ ಇರಬಹುದು ಸಕಲ ವಿಧವಾದ ಕ್ಷೇತ್ರಗಳಲ್ಲಿಯೂ ಕೂಡ ಸರ್ವದಮನ ಎಲ್ಲರನ್ನೂ ಸೋಲಿಸಿ ಅತ್ಯಂತ ಉನ್ನತವಾದ ಸರ್ವೋನ್ನತವಾದ ಸ್ಥಾನದಲ್ಲಿ ರಾರಾಜಮಾನವಾದಂತಹ ದೇಶ ಇದು ನಮ್ಮ ಭಾರತ ದೇಶ ಅದರ ಸಾಂಕೇತಿಕವಾಗಿ ಅವನ ಹೆಸರು ಸರ್ವದಮನ ಅಂತ.

ಮುಖ್ಯವಾಗಿ ಆ ವಿಷ್ಣು ಪುತ್ರನಾದಂತಹ ಋಷಭ ಪುತ್ರನಾದ ಭರತ, ಭರತ ಅಂದರೆ ವಾಯು ದೇವರ ಹೆಸರು **'ಭ'** ಇಪ್ಪತ್ತೆಂಟು ಅರ್ಥಗಳನ್ನು ಶ್ರೀಮದಾಚಾರ್ಯರು ಹೇಳುತ್ತಾರೆ. **'ಭ'** ಅಂದರೆ ಸರ್ವೋತ್ತಮನಾದಂತಹ ಸರ್ವತಂತ್ರ ಸ್ವತಂತ್ರನಾದ ಭಗವಂತ ಅವನಲ್ಲಿ ರತರಾದ ವಾಯು ದೇವರು ಭರತರು ಅಂತಹ ವಾಯು ದೇವರ ಶುದ್ಧವಾದಂತಹ ತತ್ವಜ್ಞಾನದ ಪರಂಪರೆ ಎಲ್ಲಿ ವಿರಾಜಮಾನವಾಗಿದೆ ಅಂತಹ ದೇಶ ಇದು ಭರತ ದೇಶ ಭಾರತ ದೇಶ ಅಂತ ನಾವು ತಿಳಿಯಬೇಕು. ಅವನು ಶಕುಂತಲೆಯನ್ನು ಮದುವೆಯಾದ, ಸರ್ವದಮನನನ್ನ ಪಡೆದ ಆದರೆ ಶಕುಂತಲೆಯನ್ನು ಕಣ್ವರ ಆಶ್ರಮದಲ್ಲೆಯೇ ಬಿಟ್ಟು ಬಂದಿದ್ದಾನೆ. ಶಕುಂತಲೆ ಕಣ್ವರ ಆದೇಶವನ್ನು ಪಡೆದು ಸರ್ವದಮನನನ್ನು ಕರೆದುಕೊಂಡು ಬರುತ್ತಾಳೆ ಇವನು ಯಾರು ಗೊತ್ತಿಲ್ಲ, ನೀನು ಯಾರು ಅಂದು ಬಿಡುತ್ತಾನೆ. ಅವನಿಗೆ ಗೊತ್ತು ಇವಳು ಹೆಂಡತಿ, ಇವನು ಮಗ ಅಂತ ಆದರೆ ಹೀಗೆ ಬಂದ ಒಬ್ಬ ಹೆಣ್ಣನ್ನು ಹಿಂದೆ ಮುಂದೆ ಆಲೋಚನೆ ಮಾಡದೆ ಸ್ವೀಕಾರ ಮಾಡಿದ ವಿವಾಹ ಆದದ್ದು ಅರಣ್ಯದಲ್ಲಿ ಗಾಂಧರ್ವ ವಿವಾಹ, ಇಲ್ಲಿಯ ಜನರಿಗೆ ಗೊತ್ತಿಲ್ಲ ತಪ್ಪು ತಿಳಿಯಬಾರದು ಅನ್ನುವುದಕ್ಕೆ ಹೀಗೆ ನಾಟಕ ಮಾಡಿದ ಆಗ ಆಕಾಶವಾಣಿ ಆಗುತ್ತದೆ ಸರ್ವಥಃ ನೀನು ಚಿಂತೆ ಮಾಡಬೇಡ.

ದುಷ್ಯನ್ತಂ ಪ್ರತಿ ರಾಜಾನಂ ವಾಗುವಾಚಾಶರೀರಿಣೀ ।
ಮಾತಾ ಭಸ್ತ್ರಾಪಿತುಃ ಪುತ್ರೋ ಯೇನ ಜಾತಃ ಸ ಏವ ಸಃ । (32.11 ಹರಿವಂಶಪರ್ವ)

1. 32.10 ಹರಿವಂಶಪರ್ವ



ಭರಸ್ವ ಪುತ್ರಂ ದುಷ್ಮನ್ತ ಮಾವಮಂಸ್ಥಾಃ ಶಕುನ್ತಲಾಮ್ ।
ರೇತೋಧಾಃ ಪುತ್ರ ಉನ್ನಯತಿ ನರದೇವ ಯಮಕ್ಷಯಾತ್ ॥ (32.12 ಹರಿವಂಶಪರ್ವ)

ತ್ವಂ ಚಾಸ್ಯ ಧಾತಾ ಗರ್ಭಸ್ಯ ಸತ್ಯಮಾಹ ಶಕುನ್ತಲಾ । (32.13 ಹರಿವಂಶಪರ್ವ)

ನೀನೇ ಮುಖ್ಯವಾಗಿ ಆ ಸರ್ವದಮನನ ಉತ್ಪತ್ತಿಗೆ ಕಾರಣ ಆವಳು ಅಧಿಷ್ಠಾನ ಮಾತ್ರ ತಾಯಿ, ನೀನು ಕಾರಣ ನಿನ್ನ ಮಗ ಆವನು ಆವನಿಂದಲೇ ನಿನ್ನ ಉದ್ದಾರ ಆಗುವುದು **'ಪುನ್ನಾಮ ನರಕಾತ್ ತ್ರಾಯತೇ ಯತಃ ಪುತ್ರಃ'** ಅಂಥವನನ್ನು ನೀನು ಪರಿತ್ಯಾಗ ಮಾಡಿ ಏನು ಮಾಡುತ್ತೀಯಾ ಆವನ ಭರಣವನ್ನು ಮಾಡು ಅಂತ ಅದಕ್ಕೆ ಆವನಿಗೆ ಭರತ ಅಂತ ಹೆಸರು ಬಂತು ಆಷ್ಟೇ ಬೇಕಾಗಿತ್ತು ದೇವತೆಗಳ ಆಜ್ಞೆಯನ್ನು ಪಡೆದು ಆವನನ್ನು ಸ್ವೀಕಾರ ಮಾಡಿದ್ದಾನೆ. ಮುಂದೆ ಭರತನಿಗೆ ಸಂತಾನ ಆಗುವುದಿಲ್ಲಾ ಆಗ ಆಲ್ಲಿ ಮಾತೃ ಶಾಪದಿಂದ ಆನ್ನುವುದಕ್ಕೋಸ್ಕರ ಭರದ್ವಾಜ ಋಷಿಗಳು ವಿಶೇಷವಾಗಿ ಅನುಗ್ರಹವನ್ನು ಮಾಡುತ್ತಾರೆ. ಇವನ ವಂಶ ವಿತಥವಾದಾಗ, ವ್ಯರ್ಥವಾದಾಗ, ನಿಂತು ಹೋದಾಗ ಹುಟ್ಟಿದ ಮಕ್ಕಳು ಸಾಯುತ್ತಾರೆ, ಭರದ್ವಾಜರ ಅನುಗ್ರಹದಿಂದ ಮುಂದೆ ಸಂತಾನ ಬೆಳೆಯುತ್ತೆ, ಭರದ್ವಾಜದರಿಂದ ಆ ವಂಶ ಮುಂದುವರಿಯುತ್ತೆ ಆದ್ದರಿಂದ ಆ ಮೊದಲನೆಯವನಿಗೆ ವಿತಥ ಅಂತ. ವಿಚಿತ್ರ ನೋಡಿ ಆವನು ಹುಟ್ಟಿದ್ದಾನೆ ಮಗ ಉತ್ತಮನಾದ ರಾಜ ವಿತಥ ಅಂದರೆ ವ್ಯರ್ಥ ಅಂತ ಆವನಿಗೆ ವಿತಥ ಅಂತ ಹೆಸರು ಇಟ್ಟದ್ದು ಆವನು ವಿತಥ ಅಲ್ಲ, ವಂಶ ವಿತಥ ಆದಾಗ ಮೊದಲು ಹುಟ್ಟಿದವನಾದ್ದರಿಂದ ಆವನಿಗೆ ಹೆಸರು ವಿತಥ ಅಂತ ಬಂತು.

ನಮ್ಮ ಪರಂಪರೆಯಲ್ಲಿ ಒಂದು ತುಚ್ಛಗ್ರಂಥ ಅಂತ ಇದೆ ಆ ತುಚ್ಛಗ್ರಂಥ ಅಂದರೆ ಆ ಗ್ರಂಥ ತುಚ್ಛ ಅಂತ ಅರ್ಥ ಅಲ್ಲ ಅನೇಕ ಪರವಾದಿಗಳು ಮಾಡುವಂತಹ ಆಕ್ಷೇಪಗಳನ್ನು ಒಂದೊಂದನ್ನು ಎಳೆ ಎಳೆಯಾಗಿ ಎಳೆದೆಳೆದು ಅದನ್ನು ಚೆನ್ನಾಗಿ ನಿರಾಕರಣೆ ಮಾಡಿ ಈ ಎಲ್ಲಾ ಆಕ್ಷೇಪಗಳು ತುಚ್ಛ ತುಚ್ಛ ತುಚ್ಛ ಅಂತ ಹೇಳಿ ಶ್ರೀಮದಾಚಾರ್ಯರು ಸತ್ಸಿದ್ಧಾಂತವನ್ನು ಸ್ಥಾಪನೆ ಮಾಡುವಂತಹ ಒಂದು ಗ್ರಂಥ ಅದರ ಹೆಸರು ತುಚ್ಛ ಗ್ರಂಥ ಅಂತ ಇದೆ ಅದು ತುಚ್ಛ ಅಲ್ಲ. ಹಾಗೆ ಈ ವಂಶ ವಿತಥವಾದಾಗ ಗುರುವನುಗ್ರಹದಿಂದ ಇವನು ಹುಟ್ಟಿದವನಾದ್ದರಿಂದ ಇವನಿಗೆ ವಿತಥ ವಿತಥ ಎಂಬುದಾಗಿ ಹೇಳುತ್ತಾರೆ ಎಂಬುದಾಗಿ ನಾವು ಇಲ್ಲಿ ಅರ್ಥವನ್ನು ಮಾಡಿಕೊಳ್ಳಬೇಕು. ಭರದ್ವಾಜ, ಭರದ್ವಾಜ ಅನ್ನುವುದು ಐತರೇಯ ಉಪನಿಷತ್ ಭಾಷ್ಯದಲ್ಲಿ ವಿಷ್ಣು ಪರವಾಗಿ ಅರ್ಥ ಮಾಡುತ್ತಾರೆ ಶ್ರೀಮದಾಚಾರ್ಯರು **'ಏಷ ಉ ಏವ ಬಿಭ್ರದ್ವಾಜಃ'** ದ್ವಾಜ ಅಂದರೆ ಅನ್ನ ಇಡೀ ಜಗತ್ತಿಗೆ ಅನ್ನವನ್ನು ಕೊಡುತ್ತಾನೆ ಆದ್ದರಿಂದ ಅನ್ನ ಕೊಟ್ಟು ಪೋಷಣೆ ಮಾಡುತ್ತಾನೆ ಆದ್ದರಿಂದ ಪರಮಾತ್ಮನಿಗೆ ಭರದ್ವಾಜ ಅಂತ ಕರೆಯುತ್ತಾರೆ. ಅಂತಹ ಭರದ್ವಾಜನಿಂದ ಹುಟ್ಟಿದವ ಇವನು ವಿತಥ ಅವನೇನು ಭರದ್ವಾಜ ಎಲ್ಲರಿಗೆ ಅನ್ನ ಕೊಡುವವ ಅವನಿಂದ ಅನ್ನ ಪಡೆದವರು ಯಾರೋ ಅವರು ವಿತಥರು **'ವಿ'** ಅಂದರೆ ವಿಷ್ಣು ಅವನಿಂದ **'ತ'** ಸಮೃದ್ಧವಾದ ವ್ಯಾಪ್ತವಾದ **'ಥ'** ಅನ್ನವನ್ನ ಪಡೆದವರು ಯಾರೋ ಅವರು ವಿತಥರು. ಹೀಗಾಗಿ ಭರದ್ವಾಜನ ಮಗ ವಿತಥ ಅನ್ನುವುದು ಶ್ರೀಮದಾಚಾರ್ಯರ ಐತರೇಯ ಭಾಷ್ಯದ ಹಿನ್ನಲೆಯಲ್ಲಿ ಒಂದು ವಿಶಿಷ್ಟವಾದ ಅರ್ಥವನ್ನು ಪಡೆಯುತ್ತೆ ಅಂತ ನಾವು ಇಲ್ಲಿ ಚಿಂತನವನ್ನು ಮಾಡಬಹುದು. ಹೀಗೆ ಆವನ ವಂಶ ಮುಂದುವರೆಯುತ್ತದೆ ಬಹಳ ಸುದೀರ್ಘವಾಗಿ ಇರತಕ್ಕಂತಹ ವಂಶ ಎಂಬುರಾಗಿ ನಾವು ತಿಳಿಯಬೇಕು.

ಅಜಮೀಢ ವಂಶದ ಬಗ್ಗೆ ಹೇಳುತ್ತಾರೆ ಅಲ್ಲಿ ವಧ್ಯಶ್ವ ಅಂತ ಒಬ್ಬ ರಾಜ ಬರುತ್ತಾನೆ ಆ ವಧ್ಯಶ್ವನಿಗೆ ದಿಯೋದಾಸ ಮತ್ತು ಅಹಲ್ಯೆ ಅಂತ ಆ ಅಹಲ್ಯೆಯನ್ನು ಗೌತಮರು ವಿವಾಹವಾಗುತ್ತಾರೆ ಅಲ್ಲಿ ಶತಾನಂದ ಎಂಬಂತಹ ಋಷಿಗಳು ಹುಟ್ಟುತ್ತಾರೆ. ವೇಂಕಟೇಶ ಮಹಾತ್ಮ್ಯದಲ್ಲಿ ಆ ಶತಾನಂದರೇ ಜನಕ ಮಹಾರಾಜನಿಗೆ

ವೇಂಕಟೇಶ ಮಹಾತ್ಮ್ಯವನ್ನು ಉಪದೇಶ ಮಾಡಿದ್ದು ಅಂತನ್ನುವುದನ್ನು ನೀವೆಲ್ಲ ಕೇಳಿದ್ದೀರಿ ಮತ್ತೆ ಮುಂದೆ ಕೇಳುತ್ತಾ ಇದ್ದೀರಿ. ಈ ರೀತಿ ಅವನ ವಂಶದಲ್ಲಿ ಹಾಗೆ ಬರುತ್ತದೆ. ಮುಂದೆ ಶರದ್ವಾನ್ ಅನ್ನುವಂತಹ ಒಬ್ಬ ಋಷಿ ಆ ಶರದ್ವಾನ್ ಅನ್ನುವ ಋಷಿ ಜಾಲಪದೀ ಅನ್ನುವಂತಹ ಒಬ್ಬ ಅಪ್ಸರಾ ಸ್ತ್ರೀ ಅವಳನ್ನು ನೋಡಿದಾಗ ಅವರಿಗೆ ಸ್ಖಲನವಾಗುತ್ತದೆ ಅದನ್ನು ಅಲ್ಲಿ ಒಂದು ದರ್ಭದ ಮೇಲೆ ಹಾಕಿಬಿಡುತ್ತಾರೆ. ಅಲ್ಲಿ ಎರಡು ಅವಳಿ ಜವಳಿ ಮಕ್ಕಳು ಹುಟ್ಟುತ್ತಾರೆ ಕೃಪ, ಕೃಪೀ ಅಂತ ಅವರು ಅಲ್ಲಿಯೇ ಅದನ್ನು ಬಿಟ್ಟು ಮುಂದೆ ಹೊರಟು ಬಿಡುತ್ತಾರೆ. ಶಂತನು ಮಹಾರಾಜ ಬಂದು ನೋಡುತ್ತಾನೆ ಅದನ್ನು ಅತ್ಯಂತ ಕೃಪೆಯಿಂದ ಅಯ್ಯೋ ಯಾರೋ ಈ ಅವಳಿ ಜವಳಿ ಮಕ್ಕಳನ್ನು ಇಲ್ಲಿ ಬಿಟ್ಟಿದ್ದಾರೆ ಗಂಡು-ಹೆಣ್ಣು ಮಕ್ಕಳನ್ನು ಅಂತ ಅದನ್ನು ಸ್ವೀಕಾರ ಮಾಡುತ್ತಾನೆ. ಕೃಪೆಯಿಂದ ಸ್ವೀಕಾರ ಮಾಡುತ್ತಾನೆ ಆದ್ದರಿಂದ ಗಂಡು ಮಗನಿಗೆ ಕೃಪ ಹೆಣ್ಣುಮಗಳಿಗೆ ಕೃಪಿ ಅಂತ ಹೆಸರು ಇಡುತ್ತಾರೆ. ಆ ಕೃಪ ಅಂದರೆ ಸಾಕ್ಷಾತ್ ಏಕಾದಶ ರುದ್ರರಲ್ಲಿ ವಿಷ್ಕಂಬ ಅನ್ನುವ ಹೆಸರಿನ ಒಬ್ಬ ರುದ್ರ ಪರಮಾತ್ಮನ ಸೇವೆಯನ್ನು ಮಾಡುವುದಕ್ಕೋಸ್ಕರವಾಗಿ ಅವತಾರ ಮಾಡಿದ್ದು ಆ ಮಹಾನುಭಾವರು ವಿಷ್ಕಂಬನಾಮಕ ರುದ್ರರೇ ಕೃಪಾಚಾರ್ಯರು ಎಂಬುದಾಗಿ ತಿಳಿಯಬೇಕು. ಕೃಪೀ ಅಂದರೆ ಸಾಕ್ಷಾತ್ ಬೃಹಸ್ಪತ್ಯಾಚಾರ್ಯರರ ಮಡದಿ ತಾರಾದೇವಿ ಅವಳು ಕೃಪೀಯಾಗಿ ಹುಟ್ಟಿದ್ದಾಳೆ ಈ ಕೃಪೀಯನ್ನೇ ಬೃಹಸ್ಪತ್ಯಾಚಾರ್ಯರರ ಅವತಾರರಾದ ದ್ರೋಣಾಚಾರ್ಯರು ಮದುವೆಯಾಗುತ್ತಾರೆ ಎಂಬುದಾಗಿ ನಾವು ಇಲ್ಲಿ ತಿಳಿಯಬೇಕು.

ಮುಂದೆ ಅಜಮೀಢನಿಂದ ಮತ್ತೊಬ್ಬ ಸೋಮಕ ಅಂತ ಹುಟ್ಟುತ್ತಾನೆ ಸೋಮಕನ ವಂಶದಲ್ಲಿ ಪೃಷತ ಅನ್ನುವಂತಹ ರಾಜ. ಆ ಪೃಷತ ಎಂಬಂತಹ ರಾಜನೂ ಕೂಡ ಇದೇ ರೀತಿಯಾಗಿ ಅಪ್ಸರಾ ಸ್ತ್ರೀಯನ್ನು ನೋಡಿದಾಗ ಸ್ಖಲನವಾದಾಗ ನಾಚಿಕೆಯಿಂದ ಆ ಸ್ಖಲನವಾದ ಸ್ಥಳದಲ್ಲಿ ಕಾಲಿನಿಂದ ತುಳಿಯುತ್ತಾನೆ ಅಲ್ಲಿ ಹುಟ್ಟಿದವನೇ ದ್ರುಪದ ರಾಜ. **'ಪದೇ ದ್ರುತತ್ವಾದ್ ದ್ರುಪದಾಭಿಧೇಯಃ'**[1] ಶ್ರೀಮದಾಚಾರ್ಯರು ನಿರ್ಣಯ ಹೇಳುತ್ತಾರೆ ಯಾಕೆ ಅವನಿಗೆ ದ್ರುಪದ ಅಂದರು ಕಾಲಿನಿಂದ ಅದನ್ನ ತುಳಿಯುತ್ತಾನೆ ಅನ್ನುವುದಕ್ಕಾಗಿ ಅಲ್ಲಿ ಹುಟ್ಟಿದಂತಹ ರಾಜ ದ್ರುಪದ ರಾಜ. ಅವನು ಯಾರು ಪರಮಾತ್ಮನ ಭಕ್ತ, ಗಂಧರ್ವ, ಬ್ರಹ್ಮ ದೇವರ ಸಭೆಯಲ್ಲಿ ಗಾಯಕ ಹೂಹೂ ಅನ್ನುವಂತಹ ಗಂಧರ್ವ. ಮೊಸಳೆ, ಗಜೇಂದ್ರ ಮೋಕ್ಷದ ಕಾಲದಲ್ಲಿ ಯಾವನು ಮೊಸಳೆಯಾಗಿದ್ದ ಅವನು ಹೂಹೂ ಅನ್ನುವಂತಹ ಗಂಧರ್ವ ಅವನು ಇಲ್ಲಿ ದ್ರುಪದನಾಗಿ ಹುಟ್ಟಿದ್ದಾನೆ, ಹಾಹಾ ಗಂಧರ್ವ ಅವನು ವಿರಾಟನಾಗಿ ಹುಟ್ಟಿದ್ದಾನೆ ಅವನು ಆನೆ ಹೂಹೂ ಗಂಧರ್ವ ಅವನು ದ್ರುಪದನಾಗಿ ಹುಟ್ಟಿದ್ದಾನೆ ಎಂಬುದಾಗಿ ಹೇಳಿದ್ದಾರೆ. ಆವಹ ಎಂಬ ಮರುತ್ತಿನ ಆವೇಶ ಹೂಹೂ ಎಂಬ ಗಂಧರ್ವನ ಅವತಾರ ಈ ದ್ರುಪದ ರಾಜ. ಇವನ ಮಗ ಸಾಕ್ಷಾತ್ ಧೃಷ್ಟದ್ಯುಮ್ನ ಅಗ್ನಿಯ ಅವತಾರ, ಮಗಳು ಸಾಕ್ಷಾತ್ ಭಾರತೀದೇವಿ **'ಭವತಿ ಯದನುಭಾವಾ ದೇಡಮೂಕೋಪ್ಸಿ ವಾಗ್ಮೀ'** ಅಂತಹ ಮಹಾನುಭಾವಳಾದ ಭಾರತೀ ದೇವಿ ಆ ದ್ರುಪದ ರಾಜನಿಂದ ಅವತಾರ ಮಾಡಿದ್ದಾಳೆ ಎಂಬುದಾಗಿ ತಿಳಿಯಬೇಕು. ಶಚಿ, ಶಾಮಲಾ, ಉಷಾ, ಉಮಾ ಇವರ ಸನ್ನಿಧಾನವೂ ಇದೆ ಐದು ಜನರೂ ಸೇರಿ ಅವತಾರ ಮಾಡಿದ್ದಾರೆ ಎಂಬುದಾಗಿ ನೀವು ಮಹಾಭಾರತ ತಾತ್ಪರ್ಯ ನಿರ್ಣಯದಿಂದ ಎಲ್ಲರೂ ತಿಳಿದಿದ್ದೀರಿ.

ಮುಂದೆ ಈ ಅಜಮೀಢನ ಹೆಂಡತಿ ಒಬ್ಬಳು ಧೂಮಿನೀ ಅಂತ. ಆ ಧೂಮಿನೀ ಭಾರೀ ಶ್ರೇಷ್ಠವಾದ ಸಂತಾನ ನನಗೆ ಆಗಬೇಕು ಅಂತ ಹೇಳಿ ಹತ್ತು ಸಾವಿರ ವರ್ಷ ಘೋರವಾದ ತಪಶ್ಚರ್ಯವನ್ನು ಮಾಡುತ್ತಾಳೆ ಹೆಣ್ಣು ಸಾಮಾನ್ಯವಾಗಿ ಗಂಡಸರು ತಪಶ್ಚರ್ಯವನ್ನು ಮಾಡಿ ಮಕ್ಕಳನ್ನು ಪಡೆದದ್ದು ಇದೆ. ಇಲ್ಲಿ ಇವಳು ಸ್ವತಃ ಹತ್ತು ಸಾವಿರ ವರ್ಷ ತಪಶ್ಚರ್ಯವನ್ನು ಮಾಡುತ್ತಾಳೆ ಪವಿತ್ರವಾದಂತಹದನ್ನು ಅಲ್ಪವಾದದ್ದನ್ನು ಮಾತ್ರ ಭೋಜನ ಮಾಡುತ್ತಾ ಇದ್ದಳು

1. 11.70 ಮಭಾತಾನಿರ್ಣಯ

ಆ ರೀತಿ ಉಳಿದ ಹೊತ್ತು ಉಪವಾಸ, ಅಗ್ನಿಹೋತ್ರದಲ್ಲಿ ಬಳಸುವ ದರ್ಭಗಳ ಮೇಲೆ ಮಲಗುವುದು, ಹಾಸಿಗೆ ಮೇಲೆ ಮಲಗುವುದಿಲ್ಲ. ಎಷ್ಟು ದಿವಸ, ಹತ್ತು ಸಾವಿರ ವರ್ಷ ಈ ರೀತಿ ಮಿತ ಭೋಜನ, ಅಲ್ಪ ಭೋಜನ ಮತ್ತು ಇಂತಹ ದರ್ಭದ ಮೇಲೆ ಶಯನ ಈ ರೀತಿ ವ್ರತವನ್ನು ಮಾಡುತ್ತಾಳೆ. ಅಜಮೀಢನ ಮಗನಾಗಿ ಧೂಮಿನೀಯಲ್ಲಿ ಋಕ್ಷ ಹುಟ್ಟುತ್ತಾನೆ, ಋಕ್ಷನ ಮಗ ಸಂವರಣ, ಸಂವರಣನ ಮಗನೇ ಕುರು ಕುರುವಂಶ ಅಂತ ಕುರುವಂಶದೊಳಗೆ ಇವರೆಲ್ಲಾ ಬರುವುದು ಪಾಂಡವರು ಎಲ್ಲರೂ ಇಂಥವರೆಲ್ಲ ಮಹಾನುಭಾವರು ಬರಲಿಕ್ಕೆ ಆ ಮಹಾನುಭಾವಳು ಎಷ್ಟು ತಪಸ್ಸು ಮಾಡಿದ್ದಾಳೆ ನೋಡಿರಿ. ಅವಳ ಹತ್ತು ಸಾವಿರ ವರ್ಷದ ತಪಸ್ಸು ಅನ್ನುವುದಕ್ಕಾಗಿ ಅವಳಿಗೆ ಋಕ್ಷ, ಋಕ್ಷನಿಗೆ ಸಂವರಣ, ಸಂವರಣನ ಮಗನೇ ಕುರು, ಕುರುವಿನ ವಂಶವೇ ಇಷ್ಟು ದೊಡ್ಡದಾಗಿ ಮುಂದೆ ಬೆಳೆದು ಬರುತ್ತದೆ. ಆ ಕುರುವಿಗೆ ನಾಲ್ಕು ಜನ ಮಕ್ಕಳು ಸುಧನ್ವಾ, ಸುಧನು, ಪರೀಕ್ಷಿತ್, ಪ್ರವರ ಅಂತ ಆದರೊಳಗೆ ಆ ಸುಧನ್ವನ ವಂಶದಲ್ಲಿ ಬೃಹದ್ರಥ ಬರುತ್ತಾನೆ. ಆ ಬೃಹದ್ರಥನಿಗೆ ಪ್ರತ್ಯಗ್ರಹ, ಕುಶ, ಮಾರುತ, ಯದು, ಮತ್ಸ್ಯ, ಕಾಲೀ ಹೀಗೆಲ್ಲ ಅಲ್ಲಿ ಬರುತ್ತಾರೆ. ಆ ಕಾಲೀಯನ್ನೇ ಉಪರಿಚರ ಕಾಲೀ ಅಂದರೆ ಅವಳೇ ಸತ್ಯವತೀ ಉಪರಿಚರ ವಸು ಅವನ ಮಗಳಾಗಿ ಅವಳು ಬರುತ್ತಾಳೆ ಅವಳನ್ನು ಮುಂದೆ ಮತ್ತೆ ಪರಾಶರರಿಂದ ವೇದವ್ಯಾಸ ದೇವರು ಅವತಾರ ಮಾಡುತ್ತಾರೆ. ಶಂತುವಿನಲ್ಲಿ ವಿಚಿತ್ರವೀರ್ಯ, ಚಿತ್ರಾಂಗದಾ ಹುಟ್ಟುತ್ತಾರೆ ಅನ್ನುವುದನ್ನು ಹಿಂದೆ ಕೇಳಿದ್ದೀರಿ. ಇದೇ ವಂಶದಲ್ಲಿ ಸಂಭವ ಅಂತ ಒಬ್ಬ ಬರುತ್ತಾನೆ. ಆ ಸಂಭವನಿಗೆ ಒಂದು ಮಗು ಹುಟ್ಟುತ್ತದೆ, ಅದು ಎರಡು ಹೋಳಾಗಿ ಹುಟ್ಟುತ್ತದೆ. ಜರಾ ಎಂಬ ರಾಕ್ಷಸಿ ಬಂದು ಅದನ್ನು ಕೂಡಿಸುತ್ತಾಳೆ ಅವನು ಜರಾಸಂಧ ಅಂತ ಆಗುತ್ತಾನೆ. ನೋಡಿ ಇವರೆಲ್ಲ ಕುರು ವಂಶದವರೇ ಮೂಲತಃ ಬಳಗದವರೇ ಜರಾಸಂಧ ಅಂದರೆ ಏನು ಬಹಳ ದೂರ ಅಲ್ಲ ಭೀಮಸೇನ ದೇವರಿಗೆ. ಈ ರೀತಿ ಆ ಸುಧನ್ವನ ವಂಶ ಆ ಕಡೆಗೆ ಬೆಳೆಯುತ್ತದೆ.

ಇನ್ನೊಬ್ಬ ಪರೀಕ್ಷಿತ್ ಅನ್ನುವ ಕುರುವಿನ ಮಗನಿದ್ದನಲ್ಲ ಆ ಪರೀಕ್ಷಿತ್ ಅನ್ನುವವನ ವಂಶದಲ್ಲಿಯೇನೆ ಪಾಂಡವರೆಲ್ಲ ಬರುತ್ತಾರೆ. ಆ ಪರೀಕ್ಷಿತ್ ಅನ್ನುವ ರಾಜನ ವಂಶದಲ್ಲಿ ಇವರೆಲ್ಲ ಬರುತ್ತಾರೆ ಶಂತನು ಅದಕ್ಕೆ ಹೇಳುತ್ತಾರೆ ಜನಮೇಜಯನಿಗೆ ವೈಶಂಪಾಯನರು ನಿನ್ನ ವಂಶದಲ್ಲಿ ಋಕ್ಷ ಅಂತ ಹೆಸರಿನವರು ಇಬ್ಬರು ಬಂದಿದ್ದಾರೆ ನೋಡಪ್ಪ.

ದ್ವಾವೃಕ್ಷೌ ತವ ವಂಶೇऽಸ್ಮಿನ್ ದ್ವಾವೇವ ತು ಪರೀಕ್ಷಿತೌ ॥ (32.76 ಹರಿವಂಶಪರ್ವ)

ನಿಮ್ಮ ಅಪ್ಪ ಪರೀಕ್ಷಿತ್ ಒಬ್ಬ ಬೇರೆ ಈ ಮೂಲಪರುಷ ಪರೀಕ್ಷಿತ್ ಒಬ್ಬ ಬೇರೆ, ಭೀಮಸೇನ ಅಂತ ನಿಮ್ಮ ಹಿರಿಯ ಬೇರೆ ನಿಮ್ಮ ತಾತನ ಅಣ್ಣ ಅದಲ್ಲದೇ ಇನ್ನಿಬ್ಬರಿದ್ದಾರೆ ಮೂರು ಜನ ಭೀಮಸೇನರು ಇದ್ದಾರೆ ಅಂತ. ಇಬ್ಬರು ಜನಮೇಜಯರು ನೀನೊಬ್ಬವ ಹಿಂದೆ ಒಬ್ಬ ಜನಮೇಜಯ ಬಂದ ಅಂತ ಒಟ್ಟು ಒಂದು ಸಾಮಾನ್ಯ ಪರಿಚಯವನ್ನು ಅವನಿಗೆ ಮಾಡಿಸಿಕೊಡುತ್ತಾರೆ. ಈ ಪರೀಕ್ಷಿತನ ವಂಶದಲ್ಲಿಯೇನೆ ಬಂದವನು ಪ್ರತೀಪ, ಪ್ರತೀಪ ರಾಜನ ಮಗನೇ ಶಂತನು. ಬ್ರಹ್ಮ ದೇವರು ತಪಸ್ಸು ಮಾಡುತ್ತಾ ಕುಳಿತಾಗ ಆ ಬ್ರಹ್ಮ ದೇವರಿಗೆ ತಾನು ಗಂಗಾ ದೇವಿಯ ಸಂಗಮ ಎಲ್ಲಿ ಆಗುತ್ತೋ ಸಮುದ್ರದಲ್ಲಿ ಆ ಪರ್ವಕಾಲದಲ್ಲಿ ಆ ಗಂಗಾಸಾಗರ ಸಂಗಮದೊಳಗೆ ಆ ಮಡದಿಯಾದ ಗಂಗೆಯ ಆಗಮನದ ಸಂಭ್ರಮದೊಳಗೆ ಬ್ರಹ್ಮ ದೇವರಿಗೆ ತನ್ನ ನೀರನ್ನು ಸಿಡಿಸಿ ಬಿಡುತ್ತಾನೆ ಸಮುದ್ರರಾಜ. ತಪಸ್ಸು ಮಾಡುತ್ತಾ ನಾನು ಕುಳಿತಾಗ ನೀನು ಈ ರೀತಿಯಾಗಿ ಗೌರವದಿಂದ ಇರದೇ ನೀರನ್ನು ಸಿಡಿಸಿ ನನಗೆ ಅವಮಾನ ಮಾಡಿದ್ದೀ ಅಂತ ಹೇಳಿ ಬ್ರಹ್ಮ ದೇವರು ಶಾಪ ಕೊಡುತ್ತಾರೆ ನೀನು ಮನುಷ್ಯನಾಗಿ ಹುಟ್ಟು ನೀರಿನ ಅಭಿಷೇಕ ಮಾಡಿದ್ದೀ ನನಗೆ ಜೋರಾಗಿ. ಅಭಿಷೇಕ ಪೂಜೆ ಮಾಡುವಾಗ ಮಾಡಿದರೆ ಸರಿ ಬೇರೆ ಹೊತ್ತಿಗೆ ಜಪ ಮಾಡುವಾಗ, ಧ್ಯಾನ ಮಾಡುವಾಗ ನೀರು ಸಿಡಿಸಿದರೆ ಅದಕ್ಕೆ ಮಹಾಭಿಷಕ್ ನೀರಿನ ಅಭಿಷೇಕ ಮಾಡಿದ್ದೀ ಆದ್ದರಿಂದ ಮಹಾಭಿಷಕ್.

ಇನ್ನೊಂದು ಅರ್ಥ ಮಹಾಭಿಷಕ್ ವರುಣ ಇವನು ವೈದ್ಯನಲ್ಲವಾ ಆದ್ದರಿಂದ ಮಹಾಭಿಷಕ್ ಹೌದು ಮಹಾ ಅಭಿಷೇಕ ಮಾಡಿದ್ದರಿಂದಲೂ ಮಹಾಭಿಷಕ್. ನಾನು ಶಾಂತನಾಗು ಅಂತ ಹೇಳಿದ ಮೇಲೆ ಶಾಂತನಾದಿ ಆಮೇಲೆ ಆದ್ದರಿಂದ ಶಾಂತ ತನು ಆದದ್ದರಿಂದ ಶಂತನು ಆಗಿಯೂ ಹುಟ್ಟು ಅಂತ. ಇನ್ನೂ ಒಂದು ಅರ್ಥ ಹಿಂದೆ ತಿಳಿದಿದ್ದೀರಿ ಯಾರನ್ನು ಅವನು ಮುಟ್ಟುತ್ತಾ ಇದ್ದನೋ ಅವರ ತನುವಿನೊಳಗಿನ ರೋಗ ಎಲ್ಲ ಶಾಂತವಾಗುತ್ತಾ ಇತ್ತು ಅನ್ನುವುದಕ್ಕಾಗಿಯೂ ಅವನು ಶಂತನು ಶಾಂತತನು ಶಂತನು.

ಆ ಶಂತತನು ದೇವಾಪಿ, ಬಾಹ್ಲಿಕ, ಶಂತನು ಅಂತ ಈ ರೀತಿ ಮಕ್ಕಳಾಗಿದ್ದಾರೆ. ಆ ದೇವಾಪಿ ಈಗ ರಾಜನಾಗುವುದಿಲ್ಲ ಕೃತ ಯುಗದಲ್ಲಿ ಮುಂದೆ ರಾಜನಾಗುತ್ತಾನೆ ಈಗ ತದ್ದೋಷ ಇದ್ದದ್ದರಿಂದ ತಪಶ್ಚರ್ಯವನ್ನು ಮಾಡುವುದಕ್ಕೆ ಹೊರಟುಹೋದ. ಬಾಹ್ಲಿಕ ಅಂದರೆ ಬೇರೆ ಯಾರೂ ಅಲ್ಲ ಪ್ರಹ್ಲಾದ ರಾಜರು ಮಹಾನುಭಾವರಾದ ಪ್ರಹ್ಲಾದ ರಾಜರೇ ಬಾಹ್ಲಿಕರಾಗಿ ಅವತಾರ ಮಾಡಿದ್ದಾರೆ ವಾಯು ದೇವರ ವಿಶೇಷ ಸನ್ನಿಧಾನಕ್ಕೆ ಪಾತ್ರರಾದವರು. ಈ ಬಾಹ್ಲಿಕ ರಾಜನ ಮಗನೇ ಸೋಮದತ್ತ ಅಂತ ಆ ಸೋಮದತ್ತನ ಮಕ್ಕಳು ಮೂರು ಜನ ಭೂರಿ, ಭೂರಿಶ್ರವಾ, ಶಲ ಅಂತ ಇವರೂ ಮೂರು ರುದ್ರರೇ ಆ ಸೋಮದತ್ತನು ರುದ್ರನೇ. ಪತ್ರತಾಪ ಎಂಬ ರುದ್ರ ಸೋಮದತ್ತನಾಗಿ ಅವತಾರ ಮಾಡುತ್ತಾನೆ ಅಜೈಕಪಾತ್, ಅಹಿರ್ಬುದ್ಧ್ಯ, ವಿರೂಪಾಕ್ಷ ಅನ್ನುವಂತಹ ಮೂರು ಜನ ರುದ್ರರು ಭೂರಿ, ಭೂರಿಶ್ರವಾ, ಶಲ ಎಂಬುದಾಗಿ ವಿಷ್ಕಂಬ ಎಂಬ ರುದ್ರ ಕೃಪಾಚಾರ್ಯರಾಗಿ ಅಲ್ಲಿ ಅವತಾರ ಮಾಡಿದ್ದನ್ನು ಕೇಳಿದ್ದೀರಿ, ಇವರು ನಾಲ್ಕು ಜನ ಹೀಗೆ ಇವರೆಲ್ಲ ರುದ್ರರು ಚೆನ್ನಾಗಿ ದೇವರ ಸೇವೆಯನ್ನು ಮಾಡುವುದಕ್ಕೋಸ್ಕರ ಅವತಾರ ಮಾಡುತ್ತಾರೆ ಎಂಬುದಾಗಿ ತಿಳಿಯಬೇಕು.

ಇನ್ನು ಶಂತನು ಆ ಶಂತನು ಇದೀಗ ಹಿಂದೆ ಕೇಳಿದಿರಿ ಕಾಲೀ ಆ ಉಪರಿಚರ ವಸುವಿನ ಮಗಳು ಮತ್ಸ್ಯ ಯೋನಿಯಲ್ಲಿ ಹುಟ್ಟಿದಂತಹ ಸತ್ಯವತೀ ಆ ಸತ್ಯವತೀಯಲ್ಲಿ ವಿಚಿತ್ರವೀರ್ಯ, ಚಿತ್ರಾಂಗದ ಅನ್ನುವ ಮಕ್ಕಳನ್ನು ಪಡೆಯುತ್ತಾಳೆ. ಚಿತ್ರಾಂಗದ ತನ್ನ ಹೆಸರಿನ ಗಂಧರ್ವನ ಜೊತೆಗೆ ನನ್ನ ಹೆಸರು ಇಟ್ಟುಕೊಂಡದ್ದು ಯಾಕೆ ಬಿಡು ಅಂತ ಗಂಧರ್ವ ಹೇಳುತ್ತಾನೆ ಕೇಳುವುದಿಲ್ಲ ಇವನು, ಯುದ್ಧದಲ್ಲಿ ಮೃತನಾಗಿ ಹೋಗುತ್ತಾನೆ. ಆ ವಿಚಿತ್ರವಿರ್ಯನಿಗೆ ಅಂಬಿಕಾ, ಅಂಬಾಲಿಕಾ ಅಂತ ಇಬ್ಬರನ್ನು ತಂದು ಭೀಷ್ಮಾಚಾರ್ಯರು ಮದುವೆ ಮಾಡುತ್ತಾರೆ ಅಲ್ಲಿ ವೇದವ್ಯಾಸ ದೇವರ ವಿಶೇಷವಾದ ಅನುಗ್ರಹದಿಂದ ಅಂಬಿಕಾ, ಅಂಬಾಲಿಕಾಳಲ್ಲಿ ಧೃತರಾಷ್ಟ್ರ, ಪಾಂಡು, ಭುಜುಷ್ಯೆಯಲ್ಲಿ ವಿದುರ ಇವರು ಹುಟ್ಟುತ್ತಾರೆ. ವೇದವ್ಯಾಸ ದೇವರಲ್ಲಿ ಆ ವೇದವ್ಯಾಸ ದೇವರ ದಿವ್ಯವಾದ ಸ್ವರೂಪವನ್ನು ಚೆನ್ನಾಗಿ ನೋಡಲಿಕ್ಕೆ ಸಾಮರ್ಥ್ಯ ಇಲ್ಲದೆ ಕಣ್ಣು ಮುಚ್ಚಿದ್ದಕ್ಕೆ ಕುರುಡನಾಗಿ ಹುಟ್ಟುತ್ತಾನೆ ಧೃತರಾಷ್ಟ್ರ, ಭಕ್ತಿಯಿಂದ ನೋಡಿದರೂ ಮೈಯೆಲ್ಲ ಬಿಳಿ ಆದದ್ದರಿಂದ ಪಾಂಡು ಅಲ್ಲಿ ಹುಟ್ಟುತ್ತಾನೆ. ಯಾವುದೇ ವಿಧವಾದಂತಹ ಭಯವಿಲ್ಲದಂತೆ ಭಕ್ತಿಯಿಂದ, ಶ್ರದ್ಧೆಯಿಂದ ಕಣ್ಣು ತುಂಬಾ ವೇದವ್ಯಾಸ ದೇವರ ದರ್ಶನವನ್ನು ಮಾಡಿ ವೇದವ್ಯಾಸ ದೇವರ ಅನುಗ್ರಹ ಪಡೆದದ್ದಕ್ಕೆ ಆ ಭುಜುಷ್ಯೆಯಲ್ಲಿ ಸರ್ವಗುಣ ಸಂಪನ್ನನಾದಂತಹ ಯಮ ಧರ್ಮನ ಅವತಾರನಾದ ವಿದುರ ಅಲ್ಲಿ ಹುಟ್ಟುತ್ತಾನೆ. ಧೃತರಾಷ್ಟ್ರ ಎಂಬ ಗಂಧರ್ವನೇ ಧೃತರಾಷ್ಟ್ರ ಎಂಬ ಹೆಸರಿನಿಂದ ಹುಟ್ಟುತ್ತಾನೆ, ಪರಾವಹ ಎಂಬಂತಹ ಮರುತ್ ಇವನು ಪಾಂಡುವಾಗಿ ಹುಟ್ಟುತ್ತಾನೆ ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ. ಆ ಧೃತರಾಷ್ಟ್ರ ಗಾಂಧಾರೀಯಲ್ಲಿ ನೂರು ಜನ ಮಕ್ಕಳನ್ನು ಪಡೆಯುತ್ತಾನೆ ದುರ್ಯೋಧನ ಅದರಲ್ಲಿ ಶ್ರೇಷ್ಠ. ಇನ್ನು ಪಾಂಡು ಕುಂತಿಯಲ್ಲಿ ಯುಧಿಷ್ಠಿರಾದಿಗಳನ್ನು ಪಡೆಯುತ್ತಾನೆ ಯುಧಿಷ್ಠಿರ,ಭೀಮಸೇನ ಹಾಗೂ ಅರ್ಜುನ ಅದರಲ್ಲಿ ಅರ್ಜುನನ ಮಗನೇ ಅಭಿಮನ್ಯು, ಅಭಿಮನ್ಯುವಿನ ಮಗ ಪರೀಕ್ಷಿತ್, ಪರೀಕ್ಷಿತನ ಮಗನೇ ನೀನು ಅಂತ ಜನಮೇಜಯನಿಗೆ ತಿಳಿಸುತ್ತಾ ಇದ್ದಾರೆ ಈ ರೀತಿ ಪೌರವ ವಂಶದ ಇತಿಹಾಸವನ್ನು ತಿಳಿಸಿದ್ದಾರೆ.



ಇನ್ನು ತುರ್ವಸು ಅವನ ವಂಶವನ್ನು ಹೇಳುತ್ತಾರೆ ತುರ್ವಸುವಿನ ಮಗ ವರ್ಹಿ ಅಂತ ಹೀಗೆ ಅವನ ವಂಶ ಬರುತ್ತೆ, ದ್ರುಹ್ಯು ಅವನ ಮಗ ಬಭ್ರು ಇನ್ನೂ ಅನೇಕ ಜನ ಅವನ ಮಕ್ಕಳು ಆಗುತ್ತಾರೆ. ಅನು, ಅನುವಿನ ಮಗ ಧರ್ಮ ಆ ಧರ್ಮನಿಂದ ಮುಂದೆ ಅನುವಿನ ವಂಶ ಬೆಳೆಯುತ್ತದೆ ಅಂತ ಹೀಗೆ ತುರ್ವಸು, ದ್ರುಹ್ಯು,ಅನು ಇವರ ವಂಶವನ್ನು ಹೇಳುತ್ತಾರೆ ಬಹಳ ವಿಸ್ತೃತವಾಗಿ ಅದರ ವಂಶವನ್ನು ಹೇಳಿಲ್ಲ. ಹಿಂದೆ ನೀವು ತಿಳಿದ ಹಾಗೆ ಪೂರುವಿನ ಮೇಲೆ ಯಯಾತಿಯ ಅನುಗ್ರಹ ವಿಶೇಷ ಇದ್ದದ್ದರಿಂದಲೂ ಆ ವಂಶದ ವಿಸ್ತಾರ ಬಹಳ ಆಗಿದೆ ಯದುವಂಶದಲ್ಲಿ ಮಾತ್ರ ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮನ ಅವತಾರವಾಗುತ್ತೆ ಅನ್ನುವ ದೃಷ್ಟಿಯಲ್ಲಿ ಆ ಯದುವಂಶದ ವಿಸ್ತಾರವನ್ನು ತಿಳಿಸುತ್ತಾ ಇದ್ದಾರೆ. ಯದುವಿಗೆ ಐದು ಜನ ಮಕ್ಕಳು ಸಹಸ್ರದ, ಪಯೋದ, ಕ್ರೋಷ್ಟ, ನೀಲ, ಅಂಜಿಕ ಅಂತ ಐದು ಜನ ಮಕ್ಕಳು. ಆ ಸಹಸ್ರದನ ವಂಶದಲ್ಲಿ ಸಾಹಂಜ ಅಂತ ಒಬ್ಬ ಮುಂದೆ ಬರುತ್ತಾನೆ ಸಾಹಂಜನೀ ಅಂತ ಒಂದು ಪಟ್ಟಣವನ್ನೇ ನಿರ್ಮಾಣ ಮಾಡುತ್ತಾನೆ ಅವನ ಮಗ ಮಹಿಷ್ಮಾನ್ ಅವನು ತಾನು ಒಂದು ಮಾಹಿಷ್ಮತೀ ಪಟ್ಟಣ ಅಂತ ನಿರ್ಮಾಣ ಮಾಡುತ್ತಾನೆ. ಆಮೇಲೆ ಮುಂದೆ ಅವನ ಮಗ ಭದ್ರಶ್ರೇಣ್ಯ ಅಂತ ಹಿಂದೆ ಕೇಳಿದ್ದೀರಿ ಅವನು ವಾರಣಾಸಿಗೆ ರಾಜನಾಗಿದ್ದಾನೆ ಅಂತಹ ವಾರಣಾಸಿಯ ರಾಜನಾಗಿ ಭದ್ರಶ್ರೇಣ್ಯ ಅನ್ನುವಂಥವನು ಇದ್ದ ಅಂತ ಹಿಂದೆ ಕೇಳಿದಿರಿ ಅವನ ವಂಶವೆಲ್ಲ ಬರುತ್ತೆ. ಮುಂದೆ ಇದೇ ವಂಶದಲ್ಲಿ ಕೃತವೀರ್ಯ ಅಂತ ರಾಜ ಅವನ ಮಗನೇ ಕಾರ್ತವೀರ್ಯಾರ್ಜುನ ಅರ್ಜುನ ಅಂತ ಅವನ ಹೆಸರು ಕೃತವೀರ್ಯನ ಮಗನಾದ್ದರಿಂದ ಕಾರ್ತವೀರ್ಯಾ, ಕಾರ್ತವೀರ್ಯಾರ್ಜುನ ಅಂತನ್ನುವ ಹೆಸರು ಅವನಿಗಿದೆ ಅಂತ ನಾವು ತಿಳಿಯೋಣ.

ಆ ಕಾರ್ತವೀರ್ಯಾರ್ಜುನ ದತ್ತಾತ್ರೇಯ ಸಾಕ್ಷಾತ್ ಅತ್ರಿ ಋಷಿಗಳಿಂದ ಅನುಸೂಯಾ ದೇವಿಯಲ್ಲಿ ಪ್ರಾದುರ್ಭೂತನಾದಂತಹ ಸರ್ವೋತ್ತಮನಾದ ಶ್ರೀಹರಿ ದತ್ತಾತ್ರೇಯ ಆ ಭಗವಂತನ ಉಪಾಸನೆಯನ್ನು ಮಾಡಿ ಅವನಿಂದ ವರವನ್ನು ನಾಲ್ಕು ವರಗಳನ್ನು ಪಡೆಯುತ್ತಾನೆ. ಸಾವಿರ ಬಾಹುಗಳು ನನಗೆ ಬೇಕು ಇದು ಮೊದಲನೆಯ ವರ, ನಾನು ಏನೇ ಅಧರ್ಮವನ್ನು ಮಾಡಿದರೆ ಆ ಅಧರ್ಮವನ್ನು ತಡೆಯುವುದಕ್ಕೆ ನನಗೊಬ್ಬ ಗುರುಗಳು ಇರಬೇಕು ನೀನು ಮಾಡುವುದು ತಪ್ಪು ಅಂತ ನನಗೆ ತಿದ್ದಿ ಹೇಳಿ ಅಧರ್ಮ ಮಾಡದೆ ಇರುವ ಹಾಗೆ ನನ್ನನ್ನು ರಕ್ಷಣೆ ಮಾಡಬೇಕು ಇದು ಎರಡನೆಯ ವರ. ಯಾರು ಕೇಳಿದ್ದಾರೀ ಇಂತಹ ವರ ತಪ್ಪು ಮಾಡಿದಾಗ ನನಗೆ ತಿದ್ದುವವರು ಒಬ್ಬ ಗುರುಗಳು ಬೇಕು, ನನಗೆ ಯಾರು ಹೇಳುವವರು ನೀವು ಅಂತ ಕೇಳುತ್ತಾರೆ ಇವತ್ತಿನ ಯುವಕರು. ಯುವಕರೇ, ಚೆನ್ನಾಗಿ ತಿಳಿದುಕೊಳ್ಳಿ ಎಲ್ಲರೂ ನಾವು ತಪ್ಪು ಮಾಡಿದಾಗ ನನಗೆ ತಿದ್ದಿ ಹೇಳುವಂತಹ ಹಿರಿಯರು ಇದ್ದಾರೆ ತಂದೆ-ತಾಯಿ, ಗುರುಗಳು, ಹಿರಿಯರು ಮಾರ್ಗದರ್ಶಕರು, ಹಿತೈಷಿಗಳು ಅಂತಾದಾಗ ಸಂತೋಷ ಪಡಬೇಕು ಇಲ್ಲ ಅಂತಾದರೆ ಅಂಥವರನ್ನು ಬೇಡಿ ಬಯಸಿ ಹುಡುಕಿಕೊಂಡು ಹೋಗಬೇಕು. ನನಗೆ ಯಾರೂ ಹೇಳುವವರು ಇರಬಾರದು, ಕೇಳುವವರು ಇರಬಾರದು ಏಕಾಂತದಲ್ಲಿ ನನ್ನ ಮನಸ್ಸಿಗೆ ಬಂದದ್ದನ್ನು ನಾನು ಮಾಡುತ್ತೇನೆ ಅಂದರೆ ಅರ್ಥ ಏನು. ರೋಗರುಜಿನಗಳೆಲ್ಲ ನನ್ನೊಳಗೆ ತುಂಬಿರಲಿ, ವೈದ್ಯರು ಬೇಡ, ಔಷಧಿಗಳು ಬೇಡ ಅಂದರೆ ಮರಣವನ್ನು ಹೊಂದುತ್ತಾನೆ ಹಾಗೆ ನಾನಾ ವಿಧವಾದಂತಹ ಮಾನಸಿಕವಾದ ದೋಷಗಳೆಲ್ಲ ಮನಸ್ಸಿನಲ್ಲಿ ಇದ್ದು ತುಂಬಿಕೊಂಡು ಅದನ್ನು ತಿದ್ದುವವರು ಮಾತ್ರ ನಮಗೆ ಬೇಡ ಅಂತ ಅನ್ನುವಂತಹ ಏನು ಒಂದು ಉದ್ರಿಂಖಿಲವಾದ ಪ್ರವೃತ್ತಿ ಇದೆ, ನಿಯಮ ನಿರ್ಬಂಧಗಳು ಇಲ್ಲದಂತಹ ಸ್ವೇಚ್ಛಾಚಾರದ ಪ್ರವೃತ್ತಿ ಇದು ಜೀವನದಲ್ಲಿ ದೊಡ್ಡ ಅಧಃಪತನಕ್ಕೆ ಕಾರಣ. ಇನ್ನುಳಿದ ಎಲ್ಲಾ ಗುಣಗಳನ್ನು ಪಡೆದರೆ ಸರಿ ಇಲ್ಲದಿದ್ದರೆ ಇಲ್ಲ ಆದರೆ ನಮಗೊಬ್ಬ ಗುರುಗಳು ಬೇಕು ಅನ್ನುವುದನ್ನು ಬಯಸಿ ಅವರಿಗೆ ವಿನೀತನಾಗಿ ಇರುವುದನ್ನು ಒಂದು ಕಲಿತರೆ ಸಾಕು ಇನ್ನುಳಿದ ಎಲ್ಲ ಸದ್ಗುಣಗಳು ಬಂದಂತೇನೆ. ಅದನ್ನು ಹೇಳುತ್ತಾನೆ

ಅಧರ್ಮೇ ವರ್ತಮಾನಸ್ಯ ಸದ್ಭಿಸ್ತತ್ರ ನಿವಾರಣಮ್ । (33.12 ಹರಿವಂಶಪರ್ವ)

ಮೂರನೆಯದಾಗಿ ಇಡೀ ಪೃಥ್ವಿಯನ್ನು ಗೆದ್ದು ಎಲ್ಲರೂ ವರ್ಣಾಶ್ರಮ ಧರ್ಮದಿಂದ ಚೆನ್ನಾಗಿ ವರ್ತನೆ ಮಾಡುವಂತೆ ಅವರನ್ನು ನಾನು ರಕ್ಷಣೆ ಮಾಡಬೇಕು ಅನ್ನುವುದು ಮೂರನೆಯ ವರ. ನಾಲ್ಕನೆಯದಾಗಿ ಎಷ್ಟೇ ಯುದ್ಧಗಳನ್ನು ಮಾಡಿದರೂ ಕೂಡ ನಾನು ಎಲ್ಲರನ್ನೂ ಸೋಲಿಸಿ ಸಂಗ್ರಾಮದಲ್ಲಿ ಗೆದ್ದು ಬರಬೇಕು.

ಸಂಗ್ರಾಮೇ ವರ್ತಮಾನಸ್ಯ ವಧಂ ಚಾಪ್ಯಧಿಕಾದ್ ರಣೇ ॥ (33.13 ಹರಿವಂಶಪರ್ವ)

ಕೊನೆಗೆ ನಾನು ಸಾಯುವ ಪ್ರಸಂಗ ಬರುತ್ತದೆ ನಾನೇನು ಸ್ಥಿರ ಅಲ್ಲ ಆದರೆ ಅತ್ಯುತ್ತಮರಾದ ಸರ್ವೋತ್ತಮನಾದ ವ್ಯಕ್ತಿಯಿಂದಲೇ ನಾನು ಸಾಯಬೇಕು ಬರೀ ಅತ್ಯುತ್ತಮ ಅಲ್ಲ ಸರ್ವೋತ್ತಮನಾದ ವ್ಯಕ್ತಿಯಿಂದ ಅಂತೇ ಅಭಿಪ್ರಾಯ ಅದು. ಎದುರಿಗೆ ಬಂದು ವರ ಕೊಡುವವನು ಸರ್ವೋತ್ತಮನಾದ ದತ್ತಾತ್ರೇಯ ನಿನ್ನ ಅವತಾರದಿಂದಲೇ ನನಗೆ ಮರಣ ಆಗಬೇಕು ಅಂತ ಕೇಳಿದ ಹಾಗೆ ಅನ್ನುವುದಕ್ಕೆ ಪರಶುರಾಮ ದೇವರಿಂದ ಮರಣವಾಗುತ್ತೆ ಅಂತ ನಾವು ತಿಳಿಯುತ್ತೇವೆ.

ತಸ್ಯ ಬಾಹುಸಹಸ್ರಂ ತು ಯುದ್ಧ್ಯತಃ ಕಿಲ ಭಾರತ ।
ಯೋಗಾದ್ ಯೋಗೇಶ್ವರಸ್ಯೈವ ಪ್ರಾದುರ್ಭವತಿ ಮಾಯಯಾ ॥ (33.14 ಹರಿವಂಶಪರ್ವ)

ನಿಮಗೆಲ್ಲಾ ಅನ್ನಿಸಬಹುದು ಅಲ್ಲರೀ ಊಟ ಮಾಡುವ ಮುಂದೆ ಏನಾದರು ಕೊರಳಲ್ಲಿ ಕೆಲವರು ಮಾಲೆ ಎಲ್ಲ ಹಾಕಿ ಕೊಂಡಿರುತ್ತಾರೆ ಏನೋ ಬಂಗಾರದ್ದು ದೊಡ್ಡ ದೊಡ್ಡದು ಭಾರೀ ತೋರಿಸಬೇಕು ಅಂತ. ಊಟ ಮಾಡಲಿಕ್ಕೆ ಆಗುವುದಿಲ್ಲ ಅದೆಲ್ಲ ಎಲೆಯೊಳಗೆ ಬೀಳುತ್ತಾ ಇರುತ್ತದೆ, ಎಂಜಲು ಮುಸುರಿ ಇವುಗಳನ್ನು ಸ್ವಲ್ಪ ವಿಚಾರ ಮಾಡುವವರಿಗಂತೂ ತಲೆ ಕೆಟ್ಟುಹೋಗುತ್ತದೆ. ಒಂದು ಮಾಲೆ ಹಾಕಿಕೊಂಡು ಊಟ ಮಾಡಲಿಕ್ಕೆ ಬರುವುದಿಲ್ಲ ಈ ಸಾವಿರ ಕೈಗಳಿದ್ದರೆ ಎಲ್ಲಿ ಕೂಡುವುದು, ಹೇಗೆ ತಿನ್ನುವುದು, ಉಣ್ಣುವುದು ಹೇಗೆ, ಓಡಾಡುವುದು ಹೇಗೆ ಹಾಗಲ್ಲ ಅವನಿಗೆ ಎರಡೇ ಕೈಗಳು ಇರುತ್ತಾ ಇತ್ತು ಬೇಕು ಅಂದಾಗ ಯುದ್ಧದೊಳಗೆ ಏಕಕಾಲಕ್ಕೆ ಎಲ್ಲ ಶತ್ರುಗಳ ಮೇಲೆ ಆಯುಧಗಳ ಪ್ರಯೋಗ ಮಾಡಬೇಕು ಅಂದರೆ ಸಾವಿರ ಬಾಹುಗಳು ಅಭಿವ್ಯಕ್ತವಾಗುತ್ತಾ ಇದ್ದವು ಅಂತ ಹೇಳುತ್ತಾರೆ.

ತಸ್ಯ ಬಾಹುಸಹಸ್ರಂ ತು ಯುದ್ಧ್ಯತಃ ಕಿಲ ಭಾರತ ।
ಯೋಗಾದ್ ಯೋಗೇಶ್ವರಸ್ಯೈವ ಪ್ರಾದುರ್ಭವತಿ ಮಾಯಯಾ ॥ (33.14 ಹರಿವಂಶಪರ್ವ)

ಆ ಯೋಗೇಶ್ವರನಾದ ದತ್ತಾತ್ರೇಯನ ಅನುಗ್ರಹದಿಂದ ಬೇಕು ಅಂದಾಗ ಅದು ಪ್ರಾದುರ್ಭೂತವಾಗುತ್ತಾ ಇತ್ತು. ಇಂತಹ ಮಹಾನುಭಾವ ಸಪ್ತದ್ವೀಪಗಳಲ್ಲಿ ಏಳು ನೂರು ಯಜ್ಞಗಳನ್ನು ಮಾಡಿದ್ದಾನೆ ಒಂದೊಂದು ದ್ವೀಪಗಳಲ್ಲಿ ಒಂದೊಂದು ನೂರು ಯಜ್ಞ ಪ್ರಾಯಃ ಆ ರೀತಿ ಸಪ್ತಶತ ಯಜ್ಞಗಳನ್ನು ಮಾಡಿದ್ದಾನೆ ಮಹಾನುಭಾವ. ಎಲ್ಲಾ ಯಜ್ಞಗಳೂ ಉತ್ತಮ ಕಲ್ಪದಲ್ಲಿ ಮಾಡಿದ ಯಜ್ಞ, ಬಂಗಾರದ ದೀಪ, ಬಂಗಾರದ ದಕ್ಷಿಣೆ ಎಲ್ಲವೂ ಬಂಗಾರದ್ದೆ ಆ ರೀತಿ ಯಜ್ಞವನ್ನು ಮಾಡಿದ್ದಾನೆ ಮಹಾನುಭಾವ ಹೀಗೆ ಇವನ ಯಜ್ಞ ನಡೆದಿದೆ. ವರೀದಾಸರ ಪುತ್ರರಾದ ನಾರದರು ಉಪಬರ್ಹಣ ಎಂಬ ಗಂಧರ್ವರಾಗಿ ಇರುವಾಗ ಈ ಕಾರ್ತವೀರ್ಯಾರ್ಜುನನ ಅದ್ಭುತವಾದ ಮಹಿಮೆಯನ್ನು ವರ್ಣನೆ ಮಾಡಿದ್ದುಂಟು ಅನ್ನುತ್ತಾರೆ.

ನ ನೂನಂ ಕಾರ್ತವೀರ್ಯಸ್ಯ ಗತಿಂ ಯಾಸ್ಯನ್ತಿ ಪಾರ್ಥಿವಾಃ ।

ಯಜ್ಞೈರ್ದಾನೈಸ್ತಪೋಭಿರ್ವಾ ವಿಕ್ರಮೇಣ ಶ್ರುತೇನ ಚ ॥ (33.20 ಹರಿವಂಶಪರ್ವ)

ಇವನಿಗೆ ಸಮಾನವಾದ ಯಜ್ಞ, ದಾನ, ತಪಸ್ಸು, ಪರಾಕ್ರಮ, ಅಧ್ಯಯನ ಇರುವಂತಹ ರಾಜರನ್ನೇ ನಾನು ಕಂಡಿಲ್ಲ ಅನ್ನುವ ರೀತಿಯಲ್ಲಿ ನಾರದರು ಇವನ ಬಗ್ಗೆ ವರ್ಣನೆ ಮಾಡಿದ್ದುಂಟು.

ಸ ಹಿ ಸಪ್ತಸು ದ್ವೀಪೇಷು ಖಜ್ಗೀ ಚರ್ಮೀ ಶರಾಸನೀ । (33.21 ಹರಿವಂಶಪರ್ವ)

ನೋಡಿ ಯೋಗ ಸಾಮರ್ಥ್ಯ ಹೇಗಿರುತ್ತದೆ ಅಂತ. ದತ್ತಾತ್ರೇಯನ ಅನುಗ್ರಹದಿಂದ ಯೋಗ ಸಾಮರ್ಥ್ಯ ಪಡೆದಿದ್ದರಿಂದ ಸಪ್ತದ್ವೀಪಗಳಲ್ಲಿ ಸಪ್ತರೂಪಗಳನ್ನು ತೆಗೆದುಕೊಂಡು ಎಲ್ಲರಿಗೂ ನಮ್ಮ ದ್ವೀಪದಲ್ಲಿಯೇ ರಾಜ್ಯವನ್ನು ಆಳುತ್ತಾ ಇದ್ದಾನೆ ಅನ್ನಿಸಿರಬೇಕು ನಮ್ಮ ದ್ವೀಪ ಬಿಟ್ಟು ಹೋಗುವುದಿಲ್ಲಾ ಅಂತನ್ನಿಸುವ ಹಾಗೆ ಸಪ್ತದ್ವೀಪಗಳಲ್ಲಿ ಸಪ್ತರೂಪಗಳನ್ನು ತೆಗೆದುಕೊಂಡು ಇವನು ರಾಜ್ಯವನ್ನು ಆಳುತ್ತಾ ಇದ್ದ. ಆ ದತ್ತಾತ್ರೇಯನ ವರ ಏನು ಅಂದರೆ ಕಾರ್ತವೀರ್ಯಾರ್ಜುನನ ಸ್ಮರಣೆ ಮಾಡಿದರೆ ಸಾಕು ಏನು ಕಳೆಯುವುದೇ ಇಲ್ಲ ಪದಾರ್ಥ, ಮೇಲಿಂದ ಮೇಲೆ ಕಳೆದುಕೊಳ್ಳುತ್ತೀರಿ ಕೆಲವರೆಲ್ಲ ಪುಸ್ತಕ, ಪೆನ್ನು, ದುಡ್ಡು, ಕಾಸು ಇತ್ಯಾದಿ ಇತ್ಯಾದಿ ಅಂತಹ ಸಂಧರ್ಭದಲ್ಲಿ ಕಳೆಯಬಾರದು, ಕಳೆದದ್ದು ಬೇಗ ಸಿಗಬೇಕು ಅಂದರೆ ಕಾರ್ತವೀರ್ಯಾರ್ಜುನನ ಸ್ಮರಣೆ ಮಾಡಬೇಕು ಅಂತ ಹೇಳುತ್ತಾರೆ.

ಕಾರ್ತವೀರ್ಯಾರ್ಜುನೋ ನಾಮ ರಾಜಾ ಬಾಹುಸಹಸ್ರವಾನ್ ।

ತಸ್ಯ ಸ್ಮರಣಮಾತ್ರೇಣ ಗತಂ ನಷ್ಟಂ ಚ ಲಭ್ಯತೇ ॥ (ಕಾರ್ತವೀರ್ಯಾರ್ಜುನ ಸ್ತೋತ್ರ)

ಅಂತ. ಆ ಮಾತನ್ನು ಹೇಳುತ್ತದೆ ಹರಿವಂಶ

ಅದಷ್ಟದ್ರವ್ಯತಾ ಚೈವ ನ ಶೋಕೋ ನ ಚ ವಿಭ್ರಮಃ । (33.22 ಹರಿವಂಶಪರ್ವ)

ದುಃಖ ಆಗುವುದಿಲ್ಲ, ಭ್ರಾಂತಿ ಬರುವುದಿಲ್ಲ, ಪದಾರ್ಥಗಳು ಕಳೆಯುವುದಿಲ್ಲ, ಕಳೆದಿದ್ದರೆ ಸಿಗುತ್ತದೆ ಇಷ್ಟೆಲ್ಲ ಇವನ ಮಹಾಮಹಿಮೆ ದತ್ತಾತ್ರೇಯನ ಅನುಗ್ರಹದಿಂದ ಅದನ್ನು ಮರೆಯಬಾರದು. ಆ ಅಂತರ್ಯಾಮಿಯಾದಂತಹ ಉಪಾಸ್ಯನಾದ ಪರಮಾತ್ಮನ ಒಂದು ವಿಶೇಷ ಅನುಗ್ರಹದಿಂದ ಈ ವಿಧವಾದ ಸಾಮರ್ಥ್ಯ. ಏನು ಕಳೆದದ್ದೆಲ್ಲಾ ಮತ್ತೆ ತಿರುಗಿ ಕೊಡುತ್ತಾನೆ ಆದು ಗತ ಅಂತಾದದ್ದು, ನಷ್ಟ ಅಂತಾದದ್ದು ಮತ್ತೆ ನಮಗೆ ಭಗವದನುಗ್ರಹದಿಂದ ದತ್ತ ಅಂತ ಆಗುತ್ತೆ ಆ ವಸ್ತು ಕಳೆದದ್ದೂ ಕೂಡ ಅನ್ನುವುದಕ್ಕೆ ಅವನು ದತ್ತಾತ್ರೇಯ ಮಹಾನುಭಾವ. ಅಂತಹ ದತ್ತಾತ್ರೇಯನ ಅನುಗ್ರಹದಿಂದ 85,000 ವರ್ಷಗಳವರೆಗೆ ಈ ಸಪ್ತದ್ವೀಪಾಧಿಪತಿಯಾಗಿ ಈ ರಾಜ್ಯವನ್ನು ಆಳಿದ್ದಾನೆ ಯಜ್ಞಪಾಲ, ಕ್ಷೇತ್ರಪಾಲ ಅಂತ ಅನ್ನಿಸಿಕೊಂಡಿದ್ದಾನೆ, ಯೋಗ ಸಾಮರ್ಥ್ಯದಿಂದ ತಾನೇ ಒಂದೊಮ್ಮೆ ಪರ್ಜನ್ಯನಾಗಿ ಮಳೆಯನ್ನೂ ಸುರಿಸಿದ್ದಾನೆ.

ಸ ಏವ ವೃಷ್ಟ್ಯಂ ಪರ್ಜನ್ಯೋ ಯೋಗಿತ್ವಾದರ್ಜುನೋಽಭವತ್ ॥ (33.24 ಹರಿವಂಶಪರ್ವ)

ಇಂತಹ ಮಹಾನುಭಾವ ಇವನು. ಆ ಕರ್ಕೋಟಕ ಎಂಬ ನಾಗ ಪುತ್ರರನ್ನೆಲ್ಲ ಗೆದ್ದು ತನ್ನ ಮಾಹಿಷ್ಮತಿ ಪಟ್ಟಣದಲ್ಲಿ ಇಟ್ಟುಕೊಂಡಿರುತ್ತಾನೆ, ಸಮುದ್ರದ ವೇಗವನ್ನು ಹೀಗೆ ತಡೆದು ಸಮುದ್ರ ವಿಪರೀತವಾಗಿ ತನ್ನ ಅಲೆಗಳನ್ನು

ಹರಿಸುವಂತೆ ಮಾಡುತ್ತಾನೆ, ಗಂಗಾದಿ ನದಿಗಳನ್ನು ತಡೆಯುತ್ತಾನೆ, ನರ್ಮದಾ ನದಿಯನ್ನು ತಡೆಯುತ್ತಾನೆ, ಸಮುದ್ರದೊಳಗೆ ನಿಂತು ಹೀಗೆ ತನ್ನ ಸಹಸ್ರ ಬಾಹುಗಳನ್ನು ಜೋಡಿಸಿ ಇಷ್ಟಷ್ಟು ಚಿಕ್ಕಚಿಕ್ಕ, ಪುಟ್ಟಪುಟ್ಟ ಬಾಹುಗಳೆಂದು ತಿಳಿದುಕೊಳ್ಳಬೇಡಿ ಚಿತ್ರದಲ್ಲಿ ಇದ್ದ ಹಾಗೆ ಅಂತಹ ಸುದೀರ್ಘವಾದ ತನ್ನ ಸಹಸ್ರ ಬಾಹುಗಳನ್ನು ಹೀಗೆ ಕೈಚಾಚಿ ಗರ್ ಅಂತ ತಿರುಗುತ್ತಾ ಇದ್ದನಂತೆ. ತಿರುಗಿದರೆ ಮಂದರ ಪರ್ವತದ ಮಥನ ಮಾಡಿದರೆ ಹೇಗಿರಬೇಕೋ ಹಾಗೆ ಮತ್ತೆ ಮಂದರ ಪರ್ವತದ ಮಥನ ಮಾಡಿ ಸಮುದ್ರದಲ್ಲಿ ಅಮೃತವನ್ನು ಕೊಡುತ್ತಾ ಇದ್ದಾರೋ ಅಂತನ್ನುವ ರೀತಿಯಲ್ಲಿ ಆ ಸುತ್ತಮುತ್ತಲೂ ಇದ್ದ ಜನ ನಮಗೆ ಅಮೃತ ಮತ್ತೆ ನೋಡುವ ಭಾಗ್ಯ ನಮಗೆ ಸಿಗುತ್ತೆ ಅಂತ ಅಂದುಕೊಳ್ಳುತ್ತಾ ಇದ್ದರಂತೆ.

ಮನ್ದರಕ್ಷೋಭಚಕಿತಾ ಅಮೃತೋದ್ಭವ ಶಙ್ಕಿತಾಃ । (33.32 ಹರಿವಂಶಪರ್ವ)

ಮತ್ತೆ ಅಮೃತ ಮಥನ ಪ್ರಾರಂಭವಾಯಿತೇ ಅಂತ ಅಂತಹ ಮಹಾನುಭಾವ ಕಾರ್ತವೀರ್ಯಾರ್ಜುನ. ರಾವಣ ಒಂದು ಸಲ ಅಲ್ಲಿ ವಿಹಾರಕ್ಕೆ ಬಂದಾಗ ಅವನು ನೀರಿಗೆ ನೀರೇ ಕಾಣಿಸಲಿಲ್ಲ ಅವನಿಗೆ ಯಾಕೆಂದರೆ ಇವನು ನೀರು ತಡೆದು ಬಿಟ್ಟಿದ್ದ ಡ್ಯಾಮ್ ಇದ್ದ ಹಾಗೆ ಇವನು ಸಾವಿರ ಕೈ ಹಿಡಿದುಕೊಂಡು ನಿಂತ ಅಂದರೆ. ನೀರೇ ಇಲ್ಲಲ್ಲಾ ಅಂತ ನೋಡುತ್ತಾ ಬಂದ ಇವನು ಕಾಣಿಸಿದ ಅಲ್ಲಿ, ಏನೋ ನೀನು ನೀರು ತಡೆದು ಬಿಟ್ಟಿದ್ದೀ ಅಂತ ಯಾರು ನೀನು, ಏನು ಮಾತಾಡುತ್ತಿ ಅಂತ ಅವನನ್ನು ಹಿಡಿದುಕೊಂಡು ಹೋದ. ಹೋಗಿ ತನ್ನ ಮನೆಯೊಳಗೆ ಹೆಣ್ಣುಮಕ್ಕಳ ಮುಂದೆ ತೋರಿಸಿದ ನೋಡು ಇವನ ಹತ್ತು ತಲೆ ಹುಳ ಒಂದು ಇದೆ ನೋಡಿರಿ ಅಂತ ರಾವಣನನ್ನು ಹಿಡಿದು ಆಟ ಆಡಿಸುತ್ತಾನೆ. ಎಂತಹ ಪರಾಕ್ರಮಿ ರಾವಣ ರಾಮಾಯಣದಲ್ಲಿ ಕೇಳುತ್ತೀರಿ ಹತ್ತು ತಲೆ ಹುಳ ಒಂದು ಸಿಕ್ಕಿದೆ ನೋಡರಿ ಅನ್ನುತ್ತಾನೆ ಈ ರೀತಿ ಮಹಾನುಭಾವ.

ಲಙ್ಕೇಶಂ ಮೋಹಯಿತ್ವಾ ತು ಸಬಲಂ ರಾವಣಂ ಬಲಾತ್ । (33.34 ಹರಿವಂಶಪರ್ವ)

ಒಬ್ಬ ರಾವಣ ಅಲ್ಲ ಸಸೈನ್ಯನಾದ ರಾವಣನನ್ನು ಬಂಧನ ಮಾಡಿ ಇಡುತ್ತಾನೆ ಕೊನೆಗೆ ಆ ಪುಲಸ್ಯ ಬಂದು ಬಿಟ್ಟು ಬಿಡಪ್ಪ ಆ ರಾವಣನನ್ನು ಅಂತ ಕೇಳಿಕೊಂಡದ್ದಕ್ಕೆ ಬಿಟ್ಟು ಬಿಡುತ್ತಾನೆ ಇಂತಹ ಮಹಾ ಪರಾಕ್ರಮೀ. ಏನು ಆಗುತ್ತೆ ಕಾರಣ ಅಂದರೆ ಒಂದು ಸಂದರ್ಭದಲ್ಲಿ ಅಗ್ನಿ ಇವನಿಗೆ ಪ್ರಾರ್ಥನೆ ಮಾಡುತ್ತಾನೆ ಅರ್ಥಾತ್ ಆದೇಶ ಮಾಡುತ್ತಾನೆ ಅಂತ ಇಟ್ಟುಕೊಳ್ಳಿ. ಅಗ್ನಿ ಹೇಳುತ್ತಾನೆ ನನಗೆ ಹಸಿವೆ ಬಹಳ ಆಗಿದೆ ಏನಾದರೂ ಕೊಡು ಅಂತ. ಏನು ಬೇಕು ನಿನಗೆ, ನನಗೆ ಎಲ್ಲಾ ಸುಡುವುದಕ್ಕೆ ಬೇಕು, ನನ್ನ ರಾಜ್ಯವನ್ನೇ ತೆಗೆದುಕೋ ಎಷ್ಟು ಬೇಕು ಅಷ್ಟು ಸುಟ್ಟುಕೋ, ಸಪ್ತದ್ವೀಪ ನನ್ನದೇ ಏನು ಸುಡುತ್ತಿ ಸುಡು ಅಂತ ವನಗಳನ್ನು, ಪಟ್ಟಣಗಳನ್ನು ಎಲ್ಲಾ ಸುಡಲಿಕ್ಕೆ ಪ್ರಾರಂಭ ಮಾಡಿದ ಅಗ್ನಿ. ಆ ವನಗಳನ್ನು ಸುಡುವಾಗ ವನದಲ್ಲಿ ವಸಿಷ್ಠರ ಆಶ್ರಮ ಇತ್ತು ಆ ವಸಿಷ್ಠರ ಆಶ್ರಮವನ್ನು ಸುಡುವುದಕ್ಕೆ ಪ್ರಾರಂಭ ಮಾಡಿದಾಗ ವಸಿಷ್ಠರು ಹೇಳುತ್ತಾರೆ ಏನು ನೀನು, ನನ್ನ ಆಶ್ರಮ ಒಂದನ್ನು ಬಿಟ್ಟು, ನಾನು ಅಂದರೆ ನಾನೊಬ್ಬನಲ್ಲ ಇಂತಹ ಜ್ಞಾನಿಗಳು, ಸಜ್ಜನರು ಎಲ್ಲಿ ಅಲ್ಲಲ್ಲಲ್ಲಿ ಸಾಧನೆ ಮಾಡುತ್ತಾರೆ, ಎಲ್ಲಿ ಜನರಿದ್ದಾರೆ ಆ ಪ್ರದೇಶ ಬಿಟ್ಟು ಯಾರೂ ಇಲ್ಲದ ಸ್ಥಳದಲ್ಲಿ ಒಣಗಿದ ಕಟ್ಟಿಗೆಯನ್ನು ಬೇಕಾದರೆ ಸುಟ್ಟುಕೋ ಅಂತ ಹೇಬಹುದಾಗಿತ್ತಲ್ಲ ಆಗ್ನಿಗೆ. ಇಂತಹ ಸಜ್ಜನರೆಲ್ಲ ಆವಾಸ ಮಾಡುವಂತಹ ಸ್ಥಳವನ್ನು ಬಿಡದಂತೆ ನೀನು ಸುಡುವುದಕ್ಕೆ ಹೇಳಿದ್ದೀಯಲ್ಲ ನಾನೇನು ಮಾಡುವುದಿಲ್ಲ ನಿನಗೆ, ನನ್ನ ತಪಸ್ಸನ್ನು ನಿನ್ನ ಸಂಹಾರಕ್ಕೋಸ್ಕರ ನಾನು ವ್ಯಯ ಮಾಡುವುದಿಲ್ಲ. ಮುಂದೆ ಸಾಕ್ಷಾತ್ ಪರುಶರಾಮ ದೇವರು ಬಂದು ನಿನ್ನನ್ನು ಸಂಹಾರ ಮಾಡುತ್ತಾರೆ ನಿನ್ನ ಸಾವಿರ ಬಾಹುಗಳನ್ನು ಕತ್ತರಿಸಿ ನಿನ್ನ ಸೊಕ್ಕನ್ನು ಮುರಿಯುತ್ತಾರೆ ಎಂಬುದಾಗಿ ವಸಿಷ್ಠರು ಶಾಪ ಕೊಟ್ಟಿರುತ್ತಾರೆ ಅದಕ್ಕೆ ತಕ್ಕಂತೆ ಪರಶುರಾಮ ದೇವರು ಮುಂದೆ

ಇವನನ್ನು ಸಂಹಾರ ಮಾಡುತ್ತಾರೆ ಅಂತ. ಅವನಿಗೆ ಅದೇ ಬೇಕಾಗಿರುತ್ತದೆ ವರವನ್ನೆ ಕೇಳಿದ್ದ ಬ್ರಹ್ಮ ದೇವರಿಗೆ ಅತ್ಯುತ್ತಮನಾದ, ಸರ್ವೋತ್ತಮನಾದ ವ್ಯಕ್ತಿಯಿಂದ ನನ್ನ ಮರಣ ಆಗಬೇಕು ಅಂತ ಹೀಗಾಗಿ ಪರುಶರಾಮ ದೇವರಿಂದ ಅವನ ಮರಣವಾಗುತ್ತದೆ ಅಂತನ್ನುವ ವಿಚಾರವನ್ನು ತಿಳಿಸಿಕೊಡುತ್ತಾರೆ. ಹೀಗೆ ಇವನ ವಂಶದಲ್ಲಿ ಅನೇಕ ಮಹಾನುಭಾವರೆಲ್ಲ ಹುಟ್ಟುತ್ತಾರೆ.

ಇನ್ನೊಬ್ಬ ಪಯೋದ ಅಂತ ಯದುವಿನ ಮಗ ಸಹಸ್ರದನ ವಂಶವನ್ನು ಕೇಳಿದಿರಿ ಇಷ್ಟೊತ್ತು, ಪಯೋದ ಅನ್ನುವಂತಹ ಯದುವಿನ ಮಗ ಇನ್ನೊಬ್ಬನಲ್ಲ ಆ ಪಯೋದ ಅವನ ವಂಶದಲ್ಲಿ ಮಧು ಅಂತ ಬರುತ್ತಾನೆ, ಮಧುವಿನ ಮಗ ವೃಷಣ, ಈ ವೃಷಣನ ಮಕ್ಕಳಾಗಿ ಮುಂದಿನವರು ಬಂದರು ಅನ್ನುವುದಕ್ಕೆ ವೃಷಣನ ಮಕ್ಕಳು ವೃಷ್ಣಿಗಳು ಅಂತೂ ಕರೆಯುತ್ತಾರೆ, ಮಧುವಿನ ವಂಶದಲ್ಲಿ ಬಂದವರು ಅನ್ನುವುದಕ್ಕೆ ಮಾಧವರು ಅಂತೂ ಕರೆಯುತ್ತಾರೆ, ಕೃಷ್ಣನಿಗೂ ಮಾಧವ ಅನ್ನುತ್ತಾರೆ. ಅವನು **'ಮಾ'** ಲಕ್ಷ್ಮೀ ದೇವಿಗೆ **'ಧವ'** ಪತಿ ಆದ್ದರಿಂದಲೂ ಮಾಧವ, ಮಧುವಿನ ವಂಶದಲ್ಲಿ ಅವತಾರ ಮಾಡಿದ್ದರಿಂದಲೂ ಮಾಧವ ಮತ್ತು ಯದುವಿನ ವಂಶದಲ್ಲಿ ಹುಟ್ಟಿದ್ದರಿಂದ ಯಾದವರು ಹೀಗಾಗಿ ಯಾದವರು, ವೃಷ್ಣಿಗಳು, ಮಾಧವರು ಅಂತ ಇವರನ್ನೆಲ್ಲ ಕರೆಯುತ್ತಾರೆ ಎಂಬುದಾಗಿ ಹೇಳುತ್ತಾರೆ. ಹೀಗೆ ಇವರ ವಂಶವನ್ನು ತಿಳಿಸಿಕೊಡುತ್ತಾರೆ.

ಈ ಎಲ್ಲ ವಂಶದ ಶ್ರವಣವನ್ನು ಯಾರು ಮಾಡುತ್ತಾರೋ ಅವರಿಗೆ ಅಂದರೆ ಐದು ಜನ ಮಕ್ಕಳಿದ್ದರಲ್ಲ ಯದುವಿಗೆ ಆ ಐದು ಜನ ಮಕ್ಕಳ ವಂಶವನ್ನು ಚೆನ್ನಾಗಿ ತಿಳಿದವರು ಯಾರೋ ಅವರೆಲ್ಲ **'ಶ್ರುತ್ವಾ ಪಞ್ಚವಿಸರ್ಗಂ ತು'**[1] ಈ ಐದು ಜನರ ವಂಶವನ್ನು ತಿಳಿದರೆ ಎಲ್ಲ ಧರ್ಮಾರ್ಥ ಕೋವಿದನಾಗಿ, ಎಲ್ಲ ಇಂದ್ರಿಯಗಳನ್ನು ತನ್ನ ವಶದಲ್ಲಿ ಇಟ್ಟುಕೊಂಡವನಾಗಿ, ಎಲ್ಲ ಪ್ರಜೆಗಳನ್ನೂ ತನ್ನ ವಶದಲ್ಲಿ ಇಟ್ಟುಕೊಂಡವನಾಗಿ ಉತ್ತಮವಾದಂತಹ ಸುಖವನ್ನು ಹೊಂದುತ್ತಾನೆ. ಐದು ವರಗಳನ್ನೂ ಕೂಡ ಅವನು ಪಡೆಯುತ್ತಾನೆ ಪರಮಾತ್ಮನಿಂದ ಆಯುಷ್ಯ, ಕೀರ್ತಿ, ಐಶ್ವರ್ಯ, ಭೂಮಿ, ಪುತ್ರ ಸಂತಾನ ಈ ಎಲ್ಲ ವರಗಳನ್ನೂ ಕೂಡ ಈ ಪಂಚ ವಂಶವನ್ನು ಕೇಳಿದವನು ಪಂಚ ವರಗಳನ್ನು ಪಡೆಯುತ್ತಾನೆ ಎಂಬುದಾಗಿ ತಿಳಿಯಬೇಕು. ಆದರೆ ಒಂದು ಮಾತನ್ನು ಹೇಳಿದ್ದಾರೆ **'ಧಾರಣಾಚ್ಚ್ರ ವಣಾಚ್ಚೈವ'**[2] ಬರೀ ಕೇಳಿ ಮರೆತರಲ್ಲಂತೆ ಧಾರಣಾತ್ ಕೇಳಬೇಕು, ಕೇಳಿದ್ದನ್ನು ನೆನಪು ಇಟ್ಟುಕೊಳ್ಳಬೇಕು ಅಂದರೆ ವಿಶೇಷವಾಗಿ ಭಗವಂತ ಈ ವಿಧವಾದ ವರವನ್ನು ಕೊಡುತ್ತಾನೆ ಎಂಬುದಾಗಿ ಹೇಳಿ ಮುಂದೆ ಕ್ರೋಷ್ಟ ಅಂತ ಇನ್ನೊಬ್ಬನ ವಂಶವನ್ನು ಹೇಳುತ್ತಾರೆ. ಸಹಸ್ರದನ ವಂಶ, ಪಯೋದನ ವಂಶ ಇಬ್ಬರ ವಂಶವನ್ನು ಹಿಂದೆ ಹೇಳಿದರು ಕ್ರೋಷ್ಟ ಅನ್ನುವಂತಹ ಮೂರನೆಯ ಯದುವಿನ ವಂಶವನ್ನು ಮುಂದೆ ಯದು ಪುತ್ರನ ವಂಶವನ್ನು ಮುಂದೆ ತಿಳಿಸುತ್ತಾರೆ. ಆ ವಂಶದಲ್ಲಿಯೇನೆ ಪರಮಾತ್ಮನ ಅವತಾರವಾಗುತ್ತದೆ ಅನ್ನುವುದನ್ನು ನಾವು ಮತ್ತೆ ಮುಂದೆ ತಿಳಿಯೋಣ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

1. 33.58 ಹರಿವಂಶಪರ್ವ, 2. 33.60 ಹರಿವಂಶಪರ್ವ

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಹರಿವಂಶಪರ್ವ-12

* * *

ಹುಟ್ಟಿಬಂದ ರಾಜರು ಮಹಾನುಭಾವರು ಅವರೆಲ್ಲ ಪುಣ್ಯವಂತರೇ ಸರಿ. ಅನೇಕರು ದೇವತಾಂಶ ಸಂಭೂತರು, ಪುಣ್ಯವಂತರು ಅಂತಹ ಮಹಾನುಭಾವರ ನಾಮೋಚ್ಚಾರಣೆಯನ್ನು ಮಾಡಿದರೆ ಶ್ರವಣ ಮಾಡಿದರೂ ಕೂಡ ಮಹಾಪುಣ್ಯವಿದೆ ಎನ್ನುವ ದೃಷ್ಟಿಯಲ್ಲಿ ಹರಿವಂಶ ಇಷ್ಟು ವಿಸ್ತಾರವಾಗಿ ಆ ಎಲ್ಲ ಮಹನೀಯರ ನಾಮಧೇಯಗಳನ್ನು ನಮಗೆ ತಿಳಿಸುತ್ತಾ ಇದೆ. ಹಿಂದೆ ಕ್ರೋಷ್ಟು ಅನ್ನುವಂತಹ ಯದುವಿನ ಒಬ್ಬ ಮಗ ಸಹಸ್ರದ, ಪಯೋದ, ಕ್ರೋಷ್ಟ, ನೀಲ, ಅಂಜಿಕ ಅಂತ ಅವರಲ್ಲಿನ ಸಹಸ್ರದ, ಪಯೋದ ಇವರ ಕಥೆಯನ್ನು ವಂಶವನ್ನು ತಿಳಿಸಿ ಕ್ರೋಷ್ಟುವಿನ ವಂಶವನ್ನು ತಿಳಿಸುತ್ತಾ ಇದ್ದಾರೆ. ಆ ಕ್ರೋಷ್ಟುವಿಗೆ ಇಬ್ಬರು ಮಡದಿಯರು ಗಾಂಧಾರೀ, ಮಾದ್ರೀ ಅಂತ ಧೃತರಾಷ್ಟ್ರನ ಮಡದಿ ಗಾಂಧಾರೀ ಬೇರೆ, ಪಾಂಡು ರಾಜನ ಮಡದಿ ಮಾದ್ರೀ ಬೇರೆ. ಇಲ್ಲಿ ಯಯಾತಿ ಪುತ್ರನಾದ ಯದು ರಾಜನ ಮಗ ಕ್ರೋಷ್ಟು ಅವನಿಗೆ ಇಬ್ಬರು ಹೆಂಡಂದಿರು ಗಾಂಧಾರೀ, ಮಾದ್ರೀ ಅಂತ ಅದರಲ್ಲಿ ಗಾಂಧಾರೀಗೆ ಅನಮಿತ್ರ ಅನ್ನುವ ಮಗ ಅವನಿಗೆ ಅಮಿತ್ರರು ಶತ್ರುಗಳು ಅಂತ ಇರಲಿಲ್ಲ ಎಲ್ಲರೂ ಮಿತ್ರರೇ ಅಂತಹ ಅನಮಿತ್ರ. ಮಾದ್ರೀ ಅವಳಿಗೆ ಯುಧಾಜಿತ್ ಹಾಗೂ ದೇವಮೀಢುಷ ಅನ್ನುವಂತಹ ಇಬ್ಬರು ಗಂಡು ಮಕ್ಕಳಾಗಿದ್ದಾರೆ ಅದರಲ್ಲಿ ಆ ಯುಧಾಜಿತ್ ಅನ್ನುವವನಿಗೆ ವೃಷ್ಣೀ, ಅಂಧಕ ಅಂತ ಇಬ್ಬರು ಮಕ್ಕಳಾಗಿದ್ದಾರೆ. ಆ ವೃಷ್ಣೀಗೆ ಶ್ವಫಲ್ಕ ಅಂತ ಮಗನಾಗಿದ್ದಾನೆ ಆ ಶ್ವಫಲ್ಕನ ಮಹಿಮೆಯನ್ನು ತಿಳಿಸುತ್ತಾರೆ. ವೃಷ್ಣೀಯ ಮಗ, ಅಕ್ರೂರನ ತಂದೆ ಶ್ವಫಲ್ಕ ಅಂತ ಅವನಿಗೆ ಚಿತ್ರಕ ಅಂತ ಇನ್ನೊಬ್ಬ ತಮ್ಮ. ಆ ಶ್ವಫಲ್ಕ ಅತ್ಯಂತ ಧಾರ್ಮಿಕನಾದ ವ್ಯಕ್ತಿ ಎಲ್ಲಿ ಅವನು ಇರುತ್ತಾನೋ ಅಲ್ಲಿ ಆಧಿವ್ಯಾಧಿಗಳಿಲ್ಲವಂತೆ, ಮಾನಸ ವ್ಯಥೆಗಳಿಲ್ಲ, ದೈಹಿಕವಾದ ರೋಗಗಳಿಲ್ಲ ಅಂತಹ ಅದ್ಭುತವಾದ ಮಹಿಮೆ ಆ ಶ್ವಫಲ್ಕನಿಗೆ ಇದೆ.

ನಾಸ್ತಿ ವ್ಯಾಧಿಭಯಂ ತತ್ರ ನಾವರ್ಷಭಯಮಪ್ಯುತ ।। (34.4 ಹರಿವಂಶಪರ್ವ)

ಅತಿವೃಷ್ಟಿ ಅನಾವೃಷ್ಟಿಗಳ ಭಯ ಇಲ್ಲ, ಸಮೃದ್ಧವಾದಂತಹ ಮಳೆ, ಅತಿವೃಷ್ಟಿ ಅಲ್ಲ ಎಷ್ಟು ಬೇಕೋ ಅಷ್ಟು ಮಳೆ ಸಮೃದ್ಧವಾಗಿ, ದುರ್ಭಿಕ್ಷೆ ಇಲ್ಲ ಅಂತಹ ಅದ್ಭುತವಾದ ಪುಣ್ಯವಂತ ಶ್ವಫಲ್ಕ. ಅರ್ಥ ಮಾಡಿಕೊಳ್ಳಿ ವ್ಯಕ್ತಿ ತಾನು ಮಾಡಬೇಕಾದಂತಹ ಕರ್ತವ್ಯ ಕರ್ಮಗಳ ಪರಿಪಾಲನೆಯನ್ನು ಚೆನ್ನಾಗಿ ಮಾಡುತ್ತಾ ಇದ್ದರೆ, ತನ್ನ ಧರ್ಮಗಳಲ್ಲಿ ತಾನು

ಅನುಷ್ಠಾನವನ್ನು ಮಾಡುತ್ತಾ ದೇವರನ್ನು ಚೆನ್ನಾಗಿ ಸಂತೋಷ ಪಡಿಸಿದ್ದರೆ ಆ ಭಗವಂತನ ಕೃಪೆಯಿಂದ ಅವನಿಗೆ ಮಾತ್ರ ಅಲ್ಲ ಅವನು ಹಾಗೂ ಅವನ ಜೊತೆಗೆ ಸಹವಾಸ ಮಾಡುವ ದೇಶದೊಳಗಿನ ಎಲ್ಲ ಸಜ್ಜನರಿಗೂ ಕೂಡ ಸುಭಿಕ್ಷೆ, ಆರೋಗ್ಯ ಎಲ್ಲ ವಿಧವಾದ ಸೌಭಾಗ್ಯಗಳು ಸಿಗುತ್ತದೆ ಅಂತ ಧರ್ಮದ ಮಹತ್ವ, ಅನುಷ್ಠಾನದ ಮಹತ್ವ ಎಷ್ಟು ಇದೆ ಅಂತ ಶಾಸ್ತ್ರ ನಮಗೆ ತಿಳಿಸಿಕೊಡುತ್ತದೆ. ಕಾಶಿ ರಾಜ ವಿಭು ಅವನ ಪಟ್ಟಣದಲ್ಲಿ ಮಳೆಯೇ ಆಗಿರಲಿಲ್ಲ ಮೂರು ವರ್ಷಗಳವರೆಗೆ ಅನಾವೃಷ್ಟಿ, ದುರ್ಭಿಕ್ಷೆ ಆಗ ಈ ಶ್ವಫಲ್ಕನಿಗೆ ಬೇಡಿಕೊಂಡು ಬರಬೇಕಪ್ಪಾ ನೀನು ನಮ್ಮ ಊರಿಗೆ ಅಂತ ಆ ಶ್ವಫಲ್ಕನನ್ನು ವಾರಾಣಾಸಿಗೆ ಕರೆಸಿ ಅಲ್ಲಿ ವಿಶೇಷವಾಗಿ ಅವನಿಗೆ ಪೂಜೆಯನ್ನು ಮಾಡಿ ಗೌರವದಿಂದ ಅತ್ಯಂತ ಶ್ರದ್ಧೆಯಿಂದ ಆದರೋಪಚಾರಗಳನ್ನೆಲ್ಲ ಮಾಡಿಕೊಂಡು ತನ್ನ ರಾಜ್ಯದೊಳಗೆ ಇಟ್ಟುಕೊಳ್ಳುತ್ತಾನೆ ಕೆಲವು ಕಾಲ ಆ ವಿಭು ಕಾಶಿ ರಾಜ. ಇವನು ಅಲ್ಲಿ ಪ್ರವೇಶ ಮಾಡಿದ್ದೇ ತಡ ಸಮೃದ್ಧವಾದಂತಹ ವೃಷ್ಟಿ ಆಗುತ್ತದೆ, ಸುಭಿಕ್ಷೆ ಆಗುತ್ತದೆ.

ಮುಂದೆ ಕಾಶಿ ರಾಜ ಶ್ವಫಲ್ಕನ ಆಗಮನದಿಂದ ತನ್ನ ರಾಜ್ಯ ಸಮೃದ್ಧಿಯನ್ನು ಪಡೆದಿದೆ ಅವನ ಧರ್ಮ, ಅವನ ಭಕ್ತಿ, ಅವನ ನಿಷ್ಠೆಗೆ ದೇವರು ಪ್ರಸನ್ನನಾಗಿ ಮಳೆಯನ್ನು ಕೊಟ್ಟಿದ್ದಾನೆ. ಅವನಿಗೆ ತನ್ನ ಮಗಳನ್ನೇ ಕೊಟ್ಟು ಮದುವೆ ಮಾಡಬೇಕು ಅನ್ನುವ ಆಲೋಚನೆಯನ್ನು ಮಾಡಿದ್ದಾನೆ ವಿಭು. ಹೇಗೆ ಹಿಂದೆ ಬಂತು ದಶರಥ ಲೋಮಪಾದ ಎಂಬ ಹೆಸರಿನ ಇನ್ನೊಬ್ಬ ದಶರಥ ತನ್ನ ಮಗಳಾದ ಶಾಂತಾ ದೇವಿಯನ್ನು ಋಷ್ಯಶೃಂಗನಿಗೆ ಕೊಟ್ಟು ಮದುವೆ ಮಾಡಿದರು ಆ ಋಷ್ಯಶೃಂಗನ ಆಗಮನದಿಂದಲೇ ತನ್ನ ರಾಷ್ಟ್ರದಲ್ಲಿ ಅದ್ಭುತವಾದ ಸುವೃಷ್ಟಿಯನ್ನು ಪಡೆದುಕೊಂಡ ಅನ್ನುವ ಕಥೆಯನ್ನು ಹಿಂದೆ ಕೇಳಿದಿರಿ. ಆ ರೀತಿ ಈ ಶ್ವಫಲ್ಕನನ್ನ ತನ್ನ ದೇಶಕ್ಕೆ ಕರೆದು ಅವನಿಂದ ಸುಭಿಕ್ಷೆಯನ್ನು ಪಡೆದು ಅವನಿಗೆ ತಾನು ಕನ್ಯಾ ಭಿಕ್ಷೆಯನ್ನು ಹಾಕುತ್ತಾ ಇದ್ದಾನೆ ಅವಳ ಹೆಸರು ಗಾಂದಿನೀ ಅಂತ ಆಕಾಶ ರಾಜನ ಮಗಳು. ಅವಳಿಗೆ ಗಾಂದಿನೀ ಅಂತ ಯಾಕೆ ಹೆಸರು ಬಂತು ಅಂದರೆ ಆ ಕಾಶಿ ರಾಜನ ಮಡದಿ ಅವಳನ್ನು ಗರ್ಭದಲ್ಲಿ ಧಾರಣೆ ಮಾಡಿರುವಾಗ ಎಷ್ಟೋ ವರ್ಷಗಳು ಕಳೆದರೂ ಅವಳ ಪ್ರಸವವೇ ಆಗುತ್ತಾ ಇಲ್ಲ ಗರ್ಭಧಾರಣೆಯಾಗಿ ಅನೇಕ ವರ್ಷಗಳಾಗಿವೆ. **'ಬಹೂನ್ ವರ್ಷಗಣಾನ್ ಕಿಲ'**[1] ಎಷ್ಟೋ ವರ್ಷಗಳು ಕಳೆದರೂ ಕೂಡ ಇನ್ನೂ ಆಗುತ್ತಾ ಇಲ್ಲ ಪ್ರಸವ ಯಾಕೆ ಅಂತ ಚಿಂತೆ ಮಾಡುವಂತಹ ಸಂದರ್ಭ. ಆಗ ಅಷ್ಟು ವರ್ಷಗಳಾಗಿವೆ ಅಂದರೆ ಅವಳಿಗೆ ತಿಳುವಳಿಕೆ ಬಂದಿದೆ ಒಳಗಿದ್ದಂಥವಳಿಗೆ ಮಗುವಿಗೆ ಅದಕ್ಕೆ ನಾನು ಚೆನ್ನಾಗಿ ಬೋಧನೆ ಮಾಡುತ್ತೇನೆ ಅಂತ ತಂದೆ ಗಟ್ಟಿಯಾಗಿ ಹೇಳುತ್ತಾ ಇದ್ದಾನೆ ಯಾಕೆ ಒಳಗೆ ಇದ್ದೀ ನೀನು ಹೊರಗೆ ಬಾ ಅಂತ. ಆಗ ಅವಳು ಒಳಗಿನಿಂದಲೇ ಉತ್ತರ ಕೊಡುತ್ತಾಳೆ ಒಂದು ಕರಾರು, ನೀನು ವಚನ ಕೊಟ್ಟರೆ ನಾನು ಹೊರಗೆ ಬರುತ್ತೇನೆ ಅಂತ ಇದನ್ನು ಮೊದಲೇ ಹೇಳಬಹುದಾಗಿತ್ತಲ್ಲ ಪರವಾಯಿಲ್ಲ ಹೇಳು, ಅವಳು ಹೇಳುತ್ತಾಳೆ.

ಪ್ರೋವಾಚ ಚೈನಂ ಗರ್ಭಸ್ಥಾ ಕನ್ಯಾ ಗಾಂ ಚ ದಿನೇ ದಿನೇ । (34.9 ಹರಿವಂಶಪರ್ವ)

ಯದಿ ದದ್ಯಾಂ ತತೋಽದ್ಯಾಹಂ ಜಾಯಯಿಷ್ಯಾಮಿ ತಾಂ ಪಿತಾ ॥ (34.10 ಹರಿವಂಶಪರ್ವ)

ನಾನು ಹುಟ್ಟಿದ ದಿನದಿಂದ ಪ್ರತಿನಿತ್ಯವೂ ಗೋದಾನವನ್ನು ನೀನು ಮಾಡುತ್ತೇನೆ ಅಂತ ಸಂಕಲ್ಪ ಮಾಡು ನಾನು ಹುಟ್ಟುತ್ತೇನೆ ಇಲ್ಲದಿದ್ದರೆ ಹುಟ್ಟುವುದಿಲ್ಲ ಆಲೋಚನೆಯನ್ನೇ ಮಾಡಲಿಲ್ಲ ಕಾಶಿ ರಾಜ ಅದಕ್ಕೇನಂತೆ ಅವಶ್ಯವಾಗಿ ಗೋದಾನವನ್ನು ಮಾಡೋಣ ಮಹಾಪುಣ್ಯ. ನಾವೇ ಮಾಡಬೇಕು ನೀನು ಹೇಳುತ್ತಾ ಇದ್ದೀ ಅಂದಮೇಲೆ ಮಾಡೇ ಮಾಡುತ್ತೇವೆ ಅಂತ ಹೇಳಿದಾಗ ಅವಳು ಹೊರಗೆ ಬಂದಿದ್ದಾಳೆ ಗರ್ಭದಿಂದ ಅಂತ. ಹೀಗಾಗಿ ಹುಟ್ಟುವಾಗಲೇ ಗೋದಾನವನ್ನು ನಿತ್ಯದಲ್ಲಿ ಮಾಡಲೇಬೇಕೆಂಬ ಕರಾರು ಮಾಡಿ ಹುಟ್ಟಿದ್ದಕ್ಕೆ ಅವಳಿಗೆ ಗಾಂದಿನೀ ಅಂತನ್ನುವ ಹೆಸರು

1. 34.8 ಹರಿವಂಶಪರ್ವ

ಬಂದಿದೆ. ಆ ಗಾಂದಿನೀ ಶ್ವಫಲ್ಕನಿಂದ ಅಕ್ರೂರನನ್ನು ಪಡೆದಿದ್ದಾಳೆ ಪರಮ ಭಗವದ್ಭಕ್ತನಾಗಿರುವಂತಹ ಅಕ್ರೂರ ಕಿಶೋರ ಅನ್ನುವ ಗಂಧರ್ವ ಸ್ವಾಯಂಭುವ ಮನುವಿನ ವಿಶೇಷವಾದಂತಹ ಆವೇಶ, ಬ್ರಹ್ಮ ದೇವರ ಆವೇಶ. ಸ್ವಾಯಂಭುವ ಮನುವಿನ ಅಂಶದಿಂದಲೂ ಕೂಡಿದಂತಹ ಗಂಧರ್ವ, ಬ್ರಹ್ಮ ದೇವರ ವಿಶೇಷವಾದಂತಹ ಒಂದು ಆವೇಶ, ಬ್ರಹ್ಮ ದೇವರ ಅನುಗ್ರಹ ಅಂತಹ ಮಹಾನುಭಾವ ಅಕ್ರೂರ. ಪರಮ ಭಗವದ್ಭಕ್ತ ಕೃಷ್ಣನಿಗೆ ಅಣ್ಣನೇ ಆಗಬೇಕು ಯುಧಾಜಿತ್ ಈ ವಂಶದಲ್ಲಿ ಬಂದವನು ಅಕ್ರೂರ. ಇನ್ನೊಬ್ಬ ಕ್ರೋಷ್ಟುವಿನ ಮಗ ದೇವಮೀಢುಷ ಅಂತ ಅವನ ಸಂತತಿಯಲ್ಲಿ ಬಂದವನೇ ಕೃಷ್ಣ ದೇವಮೀಢುಷ ಅವನಿಗೆ ಶೂರ, ಶೂರನಿಗೆ ವಸುದೇವ, ವಸುದೇವನಿಗೆ ಕೃಷ್ಣ, ಅಂದರೆ ಕ್ರೋಷ್ಟುವಿನಿಂದ ಅಕ್ರೂರನು ನಾಲ್ಕನೆಯವ ಕೃಷ್ಣನೂ ನಾಲ್ಕನೆಯವ. ಯುಧಾಜಿತ್, ವೃಷ್ಣಿ, ಶ್ವಫಲ್ಕ, ಅಕ್ರೂರ. ಇಲ್ಲಿ ದೇವಮೀಢುಷ, ಶೂರ, ವಸುದೇವ, ಕೃಷ್ಣ, ಅಂತಹ ಶ್ರೀಕೃಷ್ಣ ಪರಮಾತ್ಮನ ಒಂದು ಭಾತೃತ್ವದ ಭಾಗ್ಯವನ್ನೂ ಪಡೆದಂಥವನು. ಬ್ರಹ್ಮ ದೇವರ ಒಂದು ಸನ್ನಿಧಾನ ಅದಕ್ಕಾಗಿಯೇ ಬ್ರಹ್ಮ ದೇವರ ಆವೇಶ, ಸ್ವಾಯಂಭುವ ಮನುವಿನ ವಿಶೇಷವಾದ ಸನ್ನಿಧಾನ ಅಂತಹ ಆ ಕಿಶೋರ ಎಂಬ ಗಂಧರ್ವ ಅಕ್ರೂರನಾಗಿ ಅವತಾರ ಮಾಡಿದ್ದಾನೆ ಅಂತ ತಿಳಿಸಿಕೊಟ್ಟಿದ್ದಾರೆ. ಶ್ರೀಕೃಷ್ಣ ಪರಮಾತ್ಮನ ದರ್ಶನಕ್ಕೆ ಹೊರಟರೆ

ಸೋಽವೇಷ್ಟತಾತ್ರ ಜಗದೀಶಿತುರಂಗಸಂಗಾತ್

ಲಬ್ಧೋಚ್ಚಯೇನ ನಿಖಿಲಾಘವಿದಾರಣೇಷು । (13.88 ಮಭಾತಾನಿರ್ಣಯ)

ಶ್ರೀಮದಾಚಾರ್ಯರು ವರ್ಣನೆ ಮಾಡುತ್ತಾರೆ ಶ್ರೀಕೃಷ್ಣ ಪರಮಾತ್ಮನ ಪಾದಧೂಲಿ ಕಂಡಾಗ ಅದರಲ್ಲಿ ಹೊರಳಾಡಿ ಹೋದನಂತೆ ಅಷ್ಟು ಭಕ್ತಿ ಆ ಮಹಾನುಭಾವನಿಗೆ. ವ್ಯಾಸರಾಜರು ತಿರುಪತಿಯ ಬೆಟ್ಟವನ್ನು ಏರುವಾಗ ವಿಶಿಷ್ಟವಾದ ಆ ಭಗವಂತನ ಸನ್ನಿಧಾನ ಅವರಿಗೆ ಕಂಡಿದೆ ಹೀಗಾಗಿ ಪಾದಸ್ಪರ್ಶವಿಲ್ಲದಂತೆ ಮಂಡೆಯ ಮೇಲೆ ಸಂಪೂರ್ಣವಾದ ಬೆಟ್ಟವನ್ನು ಹತ್ತಿ ವೇಂಕಟೇಶ ದೇವರ ದರ್ಶನವನ್ನು ಮಾಡಿದ್ದಾರೆ, ವೇಂಕಟೇಶ ದೇವರ ಸೇವೆಯನ್ನು ಮಾಡಿದ್ದಾರೆ, ಪೂಜೆಯನ್ನು ಮಾಡಿದ್ದಾರೆ ಅಂತ ನಾವು ಇತಿಹಾಸದಲ್ಲಿ ಕೇಳುತ್ತೇವೆ. ಅಂತಹ ಪರಮ ಭಗವದ್ಭಕ್ತರು ಆ ಭಗವಂತನ ವಿಶೇಷವಾದಂತಹ ಅಧಿಷ್ಠಾನಗಳು ಕಂಡಾಗ ಆ ತರಹದ ಭಕ್ತಿ ಶ್ರದ್ಧೆಗಳಿಂದ ಸೇವೆಯನ್ನು ಮಾಡುತ್ತಾರೆ ಅಂತನ್ನುವುದನ್ನು ನಾವು ಕೇಳುತ್ತೇವೆ ಅಂತಹ ಮಹಾನುಭಾವ ಅಕ್ರೂರ.

ಮುಂದೆ ಈ ದೇವಮೀಢುಷನ ವಂಶದಲ್ಲಿ ಶೂರ ಆ ಶೂರನ ಮಗ ವಸುದೇವ, ವಸುದೇವನಿಗೆ ಇನ್ನೊಂದು ಹೆಸರು ಆನಕದುಂಧುಭಿ ಅಂತ ಅವನು ಹುಟ್ಟುವಾಗ ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮ ಜಗನ್ನಿಯಾಮಕ ಭೂಭಾರಹರಣ ಮಾಡುವುದಕ್ಕೋಸ್ಕರ ಈ ಮಹಾನುಭಾವನಾದ ವಸುದೇವನಲ್ಲಿ ಅವತಾರ ಮಾಡುತ್ತಾನೆ. ಅಂತಹ ಪರಮಾತ್ಮನ ಅವತಾರಕ್ಕೆ ಒಂದು ಸ್ಥಾನ ಅಂತ ಅನ್ನಿಸಿಕೊಂಡ ಈ ವ್ಯಕ್ತಿ ಅವತಾರ ಮಾಡುತ್ತಾ ಇದ್ದಾನೆ ಎಂದರೆ ನಮಗೆ ಬಹಳ ಸಂತೋಷ ಅಂತ ದೇವತೆಗಳು ದುಂಧುಭಿ ನಾದವನ್ನು ಮಾಡಿದ್ದಾರೆ, ನಗಾರಿಯನ್ನು ಬಾರಿಸಿದ್ದಾರೆ, ತಮಟೆಯನ್ನು ಬಾರಿಸಿದ್ದಾರೆ ಅನ್ನುವುದಕ್ಕೋಸ್ಕರ ದುಂಧುಭಿ, ಆನಕ ಇವುಗಳೆಲ್ಲ ಮೊಳಗಿದವು ಅನ್ನುವುದಕ್ಕೋಸ್ಕರ ಅವನಿಗೆ ಆನಕದುಂಧುಭಿ ಎಂಬ ಹೆಸರನ್ನು ಇಟ್ಟಿದ್ದಾರೆ ಪುಷ್ಪವೃಷ್ಟಿ ಆಗಿದೆ ಅವನ ಅವತಾರದ ಕಾಲದಲ್ಲಿ. ಅಂತಹ ಮಹಾನುಭಾವ ಆನಕದುಂಧುಭಿ ಸಾಕ್ಷಾತ್ ಕಶ್ಯಪರ ಅವತಾರ, ಅದಿತಿ ದೇವಿಯ ಅವತಾರ ದೇವಕಿ-ಕಶ್ಯಪರ ಅವತಾರನೇ ವಸುದೇವ ಮಹಾನುಭಾವ ತಪಸ್ಸು ಮಾಡಿ ಶ್ರೀಕೃಷ್ಣ ಪರಮಾತ್ಮನನ್ನು ತನ್ನ ಮಗನನ್ನಾಗಿ ಪಡೆಯಬೇಕು ಅಂತ ಅವತಾರ ಮಾಡಿದ್ದಾನೆ.

ಹಿಂದೆ ಪೃಶ್ನಿಗರ್ಭ ಅಂತ ಪರಮಾತ್ಮನ ಅವತಾರ ಆಗಿದೆ ಆಮೇಲೆ ಅದರ ಹಿಂದೆ ಸಾಕ್ಷಾತ್ ವಾಮನ ರೂಪಿಯಾದ ಪರಮಾತ್ಮ ಅವತಾರ ಮಾಡಿದ್ದಾನೆ ಇವರಲ್ಲಿಯೇನೆ ಈ ಅದಿತಿ-ಕಶ್ಯಪರಲ್ಲಿ ವಾಮನನಾಗಿ



ಪೃಶ್ನಿಗರ್ಭನಾಗಿ ಈಗ ಶ್ರೀಕೃಷ್ಣ ಪರಮಾತ್ಮನಾಗಿ ಪರಮಾತ್ಮ ಅವತಾರ ಮಾಡುತ್ತಾನೆ. ಇವನಿಗೆ ಅನೇಕ ಜನ ತಮ್ಮಂದಿರು ದೇವಭಾಗ, ದೇವಶ್ರವಾ, ಅನಾಧೃಷ್ಟಿ, ಕನವಕ, ವತ್ಸಾವಾನ್, ಗೃಂಜಿಮ, ಶ್ಯಾಮ, ಶಮೀಕ ಅಂತ ಅದರಂತೆ ಐದು ಜನ ತಂಗಿಯರೂ ಇದ್ದಾರೆ ಅರ್ಥಾತ್ ಶೂರನಿಗೆ ಮಕ್ಕಳು ವಸುದೇವನ ತಂಗಿಯರು. ಪೃಥುಕೀರ್ತಿ, ಪೃಥಾ ಅಂದರೆ ಅವಳೇ ಮುಂದೆ ಕುಂತಿ ಅಂತ ಹೆಸರಿನಿಂದ ಪ್ರಸಿದ್ಧಳಾಗುತ್ತಾಳೆ ಪೃಥುಕೀರ್ತಿ, ಪೃಥಾ, ಶ್ರುತದೇವಾ, ಶ್ರುತಶ್ರವಾ, ರಾಜಾಧಿದೇವಿ ಅಂತ ಐದು ಜನ. ಅದರಲ್ಲಿ ಪೃಥಾ ಅನ್ನುವ ತನ್ನ ಮಗಳನ್ನು ಶೂರ ವಸುದೇವನ ತಂಗಿಯನ್ನು ಪೃಥಾ ಅವಳನ್ನು ಕುಂತಿಭೋಜ ರಾಜನಿಗೆ ಕೊಡುತ್ತಾನೆ. ಆ ಕೂರ್ಮ ಎಂಬ ಮರುತ್ ಆ ಮರುತ್ ದೇವತೆಯ ಅವತಾರ ಕುಂತಿಭೋಜ ರಾಜ. ಆ ಕುಂತಿಭೋಜ ರಾಜ ಇವನಿಗೆ ಅತ್ಯಂತ ಪ್ರೀತಿಯ ಮಿತ್ರ ಅನ್ನುವುದಕ್ಕಾಗಿ ಆ ಕುಂತಿಭೋಜ ರಾಜನಿಗೆ ತನ್ನ ಮಗಳನ್ನು ಸಾಕುವುದಕ್ಕೆ ಕೊಡುತ್ತಾನೆ ಅವನು ತನ್ನ ಸಾಕುಮಗಳನ್ನಾಗಿ ಬೆಳೆಸುತ್ತಾನೆ ಕುಂತಿಭೋಜ ಹೀಗೆ ಆ ಕುಂತಿ ಅಲ್ಲಿ ಹೋಗಿದ್ದಾಳೆ. ಇನ್ನು ಅಂತ್ಯ ಅನ್ನುವ ಒಬ್ಬ ಮಹಾನುಭಾವ ಶ್ರುತದೇವಾ ಅನ್ನುವವಳಲ್ಲಿ ಜಗೃಹು ಅನ್ನುವಂತಹ ಮಗನನ್ನು ಪಡೆದಿದ್ದಾನೆ, ಶ್ರುತಶ್ರವಾ ಅನ್ನುವವಳಲ್ಲಿ ಚೈದ್ಯ ಚೇದ ದೇಶದ ರಾಜ ಶಿಶುಪಾಲನನ್ನು ಪಡೆದಿದ್ದಾನೆ. ಹಿರಣ್ಯಕಶಿಪು ಸನಕಾದಿಗಳ ಶಾಪದಿಂದ ಜಯ ವಿಜಯರು ಮೂರು ಬಾರಿ ಅವತಾರ ಮಾಡಿದರಲ್ಲ ಹಿರಣ್ಯಕಶಿಪು, ಹಿರಣ್ಯಾಕ್ಷ, ರಾವಣ, ಕುಂಭಕರ್ಣ ಆ ಹಿರಣ್ಯಕಶಿಪು, ರಾವಣ ಅವನೇ ಇಲ್ಲಿ ಶಿಶುಪಾಲನಾಗಿ ಹುಟ್ಟಿದ್ದಾನೆ. ಇನ್ನು ವೃದ್ಧ ಅನ್ನುವವನಿಂದ ಪೃಥುಕೀರ್ತಿ ಅನ್ನುವವಳಲ್ಲಿ ದಂತವಕ್ತ್ರ ಹುಟ್ಟಿದ್ದಾನೆ. ಶಿಶುಪಾಲ, ದಂತವಕ್ತ್ರ ಇಬ್ಬರೂ ಕೂಡ ಶ್ರೀಕೃಷ್ಣ ಪರಮಾತ್ಮನ ಸೋದರತ್ತೆಯ ಮಕ್ಕಳೇ ಅವರಿಬ್ಬರನ್ನೂ ಶ್ರೀಕೃಷ್ಣ ಪರಮಾತ್ಮನ ಸಂಹಾರ ಮಾಡಿದ್ದಾನೆ ಮುಂದೆ. ಇನ್ನು ಕುಂತಿಭೋಜ ರಾಜ ತನ್ನ ಮಗಳಾದ ಕುಂತಿಯನ್ನು ಪಾಂಡು ರಾಜನಿಗೆ ಕೊಟ್ಟು ಮದುವೆ ಮಾಡಿದ್ದಾನೆ ಪರಾವಹ ಎಂಬ ಮರುತ್ತಿನ ಅವತಾರ ಪಾಂಡು ರಾಜ ಆ ಪಾಂಡು ರಾಜನಿಗೆ ಕೊಟ್ಟು ಮದುವೆ ಮಾಡಿದ್ದಾನೆ ಅಲ್ಲಿ ಯುಧಿಷ್ಠಿರ ಯಮಧರ್ಮನಿಂದ, ಸಾಕ್ಷಾತ್ ಮುಖ್ಯಪ್ರಾಣ ದೇವರಿಂದ ಭೀಮಸೇನ ದೇವರು, ಇಂದ್ರ ದೇವರಿಂದ ಅರ್ಜುನ ಅಲ್ಲಿ ಅವತಾರ ಮಾಡಿದ್ದಾರೆ ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ.

ಇನ್ನು ಆ ಕ್ರೋಷ್ಟು ಮೂಲಪುರುಷ ಯದು ರಾಜನ ಮಗ ಕ್ರೋಷ್ಟು ಅವನ ಮೊದಲನೆಯ ಹೆಂಡತಿ ಗಾಂಧಾರೀ ಅವಳಲ್ಲಿ ಅನಮಿತ್ರ ಅಂತ ಒಬ್ಬ ಮಗನಾದನಲ್ಲ ಆ ಅನಮಿತ್ರನ ವಂಶವನ್ನು ತಿಳಿಸುತ್ತಾರೆ ಅನಮಿತ್ರನ ಮಗನೇ ಶಿನಿ, ಶಿನಿಯ ಮಗನೇ ಸತ್ಯಕ, ಸತ್ಯಕನ ಮಗನೇ ಸಾತ್ಯಕಿ. ಆ ಸಾತ್ಯಕಿ ಪ್ರತಿಯೊಂದು ಮಾಸದಲ್ಲಿ ಎರಡು ಪಕ್ಷಗಳು ಇರುತ್ತಲ್ಲ ಶುಕ್ಲಪಕ್ಷ, ಕೃಷ್ಣಪಕ್ಷ ಆ ಕೃಷ್ಣಪಕ್ಷಕ್ಕೆ ಅಭಿಮಾನಿ ದೇವತೆ. ಆ ಕೃಷ್ಣಪಕ್ಷಾಭಿಮಾನಿ ದೇವತೆಯೇ ಇಲ್ಲಿ ಸಾತ್ಯಕಿಯಾಗಿ ಅಥವಾ ಯುಯುಧಾನ ಅಂತ ಅವನ ಹೆಸರಿನಲ್ಲಿ ಅವತಾರ ಮಾಡಿದ್ದಾನೆ ಕೃಷ್ಣ ಪಕ್ಷಾಭಿಮಾನಿ ದೇವತೆ. ಅವನಲ್ಲಿ ಗರುಡ ದೇವರ ವಿಶೇಷ ಸನ್ನಿಧಾನ ಇದೆ, ಸುದರ್ಶನ ಚಕ್ರಾಭಿಮಾನಿ ದೇವತೆಯಾದ ಕಾಮನ ಸನ್ನಿಧಾನ ಇದೆ, ಸಂವಹ ಎಂಬಂತಹ ಮರುತ್ತಿನ ಆವೇಶವೂ ಇದೆ, ಸಾಕ್ಷಾತ್ ಪರಮಾತ್ಮನ ವಿಶೇಷ ಸನ್ನಿಧಾನವೂ ಇದೆ ಸಾತ್ಯಕಿಯಲ್ಲಿ. ಅದಕ್ಕಾಗಿಯೇನೆ ಮಹಾಪರಾಕ್ರಮಿ, ಭಾರೀ ಪರಾಕ್ರಮದ ಯುದ್ಧವನ್ನೆಲ್ಲ ಮಹಾಭಾರತದ ಯುದ್ಧದಲ್ಲಿ ಅವನು ಮಾಡಿದ್ದಾನೆ ಮುಂದೆ ಅದಕ್ಕೆ ಕಾರಣ ವಿಷ್ಣುವಿನ ಸನ್ನಿಧಾನ, ಗರುಡ ದೇವರ ಸನ್ನಿಧಾನ ಹಾಗೂ ಸುದರ್ಶನ ಚಕ್ರದ ಸನ್ನಿಧಾನ, ಸಂವಹ ಎಂಬ ಮರುತ್ತಿನ ಸನ್ನಿಧಾನ ಇದೆ ಸ್ವಯಂ ಅವನು ಕೃಷ್ಣಪಕ್ಷಾಭಿಮಾನಿ ದೇವತೆ. ನೋಡಿ ಐದು ಜನ ಸೇರಿದ್ದಾರೆ ಅಲ್ಲಿ ಅರ್ಜುನನ ಅತ್ಯಂತ ಪ್ರೀತಿಯ ಶಿಷ್ಯ, ಅರ್ಜುನನ ಭಕ್ತ ಅಂತಹ ಮಹಾನುಭಾವ ಈ ಸಾತ್ಯಕಿ ಎಂಬುದಾಗಿ ತಿಳಿಸಿದ್ದಾರೆ.

ಹೀಗೆ ಆ ಅನಮಿತ್ರನ ವಂಶವನ್ನು ಅಲ್ಲಿ ಹೇಳಿ ಈ ಕಡೆಗೆ ಮತ್ತೆ ಪುನಃ ವಸುದೇವನ ತಮ್ಮಂದಿರ ಮಕ್ಕಳು ಯಾರು ಅಂತ ಹೇಳುತ್ತಾ ಹೋಗುತ್ತಾರೆ. ವಸುದೇವನ ತಮ್ಮ ದೇವಭಾಗ ಅಂತ ಆ ದೇವಭಾಗನ ಮಗನೇ ಉದ್ಧವ ನೋಡಿ ಉದ್ಧವ ಅಂದರೆ ಬೇರೆ ಯಾರಲ್ಲ ಶ್ರೀಕೃಷ್ಣ ಪರಮಾತ್ಮನ ಚಿಕ್ಕಪ್ಪನ ಮಗನೇ. ಯಾರವನು ಸಾಕ್ಷಾತ್ ಬೃಹಸ್ಪತ್ಯಾಚಾರ್ಯರು ದೇವತೆಗಳ ಗುರುಗಳಾದ ಬೃಹಸ್ಪತ್ಯಾಚಾರ್ಯರು ಒಂದು ರೂಪದಿಂದ ದ್ರೋಣಾಚಾರ್ಯರಾಗಿ ಹುಟ್ಟಿದ್ದಾರೆ ಅವರೇ ಇನ್ನೊಂದು ಅಂಶದಿಂದ ಉದ್ಧವನಾಗಿ ಹುಟ್ಟಿದ್ದಾರೆ. ಯಾಕೆ ಅಂದರೆ ನಾನು ಪರಮಾತ್ಮನ ಸೇವೆ ಮಾಡುವುದಕ್ಕಾಗೇನೆ ದ್ರೋಣಾಚಾರ್ಯನಾಗಿ ಹುಟ್ಟಿದ್ದು ನಿಜ ಆದರೂ ದೇವರ ಆಜ್ಞೆಯ ಪ್ರಕಾರ ನಾನು ಕೌರವ ಪಕ್ಷದಲ್ಲಿ ಇರಬೇಕಾಗುತ್ತೆ ಭಗವಂತನದ ಆಜ್ಞೆಯೇ ಅದು ಅವನ ಸಂಕಲ್ಪವೇ. ಆ ಪ್ರತಿ ಪಕ್ಷದಲ್ಲಿ ಇದ್ದು ನಾನು ಒಂದು ಅರ್ಥದೊಳಗೆ ದೇವರ ಸೇವೆಯನ್ನೇ ಮಾಡಿದರೂ ಕೂಡ ಹತ್ತಿರದಲ್ಲಿದ್ದು ದೇವರ ಸೇವೆಯನ್ನು ಮಾಡಿ ವಿಶೇಷ ಅನುಗ್ರಹವನ್ನು ಪಡೆಯುವುದಕ್ಕೆ ಆಗುವುದಿಲ್ಲ ಆ ಅವತಾರದಲ್ಲಿ ಅಂತ ಬೃಹಸ್ಪತ್ಯಾಚಾರ್ಯರು ಒಂದೇ ಕಾಲದೊಳಗೆ ಎರಡು ಕಡೆಗೆ ಅವತಾರ ಮಾಡಿದ್ದಾರೆ. ಆ ಕಡೆಗೆ ಭರದ್ವಾಜ ಋಷಿಗಳಿಂದ ಅವತಾರ ಮಾಡಿದರೆ ಇಲ್ಲಿ ಈ ದೇವಭಾಗನಿಂದ ಉದ್ಧವನಾಗಿ ಅವತಾರ ಮಾಡಿದ್ದಾರೆ ಆ ಉದ್ಧವ ಪರಮ ಭಗವದ್ಭಕ್ತ ಶ್ರೀಕೃಷ್ಣ ಪರಮಾತ್ಮನಿಂದ ದಿವ್ಯವಾದ ಉಪದೇಶವನ್ನು ಮುಂದೆ ಪಡೆಯುತ್ತಾನೆ ಆ **'ಉದ್ಧವಗೀತ'** ಏಕಾದಶಸ್ಕಂಧ ಭಾಗವತದಲ್ಲಿ ಅದನ್ನು ತಿಳಿಸುತ್ತಾರೆ. ಇಡೀ ಜಗತ್ತಿಗೆ ದೊಡ್ಡ ತತ್ವಜ್ಞಾನವನ್ನು ಈ ಉದ್ಧವನನ್ನು ನಿಮಿತ್ತ ಮಾಡಿಕೊಂಡು ದೇವರು ಕೊಟ್ಟಿದ್ದಾನೆ.

ಮುಂದೆ ಬೇರೆ ಬೇರೆಯವರ ವಂಶ ಹೇಳುತ್ತಾರೆ. ಅನಾಧೃಷ್ಟಿ ಅಂತ ಇನ್ನೊಬ್ಬ ವಸುದೇವನ ತಮ್ಮ ಅವನಿಗೆ ಯಶಸ್ವಿ ಅಂತ ಮಗನಾಗುತ್ತಾನೆ, ದೇವಶ್ರವ ಅಂತ ಇನ್ನೊಬ್ಬ ವಸುದೇವನ ತಮ್ಮ ಶತ್ರುಘ್ನ ಅಂತನ್ನುವ ಮಗನನ್ನು ಪಡೆಯುತ್ತಾನೆ. ಪಡೆಯುತ್ತಾನೆ ಅಷ್ಟೇ ಆದರೆ ಅವನನ್ನು ಅಪೇಕ್ಷೆ ಪಟ್ಟು ನಿಷಾದರು ಕರೆದುಕೊಂಡು ಹೋಗಿ ಬಿಡುತ್ತಾರೆ ತಮ್ಮ ಕುಲದಲ್ಲಿ ಅವನನ್ನು ಬೆಳಸುತ್ತಾರೆ ಅವನಿಗೆ ಏಕಲವ್ಯ ಅನ್ನುವ ಹೆಸರು ಬರುತ್ತೆ. ಆ ಏಕಲವ್ಯ ಅವನೂ ಕೂಡ ಅನೇಕ ಕಾರಣಗಳಿಂದ ಭಗವಂತನಿಗೆ ವಿರೋಧವನ್ನು ಮಾಡುತ್ತಾನೆ ಮುಂದೆ ಪರಮಾತ್ಮ ಅವನ ಸಂಹಾವನ್ನೂ ಮಾಡುತ್ತಾನೆ ಆದರೆ ಅವನು ನೋಡಿದರೆ ಶ್ರೀಕೃಷ್ಣ ಪರಮಾತ್ಮನ ಚಿಕ್ಕಪ್ಪನ ಮಗನೇ ಮೂಲತಃ. ಆದರೂ ಕೂಡ ಅವನು ಶ್ರೀಕೃಷ್ಣ ಪರಮಾತ್ಮನ ದ್ರೋಹವನ್ನು ಮಾಡಿ ವಿರೋಧವನ್ನು ಮಾಡಿ ಮುಂದೆ ಮರಣವನ್ನು ಹೊಂದುತ್ತಾನೆ ಅಂತನ್ನುವ ವಿಚಾರವನ್ನು ತಿಳಿಸುತ್ತಾರೆ. ಇನ್ನು ವತ್ಸಾವಾನ್ ಅನ್ನುವಂತಹ ಇನ್ನೊಬ್ಬ ವಸುದೇವನ ತಮ್ಮ ಅವನಿಗೆ ಮಕ್ಕಳಾಗಿಲ್ಲ ಅಂತ ಹೇಳಿ ವಸುದೇವ ತನ್ನ ಒಬ್ಬ ಔರಸ ಪುತ್ರನಾದ ಕೌಶಿಕ ಅನ್ನುವವನನ್ನು ಅವನಿಗೆ ದತ್ತಕ್ಕೆ ಕೊಡುತ್ತಾನೆ ಅಂದರೆ ಕೃಷ್ಣ ಪರಮಾತ್ಮನಿಗೆ ಕೌಶಿಕ ಅಂತ ಒಬ್ಬ ಅಣ್ಣ ಇದ್ದ ವಸುದೇವನ ಮಗ ಅವನನ್ನು ವತ್ಸಾವಾನ್ ಅನ್ನುವವನಿಗೆ ಕೊಟ್ಟಿದ್ದಾನೆ ನೀನು ಇವನನ್ನ ಬೆಳೆಸಿಕೋ ಅಂತ. ಇನ್ನು ಗಂಡೂಷ ಅಂತ ಇನ್ನೊಬ್ಬ ಚಿಕ್ಕಪ್ಪ ಕೃಷ್ಣನಿಗೆ ಅವನಿಗೆ ಮಕ್ಕಳೇ ಇರಲಿಲ್ಲ ಅವನಿಗೆ ವಸುದೇವ ತನ್ನ ಮಕ್ಕಳನ್ನು ಕೊಡುವುದಿಲ್ಲ ಕೃಷ್ಣ ಪರಮಾತ್ಮ ಮುಂದೆ ತಾನು ಅವತಾರ ಆದಮೇಲೆ ಚಾರುದೇಷ್ಣ ಅಂತನ್ನುವ ಮಗ, ಗಣಪತಿಯ ಅವತಾರ ಚಾರುದೇಷ್ಣ, ಸುಚಾರು, ಪಂಚಾಲ, ಕೃತಲಕ್ಷಣ ಅಂತನ್ನುವ ಮಕ್ಕಳನ್ನು ಆ ಚಿಕ್ಕಪ್ಪನಾದ ಗಂಡೂಷನಿಗೆ ಕೊಡುತ್ತಾನೆ ಅವನು ಅವರನ್ನು ಸ್ವೀಕಾರ ಮಾಡಿ ಬೆಳೆಸುತ್ತಾನೆ ಅಂತನ್ನುವ ಮಾತನ್ನು ಹೇಳುತ್ತಾರೆ. ಹೀಗೆ ಗಂಡೂಷನಿಗೆ ಕೃಷ್ಣ ಹಾಗೂ ವತ್ಸಾವಾನ್ ಅನ್ನುವವನಿಗೆ ವಸುದೇವ ತಮ್ಮ ಮಕ್ಕಳನ್ನೇ ಕೊಡುತ್ತಾರೆ.

ಈ ಚಾರುದೇಷ್ಣನ ಮಹಿಮೆಯನ್ನು ವರ್ಣನೆ ಮಾಡುತ್ತಾರೆ ಏನು ಆ ಚಾರುದೇಷ್ಣ ಗಣಪತಿಯ ಅವತಾರನಾದ ಮಹಾನುಭಾವನಾದ ಆ ಚಾರುದೇಷ್ಣ ರುಕ್ಮಿಣಿ ಪುತ್ರ, ಶ್ರೀಕೃಷ್ಣ ಪರಮಾತ್ಮನ ವಿಶೇಷವಾದ ಅನುಗ್ರಹ

ಕೇಳಬೇಕೆ ಅವನ ಶಕ್ತಿ ಸಾಮರ್ಥ್ಯಗಳು, ಹೊರಗೆ ಹೊರಟ ಅಂದರೆ ದುಷ್ಟರ ನಿಗ್ರಹವನ್ನು ಮಾಡಿ, ಸಂಹಾರ ಮಾಡಿ, ಶತ್ರುಗಳನ್ನು ಸೋಲಿಸಿ ಗೆಲ್ಲದೇ ಬರುತ್ತಾನೆ ಇರಲಿಲ್ಲವಂತೆ.

ಅಸಂಗ್ರಾಮೇಣ ಯೋ ವೀರೋ ನಾವರ್ತತ ಕದಾಚನ । (34.36 ಹರಿವಂಶಪರ್ವ)

ಎಂದೆಂದಿಗೂ ಮನೆಗೇ ಬರುತ್ತಾನೆ ಇರಲಿಲ್ಲ ಯುದ್ಧ ಆಡೋದೇ ಶತ್ರುಗಳನ್ನು ಸಂಹಾರ ಮಾಡಿ ವಿಜಯ ಪತ್ರಿಕೆಯನ್ನು ತೆಗೆದುಕೊಂಡೆ ಬರುವುದು ಅಂತಹ ಮಹಾನುಭಾವ, ವಿಜಯ ಮಾಲೆಯನ್ನು ಹಾಕಿಕೊಂಡು ಆ ರಾಜ್ಯವನ್ನು ವಶಪಡಿಸಿಕೊಳ್ಳುತ್ತಾ ಇದ್ದ. ಹೀಗಾಗಿ ಏನು ಆಗುತ್ತಾ ಇತ್ತು ಅಂದರೆ ಚಾರುದೇಷ್ಣ ಮನೆ ಬಿಟ್ಟು ಹೊರಗೆ ಹೊರಟ ಅಂದರೆ ಈ ಪಶು ಪಕ್ಷಿಗಳಿಗೆ ಭಾರಿ ತಿಳುವಳಿಕೆ ಇರುತ್ತದೆ ಮಾತಾಡಲಿಕ್ಕೆ ಬರುವುದಿಲ್ಲ ಆವಕ್ಕೆ ಗೊತ್ತಾಗುತ್ತದೆ ದಿವಸ ತನಗೆ ಒಬ್ಬರು ಯಾರಾದರೂ ಆಹಾರ ಹಾಕುತ್ತಿದ್ದರು ಅಂದರೆ ಆ ಗೋವುಗಳಿರಬಹುದು, ಬೇರೆ ಪಕ್ಷಿಗಳಾಗಿರಬಹುದು ಅಂತಹ ಆ ವ್ಯಕ್ತಿಯನ್ನು ನೋಡಿ ಗುರುತು ಇಟ್ಟುಕೊಂಡಿರುತ್ತವೆ ಹತ್ತಿರ ಓಡಿ ಬಂದು ಬಿಡುತ್ತವೆ. ಹಾಗೆ ಚಾರುದೇಷ್ಣ ಮನೆ ಬಿಟ್ಟು ಹೊರಗೆ ಹೊರಟ ಅಂದರೆ ಕಾಗೆಗಳು ಬೆನ್ನು ಹತ್ತುತ್ತಿದ್ದವಂತೆ ಸಾವಿರಾರು ಕಾಗೆಗಳು ಯಾಕೆ ಅಂದರೆ ಇವನು ಹೋದ ಅಂದರೆ ಇವನು ಯುದ್ಧ ಆಡುತ್ತಾನೆ, ಯುದ್ಧದಲ್ಲಿ ಅನೇಕ ಜನರ ಸಂಹಾರ ಮಾಡುತ್ತಾನೆ ನಮಗೆ ಮಾಂಸ ತಿನ್ನಲಿಕ್ಕೆ ಸಿಗುತ್ತದೆ ರಣರಂಗದಲ್ಲಿ ಅಂತ ಇಂತಹ ಮಹಾಪರಾಕ್ರಮಿ ಆ ಚಾರುದೇಷ್ಣ.

ವಾಯಸಾನಾಂ ಸಹಸ್ರಾಣಿ ಯಂ ಯಾನ್ತಂ ಪೃಷ್ಠತೋನ್ವಯುಃ ॥ (34.37 ಹರಿವಂಶಪರ್ವ)

ಇನ್ನೊಬ್ಬ ವಸುದೇವನ ತಮ್ಮ ಕನವಕ ಅಂತ ಆ ಕನವಕನಿಗೆ ತಂದ್ರಿಜ, ತಂದ್ರಿಪಾಲ ಅಂತ ಇಬ್ಬರು ಮಕ್ಕಳಾಗಿದ್ದಾರೆ. ಆಮೇಲೆ ವೀರ, ಅಶ್ವಹನ ಅಂತ ಇವರಿಬ್ಬರೂ ಕೂಡ ಗೃಂಜಿಮ ಎಂಬಂತಹ ತಮ್ಮನಿಗೆ ಮಕ್ಕಳಾಗಿ ಬಂದಿದ್ದಾರೆ ಅಂತ ತಿಳಿಸಿಕೊಡುತ್ತಾರೆ. ಇನ್ನು ಶ್ಯಾಮ, ಶಮೀಕ ಅಂತ ಇಬ್ಬರು ಉಳಿದಿದ್ದಾರೆ ಅದರೊಳಗೆ ಶ್ಯಾಮ, ಶಮೀಕ ಅಂತ ತನ್ನ ತಮ್ಮನನ್ನೇ ಮಗನಂತೆ ಬೆಳೆಸುತ್ತಾನೆ. ಅವನನ್ನೇ ಮಗ ಅಂತನ್ನುವ ರೀತಿಯಲ್ಲಿ ಬೆಳೆಸಿ ತನ್ನ ರಾಜ್ಯವನ್ನೆಲ್ಲ ಆ ಶಮೀಕನಿಗೆ ಕೊಟ್ಟುಬಿಡುತ್ತಾನೆ ಅವರು ಭೋಜರು ಅಂತ ಪ್ರಸಿದ್ಧರಾಗುತ್ತಾರೆ. ಭೋಜರು ಅಂದರೆ ಈ ವೃಷ್ಣಿ ವಂಶದೊಳಗೆ ಅವರು ಒಂದು ಏಕದೇಶ ಅವರಿಗೆ ಅದರಲ್ಲಿ ತೃಪ್ತಿಯಿಲ್ಲ ನಾವು ಯಾವುದೋ ಒಂದು ಮೂಲೆಯಲ್ಲಿ ರಾಜರಾಗಿ ಇದ್ದೇವೆ ಭಾರೀ ಪ್ರಸಿದ್ಧರಾಗಬೇಕು ಜಗತ್ತಿನಲ್ಲಿ ಅಂತ ಹೇಳಿ ರಾಜಸೂಯ ಯಾಗವನ್ನು ಮಾಡುತ್ತಾನೆ ಆ ಶಮೀಕ, ರಾಜಸೂಯ ಯಾಗವನ್ನು ಮಾಡಿ ದೊಡ್ಡದಾದಂತಹ ಸ್ಥಾನವನ್ನು ಪಡೆಯುತ್ತಾನೆ ಮುಂದೆ ಅವನಿಗೆ ವಿನಾಶನ ಅಂತ ಮಗನಾಗುತ್ತಾನೆ. ಹೀಗೆ ಅವನ ವಂಶ ಮುಂದೆ ಬೆಳಯುತ್ತೆ ಅಂತ ವಸುದೇವನ ತಮ್ಮಂದಿರ ವಂಶವನ್ನೆಲ್ಲ ಹೇಳುತ್ತಾರೆ.

ಆಮೇಲೆ ವಸುದೇವನ ವಂಶವನ್ನು ಹೇಳುತ್ತಾರೆ. ವಸುದೇವನಿಗೆ ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮನ ಅವತಾರ ಈ ವಸುದೇವನಲ್ಲಿ ಆಗುತ್ತಾ ಇರುವುದರಿಂದ ಆ ವಸುದೇವನ ಚರಿತ್ರೆಯನ್ನು ಬಹಳ ವಿಸ್ತೃತವಾಗಿ ಹೇಳಬೇಕು ಅನ್ನುವುದಕ್ಕೋಸ್ಕರ ತಮ್ಮಂದಿರ ಕಥೆಯನ್ನೆಲ್ಲಾ ಸಂಕ್ಷಿಪ್ತವಾಗಿ ತಿಳಿಸಿ ಕೊನೆಗೆ ವಸುದೇವನ ವಿಷಯವನ್ನು ಹೇಳುತ್ತಾ ಇದ್ದಾರೆ. ವಸುದೇವನಿಗೆ ಹದಿನಾಲ್ಕು ಜನ ಮಡದಿಯರು ಅದರಲ್ಲಿ ರೋಹಿಣೀ, ಇಂದಿರಾ, ವೈಶಾಖೀ, ಭದ್ರಾ, ಸುನಾಮ್ನೀ ಅಂತ ಇವರೆಲ್ಲ ಪೌರವೀಯರು ಅಂತ. ಇನ್ನು ದೇವಕನ ಮಕ್ಕಳು ಏಳು ಜನ ಸಹದೇವ, ಶಾಂತಿದೇವ, ಶ್ರೀದೇವಾ, ದೇವರಕ್ಷಿತಾ, ವೃತದೇವೀ, ಉಪದೇವೀ, ದೇವಕೀ ಅಂತ ಏಳನೆಯದವಳು. ಇವರೆಲ್ಲರನ್ನೂ ದೇವಕ

ವಸುದೇವನಿಗೆ ಕೊಟ್ಟಿದ್ದಾನೆ ಏಳೂ ಜನ ಅಕ್ಕ ತಂಗಿಯರನ್ನು ಆ ಪೌರವೀಯರು ಐದು ಜನ ಇದು ಬಿಟ್ಟು ಇನ್ನಿಬ್ಬರು ಸುತನು, ವಡವಾ ಅಂತ ಒಟ್ಟು ಹದಿನಾಲ್ಕು ಜನ ಮಡದಿಯರು ವಸುದೇವನಿಗೆ ಇದ್ದಾರೆ ಎಂಬುದಾಗಿ ತಿಳಿಸುತ್ತಾರೆ. ಆ ರೋಹಿಣೀಯಲ್ಲಿ ಸಾಕ್ಷಾತ್ ಬಲರಾಮ ದೇವರು ಹಿಂದೆ ಕೇಳಿದ್ದೀರಿ ಶೇಷಾವತಾರರು ಬಲರಾಮ ದೇವರು ಪರಮಾತ್ಮನ ಶುಕ್ಲಕೇಶದ ಆವೇಶ. ಅನಂತಗುಣ ಪರಿಪೂರ್ಣವಾದಂತಹ ನಿರ್ದೋಷವಾದ ಆ ಪರಮಾತ್ಮನ ಎರಡು ಅಂಶಗಳು ಶುಕ್ಲಕೇಶ, ಕೃಷ್ಣಕೇಶ. ಕೃಷ್ಣಕೇಶವೇ ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮ, ಶುಕ್ಲಕೇಶವೇ ಬಲರಾಮ ದೇವರಲ್ಲ ಶುಕ್ಲಕೇಶದ ವಿಶೇಷವಾದ ಸನ್ನಿಧಾನ ಆ ಬಲರಾಮ ದೇವರಲ್ಲಿ ಇದೆ, ಶೇಷ ದೇವರ ಅವತಾರ. ಎಲ್ಲ ಸಜ್ಜನರಿಗೆ ಸಂತೋಷ ಪಡಿಸುತ್ತಾರೆ ಆದ್ದರಿಂದ ಅವರಿಗೆ ರಾಮ ಅಂತ ಹೆಸರು, ಭಾರೀ ಬಲಿಷ್ಠರಾದದ್ದರಿಂದ ಬಲರಾಮ ಎಂಬ ಹೆಸರು ಪ್ರಸಿದ್ಧವಾಗಿದೆ. ಅದರಂತೆ ಸಾರಣ, ಶಠ ಅಂತ ಆ ಬಲರಾಮ ದೇವರಿಗೆ ತಮ್ಮಂದಿರು ಅದಲ್ಲದೇ ದುರ್ದಮ, ದಮನ, ಶ್ವಭ್ರ, ಪಿಂಡಾರಕ, ಮುಶೀನರ ಹೀಗೆ ಇವರೆಲ್ಲ ಆ ರೋಹಿಣೀಯ ಮಕ್ಕಳೇ ಬಲರಾಮ ದೇವರ ತಮ್ಮಂದಿರು. ಇದಲ್ಲದೇ ಹೆಣ್ಣು ಮಕ್ಕಳು ಎಂಟು ಜನ ಗಂಡು ಮಕ್ಕಳು ಚಿತ್ರಾ ಅನ್ನುವಂತಹ ಒಬ್ಬಳು ತಂಗಿ ಬಲರಾಮ ದೇವರಿಗೆ ಒಟ್ಟು ಸೇರಿ ಹತ್ತು ಮಕ್ಕಳು ಅಂತ ಹೇಳುತ್ತಾರೆ ಹರಿವಂಶದಲ್ಲಿ ಆದರೆ ಹೇಳಿದ್ದು ಎಂಟು ಜನ ಗಂಡು ಮಕ್ಕಳು, ಒಂದು ಹೆಣ್ಣು ಒಂಬತ್ತು ಆಯಿತು ಹತ್ತು ಹೇಗೆ ಅಂತ ಅದಕ್ಕೆ ವ್ಯಾಖ್ಯಾನಕಾರರು ಪೌರಾಣಿಕವಾದ ಒಂದು ಕಥೆಯನ್ನು ಇಲ್ಲಿ ಉದಾಹರಣೆ ಮಾಡುತ್ತಾರೆ.

ಆ ಚಿತ್ರಾ ಅನ್ನುವವಳು ಒಬ್ಬ ಅಪ್ಸರಾ ಸ್ತ್ರೀ ಮೂಲತಃ ಆ ಅಪ್ಸರಾ ಸ್ತ್ರೀ ಶಾಪದಿಂದಾಗಿ ಮನುಷ್ಯ ಯೋನಿಯಲ್ಲಿ ಹುಟ್ಟಬೇಕು ಅಂತನ್ನುವುದಕ್ಕೆ ಇಲ್ಲಿ ಹುಟ್ಟುತ್ತಾಳೆ. ಮನುಷ್ಯಳಾಗಿ ಹುಟ್ಟಬೇಕು ಅಂತ ಆಯಿತಲ್ಲ ಹುಟ್ಟಬೇಕು ಅಂತ ಶಾಪ ಇತ್ತು ಹುಟ್ಟಿಯಾಯಿತು ಇನ್ನು ಎಷ್ಟು ದಿವಸ ಇರುವುದು ಬೇಗ ಹೋಗಿಬಿಡೋಣ ಅಂತ ತಾನು ಈ ಶರೀರವನ್ನು ಬಿಟ್ಟು ಹೊರಟು ಬಿಡುತ್ತಾಳೆ. ಹೊರಟ ಮೇಲೆ ಮತ್ತೆ ಪಶ್ಚಾತ್ತಾಪ ಆಗುತ್ತದೆ ಅಯ್ಯೋ ನಾನು ಎಂತಹ ತಪ್ಪು ಕೆಲಸ ಮಾಡಿದೆ ಭೂಮಿಯಲ್ಲಿ ಹುಟ್ಟಿದ ಮಾತ್ರಕ್ಕೆ ಏನು ತಪ್ಪು ಆಗುತ್ತಾ ಇತ್ತು ಶ್ರೀಕೃಷ್ಣ ಪರಮಾತ್ಮನ ಬಾಲ ಲೀಲೆಗಳನ್ನು ನೋಡುವ ಒಂದು ಮಹಾಸೌಭಾಗ್ಯ ಸಿಗುತ್ತಿತ್ತಲ್ಲ ನಾನು ಅಲ್ಲಿಯೇ ಇದ್ದರೆ. ಶ್ರೀಕೃಷ್ಣ ಪರಮಾತ್ಮನ ಒಂದು ಲೀಲೆಗಳನ್ನು, ಶೌರ್ಯವನ್ನು ಪರಾಕ್ರಮಗಳನ್ನು, ಚರಿತ್ರೆಯನ್ನು ನೋಡಿ ಆನಂದಬಹುದಾಗಿತ್ತಲ್ಲ ಅಂತ ಮತ್ತೆ ಹುಟ್ಟಿ ಬರುತ್ತಾಳಂತೆ. ಅದೇ ರೋಹಿಣೀಯಲ್ಲಿಯೇನೆ ಚಿತ್ರಾ ಅನ್ನುವವಳೇ ಮತ್ತೆ ಹುಟ್ಟಿ ಬರುತ್ತಾಳೆ ಹೀಗಾಗಿ ಎರಡು ಬಾರಿ ಹುಟ್ಟಿ ಬರುತ್ತಾಳೆ ಅನ್ನುವ ಲೆಕ್ಕದಲ್ಲಿ ಹತ್ತು ಜನ ರೋಹಿಣೀಗೆ ಮಕ್ಕಳು ಅಂತ. ಅವಳು ಮೂಲತಃ ಯಾರು ಅಂದರೆ ರಾಮಾಯಣ ಕಾಲದಲ್ಲಿ ಸೀತಾ ದೇವಿಯ ಸೇವೆಯನ್ನು ಮಾಡಿರತಕ್ಕಂತಹ ಪರಮ ಭಗವದ್ಭಕ್ತಳು, ಸಜ್ಜನಳು ಆ ತ್ರಿಜಟಾ ಅಂತ ಅವಳಿಗೆ ಹೆಸರು ಸುಭದ್ರಾ ಎಂಬುದಾಗಿಯೂ ಕರೆಯುತ್ತಾರೆ. ಅವಳಿಗೆ ಉಮಾ ದೇವಿಯ ವಿಶೇಷ ಸನ್ನಿಧಾನ ಇರುವುದರಿಂದ ಅತ್ಯಂತ ರೂಪ ಲಾವಣ್ಯಾದಿಗಳಿಂದ ಯುಕ್ತಳಾದಂತಹ ಆ ತ್ರಿಜಟಾನೇ ಈಗ ಇಲ್ಲಿ ಅವತಾರ ಮಾಡಿದ್ದಾಳೆ ಎಂಬುದಾಗಿ ಶ್ರೀಮದಾಚಾರ್ಯರು ತಾತ್ಪರ್ಯ ನಿರ್ಣಯದಲ್ಲಿ ತಿಳಿಸುತ್ತಾರೆ. ಅವಳಲ್ಲಿ ಮುಂದೆ ಬುಧನೇ ಅಭಿಮನ್ಯುವಾಗಿ ಅವತಾರ ಮಾಡುತ್ತಾನೆ ಅವನಲ್ಲಿ ಯಮಧರ್ಮನ, ವಾಯು ದೇವರ ಹಾಗೂ ಇಂದ್ರ ದೇವರ, ಅಶ್ವಿ ದೇವತೆಗಳ ಎಲ್ಲರ ಸನ್ನಿಧಾನ ಹಾಗೂ ಶ್ರೀಕೃಷ್ಣ ಪರಮಾತ್ಮನ ಸನ್ನಿಧಾನವೂ ಇದೆ ಅಂತಹ ಸಾತ್ಯಕಿಯ ತಿಳಿದಿದ್ದೀರಲ್ಲ ಐದು ಜನ ಅಂತ ಹಾಗೆ ಅಭಿಮನ್ಯುವಿನಲ್ಲಿ. ಹಾಗೆ ನೋಡಿದರೆ ಏಳು ಸಾಕ್ಷಾತ್ ಪರಮಾತ್ಮನ ಮುಖ್ಯವಾದ ಸನ್ನಿಧಾನ, ವಾಯು ದೇವರು, ಇಂದ್ರ ದೇವರು, ಯಮಧರ್ಮ, ಅಶ್ವಿ ದೇವತೆಗಳು, ಸ್ವಯಂ ಬುಧ ಇಷ್ಟೆಲ್ಲ ಜನ ಅಲ್ಲಿ ಇದ್ದಾರೆ ಅಂತಹ ಮಹಾನುಭಾವ ಅಭಿಮನ್ಯು. ಈ ರೀತಿ ಆ ವಂಶವನ್ನು ತಿಳಿಸಿದ್ದಾರೆ.



ಈ ಕಡೆಗೆ ಅಕ್ರೂರನಿಂದ ಕಾಶಿ ರಾಜನ ಮಗಳಲ್ಲಿ ಸತ್ಯಕೇತು ಅನ್ನುವ ಮಗನಾಗಿದ್ದಾನೆ ಅಂತ ಅವನ ವಂಶವನ್ನು ಅಲ್ಲಿ ತಿಳಿಸುತ್ತಾರೆ ಅವನ ವಂಶದಲ್ಲಿಯೇನೆ ಮುಂದೆ ಗದ ಅಂತ ಹುಟ್ಟುತ್ತಾನೆ. **'ಗದೋಥ ಶೌರೇರಿವ'** ಆ ಗದ ಅವನೂ ಕೂಡ ಶ್ರೀಕೃಷ್ಣನಿಗೆ ತಮ್ಮನೇ ಶ್ರೀಕೃಷ್ಣ ಪರಮಾತ್ಮನ ಸೇವೆಯನ್ನು ಮಾಡಿದ್ದನಂತೆ **'ಪುರಾಸ ಚಂಡಕೋ ಗಣಃ'** ಅಂತ ಶ್ರೀಮದಾಚಾರ್ಯರು ಹೇಳುತ್ತಾರೆ. ಅವನು ಪರಮಾತ್ಮನ ಗಣದಲ್ಲಿ ಸೇರಿದವನು ಪರಮಾತ್ಮನ ಪರಿವಾರದಲ್ಲಿ ಅರ್ಥಾತ್ ದ್ವಾರಪಾಲಕರಲ್ಲಿ ಸೇರಿದಂಥವನು ಪರಮಾತ್ಮನಿಗೆ ದದ್ಯೋದನವನ್ನು ಸಮರ್ಪಣೆಯನ್ನು ಮಾಡಿರುತ್ತಾನೆ ಅಂತೆ. ದೇವರು ತಾನು ಯಾತ್ರೆಗೆ ಹೊರಟಾಗ ಆ ಪರಮಾತ್ಮನ ಸೇವಾ ರೂಪದಲ್ಲಿ ದದ್ಯೋದನವನ್ನು ನಿವೇದನೆಯನ್ನು ಮಾಡಿದಂತಹ ಒಂದು ವಿಶಿಷ್ಟ ಸೌಭಾಗ್ಯವನ್ನು ಪಡೆದವ ಶ್ರೀಕೃಷ್ಣ ಪರಮಾತ್ಮನಿಗೆ ತಮ್ಮನಾಗಿ ಹುಟ್ಟಿದ್ದಾನೆ ಅಂತ ಶ್ರೀಮದಾಚಾರ್ಯರು ತಿಳಿಸುತ್ತಾರೆ. ಅಂತಹ ಗದ ಆ ಅಕ್ರೂರನ ವಂಶದಲ್ಲಿ ಬರುತ್ತಾನೆ ಅಂತ ತಿಳಿಸಿಕೊಟ್ಟಿದ್ದಾರೆ.

ಇದೇ ವಂಶದಲ್ಲಿ ಮುಂದೆ ಗರ್ಗ್ಯಾಚಾರ್ಯರು. ಆ ಗರ್ಗ್ಯಾಚಾರ್ಯರಿಗೆ ಅವರ ಶಾಲಕ ಯಾದವರ ಸನ್ನಿಧಾನದಲ್ಲಿ ಅಪಹಾಸ ಮಾಡಿಬಿಡುತ್ತಾನೆ ನೀವು ಶಂಡರಾಗಿದ್ದೀರಿ ಅಂತ. ಅವರು ಮಹಾ ಬ್ರಹ್ಮಚಾರಿಗಳು, ಭಾರೀ ನೈಷ್ಠಿಕ ಬ್ರಹ್ಮಚರ್ಯ. ಅಂತಹ ನೈಷ್ಠಿಕವಾದ ಬ್ರಹ್ಮಚರ್ಯದಲ್ಲಿ ಅವರು ಇರುವುದರಿಂದ ಅವರ ಮಹಿಮೆ ಅಷ್ಟು ಸುಲಭವಾಗಿ ಇವರಿಗೆ ಅರ್ಥ ಆಗುವುದಿಲ್ಲ. ಅದನ್ನು ತಿಳಿಯದಂತೆ ಇವರು ಶಂಡರು ಅಂತನ್ನುವ ರೀತಿಯಲ್ಲಿ ಹೇಳುತ್ತಾನೆ ಸ್ವತಃ ಶಾಲಕ ಹೇಳಿದ್ದಕ್ಕೆ ಎಲ್ಲರೂ ಅಪಹಾಸ ಮಾಡುತ್ತಾರೆ. ಅಪಹಾಸ ಮಾಡಿದ್ದನ್ನು ನೋಡಿ ಇವರಿಗೆ ಸಿಟ್ಟುಬಂದು ಕೃಷ್ಣನ ಬೆಂಬಲ ಇದ್ದದ್ದಕ್ಕೆ ನನ್ನನ್ನು ಕುರಿತು ಅಪಹಾಸ ಮಾಡುತ್ತಾರೆ ಹಾಗಾದರೆ ಕೃಷ್ಣನನ್ನೇ ಸಂಹಾರ ಮಾಡುವ ಮಗನನ್ನು ಪಡೆಯುತ್ತೇನೆ ಅಂತ ತಪಶ್ಚರ್ಯ ಮಾಡಲಿಕ್ಕೆ ಹೋಗುತ್ತಾರೆ. ಪರಮ ಭಗವದ್ಭಕ್ತರು ಅಸುರಾವೇಶ ಆ ಹೊತ್ತಿಗೆ ಆದದ್ದರಿಂದ ಅಂತಹ ದುರ್ಬುದ್ಧಿ ಬರುತ್ತದೆ ಒಂದು ವರ್ಷದವರೆಗೆ ಕಬ್ಬಿಣದ ಚೂರನ್ನು ಕುಟ್ಟಿ ಪುಡಿಮಾಡಿ ಅದನ್ನೇ ತಿಂದು ತಪಶ್ಚರ್ಯವನ್ನು ಮಾಡುತ್ತಾರೆ ರುದ್ರ ದೇವರನ್ನು ಕುರಿತು. ಆ ಘೋರವಾದ ತಪಸ್ಸಿನಿಂದ ಪ್ರಸನ್ನರಾಗಿ ರುದ್ರ ದೇವರು ಏನು ವರ ಬೇಕು ಅಂತ ಕೇಳಿದಾಗ ಈ ರೀತಿ ವರ ಕೇಳಿದ್ದಾರೆ ಕೃಷ್ಣನ ಸಂಹಾರ ಮಾಡತಕ್ಕಂತಹ ವ್ಯಕ್ತಿ ಪ್ರಪಂಚದೊಳಗೆ ಯಾರಿದ್ದಾರೆ. ಆ ಭಗವಂತನ ಮಹಾಮಹಿಮೆಯನ್ನು ತಿಳಿದಂತಹ ರುದ್ರ ದೇವರು ಸರಿ ಕೃಷ್ಣ ತಾನು ನೋಡಿಕೊಳ್ಳುತ್ತಾನೆ ಏನು ಮಾಡಬೇಕೋ ಅದನ್ನೆಲ್ಲ ವ್ಯವಸ್ಥೆ ಚೆನ್ನಾಗಿ ಮಾಡುತ್ತಾನೆ ಅನ್ನುವ ದೃಷ್ಟಿಯಲ್ಲಿ ತಥಾಸ್ತು ಅಂತ ಅಂದಿದ್ದಾರೆ ಅಲ್ಲಿ ಹುಟ್ಟಿದವನೇ ಕಾಲಯವನ ಅವನ ಕಥೆ ಮತ್ತೆ ಮುಂದೆ ಬರುತ್ತದೆ. ಯಾವಾಗ ಕೃಷ್ಣ ಬಂದಾನು, ಯಾವಾಗ ಅವನ ಸಂಹಾರ ಮಾಡಬೇಕು ಅನ್ನುವ ಕಾಲವನ್ನು ಪ್ರತೀಕ್ಷೆ ಮಾಡುತ್ತಾ ಇದ್ದದ್ದರಿಂದ ಅವನಿಗೆ ಕಾಲ ಅಂತ ಹೆಸರು. ಗರ್ಗ್ಯಾಚಾರ್ಯರು ತಾವು ಒಬ್ಬ ಅಸುರರ ಅಪ್ಸರಾ ಸ್ತ್ರೀ ಅವಳು ಗೋಪಿಕಾಸ್ತ್ರೀಯ ವೇಷದಲ್ಲಿ ಬಂದಿರುತ್ತಾಳೆ ಅವಳಲ್ಲಿ ಇವನನ್ನು ಪಡೆಯುತ್ತಾರೆ ಪಡೆದ ಮೇಲೆ ತಕ್ಷಣಕ್ಕೆ ಅವರಿಗೆ ಅಸುರಾವೇಶ ದೂರ ಆಗಿ ಸದ್ಬುದ್ಧಿ ಬಂದು ಅಯ್ಯೋ ಇಂತಹ ಕೆಟ್ಟು ಕೆಲಸ ಮಾಡಿಬಿಟ್ಟೆನಲ್ಲ ಅಂತ ಅವನನ್ನು ಬೆಳೆಸುವುದಿಲ್ಲ ಅವರು, ಯವನರಾಜ ಬೇಡುತ್ತಾನೆ ಅವನಿಗೆ ಕೊಟ್ಟುಬಿಡುತ್ತಾರೆ. ಯವನ ಬೆಳೆಸುತ್ತಾನೆ ಅನ್ನುವುದಕ್ಕೆ ಅವನಿಗೆ ಯವನ ಅಂತ ಹೆಸರು, ಕಾಲ ಪ್ರತೀಕ್ಷೆ ಮಾಡುವುದರಿಂದ ಕಾಲ, ಕಾಲಯವನ ಅನ್ನುವ ಹೆಸರಿನಲ್ಲಿ ಅವನು ಪ್ರಸಿದ್ಧನಾಗುತ್ತಾನೆ ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ.

ಮುಂದೆ ಈ ಕ್ರೋಷ್ಟುವಿಗೆ ವೃಜನೀವಾನ್ ಅನ್ನುವಂತಹ ಮಗ ಅವನ ವಂಶವನ್ನು ಮುಂದೆ ವರ್ಣನೆ ಮಾಡುತ್ತಾರೆ ಆಮೇಲೆ ಆ ವಂಶದಲ್ಲಿ ಜ್ಯಾಮಘ ರಾಜ ಬರುತ್ತಾನೆ. ಆ ಜ್ಯಾಮಘ ಬಹಳ ಸಾತ್ವಿಕನಾದ ರಾಜ ಹೆಂಡತಿ ಮಾತ್ರ ಬಹಳ ಬಲಿಷ್ಠಳು ಭಾರೀ ಜೋರಾಗಿ ಇದ್ದಾಳೆ ಹೆಂಡತಿಗೆ ಹೆದರುತ್ತಾ ಇದ್ದ ಪಾಪ ಎಷ್ಟು ದಿನಗಳಾದರೂ ಮಕ್ಕಳೇ ಆಗಿರಲಿಲ್ಲ ಒಂದು ದಿನ ಯುದ್ಧಕ್ಕೆ ಹೋಗುತ್ತಾನೆ ಯುದ್ಧದಲ್ಲಿ ಶತ್ರುಗಳನ್ನು ಸೋಲಿಸಿ ತಾನು ಬರುವಾಗ

ಆ ರಾಜನ ಕನ್ಯೆಯನ್ನು ಕರೆದುಕೊಂಡು ಬರುತ್ತಾನೆ ಮದುವೆ ಮಾಡಿಕೊಳ್ಳಬೇಕು ಅಂತ ಯಾಕೆಂದರೆ ಮೊದಲನೆಯ ಹೆಂಡತಿಯಲ್ಲಿ ಮಕ್ಕಳು ಆಗಿಲ್ಲ. ಇನ್ನೊಂದು ಮದುವೆ ಮಾಡಿಕೊಂಡಿಯಾದರೂ ಮಕ್ಕಳನ್ನು ಪಡೆಯೋಣ ಅಂತ ಹೇಗೂ ಯುದ್ಧದಲ್ಲಿ ಆ ರಾಜ್ಯವನ್ನು ಗೆದ್ದಾಗಿದೆ ಅಂತ ಆ ರಾಜ್ಯದ ರಾಜನ ಕನ್ಯೆಯನ್ನು ತಾನು ಕರೆದುಕೊಂಡು ಬರುತ್ತಾನೆ. ಬರುವುದರೊಳಗೆ ಈ ಜ್ಯಾಮಘನ ಹೆಂಡತಿ ಶೈಭ್ಯಾ ಅಂತ ಅವಳು ಮಧ್ಯದಲ್ಲಿ ನಿಂತಿರುತ್ತಾಳೆ ದಾರಿಯಲ್ಲಿಯೇ ಯಾರು ಇನ್ನೊಬ್ಬಳು ಈ ಹೆಣ್ಣು ನಿನ್ನ ರಥದಲ್ಲಿ ಕುಳಿತವಳು ಯಾರು ಅಂತ ಅವನು ಗಾಬರಿಯಾಗುತ್ತಾನೆ. ಮದುವೆ ಮಾಡಿಕೊಳ್ಳುವುದಕ್ಕೆ ಕರೆದುಕೊಂಡು ಬಂದಿದ್ದೇನೆ ಅಂತ ಹೇಳುವುದಕ್ಕೆ ಆಗುವುದಿಲ್ಲ ತತ್ತರಿಸಿ ಹೋಗುತ್ತಾನೆ ಅವಳ ಧ್ವನಿಗೆ, ನಿನ್ನ ಸೊಸೆ ಅಂತ ಹೇಳಿಬಿಡುತ್ತಾನೆ ಅವನು, ನಕ್ಕು ಬಿಡುತ್ತಾಳೆ ಅವಳು. ಏನು ಸೊಸೆ ಮಕ್ಕಳೇ ಇಲ್ಲ ನಮಗೆ, ಸೊಸೆ ಎಲ್ಲಿಂದ ಬರಬೇಕು ಅಂತ ಆಗ ದೇವತೆಗಳು ಇವನ ದಯನೀಯ ಸ್ಥಿತಿಯನ್ನು ನೋಡಿ ತಥಾಸ್ತು ಅಂದುಬಿಡುತ್ತಾರೆ ಹಾಗೆ ಆಗಲಿ ಅಂತ. ಆ ದೇವತೆಗಳ ಅನುಗ್ರಹ ಆಶೀರ್ವಾದ ಇವನ ಆ ದಯನೀಯ ಸ್ಥಿತಿಯನ್ನು ಕಂಡು ವಿಷ್ಣು ಭಕ್ತಿ ಇದೆ, ಶ್ರದ್ಧಾವಂತ, ಧಾರ್ಮಿಕ ಅನುವಾದಕ್ಕಾಗಿ ಇವನಿಗೆ ಈ ಕಷ್ಟದಿಂದ ಪರಿಹಾರ ಸಿಗಲಿ ಅಂತ ದೇವತೆಗಳು ತಥಾಸ್ತು ಅಂದದ್ದಕ್ಕೆ ಮುಂದೆ ಇವನಿಗೆ ಮಕ್ಕಳು ಆಗುತ್ತಾರೆ. ಆ ಬಂದವಳು ಏನು ಇರುತ್ತಾಳಲ್ಲ ಆ ಕನ್ಯೆ ಅವಳು ಮಹಾತಪಸ್ವಿನಿ ಅವಳೂ ತಪಸ್ಸು ಮಾಡುತ್ತಾಳೆ.

ಉಗ್ರೇಣ ತಪಸಾ ತಸ್ಯಾಃ ಕನ್ಯಾಯಾಃ ಸಾ ವ್ಯಜಾಯತ । (36.19 ಹರಿವಂಶಪರ್ವ)

ಆ ಬಂದವಳ ಒಂದು ವಿಶಿಷ್ಟವಾದ ತಪಸ್ಸಿನಿಂದ ವಿದರ್ಭ ಅನ್ನುವವ ಒಬ್ಬ ಮಗ ಇವನಿಗೆ ಆಗುತ್ತಾನೆ. ಅವನು ದೊಡ್ಡವನಾದ ಮೇಲೆ ಅವಳನ್ನು ಕೊಟ್ಟು ಮದುವೆ ಮಾಡಿ ಅವಳು ಬಂದವಳು ನಿಜವಾಗಿ ಸೊಸೆ ಅಂತ ಅನ್ನಿಸಿಕೊಳ್ಳುವ ರೀತಿಯಲ್ಲಿ ದೇವತೆಗಳು ಅದನ್ನು ಸತ್ಯ ಮಾಡುತ್ತಾರೆ. ವಯಸ್ಸಿನಲ್ಲಿ ದೊಡ್ಡವರಾದಂತಹ ಹೆಣ್ಣುಮಕ್ಕಳನ್ನು ಮದುವೆ ಆಗಬಾರದು ಅನ್ನುವುದು ಶಾಸ್ತ್ರ ಆದರೆ ಇದೊಂದು ವಿಶಿಷ್ಟವಾದ ದೇವತೆಗಳ ಸಂಕಲ್ಪ ದೇವತೆಗಳ ಒಂದು ಅನುಗ್ರಹದಿಂದ ಆದಂತಹ ಅಪವಾದ ಅಂತ ತಿಳಿಯಬೇಕೇ ಹೊರತು ದೊಡ್ಡವರನ್ನು ಮದುವೆ ಮಾಡಿಕೊಳ್ಳಬಹುದು ಅಂತ ಸರ್ವಥಃ ಅರ್ಥ ಮಾಡಿಕೊಳ್ಳಬಾರದು. ರೇವತಿಯನ್ನು ಬಲರಾಮ ದೇವರು ಮದುವೆಯಾದದ್ದು ಅಥವಾ ಇವಳನ್ನು ವಿದರ್ಭ ಅನ್ನುವವನು ಮದುವೆಯಾದದ್ದು ಇದು ಕೇವಲ ಭಗವಂತನ ಒಂದು ವಿಶಿಷ್ಟ ಸಂಕಲ್ಪದಿಂದ ಮಾಡಿದಂತಹದ್ದು ಅಂತ ಅರ್ಥ ಮಾಡಿಕೊಳ್ಳಬೇಕು. ಈ ರೀತಿ ಈ ಜ್ಯಾಮಘನ ಒಂದು ವಂಶವನ್ನು ಮುಂದೆ ಬಹಳ ವಿಸ್ತೃತವಾಗಿ ಹೇಳುತ್ತಾರೆ.

ಇಮಾಂ ವಿಸೃಷ್ಟಿಂ ವಿಜ್ಞಾಯ ಜ್ಯಾಮಘಸ್ಯ ಮಹಾತ್ಮನಃ ।
ಯುಜ್ಯತೇ ಪರಯಾ ಕೀರ್ತ್ಯಾ ಪ್ರಜಾವಾಂಶ್ಚ ಭವೇನ್ನರಃ ॥ (36.31 ಹರಿವಂಶಪರ್ವ)

ಪ್ರತಿಯೊಂದು ಅಧ್ಯಾಯದಲ್ಲಿ ಹರಿವಂಶದೊಳಗೆ ಆ ಒಂದು ವಿಶಿಷ್ಟವಾದ ಫಲಶ್ರುತಿಯನ್ನು ಹೇಳುತ್ತಾರೆ. ಈ ಜ್ಯಾಮಘ ಅವನ ವಂಶವನ್ನು ಯಾರು ಚೆನ್ನಾಗಿ ತಿಳಿದು ಆ ವಂಶಕ್ಕೆ ನಿಯಾಮಕನಾದಂತಹ ಪರಮಾತ್ಮನ ಸ್ಮರಣೆಯನ್ನು ಮಾಡುತ್ತಾರೋ ಅವರಿಗೆ ಉತ್ತಮವಾದಂತಹ ಕೀರ್ತಿ, ಉತ್ತಮವಾದ ಸಂತತಿ ಎಲ್ಲವೂ ಆಗುತ್ತದೆ ಎಂಬುದಾಗಿ ಹೇಳಿಕೊಟ್ಟಿದ್ದಾರೆ.

ಇಲ್ಲಿ ಒಬ್ಬ ಸತ್ವಾನ್ ಅಂತ ಈ ಜ್ಯಾಮಘನ ವಂಶದಲ್ಲಿ ಬರುತ್ತಾನೆ ಅವನಿಂದ ಕೌಶಲ್ಯಾ ಅನ್ನುವವಳಲ್ಲಿ ಸಾತ್ವತರು ಹುಟ್ಟುತ್ತಾರೆ ಯಾರು ಭಜಿನ, ಭಜಮಾನ, ದೇವಾವೃಧ, ಅಂಧಕ, ವೃಷ್ಣಿ ಹೀಗೆಲ್ಲ ಅನೇಕ ಜನ ಅಲ್ಲಿ ಅವನಿಂದ

ಹುಟ್ಟುತ್ತಾರೆ. ಆ ಭಜಮಾನನಿಗೆ ಬಾಹ್ಯಕಾ, ಉಪಬಾಹ್ಯಕಾ ಅಂತ ಇಬ್ಬರು ಮಡದಿಯರು ಅದರಿಂದ ಅವನ ವಂಶ ಬರುತ್ತೆ. ಅವನ ವಂಶದಲ್ಲಿ ಬಂದ ಆ ಸತ್ವಾನ್ ಅನ್ನುವವನ ಮಗ ಇದ್ದನಲ್ಲ ಇನ್ನೊಬ್ಬ ದೇವಾವೃಧ ಅವನ ಮಹಿಮೆಯನ್ನು ಹೇಳುತ್ತಾರೆ. ದೇವಾವೃಧ ಅವನು ಬಹಳ ಗುಣವಂತ, ಧಾರ್ಮಿಕ, ನಿತ್ಯ ನದಿ ಸ್ನಾನ ಆಗಬೇಕು ಅವನಿಗೆ ಪರ್ಣಾಶಾ ಅನ್ನುವ ನದಿ ಆ ನದಿಯಲ್ಲಿ ನಿತ್ಯ ಸ್ನಾನ ಮಾಡಬೇಕು. ಅವನು ಏನು ಸಂಕಲ್ಪ ಮಾಡಿದ್ದ ಅಂದರೆ ಭಾರೀ ಉತ್ತಮನಾದಂತಹ ರಾಜಕುಮಾರ ಬರಬೇಕು ಅವನಿಗೆ ನಾನು ರಾಜ್ಯ ಒಪ್ಪಿಸಿ ತಪಸ್ಸಿಗೆ ಹೋಗಬೇಕು ಅವನು ಎಂಥವನು ಇರಬೇಕು.

ಪುತ್ರಃ ಸರ್ವಗುಣೋಪೇತೋ ಮಮ ಸ್ಯಾದಿತಿ ನಿಶ್ಚಿತಃ । (37.6 ಹರಿವಂಶಪರ್ವ)

ಉತ್ತಮವಾದ ಜ್ಞಾನ ಇರಬೇಕು, ವೈರಾಗ್ಯ ಇರಬೇಕು, ಭಕ್ತಿ ಇರಬೇಕು, ಪರಾಕ್ರಮ ಇರಬೇಕು, ಶೌರ್ಯ ಇರಬೇಕು, ಪ್ರಜೆಗಳ ಮೇಲೆ ಪ್ರೀತಿ ಇರಬೇಕು, ಔದಾರ್ಯ ಇರಬೇಕು ಎಲ್ಲಾ ಸದ್ಗುಣಗಳು ಇರಬೇಕು ಅವನಲ್ಲಿ ಅಂತಹ ಶ್ರೇಷ್ಠನಾದಂತಹ ಒಬ್ಬ ಮಗ ಆಗಬೇಕು ಅಂತ ನಿತ್ಯ ಸ್ನಾನ ಮಾಡಿ, ಜಪ ಮಾಡಿ, ಪ್ರಾರ್ಥನೆ ಮಾಡಿ ಸಾಧನೆಯನ್ನು ಮಾಡುತ್ತಾ ಇದ್ದಾನೆ. ಅದು ಏನಾಯಿತು ಅಂದರೆ ದೇವತೆಗಳು ಬಂದು ವರ ಕೊಡುವುದು ಮುಂದಿನದು ಆ ನದ್ಯಭಿಮಾನಿನಿಯಾದ ದೇವತೆಗೇನೆ ಬಹಳ ಕನಿಕರ ಬಂದು ಹೋಯಿತು ಇವನ ಬಗ್ಗೆ. ಎಷ್ಟು ಕಷ್ಟಪಟ್ಟು ಇವನು ತಪಸ್ಸು ಮಾಡುತ್ತಾ ಇದ್ದಾನೆ ಅಂತ ಆ ಪರ್ಣಾಶಾ ಎಂಬ ನದ್ಯಭಿಮಾನಿ ದೇವತೆ ತಾನೇ ಮೂರ್ತಿವಂತಾಗಿ ಬಂದು ಒಂದು ಕನ್ಯೆಯ ರೂಪದಲ್ಲಿ ನನ್ನನ್ನೇ ಮದುವೆಯಾಗು ನನ್ನಲ್ಲಿಯೇ ಮಕ್ಕಳನ್ನು ಪಡಿ ಅಂತ ಹೇಳಿಬಿಡುತ್ತಾಳೆ ಆ ಪರ್ಣಾಶಾ. ಅವಳೇ ಕನ್ಯೆಯಾಗಿ ಬರುತ್ತಾಳೆ ಇವನನ್ನು ಮದುವೆಯಾಗುತ್ತಾಳೆ ಅಲ್ಲಿ ಬಭ್ರು ಅಂತ ಹುಟ್ಟುತ್ತಾನೆ ಮುಂದೆ ಅವನ ವಂಶ ಆ ಬಭ್ರು ಮನುಷ್ಯರಲ್ಲಿ ಶ್ರೇಷ್ಠನಾದರೆ, ದೇವಾವೃಧ ದೇವತೆಗಳಲ್ಲಿ ಶ್ರೇಷ್ಠ ಅಂತ ಅನ್ನಿಸಿಕೊಳ್ಳುತ್ತಾನೆ ಅಂತೆ.

ಬಭ್ರುಃ ಶ್ರೇಷ್ಠೋ ಮನುಷ್ಯಾಣಾಂ ದೇವೈರ್ದೇವಾವೃಧಃ ಸಮಃ । (37.14 ಹರಿವಂಶಪರ್ವ)

ದೇವತೆಗಳಿಗೆ ಸಮಾನ ಅಂತ ಅನ್ನುವ ರೀತಿಯಲ್ಲಿ ದೇವಾವೃಧನ ಕೀರ್ತಿ ಹೀಗೆ ಅಪ್ಪ ಮಗ ಇಬ್ಬರೂ ಕೂಡ ಅಷ್ಟು ಧಾರ್ಮಿಕರು ಮತ್ತು ದೇವಲೋಕದಲ್ಲಿ, ಮನುಷ್ಯ ಲೋಕದಲ್ಲಿ ಪ್ರಸಿದ್ಧರಾಗುತ್ತಾರೆ, ಇವರು ಯುದ್ಧದೊಳಗೇನೆ ತಾವು ತಮ್ಮ ಪ್ರಾಣವನ್ನು ಅರ್ಪಣೆ ಮಾಡಿ ಉತ್ತಮವಾದ ಸದ್ಗತಿಯನ್ನು ಹೊಂದುತ್ತಾರೆ. ಇವರ ಜೊತೆಗೆ ಏಳು ಸಾವಿರದ ಅರವತ್ತಾರು ಜನ ಅವರೆಲ್ಲರೂ ಕೂಡ ಅದೇ ರೀತಿ ಅತ್ಯಂತ ಧರ್ಮದಿಂದ ಜೀವನವನ್ನು ಮಾಡಿ ಧರ್ಮದಿಂದಲೇ ಯುದ್ಧವನ್ನು ಮಾಡಿ ಯುದ್ಧದಲ್ಲಿಯೇನೆ ಪ್ರಾಣತ್ಯಾಗವನ್ನು ಮಾಡಿ ಎಲ್ಲರೂ ಉತ್ತಮವಾದ ವೀರ ಸ್ವರ್ಗವನ್ನು ಹೊಂದಿ ಮುಂದೆ ಶ್ರೇಷ್ಠವಾದ ಸದ್ಗತಿಯನ್ನು ಹೊಂದಿದ್ದಾರೆ ಅಂತ ಹೇಳುತ್ತಾರೆ. ಅಂತಹ ಮಹಾನುಭಾವರು ಈ ವಂಶದಲ್ಲಿ ಬರುತ್ತಾರೆ.

ಇನ್ನೊಬ್ಬ ಅಂಧಕ ಅಂತ ಆ ಸತ್ವಾನ್‌ನ ಮಗ ಆ ಅಂಧಕನ ವಂಶದಲ್ಲಿ ಬರುವವ ಅಭಿಜಿತ್ ಅಂತ ಅಭಿಜಿತ್ತಿನ ಇಬ್ಬರು ಮಕ್ಕಳು ಅವಳಿ-ಜವಳಿ ಆಹುಕ-ಆಹುಕಿ ಅಂತ ಆ ಆಹುಕನ ಮಹಿಮೆಯನ್ನು ಹೇಳುತ್ತಾರೆ. ಏನು ಆಹುಕನ ಮಹಿಮೆ ಭಾರೀ ಅದ್ಭುತವಾದಂತಹ ಮಹಿಮೆ.

ಶ್ವೇತೇನ ಪರಿವಾರೇಣ ಕಿಶೋರಪ್ರತಿಮೋ ಮಹಾನ್ ॥ (37.21 ಹರಿವಂಶಪರ್ವ)

ಅತ್ಯಂತ ಶುದ್ಧವಾದ ಅವನ ಪರಿವಾರ ಎಲ್ಲರೂ ಧಾರ್ಮಿಕರು, ಎಲ್ಲರೂ ಸತ್ಯವಂತರು, ಎಲ್ಲರೂ ನ್ಯಾಯವಂತರು ಅಧರ್ಮ, ಅನ್ಯಾಯ ಯಾವುದೂ ಇಲ್ಲ, ಅವನಲ್ಲಿ ಮಾತ್ರ ಅಲ್ಲ ಅವನ ಪರಿವಾರದೊಳಗೆ ಇರಲಿಲ್ಲಂತೆ **'ಶ್ವೇತೇನ ಪರಿವಾರೇಣ'** ಅಂತಹ ವ್ಯಕ್ತಿ **'ಕಿಶೋರಪ್ರತಿಮೋ ಮಹಾನ್'** ಕುದುರೆಯ ಮರಿಗೆ ಕಿಶೋರ ಅಂತಾರೆ. ಆ ಕಿಶೋರ ಯಾವ ರೀತಿ ಅತ್ಯಂತ ಶುಭ್ರವಾಗಿ ಒಂದು ಕುದುರೆ ಹೇಗಿರಬೇಕೋ ಹಾಗೆ ಗುಣಗಳಿಂದ ಇವನು ಶುಭ್ರನಾಗಿದ್ದ, ಅಷ್ಟು ಶ್ರೇಷ್ಠನಾಗಿದ್ದ. ಇವನು ಕುದುರೆಯ ಮೇಲೆ ಕುಳಿತು ಯುದ್ಧಕ್ಕೆ ಹೋಗಬೇಕು ಅಂದಾಗ ಆ ಆಸನ ಹಾಕಬೇಕಲ್ಲ ಚರ್ಮದ ಒಂದು ಆಸನ ಇರುತ್ತದೆ ಕುದುರೆಯ ಮೇಲೆ ಆ ಚರ್ಮದ ಆಸನ ಹಾಕಿ ಅದರ ಮೇಲೆ ಕೂಡುತ್ತಾರೆ, ಎಂಭತ್ತು ಜನ ಎತ್ತಿ ತಂದು ಹಾಕಬೇಕಾಗಿತ್ತಂತೆ ಆಗ ಅಷ್ಟು ಭಾರದ ಆಸನ **'ಅಶೀತೀಚರ್ಮಣಾ ಯುಕ್ತಃ'**.[1] ಇನ್ನೊಂದು ಅರ್ಥವನ್ನು ವ್ಯಾಖ್ಯಾನಕಾರರು ಮಾಡುತ್ತಾರೆ ಇಲ್ಲಿ **'ಅಶೀತೀಚರ್ಮಣಾ'** ಅನ್ನುವುದಕ್ಕೆ **'ಶೀತೀ'** ಅನ್ನುವುದಕ್ಕೆ ಸ್ವಪ್ನ ಅಂತ ಒಂದು ಅರ್ಥ, **'ಅಶೀತೀ'** ಅಂದರೆ **'ಅಸ್ವಪ್ನಃ ಅಮೃತಾಂಧಸಃ'** ಅಂದರೆ ದೇವತೆಗಳು, ಚರ್ಮ ಅಂದರೆ ಚರ್ಮ ಸದೃಶರು ಅಂದರೆ ರಕ್ಷಕರು. ದೇವತೆಗಳು ಯಾವನಿಗೆ ಯಾವಾಗಲೂ ರಕ್ಷಕರಾಗಿ ಬೆಂಗಾವಲಾಗಿ ನಿಲ್ಲುತ್ತಾ ಇದ್ದರೋ, ಚರ್ಮದ ರೂಪದಲ್ಲಿ ರಕ್ಷಕರಾಗಿ ನಿಲ್ಲುತ್ತಾ ಇದ್ದರೋ ಅಂಥವನು ಅಂತೂ ಒಂದರ್ಥ ಅಥವಾ ಎಂಭತ್ತು ಜನ ಹೊತ್ತು ತಂದು ಹಾಕುವ ಚರ್ಮಾಸನದ ಮೇಲೆ ಕೂಡುವಂತಹ ವ್ಯಕ್ತಿ ಅಷ್ಟು ಭಾರೀ ಆಸನ ಅವನದು ಇತ್ತು ಅಂತ ಅನ್ನುವ ರೀತಿ. ನೋಡಿ ಅಕ್ರೂರನ ತಂದೆ ಶ್ವಫಲ್ಕನ ವರ್ಣನವನ್ನು ಕೇಳಿದಿರಿ ಅವನು ಎಲ್ಲಿ ಹೋಗುತ್ತಾನೋ ಅಲ್ಲಿ ಸುಭಿಕ್ಷೆ ಅಂತ, ರೋಗಗಳು ಇರಲಿಲ್ಲ ಅಂತ. ಆಹುಕನ ಮಹಿಮೆ ಕೇಳಿ ಅವನು ಹೇಗಿದ್ದ, ಅವನ ಸುತ್ತಮುತ್ತಲೂ ಇರುವಂತಹ ಅವನ ಪಟ್ಟಣದೊಳಗೆ ಇರುವಂತಹ ಜನರಿಗೆ ಯಾರಿಗೂ ಮಕ್ಕಳಿಲ್ಲ ಅಂತ ಇಲ್ಲಂತೆ

ನಾಪುತ್ರವಾನ್ ನಾಶತದೋ ನಾಮಸಹಸ್ರಶತಾಯುಷಃ । (37.22 ಹರಿವಂಶಪರ್ವ)

'ನಾಪುತ್ರವಾನ್' ಎಲ್ಲರಿಗೂ ಪುತ್ರ ಸಂತಾನ ಇದೆ **'ನಾಶತದಾ'** ನಿತ್ಯವೂ ನೂರಾರು ರೂಪಾಯಿಗಳನ್ನು ಆಗಿನ ಕಾಲಕ್ಕೆ ನೂರಾರು ಬಂಗಾರದ ನಾಣ್ಯಗಳನ್ನು ದಾನ ಮಾಡದೇ ಇದ್ದವರೇ ಯಾರೂ ಇಲ್ಲ, ಎಲ್ಲರೂ ದಾನ ಮಾಡುವವರೇ **'ನಾಮಸಹಸ್ರಶತಾಯುಷಃ'** ಎಲ್ಲರಿಗೂ ಸಾವಿರಾರು ವರ್ಷಗಳ ಆಯುಷ್ಯ, ಕೆಟ್ಟ ಕೆಲಸ ಮಾಡುವವರು ನಿಷಿದ್ಧ ಕರ್ಮ ಮಾಡುವವರು ಅಂತ ಇಲ್ಲವೇ ಇಲ್ಲ,

ನಾಶುದ್ಧಕರ್ಮಾ ನಾಯಜ್ವಾ ಯೋ ಭೋಜಮಭಿತೋ ವ್ರಜೇತ್ ॥ (37.22 ಹರಿವಂಶಪರ್ವ)

ಅವನ ಹತ್ತಿರ ಹೋದರೆ ಸಾಕಂತೆ ಇಂತಹ ಸದ್ಗುಣಗಳು ಬರುತ್ತಾ ಇತ್ತಂತೆ. ಯಜ್ಞ ಮಾಡದೇ ಇದ್ದವರಿಲ್ಲ, ದಾನ ಧರ್ಮಗಳನ್ನು ಮಾಡದೇ ಇದ್ದವರಿಲ್ಲ, ವ್ರತ ನಿಯಮಾನುಷ್ಠಾನಗಳನ್ನು ಮಾಡದೇ ಇದ್ದವರಿಲ್ಲ ಎಲ್ಲರೂ ಸಜ್ಜನರೇ ವ್ರತ ನಿಯಮ ಅನುಷ್ಠಾನ ತತ್ಪರರೇ, ದಾನ ಧರ್ಮಾಧಿಗಳನ್ನು ಮಾಡುವವರೇ, ಆರೋಗ್ಯವಂತರೇ, ಸಹಸ್ರ ವರ್ಷದ ಆಯುಷ್ಯವನ್ನು ಪಡೆದವರೇ ಎಲ್ಲರೂ ಅಂತಹ ಮಹಾನುಭಾವ ಇವನು. ಈ ರೀತಿ ಎಲ್ಲಾ ದಿಕ್ಕಿನಲ್ಲಿಯೂ ಹತ್ತತ್ತು ಸಾವಿರ ಆನೆಗಳನ್ನು ನಿಲ್ಲಿಸಿದ್ದಾನೆ, ಎಲ್ಲಾ ಆನೆಗಳಿಗೂ ಬಂಗಾರದ ಆಭರಣಗಳು, ಬೆಳ್ಳಿಯ ಆಭರಣಗಳು, ಬಂಗಾರದ ಸರಪಳಿಗಳು. ಹೀಗೆಲ್ಲ ಆ ಭಾರೀ ವೈಭವದ ಆನೆಗಳನ್ನು ಹತ್ತೂ ದಿಕ್ಕಿನಲ್ಲಿ ನಿಲ್ಲಿಸಿದ್ದಾನೆ ಜೊತೆಗೆ ಅನೇಕ ಸೈನಿಕರು, ಅನೇಕ ಸಹಸ್ರಾರು ರಥಗಳು ಎಲ್ಲ ಕಡೆಗೆ ಅಂತಹ ಅದ್ಭುತವಾದ ರೀತಿಯಲ್ಲಿ ರಾಜ್ಯವನ್ನು ಆಳುತ್ತಾ ಇದ್ದಾನೆ. ಕೇವಲ ವೈಭವ ಅಲ್ಲ, ಕೇವಲ ಧರ್ಮ ಅಲ್ಲ ಎಲ್ಲರೂ ಧಾರ್ಮಿಕರು ಭಾರೀ ವೈಭವ

1. 37.21 ಹರಿವಂಶಪರ್ವ

'ಬಾಹ್ವೋರ್ಬಲಾತ್ ಜ್ಞಾನಬಲಾಚ್ಚ ರಕ್ಷ್ಯಃ' ಇದ್ದ ಹಾಗೆ ಧರ್ಮವನ್ನು ರಕ್ಷಣೆ ಮಾಡುವುದಕ್ಕೆ ಹೊರಗಿನ ಸೈನ್ಯವನ್ನೂ ಗಟ್ಟಿ ಮಾಡಿಕೊಂಡಿದ್ದಾನೆ ತನ್ನ ತಪಸ್ಸು ಪ್ರಭಾವದಿಂದಲೂ ಎಲ್ಲರನ್ನೂ ಧಾರ್ಮಿಕರನ್ನಾಗಿ ಮಾಡಿದ್ದಾನೆ.

ಇನ್ನು ಇವನ ತಂಗಿ ಆಹುಕಿ ಅವಳನ್ನು ಅವಂತಿ ದೇಶದ ರಾಜರಿಗೆ ಕೊಟ್ಟು ಮದುವೆ ಮಾಡಿದ್ದಾರೆ. ಈ ಕಡೆಗೆ ಆಹುಕಳಿಗೆ ಇಬ್ಬರು ಮಕ್ಕಳಾಗಿದ್ದಾರೆ ಕಾಶ್ಯ ಅನ್ನುವವನನಲ್ಲಿ ಆ ಇಬ್ಬರು ಮಕ್ಕಳೇ ದೇವಕ, ಉಗ್ರಸೇನ, ಉಗ್ರಸೇನನ ಮಗನೇ ಕಂಸ, ದೇವಕನ ಮಗಳೇ ದೇವಕಿ. ದೇವಕನ ಮಗಳು ದೇವಕಿ ಒಬ್ಬಳೇ ಅಲ್ಲ ಹಿಂದೆ ಕೇಳಿದ್ದೀರಿ ಅದನ್ನು ಇಲ್ಲಿ ಹೇಳುತ್ತಾರೆ ಮತ್ತೆ **'ದೇವಕಶ್ಚೋಗ್ರಸೇನಶ್ಚ'**[1] ಇಬ್ಬರೂ ಆ ಆಹುಕನಿಂದ ಹುಟ್ಟಿದ್ದಾರೆ. ಇದಲ್ಲದೇ ದೇವಕನಿಗೆ ನಾಲ್ಕು ಜನ ಮಕ್ಕಳಾಗಿದ್ದಾರೆ ದೇವವಾನ್, ಉಪದೇವ, ಸುದೇವ, ದೇವರಕ್ಷಿತ ಅಂತ, ಏಳು ಜನ ಕುಮಾರಿಯರು ಆಗಿದ್ದಾರೆ ಅವರೆಲ್ಲರನ್ನೂ ವಸುದೇವನಿಗೆ ಕೊಟ್ಟು ಮದುವೆ ಮಾಡಿದ್ದಾನೆ. ಹಿಂದೆ ಹೇಳಿದ್ದಾರೆ ದೇವಕಿ, ಶಾಂತಿದೇವಾ, ಸುದೇವಾ, ದೇವರಕ್ಷಿತಾ, ವೃಕದೇವೀ, ಉಪದೇವೀ, ಸುನಾಸೀ ಅನ್ನುವವರನ್ನು ವಸುದೇವನಿಗೆ ಕೊಟ್ಟು ಮದುವೆ ಮಾಡಿದ್ದಾನೆ ದೇವಕ ಹೀಗಾಗಿ ಕಂಸನಿಗೆ ದೇವಕಿ ತಂಗಿ ಆಗುತ್ತಾಳೆ. ಆಮೇಲೆ ಉಗ್ರಸೇನನಿಗೆ ಕಂಸ, ನ್ಯಗ್ರೋಧ, ಸುನಾಮಾ, ಕಂಕ, ಶಂಕು, ಸುಭೂಮಿಪ, ರಾಷ್ಟ್ರಪಾಲ, ಸುತನು, ಅನಾವೃಷ್ಟಿ, ಪುಷ್ಟಿಮಾನ್ ಅಂತ ಮಕ್ಕಳಾಗಿದ್ದಾರೆ ತಂಗಿಯರು ಇದ್ದಾರೆ ಕಂಸಾ ಅಂತ ಕಂಸನಿಗೆ ಸ್ವಂತ ತಂಗಿ ಕಂಸಾ, ಕಂಸವತೀ, ಸುತನೂ, ರಾಷ್ಟ್ರಪಾಲೀ, ಕಂಕಾ, ವರಾಂಗನಾ ಹೀಗೆ ತಂಗಿಯರಿದ್ದಾರೆ. ಇವರ ವಂಶ ಈ ರೀತಿ ಮುಂದುವರೆಯುತ್ತೆ ಅಂತ ತಿಳಿಸಿಕೊಟ್ಟಿದ್ದಾರೆ.

ಇನ್ನು ಹಿಂದೆ ಭಜಮಾನ ಅಂತ ಬಂದನಲ್ಲ ಆ ಸತ್ವಾನ್ ಅನ್ನುವವನ ಮಗ ಆ ಭಜಮಾನನ ವಂಶದಲ್ಲಿ ಮತ್ತೊಬ್ಬ ಮುಂದೆ ಆ ವಂಶದೊಳಗೆ ಹೃದಿಕ ಅಂತ ಬರುತ್ತಾನೆ ಆ ಹೃದಿಕನ ಮಗನೇ ಅನೇಕ ಮಕ್ಕಳು ಅದರಲ್ಲಿ ಹಿರಿಯ ಕೃತವರ್ಮ. ಇದೀಗ ಸಾತ್ಯಕಿಯನ್ನು ಕೇಳಿದಿರಿ ಕೃಷ್ಣಪಕ್ಷಕ್ಕೆ ಅಭಿಮಾನಿ ದೇವತೆ, ಇವನು ಶುಕ್ಲಪಕ್ಷಾಭಿಮಾನಿ ದೇವತೆ, ಶುಕ್ಲಪಕ್ಷಾಭಿಮಾನಿ ದೇವತೆಯೇ ಕೃತವರ್ಮನಾಗಿ ಅವತಾರ ಮಾಡಿದ್ದಾನೆ. ಸಾತ್ಯಕಿಯಲ್ಲಿ ಚಕ್ರದ ಆವೇಶ ಪರಮಾತ್ಮನ ಸುದರ್ಶನ ಚಕ್ರ, ಕೃತವರ್ಮನಲ್ಲಿ ಪಾಂಚಜನ್ಯ ಶಂಖದ ಆವೇಶ ಆ ಶಂಖಾಭಿಮಾನಿಯಾದ ಅನಿರುದ್ಧನ ಆವೇಶ ಕೃತವರ್ಮನಲ್ಲಿ ಇದೆ, ಸಾತ್ಯಕಿಯಲ್ಲಿ ಸಂಹವ ಎಂಬ ಮರುತ್ತಿನ ಆವೇಶ ಕೃತವರ್ಮನಲ್ಲಿ ಪ್ರಹವ ಎಂಬ ಮರುತ್ತಿನ ಆವೇಶ ಇದೆ. ಅಂತಹ ಮಹಾನುಭಾವ ಈ ಕೃತವರ್ಮ ಎಂಬುದಾಗಿ ಇಲ್ಲಿ ತಿಳಿಸಿಕೊಡುತ್ತಾರೆ.

ಮುಂದೆ ಆ ಕ್ರೋಷ್ಟ ಅಂತ ಹೇಳಿದರಲ್ಲ ಆ ಕ್ರೋಷ್ಟುವಿನ ಮಡದಿಯಾದ ಗಾಂಧಾರೀಯಲ್ಲಿ ಏನು ಅನಮಿತ್ರ ಅಂತ ಹುಟ್ಟಿದ್ದ ಆ ವಂಶದಲ್ಲಿ ಅವನ ಮಗನಾಗಿ ನಿಘ್ನ ಅಂತ ಹುಟ್ಟುತ್ತಾನೆ ಹಿಂದೆ ಒಂದು ವಂಶವನ್ನು ಹೇಳಿದ್ದಾರೆ. ಇನ್ನು ಬೇರೆ ಮಕ್ಕಳ ಸಂತತಿಯನ್ನು ತಿಳಿಸುತ್ತಾ ಇದ್ದಾರೆ ನಿಘ್ನ ಆ ನಿಘ್ನನಿಗೆ ಇಬ್ಬರು ಮಕ್ಕಳು ಪ್ರಸೇನ, ಸತ್ರಾಜಿತ. ಆ ಸತ್ರಾಜಿತನ ಮಗಳೇ ಸತ್ಯಭಾಮಾ ಅದನ್ನು ಮುಂದೆ ಕೇಳುತ್ತೀರಿ. ಆ ಸತ್ರಾಜಿತ ಸೂರ್ಯನಿಗೆ ಅತ್ಯಂತ ಬಹಳ ಪ್ರೀತಿಯ ಮಿತ್ರ, ನಿತ್ಯವೂ ಹೋಗಿ ತಾನು ಸೂರ್ಯೋಪಾಸನೆಯನ್ನು ಮಾಡುತ್ತ ಇದ್ದ ಸಮುದ್ರತೀರದಲ್ಲಿ. ಸೂರ್ಯೋಪಾಸನೆಯನ್ನು ಮಾಡುತ್ತ ಇದ್ದಾನೆ ಒಂದು ದಿನ ಸೂರ್ಯ ಪ್ರತ್ಯಕ್ಷನಾಗಿದ್ದಾನೆ ಮಿತ್ರ ಸಣ್ಣ ಮಿತ್ರ ಅಂತ ಅರ್ಥ ಸೂರ್ಯ ಮಹಾನುಭಾವ ದೇವ. ಇವನು ಯೋಗ್ಯತೆಯಲ್ಲಿ ಚಿಕ್ಕವನಾದರೂ ಕೂಡ ಪ್ರೀತಿಗೆ ಮಾತ್ರ ಅನ್ನುವುದಕ್ಕೆ ಇವನಿಗೆ ವಿಶೇಷವಾಗಿ ಅನುಗ್ರಹವನ್ನು ಮಾಡಿ ದರ್ಶನವನ್ನು ಕೊಟ್ಟಿದ್ದಾನೆ. ಸೂರ್ಯಮಂಡಲದ ಹಾಗೆ ಕಾಣಿಸುತ್ತಾ ಇದೆ ಅವನು ಅಂದ ಸೂರ್ಯಮಂಡಲವನ್ನು ನೋಡಿ ದಿವಸ ನಾವು ಗಾಯತ್ರಿ ಜಪಾದಿಗಳನ್ನು ಮಾಡುತ್ತೇವೆ, ಉಪಾಸನೆಯನ್ನು ಮಾಡುತ್ತೇವೆ, ಸೂರ್ಯಾಂತರ್ಗತ ನಾರಾಯಣನನ್ನು **'ಧ್ಯೇಯ ಸದಾ ಸವಿತೃಮಂಡಲ ಮಧ್ಯವರ್ತಿ ನಾರಾಯಣ'**[2] ಮಂಡಲ ದರ್ಶನವಾಗುತ್ತದೆ. ಈಗಲೂ ಮಂಡಲವೇ ಕಾಣಿಸುತ್ತಾ ಇದ್ದರೆ

1. 37.27 ಹರಿವಂಶ ಪರ್ವ, 2. ವೇದಮಂತ್ರ

ಮತ್ತೆ ನೀನು ಅಲ್ಲಿಂದ ಇಲ್ಲಿ ಇಳಿದು ಬಂದು ಏನು ಉಪಯೋಗ ನಿನ್ನ ದರ್ಶನ ಆಗುತ್ತಾನೆ ಇಲ್ಲ ಬರೀ ಮಂಡಲದ ದರ್ಶನವಾಗುತ್ತಾ ಇದೆ.

ಆಗ ಸೂರ್ಯ ಏನು ಮಾಡಿದ ಅಂದರೆ ತನ್ನ ಕೊರಳಲ್ಲಿ ಹಾಕಿಕೊಂಡಂತಹ ಸ್ಯಮಂತಕ ಮಣಿಯನ್ನು ಪಕ್ಕದಲ್ಲಿ ತೆಗೆದು ಇಟ್ಟ ಇವನಿಗೆ ಕೊಡಲಿಲ್ಲ, ಪಕ್ಕದಲ್ಲಿ ತೆಗೆದು ಇಟ್ಟನಂತೆ. ಯಾಕೆ ಅಂದರೆ ಆ ಸ್ಯಮಂತಕ ಮಣಿ ಕೊರಳಲ್ಲಿ ಇದ್ದದ್ದಕ್ಕೆ ಅದು ಫಳಫಳ ಅಂತ ಹೊಳೀತಾ ಇರುವುದರಿಂದ ಸೂರ್ಯನ ದರ್ಶನನೇ ಇವನಿಗೆ ಆಗುತ್ತಿರಲಿಲ್ಲ. ಸೂರ್ಯ ದರ್ಶನ ಕೊಡಬೇಕು ಅಂತ ಕೆಳಗೆ ಬಂದರೂ ಆ ಸ್ಯಮಂತಕ ಮಣಿಯ ಪ್ರಭಾವದಿಂದಾಗಿ ಅದು ಮತ್ತೆ ಸೂರ್ಯಮಂಡಲ ಕಂಡ ಹಾಗೆ ಕಾಣಿಸುತ್ತಾ ಇದೆ ಅದು, ಮಂಡಲ ಬಂದಿಲ್ಲ ಇಲ್ಲಿ, ಆ ಮಣಿ ಆ ಮಂಡಲ ಕಂಡಂತೆ ಕಾಣುತ್ತಾ ಇದೆ. ಆ ಮಣಿಯನ್ನು ಪಕ್ಕಕ್ಕೆ ಇಟ್ಟಾಗ ಸೂರ್ಯನ ದರ್ಶನ ಆಯಿತು ಬಹಳ ಸಂತೋಷವಾಯಿತು ಆದರೆ ಆಸೆ ಹುಟ್ಟಿತು ಓ ಇಷ್ಟು ಬೆಳಕು, ಇಂತಹ ತೇಜಸ್ಸು, ಇಷ್ಟು ಅದ್ಭುತವಾದ ಮಹಿಮೆ ಆ ಮಣಿಗೆ ಇದ್ದರೆ ಆ ಮಣಿಯನ್ನು ನನಗೆ ಕೊಟ್ಟುಬಿಡಬಹುದಲ್ಲ ಅಂತ ಸೂರ್ಯ ಇವನು ಮಾಡಿದ ತಪಸ್ಸಿಗೆ ಪ್ರಸನ್ನನಾಗಿ ಆ ಮಣಿಯನ್ನು ಇವನಿಗೆ ಕೊಟ್ಟುಬಿಟ್ಟಿದ್ದಾನೆ. ಭಕ್ತಿಯಿಂದ ಅದು ಏನು ಬೇಡಿದ್ದನ್ನು ಕೊಡುವಂತಹ ಮಣಿ ಅದು ಬೆಳ್ಳಿ, ಬಂಗಾರ, ಮುತ್ತು, ರತ್ನ ಎಲ್ಲವನ್ನು ಕೊಡುವಂತಹದ್ದು, ಅತಿವೃಷ್ಟಿ ಅನಾವೃಷ್ಟಿಗಳು ಏನು ಆಗುವುದಿಲ್ಲ ಆ ಮಣಿ ಇದ್ದಲ್ಲಿ ರೋಗ ಆಗುವುದಿಲ್ಲ, ರುಜಿನಗಳು ಇಲ್ಲ, ಇಷ್ಟಾರ್ಥಗಳೆಲ್ಲಾ ಸಿಗುತ್ತೆ ಅಂತಹ ಶ್ರೇಷ್ಠವಾದ ಮಣಿ. ಸೂರ್ಯಾಂತರ್ಗತ ನಾರಾಯಣನ ಉಪಾಸನೆಯನ್ನು ಗಾಯತ್ರಿಯ ಮೂಲಕ ಚೆನ್ನಾಗಿ ಮಾಡಿದರೆ ಆ ಗಾಯತ್ರಿ ಪ್ರತಿಪಾದ್ಯನಾದ ನಾರಾಯಣ ಸರ್ವೇಷ್ಟಪ್ರದನಾಗುತ್ತಾನೆ ಅಂತನ್ನುವುದರ ಸಂಕೇತ ಇದು ಈ ಕಥೆ.

ಅಯಂ ಸರ್ವೇಷ್ಟದಾತಾ ಮೇ ಸರ್ವಾರಿಷ್ಟನಿವಾರಕಃ ।
ಸರ್ವೋತ್ಕೃಷ್ಟಃ ಅಯಮೇವೈಕಃ ತದೀಯೋಹಂ ಸ ಮೇ ಪತಿಃ ॥ (ಆಧ್ಯಾತ್ಮವಾಣಿ)

ಆದ್ದರಿಂದ ಉಪನೀತರಾಗಿರುವಂತಹ ವಟುಗಳು, ವಟುಗಳು ಇದ್ದಾಗ ಮಾತ್ರ ಅಲ್ಲ ಉಪನಯನವಾದ ಮೇಲೆ ಕೊನೆಯವರೆಗೆ ತಪ್ಪದೇ ನಿತ್ಯದಲ್ಲಿ ತ್ರಿಕಾಲ ಸಂಧ್ಯಾವಂದನವನ್ನು ಮಾಡಿ, ಆ ಗಾಯತ್ರಿಯ ಜಪವನ್ನು ವಿಶೇಷವಾಗಿ ಮಾಡಿ ಯಾವುದೇ ವಿಧವಾದ ಸಮಸ್ಯೆಗಳು ಬರದಂತೆ ಮಾನಸಿಕವಾದ ಸಮಸ್ಯೆಗಳು, ದೈಹಿಕವಾದ ಸಮಸ್ಯೆಗಳು, ಆರ್ಥಿಕವಾದ ಸಮಸ್ಯೆಗಳು ಏನೂ ಬರದೇ ಇರುವ ಹಾಗೆ ಸೂರ್ಯಾಂತರ್ಗತ ನಾರಾಯಣ ಸ್ಯಮಂತಕ ಮಣಿಯನ್ನು ಕೊಟ್ಟು ಅನುಗ್ರಹ ಮಾಡುತ್ತಾನೆ. ಸ್ಯಮಂತಕ ಮಣಿ ಕೈಯಲ್ಲಿದೆ ಅಂತ ಎಲ್ಲಿ ಬಂತು ಅಂತ ಹುಡುಕಬೇಡಿ ಆ ಸ್ಯಮಂತಕ ಮಣಿ ಇದ್ದರೆ ಏನಾಗಬೇಕೋ ಆ ರೀತಿ ಇಷ್ಟಾರ್ಥಗಳನ್ನು ಕೊಟ್ಟು ಅನುಗ್ರಹವನ್ನು ಮಾಡುತ್ತಾನೆ ಇದರೊಳಗೆ ಸಂಶಯವೇ ಇಲ್ಲ. ಅಷ್ಟು ಭಕ್ತಿ, ಅಷ್ಟು ಶ್ರದ್ಧೆ, ಅಷ್ಟು ನಿಷ್ಠೆಯಿಂದ ಎಲ್ಲ ಉಪನೀತರಾದ ಮಕ್ಕಳೇ, ವಟುಗಳೇ, ಬಾಲಕರೇ, ಯುವಕರೇ ಶ್ರದ್ಧಾ ಭಕ್ತಿಗಳಿಂದ ನಿತ್ಯದಲ್ಲಿ ತಪ್ಪದೇ ಗಾಯತ್ರಿಯ ಜಪವನ್ನು ಮಾಡಿ ನಿಮ್ಮ ಇಷ್ಟಾರ್ಥಗಳೆಲ್ಲವೂ ಪೂರ್ಣವಾಗುತ್ತವೆ. ಆ ರೀತಿ ಸ್ಯಮಂತಕ ಮಣಿಯನ್ನು ಪಡೆದುಕೊಂಡು ಬಂದಿದ್ದಾನೆ. ಶ್ರೀಕೃಷ್ಣ ಪರಮಾತ್ಮ ಒಂದು ಬಾರಿ ಕೇಳಿದ ಈ ಸ್ಯಮಂತಕ ಮಣಿಯನ್ನು ಮತ್ತೆ ನನಗೆ ಕೊಡಬಹುದಾ ಅಂತ ಅದು ಆಗುವುದಿಲ್ಲ ಅಂತ ಹೇಳಿದ ಸತ್ರಾಜಿತ ಹೋಗಲಿ ಬಿಡು ಅಂತ ಬಿಟ್ಟುಬಿಟ್ಟ ಕೃಷ್ಣ. ಅವನಿಗೆ ಏನು ಬೇಕು ತಾನೇ ಮಣಿ, ಮಣಿ ಅಂದರೆ ಪ್ರಧಾನ **'ಮಣೀರ್ಮುಖಂ ಪ್ರಧಾನಂ'** ಸಕಲಜಗನ್ಮಣೀ, ಭೂಷಾಮಣೀ ಅಂತಹ ಸರ್ವೋತ್ತಮನಾದಂತಹ ಆ ಭಗವಂತನಿಗೆ ಈ ಮಣಿ ಯಾಕೆ ಬೇಕು ಆದರೆ ಇವನ ಸ್ವಭಾವವನ್ನು ಜಗತ್ತಿಗೆ

ತೋರಿಸಬೇಕಾಗಿದೆ ಅಷ್ಟೇ ಪರಮಾತ್ಮ ಆ ಮಣಿಯನ್ನು ಕೇಳಿದ್ದಾನೆ ಇವನು ಕೊಟ್ಟಿಲ್ಲ. ಸರಿ ಹೋಗಲಿ ಬಿಡು ಅಂತ ಬಿಟ್ಟ ಆದರೆ ಅವನ ತಮ್ಮ ಪ್ರಸೇನಜಿತ್ ಅದನ್ನು ಭಾರೀ ಪ್ರಕಾಶಮಾನವಾದ ಮಣಿ ಏನೋ ಆನಂದ ಅದನ್ನು ಹಾಕಿಕೊಂಡರೆ ಅದನ್ನು ಹಾಕಿಕೊಂಡು ಹೊರಟಿದ್ದಾನೆ. ಹೊರಟಾಗ ಪ್ರಸೇನಜಿತ್ ಅವನಿಗೆ ಸಿಂಹ ಬಂದು ಅವನನ್ನು ಸಂಹಾರ ಮಾಡಿದೆ **'ಸಿಂಹಃ ಪ್ರಸೇನಮವಧೀತ್'** ಮತ್ತೆ ಇದನ್ನು ಹಾಕಿಕೊಂಡರೆ ಯಾರಿಗೂ ಏನು ಆಗುವುದಿಲ್ಲ, ರೋಗ ಇಲ್ಲ, ರುಜಿನ ಇಲ್ಲ, ಕಷ್ಟ ಇಲ್ಲ, ನಷ್ಟ ಇಲ್ಲ ಎಲ್ಲರೂ ತುಷ್ಟರಾಗಿ ಪುಷ್ಟರಾಗಿ ಮೃಷ್ಟಾನ್ನವನ್ನು ತಿಂದು ಸಂತುಷ್ಟರಾಗಿ ಇರುತ್ತಾರೆ ಅಂತ ಹೇಳಿದ್ದಿರಿ ಮತ್ತೆ ಹೀಗೇಕಾಯಿತು ಪ್ರಸೇನಜಿತ್ತನಿಗೆ. ಅಂದರೆ ಅದನ್ನು ಹೇಳುತ್ತಾರೆ ತಿಳಿಸುತ್ತಾರೆ ಅವನು ಶುದ್ಧ ಸದಾಚಾರದಿಂದ ಅದನ್ನು ಧಾರಣ ಮಾಡಿರಲಿಲ್ಲ, ಅಣ್ಣನ ಒಪ್ಪಿಗೆಯನ್ನು ಪಡೆದು ಧಾರಣ ಮಾಡಿಲ್ಲ, ಸದಾಚಾರಿಯಾಗಿ ಧಾರಣ ಮಾಡಿಲ್ಲ ಅನ್ನುವುದಕ್ಕೋಸ್ಕರ ಅದು ಏನು ಫಲವನ್ನು ಕೊಡಬೇಕು ಅದನ್ನು ಕೊಟ್ಟಿಲ್ಲ ತಿಳಿದುಕೊಳ್ಳಿ.

ದೇವರು ನಮಗೆ ಅನುಗ್ರಹವನ್ನು ಮಾಡುವುದಕ್ಕೆ ಸಿದ್ದನಿದ್ದಾನೆ ನಾವು ಸ್ತೋತ್ರಗಳನ್ನು ಹೇಳಿದರೆ, ಮಂತ್ರಗಳನ್ನು ಹೇಳಿದರೆ, ಜಪವನ್ನು ಮಾಡಿದರೆ, ಪ್ರಾರ್ಥನೆಯನ್ನು ಮಾಡಿದರೆ ಅನುಗ್ರಹ ಮಾಡುತ್ತಾನೆ ಆದರೆ ಭಕ್ತಿ ಶ್ರದ್ಧೆಗಳಿಂದ ಮಾಡಬೇಕು, ಸದಾಚಾರ ನಿರತರಾಗಿ ಶುದ್ಧರಾಗಿ ಮಾಡಬೇಕು, ಮನಸ್ಸು, ದೇಹ ಎಲ್ಲವೂ ಶುದ್ಧವಾಗಿ ಇರಬೇಕು ಅಶುದ್ಧವಾದರೆ ನಮಗೆ ಆ ಫಲ ಸಿಗುವುದಿಲ್ಲ ಅನ್ನುವುದಕ್ಕೂ ಇದು ನಿದರ್ಶನವಾಗಿದೆ. ಅಂತಹ ಸಮೃದ್ಧಿಯನ್ನು ಕೊಡುವ ಮಣಿ ಹಿಂದೆಯೂ ಅನೇಕ ಜನರಿಗೆ ಸಮೃದ್ಧಿಯನ್ನು ಕೊಟ್ಟಿದೆ ಮುಂದೂ ಇನ್ನೂ ಅನೇಕ ಜನರಿಗೆ ಸಮೃದ್ಧಿಯನ್ನು ಕೊಡುತ್ತಾನೆ ಇದೆ ಅಂತನ್ನುವ ಕಥೆ ಮುಂದೆ ಬರುತ್ತೆ. ಪ್ರಸೇನಜಿತ್ತಿನ ಹಣೆಬರಹ ಮಾತ್ರ ಹೀಗಾಯಿತು ಯಾಕೆಂದರೆ ಅವನು ಆ ನಿಯಮಗಳನ್ನು ಚೆನ್ನಾಗಿ ಪರಿಪಾಲನೆ ಮಾಡದೆ ಅದನ್ನು ಧಾರಣ ಮಾಡಿದ್ದ ಎಂಬ ಅಂಶವನ್ನು ನಮಗೆ ವ್ಯಾಖ್ಯಾನಕಾರರು ತಿಳಿಸಿಕೊಡುತ್ತಾರೆ. ಆ ರೀತಿ ಪ್ರಸೇನಜಿತ್ ಅದನ್ನು ಧಾರಣ ಮಾಡಿಕೊಂಡು ಹೋದ, ಸಿಂಹದಿಂದ ಹತನಾದ ಮುಂದೆ ಜಾಂಬವಂತ ಆ ಸಿಂಹವನ್ನು ಸಂಹಾರ ಮಾಡಿ ತಾನು ಅದನ್ನು ತೆಗೆದುಕೊಂಡು ಹೋಗಿದ್ದಾನೆ. ತಾನು ಅದನ್ನು ತೆಗೆದುಕೊಂಡು ಹೋಗಿ ತನ್ನ ಕುಮಾರನಿಗೆ ಆಟ ಆಡಿಸುವವುದಕ್ಕೆ ಅದನ್ನು ಮೇಲೆ ಕಟ್ಟಿದ್ದಾನೆ, ಧಾತ್ರಿ ಆ ಮಗುವನ್ನು ಬೆಳೆಸುವವಳು ಅದನ್ನು ತೋರಿಸಿ ಆ ಮಗುವನ್ನು ಆಟ ಆಡಿಸುತ್ತಾ ಇದ್ದಳಂತೆ.

ಸಿಂಹಃ ಪ್ರಸೇನಮವಧೀತ್ ಸಿಂಹೋ ಜಾಮ್ಬವತಾ ಹತಃ ।

ಸುಕುಮಾರಕ ಮಾ ರೋದೀಸ್ತವ ಹ್ಯೇಷ ಸ್ಯಮನ್ತಕಃ ॥ (38.36 ಹರಿವಂಶಪರ್ವ)

'ಮಾ ರೋದೀ' ಅಳಬೇಡ ಮಗು **'ಸ್ತವ ಹ್ಯೇಷ ಸ್ಯಮಂತಕಃ'** ನಿಮ್ಮ ಅಪ್ಪ ತಂದಾನೆ ಅಂದರೆ ನಿನ್ನದೇ ಈ ಮಣಿ ಅಂತ ತೋರಿಸಿ ಆ ಮಗುವನ್ನು ಆಟ ಆಡಿಸುತ್ತಾ ಇದ್ದಳಂತೆ.

ಈ ಕಡೆಗೆ ಶ್ರೀಕೃಷ್ಣ ಪರಮಾತ್ಮನೇ ಸ್ಯಮಂತಕ ಮಣಿಯನ್ನು ತೆಗೆದುಕೊಂಡ ಅಂತನ್ನುವ ಅಪವಾದ ಎಲ್ಲ ಕಡೆಗೆ ಹರಡಿದೆ. ಶ್ರೀಕೃಷ್ಣ ಪರಮಾತ್ಮ ಎಲ್ಲ ಯಾದವರನ್ನು ಕರೆದುಕೊಂಡು ಅಲ್ಲಿ ಹೋಗಿದ್ದಾನೆ ಬಲರಾಮ ದೇವರು ಹಾಗೂ ಉಳಿದ ಯಾದವರನ್ನೆಲ್ಲ ಹೊರಗಡೆ ನಿಲ್ಲಿಸಿದ ತಾನು ಮಾತ್ರ ಆ ಗುಹೆಯ ಒಳಗೆ ಹೋದ. ಪ್ರಸೇನಜಿತ್ತಿನ ಆ ಕುದುರೆ ಬಿದ್ದಿತ್ತು ಪ್ರಸೇನಜಿತ್ ಬಿದ್ದಿದ್ದ ಮುಂದೆ ಸಿಂಹದ ಹೆಜ್ಜೆಗಳು, ಅದರ ಮುಂದೆ ಕರಡಿಯ ಹೆಜ್ಜೆಗಳು ಅದು ಗುಹೆಯಲ್ಲಿ ಹೋಗಿದೆ ಇವತ್ತಿಗೂ ಆ ಗುಹೆ ನೋಡಲಿಕ್ಕೆ ಸಿಗುತ್ತದೆ ಗುಜರಾತದಲ್ಲಿ ಅಂತಹ ಆ ಗುಹೆ ಆ ಗುಹೆಯಲ್ಲಿ ಪರಮಾತ್ಮ ಪ್ರವೇಶ ಮಾಡಿದ್ದಾನೆ. ಈ ಶ್ಲೋಕ ಜೋರು ಜೋರಾಗಿ ಕೇಳಿಸುತ್ತಾ ಇತ್ತಂತೆ ಸರ್ವಜ್ಞನಾದ ದೇವರಿಗೆ ಈ

ಶ್ಲೋಕ ಕೇಳಿಸಿ ಹೋಗಬೇಕಾದದ್ದಿಲ್ಲ ಆದರೆ ವರ್ಣನೆ ಮಾಡುತ್ತದೆ ಹರಿವಂಶ **'ಸುವ್ಯಕ್ತೀಕೃತಶಬ್ದಸ್ತು'**[1] ಭಾರೀ ಆ ಶಬ್ದ ಕೇಳಿಸುತ್ತಾ ಇದೆ ಪರಮಾತ್ಮ ಒಳಗೆ ಪ್ರವೇಶ ಮಾಡಿದ್ದಾನೆ. ಪ್ರವೇಶ ಮಾಡಿ ಆ ಜಾಂಬವಂತನ ಜೊತೆಗೆ ಯುದ್ಧ ಪ್ರಾರಂಭವಾಗಿದೆ ಇಪ್ಪತ್ತೊಂದು ದಿನಗಳ ಕಾಲ ಯುದ್ಧವಾಗಿದೆ ಅಂತ ಹೇಳುತ್ತದೆ ಹರಿವಂಶ.

ಬಾಹುಭ್ಯಾಮೇವ ಗೋವಿನ್ದೋ ದಿವಸಾನೇಕವಿಂಶತಿಮ್ ॥ (38.39 ಹರಿವಂಶಪರ್ವ)

ಏನು ಆಯುಧಗಳಿಲ್ಲ ಬಾಹುಗಳಿಂದಲೇ ಯುದ್ಧ ಆಡಿದ್ದಾರೆ. ನಿನ್ನ ಜೊತೆಗೆ ಯುದ್ಧ ಆಡಬೇಕು ಅಂತ ಬೇಡಿಕೊಂಡಿದ್ದ ಜಾಂಬವಂತ ರಾಮಾವತಾರದಲ್ಲಿ ಈಗ ಬೇಡ ಮುಂದೆ ಮಾಡುತ್ತೇನೆ ಅಂತ ಹೇಳಿದ್ದಕ್ಕೆ ಅವನಿಗೆ ಯುದ್ಧ ಬಿಕ್ಷೆಯನ್ನು ಕೊಟ್ಟಿದ್ದಾನೆ. ಆಗ ಸಾಕ್ಷಾತ್ ಶ್ರೀರಾಮಚಂದ್ರನೇ ಶ್ರೀಕೃಷ್ಣ ಪರಮಾತ್ಮ ಬೇರೆ ಅಲ್ಲ ಅಂತ ಅವನಿಗೆ ಸ್ಪಷ್ಟವಾಗಿ ಗೊತ್ತಾಗಿದೆ ಶ್ರೀಮದಾಚಾರ್ಯರು ತಿಳಿಸಿಕೊಡುತ್ತಾರೆ ಅನುವ್ಯಾಖ್ಯಾನದಲ್ಲಿ, ಟೀಕಾಕೃತ್ಪಾದರು ಹೇಳಿರುತ್ತಾರೆ ಸುಧಾದಲ್ಲಿ. ಆ ಭಗವಂತನ ರೂಪಗಳಲ್ಲಿ ಅತ್ಯಂತ ಅಭೇದ ಇದೆ ಅನ್ನುವುದು ಜ್ಞಾನಿಗಳಿಗೆ ಪ್ರತ್ಯಕ್ಷ ಸಿದ್ಧ ಅಂತ ಅದಕ್ಕೆ ಉದಾಹರಣೆ ಜಾಂಬವಂತ. ರಾಮನೇ ಕೃಷ್ಣ ಅನ್ನುವಂತಹ ಪ್ರತ್ಯಕ್ಷ ಜ್ಞಾನ ಜಾಂಬವಂತನಿಗೆ ಬಂದಿದೆ **'ಪ್ರತ್ಯಭಿಜ್ಞಾ ಸೋಯಂ ರಾಮಃ'** ಆ ರಾಮನೇ ಈ ಕೃಷ್ಣ ಅಂತ ಆ ರೀತಿ ಅವನಿಗೆ ಅನುಭವ ಬಂದಿದೆ. ಅಷ್ಟು ಇಪ್ಪತ್ತೊಂದು ದಿನಗಳ ಯುದ್ಧದಲ್ಲಿ ನುಗ್ಗು ನುಗ್ಗಾಗಿ ಹೋಗಿದೆ ಮೈಯೆಲ್ಲ ಕೃಷ್ಣ ಪರಮಾತ್ಮ ಸುಮ್ಮನೆ ಹೀಗೆ ಕೈಯಾಡಿಸಿದ್ದಾನಂತೆ ಏನು ಆಪರೇಷನ್ ಇಲ್ಲ, ಔಷಧಿ ಇಲ್ಲ, ಎಣ್ಣೆ ಇಲ್ಲ. ಮಸಾಜ್ ಇಲ್ಲ ಕೇವಲ ಶ್ರೀಕೃಷ್ಣ ಪರಮಾತ್ಮನ ಸ್ಪರ್ಶ ಮಾತ್ರದಿಂದ ಎಲ್ಲಾ ರೋಗಗಳ ವಾಸಿಯಾಗಿದೆ ಇದು ಏನು ಬಹಳ ದೊಡ್ಡ ಆಶ್ಚರ್ಯವಲ್ಲ ದೇವರಿಗೆ. ಜಾಂಬವತ ಯಾರು ಯಮಧರ್ಮನ ಅವತಾರ ಆ ಜಾಂಬವತನಿಗೆ ಹೇಗೆ ಪರಮಾತ್ಮ ಎಲ್ಲಾ ದೋಷಗಳನ್ನು ಪರಿಹಾರ ಮಾಡಿದ ಹಾಗೆ ಎಲ್ಲ ಸಜ್ಜನರಿಗೆಲ್ಲಾ ನಿಮ್ಮ ಜೀವನದೊಳಗೆ ಧರ್ಮದ ಅವತಾರವನ್ನು ಮಾಡಿಸಿ, ಧರ್ಮ ನಿಮ್ಮ ಜೀವನದೊಳಗೆ ಕಾಲಿಡಲಿ. ಕಾಲಿಟ್ಟಿದೆ ಇನ್ನಷ್ಟು ಚೆನ್ನಾಗಿ ಕಾಲಿಡಲಿ ವಿಶೇಷವಾಗಿ ಧಾರ್ಮಿಕತೆ ಬೆಳೆಯಲಿ ವಿಶೇಷವಾಗಿ ದೇವರ ಕೃಪಾದೃಷ್ಟಿ ನಿಮ್ಮ ಮೇಲೆ ಬಿದ್ದು ಎಲ್ಲ ರೋಗರುಜಿನಗಳು ಸಮಸ್ಯೆಗಳು ದೂರ ಆಗಿ ವಿಶೇಷವಾದ ಭಗವಂತನ ಕೃಪೆಯಿಂದ ಮೋಕ್ಷ ಸಾಧನೆಯನ್ನು ವಿಶೇಷವಾಗಿ ಮಾಡುವುದಕ್ಕೆ ಸಾಧ್ಯವಾಗುತ್ತೆ ಅನ್ನುವುದಕ್ಕೆ ಇದು ಒಂದು ಸಂದೇಶ.

ಶ್ರೀಮದ್ಭಾಗವತ ಹೇಳುತ್ತದೆ ಇಪ್ಪತ್ತೆಂಟು ದಿನಗಳ ಕಾಲ ಯುದ್ಧವಾಯಿತು ಅಂತ **'ಆಸೀತ್ತದಷ್ಟಾವಿಂಶಾಹಮಿತರೇತರಮುಷ್ಟಿಭಿಃ'**[2] ಅಂತ ದಶಮಸ್ಕಂಧದಲ್ಲಿ ನಾವು ಕಾಣುತ್ತೇವೆ. ಇಲ್ಲಿ ಇಪ್ಪತ್ತೊಂದು ದಿನಗಳು ಅಂತ ಹೇಳುತ್ತಾರೆ. ವ್ರತಾರ್ಕ ಅಂತ ಒಂದು ಗ್ರಂಥ ಸತ್ಯಧರ್ಮತೀರ್ಥರು ಉದಾಹರಣೆ ಮಾಡುತ್ತಾರೆ ಆ ವ್ರತಾರ್ಕದಲ್ಲಿಯೂ ಇಪ್ಪತ್ತೊಂದು ದಿನಗಳು ಅಂತ ಇದೆ, ಹರಿವಂಶದಲ್ಲಿಯೂ ಇಪ್ಪತ್ತೊಂದು ದಿನಗಳು ಅಂತ ಇದೆ ಮತ್ತೆ ಭಾಗವತದಲ್ಲಿ ಮಾತ್ರ ಇಪ್ಪತ್ತೆಂಟು ದಿನಗಳು ಅಂತ ಹೇಳಿದ್ದಾರಲ್ಲ ಅಂತ. ಅದಕ್ಕೆ ಸತ್ಯಧರ್ಮತೀರ್ಥರು ಅನ್ನುತ್ತಾರೆ ಆ ಎಲ್ಲ ಯಾದವರನ್ನು ಕರೆದುಕೊಂಡು ಬಂದಿದ್ದನಲ್ಲ ಕೃಷ್ಣ, ಬಲರಾಮ ಇನ್ನುಳಿದ ಯಾದವರು ಅವರನ್ನೆಲ್ಲ ನೀವು ಹೊರಗಡೆ ನಿಲ್ಲಿ ನಾನು ಒಳಗಡೆ ಹೋಗುತ್ತೇನೆ ಅಂತ ಒಂದು, ಎರಡು, ಮೂರು, ನಾಲ್ಕು, ಐದು, ಆರು, ಏಳು ಏಳು ದಿವಸ ಕಾಯ್ದರು, ಏಳು ದಿವಸ ಅವರು ಕಾಯ್ದರು ಅಂದರೆ ಕೃಷ್ಣನೇ ಒಳಗೆ ಮೃತನಾಗಿ ಹೋಗಿದ್ದಾನೋ ಏನೋ ಅಂತನ್ನುವ ರೀತಿಯಲ್ಲಿ ಅವರೆಲ್ಲ ತಿರುಗಿ ಹೋಗಿಬಿಡುತ್ತಾರೆ. ಅವರು ಆಚೆಗೆ ಹೋದಮೇಲೆ ಮುಂದೆ ಎಷ್ಟು ದಿವಸ ಕೃಷ್ಣ ಯುದ್ಧ ಮಾಡಿದ ಅಂದರೆ ಇಪ್ಪತ್ತೊಂದು ದಿವಸ ಅಂತ ಹರಿವಂಶ

1. 38.37 ಹರಿವಂಶಪರ್ವ, 2.10.2.56.24 ಭಾಗವತ SD,

ಹೇಳಿದ್ದು, ಒಟ್ಟು ಮಾಡಿದ್ದು ಎಷ್ಟು ಅಂತ ಭಾಗವತ ಹೇಳಿದ್ದು ಇಪ್ಪತ್ತೆಂಟು, ಏಳು ಇಪ್ಪತ್ತೊಂದು ಇಪ್ಪತ್ತೆಂಟು ಎಷ್ಟು ಸುಂದರವಾಗಿ ಸತ್ಯಧರ್ಮ ತೀರ್ಥರು ವ್ಯಾಖ್ಯಾನ ಮಾಡುತ್ತಾರೆ. ಅದಕ್ಕೆ ಆ ವ್ರತಾರ್ಕದ ಆಧಾರವನ್ನೇ ಕೊಡುತ್ತಾರೆ **'ದ್ವಾರಕಾ ವಾಸಿನಸ್ಸರ್ವೆ ಗತಾಸ್ತೇ ಸಪ್ತಮೇ ಅಹನಿ'** ಏಳು ದಿವಸ ಕಾಯ್ದು ಏಳನೆಯ ದಿವಸ ಅಲ್ಲಿ ಹೊರಟರು ದ್ವಾರಕಾ ವಾಸಿಗಳೆಲ್ಲಾ ಅಂತ ಹೊರಟ ಮೇಲೆ ಇಪ್ಪತ್ತೊಂದು ದಿವಸ ಅಂತ ಹೇಳಿದ್ದಾರೆ ತಪ್ಪೇನಿದೆ ಅದರಲ್ಲಿ ಒಟ್ಟು ಇಪ್ಪತ್ತೆಂಟು ದಿನಗಳು ಅಂತನ್ನುವುದು ನಾವು ಅರ್ಥ ಮಾಡಿಕೊಳ್ಳಬೇಕಾದದ್ದು ಅಂತ ತಿಳಿಸಿಕೊಡುತ್ತಾರೆ.

ಈ ರೀತಿ ಆ ಶ್ರೀಕೃಷ್ಣ ಪರಮಾತ್ಮ ಜಾಂಬವಂತನನ್ನು ಉದ್ಧಾರ ಮಾಡಿದ್ದಾನೆ. ಜಾಂಬವಂತ ಈ ಮಣಿಯನ್ನು ಕೊಡುವುದರ ಜೊತೆಗೆ ತನ್ನ ಕನ್ಯಾಮಣಿ ಜಾಂಬವತೀ ಅವಳನ್ನು ಕೊಟ್ಟು ಮದುವೆ ಮಾಡಿದ್ದಾನೆ ಈ ಜಾಂಬವತಿಯ ಮೇಲೆ ಪರಮಾತ್ಮನಿಗೆ ವಿಶೇಷವಾದಂತಹ ಪ್ರೀತಿಯ ಅಭಿವ್ಯಕ್ತಿಯಾದಾಗ ಲಕ್ಷ್ಮೀ ದೇವಿಯ ವಿಶೇಷ ಸನ್ನಿಧಾನ ಬಂದು ಬಲರಾಮನಿಗೆ ಸಮಾನಳಾಗುತ್ತಾಳಂತೆ. **'ರಾಮೇಣ ತುಲ್ಯಾ ಜಾಂಬವತೀ ಪ್ರಿಯತ್ವೇ'**[1] ಯಾವಾಗ ಪರಮಾತ್ಮನ ಪ್ರೀತಿ ಸ್ವಲ್ಪ ಕಡಿಮೆಯಾಗುತ್ತೆ ಅಭಿವ್ಯಕ್ತಗೊಳಿಸುವುದಿಲ್ಲ ದೇವರು ತನ್ನ ಪ್ರೀತಿಯನ್ನು ಆಗ ಇವರೆಲ್ಲ **'ಪ್ರದ್ಯುಮ್ನತೋ ವಿಂಶಗುಣಾಃಧಿಕಾಃ ಸ್ಯುಃ'**[2] ಅಂತ. ಮಹಾನುಭಾವರು ಶಣ್ಮಹಿಷಿಯರೆಲ್ಲರೂ ಅಂತಹ ಸಾಮಾನ್ಯರಲ್ಲ ಅವರು ಆರು ಜನ, ಅವರ ಕಕ್ಷೆ ಆರನೆಯ ಕಕ್ಷೆಯೇ, ಅವರ ಕಕ್ಷೆ ತಾರತಮ್ಯದಲ್ಲಿಯೂ ಆರನೆಯದವರು, ಅವರು ಇರುವದು ಆರು ಜನ ಶಣ್ಮಹಿಷಿಯರು. ಜಾಂಬವತೀ, ಮಿತ್ರವಿಂದ, ಲಕ್ಷಣಾ, ಕಾಲಿಂದಿ ನೀಲ, ಭದ್ರ ಇವರೆಲ್ಲರೂ ಅನಾದಿಕಾಲದಿಂದ ಭಗವಂತನ ಪತ್ನಿಯರೇ ಆದರೆ ಸಾಕ್ಷಾತ್ ಲಕ್ಷ್ಮೀ ಅಲ್ಲ ಲಕ್ಷ್ಮೀ ದೇವಿಯ ಸನ್ನಿಧಾನಕ್ಕೆ ಪಾತ್ರರು ಅದರೊಳಗೂ ಜಾಂಬವತೀ ಉತ್ತಮ ಎಂಬುದಾಗಿ ತಿಳಿಸುತ್ತಾರೆ. ಅಂತಹ ಮಹಾನುಭಾವಳು ಅವಳನ್ನು ಮದುವೆಯಾಗಿ ಬಂದಿದ್ದಾನೆ.

ಈ ಕಡೆಗೆ ಸತ್ರಾಜಿತ ಅವನಿಗೆ ಆ ಮಣಿಯನ್ನು ಎಲ್ಲರ ಮಧ್ಯದಲ್ಲಿ ಸಭಾ ಮಧ್ಯದಲ್ಲಿ ದೇವರು ಕೊಡುತ್ತಾನೆ ನೋಡು ನಾನು ತೆಗೆದುಕೊಂಡು ಹೋದದ್ದಲ್ಲ ಇದು ಜಾಂಬವಂತ ತೆಗೆದುಕೊಂಡು ಹೋಗಿದ್ದ ಪ್ರಸೇನಜಿತ್, ಸಿಂಹ, ಜಾಂಬವಂತ ನಿನ್ನ ಮಣಿಯನ್ನು ನೀನು ತೆಗೆದುಕೋ ಅಂತ ಕೊಟ್ಟಿದ್ದಾನೆ. ಅವನಿಗೆ ಸತ್ಯಭಾಮಾ, ವ್ರತಿನೀ, ಪ್ರಸ್ವಾಪಿನೀ ಅಂತ ಮೂರು ಜನ ಮಕ್ಕಳು ತನ್ನ ಮಗಳಾದಂತಹ ಸತ್ಯಭಾಮಾಳನ್ನು ಸಾಕ್ಷಾತ್ ಲಕ್ಷ್ಮೀ ದೇವಿ ಅಂತಹ ಸತ್ಯಭಾಮಾ ದೇವಿಯನ್ನು ಕೊಟ್ಟು ಮದುವೆ ಮಾಡಿದ್ದಾನೆ ಎಂಬ ವಿಚಾರವನ್ನು ತಿಳಿಸುತ್ತಾರೆ.

ಇನ್ನು ಈ ಯುಧಾಜಿತ ಅಂತ ಆ ಯುಧಾಜಿತ್ತಿನ ಅನ್ನುವ ಒಬ್ಬ ಸ್ವಲ್ಪ ಸ್ವಲ್ಪ ವಂಶವನ್ನು ಬಿಟ್ಟಿದ್ದನ್ನು ಜೋಡಿಸುತ್ತಾ ಹೋಗುತ್ತಾರೆ ಆ ಯುಧಾಜಿತ್ತನ ವಂಶ ಹಿಂದೆ ಹೇಳಿದರು. ಆದೇ ವಂಶದಲ್ಲಿ ಇನ್ನೂ ಅನೇಕ ಜನ ರಾಜರು ಆಗುತ್ತಾರೆ ಆ ಶ್ವಫಲ್ಕ, ಚಿತ್ರಕ ಅಂತ ಇಬ್ಬರು ಆಗಿದ್ದರಲ್ಲ ಅದರೊಳಗೆ ಆ ಚಿತ್ರಕನಿಗೇನೆ ಪೃಥು, ವಿಪೃಥು ಮೊದಲಾದವರೆಲ್ಲ ಮಕ್ಕಳಾಗುತ್ತಾರೆ. ಆ ವಿಪೃಥುವಿನ ಕಥೆ ಮುಂದೆ ಸುಭದ್ರಾ ವಿವಾಹ ಮಾಡುವ ಸಂದರ್ಭದೊಳಗೆ ಬರುತ್ತದೆ ಸುಭದ್ರಾ ಕಲ್ಯಾಣದ ಪ್ರಸಂಗದಲ್ಲಿ ಅರ್ಜುನ ಸುಭದ್ರೆಯನ್ನು ಕರೆದುಕೊಂಡು ಹೋಗುವಾಗ ಈ ವಿಪೃಥು ಅಲ್ಲಿ ಬರುತ್ತಾನೆ ಅರ್ಜುನನನ್ನು ತಡೆಯುವುದಕ್ಕೆ ಸುಮ್ಮನೇ ನಾಟಕ ಕೃಷ್ಣನ ಭಕ್ತ ಅವನು. ನಿಜವಾಗಿ ತಡೆಯುವುದಕ್ಕೆ ಅಲ್ಲ ಅರ್ಜುನ ಸುಭದ್ರೆಯನ್ನು ಕರೆದುಕೊಂಡು ಮದುವೆ ಮಾಡಿಕೊಳ್ಳಲಿ ಅಂತೆ ಅವರ ಅಭಿಪ್ರಾಯ ಆದರೂ ಕೃಷ್ಣನ ಆಜ್ಞೇ ಅನ್ನುವುದಕ್ಕೋಸ್ಕರ ವಿಪೃಥು ಅಲ್ಲಿ ಬಂದಿರುತ್ತಾನೆ. ಏನು ಅದ್ಭುತವಾದ ಅರ್ಜುನನ ಕೌಶಲದ ವರ್ಣನೆ ಮಾಡುತ್ತಾರೆ ಶ್ರೀಮದಾಚಾರ್ಯರು ತಾತ್ಪರ್ಯ ನಿರ್ಣಯದಲ್ಲಿ ಬಾಣಗಳ ವೃಷ್ಟಿಯನ್ನೇ ಮಾಡುತ್ತಾನೆ ಆ

1. 20.61 ಮಭಾತಾನಿರ್ಣಯ, 2. 20.62 ಮಭಾತಾನಿರ್ಣಯ

ವಿಪೃಥುವಿನ ಮೇಲೆ ಆದರೆ ಒಂದು ಚೂರು ಅವನಿಗೆ ಗಾಯ ಆಗಿರುವುದಿಲ್ಲ. ಅವನು ಯುದ್ಧ ಮಾಡಲಿಕ್ಕೆ ಮುಂದೆ ಬಂದಿರಬಾರದು ಹಾಗೆ ಬಾಣಗಳ ಮೇಲೆ ಬಾಣಗಳನ್ನು ಪುಂಖಾನು ಪುಂಖವಾಗಿ ಅವನ ಮೇಲೆ ವೃಷ್ಟಿ ಮಾಡುತ್ತಾನೆ ಆದರೆ ಅವನಿಗೆ ಒಂದು ಚೂರು ತೊಗಲಿಗೆ ತಾಕಿರುವುದಿಲ್ಲ ಅಷ್ಟು ಕೌಶಲ ಬಾಣ ಬಿಡುವುದರೊಳಗೆ. ಅದು ಏನು ವೇಗ ಇರುತ್ತದಲ್ಲ ಆ ವೇಗ ಇಲ್ಲಿಯವರೆಗೂ ಬಂದು ಇಷ್ಟಕ್ಕೆ ಕರೆಕ್ಟ್ ಸ್ಟಾಪ್ ಆಗಿ ಬಿಡುತ್ತಿತ್ತು ಸುಮ್ಮನೇ ಟಚ್ ಆಗಿ ಅಲ್ಲಿ ಏನೂ ಕೂಡ ತೊಂದರೆ ಆಗಿರಬಾರದು ಅಂತಹ ಅದ್ಭುತವಾದ ಕೌಶಲವನ್ನು ತೋರಿಸುತ್ತಾನೆ ಅಂತ ಆ ರೀತಿ ಕೃಷ್ಣಾರ್ಜುನರ ಸೇವೆಯನ್ನು ಮಾಡಿದ ಮಹಾನುಭಾವ ಈ ವಿಪೃಥು ಈ ಚಿತ್ರಕನ ಮಗನಾಗಿ ಹುಟ್ಟುತ್ತಾನೆ ಅಂತ ಅವನ ಕಥೆಯನ್ನು ಹೇಳುತ್ತಾರೆ. ನಿಮ್ಮ ಹೆಸರಿನಲ್ಲಿ ಏನಾದರೂ ಮಿಥ್ಯಾಪವಾದಗಳು ಬಂದಿದ್ದರೆ ಈ ಕಥೆಯನ್ನು ಕೇಳಿ, ಈ ಶ್ಲೋಕವನ್ನು ಹೇಳಿ ಪರಿಹಾರವಾಗುತ್ತದೆ ಅನ್ನುತ್ತಾರೆ.

ಇಮಾಂ ಮಿಥ್ಯಾಭಿಶಸ್ತಿಂ ಯಃ ಕೃಷ್ಣಸ್ಯ ಸಮುದಾಹೃತಾಮ್ ।
ವೇದ ಮಿಥ್ಯಾಭಿಶಾಪಾಸ್ತಂ ನ ಸ್ಪೃಶನ್ತಿ ಕದಾಚನ ॥ (38.58 ಹರಿವಂಶಪರ್ವ)

ಸಿಂಹಃ ಪ್ರಸೇನಮವಧೀತ್ ಸಿಂಹೋ ಜಾಮ್ಬವತಾ ಹತಃ ।
ಸುಕುಮಾರಕ ಮಾ ರೋದೀಸ್ತವ ಹ್ಯೇಷ ಸ್ಯಮಂತಕಃ ॥ (38.36 ಹರಿವಂಶಪರ್ವ)

ಇದನ್ನು ಸ್ಮರಣೆ ಮಾಡಿದರೆ ಯಾವುದೇ ವಿಧವಾದಂತಹ ದೋಷಗಳು ಬರುವುದಿಲ್ಲ ಅಂತ ತಿಳಿಸಿಕೊಟ್ಟಿದ್ದಾರೆ.

ಮುಂದೆ ಈ ಅಕ್ರೂರ, ನೋಡಿ ಪರಮ ಭಗವದ್ಭಕ್ತ ಅಸುರಾವೇಶ ಅವನಿಗೆ ಆ ಸ್ಯಮಂತಕ ಮಣಿಯನ್ನು ಪಡೆಯಬೇಕು ಅಂತನ್ನುವ ಆಪೇಕ್ಷೆ, ಸತ್ಯಭಾಮಾಳನ್ನು ತನಗೆ ಕೊಟ್ಟು ಮದುವೆ ಮಾಡಿಕೊಡಬೇಕು ಅಂತ ಅವನು ಅಂದುಕೊಂಡಿದ್ದ ಕೊಡಲಿಲ್ಲ, ಸ್ಯಮಂತಕ ಮಣಿಯನ್ನೂ ಕೂಡ ಕೊಡಲಿಲ್ಲ ಸತ್ರಾಜಿತ ಅಂತ ಅವನ ಮೇಲೆ ಸಿಟ್ಟು. ಆ ಶತಧನ್ವನ ಸಹಾಯವನ್ನು ತೆಗೆದುಕೊಂಡು ಆ ಸತ್ರಾಜಿತನನ್ನು ಸಂಹಾರ ಮಾಡಿ ಆ ಮಣಿಯನ್ನು ಅಪಹಾರ ಮಾಡಿಕೊಂಡು ಹೋಗಿಬಿಟ್ಟದ್ದಾರೆ ನಾನು ಇದನ್ನು ತೆಗೆದುಕೊಂಡಿದ್ದೇನೆ ಅಂತ ನೀನು ಯಾರಿಗೂ ಹೇಳಬಾರದು ಅಂತ ಅಕ್ರೂರ ಶತಧನ್ವನಿಗೆ ಹೇಳುತ್ತಾನೆ. ಈ ಕಡೆಗೆ ಶ್ರೀಕೃಷ್ಣ ಪರಮಾತ್ಮ ಪಾಂಡವರಿಗೆ ಆ ಅರಗಿನ ಮನೆಯಲ್ಲಿ ಹಾಕಿ ಸುಟ್ಟು ಬಿಟ್ಟಿದ್ದಾರೆ ಅನ್ನುವುದು ಒಂದು ಸುಳ್ಳು ವಾರ್ತೆ ಸರ್ವಜ್ಞನಾದ ಕೃಷ್ಣನಿಗೆ ಗೊತ್ತು ಇದು ಸುಳ್ಳು ವಾರ್ತೆ ಅಂತ ಆದರೆ ಲೋಕನೀತಿಗೆ ಅನುಗುಣವಾಗಿ ಪಾಂಡವರು ಅರಗಿನ ಮನೆಯಲ್ಲಿ ಸುಟ್ಟು ಹೋಗಿದ್ದಾರೆ ಉಳಿದವರಿವರಿಗೆಲ್ಲ ಮಾತನಾಡಿಸಿಕೊಂಡು ಬರಬೇಕಲ್ಲ ಅನ್ನುವುದಕ್ಕೋಸ್ಕರ ಅಲ್ಲಿ ಬಂದಿದ್ದಾನೆ ಕೃಷ್ಣ ಪರಮಾತ್ಮ. ಅಲ್ಲಿ ಸತ್ಯಭಾಮಾ ಬಂದು ಈ ವಾರ್ತೆಯನ್ನು ಹೇಳಿದ ಕೂಡಲೇ ಪುನಃ ದ್ವಾರಕಾ ಪಟ್ಟಣಕ್ಕೆ ಬಂದಿದ್ದಾನೆ ಬಂದು ಬಲರಾಮನನ್ನು ಕರೆದುಕೊಂಡು ಆ ಶತಧನ್ವನನ್ನು ಬೆನ್ನುಹತ್ತಿ ಹೋಗಿದ್ದಾನೆ. ಶತಧನ್ವ ಸ್ವಲ್ಪಹೊತ್ತು ಹೋದಮೇಲೆ ಕುದುರೆ ಸತ್ತು ಬಿದ್ದಿದೆ ಹರಿವಂಶವನ್ನು ಸ್ಥೂಲವಾಗಿ ಓದಿದರೆ ಕೃಷ್ಣನ ಕುದುರೆಯೇ ಸತ್ತು ಬಿತ್ತೋ, ಯಾರ ಕುದುರೆ ಸತ್ತು ಬಿತ್ತು ಅಂತ ಸ್ಪಷ್ಟವಾಗಿ ಗೊತ್ತಾಗಿಲ್ಲ.

ತತಸ್ತಸ್ಯಾ ಹಯಾಯಾಸ್ತು ಶ್ರಮಾತ್ ಖೇದಾಚ್ಚ ಭಾರತ । (39.17 ಹರಿವಂಶಪರ್ವ)

ಹೆಣ್ಣು ಕುದುರೆ ಆ ಕುದುರೆಗೆ ಬಹಳ ಶ್ರಮ ಆಯಿತು ಅನ್ನುವುದಕ್ಕೆ ಕಾಲ್ನಡಿಗೆಯಿಂದ ಓಡಿದ ಅಂತ ಬರುತ್ತದೆ. ಶ್ರೀಮದಾಚಾರ್ಯರು ತಾತ್ಪರ್ಯ ನಿರ್ಣಯದಲ್ಲಿ ಹೇಳುತ್ತಾರೆ ಕೃಷ್ಣನ ಕದುರೆಗೆ ಏನು ಆಗಿರಲಿಲ್ಲ

ಶತಧನ್ವನ ಕುದುರೆ ಕೆಳಗೆ ಬಿದ್ದು ಹೋಗುತ್ತದೆ ಅವನು ಕಾಲ್ನಡಿಗೆಯಿಂದ ಓಡುತ್ತಾನೆ. ಅವನು ಕಾಲ್ನಡಿಗೆಯಿಂದ ಓಡುವಾಗ ನಾವು ಕುದುರೆಯ ಮೇಲೆ ಹೋಗುವುದು ಸರಿ ಅಲ್ಲ ಅಂತ ಕೃಷ್ಣ ಕೆಳಗೆ ಇಳಿದು ಕಾಲ್ನಡಿಗೆಯಿಂದಲೇ ಓಡಿ ಅವನನ್ನು ಹಿಡಿದುಕೊಳ್ಳುತ್ತಾನೆ ಹಿಡಿದುಕೊಂಡು ಅವನನ್ನು ಸಂಹಾರ ಮಾಡುತ್ತಾನೆ ಅಂತ ಶ್ರೀಮದಾಚಾರ್ಯರು ನಿರ್ಣಯ ಕೊಡುತ್ತಾರೆ. ಆ ರೀತಿ ಶತಧನ್ವನನ್ನು ಸಂಹಾರ ಮಾಡಿದ ತಕ್ಷಣ ಎಲ್ಲಿದೆ ಮಣಿ ನನಗೆ ಕೊಡು ಅಂತ ಬಲರಾಮ ದೇವರು ಕೇಳುತ್ತಾರೆ ಇವನ ಹತ್ತಿರ ಮಣಿ ಇಲ್ಲ ಅಂತ ಕೃಷ್ಣನಿಗೆ ಗೊತ್ತು ಆದರೆ ಇವನೇ ಅಪಹಾರ ಮಾಡಿದ್ದು ಸತ್ರಾಜಿತನನ್ನು ಸಂಹಾರ ಮಾಡಿದ್ದು ಇವನೇ ಇವನೇ ಅಪರಾಧಿ ಆದಕ್ಕಾಗಿಯೇನೆ ಇವನನ್ನು ಸಂಹಾರ ಮಾಡಿದ್ದು ಅನ್ನುವುದು ಕೃಷ್ಣನಿಗೆ ನಿರ್ಣಯ.

ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ । (2.16 ಭ ಗೀತಾ)

ಇವನು ತಪ್ಪು ಮಾಡಿದ್ದಕ್ಕೆನೇ ಇವನಿಗೆ ಶಿಕ್ಷೆ ಅಷ್ಟು ಕರಾರುವಕ್ಕಾಗಿ ಕೃಷ್ಣ ಪರಮಾತ್ಮ ನ್ಯಾಯವನ್ನು ಒದಗಿಸುತ್ತಾನೆ ಆದರೆ ನಾಟಕ ಮಾಡುತ್ತಾ ಇದ್ದಾನೆ ಅಯ್ಯೋ ಇವನಲ್ಲಿ ಮಣಿ ಇಲ್ಲವಲ್ಲ ಅಂತ. ಆಗ ಬಲರಾಮ ದೇವರಿಗೆ ಕೋಪ ಬಂತು ಮೊದಲು ಮಣಿಯನ್ನು ಹುಡುಕಿ ಇವನ ಹತ್ತಿರ ಮಣಿ ಇದೆ ಅಂತಾದರೆ ಇವನು ಕಳ್ಳ ಅಂತ ನಿರ್ಣಯ ಆಮೇಲೆ ಸಂಹಾರ ಮಾಡಬೇಕು, ಸಂಹಾರ ಮಾಡಿದ ಮೇಲೆ ಮಣಿ ಹುಡುಕುತ್ತೀಯಲ್ಲ ನೀನು ನಾನು ಇಲ್ಲಿ ಇರುವುದೇ ಇಲ್ಲ ಅಂತ ಹೇಳಿ ವಿದೇಹ ಪಟ್ಟಣಕ್ಕೆ ಹೋಗಿ ಐದು ವರ್ಷ ಅಲ್ಲಿ ಇದ್ದಾರೆ. ಇದೆಲ್ಲ ಭಗವತ್ ಸಂಕಲ್ಪವೇ ಇಲ್ಲಿ ಜೊತೆಗೇ ಇದ್ದುಬಿಟ್ಟರೆ ದುರ್ಯೋಧನ ಇಲ್ಲಿ ಬರುವುದಕ್ಕೆ ಸಂಕೋಚ ಮಾಡಿಕೊಳ್ಳುತ್ತಾನೆ ಅಂತ ಇದೊಂದು ನಿಮಿತ್ತ ಮಾಡಿ ಬಲರಾಮ ದೇವರನ್ನು ಅಲ್ಲಿ ಕಳಿಸಿದ. ಜೊತೆಗೆ ಬಲರಾಮ ದೇವರಿಗೆ ಅತೀ ಶುದ್ಧವಾದ ಭಾಗವತ ಧರ್ಮದಲ್ಲಿ ನಿರತತ್ವ ಇಲ್ಲ ಅನ್ನುವುದನ್ನು ಈ ನಿಮಿತ್ತದಿಂದ ತೋರಿಸಿದ. **'ಸ್ಯಮಂತಕಾರ್ಥೇ ರಾಮಸ್ಯ ಕೃಷ್ಣಸ್ಯ ವಿಮನಾ ಭವತ'** ಸ್ಯಮಂತಕ ಮಣಿ ನಿಮಿತ್ತದಿಂದ ಕೃಷ್ಣನ ವಿಷಯದಲ್ಲಿ ಸ್ವಲ್ಪ ತಪ್ಪು ತಿಳುವಳಿಕೆ ಮಾಡಿಕೊಂಡೆನಲ್ಲ.

ಸತ್ಯವ್ರತಂ ಸತ್ಯಪರಂ ತ್ರಿಸತ್ಯಂ ಸತ್ಯಸ್ಯ ಯೋನಿಂ ನಿಹಿತಂ ಚ ಸತ್ಯೇ ।
ಸತ್ಯಸ್ಯ ಸತ್ಯಮುತ ಸತ್ಯನೇತ್ರಂ ಸತ್ಯಾತ್ಮಕಂ ತ್ವಾಂ ಶರಣಂ ಪ್ರಪನ್ನಾಃ ॥ (10.1.3.27 ಭಾಗವತ)

ಅಂತಹ ಸತ್ಯವಾದ ಜಗತ್ತಿನ ನಿರ್ಮಾಣಾದಿಗಳನ್ನು ಮಾಡುವ ಸತ್ಯವಾದ ವೇದಗಳಿಂದ ಪ್ರತಿಪಾದ್ಯನಾದಂತಹ ಸಕಲ ಜಗತ್ ನಿಯಾಮಕನಾದ ಪರಮ ಸತ್ಯಮೂರ್ತಿಯಾದ ಭಗವಂತನಲ್ಲಿ ಅಸತ್ಯದ ಶಂಕೆಯನ್ನು ಮಾಡಿದ್ದರಿಂದ ಅವರ ಭಾಗವತ ಧರ್ಮದಲ್ಲಿ ಸ್ವಲ್ಪ ನ್ಯೂನತೆ ಬಂತು ಅನ್ನುತಾರೆ. ಸರಿ, ಅವರು ಆಚೆಗೆ ಹೋಗಿದ್ದಾರೆ ದುರ್ಯೋಧನ ಇದೇ ಒಂದು ಸದಾವಕಾಶ ಅಂತ ಅವರ ಹತ್ತಿರ ಗದಾ ಯುದ್ಧವನ್ನು ಕಲಿತಿದ್ದಾನೆ, ಭೀಮಸೇನ ದೇವರೂ ಬಂದಿದ್ದಾರೆ. ಭೀಮಸೇನ ದೇವರು ಗದಾ ಯುದ್ಧ ಕಲಿಯುವುದಕ್ಕೆ ಕೃಷ್ಣನ ಹತ್ತಿರ ಬರುವುದು ಬಿಟ್ಟು ಬಲರಾಮ ದೇವರ ಹತ್ತಿರ ಯಾಕೆ ಹೋದರು ಅಂದರೆ ಅದಕ್ಕೆ ಹೇಳುತ್ತಾರೆ ಗದಾ ಯುದ್ಧ ಅಂದರೆ ಅದು ಪುಸ್ತಕ ಹಿಡಿದುಕೊಂಡು ಕಲಿಯುವುದು ಅಲ್ಲ ಅದು ಗುರುಗಳ ಜೊತೆಗೇನೆ ಯುದ್ಧ ಮಾಡಬೇಕಾಗುತ್ತದೆ. ಕೃಷ್ಣನ ಮೇಲೆ ಆ ಒಂದು ಯುದ್ಧದ ಪ್ರಸಂಗದೊಳಗಾದರೂ ಕೈ ಎತ್ತಬೇಕಲ್ಲ ಅಷ್ಟೂ ನಾನು ಕೃಷ್ಣನ ವಿರೋಧವನ್ನು ಮಾಡಬಾರದು ಅನ್ನುವುದಕ್ಕೋಸ್ಕರ ಅಲ್ಲಿ ಮಾಡಲಿಲ್ಲ. ಬಲರಾಮ ದೇವರಲ್ಲಿಯೂ ಇದೆ ಶುಕ್ಲಕೇಶಾವೇಶ ಇದೆ ಆ ಶುಕ್ಲಕೇಶಾವೇಶದ ಅಭಿವ್ಯಕ್ತಿ ಆದಾಗ ಸುಮ್ಮನೆ ಇರುತ್ತಾ ಇದ್ದರು ಬಲರಾಮ ದೇವರ ಮೇಲೂ ಗದಾ ಎತ್ತಿ ಪ್ರಹಾರ ಮಾಡುತ್ತ ಇರಲಿಲ್ಲವಂತೆ ಭೀಮಸೇನ ದೇವರು. ಆ ಶುಕ್ಲಕೇಶ ಅನಭಿವ್ಯಕ್ತವಾದಾಗ ಪುನಃ ಅವರಲ್ಲಿ ಪ್ರತಿಯಾಗಿ ಗದಾ

ಯುದ್ಧವನ್ನ ಕಲಿಯುವುದಕ್ಕೆ ಗದೆಯನ್ನು ಎತ್ತುತ್ತಾ ಇದ್ದರು ಅಂತ ಹೇಳುತ್ತಾರೆ. ಈ ರೀತಿ ಬಲರಾಮ ದೇವರು ಆಚೆಗೆ ಹೋಗಿದ್ದಾರೆ.

ಈ ಕಡೆಗೆ ಶ್ರೀಕೃಷ್ಣ ಪರಮಾತ್ಮ ಈ ಅಕ್ರೂರನಿಗೆ ತನಗೇ ಮನಸ್ಸಿಗೆ ಒಂದು ರೀತಿ ಸಂಕೋಚವಾಗಿದೆ ಇಷ್ಟೆಲ್ಲಾ ತಪ್ಪು ಮಾಡಿ ಹೇಗೆ ಕೃಷ್ಣನ ಎದುರಿಗೆ ಓಡಾಡುವುದು, ಮುಖ ತೋರಿಸುವುದು ಅಂತ ಮುಖ ತೋರಿಸಲಿಕ್ಕೆ ಆಗುತ್ತಾ ಇಲ್ಲ ಅವನಿಗೆ. ಅವನು ಆಚೆಗೆ ಹೋದದ್ದಕ್ಕೆ ನೋಡಿ ಇವನ ಅಪ್ಪ ಶ್ವಫಲ್ಕನು ಹಾಗೆ ಅಕ್ರೂರನು ಹಾಗೆ ಇವರು ಎಲ್ಲಿರುತ್ತಾರೋ ಅಲ್ಲಿ ಸುವೃಷ್ಟಿ ಇವನಿಲ್ಲ ಅನ್ನುವುದಕ್ಕೆ ಅನಾವೃಷ್ಟಿಯಾಗಿದೆ ಅದಕ್ಕೆ ಎಲ್ಲ ವೃಷ್ಟಿಗಳು, ಅಂಧಕರು ಅವನನ್ನು ಮನಸ್ಸು ಒಲಿಸಿ ನೀನೇನು ಚಿಂತೆ ಮಾಡಬೇಡಪ್ಪಾ ನಿನಗೆ ಯಾರೂ ಏನೂ ಅನ್ನುವುದಿಲ್ಲ ಬಾ ಅಂತ ಕರೆದುಕೊಂಡು ಬಂದಾಗ ಮತ್ತೆ ಸುವೃಷ್ಟಿ ಆಯಿತು ಅಂತ ಹೇಳುತ್ತಾರೆ. ಇದರ ಅರ್ಥ ಅವನು ಮಾಡಿದ ಧರ್ಮ ಅವನು ಸ್ವತಃ ಸಜ್ಜನ ಭಗವದ್ಭಕ್ತ ಏನೋ ಅಸುರಾವೇಶದಿಂದ ತಪ್ಪು ಮಾಡಿದ್ದಾನೆ ಆದರೆ ಅವನ ನಿಜವಾದ ಭಕ್ತಿಯ ಧರ್ಮದ ಮಹಿಮೆಯನ್ನು ತೋರಿಸುವುದಕ್ಕೆ ಮಾಡಿದ್ದು ಇದು ದೇವರು ದೇವರೇ ವೃಷ್ಟಿಯನ್ನು ಮಾಡಲಿಕ್ಕೆ ಬರುತ್ತಿತ್ತಲ್ಲ.

ಆದರೂ ಕೂಡ ಋಷಭನಾಮಕ ಆ ಪರಮಾತ್ಮನ ಆಳ್ವಿಕೆಯಲ್ಲಿ ಯಜ್ಞನಾಮಕನಾದ ಪರಮಾತ್ಮ ಅವನೇ ಇಂದ್ರ, ಅವನೇ ಋಷಭ ಆದರೆ ಆ ಸಂದರ್ಭದಲ್ಲಿ ಅವನು ಮಳೆ ಸುರಿಸದೇ ಇದ್ದಾಗ ಋಷಭನಾಮಕ ಪರಮಾತ್ಮ ನೀನು ಬಿಟ್ಟರೆ ಬಿಡು ನಾನೇ ಮಳೆ ಸುರಿಸುಕೊಳ್ಳುತ್ತೇನೆ ಅಂತ ಸುರಿಸಿದಂತಹ ಮಹಾನುಭಾವ ಶ್ರೀಮದ್ಭಾಗವತದಲ್ಲಿ ಕಥೆ ಕೇಳುತ್ತೇವೆ ಎರಡೂ ಒಂದೇ ರೂಪಗಳು. ಹೇಳುವ ತಾತ್ಪರ್ಯ ಪರಮಾತ್ಮನಿಗೆ ಇನ್ಯಾರ ಅವಶ್ಯಕತೆಯೂ ಇಲ್ಲ ತಾನೇ ಸ್ವತಃ ವಾಯು ದೇವರನ್ನು, ಇಂದ್ರಾದಿ ದೇವತೆಗಳನ್ನು ನಿಮಿತ್ತ ಮಾಡಿಕೊಂಡು ಮಳೆಯನ್ನು ಸುರಿಸುತ್ತಾನೆ ಅಂತಹ ಪರಮಾತ್ಮನಿಗೆ ಅಕ್ರೂರನ ಅವಶ್ಯಕತೆ ಇರಲಿಲ್ಲ. ಸರಿ, ಆನಂತರದಲ್ಲಿ ಅಕ್ರೂರ ಬಂದಮೇಲೆ ಅವನೂ ಕೂಡ ಕೃಷ್ಣನಿಗೆ ಶರಣಾಗತನಾಗಿದ್ದಾನೆ ತನ್ನ ತಂಗಿ ಅಂತ ಹೇಳುತ್ತಾರೆ, ತಂಗಿಯ ಮಗಳು ಅಂತ ಹೇಳುತ್ತಾರೆ ಅಂತೂ ತಂಗಿಯನ್ನು ಕೊಟ್ಟು ಮದುವೆ ಮಾಡಿದ್ದಾನೆ ಅಂತ ಹೇಳುತ್ತಾರೆ. ಆ ರತ್ನವನ್ನು ಕೊಡು ಅಂತ ಕೃಷ್ಣ ಕೇಳಿದ್ದಾನೆ ಇಸಿದುಕೊಂಡು ಮತ್ತೆ ಅಕ್ರೂರನಿಗೆ ಕೊಟ್ಟು ಆ ರತ್ನವನ್ನ ನೀನೇ ಇಟ್ಟುಕೋ ನಿತ್ಯದಲ್ಲಿ ಪೂಜೆ ಮಾಡು, ಅದರಿಂದೇನು ಬಂಗಾರ ಬರುತ್ತೋ ಆ ಬಂಗಾರವನ್ನು ಮಾತ್ರ ತಂದು ನನಗೆ ಕೊಡಬೇಕು ಅಂತ ಕೃಷ್ಣ ಪರಮಾತ್ಮ ಹೇಳಿದ್ದಾನೆ ಅಂತ ಹೇಳುತ್ತಾರೆ.

ಈ ರೀತಿ ಶ್ರೀಕೃಷ್ಣ ಪರಮಾತ್ಮ ಅಕ್ರೂರ ಮಾಡಿದ ಅಪರಾಧವನ್ನು ಕ್ಷಮಿಸಿ ಅವನಿಗೆ ಅನುಗ್ರಹವನ್ನು ಮಾಡಿ ಆ ರತ್ನದ ಮೂಲಕ ಅದರ ಪೂಜೆಯನ್ನು ಶುದ್ಧವಾದ ಸಚ್ಚಾರಿತ್ರ ಸಂಪನ್ನರಾಗಿ ಸದಾಚಾರಿಗಳಾಗಿ ಭಕ್ತಿ ಶ್ರದ್ಧೆಗಳಿಂದ ಅದರ ಪೂಜೆಯನ್ನು ಮಾಡಿದರೆ ಸಕಲ ಇಷ್ಟಾರ್ಥಗಳು ಸಿಗುತ್ತದೆ ಅನ್ನುವುದನ್ನು ಜಗತ್ತಿಗೆಲ್ಲ ತೋರಿಸಿಕೊಟ್ಟು ಎಲ್ಲ ಯಾದವರಿಗೂ ಅನುಗ್ರಹ ಮಾಡಿದ್ದಾನೆ, ವಿಶೇಷವಾಗಿ ಅಕ್ರೂರನಿಗೂ ಕೂಡ ಅನುಗ್ರಹವನ್ನು ಮಾಡಿದ್ದಾನೆ ಎಂಬುದಾಗಿ ತಿಳಿಸಿಕೊಡುತ್ತಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

॥ ಶ್ರೀ ದಿಗ್ವಿಜಯ ರಾಮೋ ವಿಜಯತೇ ॥

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಹರಿವಂಶಪರ್ವ-13

* * *

ಶ್ರೀಕೃಷ್ಣ ಪರಮಾತ್ಮನ ಪ್ರಾದುರ್ಭಾವದ ಹಿನ್ನೆಲೆಯನ್ನು ತಿಳಿಸಿಕೊಡುವುದಕ್ಕೋಸ್ಕರ ಯದುವಂಶದ ವರ್ಣನೆಯನ್ನು ವೈಶಂಪಾಯನರು ಮಾಡಿದ್ದಾರೆ ಜನಮೇಜಯನ ಮುಂದೆ. ಜನಮೇಜಯ ಸುದೀರ್ಘವಾದ ಒಂದು ಪ್ರಶ್ನೆಯನ್ನು ಕೇಳುತ್ತಾ ಇದ್ದಾನೆ ಜನಮೇಜಯ ಪ್ರಶ್ನೆ ಕೇಳುವುದರ ಹಿನ್ನೆಲೆಯಲ್ಲಿ ಅವನಿಗಿರುವಂತಹ ಜ್ಞಾನ ಎಷ್ಟು ಅದ್ಭುತವಾದದ್ದು ಅನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬಹುದು. ಪರಮ ಭಗವದ್ಭಕ್ತನಾದ ಪರೀಕ್ಷಿತ್ ರಾಜನ ಮಗ ಆ ಪರೀಕ್ಷಿತ್ ರಾಜನ ಒಂದು ವಿಶೇಷವಾದ ಉಪದೇಶ ಹಾಗೂ ಕುಲಗುರುಗಳ ವಿಶೇಷವಾದಂತಹ ಉಪದೇಶದ ಬಲದಿಂದ ಎಷ್ಟು ಶ್ರೇಷ್ಠವಾದ ಪರಿಜ್ಞಾನವನ್ನು ಪಡೆದಿದ್ದಾನೆ. ಪ್ರಶ್ನೆ ಕೇಳುತ್ತಾನೆ ಅಂದರೆ ಏನೋ ಗೊತ್ತಿಲ್ಲದೆ ಪ್ರಶ್ನೆ ಕೇಳುವುದಲ್ಲ ಎಲ್ಲವನ್ನು ತಿಳಿದು ಇನ್ನಷ್ಟು ವಿಶೇಷವಾಗಿ ತಿಳಿಯುವುದಕ್ಕಾಗಿ ಜೊತೆಗೆ ಮುಂದೆ ಬರುವ ಜನರಿಗೆ ತಿಳಿಸುವುದಕ್ಕಾಗಿ ಪ್ರಶ್ನೆಯನ್ನು ಕೇಳುತ್ತಾ ಇದ್ದಾನೆ.

ಜಾನಂತಿ ಪೂರ್ವ ರಾಜಾನಃ ದೇವರ್ಷಯಃ ತಥೈವ ಚ ।

ತಥಾಪಿ ಧರ್ಮಾನ್ ಪೃಚ್ಛಂತಿ ವಾರ್ತಾಯೈ ಪೂರ್ವವಿತ್ತಯೇ ।

ಆ ಪ್ರಶ್ನೋತ್ತರ ರೂಪದಲ್ಲಿ ಚೆನ್ನಾಗಿ ಆ ತತ್ವಗಳ ಪ್ರಸಿದ್ಧಿಯಾಗಬೇಕು ಅನ್ನುವ ದೃಷ್ಟಿಯಲ್ಲಿ ಪ್ರಶ್ನೆಗಳನ್ನು ಕೇಳುತ್ತಾರೆ, ವಿಶೇಷ ಜ್ಞಾನಕ್ಕಾಗಿಯೂ ಕೆಲವೊಂದು ಪ್ರಸಂಗಗಳಲ್ಲಿ ಪ್ರಶ್ನೆಗಳನ್ನು ಕೇಳುತ್ತಾರೆ ಎಂಬುದಾಗಿ ಶ್ರೀಮದಾಚಾರ್ಯರು ತಿಳಿಸುತ್ತಾರೆ. ಅಂತಹ ಮಹಾನುಭಾವನಾದ ಜನಮೇಜಯ ಪ್ರಶ್ನೆ ಕೇಳುತ್ತಾನೆ ಎಂತಹ ಸ್ವಾಮಿ ದೇವರು, ಜಗನ್ನಿಯಾಮಕ ಜಗದೊಡೆಯ ಸರ್ವೋತ್ತಮನಾದ ವ್ಯಕ್ತಿ, ಸಮಗ್ರವಾದ ಬ್ರಹ್ಮಾಂಡದ ಸಕಲ ತತ್ವಗಳ ಸೃಷ್ಟಿಯನ್ನು ಮಾಡಿದವ, ಸ್ಥಿತಿ ಲಯ ನಿಯಮನ, ಜ್ಞಾನ-ಅಜ್ಞಾನ, ಬಂಧ ಮೋಕ್ಷಗಳೆಲ್ಲ ಯಾವ ಪರಮಾತ್ಮನಿಂದ ಅಂತಹ ಪರಮಾತ್ಮ ನಾನಾ ಅವತಾರಗಳನ್ನು ಸ್ವೀಕಾರ ಮಾಡುತ್ತಾನಲ್ಲ ಯಾಕೆ ಮಾಡುತ್ತಾನೆ. ವರಾಹಾವತಾರ, ವರಾಹ ಸೂಕರ ಅಂತಹ ಒಂದು ಸಾಮಾನ್ಯವಾದ ಪ್ರಾಣಿ, ಲೋಕದಲ್ಲಿ ಆ ವರಾಹವನ್ನ ಅಷ್ಟು ಪ್ರಶಸ್ತವಾದ ಪ್ರಾಣಿ ಅಂತ ಅಂದುಕೊಳ್ಳುವುದಿಲ್ಲ ಅಂತಹ ವರಾಹದ ರೂಪವನ್ನ ಸ್ವೀಕಾರ ಮಾಡುವ ಅವಶ್ಯಕತೆ ದೇವರಿಗೆ ಏನಿತ್ತು. ಆ ವರಾಹಾವತಾರ ಅದಲ್ಲದೇ ಇನ್ನನೇಕ ಅವತಾರಗಳನ್ನು ಸ್ವೀಕಾರ ಮಾಡಿದ್ದಾನೆ ಶ್ರೀಕೃಷ್ಣನಾಗಿಯೂ ಅವತಾರ ಮಾಡಿದ

ಮನುಷ್ಯ ಯೋನಿಯಲ್ಲಿ. ದೇವಾಧಿದೇವ ಅನಾದಿನಿತ್ಯ, ನಿತ್ಯಮುಕ್ತ, ಸರ್ವಜ್ಞ ಶಿಖಾಮಣಿ, ನಿರ್ದೋಷ, ಸತ್ವ ರಜೋ ತಮಸ್ಸುಗಳನ್ನು ಮೀರಿ ಇದ್ದಂತಹ ಸ್ವಾಮಿ ಯಾಕೆ ಈ ಮನುಷ್ಯ ಲೋಕದಲ್ಲಿ ಅವತಾರ ಮಾಡಬೇಕಾಯಿತು.

ಗೋಪಾಯನಂ ಯಃ ಕುರುತೇ ಜಗತಃ ಸಾರ್ವಲೌಕಿಕಮ್ ।

ಸ ಕಥಂ ಗಾಂ ಗತೋ ದೇವೋ ವಿಷ್ಣುರ್ಗೋಪತ್ವಮಾಗತಃ ॥ (40.12 ಹರಿವಂಶಪರ್ವ)

ಯಾವ ಪರಮಾತ್ಮ ಜಗತ್ತಿನ ಗೋಪಾಯನವನ್ನು ಮಾಡುತ್ತಾನೆ, ರಕ್ಷಣೆಯನ್ನು ಮಾಡುತ್ತಾನೆ ಅವನು ಗೋಪನೇಕಾದ ಗೋಪಾಲಕನಾಗಿ ಏಕೆ ಹುಟ್ಟಿದ ಅಂತ. ಪ್ರಶ್ನೆ ಹೇಗಿದೆ ನೋಡಿ ಯಾವ ಭಗವಂತ ಗೋಪಾಯನ ಮಾಡುವ ವ್ಯಕ್ತಿ ಇಡೀ ಜಗತ್ ಪಾಲಕ ಅಂತಹ ಪರಮಾತ್ಮ ಬರೀ ಗೋ ಪಾಲಕನಾಗಿ ಅವತಾರ ಮಾಡುವುದಕ್ಕೆ ಕಾರಣ ಏನಿತ್ತು. ಯಾವ ಭಗವಂತ ಸಮಗ್ರವಾದಂತಹ ಎಲ್ಲಾ ತತ್ವಗಳನ್ನು ಪ್ರಲಯ ಕಾಲದಲ್ಲಿ ತನ್ನ ಉದರದಲ್ಲಿ ಹಾಕಿಕೊಂಡು ಅದನ್ನೇ ಮತ್ತೆ ಪುನಃ ಹೊರಗೆ ತೆಗೆದು ಈ ಸಮಸ್ತವಾದ ಜಗತ್ತಿನ ಸೃಷ್ಟಿಯನ್ನು ಮಾಡುತ್ತಾನೆ ಅಂತಹ ಪರಮಾತ್ಮ ತಾನು ಇನ್ನೊಬ್ಬರ ಗರ್ಭದಲ್ಲಿ ದೇವಕಿಯ ಗರ್ಭದಲ್ಲಿ ಪ್ರವೇಶ ಮಾಡುವ ಅವಶ್ಯಕತೆ ಏನಿತ್ತು. ಯಾವ ದೇವರ ಗರ್ಭದಲ್ಲಿ ಇಡೀ ಪ್ರಪಂಚ ಇದೆ ಪ್ರಲಯ ಕಾಲದಲ್ಲಿ ಮತ್ತೆ ಸೃಷ್ಟಿ ಕಾಲದಲ್ಲಿ ಹೊರಗೆ ಬರುತ್ತೆ ಅಂತಹ ಪರಮಾತ್ಮನಿಗೆ ಗರ್ಭವಾಸ ಏಕೆ ಇದೆಲ್ಲ ಯಾಕೆ ಮಾಡುತ್ತಾನೆ ಪರಮಾತ್ಮ. ನರಸಿಂಹಾವತಾರ, ವಾಮನಾವತಾರ ಅನೇಕ ಅವತಾರಗಳನ್ನು ತೆಗೆದುಕೊಂಡು ಇಂದ್ರಾದಿ ದೇವತೆಗಳನ್ನು ರಕ್ಷಣೆ ಮಾಡಿದಂತಹ ದೇವೋತ್ತಮನಾದ ಪರಮಾತ್ಮ ಮನುಷ್ಯ ಲೋಕದಲ್ಲಿ ಯಾಕೆ ಅವತಾರ ಮಾಡಿದ. ಯಾವ ಪರಮಾತ್ಮನನ್ನು ಪುರುಷಸೂಕ್ತ **'ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್'** ಎಂಬುದಾಗಿ ವರ್ಣನೆ ಮಾಡುತ್ತದೆ, ಅನಂತ ಶಿರಸ್ಸು, ಅನಂತ ಬಾಹುಗಳು, ಅನಂತ ಹಸ್ತಗಳು, ಅನಂತ ನೇತ್ರಗಳಿಂದ ಕೂಡಿದಂತಹ ಸ್ವಾಮಿ ಸಾಮಾನ್ಯ ಮಾನವರಂತೆ ತೋರುವ ಈ ದೇಹವನ್ನು ಸ್ವೀಕಾರ ಮಾಡಿ ಯಾಕೆ ಅವತಾರ ಮಾಡಿದ ಹೀಗೆಲ್ಲ ಅನೇಕ ಪ್ರಶ್ನೆಗಳನ್ನು ಕೇಳುತ್ತಾನೆ. ಯಾವ ಪರಮಾತ್ಮನಿಂದ ಬ್ರಹ್ಮ ದೇವರು ನಾಭಿಕಮಲದಲ್ಲಿ ಉತ್ಪನ್ನರಾಗಿದ್ದಾರೆ ಅಂತಹ ಪರಮಾತ್ಮ ಸಕಲ ಅಸುರರನ್ನು ಸಂಹಾರ ಮಾಡುವ ಸಾಮರ್ಥ್ಯ ಇದೆ ಭಗವಂತನಿಗೆ ತಾನು ಕುಳಿತಲ್ಲಿಯೇ ಇಚ್ಛೆ ಮಾಡುವ ಮಾತ್ರದಿಂದ ಭೂಮಿಯಲ್ಲಿ ಅವತಾರ ಮಾಡಬೇಕಾದ ಅಗತ್ಯ ಇಲ್ಲ. ಎಲ್ಲಾ ಯಜ್ಞದ ಸಂಭಾರಗಳನ್ನು ತನ್ನ ದೇಹದಿಂದಲೇ ಸೃಷ್ಟಿ ಮಾಡಿದಂತಹ ಸ್ವಾಮಿ, ಸಕಲ ಯಜ್ಞಗಳಿಗೆ ಪ್ರವರ್ತಕ, ಸಕಲ ವೇದಗಳಿಗೆ ಪ್ರವರ್ತಕ, ಮೂರು ಲೋಕಗಳು, ಮೂರು ವೇದಗಳು, ಸತ್ವ ರಜ ಸ್ತಮೋ ಗುಣಗಳು ಮೂರು, ತ್ರಿವಿಧವಾದ ಕರ್ಮಗಳು ಸಾತ್ವಿಕ, ರಾಜಸ, ತಾಮಸ ಕರ್ಮಗಳು ಎಲ್ಲದಕ್ಕೂ ಪ್ರೇರಕನಾಗಿ ಇರುವಂತಹ ಸ್ವಾಮಿ **'ತ್ರ್ಯಧೀಶಃ'**.

ಕ್ಷೇಮಂ ವಿಧಾಸ್ಯತಿ ಸ ನೋ ಭಗವಾನ್ ತ್ರ್ಯಧೀಶಃ ।

ತ್ರಾತಾಸ್ಮದೀಯ ವಿಮೃಶೇನ ಕಿಯಾನಿಹಾರ್ಥಃ ॥

ಆ **'ತ್ರ್ಯಧೀಶಃ'** ಅನ್ನುವ ಶ್ರೀಮದ್ಭಾಗವತದಲ್ಲಿ ಬಂದಂತಹ ಬ್ರಹ್ಮ ದೇವರು ಪ್ರಯೋಗ ಮಾಡಿದ ಆ ಶಬ್ದಕ್ಕೆ ಒಂದರ್ಥದಲ್ಲಿ ಹರಿವಂಶದಿಂದ ನಾವು ವಿವರಣೆಯನ್ನು ತಿಳಿದುಕೊಳ್ಳಬಹುದು, ಭಗವಂತ ಮೂರಕ್ಕೆ ಅಧೀಶ ಅಂತ. ಅ ಊ ಮ ಎಂಬ ಮೂರು ಅಕ್ಷರಗಳಿಂದ ಕೂಡಿದ ಓಂಕಾರಕ್ಕೆ ನಿಯಾಮಕ ಓಂಕಾರ ಪ್ರತಿಪಾದ್ಯ, ಮೂರು ಲೋಕಗಳಿಗೆ ನಿಯಾಮಕ, ಮೂರು ವೇದಗಳಿಂದ ಪ್ರತಿಪಾದ್ಯ, ಮೂರು ಅಗ್ನಿಗಳಿಗೆ ಹಾಗೂ ಮೂರು ಗುಣಗಳಿಗೆ ತ್ರಿವಿಧವಾದ ಅಪಾಯಗಳು, ತ್ರಿವಿಧವಾದ ಕರ್ಮಗಳು ಎಲ್ಲದಕ್ಕೂ ಪ್ರೇರಕನಾದಂತಹ ಆ ಸ್ವಾಮಿ ಯಾಕೆ ಅವತಾರ

ಮಾಡಿದ. ಎಲ್ಲಾ ಭೂತಗಳ ಗುಣಗಳು ಪೃಥ್ವಿ, ಆಕಾಶದಲ್ಲಿ ಶಬ್ದ, ವಾಯುವಿನಲ್ಲಿ ಶಬ್ದ ಸ್ಪರ್ಶ, ತೇಜಸ್ಸಿನಲ್ಲಿ ಶಬ್ದ ಸ್ಪರ್ಶ ರೂಪ, ನೀರಿನಲ್ಲಿ ಶಬ್ದ ಸ್ಪರ್ಶ ರೂಪ ರಸ, ಪೃಥ್ವಿಯಲ್ಲಿ ಶಬ್ದ ಸ್ಪರ್ಶ ರೂಪ ರಸ ಗಂಧಗಳು ಹೀಗೆ ಆ ಆ ಭೂತಗಳಲ್ಲಿ ಆ ಆ ಗುಣಗಳನ್ನು ಸೃಷ್ಟಿ ಮಾಡಿದವ ಅದರ ನಿಯಮನವನ್ನು ಮಾಡುವಂತಹ ಸ್ವಾಮಿ ಪರಮಾತ್ಮ. ಇಂತಹ ಭಗವಂತ ನಾಲ್ಕು ವರ್ಣಗಳು, ನಾಲ್ಕು ವಿದ್ಯೆಗಳು, ನಾಲ್ಕು ತರಹದ ಋತ್ವಿಜರು ಇವರೆಲ್ಲರನ್ನು ನಿಯಮನ ಮಾಡುವಂತಹ ಸ್ವಾಮಿ ಸಕಲ ವೇದಗಳು ಪರಮಾತ್ಮನನ್ನು ಕೊಂಡಾಡುತ್ತೆ.

ನಾರಾಯಣಪರಾ ವೇದಾ ನಾರಾಯಣಪರಾಃ ಕ್ರಿಯಾಃ ॥ (40.41 ಹರಿವಂಶಪರ್ವ)

ಎಲ್ಲಾ ವೇದಗಳು ಭಗವಂತನ ಮಹಿಮೆಯನ್ನು ಕೊಂಡಾಡುತ್ತೆ, ಎಲ್ಲ ಯಜ್ಞಾದಿ ಕ್ರಿಯೆಗಳು ಆ ಭಗವಂತನ ಪ್ರೀತಿಗಾಗಿ ಇವೆ, ಎಲ್ಲ ಧರ್ಮಗಳ ಉದ್ದೇಶ್ಯ ಅವನೇ, ಎಲ್ಲರಿಗೂ ಕೊನೆಗೆ ಗತಿಯನ್ನು ಕೊಡುವವನು ಅವನು, ತಪಸ್ಸು ಮಾಡುವುದು ಅವನಿಗಾಗಿ, ಸತ್ಯ ನುಡಿಯುವುದು ಅವನಿಗಾಗಿ.

ನಾರಾಯಣಂಪರಂ ಸತ್ಯಂ ನಾರಾಯಣಂಪರಂ ತಪಃ ॥ (40.42 ಹರಿವಂಶಪರ್ವ)

ಮೋಕ್ಷವನ್ನು ಕೊಡುವವನು ಶ್ರೀಮನ್ನಾರಾಯಣ ಇಂತಹ ಸರ್ವೋತ್ತಮನಾದಂತಹ ಸ್ವಾಮಿ ಆ ಭಗವಂತ ಇಲ್ಲಿ ಅವತಾರ ಮಾಡುವುದಕ್ಕೆ ಕಾರಣ ಏನಿತ್ತು. ಪರಮ ಪವಿತ್ರನಾದವನು **'ಮಂಗಲಾನಾಂಚ ಮಂಗಲಂ'** ಸೌಮ್ಯ ವಸ್ತುಗಳಲ್ಲಿ ಅತ್ಯಂತ ಸೌಮ್ಯನಾದ ಚಂದ್ರ, ಭಾರೀ ತೇಜೋಮಯವಾದ ವಸ್ತುಗಳಲ್ಲಿ ಅಗ್ನಿ, ಎಲ್ಲ ಮಾನವರಲ್ಲಿ ಮನಸ್ಸನ್ನು ಪ್ರಚೋದನೆ ಮಾಡುವಂತಹ ತಪಸ್ವಿಗಳಲ್ಲಿ ತಪಸ್ಸು, ವಿನೀತರಲ್ಲಿ ವಿನಯ, ತೇಜಸ್ವಿಗಳಲ್ಲಿ ತೇಜಸ್ಸು ಹೀಗೆ ಆ ಆ ವಸ್ತುಗಳಲ್ಲಿ ಯಾವುದು ಶ್ರೇಷ್ಠವಾದ ಗುಣಗಳೋ ಅವುಗಳೆಲ್ಲವನ್ನು ನಿಯಮನ ಮಾಡುವ ತನ್ನ ವಿಶಿಷ್ಟವಾದ ವಿಭೂತಿ ರೂಪವನ್ನು ಅಲ್ಲಲ್ಲಿ ಇಟ್ಟಂತಹ ಸ್ವಾಮಿ ಮತ್ತೇನು ಪ್ರತ್ಯೇಕವಾದ ಅವತಾರ ಮಾಡುವ ಅವಶ್ಯಕತೆ ಇತ್ತು ಆ ಪರಮಾತ್ಮನಿಗೆ. ಭಗವಂತ ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ **'ದೇವಾ ಹುತಾಶನಪ್ರಾಣಾಃ'**[1] ಆ ಅಗ್ನಿ ಇಂದಲೇ ಆಹುತಿಯನ್ನು ಪಡೆದು ದೇವತೆಗಳೆಲ್ಲ ತಾವು ಪುಷ್ಟಿಯನ್ನು ಪಡೀತಾರೆ ಅಂತಹ ಅಗ್ನಿಗೂ ಶಕ್ತಿಯನ್ನು ಕೊಡುವವನು ಪರಮಾತ್ಮ. ಆ ಅಗ್ನಿ ದ್ವಾರಾ ಬಂದಂತಹದ್ದು ಜಲ ಅದರಿಂದ ರಕ್ತ, ರಕ್ತದಿಂದ ಮಾಂಸ, ಮಾಂಸದಿಂದ ಮೇದಸ್ಸು, ಮೇದಸ್ಸಿನಿಂದ ಅಸ್ಥಿಗಳು, ಅಸ್ಥಿಗಳಿಂದ ಮಜ್ಜಾ, ಮಜ್ಜಾದಿಂದ ಶುಕ್ರಧಾತು, ಅಗ್ನಿಯಿಂದ ಶೋಣಿತ ಆ ಶುಕ್ರಶೋಣಿತ ಸಂಬಂಧದಿಂದ ಸಂತಾನದ ಉತ್ಪತ್ತಿ. ಹಾಗಾದರೆ ಸೋಮ ಹಾಗೂ ಅಗ್ನಿ ಶುಕ್ರಶೋಣಿತ ನಿಯಾಮಕರಾಗಿ ಸಂತಾನದ ಉತ್ಪತ್ತಿಗೆ ಮುಖ್ಯ ಕಾರಣರಾಗಿರುತ್ತಾರೆ ಅನ್ನುವುದಕ್ಕೋಸ್ಕರ ಅವರು ಇಡೀ ಜಗತ್ತಿನ ಈ ಒಂದು ಸೃಷ್ಟಿಯ ಕಾರ್ಯದಲ್ಲಿ ಸೇವಕರಾಗಿ ಇರುತ್ತಾರೆ ಪರಮಾತ್ಮನಿಗೆ.

'ಹ್ಯೇತದಗ್ನೀಷೋಮಾಕತ್ಮಕಂ ಜಗತ್'[2] ಈ ಜಗತ್ತು ಅಗ್ನಿ ಹಾಗೂ ಸೋಮ ಎಂಬ ದೇವತೆಯ ಅನುಗ್ರಹದಿಂದ ನಡೆದಿದೆ ವಿಶೇಷವಾಗಿ ಕಫ ವರ್ಗದಲ್ಲಿ ಶುಕ್ರ, ಪಿತ್ತ ವರ್ಗದಲ್ಲಿ ಶೋಣಿತ, ಕಫಕ್ಕೆ ನಿಯಾಮಕನಾಗಿ ಸೋಮ, ಪಿತ್ತಕ್ಕೆ ನಿಯಾಮಕನಾಗಿ ಅಗ್ನಿ ಇರುತ್ತಾನೆ ಮನಸ್ಸಿಗೆ ನಿಯಾಮಕನಾಗಿ ಪ್ರಜಾಪತಿ ಇವರಿಂದ ಈ ಜಗತ್ತಿನ ಸೃಷ್ಟಿಯಾಗುತ್ತದೆ. ಇಂತಹ ಇಡೀ ಜಗತ್ತಿನ ಸೃಷ್ಟಿಗೆ ಅಗ್ನಿ ಸೋಮರನ್ನು ನಿಮಿತ್ತ ಮಾಡಿ ಗರ್ಭಧಾರಣೆಯನ್ನು ಮಾಡಿಸಿ ಆ ಗರ್ಭದ ಪ್ರವೃದ್ಧಿಯನ್ನು ಮಾಡಿ ಸುರಕ್ಷಿತವಾಗಿ ಗರ್ಭದಲ್ಲಿರುವ ಜೀವ ಹೊರಗೆ ಬರುವಂತೆ ಮಾಡುವ ಆ ಸ್ವಾಮಿಗೆ ಏಕೆ ಗರ್ಭವಾಸ ಜಗನ್ನಿಯಾಮಕ ಅವನು. ಪ್ರಾಣ ನಮ್ಮ ಹೃದಯವನ್ನು ಪ್ರಾಣ ವಾಯು, ಪ್ರಾಣ

1. 40.48 ಹರಿವಂಶಪರ್ವ, 2. 40.54 ಹರಿವಂಶಪರ್ವ

ವಾಯುವಿನಲ್ಲಿ ಪ್ರಾಣ ನಾಯಕರಾದಂತಹ ಮುಖ್ಯಪ್ರಾಣ ದೇವರು ಅಲ್ಲಿ ಆ ಹೆಸರಿನಿಂದ ಪರಮಾತ್ಮ ತಾನಿದ್ದು ಈ ಹೃದಯ ಸ್ಥಾನವನ್ನು ಬೆಳೆಸುತ್ತಾನೆ. ಮೊಣಕಾಲಿನಿಂದ ಪಾದದವರೆಗೆ ಕೆಳಗಿನ ಭಾಗವನ್ನು ಅಪಾನ ವಾಯುವನ್ನು ನಿಮಿತ್ತ ಮಾಡಿ, ಎದೆಯ ಮೇಲ್ಭಾಗವನ್ನೆಲ್ಲಾ ಉದಾನ ವಾಯುವನ್ನು ನಿಮಿತ್ತ ಮಾಡಿ, ಶ್ರಮ ಸಾಧ್ಯವಾದ ಕಾರ್ಯಗಳನ್ನು ವ್ಯಾನನನ್ನು ನಿಮಿತ್ತ ಮಾಡಿಕೊಂಡು ಹಾಗೂ ಉಂಡ ಅನ್ನವನ್ನು ಆ ಆ ಸ್ಥಾನದಲ್ಲಿ ಸಮವಾಗಿ ವಿಭಾಗ ಮಾಡಿ ಹಂಚುವ ಕಾರ್ಯವನ್ನು ಮಾಡಿ ಸಮಾನ ನಿಮಿತ್ತವನ್ನು ಇಟ್ಟುಕೊಂಡು ಪರಮಾತ್ಮ ಶರೀರದಲ್ಲಿ ಮಾಡುತ್ತಾನೆ ಪ್ರಾಣ, ಪಾನ, ವ್ಯಾನ, ಉದಾನ, ಸಮಾನ ಎಂಬಂತಹ ವಾಯುಗಳಿಂದ ಅಂತಹ ಆ ಪರಮಾತ್ಮ ಇಡೀ ಜಗತ್ತಿನ ಸೃಷ್ಟಿಗೆ ಕಾರಣ. ಆ ಎಲ್ಲ ದೈತ್ಯರು, ದಾನವರು ಅವರೆಲ್ಲರಿಗೂ ಸೃಷ್ಟಿಗೆ ಇವನೇ ಕಾರಣ, ಅವರಿಗೆ ಬಲ ಕೊಟ್ಟವ ಇವನೇ, ಅವರ ದೇಹ ನಿರ್ಮಾಣವಾಗುವುದು ಇವನಿಂದಲೇ. ಈ ದೇಹ ಪಾಂಚಭೌತಿಕ, ಪಾರ್ಥಿವವಾದ ದೇಹ ಅದರೊಳಗೆ ಇರುವಂತಹ ಒಳಗಿನ ಪ್ರಾಣ ಅದು ವಾಯುಹೂತದ್ದು, ಛಿದ್ರಗಳು ಆಕಾಶಕ್ಕೆ ಸಂಬಂಧಪಟ್ಟದ್ದು, ಜಲದಿಂದ ಶ್ರಾವಗಳೆಲ್ಲ ಆಗುತ್ತೆ, ಚಕ್ಷುರಾದಿಗಳೆಲ್ಲ ಜ್ಯೋತಿರ್ಮಯವಾದ ಪದಾರ್ಥಗಳಿವೆ. ಹೀಗೆ ಪಾಂಚ ಭೌತಿಕವಾದಂತಹ ಈ ಶರೀರವನ್ನು ಪಾಂಚ ಭೂತಾಂತರ್ಮಿಯಾದಂತಹ ಅಪ್ರಾಕೃತವಾದ ಶರೀರವನ್ನು ಪಡೆದಂತಹ ಆ ಭಗವಂತ ಈ ಜಗತ್ತಿಗೆ ನಿಯಾಮಕನಾಗಿ ಇದ್ದಾನಲ್ಲ ಅಂತಹ ಸ್ವಾಮಿ ತಾನು ಸಂಕಲ್ಪ ಮಾತ್ರದಿಂದ ಎಲ್ಲ ಕಾರ್ಯವನ್ನು ಮಾಡಬಹುದು.

ಈ ಗರ್ಭವಾಸ, ಈ ಭೂಲೋಕವಾಸ, ಮನುಷ್ಯ ಶರೀರ ಅರ್ಥಾತ್ ಮನುಷ್ಯ ಸದೃಶವಾದ ಶರೀರ ಇದೆಲ್ಲ ಯಾಕೆ ಬೇಕಾಗಿತ್ತು ಪರಮಾತ್ಮನಿಗೆ ಅಂತ ಕೇಳಿದಾಗ ವೈಶಂಪಾಯನರು ಅನ್ನುತ್ತಾರೆ ಎಂತಹ ಪ್ರಶ್ನೆಯನ್ನು ನೀನು ಮಾಡಿದ್ದೀಯಪ್ಪ. ಆ ಭಗವಂತನ ಮಹಿಮೆಗಳನ್ನು ಗುಣಗಳನ್ನು ವೇದಾದಿ ಸಕಲ ಸಚ್ಛಾಸ್ತ್ರಗಳಲ್ಲಿ ಹೇಳಿದ್ದನ್ನೆಲ್ಲ ಸಂಗ್ರಹ ಮಾಡಿ ನೀನೇ ಒಂದರ್ಥದೊಳಗೆ ಉತ್ತರವನ್ನು ಹೇಳುವ ರೀತಿಯಲ್ಲಿ, ಪ್ರವಚನ ಮಾಡುವ ರೀತಿಯಲ್ಲಿ, ನೀನೇ ಪುರಾಣ ಹೇಳುವ ರೀತಿಯಲ್ಲಿ ಹೇಳುತ್ತಾ ಇದ್ದೀ ನಾನು ನಿನಗೆ ಹೇಳಬೇಕಾದದ್ದು ಏನು. ಆದರೂ ಬಹಳ ಮಹತ್ವದ ಪ್ರಶ್ನೆಯನ್ನು ಮಾಡಿದ್ದೀಯಾ ಆದ್ದರಿಂದ ನನ್ನ ಶಕ್ತಿಗೆ ಅನುಗುಣವಾಗಿ ಗುರುಗಳ ಅನುಗ್ರಹದಿಂದ ನಾನು ಆ ಭಗವಂತನ ಮಹಿಮೆಯನ್ನು ಹೇಳುವ ಪ್ರಯತ್ನ ಮಾಡುತ್ತೇನೆ ಅಂತ ಆ ಭಗವಂತನ ಮಹಿಮೆಯನ್ನು ಹೇಳುವ ಮಹಾ ಕಾರ್ಯದೊಳಗೆ ನಾವೆಲ್ಲರೂ ಅತ್ಯಂತ ಚಿಕ್ಕವರು ಅಂತನ್ನುವ ಪರಮ ವಿನಯದಿಂದ ವೈಶಂಪಾಯನರು ಹೇಳುತ್ತಾರೆ. ಅಲ್ಪಸ್ವಲ್ಪ ಜ್ಞಾನ ಇದ್ದ ಮಾತ್ರಕ್ಕೆ ನನಗೆ ಸಮಾನವಾದ ಜ್ಞಾನವೇ ಯಾರಿಲ್ಲ, ನಾನು ತಿಳಿದಷ್ಟು ಯಾರು ತಿಳಿದಿಲ್ಲ ಅಂತ ತಿಳಿದುಕೊಳ್ಳುವವರು ಇರುತ್ತಾರೆ ಮಾನವರು. ಇಂತಹ ಮಹಾನುಭಾವರು ಅಷ್ಟು ದೊಡ್ಡ ಜ್ಞಾನ ಇದ್ದರೂ ಕೂಡ ವಿನಯದಿಂದ ಹೇಳುತ್ತಾರೆ ಯಾಕೆ ಅಂದರೆ **'ಯಸ್ಯಾಮತಂ ತಸ್ಯಮತಂ'** ಆ ಭಗವಂತನ ಬಗ್ಗೆ ಪೂರ್ಣವಾಗಿ ತಿಳಿದಿಲ್ಲ ಅಂತ ತಿಳಿಯುವುದೇ ನಿಜವಾದ ತಿಳುವಳಿಕೆ. ಅಂತಹ ತಿಳುವಳಿಕೆಯನ್ನು ಪಡೆದ ವೈಶಂಪಾಯನರು ಹೇಳುತ್ತಾರೆ ನೀನು ಹೇಳಿದ್ದು ಸತ್ಯ ಅನಂತ ಶಿರಸ್ಸು, ಅನಂತ ಬಾಹು, ಅನಂತ ಕರ, ಅನಂತ ಜಿಹ್ವ, ಅನಂತ ಕಿರೀಟಗಳು ಭಕ್ತರು ಬೇಡಿದ ಬೇಡದಿರುವ ಬೇಡಬೇಕು ಅಂತೂ ಗೊತ್ತಾಗದಿರುವ ಅನಂತಾನಂತ ವಸ್ತುಗಳನ್ನು ಅನಂತಾನಂತ ಜೀವರಾಶಿಗಳಿಗೆ ಕೊಡುವಂತಹ ಬಹುಲೌದಾರ್ಯ ಇರುವಂತಹ ಪರಮಾತ್ಮ.

ಸಹಸ್ರದಂ ಸಹಸ್ರಾದಿಂ ಸಹಸ್ರಭುಜಮವ್ಯಯಮ್ । (41.4 ಹರಿವಂಶಪರ್ವ)

ಅಂತಹ ಸಕಲ ವೇದಗಳಿಗೂ, ಯಜ್ಞಗಳಿಗೂ ಪ್ರವರ್ತಕ ಯಜ್ಞಮೂರ್ತಿ ಆಗಿರುವಂತಹ ಸ್ವಾಮಿ ಪರಮಾತ್ಮ ಅನಂತ ಅವತಾರಗಳನ್ನು ಹಿಂದೆ ತೆಗೆದುಕೊಂಡಿದ್ದಾನೆ ಇನ್ನು ಮುಂದೆ ಮತ್ತೆ ಅನಂತ ಅವತಾರಗಳನ್ನು ತೆಗೆದುಕೊಳ್ಳುತ್ತಾನೆ. ಈಗಲೂ ಅನೇಕ ಅವತಾರಗಳನ್ನು ಸ್ವೀಕಾರ ಮಾಡುತ್ತಾ ಇದ್ದಾನೆ ಅಂತರ್ಯಾಮಿ ರೂಪಗಳು ಸರ್ವದಾ

ಅನಂತಾನಂತವಾದದ್ದು ಭಗವಂತನದು ಉಂಟೇ ಉಂಟು ಅಂತಹ ಪರಮಾತ್ಮನ ಬಗ್ಗೆ ಏನು ಹೇಳಲಿಕ್ಕೆ ಸಾಧ್ಯ ಯಥಾಶಕ್ತಿಯಾಗಿ ನಾನು ಹೇಳುತ್ತೇನೆ ಅಂತ ವಿಶೇಷವಾಗಿ ಶುದ್ಧವಾದ ರೀತಿಯಲ್ಲಿ ಸ್ನಾನಾದಿಗಳನ್ನು ಮಾಡಿ ಮಡಿಯಲ್ಲಿ ಭಕ್ತಿಯಿಂದ ವಿನೀತನಾಗಿ ಶ್ರದ್ಧಾವಂತನಾಗಿ ಕೇಳುತ್ತಾ ಇದ್ದೀಯಾ ಹಾಗೆ ಕೇಳು.

ಶುಚಿಃ ಪ್ರಯತವಾಗ್ ಭೂತ್ವಾ ನಿಬೋಧ ಜನಮೇಜಯ ।

ಇದಂ ಪುರಾಣಂ ಪರಮಂ ಪುಣ್ಯಂ ವೇದೈಶ್ಚ ಸಮ್ಮಿತಮ್ ॥ (41.16 ಹರಿವಂಶಪರ್ವ)

ಅಂತಹ ಶ್ರೇಷ್ಠವಾದ ತತ್ವಗಳನ್ನು ಹೇಳುತ್ತೇನೆ ಕೇಳು ಅಂತ ಹೇಳುತ್ತಾರೆ ಅಂದರೆ ಕೇಳುವಾಗ ಶುದ್ಧಿಯನ್ನು ದೈಹಿಕ, ಮಾನಸಿಕ ಶುದ್ಧಿಯನ್ನು ಇಟ್ಟುಕೊಂಡು ಶ್ರವಣ ಮಾಡಬೇಕು ಅನ್ನುವುದನ್ನು ವೈಶಂಪಾಯನರು ತಿಳಿಸುತ್ತಾ ಇದ್ದಾರೆ.

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।

ಧರ್ಮಸಂಸ್ಥಾಪನಾರ್ಥಾಯ ತದಾ ಸಮ್ಭವತಿ ಪ್ರಭುಃ ॥ (41.17 ಹರಿವಂಶಪರ್ವ)

ಭಗವದ್ಗೀತೆಯಲ್ಲಿ ನೀವು ಕೇಳುತ್ತೀರಿ.

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।

ಅಭ್ಯುತ್ಥಾನಮಧರ್ಮಸ್ಯ ತದಾऽತ್ಮಾನಂ ಸೃಜಾಮ್ಯಹಮ್ ॥ (4.7 ಭ ಗೀತಾ)

ಅಂತ ಕೃಷ್ಣ ಹೇಳಿದ್ದು. ಇಲ್ಲಿ ವೈಶಂಪಾಯನರು ಹೇಳುತ್ತಾರೆ ಆದ್ದರಿಂದ **'ಧರ್ಮಸಂಸ್ಥಾಪನಾರ್ಥಾಯ ತದಾ ಸಮ್ಭವತಿ ಪ್ರಭುಃ'** ಪರಮಾತ್ಮ ಅಧರ್ಮದ ಉನ್ನಾಹ ಆಗಿ ಧರ್ಮದ ಗ್ಲಾನಿಯಾದಾಗ ಪುನಃ ಧರ್ಮದ ಸಂಸ್ಥಾಪನೆಯನ್ನು ಮಾಡಿ ಸಜ್ಜನರ ಉದ್ಧಾರವನ್ನು ಮಾಡುವುದಕ್ಕಾಗಿ ಅವತಾರವನ್ನು ಮಾಡುತ್ತಾನೆ. ಯಾವಾಗಲೂ ಪರಮಾತ್ಮ ತನ್ನ ಸ್ಥಾನದಲ್ಲಿ ಮೂಲರೂಪದಿಂದ ತಾನು ಇದ್ದೇ ಇರುತ್ತಾನೆ ಬ್ರಹ್ಮಾಂಡದ ಹೊರಗೆ ಇಡೀ ಜಗತ್ತನ್ನು ವ್ಯಾಪಿಸಿದಂತಹ ಆ ಭಗವಂತ ಅಲ್ಲಿ ಇದ್ದಾನೆ. ಆ ಪರಮಾತ್ಮನ ಒಂದಂಶ ಶ್ವೇತದ್ವೀಪದಲ್ಲಿ ಇರುವಂತಹ ನಾರಾಯಣ ಆ ಭಗವಂತನ ಅಂಶಗಳು ಇಲ್ಲಿ ವರಾಹಾದಿ ರೂಪಗಳಿಂದ ಅವತಾರವನ್ನು ಮಾಡುತ್ತವೆ ಎಂಬುದಾಗಿ ವೈಶಂಪಾಯನರು ತಿಳಿಸುತ್ತಾ ಇದ್ದಾರೆ.

ಪ್ರಲಯ ಕಾಲದಲ್ಲಿ ಎಲ್ಲವನ್ನು ತನ್ನ ಉದರದಲ್ಲಿ ಇಟ್ಟುಕೊಂಡಂತಹ ಪರಮಾತ್ಮ ಪುನಃ ಸೃಷ್ಟಿ ಕಾಲದಲ್ಲಿ ದನ್ನು ಹೊರಗೆ ಹಾಕುತ್ತಾನೆ. ಹಿಂದೆ ಮಧು-ಕೈಟಭರು ಅಂತ ಆ ಮಧು-ಕೈಟಭರನ್ನು ಪರಮಾತ್ಮ ಸಂಹಾರ ಮಾಡುತ್ತಾನೆ ಹಯಗ್ರಿವ ರೂಪವನ್ನು ಸ್ವೀಕಾರ ಮಾಡಿ, ಆ ಮಧು-ಕೈಟಭರ ಸಂಹಾರ ಮಾಡಿ ಅವರು ಅಪಹಾರ ಮಾಡಿಕೊಂಡಂತಹ ವೇದಗಳನ್ನು ಪುನಃ ಬ್ರಹ್ಮ ದೇವರಿಗೆ ನೀಡಿ ವೈದಿಕವಾದ ಜ್ಞಾನವನ್ನೂ ಬ್ರಹ್ಮ ದೇವರಿಗೆ ಕೊಡುತ್ತಾನೆ. ಆ ಬ್ರಹ್ಮ ದೇವರಿಗೆ ಅನಾದಿಕಾಲದಿಂದ ವೇದಗಳ ಜ್ಞಾನ ಇದೆ ಪರಿಪೂರ್ಣವಾಗಿದೆ ಪರೋಕ್ಷವಾದ ಜ್ಞಾನ ಋಜುಗಳಿಗೆ ಅನಾದಿಕಾಲದಿಂದ ಪರಿಪೂರ್ಣವಾದದ್ದು ಉಂಟು ವಿಶೇಷವಾಗಿ ಆ ಜ್ಞಾನದ ಸಂಸ್ಥಾಪನೆಯನ್ನು ಮಾಡುತ್ತಾನೆ ಪರಮಾತ್ಮ. ಜೊತೆಗೆ ಆ ಮಧು-ಕೈಟಭರನ್ನು ತನ್ನ ತೊಡೆಯ ಮೇಲೆ ಚೆನ್ನಾಗಿ ತಿಕ್ಕಿ ಅವರ ಮೇದಸ್ಸಿನಿಂದ ಈ ಮೇದಿನಿಯನ್ನು ನಿರ್ಮಾಣ ಮಾಡುತ್ತಾನೆ ಭೂಮಿಯನ್ನು ಅರ್ಥಾತ್ ಪೂರ್ವದಲ್ಲಿ ಸೃಷ್ಟವಾದಂತಹ ಭೂಮಿಗೆ ಒಂದು ವಿಶೇಷವಾದ ಉಪಚಯವನ್ನು ಅವರ ಮೇದಸ್ಸಿನಿಂದ ಮಾಡುತ್ತಾನೆ ಅನ್ನುವುದಕ್ಕಾಗಿ ಇದಕ್ಕೆ ಮೇದಿನೀ ಅಂತ ಬಾಣಗಳಿಂದ ಅವರ ಸಂಹಾರ ಮಾಡಿದ ಅಂತ ಕೆಲವು ಕಡೆ ಬರುತ್ತದೆ

ಅದೂ ಸರಿ. ಬಾಣಗಳಿಂದ ಹೊಡೆದು ಸಂಹಾರ ಮಾಡಿ ಅವರ ಶರೀರವನ್ನು ತೊಡೆಯ ಮೇಲೆ ಹಾಕಿ ತಿಕ್ಕಿ ಈ ಭೂಮಿಗೆ ಒಂದು ವಿಶೇಷವಾದ ಉಪಚಯವನ್ನು ಆ ಪರಮಾತ್ಮ ಕೊಡುತ್ತಾನೆ. ನೋಡಿ ನಿಲ್ಲುವುದಕ್ಕೆ ನೆಲೆ ಭೂಮಿ ಅದನ್ನೂ ಕೊಟ್ಟವ ನಮ್ಮೆಲ್ಲರಿಗೆ ಜ್ಞಾನದ ಆಹಾರವನ್ನು, ತಲೆಗೆ ಆಹಾರವನ್ನು ಕೊಟ್ಟವನು ಹಯಗ್ರಿವ ರೂಪಿಯಾದ ಪರಮಾತ್ಮ ಮೂಲ ರಾಮಾಯಣವನ್ನು ಮಾಡಿ ಉತ್ತಮವಾದಂತಹ ಜ್ಞಾನವನ್ನು ಕೊಟ್ಟಿದ್ದಾನೆ ಹಯಗ್ರಿವ ರೂಪದಿಂದ ಪರಮಾತ್ಮ. ಅಷ್ಟು ಮಾತ್ರ ಅಲ್ಲದೇ ಎಲ್ಲ ವಿದ್ಯೆಗಳನ್ನು ನಿರಂತರವಾಗಿ ಉಪದೇಶ ಮಾಡುತ್ತಾ ಇರುತ್ತಾನೆ ಬ್ರಹ್ಮಾದಿ ದೇವತೆಗಳಿಗೆ ಒಂದೇ ಬಾರಿ ಉಪದೇಶ ಮಾಡಿದ್ದಕ್ಕೆ ಎಲ್ಲವನ್ನು ಗ್ರಹಣ ಮಾಡಿದ ಮಹಾನುಭಾವರು ಬ್ರಹ್ಮ ದೇವರು ಉಳಿದವರು ಯಥಾ ಯೋಗ್ಯವಾಗಿ ತಮ್ಮ ತಮ್ಮ ಶಕ್ತಿಗೆ ಅನುಗುಣವಾಗಿ ತತ್ವಜ್ಞಾನವನ್ನು ಪಡೆದಿದ್ದಾರೆ ಎಂಬುದಾಗಿ ನಾವು ತಿಳಿಯಬೇಕು. ಅಂತಹ ಮಹಾನುಭಾವ ವರಾಹ ರೂಪಿಯಾಗಿರುವಂತಹ ಪರಮಾತ್ಮನೂ ಕೂಡ ಅವತಾರವನ್ನು ಮಾಡಿ ಆ ಪ್ರಲಯ ಜಲದಲ್ಲಿ ಮುಳುಗಿರುವಂತಹ ಭೂಮಿಯನ್ನು ತನ್ನ ಕೋರೆ ಹಲ್ಲಿನಿಂದ ಎತ್ತಿ ಉದ್ಧಾರ ಮಾಡಿ ಮಧ್ಯದಲ್ಲಿ ವಿಘ್ನ ಮಾಡುವುದಕ್ಕೆ ಬಂದಂತಹ ಆದಿ ಬ್ರಹ್ಮಜನಾದ ಹಿರಣ್ಯಾಕ್ಷನನ್ನು ತನ್ನ ಹಲ್ಲಿನಿಂದಲೇ ಸಂಹಾರ ಮಾಡುತ್ತಾನೆ. ಮತ್ತೆ ಮುಂದೆ ಕಶ್ಯಪರ ಪುತ್ರನಾದ ಹಿರಣ್ಯಾಕ್ಷ ಮತ್ತೊಮ್ಮೆ ಭೂಮಿಯನ್ನು ಸಮುದ್ರದೊಳಗೆ ಮುಳುಗಿಸಿದಾಗ ಆಗ ಅವನನ್ನು ಕರಣ ಮೂಲದಲ್ಲಿ ತಾಡನ ಮಾಡಿ ಸಂಹಾರ ಮಾಡುತ್ತಾನೆ ಪರಮಾತ್ಮ ಎಂಬುದಾಗಿ ಶ್ರೀಮದಾಚಾರ್ಯರು ಭಾಗವತ ತಾತ್ಪರ್ಯದಲ್ಲಿ ತಿಳಿಸುತ್ತಾರೆ. ಹೀಗೆ ಎರಡು ಬಾರಿ ಆ ಹಿರಣ್ಯಾಕ್ಷನನ್ನು ವರಾಹ ರೂಪದಿಂದ ಪರಮಾತ್ಮ ಸಂಹಾರವನ್ನು ಮಾಡುತ್ತಾನೆ ಎಲ್ಲ ಯಜ್ಞ ಸಾಧನಗಳನ್ನು ತನ್ನ ಅಂಗದಿಂದಲೇನೆ ಪರಮಾತ್ಮ ಪ್ರಾದುರ್ಭಾವ ಮಾಡುತ್ತಾನೆ ಅವುಗಳೆಲ್ಲವುಗಳನ್ನು ಹುಟ್ಟಿಸುತ್ತಾನೆ ಹೀಗಾಗಿ ಯಜ್ಞ ವರಾಹ ಅಂತ.

ತಸ್ಯ ಯಜ್ಞ ವರಾಹಸ್ಯ ವಿಷ್ಣೋರಮಿತ ತೇಜಸಃ ।
ಪ್ರಣಾಮಂ ಯೇಪಿ ಕುರ್ವಂತಿ ತೇಷಾಮಪಿ ನಮೋ ನಮಃ ॥

ಯಜ್ಞ ವರಾಹ ರೂಪಿಯಾಗಿರುವಂತಹ ಪರಮಾತ್ಮನಿಗೆ ಯಾರು ನಮಸ್ಕಾರ ಮಾಡುತ್ತಾರೋ ಅವರಿಗೆ ನಮಸ್ಕಾರವನ್ನು ಮಾಡುತ್ತೇವೆ ಅಂತ ದೇವರಿಗೆ ಅಲ್ಲ ಯಜ್ಞ ವರಾಹ ರೂಪಿಯಾದ ಪರಮಾತ್ಮನಿಗೆ ನಮಿಸುವವರಿಗೆ ನಮನ ಅಂತ ಅಂತಹ ಮಹಾಪುಣ್ಯ ಆ ಪರಮಾತ್ಮನ ವಿಶೇಷವಾದಂತಹ ದರ್ಶನವನ್ನು ಪಡೆದುಕೊಂಡು ಅವನ ಸ್ಮರಣೆ ಮಾಡಿ ನಮಸ್ಕಾರಗಳನ್ನು ಮಾಡಿದರೆ. ಅಂತಹ ವರಾಹ ದೇವರು ಯಜ್ಞ ಮಾಡುವ ಅಧಿಕಾರ ಇರುವ ಸಜ್ಜನರಿಗೆ ಯಜ್ಞ ಯಾಗಾದಿಗಳನ್ನು ಮಾಡುವಂತಹ ಉತ್ತಮವಾದ ಯೋಗವನ್ನು ಕರುಣಿಸಿ ಆ ಮೂಲಕವಾಗಿ ಭಗವಂತನ ಸೇವೆ ಮಾಡುವ ಸೌಭಾಗ್ಯವನ್ನು ಕೊಡಲಿ ಅಂತ ಪ್ರಾರ್ಥನೆ ಮಾಡಬೇಕು. ಯಜ್ಞ ಯಾಗಾದಿಗಳನ್ನು ಮಾಡುವುದಕ್ಕೆ ಬೇಕಾದಂತಹ ಏನು ವೇದಗಳ ಸಂಹಿತೆ ಇದೆ ಆ ಸಂಹಿತೆಗೆ ನಿಯಾಮಕರಾದವರು ಕೂಡ ವರಾಹ ದೇವರೇ, ಪದ ಪಾಠಕ್ಕೆ ನಿಯಾಮಕರಾದವರು ವಾಮನ ದೇವರು, ಕ್ರಮ ಪಾಠಕ್ಕೆ ಆ ಕ್ರಮಕ್ಕೆ ನಿಯಾಮಕರಾದವರು ನರಸಿಂಹ ದೇವರು ಅಂತ. ಅಂತಹ ಸಂಹಿತೆಯನ್ನೂ ತಿಳಿಸಿ ಸಂಹಿತೆಯ ಪ್ರವರ್ತನೆಯನ್ನು ಮಾಡಿ, ಯಜ್ಞ ಯಾಗಾದಿಗಳ ಸಾಧನಗಳನ್ನು ತನ್ನ ಅಂಗದಿಂದಲೇನೆ ಹುಟ್ಟಿಸಿ ಆ ಪ್ರಚೋದನೆಯನ್ನು ಸಜ್ಜನರಲ್ಲಿ ಮಾಡಿ, ಅವರೆಲ್ಲ ಯಜ್ಞ ಯಾಗಾದಿಗಳನ್ನು, ವೇದಮಂತ್ರ ಪುರಸ್ಸರವಾಗಿ ಮಾಡಿ, ಸದ್ಗತಿಯನ್ನು ಹೊಂದುವುದಕ್ಕೆ ನಿಷ್ಕಾಮವಾಗಿ ಮಾಡಿ ಉತ್ತಮವಾದ ಅಪರೋಕ್ಷ ಜ್ಞಾನವನ್ನು ಪಡೆಯುವುದಕ್ಕೆ ವರಾಹ ದೇವರು ಅನುಗ್ರಹವನ್ನು ಮಾಡಬೇಕು ಅಂತ ನಾವು ವಿಶೇಷವಾಗಿ ವರಾಹ ದೇವರಲ್ಲಿ ಪ್ರಾರ್ಥನೆ ಮಾಡಬೇಕು ಈ ರೀತಿ ವರಾಹಾವತಾರವನ್ನು ತಿಳಿಸಿದ್ದಾರೆ. ಆ ಭಗವಂತ ಸರ್ವಶಕ್ತ ತಾನಿದ್ದಲ್ಲಿಯೇ ಎಲ್ಲವನ್ನು ಮಾಡುವ ಸಾಮರ್ಥ್ಯ ಇದೆ ಇಚ್ಛಾ ಮಾತ್ರದಿಂದ ಎಲ್ಲಾ

ಕಾರ್ಯಗಳನ್ನು ಮಾಡಬಹುದು ಶ್ರೀಮದಾಚಾರ್ಯರು ತಿಳಿಸುತ್ತಾರೆ ಅನುವ್ಯಾಖ್ಯಾನದಲ್ಲಿ. ಆದರೂ ಕೂಡ **'ಕೇವಲಂ ಲೀಲಯಾ ಪ್ರಭುಃ ದೂರತೋಪಿ ಅತಿಶಕ್ತಃ'** ತಾನು ಎಲ್ಲಿದ್ದಾನೆ ಅಲ್ಲಿಯೇ ಇದ್ದು ಎಲ್ಲಾ ಕಾರ್ಯ ಮಾಡುವ ಸಾಮರ್ಥ್ಯ ಅಚಿಂತ್ಯಾದ್ಭುತ ಶಕ್ತಿ ಸಾಮರ್ಥ್ಯಗಳು ಭಗವಂತನಿಗೆ ಇದೆ. ಆದರೆ ಆ ಭಗವಂತನಿಗೆ ಕ್ರೀಡೆ, ಆಟ ಇದೇ ಆಟ, ಇಡೀ ಜಗತ್ತಿನ ಸೃಷ್ಟ್ಯಾದಿಗಳನ್ನು ಮಾಡುವುದು, ಅವತಾರಗಳನ್ನು ಮಾಡುವುದು, ಅಂತರ್ಯಾಮಿ ರೂಪಗಳಿಂದ ನಿಯಮನ ಮಾಡುವುದು ಇದೆಲ್ಲ ಭಗವಂತನ ಕ್ರೀಡೆ, ಅದು ಅವನ ಲೀಲೆ ಆನಂದೋದ್ರೇಕದಿಂದ ದೇವರು ಇದನ್ನು ಮಾಡುತ್ತಾನೆ ಅದು ಅವನ ಸಂಕಲ್ಪ ಅಷ್ಟೇ ಹೊರತು ಇಲ್ಲಿ ಬಂದೇ ಈ ಕಾರ್ಯ ಮಾಡಬೇಕು ಅನ್ನುವ ಅನಿವಾರ್ಯತೆ ಇಲ್ಲ. ಆದರೆ ಪರಮಾತ್ಮ ತನ್ನ ಸಂಕಲ್ಪಕ್ಕನುಗುಣವಾಗಿ ನಮ್ಮೆಲ್ಲರ ಉದ್ಧಾರಕ್ಕಾಗಿ

ಸ್ಮೃತಿಕೀರ್ತನಪ್ರಣತಿಭಿರ್ವಿಮುಕ್ತಯೇ ಸ್ವಜನಸ್ಯ ಯಾತ್ಯಯಮನೇಕ ರೂಪತಾಮ್ ।

(8ನೇ ಸರ್ಗ 13 ನೇ ಶ್ಲೋಕ ಸುಮಧ್ವವಿಜಯ)

ಆ ದೇವರು ತಾನು ಇದ್ದಲ್ಲಿಯೇ ಎಲ್ಲ ಕಾರ್ಯಗಳನ್ನು ಮಾಡುತ್ತಾ ಇದ್ದರೆ ನಮಗೆ ಚಿಂತನೆಗೆ ಏನು. ಆ ಭಗವಂತನ ಲೀಲೆಗಳು, ಕಥೆಗಳು, ಚರಿತ್ರೆಗಳು ಇದ್ದರೆ ಅವುಗಳ ಸ್ಮರಣೆ ಮಾಡುತ್ತಾ ನಮ್ಮ ಪಾಪಗಳನ್ನು ಕಳೆದುಕೊಳ್ಳಬಹುದು, ಮೋಕ್ಷವನ್ನು ಪಡೆದುಕೊಳ್ಳಬಹುದು, ಅವನಿದ್ದಲ್ಲಿಯೇ ಎಲ್ಲವನ್ನು ಮಾಡಬಹುದು. ಇಷ್ಟೆಲ್ಲಾ ಅವತಾರ ಮಾಡಿ, ಇಷ್ಟೆಲ್ಲಾ ಇತಿಹಾಸ ಪುರಾಣಗಳು ಅವನ ಮಹಿಮೆಯನ್ನು ಕೊಂಡಾಡುವುದಕ್ಕಾಗಿ ಬಂದರೂ ಆ ದೇವರ ಸ್ಮರಣೆಯನ್ನು ಚೆನ್ನಾಗಿ ಮಾನವರು ಮಾಡುವುದಿಲ್ಲ ವ್ಯರ್ಥ ಕಾಲಹರಣ ಮಾಡಿ ಜನ್ಮವನ್ನು ಹಾಳು ಮಾಡಿಕೊಳ್ಳುತ್ತಾ ಇನ್ನು ದೇವರು ಅವತಾರನೇ ಮಾಡದೆ ಅವನ ಮಹಿಮೆಯನ್ನೇ ಯಾರೂ ತಿಳಿಯದೆ ಇರುವ ಪ್ರಸಂಗ ಇದ್ದರೆ ಹೇಗೆ ಉದ್ಧಾರ ಆಗುವುದು ಕೇವಲ ಮೂಲರೂಪದ ಮಹಿಮೆಯನ್ನು ತಿಳಿದುಕೊಳ್ಳುವಷ್ಟು ದೊಡ್ಡ ಯೋಗ್ಯತೆ ಸಾಮಾನ್ಯರಿಗೆ ಇಲ್ಲ ಅನ್ನುವುದಕ್ಕಾಗೆ ಪರಮಾತ್ಮ ಅವತಾರಗಳನ್ನು ಮಾಡುತ್ತಾನೆ ಎಂಬುದಾಗಿ ಹೇಳುತ್ತಾರೆ.

ಆಮೇಲೆ ಹಿರಣ್ಯಕಶಿಪು ಹನ್ನೊಂದು ಸಾವಿರದ ಐದನೂರು ವರ್ಷಗಳವರೆಗೆ ಘೋರವಾದ ತಪಶ್ಚರ್ಯವನ್ನು ಮಾಡುತ್ತಾನೆ.

ದಶ ವರ್ಷಸಹಸ್ರಾಣಿ ಶತಾನಿದಶ ಪಞ್ಚ ಚ । (41.41 ಹರಿವಂಶಪರ್ವ)

ಅಷ್ಟು ತಪಶ್ಚರ್ಯವನ್ನು ಮಾಡಿದ ಉಪವಾಸ, ಮೌನ ಯಾವುದೇ ವಿಧವಾಗಿರುವಂತಹ ಭೋಗಗಳನ್ನು ಮಾಡದೆ ಉಪವಾಸವನ್ನು ಮಾಡಿದ್ದಾನೆ, ತಪಸ್ಸನ್ನು ಮಾಡಿದ್ದಾನೆ. ಬ್ರಹ್ಮ ದೇವರು ಪ್ರತ್ಯಕ್ಷರಾಗಿದ್ದಾರೆ ನೋಡಿ ಬ್ರಹ್ಮ ದೇವರು ವರ ಕೊಡುವುದಕ್ಕೆ ಅಂತ ಬಂದಾಗ ತಾವು ಒಬ್ಬರೇ ಬರಲಿಲ್ಲಂತೆ ಏನೋ ವರ ಕೊಟ್ಟುಬಿಟ್ಟರು ಅಂತ ಆಮೇಲೆ ಬೇರೆಯವರು ಅಂದುಕೊಳ್ಳುವುದು ಬೇಡ ಎಲ್ಲರ ಸಾಕ್ಷಿಯಾಗಿ ಕೊಡೋಣ ಅಂತ. ಎಲ್ಲಾ ದೇವತೆಗಳು, ಋಷಿಗಳು, ನಾಗ, ಯಕ್ಷ, ಕಿನ್ನರ, ಗಂಧರ್ವ ಎಲ್ಲರನ್ನೂ ಕರೆದುಕೊಂಡು ಬಂದಿದ್ದಾರೆ ಬ್ರಹ್ಮ ದೇವರು. ಅವರೆಲ್ಲರ ಸಮಕ್ಷಮದಲ್ಲಿ ಹಿರಣ್ಯಕಶಿಪುವಿಗೆ ಏನು ಬೇಕು ಕೇಳು ವರ ಅಂತ ಅಂದಿದ್ದಾರೆ ನಿಮಗೆಲ್ಲ ಗೊತ್ತಿದೆ ಯಾವ ದೇವತೆಗಳು, ಅಸುರರು, ಗಂಧರ್ವರು, ಯಕ್ಷರು ಇಲ್ಲಿ ಬಂದಂತಹ ಸರ್ಪಗಳು, ರಾಕ್ಷಸರು, ಮನುಷ್ಯರು, ಪಿಶಾಚಿಗಳು ಯಾರು ನನ್ನ ಸಂಹಾರ ಮಾಡಬಾರದು. ಯಾವ ಋಷಿಗಳು ನನಗೆ ಶಾಪವನ್ನು ಕೊಡಬಾರದು, ಕೊಟ್ಟರೂ ಸಾಯಬಾರದು ನಾನು, ಶಸ್ತ್ರಗಳಿಂದ, ಅಸ್ತ್ರಗಳಿಂದ, ಪರ್ವತದಿಂದ, ವೃಕ್ಷಗಳಿಂದ, ಒಣಗಿದ ಪದಾರ್ಥ, ಹಸಿ ಪದಾರ್ಥ

ಯಾವುದರಿಂದಲೂ ನಾನು ಸಾಯಬಾರದು ಅಂತಹ ವರವನ್ನು ಕೊಡಬೇಕು ಅಂತ ಹಿರಣ್ಯಕಶಿಪು ಪ್ರಾರ್ಥನೆ ಮಾಡಿದ್ದಾನೆ ಬ್ರಹ್ಮ ದೇವರಿಗೆ ಇಷ್ಟು ಮಾತ್ರ ಭಾಗವತದಲ್ಲಿ ಬರುತ್ತದೆ. ಇಲ್ಲಿ ಒಂದು ಮಾತನ್ನು ಹೇಳುತ್ತಾರೆ ಒಂದರಿಂದ ನಾನು ಬೇಕಂದರೆ ಸಾಯಬಹುದು **'ಪ್ರಾಣಿಪ್ರಹಾರೇಣ'** ಕೇವಲ ಕೈಯಿಂದ ನನ್ನನ್ನು ಹೊಡೆದು ಯಾರಾದರೂ ಸಾಯಿಸುವುದಾದರೆ ಸಾಯಿಸಲಿ ಬೇಕಾದರೆ ಆದರೆ ಶಸ್ತ್ರ ಅಸ್ತ್ರಗಳಿಂದ ಸಾಯಿಸಬಾರದು, ಪರ್ವತ ವೃಕ್ಷಗಳಿಂದ ಸಾಯಿಸಬಾರದು, ಶಾಪ ಕೊಟ್ಟು ಸಾಯಿಸಬಾರದು. ಅಂದರೆ ಅವನ ಉದ್ದೇಶ ಇಂತಹ ಮಹಾಪರಾಕ್ರಮಿಯಾದ ನನ್ನನ್ನು ಬರೇ ಕೈಯಿಂದ ಹೊಡೆದು ಅಂತೂ ಯಾರು ನನ್ನನ್ನು ಸಾಯಿಸುವುದಕ್ಕೆ ಸಾಧ್ಯ ಇಲ್ಲ ಅದು ಏನು ನನ್ನ ಒಬ್ಬನನ್ನಲ್ಲ ತನ್ನ ಕೇವಲ ಕೈಗಳಿಂದ ನನ್ನನ್ನು, ನನ್ನ ಅನುಚರರನ್ನು, ನನ್ನ ಸಂಪೂರ್ಣವಾದ ಸೈನ್ಯವನ್ನು ಎಲ್ಲವನ್ನೂ ಕೇವಲ ತನ್ನ ಕೈಯಿಂದ ನಾಶ ಮಾಡುವ ಸಾಮರ್ಥ್ಯ ಇದ್ದವನು ಯಾರಾದರೂ ಇದ್ದರೆ ಮಾಡಲಿ ಇನ್ನು ಬೇರೆ ರೀತಿ ಅದು ಅಸಾಧ್ಯ ಅನ್ನುವ ದೃಷ್ಟಿ ಅವನಿಗೆ ಇತ್ತು.

ಪ್ರಾಣಿಪ್ರಹಾರೇಣೈಕೇನ ಸಭೃತ್ಯ ಬಲವಾಹನಮ್ ।
ಯೋ ಮಾಂ ನಾಶಯಿತುಂ ಶಕ್ತಃ ಸ ಮೇ ಮೃತ್ಯುರ್ಭವಿಷ್ಯತಿ ॥ (41.52 ಹರಿವಂಶಪರ್ವ)

ಅವನು ಬೇಕಾದರೆ ನನಗೆ ಮಾರಕನಾಗಲಿ ಅಂತ ಹೇಳಿದಾಗ ಬ್ರಹ್ಮ ದೇವರು ತಥಾಸ್ತು ಅಂತ ವರ ಕೊಟ್ಟಿದ್ದಾರೆ. ಎಲ್ಲಾ ಲೋಕಗಳಿಗೆ ನಾನೇ ಪಾಲಕನಾಗಬೇಕು ಇಂದ್ರ, ವರುಣ, ಕುಬೇರ ಅವರೆಲ್ಲ ತಮ್ಮ ತಮ್ಮ ಮನೆಗೆ ಹೋಗಲಿ ಸಕಲ ಲೋಕಗಳಿಗೆ ನಾನು ಪಾಲಕನಾಗಬೇಕು ತಥಾಸ್ತು ಅಂದಿದ್ದಾರೆ ಬ್ರಹ್ಮ ದೇವರು. ಜೊತೆಗೆ ಬಂದಿದ್ದಾರೆ ಎಲ್ಲ ಲೋಕಪಾಲಕರು, ಋಷಿಗಳು, ದೇವತೆಗಳು ಅವರೆಲ್ಲ ಏನಿದು ವರ ಕೊಟ್ಟರಿ ಬ್ರಹ್ಮ ದೇವರೇ ನಮ್ಮ ಗತಿಯೇನು ನಾವು ಎಲ್ಲಿ ಹೋಗಬೇಕು ಯಾಕೆ ಹೀಗೆ ವರ ಕೊಟ್ಟಿರಿ, ನಮ್ಮನ್ನೆಲ್ಲಾ ಇಲ್ಲಿ ಕರೆದುಕೊಂಡು ಬಂದದ್ದು ಯಾತಕ್ಕೆ ಇಲ್ಲಿಂದ ಓಡಿ ಹೋಗುವುದಕ್ಕೋ ಹೇಗೆ, ಹೌದು ಅಂದರು ಬ್ರಹ್ಮ ದೇವರು. ನಿಮ್ಮ ನಿಮ್ಮ ಸ್ಥಾನದಲ್ಲಿ ನೀವು ಇರಿ ಆದರೆ ಚಿಂತೆಯನ್ನು ಮಾಡಬೇಡಿ ಭಗವಂತ ಇವನಿಗೆ ಏನು ಯೋಗ್ಯವಾದ ಗತಿಯನ್ನು ಕಲ್ಪಿಸಬೇಕು ಅದನ್ನು ಮಾಡುತ್ತಾನೆ ಅವನನ್ನು ಸಂಹಾರ ಮಾಡಿ ಮತ್ತೆ ನಿಮ್ಮ ನಿಮ್ಮ ಸ್ಥಾನಗಳನ್ನು ನೀವು ಪಡೆಯುವಂತೆ ದೇವರು ಅನುಗ್ರಹ ಮಾಡುವುದಕ್ಕೆ ಸಮರ್ಥ ಇದ್ದಾನೆ ಭಗವಂತನ ಸಂಕಲ್ಪ. ಈ ಸಂದರ್ಭದಲ್ಲಿ ತಮೋಗುಣದ ಉನ್ನಾಹ ಅನ್ನುವುದಕ್ಕಾಗಿ ಆ ಅಸುರರಿಗೆ ಉನ್ನತಿ ಬರಬೇಕಾಗಿದೆ ಅಂತೇ ದೇವರ ಸಂಕಲ್ಪ ಅವನೇ ನನ್ನಲ್ಲಿ ನಿಂತು ಈ ವರವನ್ನು ಕೊಡಿಸಿದ್ದಾನೆ. **'ವರದೇಶ ವರಪ್ರದಂ'** ವರದೇಶರೊಳಗಿದ್ದು ವರಪ್ರದನಾಗುವವನು ಆ ಭಗವಂತನೇ ವಾಸುದೇವ ಅಂತಹ ಪರಮಾತ್ಮನ ಪ್ರೇರಣೆಯಂತೆ ನಾನು ವರ ಕೊಟ್ಟಿದ್ದೇನಪ್ಪ ಚಿಂತೆ ಮಾಡಬೇಡಿ ಯಾರು, ನಿರ್ಭೀತರಾಗಿ ಇರಿ ಅಂತ ಹೇಳುತ್ತಾರೆ. ಅದು ಸರಿ, ಏನು ಅವಶ್ಯಕತೆ ಇತ್ತು ಆಗುವುದಿಲ್ಲ ಅಂತ ಹೇಳಿದರೆ ತಪ್ಪೇನು ದೇವರಾದರೂ ನಿಮಗೆ ಯಾಕೆ ಹೀಗೆ ಪ್ರೇರಣೆ ಮಾಡಿದ

ಅವಶ್ಯಂ ತ್ರಿದಶಾಸ್ತೇನ ಪ್ರಾಪ್ತವ್ಯಂ ತಪಸಃ ಫಲಮ್ ।
ತಪಸೋಽನ್ತೇಸ್ಯ ಭಗವಾನ್ ವಧಂ ವಿಷ್ಣುಃ ಕರಿಷ್ಯತಿ ॥ (41.63 ಹರಿವಂಶಪರ್ವ)

ನೋಡಿ ಯಜ್ಞ, ದಾನ, ತಪಸ್ಸು ಇದು ಪ್ರತಿಯೊಬ್ಬ ವ್ಯಕ್ತಿಗೆ ಅತ್ಯಂತ ಅನಿವಾರ್ಯವಾಗಿ ಅನುಷ್ಠೇಯವಾದಂತಹ ಸಂಗತಿಗಳು ಇದರಿಂದಲೇ ತನ್ನ ಎಲ್ಲ ಪಾಪಗಳೆಂಬ ಕಲ್ಮಷವನ್ನು ತೊಳೆದುಕೊಂಡು ಶುದ್ಧಾಂತಃಕರಣನಾಗಿ ಉತ್ತಮವಾದ ಸದ್ಗತಿಯನ್ನು ಪಡೆಯುವುದು. ಅಂತಹ ತಪಸ್ಸನ್ನು ಮಾಡಿದಾಗ ಬೇಡಿದ ವರವನ್ನು ನಾವು ಯಾರಿಗಾದರೂ ಕೊಡದಿದ್ದರೆ ಇನ್ನುಳಿದ ಜನರಿಗೆ ಅವನು ದುಷ್ಟ ಆದಕ್ಕಾಗಿ ನಾನು ವರ ಕೊಡಲಿಲ್ಲ



ಇದು ಗೊತ್ತಾಗುವುದಿಲ್ಲ. ಅಯ್ಯೋ ಯಾರೋ ತಪಸ್ಸು ಮಾಡಿದರು ಸಾವಿರಾರು ವರ್ಷ ಹತ್ತು ಸಾವಿರ ವರ್ಷಗಳವರೆಗೆ ತಪಶ್ಚರ್ಯ ಮಾಡಿದರು ಅವನಿಗೊಂದಿಷ್ಟು ಫಲ ಕೊಡಲಿಲ್ಲ, ಇಲ್ಲ ಅಂತ ಹೇಳಿ ಕಳಿಸಿದರು ಬ್ರಹ್ಮ ದೇವರು ಅಂತ ಪ್ರಚಾರ ಆಗಿಬಿಟ್ಟರೆ ಬೇರೆಯವರು ಯಾಕೆ ತಪಸ್ಸು ಮಾಡುತ್ತಾರೆ. ಸಜ್ಜನರು ತಪಸ್ಸನ್ನು ಮಾಡುವುದು ಬಿಟ್ಟರೆ ಕಷ್ಟ, ತಪಸ್ಸಿಗೆ ಫಲ ಇಲ್ಲ ಅಂತ ಆಗಬಾರದು ಅದಕ್ಕಾಗಿ ನಾನು ವರ ಕೊಡುವುದು ಅನಿವಾರ್ಯ ಅಂತ ಕೊಟ್ಟಿದ್ದೇನೆ ಆದರೆ ಆ ತಪಸ್ಸಿನಿಂದ ದುರುಪಯೋಗ ಸ್ವಲ್ಪ ದಿನ ಅವನು ಮಾಡಿಕೊಂಡರೂ ಕೂಡ ಪೂರ್ಣವಾಗಿ ಅದರಿಂದ ಸಜ್ಜನರಿಗೆ ತೊಂದರೆಯೇ ಆಗುವಂತೆ ಅವಕಾಶ ಕೊಡದೇ ಇದ್ದ ಹಾಗೆ ದೇವರು ಅದಕ್ಕೆ ವ್ಯವಸ್ಥೆ ಮಾಡುತ್ತಾನೆ ನೀವು ಚಿಂತೆ ಮಾಡಬೇಡಿ ಎಂಬುದಾಗಿ ಬ್ರಹ್ಮ ದೇವರು ಎಲ್ಲರಿಗೆ ಭರವಸೆಯನ್ನು ಕೊಟ್ಟಿದ್ದಾರೆ. ಆಗ ಅವನು ಅತ್ಯಂತ ದುಷ್ಟನೇ ಆಗಿ ತನ್ನ ಸ್ವಭಾವಕ್ಕೆ ತಕ್ಕಂತೆ ಒಳಗಿರುವಂತಹ ಜಯ, ಅವನು ಸಾತ್ವಿಕ, ವಿಷ್ಣು ಭಕ್ತ, ಅವನು ಸಜ್ಜನ ಆದರೆ ಅಸುರ ಅವನು ತನ್ನ ಸ್ವಭಾವಕ್ಕೆ ಅನುಗುಣವಾಗಿ ಉನ್ಮತ್ತನಾಗಿ ಎಲ್ಲ ಲೋಕಪಾಲಕರಿಗೆ ಪೀಡೆಯನ್ನು ಕೊಡುತ್ತಾನೆ ಋಷಿಗಳಿಗೆ, ಮುನಿಗಳಿಗೆ ಭಾರೀ ಪೀಡೆಯನ್ನು ಕೊಡುತ್ತಾ ಇರುವಾಗ ದೇವತೆಗಳೆಲ್ಲ ಪರಮಾತ್ಮನಿಗೆ ಶರಣು ಹೋಗಿ ಪ್ರಾರ್ಥನೆಯನ್ನು ಮಾಡುತ್ತಾ ಇದ್ದಾರೆ.

ತ್ವಂ ಹಿ ನಃ ಪರಮೋ ಧಾತಾ ಬ್ರಹ್ಮಾದೀನಾಂ ಸುರೋತ್ತಮ । (41.71 ಹರಿವಂಶಪರ್ವ)

ತ್ವಂ ಹಿ ನಃ ಪರಮೋ ದೇವಸ್ತ್ವಂ ಹಿ ನಃ ಪರಮೋ ಗುರುಃ ॥ (41.72 ಹರಿವಂಶಪರ್ವ)

ನೀನೇ ರಕ್ಷಕ, ನೀನೇ ಸರ್ವೋತ್ತಮ, ನೀನೇ ಸಕಲ ಜಗನ್ನಿಯಾಮಕ, ದೇವತೆಗಳಿಗೂ ದೇವತ್ವವನ್ನು ಕೊಟ್ಟವ ನೀನು ಉಳಿಸುವುದು ನಿನ್ನ ಕೆಲಸ ಅಲ್ಲವಾ **'ತ್ವಂ ಹಿ ನಃ ಪರಮೋ ದೇವಃ'** ನಮಗೆ ದೇವತ್ವವನ್ನು ಕೊಟ್ಟ ಪರಮ ದೇವ ನೀನು ಪರಮ ಗುರು, ನಮ್ಮ ಗುರುಗಳು ಬ್ರಹ್ಮ ದೇವರು ಅವರಿಗೆ ಗುರು ನೀನು, ನೀನು ಪರಮ ಗುರು. **'ಜಗದ್ಗುರೂಣಾಂ ಗುರುಮ್ ಅಂಜಸೈವ'** ಅಂತಹ ಪರಮ ಗುರುವಾದ ನೀನು ನಮ್ಮನ್ನು ರಕ್ಷಣೆ ಮಾಡು ಈ ರೀತಿ ನಾವು ಬಹಳ ಅನಾಥರಾಗಿದ್ದೇವೆ, ಶರಣಾಗತ ರಕ್ಷಕ ನೀನು ಉದ್ಧಾರ ಮಾಡು ಎಂಬುದಾಗಿ ಬ್ರಹ್ಮಾದಿ ದೇವತೆಗಳು ಪರಮಾತ್ಮನಿಗೆ ಪ್ರಾರ್ಥನೆ ಮಾಡಿದಾಗ ಭಗವಂತ ಹೇಳಿದ **'ಭಯಂ ತ್ಯಜಧ್ವಮಮರಾ'**[1] ಏನು ಚಿಂತೆ ಮಾಡಬೇಡಿ ಅಂತ ಹೇಳಿ ಪರಮಾತ್ಮ ಬಂದೇ ಬಿಟ್ಟಿದ್ದಾನೆ ನರಸಿಂಹ ರೂಪವನ್ನು ಧಾರಣೆ ಮಾಡಿಕೊಂಡು. ಶ್ರೀಮದ್ಭಾಗವತದಲ್ಲಿ ಪ್ರಹ್ಲಾದ ರಾಜರು ಪ್ರಾರ್ಥನೆಯನ್ನು ಮಾಡುತ್ತಾರೆ ಎಲ್ಲ ಕಡೆಗೆ ಪರಮಾತ್ಮ ವ್ಯಾಪ್ತನಾಗಿದ್ದಾನೆ ಅಂದರೆ ಸ್ತಂಭದಲ್ಲಿ ಇದ್ದಾನೆ ಅಂತ ಅವನ ಪ್ರಶ್ನೆ ಹೌದು ಎಂಬ ಪ್ರಹ್ಲಾದ ರಾಜರ ಉತ್ತರ ಸತ್ಯ ಮಾಡುವುದಕ್ಕಾಗಿ ಪರಮಾತ್ಮ ಸ್ತಂಭವನ್ನು ಬಿರಿದು ಬಂದದ್ದು. ಹರಿವಂಶದ ಪ್ರಕಾರ ಕಲ್ಪಬೇಧೇನ ಹೇಳುವಂತಹದ್ದು ಹರಿವಂಶ ನೇರವಾಗಿ ನರಸಿಂಹ ದೇವರು ಬಂದು ಬಿಟ್ಟಿದ್ದಾರೆ ಹಿರಣ್ಯಕಶಿಪುವಿನ ಹತ್ತಿರ

ಹಿರಣ್ಯಕಶಿಪೋ ರಾಜನ್ನಾಜಗಾಮ ಹರಿಃ ಸಭಾಮ್ । (41.75 ಹರಿವಂಶಪರ್ವ)

ಅರ್ಧ ಶರೀರ ನರ ಶರೀರ ಇನ್ನು ಅರ್ಧ ಶರೀರ ಸಿಂಹ ಶರೀರ.

ನರಸ್ಯ ಕೃತ್ವಾರ್ಧತನುಂ ಸಿಂಹಸ್ಯಾರ್ಧತನುಂ ಪ್ರಭುಃ ।

ನಾರಸಿಂಹೇಣ ವಪುಷಾ ಪಾಣಿಂ ಸಂಸ್ಪೃಶ್ಯ ಪಾಣಿನಾ ॥ (41.76 ಹರಿವಂಶಪರ್ವ)

1. 41.73 ಹರಿವಂಶಪರ್ವ

ಕೈಯಿಂದ ಕೈಯನ್ನು ತಿಕ್ಕುತ್ತಾ ಬರುತ್ತಾ ಇದ್ದಾನೆ ಯಾಕೆ ಅಂದರೆ ಬೇರೆ ಏನು ಆಯುಧದಿಂದಲೂ ಸಂಹಾರ ಮಾಡಬಾರದು ಅಂತ ವರ ಕೇಳಿದ್ದಾನೆ ಅವನು ಇದೇ ಕೈಯಿಂದಲೇ ನಿನ್ನ ಹಂಹಾರ ಮಾಡುತ್ತೇನೆ ಅಂತ ತೋರಿಸುವ ರೀತಿಯಲ್ಲಿ ಕೈಯನ್ನು ತೋರಿಸುತ್ತಾ ಬರುತ್ತಾ ಇದ್ದಾನೆ ಪರಮಾತ್ಮ ಸಿಂಹ ರೂಪದಿಂದ. ಆ ರೀತಿ ಬಂದವನೇ ಪರಮಾತ್ಮ ಅಷ್ಟೆಲ್ಲ ದೈತ್ಯರ ಗಣದಿಂದ ಗುಪ್ತನಾದ ರಕ್ಷಿತನಾದ ಹಿರಣ್ಯಕಶಿಪುವನ್ನು ಕೇವಲ ಒಂದೇ ಒಂದು ತನ್ನ ಪಾಣಿಯಿಂದ ಸಂಹಾರ ಮಾಡಿದ್ದಾನೆ. ಪರಮಾತ್ಮನಿಗೆ ಇದು ಬಹಳ ಸಣ್ಣದು ಆದರೆ ನಮ್ಮ ದೃಷ್ಟಿಯಲ್ಲಿ ಅತ್ಯದ್ಭುತ ಅತ್ಯಾಶ್ಚರ್ಯ. ಎಲ್ಲಾ ಅವನ ಗಣ, ಅವನ ಸೈನಿಕರು ಎಲ್ಲರನ್ನೂ ಕೂಡಿಕೊಂಡು ಹಿರಣ್ಯಕಶಿಪುವನ್ನು ಕೇವಲ ತನ್ನ ಒಂದು ಕೈಯಿಂದ ಸಂಹಾರ ಮಾಡಿದ್ದಾನೆ ಎಂಬುದಾಗಿ ಹೇಳುತ್ತಾರೆ. ಶ್ರೀಮದ್ಭಾಗವತದ ಪ್ರಕಾರ ಒಂದು ಕಲ್ಪದಲ್ಲಿ ಅವನನ್ನು ತೊಡೆಯ ಮೇಲೆ ಹಾಕಿಕೊಂಡು ಅವನ ಹೊಟ್ಟೆಯನ್ನು ಹರಿದು ಒಳಗಿರುವ ಕರುಳಿನ ಮಾಲೆಯನ್ನು ಕೊರಳಿಗೆ ಹಾಕಿಕೊಂಡಿದ್ದಾನೆ ಅಂತನ್ನುವುದನ್ನು ನಾವು ಕೇಳುತ್ತೇವೆ. ಈ ರೀತಿ ನರಸಿಂಹ ದೇವರು ಹಿರಣ್ಯಕಶಿಪುವನ್ನು ಸಂಹಾರ ಮಾಡಿ ಸಕಲ ಸಜ್ಜನರ ರಕ್ಷಣೆಯನ್ನು ಮಾಡಿದ್ದಾರೆ ಅಂತಹ ನರಸಿಂಹ ದೇವರು ಎಲ್ಲ ವಿಘ್ನಗಳ ಪರಿಹಾರಕ್ಕೆ, ಪಾಪಗಳ ನಿವಾರಣೆಗೆ, ರೋಗರುಜಿನಗಳ ನಿವಾರಣೆಗೆ ಮುಖ್ಯವಾಗಿ ಎಲ್ಲ ಭಕ್ತರಿಗೆ ಅನುಗ್ರಹ ಮಾಡುವುದಕ್ಕೋಸ್ಕರ ಅಂತೆ ನಿಂತವರು. ಇದಕ್ಕೋಸ್ಕರನೇ ಕಷ್ಟಗಳ ಪರಿಹಾರ, ದುರಿತಗಳ ನಿವಾರಣೆ, ವಿಘ್ನಗಳ ಪರಿಹಾರ, ರೋಗಗಳ ಪರಿಹಾರ, ಅಜ್ಞಾನಾದಿ ದೋಷಗಳ ನಿವಾರಣೆ, ಶುದ್ಧವಾದಂತಹ ಆರೋಗ್ಯ, ಜ್ಞಾನ ಇವುಗಳನ್ನು ಕೊಟ್ಟು ನಿರ್ವಿಘ್ನವಾಗಿ ಸತ್ಕಾರ್ಯಗಳನ್ನು ಮಾಡಿಸುವುದಕ್ಕೋಸ್ಕರವಾಗಿ ಇದ್ದ ಭಗವಂತ ನರಸಿಂಹ ರೂಪಿಯಾಗಿರುವಂತಹ ಪರಮಾತ್ಮ ಎಂಬುದಾಗಿ ತಿಳಿಸುತ್ತಾರೆ.

ಆಮೇಲೆ ಪರಮಾತ್ಮ ವಾಮನ ರೂಪವನ್ನು ಧಾರಣ ಮಾಡಿ, ನೋಡಿ ಅಲ್ಲಿ ನರಸಿಂಹರೂಪ ಆದಮೇಲೆ ವಾಮನ ರೂಪ ಉಪ, ಉಪ ಅಂದರೆ ಉಪದ್ರವ ನಾಮದಿಂದ ಪ್ರತಿಪಾದ್ಯರಾಗಿರುವಂತಹ ನರಸಿಂಹ ದೇವರು ಅವರೇ ಇಂದ್ರ ಮೊದಲವತಾರ ಹಿರಿಯ ಆಗಿ ಉಳ್ಳಂತಹ ವಾಮನ ಆದ್ದರಿಂದ ಅವನಿಗೆ ಉಪೇಂದ್ರ ಅಂತ ನರಸಿಂಹನ ನಂತರದಲ್ಲಿ ಬರುವ ಅವತಾರ ಅಂತ ಅರ್ಥ ಉಪೇಂದ್ರ. ಅಂತಹ ಉಪೇಂದ್ರ ನಾಮಕನಾದ ವಾಮನ ರೂಪಿಯಾಗಿರುವಂತಹ ಪರಮಾತ್ಮ ತಾನು ಅವತಾರವನ್ನು ಮಾಡಿದ್ದಾನೆ.

ಮಹಾನುಭಾವರಾದ ಸತ್ಯಧರ್ಮತೀರ್ಥ ಶ್ರೀಪಾದಂಗಳವರು ತಮ್ಮ ಗುರುಗಳಾದಂತಹ ಸತ್ಯವರತೀರ್ಥ ಶ್ರೀಪಾದಂಗಳವರ ಸ್ತುತಿಯನ್ನು ಮಾಡುವಾಗ ಹೇಳುತ್ತಾರೆ ನೀವು ವಾಮನ ದೇವರು ಇದ್ದ ಹಾಗೆ ಅಂತ. ವಾಮನ ದೇವರ ವಿಶೇಷ ಅನುಗ್ರಹ ನಿಮ್ಮ ಮೇಲೆ ಇರುವುದರಿಂದ ನೀವು ವಾಮನ ದೇವರು ಇದ್ದ ಹಾಗೆ ಅಂತ ಯಾಕೆ ಅಂದರೆ ವಾಮನ ದೇವರು ಏನು ಮಾಡಿದರು ಆ ಬಲಿಯ ತಲೆಯ ಮೇಲೆ ಪಾದವನ್ನು ಇಟ್ಟಿದ್ದಾರೆ. ಹಾಗೆ ಬಲಿಷ್ಠರಾಗಿರುವಂತಹ ಅನೇಕ ರಾಜರು, ಮಹಾರಾಜರುಗಳು ಏನಿದ್ದಾರೋ ಅವರೆಲ್ಲರಿಗೆ ವಿಶೇಷವಾಗಿ ಅನುಗ್ರಹವನ್ನು ಮಾಡುವುದಕ್ಕೆ ನಿಮ್ಮ ಪಾದಗಳನ್ನು ತೆಗೆದುಕೊಂಡು ಅವರು ತಮ್ಮ ತಲೆಯ ಮೇಲೆ ಇಟ್ಟುಕೊಳ್ಳುತ್ತಾರೆ ಯಾಕೆ ಅಂದರೆ ನಮ್ಮ ಗುರು ಪಾದದ ಧೂಲಿಯಿಂದ ನಮ್ಮ ಪಾಪಗಳ ಪರಿಹಾರವಾಗುತ್ತದೆ, ನಮ್ಮ ಉದ್ಧಾರವಾಗುತ್ತದೆ ಅಂತ. ಅತೀ ಶ್ರದ್ಧೆಗಳಿಂದ ಅನೇಕ ಏನೀತರಾದ ರಾಜರುಗಳು, ಮಹಾರಾಜರುಗಳು ನಿಮ್ಮ ಪಾದವನ್ನು ಎತ್ತಿ ತಲೆಯ ಮೇಲೆ ಇಟ್ಟುಕೊಂಡು ಧನ್ಯರು ಅಂತ ಭಾವಿಸುತ್ತಾರೆ. ಅಂದು ಆ ಬಲಿ ರಾಜನ ಮೇಲೆ ಪಾದ ಇಟ್ಟ ವಾಮನ ಆ ವಾಮನ ಸಾಲಿಗ್ರಾಮದ ಪೂಜೆಯನ್ನು ನಿತ್ಯದಲ್ಲಿ ಮಾಡುವ ನೀವು ದಧಿ ವಾಮನ ಸಾಲಿಗ್ರಾಮ ಶ್ರೀಮದಾಚಾರ್ಯರು ಪೂಜೆ ಮಾಡಿದ ದಧಿ ವಾಮನ ಸಾಲಿಗ್ರಾಮದ ಪೂಜೆಯನ್ನು ನಿತ್ಯದಲ್ಲಿ ಮಾಡುವ ನೀವು ಬಲಿ ಬಲಿಷ್ಠರಾದ ರಾಜರ ತಲೆಯ ಮೇಲೆ ಪಾದವನ್ನು ಇಟ್ಟಿದ್ದೀರಿ. ಆದ್ದರಿಂದ ಆ ವಾಮನ

ದೇವರ ವಿಶೇಷ ಅನುಗ್ರಹ ನಿಮ್ಮ ಮೇಲೆ ಇದೆ ಎಂಬುದಾಗಿ ಸತ್ಯವರತೀರ್ಥ ಶ್ರೀಪಾದಂಗಳವರ ಪಾದುಕಾ ಸ್ತುತಿಯಲ್ಲಿ ಸತ್ಯಧರ್ಮತೀರ್ಥ ಶ್ರೀಪಾದಂಗಳವರು ಸ್ಮರಣೆ ಮಾಡುತ್ತಾರೆ. ಅಂತಹ ಮಹಾನುಭಾವರು ಸತ್ಯವರತೀರ್ಥ ಶ್ರೀಪಾದಂಗಳವರು, ಸಂತೆಬಿದನೂರಿನಲ್ಲಿ ಅವರ ಮೂಲ ವೃಂದಾವನ ಇದೆ.

ಆ ಸತ್ಯವರತೀರ್ಥ ಶ್ರೀಪಾದಂಗಳವರ ವಿಶಿಷ್ಟವಾದ ತಪಸ್ಸು ಶ್ರೀರಾಮಚಂದ್ರ ದೇವರನ್ನು ಇಪ್ಪತ್ತು ದಿನಗಳವರೆಗೆ ಉಪವಾಸ ಇದ್ದು ಪುನಃ ಪಡೆದುಕೊಂಡಂತಹ ಮಹಾನುಭಾವರು ಸತ್ಯವರತೀರ್ಥ ಶ್ರೀಪಾದಂಗಳವರು ಅವರ ಅನುಗ್ರಹ, ಅವರ ಉಪಕಾರ ಎಷ್ಟು ಇದೆ ಅಂತ ಊಹೆ ಮಾಡುವುದಕ್ಕೆ ಸಾಧ್ಯ ಇಲ್ಲ, ಆ ದೃಷ್ಟಿಯಲ್ಲಿಯೇನೆ ಸತ್ಯಧರ್ಮತೀರ್ಥ ಶ್ರೀಪಾದಂಗಳವರು ವಾಮನ ದೇವರ ವಿಶೇಷ ಅನುಗ್ರಹ ಪಾತ್ರರು ಅಂತ ವಾಮನ ದೇವರ ಒಂದು ಅಲ್ಪಸಾದೃಶದ ಚಿಂತನವನ್ನು ಮಾಡಿದ್ದಾರೆ. ಹೇಗೆ ವಾಮನ ದೇವರು ಬಲಿ ಚಕ್ರವರ್ತಿಯಿಂದ ರಾಜ್ಯವನ್ನು ಕಸೆದುಕೊಂಡು ಪುನಃ ಇಂದ್ರ ದೇವರಿಗೆ ಕೊಟ್ಟರೋ ಆ ರೀತಿ ಆ ರಾಮ ದೇವರ ಪೆಟ್ಟಿಗೆಯನ್ನು ಬೇರೆಯವರು ತೆಗೆದುಕೊಂಡು ಹೋಗದಂತೆ ತಮ್ಮ ತಪಸ್ಸಿನಿಂದಲೇ ಅದನ್ನು ಪುನಃ ಪಡೆದುಕೊಂಡು ಈ ಮುಖ್ಯವಾದ ಮೂಲ ಸಂಸ್ಥಾನದಲ್ಲಿ ಸುಸ್ಥಿರವಾಗಿ ಅದು ಉಳಿಯುವಂತೆ ಮಾಡಿದಂತಹ ಮಹಾನುಭಾವರು ಸತ್ಯವರತೀರ್ಥ ಶ್ರೀಪಾದಂಗಳವರು ಹೀಗಾಗಿ ಅವರು ಮಾಡಿದ ಉಪಕಾರ ಬಹಳ ದೊಡ್ಡ ಉಪಕಾರ. ಇವತ್ತು ಆ ಶ್ರೀದಿಗ್ವಿಜಯಮೂಲರಾಮ ದೇವರ, ವೇದವ್ಯಾಸ ದೇವರ ದರ್ಶನವನ್ನು ಎಲ್ಲ ಭಗವದ್ಭಕ್ತರು ಭಕ್ತಿಯಿಂದ ಮಾಡಿ ಧನ್ಯರಾಗುತ್ತಾರೆ ಅಂತಂದರೆ ಆ ಸತ್ಯವರತೀರ್ಥ ಶ್ರೀಪಾದಂಗಳವರ ಒಂದು ವಿಶಿಷ್ಟವಾದ ಅನುಗ್ರಹ ಎಂಬುದಾಗಿ ಅಂತ ನಾವು ಭಾವಿಸಬೇಕು. ಅಂತಹ ಮಹಾಜ್ಞಾನಿಗಳು, ಮಹಾತಪಸ್ವಿಗಳು, ಪರಮವಿರಕ್ತ ಶಿಖಾಮಣಿಗಳು ಸತ್ಯವರತೀರ್ಥ ಶ್ರೀಪಾದಂಗಳವರು ಅವರ ವಿಶೇಷವಾದ ಸ್ಮರಣೆಯನ್ನು ಮಾಡಿ ಅವರ ಅನುಗ್ರಹವನ್ನು ಪಡೆಯೋಣ.

ಅಂತಹ ವಾಮನ ರೂಪಿಯಾದ ಪರಮಾತ್ಮನ ಅವತಾರವನ್ನು ಇಲ್ಲಿ ತಿಳಿಸುತ್ತಾರೆ. ಯಾವಾಗ ವಾಮನ ರೂಪಿಯಾದ ಭಗವಂತ ಒಂದು ಪಾದದಿಂದ ಭೂಮಿ ಕೆಳಗಿನ ಲೋಕಗಳು ಇನ್ನೊಂದು ಪಾದದಿಂದ ಮೇಲಿನ ಎಲ್ಲ ಲೋಕಗಳನ್ನು ವ್ಯಾಪಿಸಿ ಮೂರನೆಯ ಪಾದವನ್ನು ಬಲಿ ಚಕ್ರವರ್ತಿಯ ತಲೆಯ ಮೇಲೆ ಇಟ್ಟು ಆ ಬಲಿ ಚಕ್ರವರ್ತಿಯನ್ನು ಸುತಲಕ್ಕೆ ಕಳಿಸುವುದಕ್ಕೆ ಸಿದ್ಧನಾದನೋ ಆ ಸಂದರ್ಭದಲ್ಲಿ ಎಲ್ಲ ದೈತ್ಯರು ಯುದ್ಧಕ್ಕೆ ಬಂದಿದ್ದಾರೆ. ನಮ್ಮ ರಾಜನನ್ನು ಈ ರೀತಿ ನೀನು ವಂಚನೆಯನ್ನು ಮಾಡಿ ರಾಜ್ಯವನ್ನು ಕಸಿದುಕೊಂಡು ಸುತಲಕ್ಕೆ ಅಟ್ಟುತ್ತಾ ಇದ್ದೀಯಾ ನಾವು ಸುಮ್ಮನೆ ಇರುವುದಿಲ್ಲ, ಸಹನೆ ಮಾಡುವುದಿಲ್ಲ ಅಂತ ಎಲ್ಲ ದೈತ್ಯರು ಯುದ್ಧಕ್ಕೆ ಬಂದಿದ್ದಾರೆ. ದೇವರು ಏನು ವಂಚನೆ ಮಾಡಿಲ್ಲ ಶುಕ್ರಾಚಾರ್ಯರಲ್ಲಿ ಅಂತರ್ಯಾಮಿಯಾಗಿ ಇದ್ದು ಭಗವಂತ ಪ್ರೇರಣೆ ಮಾಡಿ ಅವನಿಗೆ ಹೇಳಿಸಿದ್ದಾನೆ ಇವನು ಬಂದವನು ಸಾಕ್ಷಾತ್ ವಿಷ್ಣು, ಸಾಮಾನ್ಯ ವಟುವಲ್ಲ. ಇವನು ಎಲ್ಲವನ್ನೂ ಕಸಿದುಕೊಳ್ಳುತ್ತಾನೆ ಅಂತ ಆ ಶುಕ್ರರಲ್ಲಿ ಅಂತರ್ಯಾಮಿಯಾಗಿ ಪರಮಾತ್ಮ ಶುಕ್ರ ಶೋಕರಹಿತನಾದದ್ದರಿಂದ ಪರಮಾತ್ಮನಿಗೆ ಶುಕ್ರ ಅಂತಾರೆ. ಅಂತಹ ಶೋಕರಹಿತನಾದ ಶುಕ್ರನಾಮಕನಾದ ಶುಕ್ರಾಂತರ್ಯಾಮಿಯಾದ ಪರಮಾತ್ಮ ಬಲಿ ಚಕ್ರವರ್ತಿಗೆ ಚೆನ್ನಾಗಿ ಹೇಳಿದ್ದಾನೆ. ಇವನು ಬಂದವನು ವಾಮನ ಸಾಕ್ಷಾತ್ ವಿಷ್ಣು ನಿನ್ನ ರಾಜ್ಯವನ್ನು ತೆಗೆದುಕೊಂಡು ಇಂದ್ರನಿಗೆ ಕೊಡುತ್ತಾನೆ ನೀನು ದಾನ ಕೊಡಬೇಕಾದರೆ ಹುಷಾರು ಅಂತ ಇಷ್ಟು ಗೊತ್ತಾಗಿಯೇ ಬಲಿ ಚಕ್ರವರ್ತಿ ದಾನ ಕೊಟ್ಟದ್ದು ಭಕ್ತಿಯಿಂದ. ವಂಚನೆ ಮಾಡಿದ್ದಲ್ಲ ವಾಮನ ಆದರೂ ಅದನ್ನು ತಿಳಿಯದಂತೆ ದೈತ್ಯರೆಲ್ಲ ಯುದ್ಧಕ್ಕೆ ಬಂದಿದ್ದಾರೆ ಭಾರೀ ಘನಘೋರವಾದಂತಹ ಯುದ್ಧವಾಗಿದೆ. ನಾನಾ ವಿಧವಾದ ವಿಚಿತ್ರವಾದಂತಹ ಆಯುಧಗಳನ್ನು ತೆಗೆದುಕೊಂಡಿದ್ದಾರೆ, ನಾನಾ ಮುಖಗಳ ಅಸುರರು ಆನೆಯ ಮುಖ, ಕೋಳಿಯ ಮುಖ,

ಮೊಲದ ಮುಖ, ಗೂಗಿ, ಕತ್ತೆ, ಒಂಟಿ, ಹಂದಿ, ಮೊಸಳೆ, ನರಿ, ಇಲಿ, ಕಪ್ಪೆ, ತೋಳ, ಬೆಕ್ಕು ಹೀಗೆ ಈ ವಿವಿಧ ಪ್ರಾಣಿಗಳ ಮುಖದ ಅಸುರರು. ನಾನಾ ವಿವಿಧ ಆಯುಧಗಳ ಧಾರಣೆ ಮಾಡಿದ ಅಸುರರು ವಿವಿಧ ವಾಹನಗಳಲ್ಲಿ ಬಂದಿದ್ದಾರೆ ಹಾಗೂ ನಾನಾ ವಿಧವಾದ ಪಕ್ಷಿಗಳು, ಪಶುಗಳು ಏನೇನೋ ವಾಹನಗಳನ್ನು ಹತ್ತಿ ಬಂದಿದ್ದಾರೆ ಅಂತಹ ಎಲ್ಲಾ ತರಹದ ಅಸುರರನ್ನು ಕೂಡ ಭಗವಂತ ಅಚಿಂತ್ಯದ್ಭುತ ಶಕ್ತಿ ಸಂಪನ್ನನಾಗಿರುವಂತಹ ಪರಮಾತ್ಮ ಅತ್ಯಂತ ಸುಲಭವಾಗಿ ಅವರೆಲ್ಲರನ್ನು ಸೋಲಿಸಿದ್ದಾನೆ.

ಪ್ರಮಥ್ಯ ಸರ್ವಾನ್ ದೈತೇಯಾನ್ ಪಾದಹಸ್ತತಲೈಃ ಪ್ರಭುಃ । (41.99 ಹರಿವಂಶಪರ್ವ)

ಹೇಗೆ ಅಂಗೈ ಅಂಗಾಲು ಅಷ್ಟೆ. ಅವರು ಅಷ್ಟೆಲ್ಲ ಆಯುಧ, ಅಷ್ಟೆಲ್ಲ ಶಕ್ತಿ, ಅಷ್ಟೆಲ್ಲ ವಾಹನಗಳನ್ನು ತೆಗೆದುಕೊಂಡು ಬಂದರೆ ಕೆಲವರನ್ನ ಅಂಗೈಯಿಂದ, ಕೆಲವರನ್ನ ಅಂಗಾಲಿನಿಂದ ಈ ಕಾಲು ಈ ಕಾಲು ಎತ್ತೆತ್ತಿ ಇಡುತ್ತಾನೆ ಎರಡು ಕೈಗಳನ್ನು ಹೀಗೆ ಬಡೀತಾನೆ. ಅದೇನು ಆ ದೈತ್ಯ ಸಮುದ್ರದೊಳಗೆ ಈಸಾಡಿದಂತೆ ಅದು ಅವರ ಮರಣ, ಈಸಾಡುವಾಗ ಹೀಗೆ ಕೈ ಮಾಡುತ್ತಾರಲ್ಲ ಹಾಗೆ ಕೈ ಮಾಡುತ್ತ ಈಸಾಡುತ್ತ ಹೋಗಿದ್ದಾನೆ ವಾಮನ, ಆ ದೈತ್ಯ ಸಾಗರ ಎಲ್ಲರನ್ನು ನಾಶ ಮಾಡಿದ್ದಾನೆ ಅತ್ಯದ್ಭುತವಾದ ಆ ಪರಮಾತ್ಮನ ಪರಾಕ್ರಮ. ತ್ರಿವಿಕ್ರಮ ರೂಪಿಯಾದ ಪರಮಾತ್ಮ ತಾನು ತನ್ನ ರೂಪದ ಅಭಿವೃದ್ಧಿ ಮಾಡುವಾಗ ಸೂರ್ಯ ಚಂದ್ರರು ಅವನ ಸ್ಥನಕ್ಕೆ ಬಂದರಂತೆ ಏನು ಪರಮಾತ್ಮನ ಶ್ರೇಷ್ಠವಾದ ಆಭರಣಗಳನ್ನು ಒಬ್ಬ ಕವಿ ಇದರ ವರ್ಣನೆಯನ್ನು ಮಾಡಿದ್ದಾನೆ **'ಅಸ್ಯ ಕಾವ್ಯಸ್ಯ ಕವಯೋ ನ ಸಮರ್ಥಃ ವಿಶೇಷಣೇ'** ಆ ಮೂಲಭೂತವಾದ ವರ್ಣನೆ ಹರಿವಂಶದಲ್ಲಿ, ಮಹಾಭಾರತದಲ್ಲಿ ನಮಗೆ ಸಿಗುತ್ತದೆ ಕವಿಯ ವರ್ಣನೆ ಇದೆ ಆದರೆ ಅದು ಕಲ್ಪನೆಯಲ್ಲ ಮಹಾಭಾರತದಲ್ಲಿ ಇದ್ದದ್ದು ಅನ್ನುವುದನ್ನು ಗಮನಿಸಿ. ಸೂರ್ಯ ಚಂದ್ರರು ಸ್ಥನ ಭಾಗದಲ್ಲಿ ಬಂದರೆ ಏನೋ ಒಂದು ನೆಕ್‌ಲೇಸು ಹಾಕಿಕೊಂಡ ಹಾಗೆ ಕಾಣಿಸುತ್ತಾ ಇತ್ತು ಸ್ವಲ್ಪ ಹೊತ್ತಿಗೆ ಅದು ಇನ್ನೂ ಕೆಳಗೆ ಬರುತ್ತಾ ಇದೆ.

ಪರಂ ಪ್ರಕ್ರಮಮಾಣಸ್ಯ ಜಾನುದೇಶೇ ಸ್ಥಿತಾವುಭೌ ।
ವಿಷ್ಣೋರತುಲವೀರ್ಯಸ್ಯ ವದನ್ತ್ಯೇವಂ ದ್ವಿಜಾತಯಃ ॥ (41.101 ಹರಿವಂಶಪರ್ವ)

ಮೊಳಕಾಲು ಹತ್ತಿರ ಬರುತ್ತಾ ಇದೆ. ನಾಭಿಗೆ ಬಂತು, ಮೊಳಕಾಲು ಹತ್ತಿರ ಬರುತ್ತಾ ಇದ್ದಾನೆ ಸೂರ್ಯ, ಪರಮಾತ್ಮ ಅಷ್ಟು ಮೇಲೆ ಭಗವಂತನ ಶಿರಸ್ಸು ಸತ್ಯಲೋಕದಲ್ಲಿ ಪರಮಾತ್ಮನ ತಲೆ ಈ ರೀತಿ ಆ ಭಗವಂತ ಇಡೀ ಜಗತ್ತನ್ನು ವ್ಯಾಪಿಸಿದ್ದಾನೆ ತ್ರಿವಿಕ್ರಮ ರೂಪದಿಂದ. ಎಲ್ಲ ಋಷಿಗಳು, ಮುನಿಗಳು ವೇದಾದಿ ಮಂತ್ರಗಳಿಂದ ಸ್ತೋತ್ರ ಮಾಡಿದ್ದಾರೆ, ಬ್ರಹ್ಮ ದೇವರು ಬ್ರಹ್ಮಾಂಡದ ಕರ್ಪರವನ್ನು ಒಡೆದು ಬ್ರಹ್ಮಾಂಡ ಬಾಹ್ಯ ಜಲಧಾರಾ ಅದೇ ಗಂಗೆಯಾಗಿ ಹರಿದು ಬಂದಿದೆ ಬ್ರಹ್ಮ ದೇವರು ಕಮಂಡಲದಲ್ಲಿ ಆ ನೀರನ್ನು ತೆಗೆದುಕೊಂಡು ಪಾದ ಪ್ರಕ್ಷಾಲನೆ ಮಾಡಿದ್ದಾರೆ. ಆ ಗಂಗೆಯನ್ನೆ ಶಿರಸಾ ಧಾರಣೆ ಮಾಡಿದ್ದಾರೆ ರುದ್ರ ದೇವರು ಅದನ್ನೇ ಭಗೀರಥನ ತಪಸ್ಸಿನಿಂದ ಇವತ್ತು ನಾವೆಲ್ಲಾ ಭಗೀರಥಿಯನ್ನು ಪಡೆದುಕೊಂಡಿದ್ದೇವೆ ಅಂತಹ ಪರಮಾತ್ಮನ ಸ್ಮರಣೆಯನ್ನು ಮಾಡಬೇಕು.

ಭಗವಂತ ಅನುಸೂಯಾ ದೇವಿಯಲ್ಲಿ ಅತ್ರಿ ಋಷಿಗಳಿಂದ ದತ್ತಾ ಎಂಬ ಹೆಸರಿನಿಂದ ಅವತಾರ ಮಾಡುತ್ತಾನೆ ದತ್ತಾತ್ರೇಯ. ಚಾತುರ್ವರ್ಣ ಧರ್ಮವನ್ನು ಚೆನ್ನಾಗಿ ನಾಲ್ಕೂ ವರ್ಣದವರಿಗೆ ಅವರವರ ಕರ್ತವ್ಯ ಕರ್ಮಗಳನ್ನು ಉಪದೇಶ ಮಾಡಿದ ಮಹಾನುಭಾವ ದತ್ತಾತ್ರೇಯ, ಶುದ್ಧವಾದಂತಹ ಆನ್ವೀಕ್ಷಿಕೀ, ತರ್ಕವಿದ್ಯೆ ಅದನ್ನು ಉಪದೇಶ ಮಾಡಿದವನು ದತ್ತಾತ್ರೇಯ, ಶುದ್ಧವಾದ ಯೋಗ ಶಾಸ್ತ್ರವನ್ನು ಉಪದೇಶ ಮಾಡಿದವನು ದತ್ತಾತ್ರೆಯ ಅಂತಹ

ಮಹಾನುಭಾವ. ಧರ್ಮ ಶಿಥಿಲವಾದಾಗ, ಅಧರ್ಮ ಬಹಳ ಭೂಹಿಷ್ಟವಾದಾಗ ಅಧರ್ಮವನ್ನು ನಾಶ ಮಾಡಿ ಧರ್ಮದ ಸ್ಥಾಪನೆಯನ್ನು ಮಾಡಿದಂತವನು ದತ್ತಾತ್ರೇಯ, ಯಜ್ಞ ಯಾಗಾದಿಗಳನ್ನು ವೇದಾದಿ ಸಕಲ ಸಚ್ಛಾಸ್ತ್ರಗಳನ್ನು ಚೆನ್ನಾಗಿ ತಿಳಿಸಿ ಹೇಳಿ ಉಪದೇಶವನ್ನು ಮಾಡಿದವನು ದತ್ತಾತ್ರೇಯ, ಕಾರ್ತವೀರ್ಯಾರ್ಜುನನ ತಪಸ್ಸಿಗೆ ಮೆಚ್ಚಿ ಅವನಿಗೆ ಅನೇಕ ವರಗಳನ್ನು ಕೊಟ್ಟು ಅವನ ಸ್ಮರಣೆ ಮಾತ್ರ ಮಾಡುವುದರಿಂದ ನಷ್ಟವಾದ ದ್ರವ್ಯಗಳೆಲ್ಲನ್ನು ಮತ್ತೆ ಮರಳಿ ಪಡೆಯುವಂತೆ ಮಾಡಿದವನು ದತ್ತಾತ್ರೇಯ ಎಂಬುದಾಗಿ ದತ್ತಾತ್ರೇಯನ ಮಹಿಮೆಯನ್ನು ತಿಳಿಸುತ್ತಾ ಇದ್ದಾರೆ ಅಂತಹ ಪರಮಾತ್ಮನ ಸ್ಮರಣೆಯನ್ನು ಭಕ್ತಿಪೂರ್ವಕವಾಗಿ ಮಾಡಬೇಕು ಅಂತ.

ಆಮೇಲೆ ಪರಶುರಾಮ ದೇವರ ಅವತಾರವನ್ನು ಜನಮೇಜಯನಿಗೆ ಹೇಳುತ್ತಾ ಇದ್ದಾರೆ ವೈಶಂಪಾಯನರು. ಇಪ್ಪತ್ತೊಂದು ಬಾರಿ ಭೂಪ್ರದಕ್ಷಿಣೆಯನ್ನು ಮಾಡಿ ಈ ಕಾರ್ತವೀರ್ಯಾರ್ಜುನನ ಸಾವಿರ ಬಾಹುಗಳನ್ನ ನೋಡಿ, ಸೃಷ್ಟಿ ಲಯ ದತ್ತಾತ್ರೇಯ ಸಾವಿರ ಬಾಹುಗಳ ಸೃಷ್ಟಿ ಮಾಡಿದ ಕಾರ್ತವೀರ್ಯಾರ್ಜುನನಿಗೆ, ಪರಶುರಾಮ ಅದರ ಲಯ ಮಾಡಿದ ಅಂತಹ ಅದ್ಭುತವಾದ ಪರಮಾತ್ಮನ ಲೀಲೆ ಅದು. ಹೇ ನಾನೇ ವರ ಕೊಟ್ಟದ್ದು ಅಂತ ಬಹಳ ಪ್ರೀತಿಯಿಂದ ಅದನ್ನು ಉಳಿಸಲಿಲ್ಲ ಎಷ್ಟು ದಿವಸ ಇರಬೇಕೋ ಇರಬೇಕು ಅವನು ಉನ್ಮತ್ತನಾಗಿ ಸಜ್ಜನರಿಗೆ ಅದರಿಂದ ಪೀಡೆಯನ್ನು ಕೊಡುತ್ತಾನೆ ಅಂತ ಗೊತ್ತಾದಾಗ ಆ ಸಾವಿರ ಬಾಹುಗಳನ್ನು ಕತ್ತರಿಸಿದ್ದಾನೆ. ಹಿಂದೆ ಕೇಳಿದ್ದೀರಿ ಅವನು ವರನೂ ಕೇಳಿದ್ದ ನನಗೆ ಆ ಸಾವಿರ ಬಾಹುಗಳನ್ನು ಕತ್ತರಿಸಿ ಸಂಹಾರ ಮಾಡುವಂಥವನು ಸಾಕ್ಷಾತ್ ಭಗವಂತನೇ ಸರ್ವೋತ್ತಮನಾದವನೇ ಆಗಿರಬೇಕು ಅಂತ. ಆ ದತ್ತಾತ್ರೇಯನ ವರ, ದತ್ತಾತ್ರೇಯನ ಸಂಕಲ್ಪಕ್ಕೆ ತಕ್ಕಂತೆ ದತ್ತಾತ್ರೇಯನಿಂದ ಅತ್ಯಂತ ಅಭಿನ್ನನಾದಂತಹ ಪರಶುರಾಮ ಆ ರೀತಿಯಾಗಿ ಅವನನ್ನು ಸಾವಿರ ಬಾಹುಗಳನ್ನು ಕತ್ತರಿಸಿ ಸಂಹಾರ ಮಾಡಿದ್ದಾನೆ ಎಂಬುದಾಗಿ ಹೇಳುತ್ತಾರೆ. ಇಪ್ಪತ್ತೊಂದು ಬಾರಿ ಸಂಪೂರ್ಣ ಭೂಪ್ರದಕ್ಷಿಣೆ ಮಾಡಿ ಎಲ್ಲ ದುಷ್ಟ ಕ್ಷತ್ರಿಯರ ಸಂಹಾರ ಮಾಡಿ, ಸಜ್ಜನರ ರಕ್ಷಣೆಯನ್ನು ಮಾಡಿ ಆ ಸಮಗ್ರ ಭೂಪತಿತ್ವ ಸ್ವಾಭಾವಿಕವಾಗಿ ತನಗೆ ಇದ್ದದ್ದನ್ನೇ ಅಭಿವ್ಯಕ್ತಗೊಳಿಸಿ ಭೂಮಿಯ ಆಸೆಗೆ ನಾನು ಈ ರೀತಿ ಕ್ಷತ್ರಿಯರ ಸಂಹಾರ ಮಾಡಿದ್ದಲ್ಲ, ಕೇವಲ ಸಜ್ಜನರ ರಕ್ಷಣೆಗಾಗಿ, ದುರ್ಜನರ ಶಿಕ್ಷಣಕ್ಕಾಗಿ ಅಂತ ಆ ಸಮಗ್ರ ಭೂಮಿಯನ್ನು ಕಶ್ಯಪರಿಗೆ ದಾನ ಮಾಡಿಬಿಟ್ಟಿದ್ದಾರೆ ಪರಶುರಾಮ ದೇವರು. ತಾವು ಸಮುದ್ರವನ್ನು ಆಚೆಗೆ ಸರಿಸಿ ಆ ಸಮುದ್ರದ ದಡದಲ್ಲಿ ಕರಾವಳಿ ಪ್ರದೇಶದಲ್ಲಿ ತಾವು ವಾಸ ಮಾಡಿದ್ದಾರೆ ಕಾರಣ ಭೂಮಿಯನ್ನೆಲ್ಲ ದಾನ ಮಾಡಿದ್ದೇನೆ ಅಂತ ಅಂತಹ ಮಹಾನುಭಾವರು ಪರಶುರಾಮ ದೇವರು. ಪರಶುರಾಮ ದೇವರು ಮಹೀಂದ್ರ ಪರ್ವತದಲ್ಲಿ ಇವತ್ತಿಗೂ ಇದ್ದಾರೆ, ಜ್ಞಾನಿಗಳಿಗೆ ಕಾಣುತ್ತಾರೆ ಕೃಷ್ಣಪಕ್ಷ ಚತುರ್ದಶೀ ಕೃಷ್ಣಪಕ್ಷದ ಅಷ್ಟಮಿ ಎರಡು ತಿಥಿಗಳಲ್ಲಿ ವಿಶೇಷವಾಗಿ ಆ ಪರಶುರಾಮ ದೇವರು ಋಷಿಗಳಿಗೆ, ಮುನಿಗಳಿಗೆ ದರ್ಶನ ಕೊಡುತ್ತಾರೆ ಇನ್ನುಳಿದ ದಿನ ಅವ್ಯಕ್ತರಾಗಿ ಇರುತ್ತಾರೆ ಅಂತ. ನಮ್ಮಂಥವರಿಗೆ ದರ್ಶನ ಕೊಡುವುದೇ ಇಲ್ಲ, ಮಹಾತಪಸ್ವಿಗಳು, ಜ್ಞಾನಿಗಳು ಸಾಧನೆ ಮಾಡಿದವರು ಆಗಿದ್ದರೆ ಅಂಥವರಿಗೆ ಅವರು ದರ್ಶನವನ್ನು ಕೊಡುತ್ತಾರೆ ಅಂತ ಮಹಾಭಾರತದ ಮತ್ತೊಂದು ಭಾಗದಲ್ಲಿ ನಾವು ಕಾಣುತ್ತೇವೆ ಅಂತಹ ಮಹಾನುಭಾವರು ಪರಶುರಾಮ ದೇವರು.

ಮುಂದೆ ಸಾಕ್ಷಾತ್ ಪ್ರಭು ಶ್ರೀರಾಮಚಂದ್ರ ಅವತಾರ ಮಾಡಿದ್ದಾನೆ ಸ್ವಾಯಂಭುವ ಮನುವಿನ ಅವತಾರ ದಶರಥ ವೈವಸ್ವತ ಮನುವಿನ ಆವೇಶ ಅಂತಹ ಮಹಾನುಭಾವನಾದ ದಶರಥನಲ್ಲಿ ಪರಮಾತ್ಮ ಅವತಾರ ಮಾಡುತ್ತಾ ಇದ್ದಾನೆ ರಾಮ. ಬ್ರಹ್ಮವೈವರ್ತ ಪುರಾಣದಲ್ಲಿ ಕೃಷ್ಣ ಜನ್ಮಖಂಡ ನೂರಹನ್ನೊಂದನೆಯ ಅಧ್ಯಾಯದಲ್ಲಿ ಹದಿನೆಂಟನೆಯ ಶ್ಲೋಕದಲ್ಲಿ ಆ ಶ್ರೀರಾಮ ಆ ರಾಮ ಅಂತ ಯಾಕೆ ಕರೀತಾರೆ ಅಂತ ಹೇಳುತ್ತಾರೆ ಅನೇಕ ಅರ್ಥಗಳನ್ನು ಹೇಳುತ್ತಾರೆ ಒಂದನ್ನು ತಿಳಿಯೋಣ.

ರಾ ಶಬ್ದೋ ವಿಶ್ವವಚನಃ ಮಶ್ಚಾಪೀಶ್ವರ ವಾಚಕಃ ।
ವಿಶ್ವಾನಾಮ್ ಈಶ್ವರೋ ಯೋಽಹಿ ತೇನ ರಾಮಃ ಪ್ರಕೀರ್ತಿತಃ ॥

ರಾ, ರಾ ಅಂದರೆ ವಿಶ್ವ ಅಂತ ನೋಡಿ ಸ್ವತಃ ವೇದವ್ಯಾಸ ದೇವರೇ ಬ್ರಹ್ಮವೈವರ್ತ ಪುರಾಣದಲ್ಲಿ ರಾಮ ಶಬ್ದದ ನಿರ್ವಚನವನ್ನು ನಮಗೆ ತಿಳಿಸುತ್ತಾರೆ. **'ರಾ ಶಬ್ದೋ ವಿಶ್ವವಚನಃ' 'ರಾ'** ಅಂದರೆ ಸಂಪೂರ್ಣವಾಗಿ ಇರುವಂತಹ ಪ್ರಪಂಚ ವಿಶ್ವ **'ಮ'** ಅಂದರೆ ಈಶ್ವರ ನಿಯಾಮಕ ಅಂತ ಅರ್ಥ **'ರಾಮ'** ಸಕಲ ಜಗನ್ನಿಯಾಮಕ ವಿಶ್ವೇಶ್ವರ **'ವಿಶ್ವೇಶ್ವರ ಮಜಂದೇವಂ'** ಆ ವಿಶ್ವೇಶ್ವರನಾದದ್ದರಿಂದ ಪರಮಾತ್ಮನಿಗೆ ರಾಮ ಎಂಬುದಾಗಿ ಕರೀತಾರೆ. **'ರಮಂತೇ ಯೋಗಿನಃ ಅಸ್ಮಿನ್'** ಇವನ ಧ್ಯಾನದಲ್ಲಿ ಯೋಗಿಗಳು ರತರಾಗುತ್ತಾರೆ ಆದ್ದರಿಂದಲೂ ಅವನಿಗೆ ರಾಮ ಎಂಬುದಾಗಿ ಕರೀತಾರೆ. **'ರಮಯಾ ರಮಮಾಣಃ'** ಆದ್ದರಿಂದಲೂ ಆ ಪರಮಾತ್ಮನಿಗೆ ರಾಮ ಇದೆಲ್ಲ ಬ್ರಹ್ಮವೈವರ್ತ ಪುರಾಣ ಹೇಳುತ್ತದೆ ರಮಯಾ ರಮಮಾಣನಾದದ್ದರಿಂದ ಅವನಿಗೆ ರಾಮ ಎಂಬುದಾಗಿ ಕರೀತಾರೆ ಅಂತಹ ಸರ್ವೋತ್ತಮನಾದ ಪ್ರಭು ಶ್ರೀರಾಮಚಂದ್ರ ಅವತಾರವನ್ನು ಮಾಡಿದ್ದಾನೆ. ವಿಶ್ವಾಮಿತ್ರರ ಪ್ರಾರ್ಥನೆಯಂತೆ ಅವರ ಯಜ್ಞದ ರಕ್ಷಣೆಯನ್ನು ಮಾಡಿದ ಮಾರೀಚಿನನ್ನು ದೂರ ಓಡಿಸಿ, ಸುಬಾಹುವನ್ನು ಸಂಹಾರ ಮಾಡಿದ ಮುಂದೆ ಮಾರೀಚಿನನ್ನು ಸಂಹಾರ ಮಾಡುತ್ತಾನೆ ಪರಮಾತ್ಮ. ಆಮೇಲೆ ಶಿವ ಧನುರ್ಭಂಗವನ್ನು ಮಾಡಿ ಸೀತೆಯನ್ನು ವಿವಾಹ ಮಾಡಿಕೊಂಡು ದಶರಥನ, ಕೈಕೇಯಿಯ ಅಪೇಕ್ಷೆಯಂತೆ ನಿತ್ಯಾ ವಿಯೋಗಿನಿಯಾದ ಸೀತೆಯ ಜೊತೆಗೆ ಹದಿನಾಲ್ಕು ವರ್ಷ ವನವಾಸದಲ್ಲಿ ಇದ್ದು ಅಲ್ಲಿರುವಂತಹ ಎಲ್ಲ ದುಷ್ಟ ದೈತ್ಯರನ್ನು, ರಾಕ್ಷಸರನ್ನು ನಾಶ ಮಾಡಿ ಸಜ್ಜನರನ್ನು ಮುನಿಗಳನ್ನು ರಕ್ಷಣೆ ಮಾಡಿದ್ದಾನೆ.

ದೇವಕಾರ್ಯಕ್ಕೋಸ್ಕರ ಪರಮಾತ್ಮ **'ತ್ರಿದಶಮುನಿಕೃತೇರಣ್ಯಮೇವಾವಿವೇಶ'** ಶ್ರೀಮದಾಚಾರ್ಯರು ಹೇಳುತ್ತಾರೆ. ಕೇವಲ ಕೈಕೇಯಿಯ ಮಾತಿಗಾಗಿ ಅಲ್ಲ ಆ ಕೈಕೇಯಿಯ ಅಪೇಕ್ಷೆ ನಿಜ ಅವಳಿಗೆ ಯೋಗ್ಯವಾದ ಗತಿಯನ್ನು ಅದಕ್ಕೆ ಏನು ಕೊಡಬೇಕೋ ಕೊಟ್ಟ ಆದರೆ ಮುಖ್ಯವಾಗಿ ದೇವತೆಗಳ, ಮುನಿಗಳ ಅಪೇಕ್ಷೆಯನ್ನು ಪೂರ್ಣ ಮಾಡುವುದಕ್ಕಾಗಿ, ದುರ್ಜನರ ನಾಶ, ಸಜ್ಜನರ ರಕ್ಷಣೆಗಾಗಿ ಪರಮಾತ್ಮ ಅರಣ್ಯಕ್ಕೆ ಬಂದಿದ್ದಾನೆ. ಅಲ್ಲಿ ಅನೇಕ ಜನರನ್ನು ವಿರಾಧ, ಕಬಂಧ ಮೊದಲಾದವರೆಲ್ಲ ಗಂಧರ್ವರು ಶಾಪದಿಂದ ಆ ಅಸುರ ಯೋನಿಯಲ್ಲಿ ರಾಕ್ಷಸರಾಗಿ ಹುಟ್ಟಿದ್ದಾರೆ ಅವರನ್ನು ಸಂಹಾರ ಮಾಡಿ ಅವರ ಮೂಲರೂಪಕ್ಕೆ ಪರಮಾತ್ಮ ಕಳಿಸಿದ್ದಾನೆ. ಸುಗ್ರೀವನಿಗಾಗಿ ವಾಲಿಯನ್ನು ಸಂಹಾರ ಮಾಡಿದ, ವಾಲಿ ಪರಮ ಭಗವದ್ಭಕ್ತ ಸಾಕ್ಷಾತ್ ಇಂದ್ರಾವತಾರ ಆದರೆ ಆ ವಾಲಿಯನ್ನು ಪರಮಾತ್ಮ ಈ ಅವತಾರದ ಕಾರ್ಯ ಮುಗಿದಿದೆ ಅನ್ನುವುದಕ್ಕೋಸ್ಕರ ಅವನನ್ನು ಸಂಹಾರ ಮಾಡಿದ. ಸುಗ್ರೀವನ ಮಡದಿಯನ್ನು ಅಪಹಾರ ಮಾಡಿದ ಅವನು, ಮಾಡಿದ ಅಪರಾಧಕ್ಕೆ ಅವನಿಗೆ ಇಷ್ಟೇ ಶಿಕ್ಷೆ ಸಾಕು ಅಂತ ಉತ್ತಮ ದ್ರೋಹ ಅಲ್ಲ ಅದು ಅನ್ನುವುದಕ್ಕಾಗಿ ಅವನಿಗೆ ಇಷ್ಟನ್ನೇ ಕೊಟ್ಟಿದ್ದಾನೆ. ಸುಗ್ರೀವ ಮಾತ್ರ ಅವನು ಮಾಡಿದ ತಪ್ಪಿಗೆ ಅವನಿಗೆ ಮೋಕ್ಷದಲ್ಲಿ ಆನಂದಹ್ರಾಸವನ್ನೇ ಮಾಡುತ್ತಾನೆ ಅಂತ ಶ್ರೀಮದಾಚಾರ್ಯರು ತಿಳಿಸುತ್ತಾರೆ. ಆ ರೀತಿ ಸುಗ್ರೀವನಿಗೆ ಕೊಡಬೇಕಾದ ಶಿಕ್ಷೆಯನ್ನು ಮುಂದೆ ಪ್ರಾಪ್ತವ್ಯ ಆನಂದದಲ್ಲಿ ಹ್ರಾಸವನ್ನು ಮಾಡಿದ್ದಾನೆ ಆ ವಾಲಿಗೆ ಮಾತ್ರ ಪರಮಾತ್ಮ ತಾನು ಇಲ್ಲಿ ಸಂಹಾರವನ್ನು ಮಾಡಿದ, ಅವನು ಶರಣಾಗತನಾದ, ಪರಮಾತ್ಮ ತನ್ನ ದರ್ಶನವನ್ನು ಕೊಟ್ಟಿದ್ದಾನೆ ಕೊನೆಗಾಲದಲ್ಲಿ ಅಷ್ಟರಿಂದಲೇ ವಾಲಿ ತೃಪ್ತನಾಗಿದ್ದಾನೆ. ಮುಂದೆ ಭಗವಂತ ಸಮುದ್ರದಲ್ಲಿ ಸೇತುವೆಯನ್ನು ಕಟ್ಟಿ ರಾವಣನ ಸಂಹಾರವನ್ನು ಮಾಡಿ ಸೀತೆಯನ್ನು ಕರೆದುಕೊಂಡು ಬಂದು ರಾಜ್ಯವನ್ನು ಆಳಿದ್ದಾನೆ ಹನ್ನೊಂದು ಸಾವಿರ ವರ್ಷಗಳವರೆಗೆ ರಾಜ್ಯವನ್ನು ಆಳಿದ್ದಾನೆ ನಕ್ಷತ್ರ ಮಾನದಿಂದ ಹದಿಮೂರು ಸಾವಿರ ವರ್ಷಗಳು. ಇಲ್ಲಿ ಹೇಳುತ್ತಾರೆ.

ದಶ ವರ್ಷಸಹಸ್ರಾಣಿ ದಶ ವರ್ಷಶತಾನಿ ಚ ।

ಅಯೋಧ್ಯಾಧಿಪತಿರ್ಭೂತ್ವಾ ರಾಮೋ ರಾಜ್ಯಮಕಾರಯತ್ ॥ (41.151 ಹರಿವಂಶಪರ್ವ)

ಶ್ರೀಮದಾಚಾರ್ಯರು ಈ ಮಾತನ್ನು ತಿಳಿಸುತ್ತಾರೆ ಅಂತಹ ಹನ್ನೊಂದು ಸಾವಿರ ವರ್ಷಗಳವರೆಗೆ ರಾಜ್ಯವನ್ನು ಆಳಿದ. ಮಧುವಿನ ಮಗ ಲವಣ ಲವಣಾಸುರನ ಸಂಹಾರ ಮಾಡಿದ ಅಂತ ಬರುತ್ತದೆ ಹರಿವಂಶದಲ್ಲಿ, ಲವಣಾಸುರನ ಸಂಹಾರವನ್ನು ಮಾಡಿದ್ದು ಶತ್ರುಘ್ನ ಆದರ ತಾತ್ಪರ್ಯ ಆ ಶತ್ರುಘ್ನನಲ್ಲಿ ಅಂತರ್ಯಾಮಿಯಾಗಿ ಇದ್ದು ತನ್ನದೇ ಆದ ಅನಿರುದ್ಧ ರೂಪದಿಂದ ಸಂಹಾರ ಮಾಡಿದ ಅಂತ ಅರ್ಥ. ಸಂಕರ್ಷಣ ರೂಪದಿಂದ ಲಕ್ಷ್ಮಣನಲ್ಲಿ, ಪ್ರದ್ಯುಮ್ನ ರೂಪದಿಂದ ಭರತನಲ್ಲಿ, ಅನಿರುದ್ಧ ರೂಪದಿಂದ ಪರಮಾತ್ಮ ಶತ್ರುಘ್ನನಲ್ಲಿ ಸನ್ನಿಹಿತನಾಗಿದ್ದಾನೆ ತಾನು ಸ್ವಯಂ ವಾಸುದೇವ. ಹೀಗಾಗಿ ಲವಣಾಸುರನನ್ನು ಸಂಹಾರ ಮಾಡಿದ ಎಂಬ ಹರಿವಂಶದ ಮಾತಿಗೆ ಶತ್ರುಘ್ನನಲ್ಲಿ ಅಂತರ್ಯಾಮಿಯಾದ ಅನಿರುದ್ಧ ರೂಪದಿಂದ ಲವಣಾಸುರನ ಸಂಹಾರವನ್ನು ತಾನು ಮಾಡಿದ ಎಂಬುದಾಗಿ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕು. ಈ ರೀತಿ ಶ್ರೀರಾಮಚಂದ್ರ ರಾಜ್ಯವನ್ನು ಆಳಿದ್ದಾನೆ.

ಆ ಶ್ರೀರಾಮಚಂದ್ರನ ರಾಜ್ಯದಲ್ಲಿ ಹೇಗಿತ್ತು ಯಾವ ಪ್ರಾಣಿಗಳಿಗೂ ಭಯ ಇಲ್ಲ, ನೀರಿನ ಭಯ ಇಲ್ಲ, ಅಗ್ನಿ ಭಯ ಇಲ್ಲ, ಅಸ್ತ್ರಗಳಿಂದ ಭಯ ಇಲ್ಲ, ಕಳ್ಳತನ ಇಲ್ಲ, ಸುಳ್ಳಿಲ್ಲ, ಮೋಸ ಇಲ್ಲ ವಂಚನೆ ಇಲ್ಲ, ಅಕಾಲ ಮೃತ್ಯು ಇಲ್ಲ, ವಿಧವೆಯರು ಇಲ್ಲ, ವಿಧುರರು ಇಲ್ಲ ಎಲ್ಲರೂ ತಮ್ಮ ತಮ್ಮ ಧರ್ಮಗಳ ಆಚರಣೆಯನ್ನು ಮಾಡುತ್ತಾರೆ. ಎಲ್ಲಿ ನೋಡಿದರೂ ಧರ್ಮ ಯಜ್ಞ ಯಾಗ, ವೇದಗಳು, ಸಚ್ಛಾಸ್ತ್ರಗಳು, ಪರೋಪಕಾರ ಇವುಗಳೇ ಎಲ್ಲ ಕಡೆಗೂ ತೋರಿ ಬರುತ್ತಾ ಇವೆ. ಎಲ್ಲರಿಗೂ ಸಾವಿರಾರು ವರ್ಷಗಳ ಆಯುಷ್ಯ, ಸಹಸ್ರಾರು ಮಕ್ಕಳು **'ಆಯುರ್ವರ್ಷ ಸಹಸ್ರಾಣಿ ತಥಾ ಪುತ್ರ ಸಹಸ್ರಿಣಃ'** ಎಲ್ಲರೂ ನೀರೋಗಿಗಳು ಆ ತರಹದ ರಾಮ ರಾಜ್ಯ ಎಂಬುದಾಗಿ ಜಗತ್ತಿನಲ್ಲಿ ಪ್ರಸಿದ್ಧವಾದದ್ದು.

'ಅರೋಗಾಃ ಪ್ರಾಣಿನಶ್ಚಾಸನ್ ರಾಮೇ ರಾಜ್ಯಂ ಪ್ರಶಾಸತಿ' ಮತ್ತೆ ಪುನಃ ಎಲ್ಲರೂ ನಿಮ್ಮ ನಿಮ್ಮ ಮನಸ್ಸಿನಲ್ಲಿ ಆ ರಾಮರಾಜ್ಯದ ಸ್ಥಾಪನೆಯನ್ನು ಮಾಡಿ, ರಾಮದೇವರ ಸ್ಮರಣೆಯನ್ನು ಮಾಡಿ, ಹರೇರಾಮ ಹರೇರಾಮ ಅಂತ ಅನ್ನಿ. ಆ ಭಗವಂತನ ಸ್ಮರಣೆಯನ್ನು ಮಾಡಿ ನಿಮ್ಮ ಹೃದಯದ ಸಿಂಹಾಸನದೊಳಗೆ ರಾಮನಿಗೆ ಪಟ್ಟಾಭಿಷೇಕ ಮಾಡಿ ಆ ರಾಮರಾಜ್ಯ ಬರುವಂತೆ ಮಾಡಿದರೆ **'ಅರೋಗಾಃ ಪ್ರಾಣಿನಶ್ಚಾಸನ್'** ಈಗ ಏನು ರೋಗದ ಭೀತಿ ಇದೆ ಎಲ್ಲ ಪರಿಹಾರ ಆಗಿ ಎಲ್ಲರೂ ನೀರೋಗಿಗಳಾಗುವಂತೆ ನಾವು ಉತ್ತಮವಾದಂತಹ ರಾಮರಾಜ್ಯದ ದರ್ಶನವನ್ನು ಮಾಡಿಕೊಳ್ಳುವುದಕ್ಕೆ ಸಾಧ್ಯ ಇದೆ ಆ ರೀತಿ ಶ್ರೀರಾಮಚಂದ್ರ ದೇವರ ವರ್ಣನೆಯನ್ನು ಮಾಡುತ್ತಾರೆ. ಆನಂತರದಲ್ಲಿ ಪರಮಾತ್ಮ ಶ್ರೀಕೃಷ್ಣ ಪರಮಾತ್ಮನಾಗಿ ಅವತಾರ ಮಾಡಿದ್ದಾನೆ.

ಕೃಷಿರ್ಭೂವಾಚಕಃ ಶಬ್ದಃ ಣಶ್ಚನಿರ್ವೃತಿ ವಾಚಕಃ । (68 ಮಹಾಭಾರತ ಉದ್ಯೋಗ ಪರ್ವ)

'ಭೂ' 'ಭೌ' ಪರಿಪೂರ್ಣವಾದ **'ಣ'** ಆನಂದ ಉಳ್ಳಂತಹ ಅನಂತಾನಂದ ಪರಿಪೂರ್ಣನಾಗಿರುವಂಥವನು ಪರಮಾತ್ಮ. ಅನಂತವಾದಂತಹ ಆನಂದ ಪರಿಪೂರ್ಣ ತಾನಾಗುವದು ಮಾತ್ರ ಅಲ್ಲದೇ ತನ್ನ ಉಪಾಸನೆ ಮಾಡಿದವರಿಗೆ ಅವರವರಿಗೆ ಯೋಗ್ಯವಾದ ಆನಂದವನ್ನು ಕೊಡುವುದಕ್ಕೆ ಉಗಮ ಆಗಿ ನಿಂತವನು ಆ ಪರಮಾತ್ಮ ಎಂಬುದಾಗಿ ಆ ಭಗವಂತನನ್ನು ಕೃಷ್ಣ ಅಂತ ಕರೀತಾರೆ. ಅಂತಹ ಶ್ರೀಕೃಷ್ಣ ಪರಮಾತ್ಮ ಅವತಾರ ಮಾಡಿ ಬ್ರಹ್ಮ ದೇವರ, ರುದ್ರ ದೇವರ, ಪಾರ್ವತಿಯ, ಸ್ಕಂದನ, ಗಣಪತಿಯ ಇವರೆಲ್ಲರ ವರದಿಂದ ಅವಧ್ಯರಾದಂತಹ ಪೂತನಾದಿ

ಅನೇಕ ರಾಕ್ಷಸರನ್ನು, ಅಸುರರನ್ನು ಎಲ್ಲರನ್ನು ಕೂಡ ಭಗವಂತ ಸಂಹಾರ ಮಾಡಿ ಭೂಭಾರಹರಣವನ್ನು ಮಾಡಿದ್ದಾನೆ ಅಂತ ತಿಳಿಸುತ್ತಾರೆ.

ನವಮೇ ದ್ವಾಪರೇ ವಿಷ್ಣುರಷ್ಟಾವಿಂಶೇ ಪುರಾಭವತ್ ।
ವೇದವ್ಯಾಸಸ್ತಥಾ ಜಜ್ಞೇ ಚಾತೂಕರ್ಣ್ಯಪುರಸ್ಸರಃ ॥ (41.161 ಹರಿವಂಶಪರ್ವ)

ಏಕೋ ವೇದಶ್ಚತುರ್ಧಾ ತು ಕೃತಸ್ತೇನ ಮಹಾತ್ಮನಾ । (41.162 ಹರಿವಂಶಪರ್ವ)

ಆಮೇಲೆ ವೇದವ್ಯಾಸ ರೂಪದಿಂದ ಅವತಾರ ಮಾಡಿ ವೇದಗಳ ವಿಭಾಗವನ್ನು ಮಾಡುತ್ತಾನೆ. ವೇದಗಳನ್ನು ವಿಭಾಗ ಮಾಡಿ, ವೇದಾರ್ಥ ನಿರ್ಣಾಯಕವಾದ ಬ್ರಹ್ಮಸೂತ್ರಗಳ ರಚನೆ ಮಾಡಿ, ವೇದಾರ್ಥಗಳನ್ನು ಚೆನ್ನಾಗಿ ಸದೃಷ್ಟಾಂತವಾಗಿ ತಿಳಿಸಿ ಕೊಡುವಂತಹ ಮಹಾಭಾರತವೆಂಬ ಇತಿಹಾಸ ಹಾಗೂ ಪುರಾಣಗಳನ್ನು ರಚನೆ ಮಾಡಿ ಆ ವೇದಾರ್ಥವನ್ನು ಜಗತ್ತಿಗೆ ತಿಳಿಸಿ ಕೊಟ್ಟಂತಹ ಮಹಾನುಭಾವರು ವೇದವ್ಯಾಸ ದೇವರು. ವೇದವ್ಯಾಸ ರೂಪದಿಂದ ಪರಮಾತ್ಮ ಅವತಾರ ಮಾಡಿ ಶುದ್ಧವಾದಂತಹ ಜ್ಞಾನವನ್ನು ಜಗತ್ತಿಗೆ ನೀಡಿದ್ದಾನೆ ಅವನೇ ನಿಮ್ಮ ವಂಶವನ್ನೂ ಮುಂದುವರಿಸಿದ ಮಹಾನುಭಾವ ಅಂತ ಜನಮೇಜಯನಿಗೆ ಹೇಳುತ್ತಾ ಇದ್ದಾರೆ. ಆಮೇಲೆ ಬುದ್ಧ ರೂಪದಿಂದ ಪರಮಾತ್ಮ ಅವತಾರವನ್ನು ಮಾಡಿ ಯೋಗ್ಯರಿಗೆ ಶುದ್ಧವಾದ ತತ್ವಜ್ಞಾನವನ್ನು ಪ್ರಶಾಂತ ವಿದ್ಯಾ ಅನ್ನುವ ಶ್ರೇಷ್ಠವಾದ ತತ್ವಜ್ಞಾನವನ್ನು ಕೊಟ್ಟಿದ್ದಾನೆ, ಅಯೋಗ್ಯರಿಗೆ ಅವರಿಗೆ ಯೋಗ್ಯವಾದ ರೀತಿಯ ಜ್ಞಾನವನ್ನು ನೀಡಿ ಅವರಿಗೆ ಮೋಹವನ್ನುಗೊಳಿಸಿದ್ದಾನೆ. ಆನಂತರದಲ್ಲಿ ಅವತಾರ ಮಾಡಿದವನೇ ಕಲ್ಕಿ. ಕಲಿಯುಗದ ಎಲ್ಲ ದುಷ್ಟರನ್ನು ನಾಶ ಮಾಡಿ,ದೋಷಗಳನ್ನು ನಾಶ ಮಾಡಿ ಶುದ್ಧವಾದ ಧರ್ಮದ ಯುಗ ಕೃತಯುಗ ಅಂತಹ ಕೃತಯುಗವನ್ನು ನಾಲ್ಕು ಪಾದದಿಂದಲೂ ಧರ್ಮ ಇರುವಂತಹ ಶ್ರೇಷ್ಠವಾದ ಕೃತಯುಗದ ಪ್ರವರ್ತನವನ್ನು ಮಾಡುತ್ತಾನೆ ಕಲ್ಕಿ ರೂಪದಿಂದ ಪರಮಾತ್ಮ. **'ಕಲೇಸ್ತು ಕಾತ್ಕೃತ ಏವ ಕಲ್ಕೀ'** ಆ ಕಲಿಯ ದೋಷಗಳನ್ನೆಲ್ಲಾ ನಾಶ ಮಾಡುತ್ತಾನೆ ಅನ್ನುವುದಕ್ಕೆ ಅವನಿಗೆ ಕಲ್ಕಿ ಅಂತ ಹೆಸರು. ಹೀಗೆ ಆ ಭಗವಂತನ ಅವತಾರಗಳೆಲ್ಲ ಇವೆ ಅಂತ ಜನಮೇಜಯನಿಗೆ ತಿಳಿಸಿಕೊಡುತ್ತಾ ಇದ್ದಾರೆ.

ಪ್ರೀಯನ್ತೇ ಪಿತರಸ್ತಸ್ಯ ಪ್ರಾದುರ್ಭಾವಾನುಕೀರ್ತನಾತ್ ।
ವಿಷ್ಣೋರತುಲವೀರ್ಯಸ್ಯ ಯಃಶೃಣೋತಿ ಕೃತಾಞ್ಜಲಿಃ ॥ (41.173 ಹರಿವಂಶಪರ್ವ)

ಯಾರು ಭಕ್ತಿಯಿಂದ, ಶ್ರದ್ಧೆಯಿಂದ ಕೈಜೋಡಿಸಿ ಆ ಭಗವಂತನ ಎಲ್ಲಾ ಅವತಾರಗಳ ಶ್ರವಣವನ್ನು ಮಾಡುತ್ತಾರೋ ಅವರಿಗೆ ಎಲ್ಲ ವಿಧವಾದಂತಹ ಪಾಪಗಳ ಪರಿಹಾರವಾಗುತ್ತೆ ಇಷ್ಟೇ ಅಲ್ಲ ಅವರ ಪಿತೃಗಳೆಲ್ಲ ಉದ್ಧೃತರಾಗಿ ಹೋಗುತ್ತಾರೆ ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ. ವೈಶಂಪಾಯನರು ಅನ್ನುತ್ತಾರೆ ಭಗವಂತ ಅವನು ವಿಶ್ವ, ಜಗತ್ತಿನಲ್ಲೆಲ್ಲ ಪ್ರವೇಶವನ್ನು ಮಾಡಿದ್ದರಿಂದ ಅವನಿಗೆ ವಿಶ್ವ, ಎಲ್ಲರಿಗೆ ವಿಶೇಷವಾಗಿ **'ವಿಶೇಷೇಣ ಶ್ವಸಿತಿ ಆಶ್ವಸಿತಿ ಅಭಯಂ ಪ್ರಾಪ್ಯ ಜನಃ ಯಸ್ಮಾದಿತಿ ವಿಶ್ವಃ'** ಅಂತ. ಎಲ್ಲರಿಗೂ ವಿಶ್ವಾಸ ಬರುವಂತೆ ಆಶ್ವಾಸ ಬರುವಂತೆ ಮಾಡುತ್ತಾನೆ ಅನ್ನುವುದಕ್ಕಾಗಿಯೂ ವಿಶ್ವ, ಎಲ್ಲರ ಪಾಪಗಳನ್ನು ಹರಣ ಮಾಡುತ್ತಾನೆ ಅನ್ನುವುದಕ್ಕೆ ಹರಿ, ಯಾವುದೇ ರೀತಿಯ ಪ್ರತಿಹತಿ ಇಲ್ಲದ ಅಖಿಂಡವಾದ ಸಾಮರ್ಥ್ಯ ಇದ್ದದ್ದರಿಂದ ವೈಕುಂಠ ಅಂತ ಕರೀತಾರೆ. ಎಲ್ಲರಿಗೆ ಉತ್ತಮವಾದ ಆನಂದವನನ್ನು ನೀಡುತ್ತಾನೆ, ಪಾಪಗಳನ್ನು ಪರಿಹಾರ ಮಾಡುತ್ತಾನೆ, ಮನಸ್ಸನ್ನು ಆಕರ್ಷಣೆ ಮಾಡುತ್ತಾನೆ ಅಂತ ಕೃಷ್ಣ ಅನ್ನುತ್ತಾರೆ, ನಿಯಮನ ಮಾಡುವುದಕ್ಕಾಗಿ ಈಶ್ವರ ಅಂತ ಕರೀತಾರೆ ಅಂತಹ ಪರಮಾತ್ಮನ ಮಹಾಮಹಿಮೆಯನ್ನು

ನೀನು ಚೆನ್ನಾಗಿ ತಿಳಿದುಕೊಳ್ಳಬೇಕು. ಬ್ರಹ್ಮ ದೇವರ ಸೃಷ್ಟಿಯನ್ನು ಮಾಡಿ ವೇದಗಳನ್ನೆಲ್ಲಾ ಜಗತ್ತಿಗೆ ಆ ಪರಮಾತ್ಮ ಉಪದೇಶ ಮಾಡಿದ್ದಾನೆ, ವೇದಗಳ ಉಚ್ಚಾರಣೆಯನ್ನು ಮಾಡುವ ಮೂಲಕ ವೇದದ ಅಕ್ಷರ ಅಕ್ಷರಗಳೆಲ್ಲ ಆ ಭಗವಂತನ ನಾಮಗಳು ಅಂತ ಶ್ರೀಮದಾಚಾರ್ಯರು ಯಾವ ತತ್ವವನ್ನು ಬಹಳ ಒತ್ತುಕೊಟ್ಟು ಹೇಳುತ್ತಾರೆ ಸಕಲ ಶಬ್ದವಾಚ್ಯನಾದವನು ಪರಮಾತ್ಮ **'ಸರ್ವೇ ವೇದಾ ಯತ್ಪದಮಾಮನಂತಿ'** ಎಲ್ಲ ವೇದಗಳು ಭಗವಂತನ ಸ್ತುತಿ, ಎಲ್ಲ ವೇದಗಳು ಭಗವಂತನನ್ನು ಕೊಂಡಾಡುವುದಕ್ಕೆ ಹೊರಟಿದೆ ಅಂತ.

ಏತದಾಶ್ಚರ್ಯಭೂತಸ್ಯ ವಿಷ್ಣೋರ್ನಾಮಾನುಕೀರ್ತನಮ್ । (42.9 ಹರಿವಂಶಪರ್ವ)

ಆ ಸಕಲ ವೇದಗಳು **'ಬಹುಧಾ ಬ್ರಹ್ಮಶಾಶ್ವತಮ್'**[1] ಅಂತ ಹಿಂದಿನ ಮಾತಿನಲ್ಲಿ ತಿಳಿಸುತ್ತಾರೆ ಅನೇಕ ರೀತಿಯಿಂದ ಪರಮಾತ್ಮ ವೇದಗಳ ಉಪದೇಶ ಮಾಡಿದ. ಆ ಎಲ್ಲ ವೇದಗಳು ಅಂದರೆ ಏನದು ಅಂತ ಕೇಳಿದರೆ ವೈಶಂಪಾಯನರು ಹೇಳುತ್ತಾರೆ **'ವಿಷ್ಣೋರ್ನಾಮಾನುಕೀರ್ತನಮ್'** ವೇದ ಅಂದರೆ ಇನ್ನೇನಲ್ಲ ಭಗವಂತನ ನಾಮಗಳೇ.

ವೇದಾಕ್ಷರಾಣಿ ಯಾವಂತಿ ಪಠಿತಾನಿ ದ್ವಿಜಾದಿಭಿಃ ।
ತಾವಂತಿ ಹರಿನಾಮಾನಿ ಪಠಿತಾನಿ ನಸಂಶಯಃ ॥

ಎಂಬ ಶೌನಕರ ವಚನದಂತೆ ಎಲ್ಲ ವೇದಗಳು ಹರಿ ನಾಮಗಳೇ ಅಂತಹ ಆ ಪರಮಾತ್ಮನ ಅದ್ಭುತವಾದ ಮಹಿಮೆಯನ್ನು ಇನ್ನಷ್ಟು ಹೇಳುತ್ತೇನೆ ಕೇಳು ಅಂತ ವೈಶಂಪಾಯನರು ಅನ್ನುತ್ತಾರೆ.

ತಾರಕಾಮಯವಾದಂತಹ ಯುದ್ಧ ಘನಘೋರವಾದ ಯುದ್ಧ ದೇವದಾನವರ ಮಧ್ಯದಲ್ಲಿ ಆಗುವಂತಹ ಯುದ್ಧ ಭಾರೀ ಅದ್ಭುತವಾದ ರೀತಿಯಲ್ಲಿ ಯುದ್ಧ ನಡೆದಿದೆ. ಬಹಳ ಭಯಾನಕವಾದ ಯುದ್ಧ ಹಿಂದೆ ಸಂಕ್ಷೇಪವಾಗಿ ಕೇಳಿದ್ದೀರಿ ನಾನಾ ವಿಧವಾದ ಉಲ್ಕಾಪಾತಗಳು, ಅಗ್ನಿ, ವಾಯು ಎಲ್ಲ ರೀತಿಯ ಅಸ್ತ್ರಗಳನ್ನು ಪ್ರಯೋಗ ಮಾಡಿ ಎಲ್ಲ ಕಡೆಗೂ ಕತ್ತಲೆ, ಎಲ್ಲ ಕಡೆಗೂ ಕ್ರೂರವಾದ ಪ್ರಾಣಿಗಳು, ಇದ್ದಕ್ಕಿದ್ದ ಹಾಗೆ ಮಳೆ ಬರುತ್ತದೆ, ಬೆಂಕಿಯ ವೃಷ್ಟಿ ಆಗುತ್ತದೆ ಹೀಗೆಲ್ಲ ನಾನಾ ರೀತಿಯ ಮಾಯಾ ಯುದ್ಧಗಳನ್ನೆಲ್ಲಾ ಮಾಡುತ್ತಾ ಇದ್ದಾರೆ. ದಾರಿ ಕಾಣುತ್ತಾ ಇಲ್ಲ, ಎದುರಿಗೆ ಇದ್ದವರು ಕಾಣುತ್ತಾ ಇಲ್ಲ ಆ ರೀತಿಯ ಪರಿಸ್ಥಿತಿ ಹೇಗೆ ಯುದ್ಧ ಆಡುವುದು ಅಂತ ಭಗವಂತ ಪ್ರಾದುರ್ಭೂತನಾಗಿದ್ದಾನೆ. ದೇವರು ಪ್ರಾದುರ್ಭೂತನಾಗೋದೆ ತಡ ಎಲ್ಲ ಕಡೆಗೆ ಬೆಳಕು, ಕತ್ತಲೆಯೆಲ್ಲ ದೂರ ಆಗಿದೆ, ಮಾಯೆ ಎಲ್ಲ ದೂರ ಆಗಿದೆ.

ತಾನ್ ಘನೌಘಾನ್ ಸತಿಮಿರಾನ್ ದೋರ್ಭ್ಯಾಮುಕ್ಷಿಪ್ಯ ಸ ಪ್ರಭುಃ । (42.20 ಹರಿವಂಶಪರ್ವ)

ಅಂತ. ಹೀಗೆ ಇಚ್ಛಾ ಮಾತ್ರದಿಂದ ಮಾಡಬಹುದು ದೇವರು **'ದೋರ್ಭ್ಯಾಮ್'** ಹೀಗೆ ಕೈ ಮಾಡಿದ್ದಾನೆ ಅಂತೆ ಪರಮಾತ್ಮ ಹೀಗೆ ಕೈ ಮಾಡಿದರೆ ಆ ಎಲ್ಲ ಮೇಘಗಳು ದೂರ ಹೋಗಿವೆ, ಕತ್ತಲೆಯೆಲ್ಲ ದೂರ ಆಗಿದೆ, ಎಲ್ಲ ಕಡೆಗೆ ಪ್ರಕಾಶ ಆ ರೀತಿ ಪರಮಾತ್ಮ ದೇವತೆಗಳಿಗೆ ತನ್ನ ದರ್ಶನವನ್ನು ಕೊಟ್ಟಿದ್ದಾನೆ. ದಿವ್ಯವಾದ ಆ ಭಗವಂತನ ದರ್ಶನ ಪಡೆದದ್ದೇ ಜಯ ಜಯಕಾರವನ್ನು ಹಾಕಿದ್ದಾರೆ ದೇವತೆಗಳು ನಾವು ಗೆದ್ದಂತೆ ಅಂತ.

1. 42.8 ಹರಿವಂಶಪರ್ವ

ಜಯಶಬ್ದಂ ಪುರಸ್ಕೃತ್ಯ ಶರಣ್ಯಂ ಶರಣಂ ಗತಾಃ । (42.29 ಹರಿವಂಶಪರ್ವ)

ಪರಮಾತ್ಮ ಭರವಸೆಯನ್ನು ಕೊಡುತ್ತಾನೆ ಅಂತೆ.

ಶಾನ್ತಿಂ ಭಜತ ಭದ್ರಂ ವೋ ಮಾ ಭೈಷ್ಟ ಮರುತಾಂ ಗಣಾಃ ।
ಜಿತಾ ಮೇ ದಾನವಾಃ ಸರ್ವೇ ತ್ರೈಲೋಕ್ಯಂ ಪ್ರತಿಗೃಹ್ಯತಾಮ್ ॥ (42.32 ಹರಿವಂಶಪರ್ವ)

ಇನ್ನು ದೇವರು ಅಸುರರ ಸಂಹಾರ ಮಾಡಿಲ್ಲ ಸತ್ಯಸಂಧನಾದಂತಹ ಪರಮಾತ್ಮ, ಸತ್ಯಪ್ರತಿಜ್ಞನಾದಂತಹ ಪರಮಾತ್ಮ ನಿಮ್ಮ ರಾಜ್ಯವನ್ನು ನೀವು ತೆಗೆದುಕೊಳ್ಳಿ ನೋಡಿ ಕೆಲವೇ ಕ್ಷಣಗಳಲ್ಲಿ ಎಲ್ಲ ದೈತ್ಯರನ್ನು ಸಂಹಾರ ಮಾಡುತ್ತೇನೆ ನೀವು ಚಿಂತೆಯನ್ನು ಮಾಡಬೇಡಿ ನಿಶ್ಚಿಂತರಾಗಿ ಇರಿ ಅಂತ ಅವರಿಗೆ ಭರವಸೆಯನ್ನು ಕೊಡುತ್ತಾನೆ. ದೇವತೆಗಳಿಗೆಲ್ಲ ಭರವಸೆಯನ್ನು ಕೊಟ್ಟದ್ದೇ ತಡ ಇಡೀ ಜಗತ್ತು ಅಲ್ಲೋಲ ಕಲ್ಲೋಲವಾಗಿ ಹೋಗಿದೆ, ಎಲ್ಲ ಕಡೆಗೂ ಕೂಡ ಭಯದ ವಾತಾವರಣ, ಉದ್ವಿಗ್ನವಾದ ಸ್ಥಿತಿ, ಸಮುದ್ರಗಳೆಲ್ಲ ಕಲುಷಿತ, ನದಿಗಳು ಕಲುಷಿತ, ನಕ್ಷತ್ರಗಳು, ಗ್ರಹಗಳು ಎಲ್ಲವೂ ತಮ್ಮ ಬೆಳಕುಗಳನ್ನು ಕಳೆದುಕೊಂಡಿವೆ ಇಂತಹ ವಾತಾವರಣದ ನಿರ್ಮಾಣವಾಗಿತ್ತು ಆ ಯುದ್ಧ ನಡೆದಾಗ. ಯಾವಾಗ ದೇವರೊಂದು ಭರವಸೆಯ ನುಡಿಯನ್ನು ನುಡಿದನೋ ಇದ್ದಕ್ಕಿದ್ದಂತೆ ಇಡೀ ಜಗತ್ತಿನಲ್ಲಿ ಪ್ರಸನ್ನತೆ, ಎಲ್ಲಾ ವಿಧವಾದ ಕಲ್ಮಷಗಳು ದೂರವಾಗಿವೆ, ಎಲ್ಲವೂ ಪ್ರಕಾಶಮಾನವಾಗಿವೆ ಗ್ರಹ ನಕ್ಷತ್ರಾದಿಗಳು, ನದಿ ಸಮುದ್ರಾದಿಗಳೆಲ್ಲ ಪ್ರಸನ್ನವಾಗಿವೆ ಭಗವಂತನ ಒಂದೇ ಒಂದು ಭರವಸೆಯ ವಚನ. ತಿಳಿದುಕೊಳ್ಳಿ ಆ ವಿಶ್ವಾಸವನ್ನು ದೇವತೆಗಳು ಮಾಡಿದರು ದೇವರ ವಚನದಲ್ಲಿ ಅಷ್ಟು ಪೂರ್ಣವಾದ ನಂಬಿಕೆಯನ್ನು ಇಟ್ಟದ್ದಕ್ಕೆ ಒಂದು ಕ್ಷಣದಲ್ಲಿ ಇಡೀ ಜಗತ್ತಿನಲ್ಲಿ ಆದಂತಹ ಏರುಪೇರುಗಳೆಲ್ಲ ಸಮವಾಗಿ ಪ್ರಸನ್ನವಾಗಿ ಶಾಂತವಾಗಿ ಹೋಯಿತು. ಇವತ್ತು ನಮಗೂ ದೇವರು ಭರವಸೆ ಕೊಟ್ಟಿದ್ದಾನೆ **'ನ ಮೇ ಭಕ್ತಃ ಪ್ರಣಶ್ಯತಿ'.**

ಅನನ್ಯಾಶ್ಚಿನ್ತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿಯುಕ್ತಾನಾಮ್ ಯೋಗಕ್ಷೇಮಂ ವಹಾಮ್ಯಹಮ್ ॥ (9.22 ಭ ಗೀತಾ)

ಆದರೆ ದೇವತೆಗಳು ದೇವರ ಮಾತಿನ ಮೇಲೆ ಇಟ್ಟ ವಿಶ್ವಾಸವನ್ನು ನಾವು ಇಟ್ಟಿಲ್ಲ ಅನ್ನುವುದಕ್ಕಾಗಿ ಕಷ್ಟ ಪಡುತ್ತಾ ಇದ್ದೇವೆ. ಮಾತೇನು ಆಡದೇ ಇಲ್ಲ ದೇವರು ಅಂದೇ ಮಾತಾಡಿದ್ದಾನೆ ಅಂದೇ ಭರವಸೆಯನ್ನು ಕೊಟ್ಟಿದ್ದಾನೆ ನಾವು ಇಂದೇ ವಿಶ್ವಾಸ ಮಾಡೋಣ ಆ ಪರಮಾತ್ಮನ ಅನುಗ್ರಹದಿಂದ ಎಲ್ಲ ಆಪತ್ತುಗಳನ್ನು ಕಳೆದುಕೊಂಡು ನಮ್ಮ ಉದ್ಧಾರವನ್ನು ಹೊಂದುವುದಕ್ಕೆ ಸಾಧ್ಯ ಇದೆ ಎಂಬುದಾಗಿ ಇಲ್ಲಿ ತಿಳಿಯಬೇಕು.

ಭಾರೀ ಘೋರವಾದಂತಹ ಸೈನ್ಯ ಅದು ದೈತ್ಯರ ಸೈನ್ಯ. ಮಯಾಸುರ, ಬಂಗಾರದ ರಥ ಹನ್ನೆರಡು ನೂರು ಹಸ್ತದ ಪರಿಮಾಣದ ಉದ್ದಾದ ದೊಡ್ಡ ಅಗಲವಾದ ರಥ ಅದು ಎಂತಹ ರಥ ಇರಬೇಕು ನೋಡಿರಿ ಅಷ್ಟು ದೊಡ್ಡದಾದಂತಹ ಭಾರೀ ದೊಡ್ಡ ದೊಡ್ಡ ಚಕ್ರಗಳಿಂದ ಕೂಡಿದಂತಹ ರಥ ಅಂತಹ ರಥದೊಳಗೆ ಕುಳಿತು ಅವನು ಯುದ್ಧಕ್ಕೆ ಬಂದಿದ್ದಾನೆ ಹೇಳಿ ಕೇಳಿ ಮಯಾ, ಶಿಲ್ಪಿ ಅವನು ತನಗೆ ಎಂತಹದು ಬೇಕು ಅಂತಹದನ್ನು ಮಾಡಿಕೊಂಡಿದ್ದಾನೆ ರಥವನ್ನು. ತಾರಾ ಅನ್ನುವ ಅಸುರ ಅವನು ಬಂದಿದ್ದಾನೆ ಕಾಗೆಯ ಧ್ವಜ ಅವನದು, ಇನ್ನು ಸಾವಿರ ಕತ್ತೆಗಳಿಂದ ಕೂಡಿದಂತಹ ಒಂದು ರಥ ಅದರೊಳಗೆ ಕುಳಿತಿದ್ದಾನೆ. ವಿರೋಚನ, ವರಾಹ ವರಾಹ ದೇವರಲ್ಲ, ವರಾಹ ಎಂಬ ಅಸುರ, ಖರಾಸುರ, ತ್ವಷ್ಟಾ, ಶ್ವೇತ, ಅರಿಷ್ಟ, ಲಂಬ, ರಾಹು, ಹಂಸ ಹೀಗೆ ಅನೇಕ ಅಸುರರು

ನಾನಾ ವಿಧವಾದ ವಾಹನಗಳಲ್ಲಿ ಅವರೆಲ್ಲ ಬಂದಿದ್ದಾರೆ ಆ ಎಲ್ಲ ಅಸುರರೂ ಕೂಡ ಅಷ್ಟು ಘೋರವಾದಂತಹ ತಮ್ಮ ಸೈನ್ಯವನ್ನು ತೆಗೆದುಕೊಂಡು ಅವರು ಸಿದ್ದರಾಗಿದ್ದಾರೆ.

ಈ ಕಡೆಗೆ ಮಹಾನುಭಾವರಾದ ಆದಿತ್ಯರು, ವಸುಗಳು, ರುದ್ರರು, ದೇವತೆಗಳು ಪೂರ್ವ ಭಾಗವನ್ನು ನೋಡಿಕೊಳ್ಳುವುದಕ್ಕೆ ಇಂದ್ರ, ಪಶ್ಚಿಮದಲ್ಲಿ ವರುಣ, ದಕ್ಷಿಣದಲ್ಲಿ ಯಮ, ಉತ್ತರದಲ್ಲಿ ಕುಬೇರ ಹೀಗೆ ಇವರೆಲ್ಲ ದಿಕ್ಪಾಲಕರು ನಾಲ್ಕು ಕಡೆಗೆ ನಾಲ್ಕು ದಿಕ್ಕಿನಲ್ಲಿ ಇರುವ ಸೈನ್ಯವನ್ನು ನಿಯಮನ ಮಾಡುತ್ತಾ ನಿಂತಿದ್ದಾರೆ. ಒಬ್ಬೊಬ್ಬರದು ಅದ್ಭುತ ವರುಣ ದೇವರಂತೂ ಅವರು ಸಮುದ್ರ ರಾಜರು ಮೈತುಂಬ ಸಮುದ್ರದ ಏನು ರತ್ನ, ಮುತ್ತು, ಶಂಖಗಳು,ಬಲಮುಡಿ ಶಂಖ, ಹವಳಗಳು ಇವೆಲ್ಲ ಸಮುದ್ರದ ಐಶ್ವರ್ಯ ಮೈತುಂಬ ಅವೇ ಆಭರಣಗಳು **'ಶಂಖ ಮುಕ್ತಾಂಗದಧರಃ'** ಜಲಮೇಯವಾದ ಶರೀರ.

ಬಿಭ್ರತ್ತೋಯಮಯಂ ವಪುಃ ಪ್ರವಾಲರುಚಿರಾಧರಃ । (44.12 /44.14 ಹರಿವಂಶಪರ್ವ)

ಆ ಸಮುದ್ರದಲ್ಲಿ ಇರುವಂತಹ ಎಲ್ಲಾ ಐಶ್ವರ್ಯಗಳು ದೇವರು ಕೊಟ್ಟದ್ದು **'ಸಡಗರದಲ್ಲಿಪ್ಪದೇ ಶ್ರೀಶನಾಜ್ಞೆ'** ಎನ್ನುವ ರೀತಿಯಲ್ಲಿ ಅದೆಲ್ಲವನ್ನು ಮೈಮೇಲೆ ಹಾಕಿಕೊಂಡು ಬಂದಿದ್ದಾರೆ ವರುಣ ದೇವರು ಅಂತಹ ಅದ್ಭುತವಾದ ವೈಭವ ಅವರದು. ಕುಬೇರ ಬಂದಿದ್ದಾನೆ ಪುಷ್ಪಕ ವಿಮಾನದಲ್ಲಿ, ಸೂರ್ಯ ಎಲ್ಲರಿಗೂ ಬೆಳಕು ಕೊಡುತ್ತಾ ಇದ್ದಾನೆ, ಚಂದ್ರ ಎಲ್ಲರಿಗೂ ತಂಪು ಮಾಡುತ್ತಾ ಇದ್ದಾನೆ, ತಂಪಾದ ಗಾಳಿ ಬೀಸುತ್ತಾ ಇದೆ ವಾಯು ದೇವರು ಎಲ್ಲರಿಗೂ ಗಾಳಿಯನ್ನು ಕೊಡುತ್ತಾ ಇದ್ದಾರೆ ಈ ರೀತಿ ಅಲ್ಲಿ ಎಲ್ಲಾ ದೇವತೆಗಳು ಸಿದ್ಧರಾಗಿದ್ದಾರೆ. ಶ್ರೀಮದಾಚಾರ್ಯರು ಬೃಹದಾರಣ್ಯಕ ಭಾಷ್ಯಯಲ್ಲಿ ಹೇಳುತ್ತಾರೆ ಪರ್ವತಗಳು, ಗಿಡಗಳು ಎಲ್ಲದಕ್ಕೂ ಅಭಿಮಾನಿ ದೇವತೆಗಳು ಇರುತ್ತಾರೆ ಅಂತ **'ಪರ್ವತಾಸ್ಸಿಕತಾಶ್ಚೈವ'** ಅಂತ. ಇಲ್ಲಿ ಬರುತ್ತೆ ನೋಡಿ **'ಪರ್ವತಾಸ್ತು ಶಿಲಾಶೃಜ್ಜೈಃ'**[1] ಪರ್ವತಗಳು ಬಂದಿವೆ ಅಂತೆ ಅಂದರೆ ಪರ್ವತಾಭಿಮಾನಿ ದೇವತೆಗಳೆಲ್ಲ ತಮ್ಮ ಪರ್ವತಗಳನ್ನು ತೆಗೆದುಕೊಂಡು ಬಂದಿದ್ದಾರೆ, ವೃಕ್ಷಗಳೆಲ್ಲ ಬಂದಿವೆ ಯಾಕೆ ಅಂದರೆ ಈ ಅಸುರರ ಸಂಹಾರಕ್ಕೆ ದೇವತೆಗಳು ನಮ್ಮನ್ನು ಉಪಯೋಗಿಸಲಿ ಅಂತ. ನಮ್ಮನ್ನು ಉಪಯೋಗಿಸಿ ಅವರನ್ನು ಸಂಹಾರ ಮಾಡಲಿ ಆ ಅಸುರರ ಸಂಹಾರದ ಕಾರ್ಯದೊಳಗೆ ನಮ್ಮ ಸೇವೆ ಇರಲಿ ಅಂತ ಪ್ರರ್ವತಾದ್ಯಾಭಿಮಾನಿಗಳು ಅಲ್ಲಿ ಬಂದು ಸೇರಿದ್ದಾರೆ.

ಉಪತಸ್ಥುಃ ಸುರಗಣಾನ್ ಪ್ರಹರ್ತುಂ ದಾನವಂ ಬಲಮ್ ॥ (44.34 ಹರಿವಂಶಪರ್ವ)

ಎಷ್ಟು ಅದ್ಭುತವಾದಂತಹ ಆ ದೇವತೆಗಳ ಅನುಸಂಧಾನ ನೋಡಿ. ಆ ಭಗವಂತ ಸರ್ವೋತ್ತಮನಾದ ಸ್ವಾಮಿ, ಸಕಲ ಜಗನ್ನಿಯಾಮಕನಾದಂತಹ ಪರಮಾತ್ಮ ಶಂಖ, ಚಕ್ರ, ಗದಾ, ಪದ್ಮಧಾರಿಯಾಗಿ, ಗರುಡಾರೂಢನಾಗಿ ಅಲ್ಲಿ ಪರಮಾತ್ಮ ಬಂದಿದ್ದಾನೆ. ಆ ಭಗವಂತ ಗರುಡಾರೂಢನೂ ಹೌದು, ಗರುಡಧ್ವಜನೂ ಹೌದು ಆ ಭಗವಂತನ ಧ್ವಜದಲ್ಲಿ ಗರುಡ. ನಮ್ಮ ದೇಶ ಇದು ದೇವ ಭೂಮಿ ಇದು ನಮ್ಮ ಭಾರತ ಭೂಮಿ, ಋಷಿಗಳ ಭೂಮಿ, ಸರ್ವೋತ್ತಮನಾದ ಭಗವಂತ ಅವತಾರ ಮಾಡಿದಂತಹ ಸ್ಥಳ, ವಾಯು ದೇವರು ಅವತಾರ ಮಾಡಿದ ಸ್ಥಳ, ಅನೇಕ ದೇವತೆಗಳು ಅವತಾರ ಮಾಡಿದ್ದು, ಋಷಿಗಳು ಮುನಿಗಳು ತಪಸ್ಸು ಮಾಡಿದ್ದು, ಯೋಗಿಗಳು ತಪಸ್ಸು ಮಾಡಿದ್ದು, ನಾನಾ ವಿಧವಾದಂತಹ ಸಾಕ್ಷಾತ್ಕಾರಗಳನ್ನು ಮಾಡಿಕೊಂಡದ್ದು, ವೇದಗಳ ದರ್ಶನವನ್ನು ಮಾಡಿದ್ದು, ಅದ್ಭುತವಾದ ಯೋಗವನ್ನು ಜಗತ್ತಿಗೆ ಕೊಟ್ಟದ್ದು, ಅದ್ಭುತವಾದ ಆಯುರ್ವೇದವನ್ನು ಜಗತ್ತಿಗೆ ಕೊಟ್ಟದ್ದು ಈ ಭರತ ಭೂಮಿ. ಎಲ್ಲಾ

1. 44.34 ಹರಿವಂಶಪರ್ವ

ವಿಜ್ಞಾನಗಳು, ಎಲ್ಲಾ ತತ್ವಜ್ಞಾನಗಳು ಬಂದದ್ದು ಈ ಭರತ ಭೂಮಿಯಲ್ಲಿ ಅಂತಹ ದೇವ ಭೂಮಿ, ತತ್ವಜ್ಞಾನದ ಭೂಮಿ, ಧರ್ಮದ ಭೂಮಿ, ಅಧ್ಯಾತ್ಮದ ಭೂಮಿ ಇದು ನಮ್ಮ ಭರತ ಭೂಮಿ ಇದು ನಮ್ಮ ಭರತ ದೇಶ. ಸಕಲ ದೇವತೆಗಳಿಗೆ ವಿಜಯವನ್ನು ಕೊಡುವುದಕ್ಕೋಸ್ಕರ ಪರಮಾತ್ಮ ತಾನು ಸ್ವತಃ ಅವತಾರ ಮಾಡಿ ಗರುಡಾರೂಢನಾಗಿ ಗರುಡ ಧ್ವಜನಾಗಿ ಬಂದು ಎಲ್ಲ ದೇವತೆಗಳಿಗೆ ಜಯವನ್ನು ಕೊಟ್ಟಿದ್ದಾನೆ ಅಂತಹ ಆ ಪರಮಾತ್ಮನ ಅದ್ಭುತವಾದಂತಹ ಮಹಿಮೆ.

ವಿಷ್ಣೋರ್ಜಿಷ್ಣೋಃ ಸಹಿಷ್ಣೋಶ್ಚ ಭ್ರಾಜಿಷ್ಣೋಸ್ತೇಜಸಾ ವೃತಮ್ । (44.51 ಹರಿವಂಶಪರ್ವ)

ಭಾರೀ ಘನಘೋರವಾಗಿರತಕ್ಕಂತಹ ಯುದ್ಧ ಪ್ರಾರಂಭವಾಗಿದೆ. ದೇವತೆಗಳ ಮೇಲಿನ ಪರಮಾನುಗ್ರಹದ ಬುದ್ಧಿಯಿಂದ ಭಗವಂತ ಪರಮ ಕಾರುಣ್ಯದಿಂದ, ವಾತ್ಸಲ್ಯದಿಂದ ಆ ಎಲ್ಲ ದೈತ್ಯರ ಸಂಹಾರವನ್ನು ಮಾಡಿ ದೇವತೆಗಳಿಗೆ ವಿಜಯವನ್ನು ತಂದು ಕೊಟ್ಟಿದ್ದಾನೆ, ದೇವತೆಗಳಿಗೆ ಸ್ವಾತಂತ್ರ್ಯವನ್ನು ಕೊಟ್ಟಿದ್ದಾನೆ. ಆ ದೇವಭೂಮಿ ಆಗಿರತಕ್ಕಂತಹ ಭಾರತ ದೇಶಕ್ಕೆ ಸ್ವಾತಂತ್ರ್ಯವನ್ನು ಕೊಟ್ಟವನು ಆ ಪರಮಾತ್ಮನೇ ಆದರೆ ಎಲ್ಲ ಭಾರತದ ಪ್ರಿಯ ಭಗವದ್ಭಕ್ತರೇ ತಿಳಿದುಕೊಳ್ಳಿ ಸ್ವಾತಂತ್ರ್ಯ ಸಿಕ್ಕಿದೆ ಅಂತ ತಿಳಿದುಕೊಳ್ಳಬೇಡಿ ಸ್ವಾತಂತ್ರ್ಯ ಒಂದರ್ಥದಲ್ಲಿ ಸಿಕ್ಕಿದೆ ಇನ್ನೊಂದು ಅರ್ಥದಲ್ಲಿ ಸ್ವಾತಂತ್ರ್ಯ ಸಿಗಬೇಕು. ಮಾನಸಿಕವಾಗಿ ಸ್ವಾತಂತ್ರ್ಯ ಬೇಕು ಪಾಶ್ಚಾತ್ಯರ ವೇಷ, ಪಾಶ್ಚಾತ್ಯರ ವಿದ್ಯೆ, ಪಾಶ್ಚಾತ್ಯರ ಭೂಷಣ ಅವರ ರೀತಿ, ಅವರ ನೀತಿ ಅದನ್ನೇ ಅನುಸರಣೆ ಮಾಡಿದರೆ ನಮ್ಮ ಜೀವನದ ಧನ್ಯತೆ ಅನ್ನುವ ಮಾನಸಿಕವಾದ ಏನು ಒಂದು ಪ್ರವೃತ್ತಿ ಇದೆ ಇದು ಹೋಗಬೇಕು. ನಮ್ಮದೇ ಆಗಿರುವಂತಹ ಏನು ತತ್ವಜ್ಞಾನ ಇದೆ, ನಮ್ಮದೇ ಆದ ಭಾರತೀಯ ಸನಾತನ ಸಂಸ್ಕೃತಿ ಏನಿದೆ, ವೈದಿಕ ಧರ್ಮ ಏನಿದೆ, ಸನಾತನ ಧರ್ಮ ಏನಿದೆ ಅಂತಹ ಶುದ್ಧವಾದ, ಸನಾತನವಾದ, ವೈದಿಕವಾದ ಆ ಧರ್ಮ ವೈದಿಕ ಧರ್ಮ, ವೈಷ್ಣವ ಧರ್ಮ ವಿಷ್ಣುಸರ್ವೋತ್ತಮತ್ವದ ಆ ದೀಕ್ಷೆ ಅದು ನಮ್ಮಲ್ಲಿ ಬರಬೇಕು. ಭಗವಂತ ಸರ್ವೋತ್ತಮ ನಾವು ಅವನ ದಾಸರು ವೇದಗಳು, ಶಾಸ್ತ್ರಗಳು, ಇತಿಹಾಸಗಳು, ಪುರಾಣಗಳು ನಮ್ಮ ದೇಶದ ದೊಡ್ಡ ಆಸ್ತಿ, ಬೆಳ್ಳಿ ಅಲ್ಲ, ಬಂಗಾರ ಅಲ್ಲ, ಮುತ್ತು ರತ್ನಗಳಲ್ಲ ಅದಕ್ಕೆ ಏನೂ ನಮ್ಮ ಭಾರತ ದೇಶದಲ್ಲಿ ಕೊರತೆ ಇಲ್ಲ ಆದರೆ ಅದು ದೊಡ್ಡ ಆಸ್ತಿ ಅಲ್ಲ. ಈ ಶಾಸ್ತ್ರಗಳು ದೊಡ್ಡ ಆಸ್ತಿ, ತತ್ವಜ್ಞಾನ ಇದು ನಮ್ಮ ದೊಡ್ಡ ಆಸ್ತಿ, ಅಧ್ಯಾತ್ಮ ಇದು ನಮ್ಮ ಆಸ್ತಿ, ಧರ್ಮ ಇದು ನಮ್ಮ ಆಸ್ತಿ ಇಂತಹ ಉತ್ತಮವಾದ ಧಾರ್ಮಿಕರಾಗಿ, ಅಧ್ಯಾತ್ಮ ಚಿಂತಕರಾಗಿ, ಭಗವದ್ಭಕ್ತರಾಗಿ, ಪರೋಪಕಾರಿಗಳಾಗಿ, ಆತ್ಮೋನ್ನತಿಯ ಸಾಧಕರಾಗಿ ಮಾತ್ರವಲ್ಲ ಜಗತ್ತಿನ ಎಲ್ಲ ದೇಶದ ಪ್ರತಿಯೊಬ್ಬ ಪ್ರಜೆಗೂ ಧಾರ್ಮಿಕ ವಿಷಯದಲ್ಲಿ ಮಾರ್ಗದರ್ಶಕರಾಗಿ ಇರುವಂತೆ ನಮ್ಮ ಭಾರತ ದೇಶದ ಒಬ್ಬೊಬ್ಬ ಜನರು ಆದರೆ ಆಗ ನಿಜವಾದ ಭಾರತ ದೇಶದ ಸ್ವಾತಂತ್ರ್ಯ ಬಂದಂತೆ. ಅಂತಹ ಸ್ವಾತಂತ್ರ್ಯದ ಕನಸನ್ನು ನಾವು ಕಾಣೋಣ ಅದಕ್ಕಾಗಿ ಎಲ್ಲರೂ ಒಗ್ಗಟ್ಟಾಗಿ ಪ್ರಯತ್ನವನ್ನು ಮಾಡೋಣ **'ಧರ್ಮೋ ರಕ್ಷತಿ ರಕ್ಷಿತಃ'** ಅಂತಹ ಶ್ರೇಷ್ಠವಾದ ವೈದಿಕ ಸನಾತನ ಧರ್ಮದ ಸ್ಥಾಪನೆಯನ್ನು ಪುನಃ ಮಾಡುವ ಮೂಲಕ ಭಾರತ ದೇಶದ ಸ್ವಾತಂತ್ರ್ಯ ನಮಗೆಲ್ಲ ಸಿಗುವಂತೆ ಆ ಭಗವಂತ ಅನುಗ್ರಹ ಮಾಡಲಿ, ಗರುಡ ಧ್ವಜನಾಗಿರುವ ಪರಮಾತ್ಮ ನಮಗೆ ಅನುಗ್ರಹವನ್ನು ಮಾಡಲಿ ಎಂಬುದಾಗಿ ಪ್ರಾರ್ಥನೆಯನ್ನು ಮಾಡೋಣ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಹರಿವಂಶಪರ್ವ-14

* * *

ದೇವತೆಗಳು, ಅಸುರರು ಎಲ್ಲರೂ ಕೂಡ ಯುದ್ಧಕ್ಕೆ ಸಿದ್ಧರಾಗಿದ್ದಾರೆ ಬಹಳ ಅದ್ಭುತವಾದಂತಹ ಸಿದ್ಧತೆ ಆಗಿದೆ. ದೇವ ಪಕ್ಷದಲ್ಲಿ ಎಲ್ಲ ದಿಕ್ಪಾಲಕರು ಭಗವಂತನ ಆಜ್ಞೆಯಂತೆ ಪರಮಾತ್ಮನ ಸ್ಮರಣೆಯನ್ನು ಮಾಡಿ ದೇವತೆಗಳ ರಕ್ಷಣೆಗಾಗಿ ಇಂದ್ರ, ಯಮ, ವರುಣ, ಕುಬೇರ, ಸೂರ್ಯ, ಚಂದ್ರ, ವಾಯು, ಅಗ್ನಿ ಎಲ್ಲರೂ ಕೂಡ ದೇವ ಸೇನೆಯಲ್ಲಿ ರಕ್ಷಣೆಗಾಗಿ ಮುಂಚೂಣಿಯಲ್ಲಿ ನಿಂತಿದ್ದಾರೆ. ನಾನಾ ತರಹದ ಮಾಯಾ ವಿದ್ಯೆಯ ಬಲವನ್ನು ಪಡೆದುಕೊಂಡಂತಹ ಅಸುರರು ತಮ್ಮದೇ ಆದ ರೀತಿಯಲ್ಲಿ ತಮ್ಮ ಸೈನ್ಯವನ್ನು ಸಿದ್ಧಪಡಿಸಿಕೊಂಡಿದ್ದಾರೆ.

ಧರ್ಮಾಧರ್ಮಸಮಾಯುಕ್ತಂ ದರ್ಪೇಣ ವಿನಯೇನ ಚ ।। (45.3 ಹರಿವಂಶಪರ್ವ)

ದೇವತೆಗಳ ಬಲದ ಮೂಲ ಅದು ಧರ್ಮ. ಅಸುರರು ಅಧರ್ಮದ ಪಕ್ಷವನ್ನು ವಹಿಸಿದರೆ ಧರ್ಮದ ಪಕ್ಷವನ್ನು ದೇವತೆಗಳು ವಹಿಸಿದ್ದಾರೆ, ಇಲ್ಲಿ ಉನ್ಮಾದ ಅಹಂಕಾರ, ದರ್ಪ ಅಸುರರಲ್ಲಿ ಕಾಣುತ್ತಾ ಇದೆ, ಭಕ್ತಿ, ಶ್ರದ್ಧೆ, ವಿನಯ ದೇವತೆಗಳಲ್ಲಿ ಕಾಣುತ್ತಾ ಇದೆ. ಇದು ದರ್ಪ ಹಾಗು ವಿನಯಗಳ ಸಮರ, ಧರ್ಮ ಹಾಗೂ ಅಧರ್ಮಗಳ ಸಮರ, ವಿಷ್ಣು ಭಕ್ತಿ ಹಾಗೂ ವಿಷ್ಣು ದ್ವೇಷದ ಸಮರ ಇದು. ಅಂತಹ ಆ ದೇವಾಸುರರ ಸಂಗ್ರಾಮ ಅಲ್ಲಿ ನಡೀತಾ ಇದೆ ಎಂಬುದಾಗಿ ತಿಳಿಸಿದ್ದಾರೆ. ಭಾರೀ ಘೋರವಾದಂತಹ ಮಾಯಾ ಯುದ್ಧಗಳನ್ನೆಲ್ಲ ದೈತ್ಯರು ಮಾಡುವಾಗ ದೇವತೆಗಳು ಸಂತ್ರಸ್ತರಾಗಿದ್ದಾರೆ ಆ ಸಂದರ್ಭದಲ್ಲಿ ಇಂದ್ರ ದೇವರು ತಮ್ಮ ವಿಶಿಷ್ಟವಾದ ಭಗವದನುಗ್ರಹದ ಸಾಮರ್ಥ್ಯದಿಂದ ಆ ಎಲ್ಲ ಮಾಯೆಯನ್ನು ನಾಶ ಮಾಡಿ ದೇವತೆಗಳಿಗೆ ಬಲವನ್ನು ತುಂಬಿದ್ದಾರೆ.

ಮಾಯಾಪಾಶಾನ್ ವಿಕರ್ಷಂಶ್ಚ ಭಿನ್ದನ್ ವಜ್ರೇಣ ತಾಞ್ಯರಾನ್ ।
ಶಕ್ರೋ ದೈತ್ಯಬಲಂ ಘೋರಂ ವಿವೇಶ ಬಹುಲೋಚನಃ ।। (45.12 ಹರಿವಂಶಪರ್ವ)

ಸಹಸ್ರಾಕ್ಷನಾದಂತಹ ಇಂದ್ರ ತನ್ನ ಸಾವಿರ ಕಣ್ಣುಗಳಿಂದ ಸಾವಿರ ಸಾವಿರ ಶತ್ರುಗಳನ್ನೆಲ್ಲ ಚೆನ್ನಾಗಿ ನೋಡುತ್ತಾ ಅವರೆಲ್ಲರೂ ಪ್ರಯೋಗ ಮಾಡಿದ ಮಾಯೆಯನ್ನು ನಾಶ ಮಾಡಿ ದೇವತೆಗಳಿಗೆ ಬಲವನ್ನು ತುಂಬಿದ್ದಾರೆ. ಎಲ್ಲ ಕಡೆಗೆ

ಕತ್ತಲೆ ಆವರಿಸುವಂತೆ ಮಾಡಿದ್ದಾನೆ ಇಂದ್ರ ದೈತ್ಯರಿಗೆ ಏನು ಕಾಣಿಸಬಾರದು ಯಾರು ದೇವತೆಗಳು ಯಾರು ತಮ್ಮವರು ಗೊತ್ತಾಗದೇ ಇದ್ದಂತೆ ತಮ್ಮವರನ್ನು ತಾವೇ ಹೊಡೆದುಕೊಂಡು ಸಾಯುವಂತೆ ಆ ದೈತ್ಯರಿಗೆ ಒಂದು ತರಹದ ಭ್ರಮ ಬರುವ ರೀತಿಯಲ್ಲಿ ಮಾಡಿದ್ದಾನೆ ಇಂದ್ರ.

ತಾಮಸೇನಾಸ್ತ್ರಜಾಲೇನ ತಮೋಭೂತಮಥಾಕರೋತ್ ॥ (45.13 ಹರಿವಂಶಪರ್ವ)

ತೇऽನ್ಯೋನ್ಯಂ ನಾವಬುಧ್ಯನ್ತ ದೇವಾನ್ ವಾ ದಾನವಾನಪಿ । (45.14 ಹರಿವಂಶಪರ್ವ)

ಕಾರಣ ಬೆಳಕಿಲ್ಲ ಕತ್ತಲು ಒಬ್ಬರನ್ನು ಒಬ್ಬರು ನೋಡುವುದಕ್ಕೆ ಆಗುತ್ತಾ ಇಲ್ಲ ಈ ರೀತಿಯಾಗಿ ಇಂದ್ರ ದೇವರು ಒಂದು ವಿಶಿಷ್ಟವಾದ ತಮ್ಮ ಸಾಮರ್ಥ್ಯವನ್ನು ತೋರಿಸಿ ದೇವತೆಗಳಿಗೆ ಉತ್ಸಾಹವನ್ನು ತುಂಬಿದ್ದಾರೆ, ಜಯವನ್ನು ಕೊಟ್ಟಿದ್ದಾರೆ ದೈತ್ಯರ ಮಾಯೆಯೇ ನಾಶವಾಗಿದೆ. ಮತ್ತೆ ದೈತ್ಯರು ಸುಮ್ಮನೆ ಕೂಡುತ್ತಾ ಇಲ್ಲ ಮಯಾಸುರ ಭಾರೀ ತಾಮಸವಾದಂತಹ ಏನು ಇಂದ್ರ ದೇವರು ಸೃಷ್ಟಿ ಮಾಡಿದಂತಹ ಒಂದು ಅದ್ಭುತವಾದ ಶಕ್ತಿ ಇತ್ತೋ ಎಲ್ಲ ಕಡೆಗೆ ಕತ್ತಲನ್ನು ನಿರ್ಮಾಣ ಮಾಡಿದ್ದಾರೆ ಅದನ್ನೆಲ್ಲ ನಾಶ ಮಾಡಿದ್ದಾನೆ ಔರ್ವ ಅಗ್ನಿ ಅಂತ. ಆ ಔರ್ವಾಗ್ನಿ ಊರ್ವ ಎಂಬ ಋಷಿ ಇಂದ ಸೃಷ್ಟವಾದ ಒಂದು ಅಗ್ನಿ ಆ ಅಗ್ನಿಯನ್ನು ಉಪಯೋಗಿಸಿ ಆ ಅಗ್ನಿಯ ಮೂಲಕ ಈ ಎಲ್ಲ ಕತ್ತಲೆಯನ್ನು ನಾಶ ಮಾಡಿ, ಎಲ್ಲ ಕಡೆಗೂ ಕೂಡ ಅತ್ಯಂತ ಉಗ್ರವಾದಂತಹ ತೇಜಸ್ಸು, ಭಯಂಕರವಾದಂತಹ ಜ್ವಾಲೆ, ಭಾರೀ ಕಿಡಿಗಳು ಅವುಗಳಿಂದ ಎಲ್ಲ ದೇವತೆಗಳಿಗೆ ಪೀಡೆಯನ್ನು ಕೊಡುತ್ತಾ ಇದ್ದಾನೆ ಮಯಾ. ಆಗ ಇಂದ್ರ ದೇವರಿಗೆ ವರುಣ ದೇವರು ಕೇಳುತ್ತಾರೆ ವರುಣ ದೇವರು ಚಿಕ್ಕವರು, ಇಂದ್ರ ದೇವರು ದೊಡ್ಡವರು ದೇವೇಂದ್ರ, ದೇವೇಂದ್ರ ನೀನು ಆಜ್ಞೆಯನ್ನು ಮಾಡು ಈ ಅಗ್ನಿಯಿಂದ ಆಗುವಂತಹ ಏನು ತಾಪ ಇದೆ ಈ ತಾಪವನ್ನು ಉಪಶಮನ ಮಾಡುವುದಕ್ಕೆ, ಶಾಂತಗೊಳಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ ನನಗೆ ಸಹಾಯಕನಾಗಿ ಚಂದ್ರ ಬೇಕು. ನಾನು ಹಾಗೂ ಚಂದ್ರ ಇವರಿಬ್ಬರೂ ಸೇರಿ ಏನೆಲ್ಲ ತಾಪ ಆಗಿದೆ ದೇವತೆಗಳಿಗೆ ಅದನ್ನು ಉಪಶಮನ ಮಾಡಿ ಶಾಂತಗೊಳಿಸುತ್ತೇವೆ ಜೊತೆಗೆ ಅವರಿಗೆ ಶೈತ್ಯದ ಪೀಡೆಯಾಗುವಂತೆ ಮಾಡುತ್ತೇವೆ. ವರುಣ, ಚಂದ್ರ ಇಬ್ಬರೂ ತಂಪನ್ನು ಕೊಡುವವರು ಮೈಯೆಲ್ಲ ಹಿಮ ಬರ್ಫಿನಂತೆ ಮೈಯೆಲ್ಲ ಸುತ್ತ ಹಿಮ ಆವರಿಸಿ ಆಚೆಈಚೆ ಸರಿಯದಂತೆ ಆ ಹಿಮದಿಂದಲೇ ನಿಶ್ಯಕ್ತರಾಗಿ, ಜಡೀಭೂತರಾಗಿ, ಘನೀಭೂತರಾಗಿ, ನಿಶ್ಚೇಷ್ಟರಾಗಿ ಅಸುರರೆಲ್ಲ ಸೋತು ಹೋಗಬೇಕು ಹಾಗೆ ಮಾಡುತ್ತೇವೆ ನೀವು ಆಜ್ಞೆ ಕೊಡಬೇಕು ಅಂತ ಆಗಲಿ ಅಂತ ಇಂದ್ರ ದೇವರು ಆಜ್ಞೆ ಕೊಟ್ಟಿದ್ದಾರೆ. ಅವರ ಆಜ್ಞೆಗೆ ತಕ್ಕಂತೆ ಇವರಿಬ್ಬರೂ ಕೂಡ ಆ ಔರ್ವ ಅಗ್ನಿಯಿಂದ ಆದ ತಾಪವನ್ನು ಕಡಿಮೆ ಮಾಡಿ ಪ್ರತಿಯಾಗಿ ಆ ದಾನವರ ಮೇಲೆ ಈ ಶೈತ್ಯದ ಆವರಣ ಆಗುವಂತೆ, ಹಿಮದ ಆವರಣ ಆಗುವಂತೆ, ಹಿಮ ವೃಷ್ಟಿಯಾಗುವಂತೆ ಮಾಡಿದ್ದಾರೆ ಸ್ನೋಫಾಲ್ ಅಂತಾರಲ್ಲ ಆ ತರಹ ಮೈಯೆಲ್ಲ ಆ ಹಿಮದ ಆವರಣ ಆಗಿದೆ ಏನು ಮಾಡುವಂತೆ ಆಗುತ್ತಾ ಇಲ್ಲ ಅಂತ.

ಯಾರಿವರು ಈ ಔರ್ವ ಅಗ್ನಿ ಯಾರು, ಯಾಕೆ ಈ ಅಗ್ನಿ ಅಂದರೆ ದೇವತೆ ಔರ್ವ ಅಗ್ನಿ ಆ ಅಸುರರ ಪಕ್ಷಕ್ಕೆ ಹೋಗುವುದಕ್ಕೆ ಕಾರಣ ಏನಾಯಿತು, ಇದರ ಹಿನ್ನೆಲೆ ಏನು ಅನ್ನುವುದರ ಬಗ್ಗೆ ತಿಳಿಸಿಕೊಡುತ್ತಾರೆ. ಹಿಂದೆ ಸುಗುರ್ಷಿಗಳ ಮಗ ಊರ್ವ ಎಂಬಂತಹ ಋಷಿ ಮಹಾತೇಜಸ್ವಿ, ಅಖಂಡವಾಗಿ ತಪಶ್ಚರ್ಯವನ್ನು ಮಾಡುತ್ತಾ ಇದ್ದಾನೆ ಅನೇಕ ಋಷಿಗಳು, ಮುನಿಗಳು ಎಲ್ಲರೂ ಬಂದು ಆ ಊರ್ವ ಋಷಿಗೆ ಕೇಳುತ್ತಾ ಇದ್ದಾರೆ. ಊರ್ವ ಇನ್ನು ತಾರುಣ್ಯ ಇದೆ ಅಖಂಡವಾಗಿ ತಪಸ್ಸು ತಪಸ್ಸು ತಪಸ್ಸು ಅಂತ ತಪಸ್ಸಿನೊಳಗೆ ಆಸಕ್ತರಾಗಿ ಬಿಟ್ಟಿದ್ದೀರಿ, ವಿವಾಹವನ್ನು ಮಾಡಿಕೊಂಡು ಮಕ್ಕಳನ್ನು ಪಡೆದು ಪ್ರಜಾಭಿವೃದ್ಧಿಯನ್ನು ಮಾಡಬೇಕು ಈ ರೀತಿಯಾಗಿ ನೀವು ಎಷ್ಟು ದಿನ ಅಂತ

ತಪಸ್ಸು ಮಾಡುವವರು. ಬ್ರಹ್ಮ ದೇವರು ಅನೇಕ ಋಷಿಗಳನ್ನು ಸೃಷ್ಟಿ ಮಾಡಿದ್ದಾರೆ ಆ ಎಲ್ಲ ಋಷಿಗಳು ತಮ್ಮದೇ ಆದ ಗೋತ್ರಗಳನ್ನು ಪ್ರವರ್ತನ ಮಾಡಿದ್ದಾರೆ, ಎಷ್ಟೋ ಗೋತ್ರಗಳೆಲ್ಲ ನಶಿಸಿ ಹೋಗುವ ಪ್ರಸಂಗ ಬಂದಿದೆ ಪುನಃ ಅದರ ವೃದ್ಧಿಯನ್ನು ಮಾಡಬೇಕು. ನಿಮ್ಮಂತಹ ಜ್ಞಾನಿಗಳು, ಸಮರ್ಥರು, ಧಾರ್ಮಿಕರು, ತಪಸ್ವಿಗಳು ನೀವು ವಂಶಾಭಿವೃದ್ಧಿಯನ್ನು ಮಾಡಿದರೆ ನಿಮ್ಮಂತಯೇ ತಪಸ್ವಿಗಳಾದ, ಜ್ಞಾನಿಗಳಾದ, ಸಜ್ಜನರಾದ ಮಹಾನುಭಾವರು, ಲೋಕೋಪಕಾರ ಮಾಡುವಂಥವರು, ಲೋಕೋದ್ಧಾರ ಮಾಡುವವರು ಜಗತ್ತಿನಲ್ಲಿ ಬರುವುದಕ್ಕೆ ಸಾಧ್ಯ. ನೀವು ಹೀಗೆ ತಪಸ್ಸು ಮಾಡಿದರೆ ಹೇಗೆ ತಪಸ್ಸನ್ನು ಉಪಸಂಹಾರ ಮಾಡಿ ನೀವು ಗೃಹಸ್ಥಾಶ್ರಮವನ್ನು ಸ್ವೀಕರಿಸಿ ಪ್ರಜಾಭಿವೃದ್ಧಿಯನ್ನು ಮಾಡಬೇಕು ಅಂತ ಕೇಳಿಕೊಂಡಿದ್ದಾರೆ ಅದಕ್ಕೆ ಊರ್ವ ಋಷಿಗಳು ಒಪ್ಪುತ್ತಾ ಇಲ್ಲ ಬ್ರಹ್ಮಚರ್ಯದ ಮಹಿಮೆಯನ್ನು ಹೇಳುತ್ತಾ ಇದ್ದಾರೆ.

ಬ್ರಹ್ಮಚರ್ಯಂ ಸುಚರಿತಂ ಬ್ರಹ್ಮಾಣಮಪಿ ಚಾಲಯೇತ್ ॥ (45.33 ಹರಿವಂಶಪರ್ವ)

ನೈಷ್ಠಿಕವಾದ ಬ್ರಹ್ಮಚರ್ಯವನ್ನು ಚೆನ್ನಾಗಿ ಪರಿಪಾಲನೆ ಮಾಡಿದರೆ ಬ್ರಹ್ಮ ದೇವರನ್ನೂ ನಡುಗಿಸಬಹುದು ಅಂತ ಅದರ ತಾತ್ಪರ್ಯ ಅಷ್ಟು ಶ್ರೇಷ್ಠವಾದ ಬ್ರಹ್ಮ ದೇವರ ಅನುಗ್ರಹವನ್ನು ಪಡೆಯಬಹುದು ಅಂತ ಅರ್ಥ. ಆ ಬ್ರಹ್ಮ ದೇವರ ವಿಶೇಷವಾದ ಅನುಗ್ರಹವನ್ನು ಪಡೆದು ಪ್ರೀತಿಯಿಂದ ನಮ್ಮ ಮೇಲೆ ವಾತ್ಸಲ್ಯದಿಂದ ಅವರು ಹೃದಯ ಕರಗಿ ಆಶೀರ್ವಾದ ಮಾಡಬಹುದು ಅಂತ. ಕಂಪ ಅಂದರೆ ಭಯದ ಕಂಪ ಅಲ್ಲ ಭಕ್ತರು ಮಾಡಿದ ತಪಸ್ಸಿಗೆ ಪ್ರೀತಿಯ ವಾತ್ಸಲ್ಯದ ಕಂಪನದಿಂದ ಅನುಗ್ರಹವನ್ನು ಬ್ರಹ್ಮ ದೇವರು ಮಾಡಬಹುದು ಅನ್ನುವ ಅರ್ಥದಲ್ಲಿ **'ಬ್ರಹ್ಮಚರ್ಯಂ ಸುಚರಿತಂ ಬ್ರಹ್ಮಾಣಮಪಿ ಚಾಲಯೇತ್'** ಬ್ರಹ್ಮ ದೇವರು ನಮ್ಮ ಮೇಲೆ ವಿಶೇಷವಾಗಿ ಅನುಗ್ರಹವನ್ನು ಮಾಡಬಹುದು. **'ಅಮ್ಬುಭಕ್ಷಾ ವಾಯುಭಕ್ಷಾ'** [1] ಕೇವಲ ನೀರನ್ನು ಸ್ವೀಕರಿಸಿ ತಪಸ್ಸು ಮಾಡುವವರಿದ್ದಾರೆ, ಕೇವಲ ಗಾಳಿಯನ್ನು ಸ್ವೀಕರಿಸಿ, ಹಲ್ಲಿದ್ದವರು ಹಲ್ಲಿನಿಂದಲೇ ತಿನ್ನುವುದು ಪ್ರತ್ಯೇಕ ಬೇಯಿಸಿಕೊಂಡು ಹೆಚ್ಚಿ ಕೊಚ್ಚಿ ಮಾಡಿ ಅಲ್ಲ, ಏನು ನೇರವಾಗಿ ಹಲ್ಲಿನಿಂದ ತಿನ್ನುವುದಕ್ಕೆ ಸಾಧ್ಯವೋ ಅಷ್ಟನ್ನೆ ಸ್ವೀಕಾರ ಮಾಡುವವರು ಕುಟ್ಟುವುದು ಬೀಸುವುದು ಯಾವುದಿಲ್ಲ **'ದನ್ತೋಲುಖಲಿಕಾಸ್ತಥಾ'** [2] ಕೆಲವರು ಕಲ್ಲಿನಿಂದ ಕುಟ್ಟಿ ತಿನ್ನುತ್ತಾರೆ ಹಲ್ಲಿಲ್ಲದವರು. ಸುತ್ತಲೂ ನಾಲ್ಕು ಅಗ್ನಿ ಮೇಲೆ ಸೂರ್ಯ ಈ ರೀತಿ ಪಂಚಾಗ್ನಿ ಮಧ್ಯದಲ್ಲಿ ತಪಸ್ಸು ಮಾಡುವವರಿದ್ದಾರೆ ಇಂತಹ ನಾನಾ ವಿಧವಾದ ವ್ರತಗಳನ್ನು ಮಾಡುವವರಿದ್ದಾರೆ ಅವರೆಲ್ಲರೂ ಬ್ರಹ್ಮಚರ್ಯದಿಂದ ಇರುತ್ತಾರೆ ಅದೆಲ್ಲದಕ್ಕೂ ಮೂಲ ಬ್ರಹ್ಮಚರ್ಯ, ಬ್ರಹ್ಮಚರ್ಯ ಎಲ್ಲದಕ್ಕಿಂತಲೂ ಹಿರಿದಾದಂತಹ ತಪಸ್ಸು,

ಬ್ರಹ್ಮಚರ್ಯಾದ್ ಬ್ರಾಹ್ಮಣಸ್ಯ ಬ್ರಾಹ್ಮಣತ್ವಂ ವಿಧೀಯತೇ । (45.37 ಹರಿವಂಶಪರ್ವ)

ಕೇವಲ ಬ್ರಾಹ್ಮಣ ಅಂತ ಜನ್ಮವನ್ನು ಪಡೆದ ಮಾತ್ರಕ್ಕೆ ಬ್ರಾಹ್ಮಣರಾಗವುದಿಲ್ಲ ನಾವು, ಬ್ರಹ್ಮಚರ್ಯದ ಪರಿಪಾಲನೆಯನ್ನು ಮಾಡಬೇಕು ಅದರಿಂದಲೇ ನಮಗೆ ಬ್ರಾಹ್ಮಣ್ಯ, ಬ್ರಹ್ಮಜ್ಞಾನ ಇದು ಸ್ಥಿರವಾಗಿ ಉಳಿಯುವುದಕ್ಕೆ ಸಾಧ್ಯ ಇದೆ, ಧೈರ್ಯ, ತಪಸ್ಸು ಎಲ್ಲವೂ ಬ್ರಹ್ಮಚರ್ಯದಿಂದ ಸಿಗುತ್ತೆ.

ಬ್ರಹ್ಮಚರ್ಯೇ ಸ್ಥಿತಂ ಧೈರ್ಯಂ ಬ್ರಹ್ಮಚರ್ಯೇಸ್ಥಿತಂ ತಪಃ ।
ಯೇ ಸ್ಥಿತಾ ಬ್ರಹ್ಮಚರ್ಯೇಷು ಬ್ರಾಹ್ಮಣಾಸ್ತೇ ದಿವಿ ಸ್ಥಿತಾಃ ॥ (45.38 ಹರಿವಂಶಪರ್ವ)

---

1. 45.35 ಹರಿವಂಶಪರ್ವ ; 2. 45.35 ಹರಿವಂಶಪರ್ವ

ಇಷ್ಟೆಲ್ಲ ಇದೆ ಆದ್ದರಿಂದ ನಾನು ಒಟ್ಟು ತಾತ್ಪರ್ಯ ಬ್ರಹ್ಮಚರ್ಯ ಇದು ಅತಿ ಶ್ರೇಷ್ಠವಾದ ತಪಸ್ಸು ಅದನ್ನು ಬಿಡುವುದಿಲ್ಲ ಬ್ರಹ್ಮಚರ್ಯದಿಂದಲೇ ನಾನು ಜೀವನ ಮಾಡುವುದು ಅದರಿಂದ ನಾನು ಪರಮಾತ್ಮನನ್ನು ಒಲಿಸಿಕೊಳ್ಳಬೇಕು, ಅವನ ಅನುಗ್ರಹವನ್ನು ಪಡೆಯಬೇಕು, ಸಾಕ್ಷಾತ್ಕಾರ ಪಡೆದುಕೊಂಡು ಮಹಾಪ್ರಸಾದದಿಂದ ಮೋಕ್ಷವನ್ನು ಪಡೆಯಬೇಕು. ಬ್ರಹ್ಮ ದೇವರು ಸನಕಾದಿಗಳನ್ನು ಸೃಷ್ಟಿ ಮಾಡಿದರು ಅವರೇನಾದರೂ ವಿವಾಹ ಮಾಡಿಕೊಂಡರಾ, ಮಕ್ಕಳನ್ನು ಪಡೆದರಾ ಬ್ರಹ್ಮಚರ್ಯದಲ್ಲಿಯೇ ಇದ್ದು ಸಾಧನೆಯನ್ನು ಮಾಡುತ್ತಾ ಇದ್ದಾರಲ್ಲ, ಸರಿ ನೀವು ಹೇಳಿದ ಮಾತನ್ನು ನಾನು ಸ್ವೀಕಾರ ಮಾಡುತ್ತೇನೆ. ನೀವೆಲ್ಲ ಇಷ್ಟು ದೊಡ್ಡ ಜ್ಞಾನಿಗಳು, ಋಷಿಗಳು, ಮುನಿಗಳು ಇಲ್ಲಿ ಬಂದು ಉಪದೇಶ ಮಾಡುತ್ತಾ ಇದ್ದೀರಿ ಆದರೆ ನಾನು ವಿವಾಹ ಮಾಡಿಕೊಳ್ಳುವುದಿಲ್ಲ, ಬ್ರಹ್ಮಚರ್ಯ ವ್ರತವನ್ನು ಬಿಡುವುದಿಲ್ಲ ಮನಸ್ಸಿನಿಂದಲೇ ಸೃಷ್ಟಿಯನ್ನು ಮಾಡುತ್ತೇನೆ ಬೇಕು ಅಂದರೆ ಅಷ್ಟೇ.

ಮನಸಾ ನಿರ್ಮಿತಾ ಯೋನಿರಾಧಾತವ್ಯಾ ತಪಸ್ವಿನಾ ।

ನ ದಾರಯೋಗಂ ಬೀಜಂ ವಾ ವ್ರತಮುಕ್ತಂ ತಪಸ್ವಿನಾಮ್ ॥ (45.44 ಹರಿವಂಶಪರ್ವ)

ಮದುವೆ ಮಾಡಿಕೊಂಡು ನಾನು ನನ್ನ ನಿಯಮವನ್ನು ಪರಿತ್ಯಾಗ ಮಾಡುವುದಿಲ್ಲ ಎಂಬುದಾಗಿ ಹೇಳಿ ಸೃಷ್ಟಿಯನ್ನು ಮಾಡುತ್ತಾರೆ ಊರ್ವ ಋಷಿಗಳು ಅವನೇ ಅಗ್ನಿ. ಆ ಊರ್ವ ಋಷಿಗಳು ಒಂದು ಅಗ್ನಿಯನ್ನು ಸೃಷ್ಟಿ ಮಾಡುತ್ತಾರೆ ಆ ಊರ್ವನ ಊರು ತೊಡೆ ಊರ್ವ ಋಷಿಗಳ ಊರುವನ್ನು ಒಡೆದು ಅಲ್ಲಿಂದ ಅಗ್ನಿ ಪ್ರಾದುರ್ಭೂತನಾಗುತ್ತಾನೆ. ಭಾರೀ ಮೂರು ಲೋಕಗಳನ್ನೇ ಸುಟ್ಟು ಹಾಕುತ್ತೇನೆ ಅನ್ನುವಂತಹ ಅತ್ಯದ್ಭುತವಾದ ಭಾರೀ ಉಗ್ರವಾದ ಜ್ವಾಲೆಗಳನ್ನು ಹೊರಗೆ ಹಾಕುತ್ತಾ ಅಗ್ನಿ ಹುಟ್ಟಿದ್ದೇ ತಡ ಕೇಳುತ್ತಾನೆ ಊರ್ವ ಋಷಿಗಳೇ ನನ್ನನ್ನು ಹುಟ್ಟಿಸಿದ್ದರಲ್ಲ ನನಗೇನು ಆಹಾರ, ಹಸಿವೆ ಆಗುತ್ತಾ ಇದೆ ನನಗೆ ಆಹಾರವನ್ನು ಮೊದಲು ಕಲ್ಪಿಸಿ ಅಂತ. ಆಗ ಅವನಿಗೆ ಯೋಗ್ಯವಾದಂತಹದ್ದನ್ನೆಲ್ಲ ನೀನು ಸ್ವೀಕಾರ ಮಾಡು ಎಂಬುದಾಗಿ ಊರ್ವ ಋಷಿಗಳು ಹೇಳಿ ಅವನಿಗೆ ಆಹಾರವನ್ನು ಕಲ್ಪಿಸಿದ್ದಾರೆ.

ಧನ್ಯೋಽಸ್ಮ್ಯನುಗೃಹೀತೋಽಸ್ಮಿ ಯನ್ಮಮಾದ್ಯ ಭವಾಞ್ಶ್ಚೋಃ ।

ಮತಿಮೇತಾಂ ದದಾತೀಹ ಪರಮಾನುಗ್ರಹಾಯ ವೈ ॥ (45.57 ಹರಿವಂಶಪರ್ವ)

ಊರ್ವ ಋಷಿಗಳು ಔರ್ವ ಎಂಬ ಅಗ್ನಿಯನ್ನು ಪಡೆದು ನಿಮ್ಮ ಆಜ್ಞೆಯಂತೆ ಈ ಎಲ್ಲ ಋಷಿಗಳ ಆಜ್ಞೆಯಂತೆ ಈ ಮಗನನ್ನು ಪಡೆದಿದ್ದೇನೆ ಇವನಿಗೆ ಆಹಾರ ಬೇಕಂತೆ ವ್ಯವಸ್ಥೆಯನ್ನು ಮಾಡಿ ಅಂತ ಬ್ರಹ್ಮ ದೇವರಿಗೆ ಹೇಳುತ್ತಾರೆ. ಆಗ ಬ್ರಹ್ಮ ದೇವರು ಹೇಳುತ್ತಾರೆ ಸಮುದ್ರದೊಳಗೆ ಎಲ್ಲ ನದಿಗಳು ಸೇರುತ್ತವೆ ಆ ಎಲ್ಲ ನದಿಗಳ ನೀರು ಸೇರಿದಾಗ ಅದು ಹಾಗೆ ಬೆಳೀತಾ ಹೋಗಬಾರದು ಎಷ್ಟು ಬೇಕೋ ಅಷ್ಟು ಇರಬೇಕು, ಹೆಚ್ಚಿನದನ್ನೆಲ್ಲ ಸಮವಾಗಿ ಇರುವಂತೆ ಮಾಡುವುದಕ್ಕೆ ಅದನ್ನು ಪಾನ ಮಾಡಬೇಕು. ಅದಕ್ಕಾಗಿ ಸಮುದ್ರದ ಮುಖದಲ್ಲಿ ಅಗ್ನಿ, ಅಲ್ಲಿ ಹೋಗಿ ನೆಲಿಸಿ ಆ ಎಲ್ಲ ನೀರನ್ನು ಪಾನ ಮಾಡಲಿ ಆ ನೀರೇ ಇವನಿಗೆ ಆಹಾರ ಅಂತ ಬ್ರಹ್ಮ ದೇವರು ಹೇಳುತ್ತಾರೆ ಮುಖ್ಯವಾಗಿ ಅಲ್ಲಿ ಪರಮಾತ್ಮ ಇದ್ದಾನೆ.

ಕ್ಷಾರಾಬ್ಧಿಸಂಗತ ಮಹಾಜಲಪಾತ್ರವಾಡವಾಗ್ನಿ ಸ್ವರೂಪ ಪರಮಾಣುಗತಾಣು ರೂಪ ।

ಅವ್ಯಾಕೃತಾಂಬರಗತಾಪರಿಮೇಯರೂಪ ವಾಸಿಷ್ಠಕೃಷ್ಣ ಮಮದೇಹಿ ಕರಾವಲಂಬಂ ॥

(13 ಶ್ರೀವೇದವ್ಯಾಸಕರಾವಲಂಬನಸ್ತೋತ್ರಂ)



ಯಾದವಾರ್ಯರು ಕರಾವಲಂಬ ಸ್ತುತಿಯಲ್ಲಿ ವರ್ಣನೆ ಮಾಡುತ್ತಾರೆ, ಶ್ರೀಮದಾಚಾರ್ಯರು ಕರ್ಮನಿರ್ಣಯದಲ್ಲಿ ಆ ಭಗವಂತನ ಮಹಿಮೆಯನ್ನು ವರ್ಣನೆ ಮಾಡುತ್ತಾರೆ. ವಾಡವಾನಲ ರೂಪದಲ್ಲಿ ಭಗವಂತ ಈ ವಾಡವಾಗ್ನಿಯಲ್ಲಿ ಅಂತರ್ಯಾಮಿಯಾಗಿ ಸ್ವಯಂ ಪರಮಾತ್ಮನೇ ಅಲ್ಲಿದ್ದು **'ಗೃಹರ್ವಿರ್ ವಿಚಿಂತ್ಯಃ'** ಅಂತಹ ಪರಮಾತ್ಮನನ್ನು ನಾವು ಅಲ್ಲಿ ಚಿಂತಿಸಬೇಕು ಅಂತ ಶ್ರೀಮದಾಚಾರ್ಯರು ಕರ್ಮನಿರ್ಣಯದಲ್ಲಿ ತಿಳಿಸಿದ್ದಾರೆ. ಆ ಭಗವಂತನ ವಿಶೇಷ ಅನುಗ್ರಹದಿಂದ, ಪರಮಾತ್ಮನ ಸನ್ನಿಧಾನದಿಂದ ಈ ಅಗ್ನಿ ಸಮುದ್ರ ಉಕ್ಕೇರದಂತೆ ಆ ಸಮುದ್ರದಲ್ಲಿ ಅಧಿಕವಾದ ಜಲವನ್ನು ಪಾನ ಮಾಡುತ್ತಾನೆ. ಪರಮಾತ್ಮ ನಿತ್ಯ ತೃಪ್ತ ಅವನಿಗೇನು ಬೇಕಿಲ್ಲ ಆದರೆ ಈ ಅಗ್ನಿಗೆ ಅದು ಆಹಾರವಾಗುತ್ತೆ ಎಂಬುದಾಗಿ ಬ್ರಹ್ಮ ದೇವರು ತಿಳಿಸಿಕೊಡುತ್ತಾರೆ ಅಂತಹ ವಾಡವಾಗ್ನಿ.

ಹಿರಣ್ಯಕಶಿಪು ಆ ಕಾಲದಲ್ಲಿ ಇದ್ದ ಅವನು ವಿಶೇಷವಾಗಿ ಆ ಊರ್ವ ಋಷಿಗಳ ಮನಸ್ಸನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡಿದ ಸ್ವಾರ್ಥದಿಂದ. ಆಗ ಹಿರಣ್ಯಕಶಿಪು ಕೇಳುತ್ತಾನೆ ಈ ಅಗ್ನಿಯನ್ನು ನನಗೆ ಕೊಟ್ಟುಬಿಡಿ ಅಂತ ಊರ್ವ ಋಷಿಗಳು ಸರಿ ಅಂತ ಅಗ್ನಿಯನ್ನು ಕೊಡುತ್ತಾರೆ ಆದರೆ ಆ ಅಗ್ನಿ ಹಿರಣ್ಯಕಶಿಪು ಇರುವವರೆಗೆ ಅದು ಸಮರ್ಥವಾಗಿರುತ್ತದೆ ಆಮೇಲೆ ಪುನಃ ಅದು ನಿರ್ವೀರ್ಯವಾಗಿ ಮರಳಿ ಬರುತ್ತದೆ ಅಂತ ಈ ರೀತಿಯಾಗಿ ಶಾಪವನ್ನೂ ಕೊಟ್ಟಿರುತ್ತಾರೆ. ಇದೆಲ್ಲ ವರುಣ ದೇವರಿಗೆ ಗೊತ್ತು ಆದ್ದರಿಂದ ಆ ವರುಣ ದೇವರು ಹೇಳುತ್ತಾರೆ ಆ ಊರ್ವ ಋಷಿಗಳು ಪಡೆದಂತಹ ಅಗ್ನಿ ಇದು, ಹಿರಣ್ಯಕಶಿಪುವಿಗೆ ಕೊಟ್ಟದ್ದು, ಅದು ಈಗ ಮಯಾಸುರ ಉಪಯೋಗಿಸುತ್ತ ಇದ್ದಾನೆ. ಆ ಅಗ್ನಿಯನ್ನು ಹೇಗೆ ಶಮನ ಮಾಡಬೇಕು ಅನ್ನುವುದು ನನಗೆ ಗೊತ್ತು ನನ್ನ ಸಮುದ್ರದೊಳಗೇ ಇರುವಂತಹ ನೀರನ್ನು ಪಾನ ಮಾಡಿಕೊಂಡಿರುವ ಅಗ್ನಿ ಇವನು ಅವನನ್ನು ಹೇಗೆ ಶಮನ ಮಾಡಬೇಕು ಎಲ್ಲ ಗೊತ್ತು ನಿನ್ನ ಅನುಗ್ರಹ ಒಂದು ಇರಲಿ ಸಾಕು. ನೋಡಿ

ಉತ್ತರೇಷಾಂ ಪ್ರಸಾದೇನ ನೀಚಾನಾಂ ನಾನ್ಯಥಾ ಭವೇತ್ । (1.78 ಮಭಾತಾನಿರ್ಣಯ)

ಅಂತ ಯಾವುದೇ ಶಕ್ತಿ, ಪರಾಕ್ರಮ, ಜ್ಞಾನ, ಆನಂದ, ಜಯ ಏನೇ ಸದ್ಗುಣಗಳು ಇರಬೇಕಾದರೂ ಉತ್ತಮರ ಅನುಗ್ರಹದಿಂದ ಅಂತ ವರುಣ ದೇವರು ಇಂದ್ರ ದೇವರಿಗೆ ಹೇಳುವ ಮಾತು.

ಮಾಯಾಮೇತಾಂ ಹನಿಷ್ಯಾಮಿ ತ್ವತ್ಪ್ರಸಾದಾನ್ನ ಸಂಶಯಃ । (45.77 ಹರಿವಂಶಪರ್ವ)

ಅಂತ ನಿನ್ನ ಅನುಗ್ರಹದಿಂದ ನಾನು ಮಾಡುತ್ತೇನೆ ಅಂತ ಶ್ರೀಮದಾಚಾರ್ಯರು ಹೇಳುವ ಆ ತತ್ವ ಇತಿಹಾಸ ಪುರಾಣಗಳಲ್ಲಿ ಎಷ್ಟು ಸ್ಪಷ್ಟವಾಗಿ ಪ್ರತಿಪಾದಿತವಾಗಿದೆ ಅಂತ ನಾವು ಇಲ್ಲಿ ಅರ್ಥ ಮಾಡಿಕೊಳ್ಳಬಹುದು. ಹದಿಮೂರನೆಯ ಕಕ್ಷೆಯಲ್ಲಿ ಬರುವ ವರುಣ, ಎಂಟನೆಯ ಕಕ್ಷೆಯಲ್ಲಿ ಇರುವಂತಹ ಇಂದ್ರ ದೇವರು ಉತ್ತಮರು ಅನ್ನುವುದಕ್ಕೋಸ್ಕರ ನಿಮ್ಮ ಅನುಗ್ರಹ ಇಲ್ಲದೆ ನಾನು ಏನು ಮಾಡಲಿಕ್ಕೆ ಆಗುವುದಿಲ್ಲ ನೀವು ಅನುಗ್ರಹವನ್ನು ಮಾಡಿ ಅಂತ ಪ್ರಾರ್ಥನೆ ಮಾಡಿದಾಗ ಸರಿ ಅಂತ ಇಂದ್ರ ದೇವರು ಹೇಳುತ್ತಾರೆ.

ಗಚ್ಛ ಸೋಮ ಸಹಾಯತ್ವಂ ಕುರುಪಾಶಧರಸ್ಯ ವೈ । (46.2 ಹರಿವಂಶಪರ್ವ)

ವರುಣನಿಗೆ ನಿನ್ನ ಸಹಾಯ ಬೇಕಂತೆ ಒಂದು ಕಕ್ಷೆ ಮೇಲೆ ಹನ್ನೆರಡು ಸೋಮ, ಹದಿಮೂರು ವರುಣ ಆ ಸೋಮ ಹಾಗೂ ವರುಣ ನೀವಿಬ್ಬರು ಸೇರಿಕೊಂಡು ಈ ಕಾರ್ಯವನ್ನು ಮಾಡಿ ಅಂತ ಆ ಸೋಮನ ಸ್ತೋತ್ರವನ್ನು ಚೆನ್ನಾಗಿ ಮಾಡಿದ್ದಾನೆ ಇಂದ್ರ ಅರ್ಥಾತ್ ಪ್ರಶಂಸೆಯನ್ನು ಮಾಡಿದ್ದಾನೆ. ಎಷ್ಟು ಸಾಮರ್ಥ್ಯ ಇದೆ, ನಿನ್ನ ಪ್ರಕಾಶ ಏನು,

ಎಷ್ಟೇ ಗ್ರಹಗಳಿರಲಿ, ನಕ್ಷತ್ರಗಳಿರಲಿ ಆ ಉತ್ತಮವಾದ ಪ್ರಕಾಶ ರಾತ್ರಿಯಲ್ಲಿ ಬರಬೇಕು ಅಂದರೆ ನಿನ್ನಿಂದ ಬರಬೇಕು, ತಂಪು ನಿನ್ನಿಂದ, ಓಷಧಿ ವನಸ್ಪತಿಗಳ ವೃದ್ಧಿ ನಿನ್ನಿಂದ ಹಿಂದೆ ಹೇಳಿದ ರೀತಿಯಲ್ಲಿ ಜಗತ್ತಿನ ಸೃಷ್ಟಿ ಅದು ಅಗ್ನಿಶೋಮಾತ್ಮಕವಾದದ್ದು ಅಂತ. ಶುಕ್ರದಲ್ಲಿ ಸೋಮ, ಲೋಹಿತದಲ್ಲಿ ಅಗ್ನಿ ಇದ್ದು ಸೃಷ್ಟಿಯನ್ನು ಮಾಡುತ್ತೀರಿ ಅಂತ ಅವನ ಅನೇಕ ಮಹಿಮೆಗಳನ್ನೆಲ್ಲ ವರ್ಣನೆ ಮಾಡಿ ಇಂತಹ ನೀನು ವರುಣನ ಸಹಾಯಕ್ಕೆ ಹೋಗಬೇಕು ಅಂತ ಇಂದ್ರ ದೇವರು ಸೋಮನಿಗೆ ಆದೇಶವನ್ನು ಮಾಡಿದ್ದಾರೆ. ಅವರಿಬ್ಬರೂ ಸೇರಿ ಅದ್ಭುತವಾದಂತಹ ಹಿಮದ ಸೃಷ್ಟಿಯನ್ನು ಮಾಡಿ ಎಲ್ಲ ಕಡೆಗೂ ಕೂಡ ದೈತ್ಯರಿಗೆ ಏನೂ ಮಾಡಲಿಕ್ಕೆ ಸಾಧ್ಯವಾಗದೇ ಇದ್ದಂತೆ ಆ ಹಿಮದಲ್ಲಿ ಬದ್ಧರಾಗುವಂತೆ ಮಾಡಿದ್ದಾರೆ. ಆಗ ಅದನ್ನು ಮಯಾಸುರ ಮತ್ತೆ ಪುನಃ ತಾನು ತನ್ನದೇ ಆದಂತಹ ಒಂದು ವಿಶಿಷ್ಟವಾದ ಪಾರ್ವತೀ ಮಾಯಾ ಅಂತ ಹಿಂದೆ ಓರ್ವ ಅಗ್ನಿಯನ್ನು ಕಳಿಸಿದ್ದ ಅದನ್ನು ಇವರು ಹಿಮದಿಂದ ದೂರ ಮಾಡಿದರೆ ಪಾರ್ವತೀ ಮಾಯಾ ಅನ್ನುವುದನ್ನು ಸೃಷ್ಟಿ ಮಾಡಿದ್ದಾನೆ. ಆ ಮಾಯೆಯಿದ ಇವರೆಲ್ಲರಿಗೂ ಕೂಡ ಬಹಳ ಪೀಡೆಯಾಗಿದೆ ದೇವತೆಗಳೆಲ್ಲ ಚಿಂತಾಕ್ರಾಂತರಾದಾಗ ಸ್ವತಃ ಸಾಕ್ಷಾತ್ ಶ್ರೀಮನ್ನಾರಾಯಣ ಅಲ್ಲಿ ಪ್ರಾದುರ್ಭೂತನಾಗಿ ಅಗ್ನಿ ಮತ್ತು ವಾಯು ಇವರಿಬ್ಬರಿಗೆ ಆದೇಶವನ್ನು ಮಾಡಿದ್ದಾನೆ. ಆ ಅಗ್ನಿ ಮತ್ತು ವಾಯು ಇಬ್ಬರೂ ಕೂಡ ಪರಮಾತ್ಮನ ಆದೇಶ ಹಾಗೂ ದೇವರು ಕೊಟ್ಟಂತಹ ಒಂದು ವಿಶಿಷ್ಟವಾದ ಶಕ್ತಿ ಆ ಬಲವನ್ನು ಪಡೆದುಕೊಂಡವರಾಗಿ ಪಾರ್ವತೀ ಮಾಯೆಯನ್ನು ಸಂಪೂರ್ಣವಾಗಿ ಭಸ್ಮ ಮಾಡಿದ್ದಾರೆ.

ದಗ್ಧಾ ಸಾ ಪಾರ್ವತೀ ಮಾಯಾ ಭಸ್ಮೀಭೂತಾ ನನಾಶ ಹ ॥ (46.34 ಹರಿವಂಶಪರ್ವ)

ಪಾರ್ವತೀ ಅಂದರೆ ಪಾರ್ವತೀ ದೇವಿ ಅಂತ ಅರ್ಥ ಅಲ್ಲ ಆ ಮಾಯೆಯ ಹೆಸರು ಆ ಪಾರ್ವತೀ ಮಾಯೆಯನ್ನು ಸಂಪೂರ್ಣವಾಗಿ ನಾಶ ಮಾಡಿ ಪುನಃ ದೇವತೆಗಳಿಗೆ ಉತ್ಸಾಹವನ್ನು ತಂದುಕೊಟ್ಟಿದ್ದಾರೆ. ಇಬ್ಬರೂ ಕೂಡ ಕ್ರೀಡೆ ಆಡುವ ರೀತಿಯಲ್ಲಿ ಅನಲಾನಿಲೌ ಅಗ್ನಿ ಮತ್ತು ವಾಯು ಇವರಿಬ್ಬರೂ ಕೂಡ ಆ ದೈತ್ಯರ ಸಮೂಹದಲ್ಲಿ, ದೈತ್ಯರ ಸೈನ್ಯದಲ್ಲಿ ಯಥೇಚ್ಛವಾಗಿ ವಿಹಾರವನ್ನು ಮಾಡುತ್ತಾ ದೈತ್ಯರೆಲ್ಲ ನಿಶ್ಚೇಷ್ಟರು, ನಿಶ್ಚಯತ್ನರೂ ಆಗುವ ರೀತಿಯಲ್ಲಿ ಮಾಡಿದಾಗ ದೇವತೆಗಳಿಗೆ ಉತ್ಸಾಹವೇ ಉತ್ಸಾಹ ಜಯ ಜಯಕಾರವನ್ನು ಹಾಕುತ್ತಾ ಇದ್ದಾರೆ ಇಂದ್ರ ದೇವರಿಗೆ ಯುದ್ಧದಲ್ಲಿ ಉತ್ಸಾಹದಿಂದ.

ದೇವಪಕ್ಷೇ ಪ್ರಮುದಿತೇ ದೈತ್ಯಪಕ್ಷೇ ವಿಷೀದತಿ ।
ತ್ರಿಪಾದವಿಗ್ರಹೇ ಧರ್ಮೇ ಅಧರ್ಮೇ ಪಾದವಿಗ್ರಹೇ ॥ (46.44 ಹರಿವಂಶಪರ್ವ)

ಮುಕ್ಕಾಲು ಧರ್ಮ, ಕಾಲು ಮಾತ್ರ ಅಧರ್ಮ ದೇವತೆಗಳ ಪಕ್ಷವೇ ಎಪ್ಪತ್ತೈದು ಭಾಗ ವಿಜಯಶಾಲಿಯಾಗಿದೆ, ಅಲ್ಲಲ್ಲಿ ಅಧರ್ಮದ ಪ್ರತೀಕವಾಗಿರುವ ಅಸುರರು ಇಪ್ಪತ್ತೈದು ಭಾಗ ಮಾತ್ರ ಅವರು ಯುದ್ಧದಲ್ಲಿ ಶಕ್ತರಾಗಿದ್ದಾರೆ. ಒಂದರ್ಥದಲ್ಲಿ ಅಸುರರಿಗೆ ಪರಾಜಯವಾಗಿ ದೇವತೆಗಳಿಗೆ ಇನ್ನೇನು ಸಂಪೂರ್ಣವಾದ ಜಯವಾಗುವ ಸ್ಥಿತಿ ಆ ರೀತಿ ಅಗ್ನಿ ಮತ್ತು ವಾಯು ಇವರಿಬ್ಬರೂ ಪರಮಾತ್ಮನ ಆಜ್ಞೆಯಿಂದ ವಿಜಯವನ್ನು ತಂದುಕೊಟ್ಟಿದ್ದಾರೆ. ಇಷ್ಟರಲ್ಲಿ ಕಾಲನೇಮಿ ಬರುತ್ತಾನೆ ಭಾರೀ ಉಗ್ರನಾಗಿರುವಂತಹ ದೈತ್ಯ ಸಾವಿರಾರು ಆಯುಧಗಳು, ಸಾವಿರ ಬಾಹು, ನೂರು ಬಾಹು ನೂರು ಮುಖ ಅಂತ ಇಲ್ಲಿದೆ. ಶ್ರೀಮದಾಚಾರ್ಯರು ಹೇಳುತ್ತಾರೆ ಸಹಸ್ರ ಮುಖಗಳು, ಎರಡು ಸಾವಿರ ಬಾಹುಗಳು ಅಂತಲ್ಲ, ನೂರು ಅಂತನ್ನುವ ಶಬ್ದ ನೂರಾರು ಅನ್ನುವ ಅರ್ಥದೊಳಗೆ ಸಾವಿರ ಅನ್ನುವುದನ್ನು ಶ್ರೀಮದಾಚಾರ್ಯರು ತಿಳಿಸಿಕೊಡುತ್ತಾರೆ. ಸಾವಿರ ತಲೆ, ಎರಡು ಸಾವಿರ ಬಾಹುಗಳು ಅವನಿಗೆ ನೋಡಿ ಹತ್ತು ತಲೆಯ ರಾವಣನೇ ಎಂತಹ ಉಗ್ರನಾದವನುನು ಅಂತ ರಾಮಾಯಣದಲ್ಲಿ ನೀವು ಕೇಳುತ್ತೀರಲ್ಲ ಇವನಿಗೆ ಹತ್ತು



ಸಾವಿರ ತಲೆ ಅಂತಹ ದಾನವ ಇವನು. ಹತ್ತು ಸಾವಿರ ತಲೆಯನ್ನು ಪಡೆದುಕೊಂಡಂತಹ ದಾನವ, ಎರಡು ಸಾವಿರ ಬಾಹುಗಳು ದೊಡ್ಡ ಪರ್ವತದಂತೆ ತನ್ನ ಬಾಹುಗಳನ್ನೆಲ್ಲ ಆಚೆಈಚೆ ಎರಡು ಸಾವಿರ ಬಾಹುಗಳನ್ನು ಚಾಚಿದರೆ ಅದು ಎಷ್ಟು ಬೇಕಾದರೂ ದೊಡ್ಡದಾಗಬಹುದು ಬಾಹು, ಎಷ್ಟಾದರೂ ಬೆಳೆಸಬಹುದು ಅಂತಹ ಶಕ್ತಿ ಅವರಿಗೆ ಮಾಯಾ ಶಕ್ತಿ ಎಲ್ಲ ದಿಕ್ಕುಗಳನ್ನು ವ್ಯಾಪಿಸಿದ್ದಾನೆ. ಎಲ್ಲ ದಿಕ್ಕುಗಳಲ್ಲಿಯೂ ವ್ಯಾಪಿಸಿ ಇವರನ್ನೆಲ್ಲ ತನ್ನ ಮುಖದಲ್ಲಿ ಹಾಕಿಕೊಳ್ಳುತ್ತಾ ಇದ್ದಾನೆ ಅಗ್ನಿಯನ್ನು ನುಂಗಿದ, ವಾಯುವನ್ನು ವಶಕ್ಕೆ ತೆಗೆದುಕೊಂಡ, ಉಳಿದೆಲ್ಲ ದೇವತೆಗಳ ಮೇಲೆ ಆಯುಧಗಳ ಪ್ರಕ್ಷೇಪವನ್ನು ಮಾಡುತ್ತಾ ಇದ್ದಾನೆ ಎಲ್ಲರೂ ಕೂಡ ಅತ್ಯಂತ ಭಯಗ್ರಸ್ತರಾಗಿ, ಕಕ್ಕಾಬಿಕ್ಕಿಯಾಗಿ ಹೋಗಿದ್ದಾರೆ. ಆಗ ಈ ಕಾಲನೇಮಿಯ ಘೋರವಾದಂತಹ ಯುದ್ಧ, ಅವನು ಮಾಡುವಂತಹ ಪರಾಕ್ರಮದ ಪ್ರದರ್ಶನ ಇದನ್ನೆಲ್ಲಾ ನೋಡುತ್ತಾ ನೋಡುತ್ತಾ ದೇವರಿಗೆ ಶರಣಾಗತದ್ದಾರೆ ಎಲ್ಲರೂ ಕೂಡ, ಬ್ರಹ್ಮ ದೇವರಿಗೆ ಶರಣರಾಗಿದ್ದಾರೆ, ಬ್ರಹ್ಮ ದೇವರು ಪರಮಾತ್ಮನಿಗೆ ಶರಣು ಬಂದಿದ್ದಾರೆ. ಶೀಘ್ರದಲ್ಲಿ ಈ ಕಾಲನೇಮಿಯ ಸಂಹಾರವನ್ನು ಮಾಡಬೇಕು ಉಪೇಕ್ಷೆಯನ್ನು ಮಾಡಬಾರದು ನಿನಗೆ ಆಟ ಆದರೆ ಉಳಿದವರಿಗೆಲ್ಲ ಅದು ಕಾಟ ಅದಕ್ಕಾಗಿ ನೀನೇ ಆ ಕಾಲನೇಮಿಯ ಸಂಹಾರವನ್ನು ಮಾಡಿ ಉದ್ಧಾರ ಮಾಡಬೇಕು ಅಂತ ಬ್ರಹ್ಮಾದಿ ದೇವತೆಗಳು ಪ್ರಾರ್ಥನೆಯನ್ನು ಮಾಡಿದ್ದಾರೆ ಪರಮಾತ್ಮ ಪ್ರಾದುರ್ಭೂತನಾಗಿದ್ದಾನೆ.

ಪಶ್ಚಾತಂ ನಾಭ್ಯವರ್ತನ್ತ ವಿಪರೀತೇನ ಕರ್ಮಣಾ ।

ವೇದೋ ಧರ್ಮಃ ಕ್ಷಮಾ ಸತ್ಯಂ ಶ್ರೀಶ್ಚ ನಾರಾಯಣಾಶ್ರಯಾ ॥ (48.1 ಹರಿವಂಶಪರ್ವ)

ವೇದ, ಧರ್ಮ, ಕ್ಷಮಾ, ಸತ್ಯ, ಶ್ರೀ ಇಷ್ಟು ಇರಲಿಲ್ಲ ಅವನ ಹತ್ತಿರ. ಯಾಕೆ ಎಂದರೆ ವಿರುದ್ಧವಾದ ವಿಪರೀತವಾದ ಕರ್ಮಗಳನ್ನು ಮಾಡುತ್ತಾ ಇದ್ದ ಅನ್ನುವುದಕ್ಕೆ ಅವನಲ್ಲಿ ಸಂಪತ್ತಿಲ್ಲ, ಧರ್ಮ ಇಲ್ಲ, ಕ್ಷಮಾ ಇಲ್ಲ, ಸತ್ಯ ಇಲ್ಲ, ಜ್ಞಾನ ಇಲ್ಲ ಅನ್ನುವುದಕ್ಕೋಸ್ಕರ ಭಗವಂತ ಆ ಕಾಲನೇಮಿಯನ್ನು ಸಂಹಾರ ಮಾಡುತ್ತಾ ಇದ್ದಾನೆ. ಪರಮಾತ್ಮ ಗರುಡಾರೂಢನಾಗಿ, ಶ್ರೀವತ್ಸ ಚಿಹ್ನದಿಂದ ಯುಕ್ತನಾಗಿ, ಸರ್ವಾಭರಣ ಭೂಷಿತನಾಗಿ, ಶಂಖ ಚಕ್ರ ಗದಾ ಪದ್ಮಾದಿಗಳನ್ನು ಧಾರಣ ಮಾಡಿಕೊಂಡು ಪರಮಾತ್ಮ ಯಾವಾಗ ಪ್ರತ್ಯಕ್ಷನಾದ ಆಗ ಆ ಕಾಲನೇಮಿ ಭಗವಂತನನ್ನು ನಿಂದೆ ಮಾಡುತ್ತಾ ಇದ್ದ. ಹೇಗೆ ಶಿಶುಪಾಲ ಶ್ರೀಕೃಷ್ಣ ಪರಮಾತ್ಮನನ್ನು ನಿಂದೆ ಮಾಡಿದನಲ್ಲ ಹಾಗೆ ಕಾಲನೇಮಿ ಮಹಾದುಷ್ಟ ದುಷ್ಟವಾದ ಕಾಮಗಳಿಗೆ ಅಭಿಮಾನಿಯಾದ ದೈತ್ಯ ಅವನು ಅಂತಹ ಮಹಾದುಷ್ಟ. ಆ ಕಾಲನೇಮಿ ಕಾಮಿ ಅಂತಹ ಮಹಾ ಕಾಮಾಭಿಮಾನಿಯಾದ ದೈತ್ಯ, ದುಷ್ಟ, ಕಾಮದ ತಲೆಗಳು ಸಾವಿರಾರು, ಆ ಕಾಮದ ಕೈಗಳು ಸಾವಿರಾರು ಅಂತ ತೋರಿಸುವ ರೀತಿಯಲ್ಲಿ ಈ ಕಾಲನೇಮಿಯ ರೂಪ ಅವನ ಚಿತ್ರ. ಅಂತಹ ಆ ಕಾಲನೇಮಿ ದೇವರಿಗೆ ಹೇಳುತ್ತಾನೆ ನಮ್ಮ ಪೂರ್ವಜರು ಎಂತೆಂತಹ ಮಹಾ ಮಹಾ ದಾನವರು, ದೈತ್ಯರು ಅವರೆಲ್ಲರನ್ನು ನೀನು ಸಂಹಾರ ಮಾಡಿದ್ದೀ, ನಾನಾ ವೇಷಗಳನ್ನು ಧಾರಣೆ ಮಾಡಿ ಸಂಹಾರ ಮಾಡಿದ್ದೀ ಮತ್ಸ್ಯಾವತಾರ, ಕೂರ್ಮಾವತಾರ, ವರಾಹಾವತಾರ, ನರಸಿಂಹಾವತಾರ ಹೀಗೆ ಅನೇಕ ರೀತಿಯ ಅವತಾರಗಳನ್ನು ತೆಗೆದುಕೊಂಡು ನಮ್ಮ ಕುಲದ ದೈತ್ಯರನ್ನು, ದಾನವರನ್ನು ನೀನೆಲ್ಲ ಹಿಂದೆ ನಾಶ ಮಾಡಿದ್ದೀ, ಮಧು-ಕೈಟಭರನ್ನು ಸಂಹಾರ ಮಾಡಿದಿ ಹೀಗೆಲ್ಲ ಮಾಡಿದ್ದೀ. ಹಿರಣ್ಯಕಶಿಪುವನ್ನು ಸಂಹಾರ ಮಾಡಿದಿ ನರಸಿಂಹನಾಗಿ ಆದರೆ ಈಗ ಮಾತ್ರ ನಾನು ನಿನ್ನ ಬಿಡುವುದಿಲ್ಲ, ನಿನ್ನನ್ನು ಸಂಹಾರ ಮಾಡಿಯೇ ಬಿಡುತ್ತೇನೆ ಅಂತ ಕಾಲನೇಮಿ ಪರಮಾತ್ಮನ ಎದುರಿಗೆ ಮಾತನಾಡುತ್ತಾ ಇದ್ದಾನೆ. ಭಗವಂತ ನಗುತ್ತಾ ಇದ್ದಾನಂತೆ ಅವನ ಮೌಢ್ಯದ ಮಾತುಗಳನ್ನು ಕೇಳಿ

ಕ್ಷಮಾಬಲೇನ ಮಹತಾ ಸಮ್ಮಿತಂ ವಾಕ್ಯಮಬ್ರವೀತ್ ॥ (48.23 ಹರಿವಂಶಪರ್ವ)

ನಗುತ್ತಾ ಇದ್ದಾನೆ. ಮುಗುಳು ನಗೆ ನಗುತ್ತಾ ದೇವರು ಹೇಳಿದ ಕೇವಲ ಮಾತನಾಡಿದ ಮಾತ್ರಕ್ಕೆ ಏನು ಪ್ರಯೋಜನ ಇಲ್ಲ.

ಅಧಮಸ್ತ್ವಂ ಮಮ ಮತೋ ಧಿಗೇತತ್ ತವ ವಾಗ್ಬಲಮ್ ।
ನ ತತ್ರ ಪುರುಷಾಃ ಸನ್ತಿ ಗರ್ಜನ್ತಿ ಯೋಷಿತಃ ॥ (48.25 ಹರಿವಂಶಪರ್ವ)

ಯಾರಿಲ್ಲದೆ ಇರುವಂತಹ ಸ್ಥಳದಲ್ಲಿ ನೀನು ಗರ್ಜನೆಯನ್ನು ಮಾಡುತ್ತಾ ಇದ್ದಂತೆ ಇಂತಹ ಮಾತುಗಳಿಗೆ ಬೆಲೆ ಇಲ್ಲ.

ಪ್ರಜಾಪತಿಕೃತಂ ಸೇತುಂ ಕೋ ಭಿತ್ತ್ವಾ ಸ್ಥಿಮಾನ್ ಭವೇತ್ ॥ (48.26 ಹರಿವಂಶಪರ್ವ)

ಪರಮಾತ್ಮ ಹೇಳುತ್ತಾನೆ ತಾನೇ ಪ್ರಜಾಪತಿ ತನ್ನ ಅಧೀನನಾದ ಪ್ರಜಾಪತಿ ಬ್ರಹ್ಮ ದೇವರು, ನಾನು ಮಾಡಿದ ನಿಯಮ, ಬ್ರಹ್ಮ ದೇವರು ಮಾಡಿದ ನಿಯಮ ಧರ್ಮದ ಒಂದು ಸೇತು ಅದನ್ನು ಭಂಗ ಮಾಡಿ ಧರ್ಮವನ್ನು ಹಾಳು ಮಾಡಿ ಅಧರ್ಮವನ್ನು ಮಾಡುವಂತಹ, ಅನ್ಯಾಯವನ್ನು ಮಾಡುವಂತಹ, ಧರ್ಮ ದ್ರೋಹ ಮಾಡುವಂತಹ, ಭಗವಂತನ ದ್ರೋಹ ಮಾಡುವಂತಹ ಯಾವ ಜನರು ಸುಖವನ್ನು ಪಡೆದಿದ್ದಾರೆ. ನಿನ್ನ ಹಿರಿಯರು ಇದೇ ಹಣೆಬರಹವನ್ನು ಅನುಭವಿಸಿದ್ದಾರೆ ನಿನ್ನದು ಅದೇ ಹಣೆಬರಹ ಆಗುತ್ತೆ ವ್ಯರ್ಥವಾಗಿ ಮಾತನಾಡಬೇಡ ಅಂತ ಆ ಕಾಲನೇಮಿಗೆ ಹೇಳುವ ಮಾತನ್ನು ಇಡೀ ಜಗತ್ತಿಗೆ ಪರಮಾತ್ಮ ಎಚ್ಚರ ಕೊಡುತ್ತಾ ಇದ್ದಾನೆ **'ಪ್ರಜಾಪತಿಕೃತಂ ಸೇತುಂ ಕೋ ಭಿತ್ತ್ವಾ ಸ್ಥಿಮಾನ್ ಭವೇತ್'.** ದೇವರು ಹಾಕಿದ ನಿಯಮವನ್ನು ಉಲ್ಲಂಘನೆ ಮಾಡಿದರೆ ಎಂದಿಗೂ ಕ್ಷೇಮವಾಗುವುದಿಲ್ಲ, ದೇವರು ಹಾಕಿದ ನಿಯಮವನ್ನು ಪರಿಪಾಲನೆ ಮಾಡಿದರೆ ಎಂದಿಗೂ ಅನರ್ಥ ಆಗುವುದಿಲ್ಲ ಅಂತಹ ಪರಮಾತ್ಮನ ನಿಯಮವನ್ನು ಭಕ್ತಿ ಶ್ರದ್ಧೆಗಳಿಂದ ಪರಿಪಾಲನೆ ಮಾಡಬೇಕು. ನಮ್ಮ ಎಲ್ಲರ ಬುದ್ಧಿ ಅತ್ಯಂತ ಸೀಮಿತ ಅಲ್ಪವಾದಂತಹ ಬುದ್ಧಿ, ಅಲ್ಪವಾದ ಆಲೋಚನಾ ಶಕ್ತಿ ನಮ್ಮ ಬುದ್ಧಿ ನಮ್ಮ ಆಲೋಚನಾ ಶಕ್ತಿಗೆ ನಿಲುಕದೆ ಇರುವಂತಹ ವಿಷಯಗಳನ್ನು ಶಾಸ್ತ್ರದಲ್ಲಿ ಪರಮಾತ್ಮ ಆದೇಶ ರೂಪದಲ್ಲಿ ತಿಳಿಸಿದ್ದಾನೆ. ಯಾವುದನ್ನು ಮಾಡಿದರೆ ನಮಗೆ ಹಿತ, ಇವತ್ತಿಗಲ್ಲ ನಾಳೆಗೆ ಅಲ್ಲ ಅನಂತಕಾಲದ ಪರಮ ಸುಖವನ್ನು ಪಡೆಯುವುದಕ್ಕೆ ಯಾವುದು ದಾರಿ ಅಂತ ಅನಂತ ಬುದ್ಧಿ ಇರುವ ದೇವರು ಉಪದೇಶ ಮಾಡಿದ್ದಾನೆ. ಅನಂತಕಾಲದವರೆಗೆ ಯಾವುದು ನಮಗೆ ಹಿತ, ಯಾವುದು ನಮಗೆ ಪಾಥೇಯ ಅದನ್ನು ದೇವರು ನಮಗೆ ಉಪದೇಶ ಮಾಡಿದ್ದಾನೆ ಶ್ರುತಿ ಸ್ಮೃತಿಗಳ ರೂಪದಲ್ಲಿ. ಅದನ್ನು ತಿಳಿದು ಶ್ರದ್ಧೆಯಿಂದ ಅನುಷ್ಠಾನ ಮಾಡಿ ಪರಮ ಹಿತವನ್ನು ಪಡೆಯುವ,ಪರಮ ಸುಖವನ್ನು ಪಡೆಯುವ ಪ್ರಯತ್ನದಲ್ಲಿ ಇರಬೇಕೇ ಹೊರತು ನನ್ನ ಬುದ್ಧಿ ಬಹಳ ಸೂಕ್ಷ್ಮ ಬಹಳ ದೂರಾಲೋಚನೆ ನನಗಿದೆ, ನನ್ನ ಹಿತವನ್ನು ನಾನು ಕೊಂಡುಕೊಳ್ಳುತ್ತೇನೆ ಅನ್ನುವ ದೃಷ್ಟಿಯಲ್ಲಿ ಶ್ರುತಿ ಸ್ಮೃತ್ಯುಕ್ತವಾದ ಕರ್ಮಗಳನ್ನು, ಶಾಸ್ತ್ರೋಕ್ತವಾದಂತಹ ಸುಖ ಸಾಧನೆಯ ಮಾರ್ಗವನ್ನು ಅನುಸರಿಸದಂತೆ ಅದನ್ನು ಉಲ್ಲಂಘನೆ ಮಾಡಿದರೆ ಎಂದಿಗೂ ಹಿತ ಅಲ್ಲ ಅನ್ನುವುದನ್ನು ಇಡೀ ಜಗತ್ತಿಗೆ ಪರಮಾತ್ಮ ಹೇಳುತ್ತಾ ಇದ್ದಾನೆ. ಕಾಲನೇಮಿಗೆ ಅದೇನು ತಲೆಯಲ್ಲಿ ಹೋಗುವುದಿಲ್ಲ ಅವನು ಮಹಾದುಷ್ಟ ಆದರೆ ಸಜ್ಜನರಿಗೆ ಈ ಸಂದೇಶವನ್ನು ದೇವರು ಕೊಡುತ್ತಾ ಇದ್ದಾನೆ. ಆ ರೀತಿ ಪರಮಾತ್ಮ ಸಂದೇಶವನ್ನು ಕೊಟ್ಟಿದ್ದಾನೆ.

ಅವನು ನಾನಾ ವಿಧವಾದ ತನ್ನದೇ ಆದ ರೀತಿಯಲ್ಲಿ ಆಯುಧಗಳ ವೃಷ್ಟಿಯನ್ನು ಮಾಡುತ್ತಾ ಇದ್ದಾನೆ, ಮಾಯಾ ಯುದ್ಧಗಳನ್ನು ಮಾಡುತ್ತಾ ಇದ್ದಾನೆ, ನಾನಾ ರೀತಿಯ ಯುದ್ಧಗಳನ್ನು ಮಾಡುತ್ತಾ ಇದ್ದರೂ ಕೂಡ ಪರಮಾತ್ಮನಿಗೆ ಅದರಿಂದ ಯಾವುದೇ ವಿಕಾರವು ಆಗದೆ ಇರುವಂತೆ ಭಗವಂತ ಅವನನ್ನು ಸಂಹಾರ ಮಾಡುತ್ತಾ

ಇದ್ದಾನೆ. ಎಲ್ಲ ಕಡೆಗೆ ತನ್ನ ಬಾಹುಗಳನ್ನು ಹರಡಿಸಿದ್ದಾನೆ ಕಾಲನೇಮಿ, ವ್ಯಾಪ್ತವಾದ ತನ್ನ ರೂಪವನ್ನು ತೋರಿಸುತ್ತ ಇದ್ದಾನೆ ದೇವರ ಎದುರಿನಲ್ಲಿ ಏನು ಆ ಭಗವಂತ ತಾನೂ ಅವನ ಎಲ್ಲ ಶಿರಸ್ಸನ್ನು ಚಕ್ರದಿಂದ ನಾಶ ಮಾಡಿ ಅವನ ಬಾಹುಗಳನ್ನೂ ನಾಶ ಮಾಡಿ ಅವನನ್ನು ಸಂಹಾರ ಮಾಡಿದ. ತಾನು ವ್ಯಾಪ್ತವಾದ ರೂಪವನ್ನು ಪರಮಾತ್ಮನೂ ಸ್ವೀಕಾರ ಮಾಡಿದ್ದಾನೆ ಅಂತಹ ಸಮಗ್ರವಾದ ಲೋಕಗಳನ್ನೇ ವ್ಯಾಪಿಸುವ ತನ್ನ ರೂಪವನ್ನು ಸ್ವೀಕರಿಸಿ ತನ್ನ ಬಾಹುವನ್ನು ಎಲ್ಲ ಕಡೆಗೆ ದೇವರು ಹರಡಿಸಿದರೆ ಅಸುರರಿಗೆ ಓಡಾಡುವುದಕ್ಕೆ, ಯುದ್ಧ ಮಾಡುವುದಕ್ಕೆ, ಆಯುಧ ಎತ್ತುವುದಕ್ಕೆ ಸ್ಥಳ ಇರಲಿಲ್ಲವಂತೆ. ಹರಿವಂಶ ವರ್ಣನೆ ಮಾಡುತ್ತದೆ

ತೇ ಸರ್ವೇ ಬಾಹುಭಿರ್ವ್ಯಾಪ್ತಾ ನ ಶೇತುಶ್ಚಲಿತುಂ ರಣೇ ॥ (48.52 ಹರಿವಂಶಪರ್ವ)

ನಡೆದಾಡುವುದಕ್ಕೆ ಸಾಧ್ಯ ಇಲ್ಲ ಎಲ್ಲ ಕಡೆಗೂ ದೇವರ ಬಾಹುಗಳು, ಭಾರೀ ಎರಡು ಸಾವಿರ ಬಾಹುವಿನ ನಾಯಕ ನಮ್ಮ ನಾಯಕ ಕಾಲನೇಮಿ ಅಂತ ಅಂದುಕೊಂಡಿದ್ದರು ಅವನನ್ನು ಸಂಹಾರ ಮಾಡುವುದು ಮಾತ್ರ ಅಲ್ಲ ತನ್ನ ಬಾಹುವಿನಿಂದ ದೇವರು ಎಲ್ಲ ಕಡೆಗೆ ವ್ಯಾಪಿಸಿದರೆ ಅವರಿಗೆ ಓಡಾಡುವುದಕ್ಕೆ ಸ್ಥಳ ಆಗುತ್ತಾ ಇಲ್ಲ, ಕೆಲವರನ್ನು ಕೂದಲಲ್ಲಿ ಹಿಡಿದು, ಕೆಲವರನ್ನು ಕುತ್ತಿಗೆಯಲ್ಲಿ ಹಿಚುಕಿ ಸಂಹಾರ ಮಾಡಿದ್ದಾನೆ, ಮುಖವನ್ನು ಕಿತ್ತಿ ಹಾಕಿದ್ದಾನೆ ಒಬ್ಬೊಬ್ಬರನ್ನು ಒಂದೊಂದು ರೀತಿಯಲ್ಲಿ ಪರಮಾತ್ಮ ಸಂಹಾರ ಮಾಡಿ ಎಲ್ಲ ಅಸುರರನ್ನು ನಾಶ ಮಾಡಿ ಬಲಿ ಚಕ್ರವರ್ತಿ, ರಾಹು ಇವರಿಬ್ಬರು ಉಳಿದಿದ್ದಾರೆ ಇನ್ನುಳಿದವರನ್ನೆಲ್ಲ ಪರಮಾತ್ಮ ಸಂಹಾರ ಮಾಡಿದ್ದಾನೆ. ಸಂಹಾರ ಮಾಡಿ ದೇವತೆಗಳಿಗೆ, ಎಲ್ಲಾ ಋಷಿಗಳಿಗೆ, ಮುನಿಗಳಿಗೆ, ಸಜ್ಜನರಿಗೆ ಭಗವಂತ ಅನುಗ್ರಹ ಮಾಡಿ ಅವರೆಲ್ಲರಿಗೆ ಹೇಳುತ್ತಾ ಇದ್ದಾನೆ ಇನ್ನುಮೇಲೆ ನಿಶ್ಚಿಂತವಾಗಿ ಯಜ್ಞ ಯಾಗಾದಿಗಳು ನಡೆಯಲಿ, ನೀವೆಲ್ಲಾ ಆಹುತಿಗಳನ್ನು ಸ್ವೀಕಾರ ಮಾಡಿ, ನೀವೆಲ್ಲಾ ಆಹುತಿಗಳನ್ನು ಕೊಡಬಹುದು ಅಂತ, ಋಷಿಗಳಿಗೆ ಹೇಳುತ್ತಾ ಇದ್ದಾನೆ ಅಲ್ಲಲ್ಲಿ ವೇದಾಧ್ಯಯನಗಳು ಪ್ರಾರಂಭ ಆಗಲಿ, ಪಾಠ ಪ್ರವಚನಗಳು ಪ್ರಾರಂಭ ಆಗಲಿ, ಹರಿನಾಮ ಸಂಕೀರ್ತನೆ ಆಗಲಿ, ಶ್ರಾದ್ಧಾದಿ ಕರ್ಮಗಳು ಪಿತೃ ದೇವತೆಗಳಿಗೆ ನಡೆಯಲಿ.

ಶ್ರಾದ್ಧೇನ ಪಿತರಶ್ಚೈವ ತೃಪ್ತಿಂ ಯಾನ್ತು ಯಥಾ ಪುರಾ ॥ (48.73 ಹರಿವಂಶಪರ್ವ)

ಎಲ್ಲ ಕಡೆಗೆ ಶಾಂತವಾದ ತಂಪಾದ ಗಾಳಿ, ಶ್ರೇಷ್ಠವಾದಂತಹ ಅಗ್ನಿ ಜ್ವಲಿಸಲಿ, ಉತ್ತಮವಾದಂತಹ ಯಜ್ಞ ಯಾಗಾದಿಗಳು ಆ ಅಗ್ನಿಯಲ್ಲಿ ನಡೆಯಲಿ, ಎಲ್ಲರೂ ತಮ್ಮದೆ ಆದ ವರ್ಣಾಶ್ರಿತವಾದ ಧರ್ಮಗಳನ್ನು ಪರಿಪಾಲನೆ ಮಾಡಲಿ, ಗೋವುಗಳು, ಸಜ್ಜನರು ಎಲ್ಲರೂ ಸುಖವಾಗಿ ಇರಲಿ ಎಂಬುದಾಗಿ ಪರಮಾತ್ಮ ಎಲ್ಲರಿಗೆ ಭರವಸೆಯನ್ನು ಕೊಟ್ಟಿದ್ದಾನೆ.

ಯದಾ ಚ ಸುದುರಾಧರ್ಷಂ ದಾನವೇಭ್ಯೋ ಭಯಂ ಭವೇತ್ ।
ತದಾ ಸಮುಪಮ್ಯಾಶು ವಿಧಾಸ್ಯೇ ವಸ್ತತೋಽಭಯಮ್ ॥ (48.82 ಹರಿವಂಶಪರ್ವ)

ನೀವೇನು ಚಿಂತೆ ಮಾಡಬೇಡಿ ಯಾವತ್ತೆ ದಾನವರಿಂದ, ದೈತ್ಯರಿಂದ ಭಯ ಬಂದರೂ ನಾನು ರಕ್ಷಕನಾಗಿ ನಿಮಗೆ ಇದ್ದೇನೆ ಅಂತ ಸಕಲ ಸಜ್ಜನರಿಗೂ ಕೂಡ ಭಗವಂತ ಅನುಗ್ರಹವನ್ನು ಮಾಡಿ ಅಲ್ಲಿಂದ ಹೊರಟಿದ್ದಾನೆ ಎಂಬುದಾಗಿ ತಿಳಿಸಿಕೊಡುತ್ತಾರೆ.

ಭಗವಂತ ಬ್ರಹ್ಮ ದೇವರ ಪ್ರಾರ್ಥನೆಯಂತೆ ಬ್ರಹ್ಮಲೋಕಕ್ಕೆ ಹೋಗಿದ್ದಾನೆ, ಕಾಲನೇಮಿಯ ಸಂಹಾರ ಆಯಿತು ಅವನ ನಿಮಿತ್ತ ಇನ್ನುಳಿದ ಎಲ್ಲ ಅಸುರರ ಸಂಹಾರನೂ ಆಯಿತು, ದೇವತೆಗಳಿಗೆ ಜಯ ಆಯಿತು, ಎಲ್ಲರೂ ಯಥೇಷ್ಟವಾಗಿ ಧರ್ಮಾಚರಣೆಯನ್ನು ಮಾಡುವುದಕ್ಕೆ ಅನುಕೂಲವಾಯಿತು ಇನ್ನುಮೇಲೆ ನಮ್ಮ ಲೋಕಕ್ಕೆ ಬಂದು ಪೂಜೆಯನ್ನು ಸ್ವೀಕಾರ ಮಾಡಬೇಕು. ಎಲ್ಲ ಋಷಿಗಳು, ಮುನಿಗಳು, ಜ್ಞಾನಿಗಳು, ದೇವತೆಗಳು ಎಲ್ಲರೂ ಕಾಯುತ್ತಾ ಇದ್ದಾರೆ ನಿನ್ನ ಅರ್ಚನೆ ಮಾಡಬೇಕು, ನಿನ್ನ ಪೂಜೆಯನ್ನು ಮಾಡಬೇಕು ಅನಂತ ಉಪಕಾರಗಳನ್ನು ನಿರಂತರವಾಗಿ ಮಾಡುವವನು ನೀನು ಅದಕ್ಕೆ ಪ್ರತಿಯಾಗಿ ನಾವು ಏನು ಮಾಡುವುದಕ್ಕೂ ನಮಗೆ ಸಾಧ್ಯ ಇಲ್ಲ ಉಪಕಾರದ ಸ್ಮರಣೆಯನ್ನು ಮಾಡಿ ಕೃತಜ್ಞತೆಯನ್ನು ಮಾತ್ರ ಹೇಳಬಹುದು. **'ಭೂಯೀಷ್ಮಾಂ ತೇ ನಮ ಉಕ್ತಿಂ ವಿಧೇಮ'** ಅದಕ್ಕಾಗಿ ನಮ್ಮ ಲೋಕಕ್ಕೆ ಬಂದು ನಮ್ಮ ಪೂಜೆಯನ್ನು ಸ್ವೀಕಾರ ಮಾಡಬೇಕು ಎಂಬುದಾಗಿ ಬ್ರಹ್ಮ ದೇವರು ಪ್ರಾರ್ಥನೆ ಮಾಡಿದ್ದಾರೆ. ಆ ಬ್ರಹ್ಮ ದೇವರ ಲೋಕದಲ್ಲಿ ಪರಮಾತ್ಮ ಯಾವಾಗ ಪ್ರವೇಶ ಮಾಡಿದ ಅಲ್ಲಿ ಅನೇಕ ಮಹಾನುಭಾವರು ಸಾಧನೆಯನ್ನು ಮಾಡಿ ಬ್ರಹ್ಮಲೋಕಕ್ಕೆ ಹೋದಂತಹ ಮಹಾನುಭಾವರೆಲ್ಲ ಇದ್ದರು, ಯಜ್ಞ ಯಾಗಾದಿಗಳು ಒಂದು ಕಡೆಗೆ, ವೇದಗಳ ಪಠಣ ಮತ್ತೊಂದು ಕಡೆಗೆ ಎಲ್ಲ ನಡೀತಾ ಇದೆ. ಅದೆಲ್ಲವನ್ನೂ ದೇವರು ನೋಡುತ್ತಾ ಇದ್ದಾನೆ ತನ್ನನ್ನು ಕುರಿತೇ ಯಜ್ಞವನ್ನು ಮಾಡುತ್ತಾ ಇದ್ದಾರೆ, ಅಲ್ಲಲ್ಲಲ್ಲಿ ತನ್ನ ಪೂಜೆ ನಡೀತಾ ಇದೆ, ಮಂತ್ರ ಪಠಣಪೂರ್ವಕವಾಗಿ ಧ್ಯಾನವನ್ನು ಮಾಡುತ್ತಾ ಇದ್ದಾರೆ ಕೆಲವರು, ನಾಮಸ್ಮರಣೆಯನ್ನು ಮಾಡುತ್ತಾರೆ, ವೇದ ಪಠನವನ್ನು ಮಾಡುತ್ತಾರೆ, ಪಾಠ ಪ್ರವಚನಗಳನ್ನು ಮಾಡುತ್ತಾ ಇದ್ದಾರೆ ಆ ಎಲ್ಲ ಲೋಕಗಳನ್ನು ದೇವರು ಹೀಗೆ ವೀಕ್ಷಣೆ ಮಾಡುತ್ತಾ ಇದ್ದಾನಂತೆ. ಆ ದೇವತೆಗಳು, ಋಷಿಗಳು ಪರಮಾತ್ಮನಿಗೆ ಪ್ರಾರ್ಥನೆ ಮಾಡುತ್ತಾ ಇದ್ದಾರೆ ನೀನೇ ಈ ಎಲ್ಲ ಯಜ್ಞಗಳಿಗೆ ಸ್ವೀಕಾರ ಮಾಡುವವ, ನಮ್ಮಲ್ಲಿ ನಿಂತು ಯಜ್ಞವನ್ನು ಮಾಡಿಸುವವನು ನೀನೇ, ಯಜ್ಞದ ಆಹುತಿಯನ್ನು ದೇವತೆಗಳಲ್ಲಿ ಇದ್ದು ಸ್ವೀಕಾರ ಮಾಡುವವನು ನೀನೇ, ಫಲಪ್ರದನೂ ನೀನೇ.

ಸತ್ರಿಣಾಂ ಸತ್ರಫಲದಃ ಪವಿತ್ರಂ ಪರಮಾತ್ಮವಾನ್ । (49.24 ಹರಿವಂಶಪರ್ವ)

ಅಂತಹ ನೀನು ಸರ್ವಮಂತ್ರ ಪ್ರತಿಪಾದ್ಯ, ಸರ್ವ ಯಜ್ಞಗಳಿಂದ ಪೂಜ್ಯ, ಸಕಲ ವೇದಗಳ ಮಹಾತಾತ್ಪರ್ಯ ವಿಷಯನಾದಂತಹ ಸ್ವಾಮಿ ನೀನು ಪ್ರತ್ಯಕ್ಷವಾಗಿ ಬಂದು ನಮ್ಮ ಈ ಎಲ್ಲ ಕರ್ಮಗಳನ್ನು ಸ್ವೀಕಾರ ಮಾಡುತ್ತಾ ಇದ್ದೀ ನಾವೆಲ್ಲ ಧನ್ಯರಾಗಿದ್ದೇವೆ ಎಂಬುದಾಗಿ ಹೇಳುತ್ತಾರೆ.

ಅವೈಷ್ಣವಸ್ಯ ಯಜ್ಞಸ್ಯ ನ ಹಿ ಕರ್ಮ ವಿಧೀಯತೇ । (49.27 ಹರಿವಂಶಪರ್ವ)
ಸದಕ್ಷಿಣಸ್ಯ ಯಜ್ಞಸ್ಯ ತ್ವತ್ಪ್ರಸೂತಿಃ ಫಲಂ ಲಭೇತ್ ॥ (49.28 ಹರಿವಂಶಪರ್ವ)

ಸರ್ವೋತ್ತಮನಾದ ವಿಷ್ಣುವಾದ ನಿನ್ನಲ್ಲಿ ಭಕ್ತಿ ಇಲ್ಲದಂತೆ ನಿನಗೆ ಸಮರ್ಪಣೆ ಮಾಡದಂತೆ ಯಜ್ಞ ಮಾಡಿದರೆ ಆ ಯಜ್ಞಕ್ಕೆ ಫಲವೇ ಇಲ್ಲ. ಯಜ್ಞ ಮಾಡಿದ ಮೇಲೆ ಅದಕ್ಕೆ ಕೃಷ್ಣಾರ್ಪಣ ಹೇಳಲೇಬೇಕು, ಶ್ರೀವಿಷ್ಣುವಿಗೆ ಅರ್ಪಣವನ್ನು ಮಾಡಲೇಬೇಕು ಅಂದಾಗಲೇ ಅದು ಸಾರ್ಥಕ ಪ್ರತ್ಯಕ್ಷವಾಗಿ ಬಂದು ನಮ್ಮ ಯಜ್ಞವನ್ನು ನೀನು ಸ್ವೀಕಾರ ಮಾಡುತ್ತಾ ಇದ್ದೀ ನಮ್ಮ ಯಜ್ಞ ಪರಿಪೂರ್ಣವಾಯಿತು ನಮ್ಮ ಜನ್ಮ ಸಾರ್ಥಕವಾಯಿತು, ಅಂತ ಋಷಿ ಮುನಿಗಳು ಎಲ್ಲರೂ ಸ್ತೋತ್ರ ಮಾಡಿದ್ದಾರೆ, ದೇವತೆಗಳು ಭಗವಂತನ ಸ್ತುತಿಯನ್ನು ಮಾಡಿದ್ದಾರೆ. ಎಲ್ಲರ ಸ್ತೋತ್ರವನ್ನು ಆಲಿಸಿ ಎಲ್ಲರಿಗೂ ಪರಮಾನುಗ್ರಹವನ್ನು ಮಾಡಿ ಭಗವಂತ ನಾರಾಯಣಾಶ್ರಮಕ್ಕೆ ಹೊರಟಿದ್ದಾನಂತೆ ಅಂದರೆ ತನ್ನದೇ ಆದ ಲೋಕಕ್ಕೆ ತಾನು ಹೊರಟಿದ್ದಾನೆ. ಯಾವಾಗಲೂ ಭಗವಂತ ಏಕಪ್ರಕಾರ ಶಶ್ವದೇಕಪ್ರಕಾರನಾಗಿದ್ದಾನೆ ಅದಕ್ಕೆ ಅವನಿಗೆ ಋತ ಅಂತ

ಕರೆಯುವುದು **'ಪೂರ್ವಾವ ಗತ ವತ್ಸದಾ ಸ್ಥಿತೇಃ ಬ್ರಹ್ಮರ್ತ ಮಿತ್ಯುಕ್ತಂ'** ಆದರೂ ಪರಮಾತ್ಮ ತನ್ನ ಅಭಿವ್ಯಕ್ತಿಯನ್ನು ಬೇರೆ ಬೇರೆ ರೀತಿಯಲ್ಲಿ ಮಾಡುತ್ತಾನೆ.

ಈಗ ಅಸುರರ ಸಂಹಾರ ಮಾಡುವುದಕ್ಕಾಗಿ ಪರಮಾತ್ಮ ಒಂದು ರೂಪವನ್ನು ತೆಗೆದುಕೊಂಡು ಬಂದ,ಎಲ್ಲ ಕಡೆಗೆ ವ್ಯಾಪಿಸಿ ನಿಂತ ಮತ್ತೆ ಪುನಃ ಸೂಕ್ಷ್ಮ ರೂಪವನ್ನು ತೆಗೆದುಕೊಂಡು ಬ್ರಹ್ಮಲೋಕಕ್ಕೆ ಬಂದ ಈಗ ಪರಮಾತ್ಮ ತಾನು ತನ್ನದೇ ಆದ ಪುರುಷ ರೂಪವನ್ನು ಸ್ವೀಕಾರ ಮಾಡಿ **'ಸಹಸ್ರಶೀರ್ಷಾ ಪುರುಷಃ'** ಎಂಬುದಾಗಿ ಹೇಳಿದಂತೆ ಆ ತನ್ನದೇ ಆದಂತಹ ಪುರುಷ ರೂಪವನ್ನು ಅನಂತ ಶೀರ್ಷಾದಿಗಳನ್ನು ಸ್ವೀಕಾರ ಮಾಡಿಕೊಂಡು ಪರಮಾತ್ಮ ಶೇಷಶಾಯಿಯಾಗಿ ಮಲಗಿದಂತೆ ನಾಟಕಮಾಡಿದ್ದಾನೆ. ಯೋಗ ನಿದ್ರೆ, ನಿದ್ರೆ ಇಲ್ಲ ದೇವರಿಗೆ **'ಅಸುಪ್ತಸ್ಸುಪ್ತಾ ನಭಿಶಾಕಶೀತಿ'** ಯಾವಾಗಲೂ ಭಗವಂತನಿಗೆ ಎಚ್ಚರ, ಸಕಲ ಜೀವರಾಶಿಗಳನ್ನು, ಸಕಲ ಜಡ ಪದಾರ್ಥಗಳನ್ನು ನಿಯಮನ ಮಾಡುವಂತಹ ಪರಮಾತ್ಮನಿಗೆ ಸುಕ್ತಿ ಇಲ್ಲದಿದ್ದರೂ ಚಾತುರ್ಮಾಸ್ಯ ಕಾಲದಲ್ಲಿ ಮಲಗಿದಂತೆ ನಾಟಕ ಮಾಡುತ್ತಾನೆ. ಪ್ರತಿವರ್ಷವೂ ಚಾತುರ್ಮಾಸ್ಯ ಇದು ದೇವರ ಶಯನ ಕಾಲ ಅಂತ, ನಿದ್ರೆ ಇಲ್ಲದಿದ್ದರೂ ನಿದ್ರೆ ಇದ್ದವರಂತೆ ತೋರಿಸುತ್ತಾನೆ. ಆದರೆ ಆ ಸಂದರ್ಭದಲ್ಲಿ ಪ್ರಪಂಚದೊಳಗಿನ ಯಾವ ಕಾರ್ಯವೂ ನಿಲ್ಲುವುದಿಲ್ಲ, ಎಲ್ಲವನ್ನೂ ಮಾಡಿಸುತ್ತಾನೆ. ಮಹಾಭಾರತ ಹರಿವಂಶ ಅದರ ವರ್ಣನೆಯನ್ನು ಮಾಡುತ್ತದೆ.

ಈ ರೀತಿ ಪರಮಾತ್ಮ ತಾನು ಪ್ರಲಯ ಕಾಲದಲ್ಲಿಯೂ **'ಸಹಸ್ರಯುಗ ಪರ್ಯಂತಂ'** ಒಂದು ಸಾವಿರ ಯುಗಗಳವರೆಗೆ ಪರಮಾತ್ಮ ಮಲಗುತ್ತಾನೆ. **'ಸಾ ವಿಶ್ವರೂಪಸ್ಯ ರಜನೀ ಹಿ'**[1] ಪುನಃ ಸೃಷ್ಟಿಯನ್ನು ಮಾಡುತ್ತಾನೆ, ಪ್ರತಿವರ್ಷವೂ ಚಾತುರ್ಮಾಸ್ಯ ಕಾಲದಲ್ಲಿ ಯೋಗ ನಿದ್ರೆಯನ್ನು ತೋರಿಸುತ್ತಾನೆ ಇದು ಆ ಭಗವಂತನ ಲೀಲೆ. ಅಂತಹ ಪರಮಾತ್ಮನಿಗೆ ಎಲ್ಲ ಋಷಿಗಳು, ದೇವತೆಗಳು ಅವನು ತನ್ನ ಆಶ್ರಮದಲ್ಲಿ ನಾರಾಯಣ ತನ್ನದೇ ಆದಂತಹ ಲೋಕದಲ್ಲಿ ಪದ್ಮನಾಭನಾಗಿ ಪರಮಾತ್ಮ ಶ್ವೇತದ್ವೀಪದಲ್ಲಿ ತಾನು ಶಯನ ಮಾಡಿದ್ದಾನೆ ಆ ಸಂದರ್ಭದಲ್ಲಿ ಪುನಃ ಪ್ರಾರ್ಥನೆ ಮಾಡುತ್ತಾ ಇದ್ದಾರೆ. ದ್ವಾಪರದ ಅಂತ್ಯಭಾಗ ಬಂದಿದೆ ಮತ್ತೆ ಅವತಾರ ಮಾಡಬೇಕು ಅನ್ನುವುದಕ್ಕೋಸ್ಕರ ಬ್ರಹ್ಮಾದಿ ದೇವತೆಗಳು, ಋಷಿಗಳು, ಮುನಿಗಳು ಎಲ್ಲರೂ ಕೂಡ ಪರಮಾತ್ಮನಿಗೆ ಪ್ರಾರ್ಥನೆಯನ್ನು ಮಾಡುತ್ತಾ ಇದ್ದಾರೆ. ಯೋಗ ನಿದ್ರೆಯಿಂದ ಎದ್ದು ಅವತಾರವನ್ನು ಮಾಡಿ ಸಕಲ ಸಜ್ಜನರ ರಕ್ಷಣೆಯನ್ನು ಮಾಡಬೇಕು, ಭೂಭಾರಹರಣವನ್ನು ಮಾಡಬೇಕು ಎಂಬುದಾಗಿ ಪ್ರಾರ್ಥನೆಯನ್ನು ಮಾಡಿದ್ದಾರೆ. ಕರ್ಮಭೂಮಿ ಭರತಭೂಮಿ, ಧರ್ಮವನ್ನು ಮಾಡತಕ್ಕ ಜನರು, ಕರ್ಮವನ್ನು ಮಾಡುವಂತಹ ಸಜ್ಜನರು ಇರುವಂತಹ ಭೂಮಿ ಅಂತಹ ಭೂಮಿಯಲ್ಲಿ ಧರ್ಮವನ್ನು ಮಾಡುವಂತಹ ಸಜ್ಜನರಿಗೆ ಅನೇಕ ದುರ್ಜನರಿಂದ ಪೀಡೆಯಾಗುತ್ತಾ ಇದೆ, ಅಸುರರಿಂದ ಬಾಧೆಯಾಗುತ್ತ ಇದೆ. ಅನೇಕ ಅಸುರರ ಕಾಲನೇಮಿ ಮೊದಲಾದ ಅಸುರರ ಸಂಹಾರವನ್ನು ನೀನು ಮಾಡಿದ್ದು ನಿಜ ಆದರೆ ಅವರು ಮತ್ತೆ ಹುಟ್ಟಿ ಬಂದಿದ್ದಾರೆ. ಕಾಲನೇಮಿ ಸಾವಿರ ತಲೆ, ಎರಡು ಸಾವಿರ ಬಾಹುಗಳು ಅವನೇ ಕಂಸನಾಗಿ ಹುಟ್ಟಿದ್ದಾನೆ, ವಿಪ್ರಚಿತ್ತಿ ಮಹಾದೈತ್ಯ ಅವನು ಜರಾಸಂಧನಾಗಿ ಹುಟ್ಟಿದ್ದಾನೆ, ಬಲಿ ಚಕ್ರವರ್ತಿಯಲ್ಲಿ ಇದ್ದ ಒಬ್ಬ ಬಲಿ ಎಂಬ ಅಸುರ ಬಲಿ ಚಕ್ರವರ್ತಿ ಇವನು ಸಜ್ಜನ, ಅವನೊಳಗೆ ಇರುವಂತಹ ಬಲಿ ಎನ್ನುವಂತಹ ಅಸುರ ಅವನು ಸಾಲ್ವನಾಗಿ ಹುಟ್ಟಿ ಭಾರೀ ಅಭೇದ್ಯವಾದ ವಿಮಾನವನ್ನು ಪಡೆದು ಮಹಾ ಉನ್ಮತ್ತನಾಗಿದ್ದಾನೆ. ಬಾಣಾಸುರನಲ್ಲಿ ಇರತಕ್ಕಂತಹ ಬಾಣ ಅವನೂ ಕೂಡ ಹುಟ್ಟಿ ಬಂದಿದ್ದಾನೆ ಕೀಚಕನಾಗಿ, ಮಧು-ಕೈಟಭರೇ ಹಂಸ ಢಿಭಿಕರಾಗಿ ಹುಟ್ಟಿ ಬಂದಿದ್ದಾರೆ, ಹಿರಣ್ಯಕಶಿಪು ಹಿರಣ್ಯಾಕ್ಷ, ಶಿಶುಪಾಲ ದಂತವಕ್ತ್ರರಾಗಿ ಹುಟ್ಟಿದ್ದಾರೆ.

1. 329 ಶಾಂತಿ ಪರ್ವ

ಯಾರನ್ನು ನೀನು ಸಂಹಾರ ಮಾಡಿದ್ದಿ ಈ ಘೋರವಾದ ದೇವಾಸುರ ಸಂಗ್ರಾಮದಲ್ಲಿ ಹಾಗೂ ಹಿಂದೆ ನರಸಿಂಹಾದಿ ಅವತಾರ ವರಾಹಾವತಾರಾದಿಗಳಲ್ಲಿ ಅವರೆಲ್ಲ ಪುನಃ ಈಗ ಹುಟ್ಟಿ ಬಂದಿದ್ದಾರೆ ದ್ವಾಪರಯುಗದಲ್ಲಿ ನಾನಾ ರೀತಿಯಿಂದ ಸಜ್ಜನರಿಗೆ ಪೀಡೆಯನ್ನು ಕೊಡುತ್ತಾ ಇದ್ದಾರೆ,ಅಧರ್ಮವನ್ನು ಮಾಡುತ್ತಾ ಇದ್ದಾರೆ. ಕೆಲವರು ಮಹಾದುಷ್ಟರು, ಅಯೋಗ್ಯರು, ಸ್ವರೂಪದಲ್ಲಿ ನಿನ್ನ ದ್ರೋಹ ಮಾಡುವವರು, ಧರ್ಮದ ದ್ರೋಹ ಮಾಡುವವರು, ಮಹಾದುರ್ಜನರು ಆದರೆ ಸಜ್ಜನರ ಸಹವಾಸದಿಂದ ಸ್ವಲ್ಪ ಧರ್ಮ ಮಾಡುವ ನಾಟಕವನ್ನು ಮಾಡುತ್ತಾರೆ. ಅವರಿಗೂ ಏನೋ ಒಂದು ಸ್ವಲ್ಪ ಧರ್ಮದಲ್ಲಿ ಮನಸ್ಸು ಬಂದ ಹಾಗೆ ಆಗುತ್ತಾ ಇದೆ ನಿಜವಾಗಿ ನೋಡಿದರೆ ಅವರು ಸ್ವಭಾವತಃ ಧಾರ್ಮಿಕರಲ್ಲ, ಸಜ್ಜನರಲ್ಲ ಆದರೆ ಸಜ್ಜನರ ಸಹವಾಸದಿಂದ ಸ್ವಲ್ಪ ಧರ್ಮ ಮಾಡುವ ಸೋಗಿನೊಳಗೆ ಇದ್ದಾರೆ. ಅವರೆಲ್ಲರಿಗೂ ಸರಿಯಾದ ಗತಿಯನ್ನು ಒದಗಿಸಬೇಕು, ದುರ್ಜನರನ್ನ ನಾಶ ಮಾಡಬೇಕು ಸಜ್ಜನರ ರಕ್ಷಣೆಯಾಗಬೇಕು, ಅಧರ್ಮದ ನಾಶ ಆಗಬೇಕು ಧರ್ಮದ ಉನ್ನಾಹ ಆಗಬೇಕು ಅದಕ್ಕಾಗಿ ಮತ್ತೆ ನೀನು ಅವತಾರ ಮಾಡಲೇಬೇಕು ಎಂಬುದಾಗಿ ಎಲ್ಲ ದೇವತೆಗಳು ಬ್ರಹ್ಮ ದೇವರನ್ನು ಮುಂದೆ ಮಾಡಿಕೊಂಡು ಪ್ರಾರ್ಥನೆಯನ್ನು ಮಾಡಿದ್ದಾರೆ. ಪೃಥ್ವಿ ಬಂದು ದೇವತೆಗಳಿಗೆ ಪ್ರಾರ್ಥನೆ ಮಾಡಿದ್ದಾಳೆ, ದೇವತೆಗಳು ಬ್ರಹ್ಮ ದೇವರಿಗೆ, ಬ್ರಹ್ಮ ದೇವರು ಪರಮಾತ್ಮನಿಗೆ ಪ್ರಾರ್ಥನೆ ಮಾಡುತ್ತಾರೆ. ಪರಮಾತ್ಮ ಮಾಡಿದ ಆದೇಶವು ಬ್ರಹ್ಮ ದೇವರಿಗೆ ಮಾತ್ರ ಕೇಳಿಸುತ್ತದೆ ಬ್ರಹ್ಮ ದೇವರು ಉಳಿದವರಿಗೆಲ್ಲ ಹೇಳುತ್ತಾರೆ. ಭಗವಂತ ಅವತಾರವನ್ನು ಮಾಡುವ ಸಂಕಲ್ಪವನ್ನು ಮಾಡಿದ್ದಾನೆ ದೊಡ್ಡದಾದ ಸಭೆ ದೇವರು ಆದೇಶ ಮಾಡಿದ ಬ್ರಹ್ಮ ದೇವರು ಅದನ್ನು ಕೇಳಿಸಿಕೊಂಡು ಎಲ್ಲ ದೇವತೆಗಳಿಗೆ ಪರಮಾತ್ಮನ ಆದೇಶವನ್ನು ತಿಳಿಸುತ್ತಾರೆ. ಸಭೆಯ ಮಧ್ಯದಲ್ಲಿ ಯಾರೂ ಗಲಾಟೆ ಮಾಡಬಾರದು ಅಂತ ಹೇಳುವುದಕ್ಕೆ ವಾಯು ದೇವರಿಗೆ ಹೇಳಿದರಂತೆ.

ತತಃ ಪ್ರಭಞ್ಜನೋ ವಾಯುರ್ಬ್ರಹ್ಮಣಾ ಸಾಧು ಚೋದಿತಃ ।

ಮಾ ಶಬ್ದಮಿತಿ ಸರ್ವತ್ರ ಪ್ರಚಕ್ರಾಮಾಥ ತಾಂ ಸಭಾಮ್ ॥ (52.12 ಹರಿವಂಶಪರ್ವ)

ಯಾರು ಮಾತನಾಡಬಾರದು ಅಂತ ಹೇಳುವುದಕ್ಕೆ ವಾಯು ದೇವರು ಒಂದು ಸಲ ಸಂಚಾರ ಮಾಡಿ ಬಂದರಂತೆ ಅಂತಹ ದೊಡ್ಡ ದೇವತೆಗಳ ಸಭೆ. ವಾಯು ದೇವರ ಪ್ರೇರಣೆಯಂತೆ ಎಲ್ಲರೂ ಶಾಂತ ಚಿತ್ತರಾಗಿ ಆಲಿಸುತ್ತಾ ಇದ್ದಾರೆ ಏನು ಆದೇಶ ಬಂತು ದೇವರದು ಅಂತ ದೇವರ ಆದೇಶವನ್ನು ಕೇಳಿದ ಬ್ರಹ್ಮ ದೇವರು ಎಲ್ಲರಿಗೆ ಹೇಳುತ್ತಾರೆ. ಭಗವಂತ ಅವತಾರ ಮಾಡುತ್ತಾನೆ, ಭೂಭಾರಹರಣವನ್ನು ಮಾಡುತ್ತಾನೆ, ನೀವೆಲ್ಲರೂ ಭಗವಂತನ ಸೇವೆಗಾಗಿ ಅವತಾರ ಮಾಡಬೇಕು ಯೋಗ್ಯವಾದ ಸ್ಥಾನದಲ್ಲಿ ಪರಮಾತ್ಮನೂ ಅವತಾರವನ್ನು ಮಾಡುತ್ತಾನೆ ಎಂಬುದಾಗಿ ಬ್ರಹ್ಮ ದೇವರು ಎಲ್ಲ ದೇವತೆಗಳಿಗೆ ಭಗವಂತನ ಆದೇಶವನ್ನು ತಿಳಿಸಿದ್ದಾರೆ. ಪರಮಾತ್ಮನ ಉಪಕಾರವನ್ನು ಹಿಂದೆ ಮಾಡಿದ್ದನ್ನು ಸ್ಮರಿಸುತ್ತಾರೆ ಇದೇ ಪರಮಾತ್ಮ ತನ್ನ ಕಿವಿ, ಕಿವಿಯಲ್ಲಿ ಇರುವಂತಹ ಸ್ವೇದಬಿಂದು ಬೆವರಿನ ಹನಿ ಅದು ಲೀಲೆಯಿಂದ ಬಂದ ಬೆವರು, ಶ್ರಮದಿಂದ ಬಂದದ್ದಲ್ಲ. ಅಂತಹ ಲೀಲೆಯಿಂದ, ಕ್ರೀಡೆಯಿಂದ ಬಂದ ಬೆವರು ಆ ಬೆವರಿನ ಹನಿ ಅದೇ ಒಂದು ತರಹದ ಮಲ ಇದ್ದಂತೆ, ಅದು ಹೊಲಸಲ್ಲ ದೇವರಲ್ಲಿ ಅದರಿಂದ ಹುಟ್ಟಿದವರು ಮಧು-ಕೈಟಭರು ಆ ಮಧು-ಕೈಟಭರನ್ನು ಅವರ ಜೊತೆಗೆ ತಾನು ಆಟ ಆಡುವ ದೃಷ್ಟಿಯಲ್ಲಿ ಅವರೊಳಗೆ ವಾಯು ದೇವರಿಗೆ ಪ್ರವೇಶ ಮಾಡುವುದಕ್ಕೆ ಹೇಳುತ್ತಾನೆ. ವಾಯು ದೇವರು ಅವರಲ್ಲಿ ಪ್ರವೇಶ ಮಾಡುತ್ತಾರೆ ಅಂತ ಶ್ರೀಮದಾಚಾರ್ಯರು ತಾತ್ಪರ್ಯ ನಿರ್ಣಯದಲ್ಲಿ ತಿಳಿಸುತ್ತಾರೆ, ಹರಿವಂಶವೂ ಆ ಮಾತನ್ನು ಹೇಳುತ್ತದೆ.

ತೌ ವಿವೇಶ ಸ್ವಯಂ ವಾಯುರ್ಬ್ರಹ್ಮಣಾ ಸಾಧು ಚೋದಿತಃ । (52.23 ಹರಿವಂಶಪರ್ವ)

ಆ ಪರಮಾತ್ಮನ ಆಜ್ಞೆಯಂತೆ ಸ್ವಯಂ ವಾಯು ದೇವರು ಆ ಮಧು-ಕೈಟಭರಲ್ಲಿ ಪ್ರವೇಶ ಮಾಡಿ ಅವರಿಗೆ ಬಲ ಕೊಡುತ್ತಾರೆ. ಬಲ ಕೊಟ್ಟದ್ದಕ್ಕೆ ಅವರು ಭಾರೀ ಉಗ್ರವಾದ ರೀತಿಯಲ್ಲಿ ಯುದ್ಧವನ್ನು ಮಾಡುವುದಕ್ಕೆ ಬರುತ್ತಾರೆ ಅಂತಹ ಮಧು-ಕೈಟಭರನ್ನು ಸಂಹಾರ ಮಾಡಿ ಆ ಮಧು ಕೈಟಭರ ಮೇಧಸ್ಸಿನಿಂದಲೇ ಮೇದಿನಿಯನ್ನು ನಿರ್ಮಾಣ ಮಾಡಿದಂತಹ ಭಗವಂತ. ಇದಲ್ಲದೆ ಅನೇಕ ಅವತಾರಗಳನ್ನು ಮಾಡಿ ನಾನಾ ವಿಧವಾದ ಅನುಗ್ರಹವನ್ನು ಮಾಡಿರತಕ್ಕಂತಹ ಪರಮಾತ್ಮ ಈಗ ಪುನಃ ಅನುಗ್ರಹವನ್ನು ಮಾಡಿ ಭೂಭಾರಹರಣವನ್ನು ಮಾಡುತ್ತಾನೆ ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ.

ಭಗವಂತ ಸರ್ವಜ್ಞ ಸರ್ವತಂತ್ರ ಸ್ವತಂತ್ರ ಆದರೂ ಕೂಡ ಬ್ರಹ್ಮ ದೇವರಿಗೆ ಒಂದು ವಿಶೇಷವಾದ ಸ್ಥಾನವನ್ನು ಕೊಟ್ಟು ಆ ಬ್ರಹ್ಮ ದೇವರಿಗೆ ಕೇಳುತ್ತಾನೆ ಎಲ್ಲಿ ಅವತಾರ ಮಾಡಬೇಕು ನಾನು, ಸ್ಥಾನವನ್ನು ಹೇಳು ಅಂತ ಆಗ ಬ್ರಹ್ಮ ದೇವರು ಹೇಳುತ್ತಾ ಇದ್ದಾರೆ. ಹಿಂದೆ ನಾನು ಸಮುದ್ರ ತೀರದಲ್ಲಿ ತಪಸ್ಸು ಮಾಡುವಂತಹ ಪ್ರಸಂಗದಲ್ಲಿ ವರುಣ ಗಂಗಾ ದೇವಿಯಿಂದ ಕೂಡಿಕೊಂಡು ಆ ಗಂಗಾ ದೇವಿಯಲ್ಲಿ ವರುಣನಲ್ಲಿ ಅರ್ಥಾತ್ ಗಂಗಾ ನದಿಯಲ್ಲಿ ಸಮುದ್ರದಲ್ಲಿ ಪ್ರವೇಶ ಮಾಡುತ್ತಾಳೆ ಆ ಸ್ಥಾನದಲ್ಲಿ ಅತ್ಯಂತ ಉಕ್ಕೇರಿ ಬಂದು ನೀರನ್ನು ಸಿಡಿಸುತ್ತಾನೆ ಆಗ ನಾನು ವರುಣನಿಗೆ ಶಾಪ ಕೊಟ್ಟಿದ್ದೆ ನೀನು ಮನುಷ್ಯನಾಗಿ ಹುಟ್ಟು ಅಂತ. ವರುಣ ದೇವರು ಮತ್ತೆ ಶರಣು ಹೋಗುತ್ತಾರೆ ನಾನು ಮಾಡಿದ ತಪ್ಪಿಗೆ ಕ್ಷಮೆ ಇರಲಿ ನಾನು ಬುದ್ಧಿ ಪೂರ್ವಕವಾಗಿ ಮಾಡಿದ್ದಲ್ಲ

ಉದ್ಧತೈಶ್ಚ ಮಹಾವಾತೈಃ ಪ್ರವೃದ್ಧೈಶ್ಚ ಬಲಾಹಕೈಃ ।
ಪರ್ವಣಾ ಚೇನ್ದುಯುಕ್ತೇನ ತ್ರಿಭಿಃ ಕ್ಷುಬ್ಧೋಸ್ಮಿ ಕಾರಣೈಃ ॥ (53.32 ಹರಿವಂಶಪರ್ವ)

ಪರ್ವಕಾಲ, ಪೌರ್ಣಿಮಾ ತಿಥಿ, ಗಾಳಿ, ಮೇಘಗಳು ಇವುಗಳೆಲ್ಲ ಇದ್ದ ಕಾರಣ ಈ ರೀತಿ ಆ ನೀರನ್ನು ಸಿಡಿಸುವ ಅನಿವಾರ್ಯತೆ ಇತ್ತು, ಬುದ್ಧಿಪೂರ್ವಕವಾಗಿ ನಾನು ಮಾಡಿದ್ದಲ್ಲ ಮಾಡಿದ ತಪ್ಪಿಗೆ ಕ್ಷಮೆ ಇರಲಿ ಅಂತಂದಾಗ ಕ್ಷಮೆ ಮಾಡಿದ್ದಾರೆ. ಗಂಗಾ ದೇವಿ ಬರುತ್ತಾಳೆ ಅವಳ ಜೊತೆಗೆ ವಿವಾಹವನ್ನು ಮಾಡಿಕೊ ಅಲ್ಲಿ ಎಂಟು ಜನ ಮಕ್ಕಳನ್ನು ಪಡೀತಾರೆ, ಏಳು ಜನ ಮೃತರಾಗುತ್ತಾರೆ, ಕೊನೆಯ ಮಗ ನಿನಗೆ ಉಳಿಯುತ್ತಾನೆ ಆಮೇಲೆ ಗಂಗೆ ಮತ್ತೆ ತನ್ನ ಲೊಕಕ್ಕೆ ತಾನು ಬರುತ್ತಾಳೆ ಮುಂದೆ ನೀನು ಕೂಡ ಕೆಲವು ಕಾಲ ಅಲ್ಲಿದ್ದು ಆಮೇಲೆ ಬರಬಹುದು. ಶಾಂತನಾಗು ಅಂತ ನಾನು ಹೇಳಿದ್ದರಿಂದ ನಿನಗೆ ಶಾಂತ ತನು ಶಂತನು ಎಂಬಂತಹ ಹೆಸರು ಬರುತ್ತದೆ ಅಂತ ಆ ಶಂತನುವಿಗೆ ಬ್ರಹ್ಮ ದೇವರು ಮೊದಲು ಶಾಪವನ್ನು ಕೊಟ್ಟು ಆಮೇಲೆ ಅವನಿಗೆ ಶೀಘ್ರದಲ್ಲಿ ಪುನಃ ನಿನ್ನ ಲೋಕವನ್ನು ನೀನು ಹೊಂದಬಹುದು ಅಂತ ಅನುಗ್ರಹವನ್ನೂ ಮಾಡಿದ ವಿಚಾರವನ್ನು ತಿಳಿಸುತ್ತಾರೆ ಅಂತಹ ಆ ಶಂತನು. ಶಂತನುವಿನ ಸಂತತಿಯಲ್ಲಿ ವಿಚಿತ್ರವಿರ್ಯ, ಚಿತ್ರಾಂಗದ, ವಿಚಿತ್ರವೀರ್ಯನ ಚಿತ್ರಾಂಗದನ ಮಡದಿಯರು ಅಂಬಿಕಾ, ಅಂಬಾಲಿಕಾ ಹಿಂದೆ ಎಲ್ಲ ಕಥೆ ಕೇಳಿದ್ದೀರಿ. ಅಲ್ಲಿ ಧೃತರಾಷ್ಟ್ರ, ಪಾಂಡು ಇತ್ಯಾದಿ ಆ ಪಾಂಡವರ ಉತ್ಪತ್ತಿ ಅಲ್ಲಿ ಅನೇಕ ದೇವತೆಗಳ ಉತ್ಪತ್ತಿಯಾಗುತ್ತದೆ ಯಮಧರ್ಮ, ವಾಯು ದೇವರು, ಇಂದ್ರ, ಅಶ್ವಿ ದೇವತೆಗಳು ಇವರಿಂದ ಪಾಂಡವರ ಉತ್ಪತ್ತಿ. ಆ ಕಡೆಗೆ ಅಸುರರ ಉತ್ಪತ್ತಿ ಕಲಿ ಮೊದಲಾದ ದೈತ್ಯರು ಗಾಂಧಾರೀಯಲ್ಲಿ ದುರ್ಯೋಧನಾದಿಗಳ ರೂಪದಲ್ಲಿ ಅವರು ಹುಟ್ಟಿ ಬರುವವರಿದ್ದಾರೆ. ಹೀಗೆಲ್ಲ ಭೂಲೋಕದಲ್ಲಿ ಬೇರೆ ಬೇರೆ ಸ್ಥಾನಗಳಲ್ಲಿ, ಬೇರೆ ಬೇರೆ ದೇವತೆಗಳು ಎಲ್ಲರೂ ಕೂಡ ಅವತಾರವನ್ನು ಮಾಡುತ್ತಾರೆ ಎಂಬುದಾಗಿ ಉಳಿದೆಲ್ಲ ಜನರ ಅವತಾರದ ವಿಚಾರವನ್ನು ತಿಳಿಸುತ್ತಾರೆ.

ಸರ್ವಾಸ್ತ್ರಜ್ಞಾ ಮಹೇಷ್ವಾಸಾ ವೇದವ್ರತಪರಾಯಣಾಃ ।
ಸರ್ವರ್ದ್ಧಿಗುಣಸಮ್ಪನ್ನಾ ಯಜ್ವಾನಃ ಪುಣ್ಯ ಕರ್ಮಿಣಃ ॥ (53.75 ಹರಿವಂಶಪರ್ವ)

ದೇವತೆಗಳು ಅವತಾರ ಮಾಡಿದಾಗ ಹೇಗಿರುತ್ತಾರೆ ಅಂತ ವರ್ಣನೆ ಮಾಡುತ್ತಾರೆ. ಎಲ್ಲರೂ ಅಸ್ತ್ರ ಜ್ಞಾನವನ್ನು ಪಡೆದವರು, ವೇದಾದಿ ಸಚ್ಛಾಸ್ತ್ರ ಜ್ಞಾನಗಳನ್ನು ಪಡೆದವರು, ಎಲ್ಲ ವಿಧವಾದ ಸಮೃದ್ಧಿ ಭೂಮಿಯನ್ನೇ ಬೇಧನ ಮಾಡಬಹುದು, ಪರ್ವತಗಳನ್ನು ಎತ್ತಿ ಎಸೆಯಬಹುದು, ಆಕಾಶಕ್ಕೆ ಹಾರಬಹುದು, ಸಮುದ್ರವನ್ನೇ ಕ್ಷೋಭಗೊಳಿಸಬಹುದು ಅಂತಹ ಮಹಾಸಾಮರ್ಥ್ಯ ಒಬ್ಬೊಬ್ಬ ದೇವತೆಗೆ ಇರುತ್ತೆ. ಅಂತಹ ದೇವತೆಗಳೆಲ್ಲ ಅಲ್ಲಿ ನಿನ್ನ ಸೇವೆಗಾಗಿ ಅವತಾರವನ್ನು ಮಾಡುತ್ತಾರೆ ಎಂಬುದಾಗಿ ಹೇಳುತ್ತಾರೆ. ನೀನು ಮಾತ್ರ

ಯಯಾತಿವಂಶಜಸ್ಯಾಥ ವಸುದೇವಸ್ಯ ಧೀಮತಃ ।

ಕುಲೇ ಪೂಜ್ಯೇ ಯಶಸ್ಕರ್ಮಾ ಜಜ್ಞೇ ನಾರಾಯಣಃ ಪ್ರಭುಃ ॥ (53.79 ಹರಿವಂಶಪರ್ವ)

ಅಂತಹ ಶ್ರೇಷ್ಠವಾದ ವಸುದೇವನ ಯಯಾತಿಯ ವಂಶ, ಯದುವಂಶ ಅಲ್ಲಿ ವಸುದೇವನಲ್ಲಿ ನೀನು ಅವತಾರ ಮಾಡಬೇಕು ಎಂಬುದಾಗಿ ಪರಮಾತ್ಮನಿಗೆ ಪ್ರಾರ್ಥನೆಯನ್ನು ಮಾಡಿದ್ದಾರೆ.

ನಾರದರು ಪರಮಾತ್ಮನಿಗೆ ಬಂದು ಕೇಳುತ್ತಾ ಇದ್ದಾರೆ ಪರಮಾತ್ಮ, ನೀನೇ ರಾಮಾವತಾರದಲ್ಲಿ ನಿನ್ನ ತಮ್ಮನಾದ, ನೋಡಿ ಹಿಂದೆ ಕೇಳಿದ್ದೀರಿ ರಾಮನೇ ಲವಣಾಸುರನ ಸಂಹಾರ ಮಾಡಿ ಮಥುರಾ ಪಟ್ಟಣವನ್ನು ನಿರ್ಮಾಣ ಮಾಡಿದ ಅಂತ ರಾಮ ಸಂಹಾರ ಮಾಡಿದ್ದಲ್ಲ. ಲವಣಾಸುರ ಶತ್ರುಘ್ನನಲ್ಲಿ ಅಂತರ್ಯಾಮಿಯಾಗಿ ಅನಿರುದ್ಧ ರೂಪದಿಂದ ಲವಣಾಸುರನನ್ನು ಸಂಹಾರ ಮಾಡಿದ, ಶತ್ರುಘ್ನನಿಂದ ಸಂಹಾರ ಮಾಡಿಸಿದ್ದು ಅಂತ ಆ ಮಾತು ಹರಿವಂಶದಲ್ಲಿ ಮತ್ತೆ ಮುಂದೆ ಸ್ಪಷ್ಟವಾಗಿ ಬರುತ್ತದೆ. ನಾರದರು ವರ್ಣನೆ ಮಾಡುತ್ತಾರೆ ನೀನೇ ಹಿಂದೆ ಆ ಲವಣಾಸುರನನ್ನ ಶತ್ರುಘ್ನನಿಂದ ಸಂಹಾರ ಮಾಡಿಸಿ ಆ ಮಥುರಾ ಪಟ್ಟಣದ ನಿರ್ಮಾಣವನ್ನು ಮಾಡಿಸಿದ್ದೀ ಅಂತಹ ಶ್ರೇಷ್ಠವಾವಾದಂತಹ ಮಥುರಾ ಪಟ್ಟಣ. ಆ ಮಥುರಾ ಪಟ್ಟಣದಲ್ಲಿ ಅನೇಕ ಅಸುರರೆಲ್ಲ ಇದ್ದಾರೆ ಕಾಲನೇಮಿಯೇ ಕಂಸನಾಗಿ ಹುಟ್ಟಿದ್ದಾನೆ ಇನ್ನುಳಿದ ಅನೇಕ ಅಸುರರು ಹಯಗ್ರೀವಾಸುರ, ಕೇಶಿಯಾಗಿ, ಅರಿಷ್ಟಾಸುರ ಆಮೇಲೆ ರಿಷ್ಟಾ ಅನ್ನುವವನು ಆ ಕಂಸನ ಆನೆಯಾಗಿ ಹುಟ್ಟಿದ್ದಾನೆ. ಲಂಬ ಎಂಬ ಅಸುರ ಪ್ರಲಂಬನಾಗಿ, ಖರ ಎಂಬ ಅಸುರ ಧೇನುಕನಾಗಿ, ವರಾಹ ಎಂಬ ಅಸುರ ಕಿಶೋರನಾಗಿ ಹೀಗೆ ಅನೇಕ ಜನ ಮಯಾ, ತಾರಾ ಇವರೆಲ್ಲ ಅಲ್ಲಿ ಹುಟ್ಟಿದ್ದಾರೆ ಆ ಎಲ್ಲ ಅಸುರರ ಸಂಹಾರ ಮಾಡಬೇಕಾಗಿದೆ ಅದಕ್ಕಾಗಿ ಆ ಮಥುರಾ ಪಟ್ಟಣದಲ್ಲಿ ನೀನು ಬಂದು ಆ ಎಲ್ಲ ಅಸುರರ ಸಂಹಾರ ಮಾಡಿ ದೇವತೆಗಳಿಗೆ ಸಂತೋಷ ಪಡಿಸಬೇಕು, ಭೂಭಾರಹರಣವನ್ನು ಮಾಡಬೇಕು ಎಂಬುದಾಗಿ ನಾರದರು ಬಂದು ಪರಮಾತ್ಮನಿಗೆ ಪ್ರಾರ್ಥನೆ ಮಾಡಿದ್ದಾರೆ ಪರಮಾತ್ಮ ನಾರದರ ವಚನವನ್ನು ಕೇಳಿದ. ಆಗ ಬ್ರಹ್ಮ ದೇವರಿಗೆ ಅನ್ನುತ್ತಾನೆ ವಸುದೇವನ ಮನೆಯಲ್ಲಿ ಅರ್ಥಾತ್ ವಸುದೇವನಿಂದ ದೇವಕಿಯಲ್ಲಿ ಅವತಾರ ಮಾಡಬೇಕು ಅಂತ ಹೇಳಿದೆಯಲ್ಲ ಯಾರು ಆ ವಸುದೇವ ದೇವಕಿ, ಯಾಕೆ ಅಲ್ಲಿ ಅವತಾರ ಮಾಡಬೇಕು ಅಂತ ಅದಕ್ಕೆ ಬ್ರಹ್ಮ ದೇವರು ಹೇಳುತ್ತಾರೆ. ಶ್ರೀಮದಾಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಹೇಳುವ ಒಂದೊಂದು ವಿಷಯಗಳು ಕೂಡ ಹರಿವಂಶದಲ್ಲಿ, ಮಹಾಭಾರತದಲ್ಲಿ, ಭಾಗವತಾದಿ ಸಚ್ಛಾಸ್ತ್ರಗಳಲ್ಲಿ ಯಾವ ರೀತಿ ಹಾಸು ಹೊಕ್ಕಾಗಿದೆ ಅನ್ನುವುದನ್ನು ನಾವು ತಿಳಿಯಬಹುದು.

ಹಿಂದೆ ಕಶ್ಯಪರು ಸುರಭಿ ಮತ್ತು ಅದಿತಿ ಇವರಿಬ್ಬರ ಬೇಡಿಕೆಯಂತೆ ಶ್ರೇಷ್ಠವಾದ ಗೋವುಗಳನ್ನು ವರುಣ ದೇವರಿಂದ ಅಪಹಾರ ಮಾಡಿಕೊಂಡು ಬರುತ್ತಾರೆ. ಕಶ್ಯಪರ ಮಗ ವರುಣ ದೇವತೆಗಳು ಕಶ್ಯಪರ ಮಕ್ಕಳು ಆದರೆ ಆ ವರುಣ ದೇವರ ಅಧಿಕಾರದಲ್ಲಿ ಇರುವಂತಹ ಏನೆಲ್ಲ ಸಂಪತ್ತಿದೆ ಅದನ್ನು ಹೇಳದೆ ಕೇಳದೆ ತೆಗೆದುಕೊಂಡು

ಹೋಗುವಂತಿಲ್ಲ ತಂದೆಯಾದರೂ ಕೂಡ ಕಶ್ಯಪ ಋಷಿಗಳು. ಅದಿತಿ ದೇವಿ, ಸುರಭಿ ದೇವಿ ಇವರಿಬ್ಬರ ಪ್ರೇರಣೆಯಂತೆ ಗೋವುಗಳನ್ನು ಅಪಹಾರ ಮಾಡಿದ್ದಾರೆ ವರುಣ ಹೋಗಿ ಬ್ರಹ್ಮ ದೇವರಿಗೆ ಹೇಳುತ್ತಾನೆ ಈ ರೀತಿಯ ಅಪಹಾರವನ್ನು ಮಾಡಿದ್ದಾರೆ. ಕಶ್ಯಪರು ದೊಡ್ಡವರು ತಂದೆ, ನನ್ನ ಗೋವುಗಳನ್ನು ಅಪಹಾರ ಮಾಡಿದ್ದಾರೆ ಆ ಗೋವುಗಳಿಂದ ಯಜ್ಞ ಯಾಗಾದಿ ಕಾರ್ಯಗಳನ್ನು ಮಾಡಬೇಕು ಸಕಲ ಲೋಕಕ್ಕೂ ಕ್ಷೇಮ ಆಗಬೇಕು.

ಅಕ್ಷಯಂ ವಾ ಕ್ಷರನ್ನ್ಯಗ್ರ್ಯಂ ಪಯೋ ದೇವಾಮೃತೋಪಮಮ್ ॥ (55.26 ಹರಿವಂಶಪರ್ವ)

ದೇವತೆಗಳು ಪಾನ ಮಾಡುವ ಅಮೃತಕ್ಕೆ ಸದೃಶವಾದಂತಹ ಹಾಲನ್ನು ಕೊಡುವ ಆ ಆಕಳುಗಳು ಅವುಗಳನ್ನು ಅಪಹಾರ ಮಾಡಿದ್ದಾರೆ ಅದಕ್ಕಾಗಿ ಹೇಗಾದರೂ ಮಾಡಿ ನೀವು ಕೊಡಿಸಬೇಕು ಅಂತ ಬ್ರಹ್ಮ ದೇವರು ಕಶ್ಯಪರಿಗೆ ಶಾಪ ಕೊಟ್ಟಿದ್ದಾರೆ. ಆ ಗೋವುಗಳ ಅಪಹಾರವನ್ನು ಮಾಡಿದ್ದೀ ಇವರಿಬ್ಬರ ಪ್ರೇರಣೆಯಂತೆ ನೀನು ಅಪಹಾರ ಮಾಡಿದ್ದೀ ಆ ಸುರಭಿ ಮತ್ತು ಅದಿತಿ ಇಂದ ಸಹಿತನಾಗಿ ನೀನು **'ಕ್ಷತ್ರೇಷು ಗೋಜೀವನಕೋ ಭವೇತಿ'**[1] ಅವನಿಗೆ ಹೇಳಿದ್ದರಿಂದ ಆ ಕಶ್ಯಪರೇ ವಸುದೇವನಾಗಿ, ಅದಿತಿಯೇ ದೇವಕಿಯಾಗಿ, ಸುರಭಿಯೇ ರೋಹಿಣೀಯಾಗಿ ಹುಟ್ಟಿದ್ದಾರೆ ಅಲ್ಲಿ ನೀನು ಅವತಾರವನ್ನು ಮಾಡಬೇಕು ಅವರು ವಿಶೇಷವಾಗಿ ನಿನ್ನ ಅವತಾರಕ್ಕೋಸ್ಕರ ತಪಶ್ಚರ್ಯವನ್ನು ಮಾಡಿದ್ದಾರೆ. ಮನುಷ್ಯರಾಗಿ ಹುಟ್ಟುವುದಕ್ಕೆ ಕಾರಣ ಬ್ರಹ್ಮ ದೇವರ ಶಾಪ ಆದರೆ ನೀನು ಅವತಾರ ಮಾಡಬೇಕು ಅನ್ನುವುದಕ್ಕೆ ಕಶ್ಯಪ ಅದಿತಿ ಇಬ್ಬರೂ ಕೂಡ ಘೋರವಾದ ತಪಶ್ಚರ್ಯವನ್ನು ಮಾಡಿದ್ದಾರೆ ಅದಕ್ಕಾಗಿ ಅವರಲ್ಲಿ ನೀನು

ದೇವಕೀಂ ರೋಹಿಣೀಂ ಚೈವ ಗರ್ಭಾಭ್ಯಾಂ ಪರಿತೋಷಯ । (55.42 ಹರಿವಂಶಪರ್ವ)

ಅವರಿಬ್ಬರನ್ನೂ ನೀನು ಸಂತೋಷ ಪಡಿಸಬೇಕು ರೋಹಿಣಿಯಲ್ಲಿ ಬಲರಾಮ ರೂಪದಿಂದ ಶುಕ್ಲ ಕೇಶಾವೇಶ, ದೇವಕಿಯಲ್ಲಿ ಸಾಕ್ಷಾತ್ ಕೃಷ್ಣ ಕೇಶ ರೂಪದಿಂದ ಪರಮಾತ್ಮ ನೀನು ಅವತಾರ ಮಾಡಿ ಅವರಿಬ್ಬರನ್ನು ಸಂತೋಷ ಪಡಿಸಬೇಕು ಅಂತ ಪ್ರಾರ್ಥನೆಯನ್ನು ಮಾಡಿದ್ದಾರೆ. ನಿನ್ನ ಭಕ್ತರಾದ ದೇವತೆಗಳೆಲ್ಲ ಗೋಪಾಲಕರಾಗಿ ಅವತಾರ ಮಾಡುತ್ತಾರೆ ನಿನ್ನ ಸೇವೆಯನ್ನು ಮಾಡುತ್ತಾರೆ ಅಂತ ಬ್ರಹ್ಮ ದೇವರು ಪ್ರಾರ್ಥನೆ ಮಾಡಿದಾಗ ಪರಮಾತ್ಮ ತಥಾಸ್ತು ಎಂಬುದಾಗಿ ವರವನ್ನು ಕೊಟ್ಟಿದ್ದಾನೆ. ಆ ವಸುದೇವ ದೇವಕಿಯರಲ್ಲಿ ಯಾವ ರೀತಿ ಅವತಾರವನ್ನು ಮಾಡಿ ತನ್ನ ಮುಂದಿನ ಅವತಾರ ಕಾರ್ಯಗಳನ್ನು ತೋರಿಸುತ್ತಾನೆ ಅನ್ನುವುದನ್ನು ಮುಂದೆ ತಿಳಿಸುತ್ತಾರೆ.

ಇಲ್ಲಿಗೆ ಸರಿವಂಶದ ಮೂರು ಪರ್ವಗಳಲ್ಲಿ ಹರಿವಂಶಪರ್ವ ಅಂತ ಮೊದಲನೆಯ ಪರ್ವ ಇಲ್ಲಿ ಸಮಾಪ್ತವಾಗುತ್ತಾ ಇದೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

1. 11.224 ಮಭಾತಾನಿರ್ಣಯ

॥ ಶ್ರೀ ॥

॥ ಶ್ರೀ ದಿಗ್ವಿಜಯ ರಾಮೋ ವಿಜಯತೇ ॥

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ವಿಷ್ಣುಪರ್ವ-15

* * *

ವೈಶಂಪಾಯನ ಉವಾಚ:

ಜ್ಞಾತ್ವಾ ವಿಷ್ಣುಂ ಕ್ಷಿತಿಗತಂ ಭಾಗಾಂಶ್ಚ ತ್ರಿದಿವೌಕಸಾಮ್ ।
ವಿನಾಶಶಂಸೀ ಕಂಸಸ್ಯ ನಾರದೋ ಮಥುರಾಂ ಯಯೌ ॥ (1.1 ವಿಷ್ಣುಪರ್ವ)

ಸರ್ವೋತ್ತಮನಾದ ಶ್ರೀಹರಿ ಬ್ರಹ್ಮಾದಿ ದೇವತೆಗಳ ಪ್ರಾರ್ಥನೆಯಂತೆ, ಭೂದೇವಿಯ ಪ್ರಾರ್ಥನೆಯಂತೆ ಭೂಭಾರಹರಣ ಮಾಡುವುದಕ್ಕಾಗಿ ಸಂಕಲ್ಪವನ್ನು ಮಾಡಿದ್ದಾನೆ. ತಾನು ಅವತಾರ ಮಾಡುವ ಹಿನ್ನೆಲೆಯಲ್ಲಿ ಎಲ್ಲ ದೇವತೆಗಳು ನೀವು ಅವತಾರ ಮಾಡಿ ಸೇವೆಗಾಗಿ ಸಿದ್ಧರಾಗಬೇಕು ಅಂತ ದೇವತೆಗಳಿಗೆ ಭಗವಂತ ಆದೇಶ ಮಾಡಿದ್ದಾನೆ. ಇದೆಲ್ಲವನ್ನು ತಿಳಿದಂತಹ ಮಹಾನುಭಾವರು ದೇವರ್ಷಿಗಳಾದ ನಾರದರು ಮಹಾಜ್ಞಾನಿಗಳು ಆದ್ದರಿಂದಲೇ ನಾರದರು ಅಂತ **'ನಾರಂ ಜ್ಞಾನಂ ದದಾತಿ ಇತಿ ನಾರದಃ'** ಎಲ್ಲ ಸಾಧಕರಾದ ಜೀವರಿಗೆ ಬೇಕಾದ ಮೋಕ್ಷೋಪಯೋಗಿಯಾದ ಜ್ಞಾನವನ್ನು ನೀಡುವಂತಹ ಮಹಾನುಭಾವರು ಆದದ್ದರಿಂದ ಅವರಿಗೆ ನಾರದರು ಅಂತ ಕರೆಯುತ್ತಾರೆ. ಅಂತಹ ಮಹಾನುಭಾವರು ಬ್ರಹ್ಮ ಪುತ್ರರು ಅವರ ಕರ್ತವ್ಯ ಏನು ಅಂದರೆ ಭಗವಂತನ ಸೇವೆಯನ್ನು ನಾನಾ ರೀತಿಯಿಂದ ಮಾಡುವುದು, ಭಗವಂತನ ಮಹಿಮೆಯನ್ನು ಉಪದೇಶ ಮಾಡುತ್ತಾರೆ, ಭಗವಂತನಲ್ಲಿ ಭಕ್ತಿ ವಿಶೇಷವಾಗಿ ಬೆಳೆಯಬೇಕು ಅಂತ ಆ ಭಗವಂತನ ಮಹಿಮೆಯನ್ನು ಹೇಳುವುದಲ್ಲದೆ ಭಕ್ತಿ ಸೂತ್ರಗಳನ್ನೆ ರಚನೆ ಮಾಡಿಕೊಟ್ಟಿದ್ದಾರೆ ಮಹಾನುಭಾವರು.

ಈ ತರಹದ ಸೇವೆ ಒಂದಾದರೆ ಇನ್ನೊಂದು ತರಹದ ಸೇವೆ ಅವರು ಮಾಡುವುದು ದುರ್ಜನರಿಗೆ ದುರ್ಬುದ್ಧಿಯ ಪ್ರಚೋದನೆಯನ್ನೆ ಮಾಡುತ್ತಾರೆ ಆ ರೀತಿಯಾದ ದುರ್ಬುದ್ಧಿಯಿಂದ ಅವರು ದುಷ್ಕೃತ್ಯಗಳನ್ನು ಮಾಡಿ ಭಗವಂತನಿಂದ ಶಿಕ್ಷಿತರಾಗಿ, ಮೃತರಾಗಿ ಅವರು ನಶಿಸಿ ಹೋದರೆ ಸಜ್ಜನರಿಗೆಲ್ಲ ಕ್ಷೇಮವಾಗುತ್ತೆ ಅಂತ. ಸಜ್ಜನರಿಗೆ ಕ್ಷೇಮ ಆಗಬೇಕು, ಧರ್ಮದ ರಕ್ಷಣೆಯಾಗಬೇಕು ಅನ್ನುವುದಕ್ಕೋಸ್ಕರ ನೇರವಾಗಿ ಧರ್ಮದ ರಕ್ಷಣೆ ಮಾಡುವುದು ಒಂದು ಕ್ರಮ ಆದರೆ ದುರ್ಜನರು ತಮ್ಮ ದೌರ್ಜನ್ಯದ ಅಭಿವ್ಯಕ್ತಿ ಮಾಡುವುದಕ್ಕೊಂದು ಪ್ರಚೋದನೆಯನ್ನು ನೀಡಿ ಆ ಮೂಲಕವಾಗಿ ಭಗವಂತನ ಅವಕೃಪೆಗೆ ಪಾತ್ರರಾಗಿ ಅವರು ಭಗವಂತನಿಂದ ಅಥವಾ



ದೇವತೆಗಳಿಂದ ಮೃತರಾಗಿ ಸಜ್ಜನರಿಗೆಲ್ಲ ಕ್ಷೇಮ ಉಂಟಾಗಬೇಕು ಆ ತರಹದ ಕಾರ್ಯವನ್ನೂ ಮಾಡುತ್ತಾರೆ ಮಹಾನುಭಾವರಾದ ನಾರದರು. ಈಗ ನೋಡಿ ಆ ನಾರದರು ಆ ಮೇರು ಪರ್ವತದ ಮೇಲೆ ಬ್ರಹ್ಮಾದಿ ದೇವತೆಗಳು ಪರಮಾತ್ಮನಿಗೆ ಮಾಡಿದ ಪ್ರಾರ್ಥನೆ, ದೇವರು ಕೊಟ್ಟ ಆಶ್ವಾಸನೆ ಆ ಎಲ್ಲ ವಿಚಾರಗಳನ್ನು ಸಂಗತಿಗಳನ್ನು ತಿಳಿದು ಕಂಸನ ಹತ್ತಿರ ಬರುತ್ತಾರೆ. ಆ ಎಲ್ಲ ಸಭೆಯ ವರ್ಣನೆಯನ್ನು ಮಾಡುತ್ತಾರೆ ಅದ್ಭುತವಾದಂತಹ ಸಭೆ ನಾನು ಎಲ್ಲ ಕಡೆಗೆ ಹೋಗಿ ಬಂದೆ ದೇವಲೋಕಕ್ಕೆ ಎಲ್ಲಾ ನಂದನ ವನ, ಚೈತ್ರರಥ ವನ ಮೊದಲಾದ ವನಗಳಿಗೆಲ್ಲ ಸುತ್ತಾಡಿ ಬಂದೆ. ಗಂಗಾ ನದಿಯಲ್ಲಿ ಸ್ನಾನ ಮಾಡಿದೆ ಎಂತಹ ಗಂಗೆ ಅದು

ದಿವ್ಯಾ ತ್ರಿಧಾರಾ ದೃಷ್ಟಾ ಮೇ ಪುಣ್ಯಾ ತ್ರಿಪಥಗಾ ನದೀ ॥ (1.10 ವಿಷ್ಣುಪರ್ವ)

ಅದು ಸ್ವರ್ಗದಲ್ಲಿಯೂ ಇದೆ, ಭೂಮಿಯಲ್ಲಿಯೂ ಇದೆ, ಪಾತಾಲದಲ್ಲಿಯೂ ಇದೆ ಅಂತಹ ಶ್ರೇಷ್ಠವಾದ **'ತ್ರಿಪಥಗಾ ಸ್ವರ್ಗಂಗಾ'**

ಸ್ಮರಣಾದೇವ ಸರ್ವೇಷಾಮಂಹಸಾಂ ಯಾ ವಿಭೇದಿನೀ । (1.11 ವಿಷ್ಣುಪರ್ವ)

ಸ್ಮರಣ ಮಾತ್ರದಿಂದ ಪಾಪಗಳ ಪರಿಹಾರ ಮಾಡುವ ಗಂಗೆಯಲ್ಲಿ ಸ್ನಾನ ಮಾಡಿ ನಾನು ಇಲ್ಲಿ ಬರುತ್ತಾ ಇದ್ದೇನೆ ತಿಳಿದುಕೋ. ಮುಂದೆ ಶ್ರೀಕೃಷ್ಣ ಪರಮಾತ್ಮನ ಅವತಾರದ ಕಥೆಯನ್ನು ಹೇಳುವವರಿದ್ದಾರೆ ಆ ಹಿನ್ನೆಲೆಯಲ್ಲಿ ಗಂಗೆಯ ಸ್ಮರಣವನ್ನು ಮಾಡುತ್ತ ಇದ್ದಾರೆ. ಭಾಗವತದಲ್ಲಿ ಸ್ಪಷ್ಟವಾಗೇನೆ

ವಕ್ತಾರಂ ಪೃಚ್ಛಕಂ ಶ್ರೋತೃಂಸ್ತತ್ಪಾದಸಲಿಲಂ ಯಥಾ ॥ (10.1.1.16 ಭಾಗವತ)

ಅಂತ ಆ ಭಗವಂತನ ಕಥೆ ಪ್ರಶ್ನೆ ಕೇಳಿದವನಿಗೆ, ಉತ್ತರ ಹೇಳುವವನಿಗೆ, ಇವರಿಬ್ಬರ ಸಂವಾದವನ್ನು ಕೇಳುವವನಿಗೆ ಮೂರು ಜನರನ್ನು ಉದ್ಧಾರ ಮಾಡುತ್ತೆ ಕಥೆ ಹೇಗೆ ಅಂದರೆ ಗಂಗೆಯಂತೆ ಅಂತ, ಗಂಗಾ ದೇವಿ ಎಲ್ಲಿ ಅಂತ ಕೇಳಿದವನಿಗೆ, ಕಾಶಿ ಎಲ್ಲಿ ಅಂತ ಉತ್ತರ ಕೊಟ್ಟವನಿಗೆ, ಇವರಿಬ್ಬರ ಸಂವಾದವನ್ನು ಕೇಳಿದವನಿಗೆ ಎಲ್ಲರಿಗೂ ಗಂಗೆ ಹೇಗೆ ಪವಿತ್ರ ಮಾಡುತ್ತಾಳೋ ಆ ರೀತಿ ಭಗವಂತನ ಕಥೆಯೂ ಕೂಡ ಎಲ್ಲರನ್ನೂ ಪವಿತ್ರಗೊಳಿಸುತ್ತೆ ಎಂಬ ಮಾತನ್ನು ಶುಕಾಚಾರ್ಯರು ಪರೀಕ್ಷಿತ್ ರಾಜನಿಗೆ ಭಾಗವತದಲ್ಲಿ ತಿಳಿಸಿಕೊಟ್ಟಿದ್ದಾರೆ.

ಆ ಒಂದು ಸೂಚನೆ ನೀಡುವಂತೆ ಕೃಷ್ಣನ ಕಥೆ ಹೇಳುವ ಹಿನ್ನೆಲೆಯಲ್ಲಿ ಗಂಗೆಯಲ್ಲಿ ಸ್ನಾನ ಮಾಡಿ ಬಂದೆ ಅಂತ ಹೇಳುವ ಅಗತ್ಯ ಇರಲಿಲ್ಲ ನಾರದರಿಗೆ ಆದರೆ ಆ ಮಾತನ್ನು ಹೇಳುವ ಮೂಲಕ ಗಂಗೆಯಂತೆ ಎಲ್ಲ ಪಾಪಗಳ ಪರಿಹಾರವನ್ನು ಮಾಡುವಂತಹ ಪರಮ ಪವಿತ್ರವಾಗಿರುವ ಕಥೆ ಶ್ರೀಕೃಷ್ಣನ ಕಥೆ ಎಂಬ ಸೂಚನೆಯನ್ನು ಸಜ್ಜನರಿಗೆ ನೀಡುತ್ತಾ ಇದ್ದಾರೆ ಒಂದು. ಎರಡನೆಯದಾಗಿ ಶ್ರೀಮದ್ಭಾಗವತ ಇನ್ನೊಂದು ಸೂಚನೆಯನ್ನು ಕೊಟ್ಟಿದೆ ಏನಂತ ಹಿಂದೆ ಅದಿತಿ ಕಶ್ಯಪರಲ್ಲಿ ವಾಮನನಾಗಿ ಪೃಶ್ನಿಗರ್ಭನಾಗಿ ಅವನೇ ಈಗ ಕೃಷ್ಣನಾಗಿ ಮತ್ತೆ ವಸುದೇವ ದೇವಕಿಯರಲ್ಲಿ ಅವತಾರ ಮಾಡಿದ್ದಾನೆ. ಅದರ ಸೂಚನೆಯನ್ನು ಈ ಮೂಲಕವಾಗಿ ಕೊಟ್ಟಂತೆ ಕೃಷ್ಣನ ಕಥೆ ಹೇಳುವ ಮುನ್ನ ಗಂಗೆಯ ಅವತಾರವನ್ನು ಹೇಳಿದರೆ ಗಂಗಾ ಜನಕ ತ್ರಿವಿಕ್ರಮ ವಾಮನ ಹಾಗಾದರೆ ಹಿಂದೆ ವಾಮನನಾಗಿ ಅವತಾರ ಮಾಡಿದವನೇ ಅದಿತಿ ಕಶ್ಯಪರಲ್ಲಿ ಈಗ ಕೃಷ್ಣನಾಗಿ ಅವತಾರ ಮಾಡುತ್ತಾ ಇದ್ದಾನೆ ಅಂತನ್ನುವ ಸೂಚನೆಯನ್ನು ನಾರದರು ನೀಡುತ್ತಾ ಇದ್ದಾರೆ ಅಂತ ನಾವು ಭಾವಿಸಬಹುದು. ಆ ರೀತಿ ನಾರದರು ಆ ಮೇರು ಪರ್ವತದ ಮೇಲೆ ನಡೆದ ಸಭೆಯ ವರ್ಣನೆಯನ್ನು ಮಾಡುತ್ತಾರೆ ಅಲ್ಲಿ ಸ್ಪಷ್ಟವಾಗಿ ದೇವತೆಗಳಿಗೆ ಭಗವಂತ ಹೇಳಿದ್ದಾನೆ ನಾನೇ ಅವತಾರ

ಮಾಡುತ್ತೇನೆ, ನೀವೆಲ್ಲ ದೇವತೆಗಳು ಅಲ್ಲಿ ಅವತಾರ ಮಾಡಿ. ನಾನು ಅವತಾರವನ್ನು ಮಾಡಿ ದುಷ್ಟರಾದ ಎಲ್ಲ ದೈತ್ಯರ ಸಂಹಾರ ಮಾಡುತ್ತೇನೆ ಕಂಸನ ಸಂಹಾರವನ್ನೂ ಮಾಡುತ್ತೇನೆ ಜೊತೆಗೆ ಇನ್ನನೇಕ ದೈತ್ಯರ ಸಂಹಾರವನ್ನೂ ನಾನು ಮಾಡುತ್ತೇನೆ, ನೀವು ಕೂಡ ನಿಮ್ಮ ಯೋಗ್ಯತೆಗೆ ತಕ್ಕಂತೆ ಸೇವೆಯನ್ನು ಮಾಡಿ ದುಷ್ಟರ ಶಿಕ್ಷಣ, ಸಜ್ಜನರ ರಕ್ಷಣವನ್ನು ಮಾಡಿ ಅಂತ ದೇವರು ಆದೇಶ ಮಾಡಿದ್ದನ್ನು ಕವಿಯಾರೇ ಕೇಳಿದ್ದೇನೆ.

ಏಷಾ ಮೇ ತ್ವದ್ಗತಾ ಪ್ರೀತಿರ್ಯದರ್ಥಂ ಚಾಹಮಾಗತಃ ।

ಭುಜ್ಯನ್ತಾಂ ಸರ್ವಕಾಮಾರ್ಥಾಃ ಸ್ವಸ್ತಿ ತೇಽಸ್ತು ವ್ರಜಾಮ್ಯಹಮ್ ॥ (1.20 ವಿಷ್ಣುಪರ್ವ)

ಕಂಸ ನಿನ್ನ ಮೇಲೆ ಇರುವ ಪ್ರೀತಿ ಅಪಾರ ನನಗೆ, ಹೆಚ್ಚು ಹೊತ್ತು ನಿಲ್ಲಲೇ ಇಲ್ಲ ಅಲ್ಲಿ, ನಿನಗೆಲ್ಲ ದೇವರು ಕಲ್ಯಾಣ ಮಾಡಲಿ ನಿನಗೆ ಮೃತ್ಯು ಆಗುವ ಸೂಚನೆಯಂತೂ ಇದೆ ಪರಮಾತ್ಮ ಹೇಳಿದ್ದಾನೆ ಇದು ಪರಮ ರಹಸ್ಯ ಹೇಗಾದರೂ ಮಾಡಿ ಆ ಮೃತ್ಯುವಿನಿಂದ ನಿನ್ನನ್ನು ನೀನು ತಪ್ಪಿಸಿಕೊಳ್ಳುವ ಪ್ರಯತ್ನ ಮಾಡು. ಆ ಮೃತ್ಯು ನಿನ್ನ ತಂಗಿಯಾದ ದೇವಕಿ ಆ ದೇವಕಿಯ ಎಂಟನೆಯ ಗರ್ಭದಿಂದಲೇ ನಿನಗೆ ಮೃತ್ಯು ಎಂಬ ವಿಚಾರವನ್ನು ನಾರದರು ಮೊದಲೇ ತಿಳಿಸಿಬಿಟ್ಟಿದ್ದಾರೆ. ಶ್ರೀಮದ್ಭಾಗವತದಲ್ಲಿ ಹೇಳುವಂತೆ ಆಕಾಶವಾಣಿಯಿಂದ ಆ ಮಾತು ತಿಳಿದಿದೆ ಅಂತ ಮೊದಲೇ ಕಂಸನಿಗೆ ಆ ವಿಷಯವನ್ನು ನಾರದರು ತಿಳಿಸಿದ್ದಾರೆ ಅಂತನ್ನುವ ಮಾತನ್ನು ಹರಿವಂಶ ಹೇಳುತ್ತಾ ಇದೆ. ಆಗ ಕಂಸನ ಹೃದಯದಲ್ಲಿ ಭಾರೀ ಭಯ ಸೇರಿಕೊಂಡಿದೆ ಎದೆ ಡಬ ಡಬ ಅನ್ನುತ್ತಾ ಇದೆ ಆದರೆ ಕಂಸನಿಗೆ ಒಂದು ಅಹಂಕಾರ ನಾಲ್ಕು ಜನರ ಮಧ್ಯದಲ್ಲಿ ತಾನು ಭಯ ಪಟ್ಟಿದ್ದೇನೆ ಅಂತ ತೋರಿಸಿಕೊಂಡರೆ ತನಗೆ ಅವಮಾನ ಅನ್ನುವ ದೃಷ್ಟಿಯಲ್ಲಿ ಕಂಸ ಹೇಳುತ್ತಾನೆ ನನಗೆ ಯಾವುದರ ಭಯವೂ ಇಲ್ಲ

ನಾಹಂ ಭೀಷಯಿತುಂ ಶಕ್ಯೋ ದೇವೈರಪಿ ಸವಾಸವೈಃ । (1.23 ವಿಷ್ಣುಪರ್ವ)

ಯಾವ ದೇವಾಧಿದೇವತೆಗಳು ಬಂದರೂ ನನಗೇನು ಭಯ ಇಲ್ಲ ಯಾರಿಂದಲೂ ಮೃತ್ಯು ಆಗುವುದಕ್ಕೆ ಸಾಧ್ಯನೇ ಇಲ್ಲ ನಾನು ಒಂದು ಕಡೆಗೆ ಆಸನದಲ್ಲಿ ಕುಳಿತಿರಬಹುದು, ಮಲಗಿರಬಹುದು, ಮೈಮೇಲೆ ಎಚ್ಚರ ಇಲ್ಲದೆ ತಿರುಗಾಡುತ್ತಾ ಇರಬಹುದು.

ಆಸನಸ್ಥಃ ಶಯಾನೋ ವಾ ಪ್ರಮತ್ತೋ ಮತ್ತ ಏವ ಚ ॥ (1.23 ವಿಷ್ಣುಪರ್ವ)

ಇಷ್ಟಿದ್ದರೂ ಕೂಡ ನನ್ನನ್ನು ಸೋಲಿಸುವುದಕ್ಕೆ, ನನ್ನನ್ನು ಸಂಹಾರ ಮಾಡುವುದಕ್ಕೆ ಯಾರಿಗೂ ಸಾಧ್ಯ ಇಲ್ಲ, ಸಂಪೂರ್ಣವಾದಂತಹ ಭೂಮಿಯನ್ನೇ ಹೋಳು ಮಾಡಿ ಬಿಡಬಹುದು, ಸಾಗರವನ್ನೇ ಕ್ಷೋಭ ಮಾಡಬಹುದು ಅಂತಹ ಸಾಮರ್ಥ್ಯ ನನ್ನಲ್ಲಿದೆ ನನ್ನನ್ನು ಯಾರೂ ಕೂಡ ಸಂಹಾರ ಮಾಡುವುದಕ್ಕೆ ಸಾಧ್ಯ ಇಲ್ಲ ಅಂತ ಎಲ್ಲರ ಎದುರಿಗೆ ಜೋರಾಗಿ ಘೋಷಣೆ ಮಾಡಿದ್ದಾನೆ. ಘೋಷಣೆ ಮಾಡಿದವನೇ ಎರಡನೆಯ ಮಾತು ಹೇಳುತ್ತಾ ಇದ್ದಾನೆ ಎಲ್ಲ ತನ್ನ ಅನುಚರರಿಗೆ ಕೇಶಿ, ಪ್ರಲಂಬ, ಧೇನುಕ, ಪೂತನಾ, ಅರಿಷ್ಟಾಸುರ ನೀವೆಲ್ಲರೂ ಕೂಡ ಎಲ್ಲೆಲ್ಲಿ ಚಿಕ್ಕ ಮಕ್ಕಳು ಅಂತ ಕಾಣಿಸುತ್ತಾರೆ ಅವರನ್ನು ನೋಡಿ ಅವರನ್ನು ಸಂಹಾರ ಮಾಡಬೇಕು. ಗರ್ಭದೊಳಗೆ ಇದ್ದಾಗಲೆ ಸರಿ ಔಷಧಾದಿಗಳನ್ನು ಕೊಟ್ಟು ಸಂಹಾರ ಮಾಡಬಹುದು ಅಥವಾ ಗರ್ಭದಿಂದ ಹೊರಗೆ ಬಂದ ಮೇಲಾದರೂ ಸರಿ, ಒಂದು ತಿಂಗಳ ಒಳಗೆ ಯಾರು ಕಾಣುತ್ತಾರೋ ಅವರನ್ನು ನೀವು ಸಂಹಾರ ಮಾಡುತ್ತಾ ಹೋಗಬೇಕು ಎಂಬುದಾಗಿ ಈ ಕಡೆಗೆ ಆಜ್ಞೆಯನ್ನು ನೀಡಿ ನಾರದರಿಗೆ ಇಷ್ಟು ಚೆನ್ನಾಗಿ ಬೈದಿದ್ದಾನೆ. ನಾರದರು ಇಷ್ಟು ಪ್ರೀತಿಯಿಂದ ನಿನಗೆ ಹೇಳಿದ್ದೇನೆ ಅಂತ ಅವರು ಬಂದು ಹೇಳಿದರೆ ಇವನು ಅನ್ನುತ್ತಾನೆ

ಸ ತು ಕೇಲಿಕಿಲೋ ವಿಪ್ರೋ ಭೇದಶೀಲಶ್ಚ ನಾರದಃ । (1.30 ವಿಷ್ಣುಪರ್ವ)

ಯುದ್ಧದಲ್ಲಿ ಬಹಳ ಪ್ರೀತಿ ಅವರಿಗೆ ದೇವತೆಗಳಲ್ಲಿ ದಾನವರಲ್ಲಿ ಕಲಹ ಹುಟ್ಟಿಸುವುದಕ್ಕೆ ಬಂದಿದ್ದಾರೆ.

ಸುಶ್ಲಿಷ್ಟಾನಪಿ ಲೋಕೇಽಸ್ಮಿನ್ ಭೇದಯಂಲ್ಲಭತೇ ರತಿಮ್ ॥ (1.30 ವಿಷ್ಣುಪರ್ವ)

ಅತ್ಯಂತ ಪ್ರೀತಿಯಿಂದ ಇದ್ದವರಲ್ಲಿಯೂ ಜಗಳ ಹುಟ್ಟಿಸಿ ಆನಂದ ಪಡುವಂಥವರು. ದೇವಕಿ ವಸುದೇವ ನಾವು ಎಲ್ಲ ಪ್ರೀತಿಯಿಂದ ಇದ್ದಿವಿ, ದೇವಕಿಯ ಎಂಟನೆಯ ಗರ್ಭದಿಂದ ಮರಣ ಅಂತ ಹೇಳಿ ನಮ್ಮಿಬ್ಬರಲ್ಲಿ ಅಣ್ಣ-ತಂಗಿಯರಲ್ಲಿ ಜಗಳ ಹುಟ್ಟಿಸಿದ್ದಾರೆ. ಹೋಗಲಿ ಬಿಡಿ, ನಮ್ಮ ರಕ್ಷಣೆಯನ್ನಂತು ನಾವು ಮಾಡಿಕೊಳ್ಳೋಣ ಅಂತ ಎಲ್ಲರ ಎದುರಿಗೆ ಹೇಳಿದ.

ಏವಂ ಸವಿಲಪನ್ನೇವ ವಾಜ್ಞಾತ್ರೇಣೈವ ಕೇವಲಮ್ ।
ವಿವೇಶ ಕಂಸೋ ಭವನಂ ದಹ್ಯಮಾನೇನ ಚೇತಸಾ ॥ (1.32 ವಿಷ್ಣುಪರ್ವ)

ಕಂಸ ಕೇವಲ ನಾಲ್ಕು ಜನರ ಎದುರಿನಲ್ಲಿ ತನ್ನ ಠೀವಿಯನ್ನು ತೋರಿಸಿಕೊಂಡನಷ್ಟೆ ಮೃತ್ಯುವಿನ ಭಯ ಯಾರಿಗಿಲ್ಲ ಆದರೆ ಮನೆಯ ಒಳಗೆ ಬಂದಾಗ ಮಾತ್ರ ಬಹಳ ಸಂತಪ್ತನಾಗುತ್ತಾ ಇದ್ದಾನೆ. ಭಗವಂತ ನಾರದರ ಮೂಲಕ ನಾರದರಲ್ಲಿ ಅಂತರ್ಯಾಮಿಯಾಗಿ ಈ ರೀತಿ ಆ ಕಂಸನಲ್ಲಿ ಭೀತಿ ಭಯವನ್ನು ಹುಟ್ಟಿಸಿದ್ದಾನೆ. ಕಾಲನೇಮಿ ಹಿಂದೆ ಕೇಳಿದ್ದೀರಿ ಮೂಲರೂಪದಲ್ಲಿ ಅವನ ಆರ್ಭಟ ಏನು ಅಂತ ಸಾವಿರ ತಲೆ, ಎರಡು ಸಾವಿರ ಬಾಹುಗಳು, ಭಾರೀ ಉನ್ನತ್ತ, ಅತ್ಯಂತ ಉಗ್ರ ಎಲ್ಲ ಲೋಕಗಳನ್ನು ವ್ಯಾಪಿಸುವಂತಹ ಬಾಹುಗಳನ್ನ ಚಾಚಿ ಎಲ್ಲರನ್ನೂ ಕೂಡ ನುಂಗುವಂತಹ ವ್ಯಕ್ತಿ ಅಂತಹ ಉಗ್ರನಾದ, ಕ್ರೂರನಾದ ಕುಂಭಕರ್ಣನಂತೆ ಇರುವಂತಹ ಭಾರೀ ಉಗ್ರನಾದ ದೈತ್ಯ ಕಾಲನೇಮಿ. ಅಂತಹ ಕಾಲನೇಮಿಯೇ ಕಂಸನಾಗಿ ಅವತಾರ ಮಾಡಿದರು ಕೂಡ ಅಂಥವನಿಗೂ ಮೃತ್ಯುವಿನ ಭಯ ತಪ್ಪಿದ್ದಲ್ಲ ಕಾಮದ ಅಭಿಮಾನಿ. ಎಂತಹ ಕಾಮುಕನಾಗಿ ನಾನಾ ವಿಧವಾದ ಭೋಗಗಳನ್ನು ಮಾಡಬೇಕು ಅನ್ನುವ ಆಶಾ ಪಾಶಗಳಿಗೆ ಸಿಲುಕಿ ನಾನಾ ವಿಧವಾದಂತಹ ಆಸೆಗಳನ್ನು ಇಟ್ಟುಕೊಂಡು ಜೀವನದಲ್ಲಿ ಅಧರ್ಮ, ಅನ್ಯಾಯ, ಮೋಸಗಳನ್ನು ಮಾಡಿ ಮನುಷ್ಯ ತಾನು ಭಾರೀ ಸುಖವನ್ನು ಪಡೆಯಬೇಕು ಅಂತ ಅಪೇಕ್ಷೆ ಪಡುತ್ತಾನೆ ಆದರೆ ಅಂಥವನಿಗೂ ಮೃತ್ಯು ತಪ್ಪಿದ್ದಲ್ಲ, ಕಾಲನೇಮಿಗೇನೆ ಮೃತ್ಯು ತಪ್ಪಿಲ್ಲ ಅನ್ನುವುದನ್ನು ಹರಿವಂಶ ನಮಗೆ ತೋರಿಸಿಕೊಡುತ್ತಾ ಇದೆ. ಹೀಗೆಲ್ಲ ಆ ದೈತ್ಯರಿಗೆಲ್ಲ ಆದೇಶವನ್ನು ಮಾಡಿ ತಾನು ಹೇಳುತ್ತಾನೆ

ಏಷ ಮಾನುಷ್ಯಕೋ ಯತ್ನೋ ಮಾನುಷೈರೇವ ಸಾಧ್ಯತೇ ।
ಶ್ರೂಯತಾಂ ಯೇನ ದೈವಂ ಹಿ ಮದ್ವಿದ್ಭಿಃ ಪ್ರತಿಹನ್ಯತೇ ॥ (2.6 ವಿಷ್ಣುಪರ್ವ)

ಮನ್ತ್ರಗ್ರಾಮೈಃ ಸುವಿಹಿತೈರೌಷಧೈಶ್ಚ ಸುಯೋಜಿತೈಃ ।
ಯತ್ನೇನ ಚಾನುಕೂಲೇನ ದೈವಮಪ್ಯನುಲೋಮ್ಯತೇ ॥ (2.7 ವಿಷ್ಣುಪರ್ವ)

ಮನುಷ್ಯ ಮಾಡಬೇಕಾದ ಪ್ರಯತ್ನ ಎಲ್ಲವನ್ನೂ ನಾನು ಮಾಡುತ್ತಾ ಇದ್ದೇನೆ. ಒಬ್ಬ ಮನುಷ್ಯ ತಾನು ಸಾಯಬಾರದು ಅನ್ನಲಿಕ್ಕೆ ಏನು ಮಾಡಬಹುದೋ ಅದೆಲ್ಲವನ್ನೂ ಪ್ರಯತ್ನ ಮಾಡುತ್ತೇನೆ ಹೇಗೂ ನಾರದರು ಒಂದರ್ಥದಲ್ಲಿ ಉಪಕಾರ ಮಾಡಿದ್ದಾರೆ ಮೃತ್ಯು ಎಂಟನೆಯ ಗರ್ಭದಿಂದ ಅಂತ ತಿಳಿಸಿದ್ದಾರೆ ಅದು ಉಳಿಯದೇ

ಇದ್ದಂತೆ ನಾನು ಮಾಡಿಬಿಡುತ್ತೇನೆ. ಜೊತೆಗೆ ನಾನಾ ವಿಧವಾದ ಮಂತ್ರಗಳು, ಔಷಧಿಗಳು, ಬೇರೆ ಬೇರೆ ಉಪಾಯಗಳಿಂದಲೂ ಕೂಡ ದೈವವೂ ನನಗೆ ಅನುಕೂಲ ಆಗಬೇಕು, ದೈವವು ನನಗೆ ಪ್ರತಿಕೂಲ ಆಗಬಾರದು ಹಾಗೆ ಮಾಡುತ್ತೇನೆ ಅಂತ ತನ್ನ ಪೌರುಷವನ್ನು ಹೇಳಿಕೊಳ್ಳುತ್ತಾ ಇದ್ದಾನೆ. ಈ ರೀತಿ ಯಾವಾಗ ಕಂಸ ಆಲೋಚನೆ ಮಾಡಿದ ಆಚೆಗೆ ಸರ್ವಜ್ಞ ಶಿಖಾಮಣಿ ಆಗಿರತಕ್ಕಂತಹ ಸರ್ವತಂತ್ರ ಸ್ವತಂತ್ರನಾದ ಸತ್ಯಸಂಕಲ್ಪನಾದ ಭಗವಂತ ಈ ಕಡೆಗೆ ತನ್ನ ಸಂಕಲ್ಪವನ್ನು ಮಾಡುತ್ತಾ ಇದ್ದಾನೆ. ಸರಿ ಹಾಗಾದರೆ ಕಂಸ ಸಂಕಲ್ಪ ಮಾಡಿದ ಈಗ ಏನಾದರೂ ಮಾಡಿ ದೇವಕಿಯ ಎಲ್ಲ ಗರ್ಭಗಳ ನಾಶವನ್ನು ಮಾಡಬೇಕು ಅಂತ ಅದರಲ್ಲಿ ಎಂಟನೆಯ ಗರ್ಭ ನಾನೇ ಬರುತ್ತೇನೆ ಸಮಸ್ಯೆ ಇಲ್ಲ ಆದರೆ ಮೊದಲು ಆರು ಗರ್ಭ ಆರು ಜನ ಸಾಯಬೇಕಲ್ಲ. ಯಾರು ಅವರು ನೋಡಿ, ಬಹಳ ಚೆನ್ನಾಗಿ ಚಿಂತನವನ್ನು ಮಾಡಿ ಇದು ಒಟ್ಟಾರೆ ಜಗತ್ತಿನಲ್ಲಿ ನಡೆಯುವಂತಹ ಎಲ್ಲ ಪ್ರಶ್ನೆಗಳಿಗೂ ಉತ್ತರವನ್ನು ಹರಿವಂಶ ಕೊಡುತ್ತಾ ಇದೆ.

ಏನೋ ಅನಾಹುತ ಆಯಿತು ನೂರಾರು ಜನ ಸತ್ತು ಹೋದರು ಹೀಗೆಲ್ಲ ಒಬ್ಬ ಡ್ರೈವರ್ ತಪ್ಪು ಮಾಡಿದ್ದಕ್ಕೆ ಟ್ರೈನ್‌ನಲ್ಲಿ ಇರುವಂಥವರು ಎಲ್ಲರೂ ಸತ್ತು ಹೋಗಬೇಕಾಯಿತು ಪಾಪ ಅವರದೇನು ತಪ್ಪಿಲ್ಲ ನಿರಪರಾಧಿಗಳು ಅಂತ ನಾವು ಅಂದುಕೊಳ್ಳುತ್ತೇವೆ. ನಿಜ ಈಗ ಕಣ್ಣಿಗೆ ಕಾಣುವಂತೆ ಲೌಕಿಕವಾಗಿ ಮಾಡಿದ ತಪ್ಪು ಒಬ್ಬ ಚಾಲಕ ಆದರೆ ಜನ್ಮಾಂತರದಲ್ಲಿ ಮಾಡಿದಂತಹ ಏನು ಪಾಪ ಕರ್ಮಗಳಿವೆ ಅವುಗಳೆಲ್ಲ ಇದ್ದರೆ ಮಾತ್ರ ಆ ತರಹದ ಅಪಮೃತ್ಯು ಅಪಘಾತಕ್ಕೆ ಒಳಗಾಗುತ್ತಾರೆ. ಒಂದು ಟ್ರೈನ್ ಅಥವಾ ಒಂದು ಬಸ್ಸು ಎಷ್ಟು ಜನ ಇದ್ದಾರೆ ಅವತ್ತಿನ ದಿವಸ ಆ ಸಂದರ್ಭದಲ್ಲಿ ಮರಣ ಆಗುವುದಕ್ಕೆ ಬೇಕಾದ ಪಾಪಗಳನ್ನು ಮಾಡಿದವರನ್ನೇ ಸರಿಯಾಗಿ ದೇವರು ಅಲ್ಲಿ ಸೇರಿಸಿ ಕೂಡಿಸಿರುತ್ತಾನೆ. ಅದರೊಳಗೆ ಯಾರಾದರೂ ಒಬ್ಬರು ಬದುಕಲೂಬಹುದು ಕಾರಣ ಇಂತಹ ಅಪಘಾತದ ಸಮಯದಲ್ಲಿಯೂ ಸಾಯದೇ ಇರುವಂತಹ ಒಂದು ಪುಣ್ಯವನ್ನು ಮಾಡಿರುತ್ತಾರೆ ಅವರು ಅಂಥವನನ್ನು ಒಬ್ಬನನ್ನು ಕೂಡಿಸಿರುತ್ತಾನೆ ಅಲ್ಲಿ. ಇಷ್ಟೆಲ್ಲ ಘೋರ ಪ್ರಸಂಗ ಇದ್ದರೂ ಸಾಯಬಾರದಂತಹ ಒಂದು ವಿಶಿಷ್ಟ ದೈವಾನುಗ್ರಹ ಪಡೆದವನು ಇರುತ್ತಾನೆ ಅವನೂ ಅಲ್ಲಿ ಸೇರಿರುತ್ತಾನೆ ಅದನ್ನು ತೋರಿಸುತ್ತಾನೆ ದೇವರು. ಪುಣ್ಯದ ಮಹಿಮೆ, ಪಾಪದ ಪ್ರತಿಫಲ ಎರಡನ್ನು ದೇವರು ತೋರಿಸುತ್ತಾನೆ ಹೊರತು ಏನೂ ತಪ್ಪಿಲ್ಲದೆ ದುಃಖಕ್ಕೆ ಒಳಗಾದರು ಮೃತರಾದರು ಅಥವಾ ಇನ್ನೇನೋ ಅನಾಹುತಕ್ಕೆ ಗುರಿಯಾದರು ಅನ್ನುವ ಪ್ರಸಂಗವೇ ಇಲ್ಲ ಅದನ್ನು ಹರಿವಂಶ ಇಲ್ಲಿ ತಿಳಿಸಿಕೊಡುತ್ತಾ ಇದೆ.

ಪರಮಾತ್ಮ ಚಿಂತನ ಮಾಡಿದ ಅರ್ಥಾತ್ ಲೋಕದೃಷ್ಟಿಯಿಂದ ಅವನು ಸರ್ವಜ್ಞ ಆ ಭಗವಂತ ಸಂಕಲ್ಪ ಮಾಡಿದ ಸರಿ ಈ ಆರು ಜನ ಯಾರು ಆಗಬೇಕು ಅಂತ. ಹಿಂದೆ ಮರೀಚಿ ಋಷಿಗಳ ಆರು ಜನ ಮಕ್ಕಳು **'ಮರೀಚಿಜಾಃ ಷಣ್ಮನಯೋ ಬಭೂವು'**[1] ಆ ಆರು ಜನ ಮಕ್ಕಳು ನೋಡಿ ಮರೀಚಿ ಋಷಿಗಳ ಮಕ್ಕಳು ಅಂದರೆ ಯಾರು ಪರಮಾತ್ಮನ ಮರಿ ಮಕ್ಕಳೇ, ದೇವರ ಮಗ ಬ್ರಹ್ಮ, ಬ್ರಹ್ಮ ದೇವರ ಮಗ ಮರೀಚಿ, ಮರೀಚಿ ಋಷಿಗಳ ಮಕ್ಕಳು ಆರು ಜನ ಮಕ್ಕಳು. ದೇವಲ ಋಷಿಗಳು ಕೃಷರಾಗಿದ್ದಾರೆ ತಪಸ್ಸು ಮಾಡಿ ಕೃಷರಾದ ಮಹಾನುಭಾವರಾದ ದೇವಲ ಋಷಿಗಳನ್ನು ನೋಡಿ ಆ ತಪಸ್ಸಿನಿಂದ ಕೃಷರಾದದ್ದನ್ನು ನೋಡಿ ಒಬ್ಬ ಋಷಿ ಪುತ್ರರಾಗಿ ಇವರು ಋಷಿಗಳ ಮಹಿಮೆಯನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ಸಾಷ್ಟಾಂಗ ಪ್ರಣಾಮ ಮಾಡಬೇಕಾಗಿತ್ತು, ಅವರ ಅನುಗ್ರಹ ಪಡೆಯಬೇಕಾಗಿತ್ತು ಅದು ಬಿಟ್ಟು ಅವರನ್ನು ನೋಡಿ ಎಷ್ಟು ಕೃಷರಾಗಿದ್ದಾರೆ ಇವರು ಅಂತ ಅಪಹಾಸ ಮಾಡಿದ್ದಾರೆ, ಕಾಮ ಜ್ವರದಿಂದ ಕೃಷರಾಗಿದ್ದಾರೆ ಅಂತನ್ನುವ ರೀತಿಯಲ್ಲಿಯೂ ಅಪಹಾಸ ಮಾಡಿದ್ದಾರೆ. ಜ್ಞಾನಿಗಳಿಗೆ ಅಪಹಾಸವನ್ನು

1. 12.12 ಮಭಾತಾನಿರ್ಣಯ

ಮಾಡಬಾರದು ಆ ಅಪಹಾಸ ಮಾಡಿದ್ದರ ಪ್ರತಿಫಲ ಏನಾಯಿತು ನೋಡಿ, ಜ್ಞಾನಿಗಳನ್ನು ತಪಸ್ವಿಗಳನ್ನು ಅಪಹಾಸ ಮಾಡುವವರು ಅಂದರೆ ಯಾರು ಅಸುರರು ಹಾಗಾದರೆ ಅಸುರರಾಗಿ ಹುಟ್ಟಿ ಅಂತ ದೇವಲ ಋಷಿಗಳು ಶಾಪ ಕೊಟ್ಟಿದ್ದಾರೆ. ಅಸುರರಾಗಿ ಹುಟ್ಟಿ ಅಂತ ಶಾಪ ಕೊಡುವುದು ಮಾತ್ರ ಅಲ್ಲ ಯಾಕೆ ನಕ್ಕರು ಕಾಮ ಜ್ವರದಿಂದ ಕೃಷರಾಗಿದ್ದಾರೆ ಇವರು ಅಂತ ಒಂದು ಅಪವಾದ ಹಾಕಿ ನಕ್ಕಿದ್ದಾರೆ ಹಾಗಾದರೆ ಆ ಕಾಮ ಇಲ್ಲದ ನನಗೆ ಕಾಮ ಜ್ವರ ಇದೆ ಅಂತ ಅಪವಾದ ಹಾಕಿದಿರಲ್ಲ ಆ ದುಷ್ಟ ಕಾಮದ ಅಭಿಮಾನಿಯಾದ ದೈತ್ಯನಾದ ಕಾಲನೇಮಿಯ ಮಕ್ಕಳಾಗಿಯೇ ನೀವು ಹುಟ್ಟಿರಿ ಅಂತ ಶಾಪ ಕೊಟ್ಟಿದ್ದಾರೆ. ಜ್ಞಾನಿಗಳ ದ್ರೋಹ ಎಂದೆಂದಿಗೂ ಮಾಡಬಾರದು. ಸಣ್ಣ ಅಪರಾಧವಾದರೂ ಎಷ್ಟು ದೊಡ್ಡ ಶಿಕ್ಷೆ ಆಗುತ್ತದೆ **'ಹೇಗಿದ್ದು ಹೇಗಾದೆಯೋ ಆತ್ಮ'** ಅಂತ. ಎಂತಹ ಅದ್ಭುತವಾದ ಯೋಗ್ಯತೆ ಮರೀಚಿ ಋಷಿಗಳ ಮಕ್ಕಳಾಗಿ ಹುಟ್ಟಿದವರು ಅಂತಹ ಮಹಾನುಭಾವರು ಅಂದರೆ ಒಂದರ್ಥದಲ್ಲಿ ಕಶ್ಯಪರ ದಾಯಾದಿಗಳಾಗಿ ಹುಟ್ಟಿದಂಥವರು, ಅಂಥವರು ಕಾಲನೇಮಿಯಂತಹ ಮಹಾದುಷ್ಟನ ಮಕ್ಕಳಾಗಿ ಹುಟ್ಟಬೇಕಾಯಿತು. ಸರಿ, ಹುಟ್ಟಿದರು ಹುಟ್ಟಿದ ಮೇಲೆ ಸುಮ್ಮನಿದ್ದರಾ ಆ ಅಸುರ ಯೋನಿಯಲ್ಲಿ ಹುಟ್ಟಿದ್ದ ಕಾರಣ ಅದೇ ಸ್ವಭಾವ ನಾವು ಸಾಯಲೇಬಾರದು ಅನ್ನುವ ಕೆಟ್ಟ ವಿಚಾರ.

ಜಾತಸ್ಯ ಹಿ ಧ್ರುವೋ ಮೃತ್ಯು ಧ್ರುವಂ ಜನ್ಮ ಮೃತಸ್ಯ ಚ ॥ (2.27 ಭ ಗೀತಾ)

ಈ ತತ್ವದ ಬಗ್ಗೆ ನಂಬಿಕೆ ಇಲ್ಲ ಅಸುರರು ಅನ್ನುವುದಕ್ಕಾಗಿ ನಾವು ಸಾಯಲೇಬಾರದು ಅಂತ ಹೇಳಿ ಬ್ರಹ್ಮ ದೇವರನ್ನು ಕುರಿತು ತಪಸ್ಸು ಮಾಡಿದ್ದಾರೆ ಬ್ರಹ್ಮ ದೇವರು ಪ್ರತ್ಯಕ್ಷವಾಗಿ ತಥಾಸ್ತು ಅಂತ ವರ ಕೊಟ್ಟರು ಓ ಸಂತೋಷ ಆಯಿತು ನಾವು ಸಾಯೋದೆ ಇಲ್ಲ, ಇನ್ನ ಅವಧ್ಯರಾಗಿದ್ದೇವೆ ಅಂತ. ಆದರೆ ಆ ಹಿರಣ್ಯಕಶಿಪು ಆ ಕಾಲನೇಮಿಯ ತಾತ ಅಂತಹ ಆ ಹಿರಣ್ಯಕಶಿಪು ಅವನಂದ ನಾನಿರುವ ಕಾಲದಲ್ಲಿ ಬ್ರಹ್ಮ ದೇವರಿಂದ ನಾನು ತಪಸ್ಸು ಮಾಡಿ ವರ ಪಡೆದಿದ್ದೇನೆ, ವರ ಪಡೆದ ಮೇಲೆ ಇನ್ನು ಮೇಲೆ ಯಾರೇ ತಪಸ್ಸು ಮಾಡಿ ವರ ಪಡೆಯಬೇಕಾದರೆ ನನ್ನಿಂದ ಪಡೆಯಬೇಕು ನೀವು ಹೋಗಿ ಮತ್ತೆ ಡೈರೆಕ್ಟ್ ಬ್ರಹ್ಮ ದೇವರಿಂದ ಯಾಕೆ ವರ ಪಡೆದು ಬಂದಿರಿ. ನೋಡಿ ಎಂತಹ ದುರ್ಬುದ್ಧಿ ಇವನಿಗೆ ಆ ಜಯ ಹಿರಣ್ಯಕಶಿಪುವಿನೊಳಗೆ ಇದ್ದವನು ಅವನು ಸಜ್ಜನ ಆದರೆ ಅವನ ಒಳಗಿರುವ ಅಸುರ ಎಷ್ಟು ದುಷ್ಟ ಸ್ವಭಾವ. ಯಾವ ಬ್ರಹ್ಮ ದೇವರ ಅನುಗ್ರಹದಿಂದ ತಾನು ವರ ಪಡೆದು ಇಂತಹ ಉನ್ನತಿಯನ್ನು ಪಡೆದಿದ್ದಾನೆ ಅಂತಹ ಬ್ರಹ್ಮ ದೇವರಿಗೆ ಇನ್ನೊಬ್ಬರು ಗೌರವ ಕೊಟ್ಟರೆ ಅವನಿಗೆ ಸಹನೆ ಇಲ್ಲ ಆಯಿತು ಇನ್ನು ಅವರ ಕೆಲಸ ಮುಗಿಯಿತು ಅಂತ ನದಿ ದಾಟಿದ ಮೇಲೆ ಅಂಬಿಗನದು ಏನು ಕೆಲಸ ಅಂತ. ನಾನು ತಪಸ್ಸು ಮಾಡಿ ವರ ಪಡೆದಾಯಿತಲ್ಲ ಇನ್ನು ಬ್ರಹ್ಮ ದೇವರನ್ನು ಮರೆತು ಬಿಡಬಹುದು ಅಂತ ಇದೆ ಅಂದರೆ ಉಪಕಾರ ಮಾಡಿಸಿಕೊಂಡು ದೇವರನ್ನು, ದೇವತೆಗಳನ್ನು, ಗುರುಗಳನ್ನು ಮರೆಯುವುದು ಉಂಟಲ್ಲ ಇದು ಅಸುರ ಸ್ವಭಾವ ಅನ್ನುವುದನ್ನು ನಾವು ತಿಳಿಯಬೇಕು ಹಿರಣ್ಯಕಶಿಪುವಿನ ದೃಷ್ಟಾಂತದಿಂದ. ಅವನು ಶಾಪ ಕೊಟ್ಟಿದ್ದಾನೆ ನನಗೆ ತಿರಸ್ಕಾರ ಮಾಡಿದ್ದೀರಾ ಆದ್ದರಿಂದ ಸಾಯಲೇಬಾರದು ಅಂತ ಅಂದುಕೊಂಡಿದ್ದೀರಲ್ಲ ನಿಮ್ಮಪ್ಪನೇ ನಿಮ್ಮನ್ನು ಕೊಲ್ಲಲಿ ಅಂತ ಶಾಪ ಕೊಟ್ಟಿದ್ದಾನೆ. ಮತ್ತೆ ಅವರು ಏನು ಬೇರೆ ಅಲ್ಲ ತನ್ನ ಸಂತತಿಯವರೇ ಹಿರಣ್ಯಕಶಿಪುವಿನ ಸಂತತಿಯಲ್ಲಿ ಬಂದವರೇ ಆದರೂ ಕೂಡ ನಿಮ್ಮಪ್ಪನೇ ನಿಮ್ಮನ್ನು ಕೊಲ್ಲಲಿ ಕಾಲನೇಮಿಯಿಂದಲೇ ನೀವು ಮೃತರಾಗಿ ಅಂತ. ಕಾಲನೇಮಿ ಮುಂದೆ ಕಂಸನಾಗಿ ಹುಟ್ಟುತ್ತಾನೆ ನೀವು ದೇವಕಿಯ ಮಕ್ಕಳಾಗಿ ಹುಟ್ಟಿ ನಿಮ್ಮಪ್ಪನಿಂದಲೇ ನೀವು ಸಾಯಬೇಕು ಅನ್ನುವ ರೀತಿಯಲ್ಲಿ ಹಿರಣ್ಯಕಶಿಪು ಕಾಲನೇಮಿಯ ಮಕ್ಕಳಿಗೆ ಶಾಪ ಕೊಟ್ಟಿದ್ದಾನೆ. ಪರಮಾತ್ಮ ಸ್ವತಂತ್ರ ಅಚಿಂತ್ಯಾದ್ಭುತ ಶಕ್ತಿ ಸಂಪನ್ನನಾಗಿ ಇರುವಂತಹ ಭಗವಂತ ಪರಮಾತ್ಮ ಏನು ಮಾಡಿದ ದುರ್ಗಾ ದೇವಿಗೆ ಆಜ್ಞೆಯನ್ನು ಮಾಡಿದ್ದಾನೆ ಪರಮಾತ್ಮನ ಮಡದಿ ದುರ್ಗೆ ತಮೋಗುಣಕ್ಕೆ ಅಭಿಮಾನಿನಿ.

ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ । (7.14 ಭ ಗೀತಾ)

ದೇವ ಪರಮಾತ್ಮ ಅವಳು ದೈವೀ. ಆ ಪರಮಾತ್ಮನಿಗೆ ಅತ್ಯಂತ ಪ್ರಿಯಳಾದಂತಹ ತಮೋಗುಣ ಅಭಿಮಾನಿನಿಯಾದ ಜೀವರಾಶಿಗಳಿಗೆ ಸಂಸಾರದ ಬಂಧನವನ್ನ ಕೊಡುವ, ದೇವರ ಉಪಾಸನೆಯನ್ನು ಮಾಡಿದರೆ ಬಂಧನವನ್ನ ಕಳಚುವ ಮಹಾನುಭಾವಳು ದುರ್ಗಾ ದೇವಿ. ಪರಮಾತ್ಮ ಆಜ್ಞೆಯನ್ನು ಮಾಡಿ ಕರೆದ, ಕೈ ಜೋಡಿಸಿ ನಿಂತಿದ್ದಾಳೆ. ನೀನು ಈ ಕಾರ್ಯವನ್ನು ಮಾಡಬೇಕು, ಬ್ರಹ್ಮ ದೇವರು ಮಹಾನುಭಾವರು ಜಗದ್ಗುರುಗಳು ನಾನೇ ಅವರಿಗೆ ಜಗದ್ಗುರುತ್ವವನ್ನು ಕೊಟ್ಟಿದ್ದೇನೆ ಅವರ ಮಾತನ್ನೂ ಸತ್ಯ ಮಾಡಬೇಕು. ಈಚೆಗೆ ಹಿರಣ್ಯಕಶಿಪು ಬ್ರಹ್ಮ ದೇವರಿಂದ ವರ ಪಡೆದು ಒಂದು ಸಾಮರ್ಥ್ಯವನ್ನು ಪಡೆದುಕೊಂಡಿದ್ದಾನೆ ತಪಸ್ಸಿನಿಂದ ಆ ತಪಸ್ಸಿನಿಂದ ಬ್ರಹ್ಮ ದೇವರನ್ನು ಒಲಿಸಿಕೊಂಡು ವರ ಪಡೆದುಕೊಂಡ ಮೇಲೆ ಅವನ ಮಾತಿಗೂ ಒಂದು ಬೆಲೆ ಕೊಡಬೇಕು ಇಲ್ಲ ಅಂದರೆ ಮತ್ತೆ ತಪಸ್ಸಿಗೆ ಬೆಲೆ ಇಲ್ಲ ಅಂತ ಆಗುತ್ತೆ ಒಳಗೆ ಜಯ ಇದ್ದಾನೆ ಅವನ ತಪಸ್ಸಿದೆ ಆ ತಪಸ್ಸಿಗೂ ಒಂದು ಬೆಲೆ ಕೊಡಬೇಕು. ಏನು ಮಾಡಬೇಕು ಹಾಗಾದರೆ ಎರಡೂ ಮಾಡಬೇಕು ಬ್ರಹ್ಮ ದೇವರು ಹೇಳಿದ್ದಾರೆ ಕಾಲನೇಮಿಯಿಂದ ಹುಟ್ಟಿದ ಈ ಆರು ಜನ ಏನಿದ್ದಾರೆ ಆ ಆರು ಜನ ಅವರ ಹೆಸರು ಹಂಸ, ಸುವಿಕ್ರತು, ಕ್ರಾಥ, ದಮನ, ರಿಪುಮರ್ದನ, ಕ್ರೋದಹಂತ ಅಂತ ಕಾಲನೇಮಿಯ ಆರು ಜನ ಮಕ್ಕಳು ಆ ಆರು ಜನ ಮಕ್ಕಳಿಗೆ ಮರಣ ಆಗಬಾರದು, ಹಿರಣ್ಯಕಶಿಪು ಹೇಳಿದ್ದಾನೆ ಇವರ ಅಪ್ಪನಿಂದಲೇ ಸಾಯಬೇಕು ಅಂತ ಅದೂ ಆಗಬೇಕು, ಎರಡನ್ನೂ ಹೊಂದಿಸಬೇಕು. ಹೇಗೆ ಅಂದರೆ ಅದಕ್ಕೆ ಇವರನ್ನ ಪಾತಾಲದಲ್ಲಿ ಒಂದು ಗುಹೆಯಲ್ಲಿ ಮಲಗಿಸಿ ಬಿಡು, ಮಲಗಿಸಿ ಒಂದಂಶದಿಂದ ಅವರನ್ನು ಕರೆದುಕೊಂಡು ಬರಬೇಕು ದೇವಕಿಯ ಗರ್ಭದಲ್ಲಿ ಪ್ರವೇಶ ಮಾಡಿಸಬೇಕು. ನೋಡಿ, ಅಂದರೆ ಕಾಲನೇಮಿಯ ಮಕ್ಕಳಾಗಿ ಈ ಹಂಸಾದಿಗಳು ಆರು ಜನ ಹುಟ್ಟಿದ್ದಾರಲ್ಲ ಅವರನ್ನು ಸಾಯಿಸುವುದಿಲ್ಲ ಅವರ ಶರೀರ ಹಾಗೆ ಇರುತ್ತೆ ಅದನ್ನು ಮಲಗಿಸುವುದಷ್ಟೇ ಒಂದು ಗುಹೆಯಲ್ಲಿ. ಒಂದಂಶದಿಂದ ಆ ಜೀವವನ್ನು ತೆಗೆದುಕೊಂಡು ಬಂದು ದೇವಕಿಯ ಗರ್ಭದಲ್ಲಿ ಹಾಕುವುದು ಹುಟ್ಟಿದ ತಕ್ಷಣ ಕಂಸ ಅದನ್ನು ಕೊಲ್ಲುತ್ತಾನೆ ಮತ್ತೆ ಆ ಜೀವವನ್ನು ತೆಗೆದುಕೊಂಡು ಆ ದೇಹದೊಳಗೆ ಸೇರಿಸಿ ಬಿಡುವುದು. ಅಂದರೆ ಆ ದೇಹವೂ ಕಾಲನೇಮಿಯಿಂದ ಹುಟ್ಟಿದ ದೇಹ ಹಾಗೆ ಇದೆ ಸತ್ತಿಲ್ಲ ಈ ಕಡೆಗೆ ಕಾಲನೇಮಿಯೇ ಕಂಸನಾಗಿ ಹುಟ್ಟಿದ್ದಾನೆ ತಂದೆ ಕಂಸನೇ ಅದನ್ನು ಕೊಂದಂತೆ ಆಯಿತು ಎರಡೂ ಆಯಿತು, ಹಿರಣ್ಯಕಶಿಪುವಿನ ಮಾತು ಸತ್ಯವಾಯಿತು ಹೀಗೆ ಕ್ರಮವಾಗಿ ಆರೂ ಜನರನ್ನು ಹುಟ್ಟಿಸುವುದು ಮತ್ತೆ ಆ ದೇಹದೊಳಗೆ ಸೇರಿಸುವುದು.

ಒಂದಂಶದಿಂದ ತನ್ನ ಅಚಿಂತ್ಯಾದ್ಭುತ ಶಕ್ತಿಯಿಂದ ದುರ್ಗಾ ದೇವಿ ಪರಮಾತ್ಮನ ಆಜ್ಞೆಯಂತೆ ತಂದು ಮತ್ತೆ ಜೋಡಿಸಿದ್ದಾಳೆ ಅಂತ ಹೇಳಬಹುದು ಆದರೆ ಅಲ್ಲಿ ಮಲಗಿದವರು ಇನ್ನೂ ಯಾಕೆ ಎದ್ದಿಲ್ಲ ಅಂತ ಸಂಶಯ ಬರಬಹುದಲ್ಲ ಸುತ್ತಲಿದ್ದವರಿಗೆ ಈ ಎಲ್ಲ ವ್ಯವಸ್ಥೆ ಗೊತ್ತಿರಲಿಲ್ಲವೆ ಅಂತ. ದೈತ್ಯರು ನೂರಾರು ವರ್ಷಗಳು ಮಲಗುವುದು ಅವರಿಗೆ ಬಹಳ ಸಹಜ ಅಂತಹದ್ದು ಕೆಲವು ವರ್ಷಗಳವರೆಗೆ ಅವರು ಮಲಗಿದ್ದರು ಅನ್ನುವುದು ಯಾರಿಗೂ ಏನು ಆಶ್ಚರ್ಯ ಅಲ್ಲ ಅಂತ. ಮುಚಕುಂದನ ಕಥೆ ಕೇಳುತ್ತಿರಲ್ಲ ಹಾಗೆ ಎಷ್ಟೋ ಯುಗ ಯುಗಗಳವರೆಗೆ ಮಲಗಿಬಿಟ್ಟಿದ್ದ ಅಂತ ಹಾಗೆ ಅಸುರರದು ತಮೋಗುಣ ಅವರದು ವಿಶೇಷವಾಗಿರುವಂತಹ ಗುಣ ತಮೋಗುಣ ತಾಮಸರೇ ಅವರು. ತಮೋಗುಣದ ಕಾರ್ಯ ನಿದ್ರೆ ಹೀಗಾಗಿ ಹೆಚ್ಚು ಹೊತ್ತು ನಿದ್ರೆ ಮಾಡುವುದು ಸಹಜವಾದದ್ದರಿಂದ ಯಾರು ಚಿಂತೆ ಮಾಡಿಕೊಳ್ಳುತ್ತಾ ಇರುವಂತಹ ಪ್ರಸಂಗ ಇರಲಿಲ್ಲ ಅಂತ ತಾಮ್ರಪರ್ಣಿ ಆಚಾರ್ಯರು ತಾತ್ಪರ್ಯ ನಿರ್ಣಯದ ವ್ಯಾಖ್ಯಾನದಲ್ಲಿ ತಿಳಿಸುತ್ತಾರೆ. ಆ ರೀತಿ ಪರಮಾತ್ಮನ ಆಜ್ಞೆಯಂತೆ ದುರ್ಗಾ ದೇವಿ ಮಾಡುವುದಕ್ಕೆ ಸಿದ್ಧಳಾಗಿದ್ದಾಳೆ ದುರ್ಗಾ ದೇವಿ ನಿತ್ಯ ಮುಕ್ತಳು, ಶಶ್ವದೇಕಪ್ರಕಾರದವಳು ಸದಾ ಭಗವಂತನ

ಅನುಗ್ರಹಕ್ಕೆ ಪಾತ್ರಳೇ ಆದರೆ ಪರಮಾತ್ಮ ಲೋಕದೃಷ್ಟಿಯಿಂದ ದುರ್ಗಾ ದೇವಿಗೆ ಹೇಳುತ್ತಾನೆ ಇದು ದೊಡ್ಡ ಕೆಲಸ ಈ ಕೆಲಸವನ್ನು ಮಾಡಿದರೆ ನಿನ್ನ ಮೇಲೆ ವಿಶೇಷ ಅನುಗ್ರಹ ಮಾಡುತ್ತೇನೆ.

ಪ್ರಸಾದಂ ತೇ ಕರಿಷ್ಯಾಮಿ ಮತ್ಪ್ರಭಾವಸಮಂ ಭುವಿ ।
ಯೇನ ಸರ್ವಸ್ಯ ಲೋಕಸ್ಯ ದೇವಿ ದೇವೀ ಭವಿಷ್ಯಸಿ ॥ (2.30 ವಿಷ್ಣುಪರ್ವ)

ಎಲ್ಲ ಲೋಕದಿಂದಲೂ ಪೂಜ್ಯಳಾದ ದೇವಿ ಅಂತ ನೀನು ಕೀರ್ತಿಯನ್ನು ಪಡೀತಿಯಾ ಅಂತಹ ದೇವಿಯನ್ನು ನಿನ್ನ ಮಾಡುತ್ತೇನೆ ಅವಳು ಇದ್ದೇ ಇದ್ದಾಳೆ ನೋಡಿ ಸ್ವಾರಸ್ಯ ಪರಮಾತ್ಮ ಅದನ್ನು ಸೂಚನೆ ಮಾಡುತ್ತಾನೆ **'ದೇವಿ ದೇವೀ ಭವಿಷ್ಯಸಿ'** ಸಂಭೋದನೆ ಮಾಡುವುದೇ ದೇವಿ ಅನ್ನುತ್ತಾನೆ ನೀನು ದೇವಿ ಆಗುತ್ತೀಯಾ ಅಂತ. ಇದರ ಅರ್ಥ ನೀನು ಅನಾದಿಕಾಲದಿಂದ ದೇವಿ ಆಗಿದ್ದೀಯಾ ವಿಶೇಷವಾಗಿ ಈ ಯುಗದಲ್ಲಿ ಹುಟ್ಟಿದಂತಹ ಜನರಿಗೆ ನಿನ್ನ ಮಹಿಮೆಯನ್ನು ತೋರಿಸಿ ಅವರು ಪುಣ್ಯವಂತರಾಗುವಂತೆ ನೀನು ಮಾಡುತ್ತೀಯ ಅಂತ ಅನ್ನುವುದು ಮಾತ್ರ ಶ್ರೀಕೃಷ್ಣ ಪರಮಾತ್ಮನ ಅಭಿಪ್ರಾಯ. ಸರಿ ಇದು ಆರು ಜನರ ಕಥೆ ಆಯಿತು.

ಇನ್ನು ಏಳನೆಯದವನು ಬಲರಾಮ. ಆ ಬಲರಾಮನ ವಿಷಯದಲ್ಲಿ ಏಳನೆಯ ಗರ್ಭ ದೇವಕಿ ದೇವಿಯಲ್ಲಿ ಇರುತ್ತೆ. ಮೂರು ತಿಂಗಳುವರೆಗೆ ಆ ದೇವಕಿ ಗರ್ಭದಲ್ಲಿ, ಆ ಶೇಷ ಇರುವುದಕ್ಕೆ ನೀನು ಸುಮ್ಮನೆ ಅವಕಾಶವನ್ನು ಕೊಡು. ಮೂರು ತಿಂಗಳಾದ ಮೇಲೆ ದೇವಕಿಯ ಗರ್ಭದಿಂದ ಅದನ್ನು ರೋಹಿಣಿ ದೇವಿಯ ಗರ್ಭದಲ್ಲಿ ಹಾಕಬೇಕು ಇದೆಲ್ಲ ದೇವತೆಗಳಿಗೆ ಸಾಧ್ಯ ಸಾಕ್ಷಾತ್ ಮಹಾನುಭಾವಳಾದಂತಹ ದುರ್ಗಾ ದೇವಿ ಅಚಿಂತ್ಯಾದ್ಭುತ ಶಕ್ತಿ ಸಂಪನ್ನಳು. ಮೂರು ತಿಂಗಳು ಗರ್ಭ ದೇವಕಿ ಗರ್ಭದಲ್ಲಿ ಬೆಳೆದಿದೆ. ಅದೇ ಗರ್ಭವನ್ನು ರೋಹಿಣಿ ದೇವಿಯ ಗರ್ಭದಲ್ಲಿ ಪ್ರವೇಶ ಮಾಡಿಸುತ್ತಾಳೆ ಪರಮಾತ್ಮನ ಆಜ್ಞೆಯಂತೆ. ಅಲ್ಲಿ ಮುಂದೆ ಏಳು ತಿಂಗಳು ಬೆಳೆಯುತ್ತದೆ. ಅಲ್ಲಿ ಬಲರಾಮ ದೇವರ ಅವತಾರ ಆಗುತ್ತದೆ. ಪರಮಾತ್ಮ ನಾಮಕರಣವನ್ನು ಮಾಡಿಯೇ ಬಿಡುತ್ತಾನೆ ಈಗಲೇ ಅವನಿಗೆ ಸಂಕರ್ಷಣ ಅಂತ ಮುಂದೆ ಹೆಸರು ಬರುತ್ತದೆ. ಯಾಕೆ ಅಂದರೆ ನೀನು ದೇವಕಿ ಗರ್ಭದಿಂದ ಕರ್ಷಣ ಮಾಡಿ ಸೆಳೆದು ಇನ್ನೊಂದು ಕಡೆಗೆ ಇಡುತ್ತೀಯಲ್ಲ, ಸೆಳೆದು ಅಂದರೆ ಸಾಯೋ ಹಾಗೆ ಅಲ್ಲ, ಸಂ ಕರ್ಷಣ ಚೆನ್ನಾಗಿ ಸಮೀಚೀನವಾಗಿ ಏನು ಆಗದೆ ಇದ್ದಂತೆ ಗರ್ಭಕ್ಕೆ ಇಲ್ಲಿಂದ ಅಲ್ಲಿ ಒಯ್ದು ಇಟ್ಟಿದ್ದೀಯಲ್ಲ ಅದಕ್ಕಾಗಿ ಅವನಿಗೆ ಸಂಕರ್ಷಣ ಎಂಬ ಹೆಸರು ಪ್ರಸಿದ್ಧವಾಗಲಿ.

ಸಂಕರ್ಷಣಾತ್ತು ಗರ್ಭಸ್ಯ ಸ ತು ಸಂಕರ್ಷಣೋ ಯುವಾ । (2.32 ವಿಷ್ಣುಪರ್ವ)

ಎಂಬುದಾಗಿ ಪರಮಾತ್ಮ ದುರ್ಗಾ ದೇವಿಗೆ ಆಜ್ಞೆಯನ್ನು ಮಾಡಿದ್ದಾನೆ. ಸರಿ ನನ್ನದೇನು ಕೆಲಸ ಇಷ್ಟೆಲ್ಲ ಮಾಡಿ ನಾನು ಹೋಗಬಹುದಾ ಇಲ್ಲಹೋಗುವುದಲ್ಲ ನೀನು ಕೂಡ ಅವತಾರ ಮಾಡಬೇಕು ಅಲ್ಲಿ.

ತಸ್ಯಾಸ್ತ್ವಂ ನವಮೋ ಗರ್ಭಃ ಕುಲೇಽಸ್ಮಾಕಂ ಭವಿಷ್ಯಸಿ । (2.35 ವಿಷ್ಣುಪರ್ವ)

ನೀನು ಆ ನಂದನ ಮನೆಯಲ್ಲಿ ನಂದನಿಂದ ಯಶೋದೆಯಲ್ಲಿ ಅವತಾರ ಮಾಡಬೇಕು, ವಸುದೇವ ನಿನ್ನನ್ನು ಕರೆದುಕೊಂಡು ಬರುತ್ತಾನೆ ನನ್ನನ್ನು ಒಯ್ದು ಆ ನಂದನ ಮನೆಯಲ್ಲಿ ಇಡುತ್ತಾನೆ, ನೀನು ಆ ಕಂಸನ ಕೈಯಲ್ಲಿ ಸಿಕ್ಕಂತೆ ನಾಟಕ ಮಾಡಿ ಅವನು ನಿನ್ನನ್ನು ಸಂಹಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾನೆ. ಅವನ ಕೈಗೆ ಸಿಗದೆ ಇದ್ದಂತೆ ನಿನ್ನ ರೂಪವನ್ನು ನೀನು ವ್ಯಕ್ತ ಮಾಡಿ ವಿಂಧ್ಯಾಚಲದಲ್ಲಿ ವಿಶೇಷವಾಗಿ ಎಲ್ಲ ಸಜ್ಜನರಿಂದ ಪೂಜ್ಯಳಾಗಿ ಎಲ್ಲರಿಗೂ

ಅನುಗ್ರಹವನ್ನು ಮಾಡುತ್ತಾ ನೀನು ಇರು. ಈ ಅವತಾರದಲ್ಲಿ ಮಾತ್ರ ನೀನು ಬ್ರಹ್ಮಚಾರಿಣಿಯಾಗಿರಬೇಕು ನನ್ನ ಮಡದಿಯಾಗಿ ಅಲ್ಲ ನಿತ್ಯಾವಿಯೋಗಿನಿ ಆದರೆ ವ್ಯಕ್ತವಾಗಿ ಎಲ್ಲರಿಗೆ ತೋರುವಂತೆ ನೀನು.

ಕೌಮಾರಂ ವ್ರತಮಾಸ್ಥಾಯ ತ್ರಿದಿವಂ ತ್ವಂ ಗಮಿಷ್ಯಸಿ ॥ (2.46 ವಿಷ್ಣುಪರ್ವ)

ತತ್ರ ತ್ವಾಂ ಶತದೃಕ್ಫೋ ಮತ್ಪ್ರಧಿಷ್ಟೇನ ಕರ್ಮಣಾ । (2.47 ವಿಷ್ಣುಪರ್ವ)

ಇಂದ್ರ ದೇವರು ಸಕಲ ದೇವತೆಗಳಿಂದ ಸಹಿತನಾಗಿ ನಿನ್ನ ಅಭಿಷೇಕಾದಿಗಳನ್ನು ಪೂಜಾದಿಗಳನ್ನು ಮಾಡುತ್ತಾ ನಿನ್ನ ಸೇವೆಯನ್ನು ಮಾಡುತ್ತಾನೆ. ಆ ಇಂದ್ರಾದಿ ದೇವತೆಗಳಿಗೂ ಋಷಿಗಳಿಗೂ ಮುನಿಗಳಿಗೂ ಮನುಷ್ಯರಿಗೂ ಎಲ್ಲರಿಗೂ ಅನುಗ್ರಹವನ್ನು ಮಾಡುತ್ತಾ ಬ್ರಹ್ಮಚಾರಿಣೀಯಾಗಿಯೇ ಇದ್ದು ಎಲ್ಲರ ಕಷ್ಟಗಳನ್ನು ಪರಿಹಾರ ಮಾಡುತ್ತಾ ನೀನು ಇರಬೇಕು. ನಿನಗೆ ಕೌಶಿಕೀ ಅಂತನ್ನುವ ಹೆಸರು ಪ್ರಸಿದ್ಧವಾಗುತ್ತದೆ ಕುಶಿಕ ಗೋತ್ರದವಳು ಅಂತ ನಿನ್ನನ್ನು ಗುರುತಿಸುತ್ತಾರೆ. ವಿಂಧ್ಯ ಪರ್ವತದಲ್ಲಿ ನೀನು ವಿಶೇಷವಾಗಿ ಪೂಜೆಯನ್ನು ಸ್ವೀಕಾರ ಮಾಡುತ್ತಾ ಮೂಲಸ್ಥಾನದಲ್ಲಿ ಇದ್ದರೂ ಕೂಡ ಸಾವಿರಾರು ಕಡೆಗೆ ಭಾರತ ದೇಶದಲ್ಲಿ ಅಲ್ಲಲ್ಲಿ ದುರ್ಗಾ ದೇವಿಯ ದೇವಸ್ಥಾನಗಳು ಅಲ್ಲಲ್ಲಿ ಭಕ್ತರು ನಿನ್ನನ್ನ ಪೂಜೆ ಮಾಡುತ್ತಾರೆ. ಶುಂಭ, ನಿಶುಂಭ ಅಂತ ಮಾತ್ರ ಇಬ್ಬರು ಬರುತ್ತಾರೆ ಅವರನ್ನು ಬಿಡಬೇಡ ಆ ಅಸುರರನ್ನು ಸಂಹಾರ ಮಾಡಬೇಕು.

ತತಃ ಸ್ಥಾನಸಹಸ್ರೈಸತ್ತ್ವಂ ಪೃಥಿವೀಂ ಶೋಭಯಿಷ್ಯಸಿ ॥ (2.49 ವಿಷ್ಣುಪರ್ವ)

ಶ್ರೀಕೃಷ್ಣ ಪರಮಾತ್ಮ ಕೃಷ್ಣಪಕ್ಷದ ಅಷ್ಟಮೀ ತಿಥಿ ಅಭಿಜಿತ್ ಕಾಲದಲ್ಲಿ ಅವತಾರವನ್ನು ಮಾಡುತ್ತಾನೆ ಅಂದರೆ ರಾತ್ರಿಯ ಎಂಟನೆಯ ಮುಹೂರ್ತ ಮಧ್ಯ ರಾತ್ರಿಯಲ್ಲಿ ಶ್ರೀಕೃಷ್ಣ ಪರಮಾತ್ಮ ಅವತಾರ ಮಾಡಿದ ಅಷ್ಟಮೀ ತಿಥಿ ಇರುವಾಗ. ಸ್ವಲ್ಪ ನಂತರ ತಂಗಿ ದುರ್ಗಾ ದೇವಿ ಅಲ್ಲಿ ಯಶೋದೆಯಲ್ಲಿ ಅವತಾರ ಮಾಡಿದ್ದಾಳೆ ಅಷ್ಟೊತ್ತಿಗೆ ನವಮೀ ಬಂದಿತ್ತು ಅದ್ದರಿಂದ ನವಮೀಯಲ್ಲಿ ನೀನು ಅವತಾರ ಮಾಡಿದ್ದರಿಂದ ಕೃಷ್ಣಪಕ್ಷದ ನವಮೀ ವಿಶೇಷವಾಗಿ ನಿನ್ನ ಪೂಜೆಯನ್ನು ಎಲ್ಲ ಸಜ್ಜನರು ಮಾಡುತ್ತಾರೆ ವಿಂಧ್ಯ ಪರ್ವತದಲ್ಲಿ ಇನ್ನೂ ವಿಶೇಷವಾಗಿ ಆಚರಣೆ ಮಾಡುತ್ತಾರೆ.

ಕಾನ್ತಾರೇಷ್ವವಸನ್ನಾನಾಂ ಮಗ್ನಾನಾಂ ಚ ಮಹಾರ್ಣವೇ । (2.54 ವಿಷ್ಣುಪರ್ವ)

ಅನೇಕ ಕಷ್ಟಗಳು ಮಕ್ಕಳಾಗದಿದ್ದವರಿಗೆ ಮಕ್ಕಳು, ಸಂಪತ್ತು ಬೇಕಾದವರಿಗೆ ಸಂಪತ್ತು, ಅಡವಿಯಲ್ಲಿ ಸಿಕ್ಕಿ ಕೊಂಡಿರುತ್ತಾರೆ, ಸಮುದ್ರದಲ್ಲಿ ಮುಳುಗುವಂತಹ ಪ್ರಸಂಗ, ಸಂಸಾರ ಸಾಗರದಲ್ಲಿ ಮುಳುಗುವಂತಹ ಜನ, ಕಳ್ಳರು ದುಷ್ಟರು ಇವರ ಕಾಟಕ್ಕೆ ಸಿಲುಕಿರುತ್ತಾರೆ ಅಂಥವರೆಲ್ಲರಿಗೂ ಕೂಡ ನೀನು ನಿನ್ನ ಸ್ತೋತ್ರವನ್ನು ಮಾಡಿದರೆ ಸಾಕು ಅವರಿಗೆ ಎಲ್ಲ ಕಷ್ಟಗಳನ್ನ ಪರಿಹಾರ ಮಾಡಿ ಉದ್ಧಾರ ಮಾಡು ಅಂತ ಶ್ರೀಕೃಷ್ಣ ಪರಮಾತ್ಮ ಅರ್ಥಾತ್ ವಿಷ್ಣು ದುರ್ಗೆಗೆ ಆಜ್ಞೆಯನ್ನು ಮಾಡಿದ್ದಾನೆ. ವೈಶಂಪಾಯನರು ಹೇಳುತ್ತಾರೆ ನೋಡಪ್ಪ ಜನಮೇಜಯ ನೀನು ಬಹಳ ಪ್ರೀತಿ ಪಾತ್ರನಾದವನು ಆದ್ದರಿಂದ ದುರ್ಗೆಯ ಸ್ತೋತ್ರವನ್ನು ಮಾಡಿದರೆ ಎಲ್ಲ ಆಪತ್ತುಗಳನ್ನು ಪರಿಹಾರ ಮಾಡುತ್ತಾಳೆ ದುರ್ಗಾ ದೇವಿ ಎಂಬುದಾಗಿ ಪರಮಾತ್ಮ ದುರ್ಗೆಗೇ ಹೇಳಿದ. ಆ ಸ್ತೋತ್ರವನ್ನು ಯಾವ ರೀತಿಯಲ್ಲಿ ಮಾಡಬೇಕು ಅಂತ ನಿನ್ನ ಮನಸ್ಸಿನಲ್ಲಿ ಅಪೇಕ್ಷೆ ಇರಬಹುದು ತಿಳಿದುಕೊಳ್ಳುವುದಕ್ಕೆ ಅದಕ್ಕಾಗಿ ನಾನೇ ಆ ಸ್ತೋತ್ರವನ್ನು ಹೇಳುತ್ತೇನೆ ಕೇಳು ಅಂತ ಜನಮೇಜಯ ಕೇಳುವ ಮೊದಲೇ ವೈಶಂಪಾಯನರು ಹೇಳುತ್ತಾರೆ.



ಆರ್ಯಾಸ್ತವಂ ಪ್ರವಕ್ಷ್ಯಾಮಿ ಯಥೋಕ್ತಮೃಷಿಭಿಃ ಪುರಾ । (3.1 ವಿಷ್ಣುಪರ್ವ)

ಮಂಗಳವಾರ ವಿಶೇಷವಾಗಿ ದುರ್ಗೆಯ ಸ್ಮರಣೆಯನ್ನು ಮಾಡಬೇಕು ಆ ಸ್ತೋತ್ರದ ಪಠಣವನ್ನು ಮಾತ್ರ ಮಾಡಿ ಕೆಲವು ವಾಕ್ಯಗಳ ಅರ್ಥವನ್ನು ಮಾತ್ರ ತಿಳಿಯುವ ಪ್ರಯತ್ನ ಮಾಡೋಣ.

ನಾರಾಯಣೀಂ ನಮಸ್ಯಾಮಿ ದೇವೀಂ ತ್ರಿಭುವನೇಶ್ವರೀಮ್ । (3.1 ವಿಷ್ಣುಪರ್ವ)

ತ್ವಂ ಹಿ ಸಿದ್ಧಿರ್ಧೃತಿಃ ಕೀರ್ತಿಃಶ್ರೀರ್ವಿದ್ಯಾ ಸಂತರ್ಮತಿಃ ।
ಸಂಧ್ಯಾ ರಾತ್ರಿಃ ಪ್ರಭಾನಿದ್ರಾ ಕಾಲರಾತ್ರಿಸ್ತಥೈವ ಚ ॥ (3.2 ವಿಷ್ಣುಪರ್ವ)

ಆರ್ಯಾ ಕಾತ್ಯಾಯನೀ ದೇವೀ ಕೌಶಿಕೀ ಬ್ರಹ್ಮಚಾರಿಣೀ ।
ಜನನೀ ಸಿದ್ಧಸೇನಸ್ಯ ಉಗ್ರಚಾರೀ ಮಹಾಬಲಾ । (3.3 ವಿಷ್ಣುಪರ್ವ)

ಜಯಾ ಚ ವಿಜಯಾ ಚೈವ ಪುಷ್ಟಿಸ್ತುಷ್ಟಿಃ ಕ್ಷಮಾ ದಯಾ । (3.4 ವಿಷ್ಣುಪರ್ವ)

ಜಗತ್ತಿನಲ್ಲಿ ಎಲ್ಲ ಸಜ್ಜನರಿಗೆ ಜಯ ವಿಜಯ ಆಗಬೇಕು ಎಲ್ಲ ರೀತಿಯ ಪುಷ್ಟಿ, ತಪ್ಪು ಮಾಡಿದಾಗ ಸಜ್ಜನರನ್ನು ಕ್ಷಮೆ ಮಾಡುವಂತಹ ಒಂದು ಗುಣ, ದಯೆ ಇವುಗಳೆಲ್ಲವೂ ದುರ್ಗೆಯ ಅನುಗ್ರಹದಿಂದ.

ಜೇಷ್ಠಾ ಯಮಸ್ಯ ಭಗಿನೀ ನೀಲಕೌಶೇಯವಾಸಿನೀ । (3.4 ವಿಷ್ಣುಪರ್ವ)

ಬಹುರೂಪಾ ವಿರೂಪಾ ಚ ಅನೇಕ ವಿಧಿಚಾರಿಣೀ ।
ವಿರೂಪಾಕ್ಷೀ ವಿಶಾಲಾಕ್ಷೀ ಭಕ್ತಾನಾಂ ಪರಿರಕ್ಷಿಣೀ ॥ (3.5 ವಿಷ್ಣುಪರ್ವ)

ಪರ್ವತಾಗ್ರೇಷು ಘೋರೇಷು ನದೀಷು ಚ ಗುಹಾಸು ಚ ।
ವಾಸಸ್ತೇ ಚ ಮಹಾದೇವಿ ವನೇಷೂಪವನೇಷು ಚ ॥ (3.6 ವಿಷ್ಣುಪರ್ವ)

ಶಬರೈರ್ಬರ್ಬರೈಶ್ಚೈವ ಪುಲಿನ್ದೈಶ್ಚ ಸುಪೂಜಿತಾ ।
ಮಯೂರಪಿಚ್ಛಧ್ವಜಿನೀ ಲೋಕಾನ್ ಕ್ರಮಸಿ ಸರ್ವಶಃ ॥ (3.7 ವಿಷ್ಣುಪರ್ವ)

ಕುಕ್ಕುಟೈಶ್ಚಾಗಲೈರ್ಮೇಷೈಃ ಸಿಂಹೈರ್ವ್ಯಾಘ್ರೈಃ ಸಮಾಕುಲಾ ।
ಘಣ್ಟಾನಿನಾದ ಬಹುಲಾ ವಿನ್ಧ್ಯವಾಸಿನ್ಯಭಿಶ್ರುತಾ ॥ (3.8 ವಿಷ್ಣುಪರ್ವ)

ತ್ರಿಶೂಲಪಟ್ಟಿಶಧರಾ ಸೂರ್ಯಚಂದ್ರ ಪತಾಕಿನೀ ।
ನವಮೀ ಕೃಷ್ಣಪಕ್ಷಸ್ಯ ಶುಕ್ಲಸ್ಯೈಕಾದಶೀ ತಥಾ ॥ (3.9 ವಿಷ್ಣುಪರ್ವ)

ನೋಡಿ ಕೃಷ್ಣಪಕ್ಷದ ನವಮೀ ವಿಶೇಷವಾಗಿ ಈ ದುರ್ಗಾ ದೇವಿಯ ತಿಥಿ ದುರ್ಗಾ ದೇವಿ ಅದಕ್ಕೆ ಅಭಿಮಾನಿನಿ ನಿಯಾಮಕಳು **'ಶುಕ್ಲಸ್ಯೈಕಾದಶೀ ತಥಾ'** ಪ್ರತಿ ಶುಕ್ಲಪಕ್ಷದ ಏಕಾದಶೀ ದುರ್ಗಾ ದೇವಿಯ ವಿಶೇಷವಾದ ಸ್ಮರಣೆಯನ್ನು ಮಾಡಬೇಕು ಹಾಗೂ ಪ್ರತಿ ಶುಕ್ಲಪಕ್ಷದ ಏಕಾದಶೀಯೂ ಕೂಡ ಅವಳಿಂದ ನಿಯಮ್ಯವಾದದ್ದು ಅವಳ ವಿಶೇಷವಾದ ಸನ್ನಿಧಾನ ಇರುವುದು ಎಂಬುದಾಗಿ ವರ್ಣನೆಯನ್ನು ಮಾಡುತ್ತಾ ಇದ್ದಾರೆ.

ಭಗಿನೀ ಬಲದೇವಸ್ಯ ರಜನೀ ಕಲಹಪ್ರಿಯಾ ।
ಆವಾಸಃ ಸರ್ವಭೂತಾನಾಂ ನಿಷ್ಠಾ ಚ ಪರಮಾ ಗತಿಃ ॥ (3.10 ವಿಷ್ಣುಪರ್ವ)

ನನ್ದಗೋಪಸುತಾ ಚೈವ ದೇವಾನಾಂ ವಿಜಯಾವಹಾ । (3.11 ವಿಷ್ಣುಪರ್ವ)

ಸಜ್ಜನರಿಗೆ, ದೇವತೆಗಳಿಗೆ ದೇವಸ್ವಭಾವ ಇರುವಂತಹ ಸಾಧುಗಳಿಗೆ ಸಾತ್ವಿಕರಿಗೆ ವಿಜಯವನ್ನು ನೀಡುತ್ತಾಳೆ.

ಚೀರವಾಸಾಃ ಸುವಾಸಾಶ್ಚ ರೌದ್ರೀ ಸಂಧ್ಯಾಚರೀ ನಿಶಾ ॥ (3.11 ವಿಷ್ಣುಪರ್ವ)

ಪ್ರಕೀರ್ಣಕೇಶೀ ಮೃತ್ಯುಶ್ಚ ಸುರಾಮಾಂಸಬಲಿಪ್ರಿಯಾ ।
ಲಕ್ಷ್ಮೀರಲಕ್ಷ್ಮೀರೂಪೇಣ ದಾನವಾನಾಂ ವಧಾಯ ಚ ॥ (3.12 ವಿಷ್ಣುಪರ್ವ)

ಸಾವಿತ್ರೀ ಚಾಪಿ ದೇವಾನಾಂ ಮಾತಾ ಭೂತಗಣಸ್ಯ ಚ । (3.13 ವಿಷ್ಣುಪರ್ವ)

ಎಲ್ಲ ದೇವತೆಗಳಿಗೆ ತಾಯಿ, ಮಂತ್ರಗಳನ್ನು ಜಪ ಮಾಡಿ ಸಿದ್ಧಿಯನ್ನು ಪಡೆದುಕೊಳ್ಳಬೇಕು ಅಂತ ಅಪೇಕ್ಷೆ ಇದ್ದವರಿಗೆ ದುರ್ಗಾ ದೇವಿಯ ವಿಶೇಷವಾದಂತಹ ಅನುಗ್ರಹ ಬೇಕು ಆ ಎಲ್ಲ ವಿಧವಾಗಿರುವಂತಹ ಮಂತ್ರಗಳನ್ನು ಜಪ ಮಾಡಿ ಸಿದ್ಧಿಯನ್ನು ಪಡೆದುಕೊಳ್ಳಬೇಕು ಅಂದರೆ ದುರ್ಗೆಯ ಅನುಗ್ರಹ. ಈ ವಿಷ್ಣು ದುರ್ಗೆಯ ಸನ್ನಿಧಾನ ಇರುವಂತಹ ಶಿವ ದುರ್ಗೆ ಅವಳೂ ಕೂಡ ವಿಶೇಷವಾಗಿ ಮಂತ್ರ ಜಪವನ್ನ ಮಾಡಿದವರಿಗೆ ಸಿದ್ಧಿಯನ್ನು ಕೊಡುವವಳು ಅಂತ. ಇವತ್ತಿಗೂ ಕುಂಭಕೋಣದಲ್ಲಿ ಇರುವಂತಹ ಆ ದುರ್ಗೆಯ ಹೆಸರನ್ನು ಮಂತ್ರ ಪೀಠೇಶ್ವರಿ ಎಂಬುದಾಗಿ ಅವಳನ್ನು ಅಲ್ಲಿರುವಂತಹ ಒಂದು ಸ್ಥಳ ಪುರಾಣದ ಪ್ರಕಾರ ಹೇಳುತ್ತಾರೆ. ಮಂತ್ರ ಪೀಠೇಶ್ವರಿ ಅಂತ ಹೇಳುವ ತಾತ್ಪರ್ಯ ಆ ಮಂತ್ರಗಳನ್ನು ವಿಶೇಷವಾಗಿ ಸಿದ್ಧಿಯನ್ನು ಪಡೆದುಕೊಳ್ಳಬಹುದು ಅಂತ ಹೇಳುತ್ತಾರೆ ಅಂತಹ ಮಂತ್ರವನ್ನು ಸಿದ್ಧಿಯನ್ನು ಮಾಡಿಕೊಳ್ಳುವ ಅಪೇಕ್ಷೆ ಇದ್ದವರಿಗೆ ಸಿದ್ಧಿಯನ್ನು ಕೊಡುವ ಆ ಮಂತ್ರಗಣಗಳ ಮಾತಾ ಅಂತ ಅನ್ನಿಸಿಕೊಂಡವಳು ದುರ್ಗೆ.

ಕನ್ಯಾನಾಂ ಬ್ರಹ್ಮಚರ್ಯಂ ತ್ವಂ ಸೌಭಾಗ್ಯಂ ಪ್ರಮದಾಸು ಚ ॥ (3.13 ವಿಷ್ಣುಪರ್ವ)

ಕನ್ಯೆಯರು ಆಗಿರುವಾಗ ವಿಶೇಷವಾಗಿ ಬ್ರಹ್ಮಚರ್ಯವನ್ನು ನೀಡುವವಳು ಮುಂದೆ ವಿವಾಹ ಆದಮೇಲೆ ಉತ್ತಮವಾದ ಸೌಭಾಗ್ಯವನ್ನು ನೀಡುವವಳೂ ಕೂಡ ದುರ್ಗೆ ಅಂತ. ಇವತ್ತಿನ ಎಲ್ಲ ಯುವತಿಯರು ಕನ್ಯೆಯರು ಉತ್ತಮ ಬ್ರಹ್ಮಚರ್ಯದಿಂದ ಇದ್ದು, ಶುದ್ಧ ಚಾರಿತ್ರ್ಯ ಸಂಪನ್ನರಾಗಿದ್ದು ಭಗವಂತನ ವಿಶೇಷವಾದ ಅನುಗ್ರಹವನ್ನು ಪಡೆಯಬೇಕು, ಬ್ರಹ್ಮದಿಂದ ಜೀವನವನ್ನು ಮಾಡಬೇಕು. ಚಾರಿತ್ರ್ಯದಿಂದ ಭ್ರಷ್ಟರಾಗಬಾರದು, ಉತ್ತಮವಾದ ಚಾರಿತ್ರ್ಯ ಸಂಪನ್ನರಾಗಿ ಗುಣವಂತರಾಗಿ ಇರಬೇಕು ಅಂದರೆ ದುರ್ಗೆಯ ವಿಶೇಷವಾದ ಉಪಾಸನೆಯನ್ನು ಮಾಡಿ, ದುರ್ಗಾ



ದೇವಿಯ ಸ್ಮರಣೆ ಮಾಡಿ ಸ್ತೋತ್ರವನ್ನು ಹೇಳಿ, ದುರ್ಗಾ ಸುಳಾದಿಯನ್ನು ಹೇಳಿ ದುರ್ಗಾ ದೇವಿಯ ಅನುಗ್ರಹವನ್ನು ಪಡೆದು ನಿಮ್ಮ ನಿಮ್ಮ ಹೆಣ್ಣುಮಕ್ಕಳು ಉತ್ತಮ ಶೀಲವಂತರಾಗಿ, ಗುಣವಂತರಾಗಿ ಮುಂದೆ ವಿವಾಹವಾದ ಮೇಲೆ ಪತಿವ್ರತೆಯರಾಗಿ ಸೌಭಾಗ್ಯಯುತರಾಗಿ ಅವರು ಜೀವನದಲ್ಲಿ ಎಲ್ಲ ರೀತಿಯ ಮಾಂಗಲ್ಯವನ್ನು ಪಡೆಯುವಂತೆ ದುರ್ಗೆಗೆ ಪ್ರಾರ್ಥನೆಯನ್ನು ಮಾಡಿ ಅಂತ ಸೂಚನೆ ಮಾಡುತ್ತಾನೆ.

ಅನ್ತರ್ವೇದೀ ಚ ಯಜ್ಞಾನಾಮೃತ್ವಿಜಾಂ ಚೈವ ದಕ್ಷಿಣಾ ।
ಕರ್ಷಕಾಣಾಂ ಚ ಸೀತೇತಿ ಭೂತಾನಾಂ ಧರಣೀತಿ ಚ ॥ (3.14 ವಿಷ್ಣುಪರ್ವ)

ಸಿದ್ಧಿಃ ಸಾಂಯಾತ್ರಿಕಾಣಾಂ ತು ವೇಲಾ ತ್ವಂ ಸಾಗರಸ್ಯ ಚ । (3.15 ವಿಷ್ಣುಪರ್ವ)

ಯಾರು ಸಾಂಯಾತ್ರಿಕರು ಅಂದರೆ ವ್ಯಾಪಾರವನ್ನು ಹಡಗಿನಲ್ಲಿ ಕುಳಿತು ಹೊರದೇಶಕ್ಕೆ ಹೋಗಿ ಮಾಡುವವರು ಎಕ್ಸ್‌ಪೋರ್ಟ್ ಮಾಡುವವರು. ನಮ್ಮ ದೇಶದಲ್ಲಿಯೇ ವ್ಯಾಪಾರ ಮಾಡುವವರಲ್ಲ ಎಕ್ಸ್‌ಪೋರ್ಟ್ ಮಾಡುವವರು ಯಾರಿದ್ದಾರೋ ಇಲ್ಲಿ ಇದ್ದದ್ದನ್ನು ಹೊರದೇಶಕ್ಕೆ ವ್ಯಾಪಾರ ಮಾಡುವವರು ಬಿಸಿನೆಸ್ ಮಾಡುವವರು ಅಂಥವರಿಗೆ ಸಿದ್ಧಿ ಬೇಕು ಅಂದರೆ ದುರ್ಗಾ ದೇವಿಯ ವಿಶೇಷವಾದ ಅನುಗ್ರಹ ಬೇಕು ಅಂತ ಅನ್ನುತ್ತಾರೆ.

ಸಿದ್ಧಿಃ ಸಾಂಯಾತ್ರಿಕಾಣಾಂ ತು ವೇಲಾ ತ್ವಂ ಸಾಗರಸ್ಯ ಚ ।
ಯಕ್ಷಾಣಾಂ ಪ್ರಥಮಾ ಯಕ್ಷೀ ನಾಗಾನಾಂ ಸುರಸೇತಿ ಚ ॥ (3.15 ವಿಷ್ಣುಪರ್ವ)

ಬ್ರಹ್ಮವಾದಿನ್ಯಥೋ ದೀಕ್ಷಾ ಶೋಭಾ ಚ ಪರಮಾ ತಥಾ ।
ಜ್ಯೋತಿಷಾಂ ತ್ವಂ ಪ್ರಭಾ ದೇವಿ ನಕ್ಷತ್ರಾಣಾಂ ಚ ರೋಹಿಣೀ ॥ (3.16 ವಿಷ್ಣುಪರ್ವ)

ರಾಜದ್ವಾರೇಷು ತೀರ್ಥೇಷು ನದೀನಾಂ ಸಙ್ಗಮೇಷು ಚ । (3.17 ವಿಷ್ಣುಪರ್ವ)

ಯಾವುದೇ ತೀರ್ಥಕ್ಷೇತ್ರಗಳು ಪವಿತ್ರ ನದಿಯ ಸಂಗಮ ಇದೆ ಆ ಎಲ್ಲ ನದ್ಯಭಿಮಾನಿ ದೇವತೆಗಳಲ್ಲಿ ಮುಖ್ಯ ಸನ್ನಿಹಿತಳಾಗಿದ್ದವಳು ದುರ್ಗಾ ದೇವಿ ಅನ್ನುವುದಕ್ಕೆ ಆ ನದಿ ಪವಿತ್ರ ಆ ಸಂಗಮ ಇದು ಪವಿತ್ರವಾದ ತೀರ್ಥ ಅಂತ ಅನ್ನಿಸಿಕೊಳ್ಳುತ್ತದೆ.

ಪೂರ್ಣಾ ಚ ಪೂರ್ಣಿಮಾ ಚನ್ದ್ರೋಕೃತ್ತಿವಾಸಾ ಇತಿ ಸ್ಮೃತಾ ॥ (3.17 ವಿಷ್ಣುಪರ್ವ)

'ಸರಸ್ವತೀ ಚ ವಾಲ್ಮೀಕೇ' ಏನು ಅದ್ಭುತ ಆಗಿರುವಂತಹ ವಾಲ್ಮೀಕೀ ಋಷಿಗಳ ಆ ರಾಮಾಯಣದ ವಾಣಿ ಅಂತಹ ಇಪ್ಪತ್ತು ನಾಲ್ಕು ಸಾವಿರ ಶ್ಲೋಕಗಳ ವಾಲ್ಮೀಕೀ ರಾಮಾಯಣದ ದೊಡ್ಡ ಸಂಹಿತೆ ವಾಲ್ಮೀಕೀ ಋಷಿಗಳಿಂದ ಹೊರಗೆ ಬಂತು ಅಂದರೆ ಆ ವಾಲ್ಮೀಕೀ ಋಷಿಗಳಿಗೆ ಅನುಗ್ರಹ ಮಾಡಿದವಳು ದುರ್ಗೆ.

ಸರಸ್ವತೀ ಚ ವಾಲ್ಮೀಕೇ ಸ್ಮೃತಿರ್ವ್ಯಾಪಾಯನೇ ತಥಾ । (3.18 ವಿಷ್ಣುಪರ್ವ)

ವೇದವ್ಯಾಸ ದೇವರು, ವೇದವ್ಯಾಸ ದೇವರ ಶಿಷ್ಯರು ದ್ವೈಪಾಯನ ಎಂಬ ಶಬ್ದಕ್ಕೆ ದ್ವೈಪಾಯನ ಶಿಷ್ಯರು ಅಂತ ಅರ್ಥ ಆ ವೇದವ್ಯಾಸ ದೇವರ ಏನೊಂದು ಶಿಷ್ಯರ ಗುಂಪಿದೆ ಸುಮಂತು, ಜೈಮಿನಿ

ವೈಶಂಪಾಯನಕಾಶಕೃತ್ಸ್ನಲೋಮಶಕಾರ್ಷ್ಣಾಜಿನ್ಯೈಡುಲೋಮ್ಯಾ-
ತ್ರೇಯಪೂರ್ವಕಶಿಷ್ಯಸಂಘಪರಿವ್ರತಾಯ ನಮಃ ॥ (ಯಾದವಾರ್ಯರ ವ್ಯಾಸ ಗದ್ಯ)

ಅಂತ ವೇದವ್ಯಾಸ ದೇವರಿಗೆ ಹೇಳುತ್ತಾರಲ್ಲ ಸ್ವಯಂ ವೈಶಂಪಾಯನರೇ ಈ ಮಾತನ್ನು ಹೇಳುತ್ತಾ ಇದ್ದಾರೆ ತಾವೂ ಒಬ್ಬರು ಇದ್ದಾರೆ ಅದರೊಳಗೆ. ಹಾಗಾದರೆ ಈ ತರಹದ ದ್ವೈಪಾಯನರ ಶಿಷ್ಯರು ಏನು ಭಾರೀ ಭಾರೀ ವೇದಗಳನ್ನು ಜಗತ್ತಿನಲ್ಲಿ ಪ್ರಚಾರ ಮಾಡಿದವರು, ಸ್ಮೃತಿ ಗ್ರಂಥಗಳನ್ನು ಪ್ರಚಾರ ಮಾಡಿದವರು ಇನ್ನಿತರ ಶಾಸ್ತ್ರಗಳನ್ನು ಪಾಠ ಪ್ರವಚನಾದಿಗಳನ್ನು ಮಾಡುತ್ತಾ ಆ ವೇದವ್ಯಾಸ ದೇವರ ತತ್ವಜ್ಞಾನದ ಸಂಪ್ರದಾಯದ ಪ್ರವರ್ತನೆ ಮಾಡಿದವರು ಯಾರು ಇದ್ದಾರಲ್ಲ ಅವರೆಲ್ಲ ವೇದವ್ಯಾಸ ದೇವರು ಮಾಡಿದ ಉಪದೇಶವನ್ನು ತಲೆಯಲ್ಲಿ ಇಟ್ಟುಕೊಂಡು ಅದನ್ನು ನೆನಪಿನಲ್ಲಿ ಇಟ್ಟುಕೊಂಡು ಇನ್ನೊಬ್ಬರಿಗೆ ಹೇಳಬೇಕಲ್ಲ, ಆ ಅದ್ಭುತವಾದ ಸ್ಮೃತಿಶಕ್ತಿ ದೊಡ್ಡ ದೊಡ್ಡ ಶಾಖೆಗಳನ್ನು ವೇದವ್ಯಾಸ ದೇವರು ಉಪದೇಶ ಮಾಡಿದರೆ ಅದೆಲ್ಲ ತಲೆಯಲ್ಲಿ ಹೊತ್ತುಕೊಳ್ಳುವಂತಹ ಸ್ಮೃತಿ ದುರ್ಗಾ ದೇವಿ ಇಂದ.

ಸರಸ್ವತೀ ಚ ವಾಲ್ಮೀಕೇ ಸ್ಮೃತಿರ್ದ್ವೈಪಾಯನೇ ತಥಾ ।
ಋಷೀಣಾಂ ಧರ್ಮಬುದ್ಧಿಸ್ತು ದೇವಾನಾಂ ಮಾನಸೀ ತಥಾ ॥ (3.18 ವಿಷ್ಣುಪರ್ವ)

ಋಷಿಗಳಿಗೆ ಧರ್ಮವನ್ನು ಮಾಡುವಂತಹ ಬುದ್ಧಿ, ದೇವತೆಗಳಿಗೆ ಉತ್ತಮವಾದಂತಹ ಮನಸ್ಸಿನ ಶಕ್ತಿ ಇವುಗಳನ್ನೆಲ್ಲ ಕೊಟ್ಟವಳು.

ಸುರಾ ದೇವೀ ತು ಭೂತೇಷು ಸ್ತೂಯಸೇ ತ್ವಂ ಸ್ವಕರ್ಮಭಿಃ ।
ಇಂದ್ರಸ್ಯ ಚಾರುದೃಷ್ಟಿಸ್ತ್ವಂ ಸಹಸ್ರನಯನೇತಿ ಚ ॥ (3.19 ವಿಷ್ಣುಪರ್ವ)

ತಾಪಸಾನಾಂ ಚ ದೇವೀ ತ್ವಮರಣೇ ಚಾಗ್ನಿಹೋತ್ರಿಣಾಮ್ ।
ಕ್ಷುಧಾ ಚ ಸರ್ವಭೂತಾನಾಂ ತೃಪ್ತಿಸ್ತ್ವಂ ದೈವತೇಷು ಚ ॥ (3.20 ವಿಷ್ಣುಪರ್ವ)

ಸ್ವಾಹಾ ತೃಪ್ತಿರ್ಧೃತಿರ್ಮೇಧಾ ವಸೂನಾಂ ತ್ವಂ ವಸೂಮತೀ ।
ಆಶಾ ತ್ವಂ ಮಾನುಷಾಣಾಂ ಚ ಪುಷ್ಟಿಶ್ಚ ಕೃತಕರ್ಮಣಾಮ್ ॥ (3.21 ವಿಷ್ಣುಪರ್ವ)

ನಾನಾ ವಿಧವಾದ ಆಶೆಗಳನ್ನು ಮಾಡುತ್ತಾರೆ ಆಶಾವಾದ ಇದೆ ಅಂದರೆ ಅದು ದುರ್ಗಾ ದೇವಿಯ ಅನುಗ್ರಹ ಇಲ್ಲ ಅಂದರೆ ಎಲ್ಲರೂ ನಿರಾಶರಾಗಿ ಹತಾಶರಾಗಿ ಹೋಗುತ್ತಾರೆ, ಮಾಡಿದ ಕರ್ಮಗಳಿಗೆ ಪುಷ್ಟಿ ಸಿಗುತ್ತೆ ಅಂದರೆ ದುರ್ಗೆಯ ಅನುಗ್ರಹದಿಂದ.

ದಿಶಶ್ಚ ವಿದಿಶಶ್ಚೈವ ತಥಾ ಹ್ಯಗ್ನಿಶಿಖಾ ಪ್ರಭಾ ।
ಶಕುನೀ ಪೂತನಾ ತ್ವಂ ಚ ರೇವತೀ ಚ ಸುದಾರುಣಾ ॥ (3.22 ವಿಷ್ಣುಪರ್ವ)

ನಿದ್ರಾಪಿ ಸರ್ವಭೂತಾನಾಂ ಮೋಹಿನೀ ಕ್ಷತ್ರಿಯಾ ತಥಾ ।
ವಿದ್ಯಾನಾಂ ಬ್ರಹ್ಮವಿದ್ಯಾ ತ್ವಮೋಙ್ಕಾರೋಽಥ ವಷಟ್ ತಥಾ ॥ (3.23 ವಿಷ್ಣುಪರ್ವ)

ಸಕಲ ವಿದ್ಯೆಗಳಲ್ಲಿ ಶ್ರೇಷ್ಠವಾದ ಬ್ರಹ್ಮವಿದ್ಯೆ ಅದಕ್ಕೆ ಅಭಿಮಾನಿನಿಯಾದವಳು ದುರ್ಗೆ.

ನಾರೀಣಾಂ ಪಾರ್ವತೀಂ ಚ ತ್ವಾಂ ಪೌರಾಣೇಮೃಷಯೋ ವಿದುಃ ।
ಆರುನ್ಧತೀ ಚ ಸಾಧ್ವೀನಾಂ ಪ್ರಜಾಪತಿವಚೋ ಯಥಾ ॥ (3.24 ವಿಷ್ಣುಪರ್ವ)

ಪರ್ಯಾಯನಾಮಭಿರ್ದಿವ್ಯೈರ್ನಾಣೇ ಚೇತಿ ವಿಶ್ರುತಾ ।
ತ್ವಯಾ ವ್ಯಾಪ್ತಮಿದಂ ಸರ್ವಂ ಜಗತ್ ಸ್ಥಾವರಜಙ್ಗಮಮ್ ॥ (3.25 ವಿಷ್ಣುಪರ್ವ)

ಸಂಗ್ರಾಮೇಷು ಚ ಸರ್ವೇಷು ಅಗ್ನಿಪ್ರಜ್ವಲಿತೇಷು ಚ ।
ನದೀತೀರೇಷು ಚೌರೇಷು ಕಾನ್ತಾರೇಷು ಭಯೇಷು ಚ ॥ (3.26 ವಿಷ್ಣುಪರ್ವ)

ಪ್ರವಾಸೇ ರಾಜಬನ್ಧೇ ಚ ಶತ್ರೂಣಾಂ ಚ ಪ್ರಮರ್ದನೇ ।
ಪ್ರಾಣಾತ್ಯಯೇಷು ಸರ್ವೇಷು ತ್ವಂ ಹಿ ರಕ್ಷಾ ನ ಸಂಶಯಃ ॥ (3.27 ವಿಷ್ಣುಪರ್ವ)

ಎಲ್ಲಾ ಸಂದರ್ಭಗಳಲ್ಲಿಯೂ ಪ್ರಾಣಾತ್ಯೆಯಾಗುವ ಸಂದರ್ಭದಲ್ಲಿ ಪ್ರಾಣಸಂಕಟ ಇದ್ದಾಗ ರಕ್ಷಕಳಾಗಿ ನೀನು ಬರುತ್ತಿಯಾ

ತ್ವಯಿ ಮೇ ಹೃದಯಂ ದೇವಿ ತ್ವಯಿ ಚಿತ್ತಂ ಮನಸ್ತ್ವಯಿ ।
ರಕ್ಷ ಮಾಂ ಸರ್ವಪಾಪೇಭ್ಯಃ ಪ್ರಸಾದಂ ಕರ್ತುಮರ್ಹಸಿ ॥ (3.28 ವಿಷ್ಣುಪರ್ವ)

ಎಂಬುದಾಗಿ ಆ ದುರ್ಗಾ ದೇವಿಯ ಸ್ತುತಿಯನ್ನು ಮಾಡಬೇಕು ಎಂದು ತಿಳಿಸಿದ್ದಾರೆ. ಮಹಾಮಾರಿ ಉಂಟಲ್ಲ ಆ ಮಹಾಮಾರಿ ಇವತ್ತು ಎಲ್ಲರಿಗೆ ಪೀಡೆಯನ್ನು ಕೊಡುತ್ತಾ ಇದೆಯಲ್ಲ ಈ ತರಹದ ಮಹಾಮಾರಿ ಅವರವರು ಮಾಡಿದ ಪಾಪಗಳಿಗೆ ಪ್ರತಿಫಲದ ರೂಪದಲ್ಲಿ ಮಹಾಮಾರಿಯನ್ನು ಸೃಷ್ಟಿ ಮಾಡುವವಳು ದುರ್ಗೆ ಅಂತ ಶಾಸ್ತ್ರದಲ್ಲಿ ತಿಳಿಸಿದ್ದಾರೆ. ಬ್ರಹ್ಮವೈವರ್ತ ಪುರಾಣದಲ್ಲಿ ಆ ಮಹಾಮಾರಿ ಅಂತನ್ನುವುದು ಕೂಡ ದುರ್ಗೆಯೇ ಕೊಡುವುದು ಹೀಗಾಗಿ ಆ ಮಹಾಮಾರಿಯನ್ನು ಪರಿಹಾರ ಮಾಡುವ ಶಕ್ತಿಯೂ ದುರ್ಗೆಗೆ ಇದೆ, ನರಸಿಂಹ ದೇವರಿಗೆ ಇದೆ, ದುರ್ಗಾ ಪತಿಯಾದ ಪರಮಾತ್ಮನಿಗೆ ಇದೆ. ಹೀಗಾಗಿ ಅಂತಹ ದುರ್ಗೆ ಅವಳೇ ಮಹಾಮಾರಿಯನ್ನ ನಾವು ಮಾಡಿದ ಕರ್ಮಕ್ಕೆ ಅನುಗುಣವಾಗಿ ನೀಡಿದ್ದು ಶೀಘ್ರದಲ್ಲಿ ಆ ಮಹಾಮಾರಿಯ ಪರಿಹಾರವನ್ನು ಮಾಡಿ ನಮ್ಮಿಂದ ಪ್ರಾಯಶ್ಚಿತ್ತಗಳನ್ನು ಮಾಡಿಸಿ, ಪುಣ್ಯ ಕರ್ಮಗಳನ್ನು ಮಾಡಿಸಿ, ಮಾಡಿದ ಅಪರಾಧವನ್ನು ಕ್ಷಮಿಸಿ ಮನ್ನಿಸಿ ಆ ಮಹಾಮಾರಿಯೂ ಕೂಡ ಮಾಯವಾಗುವಂತೆ **'ನಮಸ್ತೇಸ್ತು ಮಹಾಮಾಯೇ ಶ್ರೀಪೀಠೇ ಸುರಪೂಜಿತೆ'** ಅಂತಹ ಮಹಾಮಾಯೆ ಆ ಮಹಾಮಾರಿಯನ್ನು ಮಯಾ ಮಾಡಿ ಹಾಕಲಿ ಅಂತ ನಾವು ದುರ್ಗೆಯಲ್ಲಿ ಪ್ರಾರ್ಥನೆಯನ್ನು ಮಾಡೋಣ ಸಕಲ ಸಜ್ಜನರಿಗೂ ಕ್ಷೇಮವಾಗಲಿ ಅಂತ.

ಈ ರೀತಿ ಇದನ್ನು ನಿತ್ಯದಲ್ಲಿ ಪ್ರಾತಃಕಾಲದಲ್ಲಿ ಪಠಣ ಮಾಡಿದರೆ ಅವರ ಅಪೇಕ್ಷಿತವಾದದ್ದೆಲ್ಲ ಮೂರು ತಿಂಗಳಲ್ಲಿ ಸಿದ್ಧವಾಗುತ್ತದೆ, ಆರು ತಿಂಗಳಲ್ಲಿ ಅತಿ ಶ್ರೇಷ್ಠವಾದ ವರವನ್ನು ಕೊಡುತ್ತಾಳೆ ದುರ್ಗೆ, ಮೂರು ತಿಂಗಳು ಪಾರಾಯಣ ಮಾಡುವುದರ ಜೊತೆಗೆ ಪೂಜೆಯನ್ನೂ ಮಾಡಿದರೆ ದಿವ್ಯ ಸಕ್ಸೆಸ್ಸನ್ನು ಕೊಡುತ್ತಾಳೆ, ಒಂದು ವರ್ಷ ಪೂಜೆ ಮಾಡಿ

ಪಾರಾಯಣ ಮಾಡಿದರಂತೂ ಸಕಲ ಸಿದ್ಧಿಗಳನ್ನು ಕೊಡುತ್ತಾಳೆ ಎಂಬುದಾಗಿ ವೈಶಂಪಾಯನರು ತಿಳಿಸಿಕೊಡುತ್ತಾ ಇದ್ದಾರೆ. ಇಂತಹ ಮಹತ್ವ ದುರ್ಗಾ ದೇವಿಗೆ ಇದೆ ಎಂಬುದಾಗಿ ನಾವು ಚೆನ್ನಾಗಿ ಇಲ್ಲಿ ತಿಳಿಯಬೇಕು. ಈ ರೀತಿ ಇದನ್ನೆಲ್ಲಾ ಯಾರು ಹೇಳಿದ್ದಾರೆ ಪರಮಾತ್ಮ ಸ್ವತಃ ದುರ್ಗಾ ದೇವಿಯ ಎದುರಿಗೆ ಹೀಗೆ ಮುಂದೆ ನಿನ್ನ ಸ್ತೋತ್ರವನ್ನು ಮಾಡುತ್ತಾರೆ ಅಂತ ಹೇಳಿದ್ದಾನೆ ಅದನ್ನು ವೈಶಂಪಾಯನರು ಜನಮೇಜಯನಿಗೆ ಮೊದಲಿಗೆ ತಿಳಿಸಿದರು ಅರ್ಥಾತ್ ಹೀಗೆ ಪರಮಾತ್ಮ ಹಿಂದೆ ಹೇಳಿದ್ದ ಆನ್ನುವುದನ್ನು ತಿಳಿಸಿದರು. ಈ ಎಲ್ಲ ವಿಷಯಗಳನ್ನ ಕೇಳಿ ದುರ್ಗಾ ದೇವಿ ಹಾಗಾದರೆ ಇಡೀ ಜಗತ್ತಿಗೆ ಎಲ್ಲವನ್ನೂ ನಿಯಮನ ಮಾಡಿ, ಎಲ್ಲರ ಕಷ್ಟಗಳನ್ನು ಪರಿಹಾರ ಮಾಡಿ ಅನುಗ್ರಹ ಮಾಡುವವಳು ನಾನು ಅಂತ ನನ್ನನ್ನು ಸ್ತೋತ್ರ ಮಾಡುತ್ತಾರೆ ಅಂದರೆ ನಾನೇ ಸರ್ವೋತ್ತಮಳು ಎಂದು ಏನಾದರೂ ತಿಳಿದುಕೊಂಡಳಾ. **'ಸಾಚಾಪಿತಂ ನಮಸ್ಕೃತ್ಯ'** ಪರಮಾತ್ಮ ಇಷ್ಟು ಆದೇಶ ಮಾಡಿದರೆ ಪರಮಾತ್ಮನಿಗೆ ನಮಸ್ಕಾರ ಮಾಡಿ ನಿನ್ನ ಆಜ್ಞೆಯನ್ನು ಪರಿಪಾಲನೆ ಮಾಡುತ್ತೇನೆ ನೀನೇನು ಆದೇಶ ಮಾಡಿದ್ದಿಯೋ ಅದನ್ನು ಮಾಡುವವಳು ನಾನು ಎಂಬುದಾಗಿ ವಿನೀತಳಾಗಿ ಶಿರೋಧಾರಣ ಮಾಡಿ ಅಲ್ಲಿಂದ ಹೊರಟಿದ್ದಾಳೆ ಎಂಬುದಾಗಿ ತಿಳಿಸುತ್ತಾರೆ.

ಮುಂದೆ ಈ ಕಡೆಗೆ ದೇವಕಿ ವಸುದೇವನಿಂದ ಒಂದೊಂದಾಗಿ ಗರ್ಭಧಾರಣೆಯನ್ನು ಮಾಡುತ್ತಾ ಇದ್ದಾಳೆ. ಹುಟ್ಟಿದಂತೆ ಹುಟ್ಟಿದಂತೆ ಹಿಂದೆ ಕಥೆಯನ್ನು ನೀವು ತಿಳಿದಂತೆ ಆ ದುರ್ಗಾ ದೇವಿ ಆ ಕಾಲನೇಮಿಯ ಮಕ್ಕಳ ಶರೀರದಿಂದ ಒಂದೊಂದು ಜೀವವನ್ನು ತಂದು ಇಲ್ಲಿ ಇಡುತ್ತಾ ಇದ್ದಾಳೆ, ಒಂದೊಂದಾಗಿ ಕಂಸ ಅದನ್ನು ತೆಗೆದುಕೊಂಡು ಸಂಹಾರ ಮಾಡುತ್ತಾ ಇದ್ದಾನೆ. ಆ ಆರು ಜನರ ಹೆಸರು ಹಿಂದೆ ಕಾಲನೇಮಿಯ ಮಕ್ಕಳಾದಾಗ ಅವರ ಹೆಸರು ಏನು ಅಂತ ಕೇಳಿದಿರಿ ಹಂಸ ಮೊದಲಾದ ಹೆಸರುಗಳು ಈಗ ದೇವಕಿಯ ಮಕ್ಕಳಾಗಿ ಹುಟ್ಟಿದಾಗ ಅವರ ಹೆಸರನ್ನು ಭಾಗವತ ನವಮಸ್ಕಂಧದಲ್ಲಿ ಇಪ್ಪತ್ತೊಂದನೆಯ ಅಧ್ಯಾಯದಲ್ಲಿ ತಿಳಿಸುತ್ತದೆ.

ಕೀರ್ತಿಮಂತಂ ಸುಷೇಣಂ ಚ ಭದ್ರಸೇನಮುದಾರಧೀಃ ।

ಋಜುಂ ಸಮ್ಮರ್ದನಂ ಭದ್ರಂ ಸಂಕರ್ಷಣಮಹೀಶ್ವರಮ್ ॥ (09.21.54 ಭಾಗವತ)

ಕೀರ್ತಿಮಾನ್, ಸುಷೇಣ, ಭದ್ರಸೇನ, ಋಜು, ಸಮ್ಮರ್ದನ, ಭದ್ರ ಅಂತ ಆರು ಜನ ಮಕ್ಕಳು ಕೃಷ್ಣನ ಅಣ್ಣಂದಿರು. ಒಬ್ಬೊಬ್ಬರು ಹುಟ್ಟಿದಂತೆ ಹುಟ್ಟಿದಂತೆ ಯಾವ ದಯಾಮಯ ಇಲ್ಲದೇ ಇದ್ದಂತೆ ಕಂಸ ಕಲ್ಲಿನ ಮೇಲೆ ಅಪ್ಪಳಿಸಿ ಸಂಹಾರ ಮಾಡುತ್ತಾ ಇದ್ದಾನೆ. ಏಳನೆಯ ಗರ್ಭ, ಏಳನೆಯ ಗರ್ಭವನ್ನು ಧಾರಣೆ ಮಾಡಿದ್ದಾಳೆ ದುರ್ಗೆಗೆ ಪರಮಾತ್ಮ ಮೊದಲೇ ಆಜ್ಞೆಯನ್ನು ಮಾಡಿದ್ದ ದೇವಕಿ ಏಳನೆಯ ಗರ್ಭಧಾರಣೆ ಮಾಡಿ ಮೂರು ತಿಂಗಳು ಆಗುವವರೆಗೆ ಸುಮ್ಮನಿದ್ದಾಳೆ ದುರ್ಗೆ, ಮೂರು ತಿಂಗಳಾದ ತಕ್ಷಣ ಆ ಗರ್ಭವನ್ನು ಅಲ್ಲಿಂದ ಸಂ ಕರ್ಷಣ ಮಾಡಿ ಚೆನ್ನಾಗಿ ತೆಗೆದುಕೊಂಡು ಅದನ್ನು ರೋಹಿಣಿ ಗರ್ಭದಲ್ಲಿ ಪ್ರವೇಶ ಮಾಡಿದ್ದಾಳೆ. ರೋಹಿಣಿಗೆ ಈ ಮೊದಲೇ ಗರ್ಭಧಾರಣೆಯಾಗಿತ್ತು. ಆ ಗರ್ಭ ಇದ್ದಕ್ಕಿದ್ದ ಹಾಗೆ ಪಾತ ಆಯಿತು ಅಂತ ಬಹಳ ದುಃಖ ಪಡುತ್ತಾಳೆ

ಅರ್ಧರಾತ್ರೇ ಸ್ಥಿಥಂ ಗರ್ಭಂ ಪಾತಯನ್ತೀ ರಜಸ್ವಲಾ । (4.3 ವಿಷ್ಣುಪರ್ವ)

ಗರ್ಭಪಾತ ಆಯಿತು ಎಲ್ಲಿ ಅಂತ ನೋಡಿದರೆ ಆ ಪಾತ ಆದದ್ದು ಕಾಣಿಸಿಲ್ಲ ಅವಳಿಗೆ ಅದೃಶವಾಗಿ ಹೋಗಿದೆ ಅದು. ಆಗ ದುರ್ಗೆ ರೋಹಿಣಿ ದೇವಿಗೆ ಸಮಾಧಾನ ಮಾಡುತ್ತಾಳೆ ನೀನು ಏನು ಚಿಂತೆ ಮಾಡಬೇಡ ಅದು ಹೋಯಿತು ನಿನ್ನಲ್ಲಿ ಶ್ರೇಷ್ಠವಾದಂತಹ ಸಾಕ್ಷಾತ್ ಶೇಷ ದೇವರು ನಿನ್ನಲ್ಲಿ ಪ್ರವೇಶ ಮಾಡುತ್ತಾ ಇದ್ದಾರೆ. ಪರಮಾತ್ಮನ

ಶುಕ್ಲಕೇಶದ ಆವೇಶ ಆಗುತ್ತಾ ಇದೆ ಏನು ಚಿಂತೆ ಮಾಡಬೇಡ ಮಹಾ ಸೌಭಾಗ್ಯವತಿ ಆಗಿದ್ದೀ ನೀನು ಅಂತ ದುರ್ಗೆ ಆಶ್ವಾಸನೆಯನ್ನು ನೀಡುತ್ತಾಳೆ ಎಂಬುದಾಗಿ ಹೇಳುತ್ತಾರೆ ಅವಳಿಗೆ ಬಹಳ ಸಂತೋಷ ಆಗಿದೆ.

ಶ್ರೀಮದಾಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ತಿಳಿಸುತ್ತಾರೆ ಕಶ್ಯಪ ಹಾಗೂ ಅದಿತಿ ಇವರಿಬ್ಬರೂ ತಪಸ್ಸು ಮಾಡುವಾಗ ಪರಮಾತ್ಮನೂ ಅವತಾರ ಮಾಡಬೇಕು, ಶೇಷ ದೇವರೂ ಅವತಾರ ಮಾಡಬೇಕು ನಮ್ಮಲ್ಲಿ ಅಂತ ಅವರು ತಪಸ್ಸು ಮಾಡಿದ್ದಾರೆ. ಪರಮಾತ್ಮ ಕೃಷ್ಣನಾಗಿ ಅವತಾರ ಮಾಡಿದ, ಶೇಷ ದೇವರು ಅವತಾರ ಮಾಡಬೇಕಲ್ಲ ತಪಸ್ಸು ಮಾಡಿದ್ದಕ್ಕೆ ಅನ್ನುವುದಕ್ಕಾಗೇನೆ ಮೂರು ತಿಂಗಳು ದೇವಕಿಯ ಗರ್ಭದಲ್ಲಿ ಶೇಷ ದೇವರು ಇರಬೇಕಾಯಿತು ಇಲ್ಲ ಅಂದರೆ ಇದೆಲ್ಲ ಯಾಕೆ ಆಟ ಇಲ್ಲಿ ಮೂರು ಅಲ್ಲಿ ಏಳು ಇಬ್ಬರೂ ತಪಸ್ಸು ಮಾಡಿದ್ದಾರೆ. ಈ ಸಂದರ್ಭದಲ್ಲಿ ಶ್ರೀಕೃಷ್ಣ ಪರಮಾತ್ಮನ ಜೊತೆಗೆ ಅವನ ಅಣ್ಣನಾಗಿ ಶೇಷ ದೇವರು ಅವತಾರ ಮಾಡಬೇಕಾಗಿದೆ ಒಂದು ಬಾರಿ ಆದರೆ ತಪಸ್ಸು ಮಾಡಿದವರು ಇಬ್ಬರು ತಾಯಂದಿರು ಅದಿತಿ ಹಾಗೂ ಸುರಭಿ ಕಶ್ಯಪರ ಹೆಂಡಂದಿರೇ ಇಬ್ಬರೂ. ಅದಿತಿಯೂ ತಪಸ್ಸು ಮಾಡಿದ್ದಾಳೆ, ಸುರಭಿಯೂ ತಪಸ್ಸು ಮಾಡಿದ್ದಾಳೆ ಹೀಗಾಗಿ ಅದಿತಿಯ ಅವತಾರಳಾದ ದೇವಕಿಯಲ್ಲಿ ಮೂರು ತಿಂಗಳು ಶೇಷ ದೇವರು ಇರುವಂತೆ ಮಾಡಿ ಅವಳ ತಪಸ್ಸಿಗೂ ಒಂದು ಫಲ ಕೊಟ್ಟಂತೆ ಆಯಿತು.

ವಿಷ್ಣ್ವಾವೇಶೀ ಬಲವಾನ್ ಯೋ ಗುಣಾಧಿಕಃ
ಸ ಮೇ ಸುತಃ ಸ್ಯಾದಿತಿ ರೋಹಿಣೀ ಚ ॥ (12.111 ಮಭಾತಾನಿರ್ಣಯ)

ಮುಂದೆ ಸುರಭಿ ರೋಹಿಣಿಯಾಗಿ ಅವತಾರ ಮಾಡಿದ್ದಾಳಲ್ಲವಾ ಅವಳೂ ತಪಸ್ಸು ಮಾಡಿದ್ದಾಳೆ ಆದ್ದರಿಂದ ಆ ರೋಹಿಣಿ ದೇವಿಯಲ್ಲಿಯೂ ಕೂಡ ಪರಮಾತ್ಮನ ಶುಕ್ಲಕೇಶಾವೇಶದಿಂದ ಕೂಡಿದ ಶೇಷ ದೇವರನ್ನು ಏಳು ತಿಂಗಳು ಅಲ್ಲಿ ಬೆಳೆಯುವಂತೆ ಮಾಡಿ ರೋಹಿಣಿಯಿಂದಲೂ ಬಲರಾಮ ದೇವರು ಹುಟ್ಟುವಂತೆ ಮಾಡಿದ್ದಾರೆ ಇಬ್ಬರ ತಪಸ್ಸಿಗೂ ವರ ಕೊಟ್ಟಂತೆ ಆಯಿತು. ಯಾರು ತಪಸ್ಸು ಮಾಡಿದರೂ ಪರಮಾತ್ಮ ಅದಕ್ಕೆ ವ್ಯರ್ಥ ಮಾಡುವುದಿಲ್ಲ ಸಾರ್ಥಕಗೊಳಿಸುತ್ತಾನೆ, ಸಫಲ ಮಾಡುತ್ತಾನೆ ಅನ್ನುವುದನ್ನು ಈ ಮೂಲಕವಾಗಿ ನಮಗೆ ತಿಳಿಸಿಕೊಡುತ್ತಾ ಇದ್ದಾರೆ ಹಾಗೆ ಅಲ್ಲಿ ಸಂಕರ್ಷಣನ, ಬಲರಾಮ ದೇವರ ಅವತಾರವಾಗಿದೆ ಎಂಬುದಾಗಿ ತಿಳಿಸುತ್ತಾರೆ. ಹಿಂದೆ ತಿಳಿದಿದ್ದೀರಿ ಬಲಿಷ್ಠನಾದದ್ದರಿಂದ ಬಲ ಎಲ್ಲರನ್ನು ಸಂತೋಷಗೊಳಿಸುತ್ತಾನೆ ಆದ್ದರಿಂದ **'ರಮಯೇತೀತಿ ರಾಮಃ'** ಬಲಿಷ್ಠ ರಾಮ ಬಲರಾಮ, ಸಂಕರ್ಷಣ ಮಾಡಿದ್ದಾಳೆ ದುರ್ಗೆ ಆದ್ದರಿಂದ ಸಂಕರ್ಷಣ. ಪರಮಾತ್ಮ ಶೇಷ ದೇವರಲ್ಲಿ ಸಂಕರ್ಷಣ ರೂಪದಿಂದ ಸನ್ನಿಹಿತನಾಗಿ ಇರುತ್ತಾನೆ ಆದ್ದರಿಂದಲೂ ಆ ಶೇಷಾವತಾರರಾದ ಬಲರಾಮ ದೇವರಿಗೆ ಸಂಕರ್ಷಣ ಎಂಬಂತಹ ಹೆಸರನ್ನು ಇಟ್ಟಿದ್ದಾರೆ ಎಂಬುದಾಗಿ ನಾವು ತಿಳಿಯಬೇಕು.

ಇನ್ನು ಶ್ರೀಕೃಷ್ಣ ಪರಮಾತ್ಮ ವಸುದೇವನಲ್ಲಿ ಪ್ರವೇಶ ಮಾಡಿದ. ಪರಮಾತ್ಮನಿಗೆ ಯಾವುದೇ ತರಹದ ಗರ್ಭವಾಸಾದಿ ದುಃಖಗಳಿಲ್ಲ, ಶುಕ್ಲಶೋಣಿತ ಸಂಬಂಧ ಇಲ್ಲ, ಅಪ್ರಾಕೃತವಾದ ಶರೀರ, ಜ್ಞಾನಾನಂದಾತ್ಮಕವಾದ ಶುದ್ಧವಾದಂತಹ ಅನಂತಗುಣ ಸ್ವರೂಪವಾದಂತಹ ದೇಹ ಪರಮಾತ್ಮನದು. ಆದರೂ ಅವರ ತಪಸ್ಸಿಗೆ ವಿಶೇಷವಾಗಿ ಫಲ ಕೊಡಬೇಕು ಅಂತ ಸರ್ವತ್ರವ್ಯಾಪ್ತನಾದ ದೇವ ವಸುದೇವನಲ್ಲಿ ಪ್ರವೇಶ ಮಾಡಿದರೆ ಏನು ವಿಕಾರ ಆಗಬೇಕಾಗಿದೆ ಅವನಿಗೆ ಆ ರೀತಿಯಲ್ಲಿ ಒಂದು ಮನೆಯಲ್ಲಿ ನೀವು ಬಂದು ಹೊರಗೆ ಹೋಗುತ್ತಿರಲ್ಲ ಹಾಗೆ. ವಸುದೇವನ ದೇಹ ಇದೊಂದು ಗೇಹ ಇದ್ದ ಹಾಗೆ ಪರಮಾತ್ಮನಿಗೆ ಒಳಗೆ ಪ್ರವೇಶ ಮಾಡಿದ ಹೊರಗೆ ಬಂದ, ಬಂದು ದೇವಕಿಯ ದೇಹದಲ್ಲಿ ಪ್ರವೇಶ ಮಾಡಿದ ಅದು ಒಂದು ಗೇಹ. ಹಾಗೆ ಪರಮಾತ್ಮ ಸರ್ವತ್ರವ್ಯಾಪ್ತನೇ ವಿಶೇಷವಾಗಿ

ವಸುದೇವನಲ್ಲಿ ಸನ್ನಿಹಿತನಾಗಿ ಅವನ ದ್ವಾರಾ ದೇವಕಿ ದೇವಿಯಲ್ಲಿ ತಾನು ಸನ್ನಿಹಿತನಾಗಿ ಆದರೆ ಆ ಗರ್ಭವಾಸದ ಯಾವುದೇ ದುಃಖವಿಲ್ಲದೆ ಇದ್ದಂತೆ ಕೇವಲ ಆನಂದ ರೂಪನಾಗಿ ಅಲ್ಲಿದ್ದು ಅವಳಿಗೆ ವಿಶೇಷವಾದಂತಹ ಸೌಭಾಗ್ಯವನ್ನು ಕರುಣಿಸಿದ್ದಾನೆ ಎಂಬುದಾಗಿ ನಾವು ತಿಳಿಯಬೇಕು.

ಗರ್ಭಕಾಲೇ ತ್ವಸಮ್ಪೂರ್ಣೇ ಅಷ್ಟಮೇ ಮಾಸಿ ತೇ ಸ್ತ್ರಿಯೌ ।
ದೇವಕೀ ಚ ಯಶೋದಾ ಚ ಸುಷುವಾತೇ ಸಮಂ ತದಾ ॥ (4.11 ವಿಷ್ಣುಪರ್ವ)

ಯಾವ ಸಂದರ್ಭದಲ್ಲಿ ಇನ್ನೂ ಎಂಟು ತಿಂಗಳು ಪೂರ್ಣ ಆಗಿಲ್ಲ, ಒಂಬತ್ತು ತಿಂಗಳಾದ ಮೇಲೆ ಬಲರಾಮ ದೇವರು ಇಲ್ಲಿ ಮೂರು ತಿಂಗಳು ಅಲ್ಲಿ ಏಳು ತಿಂಗಳು ಹತ್ತು ತಿಂಗಳು, ಶ್ರೀಕೃಷ್ಣ ಪರಮಾತ್ರ ಮಾತ್ರ ಏಳೂವರೆ ತಿಂಗಳಿಗೇನೆ ಅವತಾರ ಮಾಡುತ್ತಾ ಇದ್ದಾನೆ. ಆ ಕಡೆಗೆ ಯಶೋದಾ ದೇವಿಯಲ್ಲಿ ದುರ್ಗಾ ದೇವಿಯೂ ಕೂಡ ಅವತಾರ ಮಾಡುತ್ತಾ ಇದ್ದಾಳೆ.

ತಮದ್ಭುತಂ ಬಾಲಕಮಂಬುಜೇಕ್ಷಣಂ ಚತುರ್ಭುಜಂ ಶಂಖಗದಾದ್ಯುದಾಯುಧಮ್ ।
ಶ್ರೀವತ್ಸಲಕ್ಷ್ಮಂಗಲಶೋಭಿಕೌಸ್ತುಭಂ ಪೀತಾಂಬರಂ ಸಾಂದ್ರಪಯೋದಸೌಭಗಮ್ ॥ (10.1.4.10 ಭಾಗವತ)

ಪರಮಾತ್ಮ ಅವತಾರ ಮಾಡುವಂತಹ ಸಂದರ್ಭದಲ್ಲಿ ಇನ್ನುಳಿದವರು ಅವತಾರ ಮಾಡುವ ರೀತಿಯಲ್ಲಿ ಅಳುತ್ತಾ ಪರಮಾತ್ಮ ಹುಟ್ಟಿದ್ದಲ್ಲ ಸಕಲಾಭರಣ ಭೂಷಿತನಾಗಿ, ದಿವ್ಯಮಂಗಲ ವಿಗ್ರಹನಾಗಿ ಪರಮಾತ್ಮ ಅವತಾರ ಮಾಡುತ್ತಾ ಇದ್ದಾನೆ. ವಾದಿರಾಜ ಶ್ರೀಪಾದಂಗಳವರು ಹೇಳುವಂತೆ ಅವತಾರ ಮಾಡಿದಾಗ ಸ್ವತಃ ತಂದೆ-ತಾಯಿ ದೇವಕಿ-ವಸುದೇವರೇ ಹೇಳುತ್ತಾರೆ ನೀನು ನಮ್ಮ ಮಗ ಅಲ್ಲ ಜಗನ್ನಿಯಾಮಕ, ಸರ್ವೋತ್ತಮ ಪ್ರಕೃತಿಗಿಂತಲೂ ಉತ್ತಮನಾದವನು ಪ್ರಕೃತಿ ವಿಲಕ್ಷಣ ಪ್ರಕೃತ್ಯತೀತ ಅಂತ ವರ್ಣನೆ ಮಾಡುವಾಗ ದೇವಕಿ-ವಸುದೇವರ ಮಗ ಅಂತ ಹೇಳುವುದಕ್ಕೆ ನೀವು ಯಾರು ಅಂತ ಕೇಳುತ್ತಾರೆ ವಾದಿರಾಜ ಶ್ರೀಪಾದಂಗಳವರು. ಅಂತಹ ಭಗವಂತ ಸಕಲಗುಣ ಪರಿಪೂರ್ಣನಾದ ಪರಮಾತ್ಮ ಪ್ರಾದುರ್ಭೂತನಾಗಿದ್ದಾನೆ, ಯುವಕನಾಗಿಯೇ ದರ್ಶನವನ್ನು ಕೊಟ್ಟಿದ್ದಾನೆ ಎಲ್ಲ ಕಡೆಗೆ ಉತ್ತಮವಾದ ವಾತಾವರಣ, ಎಲ್ಲಾ ತತ್ವಾಭಿಮಾನಿ ದೇವತೆಗಳಿಗೆ ಸಂತೋಷ, ಸಮುದ್ರಗಳೆಲ್ಲ ಶಾಂತವಾಗಿವೆ, ಪರ್ವತಗಳೆಲ್ಲ ಸಂತೋಷದಿಂದ ಕಂಪನ ಮಾಡುತ್ತಾ ಇವೆ, ಅಗ್ನಿಗಳೆಲ್ಲ ಶಾಂತವಾಗಿ ಪ್ರಜ್ವಲಿಸುತ್ತಾ ಇವೆ, ಎಲ್ಲ ಕಡೆಗೆ ಮಂದವಾದಂತಹ ವಾತ, **'ಮನ್ದ ಮನ್ದ ಮನುಗರ್ಜತಿ ಮೇಘಃ'** ಮೇಘಗಳು ಗರ್ಜನೆ ನಿಧಾನವಾಗಿ ಮಾಡುತ್ತಾ ಇವೆ ಸಂತೋಷವನ್ನು ಸೂಚನೆ ಮಾಡುತ್ತಾ ಇವೆ. ಈ ರೀತಿ ಆ ಭಗವಂತನ ಅವತಾರವಾಗುತ್ತ ಇದೆ ಅಭಿಜಿತ್ ಮುಹೂರ್ತ ಹಿಂದೆ ಹೇಳಿದಂತೆ ಅರ್ಧರಾತ್ರಿ ಕಾಲ ಜಯಂತಿ ಅಂತ ಕರೀತಾರೆ ಅದನ್ನು.

ರೋಹಿಣ್ಯಾ ಮರ್ಧರಾತ್ರೇ ತು ಯದಾ ಕೃಷ್ಣಾಷ್ಟಮೀ ಭವೇತ್ ।
ಜಯಂತೀ ನಾಮ ಸಾ ಪ್ರೋಕ್ತಾ ಸರ್ವಪಾಪಪ್ರಣಾಶಿನೀ ॥ (ಜಯಂತೀ ನಿರ್ಣಯಃ)

'ಯದಾ ಕಾಲಾಷ್ಟಮೀ ಭವೇತ್' ಎಂಬುದಾಗಿಯೂ ಹೇಳುತ್ತಾರೆ ಕಾಲಾ ಅಂದರೂ ಕೃಷ್ಣ ಅಂತೇ ಅರ್ಥ ಆ ಸರ್ವಗುಣ ಪರಿಪೂರ್ಣ ಕಲಕಾಮಧೇನುಃ ಅಂತ. ಕಾಳಾಷ್ಟಮೀ ಅಂತ ಕೆಲವರು ಹೇಳುತ್ತಾರೆ ಕಾಳಾ ಅಂದರೆ ಕೃಷ್ಣವರ್ಣ ಕಪ್ಪು ಬಣ್ಣ ಕೃಷ್ಣ ಅನ್ನುವ ಶಬ್ದಕ್ಕೆ ಹೇಗೆ ಪರಮಾತ್ಮ ನೀಲಮೇಘಶ್ಯಾಮ ಅಂತ ಅರ್ಥ ಇದೆಯೋ ಹಾಗೆ ಕಾಳಾ ಅಂದರೂ ನೀಲಮೇಘಶ್ಯಾಮ ಕೃಷ್ಣ ಕಾಳಾಷ್ಟಮೀ ಅಂತ ಹಾಗೂ ಇಟ್ಟುಕೊಳ್ಳಬಹುದು ಆದರೆ ಕಾಲಾಷ್ಟಮೀ

ಅಂತ. **'ರೋಹಿಣ್ಯಾ ಮಧ್ಯರಾತ್ರೇ ತು ಯದಾ ಕೃಷ್ಣಾಷ್ಟಮೀ ಭವೇತ್'** ಆ ಕಾಳಾಷ್ಟಮೀ ಅನ್ನುವ ಪಾಠ ಬಹಳ ಸ್ವರಸವಾದ ಪಾಠ ಯಾಕೆ ಅಂದರೆ ಗೀತಾಭಾಷ್ಯದಲ್ಲಿ ಹೇಳುವಾಗ **'ಕಲಕಾಮಧೇನುಃ'** ಅಂತ ಹೇಳಿದ್ದಾರೆ ಶ್ರೀಮದಾಚಾರ್ಯರು. ಕಾಳಾ ಅಂದರೆ ಬರೀ ಕಪ್ಪು ಬಣ್ಣದ ಕೃಷ್ಣ ಅಂತ ನೀಲಮೇಘಶ್ಯಾಮ ಅಂತ ಒಂದೇ ಒಂದು ಪರಮಾತ್ಮನ ಆ ಬಣ್ಣವನ್ನ ವರ್ಣನೆ ಮಾಡಿದಂತೆ ಆಗುತ್ತೆ. ಕೇವಲ ಬಣ್ಣವನ್ನ ಬಣ್ಣಿಸುವ ಶಬ್ದವನ್ನು ಬಳಸುವುದಕ್ಕಿಂತ ಕಲಕಾಮಧೇನುಃ ಅಂತ ಕಲ ಎಂಬ ಧಾತು ಇದು ಕಾಮಧೇನು ಎಲ್ಲ ಅರ್ಥವನ್ನು ಕೊಡುತ್ತೆ. ಅನಂತಗುಣ ಪರಿಪೂರ್ಣ ಅಂತ ಅರ್ಥ ಕಾಲಾ ಅನ್ನುವ ಶಬ್ದಕ್ಕೆ ಕಾಳಾ ಅಂದರೆ ಬರೇ ನೀಲಮೇಘಶ್ಯಾಮ ಅಂತ ಅರ್ಥ ಆದರೆ ಕಾಲಾ ಅಂದರೆ ಅನಂತಗುಣ ಪರಿಪೂರ್ಣನಾದ ಶ್ರೀಕೃಷ್ಣ ಪರಮಾತ್ಮ ಅನ್ನುವ ಒಂದು ಅದ್ಭುತವಾದ ಅರ್ಥ ಆ ಕಾಲ ಶಬ್ದಕ್ಕೆ ಬರುತ್ತದೆ. ಆದ್ದರಿಂದ ಅಂತಹ **'ಯದಾ ಕಾಲಾಷ್ಟಮೀ ಭವೇತ್'** ಆ ರೋಹಿಣಿ ನಕ್ಷತ್ರ ಹಾಗೂ ಕಾಲಾಷ್ಟಮೀ, ಕೃಷ್ಣಾಷ್ಟಮೀ ಇವೆರಡು ಮಧ್ಯರಾತ್ರಿ ಇದ್ದಾಗ ಅದಕ್ಕೆ ಜಯಂತೀ ಅಂತ ಕರೀತಾರೆ. ಅಂತಹ ಶ್ರೇಷ್ಠವಾದ ವಿಜಯ ಮುಹೂರ್ತ ಅಂತ ಅದಕ್ಕೆ ಹೆಸರು

ಮುಹೂರ್ತೋ ವಿಜಯೋ ನಾಮ ಯತ್ರ ಜಾತೋ ಜನಾರ್ದನಃ ॥ (4.17 ವಿಷ್ಣುಪರ್ವ)

ನೋಡಿ **'ಯತ್ರ ಜಾತೋ ಜನಾರ್ದನಃ'** ಹರಿವಂಶದ ಪ್ರಯೋಗ ಹೇಗಿದೆ ನೋಡಿ ಜನ ಅಂದರೆ ಹುಟ್ಟದೇ ಇದ್ದವ ಅಂತ ಅರ್ಥ.

ನ ಜಾಯತೇ ಇತಿ ಜನಃ ಅರ್ದಯತಿ ಸಂಸಾರಂ ಇತಿ ।

ಅರ್ದನಃ ಜನಶ್ಚಾಸಾವರ್ದನಶ್ಚ ಜನಾರ್ದನಃ ಅರ್ಧನಃ ॥ (ಗೀತಾಭಾಷ್ಯ)

ಎಲ್ಲರ ಸಂಸಾರವನ್ನು ತನ್ನ ಸ್ಮರಣೆ ಮಾಡುವ ಮಾತ್ರದಿಂದ ಕಳೆಯುವವ, ಪುನರ್ಜನ್ಮವನ್ನೇ ಕಳೆಯುವವ ಇನ್ನೊಬ್ಬರಿಗೆ, ತಾನು ಜನ ಜನ್ಮವೇ ಇಲ್ಲದೇ ಇದ್ದವ ಅಂತಹ ಪರಮಾತ್ಮ ಹುಟ್ಟಿದ ಅನ್ನುವ ಶಬ್ದಕ್ಕೆ ಅರ್ಥ ಏನು ಕೇವಲ ಪ್ರಾದುರ್ಭೂತನಾನಾದ ಅಂತ ಅರ್ಥ ತಿಳಿದುಕೊಳ್ಳಬೇಕು ಅಂತ ನಮಗೆ ಈ ಸಂದರ್ಭದಲ್ಲಿ ಹರಿವಂಶ ತಿಳಿಸಿಕೊಡುತ್ತಾ ಇದೆ. ಯಾರೂ ನಗಾರಿಯನ್ನು ಬಾರಿಸಿಲ್ಲ ತನ್ನಷ್ಟಕ್ಕೆ ತಾನೇ ದೇವಲೋಕದಲ್ಲಿ ನಗಾರಿಗಳು ಬಾರಿಸುತ್ತಾ ಇವೆ ಆ ನಗಾರಿಯ ಅಭಿಮಾನಿ ದೇವತೆಗಳಿಗೆ ಸಂತೋಷ ಕೃಷ್ಣ ಅವತಾರ ಮಾಡಿದಾಗ ನಾವು ಬಾರಿಸದೇ ಇನ್ನು ಯಾವ ಸಂದರ್ಭದಲ್ಲಿ ನಾವು ಶಬ್ದ ಮಾಡಬೇಕು ಅಂತ. ಆಕಾಶದಿಂದ ಇಂದ್ರ ದೇವರು ಪುಷ್ಪವೃಷ್ಟಿಯನ್ನು ಮಾಡುತ್ತಾ ಇದ್ದಾರೆ, ದೇವತೆಗಳೆಲ್ಲ ಸ್ತೋತ್ರ ಮಾಡುತ್ತಾ ಇದ್ದಾರೆ, ಗಂಧರ್ವರು ಹಾಡುತ್ತಾ ಇದ್ದಾರೆ, ಅಪ್ಸರಾ ಸ್ತ್ರೀಯರು ನರ್ತನೆ ಮಾಡುತ್ತಾ ಇದ್ದಾರೆ, ಮಹರ್ಷಿಗಳು ವೇದಮಂತ್ರಗಳಿಂದ ಪರಮಾತ್ಮನನ್ನು ಕೊಂಡಾಡುತ್ತಾ ಇದ್ದಾರೆ. ಈ ರೀತಿ ಆ ಪರಮಾತ್ಮನ ಅದ್ಭುತವಾದ ವೈಭವ ಸ್ತೋತ್ರ ನಡೆಯುತ್ತಾ ಇರುವಾಗ ವಸುದೇವ ಕೈಜೋಡಿಸಿದ ಆದಷ್ಟು ಬೇಗ ಶಿಶು ರೂಪವನ್ನು ತೆಗೆದುಕೊಳ್ಳಪ್ಪಾ ಕಂಸನ ಭಯ ಇದೆ ನಮಗೆ **'ಭೀತೋಹಂ ದೇವ ಕಂಸಸ್ಯ,'** [1] ಆಗ ಪರಮಾತ್ಮ ಶಿಶು ರೂಪವನ್ನು ತೆಗೆದುಕೊಂಡು ಸಣ್ಣ ಮಗುವಿನ ರೂಪದಲ್ಲಿ ದೇವಕಿಯ ತೊಡೆಯ ಮೇಲೆ ಕಾಣಿಸಿಕೊಂಡಿದ್ದಾನೆ. ಪರಮಾತ್ಮನ ಆಜ್ಞೆಯಂತೆ ವಸುದೇವ ಶ್ರೀಕೃಷ್ಣ ಪರಮಾತ್ಮನನ್ನು ಕರೆದುಕೊಂಡು ನಂದನ ಮನೆಗೆ ಹೋಗುತ್ತಾ ಇದ್ದಾನೆ ಈ ಕಥೆಯೆಲ್ಲ ನಿಮಗೆ ಗೊತ್ತು. ಯಾವ ಬಂಧನಗಳು **'ಕರಸ್ಥ ದೇವಸ್ಯ ಕುತೋಂತರಾಯಃ'** [2] ಅಂತ ವಾದಿರಾಜ ಶ್ರೀಪಾದಂಗಳವರು ತಿಳಿಸಿದಂತೆ ಕೈಯಲ್ಲಿ ಶ್ರೀಕೃಷ್ಣ ಪರಮಾತ್ಮನನ್ನು ಹಿಡಿದುಕೊಂಡು ಹೊರಟರೆ ತನ್ನಷ್ಟಕ್ಕೆ ತಾನೆ

1. 4.23 ವಿಷ್ಣುಪರ್ವ ; 2. 1ನೇ ಸರ್ಗ 59ನೇ ಶ್ಲೋಕ ಶ್ರೀರುಗ್ಮಿಣೀಶವಿಜಯ

ಬಾಗಿಲುಗಳು ತೆರೆದಿವೆ, ಎಲ್ಲರೂ ನಿದ್ರೆಯಲ್ಲಿದ್ದಾರೆ ಕಂಸನ ಭೃತ್ಯರು ಯಾರಿಗೂ ಎಚ್ಚರ ಇಲ್ಲ, ಬಾಗಿಲು ತೆರೆದಿದೆ, ಶೇಷ ದೇವರೇ ಒಂದು ತೊಟ್ಟು ಹನಿ ದೇವರಿಗೆ ಸಿಡಿಯದೇ ಇದ್ದಂತೆ ಛತ್ರದ ರೂಪದಲ್ಲಿ ನಿಂತಿದ್ದಾರೆ, ಯಮುನೆ ದಾರಿ ಕೊಟ್ಟಿದ್ದಾಳೆ ಕೃಷ್ಣ ಪರಮಾತ್ಮನನ್ನು ಕರೆದುಕೊಂಡು ಯಶೋದಾ ದೇವಿಯ ಶಯನದಲ್ಲಿ ಅವಳಿಗೆ ನಿದ್ರೆ

ನ ತಲ್ಲಿಂಗಂ ಪರಿಶ್ರಾಂತಾ ನಿದ್ರಯಾऽಪಗತಸ್ಮೃತಿಃ ॥ (10.1.4.53 ಭಾಗವತ)

ತನಗೆ ಹುಟ್ಟಿದ್ದು ಹೆಣ್ಣೋ ಗಂಡೋ ಗೊತ್ತಿರಲಿಲ್ಲ ಯಶೋದೆಗೆ ಹುಟ್ಟಿದ್ದು ಹೆಣ್ಣು ಆದರೆ ಗಂಡು ಕೂಸನ್ನು ಅಲ್ಲಿಟ್ಟು ಹೆಣ್ಣು ಕೂಸನ್ನು ತೆಗೆದುಕೊಂಡು ಬಂದಿದ್ದಾನೆ ದುರ್ಗೆಯನ್ನು ವಸುದೇವ ಮತ್ತೆ ಮೊದಲಿನಂತೆ ದ್ವಾರ ಎಲ್ಲ ಹಾಕಿಕೊಂಡಿದೆ. ಆಗ ಧ್ವನಿ ಮಾಡುತ್ತಾ ಇದೆ ಕೂಸು ಎಲ್ಲರೂ ಎಚ್ಚರ ಆಗಿದ್ದಾರೆ ಕಂಸನಿಗೆ ಸುದ್ದಿಯನ್ನು ತಿಳಿಸಿದ್ದಾರೆ ಓಡಿ ಬಂದ ಕಂಸ ಎಂಟನೆಯ ಗರ್ಭ ಇದರಿಂದಲೇ ನನಗೆ ಮೃತ್ಯು ಅಂತನ್ನುವ ಭಾರೀ ಭಯ ಇದೆ. ಹಿಂದಿನ ಮಕ್ಕಳನ್ನು ಸುಮ್ಮನೆ ಸಂಶಯಕ್ಕೆ ನಾರದರು ಹೇಳಿದರಂತೆ ಯಾವುದು ಎಂಟನೆಯದು ಅಂತ ಗೊತ್ತಾಗುವುದಿಲ್ಲ ಒಂದನೆಯದಿಂದ ಎಣಿಸಿದರೆ ಕೊನೆಯದು ಎಂಟನೆಯದು, ಅಲ್ಲಿಂದ ಎಣಿಸಿದರೆ ಒಂದನೆಯದ್ದು ಎಂಟನೆಯದು ಆಗಬಹುದು ಈ ಸಂಶಯಕ್ಕೆ ಉಳಿದವರನ್ನು ಕೊಂದಾಯಿತು. ಈಗಂತೂ ಇನ್ನು ಉಳಿದೇ ಇಲ್ಲ ಇದೇ ಕೊನೆ ಗರ್ಭ ಇನ್ನು ಮೃತ್ಯು ಇದ್ದರೆ ಇದರಿಂದಲೇ ಇರಬೇಕು ಅನ್ನುವ ನಿಶ್ಚಯದಿಂದ ಓಡೋಡಿ ಬರುತ್ತಾ ಇದ್ದಾನೆ.

ಹಿತ್ವಾ ಗರ್ಭತನುಂ ಸಾ ತು ಸಹಸಾ ಮುಕ್ತಮೂರ್ಧಜಾ ॥ (4.37 ವಿಷ್ಣುಪರ್ವ)

ಆ ದುರ್ಗಾ ದೇವಿಯ ಕೂದಲು ಇನ್ನು ಗರ್ಭದ ನೀರಿನಿಂದ ಒದ್ದೆಯಾಗಿತ್ತಂತೆ ಹಾಗೆ ಅಂತಹ ಆ ಕೂಸಿನ ರೂಪದಲ್ಲಿರುವ ಆ ದುರ್ಗೆಯನ್ನು ಮುಂದೆ ಇಡುತ್ತಾ ಇದ್ದಾಳೆ ದೇವಕಿ. ಬೇಡ ಅಂತ ಎಷ್ಟು ಹೇಳುತ್ತಾ ಇದ್ದಾಳೆ ಈ ಒಂದು ಕೂಸನ್ನು ಆದರೂ ನನಗೆ ಉಳಿಸು ಅಂತ ಹೆಣ್ಣು ಇವಳಿಂದ ನಿನಗೆ ಮೃತ್ಯು ಆಗುವ ಪ್ರಶ್ನೆಯೇ ಇಲ್ಲ, ನೀನು ಮಹಾಪರಾಕ್ರಮಿ ಹೆಣ್ಣು ನಿನಗೆ ಹೇಗೆ ಮೃತ್ಯು ತರಲಿಕ್ಕೆ ಸಾಧ್ಯ ಅಂತ ಏನು ಹೇಳಿದರೂ ಕೇಳಲಿಲ್ಲ, ದುಷ್ಟನಾದಂತಹ ಕಂಸ ಅದನ್ನು ಕಸಿದುಕೊಂಡು ಎತ್ತಿ ಅಪ್ಪಳಿಸಬೇಕು ಅಂತ ನೋಡುತ್ತಾನೆ ಆಕಾಶಕ್ಕೆ ಹಾರಿ ಹೋಗಿದ್ದಾಳೆ.

ಜಗಾಮ ಕಂಸಮಾದಿಶ್ಯ ದಿವ್ಯಸ್ರಗನುಲೇಪನಾ ॥ (4.37 ವಿಷ್ಣುಪರ್ವ)

ಹಾರಶೋಭಿತಸರ್ವಾಙ್ಗೀ ಮುಕುಟೋಜ್ಜ್ವಲಭೂಷಿತಾ ॥ (4.38 ವಿಷ್ಣುಪರ್ವ)

ಸರ್ವಾಭರಣ ಭೂಷಿತಳಾಗಿ ದೊಡ್ಡದಾದ ರೂಪವನ್ನು ತೆಗೆದುಕೊಂಡು ನೃತ್ಯವನ್ನು ಮಾಡುತ್ತಾ ಕಂಸನನ್ನು ನೋಡಿ ಅಪಹಾಸವನ್ನು ಮಾಡುತ್ತಾ ಇದ್ದಾಳೆ ಏನು ಮೂರ್ಖ ನೀನು.

ಜಹಾಸ ಚ ಮಹಾಹಾಸಂ ಕಂಸಂ ಚ ರುಷಿತಾಬ್ರವೀತ್ । (4.42 ವಿಷ್ಣುಪರ್ವ)

ಕಂಸ ಕಂಸಾತ್ಮನಾಶಾಯ ಯದಹಂ ಘಾತಿತಾ ತ್ವಯಾ ॥ (4.43 ವಿಷ್ಣುಪರ್ವ)

ನನ್ನನ್ನು ಕೊಲ್ಲಬೇಕು ಅನ್ನುವುದಕ್ಕಾಗಿ ನೀನು ಏನು ಪ್ರಯತ್ನ ಮಾಡುತ್ತಾ ಇದ್ದೀಯಲ್ಲ ನಿನ್ನನ್ನು ಸಂಹಾರ ಮಾಡುವಂತಹ ಮೃತ್ಯು ಇನ್ನೊಂದು ಕಡೆಗೆ ಬೆಳೆಯುತ್ತಾ ಇದೆ. ನಾನು ನಿನ್ನನ್ನು ಸುಮ್ಮನೆ ಬಿಡುವುದಿಲ್ಲ ನನ್ನ ಕೈಗಳಿಂದ ನಿನ್ನ ದೇಹವನ್ನು ಹರೆದು ನಿನ್ನ ದೇಹದೊಳಗಿನ ರಕ್ತವನ್ನು ಪಾನ ಮಾಡುತ್ತೇನೆ ಅಂತ

ಪಾಟಯಿತ್ವಾ ಕರೈರ್ದೇಹಮುಷ್ಣಂ ಪಾಸ್ಯಾಮಿ ಶೋಣಿತಮ್ ॥ (4.44 ವಿಷ್ಣುಪರ್ವ)

ಎಂಬುದಾಗಿ ಅವನನ್ನು ಹೆದರಿಸಿ ಬೆದರಿಸಿ ಅದೃಶ್ಯಳಾಗಿ ಪರಮಾತ್ಮನ ಆಜ್ಞೆಯಂತೆ ವಿಂಧ್ಯ ಪರ್ವತದಲ್ಲಿ ತಾನು ಪೂಜೆಯನ್ನು ಸ್ವೀಕಾರ ಮಾಡುತ್ತಾ ಅಲ್ಲಿ ಸನ್ನಿಹಿತಳಾಗಿದ್ದಾಳೆ ಇವತ್ತಿಗೂ ವಿಂಧ್ಯಾಚಲದಲ್ಲಿ ದುರ್ಗಾ ದೇವಸ್ಥಾನ ಇದೆ. ಈ ಕಡೆಗೆ ಒಂದು ಸೂಕ್ಷ್ಮ ರೂಪದಿಂದ ವಸುದೇವ ದೇವಕಿಯರಿಗೆ ಮಾತ್ರ ಕಾಣುವಂತೆ ದೇವಕಿಯ ತೊಡೆಯ ಮೇಲೆ ಒಂದು ರೂಪದಿಂದ ಇದ್ದಾಳೆ ದುರ್ಗೆ ಆ ದುರ್ಗೆಯನ್ನು ದೇವಕಿ ಬೆಳೆಸುತ್ತಾ ಇದ್ದಾಳೆ, ಆನಂದ ಪಡುತ್ತಾ ಇದ್ದಾಳೆ. ಎಲ್ಲ ಮಕ್ಕಳನ್ನು ಕಳೆದುಕೊಂಡೆ ಅನ್ನುವ ದುಃಖ ಅವಳಿಗೆ ಇರಬಾರದು, ಮಗುವನ್ನು ಬೆಳಸಿದ ಆನಂದ ಅವಳಿಗೆ ಇರಬೇಕು ಅನ್ನುವುದಕ್ಕೆ ಅವರಿಬ್ಬರಿಗೆ ಮಾತ್ರ ಗೊತ್ತಾಗುವ ರೀತಿಯಲ್ಲಿ ದೇವಕಿ ವಸುದೇವರಿಗೆ ದುರ್ಗೆಯು ಒಲಿದು ಬಂದಿದ್ದಾಳೆ ಶಿಶು ರೂಪದಲ್ಲಿ. ಇನ್ನೊಂದು ರೂಪದಿಂದ ತಾನು ಎಲ್ಲ ಜಗತ್ತಿನಲ್ಲಿ ವ್ಯಾಪ್ತಳಾಗಿ ಪೂಜೆಯನ್ನು ಸ್ವೀಕಾರ ಮಾಡುತ್ತಾ ಇದ್ದಾಳೆ ಎಂಬುದಾಗಿ ತಿಳಿಸಿಕೊಡುತ್ತಾರೆ.

ಈ ಶ್ರೀಕೃಷ್ಣ ಪರಮಾತ್ಮನಿಗೆ **'ಕೃಷ್ಣ'** ಎಂಬುದಾಗಿ ಕರೆಯುವುದಕ್ಕೆ ಅನೇಕ ಕಾರಣಗಳಿವೆ ಒಂದು ಬ್ರಹ್ಮವೈವರ್ತ ಪುರಾಣದಲ್ಲಿ ತಿಳಿಸುವ ಒಂದು ಕಾರಣವನ್ನು ತಿಳಿಯೋಣ.

ಸ ಚಾತ್ಮಾ ಪರಮಂ ಬ್ರಹ್ಮ ಕೃಷ್ಣ ಇತ್ಯಭಿಧೀಯತೇ ॥
ಕೃಷಿಸ್ತದ್ಭಕ್ತಿ ವಚನೋ ನಶ್ಚ ತದ್ದಾಸ್ಯಕಾರಕಃ ।
ಭಕ್ತಿದಾಸ್ಯ ಪ್ರದಾತಾ ಯಃ ಸ ಕೃಷ್ಣಃ ಪರಿಕೀರ್ತಿತಃ ॥ (ಬ್ರಹ್ಮವೈವರ್ತ ಪುರಾಣ, ಪ್ರಕೃತಿಖಂಡ, 2 ನೇ ಅಧ್ಯಾಯ)

ಪುರಾಣದಲ್ಲಿ ಸ್ವತಃ ವೇದವ್ಯಾಸ ದೇವರು ಮಾಡುವಂತಹ ನಿರ್ವಚನ ಬಹಳ ಅದ್ಭುತವಾದದ್ದು ಮೂಲಭೂತವಾದದ್ದು. ನಾವು ನಮ್ಮ ತಲೆಗೆ ಬಂದ ಅರ್ಥವನ್ನು ತಿಳಿದುಕೊಳ್ಳುವುದು ಬೇರೆ ವೇದವ್ಯಾಸ ದೇವರು ಹೇಳುತ್ತಾರೆ ಕೃಷಿ ಅನ್ನುವುದಕ್ಕೆ ಭಕ್ತಿ ಅಂತ ಅರ್ಥ. ನಾವು ಎಷ್ಟು ಚೆನ್ನಾಗಿ ಕೃಷಿ ಮಾಡುತ್ತೇವೆ ಅಷ್ಟು ಚೆನ್ನಾಗಿ ಪೈರುಗಳು ಬರುತ್ತೆ ಹಾಗೆ ಎಷ್ಟು ಚೆನ್ನಾಗಿ ಭಕ್ತಿಯನ್ನು ಮಾಡುತ್ತೇವೆ ಅಷ್ಟು ಚೆನ್ನಾಗಿ ಮೋಕ್ಷವನ್ನು ಪಡೆಯಬಹುದಲ್ಲ. ಕೃಷಿ ಚೆನ್ನಾಗಿ ಮಾಡಿದಂತೆ ಫಲ ಚೆನ್ನಾಗಿ ನಮಗೆ ಹೊಲದಲ್ಲಿ ಸಿಗುವಂತೆ ಭಕ್ತಿಯನ್ನು ಚೆನ್ನಾಗಿ ಮಾಡಿದರೆ ಮುಕ್ತಿ ಚೆನ್ನಾಗಿ ಸಿಗುತ್ತದೆ ಅನ್ನುವ ದೃಷ್ಟಿಯಲ್ಲಿ ಭಕ್ತಿಗೆ ಕೃಷಿ ಅಂತ ಕರೆಯುತ್ತಾರಂತೆ **'ಕೃಷಿಸ್ತದ್ಭಕ್ತಿವಚನಃ'**. ಇನ್ನು **'ನ'**, **'ನ'** ಅನ್ನುವುದಕ್ಕೆ ಪರಮಾತ್ಮನ ದಾಸ್ಯ ಅಂತ ಅರ್ಥ. **'ನಶ್ಚ ತದ್ದಾಸ್ಯಕಾರಕಃ'** ಆ ಪರಮಾತ್ಮನಿಗೆ ನತರಾಗಿ, ಅವನತ ಶಿರೋಧರರಾಗಿ, ತಲೆಬಾಗಿ ವರ್ತನೆ ಮಾಡುವ ಏನು ದಾಸ್ಯ ಇದೆ ಅದು **'ನ'** ಎಂಬ ಶಬ್ದದ ಅರ್ಥ. ಹೀಗಾಗಿ ಭಕ್ತಿ ಮತ್ತು ದಾಸ್ಯ ಕೃಷಿ **'ನ'** ಇವೆರಡನ್ನೂ ಕೊಡುತ್ತಾನೆ ಜನರಿಗೆ ತನ್ನಲ್ಲಿ, ತನ್ನ ಭಕ್ತಿ ತನ್ನ ದಾಸ್ಯಗಳನ್ನು ಕೊಟ್ಟು ಉದ್ಧಾರ ಮಾಡುತ್ತಾನೆ ಅನ್ನುವುದಕ್ಕಾಗಿ ಅವನಿಗೆ **'ಕೃಷ್ಣ'** ಅಂತ ಕರೆಯುತ್ತಾರೆ. ಇನ್ನೊಂದು ಅರ್ಥವನ್ನು ವೇದವ್ಯಾಸ ದೇವರು ಹೇಳುತ್ತಾರೆ

ಕೃಷಿಶ್ಚ ಸರ್ವವಚನೋ ನಕಾರೋ ಬೀಜವಾಚಕಃ ।
ಸರ್ವಬೀಜಂ ಪರಂಬ್ರಹ್ಮ ಕೃಷ್ಣ ಇತ್ಯಬಿಧೀಯತೇ ॥ (ಬ್ರಹ್ಮವೈವರ್ತ ಪುರಾಣ, ಪ್ರಕೃತಿಖಂಡ, 2ನೆ ಅಧ್ಯಾಯ)

ಪರಮಾತ್ಮನಿಗೆ **'ಕೃಷ್ಣ'** ಅಂತ ಯಾಕೆ ಕರೀತಾರೆ ಅಂದರೆ **'ಕೃಷಿ'** ಅಂದರೆ ಸಕಲ ಜಗತ್ತು **'ನ'** ಅಂದರೆ ಬೀಜ ಸಕಲ ಜಗತ್ತಿಗೆ ಮೂಲ ಕಾರಣನಾದದ್ದರಿಂದ ಆ ಪರಮಾತ್ಮನಿಗೆ **'ಕೃಷ್ಣ'** ಎಂಬುದಾಗಿ ಕರೆಯುತ್ತಾರೆ ಅಂತ ನಾವು ತಿಳಿಯಬೇಕು.

ಇನ್ನು ದುರ್ಗಾ ದೇವಿಗೆ **'ದುರ್ಗಾ'** ಅಂತ ಯಾಕೆ ಕರೆಯುತ್ತಾರೆ ಎಂಬುದಾಗಿಯೂ ಕೂಡ ಬ್ರಹ್ಮವೈವರ್ತ ಪುರಾಣ ನಮಗೆ ತಿಳಿಸಿಕೊಡುತ್ತದೆ.

ದುರ್ಗೋ ದೈತ್ಯೆ ಮಹಾವಿಘ್ನೇ ಭವಬಂಧೇ ಕುಕರ್ಮಣಿ ।
ಶೋಕೇ ದುಃಖೇ ಚ ನರಕೇ ಯಮದಂಡೆ ಚ ಜನ್ಮನಿ ।
ಮಹಾಭಯೇ ಅತಿರೋಗೇ ಚಾಪ್ಯಾಶಬ್ದೋಹಂತೃವಾಚಕಃ ॥ (ಬ್ರಹ್ಮವೈವರ್ತ ಪುರಾಣ)

ದುರ್ಗ ಶಬ್ದಕ್ಕೆ ಹತ್ತು ಅರ್ಥಗಳನ್ನು ಹೇಳುತ್ತದೆ ಬ್ರಹ್ಮವೈವರ್ತ ಪುರಾಣ. ದುರ್ಗಾ ಅಂದರೆ ಮಹಾದೈತ್ಯ ಅಂತ ಅರ್ಥ **'ಆ'** ಎಂಬ ಶಬ್ದಕ್ಕೆ ನಾಶ ಮಾಡುವವಳು ಅಂತ ಅರ್ಥ **'ಆಶಬ್ದೋಹಂತೃವಾಚಕಃ' 'ಆ'** ಅಂದರೆ ನಾಶ ಮಾಡುವವಳು. ಏನೇನು ನಾಶ ಮಾಡುತ್ತಾಳೆ ಅಂದರೆ ದುರ್ಗಾ ಅಂದರೆ ದೈತ್ಯ ದೈತ್ಯರನ್ನು ನಾಶ ಮಾಡುವವಳು, ಮಹಾವಿಘ್ನಗಳನ್ನು ನಾಶ ಮಾಡುವವಳು, ಸಂಸಾರದ ಬಂಧನಕ್ಕೆ ಕಾರಣವಾದ ದುಷ್ಕರ್ಮಗಳ ನಾಶ ಮಾಡುವವಳು, ಶೋಕ ನಾಶ ಮಾಡುವವಳು, ದುಃಖ ನಾಶ ಮಾಡುವವಳು, ನರಕ ನಾಶ ಮಾಡುವವಳು, ಯಮ ದಂಡವನ್ನು ತಪ್ಪಿಸುವವಳು, ಪುನರ್ಜನ್ಮವನ್ನು ತಪ್ಪಿಸುವವಳು, ಮಹಾ ಭಯವನ್ನು ತಪ್ಪಿಸುವವಳು, ಅತಿ ವೇಗವನ್ನು ತಪ್ಪಿಸುವವಳು. ಈ ಹತ್ತು ದೋಷಗಳನ್ನು ನಾಶ ಮಾಡುತ್ತಾಳೆ ಅನ್ನುವುದಕ್ಕಾಗಿ **ದುರ್ಗಾ** ಎಂಬುದಾಗಿ ಅವಳನ್ನು ಕರೆಯುತ್ತಾರೆ ಅಂತ ಎಷ್ಟು ಅದ್ಭುತವಾದ ಅರ್ಥವನ್ನು ವೇದವ್ಯಾಸ ದೇವರು ನಮಗೆ ತಿಳಿಸಿಕೊಡುತ್ತಾರೆ. ಇದೆಲ್ಲ ಸಾಮವೇದದ ಕೌಥುಮ ಶಾಖೆಯಲ್ಲಿ ಹೇಳಿದಂತಹ ಅರ್ಥಗಳು ಅಂತ ವೇದವ್ಯಾಸ ದೇವರು ಸ್ವಯಂ ಅವರೇ ಪ್ರಮಾಣ ಆದರೆ ಕೌಥುಮ ಶಾಖೆಯಲ್ಲಿ ಈ ಎಲ್ಲ ಅರ್ಥಗಳನ್ನು ಹೇಳಿದ್ದಾರೆ ಅಂತ ಆ ಕೌಥುಮ ಶಾಖೆಯ ಉದಾಹರಣೆಯನ್ನು ಮಾಡುತ್ತಾರೆ. ಇಂತಹ ಆ ಕೃಷ್ಣ ಹಾಗೂ ಅವನ ತಂಗಿ ನಿತ್ಯಾವಿಯೋಗಿನಿಯಾದ ಪತ್ನಿಯಾದರೂ ಅವತಾರದಲ್ಲಿ ತಂಗಿ ಆದ ದುರ್ಗಾ ಅವರಿಬ್ಬರ ಆ ಹೆಸರಿನ ಅರ್ಥವನ್ನು ನಾವು ಚೆನ್ನಾಗಿ ತಿಳಿದುಕೊಂಡು ಅವರ ವಿಶೇಷವಾದಂತಹ ಸ್ಮರಣೆಯನ್ನು ಮಾಡಬೇಕು ಎಂಬುದಾಗಿ ತಿಳಿಸುತ್ತಾರೆ.

ಈ ಕಡೆಗೆ ಕಂಸ ದೇವಕಿಗೆ ಬಂದು ಕಾಲಿಗೆ ಬಿದ್ದ ಕ್ಷಮಾ ಮಾಡಿಬಿಡು ನನಗೆ ಗೊತ್ತಾಗಲಿಲ್ಲ ಎಲ್ಲಾ ಮೋಸ ಆಗಿಹೋಯಿತು ನೀನು ತಂಗಿ ನಿನ್ನ ಎಲ್ಲ ಮಕ್ಕಳನ್ನು ಸುಮ್ಮನೆ ನಾನು ಸಂಹಾರ ಮಾಡಿದೆ ನಾರದರ ಮಾತನ್ನು ಕೇಳಿಕೊಂಡು, ದೈವ ನನಗೆ ಪ್ರತಿಕೂಲ ಆಯಿತು ಆದರೆ ನೀನು ಚಿಂತೆ ಮಾಡಬೇಡ. ಆ ಕಂಸನಲ್ಲಿ ಭೃಗು ಋಷಿಗಳ ಆವೇಶವು ಇದೆ. ಆ ಭೃಗು ಋಷಿಗಳ ಆವೇಶ ಇರುವುದರಿಂದ ಕೆಲವು ತತ್ವಗಳ ಉಪದೇಶವನ್ನು ಮಾಡುತ್ತಾನೆ ಹುಟ್ಟಿದವರಿಗೆ ಸಾವು ನಿಶ್ಚಿತ ಎಲ್ಲವೂ ಭಗವತ್ ಸಂಕಲ್ಪದಂತೆ ಆಗುತ್ತದೆ, ಕಾಲ ಅವರವರ ಕರ್ಮ ಇವುಗಳಿಗೆ ಅನುಗುಣವಾಗಿ ಜನ್ಮ ಮರಣಗಳೆಲ್ಲ ನಡೆಯುತ್ತ ಇರುತ್ತದೆ. ಯಾವುದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಡ ಅಂತ ಹೇಳಿದರೆ, ನೋಡಿದರೆ ಅವನು ಅಣ್ಣ ಕಂಸ ಆದರೆ ದೇವಕಿ ಅವಳ ಹೃದಯ ಎಷ್ಟು ವಿಶಾಲ ನೋಡಿರಿ.

ಉತ್ತಿಷ್ಠೋತಿಷ್ಠ ವತ್ಸೇತಿ ಕಂಸಂ ಮಾತೇವ ಜಲ್ಪತೀ । (4.57 ವಿಷ್ಣುಪರ್ವ)

ತಾಯಿ ಮಗುವಿಗೆ ಎಬ್ಬಿಸುವಂತೆ ಅಳುತ್ತಾ ಕಾಲಿಗೆ ಬಿದ್ದ ಕಂಸನನ್ನ ಎಬ್ಬಿಸಿ ಅವನಿಗೆ ರಮಿಸುತ್ತಾಳೆ. ನೀನೇನು ದುಃಖ ಪಡಬೇಡ ಅಪ್ಪ ಚಿಂತೆ ಪಡಬೇಡ ನಮ್ಮ ಹಣೆಬರಹ, ನಮ್ಮ ಕರ್ಮಕ್ಕೆ ನೀನೇನು ಮಾಡುತ್ತೀಯಾ ಏನು ಚಿಂತೆ ಮಾಡಬೇಡ ಅಂತ ಅವನಿಗೆ ಸಮಾಧಾನವನ್ನು ಹೇಳಿ ಕಳಿಸಿದ್ದಾಳೆ ದೇವಕಿ ಈ ರೀತಿ ಆ ಕಂಸನನ್ನು ಕೊಟ್ಟು ಕಳಿಸಿದ್ದಾಳೆ.



ಈ ಕಡೆಗೆ ನಂದ ಮತ್ತು ಯಶೋದೆ ಇವರೆಲ್ಲ ಕರವನ್ನು ಕೊಡಬೇಕು ಅಂತ ಪ್ರತಿ ವರ್ಷದಂತೆ ಕಂಸನಿಗೆ ಕರ ಕೊಡುವುದಕ್ಕೆ ಅಂತ ಬಂದಿದ್ದಾರೆ ಮಥುರೆಗೆ. ವಸುದೇವ ಹೇಳುತ್ತಾ ಇದ್ದಾನೆ ಬಹಳ ಹೊತ್ತು ಇಲ್ಲಿ ಇರಬೇಡ ಕರ ಕೊಟ್ಟು ಆಯಿತಲ್ಲ ಇನ್ನುಮೇಲೆ ಶೀಘ್ರದಲ್ಲಿ ಹೋಗು ಅನೇಕ ಸೂಚನೆಗಳೆಲ್ಲ ಇವೆ, ಉತ್ಪಾತಕಗಳೆಲ್ಲ ಕಾಣಿಸುತ್ತಾ ಇವೆ ಮಗುವನ್ನು ಬೇರೆ ಕರೆದುಕೊಂಡು ಬಂದಿದ್ದೀ ಆ ಮಗುವಿಗೂ ಕ್ಷೇಮ ಆಗಬೇಕು, ನಿಮಗೂ ಕ್ಷೇಮ ಆಗಬೇಕು ಆದಷ್ಟು ಬೇಗ ನೀನು ಅಲ್ಲಿ ಹೋಗು. ಮತ್ತೆ ನನ್ನ ಮಗ ರೋಹಿಣಿಯ ಮಗ ಅವನೂ ಅಲ್ಲಿಯೇ ಇದ್ದಾನೆ ಗೋಕುಲದಲ್ಲಿ ಬಲರಾಮ ಅವನನ್ನು ಚೆನ್ನಾಗಿ ನೋಡಿಕೋ, ಕೃಷ್ಣ ಅವನನ್ನು ಚೆನ್ನಾಗಿ ನೋಡಿಕೋ ಕೃಷ್ಣನ ಬಗ್ಗೆ ಬೇರೆಯವರಿಗೆ ಗೊತ್ತಿಲ್ಲ, ನಿನಗೆ ನನಗೆ ಮಾತ್ರ ಗೊತ್ತು. ಆ ಕೃಷ್ಣನನ್ನೂ ಮತ್ತು ಬಲರಾಮನನ್ನೂ ಚೆನ್ನಾಗಿ ನೋಡಿಕೋ ಯಾವುದೇ ತರಹದ ಪಶುಗಳಿಂದ ಪಕ್ಷಿಗಳಿಂದ, ನಾನಾ ವಿಧವಾದ ಅಸುರರಿಂದ, ಇನ್ನನೇಕ ವಿಧವಾದ ಉಪದ್ರವಗಳಿಂದ ಆ ಮಕ್ಕಳನ್ನು ನೀನು ಚೆನ್ನಾಗಿ ರಕ್ಷಣೆ ಮಾಡಬೇಕು ಅಂತ. ಸರ್ವೋತ್ತಮನಾದ ಭಗವಂತ ಅಂತ ವಸುದೇವ ತಾನೇ ಪ್ರತ್ಯಕ್ಷವಾಗಿ ಕಂಡಿದ್ದಾನೆ ಅವತಾರ ಮಾಡಿದಾಗ ಮತ್ತೆ ಮಾಯೆ ಆ ಭಗವಂತನ ಮಾಯೆಯಿಂದ ಹೇಳುತ್ತಾನೆ ಎಲ್ಲಿಯಾದರೂ ನೀರಿನಲ್ಲಿ ಮುಳುಗಬಹುದು, ಬೆಂಕಿಯಿಂದ ಸುಟ್ಟು ಕೊಳ್ಳಬಹುದು, ಯಾವುದಾದರೂ ಪಶು ಪಕ್ಷಿಗಳಿಗೆ ಬಲಿಯಾಗಬಹುದು ಅದು ಆಗದೇ ಇರುವ ಹಾಗೆ ನೀನು ಚೆನ್ನಾಗಿ ನೋಡಿಕೋ ಅಂತ ಹೇಳುತ್ತಾನೆ. ಈ ರೀತಿಯಾಗಿ ಹೇಳಿ ಕಳಿಸಿದಾಗ ನಂದ ಶೀಘ್ರದಲ್ಲಿ ಅಲ್ಲಿಂದ ಹೊರಟು ಬರುತ್ತಾನೆ. ಗೋಕುಲದ ವರ್ಣನೆಯನ್ನು ಮಾಡುತ್ತಾನೆ ಎಷ್ಟು ಅದ್ಭುತವಾದಂತಹ ಗೋಕುಲ.

ಯಮುನಾತೀರಸಮ್ಬದ್ಧಂ ಶೀತಮಾರುತಸೇವಿತಮ್ । (5.17 ವಿಷ್ಣುಪರ್ವ)

ಸಾಮಾನ್ಯವಾಗಿ ಸಂಸ್ಕೃತದ ಪರಿಚಯ ಇದ್ದವರಿಗೆ **'ಗಂಗಾಯಾಜ್ಘೋಷಃ'** ಅಂತ ಹೇಳುತ್ತಾರೆ ಅಂದರೆ ಗಂಗಾ ತೀರದಲ್ಲಿ ಅಷ್ಟು ತಂಪಾದ ಪವಿತ್ರವಾದಂತಹ ಗ್ರಾಮ ಅಂತ ಹೇಳುವುದಕ್ಕೆ **'ಗಂಗಾಯಾಜ್ಘೋಷಃ'** ಗಂಗೆಯಲ್ಲಿಯೇ ಘೋಷ ಅಂದರೆ ಗಂಗಾತೀರದಲ್ಲಿ ಇದೆ ಅಂತ ಆದರೆ ಇಲ್ಲಿ ಹಾಗೆ ಹೇಳದೆ **'ಯಮುನಾತೀರಸಮ್ಬದ್ಧ ಶೀತಮಾರುತಸೇವಿತಮ್'.** ಆ ಪರಮಾತ್ಮನ ಅವತಾರದ ಆ ಸಂತೋಷದೊಳಗೆ ಮೈಮರೆತಿರುವಂತಹ ಜನರಿಗೆ ನೀವು ಲಾಕ್ಷಣಿಕ ಪ್ರಯೋಗ ಮಾಡಿದರೆ ಅರ್ಥ ಮಾಡಿಕೊಳ್ಳುವಷ್ಟು ಅವಧಾನ ಇರಲಿಕ್ಕಿಲ್ಲ ಅಂತ **'ಯಮುನಾಯಾಂ ಘೋಷಃ'** ಅಂತ ಹೇಳದೆ **'ಯಮುನಾತೀರಸಮ್ಬದ್ಧಂ ಶೀತಮಾರುತಸೇವಿತಮ್'** ಆ ಲಕ್ಷಣೆಯ ಪ್ರಯೋಜನವನ್ನು ಮುಚ್ಚಿಡದಂತೆ ಶೈತ್ಯಾಪಾವನತ್ವಾದಿಗಳಿಂದ ಕೂಡಿದಂತಹ ಆ ಗೋಕುಲದಲ್ಲಿ ಇವನು ಪ್ರವೇಶ ಮಾಡುತ್ತಾ ಇದ್ದಾನೆ. ನಾನಾ ವಿಧವಾದಂತಹ ಪಶು ಪಕ್ಷಿಗಳ ಸಮೃದ್ಧಿ, ಗೋವುಗಳ ಸಮೃದ್ಧಿ, ಎಲ್ಲಿ ನೋಡಿದರೂ ಗೋವುಗಳ ಧ್ವನಿ **'ಹಮ್ಭಾರವೈಶ್ಚ ವತ್ಸಾನಾಂ'**[1] ಆ ಕರುಗಳ ಹಂಭಾ ಅನ್ನುವಂತಹ ಶ್ರೇಷ್ಠವಾದ ಮಂಗಲವಾದ ಧ್ವನಿ ಅದನ್ನು ಕೇಳಿದರೇನೆ ಪಾಪಗಳ ಪರಿಹಾರ ಆಗುತ್ತದೆ ಅಂತ ಹೇಳುತ್ತಾರೆ. ಅಲ್ಲಲ್ಲಿ ಎತ್ತಿನ ಬಂಡಿಗಳು, ಒಣಗಿದ ಸೆಗಣೆಗಳು ಕುಳ್ಳಗಳು ಅನ್ನುತ್ತಾರೆ, ಅಲ್ಲಲ್ಲಲ್ಲಿ ಒಣಗಿದಂತಹ ಸೆಗಣಿ ಇವುಗಳಿಂದ ಕೂಡಿದಂತಹ ಮನೆಗಳು, ಚಾಪೆ ಹಾಸಿದಂತಹ ಆಶ್ರಮಗಳು, ಧರ್ಭದ ಚಾಪೆಯಿಂದ ಕೂಡಿದಂತಹ ಶ್ರೇಷ್ಠವಾದ ಆಶ್ರಮಗಳು. ಎಲ್ಲಿ ನೋಡಿದರಲ್ಲಿ ಮಜ್ಜಿಗೆ ಚೆಲ್ಲಿದೆ, ಮೊಸರು ಚೆಲ್ಲಿದೆ, ಕೆನೆ ಮೊಸರು ಅದೇ ಕೆಸರಲ್ಲಿ ಅಲ್ಲಿರುವ ಕೆಸರು ಅಂದರೆ ಮೊಸರು ಇದು ಹರಿವಂಶದ ಮಾತು. **'ದಧಿಮಣ್ಡಾರ್ದ್ರಮೃತ್ತಿಕಮ್'**[2] ಅಲ್ಲಿರುವ ಮಣ್ಣು ಇದು ಒದ್ದೆಯಾಗಿ ಕೆಸರು ಆಗುವುದು ಯಾವುದೋ ಹೊಲಸು ಚರಂಡಿಯ ನೀರಿನಿಂದಲ್ಲ ಮೊಸರಿನಿಂದ, ಕೆನೆಯಿಂದ. ಆ ರೀತಿ ಅದ್ಭುತವಾದ ಎಲ್ಲರೂ ಕೂಡ ಮಥನ ಮಾಡುತ್ತಾ

1. 5.22 ವಿಷ್ಣುಪರ್ವ ; 2. 5.26 ವಿಷ್ಣುಪರ್ವ

ಇದ್ದರೆ ಭಗವಂತನ ಗುಣಗಾನವನ್ನು ಮಾಡುತ್ತಾ ದೇವರ ಆ ಬಾಲ ಲೀಲೆಗಳನ್ನೆ ವರ್ಣನೆ ಮಾಡುತ್ತಾ ಅದೇ ಪರಮಾತ್ಮ ಅವತಾರ ಮಾಡಿದ್ದಾನೆ. ಅಷ್ಟರೊಳಗೇನೆ ಆ ಭಗವಂತ ಆ ಎಲ್ಲ ಗೋಪಿಕಾ ಸ್ತ್ರೀಯರು ದೊಡ್ಡ ದೊಡ್ಡ ಅಪ್ಸರಾ ಸ್ತ್ರೀಯರೇ ಅಲ್ಲಿ ಅವತಾರ ಮಾಡಿದವರು ಹೀಗಾಗಿ ಆ ಭಗವಂತನ ಅದ್ಭುತವಾದ ಲೀಲೆಗಳನ್ನ ಹಾಡು ಕಟ್ಟಿ ಹಾಡುತ್ತಾ ಮಥನವನ್ನು ಮಾಡುತ್ತಾ ಇದ್ದರಂತೆ ದಹಿ ಮಥನ. ಅಲ್ಲಲ್ಲಿ ತುಪ್ಪವನ್ನು ಕಾಯಿಸುತ್ತಾ ಇದ್ದರೆ ಇಡೀ ಊರೆಲ್ಲ ವಾಸನೆ.

ಸರ್ಪಿಷಾ ಪಚ್ಯಮಾನೇನ ಸುರಭೀಕೃತಮಾರುತಮ್ । (5.28 ವಿಷ್ಣುಪರ್ವ)

ಇಂತಹ ಅದ್ಭುತವಾದ ಆ ಮಂಗಲಮಯವಾದ ವಾತಾವರಣ ಯಾಕೆ ಇದರ ವರ್ಣನೆಯನ್ನು ಮಾಡಿದ್ದು ಅಂದರೆ ಹೀಗಿರಬೇಕು ಊರು ಅಂತ. ಗೋವುಗಳು, ಗೋಮಯ, ಗೋಮೂತ್ರದಿಂದ ಎಲ್ಲ ಕಡೆಗೆ ಪವಿತ್ರವಾಗಿರಬೇಕು, ಹಾಲು ಕಾಯಿಸಿ ಮೊಸರು ಮಾಡಿ ಕಡೆದು ಅದರಿಂದ ಬಂದ ಬೆಣ್ಣೆ ಅದರಿಂದ ತುಪ್ಪವನ್ನು ಮಾಡಿ ಅದನ್ನು ಶುದ್ಧವಾದದ್ದನ್ನು ಸ್ವೀಕಾರ ಮಾಡಿದರೇನೆ ಉತ್ತಮವಾದ ಆರೋಗ್ಯ, ಯಾವ ರೋಗ ರುಜಿನಗಳು ಬರದೇ ಇರುವಂತೆ ಉತ್ತಮ ಆರೋಗ್ಯ ಸಂಪನ್ನನಾಗಿ ಒಬ್ಬ ಮನುಷ್ಯ ಇರಲಿಕ್ಕೆ ಏನು ಬೇಕೋ ಹಾಗೆ ಶಾಸ್ತ್ರ ನಮಗೆ ಹೇಳಿಕೊಟ್ಟಿದೆ. ಆ ತರಹದ ಜೀವನವನ್ನು ನಡೆಸದೆ ಅನೇಕ ರೋಗಗಳಿಗೆ ನಾವು ಬಲಿಯಾಗುತ್ತಾ ಇದ್ದೇವೆ ಹಾಗಿರಬಾರದು ಅನ್ನುವುದನ್ನು ಹರಿವಂಶ ನಮಗೆ ಸೂಚನೆಯನ್ನು ನೀಡುತ್ತಾ ಇದೆ ಎಂಬುದಾಗಿ ನಾವು ಇಲ್ಲಿ ತಿಳಿಯಬೇಕು. ಇಂತಹ ಶ್ರೇಷ್ಠವಾದ ರಮ್ಯವಾದ ಗೋಕುಲದಲ್ಲಿ ಎಲ್ಲ ಗೋಪವೃದ್ಧರು, ಸ್ತ್ರೀಯರು, ಹಿರಿಯರು ನಂದ ಯಶೋದೆಯರನ್ನು ಸ್ವಾಗತ ಮಾಡಿದ್ದಾರೆ ಅಲ್ಲಿ ಶ್ರೀಕೃಷ್ಣ ಪರಮಾತ್ಮನಿಂದ ಕೂಡಿಕೊಂಡು ಸುಖವಾಗಿ ಇದ್ದಾನೆ ಎಂಬುದಾಗಿ ತಿಳಿಸುತ್ತಾ ಇದ್ದಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ವಿಷ್ಣುಪರ್ವ-16

* * *

ವೈಶಂಪಾಯನ ಉವಾಚ

ತತ್ರ ತಸ್ಯಾಸತಃ ಕಾಲಃ ಸುಮಹಾನತ್ಯವರ್ತತ ।

ಗೋವ್ರಜೇ ನನ್ದಗೋಪಸ್ಯ ಬಲ್ಲವತ್ವಂ ಪ್ರಕುವ್ರತಃ ।। (6.1 ವಿಷ್ಣುಪರ್ವ)

ಶ್ರೀಕೃಷ್ಣ ಪರಮಾತ್ಮ ಗೋಕುಲದಲ್ಲಿ ಬಲರಾಮ ದೇವರ ಜೊತೆಗೆ ನಾನಾ ವಿಧವಾದ ಕ್ರೀಡೆಗಳನ್ನು ಮಾಡುತ್ತಾ ಇದ್ದಾನೆ. ಪರಮ ಭಗವದ್ಭಕ್ತರಾದ ಗರ್ಗ್ಯಾಚಾರ್ಯರು ಶ್ರೀಕೃಷ್ಣ ಪರಮಾತ್ಮನ ನಾಮಕರಣವನ್ನು ಮಾಡಿಸಿದ್ದಾರೆ. ಹಿಂದೆ ಕೇಳಿದ್ದೀರಿ ಹರಿವಂಶ ಪರ್ವದಲ್ಲಿ ಗರ್ಗ್ಯಾಚಾರ್ಯರಲ್ಲಿ ಅಸುರಾವೇಶ ಆದಾಗ ಶ್ರೀಕೃಷ್ಣ ಪರಮಾತ್ಮನನ್ನೇ ಸಂಹಾರ ಮಾಡುವ ಮಗ ನನಗೆ ಆಗಬೇಕು ಅಂತ ಮುಂದೆ ತಪಸ್ಸು ಮಾಡಿ ಕಾಲಯವನನನ್ನು ಪಡೀತಾರೆ ಆ ಕಾಲಯವನನನ್ನು ಶ್ರೀಕೃಷ್ಣ ಪರಮಾತ್ಮ ಮುಚಕುಂದನಿಂದ ಸಂಹಾರ ಮಾಡಿಸುತ್ತಾನೆ ಅನ್ನುವ ಕಥೆಯನ್ನು ಕೇಳಿದ್ದೀರಿ ಅದು ಅಸುರಾವೇಶ ಮೂಲಕವಾಗಿ ಆದದ್ದು. ಆದರೆ ಸ್ವಾಭಾವಿಕವಾಗಿ ಗರ್ಗ್ಯಾಚಾರ್ಯರು ಶ್ರೀಕೃಷ್ಣ ಪರಮಾತ್ಮನ ಭಕ್ತರು ಅಂತಹ ಭಕ್ತರಾದ ಗರ್ಗ್ಯಾಚಾರ್ಯರು ಯಾದವರ ಪುರೋಹಿತರು ವಸುದೇವನ ಸೂಚನೆಯಂತೆ ಬಂದು ಶ್ರೀಕೃಷ್ಣ ಹಾಗೂ ಬಲರಾಮರಿಗೆ ನಾಮಕರಣವನ್ನು ಏಕಾಂತದಲ್ಲಿ ಮಾಡಿಸಿದ್ದಾರೆ. ನಂದ ವೈಶ್ಯನಾಗಿದ್ದರೂ ಕೂಡ ವಸುದೇವ ಕ್ಷತ್ರಿಯನಾದದ್ದರಿಂದ ಕ್ಷತ್ರಿಯ ಯೋಗ್ಯವಾದ ಎಲ್ಲ ಸಂಸ್ಕಾರಗಳನ್ನು ಮಾಡಿದ್ದಾರೆ. ಶ್ರೀಕೃಷ್ಣ ಪರಮಾತ್ಮ ಹಾಗೂ ಬಲರಾಮ ಇವರಿಬ್ಬರೂ ಕೂಡ ವಸುದೇವನ ಮಕ್ಕಳು ಇವರು ಯಾದವರು ಅನ್ನುವುದು ಯಾರಿಗೂ ಗೊತ್ತಾಗಬಾರದು, ಕಂಸನಿಗೆ ಗೊತ್ತಾಗಬಾರದು ಅನ್ನುವುದಕ್ಕೆ ರಹಸ್ಯವಾಗಿ ಮಾಡಿಸಿದ್ದಾರೆ. ಹಿಂದೆ ತಿಳಿದಿದ್ದೀರಿ ಕೃಷ್ಣ ಶಬ್ದದ ಅರ್ಥವನ್ನು ಅನೇಕ ಅರ್ಥಗಳು

ಯತಃ ಕರ್ಷಸಿ ದೇವೇಶ ನಿಯಮ್ಯ ಸಕಲಂ ಜಗತ್ ।

ಅತೋ ವದಂತಿ ಮುನಯಃ ಕೃಷ್ಣಂ ತ್ವಾಂ ಬ್ರಹ್ಮವಾದಿನಃ' ಇತಿ ಮಹಾಕೌರ್ಮೇ ।।

(ಗೀತಾಭಾಷ್ಯದಲ್ಲಿಯ ಐದನೆಯ ಅಧ್ಯಾಯ ಎರಡನೆಯ ಶ್ಲೋಕ)

ಇಡೀ ಜಗತ್ತನ್ನು ನಿನ್ನ ಅಚಿಂತ್ಯಾದ್ಭುತ ಶಕ್ತಿಯಿಂದ ನಿಯಮನ ಮಾಡುತ್ತಾ ನಿನ್ನ ಇಚ್ಛೆಗೆ ತಕ್ಕಂತೆ ಆ ಜಗತ್ತು ನಡೆಯುವ ಹಾಗೆ ಅದನ್ನು ಕರ್ಷಣ ಮಾಡುತ್ತೀಯಾ, ನಿನ್ನ ಇಚ್ಛೆಗೆ ತಕ್ಕಂತೆ ಅದು ಸಾಗುವಂತೆ ಮಾಡುತ್ತೀಯಾ ಅನ್ನುವುದಕ್ಕೋಸ್ಕರ ನಿನಗೆ ಕೃಷ್ಣ ಎಂಬುದಾಗಿ ಕರೀತಾರೆ ಅಂತ ತಿಳಿಸಿಕೊಟ್ಟಿದ್ದಾರೆ. ಅಂತಹ ಸಕಲ ಜಗತ್ತನ್ನು ತನ್ನ ಇಚ್ಛೆಗೆ ಅನುಗುಣವಾಗಿ ಕರ್ಷಣ ಮಾಡುತ್ತಾನೆ, ಸೆಳೆಯತ್ತಾನೆ ಹೇಗೆ ಕಟ್ಟಿಗೆಯ ಬೊಂಬೆಗೆ ದಾರವನ್ನು ಕಟ್ಟಿ ಆ ಗೊಂಬೆಯ ಆಟ ಆಡಿಸುವವ ಎಳೀತಾನೆ, ಸೆಳೀತಾನೆ ಅದಕ್ಕೆ ತಕ್ಕಂತೆ ಕೈಕಾಲುಗಳನ್ನು ಮಾಡುತ್ತಾ ಆ ಗೊಂಬೆಗಳು ಕುಣಿತವೋ ಹಾಗೆ ಇಡೀ ಜಗತ್ತಿನ ಎಲ್ಲ ಜೀವರಾಶಿಗಳ ಸಂಪೂರ್ಣವಾದಂತಹ ಕ್ರಿಯಾಶಕ್ತಿಯನ್ನು ತನ್ನ ಅಧೀನವಾಗಿ ಇಟ್ಟುಕೊಂಡು ತನ್ನ ಇಚ್ಛೆಗೆ ತಕ್ಕಂತೆ ಪರಮಾತ್ಮ ಆಟ ಆಡಿಸುತ್ತಾನೆ ಅನ್ನುವುದಕ್ಕೋಸ್ಕರ ಅವನನ್ನು ಕೃಷ್ಣ ಎಂಬುದಾಗಿ ಕರೀತಾರೆ, ಇವನನ್ನು ಬಲರಾಮ ಸಂಕರ್ಷಣ ಎಂಬುದಾಗಿ ನಾಮಕರಣವನ್ನು ಮಾಡಿದ್ದಾರೆ.

ಒಂದು ಬಾರಿ ಶ್ರೀಕೃಷ್ಣ ಪರಮಾತ್ಮನನ್ನು ಒಂದು ಶಕಟದ ಬಂಡೆಯ ಕೆಳಗೆ ಕಟ್ಟಿದ್ದಾರೆ ಶ್ರೀಕೃಷ್ಣ ಪರಮಾತ್ಮನಿಗೆ ಆಗ ನಾಲ್ಕು ತಿಂಗಳು. ನಾಲ್ಕು ತಿಂಗಳು ಆದಮೇಲೆ ಮನೆಯಿಂದ ಹೊರಗೆ ಹೋಗಬೇಕು, ದೇವರಿಗೆ ಹೋಗಬೇಕು, ಪರಿಚಿತರ ಮನೆಗೆ ಮೊಟ್ಟಮೊದಲು ಮನೆಯಿಂದ ಹೊರಗೆ ಕಾಲಿಡಬೇಕು ಬಾಣಂತಿಯಾದ ಯಶೋದೆ. ಅವತ್ತು ಶ್ರೀಕೃಷ್ಣ ಪರಮಾತ್ಮನ ಜನ್ಮ ನಕ್ಷತ್ರವೂ ಇದೆ ರೋಹಿಣೀ ನಕ್ಷತ್ರ ಎರಡೂ ಕೂಡಿಬಂದಿದೆ ಉಪನಿಷ್ಕ್ರಮಣ ಮನೆಯಿಂದ ದೇವರಿಗೆ ಹೋಗುವಂತಹ ಪ್ರಸಂಗ ಜೊತೆಗೆ ಜನ್ಮ ನಕ್ಷತ್ರ ಅನ್ನುವುದಕ್ಕಾಗಿ ವಿಶೇಷ ಉತ್ಸವಗಳನ್ನೆಲ್ಲ ಮಾಡಿದ್ದಾರೆ. ಆ ಸಂದರ್ಭದಲ್ಲಿ ಶ್ರೀಕೃಷ್ಣ ಪರಮಾತ್ಮನನ್ನು ಹಾಲು, ಮೊಸರು ಮೊದಲಾದ ಅನೇಕ ಶ್ರೇಷ್ಠವಾದ ಪದಾರ್ಥಗಳಿಂದ ಕೂಡಿದ ಬಂಡೆಯ ಕೆಳಗೆ ಕಟ್ಟಿದ್ದಾರೆ. ಇವಳು ತಾನು ಯಮುನಾ ನದಿಗೆ ಸ್ನಾನ ಮಾಡಿಕೊಂಡು ಬರೋಣ ಅಂತ ಹೋಗಿದ್ದಾಳೆ ಆ ಉತ್ಸವದ ಕಾಲದಲ್ಲಿ ಬಟ್ಟೆ ಒಗೆದುಕೊಂಡು ಬರೋಣ ಅಂತ ಹೋಗಿದ್ದಳಂತೆ ಯಮುನಾ ನದಿಗೆ. ಏನು ವಿಚಿತ್ರ ನೋಡಿ, ಅವಳು ನೋಡಿದರೆ ಆ ಗೋಕುಲದ ರಾಣಿ ಅವಳು ಯಶೋದೆ, ಗೋಕುಲದ ರಾಣಿಯಾಗಿ ಇದ್ದರೂ ಕೂಡ ತನ್ನ ಬಟ್ಟೆಯನ್ನು ಶುದ್ಧಗೊಳಿಸಿಕೊಳ್ಳುವುದಕ್ಕೆ ಯಮುನಾ ನದಿಗೆ ಸ್ನಾನಕ್ಕೆ ತಾನೇ ಸ್ವತಃ ಹೋಗಿದ್ದಾಳೆ. ಆರೋಗ್ಯವಂತರಾಗಿ ಇರಬೇಕಾದರೆ ತಮ್ಮ ಕೆಲಸವನ್ನು ತಾವು ಮಾಡಿಕೊಳ್ಳಬೇಕು, ತಮ್ಮ ಕೆಲಸವನ್ನು ಮತ್ತೊಬ್ಬರಿಗೆ ಹೇಳಿದರೆ ಆರೋಗ್ಯವನ್ನು ಇನ್ನೊಬ್ಬರಿಗೆ ಕೊಟ್ಟಂತೆ ಲೆಕ್ಕ, ತಮ್ಮ ಕಾರ್ಯವನ್ನು ತಾವು ಮಾಡಿಕೊಳ್ಳಬೇಕು ಅನ್ನುವ ರೀತಿಯ ಸಂದೇಶವನ್ನು ಕೊಡುವಂತೆ ಇವಳು ರಾಣಿಯಾಗಿ ಇದ್ದರೂ ಕೂಡ ಆ ರೀತಿ **'ಚೈಲಪಕ್ಷಾಲನಾರ್ಥಿನೋ'**[1] ನದಿಗೆ ಸ್ನಾನಕ್ಕೆ ಹೋಗಿದ್ದಾಳೆ. ಬರುವುದರೊಳಗೆ ನೋಡುತ್ತಾಳೆ ಬಂಡೆ ಎಲ್ಲ ತಿರುವು ಮುರುವಾಗಿ ಬಿದ್ದಿದೆ, ಹಾಲು ಮೊಸರೆಲ್ಲ ಚೆಲ್ಲಿ ಹೋಗಿದೆ ಸುತ್ತಮುತ್ತಲಿರುವ ಬಾಲಕರು ಹೇಳುತ್ತಾರೆ ಈ ಮಗುವೇ ತನ್ನ ಕಾಲಿನಿಂದ ಒದ್ದದ್ದಕ್ಕೆ ಬಿದ್ದದ್ದು ಅಂತ. ನಂಬಿಕೆ ಆಗುತ್ತಾ ಇಲ್ಲ ಗಾಬರಿಯಾಗುತ್ತ ಇದೆ, ದುಃಖವೂ ಆಗುತ್ತಾ ಇದೆ ಎಲ್ಲವೂ ಸೇರಿ ಬಂದಿದೆ. ಎರಡು ಗಾಬರಿ ಮಗುವಿಗೆ ಏನಾಯಿತು ಅಂತ ಅನ್ನುವ ಗಾಬರಿ, ನಂದ ಬಂದರೆ ಏನಂದಾನು ಅನ್ನುವಂತಹ ಭಯ ಎರಡೂ ಭಯ ಅವಳಿಗೆ ಸೇರಿಕೊಂಡು ಗಾಬರಿಯಾಗಿದ್ದಾಳೆ.

ಕಿಂ ತು ವಕ್ಷ್ಯತಿ ತೇ ಪುತ್ರ ಪಿತಾ ಪರಮಕೋಪನಃ । (6.10 ವಿಷ್ಣುಪರ್ವ)

ಬಹಳ ಸಿಟ್ಟು ನಂದನಿಗೆ ಮಕ್ಕಳಿಗೆ ಸ್ವಲ್ಪ ಏನಾದರೂ ತೊಂದರೆ ಆಗಿದೆ ಅಂತಾದರೆ ನನ್ನನ್ನು ಚೆನ್ನಾಗಿ ಬೈದು ಬಿಡುತ್ತಾರೆ ನಾನು ಎಂತಹ ತಪ್ಪು ಕೆಲಸ ಮಾಡಿದೆ,

1. 6.17 ವಿಷ್ಣುಪರ್ವ



ಕಿಂ ಮೇ ಸ್ನಾನೇನ ದುಃಸ್ನಾನಂ ಕಿಂ ಚ ಮೇ ಗಮನೇ ನದೀಮ್ ॥ (6.11 ವಿಷ್ಣುಪರ್ವ)

ಯಾಕೆ ನಾನು ನದಿಗೆ ಹೋಗಬೇಕಾಗಿತ್ತು ಏನು ಪುಣ್ಯ ಇಂತಹ ನದಿ ಸ್ನಾನದಿಂದ, ಮಗುವಿಗೆ ಇಷ್ಟು ತೊಂದರೆಯಾಯಿತು ಅಂತ ಬಹಳ ವಿಲಾಪವನ್ನು ಮಾಡುತ್ತಾ ಇದ್ದಾಳೆ ಅಷ್ಟರೊಳಗೆ ನಂದ ಅಲ್ಲಿ ಬರುತ್ತಾನೆ. ಅವನು ನೋಡುತ್ತಾನೆ ಏನಿದು ಈ ತರಹ ಎಲ್ಲಾ ತಿರುವು ಮುರುವಾಗಿ ಬಿದ್ದು ಬಂಡೆಯೆಲ್ಲ ಒಡೆದು ಹೋಗುವಂತೆ ಆಗಬೇಕಾದರೆ ಭಾರೀ ಎರಡು ಎತ್ತುಗಳು ಜಗಳ ಆಡಿದರೆ ಹೇಗಾಗಬೇಕೋ ಹಾಗಾಗಿದೆ. ಆದರೆ ಯಾವ ಎತ್ತುಗಳು ಜಗಳ ಆಡಿಲ್ಲ ಇಲ್ಲಿ ತನ್ನ ಪಾಡಿಗೆ ಬಿಚ್ಚಿದ ಬಂಡಿ ಒಂದು ಕಡೆಗೆ ಇಟ್ಟದ್ದು, ಜೊತೆಗೆ ಒಯ್ಯುವ ಎತ್ತುಗಳು ಒಂದಕ್ಕೊಂದು ಜಗಳಾಡಿ ಆಚೆಈಚೆ ಆ ಬಂಡೆಯನ್ನು ಎಳೆದಾಡಿ ಬೀಳಿಸುವ ರೀತಿಯಲ್ಲಿ ಬಿದ್ದಿದೆಯಲ್ಲ ಹೇಗೆ ಬಿತ್ತು.

ವೃಷಯುದ್ಧಂ ವಿನಾ ಕೇನ ಪರ್ಯಸ್ತಂ ಶಕಟಂ ಮಮ । (6.15 ವಿಷ್ಣುಪರ್ವ)

ನಂದ ಕೇಳುತ್ತಾನೆ ಎತ್ತುಗಳ ಯುದ್ಧ ನಡೆದಿಲ್ಲ, ಬಂಡೆ ಬಿದ್ದಿದೆ ಹೇಗೆ ಬಿದ್ದಿದೆ ಅವನ ಮಾತಿನಲ್ಲಿಯೇ ಉತ್ತರ ಇದೆ **'ವೃಷಯುದ್ಧಂ ವಿನಾ ಕೇನ ಪರ್ಯಸ್ತಂ ಶಕಟಂ ಮಮ'** ವೃಷ ಅಂತನ್ನುವುದಕ್ಕೆ ಧರ್ಮ ಅಂತ ಅರ್ಥ ಇದೆ. **'ವೃಷಯುದ್ಧಮಿದಂ'** ಎತ್ತುಗಳಲ್ಲಿ ಯುದ್ಧ ನಡೆದಿಲ್ಲಲ್ಲ ಯಾಕೆ ಬಿತ್ತು ಅಂತ ಪ್ರಶ್ನೆ ಉತ್ತರ **'ವೃಷಯುದ್ಧಂ'** ಇದು ಧರ್ಮ ಯುದ್ಧ. ಅವನು ಅಧರ್ಮ ಮಾಡುವಂತಹ ಅಸುರ ಅವನು ಶಕಟಾಸುರ ಅವನು ಪಾರ್ವತಿಯನ್ನು ಕುರಿತು ತಪಸ್ಸು ಮಾಡಿ ನಾನು ಸಾಯಬಾರದು ಅಂತ ವರವನ್ನು ಪಡೆದುಕೊಂಡು ಕಂಸನ ಭೃತ್ಯನಾಗಿ ಇಲ್ಲಿ ಹುಟ್ಟಿ ಬಂದಿದ್ದಾನೆ. ಅವನು ದುಷ್ಟ ಅಸುರ ಅನ್ನುವುದಕ್ಕೋಸ್ಕರ ಅಧರ್ಮದ ಪ್ರತಿನಿಧಿಯಾದ ಕಂಸನಿಗೆ ಅನುಚರನಾಗಿ ಬಂದ ಒಬ್ಬ ಅಧಾರ್ಮಿಕನಾದ ಅಸುರ, ಧರ್ಮದ ಸಂರಕ್ಷಣೆಗಾಗಿ ಅವತಾರ ಮಾಡಿದವನು ಕೃಷ್ಣ ಹಾಗಾದರೆ ಇದು ವೃಷ ಯುದ್ಧ. ಧರ್ಮ ಅಧರ್ಮಗಳಲ್ಲಿ ನಡೆಯುವಂತಹ ಯುದ್ಧ, ಅಧರ್ಮವನ್ನು ಸಂಪೂರ್ಣವಾಗಿ ನಾಶ ಮಾಡಿ ಧರ್ಮದ ಸ್ಥಾಪನೆಯನ್ನು ಮಾಡುವುದಕ್ಕಾಗಿ ಅವತಾರ ಮಾಡಿದವನು ಕೃಷ್ಣ ಆದದ್ದರಿಂದ ಇದು ವೃಷ ಯುದ್ಧ, ಇದು ಸುಮ್ಮನೆ ಏನೋ ತನ್ನಷ್ಟಕ್ಕೆ ತಾನೇ ಬಿದ್ದದ್ದಲ್ಲ ಬಂಡೆ ಇದು ವೃಷ ಯುದ್ಧ. ಯಾರು ಬೀಳಿಸಿದ್ದು, ಯಾರಿಲ್ಲದೇ ಹೇಗೆ ಬಿತ್ತು ಅಂತ **'ವಿನಾ ಕೇನ'** ಯಾರಿಲ್ಲದೇ ಅಲ್ಲ **'ವಿನಾ ಕೇನ' 'ವಿ'** ಅಂದರೆ ಪರಮಾತ್ಮ ಅಂತ ಅರ್ಥ **'ಕ'** ಅಂದರೆ ಸುಖ ರೂಪಿಯಾದವನು **'ಕಂ ಬ್ರಹ್ಮ ಖಂ ಬ್ರಹ್ಮ'** ಅಂತ ಉಪನಿಷತ್ತು ಹೇಳುತ್ತದೆ **'ವಿ'** ಅನ್ನುವುದಕ್ಕೆ ಪರಮಾತ್ಮ ಅಂತ ಅರ್ಥ ಇದೆ. **'ವಿಃ ಪಕ್ಷಿಪರಮಾತ್ಮನೋಃ ವಿನಾ ಕೇನ'** ಅನಂತ ಸುಖ ರೂಪಿಯಾದಂತಹ ಸರ್ವೋತ್ತಮನಾದ ಪರಮಾತ್ಮನಿಂದಲೇ ಈ ಶಕಟ ಬಿದ್ದದ್ದು ಅಂತ ಆ ನಂದ ಅವನು ಆಡಿದ ಮಾತಿನೊಳಗೆ ಈ ಅರ್ಥಗರ್ಭಿತವಾಗಿದೆ. ಅವನು ಸಾಮಾನ್ಯ ಅಲ್ಲ ಅವನೊಬ್ಬ ದ್ರೋಣ ಎಂಬ ವಸು ನಂದ, ಧರಾ ಎಂಬಂತಹ ವಸು ಪತ್ನಿ ಅವಳು ತಪಸ್ಸು ಮಾಡಿ ಪರಮಾತ್ಮನ ಲೀಲೆಯನ್ನು ನೋಡಬೇಕು ಅನ್ನುವುದಕ್ಕೋಸ್ಕರ ಯಶೋದೆಯಾಗಿ ಅವತಾರ ಮಾಡಿದ್ದಾಳೆ. ಹೀಗಾಗಿ ಅವನ ಮಾತಿನಲ್ಲಿ ಆ ಒಂದು ಗಾಂಭೀರ್ಯ ಇದೆ, ಈ ರೀತಿ ಉದಾಸೀನ ಮಾಡಬಾರದು ಚೆನ್ನಾಗಿ ನೋಡಿಕೊಳ್ಳಬೇಕು ಎಂಬುದಾಗಿ ಯಶೋದೆಯನ್ನು ಚೆನ್ನಾಗಿ ಬೈದಿದ್ದಾನೆ. ಎಲ್ಲರೂ ಆಶ್ಚರ್ಯಚಕಿತರಾಗಿದ್ದಾರೆ ಪರಮಾತ್ಮನ ಪ್ರತಿಯೊಂದು ಘಟನೆಯೂ ಅತ್ಯಾಶ್ಚರ್ಯವಾದದ್ದು.

ಆಶ್ಚರ್ಯವತ್ ಪಶ್ಯತಿ ಕಶ್ಚಿದೇನಮ್ ಆಶ್ಚರ್ಯವದ್ವದತಿ ತಥೈವ ಚಾನ್ಯಃ ।
ಆಶ್ಚರ್ಯ ವಚ್ಚೈನಮನ್ಯಃ ಶೃಣೋತಿ ಶ್ರುತ್ವಾಪ್ಯೇನಂ ವೇದ ನ ಚೈವ ಕಶ್ಚಿತ್ ॥ (2.29 ಭ ಗೀತಾ)

ಅಂತ ಭಗವದ್ಗೀತೆಯಲ್ಲಿ ಹೇಳಿದ ಹಾಗೆ

ಆಶ್ಚರ್ಯಮಿತಿ ತೇ ಸರ್ವೇ ವಿಸ್ಮಯೋತ್ಫುಲ್ಲಲೋಚನಾಃ ॥ (6.21 ವಿಷ್ಣುಪರ್ವ)

ಪುಟ್ಟ ಮಗು ಒಂದು ಗಾಯ ಆಗಿಲ್ಲ, ನಗು ನಗುತ ಆಟ ಆಡುತ್ತಾ ಇದೆ ಬಂಡೆ ಮಾತ್ರ ಈ ರೀತಿ ಉರುಳಿ ಬಿದ್ದಿದೆ ಅಂತ. ಬಂಡೆಯ ಮೇಲೆ ಹಾಲು, ಮೊಸರು, ಬೆಣ್ಣೆ, ತುಪ್ಪ ಎಲ್ಲವನ್ನು ಇಟ್ಟಿದ್ದಾರೆ ಕೆಳಗೆ ಪರಮಾತ್ಮನನ್ನು ಮಲಗಿಸಿದ್ದಾರೆ ಇದು ಯಾವುದರ ಸಂಕೇತ, ಉಣ್ಣುವ ತಿನ್ನುವ ಪದಾರ್ಥಗಳು ನಮಗೆ ಮೇಲು, ದೇವರು ಕೆಳಗೆ ಅಂತ. ದೇವರ ಪೂಜೆ, ದೇವರ ಮಹಿಮೆಯನ್ನು ಕೇಳುವುದು, ದೇವರ ಧ್ಯಾನ, ದೇವರ ಭಜನೆ ಇದೆಲ್ಲ ಎರಡನೆಯದು ಸೆಕೆಂಡರಿ ಮುಖ್ಯವಾಗಿ ನಮಗೆ ಬೇಕಾದದ್ದು ಊಟ ತಿಂಡಿ. ಊಟ, ತಿಂಡಿ, ಹಾಲು, ಮೊಸರು, ಬೆಣ್ಣೆ, ತುಪ್ಪ ಇವುಗಳೆಲ್ಲ ನಮಗೆ ಬೇಕು ಅದಕ್ಕೆ ಮೇಲಿನ ಸ್ಥಾನ ಅನ್ನುವ ರೀತಿಯಲ್ಲಿ ನಮ್ಮ ಮನಸ್ಸಿನಲ್ಲಿ ಮನೆಯಲ್ಲಿ ತಿನ್ನುವ ಉಣ್ಣುವ ಪದಾರ್ಥಗಳಿಗೆ ಉನ್ನತ ಸ್ಥಾನ ಇದ್ದು, ಸರ್ವೋನ್ನತನಾದ ಭಗವಂತನಿಗೆ ಅವನತ ಸ್ಥಾನ ಇದ್ದರೆ ಈ ತರಹದ ಶಿಕ್ಷೆಯಾಗುತ್ತದೆ. ಭಗವಂತನಿಗೆ ಸರ್ವೋನ್ನತ ಸ್ಥಾನ ಇರಬೇಕು ಮನೆಯಲ್ಲಿಯೂ, ಮನಸ್ಸಿನಲ್ಲಿಯೂ ಭಗವಂತನ ಸ್ಮರಣೆಗೆ ಆದ್ಯತೆಯನ್ನು ನೀಡಬೇಕು ಆಗ ಭಗವಂತ ನಮ್ಮನ್ನು ರಕ್ಷಣೆ ಮಾಡುತ್ತಾನೆ ಅನ್ನುವ ಒಂದು ಸೂಚನೆಯನ್ನು ಈ ಮೂಲಕವಾಗಿ ನಮಗೆ ನೀಡಿದ್ದಾರೆ ಅಂತ ನಾವು ತಿಳಿಯಬೇಕು.

ಭಾಗವತದಲ್ಲಿ ಪೂತನೆಯೇ ಮೊದಲು ಬಂದದ್ದು, ಹರಿವಂಶ ಪೂತನೆಯ ಬಗ್ಗೆ ನಂತರ ಹೇಳುತ್ತದೆ ಇವಳು ಶಕುನೀ ಅಂತ ಹೆಣ್ಣು ಪಕ್ಷಿ ಮೂಲತಃ ಬಕ. ಬಕ ಪಕ್ಷಿಯ ವೇಷದಲ್ಲಿ ಬಂದ ಬಕಾಸುರನ ತಂಗಿ ಆದದ್ದರಿಂದ ಇವಳಿಗೆ ಪಕ್ಷಿಯ ವೇಷ ಆದರೆ ಕಾಮ ರೂಪಿಗಳು ಅಸುರರು. ಹೀಗಾಗಿ ಅವಳು ಅಂತಹ ಹೆಣ್ಣು ಪಕ್ಷಿಯ ವೇಷದ ರಾಕ್ಷಸಿಯಾಗಿದ್ದರೂ ಕೂಡ ಅತಿ ಸುಂದರವಾದಂತಹ ಸ್ತ್ರೀವೇಷವನ್ನು ಧಾರಣೆ ಮಾಡಿದ್ದಾಳೆ **'ಶಕುನೀ ಆದರೆ ವೇಷಧಾರಿಣೀ'**[1] ತಾನು ತನ್ನ ಎರಡೂ ರೆಕ್ಕೆಗಳಿಂದ ಹಾರುತ್ತ ಇಲ್ಲಿ ಬಂದು ಉತ್ತಮವಾದಂತಹ ಸ್ತ್ರೀವೇಷವನ್ನು ಧಾರಣೆ ಮಾಡಿದ್ದಾಳೆ. ಎಷ್ಟು ಮುದ್ದಾಗಿದೆ ಮಗು ಅಂತ ಆಟ ಆಡಿಸುವ ನೆಪದಲ್ಲಿ ಬಂದು ಯಾರಿಗೂ ಗೊತ್ತಾಗದಂತೆ ಅವಳು ಸ್ವಲ್ಪ ನಿದ್ರೆಯಿಂದ ಕಣ್ಣು ಮುಚ್ಚಿದ್ದಾಳೆ ಯಶೋದೆ. ಇದೇ ಸರಿಯಾದ ಅವಕಾಶ ಅಂತ ಶ್ರೀಕೃಷ್ಣ ಪರಮಾತ್ಮನನ್ನು ತನ್ನ ತೊಡೆಯ ಮೇಲೆ ತೆಗೆದುಕೊಂಡು ಹಾಲನ್ನು ಕುಡಿಸಬೇಕು ಅಂತ ಪ್ರಯತ್ನ ಮಾಡುತ್ತಾ ಇದ್ದಾಳೆ ವಿಷಪೂರಿತವಾದಂತಹ ಹಾಲು. ಹಾಲನ್ನು ಕುಡಿಸಿ ಕೃಷ್ಣನನ್ನು ಸಾಯಿಸಬೇಕು ಅಂತನ್ನುವ ದುಷ್ಟನಾದ ಚಿಂತನೆ ಆದರೆ ಸರ್ವಜ್ಞನಾದಂತಹ ಸರ್ವಶಕ್ತನಾದ ಶ್ರೀಕೃಷ್ಣ ಪರಮಾತ್ಮ ಇವಳು ಇಷ್ಟು ಹೊತ್ತು ಎಷ್ಟು ಮಕ್ಕಳನ್ನು ಕೊಂದಿದ್ದಾಳೋ ಕೊಂದಿದ್ದಾಳೆ. ಎಷ್ಟು ಜನರಿಗೆ ಈ ವಿಷದ ಹಾಲನ್ನು ಕುಡಿಸಿ ಕೊಂದಿದ್ದಾಳೋ ಗೊತ್ತಿಲ್ಲ ಅವರೆಲ್ಲರ ಆಯುಷ್ಯ ತೀರಿತ್ತು ಅನ್ನುವುದಕ್ಕೆ ಅವರೆಲ್ಲರ ಸಂಹಾರ ಆಯಿತು ಆದರೆ ಇನ್ನು ಮುಂದೆ ಇನ್ಯಾರನ್ನು ಕೊಲ್ಲುವುದು ಬೇಡ, ಇವಳನ್ನೇ ಕೊಂದು ಹಾಕೋಣ ಅಂತ ಹಾಲಿನ ಜೊತೆಗೆ ಪ್ರಾಣವನ್ನೇ ಹೀರಿದ್ದಾನೆ ಪರಮಾತ್ಮ, ತನ್ನ ಮೂಲರೂಪವನ್ನು ತೆಗೆದುಕೊಂಡು ದೊಡ್ಡದಾದ ದೇಹದಿಂದ ಸತ್ತು ಬಿದ್ದಿದ್ದಾಳೆ. ಮೂರು ಗವ್ಯೂತಿ ಅಷ್ಟು ದೊಡ್ಡದಾದ ದೇಹವನ್ನು ತೆಗೆದುಕೊಂಡು ಅವಳು ಬಿದ್ದರೆ ಒಂದೇ ಚಿತೆಯಲ್ಲಿ ಅವಳನ್ನು ಸುಡುವುದಕ್ಕೆ ಸಾಧ್ಯವಾಗದೆ ಒಂದೊಂದು ಅವಯವಗಳನ್ನು ಒಂದೊಂದು ಚಿತೆಯಲ್ಲಿಟ್ಟು ಸುಟ್ಟಿದ್ದಾರೆ ಆದರೆ ಇಡೀ ಗೋಕುಲದಲ್ಲಿ ಎಲ್ಲಿ ನೋಡಿದರಲ್ಲಿ ಸುಗಂಧ ಯಾಕೆ ಅಂದರೆ ಅವಳ ಶರೀರದಲ್ಲಿ ಊರ್ವಶಿ ಇದ್ದಾಳೆ. ಇವಳು ತಾಟಕ ದುಷ್ಟಳಾದ ರಾಕ್ಷಸಿ ಆದರೆ ಊರ್ವಶಿಯ ಸನ್ನಿಧಾನ ಇದೆ ಅಲ್ಲಿ. ಒಂದು ಸಂದರ್ಭದಲ್ಲಿ ಊರ್ವಶಿ ಕುಬೇರನ ಆಜ್ಞೆ ಇಲ್ಲದಂತೆ ಕುಬೇರನಿಗೆ ತಿರಸ್ಕಾರವಾಗುವ ರೀತಿಯಲ್ಲಿ ತುಂಬುರುವಿನ ಸಂಗವನ್ನು ಮಾಡಿದ್ದಕ್ಕೆ ಕುಬೇರ ನೀನು ರಾಕ್ಷಸಿಯಾಗಿ ಹುಟ್ಟು ಅಂತ ಶಾಪ ಕೊಟ್ಟಿದ್ದಾನೆ ಅನ್ನುವುದಕ್ಕೆ ಈ ರಾಕ್ಷಸಿಯಾದ ತಾಟಕೆಯ ಅವತಾರಳಾದ ಈ ಪೂತನೆಯಲ್ಲಿ

1. 6.22 ವಿಷ್ಣುಪರ್ವ

ಊರ್ವಶಿಯ ಪ್ರವೇಶ. ಆ ಊರ್ವಶಿಯ ಸನ್ನಿಧಾನದಿಂದ, ಆ ದೇವಲೋಕದ ಅಪ್ಸರಾ ಸ್ತ್ರೀ ವಿಷ್ಣು ಭಕ್ತಳು ವಿಶಿಷ್ಟವಾದಂತಹ ಯೋಗ್ಯತೆ ಅನ್ನುವುದಕ್ಕೆ ಅಷ್ಟು ಸುಗಂಧ ಎಲ್ಲ ಕಡೆಗೆ ಹರಡಿದೆ ಎಂಬುದಾಗಿ ವರ್ಣನೆಯನ್ನು ಮಾಡುತ್ತಾರೆ.

ಆ ರೀತಿ ಪರಮಾತ್ಮ ನೋಡಿ ದೇಹ ಒಂದೇ ಒಳಗಿರುವ ತಾಟಕೆಗೆ ಪೂತನೆಗೆ ದ್ವೇಷದಿಂದ ವಿಷ ಕುಡಿಸಬೇಕು ಅನ್ನುವ ಆಲೋಚನೆ ಇದ್ದವಳನ್ನು ಸಂಹಾರ ಮಾಡಿ ದುರ್ಗತಿಯನ್ನು ಕೊಟ್ಟ, ಒಳಗಿರುವ ಊರ್ವಶಿ ಕೃಷ್ಣ ಭಕ್ತಳು ಕೃಷ್ಣನ ಸೇವೆ ಮಾಡಬೇಕು ಅಂತ ಬಂದವಳು ಇವಳು ಮಾತ್ರ ಭಕ್ತಿಯಿಂದಲೇ ತಾನು ಶ್ರೇಷ್ಠವಾದ ಹಾಲನ್ನು ಕುಡಿಸಿದವಳನ್ನು ಸದ್ಗತಿಯನ್ನು ಕೊಟ್ಟ. ಒಂದೇ ದೇಹದೊಳಗಿದ್ದರೂ ಅವರವರ ಮನಸ್ಸಿನಲ್ಲಿರುವ ಭಾವನೆಗೆ ತಕ್ಕಂತೆ ಸದ್ಗತಿಯನ್ನು ದುರ್ಗತಿಯನ್ನು ಕೊಟ್ಟಿದ್ದಾನೆ ಭಕ್ತಿಯಿಂದ ಹಾಲು ಕುಡಿಸಿದ ಊರ್ವಶಿಗೆ ಉತ್ತಮವಾದ ಸದ್ಗತಿ, ದುರ್ಬುದ್ಧಿಯಿಂದ ದ್ವೇಷದಿಂದ ವಿಷ ಕುಡಿಸುವ ಪ್ರಯತ್ನ ಮಾಡಿದ ತಾಟಕ ಅವಳಿಗೆ ದುರ್ಗತಿಯನ್ನು ಪರಮಾತ್ಮ ಕೊಟ್ಟಿದ್ದಾನೆ ಎಂಬುದಾಗಿ ಶ್ರೀಮದಾಚಾರ್ಯರು ನಿರ್ಣಯವನ್ನು ತಿಳಿಸುತ್ತಾರೆ.

ಬ್ರಹ್ಮವೈವರ್ತ ಪುರಾಣದಲ್ಲಿ ಬಲಿ ಚಕ್ರವರ್ತಿಯ ಮಗಳು ರತ್ನಮಾಲಾ ಅಂತ. ವಾಮನ ರೂಪಿಯಾದ ಪರಮಾತ್ಮ ಸುಂದರವಾದ ಆ ಬಾಲ ವೇಷದಿಂದ ಸಭೆಯಲ್ಲಿ ಪ್ರವೇಶ ಮಾಡಿದಾಗ ಎಷ್ಟು ಮುದ್ದು ಕೂಸು ಇದು ಈ ಕೂಸನ್ನು ಎತ್ತಿಕೊಂಡು ಯಾಕೆ ನಾನು ಹಾಲು ಕುಡಿಸಬಾರದು ಅಂತ ಆ ಬಲಿ ಚಕ್ರವರ್ತಿಯ ಮಗಳಾದ ರತ್ನಮಾಲಾ ಮನಸ್ಸಿನಲ್ಲಿ ಅಂದುಕೊಂಡಿದ್ದಳಂತೆ ಅನ್ನುವುದಕ್ಕೋಸ್ಕರ ಅವಳಿಗೆ ಈ ಪ್ರಸಂಗದಲ್ಲಿ ತನ್ನ ಹಾಲು ಕುಡಿಸುವ ಯೋಗವನ್ನು ಪರಮಾತ್ಮ ಕರುಣಿಸಿದ ಅವಳು ಪೂತನೆಯಾಗಿ ಬಂದಿದ್ದಳು ಅಂತ ಬ್ರಹ್ಮವೈವರ್ತ ಪುರಾಣ ಹೇಳುತ್ತದೆ. ಶ್ರೀಮದಾಚಾರ್ಯರು ತಾತ್ಪರ್ಯ ನಿರ್ಣಯದಲ್ಲಿ ಊರ್ವಶಿ ಎಂಬುದಾಗಿ ಹೇಳುತ್ತಾರೆ ಕಲ್ಪಾಂತರದಲ್ಲಿ ಆ ರೀತಿ ಬಲಿ ಚಕ್ರವರ್ತಿಯ ಮಗಳು ಈ ರೀತಿ ಪೂತನೆಯಾಗಿ ಬಂದದ್ದು ಅಂತ ನಾವು ಇಟ್ಟುಕೊಳ್ಳಬೇಕು. ಈ ಕಲ್ಪದ ಕಥೆಯನ್ನು ಶ್ರೀಮದಾಚಾರ್ಯರು ನಿರ್ಣಯ ಮಾಡಿ ಹೇಳುವಾಗ ಊರ್ವಶಿ ಅಲ್ಲಿದ್ದಾಳೆ ಅಂತ. ಬ್ರಹ್ಮವೈವರ್ತ ಪುರಾಣ ರತ್ನಮಾಲಾ ಅನ್ನುವ ಬಲಿ ಚಕ್ರವರ್ತಿಯ ಮಗಳು ಅಲ್ಲಿದ್ದಳು ಅವಳಿಗೆ ಪರಮಾತ್ಮ ಸದ್ಗತಿಯನ್ನು ಕೊಟ್ಟ ಎಂಬುದಾಗಿ ಹೇಳುತ್ತಾರೆ. ತೃತೀಯಸ್ಕಂಧದಲ್ಲಿ ಭಾಗವತದಲ್ಲಿ ಹೇಳುವಾಗ

ಅಹೋ ಬಕೀ ಯಂ ಸ್ತನಕಾಳಕೂಟಂ ಜಿಘಾಂಸಯಾऽಪಾಯಯದಪ್ಯಸಾಧ್ವೀ ।

ಲೇಭೇ ಗತಿಂ ಧಾತ್ರ್ಯುಚಿತಾಂ ತತೋऽನ್ಯಂ ಕಂ ವಾ ದಯಾಳುಂ ಶರಣಂ ವ್ರಜೇಮ ॥

(03.2.23 ಭಾಗವತ)

ವಿಷ ಕುಡಿಸಿದ ಪೂತನೆಗೂ ಸದ್ಗತಿಯನ್ನು ಕೊಟ್ಟ ಅಂದರೆ ಇಂತಹ ದಯಾಳುವಾದ ವ್ಯಕ್ತಿ ಪ್ರಪಂಚದೊಳಗೆ ಹೇಗೆ ಇರುವುದಕ್ಕೆ ಸಾಧ್ಯ ಅಂತ ಭಾಗವತ ಹೇಳುತ್ತದೆ. ಅದರ ತಾತ್ಪರ್ಯ ಯದ್ಯಪಿ ಊರ್ವಶಿ ಸಜ್ಜನಳು ಅವಳಿಗೆ ದೇವರು ಸದ್ಗತಿಯು ಕೊಟ್ಟದ್ದು ಆದರೂ ಅಂತಹ ದುರ್ಜನಳಾದ ತಾಟಕೆಯ ಸಹವಾಸದೊಳಗೆ ಇದ್ದರೂ ಅವಳ ನೈಜ ಭಕ್ತಿಗೆ ದೇವರು ಮೆಚ್ಚಿ ಸದ್ಗತಿಯನ್ನು ಕೊಟ್ಟನಲ್ಲ ಇದೇ ದೊಡ್ಡ ಕಾರುಣ್ಯ. ನೀನು ಎಷ್ಟೇ ದೊಡ್ಡ ಭಕ್ತಳಿರಬಹುದು ಆ ದುಷ್ಟಳ ಜೊತೆಗೆ ಸಹವಾಸ ಮಾಡಿದ್ದಿ ಆದ್ದರಿಂದ ನಿನಗೆ ಸದ್ಗತಿಯನ್ನು ಕೊಡುವುದಿಲ್ಲ ಅಂತ ದೇವರು ಹೇಳಲಿಲ್ಲ ಇದು ಪರಮಾತ್ಮನ ಕಾರುಣ್ಯ ಎಂಬುದಾಗಿ ಶ್ರೀಮದ್ಭಾಗವತ ವರ್ಣನೆ ಮಾಡುತ್ತದೆ.

ಮುಂದೆ ಕೃಷ್ಣ ಪರಮಾತ್ಮ ಹಾಗೂ ಬಲರಾಮ ಇಬ್ಬರೂ ಕೂಡ ಅಂಬೆಗಾಲು ಇಡುವುದಕ್ಕೆ ಪ್ರಾರಂಭ ಮಾಡಿದ್ದಾರೆ ಸುಮ್ಮನೆ ಮಲಗಿಸಿದಲ್ಲಿ ಮಲಗುವ ರೀತಿಯೊಳಗೆ ಇದ್ದವರು ನಾಟಕ ಈಗ ಅಂಬೆಗಾಲು ಇಡುತ್ತಾ

ಇದ್ದಾರೆ. ಅಂಬೆಗಾಲು ಇಡುವಂತಹ ಪ್ರಸಂಗ ಬಲರಾಮ ದೇವರಿಗಂತೂ ಶೇಷ ದೇವರು ಮೈಸರಿಸಿಕೊಂಡು ಓಡಾಡುವುದೇ ಶೇಷ ದೇವರ ಸ್ವಭಾವ ಆ ರೀತಿಯೊಳಗೆ ನೆಲದ ಮೇಲೆ ಮೈಸರಿಸಿಕೊಂಡು ಓಡಾಡುತ್ತಾ ಕ್ರಮವಾಗಿ ಅಂಬೆಗಾಲನ್ನು ಇಡುತ್ತಾ ಇದ್ದಾರೆ. **'ದೇವವೃತ್ತಾಂತ ಮಾನುಷೌ'** ಹರಿವಂಶ ಹೇಳುತ್ತದೆ ಇವರು ದೇವತೆಗಳ ಕಾರ್ಯವನ್ನು ಮಾಡುವುದಕ್ಕೋಸ್ಕರವಾಗಿ ಮನುಷ್ಯ ವೇಷದಲ್ಲಿ ಅವತಾರ ಮಾಡಿದವರು, ನರ ನಾರಾಯಣರು ಬಲರಾಮ ಹಾಗೂ ಕೃಷ್ಣ.

ಏಕನಿರ್ಮಾಣನಿರ್ಮುಕ್ತಾವೇಕಶಯ್ಯಾಸನಾಶನೌ । (7.3 ವಿಷ್ಣುಪರ್ವ)

ಒಂದೇ ಹಾಸಿಗೆಯಲ್ಲಿ ಮಲಗುವುದು, ಒಂದೇ ತಟ್ಟೆಯಲ್ಲಿ ಊಟ, ಒಂದೇ ತರಹದ ವೇಷ, ಬಣ್ಣ ಸ್ವಲ್ಪ ವ್ಯತ್ಯಾಸ ಅವನು ಪೀತಾಂಬರ ಪರಮಾತ್ಮ, ಬಲರಾಮ ಇವನು ನೀಲಾಂಬರ ಆದರೆ ಉಳಿದೆಲ್ಲ ಆಭರಣಗಳು ಎಲ್ಲ ವಿಧವಾದ ವೇಷಗಳು ಒಂದೇ ತರಹದ ವೇಷಗಳು, ಅಲ್ಲಲ್ಲಲ್ಲಿ ನಾನಾ ವಿಧವಾಗಿ ಇರುವಂತಹ ವಿಚಿತ್ರವಾದ ಲೀಲೆಗಳನ್ನು ತೋರಿಸುತ್ತಾ ಈ ರೀತಿ ಅವರು ಆಡುತ್ತಾ ಇದ್ದಾರೆ.

ಅತಿಪ್ರಸಕ್ತೌ ತೌ ದೃಷ್ಟ್ವಾ ಸರ್ವವ್ರಜವಿಚಾರಿಣೌ । (7.12 ವಿಷ್ಣುಪರ್ವ)

ಮನೆಯಲ್ಲಿ ಇದ್ದವರು ಮನೆಯಿಂದ ಹೊರಗೆ ಹೋಗುವುದಕ್ಕೆ ಪ್ರಾರಂಭ ಮಾಡಿದರು, ದಾರಿಯಲ್ಲಿ ಓಡಾಡುತ್ತಾ ಇದ್ದಾರೆ ಬೆನ್ನುಹತ್ತಿ ಕರೆದುಕೊಂಡು ಬರುವುದು ಯಶೋದೆಗೆ, ರೋಹಿಣಿಗೆ ಬಹಳ ಕಷ್ಟ ಆಗುತ್ತಾ ಇದೆ, ತಡೆಯುವುದಕ್ಕೆ ಸಾಧ್ಯವಾಗುತ್ತಾ ಇಲ್ಲ, ನಂದನಿಗೂ ಅವರಿಬ್ಬರನ್ನು ತಡೆಯುವುದಕ್ಕೆ ಆಗುತ್ತಾ ಇಲ್ಲ ಅಷ್ಟು ಅವರು ಸಂಚಾರ ಮಾಡುತ್ತಾ ಇದ್ದಾರೆ. ಒಂದು ಪ್ರಸಂಗ, ಇವಳಿಗೆ ಎಲ್ಲ ಗೋಪಿಕಾ ಸ್ತ್ರೀಯರು ಬಂದು ಹೇಳುತ್ತಾ ಇದ್ದಾರೆ ಬೆಣ್ಣೆ ಕದಯುತ್ತಾನೆ, ಹಾಲು ಮೊಸರು ತಿನ್ನುತ್ತಾನೆ, ತಾನು ತಿನ್ನುವುದು ಅಷ್ಟೇ ಅಲ್ಲ ಕೋತಿಗಳಿಗೆಲ್ಲ ಕೊಡುತ್ತಾನೆ. ಗೋಪಾಲಕರಿಗೆಲ್ಲ ಕೊಟ್ಟು, ಕೋತಿಗಳಿಗೂ ಕೊಟ್ಟು ಮನೆಯಲ್ಲಿ ಇರುವ ಎಲ್ಲ ಹಾಲು ಮೊಸರು, ಬೆಣ್ಣೆಗಳನ್ನು ಖಾಲಿ ಮಾಡುತ್ತಾನೆ ಅಂತ ದೂರು ಹೇಳುತ್ತಾ ಇದ್ದಾರೆ ಹಾಗಾದರೆ ಹೇಗಾದರೂ ಮಾಡಿ ಶ್ರೀಕೃಷ್ಣ ಪರಮಾತ್ಮನನ್ನು ಕಟ್ಟಿ ಹಾಕಬೇಕು ಅಂತ ಯಶೋದೆ ಆಲೋಚನೆಯನ್ನು ಮಾಡುತ್ತಾ ಇದ್ದಾಳೆ ಯಾವ ಭಗವಂತ **'ಬಂಧಕೋ ಭವಪಾಶೇನ'** ಬಂಧಕ ಪಾಶವನ್ನು ಅವಕಾಶದಿಂದ ಬಂಧನ ಮಾಡಿದಂತಹ ಮಹಾನುಭಾವ ಅವನನ್ನು ಬಂಧನ ಮಾಡುವುದಕ್ಕೆ ಯಾರಿಗೆ ಸಾಧ್ಯ. ಯಶೋದೆ ಕೃಷ್ಣ ಪರಮಾತ್ಮನನ್ನು ಜೋರಾಗಿ ಕೈಯಲ್ಲಿ ಕೋಲು ಹಿಡಿದುಕೊಂಡು ಹೆದರಿಸಿ ಇನ್ನೇನು ಕಟ್ಟಿಬಿಡುತ್ತೇನೆ ಅಂತ ಹತ್ತಿರ ಹೋಗುವುದರೊಳಗೆ ಓಡುತ್ತಾ ಇದ್ದಾನೆ ಕೃಷ್ಣ. ಪುಟ್ಟ ಮಗು ಎಷ್ಟು ವೇಗದಿಂದ ಓಡುವುದಕ್ಕೆ ಸಾಧ್ಯ ಆದರೆ ಎಷ್ಟು ಓಡಿದರೂ ಅಷ್ಟೇ ಮನೆಯೊಳಗೆ ಕೃಷ್ಣ ಓಡಾಡುತ್ತಾ ಇದ್ದಾನೆ ಯಶೋದೆಗೆ ಹಿಡಿಯುವುದಕ್ಕೆ ಆಗುತ್ತಾ ಇಲ್ಲ. ಕೊನೆಗೆ ಭಕ್ತರಿಗೆ ನಾನು ವಶನಾಗುತ್ತೇನೆ ಅಂತನ್ನುವುದನ್ನು ತೋರಿಸುವುದಕ್ಕೆ ಶ್ರೀಕೃಷ್ಣ ಪರಮಾತ್ಮ ಯಶೋದೆಯ ಕೈಗೆ ಸಿಕ್ಕನಂತೆ ಶ್ರೀಮದಾಚಾರ್ಯರು ತಾತ್ಪರ್ಯ ನಿರ್ಣಯದಲ್ಲಿ ಹೇಳುತ್ತಾರೆ **'ಸ್ವಭಕ್ತ ವಶ್ಯತಾಂ'** ಭಕ್ತರಿಗೆ ನಾನು ವಶನಾಗುತ್ತೇನೆ. ಅದಕ್ಕೆ ಹೇಳುತ್ತಾರೆ ಓಡಾಡುತ್ತಾ ಓಡಾಡುತ್ತಾ ಇರುವಾಗ ಎಷ್ಟು ಹೊತ್ತಾದರೂ ಕೃಷ್ಣ ಸಿಗದೇ ಇರುವಾಗ ಕೊನೆಗೆ ಕೈಲಾಗದೇ ಎರಡೂ ಕೈ ಎತ್ತಿ ಜೋಡಿಸಿ ನಿನ್ನ ದಿಕ್ಕಿಗೆ ನಮಸ್ಕಾರ ಅಂತ ನಮಸ್ಕಾರ ಮಾಡಿದ್ದಳಂತೆ ಸಿಕ್ಕನಂತೆ ಕೃಷ್ಣ. ನಾನು ಹಿಡಿದು ಬಿಡುತ್ತೇನೆ ನನ್ನ ಶಕ್ತಿಯಿಂದ ಅನ್ನುವ ಅಹಂಕಾರ ಇರುವವರೆಗೆ ಸಿಕ್ಕಿಲ್ಲ, ಸಾಕಪ್ಪ ನಿನಗೆ ನಮಸ್ಕಾರ ಮಹಾರಾಯ ಸಿಗುತ್ತಾ ಇಲ್ಲ ಅಂತ ಕೈಜೋಡಿಸಿದರೆ ಇಷ್ಟು ಮೊದಲೇ ಮಾಡಿದ್ದರೆ ಮೊದಲೇ ಸಿಗುತ್ತಿದ್ದೆನಲ್ಲ ಅಂತ ಭಕ್ತಿಯಿಂದ ಯಾವಾಗ ನಮಸ್ಕಾರ ಮಾಡಿದಳೋ ಆಗ ಸಿಕ್ಕನಂತೆ.

ಇನ್ನು ಎರಡನೆಯ ಕೆಲಸ ಕಟ್ಟಬೇಕು. ಪುಟ್ಟ ಹಗ್ಗವನ್ನು ಇಟ್ಟುಕೊಂಡಿದ್ದಾಳೆ ಅವನ ಹೊಟ್ಟೆಗೆ ಎಷ್ಟು ಬೇಕೋ ಅಷ್ಟು ಹಗ್ಗ ಆ ಹಗ್ಗಕ್ಕೆ ಪರಮಾತ್ಮ ಸಿಗುತ್ತಾ ಇಲ್ಲ ಎಷ್ಟು ಮನೆಯಲ್ಲಿರುವ ಹಗ್ಗ ಇತ್ತೋ ಎಲ್ಲವನ್ನೂ ತಂದಾಯಿತು. ಹೇಳಿ ಕೇಳಿ ಗೋಪಾಲಕರು ಬೇಕಾದಷ್ಟು ಗೋವುಗಳು, ಗೋವುಗಳನ್ನು ಕಟ್ಟುವುದಕ್ಕೆ ಹಗ್ಗಗಳಿಗೆ ಏನು ಕೊರತೆಯಿಲ್ಲ ಜೊತೆಗೆ ಹಾಲು ಮೊಸರು ಎಲ್ಲ ಈಗಿನ ಹಾಗೆ ಕೊಂಡದ್ದನ್ನು ಬೆಣ್ಣೆ ಗಿಣ್ಣೆ ತರುವುದಲ್ಲ ಮನೆಯಲ್ಲಿಯೇ ಮೊಸರು ಕಡೆದು ಬೆಣ್ಣೆ ತೆಗೆದು ತುಪ್ಪ ಮಾಡಬೇಕು. ಕಡಿಯುವುದಕ್ಕೆ ಬೇಕಾದಷ್ಟು ಹಗ್ಗಗಳು ಆಕಳು, ಕರುಗಳನ್ನು ಕಟ್ಟುವುದಕ್ಕೆ, ಮೊಸರು ಕಡಿಯುವುದಕ್ಕೆ ಇದ್ದದ್ದೆ ಅದು ಗೋಕುಲ, ಮನೆ ಮನೆಗಳಿಗೆ ಬೇಕಾದಷ್ಟು ಸಮೃದ್ಧವಾದಂತಹ ಗೋವುಗಳು, ಬೇಕಾದಷ್ಟು ಪಾಶಗಳು ಎಲ್ಲಾ ಪಾಶಗಳನ್ನು ತಂದು ಕಟ್ಟುವ ಪ್ರಯತ್ನ ಮಾಡಿದರೂ ಕೂಡ ಶ್ರೀಕೃಷ್ಣ ಪರಮಾತ್ಮನಿಗೆ ಅದು ಸರಿ ಹೋಗುತ್ತಾ ಇಲ್ಲ. ಎಂತಹ ಅತ್ಯದ್ಭುತವಾದ ಲೀಲೆ ನೋಡಿ, ಶರೀರ ಅಷ್ಟೇ ಇದೆ ಪುಟ್ಟ ಶರೀರ, ಪುಟ್ಟ ಉದರ, ಪುಟ್ಟ ಹೊಟ್ಟೆ ಇದ್ದರೂ ಕಟ್ಟುವುದಕ್ಕೆ ಆಗದೆ ಆಶ್ಚರ್ಯಚಕಿತಳಾಗಿ ನೋಡುತ್ತಾ ಇದ್ದಾಳೆ ಗೊತ್ತಾಗಿಲ್ಲ, ಆಗ ಪರಮಾತ್ಮ **'ಸ್ವಮಾತೃ ವಶ್ಯತಾಂ'** ಶ್ರೀಮದಾಚಾರ್ಯರು ಬಹಳ ಸ್ಪಷ್ಟ ನಿರ್ಣಯವನ್ನು ಕೊಡುತ್ತಾರೆ ಸಿಗದೇ ಸಿಗದೇ ಕೊನೆಗೆ ಸಿಕ್ಕ ಭಕ್ತರಿಗೆ ವಶ ಅಂತ ತೋರಿಸುವುದಕ್ಕೆ, ಕಟ್ಟಲಿಕ್ಕೆ ಸಾಧ್ಯವಾಗದೆ ಸಾಕಷ್ಟು ಪ್ರಯತ್ನ ಮಾಡಿದ ನಂತರ ಕೊನೆಗೆ ಕಟ್ಟಿಸಿಕೊಂಡ, ತಾಯಿಗೆ ಮಕ್ಕಳು ವಶರಾಗಿರಬೇಕು ಅಂತ ಜಗತ್ತಿಗೆ ತೋರಿಸಿಕೊಡುವುದಕ್ಕೆ, ತಂದೆ ತಾಯಿಗಳ ಕಟ್ಟಿನೊಳಗೆ ಮಕ್ಕಳಿದ್ದರೆ ಕೆಟ್ಟು ಹೋಗುವುದಿಲ್ಲ ಅಂತ ಕೃಷ್ಣ ಪರಮಾತ್ಮ ತೋರಿಸಿಕೊಡುತ್ತಾ ಇದ್ದಾನೆ. ತಂದೆ ತಾಯಿಗಳ ಅವರ ಕಟ್ಟಿನಲ್ಲಿ, ಅವರ ನಿಯಮದಲ್ಲಿ, ಅವರು ಹಾಕಿಕೊಟ್ಟ ದಾರಿಯಲ್ಲಿ, ಅವರು ತೋರಿದ ಮಾರ್ಗದಲ್ಲಿ ಮಕ್ಕಳು ಧರ್ಮದಿಂದ ಜೀವನವನ್ನು ಮಾಡಬೇಕು, ನ್ಯಾಯದಿಂದ ಜೀವನವನ್ನು ಮಾಡಬೇಕು, ವಿನಯದಿಂದ ಜೀವನವನ್ನು ಮಾಡಬೇಕು, ಉತ್ತಮ ಸಂಸ್ಕಾರಯುತರಾಗಿ ತಮಗೆ ವಿಹಿತವಾದ ಕರ್ಮಗಳನ್ನು ಮಾಡಬೇಕು, ಪರೋಪಕಾರವನ್ನು ಮಾಡಬೇಕು, ದೊಡ್ಡವರ ಹಿರಿಯರ ಆದರ್ಶವನ್ನು ಇಟ್ಟುಕೊಳ್ಳಬೇಕು. ಆ ಕಟ್ಟಿನೊಳಗೆ, ಆ ನಿಯಮದೊಳಗೆ, ಕುಲದ ಆಚಾರದೊಳಗೆ ಧರ್ಮದ ಚೌಕಟ್ಟಿನಲ್ಲಿ ಇದ್ದರೆ ಅವರಿಗೆ ಶ್ರೇಯಸ್ಸು ಅಂತ ಜಗತ್ತಿಗೆ ಪಾಠ ಕಲಿಸುವುದಕ್ಕಾಗಿ ಪರಮಾತ್ಮ ತನ್ನನ್ನು ಕಟ್ಟುವ ಶಕ್ತಿ ಸಾಮರ್ಥ್ಯಗಳು ಪ್ರಪಂಚದೊಳಗೆ ಯಾರಿಗೆ ಇಲ್ಲದಿದ್ದರೂ ಕೂಡ ತಾಯಿಯ ಆ ಪಾಶಕ್ಕೆ ಪರಮಾತ್ಮ ಸಿಕ್ಕಿದ್ದಾನೆ ಅಂತ ಶ್ರೀಮದಾಚಾರ್ಯರು ತಿಳಿಸಿಕೊಡುತ್ತಾರೆ.

ಆ ರೀತಿಯಾಗಿ ಪರಮಾತ್ಮ ಕಟ್ಟಿಸಿಕೊಂಡ ಅದಕ್ಕೆ ಅವನಿಗೆ ದಾಮೋದರ ಅಂತ ಹೆಸರು. ಉದರ ಹೊಟ್ಟೆ, ದಾಮ ಹಗ್ಗ ತಾಯಿ ಕಟ್ಟಿದ ಹಗ್ಗವನ್ನು ಹೊಟ್ಟೆಯ ಮೇಲೆ ಇಟ್ಟುಕೊಂಡವನು ಆದ್ದರಿಂದ ಅವನಿಗೆ ದಾಮೋದರ ಎಂಬುದಾಗಿ ಆ ಹೆಸರು. ಕಥೆ ಒಂದು ಬಾರಿ ನಡೆದುಹೋಯಿತು ಅಂದರೆ ಮರೆತು ಬಿಡುತ್ತೇವೆ ನಾವು ಅಂತ ಹೇಳಿದಾಗೆಲ್ಲ, ಸಂಧ್ಯಾವಂದನೆ ಮಾಡುವಾಗ ದಾಮೋದರ ಅಂತ ಹೇಳಿದಾಗೆಲ್ಲ ನಮ್ಮ ತಂದೆ ತಾಯಿಗಳು ನೆನಪಿಗೆ ಬರಬೇಕು ಮತ್ತು ತಂದೆ ತಾಯಿಗಳಿಗೆ ವಶರಾಗಿರಬೇಕು ಅಂತನ್ನುವ ಒಂದು ಸಂದೇಶ ಅದಕ್ಕಾಗಿ ಹೆಸರನ್ನೇ ಇಟ್ಟುಕೊಂಡು ಪ್ರಸಿದ್ಧನಾದ ದಾಮೋದರ ಎಂಬುದಾಗಿ ಪರಮಾತ್ಮ. ಇನ್ನೊಂದು ಅವನು ಕೈಗೆ ಸಿಗುವುದೇ ಇಲ್ಲ ಎಷ್ಟು ಸೇವೆ ಮಾಡಿದರೆ ಏನು ಲಾಭ ಅಂತನ್ನುವ ಆತಂಕ ಮನಸ್ಸಿನೊಳಗೆ ಬೇಡ ಭಕ್ತಿಯಿಂದ ದೇವರನ್ನು ನಾವು ಭಜಿಸಿದರೆ ನಮ್ಮ ಭಕ್ತಿಗೂ ದೇವರು ವಶನಾಗುತ್ತಾನೆ ಅನ್ನುವ ಸಂದೇಶ.

ಆ ಭಗವಂತನ ಕಾರುಣ್ಯವೂ ಕೂಡ ಇಲ್ಲಿ ನಮಗೆ ತೋರುತ್ತೆ ತಾಯಿಯ ಮೇಲೆ, ತಾಯಿ ಅವತಾರದಲ್ಲಿ ತೋರಿಸುವುದಕ್ಕೆ ನಿಜವಾಗಿ ಅವಳೊಬ್ಬ ಭಕ್ತಳೇ ಭಕ್ತರ ಮೇಲೆ ಪರಮಾತ್ಮನಿಗೆ ಇರುವ ಕಾರುಣ್ಯ ದಯೆ ಎಷ್ಟು ಅಂತ ಈ ಘಟನೆಯಿಂದ ದೇವರು ತೋರಿಸುತ್ತಾನೆ. ತಾನೇನು ತನ್ನ ಘನತೆ ಏನು ಕಟ್ಟಿಸಿಕೊಳ್ಳುವುದು ಅಂದರೆ ಏನು, ತಾನು ಕಟ್ಟಿಸಿಕೊಂಡರೂ ತಪ್ಪಿಲ್ಲ ಇವನು ಕಟ್ಟಿಸಿಕೊಂಡ ಅಂತ ನಾಲ್ಕು ಜನ ಅಂದರೆ ಅನ್ನಲಿ ಆದರೆ ಭಕ್ತರಿಗೆ ವಶನಾಗಿ ನಾನು

ಇರುತ್ತೇನೆ, ಅವರ ಇಷ್ಟಾರ್ಥಗಳನ್ನು ಪೂರ್ಣ ಮಾಡುತ್ತೇನೆ, ಅವರು ಅಂದುಕೊಂಡದ್ದನ್ನು ಸತ್ಯ ಮಾಡುತ್ತೇನೆ ಅಂತ ತೋರಿಸುವುದಕ್ಕೆ ತಾನು ಕಟ್ಟಿಸಿಕೊಳ್ಳುವುದಕ್ಕೂ ತಯಾರಾದನಲ್ಲ ಅದೆಷ್ಟು ಕಾರುಣ್ಯ ಅನ್ನುವುದಕ್ಕೆ ದಾಸರು **'ದಯವಿರಲಿ ದಯವಿರಲಿ ದಾಮೋದರ'** ಅಂತ ಬೇರೆ ಯಾವುದೋ ಶಬ್ದವನ್ನು ಬಳಸಲಿಲ್ಲ. ಆ ಪರಮಾತ್ಮನ ದಯಾ ಘನತೆಯನ್ನು ಸುವ್ಯಕ್ತವಾಗಿ ತೋರಿಸುವ ಈ ಶಬ್ದವನ್ನು ಆ ಅವ್ಯಕ್ತವಾದ ಅನುಸಂಧಾನದಿಂದ ದಾಸರು ಬಳಸಿದ್ದಾರೆ ಅದನ್ನು ನಾವು ತಿಳಿಯಬೇಕು **'ದಯವಿರಲಿ ದಯವಿರಲಿ ದಾಮೋದರ'**. ಅಂತಹ ದಯಾಸಾಗರ ದಯಾನಿಧಿ ಪರಮಾತ್ಮ ಅನ್ನುವ ಅನುಸಂದಾಧನವನ್ನು ಮನಸ್ಸಿನಲ್ಲಿ ಮಾಡಿಕೊಳ್ಳುತ್ತಾ ದಾಸರು ಆ ಶಬ್ದ ಪ್ರಯೋಗವನ್ನು ಮಾಡುತ್ತಾರೆ. ಆ ರೀತಿ ಪರಮಾತ್ಮ ಹಗ್ಗವನ್ನು ಕಟ್ಟಿಸಿಕೊಂಡ.

ಮುಂದೆ ಯಶೋದೆ ತನ್ನ ಕೆಲಸದೊಳಗೆ ತಾನು ತೊಡಗಿದ್ದಾಳೆ ನಂದ ಆಚೆಗೆ ಹೋಗಿದ್ದಾನೆ ಪರಮಾತ್ಮ ಮನೆಯಿಂದ ಹೊರಗೆ ಬಂದಿದ್ದಾನೆ, ಒರಳಿಗೆ ಕಟ್ಟಿದ್ದಾಳೆ ಆ ಒರಳನ್ನು ಸೆಳೆದುಕೊಂಡು ಹೋಗುತ್ತಾ ಇದ್ದಾನೆ. ಹೋಗುತ್ತಾ ಹೋಗುತ್ತಾ ಎರಡು ಅರ್ಜುನ ವೃಕ್ಷಗಳು ಆ ವೃಕ್ಷಗಳ ಮಧ್ಯದಿಂದ ಪರಮಾತ್ಮ ಹೋದ ಒರಳು ಸಿಕ್ಕಿಕೊಂಡಿದೆ ಎಳೆದ ದೊಡ್ಡದಾದ ವೃಕ್ಷಗಳು ಕೆಳಗೆ ಬಿದ್ದಿವೆ ಭಾರೀ ಜೋರಾಗಿ ಶಬ್ದವಾಗಿದೆ. ಆ ವೃಕ್ಷಗಳು ಸುಮ್ಮನೆ ಬೆಳೆದು ನಿಂತ ವೃಕ್ಷಗಳು ಮಾತ್ರ ಇರಲಿಲ್ಲ ಆ ವೃಕ್ಷಗಳಿಗೆ ನಿತ್ಯದಲ್ಲಿ ಗೋಕುಲದ ಎಲ್ಲ ಗೋಪಾಲಕರು, ಗೋಪಿಕಾ ಸ್ತ್ರೀಯರು ಅಲ್ಲಿ ಬಂದು ಪೂಜೆಯನ್ನು ಮಾಡಿಕೊಂಡು ಹೋಗುತ್ತಾ ಇದ್ದರು ಅವರು ಏನು ಅಂದುಕೊಳ್ಳುತ್ತಾ ಇದ್ದರೋ ಅದೆಲ್ಲಾ ಈಡೇರುತ್ತಾ ಇತ್ತು ಇದಕ್ಕೆ ಸತ್ಯೋಪಯಾಚನ ಅಂತ. ಹಿಂದೆ ದುರ್ಗಾ ದೇವಿಯ ಸ್ತೋತ್ರವನ್ನು ಕೇಳಿದಿರಲ್ಲ ಅದರಲ್ಲಿಯೂ ಬರುತ್ತದೆ ಈ ಶಬ್ದ ಸತ್ಯೋಪಯಾಚನ ಅಂತ ಏನು ಹರಕೆ ಹೊತ್ತುಕೊಂಡು ಪ್ರಾರ್ಥನೆ ಮಾಡಿಕೊಳ್ಳುತ್ತಾರೋ ಅದು ಸತ್ಯ ಆಗಬೇಕು ಅಂತಹ ದೇವತೆಗೆ ಸತ್ಯೋಪಯಾಚನ ಅಂತ. ಈ ಎರಡು ವೃಕ್ಷಗಳು ಕೂಡ ಗೋಪಾಲಕರ ದೃಷ್ಟಿಯಲ್ಲಿ ಸತ್ಯೋಪಯಾಚನವಾಗಿ ಇದ್ದವು ಹೀಗಾಗಿ ಏನೇನೋ ಹರಕೆಗಳನ್ನು ಬೇಡಿಕೊಂಡು ಪೂಜೆ ಮಾಡಬೇಕು ಬಂದು ಅಂತಹ ಗಿಡಗಳನ್ನೇ ಬೀಳಿಸಿಬಿಟ್ಟ ಕೃಷ್ಣ. ಎಲ್ಲ ಗೋಪಾಲಕರು, ಗೋಪಿಕಾ ಸ್ತ್ರೀಯರು ಧಾವಿಸಿ ಬಂದಿದ್ದಾರೆ ಬರುವುದಷ್ಟೇ ಅಲ್ಲ ಒಳಗೆ ಹೋಗಿ ಯಶೋದೆಯನ್ನು ಬೈಯುತ್ತಾ ಇದ್ದಾರೆ ಏನು ಮಾಡುತ್ತ ಇದ್ದೀಯಾ ಒಳಗೆ ಕುಳಿತು

ಉತ್ತಿಷ್ಠ ಗಚ್ಛ ದುರ್ಮೇಧೇ ಮೂಢೇ ಪಣ್ಡಿತಮಾನಿನಿ । (7.24 ವಿಷ್ಣುಪರ್ವ)

ಬಹಳ ಪಂಡಿತಳು ಅಂತ ಅಂದುಕೊಂಡು ಬಿಟ್ಟಿದ್ದೀಯ. ಅಲ್ಲಿ ದೊಡ್ಡದಾದ ಗಿಡ ಬಿದ್ದಿದೆ ಅದರ ಕೆಳಗೆ ಮಗುವಿಗೆ ಏನಾಯಿತು ಅಂತ ನೋಡುವ ಪ್ರಜ್ಞೆ ಇಲ್ಲ ನಿನಗೆ. ನಾವೆಲ್ಲರೂ ಪೂಜೆ ಮಾಡುವ ಗಿಡ ಬಿತ್ತು ಹೋಗಲಿ, ಆ ಗಿಡ ಬಿದ್ದರೆ ಬೀಳಲಿ, ಆ ಗಿಡಕ್ಕಿಂತಲೂ ಅತ್ಯಂತ ಪೂಜ್ಯನಾದಂತಹ ಕೃಷ್ಣ ಪರಮಾತ್ಮನೇ ಗಿಡದೊಳಗೆ ಸಿಕ್ಕಿಕೊಂಡಿದ್ದಾನೆ. ಗಿಡ ಹೋದ ದುಃಖ ಏನು ದೊಡ್ಡದಲ್ಲ, ಮಗುವಿಗೆ ಏನಾಯಿತು ಅಂತ ನೀನು ಆಲೋಚನೆ ಮಾಡುವುದು ಬೇಡವಾ ಅಂತ ಬಂದು ಎಲ್ಲರೂ ಬೈಯುತ್ತಾ ಇದ್ದಾರೆ. ಗಾಬರಿಯಾಗಿ ಯಶೋದೆ ಓಡಿ ಬಂದು ನೋಡುತ್ತಾಳೆ.

ವಿನಾ ವಾತಂ ವಿನಾವರ್ಷಂ ವಿದ್ಯುತ್ಪ್ರಪತನಂ ವಿನಾ ।
ವಿನಾ ಹಸ್ತಿಕೃತಂ ದೋಷಂ ಕೇನೇಮೌ ಪಾತಿತೌ ದ್ರುಮೌ ॥ (7.29 ವಿಷ್ಣುಪರ್ವ)

ಬಿರುಗಾಳಿ ಬಿಟ್ಟಿಲ್ಲ, ಯಾವುದೇ ರೀತಿಯ ಸಿಡಿಲು ಬಿದ್ದಿಲ್ಲ, ಆನೆ ಬಂದಿಲ್ಲ ಯಾವ ಕಾರಣಕ್ಕೆ ಗಿಡ ಬೀಳಬೇಕು ಏನಿಲ್ಲದೆ ಗಿಡ ಬಿತ್ತಲ್ಲ ಹೇಗೆ ಬಿತ್ತು ಇದು ಮಗು ಬೀಳಿಸಿದೆ ಅಂದರೆ ಯಾರಿಗೂ ನಂಬಿಕೆ ಆಗುತ್ತಾ ಇಲ್ಲ.

ನೋಡಿದವರು ಹೇಳುತ್ತಾ ಇದ್ದಾರೆ ನಾವು ನೋಡಿದ್ದೇವೆ ಇವನೇ ಸೆಳೆದಿದ್ದಕ್ಕೆ ಬಿದ್ದದ್ದು ಅಂತ ನಂಬಿಕೆ ಹುಟ್ಟುತ್ತಾ ಇಲ್ಲ **'ನಿನ್ನ ಸುಗುಣಗಳ ನಂಬುಕೆ ಎನಗಿಲ್ಲಾ'** ದೇವರ ಗುಣಗಳ ಬಗ್ಗೆ ನಮಗೆ ನಂಬಿಕೆ ಇಲ್ಲ ದೊಡ್ಡವರಿಗೆ ನಂಬಿಕೆ ಇರುತ್ತದೆ. **'ಪ್ರತ್ಯಯೋ ಯದ್ಯುಣೇಷೂತ್ತಮಾನಾಂ ಪರಃ'**[1] ಆ ಭಗವಂತನ ಗುಣದಲ್ಲಿ ಪ್ರತ್ಯಯ ವಿಶ್ವಾಸ ಉತ್ತಮರಿಗೆ ದೃಢವಾಗಿ ಇರುತ್ತದೆ, ಜ್ಞಾನಿಗಳೆಲ್ಲ ಅದನ್ನು ನಂಬುತ್ತಾರೆ ಇದು ಅತ್ಯಂತ ಸಣ್ಣ ಕೆಲಸ ದೇವರಿಗೆ. ಇಡೀ ಜಗತ್ತನ್ನೇ ಆಟ ಆಡಿಸುವ ಆ ಪರಮಾತ್ಮನಿಗೆ ಎರಡು ಗಿಡಗಳನ್ನು ಬೀಳಿಸುವುದು ಏನು ದೊಡ್ಡದು ಆದರೆ ಸಾಮಾನ್ಯರಿಗೆ ಅದು ವಿಶ್ವಾಸ ಇಲ್ಲ. ಮತ್ತೆ ಇಲ್ಲಿಯೂ ಹಿಂದಿನಂತೆ ನಂದನ ಮಾತಿನಲ್ಲಿ ಹೇಗೆ ಆನಂದದಿಂದ ಅರ್ಥವನ್ನು ತಿಳಿದಿರಲ್ಲ ನೀವು ಹಾಗೆ ಇಲ್ಲಿ **'ಕೇನೇಮೌ ಪಾತಿತೌ ದ್ರುಮೌ'** ಅಂತ **'ಕೇನೇಮೌ ಪಾತಿತೌ ದ್ರುಮೌ'** ಪ್ರಶ್ನೆ ಉತ್ತರ ಅದರಲ್ಲಿಯೇ ಇದೆ. **'ಕೇನೇಮೌ ಪಾತಿತೌ ದ್ರುಮೌ'** ಯಾರು ಬೀಳಿಸಿದರು ಈ ಗಿಡವನ್ನು **'ಕ'** ಸುಖ ರೂಪಿಯಾದಂತಹ ಪರಬ್ರಹ್ಮ ಶ್ರೀಕೃಷ್ಣ ಪರಮಾತ್ಮ ಅವನೇ ಇದನ್ನು ಬೀಳಿಸಿದ್ದು ಅಂತ **'ಕೇನೇಮೌ ಪಾತಿತೌ ದ್ರುಮೌ' 'ಕ'** ಅನ್ನುವುದಕ್ಕೆ ಕರ್ತಾ ಎಂಬ ಅರ್ಥವನ್ನೂ ಶ್ರೀಮದಾಚಾರ್ಯರು ಗೀತಾ ಭಾಷ್ಯದಲ್ಲಿ ಹೇಳುತ್ತಾರೆ. ಏಕಃ ಅಂದರೆ ಏ ಏಕಯೇವ ಕ ಕರ್ತಾ ಏಕಃ ಅನ್ನುತ್ತಾರೆ ಹಾಗಾಗಿ **'ಕ'** ಅಂದರೆ ಕರ್ತಾ ಸರ್ವ ಕರ್ತುವಾದ ಪರಮಾತ್ಮ, ಯಾವ ಪರಮಾತ್ಮ ಈ ಗಿಡವನ್ನು ಸೃಷ್ಟಿ ಮಾಡಿದ, ಈ ಗಿಡವನ್ನು ಇಲ್ಲಿ ನಟ್ಟ ನೆಟ್ಟ ಅಂತಹ ಪರಮಾತ್ಮನೇ ಆ ಒಳಗಿದ್ದವನು ಕೆಟ್ಟ ಅಂತ ಗೊತ್ತಾದದ್ದಕ್ಕಾಗಿ ಅದನ್ನು ಬೀಳಿಸಿದ **'ಕೇನೇಮೌ ಪಾತಿತೌ ದ್ರುಮೌ'** ಆ ಸರ್ವ ಕರ್ತುವಾದ ಭಗವಂತನೇ ಇದನ್ನು ಬೀಳಿಸಿದ್ದು ಅಂತ ಒಳಗಿನ ಆಂತರ್ಯ.

ಯಾರವರು ಅಂತ ಶ್ರೀಮದಾಚಾರ್ಯರು ಹೇಳುತ್ತಾರೆ ಕುಬೇರನ ಮಕ್ಕಳು ನಳಕೂಬರು-ಮಣಿಗ್ರಿವರು ಅಂತ ಅವರು ಈ ಗಿಡವಾಗಿ ಹುಟ್ಟುವಂತೆ ನಾರದರ ಶಾಪ. ಎಲ್ಲರೂ ಚೆನ್ನಾಗಿ ತಿಳಿಯಬೇಕು ಈ ಕಥೆಯ ಸಂದೇಶವನ್ನು. ಯಾರೂ ಕೂಡ ಎಂದಿಗೂ ತಾನು ಸ್ನಾನ ಮಾಡುವಾಗ ವಸ್ತ್ರವನ್ನು ಧಾರಣ ಮಾಡಿಯೇ ಸ್ನಾನ ಮಾಡಬೇಕು. ವಿವಸ್ತ್ರರಾಗಿ ಸ್ನಾನವನ್ನು ಮಾಡಲೇಬಾರದು ಅದರಲ್ಲಿಯೂ ನಾರದರಂತಹ ಮಹಾಜ್ಞಾನಿಗಳು ಬಂದಾಗ ನಳಕೂಬರು-ಮಣಿಗ್ರಿವರು ಮೈಮೇಲೆ ಎಚ್ಚರ ಇಲ್ಲದಂತೆ ವಿವಸ್ತ್ರರಾಗಿ ಜಲಕ್ರೀಡೆಯನ್ನು ಮಾಡುತ್ತಾ ಇರುತ್ತಾರೆ. ಧರ್ಮ ಶಾಸ್ತ್ರದ ನಿಯಮವನ್ನು ಉಲ್ಲಂಘನೆ ಮಾಡಿ ನೀವು ಸ್ನಾನವನ್ನು ಮಾಡುತ್ತಾ ಇದ್ದೀರಲ್ಲ, ಮೈಮೇಲೆ ವಸ್ತ್ರ ಇಲ್ಲ ಅನ್ನುವ ಎಚ್ಚರವೂ ನಿಮಗಿಲ್ಲ ಹಾಗಾದರೆ ವಸ್ತ್ರವೇ ಇಲ್ಲದೆ ಜೀವನವನ್ನು ಮಾಡುತ್ತಾವಲ್ಲ ಅಂತಹ ಜೀವರಾಶಿಗಳು ಗಿಡಗಳು, ಗಿಡಗಳಾಗಿ ಹುಟ್ಟಿ ಹಾಗಾದರೆ ಅಂತ ಶಾಪ ಕೊಟ್ಟಿದ್ದಾರೆ ಆ ಶಾಪದಿಂದ ಅವರು ಗಿಡಗಳಾಗಿ ಹುಟ್ಟಿದ್ದಾರೆ ಸಾಲದ್ದಕ್ಕೆ ಅಸುರಾವೇಶ ಬೇರೆ. ಧುನಿ, ಚಮು ಅಂತ ಇಬ್ಬರು ಪಾರ್ವತಿಯನ್ನು ಕುರಿತು ತಪಸ್ಸು ಮಾಡಿ ಅವಧ್ಯರಾದಂತಹ ಅತ್ಯಂತ ಉಗ್ರರಾದ ಇಬ್ಬರು ಅಸುರರು ಕೂಡ ಅಲ್ಲಿ ಪ್ರವೇಶ ಮಾಡಿದ್ದಾರೆ, ಕೃಷ್ಣ ಅಂದು ಅವರಿಬ್ಬರನ್ನು ಬೀಳಿಸಿದ್ದಿಲ್ಲ ಅಂದರೆ ಇನ್ನು ಇರುತ್ತಾ ಇದ್ದರು. ಆ ಧುನಿ, ಚಮು, ಶಕಟಾಸುರ, ಪೂತನಾ ಇವರೆಲ್ಲ ಪಾರ್ವತಿಯ ವರದಿಂದ ಅವಧ್ಯರು ಅಂತಹ ಅವರಿಬ್ಬರನ್ನು, ಸಮಸ್ಯೆಗೆ ಅಯೋಗ್ಯರಾದವರನ್ನು ದುರ್ಗತಿಗೆ ಕಳಿಸಿದ್ದಾನೆ. ಇನ್ನು ನಳಕೂಬರು-ಮಣಿಗ್ರಿವರು ಕುಬೇರನ ಪುತ್ರರು ಸಜ್ಜನರು ಅಸುರಾವೇಶದಿಂದ ತಪ್ಪು ಮಾಡಿದ್ದಕ್ಕೆ ಸ್ವಲ್ಪಹೊತ್ತು ಶಿಕ್ಷೆ ಅನುಭವಿಸುವಂತೆ ಮಾಡಿ ಮತ್ತೆ ಅವರಿಗೆ ಉತ್ತಮವಾದಂತಹ ತಮ್ಮ ಮೂಲರೂಪದಲ್ಲಿ ಸೇರಿಕೊಳ್ಳುವಂತೆ ಅನುಗ್ರಹ ಮಾಡಿದ್ದಾನೆ ಪರಮಾತ್ಮ ಅವರು ಕುಬೇರನ ಮಕ್ಕಳು, ಕುಬೇರ ಸಂಪತ್ತಿಗೆ ದೇವತೆ ಶ್ರೀಮಂತ.

ಅಸತಃ ಶ್ರೀಮದಾಂಧ್ಯಸ್ಯ ದಾರಿದ್ರ್ಯಂ ಪರಮಾಂಜನಮ್ । (10.1.11.13 ಭಾಗವತ)

1. 8.5 ದ್ವಾದಶಸ್ತೋತ್ರ

ಅಂತ ಯಾರು ಹಣದ ಮದದಿಂದ ಉನ್ಮತ್ತರಾಗಿರುತ್ತಾರೆ ಅವರಿಗೆ ದಾರಿದ್ರ್ಯ ಬರುವುದೇ ಒಂದು ದೊಡ್ಡದಾದಂತಹ ಉಪಾಯ ಔಷಧ ಅಂತ ನಾರದರು ಅನ್ನುತ್ತಾರೆ. ನಿಮಗೆ ಅಹಂಕಾರ ಇದೆಯಲ್ಲ, ಸಂಪತ್ತಿನ ಮದದಿಂದ ಹೀಗೆ ಮಾಡುತ್ತಾ ಇದ್ದೀರಲ್ಲ ಗಿಡ ಆಗಿ ಹುಟ್ಟಿರಿ ಅಂತ ವಸ್ತ್ರವೂ ಇಲ್ಲ, ಸಂಪತ್ತೂ ಇಲ್ಲ ಗಿಡಕ್ಕೇನು ಸಂಪತ್ತು ಆ ರೀತಿ ಅವರಿಗೆ ಶಾಪವನ್ನು ಕೊಟ್ಟು ಪಾಠ ಕಲಿಸಿದ್ದಾರೆ. ಸಂಪತ್ತು ಇದೆ, ಶ್ರೀಮಂತಿಕೆ ಇದೆ ಅನ್ನುವ ಅಹಂಕಾರದೊಳಗೆ ಜ್ಞಾನಿಗಳಿಗೆ ಮಹಾನುಭಾವರಿಗೆ ತಿರಸ್ಕಾರವನ್ನು ಮಾಡಬಾರದು ಅನ್ನುವುದನ್ನು ಈ ಕಥೆಯಿಂದ ನಾವು ತಿಳಿಯಬೇಕಾದದ್ದು.

ಆನಂತರ ಈ ಎಲ್ಲ ಪ್ರಸಂಗಗಳಲ್ಲಿಯೂ ಭಾಗವತದಲ್ಲಿ ಬಹಳ ವರ್ಣನೆ ಬರುತ್ತದೆ, ಬ್ರಹ್ಮವೈವರ್ತ ಪುರಾಣದಲ್ಲಿಯೂ ಬರುತ್ತದೆ. ಈ ಎಲ್ಲಾ ಪ್ರಸಂಗಗಳಲ್ಲಿ ಯಶೋದೆ ವಿಶೇಷವಾಗಿ ಕೃಷ್ಣ ಪರಮಾತ್ಮನಿಗೆ ರಕ್ಷೆಯನ್ನು ಇಡುತ್ತಾಳೆ ಇಂತಿಂತಹ ಅಂಗಗಳಿಗೆ ಪರಮಾತ್ಮನ ಅನೇಕ ರೂಪಗಳು ವಿಶೇಷವಾಗಿ ಸನ್ನಿಹಿತವಾಗಿದ್ದು ರಕ್ಷಣೆ ಮಾಡಲಿ ಅಂತ. ಸರ್ವ ರಕ್ಷಕನಾದ ಪರಮಾತ್ಮನಿಗೆ ಆ ರಕ್ಷಾ ಕವಚ ಬೇಕಿಲ್ಲ. ಆದರೆ ಮಕ್ಕಳಿಗೆ, ಶಿಶುಗಳಿಗೆ ಕಷ್ಟವಾದಾಗ ನಾನಾ ರೀತಿಯ ರೋಗರುಜಿನಗಳು, ಭಯ ಇತ್ಯಾದಿಗಳು ಬಂದಾಗ ಅಂತಹ ಸ್ತೋತ್ರಗಳನ್ನು ಹೇಳಿ ದೇವರ ರಕ್ಷಣೆಯನ್ನು ನಾವು ಪ್ರಾರ್ಥಿಸಬೇಕು ಅಂತ ಶ್ರೀಮದ್ಭಾಗವತ ನಮಗೆ ತಿಳಿಸಿಕೊಡುತ್ತದೆ. ಲೌಕಿಕವಾದ ಔಷಧೋಪಚಾರಗಳನ್ನು ಮಾಡುವುದೆಲ್ಲ ಸರಿ ಆ ಔಷಧೋಪಚಾರಗಳನ್ನು ಮಾಡಿದರೂ **'ಭೇಷಜಂ ಭಿಷಕ'** ಔಷಧದಲ್ಲಿಯೂ, ವೈದ್ಯರಲ್ಲಿಯೂ ಇದ್ದು ರಕ್ಷಣೆ ಮಾಡುವವನು ದೇವರೇ. ಜೊತೆಗೆ ಆ ಪರಮಾತ್ಮ ಒಂದೊಂದು ಅಂಗಗಳಲ್ಲಿಯೂ ಒಂದೊಂದು ರೂಪದಿಂದ ವಿಶೇಷ ಸನ್ನಿಹಿತನಾಗಿ ಮಕ್ಕಳನ್ನು ಕಾಪಾಡಲಿ, ಮಕ್ಕಳನ್ನು ರಕ್ಷಿಸಲಿ ಎಂಬುದಾಗಿ ದೇವರಿಗೆ ಪ್ರಾರ್ಥನೆ ಮಾಡಬೇಕು ಅಂತ ನಮಗೆ ತಿಳಿಸಿಕೊಡುತ್ತದೆ ಭಾಗವತ. ಈ ರೀತಿ ಪರಮಾತ್ಮ ತನ್ನ ಮಹಿಮೆಯನ್ನು ತೋರಿಸಿದ್ದಾನೆ.

ಮುಂದೆ ಕೃಷ್ಣ ಬಲರಾಮರು ಲೋಕದೃಷ್ಟಿಯಿಂದ ಏಳು ವರ್ಷದವರು ಅಂತ ಆಗಿದ್ದಾರೆ ಅವರಿಗೆ ಯಾವುದೇ ಕಾಲದ ನಿರ್ಬಂಧ ಇಲ್ಲ ಸಂಪೂರ್ಣವಾದ ಬ್ರಹ್ಮ ದೇವರ ಒಂದು ನೂರು ವರ್ಷ ಅಂದರೆ ದೇವರಿಗೆ ಒಂದು ರೆಪ್ಪೆ ಪಡೆದು ತೆಗೆದಂತೆ. ಅದೂ ಅಲ್ಲ, ಆ ರೀತಿ ಕಾಲಗಣನೆ ಮಾಡಿದರೂ ದೇವರಿಗೊಂದು ಕಾಲಗಣನೆ ಇದೆ ಒಂದು ದಿನ ಆಯುಷ್ಯ ಮುಗಿಯುತ್ತೆ ಅಂತ ತಿಳಿಯಬೇಡಿ **'ನೀಮೇಷವತ'** ಕಣ್ಣು ಮುಚ್ಚಿ ತೆಗೆದಂತೆ ಅಷ್ಟೇ ಇಡೀ ಬ್ರಹ್ಮ ದೇವರ ನೂರು ವರ್ಷದ ಆಯುಷ್ಯ ಅಂದರೆ ಅಂತಹ ಪರಮಾತ್ಮನಿಗೆ ಯಾವ ವಯಸ್ಸು ಏನು ನಿರ್ಬಂಧ ಆದರೆ ಅವತಾರ ಮಾಡಿದ ಪರಮಾತ್ಮ ಏಳು ವರ್ಷದವನಂತೆ ತೋರುತ್ತಾ ಇದ್ದಾನೆ. ನಾನಾ ವಿಧವಾದ ವಾದ್ಯಗಳನ್ನು ಬಾರಿಸುತ್ತಾ ಇದ್ದಾರೆ ಬಲರಾಮ ಕೃಷ್ಣರು ಮದ್ದಳೆ, ವೀಣೆ, ಕೊಳಲು ಹೀಗೆ ನಾನಾ ವಿಧವಾದಂತಹ ವಾದ್ಯಗಳನ್ನು ಬಾರಿಸುತ್ತಾ ಆನಂದ ಪಡುತ್ತಾ ಇದ್ದಾರೆ, ಅವರು ನಿತ್ಯ ಆನಂದವನ್ನು ಪಡುವವರೇ ಜನರಿಗೆ ಆನಂದವನ್ನು ಕೊಡುತ್ತಾ ಇದ್ದಾರೆ. **'ಗೋಪವೇಣುಪ್ರವಾದಕೌ'**[1] ಹುಲ್ಲಿನ ಹಾಸಿಗೆ, ಎಲೆ ಯಾವ ಪರಮಾತ್ಮ ಶೇಷಶಯನ ಅದ್ಭುತವಾದ ದಿವ್ಯ ರತ್ನ ಪರ್ಯಂಕದಲ್ಲಿ ವಿರಾಜಮಾನನಾಗುವ ಭಗವಂತ.

ಪರ್ಣಶಯ್ಯಾಸು ಸಂಸುಪ್ತೌ ಕ್ವಚಿನ್ನಿದ್ರಾನ್ತರೇಕ್ಷಣೌ । (8.6 ವಿಷ್ಣುಪರ್ವ)

ಅಲ್ಲಲ್ಲಲ್ಲಿ ಇರುವಂತಹ ಎಲೆಗಳು, ಎಲ್ಲಿ ನೋಡಿದರಲ್ಲಿ ಗಿಡಗಳು, ಗಿಡಗಳ ಎಲೆಗಳು, ಒಣಗಿದ ಎಲೆಗಳು ಕೆಳಗೆ ಬಿದ್ದಿದ್ದರೆ ಅದೇ ಹಾಸಿಗೆ ಅಲ್ಲಿಯೇ ಮಲಗುತ್ತಾ ಇದ್ದಾರೆ ಬಲರಾಮ ಕೃಷ್ಣರು, ಆಟ ಆಡುತ್ತಾ ಇದ್ದಾರೆ,

1. 8.5 ವಿಷ್ಣುಪರ್ವ



ಕರುಗಳನ್ನು ಚಿಕ್ಕಮಕ್ಕಳು ಆದದ್ದರಿಂದ, ದೊಡ್ಡ ದೊಡ್ಡ ಆಕಳುಗಳನ್ನು ದೊಡ್ಡವರು ಮೇಯಿಸಿದರೆ ಕರುಗಳನ್ನು ಮೇಯಿಸುತ್ತಾ ಇದ್ದಾರೆ, ಅವುಗಳ ಜೊತೆಗೆ ಆಟ ಆಡುತ್ತಾರೆ. ಈ ರೀತಿ ಜನರಿಗೆಲ್ಲ ಸಂತೋಷವನ್ನು ಕೊಡುತ್ತಾ ಅವರು ವಿಹಾರ ಮಾಡುತ್ತಾ ಇರುವಾಗ ಶ್ರೀಕೃಷ್ಣ ಪರಮಾತ್ಮ ಸಂಕಲ್ಪ ಮಾಡಿದ ಸಾಕಿನ್ನು ಗೋಕುಲದ ವಾಸ ವೃಂದಾವನಕ್ಕೆ ಹೋಗಬೇಕು ಅಲ್ಲಿರುವ ಸಜ್ಜನರ ಉದ್ಧಾರ ಆಗಬೇಕು ಅಂತ. ಒಂದೋ ಎರಡೋ ಕಥೆಗಳನ್ನು ನಮಗೆ ಹೇಳಿರುತ್ತಾರೆ ಅದು ಕೇವಲ ಉದಾಹರಣೆಗಾಗಿ ಹೇಳಿದ್ದು ಎಲ್ಲವನ್ನೂ ನಮಗೆ ತಿಳಿಸಿರುವುದಿಲ್ಲ ಆದರೆ ಎಲ್ಲದಕ್ಕೂ ಹಿನ್ನೆಲೆ ಇರುತ್ತದೆ. ಗೋಕುಲದಲ್ಲಿ ಇರುವಂತಹ ಏನೆಲ್ಲಾ ಗುಡ್ಡ, ಗಿಡ, ನದಿ ಅಲ್ಲಿರುವಂತಹ ಏನೇನು ಪರಿಸರ ಇದೆ ಆ ಎಲ್ಲ ಅಭಿಮಾನಿ ದೇವತೆಗಳಿಗೆ ಸಂತೋಷ ಪಡಿಸಿದ್ದು ಆಯಿತು ಅಲ್ಲಿ ಎಷ್ಟಷ್ಟೋ ಜೀವಗಳು ಏನೇನೋ ಪುಣ್ಯ, ಏನೇನೋ ವರ ಪಡೆದುಕೊಂಡು ಹುಟ್ಟಿದ್ದವು ಅವುಗಳಿಗೆಲ್ಲ ಏನು ಫಲ ಕೊಡಬೇಕೋ ಫಲ ಕೊಟ್ಟ. ಕೃಷ್ಣನ ದರ್ಶನ, ಕೃಷ್ಣನ ಸ್ಪರ್ಶ, ಕೃಷ್ಣನ ಮೇಲೆ ಬೀಸಿ ಬಂದ ಗಾಳಿಯ ಸ್ಪರ್ಶದಿಂದ ಅಲ್ಲಿರುವಂತಹ ಜೀವರು ಧನ್ಯರಾಗಿ ಹೋದರು, ದುಷ್ಟರಿಗೆ ಏನು ಶಿಕ್ಷೆ ಕೊಡಬೇಕೋ ಕೊಟ್ಟಾಯಿತು, ಶಿಷ್ಟರಿಗೆ ಏನು ವರ ಕೊಡಬೇಕೋ ಕೊಟ್ಟಾಯಿತು. ಇನ್ನು ವೃಂದಾವನದೊಳಗೆ ಏನು ಗಿಡಗಳಿವೆ, ಅಲ್ಲಿರುವ ಹುಲ್ಲುಗಳು ಆ ಜೀವಗಳು ಅವುಗಳು ಏನೇನು ಪುಣ್ಯ ಮಾಡಿ ಬಂದಿವೆಯೋ, ಕೃಷ್ಣ ಓಡಾಡಬೇಕು ತಮ್ಮ ಮೇಲೆ ಅಂತ ಎಷ್ಟು ಸಾವಿರ ಜನ್ಮದ ತಪಸ್ಸು ಮಾಡಿ ಅಲ್ಲಿ ಹುಟ್ಟಿ ಬಂದಿವೆಯೋ ಅವುಗಳ ಪರ್ಯಾಯ ಬಂದಿದೆ ಈಗ. ಅವುಗಳಿಗೆ ನಾನು ಫಲ ಕೊಡಬೇಕು, ಅವುಗಳ ಮೇಲೆ ಓಡಾಡಬೇಕು, ಅವುಗಳಿಗೆ ಅನುಗ್ರಹ ಮಾಡಬೇಕು ಅಲ್ಲಿರುವಂತಹ ವನಸ್ಪತಿಗಳಿಗೆ, ಔಷಧಿಗಳಿಗೆ, ಸಸ್ಯಗಳಿಗೆ, ಪಶುಗಳಿಗೆ, ಅಲ್ಲಿರುವ ಪರ್ವತಾದ್ಯಾಭಿಮಾನಿ ದೇವತೆಗಳಿಗೆ ಅನ್ನುವುದು ಒಳಗಿನ ಆಂತರ್ಯ. ಕೃಷ್ಣ ಹೇಳುತ್ತಾನೆ ಇಲ್ಲಿ ಏನು ಉಳಿದಿದೆ ಗೋಕುಲದಲ್ಲಿ ಇಷ್ಟು ಸಮೃದ್ಧವಾದ ಗೋವುಗಳಿವೆ ಹುಲ್ಲೇ ಉಳಿದಿಲ್ಲ ಎಲ್ಲ ಹುಲ್ಲು ತಿಂದಾಯಿತು.

ಪ್ರಕ್ಷೀಣತೃಣಕಾಷ್ಠಂ ಚ ಗೋಪೈರ್ಮಥಿತಪಾದಪಮ್ । (8.9 ವಿಷ್ಣುಪರ್ವ)

ತಮ್ಮ ತಮ್ಮ ಮನೆ ಕಟ್ಟಿಕೊಳ್ಳುವುದಕ್ಕೆ ಗೋಪಾಲಕರೆಲ್ಲ ಗಿಡಗಳನ್ನು ಕತ್ತರಿಸಿಕೊಂಡು ಮನೆ ಕಟ್ಟಿಕೊಂಡಿದ್ದಾರೆ ಗಿಡಗಳೆಲ್ಲ ಖಾಲಿ ಆಯಿತು, ಹುಲ್ಲುಗಳನ್ನೆಲ್ಲ ತಿಂದು ಮುಗಿಸಿವೆ ಇನ್ನೇನು ಉಳಿದಿಲ್ಲ ಇಲ್ಲಿ ಇಲ್ಲಿಂದ ನಾವು ಹೊರಟು ಹೋಗಬೇಕು. ಎಷ್ಟು ಚೆನ್ನಾಗಿ ಬಹಳ ವಿಸ್ತೃತ ಇದೆ ಒಂದೆರಡು ಮಾತುಗಳಲ್ಲಿ ತಿಳಿಯುವುದಾದರೆ ಕೃಷ್ಣ ವರ್ಣನೆ ಮಾಡುತ್ತಾನೆ ಗೋಕುಲದ ಪರಿಸ್ಥಿತಿ ಏನಾಗಿದೆ ಅಂತ ಕಟ್ಟಿಗೆಯನ್ನು, ಹುಲ್ಲು ಆಕಳಿಗೆ ಮೇವನ್ನು ಮಾರುತ್ತಾ ಇದ್ದಾರೆ. ಗೋಕುಲದಲ್ಲಿ ಈ ಸ್ಥಿತಿ ಇಷ್ಟು ದಿವಸ ಇರಲಿಲ್ಲ, ಮಾರುವ ಸ್ಥಿತಿಯೇ ಇಲ್ಲ, ಬೇಕಾದಷ್ಟು ಸಮೃದ್ಧವಾದ ಹುಲ್ಲು ಇತ್ತು, ಇವತ್ತು ಮಾರುತ್ತಾ ಇದ್ದಾರೆ ಅಂದರೆ ನಮ್ಮ ಗೋಕುಲ ಇದು ಪಟ್ಟಣದಂತೆ ಆಗಿದೆ ಅಂತ ಅಂದೇ ಪಟ್ಟಣವನ್ನು ಬೈಯುತ್ತ ಇದ್ದಾನೆ ಕೃಷ್ಣ. ಇದೆಲ್ಲ ಹೇಗಿದೆ ಅಂದರೆ

ಉಚ್ಛಿನ್ನಸಂಚಯತೃಣೈಘೋ೯ಷೋಽಯಂ ನಗರಾಯತೇ ॥ (8.16 ವಿಷ್ಣುಪರ್ವ)

ಇದು ಘೋಷ ಇದು ಹಳ್ಳಿ **'ಘೋಷ ಅಭೀರ ವಲ್ಲೀಸ್ಯಾಸ್'** ಇದು ಗೋಪಾಲಕರ ಹಳ್ಳಿ ಇಂತಹ ಗೋಪಾಲಕರ ಹಳ್ಳಿಯಾದ ಈ ಗೋಕುಲ ಪಟ್ಟಣದಂತೆ ಆಗಿದೆಯಲ್ಲ.

ವಿಕ್ರೀಯಮಾಣೈಃ ಕಾಷ್ಠೈಶ್ಚ ಶಾಕೈಶ್ಚ ವನಸಮ್ಭವೈಃ । (8.16 ವಿಷ್ಣುಪರ್ವ)

ಇಲ್ಲಿ ಕಟ್ಟಿಗೆಗಳನ್ನು ಮಾರುತ್ತಾ ಇದ್ದಾರೆ, ಶಾಕವನ್ನು ಮಾರುತ್ತಾ ಇದ್ದಾರೆ ಇದೇನು ಇವತ್ತು ಶಾಕವ್ರತ ಮುಗಿಯಿತು ಅಂತ ಅನ್ನುವುದರೊಳಗೆ ಶಾಕವನ್ನು ಮಾರುವುದಕ್ಕೆ ತರುತ್ತಾ ಇದ್ದಾರಲ್ಲ, ಇಷ್ಟು ದಿವಸ ಶಾಕವ್ರತ ಮುಗಿದರೂ ಕೂಡ ಮಾರುತ್ತಾ ಇರಲಿಲ್ಲ, ಮನೆಯೊಳಗೆ ಬೆಳೆಯುತ್ತಾ ಇತ್ತು ಬೇಕಾದಷ್ಟು ಸಮೃದ್ಧಿ, ಮಾರುವ ಸಂದರ್ಭ ಬಂದಿದೆ ಹಾಗಾದರೆ ನಾವಿನ್ನು ಇಲ್ಲಿ ಇರುವುದಕ್ಕೆ ಯೋಗ್ಯ ಅಲ್ಲ ಇಲ್ಲಿಂದ ಹೊರಡಬೇಕು ಆ ರೀತಿಯ ವರ್ಣನೆಯನ್ನು ಮಾಡುತ್ತಾನೆ. ಅನೇಕ ಮಾತುಗಳನ್ನು ಹೇಳುತ್ತಾನೆ ಎಲ್ಲಿ ಗೋಮಯ ಗೋಮೂತ್ರಗಳು ನೋಡಿ ಪಂಚಗವ್ಯ ಅತ್ಯಂತ ಪ್ರಶಸ್ತ ಪಂಚಗವ್ಯ ಪ್ರಾಶನ ಮಾಡಿದರೆ ದೇಹದ ಶುದ್ಧಿ ಆದರೆ ಆ ಗೋಮಯ ಗೋಮೂತ್ರಗಳು ಬಿದ್ದ ಹುಲ್ಲನ್ನು ಆಕಳು ತಿನ್ನುವುದಿಲ್ಲ, ಆ ಗೋಮಯ ಗೋಮೂತ್ರಗಳು ನಮಗೆ ಪವಿತ್ರ ನಮ್ಮ ದೇಹದೊಳಗಿನ ಎಲ್ಲ ಅಶುದ್ಧಿಯನ್ನು ದೂರ ಮಾಡುತ್ತವೆ, ಆರೋಗ್ಯವನ್ನು ನೀಡುತ್ತದೆ, ರೋಗಗಳನ್ನು ಕಳೆಯುತ್ತದೆ, ಪಾಪಗಳನ್ನು ಕಳೆಯುತ್ತದೆ ಎಲ್ಲಾ ಸತ್ಯ ಆದರೆ ಗೋವುಗಳು ತಾವು ಎಲ್ಲಿ ಸೆಗಣೆ ಮೂತ್ರವನ್ನು ಮಾಡಿರುತ್ತವೆ ಆ ಹುಲ್ಲನ್ನು ತಿನ್ನುವುದಿಲ್ಲ ಈಗ ಓಡಾಡಿ ಓಡಾಡಿ ಎಲ್ಲಾ ಕಡೆಗೂ ಸೆಗಣೆ, ಮೂತ್ರ ಆಗಿಹೋಗಿದೆ ಇನ್ನು ಇಲ್ಲಿ ಇರುವುದು ಬೇಡ ನಮ್ಮ ಗೋವುಗಳು ಅಂತ. ಇದ್ದರೆ ಏನಾಯಿತು ಅಂದರೆ ಕೃಷ್ಣ ಹೇಳುತ್ತಾನೆ

ಶಕ್ಯನ್ಮೂತ್ರೇಷು ತೇಷ್ವೇವ ಜಾತಕ್ಷಾರರಸಾಯನಮ್ । (8.20 ವಿಷ್ಣುಪರ್ವ)

ಒಂದು ವಿಶಿಷ್ಟವಾದ ಕ್ಷಾರ ಅಲ್ಲಿ ಬಿದ್ದಿರುತ್ತದೆ ಅಂತಹ ಹುಲ್ಲುಗಳನ್ನು ಆಕಳು ತಿನ್ನುವುದಿಲ್ಲ **'ನ ತೃಣಂ ಭುಞ್ಜತೇ ಗಾವೋ'**[1] ಹೋಗಲಿ, ಏನೋ ಒತ್ತಾಯ ಮಾಡಿ ತಿನಿಸಿದರೆ **'ನಾಪಿ ತತ್ ಪಯಸೇ ಹಿತಮ್'** [2] ಅಂತಹ ಹುಲ್ಲನ್ನು ತಿಂದು ಬಂದ ಹಾಲು ಅದು ಆರೋಗ್ಯಕರ ಅಲ್ಲ ಅನ್ನುತ್ತಾನೆ. ಇದನ್ನು ಒಂದು ಸ್ವಲ್ಪ ವಿಚಾರ ಮಾಡಬೇಕು ವೈದ್ಯರ ಹತ್ತಿರ ಅಂತ ಅನ್ನಬೇಡಿ. **'ವೇದ್ಯೋ ವೈದ್ಯ ಸದಾಯೋಗಿ'** ಆ ಪರಮ ವಿಜ್ಞಾನಿಯಾದ, ಸರ್ವೋತ್ತಮ ವಿಜ್ಞಾನಿಯಾದಂತಹ, ಸರ್ವಜ್ಞ ಶಿಖಾಮಣಿಯಾದ ಪರಮಾತ್ಮ ಹೇಳುತ್ತಾ ಇದ್ದಾನೆ. ಗೋಮಯ ಗೋಮೂತ್ರಗಳು ಪವಿತ್ರ ಆದರೆ ಗೋಮಯ ಗೋಮೂತ್ರಗಳು ಬಿದ್ದ ಹುಲ್ಲನ್ನು ತಿಂದು ಹಾಲು ಕೊಟ್ಟರೆ ಆ ಹಾಲು ಶ್ರೇಯಸ್ಕರ ಅಲ್ಲ ಅನ್ನುತ್ತಾನೆ. ಆದ್ದರಿಂದ ಇನ್ನು ಮೇಲೆ ನಾವು ಇಲ್ಲಿ ಇರುವುದು ಬೇಡ, ಎಲ್ಲಿ ಅತ್ಯಂತ ಪ್ರಶಸ್ತವಾದ ಹುಲ್ಲುಗಳು ಇವೆ, ಪ್ರಶಸ್ತವಾದ ಗಿಡಗಳು, ಶುದ್ಧವಾದ ನೀರು, ಸಮೃದ್ಧವಾದ ವನ ಸಂಪತ್ತು ಅಲ್ಲಿ ಹೋಗೋಣ ಅದು ವೃಂದಾವನ, ವೃಂದಾವನಕ್ಕೆ ಹೋಗೋಣ ಅಂತ ಪರಮಾತ್ಮ ಮನಸ್ಸಿನಲ್ಲಿ ಸಂಕಲ್ಪ ಮಾಡಿ ಅಣ್ಣನಿಗೆ ಹೇಳಿದ್ದಾನೆ.

ತತ್ರ ಗೋವರ್ಧನೋ ನಾಮ ನಾತಿದೂರೇ ಗಿರಿರ್ಮಹಾನ್ ।

ಭ್ರಾಜತೇ ದೀರ್ಘಶಿಖರೋ ನಂದನಸ್ಯೇವ ಮನ್ದರಃ ॥ (8.25 ವಿಷ್ಣುಪರ್ವ)

ನಂದನ ವನದಲ್ಲಿ ಮಂದರ ಪರ್ವತ ಇರುವಂತೆ ಈ ವೃಂದಾವನದೊಳಗೆ ಗೋವರ್ಧನ ಪರ್ವತ ಇದೆ, ಸಮೃದ್ಧವಾದಂತಹ ವನ ಸಿರಿ ಆ ಅರಣ್ಯದ ಐಸಿರಿ ಭಾಂಢೀರ ಅನ್ನುವಂತಹ ದೊಡ್ಡದಾದ ಆಲದ ಮರ ಎಷ್ಟೋ ಯೋಜನ ಎತ್ತರದ ಗಿಡ ಅತೀ ದೀರ್ಘವಾಗಿ ಇರುವಂತಹ ವೃಕ್ಷ ಅಂತಹ ವೃಕ್ಷ ಇದೆ, ಅದರ ನೆರಳು ಬೇಕಾದಷ್ಟು ನಾವು ಅಲ್ಲಿ ವಿಹಾರವನ್ನು ಮಾಡಬಹುದು, ಎಲ್ಲರೂ ಗೋಪಾಲಕರು, ಗೋವುಗಳು ಸುಖವಾಗಿ ಇರಬಹುದು ಅಲ್ಲಿ ಹೋಗೋಣ ಅಂತ. ಶ್ರೀಕೃಷ್ಣ ಪರಮಾತ್ಮ ತನ್ನ ಅಚಿಂತ್ಯಾದ್ಭುತ ಶಕ್ತಿಯನ್ನು ತೋರಿಸುತ್ತಾ ಇದ್ದಾನೆ ದೇವರ ದೃಷ್ಟಿಯಲ್ಲಿ ಬಹಳ ಸಣ್ಣದು ನಮ್ಮೆಲ್ಲರಿಗೆ ಬಹಳ ಅದ್ಭುತ.

---

1. 8.20 ವಿಷ್ಣುಪರ್ವ ; 2. 8.20 ವಿಷ್ಣುಪರ್ವ

ಸಸರ್ಜ ರೋಮಕೂಪೇಭ್ಯೋ ವೃಕಾನ್ ವ್ಯಾಘ್ರಸಮಾನ್ ಬಲೇ । (13.26 ಮಭಾತಾನಿರ್ಣಯ)

ತಾನು ತನ್ನ ಒಂದೊಂದು ರೋಮಕೂಪಗಳಿಂದ ತೋಳುಗಳನ್ನು ಸೃಷ್ಟಿ ಮಾಡಿದ್ದಾನೆ ಎಂತಹ ತೋಳುಗಳು ಅವು

ಪ್ರಾದುರ್ಬಭೂವುಃ ಶತಶೋ ರಕ್ತ ಮಾಂಸವಸಾಶನಾಃ ॥ (8.30 ವಿಷ್ಣುಪರ್ವ)

ರಕ್ತವನ್ನು ಹೀರಿ ಕುಡಿಯುವ ಮಾಂಸವನ್ನು ಹರಿದು ತಿನ್ನುವಂತಹ ಆ ತೋಳುಗಳು ಎಲ್ಲರಿಗೂ ಗಾಬರಿಯಾಗಿದೆ ಐದೈದು ತೋಳುಗಳು ಹತ್ತತ್ತು, ಇಪ್ಪತ್ತು, ಮೂವತ್ತು, ನೂರು ನೂರು ತೋಳುಗಳು ಹೀಗೆ ಗುಂಪು ಗುಂಪಾಗಿ ಬಂದು ಮನೆಯೊಳಗೆ ಹೋಗುತ್ತಾ ಇವೆ, ಸೆಳೆದುಕೊಂಡು ತಿನ್ನುತ್ತಾ ಇವೆ. ಯಾರ ಆಯುಷ್ಯ ತೀರಿತ್ತೋ ಅಂತಹ ಕೆಲವು ಬಾಲಕರನ್ನು, ಕೆಲವು ವೃದ್ಧರನ್ನು, ಕೆಲವು ಶಿಶುಗಳನ್ನು ಸ್ತ್ರೀಯರನ್ನೆಲ್ಲ ತಿಂದಿವೆ ಆದರೆ ಇನ್ನುಳಿದವರೆಲ್ಲ ಇನ್ನುಮೇಲೆ ನಾವು ಇಲ್ಲಿ ವಾಸ ಮಾಡುವುದು ಯೋಗ್ಯ ಅಲ್ಲ ಏನಾದರೂ ಮಾಡಿ ಇಲ್ಲಿಂದ ಹೊರಡಬೇಕು ಅನ್ನುವ ನಿಶ್ಚಯ ಮಾಡಿದ್ದಾರೆ. ಆ ನಿಶ್ಚಯ ಮಾಡಿಸಬೇಕಾಗಿತ್ತು ದೇವರಿಗೆ ಅದಕ್ಕೋಸ್ಕರನೇ ಈ ನಾಟಕ ಮಾಡಿದ್ದು. ಆ ಸಂದರ್ಭದಲ್ಲಿ ಯಾರ ಆಯುಷ್ಯ ತೀರಿದೆ ಅಂಥವರನ್ನು ಸಂಹಾರ ಮಾಡಿಸಿದ್ದಾನೆ ಆ ಸಂಹಾರ ಮಾಡಿದ್ದನ್ನು ನೋಡಿ ಗಾಬರಿಯಾಗಿ ಇನ್ನುಳಿದವರೆಲ್ಲ ವೃಂದಾವನಕ್ಕೆ ಹೊರಡುವಂತೆ ಪರಮಾತ್ಮ ಪ್ರಚೋದನೆ ಮಾಡಿದ್ದಾನೆ. ಕಷ್ಟ ಬಂದಿದೆ ಇಲ್ಲಿರುವುದಕ್ಕೆ ಸಾಧ್ಯವಾಗುತ್ತಾ ಇಲ್ಲ, ದುಃಖ ಪಡುತ್ತಾ ಇದ್ದಾರೆ, ಅಳುತ್ತಾ ಇದ್ದಾರೆ

ಮಮ ಪುತ್ರೋ ಮಮ ಭ್ರಾತಾ ಮಮ ವತ್ಸೋಽಥ ಗೌರ್ಮಮ । (9.5 ವಿಷ್ಣುಪರ್ವ)

ನನ್ನ ಮಗ ಹೋದ, ಅಣ್ಣ ಹೋದ, ತಮ್ಮ ಹೋದ, ಕರು ಹೋಯಿತು, ಆಕಳು ಹೋಯಿತು ಅಂತ ದುಃಖ ಪಡುತ್ತಾ ಒದ್ದಾಡುತ್ತಾ ಏನು ಮಾಡಬೇಕು ಅಂತ ಗೊತ್ತಾಗದೆ ಕಂಗಾಲಾಗಿ ಎಲ್ಲರೂ ನಿರ್ಣಯವನ್ನು ತೆಗೆದುಕೊಂಡಿದ್ದಾರೆ, ಆಲೋಚನೆ ಮಾಡಿದ್ದಾರೆ, ನಂದ ರಾಜ ಅವನಿಗೆ ಬಂದು ವಿಜ್ಞಾಪನೆ ಮಾಡಿಕೊಂಡಿದ್ದಾರೆ ಈ ಕ್ಷಣ ನಾವು ಈ ಊರನ್ನು ಬಿಟ್ಟು ಹೊರಟರೆ ನಮಗೆ ಕ್ಷೇಮ ಇಲ್ಲದಿದ್ದರೆ ಇಲ್ಲ. ಇನ್ನು ಮುಂದೆ ಹೆಚ್ಚು ಹೊತ್ತು ನಾವು ಇರುವಂತೆ ಇಲ್ಲ ಹೇಗಾದರೂ ಮಾಡಿ ನಾವು ಇಲ್ಲಿಂದ ಹೊರಡುತ್ತೇವೆ. ಆ ಎಲ್ಲ ತೋಳುಗಳು, ಕೃಷ್ಣನಿಂದಲೇ ಹುಟ್ಟಿದ್ದು ಅಂತನ್ನುವ ಗುರುತು ಎಲ್ಲ ತೋಳುಗಳಿಗೆ ಶ್ರೀವತ್ಸ ಚಿಹ್ನ ಇತ್ತು. **'ನಿಶ್ಚೇರುಸ್ತಸ್ಯಗ್ರಾತೇಭ್ಯಃ ಶ್ರೀವತ್ಸ ಕೃತಲಕ್ಷಣಾಃ'** ಅಂತಹ ಕಪ್ಪು ಮುಖದ ಶ್ರೀವತ್ಸ ಚಿಹ್ನದಿಂದ ಕೂಡಿದ ಅತ್ಯುಗ್ರವಾದ ತನ್ನ ಸಂಕಲ್ಪದಿಂದ ಸೃಷ್ಟಿ ಮಾಡಿದಂತಹ ಆ ತೋಳುಗಳು ಅಂತಹ ತೋಳುಗಳನ್ನು ಪರಮಾತ್ಮ ಸೃಷ್ಟಿ ಮಾಡಿದ್ದಾನೆ. ಭಕ್ತಿ ಇಂದ ದೇವರನ್ನು ಸೇವಿಸಿದರೆ ಅವನು ಹೇಳಿದ್ದನ್ನು ಕೇಳುತ್ತೇವೆ ಅಂದರೆ ತನ್ನ ತೋಳಿನೊಳಗೆ ನಮ್ಮನ್ನ ಕರೆದುಕೊಳ್ಳುವುದಕ್ಕೂ ಸಿದ್ಧ, ಅವನು ಹೇಳಿದ ಆಜ್ಞೆಯನ್ನು ಪರಿಪಾಲನೆ ಮಾಡದೆ ಅವನ ಮನಸ್ಸಿಗೆ ತಕ್ಕಂತೆ ಇರುವುದಿಲ್ಲ ಎಲ್ಲಿ ನಾವಿರಬೇಕು ಅಂತ ದೇವರ ಸಂಕಲ್ಪ ಅಲ್ಲಿ ನಾವಿರಬೇಕು, ಹೇಗಿರಬೇಕು ಅಂತ ದೇವರು ಆಜ್ಞೆ ಮಾಡಿದ್ದಾನೆ ಶಾಸ್ತ್ರದಲ್ಲಿ ಹಾಗೆ ನಾವಿರಬೇಕು, ಎಲ್ಲಿ ಇರಬೇಕು ಅಲ್ಲಿ, ಹೇಗಿರಬೇಕೋ ಹಾಗೆ ನಾವಿದ್ದರೆ ಆಗ ತನ್ನ ತೋಳಿನೊಳಗೆ ಕರೆದುಕೊಳ್ಳುತ್ತಾನೆ. ಅದಕ್ಕೆ ವಿಪರೀತವಾಗಿ ನಾವು ಇದ್ದರೆ ತೋಳುಗಳನ್ನು ಸೃಷ್ಟಿ ಮಾಡಿ ನಮ್ಮನ್ನು ಓಡಿಸುತ್ತಾನೆ, ನಾನಾ ವಿಧವಾದ ಕಷ್ಟಗಳಿಗೆ ನಾವು ಬಲಿಯಾಗುವಂತೆ ಪರಮಾತ್ಮ ಮಾಡುತ್ತಾನೆ ಅನ್ನುವ ಸಂದೇಶವನ್ನು ಈ ಕಥೆಯಿಂದ ಪರಮಾತ್ಮ ನಮಗೆ ಕೊಡುತ್ತಾ ಇದ್ದಾನೆ. ಅವುಗಳನ್ನೆಲ್ಲ ಪರಮಾತ್ಮ ಸೃಷ್ಟಿ ಮಾಡಿದ ನೋಡಿ ಏನಾಯಿತು ತೋಳುಗಳ ಸೃಷ್ಟಿಯಿಂದ ಗಾಬರಿಯಾಗಿ ಎಲ್ಲರೂ ವೃಂದಾವನಕ್ಕೆ ಹೋದರು.

ಇವತ್ತು ಕಲಿಯುಗದಲ್ಲಿಯೂ ಕೂಡ ನಾನಾ ವಿಧವಾದ ರೋಗಗಳು, ಆರ್ಥಿಕ ಸಮಸ್ಯೆಗಳು, ಕೌಟುಂಬಿಕ ಸಮಸ್ಯೆಗಳು, ವಿವಿಧ ಅಪೇಕ್ಷೆಗಳು ಅವುಗಳು ಪೂರ್ಣವಾಗದೆ ಒದ್ದಾಡುವಂತಹ ಪ್ರಸಂಗ, ಇಂತಹ ಎಲ್ಲ ಪ್ರಸಂಗಗಳು ಇದ್ದಾಗ ಇವತ್ತು ಜನರು ಎಲ್ಲಿ ಧಾವಿಸಿ ಓಡಿ ಹೋಗುತ್ತಾ ಇದ್ದಾರೆ ವೃಂದಾವನಗಳಿಗೆ ಗುರುಗಳ, ಜ್ಞಾನಿಗಳ, ತಪಸ್ವಿಗಳ, ಮಹಾನುಭಾವರ ವೃಂದಾವನಗಳಿಗೆ ಹೋಗುತ್ತಾ ಇದ್ದಾರೆ. ಅವರು ಯಾಕೆ ಹೋಗುತ್ತಾರೆ ಸುಮ್ಮನೆ ಹೋಗುವುದೇ ಇಲ್ಲ ಮನೆಯಲ್ಲಿಯೇ ಇರುತ್ತಾರೆ ಟಿವಿ ನೋಡುತ್ತಾ ಕುಳಿತಿರುತ್ತಾರೆ, ಯಾವಾಗ ತೋಳುಗಳು ಬರುತ್ತೆ ಏನಾದರೂ ಸಮಸ್ಯೆ ಮನೆಯೊಳಗೆ ಬಂತು ಅಂದರೆ ವೃಂದಾವನದ ಹತ್ತಿರ ಹೋಗುತ್ತಾರೆ ಇದು ಅಂದೇ ದೇವರು ತೋರಿಸಿಕೊಟ್ಟ. ಜ್ಞಾನಿಗಳ, ಮಹಾನುಭಾವರ ವೃಂದಾವನಗಳು ಅಂದರೆ ಚೆನ್ನಾಗಿ ತಿಳಿದುಕೊಳ್ಳಿ ಮಹಾನುಭಾವರ ಪದ್ಮನಾಭತೀರ್ಥರೇ ಮೊದಲಾದಂತಹ ಮಹಾಜ್ಞಾನಿಗಳ ವೃಂದಾವನಗಳು, ಮಳಖೇಡದಲ್ಲಿ ಟೀಕಾಕೃತ್ಪಾದರ ವೃಂದಾವನ, ವ್ಯಾಸರಾಜರು, ರಘೂತ್ತಮತೀರ್ಥ ಶ್ರೀಪಾದಂಗಳವರು, ರಾಘವೇಂದ್ರ ಸ್ವಾಮಿಗಳವರು ಇಂಥವರ ವೃಂದಾವನದ ಸೇವೆಯನ್ನು ಮಾಡಿ ಭಕ್ತರು ಇಷ್ಟಾರ್ಥಗಳನ್ನು ಪಡೀತಾರೆ ಅಂದರೆ ಶಾಸ್ತ್ರ ಹೇಳುತ್ತದೆ ಪರಮಾತ್ಮ ಅನೇಕ ರೂಪಗಳಿಂದ ಅಲ್ಲಿ ಸನ್ನಿಹಿತನಾಗಿ ಇರುತ್ತಾನೆ. ನರಸಿಂಹ ಕಷ್ಟಗಳ ಪರಿಹಾರಕ್ಕಾಗಿ, ಹಯಗ್ರೀವ ಜ್ಞಾನ ಕೊಡುವುದಕ್ಕಾಗಿ, ವೇದವ್ಯಾಸ ಹಯಗ್ರೀವಾದಿ ರೂಪಗಳಿಂದ ಎಲ್ಲ ಇಷ್ಟಾರ್ಥಗಳನ್ನು ಪೂರ್ಣ ಮಾಡುವುದಕ್ಕಾಗಿ ಕೃಷ್ಣ ರಾಮ ಮೊದಲಾದ ಅನೇಕ ರೂಪಗಳಿಂದ ಭಗವಂತ ಅಲ್ಲಿ ಸನ್ನಿಹಿತನಾಗಿ ಇರುತ್ತಾನೆ. ಆ ಪರಮಾತ್ಮನೇ ಆ ಗುರುಗಳಲ್ಲಿ ಅಂತರ್ಯಾಮಿಯಾದ ಭಾರತೀರಮಣ ಮುಖ್ಯಪ್ರಾಣಾಂತರ್ಗತನಾದ ಪರಮಾತ್ಮನೇ ಅನುಗ್ರಹ ಮಾಡುವುದು **'ಕಷ್ಟಗಳು ಬಂದಾಗ ವೃಂದಾವನ'** ಅಂತ ಆ ರೀತಿ ಭಗವಂತ ಗೋಪಾಲಕರನ್ನು ಎಲ್ಲರನ್ನೂ ಕರೆದುಕೊಂಡು ಹೊರಟಿದ್ದಾನೆ.

ಏನು ಆ ಗೋಪಾಲಕರ ಸಾಲೋ ಸಾಲು ಒಂದೇ ದಿವಸ ಎಲ್ಲರೂ ಹೊರಟಿದ್ದಾರೆ ಊರಿನಿಂದ ಅದೇನು ಇಲ್ಲಿ ಪ್ರಾರಂಭವಾದರೆ ಗೋಕುಲ ವೃಂದಾವನದವರೆಗೆ ಆ ಸಾಲು ಜನರು ಅಷ್ಟು ಜನ ಗೋಪಾಲಕರು, ಗೋಪಿಕಾ ಸ್ತ್ರೀಯರೆಲ್ಲ ಅಲ್ಲಿ ಇದ್ದಾರೆ ಎಲ್ಲರೂ ಹಾಲಿನ, ಮೊಸರಿನ, ತುಪ್ಪದ ಕೊಡಗಳನ್ನು ತಲೆಯ ಮೇಲೆ ಹೊತ್ತುಕೊಂಡು ಹೋಗುತ್ತಾ ಇದ್ದಾರೆ. ಕೆಲವರೆಲ್ಲ ನೀಲವರ್ಣದ ಸೀರೆ, ಕೆಲವರು ಹಳದಿ, ಕೆಲವರು ಕೆಂಪು ಹೀಗೆ ಮೂರು ಬಣ್ಣದ ಸೀರೆಯನ್ನು ಉಟ್ಟುಕೊಂಡ ಗೋಪಿಕಾ ಸ್ತ್ರೀಯರು ಸಾಲೋ ಸಾಲಾಗಿ ನಡೆದರೆ ಅದು ದೊಡ್ಡದಾದಂತಹ ಇಂದ್ರ ದನುಸ್ಸು, ಆಕಾಶದಲ್ಲಿ ತೋರುವ ಇಂದ್ರ ದನುಸ್ಸು ಹೇಗೆ ಕಾಣಿಸಬೇಕೋ ಹಾಗೆ ಕಾಣಿಸುತ್ತಾ ಇತ್ತಂತೆ. ಇನ್ನು ಗೋಪಾಲಕರು ಇದೀಗ ತಿಳಿದಿದ್ದೀರಲ್ಲ ಅಂದರೆ ನೋಡಿ ಹಿಂದೆ ದಾಮೋದರನ ವರ್ಣನೆ ಮಾಡಿ ಈ ವರ್ಣನೆಯನ್ನು ಮುಂದೆ ಮಾಡುತ್ತಾ ಇದ್ದಾರೆ ಅವರೆಲ್ಲ ಮೈಮೇಲೆ ಹಗ್ಗಗಳನ್ನು ಹಾಕಿಕೊಂಡು ಹೊರಟರಂತೆ ಗೋವುಗಳ, ಕರುಗಳ ಮೊಸರು ಕಡೆಯುವ ಹಗ್ಗ ಎಲ್ಲ ಏನು ಬೇಕೋ ಅದೆಲ್ಲ ಹಗ್ಗ ಮೈಮೇಲೆ ಅದೇ ಒಂದು ಆಸ್ತಿ ಅವರದು. ಅದನ್ನು ಹಾಕಿಕೊಂಡು ಹೊರಟರೆ ದೊಡ್ಡ ದೊಡ್ಡ ವೃಕ್ಷಗಳು, ಆಲದ ಮರಗಳು ಇವೆಲ್ಲ ಇದ್ದಾಗ ಹೇಗೆ ಅವುಗಳ ಬೇರು ಮೇಲಿನಿಂದ ಕೆಳಗೆ ಬಂದು ಮತ್ತೆ ನೆಲದಲ್ಲಿ ಹೋಗಿ ಮತ್ತೆ ಗಿಡ ಬೆಳೆದರೆ ಹೇಗೆ ಕಾಣಿಸುತ್ತದೆ ಅಲ್ಲ ಹಾಗೆ ಆ ಗಿಡಗಳಂತೆ ಮೈತುಂಬ ಬೇರುಗಳು ಕೆಳಗೆ ಬಿದ್ದಿವೆಯೋ ಅನ್ನುವ ತರಹ ಆ ಗೋಪಾಲಕರೆಲ್ಲ ಅಷ್ಟು ಹಗ್ಗಗಳನ್ನು ಹಾಕಿಕೊಂಡು ಹೊರಟಿದ್ದಾರೆ. ಅಂದರೆ ಅರ್ಥಾತ್ ಇಷ್ಟೆಲ್ಲಾ ಹಗ್ಗ ಇದ್ದರೂ ಹಿಂದೆ ಕೃಷ್ಣನನ್ನು ಕಟ್ಟಲಿಕ್ಕೆ ಆಗಿರಲಿಲ್ಲ ಅಂದರೆ ಕೃಷ್ಣನ ಅಚಿಂತ್ಯಾದ್ಭುತ ಶಕ್ತಿ ಏನು ಅಂತ ತಿಳಿದುಕೊಳ್ಳಿ ಅನ್ನುವುದಕ್ಕೆ ಇಷ್ಟು ವರ್ಣನೆಯನ್ನು ಮಾಡುತ್ತಾ ಇದೆ ಹರಿವಂಶ, ಅಷ್ಟೆಲ್ಲ ಜನರನ್ನು ಕರೆದುಕೊಂಡು ಪರಮಾತ್ಮ ಹೊರಟಿದ್ದಾನೆ ಅಲ್ಲಿ ಹೋದರೆ ಕೇಳಬೇಕೆ ಅದ್ಭುತವಾದಂತಹ ವನ.



ತಾಸ್ತು ಕಾಮದುಘಾ ಗಾವಃ ಸರ್ವಪಕ್ಷಿರುತಂ ವನಮ್ । (9.31 ವಿಷ್ಣುಪರ್ವ)

ಯಥೇಚ್ಛವಾಗಿ ಹುಲ್ಲುಗಳನ್ನು ಮೇಯುತ್ತಾ ಇವೆ, ಸಮೃದ್ಧವಾಗಿ ಹಾಲುಗಳನ್ನು ಕೊಡುತ್ತಾ ಇವೆ ಎಲ್ಲ ಗೋವುಗಳು. ಎಲ್ಲಾ ಪಕ್ಷಿಗಳ ಧ್ವನಿಯನ್ನೂ ಕೇಳಬೇಕು ಅಂದರೆ ವೃಂದಾವನದಲ್ಲಿ ಕೇಳಬೇಕು, ಜಗತ್ತಿನೊಳಗೆ ಪಕ್ಷಿಗಳ ಜಾತಿ ಅಂತ ಎಷ್ಟಿತ್ತೋ ಎಲ್ಲಾ ಪಕ್ಷಿಗಳು ಅಲ್ಲಿ ಬಂದಿವೆ, ಎಲ್ಲಾ ಪಕ್ಷಿಗಳ ಧ್ವನಿಯೂ ಭಗವಂತನ ಗುಣಗಳನ್ನೇ ವರ್ಣನೆಯನ್ನು ಮಾಡುವುದಕ್ಕಾಗಿಯೇ ಇದ್ದದ್ದು. ನಾವು ಎಲ್ಲೆಲ್ಲಿಯೋ ಗಿಡದಲ್ಲಿ, ಗುಡ್ಡದಲ್ಲಿ ಒದರಿ ಒದರಿ ಆ ಭಗವಂತನ ಸ್ತೋತ್ರವನ್ನು ಮಾಡುತ್ತಾ ಇದ್ದಿವಿ ಪ್ರತ್ಯಕ್ಷವಾಗಿ ಕೃಷ್ಣ ಅವತಾರ ಮಾಡಿದ್ದಾನಲ್ಲ ಆ ಕೃಷ್ಣನ ಎದುರಿಗೆ ನಮ್ಮ ಧ್ವನಿಗಳನ್ನು ಮಾಡೋಣ, ನಮ್ಮ ಸ್ತೋತ್ರಗಳನ್ನು ನಾವು ಮಾಡೋಣ ಅಂತನ್ನುವ ರೀತಿಯಲ್ಲಿ ಎಲ್ಲ ಪಕ್ಷಿಗಳು ಅಲ್ಲಿ ಇದ್ದವಂತೆ. ರಂಗನತಿಟ್ಟು ಅಂತ ಏನೋ ಹೇಳುತ್ತಾರೆ ಎಲ್ಲಾ ಪಕ್ಷಿಗಳು ಅಲ್ಲಿ ಬರುತ್ತವೆ ಅಂತ ಇಲ್ಲಿ ರಂಗನೇ ಇದ್ದಾನೆ ಸಾಕ್ಷಾತ್ ಶ್ರೀರಂಗ ಸರ್ವೋತ್ತಮನಾದ ಶ್ರೀಕೃಷ್ಣ ಪರಮಾತ್ಮ ಆ ಪರಮಾತ್ಮನ ದರ್ಶನಕ್ಕೆ, ಆ ಪರಮಾತ್ಮನಿಗೆ ತಮ್ಮ ಧ್ವನಿಗಳನ್ನು ಕೇಳಿಸಿ ಸ್ತುತಿಸಿ ಅನುಗ್ರಹವನ್ನು ಪಡೆಯುವುದಕ್ಕೆ ಎಲ್ಲ ಪಕ್ಷಿಗಳು ಅಲ್ಲಿ ಬಂದಿವೆ ಅಂತಹ ಶ್ರೇಷ್ಠವಾದ ವೃಂದಾವನ. ಈ ವೃಂದಾವನದ ಸಮೃದ್ಧಿಗೆ ಕಾರಣ ಆ ವೃಂದಾವನದ ಸಹಜವಾದ ಸ್ವಭಾವ ಅಂತ ತಿಳಿಯಬೇಡಿ ಅನ್ನುತ್ತದೆ ಹರಿವಂಶ.

ಪೂರ್ವಮೇವ ತು ಕೃಷ್ಣೇನ ಗವಾಂ ವೈ ಹಿತಕಾರಿಣಾ ।
ಶಿವೇನ ಮನಸಾ ದೃಷ್ಟಂ ತದ್ ವನಂ ವನಚಾರಿಣಾ ॥ (9.32 ವಿಷ್ಣುಪರ್ವ)

ಗೋವುಗಳಿಗೆ ಇಲ್ಲಿ ಆಹಾರ ಕಡಿಮೆಯಾಗಿದೆ ಸಮೃದ್ಧವಾದ ಆಹಾರ ಇರಬೇಕು, ಆರೋಗ್ಯಮಯವಾದ ವಾತಾವರಣ ಇರಬೇಕು, ಸಮೃದ್ಧವಾದ ನೀರು ಇರಬೇಕು ಅಂತ ಒಮ್ಮೆ ಹೀಗೆ ಕೃಷ್ಣ ನೋಡಿದ್ದನಂತೆ ಏನು ವರ್ಣನೆ ಮಾಡುತ್ತದೆ ನೋಡಿ ಹರಿವಂಶ. ಕೃಷ್ಣ ಒಮ್ಮೆ ತನ್ನ ಅಮೃತ ದೃಷ್ಟಿಯಿಂದ ವೃಂದಾವನದ ಕಡೆಗೆ ನೋಡಿದನಂತೆ ಅನ್ನುವುದಕ್ಕೆ ಈ ಸಮೃದ್ಧಿ ವೃಂದಾವನದಲ್ಲಿ.

ಶಿವೇನ ಮನಸಾ ದೃಷ್ಟಂ ತದ್ ವನಂ ವನಚಾರಿಣಾ ॥ (9.32 ವಿಷ್ಣುಪರ್ವ)
ಪಶ್ಚಿಮೇ ತು ತತೋ ರೂಕ್ಷೇ ಧರ್ಮೇ ಮಾಸೇ ನಿರಾಮಯೇ ॥ (9.33 ವಿಷ್ಣುಪರ್ವ)

ಭಾರೀ ಗ್ರೀಷ್ಮ ಋತು ಆಷಾಢ ಮಾಸ ಅಂತಹ ಸಂದರ್ಭದಲ್ಲಿಯೂ ಕೂಡ ಏನೂ ಕೊರತೆ ಇಲ್ಲದೇ ಇದ್ದಂತೆ ನಿರಾಮಯವಾದ, ನಿರೋಗವಾದ ವಾತಾವರಣ ಎಲ್ಲ ಕಡೆಗೆ ಇದೆ ಅಂದರೆ ಮಳೆ ಸುರಿಸುತ್ತಾ ಇಲ್ಲ ಇಂದ್ರ, ಅಮೃತವನ್ನು ಸುರಿಸುತ್ತಾ ಇದ್ದಾನೆ ಅನ್ನುವ ರೀತಿಯಲ್ಲಿ ಆ ಸಮೃದ್ಧಿ ಕಾಣುತ್ತಾ ಇದೆ.

ನ ತತ್ರ ವತ್ಸಾಃ ಸೀದನ್ತಿ ನ ಗಾವೋ ನೇತರೇ ಜನಾಃ ।
ಯತ್ರ ತಿಷ್ಠತಿ ಲೋಕಾನಾಂ ಭವಾಯ ಮಧುಸೂದನಃ ॥ (9.34 ವಿಷ್ಣುಪರ್ವ)

ಮಂಗಲ ಮಾಡಬೇಕು ಅನ್ನುವುದಕ್ಕಾಗೇನೆ '**ಮಂಗಲಾನಾಂ**' ಮಂಗಲನಾದ ಪರಮಾತ್ಮ ಅಲ್ಲಿ ಸನ್ನಿಹಿತನಾಗಿದ್ದರೆ ಯಾವ ಕರುಗಳಿಗೂ, ಗೋವುಗಳಿಗೂ, ಗೋಪಾಲಕರರಿಗೂ, ಗೋಪಿಕೆಯರಿಗೂ, ಪಕ್ಷಿಗಳಿಗೂ ಕೂಡ ಯಾವುದೇ ವಿಧವಾದ ಆಪತ್ತುಗಳಿಲ್ಲ ವಿಪತ್ತುಗಳಿಲ್ಲ.

ಕೃಷ್ಣೇ ನ ವಿಹಿತಂ ವಾಸಂ ತಮಧ್ಯಾಸತ ನಿರ್ವೃತಾಃ ॥ (9.35 ವಿಷ್ಣುಪರ್ವ)

ಶ್ರೀಕೃಷ್ಣ ಪರಮಾತ್ಮನ ಸನ್ನಿಧಾನದಿಂದ ಪವಿತ್ರವಾದಂತಹ ಆ ವೃಂದಾವನದಲ್ಲಿ ಎಲ್ಲರೂ ಕೂಡ ಸಂತೋಷವಾಗಿ ವಾಸ ಮಾಡುತ್ತಾ ಇದ್ದಾರೆ.

ಅಷ್ಟರಲ್ಲಿ ಶ್ರಾವಣ ಮಾಸ ಬಂತು ವರ್ಷಾ ಋತು ಶ್ರಾವಣ ಮಾಸ ಎಲ್ಲ ಕಡೆಗೆ ಮಳೆ ಬರುತ್ತಾ ಇದೆ ಭಾರೀ ಮೊದಲೇ ಸ್ವತ್ಸೈವ ಸಮೃದ್ಧಿ ಇಂದ ಕೂಡಿದಂತಹ ವೃಂದಾವನ, ಮಳೆ ಬರುತ್ತಾ ಇದೆ, ಎಲ್ಲಿಯೂ ಮಣ್ಣು ಕಾಣಿಸುತ್ತಾ ಇಲ್ಲ. ಎಲ್ಲಿ ನೋಡಿದರೆ ಅಲ್ಲಿ ಹಸಿರಾದ ಹುಲ್ಲು, ಸಮೃದ್ಧವಾದ ಹುಲ್ಲು ಬೆಳೆದು ನಿಂತಿದೆ ಯಥೇಚ್ಛವಾಗಿ ಗೋವುಗಳಿಗೆ ಮೇಯುವುದಕ್ಕೆ ಇನ್ನಷ್ಟು ತೃಪ್ತಿಕರವಾಗಿದೆ ವಾತಾವರಣ ಆ ರೀತಿ ಸಮೃದ್ಧವಾಗಿ ಎಲ್ಲವೂ ಬೆಳೆಯುತ್ತಾ ಇದೆ. ಬಲರಾಮ, ಶ್ರೀಕೃಷ್ಣ ಪರಮಾತ್ಮ ನೋಡಿದರೆ ಅಣ್ಣ ಆದರೆ ಅತ್ಯಂತ ಪ್ರೀತಿಯಿಂದ ಸಾಕ್ಷಾತ್ ಪರಮಾತ್ಮ ಅಂತನ್ನುವುದು ಶೇಷ ದೇವರಿಗೆ ಗೊತ್ತು, ಬಲರಾಮ ಕೃಷ್ಣನಿಗೆ ಹೇಳುತ್ತಾ ಇದ್ದಾನೆ ನೋಡು ಎಷ್ಟು ಚೆನ್ನಾಗಿದೆ ಮಳೆಗಾಲ ಶ್ರಾವಣ ಮಾಸ,

ಪಶ್ಯ ಕೃಷ್ಣ ಘನಾನ್ ಕೃಷ್ಣಾನ್ ಬಲಾಕೋಜ್ಜ್ವಲಭೂಷಣಾನ್ ॥ (10.23 ವಿಷ್ಣುಪರ್ವ)

ಆ ಪಕ್ಷಿಗಳೆಲ್ಲ ಎಷ್ಟು ಹಾರಾಡುತ್ತಾ ಇವೆ, ಮೇಘಗಳು ಎಷ್ಟು ಚೆನ್ನಾಗಿವೆ ಅವುಗಳನ್ನು ನೋಡು, ಸ್ವಲ್ಪ ಹಂಗಿಸುವ ರೀತಿಯಲ್ಲಿ ನಿನ್ನ ಹಾಗೆ ಇದೆ ನೋಡು ಎಲ್ಲ ಮೇಘಗಳು ಅಂತ ಕಪ್ಪು ಬಣ್ಣಾಗಿ ಅಂತ ಕೃಷ್ಣ ಕಪ್ಪು ಬಣ್ಣ.

ಗಗನೇ ತವ ಗಾತ್ರಸ್ಯ ವರ್ಣಚೋರಾನ್ ಸಮುಚ್ಛ್ರಿತಾನ್ ॥ (10.23 ವಿಷ್ಣುಪರ್ವ)

ನಿನ್ನ ಬಣ್ಣವನ್ನೇ ಕದ್ದು ತೆಗೆದುಕೊಂಡು ಹೋಗಿವಿಯೋ ಏನೋ ಆ ಮೇಘಗಳು ಹಾಗೆ ಕಾಣಿಸುತ್ತಾ ಇವೆ ಅಂತ ಅಷ್ಟು ಕಪ್ಪು ಇದ್ದೀ ನೀನು ಅಂತ ಆದರೆ ನಿಜವಾಗಿ ಅದು ನಿಂದೆ ಅಲ್ಲ ಸ್ತುತಿ ಅದು ಆ ಪರಮಾತ್ಮ ನೀಲಮೇಘಶ್ಯಾಮ ಅದು ಭಗವಂತನ ಲಕ್ಷಣ ಅಂತಹ ಕೃಷ್ಣವರ್ಣದ ಪರಮಾತ್ಮನ ವರ್ಣನೆಯನ್ನು ಬಲರಾಮ ದೇವರು ಈ ರೀತಿಯಾಗಿ ಮಾಡುತ್ತಾ ಇದ್ದಾರೆ. ಇದು ಚಾತುರ್ಮಾಸ್ಯ ಕಾಲ ನಿನ್ನ ನಿದ್ರೆಯ ಕಾಲ ತಾನೇ ನಾಲ್ಕು ನಾಲ್ಕು ತಿಂಗಳು ಮಲಗುತ್ತೀಯಲ್ಲ ನೀನು **'ತವ ನಿದ್ರಾಕರಃ ಕಾಲ'**[1] ನಿನ್ನ ನಿದ್ರೆಯ ಕಾಲ ಇದು, ನಿನ್ನ ಮೈಬಣ್ಣದ ಮೇಘಗಳೆಲ್ಲ ಮೇಲೆ ಬಂದು ನಿಂತಿವೆ. ಚಂದ್ರ ನೀನು ಹೇಗೆ ಸರ್ವೋತ್ತಮನಾದರೂ ಅಜ್ಞಾತವಾಸ ಮಾಡುತ್ತಾ ಇದ್ದೀ ಈಗ ಸಾಮಾನ್ಯ ಮಾನವರಂತೆ ಯಾರಿಗೂ ನಿನ್ನ ದೇವತ್ವವನ್ನು ತೋರಿಸಿಕೊಳ್ಳುತ್ತಾ ಇಲ್ಲ ಹಾಗೆ ಚಂದ್ರ ಕಾಣಿಸುತ್ತಾನೇ ಇಲ್ಲ. ಎಲ್ಲ ಕಡೆಗೆ ಮೇಘಗಳಿವೆ ಆದ್ದರಿಂದ ಚಂದ್ರ ಕಾಣಿಸುತ್ತಾ ಇಲ್ಲ, ಸೂರ್ಯ ಕಾಣಿಸುತ್ತಾ ಇಲ್ಲ, ಸೂರ್ಯ ಕಾಣುವ ಹೊತ್ತಿಗೆ ಸೂರ್ಯ, ಚಂದ್ರ ಕಾಣುವ ಹೊತ್ತಿಗೆ ಚಂದ್ರ ಕಾಣಿಸುತ್ತಾನೇ ಇಲ್ಲ ಅಷ್ಟು ಮೇಘಗಳು ಬಂದಿವೆ. ನೀನು ಹೇಗೆ ಅಜ್ಞಾತವಾಸ ಮಾಡುತ್ತಾ ಇದ್ದೀಯೋ ಹಾಗೆ ಸೂರ್ಯ-ಚಂದ್ರರು ಅಜ್ಞಾತವಾಸ ಮಾಡುತ್ತಾ ಇದ್ದಾರೆ ಅಂತ ಅನ್ನಿಸುತ್ತಾ ಇದೆ ಅಂತ ಆ ಶ್ರಾವಣ ಮಾಸದ ಮೇಘಗಳ ಆ ಮಳೆಯ ವಾತಾವರಣದ ವರ್ಣನೆಯನ್ನು ಮಾಡುತ್ತಾ ಇದ್ದಾರೆ.

ಹರೇ ಹರ್ಯಶ್ವಚಾಪೇನ ತ್ರಿವರ್ಣೇನ ತ್ರಿವಿಕ್ರಮ ।
ವಿಭಾನಾಜ್ಯೇನ ರಚಿತಂ ತವೇದಂ ಮಧ್ಯಮಂ ಪದಮ್ ॥ (10.31 ವಿಷ್ಣುಪರ್ವ)

1. 10.24 ವಿಷ್ಣುಪರ್ವ

ನಿನ್ನ ಅಂತರಿಕ್ಷ, ನಿನ್ನ ಮಧ್ಯಮ ಸ್ಥಾನ ಅಲ್ಲಿ ಈ ಕಾಮನಬಿಲ್ಲು ಇಂದ್ರದನುಸ್ಸು ಅದ್ಭುತವಾದ ರೀತಿಯಲ್ಲಿ ಸೃಷ್ಟವಾಗಿದೆ ಇದೆಲ್ಲ ನಿನ್ನ ಸೃಷ್ಟಿಯ ವೈಚಿತ್ರ್ಯ ಅಂತ ಬಲರಾಮ ದೇವರು ಶ್ರೀಕೃಷ್ಣ ಪರಮಾತ್ಮನಿಗೆ ಹೇಳುತ್ತಾ ಇದ್ದಾರೆ.

ಮುಂದೆ ಶ್ರೀಕೃಷ್ಣ ಪರಮಾತ್ಮ ಯಮುನಾ ತೀರಕ್ಕೆ ಬಂದಿದ್ದಾನೆ ಅದ್ಭುತವಾದ ಆ ಯಮುನಾ ನದಿ, ಯಮುನಾ ತೀರದಲ್ಲಿ ವೇಣುಗಾನವನ್ನು ಮಾಡುತ್ತಾ ಇದ್ದಾನೆ ನಾನಾ ವಿಧವಾದ ವಾದ್ಯಗಳನ್ನು ಬಾರಿಸುತ್ತಾರೆ. ಎಷ್ಟು ಪಕ್ಷಿಗಳು ಕೇಳಿದರಲ್ಲ ಇದೀಗ **'ಸರ್ವಪಕ್ಷಿರುತಂ ವನಮ್'** ಲಕ್ಷ ಲಕ್ಷ ತರಹದ ಜಾತಿಯ ಪಕ್ಷಿಗಳಿದ್ದರೆ ಆ ಎಲ್ಲಾ ತರಹದ ಪಕ್ಷಿಗಳ ಧ್ವನಿಯನ್ನೂ ಮಾಡಿ ತೋರಿಸುತ್ತಾ ಇದ್ದಾನೆ ಕೃಷ್ಣ. ಇವತ್ತಿನ ಮಕ್ಕಳಿಗೆ ಎಲ್ಲ ಮಾಡಲಿಕ್ಕೆ ಬರುತ್ತಾ ನಾಯಿ ಒದರಿದಾಗ ಒದರುವುದಕ್ಕೊಂದು ಬರುತ್ತದೆ ಅದೊಂದು ಕಲಿತಿರುತ್ತವೆ, ಲಕ್ಷ ಲಕ್ಷ ಪಕ್ಷಿಗಳ ಧ್ವನಿಯನ್ನು ಪರಮಾತ್ಮ ಅನುಕರಣೆ ಮಾಡಿ ತೋರಿಸುತ್ತಾ ಇದ್ದಾನೆ. ಎಲ್ಲಾ ಪಶುಗಳ ಧ್ವನಿಯನ್ನು ಮಾಡುತ್ತಾನೆ ಬರೀ ಧ್ವನಿಯನ್ನು ಮಾಡಿ ತೋರಿಸುವುದಲ್ಲ ಅವುಗಳು ಹಾರುವಂತೆ ಹಾರಿ, ಪಶುಗಳು ನಡೆದಂತೆ ನಡೆದು, ಓಡಿದಂತೆ ಓಡಿ ಎಲ್ಲ ತರಹದ ಆಟಗಳನ್ನು ಆಡಿ ಪರಮಾತ್ಮ ಆಟ ಆಡಿಸುತ್ತಾ ಇದ್ದಾನೆ ಮಕ್ಕಳಿಂದ. ಏನದು ಆಟ ಕೈಯಲ್ಲಿ ಮೊಬೈಲ್ ಹಿಡಿದುಕೊಂಡು ಹೀಗೆ ಬೆರಳು ಆಡಿಸುತ್ತಾ ಕುಳಿತರೆ ಕಣ್ಣು ಕೆಟ್ಟಿತು, ಬುದ್ಧಿ ಕೆಟ್ಟಿತು, ತಲೆ ಕೆಡಿಸುವ ಕಣ್ಣು ಬುದ್ಧಿ ಎಲ್ಲವನ್ನೂ ಹಾಳು ಮಾಡುವ ಆಟ ಯಾವ ಆಟ, ಇದು ಕಾಟ ಇದು ಆಟ ಅಲ್ಲ, ಇದು ಕಲಿಯ ಮಾಟ ಇದು ಆಟ ಅಲ್ಲ.

ಶ್ರೀಕೃಷ್ಣ ಪರಮಾತ್ಮ ತೋರಿಸಿದ ನೋಡಿ ಅಂತಹ ಆಟಗಳನ್ನು ಆಡಿಸಿ ಶ್ರೀಮದ್ಭಾಗವತದ ಸಪ್ತಾಹ ಶ್ರವಣವನ್ನು ನೀವು ಮಾಡುತ್ತೀರಲ್ಲ ಮಾಡಿ, ಜ್ಞಾನ ಭಕ್ತಿ ವೈರಾಗ್ಯವನ್ನು ಪಡೆದುಕೊಳ್ಳಿ, ಜೊತೆಗೆ ಆರೋಗ್ಯವಂತ ಮಕ್ಕಳಿರಬೇಕು, ಮಕ್ಕಳು ಇನ್ನಷ್ಟು ಹೆಚ್ಚು ಧರ್ಮವನ್ನು ಮಾಡಬೇಕು. ಕೃಷ್ಣ ಪರಮಾತ್ಮ ಯಾವ ರೀತಿಯ ಗೋವರ್ಧನ ಪರ್ವತವನ್ನು ಎತ್ತಿಸಲಿಕ್ಕೆ ಹೋಗುವುದು ಬೇಡ ಆದರೆ ಕೃಷ್ಣ ಪರಮಾತ್ಮ ಯಾವ ತರಹದ ನೈಸರ್ಗಿಕ ಆಟಗಳನ್ನು ಆಡಿ ತೋರಿಸಿದ ಗಿಡಗಳ ಕೆಳಗೆ, ಮಣ್ಣಿನಲ್ಲಿ, ಗೋವುಗಳ ಜೊತೆಗೆ, ಪರ್ವತದಲ್ಲಿ, ಆ ತರಹದ ನೈಸರ್ಗಿಕವಾದ ನಾನಾ ವಿಧವಾದ ಯೋಗಾಸನವನ್ನು ಮಾಡಿ ತೋರಿಸಿದ. ಈ ಯೋಗಾಸನ ಅಂದರೆ ಏನು ಸಾವಿರಾರು ರೂಪಾಯಿಗಳನ್ನು ಕೊಟ್ಟು ಕಲಿಯುತ್ತೀರಲ್ಲ ಯೋಗಾಸನ ಅಂತ ಅಲ್ಲಿ ಇಲ್ಲಿ ಓಡಾಡುತ್ತೀರಲ್ಲ ಏನದು ಯೋಗಾಸನ ನವಿಲಿನಂತೆ ಅದು ಮಯೂರಾಸನ ಕೃಷ್ಣ ಪರಮಾತ್ಮ ಇದೆಲ್ಲವನ್ನು ಮಾಡಿ ತೋರಿಸಿದ್ದಾನೆ, ಎಲ್ಲಾ ಪಕ್ಷಿಗಳಂತೆ ತಾನು ನಡೆದು ನುಡಿದು ತೋರಿಸಿದ ಈ ರೀತಿ ನೀವು ನಡೆದು ನುಡಿದು ಬಿಟ್ಟರೆ ಸಾಕು. ಅಂದರೆ ಶ್ರೀಕೃಷ್ಣ ಪರಮಾತ್ಮನ ಯೋಗ ಶಾಲೆ ಅದು ವಿಶ್ವ, ಇಲ್ಲಿ ಯೋಗ ಶಿಕ್ಷಕರು ಯಾರು ಅಂದರೆ ಪಶು ಪಕ್ಷಿಗಳೇ, ಭುಜಂಗಾಸನ ಅಂದರೆ ಭುಜಂಗಾ ಇದು ಒಂದು ಯೋಗಾ ಟೀಚರ್ ಅದು ಆ ಯೋಗಾ ಟೀಚರ್ ಹೇಳಿದ ರೀತಿಯಲ್ಲಿ ನಾವು ಮೈಯನ್ನು ಬಗ್ಗಿಸಿಕೊಂಡರೆ ಅದು ಯೋಗಾಸನವಾಗುತ್ತದೆ. ಯಾವ ಖರ್ಚಿಲ್ಲದಂತೆ ಪರಮಾತ್ಮ ಸಾವಿರ ಸಾವಿರ, ಲಕ್ಷ ಲಕ್ಷ, ಕೋಟಿ ಕೋಟಿ ಪಶು ಪಕ್ಷಿಗಳ ರೂಪದಲ್ಲಿ ಯೋಗಾ ಟೀಚರ್ಸನ್ನು ಸೃಷ್ಟಿ ಮಾಡಿ ಇಟ್ಟಿದ್ದಾನೆ ಅದರಂತೆ ಅನುಕರುಣೆ ಮಾಡಿದರೆ ಸಾಕು ಉತ್ತಮ ಆರೋಗ್ಯವಂತರಾಗುತ್ತೀರಾ ನೀವು ಆಷ್ಟೆಲ್ಲ ಬೇಡ ಒಂದು ಕೆಲವಾದರೂ. ಇದೇನಿದು ಆಟ, ಆಟ ತೆಗೆದುಕೋ ಹುಟ್ಟಿದ ಹಬ್ಬನಾ ಒಂದು ಒಳ್ಳೆಯ ಮೊಬೈಲ್ ಕೊಡಿಸಿ ಕೊಡುವುದು, ಅದರಲ್ಲಿ ಆಟ ಆಡಿಸುವುದಕ್ಕೆ ಕಲಿಸುವುದು, ಈ ತರಹ ಆಟ ಆಡಿಸಬೇಡಿ, ಶ್ರೀಕೃಷ್ಣ ಪರಮಾತ್ಮ ಆಟ ಆಡಿದ ರೀತಿಯಲ್ಲಿ ಆಡಿಸಿ ಆರೋಗ್ಯವಂತರನ್ನಾಗಿ ಮಾಡಿ ನಿಮ್ಮ ಮಕ್ಕಳನ್ನು.

ಶ್ರೀಕೃಷ್ಣ ಪರಮಾತ್ಮ ಎಷ್ಟು ಚೆನ್ನಾಗಿ ಆಟ ಆಡಿಸುತ್ತಾ ಇದ್ದಾನೆ ಎಲ್ಲರಿಗೆ ಆ ಯಮುನಾ ತೀರದಲ್ಲಿ. ನಾನಾ ವಿಧವಾದ ವಾದ್ಯಗಳು, ಎಂತಹ ವಾದ್ಯಗಳು ವೀಣಾವಾದನ, ಚೆನ್ನಾಗಿ ಏಕಾಗ್ರ ಮನಸ್ಸಿನಿಂದ ಕೊಳಲುನಾದ,

ತಂಬೂರಿಯ ಧ್ವನಿ, ನಾನಾ ವಿಧವಾದ ವಾದ್ಯಗಳ ಧ್ವನಿಯನ್ನು ಆ ಸಂಗೀತ ಶಾಸ್ತ್ರದ ಕ್ರಮದ ಪ್ರಕಾರ ವಾದನ ಮಾಡಿದಾಗ ಆ ವಾದ್ಯಗಳ ಧ್ವನಿಯನ್ನು, ಆ ಸಂಗೀತವನ್ನು ಕೇಳಿದರೆ ಎಂತೆಂತಹ ದೊಡ್ಡ ದೊಡ್ಡ ರೋಗಗಳು ದೂರವಾಗುತ್ತವೆ ಅಂತ ಶಾಸ್ತ್ರ ಹೇಳುತ್ತದೆ. ಉತ್ತಮವಾದಂತಹ ಭಕ್ತಿಯ ಉದ್ರೇಕ ವಿರಕ್ತರಿಗೆ, ಸಾಧಕರಿಗೆ ಭಕ್ತಿಯ ಉದ್ರೇಕ ಪರಮಾತ್ಮನ ಉತ್ತಮವಾದ ಅನುಗ್ರಹ ಸಾಧನೆ, ಸಾಮಾನ್ಯರಿಗೆ, ಲೌಕಿಕರಿಗೆ ನಾನಾ ವಿಧವಾದ ರೋಗರುಜಿನಗಳ ಪರಿಹಾರ ಆ ಧ್ವನಿ ಇಂದ ಆಗುತ್ತದೆ ಅಂತಹ ವಾದ್ಯಗಳನ್ನು ಕೇಳಿಸಿ. ಏನು ಇವತ್ತು ಪಾಶ್ಚಾತ್ಯರ ಅನುಕರಣೆಯನ್ನು ಏನು ಮಾಡುತ್ತಾ ಹೃದಯಾಘಾತವಾಗುವಂತಹ ವಾದ್ಯಗಳ ಧ್ವನಿ ಆರೋಗ್ಯ ಅಲ್ಲ, ಇದ್ದ ಆರೋಗ್ಯವನ್ನು ಹಾಳು ಮಾಡುವಂತಹ ಧ್ವನಿಗಳು. ಭಾರತೀಯ ಸಂಗೀತವನ್ನು ಕೇಳಿ ಭಾರತೀಯ ವಾದ್ಯಗಳು, ಸನಾತನ ಸಂಸ್ಕೃತಿಯಿಂದ ಬಂದ ಭಾರತೀಯ ಸಂಸ್ಕೃತಿಯಲ್ಲಿ ಬಂದ ವಾದ್ಯಗಳು ಏನಿವೆ ಆ ವಾದ್ಯಗಳ ಧ್ವನಿಗಳನ್ನು ಕೇಳಿ, ಆ ಸಂಗೀತದ ರಾಗಗಳನ್ನು ಕೇಳಿ, ಆ ಮಂತ್ರಗಳ ಶ್ರವಣ ಮಾಡಿ, ಭಕ್ತಿಯಿಂದ ಭಗವಂತನ ಚಿಂತನ ಮಾಡಿ ಉತ್ತಮವಾದ ಪುಣ್ಯವನ್ನೂ ಪಡೆದುಕೊಳ್ಳಿ, ಉತ್ತಮವಾದ ಆರೋಗ್ಯವನ್ನೂ ಪಡೆದುಕೊಳ್ಳಿ. ಅದೇನು ಪಾಶ್ಚಾತ್ಯರ ಅನುಕರಣೆಯನ್ನು ಮಾಡುತ್ತ ವಿಕೃತವಾದ ನೃತ್ಯಗಳೇನು, ವಿಕೃತವಾದ ಸಂಗೀತಗಳೇನು, ವಿಕೃತವಾದ ವಾದ್ಯಗಳೇನು ಸಾಕು, ಸ್ವಾತಂತ್ರ್ಯ ಬಂದಾಗಿದೆ ಭಾರತಕ್ಕೆ ಬೇಡ ಇನ್ನು ಪಾರತಂತ್ರ್ಯ, ದಾಸ್ಯ ಬೇಡ, ಮಾನಸಿಕ ದಾಸ್ಯ ಬೇಡ. ಸಂಗೀತದಲ್ಲಿ ಸ್ವಾತಂತ್ರ್ಯ, ವಾದ್ಯಗಳಲ್ಲಿ ಸ್ವಾತಂತ್ರ್ಯ, ಕ್ರೀಡೆಗಳಲ್ಲಿ ಸ್ವಾತಂತ್ರ್ಯ, ವಿಚಾರ ಧಾರೆಯಲ್ಲಿ ಸ್ವಾತಂತ್ರ್ಯ, ಧರ್ಮದಲ್ಲಿ ಸ್ವಾತಂತ್ರ್ಯ, ಆಧ್ಯಾತ್ಮಿಕತೆಯಲ್ಲಿ ಸ್ವಾತಂತ್ರ್ಯ ಇದಕ್ಕಾಗಿ ಯಾವ ರಕ್ತಪಾತ ಬೇಕಾಗಿಲ್ಲ. ಇದಕ್ಕಾಗಿ ನಮ್ಮ ದೃಷ್ಟಿಪಾತ ಆದರೆ ಸಾಕು ಶಾಸ್ತ್ರಗಳ ಮೇಲೆ, ನಮ್ಮ ಶ್ರೋತ್ರಪಾತ ಆದರೆ ಸಾಕು ಮಹಾತ್ಮರ ಉಪದೇಶದ ಕಡೆಗೆ ನಮ್ಮ ದೇಶದ ಉದ್ಧಾರವಾಗುತ್ತದೆ. ಆ ತರಹದ ಸಂದೇಶವನ್ನು ಪರಮಾತ್ಮ ನೀಡುತ್ತಾ ಇದ್ದಾನೆ.

ಆದರೆ ಒಂದು ಪ್ರದೇಶಕ್ಕೆ ಬಂದಿದ್ದಾರೆ, ಗೋವುಗಳೆಲ್ಲ ಸಾಯುತ್ತಾ ಇವೆ, ಗೋಪಾಲಕರು ಸಾಯುತ್ತಾ ಇದ್ದಾರೆ, ಯಾಕೆ ಹೀಗೆ ಅಂತ ನೋಡಿದರೆ ಕಾಲಿಯ ನಾಗ, ಕಾಲಿಯ ನಾಗನ ವಿಷದಿಂದ ಪೂರಿತವಾದ ನೀರಿನ ಮೇಲೆ ಬೀಸಿ ಬಂದ ಗಾಳಿ ತಾಕಿದ್ದಕ್ಕೆ ಸಾಯುತ್ತಾ ಇದ್ದಾರೆ. ಏನು ಮಾಡಲಿಲ್ಲ ಅವನು ದಿವ್ಯದೃಷ್ಟಿಯಿಂದ ಪರಮಾತ್ಮ ಹೀಗೆ ನೋಡಿದ್ದಾನೆ ಅಷ್ಟೇ **'ತದ್ ದಿವ್ಯದೃಷ್ಟಿ ಸುಧಯಾ'** ಕೇವಲ ದಿವ್ಯದೃಷ್ಟಿಯಿಂದ ಪರಮಾತ್ಮ ನೋಡುವ ಮಾತ್ರದಿಂದ ಎಲ್ಲರೂ ಪುನರ್ಜನ್ಮವನ್ನು ಪಡೆದಿದ್ದಾರೆ, ಯಾವ ಔಷಧಿಗಳಿಲ್ಲ ತಿಳಿದುಕೊಳ್ಳಿ. ರೋಗದ ಭೀತಿಯಿಂದ ಒದ್ದಾಡುತ್ತಾ ಇದ್ದೀವಲ್ಲ ಈಗ ನಾವೆಲ್ಲ ಶ್ರೀಕೃಷ್ಣ ಪರಮಾತ್ಮನ ಸ್ಮರಣೆಯನ್ನು ಮಾಡೋಣ ಅವನ ಕೃಪಾದೃಷ್ಟಿ ಅವನ ದಿವ್ಯದೃಷ್ಟಿಯ ಅಮೃತ ವರ್ಷಣ ನಮ್ಮ ಮೇಲೆ ಆಗಲಿ ಅಂತ ಪ್ರಾರ್ಥನೆ ಮಾಡೋಣ ಇಡೀ ದೇಶದೊಳಗಿರುವ ಸಕಲ ಸಜ್ಜನರ ಮೇಲೆ, ಎಲ್ಲಾ ಕಡೆಗಿರುವ ಎಲ್ಲ ಸಜ್ಜನರ ಮೇಲೆ, ಎಲ್ಲ ದೇಶಗಳಲ್ಲಿರುವ ಸಕಲ ಸಜ್ಜನರ ಮೇಲೆ ಭಗವಂತನ ದಿವ್ಯದೃಷ್ಟಿಯ ಸುಧಾ ಅಮೃತ ವರ್ಷಣವಾದರೆ ಉತ್ತಮವಾದ ಆರೋಗ್ಯ ಸಿಗುತ್ತದೆ. ಅವರೆಲ್ಲರನ್ನೂ ಬದುಕಿಸಿದ ಸರಿ, ಇನ್ನು ಮುಂದೆ ಯಾರು ಸಾಯಬಾರದಲ್ಲ ಅದಕ್ಕೆ ಕಾಲಿಯನನ್ನು ಏನು ಮಾಡಬೇಕು, ಕಾಲಿಯನ್ನನ್ನೇ ಕಾಲಿಡದಂತೆ ಇಲ್ಲಿಂದ ಖಾಲಿ ಮಾಡಿಸಬೇಕು, ಕಾಲಿಯು ಕಾಲಿಡದಂತೆ ಆಗಬೇಕು. ಶ್ರೀಕೃಷ್ಣ ಪರಮಾತ್ಮ ನೋಡಿದ ಈಚಲು ಮರ, ಕದಂಬ ವೃಕ್ಷ, ಕದಂಬ ವೃಕ್ಷದ ಮೇಲೆ ಹತ್ತಿ ತುಟ್ಟ ತುದಿಗೆ ಏರಿದ್ದಾನೆ, ಏರಿ ಯಮುನಾ ನದಿಯಲ್ಲಿ ಪರಮಾತ್ಮ ಹಾರಿದರೆ ಒಂದು ನೂರು ಧನುಸ್ಸ್ಯದ ಪ್ರಮಾಣದಷ್ಟು ಎತ್ತರ ನೀರು ಹಾರಿದೆ. ನೀರಿನೊಳಗೆ ಹಾರುವವರ ಕಲೆ ಅದು, ಎಷ್ಟು ಮೇಲಿನಿಂದ ಹಾರಿರುತ್ತಾರೋ ಅಷ್ಟು ಮೇಲೆ ನೀರು ಹಾರಬೇಕು ಓ ಭಾರೀ ಅದ್ಭುತವಾದ ಕಲೆ ಏನು ನಿನ್ನ ತಲೆ **'ಅನಂತಬಲಸ್ಯ ಕಿಂ ತತ್'**[1] ಅನ್ನುತ್ತಾರೆ ಶ್ರೀಮದಾಚಾರ್ಯರು.

---

1. 10.1.14.7 ಭಾಗವತ

ಅನಂತ ಶಕ್ತಿ ಸಾಮರ್ಥ್ಯಗಳಿರುವ ಪರಮಾತ್ಮನಿಗೆ ಒಂದು ನೂರು ಧನುಸ್ಸ್ಸುದಷ್ಟು ಎತ್ತರಕ್ಕೆ ನೀರು ಹಾರಿಸಿದ ಅನ್ನುವುದು ಅದು ಬಹಳ ದೊಡ್ಡ ಸಂಗತಿಯೇ, ಬಹಳ ದೊಡ್ಡ ಕೌಶಲವೇ ದೇವರ ದೃಷ್ಟಿಯಲ್ಲಿ ಬಹಳ ಸಣ್ಣದು ಏನೂ ಅಲ್ಲ. ಏನು ಆ ಪರಮಾತ್ಮನ ಅಚಿಂತ್ಯವಾದ ಅದ್ಭುತವಾದ ಶಕ್ತಿ, ಅವನ ಸೃಷ್ಟಿ ಐವತ್ತು ಕೋಟಿ ಯೋಜನ ವಿಸ್ತೀರ್ಣವಾದ ಬ್ರಹ್ಮಾಂಡದ ಹೊರಗೆ ನೂರು ಕೋಟಿ ಯೋಜನ ವಿಸ್ತೀರ್ಣವಾದಂತಹ ಪೃಥ್ವಿಯ ಆವರಣವನ್ನು ಇಟ್ಟು ಅದರ ಹೊರಗೆ ಸಾವಿರ ಕೋಟಿ ಯೋಜನದ ಜಲಾವರಣವನ್ನು ಇಟ್ಟಿದ್ದಾನೆ ಅಷ್ಟು ಎತ್ತರಕ್ಕೆ ನೀರನ್ನು ಇಟ್ಟಂತಹ ಸ್ವಾಮಿ ಅಂತಹ ಅದ್ಭುತವಾದ ನೀರನ್ನು, ಅಂತಹ ಭಗವಂತನಿಗೆ ಇದೇನು ಅದ್ಭುತ. ಗಂಗೆ ಸ್ವರ್ಗದಲ್ಲಿ ಹರಿಯುವಂತೆ ಮಾಡಿದವನು ಪರಮಾತ್ಮ, ಭೂಮಿಯಲ್ಲಿಯೂ ಪಾತಾಲದಲ್ಲಿಯೂ ಹರಿಯುವಂತೆ **'ತ್ರಿಪಥಗ'** ಅಂತನ್ನುವ ಹೆಸರನ್ನು ಪಡೆಯುವಂತೆ ಮಾಡಿದ ಸ್ವಾಮಿಗೆ ಇದೆಲ್ಲ ಏನು ಅದ್ಭುತ ಬಹಳ ಸಣ್ಣದು. ಆ ರೀತಿ ಪರಮಾತ್ಮ ಅಲ್ಲಿ ಒಳಗೆ ಧುಮುಕಿದ್ದಾನೆ.

ಕಾಲಿಯ ನಾಗ ಅವನ ಮಕ್ಕಳು, ಮೊಮ್ಮಕ್ಕಳು, ಭೃತ್ಯರು ಎಲ್ಲರೂ ಸೇರಿ ಶ್ರೀಕೃಷ್ಣ ಪರಮಾತ್ಮನನ್ನು ಕಚ್ಚಬೇಕು ಅಂತ ಬಂದಿದ್ದಾರೆ. ಕೃಷ್ಣ ಪರಮಾತ್ಮನನ್ನು ತನ್ನ ಶರೀರದಿಂದಲೇ ಸುತ್ತಿದ್ದಾನೆ ಕಾಲಿಯಾ ಕಚ್ಚುತ್ತಾ ಇದ್ದಾನೆ, ಎಲ್ಲಾ ನಾಗಗಳು ಕಚ್ಚುತ್ತಾ ಇವೆ ಏನಾಗಬೇಕಾಗಿದೆ ಕೃಷ್ಣನಿಗೆ ಏನು ಆಗಿಲ್ಲ ಆನಂದವಾಗುತ್ತಾ ಇದೆ. ಆಗುತ್ತಾ ಇದೆ ಅಂದರೆ ಹೊಸದಾಗಿ ಅಲ್ಲ ನಿತ್ಯಾನಂದ ಪೂರ್ಣನಾದವನು ಹಾಗೇ ಇದ್ದಾನೆ, ನಿರ್ವಿಕಾರನಾಗಿ ಇದ್ದಾನೆ ಆದರೆ ಈಚೆಗೆ ಗೋಪಾಲಕರೆಲ್ಲ ಗಾಬರಿ ಆಗುತ್ತಾ ಇದ್ದಾರೆ. ಯಶೋದೆಗೆ ಬೈಯುತ್ತಾ ಇದ್ದಾರೆ ಕೃಷ್ಣ ಪರಮಾತ್ಮ ಕಾಲಿಯ ಮಡುವಿನಲ್ಲಿ ಧುಮುಕಿದ್ದಾನೆ, ಅಲ್ಲಿ ಒದ್ದಾಡುತ್ತಾ ಇದ್ದಾನೆ ನೀನು ನಿಶ್ಚಿಂತೆಯಾಗಿ ಕುಳಿತಿದ್ದೀಯಲ್ಲ ಅಂತ ಓಡಿ ಬಂದಿದ್ದಾಳೆ ಯಶೋದೆ, ನಂದಗೋಪ ಬಂದಿದ್ದಾನೆ ಎಲ್ಲರೂ ಗಾಬರಿಯಾಗಿದ್ದಾರೆ. ಬಲರಾಮ ಮಾತ್ರ, ಶೇಷ ದೇವರು ಶುದ್ಧವಾದ ಜ್ಞಾನ, ಪಂಚರಾತ್ರಗಳಿಗೆ ಅಭಿಮಾನಿ ದೇವತೆ ಸ್ಪಷ್ಟವಾದ ಶುದ್ಧವಾದ ನಿರ್ಮಲವಾದ ಜ್ಞಾನ ಶೇಷ ದೇವರಿಗೆ ಹೇಳುತ್ತಾ ಇದ್ದಾರೆ ಯಾಕೆ ನಾಟಕ ಮಾಡುತ್ತಾ ಇದ್ದೀ ಕೃಷ್ಣ ಇಷ್ಟು ಜನರು ದುಃಖ ಪಡುತ್ತಾ ಇದ್ದಾರಲ್ಲ.

ಸಂಕರ್ಷಣಸ್ತು ಸಂಕ್ರುದ್ಧೋ ಬಭಾಷೇ ಕೃಷ್ಣಮವ್ಯಯಮ್ ॥ (12.29 ವಿಷ್ಣುಪರ್ವ)

ಕೃಷ್ಣ ಕೃಷ್ಣ ಮಹಾಬಾಹೋ ಗೋಪಾನಾಂ ನನ್ದವರ್ಧನ ।
ದಮ್ಯತಾಮೇಷ ವೈ ಕ್ಷಿಪ್ರಂ ಸರ್ಪರಾಜೋ ವಿಷಾಯುಧಃ ॥ (12.30 ವಿಷ್ಣುಪರ್ವ)

ಶೀಘ್ರದಲ್ಲಿ ಕಾಲಿಯನನ್ನು ದೂರ ಕಳಿಸಿ ನೀನು ಭಕ್ತರಿಗೆಲ್ಲ ಸಂತೋಷ ಉಂಟು ಮಾಡಬೇಕು, ತಂದೆ ತಾಯಿಗಳಿಗೆ ಸಂತೋಷ ಉಂಟು ಮಾಡಬೇಕು ಅಂತ ಹೇಳಿದಾಗ ಶ್ರೀಕೃಷ್ಣ ಪರಮಾತ್ಮ ಕಾಲಿಯನ ತಲೆಯ ಮೇಲೆ ಏರಿ ಝಾಡಿಸಿದ ದೂರ ಸರಿದಿದ್ದಾನೆ ಕಾಲಿಯ, ಅವನ ತಲೆಯ ಮೇಲೆ ಹಾರಿದ ಕುಣಿಯುತ್ತಾ ಇದ್ದಾನೆ. ಅದ್ಭುತವಾದ ನರ್ತನವನ್ನು ಮಾಡುತ್ತಾ ಇದ್ದಾನೆ. **'ನ ನರ್ತ ಗೋಪಾಲಕ ಬಾಲಮೌಲಿಃ'** ಬ್ರಹ್ಮಾದಿ ದೇವತೆಗಳು ವಾದ್ಯಗಳನ್ನು ಬಾರಿಸುತ್ತಾ ಇದ್ದಾರೆ, ಕುಣಿಯುತ್ತಾ ಇದ್ದಾರೆ, ಪುಷ್ಪವೃಷ್ಟಿಯನ್ನು ಮಾಡಿದ್ದಾರೆ, ಹಾಡು ಹಾಡುತ್ತಾ ಇದ್ದಾರೆ ಆನಂದದಿಂದ ದರ್ಶನ ಮಾಡುತ್ತಾರೆ ಶ್ರೀಕೃಷ್ಣ ಪರಮಾತ್ಮನ ನೃತ್ಯ, ಅದ್ಭುತವಾದಂತಹ ನೃತ್ಯ ದೇವರು ಮಾಡುವಂತಹ ನೃತ್ಯ. ಯಾವ ವ್ಯಕ್ತಿಗೆ ಆನಂದೋದ್ರೇಕವಾಗಿರುತ್ತೆ ಅಂತಹ ಮನುಷ್ಯ ನೃತ್ಯ ಮಾಡಬಹುದು ಭಾರೀ ದೊಡ್ಡ ವಿಷವನ್ನು ಕಾರುವ ಸರ್ಪ ವರ್ಣನೆ ಮಾಡುತ್ತದೆ ಹರಿವಂಶ. ಇದರ ವಿಷಾಗ್ನಿಯಿಂದ ಯಮುನೆಯೇ ಒಂದೊಂದು ಬಾರಿ ಹತ್ತಿರ ಬರದಂತೆ ಪ್ರವಾಹಕ್ಕೆ ವಿರುದ್ಧ ದಿಕ್ಕಿನಲ್ಲಿ ಹೆದರಿ ಹೋಗುವ ರೀತಿಯಲ್ಲಿ ಇತ್ತಂತೆ ಅಷ್ಟು ವಿಷದ ಅಗ್ನಿಯ ಪ್ರಖರತೆ. ಅಂತಹ ಈ ವಿಷದ ಸರ್ಪಗಳ ಮಧ್ಯದಲ್ಲಿ ಆನಂದದಿಂದ ನೃತ್ಯವನ್ನು ಮಾಡಬೇಕು

ಅಂದರೆ ಆ ಭಗವಂತನ ಆನಂದ ಎಷ್ಟು ಅದ್ಭುತ, ಅವನ ಶಕ್ತಿ ಎಷ್ಟು ಅದ್ಭುತ. ಇಡೀ ಪ್ರಪಂಚದ ಸೃಷ್ಟಿ ಸ್ಥಿತ್ಯಾದಿ ಸಕಲ ಕಾರ್ಯಗಳು ಕೂಡ ದೇವರು ಆನಂದೋದ್ರೇಕದಿಂದ ಮಾಡುವ ನೃತ್ಯ ಇದ್ದಂತೆ.

ಸೋಯಂ ವಿಹಾರ ಇಹ ಮೇ ತನುಭೃತ್ಸ್ವಭಾವ
ಸಂಭೂತಯೇ ಭವತಿ ಭೂತಿಕೃದೇವ ಭೂತ್ಯಾಃ ॥ (1.5 ಮಭಾತಾನಿರ್ಣಯ)

ನಮಗೆಲ್ಲ ಇದು ವಿಷ ನಾನಾ ವಿಧವಾದ ಸರ್ಪಗಳು, ನಾನಾ ವಿಧವಾದ ದುಃಖಗಳು ಈ ಸಂಸಾರ ಅಂದರೆ ನಮಗೊಂದು ಭಾರೀ ವಿಷಮಯವಾದ ವಾತಾವರಣ ಅಂತ ಆದರೆ ದೇವರಿಗೆ ಅದು ನರ್ತನ ಶಾಲೆ, ಅದು ವಿಹಾರ ಭೂಮಿ. ಅಂತಹ ಪರಮಾತ್ಮನಿಗೆ ನಾವು ಶರಣು ಹೋದರೆ ನಮಗೂ ಆ ವಿಷದ ಬಾಧೆಯನ್ನು ಪರಿಹರಿಸಿ ಕಾಲಿಯನನ್ನು ಆಚೆಗೆ ಕಳಿಸಿ ಗೋಪಾಲಕರನ್ನು ರಕ್ಷಣೆ ಮಾಡಿದಂತೆ ನಮಗೂ ಎಲ್ಲ ಕಷ್ಟಗಳನ್ನು ಕಳೆದು ದೇವರು ರಕ್ಷಣೆ ಮಾಡುತ್ತಾನೆ ಅನ್ನುವುದನ್ನು ತೋರಿಸಿಕೊಡುತ್ತಾನೆ. ಆ ನಾಗ ಪತ್ನಿಯರೆಲ್ಲ ಬಂದು ಪ್ರಾರ್ಥನೆ ಮಾಡಿದ್ದಾರೆ, ಮಾಡಿದ ತಪ್ಪನ್ನು ಕ್ಷಮಿಸಿ ನಮ್ಮ ಮಾಂಗಲ್ಯವನ್ನು ಉಳಿಸು ಇವನನ್ನು ರಕ್ಷಣೆ ಮಾಡು ಅಂತ ಕಾಲಿಯನು ಅವನು ವಿಷ್ಣು ಭಕ್ತನೇ. ಆ ಎಲ್ಲ ನಾಗಗಳು ನೀನು ಕೃಷ್ಣ ಸರ್ವೋತ್ತಮ ಶ್ರೀಹರಿ ಅಂತ ತಿಳಿಯದೆ ನಾವು ಅಪರಾಧ ಮಾಡಿದೆವು ನಮ್ಮ ಅಪರಾಧವನ್ನು ಕ್ಷಮಿಸು, ಗರುಡ ನಮ್ಮನ್ನು ತಿನ್ನುತ್ತಾನೆ ಅನ್ನುವ ಭಯಕ್ಕೆ ನಾವು ಇಲ್ಲಿ ಬಂದು ನೆಲೆಸಿದ್ದೇವೆ, ಇಲ್ಲಿ ಸೌರಭ ಋಷಿಗಳ ಶಾಪ ಇದೆ ಗರುಡ ಬರಬಾರದು ಅಂತ ಇದೇ ಪರಿಸರದಲ್ಲಿ ಸೌರಭ ಋಷಿಗಳು ತಪಸ್ಸು ಮಾಡುವಾಗ ಗರುಡ ದೇವರು ಬಂದು ಒಂದು ಮೀನನ್ನು ತಿಂದು ಹೋದಾಗ ಮೀನನ್ನು ತಿನ್ನಬೇಡ ಅಂತ ಹೇಳಿದರು, ಮೀನಿನ ಮೇಲೆ ಬಹಳ ಪ್ರೀತಿ ಸೌರಭ ಋಷಿಗಳಿಗೆ ಆ ಮೀನನ್ನು ನೋಡಿಕೊಂಡೇ ತಾವು ಸಂಸಾರವನ್ನು ಪ್ರಾರಂಭ ಮಾಡಿದ್ದು. ಆ ಮೀನುಗಳನ್ನು ತಿನ್ನಬೇಡ ಅಂತ. ಗರುಡನಿಗೆ ಹೇಳಿದರೆ ಕೇಳದೇ ಇದ್ದಾಗ ನೀನು ಇಲ್ಲಿ ಬರಬಾರದು ಅಂತ ಶಾಪ ಕೊಡುತ್ತಾರೆ ಬಂದರೆ ಮರಣ ಆಗಬೇಕು ಅಂತ. ಗರುಡನಿಗೇನು ಸೌರಭ ಋಷಿಗಳ ಶಾಪ ತಟ್ಟುವುದಿಲ್ಲ ಆದರೆ ದೇವರ ಆಜ್ಞೆ ಋಷಿಗಳಿಗೊಂದು ಗೌರವ ಕೊಡಬೇಕು ಅಂತನ್ನುವುದಕ್ಕೋಸ್ಕರ ಗರುಡ ಇಲ್ಲಿ ಬರುವುದಿಲ್ಲ ಅಂತ ನಾನು ಬಂದಿದ್ದೆ, ನನ್ನನ್ನು ಇಲ್ಲಿಂದ ಹೋಗು ಅಂದರೆ ಮತ್ತೆ ನನ್ನನ್ನು ಸಾಯಿ ಅಂತ ಅಂದ ಹಾಗೇನೆ ಗರುಡ ಬಿಡುವುದಿಲ್ಲ ನನ್ನನ್ನು ಅಂತ. ಕೃಷ್ಣ ಹೇಳಿದ ನನ್ನ ಪಾದದ ಚಿಹ್ನ ನಿನ್ನ ತಲೆಯ ಮೇಲೆ ಇದೆ, ನಿನ್ನನ್ನು ಅತ್ಯಂತ ಪ್ರೀತಿಯಿಂದ ಗರುಡ ನೋಡುತ್ತಾನೆ, ಪಾದದ ಚಿಹ್ನವನ್ನು ನೋಡಿದರೆ ನಿನ್ನನ್ನು ಮಕ್ಕಳಿಗಿಂತಲೂ ಹೆಚ್ಚು ಪ್ರೀತಿಯಿಂದ ನೋಡುತ್ತಾನೆ ಗರುಡ, ಚಿಂತೆ ಮಾಡಬೇಡ. ಆ ಪರಮಾತ್ಮನ ಪಾದದ ಚಿಹ್ನ ನಮ್ಮ ತಲೆಯ ಮೇಲೆ ಇದ್ದರೆ, ಪಾದೋದಕ ತಲೆಯ ಮೇಲೆ ಇದ್ದರೆ, ಆ ಪರಮಾತ್ಮನ ದಾಸ್ಯವನ್ನು ನಾವು ಪಡೆದರೆ ಎಲ್ಲ ದೇವತೆಗಳು ನಮ್ಮನ್ನು ಪ್ರೀತಿಸುತ್ತಾರೆ, ಎಲ್ಲ ದೇವತೆಗಳ ಅನುಗ್ರಹವು ನಮ್ಮ ಮೇಲೆ ಆಗುತ್ತದೆ ಅನ್ನುವುದನ್ನ ಈ ಸಂದರ್ಭದಲ್ಲಿ ಕೃಷ್ಣ ಪರಮಾತ್ಮ ತಿಳಿಸಿಕೊಡುತ್ತಾ ಇದ್ದಾನೆ.

ಅದ್ಯಪ್ರಭೃತಿ ಗೋಪಾನಾಂ ಗವಾಂ ಗೋಷ್ಠಸ್ಯ ಚಾನಘ ।
ಆಪತ್ಸು ಶರಣಂ ಕೃಷ್ಣಃ ಪ್ರಭುಶ್ಚಾಯತಲೋಚನಃ ॥ (12.46 ವಿಷ್ಣುಪರ್ವ)

ಏನೋ ಸಣ್ಣ ಕೃಷ್ಣ ನಮ್ಮ ಮಗ ಅಂತ ತಿಳಿದುಕೊಂಡಿದ್ದಿವಿ ಇನ್ನು ಮೇಲಿನಿಂದ ನಮ್ಮ ಗೋಪಾಲಕರಿಗೆ ಏನೇ ಆಪತ್ತು ಬಂದರೂ ಶರಣು ರಕ್ಷಕ ಅಂದರೆ ಕೃಷ್ಣ ಎಂಬುದಾಗಿ ಘೋಷಣೆ ಮಾಡಿದ್ದಾನೆ ನಂದ. ಆಪತ್ಬಾಂಧವ ಶ್ರೀಕೃಷ್ಣ, ಶರಣಾಗತ ರಕ್ಷಕ ಶ್ರೀಕೃಷ್ಣ ಪರಮಾತ್ಮ ಎಂಬುದಾಗಿ ಆ ಪರಮಾತ್ಮನನ್ನು ಎಲ್ಲರೂ ಕೂಡ ನಮಿಸಿದ್ದಾರೆ.

ಮಹದ್ಭೂತಂ ನ ಜಾನೀಮಶ್ಚನ್ನಮಗ್ನಿಮಿವ ವ್ರಜೇ ॥ (12.48 ವಿಷ್ಣುಪರ್ವ)

ಬೂದಿ ಮುಚ್ಚಿದ ಕೆಂಡದಂತೆ ಕೃಷ್ಣ ಇದ್ದಾನೆ, ಸರ್ವೋತ್ತಮನಾದ ಶ್ರೀಹರಿಯೇ ಕೃಷ್ಣನಾಗಿ ಅವತಾರ ಮಾಡಿದ್ದಾನೆ ಎಂಬುದಾಗಿ ಆ ಕೃಷ್ಣನನ್ನು ಎಲ್ಲರೂ ಕೂಡ ವರ್ಣನೆ ಮಾಡಿದ್ದಾರೆ, ನಮಿಸಿದ್ದಾರೆ ಸ್ತುತಿಸಿದ್ದಾರೆ, ಕೊಂಡಾಡಿದ್ದಾರೆ ಎಲ್ಲರನ್ನೂ ಕೂಡ ಪರಮಾತ್ಮ ಆಪತ್ತಿನಿಂದ ಉದ್ಧಾರ ಮಾಡಿದ್ದಾನೆ.

ಅಲ್ಲಿಯೇ ರಾತ್ರಿ ಮಲಗಿದ್ದಾರೆ ಕತ್ತಲೆ ಆಯಿತು ಇನ್ನು ಊರಿಗೆ ಹೋಗುವುದು ಕಷ್ಟ ಅಂತ ನದಿ ತೀರದಲ್ಲಿಯೇ ಮಲಗಿದರೆ ಮತ್ತೊಂದು ಆಪತ್ತು ಕಾಡ್ಗಿಚ್ಚು, ಇದ್ದಕ್ಕಿದ್ದಂತೆ ಕಾಡ್ಗಿಚ್ಚು ಎಲ್ಲರೂ ಅದರಲ್ಲಿ ಸುಟ್ಟು ಬೂದಿಯಾಗುವ ಪ್ರಸಂಗ ಕೃಷ್ಣ ಪರಮಾತ್ಮ ಎಲ್ಲ ವಹ್ನಿಯನ್ನು ತಾನು ಪಾನ ಮಾಡಿದ್ದಾನೆ. **'ಮುಖಾದಿಂದ್ರಶ್ಚಾಗ್ನಿಶ್ಚ'** [1] ಮುಖದಿಂದರೇ ಅಗ್ನಿಯನ್ನು ಸೃಷ್ಟಿ ಮಾಡಿದ ಪರಮಾತ್ಮನಿಗೆ ಮುಖದಲ್ಲಿ ಅಗ್ನಿಯನ್ನು ಸೇರಿಸಿಕೊಳ್ಳುವುದು ಏನು ದೊಡ್ಡದಲ್ಲ, ತನ್ನ ಮನೆಗೆ ತಾನು ಅಗ್ನಿ ಹೋದಂತೆ ಅಂತ ವಾದಿರಾಜ ಶ್ರೀಪಾದಂಗಳವರು ಹೇಳುತ್ತಾರೆ.

ಸ್ತುವಂತು ಸರ್ವೇ ವನ-ವಹ್ನಿ-ಪಾನ ಕೃತಾನುಭಾವಂ ನವಯಂ ಮುರಾರೇಃ ।
ಸ್ವ-ಜನ್ಮ-ಭೂಮಿಂ ಶಿಖಿನಿ ಪ್ರವಿಷ್ಟೇ ಕ ಈಶಿತುಸ್ತೇನ ಕೃತೋಽನುಭಾವಃ ॥

(5 ನೇ ಸರ್ಗ 2 ನೇ ಶ್ಲೋಕ ಶ್ರೀರುಗ್ಮಿಣೀಶವಿಜಯ)

ಏನು ದೊಡ್ಡಸ್ತಿಕೆ ತನ್ನ ಮನೆಗೆ ತಾನು ಅಗ್ನಿ ಹೋದ, ಸಾಯಂಕಾಲ ಆಫೀಸು ಮುಗಿಸಿಕೊಂಡು ಮನೆಗೆ ಯಾರಾದರೂ ಹೋದರೆ ದೊಡ್ಡದಾಗಿ ಹೆಡ್ ಲೈನ್ ಬರುತ್ತಾ ಪೇಪರ್ ಅಲ್ಲಿ, ಇಂಥವರು ರಾಮರಾಯರು ಇವತ್ತು ಸಾಯಂಕಾಲ ತಮ್ಮ ಮನೆ ಸೇರಿದರು ಅಂತ ತಮ್ಮ ತಮ್ಮ ಮನೆಗೆ ತಾವು ಹೋಗುತ್ತಾರೆ ಸಹಜ. ಅಗ್ನಿ ತನ್ನ ಮನೆಗೆ ತಾನು ಹೋಗುವುದು ಏನು ದೊಡ್ಡದು ಅಂತ ವಾದಿರಾಜರು ವರ್ಣನೆ ಮಾಡುತ್ತಾರೆ ಅದರ ಅರ್ಥ ಅಚಿಂತ್ಯಾದ್ಭುತ ಶಕ್ತಿ ಸಂಪನ್ನನಾದಂತಹ ಪರಮಾತ್ಮನಿಗೆ ಇದು ಬಹಳ ಸಣ್ಣದು ಅಂತ. ನಮ್ಮ ಜೀವನದಲ್ಲಿ ಬರುವ ಎಲ್ಲ ತರಹದ ಆಪತ್ತುಗಳನ್ನು ಭಾಗವತ ಹೇಳುತ್ತಲ್ಲ

ವಿಷಾನ್ಮಹಾಗ್ನೇಃ ಪುರುಷಾದದಂಶನಾದಸತ್ಸಭಾಯಾ ವನವಾಸಕೃಚ್ಛ್ರತಃ ।
ಮೃಧೇಮೃಧೇಽನೇಕಮಹಾರಥಾಸ್ತ್ರತೋ ದ್ರೌಣ್ಯಸ್ತ್ರತಶ್ಚಾಸ್ಮ ಹರೇಽಭಿರಕ್ಷಿತಾಃ ॥ (01.8.27 ಭಾಗವತ)

ಅಂತ ಹಾಗೆ ಎಲ್ಲಾ ಆಪತ್ತುಗಳಿಂದ ನಮ್ಮನ್ನು ರಕ್ಷಿಸಿ ಪರಮಾತ್ಮ ಉದ್ಧಾರ ಮಾಡುತ್ತಾನೆ ಎಂಬುದಾಗಿ ಹರಿವಂಶ ತಿಳಿಸುತ್ತಾ ಇದೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

1. ಪುರುಷಸೂಕ್ತ

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ವಿಷ್ಣುಪರ್ವ-17

* * *

ವೈಶಂಪಾಯನ ಉವಾಚ

ದಮಿತೇ ಸರ್ಪರಾಜೇ ತು ಕೃಷ್ಣೇನ ಯಮುನಾಹ್ರದೇ ।

ತಮೇವ ಚೇರತುರ್ದೇಶಂ ಸಹಿತೌ ರಾಮಕೇಶವೌ ।। (13.1 ವಿಷ್ಣುಪರ್ವ)

ಶ್ರೀಕೃಷ್ಣ ಪರಮಾತ್ಮ ಕಾಲಿಯ ಮರ್ದನವನ್ನು ಮಾಡಿದ್ದಾನೆ. ವಿಷ್ಣು ಭಕ್ತನಾದ ಆದರೆ ತನ್ನ ಸರ್ಪ ಜಾತಿಯ ಸ್ವಭಾವಕ್ಕೆ ಅನುಗುಣವಾಗಿ ವಿಷದ ಫೂತ್ಕಾರದಿಂದ ಜಲವನ್ನೆಲ್ಲ ಕಲುಷಿತವನ್ನಾಗಿ ಮಾಡಿದಂತಹ ಕಾಲಿಯನನ್ನು ಮರ್ದನ ಮಾಡಿದ ತಪ್ಪಿಗೆ ಆದರೆ ಅವನಲ್ಲಿರುವ ಭಕ್ತಿಗೆ ಮೆಚ್ಚಿ ಅವನ ತಲೆಯ ಮೇಲೆ ತನ್ನ ಪಾದದ ಚಿಹ್ನಗಳನ್ನು ಮೂಡುವಂತೆ ನರ್ತನವನ್ನು ಮಾಡಿ ಸುರಕ್ಷಿತವಾದ ಸ್ಥಾನಕ್ಕೆ ಅವನನ್ನು ಕೊಟ್ಟುಕಳಿಸಿದ್ದಾನೆ ರಮಣಕ ದ್ವೀಪಕ್ಕೆ.

ಮುಂದೆ ಶ್ರೀಕೃಷ್ಣ ಪರಮಾತ್ಮ, ಬಲರಾಮ ಯಮುನಾ ತೀರದಲ್ಲಿ ವೃಂದಾವನದಲ್ಲಿ ಇದೇ ರೀತಿ ಗೋಪಾಲಕರ ಜೊತೆಗೆ ವಿಹಾರವನ್ನು ಮಾಡುತ್ತಾ ಇದ್ದಾರೆ. ನಾನಾ ತರಹದ ಕ್ರೀಡೆಗಳನ್ನು ಮಾಡುತ್ತಾ ಒಂದು ಬಾರಿ ತಾಲವನದ ಹತ್ತಿರ ಹೋಗಿದ್ದಾರೆ. ತಾಲ ಫಲ ಎಲ್ಲ ತರಹದ ತಾಲ ಫಲಗಳು ನಿಶಿದ್ಧ ಅಲ್ಲ ಕೆಲವುದು ನಿಶಿದ್ಧ, ಕೆಲವು ಸ್ವೀಕಾರ್ಯ ಅಂತಹ ಯೋಗ್ಯವಾದ ತಾಲ ಫಲ ಅವುಗಳನ್ನು ತಿನ್ನಬೇಕು ಅನ್ನುವ ಅಪೇಕ್ಷೆ ಗೋಪಾಲಕರಿಗೆ ಆಗಿದೆ. ಭಾರೀ ಘಮ ಘಮ ವಾಸನೆ ಸುಗಂಧ ಅಷ್ಟು ಶ್ರೇಷ್ಠವಾದ ಸುಗಂಧದಿಂದ ಕೂಡಿದಂತಹ ಆಸ್ವಾದ್ಯವಾದ ಫಲಗಳು ಮಕ್ಕಳಿಗೆ, ಗೋಪಾಲಕರಿಗೆ ಬಾಯಿಯಲ್ಲಿ ನೀರು ಬಿಡುತ್ತಾ ಇದೆ ಆದರೆ ಹತ್ತಿರ ಹೋಗಿ ತಿನ್ನುವ ಧೈರ್ಯ ಇಲ್ಲ ಯಾಕೆಂದರೆ ಅಲ್ಲಿ ಧೇನುಕಾಸುರ ಇದ್ದ. ಹೆಸರು ಧೇನುಕಾ ಆದರೆ ಆಕಳಿನ ರೂಪದಲ್ಲಿ ಇದ್ದವನಲ್ಲ ಅವನು ಕತ್ತೆಯ ರೂಪದಲ್ಲಿ ಇದ್ದವನು ಅಂತಹ ಧೇನುಕಾಸುರ ಅಲ್ಲಿ ಇದ್ದಾನೆ. ಭಾರೀ ಉಗ್ರನಾದಂತಹ ಅಸುರ ಕತ್ತೆಯ ರೂಪಗಳನ್ನೇ ಧಾರಣೆ ಮಾಡಿದ ಅಸುರರ ಅನುಚರರಾದ ಅನೇಕ ಅಸುರರೆಲ್ಲ ಅಲ್ಲಿ ಇದ್ದಾರೆ. ಅವರೆಲ್ಲರೂ ಬಹಳ ಉಗ್ರರು ಯಾರನ್ನೂ ಹತ್ತಿರ ಬರುವುದಕ್ಕೆ ಬಿಡುವುದಿಲ್ಲ. ಸರಿ, ಗೋಪಾಲಕರ ಇಚ್ಛೆಯನ್ನು ಪೂರ್ಣ ಮಾಡೋಣ ಈ ನಿಮಿತ್ತದಿಂದ ಅವನ ಸಂಹಾರವನ್ನೂ ಮಾಡಿ ಭೂಭಾರಹರಣವನ್ನೂ ಮಾಡಿದ ಹಾಗೆ ಆಯಿತು ಅಂತ ಶ್ರೀಕೃಷ್ಣ ಪರಮಾತ್ಮ, ಬಲರಾಮ

ಇಬ್ಬರೂ ಬರುತ್ತಾರೆ. ಯಾವಾಗ ಮನುಷ್ಯರ ವಾಸನೆ ಬಂದಿದೆ ಓಡಿ ಬಂದಿದ್ದಾನೆ, ಬಲರಾಮ ದೇವರ ಮೇಲೆ ಆಕ್ರಮಣವನ್ನು ಮಾಡಿದ್ದಾನೆ, ಬಲರಾಮ ದೇವರು ಅವನ ಹಿಂದಿನ ಎರಡೂ ಕಾಲುಗಳನ್ನು ಹಿಡಿದು ಗರಗರ ಅಂತ ತಿರುಗಿಸಿ ತಾಲ ವನದ ಮೇಲೆ ಎಸೆದಿದ್ದಾರೆ ಒಂದೇ ಕೆಲಸ **'ಏಕಕ್ರಿಯಾ ದ್ವರ್ಥಕರೀ ಬಭೂವ'** ಅಂತ. ಹಣ್ಣುಗಳನ್ನು ಕೆಳಗೆ ಬೀಳಿಸುವುದಕ್ಕೆ ಬೇರೆ ಕಲ್ಲು ಎಸೆಯುವುದು ಏಕೆ ಮತ್ತೆ, ಇವನನ್ನೇ ಮೇಲೆ ಎಸೆದರಾಯಿತು, ಅವನು ಕೆಳಗೆ ಬಿದ್ದು ಸಾಯುತ್ತಾನೆ, ಅವನ ಪೆಟ್ಟಿಗೆ ಗಿಡದ ಮೇಲಿನ ಹಣ್ಣುಗಳು ಕೆಳಗೆ ಉದುರುತ್ತವೆ, ಎರಡೂ ಕೆಲಸ ಆಯಿತು ಅಂತ. ಅಂತಹ ಉಗ್ರವಾದ ರೂಪವನ್ನು ತೆಗೆದುಕೊಂಡಂತಹ ಧೇನುಕಾಸುರನನ್ನು ಮೇಲೆ ಜೋರಾಗಿ ಎಸೆದಿದ್ದಾರೆ, ಒಂದಕ್ಕೊಂದು ತಾಗಿ ಎಲ್ಲ ಗಿಡಗಳು ಕೆಳಗೆ ಬಿದ್ದಿವೆ, ಯಥೇಷ್ಟವಾಗಿ ಹಣ್ಣುಗಳನ್ನು ತಿಂದಿದ್ದಾರೆ. ಉಳಿದ ಎಲ್ಲರ ಅಸುರರನ್ನು ಸಂಹಾರ ಮಾಡಿದ್ದಾರೆ, ಇವರೆಲ್ಲರೂ ಕೂಡ ಗಣಪತಿಯನ್ನು ಕುರಿತು ತಪಸ್ಸು ಮಾಡಿ ಗಣಪತಿಯ ವರದಿಂದ ಅವಧ್ಯರಾದಂಥವರು.

ಹಾಗೆ ಒಂದು ಬ್ರಹ್ಮವೈವರ್ತ ಪುರಾಣದ ಕಥೆಯ ಪ್ರಕಾರ ಈ ಕೇಶಿ ಎಂಬ ಅಸುರ, ಪ್ರಲಂಬಾಸುರ, ಬಕಾಸುರ ಈ ಮೂವರು ಕೂಡ ರುದ್ರ ದೇವರ ಶಾಪದಿಂದ ಅಸುರರಾಗಿ ಹುಟ್ಟಿದವರು, ಇವರೆಲ್ಲ ಗಂಧರ್ವ ಪುತ್ರರು ಅಂತನ್ನುವ ವಿಚಾರವನ್ನು ತಿಳಿಸುತ್ತದೆ. ಪಾರ್ವತಿ ನಿತ್ಯದಲ್ಲಿ ಶ್ರೀಕೃಷ್ಣ ಪರಮಾತ್ಮನ ಪೂಜೆಯನ್ನು ಕಮಲ ಪುಷ್ಪಗಳಿಂದ ಮಾಡುತ್ತಾ ಇದ್ದಳು ಅಂತ ಬ್ರಹ್ಮವೈವರ್ತ ಪುರಾಣ ಹೇಳುತ್ತದೆ. ಈ ಮೂವರು ಪಾರ್ವತಿಯ ನಿತ್ಯದ ಪೂಜೆಗಾಗಿ ಸರೋವರದಲ್ಲಿ ಇರುವ ಕಮಲ ಪುಷ್ಪಗಳನ್ನು ಕೃಷ್ಣನ ಪೂಜೆಗೆ ಅಂತೇನೆ ಪಾರ್ವತಿಗೆ ಹೇಳದೆ ಕೇಳದೆ ಚೌರ್ಯದಿಂದ ತೆಗೆದುಕೊಂಡು ಬರುತ್ತಾರೆ. ಚೌರ್ಯದ ಅಪರಾಧಕ್ಕೆ ನಿಮಗೆ ಅಸುರ ಜನ್ಮ ಬರುತ್ತದೆ ಹಾಗೂ ಪಾರ್ವತಿಯ ಆಜ್ಞೆ ಇಲ್ಲದೇ ಆ ಕಮಲ ಪುಷ್ಪಗಳನ್ನು ತೆಗೆದುಕೊಂಡು ಹೊರಟಿದ್ದಕ್ಕೆ ಮುಂದೆ ನಿಮಗೆ ಕೃಷ್ಣನಿಂದಲೇ ಸಂಹಾರ ಆಗುತ್ತದೆ ಅಂತ ರುದ್ರ ದೇವರು ಶಾಪ ಕೊಡುತ್ತಾರೆ ಅಂತನ್ನುವ ಮಾತನ್ನು ಬ್ರಹ್ಮವೈವರ್ತ ಪುರಾಣ ತಿಳಿಸುತ್ತದೆ. ಇರಲಿ, ಪ್ರಕೃತದಲ್ಲಿ ಈ ಧೇನುಕಾಸುರ ಗಣಪತಿಯ ವಿಶೇಷವಾದಂತಹ ಪ್ರೀತಿಯನ್ನು ಸಂಪಾದನೆ ಮಾಡಿ, ತಪಸ್ಸು ಮಾಡಿ ವರವನ್ನು ಪಡೆದುಕೊಂಡಿದ್ದ ಅಂತಹ ಅವಧ್ಯನಾದ ಅಸುರ ಎಲ್ಲರಿಗೆ ಪೀಡೆಯನ್ನು ಕೊಡುತ್ತಾನೆ ಮುಂದೂ ಹೀಗೆ ಪೀಡೆಯನ್ನು ಕೊಡುತ್ತಾ ಇರುತ್ತಾನೆ ಅನ್ನುವುದಕ್ಕೆ ಸಂಪೂರ್ಣ ಸಪರಿವಾರವಾಗಿ ಅವನನ್ನು ನಾಶ ಮಾಡಿಸಿದ್ದಾನೆ ಬಲರಾಮನ ದ್ವಾರಾ ಶ್ರೀಕೃಷ್ಣ ಪರಮಾತ್ಮ.

ಮುಂದೆ ಪ್ರಲಂಬಾಸುರ ಅಂತ ಆ ಪ್ರಲಂಬಾಸುರ ಅವನು ಕತ್ತೆ, ಎತ್ತು, ಪಕ್ಷಿ ಹೀಗೆ ಬೇರೆ ವೇಷದಲ್ಲಿ ಬರುವುದಿಲ್ಲ ಗೋಪ ವೇಷದಲ್ಲಿಯೇ ಬರುತ್ತಾನೆ. ಗೋಪಾಲಕರ ವೇಷದಲ್ಲಿ ಸೇರಿಕೊಂಡು ತಾನೂ ಒಬ್ಬ ಗೋಪಾಲಕನಂತೆ ನಾಟಕವನ್ನು ಮಾಡುತ್ತಾನೆ. ಒಂದು ಬಾರಿ ಶ್ರೀಕೃಷ್ಣ, ಬಲರಾಮ ಇಬ್ಬರು ನಾಯಕರು ಅಂತ ಎರಡು ಗುಂಪುಗಳನ್ನು ಮಾಡಿಕೊಳ್ಳುತ್ತಾರೆ ಆ ಗುಂಪುಗಳನ್ನು ಮಾಡಿಕೊಂಡು ಕ್ರೀಡೆಯನ್ನು ಆಡುತ್ತಾರೆ. ಓಡಬೇಕು ಓಡಿ ಯಾರು ಗುರಿಯನ್ನು ಬೇಗ ಮುಟ್ಟುತ್ತಾರೋ ಅವರು ಗೆದ್ದ ಹಾಗೆ ಆ ತರಹದ ಒಂದು ಕ್ರೀಡೆಯನ್ನ ಆಡುತ್ತಾ ಕೃಷ್ಣನ ಪಕ್ಷದವರು ಭದ್ರಸೇನ ಹಾಗೂ ಗೋಪರ ವೇಷದಲ್ಲಿ ಬಂದ ಪ್ರಲಂಬ ಇಬ್ಬರು ಸೋಲುತ್ತಾರೆ ಉಳಿದವರೆಲ್ಲರೂ ಗೆಲ್ಲುತ್ತಾರೆ, ಬಲರಾಮನ ಪಕ್ಷದವರು ವೃಷಭ ಅನ್ನುವವನು ಮಾತ್ರ ಗೆದ್ದು ಉಳಿದವರೆಲ್ಲರೂ ಸೋಲುತ್ತಾರೆ ಅದರಲ್ಲಿ ಒಬ್ಬ ಶ್ರೀದಾಮ. ಹೀಗಿರುವಾಗ ಶ್ರೀಕೃಷ್ಣ ಪರಮಾತ್ಮನ ಆ ವ್ಯವಸ್ಥೆಯಂತೆ ಯಾರು ಸೋಲುತ್ತಾರೋ ಅವರು ಗೆದ್ದವರನ್ನು ಬೆನ್ನಮೇಲೆ ಹೊತ್ತುಕೊಂಡು ಒಂದು ವೃಕ್ಷದವರೆಗೆ ಹೋಗಬೇಕು ಹೋಗಿ ತಿರುಗಿ ಬರಬೇಕು ಅಂತ. ಅದರ ಪ್ರಕಾರ ಕೃಷ್ಣನ ಪಕ್ಷದಲ್ಲಿ ಇರುವಂತಹ ಸೋತವರಲ್ಲಿ ಒಬ್ಬನಾದ ಭದ್ರಸೇನ ಬಲರಾಮನ ಪಕ್ಷದಲ್ಲಿರುವ ಗೆದ್ದ ವೃಷಭ ಅನ್ನುವವನನ್ನು ಹೊರುತ್ತಾನೆ ಹಾಗೂ ಸೋತವರಲ್ಲಿ ಇನ್ನೊಬ್ಬನಾದ

ಗೋಪರ ವೇಷದಲ್ಲಿ ಬಂದ ಪ್ರಲಂಬ ಸೋತ ಬಲರಾಮನನ್ನು ಹೊರುತ್ತಾನೆ, ಅದೇ ರೀತಿ ಬಲರಾಮನ ಪಕ್ಷದಲ್ಲಿ ಇರುವಂತಹ ಸೋತವ ಶ್ರೀದಾಮ ಅವನು ಗೆದ್ದ ಕೃಷ್ಣನನ್ನು ಹೊತ್ತ, ಇನ್ನುಳಿದವರೆಲ್ಲ ಬಲರಾಮನ ಪಕ್ಷದವರೇ ಕೃಷ್ಣನ ಪಕ್ಷದವರನ್ನು ಹೊತ್ತದ್ದು ಯಾಕೆಂದರೆ ಉಳಿದವರೆಲ್ಲ ಕೃಷ್ಣನ ಪಕ್ಷದವರೇ ಗೆದ್ದದ್ದು. ಉಳಿದವರೆಲ್ಲ ತಮ್ಮ ತಮ್ಮ ಗುರಿಯನ್ನು ಮುಟ್ಟುತ್ತಾರೆ ತಿರುಗಿ ಬರುತ್ತಾರೆ ಆದರೆ ಪ್ರಲಂಬಾಸುರ ಮಾತ್ರ ಅವನು ಬಲರಾಮ ದೇವರನ್ನು ಕರೆದುಕೊಂಡು ಹೊರಟವನು ಹಾಗೆ ಹೋಗುತ್ತ ಹೋಗುತ್ತ ಗಗನ ಆಕಾಶ ಮಾರ್ಗದಲ್ಲಿ ಹಾರುತ್ತ ಇದ್ದಾನೆ ತನ್ನ ಉಗ್ರವಾದಂತಹ ರಾಕ್ಷಸ ರೂಪವನ್ನು ತೆಗೆದುಕೊಂಡು ಬಲರಾಮನನ್ನು ಸಂಹಾರ ಮಾಡಬೇಕು ಅಂತ. ಎಷ್ಟು ವಿಲಂಬವಾದರೂ ಇನ್ನೂ ಪ್ರಲಂಬ ಬರುತ್ತ ಇಲ್ಲ ಯಾಕೆ ಅಂತ ನೋಡಿದರೆ ಅವನ ಮನಸ್ಸಿನಲ್ಲಿ ಇರುವಂತಹ ಈ ದುರ್ವಿಚಾರ ಗೊತ್ತಾಗಿದೆ, ಬಲರಾಮ ದೇವರು ಗಾಬರಿಯಾಗಿ ಕೃಷ್ಣ ಕೃಷ್ಣ ಅಂತಿದ್ದಾರೆ. ಯಾಕೆ ಹಾಗೆ ಒದರುತ್ತಾ ಇದ್ದೀ ಏನಾಗಿದೆ ನಿನಗೆ ಯಾರು ಅಂತ ತಿಳಿದುಕೊಂಡಿದ್ದಿಯಾ ನಿನ್ನನ್ನು ನೀನು, ಇಡೀ ಬ್ರಹ್ಮಾಂಡವನ್ನು ತಲೆಯ ಮೇಲೆ ಸಾಸಿವೆ ಕಾಳಿನಂತೆ ಧಾರಣೆ ಮಾಡುತ್ತೀಯಾ, ಇಂದ್ರಾದಿ ದೇವತೆಗಳು ನಿನಗೆ ಸ್ತುತಿಯನ್ನು ಮಾಡುತ್ತಾರೆ ಅವರಿಂದ ಪೂಜ್ಯನಾದಂತಹ ವ್ಯಕ್ತಿ, ಮಹಾಬಲ ಮಹಾಪರಾಕ್ರಮ ಸಾಕ್ಷಾತ್ ಸರ್ವೋತ್ತಮನಾದ ಪರಮಾತ್ಮನ ನನ್ನ ಇನ್ನೊಂದು ಅಂಶ ಶುಕ್ಲಕೇಶದ ಆವೇಶ ನಿನ್ನಲ್ಲಿದೆ, ಸ್ವಯಂ ಶೇಷಾವತಾರ, ಒಬ್ಬ ಸಾಮಾನ್ಯ ಅಸುರನಿಗೆ ನೀನು ಇಷ್ಟು ಹೆದರಬೇಕೇ ಅಂತ ಅವನ ರೂಪದ ಸ್ಮರಣೆಯನ್ನು ಮಾಡಿ ಕೊಟ್ಟದ್ದೇ ತಡ, ಆ ಪ್ರಲಂಬಾಸುರನನ್ನು ಸಂಹಾರ ಮಾಡಿದ್ದಾರೆ ಬಲರಾಮ ದೇವರು.

ಆದಾನತೋ ವ್ಯಕ್ತಿತಮಾಯಾಂತ್ಯುರೂಣಾಂ ॥ (22.294 ಮಭಾತಾನಿರ್ಣಯ)

ಅಂತ ಶ್ರೀಮದಾಚಾರ್ಯರು ತಾತ್ಪರ್ಯ ನಿರ್ಣಯದಲ್ಲಿ ಮುಂದೆ ನಿರ್ಣಯ ಕೊಡುತ್ತಾರೆ. ತಮ್ಮದೇ ಆದಂತಹ ಬಲ ಇದ್ದರೂ ಕೂಡ ವಿಶೇಷವಾಗಿ ತಮ್ಮ ಮೂಲರೂಪದ ಸ್ಮರಣೆಯನ್ನು ಮಾಡಿ ಆ ಬಲದ ಅಭಿವ್ಯಕ್ತವನ್ನು ಮಡಿಕೊಳ್ಳಬೇಕು ಅನ್ನುವ ಅಪೇಕ್ಷೆಯಾದಾಗ ಅಭಿವ್ಯಕ್ತವಾಗುತ್ತದೆ ಆ ರೀತಿಯ ಆ ಬಲದ ಒಂದು ವಿಶೇಷವಾದ ಆದಾನವನ್ನು ಮಾಡಿದಾಗ ಪ್ರಲಂಬಾಸುರನನ್ನು ಸುಲಭವಾಗಿ ಸಂಹಾರ ಮಾಡಿದ್ದಾರೆ. ಈ ರೀತಿ ಆ ಪ್ರಲಂಬನ ಸಂಹಾರವನ್ನು ಮಾಡುತ್ತಾರೆ. ಶ್ರೀಮದ್ಭಾಗವತದ ಪ್ರಕಾರ ಶ್ರೀದಾಮನನ್ನೇ ಕೃಷ್ಣ ಹೊತ್ತ ಕೃಷ್ಣನೇ ಸೋತ, ಶ್ರೀದಾಮನೇ ಗೆದ್ದ ಶ್ರೀದಾಮನನ್ನೇ ಕೃಷ್ಣ ಹೊತ್ತ ಅನ್ನುವ ರೀತಿಯಲ್ಲಿ ಶ್ರೀಮದ್ಭಾಗವತದಲ್ಲಿ ವಾಕ್ಯ ಇದೆ. ಶ್ರೀಮದಾಚಾರ್ಯರು ಅಲ್ಲಿ ನಿರ್ಣಯ ಕೊಡುತ್ತಾರೆ ಶ್ರೀದಾಮ ಗೆದ್ದದ್ದಲ್ಲ ಕೃಷ್ಣನೇ ಗೆದ್ದದ್ದು, ಕೃಷ್ಣನನ್ನೇ ಶ್ರೀದಾಮ ಹೊತ್ತದ್ದು ಯಾಕೆ ಅಂದರೆ ಹರಿವಂಶದಲ್ಲಿ ಹಾಗೆ ಇದೆ ನೋಡಿಕೊಳ್ಳಿ ಅನ್ನುತ್ತಾರೆ ಶ್ರೀಮದಾಚಾರ್ಯರು ಭಾಗವತ ತಾತ್ಪರ್ಯದಲ್ಲಿ.

ಶ್ರೀದಾಮಮಜಯತ್ ಕೃಷ್ಣಃ ಪ್ರಲಮ್ಬಂ ರೋಹಿಣೀಸುತಃ ।

ಗೋಪಾಲೈಃ ಕೃಷ್ಣಪಕ್ಷೀಯೈರ್ಗೋಪಾಲಾಸ್ತ್ವಪರೇ ಜಿತಾಃ ॥ (14.21 ವಿಷ್ಣುಪರ್ವ)

ಅಂತ ಶ್ರೀಮದಾಚಾರ್ಯರು ಯಾವ ನಿರ್ಣಯವನ್ನು ಭಾಗವತ ತಾತ್ಪರ್ಯದಲ್ಲಿ ಮಾಡುತ್ತಾರೋ, ಸ್ಪಷ್ಟವಾಗಿ ಹರಿವಂಶದಲ್ಲಿ ಆ ವಚನವು ನಮಗೆ ಉಪಲಬ್ಧವಾಗುತ್ತದೆ ಕೃಷ್ಣಪಕ್ಷೀಯರೇ ಗೆದ್ದದ್ದು ಅಪವಾದಕ್ಕೆ ಬಲರಾಮ ದೇವರು ಒಬ್ಬರು ಗೆದ್ದದ್ದು ಅದಕ್ಕಾಗಿ ಪ್ರಲಂಬ ಅವನನ್ನು ಹೊತ್ತ ಅಂತ. ಆ ಮಾತನ್ನು ವಿಷ್ಣು ಪುರಾಣದಲ್ಲಿಯೂ, ಹರಿವಂಶ ಪುರಾಣದಲ್ಲಿಯೂ ನಾವು ಸ್ಪಷ್ಟವಾಗಿ ಕಾಣುತ್ತೇವೆ. ಈ ರೀತಿ ಶ್ರೀಕೃಷ್ಣ ಪರಮಾತ್ಮ ಆ ಪ್ರಲಂಬಾಸುರನನ್ನೂ

ಕೂಡ ಸಂಹಾರ ಮಾಡಿಸಿ ಬಲರಾಮ ದೇವರಿಗೆ ವಿಶೇಷವಾದಂತಹ ಕೀರ್ತಿಯನ್ನು ಕೊಟ್ಟಿದ್ದಾನೆ. ಎಲ್ಲ ದೇವತೆಗಳು ಆ ಸಂದರ್ಭದಲ್ಲಿ ಬಲದೇವ ಬಲದೇವ ಅಂತ ನಾಮಕರಣ ಮಾಡಿದ್ದಾರೆ,

ಬಲೇದೇವೇತಿ ನಾಮಾಸ್ಯ ದೇವೈರುಕ್ತಂ ದಿವಿಷ್ಠಿತೈಃ ।
ಬಲಂ ತು ಬಲದೇವಸ್ಯ ತದಾ ಭುವಿ ಜನಾ ವಿದುಃ ॥ (14.58 ವಿಷ್ಣುಪರ್ವ)

ಅನೇಕ ನಾಮಗಳು ಒಬ್ಬೊಬ್ಬರಿಗೆ ಪ್ರಸಿದ್ಧವಾಗಿರುತ್ತವೆ. ಆ ಇತಿಹಾಸ ಪುರಾಣಗಳನ್ನು ನಾವು ಅವಲೋಕನ ಮಾಡಿದಾಗ ನಮಗೆ ಅರ್ಥವಾಗುತ್ತದೆ ಯಾವ ಯಾವ ಸಂದರ್ಭದಲ್ಲಿ ಯಾವ ನಾಮಗಳು ವಿಶೇಷವಾಗಿ ಪ್ರಸಿದ್ಧಿಗೆ ಬಂದಿವೆ ಅಂತ. ಹಾಗೆ ಇವರಿಗೆ ಬಲದೇವ ಅಂತನ್ನುವ ಹೆಸರು ಈ ಪ್ರಲಂಬಾಸುರನ ಸಂಹಾರ ಮಾಡಿದಾಗ ಪ್ರಸಿದ್ಧಿಗೆ ಬಂತು ದೇವತೆಗಳೆಲ್ಲ ಆ ಹೆಸರಿನಿಂದ ಸ್ತುತಿಯನ್ನು ಮಾಡಿದ್ದಾರೆ ಅಂತನ್ನುವ ಒಂದು ಸಂಗತಿಯನ್ನು ಹರಿವಂಶ ನಮಗೆ ತಿಳಿಸಿಕೊಡುತ್ತದೆ. ಶ್ರೀ ಕೃಷ್ಣ ಬಲರಾಮರು ಗೋಕುಲದಲ್ಲಿ ಪ್ರವೇಶ ಮಾಡಿದ್ದಾರೆ. ಎಲ್ಲ ವನ ವಿಹಾರವನ್ನು ಮಾಡುತ್ತಾ ಏನೋ ಭಾರೀ ಉತ್ಸವದ ಸಿದ್ಧತೆಯನ್ನು ಮಾಡುತ್ತಾ ಇದ್ದಾರೆ ಎಲ್ಲರೂ ಕೂಡ ಏನು ಅಂತ ಕೇಳಿದಾಗ ಗೊತ್ತಾಯಿತು ಇಂದ್ರ ದೇವರ ಉತ್ಸವ.

ಪ್ರಾಪ್ತಂ ಶಕ್ರಮಹಂ ವೀರೌ ಗೋಪಾಂಶ್ಚೋತ್ಸವಲಾಲಸಾನ್ ॥ (15.2 ವಿಷ್ಣುಪರ್ವ)

ಬಹಳ ಶ್ರದ್ಧೆಯಿಂದ, ಬಹಳ ಭಕ್ತಿಯಿಂದ ಎಲ್ಲ ಗೋಪಾಲಕರು ಉತ್ಸವದ ಸಿದ್ಧತೆಯನ್ನು ಮಾಡುತ್ತಾ ಇದ್ದಾರೆ, ನಾನಾ ವಿಧವಾದ ಭಕ್ಷ್ಯ ಭೋಜ್ಯಗಳನ್ನೆಲ್ಲ ಸಿದ್ಧಪಡಿಸುತ್ತಾ ಇದ್ದಾರೆ ಯಾಕೆ ಅಂತ ಕೃಷ್ಣ ಕೇಳಿದ ಸರ್ವಜ್ಞನಾದ ಪರಮಾತ್ಮ ಗೊತ್ತಿಲ್ಲದವರಂತೆ ಗೋಪಾಲಕರಿಗೆ ಕೇಳುತ್ತಾನೆ. ಆಗ ಗೋಪಾಲಕರು ಹೇಳಿದರು ನಾವೆಲ್ಲ ಬದುಕುವುದು ಹೇಗೆ ಈ ಗೋವುಗಳಿಂದಲೇ, ನಾವು ಬದುಕುವುದು ಅವುಗಳು ಹಾಲು ಕೊಟ್ಟರೆ ಆ ಹಾಲನ್ನೆ ನಾವು ಮಾರಾಟ ಮಾಡಿ ಆದರಿಂದಲೇ ನಾವು ಜೀವನವನ್ನು ಮಾಡಬೇಕು. ಗೋವುಗಳೇ ನಮ್ಮ ಆಧಾರ ಗೋವುಗಳು ಬದುಕಬೇಕು ಹುಲ್ಲಿನಿಂದ, ಹುಲ್ಲು ಬೆಳೆಯಬೇಕು ಮಳೆಯಾಗಬೇಕು, ಮಳೆಯಾಗಬೇಕು ಅಂದರೆ ಇಂದ್ರನ ಅನುಗ್ರಹ ಬೇಕು. ಇಂದ್ರ ದೇವರ ಅನುಗ್ರಹದಿಂದ ಮಳೆ, ಮಳೆಯಿಂದ ಬೆಳೆ ಹುಲ್ಲು ಗೋಘ್ರಾಸ ಅದರಿಂದ ಗೋವುಗಳು ಸುಖವಾಗಿರುತ್ತದೆ ಹೀಗಾಗಿ ಆ ಇಂದ್ರ ದೇವರ ಪೂಜೆಯನ್ನು ನಾವು ಮಾಡಬೇಕಾದದ್ದು ಅತ್ಯಂತ ಅಗತ್ಯ ಪ್ರತಿವರ್ಷವೂ ಮಾಡುತ್ತೇವೆ ಅಂತ ಹಿರಿಯರಾದ ಅತ್ಯಂತ ವೃದ್ಧರಾದಂತಹ ಗೋಪಾಲಕರು **'ತತ್ರವೃದ್ಧತಮಸ್ತ್ವೇಕೋ'**[1] ಇದನ್ನು ತಿಳಿಸಿದ್ದಾರೆ. ಒಬ್ಬ ಹಿರಿಯನಾದ ವ್ಯಕ್ತಿ ಹೇಳಿದ್ದಾನೆ ಯಾವ ತರಹದ ಸಂಪ್ರದಾಯ ಮನೆಯಲ್ಲಿದೆ, ಯಾವ ತರಹದ ಉತ್ಸವಗಳು, ಏನು ಪೂಜಾ ವಿಧಾನಗಳು, ಹೇಗೆ ನಡೆಯುತ್ತದೆ. ಈ ಸಂಪ್ರದಾಯಗಳನ್ನೆಲ್ಲ ತಿಳಿದುಕೊಳ್ಳುವುದಕ್ಕೆ ವೃದ್ಧರ ಜೊತೆಗೆ ವಿಶೇಷವಾಗಿ ಮಾತಾಡುತ್ತ ಇರಬೇಕು ಅವರಿಂದ ಕೇಳಿ ತಿಳಿದುಕೊಳ್ಳಬೇಕು ಅಂತ ಶಾಸ್ತ್ರ ಹೇಳುತ್ತದೆ. ಶ್ರೀರಾಮ ದೇವರೂ ಕೂಡ ವೃದ್ಧರ ಜೊತೆಗೆ ಮಾತನಾಡುತ್ತಾ ಇದ್ದರು **'ಕಥಯನ್ನಾಸ ವೈ ನಿತ್ಯಂ'** ಅಂತ ವಾಲ್ಮೀಕಿ ರಾಮಾಯಣ ಹೇಳುತ್ತದೆ. **'ಶೀಲವೃದ್ಧೈಸ್ತಪೋ ವೃದ್ಧೈಃ'** ಶೀಲವೃದ್ಧರು, ತಪೋವೃದ್ಧರು, ವಯೋವೃದ್ಧರ ಅವರ ಜೊತೆಗೆ ಶ್ರೀರಾಮಚಂದ್ರ ವಿಶೇಷವಾಗಿ ಮಾತನಾಡಿಸುತ್ತಾ ಇದ್ದರಂತೆ ತಾನು ಸರ್ವಜ್ಞನಾಗಿದ್ದರೂ ಯುವಕರಿಗೆ ಒಂದು ಮಾರ್ಗದರ್ಶನ, ವೃದ್ಧರ ಜೊತೆಗೆ ಮಾತನಾಡುತ್ತಾ ಅವರ ಉಪದೇಶಗಳನ್ನು ಕೇಳುತ್ತಾ ಪದ್ಧತಿಗಳನ್ನು ತಿಳಿದುಕೊಳ್ಳಿ ಅಂತ.

---

1. 15.4 ವಿಷ್ಣುಪರ್ವ

ಆ ದೃಷ್ಟಿಯಲ್ಲಿ ಪರಮಾತ್ಮ ಎಲ್ಲವನ್ನು ಕೇಳಿ ತಿಳಿದುಕೊಂಡಿದ್ದಾನೆ. ಕೇಳಿ ತಿಳಿದುಕೊಂಡ ಮೇಲೆ ಪರಮಾತ್ಮ ಅನ್ನುತ್ತಾನೆ ನೀವೆಲ್ಲಾ ಹೇಳುತ್ತಾ ಇರುವುದು ಸರಿ ಅನೇಕ ಸತ್ಸಂಪ್ರದಾಯಗಳನ್ನೆಲ್ಲ ಹೇಳುತ್ತಾ ಇದ್ದೀರಿ ಅವುಗಳನ್ನೆಲ್ಲ ಪರಿಪಾಲನೆ ಮಾಡಬೇಕು ನೀವು ಆದರೆ ಈ ಸಂದರ್ಭದಲ್ಲಿ ಇಂದ್ರನ ಉತ್ಸವದ ಬಗ್ಗೆ ನೀವು ಹೇಳುತ್ತಾ ಇದ್ದೀರಲ್ಲ ಇದು ಯಾಕೋ ನನಗೆ ಅಷ್ಟು ಸರಿ ಅನ್ನಿಸುತ್ತಾ ಇಲ್ಲ ಅಂತ. ಅವರು ಮಾಡುತ್ತಾ ಇರುವ ಇಂದ್ರ ದೇವರ ಪೂಜೆ ಇದು ಯೋಗ್ಯವೇ ಇಂದ್ರ ದೇವರ ಪೂಜೆಯನ್ನು ಮಾಡಲೇಬೇಕು ಆದರೆ ಇಂದ್ರ ದೇವರೇ ಸ್ವತಂತ್ರ ಅಂತ ತಿಳಿದು ಸರ್ವೋತ್ತಮನಾದ ಪರಮಾತ್ಮನನ್ನು ಮರೆತು, ಇವನೇ ಮಳೆ ಕೊಡುವುದು ನಿಜವಾಗಿ ಅಂತ ತಿಳಿದುಬಿಟ್ಟರೆ ಅದು ತಪ್ಪು. ಇಂದ್ರ ದೇವರಿಗೂ ಪ್ರೇರಕನಾಗಿ, ವಾಯು ದೇವರಿಗೂ ಪ್ರೇರಕನಾಗಿ ಮುಖ್ಯವಾಗಿ ಇಂದ್ರ ಶಬ್ದವಾಚ್ಯನಾದ ಪರಮಾತ್ಮನೇ ನಮಗೆ ಮಳೆ ಕೊಡುವುದು ಆ ತಥ್ಯವನ್ನು ಇವರಿಗೆ ತಿಳಿಸಬೇಕಾಗಿದೆ, ಇಂದ್ರ ದೇವರಿಗೆ ಬಂದ ಅಹಂಕಾವನ್ನು ಪರಿಹಾರ ಮಾಡಬೇಕಾಗಿದೆ ಅದಕ್ಕೋಸ್ಕರ ಪರಮಾತ್ಮ ಈ ರೀತಿ ಒಂದು ನಾಟಕವನ್ನು ಮಾಡುತ್ತ ಹೇಳುತ್ತಾನೆ. ಗೋವುಗಳು ನಮ್ಮ ವೃತ್ತಿ, ನಾವು ಗೋಪಾಲಕರು ಹಾಗಾದರೆ ಆ ಎಲ್ಲ ಗೋವುಗಳ ರಕ್ಷಣೆಯಾಗುವುದು ಮಳೆಯಿಂದ ಅಂತ ನೀವು ಹೇಳಿದಿರಲ್ಲ, ಮಳೆ ಆಗಬೇಕು ಗೋಘ್ರಾಸ ಬೆಳೆಯಬೇಕು ಆ ಮಳೆ ಆಗುವುದಕ್ಕೆ ಕಾರಣ ಈ ಪರ್ವತ ಗೋವರ್ಧನ ಪರ್ವತ. ಸಮೃದ್ಧವಾದಂತಹ ವನದಿಂದ ಕೂಡಿದ ಈ ಗೋವರ್ಧನ ಪರ್ವತ ಅದು ಇರುವುದಕ್ಕೋಸ್ಕರ ಮೇಘಗಳ ನಿರ್ಮಾಣವಾಗುತ್ತದೆ ಅದರಿಂದ ಮಳೆಯಾಗುತ್ತದೆ, ಅದರ ಪೂಜೆಯನ್ನು ನಾವು ಮಾಡೋಣ. ಇಂದ್ರನ ಪೂಜೆ ಬೇಡ ಅಂತ ನಾನು ಹೇಳುವುದಿಲ್ಲ ಮಾಡುವವರು ಬೇರೆ ಇದ್ದಾರೆ ದೇವತೆಗಳು ಇಂದ್ರನ ಪೂಜೆಯನ್ನು ಮಾಡಲಿ ಅವನು ದೇವೇಂದ್ರ ಹೀಗಾಗಿ ದೇವತೆಗಳೆಲ್ಲ ಅವನ ಪೂಜೆಯನ್ನು ಮಾಡಲಿ. ನಾವೆಲ್ಲ ಗೋಪಾಲಕರು ಗೋವುಗಳ ಪೂಜೆಯನ್ನು ಮಾಡೋಣ, ಆ ಗೋವುಗಳ ರಕ್ಷಣೆಗೆ ಬೇಕಾದಂತಹ ಘ್ರಾಸವನ್ನು ನೀಡುವ ವನಕ್ಕೆ ರಾಜನಂತೆ ಇರುವ ಈ ಗೋವರ್ಧನದ ಪೂಜೆಯನ್ನು ಮಾಡೋಣ ಆ ಗೋವರ್ಧನ ದೇವತೆ ನಮಗೆಲ್ಲ ಅನುಗ್ರಹವನ್ನು ಮಾಡುತ್ತಾನೆ. **'ಮನ್ತ್ರಯಜ್ಞಪರಾ ವಿಪ್ರಾಃ'**[1] ಮಂತ್ರ ವೇದಮಂತ್ರಾದಿಗಳ ಪಠನ ಪುರಸ್ಸರವಾಗಿ ಯಜ್ಞ ಯಾಗಾದಿಗಳನ್ನು ಬ್ರಾಹ್ಮಣರು ಮಾಡಲಿ **'ಸೀತಾಯಜ್ಞಾಶ್ಚ ಕರ್ಷುಕಾಃ'** ರೈತರು ತಮ್ಮ ನೇಗಿಲನಿಂದಲೇ ಪೂಜೆಯನ್ನು ಮಾಡಲಿ. ನಾವೆಲ್ಲ ಗೋಪಾಲಕರು

ಗಿರಿಯಜ್ಞಾಸ್ತಥಾ ಗೋಪಾ ಇಜ್ಯೋಽಸ್ಮಾಭಿರ್ಗಿರಿರ್ವನೇ ॥ (16.10 ವಿಷ್ಣುಪರ್ವ)

ಆದ್ದರಿಂದ ನಾವು ಪರ್ವತವನ್ನು ಸಂತೋಷ ಪಡಿಸೋಣ, ಪರ್ವತದ ದೇವತೆಯನ್ನು ಸಂತೋಷ ಪಡಿಸೋಣ ಅದರಿಂದಲೇ ನಮಗೆಲ್ಲ ಕ್ಷೇಮವಾಗುತ್ತದೆ ಎಂಬುದಾಗಿ ಪರಮಾತ್ಮ ಹೇಳಿದ, ಸರಿ ಅಂತ ಅವರೆಲ್ಲ ಒಪ್ಪಿಕೊಂಡಿದ್ದಾರೆ.

ಶಿವಾಯ ಗಾವಃ ಪೂಜ್ಯನ್ತಾಂ ಗಿರಿಯಜ್ಞಃ ಪ್ರವರ್ತ್ಯತಾಮ್ । (16.44 ವಿಷ್ಣುಪರ್ವ)

ಅಂತ ಪರಮಾತ್ಮ ಆದೇಶ ಮಾಡಿದ. ಗೋಪಾಲಕರೆಲ್ಲ ಕೃಷ್ಣನ ಮಾತಿಗೆ ಯಾರು ಇಲ್ಲ ಅಂತ ಅಂದಿಲ್ಲ ವೃದ್ಧರು, ವೃದ್ಧತರರು, ವೃದ್ಧತಮರು, ಚಿಕ್ಕವರು ದೊಡ್ಡವರು ಎಲ್ಲರೂ ಕೂಡ ಸೇರಿ ನೀನು ಏನು ಹೇಳುತ್ತೀಯೋ ಹಾಗೆ ಮಾಡುತ್ತೇವೆ. ನಿನ್ನ ಪರಾಕ್ರಮ, ನಿನ್ನ ಶೌರ್ಯ, ನಿನ್ನ ವೀರ್ಯ ಲೋಕೋತ್ತರವಾದ ಲೋಕವಿಲಕ್ಷಣವಾದ ಅತಿಮಾನುಷವಾದ ನಿನ್ನ ಮಹಿಮೆಯನ್ನು ಕಂಡಿದ್ದೇವೆ. ಶೈಶವದಿಂದಲೇ ಅಂತಹ ಮಹಿಮೆಯನ್ನು ತೋರಿಸಿದ ನೀನು ನಮಗೆ ರಕ್ಷಕ, ನಮಗೆ ಮಾರ್ಗದರ್ಶಕ, ಉದ್ಧಾರಕ ಅಂತ ನಾವು ನಂಬಿದ್ದೇವೆ,

1. 16.10 ವಿಷ್ಣುಪರ್ವ



ತ್ವಂ ಗತಿಸ್ತ್ವಂ ರತಿಶ್ಚೈವ ತ್ವಂ ವೇತ್ತಾ ತ್ವಂ ಪರಾಯಣಮ್ ।
ಭಯೇಷ್ವಭಯದಸ್ತ್ವಂ ನಸ್ತ್ವಮೇವ ಸುಹೃದಾಂ ಸುಹೃತ್ ॥ (17.3 ವಿಷ್ಣುಪರ್ವ)

ತತ್ತತೇ ಕೃಷ್ಣ ಘೋಷೋಽಯಂ ಕ್ಷೇಮೀ ಮುದಿತಗೋಕುಲಃ । (17.4 ವಿಷ್ಣುಪರ್ವ)

ನಿನ್ನಿಂದಾಗಿ ನಾವು ಸುಖವಾಗಿ ಇದ್ದೇವೆ. ಎಂತೆಂತಹ ದೈತ್ಯರು ಅಸುರರು ಬಂದು ಎಲ್ಲರನ್ನೂ ನಾಶ ಮಾಡಬೇಕು, ಗೋಕುಲವನ್ನೇ ಧ್ವಂಸ ಮಾಡಬೇಕು ಅಂತ ಬಂದವರೆಲ್ಲ ತಾವೇ ನಷ್ಟರಾಗಿ ಹೋದರು, ಧ್ವಸ್ತರಾಗಿ ಹೋದರು. ನಾವೆಲ್ಲ ಕ್ಷೇಮವಾಗದ್ದೇವೆ ನಿನ್ನ ಅನುಗ್ರಹದಿಂದ ನೀನು ಹೇಗೆ ಹೇಳುತ್ತಿಯೋ ಹಾಗೆ ಮಾಡುತ್ತೇವೆ ಅಂತ ಎಲ್ಲ ಭಕ್ಷ್ಯ ಭೋಜ್ಯಾದಿಗಳನ್ನೆಲ್ಲ ಸಿದ್ಧಪಡಿಸಿದ್ದಾರೆ, ಹಾಲಿನ ಕೊಡಗಳು ಬೇಕಾದಷ್ಟು ನಾನಾ ವಿಧವಾಗಿರುವಂತಹ ಪದಾರ್ಥಗಳನ್ನೆಲ್ಲಾ ಸಿದ್ಧಪಡಿಸಿ ಗೋವರ್ಧನದ ಹತ್ತಿರ ಬಂದಿದ್ದಾರೆ ಪೂಜೆಯನ್ನು ಮಾಡಿದ್ದಾರೆ. ಕ್ರಮ ಪ್ರಕಾರ ಎಲ್ಲ ಶೋಡಶೋಪಚಾರ ಪೂಜಾದಿಗಳನ್ನು ಮಾಡಿ ನೈವೇದ್ಯವನ್ನು ಸಮರ್ಪಣೆ ಮಾಡಬೇಕು ಅಂದರೆ ಸ್ವತಃ ಶ್ರೀಕೃಷ್ಣ ಪರಮಾತ್ಮನೇ ಆ ಪರ್ವತದ ಅಂತರ್ಯಾಮಿಯಾಗಿ ಪರ್ವತಕ್ಕಿಂತಲೂ ಎತ್ತರದ ರೂಪವನ್ನು ತೆಗೆದುಕೊಂಡು ಅಲ್ಲಿ ಪ್ರಾದುರ್ಭೂತನಾಗಿದ್ದಾನೆ. ಇವರು ಮಾಡುವ ಎಲ್ಲ ಪೂಜೆಯನ್ನು ಸ್ವೀಕಾರ ಮಾಡಿ, ನೈವೇದ್ಯವನ್ನೆಲ್ಲ ಭಕ್ಷಣ ಮಾಡಿ, ಪ್ರಸಾದವನ್ನು ಕೊಟ್ಟು ಅಭಯವನ್ನು ಕೊಟ್ಟಿದ್ದಾನೆ ನಿಮಗೆಲ್ಲ ರಕ್ಷಣೆಯನ್ನು ಮಾಡುತ್ತೇನೆ ಇದೇ ರೀತಿ ನನ್ನ ಪೂಜೆಯನ್ನು ನಿರಂತರವಾಗಿ ಮಾಡಿ. ನಾವೇನು ಮಾಡಬೇಕು ಅಂತ ಕೇಳಿದ್ದಾರೆ ಅವರೆಲ್ಲ ಇಷ್ಟು ದಿವಸ ಇಂದ್ರನ ಪೂಜೆಯನ್ನು ಮಾಡುತ್ತಾ ಇದ್ದೇವು ಅವನೇನು ಬಂದು ಸ್ವೀಕಾರ ಮಾಡುತ್ತಾ ಇರಲಿಲ್ಲ ಆದರೆ ಪ್ರತ್ಯಕ್ಷವಾಗಿ ಬಂದು ನೀನು ಪೂಜೆಯನ್ನು ಸ್ವೀಕಾರ ಮಾಡಿದ್ದೀ, ಅನುಗ್ರಹವನ್ನು ಮಾಡುತ್ತಾ ಇದ್ದಿ, ದರ್ಶನವನ್ನು ಕೊಟ್ಟಿದ್ದಿ ಮಹಾನುಭಾವ, ಗೋವರ್ಧನ ದೇವ ಉದ್ಧಾರ ಮಾಡು ನಮ್ಮ ಕರ್ತವ್ಯ ಏನು ಅಂತ. ಪರಮಾತ್ಮ ಹೇಳಿದ ನಿಮ್ಮ ಕರ್ತವ್ಯ ಏನು ಅಂದರೆ

ಅದ್ಯಪ್ರಭೃತಿ ಚೇಜ್ಯೋಽಹಂ ಗೋಷು ಯದ್ಯಸ್ತು ವೋ ದಯಾ ॥ (17.27 ವಿಷ್ಣುಪರ್ವ)
ಅಹಂ ವಃ ಪ್ರಥಮೋ ದೇವಃ ಸರ್ವಕಾಮಕರಃ ಶುಭಃ । (17.28 ವಿಷ್ಣುಪರ್ವ)

ಸ್ವಯಂ ತಾನೇ ಹೇಳುತ್ತಾನೆ

ಅಯಂ ಸರ್ವೇಷ್ಟದಾತಾ ಮೇ ಸರ್ವಾರಿಷ್ಟನಿವಾರಕಃ ।
ಸರ್ವೋತ್ಕೃಷ್ಟೋಽಮೇವೈಕಸ್ತದೀಯೋಽಹಂ ಸ ಮೇ ಪತಿಃ ॥

ಸಕಲ ಅರಿಷ್ಟಗಳಿಗೆ ನಿವಾರಕ ಸರ್ವೇಷ್ಟ ಪ್ರದಾಯಕನಾದಂತಹ ಸ್ವಾಮಿ ಪರಮಾತ್ಮ ನಾರಾಯಣ ಅನ್ನುವ ತತ್ವವನ್ನು ಸ್ವಯಂ ಆ ಗೋವರ್ಧನ ರೂಪದಿಂದ ಬಂದ ಶ್ರೀಕೃಷ್ಣ ಹೇಳುತ್ತಾನೆ. **'ಸರ್ವಕಾಮಕರಃ ಶುಭಃ'** ನಿಮ್ಮ ಎಲ್ಲ ಇಷ್ಟಾರ್ಥಗಳನ್ನು ಪೂರ್ಣ ಮಾಡುವಂತಹ ಪರಮ ಮಂಗಲನಾದ ದೇವ ನಾನು, ನನ್ನ ಪೂಜೆಯನ್ನು ಇಷ್ಟು ದಿನ ನೀವು ಬಿಟ್ಟದ್ದೇ ತಪ್ಪು. ಇನ್ನುಮೇಲೆ ನಿತ್ಯದಲ್ಲಿ ಪೂಜೆಯನ್ನು ಮಾಡಿ ಅಂತ ಅವರಿಗೆ ಆದೇಶವನ್ನು ಮಾಡಿದ್ದಾನೆ ಪರಮಾತ್ಮ. ಮತ್ತೇನು ಮಾಡಬೇಕು ಸ್ವಾಮಿ ಅಂತ ಕೇಳಿದರೆ

ಪರ್ಯಾಪ್ನವನ್ತು ಕ್ಷಿಪ್ರಂ ಮಾಂ ಗಾವೋ ವತ್ಸಸಮಾಕುಲಾಃ । (17.31 ವಿಷ್ಣುಪರ್ವ)

ಎಲ್ಲ ಕರುಗಳು, ಗೋವುಗಳನ್ನು ಕರೆದುಕೊಂಡು ನೀವೆಲ್ಲ ಪುರುಷರು, ಸ್ತ್ರೀಯರು, ಶಕ್ತಿ ಇದ್ದವರು ನನ್ನ ಅನುಗ್ರಹದಿಂದ ಎಲ್ಲರಿಗೂ ಶಕ್ತಿ ಬರುತ್ತೆ ಗೋವರ್ಧನ ಪರ್ವತಕ್ಕೆ ಸಂಪೂರ್ಣ ಪ್ರದಕ್ಷಿಣೆಯನ್ನು ಮಾಡಿ ಇವತ್ತಿಗೂ ಆ ಪದ್ಧತಿ ಇದೆ. ಗೋವರ್ಧನ ಪ್ರದಕ್ಷಿಣೆ ಅಂತ ಅಲ್ಲಿ ಇರುವಂತಹ ಭಕ್ತರು ವಿಶೇಷ ಸಂಕಲ್ಪ ಪೂರ್ವಕವಾಗಿ ಉತ್ಸವವನ್ನು ಮಾಡುತ್ತ ವೈಭವದಿಂದ ಭಕ್ತಿಯಿಂದ ಹರಿನಾಮ ಸ್ಮರಣವನ್ನು ಮಾಡುತ್ತ ಗೋವರ್ಧನದ ಪ್ರದಕ್ಷಿಣೆಯನ್ನು ಇವತ್ತಿಗೂ ಹಾಕುತ್ತಾರೆ ಅಷ್ಟು ಆದು ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮ ಆದೇಶ ಮಾಡಿದ್ದು ಎಂಬುದಾಗಿ ಹರಿವಂಶ ನಮಗೆ ತಿಳಿಸಿಕೊಡುತ್ತದೆ. ಪ್ರದಕ್ಷಿಣೆ ನಮಸ್ಕಾರವನ್ನೆಲ್ಲ ಮಾಡಿದ ಮೇಲೆ ಸೇವೆಯನ್ನು ಸಮರ್ಪಣೆ ಮಾಡಿ ಕೃಷ್ಣಾರ್ಪಣಮಸ್ತು ಹೇಳಿದ ಮೇಲೆ ಅದೃಶ್ಯನಾಗಿದ್ದಾನೆ ಅಲ್ಲಿಯವರೆಗೂ ಹಾಗೆ ನಿಂತಿದ್ದಾನೆ ಪರಮಾತ್ಮ.

ಅನ್ತರ್ಧಾನಂ ಜಗಾಮಾಶು ತೇನ ದೇಹೇನ ಸೋಽಚಲಃ ॥ (17.38 ವಿಷ್ಣುಪರ್ವ)

ಈ ರೀತಿ ಇದು ಕೇವಲ ಒಂದು ಉದಾಹರಣೆಗೆ ಮಾತ್ರ. ಗೋವರ್ಧನ ಪರ್ವತದಲ್ಲಿ ಮಾತ್ರ ದೇವರಿದ್ದಾನೆ ಅಂತ ತಿಳಿಯಬೇಡಿ, ಎಲ್ಲ ಪರ್ವತಗಳಿಗೂ ಅಭಿಮಾನಿ ದೇವತೆಗಳು, ಆ ಎಲ್ಲ ಅಭಿಮಾನಿ ದೇವತೆಗಳಲ್ಲಿಯೂ ಮುಖ್ಯಪ್ರಾಣಾಂತರ್ಗತನಾದ ಭಗವಂತ ಅಲ್ಲಿ ಸನ್ನಿಹಿತನಾಗಿ ಇರುತ್ತಾನೆ ಎಂಬುದಾಗಿ ನಾವು ಚಿಂತನವನ್ನು ಮಾಡಬೇಕು. ಎಲ್ಲ ವೃಕ್ಷಗಳು, ಮಂಗಲವಾದ ವೃಕ್ಷಗಳಲ್ಲಿಯೂ ಸರಿ ಸಕಲ ಪದಾರ್ಥಗಳಲ್ಲಿಯೂ ದೇವರು ಅಂತರ್ಯಾಮಿ ಆದರಲ್ಲಿಯೂ ವಿಶೇಷವಾಗಿ ಪೂಜ್ಯವಾದಂತಹ ಅಶ್ವತ್ಥಾದಿ ವೃಕ್ಷಗಳಲ್ಲಿ **'ಅಶ್ವತ್ಥಃ ಸರ್ವವೃಕ್ಷಾಣಾಮ್'**[1] ಅಂತ ಭಗವದ್ಗೀತೆಯಲ್ಲಿ ಹೇಳುತ್ತಾನಲ್ಲ ಹಾಗೆ ವಿಶೇಷವಾಗಿ ಪರಮಾತ್ಮ ಆ ಪೂಜ್ಯವಾದ ಅಧಿಷ್ಠಾನಗಳಲ್ಲಿ ತನ್ನ ವಿಭೂತಿ ರೂಪವನ್ನು ಇಟ್ಟು ಆ ವೃಕ್ಷಗಳಿಗೆ, ಆ ಪರ್ವತಗಳಿಗೆ, ಉಳಿದ ಎಲ್ಲ ಪರ್ವತಗಳು ವೃಕ್ಷಗಳಿಗಿಂತಲೂ ಒಂದು ವೈಶಿಷ್ಟ್ಯವನ್ನು ಕೊಟ್ಟು ಜಗತ್ತಿಗೆ ಕ್ಷೇಮವನ್ನು ಮಾಡುತ್ತಾನೆ ಎಂಬುದಾಗಿ ನಮಗೆ ಶಾಶ್ತ್ರ ತಿಳಿಸುತ್ತದೆ. ಉದಾಹರಣೆಗೆ ಒಂದೊಂದನ್ನು ಇತಿಹಾಸ ಪುರಾಣಗಳು ನಮಗೆ ಹೇಳಿರುತ್ತವೆ ಆದನ್ನು ನಾವು ಎಲ್ಲ ಕಡೆಗೂ ಅರ್ಥ ಮಾಡಿಕೊಳ್ಳಬೇಕು.

ಇದು ಇಂದ್ರ ದೇವರಿಗೆ **'ವಿಸ್ಮೃತರಥಾಂಗಧರಾವತಾರಃ'** ಸಾಕ್ಷಾತ್ ಶ್ರೀಹರಿ ತಾವೆಲ್ಲ ಹೋಗಿ ಬ್ರಹ್ಮ ದೇವರಿಗೆ ಪ್ರಾರ್ಥನೆ ಮಾಡಿದ್ದು, ಭೂದೇವಿಯ ಪ್ರಾರ್ಥನೆಗೆ ಅನುಗುಣವಾಗಿ, ಬ್ರಹ್ಮ ದೇವರ ಪ್ರಾರ್ಥನೆಯಂತೆ. ತಮ್ಮೆಲ್ಲರ ಪ್ರಾರ್ಥನೆಯಂತೆ ಪರಮಾತ್ಮ ಅವತಾರ ಮಾಡಿದ್ದು ಭೂಭಾರಹರಣಕ್ಕೆ ಇದು ಗೊತ್ತು, ಮಹಾಜ್ಞಾನಿಗಳು ಇಂದ್ರ ದೇವರು ಆದರೂ ಕೂಡ ಆ ಸಂದರ್ಭದಲ್ಲಿ ವಿಸ್ಮರಣೆಯಾಗಿದೆ. ಇದ್ದಕ್ಕಿದ್ದಂತೆ ಸಾಂವರ್ತಕ ಮೇಘದ ಗಣ ಭಾರೀ ಆನೆಯ ಸೊಂಡಿಲಿನಷ್ಟು ದೊಡ್ಡ ದೊಡ್ಡ ಹನಿಗಳನ್ನು ಹಾಕುವಂತಹ, ಭಾರೀ ಉಗ್ರವಾದಂತಹ ವೃಷ್ಟಿಯನ್ನು ಮಾಡುವ ಮಹಾ ಸಾಮರ್ಥ್ಯ ಇರುವ ಆ ಮೇಘಗಳಿಗೆ ಆಜ್ಞೆಯನ್ನು ಮಾಡಿದ್ದಾನೆ. ಮೇಘಗಳೆಲ್ಲ ಬಂದಿವೆ ಭಾರೀ ಘೋರವಾದಂತಹ ಮಳೆಯಾಗುತ್ತ ಇದೆ **'ನಾಗಯೂಥಾಯುತೋಪಮಾಃ'**[2] ಹತ್ತಾರು ಸಾವಿರ ಆನೆಗಳಷ್ಟು ದೊಡ್ಡ ದೊಡ್ಡದಾದಂತಹ ಮೇಘಗಳು ಅಂತಹ ಮೇಘಗಳು ಒಂದಕ್ಕೊಂದು ತಿಕ್ಕಾಟ ಮಾಡಿ ಭಾರೀ ಆರ್ಭಟದಿಂದ ಮಳೆಯನ್ನು ಸುರಿಸುತ್ತ ಇವೆ. ಗೋವುಗಳೆಲ್ಲ ತತ್ತರಿಸಿ ಹೋಗಿವೆ, ಎಲ್ಲಿಯೂ ಆಹಾರ ಸಿಕ್ಕುತ್ತ ಇಲ್ಲ ಚಳಿ ಆ ನೀರು ಎಲ್ಲಾ ಪುರುಷರು, ಸ್ತ್ರೀಯರು, ಗೋವುಗಳು ಕರುಗಳು ಎಲ್ಲವೂ ಭಯಗ್ರಸ್ಥವಾಗಿ ಇನ್ನೇನು ಅನ್ನುವ ಸ್ಥಿತಿಯೊಳಗಿರುವಾಗ ಪರಮಾತ್ಮ ಯಾರೂ ಚಿಂತೆಯನ್ನು ಮಾಡಬೇಡಿ ಅಂತ ಸುಲಭವಾಗಿ ಆ ಗೋವರ್ಧನ ಪರ್ವತವನ್ನು ಎತ್ತಿ ಎರಡೂ ಕೈಯಿಂದ ಎತ್ತಿದ್ದಾನೆ,

1. 10.26 ಭ.ಗೀತಾ, 2. 18.11 ವಿಷ್ಣುಪರ್ವ



ದೋರ್ಭ್ಯಾಮುತ್ಪಾಟಯಾಮಾಸ ಕೃಷ್ಣೋ ಗಿರಿವಾಪರಃ ॥ (18.30 ವಿಷ್ಣುಪರ್ವ)

ಸ ಧೃತಃ ಸಂಗತೋ ಮೇಘೈರ್ಗಿರಿಃ ಸವ್ಯೇನ ಪಾಣಿನಾ ॥ (18.31 ವಿಷ್ಣುಪರ್ವ)

ಒಂದೇ ಒಂದು ಕೈಯಿಂದ ಪರಮಾತ್ಮ ಅದನ್ನು ಧಾರಣ ಮಾಡಿದ್ದಾನೆ. ಎಲ್ಲರಿಗೆ ಹೇಳಿದ ನೀವೇನು ಚಿಂತೆ ಮಾಡಬೇಡಿ, ಅವಸರ ಅವಸರ ಮಾಡಿಕೊಂಡು ಗಾಬರಿಯಾಗಿ ಇನ್ನೇನು ಸತ್ತು ಹೋಗುತ್ತೇವೋ ಅಂತ ಹೆದರಿ ಒಬ್ಬರ ಮೇಲೊಬ್ಬರು ಬಿದ್ದು ಹೊರಗೆ ನೀರಿನೊಳಗೆ ಸಾಯುವುದಲ್ಲದೇ ಒಬ್ಬರ ಮೇಲೊಬ್ಬರು ಬಿದ್ದು ಸಾಯುವುದು ಬೇಡ. **'ಯೂಥಶಃ'** ನಿಮ್ಮದು ಒಂದೊಂದು ಗುಂಪು ಇದೆಯಲ್ಲಾ ಒಂದೊಂದು ಮನೆಯವರು, ಒಂದೊಂದು ಮನೆತನದವರು ನಿಮ್ಮ ಮನೆಯಲ್ಲಿ ಹೇಗೆ ಇರುತ್ತೀರೋ ಹಾಗೇನೇ ಬಂದು ಒಂದೊಂದು ಸ್ಥಳವನ್ನು ಆರಿಸಿಕೊಳ್ಳಿ ನಿಮ್ಮ ನಿಮ್ಮ ಮನೆಯವರು ಒಂದು ಗುಂಪಾಗಿ ಕೂಡಿ, ಗಲಾಟೆ ಬೇಡ ಕ್ರಮವಾಗಿ ವೃಂದಾವನದೊಳಗೆ ಹೇಗೆ ನಿಮ್ಮ ನಿಮ್ಮ ಮನೆಯಲ್ಲಿ ಇದ್ದಿರೋ ಹಾಗೇನೇ ಇಲ್ಲಿ ಬಂದು ಪ್ರತ್ಯೇಕ ಪ್ರತ್ಯೇಕ ಸ್ಥಾನದಲ್ಲಿ ಇರಬಹುದು. ಒಂದು ಸ್ವಲ್ಪವೂ ಇಲ್ಲಿ ಮಳೆಯ ಹನಿ ಸಿಡಿಯೋದಿಲ್ಲ, ಎಷ್ಟು ಬೇಕೋ ಅಷ್ಟು ಗಾಳಿ ನಿರ್ವಾತವಾಗಿ ನಾನು ನಿಮ್ಮನ್ನು ರಕ್ಷಣೆ ಮಾಡುತ್ತೇನೆ.

ಯಥಾಶ್ರೇಷ್ಠಂ ಯಥಾಯೂಥಂ ಯಥಾಸಾರಂ ಯಥಾಸುಖಮ್ । (18.56 ವಿಷ್ಣುಪರ್ವ)

ಉತ್ತಮರಿಗೆ ಹಿರಿಯರಿಗೆ, ದೊಡ್ಡವರಿಗೆ ಮೊದಲು ಸ್ಥಾನ ಕೊಡಿ ಆಮೇಲೆ ಚಿಕ್ಕವರು, ಯುವಕರು, ಹಿರಿಯರಿಗೆ ಮುಂದೆ ಬಿಡಿ ನಿಮ್ಮ ನಿಮ್ಮ ಮನೆಯವರು ನೀವು ಕೂಡಿ, ಸುಖವಾಗಿ ಇರಿ, ಚಿಂತೆ ಬಿಡಿ ನಾನು ನಿಮ್ಮನ್ನು ರಕ್ಷಣೆ ಮಾಡುತ್ತೇನೆ ಅಂತ ಇಷ್ಟು ಧೈರ್ಯವನ್ನು ಕೊಟ್ಟು ಪರಮಾತ್ಮ ಎಲ್ಲರನ್ನು ಕರೆದಿದ್ದಾನೆ.

ಅನಾದ್ಯನಂತಕಾಲಕಂ ಸಮಸ್ತ ಲೋಕ ಮಂಡಲಮ್ ।
ಯುದೀಕ್ಷಯೈವ ರಕ್ಷ್ಯತೇ ಕಿಮಸ್ಯ ವೃಷ್ಣಿ ರಕ್ಷಣಮ್ ॥ (17.119 ಮಭಾತಾನಿರ್ಣಯ)

ಅಂತ ಮುಂದೆ ಹೇಳುತ್ತಾರೆ ಶ್ರೀಮದಾಚಾರ್ಯರು ಬೇರೆ ಪ್ರಸಂಗದಲ್ಲಿ. ಅನಾದ್ಯನಂತ ಕಾಲದಲ್ಲಿ ಇಡೀ ಬ್ರಹ್ಮಾಂಡವನ್ನೇ ರಕ್ಷಣೆ ಮಾಡುವಂತಹ ಇಂತಹ ಎಷ್ಟು ಬ್ರಹ್ಮಾಂಡಗಳನ್ನು ಸೃಷ್ಟಿ ಮಾಡಿದ್ದಾನೋ, ರಕ್ಷಣೆ ಮಾಡಿದ್ದಾನೋ ಅಂತಹ ಪರಮಾತ್ಮನಿಗೆ ಯಾದವರ ರಕ್ಷಣೆ, ಈಗ, ಗೋಪಾಲಕರ ರಕ್ಷಣೆ ಈಗ ಎಂದರೆ ಏನು ದೊಡ್ಡ ಮಾತು ಎಲ್ಲರನ್ನು ರಕ್ಷಣೆ ಮಾಡಿದ್ದಾನೆ ಪರಮಾತ್ಮ. ಏಳು ದಿನಗಳವರೆಗೆ ತನ್ನ ಎಲ್ಲಾ ಶಕ್ತಿ ಹಾಕಿ ಮಳೆ ಸುರಿಸಿದ ಮೇಲೆ ಇಂದ್ರ ದೇವರಿಗೆ ಜ್ಞಾನೋದಯವಾಗಿದೆ ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮನೇ ಅವತಾರ ಮಾಡಿದ್ದು ಅವನನ್ನು ನಾನು ಪರಮಾತ್ಮ ಅಂತ ತಿಳಿಯದೆ ಸಾಮಾನ್ಯ ಗೋಪಾಲಕ ಅಂತ ತಿಳಿದು ತಪ್ಪು ಮಾಡಿಬಿಟ್ಟೆನಲ್ಲ ಅಂತ ಧಾವಿಸಿ ಓಡಿ ಬಂದು ಸಾಷ್ಟಾಂಗ ಪ್ರಣಾಮ ಮಾಡಿ ಶ್ರೀಕೃಷ್ಣ ಪರಮಾತ್ಮನಿಗೆ ಕ್ಷಮಾಯಾಚನೆ ಮಾಡುತ್ತಾ ಇದ್ದಾನೆ. ಕರು ಆಕಳಿನ ಹಾಲನ್ನು ಕುಡಿಯುವಾಗ ಆಕಳಿನ ಕೆಚ್ಚಲಿಗೆ ಜೋರಾಗಿ ತನ್ನ ತಲೆಯಿಂದ ಗುದ್ದಿ ಗುದ್ದಿ ಕುಡಿಯುತ್ತಂತೆ ಹಾಲು ಬೇಗ ಬರಲಿ ಹೆಚ್ಚು ಬರಲಿ, ಹಾಗೆ ನಾವೆಲ್ಲ ನಿನ್ನ ಮಕ್ಕಳು, ನೀನು ತಾಯಿ ಇದ್ದಂತೆ ನಾವು ಮಾಡುವಂತಹ ಅಪರಾಧವನ್ನು ಕ್ಷಮಿಸಬೇಕು ಅಂತ.

ಕೃಷ್ಣಮಕ್ಲಿಷ್ಟಕರ್ಮಾಣಂ ಪುರುಹೂತಃ ಪುರಂದರಃ ॥ (19.3 ವಿಷ್ಣುಪರ್ವ)

ಶ್ರೀಮದಾಚಾರ್ಯರು ಅಲ್ಲಲ್ಲಿ ಹೇಳುತ್ತ ಇರುತ್ತಾರೆ. ಪರಮಾತ್ಮನಿಗೆ ಕ್ರಿಯೆಗಳೇ ಇಲ್ಲ ನಿಷ್ಕ್ರಿಯ ಅಂತ ಅನೇಕ ಕಡೆಗೆ ನಮಗೆ ವೇದಗಳಲ್ಲಿ, ಪುರಾಣಗಳಲ್ಲಿ ಮಾತುಗಳು ಕೇಳಿಸುತ್ತವೆ ಅದಕ್ಕೆ ಅರ್ಥ ಕರ್ಮಗಳೇ ಇಲ್ಲ ಕ್ರಿಯೆಗಳೇ ಇಲ್ಲ ಅಂತಲ್ಲ **'ಕೇವಲೋದ್ಯೋಗಿನೋऽನಿಶಮ್'**[1] ದೇವರಷ್ಟು ಕ್ರಿಯೆಗಳನ್ನು ಮಾಡುವವರು ಯಾರಿದ್ದಾರೆ. ಇಡೀ ಜಗತ್ತಿನ ಸೃಷ್ಟ್ಯಾದಿ ಕ್ರಿಯೆಗಳನ್ನು ನಿರಂತರವಾಗಿ ಮಾಡುವಂತಹ ಸ್ವಾಮಿ ಹಾಗಾದರೆ **'ಅಕರ್ಮಾಕ್ಲಿಷ್ಟಕಾರಿತ್ವಾತ್'**[2] ಕ್ಲೇಷ ಇಲ್ಲದಂತೆ, ಆಯಾಸ ಇಲ್ಲದಂತೆ ಕಾರ್ಯಗಳನ್ನು ಮಾಡುತ್ತಾನೆ ಆದ್ದರಿಂದ ಪರಮಾತ್ಮನಿಗೆ ನಿಷ್ಕ್ರಿಯ ಅಂತಾರೆ. ಕೆಲಸ ಮಾಡಿದ್ದಾರೋ ಇಲ್ಲೋ ಅಂತ ಗೊತ್ತಿರೋದಿಲ್ಲ ಒಂದು ಅಡಿಗೆ ಮಾಡಿದರೆ ಮೈಯೆಲ್ಲಾ ಹೊಲಸು ಕಪ್ಪು ಎಲ್ಲವನ್ನೂ ಮೈಗೆ ಹಚ್ಚಿಕೊಂಡು ಕೆಲವರು ಮಾಡುತ್ತಾರೆ. ಇನ್ನು ಕೆಲವರು ಅಡಿಗೆ ಮಾಡಿದ್ದಾರೋ ಇಲ್ಲವೋ ಅಂತೆ ಗೊತ್ತಿರೋದಿಲ್ಲ ಹಾಗೆ ಮಾಡಿರುತ್ತಾರೆ ಯಾಕೆ ಇನ್ನೂ ಅಡಿಗೆ ಪ್ರಾರಂಭ ಆಗಿಲ್ವಾ ಅಂತ ಕೇಳಬೇಕು ಎಲ್ಲಾ ಮುಗಿಸಿ ಬಂದಿರುತ್ತಾರೆ ಅಷ್ಟು ಸ್ವಚ್ಛವಾಗಿ ಇರುತ್ತಾರೆ ಅದು ಕಲೆ ಅನಾಯಾಸವಾಗಿ ಮಾಡುವುದು. ಇಡೀ ಬ್ರಹ್ಮಾಂಡದ ಸೃಷ್ಟ್ಯಾದಿ ಕಾರ್ಯದಿಗಳನ್ನೆಲ್ಲ ಮಾಡಿದರೂ ಏನು ಮಾಡದೆ ಇದ್ದವರ ಹಾಗೆ ಶೇಷಶಾಯಿಯಾಗಿ ಸುಮ್ಮನೆ ಮಲಗಿರುತ್ತಾನೆ ಶ್ರಮವಾಗಿ ಮಲಗಿದ್ದಲ್ಲ ಮಲಗೇ ಇರುತ್ತಾನೆ ಹಾಗೆ ಸೃಷ್ಟಿ ನಡೆಯತ್ತಾ ಇರುತ್ತದೆ ಅದಕ್ಕಾಗಿ ಪರಮಾತ್ಮನಿಗೆ ನಿಷ್ಕ್ರಿಯ ಅಂತ. ಆ ಮಾತನ್ನು ಇಲ್ಲಿ ವಾಲ್ಮೀಕಿ ರಾಮಾಯಣದಲ್ಲಿಯೂ ಹೆಜ್ಜೆ ಹೆಜ್ಜೆಗೆ ರಾಮ ದೇವರನ್ನು ಅಕ್ಲಿಷ್ಟ ಕರ್ಮ ಅಂತ ಕರೆಯುತ್ತಾರೆ ವಾಲ್ಮೀಕಿಗಳು, **'ಕೃಷ್ಣಂಅಕ್ಲಿಷ್ಟಕರ್ಮಾಣಂ'** ಅಂತ ಹರಿವಂಶ ಹೇಳುತ್ತದೆ. ಅಂತಹ ಪರಮಾತ್ಮನಿಗೆ ಇಂದ್ರ ದೇವರು ಬಂದು ಶರಣಾಗತರಾಗಿ ಎಲ್ಲ ಗೋವುಗಳಿಗೆ ತಾಯಿಯಾದ ಸುರಭೀ ಅಲ್ಲಿ ಬಂದಿದ್ದಾಳೆ ಯಾಕೆ ಅಂದರೆ ನಮ್ಮ ಸಂತತಿಯನ್ನು ನೀನು ಉಳಿಸಿದಿ ಅಂತ ಗೋ ಕುಲ. ಇಂದ್ರ ದೇವರು ಅನ್ನುತ್ತಾರೆ ಪಾಪ ಮಾಡಿದವರೆಲ್ಲ ಕೆಳಗಿನ ಲೋಕದಲ್ಲಿ ಪಾತಾಲದಲ್ಲಿ, ಸಾಮಾನ್ಯ ಕರ್ಮಗಳನ್ನು ಮಾಡಿ ಪುಣ್ಯವನ್ನು ಪಡೆದು ಯಥಾ ಯೋಗ್ಯವಾಗಿ ಭೂಲೋಕದಲ್ಲಿ ಆ ಪುಣ್ಯದ ಫಲವನ್ನು ಅನುಭವಿಸುತ್ತಾರೆ. ಯಜ್ಞ ಯಾಗಾದಿ ಶ್ರೇಷ್ಠ ಕರ್ಮಗಳನ್ನು ಮಾಡಿದವರು ಸ್ವರ್ಗದಲ್ಲಿ, ತಪಸ್ಸು ಶಮದಮಾದಿಗಳನ್ನು ಮಾಡಿದವರು ಉತ್ತಮವಾದ ಬ್ರಹ್ಮಲೋಕವನ್ನು ಪಡೆಯುತ್ತಾರೆ.

ತಸ್ಯೋಪರಿ ಗವಾಂ ಲೋಕಃ ಸಾಧ್ಯಾಸ್ತಂ ಪಾಲಯನ್ತಿ ಹಿ । (19.30 ವಿಷ್ಣುಪರ್ವ)

ಅದರ ಮೇಲೆ ಭೂಲೋಕದೊಳಗೆ ಎಲ್ಲ ಗೋವುಗಳಿಗೆ ನೀನು ಸ್ಥಾನವನ್ನು ಕೊಟ್ಟಿದ್ದೀ ಗೋಪಾಲಕರು, ಗೋಪಿಕಾ ಸ್ತ್ರೀಯರು ಅವರೆಲ್ಲ ನಿನ್ನ ಸೇವೆಗಾಗಿ ಇಲ್ಲಿ ಅವತಾರ ಮಾಡಿದ್ದಾರೆ. ಅಂಥವರ ರಕ್ಷಣೆಯನ್ನು ನೀನು ಮಾಡಿ ಬಹಳ ದೊಡ್ಡ ಅನುಗ್ರಹವನ್ನು ಮಾಡಿದ್ದೀ ಅದಕ್ಕಾಗಿ ಆ ಗೋವುಗಳ ತಾಯಿಯಾದ ಸುರಭೀ ಹಾಗೂ ನಾವು ದೇವತೆಗಳು ಎಲ್ಲರೂ ಕೂಡ ನಿನ್ನನ್ನು ಹಾಲಿನಿಂದ ಅಭಿಷೇಕ ಮಾಡಿ, ನಿನಗೆ ಗೋವಿಂದ ಅಂತ ನಾಮಕರಣ ಮಾಡಬೇಕು ಅಂತ ಅಪೇಕ್ಷೆ ಇದೆ. ಪರಮಾತ್ಮನಿಗೆ ಎಲ್ಲ ಹೆಸರುಗಳು ಮೊದಲಿನಿಂದ ಇವೆ ವಿಶೇಷವಾಗಿ ಈ ಸಂದರ್ಭದಲ್ಲಿ ಆ ಭಗವಂತನ ಉಪಕಾರವನ್ನು ಸ್ಮರಣೆ ಮಾಡುವುದಕ್ಕಾಗಿ ಒಂದು ಕೃತಜ್ಞತೆಯ ರೂಪದಲ್ಲಿ ಗೋವಿಂದ ಅಂತ ನಾಮಕರಣವನ್ನು ಮಾಡಿದ್ದಾರೆ. ಎಲ್ಲ ಗೋವುಗಳನ್ನು ಪರಮಾತ್ಮ ರಕ್ಷಣೆ ಮಾಡಿದ್ದಾನೆ, ಗೋವುಗಳಿಗೆ ಒಡೆಯನಾಗಿದ್ದಾನೆ, ಯಾವಾಗಲೂ ಗೋವುಗಳ ಮಧ್ಯದಲ್ಲಿ ಇರುತ್ತಾನೆ ಅನ್ನುವುದಕ್ಕಾಗಿ. ಗೋ ಅನ್ನುವ ಶಬ್ದಕ್ಕೆ ವೇದಗಳು ಅಂತ ಅರ್ಥ ಇದೆ, ಸರ್ವ ವೇದಗಳಿಂದ ಪ್ರತಿಪಾದ್ಯನಾದದ್ದರಿಂದಲೂ ಪರಮಾತ್ಮನನ್ನು ಗೋವಿಂದ

1. ದ್ವಾದಶಸ್ತೋತ್ರ; 2. ಭಾಗವತ ತಾತ್ಪರ್ಯ 10ನೇ ಸ್ಕಂಧ

ಎಂಬುದಾಗಿ ಕರೀತಾರೆ. ಗೋವುಗಳನ್ನು ತನ್ನ ಸುತ್ತಲೂ ಇಟ್ಟುಕೊಂಡು ಅದರ ಮಧ್ಯದಲ್ಲಿ ತಾನು ರಾರಾಜಮಾನ ಆದದ್ದರಿಂದಲೂ ಕೂಡ ಆ ಪರಮಾತ್ಮನನ್ನು ಗೋವಿಂದ ಎಂಬುದಾಗಿ ಹೇಳುತ್ತಾರೆ ಅಂತ ತಿಳಿಸಿಕೊಟ್ಟಿದ್ದಾರೆ. ಅನೇಕ ಅರ್ಥಗಳಿವೆ ಗೋ ಅನ್ನುವ ಶಬ್ದಕ್ಕೆ ಪೃಥಿವಿ ಅಂತ ಅರ್ಥ ಇದೆ, ಗೋ ಅನ್ನುವ ಶಬ್ದಕ್ಕೆ ಕಿರಣಗಳು ಅಂತ ಅರ್ಥ ಇದೆ, ಸೂರ್ಯ-ಚಂದ್ರರ ಕಿರಣಗಳಲ್ಲಿಯೂ ಪರಮಾತ್ಮನಿದ್ದಾನೆ, ಪೃಥ್ವಿಯಲ್ಲಿಯೂ ಭಗವಂತನಿದ್ದು ಎಲ್ಲ ಸಸ್ಯಗಳನ್ನು ಸೃಷ್ಟಿ ಮಾಡುತ್ತಾನೆ. ಗೋ ಅಂದರೆ ಆಕಳು, ಆಕಳಿನ ಸುತ್ತಲೂ ಆಕಳಿನ ಮಧ್ಯದಲ್ಲಿ, ಆಕಳಿನೊಳಗೆ ಎಲ್ಲ ಕಡೆಗೂ ಭಗವಂತನಿದ್ದಾನೆ, ಇದ್ದು ಅದರಿಂದ ಹಾಲು, ಮೊಸರು, ಬೆಣ್ಣೆ, ತುಪ್ಪ ಬರುವಂತೆ ಮಾಡುತ್ತಾನೆ ಅನ್ನುವುದಕ್ಕಾಗಿಯೇ ಭೋಜನ ಕಾಲದಲ್ಲಿ **'ಗೋವಿಂದ ಗೋವಿಂದ ಗೋವಿಂದ'** ಎಂಬುದಾಗಿ ಹೇಳಿ ತುತ್ತನ್ನು ಸ್ವೀಕಾರ ಮಾಡಿ ಅಂತ ಹೇಳುತ್ತಾರೆ. ಕಾರಣ ಏನು ಆ ಒಂದೊಂದು ತುತ್ತಿಗೆ ಬೇಕಾದ ಧಾನ್ಯವನ್ನು ಸೃಷ್ಟಿ ಮಾಡುವುದಕ್ಕಾಗಿ ಗೋ ಪೃಥ್ವಿಯಲ್ಲಿ ಇದ್ದವನು ಪರಮಾತ್ಮನೇ, ಧಾನ್ಯ ಬೆಳೆಯುವುದಕ್ಕೆ ಪೃಥ್ವಿ ಸಾಲದು ಸೂರ್ಯ-ಚಂದ್ರನ ಕಿರಣಗಳು ಬೇಕು ಆ ಗೋ ಅಂದರೆ ಕಿರಣಗಳಲ್ಲಿ ಇದ್ದವನು ದೇವರು, ಬರೀ ಕಿರಣಗಳು ಸಾಲದು ಗೋ ಅಂದರೆ ನೀರು ನೀರಿನೊಳಗಿದ್ದು ಪರಮಾತ್ಮ ಸೃಷ್ಟಿಯನ್ನು ಮಾಡುತ್ತಾನೆ ಮಳೆ ಸುರಿಸಿ ಮಳೆಯ ನೀರಿನೊಳಗೂ ಇದ್ದು, ಹಾಲು, ಮೊಸರು, ಬೆಣ್ಣೆ, ತುಪ್ಪ ಇವುಗಳನ್ನೆಲ್ಲ ಕೊಡುವುದಕ್ಕೆ ಗೋವುಗಳಲ್ಲಿದ್ದು ಅನುಗ್ರಹ ಮಾಡುತ್ತಾನೆ.

ಭೂಶುದ್ಧಿಯನ್ನು ಮಾಡಿಕೊಂಡು ಊಟ ಮಾಡಬೇಕು ಅದಕ್ಕೆ ಬೇಕಾದ ಗೋಮಯ ಗೋಮೂತ್ರಗಳು ಬೇಕಾದರೂ ಪರಮಾತ್ಮನ ಸನ್ನಿಧಾನ ಆ ಗೋವಿನಲ್ಲಿ ಇದ್ದದ್ದಕ್ಕೇನೆ. ಯಾವ ಪಶು, ಯಾವ ಪ್ರಾಣಿ, ಯಾವ ಪುರುಷನ ಮಲಮೂತ್ರಗಳು ಕೂಡ ಪವಿತ್ರ ಅಲ್ಲ ಅತ್ಯಂತ ಹೇಯ ಹೇಸಿಗೆ ಆದರೆ ಗೋಮಯ ಗೋಮೂತ್ರಗಳು ಇಷ್ಟು ಪವಿತ್ರವಾಗುವುದಕ್ಕೆ ಕಾರಣನೂ ಗೋವಿಂದ ಒಳಗಿದ್ದದ್ದಕ್ಕೆ ಭೂಶುದ್ಧಿಯನ್ನು ಮಾಡುವುದನ್ನ ಪ್ರಾರಂಭ ಮಾಡಿಕೊಂಡು ಪ್ರತಿಯೊಂದು ಹಂತದಲ್ಲಿಯೂ ಕೊನೆಗೆ ಇಂದ್ರಿಯಗಳಿಂದ ಗೋ ಅಂದರೆ ಇಂದ್ರಿಯಗಳು ಆ ಇಂದ್ರಿಯಗಳಿಂದ ನಾವು ಆಹಾರವನ್ನು ಸ್ವೀಕಾರ ಮಾಡುವುದಕ್ಕೂ ಭಗವಂತ ಬೇಕು. ಇನ್ನೊಬ್ಬರಿಗೆ ಪವಿತ್ರವಾದ ನೈವೇದಿತ ಅನ್ನವನ್ನ ದಾನ ಮಾಡಿ ಆಮೇಲೆ ನಾವು ಸ್ವೀಕಾರ ಮಾಡಬೇಕು ಅದರಿಂದ ಉತ್ತಮವಾದಂತಹ ಸ್ವರ್ಗ ಗೋ ಅಂದರೆ ಸ್ವರ್ಗ ಆ ಸ್ವರ್ಗವನ್ನು ಕೊಡುವವನು ಗೋವಿಂದನೇ. ಆದ್ದರಿಂದ ಭೋಜನದ ಆದಿಯಿಂದ ಅಂತ್ಯದವರೆಗೆ ಮುಂದೆ ಅದರ ಫಲ ಸಿಗುವವರೆಗೆ ಎಲ್ಲದರೊಳಗೂ ಈ ಗೋವಿಂದನ ಅನುಗ್ರಹ ಬೇಕು ಅನ್ನುವುದಕ್ಕಾಗಿ ಪ್ರಾಚೀನರು **'ಕವಲೇ ಕವಲೇ ಕುರ್ವನ್ ಗೋವಿಂದಸ್ಯ ಅನುಕೀರ್ತನಂ'** ಅಂತ ಹೇಳಿದ್ದಾರೆ. ಅಂತಹ ಗೋವಿಂದ ಎಂಬ ನಾಮಕರಣವನ್ನು ಮಾಡುತ್ತಾನೆ ಮತ್ತು ಹೇಳುತ್ತಾನೆ ಇಂದ್ರ. ನಾನು ಇಂದ್ರ, ನೀನು ಉಪೇಂದ್ರ ಅಂದರೆ ಸಣ್ಣ ಇಂದ್ರ, ನನ್ನ ತಮ್ಮ ಅಲ್ಲವಾ ವಾಮನನಾದಾಗ, ನಾನು ಅದಿತಿಯ ಹಿರಿಯ ಮಗ, ನೀನು ಚಿಕ್ಕವ ಆದ್ದರಿಂದ ಉಪೇಂದ್ರ ಅಂತ ಜನ ತಪ್ಪು ತಿಳಿದಿದ್ದಾರೆ. ಅದಕ್ಕಾಗಿ ನೀನು ಉಪೇಂದ್ರ ಅಲ್ಲ, ನಾನು ಇಂದ್ರ, ನನ್ನ ಉಪರಿ, ನನಗಿಂತಲೂ ಮೇಲೆ ಸರ್ವೋತ್ತಮನಾಗಿ ಇದ್ದದ್ದರಿಂದ ನೀನು ಉಪೇಂದ್ರ ಅಂತ ಹೇಳುತ್ತಾನೆ.

ಮಮೋಪರಿ ಯಥೇನ್ದ್ರಸ್ತ್ವಂ ಸ್ಥಾಪಿತೋ ಗೋಭಿರೀಶ್ವರಃ ।
ಉಪೇನ್ದ್ರ ಇತಿ ಕೃಷ್ಣ ತ್ವಾಂ ಗಾಸ್ಯನ್ತಿ ದಿವಿ ದೇವತಾಃ ॥ (19.46 ವಿಷ್ಣುಪರ್ವ)

ನಿನ್ನನ್ನು ಉಪೇಂದ್ರ ಅಂತ ಕರೆಯುವುದಕ್ಕೆ ಕಾರಣ ನನ್ನ ಉಪರಿ, ನನಗಿಂತಲೂ ಉತ್ತಮನಾಗಿ ಸರ್ವೋತ್ತಮನಾಗಿ ಇದ್ದೀ ನನಗೆ ಪೂಜ್ಯನಾಗಿ ಆರಾಧ್ಯನಾಗಿ ಇದ್ದದ್ದರಿಂದ ನೀನು ಉಪೇಂದ್ರ ಅಂತ ಸ್ವಯಂ ಇಂದ್ರ

ದೇವರು ಶ್ರೀಕೃಷ್ಣ ಪರಮಾತ್ಮನ ಸ್ತೋತ್ರವನ್ನು ಮಾಡಿದ್ದಾರೆ, ಸುರಭೀ ಸ್ತೋತ್ರ ಮಾಡಿದ್ದಾಳೆ. ಆ ರೀತಿ ಅವರೆಲ್ಲರಿಂದ ಅಭಿಷಿಕ್ತನಾಗಿ ಗೋವಿಂದ ಅಂತನ್ನುವ ನಾಮಕರಣವನ್ನು ಪಡೆದ.

ಈ ಕಡೆಗೆ ಇಂದ್ರ ದೇವರು ಪರಮಾತ್ಮನಿಗೆ ಹೇಳುತ್ತಾರೆ ಇನ್ನೂ ಅನೇಕ ಜನ ಅಸುರರು ಇದ್ದಾರೆ ಅವರೆಲ್ಲರ ಸಂಹಾರ ಮಾಡಬೇಕು. ಈಗ ನೆನಪಾಗಿದೆ ಅವರಿಗೆ ಸಾಕ್ಷಾತ್ ಪರಮಾತ್ಮನೇ ಕೃಷ್ಣ ವಿಷ್ಣುವೇ ಅವತಾರ ಮಾಡಿದ್ದು ನಾವೇ ಪ್ರಾರ್ಥನೆ ಮಾಡಿದ್ದು ಅನೇಕ ಅಸುರರ ಸಂಹಾರ ಮಾಡಿದ್ದೀ, ಇನ್ನೂ ಅನೇಕ ಅಸುರರು ಇದ್ದಾರೆ ಕೇಶಿ, ಅರಿಷ್ಟ ಮೊದಲಾದ ಅಸುರರು ಅವರೆಲ್ಲರ ಸಂಹಾರವನ್ನು ಮಾಡಬೇಕು ಅಂತ. ಅದೆಲ್ಲ ಗೊತ್ತಿದೆ ನನಗೆ ನಾನು ಮಾಡುತ್ತೇನೆ ಅಂದ ಕೃಷ್ಣ, ಇವನಿಗೆ ಪ್ರಾರ್ಥನೆ ಮಾಡಬೇಕಾಗಿತ್ತು ಅದಕ್ಕಾಗಿ ಇದನ್ನೆಲ್ಲಾ ಪ್ರಾರಂಭ ನನ್ನ ಮಗ ಅರ್ಜುನ ಇದ್ದಾನೆ ಅವನನ್ನು ನೀನು ರಕ್ಷಣೆ ಮಾಡಬೇಕು. ಮುಂದೆ ಮಹಾಭಾರತದ ಯುದ್ಧ ಆದಾಗ ಅರ್ಜುನನನ್ನು ಚೆನ್ನಾಗಿ ರಕ್ಷಣೆ ಮಾಡಿ ಅವನನ್ನು ನೀನು ಕಾಪಾಡಬೇಕು ಅಂತ ಕೇಳಿಕೊಂಡಾಗ ಅದನ್ನು ಯಾಕೆ ಚಿಂತೆ ಮಾಡುತ್ತೀಯಾ ಯಾವುದೇ ರೀತಿಯ ಕಷ್ಟಗಳು ಅವನಿಗೆ ಬರದೇ ಇದ್ದಂತೆ ನನ್ನ ಪೂರ್ಣವಾದ ರಕ್ಷಣೆ ಎಲ್ಲ ಪಾಂಡವರಿಗೂ ಇದೆ ವಿಶೇಷವಾಗಿ ಅರ್ಜುನನನ್ನು ನಾನು ರಕ್ಷಣೆ ಮಾಡುತ್ತೇನೆ ಚಿಂತೆ ಮಾಡುವುದು ಬೇಡ ಅಂತ ಶ್ರೀಕೃಷ್ಣ ಪರಮಾತ್ಮ ಇಂದ್ರ ದೇವರಿಗೆ ಭರವಸೆಯನ್ನು ಕೊಟ್ಟಿದ್ದಾನೆ.

ಆಮೇಲೆ **'ಹಲ್ಲೀಸಕ ಕ್ರೀಡನಾ'** ಅಂತ, ರಾಸಕ್ರೀಡೆ ಅಂತ ಭಾಗವತದಲ್ಲಿ ಪ್ರಸಿದ್ಧವಾದದ್ದು, ಇಲ್ಲಿ ಅದನ್ನು **'ಹಲ್ಲೀಸಕ ಕ್ರೀಡನಾ'** ಎಂಬುದಾಗಿ ಅದನ್ನು ಕರೆದಿದ್ದಾರೆ ಅರ್ಥ ಒಂದೇ. **'ಗೋಪಿನಾಂ ಮಂಡಲೇ ನ ಚ ಯತ್ತ್ರೀಣಾಂ ನೃತ್ಯಂ ಹಲ್ಲೀಸಕಂ ತು ತತ್'** ಎಂಬುದಾಗಿ ಆ ಗೋಪಿಕಾ ಸ್ತ್ರೀಯರ ಜೊತೆಗೆ ಮಾಡುವಂತಹ ಕ್ರೀಡೆಗೆ ರಾಸಕ್ರೀಡೆ ಅಥವಾ ಹಲ್ಲೀಸಕ ಕ್ರೀಡೆ ಎಂಬುದಾಗಿ ಕರೆದಿದ್ದಾರೆ.

ಶ್ರೀಕೃಷ್ಣ ಪರಮಾತ್ಮ ಅಮಾನುಷವಾದ ಕರ್ಮಗಳನ್ನು ಮಾಡುತ್ತ ಇದ್ದದ್ದನ್ನು ಎಲ್ಲ ಗೋಪಾಲಕರು ವರ್ಣನೆ ಮಾಡುತ್ತಾರೆ.

ಅಮಾನುಷಾಣಿ ಕರ್ಮಾಣಿ ತವ ಪಶ್ಯಾಮ ಗೋಪತೇ ।
ಧಾರಣೇನಾಸ್ಯ ಶೈಲಸ್ಯ ವಿದ್ಮಸ್ತ್ವಾಂ ಕೃಷ್ಣ ದೈವತಮ್ ॥ (20.4 ವಿಷ್ಣುಪರ್ವ)

ನೀನು ಮಹಾದೇವತೆ ಅಂತ ನಾವು ನಿಶ್ಚಯ ಮಾಡಿಕೊಂಡಿದ್ದೇವೆ ಕಾರಣ ಇಷ್ಟು ಅಮಾನುಷವಾದ ಕರ್ಮಗಳನ್ನು ಮಾಡುತ್ತಾ ಇದ್ದೀ ಪರ್ವತದ ಧಾರಣೆ ಮಾಡುವುದೇನು, ಇಂತಹ ಅಸುರರ ಸಂಹಾರ ಮಾಡುವುದೇನು, ಕಾಡ್ಗಿಚ್ಚನ್ನು ಪಾನ ಮಾಡುವುದೇನು ಒಂದೇ ಎರಡೇ ಆದ್ದರಿಂದ ನೀನು ಸಾಮಾನ್ಯನಲ್ಲವೇ ಅಲ್ಲ ಮಹಾದೇವತೆ ನೀನು ಆದರೆ ಒಂದು ಪ್ರಶ್ನೆ ಮನಸ್ಸಿನಲ್ಲಿ ಇದೆ. ಯಾಕೆ ನಮ್ಮ ಜೊತೆಗೆ ಈ ಗೋಪಾಲಕರಂತೆ ದನ ಕಾಯುತ್ತ ಓಡಾಡುತ್ತಾ ಇದ್ದೀ, ಸರ್ವೋತ್ತಮನಾದಂತಹ ಮಹಾನುಭಾವ ನೀನು ಗೋಪ ವೇಷದಿಂದ ಓಡಾಡುವುದಕ್ಕೆ ಕಾರಣ ಏನು, ಏನಾದರೂ ಉದ್ದೇಶ್ಯ ಇದೆಯಾ ಇದಕ್ಕೆ. ಏನಾದರು ಉದ್ದೇಶ್ಯ ಇರಬಹುದು ನಾವಂತೂ ನಿನ್ನ ಸೇವಕರು, ನಿನ್ನ ಆದೇಶವನ್ನು ಪರಿಪಾಲನೆ ಮಾಡುತ್ತೇವೆ ಆದರೆ ನೀನು ಇಲ್ಲಿ ಬರುವುದಕ್ಕೆ ಕಾರಣ ಏನು ಅಂತ ಕೇಳಿದ್ದಕ್ಕೆ ಕೃಷ್ಣ ಹೇಳಿದ ಕಾಲ ಬಂದಾಗ ಹೇಳುತ್ತೇನೆ. ನಿಮ್ಮ ಸಾಧನೆ ಪಕ್ವವಾಗಲಿ

ಯದಿ ತ್ವವಶ್ಯಂ ಶೋತವ್ಯಂ ಕಾಲಃ ಸಮ್ಪ್ರತಿಪಾಲ್ಯತಾಮ್ । (20.12 ವಿಷ್ಣುಪರ್ವ)

ಯೋಗ್ಯವಾದ ಕಾಲದಲ್ಲಿ ನನ್ನ ಮಹಿಮೆಯನ್ನು ತೋರಿಸುತ್ತೇನೆ. ನನ್ನ ಮಹಿಮೆಯನ್ನು ನಿಮಗೆ ಹೇಳುತ್ತೇನೆ, ಉಪದೇಶ ಮಾಡುತ್ತೇನೆ ಎಂಬುದಾಗಿ ಪರಮಾತ್ಮ ಅವರಿಗೆ ಸಮಾಧಾನವನ್ನು ಹೇಳಿದ. ಮುಂದೆ ಉತ್ತಮವಾದ ಲೋಕವನ್ನು ಗೋಪಾಲಕರಿಗೆಲ್ಲ ಇದೆ ಅಂತ ತೋರಿಸಿದ್ದಾನೆ.

ಆಮೇಲೆ ಆ ಎಲ್ಲ ಗೋಪಿಕಾ ಸ್ತ್ರೀಯರ ಜೊತೆಗೆ ಪರಮಾತ್ಮ ರಾಸಕ್ರೀಡೆಯನ್ನು ಮಾಡಿದ್ದಾನೆ. ತಾನು ವೇಣುನಾದವನ್ನು ಮಾಡುತ್ತ ಯಮುನಾ ತೀರದಲ್ಲಿ ಪರಮಾತ್ಮ ತನ್ನ ಅದ್ಭುತವಾದಂತಹ ಕಲೆ ಶ್ರೀಕೃಷ್ಣ ಪರಮಾತ್ಮನ ವೇಣುನಾದ. ಸಾಮಾನ್ಯ ವೇಣುನಾದವನ್ನು ಮಾಡಿಸಲು ಸಮರ್ಥರಾದ ಒಬ್ಬ ವಾದ್ಯಗಳನ್ನು ಬಾರಿಸುವ ವ್ಯಕ್ತಿಗಳು ಚೆನ್ನಾಗಿ ಬಾರಿಸಿದರೇನೆ ಎಷ್ಟು ಇಂಪಾಗಿರುತ್ತದೆ ಕೇಳಬೇಕು ಅಂತ ಅನ್ನಿಸುತ್ತೆ ಭಗವಂತ ವೇಣುನಾದವನ್ನು ಮಾಡಿದರೆ ಎಲ್ಲ ದೇವಾಧಿದೇವತೆಗಳು ಬಂದು ಶ್ರವಣ ಮಾಡುತ್ತಾ ಇದ್ದಾರೆ. ಸ್ವತಃ ಲಕ್ಷ್ಮೀ ದೇವಿಯೇ ಆ ವೇಣುವಿನ ಕೊಳಲಿನ ರೂಪದಲ್ಲಿ ಬಂದು ನಿಂತಿದ್ದಾಳೆ **'ಶ್ರೀದೇವೀ ವೇಣುಮಾವಿಶ್ಯ'**[1] ಅಂತ. ಸ್ವತಃ ಲಕ್ಷ್ಮೀ ದೇವಿ ಬಂದು ಆ ವೇಣುವಿನ ರೂಪದಲ್ಲಿ ಇದ್ದಾಳೆ ಕೊಳಲಿನ ರೂಪದಲ್ಲಿ, ಶ್ರೀಕೃಷ್ಣ ಪರಮಾತ್ಮ ಆ ಲಕ್ಷ್ಮೀ ದೇವಿಯ ಮೂಲಕ ವೇಣುಗಾನವನ್ನು ಮಾಡುತ್ತಾ ಇದ್ದಾನೆ, ಎಲ್ಲ ಗೋಪಿಕಾ ಸ್ತ್ರೀಯರು ಕೂಡ ತಮ್ಮ ತಮ್ಮ ಮನೆಯ ಕೆಲಸಗಳನ್ನೆಲ್ಲ ಮರೆತು ಹೇಗಿದ್ದರೋ ಅದೇ ರೀತಿಯಲ್ಲಿ ಓಡಿ ಬಂದಿದ್ದಾರೆ. ಮಕ್ಕಳನ್ನು ಆಡಿಸುವರು, ತಮ್ಮ ಅತ್ತೆ ಮಾವಂದಿರ ಸೇವೆ ಮಾಡುತ್ತ ಇದ್ದವರು, ಗಂಡನ ಸೇವೆ ಮಾಡುತ್ತ ಇದ್ದವರು, ಏನೇನೋ ಕಾರ್ಯಗಳಲ್ಲಿ ತೊಡಗಿದವರೂ ಕೂಡ **'ವ್ಯತ್ಯಸ್ತವಸ್ತ್ರಾಭರಣಾಃ'**[2] ಕಿವಿಗೆ ಹಾಕಿಕೊಳ್ಳುವುದನ್ನು ಮೂಗಿಗೆ, ಮೂಗಿಗೆ ಹಾಕಿಕೊಳ್ಳುವುದು ಕಾಲಿಗೆ, ಕಾಲಿಗೆ ಹಾಕಿಕೊಳ್ಳುವುದು ಕೈಗೆ, ಕೈಗೆ ಹಾಕಿಕೊಳ್ಳುವುದು ಕಾಲಿಗೆ ಎಲ್ಲೆಲ್ಲಿಯೋ ಏನೇನೋ ಆಭರಣಗಳನ್ನು ಹಾಕಿಕೊಂಡು ಮೈಮೇಲೆ ಎಚ್ಚರ ಇಲ್ಲದೇ ಇದ್ದಂತೆ ಶ್ರೀಕೃಷ್ಣ ಪರಮಾತ್ಮನಲ್ಲಿ ಇರುವ ಭಕ್ತಿ ಒಂದೇ ಅವರಲ್ಲಿ ಉದ್ರಿಕ್ತವಾಗಿದೆ. ಆ ರೀತಿ ಬಂದಂತಹ ಎಲ್ಲ ಗೋಪಿಕಾ ಸ್ತ್ರೀಯರ ಜೊತೆಗೆ ಪರಮಾತ್ಮ ತಾನು ರಾಸಕ್ರೀಡೆಯನ್ನು ಮಾಡಿದ್ದಾನೆ, ಅವರೆಲ್ಲರನ್ನು ಸಂತೋಷ ಪಡಿಸಿದ್ದಾನೆ ಎಂಬುದಾಗಿ ಇಲ್ಲಿ ತಿಳಿಸುತ್ತಾರೆ. ಈ ಒಂದು ಅಧ್ಯಾಯದ ಪ್ರಾರಂಭವನ್ನು ನೀವು ಗಮನಿಸಿದಿರಿ

ಅಮಾನುಷಾಣಿ ಕರ್ಮಾಣಿ ತವ ಪಶ್ಯಾಮ ಗೋಪತೇ ।

ಧಾರಣೇನಾಸ್ಯ ಶೈಲಸ್ಯ ವಿದ್ಮಸ್ತ್ವಾಂ ಕೃಷ್ಣ ದೈವತಮ್ ॥ (20.4 ವಿಷ್ಣುಪರ್ವ)

ನಿನ್ನ ಅಮಾನುಷವಾದ ಕರ್ಮಗಳಿಂದ ನೀನು ಮಹಾದೇವತೆ ಅಂತ ನಾವು ನಿಶ್ಚಯ ಮಾಡಿಕೊಂಡಿದ್ದೇವೆ ಅಂತ ಅಧ್ಯಾಯದ ಪ್ರಾರಂಭದಲ್ಲಿ ಹರಿವಂಶ ನಮಗೆ ತಿಳಿಸಿ ಗೋಪಾಲಕರ ಮಾತಿನಲ್ಲಿ ಆನಂತರ ಈ ರಾಸಕ್ರೀಡೆಯ ವರ್ಣನೆಯನ್ನು ಅದೇ ಇಪ್ಪತ್ತನೆಯ ಅಧ್ಯಾಯದಲ್ಲಿ ತಿಳಿಸಿಕೊಟ್ಟಿದ್ದಾರೆ ಈ ವಿಷ್ಣುಪರ್ವದಲ್ಲಿ ಇದರಿಂದ ನಮಗೆ ಹರಿವಂಶ ತಿಳಿಸುತ್ತಾ ಇದೆ. ಶ್ರೀಮದ್ಭಾಗವತದಲ್ಲಿಯೂ ಶುಕಾಚಾರ್ಯರು ಪರೀಕ್ಷಿತ್ ರಾಜನ ಪ್ರಶ್ನೆಗೆ ಉತ್ತರ ಕೊಡುತ್ತಾರೆ ಇದೆಲ್ಲ ಯಾಕೆ ಹೀಗೆ ಪರಮಾತ್ಮ ರಾಸಕ್ರೀಡೆಯನ್ನು ಮಾಡಿದ ಅಂತ ಕೇಳಿದ್ದಕ್ಕೆ **'ವಹ್ನೇಃ ಸರ್ವಭುಜೋ ಯಥಾ ತೇಜೀಯಸಾಂ ನ ದೋಷಯಾ'** ಅಂತ ಆ ಉತ್ತರವನ್ನು ಹರಿವಂಶ ತಾನು ಮೊದಲೇ ಸೂಚನೆ ಮಾಡುತ್ತದೆ. ಎಲ್ಲವನ್ನು ಭಕ್ಷಣೆ ಮಾಡುವುದು ಉಳಿದವರಿಗೆ ದೋಷ ಆದರೆ ಏನು ಹಾಕಿದರೂ ಎಲ್ಲವನ್ನೂ ಸುಟ್ಟು ಹಾಕಿ ಭಕ್ಷಣವನ್ನು ಮಾಡುವಂತಹ ಅಗ್ನಿಗೆ ಅದು ದೋಷ ಅಲ್ಲ, ಹಾಗೆ ಅಗ್ನಿಯಂತೆ **'ಅಗ್ನಿಮೀಳೇ ಪುರೋಹಿತಂ'**[3] ಅಗ್ನ್ಯಂತರ್ಮಿಯಾದ ಅಗ್ನಿನಾಮಕನಾದ ಮಹಾ ಅಗ್ನಿಸ್ವರೂಪನಾದ ತೇಜೋಮಯನಾದಂತಹ ಅನಂತ

---

1. ಇತಿ ತಂತ್ರಭಾಗವತೇ ; 2. 10.1.27.7 ಭಾಗವತ, 3. ಋಗ್ವೇದ

ತೇಜಸ್ವರೂಪನಾದಂತಹ ಆ ಭಗವಂತನಿಗೆ ಇದು ಯಾವುದೂ ಕೂಡ ದೋಷವಲ್ಲ ಎಂಬುದಾಗಿ ನಮಗೆ ತಿಳಿಸಿಕೊಡುತ್ತಾರೆ.

ಶ್ರೀಕೃಷ್ಣ ಪರಮಾತ್ಮನ ಮಹಾಮಹಿಮೆಯನ್ನು ನಾವು ಚೆನ್ನಾಗಿ ತಿಳಿಯಬೇಕು ಸ್ವರಮಣನಾಗಿದ್ದಾನೆ ಪರಮಾತ್ಮ. ಐತರೇಯ ಭಾಷ್ಯದಲ್ಲಿ ಶ್ರೀಮದಾಚಾರ್ಯರು ಹೇಳುತ್ತಾರೆ **'ರಮಯಾ ರಮಮಾಣೋಪಿ ತಸ್ಥೇನೈವ ಸ್ತ್ರೀಯಾತ್ಮನಾ'** ಪರಮಾತ್ಮ ನಿತ್ಯಾವಿಯೋಗಿನಿಯಾದ ಲಕ್ಷ್ಮೀ ದೇವಿಯ ಜೊತೆಗೆ ಯಾವಾಗಲೂ ಕ್ರೀಡೆಯನ್ನು ಮಾಡುತ್ತಾನೆ, ವಿಹಾರವನ್ನು ಮಾಡುತ್ತಾನೆ. ಲಕ್ಷ್ಮೀ ದೇವಿಯೂ ಪಾದ ಸೇವೆಯನ್ನು ಮಾಡುತ್ತಾಳೆ ಆದರೂ ಲಕ್ಷ್ಮೀ ದೇವಿಯಿಂದ ಪರಮಾತ್ಮನಿಗೆ ಸಂತೋಷ ಅಂತ ತಿಳಿಯಬೇಡಿ ಲಕ್ಷ್ಮೀ ದೇವಿಯಲ್ಲಿ ಅಂತರ್ಯಾಮಿಯಾದ ತನ್ನ ರೂಪದಿಂದಲೇ ತಾನು ಸಂತೋಷಪಡುತ್ತಾನೆ ಹೊರತು ಲಕ್ಷ್ಮೀ ದೇವಿಯ ಅವಶ್ಯಕತೆ ಪರಮತ್ಮನಿಗೆ ಇಲ್ಲ ಸ್ವರಮಣನಾಗಿದ್ದಾನೆ ಅಂತ ಶಾಸ್ತ್ರ ನಮಗೆ ತಿಳಿಸಿಕೊಡುತ್ತದೆ. **'ನಿರ್ವಿಕಾರಃ ಅಕ್ಷರಃ ಶುದ್ಧಃ'** ಎಂಬುದಾಗಿ ನಿರ್ವಿಕಾರನಾಗಿದ್ದಾನೆ ಪರಮಾತ್ಮ, ಪರಮಾತ್ಮನ ಅನುಗ್ರಹವನ್ನು ಪಡೆದಂತಹ ಬ್ರಹ್ಮ ದೇವರಿಗೆ ಅವರಿಗೇನೆ ಅವಿಕಾರ ಅನ್ನುತ್ತಾರೆ **'ಅವಿಕಾರೌಬ್ರಹ್ಮರುದ್ರೌ'** ಅಂತಹ ವಿಕಾರರಹಿತರಾದಾಗ ಪರಮಾತ್ಮನ ಅನುಗ್ರಹವನ್ನು ಪಡೆದಂತಹ ಬ್ರಹ್ಮ ದೇವರಿಗೆ ಈ ತರಹದ ವಿಕಾರಗಳಿಲ್ಲ ಅಂತಾದಾಗ ಬ್ರಹ್ಮ ದೇವರಿಗೆ ಜನಕನಾದಂತಹ ಪರಮಾತ್ಮನಿಗೆ ಎಲ್ಲಿಂದ ವಿಕಾರ. ಪದ್ಮಪುರಾಣಾಂತರ್ಗತ ವೇಂಕಟೇಶ ಮಹಾತ್ಮ್ಯದಲ್ಲಿ ಬರುತ್ತದೆ. ಮೂರನೆಯ ಅಧ್ಯಾಯ 33ನೆಯ ಶ್ಲೋಕ.

ಭವತಾ ವೀಕ್ಷತೇ ಯಸ್ತು ತಸ್ಯತ್ವದ್ಭಕ್ತಿರೂಜಿತಾ ।
ಉಪೇಯತೇ ತು ಯಸ್ತಸ್ಯ ಭೋಗೇಚ್ಛಾ ಚಾಭಿಜಾಯತೇ ॥

ಪದ್ಮ ಸರೋವರದಲ್ಲಿ ಶುಕಾಚಾರ್ಯರು ತಪಸ್ಸು ಮಾಡುವಾಗ ಅಪ್ಸರಾ ಸ್ತ್ರೀಯರೆಲ್ಲ ಬಂದು ಅವರ ತಪಸ್ಸಿಗೆ ಭಂಗವನ್ನು ಮಾಡಬೇಕು ಅಂತ ಪ್ರಯತ್ನ ಮಾಡಿದಾಗ ಶುಕಾಚಾರ್ಯರು ದೇವರಿಗೆ ಮಾಡಿದ ಪ್ರಾರ್ಥನೆ ಇದು ಪದ್ಮಪುರಾಣದದಲ್ಲಿ ಬರುವ ಪದ್ಮ ಸರೋವರದ ಮಹಿಮೆ. ಯಾರನ್ನು ಕೃಪಾ ದೃಷ್ಟಿಯಿಂದ ನೀನು ನೋಡುತ್ತೀಯೋ ಅವರಿಗೆ ನಿನ್ನಲ್ಲಿ ಭಕ್ತಿಯ ಉದ್ರೇಕವಾಗುತ್ತೆ ಇವನನ್ನು ಉದ್ಧಾರ ಮಾಡಬೇಕು ಅಂತ ನೀನು ಸಂಕಲ್ಪ ಮಾಡಿ ಕೃಪಾ ದೃಷ್ಟಿಯಿಂದ ನೋಡಿದರೆ ಜ್ಞಾನ ಭಕ್ತಿ ವಿರಕ್ತ್ಯಾದಿ ಗುಣಗಳು ಅವರಲ್ಲಿ ಅಭಿವೃದ್ಧಿ ಆಗುತ್ತದೆ. ಯಾರನ್ನು ಉಪೇಕ್ಷೆಯಿಂದ ನೋಡುತ್ತೀಯೋ ಹೋಗಲಿಬಿಡು ಅಂತ, ಉದಾಸೀನ ಏನಾದರೂ ಮಾಡಿಕೊಳ್ಳಲಿ ಅಂತ ನೀನು ಉದಾಸೀನ ಮಾಡಿದರೆ ಅವನಿಗೆ ಭೋಗೇಚ್ಛೆಯ ಅಭಿವೃದ್ಧಿ ಆಗುತ್ತದೆ, ವಿಷಯಗಳಲ್ಲಿ ಆಸಕ್ತಿ ಬೆಳೆಯುತ್ತದೆ. ಆದ್ದರಿಂದ ದಯಮಾಡಿ ನನ್ನನ್ನು ಉಪೇಕ್ಷೆ ಮಾಡಬೇಡ ಇವನ್ಯಾರೋ ಏನೋ ಎಂದು ಉದಾಸೀನ ಮಾಡಬೇಡ, ಭಕ್ತಿ ನನ್ನಲ್ಲಿ ಬೆಳೆಯಬೇಕು ಅಂತ ಅಪೇಕ್ಷೆ ಇದೆ, ನನಗೆ ವಿಷಯಗಳ ಆಸಕ್ತಿ ಬೇಡ ಅಂತ ಇದೆ ಹಾಗಾದರೆ ನೀನು ನನ್ನನ್ನು ಕೃಪಾ ದೃಷ್ಟಿಯಿಂದ ನೋಡು, ಉಪೇಕ್ಷಾ ದೃಷ್ಟಿಯಿಂದ ನೋಡಬೇಡ ಅಂತ ಶುಕಾಚಾರ್ಯರು ಮಾಡಿದ ಪ್ರಾರ್ಥನೆಯನ್ನು ಕೇಳುತ್ತೇವೆ. ಯಾವ ಪರಮಾತ್ಮನ ಕೃಪಾದೃಷ್ಟಿ ಇದ್ದರೇನೆ ಭೋಗೇಚ್ಛೆ ಬರುವುದಿಲ್ಲ, ವೈರಾಗ್ಯ ಬರುತ್ತೆ ಅಂತ ಹೇಳುತ್ತಾರೆ ಅಂತಹ ಪರಮಾತ್ಮನಿಗೇನೆ ಈ ತರಹದ ವಿಷಯಾಸಕ್ತಿ ಇರುವುದಕ್ಕೆ ಸಾಧ್ಯವೇ, ಸರ್ವಥಃ ಸಾಧ್ಯ ಇಲ್ಲ ಅನ್ನುವ ಮಾತನ್ನು ನೀವು ತಿಳಿಯಬೇಕು.

ಮನ್ವಂತರಗಳ ಕಥೆ ಕೇಳುವಾಗ ತಿಳಿದಿದ್ದೀರಿ ಸ್ವಾರೋಚಿಷ ಮನ್ವಂತರದಲ್ಲಿ ವಿಭು ಎಂಬ ಹೆಸರಿನಿಂದ ಪರಮಾತ್ಮ ಅವತಾರ ಮಾಡಿ 88,000 ಮುನಿಗಳಿಗೆ ಬ್ರಹ್ಮಚರ್ಯ ವ್ರತವನ್ನು ಕಲಿಸಿಕೊಟ್ಟಂತಹ ಮಹಾನುಭಾವ. ಸನತ್ಕುಮಾರ

ಎಂಬ ಋಷಿಗಳಲ್ಲಿ ಸನತ್ಕುಮಾರ ಎಂಬ ಹೆಸರಿನಿಂದ ತಾನು ಅಂತರ್ಯಾಮಿಯಾಗಿ ಇದ್ದು ಬ್ರಹ್ಮಚರ್ಯವನ್ನು ನಿಯಮನ ಮಾಡುವುದಕ್ಕೆ ಪರಮಾತ್ಮ ಒಂದು ರೂಪವನ್ನೇ ಇಟ್ಟಿದ್ದಾನೆ ಬ್ರಹ್ಮಚರ್ಯದ ಪಾಲನೆಯನ್ನು ಹೇಗೆ ಮಾಡಬೇಕು ಅಂತ ಕಲಿಸಿಕೊಟ್ಟಿದ್ದಾನೆ. ಅಂತಹ ಸನತ್ಕುಮಾರ ರೂಪಿಯಾದ ಪರಮಾತ್ಮನಿಗೆ ಕಾಮದ ಬಾಧೆಯ ಪರಿಹಾರಕ್ಕಾಗಿ ಬ್ರಹ್ಮಚರ್ಯದ ಪಾಲನೆಗಾಗಿ ಪ್ರಾರ್ಥನೆಯನ್ನು ಮಾಡುತ್ತಾರೆ ನಾರಾಯಣವರ್ಮದಲ್ಲಿ **'ಸನತ್ಕುಮಾರೋऽವತು ಕಾಮದೇವಾ'**[1] ಆ ಸನತ್ಕುಮಾರ ಅಂದರೆ ಬ್ರಹ್ಮಪುತ್ರ ಸನತ್ಕುಮಾರ ಅಲ್ಲ ಅವರಲ್ಲಿ ಅಂತರ್ಯಾಮಿಯಾದ ಸನತ್ಕುಮಾರ ರೂಪಿಯಾದ ಪರಮಾತ್ಮ. ಅಂತಹ ಸನತ್ಕುಮಾರನಾದ ಸನತ್ ಯಾವಾಗಲೂ **'ಕು'** ಕೆಟ್ಟ **'ಮಾ'** ಇಚ್ಛೆಯನ್ನು ಬುದ್ಧಿಯನ್ನು **'ರ'** ನಾಶ ಮಾಡುತ್ತಾನೆ ಆದ್ದರಿಂದ **'ಸನತ್ ಕು ಮಾ ರ'** ಎಂಬುದಾಗಿ ಅವನನ್ನು ಕರೆಯುವುದು. ಅಂತಹ ಸನತ್ಕುಮಾರ ರೂಪಿಯಾದವನು ಪರಮಾತ್ಮ ವಿಭು ಎಂಬ ರೂಪದ ಅವತಾರವನ್ನು ತಾಳಿದವನು ಭಗವಂತ, ತಾನು ನರ ನಾರಾಯಣ. ಯಮ ದೇವರಿಂದ ಮೂರ್ತಿಯಲ್ಲಿ ನರ ನಾರಾಯಣನಾಗಿ ಅವತಾರ ಮಾಡಿದಾಗ ಅಪ್ಸರಾ ಸ್ತ್ರೀಯರೆಲ್ಲ ಆ ನಾರಾಯಣನ ತಪಸ್ಸಿಗೆ ವಿಘ್ನ ಮಾಡುವುದಕ್ಕೆ ಬಂದರೆ ತನ್ನ ತೊಡೆಯಿಂದಲೇ ಊರ್ವಶಿಯನ್ನು ಸೃಷ್ಟಿ ಮಾಡಿ ಸ್ವರ್ಗಲೋಕದೊಳಗೆ ಅಪ್ಸರಾ ಸ್ತ್ರೀಯರು ಏನಾದರೂ ಕಡಿಮೆ ಇದ್ದರೆ ಇವಳನ್ನು ಕರೆದುಕೊಂಡು ಹೋಗಿ ಅಂತ ಕೊಟ್ಟು ಕಳಿಸುತ್ತಾನೆ ನೀವೇನು ನನಗೆ ಮೋಹ ಮಾಡುವುದು. ನಾಚಿಕೆಯಾಗಿ ಅಪ್ಸರಾ ಸ್ತ್ರೀಯರೆಲ್ಲ ತಲೆ ತಗ್ಗಿಸಿಕೊಂಡು ಹೋಗುತ್ತಾರೆ ಅಂತಹ ನಿರ್ವಿಕಾರನಾಗಿ ಇರುವಂತಹ ಸ್ವಾಮಿ ಪರಮಾತ್ಮ.

ಆ ಭಗವಂತನಿಗೆ ಈ ತರಹದ ವಿಷಯಗಳ ಆಸಕ್ತಿ ಸ್ತ್ರೀಯರಲ್ಲಿ ಆಸಕ್ತಿಯೇ ಇದ್ದದ್ದೇ ಆದರೆ ಕೃಷ್ಣಾವತಾರದಲ್ಲಿ ಮಾತ್ರ ಯಾಕೆ ಗೋಪಿಕಾ ಸ್ತ್ರೀಯರ ಜೊತೆಗೆ ತಾನು ಮಾಡಿದ್ದು, ರಾಮಾವತಾರದಲ್ಲಿ ಇನ್ನುಳಿದ ಅವತಾರಗಳಲ್ಲಿಯೂ ಮಾಡಬಹುದಾಗಿತ್ತು, ತನ್ನ ಇಚ್ಛೆಯಿಂದಲೇ ಬೇಕಾದಷ್ಟು ಜನರನ್ನು ಸೃಷ್ಟಿ ಮಾಡಿಕೊಂಡು ಮಾಡಬಹುದಾಗಿತ್ತು, ಕೃಷ್ಣಾವತಾರದಲ್ಲಿಯೇ ಗೋಕುಲ ವೃಂದಾವನಗಳಲ್ಲಿ ಮಾತ್ರ ಏಕೆ ಮಥುರೆಗೆ ಹೋದಮೇಲೂ ಬೇಕಾದಷ್ಟು ಸ್ತ್ರೀಯರ ಜೊತೆಗೆ ತಾನು ವಿಹಾರವನ್ನು ಮಾಡಬಹುದಾಗಿತ್ತು ಅಲ್ಲ, ಕಂಡ ಕಂಡ ಪರಸ್ತ್ರೀಯರ ಜೊತೆಗೆ ಸರ್ವಥಃ ಪರಮಾತ್ಮ ಆ ರೀತಿಯ ಸಂಗವನ್ನು ಮಾಡಿಲ್ಲ. ಇವರು ಅಪ್ಸರಾ ಸ್ತ್ರೀಯರು ಶ್ರೀಕೃಷ್ಣನ ಸಂಗವಾಗಬೇಕು ಅಂತ ತಪಶ್ಚರ್ಯ ಮಾಡಿಯೇ ಜನ್ಮವನ್ನು ಪಡೆದವರು ವರ ಪಡೆದು, ಶ್ರೀಕೃಷ್ಣನ ಉಪನಯನಕ್ಕಿಂತಲೂ ಪೂರ್ವದಲ್ಲಿಯೇ ಶ್ರೀಕೃಷ್ಣ ಪರಮಾತ್ಮನ ಸಂಗ ನಮಗೆ ಆಗಬೇಕು ಅಂತ ತಪಸ್ಸು ಮಾಡಿ ವರ ಪಡೆದು ಹುಟ್ಟಿ ಬಂದಂತಹ ಅಪ್ಸರಾ ಸ್ತ್ರೀಯರಿವರು. ಆ ವರ ಫಲವನ್ನು ಕೊಡುವುದಕ್ಕೋಸ್ಕರ ಅವರು ತಪಸ್ಸು ಮಾಡಿದ ಫಲ ಕೊಡುವುದಕ್ಕೋಸ್ಕರ ಮಾತ್ರ ಪರಮಾತ್ಮ ಅವರ ಜೊತೆಗೆ ಸಂಗವನ್ನು ಮಾಡಿದ್ದಾನೆಯೇ ಹೊರತು ಸುಮ್ಮನೆ ತನ್ನ ಇಚ್ಛೆಗೆ ಬಂದಿದೆ ಅಂತ ಸಂಗವನ್ನು ಮಾಡುವುದಾದರೆ ವೃಂದಾವನದಲ್ಲಿ ಏಕೆ, ಮಥುರೆಯಲ್ಲಿ ಏಕೆ ಬೇಡ ಎಲ್ಲ ಅವತಾರಗಳಲ್ಲಿ ಯಾಕೆ ಮಾಡಬಾರದಾಗಿತ್ತು. ಎಷ್ಟು ಬೇಕೋ ಅಷ್ಟು ಇಚ್ಛೆಯಿಂದ ತಾನು ಸೃಷ್ಟಿಯನ್ನು ಮಾಡಿಕೊಂಡು ಸುಖವಾಗಿ ಇರಬಹುದಲ್ಲ ಆದರೆ ಭಗವಂತನಿಗೆ ಸರ್ವಥಃ ಆ ತರಹದ ಅಪೇಕ್ಷೆಯಿಲ್ಲ ನಿಷ್ಕಾಮನಾದವನು ಕೇವಲ ಅವರ ತಪಸ್ಸಿಗೆ ವರವನ್ನು ಕೊಡುವುದಕ್ಕೆ ಮಾತ್ರ ಪರಮಾತ್ಮ ಆ ರೀತಿಯಾಗಿ ಮಾಡಿದ್ದಾನೆ. ಒಂದೇನಾದರೂ ಈ ತರಹದ ತಪ್ಪನ್ನು ಮಾಡಿದರೆ ಇವತ್ತಿನ ಸಮಾಜದೊಳಗೇನೆ ಜನರು ಅವನನ್ನು ದೂರ ಇಡುತ್ತಾರೆ, ನಾನಾ ರೀತಿಯ ನಿಂದೆಗೆ ಗುರಿ ಮಾಡುತ್ತಾರೆ. ಅಂತಹ ಕಾಲದಲ್ಲಿ ಧರ್ಮದ ಯುಗ ದ್ವಾಪರ ಯುಗದೊಳಗೆ ಕಲಿ ಯುಗಕ್ಕಿಂತಲೂ ಅತ್ಯದ್ಭುತವಾಗಿ ಉನ್ನತವಾದ ಸ್ಥಾನದೊಳಗೆ ಧರ್ಮ ಇದ್ದಾಗ 5,000 ಸಾವಿರ

1. 06.08.17 ಭಾಗವತ

ವರ್ಷಗಳ ಹಿಂದೆ ಅಷ್ಟೆಲ್ಲ ಋಷಿಗಳು, ಅಷ್ಟೆಲ್ಲ ಮುನಿಗಳು, ದೇವತೆಗಳು ಎಲ್ಲರೂ ಪರಮಾತ್ಮನನ್ನು ದೇವರು ಅಂತ ಆರಾಧನೆ ಮಾಡಿ, ಪೂಜೆಯನ್ನು ಮಾಡಿ ಎಲ್ಲರ ಮಧ್ಯದಲ್ಲಿ ಭೀಷ್ಮಾಚಾರ್ಯರು ಅಗ್ರ ಪೂಜೆಯನ್ನು ಮಾಡುತ್ತಾರೆ ಕೃಷ್ಣನಿಗೇ ಮಾಡಬೇಕು ಅಂತ. ಅಂತಹ ಶ್ರೀಕೃಷ್ಣ ಪರಮಾತ್ಮನ ಎಲ್ಲ ಚರಿತ್ರೆಯನ್ನು ತಿಳಿದ ಋಷಿಗಳು, ರಾಜರು, ರಾಜರ್ಷಿಗಳು, ಮಹರ್ಷಿಗಳು, ದೇವರ್ಷಿಗಳು, ದೇವತೆಗಳು ಎಲ್ಲರೂ ಶ್ರೀಕೃಷ್ಣ ಪರಮಾತ್ಮನ ಪೂಜೆಯನ್ನು ಮಾಡಬೇಕಾಗಿದ್ದರೆ ಶ್ರೀಕೃಷ್ಣ ಪರಮಾತ್ಮ ಮಾಡಿದಂತಹ ಈ ಎಲ್ಲ ಕಾರ್ಯಗಳು ಅತ್ಯಂತ ಶುದ್ಧವಾದದ್ದು, ಪವಿತ್ರವಾದದ್ದು, ನಿರ್ದೋಷನಾಗಿದ್ದಾನೆ ಶ್ರೀಕೃಷ್ಣ ಪರಮಾತ್ಮ ಅನ್ನುವ ವಿಶ್ವಾಸ ಇಲ್ಲದಿದ್ದರೆ ಯಾಕೆ ಮಾಡುತ್ತಾ ಇದ್ದರು. ಹಾಗಾದರೆ ಶ್ರೀಕೃಷ್ಣ ಪರಮಾತ್ಮನನ್ನು ಸಾಮಾನ್ಯ ಮನುಷ್ಯನಂತೆ ನೋಡುವುದಲ್ಲ '**ಅತಿಮಾನುಷ ಕರ್ಮಣಾ**' ಅವರು ಮಾಡಿದ ತಪಸ್ಸಿಗೆ ಫಲ ಕೊಡುವುದಕ್ಕೆ ಮಾತ್ರ ಪರಮಾತ್ಮ ಆ ರೀತಿಯಾಗಿ ಮಾಡಿದ್ದು ಎಂಬುದಾಗಿ ನಾವು ತಿಳಿಯಬೇಕು.

ತಾನು ಸಾಕ್ಷಾತ್ ದೇವರು ಅಂತ ತೋರಿಸುವುದಕ್ಕೆ ಮಾಡಿದ ಕೆಲಸಗಳು ಕೆಲವು. ಗೋವರ್ಧನ ಪರ್ವತ ಎತ್ತಿದ್ದು, ನಾನಾ ವಿಧವಾದ ಅಸುರರ ಸಂಹಾರ ಮಾಡಿದ್ದು, ಕಾಡ್ಗಿಚ್ಚು ಪಾನ ಮಾಡಿದ್ದು ಒಂದೇ ಎರಡೇ ಅನೇಕ ಕಾರ್ಯಗಳನ್ನು ಆ ರೀತಿಯಲ್ಲಿ ಇದನ್ನು ಮಾಡಿದ್ದು. ಕೆಲವುದನ್ನ ಲೋಕಶಿಕ್ಷಣಕ್ಕಾಗಿ ಮಾಡಿದ್ದು, ಗುರುಕುಲದಲ್ಲಿ ವಾಸ ಮಾಡಿ ಗುರುಗಳ ಸೇವೆ ಮಾಡಿದ, ತಂದೆ ತಾಯಿಗಳ ಸೇವೆ ಮಾಡಿದ ಇವುಗಳಲ್ಲ ಲೋಕಶಿಕ್ಷಣಕ್ಕಾಗಿ ಮಾಡಿದ. ಯಾವುದನ್ನು ಲೋಕಶಿಕ್ಷಣಕ್ಕೆ ಮಾಡಿದ್ದಾನೆ ಅದನ್ನು ಅನುಸರಣೆ ಮಾಡಬೇಕು, ಯಾವುದನ್ನು ದೇವರು ಅಂತ ತನ್ನ ದೇವತ್ವವನ್ನು ತೋರಿಸಿಕೊಳ್ಳುವುದಕ್ಕೆ ಮಾಡಿದ್ದಾನೆ ಅದನ್ನು ತಿಳಿದು ಪರಮಾತ್ಮನನ್ನ ದೇವರು ಅಂತ ಉಪಾಸನೆ ಮಾಡಬೇಕು ಎಂಬುದಾಗಿ ನಾವು ಅರ್ಥ ಮಾಡಿಕೊಳ್ಳಬೇಕು. ಅಂತಹ ನಿರ್ದೋಷನಾದ ಭಗವಂತನ ಮಹಿಮೆಯನ್ನು ಹರಿವಂಶ ನಮಗೆ ತಿಳಿಸಿಕೊಡುತ್ತದೆ.

ಅರಿಷ್ಟ ಎಂಬಂತಹ ಅಸುರ ಬಂದಿದ್ದಾನೆ ರುದ್ರ ದೇವರ ವರದಿಂದ ಅವಧ್ಯನಾದವನು. ಎತ್ತಿನ ರೂಪದಲ್ಲಿ ಬರುತ್ತಾನೆ ಶ್ರೀಕೃಷ್ಣ ಪರಮಾತ್ಮನನ್ನು ಸಂಹಾರ ಮಾಡಬೇಕು ಅಂತ. ಉಗ್ರವಾದ ರೂಪವನ್ನು ತನ್ನ ಕೋಡುಗಳನ್ನು ಮುಂದೆ ಮಾಡಿ ಕೃಷ್ಣನ ಹೊಟ್ಟೆಗೆ ಕೋಡುಗಳಿಂದ ತಿವಿದು ಸಂಹಾರ ಮಾಡಬೇಕು ಅಂತ ಬಂದರೆ ಆ ಕೋಡುಗಳನ್ನೇ ಹಿಡಿದು ಪರಮಾತ್ಮ ಹಿಂದೆ ತಳ್ಳಿದ್ದಾನೆ. ಹದಿನೆಂಟು ಹೆಜ್ಜೆ ಹಿಂದೆ ತಳ್ಳಿದ್ದಾನೆ ಅಂತ ಭಾಗವತದಲ್ಲಿ ವರ್ಣನೆ ಬರುತ್ತದೆ.

ಅಪೀಡಯದರಿಷ್ಟಸ್ಯ ಕಣ್ಠಂ ಕ್ಲಿನ್ನಮಿವಾಮ್ಬರಮ್ ॥ (21.20 ವಿಷ್ಣುಪರ್ವ)

ಅಂತ ಹರಿವಂಶ ಹೇಳುತ್ತದೆ. ಅವನನ್ನು ಹಿಂದೆ ತಳ್ಳಿ ಆ ಕೋಡುಗಳಿಂದಲೇ ಒದ್ದೆ ಬಟ್ಟೆಯನ್ನ ಹಿಂಡಿದ ಹಾಗೆ ಹಿಂಡಿದನಂತೆ ಕುತ್ತಿಗೆಯನ್ನು ಆ ಕೋಡುಗಳನ್ನೇ ಕಿತ್ತಿ ಅದರಿಂದಲೇ ಚುಚ್ಚಿ ಅವನನ್ನು ಸಂಹಾರ ಮಾಡಿದ್ದಾನೆ ಅರಿಷ್ಟಾಸುರನನ್ನು.

ಈ ರೀತಿ ಆ ಅರಿಷ್ಟಾಸುರನನ್ನು ಸಂಹಾರ ಮಾಡಿದ ಮೇಲೆ ಕಂಸನಿಗೆ ಬಹಳ ಚಿಂತೆ ಆಗಿದೆ ಎಲ್ಲ ಯಾದವರನ್ನು ಸೇರಿಸಿದ್ದಾನೆ, ವಸುದೇವನು ಬಂದಿದ್ದಾನೆ ಅಲ್ಲಿ, ಅಂಧಕನು ಇದ್ದಾನೆ ಎಲ್ಲಾ ಯಾದವರು ಬಂದಿದ್ದಾರೆ. ಆ ಯಾದವರ ವರ್ಣನೆಯನ್ನು ಮಾಡಿದ್ದೆ ಮಾಡಿದ್ದು ನೀವೆಲ್ಲ ಶಾಸ್ತ್ರಗಳ ಅಧ್ಯಯನ ಮಾಡಿದ್ದೀರಿ ವರ್ಣಾಶ್ರಮೋಚಿತ ಕರ್ಮಗಳಲ್ಲಿ ತತ್ಪರರಾಗಿದ್ದೀರಿ, ಪ್ರಜೆಗಳ ರಕ್ಷಣೆಯನ್ನು ಮಾಡುವುದಕ್ಕೆ ಸಮರ್ಥರು, ಎಲ್ಲ ಶರಣಾಗತ ರಕ್ಷಕರು,

ಋಷಿಗಳಂತೆ ನಿಮ್ಮ ವರ್ತನೆ ಇದೆ. **'ಋಷೀಣಾಮಿವ ವೋ ವೃತ್ತಂ'**[1] ವಸುರುದ್ರಾದಿತ್ಯಾದಿ ದೇವತೆಗಳಂತಹ ಸಾಮರ್ಥ್ಯ ನಿಮಗುಂಟು ಅಂತಹ ಮಹಾನುಭಾವರು, ಮಹಾಶಕ್ತರು ಧಾರ್ಮಿಕರು ಸಜ್ಜನರು ನೀವೆಲ್ಲ ಯಾದವರು. ನಿಮಗೆಲ್ಲ ನಾನು ಹೇಳುವುದು ಇಷ್ಟೇ ಇಷ್ಟೆಲ್ಲಾ ಇದ್ದರೂ ಕೂಡ ನನ್ನನ್ನು ಯಾಕೋ ಉಪೇಕ್ಷೆ ಮಾಡಿದ್ದೀರಿ ಆ ಗೊಲ್ಲರ ಕೃಷ್ಣ ನಾನು ಎಷ್ಟು ದೈತ್ಯರನ್ನು ಕಳಿಸಿದರೂ ಎಲ್ಲರನ್ನು ಸಂಹಾರ ಮಾಡುತ್ತ ಇದ್ದಾನೆ, ನನಗೆ ಮೃತ್ಯುವಾಗಿ ಅವನು ಬೆಳೆಯುತ್ತಾ ಇದ್ದಾನೆ ಅಂತ ನಾರದರು ಹೇಳಿದ್ದಾರೆ ಇಷ್ಟಿದ್ದರೂ ನೀವು ಮಾತ್ರ ಯಾಕೆ ಉದಾಸೀನ ಮಾಡಿದ್ದೀರಿ ಎಂತಹ ಮಹಾನುಭಾವರು ನೀವೆಲ್ಲ.

ವರ್ಧಮಾನೋ ಮಮಾನರ್ಥೋ ಭವದ್ಭಿಃ ಕಿಮುಪೇಕ್ಷಿತಃ ॥ (22.20 ವಿಷ್ಣುಪರ್ವ)

ಶ್ರೀಕೃಷ್ಣ ಪರಮಾತ್ಮ ನೋಡಿ, ಕೃಷ್ಣನ ವರ್ಣನೆಯನ್ನೆಲ್ಲ ಮಾಡುತ್ತಾನೆ ಅವನಲ್ಲಿ ಭೃಗು ಋಷಿಯ ಆವೇಶವೂ ಇದೆ ವರ್ಣನೆ ಮಾಡುವಾಗ ಮಾಡುತ್ತಾನೆ ಮತ್ತೆ ಅವನನ್ನು ಸಂಹಾರ ಮಾಡಬೇಕು ಅನ್ನುತ್ತಾನೆ. ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ ಈ ಎಲ್ಲಾ ಅವತಾರಗಳನ್ನು ಸ್ವೀಕಾರ ಮಾಡಿ ಭಾರೀ ಭಾರೀ ಪರಾಕ್ರಮವನ್ನು ತೋರಿಸಿದಂಥವನು, ಅನೇಕ ಅಸುರರ ಸಂಹಾರವನ್ನು ಮಾಡಿದವನು ಅವನೇ ಈಗ ಇಲ್ಲಿ ಅವತಾರ ಮಾಡಿದ್ದಾನೆ ನನ್ನನ್ನು ಸಂಹಾರ ಮಾಡಬೇಕು ಅನ್ನುವ ಸಂಕಲ್ಪದಿಂದ, ವಸುದೇವ ಎಷ್ಟು ಮೋಸ ಮಾಡಿದ ನನಗೆ. ವಸುದೇವನ ಮಗನೇ ಇವನು, ನಾರದರು ಅದನ್ನೂ ಹೇಳಿರುತ್ತಾರೆ, ವಸುದೇವ ಆ ಯಶೋದೆಯ ಮಗಳು ದುರ್ಗಾ ಅವಳನ್ನು ಇಲ್ಲಿ ತಂದು ಕೃಷ್ಣನನ್ನು ಅಲ್ಲಿ ಒಯ್ದು ಕೊಟ್ಟು ಇಷ್ಟೆಲ್ಲ ಮೋಸ ಮಾಡಿದ ಎಂತಹ ನೀಚ ಇವನು ವಸುದೇವ, ನಾವು ಕೊಟ್ಟ ಅನ್ನವನ್ನು ತಿಂದು ನಮ್ಮ ರಾಜ್ಯದೊಳಗಿದ್ದು ನನಗೆ ಪೀಡೆಯನ್ನು ಕೊಡುತ್ತಾನೆ. ಕಾಗೆಗಳು ತಲೆಯ ಮೇಲೆ ಬಂದು ಕೂಡುತ್ತವಂತೆ, ಪಶುಗಳು ಮನುಷ್ಯರ ತಲೆಯ ಮೇಲೆ ಬಂದು ಕುಳಿತು ಅವರ ತಲೆಯ ಮೇಲೆ ಕುಳಿತು ಅವರ ಕಣ್ಣಿಗೆ ಕುಕ್ಕಿ ಮಾಂಸವನ್ನು ತಿನ್ನುತ್ತವೆ. ಯಾರ ತಲೆಯ ಮೇಲೆ ನಾವು ನಿಂತಿದ್ದೇನೆ ಅವರಿಗೆ ನಾನು ವಂಚನೆ ಮಾಡುತ್ತಾ ಇದ್ದೇನೆ ಅನ್ನುವ ಎಚ್ಚರವೂ ಇಲ್ಲದ ಕಾಗೆಯಂತೆ ಇದ್ದಾನೆ ಇವನು ವಸುದೇವ. ನಮ್ಮ ರಾಜ್ಯದೊಳಗೇ ಇದ್ದು ನನಗೆ ಪೀಡೆಯನ್ನು ಕೊಡುತ್ತಾನೆ, ನನ್ನನ್ನೇ ಸಂಹಾರ ಮಾಡುವುದಕ್ಕೆ ಆ ಕೃಷ್ಣನನ್ನು ಅಲ್ಲಿ ಬೆಳೆಸುತ್ತಾ ಇದ್ದಾನೆ ಇವನು ಅಂತ ಅತ್ಯಂತ ನೀಚವಾದ ರೀತಿಯಲ್ಲಿ ಆ ವಸುದೇವನನ್ನೆಲ್ಲ ಬೈದಿದ್ದಾನೆ. ಅಷ್ಟೆಲ್ಲ ಬೈದಮೇಲೆ ಹಿರಿಯ ವೃದ್ಧನಾದಂತಹ ಅಂಧಕ ಪಿತಾಮಹ ಅವನು ಮಾತನಾಡುತ್ತಾನೆ ಎಂತಹ ಮೂರ್ಖನಾಗಿದ್ದೀ ನೀನು ಅಂತ ಕಂಸನಿಗೆ ಬೈಯುತ್ತಾನೆ, ಅಲ್ಲಿ ಕುಳಿತಂತಹ ಎಲ್ಲ ಯಾದವರು ಕೂಡ ಕಂಸನನ್ನು ಬೈದಿದ್ದಾರೆ. ಇಂತಹ ಸಜ್ಜನನಾದ, ಸಾತ್ವಿಕನಾದ, ನಿರಪರಾಧಿಯಾದ ಸುಮ್ಮನೆ ತನ್ನ ಒಂದು ಮಾತಿಗಾಗಿ ತನ್ನ ಎಲ್ಲ ಮಕ್ಕಳನ್ನು ಇವನ ಕೈಯಲ್ಲಿ ಕೊಟ್ಟು, ಇವನು ಸಂಹಾರ ಮಾಡಿದರೂ ಒಂದು ಮಾತಾಡದಂತೆ ಸಹನಶೀಲತೆಯಿಂದ ಇದ್ದಂತಹ ವಸುದೇವನನ್ನು ಇಷ್ಟು ನಿಂದೆ ಮಾಡುತ್ತ ಇದ್ದಾನಲ್ಲ ಅಂತ ಎಲ್ಲರೂ ಅವನನ್ನು ನಿಂದೆ ಮಾಡಿದ್ದಾರೆ. ಆದರೆ ಗಟ್ಟಿಯಾಗಿ ಮಾತನಾಡುವ ಧೈರ್ಯ ಇಲ್ಲ, ಅಂಧಕ ಒಬ್ಬನು ಮಾತ್ರ ಮಾತನಾಡುತ್ತಾನೆ ನೀನು ಮಹಾ ಅನ್ಯಾಯವನ್ನು ಮಾಡುತ್ತ ಇದ್ದೀ, ಮಹಾಕ್ರೂರ, ನೀಚ, ದುಷ್ಟ ನಮ್ಮ ಯಾದವ ಕುಲಕ್ಕೆ ಕಲಂಕ ನೀನು.

1. 22.18 ವಿಷ್ಣುಪರ್ವ

ಮಾನ್ಯಶ್ಚೈವಾಭಿಗಮ್ಯಶ್ಚ ವೃದ್ಧಾಸ್ತಾತ ಯಥಾಗ್ನಯಃ ।
ಕ್ರೋಧೋ ಹಿ ತೇಷಾಂ ಪ್ರದಹೇಲ್ಲೋಕಾನನ್ತರ್ಗತಾನಪಿ ॥ (23.12 ವಿಷ್ಣುಪರ್ವ)

ಅವನು ಹಿರಿಯ ವಸುದೇವ, ವೃದ್ಧ, ಸಜ್ಜನ, ಜ್ಞಾನಿ, ಸಾತ್ವಿಕ ಅಂತಹ ದೊಡ್ಡವರ ದ್ರೋಹವನ್ನು, ನಿಂದೆಯನ್ನು ಮಾಡಿದರೆ ಮೂರು ಲೋಕಗಳನ್ನು ಸುಡುವ ಸಾಮರ್ಥ್ಯ ಇರುತ್ತದೆ ಅಂತಹ ದೊಡ್ಡವರ ದ್ರೋಹವನ್ನು ಮಾಡಬೇಡ. ನೀನು ಮಗುವಾದಾಗ ನಿನ್ನನ್ನು ಯಾರಾದರೂ ಕೊಲ್ಲಬೇಕು ಅಂತ ಪ್ರಯತ್ನ ಮಾಡಿದ್ದರೆ ನಿಮ್ಮ ತಂದೆ ಏನು ಮಾಡುತ್ತ ಇದ್ದ ಹೇಳು ಉಗ್ರಸೇನ, ಹೋಗಲಿಬಿಡು ಪಾಪ ಕೊಲ್ಲುತ್ತಾರೆ, ತೊಗೊಂಡು ಹೋಗಲಿ ಅಂತ ಕೊಡುತ್ತಾ ಇದ್ದನಾ. ವಸುದೇವ ತನ್ನ ಆರು ಮಕ್ಕಳನ್ನು ನಿನಗೆ ಕೊಟ್ಟಿದ್ದಾನೆ ಅವನ ದೊಡ್ಡ ಮನಸ್ಸು ನೋಡು ನೀನು ಬದುಕಬೇಕು ಅನ್ನುವುದಕ್ಕೆ ಆರೂ ಮಕ್ಕಳನ್ನು ಕೊಟ್ಟ, ಒಬ್ಬ ಮಗನನ್ನು ತಾನು ಬದುಕಲಿ ಅಂತ ಬದುಕಿಸಿಕೊಂಡಿದ್ದಾನೆ ತಪ್ಪೇನು ಅದರೊಳಗೆ.

ಪುನ್ನಾಮ್ನೋ ನರಕಾತ್ ಪುತ್ರೋ ಯಸ್ಮಾತ್ ತ್ರಾತಾ ಪಿತೄನ್ಸುದಾ ।
ತಸ್ಮಾದ್ ಭುವನ್ತಿ ಪುತ್ರೇತಿ ಪುತ್ರಂ ಧರ್ಮವಿದೋ ಜನಾಃ ॥ (23.20 ವಿಷ್ಣುಪರ್ವ)

ನರಕದಿಂದ ರಕ್ಷಣೆ ಮಾಡುತ್ತಾನೆ ಅನ್ನುವುದಕ್ಕೋಸ್ಕರ ಪುತ್ರಾ ಅಂತ ಹೆಸರು ಅವನಿಗೆ ಅಂತಹ ಶ್ರೇಷ್ಠ ಪುತ್ರನಾದ ಶ್ರೀಕೃಷ್ಣ ಪರಮಾತ್ಮನ ಮೇಲೆ ಅವನು ಪ್ರೀತಿಯನ್ನು ಮಾಡುವುದರೊಳಗೆ ತಪ್ಪೇನು ಅಂದ ಮಾತ್ರಕ್ಕೆ ಅವನನ್ನು ಇಷ್ಟು ನಿಂದೆ ಮಾಡುವುದಕ್ಕೆ ಅವಕಾಶ ಏನು. ಎಂತಹ ಮೂರ್ಖ ವಿವೇಕ ಶೂನ್ಯನಾಗಿದ್ದೀ ನೀನು ನೋಡು ಸುತ್ತಮುತ್ತಲೂ ನರಿಗಳು ಒದರುತ್ತಾ ಇವೆ, ದೇವಸ್ಥಾನದ ಪ್ರತಿಮೆಗಳು ಚಲಿಸುತ್ತಾ ಇವೆ, ಭೂಕಂಪ ಆಗುತ್ತಾ ಇದೆ, ನಾನಾ ವಿಧವಾದಂತಹ ಅಪಶಕುನಗಳೆಲ್ಲ ಆಗುತ್ತಾ ಇವೆ ಇದೆಲ್ಲ ನೀನು ರಾಜ್ಯವನ್ನು ಕಳೆದುಕೊಂಡು ಶೀಘ್ರದಲ್ಲಿ ಮೃತನಾಗುತ್ತಿ ಅನ್ನುವುದಕ್ಕೆ ಇದೆಲ್ಲ ಸೂಚನೆ. ಇಷ್ಟಿದ್ದರೂ ನಿನಗೆ ಬುದ್ಧಿ ಇಲ್ಲ ಇನ್ನೂ ಮತ್ತೆ ಆ ಕೃಷ್ಣನ ವಿರೋಧವನ್ನು ಮಾಡಬೇಕು ಅಂತಿದ್ದೀ ಈಗಾದರೂ ಹೋಗಿ ಶ್ರೀಕೃಷ್ಣ ಪರಮಾತ್ಮನಿಗೆ ಶರಣು ಹೋಗು, ಸುರಕ್ಷಿತವಾಗಿ ನೀನು ಬದುಕುವುದಕ್ಕೆ ಸಾಧ್ಯ ಇದೆ ಅಂತ ಅಂಧಕ ಬೇಕಾದಷ್ಟು ಉಪದೇಶವನ್ನು ಮಾಡಿದ್ದಾನೆ. ಅವನಿಗೆ ಏನೂ ತಲೆಯಲ್ಲಿ ಹೋಗಲಿಲ್ಲ ಮತ್ತೆ ಇನ್ನೊಬ್ಬ ಅಸುರನನ್ನು ಕರೆದ ಕೇಶಿಯನ್ನು ಹೋಗು ಶ್ರೀಕೃಷ್ಣ ಪರಮಾತ್ಮನನ್ನು ಸಂಹಾರ ಮಾಡುವುದಕ್ಕೆ ನಿನ್ನದು ಪ್ರಯತ್ನ ಆಗಲಿ ಅಂತ ಕೇಶಿ ಎಂಬ ಅಸುರನನ್ನು ಕಳುಹಿಸುತ್ತಾನೆ. ಈಚೆಗೆ ಅಕ್ರೂರನಿಗೆ ಹೇಳಿದ ನೀನು ಶ್ರೀಕೃಷ್ಣ ಪರಮಾತ್ಮನನ್ನು ಯಾವುದಾದರೂ ಒಂದು ಕ್ಲಿಕ್ ಆಗಲಿ ಅಂತ ಸತ್ತರೆ ಕೇಶಿಯಿಂದ ಸಾಯಲಿ, ಇಲ್ಲ ಬದುಕಿದ ಅಂದರೆ ಅವನನ್ನು ಕರೆದುಕೊಂಡು ಬಾ ಅಂತ ಅಕ್ರೂರನನ್ನು ಹೇಳಿ ಕಳಿಸುತ್ತಾನೆ. ಧನುರ್ಯಾಗವನ್ನು ನಾನು ಮಾಡುತ್ತಾ ಇದ್ದೇನೆ ಬಹಳ ದಿವಸ ಆಯಿತು ನಂದ, ಯಶೋದೆ, ಕೃಷ್ಣ, ಬಲರಾಮ ಎಲ್ಲ ಗೋಪಾಲಕರನ್ನು ಕರೆದುಕೊಂಡು ಬಾ ಅವರೆಲ್ಲರೂ ಉತ್ಸವವನ್ನು ನೋಡಲಿ ಧನುರ್ಯಾಗವನ್ನು ನೋಡಲಿ ಆಮಂತ್ರಣ ಕೊಟ್ಟಿದ್ದೇನೆ ಅಂತ ಹೇಳು, ಭಾರೀ ಪರಾಕ್ರಮಿಗಳು ಕೃಷ್ಣ ರಾಮರು ಅಂತ ಕೇಳಿದೆ ನೋಡಬೇಕು ಅಂತ ಅನ್ನಿಸಿದೆ ಅದಕ್ಕಾಗಿ ಬನ್ನಿ ಅಂತ ಕರೆದುಕೊಂಡು ಬಾ ಅಂತ. ಅಕ್ರೂರನಿಗೆ ಗೊತ್ತು ಇವನ ದುಷ್ಟವಾದ ಮನಸ್ಸು, ಅವರನ್ನು ಸಂಹಾರ ಮಾಡಿಸುವುದಕ್ಕೆ ಇಲ್ಲಿ ಕರೆಸುತ್ತಾ ಇದ್ದಾನೆ ಅನ್ನುವುದು ಗೊತ್ತು ಆದರೂ ಧೈರ್ಯ ಇದೆ. ಸರ್ವಥಃ ಶ್ರೀಕೃಷ್ಣ ಪರಮಾತ್ಮನನ್ನು ಸಂಹಾರ ಮಾಡುವ ಯೋಗ್ಯತೆ ಇವನಿಗೆ ಇಲ್ಲ, ಇವನೇ ಸತ್ತು ಹೋಗುತ್ತಾನೆ. ಈ ದುಷ್ಟನಾದ

ಕಂಸನ ಮರಣದಿಂದ ನಮ್ಮ ಯಾದವ ಕುಲಕ್ಕೆ ಕ್ಷೇಮವಾಗುತ್ತೆ ಅಂತನ್ನುವ ಪೂರ್ಣವಾದ ವಿಶ್ವಾಸದಿಂದ ರಾಮ, ಕೃಷ್ಣನ ದರ್ಶನವಾಗುತ್ತದೆ ಎಂತಹ ದೊಡ್ಡ ಭಾಗ್ಯ ಸಿಕ್ಕಿತು ನನಗೆ ಈ ನಿಮಿತ್ತದಿಂದ ಅಂತ ಸಂತೋಷದಿಂದ ಅಕ್ರೂರ ಒಪ್ಪಿಕೊಂಡಿದ್ದಾನೆ ಅವನು ಆ ಕಡೆಗೆ ಹೊರಟಿದ್ದಾನೆ.

ಈ ಕಡೆಗೆ ಕೇಶಿ ಬರುತ್ತಾ ಇದ್ದಾನೆ ಕುದುರೆಯ ರೂಪದಲ್ಲಿ ಇರುವಂತಹ ವ್ಯಕ್ತಿ, ಪಾರ್ವತಿಯನ್ನು ಕುರಿತು ತಪಸ್ಸು ಮಾಡಿ ಪಾರ್ವತಿಯ ವರದಿಂದ ಸಾಯಲೇಬಾರದು ಅನ್ನುವ ವರವನ್ನು ಪಡೆದುಕೊಂಡಂತಹ ಉಗ್ರ ಕೇಶಿ. ಅವನು ಇರುವಂತಹ ವನದೊಳಗೆ ಏನಿಲ್ಲ ಬರೀ ಎಲುಬುಗಳು, ಬಂದವರನ್ನೆಲ್ಲ ತಿನ್ನುವುದು ಎಲುಬುಗಳನ್ನು ಎಸೆಯುವುದು ಇಂತಹ ಉಗ್ರನಾದ ಕ್ರೂರನಾದಂತಹ ಆ ಕೇಶಿ. ಶ್ರೀಕೃಷ್ಣ ಪರಮಾತ್ಮನ ಮೇಲೆ ಆಕ್ರಮಣ ಮಾಡುವುದಕ್ಕೆ ಅಂತ ಬಂದರೆ ಶ್ರೀಕೃಷ್ಣ ಪರಮಾತ್ಮ ತನ್ನ ಬಾಹುವನ್ನು ಆ ಕುದುರೆಯ ರೂಪದಲ್ಲಿ ಇರುವ ದೈತ್ಯನ ಬಾಯಿಯಲ್ಲಿ ಹಾಕಿದ್ದಾನೆ. ಕಡಿಯಬೇಕು ಅಂತ ಹೋದರೆ ಹಲ್ಲೆಲ್ಲ ಮುರಿದು ಕೆಳಗೆ ಬಿದ್ದಿದೆ, ರಕ್ತ ಸುರಿಯುತ್ತ ಇದೆ, ಕಣ್ಣುಗುಡ್ಡಿ ಕಿತ್ತು ಕೆಳಗೆ ಬೀಳುತ್ತ ಇದೆ, ಏನೂ ಮಾಡಲಿಕ್ಕೆ ಗೊತ್ತಾಗುತ್ತಾ ಇಲ್ಲ ಕ್ರಮೇಣ ಪರಮಾತ್ಮ ತನ್ನ ಬಾಹುವನ್ನು ಬೆಳೆಸುತ್ತಾ ಇದ್ದಾನೆ ಒಳಗೆ ಬೆಳೆದು ಬೆಳೆದು ಶ್ವಾಸ ನಿರೋಧವಾಗಿ ಅಲ್ಲಿಯೇ ಮೃತನಾಗಿ ಹೋಗಿದ್ದಾನೆ ಕೇಶಿ. ಈ ರೀತಿ ಆ ದುಷ್ಟನಾದ ಕೇಶಿಯನ್ನು ಸಂಹಾರ ಮಾಡಿದ್ದಾನೆ. ಕುದುರೆಯ ರೂಪದಲ್ಲಿ ಬಂದಂತಹ ದೈತ್ಯ, ಎಲ್ಲರ ಸಂಹಾರವನ್ನು ಮಾಡುವಂತಹ ಕೆಟ್ಟ ಕಾರ್ಯಗಳನ್ನು ಮಾಡುವ ದೈತ್ಯ, ಕುದುರೆ ಇಂದ್ರಿಯಗಳು ಅಂತ ಕೆಟ್ಟ ಕೆಲಸವನ್ನು ಮಾಡುವಂತಹ ಇಂದ್ರಿಯಗಳು ಇದ್ದರೆ, ಇಂದ್ರಿಯಗಳಿಂದ ಕೆಟ್ಟ ಕೆಲಸಗಳನ್ನು ಮಾಡಿದರೆ ದೇವರು ಶಾಸನ ಮಾಡುತ್ತಾನೆ ಅನ್ನುವ ಸಂದೇಶ. ಇಂದ್ರಿಯಗಳೆಲ್ಲ ಪರೋಪಕಾರಕ್ಕಾಗಿ ಇರಬೇಕೇ ಹೊರತು ಇನ್ನೊಬ್ಬರ ಅಪಕಾರಕ್ಕಾಗಿ ಇರಬಾರದು, ಪರೋಪಕಾರಕ್ಕಾಗಿ ನಮ್ಮ ಇಂದ್ರಿಯಗಳು ಇದ್ದರೆ ದೇವರ ಅನುಗ್ರಹ, ಅಪಕಾರಕ್ಕಾಗಿ ನಮ್ಮ ಇಂದ್ರಿಯಗಳ ಉಪಯೋಗವನ್ನು ಮಾಡಿದರೆ ದೇವರ ನಿಗ್ರಹವಾಗುತ್ತದೆ ಎಂಬ ಸಂದೇಶವನ್ನು ಈ ಕೇಶಿಯ ಸಂಹಾರ ಮಾಡುವ ಮೂಲಕ ಪರಮಾತ್ಮ ತಿಳಿಸಿಕೊಟ್ಟಿದ್ದಾನೆ.

ನಾರದರು ಬಂದಿದ್ದಾರೆ, ನಾರದರು ಅನ್ನುತ್ತಾರೆ ಕೃಷ್ಣ, ಅನೇಕ ಅಸುರರ ಸಂಹಾರ ಮಾಡಿದಿ ನಾನಿದ್ದಲ್ಲಿಯೇ ನೋಡಿ ಸಂತೋಷಪಡುತ್ತಾ ಇದ್ದೆ ಆದರೆ ಈ ಕೇಶಿ ಭಾರೀ ದುಷ್ಟ ಇವನನ್ನು ಸಂಹಾರ ಮಾಡಿ ಗೋಪಾಲಕರಿಗೆ ಮಾತ್ರ ಅಲ್ಲ ಇಡೀ ಜಗತ್ತಿಗೆ ನೀನು ಕ್ಷೇಮವನ್ನು ಮಾಡಿದ್ದೀ. ದೇವತೆಗಳಿಗೂ ಬಗ್ಗದೇ ಇರುವಂತಹ ದೈತ್ಯ ಇವನು ಆ ಪಾರ್ವತಿಯ ವರದಿಂದ ಅಷ್ಟು ಉನ್ಮತನಾಗಿದ್ದ ಅದಕ್ಕಾಗಿ ನಾನೊಂದು ನಾಮಕರಣ ಮಾಡುತ್ತೇನೆ ಅಂದರು. ದಾಮೋದರ ಅಂತ ನಾಮಕರಣ ಆಯಿತು, ಆಮೇಲೆ ಗೋವಿಂದ ಅಂತ ನಾಮಕರಣ ಆಯಿತು ಈಗ ನಾರದರು ಬಂದು ಕೇಶವ ಅಂತ ನಾಮಕರಣ ಮಾಡುತ್ತಾರೆ. ಕೇಶಿ ಎಂಬ ಅಸುರನ ಸಂಹಾರ ಕೇಶ ಉಳ್ಳವನಾದದ್ದರಿಂದ ಅವನು ಕೇಶಿ, ಕೇಶ ಉಳ್ಳವನಾದದ್ದರಿಂದಲೇ ಕೇಶ **'ವ'** ಗಮನ ನಾಶ ಸಂಹಾರ ಯಾರಿಂದ ಆಯಿತೋ ಅಂಥವನು ಕೇಶವ. ಇನ್ನೊಂದು ಅರ್ಥ ಇದೆ 'ಕ' ಬ್ರಹ್ಮ ದೇವರು, 'ಈಶ' ರುದ್ರ ದೇವರು ಇವರಿಬ್ಬರಿಗೂ ಪ್ರೇರಕನಾದದ್ದರಿಂದ ಕೇಶವ ಅಂತ, ಕೇಶಿ ಎಂಬ ಅಸುರನನ್ನು ಸಂಹಾರ ಮಾಡಿದ್ದರಿಂದಲೂ ಕೇಶವ ಅಂತ. ನೋಡಿ ಎರಡೂ ಅರ್ಥಗಳೂ ಸಂಗತ ಯಾಕೆ ಅಂದರೆ ಪಾರ್ವತಿಯ ವರದಿಂದ ಅವಧ್ಯನಾದ ಈ ಅಸುರನನ್ನ ಕೃಷ್ಣ ಹೇಗೆ ಕೊಂದ ಪಾರ್ವತಿಯ ಗಂಡನಾದ ಈಶನಿಗೂ ಪ್ರವರ್ತಕನಾದದ್ದರಿಂದ ಪಾರ್ವತಿಯ ವರದಿಂದ ಅವಧ್ಯರಾದರೂ ಇವನನ್ನು ಕೊಂದ ಅನ್ನುವ

ಅರ್ಥವೂ ಆ ಕೇಶವ ಎಂಬ ಶಬ್ದದಲ್ಲಿ ಸೂಚಿತವಾಗುತ್ತಾ ಇದೆ ಅಂತಹ ಕೇಶವ ನೀನು. **'ಕೇಶವೋನಾಮ್ನಾ ತ್ವಂ ಖ್ಯಾತೋ ಲೋಕೇ ಭವಿಷ್ಯಸಿ'** ಆ ಕೇಶವನಾಮ ಅನಾದಿಕಾಲದಿಂದಲೂ ಭಗವಂತನಿಗೆ ಇದೆ ವಿಶೇಷವಾಗಿ ಭಕ್ತರಿಗೆ ಅದು ಪ್ರಸಿದ್ಧಿ ಆಗುತ್ತೆ ಅಂತ ನಾರದರು ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ.

ಮುಂದಿನ ಭೂಭಾರಹರಣದ ಕಾರ್ಯ ಮಹಾಭಾರತಾದಿಗಳ ಯುದ್ಧವನ್ನು ಮಾಡಿಸಿ ಕಂಸನ ಸಂಹಾರವನ್ನು ಮಾಡಬೇಕು, ಮಹಾಭಾರತದ ಯುದ್ಧದಲ್ಲಿ ಪಾಂಡವರಿಂದ ಕೌರವರ ಸಂಹಾರವನ್ನು ಮಾಡಿಸಿ ಭೂಭಾರಹರಣವನ್ನು ಮಾಡಿ ಧರ್ಮದ ರಾಜ್ಯವನ್ನು ಸ್ಥಾಪನೆ ಮಾಡಬೇಕು ಎಂಬ ಪ್ರಾರ್ಥನೆಯನ್ನು ನಾರದರು ಮಾಡಿದ್ದಾರೆ ತಥಾಸ್ತು ಅಂತ ಪರಮಾತ್ಮ ಅವರಿಗೆ ಅಭಯವನ್ನು ನೀಡಿದ್ದಾನೆ ಎಂಬ ವಿಷಯವನ್ನು ತಿಳಿಸುತ್ತಾ ಇದ್ದಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

॥ ಶ್ರೀ ದಿಗ್ವಿಜಯ ರಾಮೋ ವಿಜಯತೇ ॥

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ವಿಷ್ಣುಪರ್ವ-18

* * *

ಶ್ರೀಕೃಷ್ಣ ಪರಮಾತ್ಮ ಧರ್ಮದ ಸಂಸ್ಥಾಪನೆಗಾಗಿ ಧರ್ಮ ವಿರೋಧಿಗಳಾದಂತಹ ಕೇಶಿ ಮೊದಲಾದ ಎಲ್ಲ ಅಸುರರನ್ನು ಸಂಹಾರ ಮಾಡಿ ಧರ್ಮದ ಸಂಸ್ಥಾಪನೆಯನ್ನು ಮಾಡಿದ್ದಾನೆ. ನಾರದರು ಕೇಶವ ಅಂತ ಪರಮಾತ್ಮನಿಗೆ ಅನಾದಿ ಸಿದ್ಧವಾದ ನಾಮವನ್ನೇ ಉಚ್ಚರಿಸಿ ಧನ್ಯರಾಗಿದ್ದಾರೆ. ಶ್ರೀಮದ್ಭಾಗವತದಲ್ಲಿಯೂ, ಹರಿವಂಶದಲ್ಲಿಯೂ ಒಂದು ಸಂಗತಿಯನ್ನು ನಾವು ವಿಶೇಷವಾಗಿ ಗಮನಿಸುವುದು ಪ್ರಾಯಃ ಗೋವಿಂದ ಎಂಬ ನಾಮಕರಣವನ್ನು ಗೋವರ್ಧನೋದ್ಧರಣವನ್ನು ಮಾಡಿ ಪರಮಾತ್ಮ ಯಾವಾಗ ಪಡೆದ ಲೋಕದೃಷ್ಟಿಯಿಂದ, ಇಂದ್ರ ದೇವರು ಹಾಗೂ ಸುರಭೀ ಬಂದು ಶ್ರೀಕೃಷ್ಣ ಪರಮಾತ್ಮನಿಗೆ ಸುವರ್ಣ ಘಟಗಳಿಂದ ಹಾಲಿನಿಂದ ಅಭಿಷೇಕ ಮಾಡುತ್ತಾರೆ ಗೋವಿಂದ ಅಂತ ನಾಮಕರಣ ಮಾಡುತ್ತಾರೆ ಆ ಮುಂದೆ ಶ್ರೀಮದ್ಭಾಗವತದಲ್ಲಿ ಮುಂದಿನ ಅಧ್ಯಾಯಗಳಲ್ಲಿ ದಶಮಸ್ಕಂಧದಲ್ಲಿ ವಿಶೇಷವಾಗಿ ಗೋವಿಂದ ಶಬ್ದದ ಪ್ರಯೋಗವನ್ನು ನಾವು ಕಾಣುತ್ತೇವೆ. ಆ ಮೊದಲು ಅಷ್ಟು ವಿಶೇಷವಾಗಿ ಗೋವಿಂದ ಶಬ್ದದ ಪ್ರಯೋಗವನ್ನು ಕಾಣೋದಿಲ್ಲ. ಹಾಗೆ ಹರಿವಂಶದಲ್ಲಿಯೂ ಕೂಡ ದಾಮೋದರ ಎಂಬ ಹೆಸರು ಬಂದ ನಂತರ ಕೇಶವ ಎಂಬ ನಾಮಕರಣವಾದ ನಂತರದ ಮುಂದಿನ ಅಧ್ಯಾಯಗಳಲ್ಲಿ ದಾಮೋದರ, ಕೇಶವ, ಗೋವಿಂದ ಈ ಶಬ್ದಗಳ ವಿಶೇಷವಾದಂತಹ ಒಂದು ವ್ಯವಹಾರವನ್ನು ನಾವು ಕಾಣುತ್ತೇವೆ. ಎಲ್ಲ ಸಂದರ್ಭಗಳಲ್ಲಿಯೂ, ಎಲ್ಲ ನಾಮಗಳು ದೇವರಿಗೆ ಇದ್ದರೂ ಕೂಡ ಅದರ ವಿಶೇಷವಾದ ಪ್ರಯೋಗಗಳು ಈ ರೀತಿ ಆ ಜ್ಞಾನಿಗಳು ನಮಗೆ ತಿಳಿಸಿಕೊಟ್ಟಾಗ ಕಂಡುಬರುತ್ತವೆ ಅಂತ ನಾವು ಅರ್ಥ ಮಾಡಿಕೊಳ್ಳಬಹುದು.

ಈ ಕಡೆಗೆ ಕಂಸನ ಆಜ್ಞೆಯನ್ನು ಹೊತ್ತು ಅಕ್ರೂರ, ಕಿಶೋರ ಎಂಬಂತಹ ಗಂಧರ್ವನ ಅವತಾರ, ಪರಮ ಭಗವದ್ಭಕ್ತ, ಸ್ವಾಯಂಭುವ ಮನುವಿನ ಆವೇಶ ಅಂತಹ ಅಕ್ರೂರ ಭಕ್ತಿಯಿಂದ ಈ ಒಂದು ನೆಪದಲ್ಲಿ ಶ್ರೀಕೃಷ್ಣ ಪರಮಾತ್ಮನ ದರ್ಶನ ಮಾಡುವ ಮಹಾಸೌಭಾಗ್ಯ ನನಗೆ ಸಿಗುತ್ತೆ ಅಂತ ಸಂತೋಷದಿಂದ ಧಾವಿಸಿ ಬಂದಿದ್ದಾನೆ ವೃಂದಾವನಕ್ಕೆ. ಅವನು ಬರುವ ಸಂದರ್ಭ ಸಾಯಂಕಾಲವಾಗಿತ್ತು, ಸೂರ್ಯಾಸ್ತವಾಗುತ್ತಾ ಇದೆ ಆ ಪ್ರಸಂಗ, ಕೆಂಪಾದ ಸೂರ್ಯ ಅಸ್ತನಾಗುವ ಹೊತ್ತಿಗೆ ಕೆಂಪಾಗಿ ತೋರುತ್ತ ಇದ್ದಾನೆ, ಅಕ್ರೂರನ ಮನಸ್ಸು ಭಕ್ತಿಯಿಂದ ರಾಗದಿಂದ ಅನುರಾಗದಿಂದ ಕೆಂಪಾಗಿದೆ. ಅಲ್ಲಲ್ಲಿ ಅಗ್ನಿಹೋತ್ರಗಳು ನಡೀತಾ ಇವೆ ಅನೇಕ ಸಜ್ಜನರ ಮನೆಗಳಲ್ಲಿ, ಗೋವುಗಳೆಲ್ಲ ಮೇಯ್ದು ತಿರುಗಿ ಬರುತ್ತಾ ಇವೆ, ವೇದ ಧ್ವನಿಗಳು ಅಲ್ಲಲ್ಲಿ ಕೇಳಿಸುತ್ತ ಇವೆ ಇಂತಹ ಒಂದು

ಪವಿತ್ರವಾದ ವಾತಾವರಣ. ಹರಿವಂಶ ಈ ಮೂಲಕವಾಗಿ ನಮಗೆ ತಿಳಿಸುತ್ತ ಇರುವುದು ಶ್ರೀಕೃಷ್ಣ ಪರಮಾತ್ಮ ಧರ್ಮದ ಸ್ಥಾಪನೆ ಮಾಡುವುದಕ್ಕಾಗಿ ಅವತಾರ ಮಾಡಿದವ, ಅಧರ್ಮದ ನಿರ್ಮೂಲನ ಮಾಡುವುದಕ್ಕಾಗಿ ಅವತಾರ ಮಾಡಿದವ. ಹೀಗಾಗಿ ಧರ್ಮವನ್ನು ವಿರೋಧಿಸುವ ಎಲ್ಲ ಅಸುರರ, ದೈತ್ಯರ, ರಾಕ್ಷಸರ ಸಂಹಾರವನ್ನು ಮಾಡಿ ಈ ಗೋಕುಲ, ವೃಂದಾವನಗಳಲ್ಲಿ ಧರ್ಮದ ಸ್ಥಾಪನೆ ಮಾಡಿದ್ದಕ್ಕೆ ನಿರಾತಂಕವಾಗಿ ಯಜ್ಞ ಯಾಗಾದಿಗಳು, ಗೋವುಗಳ ಸಂಚಾರ, ಸ್ತ್ರೀಯರ ಸಂಚಾರ ಯಾವುದೇ ರೀತಿಯ ಸಮಸ್ಯೆ ಇಲ್ಲದಂತೆ ನಡೆಯುತ್ತ ಇತ್ತು ಅಂತನ್ನುವುದರ ಸೂಚನೆಯನ್ನು ಈ ಮೂಲಕವಾಗಿ ಬಹಳ ಅದ್ಭುತವಾಗಿ ಆ ವೃಂದಾವನದ ವರ್ಣನೆಯನ್ನು ಮಾಡುವ ಮೂಲಕ ಹರಿವಂಶ ನಮಗೆ ನೀಡುತ್ತದೆ. ಅಂತಹ ಒಂದು ಪವಿತ್ರವಾದ ಶಾಂತವಾದ ನಿರ್ಮಲವಾದ ಧರ್ಮಮಯವಾದ ಆಕರ್ಷಕವಾದಂತಹ ವಾತಾವರಣದಲ್ಲಿ ಅಕ್ರೂರ ಪ್ರವೇಶ ಮಾಡುತ್ತಾ ಇದ್ದಾನೆ.

ಸೋಽವೇಷ್ಟತಾತ್ರ ಜಗದೀಶಿತುರಂಗಸಂಗಾತ್
ಲಬ್ಧೋಚ್ಚಯೇನ ನಿಖಿಲಾಘವಿದಾರಣೇಷು ॥
ಪಾಂಸುಷ್ವಜೇಶಪುರುಹೂತಮುಖೋಚ್ಚವಿದ್ಯುದ್
ಭ್ರಾಜತ್ಕಿರೀಟ ಮಣಿಲೋಚನಗೋಚರೇಷು ॥ (13.88 ಮಭಾತಾನಿರ್ಣಯ)

ಶ್ರೀಮದಾಚಾರ್ಯರು ವರ್ಣನೆ ಮಾಡಿದಂತೆ ಯಾವ ಪರಮಾತ್ಮನ ಪಾದ ಧೂಲಿಯ ಮೇಲೆ ಹೊರಳಾಡುವುದಕ್ಕೆ ಬ್ರಹ್ಮಾದಿ ದೇವತೆಗಳು ಕಾಯುತ್ತಾ ಇರುತ್ತಾರೆ, ಆ ಪರಮಾತ್ಮನ ಪಾದಗಳಿಗೆ ತಮ್ಮ ಶಿರಸ್ಸನ್ನು, ತಮ್ಮ ಕಿರೀಟವನ್ನು ಗಟ್ಟಿಸುತ್ತಾರೆ ಅಂತಹ ಪಾದ ಧೂಲಿಗಳು ಸಹಸ್ರಾರು ವರ್ಷಗಳವರೆಗೆ ತಪಶ್ಚರ್ಯವನ್ನು ಮಾಡಿ ಯಾವ ಪರಮಾತ್ಮನ ದರ್ಶನ ಪಡೆಯಬೇಕೋ, ಇನ್ನೂ ಮಹಾಪುಣ್ಯ ಇದ್ದರೆ ಆ ಪರಮಾತ್ಮನ ಪಾದ ಸ್ಪರ್ಶವನ್ನು ಪಡೆಯಬೇಕೋ ಅಂತಹ ಪಾದ ಸ್ಪರ್ಶದ ಭಾಗ್ಯವನ್ನು ಪಡೆದ ಪವಿತ್ರತಮವಾದ ಪಾದ ಧೂಲಿಗಳು ನೋಡಲಿಕ್ಕೆ ಸಿಗುತ್ತಾ ಇವೆ ಧ್ವಜ ವಜ್ರ ಅಂಕುಶಗಳಿಂದ ಚಿಹ್ನಿತವಾದದ್ದು ಅಂತ ಆ ಪಾದ ಚಿಹ್ನಗಳಿಂದ ಕೂಡಿದಂತಹ ಧೂಲಿಗಳ ಮೇಲೆ ಹೊರಳಾಡುತ್ತಾ ಇದ್ದಾನೆ. ರಥದಲ್ಲಿ ಕುಳಿತು ಹೋಗಲಿಕ್ಕೆ ಮನಸ್ಸು ಆಗಿಲ್ಲ ಅವನಿಗೆ ಉರುಳು ಸೇವೆಯನ್ನು ಮಾಡುತ್ತಾ ಹೋಗಿದ್ದಾನೆ ಶ್ರೀಕೃಷ್ಣ ಪರಮಾತ್ಮನ ಮನೆಗೆ ಅಕ್ರೂರ ಎಂತಹ ಭಕ್ತಿ. ಆ ಭಗವಂತನ ವಿಶೇಷ ಸನ್ನಿಧಾನ ಇರುವಂತಹ ಪ್ರತಿಮೆಗಳು ಸಾಲಿಗ್ರಾಮಗಳು ಇರುವಂತಹ ಸ್ಥಳ ದೇವರ ಮನೆ ಅಲ್ಲಿರುವಂತಹ ಧೂಲಿಯನ್ನು ದೇವರ ಮನೆಯನ್ನು ಸ್ವಚ್ಛ ಮಾಡುವಾಗ ಎಷ್ಟು ಧೂಲಿಯ ಕಣಗಳು ಇವನ ತಲೆಯ ಮೇಲೆ ಬೀಳುತ್ತವೆ, ಅಷ್ಟು ಸಾವಿರ ವರ್ಷ ಇವನು ಸ್ವರ್ಗದಲ್ಲಿ ಸುಖವಾಗಿ ಇರುತ್ತಾನೆ ಎಂದು ಶಾಸ್ತ್ರ ಹೇಳುತ್ತದೆ. ಅಷ್ಟು ಆ ಭಗವಂತನ ಅಧಿಷ್ಠಾನ ಇರುವ ಸಾಲಿಗ್ರಾಮಾದಿಗಳಿಂದ ಕೂಡಿದಂತಹ ದೇವರ ಮನೆಯಲ್ಲಿರುವ ಧೂಲಿಗೇನೆ ಇಷ್ಟು ಮಹತ್ವ ಅಂದರೆ ಸಾಕ್ಷಾತ್ ಭಗವಂತನ ಸ್ಪರ್ಶವಾಗಿರುವ ಆ ಪಾದ ಧೂಲಿಯ ಮಹತ್ವವನ್ನು ತನ್ನ ಚಿಂತನದಲ್ಲಿ ತಂದುಕೊಂಡಂತಹ ಅಕ್ರೂರ ಭಕ್ತಿಯಿಂದ ಪರಮಾತ್ಮನ ಗೃಹಕ್ಕೆ ಪ್ರವೇಶ ಮಾಡಿದ್ದಾನೆ. ಅವನು ಏನು ಅಂದುಕೊಂಡಿದ್ದ ಯಾವ ರೀತಿ ಪರಮಾತ್ಮ ನಾನು ಹೋದಾಗ ದರ್ಶನ ಕೊಡಬಹುದು ಅಂತ ಹಾಗೇ ದರ್ಶನ ಕೊಟ್ಟಿದ್ದಾನೆ ಪ್ರಾಯಃ ಆಕಳಿನ ಹತ್ತಿರ ಇರುತ್ತಾನೆ ಸಾಯಂಕಾಲ ಗೋದೋಹನ ಮಾಡುವ ಹೊತ್ತು ಹಾಗೆ ಇದ್ದಾನೆ ಕೃಷ್ಣ ಗೋವುಗಳ ಮಧ್ಯದಲ್ಲಿಯೇ ಇದ್ದಾನೆ.

ವತ್ಸಮಧ್ಯೇ ಸ್ಥಿತಂ ಕೃಷ್ಣಂ ಸವತ್ಸಾಮಿವ ಗೋವೃಷಮ್ । (25.17 ವಿಷ್ಣುಪರ್ವ)



ಆ ವತ್ಸಗಳ ಮಧ್ಯದಲ್ಲಿಯೇ ತಾನಿದ್ದಾನೆ ಎತ್ತು, ಎತ್ತಿನ ಹತ್ತಿರ ಕರು ಇದ್ದರೆ ಹೇಗೋ ಆಕಳು, ಎತ್ತು, ಕರು ಹಾಗೆ ಶ್ರೀಕೃಷ್ಣ ಪರಮಾತ್ಮ ಅವುಗಳ ಮಧ್ಯದಲ್ಲಿ ನಿಂತರೆ ಹಾಗೆ ತೋರುತ್ತಾ ಇದ್ದಾನೆ. ಕೃಷ್ಣ ಪರಮಾತ್ಮನಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿದ್ದಾನೆ. ನೋಡಿದರೆ ಹಿರಿಯ ಆದರೆ ಸರ್ವೋತ್ತಮನಾದಂತಹ ಪರಮಾತ್ಮನ ತತ್ವವನ್ನು ತಿಳಿದ ಅಕ್ರೂರ ಸಾಷ್ಟಾಂಗವಾದ ಪ್ರಣಾಮವನ್ನು ಮಾಡಿದ್ದಾನೆ ಭಗವಂತನ ದರ್ಶನವನ್ನು ಪಡೆದಿದ್ದಾನೆ ಪರಮಾತ್ಮ ಅವನನ್ನು ಎರಡೂ ಭುಜಗಳಿಂದ ಎತ್ತಿ ವಿಶೇಷವಾಗಿ ಅನುಗ್ರಹವನ್ನು ಮಾಡಿದ್ದಾನೆ. ಎರಡೂ ಪಾದಗಳನ್ನು ನೋಡುತ್ತಾ ಹೇಳುತ್ತಾನೆ ಅಕ್ರೂರ ಇದೇ ಪಾದಗಳಾ ಎಲ್ಲ ಕೆಳಗಿನ ಲೋಕಗಳನ್ನು ವ್ಯಾಪಿಸಿದ ಪಾದ, ಮೇಲಿನ ಎಲ್ಲ ಲೋಕಗಳನ್ನು ವ್ಯಾಪಿಸಿದ ಮತ್ತೊಂದು ಪಾದ, ಬಲಿ ಚಕ್ರವರ್ತಿಯ ತಲೆಯ ಮೇಲೆ ಕಾಲಿಟ್ಟ ಪಾದ ಇದೇ ಪಾದಗಳಾ, ಇಷ್ಟು ಪುಟ್ಟ ಪಾದಗಳೇ.

ತ್ರೈಲೋಕ್ಯಾಕ್ರಾನ್ತಿಭೂತಾಭ್ಯಾಂ ಭುವಿ ಪದ್ಭ್ಯಾಂ ವ್ಯವಸ್ಥಿತಃ ॥ (25.25 ವಿಷ್ಣುಪರ್ವ)

ಸಾಮಾನ್ಯ ಮಾನವರಂತೆ ನೀನು ಭೂಮಿಯ ಮೇಲೆ ನಿಂತಿದ್ದೀಯಲ್ಲಪ್ಪಾ ನಿನ್ನ ಮಹಿಮೆ ಎಷ್ಟು ಅದ್ಭುತ ಎಂಬುದಾಗಿ ಹೇಳುತ್ತಾನೆ. ನಿನ್ನಿಂದ ಸಂಪೂರ್ಣ ಭೂಭಾರಹರಣವಾಗುತ್ತೆ ಅಂತನ್ನುವುದು ನನಗೆ ಗೊತ್ತು ಸಾಕ್ಷಾತ್ ಸರ್ವೋತ್ತಮನಾದ ಶ್ರೀಹರಿಯೇ ನೀನು ಅವತಾರ ಮಾಡಿದ್ದೀ. ಎಲ್ಲ ದುರ್ಜನರ ನಾಶ ಮಾಡಿ ಧರ್ಮದ ಸಂಸ್ಥಾಪನೆಯನ್ನು ಮಾಡುವುದು ಶೀಘ್ರದಲ್ಲಿ ನಿನ್ನಿಂದ ಆಗುತ್ತೆ ಅಂತ ನನಗೆ ಗೊತ್ತು.

ರಾಜ್ಞಾಂ ಭವಿಷ್ಯತ್ಯುಪರಿ ನ ಚ ರಾಜಾ ಭವಿಷ್ಯತಿ ॥ (25.31 ವಿಷ್ಣುಪರ್ವ)

ನೀನು ರಾಜನಾಗುವುದಿಲ್ಲ ಹೆಸರಿಗೆ ಆದರೆ ಎಲ್ಲ ರಾಜರಿಗೆ ರಾಜನಾಗಿ, ಎಲ್ಲ ರಾಜರಿಗೂ ನಾಯಕನಾಗಿ ಪ್ರೇರಕನಾಗಿ ಪೋಷಕನಾಗಿ ನೀನಿರುತ್ತೀಯ ಅಂತಹ ನಿನ್ನ ಮಹಾಮಹಿಮೆ ನನಗೆ ಗೊತ್ತು. ಕಂಸ ಧನುರ್ಯಾಗವನ್ನು ಮಾಡುತ್ತಾನಂತೆ ಮಥುರೆಗೆ ಬರಬೇಕು, ಎಲ್ಲ ಗೋಪಾಲಕರು, ಗೋಪಿಕಾ ಸ್ತ್ರೀಯರು ಎಲ್ಲರನ್ನೂ ಕರೆದುಕೊಂಡು ಮಥುರೆಗೆ ಬರಬೇಕು ಅಂತ ಹೇಳಿ ಕಳಿಸಿದ್ದಾನೆ. ಆ ಒಂದು ವಿಜ್ಞಾಪನೆಯನ್ನು ಮಾಡುವುದಕ್ಕಾಗಿ ನಾನು ಬಂದಿದ್ದೇನೆ. ಉಳಿದೆಲ್ಲ ಗೋಪಾಲಕರು ಬರುವಾಗ ವಾರ್ಷಿಕ ಕರ ಟ್ಯಾಕ್ಸ್ ಏನು ಕೊಡಬೇಕು ಸಾಮಂತ ರಾಜರು ಮುಖ್ಯ ಪ್ರಧಾನ ರಾಜನಿಗೆ ವಾರ್ಷಿಕ ಕರವನ್ನು ಕೊಡಬೇಕು. ಅದಕ್ಕಾಗಿ ನಂದಗೋಪ ವಾರ್ಷಿಕವಾದ ಕರವನ್ನು ತೆಗೆದುಕೊಂಡು ಅವನೂ ಬರಬೇಕು. ಉಳಿದೆಲ್ಲ ಗೋಪಾಲಕರು ಹಾಲು, ಮೊಸರು, ಗೋವುಗಳು ಏನೇನನ್ನು ರಾಜನಿಗೆ ಕೊಡಬೇಕೋ ಅದೆಲ್ಲವನ್ನು ತೆಗೆದುಕೊಂಡು ಅವರೂ ಬರಲಿ, ನೀವಿಬ್ಬರೂ ರಾಮ ಕೃಷ್ಣರು ಬರಬೇಕು ಅಂತ ಹೇಳಿ ಕಳಿಸಿದ್ದಾನೆ ಅಂತ ಕಂಸನ ಸೂಚನೆಯನ್ನು ನೀಡುತ್ತಾನೆ ಅಕ್ರೂರ. ಸರಿ ಜೊತೆಗೆ ಇನ್ನೊಂದು ಮಾತು ಹೇಳುತ್ತಾನೆ ಕಂಸ ಹೇಳಿ ಕಳಿಸಿದ್ದು ಹಾಗಿರಲಿ ಮುಖ್ಯವಾಗಿ ನಿನ್ನ ತಂದೆ ವಸುದೇವ-ದೇವಕಿ ಹುಟ್ಟಿದ ಕೂಡಲೇ ನಿನ್ನನ್ನು ತಂದು ಇಲ್ಲಿ ಬಿಟ್ಟಿದ್ದಾರೆ ನಿನ್ನನ್ನು ನೋಡಬೇಕು ಅಂತ ನಿರಂತರವಾಗಿ ದೇವಕಿ ಪರಿತಪಿಸುತ್ತಾಳೆ ಅವಳ ಮನಸ್ಸಿಗೂ ನೀನು ಸಂತೋಷವನ್ನು ನೀಡಿದಂತೆ ಆಗುತ್ತದೆ.

ತಾಂ ಚ ದ್ರಕ್ಷ್ಯಸಿ ಗೋವಿನ್ದ ಪುತ್ರೈರಮೃದಿತಸ್ತನೀಮ್ । (26.8 ವಿಷ್ಣುಪರ್ವ)

ನೀನು ಹುಟ್ಟಿದ ಕೂಡಲೇ ಯಶೋದೆಯ ಹತ್ತಿರ ಬಂದಿದ್ದೀ ಯಾವ ಮಕ್ಕಳಿಗೂ ಹಾಲು ಕುಡಿಸಿಲ್ಲ, ನಿನಗೂ ಕುಡಿಸಿಲ್ಲ ಅಂತಹ ತಾಯಿಯನ್ನು ನೋಡುವುದಕ್ಕೆ ಬಾ ಅಂತ ಆದರೆ ಸಂಭೋಧನೆ ಮಾಡುವುದು ಗೋವಿಂದ ಅಂತ. ಸಕಲ ಗೋವುಗಳ ರಕ್ಷಣೆ ಮಾಡಿ ಸುರಭೀ ಮಾತೆಯೇ ಬಂದು ನಿನ್ನನ್ನು ಪಟ್ಟಾಭಿಷೇಕ ಮಾಡಿದಾಗ ಹಾಲಿನಿಂದ

ನಿನ್ನಂಥವನಿಗೆ ಹಾಲು ಕುಡಿಸುವ ಯೋಗ್ಯತೆಯಾದರೂ ಯಾರಿಗೆ ಇದೆ ಅಂತ ಒಳಗಿನ ಆಂತರ್ಯ ಆದರೂ ಅಂತಹ ತಾಯಿಯನ್ನು ನೀನು ಸಂತೋಷ ಪಡಿಸುವುದಕ್ಕಾಗಿ ಅವಶ್ಯವಾಗಿ ಬರಬೇಕು ಎಂಬುದಾಗಿ ಕೇಳಿಕೊಂಡಿದ್ದಾನೆ. ತಂದೆ ತಾಯಿಗಳಿಬ್ಬರನ್ನು ಕಂಸ ಬಹಳ ಹಿಂಸೆಗೊಳಿಸುತ್ತಾನೆ, ನಾನಾ ರೀತಿಯ ನಿಂದೆಯನ್ನು ಮಾಡುತ್ತಾನೆ ನೀನು ಬಂದು ಅವರಿಬ್ಬರನ್ನು ಸಂತೋಷ ಪಡಿಸಿದರೆ ಅದೆಲ್ಲವನ್ನು ಮರೆತು ಬಿಡುತ್ತಾರೆ. ಕಾಲಿಯ ಮರ್ದನವನ್ನು ಮಾಡಿದಿ, ಗೋವರ್ಧನೋದ್ಧಾರ ಮಾಡಿದಿ, ಕೇಶಿ, ಅರಿಷ್ಟ ಮೊದಲಾದ ಅನೇಕ ಅಸುರರ ಸಂಹಾರವನ್ನು ಮಾಡಿದಿ ಇಷ್ಟೆಲ್ಲ ಪರಾಕ್ರಮವನ್ನು ತೋರಿಸಿ ಬಹಳ ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡಿ ಜಗತ್ತಿನ ಉದ್ಧಾರವನ್ನು ಮಾಡಿದಂತಹ ನೀನು, ಎಲ್ಲ ಋಷಿಗಳು, ಮುನಿಗಳು ಧರ್ಮವನ್ನು ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟು ನೀನು ಈ ಒಂದು ಸಣ್ಣ ಧರ್ಮವನ್ನು ನೀನು ಮಾಡಬಾರದೇ ತಂದೆ ತಾಯಿಗಳನ್ನು ಸಂತೋಷ ಪಡಿಸುವುದು ಒಂದು ಧರ್ಮ ಅಲ್ಲವೋ ಆ ಧರ್ಮವನ್ನೂ ಮಾಡು.

ಪರಿತ್ಯಜೇತಾಂ ತೌ ಶೋಕಂ ಸ್ಯಾಚ್ಚ ಧರ್ಮಸ್ತವಾನಘ ॥ (26.25 ವಿಷ್ಣುಪರ್ವ)

ಪುಣ್ಯ ಇಲ್ಲ ಪಾಪ ಇಲ್ಲ ದೇವರಿಗೆ, ಧರ್ಮವು ಇಲ್ಲ ಅಧರ್ಮವು ಇಲ್ಲ ಎಲ್ಲ ಧರ್ಮಾ ಅಧರ್ಮಾಗಳನ್ನು ಮೀರಿದವ ಅವನ ಆಜ್ಞೆಯನ್ನು ಪರಿಪಾಲನೆ ಮಾಡಿದವರಿಗೆ ಧರ್ಮ ಇದೆ ಅವನಿಗೆಲ್ಲಿಯ ಧರ್ಮ ಆದರೆ ಧರ್ಮ ಹೇಗೆ ನಾವು ಸಂಪಾದನೆ ಮಾಡಬೇಕು ಅಂತ ಜಗತ್ತಿಗೆ ತಿಳಿಸಿಕೊಡು. ಸಮಾಜ ಸೇವೆ ಅಂತ ಸಾಕಷ್ಟು ಜನ ಇವತ್ತಿನ ದಿವಸ ಸಮಾಜದ ಸೇವೆಯನ್ನು ಮಾಡುತ್ತೇವೆ ಅಂತ ಬರುತ್ತಾರೆ ಬಹಳ ಸ್ತುತ್ಯವಾದಂತಹ ಕಾರ್ಯ ಆದರೆ ಸಮಾಜ ಸೇವೆಯನ್ನು ಮಾಡುವುದರ ಜೊತೆಗೆ ತಂದೆ ತಾಯಿಗಳ ಸೇವೆಯನ್ನು ಮಾಡದೆ ಇದ್ದರೆ ಪ್ರಯೋಜನವಿಲ್ಲ ಇದನ್ನು ಜಗತ್ತಿಗೆ ತಿಳಿಸಿಕೊಡಬೇಕಾಗಿದೆ ಪರಮಾತ್ಮನಿಗೆ. ಸಮಾಜದ ಸೇವೆಯನ್ನು ಮಾಡಬೇಕು, ಸಕಲ ಸಜ್ಜನರ ಉಪಕಾರವನ್ನು ಮಾಡಬೇಕು, ಪರೋಪಕಾರ ಮಾಡಬೇಕು ಅದು ಧರ್ಮ ಇದು ವಾಸ್ತವ ಆದರೆ ಅದೆಷ್ಟು ಸತ್ಯವೋ ಅಷ್ಟೇ ಸತ್ಯ ತನ್ನ ತಂದೆ ತಾಯಿಗಳನ್ನು ತಾನು ಸೇವೆ ಮಾಡಲೇಬೇಕು, ಅವರನ್ನು ಸಂತೋಷ ಪಡಿಸಲೇಬೇಕು ಅನ್ನುವ ಧರ್ಮವನ್ನು ಜಗತ್ತಿಗೆ ನೀನು ತಿಳಿಸಲೇಬೇಕಲ್ಲ ಕೃಷ್ಣ ಅದಕ್ಕಾಗಿ ನೀನು ಬಾ ಅಂತ ಅಕ್ರೂರನ ಆಂತರ್ಯ ಎಂಬುದಾಗಿ ನಾವಿಲ್ಲಿ ತಿಳಿಯಬೇಕು. ಆ ರೀತಿ ಪ್ರಾರ್ಥನೆಯನ್ನು ಮಾಡಿಕೊಂಡಾಗ ಸರಿ ಅಂತ ಹೊರಟಿದ್ದಾನೆ.

ಶ್ರೀಕೃಷ್ಣ ಪರಮಾತ್ಮ ರಥದಲ್ಲಿ ಕುಳಿತು ಅಕ್ರೂರನ ಜೊತೆಗೆ ಹೊರಟಾಗ ಯಮುನಾ ನದಿ ಆ ಸಂದರ್ಭದಲ್ಲಿ ಸಂಧ್ಯಾವಂದನದ ಕಾಲ ವಿಶೇಷವಾಗಿ ಅವನು ನಿತ್ಯದಲ್ಲಿ ಶೇಷ ಮಂತ್ರದ ಜಪವನ್ನು ಮಾಡಿ ಶೇಷಾಂತರ್ಯಾಮಿಯಾದ, ಸಂಕರ್ಷಣ ರೂಪಿಯಾದ ಪರಮಾತ್ಮನ ದರ್ಶನವನ್ನು ಮಾಡಿಕೊಳ್ಳುತ್ತ ಇದ್ದ ಮಹಾನುಭಾವ ಅಕ್ರೂರ, ಸಾಮಾನ್ಯ ಅಲ್ಲ. ಅಂತಹ ಅಕ್ರೂರ ಭಕ್ತಿಯಿಂದ ತಾನು ನಿತ್ಯದ ಅನುಷ್ಠಾನವನ್ನು ಮಾಡುವವ ಅದು ಏನೇ ಇರಲಿ ನಾವು ಈಗ ಹೊರಟಿದ್ದೇವೆ ಅವಸರದಲ್ಲಿ, ಬೇಗ ಮುಟ್ಟಬೇಕು ಮಥುರೆಗೆ ಅವೆಲ್ಲ ಇಲ್ಲ. ಯಮುನಾ ನದಿ ಬಂದಿದೆ ಯಮುನಾ ನದಿ ದರ್ಶನವಾಗಿದೆ ಅಲ್ಲಿ ತಾನು ಸ್ನಾನ ಮಾಡಿ ದರ್ಶನವನ್ನು ಮಾಡಿಕೊಂಡೇ ಹೊರಡಬೇಕು ಅಂತ ಬಲರಾಮ ಕೃಷ್ಣರಿಗೆ ನೀವು ಇಲ್ಲಿಯೇ ಇರಬೇಕು. ಅವರದಿನ್ನೂ ಉಪನಯನವಾಗಿಲ್ಲ ನೀವು ಇಲ್ಲಿಯೇ ಕುಳಿತುಕೊಳ್ಳಿ ರಥದಲ್ಲಿ ನಾನು ಸ್ನಾನ ಮಾಡಿ ಆಹ್ನಿಕ ಮುಗಿಸಿಕೊಂಡು ಬರುತ್ತೇನೆ ಅಂತ ಮುಳುಗಿದ್ದಾನೆ ಮಹಾನುಭಾವ. ಆ ಮಂತ್ರಗಳ ಜಪವನ್ನು ಮಾಡುವ ಅವನಿಗೆ ಆ ಸಿದ್ಧಿ ರಸಾತಲದವರೆಗೆ ಹೋಗಿದ್ದಾನೆ, ರಸಾತಲಕ್ಕೆ ಹೋಗಿ ಅಲ್ಲಿರುವಂತಹ ಶೇಷ ದೇವರ ದರ್ಶನವನ್ನು ಮಾಡುತ್ತಾನೆ. ಶೇಷ ದೇವರ ಆ ಪರ್ಯಂಕದಲ್ಲಿ ಮಧ್ಯದಲ್ಲಿ ಶ್ರೀಕೃಷ್ಣ ಪರಮಾತ್ಮನನ್ನು ಕಾಣುತ್ತಾನೆ, ಬಲರಾಮ ಪಕ್ಕದಲ್ಲಿ

ಕುಳಿತಿದ್ದಾನೆ. ಆಶ್ಚರ್ಯವಾಯಿತು ಇದೇನು ಶ್ರೀಕೃಷ್ಣನನ್ನು ರಥದಲ್ಲಿ ಕುಳಿತುಕೋ ಅಂತ ಹೇಳಿ ನಾನು ಬಂದೆ ಇಲ್ಲಿ ಬಂದಿದ್ದಾನಲ್ಲ ಅಂತ ಕೂಡಲೇ ತನ್ನ ಯೋಗ ಸಾಮರ್ಥ್ಯದಿಂದ ಮತ್ತೆ ಮೇಲೆ ಬಂದು ನೋಡುತ್ತಾನೆ ರಥದಲ್ಲಿಯೇ ಇದ್ದಾನೆ ಕೃಷ್ಣ, ಮತ್ತೆ ಒಳಗೆ ಹೋಗಿ ನೋಡುತ್ತಾನೆ ಅಲ್ಲಿಯೇ ಕಾಣಿಸುತ್ತಾನೆ ಆಗ ಅವನಿಗೆ ಆನ್ನಿಸುತ್ತದೆ ಸರ್ವತ್ರ ವ್ಯಾಪ್ತನಾದಂಥವನು ಭಗವಂತ.

ಆಸೀನೋ ದೂರಂ ವ್ರಜತಿ ಶಯಾನೋ ಯಾತಿ ಸರ್ವತಃ ।

ಕಸ್ತಂ ಮದಾಮದಂ ದೇವಂ ಮದನ್ಯೋ ಜ್ಞಾತುಮರ್ಹತಿ ॥

(1.2.21 ಕಾಠಕೋಪನಿಷದಿ ಪ್ರಥಮಾಧ್ಯಾಯೇ ದ್ವಿತೀಯಾ ವಲ್ಲೀ)

ಆ ಪರಮಾತ್ಮನ ಸ್ವರೂಪವನ್ನು ಯಾರು ತಿಳಿದುಕೊಳ್ಳುವುದಕ್ಕೆ ಸಾಧ್ಯ **'ಆಸೀನೋ ದೂರಂ ವ್ರಜತಿ'** ರಥದಲ್ಲಿಯೇ ಕುಳಿತಿದ್ದಾನೆ ಆದರೆ ಇಲ್ಲಿ ರಸಾತಲಕ್ಕೂ ಬಂದಿದ್ದಾನೆ. ರಥದಲ್ಲಿಯೂ ಇದ್ದಾನೆ, ರಸಾತದಲ್ಲಿಯೂ ಇದ್ದಾನೆ ಇದು ಆ ಪರಮಾತ್ಮನ ಅದ್ಭುತವಾದಂತಹ ಶಕ್ತಿ ಸರ್ವತ್ರವ್ಯಾಪ್ತ ಸರ್ವೋತ್ತಮ ಅಂತಹ ಪರಮಾತ್ಮನನ್ನ ರಥದಲ್ಲಿ ಕೂಡಿಸಿಕೊಂಡು ಹೋಗುವ ಭಾಗ್ಯ ನನಗೆ ಸಿಕ್ಕಿದೆಯಲ್ಲ ನಾನೇ ಧನ್ಯ ಅಂತ. ಅಕ್ರೂರನಿಗೆ ಏನು ಸಾಮರ್ಥ್ಯ ಇತ್ತು ಅಂದರೆ ವಿಷ ಕುಡಿಯತ್ತ ಇದ್ದನಂತೆ ಆ ವಿಷವೂ ಅವನಿಗೆ ಅಮೃತದಂತೆ ಆಗುತ್ತ ಇತ್ತಂತೆ.

ವಿಷಮಪ್ಯಮೃತಂ ಕ್ವಚಿದ್ಭವೇದಮೃತಂ ವಾ ವಿಷಮೀಶ್ವರೇಚ್ಛಯಾ । (ಕಾಳಿದಾಸನ ರಘುವಂಶ)

ಇದು ಅಲ್ಲಲ್ಲಿ ಉದಾಹರಣೆ. ಪ್ರಹ್ಲಾದ ರಾಜರಿಗೆ ವಿಷ ಕುಡಿಸಿದ ಹಿರಣ್ಯಕಶಿಪು ಆದರೂ ಅವನಿಗೆ ಏನೂ ಆಗಲಿಲ್ಲ. ಯಾಕೆ ಅಂದರೆ ಭಗವಂತನ ವಿಶೇಷ ಅನುಗ್ರಹದಿಂದ ಆ ವಿಷದೊಳಗಿರುವ ಮಾರಕತ್ವ ಶಕ್ತಿಯೂ ಕೂಡ ನಶಿಸಿ ಅದರಲ್ಲಿ ವಿಶೇಷವಾದ ಪುಷ್ಟಿಯನ್ನು ಕೊಡುವ ಶಕ್ತಿ ಬಂದಿದೆ ದಷ್ಟ ಪುಷ್ಟನಾಗಿದ್ದಾನೆ ಪ್ರಹ್ಲಾದ ಅದರಿಂದ ಮೃತನಾಗಿಲ್ಲ ಅಂತ. ಅಮೃತ ಕುಡಿದರೂ ರಾಹುವಿನ ಮರಣ ಆಯಿತು ಅರ್ಥಾತ್ ಅವನ ಶರೀರ ಕದಂಥ ಬೇರೆಯಾಯಿತು, ಶಿರಸ್ಸು ಬೇರೆಯಾಯಿತು ಅಮೃತ ಕುಡಿದರೂ ಅವನು ಅಮರನಾಗಲಿಲ್ಲ ಆದರೆ ಈ ಕಡೆಗೆ ವಿಷ ಕುಡಿದರೂ ಸಾಯಲಿಲ್ಲ ಪ್ರಹ್ಲಾದ.

ವಿಷಮಪ್ಯಮೃತಂ ಕ್ವಚಿದ್ಭವೇದಮೃತಂ ವಾ ವಿಷಮೀಶ್ವರೇಚ್ಛಯಾ । (ಕಾಳಿದಾಸನ ರಘುವಂಶ)

ಆದರೆ ಇವನ ಜೀವನದಲ್ಲಿ ನಿತ್ಯವೂ ಯಾಕೆ ಅಂದರೆ ಅವನು ಹೇಳುತ್ತಾನೆ.

ಸಹಸ್ರಶಿರಸಂ ದೇವಮನನ್ತಂ ನೀಲವಾಸಸಮ್ ॥ (26.43 ವಿಷ್ಣುಪರ್ವ)

ಧರ್ಮದೇವಸ್ಯ ತಸ್ಯಾಥ ಯದ್ ವಿಷಂ ಪ್ರಭವಿಷ್ಯತಿ ।

ಸರ್ವಂ ತದಮೃತಪ್ರಖ್ಯಮಶಿಷ್ಯಾಮಮರೋ ಯಥಾ ॥ (26.44 ವಿಷ್ಣುಪರ್ವ)

ದೇವತೆಗಳು ಅಮೃತ ಪಾನ ಮಾಡುವಂತೆ ಆ ಸಂಕರ್ಷಣನ ಉಪಾಸನೆ ಮಾಡುವಾಗ ಅವನ ಮುಖದಿಂದ ಬಂದ ವಿಷವನ್ನು ನಾನು ನಿತ್ಯದಲ್ಲಿ ಪ್ರಾಶನ ಮಾಡುತ್ತೇನೆ. ನನಗೆ ಏನಾಗುವುದಿಲ್ಲ, ಅದರಿಂದ ನನಗೆ ಇನ್ನಷ್ಟು ಶಕ್ತಿ ಬರುತ್ತದೆ ಅಂತ ಅಕ್ರೂರ ಹೇಳುತ್ತಾನೆ.

ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ ।
ಯದನುಗ್ರಹತಃ ಸಂತಿ ನ ಸಂತಿ ಯದುಪೇಕ್ಷಯಾ ॥ (02.10.12 ಭಾಗವತ)

ವಿಷದಲ್ಲಿ ಮಾರಕತ್ವ ಸ್ವಭಾವ ಇದೆ ದೇವರ ಅಧೀನವಾಗಿದೆ. ಅಮೃತದಲ್ಲಿ ಅಮರತ್ವವನ್ನು ನೀಡುವ ಸ್ವಭಾವ ಇದೆ ಅದು ದೇವರ ಅಧೀನ ಅನ್ನುವುದಕ್ಕಾಗೇನೆ ಭಕ್ತನಾದ ಅಕ್ರೂರ ವಿಷ ಕುಡಿದಾಗಲೂ ಅದು ಅವನಿಗೆ ಅಮೃತವಾಗುವಂತೆ ದೇವರು ಅನುಗ್ರಹ ಮಾಡುತ್ತ ಇದ್ದ ಅನ್ನುವುದನ್ನು ನಾವು ಇಲ್ಲಿ ಕಾಣುತ್ತೇವೆ. ಅಂತಹ ಆ ಪರಮಾತ್ಮನ ಒಂದು ವಿಶಿಷ್ಟವಾದ ದರ್ಶನವನ್ನು ಪಡೆದಂತಹ ಅಕ್ರೂರ ಮುಂದೆ ಹೊರಟಿದ್ದಾನೆ ಸರ್ವೋತ್ತಮನಾದ ಭಗವಂತನನ್ನು ಫರಮಾಶ್ಚರ್ಯ ನೀನು ಅಂತ ವರ್ಣನೆ ಮಾಡುತ್ತಾನೆ.

ಈ ಕಡೆಗೆ ಮಥುರೆಗೆ ಪ್ರವೇಶ ಮಾಡುವ ಹೊತ್ತು ಸಾಯಂಕಾಲವಾದದ್ದರಿಂದ ನೀವು ನನ್ನ ಮನೆಯಲ್ಲಿಯೇ ಇರಬೇಕು ಅಂತ ಅಕ್ರೂರ ಪ್ರಾರ್ಥನೆ ಮಾಡಿಕೊಂಡಿದ್ದಾನೆ. ತನ್ನ ಮನೆಗೆ ಕರೆದುಕೊಂಡು ಹೋದ ನೀವು ನನ್ನ ಮನೆಯಲ್ಲಿಯೇ ಇದ್ದು ಬಿಡಿ ವಸುದೇವ ದೇವಕಿ ಅವರ ಹತ್ತಿರ ಹೋಗಬೇಕು ಅಂತ ಅಪೇಕ್ಷೆ ಪಡಬೇಡಿ ಈಗ. ಕಾರಣ ಕಂಸನ ಭಯ ಇದೆ ಬಹಳ ಪೀಡೆ ಕೊಡುತ್ತಾನೆ ಕಂಸ ವಸುದೇವ ದೇವಕಿಯರಿಗೆ ಈ ಸಂದರ್ಭದಲ್ಲಿ ನೀವು ಅವರ ಮನೆಗೆ ಹೋಗುವ ಆಲೋಚನೆ ಮಾಡುವುದು ಬೇಡ ಅಂತ ಹೇಳಿದ. ರಾಮ ಕೃಷ್ಣರು ಅಂದರು ನಾವು ಹೋಗುತ್ತೇವೆ ಊರೆಲ್ಲ ನೋಡಬೇಕು ಅಂತೂ ನಮಗೆ ಅಪೇಕ್ಷೆ ಇದೆ, ನಿನ್ನ ಮನೆಯಲ್ಲಿ ಕುಳಿತು ಮಾತ್ರ ನಾವು ಮಾಡುವುದೇನು ನೀನೇನು ಚಿಂತೆ ಮಾಡಬೇಡ. ನೀನು ಕಂಸನಿಗೆ ಹೋಗಿ ಏನು ವಾರ್ತೆ ಹೇಳಬೇಕು ನಮ್ಮನ್ನು ಕರೆದುಕೊಂಡು ಬಾ ಅಂತ ಹೇಳಿದ್ದ ಕರೆದುಕೊಂಡು ಬಂದಾಯಿತು ಅಂತ ಅವನಿಗೆ ವಾರ್ತೆಯನ್ನು ತಿಳಿಸು ನಿನ್ನ ಕೆಲಸ ನೀನು ಮಾಡು ನಾವು ಊರೆಲ್ಲ ನೋಡಿಕೊಂಡು ಬರುತ್ತೇವೆ ಅಂತ ಬಲರಾಮ, ಕೃಷ್ಣ ಇಬ್ಬರೂ ಕೂಡ ಹೊರಟಿದ್ದಾರೆ. ಹೋಗುತ್ತ ಇರುವಾಗ ಮಧ್ಯದಲ್ಲಿ ರಜಕ ಭೇಟಿ ಆಗುತ್ತಾನೆ ಪಾರ್ವತಿಯನ್ನು ಕುರಿತು ತಪಸ್ಸು ಮಾಡಿ ಅವಧ್ಯನಾದಂತಹ ವ್ಯಕ್ತಿ ಅವನು ಅಸುರ. ಅಂತಹ ರಜಕ ನಾನಾ ದೇಶದ ಬಟ್ಟೆಗಳನ್ನೆಲ್ಲ ವಿವಿಧ ದೇಶಗಳ ವಿವಿಧ ರೀತಿಯ ಉಡುಪುಗಳನ್ನೆಲ್ಲ ತರಿಸಿ ಅವುಗಳಿಗೆ ಬಣ್ಣ ಕೊಟ್ಟು ಚೆನ್ನಾಗಿ ಕಂಸನಿಗೆ ಅಲಂಕಾರ ಮಾಡಿಕೊಳ್ಳುವುದಕ್ಕೆ, ಅವನಿಗೆ ಧಾರಣೆ ಮಾಡಿಕೊಳ್ಳುವುದಕ್ಕೆ ಕೊಡುವಂತಹ ಕೆಲಸ. ಅವನದು ಇದೇ ಕೆಲಸ ಭಾರೀ ಭಾರೀ ಬಟ್ಟೆಗಳನ್ನು ತರಿಸುವುದು ಬಣ್ಣ ಹಾಕುವುದು ಕಂಸನಿಗೆ ಕೊಡುವುದು.

ಅಹಂ ಕಂಸಸ್ಯ ವಾಸಾಂಸಿ ನಾನಾದೇಶೋದ್ಭವಾನಿ ವೈ ।
ಕಾಮರಾಗಾಣಿ ಶತಶೋ ರಞ್ಜಯಾಮಿ ವಿಶೇಷತಃ ॥ (27.12 ವಿಷ್ಣುಪರ್ವ)

ನೂರಾರು ರೀತಿಯಿಂದ ಅವುಗಳಿಗೆ ನಾನು ಬಣ್ಣ ಕೊಟ್ಟು ಅಲಂಕಾರ ಮಾಡುತ್ತೇನೆ ಅಂತ ತನ್ನ ಪರಿಚಯ ಹೇಳಿಕೊಂಡ. ಸರಿ ಹಾಗಾದರೆ ಅಂತಹ ನಾವು ಭಾರೀ ಬಟ್ಟೆಗಳನ್ನು ಉಟ್ಟುಕೊಳ್ಳಬೇಕು ಅಂತ ಅಪೇಕ್ಷೆ ಇದೆ ಕೊಡು ಅಂತ ಕೃಷ್ಣ ಕೇಳಿದರೆ ಕೊಡಲಿಲ್ಲ ಅವನು ದುಷ್ಟ. ಸ್ವಭಾವತಃ ದುಷ್ಟನಾದವನು ಆ ಕಂಸನಿಂದ ಅನುಶಿಷ್ಟನಾದವನು ಅನ್ನುವುದಕ್ಕೋಸ್ಕರವಾಗಿ ಶ್ರೀಕೃಷ್ಣ ಪರಮಾತ್ಮ ಅವನನ್ನ ಆಯುಧ ಇಲ್ಲ, ಖಡ್ಗ ಇಲ್ಲ, ಚಕ್ರ ಇಲ್ಲ ಏನೇನು ಇಲ್ಲ ತನ್ನ ಹಸ್ತ ತಲದಿಂದಲೇ ಜೋರಾಗಿ ತಲೆಯ ಮೇಲೆ ಒಂದು ಹೊಡೆದರೆ ಅಪ್ಪಚ್ಚಿಯಾಗಿ ಹೋಗಿದ್ದಾನೆ ಅವನನ್ನು ಸಂಹಾರ ಮಾಡಿದ. ರುದ್ರ ದೇವರ ವರ ಯಾರು ಕೊಲ್ಲುವಂತೆ ಇಲ್ಲ ಅಂತ ಅಂಥವನನ್ನೂ ತಾನು ಸಂಹಾರ ಮಾಡುವ ಮೂಲಕ ಕೃಷ್ಣ ಪರಮಾತ್ಮ ತಾನು ಸರ್ವೋತ್ತಮ ಅನ್ನುವುದನ್ನು ತೋರಿಸಿಕೊಡುತ್ತಾನೆ.

ತಲೇನಾಶನಿಕಲ್ಪೇನ ಸ ತಂ ಮೂರ್ಧ್ನ್ಯತಾಡಯತ್ । (27.16 ವಿಷ್ಣುಪರ್ವ)

ಅವನಿಗೆ ಅನೇಕ ಜನ ಮಡದಿಯರಿದ್ದರು ಅವರೆಲ್ಲ ಓಡಿ ಹೋಗಿ ಕಂಸನಿಗೆ ಈ ಸುದ್ದಿಯನ್ನು ಹೇಳಿದರು ಹೇಳಲಿ ಅಂತೇ ಕೃಷ್ಣ ಮಾಡಿದ್ದು ಈ ಕೆಲಸ ಅವನನ್ನು ಸಂಹಾರ ಮಾಡಿದ್ದು. ಇದರಿಂದ ನಮಗೆ ತಿಳಿಸಿಕೊಡುವ ಸಂದೇಶ ಬಟ್ಟೆ ಹೊಸದು ಏನನ್ನೇ ಸ್ವೀಕಾರ ಮಾಡಬೇಕಾದರೆ ದೇವರಿಗೆ ಅರ್ಪಣೆ ಮಾಡಿಯೇ ನೀವು ಸ್ವೀಕಾರ ಮಾಡಿ.

ಸಿದ್ಧಮೇವಾನ್ನವಸ್ತ್ರಾದ್ಯಂ ವಿಷ್ಣೋಃ ಸ್ವಾತಂತ್ರ್ಯತಃ ಸದಾ ।
ಸ್ವಾರ್ಥಂ ಸಮರ್ಪಯೇದ್ವಿಷ್ಣೌ ಯಥಾ ಪ್ರಾಣೇ ಸುರಾಃ ಪುರಾ ॥ (ಛಾಂದೋಗ್ಯಭಾಷ್ಯ)

ಅನ್ನವನ್ನೇ ಸ್ವೀಕಾರ ಮಾಡಲಿ, ವಸ್ತ್ರವನ್ನೇ ಸ್ವೀಕಾರ ಮಾಡಲಿ ದೇವರಿಗೆ ಅರ್ಪಣೆ ಮಾಡದೇ ಇರುವಂತಹ ಅನ್ನ ವಸ್ತ್ರಾದಿಗಳನ್ನು ಸ್ವೀಕಾರ ಮಾಡಬಾರದು ಹತ್ತಾರು ಬಾರಿ ಈ ಮಾತನ್ನು ಬ್ರಹ್ಮವೈವರ್ತ ಪುರಾಣದಲ್ಲಿ ಹೇಳುತ್ತಾರೆ.

'ಅನ್ನಂ ವಿಷ್ಠಾ ಪಯೋ ಮೂತ್ರಂ ಯದ್ವಿಷ್ಣೋರನಿವೇದಿತಂ' ಪುನಃ ಪುನಃ ಬ್ರಹ್ಮವೈವರ್ತ ಪುರಾಣ ಇದನ್ನು ಗರ್ಜನೆ ಮಾಡುತ್ತದೆ. ದೇವರಿಗೆ ನೈವೇದ್ಯ ಮಾಡದೇ ಇರುವಂತಹ ಅನ್ನ ಇದು ಅತ್ಯಂತ ಅಪವಿತ್ರವಾದದ್ದು, ನೀರು ಅಪವಿತ್ರವಾದದ್ದು ಸರ್ವತಃ ಸ್ವೀಕಾರ ಮಾಡಲು ಯೋಗ್ಯವಲ್ಲ. ಅದರಂತೆ ವಸ್ತ್ರ

ತ್ವಯೋಪಭುಕ್ತಸ್ರಗ್ಗಂಧವಾಸೋಽಲಂಕಾರಚರ್ಚಿತಾಃ ।
ಉಚ್ಛಿಷ್ಟಭೋಜಿನೋ ದಾಸಾಸ್ತವ ಮಾಯಾಂ ಜಯೇಮಹಿ ॥ (11.6.46 ಭಾಗವತ)

ಆ ದೇವರು ಸ್ವೀಕಾರ ಮಾಡಿ, ಉಪಯೋಗ ಮಾಡಿ ಕೊಟ್ಟಂತಹ ಪವಿತ್ರವಾದ ವಸ್ತ್ರ, ಪವಿತ್ರವಾದ ಗಂಧ, ಪವಿತ್ರವಾದ ಅನ್ನ ಅದರಿಂದ ನಾವು ಈ ಸಂಸಾರದ ಮಾಯೆಯನ್ನು ದಾಟಬಹುದು ಎಂಬುದಾಗಿ ಶಾಸ್ತ್ರ ತಿಳಿಸಿಕೊಟ್ಟಿದೆ. ಅದನ್ನು ಅನುಸರಣೆ ಮಾಡದೆ ಇದ್ದದ್ದಕ್ಕಾಗಿ ರಜಕನಿಗೆ ಈ ತರಹದ ಗತಿಯನ್ನು ಪರಮಾತ್ಮ ಕೊಟ್ಟಿದ್ದಾನೆ.

ಮುಂದೆ ಮತ್ತೊಬ್ಬ ಬಂದ ಅವನ ಹೆಸರು ಗುಣಕ ಅಂತ ಹೇಳುತ್ತಾರೆ ಅವನು ಮಾಲಾಕಾರ, ಸುಧಾಮ ಅಂತ ಶ್ರೀಮದಾಚಾರ್ಯರು ತಾತ್ಪರ್ಯ ನಿರ್ಣಯದಲ್ಲಿ ಹೆಸರು ಹೇಳುತ್ತಾರೆ, ಗುಣಕ ಅಂತ ಇನ್ನೊಂದು ಹೆಸರು ಅವನಿಗೆ ಹರಿವಂಶ ತಿಳಿಸುತ್ತದೆ. ಅಂತಹ ಗುಣಕ ಸುದಾಮ ಆ ಮಾಲಾಕಾರ ಅವನು ಪರಮ ಭಗವದ್ಭಕ್ತ ಅವನು ವೈಕುಂಠ ಲೋಕದಲ್ಲಿ ಅಮುಕ್ತ ಸ್ಥಾನದಲ್ಲಿಯೂ ಕೂಡ ಪರಮಾತ್ಮನಿಗೆ ಮಾಲೆಯನ್ನು ಮಾಡುವಂತಹ ವ್ಯಕ್ತಿಯೇ ಭಗವಂತನ ಸೇವಕನೇ ಅವನು. ಅವನು ಕೃಷ್ಣ ಪರಮಾತ್ಮ ಇಲ್ಲಿ ಅವತಾರ ಮಾಡಿದ್ದಾನೆ, ನಮ್ಮ ದೇವರೇ ಅವತಾರ ಮಾಡಿದ್ದಾನೆ ಅಂತ ದೇವರ ಸೇವೆ ಮಾಡುವುದಕ್ಕೆ ಅಂತೇನೆ ಇಲ್ಲಿ ಹುಟ್ಟಿದವ ಆದರೆ ಅವನಿಗೆ ಇಷ್ಟು ದಿವಸ ಇನ್ನೂ ದೇವರ ದರ್ಶನನೇ ಆಗಿರಲಿಲ್ಲ ಈ ಕಂಸನ ಸೇವೆಯನ್ನು ಮಾಡುವಂತಹ ಒಂದು ಪ್ರಸಂಗ ಇತ್ತು. ಈಗ ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮ ಅಲ್ಲಿ ಬಂದಿದ್ದಾನೆ ಅವನ ದರ್ಶನವಾಗಿದೆ ಯಾವುದಕ್ಕೋಸ್ಕರ ನಾವು ಅವತಾರ ಮಾಡಿದ್ದೇವೆ ಆ ಭಾಗ್ಯ ಈಗ ಸಿಕ್ಕಿತು ಅಂತ ಸಂತೋಷದಿಂದ ಕೃಷ್ಣ ಕೇಳಿದಷ್ಟು ಮಾಲೆಗಳನ್ನು ಕೊಟ್ಟಿದ್ದಾನೆ. ಭಾರೀ ಭಾರೀ ಶ್ರೇಷ್ಠವಾದ ಸುಗಂಧಯುತವಾದ ಪುಷ್ಪಗಳ ಮಾಲೆಗಳನ್ನು ಹಾಕಿಕೊಂಡಿದ್ದಾರೆ ಬಲರಾಮ ಕೃಷ್ಣರು, ಎಲ್ಲರಿಗೂ ಕೊಟ್ಟಿದ್ದಾರೆ. ಬಟ್ಟೆಗಳನ್ನು ಅಷ್ಟೇ ಎಲ್ಲರಿಗೂ ಕೊಟ್ಟು ಉಳಿದದ್ದನ್ನು ಕಾಲಿನಿಂದ ತುಳಿದು ಬೀದಿಯಲ್ಲಿ ಹಾಕಿ ಹೊರಟಿದ್ದಾನೆ ಕೃಷ್ಣ. ಆ

ಕಂಸನ ಪರಾಭವವನ್ನು ಮಾಡುವುದಕ್ಕೆ ಹೊರಟಿದ್ದೇನೆ ಅನ್ನುವುದರ ಸೂಚನೆ ಹಾಗೆ ನೀಡುತ್ತಾನೆ ಕೃಷ್ಣ ಮಾಲೆಗಳನ್ನು ಹಾಕಿಕೊಂಡಿದ್ದಾನೆ.

ಇದಕ್ಕೂ ಮೊದಲು ಒಬ್ಬ ನಾಪಿತ ಬಂದನಂತೆ ಅವನ ಹತ್ತಿರ ಇಬ್ಬರೂ ಕೂಡ ಕೂದಲುಗಳನ್ನು ಹಾಗೂ ಉಗುರುಗಳನ್ನೆಲ್ಲ ಕತ್ತರಿಸಿಕೊಂಡು ಚೆನ್ನಾಗಿ ಅಲಂಕಾರ ಮಾಡಿಕೊಂಡಿದ್ದಾರಂತೆ. ಅವನೂ ಕೂಡ ವೈಕುಂಠ ಲೋಕದಲ್ಲಿ ಪರಮಾತ್ಮನ ಒಬ್ಬ ಸೇವಕನೇ ಇಲ್ಲಿ ಕೃಷ್ಣನ ಸೇವೆಗಾಗಿ ಅವತಾರ ಮಾಡಿದವ ಅವರಿಬ್ಬರಿಗೂ ಪರಮಾತ್ಮ ವಿಶೇಷವಾಗಿ ಅನುಗ್ರಹ ಮಾಡಿ ಸಮೃದ್ಧವಾದ ದೈಹಿಕವಾಗಿ ಧನದ ರೀತಿಯಲ್ಲಿ ಎಲ್ಲ ರೀತಿಯ ಸಂಪತ್ತನ್ನು ಕೊಟ್ಟಿದ್ದಾನಂತೆ.

'ಸರ್ವೇಷ್ಟಪುಷ್ಟಿಮಿಹ ತತ್ರ ಸರೂಪತಾಂ ಚ'[1] ಶ್ರೀಮದಾಚಾರ್ಯರು ಹೇಳುತ್ತಾರೆ ಎಲ್ಲಾ ಪುಷ್ಟಿಯನ್ನು ಇಲ್ಲಿ ಕೊಟ್ಟು ಮೋಕ್ಷದಲ್ಲಿಯೂ ಅವರಿಗೆ ಸಾರೂಪ್ಯವನ್ನು ಕೊಟ್ಟಿದ್ದಾನಂತೆ ಅಂತಹ ಭಗವದ್ಭಕ್ತರು ಅವರಿಬ್ಬರೂ ಕೂಡ. ಆ ಭಗವಂತನಿಗೆ ಏನು ಅವನ ಉಗುರು ಕತ್ತರಿಸುವುದು, ಅವನ ಕೂದಲು ಕತ್ತರಿಸುವುದು ಅಂದರೆ ಹೇಗೆ ಸಾಧ್ಯ ಸಚ್ಚಿನ್ಮಾತ್ರಕವಾದದ್ದು ಅಚ್ಛೇದ್ಯ ಅಭೇದ್ಯ ದೇಹ ಪರಮಾತ್ಮನದು ಒಂದು ನೂರು ಕೋಟಿ ಯೋಜನದ ಬ್ರಹ್ಮಾಂಡದ ಕರ್ಪರ ಕಟಾಹ ಅದು ಯಾವ ಪರಮಾತ್ಮನ ಉಗುರು ತಾಕಿದ್ದಕ್ಕೆ. **'ವಾಮಪಾದ ಅಂಗುಷ್ಠ ನಖ'**. ಆ ಒಂದು ಉಗುರು ತಾಕಿದ್ದಕ್ಕೆ ನೂರು ಕೋಟಿ ಯೋಜನದ ಕಟಾಹದ ಭೇಧನ ಆಯಿತೋ ಅಂತಹ ಕಟಾಹದ ಭೇಧನ ಆಯಿತೇ ಹೊರತು ಉಗುರು ಕತ್ತರಿಸಲಿಲ್ಲ. ಅಂತಹ ಉಗುರನ್ನ ಇವನು ಯಾವನೋ ಒಬ್ಬವನು ಕತ್ತರಿಸುತ್ತಾನೆ ಅಂದರೆ ಹೇಗೆ ಸಾಧ್ಯ ಅಂತ ವಾದಿರಾಜ ಶ್ರೀಪಾದಂಗಳವರು ತಾತ್ಪರ್ಯ ನಿರ್ಣಯ ವ್ಯಾಖ್ಯಾನದಲ್ಲಿ ಕೇಳುತ್ತಾರೆ. ಹಾಗಾದರೆ ಇದು ಕೇವಲ ಭಗವಂತನ ಲೀಲೆ ಅವನು ಹತ್ತಿರ ಬಂದಾಗ ದೇವರು ತನ್ನ ಉಗುರುಗಳನ್ನು ತಾನೇ ಸಂಕೋಚ ಮಾಡಿಕೊಂಡು, ಕೂದಲುಗಳನ್ನು ಸಂಕೋಚ ಮಾಡಿಕೊಂಡು ಕೃತ್ರಿಮವಾದ ಪ್ರಾಕೃತವಾದದ್ದನ್ನು ಸೃಷ್ಟಿ ಮಾಡಿ ಕೆಳಗೆ ಬೀಳಿಸಿ ಅಯೋಗ್ಯ ಜನರಿಗೆ ಮೋಹನ ಮಾಡಿದ್ದೇ ಹೊರತು ಆ ಭಗವಂತನಿಗೆ ಸರ್ವತಃ ಗ್ರಾಹ್ಯಾಪಹೇಯ ಅಂತ ಇಲ್ಲ.

ಗ್ರಾಹ್ಯಾಪಹೇಯರಹಿತೈಕಚಿದಾತ್ಮ ಸಾಂದ್ರ ಸ್ವಾನಂದಪೂರ್ಣವಪುರಪ್ಯಯಶೋಷಹೀನಃ ।

(13.99 ಮಭಾತಾನಿರ್ಣಯ)

ಅಂತ ಏನು ಶ್ರೀಮದಾಚಾರ್ಯರ ಶಬ್ದಗಳು ಅವನಿಗೆ ಇದು ಗ್ರಾಹ್ಯ, ಇದು ಹೇಯ ಅಂತ ಇಲ್ಲವೇ ಇಲ್ಲ. ಕೇವಲ ಸಚ್ಚಿನ್ಮಾತ್ರಕವಾದಂತಹ ಸ್ವರೂಪ ಆ ಪರಮಾತ್ಮನದು ಆದರೆ ಆ ಭಕ್ತರಿಗೆ ಒಂದು ಅನುಗ್ರಹ ಮಾಡುವುದಕ್ಕೆ ಅವರ ಸೇವೆಯನ್ನು ಸ್ವೀಕಾರ ಮಾಡಿದ್ದಾನೆ ಅಂತ ಎಲ್ಲದಕ್ಕೂ ಸಮಾನ ಮತ್ತೆ. ನಾವೆಲ್ಲ ಏನೋ ನಿತ್ಯ ಸೇವೆ ಅಂತ ಮಾಡುತ್ತೇವಲ್ಲ ಏನೇನೋ ದೇವರ ಸೇವೆ ಎಲ್ಲ ಕೇವಲ ನಮ್ಮ ಅನುಗ್ರಹಕ್ಕಾಗಿ, ನಮ್ಮ ಮೇಲೆ ಅನುಗ್ರಹ ಮಾಡುವುದಕ್ಕಾಗಿ ದೇವರು ಸ್ವೀಕಾರ ಮಾಡುತ್ತಾನೆ ಅವನಿಗೆ ಯಾವುದೂ ಬೇಕಿಲ್ಲ. ಮುಂದೆ ಹೊರಟಿದ್ದಾರೆ ಕುಬ್ಜಾ ಬಂದಿದ್ದಾಳೆ ಪೂರ್ವ ಜನ್ಮದಲ್ಲಿ ಅವಳು ಪಿಂಗಲ ಅನ್ನುವಂತಹ ಸ್ತ್ರೀ ತಾನು ವೇಶ್ಯೆಯಾಗಿ ನಾನಾ ಜನರ ಸಂಗವನ್ನು ಮಾಡಿ ವಿರಕ್ತಳಾಗಿ

ಸಂತಂ ಸಮೀಪೇ ರಮಣಂ ರತಿಪ್ರದಂ ವಿತ್ತಪ್ರದಂ ನಿತ್ಯಮಿಮಂ ವಿಹಾಯ ।

ಅಕಾಮದಂ ದುಃಖಭಯಾಧಿಶೋಕಮೋಹಪ್ರದಂ ತುಚ್ಛಮಹಂ ಭಜೇಽಜ್ಞಾ ॥ (11.8.31 ಭಾಗವತ)

1. 13.101 ಮಭಾತಾನಿರ್ಣಯ

ಸರ್ವರಿಗೂ ಸುಖವನ್ನು ಕೊಡುವ ಅಂತರ್ಯಾಮಿಯಾದಂತಹ ಸರ್ವೋತ್ತಮನಾದ ಭಗವಂತನ ಸೇವೆಯನ್ನು ಮಾಡುವುದನ್ನು ಬಿಟ್ಟು ನಾನು ಜೀವನದಲ್ಲಿ ಸುಖ ಸಾಧನವಾದದ್ದು ಇನ್ನೇನೋ ಅಂತ ತಿಳಿದು ಈ ರೀತಿಯ ಪುರುಷರ ಅಪೇಕ್ಷೆಯನ್ನು ಪಟ್ಟೆನಲ್ಲಾ ಇಷ್ಟು ದಿವಸ, ನಾನು ಮಾಡಿದ್ದು ಬಹಳ ದೊಡ್ಡ ತಪ್ಪು ಇನ್ನು ಮೇಲೆ ನಾನು ವಿರಕ್ತಳಾಗಬೇಕು.

ಯದಷ್ಟಿಭಿರ್ನಿರ್ಮಿತವಂಶವಂಶ್ಯ-ಸ್ಥೂಣಂ ತ್ವಚಾ ರೋಮನಖೈಃ ಪಿನದ್ಧಂ ।
ಕ್ಷರನ್ನವದ್ವಾರಮಗಾರಮೇತ-ದ್ವಿಣ್ಮೂತ್ರಪೂರ್ಣಂ ಮದುಪೈತಿ ಕಾನ್ಯಾ ॥ (11.8.33 ಭಾಗವತ)

ಇಂತಹ ಅತ್ಯಂತ ಹೇಯವಾದ ಶಾರೀರಿಕ ಸುಖಕ್ಕಾಗಿ ನಾವು ಅಪೇಕ್ಷೆ ಪಡಬಾರದು ಆ ಪರಮಾತ್ಮನ ಸೇವೆಯನ್ನು ಮಾಡಬೇಕು ಅಂತ ನಿರಂತರ ಭಗವಂತನ ಧ್ಯಾನವನ್ನು ಮಾಡಿದ್ದಕ್ಕೆ ಈಗ ಕುಬ್ಜೆಯಾಗಿ ಹುಟ್ಟಿದ್ದಾಳೆ. ನೋಡಿ, ಪರ ಪುರುಷರ ಸಂಗದಿಂದ ವಿರಕ್ತಳಾಗಿ ಸಾಧನೆ ಮಾಡಿ ತಪಸ್ಸು ಮಾಡಿದ್ದಕ್ಕೆ ಪರಮ ಪುರುಷನ ಸಂಗವನ್ನು ಮಾಡುವಂತಹ ಮಹಾಸೌಭಾಗ್ಯ ಅವಳಿಗೆ ಬಂದಿದೆ. ಅವಳು ಗಂಧವನ್ನು ಒಯ್ಯುತ್ತಾ ಇದ್ದಾಳೆ ಕಂಸನಿಗೆ ಅಂತ ಭಾರೀ ಗಂಧ ಅಂತಹ ಗಂಧದ ಲೇಪನವನ್ನೆಲ್ಲ ಸಿದ್ದ ಮಾಡಿಕೊಂಡು ಒಯ್ಯುತ್ತಾ ಇರುವಾಗ ಪರಮಾತ್ಮ ಅವಳಿಗೆ ಕೇಳಿದ ಭಕ್ತಿಯಿಂದ ಕೊಟ್ಟಿದ್ದಾಳೆ. ತನ್ನ ಕೈಗಳಿಂದ ಅವಳ ಗದ್ದವನ್ನು ಹಿಡಿದು ಕಾಲಿನ ಮೇಲೆ ಕಾಲಿಟ್ಟು ಅವಳನ್ನು ಹೀಗೆ ಎತ್ತಿದರೆ ಅಷ್ಟು ವಕ್ರಳಾದಂತಹ ಆ ವ್ಯಕ್ತಿ ವಿದ್ಯುತ್ತಿನಂತಹ ಸಂಚಾರ ವಿದ್ಯುತ್ತು ಹೀಗೆ ಅಂಕುಡೊಂಕಾಗಿ ಬರುತ್ತದಲ್ಲ ಹಾಗೇ ಹೋಗುತ್ತ ಇದ್ದಳು ಅಂತ ಹರಿವಂಶ ವರ್ಣನೆ ಮಾಡುತ್ತದೆ ಅಂಥವಳನ್ನ ಪರಮಾತ್ಮ ಒಂದು ಕ್ಷಣ ಮಾತ್ರದಲ್ಲಿ ಅತ್ಯಂತ ಸುಂದರವಾದ ಶರೀರವುಳ್ಳವಳನ್ನಾಗಿ ಮಾಡಿದ್ದಾನೆ. ಅಚಿಂತ್ಯಾದ್ಭುತವಾದಂತಹ ಶಕ್ತಿ ಪರಮಾತ್ಮನಿಗೆ ಏನೂ ಆಪರೇಷನ್ ಇಲ್ಲ ಏನೇನು ಇಲ್ಲ, ಔಷಧಗಳಿಲ್ಲ, ಉಪಚಾರಗಳಿಲ್ಲ, ಮಂತ್ರಗಳಿಲ್ಲ ಏನು ಇಲ್ಲ. ಅಂತಹ ಪರಮಾತ್ಮನ ಸೇವೆಯನ್ನು ಮಾಡಿದರೆ ಅವನ ಅನುಗ್ರಹವನ್ನು ಪಡೆದರೆ ಎಲ್ಲ ವಿಧವಾದ ದೈಹಿಕವಾದ ಅಸ್ವಾಸ್ಥ್ಯಗಳು, ಅಂಕುಡೊಂಕುಗಳು ಮಾತ್ರ ಅಲ್ಲ ಮಾನಸಿಕವಾದ ಅಂಕುಡೊಂಕುಗಳು ಕೂಡ ಆ ಭಗವಂತನ ಅನುಗ್ರಹದಿಂದ ದೂರವಾಗುತ್ತದೆ ಅನ್ನುವ ಸಂದೇಶವನ್ನು ಈ ಕಥೆಯಿಂದ ಪರಮಾತ್ಮ ಕೊಡುತ್ತಾನೆ. ತಾನೂ ಗಂಧ ಲೇಪನವನ್ನು ಮಾಡಿಕೊಂಡ ಎಲ್ಲರಿಗೂ ಕೊಟ್ಟ ಆ ದೇವರ ನಿರ್ಮಾಲ್ಯ ಗಂಧ ಎಲ್ಲ ಗೋಪಾಲಕರು ಹಚ್ಚಿಕೊಂಡಿದ್ದಾರೆ. ಅವಳಿಗೆ ಶ್ರೀಕೃಷ್ಣ ಪರಮಾತ್ಮನನ್ನು ಸಂಗ ಮಾಡಬೇಕು, ಶ್ರೀಕೃಷ್ಣ ಪರಮಾತ್ಮನ ಅನುಗ್ರಹವನ್ನು ಪಡೆಯಬೇಕು ಅನ್ನುವ ಅಪೇಕ್ಷೆಯಿತ್ತು, ಅವಶ್ಯವಾಗಿ ಕಂಸನ ಸಂಹಾರವಾದ ಮೇಲೆ ನಿನ್ನ ಅಪೇಕ್ಷೆಯನ್ನು ಪೂರ್ಣ ಮಾಡುತ್ತೇನೆ ಅಂತ ಅವಳಿಗೆ ವರ ಕೊಡುತ್ತಾನೆ ಮುಂದೆ ಅವಳಲ್ಲಿ ವಿಶೋಕ ಅನ್ನುವ ಮಗ ಹುಟ್ಟುತ್ತಾನೆ ಅವನೇ ಭೀಮಸೇನ ದೇವರಿಗೆ ಸಾರಥಿ ಆಗುತ್ತಾನೆ. ಪಂಚರಾತ್ರಾಗಮಗಳಲ್ಲಿ ಮಹಾಪಾಂಡಿತ್ಯ ವಿಶೋಕನಿಗೆ ಅಂತಹ ನಾರದರ ಉಪದೇಶದಿಂದ ಪಂಚರಾತ್ರಾಗಮಗಳ ಪಾಂಡಿತ್ಯವನ್ನು ಪಡೆದು ಆ ಪಂಚರಾತ್ರಾದಿ ಆಗಮಗಳೆಲ್ಲ ಯಾರ ತಲೆಯಲ್ಲಿ ಯಾವಾಗಲೂ ನರ್ತನ ಮಾಡುತ್ತವೆ ಅಂತಹ ಭೀಮಸೇನ ದೇವರಿಗೆ ಅವನು ಸಾರಥಿಯಾದ. ಅಂತಹ ಒಂದು ದೊಡ್ಡ ಸೌಭಾಗ್ಯ ಸರ್ವೋತ್ತಮನ ಕೈಹಿಡಿದಿದ್ದಾಳೆ, ಜೀವೋತ್ತಮರ ಸಾರಥಿ ಆಗುವಂತಹ ಮಗನನ್ನು ಪಡೆದಿದ್ದಾಳೆ ಎಂದರೆ ಅವಳ ಭಾಗ್ಯ ಹೇಗಿದೆ ಅಂತ ನೋಡಿ. ಈ ರೀತಿ ಅವಳನ್ನು ಪರಮಾತ್ಮ ಉದ್ಧಾರ ಮಾಡಿ ಮುಂದೆ ಹೊರಟಿದ್ದಾನೆ.

ಸರ್ವಜ್ಞನಾಗಿದ್ದರೂ ಎಲ್ಲಿ ಕಂಸನ ಆ ಧನುರ್ಯಾಗವಂತೆ ಅದು ಎಲ್ಲಿದೆ ಧನುರ್ಮಹಾ ಮಹ ಅಂದರೆ ಉತ್ಸವ ಧನುರ್ಮಹಾ ಎಲ್ಲಿ ನಡೆಯುತ್ತ ಇದೆ, ಧನುಸ್ಸನ್ನು ಎಲ್ಲಿ ಇಟ್ಟಿದ್ದಾರೆ ಅಂತ ದಾರಿಯಲ್ಲಿ ಅಡ್ರೆಸ್ ಕೇಳುತ್ತ ಇದ್ದಾನೆ ಜನರು ಹೇಳಿದ ದಾರಿಗೆ ಹೊರಟ.

ಕತರತ್ತದ್ ಧನುಃ ಸೌಮ್ಯ ಮಹೋಽಯಂ ಯಸ್ಯ ವರ್ತತೇ ॥ (27.43 ವಿಷ್ಣುಪರ್ವ)

ಆ ಮಹ ಎಲ್ಲಿ ಅಂತ ಅದಕ್ಕೆ ಇವನಿಗೆ ಮಹಾವಿಷ್ಣು ಅಂತ ಕರೆಯುವುದು ಪರಮಾತ್ಮನಿಗೆ. ಅಲ್ಲಿ ಹಿಂದೆ ಶಕ್ರಮಹಾ ಅಂತ ಇಂದ್ರನ ಮಹಾಉತ್ಸವ ಅಂತ ಕೇಳಿದಿರಿ, ಇದು ಧನುರ್ಮಹಾ, ಅಲ್ಲಿ ಶಕ್ರಮಹದಲ್ಲಿ ಒಳಗೆ ಪ್ರವೇಶ ಮಾಡಿದ ದೇವರು ಅಂದರೆ ನಿಲ್ಲಿಸುವುದಕ್ಕೆ ಇದೇನು ಮಾಡುತ್ತೀರಿ ಶಕ್ರಮಹಾ ಸರ್ವೋತ್ತಮನಾದಂತಹ ಪರಮಾತ್ಮನ ಪೂಜೆಯನ್ನು ಮಾಡಿ ಅಂತ ಅಲ್ಲಿ ಉಪದೇಶ ಮಾಡಿದ. ಈ ಧನುರ್ಮಹದಲ್ಲಿ ಪ್ರವೇಶ ಮಾಡಿದ ಧನುರ್ಭಂಗವನ್ನೇ ಮಾಡಿ ಕಂಸನ ಸಂಹಾರವನ್ನೇ ಮಾಡುವುದಕ್ಕೆ ಪರಮಾತ್ಮ ಬರುತ್ತಾ ಇದ್ದಾನೆ ಹೀಗೆ ಮಹದಲ್ಲಿ ಉತ್ಸವದಲ್ಲಿ ಪ್ರವೇಶ ಮಾಡುತ್ತಾನೆ ಆದ್ದರಿಂದ ದೇವರಿಗೆ ಮಹಾವಿಷ್ಣು ಅಂತ ಹೆಸರು. ಅಂತಹ ಮಹಾವಿಷ್ಣು ಪರಮಾತ್ಮ ಆ ಮಹದಲ್ಲಿ ಪ್ರವೇಶ ಮಾಡುತ್ತ ಇದ್ದಾನೆ ಅಲ್ಲಿರತಕ್ಕಂತಹ ಧನುಸ್ಸಿನ ಪರಿಚಯವನ್ನು ಮಾಡಿಸಿಕೊಡುತ್ತಾ ಇದ್ದಾರೆ ಇಂದ್ರಾದಿ ದೇವತೆಗಳು ಇದನ್ನು ಎತ್ತುವುದಕ್ಕೆ ಸಾಧ್ಯ ಇಲ್ಲ ಅಂತಹ ಭಾರೀ ಧನುಸ್ಸು ಇದು. ಇದನ್ನು ಸುಲಭವಾಗಿ ಎತ್ತುವುದಕ್ಕೆ ಅಂತೂ ಸಾಧ್ಯವೇ ಇಲ್ಲ ಅಂತ ಹೇಳುತ್ತ ಇರುವಾಗಲೇ ಪರಮಾತ್ಮ ಅನಾಯಾಸವಾಗಿ ಅದನ್ನು ಎತ್ತೋದಲ್ಲ ಆಟ ಆಡುತ್ತ ಇದ್ದಾನೆ ಚೆಂಡಾಡಿದಂತೆ. ಅದನ್ನು ಎತ್ತೆತ್ತಿ ಎಸೆದು ಆಟವಾಡಿ ಚೆನ್ನಾಗಿ ಬಗ್ಗಿಸಿ ಧನುರ್ಭಂಗವನ್ನು ಮಾಡಿದರೆ ಇಡೀ ಮಥುರೆ ಎಲ್ಲಾ ಕಂಪಿಸಿ ಹೋಗಿದೆ, ಕಂಸನ ಹೃದಯ ವಿನೀರ್ಣವಾಗಿದೆ, ಮೃತ್ಯುವಿನ ಭಯ ಅವನಲ್ಲಿ ಪ್ರವೇಶ ಮಾಡಿದೆ. ಜನರೆಲ್ಲಾ ಗಾಬರಿಯಾಗಿದ್ದಾರೆ ಏನಾಯಿತು ಭೂಕಂಪವಾಯಿತೇ, ಪ್ರಲಯ ಹತ್ತಿರ ಬಂತೇ ಅನ್ನುವ ರೀತಿಯಲ್ಲಿ ಎಲ್ಲರಿಗೂ ಭಯವಾಗಿದೆ. ಆ ಧನುಸ್ಸನ್ನು ರಕ್ಷಣೆ ಮಾಡುವುದಕ್ಕಾಗಿ ಇರುವಂತಹ ವ್ಯಕ್ತಿ ಕಂಸನ ಹತ್ತಿರ ಓಡೋಡಿ ಬಂದು ಹೇಳುತ್ತಾ ಇದ್ದಾನೆ ಈ ನಡೆದ ಘಟನೆಯನ್ನ **'ಕಾಕೋಚ್ಛ್ವಾಸೋಽಭ್ಯಭಾಷತ'**[1] ಅಂತ.ಒಂದು ವಿಶಿಷ್ಟವಾದ ಪ್ರಯೋಗವನ್ನು ಹೇಳುತ್ತದೆ. ಕಾಗೆ ಹೇಗೆ ಆಚೆ ಈಚೆ ಒಂದೇ ಕಣ್ಣು ಹೀಗೆ ಹೀಗೆ ನೋಡುತ್ತ ಇರುತ್ತದೆ ಹಾಗೆ ಕಣ್ಣುಗಳನ್ನು ಆಚೆ ಈಚೆ ಮಾಡುತ್ತಾ ಭಯದಿಂದ ನಾನೇನು ಬದುಕುತ್ತೇನೋ ಸಾಯುತ್ತೇನೋ ಅನ್ನುವ ರೀತಿಯಲ್ಲಿ ಕಾಕದಂತಹ ದೃಷ್ಟಿಯನ್ನು ಪಡೆದುಕೊಂಡು ಅನಿಯಂತ್ರಿತವಾದ ಶ್ವಾಸ ಉಳ್ಳವನಾಗಿ ಗಾಬರಿಯಾಗಿ ಕಕ್ಕಾಬಿಕ್ಕಿಯಾಗಿ ಬಂದು ಕಂಸನ ಎದುರಿಗೆ ಹೇಳಿಕೊಂಡ ಅನ್ನುವ ಅರ್ಥದಲ್ಲಿ **'ಕಾಕೋಚ್ಛ್ವಾಸೋಽಭ್ಯಭಾಷತ'** ಅಷ್ಟು ಗಾಬರಿಯಾಗಿ ಹೇಳಿದ್ದಾನೆ, ಕಂಸನಿಗೆ ಭಯ ಪ್ರಾರಂಭವಾಗಿದೆ. ಈ ಕಡೆಗೆ ಕಂಸ ತಕ್ಷಣಕ್ಕೆ ಇನ್ನು ಮುಂದಿನ ಉಪಾಯವನ್ನು ಮಾಡಬೇಕು ಅಂತ ಹೇಳುತ್ತಾ ಇದ್ದಾನೆ ಮಧ್ಯದಲ್ಲಿ ಆಲೋಚನೆ ಮಾಡಿದ ನಾನು ದೈವವನ್ನು ಮೀರಿ ನನ್ನ ಪ್ರಯತ್ನದಿಂದ ಮೃತ್ಯುವನ್ನು ದೂರ ಮಾಡುತ್ತೇನೆ ಅಂತ ಅಂದುಕೊಂಡಿದ್ದೆ.

ದೈವಂ ಪುರುಷಕಾರೇಣ ನ ಶಕ್ಯಮತಿವರ್ತಿತುಮ್ ।
ನಾರದೋಕ್ತಂ ಚ ವಚನಂ ನೂನಂ ಮಹ್ಯಮುಪಸ್ಥಿತಮ್ ॥ (28.4 ವಿಷ್ಣುಪರ್ವ)

ಇಷ್ಟು ದಿನ ಪ್ರಯತ್ನ ಮಾಡಿದೆ ಎಷ್ಟು ಅಸುರರನ್ನ, ದೈತ್ಯರನ್ನ ಕಳಿಸಿದೆ ಕೃಷ್ಣನ ಸಂಹಾರಕ್ಕೆ ಕೊನೆಗೂ ಆಗಲಿಲ್ಲ ಹತ್ತಿರ ಬಂದ ಧನುರ್ಭಂಗವನ್ನೂ ಮಾಡಿದ ಪ್ರಾಯಃ ನನ್ನ ಮರಣ ಹತ್ತಿರ ಬಂತೋ ಏನೋ ಅಂತ ಕಂಸ ವಿಚಾರವನ್ನು ಮಾಡುತ್ತಾ ಇದ್ದಾನೆ ಈ ರೀತಿ ಆಲೋಚನೆಯನ್ನು ಮಾಡಿದ. ಆ ಧನುರ್ಯಾಗದ ನಿಮಿತ್ತ ಆ ಮಲ್ಲ ಯುದ್ಧವನ್ನು ಮಾಡಿಸುವುದಕ್ಕೆ ದೊಡ್ಡದಾದಂತಹ ರಂಗಮಂಚವನ್ನು ಮೊದಲೇ ಸಿದ್ಧ ಮಾಡಿದ್ದ ತಾನೇ ಸ್ವತಃ ನೋಡಿಕೊಂಡು ಬಂದ ರಂಗಮಂಚ ಎಲ್ಲಾ ಚೆನ್ನಾಗಿದೆಯಾ ಅಂತ. ಸ್ತ್ರೀಯರಿಗೆ ಬೇರೆ ವ್ಯವಸ್ಥೆ ಮಂಚಗಳು ಅಲ್ಲಲ್ಲಿ

1. 27.51 ವಿಷ್ಣುಪರ್ವ

ಕೂಡುವುದಕ್ಕೆ ಸ್ತ್ರೀಯರಿಗೆ ಬೇರೆ, ಗೋಪಾಲಕರಿಗೆ ಬೇರೆ, ಪಟ್ಟಣದ ವಾಸಿಗಳಿಗೆ ಬೇರೆ, ಋಷಿಗಳಿಗೆ ಬೇರೆ, ಮಂತ್ರಿಗಳು, ಸೈನಿಕರು, ಸೇನಾಧಿಪತಿಗಳು ಬೇರೆ ಹೀಗೆ ಅಂತಹ ಅದ್ಭುತವಾದ ವ್ಯವಸ್ಥೆ ಅಷ್ಟು ಪ್ರಾಚೀನ ಕಾಲದಲ್ಲಿಯೂ ಇತ್ತು. ಈ ಸ್ಟೇಡಿಯಂನ ವ್ಯವಸ್ಥೆ ಇವತ್ತಿದೆ ಅವತ್ತಿಲ್ಲ ಅಂತ ತಿಳಿದುಕೊಳ್ಳಬೇಡಿ ಬಹಳ ವರ್ಣನೆ ಇದೆ ಒಂದು ಅಧ್ಯಾಯದವರೆಗೆ. ಅಂತಹ ಭಾರೀ ಭಾರೀ ಮಂಚಗಳು, ಅಲ್ಲಲ್ಲಿ ಬಂಗಾರದ ಬಟ್ಟಲುಗಳು, ಬಂಗಾರದ ಪಾತ್ರೆಗಳು ನೀರು ಕುಡಿಯುವುದಕ್ಕೆ ವ್ಯವಸ್ಥೆ, ಹಾಲು ಕುಡಿಯುವುದಕ್ಕೆ ವ್ಯವಸ್ಥೆ ಯಾರಿಗೆ ಏನು ಬೇಕೋ ಅದು ಅಂತಹ ಎಲ್ಲ ವ್ಯವಸ್ಥೆಯನ್ನು ಮಾಡಿದ್ದಾನೆ ಅದನ್ನೆಲ್ಲ ನೋಡಿಕೊಂಡು ಹೋದ ಸರಿ ಎಲ್ಲವೂ ಚೆನ್ನಾಗಿದೆ ಅಂತ ಗೊತ್ತಾಯಿತು. ಆಮೇಲೆ ಮಲ್ಲರನ್ನು ಚಾಣೂರ, ಮುಷ್ಟಿಕರನ್ನು ಕರೆದು ಹೇಳುತ್ತಾನೆ ನೀವಿಬ್ಬರು ಏನಾದರೂ ಮಾಡಿ ಆ ಬಲರಾಮ ಕೃಷ್ಣರನ್ನು ಸಂಹಾರ ಮಾಡಲಿಕ್ಕೇ ಬೇಕು. ಮಲ್ಲ ಯುದ್ಧದಲ್ಲಿ ಸಾಮಾನ್ಯ ಏನು ಇರುತ್ತದೆ ಅಂದರೆ ನಿಯಮ ಬೆನ್ನು ನೆಲಕ್ಕೆ ಹತ್ತಿದರೆ ಕೈಬಿಟ್ಟು ಬಿಡಬೇಕು, ಅವನನ್ನ ಮುಂದೆ ಹೊಡೆಯಲೂಬಾರದು, ಕೊಲ್ಲುವುದಂತೂ ಇಲ್ಲವೇ ಇಲ್ಲ, ಪೀಡೆಯನ್ನೂ ಕೊಡಬಾರದು. ಬೆನ್ನು ನೆಲಕ್ಕೆ ಹಚ್ಚಿದ ಅಂದರೆ ಅವನು ಸೋತ, ಸೋತ ಅಂದರೆ ಅವನನ್ನು ಕೈ ಬಿಡಬೇಕು ಇದು ಯುದ್ಧ ಅಲ್ಲ, ಇಲ್ಲಿ ಮಾರಣ ಇರುವುದಿಲ್ಲ ಕೇವಲ ಪಾತನ ಆದರೆ ಕಂಸ ಹೇಳುತ್ತಾನೆ ಕಿವಿಯಲ್ಲಿ ನೀವು ಕೇವಲ ಪಾತನ ನಮ್ಮ ಮಲ್ಲ ಯುದ್ಧದ ಧರ್ಮ ಅಂತ ಅಂದುಕೊಳ್ಳಬೇಡಿ ಅವರನ್ನು ಸಂಹಾರ ಮಾಡಲೇಬೇಕು ನೀವು ಅಂದರೇ ನನ್ನ ಸೇವೆಯನ್ನು ಮಾಡಿದಂತೆ.

ತನ್ಮತ್ತೋ ಯದಿ ಸತ್ಕಾರಃ ಸ್ಮರ್ಯತೇ ಸುಕೃತಾನಿ ಚ ।
ಕರ್ತವ್ಯಂ ಮೇ ಮಹತ್ ಕರ್ಮ ಭವದ್ಭ್ಯಾಂ ಸ್ವೇನ ತೇಜಸಾ ॥ (28.21 ವಿಷ್ಣುಪರ್ವ)

ನಾನು ಇಷ್ಟು ದಿವಸ ನಿಮ್ಮನ್ನು ಉಣ್ಣಿಸಿ ತಿನ್ನಿಸಿ ಬೆಳಿಸಿದ್ದೇನೆ, ಎಂತಹ ಸ್ಥೂಲವಾದ ಕಾಯವನ್ನು ಪಡೆದಿದ್ದೀರಿ ಒಬ್ಬೊಬ್ಬರೂ ಕೂಡ. ಈ ತರಹದ ಶರೀರವನ್ನ ಪಡೆದು ನೀವು ಬಲಿಷ್ಠರಾಗುವುದಕ್ಕೆ ನಾನು ಕೊಟ್ಟ ಆಹಾರ ಕಾರಣ ಗೊತ್ತಾ ಆದ್ದರಿಂದ ನನ್ನ ಇಚ್ಛೆಯನ್ನು ನೀವು ಪೂರ್ಣ ಮಾಡಬೇಕು ಅಂತ. ಅವರು ಮಹಾ ದುಷ್ಟರು ಆಗಲಿ ನಾವು ಪ್ರಯತ್ನ ಮಾಡುತ್ತೇವೆ ಅಂತ ಹೇಳಿದ್ದಾರೆ. ಈ ಕಡೆಗೆ ಕುವಲಯಾಪೀಡ ಎಂಬಂತಹ ಆನೆ ಸಮಗ್ರವಾದ ಭೂವಲಯಕ್ಕೇನೆ ಪೀಡೆಯನ್ನು ಕೊಡುವಂತಹ ಕುವಲಯಾಪೀಡ ಅದು ಕುವಲಯಾ ಪೀಡ, ಒಂದು ಹೆಜ್ಜೆ ಇಟ್ಟರೆ ಭೂಮಿಯನ್ನೇ ನಡುಗಿಸುವಂತಹ ಭಾರೀ ಆನೆ ಅದು, ರುದ್ರ ದೇವರ ವರದಿಂದಲೇ ಅವಧ್ಯನಾದಂತಹ ಮಾವುತ ಆ ಮಾವುತನನ್ನು ಕರೆದು ಹೇಳುತ್ತಾನೆ. ಏನಾದರೂ ಮಾಡಿ ಶ್ರೀಕೃಷ್ಣ ಪರಮಾತ್ಮ, ಬಲರಾಮರು ರಂಗಮಂಚದ ಒಳಗೆ ಬರುವ ದಾರಿಯಲ್ಲಿಯೇನೆ ಅವರನ್ನು ಸಂಹಾರ ಮಾಡಬೇಕು, ಮಲ್ಲಯುದ್ಧಕ್ಕೂ, ರಂಗಮಂಚಕ್ಕೂ ಅವರು ಬಂದಿರಬಾರದು ಹಾಗೆ ವ್ಯವಸ್ಥೆ ಮಾಡಬೇಕು ಅಂತ ಹೇಳಿದ. ಆ ರೀತಿ ಹೇಳಿದಾಗ ಅವನು ಆ ಸಿಟ್ಟಿನ ಭರದಲ್ಲಿ ಯಾದವರು ಯಾರೂ ಉಳಿಯಬಾರದು ವಸುದೇವ, ನಂದ, ಗೋಪಾಲಕರು, ಯಾದವರು ಎಲ್ಲರನ್ನೂ ನಿರ್ನಾಮ ಮಾಡಬೇಕು, ಈ ಕೃಷ್ಣನನ್ನು ಉಳಿಸಬಾರದು ಯಾರನ್ನು ಉಳಿಸಬಾರದು. ಅಲ್ಲ ನೀನು ಯಾದವನೇ ಹೀಗೆ ಯಾಕೆ ಯಾದವರ ಬಗ್ಗೆ ದ್ವೇಷ ನಿನಗೆ ಅಂತ ಆ ಮಹಾಮಾತ್ರ ಕೇಳಬಹುದು ಅಂತ ಅಂದುಕೊಂಡು ತಾನೇ ಉತ್ತರವನ್ನು ಕೊಡುತ್ತಾನೆ ನಾನು ಯಾದವನೇ ಅಲ್ಲ, ನನ್ನ ಜನ್ಮ ವೃತ್ತಾಂತವೇ ಬೇರೆ ಇದೆ ಅಂತ. ಏನು ಸಂದರ್ಭ ಇರಲಿಲ್ಲ ಹೇಳುವುದು, ಅವನಿಗೆ ತಲೆಯೇ ಸರಿ ಇರಲಿಲ್ಲ ಆ ಸಿಟ್ಟಿನೊಳಗೆ ಹೇಳುತ್ತಾ ಇದ್ದಾನೆ. ನಾರದರು ನನಗೆ ಎಲ್ಲ ಕಥೆ ಹೇಳಿದ್ದಾರೆ ನಾನು ಉಗ್ರಸೇನನ ಮಗನೇ ಅಲ್ಲ. ಏನು ಹೀಗೆ ಹೇಳುತ್ತ ಇದ್ದೀರಿ ಮಹಾರಾಜರೇ ನೀನು ಉಗ್ರಸೇನನ ಮಗನಲ್ಲ ಅಂದರೆ ಹಾಗಾದರೆ ನಿಮ್ಮ ತಾಯಿಯಲ್ಲಿ ಇನ್ನೊಬ್ಬರಿಂದ ಹುಟ್ಟಿದವ ಅಂತ ಆಯಿತು ನಿಮ್ಮ ತಾಯಿಯಲ್ಲಿ ನೀನೇ ದೋಷವನ್ನು ಹೇಳುತ್ತಾ ಇದ್ದೀ.

ಅನ್ಯಾಪಿ ಪ್ರಾಕೃತಾ ನಾರೀ ನ ಕುರ್ಯಾಚ್ಚ ಮಗುಪ್ಸಿತಮ್ । (28.41 ವಿಷ್ಣುಪರ್ವ)

ಹಾಗಾದರೆ ಯಾವ ಸ್ತ್ರೀಗೂ ಈ ತರಹದ ದೋಷ ಇರಬಾರದು ಅಂತಹದ್ದು ಮಹಾರಾಣಿ ಅವಳಲ್ಲಿ ನೀನು ದೋಷವನ್ನು ಹೇಳುತ್ತಾ ಇದ್ದೀ ನಿನ್ನ ತಾಯಿಯಲ್ಲಿ ಅಂತ ಹೌದು ಸತ್ಯ ಅಂದ ಅವನು. ಹಿಂದೆ ನನ್ನ ತಾಯಿ ಸುಯಾಮುನ ಅನ್ನುವ ಪರ್ವತಕ್ಕೆ ಸಖಿಯರ ಜೊತೆಗೆ ವಿಹಾರ ಮಾಡುವುದಕ್ಕೆ ಅಂತ ಹೋಗಿರುತ್ತಾಳೆ ಅಲ್ಲಿ ದ್ರುಮಿಲ ಎಂಬಂತಹ ಒಬ್ಬ ಅಸುರ ಗಂಧರ್ವ, ದೇವ ಗಂಧರ್ವ ಅಲ್ಲ, ಗಂಧರ್ವ ಅಸುರ ನನ್ನ ತಂದೆ ಉಗ್ರಸೇನನ ವೇಷವನ್ನು ಹಾಕಿಕೊಂಡು ನನ್ನ ತಾಯಿಯ ಸಂಗವನ್ನು ಮಾಡಿ ತಾಯಿಗೆ ಮೋಸವನ್ನು ಮಾಡಿ ಅವಳಲ್ಲಿ ನನ್ನನ್ನು ಪಡೆದಳು. ಆಗ ನನ್ನ ತಾಯಿಗೆ ಗೊತ್ತಾಯಿತು ಇವನು ನನ್ನ ನಿಜವಾದ ಪತಿ ಅಲ್ಲ ಪತಿಯ ವೇಷವನ್ನು ಹಾಕಿಕೊಂಡಂತಹ ದುಷ್ಟ ಬೇರೆ ಯಾರೋ ಇದ್ದಾನೆ ಅಂತ.

ಕಸ್ಯ ತ್ವಂ ವಿಕೃತಾಚಾರೋ ಯೇನಾಸ್ಮಿ ಮಲಿನೀಕೃತಾ ॥ (28.94 ವಿಷ್ಣುಪರ್ವ)
ಏಕಭರ್ತೃವ್ರತಮಿದಂ ಮಮ ಸಂದೂಷಿತಂ ತ್ವಯಾ । (28.95 ವಿಷ್ಣುಪರ್ವ)

ನನ್ನ ಶುದ್ಧವಾದ ಪಾತಿವ್ರತ್ಯಕ್ಕೆ ನೀನು ವಿರೋಧವನ್ನು ಉಂಟು ಮಾಡಿದ್ದೀ ಮಹಾ ನೀಚ ದುಷ್ಟ ಹಾಗೆ ಅಂತ ಅವಳು ಬೈದಿದ್ದಾಳೆ ನೀನು ಯಾರು ಅಂತ ಸಿಟ್ಟಿನಿಂದ ಅವನಿಗೆ ಕೇಳುತ್ತಾಳೆ. ಅವನು ತನ್ನ ಪರಿಚಯವನ್ನು ಹೇಳುತ್ತಾನೆ ನಾನು ಅಸುರ ಗಂಧರ್ವ ದ್ರುಮಿಲ ಅಂತ ನನ್ನ ಸಂಗವನ್ನು ಮಾಡುವ ಭಾಗ್ಯ ಸಿಕ್ಕಿತು ಧನ್ಯಳಾದಿ ಅಂತ ತಿಳಿದುಕೋ ಯಾಕೆ ನನ್ನನ್ನು ಬೈಯುತ್ತಾ ಇದ್ದೀ, ಶಾಪ ಕೊಡುತ್ತಾ ಇದ್ದೀ ಅಂತ. ಕಸ್ಯಂ ಅಂತ ನನ್ನನ್ನು ಕೇಳುತ್ತೀಯಲ್ಲ ನೀನು ಅದಕ್ಕಾಗಿಯೇನೆ ಆ ಹುಟ್ಟುವ ಮಗನಿಗೆ ಕಂಸ ಅನ್ನುವಂತಹ ಹೆಸರು ಬರುತ್ತದೆ ಹಾಗೂ ಶತ್ರುಗಳನ್ನು ನಾಶ ಮಾಡುವಂತಹ ಮಗನಾಗುತ್ತಾನೆ ಅಂತ ಅವನು ಅನ್ನುತ್ತಾನೆ.

ಕಸ್ಯ ತ್ವಮಿತಿ ಯಚ್ಚಾಹಂ ತ್ವಯೋಕ್ತೋ ಮತ್ತಕಾಶಿನಿ ।
ಕಂಸಸ್ತಸ್ಮಾದ್ ರಿಪುಧ್ವಂಸೀ ತವ ಪುತ್ರೋ ಭವೀಷ್ಯತಿ ॥ (28.103 ವಿಷ್ಣುಪರ್ವ)

ಆಗ ಇವಳು ಅನ್ನುತ್ತಾಳೆ ಕಂಸ ಅನ್ನುವಂತಹ ಎಲ್ಲ ಶತ್ರುಗಳನ್ನು ನಾಶ ಮಾಡುವಂತಹ ಮಗನಾಗುತ್ತಾನೆ ಅಂತ. ಆಗ ಇವಳು ಅನ್ನುತ್ತಾಳೆ ನಿನ್ನ ವರನೇ ಬೇಡ ನನಗೆ ನಾಚಿಕೆ ಇಲ್ಲ ನಿನಗೆ ಧಿಕ್ಕಾರ ಇರಲಿ **'ಧಿಕ್ ತೇ ವೃತ್ತಂ ಸುದುರ್ವೃತ್ತ'**[1] ಎಲ್ಲ ಸ್ತ್ರೀಯರನ್ನು ನಿಂದೆ ಮಾಡುತ್ತೀಯಾ, ಪಾತಿವ್ರತ್ಯವನ್ನು ನೀನು ಕೆಡಿಸಿದೀ ವಿರೋಧಿಯಾಗಿದ್ದೀ, ಪತಿವ್ರತಾ ಸ್ತ್ರೀಯರನ್ನೆಲ್ಲಾ ಅವನು ನಿಂದೆ ಮಾಡಿದ್ದಕ್ಕೆ ಅವಳು ಬೈಯುತ್ತಾಳೆ.

ಯಾಸ್ತ್ವೇಕಪತ್ನ್ಯಃ ಶ್ರೂಯನ್ತೇಽರುನ್ಧತೀಪ್ರಮುಖಾಃ ಸ್ತ್ರಿಯಃ ।
ಧೃತಾ ಯಾಭಿಃ ಪ್ರಜಾಃ ಸರ್ವಾ ಲೋಕಾಶ್ಚೈವ ಕುಲಾಧಮ ॥ (28.106 ವಿಷ್ಣುಪರ್ವ)

ಸಕಲ ಲೋಕೋದ್ಧಾರ ಮಾಡುವಂತಹ ಮಹಾ ಮಹಾ ಪ್ರಜಾ ಪ್ರಜೆಗಳನ್ನು ಜಗತ್ತಿಗೆ ನೀಡಿದ ಎಂತೆಂತಹ ಮಹಾನುಭಾವರು ಪತಿವ್ರತಾ ಸ್ತ್ರೀಯರು ಅರುಂಧತಿ, ವಸಿಷ್ಠ ಪತ್ನಿ ಇದ್ದಾರೆ ಅಂತಹ ಮಹಾನುಭಾವರ ಒಂದು ದಿವ್ಯವಾದಂತಹ ಪರಂಪರೆ ಇದೆ, ಅವರ ಆದರ್ಶ ಇದೆ ಅಂತಹ ಶುದ್ಧವಾದ ಪಾತಿವ್ರತ್ಯದ ತಪಸ್ಸಿನಿಂದ ಎಲ್ಲ ದುರ್ಜನರನ್ನು ತಮ್ಮ ದೃಷ್ಟಿಯಿಂದಲೇ ನಾಶ ಮಾಡುವ ಮಹಾಸಾಮರ್ಥ್ಯ ಅವರಲ್ಲಿ ಇರುತ್ತದೆ. ಅವರ ಸ್ಮರಣೆ

1. 28.105 ವಿಷ್ಣುಪರ್ವ

ಮಾಡುವ ಮಾತ್ರದಿಂದ ಎಲ್ಲ ಇಷ್ಟಾರ್ಥಗಳೆಲ್ಲ ಪೂರ್ಣವಾಗುತ್ತವೆ, ಎಲ್ಲ ಕಾರ್ಯಗಳು ಸಿದ್ಧವಾಗುತ್ತದೆ ಅಂತಹ ಸಾಮರ್ಥ್ಯ ಪತಿವ್ರತಾ ಸ್ತ್ರೀಯರಲ್ಲಿ ಇದೆ. ಅಂತಹ ಪತಿವ್ರತೆಯರ ಮಹಿಮೆ ನಿನಗೆ ಗೊತ್ತಿಲ್ಲ ಅವರ ಪಾದ ಧೂಲಿಯನ್ನು ಮುಟ್ಟುವ ಯೋಗ್ಯತೆಯೂ ನಿನಗೆ ಇಲ್ಲ ಮಹಾನೀಚ, ನೀನು ದುಷ್ಟ ಅಂತ ಬೈಯುತ್ತಾ ಇದ್ದಾಳೆ. ನೀನು ವರ ಕೊಟ್ಟಿದ್ದೀಯಲ್ಲ ಭಾರೀ ಶತ್ರುವನ್ನು ನಾಶ ಮಾಡುವ ಮಗ ಹುಟ್ಟುತ್ತಾನೆ ಅಂತ ಆ ಹುಟ್ಟುವಂತಹ ಮಗ ಮಹಾದುಷ್ಟ, ನೀಚ ತನ್ನ ಮಗನೇ ನೋಡಿದರೆ ಆದರೆ ನಿನ್ನಿಂದ ಹುಟ್ಟುತ್ತಾನಲ್ಲ ಅನ್ನುವುದಕ್ಕೆ ಅವನು ಮಹಾದುಷ್ಟ, ನೀಚ, ಮಹಾಸಜ್ಜನರಿಂದ ದ್ವೇಷ್ಯನಾಗುವಂತಹ ಮಗ ಹುಟ್ಟಲಿ ಅವನಿಂದಲೇ ನಿನ್ನ ಸಂಹಾರವೂ ಆಗಲಿ ಅಂತ ಶಾಪ ಕೊಡುತ್ತಾಳೆ ಆ ಉಗ್ರಸೇನನ ಹೆಂಡತಿ ಕಂಸನ ತಾಯಿ. ಆ ರೀತಿ ಶಾಪ ಕೊಟ್ಟ ಮೇಲೆ ದ್ರುಮಿಲ ಎಂಬ ಗಂಧರ್ವ ಓಡಿ ಹೋಗುತ್ತಾನೆ. ಹೀಗೆ ನನ್ನ ಕಥೆ ಇದೆ ಆದ್ದರಿಂದ ನಾನು ಉಗ್ರಸೇನನಿಂದ ಹುಟ್ಟಿದ್ದರೆ ಯಾದವ ಉಗ್ರಸೇನನಿಂದ ಹುಟ್ಟಿದವನಲ್ಲ ನಾನು, ಅಸುರನಿಂದ ಹುಟ್ಟಿದವ ಅಸುರ ನಾನು, ಅದಕ್ಕಾಗಿ ಈ ಯಾದವರನ್ನು ನಾವು ಉಳಿಸಲೇಬಾರದು ಏನಾದರೂ ಮಾಡಿ ನೀನು ಈ ಸೇವೆಯನ್ನು ಮಾಡಬೇಕು ಅಂತ ಆ ಮಾವುತನಿಗೆ ಕಂಸ ಹೇಳುತ್ತಾನೆ.

ಸರಿ ಅಂತ ಆ ಮಾವುತ ಸಿದ್ಧನಾಗಿ ನಿಂತಿದ್ದಾನೆ ದ್ವಾರದಲ್ಲಿ, ಎಲ್ಲರೂ ಸಿದ್ಧರಾಗಿ ನಿಂತಿದ್ದಾರೆ ಕೃಷ್ಣನಿಗಾಗಿ ಕಾಯುತ್ತ ಇದ್ದಾರೆ ಕುವಲಯಾಪೀಡ, ಮಾವುತ ಆ ದಾರಿಯಲ್ಲಿಯೇ ನಿಂತಿದ್ದಾರೆ ಮಧ್ಯದಲ್ಲಿ ದಾಟಿ ಹೋಗಲೇಬಾರದು ಅಂತ ಆ ಸಂದರ್ಭದಲ್ಲಿ ಕೃಷ್ಣ ಬಲರಾಮರು ಪ್ರವೇಶ ಮಾಡುತ್ತ ಇದ್ದಾರೆ. ಆನೆಯನ್ನು ಮುಂದೆ ಮುಂದೆ ಬಿಡುತ್ತ ಇದ್ದಾನೆ ಕೃಷ್ಣನ ಮೇಲೆ ಹೋಗಿ ತನ್ನ ಸೊಂಡಿಲಲ್ಲಿ ಹಿಡಿದು ಎತ್ತಿ ಅಪ್ಪಳಿ ಸಂಹಾರ ಮಾಡಿಬಿಡಬೇಕು ಅಂತ ಸೊಂಡೆಯನ್ನು ಕುಂಡಲಾಕಾರವಾಗಿ ದುಂಡು ದುಂಡಾಗಿ ಈ ಮಹಾ ಗಂಡನಾದ ಶ್ರೀಕೃಷ್ಣ ಪರಮಾತ್ಮನನ್ನ ಸುತ್ತಬೇಕು ಅಂತ ಪ್ರಯತ್ನ ಮಾಡುತ್ತಾ ಇದ್ದರೆ ಶ್ರೀಕೃಷ್ಣ ಪರಮಾತ್ಮ ತನ್ನ ಎದೆಯನ್ನು ಮುಂದೊಡ್ಡಿ ಆ ಎರಡೂ ದೊಡ್ಡದಾದ ಹಲ್ಲುಗಳನ್ನು ಹಿಡಿದು ಕಾಲು ಬುಡಕ್ಕೆ ಹೋಗಿದ್ದಾನೆ ಇದ್ದಕ್ಕಿದ್ದಂತೆ. ಅದು ಹೀಗೆ ಒಳಗೆ ಕೈ ಹಾಕಲಿಕ್ಕೆ ಬರುವುದಿಲ್ಲ ಹಿಂದೆ ತಿರುಗುತ್ತದೆ ಮುಂದೆ ತಿರುಗುತ್ತದೆ ಎಲ್ಲಿಯೂ ಸಿಕ್ಕುತ್ತಾ ಇಲ್ಲ ಕಾಲು ಕಡೆಗೆ ಸೊಂಡಿಲಲ್ಲಿ, ಹಲ್ಲಿನ ಮಧ್ಯದಲ್ಲಿ, ಹಿಂದೆ ಬಾಲದ ಹತ್ತಿರ ಸುತ್ತಾಡುತ್ತ ಇದ್ದಾನೆ ಸಣ್ಣ ಮಗು ಯಾವ ರೀತಿ ಆಟ ಆಡಿಸಬೇಕೋ ಹಾಗೆ ಆಟ ಆಡಿಸುತ್ತಾ ಇದ್ದಾನೆ ಆ ಆನೆಯ ಜೊತೆಗೆ. ಆನೆಯ ಜೊತೆಗೆ ಸ್ವಲ್ಪ ಹೊತ್ತು ಆಟ ಆಡಿ ಪರಮಾತ್ಮ ಬಾಲ ಲೀಲೆಯನ್ನು ತೋರಿಸಿದ ಆಮೇಲೆ ಅದರ ಹಲ್ಲುಗಳನ್ನೇ ಕಿತ್ತಿ ಅದೇ ಹಲ್ಲಿನಿಂದಲೇ ಅದನ್ನು ಸಂಹಾರ ಮಾಡಿದ್ದಾನೆ.

ತಾನು ಮಾಡಿದ ಅಧರ್ಮದಿಂದಲೇ ತಾನು ಸಾಯುತ್ತಾನೆ ಮನುಷ್ಯ ತನ್ನ ಅಧರ್ಮವೇ ತನ್ನ ಸರ್ವನಾಶಕ್ಕೆ ಕಾರಣವಾಗುತ್ತದೆ. ವಾಲ್ಮೀಕಿ ರಾಮಾಯಣದಲ್ಲಿ ಬರುತ್ತದೆ ಬೇಕಾದಷ್ಟು ಉಪಚಾರಗಳನ್ನು ಮಾಡುತ್ತಾರೆ ವಸಿಷ್ಠ ಮಹರ್ಷಿಗಳು ವಿಶ್ವಾಮಿತ್ರರಿಗೆ ಇನ್ನೂ ಅವರು ಋಷಿಗಳು ಆಗಿರಲಿಲ್ಲ ರಾಜರಾಗಿದ್ದಾಗ. ಎಲ್ಲ ಉಪಚಾರ ಮಾಡಿದ ಮೇಲೆ ಆ ನಂದಿನಿಯನ್ನೇ ಅಪಹಾರ ಮಾಡಿಕೊಂಡು ಹೋಗುವಾಗ ಬೇಡ ಅಂತ ಎಷ್ಟು ಹೇಳಿದರೂ ಕೇಳುವುದಿಲ್ಲ ಆಗ ವಸಿಷ್ಠರು ಒಂದೇ ಮಾತನ್ನು ಅನ್ನುತ್ತಾರೆ. ನಾನಂತೂ ಕೇವಲ ಧರ್ಭಗಳನ್ನು ಹಿಡಿದುಕೊಂಡು ಯಜ್ಞ ಯಾಗಾದಿಗಳನ್ನು ಮಾಡುತ್ತಾ, ವೇದಾದಿಗಳ ಪಾಠ ಪ್ರವಚನವನ್ನು ಮಾಡುತ್ತ ಇದ್ದವನು ನಿನ್ನ ಜೊತೆಗೆ ಯುದ್ಧ ಮಾಡಲಿಕ್ಕೆ ನಾನು ಹೋಗುವುದಿಲ್ಲ ಆದರೆ ಏನು ನೀನು ದ್ರೋಹ ಮಾಡುತ್ತಾ ಇದ್ದೀ ಆಶ್ರಮಕ್ಕೆ,ಇಲ್ಲಿರುವಂತಹ ಗೋವಿಗೆ ದ್ರೋಹ ಮಾಡುತ್ತಾ ಇದ್ದೀ, ಅಪಹಾರ ಮಾಡಿಕೊಂಡು ಹೋಗುತ್ತಾ ಇದ್ದೀ ಇದೇ ಅಪರಾಧ ನಿನ್ನನ್ನು ಹಾಳು ಮಾಡುತ್ತದೆ. **'ತಸ್ಮಾತ್ತ್ವಂ ನ ಭವಿಷ್ಯಸಿ'**[1] ಯಾವ ಅಪರಾಧವನ್ನು ಮಾಡಿದ್ದೀಯೋ ಆ ಅಪರಾಧವೇ ನಿನಗೆ

1. ವಾಲ್ಮೀಕಿರಾಮಾಯಣ ಬಾಲಕಾಂಡ

ಸಂಪೂರ್ಣವಾಗಿ ನಿರ್ಮೂಲವನ್ನಾಗಿ ಮಾಡುತ್ತದೆ ಎಚ್ಚರಿಕೆ ಇರಲಿ ಅಂತ. ಹೇಳುವ ತಾತ್ಪರ್ಯ ಮನುಷ್ಯ ತಾನು ಮಾಡಿದ ಅಪರಾಧದಿಂದಲೇ ತಾನು ನಶಿಸಿ ಹೋಗುತ್ತಾನೆ, ತನ್ನ ಕಾಲ ಮೇಲೆ ತಾನೇ ಕಲ್ಲು ಹಾಕಿಕೊಳ್ಳುತ್ತಾನೆ. ಆನೆಯ ಹಲ್ಲಿನಿಂದಲೇ ಆನೆಯನ್ನು ಸಂಹಾರ ಮಾಡಿದ ಪರಮಾತ್ಮ ಮೈಯೆಲ್ಲ ರಕ್ತ ಆದೇನು ಕೃಷ್ಣ ಪರಮಾತ್ಮನಿಗೆ ಓಕಳಿ ಆಡಿದ ಹಾಗೆ ಇತ್ತು ಆ ಆನೆಯ ರಕ್ತದಿಂದ ರಂಜಿತವಾದಂತಹ ದೇಹ ಅದನ್ನೇ ಖಡ್ಗದಂತೆ ಒಂದು ಹಲ್ಲನ್ನು ಬಲರಾಮ, ಇನ್ನೊಂದು ಹಲ್ಲನ್ನು ಕೃಷ್ಣ ಹಿಡಿದುಕೊಂಡು ಒಳಗೆ ಹೊರಟಿದ್ದಾರೆ. ಇಬ್ಬರನ್ನೂ ಸಂಹಾರ ಮಾಡಿದ ಇಬ್ಬರೂ ರುದ್ರ ದೇವರ ವರದಿಂದ ಅವಧ್ಯರು ತಾನು ಸರ್ವೋತ್ತಮ ಅಂತ ತಾನು ಮತ್ತೆ ತೋರಿಸಿಕೊಟ್ಟಿದ್ದಾನೆ ಹೆಜ್ಜೆ ಹೆಜ್ಜೆಗೆ ಆ ಪರಮಾತ್ಮ ಈ ತತ್ವಗಳನ್ನು ನಮಗೆ ತಿಳಿಸುತ್ತ ಇದ್ದಾನೆ.

ಮುಂದೆ ಬಂದ ಚಾಣೂರ–ಮುಷ್ಟಿಕರಿಗೆ ಮೊದಲೇ ಹೇಳಿಟ್ಟಿದ್ದ ಕಂಸ ಸಿದ್ಧರಾಗಿದ್ದಾರೆ ಆ ಚಾಣೂರನಿಗೆ ಅಂಧ್ರ ಅಂತೂ ಕರೆಯುತ್ತಾ ಇದ್ದರು ಯಾಕೆ ಅಂದರೆ ಅಂಧಯತಿ ಬಂದವರ ಜೊತೆಗೆ ಯುದ್ಧ ಮಾಡಿ ಕಣ್ಣು ಕಿತ್ತಿ ಕುರುಡರನ್ನು ಮಾಡುತ್ತ ಇದ್ದ ಅನ್ನುವ ದೃಷ್ಟಿಯಲ್ಲಿ ಅವನನ್ನು ಅಂಧ್ರ. ಅದಕ್ಕೆ ವಿಷ್ಣು ಸಹಸ್ರನಾಮದಲ್ಲಿ **'ಚಾಣೂರಾಂಧ್ರ ನಿಷೂದನ'** ಚಾಣೂರ ಅಂಧ್ರ ಎಂಬ ಹೆಸರನ್ನು ಇಟ್ಟುಕೊಂಡಂತಹ ಆ ಮಲ್ಲನನ್ನ ಸಂಹಾರ ಮಾಡಿದವ ಅನ್ನುವ ಅರ್ಥದಲ್ಲಿ ಚಾಣೂರ ಅಂಧ್ರ ನಿಷೂಧನ **'ಚಾಣೂರಾಂಧ್ರ ನಿಷೂದನ'** ಅಂತ.

ಅನ್ಧ್ರಂ ಮಲ್ಲಂ ಚ ನಿಕೃತಿಂ ಮುಷ್ಟಿಕಂ ಚ ಮಹಾಬಲಮ್ । (30.8 ವಿಷ್ಣುಪರ್ವ)

ಅಂತಹ ಇಬ್ಬರೂ ಮಹಾ ಬಲಿಷ್ಠರಾಗಿರತಕ್ಕಂತಹ ಅವಧ್ಯರಾದ, ರುದ್ರ ದೇವರ ವರದಿಂದ ಅವಧ್ಯನಾದಂತಹ ಚಾಣೂರ ಅಂತಹ ಚಾಣೂರ ಯುದ್ಧಕ್ಕಾಗಿ ಬಂದಿದ್ದಾನೆ. ಯುದ್ಧಕ್ಕೆ ಸಿದ್ದರಾಗಿದ್ದಾರೆ ಜನರೆಲ್ಲ ಮಾತನಾಡಿಕೊಳ್ಳುತ್ತ ಇದ್ದಾರೆ ಏನಿದು ಸಣ್ಣ ಹುಡುಗರು ಇಂತಹ ಭಾರೀ ಬಲಿಷ್ಠರಾದಂತಹ ದೈತ್ಯಕಾಯದ ಈ ಮಲ್ಲರು ಇದು ಸರಿಯಲ್ಲ ಯುದ್ಧ, ಸಮಾನರಲ್ಲಿ ಯುದ್ಧ ಆಗಬೇಕು.

ಬಾಲೋ ವಾ ಯದಿ ವಾ ವೃದ್ಧೋ ಮಧ್ಯೋ ವಾಪಿ ಕೃಶೋಽಪಿ ವಾ ।
ಬಲಸ್ಥೋ ವಾ ಸ್ಥಿತೋ ರಂಗೇ ಜ್ಞೇಯಃ ಕಕ್ಷಾನ್ತರೇಣ ವೈ ॥ (30.15 ವಿಷ್ಣುಪರ್ವ)

ಇಬ್ಬರೂ ಬಾಲರು, ಇಬ್ಬರೂ ವೃದ್ಧರು, ಇಬ್ಬರೂ ತರುಣರು ಹೀಗಿರಬೇಕು ಇದೇನು ವ್ಯತ್ಯಾಸವಾಗಿದೆ ಎಂತಹ ಅಧರ್ಮ ಇದು. ಇದನ್ನೆಲ್ಲ ಮಾತನಾಡುತ್ತ ಇದ್ದಾರೆ. ಕೃಷ್ಣ ಪರಮಾತ್ಮ ಆ ಎಲ್ಲ ಗೋಪಿಕಾ ಸ್ತ್ರೀಯರು, ಬಂದಂತಹ ಸಜ್ಜನರು ನಾಗರಿಕರು, ವಸುದೇವ, ದೇವಕಿ, ನಂದ, ಯಶೋದಾ ಇವರೆಲ್ಲರ ಮನಸ್ಸಿನಲ್ಲಿ ಬಹಳ ಉದ್ವಿಘ್ನತೆ ಇಂತಹ ಮಲ್ಲರ ಎದುರುಗಡೆ ನಮ್ಮ ಕೂಸುಗಳನ್ನು ನಿಲ್ಲಿಸಿದ್ದಾರಲ್ಲ ಅಂತ. ಅವರೆಲ್ಲರಿಗೆ ಧೈರ್ಯವನ್ನು ಕೊಡುವಂತೆ ಪರಮಾತ್ಮ ಹೇಳುತ್ತಾನೆ ನೀವು ಯಾರೂ ಚಿಂತೆಯನ್ನು ಮಾಡಬೇಡಿ ಯುದ್ಧದ ನಿಯಮ ರಣರಂಗದಲ್ಲಿ ಸಂಹಾರ ಮಾಡೋದೆ ಆದರೆ ಇಲ್ಲಿ ಸಂಹಾರ ಮಾಡಬಾರದು. ಆದರೆ ಈ ಚಾಣೂರ, ಮುಷ್ಟಿಕರ ಇತಿಹಾಸ ಏನು ಅಂತ ನಾನೆಲ್ಲ ತೆಗೆದಿದ್ದೇನೆ ಹೇಗೆ ಸರ್ವಜ್ಞನಾದದ್ದರಿಂದ ಗೂಗಲ್‌ದೊಳಗೆ ನೋಡಿ ಅಲ್ಲ ಅವರ ಬಗ್ಗೆ ಏನು ಮಾಹಿತಿ ಇದೆ ಅಂತ ಸರ್ವಜ್ಞ ಶಿಖಾಮಣಿಯಾದಂತಹ ನನಗೆ ಗೊತ್ತು ಎಷ್ಟು ಜನರನ್ನು ಇವರು ಸಂಹಾರ ಮಾಡಿದ್ದಾರೆ. ಮಲ್ಲ ಯದ್ಧದಲ್ಲಿ ಸಂಹಾರ ಮಾಡಬಾರದು ಸುಮ್ಮನೆ ಬೀಳಿಸಿ ಬರಬೇಕು ಆದರೆ ಸಂಹಾರ ಮಾಡುತ್ತಾರೆ ಇವರು ಇಂತಹ ಅಧರ್ಮವನ್ನು ಅನ್ಯಾಯವನ್ನು ಬೇಕಾದಷ್ಟು ಇವರು ಮಾಡಿದ್ದಾರೆ ನನಗೆ ಗೊತ್ತು ಆದ್ದರಿಂದ ನಾನೇನು ಇವರನ್ನು

ಸುಮ್ಮನೆ ಬಿಡುವುದಿಲ್ಲ **'ನಿಕೃತ್ಯಾ ನಿಕೃತಿಂ ಹನ್ಯಾತ್'** ಇವರು ಈ ರೀತಿ ಸಂಹಾರ ಮಾಡಿ, ಮೋಸ ಮಾಡಿ ಅಧರ್ಮ ಮಾಡಿದ್ದಾರೆ ಆದ್ದರಿಂದ ಇವರನ್ನು ನಾನು ಸಂಹಾರ ಮಾಡುತ್ತೇನೆ. ನಾನು ಇನ್ನುಳಿದ ಏನೇನು ಧರ್ಮವನ್ನು ಪರಿಪಾಲನೆ ಮಾಡಬೇಕೋ ಅದೆಲ್ಲ ಮಾಡುತ್ತೇನೆ ಆ ಮಲ್ಲ ಯುದ್ಧದ ಧರ್ಮಗಳನ್ನು ಆದರೆ ಇವರಿಗೆ ಮಾತ್ರ ಸರಿಯಾದ ಪಾಠವನ್ನು ಕಲಿಸುತ್ತೇನೆ ಎಂಬುದಾಗಿ ಹೇಳುತ್ತಾನೆ. ಸಂಯಮ, ಒಬ್ಬರನ್ನು ಒಬ್ಬರು ಸರಿಸುವುದು ಗಟ್ಟಿಯಾಗಿ ಹಿಡಿದುಕೊಂಡು ಒಂದು ಕಡೆಗೆ ನಿಲ್ಲುವುದು, ಸ್ಥಿರತ ಶೌರ್ಯ ತೋರಿಸುವುದು, ಆಚೆಈಚೆ ಕೈಕಾಲುಗಳನ್ನು ಅಳುಗಾಡಿಸುವುದು ವ್ಯಾಯಾಮ ತಕ್ಕೀಯಾ, ಹೇಯಾ ಯಾವುದೇ ಮರ್ಮ ಸ್ಥಾನವನ್ನು ಮುಟ್ಟದಂತೆ ಒಂದು ಗೌರವವನ್ನು ಸಲ್ಲಿಸುವುದು, ಬಲಂ, ಬಲ ಪ್ರದರ್ಶನ ಮಾಡುವುದು ಈ ಆರು ಮಲ್ಲ ಯುದ್ಧದಲ್ಲಿ ಅನುಸರಣೆ ಮಾಡಬೇಕಾದ ಧರ್ಮಗಳು ಅದೆಲ್ಲ ನಾನು ಅನುಸರಣೆ ಮಾಡುತ್ತೇನೆ. ಅದ್ಯಾವುದರಲ್ಲಿಯೂ ವ್ಯತ್ಯಾಸವಿಲ್ಲ ಆದರೆ ಇವರನ್ನು ಬಿಡುವುದಿಲ್ಲ ಯಾಕೆಂದರೆ ಅವರು ಯಾರನ್ನು ಬಿಟ್ಟಿಲ್ಲ ಆದ್ದರಿಂದ ಅವರನ್ನು ಸಂಹಾರ ಮಾಡುತ್ತೇನೆ. ನೀವು ಯಾರೂ ಚಿಂತೆ ಮಾಡಬೇಡಿ ನಿಶ್ಚಿಂತರಾಗಿ ಇರಿ ಅಂತ ಎಲ್ಲರಿಗೆ ಪರಮಾತ್ಮ ನೆರೆದ ಸಹಸ್ರ ಸಹಸ್ರ ಜನರಿಗೆ ಲಕ್ಷ್ಯಾವಧಿ ಜನಗಳಿಗೆ ತನ್ನ ಧ್ವನಿಯಿಂದ ನಿಂತಲ್ಲಿಯೇ ಹೇಳಿದ್ದಾನೆ ಪರಮಾತ್ಮ ಇಡೀ ಜಗತ್ತಿಗೆ ಕೇಳಿಸುವ ಹಾಗೆ ಆ ಭಗವಂತನ ಧ್ವನಿ ಕೇಳಬೇಕೇ ಅಂತಹ ಪರಮಾತ್ಮನ ಧ್ವನಿಯನ್ನು ಕೇಳಿ ಎಲ್ಲರಿಗೂ ಸಂತೋಷವಾಗಿದೆ. ಈ ಕಡೆಗೆ ಯುದ್ಧ ಪ್ರಾರಂಭವಾಗಿದೆ ನಾನಾ ರೀತಿಯ ಆ ಮಲ್ಲ ಯುದ್ಧಗಳ ಕೌಶಲಗಳನ್ನು ಅವರು ತೋರಿಸಿದ್ದಾರೆ ಎಲ್ಲದಕ್ಕೂ ಪ್ರತಿಯಾಗಿ ಅದಕ್ಕಿಂತಲೂ ಅತ್ಯದ್ಭುತವಾದ ಕೌಶಲವನ್ನು ತೋರಿಸುತ್ತ ಇದ್ದಾನೆ.

ಜಯಸ್ವ ಕೃಷ್ಣ ಚಾಣೂರಂ ದಾನವಂ ಮಲ್ಲರೂಪಿಣಮ್ । (30.41 ವಿಷ್ಣುಪರ್ವ)

ಮೇಲೆ ಸಪ್ತಋಷಿಗಳು ಬಂದು ಶೀಘ್ರದಲ್ಲಿ ಅವನನ್ನು ಜಯಿಸಿ ಸಂಹಾರವನ್ನು ಮಾಡು ಯಾಕೆ ವಿಲಂಬವನ್ನು ಮಾಡುತ್ತಾ ಇದ್ದೀ ಅಂತ ಪ್ರಾರ್ಥನೆ ಮಾಡುತ್ತಾರೆ, ಬ್ರಹ್ಮಾದಿ ದೇವತೆಗಳು ಬಂದಿದ್ದರು. ಮಧ್ಯದಲ್ಲಿ ಘಟನೆ ಏನಾಯಿತು ಅಂದರೆ ಈ ಮಹಾನುಭಾವ ನೀಚ ಕಂಸ ಆ ಮಲ್ಲರಿಗೆ ಉತ್ಸಾಹ ಬರುವುದಕ್ಕೆ ಭಾರೀ ವಾದ್ಯಗಳನ್ನು ಬಾರಿಸಲು ಹೇಳಿದ್ದ. ಅವರದೇನು ಕೆಲಸ ಯಾರು ಗೆದ್ದರೂ ಬಾರಿಸುತ್ತಾ ಇರುತ್ತಾರೆ ಅವರು. ಈ ಕೃಷ್ಣನ ಕೈ ಸ್ವಲ್ಪ ಜೋರಾದಾಗ ಇವನಿಗೆ ಸಹನೆ ಆಗಲಿಲ್ಲ ಸಂಕಟ ಆಯಿತು ಕೃಷ್ಣ ಗೆಲ್ಲುತ್ತಾ ಇದ್ದಾನೆ ಇಂತಹ ಸಂದರ್ಭದಲ್ಲಿ ನೀವು ವಾದ್ಯ ಬಾರಿಸುತ್ತೀರಿ ನಿಲ್ಲಿಸಿ ಆ ವಾದ್ಯವನ್ನು ಅಂತ ನಿಲ್ಲಿಸುತ್ತಾನೆ. ವಾದ್ಯ ನಿಂತದ್ದೇ ತಡ ಕಾಯುತ್ತಾ ಇದ್ದರು ನೋಡಿ ಮೇಲೆ ವಾದ್ಯಗಳು ಶುರುವಾಯಿತು ಎಲ್ಲಾ ದೇವಾಧಿ ದೇವತೆಗಳು ವಾದ್ಯಗಳನ್ನು ಬಾರಿಸುತ್ತಾ ಇದ್ದಾರೆ, ಗಾಬರಿಯಾದ ಕಂಸ ಇವರು ಬಾರಿಸುತ್ತಾನೆ ಇಲ್ಲ ಶಬ್ದ ಬರುತ್ತ ಇದೆ ದೇವತೆಗಳು ಕಾಣಿಸುವುದಿಲ್ಲ.

ಪ್ರತಿಸಿದ್ಧೇಷು ತೂರ್ಯೇಷು ಮೃದಂಗಾದಿಷು ತೇಷು ವಿ ।
ಖೇ ಸಂಗತಾನ್ಯವಾದ್ಯಂತ ದೇವತೂರ್ಯಾಣ್ಯನೇಕಶಃ ॥

ಅವರಂದರು ಈ ಅಯೋಗ್ಯರು ಕೃಷ್ಣ ಪರಮಾತ್ಮನ ಆ ಜಯಭೇರಿಯನ್ನು ಮೊಳಗಿಸುವುದಕ್ಕೆ ಯೋಗ್ಯರೇ ಅಲ್ಲ ಅನ್ನುವುದಕ್ಕೋಸ್ಕರ ನಾವೇ ಬಾರಿಸುತ್ತೇವೆ ಅಂತ ಬ್ರಹ್ಮಾದಿ ದೇವತೆಗಳು ವಾದ್ಯಗಳನ್ನು ಬಾರಿಸುತ್ತಾ ಇದ್ದಾರೆ ಅದ್ಭುತವಾದ ವಾದ್ಯಗಳು, ಋಷಿಗಳು ಮಾಡುವ ಸ್ತುತಿ ಇವೆಲ್ಲ ನಡೆದಿದೆ. ಈ ಸಂದರ್ಭದಲ್ಲಿ ಕೃಷ್ಣ ಪರಮಾತ್ಮ ಅವನ ಕಾಲುಗಳನ್ನು ಹಿಡಿದು ನೂರು ಸಲ ತಿರುಗಿಸಿದ್ದಾನಂತೆ ಗರ ಗರ ಗರ ಅಂತ ತಿರುಗಿಸಿ ಪ್ರಾಯಃ ಅಲ್ಲಿಯೇ ಪ್ರಾಣ ಹೋಗಿರಬೇಕು ಅಂತಹ ನೂರು ಸಲ ಅವನನ್ನು ತಿರುಗಿಸಿ ಕೆಳಗೆ ಹಾಕಿ ಅವನ ಎದೆಯ ಮೇಲೆ ಮೊಳಕಾಲಿಟ್ಟು

ಮುಷ್ಟಿಯಿಂದ ಅವನನ್ನು ಗುದ್ದಿ ಸಂಹಾರ ಮಾಡಿದ್ದಾನೆ ಪರಮಾತ್ಮ. ಈ ರೀತಿ ಚಾಣೂರನನ್ನು ಪರಮಾತ್ಮ ಸಂಹಾರ ಮಾಡಿದ ಅದೇ ರೀತಿ ಬಲರಾಮ ಮುಷ್ಟಿಕನನ್ನು ಯುದ್ಧದಲ್ಲಿ ಸಂಹಾರ ಮಾಡಿದ್ದಾನೆ ಅವರಿಬ್ಬರ ಸಂಹಾರ ಆಗಿದೆ. ಇದಲ್ಲದೆ ಇನ್ನು ಅನೇಕ ಜನರನ್ನು ಕೂಟ, ಕೋಸಲ ಅಂತ ಇಬ್ಬರು ಅವರಿಬ್ಬರನ್ನು ಪರಮಾತ್ಮ ಸಂಹಾರ ಮಾಡಿದ, ಛಲ ಅಂತ ಅನ್ನುವವನನ್ನು ಬಲರಾಮ ದೇವರು ಸಂಹಾರ ಮಾಡುತ್ತಾರೆ. ಸುನೀಥ ಮೊದಲಾದಂತಹ ಅನೇಕ ಜನ ಅವನ ತಮ್ಮಂದಿರು ಸುನಾಮ ಅಂತ ಹರಿವಂಶದಲ್ಲಿ ಬರುತ್ತದೆ ಶ್ರೀಮದಾಚಾರ್ಯರು ಸುನೀಥ ಅಂತ ಹೇಳುತ್ತಾರೆ ಆ ಸುನೀಥ ಮೊದಲಾದ ಅನೇಕ ಜನ ತಮ್ಮಂದಿರನ್ನೂ ಕೂಡ ಬಲರಾಮ ದೇವರು ಪರಿಘಾ ಎಂಬ ಆಯುಧದಿಂದ ಸಂಹಾರ ಮಾಡುತ್ತಾರೆ. ಇಪ್ಪತ್ತು ಅಕ್ಷೌಹಿಣೀ ಸೈನ್ಯಗಳನ್ನು ಕಳಿಸುತ್ತಾನೆ ಅವನು ಭಾರೀ ಬಲಿಷ್ಠವಾದ ರುದ್ರ ದೇವರ ವರದಿಂದ ಅವಧ್ಯ ಒಬ್ಬರಲ್ಲ ಇಬ್ಬರಲ್ಲ ಆ ಇಡೀ ಸೈನ್ಯವೇ ಅದೇನು ರುದ್ರ ದೇವರನ್ನು ಕುರಿತು ಎಷ್ಟು ಜನ ತಪಸ್ಸು ಮಾಡಿದ್ದರು ಎಷ್ಟು ಜನರಿಗೆ ವರ ಕೊಟ್ಟಿದ್ದರೋ. ಇಪ್ಪತ್ತು ಅಕ್ಷೌಹಿಣೀ ಸೈನ್ಯ 21,870 ಆನೆ, ಅಷ್ಟೇ ರಥ 65,610 ಕುದುರೆಗಳು 1,09,350 ಕಾಲಾಳುಗಳು ಇಷ್ಟು ಸೇರಿದರೆ ಒಂದು ಅಕ್ಷೌಹಿಣೀ ಸೈನ್ಯ ಇಂತಹ ಇಪ್ಪತ್ತು ಅಕ್ಷೌಹಿಣೀ ಸೈನ್ಯ ಅಷ್ಟು ಕುದುರೆ, ಅಷ್ಟು ಆನೆ ಅಷ್ಟೆಲ್ಲಾ ಕಾಲಾಳುಗಳು ಎಲ್ಲರೂ ರುದ್ರ ದೇವರ ವರದಿಂದ ಅವಧ್ಯರು. ಆ ಕುದುರೆ ಆನೆಗಳು ಹಿಂದಿನ ಜನ್ಮದಲ್ಲಿ ತಪಸ್ಸು ಮಾಡಿದ್ದವೋ ಅವುಗಳ ಸಲುವಾಗಿ ಇನ್ನೊಬ್ಬರು ತಪಸ್ಸು ಮಾಡಿ ವರ ಪಡೆದಿದ್ದರೋ ಅಂತೂ ಇಂತೂ ಎಲ್ಲವೂ ಅವಧ್ಯವಾದದ್ದವು. ಅಪ್ಪೆಲ್ಲವನ್ನೂ ಕೂಡ ಆ ಭಗವಂತ ಲೀಲಾಜಾಲವಾಗಿ ಸಂಹಾರ ಮಾಡಿದ್ದಾನೆ ತಾನು ಸರ್ವೋತ್ತಮ ಸರ್ವೋತ್ತಮ ಅನ್ನುವುದನ್ನು ಸಾಧಿಸಿದ್ದಾನೆ.

ಇಷ್ಟಾದ ಮೇಲೆ ಇನ್ನೇನು ಉಳೀತು ತಾನೇ ಬಂದು ಯುದ್ಧ ಆಡಬೇಕು ಅಂತ ಹೀಗೆ ಹೀಗೆ ತಯಾರು ಆಗುತ್ತಾ ಇದ್ದಾನೆ ಕಂಸ ಅನ್ನುವುದರೊಳಗೆ ಹಾರಿ ಬಂದ ನೋಡಿ ಕಾಣಿಸಲಿಲ್ಲ ಅಂತ ವರ್ಣನೆ ಮಾಡುತ್ತಾರೆ ಹರಿವಂಶದಲ್ಲಿ ಕೃಷ್ಣ. ಉಳಿದವರಿಗೆ ಅಂತಹ ಭಾರೀ ಮಂಚ ಮಾಡಿದರೆ ತಾನು ಎಷ್ಟು ಎತ್ತರದ ರಂಗಮಂಚದ ಮೇಲೆ ಕುಳಿತಿದ್ದ ಅಂದರೆ ಅಂತಹ ಕಂಸನ ಹತ್ತಿರ ಆ ರಂಗದ ಮಧ್ಯದಿಂದ ಕೃಷ್ಣ ಹಾರಿ ಬಂದದ್ದು ಗೊತ್ತಾಗೇ ಇಲ್ಲ ಅಲ್ಲಿ ನಿಂತದ್ದು ಒಂದೇ ಗೊತ್ತು, ಅಷ್ಟು ವೇಗದಿಂದ ಹಾರಿದ್ದಾನೆ ಪರಮಾತ್ಮ. ವಾಯೂತ್ತಮನಾದ ಪರಮಾತ್ಮ ವಾಯೂತ್ತಮ ವೇಗದಿಂದ ಬಂದು ಕಂಸನ ಕಿರೀಟವನ್ನು ಕೆಳಗೆ ಬೀಳಿಸಿ ಅವನ ಕೂದಲನ್ನು ಎಡಗೈಯಿಂದ ಹಿಡಿದಿದ್ದಾನೆ, ಬಲಗೈಯಿಂದ ಕುತ್ತಿಗೆಗೆ ಹೊಡೆದರೆ ಮುಗಿದೇ ಹೋಯಿತು ಕಂಸನ ಕಥೆ. ದುಷ್ಟನಾದಂತಹ ಕಾಲನೇಮೀ ಮಹಾಕಾಮಿ ಕಂಸ ಸರ್ವಥಃ ದುಷ್ಟ ಕಾಮನೆಗಳು ನನಗಿಲ್ಲ ಅಂತಹ ದುಷ್ಟ ಕಾಮಗಳನ್ನು ಈ ರೀತಿ ನಿರ್ನಾಮ ಮಾಡುವಂತಹ ಕೃಷ್ಣ ನಾನು ಅಂತ ಪರಮಾತ್ಮ ತೋರಿಸಿಕೊಟ್ಟಿದ್ದಾನೆ. ಅವನ ಕುಂಡಲುಗಳೆಲ್ಲ ಬಿದ್ದುಹೋಗಿವೆ, ಹಾರ ಆಭರಣಗಳು, ವಸ್ತ್ರಗಳೆಲ್ಲ ಕಳಚಿ ಹೋಗಿವೆ ಅತ್ಯಂತ ಶೋಚನೀಯ ಸ್ಥಿತಿಗೆ ಬಂದಿದ್ದಾನೆ, ಒಂದೇ ಕ್ಷಣದೊಳಗೆ ಕೃಷ್ಣ ಪರಮಾತ್ಮ ಅವನನ್ನು ಸಂಹಾರ ಮಾಡಿದ್ದಾನೆ ಪಾದದಿಂದ ತಲೆಗೆ ತುಳಿದು ಅವನನ್ನು ಅಲ್ಲಿಯೇ ಎಸೆದಿದ್ದಾನೆ ರಂಗಮಂಚದಲ್ಲಿ.

ಬಂದವನೇ ಬಂದು ವಸುದೇವ ದೇವಕಿಯರ ಪಾದವನ್ನು ಹಿಡಿದು ಸಾಷ್ಟಾಂಗ ಪ್ರಣಾಮ ಮಾಡಿದ ಹುಟ್ಟಿದ ಕೂಡಲೇ ನಿಮ್ಮನ್ನು ಬಿಟ್ಟು ಹೋಗಿದ್ದೇನೆ ಯಾವ ಸೇವೆಯನ್ನು ಮಾಡಿಲ್ಲ ನನ್ನನ್ನು ಕ್ಷಮಿಸಬೇಕು ಅಂತ ಕೇಳುತ್ತಾನೆ. ಅತ್ತು ಬಿಡುತ್ತಾರೆ ಅವರು ನಿನ್ನನ್ನೇನು ಕ್ಷಮಿಸುವುದು ನಿನ್ನ ದರ್ಶನವಾಯಿತು ನಮ್ಮ ಕೋಟಿ ಜನ್ಮಗಳ ಪುಣ್ಯ ಧನ್ಯರಾದೆವು ಅಂತ ಶ್ರೀಕೃಷ್ಣ ಪರಮಾತ್ಮನನ್ನು ಆಲಿಂಗನ ಮಾಡಿಕೊಳ್ಳುತ್ತಾರೆ. ತಂದೆ ತಾಯಿಗಳಿಗೆ ಮೊಟ್ಟಮೊದಲು ನಮಸ್ಕಾರ ಮಾಡಿ ತನ್ನ ಕರ್ತವ್ಯವನ್ನ ಈ ರೀತಿ ಪರಿಪಾಲನೆ ಮಾಡಬೇಕು ಅಂತ ಜಗತ್ತಿಗೂ ತಿಳಿಸಿಕೊಟ್ಟು ಪರಮಾತ್ಮ ಇನ್ನುಳಿದವರೆಲ್ಲರಿಗೂ ಕೂಡ ಸಮಾಧಾನ ಮಾಡಿದ್ದಾನೆ. ಎಲ್ಲಾ ಗೋಪಾಲಕರು, ಗೋಪಿಕಾ ಸ್ತ್ರೀಯರು, ಯಾದವರು

ಎಲ್ಲರಿಗೂ ಆಶ್ವಾಸನೆಯನ್ನು ಕೊಟ್ಟಿದ್ದಾನೆ ಧೈರ್ಯದಿಂದ ಇರಿ ನಿಮ್ಮ ನಿಮ್ಮ ಕರ್ತವ್ಯ ಕರ್ಮಗಳನ್ನು ಪರಿಪಾಲನೆ ಮಾಡಿ, ಧರ್ಮದ ರಕ್ಷಣ, ಅಧರ್ಮದ ನಾಶನ ಆಗಬೇಕು, ಸಜ್ಜನರ ರಕ್ಷಣೆಯಾಗಬೇಕು. ಇನ್ನುಮೇಲೆ ಯಾರಿಗೂ ಭಯ ಬೇಡ ಯಾವುದು ಸತ್ಯ, ಯಾವುದು ಧರ್ಮ, ಯಾವುದು ಶಾಸ್ತ್ರವಿಹಿತ ಅದನ್ನೇ ಮಾಡಿ, ಇವನ ಆಜ್ಞೆ ಇವನ ಒತ್ತಾಯಕ್ಕೆ ಇಷ್ಟು ದಿವಸ ಏನೇನೋ ಮಾಡುವ ಪ್ರಸಂಗ ನಿಮಗೆ ಇತ್ತು ಇನ್ನು ಆ ಚಿಂತೆ ಬೇಡ ಅಂತ ಎಲ್ಲರಿಗೂ ಹೇಳಿದ್ದಾನೆ.

ಈ ಕಡೆಗೆ ಆ ಕಂಸನ ಅನೇಕ ಜನರು, ಮಡದಿಯರು ಅವರೆಲ್ಲ ದುಃಖವನ್ನು ಪಟ್ಟಿದ್ದಾರೆ, ಕಂಸನ ತಾಯಿ ತಂದೆ ಉಗ್ರಸೇನ, ಉಗ್ರಸೇನನ ಮಡದಿ ಅವರಿಬ್ಬರೂ ಕೂಡ ಬಂದು ವಿಲಾಪವನ್ನು ಮಾಡಿದ್ದಾರೆ ಬೇಕಾದಷ್ಟು. **'ಕ್ವ ಮೇ ವತ್ಸಃ ಕ್ವ ಮೇ ವತ್ಸಃ ಪುತ್ರಃ'** ಇತ್ಯಾದಿಯಾಗಿ ಅವಳು ವಿಲಾಪ ಮಾಡುತ್ತ ಕೃಷ್ಣನಿಗೆ ಹೇಳು ಅಂತ ಉಗ್ರಸೇನನಿಗೆ ಹೇಳುತ್ತಾಳೆ ಇನ್ನು ಯಾಕೆ ವೈರ.

ಮರಣಾನ್ತಾನಿ ವೈರಾಣಿ ಶಾನ್ತೇ ಶಾನ್ತಿರ್ಭವಿಷ್ಯತಿ । (31.51 ವಿಷ್ಣುಪರ್ವ)

ಬದುಕಿರುವಾಗ ಅವನ ದುಷ್ಟ ಸ್ವಭಾವ ಇತ್ತು ಅನ್ನುವುದಕ್ಕೆ ವೈರ ಈಗ ಅವನು ಹೋದನಲ್ಲ ಈ ಶರೀರದ ಬಗ್ಗೆ ಯಾಕೆ ವೈರ, ಇದೇನು ತಪ್ಪು ಮಾಡಿದೆ ಅದಕ್ಕಂತೂ ಪ್ರೇತ ಕಾರ್ಯಗಳನ್ನು ಚೆನ್ನಾಗಿ ಮಾಡಿಸಬೇಕಲ್ಲ ಆ ವ್ಯವಸ್ಥೆಯನ್ನು ಮಾಡಿಸು ಅಂತ ಹೇಳು ಕೃಷ್ಣನಿಗೆ ಅಂತ ಉಗ್ರಸೇನನಿಗೆ ಅವಳು ಕೇಳಿಕೊಳ್ಳುತ್ತಾಳೆ. ಉಗ್ರಸೇನ ಬಂದು ಶ್ರೀಕೃಷ್ಣ ಪರಮಾತ್ಮನಿಗೆ ತಿಳಿಸಿದಾಗ ಕೃಷ್ಣ ಪರಮಾತ್ಮ ಹೇಳಿದ ನಿಜವಾಗಿ ಆ ಎಲ್ಲ ಕಂಸನ ಮಡದಿಯರು ಅಳುವುದು, ತಾಯಿಯು ಅಳುವುದು ಇದನ್ನೆಲ್ಲ ನೋಡಿದರೆ ಕನಿಕರ ಅಂತ ಎಲ್ಲರಿಗೂ ಅನ್ನಿಸುತ್ತದೆ, ಯಮನಿಗೂ ಅನ್ನಿಸಬಹುದು ಅನ್ನುತ್ತಾನೆ ಕೃಷ್ಣ.

ಪರಿದೇವಿತಮಾತ್ರೇಣ ಶೋಕಃ ಖಲು ವಿಧೀಯತೇ ।

ಕೃತಾನ್ತಸ್ಯಾನಭಿಜ್ಞಾನಾಂ ಸ್ತ್ರೀಣಾಂ ಕಾರುಣ್ಯಸಮ್ಭವಃ ॥ (32.6 ವಿಷ್ಣುಪರ್ವ)

ಯಮನಿಗೂ ಒಂದೊಮ್ಮೆ ಶೋಕ ಅನಿಸಬಹುದು ಕನಿಕರ ಅನಿಸಬಹುದು ಆದರೆ ಅಧರ್ಮ ಅಧರ್ಮವೇ ಅವನು ಮಾಡಿದ್ದು ತಪ್ಪು, ಅನ್ಯಾಯ, ಮೋಸ, ವಂಚನೆ ನಾನಾ ವಿಧವಾದ ಅಪರಾಧಗಳನ್ನು ಮಾಡಿದ್ದಾನೆ, ನಾನಾ ಜನರಿಗೆ ಮೋಸವನ್ನು ಮಾಡಿದ್ದಾನೆ ಕೇವಲ ಸ್ವಾರ್ಥದಿಂದ ಸಾಕಷ್ಟು ಜನರನ್ನು ಆಹುತಿಯಾಗಿ ತೆಗೆದುಕೊಂಡಿದ್ದಾನೆ ಅವನನ್ನು ನಾನು ಸಂಹಾರ ಮಾಡಿದ್ದು ಧರ್ಮವೇ. ಅವನಿಂದ ಲಕ್ಷ ಲಕ್ಷ ಕೋಟಿ ಕೋಟಿ ಜನರಿಗೆ ಆಗುವ ಪೀಡೆಯನ್ನು ನಾನು ತಪ್ಪಿಸಿದ್ದೇನೆ ಆದರೆ ನೀನು ಹೇಳುತ್ತಾ ಇದ್ದೀ ಉತ್ತರಕ್ರಿಯೆ ಚೆನ್ನಾಗಿ ಆಗಬೇಕು ಅಂತ ಅದರ ಬಗ್ಗೆ ಏನು ಅಡ್ಡಿ ಇಲ್ಲ ಆಗಲಿ ಅಂತ ಯಥೇಚ್ಛವಾಗಿ ಅವನಿಗೆ ಧನವನ್ನು ಕೊಟ್ಟ ಯಾಕೆಂದರೆ ಅದೆಲ್ಲ ಇವನ ವಶವಾಗಿತ್ತಲ್ಲ ಅವನಿಗೆ ಹತ್ತು ಕೋಟಿ ರೂಪಾಯಿ ಬಂಗಾರದ ನಾಣ್ಯಗಳನ್ನು ದಾನ ಮಾಡಿದ್ದಾನೆ ಕಂಸನ ಹೆಸರಿನಲ್ಲಿ.

ಹಿರಣ್ಯಸ್ಯ ಸುವರ್ಣಸ್ಯ ದಶ ಕೋಟೀಸ್ತಥಾ ಹರಿಃ ॥ (32.62 ವಿಷ್ಣುಪರ್ವ)

ಅದರಂತೆ ಆಕಳುಗಳು, ರತ್ನಗಳು, ಬಟ್ಟೆಗಳು ಅನೇಕ ಊರುಗಳನ್ನ ಆ ಕಂಸನ ಹೆಸರಿನಲ್ಲಿ ದಾನ ಮಾಡಿದ್ದಾನೆ. ಆ ಕಂಸನ ಹೆಸರು ಕೇಳಿದರೆ ಯಾರು ದಾನ ತೊಗೊಳ್ಳಲಿಕ್ಕೆ ಬರಲಿಲ್ಲ, ಕೊಡುವವನು ಕೃಷ್ಣ ಅನ್ನುವುದಕ್ಕೆ ಓಡೋಡಿ

ಬಂದರು ಅದು ಯಾರದರ ಹೆಸರು ಇರಲಿ **ಕೊಡುವವನು ಕೃಷ್ಣ** ಅಂತ ಧಾವಿಸಿ ಬಂದಿದ್ದಾರೆ, ಆ ದಾನವನ್ನೆಲ್ಲ ಸ್ವೀಕಾರ ಮಾಡಿದ್ದಾರೆ. ಉಗ್ರಸೇನ ಅಂದ ಇದೆಲ್ಲ ರಾಜ್ಯ ನಿನ್ನದು **'ನಂದೇನದೋ ಸ್ವಾಮಿ ನಿಂದೇ ಇದೆಲ್ಲವು ನಿನ್ನದು ನಂದ ನಂದನ ನಿಂದೇ ಇದೆಲ್ಲ'** ನೀನೇ ರಾಜನಾಗಬೇಕು ನಾವೆಲ್ಲ ನೀನು ಹೇಳಿದ ಹಾಗೆ ಕೇಳಿಕೊಂಡು ಇರುತ್ತೇವೆ ಅಂತ ಅಷ್ಟು ವೃದ್ಧ ಹಿರಿಯ ಅಂತಹ ಉಗ್ರಸೇನ ಕೃಷ್ಣ ಪರಮಾತ್ಮನಿಗೆ ಹೇಳಿದರೆ ಕೃಷ್ಣ ಅಂದ.

ನ ಹಿ ರಾಜ್ಯೇನ ಮೇ ಕಾರ್ಯಂ ನಾಪ್ಯಹಂ ನೃಪ ಕಾಂಕ್ಷಿತಃ । (32.48 ವಿಷ್ಣುಪರ್ವ)

ನಾನು ಅದನ್ನು ಅಪೇಕ್ಷೆ ಪಟ್ಟವನೇ ಅಲ್ಲ, ನಾನು ಅನಾದಿಕಾಲದಿಂದ ಅನಂತಕಾಲದವರೆಗೆ ನಾನು ರಾಜನೇ, ಹೊಸದಾಗಿ ನಾನು ಆಗಬೇಕಾದದ್ದಿಲ್ಲ. ನೀನು ರಾಜನಾಗು, ನಿನಗೆ ನಾನು ಪಟ್ಟಾಭಿಷೇಕ ಮಾಡುತ್ತೇನೆ ಅಂತ ಉಗ್ರಸೇನನಿಗೇನೆ ಪಟ್ಟಾಭಿಷೇಕವನ್ನು ಮಾಡಿ ಅವನಿಗೆ ರಾಜ್ಯವನ್ನು ಒಪ್ಪಿಸಿ, ಧರ್ಮದಿಂದ ರಾಜ್ಯವನ್ನು ಆಳು ಅಂತ ಅವನಿಗೆ ಆದೇಶವನ್ನು ಮಾಡಿ, ಶ್ರೀಕೃಷ್ಣ ಪರಮಾತ್ಮ ಎಲ್ಲ ಯಾದವರಿಗೆ ಆಶ್ವಾಸನೆಯನ್ನು ನೀಡಿ, ತಂದೆ ತಾಯಿಗಳಿಗೂ ಕೂಡ ವಿಶೇಷವಾಗಿ ಸಂತೋಷ ಪಡಿಸಿ ಅವರ ಜೊತೆಗೆ ಇದ್ದಾನೆ. ಮುಂದೆ ಸಾಂದೀಪನಿ ಋಷಿಗಳಲ್ಲಿ ವಿದ್ಯಾಭ್ಯಾಸವನ್ನು ಮಾಡಿ, ಗುರುಕುಲದಲ್ಲಿ ವಾಸ ಮಾಡಿ ವಿದ್ಯಾಭ್ಯಾಸ ಮಾಡಬೇಕು ಅನ್ನುವ ಲೋಕಶಿಕ್ಷಣವನ್ನು ಮಾಡುತ್ತಾನೆ ಎಂಬ ವಿಚಾರವನ್ನು ತಿಳಿಸುತ್ತಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ವಿಷ್ಣುಪರ್ವ-19

* * *

ಶ್ರೀಕೃಷ್ಣ ಪರಮಾತ್ಮ ಕಂಸನ ಸಂಹಾರವನ್ನು ಮಾಡಿ ಸಕಲ ಸಜ್ಜನರಿಗೆ ಅಭಯವನ್ನು ನೀಡಿದ್ದಾನೆ. ಮುಂದೆ ಶ್ರೀಕೃಷ್ಣ ಪರಮಾತ್ಮ ಲೋಕದೃಷ್ಟಿಯಲ್ಲಿ ಯೌವನವನ್ನು ಪಡೆದು ಸಾಂದೀಪನಿ ಋಷಿಗಳ ಆಶ್ರಮಕ್ಕೆ ಅಧ್ಯಯನಕ್ಕೋಸ್ಕರ ಅಂತ ಹೊರಟಿದ್ದಾನೆ.

ಯಸ್ಮಾತ್ ಬ್ರಹ್ಮೇಂದ್ರ ರುದ್ರಾದಿ ದೇವತಾನಾಂ

ಶ್ರೀಯೋಽಪಿ ಚ ಜ್ಞಾನ ಸ್ಫೂರ್ತಿಸ್ಸದಾ ತಸ್ಮೈ ಹರಯೇ ಗುರುವೇ ನಮಃ ।। (ಶ್ರೀವಿಜಯದಾಸಾರ್ಯಕೃತ)

ಅಂತ ಬ್ರಹ್ಮಾದಿ ದೇವತೆಗಳಿಗೆ ಯಾವ ಪರಮಾತ್ಮನ ಅನುಗ್ರಹದಿಂದ ಜ್ಞಾನದ ಸ್ಫೂರ್ತಿಯಾಗುತ್ತದೆ, ಲಕ್ಷ್ಮೀ ದೇವಿಗೂ ಜ್ಞಾನ ಯಾವ ಪರಮಾತ್ಮನ ಅನುಗ್ರಹದಿಂದ ಬರುತ್ತದೆ.

ಈದೃಶಾನಂತಸಂಖ್ಯಾನಾಂ ಶಿವಾನಾಂ ಬ್ರಹ್ಮಣಾಮಪಿ ।

ರಮಾಯಾ ಅಪಿ ಯದ್ವೀಕ್ಷಾಂ ವಿನಾ ನ ಚಲಿತುಂ ಬಲಂ ।। (22.270 ಮಭಾತಾನಿರ್ಣಯ)

ನ ಚ ಜ್ಞಾನಾದಯೋ ಭಾವಾ ನ ಚಾಸ್ತಿತ್ವಂತ್ವಮಪಿ ಕ್ವಚಿತ್ । (22.271 ಮಭಾತಾನಿರ್ಣಯ)

ರಮಾ ಬ್ರಹ್ಮಾದಿ ದೇವತೆಗಳಿಗೆ ಅನಂತ ಬ್ರಹ್ಮರು, ಅನಂತ ರುದ್ರರು ಹಾಗೂ ಆನಾದಿ ಅನಂತಕಾಲದಲ್ಲಿ ಸರ್ವಜ್ಞಳಾದಂತಹ ಮಹಾಲಕ್ಷ್ಮೀ ದೇವಿಯೂ ಕೂಡ ಯಾವ ಪರಮಾತ್ಮನ ಅನುಗ್ರಹದಿಂದ ಜ್ಞಾನವನ್ನು ಪಡೆಯುತ್ತಾಳೆ ಅಂತಹ ಮಹಾಲಕ್ಷ್ಮೀ ದೇವಿಗೂ, ಬ್ರಹ್ಮಾದಿಗಳಿಗೂ ಜ್ಞಾನವನ್ನು ನೀಡುವಂತಹ ಪರಮಾತ್ಮ ಅವನಿಗೆ ಗುರುಕುಲದಲ್ಲಿ ಅಧ್ಯಯನವನ್ನು ಮಾಡಬೇಕಾದ ಅಗತ್ಯ ಇಲ್ಲ. ಆದರೂ ಕೂಡ ಗುರುಕುಲದಲ್ಲಿ ಅಧ್ಯಯನವನ್ನು ಮಾಡಬೇಕು, ಗುರುಗಳ ಸೇವೆಯನ್ನು ಮಾಡಿ ವಿದ್ಯೆಯನ್ನು ಪಡೆಯಬೇಕು ಅಂತ ಜಗತ್ತಿಗೆ ಭಗವಂತ ತಿಳಿಸಿಕೊಡುತ್ತ ಇದ್ದಾನೆ. ಆ ರೀತಿ ಲೋಕಶಿಕ್ಷಣ ಮಾಡುವುದಕ್ಕಾಗಿ ಬಲರಾಮ ದೇವರ ಜೊತೆಗೆ ಶ್ರೀಕೃಷ್ಣ ಪರಮಾತ್ಮ ಅಲ್ಲಿ ಬಂದಿದ್ದಾನೆ. ಕಾಶಿಯಲ್ಲಿ ಹುಟ್ಟಿದ್ದು ಸಾಂದೀಪನಿ ಋಷಿಗಳು, ವಾಸ ಅವಂತಿಪುರದಲ್ಲಿ ಅಂಥವರ ಹತ್ತಿರ ಸೇವೆಯನ್ನು

ಮಾಡುತ್ತ ಯಾವ ಅಹಂಕಾರವಿಲ್ಲದಂತೆ, ಉಳಿದೆಲ್ಲ ಶಿಷ್ಯರ ಜೊತೆಗೆ ತಾವೂ ಶಿಷ್ಯರು ಅನ್ನುವ ರೀತಿಯಲ್ಲಿ ಅತ್ಯಂತ ವಿನೀತರಾಗಿ ಸೇವೆಯನ್ನು ಮಾಡಿಕೊಂಡು ಅರವತ್ತು ನಾಲ್ಕು ದಿನಗಳಲ್ಲಿ, ಅರವತ್ತು ನಾಲ್ಕು ಕಲೆಗಳನ್ನು ಅಭ್ಯಾಸ ಮಾಡಿದ್ದಾರೆ ಸಮಗ್ರ ವೇದಾದಿ ಸಕಲ ಸಚ್ಛಾಸ್ತ್ರಗಳನ್ನೂ ಕೂಡ ಅಧ್ಯಯನ ಮಾಡಿದ್ದಾರೆ, ನಿಮಿತ್ತ ಮಾತ್ರಕ್ಕೆ. ಸ್ವತೇವ ಸರ್ವಜ್ಞನಾದಂತಹ ಭಗವಂತ ಗುರುಗಳ ಅನುಗ್ರಹದಿಂದ ಆ ಎಲ್ಲ ವಿದ್ಯೆಗಳನ್ನು ಪರಮಾತ್ಮನ ಎದುರಿಗೆ ಸಮರ್ಪಣೆ ಮಾಡಿದ್ದರಿಂದ ತಾವು ಅಧ್ಯಯನ ಮಾಡಿದ್ದನ್ನು ಸಾರ್ಥಕ ಮಾಡಿಕೊಂಡಿದ್ದಾರೆ. ದೇವರ ಎದುರಿನಲ್ಲಿ ಅನುವಾದ ಮಾಡುವಂತಹ ಒಂದು ದೊಡ್ಡ ಭಾಗ್ಯ ಸಾಂದೀಪನಿ ಋಷಿಗಳಿಗೆ ಲಭಿಸಿದೆ. ನಾಲ್ಕು ಪಾದಗಳಿಂದ ಸಹಿತವಾದ ದೀಕ್ಷಾ, ಸಂಗ್ರಹ, ಸಿದ್ಧಿ, ಪ್ರಯೋಗ ಎಂಬಂತಹ ಧನುರ್ವೇದವನ್ನೂ ಕೂಡ ಅಧ್ಯಯನವನ್ನು ಮಾಡಿದ ಮೇಲೆ ಗುರುಗಳು ಅನ್ನುತ್ತಾರೆ.

ಅತೀವಾಮಾನುಷೀಂ ಮೇಧಾಂ ಚಿಂತಯಿತ್ವಾ ತಯೋರ್ಗುರುಃ । (33.8 ವಿಷ್ಣುಪರ್ವ)

ನಿಮ್ಮ ಬುದ್ಧಿ ಸಾಮಾನ್ಯ ಬುದ್ಧಿ ಅಲ್ಲ ಅತೀಮಾನುಷವಾದ ಬುದ್ಧಿ, ಅತ್ಯದ್ಭುತವಾದ ಯೋಗ್ಯತೆ, ನಿಮ್ಮ ತೇಜಸ್ಸು, ನಿಮ್ಮ ವರ್ಚಸ್ಸು ನೋಡಿದರೆ ಸೂರ್ಯ ಚಂದ್ರರೇ ಪ್ರಾಯಃ ನೀವು ಇಲ್ಲಿ ಕೆಳಗೆ ಇಳಿದು ಬಂದಿರಬಹುದು ಅಂತ ಅನ್ನುತ್ತಾರೆ ಸಾಂದೀಪನಿ ಋಷಿಗಳು ಆದರೆ ವಿಚಿತ್ರವನ್ನು ನೋಡಿದ್ದಾರೆ ಸೂರ್ಯ ಚಂದ್ರರೇ ಬಂದು ಪರ್ವ ಕಾಲದಲ್ಲಿ ಶ್ರೀಕೃಷ್ಣ ಪರಮಾತ್ಮನ ಪೂಜೆಯನ್ನು ಮಾಡುವುದನ್ನು ನೋಡಿ ಆಶ್ಚರ್ಯ ಪಟ್ಟಿದ್ದಾರೆ. ನೀವೇ ಸೂರ್ಯ ಚಂದ್ರರು ಅಂತ ಅಂದುಕೊಂಡಿದ್ದಿವಿ, ಸೂರ್ಯ ಚಂದ್ರರಗಿಂತಲೂ ದೊಡ್ಡವರೇ, ಅವರೂ ಬಂದು ನಿಮ್ಮ ಅರ್ಚನೆಯನ್ನು ಮಾಡುತ್ತಾರಲ್ಲ ಎಂತಹ ಮಹಾನುಭಾವರು ನೀವು ಎಂಬುದಾಗಿ ಆಶ್ಚರ್ಯ ಪಟ್ಟಿದ್ದಾರೆ ಸಾಂದೀಪನಿ ಋಷಿಗಳು. ಗುರು ದಕ್ಷಿಣೆಯನ್ನು ಕೊಡಬೇಕು ಅಂತ ಶ್ರೀಕೃಷ್ಣ ಪರಮಾತ್ಮ ತಿಳಿಸಿದಾಗ, ತನ್ನ ಮಡದಿಗೆ ಕೇಳಿಕೊಂಡು ಸಾಂದೀಪನಿ ಋಷಿಗಳು ಹೇಳುತ್ತಾರೆ ನಮಗೆ ಇನ್ನೇನು ಬೇಡ ನಮ್ಮ ಹುಟ್ಟಿದ ಮಗುವನ್ನು ಅಪಹಾರ ಮಾಡಿಕೊಂಡು ಹೋಗಿದ್ದಾರೆ ಆ ಮಗುವನ್ನು ನೀವು ಮತ್ತೆ ನಮಗೆ ಕೊಡಬೇಕು ಅಂತ ಪ್ರಾರ್ಥನೆ ಮಾಡಿದ್ದಾರೆ. ಆಗ ಶ್ರೀಕೃಷ್ಣ ಪರಮಾತ್ಮ ಸರಿ ಅಂತ ಸಮುದ್ರಕ್ಕೆ ಹೋಗಿದ್ದಾನೆ ಎಲ್ಲಿದ್ದಾನೆ ಸಾಂದೀಪನಿ ಋಷಿಯ ಮಗ ಅಂತ ಸಮುದ್ರ ರಾಜನಾದ ವರುಣನಿಗೆ ಪರಮಾತ್ಮ ಜೋರಾಗಿ ಗದ್ದರಿಸಿ ಕೇಳುತ್ತಾನೆ ಗೊತ್ತು ದೇವರಿಗೆ ಎಲ್ಲವೂ. ವರುಣನಿಗೆ ಕೇಳಿದಾಗ ವರುಣ ಸಾಷ್ಟಾಂಗ ಪ್ರಣಾಮವನ್ನು ಮಾಡಿ ಪ್ರಾರ್ಥನೆಯನ್ನು ಮಾಡಿಕೊಂಡ ಪಂಚಜನ ಎಂಬಂತಹ ದೈತ್ಯ ಅವನು ಮೀನದ ರೂಪದಲ್ಲಿ ಬಂದು ಆ ಸಾಂದೀಪನಿ ಋಷಿಗಳ ಮಗುವನ್ನು ನುಂಗಿ ಬಿಟ್ಟಿದ್ದಾನೆ ಅವನ ಹತ್ತಿರ ನೀನು ವಿಚಾರಿಸು ಅಂತ ಸರಿ ಅಂತ ಪಂಚಜನ ದೈತ್ಯನ ಹತ್ತಿರ ಹೋಗಿದ್ದಾನೆ ಪಂಚಜನನನ್ನು ಸಂಹಾರ ಮಾಡಿದ. ಸಂಹಾರ ಮಾಡಿ ಅವನೊಳಗೆ ಇರುವಂತಹ ಶಿಶುವನ್ನು ತೆಗೆದುಕೊಳ್ಳಬೇಕು ಅಂತ ನೋಡಿದರೆ ಅಲ್ಲಿ ಶಿಶು ಇರಲೇ ಇಲ್ಲ ಅಲ್ಲಿ ಶಂಖ ಇದೆ ಪಾಂಚಜನ್ಯ ಶಂಖ ಅಂತ ಅದಕ್ಕೆ ಹೆಸರು ಬಂತು. ಪಂಚಜನ ಎಂಬ ಅಸುರನೊಳಗೆ ಇರುವಂತಹ ಶಂಖ ಅದು ಆ ಶಂಖವನ್ನು ಪರಮಾತ್ಮ ತೆಗೆದುಕೊಂಡಿದ್ದಾನೆ ಪಾಂಚಜನ್ಯ ಶಂಖವನ್ನ, ಶಂಖನಾದವನ್ನು ಮಾಡಿದ್ದಾನೆ.

ಸರಿ ಹಾಗಾದರೆ ಎಲ್ಲಿ ಹೋಯಿತು ಶಿಶು, ಯಮಲೋಕಕ್ಕೆ ಹೋಗಿದ್ದಾನೆ ಪರಮಾತ್ಮ, ಯಮ ದೇವರಿಗೆ ಕೇಳಿದ ಎಲ್ಲಿದೆ, ಸಾಂದೀಪನಿ ಋಷಿಗಳ ಮಗುವನ್ನು ಕೊಡು ಅಂತ ಒಮ್ಮೆ ಇಲ್ಲಿ ಬಂದ ಮೇಲೆ ತನ್ನ ಕರ್ಮಕ್ಕೆ ತಕ್ಕಂತೆ ಏನು ಫಲ ಅನುಭವಿಸಬೇಕೋ ಪುಣ್ಯ ಪಾಪಗಳ ಫಲವನ್ನು ಅನುಭವಿಸುತ್ತಾನೆ, ನಿನ್ನದೇ ಆಜ್ಞೆ ಆದರ ಪ್ರಕಾರ ಅನುಭವಿಸುತ್ತಾ ಇರುತ್ತಾನೆ ಅವನನ್ನು ಹೇಗೆ ಕಳಿಸುವುದು ಅಂತ. ಆ ಯಮ ದೇವರ ಜೊತೆಗೆ ಯುದ್ಧವಾಗಿದೆ, ಯುದ್ಧದಲ್ಲಿ ಯಮನನ್ನು ಸೋಲಿಸಿ ಶ್ರೀಕೃಷ್ಣ ಪರಮಾತ್ಮ ಆ ಸಾಂದೀಪನಿ ಋಷಿಗಳ ಗುರು ಪುತ್ರನನ್ನು ತಂದು

ಸಾಂದೀಪನಿ ಋಷಿಗಳಿಗೆ ತೋರಿಸಿದ್ದಾನೆ ಕೊಟ್ಟಿದ್ದಾನೆ. ಅಷ್ಟು ಮಾತ್ರ ಅಲ್ಲ ಸಮುದ್ರ ರಾಜನ ಹತ್ತಿರ ಕೇಳಿದ್ದನಲ್ಲ ಇವನು ಮಗುವನ್ನು ಕೊಡು ಅಂತ ಇಲ್ಲ ಪಂಚಜನ ತೆಗೆದುಕೊಂಡು ಹೋಗಿದ್ದಾನೆ ಅಂತ ಸುಮ್ಮನೆ ಹೇಳಿ ಕಳಿಸಲಿಲ್ಲ ವರುಣ. ಸಾಕ್ಷಾತ್ ಜಗನ್ನಿಯಾಮಕನಾದ ಪರಮಾತ್ಮ ನನ್ನ ಮನೆಯವರೆಗೆ ಬಂದಿದ್ದಾನೆ, ನನ್ನ ಸ್ಥಾನಕ್ಕೆ ಬಂದಿದ್ದಾನೆ ಅಂತ ಬೇಕಾದಷ್ಟು ಮುತ್ತು ರತ್ನ ಎಲ್ಲವನ್ನು ಸಮುದ್ರ ರಾಜ ಮುತ್ತು ರತ್ನಗಳನ್ನೆಲ್ಲ ಸಮೃದ್ಧವಾಗಿ ಕಾಣಿಕೆಯಾಗಿ ಅರ್ಪಣೆ ಮಾಡಿದ್ದಾನೆ. ಆ ಎಲ್ಲ ಮುತ್ತು ರತ್ನಗಳಿಂದ ಸಹಿತನಾದ ಆ ಗುರು ಪುತ್ರನನ್ನು ಶ್ರೀಕೃಷ್ಣ ಪರಮಾತ್ಮ ಗುರುಗಳಿಗೆ ಕೊಟ್ಟಿದ್ದಾನೆ, ವೇದ ಶಾಸ್ತ್ರಗಳನ್ನು ಉಪದೇಶ ಮಾಡಿದಂತಹ, ಬ್ರಹ್ಮ ವಿದ್ಯೆಯನ್ನು ಉಪದೇಶ ಮಾಡಿದ ಗುರುಗಳ ಉಪಕಾರ ಅಷ್ಟು ಇರುತ್ತದೆ ಎಂಬುದಾಗಿ ಪರಮಾತ್ಮ ಇದರಿಂದ ತೋರಿಸಿಕೊಡುತ್ತಾನೆ.

ಆ ರೀತಿ ಭಕ್ತಿಯಿಂದ, ಶ್ರದ್ಧೆಯಿಂದ ಗುರುಗಳಲ್ಲಿ ಸೇವೆಯನ್ನು ಮಾಡುತ್ತ ವಿದ್ಯೆಯನ್ನು ಪಡೆಯಬೇಕು. ಜೊತೆಗೆ ಗುರುಗಳಿಗೆ ತನ್ನ ಯೋಗ್ಯತೆಗೆ ಅನುಗುಣವಾಗಿ ದಕ್ಷಿಣೆಯನ್ನು ಕೊಡಬೇಕು ಅಂತ, ಗುರುಗಳಿಗೆ ಅಪೇಕ್ಷೆ ಇರುವುದಿಲ್ಲ ಆದರೆ ಆ ಬ್ರಹ್ಮ ವಿದ್ಯೆಯ ಮಹತ್ವ ಅಷ್ಟು ಅನ್ನುವುದನ್ನು ಜಗತ್ತಿಗೆ ತೋರಿಸಿಕೊಡುತ್ತಾನೆ. ಒಂದು ಕಡೆಗೆ ಛಾಂದೋಗ್ಯೋಪನಿಷತ್ತಿನ ಭಾಷ್ಯದಲ್ಲಿ ಶ್ರೀಮದಾಚಾರ್ಯರು ಹೇಳುತ್ತಾರೆ ಸಂಪೂರ್ಣವಾದಂತಹ ಪೃಥ್ವಿಯನ್ನು ರಕ್ತದಿಂದ ತುಂಬಿಕೊಟ್ಟರೂ ಕೂಡ ಗುರುಗಳಿಗೆ ಅದು ಸರಿಯಾದ ದಕ್ಷಿಣೆ ಆಗುವುದಿಲ್ಲವಂತೆ. ಅವರು ಕೊಟ್ಟ ಬ್ರಹ್ಮ ವಿದ್ಯೆಯೇ ಹೆಚ್ಚಾಗುತ್ತದೆ, ದಕ್ಷಿಣೆ ಇದು ಚಿಕ್ಕದಾಗುತ್ತೆ. ಅಷ್ಟು ಬ್ರಹ್ಮವಿದ್ಯೆಯ ಮಹತ್ವ ಇದೆ, ವೇದ ವಿದ್ಯೆಯ ಮಹತ್ವ ಎಂಬುದಾಗಿ ತಿಳಿಸಿಕೊಡುತ್ತಾರೆ. ಶ್ರೀಕೃಷ್ಣ ಪರಮಾತ್ಮ ಆ ಮಗುವನ್ನು ಒಪ್ಪಿಸಿದರೆ, ಇಷ್ಟು ಹೊತ್ತಿಗೆ ಯಾವ ವಯಸ್ಸು, ಯಾವ ಬಣ್ಣ, ಯಾವ ಧ್ವನಿ ಆ ಮಗುವಿಗೆ ಇರಬಹುದಾಗಿತ್ತೋ, ಆ ರೀತಿಯ ಬಣ್ಣ, ವಯಸ್ಸು, ಧ್ವನಿ ಅದರಿಂದ ಯುಕ್ತವಾದಂತಹ ಮಗುವನ್ನ ಒಪ್ಪಿಸಿದ್ದಾನೆ.

ತತಃ ಸಾನ್ದೀಪನೇಃ ಪುತ್ರಂ ತದ್ರೂಪವಯಸಂ ತದಾ ।

ಪ್ರಾದಾತ್ ಕೃಷ್ಣಃ ಪ್ರತೀತಾತ್ಮಾ ಸಹ ರತ್ನೈರುದಾರಧೀಃ ॥ (33.26 ವಿಷ್ಣುಪರ್ವ)

ಅನಂತ ಔದಾರ್ಯ ಸಂಪನ್ನನಾದ ಭಗವಂತ ಪರಮೌದಾರ್ಯದಿಂದ ಆ ಮುತ್ತು ರತ್ನಗಳಿಂದ ಸಹಿತನಾದ ಮಗುವನ್ನು ಕೊಟ್ಟಿದ್ದಾನೆ ಅಂತ ತಿಳಿಸಿಕೊಟ್ಟಿದ್ದಾರೆ.

ಶ್ರೀಕೃಷ್ಣ ಪರಮಾತ್ಮ ಪುನಃ ಇಷ್ಟೆಲ್ಲ ಮಾಡಿ ಮಥುರಾ ಪಟ್ಟಣಕ್ಕೆ ಪ್ರವೇಶ ಮಾಡಿದರೆ ಶ್ರೀಕೃಷ್ಣ ಪರಮಾತ್ಮನ ಮೇಲೆ ಪುಷ್ಪವೃಷ್ಟಿ ಆಗಿದೆ ಎಲ್ಲ ಯಾದವರು ಕೂಡ ಅತ್ಯಂತ ವೈಭವದಿಂದ ಅವನನ್ನು ಸ್ವಾಗತಿಸಿದ್ದಾರೆ ಹೀಗೆ ಶ್ರೀಕೃಷ್ಣ ಪರಮಾತ್ಮ ಯಾದವರಿಗೆಲ್ಲ ಸಂತೋಷ ಪಡಿಸುತ್ತ ಅಲ್ಲಿ ವಾಸವಾಗಿದ್ದಾನೆ. ಶ್ರೀಕೃಷ್ಣ ಪರಮಾತ್ಮ ಆ ಮಥುರಾ ಪಟ್ಟಣದಲ್ಲಿ ವಾಸ ಮಾಡಿಕೊಂಡು ಇರುವಾಗ ಹೇಗಿತ್ತು ಅಂತ ಶ್ರೀಮದಾಚಾರ್ಯರು ಅನ್ನುತ್ತಾರೆ **'ಕೃಷ್ಣಾಶ್ರಯೋ ವಸತಿ ಯತ್ರ'**[1] ಅಂತ. ಶ್ರೀಕೃಷ್ಣನ ಭಕ್ತರಿದ್ದಲ್ಲಿಯೇನೆ ಯಾವುದೇ ಆಪತ್ತು ವಿಪತ್ತುಗಳು ಇರುವುದಿಲ್ಲ, ಸ್ವತಃ ಶ್ರೀಕೃಷ್ಣ ಪರಮಾತ್ಮ ಆ ಮಥುರಾ ಪಟ್ಟಣದಲ್ಲಿ ವಾಸ ಮಾಡುತ್ತ ಇದ್ದರೆ ಏನು ಅದ್ಭುತವಾದಂತಹ ಸಮೃದ್ಧಿ, ಸೌಖ್ಯ, ಸೌಭಾಗ್ಯ ಪ್ರಜೆಗಳಿಗೆ ವರ್ಣನೆ ಮಾಡುವುದಕ್ಕೆ ಸಾಧ್ಯ ಇಲ್ಲ ಅನ್ನುತ್ತಾರೆ. **'ಸ್ವೇ ಪುರೇ ನಿರ್ಭಯಾಃ ಸರ್ವೇ'**[2] ಎಲ್ಲರೂ ನಿರ್ಭಯರಾಗಿ ಇದ್ದಾರೆ.

ನ ತತ್ರ ಕಶ್ಚಿದ್ ದೀನೋ ವಾ ಮಲೀನೋ ವಾ ವಿಚೇತನಃ ॥ (33.35 ವಿಷ್ಣುಪರ್ವ)

1. 14.7 ಮಹಾತಾನಿರ್ಣಯ; 2. 33.34 ವಿಷ್ಣುಪರ್ವ

ಹೊಲಸು ಬಟ್ಟೆ ಉಟ್ಟವರು, ಹೊಲಸು ಮೈ ಇದ್ದವರು, ದೀನರು, ಕಷ್ಟ ಪಡುವವರು, ಬುದ್ಧಿ ಶೂನ್ಯರು ಯಾವುದೇ ರೀತಿಯಾದಂತಹ ಮಾನಸಿಕ ಬೌದ್ಧಿಕ ರೋಗಗಳಿಲ್ಲ, ದೈಹಿಕ ರೋಗಗಳಿಲ್ಲ, ಆಪತ್ತು ವಿಪತ್ತುಗಳಿಲ್ಲ, ದಾರಿದ್ರ್ಯ ಇಲ್ಲ, ಯಾವ ತರಹದ ಕಷ್ಟಗಳು ಇಲ್ಲ ರಾಮರಾಜ್ಯ ಹೇಗೋ ಹಾಗೆ ಕೃಷ್ಣರಾಜ್ಯ ಹಾಗೆ ಎಲ್ಲರೂ ಸುಖವಾಗಿದ್ದಾರೆ ಎಂಬುದಾಗಿ ಹೇಳುತ್ತಾರೆ. ಎಲ್ಲ ದೇವಸ್ಥಾನಗಳಲ್ಲಿ ದೇವತೆಗಳಿಗೆ, ದೇವರಿಗೆ ಪೂಜೆ ಚೆನ್ನಾಗಿ ನಡೆಯುತ್ತ ಇದೆ ಕೃತಯುಗ ಇದ್ದಂತೆ ಆ ಮಥುರಾ ಪಟ್ಟಣದಲ್ಲಿ ರಾಜ್ಯ, ರಾಜ್ಯ ಆಳುವುದು ಉಗ್ರಸೇನ ಆದರೆ ಶ್ರೀಕೃಷ್ಣನ ಸನ್ನಿಧಾನ ಇರುವ ಮಾತ್ರದಿಂದ ಅಂತರ್ಯಾಮಿಯಾಗಿ ಶ್ರೀಕೃಷ್ಣನೇ ಮುಖ್ಯವಾಗಿ ರಾಜ್ಯವನ್ನು ಆಳುತ್ತಾನೆ ಅನ್ನುವುದಕ್ಕಾಗಿ ಆ ತರಹದ ಸಮೃದ್ಧಿಯನ್ನು ಅಲ್ಲಿ ಪ್ರಜೆಗಳು ಅನುಭವಿಸುತ್ತಾ ಇದ್ದಾರೆ.

ಈ ಕಡೆಗೆ ಜರಾಸಂಧನಿಗೆ ಅವನ ಇಬ್ಬರು ಮಕ್ಕಳು ಅಸ್ತಿ ಪ್ರಾಪ್ತಿ ಕಂಸನ ಹೆಂಡಂದಿರು, ಕಂಸನನ್ನು ಶ್ರೀಕೃಷ್ಣ ಪರಮಾತ್ಮ ಸಂಹಾರ ಮಾಡಿ ನಮ್ಮನ್ನು ಈ ತರಹದ ಶೋಚನೀಯವಾದ ಸ್ಥಿತಿಯಲ್ಲಿ ಇಟ್ಟಿದ್ದಾನೆ. ನಾವೆಲ್ಲ ದುಃಖ ಪಡುತ್ತಾ ಇದ್ದೇವೆ ಅಂತ ಯಾವಾಗ ಅಸ್ತಿ ಪ್ರಾಪ್ತಿಯರು ಜರಾಸಂಧನಿಗೆ ತಿಳಿಸುತ್ತಾರೋ ಕೂಡಲೇ ಆ ಜರಾಸಂಧ ಎಲ್ಲಿದ್ದಾನೆ ಆ ಕೃಷ್ಣ ಇಲ್ಲಿಂದಲೇ ಅವನನ್ನು ಸಂಹಾರ ಮಾಡಿ ಬಿಡುತ್ತೇನೆ ಅಂತ ಗದೆಯನ್ನು ತಿರುಗಿಸುತ್ತಾನೆ. ಅವನ ಹತ್ತಿರ ಅಂತಹ ವಿದ್ಯೆ, ದೂರದಿಂದಲೂ ಗದೆಯನ್ನು ಒಂದು ಗುರಿಯಿಟ್ಟು ಎಸೆದರೆ ಯಾರಿಗೆ ತಲೆಗೆ ಪೆಟ್ಟು ತಾಗಬೇಕು ಅಂತ ಉದ್ದೇಶ್ಯ ಮಾಡಿ ಎಸೆದಿರುತ್ತಾರೋ, ಅವರ ತಲೆ ಸೀಳಬೇಕು, ಅಷ್ಟು ಚೆನ್ನಾಗಿ ಗುರಿ ಇಡುವಂತಹ ಒಂದು ವಿದ್ಯೆ ಆ ಒಂದು ಮಂತ್ರವಿದ್ಯೆ ಕಲೆ. ನಾರದರಿಗೆ ಕೇಳಿದ ಎಷ್ಟು ದೂರ ಇದೆ ಇಲ್ಲಿಂದ ಮಥುರಾ ಅಂತ ಒಂದು ನೂರು ಯೋಜನ ಅಂತ ಹೇಳಿದರು. ಇಂಥಲ್ಲಿ ಇದ್ದಾನೆ ಕೃಷ್ಣ ಅಂತ ಸರಿಯಾಗಿ ಅದನ್ನು ತಿರುಗಿಸಿ ಒಗೆದರೆ ನೂರು ಯೋಜನಕ್ಕೆ ಅದು ಬಿತ್ತು ಆದರೆ ನಾರದರು ಸುಳ್ಳು ಹೇಳಿದ್ದರು ನೂರಾ ಒಂದು ಯೋಜನ ಇತ್ತು ಮಥುರಾ ನೂರು ಯೋಜನ ಅಂತ. ಒಂದು ಯೋಜನ ಮೊದಲೇ ಬಿತ್ತು ಅಲ್ಲಿ ಜರಾಸಂಧನ ತಾಯಿಯೇ ಇದ್ದಳು ಜರಾ ಎಂಬ ಒಬ್ಬ ರಾಕ್ಷಸಿ, ಎರಡು ಹೋಳಾಗಿ ಬಿದ್ದ ಇವನನ್ನು ಕೂಡಿಸಿದವಳೇ ಅವಳು ಕೂಡಿಸಿದ ತಾಯಿ ಅಂತಹ ಜರ ಅವಳ ತಲೆಯ ಮೇಲೆ ಆ ಗದೆ ಬಿತ್ತು ಅವಳು ಸತ್ತು ಹೋದಳು. ಈ ಮಗ ದುಷ್ಟನಿಂದ ಆ ದುಷ್ಟಳಾದ ರಾಕ್ಷಸಿಯ ಸಂಹಾರವನ್ನು ಮಾಡಿಸಿದಂತೆಯೂ ಆಯಿತು, ಶ್ರೀಕೃಷ್ಣ ಪರಮಾತ್ಮನ ತಲೆಗೆ ಬಡೆದಿದ್ದರೂ ಅವನಿಗೆ ಏನೂ ಆಗುತ್ತಾ ಇರಲಿಲ್ಲ ಆದರೂ ಕೂಡ ಶ್ರೀಕೃಷ್ಣ ಪರಮಾತ್ಮನಿಗೆ ನಾನು ಮಾಡುವ ಒಂದು ಸೇವೆ. ದೇವರಿಗೆ ಏನೂ ಆಗುವುದಿಲ್ಲ ಅಂತ ದೇವರಿಗೆ ಅಪಚಾರವನ್ನು ಮಾಡಬಾರದು, ಇನ್ನೊಬ್ಬರು ಅಪಚಾರ ಮಾಡುವುದನ್ನು ಸಹಿಸಬಾರದು, ದೇವರಿಗೆ ಏನು ಹಸಿವೆ ಇಲ್ಲ ಯಾಕೆ ನೈವೇದ್ಯ ಮಾಡಬೇಕು, ದೇವರಿಗೆ ಒದ್ದರೂ ಏನಾಗುವುದಿಲ್ಲ ಯಾಕೆ ಒದೆಯಬಾರದು ದೇವರಿಗೆ ಏನಾಗುವುದಿಲ್ಲ ಆದರೆ ಒದ್ದವನಿಗೆ ಅಧೋಗತಿ, ಮಹಾಅನರ್ಥ, ನರಕ ಆಗುತ್ತದೆ. ಇನ್ನೊಬ್ಬರು ಆ ರೀತಿಯ ಅಪಚಾರವನ್ನು ಮಾಡುವಾಗ ನೋಡಿ ಸುಮ್ಮನೆ ಕುಳಿತವರಿಗೂ ಪಾಪ ಬರುತ್ತದೆ ಅನ್ನುವುದಕ್ಕೆ ನಾರದರು ನಾನು ಅದನ್ನು ಸಹನೆ ಮಾಡಬಾರದು ಅಂತ ಆ ರೀತಿ ಸೇವೆಯನ್ನು ಮಾಡಿದ್ದಾರೆ ಅಂತ ಶ್ರೀಮದಾಚಾರ್ಯರು ತಿಳಿಸಿಕೊಡುತ್ತಾರೆ.

ಈ ರೀತಿ ಜರಾಸಂಧ ಆಲೋಚನೆಯನ್ನು ಮಾಡಿದ ಮುಂದೇನು ಮಾಡಬೇಕು ಇನ್ನು, ಇಲ್ಲಿ ಮೋಸ ಆಯಿತು. ಹಾಗಾದರೆ ಇನ್ನು ಯುದ್ಧದಿಂದಲೇ ಬಲರಾಮ ಕೃಷ್ಣರನ್ನು ಸಂಹಾರ ಮಾಡಬೇಕು ಅಂತ ಭಾರೀ ರಾಜ ಮಹಾರಾಜರುಗಳನ್ನೆಲ್ಲ ಸೇರಿಸಿದ್ದಾನೆ. ಮಹಾಪರಾಕ್ರಮಿ ಜರಾಸಂಧ ಅನ್ನುವುದಕ್ಕಾಗಿ ಎಲ್ಲರೂ ಅವನ ವಶದಲ್ಲಿದ್ದಾರೆ ಅನೇಕರು ಶಿಶುಪಾಲ, ದಂತವಕ್ತ್ರ, ಭೀಷ್ಮಕ, ರುಕ್ಮೀ ಇನ್ನೂ ಅನೇಕ ರಾಜರು ಈಕಡೆ ಕಾಶ್ಮೀರದ ರಾಜ ಗೋನರ್ದ ಅಂತ ಕೌರವರು ದುರ್ಯೋಧನಾದಿಗಳೆಲ್ಲ ಸಹಾಯಕ್ಕೆ ಹೋಗಿದ್ದಾರೆ. ಕೃಷ್ಣನ ವಿರೋಧ ಮಾಡುತ್ತಾನೆ ಅಂದರೆ



ಅಷ್ಟು ಋಷಿ ದುರ್ಯೋಧನಾದಿಗಳಿಗೆ **'ಆರಭ್ಯ ಕಲಭಾಷಣಾತ್'**[1] ಅವರಿಗೆ ದೇವರ ಮೇಲೆ ಅಷ್ಟು ದ್ವೇಷ, ದ್ರೋಹ ಒಳಗೆ ಸುಪ್ತವಾಗಿತ್ತು ಅನ್ನುವುದನ್ನು ನಾವು ತಿಳಿಯಬಹುದು. ಮುಂದೆ ಅದು ಮಹಾಭಾರತದ ಯುದ್ಧದ ಕಾಲದಲ್ಲಿ ವ್ಯಕ್ತವಾದದ್ದು ಆದರೆ ಅವರು ಮೊದಲಿನಿಂದಲೂ ದ್ವೇಷ ಮಾಡಿದ್ದಾರೆ ಜರಾಸಂಧನ ಪಕ್ಷವನ್ನು ಕಟ್ಟಿ ಕೃಷ್ಣನ ಜೊತೆಗೆ ಯುದ್ಧಕ್ಕೆ ಹೋಗಿದ್ದಾರೆ ಕೌರವರು ಕೂಡ ಅಂತ ಹರಿವಂಶ ಹೇಳುತ್ತದೆ ಅವರೆಲ್ಲ ಬಂದಿದ್ದಾರೆ. ಇಲ್ಲಿ ಶ್ರೀಕೃಷ್ಣ ಪರಮಾತ್ಮ, ಬಲರಾಮ ಇವರೆಲ್ಲ ವಿಚಾರ ಮಾಡುತ್ತಾ ಇದ್ದಾರೆ ಸರಿ, ಜರಾಸಂಧ ಯುದ್ಧಕ್ಕೆ ಬಂದಿದ್ದಾನೆ ಸರಿಯಾಗಿ ಅವನಿಗೆ ಪಾಠ ಕಲಿಸಬೇಕು ಅದಕ್ಕೂ ಮೊದಲು ಹೇಗಿದೆ ಅವನ ಸೈನ್ಯ ಇದನ್ನು ನಾವು ನೋಡಬೇಕು ಒಂದು ರಾಜನೀತಿಯನ್ನು ಕಲಿಸುತ್ತಾನೆ. ಯುದ್ಧಕ್ಕೆ ಬಂದಿದ್ದಾನೆ ಅಂತ ಯುದ್ಧಕ್ಕೆ ಹೋಗುವುದಲ್ಲ ದೇವರಿಗೆ ಏನು ಆಲೋಚನೆ ಬೇಕಾಗಿಲ್ಲ ಆದರೆ ಒಬ್ಬ ರಾಜ ಹೇಗಿರಬೇಕು ಅನ್ನುವುದನ್ನು ತೋರಿಸುತ್ತಾನೆ. ಶತ್ರುವಿನ ಸೈನ್ಯ ಎಷ್ಟು ಬಲಿಷ್ಠ, ಯಾವ ಆಲೋಚನೆಯನ್ನು ಮಾಡಿದೆ, ಹೇಗೆ ಹೊಂಚು ಹಾಕಿದೆ, ಎಲ್ಲಿ ನಿಂತಿದೆ ನಾವು ಹೇಗೆ ಅದನ್ನು ಎದುರಿಸಬೇಕು ಇದನ್ನೆಲ್ಲಾ ಚೆನ್ನಾಗಿ ಆಲೋಚನೆ ಮಾಡಿ ಆಮೇಲೆ ಯುದ್ಧ ಪ್ರಾರಂಭ ಮಾಡಬೇಕು ಅಂತ ಪರಮಾತ್ಮ ತೋರಿಸುತ್ತಾನೆ. ಜರಾಸಂಧನ ಸೈನ್ಯವನ್ನು ನೋಡಿ ಬಲರಾಮನಿಗೆ ಹೇಳುತ್ತಾನೆ ಏನೂ ಚಿಂತೆ ಮಾಡಬೇಕಾಗಿಲ್ಲ, ಸುಲಭವಾಗಿ ಇವರನ್ನು ಸಂಹಾರ ಮಾಡಬಹುದು.

ಯಜ್ಞೋ ಯಜ್ಞಪತಿರ್ಯಜ್ವಾ ಯಜ್ಞಾಂಗೋ ಯಜ್ಞವಾಹನಃ ॥ (104 ವಿಷ್ಣುಸಹಸ್ರನಾಮ)

ತಾನೇ ಸ್ವಯಂ ಯಜ್ಞ ಆದರೆ ಆ ಪರಮಾತ್ಮ ಇವರೆಲ್ಲರನ್ನೂ ಕೂಡ ಪಶು ಅಂತ ಸಂಕಲ್ಪ ಮಾಡಿದನಂತೆ. ಈ ಯುದ್ಧವೇ ಒಂದು ದೊಡ್ಡ ಯಜ್ಞ, ಪ್ರೋಕ್ಷಿತವಾದ ಪಶುಗಳಂತೆ ಈ ಎಲ್ಲ ದುರ್ಜನರು, ಸಜ್ಜನರ ರಕ್ಷಣೆಗೆ ದುರ್ಜನರೆಲ್ಲರನ್ನು ಸಂಹಾರ ಮಾಡಿದರೆ ಇದೊಂದು ದೊಡ್ಡದಾದ ಯಜ್ಞ ಮಾಡಿದಂತೆ. ಆ ಅನುಸಂಧಾನದಿಂದ ನಾವು ಯಜ್ಞವನ್ನು ಮಾಡೋಣ, ಈ ಯುದ್ಧವನ್ನು ಮಾಡೋಣ ಅಂತ ಬಲರಾಮ ದೇವರಿಗೆ ಶ್ರೀಕೃಷ್ಣ ಪರಮಾತ್ಮ ಹೇಳುತ್ತಾ ಇದ್ದಾನೆ. ಇದರಿಂದ ನಾವು ಭೂಭಾರಹರಣ ಮಾಡಿದಂತೆ ಆಗುತ್ತದೆ ಯಾವುದಕ್ಕೋಸ್ಕರ ನಾವು ಅವತಾರ ಮಾಡಿದ್ದೆವೋ ಆ ಕಾರ್ಯವನ್ನು ನೆರವೇರಿಸಿದಂತೆ ಆಗುತ್ತದೆ.

ಸ್ಥಾನೇ ಭಾರಪರಿಶ್ರಾನ್ತಾ ವಸುಧೇಯಂ ದಿವಂ ಗತಾ । (35.12 ವಿಷ್ಣುಪರ್ವ)

ಭೂಭಾರಹರಣಕ್ಕಾಗಿಯೇ ಇವಳು ದೇವಲೋಕಕ್ಕೆ ಹೋಗಿ ದೇವತೆಗಳಿಗೆ ಪ್ರಾರ್ಥನೆ ಮಾಡಿ, ಪರಮಾತ್ಮನಿಗೆ ಮುಂದೆ ಮೇರು ಪರ್ವತದಲ್ಲಿ ದರ್ಶನ ಮಾಡಿ ಅವನ ಆಜ್ಞೆಯನ್ನು ಪಡೆದು ಎಲ್ಲ ದೇವತೆಗಳು ಅವತಾರ ಮಾಡಿದಾಗ ನಾವೂ ಅವತಾರ ಮಾಡಿದ್ದು ತಾನೇ ಹಾಗಾದರೆ ಆ ಕಾರ್ಯ ಹತ್ತಿರ ಬಂದಂತೆ ಆಗಿದೆ ಯುದ್ಧವನ್ನು ಮಾಡೋಣ ಅಂತ ಬಲರಾಮ ದೇವರಿಗೆ ಶ್ರೀಕೃಷ್ಣ ಪರಮಾತ್ಮ ತಿಳಿಸುತ್ತಾ ಇದ್ದಾನೆ.

ಈ ಕಡೆಗೆ ಜರಾಸಂಧ ತನ್ನ ಎಲ್ಲ ನಾನಾ ದೇಶಗಳಿಂದ ಬಂದಂತಹ ರಾಜಾಧಿರಾಜರು ಅವರೆಲ್ಲ ಇವನಿಗೆ ವಶರಾಗಿ ಬಂದಿದ್ದಾರೆ ಅವರ ಸೈನ್ಯ ಎಲ್ಲ ಬಂದಿದೆ, ಚತುರಂಗಿಣಿ ಸೇನೆ ಅವರೆಲ್ಲರನ್ನು ಕೂಡಿಸಿಕೊಂಡಿದ್ದಾನೆ ಅದೆಷ್ಟು ರಾಜರ ಹೆಸರುಗಳನ್ನು ಹೇಳಿದ್ದಾರೋ ಅಷ್ಟೆಲ್ಲ ರಾಜರೂ ಅವರೆಲ್ಲರ ಸೈನ್ಯ ಇಪ್ಪತ್ತೂರು ಅಕ್ಷೌಹಿಣೀ ಸೈನ್ಯ ಒಂದೊಂದು ಸಲ ಬರುವಾಗಲೂ ಅಷ್ಟು ಅಕ್ಷೌಹಿಣೀ ಸೈನ್ಯವನ್ನು ಕರೆದುಕೊಂಡು ಬರುತ್ತಾ ಇದ್ದಾರೆ. ಈ ಮೊದಲು ತಿಳಿದಿದ್ದೀರಲ್ಲ ಹಾಗೆ 21,870 ಆನೆ, ರಥ, 65,610 ಕುದುರೆಗಳು, 1,09,350 ಪದಾತಿಗಳು ಇಷ್ಟು ಸೇರಿದ ಒಂದು ಅಕ್ಷೌಹಿಣೀ

1. 07.1.19 ಭಾಗವತ

ಇಂತಹ 23 ಅಕ್ಷೌಹಿಣೀ ಸೈನ್ಯ. ಎಷ್ಟು ಗಲಾಟೆ ಇರಬೇಕು ಈ ಜರಾಸಂಧ ಎಲ್ಲಿಯೋ ಒಂದು ಕಡೆಗೆ ಕುಳಿತು ಹೇಳಿದರೆ ಯಾರಿಗೆ ಕೇಳಿಸಬೇಕು ಧ್ವನಿವರ್ಧಕ ಇದ್ದಂತಹ ಕಾಲ ಅಲ್ಲ ಎಲ್ಲರೂ ಶಾಂತಚಿತ್ತರಾಗಿ ಕೂಡಬೇಕು ಅನ್ನುವುದಕ್ಕೋಸ್ಕರ ಕೆಲವರನ್ನು ತಲೆಯ ಮೇಲೆ ಪೇಟಾ ಸುತ್ತಿ ಕೇವಲ ಎಲ್ಲರನ್ನು ಮೌನದಿಂದ ಕೂಡಿಸುವುದಕ್ಕೇನೆ ಆ ಸೈನ್ಯ ಮಧ್ಯದಲ್ಲಿ ಕೆಲವರಿಗೆ ಕೆಲಸವನ್ನು ಒಪ್ಪಿಸಿದ್ದ.

ಚೇರುರ್ಮಾ ಶಬ್ದ ಇತ್ಯೇವಂ ವದನ್ತೋ ರಾಜಶಾಸನಾತ್ ॥ (35.30 ವಿಷ್ಣುಪರ್ವ)

ಎಲ್ಲರೂ ಶಾಂತರಾಗಿ ಕುಳಿತಾಗ ಜರಾಸಂದ ಹೇಳುತ್ತಾ ಇದ್ದಾನೆ ಯಾವುದೇ ಕಾರಣಕ್ಕೂ ಯಾರೂ ಹಿಂದೇಟು ಹಾಕತಕ್ಕದ್ದಲ್ಲ ಏನಾದರೂ ಮಾಡಿ ಆ ಮಥುರಾ ಪಟ್ಟಣವನ್ನು ಸಂಪೂರ್ಣವಾಗಿ ನಿರ್ನಾಮ ಮಾಡಬೇಕು, ನಾಶ ಮಾಡಿ ಹಾಕಬೇಕು ಎಲ್ಲಾ ಮನೆಗಳು, ಎಲ್ಲಾ ಅರಮನೆಗಳು ಎಲ್ಲವನ್ನು ನಾಶ ಮಾಡಿ, ಒಳಗಿದ್ದ ಜನರನ್ನು ನಾಶ ಮಾಡಿ ರಾಮ ಕೃಷ್ಣರನ್ನು ಅಲ್ಲಿ ಉಳಿಸಬಾರದು ಅದು ನನ್ನ ಸಂಕಲ್ಪ ನೀವೆಲ್ಲ ನನಗೆ ಸಹಾಯವನ್ನು ಮಾಡಬೇಕು ಪೂರ್ವಕ್ಕೆ, ಪಶ್ಚಿಮಕ್ಕೆ ಹೀಗೆ ಬೇರೆ ಬೇರೆ ದಿಕ್ಕುಗಳಿಗೆ ಕೆಲವರೆಲ್ಲ ಹೋಗಬೇಕು ಅಂತ ಆದೇಶವನ್ನು ಮಾಡುತ್ತಾನೆ. ಬಾಹ್ಲಿಕ ಮೊದಲಾದ ರಾಜರನ್ನು ಪಶ್ಚಿಮ ದ್ವಾರಕ್ಕೆ ಕಳಿಸಿದ್ದಾನೆ, ವಿರಾಟ, ರುಕ್ಮೀ, ಭೂರಿಶ್ರವ, ಬಾಣ ಮೊದಲಾದವರನ್ನು ಉತ್ತರ ದ್ವಾರಕ್ಕೆ ಕಳಿಸಿದ್ದಾನೆ, ಏಕಲವ್ಯ ಹಾಗೂ ಶಲ್ಯ, ಕೌರವರು ಇವರೆಲ್ಲ ಪೂರ್ವ ದ್ವಾರಕ್ಕೆ ಹೋಗಿದ್ದಾರೆ, ಸ್ವಯಂ ತಾನು ಹಾಗೂ ಶಿಶುಪಾಲ ದಕ್ಷಿಣ ದ್ವಾರಕ್ಕೆ ಬಂದು ನಿಂತಿದ್ದಾರೆ ಎಲ್ಲರೂ ಸಿದ್ದರಾಗಿದ್ದಾರೆ.

ಈ ಕಡೆಗೆ ಭಗವಂತ ಶ್ರೀಕೃಷ್ಣ ಪರಮಾತ್ಮ, ಬಲರಾಮ ಇಬ್ಬರೂ ನಿಂತರೆ ಅವರ ಆಯುಧಗಳೆಲ್ಲ ಬಂದು ಅಲ್ಲಿ ಸೇರಿವೆ ಅನೇಕ ಬಾರಿ ಜರಾಸಂಧ ಯುದ್ಧಕ್ಕೆ ಬಂದಿದ್ದಾನೆ. ಆ ಅನೇಕ ಬಾರಿ ಜರಾಸಂಧ ಬಂದಾಗ ನಡೆದಂತಹ ಯುದ್ಧಗಳ ಕಥೆಯನ್ನು ಸೇರಿಸಿ ಹರಿವಂಶ ಹೇಳುತ್ತಾ ಇದೆ ಶ್ರೀಮದಾಚಾರ್ಯರು ಅದನ್ನು ಬಿಡಿಸಿ ಬಿಡಿಸಿ ತಾತ್ಪರ್ಯ ನಿರ್ಣಯದಲ್ಲಿ ತಿಳಿಸಿದ್ದಾರೆ. ಈ ಆಯುಧಗಳೆಲ್ಲ ಬಂದದ್ದು ಮುಂದೆ ಗೋಮಂತ ಪರ್ವತದಲ್ಲಿ ಅಂತ ಶ್ರೀಮದಾಚಾರ್ಯರು ಮತ್ತೊಮ್ಮೆ ಬರುತ್ತಾನೆ ಜರಾಸಂಧ ಯುದ್ಧಕ್ಕೆ ಆ ಸಂದರ್ಭದಲ್ಲಿ ಅಂತ ತಿಳಿಸುತ್ತಾರೆ. ಒಟ್ಟು ಸೇರಿಸಿ ಜರಾಸಂಧ ಅನೇಕ ಬಾರಿ ಯುದ್ಧಕ್ಕೆ ಬಂದ ಆ ಸಂದರ್ಭದಲ್ಲಿ ನಡೆದ ಕಥೆಗಳನ್ನು ಹರಿವಂಶ ಹೇಳುತ್ತಾ ಇದೆ. ಆಯುಧಗಳೆಲ್ಲ ಕೆಳಗೆ ಬರುತ್ತವೆ ಸಂವರ್ತಕ ಅನ್ನುವ ಹೆಸರಿನ ಹಲಾಯುಧ ನೇಗಿಲು, ಸೌನಂದ ಎಂಬ ಹೆಸರಿನ ಮುಸುಲಾಯುಧ ಇವುಗಳನ್ನು ಬಲಗೈಯಲ್ಲಿ ಹಲ, ಎಡಗೈಯಲ್ಲಿ ಮುಸಲ, ಸಂವರ್ತಕ ಸೌನಂದಗಳನ್ನು ಹಿಡಿದಿದ್ದಾರೆ. **'ದಧಾನೋ ಹಲಸೌ ನಂದೌ'** ಎಂಬುದಾಗಿ ಶ್ರೀಮದಾಚಾರ್ಯರು ತಂತ್ರಸಾರ ಸಂಗ್ರಹದಲ್ಲಿಯೂ ಶೇಷ ದೇವರ ವರ್ಣನೆಯನ್ನು ಮಾಡುವಾಗ ತಿಳಿಸುತ್ತಾರೆ ಆ ಶೇಷಾವತಾರರಾದ ಬಲರಾಮ ದೇವರು ಬಲಗೈಯಲ್ಲಿ ಹಲ, ಎಡಗೈಯಲ್ಲಿ ಮುಸಲ.

ಆಮೇಲೆ ಶ್ರೀಕೃಷ್ಣ ಪರಮಾತ್ಮ ಅವನ ಶಾರಂಗ ಧನಸ್ಸು, ಗದಾ ಎರಡನ್ನೂ ಹರಿವಂಶ ಹೇಳುತ್ತದೆ, ಶ್ರೀಮದಾಚಾರ್ಯರು ಹೇಳುತ್ತಾರೆ ಚಕ್ರ, ಶಂಖ, ಬತ್ತಳಿಕೆ, ಖಡ್ಗ ಇವುಗಳೆಲ್ಲವೂ ಕೂಡ ಬಂದಿವೆ ಅವುಗಳೆಲ್ಲವನ್ನು ಶ್ರೀಕೃಷ್ಣ ಪರಮಾತ್ಮ ಧಾರಣೆ ಮಾಡಿದ್ದಾನೆ. ಇವುಗಳೆಲ್ಲ ಹೇಗಿದ್ದವು ಅಂತ ಇವುಗಳೆಲ್ಲದಕ್ಕೂ ಅಭಿಮಾನಿ ದೇವತೆಗಳಿದ್ದಾರೆ ಹಿಂದೆ ತಿಳಿದಿದ್ದೀರಿ ಆ ಎಲ್ಲ ಅಭಿಮಾನಿ ದೇವತೆಗಳು ಯಾವಾಗ ದುರ್ಜನರ ಸಂಹಾರವನ್ನು ಮಾಡೇವು ಅಂತ ಕಾಯುತ್ತಾ ಇದ್ದರಂತೆ. ದೇವರ ಸೇವಾರೂಪದಲ್ಲಿ ಯಾವಾಗ ನಾವು ದುರ್ಜನರ ಸಂಹಾರವನ್ನು ಮಾಡೇವು ಅಂತ ಆ ಚಕ್ರಾಭಿಮಾನಿನಿಯಾದ ದುರ್ಗೆ, ಗದಾಭಿಮಾನಿಗಳಾದ ವಾಯು ದೇವರು, ಶಾರಂಗಾಭಿಮಾನಿನಿಯಾದ ಸರಸ್ವತೀ ಇವರೆಲ್ಲ ಕಾಯುತ್ತಾ ಇದ್ದಾರೆ. ದುರ್ಜನರ ಸಂಹಾರವನ್ನು ಮಾಡಿ ಸಜ್ಜನರ



ರಕ್ಷಣೆಯನ್ನು ಮಾಡುವ ಭಗವಂತನ ಆ ಕಾರ್ಯದಲ್ಲಿ ನಮ್ಮ ಸೇವೆ ಆಗಬೇಕು ಅಂತ ಹೀಗಾಗಿ ಮೂರ್ತಿಮಂತಾಗಿ ಅವರೆಲ್ಲರೂ ಬಂದಿದ್ದಾರೆ ಅಂತ ಹರಿವಂಶ ಹೇಳುತ್ತದೆ **'ಮೂರ್ತಿಮನ್ತಿ ಬೃಹನ್ತಿ ಚ'**[1] ಅವರು ಬರುವುದರ ಜೊತೆಗೆ ಅವರ ಹಿಂದೆ ಅನೇಕ ಹದ್ದು ಮೊದಲಾದ ಪಕ್ಷಿಗಳು ಮಾಂಸವನ್ನು ತಿನ್ನುವ ಪಕ್ಷಿಗಳು, ಪ್ರಾಣಿಗಳೆಲ್ಲ ಆಯುಧಗಳು ಬರುವುದು ನೋಡಿ ಅವುಗಳೆಲ್ಲ ಬಂದವಂತೆ ಇನ್ನು ಮೇಲೆ ನಮ್ಮಗಳ ಆಹಾರ ಸಿಗುತ್ತೆ. ಇಷ್ಟೆಲ್ಲ ದೇವರ ಆಯುಧಗಳು ಬರುತ್ತಾ ಇವೆ ಅಂದರೆ ಇಲ್ಲಿ ದುರ್ಜನರ ಸಂಹಾರ ಆಗುತ್ತದೆ ನಮಗೆಲ್ಲ ಬೇಕಾದಷ್ಟು ಆಹಾರ ಸಿಗುತ್ತೆ ಅಂತ ಅವುಗಳು ಬಂದಿದ್ದವಂತೆ. ಈ ರೀತಿ ಆಯುಧಗಳನ್ನು ಆ ಪರಮಾತ್ಮ ಸ್ವೀಕಾರ ಮಾಡಿದ್ದಾನೆ. ಆಯುಧಗಳ ಅವಶ್ಯಕತೆಯೂ ದೇವರಿಗಿಲ್ಲ ಆದರೂ ತನ್ನ ಸಂಕಲ್ಪದಂತೆ ಆ ದೇವತೆಗಳಿಗೆ ಸೇವೆ ಕೊಡುವುದಕ್ಕೋಸ್ಕರ ಪರಮಾತ್ಮ ಆಯುಧಗಳನ್ನು ಸ್ವೀಕಾರ ಮಾಡಿದ್ದಾನೆ. ಘನಘೋರವಾದಂತಹ ಯುದ್ಧ ನಡೆಯುತ್ತ ಇದೆ, ನಾನಾ ರೀತಿಯ ಯುದ್ಧಗಳೆಲ್ಲ ನಡೆಯುತ್ತ ಇದೆ ಗದಾಯುದ್ಧ, ಬಾಣಯುದ್ಧ, ಖಡ್ಗಗಳಿಂದ, ಬಾಹುಯುದ್ಧ ನಾನಾ ರೀತಿಯ ಯುದ್ಧಗಳನ್ನೆಲ್ಲ ಮಾಡುತ್ತ ಇದ್ದಾರೆ.

ಈ ಕಡೆಗೆ ರುಕ್ಮಿ ಹಾಗೂ ಶ್ರೀಕೃಷ್ಣ ಪರಮಾತ್ಮನ ಯುದ್ಧ, ಭೀಷ್ಮಕ ಆಹುಕ, ಕ್ರಥ ವಸುದೇವ, ಕೈಶಿಕ ಅಕ್ರೂರ, ಗದಾ ಹಾಗೂ ಶಿಶುಪಾಲ, ದಂತವಕ್ತ್ರ ಶಂಖಿ ಹೀಗೆಲ್ಲ ದ್ವಂದ್ವ ಯುದ್ಧಗಳನ್ನು ಮಾಡುತ್ತಾ ಇದ್ದಾರೆ. ರುಕ್ಮಿಯನ್ನು ಚೆನ್ನಾಗಿ ಹೊಡೆದಿದ್ದಾನೆ ಕೃಷ್ಣ ಆದರೂ ಬಹಳ ಹೊಡೆದಿಲ್ಲ ಮುಂದೆ ಮತ್ತೆ ರುಕ್ಮಿಣಿಯ ಜೊತೆಗೆ ವಿವಾಹವನ್ನು ಮಾಡಿಕೊಳ್ಳಬೇಕಾಗಿದೆ ಅನ್ನುವುದಕ್ಕೋಸ್ಕರ ಶ್ರೀಕೃಷ್ಣ ಪರಮಾತ್ಮ ಸ್ವಲ್ಪ ತಕ್ಕಮಟ್ಟಿಗೆ ಮಾತ್ರ ಅವನನ್ನು ಹೊಡೆದಿದ್ದಾನೆ ಹೀಗೆ ಯುದ್ಧ ನಡೆಯುತ್ತ ಇದೆ. ಜರಾಸಂಧ ಬಲರಾಮ ದೇವರಿಗೆ ಬಹಳ ಜೋರಾಗಿ ಪೆಟ್ಟುಕೊಟ್ಟಾಗ ಬಲರಾಮ ದೇವರು ಪುನಃ ಎದ್ದು ಜರಾಸಂಧನನ್ನ ಚೆನ್ನಾಗಿ ಹೊಡೆದಿದ್ದಾರೆ, ಇನ್ನೇನು ಸಂಹಾರವನ್ನೇ ಮಾಡಬೇಕು ಅನ್ನುವುದಕ್ಕೋಸ್ಕರ ಯಾವಾಗ ಬಲರಾಮ ದೇವರು ಮುಸಲವನ್ನು ಕೈಯಲ್ಲಿ ತೆಗೆದುಕೊಳ್ಳುತ್ತಾರೋ ಆಗ ಅಂತರಿಕ್ಷದಿಂದ ಆಕಾಶವಾಣಿ ಆಗುತ್ತದೆ.

ತತೋऽನ್ತರಿಕ್ಷೇ ವಾಗಾಸೀತ್ ಸುಸ್ವರ ಲೋಕಸಾಕ್ಷಿಣೀ । (36.28 ವಿಷ್ಣುಪರ್ವ)

ಎಲ್ಲರಿಗೆ ಕೇಳಿಸುವಂತೆ ಸುಸ್ವರವಾದ ಗಂಭೀರವಾದ ವಾಣಿ ಆಕಾಶವಾಣಿ, ಬಲರಾಮ ನೀನು ಕೊಲ್ಲುವುದಕ್ಕೆ ಯೋಗ್ಯನಲ್ಲ ಇವನು, ಇವನನ್ನು ಕೊಲ್ಲುವ ವ್ಯಕ್ತಿ ಬೇರೆ ಇದ್ದಾರೆ ನೀನು ಇಲ್ಲಿಗೆ ನಿಲ್ಲಿಸು ಸಾಕು ಇಷ್ಟಕ್ಕೆ ಸಾಕು, ಚೆನ್ನಾಗಿ ಅವನನ್ನು ಹೊಡೆದದ್ದೀಯಾ ಅವನಿಗೆ ಅವಮಾನ ಆಗಿದೆ ನೆಲಕ್ಕೆ ಬಿದ್ದಿದ್ದಾನೆ ಸಾಕು, ಸಂಹಾರ ಮಾಡುವುದಕ್ಕೆ ಪ್ರಯತ್ನ ಮಾಡಬೇಡ ಎಂಬುದಾಗಿ ಹೇಳಿದ್ದಾರೆ. ಬ್ರಹ್ಮಾದಿ ದೇವತೆಗಳ ವರ, ಬ್ರಹ್ಮ ದೇವರ ವರ ಇದೆ ಚಂಡಮುನಿ ಅಂತ **'ಬ್ರಹ್ಮೇಶಚಂಡಮುನಿದತ್ತವರೈರಜೇಯಃ'.**[2] ಆ ಬ್ರಹ್ಮ ದೇವರ, ರುದ್ರ ದೇವರ, ಚಂಡ ಮುನಿಯ ವರದಿಂದ ಅಜೇಯನಾಗಿ ಇರತಕ್ಕಂತಹ ಆ ಜರಾಸಂಧನನ್ನು ಭೀಮಸೇನ ದೇವರೇ ಮುಂದೆ ಸಂಹಾರ ಮಾಡುವುದು ಅಂತ ವಾಯು ದೇವರೇ ಈ ಮಾತನ್ನು ಹೇಳುತ್ತಾರೆ. ತನ್ನ ಅವತಾರನಾದ ಭೀಮಸೇನನೇ ಬಂದು ಸಂಹಾರ ಮಾಡುತ್ತಾನೆ ಭೀಮಸೇನ ದೇವರೇ ಸಂಹಾರ ಮಾಡುತ್ತಾರೆ ಅಂತ ವಾಯು ದೇವರೇ ಆ ಅಶರೀರ ವಾಣಿಯಲ್ಲಿ ತಿಳಿಸಿಕೊಡುತ್ತಾರೆ ಅಂತ ಮಹಾಭಾರತದ ತಾತ್ಪರ್ಯ ನಿರ್ಣಯದಲ್ಲಿ ನಾವು ಕಾಣುತ್ತೇವೆ. ಇಲ್ಲಿ **'ತತೋऽನ್ತರಿಕ್ಷೇ ವಾಗಾಸೀತ್'** ಅಂತ ಮಾತ್ರ ಇದೆ ಅಂತರಿಕ್ಷದಿಂದ ಧ್ವನಿ ಬಂತು ಅಂತ ಅಂತರಿಕ್ಷ ಅಂದರೇನೆ ವಾಯು ದೇವರು ಅಂತಹ **'ಸೋಂತರಿಕ್ಷಮಿತಿ ಪ್ರೋಕ್ತಃ ಸ್ವಾಂತಃ ಸಮ್ಯಕ್ ಹರೀಕ್ಷಣಾತ್'**[3] ಅಂತ ಶ್ರೀಮದಾಚಾರ್ಯರು ಹೇಳುವಂತೆ ತನ್ನೊಳಗೆ

1. 35.58 ವಿಷ್ಣುಪರ್ವ; 2. ತಾತ್ಪರ್ಯ ನಿರ್ಣಯ; 3. ಛಾಂದೋಗ್ಯ ಭಾಷ್ಯ

ಪರಮಾತ್ಮನನ್ನ ಕಾಣುವವರು ಆದ್ದರಿಂದ ಅಂತರಿಕ್ಷ ಅಂದರೆ ವಾಯು ದೇವರು, ಆ ವಾಯು ದೇವರಲ್ಲಿ ಈ ವಾಣಿ ಪ್ರಾದೂರ್ಭೂತವಾಯಿತು ಅಂತ ಅರ್ಥ.

ತತೋಽನ್ತರಿಕ್ಷೇ ವಾಗಾಸೀತ್ ಸುಸ್ವರ ಲೋಕಸಾಕ್ಷಿಣೀ ।
ಉವಾಚ ಬಲದೇವಂ ತಂ ಸಮುದ್ಯತಹಲಾಯುಧಮ್ ॥ (36.28 ವಿಷ್ಣುಪರ್ವ)

ಅಂತ ಇದೆ ಆ ಬಲದೇವನನ್ನು ಕುರಿತು ಆಕಾಶವಾಣಿ ಆಯಿತು ಅಂತ, ಬಲದೇವ ಅಂದರೆ ಹಿಂದೆ ಪ್ರಲಂಬನ ಸಂಹಾರ ಮಾಡಿದಾಗ ಬಲದೇವ ಎಂಬ ನಾಮಕರಣ ಮಾಡಿಸಿಕೊಂಡ ಬಲರಾಮನನ್ನು ಕುರಿತು ಈ ಮಾತನ್ನು ವಾಯು ದೇವರು ನುಡಿದಿರುವುದು. ಇಲ್ಲಿ ಅಂತರಿಕ್ಷ ಅನ್ನುವ ಶಬ್ದಕ್ಕೆ ವಾಯು ದೇವರು ಅಂತ ಅರ್ಥವನ್ನೂ ಮಾಡಬಹುದು ಅಥವಾ ಬಲದೇವಂ ಅನ್ನುವುದಕ್ಕೇನೆ ಶಟ್ ದ್ವಿತೀಯಾ ಅಂತ ಇದೆ ದ್ವಿತೀಯಾ ವಿಭುಕ್ತಿ ಆರೂ ವಿಭುಕ್ತಿಗಳಲ್ಲಿ ಬರುತ್ತದೆ ಅಂತ ಇರುವುದರಿಂದ ಆ ಬಲದೇವಂ ಅನ್ನುವ ಶಬ್ದಕ್ಕೆ ಬಲದೇವಸ್ಯ ಅಂತ ಶಟ್ ದ್ವಿತೀಯಾ ವಿಭುಕ್ತಿ **'ಬಲದೇವಸ್ಯ ವಾಗಾಸೀತ್ ಅತ್ರಾಹ ರೂಪಮಪರಂ ಬಲದೇವತಾಯಾ'**[1] ಅಂತ ಆ ವಾಯು ದೇವರನ್ನು ಬಲದೇವತಾ ಅಂತ ಕರೆಯುತ್ತಾರೆ. ಆ ಬಲದೇವತಾ ಅಂದರೆ ವಾಯು ದೇವರು **'ಬಲದೇವತಾಯಾಃ ವಾಕ್ ತತೋಽನ್ತರಿಕ್ಷೇ ವಾಗಾಸೀತ್'** ಅಂತ ಇದೆಯಲ್ಲ **'ತತೋಽನ್ತರಿಕ್ಷೇ ಬಲದೇವಸ್ಯ ವಾಗಾಸೀತ್'** ವಾಯು ದೇವರ ವಾಣಿ ಆಯಿತು ಅನ್ನುವ ಅರ್ಥವನ್ನೂ ಕೂಡ ಈ ಶ್ಲೋಕಕ್ಕೆ ನಾವು ತಿಳಿಯಬಹುದು.

ನ ತ್ವಯಾ ರಾಮ ವಧ್ಯೋಽಯಮಲಂ ಖೇದೇನ ಮಾನದ ।
ವಿದಿತೋಽಸ್ಯ ಮಯಾ ಮೃತ್ಯುಸ್ತಸ್ಮಾತ್ ಸಾಧು ವ್ಯುಪಾರಮ ॥ (36.29 ವಿಷ್ಣುಪರ್ವ)

ಇಷ್ಟೇ ಹೇಳಿದ್ದು. ನೀನು ಕೊಲ್ಲುವುದಕ್ಕೆ ಸಾಧ್ಯ ಇಲ್ಲ ಕಷ್ಟ ಪಡುವುದು ಬೇಡ ಯಾರು ಇವರನ್ನು ಕೊಲ್ಲುತ್ತಾರೆ ಅಂತ ನನಗೆ ಗೊತ್ತು ಸಾಕು ಇಷ್ಟಕ್ಕೆ ನಿಲ್ಲಿಸು ಅಂತ ಇಷ್ಟೇ ಅರ್ಥ ಮೇಲೆ ತೋರುತ್ತದೆ **'ವಿದಿತೋಽಸ್ಯ ಮಯಾ ಮೃತ್ಯುಃ'** ಯಾರಿಂದ ಮೃತ್ಯು ಅಂತ ನನಗೆ ಗೊತ್ತು ಸಾಕು ಅಂತ ಅದಕ್ಕೆ ಸರಿಯಾಗಿ ಅರ್ಥವನ್ನು ಮಾಡಿಕೊಳ್ಳಬೇಕು. ಇವನ ಮೃತ್ಯು ಯಾರಿಂದ ಅಂತ ನನಗೆ ಗೊತ್ತು ಇಷ್ಟೇ ಅರ್ಥ ಅಲ್ಲ ಅಲ್ಲಿ **'ವಿದಿತೋಽಸ್ಯ ಮಯಾ ಮೃತ್ಯುಃ ಅಸ್ಯ ಮೃತ್ಯುಃ ಮಯಾ ಭವತಿ ಇತಿ ಮಯಾ ವಿದಿತಃ'** ಅಸ್ಯ ಮೃತ್ಯುಃ ಈ ಜರಾಸಂಧನ ಮೃತ್ಯು ಇದು ಮಯಾ ನನ್ನಿಂದಲೇ ಆಗುತ್ತದೆ ನಾನೇ ಭೀಮಸೇನ ರೂಪದಿಂದ ಆ ಜರಾಸಂಧನ ಮರಣವನ್ನು ಮಾಡುತ್ತೇನೆ. ಆ ನಾನೇ ಮಾಡುವ ಮೃತ್ಯು ನನಗೆ ವಿದಿತವಾಗಿದೆ ಆದ್ದರಿಂದ ನೀನು ಇಲ್ಲಿಗೆ ನಿಲ್ಲಿಸು ಅಂತ ವಾಯು ದೇವರ ಆ ಮಾತಿನ ಆಂತರ್ಯ ಅಂತ. ಯಾವ ರೀತಿ ಗಂಭೀರವಾದ ಶೈಲಿಯಲ್ಲಿ ವೇದವ್ಯಾಸ ದೇವರು ಉಪದೇಶ ಮಾಡುತ್ತಾರೆ ಅದನ್ನು ಶ್ರೀಮದಾಚಾರ್ಯರು ನಮಗೆ ಹೇಗೆ ತಿಳಿಸಿಕೊಡುತ್ತಾರೆ ಅನ್ನುವುದನ್ನು ತೋರಿಸುವುದಕ್ಕೆ ಒಂದು ಉದಾಹರಣೆ ಮಾತ್ರ.

ಮುಂದೆ ಆ ಯುದ್ಧ ನಡೆದಿದೆ ಇಪ್ಪತ್ತುಮೂರು ಅಕ್ಷೌಹಿಣೀ ಸೈನ್ಯವನ್ನೂ ಸೋಲಿಸಿ, ಕೆಲವರನ್ನು ಸಂಹಾರ ಮಾಡಿ ಓಡಿಸಿದ್ದಾರೆ, ಜರಾಸಂಧ ಮರ್ಯಾದೆಯನ್ನು ಕಳೆದುಕೊಂಡು, ಮಾನಭಂಗವನ್ನು ಮಾಡಿಕೊಂಡು ಹೋಗುತ್ತಾನೆ. ಇಪ್ಪತ್ತುಮೂರು ಅಕ್ಷೌಹಿಣೀ ಸೈನ್ಯ ಅಂತ ಶ್ರೀಮದಾಚಾರ್ಯರು ಹೇಳುತ್ತಾರೆ, ಇಲ್ಲಿ ಇಪ್ಪತ್ತು ಬರುತ್ತದೆ **'ಅಕ್ಷೌಹಿಣ್ಯಶ್ಚ ತಸ್ಯಾಸನ್ ವಿಂಶತಿಶ್ಚ ಮಹಾಮತೇ'**[2] ವಿಂಶತಿಶ್ಚ ಶಬ್ದದಿಂದ ಇನ್ನೂ ಮೂರನ್ನು

1. 8.5 ಮಭಾತಾನಿರ್ಣಯ; 2. 36.38 ವಿಷ್ಣುಪರ್ವ

ತೆಗೆದುಕೊಂಡರೆ ಇಪ್ಪತ್ತುಮೂರು ಅಕ್ಷೌಹಿಣೀ ಸೈನ್ಯವನ್ನೂ ಸೋಲಿಸಿ ಕೊಟ್ಟುಕಳಿಸುತ್ತಾನೆ. ಹೀಗೆ ಮತ್ತೆ ಮತ್ತೆ ಒಟ್ಟು ಹದಿನೆಂಟು ಬಾರಿ ಯುದ್ಧಕ್ಕೆ ಬರುತ್ತಾನೆ ಜರಾಸಂಧ ಪ್ರತಿಸಲ ಬಂದಾಗಲೂ ಸೋಲುತ್ತಾನೆ ಇಪ್ಪತ್ಮೂರು ಅಕ್ಷೌಹಿಣೀ ಸೈನ್ಯವನ್ನು ಕರೆದುಕೊಂಡು ಬರುವುದು ಸೋಲುವುದು. ಅದೇ ಬೇಕಾಗಿತ್ತು ದೇವರಿಗೆ ಅಷ್ಟು ಜನ ದುಷ್ಟರು ಭೂಮಿಯ ಮೇಲೆ ಭಾರ ಆಗಿ ಸಜ್ಜನರಿಗೆ ಪೀಡೆಯನ್ನು ಕೊಡುತ್ತಾರಲ್ಲ ಅಷ್ಟೆಲ್ಲ ದುರ್ಜನರ ನಾಶವಾದರೆ ಆ ಮೂಲಕ ಭೂಭಾರಹಣವಾಗಿ ಸಜ್ಜನರಿಗೆಲ್ಲ ಕ್ಷೇಮವಾಗುತ್ತದೆ. ಒಂದೇ ಸಲ ಜರಾಸಂಧನನ್ನು ಸಂಹಾರ ಮಾಡಿದರೆ ಅವನೊಬ್ಬನು ಸಾಯುತ್ತಾನೆ ಅವನ ಜೊತೆಗೆ ಇವರೆಲ್ಲ ಬರಬೇಕು ಆ ಎಲ್ಲ ದುರ್ಜನರನ್ನು ಒಂದು ಕಡೆಗೆ ಸೇರಿಸಿದ ಪಾಪವೂ ಅವನಿಗೆ ಸೇರಲಿ. ಅವನ ಸಂಹಾರವನ್ನು ಮುಂದೆ ಭೀಮಸೇನ ದೇವರಿಂದ ಮಾಡಿಸೋಣ, ಆ ಒಂದು ವಿಶೇಷ ಸೇವೆಯನ್ನು ಸೌಭಾಗ್ಯವನ್ನು ಪುಣ್ಯವನ್ನು ಭೀಮಸೇನ ದೇವರಿಗೆ ಕೊಡೋಣ ಆದರೆ ಈ ಎಲ್ಲ ದುರ್ಜನರ ನಾಶ ಮಾಡಿ ಭೂಭಾರಹಣವನ್ನಂತೂ ಮಾಡೋಣ ಅಂತ ಪರಮಾತ್ಮ ಪ್ರತಿಬಾರಿಯೂ ಅವರೆಲ್ಲರನ್ನು ಸೋಲಿಸಿ ಕಳಿಸುತ್ತಾ ಇದ್ದಾನೆ.

ವಿಕದ್ರು ಅನ್ನುವಂತಹ ಒಬ್ಬ ಯಾದವ ಶ್ರೀಕೃಷ್ಣ ಪರಮಾತ್ಮನಿಗೆ ಹೇಳುತ್ತಾ ಇದ್ದಾನೆ. ಈ ಜರಾಸಂಧನನ್ನು ನಾವು ಸುಮ್ಮನೆ ಬಿಡಬಾರದು, ಯುದ್ಧ ಮಾಡಬೇಕು, ಸೋಲಿಸಬೇಕು, ಸಂಹಾರ ಮಾಡಬೇಕು ಎಲ್ಲವೂ ನಿಜ ಅದೆಷ್ಟು ಸತ್ಯವೋ ನಮ್ಮ ಪಟ್ಟಣದ ಪ್ರಜೆಗಳಿಗೆ ಯಾವುದೇ ಅಪಾಯವಾಗದಂತೆ ನೋಡಿಕೊಳ್ಳಬೇಕಾದದ್ದು ನಮ್ಮ ಕರ್ತವ್ಯ. ಬರೀ ಶತ್ರುಗಳ ಸಂಹಾರ ಮಾಡಬೇಕು ಅನ್ನುವ ಉತ್ಸಾಹದೊಳಗೆ ಆ ಶತ್ರುಗಳು ಪ್ರಯೋಗ ಮಾಡುವ ಅಸ್ತ್ರಗಳಿಂದ ನಮ್ಮ ಪ್ರಜೆಗಳು, ಪಟ್ಟಣದ ಜನರು, ಸ್ತ್ರೀಯರು, ಬಾಲರು, ವೃದ್ಧರು ಎಲ್ಲರೂ ಕೂಡ ಮನೆ ಕಳೆದುಕೊಂಡು ಅಂಗವಿಕಲರಾಗಿ ಕಷ್ಟಪಟ್ಟು ದುಃಖವನ್ನು ಪಡುವುದರೊಳಗೆ ಏನು ಸುಖ ಇದೆ. ಹಾಗಾದರೆ ಶತ್ರುವನ್ನು ಸೋಲಿಸಿರಬೇಕು, ನಮ್ಮ ಜನರಿಗೆ ಏನೂ ಆಗಿರಬಾರದು ಆ ರೀತಿ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಬೇಕು ಅಂತನ್ನುವ ಹಿನ್ನೆಲೆಯಲ್ಲಿ ಆ ವಿಕದ್ರು ಮೊದಲು ಇತಿಹಾಸವನ್ನು ಹೇಳುತ್ತಾನೆ.

ಈ ಯದುವಂಶ ಇದು ಇಕ್ಷ್ವಾಕುವಂಶದಿಂದ ಸೂರ್ಯವಂಶದಿಂದ ಚಂದ್ರವಂಶಕ್ಕೆ ಸೇರಿಕೊಂಡಂತಹ ಒಂದು ವಿಚಿತ್ರವಾದ ವಂಶ ಇದು, ಆ ಸೂರ್ಯವಂಶದಲ್ಲಿ ಬಂದ ಯದು ಚಂದ್ರವಂಶದಲ್ಲಿಯೂ ಸೇರಿಕೊಂಡ ಯಯಾತಿಯ ಪುತ್ರನಾಗಿ, ಅವನ ವಂಶದಲ್ಲಿ ನೀವು ಬಂದಿದ್ದೀರಿ ಹೀಗೆ ಈ ಯದುವಂಶದ ಕಥೆ ಇದೆ. ಇಕ್ಷ್ವಾಕು ವಂಶದಲ್ಲಿ ಹರ್ಯಶ್ವ ಅಂತ ರಾಜ ಇದ್ದ ಮಧು ಎಂಬ ದೈತ್ಯನ ಮಗಳು ಮಧುಮತೀ ಅವನ ಹೆಂಡತಿ, ಇವನ ಅಣ್ಣ ಇವನಿಗೆ ರಾಜ್ಯವನ್ನು ಕೊಡಲಿಲ್ಲ ಹರ್ಯಶ್ವನನ್ನು ಮನೆಯಿಂದ ಓಡಿಸಿದ. ಇವನ ಹೆಂಡತಿ ಮಧುಮತೀ ಹೇಳುತ್ತಾಳೆ ಅಣ್ಣ ರಾಜ್ಯ ಕೊಟ್ಟಿಲ್ಲ ಅಂತ ಬೇಸರ ಮಾಡಿಕೊಳ್ಳುವುದು ಬೇಡ, ಹೆಂಡತಿ ಗಂಡನಿಗೆ ಕಷ್ಟ ಬಂದಾಗ ತಾನು ಧೈರ್ಯವನ್ನು ತುಂಬಬೇಕು, ಯಾವುದೇ ರೀತಿಯ ಅಧೈರ್ಯ ಬರದೇ ಇದ್ದಂತೆ, ಅವನು ತನ್ನ ಕಾಲಲ್ಲಿ ಶಕ್ತಿಯನ್ನು ಕಳೆದುಕೊಳ್ಳದೇ ಇದ್ದಂತೆ ಶಕ್ತಿಯನ್ನು ತುಂಬಬೇಕು ಅನ್ನುವ ಒಂದು ಪತಿವ್ರತೆಯ ಧರ್ಮವನ್ನು ಅವಳು ತೋರಿಸುತ್ತಾಳೆ. ನೀವು ಧೈರ್ಯದಿಂದ ಇರಬೇಕು, ಯಾವುದೇ ರೀತಿಯ ಭಯ ಬೇಡ ನನ್ನ ತಂದೆಯ ಮನೆ ಇದೆ ಮಧು ದೈತ್ಯ, ನನ್ನ ಭ್ರಾತ ಲವಣ ಅಸುರ ಇದ್ದಾನೆ. ಮಧುವಿನ ಮಗ ಮಧು ಎಂಬ ಅಸುರನ ಮಗನೇ ಲವಣ ಅವನನ್ನೇ ಶತ್ರುಘ್ನ ಸಂಹಾರ ಮಾಡಿ ಮಥುರಾ ಪಟ್ಟಣದ ನಿರ್ಮಾಣ ಮಾಡಿದ್ದು ಅಂತ ಹಿಂದೊಮ್ಮೆ ಕಥೆ ಕೇಳಿದ್ದೀರಿ. ಆ ಲವಣ ಇದ್ದಾನೆ ನನ್ನ ಭ್ರಾತ, ತಂದೆ ಇದ್ದಾನೆ ಮಧು ನಿನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ, ನಿನಗೊಂದಿಷ್ಟು ರಾಜ್ಯವನ್ನು ಒಪ್ಪಿಸುತ್ತಾರೆ, ರಾಜ್ಯವನ್ನು ಆಳುತ್ತ ರಾಜನಾಗಿ ವೈಭವದಿಂದ ಮರ್ಯಾದೆಯಿಂದ ಜೀವನ ಮಾಡೋಣ ಇಲ್ಲಿ ಏಕೆ ಪರವಶರಾಗಿ ನಾವಿರಬೇಕು ಹೋಗೋಣ ಅಂತ ಅವನನ್ನು ಕರೆದುಕೊಂಡು ಹೋಗಿದ್ದಾಳೆ. ಮಧು ದೈತ್ಯ

ಅತ್ಯಂತ ಪ್ರೀತಿಯಿಂದ ಅಳಿಯನಿಗೆ ಸ್ವಾಗತ ಮಾಡಿ ನೀನು ಬಂದದ್ದು ಬಹಳ ಸಂತೋಷ ನನ್ನ ರಾಜ್ಯ ಎಲ್ಲ ನಿನಗೆ ಒಪ್ಪಿಸುತ್ತೇನೆ ನೀನೇ ರಾಜ್ಯವನ್ನು ಆಳು ಅಂತ ಅನ್ನುತ್ತಾನೆ.

ಯದೇತನ್ಮಮ ರಾಜ್ಯಂ ವೈ ಸರ್ವಂ ಮಧುವನಂ ವಿನಾ ।
ದದಾಮಿ ತವ ರಾಜೇನ್ದ್ರ ವಾಸಶ್ಚ ಪ್ರತಿಗೃಹ್ಯತಾಮ್ ॥ (37.28 ವಿಷ್ಣುಪರ್ವ)

ಮಧುವನ ಒಂದನ್ನು ಬಿಟ್ಟು ಇನ್ನುಳಿದ ನನ್ನ ಎಲ್ಲ ರಾಜ್ಯವನ್ನು ನಿನಗೆ ಕೊಡುತ್ತೇನೆ ತೆಗೆದುಕೋ. ಸಮೃದ್ಧವಾದಂತಹ ನೀರು ಆ ನೀರಿನಿಂದ ಸಮೃದ್ಧವಾದಂತಹ ರಾಷ್ಟ್ರವನ್ನು ರಾಜ್ಯವನ್ನು ನಿನಗೆ ಕೊಡುತ್ತೇನೆ ಇದನ್ನು ಆನರ್ತ ರಾಷ್ಟ್ರ ಅಂತ ಹೆಸರಿನಿಂದ ನೀನು ಪ್ರಸಿದ್ಧಿಯನ್ನು ಮಾಡಬಹುದು ಅಲ್ಲಿ ನೀನು ರಾಜನಾಗಿ ಇರಬೇಕು ಅಂತ. ಬೇಕಾದಷ್ಟು ಗೋಸಂಪತ್ತು, ಬೇಕಾದಷ್ಟು ಜಲದ ಸಮೃದ್ಧಿ, ಬೇಕಾದಷ್ಟು ಧರ್ಮದಿಂದ ಜೀವನವನ್ನು ಮಾಡುವಂತಹ ಪ್ರಜೆಗಳು ಅವರಿಗೆ ನೀನು ರಾಜನಾಗಿ ಇರು ಅಂತ. ಅಲ್ಲಿ ರಾಜನಾಗಿ ಒಳ್ಳೆಯ ಹೆಸರನ್ನು ಪಡೆದಿದ್ದಾನೆ, ಉತ್ತಮವಾದಂತಹ ರಾಜ್ಯವನ್ನು ಹತ್ತು ಸಾವಿರ ವರ್ಷಗಳವರೆಗೆ ಆಳಿದ್ದಾನೆ.

ದಶ ವರ್ಷಸಹಸ್ರಾಣಿ ಸ ಕೃತ್ವಾ ರಾಜ್ಯಮವ್ಯಯಮ್ ॥ (37.48 ವಿಷ್ಣುಪರ್ವ)

ರಾಜ್ಯವೇ ಇಲ್ಲ ಅಂತ ಒದ್ದಾಡುವಂತಹ ವ್ಯಕ್ತಿಗೆ ಹತ್ತು ಸಾವಿರ ವರ್ಷಗಳವರೆಗೆ ಸಮೃದ್ಧವಾದ ರಾಜ್ಯವನ್ನು ಅತ್ಯಂತ ವೈಭವದಿಂದ ಆಳುವಂತೆ ದೇವರು ಅನುಗ್ರಹ ಮಾಡಿದ್ದಾನೆ. ಹರ್ಯಶ್ವ ಮಗನಾಗಿ ಹುಟ್ಟಿದ ಯದು, ಯಯಾತಿಯ ಮಗ ಆದರೆ ಇಲ್ಲಿ ಈ ಹರ್ಯಶ್ವನ ಮಗನಾಗಿಯೂ ಯದು ಬಂದಿದ್ದಾನೆ ಮತ್ತೆ ಒಬ್ಬನೇ ಎರಡು ಈ ರೀತಿಯಲ್ಲಿ ಹುಟ್ಟಿದ್ದಾನೆ ಎಂಬುದಾಗಿ ವ್ಯಾಖ್ಯಾನಕಾರರು ಅಭಿಪ್ರಾಯ ಪಡುತ್ತಾರೆ. ಬೇರೆ ಬೇರೆ ಕಡೆಗೆ ಹುಟ್ಟಿದವರೆ ಮತ್ತೊಂದು ಕಡೆಗೆ ಹುಟ್ಟಿ ಒಂದಾಗಿ ಅವರು ತಮ್ಮ ಅವತಾರ ಕಾರ್ಯವನ್ನು ಮಾಡುತ್ತಾರೆ ಅಂತ ತಿಳಿಸಿಕೊಡುತ್ತಾರೆ ಯದು ಅಲ್ಲಿ ಹುಟ್ಟಿದ್ದಾನೆ ಅವನೂ ಕೂಡ ವೈಭವದಿಂದ ರಾಜ್ಯವನ್ನು ಆಳುತ್ತ ಇದ್ದಾನೆ. ಅವನು ತನ್ನ ಮಡದಿಯರ ಜೊತೆಗೆ ಜಲಕ್ರೀಡೆಯನ್ನು ಮಾಡುತ್ತ ಇರುವಂತಹ ಸಂದರ್ಭದಲ್ಲಿ ಸಹಜವಾಗಿ ಸಮುದ್ರದಲ್ಲಿ ಈಸಾಡುತ್ತ ಇದ್ದಾನೆ. ಈಸಾಡುತ್ತ ಇದ್ದರೆ ಧೂಮ್ರವರ್ಣ ಅನ್ನುವಂತಹ ಒಬ್ಬ ನಾಗರಾಜ ತನ್ನ ದೂತರನ್ನು ಕಳಿಸಿ ಇವನನ್ನು ನಾಗಲೋಕಕ್ಕೆ ಕರೆದುಕೊಂಡು ಹೋಗಿಬಿಡುತ್ತಾರೆ. ಅಲ್ಲಿ ಯದು ರಾಜ ಬಂದಾಗ ಆ ಧೂಮ್ರವರ್ಣ ಹೇಳುತ್ತಾನೆ ನೀನು ಶ್ರೇಷ್ಠವಾದಂತಹ ರಾಜ, ನಿನ್ನ ತಂದೆ ಬಹಳ ಶ್ರೇಷ್ಠನಾದಂತಹ ಉತ್ತಮವಾದಂತಹ ಭಗವದ್ಭಕ್ತ, ಮಹಾಸಮರ್ಥ, ಮಹಾಬಲಿಷ್ಠ ಹರ್ಯೇಶ್ವ ದೊಡ್ಡ ರಾಜ್ಯವನ್ನು ಸ್ಥಾಪನೆ ಮಾಡಿದ ಹತ್ತು ಸಾವಿರ ವರ್ಷ ರಾಜ್ಯ ಆಳಿದ ಆನರ್ತ ರಾಜ್ಯವನ್ನು ಆನರ್ತ ರಾಷ್ಟ್ರವನ್ನು ಆಳಿದ್ದಾನೆ ಅಂಥವನ ಮಗ ನೀನು. ನಿನ್ನ ಮೇಲೆ ನನಗೆ ವಿಶೇಷವಾದಂತಹ ಅಭಿಮಾನ ಎಲ್ಲಾ ಋಷಿಗಳು ಹಾಗೂ ಸರ್ಪಗಳು, ಅನೇಕ ದೇವತೆಗಳು ಇವರೆಲ್ಲ ಬೇರೆ ಬೇರೆ ರೂಪದಿಂದ ನಿನ್ನ ವಂಶದಲ್ಲಿ ಮುಂದೆ ಹುಟ್ಟಿ ಬರುವವರಿದ್ದಾರೆ ಅದು ಗೊತ್ತೇ ನಿನಗೆ.

ವಂಶೇ ಚಾಸ್ಮಿಂಸ್ತವ ವಿಭೋ ದೇವಾನಾಂ ತನಯಾವ್ಯಯಾಃ ।
ಋಷೀಣಾಮುರಗಾಣಾಂ ಚ ಉತ್ಪತ್ಸ್ಯನ್ತೇ ನೃಯೋನಿಜಾಃ ॥ (37.62 ವಿಷ್ಣುಪರ್ವ)

ಅವರೆಲ್ಲ ಕಾರಣಾಂತರಗಳಿಂದ ದೇವರ ಸೇವೆ ಮಾಡುವುದಕ್ಕೆ ನಿನ್ನ ವಂಶದಲ್ಲಿ ಹುಟ್ಟಿ ಬರುತ್ತಾರೆ ಆ ಯೋಗ ನಿನಗಿದೆ ಅನ್ನುವುದಕ್ಕೋಸ್ಕರ ನಾನು ನನ್ನ ಐದು ಜನ ಕನ್ಯೆಯರನ್ನು ನಿನಗೇ ಕೊಟ್ಟು ಮದುವೆ ಮಾಡುತ್ತೇನೆ ಮದುವೆ

ಮಾಡಿಕೊಂಡು ಹೋಗು ನಾಗ ಕನ್ಯೆಯರನ್ನು. ತನ್ನ ಪಾಡಿಗೆ ತಾನು ಜಲಕ್ರೀಡೆಯನ್ನು ಮಾಡುವಂತಹ ಯದುವನ್ನ ಕರೆದುಕೊಂಡು ಬಂದದ್ದು ಮಾತ್ರ ಅಲ್ಲದೇ ತನ್ನ ಐದು ಜನ ಕನ್ಯೆಯರನ್ನು ಕೊಟ್ಟು ಮದುವೆ ಮಾಡುತ್ತೇನೆ ಅಂತ ಅವನಿಗೆ ಹೇಳುತ್ತಾನೆ ಹೇಳುವುದಷ್ಟೇ ಅಲ್ಲ ನಿನ್ನ ವಂಶದ ಅಭಿವೃದ್ಧಿಯಾಗುತ್ತದೆ.

ವರಂ ಚ ತೇ ಪ್ರದಾಸ್ಯಾಮಿ ವರಾರ್ಹಸ್ತ್ವಂ ಮತೋ ಮಮ ॥ (37.64 ವಿಷ್ಣುಪರ್ವ)

ಏಳು ವಂಶಗಳು ನಿನ್ನ ವಂಶದಲ್ಲಿ ಮುಂದೆ ಕವಲಾಗಿ ಒಡೆಯುತ್ತವೆ. ಭೈಮಾ, ಕುಕುರಾ, ಭೋಜಾ, ಅಂಧಕ, ಯಾದವಾ, ದಾಶಾರ್ಹಾ, ವೃಷ್ಣ ಅಂತ ಅಷ್ಟೆಲ್ಲಾ ವಂಶಗಳು ಬರುತ್ತವೆ ಈ ಐದು ಕನ್ಯೆಯರನ್ನು ನೀನು ಮದುವೆ ಮಾಡಿಕೊಂಡು ಹೋಗು ಅಂತ ಸಂಕಲ್ಪ ಪೂರ್ವಕವಾಗಿ ವಿವಾಹ ಮಾಡಿ ಕಳಿಸಿದ್ದಾನೆ. ಅವರೆಲ್ಲರನ್ನೂ ಕರೆದುಕೊಂಡು ಬಂದಿದ್ದಾನೆ ಮೊದಲಿರುವಂತಹ ಆ ಮಡದಿಯರೂ ಕೂಡ ಅತ್ಯಂತ ಪ್ರೀತಿಯಿಂದ ಇವರೆಲ್ಲರ ಸವತಿಯರ ಜೊತೆಗೆ ಸೇರಿಕೊಂಡಿದ್ದಾರೆ ಎಂಬುದಾಗಿ ಹರಿವಂಶ ತಿಳಿಸುತ್ತದೆ. ಮುಂದೆ ಅವನಿಗೆ ಮುಚುಕುಂದ, ಪದ್ಮವರ್ಣ, ಮಾಧವ, ಸಾರಸ, ಹರಿತ ಎಂಬುದಾಗಿ ಐದು ಜನ ಮಕ್ಕಳಾಗುತ್ತಾರೆ. ವಿಂಧ್ಯ ಪರ್ವತ ಹಾಗೂ ರುಕ್ಷ ಪರ್ವತದ ಮಧ್ಯದಲ್ಲಿ ಎರಡು ಪಟ್ಟಣಗಳನ್ನು ಮಾಡಿಕೊಂಡು ಚೆನ್ನಾಗಿ ರಾಜ್ಯವನ್ನು ಆಳಬೇಕು ಅಂತ ಮುಚುಕುಂದನಿಗೆ ಒಪ್ಪಿಸಿದ್ದಾನೆ. ದಕ್ಷಿಣ ಭಾಗದಲ್ಲಿ ಇರತಕ್ಕಂತಹ ಸಹ್ಯ ಪರ್ವತದ ಪರಿಸರದಲ್ಲಿ ನೀನು ರಾಜ್ಯವನ್ನು ಮಾಡಬೇಕು ಅಲ್ಲಿ ಪಟ್ಟಣವನ್ನು ಕಟ್ಟಬೇಕು ಅಂತ ಪದ್ಮವರ್ಣ ಅನ್ನುವವನಿಗೆ ಆದೇಶವನ್ನು ಮಾಡಿದ್ದಾನೆ. ಸಾರಸ ಅನ್ನುವವನಿಗೆ ಹೇಳುತ್ತಾನೆ ನೀನು ಪಶ್ಚಿಮ ದೇಶದಲ್ಲಿ ರಾಜ್ಯವನ್ನು ಮಾಡು ಅಂತ, ಹರಿತ ಅನ್ನುವವನಿಗೂ ಕೂಡ ಈ ತನ್ನ ತಾತನ ತಾಯಿಯ ತಂದೆ ಪನ್ನಗ ರಾಜ ಆ ಪನ್ನಗೇಂದ್ರನಾಗಿ ಇರುವಂತಹ ಧೂಮ್ರವರ್ಣನ ರಾಜ್ಯದಲ್ಲಿ ಇದ್ದು ನೀನು ಅಲ್ಲಿ ರಾಜ್ಯವನ್ನು ಆಳಬೇಕು ಅಂತ ಅವನಿಗೆ ಹೇಳಿದ್ದಾನೆ. ಜ್ಯೇಷ್ಠ ಪುತ್ರನಾದ ಮಾಧವನಿಗೆ ಮಾತ್ರ ನಾನಿರುವ ಪಟ್ಟಣದಲ್ಲಿಯೇ ಆನರ್ತ ದೇಶದಲ್ಲಿಯೇ ರಾಜನಾಗಿ ನೀನಿರಬೇಕು ಅಂತ ಅವನಿಗೆ ಒಪ್ಪಿಸುತ್ತಾನೆ. ಹೀಗೆ ಐದು ಜನರಿಗೆ ವಿಭಾಗ ಮಾಡಿಕೊಡುತ್ತಾನೆ ಅವರೆಲ್ಲರೂ ಕೂಡ ತಂದೆಯ ಆಜ್ಞೆಯಂತೆ ಬಹಳ ಅದ್ಭುತವಾದ ರೀತಿಯಲ್ಲಿ ತಮ್ಮ ರಾಜ್ಯದ ಸ್ಥಾಪನೆಯನ್ನು ಮಾಡುತ್ತಾರೆ.

ಆ ಮುಚುಕುಂದ ಮಾಹಿಷ್ಮತೀ ಅನ್ನುವ ಪಟ್ಟಣವನ್ನು ನಿರ್ಮಾಣ ಮಾಡುತ್ತಾನೆ. ಆ ಮಾಹಿಷ್ಮತೀ ಅಂತ ಯಾಕೆ ಆ ಪಟ್ಟಣಕ್ಕೆ ಹೆಸರು ಬಂತು ಅಂದರೆ **'ಮಹಾಶ್ಮಸಂಘಾತವತೀ'**[1] ಆದ್ದರಿಂದ ಮಾಹಿಷ್ಮತಿ ಅಂತ ಆಗುತ್ತದೆ ಅಷ್ಟು ಭಾರೀ ಕಲ್ಲುಗಳು, ಪರ್ವತಗಳು ಇವುಗಳಿಂದ ಕೂಡಿರತಕ್ಕಂತಹ ಪಟ್ಟಣ. ಅಂತಹ ಪಟ್ಟಣದಲ್ಲಿ ಉತ್ತಮವಾದಂತಹ ರಾಜಮಾರ್ಗಗಳು, ಅನೇಕ ಅಂಗಡಿಗಳು, ಪಟ್ಟಣದ ವ್ಯವಸ್ಥೆ ಹೇಗಿರಬೇಕು ಅನ್ನುವುದರ ಒಂದು ಕಲ್ಪನೆಯನ್ನು ಕೊಡುವ ರೀತಿಯಲ್ಲಿ ಶ್ರೇಷ್ಠವಾದಂತಹ ಮಾಹಿಷ್ಮತೀ ಎಂಬ ಪಟ್ಟಣವನ್ನು ನಿರ್ಮಾಣ ಮಾಡಿದ್ದಾನೆ. ಬರೀ ಅಂಗಡಿಗಳು, ದೊಡ್ಡ ದೊಡ್ಡ ರಾಜಮಾರ್ಗಗಳು ಸೇತುವೆಗಳನ್ನು ಮಾತ್ರ ಮಾಡಲಿಲ್ಲ **'ದೇವತಾಯತನಾನ್ಯಪಿ'**[2] ಅಲ್ಲಲ್ಲಲ್ಲಿ ದೇವಸ್ಥಾನಗಳನ್ನು ಮಾಡಿದ್ದಾನೆ, ನಿರಂತರವಾಗಿ ದೇವಸ್ಥಾನದಲ್ಲಿ ಪೂಜೆ ನಡೆಯುವ ವ್ಯವಸ್ಥೆಯನ್ನು ಮಾಡಿದ್ದಾನೆ, ಉತ್ಸವಗಳು ನಡೆಯುವ ವ್ಯವಸ್ಥೆಯನ್ನು ಮಾಡಿದ್ದಾನೆ ಈ ಮುಚುಕುಂದ ಎಂಬಂತಹ ರಾಜ.

ಇದೇ ರೀತಿ ಪದ್ಮವರ್ಣ ಅವನು ಈ ಸಹ್ಯ ಪರ್ವತದ ಸಮೀಪದಲ್ಲಿ ವೇಣಾ ನದಿತೀರದಲ್ಲಿ ಇವನು ತನ್ನ ರಾಜ್ಯವನ್ನು ಮಾಡಿದ್ದಾನೆ ಅಲ್ಲಿ ಪದ್ಮಾವತ ಎಂಬ ಒಂದು ಜನಪದ ಕರವೀರಪುರ ಅನ್ನುವಂತಹ ಒಂದು ಶ್ರೇಷ್ಠವಾದ

1. 38.19 ವಿಷ್ಣುಪರ್ವ; 2. 38.16 ವಿಷ್ಣುಪರ್ವ

ಪಟ್ಟಣ. ಇವತ್ತಿಗೂ ಕೊಲ್ಲಾಪುರ ಅಂತ ಪ್ರಸಿದ್ಧವಾದಂತಹ ಕರವೀರಪುರ ದಕ್ಷಿಣ ದೇಶದಲ್ಲಿ ಇರತಕ್ಕಂಥಹದ್ದು ಅದನ್ನು ಅವನು ನಿರ್ಮಾಣ ಮಾಡಿಕೊಂಡು ಇದ್ದು ಅಲ್ಲಿ ರಾಜ್ಯವನ್ನು ಆಳುತ್ತಾ ಇದ್ದಾನೆ. ಸಾರಸ ಅನ್ನುವವನು ಕ್ರೌಂಚಪುರವನ್ನು ಮಾಡಿಕೊಂಡು ಅಲ್ಲಿ ತನ್ನ ರಾಜ್ಯವನ್ನು ಮಾಡುತ್ತಾ ಇದ್ದಾನೆ. ಹರಿತ ಅವನೂ ಕೂಡ ಸಮುದ್ರದಲ್ಲಿ ದ್ವೀಪವನ್ನು ಮಾಡಿಕೊಂಡು ರಾಜ್ಯವನ್ನು ಆಳುತ್ತಾ ಇದ್ದಾನೆ ಅಲ್ಲಿ ನಾನಾ ವಿಧವಾಗಿ ಇರತಕ್ಕಂತಹ ಸಮೃದ್ಧವಾದ ಶಂಖಗಳು ದಕ್ಷಿಣಾವೃತ ಶಂಖ, ಬಲಮುರಿ ಶಂಖಗಳು, ಎಡಮುರಿ ಶಂಖಗಳು, ಎಲ್ಲಾ ತರಹದ ಶಂಖಗಳು, ಹವಳಗಳು, ಮುತ್ತುಗಳು ಇವುಗಳನ್ನೆಲ್ಲ ತಂದುಕೊಡುತ್ತಾರೆ ಅವನಿಗೆ. ಅವುಗಳೆಲ್ಲವನ್ನು ತರುವುದಕ್ಕೆ ಬೇರೆ ಬೇರೆ ತರಹದ ಜನರನ್ನ, ಸೇವಕರನ್ನ ವ್ಯವಸ್ಥೆ ಮಾಡಿದ ಯಾಕೆಂದರೆ ಸಮುದ್ರ ಮಧ್ಯದಲ್ಲಿ ಅವನ ರಾಜ್ಯ, ದ್ವೀಪದಲ್ಲಿ ರಾಜ್ಯ ಅಲ್ಲಿರುವ ಜನರ ಕೆಲಸ ಅಂದರೆ ಇದೇ ಕೆಲಸ ಮುತ್ತು ರತ್ನಗಳನ್ನು ತೆಗೆದುಕೊಂಡು ಬರುವುದು, ಹವಳಗಳನ್ನು, ಶಂಖಗಳನ್ನೆಲ್ಲ ತೆಗೆದುಕೊಂಡು ಬಂದು, ಶಂಖಗಳನ್ನು ಪೂಜೆಗೆ ಬೇಕು ಅಂದವರಿಗೆ ಪೂಜೆಗೆ ಕೊಡುವುದು, ಮುತ್ತು ರತ್ನ, ವಜ್ರ ಬೇಕು ಅಂದವರಿಗೆ ಅದನ್ನು ಕೊಡುವುದು ಈ ತರಹದ ಪ್ರಜೆಗಳನ್ನ ಸಾಕಿ ಬೆಳೆಸಿದ ಮಹಾನುಭಾವ ಆ ಹರಿತ ಎಂಬಂತಹ ರಾಜ ಎಂಬುದಾಗಿ ಹೇಳುತ್ತಾರೆ.

ಮುಂದೆ ಯದು ತಾನು ಮಾಧವನಿಗೆ ತನ್ನ ರಾಜ್ಯದಲ್ಲಿ ರಾಜ್ಯವನ್ನು ಆಳುವುದಕ್ಕೆ ಏನು ಜೇಷ್ಠ ಪುತ್ರನಾದ ಮಾಧವನಿಗೆ ಒಪ್ಪಿಸಿದ್ದ ಆ ಮಾಧವನಿಗೇನೆ ರಾಜ್ಯವನ್ನು ಬಿಟ್ಟು ತಾನು ದೇಹವನ್ನು ಬಿಟ್ಟು ಹೊರಟು ಹೋಗಿದ್ದಾನೆ ಅವನ ಮಗನೇ ಸತ್ವತ, ಅವನ ಮಗ ಭೀಮ. ಆ ಭೀಮ ರಾಜ್ಯವನ್ನು ಆಳುವಂತಹ ಕಾಲದಲ್ಲಿಯೇ ಲವಣಾಸುರನನ್ನು ಶತ್ರುಘ್ನ ಸಂಹಾರ ಮಾಡಿ ಮಥುರಾ ಪಟ್ಟಣವನ್ನು ನಿರ್ಮಾಣ ಮಾಡಿದ್ದು. ಮುಂದೆ ಈ ಕಡೆಗೆ ಶ್ರೀರಾಮಚಂದ್ರನ ಮಗನಾಗಿ ಸಾಕ್ಷಾತ್ ಇಂದ್ರ ದೇವರು ಕುಶನಾಗಿ ಅವತಾರ ಮಾಡುತ್ತಾರೆ ಆ ಕುಶ ರಾಜ್ಯವನ್ನು ಆಳುವಂತಹ ಸಂದರ್ಭ, ಲವ ಇವನು ಯುವರಾಜನಾಗಿ ಇರುತ್ತಾನೆ. ಹಿಂದೆ ಸಂಕ್ಷಿಪ್ತವಾಗಿ ಇಕ್ಷ್ವಾಕುವಂಶ ಹೇಳುವಾಗ ಕುಶನ ಹೆಸರನ್ನು ಮಾತ್ರ ಹೇಳಿದ್ದಾರೆ ಲವನ ಹೆಸರು ಹೇಳಿಲ್ಲ ಇಲ್ಲಿ ಮಾತ್ರ ಹೇಳುತ್ತಾರೆ. ಅಗ್ನಿಯ ಅವತಾರನಾದ ಲವ ಯುವರಾಜನಾಗಿ ಇರುತ್ತಾನೆ, ಕುಶ ಇವನು ರಾಜನಾಗಿ ಇರುತ್ತಾನೆ ಆಗ ಇಲ್ಲಿ ಅಂಧಕ ಅನ್ನುವಂತಹ ರಾಜ ಈ ಯದುವಂಶದಲ್ಲಿ ಬರುತ್ತಾನೆ. ಅಂಧಕನ ಮಗನೇ ರೈವತ, ಅವನ ಮಗ ಋಕ್ಷ, ಅವನ ಮಗ ವಿಶ್ವಗರ್ಭ, ಅವನಿಗೆ ಮೂರು ಜನ ಮಡದಿಯರು ಅಲ್ಲಿ ನಾಲ್ಕು ಜನ ಮಕ್ಕಳಾಗುತ್ತಾರೆ ವಸು, ಬರ್ಭ್ರು, ಸುಷೇಣ, ಸಭಾಕ್ಷ ಅಂತ. ಆ ವಸು ಅಂದರೆ ಅವನೇ ಶೂರ ಆ ಹಿಂದೆ ಯದುವಂಶದಲ್ಲಿ ಶೂರ ಅಂತ ಕೇಳಿದಿರೋ ಅವನೇ ಇಲ್ಲಿ ವಸು ಅನ್ನುವ ಹೆಸರಿನಲ್ಲಿ ಹುಟ್ಟುತ್ತಾನೆ ಆ ವಸುವಿನ ಮಗನೇ ವಸುದೇವ. ಪೃಥಾ ಅವಳನ್ನೇ ಕುಂತಿಭೋಜ ರಾಜನಿಗೆ ಕೊಟ್ಟಿದ್ದರಿಂದ ಕುಂತಿ ಎಂಬುದಾಗಿಯೂ ಕರೆಯುತ್ತಾರೆ ಹಾಗೂ ಪೃಥಶ್ರವಾ ಅವನನ್ನೇ ಚೇದಿ ರಾಜನಿಗೆ ಅರ್ಥಾತ್ ಶಿಶುಪಾಲನ ತಂದೆ ಅವನಿಗೆ ಕೊಟ್ಟು ಮದುವೆ ಮಾಡುತ್ತಾರೆ ಎಂಬುದಾಗಿ ಇಷ್ಟೆಲ್ಲ ಕಥೆಯನ್ನು ಹೇಳುತ್ತಾನೆ ವಿಕದ್ರು, ಇಂತಹ ವಂಶ ಇದೆ ಇದು ಯದುವಂಶ. ಈ ರೀತಿ ಸೂರ್ಯವಂಶ ಚಂದ್ರವಂಶಗಳು ಸೇರಿದಂತಹ ಒಂದು ವಿಶಿಷ್ಟವಾದಂತಹ ವಂಶ ಇದು ಯದುವಂಶ, ಇಂತಹ ಯದುವಂಶದಲ್ಲಿ ನೀನು ಅವತಾರ ಮಾಡಿದ್ದೀ, ನೀನು ಮನುಷ್ಯನು ಅಲ್ಲವೇ ಅಲ್ಲ ಸಾಕ್ಷಾತ್ ಭಗವಂತ.

ತ್ವದ್ ಬುದ್ಧಿವಶಗಾಃ ಸರ್ವೇ ವಯಂ ಯೋಧವ್ರತೇ ಸ್ಥಿತಾಃ ॥ (38.55 ವಿಷ್ಣುಪರ್ವ)

ನಿನ್ನ ಆಜ್ಞಾನುವರ್ತಿಗಳಾಗಿ ನಾವೆಲ್ಲಾ ಇದ್ದೇವೆ ಆದರೂ ಕೂಡ ಒಂದು ಶ್ರೇಷ್ಠವಾದ, ಸುರಕ್ಷಿತವಾದ ಸ್ಥಾನವನ್ನು ನಮಗೆ ಕಲ್ಪಿಸಿ ಕೊಟ್ಟು, ಯಾವುದೇ ರೀತಿಯ ಆಪತ್ತು ವಿಪತ್ತುಗಳು ಈ ಶತ್ರುಗಳಿಂದ ಬರದೇ ಇರುವ ಹಾಗೆ

ವ್ಯವಸ್ಥೆಯನ್ನು ಮಾಡಬೇಕು ಎಂಬುದಾಗಿ ಪ್ರಾರ್ಥನೆಯನ್ನು ಮಾಡಿದ್ದಾನೆ. ಪರಮಾತ್ಮ ಹೇಳಿದ ಮೊದಲು ಒಂದು ಕೆಲಸವನ್ನು ಮಾಡೋಣ ಯುದ್ಧವನ್ನು ನಾವು ಇದ್ದಲ್ಲಿಯೇ ಇದ್ದು ಆಡಿದರೆ ತಾನೇ ಈ ಪಟ್ಟಣಕ್ಕೆ ಅನಾಹುತ ಆಗುವ ಪ್ರಸಂಗ. ನೀವು ಇಲ್ಲಿಯೇ ಇರಿ ನಾನು ಹಾಗೂ ಬಲರಾಮ ನಾವಿಬ್ಬರೇ ಇಲ್ಲಿಂದ ಬೇರೆ ಕಡೆಗೆ ಹೋಗುತ್ತೇವೆ, ನಮ್ಮನ್ನು ಬೆನ್ನುಹತ್ತಿ ಅವರು ಓಡಿ ಬರುತ್ತಾರೆ ಎಲ್ಲಿಯೋ ಬೇರೆ ಕಡೆಗೆ ಯುದ್ಧ ಮಾಡೋಣ ಇಲ್ಲಿ ಯುದ್ಧ ಮಾಡುವುದೇ ಬೇಡ ಅಂತ ಪರಮಾತ್ಮ ಹೊರಟುಬಿಡುತ್ತಾನೆ. ಸ್ವಯಂ ಪರಮಾತ್ಮ ಹೇಳುತ್ತಾನೆ ಹಾಗಾದರೆ ನಾನು ಅಶಕ್ತ ಅಂತ ತಿಳಿದುಕೊಳ್ಳಬೇಡಿ.

ಜೀವಿತಾರ್ಥಂ ಗಮಿಷ್ಯಾಮಿ ಶಕ್ತಿಮಾನಪ್ಯಶಕ್ತವತ್ ॥ (39.9 ವಿಷ್ಣುಪರ್ವ)

ಇಲ್ಲಿರುವಂತಹ ಸಜ್ಜನರ ಜೀವನಕ್ಕೆ ಅನುಕೂಲವಾಗಲಿ ಅನ್ನುವುದಕ್ಕಾಗಿ ಅಶಕ್ತರಂತೆ ನಾನು ನಾಟಕ ಮಾಡುತ್ತೇನೆ ನಿಜವಾಗಿ ಅಶಕ್ತನಲ್ಲ, ಯಾವ ನಿರ್ಣಯವನ್ನು ಪದೇ ಪದೇ ಶ್ರೀಮದಾಚಾರ್ಯರು ಹೇಳುತ್ತಾರೋ ಸ್ಪಷ್ಟವಾಗಿ ಮಹಾಭಾರತದಲ್ಲಿ ವೇದವ್ಯಾಸ ದೇವರು ತಿಳಿಸುತ್ತಾ ಇದ್ದಾರೆ. **'ಶಕ್ತಿಮಾನಪ್ಯಶಕ್ತವತ್'** ಶಕ್ತಿ ಇದ್ದರೂ ಅಶಕ್ತರಂತೆ ದೇವರು ನಾಟಕ ಮಾಡುವುದಕ್ಕೋಸ್ಕರ ಹೊರಟಿದ್ದಾನೆ, ನಿಜವಾಗಿ ಅಶಕ್ತ ಅಂತೇ ತಿಳಿದು ಅಸುರರು ದುರ್ಗತಿ ಹೊಂದಲಿ ಅಂತ. ಸಹ್ಯಾಚಲದ ಸಮೀಪದಲ್ಲಿರುವ ಕರವೀಪುರಕ್ಕೆ ಬಂದಿದ್ದಾನೆ. ಅಲ್ಲಿಂದ ಮುಂದೆ ಗೋಮಂತ ಪರ್ವತಕ್ಕೆ ಹೋಗಬೇಕು ಅನ್ನುವಂತಹ ಅಪೇಕ್ಷೆಯನ್ನು ಪರಮಾತ್ಮ ಇಟ್ಟುಕೊಂಡು ಆ ಮಾರ್ಗದಲ್ಲಿ ಬಂದಿದ್ದಾನೆ. ಅಲ್ಲಿ ವೇಣಾ ನದಿತೀರ, ಒಂದು ಶ್ರೇಷ್ಠವಾದ ಆಶ್ರಮ, ಆಲದ ಮರ ಪರಶುರಾಮ ದೇವರು ಅಲ್ಲಿ ಕುಳಿತಿದ್ದಾರೆ ಪರಶು ಆಯುಧವನ್ನು ಹಿಡಿದುಕೊಂಡು ಕುಳಿತಿದ್ದಾರೆ. ಇಪ್ಪತ್ತೊಂದು ಬಾರಿ ಭೂಪ್ರದಕ್ಷಿಣವನ್ನು ಮಾಡಿ ಎಲ್ಲ ದುಷ್ಟ ಕ್ಷತ್ರಿಯರ ಸಂಹಾರವನ್ನು ಮಾಡಿದಂತಹ ಮಹಾ ಪರಾಕ್ರಮಿಗಳು ಆದರೆ ಅಗ್ನಿಹೋತ್ರಾದಿಗಳನ್ನು ಮಾಡುತ್ತಾ, ಒಬ್ಬ ಋಷಿಗಳು ಯಾವ ರೀತಿ ಇರಬೇಕೋ ಆ ರೀತಿಯ ಧರ್ಮವನ್ನು ಪರಿಪಾಲನೆ ಮಾಡುತ್ತಾ, ಭಗವಂತ ಶಾಂತ ಮೂರ್ತಿಯಾಗಿ ಯಜ್ಞ ಯಾಗಾದಿಗಳನ್ನು ಮಾಡುತ್ತಾ ಆಶ್ರಮದಲ್ಲಿ ಇದ್ದಾರೆ. ತ್ರಿಷವಣಾ ಸ್ನಾನ ಕೂದಲು ಒಣಗುತ್ತಾನೆ ಇರಲಿಲ್ಲಂತೆ, ಒಣಗುವುದರೊಳಗೆ ಮತ್ತೆ ಎರಡನೇಯ ಸ್ನಾನ, ಮತ್ತೆ ಒಣಗುವುದರೊಳಗೆ ಮೂರನೇಯ ಸ್ನಾನ ಜಟ **'ಕ್ಲಿನ್ನಂ ತ್ರಿಷವಣಾಮ್ಭೋಭಿ'**[1] ಮೂರು ಹೊತ್ತು ನಿರಂತರ ಸ್ನಾನ ಮಾಡಿದ್ದರಿಂದ ಯಾವಾಗಲೂ ಒದ್ದೆಯಾದಂತಹ ಜಟೆ ಅಂತಹ ಆ ಮಹಾನುಭಾವರ ದರ್ಶನವನ್ನು ಪಡೆದಿದ್ದಾರೆ. ಪರಶುರಾಮ ದೇವರು ಉತ್ತಮವಾದಂತಹ ಜ್ಞಾನವನ್ನು ಉಪದೇಶ ಮಾಡುವಂತಹ ಶ್ರೇಷ್ಠ ಋಷಿಗಳು ಎಲ್ಲ ಋಷಿಗಳಿಗೆ ಋಷಿಗಳಾಗಿ, ಎಲ್ಲ ಋಷಿಗಳಿಗೆ ಋಷಿತ್ವವನ್ನು ಕೊಡುವಂತಹ ಮಹಾನುಭಾವರು ಪರಶುರಾಮ ದೇವರು, ಅವರ ಅಧೀನರಾದ ಋಷಿಗಳು ಇನ್ನುಳಿದವರೆಲ್ಲ ಆ ಎಲ್ಲ ಋಷಿಗಳ ಸ್ಮರಣೆಯನ್ನು ವಿಶೇಷವಾಗಿ ಮಾಡಬೇಕು. ಆ ಋಷಿಗಳು ಕೊಟ್ಟಂತಹ ಅವರು ಉಳಿಸಿದಂತಹ ವೇದವಿದ್ಯೆಯೇ ನಮ್ಮ ತನಕ ಬಂದದ್ದು ಅಂತಹ ದಿವ್ಯವಾದ ಆ ಋಷಿಗಳಿಗೆ ಜ್ಞಾನವನ್ನು ನೀಡಿದ ಪರಶುರಾಮ ದೇವರನ್ನು ನಾವು ಇಲ್ಲಿ ಚಿಂತನ ಮಾಡಬೇಕು. ಆ ಪರಶುರಾಮ ದೇವರ ಸ್ತೋತ್ರವನ್ನು ಇಲ್ಲಿ ಮಾಡುತ್ತಾ ಇದ್ದಾರೆ ಎಂತಹ ಮಹಾಕಾರ್ಯವನ್ನು ಮಾಡಿದ್ದೀರಿ ಒಂದು ಬಾಣವನ್ನು ಪ್ರಯೋಗ ಮಾಡುವ ಮೂಲಕ ಸಮುದ್ರವನ್ನೇ ಹಿಂದೆ ಸರಿಸಿದಂತಹ ಮಹಾನುಭಾವರು, ಇಪ್ಪತ್ತೊಂದು ಸಲ ಭೂಪ್ರದಕ್ಷಿಣೆ ಮಾಡಿ ದುಷ್ಟರನ್ನು ನಾಶ ಮಾಡಿದ ಮಹಾನುಭಾವರು ಒಂದು ಬಾಣದಿಂದ ಶೂರ್ಪಾರಕ ಅನ್ನುವ ಕ್ಷೇತ್ರವನ್ನೇ ನಿರ್ಮಾಣ ಮಾಡಿದ್ದೀರಿ.

1. 39.23 ವಿಷ್ಣುಪರ್ವ

ಇಷುಪಾತೇನ ನಗರಂ ಕೃತಂ ಶೂರ್ಪಾರಕಂ ತ್ವಯಾ ॥ (39.29 ವಿಷ್ಣುಪರ್ವ)

ಐದುನೂರು ಧನುಸ್ಸುದಷ್ಟು ವಿಸ್ತಾರ, ಐದುನೂರು ಬಾಣದಷ್ಟು ಎತ್ತರ ಇರುವಂತಹ ಆ ಶೂರ್ಪಾರಕ ಕ್ಷೇತ್ರ ಸಹ್ಯ ಪರ್ವತದ ಸುತ್ತಮುತ್ತಲು ಆ ಪರಿಸರದೊಳಗೆ ಆ ಕೃಷ್ಣಾ ತೀರ ವೇಣಾ ತೀರ ಅಲ್ಲಿ ಆ ಕೃಷ್ಣವೇಣಿ ತೀರದಲ್ಲಿ ಶೂರ್ಪಾರಕ ಎಂಬಂತಹ ಕ್ಷೇತ್ರವನ್ನು ಮಾಡಿದಂತಹ ಮಹಾನುಭಾವರು ನೀವು ಪರಶುರಾಮ ದೇವರು ಅಂತ ಆ ಪರಶುರಾಮ ದೇವರ ವರ್ಣನೆಯನ್ನು ಮಾಡುತ್ತಾ ಇದ್ದಾರೆ. ಶೂರ್ಪಾಲಯ ಕ್ಷೇತ್ರ ನರಸಿಂಹ ದೇವರ ವಿಶೇಷವಾದ ಸನ್ನಿಧಾನ, ಅಶ್ವತ್ಥ ವೃಕ್ಷದ ಸನ್ನಿಧಾನ, ಕೃಷ್ಣವೇಣೀ ನದಿತೀರ, ಪರಶುರಾಮ ದೇವರು ಮಾಡಿದಂತಹ ಕ್ಷೇತ್ರ, ನರಸಿಂಹ ದೇವರ ಸನ್ನಿಧಾನ ಅಂತಹ ಮಹಾನುಭಾವರು ತಾವು ಅಂತ ಆ ಪರಶುರಾಮ ದೇವರನ್ನು ವರ್ಣನೆ ಮಾಡುತ್ತಾರೆ. ಕಾರ್ತವೀರ್ಯಾರ್ಜುನನನ್ನು ನಾಶ ಮಾಡಿದಂತಹ ಪರಶುವನ್ನು ಧಾರಣೆ ಮಾಡಿದ್ದೀರಿ ಅವನ ಸಾವಿರ ಬಾಹುಗಳನ್ನು ಕತ್ತರಿಸಿದ ಮಹಾನುಭಾವರು ನೀವು ಅಂತ ಇಷ್ಟೆಲ್ಲ ವರ್ಣನೆ ಮಾಡಿ ಕೊನೆಗೆ ಶ್ರೀಕೃಷ್ಣ ಪರಮಾತ್ಮ ಅನ್ನುತ್ತಾನೆ. ಈಗ ಜರಾಸಂಧ ನಮ್ಮ ಬೆನ್ನು ಹತ್ತಿದ್ದಾನೆ ನಾವು ಎಲ್ಲಿಯಾದರೂ ಹೋಗಿ ಅವನ ಜೊತೆಗೆ ಯುದ್ಧ ಮಾಡಬೇಕು, ಎಲ್ಲಿ ಹೋದರೆ ಒಳ್ಳೆಯದಾಗಬಹುದು ಅಂತ ನಿಮ್ಮ ಅಭಿಪ್ರಾಯ ಹೇಳಿ ಅಂತ ತನ್ನದೇ ಆದ ಇನ್ನೊಂದು ರೂಪಕ್ಕೆ ಶ್ರೀಕೃಷ್ಣ ಪರಮಾತ್ಮ ಕೇಳುತ್ತಾನೆ.

ಆವಯೋರ್ಮನ್ತ್ರಮಾತ್ರೇಣ ಕರ್ತುಮರ್ಹಸಿ ಸತ್ಕ್ರಿಯಾಮ್ ॥ (39.43 ವಿಷ್ಣುಪರ್ವ)

ನಮಗೆ ಸಹಾಯ ಬೇಡ ಯುದ್ಧಕ್ಕೆ, ನಮ್ಮ ಜೊತೆಗೆ ಬರುವುದು ಬೇಡ, ಸೈನ್ಯ ಕಳಿಸುವುದು ಬೇಡ ಎಲ್ಲಿ ಯುದ್ಧ ಮಾಡಿದರೆ ಹೇಗೆ ಮಾಡಿದರೆ ಅನುಕೂಲವಾದೀತು ಅನ್ನುವ ರೀತಿಯಲ್ಲಿ ನಿಮ್ಮ ಒಂದು ಸಲಹೆಯನ್ನು ಕೊಟ್ಟರೆ ಸಾಕು ಅದೇ ನೀವು ಮಾಡುವಂತಹ ಒಂದು ವಿಶಿಷ್ಟವಾದ ಸತ್ಕಾರ. ನಿಮ್ಮ ಆಶ್ರಮಕ್ಕೆ ಬಂದಿದ್ದೇವೆ ಅಂತ ನಮಗೆ ಇನ್ನೇನು ಆದರ, ಆತಿಥ್ಯ, ಉಪಚಾರಗಳೆಲ್ಲ ಬೇಡ ಇಷ್ಟನ್ನೇ ಹೇಳಿದರೆ ಸಾಕು ಅಂತ ಆಗ ಪರಶುರಾಮ ದೇವರು ನೀವು ಇಲ್ಲಿಂದ ಯಾವ ರೀತಿ ಹೋಗಬೇಕು ಅನ್ನುವುದನ್ನು ತಿಳಿಸಿಕೊಡುತ್ತಾರೆ. ವೇಣಾ ನದಿ, ಸಹ್ಯ ಪರ್ವತ, ಅದರ ಉಪಪರ್ವತ ಯಜ್ಞಗಿರಿ ಅಂತ ಇದೆ ಅಲ್ಲಿ ಹೋಗಿ ಅಲ್ಲಿ ಇದ್ದು ಅಲ್ಲಿಂದ ಖಟ್ವಾಂಗ ಅನ್ನುವ ನದಿ ಬರುತ್ತದೆ, ಅದನ್ನು ದಾಟಿ ಕ್ರೌಂಚಪುರಕ್ಕೆ ಹೋಗಬೇಕು ಅಲ್ಲಿಂದ ಮುಂದೆ ಅನಡುಹ ತೀರ್ಥ ಅಂತ ಬರುತ್ತೆ ಅದನ್ನೂ ದಾಟಿ ಹೋದರೆ ನೀವು ಗೋಮಂತ ಪರ್ವತಕ್ಕೆ ಹೋಗತ್ತೀರಿ ಅಲ್ಲಿ ಅವನು ಯುದ್ಧಕ್ಕೆ ಬರುತ್ತಾನೆ ಬರಲಿ ಅಂತ ಎಲ್ಲ ಮುಂದಿನ ಕಥೆಯನ್ನು ಹೇಳುತ್ತಾರೆ. ಅಲ್ಲಿ ನಿಮ್ಮ ಆಯುಧಗಳೆಲ್ಲ ಬರುತ್ತವೆ ಹಿಂದೆ ಬಂದ ಆಯುಧಗಳು ಮತ್ತೆ ಅದೃಶ್ಯವಾಗಿ ಹೋಗಿರುತ್ತವೆ ಪುನಃ ಆಯುಧಗಳು ಬರುತ್ತವೆ ಆ ಆಯುಧಗಳನ್ನು ತೆಗೆದುಕೊಂಡು ನೀವು ಅವನ ಜೊತೆಗೆ ಯುದ್ಧವನ್ನು ಮಾಡಿ ಅವಶ್ಯವಾಗಿ ನೀವು ಗೆಲ್ಲುತ್ತೀರಾ. ಇಷ್ಟೇಕೆ ಮುಂದೆ ಮಹಾಭಾರತದ ಯುದ್ಧದಲ್ಲಿಯೂ ಕೂಡ ಪಾಂಡವರಿಗೆ ನೀವು ವಿಜಯವನ್ನು ಕೊಡುತ್ತೀರಿ ಆ ಒಂದು ವಿಶಿಷ್ಟವಾದಂತಹ ಸಾಮರ್ಥ್ಯ ನಿಮ್ಮಲ್ಲಿ ಉಂಟು ಎಂಬುದಾಗಿ ಪರಶುರಾಮ ದೇವರು ಶ್ರೀಕೃಷ್ಣ ಪರಮಾತ್ಮನಿಗೆ ಹಾಗೂ ಬಲರಾಮ ದೇವರಿಗೆ ಹೇಳುತ್ತಾ ಇದ್ದಾರೆ.

ತತ್ರ ಚಕ್ರಂ ಹಲಂ ಚೈವ ಗದಾಂ ಕೌಮೋದಕೀಂ ತಥಾ ।
ಸೌನನ್ದಂ ಮುಸಲಂ ಚೈವ ವೈಷ್ಣವಾನ್ಯಾಯುಧಾನಿ ಚ ॥ (39.73 ವಿಷ್ಣುಪರ್ವ)

ಈ ಎಲ್ಲ ಆಯುಧಗಳು ನಿಮಗೆ ಅಲ್ಲಿ ಬರುತ್ತವೆ.

ಏಷ ತೇ ಪ್ರಥಮಃ ಕೃಷ್ಣ ಸಂಗ್ರಾಮೋ ಭುವಿ ಪಾರ್ಥಿವೈಃ । (39.79 ವಿಷ್ಣುಪರ್ವ)

ಇದು ಮೊಟ್ಟ ಮೊದಲ ಬಾರಿ ನೀವು ಮಾಡುವಂತಹ ಯುದ್ಧ, ಭೂಭಾರಹರಣ ಮಾಡುವಂತಹ ದೊಡ್ಡ ಕಾರ್ಯ.

ಭವಿಷ್ಯತಿ ಮಹಾನ್ ಕೃಷ್ಣ ಭಾರತಂ ನಾಮ ವೈಶಸಮ್ ॥ (39.81 ವಿಷ್ಣುಪರ್ವ)

ಈ ಯುದ್ಧದ ನಂತರ ಮುಂದೆ ಮಹಾಭಾರತ ಯುದ್ಧ ಬೇರೆ ಆಗುತ್ತದೆ ಆ ಸಂದರ್ಭದಲ್ಲಿಯೂ ಕೂಡ ನೀವು ಉತ್ತಮವಾದಂತಹ ಯಶಸ್ಸನ್ನು ಪಡಿತೀರಿ, ವಿಜಯವನ್ನು ಪಡಿತೀರಿ ಅಂತ ಶ್ರೀಕೃಷ್ಣ ಪರಮಾತ್ಮನಿಗೆ ಪರಶುರಾಮ ದೇವರು ಹೇಳಿದರು. ಪರಶುರಾಮ ದೇವರು ಅಂದರೆ ವಾಕ್, ನಮ್ಮ ವಾಗೀಂದ್ರಿಯಕ್ಕೆ ಅಭಿಮಾನಿ ದೇವತೆ ಅಗ್ನಿ, ಅಗ್ನಿಯಲ್ಲಿ ಅಂತರ್ಯಾಮಿಯಾಗಿದ್ದವರು ಪರಶುರಾಮ ದೇವರು ಆ ಪರಶುರಾಮ ದೇವರೇ ನುಡಿಸುವವರು ನಮ್ಮೆಲ್ಲರಿಂದ. ದೇವರ ವಾಗೀಂದ್ರಿಯವೂ ಪರಶುರಾಮ ಸ್ವರೂಪವಾದದ್ದೇ, ದೇವರ ಕಣ್ಣಿನಲ್ಲಿ ಕಪಿಲ, ವಾಕಿನಲ್ಲಿ ಪರಶುರಾಮ, ಘ್ರಾಣದಲ್ಲಿ ನರಸಿಂಹ ದೇವರು ಅಂತ ಐತರೇಯ ಭಾಷ್ಯದಲ್ಲಿ ಶ್ರೀಮದಾಚಾರ್ಯರು ತಿಳಿಸುತ್ತಾರೆ. ಹಾಗಾದರೆ ಆ ರೀತಿಯ ಪರಶುರಾಮ ದೇವರು ಹೀಗೆ ನುಡಿದಿದ್ದಾರೆ ಅಂದರೆ ಯಾರೋ ನುಡಿದಿದ್ದಲ್ಲ ದೇವರ ನಾಲಿಗೆಯೇ ಶ್ರೀಕೃಷ್ಣ ಪರಮಾತ್ಮನ ನಾಲಿಗೆಯೇ ಶ್ರೀಕೃಷ್ಣ ಪರಮಾತ್ಮನ ಅಭಿಪ್ರಾಯವನ್ನು ಹೊರಗೆ ಹಾಕಿದೆ ಅಂತ ಅರ್ಥ. ಮನಸ್ಸಿನಲ್ಲಿ ಬಂದ ಅಭಿಪ್ರಾಯವನ್ನು ನಾಲಿಗೆಯಿಂದ ವಾಗೀಂದ್ರಿಯದಿಂದ ನಾವು ಇನ್ನೊಬ್ಬರಿಗೆ ತಿಳಿಸುತ್ತೇವಲ್ಲ ಹಾಗೆ ಶ್ರೀಕೃಷ್ಣ ಪರಮಾತ್ಮ ತನ್ನ ಅಭಿಪ್ರಾಯವನ್ನು ತನ್ನ ವಾಗೀಂದ್ರಿಯದಿಂದ ಹೇಳಿದ, ಅವನ ವಾಗೀಂದ್ರಿಯದಲ್ಲಿ ಇದ್ದವರು ಅಂದರೆ ಯಾರು ಪರಮಾತ್ಮನದೇ ಆದ ಒಂದು ರೂಪ ಪರಶುರಾಮ ರೂಪ, ಆ ಪರಶುರಾಮ ರೂಪದಿಂದ ಇದನ್ನು ಹೇಳಿದರು ಕೃಷ್ಣನಿಗೆ ಗೊತ್ತಿರಲಿಲ್ಲ ಅಂತ ತಿಳಿಯುವುದಲ್ಲ. ತನಗೆ ಗೊತ್ತಿದ್ದದ್ದನ್ನೇ ತನ್ನ ನಾಲಿಗೆಯಿಂದ ಒಬ್ಬ ವ್ಯಕ್ತಿ ನುಡಿಯುವಂತೆ ಕೃಷ್ಣ ತನ್ನ ನಾಲಿಗೆಯ ರೂಪದಲ್ಲಿರುವ ಪರಶುರಾಮ ದೇವರಿಂದ ಅದನ್ನು ನುಡಿಸುವ ಮೂಲಕ ತನ್ನ ಅಭಿಪ್ರಾಯವನ್ನೇ ವ್ಯಕ್ತ ಮಾಡಿದ್ದಾನೆ ಎಂಬುದಾಗಿ ನಾವಿಲ್ಲಿ ಚಿಂತನ ಮಾಡಬೇಕು.

ಇದಂ ಚೈವಾಮೃತಪ್ರಖ್ಯಂ ಹೋಮಧೇನೋಃ ಪಯೋऽಮೃತಮ್ ।
ಪೀತ್ವಾ ಗಚ್ಛತ ಭದ್ರಂ ವೋ ಮಯಾऽದಿಷ್ಟೇನ ವರ್ತ್ಮನಾ ॥ (39.83 ವಿಷ್ಣುಪರ್ವ)

ನಾನು ಹೇಳಿದ ದಾರಿಯಲ್ಲಿಯೇ ಹೋಗಿ ನಿಮಗೆಲ್ಲ ಶ್ರೇಯಸ್ಸು ಆಗುತ್ತದೆ, ಉಪವಾಸ ಹೋಗಬೇಡಿ, ಹಾಲು ಕುಡಿದು ಹೋಗಿ ಶ್ರೇಷ್ಠವಾದಂತಹ ಕಾಮಧೇನು ಇದೆ ಹೋಮಧೇನು ಅದರ ಪವಿತ್ರವಾದ ಅಮೃತ ಸದೃಶವಾದಂತಹ ಹಾಲನ್ನು ಕುಡಿದು, ನೀವು ಜರಾಸಂಧನನ್ನು ಗೆದ್ದು ಎಲ್ಲ ಯಾದವರಿಗೆ ಸಂತೋಷ ಪಡಿಸಿ ಎಂಬುದಾಗಿ ಪರಶುರಾಮ ದೇವರು ಶ್ರೀಕೃಷ್ಣ ಪರಮಾತ್ಮ ಹಾಗೂ ಬಲರಾಮ ದೇವರಿಗೆ ತಿಳಿಸುತ್ತಾ ಇದ್ದಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ವಿಷ್ಣುಪರ್ವ-20

* * *

ವೈಶಂಪಾಯನ ಉವಾಚ

ತತ್ತು ಧೇನ್ವಾಃ ಪಯಃ ಪೀತ್ವಾ ಬಲದರ್ಪಸಮನ್ವಿತೌ ।
ತತಸ್ತೌ ರಾಮಸಹಿತೌ ಪ್ರಸ್ಥಿತೌ ಯದುಪುಙ್ಗವೌ ।। (40.1 ವಿಷ್ಣುಪರ್ವ)

ಶ್ರೀಕೃಷ್ಣ ಪರಮಾತ್ಮ ಹಾಗೂ ಬಲರಾಮ ದೇವರು ಇಬ್ಬರೂ ಕೂಡ ಪರಶುರಾಮ ದೇವರ ಭೇಟಿಯಾಗಿ ಅವರು ತೋರಿದ ಮಾರ್ಗದಲ್ಲಿ ಗೋಮಂತ ಪರ್ವತಕ್ಕೆ ಅವರ ಜೊತೆಗೇನೆ ಹೊರಟಿದ್ದಾರೆ. ಶ್ರೀಕೃಷ್ಣ, ಬಲರಾಮ, ಪರಶುರಾಮ ದೇವರು ಮೂವರು ಸಮರ್ಥರು ತಾವಿದ್ದ ಸ್ಥಳದಿಂದಲೇ ಇದಕ್ಕಿದ್ದಂತೆ ಗೋಮಂತ ಪರ್ವತದಲ್ಲಿ ಅಭಿವ್ಯಕ್ತರಾಗುವುದಕ್ಕೆ ಸಮರ್ಥರು ಆದರೆ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಇದಕ್ಕಿದ್ದಂತೆ ಗೋಮಂತ ಪರ್ವತದಲ್ಲಿ ಪ್ರಕಟವಾಗಲಿಲ್ಲ.

ತೇ ಚಾಧ್ವವಿಧಿನಾ ಸರ್ವೇ ತತೋ ವೈ ದಿವಸಕ್ರಮಾತ್ । (40.4 ವಿಷ್ಣುಪರ್ವ)

ಸಾಮಾನ್ಯ ಮಾನವರು ಯಾವ ರೀತಿ ಒಂದು ದಾರಿಯನ್ನು ಹಿಡಿದುಕೊಂಡು ದಿನ ದಿನಕ್ಕೆ ಇಷ್ಟಿಷ್ಟು ದಾರಿ ಅಂತ ಕ್ರಮಣವನ್ನು ಮಾಡುತ್ತ ಗುರಿಯನ್ನು ಮುಟ್ಟಬೇಕೋ ಆ ಕ್ರಮದಲ್ಲಿ ರಾಮ, ಕೃಷ್ಣರು ಹಾಗೂ ಪರಶುರಾಮ ದೇವರು ಮೂರು ಅಗ್ನಿಗಳಂತೆ ಪ್ರಾಜ್ವಲ್ಯಮಾನರಾಗಿ ಗೋಮಂತ ಪರ್ವತದ ದಿಕ್ಕಿನತ್ತ ಹೊರಟಿದ್ದಾರೆ, ಗೋಮಂತ ಪರ್ವತಕ್ಕೆ ಬಂದಿದ್ದಾರೆ. ಅದ್ಭುತವಾದಂತಹ ಪರ್ವತ ಬೇಕಾದಷ್ಟು ಗಗನಚುಂಬಿ ಆದಂತಹ ವೃಕ್ಷಗಳು, ಭಾರೀ ಭಾರೀ ಅದ್ಭುತವಾದಂತಹ ಜಲಚರ ಪ್ರಾಣಿಗಳಿಂದ, ಕಮಲಗಳಿಂದ ಯುಕ್ತವಾದಂತಹ ಸರೋವರಗಳು, ಹೂವಿನ ಗಿಡಗಳು, ಹಣ್ಣಿನ ಗಿಡಗಳು, ವನ್ಯ ಪ್ರಾಣಿಗಳು ಹುಲಿ, ಸಿಂಹ, ಆನೆ ಮೊದಲಾದ ಪ್ರಾಣಿಗಳು, ಯಕ್ಷರು, ಕಿನ್ನರರು, ವಿದ್ಯಾಧರರು, ಸಿದ್ಧರು, ಸಾಧ್ಯರು, ರಾಜರು, ಗಂಧರ್ವರು ಎಲ್ಲರೂ ಬಂದು ಸಪತ್ನೀಕರಾಗಿ ವಿಹಾರವನ್ನು ಮಾಡುವಂತಹ ಸ್ಥಳ, ದಾನ ಮಾಡುವಂತಹ ಸ್ಥಳ, ಧ್ಯಾನ ಮಾಡುವಂತಹ ಸ್ಥಳ ಅಂತಹ ಅದ್ಭುತವಾದ ಪರ್ವತ ಅದು, ಸಾಮಾನ್ಯ ಅಲ್ಲ ಗೋಮಂತ ಪರ್ವತ.

ಶಕ್ರವಜ್ರಪ್ರಹಾರಾಣಾಮನಭಿಜ್ಞಂ ಕದಾಚನ ।

ದಾವಾಗ್ನಿಭಯನಿರ್ಮುಕ್ತಂ ಮಹಾವಾತಭಯೋಜ್ಝಿತಮ್ ॥ (40.21 ವಿಷ್ಣುಪರ್ವ)

ಎಂದಿಗೂ ಅಲ್ಲಿ ಕಾಡ್ಗಿಚ್ಚು ಬಂದು ವನ ಸುಟ್ಟಿದ್ದಿಲ್ಲ, ಸಿಡಿಲು ಬಿದ್ದದ್ದಿಲ್ಲ, ಬಿರುಗಾಳಿಯಿಂದ ಅನಾಹುತ ಆದದ್ದಿಲ್ಲ ಅಂತಹ ಅತ್ಯಂತ ಸಮೃದ್ಧವಾದ ರೀತಿಯಲ್ಲಿ ಬೆಳೆದು ನಿಂತದ್ದು, ಅರಳಿ ನಿಂತದ್ದು, ತುಂಬಿ ನಿಂತದ್ದು ಆ ಗೋಮಂತ ಪರ್ವತ. ಆ ಭಗವಂತನ ಅನುಗ್ರಹದಿಂದಲೇ ವನಸ್ಪತಿಗಳೆಲ್ಲ ಬೆಳೆಯುವುದು, ವೃಕ್ಷಗಳೆಲ್ಲ ಬೆಳೆಯುವುದು.

ಅತಃ ಸಮುದ್ರಾ ಗಿರಯಶ್ಚ ಸರ್ವೇಽಸ್ಮಾತ್ಸ್ಯಂದಂತೇ ಸಿಂಧವಃ ಸರ್ವರೂಪಾಃ ।

ಅತಶ್ಚ ಸರ್ವಾ ಓಷಧಯೋ ರಸಶ್ಚಯೇನೈಷ ಭೂತೈಸ್ತಿಷ್ಠತೇ ಹ್ಯಂತರಾತ್ಮಾ ॥

(9 ಮುಂಡಕೋಪನಿಷದಿ ದ್ವಿತೀಯಮುಂಡಕೇ ಪ್ರಥಮಃ ಖಂಡಃ)

ಅಂತರಾತ್ಮನಾದ ಆ ಸರ್ವೋತ್ತಮನಾದ ಶ್ರೀಹರಿ ಅವನ ಪ್ರೇರಣೆಯಂತೇನೆ ಸಮುದ್ರಗಳು, ಪರ್ವತಗಳು, ನದಿಗಳು ಹಾಗೂ ಎಲ್ಲಾ ವೃಕ್ಷಗಳು ಜಗತ್ತಿನಲ್ಲಿ ಸೃಷ್ಟಿಯನ್ನು ಪಡೆಯುತ್ತವೆ, ಸ್ಥಿತಿಯನ್ನು ಹೊಂದುತ್ತವೆ, ಸಮೃದ್ಧವಾಗಿ ಬೆಳೆದು ನಿಲ್ಲುತ್ತವೆ ಅಂತಹ ಆ ಪರ್ವಾತಾದಿಗಳ ಸೃಷ್ಟಿಕರ್ತುವಾದಂತಹ ಪರಮಾತ್ಮ ಎರಡು ರೂಪಗಳಿಂದ ಬರುತ್ತಾ ಇದ್ದಾನೆ ಪರುಶರಾಮ, ಕೃಷ್ಣ. ಬಲರಾಮರಲ್ಲಿ ಶುಕ್ಲಕೇಶದ ಆವೇಶ ಹಾಗೆ ನೋಡಿದರೆ ಮೂರು ರೂಪಗಳಿಂದ ಎರಡು ಪ್ರತ್ಯಕ್ಷ ಒಂದು ಆವೇಶ ಅಂತಹ ಮೂರು ರೂಪಗಳಿಂದ ಪರಮಾತ್ಮ ಅಲ್ಲಿ ಬರುತ್ತಾ ಇದ್ದಾನೆ ತಾನೇ ಮಾಡಿದ ಸೃಷ್ಟಿಯನ್ನು ನೋಡುವುದಕ್ಕೆ. ಮೂವರೂ ಪರ್ವತವನ್ನು ಹತ್ತಿದ್ದಾರೆ ಅತ್ಯಂತ ವೇಗದಿಂದ ಪರ್ವತವನ್ನು ಹತ್ತಿದ್ದಾರೆ ಯಾವುದೇ ಆಯಾಸವಿಲ್ಲದಂತೆ ಏನಾಗಬೇಕು ಆಯಾಸ ಅಖಿಲಾಂಡಕೋಟಿ ಬ್ರಹ್ಮಾಂಡ ನಾಯಕನಾದ ಭಗವಂತನಿಗೆ. ಆ ಪರ್ವತದ ಉತ್ತುಂಗ ಶಿಖರವನ್ನು ಮುಟ್ಟಿದ ಮೇಲೆ ಬಲರಾಮ, ಕೃಷ್ಣರಿಗೆ ಪರಶುರಾಮ ದೇವರು ಹೇಳುತ್ತಾರೆ ಗೋಮಂತ ಪರ್ವತ ಎಲ್ಲಿ ಅಂತ ಕೇಳಿದಿರಲ್ಲ ಈ ದಾರಿಯಲ್ಲಿ ಹೋಗಿ ಅಂತ ಹೇಳುವುದಲ್ಲದೇ ಜೊತೆಗೆ ಆ ದಾರಿಯಲ್ಲಿ ತಾವು ಬಂದು ಮುಟ್ಟಿಸಿ ಇನ್ನು ನಾವು ಹೋಗಿ ಬರುತ್ತೇವೆ ನಿಮ್ಮ ಕಾರ್ಯವನ್ನು ನೀವು ಮಾಡಿಕೊಳ್ಳಿ ಅಂತ ಹೇಳಿ ಪರಶುರಾಮ ದೇವರು ಹೊರುಡುತ್ತಾ ಇದ್ದಾರೆ. ಕೃಷ್ಣನೂ ಸಜ್ಜನ, ಪರುಶರಾಮ ದೇವರು ಸಜ್ಜನರು ಇಲ್ಲಿ ಇಬ್ಬರೂ ಸಮಾನರು ಆದರೆ ಉತ್ತಮರಾದ ಜ್ಞಾನಿಗಳು ಸಜ್ಜನರು ಬಂದಾಗ ಅಂಥವರಿಗೆ ಯಾವ ರೀತಿ ಆದರ ಉಪಚಾರಗಳನ್ನು ಮಾಡಬೇಕು ಅಂತ ಪರುಶರಾಮ ದೇವರು ಜಗತ್ತಿಗೆ ನೀತಿಯನ್ನು ತಿಳಿಸಿಕೊಡುತ್ತಾ ಇದ್ದಾರೆ ನೋಡಿ. ಶ್ರೀಕೃಷ್ಣನಂತಹ ಸರ್ವೋತ್ತಮನಾದ ವ್ಯಕ್ತಿ ಬಂದು ಪರಶುರಾಮ ದೇವರಿಗೆ ಕೇಳುತ್ತಾ ಇದ್ದಾನೆ ಗೋಮಂತ ಪರ್ವತ ಎಲ್ಲಿ, ಗೋಮಂತ ಪರ್ವತಕ್ಕೆ ಹೇಗೆ ಹೋಗಬೇಕು, ದಾರಿ ಯಾವುದು ಅಂತ. ಅಲ್ಲಿ ಎಲ್ಲಿಯೋ ಇದೆ ನೋಡಿ ಹುಡುಕಿಕೊಂಡು ಹೋಗಿ ಹೀಗೆ ಹೋಗಿ, ಹಾಗೆ ಹೋಗಿ ಅಂತ ಹೇಳುವುದಲ್ಲ, ಸ್ವತಃ ತಾವೇ ಬಂದು ಅಲ್ಲಿಯವರೆಗೆ ಮುಟ್ಟಿಸಿ ಹೋಗುವ ಮೂಲಕ ದೊಡ್ಡವರು ದಾರಿ ಕೇಳಿದಾಗ ಆ ರೀತಿ ಚಿಕ್ಕವರು ಅವರನ್ನು ಚೆನ್ನಾಗಿ ಗೌರವದಿಂದ ಕರೆದುಕೊಂಡು ಹೋಗಬೇಕು ಅನ್ನುವ ಒಂದು ನೀತಿಯನ್ನು ತಿಳಿಸಿಕೊಡುತ್ತಾ ಇದ್ದಾರೆ. ಆ ರೀತಿ ಪರುಶರಾಮ ದೇವರು ಅವರನ್ನು ಅಲ್ಲಿಯವರೆಗೆ ಮುಟ್ಟಿಸಿದ್ದಾರೆ.

ಒಂದು ಆಧ್ಯಾತ್ಮಿಕ ವಿಚಾರವನ್ನು ಎಲ್ಲರೂ ತಿಳಿಯಿರಿ. ನೀವೆಲ್ಲ ಊರಿಗೆ ಹೋಗುವಾಗ ವಾಹನದಲ್ಲಿ ಕುಳಿತು ದಾರಿಯನ್ನು ವಿಚಾರಸುತ್ತಿರಲ್ಲ ವಿಚಾರಸುತ್ತಿರೋ ಇಲ್ಲವೋ ನಿಮಗೆ ಹೇಳುತ್ತಾರಲ್ಲ ಇಲ್ಲಿಂದ ಸ್ವಲ್ಪ ಮುಂದೆ ಹೋಗಿ ಎಡಕ್ಕೆ ಹೋಗಿ, ಅಲ್ಲಿಂದ ಬಲಕ್ಕೆ ತಿರುಗಿಕೊಳ್ಳಿ, ಮುಂದೆ ನೇರವಾಗಿ ಹೋಗಿ, ಅಲ್ಲಿ ಒಂದು ಸರೋವರ ಅಥವಾ

ಒಂದು ಪರ್ವತ ಹೀಗೆ ಎಲ್ಲ ದಾರಿ ಹೇಳುತ್ತಾರಲ್ಲ ಯಾರು ಹೇಳುತ್ತಾರೆ ದಾರಿಯಲ್ಲಿ ಇದ್ದವರು ಯಾರು ಅಂತ ಹಾಗೆ ಅಂದುಕೊಳ್ಳಬೇಡಿ ನಿಮಗೆ ಎಲ್ಲ ಹೊತ್ತಿಗೂ ದಾರಿ ಹೇಳುವವರು ಪರುಶರಾಮ ದೇವರೇ. ಆ ಅನುಸಂಧಾನವನ್ನು ಮಾಡಿ ಯಾಕೆ ಅಂದರೆ ವಾಕ್ ವಾಗೇಂದ್ರಿಯಕ್ಕೆ ಮಾತಿನಿಂದ ತಾನೇ ಅವರು ಹೇಳುವುದು ಆ ವಾಗೇಂದ್ರಿಯಕ್ಕೆ ಅಭಿಮಾನಿ ಅಗ್ನಿ, ಅಗ್ನಿಯಲ್ಲಿ ಅಂತರ್ಯಾಮಿ ಯಾರು ಹರಿಣಿ ಪತಿ ಪರಶುರಾಮ. ಹಾಗಾದರೆ ಎಂದೇ ಎಲ್ಲಿಯೇ ಯಾರೇ ನಿಮಗೆ ದಾರಿಯನ್ನು ಹೇಳಲಿ, ಹೇಳುವ ಅವರ ವಾಗೇಂದ್ರಿಯದಲ್ಲಿ ಪ್ರೇರಕನಾದ ಅಗ್ನಿಯಲ್ಲಿ ಅಂತರ್ಯಾಮಿಯಾಗಿ ಹರಿಣಿ ಪತಿ ಪರಶುರಾಮ ದೇವರೇ ನಿಮಗೆ ದಾರಿಯನ್ನು ಹೇಳಿದಂತೆ. ಅಬ್ಬಾ ಅಂತೂ ಎಲ್ಲಿಯೋ ತಪ್ಪಿಸಿಕೊಂಡಿದ್ದಿವಿ, ಯಾರೋ ಹಾದಿ ಹೇಳಿ ಪುಣ್ಯ ಕಟ್ಟಿಕೊಂಡರು ಅಂತ ಸತ್ಯ ಆ ವ್ಯಕ್ತಿ ಪುಣ್ಯ ಕಟ್ಟಿಕೊಂಡ ಹಾದಿ ಹೇಳಿ. ಹಾದಿ ಹೇಳುವ ವ್ಯಕ್ತಿಯ ನುಡಿಯಲ್ಲಿ ಪರಶುರಾಮ ದೇವರಿದ್ದು ನುಡಿಸಿ ನಮಗೆ ಹಾದಿ ತಿಳಿಸಿದರು ಅಂತ ನೀವು ಅರ್ಥ ಮಾಡಿಕೊಂಡರೆ ಪುಣ್ಯ ನೀವು ಕಟ್ಟಿಕೊಳ್ಳುತ್ತೀರಿ ಅವನಲ್ಲ ನೀವು. ಹೇಳಿದ್ದಕ್ಕೆ ಅವನು ಪುಣ್ಯ ಕಟ್ಟಿಕೊಂಡರೆ ಪರುಶರಾಮ ದೇವರು ಹೇಳಿಸಿದರೂ ಅಂತನ್ನುವ ಚಿಂತನೆ ಬಂದಾಗ ಪುಣ್ಯವನ್ನು ನೀವು ಕಟ್ಟಿಕೊಳ್ಳುತ್ತೀರಾ ಕೇಳಿದವರು. ಈ ಅನುಸಂಧಾನ ಇರಬೇಕು ಅಂತ ಹರಿವಂಶ ವಿಷ್ಣುಪರ್ವ ನಮಗೆ ತಿಳಿಸಿಕೊಡುತ್ತಾ ಇದೆ.

ಮುಂದೆ ಬಂದಿದ್ದಾರೆ. ಪರುಶರಾಮ ದೇವರು ಅಂದರು ನನ್ನ ಕೆಲಸ ಆಯಿತು ಇನ್ನು ನಾವು ಶೂರ್ಪಾಲಯಕ್ಕೆ ಹೋಗುತ್ತೇವೆ ಅಂತ. ಸಖ್ಯ ಪರ್ವತದ ಆಸುಪಾಸಿನಲ್ಲಿ ಕೃಷ್ಣವೇಣಿ ನದೀತೀರದಲ್ಲಿ ಇರುವಂತಹ ಶೂರ್ಪಾಲಯ ಕ್ಷೇತ್ರಕ್ಕೆ ನಾವು ಹೋಗಬೇಕು ಅಂತ ಸಂಕಲ್ಪ ಮಾಡಿದ್ದೇವೆ ಅಲ್ಲಿ ಹೋಗುತ್ತೇವೆ. ನಾವೇ ಮಾಡಿದ್ದು ಆ ಕ್ಷೇತ್ರವನ್ನು.

ಕೃಷ್ಣ ಯಾಸ್ಯಾಮ್ಯಹಂ ತಾತ ಪುರಂ ಶೂರ್ಪಾರಕಂ ವಿಭೋ । (40.32 ವಿಷ್ಣುಪರ್ವ)

ನೀವೇನೂ ಚಿಂತೆ ಮಾಡಬೇಡಿ ಜರಾಸಂಧ ಯುದ್ಧಕ್ಕೆ ಹಿಂದೆ ಬೆನ್ನಟ್ಟಿಕೊಂಡು ಬರುತ್ತಾ ಇದ್ದಾನೆ ಅಂತ. ನೀವು ಗೋಮಂತ ಪರ್ವತಕ್ಕೆ ಬಂದಿದ್ದೀರಲ್ಲ ಅವನು ಬರುತ್ತಾನೆ ಇಲ್ಲಿ ಆದರೂ ಯುದ್ಧದಲ್ಲಿ ನಿಮಗೇ ಜಯವಾಗುವುದು ನಿಶ್ಚಿತ.

ಯುವಯೋರ್ನಾಸ್ತಿ ವೈಮುಖ್ಯಂ ಸಂಗ್ರಾಮೇ ದೈವತೈರಪಿ ॥ (40.32 ವಿಷ್ಣುಪರ್ವ)

ದೇವತೆಗಳು ಬಂದು ಯುದ್ಧ ಮಾಡಿದರೂ ನಿಮ್ಮನ್ನು ಸೋಲಿಸುವುದಕ್ಕೆ ಸಾಧ್ಯ ಇಲ್ಲ.

ಅಭೀ ಇದಮೇಕಮೇಕೋ ಅಸ್ಮಿ ನಿಷ್ಪಾಳಭೀ ದ್ಭಾಕಿಮುತ್ರ ಯಃ ಕರಂತಿ ।
ಖಿಲೇನ ಪರ್ಷಾನ್ ಪ್ರತಿಹನ್ಮಿ ಭೂರಿ ಕಿಂ ಮಾ ನಿಂದಂತಿ ಶತ್ರವೋ ನಿಂದ್ರಾಃ ॥

ಒಂದಲ್ಲ ಎರಡಲ್ಲ ಎಷ್ಟಾದರೂ ಬ್ರಹ್ಮಾಂಡಗಳು ಜಗತ್ತು ಅಲ್ಲಿರುವ ಎಲ್ಲಾ ಮಹಾಪರಾಕ್ರಮಿಗಳು ದೇವಾಧಿ ದೇವತೆಗಳನ್ನು ಮೊದಲು ಮಾಡಿಕೊಂಡು ಎಲ್ಲರೂ ಸೇರಿ ಒಟ್ಟಾಗಿ ಯುದ್ಧಕ್ಕೆ ಬಂದರೂ ನನ್ನನ್ನು ಸೋಲಿಸುವುದಕ್ಕೆ ಸಾಧ್ಯ ಇಲ್ಲ, ಒರಳಿನಲ್ಲಿ ಧಾನ್ಯವನ್ನು ಹಾಕಿ ಕುಟ್ಟುವಂತೆ ಎಲ್ಲರನ್ನೂ ಕುಟ್ಟಿ ಎಸೆಯುತ್ತೇನೆ ಅಂತ ದೇವತೆಗಳು ಬರುವುದೇ ಇಲ್ಲ ಅವರು ಭಕ್ತರು, ಯಾವುದೇ ದುರ್ಜನರು ಯುದ್ಧಕ್ಕೆ ಬಂದರೂ ಅವರನ್ನು ನಾಶ ಮಾಡಿ ಹಾಕುತ್ತೇನೆ ಅಂತ ಪರಮಾತ್ಮ ಹೇಳಿಕೊಳ್ಳುತ್ತಾನೆ. ವೈಕುಂಠ ಇಂದ್ರ ವೇದದಲ್ಲಿ, ಅಂತಹ ಸಾಮರ್ಥ್ಯವನ್ನು ಪಡೆದಂತಹ



ನಿಮಗೆ ಯಾವುದರ ಭಯ, ನೀವು ಸುರಕ್ಷಿತವಾಗಿ ಇಲ್ಲಿ ಇರಬಹುದು ಅಂತ ಹೇಳಿದ್ದಾರೆ ಹೇಳಿ ಒಂದು ಮಾತನ್ನು ಅನ್ನುತ್ತಾರೆ.

ಪ್ರಾಪ್ತವಾನಸ್ಮಿ ಯಾಂ ಪ್ರೀತಿಂ ಯಾಂ ಮಾರ್ಗಾನುಗಮನಾದಪಿ ।

ಸಾ ಮೇ ಕೃಷ್ಣಾನುಗೃಹ್ಣಾತಿ ಶರೀರಮಿದಮವ್ಯಯಮ್ ॥ (40.33 ವಿಷ್ಣುಪರ್ವ)

ನಿಮ್ಮ ಜೊತೆಗೆ ನಾನು ಅಲ್ಲಿಂದ ಇಲ್ಲಿಯವರೆಗೆ ಬಂದೆನಲ್ಲ ಬಹಳ ಸಂತೋಷವಾಗಿದೆ ನಿಮ್ಮ ಜೊತೆಗೆ ಬಂದದ್ದಕ್ಕೆ, ನನ್ನ ಶರೀರ ಇದು ಪವಿತ್ರ ಆಯಿತು ನನ್ನ ಶರೀರಕ್ಕೆ ನಿಮ್ಮ ಜೊತೆಗೆ ಬಂದದ್ದಕ್ಕೆ ಒಂದು ದೊಡ್ಡ ಅನುಗ್ರಹವಾದ ಹಾಗೆ ಆಯಿತು ಅಂತ ಅದು ಹೇಗೆ ಪರುಶರಾಮ ದೇವರು ಕೃಷ್ಣ ಇಬ್ಬರೂ ಒಂದಲ್ಲವಾ ಅನುಗ್ರಹ ಆಗುವುದು ಹೇಗೆ ಅಂತ ದೇವರು ಬೇರೆಯಲ್ಲ, ದೇವರ ಶರೀರ ಬೇರೆ ಅಲ್ಲ, ಪರುಶರಾಮ ದೇವರ ಶರೀರ ಅಂದರೆ ಪರಶುರಾಮ ದೇವರು, ಪರಶುರಾಮ ದೇವರು ಶ್ರೀಕೃಷ್ಣನಿಗೆ ಸಮಾನ, ಅತ್ಯಂತ ಅಭಿನ್ನ ಹೀಗಿರುವಾಗ ಅನುಗ್ರಹವಾಯಿತು ಅಂತ ಪರುಶರಾಮ ದೇವರು ಅಂದದ್ದರ ಭಾವ ಏನು. ನನಗೆ ಅನುಗ್ರಹವಾಯಿತು ಅಂತ ಹೇಳಲಿಲ್ಲ ನಾನು ನನ್ನ ಶರೀರ ಅಂತ ಬೇರೆ ಇಲ್ಲವೇ ಇಲ್ಲ ದೇವರಿಗೆ, ನನ್ನ ಶರೀರ ಅಂತ ದೇವರು ಹೇಳಿಕೊಳ್ಳುತ್ತ ಇದ್ದಾರೆ ಇದರ ಅರ್ಥ ಆ ಪರಮಾತ್ಮನ ಶರೀರಕ್ಕೆ ಸದೃಶವಾದ ಪೃಥಿವಿ ಅಂತ ಅರ್ಥ **'ಯಸ್ಯ ಪೃಥಿವೀ ಶರೀರಂ'** ಅಂತ ಬೃಹದಾರಣ್ಯಕೋಪನಿಷತ್ತಿನ ತೃತೀಯೋಽಧ್ಯಾಯದಲ್ಲಿ ಹೇಳುತ್ತದೆ ಭಗವಂತನ ಅಧಿಷ್ಠಾನವಾದ ಪೃಥಿವಿ ಇದು ಪರಮಾತ್ಮನ ಶರೀರವಲ್ಲದಿದ್ದರೂ ಶರೀರವಿದ್ದಂತೆ. ಅಂತಹ ಪೃಥಿವಿ ಪಾವನವಾಯಿತು ಅಂತ ಯಾಕೆ ನೀವು ನಡೆದಿರಿ ಆಕಾಶ ಮಾರ್ಗದಿಂದ ಬರಲಿಲ್ಲ, ಅಲ್ಲಿ ಅದೃಶರಾಗಿ ಇಲ್ಲಿ ಒಂದೇ ಸಲ ವ್ಯಕ್ತವಾಗಲಿಲ್ಲ, ಅಧ್ವವಿಧಿನಾ ಮಾರ್ಗ ಕ್ರಮವನ್ನು ಅನುಸರಿಸಿ ಬಂದದ್ದು ನಾವು ನೀವು ಎಲ್ಲರೂ, ಇದರಿಂದ ಪೃಥ್ವಿ ಪಾವನವಾಯಿತು ಅಂತ ಪರುಶರಾಮ ದೇವರ ಅಭಿಪ್ರಾಯ. ಆ ರೀತಿ ಪರುಶರಾಮ ದೇವರು ಹೇಳಿ ಅಲ್ಲಿಂದ ಶೂರ್ಪಾಲಯಕ್ಕೆ ಹೊರಟಿದ್ದಾರೆ ಆ ಶೂರ್ಪಾಲಯ ಕ್ಷೇತ್ರ ಎಷ್ಟು ಪವಿತ್ರವಾದದ್ದು, ಅಲ್ಲಿದ್ದಂತಹ ಸಜ್ಜನರು ಎಷ್ಟು ಧನ್ಯರು ಪರಶುರಾಮ ದೇವರ, ನರಸಿಂಹ ದೇವರ ವಿಶೇಷವಾದ ಅನುಗ್ರಹಕ್ಕೆ ಪಾತ್ರರು ಅಂತ ನಾವು ಇಲ್ಲಿ ಚಿಂತನ ಮಾಡಬೇಕು.

ಮುಂದೆ ಶ್ರೀಕೃಷ್ಣ ಪರಮಾತ್ಮ ಪುನಃ ತನ್ನ ಎಲ್ಲ ಆಯುಧಗಳನ್ನು ಪಡೆದುಕೊಂಡಿದ್ದಾನೆ. ಗರುಡನ ಚಿಂತನವನ್ನು ಮಾಡಿದ ಆ ಗರುಡನ ಸ್ಮರಣೆಯನ್ನು ಮಾಡಿ ಆ ಗರುಡನನ್ನು ಕರೆಸಿದ್ದಾನೆ.

ಕುರು ಶೀಘ್ರಂ ಮಹಾಬಾಹೋ ಗೋವಿನ್ದ ವದತಾಂ ವರ ॥ (40.41 ವಿಷ್ಣುಪರ್ವ)

ಈ ನಕ್ಷತ್ರಗಳು ದುಷ್ಟವಾದ ಗ್ರಹಗಳಿಂದ ಕೂಡಿವೆ ನಿಶ್ಚಿತವಾಗಿಯೂ ಎಲ್ಲ ದುಷ್ಟರಾದ ರಾಜರ ಸಂಹಾರ ಆಗುವುದರಲ್ಲಿ ಯಾವುದೇ ಸಂಶಯವಿಲ್ಲ, ಭೂಭಾರಹರಣ ಹತ್ತಿರ ಬಂದಿದೆ, ನಿಶ್ಚಿತವಾಗಿಯೂ ನಿಮಗೆ ವಿಜಯವಾಗುತ್ತದೆ, ಯಾವುದೇ ಪ್ರಸಂಗದಲ್ಲಿ ನನ್ನ ಅವಶ್ಯಕತೆ ಇದ್ದರೆ ಸ್ಮರಿಸಿ ನಿಮ್ಮ ಎದುರಿನಲ್ಲಿ ನಾನು ಪ್ರತ್ಯಕ್ಷನಾಗುತ್ತೇನೆ ಅಂತ ಇಷ್ಟು ಹೇಳಿ ಪರುಶರಾಮ ದೇವರು ಅಲ್ಲಿಂದ ಹೊರಟಿದ್ದಾರೆ. ಈ ಕಡೆಗೆ ಶ್ರೀಕೃಷ್ಣ ಪರಮಾತ್ಮ, ಬಲರಾಮ ದೇವರು ಗೋಮಂತ ಪರ್ವತದಲ್ಲಿ ವಿಹಾರ ಮಾಡುತ್ತ ಇದ್ದಾರೆ. ಆ ಕಡೆಗೆ ಜರಾಸಂಧ ತನ್ನ ಸೈನ್ಯವನ್ನು ತೆಗೆದುಕೊಂಡು ಶ್ರೀಕೃಷ್ಣ ಪರಮಾತ್ಮನನ್ನು ಹಿಂಬಾಲಿಸಿ ಹೊರಟಿದ್ದಾನೆ ಮಥುರೆಯಲ್ಲಿ ಶ್ರೀಕೃಷ್ಣ ಇಲ್ಲ ಅಂತ ತಿಳಿದು. ಕೃಷ್ಣನನ್ನು ಬೆನ್ನು ಹತ್ತಿ ಗೋಮಂತ ಪರ್ವತದ ದಿಕ್ಕಿಗೆ ಅವನು ಹೊರಟಿದ್ದಾನೆ ಅಷ್ಟರಲ್ಲಿ ಬಂದು ಸೇರಿದಂತಹ ಕೃಷ್ಣ ಬಲರಾಮರು ವಿಹಾರ ಮಾಡುತ್ತ ಇದ್ದಾರೆ. ಕದಂಬ ವೃಕ್ಷ ಅರಳಿ ನಿಂತಿದೆ, ಸಾಕಷ್ಟು ಮಳೆಗಾಲದೊಳಗೆ ನೀರು

ಬಿದ್ದ ಕಾರಣ ಆ ಹೂವುಗಳು ತಮ್ಮ ರಸವನ್ನೆಲ್ಲ ಸೋರಿಸಿವೆ ಆ ಎಲ್ಲ ರಸ ಆ ಗಿಡದ ಒಳಗೆ ಸೇರಿಕೊಂಡಿದೆ ಅದರ ಛಿದ್ರದಲ್ಲಿ. ಅದು ಒಂದು ತರಹದ ಪೇಯ ದ್ರವ್ಯ ಪಾನ ಮಾಡಲು ಯೋಗ್ಯವಾದಂತಹ ಶ್ರೇಷ್ಠವಾದ ದ್ರವ್ಯವಾಗಿ ಪರಿಣಾಮವನ್ನು ಹೊಂದಿದೆ ಅದನ್ನು ಪಾನ ಮಾಡಬೇಕು ಅಂತ ಅಪೇಕ್ಷೆ ಪಟ್ಟಿದ್ದಾರೆ ಬಲರಾಮ ದೇವರು. ಆ ಕದಂಬ ವೃಕ್ಷದಿಂದ ಬಂದದ್ದು ಅನ್ನುವುದಕ್ಕೆ ಕಾದಂಬರೀ ಅಂತ ಅದಕ್ಕೆ ಹೆಸರು ಸಾಕ್ಷಾತ್ ಶೇಷ ದೇವರ ಪತ್ನಿ ಅಮೃತಮಥನ ಕಾಲದಲ್ಲಿ ಸಮುದ್ರ ರಾಜನಿಂದ ಉತ್ಪನ್ನಳಾದವಳು ವರುಣನ ಪುತ್ರಿ ವಾರುಣೀ. ಶೇಷ ದೇವರ ಹೆಂಡತಿ ವಾರುಣೀ ಅವಳು ಈ ಪುಷ್ಪ ರಸಕ್ಕೆ ಅಭಿಮಾನಿನಿ ಆದದ್ದರಿಂದ ಅದಕ್ಕೆ ವಾರುಣೀ ಅಂತೂ ಹೆಸರು, ಕದಂಬ ವೃಕ್ಷದಿಂದ ಉದ್ಭೂತವಾದದ್ದರಿಂದ ಕಾದಂಬರೀ ಎಂಬುದಾಗಿಯೂ ಹೆಸರು. ಅಂತಹ ಒಂದು ರೂಪದಲ್ಲಿ ಶೇಷ ದೇವರ ಪತ್ನಿಯೇ ವಾರುಣೀ ಅವಳು ಬಂದಿದ್ದಾಳೆ.

ಇನ್ನೊಬ್ಬ ಹೆಂಡತಿ ಕಾಂತಿ ಅಂತ ಅವಳ ಹೆಸರು, ಚಂದ್ರನ ಹೆಂಡತಿ ಕಾಂತಿ ಅಂತ ಒಬ್ಬಳು ಇದ್ದಾಳೆ. ಅವಳಲ್ಲ, ಅದೇ ಹೆಸರಿನ ಇನ್ನೊಬ್ಬ ಕಾಂತಿ ಶೇಷ ದೇವರ ಹೆಂಡತಿ ಅವಳೂ ಬಂದಿದ್ದಾಳೆ. ಬಲರಾಮ ದೇವರಲ್ಲಿ ಶುಕ್ಲಕೇಶದ ಆವೇಶ ಇರುವುದರಿಂದ ಆ ಶುಕ್ಲಕೇಶನಾದ ಪರಮಾತ್ಮನ ವಕ್ಷಸ್ಥಲದಲ್ಲಿ ವಿರಾಜಮಾನಳಾದ ಪರಮಾತ್ಮನ ಪತ್ನಿಯಾದ ಸಮುದ್ರಮಥನ ಕಾಲದಲ್ಲಿ ಅವತಾರ ಮಾಡಿದ ಶ್ರೀವತ್ಸ ಚಿಹ್ನದೊಳಗೆ ವಿಶೇಷವಾಗಿ ಸನ್ನಿಹಿತಳಾದ ಶ್ರೀದೇವಿ ಅವಳೂ ಕೂಡ ವಾರುಣಿಯಲ್ಲಿ ವಿಶೇಷ ಸನ್ನಿಹಿತಳಾಗಿ ಮತ್ತೊಂದು ರೂಪದಿಂದ ಬಂದಿದ್ದಾಳೆ. ವಾರುಣೀ ಎರಡೂ ರೂಪದಿಂದ ಒಂದು ವಾರುಣೀ ರೂಪದಿಂದ ಆ ಪುಷ್ಪ ರಸಕ್ಕೆ ಅಭಿಮಾನಿನಿಯಾಗಿ, ಶ್ರೀ ಎಂಬ ಹೆಸರಿನ ಶ್ರೀದೇವಿಯ ಸನ್ನಿಧಾನದಿಂದ ಕೂಡಿದ ವಾರುಣೀ ಇನ್ನೊಂದು ರೂಪದಿಂದ, ಕಾಂತಿ ಅನ್ನುವ ಮಡದಿ ಹೀಗೆ ಮೂರು ರೂಪದಿಂದ ಎರಡು ರೂಪದಿಂದ ವಾರುಣೀ, ಕಾಂತಿ ಒಬ್ಬಳು ಹೀಗೆ ಮೂರು ಪತ್ನಿಯರ ಜೊತೆಗೆ ವಿಹಾರವನ್ನು ಮಾಡುತ್ತಾರೆ ಬಲರಾಮ ದೇವರು ಅಂತ ಹರಿವಂಶದಲ್ಲಿ ಬರುತ್ತದೆ. ಅದನ್ನು ಶ್ರೀಮದಾಚಾರ್ಯರು ನಿರ್ಣಯ ಮಾಡಿ ತಿಳಿಸುತ್ತಾರೆ ಇಲ್ಲಿ ಶ್ರೀ ಅಂದರೆ ಸಾಕ್ಷಾತ್ ಲಕ್ಷ್ಮೀ ಅಲ್ಲ ಲಕ್ಷ್ಮೀಯ ಆವೇಶದಿಂದ ಶ್ರೀದೇವಿಯ ಆವೇಶದಿಂದ ಕೂಡಿದ ವಾರುಣೀ ಅಂತ ಈ ರೀತಿ ಬಲರಾಮ ದೇವರು ವಿಹಾರವನ್ನು ಮಾಡುತ್ತಾರೆ. ಬ್ರಹ್ಮವೈವರ್ತ ಪುರಾಣದಲ್ಲಿ' ಅನಿರುದ್ಧ ಹಾಗೂ ಬಾಣಾಸುರ ಇವರಿಬ್ಬರ ಮಧ್ಯದಲ್ಲಿ ಯುದ್ಧವಾಗುವ ಒಂದು ಪ್ರಸಂಗ ಆ ಮೊದಲು ವಾಗ್ಯುದ್ಧವಾಗುತ್ತೆ ಆಗ ಅನಿರುದ್ಧನನ್ನು ಕುರಿತು ಬಾಣಾಸುರ ಏನೇನೋ ನಿಂದೆ ಮಾಡುತ್ತಾನೆ. ನಿಮ್ಮ ಬಳಗದವರೆಲ್ಲ ಹಾಗೆ ನಿಮ್ಮ ಅಪ್ಪ ಪ್ರದ್ಯುಮ್ನ, ನಿಮ್ಮ ತಾತ ಕೃಷ್ಣ, ದೊಡ್ಡ ತಾತ ಬಲರಾಮ ಇವರೆಲ್ಲ ಅಯೋಗ್ಯರು ಅಂತನ್ನುವ ರೀತಿಯಲ್ಲಿ ಆ ಬಾಣಾಸುರ ನಿಂದೆಯನ್ನು ಮಾಡುತ್ತಾನೆ. ಆ ನಿಂದೆ ಮಾಡುತ್ತ ಮಾಡುತ್ತ ಬಲರಾಮನ ಬಗ್ಗೆ ನಿಂದೆ ಮಾಡುವಾಗ ಮದಿರಾ ಪಾನವನ್ನು ಮಾಡಿದಂತಹ ವ್ಯಕ್ತಿ ಅಂತ ನಿಂದೆ ಮಾಡುತ್ತಾನೆ ಆಗ ಅನಿರುದ್ಧ ಬಾಣಾಸುರನಿಗೆ ಉತ್ತರ ಕೊಡುತ್ತಾನೆ ಸರ್ವಥಃ ಬಲರಾಮ ಮದಿರಾ ಪಾನ ಮಾಡಿದ್ದಲ್ಲ ಅದು ಪುಷ್ಪ ರಸ ಪಾನ ಮಾಡಿದ್ದು ಹೂವಿನ ರಸ ಅಷ್ಟೇ.

ಬಲದೇವಃ ಪುಷ್ಪಮಧು ಪೂತಂ ಪಿಬತಿ ನಿತ್ಯಶಃ ।

(115 ಅಧ್ಯಾಯ 114 ಶ್ಲೋಕ ಬ್ರಹ್ಮವೈವರ್ತ ಶ್ರೀಕೃಷ್ಣಜನ್ಮಖಂಡ)

ಪರಮ ಪವಿತ್ರವಾದ ಪುಷ್ಪದ ಮಧು ಜೇನು ಅದನ್ನು ಪಾನ ಮಾಡಿದವರೇ ಹೊರತು ಬಲರಾಮ ದೇವರು ಆ ವೃಕ್ಷದಿಂದ ಬಂದದ್ದು ಅದು ಅಷ್ಟೇ, ಮದಿರಾ ಪಾನ ಮಾಡಿದ್ದಲ್ಲ ಅದು ಅಜ್ಞಾನಿಗಳು ಹಾಗೆ ತಿಳಿಯುತ್ತಾರೆ. ಆ ಪುಷ್ಪ ರಸಕ್ಕೆ ಅಭಿಮಾನಿನಿಯಾದವಳು ವಾರುಣೀ ದೇವಿ ಅವಳ ಜೊತೆಗೆ ವಿಹಾರ ಮಾಡಿದ್ದು, ಆ ಪುಷ್ಪ ರಸದ ರೂಪದಲ್ಲಿ

ಅವಳು ಬಂದದ್ದು ಆಗ ಪಾನ ಮಾಡಿದ್ದು, ಪ್ರತ್ಯೇಕವಾಗಿ ಸ್ತ್ರೀ ರೂಪದಲ್ಲಿ ಬಂದಾಗ ಅವಳ ಜೊತೆಗೆ ವಿಹಾರ ಮಾಡಿದ್ದು ಅಷ್ಟು ಮಾತ್ರವೇ ಹೊರತು ಮದಿರಾ ಪಾನ ಮಾಡಿದ್ದಲ್ಲ ಅಂತ ಬಾಣಾಸುರನಿಗೆ ಅನಿರುದ್ಧ ಉತ್ತರ ಕೊಡುತ್ತಾನೆ ಅಂತ ಬ್ರಹ್ಮವೈವರ್ತ ಪುರಾಣ ಕೃಷ್ಣಜನ್ಮ ಖಂಡದಲ್ಲಿ 115ನೇ ಅಧ್ಯಾಯ 114ನೇ ಶ್ಲೋಕದಲ್ಲಿ ತಿಳಿಸಿಕೊಡುತ್ತಾರೆ ಅದನ್ನು ಇಲ್ಲಿ ನಾವು ಅನುಸಂಧಾನ ಮಾಡಬೇಕು. ಇದಕ್ಕೆ ಕಾದಂಬರೀ ಅಂತ ಕರೆಯುವುದಕ್ಕೆ ಇನ್ನೊಂದು ಅಭಿಪ್ರಾಯವನ್ನು ಕೂಡ ಅಮರಕೋಶದ ವ್ಯಾಖ್ಯಾನದಲ್ಲಿ ಕ್ಷೀರಸ್ವಾಮಿ ಅನ್ನುವವರು ತಿಳಿಸಿಕೊಡುತ್ತಾರೆ. ಅಂಬರ ಬಟ್ಟೆ ಕುತ್ಸಿತವಾದ ಅಂಬರ ಅಂದರೆ ಕೆಟ್ಟದ್ದು ಅಂತ ಅರ್ಥದಲ್ಲಿ ಅಲ್ಲ ನೀಲವರ್ಣದ ಅಂಬರ, ನೀಲ ಬಣ್ಣದ ಬಟ್ಟೆ, ಕುತ್ಸಿತಾಂ ಬರ ಅದು ಕದಂಬರ ಆ ಕದಂಬರವನ್ನು ಧಾರಣ ಮಾಡಿದವ ಬಲರಾಮ ಅವನ ಹೆಂಡತಿ **'ತಸ್ಯೇಯಂ ಸ್ತ್ರೀ'** ಆದ್ದರಿಂದ ಅವಳಿಗೆ ಕಾದಂಬರೀ ಅಂತ. ಅಭಿಮಾನಿನಿಯಾದ ಆ ವಾರುಣಿಗೆ ಕಾದಂಬರೀ ಅಂತ ಕರೆಯುವುದಕ್ಕೆ ಕಾರಣ ಕದಂಬರನ ಹೆಂಡತಿ ಅಂತ ಬಲರಾಮನ ಹೆಂಡತಿ ಅಂತ, ಕದಂಬ ವೃಕ್ಷದಿಂದ ಬಂದದ್ದರಿಂದ ಆ ಪುಷ್ಪದ ರಸಕ್ಕೂ ಕಾದಂಬರೀ ಎಂಬುದಾಗಿ ಕರೆಯುತ್ತಾರೆ ಅಂತ ನಾವಿಲ್ಲಿ ಚಿಂತನವನ್ನು ಮಾಡಬೇಕು. ಹಾಗೆ ಅಲ್ಲಿ ವಿಶೇಷವಾಗಿ ಆ ಬಲರಾಮ ದೇವರು ವಿಹಾರವನ್ನು ಮಾಡಿದ್ದಾರೆ.

ಶ್ರೀಕೃಷ್ಣ ಪರಮಾತ್ಮ ಅಲ್ಲಿರುವಾಗ ಅದೇ ಮಾರ್ಗದಿಂದ ಗರುಡ ದೇವರು ಹೊರಟಿರುತ್ತಾರೆ. ಪರಮಾತ್ಮ ಕ್ಷೀರ ಸಮುದ್ರದಲ್ಲಿ ಮಲಗಿದಾಗ ಎಲ್ಲ ದೇವತೆಗಳು ಭಗವಂತನ ದರ್ಶನಕ್ಕೆ ಅಂತ ಬಂದಿರುತ್ತಾರೆ ಪರಮಾತ್ಮ ಕಣ್ಣಿನಿಂದ ಒಂದು ಸೂಚನೆಯನ್ನು ಮಾಡುತ್ತಾನೆ ನಾನು ಮಲಗುತ್ತೇನೆ, ನೀವು ಮಲಗಿದ ಹಾಗೆ ಮಾಡಿ ನಾನು ಮಲಗಿದಂತೆ ನಾಟಕ ಮಾಡುತ್ತೇನೆ. ಸರಿ ಅಂತ ಎಲ್ಲರೂ ಮಲಗಿದಂತೆ ನಾಟಕ ಮಾಡಿದಾಗ ಬಲಿ ಚಕ್ರವರ್ತಿ ಆಚೆ ಈಚೆ ನೋಡುತ್ತಾನೆ ಪರಮ ಭಗವದ್ಭಕ್ತ ಅಸುರಾವೇಶದಿಂದ ಆ ದೇವರ ತಲೆಯ ಮೇಲಿರುವ ಕಿರೀಟವನ್ನು ಅಪಹಾರ ಮಾಡಿಕೊಂಡು ಹೊರಟುಬಿಡುತ್ತಾನೆ ಅಲ್ಲಿಂದ. ಎಂತಹ ಭಕ್ತ ಎಲ್ಲವನ್ನೂ ದಾನ ಮಾಡಿದವ ದೇವರಿಗೆ ಹೆಂಡತಿ ಸಂಧ್ಯಾವಳಿ ಇಂದ ನೀರು ಹಾಕಿಸಿಕೊಂಡು ಶುಕ್ರಾಚಾರ್ಯರು ಬೇಡ ಅಂದರೂ ಕೂಡ ಅಷ್ಟು ಭಕ್ತಿಯಿಂದ ಸಪತ್ನೀಕನಾಗಿ ದಾನ ಮಾಡಿದಂತಹ ವ್ಯಕ್ತಿ ಇದು ದೇವರ ತಲೆಯ ಮೇಲಿರುವ ಕುಂಡಲವನ್ನು ಅಪಹಾರ ಮಾಡುವಂತಹ ಪ್ರವೃತ್ತಿಯನ್ನು ಹೇಗೆ ಮಾಡಿದ ಅನ್ನುವುದೇ ಆಶ್ಚರ್ಯ, ಅದು ಅವನ ಸ್ವಭಾವ ಅಲ್ಲ ಅಸುರಾವೇಶ ಮೂಲಕವಾಗಿ ಮಾಡಿದ. ಆ ರೀತಿ ಅವನು ಸ್ವಯಂ ಅಸುರ ಜಾತಿಯಲ್ಲಿ ಹುಟ್ಟಿದರೂ ದೇವ ಸ್ವಭಾವದವ ಆದರೆ ಈಗ ನಿಜವಾದ ಅಸುರರ ಆವೇಶದಿಂದ ಆ ರೀತಿ ಮಾಡಿದ್ದಾನೆ ಅದನ್ನೇ ದೇವರಿಗೆ ಮಾಡಿಸಬೇಕಾಗಿತ್ತು ಅನ್ನುವುದಕ್ಕೆ ನಿದ್ರೆಯ ನಾಟಕ ಮಾಡಿದ್ದ. ಗರುಡ ದೇವರು ಬೆನ್ನು ಹತ್ತಿ ಹೋಗಿದ್ದಾರೆ ಹೋಗಿ ಅವನನ್ನು ಸೋಲಿಸಿ ಆ ಕಿರೀಟವನ್ನು ಮರಳಿ ತೆಗೆದುಕೊಂಡು ಬರುತ್ತಾರೆ, ಗರುಡ ದೇವರು ಬರುತ್ತಾ ಇರುವಾಗ ದಾರಿಯಲ್ಲಿ ಕೃಷ್ಣ ಪರಮಾತ್ಮ ಕಾಣಿಸಿದ ಗೋಮಂತ ಪರ್ವತದಲ್ಲಿ. ಆಕಾಶ ಮಾರ್ಗದಲ್ಲಿ ಹೋಗುವಂತಹ ಗರುಡ ಹಾಗೆ ಆ ಕಿರೀಟವನ್ನು ಕೃಷ್ಣನ ತಲೆಯ ಮೇಲೆ ಬಿಟ್ಟುಬಿಡುತ್ತಾರೆ. ಅದು ಸರಿಯಾಗಿ ಕೃಷ್ಣನ ತಲೆಗೆ ಬಂದು ಹೂವಿನಂತೆ, ಯಾವುದೇ ರೀತಿಯ ಪೀಡೆ ಏನಾಗಬೇಕು ಕೃಷ್ಣನಿಗೆ, ಸುಲಭವಾಗಿ ಬಂದು ಹೂವಿನ ಕಿರೀಟದಂತೆ ಕೃಷ್ಣನ ತಲೆಯ ಮೇಲೆ ಕುಳಿತಿದೆ, ಪೆಟ್ಟು ತಾಕಿಲ್ಲ ಇಷ್ಟು ಮಾತ್ರ ಅಲ್ಲ ಸರಿಯಾಗಿ ಹೊಂದಿದೆ ಮೂಲರೂಪಕ್ಕೂ, ಅವತಾರ ರೂಪಕ್ಕೂ ಯಾವುದೇ ಬೇಧ ಇಲ್ಲ, **'ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ'**[1] ಅನ್ನುವುದನ್ನ ಪರಮಾತ್ಮ ತೋರಿಸಿಕೊಟ್ಟಿದ್ದಾನೆ.

1. ಈಶಾವಾಸ್ಯೋಪನಿಷತ್

ಚಿಕ್ಷೇಪ ಖಂ ಗತೋ ಮೌಲಿಂ ವಿಷ್ಣೋಃ ಶಿರಸಿ ಹೃಷ್ಟವತ್ ॥ (41.44 ವಿಷ್ಣುಪರ್ವ)

ಆಕಾಶದಿಂದಲೇನೆ ಅದನ್ನು ಬಿಟ್ಟುಬಿಟ್ಟಿದ್ದಾರೆ ಗರುಡ ದೇವರು ಕಿರೀಟವನ್ನು, ಅದು ನೇರವಾಗಿ ಕೃಷ್ಣನ ತಲೆಯ ಮೇಲೆ ಬಂದು ಕುಳಿತಿದೆ. ಹೀಗೆ ಆ ಭಗವಂತನ ಅದ್ಭುತವಾದಂತಹ ಮಹಿಮೆಯನ್ನು ಇಲ್ಲಿ ಗರುಡ ದೇವರು ತೋರಿಸಿಕೊಡುತ್ತಾರೆ.

ಆಮೇಲೆ ಪರಮಾತ್ಮ ಆ ಗೋಮಂತ ಪರ್ವತದಲ್ಲಿ ವಿಹಾರ ಮಾಡುತ್ತಾ ಇದ್ದಾನೆ. ಅಷ್ಟರಲ್ಲಿ ಜರಾಸಂಧನ ಸೈನ್ಯ ಗೋಮಂತ ಪರ್ವತವನ್ನು ಬಂದು ತಲುಪಿದೆ ಎಲ್ಲರೂ ಆಲೋಚನೆ ಮಾಡಿದ್ದಾರೆ. ಹಿಂದೆ ಕೇಳಿದ್ದೀರಿ ಯಾವ ರೀತಿ ಸಭೆ ಮಾಡಿದ ಅಂತ ದೊಡ್ಡ ಸಭೆ ಮತ್ತೆ ಅಲ್ಲಿ ಎಲ್ಲರೂ ಸುಮ್ಮನೆ ಕೂಡಿ ಅಂತ, ಸೈಲೆನ್ಸ್ ಪ್ಲೀಸ್ ಅಂತ ಹೇಳುವುದಕ್ಕಾಗೇನೆ ತಲೆಗೆ ರುಮಾಲನ್ನು ಸುತ್ತಿಕೊಂಡಂತಹ ಒಂದು ವರ್ಗ, ಅದೆಲ್ಲ ಅದೇ ತರಹದ ವರ್ಣನೆ ಮತ್ತೆ ಪುನರಾವರ್ತನೆ. ಎಲ್ಲ ಜನರನ್ನು ಕೂಡಿಸಿದ್ದಾರೆ ಎಲ್ಲರೂ ನಿಶ್ಶಬ್ದರಾಗಿ ಅಂತ ಯಾವ ರೀತಿ ಕೃಷ್ಣನ ಮೇಲೆ ಅಟ್ಯಾಕ್ ಮಾಡಬೇಕು ಆಗ ಮಥುರೆ, ಈಗ ಗೋಮಂತ ಪರ್ವತ. ವ್ಯತ್ಯಾಸ ಅಷ್ಟೇ ಎಲ್ಲಾ ತರಹದ ಆಯುಧಗಳನ್ನು ಪ್ರಯೋಗ ಮಾಡಿ ಕಲ್ಲುಗಳನ್ನೆಲ್ಲ ಒಡೆದು ಹಾಕಿ, ಗಿಡಗಳನ್ನೆಲ್ಲ ಕತ್ತರಿಸಿ ಹಾಕಿ. ಬಲರಾಮ ಕೃಷ್ಣರನ್ನು ಬಿಡಬಾರದು ಇಬ್ಬರೇ ಇದ್ದಾರೆ ಆದರೂ ಬಹಳ ಭಯಂಕರವರು ಇಬ್ಬರು ಅಂತ ಉದಾಸೀನ ಮಾಡಬೇಡಿ. ಹೇಗಾದರೂ ಮಾಡಿ ಅವರನ್ನು ಸೋಲಿಸಬೇಕು, ಇಲ್ಲಿಂದ ಹೊರಗೆ ಹೋಗುವುದಕ್ಕೆ ಬಿಡಬಾರದು ಹಾಗೇ ಹೀಗೇ ಅಂತ ಎಲ್ಲ ಭಾರೀ ಚರ್ಚೆಯಾಗಿದೆ. ಮತ್ತೆ ಯಥಾಪ್ರಕಾರ ಮಥುರೆಯ ನಾಲ್ಕು ದಿಕ್ಕುಗಳಿಗೆ ನಿಂತಂತೆ, ನಾಲ್ಕೂ ದಿಕ್ಕುಗಳಿಗೆ ರಾಜರುಗಳನ್ನು ವಿಭಾಗ ಮಾಡಿ ಅಲ್ಲಲ್ಲಿ ಅವರನ್ನು ಹಂಚಿದ್ದಾನೆ. ಅಲ್ಲಿಯೂ ತಾನು ದಕ್ಷಿಣಕ್ಕೆ ನಿಂತಿದ್ದ ಇಲ್ಲಿಯೂ ದಕ್ಷಿಣಕ್ಕೆ ನಿಂತ ಇವತ್ತಿಲ್ಲ ನಾಳೆ ದಕ್ಷಿಣ ದಿಕ್ಕಿಗೆ ಅಧಿಪತಿಯಾದ ಯಮನ ಅತಿಥಿಯಾಗುವವನಿದ್ದೇನೆ ಅನ್ನುವುದರ ಸೂಚನೆ ಮಾಡುವುದಕ್ಕೋ ಅನ್ನುವ ರೀತಿಯಲ್ಲಿ ದಕ್ಷಿಣವನ್ನೇ ಆರಿಸಿಕೊಂಡಿದ್ದಾನೆ ಮತ್ತೆ.

ಈ ಮಧ್ಯದೊಳಗೆ ಆ ಚೇದಿ ದೇಶದ ರಾಜ ಅವನು ಹೇಳುತ್ತಾನೆ. ಜರಾಸಂಧ, ಈ ಸಂದರ್ಭದಲ್ಲಿ ನಾವು ಒಂದು ಬೇರೆ ಉಪಾಯ ಮಾಡುವುದು ಒಳ್ಳೆಯದು. ಶಸ್ತ್ರ, ಅಸ್ತ್ರ ಇವುಗಳೆಲ್ಲ ಬೇಡ. ಒಳ್ಳೆಯ ಗಿಡಗಳಿಂದ ಕೂಡಿದ ಪರ್ವತ ಸಾಕಷ್ಟು ಹಸಿರಾದ ಗಿಡಗಳಿವೆ ನಿಜ ಆದರೆ ಅಲ್ಲಿ ಇಲ್ಲಿ ಬಿದ್ದ ಒಣಗಿದ ಗಿಡಗಳನ್ನು ತಂದು ಸುತ್ತಲೂ ಹಾಕೋಣ, ಹಾಕಿ ಬೆಂಕಿ ಹಚ್ಚೋಣ. ಅದು ಕ್ರಮವಾಗಿ ಇಡೀ ಪರ್ವತವನ್ನೇ ಸುಟ್ಟುಬಿಡುತ್ತೆ ಎಂದೂ ಕಾಡ್ಗಿಚ್ಚನ್ನು ಅನುಭವಿಸಿದ ಪರ್ವತ ಅಲ್ಲ ಈಗ ಹೊಸದಾಗಿ ಅದರ ಅನುಭವ ಕೊಡೋಣ ಇದಕ್ಕೆ. ಕೃತ್ರಿಮವಾದ ಬೆಂಕಿಯನ್ನು ಹಚ್ಚಿ ಸುಟ್ಟು ಬಿಡೋಣ ಒಂದು ಅವರು ಸುಟ್ಟು ಹೋಗುತ್ತಾರೆ, ತಪ್ಪಿಸಿಕೊಳ್ಳುವುದಕ್ಕೆ ಅಂತ ಕೆಳಗೆ ಬಂದರೆ ನಮ್ಮ ಕೈಯಲ್ಲಿ ಸಿಕ್ಕಾದರೂ ನಾವೇಕೆ ಕಷ್ಟಪಟ್ಟು ಆ ಪರ್ವತ ಹತ್ತಬೇಕು, ಅಲ್ಲಿ ಎಲ್ಲಿದ್ದಾರೆ ಅಂತ ಹುಡುಕಬೇಕು, ಇಂತಹ ದೊಡ್ಡ ಪರ್ವತ ಎಷ್ಟು ಗುಹೆಗಳು, ಎಷ್ಟು ಗಿಡಗಳು ಎಲ್ಲಿದ್ದಾರೆ ಅಂತ ಹೇಗೆ ಗೊತ್ತಾಗುತ್ತೆ. ಇದು ಸುಲಭವಾದ ಉಪಾಯ. ಅವರು ಅಲ್ಲಿಯಾದರೂ ಮಡಿಯಬೇಕು, ಇಲ್ಲ ನಮಗಾದರೂ ಕೈಗೆ ಸಿಗಬೇಕು ಈ ರೀತಿಯಾಗಿ ಅವನು ಸೂಚನೆ ಕೊಟ್ಟಾಗ ಜರಾಸಂಧನಿಗೆ ಸರಿ ಅನ್ನಿಸಿದೆ ಎಲ್ಲ ರಾಜರೂ ಒಪ್ಪಿಕೊಂಡಿದ್ದಾರೆ ಹಾಗೇ ಮಾಡೋಣ ಅಂತ. ಅಲ್ಲಿ ಇಲ್ಲಿ ಬಿದ್ದ ಒಣಗಿದ ಕಟ್ಟಿಗೆಗಳನ್ನು ತಂದು ಬೆಂಕಿ ಹಚ್ಚಿದ್ದಾರೆ ಧಗ ಧಗ ಉರಿತಾ ಇದೆ ಎಲ್ಲಾ ಪಶುಗಳು, ಪಕ್ಷಿಗಳು ಸುಟ್ಟು ಹೋಗುತ್ತಾ ಇವೆ, ಚೀರುತ್ತಾ ಇವೆ, ದುಃಖ ಪಡುತ್ತಾ ಇವೆ, ಗಿಡಗಳಿಂದ ರಸ ಸುರೀತಾ ಇದೆ. ಅಷ್ಟು ಸಮೃದ್ಧವಾಗಿ ಬೆಳೆದಂತಹ ಸಂಪತ್ತು ಚೆನ್ನಾಗಿ ಬೆಳೆದು ನಿಂತು ಎಲ್ಲ ಪ್ರಜೆಗಳಿಗೆ ತಂಪು ಕೊಡುವ, ಫಲ ಪುಷ್ಪಗಳನ್ನು ಕೊಡುವ, ಉತ್ತಮವಾದ ವಾತಾವರಣವನ್ನು ನೀಡುವ, ಶ್ವಾಸೋಚ್ಛ್ವಾಸ ಮಾಡುವುದಕ್ಕೆ ಬೇಕಾದ ಪವಿತ್ರವಾದ ಗಾಳಿಯನ್ನು ಕೊಡುವ, ಶ್ರೇಷ್ಠವಾದಂತಹ ಮೇಘಗಳ ನಿರ್ಮಾಣಕ್ಕೆ ಅತ್ಯಂತ ಆವಶ್ಯಕವಾದ ಅರಣ್ಯದ

ಸಂಪತ್ತನ್ನು ನಾಶ ಮಾಡುವವರು ಅಂದರೆ ಜರಾಸಂಧನ ಪಕ್ಷದವರು ಅಂತ ಅರ್ಥ. ಜರಾಸಂಧನಿಗೆ ಹೇಗೆ ಶ್ರೀಕೃಷ್ಣ ಪರಮಾತ್ಮ ಸೋಲಿಸಿ ಅವನ ಜೊತೆಗೆ ಬಂದ ಅನೇಕ ದುಷ್ಟರನ್ನು ಸಂಹರಿಸಿ ಓಡಿಸಿದ ಹಾಗೇ ಈ ಅರಣ್ಯದ ಸಂಪತ್ತನ್ನು, ವೃಕ್ಷದ ಸಂಪತ್ತನ್ನು ನಾಶ ಮಾಡುವವರಿಗೆ ಭಗವಂತ ಕ್ಷಮೆ ಮಾಡುವುದಿಲ್ಲ ಚೆನ್ನಾಗಿ ಶಿಕ್ಷೆಯನ್ನು ಕೊಡುತ್ತಾನೆ.

ಎಂದಿಗೂ ಕೂಡ ವಿನಾಕಾರಣವಾಗಿ ಅರಣ್ಯವನ್ನು ಹಾಳು ಮಾಡಬಾರದು ಕಾಡಿದ್ದರೆ ನಾಡು ಆ ವೃಕ್ಷಗಳ ರಕ್ಷಣೆಯನ್ನು ಮಾಡಿದರೆ ಆ ವೃಕ್ಷಗಳು ನಮ್ಮ ರಕ್ಷಣೆಯನ್ನು ಮಾಡುತ್ತವೆ ಅನ್ನುವುದನ್ನು ಸೂಚನೆ ಮಾಡುವ ರೀತಿಯಲ್ಲಿ ಭಗವಂತ ಹಾಗೂ ಬಲರಾಮ ದೇವರು ಮೊದಲಿಗೆ ಜೋರಾಗಿ ಆ ಪರ್ವತವನ್ನು ಒತ್ತಿ ಹಾರಿದ್ದಾರೆ. ಶ್ರೀಕೃಷ್ಣ ಪರಮಾತ್ಮ ಆನಂತರದಲ್ಲಿ ತಾನೂ ಹಾರಿದ್ದಾನೆ ಹಾರುವುದು ಮಾತ್ರ ಅಲ್ಲ ಏನು ಬಲ, ಅನಂತ ಬಲನಾದ ಪರಮಾತ್ಮನಿಗೆ ಇದೇನು ಆಶ್ಚರ್ಯ. ಅಂತಹ ದೊಡ್ಡ ಪರ್ವತವನ್ನು ಕಾಲಿನಿಂದ ಒತ್ತಿ ಹಾರಿದರೆ ಹನ್ನೊಂದು ಯೋಜನ ಭೂಮಿಯ ಒಳಗೆ ಹೋಗಿದೆ ಪರ್ವತ, ಅಷ್ಟು ಒಳಗೆ ಹೋದರೆ ಒಳಗಿದ್ದ ನೀರೆಲ್ಲ ಮೇಲೆ ಹಾರಿ ತನ್ನಷ್ಟಕ್ಕೆ ತಾನೇ ಉರಿ ಶಾಂತವಾಗಿ ಹೋಗಿದೆ ಎಲ್ಲ ಗಿಡಗಳು ಪಶು, ಪಕ್ಷಿ ಪ್ರಾಣಿಗಳೆಲ್ಲವೂ ಸಂತೋಷಪಟ್ಟಿವೆ. ನಮ್ಮ ಕಾರಣಕ್ಕೆ ಅವುಗಳಿಗೆ ಹಿಂಸೆಯಾಗುವುದು ಬೇಡ ಅಂತ ಸಕಲ ಜಗತ್ ರಕ್ಷಕನಾದಂತಹ ಜಗತ್ ಪಾಲಕ ಬಾಲಕನಾದಂತಹ ಶ್ರೀಕೃಷ್ಣ ಪರಮಾತ್ಮ ಅವರೆಲ್ಲರನ್ನು ರಕ್ಷಣೆ ಮಾಡಿ ಮುಂದೆ ಜರಾಸಂಧನ ಸೈನ್ಯದ ಮಧ್ಯದೊಳಗೇ ಜಿಗಿದಿದ್ದಾರೆ.

ಎಲ್ಲಿಯೂ ತಪ್ಪಿಸಿಕೊಂಡಿಲ್ಲ ನಿಮ್ಮ ಭಯಕ್ಕೆ ನಾವು ಓಡಿ ಬಂದವರಲ್ಲ ಮಥುರೆಯಲ್ಲಿರುವ ಪ್ರಜೆಗಳಿಗೆ ಪೀಡೆ ಆಗಬಾರದು ಅಂತ ಇಷ್ಟು ದೂರ ಬಂದಿದ್ದೇವೆ ಬನ್ನಿ ಯುದ್ಧಕ್ಕೆ ಅಂತ ಅವರೆಲ್ಲ ಆಯುಧ ಸಹಿತರಾಗಿ, ಬೇಕಾದಷ್ಟು ವಾಹನಗಳಿಂದ ಸಹಿತರಾಗಿ ಇಪ್ಪತ್ಮೂರು ಅಕ್ಷೌಹಿಣೀ ಸಮೇತರಾಗಿ ಅವರಿದ್ದರೆ ಇವರಿಬ್ಬರೇ. ಆಯುಧಗಳು ಬಂದಿವೆ ಹಿಂದೆ ಹೇಳಿದ ರೀತಿಯಲ್ಲಿ ಮೊದಲೊಮ್ಮೆ ಜರಾಸಂಧನ ಜೊತೆಗೆ ಯುದ್ಧ ಮಾಡುವಾಗ ಬಂದಂತಹ ಆಯುಧಗಳು ಪುನಃ ವೈಕುಂಠಕ್ಕೆ ಹೋಗಿವೆ ಪುನಃ ಮತ್ತೆ ಬಂದಿವೆ. ಗದಾ, ಚಕ್ರ ,ಖಡ್ಗ ಮೊದಲಾದ ಆಯುಧಗಳೆಲ್ಲ ಬಂದಿವೆ ಮುಸಲ ಹಲ, ಸಂವರ್ತಕ ಸೌನಂದ ಎಂಬ ಹೆಸರಿನ ಹಲ ಮುಸಲುಗಳೂ ಕೂಡ ಬಲರಾಮ ದೇವರಿಗೆ, ಇವನಿಗೆ ಎಲ್ಲ ಚಕ್ರಾಧಿ ಆಯುಧಗಳು ಬಂದಿವೆ ಆ ಆಯುಧಗಳನ್ನು ತೆಗೆದುಕೊಂಡು ಘೋರವಾದಂತಹ ಯುದ್ಧ ಮಾಡುತ್ತಾ ಇದ್ದಾರೆ. ಎಷ್ಟೋ ಜನ ಸಜ್ಜನರಾದ ಭಗವದ್ಭಕ್ತರಾದ ಶಲ್ಯ, ಬಾಹ್ಲಿಕ ರಾಜ, ವಿರಾಟ ರಾಜ, ದ್ರುಪದ ರಾಜ ಇವರೆಲ್ಲ ಇದ್ದಾರೆ ಕಾರಣ ಇವರೆಲ್ಲರನ್ನ ಕಾರಾಗಾರದಲ್ಲಿ ಇಟ್ಟಿದ್ದ, ವಶದಲ್ಲಿ ಇಟ್ಟುಕೊಂಡಿದ್ದ ಅನಿವಾರ್ಯವಾಗಿ ಜರಾಸಂಧನ ಒತ್ತಾಯಕ್ಕೆ ಬಂದವರು. ಆದರೂ ಜರಾಸಂಧನ ಪಕ್ಷದೊಳಗೆ ಇದ್ದಾರೆ ಅನ್ನುವುದಕ್ಕೆ ಕೃಷ್ಣ ಅವರೆಲ್ಲರ ರಥ, ಸಾರಥಿ, ಕುದುರೆ ಇವುಗಳೆಲ್ಲವನ್ನು ನಾಶ ಮಾಡಿದ ಅವರಿಗೆ ಏನು ಮಾಡಿಲ್ಲ, ಓಡಿಸಿದ ಅಷ್ಟೇ. ಅನೇಕ ಜನ ದುಷ್ಟರೂ ಇದ್ದಾರೆ ಏಕಲವ್ಯ, ಕೃಷ್ಣನ ಚಿಕ್ಕಪ್ಪನ ಮಗ ಅಂತ ಕೇಳಿದ್ದೀರಿ ಹರಿವಂಶದಲ್ಲಿ ಹಿಂದೆ ಏಕಲವ್ಯ, ಏಕಲವ್ಯ ಇದ್ದಾನೆ, ಕೀಚಕ ಇದ್ದಾನೆ, ಅನೇಕ ಜನ ದುಷ್ಟರಾದ ದೈತ್ಯರು ಅಲ್ಲಿದ್ದಾರೆ ಅದರಲ್ಲಿ ಅನೇಕ ಜನರನ್ನು ಸಂಹಾರ ಮಾಡಿದ್ದಾನೆ, ಅನೇಕ ಜನರನ್ನು ಓಡಿಸಿದ್ದಾನೆ. ಈ ರೀತಿ ಜರಾಸಂಧನನ್ನು ಪುನಃ ಪರಾಭಾವಗೊಳಿಸಿದ್ದಾರೆ. ಜರಾಸಂಧನನ್ನು ಬಲರಾಮನ ದೇವರು ಮತ್ತೆ ಸಂಹಾರ ಮಾಡಬೇಕು ಅಂತ ಹೊರಟಾಗ ಆಕಾಶವಾಣಿ ಆಗಿದೆ ಕೊಲ್ಲುವವನು ಬೇರೆ ಇದ್ದಾನೆ ಸಾಕು ಇಷ್ಟಕ್ಕೆ ಅವನನ್ನು ಬಿಟ್ಟುಬಿಡಿ ಅಂತ ಜರಾಸಂಧನಿಗೆ ಮತ್ತೆ ಅವಮಾನವಾಗಿ ಮತ್ತೆ ಓಡಿ ಹೋಗಿದ್ದಾನೆ. ಈ ರೀತಿ ಶ್ರೀಕೃಷ್ಣ ಪರಮಾತ್ಮ ತನ್ನ ಅದ್ಭುತವಾದಂತಹ ಮಹಿಮೆಯನ್ನು ತೋರಿಸಿಕೊಟ್ಟಿದ್ದಾನೆ.

ಅಲ್ಲಿಂದ ಆ ಚೇದಿ ದೇಶದ ರಾಜ, ಶಿಶುಪಾಲನ ತಂದೆ ದಮಘೋಷ, ಕೃಷ್ಣನ ಸೋದರತ್ತೆಯ ಗಂಡ ಹೀಗಾಗಿ ದಮಘೋಷ ಕೃಷ್ಣನ ಜೊತೆಗೆ ಯುದ್ಧವನ್ನೂ ಮಾಡಿದ, ಜರಾಸಂಧನ ಜೊತೆಗೆ ಅವನ ಪಕ್ಷ ಕಟ್ಟಿ. ಕೃಷ್ಣನ ಜೊತೆಗೆ

ಜರಾಸಂಧ ಸೋತು ಆಚೆಗೆ ಹೋದಮೇಲೆ ಕೃಷ್ಣನಿಗೆ ಅನ್ನುತ್ತಾನೆ ಏನು ಹಣೆಬರಹ ಅಪ್ಪ ನಿನ್ನ ಜೊತೆಗೆ ಯುದ್ಧ ಮಾಡುವ ಪ್ರಸಂಗ ಬಂತು ಆ ಜರಾಸಂಧಾನ ಒತ್ತಾಯಕ್ಕೆ ನಾನು ಯುದ್ಧ ಮಾಡಿದೆ, ನಾವು ನೀವು ಬಾಂಧವರು ಆದ್ದರಿಂದ ಯಾವುದೇ ರೀತಿಯ ಕಲಹ ನಮ್ಮ ಮಧ್ಯದಲ್ಲಿ ಬೇಡ. ಇಲ್ಲಿ ಇರುವುದು ಬೇಡ ಕರವೀಪುರಕ್ಕೆ ಹೋಗೋಣ ಬಾ ಕೊಲ್ಹಾಪುರದಲ್ಲಿ ಮಹಾಲಕ್ಷ್ಮೀಯ ಸಂದರ್ಶನವನ್ನು ಮಾಡೋಣ ಬಾ ಇಬ್ಬರು ಹೊರಡೋಣ. ನೀವಿಬ್ಬರೂ ಬಂಧುಗಳು ನೀವು ಯುದ್ಧ ಗೆದ್ದೇ ಗೆಲ್ಲುತ್ತೀರಿ ಅಂತ ನನಗೆ ಗೊತ್ತಿತ್ತು ಗೆದ್ದಾದ ಮೇಲೆ ನಿಮ್ಮನ್ನು ಕರವೀರಪುರಕ್ಕೆ ಕರೆದುಕೊಂಡು ಹೋಗೋಣ ಅನ್ನುವುದಕ್ಕೋಸ್ಕರನೇ ಶ್ರೇಷ್ಠವಾದ ರಥ ಸಿದ್ಧಮಾಡಿ ಇಟ್ಟಿದ್ದೆ ಅಂತ ಹೇಳಿ ರಥದಲ್ಲಿ ಕೂಡಿಸಿಕೊಂಡು ಕರವೀರಪುರಕ್ಕೆ ಕರೆದುಕೊಂಡು ಹೊರಟಿದ್ದಾನೆ. ಕೃಷ್ಣ ಪರಮಾತ್ಮನೂ ಕೂಡ ಬಹಳ ಪ್ರೀತಿಯಿಂದ ಮಾತನಾಡುತ್ತಾನೆ

ನಾವಯೋಃ ಕಿಂಚಿದಪ್ರಾಪ್ಯಂ ಯ ಯೋಸ್ಟಂ ಬನ್ಧುರೀದೃಶಃ ॥ (43.91 ವಿಷ್ಣುಪರ್ವ)

ನಿನ್ನಂತಹ ಪ್ರೀತಿ ಮಾಡುವ ಬಂಧು ಇದ್ದಾಗ ನಮಗೆ ಇನ್ನೇನು ಬೇಕು ಇನ್ನೇನು ಇನ್ನೇನು ಅನ್ನುತ್ತಾನೆ **'ನಾವಯೋಃ ಕಿಂಚಿದಪ್ರಾಪ್ಯಂ'** ಏನು ಪಡೆಯಬೇಕೋ ಪಡೆದಾಯಿತು. ಬಂಧುಗಳನ್ನು ಅಷ್ಟು ಪ್ರೀತಿಯಿಂದ ಮಾತನಾಡಿಸಬೇಕು, ಬಂಧುತ್ವವನ್ನು ಬೆಳೆಸಿಕೊಳ್ಳಬೇಕು ಅಂತ ಒಂದು ಲೋಕ ನೀತಿಯನ್ನು ಪರಮಾತ್ಮ ತಿಳಿಸಿಕೊಡುತ್ತಾ ಇದ್ದಾನೆ. ಅವನೂ ಅಷ್ಟು ಪ್ರೀತಿಯಿಂದ ಸ್ವಾಗತ ಮಾಡಿದ್ದಕ್ಕೆ ಅಷ್ಟೇ ಪ್ರೀತಿಯಿಂದ ಕೃಷ್ಣ ಅವನನ್ನು ಹೊಗಳುತ್ತಾನೆ ಹೊಗಳಿ ಅವನ ಜೊತೆಗೆ ಅಲ್ಲಿಂದ ಹೊರಡುತ್ತಾರೆ. ಮತ್ತೆ ಹಾರಿ ಕೊಲ್ಹಾಪುರಕ್ಕೆ ಬರುವುದಿಲ್ಲ, ಹೇಗೆ ಬರುತ್ತಾರೆ ಮೂರು ದಿವಸ ಪ್ರವಾಸ ಮಾಡಿ ಬಂದಿದ್ದಾರೆ.

ತೇ ತ್ರಿರಾತ್ರೋಷಿತಾಃ ಪ್ರಾಪ್ತಾಃ ಕರವೀರಂ ಪುರೋತ್ತಮಮ್ । (43.98 ವಿಷ್ಣುಪರ್ವ)

ಹಿಂದೆ ತಿಳಿಸಿದಂತೆ ಆ ಮಧ್ಯದೊಳಗಿನ ಎಲ್ಲ ಕ್ಷೇತ್ರಗಳನ್ನು ಪವಿತ್ರ ಮಾಡಬೇಕು, ಅಲ್ಲಿರುವ ಎಲ್ಲ ಋಷಿ ಮುನಿಗಳು, ಜ್ಞಾನಿಗಳು, ಪ್ರಜೆಗಳು, ಪುಣ್ಯವಂತರು ಅವರಿಗೆ ತನ್ನ ದರ್ಶನ ಕೊಟ್ಟು ಅನುಗ್ರಹ ಮಾಡಬೇಕು ಅನ್ನುವುದಕ್ಕೆ ಪರಮಾತ್ಮ ಆ ರೀತಿ ಕ್ರಮವಾಗಿ ಅಲ್ಲಿಂದ ಬಂದಿದ್ದಾನೆ ಎಂಬುದಾಗಿ ನಾವು ಇಲ್ಲಿ ತಿಳಿಯಬೇಕು. ಕರವೀರಪುರಕ್ಕೆ ಕೃಷ್ಣ ಬಂದದ್ದು ಆ ಮಹಾಲಕ್ಷ್ಮೀ ತನ್ನ ಮಡದಿ ವಕ್ಷಸ್ಥಲವನ್ನ ಆಶ್ರಯಿಸಿದಂತಹ ಮಹಾನುಭಾವಳು ಅಂತಹ ಅವಳಿಗೆ ದರ್ಶನ ಕೊಟ್ಟು ಅನುಗ್ರಹ ಮಾಡಬೇಕು ಅಂತ ಬಂದದ್ದು. ಶೃಗಾಲ ವಾಸುದೇವ ಅಲ್ಲಿದ್ದ, ಅವನು ಯಾರಲ್ಲ ಕೃಷ್ಣನ ಅಣ್ಣನೇ ಅವನು, ವಾಸುದೇವ ಅಂದರೆ ವಸುದೇವನ ಮಗನೇ, ಚಿಕ್ಕಪ್ಪನ ಮಗ ಅಲ್ಲ ಅಪ್ಪನ ಮಗನೇ, ವಸುದೇವನ ಮಗನೇ ವಾಸುದೇವ ಆದರೆ ದೇವಕಿಯ ಮಗನಲ್ಲ. ವಸುದೇವನಿಗೆ ದಿತಿ, ದನು ಕಶ್ಯಪರ ಅವತಾರ ವಸುದೇವ ಅನ್ನುವುದಕ್ಕಾಗಿ ದೇವಕಿ, ಅದಿತಿ ಹೇಗೆ ಕಶ್ಯಪರ ಅವತಾರನಾದ ವಸುದೇವನ ಹೆಂಡತಿ ಹಾಗೆ ದೈತ್ಯರ ತಾಯಿಯಾದ ದಿತಿ, ದಾನವರ ತಾಯಿಯಾದ ದನು ಅವರಿಬ್ಬರೂ ಕೂಡ ವಸುದೇವನ ಹೆಂಡಂದಿರಾಗಿ ಅವತಾರ ಮಾಡಿದ್ದಾರೆ. ಆ ದನುವಿನಲ್ಲಿ ಹುಟ್ಟಿದ ದಾನವ ಈ ಶೃಗಾಲ ವಾಸುದೇವ ಅಂತ ಅವನ ಹೆಸರು ವಸುದೇವನ ಮಗನೇ ಆದರೆ ಬೇರೆ ತಾಯಿಯಲ್ಲಿ ಹುಟ್ಟಿದವ. ಆದರೆ ಯಾಕೆ ಜೊತೆಗೆ ಇರಲಿಲ್ಲ ಅಂದರೆ ಪುತ್ರಿಕಾ ಪುತ್ರ ಧರ್ಮ ಅಂತ ಹೆಣ್ಣುಮಗಳಲ್ಲಿ ಹುಟ್ಟಿದ ಮಗನನ್ನು ನನಗೆ ಕೊಡಬೇಕು ಅಂತ ಕರಾರು ಮಾಡಿ ಆ ಕರವೀರ ಪಟ್ಟಣದ ರಾಜ ವಸುದೇವನಿಗೆ ಹೆಣ್ಣು ಕೊಟ್ಟಿದ್ದ ಹೀಗಾಗಿ ಹುಟ್ಟಿದ ಮೇಲೆ ಆ ಮಗನನ್ನು ಅಜ್ಜನಿಗೆ ಒಪ್ಪಿಸಿ ಬಿಟ್ಟಿದ್ದಾನೆ. ಇದರಂತೆ ಕಾಶೀ ದೇಶದ ರಾಜ ಅವನು ತನ್ನ ಮಗಳ ಮಗನನ್ನು ತನಗೆ ಕೊಡಬೇಕು ಅನ್ನುವ ಕರಾರಿನಿಂದ ಕೊಟ್ಟಿದ್ದ ಅಂತ ಆ ದಿತಿ ಅವನ ಮಗನಾದ ಪೌಂಡ್ರಕವಾಸುದೇವ ಅವನನ್ನೂ ಆ ಕಾಶಿ ರಾಜನಿಗೆ

ಕೊಟ್ಟಿದ್ದ ಹೀಗಾಗಿ ಕೃಷ್ಣನ ಜೊತೆಗೆ ಇಲ್ಲ ಅವರು ಅಸುರರೇ ಅವರು ಅನ್ನುವ ಕಾರಣಕ್ಕಾಗೇನೆ ಆ ರೀತಿ ಅವರನ್ನ ದೂರ ಕಳಿಸಿದ್ದಾನೆ. ಆ ದಿತಿ, ದನು ಅವರ ಜೊತೆಗೂ ಹೋಗಿಲ್ಲ ಮೊದಲು ಮದುವೆ ಆದದ್ದೇನೋ ನಿಜ ಅವರನ್ನ ದೇವಕಿಯ ಮದುವೆಯಾದ ಮೇಲೆ ಅದಿತಿಯ ಅವತಾರಳಾದ ದೇವಕಿಯ ಜೊತೆಗೆ ಮದುವೆಯಾದ ಮೇಲೆ ಅವರಿಬ್ಬರ ಜೊತೆಗೆ ಹೋಗಲೂ ಇಲ್ಲ ವಸುದೇವ. ಅವರು ದೂರದಲ್ಲಿಯೇ ಇದ್ದಾರೆ.

ಹಿಂದೆ ಕೇಳಿದ್ದೀರಿ ಕುವಲಾಶ್ವ ಅಂತ ದುಂಧುಮಾರ ಅಂತ ಪ್ರಸಿದ್ಧನಾದ. ಮಧುವಿನ ಮಗ ಮಧು ಎಂಬ ದೈತ್ಯನ ಮಗ ದುಂಧು ಅವನು ಎಲ್ಲ ಉಸುಕಿನ ಕೆಳಗೆ ಮಲಗಿ ಇದ್ದಕ್ಕಿದ್ದ ಹಾಗೆ ಶ್ವಾಸ ಬಿಟ್ಟರೆ ಎಲ್ಲ ಕಡೆಗೆ ಕೆಂಡ ಹಾರಿ ಎಲ್ಲರೂ ಸಂತ್ರಸ್ತರಾಗುತ್ತ ಇದ್ದರು ಅವನನ್ನು ಕುವಲಾಶ್ವ ಸಂಹಾರ ಮಾಡಿದ ಅಂತ. ಆ ಕುವಲಾಶ್ವನಲ್ಲಿ ಅಂತರ್ಯಾಮಿಯಾಗಿ ಸಾಕ್ಷಾತ್ ಪರಮಾತ್ಮನೇ ಸಂಹಾರ ಮಾಡಿದ್ದು ಅಂತ ತಾತ್ಪರ್ಯ ನಿರ್ಣಯದಲ್ಲಿ ಶ್ರೀಮದಾಚಾರ್ಯರು ತಿಳಿಸುತ್ತಾರೆ. ಹರಿವಂಶ ಕುವಲಾಶ್ವ ಸಂಹಾರ ಮಾಡಿದ ನಾರಾಯಣನ ವಿಶೇಷ ಸನ್ನಿಧಾನ ಇತ್ತು ಅಂತ ಹರಿವಂಶ ಹೇಳುತ್ತದೆ ಅಂತರ್ಯಾಮಿಯಾದ ನಾರಾಯಣನೇ ಸಂಹಾರ ಮಾಡಿದ್ದು ಆ ಕುವಲಾಶ್ವನಲ್ಲಿ ಅಂತರ್ಯಾಮಿಯಾಗಿ ಆ ದುಂಧು ಈಗ ಶೃಗಾಲ ವಾಸುದೇವನಾಗಿ ಹುಟ್ಟಿದ್ದಾನೆ ಮತ್ತೆ. ಅಂತಹ ಆ ಶೃಗಾಲವಾಸುದೇವ ರಾಮ ಕೃಷ್ಣರು ಬಂದಿದ್ದಾರೆ ಅಂದರೆ ಪ್ರಾಯಃ ಯುದ್ಧಕ್ಕೆ ಬಂದಿದ್ದಾರೆ ಅಂತ ಸಿದ್ಧನಾಗಿ ಯುದ್ಧಕ್ಕೇನೆ ಬಂದ ಘನ ಘೋರವಾದಂತಹ ಯುದ್ಧವಾಗಿದೆ. ಆ ಯುದ್ಧದಲ್ಲಿ ಶ್ರೀಕೃಷ್ಣ ಪರಮಾತ್ಮ ಸ್ವಲ್ಪ ಹೊತ್ತು ಅವನ ಜೊತೆಗೆ ಯುದ್ಧವನ್ನು ಮಾಡಿ ಅವನನ್ನು ಸಂಹಾರ ಮಾಡಿಬಿಟ್ಟಿದ್ದಾನೆ ಶೃಗಾಲ ವಾಸುದೇವ ಮೃತನಾಗಿದ್ದಾನೆ. ದುಂಧುವಾದಾಗಲೂ ಇವನೇ ಕೊಂದದ್ದು, ಶೃಗಾಲನಾಗಿ ಬಂದಾಗಲೂ ಇವನೇ ಕೊಂದದ್ದು ಅಧರ್ಮವನ್ನು ಮಾಡುವವ ಎಷ್ಟು ವೇಷ ಹಾಕಿಕೊಂಡು ಬಂದರೂ ದೇವರ ಎದುರಿನಲ್ಲಿ ಅವನು ಉಳಿಯುವುದಿಲ್ಲ ಅಂತ ತೋರಿಸಿಕೊಟ್ಟ.

ಎಲ್ಲರೂ ವಿಲಾಪ ಮಾಡುತ್ತ ಇದ್ದಾರೆ ಪತ್ನಿಯರು ಪ್ರಜೆಗಳು ಎಲ್ಲರೂ ಅವನ ಶರೀರವನ್ನು ಇಟ್ಟುಕೊಂಡು ವಿಲಾಪ ಮಾಡುತ್ತ ಇರುವಾಗ ಒಬ್ಬ ಪತ್ನಿ ಪ್ರಮದೋತ್ತಮ ಅವರಲ್ಲಿ ಹಿರಿಯಳಾದವಳು ಪದ್ಮಾವತೀ ಅಂತ ಆ ಶೃಗಾಲ ವಾಸುದೇವನ ಒಬ್ಬ ಹೆಂಡತಿ. ಅವಳು ಆ ಶೃಗಾಲ ವಾಸುದೇವನ ಮಗನಾದ ಶಕ್ರದೇವನನ್ನು ಕರೆದುಕೊಂಡು ಬಂದು ಕೃಷ್ಣನ ಮುಂದೆ ನಿಲ್ಲುತ್ತಾಳೆ ಏನು ತಪ್ಪು ಮಾಡಿದ್ದನೋ ನನ್ನ ಗಂಡನನ್ನು ನೀವು ಸಂಹಾರ ಮಾಡಿದ್ದೀರಿ ಈ ಮಗನನ್ನು ಸಂಹಾರ ಮಾಡಬೇಡಿ ಅವನನ್ನಾದರೂ ರಕ್ಷಣೆ ಮಾಡಿ. ಯಾರು ಶಕ್ರದೇವ ನಿಮ್ಮ ಮಗ ತಾನೇ, ನಿಮ್ಮ ಅಣ್ಣ ಅಲ್ಲವಾ ಶೃಗಾಲ ವಾಸುದೇವ, ಅಣ್ಣನ ಮಗ ಅಂದರೆ ನಿಮ್ಮ ಮಗ ಇದ್ದ ಹಾಗೆ ಅಲ್ಲವಾ, ಅಷ್ಟೂ ಪ್ರೀತಿ ಮಾಡಬಾರದಾ. ಯಾಕೆ ಇಷ್ಟು ನಮ್ಮ ಮೇಲೆ ಅವಕೃಪೆ ಎಂಬುದಾಗಿ ಅವಳು ಕೇಳಿಕೊಂಡಾಗ ಕೃಷ್ಣ ಹೇಳುತ್ತಾನೆ ನಾನೇನು ಶೃಗಾಲ ವಾಸುದೇವ ಯುದ್ಧಕ್ಕೆ ಬಂದ ನಮ್ಮನ್ನು ಸಂಹಾರ ಮಾಡಬೇಕು ಅಂತ ಅವನು ಬಂದದ್ದಕ್ಕೆ ನಾನು ಅವನನ್ನು ಸಂಹಾರ ಮಾಡಿದೆ, ಅವನು ದುಷ್ಟ ಅನ್ನುವುದಕ್ಕಾಗಿ ಸಂಹಾರ ಮಾಡಿದೆ ನಿಮ್ಮ ಗಂಡ ಇರಬಹುದು ಆದರೆ ದುಷ್ಟ, ಪ್ರಜೆಗಳಿಗೆ ಕಂಟಕ. ಆದರೆ ಈ ಶಕ್ರದೇವ ಇವನು ಅತ್ಯಂತ ಸಾತ್ವಿಕ ಸಜ್ಜನ ಪ್ರಜೆಗಳನ್ನು ಧರ್ಮದಿಂದ ರಕ್ಷಣೆ ಮಾಡುತ್ತಾನೆ ಅಂತ ನನಗೆ ಗೊತ್ತು ಇವನನ್ನು ನಾನು ಸಂಹಾರ ಮಾಡುವುದೇ ಇಲ್ಲ ಇವನಿಗೇನೆ ಪಟ್ಟಾಭಿಷೇಕ ಮಾಡುತ್ತೇನೆ ಯಾಕೆ ಚಿಂತೆ ಮಾಡುತ್ತೀಯಾ ಅಂತ ಹೇಳಿ ಆ ಶಕ್ರದೇವನಿಗೇನೆ ಆ ಸಿಂಹಾಸನದಲ್ಲಿ ಪಟ್ಟಾಭಿಷೇಕವನ್ನು ಮಾಡಿ, ಅನುಗ್ರಹವನ್ನು ಮಾಡಿ ಭಗವಂತ ಅಲ್ಲಿಂದ ಹೊರಡುತ್ತಾನೆ. ರಾಜ್ಯದ ಆಸೆ ಇಂದ ನಾನು ಕೊಂದದ್ದೇ ಅಲ್ಲವೇ ಅಲ್ಲ ಧರ್ಮದ ರಕ್ಷಣೆಗಾಗಿ, ಧರ್ಮದ ಸಂಸ್ಥಾಪನಕ್ಕಾಗಿ ನಾನು ಅವತಾರ ಮಾಡಿದ್ದು. ಅವನು ಮಣಿಭದ್ರ ಅನ್ನುವ ದೇವತೆಯ ಅವತಾರ ಎಂಬುದಾಗಿ ಶ್ರೀಮದಾಚಾರ್ಯರು ತಾತ್ಪರ್ಯ ನಿರ್ಣಯದಲ್ಲಿ ಹೇಳುತ್ತಾರೆ. ಆ ಶಕ್ರದೇವ ಅಂದರೆ ಮಣಿಭದ್ರನ ಅವತಾರ ಅವನು ದೇವ ಹೀಗಾಗಿ ಸಾತ್ವಿಕ ಸಜ್ಜನ ಅವನಿಗೆ ಪಟ್ಟಾಭಿಷೇಕವನ್ನು ಮಾಡಿ, ಅಭಯ ದಾನವನ್ನು ಮಾಡಿ, ಪರಮಾನುಗ್ರಹವನ್ನು ಮಾಡಿದ್ದಾನೆ ಪರಮಾತ್ಮ ಎಂಬುದಾಗಿ ತಿಳಿಸುತ್ತಾರೆ.

ಕೊಲ್ಹಾಪುರದಿಂದ ಮಥುರಾ ಪಟ್ಟಣಕ್ಕೆ ಐದು ದಿನ ಪ್ರವಾಸ ಮಾಡಿ ಶ್ರೀಕೃಷ್ಣ ಪರಮಾತ್ಮ, ಬಲರಾಮ ದೇವರು ಬಂದಿದ್ದಾರೆ **'ಪಞ್ಚರಾತ್ರೋಷಿತೌ ಪಥಿ'**[1] ಬಹಳ ಆಯಾಸ ಪಟ್ಟು ಬಂದರಾ ಏನೂ ಆಯಾಸ ಇಲ್ಲ ಇದೀಗ ತಿಳಿಸಿದಂತೆ ಲೋಕಾನುಗ್ರಹಕ್ಕಾಗಿ ಮಾರ್ಗಕ್ರಮಣವನ್ನು ಮಾಡಿ ಅತ್ಯಂತ ಅನಾಯಾಸವಾಗಿ ಮಥುರಾ ಪಟ್ಟಣಕ್ಕೆ ಬಂದಿದ್ದಾರೆ. ಏನು ವೈಭವ ಪಟ್ಟಣದಲ್ಲಿ ಜರಾಸಂಧನನ್ನು ಸೋಲಿಸಿ, ಶೃಗಾಲ ವಾಸುದೇವನನ್ನು ಸಂಹಾರ ಮಾಡಿ ಅತ್ಯದ್ಭುತವಾದ ಕಾರ್ಯವನ್ನು ಮಾಡಿ ಶ್ರೀಕೃಷ್ಣ ಪರಮಾತ್ಮ ಮತ್ತೆ ಮಥುರಾ ಪಟ್ಟಣಕ್ಕೆ ಬರುತ್ತಾ ಇದ್ದಾನೆ ಅಂತ ಇಡೀ ಮಥುರಾ ಪಟ್ಟಣವೇ ಪರಮಾತ್ಮನನ್ನು ಅತ್ಯಂತ ವೈಭವದಿಂದ, ವಾದ್ಯ ವೈಭವಗಳಿಂದ ಪುಷ್ಪವೃಷ್ಟಿಯನ್ನು ಮಾಡುತ್ತ, ಆರತಿಯನ್ನು ಮಾಡುತ್ತ ಸ್ವಾಗತವನ್ನು ಮಾಡಿ ವಿಶೇಷವಾಗಿ ಭಗವಂತನ ಪ್ರಶಂಸೆಯನ್ನು ಮಾಡಿದೆ.

ಮುಂದೆ ಬಲರಾಮ ದೇವರು ಕೃಷ್ಣ ಪರಮಾತ್ಮನ ಅನುಮತಿಯನ್ನು ಪಡೆದು ಗೋಕುಲಕ್ಕೆ ಬಂದಿದ್ದಾರೆ ಮತ್ತೆ. ಆ ಗೊಕುಲ ವೃಂದಾವನದ ಪ್ರಾಚೀನವಾದ ನೆನಪುಗಳು, ಕೃಷ್ಣ ಹಾಗೂ ತಾನು ಇಬ್ಬರೂ ಅಲ್ಲಿ ಮಾಡಿದ ವಿಹಾರ ಇವುಗಳೆಲ್ಲವನ್ನು ನೆನೆಸಿಕೊಂಡು ಮತ್ತೊಮ್ಮೆ ನೋಡಿಕೊಂಡು ಬರೋಣ ಅಂತ ಬಲರಾಮ ದೇವರು ಬಂದರೆ ಆ ಗೋಕುಲದಲ್ಲಿ ಇರುವಂತಹ ಎಲ್ಲ ಗೋಪಾಲಕರು, ಗೋಪಿಕಾ ಸ್ತ್ರೀಯರು ಎಲ್ಲರೂ ಕೂಡ ಬಹಳ ಬಹಳ ಸಂತೋಷ ಪಟ್ಟಿದ್ದಾರೆ, ಅದ್ಭುತವಾದ ಸ್ವಾಗತವನ್ನು ಮಾಡಿದ್ದಾರೆ. ನೀವಿಬ್ಬರು ರಾಮ ಕೃಷ್ಣರು ಇಲ್ಲಿರುವಾಗ ಎಂತಹ ಸಮೃದ್ಧಿ, ಎಂತಹ ವೈಭವ, ಏನು ಸಂತೋಷ, ಏನು ಆನಂದ, ಏನು ಉಲ್ಲಾಸ ಸ್ವರ್ಗವನ್ನೂ ಮೀರಿದ ಲೋಕ ಇದ್ದ ಹಾಗೆ ಆಗಿತ್ತು ಈ ಗೋಕುಲ ಅಂತಹ ಗೋಕುಲಕ್ಕೆ ಮತ್ತೆ ನೀವು ಬಂದದ್ದು ನಮಗೆ ಬಹಳ ಸಂತೋಷ ಅಂತ ಎಲ್ಲರೂ ಕೂಡ ಹೇಳಿದ್ದಾರೆ. ಬಲರಾಮ ದೇವರು ಅಲ್ಲಿ ವಿಹಾರ ಮಾಡುತ್ತಾ ಮಾಡುತ್ತಾ ಯಮುನಾ ನದಿ ಆ ಯಮುನಾ ನದಿಯನ್ನು ಆಕರ್ಷಣೆ ಮಾಡಿದ್ದಾರೆ, ಯಮುನಾ ನದಿಗೆ ಹೇಳಿದ್ದಾರೆ ನಾನು ಎಲ್ಲಿ ವಿಹಾರ ಮಾಡುತ್ತಿದ್ದೇನೆ ಅಲ್ಲಿ ನೀನು ಬರಬೇಕು ಅಂತ ಯಮುನೆ ಬಂದಿಲ್ಲ ಬರದಿದ್ದರೆ ತಮ್ಮ ಹಲಾಯುಧವನ್ನು ಹಾಕಿ ಎಳೆದರೆ ಆ ಹಲಾಯುಧದ ಮಾರ್ಗದಲ್ಲಿ ಯಮುನೆ ಧಾವಿಸಿ ಬಂದಿದ್ದಾಳೆ. ಬ್ರಹ್ಮವೈವರ್ತ ಪುರಾಣದಲ್ಲಿ ಅನಿರುದ್ಧನ ಎದುರಿನಲ್ಲಿ ಬಾಣಾಸುರ ಇದನ್ನೂ ಆಕ್ಷೇಪ ಮಾಡಿದ್ದಾನೆ ಇದೇನು ಯಮುನಾ ದೇವಿಯನ್ನು ಕರೆದು ವಿಹಾರ ಮಾಡುವುದು ಇದು ಸರಿಯಲ್ಲವಲ್ಲ ಬಲರಾಮ ದೇವರಿಗೆ ಶೋಭೆಸುವುದಿಲ್ಲ ಅಂತ. ಯಮುನೆಯನ್ನು ತನ್ನ ಪತ್ನಿಯನ್ನಾಗಿ ತನ್ನ ಜೊತೆಗೆ ವಿಹಾರ ಮಾಡುವುದಕ್ಕೋಸ್ಕರ ಕರೆದದ್ದಲ್ಲ ಯಮುನೆಯಲ್ಲಿ ಸ್ನಾನವನ್ನು ಮಾಡಿ ಪವಿತ್ರನಾಗಿ ತನ್ನ ಕಾರ್ಯವನ್ನು ತಾನು ಮಾಡುವುದಕ್ಕೋಸ್ಕರ ಯಮುನೆಯನ್ನು ಕರೆದದ್ದು ಅಂತ ಅನಿರುದ್ಧ ಉತ್ತರವನ್ನು ಕೊಡುತ್ತಾನೆ. ಆ ರೀತಿ ಯಮುನಾ ದೇವಿಯನ್ನು ಕರೆಯುತ್ತಾನೆ ಆ ಮಾತನ್ನು ಬ್ರಹ್ಮವೈವರ್ತ ಪುರಾಣದಲ್ಲಿ ನಾವು ಕೇಳುವ ಮಾತನ್ನು ಹರಿವಂಶದಲ್ಲಿ ನೋಡುತ್ತೇವೆ

ರಾಮಸ್ತು ಯಮುನಾಮಾಹ ಸ್ನಾತುಮಿಚ್ಛೇ ಮಹಾನದಿ । (46.30 ವಿಷ್ಣುಪರ್ವ)

ಅವಳ ಜೊತೆಗೆ ಸಂಗವನ್ನು ಮಾಡುವುದಕ್ಕಲ್ಲ ಸ್ನಾನ ಮಾಡುವುದಕ್ಕಾಗಿ ಕರೆದ ಅಂತ ಹರಿವಂಶವೂ ಹೇಳುತ್ತದೆ, ಬ್ರಹ್ಮವೈವರ್ತ ಪುರಾಣವೂ ಹೇಳುತ್ತದೆ. ಆ ರೀತಿಯಾಗಿ ಯಮುನಾ ದೇವಿಯನ್ನ ಕರೆದು ತನ್ನ ಅದ್ಭುತವಾದ ಪರಾಕ್ರಮ ನದಿ ಇದ್ದಲ್ಲಿ ತಾನು ಸ್ನಾನಕ್ಕೆ ಹೋದದ್ದಲ್ಲ, ತಾನಿದ್ದಲ್ಲಿ ನದಿಯನ್ನು ಕರೆದು ಸ್ನಾನ ಮಾಡಿದ ಮಹಾನುಭಾವ. ಬಲರಾಮ ದೇವರು ಅಂದರೆ ಶೇಷ ದೇವರು, ಶೇಷ ದೇವರು ಅಂದರೆ ಇತಿಹಾಸ ಪುರಾಣಾದಿಗಳಿಗೆ ಪಂಚರಾತ್ರಾದಿಗಳಿಗೆ, ಪೌರುಷೇಯ ಗ್ರಂಥಗಳಿಗೆ ಅಭಿಮಾನಿ ದೇವತೆಗಳು, ಎಲ್ಲಿ ಸಚ್ಛಾಸ್ತ್ರಗಳ ಪಾಠ ಪ್ರವಚನ ನಡೆಯುತ್ತೆ ಅಲ್ಲಿ ಎಲ್ಲಾ ನದಿಗಳ ಸನ್ನಿಧಾನ ಇರುತ್ತದೆ ಅಂತ ಹೇಳುತ್ತದೆ ಶಾಸ್ತ್ರ

1. 45.1 ವಿಷ್ಣುಪರ್ವ

ತತ್ರೈವ ಗಂಗಾ ಯಮುನಾ ಚ ತತ್ರ ಗೋದಾವರೀ ಸಿಂಧು ಸರಸ್ವತೀ ಚ
ಸರ್ವಾಣಿ ತೀರ್ಥಾನಿ ಭವಂತಿ ತತ್ರಯತ್ರಾಚ್ಯುತೋದಾರ ಕಥಾಪ್ರಸಂಗಃ

(38 ಪಾಂಡವಗೀತಾ ಅಥವಾ ಪ್ರಪನ್ನಗೀತಾ)

ಗಂಗಾ, ಯಮುನಾ, ಗೋದಾವರಿ, ಸಿಂಧು, ಸರಸ್ವತೀ ಎಲ್ಲಾ ನದಿಗಳು ಅಲ್ಲಿ ಇರುತ್ತವೆ ಎಲ್ಲಿ, **'ಯತ್ರಾಚ್ಯುತೋದಾರ ಕಥಾಪ್ರಸಂಗಃ'** ಶ್ರೀಹರಿ ಕಥೆ ಎಲ್ಲಿ ನಡೆಯುತ್ತಾ ಇರುತ್ತದೆಯೋ ಅಲ್ಲಿ ಎಲ್ಲಾ ನದಿಗಳು ಇರುತ್ತೆ ಅಂತ ಇದು ಕೇವಲ ಪುರಾಣಗಳಲ್ಲಿ, ಶಾಸ್ತ್ರಗಳಲ್ಲಿ ಹೇಳಿದ ಒಂದು ಅರ್ಥವಾಗ, ಸ್ತುತಿ ಮಾತ್ರ ಇದು ಅಂತ ಭಾವಿಸಬೇಡಿ. ಇದು ಸತ್ಯಸಂಗತಿ ಅಂತ ತೋರಿಸಿಕೊಡುವುದಕ್ಕೆ ಆ ಪೌರುಷೇಯ ಗ್ರಂಥಗಳಿಗೆ, ಹರಿಕಥಾ ಗ್ರಂಥಗಳಿಗೆ ಅಭಿಮಾನಿಗಳಾದ ಬಲರಾಮ ದೇವರು ನಾನಿದ್ದಲ್ಲಿ ನದಿ ಇರುತ್ತೆ ನೋಡಿ ಅಂತ ಪ್ರತ್ಯಕ್ಷವಾಗಿ ತಮ್ಮ ಸಮಕಾಲೀನ ಜನರಿಗೆ ತೋರಿಸಿಕೊಟ್ಟರು ಅಂತನ್ನುವುದನ್ನ ಈ ಕಥೆಯಿಂದ ನಾವು ಅರ್ಥ ಮಾಡಿಕೊಳ್ಳಬೇಕಾದದ್ದು. ಹಾಗಾದರೆ ಇವತ್ತಿಗೂ ಎಲ್ಲಿ ನಾವು ಹರಿಕಥಾ ಮಾಡುತ್ತೇವೋ ಅಲ್ಲಿ ಎಲ್ಲಾ ನದಿಗಳ ಸನ್ನಿಧಾನ ಇರುತ್ತದೆ ಅನ್ನುವ ಅನುಸಂಧಾನವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು.

ಮಾಘಮಾಸ ಮಹಾತ್ಮ್ಯದಲ್ಲಿ ಬರುತ್ತೆ. ಒಬ್ಬರು ಮಹಾಜ್ಞಾನಿಗಳು, ತಪಸ್ವಿಗಳು, ಋಷಿಗಳು ನಿರಂತರವಾಗಿ ಸಚ್ಛಾಸ್ತ್ರಗಳ, ವೇದಾದಿಗಳ ಪಾಠ ಪ್ರವಚನವನ್ನು ಮಾಡುತ್ತಾ ಒಂದು ಕಡೆಗೆ ಇರುತ್ತಾರೆ ಅನ್ನದಾನವನ್ನು ಮಾಡುತ್ತಾರೆ, ಪಾಠ ಪ್ರವಚನವನ್ನು ಮಾಡುತ್ತಾರೆ ಎರಡೇ ಅವರ ಕೆಲಸ ಅವರು ಗಂಗಾ ತೀರದಲ್ಲಿಯೇ ಆಶ್ರಮ ಕಟ್ಟಿಕೊಂಡು ಇರುತ್ತಾರೆ. ಒಬ್ಬರು ಯಾತ್ರಿಕರು ಅಲ್ಲಿ ಬರುತ್ತಾರೆ ಗಂಗಾ ಸ್ನಾನ ಮಾಡುವುದಕ್ಕೆ ಅಂತ ಸಾಮಾನು ಇಡುತ್ತಾರೆ ಚೀಲ ಇಟ್ಟು ಗಂಗಾ ಸ್ನಾನ ಮಾಡಿಕೊಂಡು ಬರುತ್ತೇವೆ ಅವಶ್ಯವಾಗಿ ಬನ್ನಿ ಅಡುಗೆ ಎಲ್ಲ ಸಿದ್ಧವಾಗಿ ಇರುತ್ತದೆ ನೀವು ಸ್ನಾನ ಮಾಡಿಕೊಂಡು ಬಂದು ಆಮೇಲೆ ಆಹ್ನಿಕ ಮಾಡಿಕೊಂಡು ಬಂದು ನೈವೇದ್ಯವನ್ನು ಮಾಡಿಕೊಂಡು ಊಟ ಮಾಡಬಹುದು ಅಂತ. ಸರಿ, ಎಲ್ಲ ಸಿದ್ಧ ಮಾಡಿ ಇಡಿ ಅಂತ ಹೇಳಿದರು ಎಲ್ಲಿದೆ ಗಂಗೆ ಅಂತ ಕೇಳುತ್ತಾರೆ ಗೊತ್ತಿಲ್ಲ ಅಂತ ಇವರು ಹೇಳುತ್ತಾರೆ, ಅಲ್ಲ ಇದೇ ಊರಲ್ಲಿ ಇದ್ದೀರಲ್ಲ ನೀವು. ಹೌದು ನಾವು ಇರುವುದು ಇದೇ ಊರಲ್ಲಿ ಆದರೆ ನಾವು ಮಾಡುವುದು ಗಂಗಾ ಯಾತ್ರೆಗೆ ಬಂದವರಿಗೆ ಅನ್ನ ಹಾಕುತ್ತೇವೆ, ಅನ್ನದಾನ ಮಾಡುತ್ತೇವೆ ಉಳಿದ ಹೊತ್ತು ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತೇವೆ ಇಷ್ಟು ನಮ್ಮ ಕೆಲಸ. ಅಯ್ಯೋ ಹಾಗಾದರೆ ನಿಮ್ಮ ಮನೆಯಲ್ಲಿ ನಾವು ಆತಿಥ್ಯವನ್ನು ಸ್ವೀಕಾರ ಮಾಡುವುದಿಲ್ಲ ನೀವು ಗಂಗೆಯ ಊರಲ್ಲಿ ಇದ್ದು ಗಂಗೆಯಲ್ಲಿ ಸ್ನಾನ ಮಾಡುವುದಿಲ್ಲ ಹೊರಟಿವಿ ಅಂತ ಚೀಲ ತೆಗೆದುಕೊಂಡು ಹೊರಡುತ್ತಾರೆ.

ದಾರಿಯಲ್ಲಿ ಬೇರೆ ಯಾರಿಗೋ ಕೇಳುತ್ತಾರೆ ಗಂಗಾ ಇಲ್ಲಿದೆ ಅಂತ ತೋರಿಸುತ್ತಾರೆ ಹೋಗುತ್ತಾರೆ ನೋಡುತ್ತಾರೆ ಅಲ್ಲಿ ಬರೀ ಗಂಗೆಯ ಪಾತ್ರ ಇದೆ ನೀರಿಲ್ಲ. ಅವರು ಅಂದರು ಗಂಗೆಯಲ್ಲಿ ಎಂದು ನೀರು ಬತ್ತೋದಿಲ್ಲ ಅಂತ ನಾವು ಕೇಳಿದ್ದೀವಿ ಗಂಗೆಯ ಪಾತ್ರ ಇದೆ ನೀರಿಲ್ಲ ಆ ಪಾತ್ರವನ್ನು ಅನುಸರಿಸಿ ಹಾಗೇ ಹೋಗಿದ್ದಾರೆ ಗಂಗೋತ್ರಿಯವರೆಗೆ ಒಂದು ಹನಿ ಗಂಗಾ ಕಂಡಿಲ್ಲ ಅವರಿಗೆ. ಆಗ ಬಹಳ ಪಶ್ಚಾತ್ತಾಪ ಆಗಿ ದುಃಖಪಟ್ಟು ಪ್ರಾಣ ತ್ಯಾಗವನ್ನೇ ಮಾಡಬೇಕು ಅಂತ ಹೊರಟಾಗ ಆಗ ಅವರಿಗೆ ಸೂಚನೆಯಾಗಿದೆ ನೀವು ಯಾವ ಶಾಸ್ತ್ರ, ಪಾಠ ಪ್ರವಚನ ಮಾಡುವವರಿಗೆ ತಿರಸ್ಕಾರ ಮಾಡಿ ಇಲ್ಲಿ ಬಂದಿದ್ದೀರಿ ಅವರಿಗೆ ಹೋಗಿ ಕಾಲಿಗೆ ಬೀಳಿ, ತಪ್ಪಾಯಿತು ಅಂತ ಅನ್ನಿ ಆಮೇಲೆ ಗಂಗೆ ದರ್ಶನ ಕೊಡುತ್ತಾಳೆ ಅಂತ. ಮತ್ತೆ ಕಷ್ಟಪಟ್ಟು ನಡೆದುಕೊಂಡು ಬಂದಿದ್ದಾರೆ ಮಹಾನುಭಾವರು. ಇವರಿಗೆ ನಮಸ್ಕಾರ ಮಾಡಿ ನಿಮ್ಮ ಪಾದ ಒತ್ತುತ್ತೇವೆ ಅಂತ ಬಂದರೆ ಅವರಿಗೆ ಬಹಳ ಸಂಕೋಚ ಆಯಿತು ನೀವು ಜ್ಞಾನಿಗಳು ಅತಿಥಿಗಳು ಹಾಗೆಲ್ಲಾ ಅನ್ನಬಾರದು ಬನ್ನಿ ಅಂತ ಅದು ಇಲ್ಲ ಮಹಾರಾಯ ಮೊದಲು ನಮಗೆ ಗಂಗಾ

ದರ್ಶನ ಆಗಬೇಕಾಗಿದೆ ನಿನ್ನ ಪಾದ ಕೊಡು ಅಂತ. ಇವರಿಗೆ ತಪ್ಪಾಯಿತು ಅಂತ ಕ್ಷಮೆಯಾಚನೆ ಮಾಡಿದ ಮೇಲೆ ಗಂಗಾ ದರ್ಶನವಾಗಿದೆ ಆಮೇಲೆ ಗಂಗಾ ಸ್ನಾನ ಮಾಡಿದ್ದಾರೆ ಅಂತ ವಾಯು ಪುರಾಣಾಂತರ್ಗತ ಮಾಘಮಾಸ ಮಹಾತ್ಮ್ಯದಲ್ಲಿ ನಾವು ಕಥೆಯನ್ನು ಕೇಳುತ್ತೇವೆ. ಆ ಒಂದು ತತ್ವವನ್ನು ಗಂಗಾದಿ ಸಕಲ ತೀರ್ಥಗಳ ಸನ್ನಿಧಾನ ಮಹಾನುಭಾವರಾದ ರಘುನಾಥತೀರ್ಥ ಶ್ರೀಪಾದಂಗಳವರ ಒಂದು ಚರಿತ್ರೆಯಲ್ಲಿಯೂ ಈ ಕಥೆಯನ್ನು ಕೇಳುತ್ತೇವೆ. ಅವರಿದ್ದಲ್ಲಿಯೇನೆ ಗಂಗಾದಿ ಸಕಲ ತೀರ್ಥಗಳ ಸನ್ನಿಧಾನ ಆ ಗಂಗಾದಿ ಸಕಲ ತೀರ್ಥಾಭಿಮಾನಿ ದೇವತೆಗಳು ವಿಶೇಷವಾಗಿ ಆ ಎಲ್ಲ ಕುಂಭಗಳಿಂದ ಆ ರಘುನಾಥತೀರ್ಥರಿಗೆ ಅಭಿಷೇಕ ಮಾಡುತ್ತವೆ ಅಂತನ್ನುವುದನ್ನು ನಾವು ಕೇಳಿದ್ದೇವೆ ಅಷ್ಟು ಆ ಶಾಸ್ತ್ರ ಪಾಠ ಪ್ರವಚನ ಮಾಡುವವರಿಗೆ ನದ್ಯಭಿಮಾನಿ ದೇವತೆಗಳು ಮಾಡುವ ಅನುಗ್ರಹ ಅಂತ ನಾವಿಲ್ಲಿ ಅರ್ಥ ಮಾಡಿಕೊಳ್ಳಬೇಕು. ಈ ರೀತಿ ಬಲರಾಮ ದೇವರು ತಮ್ಮ ಸಾಮರ್ಥ್ಯವನ್ನು ತೋರಿಸಿಕೊಟ್ಟಿದ್ದಾರೆ.

ಮುಂದೆ ಶ್ರೀಕೃಷ್ಣ ಪರಮಾತ್ಮ ರುಕ್ಮಿಣಿಯ ಸ್ವಯಂವರಕ್ಕಾಗಿ ಕುಂಡಿನಪುರಕ್ಕೆ ಹೊರಡುತ್ತಾ ಇದ್ದಾನೆ ರುಕ್ಮಿಣಿಯ ಸ್ವಯಂವರದ ಘೋಷಣೆಯಾಗಿದೆ ಭಾಗವತದಲ್ಲಿ ತಿಳಿಸುವಂತೆ ಆ ರುಕ್ಮಿಣಿಯ ಪತ್ರ ಇತ್ಯಾದಿಗಳ ವಿಚಾರ ನಂತರ ಬರುತ್ತದೆ. ಮೊದಲು ಸ್ವಯಂವರದ ಘೋಷಣೆಯನ್ನು ಮಾಡಿದಾಗ ಆ ವಿಚಾರವನ್ನು ತಿಳಿದಿರುವಂತಹ ಶ್ರೀಕೃಷ್ಣ ಪರಮಾತ್ಮ ಎಲ್ಲ ಯಾದವರ ಜೊತೆಗೆ ತಾನು ಹೊರಡುತ್ತಾನೆ. ಕುಂಡಿನಪುರಕ್ಕೆ ಶ್ರೀಕೃಷ್ಣ ಪರಮಾತ್ಮ ಬರುತ್ತಾ ಇದ್ದಾನೆ ಅನ್ನುವ ವಾರ್ತೆ ಗೊತ್ತಾದ ತಕ್ಷಣ ದೊಡ್ಡದಾದಂತಹ ಒಂದು ಸಭೆ ಜರಾಸಂಧನ ಅಧ್ಯಕ್ಷತೆ ಏನು ಮಾಡಬೇಕು ಈಗ, ಕೃಷ್ಣ ಸ್ವಯಂವರಕ್ಕೆ ಬಂದ ಅಂತಾದರೆ ಕೃಷ್ಣನನ್ನೇ ವರಿಸುತ್ತಾಳೆ ರುಕ್ಮಿಣಿ ಇದರೊಳಗೆ ಸಂಶಯವೇ ಇಲ್ಲ. ಅವನು ಮೂರು ಲೋಕಗಳಲ್ಲಿಯೂ ಅತ್ಯಂತ ರೂಪವಂತ ಬಲವಂತ ಗುಣವಂತ, ಇವಳು ಮೂರು ಲೋಕಗಳಲ್ಲಿ ಅತ್ಯಂತ ಶ್ರೇಷ್ಠಳಾದ ರೂಪಿಣಿ, ಯೋಗ್ಯನಾದ ವರ ಯೋಗ್ಯಳಾದ ಕನ್ಯೆ ಹೀಗಾಗಿ ಇವಳು ಅವನನ್ನೇ ವರಿಸುವುದರಲ್ಲಿ ಯಾವ ಸಂಶಯ ಇಲ್ಲ ನಮ್ಮ ಇಚ್ಛೆ ಇಡೇರುವುದಿಲ್ಲ ಏನು ಮಾಡಬೇಕು ಅದಕ್ಕೆ ಅಂತ ಆಲೋಚನೆ ಮಾಡುತ್ತ ಇದ್ದಾರೆ. ಆ ಶ್ರೀಕೃಷ್ಣ ಪರಮಾತ್ಮ ಬಂದರೆ ಮಧ್ಯದಲ್ಲಿ ದಂತವಕ್ತ್ರ ಮಾತಾಡುತ್ತಾನೆ ನೋಡಿದರೆ ಅವನು ಕೃಷ್ಣನ ವಿರೋಧಿ ಆದರೆ ಒಳಗೆ ವಿಜಯನ ಆವೇಶ, ಶಿಶುಪಾಲನಲ್ಲಿ ಜಯನ ಆವೇಶ ಆ ಜಯ ವಿಜಯರು ಇರುವುದರಿಂದ ಅವರು ಅನ್ನುತ್ತಾರೆ ನಮಗೂ ಆ ಕೃಷ್ಣನನ್ನು ನೋಡಿದರೆ ಭಕ್ತಿ ಬಂದು ಬಿಡುತ್ತದೆ ಒಂದೊಂದು ಸಲ, ಅವನ ಜೊತೆಗೆ ಸಂಧಾನ ಮಾಡಿಕೊಳ್ಳುವುದೇ ಯೋಗ್ಯ. ಅವನು ಮಹಾಪರಾಕ್ರಮಿ, ಮಹಾಶೂರ, ವೀರ, ಧೀರ ಸಕಲ ಗುಣಗಳಿಗೆ ಭಾಜನ ಅಂತಹ ಅನಂತಗುಣ ಪರಿಪೂರ್ಣ, ಸರ್ವದೋಷ ವಿದುರ, ಪರಮ ಸುಂದರಮೂರ್ತಿ ಅಂಥವನು ಅಳಿಯನಾಗಿ ಸಿಗುವುದು ಅಂದರೆ ಒಂದು ದೊಡ್ಡ ಭಾಗ್ಯ ಭೀಷ್ಮಕನಿಗೆ ಕೃಷ್ಣ ಬರುತ್ತಾನೆ ಅಂತ ಯಾಕೆ ಈ ದೊಡ್ಡ ಸಭೆ ಅವನಿಗೆ ಕೊಟ್ಟು ಮದುವೆ ಮಾಡಿದರೆ ಆಯಿತಲ್ಲ ಅವನನ್ನೇ ಆರಿಸುತ್ತಾಳಲ್ಲವಾ ಆರಿಸಲಿ ಅವನಿಗೆ ಕೊಟ್ಟು ಮದುವೆ ಮಾಡಿದರಾಯಿತು ತಪ್ಪೇನು ಅಂತ. ಜರಾಸಂಧ ಕೆಂಡದ ಕಣ್ಣಿನಿಂದ ನೋಡುತ್ತಾ ಇದ್ದಾನೆ ಅವರನ್ನು, ಸಾಲ್ವ ಬೈಯುತ್ತಾ ಇದ್ದಾನೆ ಸುಮ್ಮನೆ ಇರಿ ಎಂದೆಂದಿಗೂ ಕೃಷ್ಣನಲ್ಲಿ ಭಕ್ತಿ ಮಾಡುವುದು ಯೋಗ್ಯವಾದದ್ದಲ್ಲ, ದ್ವೇಷ ಮಾಡುವುದೇ ನಮ್ಮ ಧರ್ಮ ಅಸುರರ ಧರ್ಮ. ವಿಚಿತ್ರ ಅಂದರೆ ಜರಾಸಂಧ, ಸಾಲ್ವ ಇಬ್ಬರೂ ಕೃಷ್ಣನ ಮಹಿಮೆಯನ್ನು ವರ್ಣನೆ ಮಾಡುತ್ತಾರೆ ಅವನು ಸಾಕ್ಷಾತ್ ದೇವರು ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕ, ಸರ್ವಸಮರ್ಥ ನಾರಾಯಣನೇ ಇಲ್ಲಿ ಅವತಾರ ಮಾಡಿದ್ದು, ದೈತ್ಯರ ನಾಶ ಮಾಡಿ ಸಜ್ಜನರ ರಕ್ಷಣೆಗೆ ಅವತಾರ ಮಾಡಿದ್ದಾನೆ ಅಂತ ಅನ್ನುತ್ತಾರೆ. ಹರಿವಂಶದಲ್ಲಿ ವರ್ಣನೆ ಬರುತ್ತದೆ ಬಹಳ ವಿಚಿತ್ರವಾದ ರೀತಿಯಲ್ಲಿ.

ನಾರಾಯಣಂ ಜಗದ್ಯೋನಿಂ ಪುರಾಣಂ ಪುರುಷಂ ಧ್ರುವಮ್ ॥ (48.31 ವಿಷ್ಣುಪರ್ವ)

ಸ್ರಷ್ಟಾರಂ ಸರ್ವಭೂತಾನಾಂ ವ್ಯಕ್ತಾವ್ಯಕ್ತಂ ಸನಾತನಮ್ । (48.32 ವಿಷ್ಣುಪರ್ವ)

ಈ ರೀತಿ ಆ ಜರಾಸಂಧನ ಮುಖದಿಂದ, ಸಾಲ್ವನ ಮುಖದಿಂದ ಈ ತರಹದ ಮಾತುಗಳು ಬರುತ್ತೆ ಅಂದರೆ ಬಹಳ ಆಶ್ಚರ್ಯ ಆಯಿತು. ನೋಡಿ ಅಂಥವರ ಬಾಯಿಯಲ್ಲಿಯೂ ಕೃಷ್ಣ ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕ, ಸಕಲ ಜಗನ್ನಿಯಾಮಕ, ಜಗದ್ ಜನ್ಮಾದಿಕಾರಣ ಅವನು ದೇವತೆಗಳ ರಕ್ಷಣೆ ಮಾಡುವುದಕ್ಕೆ, ಸಜ್ಜನರ ರಕ್ಷಣೆ ಮಾಡುವುದಕ್ಕೆ ಅವತಾರ ಮಾಡಿದವ. ದೈತ್ಯರ ಸಂಹಾರ ಮಾಡುವುದಕ್ಕೆ ಅವತಾರ ಮಾಡಿದ್ದಾನೆ ನಾವು ಸುಮ್ಮನೆ ಬಿಡಬಾರದು ಅವನನ್ನು ಕೊನೆಗೆ ಒಂದು ಮಾತು ಅಷ್ಟೇ ಅಂದರೆ ದೇವರು ಜಗದ್ ಜನ್ಮಾದಿಕಾರಣ ಅನ್ನುವುದನ್ನ ಅಂತಹ ಅಸುರರೂ ಒಪ್ಪಿಕೊಳ್ಳುತ್ತಾ ಇದ್ದಾರೆ ಆದರೆ ತಮ್ಮ ಸ್ವಭಾವಕ್ಕೆ ಅನುಗುಣವಾಗಿ ದ್ವೇಷವನ್ನು ಮಾಡುತ್ತ ಇದ್ದಾರೆ, ಅದಕ್ಕೆ ಯುಕ್ತಿಯನ್ನು ಬೇರೆ ಕೊಡುತ್ತಾನೆ ಅವನು ನಾರಾಯಣ ಆಗಿದ್ದ ಅಂದರೆ

ಕಥಮನ್ಯಸ್ಯ ಮರ್ತ್ಯಸ್ಯ ಗರುಡೋ ವಾಹನಂ ಭವೇತ್ ॥ (48.35 ವಿಷ್ಣುಪರ್ವ)

ಆ ದೇವರು ಬಂದಿದ್ದಾನೆ ಅನ್ನುವ ವಾರ್ತೆ ಇವರಿಗೆ ಗೊತ್ತಾದದ್ದೇ ನೂರಾರು, ಸಾವಿರಾರು, ಲಕ್ಷಾವಧಿ ರಾಜರು, ಸೈನಿಕರೆಲ್ಲ ಮುಕ್ಕರಿಸಿ ಬಿದ್ದಾಗ, ಇದ್ದಕ್ಕಿದ್ದ ಹಾಗೆ ನಿಂತಲ್ಲಿ ಬೀಳುತ್ತಾರೆ ಕೆಳಗೆ ಮೂಗು ಮುರಿಯುವ ಹಾಗೆ ಅಂಗಾತ ಬೀಳುತ್ತಾರೆ, ಮುಕ್ಕರಿಸಿ ಬೀಳುತ್ತಾರೆ ಯಾಕೆ ಅಂದರೆ ಆ ಗರುಡ ದೇವರ ಗಾಳಿಯ ವೇಗ. ಕೃಷ್ಣ ಬಂದಿದ್ದಾನೆ ಅಂತ ಗೊತ್ತಾದಾಗ ಕೃಷ್ಣನ ಆಜ್ಞೆಯಂತೆ ಗರುಡನೂ ಅಲ್ಲಿ ಬರುತ್ತಾನೆ, ಬರುವಾಗ ಹೀಗೆ ಬರುತ್ತಾನೆ ಎಲ್ಲರನ್ನೂ ಬೀಳಿಸಿ ಬರುತ್ತಾನೆ ಆಗ ಗೊತ್ತಾಗುತ್ತೆ ಗರುಡ ವಾಹನನಾದ ಕೃಷ್ಣ ಇಲ್ಲಿ ಬಂದಿದ್ದಾನೆ ಅಂತ ಅದನ್ನು ಹೇಳುತ್ತಾನೆ ಅಂತಹ ಗರುಡ ವಾಹನ ಅಂತಾದರೆ ಅವನು ನಾರಾಯಣನೇ. ಗರುಡನ ಪಕ್ಷವಾತ, ಪಕ್ಷವಾತದಿಂದಲೇ ನಮ್ಮೆಲ್ಲರ ಪಾತ ಆಗಿದೆ ಅಂತಾದರೆ ಇನ್ನು ಆ ಶ್ರೀಕೃಷ್ಣ ಪರಮಾತ್ಮನಿಂದ ನಾವು ಸೋಲುವುದರೊಳಗೆ ಯಾವುದೇ ಸಂಶಯವೂ ಇಲ್ಲ ಏನು ಮಾಡಬೇಕು ಅದಕ್ಕೆ ಒಂದು ಆಲೋಚನೆ ಮಾಡಿದ್ದಾರೆ ಆ ಕೃಷ್ಣ ಭಾರೀ ಸ್ವಾಭಿಮಾನಿ ಇಂತಹ ದೊಡ್ಡ ಸಭೆಯೊಳಗೆ ಅವನಿಗೆ ಒಂದು ಆಸನವನ್ನೇ ನಾವು ಇಡುವುದು ಬೇಡ. ಅವನು ಬಂದಿದ್ದಾನೆ ಅಂತ ಗೊತ್ತಾಗಿದೆ ಅಂತಹ ಪ್ರಸಿದ್ಧನಾದ ಒಬ್ಬ ವ್ಯಕ್ತಿ ಬಂದಿದ್ದಾನೆ ಅಂದರೆ ಅವನಿಗೆ ಒಂದು ಆಸನವನ್ನು ಕಾದಿರಿಸಬೇಕು, ನಾವು ಇಡುವುದೇ ಬೇಡ ಅವಮಾನ ಆಗುತ್ತೆ ಹೋಗಿಬಿಡುತ್ತಾನೆ ನಮ್ಮ ಕೆಲಸ ನಾವು ಮಾಡಿಕೊಳ್ಳಬಹುದು ಮುಂದೆ ಸ್ವಯಂವರ. ಆಮೇಲೆ ಅವಳು ಯಾರನ್ನಾದರೂ ಆರಿಸಲಿ ಶಿಶುಪಾಲನನ್ನೇ ಆರಿಸುತ್ತಾಳೆ ಬೇರೆ ಏನು ಗತಿ ಈ ಆಲೋಚನೆಯನ್ನು ಮಾಡಿದ್ದಾರೆ.

ಕ್ರಥ, ಕೈಶಿಕರು ಅಂತ ಭೀಷ್ಮಕ ರಾಜನ ತಮ್ಮಂದಿರು ಅವರಿಬ್ಬರೂ ಸಜ್ಜನರೇ. ಭೀಷ್ಮಕ ರಾಜ ಮಿತ್ರ ಎಂಬ ದೇವತೆಯ ಅವತಾರ. ಮಿತ್ರನಾಮಕನಾದ ಆದಿತ್ಯರಲ್ಲಿ ಒಬ್ಬ ಆ ಮಿತ್ರನ ಅವತಾರ ಹದಿನೇಳನೆಯ ಕಕ್ಷೆ, ರಾಹುವಿನ ಆವೇಶದಿಂದ ಕೂಡಿದವ ಭೀಷ್ಮಕ ರಾಜ. ಅವನ ತಮ್ಮಂದಿರು ಕ್ರಥ, ಕೈಶಿಕರು ಇವರು ಪವಮಾನ ಮತ್ತು ಶುಂಧಿ ಅನ್ನುವ ಅಗ್ನಿಯ ಇಬ್ಬರು ಮಕ್ಕಳು ಅವರ ಅವತಾರ. ಆ ರುಕ್ಮಿಣಿ ಸಾಕ್ಷಾತ್ ಮಹಾಲಕ್ಷ್ಮೀ, ರುಕ್ಮಿ ಭೀಷ್ಮಕನ ಮಗ ರುಕ್ಮಿಣಿಯ ಅಣ್ಣ ಅವನು ಇಲ್ವಲ ವಾತಾಪಿ ಇಲ್ವಲ ಅಂತ ಇಬ್ಬರು ದೈತ್ಯರ ಹೆಸರನ್ನು ನೀವು ಕೇಳಿದ್ದೀರಿ. ಆ ಇಲ್ವಲ ಈ ದ್ವಾಪರ ಯುಗದಲ್ಲಿ ಕೃಷ್ಣನ ಕಾಲದಲ್ಲಿ ಇಲ್ವಲ್ಲ ಅಂತ ಆಲೋಚನೆ ಮಾಡಬೇಡಿ ಆ ಇಲ್ವಲನೇ ರುಕ್ಮಿ ಆಗಿ ಅವತಾರ ಮಾಡಿದ್ದಾನೆ ಆದರೆ ಅಂತಹ ದುಷ್ಟ ಕೃಷ್ಣನ ಶಾಲಕ ಹೇಗಾಗುವುದು ಅದಕ್ಕೆ ಅವನೊಳಗೆ ಶುಚಿ ಎಂಬ ಒಬ್ಬ ಅಗ್ನಿಯ ಮಗ ಆವೇಶ ಮಾಡಿದ್ದಾನೆ. ಸ್ವತಃ ಅವನು ದೈತ್ಯ ಇಲ್ವಲ ಆದರೆ ಯಾವ ದೇವತೆಗಳ ಆವೇಶವೂ ಅವನಲ್ಲಿ ಇಲ್ವಲ್ಲ ಅವನು ಹೇಗೆ ಕೃಷ್ಣನ ಬಳಗ ಆದ ಅಂತ ಅಂದುಕೊಳ್ಳಬೇಡಿ ಶುಚಿ ಅನ್ನುವ ಅಗ್ನಿ ಪುತ್ರನ ಆವೇಶ ಇದೆ ಅಂತ ಇಷ್ಟು ನಿರ್ಣಯವನ್ನು ಶ್ರೀಮದಾಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ತಿಳಿಸಿಕೊಟ್ಟಿದ್ದಾರೆ.

ಹೀಗಾಗಿ ಅವನು ಸ್ವಯಂ ಮಹಾದುಷ್ಟ. ಕೃಷ್ಣನ ಸಂಬಂಧಿಕ ಆಗುವುದಕ್ಕೆ ಮಾತ್ರ ಆ ಶುಚಿ ಶುಚಿಯಾಗಿ ಕುಳಿತಿದ್ದಾನೆ ಒಳಗೆ ಆದರೆ ಸ್ವಯಂ ಅವನು ದುಷ್ಟ ರುಕ್ಮಿಣಿಯನ್ನು ಕೃಷ್ಣನಿಗೆ ಕೊಡುವ ಮನಸ್ಸಿಲ್ಲ ವಿರೋಧ ಮಾಡುತ್ತಾನೆ ಅದಕ್ಕೆ. ಆದರೆ ಕ್ರಥ, ಕೈಶಿಕರು ಮಾತ್ರ ಭಗವದ್ಭಕ್ತರು ಅವರು ಅಗ್ನಿಪುತ್ರರ ಅವತಾರರೇ ಆವೇಶ ಮಾತ್ರ ಅಲ್ಲ ಅಗ್ನಿ ಪುತ್ರರ ಅವತಾರ ಹೀಗಾಗಿ ಸ್ವಯಂ ಸಜ್ಜನರು ತಮ್ಮ ಪಟ್ಟಣಕ್ಕೆ ವಿದರ್ಭಾ ನಗರಿ ಇವರು ಕುಂಡಿನಪುರದಲ್ಲಿ ಇದ್ದಾರೆ ಅವರು ವಿದರ್ಭ ನಗರಿಗೆ ಕರೆದುಕೊಂಡು ಹೋಗುತ್ತಾರೆ. ಕೈಶಿಕ ತನ್ನ ಮನೆಯಲ್ಲಿ ದೊಡ್ಡದಾದ ಸಿಂಹಾಸನ, ಅದ್ಭುತವಾದ ಶ್ರೇಷ್ಠವಾದ ಭವನ ಕೃಷ್ಣ ಬರುತ್ತಾನೆ ಅಂತ ಕಟ್ಟಿಸಿದ್ದು, ಅವನಿಗಾಗಿ ಹೊಸದಾದ ಭವನವನ್ನೇ ಕಟ್ಟಿಸಿ ಶ್ರೇಷ್ಠವಾದ ಆಸನವನ್ನು ನಿರ್ಮಾಣ ಮಾಡಿ ಅಲ್ಲಿ ಅವನನ್ನು ಕೂಡಿಸಿ ಆರ್ಘ್ಯಪಾದ್ಯಾದಿಗಳಿಂದ ಪೂಜೆಯನ್ನು ಮಾಡಿ ಕೃಷ್ಣನಿಗೆ ಸೇವೆಯನ್ನು ಮಾಡುತ್ತಾನೆ. ಕ್ಷಮಿಸು ಪರಮಾತ್ಮ ರಾಜರು ಮಾಡಿದ ಅವಮಾನ ನಿನಗೆ ಆಸನ ಕೊಟ್ಟಿಲ್ಲ ಅಂತ ಕ್ಷಮಾ ಮಾಡು ಅವರು ಮಾಡಿದ ತಪ್ಪನ್ನು, ನಾವು ಕ್ಷಮೆ ಕೇಳುತ್ತೇವೆ ನಮ್ಮನ್ನು ರಕ್ಷಿಸು ಉದ್ಧಾರ ಮಾಡು, ಸಜ್ಜನರಿಗೆ ಅನುಗ್ರಹವನ್ನು ಮಾಡು ಅಂತ ಅವರು ಪ್ರಾರ್ಥನೆಯನ್ನು ಮಾಡುತ್ತಾರೆ. ಅಷ್ಟರಲ್ಲಿ ಆಕಾಶವಾಣಿ ದೇವದೂತರ ವಚನ ಕೇಳಿಸುತ್ತಾ ಇದೆ ಇಂದ್ರ ದೇವರು ಹೇಳುತ್ತ ಇದ್ದಾರೆ ಶ್ರೀಕೃಷ್ಣ ಪರಮಾತ್ಮನಿಗೆ ಅದ್ಭುತವಾದಂತಹ ಅಭಿಷೇಕ ಆಗಬೇಕು. ಅವನಿಗೆ ಆಸನ ಕೊಡದೇ ಅವಮಾನ ಮಾಡಬೇಕು ಅಂತ ನೀವೆಲ್ಲಾ ಆಲೋಚನೆ ಮಾಡಿದ್ದೀರಿ, ಎಚ್ಚರಿಕೆ ಇರಲಿ ನಿಮಗೆ, ಕೃಷ್ಣ ಪರಮಾತ್ಮನಿಗೆ ಸರಿಯಾದ ಗೌರವವನ್ನು ಸಲ್ಲಿಸಿದೇ ಇದ್ದರೆ ವಜ್ರ ಪ್ರಹಾರವನ್ನು ಮಾಡಿ ನಿಮ್ಮೆಲ್ಲರನ್ನು ಸಂಹಾರ ಮಾಡಿಬಿಡುತ್ತೇನೆ. ನೀವು ಕೊಡುವ ಆಸನ ಬೇಕಾಗಿಲ್ಲ ನಾನು ಸ್ವರ್ಗದಿಂದಲೇ ಆಸನವನ್ನು ಕಳಿಸುತ್ತೇನೆ ಅಂತ ಸ್ವರ್ಗದಿಂದಲೇ ಆಸನವನ್ನು ಕಳಿಸಿದ್ದಾರೆ ಇದು ಕೇವಲ ಕೈಶಿಕನಿಗೆ ಕೇಳಿಸಿದೆ ಅವನು ಈ ಭೀಷ್ಮಕ ರಾಜ, ಜರಾಸಂಧನಿರುವ ಸಭೆಗೆ ಒಬ್ಬ ದೂತನನ್ನು ಕೊಟ್ಟು ಕಳಿಸಿದ ಹೀಗೆ ಇಂದ್ರನ ಆದೇಶ ಬಂದಿದೆ ಅಂತ.

ಅವರು ನಂಬುತ್ತಾರೋ ಇಲ್ಲವೋ ಅಂತ ಮತ್ತೊಮ್ಮೆ ಇಂದ್ರ ದೇವರು ಚಿತ್ರಾಂಗದನೆಂಬ ದೂತನಿಂದ ಆ ಸಭೆಯ ಮಧ್ಯದಲ್ಲಿ ಇದನ್ನೇ ಪುನಃ ಆದೇಶವನ್ನು ಮಾಡಿಸಿದ್ದಾನೆ. ಚಿತ್ರಾಂಗದ ಯಾವಾಗಲೂ **'ಸದಾಹಮಕ್ಷಿಗೋಚರಃ'** ಇಂದ್ರನ ಎದುರಿಗೇ ಕೈಜೋಡಿಸಿಕೊಂಡು ನಿಂತಂಥವ, ಇಂದ್ರ ಸೇವಕ ಅವನು ಇಪ್ಪತ್ತುನಾಲ್ಕು ಗಂಟೆ ಇಂದ್ರನ ಕಣ್ಣೆದುರಿಗೆ ಇರುವಂತಹ ಸೇವಕ. ನಾನು ಇಂದ್ರನ ಆಜ್ಞೆಯನ್ನು ತಿಳಿಸುತ್ತಾ ಇದ್ದೇನೆ. ಪಟ್ಟಾಭಿಷೇಕ ಮಾಡಿ ಸಮಸ್ತ ರಾಜ ರಾಜ ಅಂತ ಆ ದೇವರನ್ನು ನೀವು ಹೊಗಳಿ ಗೌರವವನ್ನು ಸಲ್ಲಿಸಿದರೆ ಉಂಟು, ಇಲ್ಲಾ ಅಂದರೆ ನಿಮ್ಮೆಲ್ಲರನ್ನು ಸಂಹಾರ ಮಾಡುತ್ತೇನೆ ಅಂತ ಇಂದ್ರನ ಆದೇಶ ಇದೆ ಅಂತ ಹೇಳಿದರೆ ಎಲ್ಲರೂ ನಡುಗಿ ಹೋದರು. ಇಂದ್ರನ ಜೊತೆಗೆ ಯುದ್ಧ ಮಾಡುವ ಸಾಮರ್ಥ್ಯ ನಮಗಿದೆ ನಿಜ ನಾವು ಅಂತಹ ಪರಾಕ್ರಮಿಗಳು ಒಬ್ಬೊಬ್ಬರು ಆದರೆ ಕೃಷ್ಣನ ಸಹಾಯ ಇದೆ ಅವನಿಗೆ ಹೀಗಾಗಿ ನಾವು ನೋಡಿದರೆ ಬ್ರಹ್ಮ ರುದ್ರಾದಿಗಳ ವರಗಳನ್ನು ಪಡೆದು ಅವಧ್ಯರಾಗಿದ್ದೇವೆ ನಮ್ಮನ್ನು ಸಾಯಿಸಲಿಕ್ಕೆ ಆಗದೇ ಇದ್ದರೂ ಏನು ಕೆಲಸ ಮಾಡಲಿಕ್ಕೆ ಬರದೇ ಇರೋ ಹಾಗೆ ಮಾಡುತ್ತಾನೆ ಇಂದ್ರ.

ಧನು ಅಂತನ್ನುವ ರಾಕ್ಷಸ ಅವನು ಅವಧ್ಯ ಅಂತ ವಜ್ರ ಪ್ರಹಾರ ಮಾಡಿ ಅವನ ತಲೆಯನ್ನು ಅವನ ಹೊಟ್ಟೆಯಲ್ಲಿ ಹಾಕಿಬಿಟ್ಟಿದ್ದ ಇಂದ್ರ ಸಾಯಬಾರದಲ್ಲ ಬದುಕು ಆದರೆ ಕಣ್ಣು ಕಾಣಿಸುವುದಿಲ್ಲ, ಕಿವಿ ಕೇಳಿಸುವುದಿಲ್ಲ, ಓಡಾಡಲಿಕ್ಕೆ ಬರುವುದಿಲ್ಲ ಏನಿಲ್ಲ ಹೊಟ್ಟೆಯೊಳಗೆ ತಲೆ ತುರುಕಿ ಅವನನ್ನು ಎಸೆದು ಬಿಟ್ಟ ಹಾಗೆ ನಮ್ಮನ್ನು ಮಾಡಬಹುದು. **'ಕುಕ್ಷಿಗಾಸ್ಯಯುಕ'** ಅದಕ್ಕಾಗಿ ಇಂದ್ರನ ವಿರೋಧ ಕಟ್ಟಿಕೊಳ್ಳುವುದು ಬೇಡ ಸದ್ಯಕ್ಕೆ ಕೃಷ್ಣನಿಗೆ ಅಭಿಷೇಕ ಮಾಡಿ ಕಳಿಸೋಣ ಅಂತ ಹೇಳಿ ಎಲ್ಲಾ ರಾಜರು ಹೊರಡುತ್ತಾರೆ. ಆದರೆ ಇಂದ್ರ ಹೇಳಿದ ಜರಾಸಂಧ,



ಸಾಲ್ವ, ಶಿಶುಪಾಲ ಈ ಕೆಲವರು ಒಂದು ನಾಲ್ಕು ಜನ ಇವರು ಬರುವುದು ಬೇಡ ಅಂತ ಅವರು ಅಲ್ಲಿಯೇ ಇರಲಿ ಅಂತ ಏಕೆಂದರೆ ಅವರೂ ಬಂದುಬಿಟ್ಟಿರೆ ಅವರನ್ನು ಅನುಯಾಯಿಸಿದ ಎಲ್ಲ ದುರ್ಜನರು ಕೃಷ್ಣ ಭಕ್ತರಾದಾರು ನಾಳೆ ಅವರಿಗೆ ಯೋಗ್ಯವಾದ ಗತಿ ಅವರಿಗೆ ಸಿಗಬೇಕು. ಈ ನಾಲ್ಕು ಜನರನ್ನು ಬಿಟ್ಟು ಇನ್ನುಳಿದವರು ಮಾತ್ರ ಬರಲಿ ಅಂತನೇ ಇಂದ್ರನ ಆದೇಶ ಇತ್ತು ಎಲ್ಲಾ ರಾಜರೂ ಕಿತ್ತಿ ಎದ್ದು ಬಂದಿದ್ದಾರೆ, ಧಾವಿಸಿ ಬಂದಿದ್ದಾರೆ. ಅದ್ಭುತವಾದ ರೀತಿಯಲ್ಲಿ ಯಾವ ಪರಮಾತ್ಮನಿಗೆ ಆಸನನೇ ಕೊಡಬಾರದು ಅಂದುಕೊಂಡಿದ್ದರೋ ಇಂದ್ರಾಸನದಲ್ಲಿ ಕೂಡಿಸಿ ಅವನಿಗೆ ಸ್ವರ್ಣ ಕುಂಭಗಳಿಂದ ಅಭಿಷೇಕ ಮಾಡಿದ್ದಾರೆ, ಭೀಷ್ಮಕ ರಾಜನೂ ಬಂದಿದ್ದಾನೆ ಎಲ್ಲರೂ ಬಂದಿದ್ದಾರೆ. ಆ ರೀತಿ ಶ್ರೀಕೃಷ್ಣ ಪರಮಾತ್ಮನ ಅದ್ಭುತವಾದಂತಹ ಅಭಿಷೇಕ ಸಮಾರಂಭ ನಡೆದಿದೆ ಕೃಷ್ಣ ಪರಮಾತ್ಮ ಎಲ್ಲರಿಗೂ ಕೂಡ ಅನುಗ್ರಹವನ್ನು ಮಾಡಿದ್ದಾನೆ. ಭೀಷ್ಮಕ ರಾಜನಿಗೂ ಕೂಡ ಉಪದೇಶವನ್ನು ಮಾಡಿ ಆ ರುಕ್ಮಿಣಿ ನಿತ್ಯಾವಿಯೋಗಿನಿ ಮುಂದೆ ಬರುತ್ತೆ ಅಂತಹ ಆ ರುಕ್ಮಿಣಿಯನ್ನು ನನಗೇ ಕೊಟ್ಟು ಮದುವೆ ಮಾಡಿದರೆ ನಿನಗೆ ಕ್ಷೇಮ, ಇಲ್ಲದಿದ್ದರೆ ಇಲ್ಲ ಅಂತ ತನ್ನ ವಿಶ್ವರೂಪದ ದರ್ಶನವನ್ನೂ ಮಾಡಿಸಿ ಅವನಿಂದ ಪ್ರತಿಜ್ಞೆಯನ್ನು ಮಾಡಿಸಿಕೊಂಡು ಶ್ರೀಕೃಷ್ಣ ಪರಮಾತ್ಮ ಅಲ್ಲಿಂದ ಹೊರಡುತ್ತಾನೆ ಅಂತನ್ನುವ ಚರಿತ್ರೆಯನ್ನು ಇಲ್ಲಿ ತಿಳಿಸುತ್ತಾ ಇದ್ದಾರೆ. ಅಂತಹ ಸರ್ವೋತ್ತಮನಾದ ಶ್ರೀಕೃಷ್ಣ ಪರಮಾತ್ಮನ ಮಹಾಮಹಿಮೆಯನ್ನು ಆ ಚಿತ್ರಾಂಗದ ಹೇಳುವಾಗ ಹೇಳುತ್ತಾನೆ ಮನುಷ್ಯರಿಗೆಲ್ಲ ರಾಜರೇ ದೇವತೆಗಳಿದ್ದಂತೆ ನೃದೇವ ಅಂತ ಕರೆಯುತ್ತಾರೆ ಅದಕ್ಕೆ ರಾಜರನ್ನು.

ಮಾನುಷಾಣಾಂ ನೃಪಾ ದೇವಾ ನೃಪಾಣಾಂ ದೇವತಾಃ ಸುರಾಃ ॥ (50.47 ವಿಷ್ಣುಪರ್ವ)

ಆ ನೃಪರಿಗೂ, ನೃದೇವರಿಗೂ ದೇವರು ಅಂದರೆ ದೇವತೆಗಳು, ಇಂದ್ರಾದಿಗಳು, ನೃದೇವ ದೇವರು ಆ ನೃದೇವ ದೇವರಿಗೂ ದೇವತೆ ಅಂದರೆ ಕೃಷ್ಣ ಅಂತಹ ಕೃಷ್ಣನಿಗೆ ನೀವು ಮರ್ಯಾದೆ ಕೊಡುವುದಿಲ್ಲ ಅಂದರೆ ನಿಮ್ಮ ಹಣೆಬರಹ ಏನಾಗಬೇಕಾದೀತು ಅಂತನ್ನುವ ಮಾತನ್ನು ಆ ಚಿತ್ರಾಂಗದ ನುಡಿಯುತ್ತಾನೆ. ಅಂತಹ ನೃದೇವ ದೇವ ದೇವನಾದಂತಹ ಸರ್ವೋತ್ತಮನಾದ ಪರಮಾತ್ಮನಿಗೆ ನಾವು ನಮ್ಮ ಮನಸ್ಸೆಂಬ ಸಿಂಹಾಸನದೊಳಗೆ ನಿತ್ಯದಲ್ಲಿ ಆ ಭಕ್ತಿ ಜಲದಿಂದ ಅಭಿಷೇಕವನ್ನು ಮಾಡಿ ಅವನ ಪಾದಾರವಿಂದಕ್ಕೆ ನಮಿಸಿ ಅನುಗ್ರಹವನ್ನು ನಿತ್ಯದಲ್ಲಿಯೂ ಪಡೆಯಬೇಕು ಎಂಬ ಸಂದೇಶವನ್ನು ಕೊಡುತ್ತ ಇದ್ದಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ವಿಷ್ಣುಪರ್ವ-21

* * *

ಶ್ರೀಕೃಷ್ಣ ಪರಮಾತ್ಮ ಭಗವದ್ಭಕ್ತನಾದ ಭೀಷ್ಮಕ ರಾಜನಿಗೆ ಉಪದೇಶವನ್ನು ಮಾಡುತ್ತಾನೆ. ಈ ಹಿಂದೆ ತಿಳಿದಂತೆ ಭೀಷ್ಮಕ ರಾಜ ಮಿತ್ರನಾಮಕ ಸೂರ್ಯನ ಅವತಾರ, ರಾಹುವಿನ ಆವೇಶ ಅಂತಹ ಭೀಷ್ಮಕ ರಾಜ ಕೃಷ್ಣನಿಗೆ ಬಂದು ತನ್ನ ಅಸಹಾಯಕತೆಯನ್ನು ಹೇಳಿಕೊಳ್ಳುತ್ತಾನೆ. ಸ್ವಯಂವರವನ್ನು ಮಾಡಬೇಕು ಅನ್ನುವ ಅಪೇಕ್ಷೆ ನನಗಿರಲಿಲ್ಲ, ಯೋಗ್ಯನಾದ ವರನನ್ನು ನೋಡಿ ಕೊಡಬೇಕು ಅನ್ನುವ ಅಪೇಕ್ಷೆಯೇ ನನ್ನದು ಆದರೆ ರುಕ್ಮಿ ಬಹಳ ಹಠ ಮಾಡಿ ಈ ಸ್ವಯಂವರವನ್ನು ವ್ಯವಸ್ಥೆ ಮಾಡಿದ್ದು, ಬಾಲಭಾವದಿಂದ ಅವಿವೇಕದಿಂದ ರುಕ್ಮಿ ಮಾಡಿದ್ದು ನನಗೆ ಗೊತ್ತಾಗಿಲ್ಲ ಅದಕ್ಕಾಗಿ ಕ್ಷಮೆ ಮಾಡಬೇಕು ಅಂತ ಶ್ರೀಕೃಷ್ಣ ಪರಮಾತ್ಮನಿಗೆ ಪ್ರಾರ್ಥನೆಯನ್ನು ಮಾಡುತ್ತಾನೆ ಭೀಷ್ಮಕ. ಕೃಷ್ಣ ಪರಮಾತ್ಮ ಹೇಳುತ್ತಾನೆ

ಬಾಲಭಾವೇನ ಪುತ್ರೇಣ ಚಾಲಿತಂ ನೃಪಮಣ್ಡಲಮ್ ।
ಯದಾ ಭವತಿ ವೈ ಪ್ರೌಢಃ ಕೀದೃಶೋಽವಿನಯೋ ಭವೇತ್ ।। (51.4 ವಿಷ್ಣುಪರ್ವ)

ಇಷ್ಟು ಚಿಕ್ಕ ವಯಸ್ಸಿನಲ್ಲಿ ಇರುವಾಗಲೇನೆ ಬಾಲಭಾವದಿಂದ ಈ ತರಹದ ಉನ್ಮಾದ ರುಕ್ಮಿಗೆ ಇದೆ ಅಂತಾದರೆ ಎಲ್ಲ ರಾಜರನ್ನು ಒಂದು ಸ್ವಯಂವರದ ನೆಪದಲ್ಲಿ ಹೇಳಿ ಕಳಿಸಿ ಅವರನ್ನೆಲ್ಲ ಇಲ್ಲಿ ಸೇರಿಸಿದ್ದಾನೆ ರಾಜನಾದ ನಿನಗೆ ಗೊತ್ತಿಲ್ಲ ಆದರೆ ಎಲ್ಲರೂ ಬಂದಿದ್ದಾರೆ ಹೀಗಾಗುವುದಾದರೆ ಮುಂದೆ ಅವನು ಪ್ರೌಢನಾದ ಮೇಲೆ ಇನ್ನೆಷ್ಟು ಅವಿವೇಕವನ್ನು ತೋರಿಸಲಿಕ್ಕೆ ಇಲ್ಲ, ಎಷ್ಟು ಅವಿನಯವನ್ನು ತೋರಿಸುವುದಕ್ಕೆ ಸಾಧ್ಯ ಇದೆ. ಎಂದಿಗೂ ಸುಳ್ಳು ಮಾತನಾಡಬಾರದು ರಾಜರ ಎದುರಿನಲ್ಲಿ ಈ ರೀತಿ ಮೋಸವನ್ನು ಮಾಡಿ ಸ್ವಯಂವರವನ್ನು ಮಾಡುವ ಅಪೇಕ್ಷೆ ನಿನಗಿಲ್ಲದಿದ್ದರೂ ಸ್ವಯಂವರವಿದೆ ಅಂತ ಘೋಷಣೆ ಮಾಡಿ ಅಷ್ಟೆಲ್ಲ ಜನ ರಾಜರನ್ನ ಕರೆಸಿದ್ದಾನೆ ಅಂದರೆ ರಾಜರಿಗೆ ಸುಳ್ಳು ಹೇಳಿದಂತೆ ಆಯಿತು. ಒಬ್ಬ ರಾಜನ ಎದುರಿನಲ್ಲಿ ಸುಳ್ಳು ಮಾತನಾಡಿದರೇನೆ ಅವನಿಗೆ ಉತ್ತಮ ಲೋಕಪ್ರಾಪ್ತಿ ಆಗುವುದಿಲ್ಲ ನರಕಾದಿ ಮಹಾ ದುಃಖಗಳನ್ನು ಅನುಭವಿಸ ಬೇಕಾಗುತ್ತೆ. ಸಾವಿರಾರು ಜನ ರಾಜರಿಗೆ ಇವನು ಮೋಸ ಮಾಡಿದರೆ



ಏಕಸ್ಯಾಪಿ ನೃಪಸ್ಯಾಗ್ರೇ ಮೋಹಾದ್ಯೋ ಏತಥಂ ವದೇತ್ ।

ನ ಸ ತಿಷ್ಠತಿ ಲೋಕೇಽಸ್ಮಿನ್ ನಿರ್ದಹೇದ್ ದಣ್ಡವಹ್ನಿನಾ ॥ (51.6 ವಿಷ್ಣುಪರ್ವ)

ಯಮ ದೇವರ ಆ ಶಾಸನವೆಂಬ ಅಗ್ನಿಯಿಂದ ತಪ್ತನಾಗಿ ಸುಖ ಶಾಂತಿ ಸಮಾಧಾಗಳನ್ನು ಪಡೆಯದೆ ಇಹಲೋಕದಲ್ಲಿ, ಪರಲೋಕದಲ್ಲಿಯೂ ನರಕದಲ್ಲಿಯೂ ದುಃಖವನ್ನು ಅನುಭವಿಸಿ ಒದ್ದಾಡುವಂತಹ ಪ್ರಸಂಗ ಬರುತ್ತೆ ಒಂದು. ಎರಡನೆಯದಾಗಿ ನೀನು ಹೇಳುವ ಮಾತಿನ ಮೇಲೂ ನನಗೆ ವಿಶ್ವಾಸ ಇಲ್ಲ, ಬಂದ ಎಲ್ಲ ರಾಜರಿಗೆ ಆತಿಥ್ಯವನ್ನು ಮಾಡಿದ್ದಿ, ಸ್ವಾಗತವನ್ನು ಮಾಡಿದ್ದಿ, ವಾದ್ಯ ವೈಭವಗಳಿಂದ ಸ್ವಾಗತ ಮಾಡಿದ್ದಿ ನನಗೆ ಮಾತ್ರ ಆಸನವನ್ನು ಇಟ್ಟಿರಲಿಲ್ಲ ಅಷ್ಟೇ, ಬಿಟ್ಟರೆ ಇನ್ನುಳಿದ ರಾಜರಿಗೆ ತಿಳಿದುಕೊಳ್ಳುವ ಮನೆಗಳ ವ್ಯವಸ್ಥೆಯಾಗಿತ್ತು, ಆಸನದ ವ್ಯವಸ್ಥೆಯಾಗಿತ್ತು. ರಾಜರೆಲ್ಲರಿಗೆ ಆದರೋಪಚಾರಗಳು ನಡೆದಿವೆ ಆದರೆ ನನಗೇನು ಗೊತ್ತಿಲ್ಲ ಅಂತ ಹೇಳುವ ನಿನ್ನ ಮಾತೇ ಸುಳ್ಳು, ನಿನ್ನ ಮಾತನ್ನೂ ನಾನು ನಂಬುವುದಕ್ಕೆ ಸಾಧ್ಯ ಇಲ್ಲ, ಇದು ನೀನು ಮಾಡುವಂತಹ ಮೋಸ.

ಅತೋ ನ ಕೃತಮಾತಿಥ್ಯಮಪಾತ್ರಾಯ ನರೇಶ್ವರ । (51.13 ವಿಷ್ಣುಪರ್ವ)

ನಾನು ಪಾತ್ರನಲ್ಲ, ಯೋಗ್ಯನಾದ ಪಾತ್ರನಲ್ಲ ಅನ್ನುವುದಕ್ಕೆ ನನ್ನ ಆತಿಥ್ಯವನ್ನು ನೀನು ಮಾಡಿರಲಿಕ್ಕಿಲ್ಲ ಅದು ನಿನ್ನ ವಿಚಾರ, ನಾನು ಅದರ ಬಗ್ಗೆ ಯಾವುದೇ ವಿಧವಾದ ಆಕ್ಷೇಪಣೆಯನ್ನು ಮಾಡುವುದಿಲ್ಲ ಆದರೆ ನೀನು ಹೇಳುತ್ತಾ ಇರುವುದು ಮಾತ್ರ ಸುಳ್ಳು ಅಂತ ಅವನಿಗೆ ಶ್ರೀಕೃಷ್ಣ ಪರಮಾತ್ಮ ಹೇಳಿ ಜೊತೆಗೆ ಇನ್ನೊಂದು ಮಾತನ್ನು ಹೇಳುತ್ತಾನೆ ಕೃಷ್ಣ. ನೀನು ಆತಿಥ್ಯ ಮಾಡದಿದ್ದರೆ ಏನಾಯಿತು ಕ್ರಥ, ಕೈಶಿಕರು ನಿನ್ನ ತಮ್ಮಂದಿರು ಬೇಕಾದಷ್ಟು ವೈಭವದಿಂದ ಆತಿಥ್ಯವನ್ನು ಮಾಡಿದರು, ಇಂದ್ರನೇ ಕಳಿಸಿದ ಸಿಂಹಾಸನದ ಮೇಲೆ ಕೂಡಿಸಿದರು, ಆದರ ಆಯಿತು, ಆತಿಥ್ಯ ಆಯಿತು, ಉಪಚಾರ ಆಯಿತು ಎಲ್ಲಾ ರಾಜರು ಬಂದು ಪಟ್ಟಾಭಿಷೇಕ ಮಾಡುವುದು ಆಯಿತು ನನಗಾಗುವುದರೊಳಗೆ ಏನೂ ಕಡಿಮೆಯಾಗಿಲ್ಲ, ಮಾಡಬೇಕಾದ ಸಜ್ಜನರೆಲ್ಲ ಏನು ಮಾಡಬೇಕೋ ಅದನ್ನು ಮಾಡಿದ್ದಾರೆ ಆದರೆ ನೀನು ಮಾಡಿದ ತಪ್ಪಿನ ಎಚ್ಚರವನ್ನು ನಿನಗೆ ಕೊಡುತ್ತ ಇದ್ದೇನೆ ಎಚ್ಚರಿಕೆಯಿಂದ ನಡೆದುಕೊಳ್ಳು ಅಂತ ಹೇಳಿದಾಗ ಶರಣು ಬಂದಿದ್ದೇನೆ ಅಂತ ಭೀಷ್ಮಕ ನಮಸ್ಕಾರ ಮಾಡಿ ಶರಣಾಗತನಾಗಿ ತನ್ನ ತಪ್ಪನ್ನು ಒಪ್ಪಿಕೊಂಡಿದ್ದಾನೆ.

ಭವನ್ತಂ ಶರಣಂ ಪ್ರಾಪ್ಯ ದೇವಾನಾಮಪಿ ದೈವತಮ್ ।

ಸಮ್ಯಗ್ ಭವತು ಮೇ ದೃಷ್ಟಿಃ ಸಮ್ಪಶ್ಯನ್ತು ಚ ಮೇ ಕ್ರಿಯಾ ॥ (51.22 ವಿಷ್ಣುಪರ್ವ)

ನನ್ನ ಎಲ್ಲ ಕ್ರಿಯೆಗಳು ಸಂಪನ್ನವಾಗಲಿ, ನಾನು ಮಾಡಿದ ತಪ್ಪನ್ನು ಮನ್ನಿಸು ಶರಣಾಗತನಾಗಿದ್ದೇನೆ, ಶರಣು ಬಂದವರನ್ನು ರಕ್ಷಣೆ ಮಾಡುವುದು ನಿನ್ನ ಧರ್ಮ ಅಂತ. ಕೃಷ್ಣ ಹೇಳಿದ ಸ್ವಯಂವರವನ್ನು ಮಾಡಿ ಯಾರಾದರೂ ಕನ್ಯೆಯನ್ನು ಮದುವೆ ಮಾಡಿಕೊಳ್ಳಬಹುದು, ಯಾರನ್ನಾದರೂ ಅವಳು ಆರಿಸಬಹುದು ಅಂತ ಅವಕಾಶ ಕೊಡದಂತೆ ಯೋಗ್ಯನಾದ ವರನನ್ನ ಹುಡುಕಿ ಅವನಿಗೆ ಮದುವೆ ಮಾಡಿಕೊಡು. ನೀನು ಯಾರಿಗಾದರೂ ಕೊಡು ಆದರೆ ಒಂದು ಸತ್ಯ ಸಂಗತಿಯನ್ನು ಹೇಳುತ್ತೇನೆ ಕೇಳು ಅಂತ ಹರಿವಂಶದಲ್ಲಿ ಅದನ್ನು ಸ್ಪಷ್ಟವಾಗಿ ಹೇಳಿಲ್ಲ, ಅದನ್ನು ಶ್ರೀಮದಾಚಾರ್ಯರು ತಿಳಿಸಿಕೊಡುತ್ತಾರೆ ತನ್ನ ವಿಶ್ವರೂಪವನ್ನು ಪರಮಾತ್ಮ ತೋರಿಸುತ್ತಾನೆ. ನಾನು ಯಾರು ಅನ್ನುವುದನ್ನು ಚೆನ್ನಾಗಿ ತಿಳದುಕೋ ಅಂತ ಅದ್ಭುತವಾದಂತಹ ವಿಶ್ವರೂಪ ವಿಶ್ವವ್ಯಾಪಿಯಾದಂತಹ ವಿಶ್ವರೂಪ ಆ ಭೀಷ್ಮಕ ರಾಜನ ಯೋಗ್ಯತೆ ಎಷ್ಟೋ ಆ ಯೋಗ್ಯತೆಗೆ ತಕ್ಕಂತೆ ತನ್ನ ವಿರಾಟ್ ರೂಪವನ್ನು ತೋರಿಸಿದ್ದಾನೆ. ಇಂತಹ

ಅದ್ಭುತವಾದ ರೂಪ ನಾನು ಸಾಮಾನ್ಯ ಒಬ್ಬ ಗೊಲ್ಲರವ ಅಂತ ತಿಳಿದುಕೊಳ್ಳಬೇಡ ಸಾಕ್ಷಾತ್ ಶ್ರೀಮನ್ನಾರಾಯಣನ ಅವತಾರ ಅಂತ ಅವನು ವಿಷ್ಣು ಭಕ್ತನಾದದ್ದರಿಂದ ಅರ್ಜುನನಿಗೆ ಯಾವ ರೀತಿ ಭಗವಂತ ವಿಶ್ವರೂಪವನ್ನು ತೋರಿಸಿದ ಅದೇ ರೀತಿಯಲ್ಲಿ ಭೀಷ್ಮಕ ರಾಜನಿಗೂ ತೋರಿಸುತ್ತಾನೆ, ಧೃತರಾಷ್ಟ್ರನಿಗೂ ವಿಶ್ವರೂಪವನ್ನು ಮುಂದೆ ತೋರಿಸುತ್ತಾನೆ. ಆ ರೀತಿಯ ವಿಶ್ವರೂಪವನ್ನು ತೋರಿಸಿ ಜೊತೆಗೆ ರುಕ್ಮಿಣಿಯ ಮಹಿಮೆಯನ್ನು ತೋರಿಸುತ್ತಾನೆ. ರುಕ್ಮಿಣಿ ದೇವಿ ಸಾಮಾನ್ಯಳಲ್ಲ ಅನಂತ ರೂಪಗಳಿವೆ, ಅವಳಿಗೂ ಅದ್ಭುತವಾದಂತಹ ರೂಪ ಇದೆ. ನಾನು ಎಷ್ಟು ರೂಪಗಳನ್ನು ತೆಗೆದುಕೊಂಡು ಈ ಜಗತ್ತಿನಲ್ಲಿ ಸೃಷ್ಟ್ಯಾದಿ ಕಾರ್ಯಗಳನ್ನು ಮಾಡುತ್ತೇನೆ ನನ್ನ ಸೇವೆಗಾಗಿ ಅವಳೂ ಅನಂತ ರೂಪಗಳನ್ನು ತೆಗೆದುಕೊಂಡು ಸೇವೆಯನ್ನು ಮಾಡುತ್ತಾಳೆ ಅಂತ ಪರಮಾತ್ಮ ರುಕ್ಮಿಣಿಯ ರೂಪಗಳನ್ನು ತೋರಿಸಿದ್ದಾನೆ. ಭೀಷ್ಮಕ ರಾಜನಿಗೆ ಆತ್ಯಾಶ್ಚರ್ಯವಾಗಿದೆ ಆ ಭಗವಂತನ ಅದ್ಭುತವಾದಂತಹ ಮಹಿಮೆ ತನ್ನ ಮಗಳು ಸಾಮಾನ್ಯಳಲ್ಲ ಸಾಕ್ಷಾತ್ ಮಹಾಲಕ್ಷ್ಮೀಯ ಅವತಾರ, ಅನಂತ ರೂಪಗಳನ್ನು ಪಡೆದುಕೊಂಡವಳು ಅಂತಹ ಮಹಾನುಭಾವಳು ಎಂಬುದಾಗಿ ತಿಳಿದು ಆನಂದ ಪಟ್ಟಿದ್ದಾನೆ. ಪರಮಾತ್ಮ ಹೇಳಿದ ನೀನು ಇಂತಹ ನಿತ್ಯಾವಿಯೋಗಿನಿಯಾದ ಆ ರುಕ್ಮಿಣಿ ಶ್ರೀದೇವಿ ಸಮುದ್ರಮಥನ ಕಾಲದಲ್ಲಿ ಅವತಾರ ಮಾಡಿದವಳು, ನನ್ನ ವಕ್ಷಸ್ಥಲವನ್ನೇ ಆಶ್ರಯಿಸಿಕೊಂಡು ಇದ್ದವಳು ಅಂತಹ ಮಹಾನುಭಾವಳಾದಂಥವಳು ರುಕ್ಮಿಣಿ ಅಂಥವಳನ್ನು ಇನ್ನೊಬ್ಬನಿಗೆ ಕೊಟ್ಟು ಮದುವೆ ಮಾಡುತ್ತೇನೆ ಅಂತ ನೀನು ಮನಸ್ಸಿನಲ್ಲಿ ಚಿಂತನ ಮಾಡಿದರೂ ನಿನಗೆ ಮಹಾಅನರ್ಥ ಇದೆ. ನಿನ್ನ ಮಗ ರುಕ್ಮಿ ಏನಾದರೂ ಹೇಳಿ ನೀನು ಶುದ್ಧವಾದ ಮನಸ್ಸಿನಿಂದ ರುಕ್ಮಿಣಿಯ ಸ್ವರೂಪವನ್ನು ಚೆನ್ನಾಗಿ ತಿಳಿದುಕೊಂಡು, ನನ್ನ ಸ್ವರೂಪವನ್ನೂ ಚೆನ್ನಾಗಿ ತಿಳಿದುಕೊಂಡು ರಮಾರಮೇಶರ ಯೋಗವನ್ನ ಮಾಡಿಸಿದರೆ ಸಕಲ ಮಂಗಲವಾಗುತ್ತೆ ಅಂತನ್ನುವ ಶಾಸ್ತ್ರದ ತತ್ವವನ್ನು ಅರಿತುಕೊಂಡು ಸಂಕಲ್ಪವನ್ನು ಮಾಡು ಮುಂದಿನ ವಿವಾಹದ ಕಾರ್ಯವನ್ನು ಯಾವ ರೀತಿ ಮಾಡಿಕೊಳ್ಳಬೇಕು ಅನ್ನುವುದನ್ನು ನಾನೇ ನೋಡಿಕೊಳ್ಳುತ್ತೇನೆ.

ಹಿಂದೆ ಸಮುದ್ರಮಥನ ಕಾಲದಲ್ಲಿ ವರುಣ ಸಮುದ್ರ ರಾಜನೂ ಸ್ವಯಂವರವನ್ನು ಮಾಡಿದ, ಸೀತೆಯ ಸ್ವಯಂವರವನ್ನು ಜನಕ ಮಹಾರಾಜ ಮಾಡಿದ ಆದರೆ ಯಾರಾದರೂ ಬಂದು ತೆಗೆದುಕೊಳ್ಳಬಹುದು ಅನ್ನುವ ಸಂಕಲ್ಪದಿಂದ ಮಾಡಿದವರಲ್ಲ ಅವರು. ಪರಮಾತ್ಮನೇ ನಿಶ್ಚಿತವಾಗಿ ಬಂದು ಇಲ್ಲಿ ಸೀತೆಯನ್ನು ಮದುವೆ ಆಗುತ್ತಾನೆ ಶ್ರೀರಾಮಚಂದ್ರನೇ ಮದುವೆಯಾಗುತ್ತಾನೆ ಅನ್ನುವ ಪೂರ್ಣವಾದ ವಿಶ್ವಾಸದಿಂದ ಜನಕ ಮಹಾರಾಜ ಮಾಡಿದ, ವಿಷ್ಣುವಿನ ಕೊರಳಿಗೇ ಮಾಲೆ ಹಾಕುತ್ತಾಳೆ ಮಹಾಲಕ್ಷ್ಮೀ ಅನ್ನುವ ನಿಶ್ಚಯವನ್ನು ಇಟ್ಟುಕೊಂಡೇ ವರುಣ ಆ ಸ್ವಯಂವರವನ್ನು ಮಾಡಿದ್ದಾನೆ ಅವರಿಗೆ ಆ ದೋಷ ಬಂದಿಲ್ಲ. ನೀನು ಹಾಗಲ್ಲ ಯಾರಾದರೂ ಮದುವೆ ಮಾಡಿಕೊಳ್ಳಲಿ ಅನ್ನುವ ದೃಷ್ಟಿಯಲ್ಲಿ ಸ್ವಯಂವರವನ್ನು ಮಾಡುವುದಕ್ಕೆ ಹೊರಟದ್ದರಿಂದ ನಿನಗೆ ಅರ್ಥವಾದೀತು ಎಚ್ಚರಿಕೆ ಇರಲಿ ಆ ತಪ್ಪು ಮಾಡಬೇಡ ಅಂತ ಅವನಿಗೆ ಚೆನ್ನಾಗಿ ತಿಳುವಳಿಕೆಯನ್ನು ಹೇಳಿ ಪರಮಾತ್ಮ ಅಲ್ಲಿಂದ ಹೊರಟಿದ್ದಾನೆ. ಹೊರಡುವಾಗ ಇನ್ನೊಂದು ಮಾತನ್ನು ಹೇಳುತ್ತಾನೆ ಕೃಥ, ಕೈಶಿಕರು ಅತ್ಯಂತ ಭಕ್ತಿಯಿಂದ ಶ್ರದ್ಧೆಯಿಂದ ಬಂದು ಸ್ವಾಗತ ಮಾಡಿದರಲ್ಲ ನೀನು ಆತಿಥ್ಯ ಮಾಡದಿದ್ದರೂ ಅವರು ಆತಿಥ್ಯ ಮಾಡಿದರು. ಆಮೇಲೆ ಇಂದ್ರನ ಆದೇಶದಂತೆ ಉಳಿದೆಲ್ಲ ರಾಜರುಗಳೆಲ್ಲರೂ ಬಂದು ಪಟ್ಟಾಭಿಷೇಕ ಮಾಡಿದರಲ್ಲ ಸಿಂಹಾಸನದ ಮೇಲೆ ಕೂಡಿಸಿ ಅದರ ಫಲ ಏನು ಅಂತ ಹೇಳುತ್ತಾನೆ.

ಆತಿಥ್ಯಕರಣೇऽಸ್ಮಾಕಂ ಸ್ವರಾಜ್ಯಂ ದದತಾವುಭೌ ।
ತೇನ ದಾನಫಲೇನಾಸ್ಯ ದಶಪೂರ್ವಾ ದಿವಂಗತಾಃ ॥ (51.45 ವಿಷ್ಣುಪರ್ವ)
ಭವಿಷ್ಯಾಶ್ಚೈವ ರಾಜಾನಃ ಪುತ್ರಪೌತ್ರಾ ದಶಾವರಾಃ । (51.46 ವಿಷ್ಣುಪರ್ವ)



ಅವರ ತಂದೆ ತಾತ ಮುತ್ತಾತ ಹೀಗೆ ಹಿಂದಿನ ಹತ್ತು ತಲೆ, ಮಗ ಮೊಮ್ಮಗ ಮರಿಮಗ ಹೀಗೆ ಮುಂದಿನ ಹತ್ತು ತಲೆ ಎಲ್ಲರೂ ಕೂಡ ಉತ್ತಮವಾದಂತಹ ಸ್ವರ್ಗಲೋಕವನ್ನು ಹೊಂದಿದ್ದಾರೆ, ಶ್ರೇಷ್ಠವಾದ ಸ್ಥಾನವನ್ನು ಹೊಂದಿದ್ದಾರೆ, ಉತ್ತಮವಾದ ಸುಖವನ್ನು ಪಡೆದಿದ್ದಾರೆ ಅವರೆಲ್ಲರೂ ಮಾಡಿದ ಆ ಪುಣ್ಯದಿಂದ, ಆ ಕ್ರಥ ಕೈಶಿಕರ ಪುಣ್ಯ. ಕ್ರಥ, ಕೈಶಿಕರು ಮಾತ್ರ ಅಲ್ಲ ಯಾರೆಲ್ಲಾ ಅಲ್ಲಿ ಅಭಿಷೇಕ ಮಾಡುವುದಕ್ಕೆ ಬಂದಿದ್ದರೋ

ಕಾಲೇನ ತೇऽಪಿ ಯಾಸ್ಯನ್ತಿ ದೇವಲೋಕಂ ತ್ರಿವಿಷ್ಟಪಮ್ ॥ (51.48 ವಿಷ್ಣುಪರ್ವ)

ಸ್ಪೃಷ್ಟಿ ವೋऽಸ್ತು ಗಮಿಷ್ಯಾಮಿ ವೈನತೇಯಸಹಾಯವಾನ್ । (51.49 ವಿಷ್ಣುಪರ್ವ)

ಅವರೆಲ್ಲರೂ ಕೂಡ ಅತ್ಯುತ್ತಮವಾದ ಶ್ರೇಷ್ಠವಾದಂತಹ ಸ್ಥಾನವನ್ನು ಮುಂದೆ ಹೊಂದುತ್ತಾರೆ, ದೇವರಿಗೆ ಅಭಿಷೇಕ ಮಾಡಿದರೆ ಆಗುವ ಲಾಭ ಏನು ಅಂತ ಪರಮಾತ್ಮ ತೋರಿಸಿಕೊಡುತ್ತಾ ಇದ್ದಾನೆ. ಭಗವಂತನನ್ನು ಸರ್ವೋತ್ತಮ ಅಂತ ತಿಳಿದು ಒಂದು ಹನಿ ನೀರಿನಿಂದ ಅಭಿಷೇಕ ಮಾಡಿದರೆ ಸಾಕು, ಬಿಂದು ಗಂಗೋದಕ ಅಂತ ಅಷ್ಟು ಪವಿತ್ರವಾದ ನೀರನ್ನು ಗಂಗೋದಕವನ್ನೋ, ತನಗೆ ಉಪಲಬ್ಧವಾದ ಶುದ್ಧವಾದ ಯಾವ ನೀರಿದೆ ಆ ನೀರನ್ನೋ ಗಂಗಾದಿ ತೀರ್ಥಗಳ ಆವಾಹನೆಯನ್ನು ಮಾಡಿ ಭಕ್ತಿಯಿಂದ ಮಂತ್ರಪಠಣ ಪುರಸ್ಸರವಾಗಿ ಶ್ರದ್ಧೆಯಿಂದ ದೇವರಿಗೆ ಅಭಿಷೇಕ ಮಾಡಿದರೆ, ಪುರುಷಸೂಕ್ತ ಮೊದಲಾದ ಸೂಕ್ತಗಳಿಂದ, ಮಂತ್ರಗಳಿಂದ ಅಭಿಷೇಕವನ್ನು ಮಾಡಿದರೆ ಉತ್ತಮವಾದಂತಹ ಶ್ರೇಷ್ಠವಾದ ಜ್ಞಾನ, ಇಹಲೋಕದಲ್ಲಿಯೂ ಸುಖ ಪರಲೋಕದಲ್ಲಿಯೂ ಸುಖ, ಪುತ್ರ ಪೌತ್ರಾದಿಗಳಿಗೂ, ಪಿತೃ ಪಿತಾಮಹಾದಿಗಳಿಗೂ ಎಲ್ಲರಿಗೂ ಸುಖವಾಗಿ ಆಗುತ್ತೆ ಅಂತನ್ನುವ ಒಂದು ತತ್ವವನ್ನು ಪರಮಾತ್ಮ ಈ ಮೂಲಕವಾಗಿ ತಿಳಿಸುತ್ತಾ ಇದ್ದಾನೆ ಕೇವಲ ಆ ಕ್ರಥ, ಕೈಶಿಕರಿಗೆ ಮಾತ್ರ ಅಂತ ಅಭಿಪ್ರಾಯವಲ್ಲ ಯಾರೆಲ್ಲ ಭಕ್ತಿಯಿಂದ ದೇವರನ್ನು ಸರ್ವೋತ್ತಮ ಅಂತ ತಿಳಿದು ದೇವರಿಗೆ ಅಭಿಷೇಕವನ್ನು ಮಾಡುತ್ತಾರೆ. ದೇವರು ತಾನು ಸೃಷ್ಟಿಯನ್ನ ಮಾಡುವಾಗ ತನ್ನ ಪೂಜೆಯನ್ನು ತಾನು ಮಾಡಿಕೊಳ್ಳುತ್ತಾ ಮೊಟ್ಟ ಮೊದಲಿಗೆ ಸೃಷ್ಟಿ ಮಾಡಿದ್ದು ನೀರನ್ನು ಅದಕ್ಕಾಗಿ ಆ ನೀರಿಗೆ ಅರ್ಕ ಅಂತಾರೆ ಯಾಕೆ ಅಂದರೆ ಅರ್ಚನೆಗೆ ಸಾಧನವಾದದ್ದರಿಂದ ಅರ್ಕ ಅಂತ. ದೇವರು ತನ್ನ ಅರ್ಚನೆಯನ್ನು ಮಾಡಿಕೊಳ್ಳುವಾಗ ನೀರಿನ ಸೃಷ್ಟಿ ಮಾಡಿದ ಅನ್ನುವುದಕ್ಕೆ ಅದು ಅರ್ಚನೆಗೆ ಸಾಧನವಾಯಿತು, ಅರ್ಚನೆಗೆ ಸಾಧನವಾದ್ದರಿಂದಲೇ ನೀರಿಗೆ ಅರ್ಕ ಎಂಬ ಹೆಸರುಂಟು ಅಂತ ಬೃಹದಾರಣ್ಯಕ ಉಪನಿಷತ್ತು ಹಾಗೂ ಭಾಷ್ಯಗಳಲ್ಲಿ ನಾವು ತಿಳಿಯುತ್ತೇವೆ ಅಂತಹ ಶ್ರೇಷ್ಠವಾದದ್ದು. ತೀರ್ಥಾಭಿಮಾನಿ ದೇವತೆಗಳೆಲ್ಲ ದೇವರಿಗೆ ಅಭಿಷೇಕ ಮಾಡುವಾಗ ಅತ್ಯಂತ ಉತ್ಸಾಹದಿಂದ ಬಂದು ಅಲ್ಲಿ ಸನ್ನಿಹಿತರಾಗುತ್ತಾರೆ ಹೀಗಾಗಿ ಗಂಗಾದಿ ಸಕಲ ತೀರ್ಥಗಳಲ್ಲಿ ಸ್ನಾನ ಮಾಡಿದ ಫಲ, ಯಜ್ಞ ಮಾಡಿದ ಫಲ, ಉಪವಾಸ ಮಾಡಿದ ಫಲ. ಹನ್ನೆರಡು ವರ್ಷಗಳವರೆಗೆ ಉಪವಾಸ ಮಾಡಿದರೆ, ಸ್ನಾನ ಮಾಡಿದರೆ, ಯಜ್ಞ ಮಾಡಿದರೆ ಏನು ಫಲ ಬರಬೇಕೋ ಗಂಗಾ ತೀರದಲ್ಲಿ, ಗಂಗೆಯಲ್ಲಿ ಆ ಫಲ ಪರಮಾತ್ಮನ ತೀರ್ಥದ ಪ್ರಾಶನವನ್ನು ಮಾಡಿದರೆ ಬರುತ್ತದೆ ಅಷ್ಟು ಶ್ರೇಷ್ಠವಾದಂತಹ ಫಲ ಆ ಭಗವಂತನ ತೀರ್ಥಕ್ಕೆ ಉಂಟು. ಅಂತಹ ಮಹಾಮಹಿಮೆಯನ್ನು ಇಲ್ಲಿ ತಿಳಿಸಿಕೊಟ್ಟು ಪರಮಾತ್ಮ ಹೊರಡುತ್ತ ಇದ್ದಾನೆ ಭೀಷ್ಮಕ ಮತ್ತೆ ಪರಮಾತ್ಮನ ಸ್ತೋತ್ರವನ್ನು ಮಾಡುತ್ತಾನೆ.

ದೇವದೇವ ನಮಸ್ತುಭ್ಯಮನಾದಿನಿಧನಾಯ ವೈ ॥ (51.56 ವಿಷ್ಣುಪರ್ವ)

ಶಾಶ್ವತಾಯಾದಿದೇವಾಯ ನಾರಾಯಣ ಪರಾಯಣ । (51.57 ವಿಷ್ಣುಪರ್ವ)

ಅಂತ ಆ ಅನೇಕ ಶ್ಲೋಕಗಳಿಂದ ಭಗವಂತನ ಗುಣಗಳ ವರ್ಣನೆಯನ್ನು ಮಾಡಿ ನೀನು ಸರ್ವೋತ್ತಮ, ಸರ್ವನಿಯಾಮಕ, ಸರ್ವತ್ರವ್ಯಾಪ್ತ ಅನಂತ ರೂಪಿಣಿಯಾದಂತಹ ಆ ನಿತ್ಯಮುಕ್ತಳಾದ ಮಹಾಲಕ್ಷ್ಮೀಗೆ ನೀನೇ ಪತಿ ಅನ್ನುವುದು ನನಗೆ ಗೊತ್ತು ಆ ಕಾರ್ಯವನ್ನು ನೆರವೇರಿಸುವಂತೆ

ವರದೋ ಭವ ಮೇ ನಿತ್ಯಂ ತ್ವದ್ಭಕ್ತಾಯ ಸುರೋತ್ತಮ ॥ (51.60 ವಿಷ್ಣುಪರ್ವ)

ವಿಶೇಷವಾಗಿ ಅನುಗ್ರಹವನ್ನು ಮಾಡು ಅಂತ. ಗರುಡ ದೇವರು ಬಂದಿದ್ದಾರೆ ಭಾರೀ ವೇಗದಿಂದ ಎಲ್ಲ ರಾಜರನ್ನು ಕೆಳಗೆ ಬೀಳಿಸುವಂತೆ, ಅಷ್ಟು ವೇಗದಿಂದ ಬಂದು ಶ್ರೀಕೃಷ್ಣನ ಸೇವೆಯನ್ನು ಮಾಡಿ ಹೊರಟಿದ್ದಾರೆ ಆ ಗರುಡ ದೇವರಿಗೂ ಸ್ತೋತ್ರ ಮಾಡುತ್ತಾನೆ.

ನಮಸ್ತಸ್ಮೈ ಖಗೇನ್ದ್ರಾಯ ನಮೋ ಮಾರುತರಂಹಸೇ ।
ಕಾಮರೂಪಾಯ ದಿವ್ಯಾಯ ಕಾಶ್ಯಪಾಯ ಚ ವೈ ನಮಃ ॥ (51.63 ವಿಷ್ಣುಪರ್ವ)

ಕೇವಲ ಪಕ್ಷಿಯ ರೂಪದಿಂದ ಗರುಡ ದೇವರು ಇರುತ್ತಾರೆ ಅಂತ ಅಲ್ಲ, ಪುರುಷಾಕಾರದಿಂದಲೂ ಅವರು ದರ್ಶನವನ್ನು ಕೊಡುತ್ತಾರೆ **'ಕಾಮರೂಪಾಯ ದಿವ್ಯಾಯ'** ಅಂತಹ ವೇದಾಭಿಮಾನಿಗಳು ಭಗವಂತನ ವಾಹನ. ಇಂದ್ರಾದಿ ದೇವತೆಗಳಿಗೂ ಯಾವುದನ್ನು ಪಡೆಯುವುದಕ್ಕೆ ಸಾಧ್ಯ ಇಲ್ಲ ಅಂತಹ ಶ್ರೇಷ್ಠವಾದ ನಿತ್ಯದಲ್ಲಿ ಭಗವಂತನಿಗೆ ವಾಹನರಾಗಿ ಸೇವೆ ಮಾಡುವ ಸೌಭಾಗ್ಯವನ್ನು ಪಡೆದ, ದೇವರ ಎದುರಿನಲ್ಲಿ ಯಾವಾಗಲೂ ಕೈಜೋಡಿಸಿ ನಿಂತು ದೇವರ ಸೇವೆಯನ್ನೂ ಮಾಡುವಂತಹ ಮಹಾನುಭಾವರು ಗರುಡ ದೇವರು ಅಂತಹ ಗರುಡ ದೇವರ ಸ್ತುತಿಯನ್ನು ಮಾಡಿದ್ದಾನೆ. ಸ್ತುತಿಯನ್ನು ಮಾಡಿದ ಮೇಲೆ ಪರಮಾತ್ಮ ಎಲ್ಲರಿಗೆ ವಿಶೇಷವಾಗಿ ಅನುಗ್ರಹವನ್ನು ಮಾಡಿ ಭೀಷ್ಮಕ ರಾಜನಿಗೆ ಹಾಗೂ ಇನ್ನುಳಿದವರಿಗೆ ಅಲ್ಲಿಂದ ಮುಂದೆ ಹೊರಟಿದ್ದಾನೆ.

ರಾಘವೇಂದ್ರ ಸ್ವಾಮಿಗಳವರ ಆರಾಧನೆ ಬಂದು ಹೋಗಿದೆ ಅಥವಾ ಬರುತ್ತದೆ ಪರಮ ಪವಿತ್ರವಾದಂತಹ ರಾಘವೇಂದ್ರ ಸ್ವಾಮಿಗಳವರ ಮಹಿಮೆಯನ್ನು ಎಷ್ಟು ತಿಳಿದರೂ ಕಡಿಮೆ ಇದೆ, ಅವರು ಮಾಡಿದ ಉಪಕಾರ ಇದು ಅಪಾರ. ಅತ್ಯದ್ಭುತವಾದ ಗ್ರಂಥಗಳ ರಚನೆಯನ್ನು ಮಾಡಿ ತತ್ವಜ್ಞಾನದ ಪ್ರಪಂಚಕ್ಕೆ ಒಂದು ದೊಡ್ಡ ಕೊಡುಗೆಯನ್ನು ಕೊಟ್ಟಿದ್ದಾರೆ ಅದ್ಭುತವಾದ ಕೊಡುಗೆಯನ್ನು ನೀಡಿದ್ದಾರೆ ಅವರ ಒಂದೊಂದು ಗ್ರಂಥಗಳು ಒಂದೊಂದು ಕೊಡುಗೆ. ಆ ಒಂದೊಂದು ಗ್ರಂಥಗಳನ್ನು ಅಧ್ಯಯನ ಮಾಡಿ ಜೀವನದಲ್ಲಿ ಅದನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ಅಳವಡಿಸಿಕೊಂಡರೆ ಜನ್ಮ ಸಾರ್ಥಕವಾಗುತ್ತೆ ಅಂತಹ ಗ್ರಂಥಗಳನ್ನು ರಚನೆ ಮಾಡಿಕೊಟ್ಟ ಮಹಾನುಭಾವರು ರಾಘವೇಂದ್ರ ಸ್ವಾಮಿಗಳು. ಮೂಲಗ್ರಂಥಗಳನ್ನು ತಿಳಿದುಕೊಳ್ಳುವುದಕ್ಕೆ ಭಗವದ್ಗೀತೆ, ಉಪನಿಷತ್ತು, ವೇದಮಂತ್ರಗಳು, ಬ್ರಹ್ಮಸೂತ್ರಗಳು ಇವುಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಅತ್ಯಂತ ಸುಲಭವಾಗಿ ವಿದ್ವಾಂಸರಿಗೂ, ವಿದ್ಯಾರ್ಥಿಗಳಿಗೂ, ಜಿಜ್ಞಾಸುರಿಗೂ ಎಲ್ಲರಿಗೂ ಉಪಯುಕ್ತವಾಗುವ ರೀತಿಯಲ್ಲಿ ಗೀತಾ ವಿವೃತಿ, ಮಂತ್ರಾರ್ಥಮಂಜರಿ, ಉಪನಿಷದ್ ಖಂಡಾರ್ಥ, ತಂತ್ರದೀಪಿಕಾ ಮೊದಲಾದ ಗ್ರಂಥಗಳನ್ನು ರಚನೆ ಮಾಡಿಕೊಟ್ಟು ಪರಮೋಪಕಾರವನ್ನು ಮಾಡಿದ್ದಾರೆ. ಅಂತಹ ಗೀತಾ ವಿವೃತಿಯಲ್ಲಿ ಶ್ರೀಕೃಷ್ಣ ಪರಮಾತ್ಮ ಯಜ್ಞದ ಬಗ್ಗೆ ಹೇಳುತ್ತಾನೆ ಯಾರೇ ಇರಲಿ ಯಜ್ಞವನ್ನು ಮಾಡಲೇಬೇಕು ಅಂತ ಯಜ್ಞವನ್ನು ಮಾಡದ ವ್ಯಕ್ತಿ ಈ ಜಗತ್ತಿನ ಚಕ್ರದಲ್ಲಿ ಪ್ರವೇಶ ಮಾಡದಿರುವ ಕಾರಣ ಅವನು ವಿಶ್ವ ಹಂತ, ಜಗತ್ತಿನ ಹಂತ ಒಬ್ಬ ವ್ಯಕ್ತಿಯ ಇಬ್ಬರ ಹಂತ ಅಲ್ಲ, ವಿಶ್ವದ ಹಂತ ಅಂತಾದರೆ ಎಂತಹ ಪಾಪ ಅವನಿಗೆ ಬರಬಹುದು, ಎಷ್ಟು ದೊಡ್ಡ ದುರ್ಗತಿ ಆಗಬಹುದು. ಯಜ್ಞ ಮಾಡುವ ಅಧಿಕಾರ ಇದ್ದ ವ್ಯಕ್ತಿ ಯಜ್ಞವನ್ನು

ಮಾಡಬೇಕು ಒಂದಿಲ್ಲ ಒಂದು ತರಹದ ಯಜ್ಞವನ್ನು ಮಾಡುವುದಕ್ಕಂತೂ ಎಲ್ಲರಿಗೂ ಬರುತ್ತೆ ತಮಗೆ ಯಾವ ತರಹದ ಯಜ್ಞ ವಿಹಿತವೋ ಆ ತರಹದ ಯಜ್ಞವನ್ನು ಮಾಡಬಹುದು.

ಸನ್ಯಾಸಿಗಳಿಗೆ ಅಗ್ನಿಯಲ್ಲಿ ಆಹುತಿಗಳನ್ನು ಹಾಕಿ ಯಜ್ಞವನ್ನು ಮಾಡುವ ಅಧಿಕಾರವಿಲ್ಲ ಅಂದ ಮಾತ್ರಕ್ಕೆ ಯಜ್ಞವನ್ನು ಮಾಡಬಾರದು ಅಂತ ಅಲ್ಲ ಸ್ವಾಧ್ಯಾಯ ಯಜ್ಞ, ಶಾಸ್ತ್ರಗಳ ಅಧ್ಯಯನ, ಪಾಠ ಪ್ರವಚನ ಇದೇ ಒಂದು ಯಜ್ಞ ಇಂತಹ ಯಜ್ಞವನ್ನು ಮಾಡಬಹುದು. ಅಭಯದಾನ ಮೊದಲಾದ ದಾನವನ್ನು ಮಾಡಬಹುದು,ಸ್ವಭೋಜ್ಯ ದಾನ ಟೀಕಾಕೃತ್ಪಾದರು, ಶ್ರೀಮದಾಚಾರ್ಯರು ಗೀತಾಭಾಷ್ಯ, ಗೀತಾ ತಾತ್ಪರ್ಯಗಳಲ್ಲಿ, ಟೀಕಾಕೃತ್ಪಾದರು ಪ್ರಮೇಯ ದೀಪಿಕಾ, ನ್ಯಾಯ ದೀಪಿಕಾಗಳಲ್ಲಿ ಹೇಳಿದ ವಿಷಯಗಳನ್ನು ಸಂಗ್ರಹ ಮಾಡಿ ಅತಿ ಸುಲಭವಾದ ರೀತಿಯಲ್ಲಿ ಮನ ಮುಟ್ಟುವಂತೆ ರಾಘವೇಂದ್ರ ಸ್ವಾಮಿಗಳವರು ಗೀತಾವಿವೃತಿಯಲ್ಲಿ ತಿಳಿಸಿಕೊಡುತ್ತಾರೆ. ಹಣ ಸಂಪಾದನೆ ಮಾಡುವ ಅಧಿಕಾರವೇ ಇಲ್ಲದ ವ್ಯಕ್ತಿಗಳು ಹಣವನ್ನು ದಾನ ಮಾಡುವುದು ಹೇಗೆ ಹಣನೇ ದಾನ ಮಾಡಬೇಕು ಅಂತಿಲ್ಲ, ದ್ರವ್ಯ ದಾನವನ್ನೇ ಮಾಡಬೇಕು ಅಂತಿಲ್ಲ ಅಭಯ ದಾನವೂ ಒಂದು ದಾನವೇ, ವಿದ್ಯಾ ದಾನವೂ ದಾನವೇ. ಆದಿಪದದಿಂದ ಸ್ವಭೋಕ್ತವ್ಯ ಅನ್ನದಾನ ಅಂತ ಹೇಳುತ್ತಾರೆ ಯತಿಗಳು ಸ್ವಭೋಜ್ಯವಾದ ಅನ್ನವನ್ನು ಕೊಡುತ್ತಾರಲ್ಲ ಆ ಸ್ವಭೋಜ್ಯ ಅನ್ನದಾನವೂ ಒಂದು ಯತಿಗಳು ಮಾಡುವಂತಹ ದಾನ ಎಂಬುದಾಗಿ ಟೀಕಾಕೃತ್ಪಾದರು ತಿಳಿಸುತ್ತಾರೆ ಅದನ್ನು ಬಹಳ ಸುಂದರವಾಗಿ ರಾಘವೇಂದ್ರ ಸ್ವಾಮಿಗಳವರು ತಿಳಿಸುತ್ತಾರೆ. ಆ ದಾನವನ್ನು ಯತಿಗಳು ಮಾಡುತ್ತಾರೆ, ಯತಿಗಳು ಮಾಡುವಂತಹ ಆ ಸ್ವಭೋಕ್ತವ್ಯ ಅನ್ನದಾನ, ಸ್ವಭೋಜ್ಯ ಅನ್ನದಾನ ಅದನ್ನು ಸ್ವೀಕಾರ ಮಾಡುತ್ತಾರೆ ಭಕ್ತರು ಆ ದಾನ ಮಾಡುವುದಕ್ಕೂ ಯತಿಗಳಿಗೆ ಅಧಿಕಾರ ಉಂಟು. ಆದರೆ ಯಜ್ಞ, ದಾನ, ತಪಸ್ಸು ಇವುಗಳನ್ನು ಮಾಡದೇ ಯಾರು ಇರುವಂತೆ ಇಲ್ಲ ಉಪವಾಸಾದಿ ತಪಸ್ಸುಗಳು ಎಲ್ಲರಿಗೂ ಉಂಟು. ಈ ಸಂದರ್ಭದಲ್ಲಿ ಕೃಷ್ಣ ಪರಮಾತ್ಮ ಹೇಳುತ್ತಾನೆ

ಅನ್ನಾದ್ಭವಂತಿ ಭೂತಾನಿ ಪರ್ಜನ್ಯಾದನ್ನಸಂಭವಃ । (3.14 ಭ ಗೀತಾ)

'ಅನ್ನಾದ್ಭವಂತಿ ಭೂತಾನಿ' ಎಲ್ಲ ಜೀವರಾಶಿಗಳು ಬದುಕಬೇಕು ಅನ್ನ ಬೇಕು, ಅನ್ನ ಇಲ್ಲದೇ ಬದುಕುವಂತಿಲ್ಲ, ಅನ್ನದಿಂದಲೇ ಹುಟ್ಟುತ್ತಾರೆ ಅನ್ನದಿಂದಲೇ ಬದುಕುತ್ತಾರೆ, ತಂದೆ ತಾಯಿಗಳು ಅನ್ನವನ್ನು ಭಕ್ಷಣ ಮಾಡಿದರೇನೆ ಅಂತಹ ತಂದೆ ತಾಯಿಗಳಿಂದ ಮಕ್ಕಳು ಹುಟ್ಟುವುದಕ್ಕೆ ಸಾಧ್ಯ, ತಾವು ಬದುಕುವುದಕ್ಕೂ ಅನ್ನವನ್ನು ಸೇವನೆ ಮಾಡಿಯೇ ಬದುಕಬೇಕು **'ಅನ್ನಗತ ಪ್ರಾಣಃ'** ಅನ್ನ ಇಲ್ಲದೇ ಬದುಕುವಂತಿಲ್ಲ ಅನ್ನದ ಅವಶ್ಯಕತೆ ಇದೆ. **'ಅನ್ನಾದ್ಭವಂತಿ ಭೂತಾನಿ'** ಅನ್ನ ಬರಬೇಕು ಮಳೆಯಿಂದ **'ಪರ್ಜನ್ಯಾದನ್ನ ಸಂಭವಃ'** ಆ ಮಳೆಗೆ ಪ್ರೇರಕನಾದ ಪರ್ಜನ್ಯ ಆದಿತ್ಯ ಆ ಪರ್ಜನ್ಯನಾಮಕ ಆದಿತ್ಯನಿಂದ ಮೇಘ ಚಕ್ರಗಳ ನಿರ್ಮಾಣ ಆಗಿ ಆ ಮೂಲಕವಾಗಿ ಮಳೆ ಬರುತ್ತದೆ, ಮಳೆಯಿಂದ ಬೆಳೆ ಅದರಿಂದ ಅನ್ನ, ಅನ್ನದಿಂದ ಜೀವರಾಶಿಗಳು ಹುಟ್ಟುತ್ತಾರೆ ಬದುಕುತ್ತಾರೆ. ಆ ಮಳೆ ಆಗಬೇಕು ಪರ್ಜನ್ಯನೆಂಬ ಆದಿತ್ಯ ತಾನು ಪುಷ್ಟನಾಗಬೇಕು, ಮೇಘ ಚಕ್ರಗಳ ನಿರ್ಮಾಣವಾಗಬೇಕು ಅಂದರೆ ಅವನನ್ನು ಸಂತೋಷ ಪಡಿಸಬೇಕಾದರೆ ಯಜ್ಞಗಳನ್ನು ಮಾಡಬೇಕು. ಯಜ್ಞಗಳನ್ನು ಮಾಡಬೇಕು ಅಂದರೆ ಅನೇಕ ತರಹದ ಕ್ರಿಯೆಗಳನ್ನು ಮಾಡಿದರೆ ಒಂದು ಯಜ್ಞ ಅಂತ ಆಗುತ್ತೆ ಅಂತಹ ಕ್ರಿಯೆಗಳನ್ನು ಮಾಡಬೇಕಾದರೆ ಪರಮಾತ್ಮನ ಅಂತರ್ಯಾಮಿಯ ಪ್ರೇರಣೆ ಬೇಕು. ಅಂತಹ ಭಗವಂತನ ಪ್ರೇರಣೆ ಇದ್ದರೆ ಯಜ್ಞ ಕರ್ಮಗಳನ್ನು ಮಾಡಿ ಆ ಕರ್ಮಗಳ ಮೂಲಕ ಯಜ್ಞ, ಯಜ್ಞದಿಂದ ಪರ್ಜನ್ಯನ ಸಂತೋಷ ಮತ್ತು ಪುಷ್ಟಿ, ಅದರಿಂದ ಮಳೆ, ಅದರಿಂದ ಅನ್ನ, ಅನನದಿಂದ

ಜೀವರಾಶಿಗಳು. ಅಂತಹ ಪರಮಾತ್ಮನನ್ನ ನಾವು ಸಂತೋಷ ಪಡಿಸಿದರೆ ಆ ಭಗವಂತ ನಮ್ಮಿಂದ ಯಜ್ಞ್ಯಾದಿ ಕರ್ಮಗಳನ್ನು ಮಾಡಿಸುತ್ತಾನೆ ಇಲ್ಲದಿದ್ದರೆ ಮಾಡಿಸುವುದಿಲ್ಲ. ಹೇಗೆ ಸಂತೋಷ ಪಡಿಸಬೇಕು ಚೆನ್ನಾಗಿ ಅವನನ್ನು ತಿಳಿಯಬೇಕು, ಅವನ ಸ್ವರೂಪವನ್ನು ತಿಳಿದು ಭಜಿಸಬೇಕು ಆಗ ಭಗವಂತ ಸಂತುಷ್ಟನಾಗಿ ನಮ್ಮಿಂದ ಯಜ್ಞ್ಯಾದಿ ಕರ್ಮಗಳನ್ನು ಮಾಡಿಸುತ್ತಾನೆ ಅಂತೆ ಎಷ್ಟು ಮಹತ್ವದ ತತ್ವವನ್ನು ತಿಳಿಸಿಕೊಡುತ್ತಾರೆ ನೋಡಿ. ದೇವರಿದ್ದಾನೆ ಅಂತರ್ಯಾಮಿಯಾಗಿ ಇದ್ದಾನೆ ದೂರ ಇಲ್ಲ ಹೃದಯದೊಳಗೆ ಇದ್ದಾನೆ ಆದರೂ ಭಗವಂತ ನಮ್ಮಿಂದ ಸತ್ಕರ್ಮಗಳನ್ನು ಮಾಡಿಸುವುದಿಲ್ಲ ಯಾಕೆ ಅಂದರೆ ನಾವು ದೇವರ ಬಗ್ಗೆ ಚೆನ್ನಾಗಿ ತಿಳಿದು ಅವನನ್ನು ಭಜಿಸಿಲ್ಲ, ಚೆನ್ನಾಗಿ ತಿಳಿಯಬೇಕು ಹೇಗೆ ತಿಳಿಯಬೇಕು ವೇದಗಳಿಂದ. ಆ ವೇದಗಳ ರಕ್ಷಣೆ ಹೇಗೆ, ವೇದಗಳ ಜ್ಞಾನ ನಮಗಾಗುವದು ಹೇಗೆ ವೇದಗಳನ್ನು ಉಪದೇಶ ಮಾಡುವವರು ಯಾರು ಮತ್ತೆ ಜೀವರೇ ಗುರುಗಳು ಉಪದೇಶ ಮಾಡಬೇಕು ಶಿಷ್ಯರು ಕೇಳಬೇಕು, ಗುರುಗಳೂ ಬದುಕಬೇಕು ಶಿಷ್ಯರೂ ಬದುಕಬೇಕು, ಗುರುಗಳೂ ಹುಟ್ಟಬೇಕು ಶಿಷ್ಯರೂ ಹುಟ್ಟಬೇಕು ಅದಕ್ಕೆ ಅನ್ನ ಬೇಕು ಮತ್ತೆ ಹಾಗಾದರೆ ಗುರು-ಶಿಷ್ಯರ ಪರಂಪರೆಯಲ್ಲಿ ವೇದಾದಿ ಸಚ್ಛಾಸ್ತ್ರಗಳು ಅಂದಿನಿಂದ ಇಂದಿನವರೆಗೆ ಉಳಿದು ಬರಬೇಕಾದರೆ ಅವರೆಲ್ಲರ ಶರೀರ ಚೆನ್ನಾಗಿರಬೇಕು. ಅವರು ಹುಟ್ಟಬೇಕು ಶರೀರ ಚೆನ್ನಾಗಿರಬೇಕು ಅದಕ್ಕೆ ಅನ್ನ ಬೇಕು ಹಾಗಾದರೆ ಇದು ಒಂದು ಚಕ್ರ ಆಯಿತು ಗೀತೆಯ ಮೂಲವನ್ನು ನೋಡಿದರೆ ಚಕ್ರ ಏನು ಅಂತ ಗೊತ್ತಾಗುವುದಿಲ್ಲ ಶ್ರೀಮದಾಚಾರ್ಯರು, ಟೀಕಾಕೃತ್ಪಾದರು ತೋರಿಸಿದ ರೀತಿಯಲ್ಲಿ ರಾಘವೇಂದ್ರ ಸ್ವಾಮಿಗಳವರು ಸುಂದರವಾಗಿ ಆ ಚಕ್ರವನ್ನು ತೋರಿಸುತ್ತಾರೆ. ಅನ್ನದಿಂದ ಭೂತ, ಪರ್ಜನ್ಯದಿಂದ ಅನ್ನ, ಯಜ್ಞದಿಂದ ಪರ್ಜನ್ಯ, ಕರ್ಮಗಳಿಂದ ಯಜ್ಞ, ಕರ್ಮ ಬ್ರಹ್ಮನಿಂದ ಚಕ್ರ ಆಗಲಿಲ್ಲಲ್ಲ ಒಂದು ಸಾಲು ಆಯಿತು ಅಷ್ಟೇ ಪಂಕ್ತಿ. ಆ ಬ್ರಹ್ಮನಿಗೂ ಅನ್ನಕ್ಕೂ ಮತ್ತೆ ಸಂಬಂಧ ಬಂದರೆ ಅದು ಒಂದು ಚಕ್ರ ಆಗುತ್ತೆ ಅದು ಏನು ಸಂಬಂಧ ಗೊತ್ತಾಗುವುದಿಲ್ಲ ಅದನ್ನು ರಾಘವೇಂದ್ರ ಸ್ವಾಮಿಗಳವರು ಗೀತಾವಿವೃತಿಯಲ್ಲಿ ತಿಳಿಸಿಕೊಡುತ್ತಾರೆ. ಆ ಬ್ರಹ್ಮ ನಮ್ಮಿಂದ ಕರ್ಮವನ್ನು ಮಾಡಿಸಬೇಕಾದರೆ ಚೆನ್ನಾಗಿ ವೇದಗಳಿಂದ ಅವನನ್ನು ತಿಳಿದಾಗ ತಾನೇ ಅವನು ಕರ್ಮ ಮಾಡಿಸಬೇಕು ಆ ವೇದಗಳಿಂದ ತಿಳಿಯಲ್ಪಟ್ಟ ಬ್ರಹ್ಮ ಸಂತುಷ್ಟನಾಗಿ ಕರ್ಮ ಮಾಡಿಸುವುದಾದರೆ ಆ ವೇದಗಳ ರಕ್ಷಣೆ ಆಗಬೇಕಲ್ಲ, ವೇದಗಳ ಜ್ಞಾನ ನಮಗೆ ಆಗಬೇಕಲ್ಲ ಜೀವರಾಶಿಗಳಿಂದ ಅದಕ್ಕೆ ಅನ್ನ ಬೇಕು.

ಕರ್ಮಬ್ರಹ್ಮೋದ್ಭವಂ ವಿದ್ಧಿ ಬ್ರಹ್ಮಾಕ್ಷರ ಸಮುದ್ಭವಮ್ । (3.15 ಭ ಗೀತಾ)

ಬ್ರಹ್ಮಜ್ಞಾನ ಆಗಬೇಕು ವೇದಗಳು ಆ ವೇದಗಳು ಉಳಿಯಬೇಕಾದರೆ ಮತ್ತೆ ಅನ್ನ ಬೇಕು, ಅನ್ನಕ್ಕೆ ಪರ್ಜನ್ಯ, ಪರ್ಜನ್ಯಕ್ಕೆ ಯಜ್ಞ ಹೀಗೆ ಇದು ಚಕ್ರ. ಇದರೊಳಗೆ ನಾವು ಚಕ್ರದಲ್ಲಿ ಭಾಗವಹಿಸುವುದು ಹೇಗೆ ನಾವು ಭಾಗವಹಿಸುವುದು ಯಜ್ಞ ಯಾಗಾದಿಗಳನ್ನು ಮಾಡುವ ಮೂಲಕ, ವೇದಾದಿ ಸಚ್ಛಾಸ್ತ್ರಗಳ ಅಧ್ಯಯನವನ್ನು ಮಾಡುವ ಮೂಲಕ. ಇದರಿಂದ ಆಗುವ ಲಾಭ ಎಷ್ಟು ಅಂದರೆ ಆ ಯಜ್ಞ ಯಾಗಾದಿಗಳನ್ನು ಮಾಡುವುದರಿಂದ ಇಡೀ ಜಗತ್ತಿಗೆ ಸುಭಿಕ್ಷೆ ಆಗುತ್ತದಲ್ಲ ಎಲ್ಲ ಕಡೆಗೆ ಮಳೆಯಾಗಿ ಅಷ್ಟೆಲ್ಲ ಜನ ಸುಗ್ರಾಸ ಭೋಜನವನ್ನು ಮಾಡಿ ಸುಖವಾಗಿ ತಮ್ಮ ತಮ್ಮ ಮನೆಯಲ್ಲಿ ಇರುತ್ತಾರಲ್ಲ ಎಲ್ಲ ಮಾನವರಷ್ಟೇ ಅಲ್ಲ, ಎಲ್ಲ ಪಶು, ಪಕ್ಷಿ ಮೊದಲಾದ ಸಕಲ ತರಹದ ಚೇತನರು ತಾವು ತಾವು ಸುಖವಾಗಿ ಇರುವುದಕ್ಕೆ ಸುಭಿಕ್ಷೆ ಆಗುವುದು ಕಾರಣ ಆ ಸುಭಿಕ್ಷೆಗೆ ಯಜ್ಞ ಕಾರಣ ಆ ಯಜ್ಞ ಒಂದು ಮಾಡಿದರೆ ಅಷ್ಟು ಜನರಿಗೆ ಅನ್ನದಾನ ಮಾಡಿದ ಪುಣ್ಯ. ಜೊತೆಗೆ ಅಷ್ಟೆಲ್ಲ ಜನರಲ್ಲಿ ತತ್ವಜ್ಞಾನವನ್ನು ಬಿತ್ತಿದ ಪುಣ್ಯವೂ ಬರುತ್ತದೆ ಅದರಲ್ಲಿ ಅನೇಕ ಜನ ಸಜ್ಜನರು ವೇದಾದಿ ಸಚ್ಛಾಸ್ತ್ರಗಳ ಅಧ್ಯಯನ ಮಾಡಿ ಅಥವಾ

ಇತಿಹಾಸ ಪುರಾಣಾದಿಗಳ ಅಧ್ಯಯನ ಅಥವಾ ಶ್ರವಣ ಮಾಡಿ, ಇನ್ನೊಬ್ಬರಿಂದ ಉಪದೇಶ ಪಡೆದು ದೇವರ ಬಗ್ಗೆ ತಿಳಿದು ಭಕ್ತಿಯನ್ನು ಮಾಡುತ್ತಾರಲ್ಲ, ಅಷ್ಟು ಜನ ಶಾಸ್ತ್ರಗಳ ಅಧ್ಯಯನವನ್ನು ಮಾಡಿ, ಶ್ರವಣಾದಿಗಳನ್ನು ಮಾಡಿ ತತ್ವಜ್ಞಾನವನ್ನು ಪಡೆಯುವಂತೆ ಮಾಡುವುದಕ್ಕೆ ಕಾರಣ ಯಾವುದು ಯಜ್ಞ. ಹಾಗಾದರೆ ಯಜ್ಞ ಯಾಗಾದಿಗಳನ್ನು ಮಾಡುವ ಸಜ್ಜನರು ಏನು ಸುಮ್ಮನೆ ಅಗ್ನಿಯಲ್ಲಿ ತುಪ್ಪ ಹಾಕಿ ವ್ಯರ್ಥ ಅಂತ ತಿಳಿಯುವುದಲ್ಲ, ಇಡೀ ಜಗತ್ತಿಗೆ ಅನ್ನದಾನ ಮಾಡಿದ, ಜ್ಞಾನದಾನ ಮಾಡಿದ ಮಹಾಸುಕೃತ ಅವರಿಗೆ ಬರುತ್ತೆ. ಅವಶ್ಯವಾಗಿ ಅವರವರಿಗೆ ವಿಹಿತವಾದ ಯಜ್ಞ, ದಾನ, ತಪಸ್ಸುಗಳನ್ನು ಎಲ್ಲರೂ ಮಾಡಲೇಬೇಕು ಇಂತಹ ಮಹಾಫಲ ಇದೆ ಅಂತ ಶಾಸ್ತ್ರದಲ್ಲಿ ತಿಳಿಸಿಕೊಟ್ಟಿದ್ದಾರೆ ಅಂತ ರಾಘವೇಂದ್ರ ಸ್ವಾಮಿಗಳವರು ತಮ್ಮ ಗೀತಾವಿವೃತಿ ಗ್ರಂಥದಲ್ಲಿ ಹೇಳಿ ಪರಮೋಪಕಾರವನ್ನು ಮಾಡಿದ್ದಾರೆ. ಒಂದಲ್ಲ ಎರಡಲ್ಲ ಹೆಜ್ಜೆ ಹೆಜ್ಜೆಗೆ ಅತ್ಯುತ್ತಮವಾದ ಸಂದೇಶಗಳನ್ನು ನೀಡುತ್ತಾ, ತತ್ವಜ್ಞಾನವನ್ನು ನೀಡುತ್ತಾ ಅನುಗ್ರಹವನ್ನು ಮಾಡಿದ ರಾಘವೇಂದ್ರ ಸ್ವಾಮಿಗಳವರನ್ನು ಭಕ್ತಿಯಿಂದ ಸ್ಮರಣೆಯನ್ನು ಮಾಡೋಣ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ವಿಷ್ಣುಪರ್ವ-22

* * *

ವೈಶಂಪಾಯನ ಉವಾಚ

ತತಃ ಪ್ರಯಾತೇ ವಸುದೇವಪುತ್ರೇ ನರಾಧಿಪಾ ಭೂಷಣಭೂಷಿತಾಙ್ಗಾಃ ।

ಸಭಾಂ ಸಮಾಜಗ್ಮುಃ ಸುರೇನ್ದ್ರಕಲ್ಪಾಃ ಪ್ರಬೋಧನಾರ್ಥಂ ಗಮನೋತ್ಸವಾಸ್ತೇ ।। (52.1ವಿಷ್ಣುಪರ್ವ)

ಶ್ರೀಕೃಷ್ಣ ಪರಮಾತ್ಮ ತನ್ನ ಅದ್ಭುತವಾದ ದಿವ್ಯವಾದ ವಿಶ್ವರೂಪವನ್ನು ತೋರಿಸಿ ಭೀಷ್ಮಕ ರಾಜನ ಮನಸ್ಸಿನಲ್ಲಿ ದೃಢವಾದ ನಿಶ್ಚಯ ಬರುವಂತೆ ಮಾಡಿದ್ದಾನೆ ಸಾಕ್ಷಾತ್ ಶ್ರೀಮನ್ನಾರಾಯಣನ ಅವತಾರನೇ ಶ್ರೀಕೃಷ್ಣ ಪರಮಾತ್ಮ. ಆ ಅನಂತ ರೂಪಿಯಾದ ಭಗವಂತನ ಕೈ ಹಿಡಿಯುವುದಕ್ಕೆ ಅತ್ಯಂತ ಯೋಗ್ಯಳಾದ ಅನಂತ ರೂಪಗಳನ್ನು ಪಡೆದಂತಹ ನಿತ್ಯಮುಕ್ತಳು ಪರಮಾತ್ಮನ ನಂತರದಲ್ಲಿ ಸಕಲ ಚೇತನರಿಗಿಂತಲೂ ಬ್ರಹ್ಮಾದಿಗಳಿಗಿಂತಲೂ ಉತ್ತಮಳು ನಿತ್ಯಮುಕ್ತಳು ನಿರ್ವಿಕಾರಳು ಶಶ್ವದೇಕ ಪ್ರಕಾರಳಾಗಿ ಇರುವಂತಹ ಸಕಲ ಜಗತ್ತಿನ ಸೃಷ್ಟಿ ಸ್ಥಿತಿ ಲಯ ನಿಯಮನ ಜ್ಞಾನಾಜ್ಞಾನ ಬಂಧ ಮೋಕ್ಷಗಳನ್ನು ಭಗವಂತನ ಕೃಪಾಕಟಾಕ್ಷದಿಂದ ತಾನು ಬಲವನ್ನು ಪಡೆದುಕೊಂಡು ಜಗತ್ತಿಗೆ ನೀಡುವಂಥವಳು ಅಂತಹ ಮಹಾನುಭಾವಳು ರುಕ್ಮಿಣಿ ಇವಳು ಸಾಮಾನ್ಯಳಲ್ಲ. ಇಂತಹ ಸರ್ವೋತ್ತಮನಾದ ಶ್ರೀಹರಿಗೆ ಆನಂತರ ಸರ್ವರಿಗೂ ಉತ್ತಮಳಾದ ಭಗವಂತನ ನಂತರದಲ್ಲಿ ಇನ್ನೆಲ್ಲರಿಗಿಂತಲೂ ಉತ್ತಮಳಾದ ರುಕ್ಮಿಣಿ ದೇವಿಯೇ ಸರಿಯಾದಂತಹ ಪತ್ನಿ ಇವಳಿಗೆ ಅವನೇ ವರ ಅನ್ನುವಂತಹ ನಿರ್ಧಾರ ಅವನ ಮನಸ್ಸಿನಲ್ಲಿ ಗಟ್ಟಿಯಾಗಿ ಆಗಬೇಕು ಕಾರಣ ಅವನು ದೇವ. ಅವನು ದೇವಾವತಾರ, ಭಕ್ತ ಮತ್ತು ಸಜ್ಜನ ಅನ್ನುವುದಕ್ಕೋಸ್ಕರ ಮಿತ್ರನೆಂಬ ಸೂರ್ಯನ ಅವತಾರನಾದದ್ದರಿಂದ ಮಿತ್ರ ಭಾವದಿಂದ ಪ್ರೀತಿಯಿಂದ ಪರಮಾತ್ಮ ಅವನಿಗೆ ಸತ್ತತ್ವವನ್ನು ಬೋಧನೆ ಮಾಡಿದ್ದಾನೆ. ಅವನಿಂದ ಮಾನಸಿಕ ಸಂಕಲ್ಪವನ್ನು ಮಾಡಿಸಿಕೊಂಡು ಅಲ್ಲಿಂದ ಕೃಷ್ಣ ಪರಮಾತ್ಮ ಹೊರಟಿದ್ದಾನೆ.

ಈ ಕಡೆಗೆ ಎಲ್ಲರೂ ಆಲೋಚನೆ ಮಾಡುತ್ತ ಇದ್ದಾರೆ ಹೀಗೆ ಸ್ವಯಂವರವನ್ನು ಮಾಡಿದ್ದೆ ಆದರೆ ರುಕ್ಮಿಣಿ ಕೃಷ್ಣನನ್ನೇ ವರಿಸುವುದು ನಿಶ್ಚಿತ, ಕೃಷ್ಣ ಬರದೇ ಇರುವ ಹಾಗೆ ಮಾಡಬೇಕು ಸ್ವಯಂವರದಲ್ಲಿ ಅಂತ ಪ್ರಯತ್ನ ಮಾಡಿದೆವು ಅದು ಆಗಲಿಲ್ಲ ಕೃಷ್ಣ ಬಂದ ನಾವು ಆಸನ ಕೊಡುವುದಿಲ್ಲ ಅಂತಾದರೆ ದೇವೇಂದ್ರನ ಆಸನ ಬಂತು ರಾಜರಾಜೇಶ್ವರ ಅಂತ ಅವನಿಗೆ ಎಲ್ಲರೂ ಪಟ್ಟಾಭಿಷೇಕ ಮಾಡಬೇಕಾಯಿತು ನಾವೆಲ್ಲ ಸುಮ್ಮನೆ ಇರುವಂತಹ

ಪ್ರಸಂಗ. ಸರಿ, ಇನ್ನು ಮುಂದೆ ಶಿಶುಪಾಲನಿಗೆ ಕೊಟ್ಟು ಮದುವೆ ಮಾಡುವುದು ಅಂತ ನಿಶ್ಚಯ ಮಾಡಿಬಿಡೋಣ ಎಲ್ಲ ರಾಜರಿಗೆ ಕ್ಷಮೆ ಕೇಳಿದ ಭೀಷ್ಮಕ ರಾಜ ಏನೋ ನನ್ನ ಮಗ ಸ್ವಯಂವರ ಅಂತ ಘೋಷಣೆ ಮಾಡಿದ ನೀವೆಲ್ಲ ಬಹಳ ದೂರದಿಂದ ಬಂದಿದ್ದೀರಿ ಕ್ಷಮಾ ಮಾಡಿ ನನಗೆ ಸ್ವಯಂವರವನ್ನು ಮಾಡಲಿಕ್ಕೆ ಕಾರಣಾಂತರಗಳಿಂದ ಆಗುತ್ತ ಇಲ್ಲ ಅಂತ ಕ್ಷಮಾಯಾಚನೆ ಮಾಡಿದ. ಅವರನ್ನು ಕೊಟ್ಟು ಕಳಿಸಿದ ಮೇಲೆ ಈ ಕಡೆಗೆ ರುಕ್ಮಿ ಹಾಗೂ ಇನ್ನುಳಿದವರೆಲ್ಲ ಆಲೋಚನೆ ಮಾಡುತ್ತ ಇದ್ದಾರೆ ಹಾಗಾದರೆ ಶಿಶುಪಾಲನಿಗೆ ಕೊಟ್ಟು ಮದುವೆ ಮಾಡೋಣ ಆ ಸಂದರ್ಭದಲ್ಲಿ ಕೃಷ್ಣ ಸುಮ್ಮನೆ ಬಿಡುವುದಿಲ್ಲ ರುಕ್ಮಿಣಿಯನ್ನು ಅಪಹಾರ ಮಾಡಿಕೊಂಡು ಹೋಗುತ್ತಾನೆ ಇದು ನಿಶ್ಚಿತ.

ಆ ರುಕ್ಮಿಣಿ ಶ್ರೀಕೃಷ್ಣ ಪರಮಾತ್ಮನನ್ನೇ ಅಪೇಕ್ಷೆ ಪಡುತ್ತಾಳೆ ರುಕ್ಮಿಣಿ ತನ್ನ ಎಲ್ಲ ಸಖಿಯರಿಗೆ ಹೇಳಿದ್ದಾಳೆ ನಾನು ವರಿಸಿದರೆ ಶ್ರೀಕೃಷ್ಣ ಪರಮಾತ್ಮನನ್ನೇ ವರಿಸುವುದು, ಅವನೇ ವರ, ಸರ್ವರಿಗೂ ವರ, ಸರ್ವ ವರ ಅವನು ಸರ್ವೋತ್ತಮ ಸರ್ವ ವರನಾದ ಸರ್ವೋತ್ತಮನಾದ ಭಗವಂತನೇ ನನಗೆ ವರ ಅವನನ್ನೇ ನಾನು ವರಿಸುವುದು ಇನ್ನುಳಿದವರನ್ನೆಲ್ಲ ವರಿಸಿ ಹಾಕುವುದು ಅಷ್ಟೇ ಅವನೊಬ್ಬನನ್ನೇ ವರಿಸುವುದು. ಆ ನಿರ್ಧಾರವನ್ನು ರುಕ್ಮಿಣಿ ಮನಸ್ಸಿನಲ್ಲಿ ಮಾಡಿಕೊಂಡಿದ್ದಾಳೆ ಅನ್ನುವುದು ಸಖಿಗಳ ಮೂಲಕ ಹಿರಿಯರಿಗೆ ಗೊತ್ತಾಗಿದೆ ರುಕ್ಮಿ ಮೊದಲಾದವರಿಗೆ ಹಾಗಾದರೆ ಇವಳು ಮತ್ತೆ ಕೃಷ್ಣನನ್ನೇ ಆರಿಸುತ್ತಾಳೆ ಅಂತ ಶಿಶುಪಾಲನಿಗೆ ಕೊಟ್ಟು ಮದುವೆ ಮಾಡೋಣ ಅಂತ ನಿರ್ಧಾರ ಮಾಡಿಕೊಂಡಿದ್ದಾರೆ. ಆ ಮಧ್ಯದಲ್ಲಿ ಕೃಷ್ಣ ಏನಾದರೂ ಬಂದು ರುಕ್ಮಿಣಿಯನ್ನು ಅಪಹಾರ ಮಾಡಿದರೆ ಹೇಗೆ, ಅದಕ್ಕೆ ಉಪಾಯ ಮಾಡೋಣ ಆ ಕೃಷ್ಣ ಪರಮಾತ್ಮನೇ ಇಲ್ಲದೇ ಇರುವ ಹಾಗೇ ಮಾಡಿಬಿಡೋಣ. ಹಾಗೇನಾದರು ಉಪಾಯವನ್ನು ಮಾಡಿದರೆ ನಿರಾತಂಕವಾಗಿ ಮುಂದೆ ಶಿಶುಪಾಲನ ಜೊತೆಗೆ ವಿವಾಹವನ್ನು ಮಾಡಬಹುದು ಅಂತ ಹಾಗಾದರೆ ಹೇಗೆ ಮಾಡಬೇಕು. ಜರಾಸಂಧ ಅಂದ ನನ್ನಂತಹ ಎಷ್ಟು ಬಾರೀ ಯುದ್ಧ ಮಾಡಿದರೂ ಗೆಲ್ಲಲಿಕ್ಕೆ ಆಗಿಲ್ಲ ಸೋತು ಸೋತು ಸತ್ತು ಸುಣ್ಣಾಗಿದ್ದೇನೆ ಇನ್ನು ಅವನ ಜೊತೆಗೆ ಯುದ್ಧ ಮಾಡುವುದು ಹೇಗೆ. ಇಬ್ಬರೇ ಗೋಮಂತ ಪರ್ವತದೊಳಗೆ ಇದ್ದವರು ಬಲರಾಮ, ಕೃಷ್ಣ ಇಬ್ಬರೇ ಇಬ್ಬರು ನಾವೆಲ್ಲಾ ಇಷ್ಟು ಇಪ್ಪತ್ತೂ ೂರು ಅಕ್ಷೌಹಿಣೀ ಸೈನ್ಯದಿಂದ ಕೂಡಿಕೊಂಡು ಮಹಾ ಮಹಾ ರಾಜರೂ ಘಟಾನುಘಟಿಕರೆಲ್ಲಾ ಅಲ್ಲಿ ಇದ್ದರೂ ಕೂಡ ಎಲ್ಲರನ್ನು ಸೋಲಿಸಿ ಅವರು ಅತ್ಯಂತ ವೈಭವದ ವಿಜಯವನ್ನು ಪಡೆದು ಬಂದಿದ್ದಾರೆ ಅಂಥವರ ಜೊತೆಗೆ ಯುದ್ಧ ಆಡುವುದು ಹೇಗೆ ಅಂತ ಅಂತರಂಗದ ಚರ್ಚೆಯನ್ನು ಮಾಡಿಕೊಂಡಿದ್ದಾರೆ.

ಸಾಲ್ವ ರಾಜ ಅವನು ಹೇಳುತ್ತಾನೆ. ಕೃಷ್ಣನ ಸಂಹಾರ ಮಾಡುವುದಕ್ಕಾಗಿಯೇ ಕಾಲಯವನ ಅಂತ ಒಬ್ಬನು ಹುಟ್ಟಿದ್ದಾನೆ. ಅವನಿಗೆ ನಾವು ಶರಣು ಹೋಗೋಣ, ಅವನ ದ್ವಾರಾ ಕೃಷ್ಣನ ಸಂಹಾರ ಮಾಡಿಸುವ ಪ್ರಯತ್ನ ಮಾಡೋಣ ಅಂತ. ಜರಾಸಂಧನ ಮೈಯೆಲ್ಲ ಬೆವೆತು ಹೋಯಿತು, ತಲೆ ಕೆಳಗೆ ಮಾಡುತ್ತಾನೆ, ಕಣ್ಣು ಕೆಂಪಾಗಿದೆ, ಕಿರುಚುತ್ತ ಇದ್ದಾನೆ ಏನಿದು ಎಲ್ಲಾ ರಾಜರೂ ತಮ್ಮ ಕಾರ್ಯಗಳನ್ನು ಏನಾದರೂ ಮಾಡಿಕೊಳ್ಳಬೇಕು ಅಂದರೆ ನನ್ನ ಹತ್ತಿರ ಬರುತ್ತಾರೆ, ನನ್ನ ಸಹಾಯ ಕೇಳುತ್ತಾರೆ, ನನ್ನ ಬಲದ ಉಪಯೋಗವನ್ನು ಮಾಡಿಕೊಂಡು ತಮ್ಮ ಕಾರ್ಯಗಳನ್ನು ಈಡೇರಿಸಿಕೊಳ್ಳುತ್ತಾರೆ ಎಲ್ಲರೂ ಕೂಡ, ನಾನು ನನ್ನ ಕಾರ್ಯಕ್ಕಾಗಿ ಒಬ್ಬ ಸಾಮಾನ್ಯ ವ್ಯಕ್ತಿಗೆ ಹೋಗಿ ಬೇಡಿಕೊಳ್ಳುವುದು ಅಂದರೆ ದೊಡ್ಡ ಅವಮಾನ ಇದು ನಾನು ಅದಕ್ಕೆ ಒಪ್ಪುವುದಿಲ್ಲ ಅಂದ. ಸಾಲ್ವ ರಾಜ ಹೇಳುತ್ತಾನೆ ಇದೇನು ದೊಡ್ಡದು ಮನುಷ್ಯ ಮಹಾಪರಾಕ್ರಮಿ ಕೊಡಲಿ ಇದು ಸಾಮಾನ್ಯವಾದ ಜಡ ವಸ್ತು ಆದರೆ ಒಂದು ಗಿಡವನ್ನು ಕತ್ತರಿಸಬೇಕು ಅಂದರೆ ಕೊಡಲಿಯನ್ನು ತೆಗೆದುಕೊಂಡರೆ ಎಂತಹ ಅವಮಾನ, ನಾನು ಎಂತಹ ಮಹಾಪುರುಷ ನಾನು ಒಂದು ಕೊಡಲಿಗೆ ಶರಣು ಹೋಗೋದೇ ಅಂತ ಯಾರಾದರೂ ಅನ್ನುತ್ತಾರಾ, ಇಲ್ಲ. ಮನುಷ್ಯ ತಾನು ಮಾಡುವ ಕಾರ್ಯಕ್ಕೆ ಅದೊಂದು ಸಾಧನ ಅಷ್ಟೇ ಹಾಗೆ ನೀನು ಸಮರ್ಥನಾದಂತಹ ಪುರುಷ ಆ

ಕಾಲಯವನ ಅಂದರೆ ನಿನ್ನ ಕೈಯಲ್ಲಿ ಇರುವ ಕೊಡಲಿ ಇದ್ದಂತೆ ನೀನು ಶ್ರೀಕೃಷ್ಣ ಪರಮಾತ್ಮನ ಸಂಹಾರಕ್ಕೆ ಮಾಡುವುದಕ್ಕೆ ಉಪಯೋಗಿಸುವ ಒಂದು ಸಾಧನ ಅದಕ್ಕೆ ನೀನು ಅವಮಾನ ಅಂತ ಯಾಕೆ ಭಾವಿಸುತ್ತೀಯಾ ಅಂತ ಇಷ್ಟು ಹೇಳಿದರೂ ಜರಾಸಂಧ ಅದಕ್ಕೆ ತಾನು ಸಂತೋಷದಿಂದ ಒಪ್ಪಿಗೆ ಕೊಡುವುದಿಲ್ಲ ಮುಖ ಕೆಳಗೆ ಹಾಕಿದವನು ಮೇಲೆ ಎತ್ತುವುದಿಲ್ಲ.

ಸರಿ, ಮೌನಂ ಸಮ್ಮತ ಲಕ್ಷಣಂ ಅಂತ ತಿಳಿದಂತಹ ಸಾಲ್ವ ಅಲ್ಲಿಂದ ಹೊರಟೇ ಬಿಡುತ್ತಾನೆ ತನ್ನ ವಿಮಾನದಲ್ಲಿ ಭಾರೀ ಅದ್ಭುತವಾದಂತಹ ವಿಮಾನ ಅದು ಸಾಲ್ವನ ವಿಮಾನ. ರುದ್ರ ದೇವರನ್ನು ಕುರಿತು ತಪಸ್ಸು ಮಾಡಿ ಪಡೆದಿದ್ದಾನೆ ಅಭೇದ್ಯವಾದದ್ದು ಅಚ್ಛೇದ್ಯವಾದದ್ದು ಭಯಂಕರವಾದ ವೇಗದಿಂದ ಹೋಗುವಂತಹದ್ದು ಸಕಲ ಸಾಧನ ಸೌಕರ್ಯಗಳೂ ಅದರೊಳಗೆ ಇದೆ ಯುದ್ಧದ ವಿಮಾನ ಅದು ಸುಮ್ಮನೆ ತಿರುಗುವ ವಿಮಾನ ಅಲ್ಲ. ಜೊತೆಗೆ ಎಲ್ಲವೂ ಅದರೊಳಗೆ ಇತ್ತು ಆ ವಿಮಾನ ಬರುತ್ತಾ ಇದೆ ಅಂದರೇನೆ ಭಾರೀ ಸುಗಂಧ, ಭಾರೀ ಅದ್ಭುತವಾಗಿ ಇರುವಂತಹ ನಾನಾ ವಿಧವಾದ ವಾದ್ಯದ ಘೋಷಗಳು ಇವುಗಳೆಲ್ಲ ಕೇಳಿಸುತ್ತಾ ಕಾಲಯವನನ ಆ ಪಟ್ಟಣದೊಳಗೆ ಎಲ್ಲರೂ ಕೂಡ ಆಶ್ಚರ್ಯಚಕಿತರಾಗಿ ಎದ್ದು ಸ್ವಾಗತ ಮಾಡಿದ್ದಾರೆ, ಕಾಲಯವನನು ಎದ್ದು ಬಂದು ಸ್ವಾಗತ ಮಾಡುತ್ತಾನೆ. ಸಾಲ್ವ ಅಂದ ನಾನು ದೂತನಾಗಿ ಬಂದವ ಜರಾಸಂಧನ ದೂತ ನಾನು ಒಬ್ಬ ರಾಜನಾಗಿ ಬಂದಿಲ್ಲ ಈಗ, ನೀನು ದೊಡ್ಡ ರಾಜ ನನಗೇಕೆ ಎದ್ದು ಸ್ವಾಗತ ಮಾಡುತ್ತಿಯಾ ಅಂತ ಅದು ಹಾಗಲ್ಲ ನೀನು ರಾಜನಂತೂ ಹೌದು ನೀನು ಯಾರ ದೂತನಾದರೂ ಅಡ್ಡಿ ಇಲ್ಲ ಅಂತ ಕಾಲಯವನ ಅದ್ಭುತವಾದಂತಹ ಸ್ವಾಗತವನ್ನು ಮಾಡುತ್ತಾನೆ ಸಾಲ್ವನಿಗೆ. ಹೋಗಿ ಕುಳಿತ ತನ್ನ ಅಭಿಪ್ರಾಯವನ್ನು ತಿಳಿಸುತ್ತಾನೆ ಜರಾಸಂಧ ಅಂತ ಹೆಸರು ಕೇಳಿದ ಕೂಡಲೇನೆ ಎದ್ದು ಸಾಷ್ಟಾಂಗ ನಮಸ್ಕಾರವನ್ನು ಹಾಕಿದ ಕಾಲಯವನ.

ಆ ರೀತಿ ಅಂತಹ ಎಲ್ಲ ಕೃಷ್ಣ ವಿರೋಧಿ ಚಟುವಟಿಕೆಗಳನ್ನು ಮಾಡುವಂತಹ ಅಖಿಲ ದೈತ್ಯ ಮಹಾಮಂಡಳಕ್ಕೆ ಅವನು ಅಧ್ಯಕ್ಷನಾಗಿದ್ದಾನೆ. ಎಲ್ಲ ದೈತ್ಯರು ಕೃಷ್ಣ ವಿರೋಧಿಗಳು ಅಂತ ಯಾರೋ ಅಂಥವರ ಒಂದು ದೊಡ್ಡ ಸಂಘಟನೆಗೆ ಜರಾಸಂಧ ಅಧ್ಯಕ್ಷ ಹೀಗಾಗಿ ಆ ಜರಾಸಂಧ ಹೇಳಿ ಕಳಿಸಿದ್ದಾನೆ ಅಂತ ಕೇಳಿದರೇನೆ ಕಾಲಯವನನಿಗೆ ಅಷ್ಟು ಸಂತೋಷ. ಅಂತಹ ದೊಡ್ಡ ಮಹಾನುಭಾವ ನನ್ನಂಥವರ ಉಪಕಾರ ಅವನಿಗೆ ಯಾಕೆ ಬೇಕು ನಾನು ಏನು ಬೇಕೋ ಅವನಿಗೆ ಸೇವೆ ಮಾಡುವುದಕ್ಕೆ ಸಿದ್ಧ ಅಂತ ಕಾಲಯವನ ಒಪ್ಪಿಕೊಂಡಿದ್ದಾನೆ. ಹಿಂದೆ ಕಥೆ ನೀವು ಕೇಳಿದ್ದೀರಿ ಗರ್ಗ್ಯಾಚಾರ್ಯರು ಪರಮ ಭಗವದ್ಭಕ್ತರು ಯದು ಕುಲದ ಪುರೋಹಿತರು ಆದರೆ ಆ ಗರ್ಗ್ಯಾಚಾರ್ಯರ ಶಾಲಕ ಅನೇಕ ಜನರ ಎದುರಿನಲ್ಲಿ ಇವರು ಷಂಡ ಅಂತ ಇವರು ಮಹಾತಪಸ್ವಿಗಳು ಅತ್ಯಂತ ನೈಷ್ಠಿಕವಾದ ಬ್ರಹ್ಮಚರ್ಯವನ್ನು ಪರಿಪಾಲನೆ ಮಾಡುವಂತಹ ಮಹಾತಪಸ್ವಿಗಳು. ಆ ತಪಸ್ವಿಗಳು ಆದದ್ದರಿಂದ ನಿರ್ವಿಕಾರವಾಗಿ ಇರುತ್ತಾ ಇದ್ದರು ಯಾವಾಗಲೂ ಕೂಡ ಯಾವುದೇ ತರಹದ ವಿಕಾರ

ವಿಕಾರಹೇತೌ ಸತಿವಿಕ್ರಿಯಂತೇ ಏಷಾಂ ನ ಚೇತಾಂಸಿ ಸ ಎವಧೀರಃ । (ಕುಮಾರಸಂಭವ ಮಹಾಕಾವ್ಯ)

ಧೈರ್ಯ ಅಂದರೆ ಏನು ಏನಿಲ್ಲದೆ ಸುಮ್ಮನೆ ಮನೆಯಲ್ಲಿ ಕುಳಿತಾಗ ಧೈರ್ಯ ಅಂದರೆ ಅದು ಧೈರ್ಯ ಅಲ್ಲ **'ವಿಕಾರಹೇತೌ ಸತಿವಿಕ್ರಿಯಂತೇ ಏಷಾಂ ನ ಚೇತಾಂಸಿ ಸ ಎವಧೀರಃ'** ಯಾವ ತರಹದ ವಸ್ತುಗಳ ದರುಶನ ಮಾಡಿದಾಗ ಮನಸ್ಸಿಗೆ ವಿಕಾರವಾಗಬಹುದೋ ಅಂತಹ ವಸ್ತುಗಳ ದರುಶನ ಮಾಡಿದಾಗಲೂ ವಿಕಾರವಾಗದೇ ಇದ್ದರೆ ಅದು ನಿಜವಾದಂತಹ ಧೈರ್ಯ, ಸ್ಥೈರ್ಯ ಅದು ಬ್ರಹ್ಮಚರ್ಯ ಅಂತಹ ಬ್ರಹ್ಮಚರ್ಯ ಇವರಲ್ಲಿ ಇತ್ತು. ಇದನ್ನು ಅರ್ಥ ಮಾಡಿಕೊಳ್ಳದೇ ಇವರು ಷಂಡರು ಅಂತ ಅಪಾಹಸ ಮಾಡಿದಾಗ ಕೃಷ್ಣನ ಸಹಾಯದಿಂದ ನೀವು ಅಪಹಾಸ

ಮಾಡುತ್ತಾ ಇದ್ದೀರಿ ಅಂತ ತಪ್ಪು ತಿಳುವಳಿಕೆ ಬಂತು. ಕೃಷ್ಣ ಎಂದಿಗೂ ಸಜ್ಜನರನ್ನು ನೋಡಿ ಅಪಹಾಸ ಮಾಡಬೇಡಿ ಅಂತ ಹೇಳಿದವ ಅಂತಹ ಕೃಷ್ಣನ ಹೃದಯವನ್ನು ತಿಳಿಯದೇ ಅಸುರಾವೇಶದಿಂದ ಇವರು ತಪಸ್ಸು ಮಾಡಿದ್ದಾರೆ. ಹನ್ನೆರಡು ವರ್ಷ ತಪಸ್ಸು ಮಾಡಿದರು ಅಂತ ಹರಿವಂಶ ಹೇಳುತ್ತದೆ, ಒಂದು ವರ್ಷ ತಪಸ್ಸು ಮಾಡಿದರು ಅಂತ ಅಬ್ದ ಅಬ್ದತಃ ಅಂತ ಇದೆ ಒಂದು ವರ್ಷ ಅಂತ ಪ್ರಾಯಃ ಅದಕ್ಕೆ ಅರ್ಥ ತೋರುತ್ತದೆ ಮಹಾಭಾರತದ ತಾತ್ಪರ್ಯ ನಿರ್ಣಯದಲ್ಲಿ. ಅದಕ್ಕೆ ಮಧುಸೂಧನ ಭಿಕ್ಷುಗಳು ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಕ್ಕೆ ವ್ಯಾಖ್ಯಾನ ಬರೆದ ಮಹಾನುಭಾವರು ಹಾಗೂ ಚೆಟ್ಟಿ ಆಚಾರ್ಯರು ವ್ಯಾಖ್ಯಾನದಲ್ಲಿ ತಿಳಿಸುತ್ತಾರೆ. ಅಲ್ಲಿ ಹರಿವಂಶದೊಳಗೆ ಇರುವ ಅಬ್ದ ಅನ್ನುವ ಶಬ್ದಕ್ಕೆ ತಿಂಗಳು ಅಂತ ಅರ್ಥ 12 ವರ್ಷ ಅಂದರೆ 12 ತಿಂಗಳು ಅಂತ ಅರ್ಥ ಹಾಗಾದರೆ ಶ್ರೀಮದಾಚಾರ್ಯರು ಹೇಳಿದ ರೀತಿಯಲ್ಲಿ 1 ವರ್ಷ ಕಬ್ಬಿಣದ ಚೂರನ್ನು ತಿಂದು ತಪಸ್ಸು ಮಾಡುತ್ತಾರೆ. ಎಂತಹ ಕಠಿಣವಾದ ತಪಸ್ಸು ಅಸುರಾವೇಶ ಇದ್ದದ್ದರಿಂದ ದೇವರ ದ್ರೋಹ ಮಾಡುವಂತಹ ಆಗ್ರಹ ಎಷ್ಟು ಬಂತು ನೋಡಿ ಒಂದು ವರ್ಷ ಸಂಪೂರ್ಣ ಕಬ್ಬಿಣದ ಚೂರನ್ನು ತಿಂದು ತಪಸ್ಸು ಮಾಡಿ ರುದ್ರ ದೇವರಿಂದ ವರ ಪಡೆಯುತ್ತಾರೆ ಕೃಷ್ಣನ **'ಅಭಾವ ಕೃಷ್ಣಾ ಭಾವದಂ ಸುತಂ'** ಆ ಕೃಷ್ಣ ಇಲ್ಲದಂತೆ ಮಾಡುವಂತಹ ಒಬ್ಬ ಮಗನನ್ನ ಪಡೆಯಬೇಕು ಅಂತ. ಆ ಮಗನನ್ನು ಪಡೆಯಬೇಕು ಅಂತ ವರ ಪಡೆದು ಬರುತ್ತಾರೆ ಆದರೆ ಇಷ್ಟು ದಿವಸ ಬ್ರಹ್ಮಚರ್ಯದಿಂದ ಇದ್ದರು ಮದುವೆಯಾಗಿಲ್ಲ ಎಲ್ಲಿ ಮಕ್ಕಳನ್ನು ಪಡೆಯುವುದು. ಆಗ ಇದನ್ನೇ ದಾರಿ ಕಾಯುತ್ತಾ ಇದ್ದ ಇನ್ನೊಬ್ಬ ಅಸುರಳು ಅಸುರ ಅಪ್ಸರಾ ಸ್ತ್ರೀ ಅವಳು ಗೋಪಿಕಾಸ್ತ್ರೀ ವೇಷದೊಗಳಗೆ ಬಂದು ಇವರ ಹತ್ತಿರ ಸಂಗವನ್ನು ಮಾಡುತ್ತಾಳೆ. ಒಬ್ಬ ಮ್ಲೇಚ್ಛ ರಾಜ ಯವನ ಅವನು ಕೊಟ್ಟು ಕಳಿಸುತ್ತಾನೆ ಅವಳನ್ನು ಅವಳಲ್ಲಿ ಇವರು ತಾವು ವಿಶೇಷವಾಗಿ ಆ ಮಗನನ್ನು ಪಡೆಯುತ್ತಾರೆ ಆಗ ಇವರಿಗೆ ಬಹಳ ಪಶ್ಚಾತ್ತಾಪವಾಗುತ್ತದೆ. ಎಂತಹ ತಪ್ಪು ಕೆಲಸ ಮಾಡಿದೆ ನಾನು, ವಿಷ್ಣು ದ್ರೋಹ ಮಾಡಿದೆ ಶ್ರೀಕೃಷ್ಣ ಪರಮಾತ್ಮನ ವಿರೋಧ ಮಾಡಿದೆನಲ್ಲ, ನೈಷ್ಠಿಕ ಬ್ರಹ್ಮಚರ್ಯವನ್ನೂ ಪರಿತ್ಯಾಗ ಮಾಡಿದೆ ಅಂತ ಪಶ್ಚಾತ್ತಾಪ ಆಗಿ ಅವಳನ್ನ ಆ ಮಗನನ್ನ ಆ ಯವನನಿಗೆ ಕೊಟ್ಟು ಕಳಿಸಿಬಿಡುತ್ತಾರೆ. ಯವನ ಅದೇ ಕರಾರಿನೆಂದಲೇ ಕೊಟ್ಟಿದ್ದ ಹುಟ್ಟಿದ ಮಗು ನನಗೆ ಬೇಕು ಅಂತ ಬಹಳ ಸಂತೋಷ ನೀನೇ ತೊಗೊಂಡು ಹೋಗು ಅಂತ ಆ ಮಗನನ್ನು ಅವಳನ್ನು ಕೊಟ್ಟು ಕಳಿಸಿ ತಾವು ಮತ್ತೆ ತಪಶ್ಚರ್ಯಕ್ಕೆ ಹೊರಟು ಹೋಗಿದ್ದಾರೆ. ಪರಮಾತ್ಮನನ್ನು ಕುರಿತು ವಿಶೇಷವಾಗಿ ತಪಶ್ಚರ್ಯ ಮಾಡಿ ತಮ್ಮ ಉದ್ಧಾರವನ್ನು ತಾವು ಹೊಂದಿದ್ದಾರೆ.

ಕೃಷ್ಣನನ್ನು ಯಾವಾಗ ಸಂಹಾರ ಮಾಡೇನು ಅಂತ ಕಾಯುತ್ತಾ ಕಾಲ ಕಾಯುತ್ತಾ ಕುಳಿತಿದ್ದ ಅನ್ನುವುದಕ್ಕೆ ಇವನು ಕಾಲ, ಯವನ ಇವನನ್ನು ಬೆಳೆಸಿದ ಅನ್ನುವುದಕ್ಕೆ ಇವನು ಯವನ ಕಾಲಯವನ ಅಂತಹ ಕಾಲಯವನ ಯುದ್ಧಕ್ಕೆ ಸಿದ್ಧನಾಗಿ ಹೊರಟೇಬಿಟ್ಟ. ಹರಿವಂಶ ವರ್ಣನೆ ಮಾಡುತ್ತದೆ ಅವನು ಅಂದರೆ ಅಂಥವರು ಅಸುರರೂ ಕೂಡಾನೂ ನೋಡಿದರೆ ಅಸುರರು ದೈತ್ಯರು ಆದರೆ ತಾವು ಮಾಡುವ ಕಾರ್ಯದಲ್ಲಿ ಯಶಸ್ಸು ಸಿಗಬೇಕು ಅಂತ ಹೇಳಿ ಮತ್ತೆ ಯಜ್ಞ ಯಾಗ, ಹೋಮ ಹವನ, ಬ್ರಾಹ್ಮಣರ ಭೋಜನ ಅವರ ಆಶೀರ್ವಾದ ಪಡೆದೇ, ಪುಣ್ಯಾಹವಾಚನವನ್ನು ಮಾಡಿಸಿಕೊಂಡೇ ಹೊರಡುತ್ತಾರೆ. ಇದು ಬಹಳ ಗಮನಾರ್ಹವಾದದ್ದು ಅನೇಕ ಜನ ಹಾಗೆ ಹೇಳುವವರು ಇವತ್ತಿಗೂ ಜಗತ್ತಿನಲ್ಲಿ ಕಾಣುತ್ತಾರೆ ಧರ್ಮ ಇಲ್ಲ, ದೇವರಿಲ್ಲ, ಏನೂ ಇಲ್ಲ ಎಲ್ಲಾ ಸುಳ್ಳು ಅಂತ ಉಪನ್ಯಾಸ ಮಾಡುತ್ತಾರೆ ನಾಲ್ಕು ಜನರ ಒಂದು ವಿಶೇಷವಾದಂತಹ ಮನ್ನಣೆಯನ್ನು ಪಡೆಯಬೇಕು ಅಂತ. ಹೋ ಇವರು ಬಹಳ ಉಪಕಾರವಂತರು, ಯಾವ ಅಂಧ ಶ್ರದ್ಧೆಗಳನ್ನು ನಂಬುವುದಿಲ್ಲ, ಭಾರೀ ನೂತನ ವಿಚಾರಶಾಲಿಗಳೂ ಅಂತ ನಾಲ್ಕು ಜನರ ಮನ್ನಣೆಯನ್ನು ಪಡೆದು ಮತ್ತೆ ತಮಗೆ ಬೇಕಾದ ಕಾರ್ಯಗಳನ್ನು ಪೂರ್ಣ ಮಾಡಿಕೊಳ್ಳುವುದಕ್ಕೆ ಹೋಮ ಹವನ, ಪೂಜೆ ಪುನಸ್ಕಾರ, ಪಂಚಾಮೃತ ಎಲ್ಲ ಮಾಡಿಸುವುದೇ ಇದು ಅಂದಿನಿಂದಲೂ ನಡೆದು ಬಂದದ್ದು. ಕಾಲಯವನ ಹೊರಡುತ್ತಾನೆ ಹೊರಡುವಾಗ ಮುಹೂರ್ತ ಮಾತ್ರ ನೋಡುವುದಿಲ್ಲ ಯಾಕೆ ಅಂದರೆ ಗುರುಗಳ ಆಜ್ಞೆ

ಆಗಿದೆ ಜರಾಸಂಧನ ಆಜ್ಞೆ ಆದ್ದರಿಂದ ನಾನು ಇನ್ನು ಬೇರೆ ಮುಹೂರ್ತ ನೋಡಬೇಕಾಗಿಲ್ಲ ಅಂತದೆ ಹರಿವಂಶ. ಇದು **'ತದೇವಲಗ್ಗಂ ಸುದಿನಂತ ದೇವ'** ಹೊರಟೇ ಬಿಡುವುದು ಆದರೆ ಬ್ರಾಹ್ಮಣರ ಆಶೀರ್ವಾದ ಬೇಕು, ಯಜ್ಞ ಯಾಗಾದಿಗಳನ್ನು ಮಾಡಬೇಕು, ಪುಣ್ಯಾಹವಾಚನಾದಿಗಳನ್ನು ಮಾಡಿಸಿಕೊಂಡು ಹೊರಡೋಣ ಅಂತ ಸಂಕಲ್ಪವನ್ನು ಮಾಡಿ ಆಶೀರ್ವಾದವನ್ನು ತೆಗೆದುಕೊಂಡು ಹೊರಡುತ್ತಾನೆ. ಅವರು ಯಾಕೆ ಆಶೀರ್ವಾದವನ್ನು ನೀನೇ ವಿಜಯಶಾಲಿ ಆಗು ಅಂತ ಮಾಡುತ್ತಾರೆ ಆ ದೇವರೇ ವಿಜಯಶಾಲಿ ಸರ್ವದಾ ವಿಜಯಶಾಲಿ ಆ ಸುದ್ದಿ ನಮಗೆ ಬರಲಿ ಅಂತ ಆಶೀರ್ವಾದ ಮಾಡಿದ್ದಾರೆ ಮಹಾನುಭಾವರು ಹೊರಟಿದ್ದಾನೆ.

ಮೂರು ಕೋಟಿ ಅಕ್ಷೌಹಿಣೀ ಸೈನ್ಯವನ್ನು ತೆಗೆದುಕೊಂಡು ಹೊರಟಿದ್ದಾನೆ. ಹದಿನೆಂಟು ಅಕ್ಷೌಹಿಣೀ ಸೈನ್ಯದ ಮಹಾಭಾರತದ ಯುದ್ಧ ಎಲ್ಲಿ, ಮೂರು ಕೋಟಿ ಅಕ್ಷೌಹಿಣೀ ಸೈನ್ಯವನ್ನು ತೆಗೆದುಕೊಂಡು ಹೊರಟಿದ್ದಾನೆ ಇದಕ್ಕಿಂತ ದೊಡ್ಡದು ರಾಮ ರಾವಣ ಯುದ್ಧ ಅದು ಇರಲಿ ಅದು **'ಮಹೌಘಮಹೌಘಮೇವ'** ಅಂತ ಅದು ಭಾರೀ ಅದ್ಭುತವಾದಂತಹದ್ದು 36,000 ಮಹೌಘ ಅಕ್ಷೌಹಿಣೀ ಸೈನ್ಯ **'ಮಹೌಘಮಹೌಘಮೇವ'** ಇದು ದೇವಾ ದೇವಾನ ಸಂಗ್ರಾಮ ಕಾಲದಲ್ಲಿ ಬಂದದ್ದು ಆ ಕಾಲನೇಮಿಯ ಯುದ್ಧ ಎಲ್ಲ ಆಗುತ್ತದಲ್ಲ ಆಗ, ಇರಲಿ ಹೇಳುವ ತಾತ್ಪರ್ಯ ಭಾರೀ ಭಾರೀ ಯುದ್ಧಗಳೆಲ್ಲಾ ಆಗಿವೆ. ಈಗ ಮೂರು ಕೋಟಿ ಅಕ್ಷೌಹಿಣೀ ಸೈನ್ಯ ಮತ್ತೇನು ಅಂತ ವಿವರಣೆ ಕೊಡಬೇಕಾಗಿಲ್ಲ ಅಕ್ಷೌಹಿಣೀ ವಿವರಣೆ ಕೊಟ್ಟಾಗಿದೆ ಅಷ್ಟು ದೊಡ್ಡ ಸೈನ್ಯವನ್ನು ಅವನು ಕಟ್ಟುಗೊಂಡಿದ್ದ.

ಅವನು ಎಲ್ಲಿ ಇದ್ದ ಅಲ್ಲಿ ಒಂದು ನದಿ ಹರಿಯುತ್ತಾ ಇತ್ತು ಎದರದು ಅಂದರೆ ಆ ಕುದುರೆ ಆನೆ ಇತ್ಯಾದಿಗಳ ಮೂತ್ರದ ನದಿಯೇ ಹರಿಯುತ್ತಾ ಇತ್ತು ಶಕೃತ್ ಅಂತ ಆ ನದಿಯ ಹೆಸರು. ಅದು ಕೆಲವು ಕಡೆಗೆ ಮಹಾಪೂರ ಬಂದು ಊರುಗಳು ನಾಶ ಆಗುವಂತಹ ಪ್ರಸಂಗ

ತದನ್ಯ ದೇಶ ಮೂತ್ರಿತಂ ವ್ಯಶೋಷಯದ್ಧಿ ಮಾರುತಃ ॥ (17.106 ಮಭಾತಾನಿರ್ಣಯ)

ಅದಕ್ಕೆ ಪ್ರಜಾಪಾಲಕರಾದಂತಹ ವಾಯು ದೇವರು ಪ್ರಜೆಗಳಿಗೆ ತೊಂದರೆ ಆಗಬಾರದು ಅಂತ ಅದನ್ನೆಲ್ಲಾ ಒಣಗಿಸುತ್ತ ಇದ್ದರು. ಆ ರೀತಿಯ ಮಹಾ ಸೈನ್ಯ ಇಂತಹ ಸೈನ್ಯವನ್ನು ಕರೆದುಕೊಂಡು ಬಂದರೆ ಶ್ರೀಕೃಷ್ಣ ಪರಮಾತ್ಮ ಆ ಎಲ್ಲ ದುಷ್ಟರಾದಂತಹ ಅವನ ಅನುಚರರನ್ನ, ಸೈನಿಕರನ್ನ, ಸವಾಹನ ಸಕಲ ಸೈನ್ಯವನ್ನ ನಾಶ ಮಾಡಿದ್ದಾನೆ. ಕೊನೆಗೆ ಆ ಕಾಲಯವನ ಶ್ರೀಕೃಷ್ಣ ಪರಮಾತ್ಮನನ್ನೇ ಬೆನ್ನು ಹತ್ತಿ ಬರುತ್ತಾ ಇದ್ದಾನೆ, ಕೃಷ್ಣ ಪರಮಾತ್ಮ ಅಲ್ಲಿಂದ ಓಡುತ್ತಾ ಬಂದು ಮುಚುಕುಂದನು ಇದ್ದಂತಹ ಪರ್ವತಕ್ಕೆ ಬಂದ ಒಳಗೆ ಗುಹೆಯಲ್ಲಿ ಪ್ರವೇಶ ಮಾಡಿದ್ದಾನೆ. ಗುಹೆಯಲ್ಲಿ ಪ್ರವೇಶ ಮಾಡಿ ತಾನು ಅದೃಶ್ಯನಾಗಿದ್ದಾನೆ ಅಲ್ಲಿ ಮಲಗಿದ್ದ ಮುಚುಕುಂದ ಇವನೇ ಕೃಷ್ಣ ಅಂತ ಭ್ರಾಂತಿ ದೇವರಲ್ಲದೇ ಇದ್ದವನನ್ನು ದೇವರು ಅಂತ ತಿಳಿದ ಆದ ಅನರ್ಥ ಏನು ನೋಡಿ ದೇವರಲ್ಲದ ಮುಚುಕುಂದನನ್ನು ಮುಕುಂದ ಅಂತ ತಿಳಿದ ದೇವರಿಂದ ಮೋಕ್ಷ ಪಡೆಯಬೇಕಾದವ ಇವ, ಮೋಕ್ಷ ಕೊಡುವವ ಅವ, ಮೋಕ್ಷ ಕೊಡುವ ದೇವನಿಗೂ ಮೋಕ್ಷ ಪಡೆಯುವ ಜೀವನಿಗೂ ಎಂದಿಗೂ ಐಕ್ಯ ಇರುವುದಕ್ಕೆ ಸಾಧ್ಯವೇ ಇಲ್ಲ. ಆದರೆ ಆ ಕಾಲಯವನ ಆ ಮುಕುಂದ ಮೋಕ್ಷಪ್ರದನಾದ ಶ್ರೀಹರಿ ಅವನೇ ಇವ ಈ ಮುಚುಕುಂದ ಅಂತ ತಪ್ಪು ತಿಳಿದ ಕಾಲಿನಿಂದ ಒದ್ದ, ಮುಸುಕು ಎಳೆದ ಅವನ ಮೊದಲ ಕಣ್ಣಿನ ದೃಷ್ಟಿ ಬಿದ್ದದ್ದೇ ತಡ ಅವನು ಸುಟ್ಟು ಬೂದಿಯಾಗಿದ್ದಾನೆ. ದೇವತೆಗಳ ವರ ಇತ್ತು ಯಾರು ನಿನ್ನನ್ನು ಎಬ್ಬಿಸುತ್ತಾರೋ ಅವರನ್ನು ನೀನು ನೋಡಿದರೆ ಸಾಕು ಅವರು ಸುಟ್ಟು ಬೂದಿಯಾಗುತ್ತಾರೆ ಅಂತ ಹಾಗೆ ವರ ಕೇಳಿದ್ದ ಕೊಟ್ಟಿದ್ದರು ಬೂದಿಯಾದ. ದೇವತೆಗಳಿಗೆ ಸಂತೋಷ ಆಯಿತು ಯಾಕೆ ಅಂದರೆ ನಾವು ನಿದ್ರೆಯ ವರ ಕೊಟ್ಟಿದ್ದೇವೆ ಇದು ತಮೋಗುಣದ ಕಾರ್ಯ ನಿದ್ರೆ ಇದು ಸಾರ್ಥಕವಾಗಬೇಕು ಅಂತಹ ಒಬ್ಬ

ದುಷ್ಟನಾದ ವ್ಯಕ್ತಿಯ ಸಂಹಾರಕ್ಕೆ ಇದು ಕಾರಣ ಅಂತಾದರೆ ನಾವು ಕೊಟ್ಟ ವರ ಸಾರ್ಥಕ ಆಯಿತು. ಯಾರೋ ಸಜ್ಜನರು ಇವನನ್ನು ಎಬ್ಬಿಸುವುದಕ್ಕೆ ಹೋಗಿ ಅವರು ಸತ್ತಿದ್ದರೆ ನಮ್ಮ ವರದಿಂದ ಒಬ್ಬ ಸಜ್ಜನನ ಮರಣ ಆಯಿತು ಅನ್ನುವ ಖೇದ ನಮ್ಮ ಮನಸ್ಸಿನಲ್ಲಿ ಇರುತ್ತಾ ಇತ್ತು ಇವತ್ತು ಆ ಖೇದ ಇಲ್ಲ ಸಾರ್ಥಕವಾಗಿದೆ ಅಂತ ದೇವತೆಗಳು ಸಂತೋಷ ಪಟ್ಟಿದ್ದಾರೆ ದೇವತೆಗಳಿಗೆ ಪರಮಾತ್ಮ ಅನುಗ್ರಹವನ್ನು ಮಾಡಿದ್ದಾನೆ. **'ನ ದೇವ ತೋಷಣಂ ವೃಥಾ'** ದೇವರನ್ನು ಸಂತೋಷ ಪಡಿಸಿದರೆ, ದೇವತೆಗಳನ್ನು ಸಂತೋಷ ಪಡಿಸಿದರೆ ಅದು ವ್ಯರ್ಥ ಆಗುವುದಿಲ್ಲ, ದೊಡ್ಡವರ ಅನುಗ್ರಹ ಅದನ್ನು ನೋಡುವುದಕ್ಕೆ ಏನೋ ಸಾಮಾನ್ಯ ನಿದ್ರೆಯ ವರ ಅಂತ ಅನ್ನಿಸಬಹದು ಆದರೆ ಅದರಿಂದ ಇಂತಹ ಒಂದು ಉತ್ತಮವಾದ ಸಜ್ಜನರ ರಕ್ಷಣೆಯ ಕಾರ್ಯ, ಒಬ್ಬ ದುಷ್ಟನ ಸಂಹಾರದ ಕಾರ್ಯ ಆಗಿದೆ ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ.

ಈ ಮಧ್ಯದಲ್ಲಿ ಶ್ರೀಕೃಷ್ಣ ಪರಮಾತ್ಮ ನಾನು ಮಥುರಾ ಪಟ್ಟಣದಲ್ಲಿಯೇ ಇದ್ದರೆ ಇವರಿಂದ ಈ ತರಹ ಮೇಲಿಂದ ಮೇಲೆ ಆಕ್ರಮಣ ಆಗಿ ಅಲ್ಲಿರುವ ಜನರಿಗೆ ತೊಂದರೆ ಆಗುತ್ತದೆ ಅಂತ ದ್ವಾರಕಾ ಪಟ್ಟಣದ ನಿರ್ಮಾಣವನ್ನು ಮಾಡುತ್ತಾನೆ. ವಿಶ್ವಕರ್ಮನನ್ನೇ ಕರೆಸಿ ಮೊದಲೇನೆ ಹಿಂದೆ ರೈವತ ರಾಜ್ಯ ಕುಶಸ್ಥಲೀ ಅಂತ ಒಂದು ಪಟ್ಟಣವನ್ನು ಸಮುದ್ರ ಮಧ್ಯದಲ್ಲಿ ನಿರ್ಮಾಣ ಮಾಡಿದ್ದ ಅದು ಅತ್ಯಂತ ಸಂಕ್ಷಿಪ್ತವಾದದ್ದು ಆದರೆ ಶ್ರೀಕೃಷ್ಣ ಪರಮಾತ್ಮ ಅದನ್ನು ವಿಸ್ತಾರವನ್ನು ಮಾಡುತ್ತಾನೆ ಎಂಬುದಾಗಿ ನವಮಸ್ಕಂಧ ಭಾಗವತದ ವ್ಯಾಖ್ಯಾನದಲ್ಲಿ ಸತ್ಯಧರ್ಮತೀರ್ಥರು ತಿಳಿಸುತ್ತಾರೆ. ಕೆಲವರ ಅಭಿಪ್ರಾಯ ಅದು ಮುಳುಗಿ ಹೋಗಿತ್ತು ಶ್ರೀಕೃಷ್ಣ ಪರಮಾತ್ಮ ಪುನಃ ಅದರ ಉಜ್ಜೀವನ ಮಾಡಿದ ಅಂತೂ ಕೆಲವು ವ್ಯಾಖ್ಯಾನಕಾರರ ಅಭಿಪ್ರಾಯ ಆದರೆ ಹರಿವಂಶ ಗ್ರಂಥದ ಪರ್ಯಾಲೋಚನೆ ಮಾಡಿದರೆ ಸತ್ಯಧರ್ಮತೀರ್ಥರು ವ್ಯಾಖ್ಯಾನದಲ್ಲಿ ಹೇಳಿದ್ದದ್ದನ್ನು ನಾವು ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದು. ಯಾಕೆಂದರೆ ಹರಿವಂಶ ಹೇಳುತ್ತದೆ ಗರುಡ ದೇವರು ಆ ದ್ವಾರಕಾ ಪಟ್ಟಣದ ವೀಕ್ಷಣೆಯನ್ನು ಮಾಡಿ ಬರುತ್ತಾರೆ ಅಂತ ಇದೆ ಅಂದರೆ ಮೊದಲೇ ಇತ್ತು ಅಂತ ಅಲ್ಲಿ ಸಾಕಷ್ಟು ಗಿಡಗಳು ಬೆಳೆದಿತ್ತು, ಮುಳ್ಳುಗಳು, ಕಂಟಿಗಳು ಇವುಗಳೆಲ್ಲವೂ ಬೆಳೆದು ನಿಂತಿತ್ತು ಬಹಳ ಜನರು ಓಡಾಡುವುದಕ್ಕೆ ಸಾಧ್ಯವಿಲ್ಲದೇ ಇರುವ ಸ್ಥಿತಿ ಇತ್ತು. ಅದೆಲ್ಲವನ್ನು ಶುದ್ಧ ಮಾಡಿಕೊಂಡು ಬಂದು ಗರುಡ ದೇವರು ಕೃಷ್ಣನಿಗೆ ಹೇಳುತ್ತಾರೆ ಎಲ್ಲ ಶುದ್ಧವಾಗಿದೆ ಸಿದ್ಧವಾಗಿದೆ ಇನ್ನೇನಾದರೂ ಹೆಚ್ಚಿನ ವಿಸ್ತಾರ ಮಾಡುವದಾದರೆ ನೀನು ಬಂದು ಮಾಡಬಹುದು ಅಂತ ಆಗ ಕೃಷ್ಣ ಹೋಗಿ ಆ ವಿಶ್ವಕರ್ಮನನ್ನು ಕರೆಸಿ ಸಮುದ್ರ ರಾಜನಾದ ವರುಣನಿಗೆ ಆಜ್ಞೆ ಮಾಡುತ್ತಾನೆ. ಎಲ್ಲಾ ದೇವಾಧಿದೇವತೆಗಳು ಪರಮಾತ್ಮನ ದಾಸಾನದಾಸರು ಸರ್ವೋತ್ತಮನಾದವನು ಶ್ರೀಹರಿ ಶ್ರೀಕೃಷ್ಣ ಅನ್ನುವುದು ಪದೇ ಪದೇ ಇತಿಹಾಸ ಪುರಾಣಗಳಿಂದ ನಮಗೆ ತೋರಿಬರುತ್ತದೆ. ವರುಣ ದೇವರಿಗೆ ಆಜ್ಞೆ ಮಾಡುತ್ತಾನೆ ಬಹಳ ಚಿಕ್ಕದಾಗಿದೆ ದ್ವಾರಕಾ ನಮ್ಮ ಹಿರಿಯರು ರೈವತ ರಾಜ ಮಾಡಿದ್ದು ಆದರೆ ಹನ್ನೆರಡು ಯೋಜನ ನೀನು ದೂರ ಸರಿ ಅಂದುಬಿಟ್ಟ ಅಷ್ಟೆ, ಆ ವಾಯು ದೇವರು ಜೋರಾಗಿ ಆ ವಾಯು ವೇಗದಿಂದ ಆ ನೀರನ್ನು ಹಿಂದೆ ಸರಿಸುತ್ತಾರೆ ವರುಣ ದೇವರು ಸರಿಯುತ್ತಾನೆ, ವಾಯು ದೇವರು ಸರಿಸುತ್ತಾರೆ ಅವನು ಹಿಂದೆ ಹೋಗುತ್ತಾನೆ, ಹನ್ನೆರಡು ಯೋಜನ ಸುತ್ತಲೂ ಸ್ಥಳ ಅವಕಾಶ ಸಿಕ್ಕಾಗ ವಿಶ್ವಕರ್ಮ ಅದನ್ನು ವಿಸ್ತಾರ ಮಾಡುತ್ತಾನೆ

ವಾಯು ದೇವರಿಗೆ ಆಜ್ಞೆ ಮಾಡುತ್ತಾನೆ ಪರಮಾತ್ಮ. ಇಂದ್ರ ದೇವರ ಸಭಾ ಸುಧರ್ಮ ಅನ್ನುವ ದೊಡ್ಡ ಸಭಾಭವನ, ಅದ್ಭುತವಾದ ಸಭಾಭವನ. ಕಾಮಗಾಮಿಯಾದ ವಿಮಾನಗಳು ಹೇಗಿರುತ್ತಾವೋ ಕಾಮಗಾಮಿನಿಯಾದ ಸಭೆ ಇದು. ಅರ್ಥಾತ್ ಕಾಮಗಾಮಿನಿ ಅನ್ನುವುದಕ್ಕೂ, ಕಾಮ ಅಪೇಕ್ಷೆಗೆ ತಕ್ಕಂತೆ ದೊಡ್ಡದಾಗಬಹುದು, ಚಿಕ್ಕದಾಗಬಹುದು, ಉದ್ದ ಆಗಬಹುದು, ಗುಂಡ ಆಗಬಹುದು, ಚಕ್ರವರ್ತ ಆಗಬಹುದು,

ದೀರ್ಘ ವರ್ತುಲಾಕಾರ ಆಗಬಹುದು. ಇವತ್ತು ಇಲ್ಲಿ, ಬೇಕು ಅಂದರೆ ಇಲ್ಲಿ ಇನ್ನೊಂದು ಕಡೆ ಬೇಕು ಅಂದರೆ ಅಲ್ಲಿ, ಎಲ್ಲಿ ಬೇಕು ಅಲ್ಲಿ ಓಡಾಡುವಂತಹ ಅದ್ಭುತವಾದವಾದ ಆ ಸುಧರ್ಮ ಅನ್ನುವ ಸಭೆ. ಸ್ವರ್ಗಲೋಕದ ಸಭೆಯೇ ಇಲ್ಲಿ ಬೇಕು ತೆಗೆದುಕೊಂಡು ಬಾ ಅಂತ ವಾಯು ದೇವರಿಗೆ ಹೇಳಿದರೆ ಅವರು ಇನ್ಯಾರಿಗೆ ಕೇಳಬೇಕು ಪರಮಾತ್ಮನ ಆಜ್ಞೆ. ಸರ್ವತಂತ್ರ ಸ್ವತಂತ್ರ ಇಂದ್ರನಿಗೆ ಏನು ಮತ್ತೆ ಬೇರೆ ಕೇಳುವ ಅವಶ್ಯಕತೆ ಇಲ್ಲ ತಂದು ಇಟ್ಟಿದ್ದಾರೆ ಆ ಸುಧರ್ಮ ಎಂಬ ಸಭೆ ಬಂದಿದೆ. ವಿಶ್ವಕರ್ಮ ಪಟ್ಟಣವನ್ನು ನಿರ್ಮಾಣ ಮಾಡಿದ್ದಾನೆ ಅದ್ಭುತವಾದ ಮುತ್ತು ರತ್ನ ವಜ್ರಗಳಿಂದ ನಿರ್ಮಿತವಾದಂತಹ ಪಟ್ಟಣ ಅದು ಕೇವಲ ಕಲ್ಲು ಮಣ್ಣು ಇಟ್ಟಿಗೆಗಳಿಂದ ಅಲ್ಲ ಅಂತಹ ಅದ್ಭುತವಾದ ಪಟ್ಟಣದ ನಿರ್ಮಾಣ ಮಾಡಿದ್ದಾರೆ. ಸ್ತ್ರೀಯರಿಗೆ ಸ್ನಾನ ಮಾಡುವುದಕ್ಕೆ ಬೇಕು ಸಮುದ್ರ ಸುತ್ತಲೂ ಕಾಲಿಟ್ಟರೆ ಗೋವಿಂದ ಅಂತಹ ಅತ್ಯಂತ ಆಘಾದವಾದ ಸಮುದ್ರದೊಳಗೆ ಸ್ನಾನ ಮಾಡುವುದು ಹೇಗೆ. ಹಾಗಿಲ್ಲ ಚಿಕ್ಕಮಕ್ಕಳು ಬಂದರೆ ಅವುಗಳು ಓಡಾಡುವುದಕ್ಕೆ ಬೇಕಾದ ಪಾದದಷ್ಟೇ ಮುಳುಗುವಷ್ಟು ನೀರು, ಕೆಲವು ಕಡೆಗೆ ಮೊಳಕಾಲಿನಷ್ಟೆ, ಟೊಂಕದಷ್ಟೆ, ಸ್ತ್ರೀಯರು ತಮ್ಮ ಗೌರವಕ್ಕೆ ತಕ್ಕಂತೆ ಸ್ನಾನ ಮಾಡುವುದಕ್ಕೆ ಅವರಿಗೆ ಕಂಠದವರೆಗೆ ನೀರು. ಹೀಗೆ ಯಾರು ಎಲ್ಲಿ ಸ್ನಾನ ಮಾಡವುದಕ್ಕೆ ಹೇಗೆ ಬೇಕೋ ಆ ತರಹದ ರೀತಿಯಲ್ಲಿ ಸಮುದ್ರರಾಜ ಅಲ್ಲಲ್ಲಿ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾನೆ. ಉಪ್ಪು ಅದರೆ ದ್ವಾರಕೆಯ ಸುತ್ತಲೂ ಮಾತ್ರ ಸಿಹಿ, ಕೃಷ್ಣ ಮಧುರಾ ಅಂತ ಅಂದ ತಕ್ಷಣ ಮಧುರವಾಗಿ ಹೋಯಿತು ನೀರು, ಪರಮಾತ್ಮನ ಆಜ್ಞೆ.

ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ ।
ಯದನುಗ್ರಹತಃ ಸಂತಿ ನ ಸಂತಿ ಯದುಪೇಕ್ಷಯಾ ॥ (02.10.12 ಭಾಗವತ)

ಸಿಹಿ ಆಗಬೇಕು ಉಪ್ಪು ನೀರು ಉಪ್ಪು ಹೋಗಬೇಕು ಮಾಧುರ್ಯ ಬರಬೇಕು ಅದು ಭಗವಂತನ ಸಂಕಲ್ಪ ಬಂದಾಯಿತು. ಇಂತಹ ಅದ್ಭುತವಾದ ಆ ದ್ವಾರಕಾ ಪಟ್ಟಣ. ದ್ವಾರಕಾ ಪಟ್ಟಣದ ಸ್ಮರಣ ಮಾಡುವ ಮಾತ್ರದಿಂದ ಎಲ್ಲ ಪಾಪಗಳ ಪರಿಹಾರವಾಗುತ್ತದೆ ಅಲ್ಲಿರುವಂತಹ ತೀರ್ಥದ ಸ್ನಾನ ಮಾಡಿದರೆ, ತೀರ್ಥಗಳ ಸ್ಮರಣೆ ಮಾಡಿದರೆ ಒಂದೊಂದು ಅಲ್ಲಿರುವಂತಹ ಅನೇಕ ತೀರ್ಥಗಳಿವೆ ವಿಶೇಷ ಸನ್ನಿಧಾನಗಳಿವೆ ಗೋಮತಿ ಸಮುದ್ರ ಸಂಗಮ ಚಕ್ರಾಂಕಿತಗಳೆಲ್ಲ, ಆ ಭಗವಂತನ ಅದ್ಭುತ ಸನ್ನಿಧಾನವನ್ನು ಪಡೆದಂತಹ ಆ ಚಕ್ರಾಂಕಿತಗಳು ಅಂತಹ ಪವಿತ್ರವಾದ ಶ್ರೇಷ್ಠವಾದ ಮೋಕ್ಷಪ್ರದವಾದಂತಹ ಜ್ಞಾನವನ್ನ ನೀಡುವ ಕ್ಷೇತ್ರ ಅದು ದ್ವಾರಕಾ ಕ್ಷೇತ್ರ ಅಂತಹ ಕ್ಷೇತ್ರವನ್ನು ಶ್ರೀಕೃಷ್ಣ ಪರಮಾತ್ಮ ಅಲ್ಲಿ ನಿರ್ಮಾಣ ಮಾಡಿದ್ದಾನೆ. ಅತ್ಯದ್ಭುತವಾದಂತಹ ದ್ವಾರಕಾ ಪಟ್ಟಣವನ್ನು ನಿರ್ಮಾಣ ಮಾಡಿ ಮುಂದೆ ಬರುವಂತಹ ಎಲ್ಲ ಸಜ್ಜನರಿಗೆ ಮೋಕ್ಷಕ್ಕೆ ಇದು ದ್ವಾರ ಆಗಲಿ ಅನ್ನುವ ರೀತಿಯಲ್ಲಿ ಭಗವಂತ ಆ ಪಟ್ಟಣವನ್ನು ನಿರ್ಮಾಣ ಮಾಡಿ ಪರಮಾನುಗ್ರಹವನ್ನು ಮಾಡಿದ್ದಾನೆ ಎಂಬುದಾಗಿ ನಾವು ತಿಳಿಯಬೇಕು. ಆ ಭಗವಂತನ ಸರ್ವೋತ್ತಮತ್ವವನ್ನು ಹೀಗೆ ಒಂದೊಂದು ಕಥೆಗಳ ಮೂಲಕ ನಾವು ತಿಳಿಯುತ್ತಾ ಇದ್ದೇವೆ.

ವೇದೇ ರಾಮಾಯಣೇ ಚೈವ ಪುರಾಣೇ ಭಾರತೇ ತಥಾ ।
ಆದಾವಂತೆ ಚ ಮಧ್ಯೇ ಚ ವಿಷ್ಣುಃ ಸರ್ವತ್ರ ಗೀಯತೇ ॥ (ಭಾವಾಮೃತ)

ಇದು ಶ್ರೀಮದಾಚಾರ್ಯರು ತಿಳಿಸಿಕೊಟ್ಟಿರುವಂತಹ ಸಿದ್ಧಾಂತ. ಮಹಾನುಭಾವರಾದ ರಾಘವೇಂದ್ರ ಸ್ವಾಮಿಗಳವರ ವಿಶೇಷವಾದ ಸ್ಮರಣೆಯ ನಿಮಿತ್ತದಿಂದ ಅವರು ಮಂತ್ರಾರ್ಥ ಮಂಜರೀ ಋಗ್ಭಾಷ್ಯಕ್ಕೆ ವ್ಯಾಖ್ಯಾನವನ್ನು ಮಾಡುವಂತಹ ಪ್ರಸಂಗ ಅರ್ಥಾತ್ ಸಂಗ್ರಹ ರೂಪದಲ್ಲಿ. ಋಗ್ಭಾಷ್ಯದಲ್ಲಿ ಶ್ರೀಮದಾಚಾರ್ಯರು ಹೇಳಿದ

ವಿಷಯಗಳನ್ನ ಟೀಕೆಯಲ್ಲಿ ಟೀಕಾಕೃತ್ಪಾದರು ಹೇಳಿದ ವಿಷಯಗಳನ್ನ ಸಂಗ್ರಹ ರೂಪವಾಗಿ ಮಂತ್ರಗಳ ಅರ್ಥ ನೇರವಾಗಿ ಜಿಜ್ಞಾಸುಗಳಿಗೆ ತಿಳಿಯುವ ರೀತಿಯಲ್ಲಿ ಅವರು ಪರಮೋಪಕಾರ ಮಾಡಿ ತಿಳಿಸಿಕೊಟ್ಟಿದ್ದಾರೆ ಆ ಮೊದಲು ಭೂಮಿಕೆಯನ್ನು ಬರೆದಿದ್ದಾರೆ. ಶ್ರೀಮದಾಚಾರ್ಯರು ಋಗ್ಭಾಷ್ಯದಲ್ಲಿ ಉಪೋದ್ಘಾತವನ್ನು ಹೇಳುತ್ತಾರೆ ಅದೇ ರೀತಿ ಮಂತ್ರಾರ್ಥ ಮಂಜರೀಯಲ್ಲಿ ರಾಘವೇಂದ್ರ ಸ್ವಾಮಿಗಳವರು ಸಂಗ್ರಹ ರೂಪದಲ್ಲಿ ಭೂಮಿಕೆಯನ್ನು ರಚನೆ ಮಾಡಿಕೊಟ್ಟಿದ್ದಾರೆ. ವೇದಗಳ ಮುಖ್ಯ ಪ್ರತಿಪಾದ್ಯನಾದಂತಹ ವ್ಯಕ್ತಿ ಯಾರು, ಸರ್ವೋತ್ತಮನಾದಂತಹ ಭಗವಂತ ಶ್ರೀಹರಿ ನಾರಾಯಣನೇ ಸರ್ವವೇದ ಪ್ರತಿಪಾದ್ಯನಾಗಿದ್ದಾನೆ ಅನ್ನುವ ವಿಷಯವನ್ನು ಅತ್ಯದ್ಭುತವಾದ ರೀತಿಯಲ್ಲಿ ಶ್ರೀಮದಾಚಾರ್ಯರು ಪ್ರತಿಪಾದನೆ ಮಾಡಿಕೊಟ್ಟಿದ್ದಾರೆ ಅದನ್ನು ರಾಘವೇಂದ್ರ ಸ್ವಾಮಿಗಳವರು ತಿಳಿಸುತ್ತಾರೆ. ವೇದಗಳನ್ನ ಪಾರಾಯಣ ಮಾಡುತ್ತೇವೆ, ವೇದಗಳ ಶ್ರವಣ ಮಾಡುತ್ತೇವೆ, ವೇದಮಂತ್ರ ಪಠಣ ಪೂರ್ವಕವಾಗಿ ಅನೇಕ ಹೋಮ-ಹವನಾದಿ ಕಾರ್ಯಗಳು ಆಗುತ್ತದೆ, ಯಜ್ಞ ಯಾಗಾದಿಗಳು ನಡೆಯುತ್ತದೆ, ಅನೇಕ ಸಂಸ್ಕಾರಗಳು ಆಗುತ್ತದೆ, ವಿವಾಹಾದಿ ಉಪನಯನಾದಿ ಇತ್ಯಾದಿಗಳ ಸಂಸ್ಕಾರಗಳಲ್ಲಿ ವೇದ ಮಂತ್ರಗಳ ಪಠಣ ಆಗುತ್ತದೆ. ಇನ್ನು ಅನೇಕ ಶಾಂತಿ ಕಾರ್ಯಗಳು ನಾನಾ ತರಹದ ಪ್ರಸಂಗಗಳಲ್ಲಿ ವೇದ ಮಂತ್ರಗಳ ಉಪಯೋಗ ಹಾಗೂ ಇನ್ನಿತರ ಪೌರುಷೇಯ ಗ್ರಂಥಗಳ, ಸ್ಮೃತಿ ಗ್ರಂಥಗಳ ಉಪಯೋಗವನ್ನೆಲ್ಲಾ ಮಾಡುತ್ತಾ ಇರುತ್ತೇವೆ. ಉಪಯೋಗ ಮಾಡದೇ ಇದ್ದವರಿಗೂ ಗೊತ್ತಂತೂ ಇದೆ ನಮ್ಮ ಭಾರತ ದೇಶದಲ್ಲಿ ಅದ್ಭುತವಾದಂತಹ ಗ್ರಂಥಗಳ ಶಾಸ್ತ್ರಗಳ ದೊಡ್ಡ ಪರಂಪರೆ ಇದೆ ಅಂತ ಏನು ಈ ಎಲ್ಲ ಶಾಸ್ತ್ರಗಳ ಮರ್ಮ ಅನ್ನುವುದನ್ನು ಚೆನ್ನಾಗಿ ತಿಳಿಯದೇ ಆ ಮಂತ್ರಗಳನ್ನ ಪಠಣ ಮಾಡಿದರೆ ಯಾವ ಪ್ರಯೋಜನವೂ ಇಲ್ಲ. ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಸಕಲ ವೇದಗಳ ಸಾರವನ್ನ ಅತ್ಯಅದ್ಭುತವಾದ ರೀತಿಯಲ್ಲಿ ನಮಗೆ ತಿಳಿಸಿಕೊಟ್ಟಿದ್ದಾರೆ ಆಚೆಈಚೆ ಆಲೋಚನೆ ಮಾಡಬೇಡಿ ಅನ್ನುತ್ತಾರೆ. ವೇದಗಳಿಂದಲೇ ವೇದಗಳ ವ್ಯಾಖ್ಯಾನವನ್ನು ಮಾಡಿಕೊಳ್ಳಿ, ಉಪನಿಷತ್ತು ವೇದಗಳ ಅಧಾರದ ಮೇಲೆ ಆ ಉಪನಿಷತ್ತು ವೇದಗಳ ಅಧಾರದ ಮೇಲೆ ವೇದಗಳಿಗೆ ವ್ಯಾಖ್ಯಾನ ಮಾಡಿಕೊಂಡು ಅದಕ್ಕೆ ಅನುಗುಣವಾದ ಇತಿಹಾಸ ಪುರಾಣಗಳಿಗೆ ಅನುಗುಣವಾಗಿ ವೇದದ ವಿಸ್ತಾರವನ್ನು ತಿಳಿದುಕೊಳ್ಳಿ. ವೇದಗಳಿಂದಲೇ ನೇರವಾಗಿ ವೇದದ ಅರ್ಥವನ್ನು ತಿಳಿದುಕೊಳ್ಳಿ, ತಿಳಿದುಕೊಂಡು ಧೃಡ ಆದಮೇಲೆ ಅದಕ್ಕೆ ಅನುಗುಣವಾದ ಏನು ಸ್ಮೃತಿ ಗ್ರಂಥಗಳಿವೆ, ಪೌರುಷೇಯ ಗ್ರಂಥಗಳಿವೆ ಅವುಗಳಿಗೆ ಅನುಗುಣವಾಗಿ ಇನ್ನಷ್ಟು ವೇದದ ವಿವರಣೆಯನ್ನು ಅರ್ಥ ಮಾಡಿಕೊಳ್ಳಿ, ಅದರ ವಿಸ್ತಾರವನ್ನು ನೀವು ತಿಳಿದುಕೊಳ್ಳಿ ಅನ್ನುವ ರೀತಿಯಲ್ಲಿ ಶ್ರೀಮದಾಚಾರ್ಯರು ತೋರಿಸಿಕೊಟ್ಟಿದ್ದಾರೆ.

'ಓಂಕಾರೇಣ ಸರ್ವಾವಾಕ್ ತಂತ್ರಣ್ಣಾತ್' ರಾಘವೇಂದ್ರ ಸ್ವಾಮಿಗಳವರು ಮಂತ್ರಾರ್ಥ ಮಂಜರೀಯಲ್ಲಿ ಹೇಳುತ್ತಾರೆ ಓಂಕಾರದ ವ್ಯಾಖ್ಯಾನ ಸಕಲ ವಾಙ್ಮಯ **'ಓಂಕಾರೇಣ ಸರ್ವಾವಾಕ್ ತಂತ್ರಣ್ಣಾತ್'** ಅಂತ ಎಲ್ಲ ವಾಙ್ಮಯ ಇದು ಓಂಕಾರದ ವ್ಯಾಖ್ಯಾನ ರೂಪ ಆ ಓಂಕಾರ ಇದು ಪರಮಾತ್ಮನನ್ನು ತಿಳಿಸಿಕೊಡುತ್ತದೆ. ಓಂ ಇತಿ ಬ್ರಹ್ಮ, ಓಂಕಾರ ಇದು ಪರಮಾತ್ಮನನ್ನು ಹೇಳಿಕೊಡುತ್ತದೆ ಓಂಕಾರ ಪ್ರತಿಪಾದ್ಯವಾದದ್ದು ಗುಣಪರಿಪೂರ್ಣತ್ವ ಎಂಬ ಅರ್ಥ.

ಓತತ್ತವಾಚೀ ಹ್ಯೋಂಕಾರೋ ವಕ್ಷ್ಯಸೌ ತದ್ಗುಣೋಶತಂ । (1.1.9 ಅನುವ್ಯಾಖ್ಯಾನ)

ಯಾವ ವ್ಯಕ್ತಿ ಸಕಲ ಗುಣಗಳಿಂದ ಪೂರ್ಣ ಅವನನ್ನು **'ಓಂ'** ಎಂಬುದಾಗಿ ಹೇಳುವುದು, ಗುಣ ಪರಿಪೂರ್ಣನಾದ ವ್ಯಕ್ತಿ ನಾರಾಯಣ ಹಾಗಾದರೆ ಓಂ ಎಂಬ ಶಬ್ದದಿಂದ ವಾಚ್ಯನಾದವನು ನಾರಾಯಣ ಅನ್ನುವುದಕ್ಕಾಗಿಯೇ ವೇದಮಂತ್ರದ ಉಚ್ಚಾರಣೆಯ ಪ್ರಾರಂಭದಲ್ಲಿ, ಸಮಗ್ರ ವೇದ ಪಠಣದ ಕೊನೆಯಲ್ಲಿ **'ಹರಿಃ**

ಓಂ ಹರಿಃ ಓಂ ಹರಿಃ ಓಂ' ಪ್ರಾರಂಭದಲ್ಲಿಯೂ ಕೊನೆಯಲ್ಲಿಯೂ ಓಂಕಾರವನ್ನು ಉಚ್ಚಾರಣೆ ಮಾಡುವಾಗ ಹರಿಃ ಅಂತ ಹೇಳುತ್ತಾರೆ. ಹರಿಯೇ ಓಂಕಾರ ಪ್ರತಿಪಾದ್ಯ ಅಂತನ್ನುವುದು ಸಂಪ್ರದಾಯದಿಂದ ತಿಳಿದು ಬಂದದ್ದು, ಶಾಸ್ತ್ರದಿಂದ ತಿಳಿದು ಬಂದದ್ದು ಅಂತಹ ಓಂಕಾರ ಪ್ರತಿಪಾದ್ಯನಾದಂತಹ ನಾರಾಯಣ ಇವನು ಸರ್ವವೇದ ಪ್ರತಿಪಾದ್ಯಕ ಕಾರಣ ಓಂಕಾರದ ವ್ಯಾಖ್ಯಾನವೇ ಸಕಲ ವಾಙ್ಮಯ. ಓಂಕಾರದ ವ್ಯಾಖ್ಯಾನ ಪರಂಪರಯಾ ಸಕಲ ವಾಙ್ಮಯವಾದರೆ ಓಂಕಾರದ ಅರ್ಥನಾದಂತಹ ಹರಿ ಅವನು ಸಕಲ ವೇದಗಳ ಅರ್ಥ ಹಾಗಾದರೆ ಸಕಲ ಶಾಸ್ತ್ರ ಪ್ರತಿಪಾದ್ಯನಾದವನು ನಾರಾಯಣ ಅನ್ನುವುದನ್ನು ತಿಳಿದು ಆಮೇಲೆ ವೇದವನ್ನು ಓದುವುದಕ್ಕೆ ಪ್ರಾರಂಭ ಮಾಡಬೇಕು. **'ವೇದೈಶ್ಚ ಸರ್ವೈರಹಮೇವ ವೇದ್ಯೋ'**[1] ಅಂತ ಶ್ರೀಕೃಷ್ಣ ಪರಮಾತ್ಮ ತಾನು ಹೇಳಿಕೊಂಡಿದ್ದಾನೆ. ಅನೇಕ ಪುರಾಣಗಳಲ್ಲಿ ಸಕಲ ವೇದಗಳ ಪ್ರತಿಪಾದ್ಯನಾದವನು ಶ್ರೀಹರಿ ಅಂತ ಪದ್ಮ ಪುರಾಣದ ಉತ್ತರಖಂಡದಲ್ಲಿ ವೇದವ್ಯಾಸ ದೇವರು ಹೇಳುವಾಗ ಸ್ವತಃ ರುದ್ರ ದೇವರು ಪಾರ್ವತಿ ದೇವಿಗೆ ಹೇಳುತ್ತಾರೆ ಶ್ರೀರಾಮ ಈ ಮೂರಕ್ಷರದ ನಾಮದಲ್ಲಿ ಎಲ್ಲಾ ವೇದಗಳ, ಎಲ್ಲಾ ಉಪನಿಷತ್ತುಗಳ, ಎಲ್ಲಾ ಇತಿಹಾಸ-ಪುರಾಣಗಳ ಸಾರ ಸರ್ವಸ್ವ ಅಡಗಿದೆ ಅಂತ ಹೇಳುತ್ತಾರೆ. ಹಾಗಾದರೆ ಸಕಲ ಶಾಸ್ತ್ರಗಳ ಪ್ರತಿಪಾದ್ಯನಾದವನು ಶ್ರೀರಾಮಚಂದ್ರ ಅಂತ ಸ್ವತಃ ರುದ್ರ ದೇವರು ಪಾರ್ವತಿಗೆ ಹೇಳಿದ ಮಾತನ್ನು ಪದ್ಮ ಪುರಾಣದಲ್ಲಿ ನಾವು ಕೇಳುತ್ತೇವೆ ಇಂತಹ ಮಾತುಗಳು ಹೇರಳವಾಗಿವೆ ಅನೇಕ ಪುರಾಣಗಳಲ್ಲಿ. ಹಾಗಾದರೆ ವೇದವು ಹೇಳುತ್ತೆ, ಇತಿಹಾಸ ಪುರಾಣಗಳು ಹೇಳುತ್ತವೆ ಸರ್ವವೇದ ಪ್ರತಿಪಾದ್ಯನಾಗಿರುವವನು ಭಗವಂತ **'ಯೋ ದೇವಾನಾಂ ನಾಮಧಾ ಏಕ ಏವ'** ಸಕಲ ದೇವತೆಗಳ ನಾಮವನ್ನ ಪಡೆದವನು, ಎಲ್ಲ ದೇವತೆಗಳ ನಾಮದಿಂದ ಮುಖ್ಯ ಪ್ರತಿಪಾದ್ಯನಾದವನು ನಾರಾಯಣ ಅಂತ. **'ಅಜಸ್ಯನಾಭಾವಧ್ಯೇಕ ಮರ್ಪಿತಂ'** ಅದು ವಿಶ್ವಕರ್ಮ ಸೂಕ್ತ ಅದು. ಆ ವಿಶ್ವಕರ್ಮ ಅಂದರೆ

ವಿಶ್ವಕರ್ಮಾ ಮನುಷ್ಟ್ವಷ್ಟಾ ಸ್ಥವಿಷ್ಠಃ ಸ್ಥವಿರೋ ಧ್ರುವಃ । (6 ವಿಷ್ಣುಸಹಸ್ರನಾಮ)

ವಿಶ್ವಕರ್ಮನಾಮಕನಾದಂತಹ ಪರಮಾತ್ಮನನ್ನು ಕೊಂಡಾಡುವ ಸೂಕ್ತ ಅದು ವಿಶ್ವಕರ್ಮ ಸೂಕ್ತ ಕಾರಣ ಅಲ್ಲಿ ಪರಮಾತ್ಮನನ್ನು ಪದ್ಮನಾಭ ಪದ್ಮನಾಭ ಅಂತ ಎಲ್ಲ ಪುರಾಣಗಳು ಹೇಳುತ್ತವೆ. ನಾಭಿ ಇಂದ ಕಮಲ ಬಂದದ್ದು ವಿಷ್ಣುವಿನಿಂದ ಮಾತ್ರ ಅಂತ ಪುರಾಣಗಳಲ್ಲಿ ಸ್ಪಷ್ಟವಾದ ಪ್ರಸಿದ್ಧಿ ಇದೆ ಇನ್ನು ಯಾವ ದೇವತೆಯ ಕಥೆಯಲ್ಲಿಯೂ ಅವನ ನಾಭಿ ಇಂದ ಕಮಲ ಬಂತು ಅಂತ ಹೇಳಿದ್ದು ಇಲ್ಲ, ಮಹಾಭಾರತ, ಪುರಾಣ ಎಲ್ಲ ಕಡೆಗೂ ವಿಷ್ಣುವಿನ ನಾಭಿ ಇಂದಲೇ ಪದ್ಮದ ಉತ್ಪತ್ತಿಯನ್ನು ಹೇಳಿದ್ದಾರೆ. ಹಾಗಾದರೆ ಈ ಸೂಕ್ತದಲ್ಲಿ ಪದ್ಮನಾಭತ್ವವನ್ನು ಹೇಳಿದ್ದಾರೆ ಅಂದಮೇಲೆ ಇದನ್ನು ವಿಷ್ಣುವನ್ನೇ ಹೇಳಿ ಕೊಡುವ ಸೂಕ್ತ ಅಂತಹ ಸೂಕ್ತದಲ್ಲಿ ಸಕಲ ದೇವತೆಗಳ ನಾಮಗಳು ವಿಷ್ಣುವಿಗೆ ಇದೆ ಎಂಬುದಾಗಿ ಕೊಂಡಾಡಿದ್ದಾರೆ ಅಂತ ಅಂದಮೇಲೆ ವೇದಗಳಲ್ಲಿ ಇರುವಂತಹ ಎಲ್ಲ ಸೂಕ್ತಗಳು ಕೂಡ ಪರಮಾತ್ಮನನ್ನೇ ಕೊಂಡಾಡುತ್ತೆ.

ಮಾಂ ವಿಧತ್ತೇ ಅಭಿಧತ್ತೇ ಮಾಂ ವಿಕಲ್ಪ್ಯ ಅಪೋಹ್ಯೈತ್ಯಹಂ । (ಆಧ್ಯಾತ್ಮಿಕ ಸಂಗ್ರಹ)

ಸೂಕ್ತಗಳು ಮಾತ್ರ ಅಲ್ಲ ವಿಧಿ ನಿಷೇಧಗಳನ್ನು ತಿಳಿಸುವ ವಾಕ್ಯಗಳು ಭಗವಂತನನ್ನೇ ಕೊಂಡಾಡುತ್ತವೆ ಅಂತ ಭಾಗವತ ಹೇಳುತ್ತದೆ. ಪರಮಾತ್ಮನ ಮಹಿಮೆಯನ್ನೇ ಕೊಂಡಾಡುತ್ತದೆ ಪರಮಾತ್ಮನ ಪ್ರೀತಿಗಾಗಿಯೇ ಎಲ್ಲ ಸಂಧ್ಯಾವಂದನಾದಿ ಕರ್ಮಗಳನ್ನು, ಯಜ್ಞ ಯಾಗಾದಿ ಕರ್ಮಗಳನ್ನು ಮಾಡಬೇಕು. **'ನ ಸುರಾಂ ಪಿಬೇತ್'**

1. 15.15 ಭ ಗೀತಾ

ಸುರಾಪಾನಾದಿಗಳನ್ನು ಮಾಡಬಾರದು ಪರಮಾತ್ಮನ ಪ್ರೀತಿಗಾಗಿ ಸುರಾಪಾನಾದಿಗಳನ್ನು ಮಾಡಬಾರದು ಅಂತ. ವಿಹಿತ ಕರ್ಮಗಳನ್ನು ಮಾಡಬೇಕು ದೇವರ ಪ್ರೀತಿಗಾಗಿ, ನಿಷಿದ್ಧ ಧರ್ಮಗಳನ್ನು ಮಾಡಬಾರದು ದೇವರ ಪ್ರೀತಿಗಾಗಿ ಹೀಗೆ ಆ ಎಲ್ಲ ವಿಧಿ ನಿಷೇದ ವಾಕ್ಯಗಳು ಕೊನೆಗೆ ದೇವರಲ್ಲಿಯೇ ಪರ್ಯವಸಾನ ಹೊಂದುವುದು. ಈ ರೀತಿಯಾಗಿ ಸಕಲ ವೇದ ಪ್ರತಿಪಾದ್ಯತ್ವವನ್ನ ಇತಿಹಾಸ ಪುರಾಣಗಳು ಹಾಗೂ ಸ್ವಯಂಶೃತಿ ನಮಗೆ ತಿಳಿಸಿಕೊಡುವ ಕಾರಣ ಆ ಎಲ್ಲ ವೇದಗಳನ್ನು ಭಗವಂತನಲ್ಲಿಯೇ ಸಮನ್ವಯ ಮಾಡಿಕೊಂಡು ನಾವು ಚೆನ್ನಾಗಿ ಅರ್ಥ ಮಾಡಿಕೊಂಡು ಆ ದಿಶೆಯಲ್ಲಿ ನಾವು ವೇದಗಳ ಅಧ್ಯಯನ ಮಾಡಬೇಕು ಎಂಬುದಾಗಿ ರಾಘವೇಂದ್ರ ಸ್ವಾಮಿಗಳವರು ಬಹಳ ಇನ್ನೂ ವಿಸ್ತೃತವಾಗಿದೆ ಪ್ರಾರಂಭದಲ್ಲಿ ನಮಗೆ ತೋರಿಸಿಕೊಡುತ್ತಾರೆ.

ಪರಮ ಮುಖ್ಯ ವೃತ್ತಿಯಿಂದ ಪರಮಾತ್ಮನನ್ನು ಕೊಂಡಾಡುತ್ತೆ ಅಗ್ನಿ ಎಂಬ ಶಬ್ದ ಬಹಳ ಸುಂದರವಾಗಿ ಹೇಳುತ್ತಾರೆ. ಕೆಲವು ಕಡೆಗೆ ದೇವತೆಗಳನ್ನೂ ಹೇಳಿ ಆ ದೇವತೆಗಳಲ್ಲಿ ಅಂತರ್ಯಾಮಿಯಾದ ಭಗವಂತನನ್ನು ತಿಳಿಸಿಕೊಡುತ್ತಾರೆ, ಕೆಲವು ಕಡೆಗೆ ದೇವತೆಗಳನ್ನ ಹೇಳದೇ ಕೇವಲ ಭಗವಂತನನ್ನೇ ತಿಳಿಸಿಕೊಡುವಂತಹ ಮಂತ್ರಗಳು ಇವೆ. ಅಗ್ನಿಮೀಳೆ ಇತ್ಯಾದಿ ಸೂಕ್ತಗಳಲ್ಲಿ ಅಗ್ನಿ ಎಂಬ ದೇವತೆಯ ಮಹಿಮೆಯನ್ನೂ ಕೊಂಡಾಡುತ್ತೆ ಆ ಮಂತ್ರ, ಆ ಅಗ್ನಿಯಲ್ಲಿ ಅಂತರ್ಯಾಮಿಯಾದ ಅಗ್ನಿನಾಮಕನಾದಂತಹ ಪರಮಾತ್ಮನ ಮಹಿಮೆಯನ್ನೂ ಕೊಂಡಾಡುತ್ತೆ. ಕೆಲವು ಕಡೆಗೆ ಕೇವಲ ಭಗವಂತನನ್ನ ಎಲ್ಲಿ ಪರಮಾತ್ಮನನ್ನ ಬಿಟ್ಟು ಬೇರೆ ದೇವತೆಗಳನ್ನು ಹೇಳುವುದಕ್ಕೆ ಸಾಧ್ಯ ಇಲ್ಲ ಅಂತಹ ಪ್ರಸಂಗಗಳಲ್ಲಿ **'ಅಯಮಗ್ನಿಃ ವೈಶ್ವಾನರಃ'** ಇತ್ಯಾದಿಗಳಲ್ಲಿ ಕೇವಲ ಭಗವಂತನನ್ನೇ ಕೊಂಡಾಡುವಂತಹ ಮಂತ್ರಗಳು ಉಂಟು. ಅದಕ್ಕೆ ಶ್ರೀಮದಾಚಾರ್ಯರು ಅನುವ್ಯಾಖ್ಯಾನದಲ್ಲಿ ತಿಳಿಸಿದಂತೆ ಪರಮಾತ್ಮನ ಸರ್ವೋತ್ತಮತ್ವಕ್ಕೆ, ಅವನ ಗುಣಪೂರ್ಣತ್ವಕ್ಕೆ ವಿರೋಧ ಬರದೆ ಇರುವಂತೆ ಎಲ್ಲ ವೇದಗಳನ್ನು ಭಗವಂತನಲ್ಲಿ ಸಮನ್ವಯ ಮಾಡಬೇಕು. ದೋಷ ಹೇಳುವಂತಹ ಶಬ್ದಗಳು ಪರಮಾತ್ಮನಲ್ಲಿ ಆ ದೋಷವನ್ನ ಪ್ರತಿಪಾದನೆ ಮಾಡುವ ರೀತಿಯಲ್ಲಿ ಸಮನ್ವಯವನ್ನು ಹೊಂದುವುದಿಲ್ಲ ಆದರೂ ಅಂತಹ ಶಬ್ದಗಳನ್ನೂ ಪರಮಾತ್ಮನಲ್ಲಿ ಸಮನ್ವಯ ಮಾಡಿ ಆ ಭಗವಂತನಿಗೆ ದೋಷ ನಿಯಾಮಕತ್ವವನ್ನು ಹೇಳುತ್ತದೆ.

ಉದಾಹರಣೆಗೆ **'ದುಃಖಿ'** ಅಂತ ಶಬ್ದ ಇದೆ ದುಃಖಿ ಎಂಬ ಶಬ್ದ ಇದನ್ನು ದೇವರಿಗೆ ಹೇಳಿದರೆ ದುಃಖ ಇದೆ ಅಂತ ಆಗುತ್ತದೆ. ದೇವರಲ್ಲಿ ಸರ್ವಥಃ ದುಃಖ ಇಲ್ಲ ಆದರೆ ದೇವರನ್ನು **'ದುಃಖಿ'** ಎಂಬ ಶಬ್ದದಿಂದ ಕರೆಯಬಹುದು ಯಾಕೆ, ದೇವರಿಗೆ ದುಃಖ ಇದೆ ಅನ್ನುವುದಕ್ಕಾಗಿ ದುಃಖಿ ಅಲ್ಲ ದುಃಖಕ್ಕೆ ನಿಯಾಮಕನಾಗಿದ್ದಾನೆ ಅನ್ನುವುದಕ್ಕೆ ದುಃಖಿ. ಧನಿ ಅಂತ ಕರೆಯುತ್ತಾರೆ ಧನಿ ಅಂದರೆ ಯಾರು ಧನ ಇದ್ದವರು, ಧನ ಇದ್ದವರು ಅಂದರೆ ಅವನ ಮೈಮೇಲೆ ಧನ ಇರುತ್ತದಾ, ಕೈಯಲ್ಲಿ ಧನ ಇರುತ್ತದಾ ಯಾವಾಗಲೂ ಇಲ್ಲ, ಧನ ಇರುವ ಸ್ಥಳದಲ್ಲಿ ಧನ ಇರುತ್ತದೆ. ಮನೆಯಲ್ಲಿಯೋ ಬ್ಯಾಂಕಿನಲ್ಲಿಯೋ ಧನ ಇದೆ ಆದರೆ ಆ ಧನದ ಒಡೆತನ ಇವನಿಗೆ ಉಂಟು ಅನ್ನುವುದಕ್ಕೆ ಇವನು ಧನಿ ಹಾಗೆ ದುಃಖ ಇರುವುದು ಎಲ್ಲಿಯೇ ಇರಲಿ ಎಲ್ಲಿದೆ ದುಃಖ ಆ ದುಃಖದ ಬ್ಯಾಂಕು ಅಂದರೆ ಜೀವರಾಶಿಗಳೇ ಆ ಜೀವರಾಶಿಗಳ ಮನಸ್ಸಿನಲ್ಲಿ ದುಃಖ ಇದೆ, ದುಃಖ ಇರುವುದು ಅಲ್ಲಿ. ದುಃಖ ಇರುವುದು ಜೀವರಾಶಿಗಳಲ್ಲಿ ಆದ್ದರಿಂದ ಅವರೂ ದುಃಖಿಗಳೇ ಆದರೆ ದೇವರು ದುಃಖಿ ಯಾಕೆ ಅಂದರೆ ಅವನಲ್ಲಿ ದುಃಖ ಇದ್ದದ್ದಕ್ಕಲ್ಲ ಜೀವರಲ್ಲಿರುವ ದುಃಖದ ಒಡೆತನ ಅವನಿಗೆ ಇದೆ ಅನ್ನುವುದಕ್ಕಾಗಿ ಅವನು ದುಃಖಿ. ಒಡೆತನ ಅಂದರೆ ಹೇಗೆ ಬೇಕೋ ಹಾಗೆ ಅದನ್ನ ನಿಯಮನ ಮಾಡುತ್ತಾನೆ, ಅವನವನ ಕರ್ಮಗಳಿಗೆ ತಕ್ಕಷ್ಟು ದುಃಖವನ್ನು ಕೊಡುತ್ತಾನೆ, ತಾನು ಮಾಡಿದ ಪಾಪ ಕರ್ಮಗಳಿಗೆ ಪ್ರಾಯಶ್ಚಿತ್ತ ಮಾಡಿಕೊಂಡಿದ್ದರೆ ಆ ದುಃಖವನ್ನು ಕಡಿಮೆ ಮಾಡುತ್ತಾನೆ, ನಿವಾರಣೆ ಮಾಡುತ್ತಾನೆ ಈ ರೀತಿ ಆ ದುಃಖವನ್ನು ಕೊಡುವುದರಲ್ಲಿ ತೆಗೆದುಕೊಳ್ಳುವುದರಲ್ಲಿ ಅದರ ಅನುಭವವನ್ನು ಮಾಡಿಸುವುದರಲ್ಲಿ ಸ್ವಾತಂತ್ರ

ದೇವರಿಗೆ ಇದ್ದದ್ದರಿಂದ ಅವನು ದುಃಖಿ. ಅವರ, ಅವರ ಅಂದರೆ ನೀಚ ಅಂತ ದೇವರು ನೀಚ ಅಲ್ಲ ಆದರೆ ದೇವರನ್ನು ಅವರ ಅಂತ ಕರೆಯಬಹುದು ನೋಡಿದರೆ ಅವನು ವರ ಆದರೆ ಅವನನ್ನು ಅವರ ಅಂತ ಹೇಳಬಹದು ಯಾಕೆ ಇನ್ನೊಬ್ಬರು ನೀಚ ಅಂತ ಮಾಡುವುದಕ್ಕೆ ಕಾರಣ ದೇವರು ಆದ್ದರಿಂದ ಅವನಿಗೆ ಅವರ ಯತಿ ಆದ್ದರಿಂದ ಅವರ.

ಒಬ್ಬ ವ್ಯಕ್ತಿ ಬಹಳ ದೊಡ್ಡವ, ಇನ್ನೊಬ್ಬ ಅವನಿಗಿಂತಲೂ ಚಿಕ್ಕವ, ಮತ್ತೊಬ್ಬ ಇನ್ನೂ ಚಿಕ್ಕವ ಹೇಗಾಯಿತು ಏನೋ ಇದ್ದಾರೆ ಅಂತ ನಾವು ತಿಳಿಯುತ್ತೇವೆ, ಏನೋ ಅಲ್ಲ ನಾಲ್ಕು ಜನರಲ್ಲಿ ತಾರತಮ್ಯ ಇದೆ ಅಂದರೆ ಒಬ್ಬ ಬಹಳ ಬುದ್ಧಿವಂತ, ಇನ್ನೊಬ್ಬ ಸ್ವಲ್ಪ ಕಡಿಮೆ, ಮತ್ತೊಬ್ಬ ಇನ್ನೂ ಸ್ವಲ್ಪ ಕಡಿಮೆ ಅಂದರೆ ಭಗವಂತ ಅವನವನ ಪೂರ್ವಜನ್ಮದ ಕರ್ಮಕ್ಕೆ ತಕ್ಕಂತೆ ಆ ಬುದ್ಧಿ ಮಟ್ಟದಲ್ಲಿ ತಾರತಮ್ಯವನ್ನು ಅಲ್ಲಿ ಕೊಟ್ಟಿದ್ದಾನೆ ಅಂತ ಅರ್ಥ. ಹಾಗಾದರೆ ಒಬ್ಬನಿಗಿಂತಲೂ ಇನ್ನೊಬ್ಬ ಚಿಕ್ಕವ, ಅವನಿಗಿಂತಲೂ ಮತ್ತೊಬ್ಬ ಅವರ ಚಿಕ್ಕವ ಅಂತ ಮಾಡಿದ್ದು ದೇವರು, ಅವರರನ್ನು ಮಾಡಿದ ಅನ್ನುವುದಕ್ಕಾಗಿ ಅವನು ಅವರ ಇವನಲ್ಲಿ ಅವರತ್ವ ಬರುವುದಕ್ಕೆ ದೇವರು ಕಾರಣ ಅನ್ನುವುದಕ್ಕೆ ದೇವರು ಅವರ, ಅವನು ನಿಜವಾಗಿ ಅವರ ಅಲ್ಲ ಅವನು ಸರ್ವೋತ್ತಮ ಸರ್ವ ವರ. ಹೀಗೆ ಎಲ್ಲ ಶಬ್ದಗಳನ್ನು ಕೂಡ ಕೇವಲ ವರ್ಣಾತ್ಮಕವಾದ ಶಬ್ದಗಳು ಮಾತ್ರ ಅಲ್ಲ, ಧನ್ಯಾತ್ಮಕವಾದ ಶಬ್ದಗಳು ಕೂಡ ಆ ಭಗವಂತನ ಮಹಿಮೆಯನ್ನು ತಿಳಿಸಿಕೊಡುತ್ತದೆ ಅಂತ ಶ್ರೀಮದಾಚಾರ್ಯರು ಹೇಳುತ್ತಾರೆ. ಪ್ರಾತಃಸಂಕಲ್ಪ ಗದ್ಯದಲ್ಲಿ ರಾಘವೇಂದ್ರ ಸ್ವಾಮಿಗಳವರು ಪ್ರಾರಂಭದಲ್ಲಿಯೇ ಹೇಳುತ್ತಾರೆ **'ಲೌಕಿಕ ವೈದಿಕ ಭೇದ ಭಿನ್ನ ವರ್ಣಾತ್ಮಕ ಧ್ವನ್ಯಾತ್ಮಕ ಅಶೇಷ ಶಬ್ದಾರ್ಥ'** ಇತ್ಯಾದಿ ಇತ್ಯಾದಿಯಾಗಿ ಹೇಳುತ್ತ ಟೀಕಾಕೃತ್ಪಾದರು ಕರ್ಮನಿರ್ಣಯ ಟೀಕೆಯಲ್ಲಿ ಹೇಳುವಾಗ ಹೇಳುತ್ತಾರೆ. ಧನ್ಯಾತ್ಮಕವಾದ ಏನು ಶಬ್ದಗಳು ಇವೆ ಅವುಗಳೆಲ್ಲ ನಾದ ಎಂಬಂತಹ ಒಂದು ವರ್ಣದ ಅಭಿವ್ಯಕ್ತಿಯನ್ನು ಮಾಡುತ್ತವೆ, ಆ ವರ್ಣದ ಅಭಿವ್ಯಕ್ತಿಯನ್ನು ಮಾಡಿ ಆ ವರ್ಣದ ಮೂಲಕ ಭಗವಂತನ ಮಹಿಮೆಯನ್ನು ಕೊಂಡಾಡುತ್ತವೆ ಎಂಬುದಾಗಿ ಹೇಳುತ್ತಾರೆ.

ಭೇರೀನಾದ ನಗಾರಿಯನ್ನು ಬಾರಿಸಿದರೆ ಅದು ಆ ಭಗವಂತನ ಔದಾರ್ಯವನ್ನು ಹೇಳುತ್ತದೆ, ಘಂಟಾನಾದ ಆ ಘಂಟೆಯ ನಾದ ಇದು ಪರಮಾತ್ಮ ಸರ್ವೋತ್ತಮ, ಪರಮಾತ್ಮನನ್ನು ಬಿಟ್ಟು ಉಳಿದವರೆಲ್ಲರೂ ಅವನಿಗಿಂತ ಅಧಮರು ಅಂತ ಹೇಳಿಕೊಡುತ್ತದೆ, ಹಲ್ಲಿ ಲೊಚಗುಟ್ಟುವ ಶಬ್ದ ಅದು ಆ ಭಗವಂತನ ಆಶ್ಚರ್ಯತೆಯನ್ನು ಹೇಳುತ್ತದೆ. **'ಗೃಹಗೋಧಾ ಪರಾಪಿ ಚ'** ಅಂತ ಕರ್ಮನಿರ್ಣಯದಲ್ಲಿ ಹೇಳುತ್ತಾರೆ ಶ್ರೀಮದಾಚಾರ್ಯರು. ಆ ಭಗವಂತನ ಅದ್ಭುತತೆ, ಆಶ್ಚರ್ಯಯತೆ. ವ್ಯವಹಾರದಲ್ಲಿಯೂ ಕೂಡ ಯಾವುದೋ ಒಂದು ಅದ್ಭುತ ಆಶ್ಚರ್ಯವನ್ನು ನೋಡಿದರೆ ಜನರು ಆ ಆಶ್ಚರ್ಯದ ಭಾವನೆಯನ್ನು ಅಭಿವ್ಯಕ್ತಗೊಳಿಸುವಾಗ ಆ ರೀತಿ ಶಬ್ದ ಮಾಡುತ್ತಾರೆ ಲೊಚಗುಟ್ಟುವ ಶಬ್ದ. ಅದೇ ತರಹ ಹಲ್ಲಿಗಳು ಶಬ್ದ ಮಾಡುತ್ತವೆ ಅದು ಆಶ್ಚರ್ಯವನ್ನು ತೋರಿಸುತ್ತದೆ. ಹಲ್ಲಿಗಳಿಗೆ ಅದು ಗೊತ್ತಿರಲಿಕ್ಕಿಲ್ಲ ಆದರೆ ಅಭಿಮಾನಿ ದೇವತೆಗಳಿಗೆ ಗೊತ್ತು ಶ್ರೀಮದಾಚಾರ್ಯರು ಅದನ್ನು ಪ್ರಮಾಣ ಪುರಸ್ಸರವಾಗಿ ತಿಳಿಸಿಕೊಡುತ್ತಾರೆ ಪರಮಾತ್ಮ ಎಷ್ಟು ಆಶ್ಚರ್ಯ. ಯಾವುದರಿಂದಲೂ ತನಗೆ ಕಿಂಚಿತ್ತು ಲಾಭ ಇಲ್ಲದೇ ಇದ್ದರೂ ಇಷ್ಟೆಲ್ಲ ಮಾಡುತ್ತಾನಲ್ಲ ಇದು ಲೋಕದಲೊಳಗೆ ಎಲ್ಲಾದರೂ ಕಂಡಿದ್ದು ಇದೆಯಾ ಏನೇನು ಸ್ವಾರ್ಥ ಇಲ್ಲದೆ ಮಾಡುವುದು. ಸ್ವಾರ್ಥ ಇಲ್ಲದೆ ಇದ್ದರೆ ಹಣ ಇಲ್ಲದೆ ಹಣದ ಅಪೇಕ್ಷೆ ಇಲ್ಲದೆ ಮಾಡುವ ಅನೇಕ ಜನ ಕಂಡಿದ್ದಾರೆ ಆದರೆ ಅವರಿಗೆ ಕೀರ್ತಿಯ ಅಪೇಕ್ಷೆ ಇರುತ್ತದೆ. ಕೀರ್ತಿಯ ಅಪೇಕ್ಷೆಯೂ ಇಲ್ಲದೆ ಕೆಲವರು ಮಾಡುತ್ತಾರೆ ಅವರಿಗೆ ಪುಣ್ಯದ ಅಪೇಕ್ಷೆ ಇರುತ್ತದೆ ಹಣ ಬೇಡ ಆದರೆ ಕೀರ್ತಿ ತಮ್ಮ ಹೆಸರು ಬಂದರೆ ಸಾಕು ಅಂತ. ಹೆಸರೂ ಬೇಡ ಪುಣ್ಯ ಬಂದರೆ ಸಾಕು ನಮಗೆ ಒಳ್ಳೆಯ ಸದ್ಗತಿ ಆದರೆ ಸಾಕು ಅಂತ ಕೆಲವರು ಏಕಾಂತದಲ್ಲಿ ದಾನ ಧರ್ಮ ಮಾಡುವವರು

ಇದ್ದಾರೆ. ಪುಣ್ಯದ ಅಪೇಕ್ಷೆಯೂ ಇಲ್ಲದಂತೆ ಕೇವಲ ಸಹಜವಾದ ಒಂದು ಪ್ರೇಮ ಆ ರೀತಿಯ ಸೇವೆ ಆ ರೀತಿಯ ಉಪಕಾರವನ್ನು ಮಾಡದೇ ಇದ್ದರೆ ತಡೆದುಕೊಳ್ಳುವುದಕ್ಕೆ ಆಗುವುದಿಲ್ಲ ಅನ್ನುವುದಕ್ಕೋಸ್ಕರ ಮಾಡುವವರು ಇದ್ದಾರೆ. ಮಕ್ಕಳು ಆಳುವಾಗ ಸುಮ್ಮನೆ ಕೂಡಲಿಕ್ಕೆ ಆಗುವುದಿಲ್ಲ ಅಂತ ಮಕ್ಕಳಿಂದ ಏನು ಸ್ವಾರ್ಥ ಇಲ್ಲ ಅಪೇಕ್ಷೆ ಏನಿಲ್ಲ ನಿಸ್ವಾರ್ಥವಾಗಿ ಮಾಡಿದರೂ ಕೂಡ ಅಳುವ ಮಕ್ಕಳನ್ನು ನೋಡಿ ಸುಮ್ಮನಿರಲಿಕ್ಕೆ ಆಗುವುದಿಲ್ಲ ಅನ್ನುವ ಒಂದು ಅಸಹಾಯಕತೆಯೂ ಇದೆ ಅದೂ ಇಲ್ಲ ದೇವರಿಗೆ. ಹಾಗಾದರೆ ಧನದ ಅಪೇಕ್ಷೆ ಇಲ್ಲ ಲಕ್ಷ್ಮೀ ಪತಿ ಅವನಿಗೆ ಇನ್ನೇನು ಧನ ಬೇಕಾಗಿದೆ, ಕೀರ್ತಿಯ ಅಪೇಕ್ಷೆ ಇಲ್ಲ ಉರುಗಾಯ ಸಕಲ ವೇದಾದಿ ಸಚ್ಛಾಸ್ತ್ರಗಳೇ ಅವನ ಮಹಿಮೆಯನ್ನು ಕೊಂಡಾಡುವುದಕ್ಕೆ ನಿಂತಾಗ ಇನ್ಯಾರು ಹೊಗಳಬೇಕಾಗಿದೆ ಅವನಿಗೆ. ಕೀರ್ತಿಯ ಅಪೇಕ್ಷೆ ಇಲ್ಲ, ಪುಣ್ಯ ಪಾಪಗಳ ಸಂಬಂಧವೇ ಇಲ್ಲ ಅವನಿಗೆ ಏನು ಪಡೆಯಬೇಕೋ ಪಡೆದಾಗಿದೆ ಪುಣ್ಯದಿಂದ ಏನು ಹೊಸದಾಗಿ ಪಡೆಯಬೇಕಾದದ್ದು. ನಿತ್ಯ ತೃಪ್ತ ಪರಿಪೂರ್ಣ ಸಮಾಧಾನ ಯಾವ ಅತೃಪ್ತಿಯಲ್ಲ ಯಾವುದರ ಪರಿಹಾರಕ್ಕಾಗಿ ಅವನು ಮಾಡಬೇಕಾದದ್ದು ಆದರೂ ಯಾರೂ ಮಾಡದೇ ಇರುವಷ್ಟು ಸಕಲ ಜೀವರಾಶಿಗಳು ಸೇರಿ ಮಾಡಿದರೆ ಎಷ್ಟೋ ಅದಕ್ಕಿಂತ ಅನಂತ ಅನಂತ ಪಟ್ಟು ಮಿಗಿಲಾದ ಕಾರ್ಯಗಳನ್ನು ನಿರಂತರವಾಗಿ ಮಾಡುತ್ತಾನೆ ಪ್ರಯೋಜನ ಮಾತ್ರ ಕಿಂಚಿತ್ತೂ ಇಲ್ಲ ಅಂದರೆ ಇದೆಷ್ಟು ಆಶ್ಚರ್ಯ. ಈ ಆಶ್ಚರ್ಯವನ್ನ ಇಂತಹ ಒಂದಲ್ಲ ಆಶ್ಚರ್ಯಗಳೇ ಆಶ್ಚರ್ಯವಾಗುವಷ್ಟು ರೀತಿಯಲ್ಲಿವೆ ಅಷ್ಟು ಆಶ್ಚರ್ಯಗಳನ್ನ ಎಷ್ಟು ಹಲ್ಲಿಗಳು ಲೊಚಗುಟ್ಟಿ ಹೊಗಳಿದರೂ ಕಡಿಮೆ ಇದೆ. ಆ ಎಲ್ಲ ಹಲ್ಲಿಗಳ ಶಬ್ದಕ್ಕೆ ಅಂತಹ ಅದ್ಭುತವಾದ ಆಶ್ಚರ್ಯತೆಯನ್ನ ನಾವು ಅರ್ಥವಾಗಿ ತಿಳಿಯಬೇಕು ಅಂತ ಶ್ರೀಮದಾಚಾರ್ಯರು ತಿಳಿಸಿಕೊಟ್ಟದ್ದನ್ನು ಕೂಡ ರಾಘವೇಂದ್ರ ಸ್ವಾಮಿಗಳವರು ಪ್ರಾತಃಸಂಕಲ್ಪ ಗದ್ಯದಲ್ಲಿಯೂ ಹಾಗೂ ಮಂತ್ರಾರ್ಥ ಮಂಜರೀ ಭೂಮಿಕಾದಲ್ಲಿಯೂ ಕೂಡ ಅದರ ವಿಶೇಷವಾದ ವಿವರಣೆಯನ್ನು ನಮಗೆ ನೀಡಿ ತಿಳಿಸಿಕೊಡುತ್ತಾರೆ. ಇಂತಹ ಆ ಭಗವಂತನ ಅತ್ಯದ್ಭುತವಾದ ಆ ಸರ್ವ ಶಬ್ದವಾಚ್ಯತ್ವ, ಆ ಸಕಲ ಶಬ್ದವಾಚ್ಯತ್ವದ ಮೂಲಕ ಆ ಪರಮಾತ್ಮನ ಸಕಲ ಗುಣ ಪರಿಪೂರ್ಣತ್ವವನ್ನು ತಿಳಿದುಕೊಳ್ಳುವ ಬಗೆ, ಇದೊಂದನ್ನು ಚೆನ್ನಾಗಿ ಜೀವನದಲ್ಲಿ ನಾವು ರೂಢಿಸಿಕೊಂಡು ಬಿಟ್ಟರೆ ನಮ್ಮ ಮನಸ್ಸಿನ ನಿಗ್ರಹ ಮಾಡಿಕೊಳ್ಳುವುದು ಬಹಳ ಸುಲಭ ಅಂತ ಭಾಗವತ ಹೇಳುತ್ತದೆ. ಯಾದವಾರ್ಯರು ದ್ವಿತೀಯ ಸ್ಕಂಧದ ವ್ಯಾಖ್ಯಾನ ಮಾಡುವಾಗ

ಶಬ್ದಸ್ಯ ಹಿ ಬ್ರಹ್ಮಣ ಏಷ ಪಂಥಾ ಯನ್ನಾಮಭಿರ್ಧ್ಯಾಯತಿ ಧೀರಪಾರ್ಥ್ಯೈಃ ।
ಪರಿಭ್ರಮಂಸ್ತತ್ರ ನ ವಿಂದತೇऽರ್ಥಾನ್ ಮಾಯಾಮಯೇ ವಾಸನಯಾ ಶಯಾನಃ ॥ (02.2.2 ಭಾಗವತ)

ಆ ಸಕಲ ಶಬ್ದವಾಚ್ಯತ್ವ ದೇವರಿಗೆ ಇದೆ ಎಂಬ ತತ್ವದ ಚಿಂತನ ಯಾಕೆ ಬೇಕು ಅಂದರೆ ಏಕಾಗ್ರ ಮನಸ್ಸಿನಿಂದ ಸಾಧನೆ ಮಾಡುವ ವ್ಯಕ್ತಿಯ ಮನಸ್ಸನ್ನು ಆಚೆಈಚೆ ಹರದಾಡುವಂತೆ ಮಾಡುವ ಸಾಧನಗಳೇ ಈ ಶಬ್ದಗಳು. ಈ ಶಬ್ದಗಳೆಲ್ಲ ದೇವರ ಮಹಿಮೆಯನ್ನೇ ಕೊಂಡಾಡುತ್ತವೆ ಅನ್ನುವ ಅನುಸಂಧಾನ ಇದ್ದರೆ ಯಾವ ಶಬ್ದಗಳು ಅವನ ಕಿವಿಗೆ ಬಿದ್ದರೂ, ಅವನ ಮನಸ್ಸು ಆಚೆಗೆ ಹೋಗೋದಿಲ್ಲ. ಆ ಭಗವಂತನ ಪಾದಾರವಿಂದಗಳಲ್ಲಿಯೇ ದೃಢವಾಗಿ ಇರುತ್ತದೆ. ಅದು ಏನೇ ಶಬ್ದ ಕೇಳಲಿ, ಇವನನ್ನು ಯಾರೇ ಹೊಗಳಬಹುದು. ಏನು ಪಾಂಡಿತ್ಯ, ನಿನ್ನ ಅದ್ಭುತವಾದಂತಹ ವಾಕ್ಚಟುತ್ವ ಅಂತ ಹೊಗಳಿ ಬಿಟ್ಟರೆ ಇವನಿಗೆ ಪಾರಾಯಣ, ಅಧ್ಯಯನ ಅದರ ಕಡೆಗೆ ಗಮನ ಹೋಗಿಬಿಡುತ್ತದೆ, ಅದನ್ನೇ ಕೇಳುತ್ತಾ ಇರುತ್ತಾನೆ ಎರಡೂ ಕಿವಿಗಳನ್ನು ಚೆನ್ನಾಗಿ ನಿಗಿರಿಸಿ. ಅವರು ಇನ್ನಷ್ಟು ವರ್ಣನೆ ಮಾಡುತ್ತ ಇರುತ್ತಾರೆ ಇವನು ಕೇಳುತ್ತಾ ಇರುತ್ತಾನೆ ಹಾಗಾದರೆ ದೇವರಿಂದ ಮನಸ್ಸು ಆಚೆಗೆ ಹೋಯಿತು ಅಲ್ಲ ನನಗೆ ಜ್ಞಾನ, ಪಾಂಡಿತ್ಯ ಏನು ಅಲ್ಪಸ್ವಲ್ಪ ವಾಕ್ಚಾತುರ್ಯ ಏನಾದರು ಒಳ್ಳೆಯ ಸತ್ಕಾರ್ಯಗಳು ನನ್ನಿಂದ ನಡೆದಿದ್ದರೆ ಅದೆಲ್ಲವೂ

ಒಳಗಿದ್ದು ಅಂತರ್ಯಾಮಿಯೇ ಪರಮಾತ್ಮನೇ ಮಾಡಿಸಿದ್ದು, ಇವರು ಹೊಗಳುವ ಎಲ್ಲ ಶಬ್ದಗಳು ನಿಜವಾಗಿ ಆ ಅಂತರ್ಯಾಮಿಯಾದ ಭಗವಂತನ ಸ್ತುತಿ ಅಂತ ಚಿಂತನ ಮಾಡಿದರೆ ಸ್ತುತಿಯನ್ನು ಕೇಳುವಾಗಲೂ ದೇವರ ಸ್ಮರಣೆಯೇ ಬಂತು ಇವನಿಗೆ. ಇನ್ನೊಬ್ಬ ಬಂದು ಬೈಯುತ್ತಾನೆ ನೀನು ಮೂರ್ಖ, ದುಷ್ಟ, ಬಹಳ ಕೆಟ್ಟ ಇದ್ದೀಯಾ ಇವನು ಬೇಕಾದಷ್ಟು ಉಪಕಾರ ಮಾಡಿದ್ದರೂ ನೀನು ಏನೂ ಮಾಡಿಲ್ಲ ಮಹಾವಂಚಕ ಅಂತ ಅವನು ಬೈಯುತ್ತಾ ಇರುತ್ತಾನೆ ಅಯ್ಯೋ ಹೀಗೆ ನನಗೆ ಬೈಯುತ್ತಾ ಇದ್ದಾರಲ್ಲ ಅಂತ ದುಃಖ ಆಗುತ್ತದೆ ಆ ದುಃಖವೂ ಇವನಿಗೆ ಆಗುವುದಿಲ್ಲ. **'ಶಬ್ದಸ್ಯ ಹಿ ಬ್ರಹ್ಮಣ ಏಷ ಪಂಥಾ'** ನನ್ನಲ್ಲೇನೋ ಸಣ್ಣಪ್ರುಟ್ಟ ದೋಷಗಳಿದ್ದರೆ ಆ ದೋಷಗಳೂ ಪೂರ್ವಜನ್ಮದ ಕರ್ಮಕ್ಕನುಗುಣವಾಗಿ ದೇವರೇ ಕೊಟ್ಟ ದೋಷಗಳು, ಆ ದೋಷಗಳನ್ನು ದೇವರು ನನ್ನ ಕರ್ಮಕ್ಕನುಗುಣವಾಗಿ ನಿಯಮನ ಮಾಡಿದ ಅಂತ ಇವನು ಹೇಳುತ್ತಾ ಇದ್ದಾನೆ. ಅದು ಒಂದು ದೇವರ ಮಹಿಮೆಯೇ ಅಥವಾ ದೋಷಗಳು ಇಲ್ಲದೇ ಇದ್ದರೂ ಇಲ್ಲದ ದೋಷಗಳನ್ನು ಇವನು ಆರೋಪಣೆ ಮಾಡುತ್ತಾ ಇದ್ದಾನೆ. ಆ ರೀತಿ ನಾನು ಹಿಂದೆ ಮಾಡಿದ ಎಷ್ಟೆಷ್ಟೋ ಪಾಪಗಳಿವೆ. ಆ ಎಲ್ಲ ಪಾಪಗಳಿಗೆ ಪರಿಹಾರಕ್ಕೆ ಇದು ಒಂದು ಪ್ರಾಯಶ್ಚಿತ್ತ, ಎಷ್ಟು ಜನ ನಮ್ಮನ್ನು ಬೈಯುತ್ತಾರೋ ಅಷ್ಟು ಜನ ಬೈಯುವವರಿಗೆ ನಮ್ಮಲ್ಲಿರುವ ಪಾಪಗಳೆಲ್ಲ ಹೋಗುತ್ತಾ ಇರುತ್ತದೆ. ಭಾರೀ ದೊಡ್ಡ ಪ್ರಾಯಶ್ಚಿತ್ತ. ಸುಖವಾದ ಪ್ರಾಯಶ್ಚಿತ್ತ, ಹೋಮ ಹವನ ಮಾಡಿ ಕಣ್ಣಿನಲ್ಲಿ ಹೊಗೆ ಹಾಕಿಕೊಂಡು ಏನೂ ಕಷ್ಟಪಡದೇ ಸುಮ್ಮನೆ ಕೂತು ಎಲ್ಲಾ ಪಾಪಗಳನ್ನು ಕಳೆದುಕೊಳ್ಳಬೇಕು ಅಂದರೆ ಬೈಯುವುದನ್ನು ಕೇಳುತ್ತಾ ಇರಬೇಕು ನಗುತ್ತಾ ಆನಂದದಿಂದ ಕೇಳಬೇಕು. ಹಾಗಾದರೆ ಬೈಯುವ ವ್ಯಕ್ತಿಗಳು ನಮಗೆ ಬೈದರೆ ನಮ್ಮಲ್ಲಿರುವ ಪಾಪಗಳೆಲ್ಲ ಅವರಿಗೆ ಹೋಗುತ್ತೆ ನಾವು ಶುದ್ಧರಾಗುತ್ತೇವೆ ಆ ರೀತಿಯ ಪ್ರಾಯಶ್ಚಿತ್ತವನ್ನು ದೇವರು ನಮಗೆ ಮಾಡಿಸುತ್ತ ಇದ್ದಾನೆ ಅವನಲ್ಲಿ ಅಂತರ್ಯಾಮಿಯಾಗಿ ಇದ್ದು. ಹಾಗಾಗಿ ಈ ಶಬ್ದಗಳೂ ಕೂಡ ಇಲ್ಲದೇ ಇರುವಂತಹ ದೋಷಗಳು ನನ್ನಲ್ಲಿ ಇಲ್ಲದೇ ಇರುವಂತಹ ದೋಷಗಳಾಗಿದ್ದರೂ ಆ ದೋಷಗಳು ಎಲ್ಲೆಲ್ಲಿ ಇವೆ ಆ ತರಹದ ದೋಷಗಳಿಗೆ ನಿಯಾಮಕನಾದ ಆ ಭಗವಂತನ ಒಂದು ನಿಯಾಮಕತ್ವ ಎಂದ ಮಹಿಮೆಯನ್ನೇ ತಿಳಿಸಿಕೊಡುತ್ತದೆ ಎಂಬುದಾಗಿ ಚಿಂತನ ಮಾಡುತ್ತ ಆನಂದ ಪಡುವವನಿಗೆ ಆನಂದ ಆನಂದ ಮತ್ತೆ ಪರಮಾನಂದ ಅವನಿಗೆ ದುಃಖವೇ ಇಲ್ಲ. ಹೀಗೆ ಆ ಸಕಲ ಶಬ್ದವಾಚ್ಯತ್ವವನ್ನ ಶ್ರೀಮದಾಚಾರ್ಯರು, ಟೀಕಾಕೃತ್ಪಾದರು ಸಮರ್ಥನೆ ಮಾಡಿಕೊಟ್ಟದ್ದನ್ನು ರಾಘವೇಂದ್ರ ಸ್ವಾಮಿಗಳವರು ಅತ್ಯಂತ ಉತ್ತಮವಾದ ಅದ್ಭುತವಾದ ರೀತಿಯಲ್ಲಿ ಎಲ್ಲರಿಗೂ ತಿಳಿಯುವಂತೆ ಆ ಮಂತ್ರಾರ್ಥ ಮಂಜರೀಯ ಭೂಮಿಕೆಯಲ್ಲಿ ತಿಳಿಸಿಕೊಟ್ಟು ಪರಮಾನುಗ್ರಹವನ್ನು ಮಾಡಿದ್ದಾರೆ. ಅಂತಹ ಮಹಾನುಭಾವರಾದ ರಾಘವೇಂದ್ರ ಸ್ವಾಮಿಗಳವರನ್ನು ಈ ಸಂದರ್ಭದಲ್ಲಿ ಎಲ್ಲರೂ ಸೇರಿ ಅವರಲ್ಲಿ ಭಕ್ತಿಯಿಂದ ಪ್ರಾರ್ಥನೆ ಮಾಡೋಣ ವಿಶೇಷವಾಗಿ ಆ ಪರಮಾತ್ಮನ ಸರ್ವ ಶಬ್ದವಾಚ್ಯತ್ವದ ಅನುಸಂಧಾನ ಸದಾಕಾಲದಲ್ಲಿ ನಮ್ಮ ಯೋಗ್ಯತೆಗೆ ಅನುಗುಣವಾಗಿ ಮನಸ್ಸಿನಲ್ಲಿ ಬರುವಂತೆ ಮಾಡಿ ನಮ್ಮನ್ನು ಉದ್ಧರಿಸಿ ಎಂಬುದಾಗಿ ಕೇಳಿಕೊಳ್ಳೋಣ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

॥ ಶ್ರೀ ದಿಗ್ವಿಜಯ ರಾಮೋ ವಿಜಯತೇ ॥

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ವಿಷ್ಣುಪರ್ವ-23

* * *

ಶ್ರೀಕೃಷ್ಣ ಪರಮಾತ್ಮ ತನ್ನ ಅಚಿಂತ್ಯಾದ್ಭುತ ಶಕ್ತಿಯಿಂದ ಮಥುರಾ ಪಟ್ಟಣದಲ್ಲಿ ಇದ್ದವರನ್ನೆಲ್ಲ ಕಣ್ಣು ಮುಚ್ಚಿ ತೆಗೆಯುವುದರೊಳಗೆ ದ್ವಾರಕಾ ಪಟ್ಟಣದಲ್ಲಿ ನೆಲೆಸುವಂತೆ ಮಾಡಿದ್ದಾನೆ. ಕ್ರಮವಾಗಿ ಎಲ್ಲರೂ ಕೂಡ ವಾಹನಗಳಿಂದ ಆನೆ, ಒಂಟೆ, ಕುದುರೆ, ರಥ ಮೊದಲಾದ ವಾಹನಗಳಿಂದ ಕ್ರಮವಾಗಿ ಮಥುರಾ ಪಟ್ಟಣದಿಂದ ದ್ವಾರಕಾ ಪಟ್ಟಣಕ್ಕೆ ಹೋದರು ಅಂತನ್ನುವ ರೀತಿಯಲ್ಲಿ ವರ್ಣನೆ ಬರುತ್ತದೆ. ಆದರೆ ಪುರಾಣಾಂತರಗಳ ಪ್ರಮಾಣಗಳ ಆಧಾರದ ಮೇಲೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ನಿರ್ಣಯ ಮಾಡಿದ ರೀತಿಯಲ್ಲಿ ಕ್ಷಣ ಮಾತ್ರದೊಳಗೆ ಕಣ್ಣು ಮುಚ್ಚಿ ತೆರೆಯುವುದರೊಳಗೆ ಎಲ್ಲ ರಥ, ಆನೆ, ಒಂಟೆ, ಕುದುರೆಗಳಿಂದ ಸಹಿತರಾದ ಎಲ್ಲ ಪ್ರಜೆಗಳು ಇದ್ದಕ್ಕಿದ್ದಂತೆ ಮಥುರೆಯಲ್ಲಿ ಇದ್ದವರು ಕಣ್ಣು ತೆರೆಯುವುದರೊಳಗೆ ದ್ವಾರಕೆಯಲ್ಲಿ ಇರುವಂತೆ ಮಾಡಿದ್ದಾನೆ. ವಾಹನಗಳಿಂದ ಸಹಿತರಾಗಿ ಹೋದರು ಅಂತ ಹೇಳುವ ಮಾತು ತಪ್ಪಲ್ಲ ಆದರೆ ವಾಹನಗಳಿಂದ ಸಹಿತರಾದಂತಹ ಎಲ್ಲ ಪ್ರಜೆಗಳೇ ಇದ್ದಕ್ಕಿದ್ದಂತೆ ಭಗವಂತನ ಅಚಿಂತ್ಯ ಶಕ್ತಿಯಿಂದ ಎಲ್ಲರೂ ದ್ವಾರಕಾ ಪಟ್ಟಣದಲ್ಲಿ ಬರುವಂತೆ ಪರಮಾತ್ಮ ಮಾಡಿದ್ದಾನೆ. ಅನೇಕ ಜನರಿಗೆ ತಾವಿದ್ದ ಸ್ಥಳದಲ್ಲಿ ನಾನಾ ತರಹದ ಭಯ, ಭೀತಿ, ಕಷ್ಟಗಳು, ಅನಾರೋಗ್ಯ, ನಾನಾ ವಿಧವಾದ ಸಮಸ್ಯೆಗಳು ಅದಕ್ಕಾಗಿ ಬೇರೆ ದೇಶಕ್ಕೆ ಹೋಗಬೇಕು ಅರ್ಥಾತ್ ಬೇರೆ ಊರಿಗೆ ಹೋಗಬೇಕು, ಬೇರೆ ಸ್ಥಾನಕ್ಕೆ ಹೋಗಿ ಸುಭದ್ರವಾಗಿ ಇರಬೇಕು ಅನ್ನುವ ಅಪೇಕ್ಷೆ ಇರುತ್ತದೆ ಅನುಕೂಲತೆಗಳು ಆಗುತ್ತಾ ಇರುವುದಿಲ್ಲ. ಅಚಿಂತ್ಯಾದ್ಭುತ ಶಕ್ತಿಯಿಂದ ಪರಮಾತ್ಮ ಮಥುರೆಯಲ್ಲಿದ್ದ ಎಲ್ಲ ಪ್ರಜೆಗಳನ್ನು ಯಾವುದೇ ಕಷ್ಟ ಇಲ್ಲದೆ ಇದ್ದಂತೆ ಸುರಕ್ಷಿತವಾದ ಪ್ರದೇಶಕ್ಕೆ ದ್ವಾರಕಾ ಪಟ್ಟಣದಲ್ಲಿ ನೆಲೆಸುವಂತೆ ಮಾಡಿದ ಇದು ದೇವರ ಮಹಾಮಹಿಮೆ. ಅಂತಹ ಮಹಾಮಹಿಮೆ ಇರುವ ಶ್ರೀಕೃಷ್ಣ ಪರಮಾತ್ಮನ ಸ್ಮರಣೆಯನ್ನು ಮಾಡಿದರೆ ಅಭದ್ರವಾದ ಸ್ಥಾನದಿಂದ ಸುಭದ್ರವಾದ ಸ್ಥಾನಕ್ಕೆ ಹೋಗಿ ಸುಖವಾಗಿ ನೆಲೆಸಿ ಸಾಧನೆಯನ್ನು ಮಾಡುವಂತೆ ದೇವರು ಅನುಗ್ರಹ ಮಾಡುತ್ತಾನೆ ಅಂತನ್ನುವ ತತ್ತ್ವವನ್ನು ಈ ಸಂದರ್ಭದಲ್ಲಿ ತಿಳಿಯಬೇಕು.

ಅಲ್ಲಿರುವಂತಹ ಜನರಿಗೆ ಕಷ್ಟಕಾರ್ಪಣ್ಯ ದಾರಿದ್ರ್ಯಗಳು ಇರಬಾರದು ಅನ್ನುವುದಕ್ಕೆ ಎಲ್ಲ ನಿಧಿ ಕುಬೇರನ ನವನಿಧಿಗಳಿಗೆ ಅಭಿಮಾನಿಗಳಾದ ಏನು ದೇವತೆಗಳು ಇದ್ದಾರೆ ಆ ಎಲ್ಲ ಶಂಖ, ಪದ್ಮ ಮೊದಲಾದ ಆ ಎಲ್ಲ ನಿಧಿಗಳನ್ನು ಕರೆಯುತ್ತಾನೆ. ನಿಧಿಯ ದೇವತೆಗಳನ್ನು ಕರೆದು ಯಾರಿಗೆ ಕಷ್ಟ ಇದೆ, ಯಾರಿಗೆ ಹಣದ ಕೊರತೆ ಇದೆ, ಯಾರಿಗೆ

ಎಷ್ಟು ಬೇಕೋ ಅಷ್ಟನ್ನು ಕೇಳಿ ತಿಳಿದು ನೀವೇ ಕೊಡಬೇಕು ಅಂತ ಆಜ್ಞೆಯನ್ನು ಮಾಡಿ, ಯಾರಿಗೂ ದಾರಿದ್ರ್ಯ ಇರಬಾರದು, ಎಲ್ಲರೂ ಸುಖವಾಗಿ ಇರಬೇಕು ಅನ್ನುವ ವ್ಯವಸ್ಥೆಯನ್ನು ಆ ದ್ವಾರಕಾ ಪಟ್ಟಣದಲ್ಲಿ ಪರಮಾತ್ಮ ಮಾಡಿದ್ದಾನೆ. ಎಂತಹ ಅದ್ಭುತವಾದ ರಾಜ್ಯ ಎಲ್ಲರೂ ಸಮೃದ್ಧಿಯಿಂದ ಸುಖವಾಗಿ ಧರ್ಮವನ್ನು ಮಾಡುತ್ತಾ, ತಮಗೆ ವಿಹಿತವಾದ ಯಜ್ಞ ಯಾಗಾದಿ ಕರ್ಮಗಳನ್ನು ಮಾಡುತ್ತಾ, ಶಾಸ್ತ್ರಗಳ ಶ್ರವಣಗಳನ್ನು ಮಾಡುತ್ತಾ ಅತ್ಯಂತ ಸುಖವಾಗಿ ದ್ವಾರಕಾ ಪಟ್ಟಣದಲ್ಲಿ ಎಲ್ಲರೂ ವಾಸ ಮಾಡಿದ್ದಾರೆ ಎಂಬುದಾಗಿ ತಿಳಿಸುತ್ತಾರೆ. ಆ ರೀತಿ ತಿಳಿದರೆ ನಾವೆಲ್ಲ ಧರ್ಮದಿಂದ ಜೀವನ ಮಾಡುವುದಕ್ಕೆ, ಸಮೃದ್ಧಿಯಿಂದ ಜೀವನ ಮಾಡುವುದಕ್ಕೆ ಸಾಧ್ಯವಿದೆ ಎಂಬುದಾಗಿ ಶಾಸ್ತ್ರ ಹೇಳುತ್ತದೆ.

ಮುಂದೆ ಈಚೆಗೆ ಕಾಲಯವನನ ಸಂಹಾರ ಆಯಿತು. ಕಾಲಯವನನಿಂದ ಶ್ರೀಕೃಷ್ಣ ಪರಮಾತ್ಮನನ್ನ ಸಂಹಾರ ಮಾಡಿಸಬೇಕು ಅನ್ನುವ ಹೊಂಚು ಹಾಕಿದ್ದರು ಜರಾಸಂಧ, ಸಾಲ್ವ ಮೊದಲಾದವರು **'ಹರಿಚಿತ್ತ ಸತ್ಯಾ ಹರಿಚಿತ್ತ ಸತ್ಯಾ ನರಚಿತ್ತಕ್ಕೆ ಬಂದದ್ದು, ಲವಲೇಶ ನಡೆಯದು'** ಇವರು ಬರೀ ನರರಲ್ಲ ನರಿ ಅನೇಕ ಹೊಂಚು ಹಾಕಿ ಮೋಸ ಮಾಡಬೇಕು ಅಂತ ಪ್ರಯತ್ನ ಮಾಡಿದವರೆಲ್ಲ ನರಿ ಚಿತ್ತಕ್ಕೆ ಬಂದದ್ದು ಲವಲೇಶ ನಡೆಯದು. ದೇವರ ಎದುರಿಗೆ ಆ ನರಿಯ ಬುದ್ಧಿಯನ್ನು ಮೋಸ ಮಾಡುವ ಬುದ್ಧಿಯನ್ನು ಉಪಯೋಗಿಸಿದರೆ ಯಾವ ಕೆಲಸಕ್ಕೂ ಬರದು, ಪರಮಾತ್ಮನ ಸಂಕಲ್ಪವೇ ಸಂಕಲ್ಪ. ಸರಿ ಹಾಗಾದರೆ ಇನ್ನು ಶಿಶುಪಾಲನಿಗೆ ಕೊಟ್ಟು ಮದುವೆಯನ್ನು ಮಾಡಬೇಕು ರುಕ್ಮಿಣಿಗೆ ಅಂತ ನಿರ್ಧಾರ ಮಾಡಿದ್ದಾರೆ. ಆ ವಿವಾಹದ ಮೊದಲೇ ಈ ಯುದ್ಧದಲ್ಲಿ ಕೃಷ್ಣನನ್ನು ಸಂಹಾರ ಮಾಡಬೇಕು ಅನ್ನುವ ದುರ್ಬುದ್ಧಿ ಇತ್ತು ಅದು ಈಡೇರಲಿಲ್ಲ ಏನಾದರಾಗಲಿ ಶಿಶುಪಾಲನಿಗೆ ಕೊಟ್ಟು ಮದುವೆಯನ್ನಂತೂ ಮಾಡೋಣ ಅಂತ ಎಲ್ಲರೂ ನಿರ್ಧಾರ ಮಾಡಿದ್ದಾರೆ ಭೀಷ್ಮಕನಿಗೆ ಮನಸ್ಸಿಲ್ಲ ಆದರೆ ರುಕ್ಮಿಯ ಒತ್ತಾಯ ಜರಾಸಂಧ ಮೊದಲಾದವರ ಆಗ್ರಹ ಅದಕ್ಕಾಗಿ ಸುಮ್ಮನಿದ್ದಾನೆ. ನೀವೆಲ್ಲ ತಿಳಿದಂತೆ ಭಾಗವತದಲ್ಲಿ ಹೇಳಿದ ರೀತಿಯಲ್ಲಿ ಶ್ರೇಷ್ಠನಾದ ಒಬ್ಬ ಉತ್ತಮನಾದ ಸದ್ ಬ್ರಾಹ್ಮಣ ಅಂತ ಸಜ್ಜನನನ್ನು ಕರೆದು ರುಕ್ಮಿಣಿ ತನ್ನ ಅಭಿಪ್ರಾಯವನ್ನು ಪತ್ರದ ಮೂಲಕ ಶ್ರೀಕೃಷ್ಣ ಪರಮಾತ್ಮನಿಗೆ ತಿಳಿಸಿದ್ದಾಳೆ.

ಶ್ರುತ್ವಾಗುಣಾನ್ ಭುವನಸುಂದರ ಶೃಣ್ವತಾಂ ತೇ
ನಿರ್ವಿಶ್ಯ ಕರ್ಣವಿವರಂ ಹರತೋऽಂಗತಾಪಮ್ ।
ರೂಪಂ ಪರಂ ಭುವನಮಂಗಲಮಂಗಲಂ ತೇ
ತ್ವಯ್ಯಚ್ಯುತಾವಿಶತಿ ಚಿತ್ತಮಪತ್ರಪಂ ಮೇ ॥ (10.2.57.36 ಭಾಗವತ)

ನಿನ್ನ ಗುಣಗಳನ್ನ ನಾನೆಲ್ಲ ಕೇಳಿ ತಿಳಿದಿದ್ದೇನೆ ಅಂತ. ನಿತ್ಯವಾದ ಏಕಪ್ರಕಾರವಾದ ಜ್ಞಾನ ಮಹಾಲಕ್ಷ್ಮೀ ದೇವಿಗೆ ಅನಾದಿ ಕಾಲದಿಂದ ಗೊತ್ತು ಆ ಭಗವಂತನ ಗುಣಗಳು, ಅವನ ಮಹಿಮೆ, ಅವನ ಅವತಾರಗಳು, ಅವನ ಲೀಲೆಗಳು ಯಾವುದನ್ನೂ ಆ ಮಹಾಲಕ್ಷ್ಮೀ ದೇವಿ ತಿಳಿದಿಲ್ಲ ಅಂತಿಲ್ಲ. ಲಕ್ಷ್ಮೀ ದೇವಿಗೂ ತಿಳಿಯದ ಅನಂತಾನಂತ ಗುಣಗಳು ಭಗವಂತನಲ್ಲಿ ಇದ್ದದ್ದು ಸತ್ಯ ಆದರೆ ಆ ಲಕ್ಷ್ಮೀ ದೇವಿ ತನ್ನ ಯೋಗ್ಯತೆಗೆ ಅನುಗುಣವಾಗಿ ಎಷ್ಟು ಗುಣಗಳನ್ನು ತಿಳಿಯಬೇಕೋ ಅಷ್ಟೆಲ್ಲವನ್ನೂ ಅನಾದಿಕಾಲದಿಂದ ತಿಳಿದಂತಹ ಮಹಾನುಭಾವಳು. ಅಷ್ಟೆಲ್ಲ ಗೊತ್ತು ಆದರೂ ಲೋಕದೃಷ್ಟಿಯಲ್ಲಿ ಹೇಳುತ್ತಾಳೆ ಅನೇಕ ಜನರಿಂದ ಕೇಳಿ ತಿಳಿದಿದ್ದೇನೆ ಅಂತ. ಆ ಭಗವಂತನ ಗುಣಗಳನ್ನು ಮಹಿಮೆ ಅವತಾರಗಳನ್ನೆಲ್ಲ ತಿಳಿದದ್ದಕ್ಕೆ ನಿನ್ನನ್ನೇ ಸ್ವೀಕಾರ ಮಾಡಬೇಕು. ನಾನು ಏನೇನು ಇಷ್ಟು ದಿನ ಪೂಜೆ ಮಾಡಿದ್ದು, ವ್ರತ ಮಾಡಿದ್ದು, ಸೇವೆ ಮಾಡಿದ್ದು ಮಾಡಿದ್ದು, ಉಪವಾಸ ಮಾಡಿದ್ದು.

ಪೂರ್ತೇಷ್ಟದತ್ತನಿಯಮವ್ರತದೇವವಿಪ್ರ-
ಗುರ್ವರ್ಚನಾದಿಭಿರಲಂ ಭಗವಾನ್ ಪರೇಶಃ ।
ಆರಾಧಿತೋ ಯದಿ ಗದಾಗ್ರಜ ಏತ್ಯ ಪಾಣಿಂ
ಗೃಹ್ಣಾತು ಮೇ ನ ದಮಘೋಷಸುತಾದಯೋಽನ್ಯೇ ॥ (10.2.57.40 ಭಾಗವತ)

ಎಲ್ಲಾ ಪುಣ್ಯಗಳು ಅಂದರೆ ರುಕ್ಮಿಣಿ ದೇವಿ ನಮಗೆ ತಿಳಿಸಿಕೊಡುತ್ತಾ ಇದ್ದಾಳೆ. ದೇವರು ನಮ್ಮ ಹತ್ತಿರ ಬರಬೇಕು, ದೇವರು ನಮ್ಮ ಮನಸ್ಸಿನಲ್ಲಿ ಬರಬೇಕು, ದೇವರ ಧ್ಯಾನ ಮಾಡಲಿಕ್ಕೆ ನಮಗೆ ಆಗಬೇಕು, ದೇವರ ಮಹಿಮೆಯನ್ನು ಕೇಳಬೇಕು, ಶಾಸ್ತ್ರ ಓದಬೇಕು, ತಿಳಿಯಬೇಕು, ಭಗವಂತನ ಅನುಗ್ರಹ ಆಗಬೇಕು ಅಂತ ಅಪೇಕ್ಷೆಯಿದೆ. ಆ ಅಪೇಕ್ಷೆ ಇದೆ ಅನ್ನುವುದಕ್ಕೆ ಹಾಗಾದರೆ ಏನಾದರೂ ಸ್ವಲ್ಪ ನಿಮ್ಮ ಪುಣ್ಯ ಖರ್ಚು ಮಾಡಿ, ಇಲ್ಲ ನಮ್ಮ ಪುಣ್ಯ ಎಲ್ಲ ಸಾಕಷ್ಟು ಬೇರೆ ಬೇರೆ ಕೆಲಸಗಳಿಗೆಲ್ಲ ಸ್ವಲ್ಪ ಇರಬೇಕು. ಹಣ ಗಳಿಸಲಿಕ್ಕೆ ಒಂದಿಷ್ಟು ಪುಣ್ಯ, ಮದುವೆಗೆ ಒಂದಿಷ್ಟು ಪುಣ್ಯ, ಮಕ್ಕಳಿಗೆ ಒಂದಿಷ್ಟು ಪುಣ್ಯ, ಮನೆಗೆ ಒಂದಿಷ್ಟು ಪುಣ್ಯ ಹೀಗೆ ಇನ್ನೇನೇನೋ ಕೆಲಸಗಳಿಗೆಲ್ಲ ಒಂದಿಷ್ಟೆಲ್ಲಾ ಪುಣ್ಯಗಳನ್ನು ಎತ್ತಿಟ್ಟು ಶಾಸ್ತ್ರಗಳ ಪಾಠ ಪ್ರವಚನ, ದೇವರ ಧ್ಯಾನ ಮಾಡಲಿಕ್ಕೂ ನನಗೆ ಆಗಬೇಕು ಅದಕ್ಕೆ ಒಂದಿಷ್ಟು ಪುಣ್ಯ ಅಂತ ಇಟ್ಟರೆ ಇರುತ್ತೆ. ಅದು ಸಿಗುವುದಿಲ್ಲ, ಅಷ್ಟು ಸೋವಿ ಅಲ್ಲ, ಅದು ಭಾರೀ ತುಟ್ಟಿ. ಆ ದೇವರ ಧ್ಯಾನ ಮಾಡುವ, ದೇವರ ಸೇವೆ ಮಾಡುವ, ದೇವರ ಚಿಂತನ ಮಾಡುವ ಸೌಭಾಗ್ಯ ನಮಗೆ ಸಿಗಬೇಕು ಅಂದರೆ ಎಲ್ಲಾ ಪುಣ್ಯಗಳನ್ನು ಅದಕ್ಕೆ ಮೀಸಲಿಟ್ಟರೆ ಅದು ಸಿಗುತ್ತದೆ ಎಷ್ಟೋ ಜನ್ಮಗಳ ಪುಣ್ಯ.

ಪೂರ್ತೇಷ್ಟದತ್ತನಿಯಮವ್ರತದೇವವಿಪ್ರ-
ಗುರ್ವರ್ಚನಾದಿಭಿರಲಂ ಭಗವಾನ್ ಪರೇಶಃ । (10.2.57.40 ಭಾಗವತ)

ಅನ್ನದಾನ ಅನೇಕ ಕಟಾಕಾದಿಗಳ ನಿರ್ಮಾಣ, ಯಜ್ಞ ಯಾಗಾದಿಗಳು, ಬ್ರಾಹ್ಮಣರ ಸೇವೆ, ದೇವತೆಗಳ ಸೇವೆ, ಗುರುಗಳ ಸೇವೆ, ತಂದೆ ತಾಯಿಗಳ ಸೇವೆ ಏನೇನು ಪುಣ್ಯಗಳನ್ನು ನಿಷ್ಕಾಮವಾಗಿ ಮಾಡಿದ್ದು ಉಂಟೋ ಅದೆಲ್ಲವನ್ನು ಒತ್ತಟ್ಟಿಗೆ ಸೇರಿಸಿದರೆ ಆ ಭಗವಂತನ ದರ್ಶನವಾದೀತು. ಆ ರೀತಿ ನಿಷ್ಕಾಮ ಕರ್ಮಗಳನ್ನು ಮಾಡಿ ಪುಣ್ಯವನ್ನು ಭಗವಂತನಿಗೆ ಮೀಸಲಿಡಬೇಕು ಎಂಬ ಸಂದೇಶವನ್ನು ಮಹಾತಾಯಿ ಆದಂತಹ ರುಕ್ಮಿಣಿ ದೇವಿ ಎಲ್ಲರಿಗೂ ತಿಳಿಸಿಕೊಡುತ್ತ ಇದ್ದಾಳೆ. ಹಾಗೆ ಪತ್ರವನ್ನು ಬರೆದಾಗ ಶ್ರೀಕೃಷ್ಣ ಪರಮಾತ್ಮ ಅದನ್ನು ನೋಡಿದವನೇ ವಿದರ್ಭ ದೇಶಕ್ಕೆ ಬಂದಿದ್ದಾನೆ ಬರುವಾಗ ಎಲ್ಲ ಯಾದವರು ಜೊತೆಗೆ ಬಂದಿದ್ದಾರೆ, ಬಲರಾಮ ದೇವರು ಬರುತ್ತಾರೆ ನಂತರ. ಶ್ರೀಕೃಷ್ಣ ಪರಮಾತ್ಮ ನೋಡುತ್ತ ಇದ್ದಾನೆ ದೇವತಾ ಕಾರ್ಯಕ್ಕೆ ವಿಘ್ನ ಮಾಡಿಲ್ಲ, ಕುಲದೇವಿಯ ಪೂಜೆಯನ್ನು ಮಾಡುತ್ತ ಇದ್ದಾಳೆ. ಆ ಪೂಜೆಯನ್ನು ಮಾಡಿ ಹೊರಗೆ ಬರುತ್ತ ಎಲ್ಲ ಮಂಗಳ ಕಾರ್ಯಗಳನ್ನು ಮುಗಿಸಿಕೊಂಡು, ಪೂಜೆ ಮಾಡಿ ರುಕ್ಮಿಣಿ ದೇವಿ. ಯಾರ ಶಚಿ ದೇವಿಯ, ಗೌರಿಯ ಪೂಜೆಯನ್ನ ಮಾಡುವ ಅವಶ್ಯಕತೆ ಇಲ್ಲ ನಿಜ, ತಾನೇ ಎಲ್ಲರಿಗಿಂತಲೂ ಉತ್ತಮಳು ಆದರೆ ದೇವತಾ ಸ್ತ್ರೀಯರ ಪೂಜೆಯನ್ನು ಮಾಡಿ ಸೌಮಂಗಲ್ಯವನ್ನು ಜಗತ್ತಿಗೆ ತೋರಿಸಿಕೊಡುವುದಕ್ಕೆ ಮಾಡಬೇಕಾದ ಪೂಜೆಗಳನ್ನೆಲ್ಲ ಮಾಡಿ, ಬಂದ ಮೇಲೆ ಇನ್ನು ಮುಂದಿನ ಕೆಲಸ. ಏನು ಶಿಶುಪಾಲನ ಜೊತೆಗೆ ವಿವಾಹ ಅದಕ್ಕೆ ಮಾತ್ರ ವಿಘ್ನ ಮಾಡುವುದು ದೇವತಾ ಕಾರ್ಯಕ್ಕೆ, ಪೂಜೆಗೆ ವಿಘ್ನ ಮಾಡಬಾರದು ಅಂತ. ಅದನ್ನು ಮಾಡಿ ಬಂದದ್ದೇ ತಡ ಕೃಷ್ಣ ಪರಮಾತ್ಮ ರಥದಲ್ಲಿ ಕೂಡಿಸಿಕೊಂಡು ಹೊರಟೇ ಬಿಟ್ಟಿದ್ದಾನೆ. ಎಲ್ಲರೂ ಆಯುಧಗಳನ್ನು ಹಿಡಿದುಕೊಂಡು ಸಿದ್ಧರಾಗಿ ನಿಂತಿದ್ದಾರೆ ಕೃಷ್ಣ ಬರಬಹುದು ಯುದ್ಧ

ಮಾಡಬೇಕು ಎಲ್ಲಿಂದ ಬರುತ್ತಾನೆ ಅಂತ ನೋಡುವುದರೊಳಗೆ ಬಂದಾಯಿತು ಕರೆದುಕೊಂಡು ಹೊರಟು ಹೋಗಿ ಆಯಿತು ಅದ್ಭುತವಾದಂತಹ ಆ ಪರಮಾತ್ಮನ ಶಕ್ತಿ, ಅವನ ಮಹಿಮೆ, ವಿಚಿತ್ರವಾದ ಲೀಲೆ ಅಷ್ಟು ವೇಗದಿಂದ. ಪ್ರತಿಕ್ಷಣದಲ್ಲಿ ನಮ್ಮ ದೇಹದೊಳಗೆ ಅತ್ಯಂತ ವೇಗದಿಂದ ಎಲ್ಲ ಕಾರ್ಯಗಳನ್ನು ಅನಂತ ಜೀವರಾಶಿಗಳಲ್ಲಿ ಮಾಡಿಸುವ ಆ ಸ್ವಾಮಿಗೆ ಇದನ್ನು ವೇಗದಿಂದ ಮಾಡಿದ ಅನ್ನುವುದು ಏನೂ ದೊಡ್ಡದಲ್ಲ ಅತ್ಯಂತ ಅನಾಯಾಸವಾಗಿ ಪರಮಾತ್ಮ ಹೊರಟಿದ್ದಾನೆ.

ಆಗ ಎಲ್ಲರೂ ಯುದ್ಧಕ್ಕೆ ಬಂದಿದ್ದಾರೆ ಯುದ್ಧಕ್ಕೆ ಬಂದರೆ ಎಲ್ಲರನ್ನು ಏಕಕಾಲಕ್ಕೆ ಜರಾಸಂಧಾದಿ ಸಕಲ ರಾಜರುಗಳನ್ನೂ ಕೂಡ ಅವರ ವಾಹನ, ಆಯುಧಗಳನ್ನೆಲ್ಲ ಕತ್ತರಿಸಿ ಹಾಕಿ ಎಲ್ಲರನ್ನೂ ಸೋಲಿಸಿ ಕೆಳಗೆ ಬೀಳಿಸಿದ್ದಾನೆ. ಇಷ್ಟಾದ ಮೇಲೂ ಅವರು ಮತ್ತೆ ಬೇರೆ ಆಯುಧಗಳನ್ನು ತೆಗೆದುಕೊಂಡು ಯುದ್ಧಕ್ಕೆ ಬಂದಾಗ ಬಲರಾಮ ದೇವರು ಅವರನ್ನೆಲ್ಲ ಚೆನ್ನಾಗಿ ನೋಡಿಕೊಂಡಿದ್ದಾರೆ. ಶ್ರೀಮದಾಚಾರ್ಯರು ಹೇಳುತ್ತಾರೆ ಬಲರಾಮ ದೇವರಿಗೆ ಅತ್ಯಂತ ವಿಶೇಷವಾದಂತಹ ಪ್ರೀತಿ, ಭಕ್ತರೇ ಅವರು ಶೇಷ ದೇವರು, ಈಗ ಶುಕ್ಲಕೇಶದ ಆವೇಶ ಪರಮಾತ್ಮನ ವಿಶೇಷವಾದ ಸನ್ನಿಧಾನ ಅವರಲ್ಲಿ ಜಾಗೃತವಾಗಿದೆ ಆ ಶುಕ್ಲಕೇಶಾವೇಶ ಆವೇಶ ಜಾಗೃತವಾದದ್ದಕ್ಕೆ ಜರಾಸಂಧನನ್ನು ಸುಲಭವಾಗಿ ಸೋಲಿಸಿ ಕೆಳಗೆ ಬೀಳಿಸಿದ್ದಾರೆ. ಸಾತ್ಯಕಿ ಶಿಶುಪಾಲನನ್ನು ಸೋಲಿಸಿದ್ದಾನೆ ಬಹಳ ಹೊತ್ತು ಸಾತ್ಯಕಿ ಶಿಶುಪಾಲನ ಜೊತೆಗೆ ಯುದ್ಧವನ್ನು ಆಡಿದ್ದಾನೆ. ಇಬ್ಬರೂ ಸಮಾನವಾದ ರೀತಿಯಲ್ಲಿ ಯುದ್ಧವನ್ನು ಬಹಳ ಹೊತ್ತು ಆಡಿದಾಗ ಸಾತ್ಯಕಿಗೆ ಏನೋ ಒಂದು ಅವಮಾನ ಅನ್ನಿಸಿತು ನಾನು ಇಷ್ಟು ಇವನ ಜೊತೆಗೆ ಸರಳವಾಗಿ ಯುದ್ಧ ಮಾಡುವುದು ಬೇಡ ಅಂತ ಘೋರವಾದಂತಹ ಬಾಣವನ್ನು ಬಿಟ್ಟು ಅವನನ್ನು ಮೂರ್ಛೆ ಹೋಗುವಂತೆ ಮಾಡಿ ಶಿಶುಪಾಲನನ್ನು ಕೆಳಗೆ ಬೀಳಿಸಿದ್ದಾನೆ. ಹೀಗೆ ಈ ಕಡೆಗೆ ಸಾತ್ಯಕಿ, ಬಲರಾಮ ದೇವರು, ಕೃತವರ್ಮ ಇವರೆಲ್ಲ ಈ ಜರಾಸಂಧಾದಿಗಳ ಜೊತೆಗೆ ಯುದ್ಧವನ್ನು ಮಾಡಿ ಇಲ್ಲಿರುವಂತಹ ಜನರನ್ನು ಸೋಲಿಸುತ್ತಾ ಇದ್ದಾರೆ.

ಕೃಷ್ಣ ಪರಮಾತ್ಮ ಆ ಕಡೆಗೆ ರಥದಲ್ಲಿ ರುಕ್ಮಿಣಿಯನ್ನು ಕೂಡಿಸಿಕೊಂಡು ಹೊರಟಿದ್ದಾನೆ ಅಂತ ಗೊತ್ತಾಗಿ ರುಕ್ಮಿ ಬೆನ್ನು ಹತ್ತಿದ್ದಾನೆ ಅಣ್ಣ ಇಲ್ವಲ. ಇಲ್ಲಿ ಇಲ್ವಲ ಅಲ್ಲ, ರುಕ್ಮಿ ಈ ಎಲ್ಲರ ಜೊತೆಗೆ ಯುದ್ಧ ಮಾಡುತ್ತಾ ಕುಳಿತು ಏನು ಮಾಡುವುದು ಅಂತ ಕೃಷ್ಣನ ಬೆನ್ನು ಹತ್ತಿ ಕೃಷ್ಣನ ಜೊತೆಗೆ ಯುದ್ಧಕ್ಕೆ ಅಂತ ಹೊರಟಿದ್ದಾನೆ. ಅಂತಹ ಅವಸರದೊಳಗೆ ಮೂರು ಅಕ್ಷೌಹಿಣೀ ಸೈನ್ಯವನ್ನು ತೆಗೆದುಕೊಂಡು ಯುದ್ಧಕ್ಕೆ ಹೋಗಿದ್ದಾನೆ ಘೋರವಾದ ಯುದ್ಧ ಪ್ರಾರಂಭವಾಗಿದೆ ಕ್ಷಣ ಮಾತ್ರದೊಳಗೆ ಆ ಬಂದಂತಹ ದುಷ್ಟರಾದ ಎಲ್ಲಾ ಸೈನಿಕರನ್ನು ನಾಶ ಮಾಡಿ ಹಾಕಿದ್ದಾನೆ ಕೃಷ್ಣ. ಏಕಲವ್ಯ ಬಂದಿದ್ದಾನೆ ಅವನನ್ನೂ ಸೋಲಿಸಿದ್ದಾನೆ. ರುಕ್ಮಿ, ರುಕ್ಮಿ ನಾನಾ ವಿಧವಾದ ಶಸ್ತ್ರಾಸ್ತ್ರಗಳನ್ನು ಪ್ರಯೋಗ ಮಾಡುತ್ತ ಇದ್ದರೆ ಅವನ್ನೆಲ್ಲ ಖಂಡನ ಮಾಡಿ ಅವನ ಧನುರ್ಬಾಣಗಳನ್ನೆಲ್ಲ ನಾಶ ಮಾಡಿದ ಕೊನೆಗೆ ಖಡ್ಗ ಚರ್ಮಗಳನ್ನು ಹಿಡಿದುಕೊಂಡು ಕೃಷ್ಣನ ರಥದೊಳಗೆ ಹತ್ತಿದ್ದಾನೆ ರುಕ್ಮಿ ಕೃಷ್ಣನ ಜೊತೆಗೆ ಯುದ್ಧ ಮಾಡುವುದಕ್ಕೆ ಬಹಳ ಕಷ್ಟ ಅದು. ದೂರದಲ್ಲಿ ಇದ್ದರೆ ಬಾಣ ಬಿಡಬಹುದು ರಥದೊಳಗೆ ಎದುರಿಗೆ ನಿಂತಾಗ ಬಾಣ ಬಿಡುವುದು ಹೇಗೆ. ಕೃಷ್ಣನಿಗೆ ಏನು ಬಾಣ ಬಿಡಬೇಕು ಅಂತ ಇಲ್ಲ ಇಚ್ಛಾ ಮಾತ್ರದಿಂದ ಅವನನ್ನು ಸಂಹಾರನು ಮಾಡಬಹುದು, ಏನಾದರೂ ಮಾಡಬಹುದಾಗಿತ್ತು ಆದರೆ ಯುದ್ಧದ ನೀತಿಯ ಕ್ರಮಕ್ಕೆ ತಕ್ಕಂತೆ ಹೇಗೆ ಯುದ್ಧ ಮಾಡುವುದು. ದೇವರಿಗೆ ಏನು ಅದ್ಭುತವಾದ ಕೌಶಲ ಇಷ್ಟಿಷ್ಟೇ ಪುಟ್ಟ ಪುಟ್ಟ ಬಾಣಗಳನ್ನು ಛೋಟು ಛೋಟ ಬಾಣಗಳು ಅವುಗಳನ್ನು ಪಟ್ ಪಟ್ ಅಂತ ಬಿಟ್ಟರೆ ಅವನಿಗೆ ತಡೆದುಕೊಳ್ಳುವುದಕ್ಕೆ ಆಗಲಿಲ್ಲ ಅವನು ಮತ್ತೆ ಅಲ್ಲಿಯೇ ಸೋತು ಹೋಗಿದ್ದಾನೆ. ಇನ್ನೇನು ಅವನನ್ನು ಸಂಹಾರ ಮಾಡಬೇಕು ಅಂತ ದೇವರಿಗೆ, ಸಂಹಾರ ಮಾಡಬೇಕು ಅಂತ ಇಚ್ಛೆ ಇರಲಿಲ್ಲ ಸತ್ಯ ಸಂಕಲ್ಪ.

ಅವನು ಮಾಡಬೇಕು ಅಂತ ಇಚ್ಛಾ ಇದ್ದರೆ ಮಾಡೇಬಿಡುತ್ತಿದ್ದ ಆದರೆ ಮಾಡಿದ ಹಾಗೆ ತೋರಿಸಿಬೇಕು ಅಂತ ಇಚ್ಛೆ ಇತ್ತು ತೋರಿಸಿದ, ರುಕ್ಮಿಣಿ ಬೇಡ ಅಂದಿದ್ದಾಳೆ ವಿವಾಹದ ಸಂದರ್ಭ ಅಣ್ಣನನ್ನು ಕೊಂದರೆ ಹೇಗೆ **'ಸದೈಕಮಾನಸಾವಪಿ'**[1] ಅಂತ ಅನ್ನುತ್ತಾರೆ ಶ್ರೀಮದಾಚಾರ್ಯರು. ಇಬ್ಬರ ಇಚ್ಛೆ ಏಕಪ್ರಕಾರ ಮುಕ್ತರಾದ ಮೇಲೇನೆ ಸಾಮಾನ್ಯ ಜೀವರಿಗೇನೆ ದೇವರ ಇಚ್ಛೆಗೆ ವಿರುದ್ಧವಾದ ಇಚ್ಛೆ ಬರುವುದಿಲ್ಲ **'ಕಾಮೇ ರಮೇ ಕಾಮೇ ಆಗಾತ್'** ಆ ಭಗವಂತನ ಇಚ್ಛೆಗೆ ಅನುಗುಣವಾಗಿಯೇ ಮುಕ್ತರು ಇಚ್ಛೆ ಮಾಡುತ್ತಾರೆ ಅನ್ನುವುದಕ್ಕೆ ಅವರು ಸತ್ಯ ಸಂಕಲ್ಪರಾಗುತ್ತಾರೆ. ಮಹಾಲಕ್ಷ್ಮೀ ನಿತ್ಯಮುಕ್ತಳು ಎಂದಾದರೂ ದೇವರ ವಿರುದ್ಧವಾದ ಇಚ್ಛೆ, ದೇವರು ಕೊಲ್ಲಬೇಕು ಅಂತ ಇಚ್ಛೆ ಮಾಡಿದರೆ ಇವಳು ಬೇಡ ಅಂತ ಇಚ್ಛೆ ಮಾಡುತ್ತಾಳಾ ಸಾಧ್ಯವೇ ಇಲ್ಲ. ದೇವರಿಗೂ ಈ ಸಂದರ್ಭದಲ್ಲಿ ಇವನನ್ನು ಕೊಲ್ಲುವುದು ಬೇಡ ಮುಂದೆ ಬಲರಾಮ ದೇವರಿಂದ ಅವನ ಸಂಹಾರ ಆಗಬೇಕಾಗಿದೆ ಅಂತನ್ನುವುದು ದೇವರಿಗೂ ಸಂಕಲ್ಪ ಇತ್ತು, ಅದೇ ರುಕ್ಮಿಣಿಯ ಸಂಕಲ್ಪ.

ಈ ಸಂದರ್ಭದಲ್ಲಿ ಬೇಡ ಅನ್ನುವುದಕ್ಕಾಗಿ ಪರಮಾತ್ಮ ಬಿಟ್ಟು ಐದು ಕಡೆಗೆ ಅವನ ತಲೆಯನ್ನು ಬೋಳಿಸಿ ಆ ರುಕ್ಮಿಯನ್ನ ಅವಮಾನ ಮಾಡಿ ಕಳಿಸಿದ್ದಾನೆ. ಆದರೆ ಆ ಮಹಾನುಭಾವ ಭಾರೀ ವಿಶ್ವಾಸದಿಂದ ಬಂದಿದ್ದ, ಕೃಷ್ಣನನ್ನು ಸಂಹಾರ ಮಾಡದೇ, ರುಕ್ಮಿಣಿಯನ್ನು ಕರೆದುಕೊಂಡು ಬರದೇ ಕುಂಡಿನಪುರಕ್ಕೆ ನಾನು ಪ್ರವೇಶನೇ ಮಾಡುವುದಿಲ್ಲ ಅಂತ. ತಾನೇ ಸೋತು ಹೋದ, ಅವಮಾನ ಆಗಿಹೋಯಿತು ರುಕ್ಮಿಣಿಯನ್ನು ಕರೆದುಕೊಂಡು ಬರಲಿಕ್ಕೆ ಆಗಲಿಲ್ಲ. ಹಾಗಾದರೆ ತಾನಿದ್ದಲ್ಲಿಯೇ ಒಂದು ಭೋಜಕಟ ಅಂತ ಒಂದು ಪಟ್ಟಣವನ್ನು ನಿರ್ಮಾಣ ಮಾಡಿಕೊಂಡು ಅಲ್ಲಿ ವಾಸ ಮಾಡುತ್ತಾನೆ ಒಳಗೆ ಹೋಗುವುದಿಲ್ಲ, ಮಹಾದುಷ್ಟ, ಕೃಷ್ಣನ ದ್ರೋಹವನ್ನು ಮಾಡಿದವ ಇಲ್ಲವಲ ಅನ್ನುವ ಅಸುರ ಎಲ್ಲಾ ಸತ್ಯ ಆದರೆ ಒಂದು ಗಮನಿಸಿ, ಅಂತಹ ದುಷ್ಟನಾದರೂ ತಾನು ಮಾಡಿದ ಪ್ರತಿಜ್ಞೆ ಉಳಿಸಿಕೊಳ್ಳಬೇಕು ಅನ್ನುವುದು ಒಂದು ಇದೆ ತಲೆಯಲ್ಲಿ ಸತ್ಯಕ್ಕೆ ವಿರುದ್ಧವಾಗಿ ಹೋಗಬಾರದು ಅಂತ ಇಂತಹ ಎಲ್ಲ ಸತ್ಯ ಮಾತಾಡಬಾರದು. ದೇವರ ವಿರುದ್ಧವಾದಂತಹ ಪ್ರವೃತ್ತಿಯೇ ತಪ್ಪು ಆದರೆ ಹೇಳಬೇಕಾದದ್ದು ಒಂದು ನಾಚಿಕೆ ಆಗಬೇಕು ಕೆಲವು ಸಜ್ಜನರಿಗೆ. ಅಂತಹ ದುಷ್ಟರಿಗೇನೆ ಆಡಿದ ಮಾತಿಗೆ ಹಿಂದೆ ಹೋಗಬಾರದು ಅಂತ ಇರುವಾಗ ಇನ್ನು ಸಜ್ಜನರು ಅಂತ ಅಂದುಕೊಂಡವರು, ತಾವು ದೇವರ ಪ್ರೀತಿಗಾಗಿ ಮಾಡುವ ಕಾರ್ಯದಲ್ಲಿ ಎಷ್ಟು ಸತ್ಯವಂತಿಕೆಯನ್ನು ಇಟ್ಟುಕೊಳ್ಳಬೇಕು ಅಂತ. ಇದರಿಂದ ವಿಪರೀತವಾಗಿ ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕಾದದ್ದು ಆ ಭಗವಂತನ ಅನುಗ್ರಹವನ್ನು ಪಡೆಯುವುದಕ್ಕೆ ಸತ್ಯವನ್ನು ಮಾತನಾಡಿ ಅವನನ್ನು ಸಂತೋಷ ಪಡಿಸಿಕೊಳ್ಳುವುದು ಬಹಳ ಅಗತ್ಯ. ಸರಿ, ಅಂತೂ ಇವನು ಭೋಜಕಟದಲ್ಲಿ ಇದ್ದಾನೆ.

ಕೃಷ್ಣ ಪರಮಾತ್ಮ ಅಲ್ಲಿಂದ ದ್ವಾರಕಾ ಪಟ್ಟಣಕ್ಕೆ ಹೊರಟು ಹೋದ ಇವರೆಲ್ಲರನ್ನು ಸೋಲಿಸಿಕೊಂಡು ಬಲರಾಮಾದಿಗಳು ಅಲ್ಲಿ ಬಂದಿದ್ದಾರೆ. ಬಲರಾಮ ದೇವರ ಮದುವೆ ಮೊದಲೇ ಆಗಿದೆ ಹಿಂದೆ ಕಥೆ ಎಲ್ಲಾ ಕೇಳದ್ದೀರಿ ಆ ರೈವತ ರಾಜ ಬ್ರಹ್ಮ ದೇವರ ಹತ್ತಿರ ಹೋಗಿ ತನ್ನ ಮಗಳನ್ನು ಯಾರಿಗೆ ಕೊಡಬೇಕು ಅಂತ ಕೇಳಿದಾಗ ಬಲರಾಮನಿಗೆ ಕೊಡು ಅಂತ ಹೇಳಿದ್ದರು. ಅವಳನ್ನು ಕರೆದುಕೊಂಡು ಬಂದಿದ್ದಾನೆ ಇಪ್ಪತ್ತೆಂಟು ಮೊಳ ಎತ್ತರ ಕೃತಯುಗದ ಪ್ರಮಾಣ, ದ್ವಾಪರಯುಗ ಏಳು ಅಷ್ಟೇ ಇವನು, ಆ ಏಳು ಹಸ್ತ ಪ್ರಮಾಣದ ದ್ವಾಪರಯುಗದ ಈ ಬಲರಾಮ ದೇವರು ಇಪ್ಪತ್ತೆಂಟು ಹಸ್ತ ಪ್ರಮಾಣದ ಎತ್ತರದ ಆ ರೇವತಿಯ ಹೆಗಲಿಗೆ ಹಲಾಯುಧ ಹಾಕಿ ಅವಳನ್ನು ಎಳೆದಿದ್ದಾರೆ ತಮಗೆ ಸರಿಯಾಗಿ ಎಷ್ಟು ಬೇಕೋ ತಮ್ಮ ಭುಜಕ್ಕೆ ಬರುವಂತೆ ಮಾಡಿಕೊಂಡು ಅವಳ ಜೊತೆಗೆ ವಿವಾಹವನ್ನು ಮಾಡಿಕೊಂಡಿದ್ದಾರೆ ಎಂಬುದಾಗಿ ತಿಳಿಸುತ್ತಾರೆ. ಈ ರೀತಿ ಬಲರಾಮ ದೇವರ ವಿವಾಹವಾದ ಮೇಲೆ

1. 17.163 ಮಭಾತಾನಿರ್ಣಯ

ಶ್ರೀಕೃಷ್ಣ ಪರಮಾತ್ಮ ರುಕ್ಮಿಣಿಯ ಜೊತೆಗೆ ವಿವಾಹವನ್ನು ಮಾಡಿಕೊಂಡಿದ್ದಾನೆ. ನಾವೇನು ಯಾವುದನ್ನು ನೋಡಬೇಕಾಗಿಲ್ಲ ಮುಹೂರ್ತ ಬೇಡ ಏನೂ ಬೇಡ ಯಾವತ್ತಾದರೂ ಮಾಡಿಕೊಂಡು ಬಿಡೋಣ ಅಂತ ಅನ್ನಲಿಲ್ಲ ಉತ್ತಮವಾದ ನಕ್ಷತ್ರ ಮುಹೂರ್ತಾದಿಗಳನ್ನು ನೋಡಿಯೇ ವಿವಾಹಾದಿ ಶುಭ ಕಾರ್ಯಗಳನ್ನು ಮಾಡಬೇಕು ಶಾಸ್ತ್ರೋಕ್ತವಾದ ರೀತಿಯಲ್ಲಿ ಅಂತ ಜಗತ್ತಿಗೆ ಒಂದು ಪಾಠ ಕಲಿಸುವುದಕ್ಕೆ ಪರಮಾತ್ಮ

ಜನಾರ್ದನಶ್ಚ ರುಕ್ಮಿಣೀಕರಂ ಶುಭೇ ದಿನೇಽಗ್ರಹೀತ್ ।
ಮಹೋತ್ಸವಸ್ತದಾಭವತ್ ಕುಶಸ್ಥಲೀನಿವಾಸಿನಾಮ್ ॥ (17.176 ಮಭಾತಾನಿರ್ಣಯ)

ಶ್ರೀಮದಾಚಾರ್ಯರು ಹೇಳುತ್ತಾರೆ, ಹರಿವಂಶವೂ ಕೂಡ ಪದೇ ಪದೇ ಹೇಳುತ್ತದೆ. ಒಂದು ಯಾತ್ರೆಗೆ ಹೊರಡಬೇಕಾದರೆ ಮುಹೂರ್ತ, ಒಂದು ಶುಭಕಾರ್ಯ ಮಾಡಬೇಕು ಅಂದರೆ ಮುಹೂರ್ತ, ಹೆಜ್ಜೆ ಹೆಜ್ಜೆಗೆ ಮುಹೂರ್ತವನ್ನು ನೋಡುವುದು, ಪುಣ್ಯಾಹವಾಚನವನ್ನು ಮಾಡಿಸಿಕೊಳ್ಳುವುದು, ದೊಡ್ಡವರ ಆಶೀರ್ವಾದವನ್ನು ಪಡೆಯುವುದು ಆಮೇಲೆ ಸತ್ಕಾರ್ಯ ಮಾಡುವುದು ಆ ರೀತಿಯ ಶಾಸ್ತ್ರದ ಒಂದು ನಿಯಮವನ್ನು ಸಜ್ಜನರಿಗೆ ಕಲಿಸಿ ಕೊಡುವುದಕ್ಕಾಗಿ ಪರಮಾತ್ಮ ಹಾಗೆ ಮಾಡಿದ್ದಾನೆ. ಶ್ರೇಷ್ಠವಾದ ಮುಹೂರ್ತದಲ್ಲಿ ಬ್ರಹ್ಮಾದಿ ದೇವತೆಗಳೆಲ್ಲ ಬಂದು ಆ ಭಗವಂತನ ರುಕ್ಮಿಣಿ ದೇವಿಯ ಅದ್ಭುತವಾದ ಆ ವಿವಾಹದ ಒಂದು ಪ್ರಸಂಗವನ್ನು ನೋಡಿ ಧನ್ಯತೆಯನ್ನು ಅನುಭವಿಸಿದ್ದಾರೆ. ಸಕಲ ಶಾಸ್ತ್ರಗಳ ಪ್ರತೀಕ ರುಕ್ಮಿಣಿ ದೇವಿ, ಸಕಲ ಶಾಸ್ತ್ರ ಪ್ರತಿಪಾದ್ಯನಾದವನು ಶ್ರೀಕೃಷ್ಣ ಪರಮಾತ್ಮ, ರುಕ್ಮಿಣಿಯ ಶ್ರೀಕೃಷ್ಣ ಪರಮಾತ್ಮನ ವಿವಾಹವಾಯಿತು ಅಂತನ್ನುವುದರ ಅರ್ಥ ಸಕಲ ಶಾಸ್ತ್ರಗಳೆಲ್ಲ ಭಗವಂತನ ಮಹಿಮೆಯನ್ನು ಕೊಂಡಾಡುವುದರಲ್ಲಿ ಪ್ರವೃತ್ತವಾಗಿವೆ ಎಲ್ಲ ಶಾಸ್ತ್ರಗಳ ಸಮನ್ವಯ ಶ್ರೀಕೃಷ್ಣನಲ್ಲಿಯೇ ಅಂತನ್ನುವ ಒಂದು ಸಂದೇಶವನ್ನು ಈ ಸಂದರ್ಭದಲ್ಲಿ ನಾವು ಚಿಂತನವನ್ನು ಮಾಡಬೇಕು. ಈ ಹಿಂದೆ ಕೇಳಿದ್ದೀರಿ ಸಕಲ ಶಾಸ್ತ್ರ ಪ್ರತಿಪಾದ್ಯನಾದವನು ಭಗವಂತ ಅಂತ ಯಾವ ರೀತಿ ಶ್ರೀಮದಾಚಾರ್ಯರು, ಟೀಕಾಕೃತ್ಪಾದರು, ರಾಘವೇಂದ್ರ ಸ್ವಾಮಿಗಳವರು ತಿಳಿಸಿಕೊಟ್ಟಿದ್ದಾರೆ ಅಂತ ಅದು ರುಕ್ಮಿಣಿ ಕಲ್ಯಾಣದ ಒಂದು ಸಂದೇಶ ಅಂತಹ ಮಹಾಲಕ್ಷ್ಮೀ ದೇವಿಯ ಕಲ್ಯಾಣವನ್ನು ನಾವು ತಿಳಿಯಬೇಕು.

ಈ ಕಡೆಗೆ ಮುಂದೆ ಶ್ರೀಕೃಷ್ಣ ಪರಮಾತ್ಮ ಆ ರುಕ್ಮಿಣಿಯಲ್ಲಿ ಚಾರುದೇಷ್ಣ, ಸುದೇಷ್ಣ, ಪ್ರದ್ಯುಮ್ನ, ಸುಶೇಣ, ಚಾರುಗುಪ್ತ, ಚಾರುಬಾಹು, ಚಾರುವಿಂದ, ಸುಚಾರು, ಭದ್ರಚಾರು, ಚಾರು ಹೀಗೆ ಹತ್ತು ಜನ ಮಕ್ಕಳು ಚಾರುಮತಿ ಅನ್ನುವ ಹೆಣ್ಣುಮಗಳನ್ನು ಕೂಡ ಪಡೆದಿದ್ದಾನೆ. ಇದಲ್ಲದೇ ಷಣ್ಮಹಿಷಿಯರ ವಿವಾಹವನ್ನು ಮಾಡಿಕೊಂಡಿದ್ದಾನೆ ಅಂತ ಸಂಕ್ಷಿಪ್ತವಾಗಿ ಮೊದಲು ತಿಳಿಸುತ್ತ ಇದ್ದಾರೆ ಕಾಲಿಂದಿ, ಮಿತ್ರವಿಂದ, ಲಕ್ಷಣ, ನೀಲಾ, ಭದ್ರಾ, ಜಾಂಬವತೀ ಇವರೆಲ್ಲರ ಜೊತೆಗೆ ಹಾಗೂ ನರಕಾಸುರನ ಪಟ್ಟಣದಲ್ಲಿ ಇರುವಂತಹ ಅತ್ಯಂತ ಶುದ್ಧರಾದಂತಹ ಶ್ರೀಕೃಷ್ಣನ ಜೊತೆಗೆ ಮದುವೆ ಆಗಬೇಕು ಅಂತೇನೆ ತಪಸ್ಸು ಮಾಡಿ ವಾಯು ದೇವರಿಂದ ವರ ಪಡೆದು ಹುಟ್ಟಿದಂತಹ ಮಹಾನುಭಾವರು 16,100 ಜನ ಅವರೆಲ್ಲರ ಜೊತೆಗೂ ಪರಮಾತ್ಮ ವಿವಾಹವನ್ನು ಮಾಡಿಕೊಂಡು ಎಲ್ಲರಿಗೂ ಕೂಡ ವಿಶೇಷವಾಗಿ ಅನುಗ್ರಹವನ್ನು ಮಾಡಿದ್ದಾನೆ ಎಂಬುದಾಗಿ ತಿಳಿಸುತ್ತಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

॥ ಶ್ರೀ ದಿಗ್ವಿಜಯ ರಾಮೋ ವಿಜಯತೇ ॥

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ವಿಷ್ಣುಪರ್ವ-24

* * *

ರುಕ್ಮಿಣಿಯ ವಿವಾಹವನ್ನು ಮಾಡಿಕೊಂಡು ಚಾರುದೇಷ್ಣ ಮೊದಲಾದ ಪುತ್ರರನ್ನು ಆವಳಲ್ಲಿ ಪಡೆದು ತಮ್ಮಿಬ್ಬರ ಸಮಾಗಮದ ದರ್ಶನದಿಂದ ಸಕಲ ಸಜ್ಜನರಿಗೆ ಆನಂದವನ್ನು ಶ್ರೀಕೃಷ್ಣ ಪರಮಾತ್ಮ ನೀಡಿದ್ದಾನೆ. ಆ ಕೃಷ್ಣ ಪರಮಾತ್ಮನ ರುಕ್ಮಿಣಿ ದೇವಿಯ ವಿವಾಹದ ಶ್ರೇಷ್ಠವಾದ ಒಂದು ಸಂದರ್ಭವನ್ನು ಚಿಂತನ ಮಾಡಿದವರಿಗೂ ಉತ್ತಮವಾದ ಮಂಗಲವನ್ನು ಭಗವಂತ ನೀಡುತ್ತಾ ಇದ್ದಾನೆ ಎಂಬುದಾಗಿ ತಿಳಿಸಿದ್ದಾರೆ. ಮುಂದೆ ಶ್ರೀಕೃಷ್ಣ ಪರಮಾತ್ಮನ ಪುತ್ರನಾದ ಪ್ರದ್ಯುಮ್ನನಿಗೆ ರುಕ್ಮಿಣಿ ದೇವಿಯಲ್ಲಿ ಶ್ರೀಕೃಷ್ಣ ಪರಮಾತ್ಮ ಪ್ರದ್ಯುಮ್ನನನ್ನು ಹುಟ್ಟಿಸಿದ್ದಾನೆ. ರುಕ್ಮಿಣಿ ದೇವಿಯ ಆವಶ್ಯಕತೆ ಇಲ್ಲದಂತೆ ಹಿಂದೆ ಏಕಲವ್ಯನ ಜೊತೆಗೆ ಯುದ್ಧವನ್ನು ಮಾಡುವಾಗ ತನ್ನ ಉದರದಿಂದಲೇ ಪ್ರದ್ಯುಮ್ನನನ್ನು ಹೊರಗೆ ತೆಗೆದು ಏಕಲವ್ಯನ ಜೊತೆಗೆ ಯುದ್ಧ ಮಾಡಿಸಿ, ಯುದ್ಧವಾದ ನಂತರ ಪುನಃ ತನ್ನ ಹೊಟ್ಟೆಯಲ್ಲಿ ಪ್ರದ್ಯುಮ್ನನನ್ನು ಹಾಕಿಕೊಂಡಿದ್ದಾನೆ ಪರಮಾತ್ಮ ಅಂತನ್ನುವ ಕಥೆಯನ್ನು ಹಿಂದೆ ಕೇಳುತ್ತೇವೆ, ಅವನು ತಾನೇ ತನಯರನ್ನು ತನ್ನ ಅವಯವದಿಂದ ಪಡೆದವನಿಗೆ ಅಂತ. ಭಗವಂತ ತನ್ನ ಅವಯವಗಳಿಂದಲೇ ಎಲ್ಲ ದೇವತೆಗಳನ್ನು ಸೃಷ್ಟಿ ಮಾಡಿದ್ದಾನೆ **'ಇಂದ್ರಾದಯೋ ಬಾಹವ ಆಹುರುಸ್ಯ'**[1] ಇಂದ್ರಾದಿ ದೇವತೆಗಳೆಲ್ಲ ತನ್ನ ಬಾಹುಗಳಿಂದ ಸೃಷ್ಟಿ ಮಾಡಿದ್ದಾನೆ, ತನ್ನ ಕಣ್ಣುಗಳಿಂದ ಸೂರ್ಯ-ಚಂದ್ರರ ಸೃಷ್ಟಿಯನ್ನು ಮಾಡಿದ್ದಾನೆ ಹೀಗೆಲ್ಲ ಭಾಗವತದಲ್ಲಿ ವರ್ಣನೆ ಬರುತ್ತದೆ. ಅಂತಹ ಸಕಲ ದೇವತೆಗಳನ್ನು ತನ್ನ ಶರೀರದಿಂದಲೇ ಸೃಷ್ಟಿ ಮಾಡಿದಂತಹ ಅಚಿಂತ್ಯವಾದ ಅದ್ಭುತವಾದ ಸಾಮರ್ಥ್ಯವನ್ನು ಪಡೆದ ಪರಮಾತ್ಮನಿಗೆ ಪ್ರದ್ಯುಮ್ನನನ್ನು ತಾನು ತನ್ನ ಉದರದಿಂದಲೇ ಸೃಷ್ಟಿ ಮಾಡಿ ಮಗುವಾಗಿ ಅಲ್ಲ, ನೇರವಾಗಿ ಏಕಲವ್ಯನ ಜೊತೆಗೆ ಯುದ್ಧಕ್ಕೆ ಸಿದ್ಧನಾಗಿಯೇ ಹೊಟ್ಟೆಯಿಂದ ಹೊರಗೆ ಬಂದ, ಯುದ್ಧ ಮಾಡಿದ ಮತ್ತೆ ಹೊಟ್ಟೆಯಲ್ಲಿ ಪ್ರವೇಶ ಮಾಡಿದ ಆ ಪ್ರದ್ಯುಮ್ನನನ್ನು ಪುನಃ ರುಕ್ಮಿಣಿ ದೇವಿಯಲ್ಲಿ ಪರಮಾತ್ಮ ಪಡೆದಿದ್ದಾನೆ.

ಆ ಪ್ರದ್ಯುಮ್ನನಿಗೆ ಸೋದರಮಾವ ರುಕ್ಮಿ, ರುಕ್ಮಿಣಿಯ ಪುತ್ರ ಪ್ರದ್ಯುಮ್ನ, ರುಕ್ಮಿಣಿಯ ಅಣ್ಣ ರುಕ್ಮಿ ಪ್ರದ್ಯುಮ್ನನಿಗೆ ಸೋದರ ಮಾವ ಆ ಸೋದರ ಮಾವನ ಮಗಳನ್ನೇ ಮದುವೆಯಾಗಿದ್ದಾನೆ. ರುಕ್ಮಿ ಅವನು ಅಸುರ ಆದರೆ ಅವನು ದುಷ್ಟನಾಗಿದ್ದರೂ ಅವನ ಮಗಳು ರತಿ, ರತಿ ದೇವಿಯ ಮೂಲತಃ ಪ್ರದ್ಯುಮ್ನ ಕಾಮನ ಅವತಾರ

1. 02.1.29 ಭಾಗವತ

ಕಾಮನ ಮಡದಿಯಾದಂತಹ ರತಿ ಅವಳೇ ರುಕ್ಮಿಯಲ್ಲಿ ಹುಟ್ಟಿ ಬಂದಿದ್ದಾಳೆ ಆದ್ದರಿಂದ ಆ ತನ್ನ ಮಡದಿಯಾದ ಆ ರತಿಯ ಅವತಾರಳಾದಂತಹ ಆ ಶುಭಾಂಗಿ ವೈದರ್ಭೀ ರುಕ್ಮಿಯ ಮಗಳು ಅವಳ ಜೊತೆಗೆ ಪ್ರದ್ಯುಮ್ನ ಮದುವೆಯಾಗಿದ್ದಾನೆ ರುಕ್ಮಿ ಅತ್ಯಂತ ವೈಭವದಿಂದ ಮದುವೆಯನ್ನು ಮಾಡಿಕೊಟ್ಟಿದ್ದಾನೆ. ಮುಂದೆ ಆ ಪ್ರದ್ಯುಮ್ನನಲ್ಲಿ ಅನಿರುದ್ಧ ಅವತಾರ ಮಾಡುತ್ತಾನೆ ಆ ಕಾಮನ ಅವತಾರನಾದ ಪ್ರದ್ಯುಮ್ನನಲ್ಲಿ ಅನಿರುದ್ಧ ಅವನ ಮೂಲರೂಪದಲ್ಲಿಯೂ ಅನಿರುದ್ಧನೇ ಅನಿರುದ್ಧ ಎಂಬ ಹೆಸರಿನಿಂದಲೇ ಅವನು ಅವತಾರ ಮಾಡುತ್ತಾನೆ. ಆ ಅನಿರುದ್ಧನಿಗೆ ಪುನಃ ರುಕ್ಮಿಯ ಮೊಮ್ಮಗಳನ್ನು ಕೊಟ್ಟು ಅವನ ಸೋದರ ಮಾವನ ಮಗಳು, ಪ್ರದ್ಯುಮ್ನನ ಹೆಂಡತಿ ರುಕ್ಮಿಯ ಮಗಳು ಆ ರುಕ್ಮಿಯ ಮಗನ ಮಗಳನ್ನು ಅರ್ಥಾತ್ ಅನಿರುದ್ಧ ತನ್ನ ಸೋದರ ಮಾವನ ಮಗಳನ್ನು ಪುನಃ ತಾನು ಮದುವೆಯಾಗಿದ್ದಾನೆ ಅವಳಿಗೆ ರುಕ್ಮವತೀ ಎಂಬಂತಹ ಹೆಸರು. ಈ ರೀತಿ ಪ್ರದ್ಯುಮ್ನನೂ ಸೋದರ ಮಾವನ ಮಗಳನ್ನು ಮದುವೆಯಾದ, ಅನಿರುದ್ಧನೂ ತನ್ನ ಸೋದರ ಮಾವನ ಮಗಳನ್ನು ಮದುವೆಯಾಗಿದ್ದಾನೆ. ಮದುವೆಯನ್ನೇನೋ ಬಹಳ ಪ್ರೀತಿಯಿಂದ ರುಕ್ಮಿಣಿಯ ಮೇಲಿನ ವಿಶೇಷವಾದ ಅಭಿಮಾನ ಹಿಂದಿನ ವೈರವನ್ನು ಮರೆತಂತೆ ಆ ರುಕ್ಮಿಣಿಯ ಒಂದು ಪ್ರೀತಿಯಿಂದ ಅವಳ ಮೇಲಿನ ಅಭಿಮಾನದಿಂದ ಬಹಳ ಚೆನ್ನಾಗಿ ಮದುವೆಯನ್ನೆಲ್ಲಾ ಮಾಡಿದ್ದಾನೆ ಆದರೆ ಸ್ವಭಾವತಃ ದುಷ್ಟ ಆ ಇಲ್ವಲ ಎಂಬ ಅಸುರ ರುಕ್ಮಿಯಾಗಿ ಹುಟ್ಟಿದ್ದಾನೆ ಆ ಒಳಗಿನ ಅಸುರ ಸ್ವಭಾವ ಅದು ಹೋಗುವುದಿಲ್ಲ. ಅಸುರ ಸ್ವಭಾವಕ್ಕೆ ತಕ್ಕಂತೆ ಎಲ್ಲ ಅವನ ಮಿತ್ರರು ಅನೇಕ ಪಾಂಡ್ಯ ದೇಶದ ರಾಜನೇ ಮೊದಲಾದಂತಹ ರಾಜರು, ಕಲಿಂಗ ದೇಶದ ರಾಜ ಹೀಗೆ ಅನೇಕ ದೇಶದ ರಾಜರು ದಾಕ್ಷಣಾತ್ಯ ರಾಜರೆಲ್ಲ ವಿಶೇಷವಾಗಿ ಅವನಿಗೆ ಪ್ರೋತ್ಸಾಹನೆಯನ್ನು ನೀಡಿದ್ದಾರೆ.

ಈ ಸಂದರ್ಭದಲ್ಲಿ ಅವರು ರುಕ್ಮಿಗೆ ಯಾಕೆ ನೀನು ಲತ್ತ ಆಡಬಾರದು ಬಲರಾಮ ದೇವರಿಗೆ ಲತ್ತ ಅಷ್ಟು ಚೆನ್ನಾಗಿ ಆಡುವುದಕ್ಕೆ ಬರುವುದಿಲ್ಲ ಲತ್ತ ಆಡುವುದಕ್ಕೆ ಕರಿ, ಜೂಜಾಟ ಆಡುವುದಕ್ಕೆ ಕರಿ, ಆ ಜೂತದಲ್ಲಿ ಅವರನ್ನು ಸೋಲಿಸಿ ಅವರಿಗೆ ಒಂದು ಅವಮಾನವನ್ನು ಮಾಡಿ ಸಂತೋಷ ಪಡೋಣ ಅಂತ. ದೊಡ್ಡವರಿಗೆ ಮಹಾನುಭಾವರಿಗೆ ಅವಮಾನ ಮಾಡಿದರೆ ದುರ್ಜನರಿಗೆ ಸಂತೋಷ ಅವರಿಗೆ ಏನು ಅದರಿಂದ ಲಾಭ ಇಲ್ಲ, ಇನ್ನೊಬ್ಬ ಸಜ್ಜನರನ್ನು ಅವಮಾನ ಮಾಡುವುದು, ಅವರು ದುಃಖ ಪಡುವುದನ್ನು ನೋಡುವುದು ಅದರೊಳಗೆ ಆನಂದ. ಬಲರಾಮ ದೇವರನ್ನು ಸೋಲಿಸಿದರೆ ಇವರಿಗೆ ಏನು ಅದರಿಂದ ಲಾಭ ಇಲ್ಲ ಜೂಜಾಟದಲ್ಲಿ ಸೋಲಿಸಿದರೆ ಏನೋ ದ್ರವ್ಯ ಲಾಭವಾದೀತು ಜೊತೆಗೆ ಅವರನ್ನ ಸೋಲಿಸಿದ್ದೇ ಒಂದು ಆನಂದ ಅಂತ. ಇವನು ಹೇಳಿ ಕೇಳಿ ದುಷ್ಟ ಆ ಎಲ್ಲ ರಾಜರ ಪ್ರೇರಣೆಯಿಂದ ಇವನಿಗೆ ಅದು ಬಹಳ ಸರಿಯಾದ ಕಾರ್ಯ ಅಂತ ಅನಿಸಿದೆ ಉತ್ಸಾಹದಿಂದ ಜೂಜಾಟಕ್ಕೆ ಕರೆದಿದ್ದಾನೆ ಸರಿ ಅಂತ ಏನೋ ವಿವಾಹ ಕಾಲದಲ್ಲಿ ಬೀಗರು ಆಟಕ್ಕೆ ಕರೆಯುತ್ತ ಇದ್ದಾರಲ್ಲ ಯಾಕೆ ಬೇಡ ಅನ್ನಬೇಕು ಅಂತ ಬಲರಾಮ ದೇವರು ಒಪ್ಪಿಕೊಂಡಿದ್ದಾರೆ. ಆಟ ಪ್ರಾರಂಭ ಆಗಿದೆ ಒಂದು ಸಾವಿರ ಬಂಗಾರದ ನಾಣ್ಯಗಳನ್ನು ಪಣಕ್ಕೆ ಇಟ್ಟು ಆಟ ಪ್ರಾರಂಭ ಮಾಡಿದರು ಬಲರಾಮ ದೇವರನ್ನು ಸೋಲಿಸಿದ್ದಾನೆ ಮೋಸದಿಂದ ಯಾವ ರೀತಿ ಶಕುನಿ ಯುಧಿಷ್ಠಿರನನ್ನು ಮೋಸದಿಂದ ಸೋಲಿಸುತ್ತಾ ಇದ್ದ ಹಾಗೆ. ಎರಡನೆಯ ಬಾರಿ ಮತ್ತೆ ಒಂದು ಸಾವಿರ ಬಂಗಾರದ ನಾಣ್ಯಗಳನ್ನು ಪಣಕ್ಕೆ ಇಟ್ಟಿದ್ದಾರೆ ಮತ್ತೆ ಸೋಲಿಸಿದ್ದಾನೆ, ಒಂದು ಕೋಟಿ ಸುವರ್ಣ ನಾಣ್ಯಗಳನ್ನು ಇಟ್ಟಿದ್ದಾರೆ ಮತ್ತೆ ಸೋಲಿಸಿದ್ದಾನೆ.

ಆಮೇಲೆ ಹತ್ತು ಸಾವಿರ ಕೋಟಿ ಸುವರ್ಣ ನಾಣ್ಯಗಳನ್ನು ಆ ಪಣಕ್ಕೆ ಇಟ್ಟು ಬಲರಾಮ ದೇವರು ಗೆದ್ದಿದ್ದಾರೆ. ಬಲರಾಮ ದೇವರೇ ಗೆದ್ದರೂ ಕೂಡ ಬಲರಾಮ ದೇವರು ಗೆದ್ದಿದ್ದಾರೆ ಅಂತ ಒಪ್ಪಿಕೊಳ್ಳುತ್ತ ಇಲ್ಲ, ಬಲರಾಮ ದೇವರು ತಾವು ಗೆದ್ದದ್ದನ್ನು ತೋರಿಸಿಕೊಟ್ಟರೂ ಅವರು ಮೋಸ ಮಾಡಿ ನೀವು ಸೋತಿದ್ದೀರಿ ಅಂತ ಹೇಳುತ್ತಾ

ಇರುವಾಗ ಆಕಾಶವಾಣಿ ಆಗಿದೆ ಸುಳ್ಳು ಮಾತನಾಡುತ್ತ ಇದ್ದೀರಿ ಬಲರಾಮ ದೇವರೇ ಗೆದ್ದದ್ದು ನೀವೆಲ್ಲಾ ಸೋತಿದ್ದೀರಿ ಅಂತ ಆಕಾಶವಾಣಿ ಆಗಿದೆ. ಆಕಾಶವಾಣಿ ಆದಾಗ ಬಲರಾಮ ದೇವರು ಇನ್ನು ಇವರನ್ನು ಸುಮ್ಮನೆ ಬಿಟ್ಟರೆ ಸರಿಯಲ್ಲ ಅಂತ ಅತ್ಯಂತ ಕೃದ್ಧರಾಗಿ ಯುದ್ಧಕ್ಕೆ ಕರೆದು ಎಲ್ಲರ ಜೊತೆಗೆ ಯುದ್ಧವನ್ನು ಮಾಡಿ ಸೋಲಿಸಿ ಆ ರುಕ್ಮಿಯನ್ನು ಸಂಹಾರನೇ ಮಾಡಿದ್ದಾರೆ. ಅವನ ಮೊಮ್ಮಗಳ ಮದುವೆ ಅನಿರುದ್ಧನ ವಿವಾಹವಾಗಿದೆ ಆದರೂ ಕೂಡ ಅವನು ಮಾಡುವಂತಹ ಮೋಸ, ಶ್ರೀಕೃಷ್ಣ ಪರಮಾತ್ಮನ ವಿರೋಧವನ್ನು ಮೊದಲಿನಿಂದಲೂ ಮಾಡುತ್ತಾ ಬಂದಿದ್ದಾನೆ ಈ ಸಂದರ್ಭದಲ್ಲಿಯೂ ಮೋಸ ಮಾಡುತ್ತ ಇದ್ದಾನೆ ಅಂತ ಅನ್ನುವುದಕ್ಕೋಸ್ಕರ ಅವನನ್ನು ಸಂಹಾರ ಮಾಡಿ, ಕಲಿಂಗ ದೇಶದ ರಾಜ ಬಲರಾಮ ದೇವರು ಸೋತರು ಅಂತ ಹೇಳಿದಾಗ ಹಲ್ಲು ತೋರಿಸಿ ನಗುತ್ತ ಇದ್ದ ಅಂತಹ ದುಷ್ಟ ಅವನ ಎಲ್ಲ ಹಲ್ಲುಗಳನ್ನೆಲ್ಲ ಮುರಿದು ಹಾಕಿದ್ದಾರೆ.

ದಂತಾನ್ ಬಭಂಜ ಸಂರಂಭಾತ್ ಪ್ರೋನ್ನನಾದ ಚ ಸಿಂಹವತ್ ।

ಈ ರೀತಿ ಬಲರಾಮ ದೇವರು ತಮ್ಮ ಪರಾಕ್ರಮವನ್ನು ತೋರಿಸಿದ್ದಾರೆ. ಶ್ರೀಕೃಷ್ಣ ಪರಮಾತ್ಮ, ರುಕ್ಮಿಣಿ ದೇವಿ ಅವಳು ಸರ್ವಜ್ಞಳು ಕೃಷ್ಣನ ಮನಸ್ಸು ಪೂರ್ಣ ಗೊತ್ತು ಅಸುರ ಇವನು, ಅವನು ಮಾಡಿದ ತಪ್ಪಿಗಾಗಿ ಅವನು ಸತ್ತದ್ದು ಅತ್ಯಂತ ಯೋಗ್ಯ ಅಂತ ಗೊತ್ತು ಆದರೂ ಲೋಕ ವಿಡಂಬನೆಗೆ ಅವಳು ಅತ್ತಂತೆ ನಾಟಕ ಮಾಡಿದಾಗ ಶ್ರೀಕೃಷ್ಣ ಪರಮಾತ್ಮ ರುಕ್ಮಿಣಿ ದೇವಿಗೆ ಸಮಾಧಾನವನ್ನು ಹೇಳಿದ್ದಾನೆ. ಅವರವರ ಕರ್ಮಕ್ಕೆ ತಕ್ಕ ಹಾಗೆ ಗತಿಯನ್ನು ಅನುಭವಿಸುತ್ತಾರೆ, ಕಾಲವನ್ನು ಯಾರೂ ಮೀರಲಿಕ್ಕೆ ಸಾಧ್ಯ ಇಲ್ಲ ಸಮಾಧಾನ ಮಾಡಿಕೋ ಅಂತ ಹೇಳಿ ರುಕ್ಮಿಣಿ ದೇವಿಗೆ ಸಮಾಧಾನವನ್ನು ಮಾಡಿದ್ದಾನೆ.

ಬಲರಾಮ ದೇವರ ಮಹಿಮೆ ಒಂದಲ್ಲ ಎರಡಲ್ಲ ಹಿಂದೆ ಅನೇಕ ಮಹಿಮೆಗಳನ್ನು ತಿಳಿಸಿದ್ದಾರೆ ಅಂತಹ ಮಹಾಪರಾಕ್ರಮ ಬಲರಾಮ ದೇವರದು.

ನಾಗಾಯುತಬಲಪ್ರಾಣೋ ಭೀಮೋ ಭೀಮಪರಾಕ್ರಮಃ । (62.7 ವಿಷ್ಣುಪರ್ವ)

ಶ್ರೀಕೃಷ್ಣ ಪರಮಾತ್ಮನ ಜಾಂಬವತಿಯ ಮಗ ಸಾಂಬ **'ಸಾಮ್ಬೋ ಜಾಮ್ಬವತೀ ಪುತ್ರೋ'**[1] ಅಂತಹ ಸಾಂಬ, ಅವನೂ ಕೂಡ ಕಾಮನ ಅವತಾರನೇ, ಪ್ರದ್ಯುಮ್ನ ಹೇಗೆ ಕಾಮನ ಅವತಾರನೋ ಸಾಂಬನೂ ಕಾಮನ ಅವತಾರ. ಅವನ ಹೆಂಡತಿ ರತಿಯೇ ಆ ರತಿ ದುರ್ಯೋಧನನ ಮಗಳಾಗಿ ಹುಟ್ಟಿದ್ದಾಳೆ. ಆ ದುರ್ಯೋಧನನ ಮಗಳಾಗಿ ಹುಟ್ಟಿದ ರತಿಯನ್ನು ಸಾಂಬ ಮದವೆಯಾಗಬೇಕು ಅಂತ ಬಯಸಿದ್ದಾನೆ ಆಗ ಆ ಸಾಂಬ ಅವಳನ್ನು ಕರೆದುಕೊಂಡು ಬರುವಾಗ ದುರ್ಯೋಧನಾದಿಗಳೆಲ್ಲ ಆ ಸಾಂಬನನ್ನು ಹಿಡಿದು ಹಾಕಿದ್ದಾರೆ. ಬಲರಾಮ ದೇವರಿಗೆ ಗೊತ್ತಾಯಿತು ದುರ್ಯೋಧನ ಗದಾ ಯುದ್ಧದಲ್ಲಿ ಬಲರಾಮ ದೇವರ ಶಿಷ್ಯ ಹೇಗೂ ನನ್ನ ಶಿಷ್ಯನೇ ಅಲ್ಲವಾ ನನ್ನ ಶಿಷ್ಯನಾದದ್ದರಿಂದ ನಾನು ಹೇಳಿದರೆ ಕೇಳಿಬಿಡುತ್ತಾನೆ ಅಂತ ಬಲರಾಮ ದೇವರಿಗೆ ಒಂದು ವಿಶ್ವಾಸ. ಉಳಿದವರೆಲ್ಲ ಯುದ್ಧ ಮಾಡಿ ದುರ್ಯೋಧನಾದಿಗಳನ್ನು ಸೋಲಿಸಿ ಸಾಂಬನನ್ನು ಬಿಡಿಸಿಕೊಂಡು ಕರೆದುಕೊಂಡು ಬರೋಣ ಅಂತ ವಿಚಾರ ಮಾಡಿದರೆ ಎಲ್ಲ ಯಾದವರಿಗೆ ಸಮಾಧಾನ ಹೇಳಿದ್ದಾರೆ ಬಲರಾಮ ದೇವರು ನೀವು ಯಾರು ಚಿಂತೆ ಮಾಡಬೇಡಿ ನಾನು ಹೋಗಿ ದುರ್ಯೋಧನನಿಗೆ ಬುದ್ಧಿಯನ್ನು ಹೇಳುತ್ತೇನೆ ಅಂತ. ಹೋಗಿ ಹೇಳಿದ್ದಾರೆ ಉಗ್ರಸೇನ ನಮ್ಮ

1. 62.8 ವಿಷ್ಣುಪರ್ವ

ಯಾದವರ ರಾಜ ಆಜ್ಞೆ ಮಾಡಿದ್ದಾನೆ ಸಾಂಬನನ್ನು ಅತ್ಯಂತ ಗೌರವದಿಂದ ನೀವು ಬಿಟ್ಟುಕೊಡಬೇಕು ಅಂತೆ ಯಾವುದೇ ರೀತಿಯ ಕಲಹ ಇಲ್ಲದೇ ಇದ್ದಂತೆ ಅತ್ಯಂತ ಪ್ರೀತಿ ವಿಶ್ವಾಸಗಳಿಂದ ಬಿಟ್ಟು ಕೊಟ್ಟುಬಿಡಿ ವಿವಾಹವನ್ನು ಮಾಡಿಕೊಡಿ ಅಂತ ಹೇಳಿದಾಗ ಅದೆಲ್ಲಾ ಆಗೋದಿಲ್ಲ ಅವನು ಯಾರು ರಾಜ ನಮಗೆ ಹೇಳುವುದಕ್ಕೆ ಅಂತ ಉನ್ಮತ್ತರಾಗಿ ಉತ್ತರವನ್ನು ಕೊಟ್ಟಿದ್ದಾರೆ. ದುರ್ಯೋಧನಾದಿಗಳು ದೋಷ ಸ್ವರೂಪರು, ಸಕಲ ದೋಷಗಳ ಸಾಕಾರ ಮೂರ್ತಿ ಅಂದರೆ ಕಲಿ, ಕಲಿಯೇ ದುರ್ಯೋಧನ ಅಂತಹ ಕಾಮ ಕ್ರೋಧಾದಿ ದೋಷಗಳ ಸಾಕಾರ ಮೂರ್ತಿಗಳಾದ ಈ ಕೌರವರು ಇಂತಹ ಪ್ರೀತಿಪೂರ್ವಕವಾದ ಗೌರವಯುತವಾದಂತಹ ಸಂದೇಶವನ್ನು ಕೇಳಿ ಅದಕ್ಕೆ ಅನುಸರಿಸಿ ವರ್ತನೆ ಮಾಡುವಂತಹ ಸ್ವಭಾವದವರಲ್ಲ.

ಬಲರಾಮ ದೇವರು ಏನೂ ಅವಕಾಶ ಕೊಡದೆ ಶಿಕ್ಷೆಯನ್ನು ಕೊಡಬಾರದು ಅಂತ ಅನ್ನುವುದಕ್ಕೋಸ್ಕರ ಒಂದು ಅವಕಾಶ ಕೊಟ್ಟಿದ್ದಾರೆ. ಬಲರಾಮ ದೇವರು ಅಂದರೆ ಸಚ್ಚಾಸ್ತ್ರಗಳ ಪ್ರತೀಕ ಅವರು ಅಂತ ನೀವೆಲ್ಲ ತಿಳಿದಿದ್ದೀರಿ, ಪೌರುಷೇಯ ಗ್ರಂಥಗಳ ಅಭಿಮಾನಿ ದೇವತೆಗಳು ಶಾಸ್ತ್ರದ ಆದೇಶವನ್ನು ಯಾವಾಗ ಜನರು ಪಾಲನೆ ಮಾಡುವುದಿಲ್ಲ ಆಗ ಅವರು ಅದಕ್ಕೆ ಸರಿಯಾದ ದಂಡವನ್ನು ಮುಂದೆ ಅನುಭವಿಸ ಬೇಕಾಗುತ್ತದೆ ಪರಲೋಕದಲ್ಲಿಯೂ ಜನ್ಮಾಂತರದಲ್ಲಿಯೂ ಅನ್ನುವ ಒಂದು ಸಂದೇಶವನ್ನು ತೋರಿಸುವ ರೀತಿಯಲ್ಲಿ ಬಲರಾಮ ದೇವರು ಹೇಳಿದ ಮಾತನ್ನು ಯಾವಾಗ ಕೇಳಲಿಲ್ಲ, ತಮ್ಮ ಆಜ್ಞೆಯನ್ನು ಉಲ್ಲಂಘನೆ ಮಾಡಿದ್ದೇ ತಡ ತಮ್ಮ ಹಲಾಯುಧವನ್ನು ಹಾಕಿ ಆ ಹಸ್ತಿನಾವತಿಯನ್ನೇ ಎಳೆದು ಗಂಗೆಯಲ್ಲಿ ಮುಳಿಗುಸುತ್ತೇನೆ ಅಂತ ಹೊರಡುತ್ತಾರೆ ಏನು ಪರಾಕ್ರಮ. ಇಡೀ ಬ್ರಹ್ಮಾಂಡವನ್ನೇ ತಮ್ಮ ತಲೆಯ ಮೇಲೆ ಸಾಸಿವೆ ಕಾಳಿನಂತೆ ಧಾರಣೆ ಮಾಡಿದ ಮಹಾಸಾಮರ್ಥ್ಯ ಇರುವ ಶೇಷ ದೇವರಿಗೆ ಒಂದು ಊರನ್ನು ಎಳೆದು ಹಾಕೋದು ಏನೂ ದೊಡ್ಡದಲ್ಲ. ಬ್ರಹ್ಮಾಂಡವೇ ಸಾಸಿವೆ ಕಾಳಿನ ಹಾಗೆ ಇರಬೇಕಾಗಿದ್ದರೆ ಇನ್ನು ಒಂದು ಊರು ಆ ಸಾಸಿವೆ ಕಾಳಿನೊಳಗೆ ಎಷ್ಟು ಭಾಗ ಮಾಡಿದರೆ ಅದರ ಒಂದು ಭಾಗಕ್ಕೂ ಸಮಾನ ಅಲ್ಲ. ಅಂತಹ ಮಹಾಪರಾಕ್ರಮಿಗಳಾದ ಬಲರಾಮ ದೇವರು ಯಾವಾಗ ಅದನ್ನು ಎಳೆಯುತ್ತ ಇದ್ದಾರೆ ಎಲ್ಲರಿಗೂ ಅನುಭವಕ್ಕೆ ಬಂದಿದೆ ಭೂಕಂಪ ಆಗಿದೆ, ಸರೀತಾ ಇದೆ ಊರು ಅನ್ನುವುದು ಗೊತ್ತಾಯಿತು ಓಡಿಬಂದು ಶರಣಾಗತನಾಗಿದ್ದಾರೆ ದುರ್ಯೋಧನಾದಿಗಳೆಲ್ಲ.

ಆವರ್ಜಿತನಮಿವಾಭಾತಿ ಗಙ್ಗಾಮಭಿಮುಖಂ ನೃಪ । (62.15 ವಿಷ್ಣುಪರ್ವ)

ಗಂಗೆಗೆ ಅಭಿಮುಖವಾಗಿ ಸೆಳೆದದ್ದರ ಚಿಹ್ನ ಇಂದಿಗೂ ಅಲ್ಲಿ ಕಾಣಿಸುತ್ತದೆ ಎಂಬುದಾಗಿ ಹರಿವಂಶ ನಮಗೆ ತಿಳಿಸಿಕೊಡುತ್ತದೆ ಇಂತಹ ಪರಾಕ್ರಮ ಆಮೇಲೆ ಅವರು ಶರಣಾಗತರಾಗಿ ಸಾಂಬನ ಜೊತೆಗೆ ತನ್ನ ಮಗಳನ್ನು ಮದುವೆ ಮಾಡಿಕೊಟ್ಟಿದ್ದಾನೆ ಎಂಬುದಾಗಿ ತಿಳಿಸಿಕೊಡುತ್ತಾರೆ. ಹೀಗೆ ಪ್ರಲಂಬಾಸುರನ ಸಂಹಾರ, ಧೇನುಕಾಸುರನ ಸಂಹಾರ ಈ ಕಡೆಗೆ ಯಮುನೆಯನ್ನ ತನ್ನ ಹತ್ತಿರ ಕರೆದುಕೊಂಡದ್ದು, ತಾನಿದ್ದಲ್ಲಿ ನದಿ ಬರುವಂತೆ ಮಾಡಿದ್ದು, ನದಿ ಇದ್ದಲ್ಲಿ ಊರನ್ನು ಸೆಳೆದದ್ದು ಇಂತಹ ಒಂದೇ ಎರಡೇ ಆ ಬಲರಾಮ ದೇವರ ಮಹಾತ್ಮೆ ಅದ್ಭುತವಾದದ್ದು

ಬಲದೇವಸ್ಯ ಮಾಹಾತ್ಮ್ಯ ಮೇತತ್ ತೇ ಕಥಿತಂ ಮಯಾ ।
ಅನನ್ತಸ್ಯಾಪ್ರಮೇಯಸ್ಯ ಶೇಷಸ್ಯ ಧರಣೀಭೃತಃ ॥ (62.19 ವಿಷ್ಣುಪರ್ವ)

ಅಂತ ವೈಶಂಪಾಯನರು ಜನಮೇಜಯನಿಗೆ ತಿಳಿಸುತ್ತಾ ಇದ್ದಾರೆ ಈ ರೀತಿ ಅವರ ಮಹಿಮೆ ಇದೆ ಅಂತ.

ಇನ್ನು ಶ್ರೀಕೃಷ್ಣ ಪರಮಾತ್ಮನ ಮಹಿಮೆಯನ್ನು ತಿಳಿಸುತ್ತಾ ಇದ್ದಾರೆ. ಶ್ರೀಕೃಷ್ಣ ಪರಮಾತ್ಮ ನರಕಾಸುರನ ಸಂಹಾರವನ್ನು ಮಾಡಿದಂತಹ ಹಿನ್ನೆಲೆಯನ್ನು ತಿಳಿಸುತ್ತಾರೆ. ಅದಿತಿ ದೇವಿಯ ಕರ್ಣ ಕುಂಡಲಗಳನ್ನು ಅಪಹಾರ ಮಾಡಿಕೊಂಡು ಹೋಗಿರುತ್ತಾನೆ ನರಕಾಸುರ, ಶ್ರೇಷ್ಠವಾದ ವರುಣ ದೇವರ ಶ್ವೇತಚ್ಛತ್ರವನ್ನು ಅಪಹಾರ ಮಾಡಿಕೊಂಡು ಹೋಗಿರುತ್ತಾನೆ, ಸುಪ್ರತೀಕ ಎಂಬಂತಹ ಶ್ರೇಷ್ಠವಾದ ಆ ಕುಬೇರನ ಆನೆ ಅದನ್ನೂ ಅಪಹಾರ ಮಾಡಿಕೊಂಡಿದ್ದಾನೆ, ಇಂದ್ರನ ಎರಡುನೂರು ಯೋಜನ ವಿಸ್ತೀರ್ಣವಾದಂತಹ ಅಷ್ಟು ದೊಡ್ಡದಾದ ಮುತ್ತು ರತ್ನಗಳ ಪರ್ವತವನ್ನೇ ಅಪಹಾರ ಮಾಡಿರುತ್ತಾನೆ. ಹೀಗೆಲ್ಲ ಅಪಹಾರ ಮಾಡಿಕೊಂಡು ಹೋಗಿ ತಾನು ಇಟ್ಟುಕೊಂಡಿರುತ್ತಾನೆ. ಇದಲ್ಲದೇ 16,100 ಶ್ರೇಷ್ಠರಾದ ರಾಜ ಕನ್ಯೆಯರು ಹಾಗೂ ಕೆಲವರು ಗಂಧರ್ವ ಕನ್ಯೆಯರು ಅಂತಹ ಕನ್ಯೆಯರನ್ನೂ ಕೂಡ ತನ್ನ ಪಟ್ಟಣದಲ್ಲಿ ಕಾರಾಗಾರದಲ್ಲಿ ಅವನು ಇಟ್ಟಿರುತ್ತಾನೆ ಒಂದು ಕಡೆಗೆ ಸುರಕ್ಷಿತವಾಗಿ.

ಇಂತಹ ಆ ನರಕಾಸುರನನ್ನು ಸಂಹಾರ ಮಾಡಿ ಕರ್ಣ ಕುಂಡಲಗಳನ್ನು ತಂದು ಒಪ್ಪಿಸಬೇಕು ಅಂತ ಅದಿತಿ ದೇವಿಯೂ ಹೇಳಿದ್ದಾಳೆ. ಶ್ರೀಕೃಷ್ಣನನ್ನೇ ಪತಿಯನ್ನಾಗಿ ಪಡೆಯಬೇಕು ಅಂತ ತಪಸ್ಸು ಮಾಡಿ ಹುಟ್ಟಿದವರು ಅವರೆಲ್ಲ 16,100 ಜನ, ಮೂಲತಃ ಅವರೆಲ್ಲ ಪುರುಷರೇ ಅಗ್ನಿಯ ಪುತ್ರರು, ಅಗ್ನಿ ಪುತ್ರರು ವಾಯು ದೇವರನ್ನು ಕುರಿತು ತಪಸ್ಸು ಮಾಡುತ್ತಾರೆ. ಸಾಮಾನ್ಯವಾಗಿ ನಾವು ಸಾಯಬಾರದು ಅಂತ ಅವಧ್ಯರಾಗುವುದಕ್ಕೆ ತಪಸ್ಸು ಮಾಡಿದ ಅನೇಕ ಅಸುರರ ದೈತ್ಯರ ಕಥೆಗಳನ್ನು ಕೇಳಿದ್ದೀರಾ, ಅಲ್ಲಿ ಎಲ್ಲಿಯೂ ವಾಯು ದೇವರ ಹೆಸರು ಬಂದಿಲ್ಲ. ಪ್ರಾಯಃ ಬ್ರಹ್ಮ ದೇವರ ವರದಿಂದ ಅವಧ್ಯರಾದವರು, ರುದ್ರ ದೇವರ ವರದಿಂದ, ಪಾರ್ವತಿ, ಸ್ಕಂದ, ಗಣಪತಿ, ಚಂಡಮುನಿ ಹೀಗೆ ಇವರ ವರದಿಂದ ಅವಧ್ಯವರಾದವರನ್ನ ನಾವು ಅಲ್ಲಲ್ಲಿ ಕಾಣುತ್ತೇವೆ. ಆದರೆ ಇಲ್ಲಿ ಈ ಅಗ್ನಿ ಪುತ್ರರೆಲ್ಲ ಶ್ರೀಕೃಷ್ಣ ಪರಮಾತ್ಮನ ಒಂದು ವಿಶೇಷವಾದ ಅನುಗ್ರಹವನ್ನು ಪಡೆಯಬೇಕು ಅಂತ ನಾವೆಲ್ಲ ಸ್ತ್ರೀಯರಾಗಬೇಕು ಅಂತ ಅಪೇಕ್ಷೆ ಪಡುತ್ತಾರೆ. **'ಪುಂಸಾಂ ಸ್ತ್ರೀತ್ವಂ ಭವೇತ್ಕಾಪಿ'**[1] ಅಂತ. ವಿಶೇಷವಾದ ಕಾರಣ ಇದ್ದಾಗ ಶಾಪ ಅಥವಾ ವರ ಇದ್ದಾಗ ಪುರುಷರಿಗೆ ಸ್ತ್ರೀ ಜನ್ಮ ಬರಬಹುದು ಅಂತ. ಹೀಗಾಗಿ ಇವರು ತಪಸ್ಸು ಮಾಡಿ ವಾಯು ದೇವರನ್ನು ಒಲಿಸಿಕೊಂಡು, ವಾಯು ದೇವರ ವರ ಪಡೆದು ಸ್ತ್ರೀ ಜನ್ಮವನ್ನು ಪಡೆಯುತ್ತಾರೆ ಸ್ತ್ರೀ ಜನ್ಮವನ್ನು ಪಡೆದು ಬದರಿಕಾಶ್ರಮಕ್ಕೆ ಹೋಗುತ್ತಾರೆ.

ಆ ಬದರಿಕಾಶ್ರಮದಲ್ಲಿ ನಾರಾಯಣನ ವಿಶೇಷವಾದ ಸೇವೆಯನ್ನು ಮಾಡುತ್ತಾರೆ. ನಾರಾಯಣನ ಪರಮಾತ್ಮನ ಸೇವೆಯನ್ನು ಮಾಡಿರಿ ನರ ನಾರಾಯಣನ ರೂಪದಿಂದ ಬದರಿಕಾಶ್ರಮದಲ್ಲಿ ಭಗವಂತ ಇದ್ದಾನೆ ನರನಲ್ಲಿ ಪರಮಾತ್ಮನ ಆವೇಶ ನಾರಾಯಣ ಸಾಕ್ಷಾತ್ ಭಗವದವತಾರ ಯಮಧರ್ಮನ ಪುತ್ರನಾಗಿ ಅವತಾರ ಮಾಡಿದ್ದಾನೆ ಮೂರ್ತಿ ದೇವಿಯಲ್ಲಿ ಪರಮಾತ್ಮ. ಆ ನಾರಾಯಣನೇ ತನ್ನ ತೊಡೆಯಿಂದ ಊರ್ವಶಿಯ ಸೃಷ್ಟಿಯನ್ನು ಮಾಡಿದ್ದು ಅಂತ ನೀವು ಕೇಳಿದ್ದೀರಿ ಅಂತಹ ನಿರ್ಲಿಪ್ತನಾದ ಪರಮವಿರಕ್ತ ಶಿಖಾಮಣಿಯಾದ ಆ ನಾರಾಯಣ ರೂಪಿಯಾದ ಪರಮಾತ್ಮನ ಸೇವೆಯನ್ನು ಮಾಡಿದ್ದಾರೆ ಸ್ತ್ರೀರೂಪದಲ್ಲಿ ಈ ಎಲ್ಲ ಅಗ್ನಿ ಪುತ್ರರು. ಸೇವೆ ಮಾಡಿ ಆ ಪರಮಾತ್ಮನ ವಿಶೇಷ ಅನುಗ್ರಹವನ್ನು ಪಡೆದು ಕೆಲವರು ಪುನಃ ಮತ್ತೊಮ್ಮೆ ಗಂಧರ್ವ ಕನ್ಯೆಯರಾಗಿ, ಕೆಲವರು ರಾಜ ಕನ್ಯೆಯರಾಗಿ ಹುಟ್ಟಿದ್ದಾರೆ ಈ 16,100 ಜನ. ಅವರನ್ನೆಲ್ಲಾ ಅಲ್ಲಲ್ಲಿ ಇರುವಂತಹ ಗಂಧರ್ವ ಕನ್ಯೆಯರನ್ನ, ಅಲ್ಲಲ್ಲಿ ಹುಟ್ಟಿದಂತಹ ರಾಜ ಕನ್ಯೆಯರನ್ನೆಲ್ಲ ಒಂದು ಕಡೆಗೆ ತಂದು ತಾನು ಇಟ್ಟುಕೊಂಡಿದ್ದಾನೆ, ತ್ವಷ್ಟುವಿನ ಮಗಳಾದ ಕಶೇರು ಅನ್ನುವವಳು ಅವರಲ್ಲಿ ಪ್ರಧಾನ. ಇಂತಹ ಎಲ್ಲರನ್ನ ಕರೆದುಕೊಂಡು ಅಜಾನಜ ದೇವತೆಗಳಿಗೆ ಸಮಾನರಾದವರು ಅಂತ ಶ್ರೀಮದಾಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ತಿಳಿಸುತ್ತಾರೆ ಇವರೆಲ್ಲ ಅಲ್ಲಿದ್ದಾರೆ. ಅವರೆಲ್ಲ

1. ತಾತ್ಪರ್ಯನಿರ್ಣಯ

ಶ್ರೀಕೃಷ್ಣನಿಗಾಗಿ ಕಾಯುತ್ತಾ ಇದ್ದಾರೆ ಕೃಷ್ಣ ತಮ್ಮ ಪಾಣಿಗ್ರಹಣವನ್ನು ಮಾಡಬೇಕು, ನರಕಾಸುರನ ಮನೆಯಲ್ಲಿ ಅವನ ಬಂದಿಯೊಳಗೆ ಇದ್ದವರಷ್ಟೆ, ನರಕಾಸುರ ಇವರ ಯಾರ ಸ್ಪರ್ಶವನ್ನೂ ಮಾಡಿರಲಿಲ್ಲ, **'ಅಕ್ಷತಾಃ ತದ್ ವ್ರತಸ್ಥಃ'** ಅಂತ ಶ್ರೀಮದಾಚಾರ್ಯರು ಹೇಳುತ್ತಾರೆ ಅದೇ ಮಾತನ್ನು ಹರಿವಂಶವೂ ಕೂಡ ತಿಳಿಸುತ್ತದೆ. ಅತ್ಯಂತ ಶುದ್ಧವಾದಂತಹ ಬ್ರಹ್ಮಚರ್ಯದಿಂದ ಇದ್ದಾರೆ, ವ್ರತ, ನಿಯಮ ಉಪವಾಸಾದಿಗಳನ್ನು ಮಾಡಿ ತಮ್ಮ ದೇಹವನ್ನು ಪರಿಶುದ್ಧವಾಗಿ ಇಟ್ಟುಕೊಂಡಿದ್ದಾರೆ ಪ್ರತಿಯೊಬ್ಬರೂ ಕೂಡ. ಅಖಂಡ ಭಗವದ್ ಧ್ಯಾನವನ್ನು ಮಾಡುತ್ತ ಇರುತ್ತಾರೆ ಅಂತಹ ವ್ರತ ನಿಷ್ಠರು, ಶುದ್ಧರು ಮತ್ತು ಪರಮಾತ್ಮನನ್ನೇ ಧ್ಯಾನ ಮಾಡುವಂತಹ ಇವರೆಲ್ಲ ಏನು 16,100 ಜನ ಇದ್ದಾರೆ ಅವರನ್ನು ಉದ್ಧಾರ ಮಾಡಬೇಕು ಅನ್ನುವುದಕ್ಕೋಸ್ಕರ ಪರಮಾತ್ಮ ಹೊರಟಿದ್ದಾನೆ ನರಕಾಸುರನ ಪಟ್ಟಣಕ್ಕೆ.

ಗರುಡ ದೇವರ ಸ್ಮರಣೆಯನ್ನು ಮಾಡಿ ಗರುಡ ದೇವರ ಮೇಲೆ ಕುಳಿತು ಸತ್ಯಭಾಮಾ ದೇವಿಯನ್ನು ಕರೆದುಕೊಂಡು ಗರುಡಾರೂಢನಾಗಿ ಪರಮಾತ್ಮ ಹೋಗಿದ್ದಾನೆ ಶಂಖ, ಚಕ್ರ, ಗದಾ, ಖಡ್ಗಧಾರಿಯಾಗಿ ಪರಮಾತ್ಮ ಹೋದ. ಆ ನರಕಾಸುರ ನೋಡಿ ಇದೀಗ ಹೇಳಿದ ಹಾಗೆ ಬ್ರಹ್ಮ ದೇವರನ್ನು ಕುರಿತು ತಪಸ್ಸು ಮಾಡಿದ್ದ, ನರಕಾಸುರ ಭೂದೇವಿಯ ಮಗ ವರಾಹ ದೇವರಿಂದ ಭೂದೇವಿಯಲ್ಲಿ ಹುಟ್ಟಿದ ಮಗ ಅಂದರೆ ಪರಮಾತ್ಮನ ಮಗನೇ ನರಕ ಆದರೆ ದುಷ್ಟ ದುಷ್ಟನಾದರೆ ಯಾರೇ ಇರಲಿ ಅವರಿಗೆ ಶಿಕ್ಷೆಯನ್ನು ಕೊಡದೇ ಬಿಡುವುದಿಲ್ಲ ಅನ್ನುವುದನ್ನು ದೇವರು ತೋರಿಸಿಕೊಡುತ್ತಾನೆ. ವರಾಹ ರೂಪದಿಂದ ತಾನೇ ಅವನನ್ನು ಹುಟ್ಟಿಸಿದ್ದರೂ ಕೂಡ ಭೂದೇವಿಯಲ್ಲಿ ಅವನು ದುಷ್ಟ ಅನ್ನುವ ಒಂದು ಕಾರಣಕ್ಕಾಗಿ ಅವನ ದುರ್ಗುಣಗಳು, ಅವನ ದೋಷಗಳು ಅವುಗಳ ಕಾರಣಕ್ಕಾಗಿ ಪರಮಾತ್ಮ ಅವನನ್ನು ಸಂಹಾರ ಮಾಡಿದ್ದಾನೆ ಅನ್ನುವುದನ್ನು ತಿಳಿಯಬೇಕು. ಅವನು ಬ್ರಹ್ಮ ದೇವರನ್ನು ಕುರಿತು ತಪಸ್ಸು ಮಾಡಿ ಅವಧ್ಯನಾಗಿದ್ದಾನೆ, ಅವನೊಬ್ಬ ಬ್ರಹ್ಮ ದೇವರನ್ನು ಕುರಿತು ತಪಸ್ಸು ಮಾಡಿ ಅವಧ್ಯನಾಗುವುದಲ್ಲ ತನ್ನ ಐದು ಜನ ಮಂತ್ರಿಗಳಾದ ಮುರ, ನಿಸುಂದ, ಹಯಗ್ರೀವ, ಪೀಠ, ಪಂಚಜನ ಅವರೆಲ್ಲರೂ ಕೂಡ ಬ್ರಹ್ಮ ದೇವರ ವರವನ್ನು ಪಡೆದುಕೊಂಡು ಎಲ್ಲರೂ ಅವಧ್ಯರಾಗಿದ್ದಾರೆ.

ತಾನು ಇರುವಂತಹ ಪ್ರಾಗ್ಜ್ಯೋತಿಷಪುರ ಆ ಪ್ರಾಗ್ಜ್ಯೋತಿಷಪುರಕ್ಕೆ ದುರ್ಗಗಳನ್ನು ಮಾಡಿಕೊಂಡಿದ್ದಾನೆ ನರಕಾಸುರ. ನರಕಾಸುರ ಅಂದರೆ ಪಾಪ, ನರಕ ಸಾಧನವಾದಂತಹ ಪಾಪಗಳ ಪ್ರತೀಕ ಅವನು ಹೆಸರೇ ನರಕಾಸುರ, ನರಕ ಸಾಧನವಾದ ಪಾಪಗಳನ್ನು ಮಾಡುವ ಅಸುರ, ನರಕ ಸಾಧನವಾದ ಪಾಪಗಳನ್ನು ಮಾಡುವ ಪಾಪಿ ಜೀವಗಳ ಪ್ರತಿಕ ಅವನು. ಪಾಪಿಗಳು ತಾವು ದೀರ್ಘಾಯುಷಿಗಳಾಗಬೇಕು ಅಂತ ಬಯಸುತ್ತಾರೆ, ಸುಖವಾಗಿ ಇರಬೇಕು. ಎಲ್ಲರಿಗೂ ಪೀಡೆ ಕೊಡಬೇಕು, ನಾವು ಆನಂದವಾಗಿರಬೇಕು ಅಂತ. ಹೀಗಾಗಿ ತಾನು ಸುಖವಾಗಿ ಮಧ್ಯದೊಳಗೆ ಇರಬೇಕು ಯಾರೂ ತನಗೆ ಪೀಡಿಸಬಾರದು ಅಂತ ಅನೇಕ ದುರ್ಗಗಳನ್ನು ಮಾಡಿಕೊಂಡು ನಡುವೆ ಇದ್ದಾನೆ. ಪಾಪಗಳನ್ನು ಮಾಡುವವರು, ತಪ್ಪು ಮಾಡುವವರು ತಾವು ಮಾಡುವ ತಪ್ಪು, ಪಾಪಗಳು ಯಾರಿಗೂ ಗೊತ್ತಾಗಬಾರದು, ಯಾರೂ ಅದಕ್ಕೆ ಆಡ್ಡಿ ಆಗಬಾರದು ಅನ್ನುವುದಕ್ಕೆ ಸಾಕಷ್ಟು ಭದ್ರತೆಗಳನ್ನು ಮಾಡಿಕೊಂಡಿರುತ್ತಾರೆ. ನಾವು ಇಷ್ಟೆಲ್ಲ ಭದ್ರತೆಗಳನ್ನು ಮಾಡಿಕೊಂಡದ್ದಕ್ಕೆ ನಾವು ಎಷ್ಟು ಪಾಪಗಳನ್ನು ಮಾಡಿದರೂ ನಡೆಯುತ್ತದೆ ನಮ್ಮನ್ನು ಯಾರೂ ತಡೆಯುವ ಹಾಗಿಲ್ಲ ಅನ್ನುವಂತಹ ಒಂದು ಭಾರೀ ಒಂದು ಮೊಂಡು ಧೈರ್ಯ ಇರುತ್ತದೆ. ಆದರೆ ಶಾಸ್ತ್ರ ತೋರಿಸಿ ಕೊಡುತ್ತದೆ ನೀವು ಎಷ್ಟೇ ದುರ್ಗಗಳನ್ನು ಮಾಡಿಕೊಂಡು ಯಾರಿಗೂ ಗೊತ್ತಾಗದಂತೆ, ಯಾರಿಗೆ ಗೊತ್ತಾದರೂ ಯಾರೂ ಏನು ಮಾಡದೆ ಇರುವ ರೀತಿಯಲ್ಲಿ ನಾವು ಪಾಪಗಳನ್ನು ಮಾಡುತ್ತೇವೆ ಅಂತ ನಿಮಗೆ ಒಂದು ಅಹಂಕಾರ ಇರಬಹುದು. ಆದರೆ ದೇವರು ಆ ಎಲ್ಲ ದುರ್ಗಗಳನ್ನು ಭೇದನ ಮಾಡಿ ನಿಮಗೆ ಕೊಡಬೇಕಾದ ಶಿಕ್ಷೆಯನ್ನು ಕೊಟ್ಟೇ ಕೊಡುತ್ತಾನೆ ಈ ಜನ್ಮದಲ್ಲಿಯೋ, ಪರಲೋಕದಲ್ಲಿಯೋ, ಜನ್ಮಾಂತರದಲ್ಲಿಯೋ ನಿಮ್ಮ ನಿಮ್ಮ

ಪಾಪಗಳಿಗೆ ತಕ್ಕಂತೆ ಶಿಕ್ಷೆಯನ್ನು ಕೊಡದೇ ಬಿಡುವುದಿಲ್ಲ ಅಂತ ಈ ನರಕಾಸುರನ ವಧೆಯ ಕಥೆಯಿಂದ ಹರಿವಂಶ ನಮಗೆ ತಿಳಿಸಿಕೊಡುತ್ತಾ ಇದೆ.

ಮಾನೀಯ ದುರ್ಗ, ಪಾಶ ದುರ್ಗ, ಗಿರಿ ದುರ್ಗ, ಪರ್ವತದ ದುರ್ಗ ಇದೆ ಪಾನೀಯ ದುರ್ಗ ಬರೀ ನೀರು, ಆರು ಸಾವಿರ ಪಾಶಗಳು ಆ ಪಾಶಗಳ ದುರ್ಗವನ್ನು ಕಟ್ಟಿಕೊಂಡು ಅದರ ಮಧ್ಯದೊಳಗೆ ಇದ್ದಾನೆ. ಅವುಗಳಿಗೆಲ್ಲ ಮತ್ತೆ ಬ್ರಹ್ಮ ದೇವರ ವರ ಯಾರೂ ಭೇದನ ಮಾಡಬಾರದು ಈ ಗಿರಿ ದುರ್ಗವನ್ನು, ಯಾರೂ ಈ ನೀರನ್ನು ದಾಟಬಾರದು, ಈ ಪಾಶಗಳನ್ನು ಕತ್ತರಿಸಬಾರದು ಅಂತ ಅದೆಲ್ಲದಕ್ಕೂ ವರ ಬ್ರಹ್ಮ ದೇವರದು. ಇವನೊಬ್ಬನಿಗೇ ಸಾಯಬಾರದು ಅಂತ ವರ ಇದ್ದರೇ ಸಾಕು ಅಂಥಹದ್ದು ಅವನಿಗೆ, ಅವನ ಮಂತ್ರಿಗಳಿಗೆ, ಅವನ ದುರ್ಗಗಳಿಗೆ ಎಲ್ಲದಕ್ಕೂ ಬ್ರಹ್ಮ ದೇವರ ವರ ಇದೆ. ಅರ್ಥ ಮಾಡಿಕೊಳ್ಳಿ ದೇವರ ಸರ್ವೋತ್ತಮತ್ವ ಸರ್ವಶಕ್ತಿ ಏನು ಅದ್ಭುತವಾದದ್ದು ಇಷ್ಟೆಲ್ಲಾ ಇದ್ದರೂ ಒಬ್ಬ ಒಂದೇ ಒಂದು ವರ ರುದ್ರ ದೇವರ ವರ ಇತ್ತು ಈ ಮಂದರ ಪರ್ವತವನ್ನು ಯಾರು ಎತ್ತಲಿಕ್ಕೆ ಸಾಧ್ಯವಾಗಬಾರದು ಅಂತ ಇಂದ್ರಾದಿ ದೇವತೆಗಳು ಎಲ್ಲರೂ ಸೇರಿ ಎತ್ತಲಿಕ್ಕೆ ಪ್ರಯತ್ನ ಮಾಡಿದರೂ ಮಂದರ ಪರ್ವತ ಎತ್ತಲಿಕ್ಕೆ ಆಗಲಿಲ್ಲ ರುದ್ರ ದೇವರ ವರ ಇದ್ದದ್ದಕ್ಕೆ. ಆ ಎಲ್ಲ ದೇವತೆಗಳಿಗಿಂತ ರುದ್ರ ದೇವರು ಉತ್ತಮರು ಅನ್ನುವುದಕ್ಕೆ ಅವರ ಒಂದು ವಚನ ಇದ್ದದ್ದಕ್ಕೆ ಯಾವ ದೇವತೆಗಳು ಎತ್ತಲಿಕ್ಕೆ ಆಗಲಿಲ್ಲ ಅಂತ ಕೇಳುತ್ತೇವೆ. ಆದರೆ ಅದಕ್ಕೆ ವಿಪರೀತವಾಗಿ ನೋಡಿ ಇಲ್ಲಿ ರುದ್ರ ದೇವರಲ್ಲ,ರುದ್ರ ದೇವರಿಗೆ ಜನಕರಾದ ಬ್ರಹ್ಮ ದೇವರ ವರ, ಜೀವೋತ್ತಮರಾದ ಬ್ರಹ್ಮ ದೇವರ ವರ ಇದೆ ಇಷ್ಟೆಲ್ಲಾ ಜನರಿಗೆ ವರ ಇದ್ದರೂ ಅದೆಲ್ಲವನ್ನು ಮೀರಿ ಪರಮಾತ್ಮ ಅವನನ್ನು ಸಂಹಾರ ಮಾಡಿದ್ದಾನೆ ಅಂದರೆ ಆ ಭಗವಂತನ ಸರ್ವೋತ್ತಮತ್ವವನ್ನು ಯಾವ ರೀತಿಯಾಗಿ ನಾವಿಲ್ಲಿ ತಿಳಿಯಬಹುದು. ದೇವರು ಆ ನರಕಾಸುರನನ್ನ ಸಂಹಾರ ಮಾಡಿದ ಆದರೆ ಆ ದೇವರ ಆ ಸರ್ವೋತ್ತಮತ್ವವನ್ನು ನಾವು ತಿಳಿದುಕೊಂಡರೆ ಈ ಕಥೆಯ ಮೂಲಕ ನಮ್ಮ ಮನಸ್ಸಿನೊಳಗೆ ಇರುವ ನರಕಾಸುರನನ್ನ ಆ ಪಾಪ ಸಾಧನೆಗಳು ಏನೇನು ನಮ್ಮ ಜೀವನದಲ್ಲಿ, ನಡೆಯುತ್ತೋ ಅದೆಲ್ಲವನ್ನು ನಾವು ನಿರ್ಮೂಲನೆ ಮಾಡಿಕೊಳ್ಳಬಹುದು ಅಂತ ನಾವು ಇಲ್ಲಿ ಅರ್ಥ ಮಾಡಿಕೊಳ್ಳಬೇಕು.

ಆ ಗಿರಿ ದುರ್ಗವನ್ನೆಲ್ಲ ಭೇದನ ಮಾಡಿದ್ದಾನೆ ಪರಮಾತ್ಮ ಗದೆಯಿಂದ, ವಾಯುವ್ಯಾಸ್ತ್ರದಿಂದ ಎಲ್ಲ ನೀರನ್ನು ಒಣಗಿಸಿ ಬಿಟ್ಟಿದ್ದಾನೆ, ಚಕ್ರದಿಂದ ಆ ಎಲ್ಲಾ ಪಾಶಗಳನ್ನು ಕತ್ತರಿಸಿ ಹಾಕಿ ಪರಮಾತ್ಮ ಒಳಗೆ ಹೋಗಿದ್ದಾನೆ, ಒಬ್ಬೊಬ್ಬರೇ ಯುದ್ಧಕ್ಕೆ ಬರುತ್ತಾ ಇದ್ದಾರೆ ಐದು ಜನ ಮಂತ್ರಿಗಳು ಬ್ರಹ್ಮ ದೇವರ ವರದಿಂದ ಅವಧ್ಯರಾದವರು. ಅದಕ್ಕಾಗಿಯೇನೆ ದೇವರಿಗೆ ಮುರಾರಿ ಅಂತ ಮುರ ಎಂಬುದಾಗಿ ಭಾಗವತದಲ್ಲಿಯೂ, ಶ್ರೀಮದಾಚಾರ್ಯರು ತಾತ್ಪರ್ಯ ನಿರ್ಣಯದಲ್ಲಿಯೂ ತಿಳಿಸುತ್ತಾರೆ, ಹರಿವಂಶದಲ್ಲಿ ಮುರು ಅಂತ ಅವನನ್ನು ಕರೆದಿದ್ದಾರೆ ಮುರ ಅಥವಾ ಮುರು. ಆ ಮುರ ಮುರಾರಿ **'ಮುರಾರಾತೇ ವಿಷ್ಣೋ ಮುರಾರಿ ಮುರಾರಿ ಹರೇ ಕೃಷ್ಣ ಮುರಾರೇ ಗೋವಿಂದ'** ಅಂತ ಪ್ರಸಿದ್ಧವಾದ ನಾಮ ಇದು ಮುರಾರಿ ಮುರ ಎಂಬ ಅಸುರನನ್ನು ಪರಮಾತ್ಮ ಸಂಹಾರ ಮಾಡಿದ ಅನ್ನುವುದಕ್ಕಾಗಿ ಮುರಾರಿ ಅಂತ ದೇವರಿಗೆ. ಪೀಠಾರಿ ಪೀಠ ಎಂಬಂತಹ ಮಂತ್ರಿ ನಿಸುಂಬ, ಹಯಗ್ರೀವ, ಪಂಚಜನ ಈ ಎಲ್ಲ ಅಸುರರನ್ನು ಕೂಡ ಅವರೆಲ್ಲ ಅವಧ್ಯರಾಗಿದ್ದರು, ನಾನಾ ವಿಧವಾದ ಶಸ್ತ್ರಾಸ್ತ್ರಗಳ ಪ್ರಯೋಗ ಮಾಡಿದರು, ಸ್ವಲ್ಪ ಹೊತ್ತು ಇಷ್ಟೆಲ್ಲಾ ಬ್ರಹ್ಮ ದೇವರ ವರ ಇದೆ ಬ್ರಹ್ಮ ದೇವರಿಗೆ ಒಂದು ಗೌರವ ಮರ್ಯಾದೆ ಇರಲಿ ಜಗತ್ತಿನೊಳಗೆ ಅಂತ ಅವರಿಗೆ ಅವಕಾಶ ಕೊಟ್ಟು, ಕೆಲ ಕಾಲ ಯುದ್ಧ ಮಾಡಿದಂತೆ ತೋರಿಸಿ ಅವರೆಲ್ಲರನ್ನು ಕೂಡ ಪರಮಾತ್ಮ ಸಂಹಾರ ಮಾಡಿದ್ದಾನೆ. ಒಬ್ಬೊಬ್ಬರಿಗೆ ಏಳೇಳು ಜನ ಮಕ್ಕಳು ಅವರಿಗೆ ಮಂತ್ರಿಗಳಿಗೆ ಮೂವತ್ತೈದು ಜನ ಮಂತ್ರಿ ಪುತ್ರರು ಅವರೆಲ್ಲರನ್ನೂ ರುದ್ರ ದೇವರ ವರ ಸಾಯಬಾರದು ಅಂತ ಆ ಮೂವತ್ತೈದೂ ಜನರನ್ನ ಪರಮಾತ್ಮ ಸಂಹಾರ

ಮಾಡಿದ್ದಾನೆ. ಒಟ್ಟು ನಲವತ್ತು ಜನ ಇವರು ಐದು ಜನ ಅವರ ಮಕ್ಕಳು ಮೂವತ್ತೈದು ಈ ನಲವತ್ತೂ ಜನರನ್ನು ಸಂಹಾರ ಮಾಡಿದ ಭಗವಂತ ಅವರೆಲ್ಲರನ್ನ ಸಂಹಾರ ಮಾಡಿ ನರಕಾಸುರನ ಜೊತೆಗೆ ಯುದ್ಧವನ್ನು ಮಾಡುತ್ತಾ ಇದ್ದಾನೆ.

ಅಂದರೆ ಇದೀಗ ತಿಳಿಸಿದ ಹಾಗೆ ನಾವು ಮಾಡಿದ ಪಾಪದ ರಕ್ಷಣೆ ಮಾಡಿಕೊಳ್ಳುವುದಕ್ಕೆ ಯಾರಿಗೂ ಗೊತ್ತಾಗಬಾರದು ಅಂತ ಅಥವಾ ಈ ತರಹದ ಪಾಪ ಕೃತ್ಯಗಳನ್ನು ಮಾಡುವುದಕ್ಕೆ ಯಾರೂ ಅಡ್ಡಿಯಾಗಬಾರದು ಅಂತ ಬೇಕಾದಷ್ಟು ದುರ್ಜನರ ಇಂಥಹವರೆಲ್ಲರ ಸಹಾಯವನ್ನು ತೆಗೆದುಕೊಂಡು ಇಷ್ಟೆಲ್ಲ ಇದ್ದಾಗ ನಮಗೆ ಯಾರು ಏನು ಮಾಡಲಿಕ್ಕಾಗುವುದಿಲ್ಲ ಅಂತ ಅಂದುಕೊಂಡರೆ ದೇವರು ತೋರಿಸುತ್ತಾನೆ ಅವರು ಯಾರು ನಿಮ್ಮ ರಕ್ಷಣೆಗೆ ಕೊನೆಗೆ ಬರುವುದಿಲ್ಲ, ನೀವು ಮಾಡಿದ ಪಾಪದ ಫಲವನ್ನು ನೀವೇ ಅನುಭವಿಸಬೇಕು ಅವರೆಲ್ಲರನ್ನು ನಾನು ದಂಡಿಸುತ್ತೇನೆ ಅಂತ ಈ ಕಥೆಯಿಂದ ತೋರಿಸಿಕೊಡುತ್ತಾನೆ. ಆ ರೀತಿ ನರಕಾಸುರನ ಜೊತೆಗೆ ನೇರವಾಗಿ ಪರಮಾತ್ಮ ಯುದ್ಧ ಮಾಡುತ್ತ ಇದ್ದಾನೆ ಉಳಿದವರೆಲ್ಲರನ್ನ ಸಂಹಾರ ಮಾಡಿ, ಘೋರವಾರದಂತಹ ಯುದ್ಧ ನಾನಾ ವಿಧವಾದಂತಹ ಶತಘ್ನಿ ಅಂತ ಭಾರೀ ಬ್ರಹ್ಮದತ್ತವಾದ ಆಯುಧವನ್ನು ಹಾಕಿದರೆ ಪರಮಾತ್ಮ ಅದನ್ನು ನುಂಗಿ ಬಿಟ್ಟ. ಏನೇನೂ ದೇವರಿಗೆ ಶ್ರಮ ಇಲ್ಲ, ವಾಯು ದೇವರಿಗೇ ಶ್ರಮ ಇಲ್ಲ **'ಅವಿಶ್ರಮೋಽಸೌ'**[1] ಕಿಂಚಿತ್ತು ಶ್ರಮ ಇಲ್ಲ. ಇಡೀ ಜಗತ್ತಿನ ಸಕಲ ಜೀವರಾಶಿಗಳಿಂದ ಎಲ್ಲ ಕರ್ಮಗಳನ್ನು ನಿರಂತರವಾಗಿ ಮಾಡಿಸುವ ವಾಯು ದೇವರಿಗೆ ಕಿಂಚಿತ್ತೂ ಶ್ರಮ ಇಲ್ಲ ಅಂತಹ ವಾಯು ದೇವರ ಪಿತ ಜಗನ್ನಿಯಾಮಕನಾದ ಅನಂತ ವಾಯು ದೇವರಿಗೆ ಶಕ್ತಿಯನ್ನು ಕೊಡುವ ಅತೀತಾನಾನಾಗತ ಅನಂತ ವಾಯು ಬ್ರಹ್ಮಾದಿ ನಿಯಮಗಳನ್ನು ಮಾಡುವ ಭಗವಂತನಿಗೆ ಎಲ್ಲಿಯ ಶ್ರಮ. ಇಷ್ಟಿದ್ದರೂ ಆ ಬ್ರಹ್ಮ ದೇವರಿಗೆ ಒಂದು ಮರ್ಯಾದೆ ಕೊಟ್ಟಂತೆ ಆಯುಧವನ್ನು ನುಂಗಿದಾಗ ಶ್ರಮವಾದವರಂತೆ ನಾಟಕ ಮಾಡುತ್ತಾನೆ ದೇವರು ಕಾರಣ ಒಂದು ಬ್ರಹ್ಮ ದೇವರಿಗೆ ಮರ್ಯಾದೆ ಕೊಡೋಣ ಅಂತ. ಇನ್ನೊಂದು ಸತ್ಯಭಾಮೆಯ ಮಹಿಮೆಯನ್ನು ಜಗತ್ತಿಗೆ ತೋರಿಸಬೇಕಾಗಿದೆ ಆ ಸಂದರ್ಭದಲ್ಲಿ ಶಾರಂಗ ಧನುಸ್ಸನ್ನು ತಾನು ಕೈಯಲ್ಲಿ ತೆಗೆದುಕೊಂಡು ಸತ್ಯಭಾಮಾ ದೇವಿ ಯುದ್ಧವನ್ನು ಮಾಡುತ್ತಾಳೆ ನರಕಾಸುರನ ಜೊತೆಗೆ ಅವಳಿಗೆ ಅಂತಹ ಅದ್ಭುತವಾದ ಸಾಮರ್ಥ್ಯ ಇದೆ. ಹಂತವಾ ಉ ಅಂತ ಅಂಭ್ರಣೀ ಸೂಕ್ತದಲ್ಲಿ ಬರುತ್ತದಲ್ಲ **'ಅಹಂ ರುದ್ರಾಯ ಧನುರಾ ತನೋಮಿ ಬ್ರಹ್ಮದ್ವಿಷೇ ಶರವೇ ಹಂತವಾ ಉ'** ಅಂತಹ ಪ್ರಲಯ ಕಾಲದಲ್ಲಿ ಧನುರ್ಬಾಣಗಳನ್ನು ತೆಗೆದುಕೊಂಡು ಎಲ್ಲರ ಸಂಹಾರವನ್ನು ಮಾಡುತ್ತೇನೆ ಅಂತ ಮಹಾಲಕ್ಷ್ಮೀ ದೇವಿ ಹೇಳುತ್ತಾಳಲ್ಲ ಅದನ್ನು ಇಲ್ಲಿ ತೋರಿಸಿಕೊಡುತ್ತಾ ಇದ್ದಾಳೆ ಸತ್ಯಭಾಮಾ ದೇವಿ. ಧನುರ್ಬಾಣಗಳನ್ನು ತಾನು ತೆಗೆದುಕೊಂಡು ನರಕಾಸುರನ ಜೊತೆಗೆ. ಯುದ್ಧವನ್ನು ಮಾಡಿದ್ದಾಳೆ ಶ್ರೀಕೃಷ್ಣ ಪರಮಾತ್ಮ ಬಹಳ ವಿಶೇಷವಾಗಿ ನಿತ್ಯದಲ್ಲಿ ಅವಳ ಮೇಲೆ ಸಂತುಷ್ಟನೇ ಪ್ರೀತನೇ ಇನ್ನೂ ವಿಶೇಷವಾದ ಪ್ರೀತಿಯ ಅಭಿವ್ಯಕ್ತಿಯನ್ನು ಮಾಡಿ ಆಲಿಂಗನವನ್ನು ಮಾಡಿಕೊಂಡು ಪುನಃ ತಾನು ಸ್ವಲ್ಪ ಹೊತ್ತು ಯುದ್ಧವನ್ನು ಮಾಡಿ ಚಕ್ರದಿಂದ ಅವನ ಶಿರಸ್ಸನ್ನು ಛೇದನ ಮಾಡಿದ್ದಾನೆ ನರಕಾಸುರನ ಸಂಹಾರ ಮಾಡಿಬಿಟ್ಟ.

ಎಲ್ಲಾ ದೇವತೆಗಳು ಒಟ್ಟಾಗಿ ವರಗಳನ್ನು ಕೊಟ್ಟು ಗಟ್ಟಿಯಾಗಿ ಮಾಡಿದ್ದರೂ ಕೂಡ ಆ ಭಗವಂತನ ಅನಂತವಾದ ಅಚಿಂತ್ಯವಾದ ಸಾಮರ್ಥ್ಯದ ಮುಂದೆ ಅದು ಯಾವ ಕೆಲಸಕ್ಕೂ ಬರುವುದಿಲ್ಲ. ಎಲ್ಲ ದೇವತೆಗಳಲ್ಲಿ ಭಕ್ತಿ ಮಾಡಿದರೂ, ಅವರೆಲ್ಲರ ಅನುಗ್ರಹ ಪಡೆದರೂ ಪರಮಾತ್ಮನಲ್ಲಿ ಭಕ್ತಿ ಮಾಡಿಲ್ಲ ಅಂದರೆ ಅವನಿಗೆ ನರಕವೇ ನಿತ್ಯ ನರಕವೇ. **'ಧರ್ಮಾರಣವೋಪಿ'** ಅಂತ ಅನ್ನುತ್ತಾರೆ ಶ್ರೀಮದಾಚಾರ್ಯರು ಶಬ್ದ ಹೇಗೆ ಆಡುತ್ತಾರೆ ನೋಡಿ **'ಧರ್ಮಾರಣವೋಪಿ'** ಅಂತ ಧರ್ಮ ಸಾಗರನಾಗಿ ಇರಬಹುದು, ಅವನು ಬೇಕಾದಷ್ಟು ಧರ್ಮಗಳನ್ನು ಮಾಡುತ್ತ

1. ತಾತ್ಪರ್ಯನಿರ್ಣಯ ಸುಂದರಕಾಂಡ

ಇರಬಹುದು ವಿಷ್ಣು ಭಕ್ತಿ ಇಲ್ಲ ಅಂತಾದರೆ ಕೇವಲ ತಾನು ಧರ್ಮವನ್ನು ಮಾಡುತ್ತೇನೆ ಆಡಂಬರಕ್ಕೆ, ಬೇರೆ ದೇವತೆಗಳಿಂದ ವರ ಪಡಿತೇನೆ ಅಂದ ಮಾತ್ರಕ್ಕೆ ಅವನು ಸುಖವಾಗಿ ಇರುವುದಕ್ಕೂ ಸಾಧ್ಯ ಇಲ್ಲ, ದೀರ್ಘಾಯುಷಿ ಆಗುವುದಕ್ಕೂ ಸಾಧ್ಯ ಇಲ್ಲ ಸಮಸ್ಯೆಗೇನೆ ಹೋಗುತ್ತಾನೆ ಅಂತನ್ನುವ ಮಾತನ್ನು ತಿಳಿಸುತ್ತಾರೆ ಅದಕ್ಕೆ ನರಕಾಸುರನೇ ಉದಾಹರಣೆ. ಆದ್ದರಿಂದ ನಾವೆಲ್ಲ ಆ ಭಗವಂತನಲ್ಲಿ ಭಕ್ತಿಯನ್ನು ನಿರಂತರವಾಗಿ ಮಾಡುತ್ತಾ ಭಗವದ್ಭಕ್ತರು ಅನ್ನುವುದಕ್ಕಾಗಿ ಉಳಿದ ದೇವತೆಗಳಲ್ಲಿ ತಾರತಮ್ಯ ಕ್ರಮದಲ್ಲಿ ಭಕ್ತಿಯನ್ನು ಮಾಡಿ ಎಲ್ಲ ದೇವತೆಗಳ ಅನುಗ್ರಹವನ್ನು ಪಡೆದರೆ ಮಾತ್ರ ಶ್ರೇಷ್ಠವಾದ ಸುಖವನ್ನು ಪಡೆಯಬಹುದು, ಮೋಕ್ಷವನ್ನು ಹೊಂದಬಹುದು ಅಂತ ದೇವರು ಇದರಿಂದ ತೋರಿಸಿಕೊಡುತ್ತಾನೆ.

ನರಕಾಸುರನ ಸಂಹಾರ ಆಗಿದೆ ಆ ನರಕಾಸುರ ಓಡಿ ಹೋಗಿ ಕರ್ಣನೊಳಗೆ ಕುಳಿತನಂತೆ **'ನರಕಃ ಕರ್ಣ ಆಸ್ಥಿತಃ'** ಮುಂದೆ ಮಹಾಭಾರತದ ಯುದ್ಧದಲ್ಲಿ ಪಾಂಡವರ ಕುಂತಿಯ ಮೊದಲು ಮಗ ಕರ್ಣ ಆ ಕರ್ಣನೊಳಗೆ ಈ ನರಕಾಸುರ ಪ್ರವೇಶ ಮಾಡಿ ತಾನೇನು ಕೃಷ್ಣನ ದ್ವೇಷವನ್ನ ಸಾಧಿಸಬೇಕು ಅಂತ ಅಂದುಕೊಂಡಿದ್ದ ಆಗಲಿಲ್ಲ ಸತ್ತು ಹೋದ. ಆ ಕರ್ಣ ಸಾಕ್ಷಾತ್ ಸೂರ್ಯ ಅವನು ದೇವತೆ ಸಹಸ್ರವರ್ಮ ಎಂಬ ಅಸುರನ ಆವೇಶ ಇದೆ ಜೊತೆಗೆ ನರಕಾಸುರನ ಆವೇಶ ಅವನೊಳಗೆ ಆಯಿತು. ಕೃಷ್ಣ ಪರಮಾತ್ಮ ಅರ್ಜುನನಿಂದ ಆ ಕರ್ಣನ ಸಂಹಾರವನ್ನು ಮಾಡಿಸಿ ಸೂರ್ಯನಿಗೆ ಶ್ರೇಷ್ಠವಾದ ಸದ್ಗತಿಯನ್ನು ಕೊಟ್ಟು ಒಳಗಿರುವ ನರಕನಿಗೆ ಸಹಸ್ರವರ್ಮನಿಗೆ ಯೋಗ್ಯವಾದ ದುರ್ಗತಿಯನ್ನು ನೀಡುತ್ತಾನೆ ಅನ್ನುವುದನ್ನು ನಾವು ಇಲ್ಲಿ ತಿಳಿಯಬೇಕು.

ಈಚೆಗೆ ಧರಾ ದೇವಿ ತಾಯಿ ಮಗನಾದ ನರಕಾಸುರನನ್ನ ಸಂಹಾರ ಮಾಡಿದ್ದಕ್ಕೆ ಶ್ರೀಕೃಷ್ಣ ಪರಮಾತ್ಮನಿಗೆ ಯಾವುದೇ ರೀತಿಯ ನಿಂದೆಯನ್ನು ಮಾಡದಂತೆ ಸ್ತುತಿಯನ್ನು ಮಾಡುತ್ತ ಆ ನರಕಾಸುರ ನನ್ನ ಮಗನಾಗಿ ಹುಟ್ಟಿದ್ದೆ ನಿನ್ನಿಂದ, ನೀನೇ ವರಾಹ ರೂಪದಿಂದ ನನಗೆ ಆ ಮಗನನ್ನು ಕೊಟ್ಟಿದ್ದಿ, ಕೃಷ್ಣ ರೂಪದಿಂದ ನೀನೇ ಕರ್ಷಣೆ ಮಾಡಿದ್ದಿ. ವರಾಹ ರೂಪದಿಂದ ವರವಾಗಿ ಕೊಟ್ಟಿ, ಕೃಷ್ಣ ರೂಪದಿಂದ ಕರ್ಷಣೆ ಮಾಡಿದಿ ವರವಾಗಿ ಅಂದರೆ ಇಂತಹ ದುಷ್ಟ ಮಗನನ್ನು ಕೊಡುವುದು ಒಂದು ವರ ಅಂತ ಅರ್ಥ ಅಲ್ಲ ಮಗ ಅನ್ನುವ ಅರ್ಥದೊಳಗೆ ಒಂದು ವರ. ಆ ರೀತಿಯ ಮಗನನ್ನ ಮತ್ತೆ ನೀನೇ ಸಂಹಾರ ಮಾಡಿದಿ ಇದೆರಡು ನಿನ್ನ ಸಂಕಲ್ಪವೇ ಕೊಡುವುದು ನೀನೇ, ತೆಗೆದುಕೊಳ್ಳುವುದು ನೀನೇ ನನಗೆ ಯಾವ ದುಖವು ಇಲ್ಲ, ನಿನ್ನ ಅನುಗ್ರಹ ಮಾತ್ರ ನನ್ನ ಮೇಲೆ ಸದಾ ಕಾಲ ಇರಲಿ ಅಂತ ಆ ಧರಾ ದೇವಿ ಕೃಷ್ಣನಿಗೆ ನಮಸ್ಕಾರ ಮಾಡಿ ಪ್ರಾರ್ಥನೆ ಮಾಡುತ್ತ ಅವನೇನು ಅದಿತಿಯ ಕರ್ಣ ಕುಂಡಲಗಳನ್ನು ಅಪಹಾರ ಮಾಡಿಕೊಂಡು ತೆಗೆದುಕೊಂಡು ಹೋಗಿದ್ದ ಆ ಕರ್ಣ ಕುಂಡಲಗಳನ್ನು ದಿವ್ಯವಾದ ಕರ್ಣ ಕುಂಡಲಗಳು ಅದಕ್ಕೆ ಯಾಕೆ ಇಷ್ಟು ಮಹತ್ವ ಅಂತ ತಿಳಿಯಬೇಡಿ ಅಂತಹ ಶ್ರೇಷ್ಠವಾದ ಕರ್ಣ ಕುಂಡಲಗಳನ್ನು ತಂದು ಶ್ರೀಕೃಷ್ಣನಿಗೆ ಅರ್ಪಣೆಯನ್ನು ಮಾಡಿದ್ದಾಳೆ.

ಆಧ್ಯಾತ್ಮಿಕವಾಗಿ ನಾವಿಲ್ಲಿ ತಿಳಿಯಬೇಕಾದದ್ದು ಅದು ದಿವ್ಯವಾದ ಕರ್ಣ ಕುಂಡಲಗಳು, ಕರ್ಣ ಭೂಷಣಗಳು. ಆ ಕರ್ಣ ಭೂಷಣಗಳನ್ನು ನರಕಾಸುರ ಅಪಹಾರ ಮಾಡಿಕೊಂಡು ಹೋಗಿದ್ದಾನೆ. ಅದನ್ನು ಮತ್ತೆ ಕೃಷ್ಣನಿಗೆ ಒಪ್ಪಿಸುತ್ತಾ ಇದ್ದಾಳೆ. ಇದರ ಅರ್ಥ ನಮ್ಮ ಕರ್ಣಗಳಿಗೆ ಭೂಷಣ ಯಾವುದು ಅಂದರೆ ಯಾವಾಗಲೂ ಭಗವಂತನ ಮಹಿಮೆಯನ್ನು ಕೇಳುವುದೇ ಆ ಕರ್ಣಗಳಿಗೆ ಭೂಷಣ ಹೊರತು ಹಾಳು ಹರಟೆ, ನಾಲ್ಕು ಜನರ ನಿಂದೆ, ದೊಡ್ಡವರ ನಿಂದೆ ಇವುಗಳನ್ನು ಕೇಳುವದಲ್ಲ ನರಕ ಸಾಧನವಾದ ಮಹಾತ್ಮರ ನಿಂದೆ ಮೊದಲಾದವುಗಳನ್ನು ಕೇಳುವದಕ್ಕೆ ಇಲ್ಲ ನಮ್ಮ ಕಿವಿಗಳು, ಅದು ಕಿವಿಗೆ ಭೂಷಣ ಅಲ್ಲ ಅಂತ. ಹೀಗಾಗಿ ನರಕನ ಹತ್ತಿರ ಕರ್ಣ ಕುಂಡಲಗಳು ಇರುವುದು ಯೋಗ್ಯ

ಅಲ್ಲ ಇದರ ಅರ್ಥ ನರಕ ಸಾಧನವಾದಂತಹ ಕಥೆಗಳನ್ನು ಕೇಳುವುದಕ್ಕೆ, ಹಾಳು ಹರಟೆ ಕೇಳುವುದಕ್ಕೆ ನಮ್ಮ ಕಿವಿಗಳಲ್ಲ ಅದೆಲ್ಲ ಕೃಷ್ಣನ ಮಹಿಮೆಗಳನ್ನು ಕೇಳುವುದಕ್ಕೆ ಮೀಸಲಿರಬೇಕು ಅನ್ನುವುದು ಆಧ್ಯಾತ್ಮಿಕ ಸಂದೇಶ. ಆ ದೃಷ್ಟಿಯಲ್ಲಿ ಅವಳು ಅದನ್ನು ಶ್ರೀಕೃಷ್ಣ ಪರಮಾತ್ಮನಿಗೆ ಕರ್ಣ ಕುಂಡಲಗಳನ್ನು ಅರ್ಪಣೆ ಮಾಡಿದ್ದಾಳೆ ಕೃಷ್ಣ ಪರಮಾತ್ಮ ಆ ಕರ್ಣ ಕುಂಡಲಗಳನ್ನು ತೆಗೆದುಕೊಂಡು ಅದಿತಿ ದೇವಿಗೆ ಕೊಡುವುದಕ್ಕೋಸ್ಕರ ಇಟ್ಟುಕೊಂಡಿದ್ದಾನೆ.

ಇನ್ನು ಅಲ್ಲಿರುವಂತಹ ಶ್ರೇಷ್ಠವಾದಂತಹ ಶ್ವೇತಚ್ಛತ್ರ ಆ ವರುಣ ದೇವರ ಅಮೃತಸ್ರಾವಿಯಾದ ಶ್ವೇತಚ್ಛತ್ರ ಆ ಶ್ವೇತಚ್ಛತ್ರವನ್ನು ಹಿಡಿದರೆ ಅಮೃತ ಸೋರಬೇಕು. ಅದ್ಭುತವಾಗಿರುವಂತಹ ಮುತ್ತು, ರತ್ನ, ಬೆಳ್ಳಿ, ಬಂಗಾರ ಇವುಗಳೆಲ್ಲವುಗಳಿಂದ ಮಾಡಿದಂತಹ ಹೂವುಗಳ ಗೊಂಚಲಗಳು ಅಂತಹ ಶ್ರೇಷ್ಠವಾದ ಆ ದಿವ್ಯವಾದ ವಿಸ್ತೀರ್ಣವಾದ ಆ ಶ್ವೇತಚ್ಛತ್ರವನ್ನ ಗರುಡ ದೇವರ ಮೇಲೆ ಇಟ್ಟಿದ್ದಾನೆ. ಎರಡೂ ನೂರು ಯೋಜನದ ಮಣಿಯ ಪರ್ವತವನ್ನು ಎತ್ತಿ ಒಂದು ಸಣ್ಣ ಯಾವುದೋ ಒಂದು ಪುಸ್ತಕವನ್ನೋ, ಪೆಟ್ಟಿಗೆಯನ್ನೋ ಇಟ್ಟಂತೆ ಗರುಡನ ಮೇಲೆ ಇಟ್ಟಿದ್ದಾನೆ ಆ ಪರ್ವತವನ್ನ, ಗರುಡ ದೇವರಿಗೆ ಇಟ್ಟಿದ್ದು ಗೊತ್ತಾಗಿಲ್ಲ ಅನ್ನುವಷ್ಟು ಅಷ್ಟು ಹಗುರವಾಗಿ. ಶೇಷ ದೇವರು, ಗರುಡ ದೇವರು ಸಮಾನ ಇವರು ಹೇಗೆ ಎಲ್ಲವನ್ನ ತಮ್ಮ ತಲೆಯ ಮೇಲೆ ಸಾಸಿವೆ ಕಾಳಿನ ಹಾಗೆ ಧಾರಣ ಮಾಡುತ್ತಾರೆ ಹಾಗೆ ಗರುಡ ದೇವರ ಸಾಮರ್ಥ್ಯ ಪರಮಾತ್ಮನ ಅನುಗ್ರಹದಿಂದ ಭಗವಂತನನ್ನೇ ಹೊತ್ತವರಿಗೆ ಇದೆಲ್ಲ ಏನು ದೇವರೇ ಕೊಟ್ಟ ಶಕ್ತಿ ಅದು ಅನಾಯಾಸವಾಗಿ ಆ ಪರ್ವತವನ್ನು ಇಟ್ಟ ಈ ಕಡೆಗೆ ಶ್ವೇತಚ್ಛತ್ರವನ್ನ ಇಟ್ಟಿದ್ದಾನೆ ಭಗವಂತ. ಆಮೇಲೆ ಅಲ್ಲಿರುವಂತಹ ಮುತ್ತುಗಳು, ರತ್ನಗಳು ಅನೇಕ ನಾಲ್ಕು ಹಲ್ಲಿನ ಅರು ಸಾವಿರ ಆನೆಗಳು, ಬೇಕಾದಷ್ಟು ಕುದುರೆಗಳು ಅವುಗಳೆಲ್ಲವನ್ನೂ ಕೂಡ ಅವುಗಳ ಮೇಲೆ ಮುತ್ತು, ರತ್ನ, ವಜ್ರಗಳನ್ನೆಲ್ಲ ತುಂಬಿ ದ್ವಾರಕಾ ಪಟ್ಟಣಕ್ಕೆ ಕೊಟ್ಟು ಕಳಿಸಿದ್ದಾನೆ. ಅಲ್ಲಿರುವಂತಹ ಅನೇಕ ಜನ ರಾಕ್ಷಸರು ಅವರೇ ಶ್ರೀಕೃಷ್ಣ ಪರಮಾತ್ಮನಿಗೆ ದಾಸರಾಗಿದ್ದಾರೆ ತಮ್ಮ ಎಲ್ಲ ನಾಯಕರನ್ನ ಕೃಷ್ಣ ಸಂಹಾರ ಮಾಡಿದ ಮೇಲೆ ಅವರು ಶರಣಾಗತರಾಗಿದ್ದಾರೆ. ನೀವು ಮಾಡಬೇಕಾದ ಸೇವೆ ಅಂದರೆ ಈ ಪ್ರಾಗ್ಜ್ಯೋತಿಷಪುರ ಪಟ್ಟಣದಲ್ಲಿ ಇರುವಂತಹ ಎಲ್ಲಾ ಸಂಪತ್ತನ್ನು ದ್ವಾರಕಾ ಪಟ್ಟಣಕ್ಕೆ ಒಯ್ಯಬೇಕು ಅಂತ ಅವರೆಲ್ಲಾ ಹೊತ್ತುಕೊಂಡು ದ್ವಾರಕಾ ಪಟ್ಟಣಕ್ಕೆ ತೆಗೆದುಕೊಂಡು ಹೋಗಿದ್ದಾರೆ ರಾಕ್ಷಸರು.

ಪುರ ಏವ ಪೂರಿತಮಪೂರಯತ್ ಪುನರ್ನನು ಕೃಷ್ಣ ಏಷ ಪರಮಾರ್ಥಸಂಖ್ಯಯಾ ।

(8 ನೇ ಸರ್ಗ 3 ನೇ ಶ್ಲೋಕ ಸುಮಧ್ವವಿಜಯ)

ಆ ರೀತಿ ಪರಮಾತ್ಮ ಸ್ವತಯೇವ ಸಮೃದ್ಧವಾದಂತಹ ದ್ವಾರಕಾ ಪಟ್ಟಣವನ್ನು ಇನ್ನಷ್ಟು ಸಮೃದ್ಧವನ್ನಾಗಿ ಮಾಡಿದ್ದಾನೆ. ಆ ರಾಜ್ಯವನ್ನು ಮಾತ್ರ ಪರಮಾತ್ಮ ಹೇಗೆ ಕಂಸನನ್ನ ಸಂಹಾರ ಮಾಡಿ ಉಗ್ರಸೇನನನ್ನ ಅಲ್ಲಿ ಪಟ್ಟಾಭಿಷೇಕ ಮಾಡಿದ ತಾನು ರಾಜನಾಗಲಿಲ್ಲ ಪ್ರಾಗ್ಜ್ಯೋತಿಷಪುರ ಪಟ್ಟಣದಲ್ಲಿಯೂ ಕೂಡ ನರಕಾಸುರನನ್ನು ಸಂಹಾರ ಮಾಡಿ ರಾಜ್ಯವನ್ನು ತಾನು ತೆಗೆದುಕೊಳ್ಳದೆ ಅವನ ಮಗನಾದ ಭಗದತ್ತ, ಕುಬೇರನ ಅವತಾರ ಆ ಸುಪ್ರತೀಕ ಆನೆಯನ್ನು ಇವನು ಅಪಹಾರ ಮಾಡಿಕೊಂಡು ಹೋಗಿದ್ದಾನೆ ಅದನ್ನು ತಿರುಗಿ ತೆಗೆದುಕೊಂಡು ಬರಬೇಕು ಅಂತ ತಾನೇ ಇವನ ಮಗನಾಗಿ ಹುಟ್ಟಿದ್ದ ಅವನು ಅನ್ನುವುದಕ್ಕಾಗಿ ಆ ಭಗದತ್ತನಿಗೇನೆ ಆ ರಾಜ್ಯವನ್ನ ಒಪ್ಪಿಸಿ ಪಟ್ಟಾಭಿಷೇಕ ಮಾಡಿ ಅವನು ಸಜ್ಜನ, ವಿಷ್ಣು ಭಕ್ತ ಅನ್ನುವುದಕ್ಕೆ ಅವನಿಗೆ ರಾಜ್ಯವನ್ನು ಹಾಗೂ ಆ ಸುಪ್ರತೀಕವನ್ನು ಕೊಟ್ಟಿದ್ದಾನೆ.

ಈ ಕಡೆಗೆ 16,100 ಜನ ಅವರೆಲ್ಲ ಕೃಷ್ಣನಿಗಾಗಿ ತಪಸ್ಸು ಮಾಡುವಂತಹ ಪರಿಶುದ್ಧರಾದ ಆ ತಪಸ್ವಿನಿಯರು ಅವರೆಲ್ಲರೂ ಕೃಷ್ಣನಿಗೆ ಶರಣರಾಗಿದ್ದಾರೆ. ಅವರೆಲ್ಲರನ್ನೂ ಹೇಗೋ ಒಂದು ರೀತಿಯಿಂದ ಕಳಿಸಲಿಲ್ಲ ಅವರೆಲ್ಲರಿಗೂ ಕೂಡ ಅತ್ಯಂತ ಗೌರವದಿಂದ ಶ್ರೇಷ್ಠವಾದಂತಹ ಪಲ್ಲಕ್ಕಿಯಲ್ಲಿ ಎಲ್ಲರನ್ನು ದ್ವಾರಕಾ ಪಟ್ಟಣಕ್ಕೆ ಕಳಿಸಿದ್ದಾನೆ. ಒಬ್ಬೊಬ್ಬರ

ಜೊತೆಗೂ ಪ್ರತ್ಯೇಕ ಪ್ರತ್ಯೇಕ ಮದುವೆ ಮಾಡಿಕೊಂಡಿದ್ದಾನೆ 16,100 ಮದುವೆಗಳು ಒಂದೇ ದೊಡ್ಡ ವಿವಾಹ ಮಂಟಪದಲ್ಲಿ ಎಲ್ಲರ ಜೊತೆಗೆ ಮದುವೆ ಅಲ್ಲ ಪ್ರತ್ಯೇಕವಾದ ಮದುವೆ, ಪ್ರತ್ಯೇಕವಾದ ಭವನಗಳು ಅವರೆಲ್ಲರ ಜೊತೆಗೆ ಒಂದೊಂದು ರೂಪದಿಂದ ಪ್ರತ್ಯೇಕವಾಗಿದ್ದು ಭಗವಂತ ಅವರಿಗೆ ಅನುಗ್ರಹವನ್ನು ಮಾಡಿದ್ದಾನೆ ಎಂಬುದಾಗಿ ತಿಳಿಸಿಕೊಡುತ್ತಾರೆ ಈ ರೀತಿ 16,100 ಜನರನ್ನು ಪರಮಾತ್ಮ ಮದುವೆ ಆಗಿ ಅವರೆಲ್ಲರನ್ನು ಅನುಗ್ರಹಿಸಿದ್ದಾನೆ. ಒಟ್ಟು 16,108 ಜನ ಈ 16,100 ಜನ ಅಜಾನಜ ದೇವತೆಗಳಿಗೆ ಸಮಾನರು ಅವರು, ಷಣ್ಮಹಿಷಿಯರು, ಅವರು ಪ್ರದ್ಯುಮ್ನನನಿಗಿಂತಲೂ ಇಪ್ಪತ್ತು ಗುಣದಿಂದ ಅಧಿಕರು ಅಂತ ಹೇಳುತ್ತಾರೆ ಆರನೆಯ ಕಕ್ಷೆಯಲ್ಲಿ ಬರುವವರು. ಇವರಿಬ್ಬರು ಸತ್ಯಭಾಮಾ ಹಾಗೂ ರುಕ್ಮಿಣಿ ಸಾಕ್ಷಾತ್ ಮಹಾಲಕ್ಷ್ಮೀ ದೇವಿಯ ಅವತಾರ ಅತ್ಯಂತ ನಿರ್ದೋಷರಾದವರು, ನಿತ್ಯ ಮುಕ್ತರಾದವರು, ಸಾಕ್ಷಾತ್ ಲಕ್ಷ್ಮೀ ಸ್ವರೂಪರು ಇಬ್ಬರು. ಇನ್ನುಳಿದ 16,106 ಜನರಲ್ಲಿ ಲಕ್ಷ್ಮೀ ದೇವಿಯ ವಿಶೇಷ ಆವೇಶ ಇದೆ ಆದರೆ ಅವರೆಲ್ಲ ಲಕ್ಷ್ಮೀ ದೇವಿಯ ಸ್ವರೂಪವಲ್ಲ ಅನ್ನುವುದನ್ನು ಶ್ರೀಮದಾಚಾರ್ಯರು ತಿಳಿಸಿಕೊಡುತ್ತಾರೆ. ತಾರತಮ್ಯಕ್ಕೆ ತಕ್ಕ ಹಾಗೆ ನಾವು ಅನುಸಂಧಾನವನ್ನು ಮಾಡಬೇಕು. ಹೀಗೆ ಇವರೆಲ್ಲರ ಜೊತೆಗೆ ಪರಮಾತ್ಮ 16,108 ಜನರಿಂದ ಸಹಿತನಾಗಿ ಶ್ರೀಕೃಷ್ಣ ಪರಮಾತ್ಮ ದ್ವಾರಕಾ ಪಟ್ಟಣದಲ್ಲಿ ಸಕಲ ಸಜ್ಜನರಿಗೆ ಅನುಗ್ರಹವನ್ನು ಮಾಡುತ್ತ ಸುಖವಾಗಿ ಇದ್ದಾನೆ ಎಂಬುದಾಗಿ ತಿಳಿಸಿಕೊಡುತ್ತಾ ಇದ್ದಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ವಿಷ್ಣುಪರ್ವ-25

* * *

ಶ್ರೀಕೃಷ್ಣ ಪರಮಾತ್ಮ ದುಷ್ಟನಾದ ನರಕಾಸುರನ ಸಂಹಾರವನ್ನು ಮಾಡಿ 16,100 ಜನರನ್ನು ಅತ್ಯಂತ ಗೌರವದಿಂದ ಅವರ ಮಾನ ಮರ್ಯಾದೆಗಳಿಗೆ ತಕ್ಕಂತೆ ದ್ವಾರಕಾ ಪಟ್ಟಣಕ್ಕೆ ಮೇಣೆಯಲ್ಲಿ ಹಾಗೂ ಎಲ್ಲ ಸಂಪತ್ತನ್ನು ನಾನಾ ವಿಧವಾದ ವಾಹನಗಳಿಂದಲೂ ಹಾಗೂ ರಾಕ್ಷಸರಿಂದಲೂ ಕೊಟ್ಟು ಕಳಿಸಿದ್ದಾನೆ. ಈ ಕಡೆಗೆ ತಾನು ಅದಿತಿಯ ಕರ್ಣ ಕುಂಡಲಗಳನ್ನು ತೆಗೆದುಕೊಂಡು ಅದಿತಿ ದೇವಿಗೆ ಪರಮಾತ್ಮ ಸಮರ್ಪಣೆ ಮಾಡಿದ್ದಾನೆ. ಅದಿತಿ ಆ ಕರ್ಣ ಕುಂಡಲಗಳನ್ನು ನರಕಾಸುರ ಅಪಹಾರ ಮಾಡಿಕೊಂಡು ಹೋದದ್ದನ್ನು ಶ್ರೀಕೃಷ್ಣ ಪರಮಾತ್ಮ ತನಗೆ ತಂದು ಕೊಟ್ಟಾಗ ಅತ್ಯಂತ ಪ್ರೀತಿಯಿಂದ ಆಲಿಂಗನ ಮಾಡಿಕೊಳ್ಳುತ್ತಾಳೆ ತಾಯಿ ಅಂತ. ವಾಮನಾವತಾರದಲ್ಲಿ ಅದಿತಿ ಕೃಷ್ಣನಿಗೆ ತಾಯಿ, ಪ್ರಶ್ನಿಗರ್ಭನಾಗಿ ಪರಮಾತ್ಮ ಅವತಾರ ಮಾಡಿದಾಗಲೂ ಪ್ರಶ್ನಿ ಎಂಬ ಹೆಸರಿನಿಂದ ಅದಿತಿ ತಾಯಿ, ಈಗ ಅದಿತಿ ದೇವಿಯೇ ದೇವಕಿಯಾಗಿ ಅವತಾರ ಮಾಡಿದ್ದರಿಂದ ಶ್ರೀಕೃಷ್ಣಾವತಾರದಲ್ಲಿಯೂ ಅದಿತಿ ಪರಮಾತ್ಮನಿಗೆ ತಾಯಿ. ಸಕಲ ಜಗನ್ನಿಯಾಮಕ, ಸಕಲ ಜಗತ್ತಿಗೇನೆ ತಂದೆ ತಾಯಿ ಅನ್ನುವುದು ಗೊತ್ತು ಕಶ್ಯಪ ಅದಿತಿ ದೇವಿಯರಿಗೆ ತಾವೇ ತಪಸ್ಸು ಮಾಡಿ ಪರಮಾತ್ಮನಿಗೆ ಪ್ರಾರ್ಥನೆ ಮಾಡಿಕೊಂಡು ವರ ಪಡೆದು ಶ್ರೀಕೃಷ್ಣ ಪರಮಾತ್ಮನನ್ನು ತಾನು ದೇವಕಿಯಾಗಿ ಪಡೆದದ್ದು. ಅದಿತಿಯಾಗಿ ವಾಮನನನ್ನು ಪಡೆದಾಗಲೂ ವ್ರತ ಮಾಡಿ ವಿಶೇಷವಾಗಿ ಪರಮಾತ್ಮನ ಅನುಗ್ರಹದಿಂದಲೇ ಭಗವಂತನನ್ನು ಪಡೆದವಳು ಆದರೂ ಈ ಸಂದರ್ಭದಲ್ಲಿ ತಾನು ತಾಯಿ, ಅವನು ಮಗ ಅನ್ನುವ ದೃಷ್ಟಿಯಲ್ಲಿ ಆಲಿಂಗನವನ್ನು ಮಾಡಿಕೊಂಡು ಆಶೀರ್ವಾದವನ್ನು ಮಾಡಿದ್ದಾಳೆ. ಆಶೀರ್ವಾದವನ್ನು ಮಾಡಿ ಪರಮಾತ್ಮ ಸತ್ಯಭಾಮಾ ದೇವಿಯನ್ನ ಕರೆದುಕೊಂಡು ಹೋದುದ್ದಕ್ಕೆ ಸತ್ಯಭಾಮೆಗೂ ಅದಿತಿ ಆಶೀರ್ವಾದವನ್ನು ಮಾಡುತ್ತಾಳೆ.

ಸರ್ವಲೋಕೇಷು ವಿಖ್ಯಾತಾ ದಿವ್ಯಗನ್ಧಾ ಮನೋರಮಾ ।

ಸತ್ಯಭಾಮೋತ್ತಮಾ ಸ್ತ್ರೀಣಾಂ ಸುಭಗಾ ಸ್ಥಿರಯೌವನಾ ।। (64.62 ವಿಷ್ಣುಪರ್ವ)

ಮಹಾಲಕ್ಷ್ಮೀ ದೇವಿ ಸ್ವತಯೇವ ಸಕಲ ಗುಣಗಳಿಂದ ಸಂಪನ್ನಳು, ಸಾಕ್ಷಾತ್ ಮಹಾಲಕ್ಷ್ಮೀಯ ಅವತಾರಳಾದಂತಹ ಸತ್ಯಭಾಮಾ ದೇವಿಗೆ ಅದಿತಿ ದೇವಿ ಏನು ಆಶೀರ್ವಾದವನ್ನು ಮಾಡುವುದು ಬೇಕಿಲ್ಲ. ಸ್ಥಿರವಾದಂತಹ ಯೌವನ, ಉತ್ತಮವಾದಂತಹ ದಿವ್ಯವಾದ ಗಂಧ, ಸಕಲ ಲೋಕಗಳಲ್ಲಿ ಪ್ರಸಿದ್ಧಿ, ಶ್ರೇಷ್ಠವಾದ



ಸೌಭಾಗ್ಯ ಹೀಗೆ ಎಲ್ಲ ಸದ್ಗುಣಗಳಿಂದ ಸ್ವತಯೇವ ಮಂಡಿತಳಾದ ಸತ್ಯಭಾಮೆಗೆ ಆ ಗುಣಗಳ ಅನುಸಂಧಾನ ಮಾಡುವ ರೀತಿಯಲ್ಲಿ ಈ ಎಲ್ಲ ಸದ್ಗುಣಗಳು ನಿನಗೆ ಸದಾಕಾಲದಲ್ಲಿ ಇರಲಿ ಅಂತ ಅದಿತಿ ಆಶೀರ್ವಾದ ಮಾಡುತ್ತಾ ಇದ್ದಾಳೆ ಅಷ್ಟೇ. ಶ್ರೀಕೃಷ್ಣ ಪರಮಾತ್ಮನಿಗೆ ಹೇಳುತ್ತಾಳೆ ನೀನು ಯಾರಿಂದಲೂ ವಧ್ಯನಾಗದೇ, ಯಾರಿಂದಲೂ ಸೋಲದೇ ಎಲ್ಲರಿಗೂ ಅನುಗ್ರಹವನ್ನು ಮಾಡುತ್ತಾ ಎಲ್ಲರನ್ನು ಗೆಲ್ಲುತ್ತಾ ಜಗತ್ತಿನಲ್ಲಿ ಪ್ರಸಿದ್ಧನಾಗು ಅಂತ ಯಾವುದು ಲಕ್ಷ್ಮೀ ನಾರಾಯಣರ ಸ್ವಾಭಾವಿಕವಾದ ಗುಣಗಳೋ ಅವುಗಳನ್ನೇ ಅವಳು ಚಿಂತನ ಮಾಡಿದ್ದಾಳೆ.

ಜರಾಂ ನ ಯಾಸ್ಯತಿ ವಧೂರ್ಯಾವತ್ತ್ವಂ ಕೃಷ್ಣ ಮಾನುಷಃ । (64.63 ವಿಷ್ಣುಪರ್ವ)

ಕೃಷ್ಣನಿಗೆ ಹೇಳುತ್ತಾಳೆ ಅದಿತಿ ನೀನು ಮನುಷ್ಯನಾಗಿ ಎಲ್ಲಿಯವರೆಗೆ ಇರುತ್ತೀಯಲ್ಲ ಭೂಲೋಕದಲ್ಲಿ ಅವತಾರ ಮಾಡಿ ಅಲ್ಲಿಯವರೆಗೆ ಸತ್ಯಭಾಮಾ ದೇವಿಗೆ ಜರ ವಾರ್ಧಕ್ಯ ಬರೋದೇ ಇಲ್ಲ ಅಂತ. ಸತ್ಯಭಾಮಾ ದೇವಿಗೆ ನಿತ್ಯದಲ್ಲಿ ಯೌವನವೇ, ಸ್ಥಿರವಾದ ಯೌವನ ಅವತಾರ ಕಾಲದಲ್ಲಿ ಮಾತ್ರ ಕೃಷ್ಣ ಭೂಮಿಯಲ್ಲಿ ಇರುವವರೆಗೆ ಜರಾ ಬರುವುದಿಲ್ಲ ಅಂತ ಅನ್ನುವುದು ಕೇವಲ ಅದಿತಿ ದೇವಿಯ ಅಭಿಮಾನದ ಮಾತುಗಳು. ಅನಂತ ಕಾಲದವರೆಗೂ ಲಕ್ಷ್ಮೀ ದೇವಿಗೆ ಯಾವುದೇ ತರಹದ ರೋಗ ರುಜಿನೆಗಳು, ಮುಪ್ಪು, ದೋಷಗಳು ಸರ್ವಥಃ ಇಲ್ಲ ಅನ್ನುವುದನ್ನು ನಾವು ಶಾಸ್ತ್ರದಿಂದ ಚೆನ್ನಾಗಿ ತಿಳಿಯಬೇಕು. ನೀನು ಮಾನುಷನಾಗಿ ಇರುವವರೆಗೆ ಅವಳಿಗೆ ಮುಪ್ಪು ಮೊದಲಾದ ದೋಷಗಳು ಬರುವುದಿಲ್ಲ ಅಂತ ಕೃಷ್ಣನಿಗೆ ಅದಿತಿ ಹೇಳುತ್ತಾಳೆ ಇದರ ಅರ್ಥ ಅನಂತ ಕಾಲದವರೆಗೆ ಅಂತ. ಯಾಕೆ ಅಂದರೆ ಮಾನುಷ ಅಂದರೆ ಮನುಷ್ಯನಂತೆ ಮನುಷ ಸದೃಶವಾದ ಅವತಾರವನ್ನ ಕೃಷ್ಣ ತೆಗೆದುಕೊಂಡದ್ದು ಉಂಟಲ್ಲ ಈ ಸಂದರ್ಭದಲ್ಲಿ ಮಾತ್ರ ಅಂತ ಅರ್ಥ ಅಲ್ಲ **'ಮಾನ ಉಷ'** ಮಾನ ಅಂದರೆ ವೇದಾದಿ ಪ್ರಮಾಣಗಳು, ಉಷ್ಣ ಅಂದರೆ ಉತ್ಕೃಷ್ಟವಾದಂತಹ ಷಡ್ ಗುಣಗಳು. ಆ ವೇದಾದಿ ಪ್ರಮಾಣಗಳಿಂದ ಪ್ರಮೀತವಾದ ಉತ್ಕೃಷ್ಟ ಷಡ್ ಗುಣಗಳು ಎಲ್ಲಿಯವರೆಗೆ ನಿನ್ನಲ್ಲಿ ಇರುತ್ತವೋ ಅಲ್ಲಿಯವರೆಗೆ ಇವಳಿಗೆ ಮುಪ್ಪಿಲ್ಲ ಅಂತ. ಅವುಗಳು ಎಲ್ಲಿಯವರೆಗೆ ಇರುತ್ತವೆ ಅನಂತ ಕಾಲದವರೆಗೂ ಪರಮಾತ್ಮನಲ್ಲಿ ಷಡ್ ಗುಣಗಳು ಇದ್ದೇ ಇರುತ್ತದೆ ಅಲ್ಲಿಯವರೆಗೆ ಲಕ್ಷ್ಮೀ ದೇವಿಗೆ ಯಾವುದೇ ವಿಧವಾದ ದೋಷಗಳು ಇಲ್ಲ ಅಂತನ್ನುವ ಸತ್ಯವಾದ ತತ್ವವನ್ನೇ ಇಲ್ಲಿ ತಿಳಿಸಿದ್ದಾರೆ ಅಂತ ನಾವು ಚಿಂತನ ಮಾಡಬೇಕು.

ಜರಾಂ ನ ಯಾಸ್ಯತಿ ವಧೂರ್ಯಾವತ್ತ್ವಂ ಕೃಷ್ಣ ಮಾನುಷಃ । (64.63 ವಿಷ್ಣುಪರ್ವ)

ಮಾನ ಪ್ರತಿಪಾದ್ಯಾಃ ಉಷಾಃ ಯಸ್ಮಿನ್ ಸಃ ಮಾನುಷಃ ।
ನಿರುತ್ತತ್ವಾತ್ ಅಕಾರಲೋಪಃ ಮಾನುಷಃ ॥

ಅಂತಹ ಆ ಪರಮಾತ್ಮನ ಅದ್ಭುತವಾದ ಮಹಿಮೆಯನ್ನು ಇಲ್ಲಿ ಅದಿತಿ ದೇವಿ ಸ್ಮರಣೆ ಮಾಡುತ್ತಾ ಇದ್ದಾಳೆ.

ಅಲ್ಲಿಂದ ಪರಮಾತ್ಮ ನಂದನವನದಲ್ಲಿ ವಿಹಾರ ಮಾಡಿದ್ದಾನೆ ಎಲ್ಲ ದೇವತೆಗಳ ಲೋಕಗಳನ್ನು, ಎಲ್ಲ ದೇವತೆಗಳ ಪುರಗಳನ್ನು ಸಂಚಾರ ಮಾಡುತ್ತ ನಂದನವನಕ್ಕೆ ಬಂದು ಪಾರಿಜಾತ ವೃಕ್ಷವನ್ನು ತೆಗೆದುಕೊಂಡು ಗರುಡನ ಮೇಲೆ ಇಟ್ಟಿದ್ದಾನೆ. ಪಾರಿಜಾತ ವೃಕ್ಷವನ್ನು ರಕ್ಷಣೆ ಮಾಡುವುದಕ್ಕೆ ಅಂಥವರೆಲ್ಲಾ ಇಂದ್ರನಿಗೆ ವಿಷಯವನ್ನು ತಿಳಿಸಿದ್ದಾರೆ.

ಅನುಮೇನೇ ಮಹಾಬಾಹುಃ ಕೃತಕರ್ಮೇತಿ ಚಾಬ್ರವೀತ್ ॥ (64.70 ವಿಷ್ಣುಪರ್ವ)

ಸರಿ, ತನ್ನ ಇಚ್ಛೆಗೆ ಬಂದದ್ದನ್ನು ತಾನು ಮಾಡಿದ್ದಾನೆ ಅಂತ ಇಂದ್ರ ದೇವರು ಸುಮ್ಮನಿದ್ದಾರೆ. ಆನಂತರದಲ್ಲಿ ಶ್ರೀಕೃಷ್ಣ ಪರಮಾತ್ಮ ದ್ವಾರಕಾ ಪಟ್ಟಣಕ್ಕೆ ಬಂದ ಅಂತ ಸಂಕ್ಷಿಪ್ತವಾಗಿ ವೈಶಂಪಾಯನರು ಈ ಪಾರಿಜಾತ ಹರಣದ ಕಥೆಯನ್ನು ಜನಮೇಜಯನಿಗೆ ತಿಳಿಸಿದ್ದಾರೆ. ಅದರ ವಿಸ್ತೃತವಾದ ವಿವರಣೆಯನ್ನು ಕೇಳಬೇಕು ಅಂತನ್ನುವ ಅಪೇಕ್ಷೆ ಜನಮೇಜಯ ರಾಜನಿಗೆ, ಏನು ಇದರ ಇತಿಹಾಸ, ಯಾಕೆ ಕೃಷ್ಣ ಪಾರಿಜಾತ ವೃಕ್ಷವನ್ನು ತರಬೇಕಾಯಿತು ಇದೆಲ್ಲವನ್ನ ತಿಳಿಸಿ ಹೇಳಬೇಕು ಅಂತ ಕೇಳಿದಾಗ ಆಗ ವೈಶಂಪಾಯನರು ತಿಳಿಸುತ್ತಾ ಇದ್ದಾರೆ.

ಶ್ರೀಕೃಷ್ಣ ಪರಮಾತ್ಮ ಒಂದು ಬಾರಿ ರುಕ್ಮಿಣಿ ದೇವಿ ವಿಶೇಷವಾದಂತಹ ವ್ರತವನ್ನು ಆಚರಣೆ ಮಾಡಿದ್ದಾಳೆ. ಆ ಉಪವಾಸದ ವ್ರತವನ್ನು ಮಾಡಿದಾಗ ಅದರ ಪಾರಣೆಯನ್ನ, ಉದ್ಯಾಪನೆಯನ್ನ ಮಾಡುವ ದೃಷ್ಟಿಯಲ್ಲಿ ಶ್ರೀಕೃಷ್ಣ ಪರಮಾತ್ಮ ರೈವತ ಪರ್ವತಕ್ಕೆ ಕರೆದುಕೊಂಡು ಹೋಗಿದ್ದಾನೆ.

ಉಪವಾಸವಸಾನಂ ಹಿ ರುಕ್ಮಿಣ್ಯಾಃ ಪ್ರತಿಪೂಜಯನ್ ॥ (65.5 ವಿಷ್ಣುಪರ್ವ)

ಆ ಸಂದರ್ಭದಲ್ಲಿ ಉಪವಾಸದ ಅವಸಾನ ಪಾರಣೆಯನ್ನು ಮಾಡುವಾಗ ಕೇವಲ ಪಾರಣೆ ಮಾಡುವುದಲ್ಲ ಎಲ್ಲ ಸದ್ಬ್ರಾಹ್ಮಣರಿಗೆ ಕರೆದು ಅವರೆಲ್ಲರಿಗೂ ವಿಶೇಷವಾಗಿ ಅನ್ನದಾನಾದಿಗಳನ್ನು ಮಾಡಿ ದಕ್ಷಿಣೆ ಕೊಟ್ಟು ತಾನು ವ್ರತದ ಸಮಾಪ್ತಿಯನ್ನು ಮಾಡಬೇಕು ಅಂತ ಜಗತ್ತಿಗೆ ತಿಳಿಸುವುದಕ್ಕೆ ಭಗವಂತ ಅಲ್ಲಿ ಅನೇಕ ಶ್ರೇಷ್ಠರಾದಂತಹ ಸಜ್ಜನರನ್ನು ಬ್ರಾಹ್ಮಣರನ್ನೆಲ್ಲ ಕರೆದಿದ್ದಾನೆ. ಎಂತಹ ಜ್ಞಾನಿಗಳು ಅಲ್ಲಿ ಬಂದಿದ್ದರು ಅಂತ ಹೇಳುತ್ತಾರೆ ನಿತ್ಯದಲ್ಲಿ ಧರ್ಮಾನುಷ್ಠಾನದಲ್ಲಿ ತತ್ಪರರಾದವರು, ಪವಿತ್ರವಾದಂತಹ ಕುಲದಲ್ಲಿ ಗೋತ್ರದಲ್ಲಿ ಹುಟ್ಟಿ ಬಂದವರು ಅವರ ಕುಲದಲ್ಲಿ ಶುದ್ಧಿ ಇದೆ, ಪರಂಪರೆಯಲ್ಲಿ ಯೋನಿ ಶುದ್ಧಿ, ವೇದೋಕ್ತವಾದ ಕರ್ಮಗಳನ್ನು ಮಾಡುತ್ತಾರೆ, ಉತ್ತಮವಾದ ಜ್ಞಾನ ಸಂಪನ್ನರು ಜ್ಞಾನ ಶುದ್ಧಿ ಇದೆ, ಉತ್ತಮವಾದಂತಹ ಯಜ್ಞ ಯಾಗಾದಿಗಳನ್ನು ಮಾಡುವವರು. ಯಜ್ಞ, ಯಾಗ, ಪಾಠ ಪ್ರವಚನ, ಅಧ್ಯಯನ, ಚಿಂತನ, ಧ್ಯಾನ ಇವುಗಳಲ್ಲಿಯೇ ಆಸಕ್ತರಾದಂತಹ ಸಜ್ಜನರು ಯಾರೆಲ್ಲ ಇದ್ದರೋ ಅವರೆಲ್ಲರಿಗೆ ಅಪೇಕ್ಷಿತವಾದ ವಸ್ತುಗಳನ್ನೆಲ್ಲ ಕೊಟ್ಟು ಪೂಜೆಯನ್ನು ಮಾಡಿದ್ದಾನೆ. ತಾನು ಕೊಡುವುದನ್ನು ಅವರು ತೆಗೆದುಕೊಳ್ಳಬೇಕು ಅಂತ ಅಲ್ಲ ಅವರು ಬಯಸಿದ್ದನ್ನೆಲ್ಲ ಶ್ರೀಕೃಷ್ಣ ಪರಮಾತ್ಮ ಕೊಟ್ಟಿದ್ದಾನೆ ಅವರನ್ನು ಸಂತೋಷ ಪಡಿಸಿದ್ದಾನೆ. ಈ ಕಡೆಗೆ ಒಂದು ಪುಣ್ಯ ಕರ್ಮವನ್ನು ಮಾಡಿದಾಗ, ಸತ್ಕಾರ್ಯಗಳನ್ನು ಮಾಡಿದಾಗ ಕೇವಲ ಬ್ರಾಹ್ಮಣರಿಗೆ, ಅತಿಥಿ ಅಭ್ಯಾಗತರಿಗೆ ಮಾತ್ರ ಸಂತರ್ಪಣೆ ಮಾಡುವುದಲ್ಲ ಬಂಧು ಬಾಂದವರನ್ನೂ ಸಂತೋಷ ಪಡಿಸಬೇಕು ಅಂತ ದೇವರು ಜಗತ್ತಿಗೆ ತೋರಿಸಿ ಕೊಡುತ್ತಾನೆ. **'ಜ್ಞಾತೀನ್ ಸಂತರ್ಪಯಾಮಾಸ'**[1] ಎಲ್ಲ ಬಂಧು ಬಾಂಧವರಿಗೆ ಯತೇಷ್ಟವಾದ ಆಹೇರಿಗಳನ್ನು ಕೊಟ್ಟು ಅವರಿಗೂ ಕೂಡ ಸಂತೃಪ್ತಿಯಾಗುವ ರೀತಿಯಲ್ಲಿ ಭೋಜನಾಧಿಗಳನ್ನು ಮಾಡಿಸಿದ್ದಾನೆ. ರುಕ್ಮಿಣಿ ದೇವಿಯ ಮೇಲೆ ನಿತ್ಯದಲ್ಲಿಯೂ ಪರಮಾತ್ಮನ ಪರಿಪೂರ್ಣವಾದ ಅನುಗ್ರಹ ಅನಾದಿಕಾಲದಿಂದ ಇದೆ ಅನಂತಕಾಲದವರೆಗೂ ಇದ್ದೇ ಇರುತ್ತದೆ ಇನ್ನೂ ವಿಶೇಷವಾಗಿ ಎಲ್ಲ ಜನರಿಗೆ ತೋರುವಂತೆ ದೊಡ್ಡ ವ್ರತವನ್ನು ಮಾಡಿದ್ದೀ ಅಂತ ರುಕ್ಮಿಣಿ ದೇವಿಯ ಮೇಲೆ ವಿಶೇಷವಾಗಿ ಪರಮಾತ್ಮ ತನ್ನ ಅನುಗ್ರಹವನ್ನು ತೋರಿಸಿದ್ದಾನೆ.

ಈ ರೀತಿ ಶ್ರೀಕೃಷ್ಣ ಪರಮಾತ್ಮ ತನ್ನ 16,108 ಜನರ ಜೊತೆಗೆ, ಸಕಲ ಯಾದವರ ಜೊತೆಗೆ, ಸಕಲ ಸಜ್ಜನರ ಜೊತೆಗೆ ಆ ರೈವತ ಪರ್ವತದಲ್ಲಿ ಈ ದೊಡ್ಡದಾದ ಉತ್ಸವವನ್ನು ಆಚರಣೆ ಮಾಡುತ್ತ ಇರುವಂತಹ ಪ್ರಸಂಗದಲ್ಲಿ

1. 65.10 ವಿಷ್ಣುಪರ್ವ



ನಾರದರು ಬಂದಿದ್ದಾರೆ. ಶ್ರೀಕೃಷ್ಣ ಪರಮಾತ್ಮನ ನಿರಂತರ ಸ್ಮರಣೆಯನ್ನು ಮಾಡುತ್ತ ಕೃಷ್ಣ ಭಕ್ತಿಯ ಪ್ರಸಾರವನ್ನು ಮಾಡುವಂತಹ ನಾರದರು ಶ್ರೀಕೃಷ್ಣನ ದರ್ಶನದಿಂದ ತಾವು ವಿಶೇಷವಾದ ಅನುಗ್ರಹವನ್ನು ಪಡೆಯಬೇಕು ಅಂತ ಬಂದಿದ್ದಾರೆ. ಶ್ರೀಕೃಷ್ಣ ಪರಮಾತ್ಮ ಬಂದಂತಹ ನಾರದರಿಗೆ ದೇವರ್ಷಿಗಳಿಗೆ ಯಾವ ರೀತಿ ಸ್ವಾಗತವನ್ನು ಮಾಡಬೇಕು ಅಂತ ತೋರಿಸುತ್ತಾನೆ ಎದ್ದು ನಿಂತು ಪರಮಾತ್ಮ ಅವರಿಗೆ ಸ್ವಾಗತವನ್ನು ಮಾಡಿ ಅರ್ಘ್ಯಪಾದ್ಯಾದಿಗಳಿಂದ ಪೂಜೆಯನ್ನು ಮಾಡಿದ್ದಾನೆ. ಆಗ ನಾರದರು ಶ್ರೀಕೃಷ್ಣ ಪರಮಾತ್ಮನಿಗೆ ಒಂದು ಶ್ರೇಷ್ಠವಾದ ಪಾರಿಜಾತ ಪುಷ್ಪವನ್ನು ಕೊಟ್ಟಿದ್ದಾರೆ. ಶ್ರೀಕೃಷ್ಣ ಪರಮಾತ್ಮನಿಗೆ ಪಾರಿಜಾತದ ಪುಷ್ಪವನ್ನು ಕೊಟ್ಟರೆ ಅತ್ಯಂತ ಸುಗಂಧಯುತವಾದಂತಹ ಸ್ವರ್ಗಲೋಕದ ಪಾರಿಜಾತ ವೃಕ್ಷದ ಪುಷ್ಪ ಅದು, ಭೂಮಿಯ ಪಾರಿಜಾತ ವೃಕ್ಷದ ಅಲ್ಲಿ ಇಲ್ಲಿ ಇರುವಂತಹ ಸಾಧಾರಣವಾದ ಪುಷ್ಪವಲ್ಲ. ಅಂತಹ ಶ್ರೇಷ್ಠವಾದ ಸ್ವರ್ಗದ ಆ ಪುಷ್ಪವನ್ನು ಶ್ರೀಕೃಷ್ಣ ಪರಮಾತ್ಮನಿಗೆ ಕೊಟ್ಟರೆ ಶ್ರೀಕೃಷ್ಣ ಪರಮಾತ್ಮ ಅದನ್ನ ಕೈಯಲ್ಲಿ ತೆಗೆದುಕೊಂಡು ಇದೀಗ ವ್ರತವನ್ನು ಸಮಾಪ್ತಿ ಮಾಡಿದಂತಹ ರುಕ್ಮಿಣಿ ಪಕ್ಕದಲ್ಲಿಯೇ ಕುಳಿತಿದ್ದಾಳೆ ಅತ್ಯಂತ ಪ್ರೀತಿಯಿಂದ ಪರಮಾತ್ಮ ಆ ರುಕ್ಮಿಣಿ ದೇವಿಗೆ ಕೊಟ್ಟಿದ್ದಾನೆ. ದೇವರ ನಿರ್ಮಾಲ್ಯ, ದೇವರ ಪಾದಕ್ಕೆ ಇಟ್ಟರೇನೇ ಅದು ನಿರ್ಮಾಲ್ಯ ಅಂತ ಅಲ್ಲ ಭಗವಂತನ ಯಾವ ಅಂಗಗಳಿಗೆ ಸ್ಪರ್ಶವಾದರೂ ಅದು ನಿರ್ಮಾಲ್ಯ, ಭಗವಂತನ ಸ್ಪರ್ಶವಾದರೆ ಸಾಕು ಅವನ ದೃಷ್ಟಿ ಬಿದ್ದರೂ ಅದು ಭಗವಂತನ ನಿರ್ಮಾಲ್ಯ. ದೇವರಿಗೆ ಅರ್ಪಿತವಾಗದೇ ಇರುವಂತಹ ಗಂಧ ಮಾಲ್ಯಾದಿಗಳನ್ನು ಸ್ವೀಕಾರ ಮಾಡಬಾರದು ಅಂತ ಇದೆ ಹಾಗಾಗಿ ರುಕ್ಮಿಣಿ ದೇವಿ ದೇವರಿಗೆ ಅನರ್ಪಿತವಾದಂತಹ ಪುಷ್ಪವನ್ನು ಧಾರಣೆ ಮಾಡುವುದಕ್ಕೆ ಸಾಧ್ಯ ಇಲ್ಲ ಆ ಭಗವಂತ ಅದನ್ನ ದೃಷ್ಟಿಯಿಂದ ಪವಿತ್ರಗೊಳಿಸಿದ, ಹಸ್ತದಲ್ಲಿ ಧಾರಣೆ ಮಾಡಿದ. **'ಸರ್ವತಃ ಪಾಣಿಪಾದ ತತ್ ಸರ್ವತೋಕ್ಷಿ ಶಿರೋಮುಖಂ'** ಆ ಪರಮ ಪವಿತ್ರವಾದ ಪರಮಾತ್ಮನ ಹಸತಿದ ಸ್ಪರ್ಶ ಆದರೆ ಪಾದ ಸ್ಪರ್ಶವಾದ ಹಾಗೂ ಸರಿ, ಪರಮಾತ್ಮನ ಪಾದಗಳಿಗೆ, ಹಸ್ತಗಳಿಗೆ ಅರ್ಪಿತವಾದ ಆ ಪುಷ್ಪವನ್ನ ಶಿರಸಾಧಾರಣ ಮಾಡಿದ್ದಾಳೆ ಭಕ್ತಿಯಿಂದ ರುಕ್ಮಿಣಿ ದೇವಿ.

ಶಿರಸ್ಯಮಲಪತ್ರಾಕ್ಷೀ ದದೌ ಕೃಷ್ಣೇಂಙ್ಗಿತಾನುಗಾ ॥ (65.16 ವಿಷ್ಣುಪರ್ವ)

ಅಂತಹ ಶ್ರೇಷ್ಠವಾದ ಪುಷ್ಪವನ್ನು ಧಾರಣೆ ಮಾಡಿದರೆ ಸ್ವತಯೇವ ಶೋಭಾಯಮಾನಳಾದಂತಹ ರುಕ್ಮಿಣಿ ದೇವಿಗೆ ಇನ್ನಷ್ಟು ವಿಶೇಷವಾದಂತಹ ಕಳೆ ದಿವ್ಯವಾದಂತಹ ಶೋಭೆ ಅವಳಿಗೆ ಬಂದಿದೆ ಅಂತ ನಾವು ಅನ್ನುತ್ತೇವೆ. ನಾರದರು ಅನ್ನುತ್ತಾರೆ ಪುಷ್ಪವನ್ನ ಧಾರಣೆ ಮಾಡಿದ್ದಕ್ಕೆ ರುಕ್ಮಿಣಿ ದೇವಿಗೆ ಶೋಭೆಯಲ್ಲ, ರುಕ್ಮಿಣಿಯ ಶಿರಸ್ಸನ್ನು ಏರಿದ್ದಕ್ಕೆ ಆ ಪಾರಿಜಾತ ಪುಷ್ಪಕ್ಕೆ ಒಂದು ಶೋಭೆ ಬಂತು, ಪಾರಿಜಾತ ವೃಕ್ಷ ಇದು ಧನ್ಯ ಆಯಿತು. ನನ್ನ ಪುಷ್ಪವನ್ನು ಕೃಷ್ಣನಿಗೆ ಅರ್ಪಿಸಿ ಆ ನಿರ್ಮಾಲ್ಯವನ್ನು ರುಕ್ಮಿಣಿ ದೇವಿ ತಾನು ಶಿರಸಾ ಧಾರಣೆ ಮಾಡಿದ್ದಾಳೆ ಅಂದರೆ ನಾನು ಪುಷ್ಪಗಳನ್ನು ಸೃಷ್ಟಿ ಮಾಡಿದ್ದು ಸಾರ್ಥಕ ಅಂತ ಆ ಪಾರಿಜಾತ ವೃಕ್ಷ ಭಾವಿಸಬೇಕು.

ಅಲಂಕೃತಂ ಪುಷ್ಪಮೇತತ್ ಸಂಸರ್ಗಾತ್ ತವ ಸರ್ವಥಾ ।
ಅತ್ಯರ್ಹಾ ಚ ಮತಾ ಮೇ ತ್ವಮೇತತ್ಪುಷ್ಪಾದ್ ಧೃತವ್ರತೇ ॥ (65.19 ವಿಷ್ಣುಪರ್ವ)

ನಿನ್ನ ಸಂಸರ್ಗದಿಂದ ಆ ಪುಷ್ಪಕ್ಕೆ ಒಂದು ಅಲಂಕಾರವಾದಂತೆ ಆಯಿತು ಅಂತ ನಾರದರು ವರ್ಣನೆ ಮಾಡುತ್ತಾರೆ. ಆ ಪುಷ್ಪದ ಗುಣಗಳನ್ನು ಹೇಳುತ್ತಾರೆ ಪಾರಿಜಾತ ಪುಷ್ಪದ ಗುಣಗಳೇನು ಸಭಾ ಮಧ್ಯದಲ್ಲಿ ಎಲ್ಲ ಜನ ಇದ್ದಾರೆ. ಅಷ್ಟೆಲ್ಲ ಜನರ ಮಧ್ಯದಲ್ಲಿ ಎಲ್ಲರಿಗೆ ಕೇಳಿಸುವಂತೆ ಪಾರಿಜಾತ ಪುಷ್ಪದ ಮಹಿಮೆಯನ್ನು ವರ್ಣನೆ ಮಾಡುತ್ತಾರೆ. ಏನೋ ಒಂದು ಪುಟ್ಟ ಹೂವು ತಂದುಕೊಟ್ಟರು ಈಗ ಎಲ್ಲ ಪಾರಿಜಾತ ಪುಷ್ಪ ಅಂದ ತಕ್ಷಣ ಇವತ್ತು

ನೀವು ನೋಡುವಂತಹ ಏನು ಪುಟ್ಟ ಪುಟ್ಟ ಪಾರಿಜಾತ ಪುಷ್ಪಗಳು, ಸ್ವಲ್ಪ ಹೊತ್ತಿನಲ್ಲಿ ಬಾಡಿ ಹೋಗುವಂತಹ ಪುಷ್ಪಗಳು ಅವುಗಳೇ ನಿಮ್ಮ ನೆನಪಿನಲ್ಲಿ ಬರುತ್ತದೆ ಇಂತಹ ಪುಷ್ಪವನ್ನೇ ಕೊಟ್ಟಿರಬಹುದು ಪ್ರಾಯಃ ನಾರದರು ಕೃಷ್ಣನಿಗೆ ರುಕ್ಮಿಣಿ ಅದನ್ನೇ ಧಾರಣೆ ಮಾಡಿರಬೇಕು ಅಂತ ಅದು ಸ್ವಲ್ಪ ಹೊತ್ತಿಗೆ ಅದು ಬಾಡಿ ಹೋಗಿರಬಹುದು ಅಂತ ಅಂಥಹದ್ದಲ್ಲ ಅದು.

ಅಮ್ಲಾನಮೇತತ್ ಸತತಂ ಪುಷ್ಪಂ ಭವತಿ ಕಾಮಿನಿ ॥ (65.20 ವಿಷ್ಣುಪರ್ವ)

ಎಂದಿಗೂ ಒಣಗುವುದಿಲ್ಲ, ಯಾವಾಗಲೂ ಸುಗಂಧಯುತವಾಗಿ ಇರುತ್ತದೆ ಅರಳಿದ ಪುಷ್ಪ, ಸುಗಂಧವನ್ನು ಎಲ್ಲ ಕಡೆಗೆ ಹರಡಿಸುವಂತಹ ಶ್ರೇಷ್ಠವಾದ ಪುಷ್ಪ ಈ ಪಾರಿಜಾತ ಪುಷ್ಪ. ತಿಳಿದುಕೊಳ್ಳಿ ಅನೇಕ ಜನರಿಗೆ ಪಾರಿಜಾತ ಪುಷ್ಪದ ಮಹಿಮೆ ಚೆನ್ನಾಗಿ ಗೊತ್ತಿರುವುದಿಲ್ಲ ನಾರದರು ಮಹಾನುಭಾವರು ತಿಳಿಸಿಕೊಡುತ್ತಾರೆ, ಹರಿವಂಶ ನಮಗೆ ತಿಳಿಸಿಕೊಡುತ್ತದೆ, ವೇದವ್ಯಾಸ ದೇವರು ಹೇಳುತ್ತಾರೆ. **'ಈಪ್ಸಿತಾನಪಿ ಗಂಧಾಂಶ್ಚ ದದಾತಿ'**[1] ಒಂದೇ ತರಹದ ವಾಸನೆ ಅಲ್ಲ ಬಯಸಿದ ವಾಸನೆ ನಿಮಗೆ ಯಾವ ಹೂವಿನ ವಾಸನೆ ಬೇಕೋ ಅಥವಾ ಇನ್ಯಾವ ಹಣ್ಣಿನ ವಾಸನೆ ಬೇಕೋ, ಸುಗಂಧ ಎಷ್ಟು ವಿಧವಾದದ್ದು ಪ್ರಪಂಚದೊಳಗೆ ಇದೆ ಅದೆಲ್ಲಾ ಸುಗಂಧ ನಿಮ್ಮ ಮನಸ್ಸಿನಲ್ಲಿ ಬಹಳ ಹೊತ್ತಾಯಿತು ಪಾರಿಜಾತದ ಗಂಧ. ಈಗ ಸ್ವಲ್ಪ ಚಂಪಕ ಗಂಧ ಸಂಪಿಗೆಯ ವಾಸನೆ ನನಗೆ ಬೇಕು ಅಂತ ಅನ್ನಿಸಿದರೆ ಅದೇ ಪಾರಿಜಾತ ಪುಷ್ಪ ಸಂಪಿಗೆಯ ವಾಸನೆಯನ್ನು ಕೊಡುತ್ತದೆ, ಕರ್ಪೂರದ ವಾಸನೆಯನ್ನು ಬೇಕು ಅಂದರೆ ಕೊಡುತ್ತದೆ, ಚಂದನದ ವಾಸನೆ ಬೇಕು ಅಂದರೆ ಕೊಡುತ್ತದೆ ಯಾವ ವಾಸನೆ ಬೇಕೋ ಆ ವಾಸನೆ ಆ ಪಾರಿಜಾತದ ಪುಷ್ಪದಿಂದ ಬರುತ್ತದೆ. ಇಷ್ಟು ಮಾತ್ರ ಅಲ್ಲ ಸ್ಪರ್ಶ, ತಂಪು ಬೇಕು ಅಂದರೆ ತಂಪು ನೋಡಿ ಏನು ಅದ್ಭುತ ಅದು ದಿವ್ಯವಾಗಿರುವಂತಹ ಪಾರಿಜಾತ ವೃಕ್ಷ, ಅದು ಸಾಮಾನ್ಯ ವೃಕ್ಷ ಅಲ್ಲ, ಮಾನವ ವೃಕ್ಷಕ್ಕೆ ನಾವು ಹೋಲಿಸಿ ಕೊಳ್ಳುವುದಲ್ಲ. ನೋಡಿ ಅಚಿಂತ್ಯ ಅದ್ಭುತವಾದ ಮಹಿಮೆ ದೇವರ ಸೃಷ್ಟಿ ಈ ಮಾನವರ ಮನುಷ್ಯ ಲೋಕದೊಳಗಿರುವ ವೃಕ್ಷಗಳಲ್ಲಿಯೇ ಇದೆ. ಏನಿರುತ್ತದೆ ಅಲ್ಲಿ ಸಣ್ಣ ಸಣ್ಣ ಬೀಜಗಳು ಆ ಬೀಜ ನೋಡಿದರೆ ನಿಮಗೆ ಏನು ಗೊತ್ತಾಗುತ್ತದೆ, ಅದೇ ಬೀಜದಿಂದ ದೊಡ್ಡ ಗಿಡ ಬೆಳೆಯುತ್ತದೆ. ಆ ಗಿಡಕ್ಕೆ ಹೂವುಗಳು ಆಗುತ್ತದೆ. ಅದರ ಬೇರು ಇರುವ ರೀತಿಯೇ ಬೇರೆ, ಕಾಂಡ ಇರುವ ರೀತಿಯೇ ಬೇರೆ, ಟೊಂಗೆಗಳು ಇರುವ ರೀತಿ ಬೇರೆ, ಎಲೆಗಳು ಮತ್ತೊಂದು ರೀತಿ, ಹೂವುಗಳೇ ಇನ್ನೊಂದು ರೀತಿ. ಇದೇ ಬೇರಿನಿಂದ ಈ ತರಹದ ಕಾಂಡವೋ, ಈ ಕಾಂಡದಿಂದ ಇಂತಹ ಎಲೆಯೋ ಮುಳ್ಳಿನ ಪಾರಿಜಾತದ ಎಲೆ, ಆ ಎಲೆಯಿಂದ ಈ ತರಹದ ಘಮ ಘಮ ವಾಸನೆಯ, ಅಷ್ಟು ಬಿರುಸಾದ ಎಲೆಗಳು ಅಷ್ಟು ಮೃದುವಾದ ಹೂವು, ಪಕಳಿಗಳೆಲ್ಲ ಶುಭ್ರ, ಹಿಂದಿನ ದೇಟು ಮಾತ್ರ ಕೆಂಪು ಇದೆಲ್ಲ ಏನು ಅದ್ಭುತ ಅಲ್ಲವಾ, ಇದೆಲ್ಲವೂ ಅದ್ಭುತವೇ. ಇದನ್ನು ನಾವು ನಿತ್ಯ ನೋಡುತ್ತೇವೆ ಅನ್ನುವುದಕ್ಕೆ ನಮಗೆ ಅದ್ಭುತ ಅಲ್ಲ ಅನಿಸುತ್ತದೆ. ದೇವತೆಗಳಿಗೆ ಇದೂ ಅದ್ಭುತ ಅಲ್ಲ ಯಾಕೆಂದರೆ ಅವರು ನಿತ್ಯವೂ ಅದನ್ನು ನೋಡುತ್ತಾರೆ. ಆದರೆ ಎಲ್ಲವೂ ದೇವರ ವಿಚಿತ್ರವಾದ ಅಚಿಂತ್ಯವಾದ ಅದ್ಭುತವಾದ ಶಕ್ತಿಯಿಂದ ನಿರ್ಮಿತವಾದದ್ದು ಅನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು.

ಏರ್ ಕಂಡೀಶನ್ ಬೇಕಾಗಿಲ್ಲ ಆ ಹೂವು ಇದ್ದರೆ ಸಾಕು ಆ ಹೂವು ಇರುವ ಸ್ಥಳದಲ್ಲಿ ಯಾವ ಹೊರಗೆ ಬಿಸಿಲು ಇದೆ ಅಂದರೆ ತಂಪು ಕೊಡುತ್ತದೆ, ಚಳಿ ಇದೆ ಅಂದರೆ ಬಿಸಿಯನ್ನು ಕೊಡುತ್ತದೆ, ಶೀತ ಉಷ್ಣ ಅಪೇಕ್ಷಿತವಾದ ಸ್ಪರ್ಶಗಳನ್ನು ನೀಡುವಂತಹದ್ದು. ರಸವನ್ನು ಕೊಡುತ್ತದೆ ಎಂತಹ ರಸ ನಿಮಗೆ ಅವತ್ತು ಬೇಕೋ ಆ ತರಹದ ರಸ ನಿಮಗೆ ನೀವು ಊಟ ಮಾಡುತ್ತಾ ಇದ್ದೀರಿ ಸಿಹಿ ಬೇಕು ಅಂತನಿಸುತ್ತದೆ ಅದು ಸಿಹಿ ಆಗುತ್ತದೆ, ಕಹಿ ಅಂದರೆ ಕಹಿ

1. 65.21 ವಿಷ್ಣುಪರ್ವ

ಆಗುತ್ತದೆ, ಖಾರ ಅಂದರೆ ಖಾರ ಆಗುತ್ತದೆ, ಹುಳಿ ಅಂದರೆ ಹುಳಿ ಆಗುತ್ತದೆ ನಿಮಗೆ ಷಡ್ ರಸಗಳು ಯಾವ ರಸಗಳು ಬೇಕೋ ಆ ರಸಗಳನ್ನು ಕೊಡುತ್ತದೆ. ಯಾವ ಶಬ್ದ ಬೇಕೋ ಆ ಶಬ್ದವನ್ನು ಕೊಡುತ್ತದೆ ಕುಳಿತಲ್ಲಿಯೇ ಉತ್ತಮವಾದ ಸಂಗೀತವನ್ನ, ಅನೇಕ ರಾಗಗಳಿವೆ ಸಂಗೀತ ಶಾಸ್ತ್ರದಲ್ಲಿ ಪ್ರಸಿದ್ಧವಾದ ವಿವಧ ರಾಗಗಳು, ಇಂತಹ ರಾಗದ ಹಾಡು ನನಗೆ ಕೇಳಬೇಕು ಅಂತ ಅಪೇಕ್ಷೆ ಇದ್ದರೆ ಆ ಹಾಡು ನಿಮಗೆ ಕೇಳಿಸುತ್ತದೆ ಆ ರಾಗದ ಧ್ವನಿ ನಿಮ್ಮ ಕಿವಿಗೆ ಬೀಳುತ್ತದೆ. ಇಂತಹ ವಾದ್ಯದ ಧ್ವನಿಯನ್ನು ಕೇಳಬೇಕು ಅಂದರೆ ಆ ವಾದ್ಯಗಳ ಧ್ವನಿ ಕೇಳುತ್ತದೆ ವರ್ಣಾತ್ಮಕ ಶಬ್ದಗಳಿರಬಹುದು, ಧನ್ಯಾತ್ಮಕ ಶಬ್ದಗಳಿರಬಹುದು. ಆ ವಾದ್ಯಗಳಿಂದ ಬರುವ ಧನ್ಯಾತ್ಮಕ ಶಬ್ದಗಳು, ಸಂಗೀತದ ವರ್ಣಾತ್ಮಕ ಶಬ್ದಗಳು ಅವುಗಳೆಲ್ಲ ಈ ಪಾರಿಜಾತ ಪುಷ್ಪ ಇದ್ದಂತಹ ಪ್ರಸಂಗದಲ್ಲಿ ಕೇಳಿಸಲಿಕ್ಕೆ ಸಿಗುತ್ತೆ. ಶಬ್ದ, ಸ್ಪರ್ಶ, ರೂಪ ಯಾವುದೇ ತರಹದ ಬಣ್ಣ ಒಂದೇ ತರಹದ ಬಣ್ಣ ಇರುತ್ತೆ ಅಂತ ತಿಳಿಯಬೇಡಿ. ಕೆಲವು ಲೈಟುಗಳೆಲ್ಲ ಇರುತ್ತೆ ನೋಡಿ ಬಣ್ಣಗಳನ್ನು ಬದಲಾಯಿಸುವಂತಹ ವಿದ್ಯುತ್ ದೀಪಗಳನ್ನು ಅಲ್ಲಲ್ಲಿ ಅಲಂಕಾರಕ್ಕೆ ಇಟ್ಟಿದ್ದನ್ನು ನೋಡುತ್ತೀರಿ ಹಾಗೆ ಇರುತ್ತದೆ ಈ ಪಾರಿಜಾತ ಪುಷ್ಪ, ಒಂದೇ ಬಣ್ಣ ಇರುವುದಿಲ್ಲ ಬಣ್ಣ ಬಣ್ಣಗಳನ್ನ ಬದಲಾಯಿಸುತ್ತ ಇರುತ್ತದೆ. ಹೀಗಾಗಿ ಶಬ್ದ, ಸ್ಪರ್ಶ, ರೂಪ, ರಸ, ಗಂಧ ನಾನಾ ತರಹದ ಗಂಧಗಳು ಹೀಗೆ ಎಲ್ಲಾ ತರಹದ ವಿಷಯಗಳ ಅನುಭವ ನಮಗೆ ಬರುವಂತೆ ಮಾಡುತ್ತದೆ. ಉತ್ತಮ ಸೌಭಾಗ್ಯವನ್ನು ಕೊಡುತ್ತದೆ, ಪುತ್ರ ಸಂತಾನವನ್ನು ಕೊಡುತ್ತದೆ, ಐಶ್ವರ್ಯವನ್ನು ಕೊಡುತ್ತದೆ, ಉತ್ತಮವಾದಂತಹ ಬುದ್ಧಿ ಶಕ್ತಿಯನ್ನು ಕೊಡುತ್ತದೆ ಮತ್ತು ಪರಿಮಾಣ ದೊಡ್ಡದಾಗಿ ಕಾಣಿಸಬೇಕು ಅಂದರೆ ಚೆನ್ನಾಗಿ ಅರಳಿ ದೊಡ್ಡ ಕಮಲದ ಹಾಗೆ ಕಾಣಿಸುತ್ತದೆ, ಸಣ್ಣ ಪರಿಮಾಣ ಬೇಕು ಅಂದರೆ ಸಣ್ಣದು, ಇಡೀ ಮನೆಗೆ ಅಲಂಕಾರವಾಗವಂತೆ ನಿಲ್ಲು ಅಂದರೆ ಅಂತಹ ದೊಡ್ಡ ಪುಷ್ಪವಾಗಿ ನಿಲ್ಲುತ್ತದೆ, ಇಷ್ಟವಾದ ಪರಿಣಾಮ ಬೆಳಕು ದೀಪದ ಕೆಲಸವನ್ನು ಮಾಡುತ್ತದೆ ದೀಪವೇ ಬೇಕಿಲ್ಲ ಮನೆಯಲ್ಲಿ ಭಾರೀ ಮಣಿ, ಭಾರೀ ಅಗ್ನಿ, ಉತ್ತಮವಾದ ನಕ್ಷತ್ರ ಏನು ಪ್ರಕಾಶ ಕೊಡಬೇಕೋ ಹಾಗೆ ಪ್ರಕಾಶವನ್ನು ಕೊಡುತ್ತೆ ಇದು.

ಪ್ರದೀಪಕರ್ಮ ರಾತ್ರೌ ಚ ಕರೋತಿ ಕಮಲೇಕ್ಷಣೇ ॥ (65.27 ವಿಷ್ಣುಪರ್ವ)

ಹಸಿವೆ ಇಲ್ಲ, ನೀರಡಿಕೆ ಆಗುವುದಿಲ್ಲ ಇದು ಇದ್ದರೆ, ಯಾವುದೇ ರೀತಿಯ ಶ್ರಮ ಇಲ್ಲ, ಬೆವರಿಲ್ಲ, ಸುಸ್ತಿಲ್ಲ ಯಾವ ತರಹದ ಕಷ್ಟಗಳು ಇರುವುದಿಲ್ಲ. ಒಂದು ವರ್ಷದವರೆಗೆ ಈ ಪುಷ್ಪವನ್ನು ಇಟ್ಟುಕೊಳ್ಳಬಹುದು ಆಮೇಲೆ ಮತ್ತೆ ತನ್ನ ಸ್ಥಾನಕ್ಕೆ ಅದು ತಾನು ಹೋಗುತ್ತದೆ ಬ್ರಹ್ಮ ಮಾನದಿಂದ ಒಂದು ವರ್ಷ. ಉಮಾ ದೇವಿ ಇದನ್ನು ಧಾರಣೆ ಮಾಡಿರುತ್ತಾಳೆ, ಆದಿತಿ ದೇವಿ, ಶಚೀ ದೇವಿ, ಸರಸ್ವತೀ, ಮಹಾಲಕ್ಷ್ಮೀ ಇದನ್ನು ಧಾರಣೆ ಮಾಡುತ್ತಾಳೆ ನೀನು ಮಹಾಲಕ್ಷ್ಮೀಯ ಅವತಾರಳೇ. ಹೀಗೆ ದೇವ ಪತ್ನಿಯರು ಅವರವರ ಯೋಗ್ಯತಾನುಸಾರವಾಗಿ ಈ ಪಾರಿಜಾತ ಪುಷ್ಪವನ್ನು ಧಾರಣೆ ಮಾಡುತ್ತಾರೆ. ಅಂತಹ ಪಾರಿಜಾತ ಪುಷ್ಪವನ್ನು ನೀನು ಶ್ರೇಷ್ಠ ವ್ರತವನ್ನು ಆಚರಣೆ ಮಾಡಿದ್ದಿ, ಶ್ರೀಕೃಷ್ಣ ಪರಮಾತ್ಮನಿಗೆ ಅತ್ಯಂತ ಪ್ರೀತ ಪಾತ್ರಳು ಅನ್ನುವುದಕ್ಕಾಗಿ ನಿನಗೆ ಕೊಟ್ಟಿದ್ದೇನೆ ಅಂತ ಅರ್ಥಾತ್ ಕೃಷ್ಣನಿಗೆ ನಾನು ಸಮರ್ಪಣೆ ಮಾಡಿದೆ, ಅದನ್ನು ಕೃಷ್ಣ ನಿನಗೆ ಕೊಟ್ಟು ದೊಡ್ಡ ಅನುಗ್ರಹ ಮಾಡಿದ್ದಾನೆ. ನಾರದರು ಸುಮ್ಮನೆ ಇರಬೇಕೋ ಬೇಡವೋ ಇಷ್ಟು ವರ್ಣನೆಯನ್ನು ಮಾಡಿ ಹೊರಟುಬಿಟ್ಟಿದ್ದರೆ ಏನು ಆಗುತ್ತಿರಲಿಲ್ಲ ಕೊನೆಗೆ ಒಂದು ಮಾತು ಅಂದಿದ್ದಾರೆ 16,108 ಜನರಲ್ಲಿ ನೀನೇ ಶ್ರೇಷ್ಠಳಾದ ಪತ್ನಿ ಅದಕ್ಕಾಗಿಯೇ ನಿನಗೇ ಕೊಟ್ಟಿದ್ದಾನೆ ಕೃಷ್ಣ, ಸತ್ಯಭಾಮಾ ದೇವಿಗೆ ಕ್ರೋಧದ ಉದ್ದೀಪನವನ್ನು ಮಾಡುವುದಕ್ಕೋಸ್ಕರ ಈ ರೀತಿ ಮಾತನಾಡುತ್ತಾ ಇದ್ದಾರೆ.

ಸಪತ್ನ್ಯಸ್ತೇ ಗುಣೋಪೇತೇ ಸರ್ವಾಃ ತ್ರ ಸರ್ವೇಶ್ವರಪ್ರಿಯೇ ।
ಅವಮಾನಾವಸೇಕೇನ ತ್ವಯಾ ಸಿಕ್ತಾದ್ಯ ಭಾಮಿನಿ ॥ (65.37 ವಿಷ್ಣುಪರ್ವ)

16,107 ಜನರಿಗೆ ತಿರಸ್ಕಾರ ಮಾಡಿದಂತೆ ಆಯಿತು ನೀನೇ ಒಬ್ಬಳು ಸರ್ವಮಾನ್ಯಳು, ಸರ್ವಧನ್ಯಳು ಅನ್ನುವ ರೀತಿಯಲ್ಲಿ ಅವಳನ್ನು ವರ್ಣನೆ ಮಾಡಿದ್ದಾರೆ ಅವಳು ಸುಮ್ಮನಿದ್ದಾಳೆ ಗಂಭೀರಳಾಗಿ ರುಕ್ಮಿಣಿ ದೇವಿ ಶ್ರೀಕೃಷ್ಣ ಪರಮಾತ್ಮನ ಅನುಗ್ರಹ ಅಂತ. ಸತ್ಯಭಾಮಾ ತನ್ನ ಅನೇಕ ದಾಸಿಯರನ್ನ ಅಲ್ಲಿ ಕಳಿಸಿದ್ದಳು ಸಭೆಗೆ, ಉಳಿದ ಪತ್ನಿಯರೂ ಕಳಿಸಿದ್ದಾರೆ ಆ ಎಲ್ಲ 16,107 ದಾಸಿಯರದು ಏನು ಕೆಲಸ ಓಡಿ ಹೋಗಿ ತಮ್ಮ ತಮ್ಮ ರಾಣಿಯರಿಗೆ ಸುದ್ದಿಯನ್ನು ತಿಳಿಸುವುದು ಸತ್ಯಭಾಮೆಯ ದಾಸಿಯರು ಸತ್ಯಭಾಮೆಗೆ ಈ ರೀತಿ. ರೈವತ ಪರ್ವತಕ್ಕೆ 16,108 ಜನರು ಬಂದಿದ್ದಾರೆ ಅಂತ ಹಿಂದಿದೆ ತಾವು ಬರುವುದು ಅಲ್ಲದೇ ತಮ್ಮ ದಾಸಿಯರನ್ನು ಕರೆದುಕೊಂಡು ಬಂದಿದ್ದಾರೆ ತಾವು ಕಾರ್ಯಾಂತರದಿಂದ ಈ ಮಾತು ಹೇಳುವಾಗ ಅಲ್ಲಿ ಇರಲಿಲ್ಲವೋ ಏನೋ ಆ ದಾಸಿಯರು ಹೋಗಿ ಅದನ್ನು ತಿಳಿಸಿದ್ದಾರೆ ಅಂತ ಬರುತ್ತೆ.

ತತ್ರಸ್ಥಾಃ ಶುಶ್ರುವುಃ ಪ್ರೇಷ್ಯಾಃ ಪ್ರೇಷಿತಾಃ ಸತ್ಯಭಾಮಯಾ ॥ (65.44 ವಿಷ್ಣುಪರ್ವ)

ದೇವೀನಾಂ ಚ ತಥಾಽನ್ಯಾಸಾಂ ಪತ್ನೀನಾಂ ಚ ವಿಶಾಮ್ಪತೇ । (65.45 ವಿಷ್ಣುಪರ್ವ)

ಆ ಉಳಿದವರ ದಾಸಿಯರೆಲ್ಲ ಹೋಗಿ ಆ ವಾರ್ತೆಯನ್ನು ತಿಳಿಸಿದಾಗ ಉಳಿದವರೆಲ್ಲರೂ ಹಿರಿಯಳು ರುಕ್ಮಿಣಿ ನಮ್ಮೆಲ್ಲರಿಗಿಂತ ಅವಳಿಗೆ ಆ ಮಾನ ಸನ್ಮಾನ ಮತ್ತು ಅವಳು ಮಾಡಿದ ವ್ರತಕ್ಕೆ ತಕ್ಕ ಗೌರವ, ಇದು ಯೋಗ್ಯವಾದದ್ದೆ ಬಹಳ ಸಂತೋಷ ಅಂತ ಸಂತೋಷ ಪಟ್ಟಿದ್ದಾರೆ ಉಳಿದವರೆಲ್ಲ. ಸತ್ಯಭಾಮಾ ದೇವಿ ಮಾತ್ರ ಸತ್ಯಭಾಮಾ ರುಕ್ಮಿಣಿ ಭೇದವೇ ಇಲ್ಲ ಅತ್ಯಂತ ಅಭಿನ್ನರು ಕೇವಲ ನಾಟಕವನ್ನು ಮಾಡುತ್ತಾ ಇದ್ದಾಳೆ. ಯಾವುದೇ ರೀತಿಯ ಕಲಹ ಮೊದಲಾದವುಗಳು ಇಲ್ಲದಿದ್ದರೆ ಸಂಸಾರದಲ್ಲಿ ಚೆನ್ನಾಗಿರುವುದಿಲ್ಲ ಸ್ವಲ್ಪ ಗಂಡನ ಜೊತೆಗೆ, ಸವತಿಯರ ಜೊತೆಗೆ ಜಗಳ ಆಡಿದಂತೆ ಇರಬೇಕು ನಿಜವಾಗಿ ಆಡಬಾರದು ಆಡಿದ ಹಾಗೆ ಇರಬೇಕು ಅಂದರೆ ಅದು ಚೆನ್ನಾಗಿರುತ್ತೆ. ನಿಜವಾದ ಜಗಳ ಆಡಿದರೆ ಅದು ಸಂಸಾರಕ್ಕೆ ದೂಷಣ ಒಳಗೆ ದ್ವೇಷ ಇಲ್ಲದೆ, ಅಸೂಯಾ ಮಾತ್ಸರ್ಯಾದಿಗಳು ಇಲ್ಲದೆ ಕೇವಲ ತೋರಿಕೆಗೆ ಪ್ರೇಮ ಕಲಹದ ರೂಪದೊಳಗೆ ಅದು ಇದ್ದರೆ ಅದು ಭೂಷಣ ಆ ರೀತಿ ಸತ್ಯಭಾಮಾ ಕೇವಲ ನಾಟಕವನ್ನು ಮಾಡುತ್ತಾ ಇದ್ದಾಳೆ.

ರೂಪಯೌವನಸಮ್ಪನ್ನಾ ಸ್ವಸೌಭಾಗ್ಯೇನ ಗರ್ವಿತಾ ।

ಅಭಿಮಾನವತೀ ದೇವಿ ಶ್ರತ್ಪ್ರೈವೇರ್ಷಾವಶಂಗತಾ ॥ (65.50 ವಿಷ್ಣುಪರ್ವ)

ಆ ಈರ್ಷಾ ಎಂಬ ದೋಷಕ್ಕೆ ವಶಳಾಗಿ ಹೋಗಿದ್ದಾಳೆ ಸತ್ಯಭಾಮೆ ಅಂತ ಭಾರೀ ಅಭಿಮಾನ, ಭಾರೀ ಗರ್ವ ಅವಳಿಗೆ ಅನ್ನುವುದಕ್ಕಾಗಿ ರುಕ್ಮಿಣಿ ದೇವಿಯ ಬಗ್ಗೆ ಈರ್ಷ್ಯೆಗೆ ವಶಳಾಗಿದ್ದಾಳೆ ಅಂತ ಮೇಲ್ನೋಟಕ್ಕೆ ಅರ್ಥ ತೋರುತ್ತೆ ಶ್ಲೋಕಕ್ಕೆ. ಇದರ ಅರ್ಥ ಹೇಗೆ ಅಂದರೆ **'ರೂಪಯೌವನಸಂಪನ್ನಾ'** ಅದಂತು ಸತ್ಯಭಾಮೆಯ ಗುಣ **'ಸ್ವಸೌಭಾಗ್ಯೇನ ಗರ್ವಿತಾ'** ಗರ್ವ ಅಂದರೆ ಅಹಂಕಾರ ಉನ್ಮತ್ತತೆ ಅಂತ ಅರ್ಥ ಅಲ್ಲ ಶ್ರೀಕೃಷ್ಣ ಪರಮಾತ್ಮನ ಮಡದಿ ಅನ್ನುವುದಕ್ಕಾಗಿ ನೀವು ಹೇಳುತ್ತೀರಲ್ಲವಾ ಎಲ್ಲರೂ ನಾವೆಲ್ಲ ಹೇಳುತ್ತೇವಲ್ಲ **'ಗರ್ವ್ ಸೇ ಕಹೋ ಹಮ್ ಹಿಂದು ಹೈ'** ಅಂತ. ನಾವೆಲ್ಲ ಸ್ವಾಭಿಮಾನದಿಂದ ಹೇಳಿಕೊಳ್ಳಬೇಕು ನಾವೆಲ್ಲ ಇಂತಹ ಶ್ರೇಷ್ಠವಾದ ಸನಾತನ ಧರ್ಮವನ್ನು ಅನುಸರಣೆ ಮಾಡುವವರು ಅಂತ ಹಾಗೆ ಶ್ರೀಕೃಷ್ಣ ಪರಮಾತ್ಮನು ಉಪದೇಶ ಮಾಡಿದ ಧರ್ಮವನ್ನು ಅನುಸರಣೆ ಮಾಡುವವರೇ ನಾವು ಗರ್ವದಿಂದ ಹೇಳಿಕೊಳ್ಳುವುದಾದರೆ ಕೃಷ್ಣನನ್ನೇ ಕೈ ಹಿಡಿದ ಆ ಶ್ರೀಕೃಷ್ಣನನ್ನೇ ಅನುಸರಿಸುವ ಸತ್ಯಭಾಮೆ ಆ ಗರ್ವದಿಂದ ಇದ್ದಾಳೆ ನಾನು ಕೃಷ್ಣ ಪರಮಾತ್ಮನ ಅನುಗ್ರಹಕ್ಕೆ ಪಾತ್ರಳು ಅವನ ಮಡದಿ ಅಂತ.

'ಅಭಿಮಾನವತೀ' ಇಡೀ ಜಗತ್ತಿಗೆ ಅಭಿಮಾನಿ ದೇವತೆ ಅವಳು ಅಭಿಮಾನಿನಿ ಆದ್ದರಿಂದ **'ಅಭಿಮಾನವತೀ ದೇವಿ ಶ್ರತ್ಪ್ಲೈವೇರ್ಷಾವಶಂಗತಾ'** ನಾರದರು ವರ್ಣನೆ ಮಾಡಿದ ಈ ವಿಚಾರವನ್ನು ಕೇಳಿ ಕೃಷ್ಣ ಹೂ ಕೊಟ್ಟದ್ದನ್ನು ಕೇಳಿ ಈರ್ಷೆಗೆ ಪರವಶಳಾದಳು ಅಲ್ಲ. ಸರಿಯಾಗಿ ಅಲ್ಲಿ ಪದಚ್ಛೇದ ಮಾಡಿಕೊಳ್ಳಬೇಕು **'ಶ್ರತ್ಪ್ಲೈಈರ್ಷಾ ವಶಂಗತಾ'** ಇವಳು ಈರ್ಷೆಗೆ ವಶಳಾಗಲಿಲ್ಲ **'ಅಸ್ಯಾಃ ಏವ ಈರ್ಷಾ ವಶಂಗತಾ'** ಈರ್ಷಾ ಅಂತನ್ನುವುದೇ ಬರಲಿಲ್ಲ ಇವಳಿಗೆ ರುಕ್ಮಿಣಿಯ ಬಗ್ಗೆ ಅತ್ಯಂತ ಪ್ರೀತಿಯೇ ಈರ್ಷೆಯೇ ಇವಳಿಗೆ ವಶವಾಯಿತು **'ಈರ್ಷಾವಶಂಗತಾ'** ಸತ್ಯಭಾಮಾ ಅಲ್ಲ **'ಅಸ್ಯಾಃ ಈರ್ಷಾ ವಶಂಗತಾ'** ಇವಳಿಗೇನೆ ಅದು ವಶವಾಗಿ ಹೋಗಿದೆ ಅಂತ ಹೇಳುವ ತಾತ್ಪರ್ಯ ಅಂತಹ ಎಲ್ಲ ದೋಷಗಳನ್ನು ಮೀರಿ ಇದ್ದವಳು.

ಷಡ್ ವರ್ಗ ನಿಗ್ರಹ ನಿರಸ್ತ ಸಮಸ್ತ ದೋಷಾ
ಧ್ಯಾಯಂತಿ ವಿಷ್ಣುಮೃಷಯೋ ಯದಪಾಂಗಲೇಶಮ್ ।
ಆಶ್ರೀತ್ಯ ಯಾನಪಿ ಸಮೇತ್ಯ ನ ಯಾತಿ ದುಃಖಿಂ
ಶ್ರೀರ್ಯತ್ಕಟಾಕ್ಷಬಲವತ್ಯಜಿತಂ ನಮಾಮಿ ॥ (7.4 ದ್ವಾದಶಸ್ತೋತ್ರ)

ಇವಳು ಉಪಾಸನೆ ಮಾಡಿದಂತಹ ಋಷಿಗಳಿಗೆ ಮುನಿಗಳಿಗೆ ದೇವತೆಗಳಿಗೆ ಅವರಿಗೇನೆ ಕಾಮ ಕ್ರೋದ ಲೋಭ ಮೋಹ ಮದ ಮಾತ್ಸರ್ಯಾದಿ ದೋಷಗಳು ಇರುವುದಿಲ್ಲ ಅಂತ ಹೇಳುತ್ತಾರೆ ಇವಳಿಗೆ ಎಲ್ಲಿಯ ಈರ್ಷ್ಯೆ, ಇವಳಿಗೆ ಎಲ್ಲಿಯ ಮಾತ್ಸರ್ಯ ಎಂಬುದಾಗಿ ನಾವು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು. ಆ ರೀತಿ ಈರ್ಷಾ ಅಸೂಯಾದಿಗಳು ಬಂದವರಂತೆ ನಾಟಕ ಮಾಡಿದವಳೇ ಕ್ರೋಧಾಗಾರಕ್ಕೆ ಹೋಗಿದ್ದಾಳೆ ಕ್ರೋಧದಿಂದ ಅತ್ಯಂತ ದುಃಖಿತಳಾಗಿ ತಾನು ತನ್ನ ಎಲ್ಲ ಆಭರಣಗಳನ್ನು ಕಿತ್ತಿ ಎಸೆದಿದ್ದಾಳೆ, ಮಂಚದ ಮೇಲೆ ಮಲಗಿದ್ದಾಳೆ, ಮುಖವನ್ನು ಮುಚ್ಚಿಕೊಳ್ಳುತ್ತಾಳೆ, ಕಾಲಿನಿಂದ ಭೂಮಿಯನ್ನು ಕೆದುರುತ್ತ ಇದ್ದಾಳೆ ಸಿಟ್ಟಿಗೆ ಬಂದವರು ಏನೆಲ್ಲ ಮಾಡಬಹುದೋ ಅದೆಲ್ಲ ನಾಟಕವನ್ನು ಮಾಡುತ್ತ ಇದ್ದಾಳೆ. ಶ್ರೀಕೃಷ್ಣ ಪರಮಾತ್ಮನಿಗೆ ಗೊತ್ತಾಯಿತು ಸತ್ಯಭಾಮಾ ದೇವಿಯ ಆ ಕ್ರೋಧಾಗಾರದಲ್ಲಿ ಪ್ರವೇಶ ಮಾಡುತ್ತಾ ಇದ್ದಾನೆ ಪ್ರವೇಶ ಮಾಡುವಾಗ ಎಲ್ಲ ದಾಸಿಯರಿಗೆ ಕಣ್ಸನ್ನೆಯಿಂದ ಸೂಚನೆ ಮಾಡಿದ ನಾನು ಬಂದದ್ದನ್ನು ಹೇಳುವುದು ಬೇಡ ಅಂತ. ಅವಳು ಅತ್ಯಂತ ಸಿಟ್ಟಿನಿಂದ ಮಂಚದ ಮೇಲೆ ಮಲಗಿದ್ದಾಳೆ ಸ್ವತಃ ತಾನು ಬೀಸಣಿಕೆಯನ್ನು ತೆಗೆದುಕೊಂಡು ಕೃಷ್ಣ ಪರಮಾತ್ಮ ಸತ್ಯಭಾಮಾ ದೇವಿಗೆ ಬೀಸುತ್ತಾ ಇದ್ದಾನೆ. ಪಾರಿಜಾತವನ್ನು ಕೈಯಲ್ಲಿ ತೆಗೆದುಕೊಂಡು ರುಕ್ಮಿಣಿಗೆ ಕೊಟ್ಟು ಬಂದವ ಕೃಷ್ಣ, ತೆಗೆದುಕೊಂಡು ಬಂದಿಲ್ಲ ರುಕ್ಮಿಣಿಗೆ ಕೊಟ್ಟು ಬಂದಿದ್ದಾನೆ ಅವಳು ತನ್ನ ತಲೆಯಲ್ಲಿ ಹಾಕಿಕೊಂಡಿದ್ದಾಳೆ, ಶಿರಸಾಧಾರಣ ಮಾಡಿದ್ದಾಳೆ, ಮುಡಿದು ಕೊಂಡಿದ್ದಾಳೆ.

ಕೈಯಲ್ಲಿ ಪಾರಿಜಾತವನ್ನು ಹಿಡಿದುಕೊಂಡು ಬಂದದ್ದರ ವಾಸನೆ ಇತ್ತಲ್ಲ ಆ ವಾಸನೆ ಘಮ ಘಮ ಘಮ ಅಂತ ವಾಸನೆ ಮಲಗಿದಂತಹ ಸತ್ಯಭಾಮಾ ದೇವಿಗೆ ಎಬ್ಬಿಸಿದೆ ಅದು, ಸುತ್ತಮುತ್ತಲೂ ನೋಡುತ್ತಾ ಇದ್ದಾಳೆ ಯಾರು ಹೂವು ತಂದರು, ಏನು ತಂದರು, ಎಲ್ಲಿಂದ ತಂದರು ಎಲ್ಲಿಂದ ವಾಸನೆ ಬಂತು ಅಂತ. ಅಲ್ಲಿ ಇದ್ದಂತಹ ಎಲ್ಲ ದಾಸಿಯರಿಗೆ ಕೇಳುತ್ತಾಳೆ ಕೃಷ್ಣನ ಆಜ್ಞೆ ಆಗಿತ್ತು ಮಾತಾಡಬೇಡಿ ಅಂತ ಅವರು ಕೈಜೋಡಿಸಿಕೊಂಡು, ಕೈಮುಗಿದುಕೊಂಡು ನಿಂತು ಬಿಟ್ಟರು ಏನು ಉತ್ತರನೇ ಕೊಡಲಿಲ್ಲ, ಸುಳ್ಳು ಹೇಳುವ ಹಾಗಿಲ್ಲ ಸತ್ಯ ಹೇಳುವ ಹಾಗೂ ಇಲ್ಲ ಕೃಷ್ಣನ ಆಜ್ಞೆ ಇತ್ತು ಸುಮ್ಮನೆ ಇದ್ದಾರೆ ಮಾತನಾಡಿಲ್ಲ. ಆಚೆ ಈಚೆ ನೋಡುತ್ತಾ ಇದ್ದಾಳೆ ಎಲ್ಲಿಂದ ಬಂತು ವಾಸನೆ ಪೃಥ್ವಿಯೇ ಇದ್ದಕ್ಕೆ ಇದ್ದಂತೆ ತನ್ನಲ್ಲಿರುವಂತಹ ಗಂಧದ ಗುಣವನ್ನು ಅಭಿವ್ಯಕ್ತಗೊಳಿಸುತ್ತ ಇದ್ದಾಳೋ ಅಂತನ್ನುವ

ರೀತಿಯಲ್ಲಿ ಪೃಥ್ವಿಯ ಕಡೆಗೆ ನೋಡುತ್ತಾಳೆ ಅಲ್ಲ ಅಂತ ಅನ್ನಿಸಿತು ಆಚೆ ಈಚೆ ನೋಡಿದರೆ ಕೃಷ್ಣ ಕಾಣುತ್ತಾ ಇದ್ದಾನೆ ಮಾತನಾಡಿಲ್ಲ ಮುಖ ತಿರುಗಿಸಿದ್ದಾಳೆ ನಾನಾ ರೀತಿಯಿಂದ ಶ್ರೀಕೃಷ್ಣ ಪರಮಾತ್ಮನನ್ನ ಮೊದಲು ಸುಮ್ಮನಿದ್ದು ಆಮೇಲೆ ಬಯ್ಯುತ್ತಾ ಇದ್ದಾಳೆ. ಅತ್ಯಂತ ಪ್ರೀತಿಯಿಂದ ಎಲ್ಲರಿಗಿಂತಲೂ ಉನ್ನತವಾದ ಸ್ಥಾನವನ್ನ ನನಗೆ ಕೊಟ್ಟು ನನ್ನನ್ನು ವಿಶೇಷವಾಗಿ ಅಭಿಮಾನದಿಂದ ನೀನು ನೋಡುತ್ತೀಯಾ ಅಂತ ಇಷ್ಟು ದಿವಸ ನಾನು ಅಂದುಕೊಂಡಿದ್ದೆ ನನಗೆ ಮೋಸವನ್ನು ಮಾಡಿದಿ, ಮೋಸವನ್ನು ಮಾಡಿ ಈ ರೀತಿ ರುಕ್ಮಿಣಿಗೆ ನೀನು ಆ ಪುಷ್ಪವನ್ನು ಕೊಟ್ಟುಬಿಟ್ಟಿ ಬರೀ ಪುಷ್ಪವನ್ನು ಕೊಡುವುದಷ್ಟೇ ಅಲ್ಲ, ಅಷ್ಟೆಲ್ಲ ಜನರ ಮಧ್ಯದಲ್ಲಿ ರುಕ್ಮಿಣಿಗೆ ಸ್ತೋತ್ರ ಮಾಡಿದರು ಮಾಡಿದರು ಒಂದು ಅಳತಿ ನಾರದರು ಅಷ್ಟು ಸ್ತೋತ್ರ ಮಾಡಿದರೆ ನೀನು ಸುಮ್ಮನಿರಬೇಕಾ. ನಾರದರಿಗೆ ನಾನು ಏನು ಅನ್ನುವ ಹಾಗಿಲ್ಲ ಅವರು ಋಷಿಗಳು ಮಹಾನುಭಾವರು ದೇವರ್ಷಿಗಳು ಅವರು ಸ್ತೋತ್ರ ಮಾಡಿದರು ರುಕ್ಮಿಣಿಯನ್ನು ಸೋತ್ರ ಮಾಡಬೇಕು ಅಂತ ಅವರಿಗೆ ಅನ್ನಿಸಿತು ಮಾಡಿದರು ಅದು ನಾರದರ ಇಚ್ಛೆ. ನೀನು ಯಾಕೆ ಕೇಳಬೇಕಾಗಿತ್ತು ಕೇಳದೇ ಎದ್ದು ಬರಬೇಕಾಗಿತ್ತಲ್ಲ ಈ ರೀತಿ ರುಕ್ಮಿಣಿಯನ್ನು ಮಾತ್ರ ಸ್ತೋತ್ರ ಮಾಡುವುದು ಬೇಡ, ಸತ್ಯಭಾಮೆಯನ್ನು ಸ್ತೋತ್ರ ಮಾಡು ಅಂತ ಅಂದಾದರೂ ಅನ್ನಬೇಕಾಗಿತ್ತು ಅಥವಾ ಇವಳಿಗಿಂತಲೂ ಸತ್ಯಭಾಮೆ ದೊಡ್ಡವಳಿದ್ದಾಳೆ ಅಂತ ಹೇಳಬಹುದಾಗಿತ್ತು ಅಷ್ಟು ಹೇಳುವ ಧೈರ್ಯ ಇಲ್ಲದಿದ್ದರೆ ಅಲ್ಲಿಂದ ಎದ್ದು ಬರಬಹುದಾಗಿತ್ತು. ನನಗೆ ಸಿಟ್ಟು ಬಂದದ್ದು ಅವರು ಸ್ತೋತ್ರ ಮಾಡಿದ್ದಕ್ಕಲ್ಲ ನೀನು ಕೇಳಿದ್ದಕ್ಕೆ. ನೀನು ನಾನು ಬಹಳ ಪ್ರೀತಿ ಮಾಡುತ್ತೇನೆ ನಿನ್ನ ಮೇಲೆ ಅಂತ ಸುಮ್ಮನೆ ನನಗೆ ಹೇಳುತ್ತೀಯಾ ಅಷ್ಟೇ.

ವಾಂಜ್ ಮಾತ್ರಮೇವ ಪಶ್ಯಾಮಿ ಮಾಧುರ್ಯಂ ಸಮ್ಪ್ರಯುಜ್ಯತೇ ।
ಮಯಿ ಸ್ನೇಹಶ್ಚ ಕೃತಕಸ್ತವಾನ್ಯತ್ರ ನ ಕೃತ್ರಿಮಃ ॥ (66.50 ವಿಷ್ಣುಪರ್ವ)

ರುಕ್ಮಿಣಿಯಲ್ಲಿಯೇ ನಿನಗೆ ಪ್ರೀತಿ ಇದೆ, ನನ್ನ ಮೇಲೆ ಕೃತ್ರಿಮವಾದ ಪ್ರೀತಿಯನ್ನು ತೋರಿಸುತ್ತ ಆಷ್ಟೇ ನಿಜವಾದ ಪ್ರೀತಿ ನಿನಗೆ ಇಲ್ಲ ಎಂಬುದಾಗಿ ಶ್ರೀಕೃಷ್ಣ ಪರಮಾತ್ಮನಿಗೆ ಹೇಳುತ್ತಾ ಇದ್ದಾಳೆ. ನೀನೇ ಕೊಟ್ಟಂತಹ ಸೌಭಾಗ್ಯ ಇಷ್ಟು ದಿನ ಎಂತಹ ವೈಭವದಿಂದ ತಲೆ ಎತ್ತಿ ನಾನು ನಡೆಯುತ್ತಾ ಇದ್ದೆ ಭಾರೀ ಗೌರವದಿಂದ ನಡೆಯುತ್ತಾ ಇದ್ದೆ.

ಶಿರೋ ವಹಾಮಿ ಚೇಷ್ಟತ್ತಾತ್ ತವಾಹಂ ದೇವ ಗರ್ವಿತಾ । (67.6 ವಿಷ್ಣುಪರ್ವ)

ಆದರೆ ಈಗ ಮಾತ್ರ ನನಗೆ ಅತ್ಯಂತ ಅವಮಾನವಾಗಿದೆ, ನನಗೆ ಬಹಳ ದುಃಖವಾಗಿದೆ ಸಹನೆ ಮಾಡುವುದಕ್ಕೆ ಸಾಧ್ಯವೇ ಇಲ್ಲ ಹೇಗಾದರೂ ಮಾಡಿ ಇದಕ್ಕೆ ನನಗೆ ಉಪಾಯವನ್ನು ಮಾಡಬೇಕು, ಉಪಾಯ ಅಂದರೆ ಬೇರೆ ಇನ್ಯಾವ ಉಪಾಯ ಅಲ್ಲ. ಕೃಷ್ಣ ಹೇಳುತ್ತಾನೆ ನೀನು ಏನು ಹೇಳುತ್ತೀಯೋ ಅದನ್ನು ಮಾಡುತ್ತೇನೆ ಅಂತ ಇದೊಂದು ಅಪರಾಧವನ್ನು ಕ್ಷಮೆ ಮಾಡು ಅಂತ ಇಬ್ಬರೂ ನಾಟಕ ಮಾಡುತ್ತಾ ಇದ್ದಾರೆ.

ಪ್ರಸೀದೈಕಾಪರಾಧಂ ಮೇ ಮರ್ಷಯಸ್ವ ಶುಚಿಸ್ಮಿತೇ ॥ (67.30 ವಿಷ್ಣುಪರ್ವ)

ನೀನೇನು ಚಿಂತೆ ಮಾಡಬೇಡ ಅಂತ ಅವಳು ಅನ್ನುತ್ತಾಳೆ ನಿಜವಾಗಿ ನೋಡಿದರೆ ನನಗೆ ಕೋಪ ಬೇಕಾದಷ್ಟು ಬಂದಿದೆ ಆದರೂ ಒಂದು ಧರ್ಮದ ಚೌಕಟ್ಟನ್ನು ದಾಟಿ ಹೋಗಬಾರದಲ್ಲ. ನೀನು ಪತಿ, ನಾನು ಪತ್ನಿ ಅನ್ನುವುದಕ್ಕೆ ನಿನ್ನ ಆಜ್ಞೆಯನ್ನ ಅನುಜ್ಞೆಯನ್ನ ಕೇಳುತ್ತಾ ಇದ್ದೇನೆ. ನನಗೆ ಆಜ್ಞೆ ಕೊಡು ತಪಸ್ಸು ಮಾಡುವುದಕ್ಕೆ, ನಾನು ವನಕ್ಕೆ ಹೋಗುತ್ತೇನೆ. ಸಾಕು ನಿನ್ನ ಜೊತೆಗೆ ನಾನಿನ್ನು ಇರುವುದಿಲ್ಲ, ಹೇಳದೇ ಕೇಳದೇ ಹೋಗುವುದು ಧರ್ಮ ಅಲ್ಲ. ಹಾಗೆ

ಮಾಡಿದರೆ ನಾನು ತಪಸ್ಸು ಮಾಡಿದ್ದಕ್ಕೂ ನನಗೆ ಫಲ ಸಿಗುವುದಿಲ್ಲ ನಾನು ತಪಸ್ಸು ಮಾಡಿದ್ದು ಸಾರ್ಥಕ ಆಗಬೇಕು. ನೋಡಿರಿ, ಅಂದರೆ ಸಿಟ್ಟು ಬಂದು ಜಗಳ ಆಡುವ ಸ್ಥಿತಿಯಲ್ಲಿಯೂ ಹೇಗೆ ಧರ್ಮದ ಚೌಕಟ್ಟನ್ನು ದಾಟದೇ ಜಗಳ ಆಡಬೇಕು ಅಂತ ಒಂದು ಜಗತ್ತಿಗೆ ತೋರಿಸುತ್ತಾಳೆ. ಸಿಟ್ಟು ಬಂತು ಅಂದರೆ ಮುಗಿದುಹೋಯಿತು ಏನು ಬೇಕಾದ್ದು ಮಾತಾಡುವುದು, ಏನಾದರೂ ಹೇಳಿ ಜಗಳ ಆಡಿಕೊಂಡು ಎದ್ದು ಹೋಗುವುದು ಆ ತರಹದ ಜಗಳ ಅಲ್ಲ ಇಂತಹ ಸಿಟ್ಟಿನ ಅತಿರೇಕವನ್ನು ತೋರಿಸಿದರೂ ಆ ಮಧ್ಯದಲ್ಲಿ ಒಂದು ತತ್ವವನ್ನು ತಿಳಿಸಿಕೊಡುತ್ತಾಳೆ ಸತ್ಯಭಾಮೆ.

ತಪಸ್ಯೇಯಂ ಪರಂ ಕೃತ್ವಾ ನಿಶ್ಚಯಂ ಪುರುಷೋತ್ತಮ ॥ (29.227 ಹರಿವಂಶಪರ್ವ)

ಮಾಡೋದಾದರೆ ಮಾಡಬಹುದು, ಸಿಟ್ಟಿಗೆ ಬಂದರೆ ಹೇಳದೇ ಕೇಳದೇ ಓಡಿ ಹೋಗಿ ಬಿಡಬಹುದು ವನಕ್ಕೆ, ನನಗೆ ಯಾಕೆ ಕೇಳುತ್ತೀಯಾ ಅಂದರೆ

ಭರ್ತುಶ್ಚನ್ದೇನನಾರೀಣಾಂ ತಪೋ ವಾ ವ್ರತಕಾನಿ ವಾ ।
ನಿಷ್ಫಲಂ ಖಲು ಯದ್ ಭರ್ತುರಚ್ಚನ್ದೇನ ಕ್ರಿಯೇತ ಹಿ ॥ (66.54 ವಿಷ್ಣುಪರ್ವ)

ಪತಿಯ ಆಜ್ಞೆಯು ಇಲ್ಲದೆ ತಪಸ್ಸು ಮಾಡಿದರೆ, ವ್ರತ ಮಾಡಿದರೆ ಅದು ನಿಷ್ಫಲವಾಗುತ್ತದೆ ಅದಕ್ಕೋಸ್ಕರ ನಿನ್ನ ಆಜ್ಞೆಯನ್ನು ಕೇಳುತ್ತಾ ಇದ್ದೇನೆ ಅದೊಂದಕ್ಕೆ ಆಜ್ಞೆ ಕೊಡು ಹೆಚ್ಚು ಮಾತನಾಡಬೇಡ ನಾನು ಹೊರಟುಬಿಡುತ್ತೇನೆ. ಆಗ ಕೃಷ್ಣ ಸಮಾಧಾನವನ್ನು ಮಾಡಿ ಕೊನೆಗೆ ಹೇಳುತ್ತಾನೆ ಅವಳಿಗೆ ಒಂದು ಹೂವು ಕೊಟ್ಟರೆ ನಿನಗೆ ಗಿಡವನ್ನೇ ತಂದು ಮನೆಯಲ್ಲಿ ಇಡುತ್ತೇನೆ ಯಾಕೆ ಚಿಂತೆ ಮಾಡುತ್ತೀಯಾ ಅಷ್ಟು ಹೇಳಿದ್ದೇ ತಡ ಸಿಟ್ಟು ಇಳಿದು ಹೋಗಿದೆ ಪೂರ್ಣವಾಗಿ, ಶಾಂತಳಾಗಿದ್ದಾಳೆ. **'ಮನ್ಯುರೇಷ ಪ್ರಮೃಷ್ಟೋ ಹಿ'**[1] ಪೂರ್ಣವಾಗಿ ಸಿಟ್ಟು ನನ್ನದು ಮಾಯವಾಗಿ ಹೋಯಿತು ಬಹಳ ಸಂತೋಷ ಅಂತ ನಗು ನಗುತ್ತಾ ಇದ್ದಾಳೆ. ಇದ್ದಕ್ಕಿದ್ದಂತೆ ಇಬ್ಬರೂ ಸ್ನಾನವನ್ನು ಮಾಡಿ ಶ್ರೀಕೃಷ್ಣ ಪರಮಾತ್ಮ ತನ್ನ ಎಲ್ಲ ಕಾರ್ಯಗಳನ್ನೆಲ್ಲ ಮಾಡಿದ್ದಾನೆ **'ಚಕಾರಾವಶ್ಯಕಂ ಸರ್ವಂ'**[2] ಸಂಧ್ಯಾವಂದ್ಯನಾದಿಗಳನ್ನು ಎಲ್ಲವನ್ನು ಮಾಡಿ ನಾರದರ ಸ್ಮರಣೆಯನ್ನು ಮಾಡಿದ್ದಾರೆ. ನಾರದರೂ ಕೂಡ ಸ್ನಾನವನ್ನು ಮಾಡಿಕೊಂಡು ಅಲ್ಲಿ ಬಂದಿದ್ದಾರೆ ಉತ್ತಮವಾದ ಬಂಗಾರದ ಪಾತ್ರೆಯಿಂದ ಅವರಿಗೆ ಅರ್ಘ್ಯಪಾದ್ಯಾದಿಗಳಿಂದ ಗೌರವವನ್ನು ಪರಮಾತ್ಮ ಸಲ್ಲಿಸಿದ್ದಾನೆ. ನೋಡಿ ನಾರದರು ಬಂದು ರುಕ್ಮಿಣಿಯನ್ನು ವರ್ಣನೆ ಮಾಡಿದ್ದಕ್ಕೆ ಇವಳಿಗೆ ಸಿಟ್ಟು ಬಂದಿತ್ತು ಪಾರಿಜಾತ ಪುಷ್ಪವನ್ನು ಕೊಟ್ಟದ್ದಕ್ಕೆ, ಪಾರಿಜಾತ ವೃಕ್ಷವನ್ನೇ ನಿನಗೆ ಕೊಡುತ್ತೇನೆ ಅಂತ ಹೇಳಿ ಒಂದು ಸಮಾಧಾನ ಮಾಡಿದ್ದ ಕೃಷ್ಣ. ಇನ್ನು ನಾರದರನ್ನು ಕರಿಸಿ ಸಮಾಧಾನ ಮಾಡಿ ಇವರೆಲ್ಲ ಅರ್ಘ್ಯಪಾದ್ಯಾದಿಗಳಿಂದ ಪೂಜೆಯನ್ನು ಮಾಡಿದ ಮೇಲೆ ನಾರದರು ಅನ್ನುತ್ತಾರೆ.

ಸವಿಶೇಷಂ ಚ ಸುಭಗಾ ಭವ ಮತ್ತಪಸೋ ಬಲಾತ್ ॥ (67.45 ವಿಷ್ಣುಪರ್ವ)

ಎಲ್ಲರಿಗಿಂತಲೂ ಉತ್ತಮ ಸೌಭಾಗ್ಯವತಿ ಆಗುತ್ತೀಯಾ ನೀನು ಅಂತ ನಾರದರು ಇವಳನ್ನು ವರ್ಣನೆ ಮಾಡಿದಾಗ ಸತ್ಯಭಾಮಾ ದೇವಿಗೆ ಸಂತೋಷವಾಗಿದೆ. ನಾರದರಿಗೆ ಯಥೇಚ್ಛವಾಗಿ ಆತಿಥ್ಯವನ್ನು ಮಾಡಿ ಅವರು ಭೋಜನ ಮಾಡಿದ ಮೇಲೆ ಉಳಿದಂತಹ ಪಾತ್ರೆಯಲ್ಲಿ ಉಳಿದ ವಿಘಸಾನ್ನ ಅಂತ ಅನ್ನುತ್ತಾರೆ. ಬಂದ ಅತಿಥಿ ಅಭ್ಯಾಗತರಿಗೆಲ್ಲ ಕೊಟ್ಟ ಮೇಲೆ ಏನು ಉಳಿಯುತ್ತಲ್ಲ ಅದಕ್ಕೆ ವಿಘಸಾನ್ನ ಅಂತ ಹೆಸರು ಬಹಳ ಪವಿತ್ರವಾದ ಅನ್ನ

1. 67.34 ವಿಷ್ಣುಪರ್ವ, 2. 67.37 ವಿಷ್ಣುಪರ್ವ

ಅಂತಹ ಪವಿತ್ರವಾದ ಅನ್ನವನ್ನ ಕೃಷ್ಣ ಹಾಗೂ ಸತ್ಯಭಾಮೆಯರು ಸ್ವೀಕಾರ ಮಾಡಿದ್ದಾರೆ. ಮನೆಗೆ ಬಂದ ಅತಿಥಿಗಳಿಗೆ ಉಪವಾಸ ಕೂಡಿಸಿ ತಾವು ಊಟ ಮಾಡಿ ಆಮೇಲೆ ಅವರಿಗೆ ಊಟಕ್ಕೆ ಹಾಕುವುದಲ್ಲ, ಬಂದ ಅತಿಥಿಗಳಿಗೆ, ಜ್ಞಾನಿಗಳಿಗೆ ಸತ್ಕಾರವನ್ನು ಮಾಡಿ, ಆತಿಥ್ಯವನ್ನು ಮಾಡಿ ಆ ಪವಿತ್ರವಾದ ಅನ್ನ ಏನಿದೆ ಆ ಒಂದೊಂದು ತುತ್ತು ಅನ್ನ ತಿಂದರೂ ಉತ್ತಮವಾದಂತಹ ವರ್ಚಸ್ಸು, ತೇಜಸ್ಸು, ಮಹಾಪುಣ್ಯ ಎಲ್ಲವನ್ನು ಪಡೆಯುವುದಕ್ಕೆ ಸಾಧ್ಯವಿದೆ ಅಂತ ಜಗತ್ತಿಗೆ ಪರಮಾತ್ಮ ತೋರಿಸಿಕೊಡುತ್ತಾನೆ ಅಲ್ಲಿಂದ ಹೊರಟಿದ್ದಾರೆ ನಾರದರು.

ಈ ಕಡೆಗೆ ನಾರದರು ಇಂದ್ರ ದೇವರ ಸಭೆಗೆ ಬರುತ್ತಾ ಇದ್ದಾರೆ. ಶ್ರೀಕೃಷ್ಣ ಪರಮಾತ್ಮ ನಾರದರಿಗೆ ತಿಳಿಸಿದ್ದಾನೆ ಈ ರೀತಿ ನಾನು ವಚನ ಕೊಟ್ಟಿದ್ದೇನೆ ಸತ್ಯಭಾಮೆಗೆ ಪಾರಿಜಾತ ವೃಕ್ಷವನ್ನೇ ಇಲ್ಲಿ ತಂದು ನಿನಗೆ ಕೊಡುತ್ತೇನೆ ಅಂತ ಹೀಗಾಗಿ ಅದರ ಬಗ್ಗೆ ನೀವು ಇಂದ್ರ ದೇವರಿಗೆ ಹೋಗಿ ತಿಳಿಸಬೇಕು ಅಂತ ನಾರದರಿಗೆ ಕೃಷ್ಣ ಹೇಳುತ್ತಾನೆ ಹೀಗೆ ಶ್ರೀಕೃಷ್ಣ ಪರಮಾತ್ಮ ಪಾರಿಜಾತ ವೃಕ್ಷವನ್ನ ಬಯಸಿದ್ದಾನೆ ಅದನ್ನು ತೆಗೆದುಕೊಂಡು ಹೋಗುತ್ತಾನೆ ಅಂತ ತಿಳಿಸಬೇಕು ಅಂತ. ನಾರದರು ಅಂದರು ಬಹಳ ಕಷ್ಟ ಅದು ಇಂದ್ರ ದೇವರು ಕೊಡಲಿಕ್ಕಿಲ್ಲ ನಿನಗೆ ಅಂತ ಯಾಕೆ ಈ ಪಾರಿಜಾತ ವೃಕ್ಷ ಬಹಳ ಶಚೀ ದೇವಿಗೆ ಪ್ರಿಯವಾದದ್ದು, ದೇವತಾ ಸ್ತ್ರೀಯರಿಗೆ ಎಲ್ಲರಿಗೂ ಪ್ರಿಯವಾದದ್ದು ಇದನ್ನು ಬಿಟ್ಟು ಕೊಡೋದಿಲ್ಲ. ಇದೇ ಪಾರಿಜಾತ ವೃಕ್ಷಕ್ಕೇನೆ ಅದಿತಿ ದೇವಿ ಕಶ್ಯಪರಿಗೆ ಪುಷ್ಪದ ಮಾಲೆಯಿಂದ ಕಟ್ಟಿ ದಾನ ಕೊಟ್ಟಿದ್ದಾಳೆ ನನಗೇ ಅದೊಂದು ವ್ರತ ಪುಣ್ಯಕ ವ್ರತವನ್ನು ಮಾಡಿ ಗಂಡನನ್ನೇ ದಾನವಾಗಿ ಕೊಡುವುದು ಮತ್ತೆ ಪುನಃ ಕ್ರಯ ಕೊಟ್ಟು ಗಂಡನನ್ನು ಹತ್ತಿರ ಕರೆದುಕೊಳ್ಳುವುದು ಅಂತ. ಹೀಗೆ ಅದಿತಿ ದೇವಿ ನನಗೆ ದಾನ ಕೊಟ್ಟಿದ್ದಾಳೆ ಕಶ್ಯಪರನ್ನ, ಶಚೀ ಇಂದ್ರನನ್ನ ದಾನ ಕೊಟ್ಟಿದ್ದಾಳೆ ಮತ್ತೆ ನಾನು ಅವರಿಗೆ ತಿರುಗಿ ಕೊಟ್ಟದ್ದುಂಟು ಕ್ರಯಕ್ಕೆ. ಹೀಗೆ ಸೌಭಾಗ್ಯದ ಅಭಿವೃದ್ಧಿಗಾಗಿ ಈ ಪಾರಿಜಾತ ವೃಕ್ಷಕ್ಕೆ ಪುಷ್ಪ ಮಾಲೆಯಿಂದ ಅವರ ಶಿರಸ್ಸಿಗೆ ಬಂಧನ ಮಾಡಿ ದಾನವನ್ನು ಕೊಡುವಂತಹ ಪದ್ಧತಿ ಇದೆ ಆ ವ್ರತಕ್ಕೋಸ್ಕರ ಅವರು ಅದನ್ನು ಉಪಯೋಗಿಸುತ್ತಾರೆ. ರೋಹಿಣಿ ದೇವಿ ಚಂದ್ರನನ್ನ, ಋದ್ಧಿ ದೇವಿ ಕುಬೇರನನ್ನ ದಾನ ಕೊಟ್ಟಿದ್ದುಂಟು ಇದೇ ವೃಕ್ಷದ ಜೊತೆಗೆ ಸೇರಿಸಿ ಇಂತಹ ಶ್ರೇಷ್ಠವಾದ ಈ ಪಾರಿಜಾತ ವೃಕ್ಷ ಇದನ್ನು ಅಷ್ಟು ಸುಲಭವಾಗಿ ಇಂದ್ರ ದೇವರು ಬಿಟ್ಟು ಕೊಡುವುದಕ್ಕೆ ಸಾಧ್ಯ ಇಲ್ಲ. ಕೃಷ್ಣ ಅಂದ ಅದಕ್ಕೋಸ್ಕರನೇ ಬೇಕು ಅವರೆಲ್ಲ ದಾನ ಹೇಗೆ ಮಾಡಿದ್ದಾರೋ ಸತ್ಯಭಾಮೆ ಅದೇ ರೀತಿ ನನ್ನನ್ನು ದಾನ ಮಾಡಬೇಕು ಅಂತ ಅಪೇಕ್ಷೆ ಪಡುತ್ತಾಳೆ ವ್ರತ ಮಾಡಿ ಅದಕ್ಕೋಸ್ಕರ ಆ ಪಾರಿಜಾತ ವೃಕ್ಷ ಬೇಕು ಅಂತ ಇಂದ್ರ ದೇವರಿಗೆ ಹೇಳಿ ಅಂತ ನಾರದರಿಗೆ ತಿಳಿಸುತ್ತಾನೆ.

ನಾರದರು ಈ ಪಾರಿಜಾತದ ಮಹತ್ವವನ್ನು ಹೇಳುತ್ತಾ ಯಾಕೆ ಇದಕ್ಕೆ ಪಾರಿಜಾತ ಅಂತ ಹೆಸರು ಬಂತು ಅಂತ ಹೇಳುತ್ತಾರೆ.

ಪರಿ ಜಾತೋ ವಿಷ್ಣುಪದ್ಯಾಃ ಪಾರಿಜಾತೇತಿಶಬ್ದಿತಃ । (67.70 ವಿಷ್ಣುಪರ್ವ)

ಪರಿ ಅಂದರೆ ಉಪರಿ, ಗಂಗೆಯ ಮೇಲೆ ಇದು ಜನಿಸಿದ್ದಕ್ಕೋಸ್ಕರ ಇದಕ್ಕೆ ಗಂಗೆಯ ಪರಿ ಉಪರಿ ಜಾತವಾದದ್ದರಿಂದ ಇದು ಪಾರಿಜಾತ ಅಂತ. ಇನ್ನು ಇದಕ್ಕೆ ಮಂದಾರ ಮಂದಾರ ಎಂಬುದಾಗಿಯೂ ಹೇಳುತ್ತಾರೆ ಯಾಕೆ ಅಂದರೆ **'ಸಂಯೋಗೇ ಮಾನಯಿತುಂ ವಿಯೋಗೇ ದಾರಯಿತುಂ ಯೋಗ್ಯಾನೀ ಮಂದಾರಾಣೀ'** ಮಂದಾರ ಪುಷ್ಪಗಳನ್ನು ಕೊಡುತ್ತೆ ಆದ್ದರಿಂದ ಇದು ಮಂದಾರ ವೃಕ್ಷ. ಏನು ಮಂ ದಾರ ಅಂದರೆ ತನ್ನ ಸಂಯೋಗವಾದರೆ ವಿಶೇಷವಾದ ಮಾನ, ವಿಯೋಗವಾದರೆ ವಿದಾರಣವನ್ನ ಮಾಡುವುದಕ್ಕೆ ಸಮರ್ಥವಾದದ್ದು ಆದ್ದರಿಂದ ಇದು ಮಂ ದಾರ ಅಂತಹ ಮಂದಾರ ಪುಷ್ಪಗಳನ್ನು ನೀಡುವ ವೃಕ್ಷ ಇದು ಮಂದಾರ ವೃಕ್ಷ. ಸಾಮಾನ್ಯರಿಗೆ ಇದು ಏನು ಗಿಡ

ಎಲ್ಲಾ ಹೂವುಗಳನ್ನು ಕೊಡುತ್ತದೆ, ಎಲ್ಲಾ ವಾಸನೆಯು ಬರುತ್ತದೆ, ಎಲ್ಲಾ ತರಹದ ಸ್ಪರ್ಶ ಕೊಡುತ್ತದೆ, ಬೇಡಿದ್ದೆಲ್ಲ ಕೊಡುತ್ತದೆ ಇದು ಯಾವುದಾದರೂ ವೃಕ್ಷ ಅಪ್ಪ ಇದು ಗೊತ್ತೇ ಆಗುತ್ತ ಇಲ್ಲವಲ್ಲ ಅಂತಾರಂತೆ. ಕೋಯಂದಾರುಃ ಕೋಯಂದಾರುಃ ಅನ್ನುತ್ತಾರೆ ಅಂತ ಕೋವಿದಾರ ಅಂತ ಇದಕ್ಕೆ ಹೆಸರು ಬಂದುಬಿಟ್ಟಿದೆ.

ಕೋऽಪ್ಯಯಂ ದಾರುರಿತ್ಯಾಹುರಜಾನನ್ತೋ ಯತೋ ಜನಾಃ ।

ಕೋವಿದಾರ ಇತಿ ಖ್ಯಾತಸ್ತತಃ ಸ ಸುಮಹಾತರುಃ ॥ (67.71 ವಿಷ್ಣುಪರ್ವ)

ಹೀಗೆ ಪಾರಿಜಾತ, ಮಂದಾರ, ಕೋವಿದಾರ ಇತ್ಯಾದಿ ಅನೇಕ ಹೆಸರುಗಳಿಂದ ಪ್ರಸಿದ್ಧವಾದಂತಹದ್ದು ಈ ವೃಕ್ಷ ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ. ಆಗ ನಾರದರಿಗೆ ಶ್ರೀಕೃಷ್ಣ ಪರಮಾತ್ಮ ಹೇಳಿದ ಇಷ್ಟೆಲ್ಲಾ ಮಹಿಮೆ ಇದೆ, ಇಷ್ಟೆಲ್ಲ ದೇವತಾಸ್ತ್ರೀಯರು ದಾನ ಮಾಡಿದ್ದಾರೆ ತಮ್ಮ ತಮ್ಮ ಪತಿಗಳಿಗೆ ಈ ವೃಕ್ಷದ ಪೂಜೆಯನ್ನು ಮಾಡಿ ಅದರ ಜೊತೆಗೆ ಅಂತ ಹೇಳುತ್ತ ಇದ್ದೀರಿ ಹಾಗಾದರೆ ಆ ವೃಕ್ಷವನ್ನ ನಾನು ತೆಗೆದುಕೊಂಡು ಬರುತ್ತೇನೆ, ಕೊಟ್ಟು ಕಳಿಸು ಅಂತ ಇಂದ್ರ ದೇವರಿಗೆ ನೀವು ತಿಳಿಸಬೇಕು ಅಂದಾಗ ಹೇಳಿದರು. ಹಿಂದೆ ರುದ್ರ ದೇವರೇ ಈ ವೃಕ್ಷವನ್ನ ಕೇಳಿದ್ದರು ಇಂದ್ರನಿಗೆ ಅವನು ಆಗಲೂ ಕೊಟ್ಟಿಲ್ಲ. ಕೊಡದಿರುವಾಗ ರುದ್ರ ದೇವರು ತಮ್ಮ ಸಾಮರ್ಥ್ಯದಿಂದಲೇನೇ ಒಂದು ಪ್ರತ್ಯೇಕವಾದ ಪಾರಿಜಾತದ ವನವನ್ನೇ ನಿರ್ಮಾಣ ಮಾಡಿ, ಯಾವ ಸೂರ್ಯನ ಪ್ರಕಾಶ, ಚಂದ್ರನ ಪ್ರಕಾಶ, ಗಾಳಿಯೂ ಅಲ್ಲಿ ಪ್ರವೇಶ ಮಾಡಿರಬಾರದು ಅಂತಹ ಸುಭದ್ರವಾದ ಒಂದು ಏಕಾಂತದ ವನವನ್ನ ತಾವು ತಮ್ಮ ಶಕ್ತಿಯಿಂದಲೇ ನಿರ್ಮಾಣ ಮಾಡಿದರು. ನಿರ್ಮಾಣ ಮಾಡಿ ಅಲ್ಲಿ ತಾವು ಉಮಾ ದೇವಿಯ ಜೊತೆಗೆ ವಿಹಾರವನ್ನು ಮಾಡುತ್ತಾರೆ, ತಮ್ಮದೇ ಆದ ತೇಜಸ್ಸಿನಿಂದ ಅಲ್ಲಿ ಬೆಳಕನ್ನು ಕೊಡುತ್ತಾರೆ ಅಲ್ಲಿ ಸೂರ್ಯ ಚಂದ್ರರ ಪ್ರಕಾಶಕ್ಕೂ ಅವಕಾಶ ಕೊಡುವುದಿಲ್ಲ,

ನ ತತ್ರ ಸೂರ್ಯಭಾಃ ಕೃಷ್ಣ ಪ್ರವಿಶನ್ತಿ ನಗೋತ್ತಮೇ ।

ನ ಚ ಚನ್ದ್ರಪ್ರಭಾ ಶೀತಾ ನೈವ ಕೃಷ್ಣ ಸದಾಗತಿಃ ॥ (68.19 ವಿಷ್ಣುಪರ್ವ)

ಗಾಳಿಯೂ ಇಲ್ಲ, ಸೂರ್ಯ ಚಂದ್ರರ ಬೆಳಕೂ ಇಲ್ಲ ತಾವೇ ಗಾಳಿಯನ್ನೂ ಕೊಡುತ್ತಾರೆ, ತಾವೇ ಬೆಳಕನ್ನೂ ಕೊಡುತ್ತಾರೆ ರುದ್ರ ದೇವರು. ಅಂತಹ ಅದ್ಭುತವಾದ ವನವನ್ನ ಅಲ್ಲಿ ನಿರ್ಮಾಣ ಮಾಡಿ ತಮ್ಮ ಎಲ್ಲ ಪ್ರಮಥ ಗಣ ಹಾಗೂ ಪಾರ್ವತಿ ದೇವಿಯರಿಂದ ತಮ್ಮದೇ ಆದಂತಹ ಒಂದು ರಾಜ್ಯವನ್ನು ಅಲ್ಲಿ ಮಾಡುತ್ತ ಇರುತ್ತಾರೆ ರುದ್ರ ದೇವರು. ಅಂಧಕ ಅಂತ ಒಬ್ಬ ಮಹಾ ಅಸುರ ವೃತ್ರಾಸುರನ ಸಂಹಾರವನ್ನು ಮಾಡಿ ಮಹಾ ಪರಾಕ್ರಮವನ್ನು ಇಂದ್ರ ದೇವರು ತೋರಿಸಿದರೆ ವೃತ್ರಾಸುರನಿಗಿಂತಲೂ ಹತ್ತು ಪಟ್ಟು **'ವೃತ್ರಾದ್ ದಶಗುಣಂ ಬಲೀ'**[1] ಅಂತಹ ಬಲಿಷ್ಠನಾದ ಆ ಅಂಧಕಾಸುರನನ್ನ ಸಂಹಾರ ಮಾಡಿದ್ದಾರೆ. ಅವನು ಅನೇಕ ದೇವತೆಗಳ ವರದಿಂದ ಅವಧ್ಯನಾದವನು ಅಂಧವನನ್ನೂ ಸಂಹಾರ ಮಾಡಿ ರುದ್ರ ದೇವರು ಆ ಮಂದರ ಪರ್ವತದಲ್ಲಿ ಪಾರ್ವತಿಯ ಜೊತೆಗೆ ಇರುತ್ತಾರೆ ಅಂತ ನಾವು ತಿಳಿದಿದ್ದೇವೆ. ಇಷ್ಟು ಪಾರಿಜಾತದ ಬಗ್ಗೆ ಇಂದ್ರ ದೇವರಿಗೆ ಅಭಿಮಾನ ಇದೆ ರುದ್ರ ದೇವರೇನೋ ಅದನ್ನು ಬೇರೆ ಮಾಡಿಕೊಂಡರು ಆದರೆ ಇಂದ್ರ ಮಾತ್ರ ಕೊಟ್ಟಿಲ್ಲ ಅಂತನ್ನುವುದು ಸತ್ಯ ಅಂತ. ಶ್ರೀಕೃಷ್ಣ ತಾನು ಸರ್ವೋತ್ತಮ, ಸರ್ವನಿಯಾಮಕ, ಸರ್ವ ಸೃಷ್ಟಿಕರ್ತ ಆದರೆ ನಾರದರಿಗೆ ಹೇಳುತ್ತಾನೆ ಇಂದ್ರ ನನಗೆ ಅಣ್ಣ, ನಾನು ಉಪೇಂದ್ರ ಅವನ ತಮ್ಮನಾಗಿ ಹುಟ್ಟಿದವನಲ್ಲ ಅವನ ತಮ್ಮನಾಗಿ ಹುಟ್ಟಿದ ಮೇಲೆ ಆ ತಮ್ಮ ಅನ್ನುವ ಪ್ರೀತಿ ವಾತ್ಸಲ್ಯದಿಂದ ಅವನು

1. 68.28 ವಿಷ್ಣುಪರ್ವ

ಪಾರಿಜಾತವನ್ನು ಕೊಡಲಿ. ಇಂದ್ರನ ದೃಷ್ಟಿಯಲ್ಲಿ ರುದ್ರ ದೇವರು ಉಮಾ ದೇವಿ ಹಿರಿಯರು ಹಾಗೂ ರುದ್ರ ದೇವರು ಗುರು ಹೀಗಾಗಿ ಆ ಗುರುಗಳು ಜ್ಯೇಷ್ಠರು ದೊಡ್ಡವರು ಅನ್ನುವುದಕ್ಕೆ ಅವರೆದುರಿಗೆ ಇವನು ಚಿಕ್ಕವನಾಗಿ ಹಠ ಮಾಡಿ ನನ್ನ ವೃಕ್ಷ ನನಗೆ ಬೇಕು ನಾನು ಕೊಡುವುದಿಲ್ಲ ಅಂತ ದೊಡ್ಡವರ ಎದುರಿಗೆ ಚಿಕ್ಕವರು ಹಠ ಮಾಡಿ ತಮ್ಮ ಪದಾರ್ಥಗಳನ್ನು ತಾವು ಇಟ್ಟುಕೊಳ್ಳುವಂತೆ ಇಟ್ಟುಕೊಂಡಿದ್ದಾನೆ ಅದು ಚೆನ್ನಾಗಿ ಕಾಣಿಸುತ್ತದೆ. ಈಗ ವಿಪರೀತ ಅಲ್ಲವಾ ನಾನೇ ಚಿಕ್ಕವ ಇಂದ್ರನೇ ದೊಡ್ಡವ ಅಣ್ಣ ನಾನು ತಮ್ಮ ಹಾಗಾದರೆ ತಮ್ಮ ಕೇಳುವಾಗ ಅಣ್ಣನಾಗಿ ಹಿರಿಯನಾಗಿ ತಮ್ಮನಿಗೆ ಕೊಡಬೇಕಾದದ್ದು ಅವನ ಧರ್ಮ ಅಲ್ಲವಾ ಅದಕ್ಕೋಸ್ಕರ ಕೊಡುವುದಕ್ಕೆ ಹೇಳಿ ಅಂತ ಶ್ರೀಕೃಷ್ಣ ಪರಮಾತ್ಮ ಹೇಳುತ್ತಾನೆ. ಅಷ್ಟಕ್ಕೂ ಮೀರಿ ನಿನ್ನ ಮನೆಯಲ್ಲಿ ಈ ವೃಕ್ಷವನ್ನು ತಂದು ಇಡುತ್ತೇನೆ ಅಂತ ನಾನೊಂದು ವಚನ ಕೊಟ್ಟಿದ್ದೇನೆ ಸತ್ಯಭಾಮೆಗೆ ಕೊಟ್ಟ ವಚನ ಇದು ಸತ್ಯ ಮಾಡಬೇಕು, ನಾನು ಸುಳ್ಳು ಮಾತನಾಡಿದರೆ ಇನ್ನುಳಿದವರು ನನ್ನಂತೆ ಸುಳ್ಳು ಮಾತನಾಡುವುದಕ್ಕೆ ಶುರು ಮಾಡುತ್ತಾರೆ ಅದಕ್ಕೆ ನಾವೇ ಸುಳ್ಳು ಮಾತನಾಡಬಾರದು.

ನಾನೃತಂ ಹಿ ವಚೋ ವಿಪ್ರ ಪ್ರೋಕ್ತಂ ಪೂರ್ವಂ ಮಯಾನಘ ॥ (68.36 ವಿಷ್ಣುಪರ್ವ)

ಎಂದೂ ನಾನು ಸುಳ್ಳು ಮಾತಾನಾಡಿಲ್ಲ, ಮಾತನಾಡುವುದಿಲ್ಲ ನಾನು ಆಡಿದ್ದೆಲ್ಲವೂ ಸತ್ಯವೇ ನನ್ನ ವಚನವನ್ನು ನನ್ನ ಭಕ್ತರೆಲ್ಲ ಅನುಸರಣೆ ಮಾಡುತ್ತಾರೆ ಆದ್ದರಿಂದ ನನ್ನ ಮಾತನ್ನು ಸತ್ಯ ಮಾಡಬೇಕು ನೀವು ಅಂತ ನಾರದರಿಗೆ ಹೇಳಿ ಕೊನೆಗೆ ಒಂದು ಮಾತು ಹೇಳುತ್ತಾನೆ. ಒಂದು ವೇಳೆ ಪಾರಿಜಾತ ವೃಕ್ಷವನ್ನು ತಮ್ಮ ಅಂತ ಪ್ರೀತಿಯಿಂದ ಕೊಡದಿದ್ದರೆ ಅವನ ಎದೆಯ ಮೇಲೆ ಗದಾ ಪ್ರಹಾರವನ್ನು ಮಾಡಿ ಇಂದ್ರನನ್ನು ಸೋಲಿಸಿ ಆ ಪಾರಿಜಾತ ವೃಕ್ಷವನ್ನು ನಾನು ತರುತ್ತೇನೆ ಅನ್ನುವ ಸಂದೇಶವನ್ನೂ ಇಂದ್ರ ದೇವರಿಗೆ ನೀವು ಮುಟ್ಟಿಸಬೇಕು ಎಂಬುದಾಗಿ ಶ್ರೀಕೃಷ್ಣ ಪರಮಾತ್ಮ ನಾರದರಿಗೆ ಹೇಳಿ ಕಳಿಸುತ್ತಾನೆ.

ನಾರದರು ಬಂದಿದ್ದಾರೆ ನಾರದರು ಬರುವ ಹೊತ್ತಿಗೆ ಇಂದ್ರ ಲೋಕದಲ್ಲಿ ಒಂದು ವಿಶೇಷವಾದಂತಹ ಉತ್ಸವ ನಡೆಯುತ್ತ ಇದೆ ಉಮಾ ಸಹಿತರಾಗಿ ರುದ್ರ ದೇವರು ಅಲ್ಲಿ ಬಂದಿದ್ದಾರೆ. ಪುಣ್ಯವನ್ನು ಮಾಡಿ ಸ್ವರ್ಗಕ್ಕೆ ಹೋದಂತಹ ಪುಣ್ಯವಂತರಾದ ಜನರೆಲ್ಲ ಅಲ್ಲಿದ್ದಾರೆ, ಸ್ವರ್ಗದಲ್ಲಿಯೇ ಇರುವಂತಹ ದೇವತೆಗಳು ಇದ್ದಾರೆ. ಋಷಿಗಳು, ಮುನಿಗಳು ಅನೇಕ ಸಿದ್ಧರು, ಸಾಧ್ಯರು ವಸು ರುದ್ರ ಆದಿತ್ಯಾದಿ ದೇವತೆಗಳು ಎಲ್ಲರೂ ಕೂಡ ಆ ರುದ್ರ ದೇವರಿಗೆ ವಿಶೇಷವಾದ ಪೂಜೆಯನ್ನು ಸಲ್ಲಿಸುತ್ತಾ ಇದ್ದಾರೆ. ಆ ರೀತಿ ಆದಿತ್ಯರಲ್ಲಿ ವಿಷ್ಣು ಇದ್ದಾನೆ ಆ ವಿಷ್ಣುವನ್ನು ಬಿಟ್ಟು ಇನ್ನುಳಿದವರೆಲ್ಲ ವಸು ರುದ್ರಾ ಆದಿತ್ಯಾದಿ ರುದ್ರ ದೇವರಿಗಿಂತಲೂ ಚಿಕ್ಕವರಾದ ಎಲ್ಲಾ ದೇವತೆಗಳು ಅತ್ಯಂತ ಭಕ್ತಿ ಶ್ರದ್ಧೆಗಳಿಂದ ಋಷಿ ಮುನಿಗಳೆಲ್ಲರೂ ಸೇರಿಕೊಂಡು, ಇಂದ್ರ ದೇವರೂ ಸೇರಿಕೊಂಡು ಪೂಜೆಯನ್ನು ಸಲ್ಲಿಸಿದ್ದಾರೆ, ಗಂಧರ್ವರು ಗಾನವನ್ನು ಮಾಡುತ್ತಾ ಇದ್ದಾರೆ ವೇದ ಮಂತ್ರ ಪಠಣಾದಿಗಳಿಂದ ಎಲ್ಲ ಉತ್ಸವ ಎಲ್ಲ ಮುಗಿದಿದೆ. ಅದಾದ ಮೇಲೆ ರುದ್ರ ದೇವರು ತಮ್ಮ ಲೋಕಕ್ಕೆ ತಾವು ಹೋದಮೇಲೆ ಇಂದ್ರ ದೇವರಿಗೆ ನಾರದರು ಶ್ರೀಕೃಷ್ಣ ಪರಮಾತ್ಮನ ಸಂದೇಶವನ್ನು ಮುಟ್ಟಿಸಿದ್ದಾರೆ.

ಇಂದ್ರ ದೇವರು ಅತ್ಯಂತ ಪ್ರೀತಿಯಿಂದ ಗೌರವಯುತವಾಗಿ ಮಾತನಾಡಿದರೂ ತನ್ನ ಹಠ ಮಾತ್ರ ಬಿಟ್ಟಿಲ್ಲ ಪಾರಿಜಾತ ವೃಕ್ಷವನ್ನು ಕೊಡುವುದಕ್ಕೆ ಸಾಧ್ಯ ಇಲ್ಲ. ಶ್ರೀಕೃಷ್ಣ ಪರಮಾತ್ಮ ನನ್ನ ಸ್ಮರಣೆ ಮಾಡಿದ ನನ್ನನ್ನು ನೆನೆಸಿಕೊಂಡ ಅನ್ನುವುದೇ ಒಂದು ನನ್ನ ದೊಡ್ಡ ಭಾಗ್ಯ ಅಂತ ಅನ್ನುತ್ತಾನೆ ಮತ್ತೆ **'ಪ್ರೇಷಿತೋಽಸ್ಮಿ ಮಹಾತ್ಮನಾ'**[1] ಅವನು ನನ್ನನ್ನು ನೆನಪು ಮಾಡಿಕೊಂಡ ಅಂದಮೇಲೆ ನನ್ನ ಜೀವನ ಸಾರ್ಥಕವಾಯಿತು ನಾನು ಪವಿತ್ರನಾದೆ, ನಾನು ಧನ್ಯನಾದೆ ಆದರೆ

1. 69.21 ವಿಷ್ಣುಪರ್ವ

ಈ ಪಾರಿಜಾತ ವೃಕ್ಷವನ್ನು ಕೊಡುವುದಕ್ಕೆ ಸಾಧ್ಯ ಇಲ್ಲ, ಯಾಕೆ ಅಂದರೆ ಶ್ರೀಕೃಷ್ಣ ಪರಮಾತ್ಮನೇ ಕೊಟ್ಟದ್ದು ನನಗೆ ಈ ರಾಜ್ಯವನ್ನು, ಅವನೇ ನನಗೆ ಇಲ್ಲಿ ಕೂಡಿಸಿದ್ದು, ಬ್ರಹ್ಮ ದೇವರು ನನಗೆ ಗುರುಗಳು, ಜಗದ್ಗುರುಗಳು ಅಂತ ಬ್ರಹ್ಮ ದೇವರನ್ನು ದೇವರೇ ಮಾಡಿ ಇಟ್ಟಿದ್ದಾನೆ. ಬ್ರಹ್ಮ ದೇವರು ಹೇಳಿದ್ದಾರೆ ಇಂತಿಂಥವರು ಇಂತಿಂತಹ ಲೋಕದ ಪಾಲನೆಯನ್ನು ಮಾಡಬೇಕು, ಇಷ್ಟಿಷ್ಟು ವಸ್ತುಗಳನ್ನ ನೀವು ರಕ್ಷಣೆ ಮಾಡಿಕೊಳ್ಳಬೇಕು ಅಂತ ನಮಗೆ ಕೊಟ್ಟಿದ್ದಾರೆ. ಸ್ವರ್ಗಾಧಿಪತ್ಯವನ್ನು ಕೊಡುವಾಗ ಈ ಪಾರಿಜಾತ ವೃಕ್ಷವೂ ಕೂಡ ನನ್ನ ಆಧಿಪತ್ಯಕ್ಕೆ ಒಳಪಟ್ಟದ್ದು ನೀನು ಚೆನ್ನಾಗಿ ಸ್ವರ್ಗದಲ್ಲಿ ಇದು ಸುರಕ್ಷಿತವಾಗಿ ಇರುವಂತೆ ನೋಡಿಕೋ ಅಂತ ನನಗೆ ಬ್ರಹ್ಮ ದೇವರು ಹೇಳಿದ್ದಾರೆ. ನಾನು ಅದನ್ನು ಭೂಲೋಕಕ್ಕೆ ಕಳಿಸಿದರೆ ಬ್ರಹ್ಮ ದೇವರು ನನಗೆ ಶಾಪ ಕೊಡುತ್ತಾರೆ, ಬ್ರಹ್ಮ ದೇವರ ಆವಕೃಪೆಗೆ ನಾನು ಪಾತ್ರನಾಗುತ್ತೇನೆ. ಶ್ರೀಕೃಷ್ಣ ಪರಮಾತ್ಮನಿಗೆ ಈ ಪಾರಿಜಾತ ವೃಕ್ಷದ ಉಪಯೋಗವನ್ನು ಮಾಡಿಕೊಳ್ಳಬಾರದು ಅಂತ ನಾನೇನು ಹೇಳಿಲ್ಲ ಸ್ವರ್ಗಲೋಕಕ್ಕೆ ಸತ್ಯಭಾಮೆಯನ್ನು ಕರೆದುಕೊಂಡು ಬರಲಿ ಇಲ್ಲಿಯೇ ಇರಲಿ ಬೇಕಾದಷ್ಟು ಪಾರಿಜಾತ ವೃಕ್ಷದ ಪುಷ್ಪಗಳನ್ನ ಸ್ವೀಕಾರ ಮಾಡಬಹುದು ಅದರ ಎಲ್ಲ ಲಾಭಗಳನ್ನು ಪಡೆದುಕೊಳ್ಳಬಹುದು ಆದರೆ ಇದನ್ನು ಭೂಲೋಕಕ್ಕೆ ಕಳಿಸುವುದಕ್ಕೆ ಸಾಧ್ಯ ಇಲ್ಲ.

ಒಂದು ವೇಳೆ ನಾನು ಕಳಿಸಿದ್ದೆ ಆದರೆ ಇದೀಗ ನಾರದರು ಹೇಳಿದ ಎಲ್ಲ ಗುಣಗಳನ್ನು ಕೇಳಿದ್ದೀರಿ ಯಾರಿಗೆ ಹಸಿವೆ ಇಲ್ಲ, ನೀರಡಿಕೆ ಇಲ್ಲ, ಮುಪ್ಪಿಲ್ಲ, ಸಾವಿಲ್ಲ, ಏನೂ ಕಷ್ಟಗಳು ಆಗುವುದಿಲ್ಲ ಎಲ್ಲರೂ ಸುಖವಾಗಿ ಇರುತ್ತಾರೆ ಮನಸ್ಸಿಗೆ ಬಂದ ಇಷ್ಟಾರ್ಥಗಳೆಲ್ಲ ಅವರಿಗೆ ಸಿಕ್ಕು ಬಿಡುತ್ತದೆ ಕಲ್ಪ ವೃಕ್ಷ ಏನು ಮನಸ್ಸಿನಲ್ಲಿ ಅಪೇಕ್ಷೆ ಪಡುತ್ತಾರೋ ಅದು ಅವರಿಗೆ ಸಿಗುತ್ತೆ. ಮನಸ್ಸಿನಲ್ಲಿ ಬಯಸಿದ್ದೆಲ್ಲ ಸುಲಭವಾಗಿ ಸಿಗೋದಾದರೆ ಯಾರು ಯಜ್ಞ ಮಾಡುತ್ತಾರೆ, ಯಾರು ಯಾಗವನ್ನು ಮಾಡುತ್ತಾರೆ, ಯಾರು ಪಾಠ ಪ್ರವಚನ ಮಾಡುತ್ತಾರೆ, ಜಪ ಏನು, ಧ್ಯಾನ ಏನು ಎಲ್ಲ ಧರ್ಮಗಳ ಲೋಪ. ಎಲ್ಲರೂ ಸ್ವರ್ಗಾದಿಗಳು ಬೇಕು ಅನ್ನುವುದಕ್ಕಾಗಿ ಕರ್ಮ ಮಾಡುತ್ತಾರೆ ಆ ಕರ್ಮವನ್ನ ಮಾಡುವಂತಹ ಎಲ್ಲ ಜನರಿಗೂ ಸಿಗಬೇಕಾದ ಫಲಗಳು ಪುಕ್ಕಟೆಯಾಗಿ ಸಿಗುತ್ತೆ ಅಂದರೆ ಯಾರು ಕರ್ಮ ಮಾಡುತ್ತಾರೆ ಹಾಗಾದರೆ ಜಗತ್ತಿನಲ್ಲಿ ಧರ್ಮ ಲೋಪ ಮಾಡಿಸಿದ ಹಾಗೆ ಆಗುತ್ತದೆ ಅದಕ್ಕಾಗಿ ನಾನು ಪಾರಿಜಾತ ವೃಕ್ಷವನ್ನು ಕೆಳಗೆ ಕಳಿಸುವುದಿಲ್ಲ ಎಂಬುದಾಗಿ ನಾರದರಿಗೆ ಇಂದ್ರ ದೇವರು ತಿಳಿಸುತ್ತಾರೆ. ನಾರದರು ಅನ್ನುತ್ತಾರೆ ಮತ್ತೆ ನೀನು ಪಾರಿಜಾತ ಕೊಡದೆ ಇದ್ದರೇ ಯುದ್ಧಕ್ಕೆ ಬರುತ್ತೇನೆ ಅಂತ ಕೃಷ್ಣ ಪರಮಾತ್ಮ ಹೇಳಿದ್ದಾನೆ ಅಂತ ಇಂದ್ರ ದೇವರು ಅಂದರು ಬಂದರೆ ಬರಲಿ ನಾನೇನು ಮಾಡಲಿ, ನಾನಂತೂ ಯುದ್ಧ ಮಾಡುವುದಕ್ಕೆ ಅವನಿಗೆ ಹೇಳಿಲ್ಲ ಪ್ರೀತಿಯಿಂದ ಹೇಳುತ್ತಾ ಇದ್ದೇನೆ ಅವನೇ ಇಲ್ಲಿ ಬಂದು ಪಾರಿಜಾತ ವೃಕ್ಷದ ಉಪಭೋಗವನ್ನು ಮಾಡಬಹುದು ಅಂತ, ಅದರ ಫಲವನ್ನು ಪಡೆಯಬಹುದು ಅಂತ ಯುದ್ಧ ಮಾಡುತ್ತಾನೆ ಅಂದರೆ ಅದು ಅವನ ಇಷ್ಟ.

ನೋಡಿ ಅಸುರಾವೇಶ ಮೂಲವಾಗಿ ಇಂದ್ರ ದೇವರು ಕೃಷ್ಣನನ್ನು ದೇವರು ಅಂತ ಒಂದೊಮ್ಮೆ ಹೊಗಳುತ್ತಾರೆ ಮತ್ತೆ ಮಧ್ಯದಲ್ಲಿ ಹೇಳುತ್ತಾರೆ ಅವನು ಖಾಂಡವ ವನದ ದಾಹ ಮಾಡುವಾಗಲೂ ಇದೇ ರೀತಿ ನನ್ನ ವಿರೋಧ ಮಾಡಿದ, ನಾನು ಖಾಂಡವ ವನವನ್ನ ಉಳಿಸಬೇಕು ಅಂತ ಅನ್ನುವುದಕ್ಕೋಸ್ಕರವಾಗಿ ಮಳೆ ಸುರಿಸಿದರೆ ಅದನ್ನು ತಡೆದು ಹಿಡಿದಿದ್ದಾನೆ ಖಾಂಡವ ವನವನ್ನ ದಾಹ ಮಾಡಿಬಿಟ್ಟ. ಗೋಕುಲವನ್ನು ಸಂಪೂರ್ಣವಾಗಿ ನಾಶ ಮಾಡಬೇಕು ಅಂತ ನಾನು ಹೊರಟರೆ ಗೋವರ್ಧನ ಪರ್ವತವನ್ನು ಎತ್ತಿ ಹಿಡಿದು ಆಗಲೂ ವಿರೋಧ ಮಾಡಿದ ಆಗ ತಾನೇ ಹೋಗಿ ಕಾಲಿಗೆ ಬಿದ್ದು ಶರಣಾಗತನಾಗಿ ಗೋವಿಂದ ಅಂತ ನಾಮಕರಣ ಮಾಡಿ ಪಟ್ಟಾಭಿಷೇಕ ಮಾಡಿದ್ದಾನೆ ಅದನ್ನು ಮರೆತುಬಿಟ್ಟ ವಿರೋಧ ಮಾಡಿದ ಕೃಷ್ಣ ನನಗೆ ಅಂತ ಅನ್ನುತ್ತಾನೆ. ವೃತ್ರಾಸುರನ ವಧದ ಕಾಲದಲ್ಲಿ ನನಗೆ ಸಹಾಯ ಮಾಡಪ್ಪ ಅಂತ ಕೇಳಿದರೆ ನಾನು ಎಲ್ಲರಿಗೂ ಸಮಾನ ಒಬ್ಬರ ಪಕ್ಷಪಾತ ವಹಿಸುವುದಿಲ್ಲ ಅಂತ ಕೃಷ ಹೇಳಿದ ಅಂತ

ಅನ್ನುತ್ತಾನೆ. ವೃತ್ರಾಸುರನ ವಧದ ಕಾಲದಲ್ಲಿ ಆ ವಜ್ರಾಯುಧದೊಳಗೆ ವಿಶೇಷವಾಗಿ ಸನ್ನಿಹಿತನಾಗಿದ್ದು ವೃತ್ರಾಸುರನ ಸಂಹಾರಕ್ಕೆ ಕಾರಣನಾಗಿ ಇವನಿಗೆ ವಿಜಯವನ್ನು ಕೊಟ್ಟದ್ದೆ ಪರಮಾತ್ಮ. ಅದನ್ನು ಮರೆತು ಬಿಟ್ಟು ಹೇಳುತ್ತಾನೆ ವೃತ್ರಾಸುರನ ವಧದ ಕಾಲದಲ್ಲಿಯೂ ನನಗೆ ಸಹಾಯ ಮಾಡಿಲ್ಲ, ದೇವಾಸುರ ಸಂಗ್ರಾಮಗಳು ಮೇಲಿಂದ ಮೇಲೆ ಆಗುತ್ತವೆ ಯಾವ ಹೊತ್ತಿಗೂ ಕೃಷ್ಣ ನನಗೆ ಸಹಾಯಕ್ಕೆ ಬಂದಿಲ್ಲ ಅನ್ನುತ್ತಾನೆ ಇಂದ್ರ ದೇವರು. ಮನುಷ್ಯರು ಯಾವ ರೀತಿ ದೇವರಿಂದ ಪ್ರತಿಕ್ಷಣ ಉಪಕಾರವನ್ನು ಪಡೆದರೂ ಅದನ್ನು ಮರೆತು ದೇವರನ್ನೇ ನಿಂದೆ ಮಾಡುವಂತಹ ಸ್ವಭಾವವನ್ನು ಪಡೆದುಕೊಂಡಿರುತ್ತಾರೆ ಅನ್ನುವುದನ್ನ ತೋರಿಸಿಕೊಡುತ್ತಾ ಇದ್ದಾರೆ ಇಂದ್ರ ದೇವರ ಒಂದು ದೃಷ್ಟಾಂತದಿಂದ. ಪ್ರತಿಯೊಂದು ಸಂಗ್ರಾಮದಲ್ಲಿಯೂ ಇವರು ಗೆದ್ದದ್ದು ಪರಮಾತ್ಮನ ಸ್ಮರಣೆಯಿಂದ, ಭಗವಂತನ ಅನುಗ್ರಹದಿಂದ, ಕೆಲವು ಕಡೆಗೆ ಪ್ರತ್ಯಕ್ಷನಾಗಿ ದೇವರು ಬಂದು ಯುದ್ಧ ಮಾಡಿದ್ದು ಉಂಟು ಕೆಲವು ಕಡೆಗೆ ಆಯುಧಗಳಲ್ಲಿ ಸನ್ನಿಹಿತನಾಗಿ ನಾನಾ ರೀತಿಯಿಂದ ಪರಮಾತ್ಮ ದೇವತೆಗಳಿಗೆ ಸಹಾಯವನ್ನು ಅನುಗ್ರಹವನ್ನು ಮಾಡಿದ್ದಾನೆ. ಒಂದಲ್ಲ ಎರಡಲ್ಲ ಆದರೆ ಅನಂತ ಉಪಕಾರಗಳನ್ನು ಪರಮಾತ್ಮ ಮಾಡಿದ್ದರೂ ಅದನ್ನು ಮರೆತು ಇಂದ್ರ ದೇವರು ಹೇಳುತ್ತಾರೆ

ದೇವಾಸುರೇಷು ಪ್ರಾಪ್ತೇಷು ಸಂಗ್ರಾಮೇಷು ಚ ನಾರದ । (70.18 ವಿಷ್ಣುಪರ್ವ)

ಅಂತಹ ಎಷ್ಟೋ ಸಂಗ್ರಾಮಗಳಲ್ಲಿಯೂ ನಮಗೆ ಸಹಾಯಕನಾಗಿ ಕೃಷ್ಣ ಪರಮಾತ್ಮ ನಿಂತಿಲ್ಲ ಎಂಬುದಾಗಿ ಈ ರೀತಿ ಅನೇಕ ಮಾತುಗಳನ್ನು ಇಂದ್ರ ದೇವರು ಆಡಿದ್ದಾರೆ. ಇಷ್ಟು ಮೀರಿ ಅವನು ಯುದ್ಧ ಮಾಡುವುದಾದರೆ ಮಾಡಲಿ. ಯುದ್ಧ ಮಾಡಿ, ನನ್ನನ್ನು ಸೋಲಿಸಿ ಬೇಕಾದರೆ ಪಾರಿಜಾತ ವೃಕ್ಷವನ್ನು ತೆಗದುಕೊಂಡು ಹೋಗಲಿ ಅದಕ್ಕೆ ಏನು ಉಪಾಯ ಇಲ್ಲ, ನಾನು ಕೈ ಎತ್ತಿ ಮಾತ್ರ ಆ ಪಾರಿಜಾತ ವೃಕ್ಷವನ್ನು ಸರ್ವಥಃ ಕೊಡುವುದಿಲ್ಲ. ಹೇಳುತ್ತಾನೆ,

ಪಲಾಶಪತ್ರಾರ್ದ್ಧಮಪಿ ತ್ವಯಾಜಿತೋ ನ ಪಾರಿಜಾತಸ್ಯ ತವ ಪ್ರದಾಸ್ಯತಿ ॥ (70.49 ವಿಷ್ಣುಪರ್ವ)

ಒಂದು ಅರ್ಧ ಎಲೆ ಕೂಡ ಹರೆದು ಕೊಡುವುದಿಲ್ಲ ಅಂತ ತಿಳಿಸಿಬಿಡಿ ಅಂತ ಶ್ರೀಕೃಷ್ಣ ಪರಮಾತ್ಮನಿಗೆ ನಾರದರ ಮೂಲಕ ಇಂದ್ರ ದೇವರು ಹೇಳಿ ಕಳಿಸಿದ್ದಾರೆ. ನಾರದರು ಇಂದ್ರನಿಗೆ ಹೇಳುತ್ತಾ ಇದ್ದಾರೆ ನೋಡಪ್ಪ, ನೀನು ದೊಡ್ಡ ರಾಜ ಅಂದರೆ ಬರೀ ಸಾಮಾನ್ಯ ರಾಜ ಅಲ್ಲ ದೇವರಾಜ ಮೂರು ಲೋಕಗಳ ಒಡೆಯ, ಬಹಳ ದೊಡ್ಡ ಅಧಿಕಾರದಲ್ಲಿ ಇದ್ದೀ. ಆದರೂ ಯಾವ ಹೊತ್ತಿಗೆ ಹಿತ ಹೇಳಬೇಕೋ ಅದು ಹೇಳಲೇಬೇಕು, ಅಪ್ರಿಯವಾದರೂ ಹೇಳಬೇಕಾದದ್ದು ನಮ್ಮ ಕರ್ತವ್ಯ. ಕೇಳುವುದು ಬಿಡುವುದು ನಿನ್ನ ಇಷ್ಟ, ಹೇಳದೇ ಇದ್ದರೆ ನಮ್ಮ ತಪ್ಪಾಗುತ್ತದೆ.

ಕಾಮಂ ಪ್ರಿಯಾಣಿ ರಾಜಾನೋ ವಕ್ತವ್ಯಾ ನಾತ್ರ ಸಂಶಯಃ ।
ಪ್ರಾಪ್ತಕಾಲಂ ತು ವಕ್ತವ್ಯಂ ಹಿತಮಪ್ರಿಯಮಪ್ಯುತ ॥ (71.2 ವಿಷ್ಣುಪರ್ವ)

ಪ್ರಿಯವಾದದ್ದನ್ನೇ ನಿಮ್ಮ ಎದುರಿಗೆ ನಾವು ಹೇಳಬೇಕು ನಿಜ ಆದರೆ ಕೆಲವು ಪ್ರಸಂಗಗಳಲ್ಲಿ ಅಪ್ರಿಯವಾದರೂ ಹಿತವಾದುದ್ದನ್ನ ಹೇಳಬೇಕು ನೀವು ಅದನ್ನು ಕೇಳಬೇಕು. **'ಹಿತಂ ಮನೋಹಾರಿ ಚ ದುರ್ಲಭಂ ವಚಃ'** ಯಾವುದು ಹಿತ ಅದು ಪ್ರಿಯ ಆಗಿರುವುದಿಲ್ಲ, ಪ್ರಿಯವಾದದ್ದು ಹಿತವಾಗಿರುವುದಿಲ್ಲ ಕೆಲವು ಸಂದರ್ಭಗಳಲ್ಲಿ, ನಾನು ಹಿತವನ್ನು ಹೇಳುತ್ತೇನೆ ಕೆಲವು ಮಾತುಗಳನ್ನು ಕೇಳು. ನೀನು ಯುದ್ಧಕ್ಕೆ ಬಂದರೆ ಬರಲಿ ನಾನು ಪಾರಿಜಾತವನ್ನು ಕೊಡುವುದಿಲ್ಲ ಅಂತ ಅನ್ನುತ್ತಾ ಇದ್ದೀಯಲ್ಲ ಬಹಳ ಘೋರವಾದ ಪರಿಣಾಮವನ್ನು ನೀನು ಅನುಭವಿಸಬೇಕಾಗುತ್ತದೆ. ಯುದ್ಧ



ಸಾಮಾನ್ಯ ಯುದ್ಧ ಆಗುವುದಿಲ್ಲ ಕೃಷ್ಣನ ಜೊತೆಗೆ ಯುದ್ಧ ಅಂದರೆ ಎಚ್ಚರಿಕೆಯಿಂದ ನೀನು ಆಲೋಚನೆಯನ್ನು ಮಾಡು, ನಾನೊಬ್ಬ ದೇವರ್ಷಿಯಾಗಿ ನಿನಗೆ ಅತ್ಯಂತ ಹಿತೈಷಿಯಾಗಿ ಹೇಳುತ್ತಾ ಇದ್ದೇನೆ. ಇಡೀ ಜಗತ್ತಿನ ಸೃಷ್ಟಿ ಸ್ಥಿತಿ ಲಯ ನಿಯಮನ ಜ್ಞಾನ ಜ್ಞಾನಾಬಂಧ ಮೋಕ್ಷಗಳನ್ನು ಕೊಡುವಂತಹ ಸರ್ವಸ್ವಾಮಿಯಾದ ಸರ್ವತಂತ್ರ ಸ್ವತಂತ್ರನಾದ ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕನಾದ ಪರಮಾತ್ಮನ ಜೊತೆಗೆ ನೀನು ವಿರೋಧ ಮಾಡುತ್ತಾ ಇದ್ದೀ ಎಚ್ಚರ.

ಯ ಏಕೋ ವಿಶ್ವಮಧ್ಯಾಸ್ತೇ ಪ್ರಧಾನಂ ಜಗತೋ ಹರಿಃ ।

ಪ್ರಕೃತ್ಯಾ ಯಂ ಪರಂ ಸರ್ವೇ ಕ್ಷೇತ್ರಜ್ಞಂ ವೈ ವಿದುರ್ಬುಧಾಃ ॥ (71.13 ವಿಷ್ಣುಪರ್ವ)

ಪ್ರಕೃತಿಯನ್ನು ಮೀರಿದವ ಸರ್ವೋತ್ತಮ ಸರ್ವಜ್ಞ ಸರ್ವಶಿಖಾಮಣಿ ಸರ್ವೋತ್ತಮನಾದ ಪರಮಾತ್ಮ, ಬ್ರಹ್ಮಾದಿ ದೇವತೆಗಳನ್ನ ಸೃಷ್ಟಿ ಮಾಡಿದಂತಹ ಸ್ವಾಮಿ ಈ ಪರಮಾತ್ಮ. ಅಚಿಂತ್ಯಾದ್ಭುತ ಶಕ್ತಿ ಸಂಪನ್ನನಾದವನು, ಇಡೀ ಜಗತ್ತಿನಲ್ಲಿ ವ್ಯಾಪ್ತ ಎಲ್ಲವನ್ನು ಮೀರಿದ್ದವ, ಸಮಗ್ರವಾದ ಬ್ರಹ್ಮಾಂಡವನ್ನೇ ಶೇಷ ದೇವರೊಳಗಿದ್ದು ಇವನೇ ಧಾರಣೆ ಮಾಡುತ್ತಾನೆ ಅಂತ ನಾರದರು ಹೇಳುತ್ತಾರೆ.

ಅನನ್ತೋ ಧಾರಣಾರ್ಥಂ ಚ ಬಿಭರ್ತಿ ಚ ಮಹದ್ಯಶಃ ॥ (71.30 ವಿಷ್ಣುಪರ್ವ)

ಶ್ರೀಮದಾಚಾರ್ಯರು ಐತರೇಯ ಭಾಷ್ಯದಲ್ಲಿ ತಿಳಿಸುತ್ತಾರಲ್ಲ ಹಾಗೆ ಶೇಷ ದೇವರೊಳಗೆ ದೇವರು ತಾನೇ ಇದ್ದು ಈ ಬ್ರಹ್ಮಾಂಡ ಧಾರಣೆ ಮಾಡುತ್ತಾನೆ ಅಂತ ನಾರದರು ಹೇಳುತ್ತಾರೆ ಇಲ್ಲಿ ಆ ಮಾತನ್ನು. ಶೇಷ ದೇವರಲ್ಲಿ ತಾನೇ ಅನಂತ ನಾಮಕನಾಗಿದ್ದು ಅನಂತಗುಣ ಪೂರ್ಣನಾದ ಭಗವಂತ ಈ ಜಗತ್ತನ್ನು ಧಾರಣೆ ಮಾಡುತ್ತಾನೆ ನಾಲ್ಕು ಯುಗಗಳಲ್ಲಿ ನಾಲ್ಕು ವರ್ಣಗಳಿಂದ ಸಕಲ ಭಕ್ತರಿಂದ ಪೂಜ್ಯನಾದವನು ದಶಾವತಾರಗಳಲ್ಲಿ. ಹಿಂದೆ ಹೇಳಿದರಲ್ಲ ನನಗೇನು ಸಹಾಯನೇ ಮಾಡಿಲ್ಲ ಕೃಷ್ಣ ಅಂತ, ನಾರದರು ಎಚ್ಚರ ಕೊಡುತ್ತಾರೆ. ಒಂದೇ ಎರಡೇ ಹೆಜ್ಜೆ ಹೆಜ್ಜೆಗೆ ನಿಮಗೆ ದಾನವರಿಂದ ಆಪತ್ತುಗಳು ಬಂದಾಗೆಲ್ಲ ಪರಮಾತ್ಮನಿಗೆ ಹೋಗಿ ಶರಣು ಹೋಗಿದ್ದೀರಿ, ಅವತಾರ ಮಾಡಿದ್ದಾನೆ. ಮತ್ಸ್ಯ, ಕೂರ್ಮ, ವರಾಹಾದಿ ಅನೇಕ ಅವತಾರಗಳನ್ನು ಮಾಡಿ ಕಾಲ ಕಾಲಕ್ಕೆ ಅಸುರರ ಸಂಹಾರ ಮಾಡಿ, ನಿಮಗೆ ವಿಜಯವನ್ನು ಕೊಟ್ಟದ್ದು, ಬಲಿ ಚಕ್ರವರ್ತಿಯನ್ನ ವಾಮನನಾಗಿ ಕೆಳಗಿನ ಲೋಕಕ್ಕೆ ಸುತಲಕ್ಕೆ ಕಳಿಸಿ ನಿನಗೆ ರಾಜ್ಯವನ್ನು ಕೊಟ್ಟವರು ಯಾರು ಮರೆತು ಬಿಟ್ಟಿಯಾ.

ಉಪೇನ್ದ್ರೋ ಜಗತಾಂ ನಾಥಃ ಸರ್ವಭೂತೋತ್ತಮೋತ್ತಮಃ ॥ (71.39 ವಿಷ್ಣುಪರ್ವ)

ಜಟೀ ಕೃಷ್ಣಾಜಿನೀ ದಣ್ಡೀ ದೃಷ್ಟಪೂರ್ವೋ ಮಯಾ ಹರಿಃ । (71.40 ವಿಷ್ಣುಪರ್ವ)

ಆ **'ಅಜಿನ ದಂಡ ಕಮಂಡಲ ಮೇಖಲ ರುಚಿರ ಪಾವನ ವಾಮನ ಮೂರ್ತಯೇ'** ಧಾರಣ ರೂಪಿಯಾದ ಪರಮಾತ್ಮ ತ್ರಿವಿಕ್ರಮನಾಗಿ ನಿನಗೆ ರಾಜ್ಯವನ್ನು ಕೊಟ್ಟದ್ದು ಇಷ್ಟು ಬೇಗ ಮರೆತು ಬಿಟ್ಟಿಯಾ ಅಂತಹ ಆ ಪರಮಾತ್ಮನಿಗೆ ನೀನು ಪಾರಿಜಾತ ವೃಕ್ಷವನ್ನು ಕೊಡುವುದಿಲ್ಲ ಅನ್ನುತ್ತಿದ್ದೀ ಅವನಿಗೇನು ಕೊಡುವುದು ಅದು ಅವನದೇ. ಆದರೆ ನಿನಗೊಂದು ಪುಣ್ಯ ಬರಲಿ ಕೊಟ್ಟದ್ದಕ್ಕೆ ಅನ್ನೋದಕ್ಕೆ ಕೊಡು ಅಂತ ಕೇಳಿ ಕಳಿಸಿದ್ದಾನೆ ಇದೇ ಒಂದು ದೊಡ್ಡ ಭಾಗ್ಯ ಅಂತ ತಿಳಿದುಕೋ, ಅವನು ಕುಳಿತಲ್ಲಿಯೇ ಕಣ್ಣು ಮುಚ್ಚಿ ತೆಗೆಯುವುದರೊಳಗೆ ಕಣ್ಣೆದುರಿಗೆ ಪಾರಿಜಾತ ಇರುತ್ತಿತ್ತು. ಆ ಭಗವಂತನ ಅನುಗ್ರಹಕ್ಕೆ ಪಾತ್ರರಾದ ರುದ್ರ ದೇವರೇ ಪಾರಿಜಾತದ ವನವನ್ನೇ ಸೃಷ್ಟಿ ಮಾಡಿ ಉಮಾ ದೇವಿಯನ್ನು ಸಂತೋಷಪಡಿಸಿದರು ಅಂತ ನೀನು ಕೇಳಿದ್ದೀ ಹೀಗಿರುವಾಗ ಅನಂತ ಪಾರಿಜಾತ ವೃಕ್ಷಗಳನ್ನು ಸೃಷ್ಟಿ ಮಾಡುವ

ಸಾಮರ್ಥ್ಯ ಅವನಿಗಿದೆ. ಈ ಪಾರಿಜಾತವು ಇಚ್ಛಾ ಮಾತ್ರದಿಂದ ಅವನ ಕಣ್ಣು ಮುಂದೆ ಇರುತ್ತೆ ಆದರೆ ನಿನಗೊಂದು ಅವಕಾಶ ಇರಲಿ ಪುಣ್ಯಕ್ಕೆ ಅಂತ ನಿನಗೆ ಹೇಳಿ ಕಳಿಸಿದ್ದಾನೆ ಕೊಡು, ಕೊಡದಿದ್ದರೂ ಅವನು ನಿನ್ನನ್ನು ಸೋಲಿಸಿ ಒಯ್ಯುವುದು ನಿಶ್ಚಿತ ಅಂದಮೇಲೆ ಯಾಕೆ ಹಠ ಮಾಡುತ್ತೀಯಾ.

ಅವಶ್ಯಂ ಪಾರಿಜಾತಂ ತೇ ನಯಿಷ್ಯತಿ ಜನಾರ್ದನಃ ॥ (71.42 ವಿಷ್ಣುಪರ್ವ)

ಇಷ್ಟೆಲ್ಲಾ ನಾರದರು ತಮ್ಮ ಹಿತ ನುಡಿಗಳನ್ನು ಹೇಳಿದರೂ ಕೂಡಾನೂ ಇಂದ್ರ ದೇವರು ಸಿದ್ಧರಾಗುತ್ತಾ ಇಲ್ಲ ನೋಡಿ ಅವರು ಹೇಗೆ ಅದನ್ನು ತಿರುಗಿಸುತ್ತಾ ಇದ್ದಾರೆ. ಇವತ್ತಿನ ಲೌಕಿಕರೆಲ್ಲ ಹೇಗೆ ಮಾತಾಡುತ್ತಾರೆ ಬಹಳ ದೊಡ್ಡವ ಬಹಳ ದೊಡ್ಡವ ಅಂತ ವರ್ಣನೆ ಮಾಡುತ್ತ ಇದ್ದೀರಲ್ಲ ನಾರದರೇ ಕೃಷ್ಣನನ್ನ ಅದಕ್ಕೆ ಹೇಳುತ್ತಾ ಇದ್ದೀನಿ ಅಂತಹ ದೊಡ್ಡವನಿಗೆ ಈ ಸಣ್ಣ ಪಾರಿಜಾತ ಯಾಕೆ ಬೇಕಾಗಿದೆ ಅಂತ ಹೀಗೆ ತಿರುಗಿಸಿದ ಇಂದ್ರ.

ಮಹಾಪ್ರಭಾವೋ ನಾಲ್ಪಾರ್ಥೇ ರುಷ್ಯೇದಿತಿ ವಿಚಿನ್ತಯನ್ ॥ (71.48 ವಿಷ್ಣುಪರ್ವ)

ಇಷ್ಟು ದೊಡ್ಡ ಪರಮಾತ್ಮ ಇಷ್ಟು ಸಣ್ಣ ಪದಾರ್ಥಕ್ಕೋಸ್ಕರ ಅಪೇಕ್ಷೆಯಲ್ಲ ಪಡುವುದು ಸರಿಯಲ್ಲ ಅದಕ್ಕಾಗಿ ಅವನು ಇದನ್ನು ಬಿಟ್ಟು ಬಿಡಲಿ ಅಂತ ಹೇಳಿದಾಗ, ಸರಿ ಹಾಗಾದರೆ ನಿನ್ನ ಇಷ್ಟ ಹೇಳುವುದು ನನ್ನ ಕರ್ತವ್ಯ ಹೇಳಿದ್ದೇನೆ ಅಂತ ನಾರದರು ಇಂದ್ರ ದೇವರಿಗೆ ಹಿತೈಷಿಗಳಾಗಿ ಹಿತನುಡಿಗಳನ್ನು ನುಡಿದು ಇಂದ್ರ ದೇವರು ಪಾರಿಜಾತ ವೃಕ್ಷವನ್ನು ನಾನು ಕೊಡುವುದಿಲ್ಲ ಅಂತ ಹೇಳಿದಾಗ ಅಲ್ಲಿಂದ ಹೊರಟು ದ್ವಾರಕಾ ಪಟ್ಟಣಕ್ಕೆ ಬಂದು ಶ್ರೀಕೃಷ್ಣ ಪರಮಾತ್ಮನಿಗೆ ಈ ವಿಷಯವನ್ನು ತಿಳಿಸಿದ್ದಾರೆ.

ಈ ಮಧ್ಯದಲ್ಲಿ ಘನಘೋರವಾದ ಯುದ್ಧವಾಗುತ್ತೆ ಅಂತ ನಾರದರು ಹೇಳಿದರು ಕೃಷ್ಣ ನಿನ್ನನ್ನು ಸೋಲಿಸಿ ಎಲ್ಲ ದೇವತೆಗಳನ್ನು ಸೋಲಿಸಿ ಪಾರಿಜಾತವನ್ನು ತೆಗೆದುಕೊಂಡು ಹೋಗುವುದು ಸತ್ಯ ಅಂತ ಅದಕ್ಕೆ ನೇರವಾಗಿ ಓಡಿ ಹೋದ ಇಂದ್ರ ಬೃಹಸ್ಪತ್ಯಾಚಾರ್ಯರ ಹತ್ತಿರ ಗುರುಗಳ ಹತ್ತಿರ ದೇವ ಗುರುಗಳು ಬೃಹಸ್ಪತ್ಯಾಚಾರ್ಯರು. ಯೋಗ್ಯತೆಯಲ್ಲಿ ಇಂದ್ರ ದೇವರು ದೊಡ್ಡವರು ಆದರೆ ಗುರು ಸ್ಥಾನದಲ್ಲಿ ಇದ್ದಾಗ ಗುರುಗಳ, ಪುರೋಹಿತರ ಉಪದೇಶದಂತೆ ತಾವು ಕರ್ತವ್ಯಗಳನ್ನು ಮಾಡಬೇಕು ಅಂತ ಒಂದು ಶಾಸ್ತ್ರದ ವ್ಯವಸ್ಥೆ. ಅದಕ್ಕೆ ತಕ್ಕಂತೆ ಬೃಹಸ್ಪತ್ಯಾಚಾರ್ಯರಿಗೆ ಕೇಳಿದರೆ ಬೃಹಸ್ಪತ್ಯಾಚಾರ್ಯರು ಹಣೆ ಗಟ್ಟಿಸಿಕೊಂಡಿದ್ದಾರೆ ಯಾಕೆ ಈ ಕೆಲಸ ಮಾಡಲಿಕ್ಕೆ ಹೋಗಿದ್ದಿ ಅಂತ ನಾನು ಬ್ರಹ್ಮ ಲೋಕಕ್ಕೆ ಹೋಗಿದ್ದೆ ಕಾರ್ಯಾಂತರದಿಂದ ಬರುವುದರೊಳಗೆ ಇಷ್ಟೆಲ್ಲ ಮಾಡಿಬಿಟ್ಟೆ ಅಲ್ಲ. ಒಂದು ಮಾತು ನನಗೆ ಕೇಳಬಾರದಾಗಿತ್ತಾ ನಾನು ಹೇಳುತ್ತಾ ಇದ್ದೆ ಮೊದಲು ಕೊಟ್ಟು ಕೃಷ್ಣಾರ್ಪಣ ಹೇಳು ಅಂತ ಕೃಷ್ಣನೇ ಕೇಳಿದ್ದ ಕೃಷ್ಣಾರ್ಪಣ ಹೇಳುವುದರೊಳಗೆ ಏನು ಗಂಟು ಹೋಗಿತ್ತು ನಿನಗೆ ಅವನದೇ ಇದೆಲ್ಲ. ಅಂತಹ ಶ್ರೀಕೃಷ್ಣ ಪರಮಾತ್ಮನೇ ಸ್ವತಃ ಕೇಳಿದಾಗ ನೀನು ಹೋಗಿ ಪಾರಿಜಾತ ವೃಕ್ಷವನ್ನು ಅವನ ಮನೆಯಲ್ಲಿ ಇಟ್ಟು ಆ ಪಾರಿಜಾತ ಪುಷ್ಪಗಳಿಂದ ಅವನಿಗೆ ಅರ್ಚನೆ ಮಾಡಿ ಪುಣ್ಯ ಪಡೆದುಕೊಂಡು ಬರಬೇಕಾಗಿತ್ತು ಅಂಥಹದ್ದು ಅವನೇ ಹೇಳಿ ಕಳಿಸಿದರೂ ಕೊಡುವುದಿಲ್ಲ ಅಂತ ಹೇಳಿದೆಯಲ್ಲ ಎಂತಹ ತಪ್ಪು ಕೆಲಸ ಮಾಡಿದಿ, ಸರಿ ಭಗವಂತನ ಸಂಕಲ್ಪ, ದೇವರ ಪ್ರೇರಣೆ ಆದದ್ದಾಯಿತು.

ಇಷ್ಟು ವಿಚಾರವನ್ನು ಇಂದ್ರ ದೇವರಿಗೆ ಹೇಳಿ ನನ್ನ ಪ್ರಯತ್ನ ನಾನು ಮಾಡುತ್ತೇನೆ, ನೀನು ನಿನ್ನ ಮಗ ಜಯಂತ ಇಬ್ಬರೂ ಮಹಾ ಪ್ರಯತ್ನ ಮಾಡಿ, ಯುದ್ಧವನ್ನು ಮಾಡಿ ನಿಮಗೇನು ಬೇಕೋ ಆ ಬಲವನ್ನು ನನ್ನ ತಪಸ್ಸಿನಿಂದ, ಮಂತ್ರ ಸಾಮರ್ಥ್ಯದಿಂದ ನಾನು ಏನು ಬೇಕೋ ಕೊಡಬೇಕೋ ಕೊಡುತ್ತೇನೆ ಇಷ್ಟೇ ಹೇಳುತ್ತಾರೆ ನೀನು ಗೆಲ್ಲುತ್ತೀಯ

ಅಂತ ಹೇಳುವುದಿಲ್ಲ ಅವರು. ನನ್ನಿಂದ ಮಾಡಬೇಕಾದ ಎಲ್ಲ ಸಹಾಯವನ್ನು ನಾನು ಮಾಡುತ್ತೇನೆ, ನನ್ನ ಕರ್ತವ್ಯ ಎಷ್ಟೋ ಅಷ್ಟು ಮಾಡುತ್ತೇನೆ ಆದರೆ ಆ ದೇವರ ಅಚಿಂತ್ಯಾದ್ಭುತ ಶಕ್ತಿ ಸಾಮರ್ಥ್ಯಗಳ ಮುಂದೆ ನಮ್ಮದೇನು ನಡೆಯವುದಿಲ್ಲ ಪ್ರಯತ್ನ ನಾನು ಮಾಡುತ್ತೇನೆ ಅಂತ ಹೇಳಿ ಬೃಹಸ್ಪತ್ಯಾಚಾರ್ಯರು ಇಂದ್ರನನ್ನ ಆಚೆಗೆ ಕಳಿಸಿ ಕಶ್ಯಪರಿಗೆ ಹೋಗಿ ಹೇಳಿದ್ದಾರೆ ನಿಮ್ಮ ಮಗ ಇಂತಹ ಕೆಲಸ ಮಾಡಿದ್ದಾನೆ ನೋಡಿರಿ ಅಂತ. ದೇವರು ಪಾರಿಜಾತ ವೃಕ್ಷವನ್ನು ಕೇಳಿದರೆ ಕೊಡುವುದಿಲ್ಲ ಅಂತ ಹೇಳಿ ಕಳಿಸಿದ್ದಾನೆ ಅಂತೆ ಅವನು ಯುದ್ಧ ಮಾಡುತ್ತೇನೆ ಅಂತ ಹೇಳಿದರೂ ಸುಮ್ಮನಿದ್ದಾನೆ ನನಗೆ ಬಂದು ಯುದ್ಧಕ್ಕೆ ಸಹಾಯ ಮಾಡಿ ಅಂತ ಕೇಳುತ್ತಾನೆ ಹೀಗಾಗಿದೆ ಘಟನೆ ಅಂತ ಹೇಳಿದಾಗ ಕಶ್ಯಪರು ಅಂದರು ಇದೆಲ್ಲಾ ಹಣೆಬರಹ ಇಷ್ಟು ಆಗೋದು ನನಗೆ ಮೊದಲೇ ಗೊತ್ತೇ ಇತ್ತು. ಯಾವಾಗ ಇಂದ್ರ ದೇವರು ಅಹಲ್ಯಾ ದೇವಿಯ ಘರ್ಷಣವನ್ನು ಮಾಡಿದರೋ ಗೌತಮರು ಆಗೇ ಶಾಪ ಕೊಟ್ಟಿದ್ದಾರೆ ಸಂಪೂರ್ಣವಾಗಿ ನಿಮಗೆಲ್ಲ ನಿನಗೂ, ನಿನಗೆ ಸಹಾಯ ಮಾಡಿದವರಿಗೂ ಎಲ್ಲರಿಗೂ, ನಿನ್ನ ಜೊತೆಗಿದ್ದವರಿಗೆ ಘೋರವಾದ ಯುದ್ಧದೊಳಗೆ ಪರಾಭವ ಆಗಲಿ ಶ್ರೀಕೃಷ್ಣ ಪರಮಾತ್ಮನಿಂದ ಎಂಬುದಾಗಿ ಅಂದೇ ಶಾಪ ಕೊಟ್ಟಿದ್ದಾರೆ ಗೌತಮರು ಅದು ನನಗೆ ಗೊತ್ತೇ ಇದೆ. ಆ ಬ್ರಾಹ್ಮಣರ ಶಾಪವನ್ನ ಯಾರೂ ಮೀರುವುದಕ್ಕೆ ಸಾಧ್ಯ ಇಲ್ಲ ಅನ್ನುವುದಕ್ಕೆ ಈ ದುರ್ಬದ್ಧಿ ಬಂದಿದೆ ಅದಕ್ಕಾಗೇನೆ ಅವನು ಕೊಟ್ಟಿಲ್ಲ, ಕೃಷ್ಣ ಪರಮಾತ್ಮ ಅವನನ್ನ ಸೋಲಿಸುತ್ತೇನೆ ಅಂತ ಹೇಳಿದ್ದಾನೆ.

ಅವಶ್ಯಂ ಭಾವ್ಯಮೇತದ್ ಭೋಃ ಸರ್ವಥಾ ನಾತ್ರ ಸಂಶಯಃ ॥ (72.21 ವಿಷ್ಣುಪರ್ವ)

ಇಚ್ಛತಃ ಸದೃಶೀಂ ಭಾರ್ಯಾಂ ಮಹರ್ಷೇರ್ದೇವಶರ್ಮಣಃ । (72.22 ವಿಷ್ಣುಪರ್ವ)

ಅಂತ ಕಶ್ಯಪರು ತಮ್ಮ ದಿವ್ಯವಾದ ಜ್ಞಾನದಿಂದ ಗೌತಮರು ಕೊಟ್ಟ ಶಾಪವನ್ನ ಅವರು ಮನಸ್ಸಿನಲ್ಲಿ ಅಂದುಕೊಂಡದ್ದನ್ನ ಬೃಹಸ್ಪತ್ಯಾಚಾರ್ಯರಿಗೆ ಹೇಳುತ್ತಾರೆ. ಹೀಗೆ ಗೌತಮರ ಶಾಪವನ್ನು ಮೀರುವ ಸಾಮರ್ಥ್ಯ ಇಂದ್ರ ದೇವರಿಗೆ ಇದೆ ಆದರೆ ಭಗವಂತನ ಸಂಕಲ್ಪದಂತೆ ಇದೆಲ್ಲ ಆಗಬೇಕಾಗದದ್ದು ಆ ಗೌತಮರ ತಪಸ್ಸನ್ನು ಕಡಿಮೆ ಮಾಡುವುದಕ್ಕೋಸ್ಕರನೇ ಗೌತಮರಿಂದ ಅನೇಕ ಶಾಪಗಳನ್ನು ಪಡೆದದ್ದು ಹೀಗಾಗಿ ಆ ಗೌತಮರ ಶಾಪಕ್ಕೆ ತಕ್ಕ ಹಾಗೆ ಈ ಯುದ್ಧ ಆಗೋದೇ, ಇಂದ್ರ ದೇವರ ಪರಾಭವ ಆಗೋದೇ, ಶ್ರೀಕೃಷ್ಣ ಪರಮಾತ್ಮನಿಗೆ ವಿಜಯವಾಗೋದೇ ಇಬ್ಬರೂ ನನ್ನ ಮಕ್ಕಳೇ, ಸರಿ ಒಬ್ಬನಿಗೆ ಜಯ ಒಬ್ಬನಿಗೆ ಪರಾಜಯ ಇದು ಭಗವಂತನ ಸಂಕಲ್ಪ ಆದರೂ ತಾತ್ಕಾಲಿಕವಾದ ಕಲಹ ಅಂತಾದರೂ ಇದು ಸ್ಥಿರವಾದ ಕಲಹವಾಗಬಾರದು. ಆ ಸರ್ವೋತ್ತಮನಾದ ಶ್ರೀಹರಿಯ ಶ್ರೀಕೃಷ್ಣ ಪರಮಾತ್ಮನ ಭಕ್ತನಾಗಿ, ದಾಸಾನುದಾಸನಾಗಿ ಇಂದ್ರ ಇರಬೇಕು ಪ್ರೀತಿಯಿಂದ, ಭಕ್ತಿಯಿಂದ ಗೌರವದಿಂದ ಇರಬೇಕು ವಿರೋಧವನ್ನು ಮಾಡಿ ಅನರ್ಥವನ್ನು ಹೊಂದಬಾರದು ಅದಕ್ಕೋಸ್ಕರ ನಾನು ತಪಸ್ಸು ಮಾಡುತ್ತೇನೆ ಅಂತ ಕಶ್ಯಪರು ವಿಶೇಷವಾಗಿ ತಪಸ್ಸನ್ನು ಮಾಡಿದ್ದಾರೆ ರುದ್ರ ದೇವರನ್ನು ಕುರಿತು. ಇಂದ್ರ ದೇವರ ಗುರುಗಳು ರುದ್ರ ದೇವರು ಆ ಇಂದ್ರ ದೇವರಿಗೆ ರುದ್ರ ದೇವರು ಒಳ್ಳೆಯ ಬುದ್ಧಿಯನ್ನು ಕೊಡಲಿ, ಒಳ್ಳೆಯ ಮನಸ್ಸನ್ನು ಕೊಡಲಿ ಮನೋಭಿಮಾನಿಗಳಾದ ರುದ್ರ ದೇವರು ಇಂದ್ರ ದೇವರಿಗೆ ಸದ್ಬುದ್ಧಿಯನ್ನು ಕೊಟ್ಟು ಈ ಕಲಹ ಮಾಡದೇ ಇದ್ದಂತೆ ಪರಮಾತ್ಮನಲ್ಲಿ ಭಕ್ತಿಯನ್ನು ಮಾಡುವಂತೆ **'ತೈಲಧಾರೆಯಂತೆ ಮನಸು ಕೊಡು ಹರಿಯಲ್ಲಿ ಶಂಭೋ'**[1] ಎಂಬುದಾಗಿ ಆ ರುದ್ರ ದೇವರಿಗೆ ಪ್ರಾರ್ಥನೆಯನ್ನು ಮಾಡುತ್ತಾ ತಪಸ್ಸು ಮಾಡಿದ್ದಾರೆ, ಸ್ತೋತ್ರವನ್ನು ಮಾಡಿದ್ದಾರೆ.

ವೇದೋಕ್ತೈಃ ಸ್ವಕೃತಶ್ಚೈವ ಸ್ತವೈಃ ಸ್ತುತ್ಯಂ ಜಗದ್ ಗುರುಮ್ ॥ (72.28 ವಿಷ್ಣುಪರ್ವ)

1. ದಾಸಸಂಪದ

ವೈದಿಕ ಸ್ತೋತ್ರಗಳು, ತಾವು ಸ್ವತಃ ಕಶ್ಯಪರು ಅನೇಕ ಸ್ತೋತ್ರಗಳನ್ನು ರಚನೆ ಮಾಡಿ, ವೇದ ಮಂತ್ರಗಳಿಂದ ಹಾಗೂ ತಾಂತ್ರಿಕವಾದ ಸ್ತೋತ್ರಗಳಿಂದ ಎಲ್ಲ ಸ್ತೋತ್ರವನ್ನು ಮಾಡಿ ರುದ್ರ ದೇವರನ್ನು ಸಂತೋಷ ಪಡಿಸಿದ್ದಾರೆ ರುದ್ರ ದೇವರು ಪ್ರತ್ಯಕ್ಷರಾಗಿದ್ದಾರೆ. ಏನು ವರ ಬೇಕು ಕೇಳು ಅಂತ ಅನ್ನಲಿಲ್ಲ ರುದ್ರ ದೇವರು, ನೀನು ಯಾಕೆ ತಪಸ್ಸು ಮಾಡಿದ್ದಿ ನನಗೆ ಗೊತ್ತು, ನಿನ್ನ ಮನಸ್ಸಿನಲ್ಲಿ ಏನಿದೆ ಅನ್ನುವುದು ನನಗೆ ಗೊತ್ತು ಅಂದರು ಇಂದ್ರ, ಉಪೇಂದ್ರರ ಮಧ್ಯದಲ್ಲಿ ವಿರೋಧ ಇರಬಾರದು ಇಬ್ಬರೂ ಪ್ರೀತಿಯಿಂದ ಇರಬೇಕು ಇಷ್ಟು ತಾನೇ ನಿಮ್ಮ ಅಪೇಕ್ಷೆ ತಥಾಸ್ತು ಅಂದಿದ್ದಾರೆ. ಅದು ಹಾಗೇ ಆಗುತ್ತೆ ಏನು ಚಿಂತೆ ಮಾಡಬೇಡ ತಾತ್ಕಾಲಿಕವಾಗಿ ಇಂದ್ರ ದೇವರು ವಿರೋಧ ಮಾಡುತ್ತಾರೆ, ಕೃಷ್ಣ ಪರಮಾತ್ಮನ ಅದ್ಭುತವಾದ ಪರಾಕ್ರಮದಿಂದ ಸೋಲೇನೋ ಆಗುತ್ತೆ ಆದರೆ ಮುಂದೆ ಇಂದ್ರ ದೇವರು ಶರಣಾಗತರಾಗಿ ಪರಮಾತ್ಮನಲ್ಲಿ ಭಕ್ತಿಯನ್ನು ಮಾಡಿ ಅವನ ಅನುಗ್ರಹವನ್ನು ಪಡೆದುಕೊಳ್ಳುತ್ತಾರೆ. ನೀವೇನು ಚಿಂತೆ ಮಾಡಬೇಡಿ ಆದರೆ ಆ ಯುದ್ಧವೂ ಆಗದೇ ಇರುವಂತೆ ಮಾಡು ಅಂದರೆ ಅದನ್ನು ತಪ್ಪಿಸಲಿಕ್ಕೆ ಆಗುವುದಿಲ್ಲ ಗೌತಮರ ಶಾಪವಿದೆ ಅನ್ನುತ್ತಾರೆ ಮತ್ತೆ ರುದ್ರ ದೇವರು. ಆ ಋಷಿಗಳ ಬ್ರಾಹ್ಮಣರ ಶಾಪವನ್ನು ಮೀರುವುದಕ್ಕೆ ನಮಗೆ ಶಕ್ತಿ ಇದೆ ಆದರೆ ದೇವರ ಆಜ್ಞೆ ಇಲ್ಲ ಅದಕ್ಕೋಸ್ಕರ ಅವರಿಗೆ ಒಂದು ಗೌರವವನ್ನು ಕೊಡಬೇಕು ಗೌತಮ ಋಷಿಗಳಿಗೆ. ಆ ಶಾಪ ಇದ್ದ ಕಾರಣ ಆ ಯುದ್ಧದಲ್ಲಿ ಇಂದ್ರನಿಗೆ ಪರಾಭವ ಆಗುವುದು ನಿಶ್ಚಿತ ಆದರೆ ಕಲಹ ಮುಂದುವರಿಯುವುದಿಲ್ಲ ಪ್ರೀತಿಯಿಂದ ಅಣ್ಣ ತಮ್ಮಂದಿರು ಇರುತ್ತಾರೆ ಚಿಂತೆ ಮಾಡಬೇಡಿ ಅಂತ ರುದ್ರ ದೇವರು ಕಶ್ಯಪರಿಗೆ ವರವನ್ನು ಕೊಡುತ್ತಾರೆ ಎಂಬ ವಿಷಯವನ್ನು ತಿಳಿಸುತ್ತಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ವಿಷ್ಣುಪರ್ವ-26

* * *

ವೈಶಂಪಾಯನ ಉವಾಚ

ಅಥ ವಿಷ್ಣರ್ಮಹಾತೇಜಾ ಮುಹೂರ್ತಾಭ್ಯುದಿತೇ ರವೌ ।
ಮೃಗಯಾವ್ಯಪದೇಶೇನ ಯಯೌ ರೈವತಕಂ ಗಿರಿಮ್ ।। (73.1 ವಿಷ್ಣುಪರ್ವ)

ಅಪರಾಜಿತನಾದ ಶ್ರೀಕೃಷ್ಣ ಪರಮಾತ್ಮ, ಅಪರಾಜಿತ ಸೇನೆಯಿಂದ ಕೂಡಿದ ಶ್ರೀಕಷ್ಣ ಪರಮಾತ್ಮ ಪಾರಿಜಾತ ವೃಕ್ಷವನ್ನ ಕೊಡುವುದಕ್ಕೆ ನಾರದರ ಮುಖಾಂತರ ಇಂದ್ರನಿಗೆ ಸಂದೇಶವನ್ನು ಕಳಿಸಿದ. ಇಂದ್ರ ಅದಕ್ಕೆ ಒಪ್ಪಲಿಲ್ಲ, ಯುದ್ಧ ಮಾಡಿ ಬೇಕು ಅಂದರೆ ತೆಗೆದುಕೊಂಡು ಹೋಗಲಿ. ನಾನಾಗಿಯೇ ಪಾರಿಜಾತ ವೃಕ್ಷವನ್ನು ಭೂಲೋಕಕ್ಕೆ ಕಳಿಸುವುದಕ್ಕೆ ಒಪ್ಪುವುದಿಲ್ಲ ಅಂತ ಇಂದ್ರ ಹೇಳಿದಾಗ ಶ್ರೀಕೃಷ್ಣ ಪರಮಾತ್ಮ ಪ್ರದ್ಯುಮ್ನನನ್ನು ಕರೆದಿದ್ದಾನೆ, ಸಾತ್ಯಕಿಯನ್ನು ಕರೆದಿದ್ದಾನೆ. ಅವರಿಬ್ಬರನ್ನು ಕರೆದುಕೊಂಡು ರೈವತ ಪರ್ವತಕ್ಕೆ ಹೋಗಿ ಗರುಡನ ಸ್ಮರಣೆ ಮಾಡಿದ, ಗರುಡ ಪ್ರತ್ಯಕ್ಷನಾದ ಕೈ ಜೋಡಿಸಿ ನಿಂತ ದಾಸಾನುದಾಸ ನಿನ್ನ ಸೇವೆಗೆ ಅಂತ. ಶ್ರೀಕೃಷ್ಣ ಪರಮಾತ್ಮನ ಸೇವೆಗೆ ಗರುಡ ದೇವರು ಸಿದ್ಧರಾಗಿದ್ದಾರೆ. ಸಕಲ ವೇದಾಭಿಮಾನಿ ದೇವತೆ ಗರುಡ, ಸಕಲ ವೇದಗಳು ಭಗವಂತನ ಮಹಿಮೆಯನ್ನು ಕೊಂಡಾಡುವುದಕ್ಕೆ ಪರಮಾತ್ಮನ ಆಜ್ಞೆಗೆ ತಕ್ಕಂತೆ ಆ ಎಲ್ಲ ವೇದಗಳು ಭಗವಂತನ ಮಹಿಮೆಯನ್ನು ಕೊಂಡಾಡುತ್ತವೆ. ಅಂತಹ ವೇದಗಳ ಅಭಿಮಾನಿಯಾದ ಗರುಡ ಪ್ರತ್ಯಕ್ಷವಾಗಿ ನಿಂತು ಪರಮಾತ್ಮನ ಸೇವೆಗೆ ಸಿದ್ಧನಾಗಿದ್ದಾನೆ. ಪ್ರದ್ಯುಮ್ನನಿಗೆ ಹೇಳಿದ ನೀನೊಂದು ರಥದಲ್ಲಿ ನನ್ನನ್ನು ಹಿಂಬಾಲಿಸು ಅಂತ ಆ ಭಗವಂತನ ಅನುಗ್ರಹ ಸಾಮರ್ಥ್ಯ ಅದ್ಭುತವಾದ ಶಕ್ತಿ ಪ್ರದ್ಯುಮ್ನನಿಗೆ, ಗರುಡಾರೂಢನಾಗಿ ಪರಮಾತ್ಮ ಹೊರಟರೆ ರಥದೊಳಗೇ ಕುಳಿತು ಆಕಾಶ ಮಾರ್ಗದಿಂದ ಪ್ರದ್ಯುಮ್ನ ತಾನು ಹೋಗಬೇಕಾದರೆ ಅವನ ವಿದ್ಯಾ ಸಾಮರ್ಥ್ಯ, ಅವನ ತಪಸ್ಸಾಮರ್ಥ್ಯ, ಅವನ ಯೋಗ ಸಾಮರ್ಥ್ಯ, ಅವನ ಅದ್ಭುತವಾದ ಶಕ್ತಿ ಕಾಮನ ಅವತಾರನಾದ ಪ್ರದ್ಯುಮ್ನನಿಗೆ ಎಷ್ಟು ಶಕ್ತಿ, ಇಲ್ಲಿ ಚಿಂತನ ಮಾಡಬಹುದು. ಅಂತಹ ಮಹಾಶಕ್ತಿ ಸಂಪನ್ನನಾದ ಪ್ರದ್ಯುಮ್ನ, ಸಾತ್ಯಕಿಯನ್ನು ತನ್ನ ಜೊತೆಗೇನೆ ಗರುಡನ ಮೇಲೆ ಕುಳಿತುಕೊಂಡು ಬರುವುದಕ್ಕೆ ಹೇಳಿದ. ನಾನು ದ್ವಾರಕಾ ಪಟ್ಟಣ ಪ್ರವೇಶ ಮಾಡುವಾಗ ಮಾತ್ರ ಈ ಗರುಡನ ಮೇಲೆ ಕುಳಿತು ಬರುವುದಿಲ್ಲ

ಯುದ್ಧಕ್ಕೆ ಮಾತ್ರ ಇದು ಯುದ್ಧದ ವಾಹನ. ಆ ಗರುಡನ ಮೇಲೆ ಕುಳಿತು ನಾನು ಯುದ್ಧ ಮುಗಿಸಿಕೊಂಡು ಬರುವಾಗ ಮತ್ತೆ ಈ ರಥದಲ್ಲಿ ಕುಳಿತು ದ್ವಾರಕಾ ಪ್ರವೇಶ ಮಾಡಬೇಕು ಅದಕ್ಕೆ ಸಾರಥಿಯಾದ ದಾರುಕನಿಗೆ ಪರಮಾತ್ಮ ಹೇಳುತ್ತಾನೆ. ನೀನು ಮಾತ್ರ ನನ್ನ ರಥವನ್ನು, ಮೇಘಪುಷ್ಪ, ಬಲಾಹಕ, ಶೈಬ್ಯ, ಸುಗ್ರೀವ ಈ ಎಲ್ಲ ಕುದುರೆಗಳನ್ನು ತೆಗೆದುಕೊಂಡು ಇಲ್ಲಿಯೇ ರೈವತ ಪರ್ವತದಲ್ಲಿ ಪ್ರತೀಕ್ಷೆಯನ್ನು ಮಾಡುತ್ತಾ ಇರು. ನಾನು ಯಾವಾಗ ಹೇಳುತ್ತೇನೋ ಆವಾಗ ನೀನು ಬರಬೇಕು ಎಂಬುದಾಗಿ ತನ್ನ ಸಾರಥಿ ದಾರುಕನಿಗೆ ನಿಲ್ಲುವುದಕ್ಕೆ ಹೇಳಿ, ತಾನು ಆಕಾಶ ಮಾರ್ಗದಿಂದ ಗರುಡನ ಮೇಲೆ ಕುಳಿತು ಪರಮಾತ್ಮ ಹೊರಟಿದ್ದಾನೆ. ಪ್ರದ್ಯುಮ್ನ ರಥದಲ್ಲಿ ಕುಳಿತು ಪರಮಾತ್ಮನ ಅನುಗ್ರಹದಿಂದ ಅವನನ್ನು ಹಿಂಬಾಲಿಸಿದ್ದಾನೆ.

ನಂದನ ವನವನ್ನ ಪ್ರವೇಶ ಮಾಡಿಯೇ ಬಿಟ್ಟ ಎಷ್ಟೋ ದಿನಗಳವರೆಗೆ ಪ್ರವಾಸ ಮಾಡಿ ಅಲ್ಲ **'ನಿಮೇಷಾನ್ತರಮಾತ್ರೇಣ'**[1] ಒಂದೇ ನಿಮಿಷದೊಳಗೆ ಭಗವಂತ ರೈವತ ಪರ್ವತದಿಂದ ಹಾರಿದವನೇ ನಂದನ ವನದಲ್ಲಿ ಪ್ರವೇಶ ಮಾಡಿಯೇ ಬಿಟ್ಟಿದ್ದಾನೆ. ಅದ್ಭುತವಾದಂತಹ ನಂದನ ವನ ಅದ್ಭುತವಾದ ವೃಕ್ಷಗಳು, ಪಾರಿಜಾತ ವೃಕ್ಷವೂ ಇದೆ, ಇನ್ನು ಅನೇಕ ವೃಕ್ಷಗಳಿವೆ ಎಲ್ಲವೂ ದಿವ್ಯವಾದ ವೃಕ್ಷಗಳು, ಕಾಮಿತವಾದ ಅರ್ಥಗಳನ್ನು ಕೊಡುವಂತಹ ಶ್ರೇಷ್ಠವಾದ ವೃಕ್ಷಗಳು. ತಪಸ್ಸು ಸಾಧನೆ ಜ್ಯೋತಿಷ್ಟೋಮಾದಿ ಯಜ್ಞ ಯಾಗಾದಿಗಳು ಇವುಗಳೆನ್ನೆಲ್ಲ ಮಾಡಿದ ಪುಣ್ಯವಂತರು ಮಾತ್ರ ಇಲ್ಲಿ ಪ್ರವೇಶ ಮಾಡಬಹುದೋ ಅಂತಹ ಶ್ರೇಷ್ಠವಾದ ವನ. ಪಾಪಿಗಳಿಗೆ ಅಲ್ಲಿ ಪ್ರವೇಶ ಇಲ್ಲ, ಪುಣ್ಯವಂತರಿಗೆ ಮಾತ್ರ ಪ್ರವೇಶ, ತಪಸ್ಸು ಇದ್ದವರಿಗೆ ಮಾತ್ರ ಪ್ರವೇಶ, ಭಗವಂತನ ಕೃಪಾಕಟಾಕ್ಷಕ್ಕೆ ಪಾತ್ರರಾದವರಿಗೆ ಮಾತ್ರ ಅಲ್ಲಿ ಪ್ರವೇಶ ಅಂತಹ ಶ್ರೇಷ್ಠವಾದ ದೇವರೇ ಸೃಷ್ಟಿ ಮಾಡಿದಂತಹ ಅದ್ಭುತವಾದ ವನ ಅದು ನಂದನ ವನ. ಅಂತಹ ನಂದ ನಂದನನ ಅನುಗ್ರಹದಿಂದಲೇ ನಿರ್ಮಿತವಾದ ನಂದನ ವನದಲ್ಲಿ ಆ ನಂದ ನಂದನ ಪ್ರವೇಶವನ್ನು ಮಾಡಿದ್ದಾನೆ, ಮಾಡಿದವನೇ ಯಾರಿಗೆ ಹೇಳುವುದಿಲ್ಲ ಕೇಳುವುದಿಲ್ಲ ತನ್ನದೇ ಸ್ವಾತಂತ್ರ್ಯ ಸಂಪೂರ್ಣವಾಗಿ ಆ ಪಾರಿಜಾತ ವೃಕ್ಷವನ್ನೇ ಎತ್ತಿ ಗರುಡನ ಮೇಲೆ ಇಟ್ಟಿದ್ದಾನೆ. ಕೂಡಲೇ ಅಲ್ಲಿರುವಂತಹ ಎಲ್ಲ ದೂತರು ಇಂದ್ರ ದೇವರಿಗೆ ತಿಳಿಸಿದ್ದಾರೆ ಪಾರಿಜಾತ ವೃಕ್ಷವನ್ನು ಕೃಷ್ಣ ಪರಮಾತ್ಮ ಕಿತ್ತಿ ಗರುಡನ ಮೇಲೆ ಇಟ್ಟು ಆಯಿತು ನೀನು ಇಲ್ಲಯೇ ಕುಳಿತಿದ್ದೀಯಾ ಸಿಂಹಾಸನದ ಮೇಲೆ ಪಾರಿಜಾತ ವೃಕ್ಷವನ್ನು ರಕ್ಷಣೆ ಮಾಡಬೇಕು ಅವನಿಗೆ ಕೊಡಬಾರದು ಕೊಡಬಾರದು ಅಂತ ಮನಸ್ಸಿನಲ್ಲಿ ಚಿಂತನ ಮಾಡುತ್ತಾ ಕೆಲಸ ಆಗಿಹೋಯಿತು, ಕೃಷ್ಣ ಹೊರಟಾಯಿತು. ಗರುಡನ ಮೇಲೆ ಕುಳಿತಂತಹ ಶ್ರೀಕೃಷ್ಣ ಪರಮಾತ್ಮ ಪಾರಿಜಾತ ವೃಕ್ಷದಿಂದ ಸಮೇತವಾಗಿ ಸಂಪೂರ್ಣ ಆ ಇಂದ್ರನ ಅಮರಾವತಿ ಪಟ್ಟಣವನ್ನ ಪ್ರದಕ್ಷಿಣೆ ಹಾಕಿದ್ದಾನೆ ಜೋರಾಗಿ ಸುತ್ತಲೂ ಸುತ್ತಿದ್ದಾನೆ. ಇಂದ್ರ ದೇವರು ಸಿದ್ದರಾಗುತ್ತಾ ಇದ್ದಾರೆ ಯುದ್ಧಕ್ಕೆ ಶ್ರೀಕೃಷ್ಣ ಪರಮಾತ್ಮ ಅಮರಾವತಿ ಪಟ್ಟಣದ ಪೂರ್ವ ದ್ವಾರಕ್ಕೆ ಬಂದಾಗ ಇಂದ್ರ ದೇವರು ಎದುರು ಬಂದು ಪರಮಾತ್ಮನ ಜೊತೆಗೆ ಮಾತನಾಡುತ್ತಾ ಇದ್ದಾರೆ. ಪರಮಾತ್ಮನೂ ಅತ್ಯಂತ ಗೌರವದಿಂದ ತಾನು ಉಪೇಂದ್ರ ಅವನು ಇಂದ್ರ ಅಂತ ಅಣ್ಣ ಅಂತ ಗೌರವದಿಂದ ಲೋಕನೀತಿಯನ್ನು ತೋರಿಸುವುದಕ್ಕಾಗಿ ಉತ್ತಮರಿಗೆ ದೊಡ್ಡವರಿಗೆ ನಮಸ್ಕಾರವನ್ನು ಮಾಡಬೇಕು ಚಿಕ್ಕವರು ಅಂತನ್ನುವ ಒಂದು ನೀತಿಯನ್ನು ಜಗತ್ತಿಗೆ ತಿಳಿಸುತ್ತಾನೆ ಪರಮಾತ್ಮ.

ಪ್ರಣಮ್ಯ ಗರುಡಸ್ಥೋಥ ಕೇಶವಃ ಶಕ್ರಮಬ್ರವೀತ್ । (73.16 ವಿಷ್ಣುಪರ್ವ)

ಬಂದದ್ದು ಯುದ್ಧಕ್ಕೆ ಆದರೂ ಅಣ್ಣ ಅನ್ನುವುದಕ್ಕಾಗಿ ಅಣ್ಣ ಅಂತ ನಮಸ್ಕಾರವನ್ನು ಮಾಡಿ ಹೇಳುತ್ತಾನೆ. ಅಣ್ಣ, ನಾನು ಪಾರಿಜಾತ ವೃಕ್ಷವನ್ನ ಕೆಲವು ದಿನಗಳ ಮಟ್ಟಿಗೆ ಭೂಲೋಕಕ್ಕೆ ತೆಗೆದುಕೊಂಡು ಹೋಗಿ ನಿನ್ನ ಸೊಸೆ, ಹಿರಿಯ

1. 73.7 ವಿಷ್ಣುಪರ್ವ

ಅಣ್ಣ ಅಂದರೆ ತಂದೆಗೆ ಸಮಾನ, ಹೀಗಾಗಿ ಸತ್ಯಭಾಮಾ ಅಂದರೆ ನಿನ್ನ ಸೊಸೆ ಇದ್ದ ಹಾಗೆ ನಿನ್ನ ಸೊಸೆ ಪುಣ್ಯಕ ವ್ರತವನ್ನು ಮಾಡುತ್ತಾಳೆ. ಈ ಪಾರಿಜಾತ ವೃಕ್ಷಕ್ಕೆ ನನ್ನನ್ನು ಪುಷ್ಪ ಮಾಲೆಯಿಂದ ಬಂಧನ ಮಾಡಿ ಶ್ರೇಷ್ಠ ಸಜ್ಜನರಿಗೆ ನಾರದರಿಗೆ ದಾನವನ್ನು ಮಾಡುತ್ತಾಳೆ ದಾನ ಮಾಡಿ ಪುಣ್ಯಕ ವ್ರತ ಸಮಾಪ್ತಿ ಆದಮೇಲೆ ನಿನ್ನ ಪಾರಿಜಾತ ವೃಕ್ಷವನ್ನು ಮತ್ತೆ ನಿನಗೆ ತಿರುಗಿ ಕೊಡುತ್ತೇನೆ ಅಂತ ಅತ್ಯಂತ ಪ್ರೀತಿಯಿಂದ ಸಾಮದಿಂದ ಕೃಷ್ಣ ಪರಮಾತ್ಮ ಮೊದಲಿಗೆ ಹೇಳಿದ್ದಾನೆ.

ವಧಾರ್ಹೇ ಪುಣ್ಯಕಾರ್ಯಾಯ ನೀಯತೇಽಯಂ ವರದ್ರುಮಃ ॥ (73.16 ವಿಷ್ಣುಪರ್ವ)

ಅಷ್ಟೆ ಇನ್ನು ಯಾವ ಚಿಂತೆಯನ್ನು ನೀನು ಮಾಡಬೇಕಾದದ್ದು ಇಲ್ಲ ಅಂತ ಆದರೆ ಇಂದ್ರ ದೇವರು ಮಾತ್ರ ತಮ್ಮ ನಿರ್ಧಾರವನ್ನು ಬದಲು ಮಾಡಿಲ್ಲ.

ಅಯೋಧಯಿತ್ವಾ ನ ತರುರ್ನಯಿತವ್ಯಸ್ತ್ವಯಾಚ್ಯುತ ॥ (73.17 ವಿಷ್ಣುಪರ್ವ)

ಯುದ್ಧ ಮಾಡು ತೆಗೆದುಕೊಂಡು ಹೋಗು, ಗೆದ್ದು ತೆಗೆದುಕೊಂಡು ಹೋಗು ಇಲ್ಲದಿದ್ದರೆ ಸ್ವರ್ಗದ ಈ ಸಂಪತ್ತನ್ನು ಸುಮ್ಮನೆ ಭೂಲೋಕಕ್ಕೆ ಕಳಿಸಿದ್ದರಿಂದ ನನಗೆ ಬ್ರಹ್ಮ ದೇವರು ಶಾಪ ಕೊಟ್ಟಾರು ಅನ್ನುವ ಭಯ ನನಗಿದೆ. ಸಾಕ್ಷಾತ್ ಬ್ರಹ್ಮ ದೇವರ ಅಪ್ಪನೇ ಬಂದಿದ್ದಾನೆ ಅವನೇ ಕೊಟ್ಟದ್ದು ಈ ಸೌಭಾಗ್ಯವನ್ನ, ಅವನಿಗೆ ಕೊಟ್ಟರೆ ಇನ್ನೂ ಯಾರು ಶಾಪ ಕೊಡುವವರು ಇದ್ದಾರೆ ಎಲ್ಲರೂ ಅನುಗ್ರಹವನ್ನೇ ಮಾಡುತ್ತಾರೆ ಅಂತನ್ನುವ ತಿಳುವಳಿಕೆ ಆ ಸಂದರ್ಭದಲ್ಲಿ ಇಂದ್ರ ದೇವರಿಗೆ ಬರಬೇಕಾಗಿತ್ತು ಅಸುರಾವೇಶ ಮೂಲಕವಾಗಿ ಇಂದ್ರ ದೇವರು ಪರಮಾತ್ಮನ ಆಜ್ಞೆಯ ಉಲ್ಲಂಘನವನ್ನು ಮಾಡುತ್ತಾ ಇದ್ದಾರೆ. ಯುದ್ಧ ಪ್ರಾರಂಭವಾಗಿದೆ ಘೋರವಾದಂತಹ ಯುದ್ಧ ಪರಸ್ಪರವಾಗಿ ನಾನಾ ವಿಧವಾದ ಬಾಣಗಳ ಪ್ರಕ್ಷೇಪಗಳು ನಡಿಯುತ್ತಾ ಇವೆ, ವಿವಿಧ ಆಯುಧಗಳನ್ನು ಪ್ರಯೋಗ ಮಾಡುತ್ತಾ ಇದ್ದಾರೆ. ಈ ಕಡೆಗೆ ಕೃಷ್ಣನ ಪಕ್ಷದಲ್ಲಿ ಪ್ರದ್ಯುಮ್ನ, ಸಾತ್ಯಕಿ ಇದ್ದಾರೆ, ಆ ಕಡೆಗೆ ಜಯಂತ ಇಂದ್ರನ ಮಗ ಜಯಂತ, ಇನ್ನೊಬ್ಬ ಪ್ರವರ ಅಂತ. ಆ ಪ್ರವರ ಅವನೊಬ್ಬ ಬ್ರಾಹ್ಮಣ ತಾನು ವಿಶೇಷ ಯಜ್ಞ ಯಾಗಾದಿ ಕರ್ಮಗಳನ್ನು ಮಾಡಿ ಸ್ವರ್ಗವನ್ನು ಪಡೆದಂತಹ ವ್ಯಕ್ತಿ, ಬ್ರಹ್ಮ ದೇವರನ್ನು ಕುರಿತು ತಪಸ್ಸು ಮಾಡಿ ಅವಧ್ಯನಾದಂತಹ ಒಬ್ಬ ಬ್ರಾಹ್ಮಣ ಅವನು ಪ್ರವರ ಅಂತ. ಇಂದ್ರನಿಗೆ ವಿಶೇಷವಾಗಿ ಪ್ರೀತಿ ಪಾತ್ರನಾಗಿದ್ದ ಇಂದ್ರನಿಗೆ ಗೆಳೆಯನಾಗಿದ್ದಾನೆ ಇಂದ್ರನ ಸಖ, ಬಹಳ ಪುಣ್ಯವನ್ನು ಮಾಡಿದ್ದ, ಉತ್ತಮ ತಪಸ್ವಿ ಬ್ರಹ್ಮ ದೇವರಿಂದ ವರ ಪಡೆದವನು ಅಹುದು ಅವಧ್ಯನಾಗಿದ್ದಾನೆ. ಯುದ್ಧದಲ್ಲಿ ಇಂತಹ ಅವಧ್ಯರಾದವರು ನಿಂತರೆ ಬಹಳ ಅನುಕೂಲ ಅನ್ನುವ ದೃಷ್ಟಿಯಲ್ಲಿ ಆ ಪ್ರವರನನ್ನು, ಜಯಂತನನ್ನು ಕರೆದುಕೊಂಡು ಇಂದ್ರ ಬಂದಿದ್ದಾನೆ. ಈ ಕಡೆಗೆ ಸಾತ್ಯಕಿ ಮತ್ತು ಪ್ರದ್ಯುಮ್ನ ಇವರಿಬ್ಬರನ್ನು ಕರೆದುಕೊಂಡು ಕೃಷ್ಣ ಬಂದಿದ್ದಾನೆ.

ಶ್ರೀಮದಾಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ತಿಳಿಸುವ ರೀತಿಯಲ್ಲಿ ಇಂದ್ರ ದೇವರ ಸಹಾಯಕ್ಕೆ ರುದ್ರ ದೇವರು ಬಂದಿದ್ದಾರೆ, ಅಗ್ನಿ ಬಂದಿದ್ದಾನೆ, ಯಮ, ವರುಣ, ವಾಯುವ್ಯ ದಿಕ್ಕಿನ ಅಭಿಮಾನಿ ದೇವತೆಯಾದ ಮುಖ್ಯಪ್ರಾಣ ಪುತ್ರನಾದ ವಾಯು, ಮುಖ್ಯಪ್ರಾಣ ದೇವರಲ್ಲ. **'ನ ಪ್ರತೀಪಂ ಹರೇಃ ಕ್ವಾಪಿ'**[1] ಅವರು ಎಂದಿಗೂ ಭಗವಂತನ ವಿರೋಧ ಮಾಡುವವರಲ್ಲ ಶುದ್ಧ ಭಾಗವತ ಧರ್ಮದಲ್ಲಿ ನಿರತರು, ವಾಯು ದೇವರು ಬಂದಿಲ್ಲ ಬ್ರಹ್ಮ ದೇವರು ಬಂದಿಲ್ಲ. ಆದರೆ ಈ ಎಲ್ಲ ದಿಕ್ಪಾಲಕ ದೇವತೆಗಳು ಅಲ್ಲಿ ಬಂದಿದ್ದಾರೆ ಅವರೆಲ್ಲರ ಜೊತೆಗೂ ಯುದ್ಧವಾಗಿದೆ ವರುಣ ದೇವರನ್ನು ಸಮುದ್ರದಲ್ಲಿ ಎಸೆದಿದ್ದಾನೆ ಗರುಡ. ಇನ್ನುಳಿದ ದೇವತೆಗಳಿಗೆ

1. 18.7 ಮಭಾತಾನಿರ್ಣಯ

ಸತ್ಯಭಾಮೆಯೂ ಜೊತೆಗಿದ್ದಳು ಆ ಸತ್ಯಭಾಮಾ ದೇವಿ ಜೋರಾಗಿ ಶಾರಂಗ ಧನುಸ್ಸಿನ ಟಂಕಾರ ಮಾಡುವ ಮೂಲಕವೇ ಅವರಲ್ಲಿರುವ ಅಸುರಾವೇಶ ದೂರ ಆಗಿ ಸಾಕ್ಷಾತ್ ಭಗವಂತನೇ ಬಂದಿದ್ದಾನೆ, ಲಕ್ಷ್ಮೀ ದೇವಿ ಬಂದಿದ್ದಾಳೆ. ನಮ್ಮ ತಂದೆ ತಾಯಿ ಜಗನ್ನಿಯಾಮಕರು ಅಂತ ಸಾಷ್ಟಾಂಗ ನಮಸ್ಕಾರ ಹಾಕಿ ಆ ಎಲ್ಲ ದೇವತೆಗಳು ಹೋಗಿಬಿಟ್ಟರು. ರುದ್ರ ದೇವರನ್ನೂ ತನ್ನ ಪಕ್ಷವಾತದಿಂದ ಗರುಡ ದೇವರು ದೂರ ಸರಿಸುತ್ತಾರೆ. ಕೊನೆಗೆ ಇಂದ್ರ ದೇವರಿಗೂ ಕೂಡ ಅಸುರಾವೇಶ ದೂರ ಆದಾಗ ಸತ್ಯಭಾಮಾ ಹಾಗೂ ಶ್ರೀಕೃಷ್ಣ ಪರಮಾತ್ಮನಿಗೆ ಶರಣಾಗತರಾಗಿ ಆ ಪಾರಿಜಾತ ವೃಕ್ಷವನ್ನು ಸಮರ್ಪಣೆ ಮಾಡುತ್ತಾರೆ ಅನ್ನುವ ವಿಚಾರವನ್ನು ಶ್ರೀಮದಾಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ತಿಳಿಸಿಕೊಟ್ಟಿದ್ದಾರೆ.

ಇಲ್ಲಿ ಸಂಕ್ಷಿಪ್ತವಾಗಿ ಜಯಂತ ಮತ್ತು ಪ್ರವರ ಇವರಿಬ್ಬರ ಹೆಸರು ಬರುತ್ತದೆ. ಆ ಕಡೆಗೆ ಇಂದ್ರ ಪುತ್ರ ಜಯಂತನಿಗೂ, ಕೃಷ್ಣ ಪುತ್ರ ಉಪೇಂದ್ರ ಪುತ್ರ ಪ್ರದ್ಯುಮ್ನನಿಗೂ ಇವರಿಬ್ಬರಲ್ಲಿ ಯುದ್ಧ ಪ್ರಾರಂಭವಾಗಿದೆ. ಈ ಕಡೆಗೆ ಇಂದ್ರನ ಮಿತ್ರ ಪ್ರವರ, ಕೃಷ್ಣನ ಶಿಷ್ಯನಾದ ಅರ್ಜುನನ ಶಿಷ್ಯ ಕೃಷ್ಣನ ಪ್ರೀತಿ ಪಾತ್ರ ಸಾತ್ಯಕಿ ಅವರಿಬ್ಬರ ಯುದ್ಧ ಪ್ರಾರಂಭವಾಗಿದೆ ಘೋರವಾದಂತಹ ಯುದ್ಧ. ನೋಡಿ, ಶ್ರೀಕೃಷ್ಣ ಪರಮಾತ್ಮ ಯುದ್ಧದ ಮಧ್ಯದಲ್ಲಿಯೂ ಭಗವದ್ಗೀತೆಯನ್ನೇ ಉಪದೇಶ ಮಾಡಿದ ಮಹಾನುಭಾವ ಅವನಿಗೆ ಯಾವ ತರಹದ ಚಿಂತೆ ಇಲ್ಲ, ಭಯ ಇಲ್ಲ, ಯಾವುದೇ ತರಹದ ಸಮಸ್ಯೆ ಇಲ್ಲ, ಟೆನ್ಶನ್ ಇಲ್ಲ ಆದರೆ ಲೋಕದೃಷ್ಟಿಯಿಂದ ಇಂತಹ ಒಂದು ಯುದ್ಧದ ಪ್ರಸಂಗದೊಳಗೂ ಸಾತ್ಯಕಿಯನ್ನು ಕರೆದು ಕೃಷ್ಣ ಹೇಳುತ್ತಾನೆ. ನೀನು ಯುದ್ಧ ಮಾಡುತ್ತಾ ಇದ್ದದ್ದು ಒಬ್ಬ ಬ್ರಾಹ್ಮಣನ ಜೊತೆಗೆ ಪ್ರವರ ಅಂತ ಅವನ ಹೆಸರು, ಪುಣ್ಯ ಮಾಡಿ ಸ್ವರ್ಗಕ್ಕೆ ಬಂದವ, ಬಾಣ ಬಿಡುವಾಗ ಎಚ್ಚರಿಕೆ ಅವನಿಗೆ ಗಾಯವಾಗದಂತೆ ಬಾಣ ಬಿಡು. ನಿನಗೆ ಅವನು ಬಿಟ್ಟ ಬಾಣಗಳನ್ನು ಕತ್ತರಿಸು ನಿನ್ನ ರಕ್ಷಣೆಯನ್ನು ನೀನು ಮಾಡಿಕೋ, ಅವನನ್ನು ತಡೆ ಪಾರಿಜಾತ ವೃಕ್ಷವನ್ನು ಅವನು ಗರುಡನ ಮೇಲೆ ಇಟ್ಟದ್ದನ್ನು ತೆಗೆದುಕೊಂಡು ಹೋಗಬಾರದು ಹಾಗೆ ನೋಡಿಕೋ, ಅಷ್ಟು ಕೆಲಸವೇ ಹೊರತು ಅವನಿಗೆ ಪೆಟ್ಟು ತಾಕಬಾರದು ಬ್ರಹ್ಮಹತ್ಯಾ ದೋಷ ಬಂದೀತು ಎಚ್ಚರಿಕೆ ಅಂತ ಕೃಷ್ಣ ಪರಮಾತ್ಮ ಹೇಳುತ್ತಾನೆ. ಅಂದರೆ ಯುದ್ಧದ ಪ್ರಸಂಗದೊಳಗೂ ಕೂಡ ಆ ತರಹದ ಧರ್ಮವನ್ನು ಹೇಗೆ ಪರಿಪಾಲನೆ ಮಾಡಬೇಕು ಅಂತ. ಸಜ್ಜನರಿಗೆ ಹಿಂಸೆಯಾಗದೆ ಇರುವಂತೆ ನೋಡಿಕೊಳ್ಳಬೇಕು ಅನ್ನುವ ಪ್ರಜ್ಞೆಯನ್ನು ತನ್ನ ಶಿಷ್ಯರಿಗೆ ಯಾವ ರೀತಿ ಪರಮಾತ್ಮ ಬೋಧನೆ ಮಾಡುತ್ತಾ ಇದ್ದಾನೆ ಅನ್ನುವುದನ್ನು ತಿಳಿದರೆ ಜೀವನದಲ್ಲಿ ಮಹಾತ್ಮರ ಜೊತೆಗೆ, ದೊಡ್ಡವರ ಜೊತೆಗೆ, ಸಜ್ಜನರ ಜೊತೆಗೆ ನಾವು ಹೇಗೆ ಇರಬೇಕು. ನಾವು ಏನು ಧನುರ್ಬಾಣಗಳನ್ನು ತೆಗೆದುಕೊಂಡು ಹೊರಟಂತಹ ಯೋಧರಲ್ಲದಿದ್ದರೂ ವಾಗ್ಬಾಣಗಳಂತೂ ಇವೆ. ಆ ರೀತಿಯ ವಾಗ್ಬಾಣಗಳಿಂದ ಯಾವ ಸಜ್ಜನರ ಮನಸ್ಸನ್ನೂ ಎಂತಹ ಪ್ರಸಂಗದಲ್ಲಿಯೂ ನೋಯಿಸಬಾರದು ಅವರು ನೋಯಿಸುವುದಕ್ಕೆ ನಿಂತರು ಕೂಡ ಸಹನೆ ಮಾಡಿಕೊಳ್ಳುವುದೇ ದೊಡ್ಡ ತಪಸ್ಸು.

ಯೇ ಬ್ರಾಹ್ಮಣಾನ್ ಮಯಿ ಧಿಯಾ ಕ್ಷಿಪತೋऽರ್ಚಯಂತಿ
ತುಷ್ಯದ್ಧೃದಃ ಸ್ಮಿತಸುಧೋಕ್ಷಿತಪದ್ಮವಕ್ತ್ರಾಃ ।
ವಾಣ್ಯಾऽನುರಾಗಕಲಯಾऽऽತ್ಮಜವದ್ ಗೃಣಂತಃ
ಸಂಬೋಧಯಂತ್ಯಹಮಿವಾಹಮುಪಾಹೃತಸ್ತೈಃ ॥ (03.17.11 ಭಾಗವತ)

ಶ್ರೀಕೃಷ್ಣ ಪರಮಾತ್ಮ ಶ್ರೀಮದ್ಭಾಗವತದಲ್ಲಿ ಹೇಳುತ್ತಾನೆ ಯಾರೋ ಸುಮ್ಮನೆ ತಮ್ಮ ಪಾಡಿಗೆ ತಾವಿದ್ದರಿಗೆ ನೀವೇ ಮಹಾನುಭವರು ದೊಡ್ಡವರು ಅಂತ ಸ್ತೋತ್ರ ಮಾಡುವುದರಲ್ಲಿ ದೊಡ್ಡಸ್ತಿಕೆಯಿಲ್ಲ, ನಮ್ಮನ್ನು ನಿಂದೆ ಮಾಡುವಂತಹ

ನಮಗೆ ಪೀಡೆ ಕೊಡುವಂಥವರಾಗಿದ್ದರೂ ಕೂಡ ಯಾವುದೋ ಕಾರಣದಿಂದ ಅಂತಹ ಸಜ್ಜನರನ್ನು, ಜ್ಞಾನಿಗಳನ್ನು, ಬ್ರಾಹ್ಮಣರನ್ನು ಗೌರವದಿಂದ ಯಾರು ನೋಡುತ್ತಾರೆ, ಪ್ರೀತಿಯಿಂದ ಆದರದಿಂದ ನೋಡುತ್ತಾರೆ ಅಂಥವರಿಗೆ ನಾನು ವಶನಾಗಿ ಹೋಗುತ್ತೇನೆ, ಅವರು ಹೇಳಿದ ಹಾಗೆ ಕುಣಿಯುತ್ತೇನೆ ನಾನು ಅನ್ನುತ್ತಾನೆ ಕೃಷ್ಣ ಪರಮಾತ್ಮ ಸ್ವಯಂ. ಆ ಮಾತನ್ನು ಹರಿವಂಶದಲ್ಲಿಯೂ ಕೂಡ ಶ್ರೀಕೃಷ್ಣ ಪರಮಾತ್ಮ ಹೇಳುತ್ತಾ ಇದ್ದಾನೆ.

ನ ತತ್ರ ನಿರ್ದಯಂ ಬಾಣಾ ಮೋಕ್ತವ್ಯಾಃ ಸಾತ್ಯಕೇ ತ್ವಯಾ ।
ಅಸ್ಯ ಬ್ರಾಹ್ಮಣಚಾಪಲ್ಯಂ ಸೋಢವ್ಯಂ ಖಲು ಸರ್ವಥಾ ॥ (73.34 ವಿಷ್ಣುಪರ್ವ)

ಅವನು ಏನೋ ಸ್ವಲ್ಪ ಹೆಚ್ಚು ಕಡಿಮೆ ಮಾಡಿದರು ಸಹನೆ ಮಾಡಿಕೋ ಪಾರಿಜಾತದ ಹರಣ ಆಗಬಾರದು ಅವರು ತೆಗೆದುಕೊಂಡು ಹೋಗಬಾರದು ನಿನಗೆ ಪೆಟ್ಟಾಗಬಾರದು ಅಷ್ಟು ನೋಡಿಕೋ ಸಾಕು ಅಂತ ಕೃಷ್ಣ ಹೇಳಿದ್ದಾನೆ ಘೋರವಾದಂತಹ ಯುದ್ಧವಾಗುತ್ತ ಇದೆ. ಕೃಷ್ಣ ಹೇಳಿದ್ದನ್ನ ಸಾತ್ಯಕಿ ಅವನ ಎದುರಿಗೆ ಹೇಳುತ್ತಾನೆ ನೋಡು ಪ್ರವರ ಕೃಷ್ಣ ಹೇಳಿದ್ದಾನೆ ಅಂತ ನಾನು ಮೆಲ್ಲಗೆ ಯದ್ಧ ಮಾಡುತ್ತಾ ಇದ್ದೇನೆ ಅಂತ ನೀನು ಮಹಾಪರಾಕ್ರಮಿ ಅಂತ ಏನು ತಿಳಿದುಕೊಳ್ಳಬೇಡ ಮತ್ತೆ ಅಂತ. ಅವನಂದ ಅಂತಹ ದಯಾ ಮಾಡುವುದು ಬೇಕಾಗಿಲ್ಲ ನನ್ನ ಮೇಲೆ ನಿನ್ನ ಎಲ್ಲಾ ಪರಾಕ್ರಮ ಉಪಯೋಗಿಸು ನಾನು ಅದಕ್ಕೆ ಉತ್ತರವನ್ನು ಕೊಡುತ್ತೇನೆ ನನಗೆ ಬ್ರಹ್ಮ ದೇವರ ವರ ಇದೆ ನಿನ್ನ ಉಪಕಾರ ಏನು ಬೇಕಿಲ್ಲ ಅಂತ ಅವನು ಹೇಳುತ್ತಾನೆ ಇಬ್ಬರಲ್ಲಿಯೂ ಘನಘೋರವಾದಂತಹ ಯುದ್ಧವಾಗಿದೆ.

ಈ ಕಡೆಗೆ ಜಯಂತ ಪ್ರದ್ಯುಮ್ನನ ರಥವನ್ನು ಸುಟ್ಟು ಹಾಕಿದ್ದಾನೆ ಪ್ರದ್ಯುಮ್ನ ಆಕಾಶದಲ್ಲಿಯೇ ನಿಂತು ಯುದ್ಧ ಮಾಡುತ್ತಾ ಇದ್ದಾನೆ ಅವನು ಹೇಳಿದ ಒಂದಲ್ಲ ಇಂತಹ ಸಾವಿರ ರಥ ನೀನು ಸುಡು ನನಗೆ ಸೃಷ್ಟಿ ಮಾಡುವ ಶಕ್ತಿ ಇದೆ ಹೆಸರು ಕಾಮ, ಕಾಮ ಬಂದಂತೆ ಪದಾರ್ಥಗಳ ಸೃಷ್ಟಿ ಮಾಡುವ ವಿದ್ಯೆ ನನ್ನಲ್ಲಿದೆ. ಇಚ್ಛೆಗೆ ಬಂದದ್ದನ್ನು ನಾನು ಸೃಷ್ಟಿ ಮಾಡಬಹುದು ಎಷ್ಟು ಅಂತ ರಥಗಳನ್ನು ಸುಡುತ್ತೀಯಾ ನೀನು, ನಿನ್ನ ಶಕ್ತಿ, ನಿನ್ನ ವಿದ್ಯಾ ಬಲ ಆದು ಕಡಿಮೆಯಾದೀತೆ ಹೊರತು ನನಗೇನು ಅದರಿಂದ ಆಗಬೇಕಾದದ್ದಿಲ್ಲ. ಯೋಗ್ಯತೆಯಲ್ಲಿಯೂ ಜಯಂತನಿಗಿಂತಲೂ ಬಹಳ ದೊಡ್ಡವ ಪ್ರದ್ಯುಮ್ನ ಇಂದ್ರನಿಗೆ ಸಮಾನ ಅಂತಹ ಪ್ರದ್ಯುಮ್ನ ಹೇಳುತ್ತಾನೆ.

ನಾಹಮೀದೃಶರೂಪಾಣಾಂ ಶಕ್ಯೋ ಹನ್ತುಂ ಶತೈರಪಿ ॥ (73.51 ವಿಷ್ಣುಪರ್ವ)

ನಿನ್ನಂಥವರು ನೂರಾರು ಜನ ಸೇರಿದರೂ ನನ್ನನ್ನು ಸಂಹಾರ ಮಾಡಲಿಕ್ಕೆ ಸಾಧ್ಯ ಇಲ್ಲ. ಪಾರಿಜಾತ ಪಾರಿಜಾತ ಪಾರಿಜಾತ ಅಂತ ಜಪ ಮಾಡಬೇಕಾದರೆ ಮನಸ್ಸಿನಲ್ಲಿ ಸ್ಮರಣೆ ಮಾಡು ಪುಣ್ಯ ಪಡೆದುಕೋ ನಿನಗೆ ಬೇಡ ಅನ್ನುವುದಿಲ್ಲ, ಮುಟ್ಟಿದಿ ಅಂದರೆ ನೋಡು ಹುಷಾರ್.

ಮನಸಾ ಸ್ಮರ್ಯತಾಂ ಸೈಷ ಪಾರಿಜಾತಸ್ತ್ವಯಾ ತರುಃ ।
ಶಕ್ಯಂ ನ ಖಲು ಹಸ್ತಾಭ್ಯಾಂ ಸ್ಪೃಷ್ಟವ್ಯೋ ಯಸ್ತ್ವಯಾ ಹ್ಯಸೌ ॥ (73.54 ವಿಷ್ಣುಪರ್ವ)

ಮುಟ್ಟುವುದಕ್ಕೆ ಸಾಧ್ಯ ಇಲ್ಲ ಅಂತ ಪ್ರದ್ಯುಮ್ನ ಜಯಂತನಿಗೆ ಹೆದರಿಸಿದ್ದಾನೆ, ಮತ್ತೆ ಪುನಃ ಯುದ್ಧ ಪ್ರಾರಂಭವಾಗಿದೆ. ಈ ಕಡೆಗೆ ಪ್ರವರನು ಕೂಡ ಬಹಳ ಸಾತ್ಯಕಿಯ ಮೇಲೆ ಆಯುಧಗಳನ್ನು ಪ್ರಹಾರ ಮಾಡಿ ಪರಸ್ಪರವಾಗಿ ಒಬ್ಬರಿಗೊಬ್ಬರು ಮಾಂಸ ಕಿತ್ತಿ ಬರುವಂತೆ ಯುದ್ಧವನ್ನು ಆಡುತ್ತ ಇದ್ದಾರೆ. ಕೊನೆಗೂ ಕೃಷ್ಣನ ಮಾತು

ನೆನಪಾಯಿತು, ಇನ್ನು ಹೆಚ್ಚು ನಾನು ಯುದ್ಧ ಮಾಡಿ ಬ್ರಾಹ್ಮಣನಿಗೆ ತೊಂದರೆ ಕೊಡಬಾರದು ಅಂತ ಸ್ವಲ್ಪ ಇವನು ಮತ್ತೆ ಮಂದನಾಗಿ ನಿಂತಾಗ ಅವನ ಕೈ ಜೋರಾಗಿ ಇವನು ಮೂರ್ಛೆ ಹೋಗಿದ್ದಾನೆ. ಇನ್ನಿವನು ಮೂರ್ಛೆ ಬಿದ್ದಿದ್ದಾನೆ, ತೊಂದರೆಯಲ್ಲಿ ಇದ್ದಾನೆ ಹಾಗಾದರೆ ಇದೇ ಸರಿಯಾದ ಅವಕಾಶ ಆ ಪಾರಿಜಾತವನ್ನು ತೆಗೆದುಕೊಂಡು ಹೋಗೋಣ ಅಂತ ಪ್ರವರ ಗರುಡನ ಹತ್ತಿರ ಬಂದು ನಿಂತದ್ದೇ ತಡ, ಒಂದು ಜೋರಾಗಿ ರೆಕ್ಕೆಯನ್ನು ಬೀಸಿದರೆ ಎಷ್ಟೋ ದೂರ ಹೋಗಿ ಬಿದ್ದಿದ್ದಾನೆ ಆ ಬ್ರಾಹ್ಮಣ ಆ ಗಾಳಿಯಿಂದ, ಅವನೇನು ಗರುಡ ಅಂದರೆ ಸುಮ್ಮನೇ ಒಂದು ಸಾಮಾನ್ಯ ಕಾರು ಬಸ್ಸು ಟ್ರಕ್ ಇದ್ದ ಹಾಗೆ ಅಂತ ತಿಳಿದು ಕೊಂಡುಬಿಟ್ಟ. ಅದರಲ್ಲಿ ಮೇಲೆ ಇಟ್ಟಿದ್ದಾರೆ ಪಾರಿಜಾತ ಅಂತ ಅಂದರೆ ಸಾಮಾನ್ಯ ರಥ ಅಥವಾ ಬಂಡೆ ವಾಹನನಾ ಅದು ಅಂತಹ ಮಹಾನುಭಾವನಾದ, ಮಹಾ ಸಮರ್ಥನಾದಂತಹ ಗರುಡ ದೇವರು. ಹತ್ತಿರ ಹೋದದ್ದೆ ತಡ ಒಂದು ರೆಕ್ಕೆಯಿಂದ ಬೀಸಿದರೆ ಒಂದು ಗಯ್ಯೂತಿ ಒಂದು ಸಾವಿರ ಧನುಸ್ಸಿನ ಪ್ರಮಾಣಕ್ಕೆ ಒಂದು ಕ್ರೋಶ ಅನ್ನುತ್ತಾರೆ ಎರಡು ಸಾವಿರ ಧನುಸ್ಸು ಅಂದರೆ ಎರಡು ಕ್ರೋಶಗಳು ಅಂದರೆ ಒಂದು ಗಯ್ಯೂತಿ ಅಷ್ಟು ದೂರ ಹೋಗಿ ಬಿದ್ದಿದ್ದಾನೆ ನಿಶ್ಚೇಷ್ಟನಾಗಿ ಅವನನ್ನು ಜಯಂತ ತನ್ನ ರಥದಲ್ಲಿ ಕೂಡಿಸಿಕೊಂಡು ಶೈತ್ಯೋಪಚಾರ ಮಾಡುವುದಕ್ಕೆ ಕರೆದುಕೊಂಡು ಹೋದ. ಈ ಕಡೆಗೆ ಸಾತ್ಯಕಿಗೆ ಶೈತ್ಯೋಪಚಾರ ಮಾಡುವುದಕ್ಕೆ ಪ್ರದ್ಯುಮ್ನ ತನ್ನ ರಥದಲ್ಲಿ ಕೂಡಿಸಿಕೊಂಡು ಅವನು ಕರೆದುಕೊಂಡು ಹೋಗಿದ್ದಾನೆ, ಸಾತ್ಯಕಿ ಮೂರ್ಛಿತನಾಗಿ ಬಿದ್ದಿದ್ದಾನೆ. ಪ್ರದ್ಯುಮ್ನ ಇನ್ನು ಒಳ್ಳೆಯ ಗಿಡ ಮೂಲಿಕೆ ಔಷಧಿಗಳನ್ನೆಲ್ಲ ನೋಡಿ ಚೆನ್ನಾಗಿ ಲೇಪನ ಮಾಡಿ ಅವನನ್ನು ಎಬ್ಬಿಸಬೇಕು ಅಂತ ನೋಡುವುದರೊಳಗೆ ಬಂದ

ವೇದ್ಯೋ ವೈದ್ಯಃ ಸದಾಯೋಗೀ ವೀರಹಾ ಮಾಧವೋ ಮಧುಃ ॥ (18 ವಿಷ್ಣುಸಹಸ್ರನಾಮ)

'ವೈದ್ಯ ಬಂದ ನೋಡಿ – ವೇಂಕಟನೆಂಬ ವೈದ್ಯ ಬಂದ ನೋಡಿ' ಸ್ವಯಂ ಪರಮಾತ್ಮ ಅಲ್ಲಿ ಇದ್ದಾನೆ. ಏನೋ ಪ್ರದ್ಯುಮ್ನ ಎಲ್ಲಿಯ ಔಷಧಿ ಹುಡುಕುತ್ತಿಯಾ ಅಂದ ಎಡಗೈ ಬಲಗೈಯನ್ನು ಉಪಯೋಗಿಸದೇ,

ತಂ ಹಿ ಮ್ಮಿಪಸ್ಪರ್ಶ ಹಸ್ತೇನ ಸವ್ಯೇನ ಮಧುಸೂದನಃ ।
ವಿರುಜಃ ಸ್ಪರ್ಶಮಾತ್ರೇಣ ಸಾತ್ಯಕಿಃ ಸಮಪದ್ಯತ ॥ (73.78 ವಿಷ್ಣುಪರ್ವ)

ಸಕಲ ದಿವ್ಯೌಷಧಿಗಳ ಸೃಷ್ಟಿಯನ್ನು ಮಾಡಿದಂತಹ ಸಾಕ್ಷಾತ್ ಅಮೃತಮಯವಾದ ಕರಗಳನ್ನು ಪಡೆದಂತಹ ಪರಮಾತ್ಮ ತನ್ನ ವಾಮ ಹಸ್ತದ ಸ್ಪರ್ಶವನ್ನು ಮಾಡಿದ್ದಾನೆ. ಮಾಡಿದ್ದೇ ತಡ ಅವನಿಗೆ ಎಚ್ಚರ ಬಂದಿದೆ ಮತ್ತೆ ಯುದ್ಧ ಪ್ರಾರಂಭ ಮಾಡಿದ್ದಾನೆ. ಇಂದ್ರ ದೇವರು ನಗುತ್ತಾ ಇದ್ದಾರೆ ಈ ಮಧ್ಯದಲ್ಲಿ ಆ ಪ್ರವರನ ಪರಿಸ್ಥಿತಿ ನೋಡಿ ಒಂದು ಗರುಡನ ರೆಕ್ಕೆಗೆ ಹೊಡೆಸಿಕೊಂಡು ದೂರ ಬಿದ್ದದ್ದನ್ನು ನೋಡಿ ಅವರನ್ನು ಕರೆದು ಹೇಳಿದ. ಜಯಂತ, ಪ್ರವರ ನೀವಿಬ್ಬರೂ ಕೂಡ ಗರುಡ ಅಂದರೆ ಸಾಮಾನ್ಯ ಅಂತ ತಿಳಕೋಬೇಡಿ ಬಹಳ ದೊಡ್ಡ ಶಕ್ತಿ ಅವನದು.

ನಾಗಾರಿರುಗ್ರಬಲಪೌರುಷ ಆಪ ವಿಷ್ಣೋ-
ರ್ವಾಹತ್ವಮುತ್ತ ಮಜವೋ ಯದಪಾಂಗಲೇಶಮ್ ।
ಆಶ್ರಿತ್ಯ ಶಕ್ರಮುಖದೇವಗಣೈರಚಿಂತ್ಯಂ
ಶ್ರೀರ್ಯತ್ಕಟಾಕ್ಷ ಬಲವತ್ಯಜಿತಂ ನಮಾಮಿ । (7.8 ದ್ವಾದಶಸ್ತೋತ್ರ)



ನಮ್ಮಂತಹ ದೇವತೆಗಳು ಅವನ ಸ್ಥಾನ, ಅವನ ಮಾನ, ಅವನ ಶಕ್ತಿ, ಅವನ ಬಲ, ಅವನ ಪರಾಕ್ರಮ ಇದನ್ನು ಊಹೆ ಮಾಡಲಿಕ್ಕೆ ಸಾಧ್ಯ ಇಲ್ಲ ಅಂತಹ ಪರಾಕ್ರಮ ಇದೆ ಅನ್ನುತ್ತಾರೆ ಅವನಿಗೆ ಇಂದ್ರ ದೇವರು. ಅದಕ್ಕೆ ಅವನ ಹತ್ತಿರ ಹೋಗಬೇಡಿ, ದೂರದಿಂದ ಇರಿ ಗರುಡನ ಹತ್ತಿರ ಹೋದರೆ ಇದೇ ಅವಸ್ಥೆ ಆದೀತು ಅಂತ. ಹಾಗಾದರೆ ಎಲ್ಲಿರಬೇಕು ನಾವು ನೀವು ನನ್ನ ರಥದ ಪಕ್ಕದಲ್ಲಿ ಇರಿ, ನನ್ನ ಸೇವೆಗಾಗಿ ಇರಿ ನಾನು ಯುದ್ಧವನ್ನು ಮಾಡುತ್ತೇನೆ ನೀವು ಆಚೆ ಈಚೆ ಬಾಣಗಳು ಬರದೇ ಇರುವಂತೆ ನೋಡಿಕೊಳ್ಳಿ ಸಾಕು, ಗರುಡನ ಹತ್ತಿರ ಹೋಗಬೇಡಿ ಅಂತ. ಅಲ್ಲಿ ಕೃಷ್ಣನ ಎಡ ಬಲಗಳಲ್ಲಿ ಪ್ರದ್ಯುಮ್ನ ಸಾತ್ಯಕಿ, ಇಲ್ಲಿ ಜಯಂತ ಪ್ರವರ, ಕೃಷ್ಣ ಮತ್ತು ಇಂದ್ರ ಇವರಿಬ್ಬರ ಮಧ್ಯದಲ್ಲಿ ಯುದ್ಧ ಪ್ರಾರಂಭವಾಗಿದೆ. ವಾಹನಗಳಲ್ಲಿ ಮಧ್ಯ ಯುದ್ಧ ಗರುಡ ಮತ್ತು ಐರಾವತ ಅವುಗಳಲ್ಲಿ ಕಲಹ ಪ್ರಾರಂಭ ಆಯಿತು. ಏನು ಆ ಐರಾವತ ಗರುಡನ ಮುಂದೆ ಯಾವ ಗಿಡದ ತೊಪ್ಪಲು ಅಪಾರವಾದ ಪರಾಕ್ರಮ ಗರುಡ ದೇವರದು ಮಹಾನುಭಾವರು ಅಂತಹ ಗರುಡ ದೇವರು ತಮ್ಮ ಚೂಪಾದ ಉಗುರುಗಳಿಂದ ಕೂಡಿದಂತಹ ಕಾಲಿನಿಂದ ಜೋರಾಗಿ ಅದರ ತಲೆಯ ಮೇಲೆ ಠಪ್ ಅಂತ ಹೊಡೆದರೆ ಸ್ವರ್ಗದಲ್ಲಿ ಆ ನಂದನ ವನದ ಹತ್ತಿರದಲ್ಲಿ ಇರುವಂತಹ ಆನೆ ಐರಾವತ ಅದು ಕೆಳಗೆ ಬಿದ್ದಿದೆ. ಮೇರು ಪರ್ವತದ ನಾಲ್ಕು ದಿಕ್ಕಿಗೆ ಎರಡೆರಡು ಪರ್ವತಗಳಿವೆ ಪೂರ್ವ ದಿಕ್ಕಿಗೆ ಜಠರ-ದೇವಕೂಟ ಅಂತ ಹದಿನೆಂಟು ಸಾವಿರ ಯೋಜನ ಉದ್ದ, ಎರಡು ಸಾವಿರ ಯೋಜನ ಅಗಲ ಮತ್ತು ಎತ್ತರ ಅದೇ ರೀತಿ ಪಶ್ಚಿಮ ದಿಕ್ಕಿಗೆ ಪವನ, ಪಾರಿಯಾತ್ರ ಅಂತ ಆ ಪಾರಿಯಾತ್ರ ಎಂಬಂತಹ ಪರ್ವತದ ಮೇಲೆ ಬಂದು ಬಿದ್ದಿದೆ ಅದು ಅಲ್ಲಿಂದ.

ಸಮ್ಮೂಹಾರಾಭಿಸಂತಪ್ತೋ ನಿಪಪಾತ ತ್ರಿವಿಷ್ಟಪಾತ್ ।
ಪಾರಿಯಾತ್ರೇ ಗಿರಿಶ್ರೇಷ್ಠೇ ದ್ವೀಪೇಽಸ್ಮಿಞ್ಜನಮೇಜಯ ॥ (73.91 ವಿಷ್ಣುಪರ್ವ)

ಜಂಬೂದ್ವೀಪದ ಮಧ್ಯದಲ್ಲಿರುವ ಮೇರು ಪರ್ವತದ ಪಶ್ಚಿಮ ಭಾಗದಲ್ಲಿ ಇರುವ ಪವಮ, ಪಾರಿಯಾತ್ರ ಪರ್ವತಗಳ ಪೈಕಿ ಪಾರಿಯಾತ್ರ ಎಂಬ ಪರ್ವತದ ಮೇಲೆ ಧಪ್ ಅಂತ ಬಿದ್ದಿದೆ. ಬಿದ್ದರೆ ಇಂದ್ರ ಅಯ್ಯೋ ಐರಾವತ ಬೀಳುತ್ತಾ ಇದೆ ಅಂತ ತಾನು ಆಕಾಶ ಮಾರ್ಗದಲ್ಲಿ ನಿಂತು ಐರಾವತವನ್ನು ಒದ್ದು ನೀನು ಬಿದ್ದರೆ ಬೀಳು ಅಂತ ಅನ್ನಲಿಲ್ಲ ನನ್ನ ಸೇವೆಯನ್ನು ಮಾಡುತ್ತ ಇದೆ ಹೊತ್ತು ಇಷ್ಟೆಲ್ಲಾ ನಾನು ಹೇಗೆ ಅದನ್ನ ಬಿಡೋದು ಅಂತ ಅದರ ಜೊತೆಗೆ ಇಂದ್ರನೂ ಕೆಳಗೆ ಬಂದಿದ್ದಾನೆ ತಾನು ಬಿದ್ದಿದ್ದಾನೆ ಬಿಟ್ಟು ಕೊಟ್ಟಿಲ್ಲ. **'ಕಾರುಣ್ಯಾದಥ ಸೌಹಾರ್ದಾತ್'**[1] ಅದರ ಮೇಲಿನ ಕಾರುಣ್ಯ ಪ್ರೀತಿಯಿಂದ ತಾನೂ ಅಲ್ಲಿಂದ ಪಾರಿಯಾತ್ರ ಪರ್ವತದವರೆಗೆ ತಾನೂ ಬಂದಿದ್ದಾನೆ ಇಂದ್ರ. ಇಂದ್ರ ಬಂದಿದ್ದಾನೆ ಅಂತ ಕೃಷ್ಣನು ಬಂದ ಗರುಡಾರೂಢನಾಗಿ ಇಲ್ಲಿಯೇ ಯುದ್ಧ ಪ್ರಾರಂಭವಾಗಿದೆ ಪಾರಿಯಾತ್ರ ಪರ್ವತದ ಮೇಲೆ ಆ ಪಾರಿಯಾತ್ರ ಪರ್ವತ ಪುಡಿ ಪುಡಿಯಾಗುತ್ತಾ ಇದೆ ಆ ಗರುಡ ದೇವರ ಠಪ ಠಪ ಅಂತ ಹೆಜ್ಜೆ ಇಟ್ಟರೆ ಪರ್ವತ ನುಚ್ಚುನೂರಾಗಿ ಹೋಗುತ್ತಾ ಇದೆ. ಆ ಪರ್ವಾತಾಭಿಮಾನಿ ದೇವತೆ ಬಂದು ಕೃಷ್ಣ ಪರಮಾತ್ಮನಿಗೆ ಶರಣು ಹೋದ ನನ್ನ ಗತಿ ಏನು ನನ್ನನ್ನು ಸೃಷ್ಟಿ ಮಾಡಿದ್ದು ನೀನೇ ತಾನೆ, ನಿನ್ನ ಸೇವೆ ಮಾಡು ಅಂದರೆ ಮಾಡುತ್ತೇನೆ ಈ ಪರಿ ಆ ಗರುಡ ದೇವರ ಪಟ ಪಟ ಅಂತ ಹೊಡೆದರೆ ನನ್ನ ಗತಿ ಏನಾಗಬೇಕು.

ಚುಕೂಜ ಬಹುಮಾನೇನ ಕೃಷ್ಣಸ್ಯ ಸ ತು ಪರ್ವತಃ । (73.100 ವಿಷ್ಣುಪರ್ವ)

1. 73.92 ವಿಷ್ಣುಪರ್ವ

ಒದರಿ ಒದರಿ ಪ್ರಾರ್ಥನೆ ಮಾಡಿಕೊಂಡು ಪರಮಾತ್ಮನಿಗೆ ಹೇಳುತ್ತಾ ಇದ್ದಾನೆ. **'ರಾಜಞ್ಜ್ವೀರ್ಯಮಾಣು ಸಮಂತತಃ'**[1] ಆಗ ಪರಮಾತ್ಮ ತತ್ ಕ್ಷಣಕ್ಕೆ ಕೃಪಾಲು ಪರಮಾತ್ಮ ಅಂದ ಅಲ್ಲಿ ಐರಾವತದ ಮೇಲೆ ಕಾರುಣ್ಯ ತೋರಿದ ಇಂದ್ರ ಯಾಕೆ ಅಂದರೆ ಐರಾವತ ದುರ್ಬಲ ಅಂತ ಇಲ್ಲಿ ಗರುಡ ಬಹಳ ಮಹಾ ಪ್ರಬಲ ಆ ಪ್ರಬಲನಾದ ಗರುಡನ ಹೆಜ್ಜೆಯ ಒಂದು ಭಾರವನ್ನ ಅದರ ಹೊಡೆತವನ್ನ ತಾಳದೇ ಇರುವ ಪಾರಿಯಾತ್ರದ ಮೇಲೆ ಕೃಷ್ಣ ಕಾರುಣ್ಯವನ್ನು ತೋರುತ್ತ ಇದ್ದಾನೆ. ಅಯ್ಯೋ ನಿನಗೆ ತೊಂದರೆ ಆಗುತ್ತಾ ಇದೆಯಾ ಚಿಂತನೆ ಮಾಡಬೇಡ ನನಗೆ ಏನು ಗರುಡ ಬೇಕು ಅಂತ ಇಲ್ಲ ಅಂತ ಆ ಗರುಡನಿಗೆ ನೀನು ಈ ಪರ್ವತದ ಮೇಲೆ ನಿಲ್ಲಬೇಡ ತೊಂದರೆ ಆಗುತ್ತದೆ, ನೀನು ಆಕಾಶದಲ್ಲಿ ನಿಂತು ಬಿಡು ಅಂತ ಆ ಗರುಡನನ್ನು ಆಕಾಶದಲ್ಲಿ ನಿಲ್ಲಿಸಿ ತಾನು ಆ ಪರ್ವತದ ಮೇಲೆ ನಿಂತಿದ್ದಾನೆ. ಗರುಡನಿಗಿಂತಲೂ ಅನಂತ ಬಲನಾದ ಪರಮಾತ್ಮ ನಿಂತರೆ ಇನ್ನೇನು ಆಗಬೇಕು ಪರ್ವತಕ್ಕೆ ಆದರೆ ಭಗವಂತ ಗರುಡನ ಮಹಾತ್ಮೆ ಏನು ಅಂತ ಜಗತ್ತಿಗೆ ತೋರಿಸಿಕೊಡುತ್ತಾ ಇದ್ದಾನೆ.

ಸಕಲ ಸಜ್ಜನರಿಗೆ ಉತ್ತಮವಾದ ವೈದಿಕ ಜ್ಞಾನವನ್ನು ನೀಡುವಂತಹ ಮಹಾನುಭಾವ ಆ ಗರುಡ ದೇವರ ಬಲ ಎಂತಹ ಅದ್ಭುತವಾದದ್ದು. ಮನೋಭಿಮಾನಿ ದೇವತೆಗಳು, ಅಹಂಕಾರ ತತ್ವಕ್ಕೆ ಅಭಿಮಾನಿ ದೇವತೆಗಳು, ಪೃಥ್ವಿಗೆ ಅಭಿಮಾನಿ ದೇವತೆಗಳು ಅಂತಹ ಮಹಾನುಭಾವರಾದ ವೇದಾಭಿಮಾನಿಗಳಾದಂತಹ ಪರಮಾತ್ಮನ ವಾಹನರಾದ ಶುದ್ಧ ಜ್ಞಾನಪ್ರದರಾದ ಆ ಗರುಡ ದೇವರ ಧ್ಯಾನ ಶಕ್ತಿ. ನಮಗೆ ಉತ್ತಮವಾದಂತಹ ಪಾಠ ಪ್ರವಚನವನ್ನು ಮಾಡುವಂತಹ ಸೌಭಾಗ್ಯ ಸಿಗಬೇಕು ಶೇಷ ದೇವರ ಅನುಗ್ರಹ ಬೇಕು, ಭಗವಂತನ ಧ್ಯಾನ ಮಾಡಬೇಕು ಗರುಡ ದೇವರ ಅನುಗ್ರಹ ಬೇಕು, ಯುಕ್ತಿಗಳನ್ನು ಹೇಳಿ ಪರಮತ ನಿರಾಕರಣ ಮಾಡಬೇಕು ರುದ್ರ ದೇವರ ಅನುಗ್ರಹ ಬೇಕು ಈ ರೀತಿ ವಿಶೇಷವಾಗಿ ಆ ಗರುಡ ದೇವರ ಅನುಗ್ರಹ ಸಜ್ಜನರಿಗೆ ಬೇಕು, ಅವರ ಮಹಾತ್ಮೆ ತೋರಿಸಬೇಕು ಅಂತ ಮಾಡಿದ್ದು. ಅವರು ಯೋಗ ಸಾಮರ್ಥ್ಯದಿಂದ ತಮ್ಮದಷ್ಟೇ ಭಾರ ಇದ್ದರೂ ಭಾರವಾಗದೇ ಇರುವ ಹಾಗೆ ನಿಲ್ಲಲಿಕ್ಕೂ ಅವರಿಗೆ ಬರುತ್ತದೆ ಹಾಗೆ ಪರಮಾತ್ಮ ತಾನು ಭಾರವಾಗದಂತೆ ನಿಂತಿದ್ದಾನೆ ಪಾರಿಯಾತ್ರ ಪರ್ವತದ ಮೇಲೆ. ಯುದ್ಧ ಮಾಡಬೇಕಲ್ಲ ಅದಕ್ಕೆ ರೈವತ ಪರ್ವತದಲ್ಲಿ ನನ್ನ ರಥ ಬಿಟ್ಟು ಬಂದಿದ್ದೇನಲ್ಲ ಅಲ್ಲಿಯೇ ನಿಲ್ಲಿಸಿ ಬಂದಿದ್ದೇನೆ ಅದನ್ನು ತೆಗೆದುಕೊಂಡು ಬಾ ಅಂತ ಈ ಮೇರು ಪರ್ವತದ ಪಶ್ಚಿಮ ಭಾಗದಲ್ಲಿ ಇರುವ ಪಾರಿಯಾತ್ರ ಪರ್ವತ ಎಲ್ಲಿ, ರೈವತ ಪರ್ವತ ಎಲ್ಲಿ ಇಷ್ಟು ದೂರ ಬರಬೇಕಲ್ಲ ಹೇಗೆ ಬರುವುದು ಅಂತ ಚಿಂತೆ ಇಲ್ಲ. ಪ್ರದ್ಯುಮ್ನ ಮನೋವೇಗ ಮನೋಭಿಮಾನಿಯೇ ಅವನು ಮನೋವೇಗದಿಂದ ಪ್ರದ್ಯುಮ್ನ ಬಂದದ್ದೇ ಬಂದು ಆ ರಥವನ್ನು ತೆಗೆದುಕೊಂಡು ಒಂದೇ ಒಂದು ಘಟಿಕಾದೊಳಗೆ ಇಪ್ಪತ್ತು ನಾಲ್ಕು ನಿಮಿಷದೊಳಗೆ ಅಲ್ಲಿ ಬಂದು ಬಿಟ್ಟಿದ್ದಾನೆ ಪ್ರದ್ಯುಮ್ನ. ಪಾರಿಯಾತ್ರ ಪರ್ವತದಿಂದ ರೈವತ ಪರ್ವತಕ್ಕೆ ಬಂದು ಅಲ್ಲಿಂದ ಆ ರಥವನ್ನು ತೆಗೆದುಕೊಂಡು ಮತ್ತೆ ಪಾರಿಯಾತ್ರ ಪರ್ವತಕ್ಕೆ ಬಂದು ಕೃಷ್ಣನಿಗೆ ರಥವನ್ನು ಸಮರ್ಪಣೆ ಮಾಡಿದ ರಥದ ಮೇಲೆ ಕುಳಿತು ಯುದ್ಧ ಪ್ರಾರಂಭ ಆಯಿತು.

ಈಗ ಆ ಪಾರಿಯಾತ್ರ ಪರ್ವತ ಕೃಷ್ಣನಿಗೆ ಅನ್ನುತ್ತದೆ ನನ್ನ ಮೇಲೆ ದಯೆ ಮಾಡಿ ಎಷ್ಟು ದೊಡ್ಡ ಕೆಲಸ ಮಾಡಿದಿ ಗರುಡನನ್ನ ಕಳಿಸಿದಿ, ರಥವನ್ನ ತರಿಸಿದಿ ಇಷ್ಟು ಪ್ರೀತಿಯಿಂದ ನನಗೆ ತೊಂದರೆ ಆಗಬಾರದು ಅಂತ ಅನುಗ್ರಹವನ್ನು ಮಾಡಿ ನೀನು ಯುದ್ಧವನ್ನು ಮಾಡುತ್ತಾ ಇದ್ದೀ ಆದ್ದರಿಂದ ನಾನು ನಿನ್ನ ಸೇವೆ ಮಾಡುತ್ತೇನೆ. ಪರ್ವತ ಅಂದರೆ ಎತ್ತರ, ತಗ್ಗು, ದಿನ್ನಿ, ಮೇಲೆ ಕೆಳಗೆ ಏನೇನೋ ಎಲ್ಲಾ ಇರುತ್ತದೆ ರಥ ಓಡಾಡುವುದಕ್ಕೆ ಅತ್ಯಂತ ಅನುಕೂಲವಾಗುವ ರೀತಿಯಲ್ಲಿ ಸಮಾನವಾದಂತಹ ಭೂಮಿ ಆಗಬೇಕು ಆ ಪರ್ವತ ತಾನು ಭೂಮಿ ಒಳಗೆ ಪ್ರವೇಶ ಮಾಡಿದೆ.

1. 73.99 ವಿಷ್ಣುಪರ್ವ

ಗರುಡನ ಹೊಡೆತಕ್ಕೆ ತಾನು ಮುರಿಯುವುದಕ್ಕೆ ಸಿದ್ಧವಾಗದಿದ್ದರೂ ಕೃಷ್ಣನ ರಥದ ಸಂಚಾರಕ್ಕೆ ಅನುಕೂಲವಾಗುವ ದೃಷ್ಟಿಯಲ್ಲಿ ಸೇವಾ ರೂಪದಲ್ಲಿ ತಾನೇ ತಾನು ಶಾಣಪಾದಃ ಅಂತ ಸಾಣೇಕಲ್ಲಿನ ಹಾಗೆ ಸಮಾನವಾಗಿ ಸಮತಟ್ಟಾಗಿ ನಿಂತಿದೆ ಅಂತ. ಕೆಲವರ ಪ್ರಕಾರ ಶಾಣಪಾದಃ ಅಂದರೆ ಮಾಶರಾಶಿವತ ಅಂತ ಉದ್ದಿನ ರಾಶಿಯಂತೆ ಅತೀ ಸುಲಭವಾಗಿ ಉಸುಕಿನ ಹಾಗೆ ತಾನು ರೂಪವನ್ನು ತಾಳಿದೆ ಕೃಷ್ಣನ ರಥ ಅಲ್ಲಿ ಸುಲಭವಾಗಿ ಓಡಾಡಬಹುದು ಅಂತ ಅದರ ಮೇಲೆ ಕುಳಿತು ಯುದ್ಧವನ್ನು ಮಾಡುತ್ತಾ ಇದ್ದಾರೆ. ಗರುಡ ಹೋಗಿಲ್ಲ ಪಾರಿಜಾತ ವೃಕ್ಷ, ಪ್ರದ್ಯುಮ್ನ, ಸಾತ್ಯಕಿ ಇವರೆಲ್ಲರನ್ನ ಹೊತ್ತುಕೊಂಡು ಹಿಂದೆ ಹಿಂದೆ ಆಕಾಶದಲ್ಲಿ ಓಡಾಡುತ್ತಾ ಇದ್ದಾನೆ ಗರುಡ, ಕೃಷ್ಣ ರಥದ ಮೇಲೆ ಕುಳಿತು ಯುದ್ಧವನ್ನು ಮಾಡುತ್ತ ಇದ್ದಾನೆ. ಆಷ್ಟೊತ್ತಿಗೆ ಆ ಐರಾವತ ಮೇಲಿನಿಂದ ಕೆಳಗೆ ಬಿದ್ದಿದ್ದು ಬೇರೆ, ಅಖಂಡವಾಗಿ ಯುದ್ಧವನ್ನು ಮಾಡಿದ್ದು ಬೇರೆ ಎಲ್ಲವೂ ಶ್ರಮವಾಗಿ ಸುಸ್ತಾಗಿ ಕಾಣುತ್ತಾ ಇದೆ ಕೃಷ್ಣ ಯುದ್ಧ ನಿಲ್ಲಿಸುತ್ತಾನೆ ಯುದ್ಧದ ಧರ್ಮ. ಐರಾವತ ಬಹಳ ಸಮಸ್ಯೆಯಲ್ಲಿ ಇದೆ ಇಂದ್ರ ಅದಕ್ಕೆ ಸ್ವಲ್ಪ ವಿಶ್ರಾಂತಿ ಕೊಡು ರಾತ್ರಿಯಾಗಿದೆ ನಾಳೆ ಬೆಳಿಗ್ಗೆ ಮತ್ತೆ ಯುದ್ಧ ಪ್ರಾರಂಭ ಮಾಡೋಣ ಅಂತ ಇಂದ್ರನಿಗೆ ಹೇಳಿ ಇಂದ್ರನನ್ನು ಕೃಷ್ಣ ಪರಮಾತ್ಮ ಕೊಟ್ಟು ಕಳಿಸುತ್ತಾನೆ.

ಇಂದ್ರ ಎಲ್ಲ ಪರ್ವತಗಳು ಎಲ್ಲಿ ಸುತ್ತಲಿವೆ ಮಧ್ಯದೊಳಗೆ ಇರುವ ಸ್ಥಳ ನೋಡಿ ಆ ಪರ್ವತಮಯವಾದ ಒಂದು ದುರ್ಗದೊಳಗೆ ತಾನು ಕುಳಿತ ಹಾಗೆ ತಾನೇನೋ ಭದ್ರವಾಗಿ ಇದ್ದೇನೆ ಅನ್ನುವ ತರಹ ಜಾಗ ಹುಡುಕಿಕೊಂಡು ಇಂದ್ರ ದೇವರು ಅಲ್ಲಿ ರಾತ್ರಿ ಇರುತ್ತಾರೆ. ಈ ಕಡೆಗೆ ಕೃಷ್ಣ ಪರಮಾತ್ಮ ಪಾರಿಯಾತ್ರ ಪರ್ವತದಲ್ಲಿಯೇನೆ ವಾಸ ಮಾಡಿ ಇದ್ದಾನೆ ಬ್ರಹ್ಮ ದೇವರು ಬರುತ್ತಾರೆ, ಕಶ್ಯಪ ಋಷಿಗಳು, ಅದಿತಿ ಎಲ್ಲಾ ದೇವತೆಗಳು, ಮುನಿಗಳು, ಋಷಿಗಳು ಎಲ್ಲರೂ ಕೃಷ್ಣ ಪರಮಾತ್ಮನ ಜೊತೆಗೆ ಅವತ್ತು ರಾತ್ರಿ ಅಲ್ಲಿಯೇ ಇರುತ್ತಾರೆ. ಕೃಷ್ಣ ಆ ಪರ್ವತಕ್ಕೆ ಶಾಣಪಾದ ಅಂತ ನೀನು ನನಗೋಸ್ಕರ ಶಾಣಪಾದನಾಗಿ ಸಾಣೇಕಲ್ಲಿನಂತೆ ಆಗಿ ಅಥವಾ ಶಾಣಪಾದ ಮಾಶರಾಶಿಯಂತೆ ಅತ್ಯಂತ ಮೃದುವಾಗಿ ಅವಕಾಶ ಕೊಟ್ಟದ್ದಕ್ಕೆ ನಿನಗೆ ಶಾಣಪಾದ ಅಂತ ಹೆಸರು ಬರಲಿ ಅಂತ ಒಂದು ವರ ಕೊಟ್ಟಿದ್ದಾನೆ ಕೃಷ್ಣ ಪಾರಿಯಾತ್ರ ಪರ್ವತಕ್ಕೆ. ಅದಕ್ಕೆ ವ್ಯಾಖ್ಯಾನಕಾರರು ಅನ್ನುತ್ತಾರೆ ಶಾಣಪಾದ ಅಂದರೆ ಕೃಷ್ಣ ವರ ಕೊಡುವುದು ಏನು, ವರ ಕೊಡುವುದು ಅಂದರೆ ಏನಾದರೂ ಒಂದು ವಿಶೇಷ ಬೇಕಲ್ಲ ಅಂತ ಅದಕ್ಕೆ ಶಣುದಾನೆ ಅಂತ ಧಾತು ಇರುವುದುರಿಂದ **'शणंति ददति अस्यामिति शाणा भारत भूमिः'** ಯಾವ ಭರತ ಭೂಮಿಯಲ್ಲಿ ಕರ್ಮ ಭೂಮಿಯಲ್ಲಿ ನಿರಂತರ ದಾನ ಧರ್ಮಾದಿಗಳನ್ನು ಮಾಡುತ್ತಾರೋ ಅಂತಹ ಭಾರತ ಭೂಮಿಗೆ ಶಾಣಾ ಶಾಣಾ ಅಂತ ಹೆಸರು. ಆ ಭಾರತ ಭೂಮಿ ಅಲ್ಲಿ ಮಾಡುವ ಪುಣ್ಯ ನಿನ್ನಲ್ಲಿ ಮಾಡುವ ಪುಣ್ಯದ ಒಂದು ಪಾದ ಭಾಗದಷ್ಟು ಆಗುತ್ತೆ ಅಂದರೆ ಆ ಭರತ ಭೂಮಿಯಲ್ಲಿ ಮಾಡುವಂತಹ ಪುಣ್ಯಕ್ಕೆ ಅಧಿಕವಾದ ಪುಣ್ಯ ಬರಲಿ. ಎಲ್ಲಿ ನಾನು ಯುದ್ಧ ಮಾಡಿದ್ದೇನೆ, ನಾನು ಈ ರಥ ಸಮೇತನಾಗಿ ಎಲ್ಲಿ ನಿಂತಿದ್ದೇನೆ ಈ ಪರಿಸರದಲ್ಲಿ ಈ ಪರ್ವತದ ಮೇಲ್ಭಾಗದಲ್ಲಿ ಅಧಿತ್ಯಕಾದಲ್ಲಿ ಯಾರು ವಿಶೇಷವಾಗಿ ಸಾಧನೆಯನ್ನು ಮಾಡುತ್ತಾರೆ, ತಪ್ಪಸ್ಸು ಮಾಡುತ್ತಾರೆ ಅವರಿಗೆ ಮಹಾ ಪುಣ್ಯ ಲಾಭವಾಗಲಿ ಅನ್ನುವ ದೃಷ್ಟಿಯಲ್ಲಿ ಒಂದು ವಿಶೇಷ ವರವನ್ನು ಶ್ರೀಕೃಷ್ಣ ಪರಮಾತ್ಮ ಆ ಪಾರಿಯಾತ್ರೆ ಪರ್ವತಕ್ಕೆ ಕೊಟ್ಟಿದ್ದಾನೆ.

ಅಷ್ಟು ಮಾಡಿ ಅಲ್ಲಿಯೇ ಗಂಗಾ ಸ್ಮರಣೆಯನ್ನು ಮಾಡಿದ. ಸ್ಮರಣೆ ಮಾಡಿದ್ದೇ ತಡ ಸೇವೆಗಾಗಿ ಗಂಗೆ ಓಡಿ ಬಂದಿದ್ದಾಳೆ, ಕೈಜೋಡಿಸಿ ನಿಂತಿದ್ದಾಳೆ ಏನಾಗಬೇಕು ಅಂತ ನೀರಿನ ರೂಪದಲ್ಲಿ ಇಲ್ಲಿ ಹರಿ ಅಂತ ಹೇಳಿದ ಕೃಷ್ಣ ಅಲ್ಲಿ ಗಂಗಾ ಜಲ ಬಂತು. ಬಿಲ್ವ ಪತ್ರ ಬಿಲ್ವ ವೃಕ್ಷದ ಸ್ಮರಣೆ ಮಾಡಿದ ಬಿಲ್ವ ವೃಕ್ಷ ಸ್ಮರಣೆ ಅನ್ನುವ ಶಬ್ದಕ್ಕೆ ಸಂಸ್ಕಾರ ಜನ್ಯ ಜ್ಞಾನ ಅಂತ ಅರ್ಥ ಅಲ್ಲ ದೇವರದು ನಿತ್ಯ ಜ್ಞಾನ, ಆ ತನ್ನ ನಿತ್ಯ ಜ್ಞಾನದಲ್ಲಿಯೇ ವಿಶೇಷವಾಗಿ ಆ ಬಿಲ್ವ ಪತ್ರ ಬಿಲ್ವ ವೃಕ್ಷವನ್ನ

ಪರಮಾತ್ಮ ಚಿಂತನ ಮಾಡಿದ ಬಿಲ್ವ ಪತ್ರ, ಗಂಗಾ ಜಲ ಅಲ್ಲಿ ಬಂದಿದೆ. ತಾನೇ ತನ್ನ ಮನಸ್ಸಿನಿಂದ ಒಂದು ಲಿಂಗವನ್ನು ಸ್ಥಾಪನೆ ಮಾಡಿದ ರಾಮೇಶ್ವರದಲ್ಲಿ ರಾಮ ದೇವರು ಯಾವ ರೀತಿಯಾಗಿ ಲಿಂಗದ ಪ್ರತಿಷ್ಠಾಪನೆಯನ್ನು ಮಾಡಿದ್ದಾರೆ. **'ಲಿಂಗಂ ಪ್ರತಿಷ್ಠಾಪಯತಿ'** ಇತ್ಯಾದಿಯಾಗಿ ಶ್ರೀಮದಾಚಾರ್ಯರು ತಿಳಿಸಿದಂತೆ ಇವುಗಳನ್ನೆಲ್ಲ ಪರಮಾತ್ಮ ಮೋಹನಕ್ಕಾಗಿ ಮಾಡುತ್ತಾನೆ. ತಾನು ಸ್ವಯಂ ಸರ್ವೋತ್ತಮ ಇದೇ ಹರಿವಂಶದ ಪೂರ್ವ ಭಾಗದಲ್ಲಿ, ಮಧ್ಯದಲ್ಲಿ, ಕೊನೆಗೆ ರುದ್ರ ದೇವರು ಪರಮಾತ್ಮನನ್ನ ಅತ್ಯಂತ ಭಕ್ತಿಯಿಂದ ಸರ್ವೋತ್ತಮ ಎಂಬುದಾಗಿ ಸ್ತೋತ್ರವನ್ನು ಮಾಡಿ ಅವನ ವರ್ಣನೆಯನ್ನು ಮಾಡಿದ್ದು ಹರಿವಂಶದಲ್ಲಿಯೇ ಮುಂದೆ ಮತ್ತೆ ನೀವು ಕೇಳುವವರಿದ್ದೀರಿ ಅನೇಕ ಅಧ್ಯಾಯಗಳಿಂದ ರುದ್ರ ದೇವರು ಪರಮಾತ್ಮನ ಸ್ತುತಿಯನ್ನು ಮಾಡುತ್ತಾರೆ. ಅಂತಹ ಬ್ರಹ್ಮ ರುದ್ರಾದಿ ಸಕಲ ದೇವತೆಗಳಿಂದ ವಂದ್ಯನಾದಂತಹ ಸರ್ವೋತ್ತಮನಾದ ಭಗವಂತ ನೀವೆಲ್ಲರೂ ಭಕ್ತರು ರುದ್ರ ದೇವರ ಪೂಜೆಯನ್ನು ಮಾಡಬೇಕು, ರುದ್ರ ದೇವರ ಅನುಗ್ರಹದಿಂದ ಉತ್ತಮವಾದ ಶುದ್ಧವಾದಂತಹ ಮನಸ್ಸನ್ನು ಪಡೆದು ಆ ಮನಸ್ಸಿನಿಂದ ನನ್ನ ಧ್ಯಾನವನ್ನು ಮಾಡಿ ಜ್ಞಾನವನ್ನು ಪಡೆದು ಸದ್ಗತಿಯನ್ನು ಪಡೆಯಬೇಕು ಅಂತ ಜಗತ್ತಿಗೆ ತಿಳಿಸುವುದಕ್ಕಾಗಿ ಆ ರುದ್ರ ದೇವರ ಪೂಜೆಯನ್ನ ತಾನು ಮಾಡಿ ತೋರಿಸುತ್ತಾನೆ ಪರಮಾತ್ಮ. ರುದ್ರ ದೇವರ ಪ್ರತಿಷ್ಠಾಪನೆ ಮಾಡಿದ್ದಾನೆ, ಪ್ರತಿಷ್ಠಾಪನೆ ಮಾಡಿ ಆ ಬಿಲ್ವ ಪತ್ರದಿಂದ ಗಂಗೋದಕದಿಂದ ಪೂಜೆಯನ್ನು ಮಾಡುತ್ತಾನೆ, ಮಾಡಿ ಆ ರುದ್ರ ದೇವರ ಸ್ತುತಿಯನ್ನು ಮಾಡಿದ್ದಾನೆ ರುದ್ರಾಂತರ್ಗತವಾದ ತನ್ನ ರೂಪವನ್ನೇ ತಾನು ಸ್ತೋತ್ರ ಮಾಡಿಕೊಂಡಿದ್ದಾನೆ **'ಬಿಲ್ವೋದಕೇಶ್ವರ'** ಅಂತ ಅದಕ್ಕೆ ಹೆಸರು. ಉದಕವನ್ನು ಸೃಷ್ಟಿ ಮಾಡಿ ಬಿಲ್ವವನ್ನೂ ಸೃಷ್ಟಿ ಮಾಡಿ ಬಿಲ್ವೋದಕಗಳಿಂದ ಪೂಜೆ ಮಾಡಿದ್ದರಿಂದ **'ಬಿಲ್ವೋದಕೇಶ್ವರ'** ಅಂತ ಆ ಪಾರಿಯಾತ್ರದ ಪರ್ವತದ ಮೇಲೆ ಇರುವಂತಹ ರುದ್ರ ದೇವರಿಗೆ ಹೆಸರು. ಆ ರುದ್ರ ದೇವರನ್ನು ಕುರಿತು ಪರಮಾತ್ಮ ಪೂಜೆ ಮಾಡಿದಾಗ ರುದ್ರ ದೇವರು ಅನ್ನುತ್ತಾರೆ **'ಮತ್ತಃ ಶೂರತರಸತಿಥಾ'**[1] ನನಗಿಂತಲೂ ಮಹಾಪರಾಕ್ರಮಿ ನೀನು ಸರ್ವೋತ್ತಮ ನಿಶ್ಚಿತವಾಗಿಯೂ ಪಾರಿಜಾತ ವೃಕ್ಷವನ್ನು ಹರಣ ಮಾಡಿಕೊಂಡು ನೀನು ದ್ವಾರಕಾ ಪಟ್ಟಣಕ್ಕೆ ಹೋಗುತ್ತೀಯಾ, ಇಂದ್ರನಿಂದ ಯಾವುದೇ ವಿಘ್ನ ಆಗುವುದಿಲ್ಲ ಯಾಕೆ ಚಿಂತನೆ ಮಾಡುತ್ತೀಯಾ ಅನ್ನುವ ರೀತಿಯಲ್ಲಿ ರುದ್ರ ದೇವರು ಪರಮಾತ್ಮನಿಗೆ ವಿಜ್ಞಾಪನೆಯನ್ನು ಮಾಡಿಕೊಂಡಿದ್ದಾರೆ. ಜೊತೆಗೆ ಮುಂದೆ ಬರುವ ಭಕ್ತರಿಗಾಗಿ ನೋಡಿ ಯಾವುದಕ್ಕೋಸ್ಕರ ಪರಮಾತ್ಮ ಅಲ್ಲಿ ಪೂಜೆ ಮಾಡಿದ್ದು ತಾನು ವರ ಪಡೆಯುವುದಕ್ಕಾಗಿ ಅಲ್ಲ **'ವರದೇಶ ವರಪ್ರದಮ್'** ತಾನೇ ಎಲ್ಲರಿಗೂ ವರ ಕೊಡುವವ ಆದರೆ ಮುಂದಿನವರೆಲ್ಲ ಹೀಗೆ ಪೂಜೆ ಮಾಡಬೇಕು ಅಂತ ತೋರಿಸುವುದಕ್ಕೆ ಅದನ್ನೇ ರುದ್ರ ದೇವರು ಹೇಳುತ್ತಾರೆ. ಈ ಸ್ಥಾನದಲ್ಲಿ ಮೂರು ದಿನಗಳವರೆಗೆ ಯಾರು ಉಪವಾಸ ಇದ್ದು ನನ್ನ ಪೂಜೆಯನ್ನು ಮಾಡುತ್ತಾರೋ ಅಂಥವರಿಗೆ ಎಲ್ಲ ಅಧಿಸ್ತಿತವಾದ ಇಷ್ಟಾರ್ಥಗಳನ್ನು ನಾನು ಕೊಡುತ್ತೇನೆ ಎಂಬುದಾಗಿ ರುದ್ರ ದೇವರು ಹೇಳುತ್ತಾರೆ.

ಇಲ್ಲಿರುವಂತಹ ಗಂಗೆ ಇವಳು ಅವಿಂಧ್ಯಾ ಅಂತ ಇವಳಿಗೆ ಹೆಸರು ಬರಲಿ. ನೀನು ಚಿಂತನ ಮಾಡಿದ ಮಾತ್ರಕ್ಕೆ ಗಂಗೆ ಇಲ್ಲಿ ಬಂದು ನನ್ನ ಅಭಿಷೇಕಕ್ಕೆ ಸಿದ್ಧಳಾದಳಲ್ಲ ಹಾಗಾದರೆ ಇಂದಿನಿಂದ ಗಂಗೆಯಲ್ಲಿಯೇ ಎಲ್ಲರೂ ಸ್ನಾನ ಮಾಡಬೇಕು ಅಂತಿಲ್ಲ ನೀನಿದ್ದಲ್ಲಿ ಹೇಗೆ ಗಂಗೆ ಬಂದಳೋ ಹಾಗೆ ಗಂಗಾ ಗಂಗಾ ಗಂಗಾ ಅಂತ ಯಾರು ಸ್ಮರಣೆ ಮಾಡುತ್ತಾರೆ, ಸ್ತೋತ್ರ ಹೇಳುತ್ತಾರೆ, ಶ್ಲೋಕ ಹೇಳುತ್ತಾರೆ ಅಲ್ಲಿಯೇ ಗಂಗಾ ಸನ್ನಿಧಾನ ಇರುತ್ತದೆ ಗಂಗಾ ಸ್ನಾನ ಮಾಡಿದ ಪುಣ್ಯ ಅವರಿಗೆ ಬರುತ್ತದೆ ಅನ್ನುವ ವಿಶೇಷವಾದ ವರವನ್ನೂ ರುದ್ರ ದೇವರು ಕೊಡುತ್ತಾರೆ.

ಗಙ್ಗಾಸ್ನಾನಸಮಂ ಸ್ನಾನಂ ಮನ್ತ್ರೋ ಭವಿತಾ ತಥಾ ॥ (74.42 ವಿಷ್ಣುಪರ್ವ)

1. 74.38 ವಿಷ್ಣುಪರ್ವ



ಮಂತ್ರ ಹೇಳಿದರೆ ಸಾಕು ಗಂಗಾ ಸ್ನಾನ ಮಾಡಿದ ಪುಣ್ಯ ಬರುತ್ತದೆ ಅಂತ. ನೋಡಿ ರುದ್ರ ದೇವರೇ ಪರಮಾತ್ಮನಿಗೆ ವರ ಕೊಟ್ಟದ್ದಾದರೆ ಪರಮಾತ್ಮನಿಗೆ ಈ ರೀತಿಯಾಗಿ ಕೇಳುವ ಅವಶ್ಯಕತೆ ಇರಲಿಲ್ಲ ಅವರು ಅನ್ನುತ್ತಾರೆ ನೀನು ಎಲ್ಲಿ ನಿಂತಿದ್ದೀಯಲ್ಲ ಪರ್ವತದಲ್ಲಿ ಈ ಪಾರಿಯಾತ್ರ ಪರ್ವತದ ಬುಡದಲ್ಲಿ ಒಂದು ಷಟ್ಪುರ ಅಂತ ಇದೆ ಅಲ್ಲಿ ಭಾರೀ ಭಾರೀ ದಾನವರಿದ್ದಾರೆ, ಅಸುರರಿದ್ದಾರೆ ಅವರೆಲ್ಲರೂ ಕೂಡ ಬಹಳ ದುಷ್ಟರು.

ಏತೇ ದೈತ್ಯಾ ದುರಾತ್ಮಾನೋ ಜಗತೋ ದೇವಕಣ್ಟಕಾಃ । (74.44 ವಿಷ್ಣುಪರ್ವ)

ಜಗತ್ತಿಗೂ ದೇವತೆಗಳಿಗೂ ಬಹಳ ಕಂಟಕರಾದವರು, ದುಷ್ಟರಾದ ಅನೇಕ ಅಸುರರೆಲ್ಲ ಇದ್ದಾರೆ. ಅವರೆಲ್ಲರಿಗೂ ಬ್ರಹ್ಮ ದೇವರ ವರ ಎಲ್ಲರೂ ಅವಧ್ಯರು ಅವರನ್ನು ಸಂಹಾರ ಮಾಡುವುದಕ್ಕೆ ನೀನೇ ಸಮರ್ಥ ಇನ್ಯಾರೂ ಸಮರ್ಥರಲ್ಲ ಅವರನ್ನು ಸಂಹಾರ ಮಾಡು. ನೋಡಿ **'ಏಕಕ್ರಿಯಾ ದ್ವರ್ಥಕರೀ'** ಅಲ್ಲಿ ಇಂದ್ರ ದೇವರ ವಾಹನಕ್ಕೆ ಗರುಡ ದೇವರು ಹೊಡೆದು ಐರಾವತವನ್ನು ಬೀಳಿಸಿದ್ದು ಸರಿಯಾಗಿ ಪಾರಿಯಾತ್ರ ಪರ್ವತದ ಮೇಲೆ ಅದರ ಬುಡಕ್ಕೇನೆ ಈ ಎಲ್ಲ ಬ್ರಹ್ಮ ದೇವರ ವರದಿಂದ ಅವಧ್ಯರಾದ ಅಸುರರ ಪಟ್ಟಣ ಆಗ ಪರಮಾತ್ಮ ಹೇಳಿದ ಆಗಲಿ ಅವರನ್ನು ಸಂಹಾರ ಮಾಡುತ್ತೇನೆ ನೀವೇನು ಚಿಂತೆ ಮಾಡುವುದು ಬೇಡ ಅಂತ ರುದ್ರ ದೇವರಿಗೆ ಭರವಸೆಯನ್ನು ಕೊಟ್ಟಿದ್ದಾನೆ. ಈ ಕಡೆಗೆ ಪಾರಿಯಾತ್ರ ಪರ್ವತಕ್ಕೆ ಕೇಳುತ್ತಾನೆ ಪಾರಿಯಾತ್ರ, ನಿನ್ನ ಕೆಳಗೆ ಷಟ್ಪುರ ಅಂತ ಪಟ್ಟಣ ಇದೆ ಬ್ರಹ್ಮ ದೇವರ ವರದಿಂದ ಅವಧ್ಯರಾದ ಅಸುರರು ಇದ್ದಾರೆ ನೀನು ಭಯ ಪಡಬೇಡ ನಿನ್ನೊಳಗೆ ನಾನು ವಿಶೇಷವಾಗಿ ಸನ್ನಿಹಿತನಾಗುತ್ತೇನೆ ಇನ್ನುಮೇಲೆ, ಗೋವರ್ಧನ ಪರ್ವತದಲ್ಲಿ ಹೇಗೆ ಪರಮಾತ್ಮ ಸನ್ನಿಹಿತನಾಗಿದ್ದ ಹಾಗೆ ಪಾರಿಯಾತ್ರ ಪರ್ವತದಲ್ಲಿ ನಾನು ಪೂರ್ಣ ಸನ್ನಿಹಿತನಾಗಿ ಇರುತ್ತೇನೆ. ಏನು ಮಾಡುತ್ತೀಯಾ ಸನ್ನಿಹಿತನಾಗಿ ಇದ್ದು ಅಂದರೆ ಅವರು ತಮ್ಮ ಕೆಲಸ ಇದ್ದಾಗ ಆಗ ಆಗ ಮೇಲೆ ಬಂದು ಹೋಗಿ ಮಾಡಿ ಜನರಿಗೆ ತೊಂದರೆ ಕೊಡುತ್ತಾರಲ್ಲ ಅವರು ಯಾರೂ ನಿನ್ನನ್ನು ಬೇಧನೆ ಮಾಡಿ ಸ್ಥಳ ಮಾಡಿಕೊಂಡು, ಛಿದ್ರ ಮಾಡಿಕೊಂಡು ಬಂದಿರಲೇಬಾರದು ಹಾಗೆ ಅತ್ಯಂತ ನಿಭಿಡವಾಗಿ ಘನಿಷ್ಠವಾಗಿ ಸಾಂದ್ರವಾಗಿ ನೀನು ಗಟ್ಟಿಮುಟ್ಟಿಯಾಗಿ ಅಭೇದ್ಯನಾಗಿ ಅಚ್ಛೇದ್ಯನಾಗಿ ಇರುವಂತೆ ನಿನ್ನೊಳಗೆ ನಾನು ಸನ್ನಿಹಿತನಾಗಿ ಇರುತ್ತೇನೆ. ಏನಾಗುತ್ತೆ ಅಲ್ಲಿಯೇ ಶ್ವಾಸ ನಿರೋಧವಾಗಿ ಒಳಗೆ ಸತ್ತು ಹೋಗುತ್ತಾರೆ ಎಲ್ಲರೂ ಸಾಯಲಿ ಜನರಿಗೆ ಎಲ್ಲ ಕ್ಷೇಮವಾಗಲಿ ಜಗತ್ತಿಗೆ, ನಿನ್ನೊಳಗಿದ್ದು ನಾನು ಆ ಕಾರ್ಯ ಮಾಡುತ್ತೇನೆ. ನನ್ನ ಸನ್ನಿಧಾನ ನಿನ್ನೊಳಗೆ ವಿಶೇಷ ಇದ್ದದ್ದರ ಒಂದು ಪರಿಣಾಮ ಏನು ಅಂದರೆ ಯಾರಾದರೂ ದೇವಸ್ಥಾನವನ್ನು ಕಟ್ಟುವುದಾದರೆ ಪ್ರತಿಮೆಯನ್ನು ಮಾಡುವುದಕ್ಕೆ ಕಲ್ಲು ಬೇಕಲ್ಲ ಶಿಲಾ ಈ ಪಾರಿಯಾತ್ರ ಪರ್ವತದ ಶಿಲಾವನ್ನು ತೆಗೆದುಕೊಂಡು ಅವರು ಪ್ರತಿಮೆಯನ್ನು ಮಾಡಿದರೆ ಬಹಳ ವಿಶೇಷವಾಗಿ ಇರತಕ್ಕಂತಹ ಸನ್ನಿಧಾನ ಯಾಕೆ ಸ್ವಯಂ ನನ್ನ ಸನ್ನಿಧಾನ ಇದೆ ಶಾಲಿಗ್ರಾಮವನ್ನೇ ತೆಗೆದುಕೊಂಡು ಪ್ರತಿಮೆಗಳನ್ನು ಮಾಡಿದ ಹಾಗೆ. ನನ್ನ ವಿಶೇಷ ಸನ್ನಿಧಾನದಿಂದ ಕೂಡಿದಂತಹ

ತ್ವತ್ತೋऽಶ್ಮಭಿಶ್ಚ ಪ್ರತಿಮಾಂ ಕಾರಯಿತ್ವಾ ಹಿ ಭಕ್ತಿತಃ ।
ಶುಶ್ರೂಷಯನ್ತಿ ಯೇ ನಿತ್ಯಂ ಮಮ ಯಾಸ್ಯನ್ತಿ ತೇ ಗತಿಮ್ ॥ (74.52 ವಿಷ್ಣುಪರ್ವ)

ಆದ್ದರಿಂದ ಅಂತಹ ಒಂದು ಅನುಗ್ರಹವನ್ನ ನಿನ್ನ ಕಲ್ಲಿನಿಂದ ಪ್ರತಿಮೆಗಳನ್ನ ಮಾಡಿಕೊಂಡು ದೇವಸ್ಥಾನ ಎಷ್ಟೆಷ್ಟೋ ಕಡೆಗೆ ನೀವು ಕೇಳುತ್ತೀರಲ್ಲ ದೇವತೆಗಳು ಪ್ರತಿಷ್ಠಾಪನೆ ಮಾಡಿದಂತಹ ಪ್ರತಿಮೆಗಳು ಅಂತ ಅನೇಕ ಕಡೆಗೆ ಹೇಳುತ್ತಾರೆ, ತೃತೀಯಸ್ಕಂಧ ಭಾಗವತದಲ್ಲಿಯೂ ಬರುತ್ತದೆ ಪ್ರತಿಷ್ಠಾಪನೆ ಮಾಡಿದ್ದು.

ಅನ್ಯಾನಿ ಚೇಹ ದ್ವಿಜದೇವದೇವೈಃ ಕೃತಾನಿ ನಾನಾಯತನಾನಿ ವಿಷ್ಣೋಃ ।
ಪ್ರತ್ಯಂಕಮುಖ್ಯಾಂಕಿತಮಂದಿರಾಣಿ ಯದ್ದರ್ಶನಾತ್ ಕೃಷ್ಣಮನುಸ್ಮರಂತಿ ॥ (03.1.23 ಭಾಗವತ)

ಹಾಗೆ ಆ ದೇವತೆಗಳೇ ಇಂತಹ ಪಾರಿಯಾತ್ರ ಪರ್ವತದ ಶಿಲೆಯನ್ನು ತೆಗೆದುಕೊಂಡು, ಪ್ರತಿಮೆಯನ್ನು ಮಾಡಿ ಅಲ್ಲಲ್ಲಿ ಪ್ರತಿಷ್ಠಾಪನೆ ಮಾಡುವುದಕ್ಕೆ ಸಾಧ್ಯ. ಅಲ್ಲಿ ವಿಶೇಷವಾಗಿ ನನ್ನ ಸನ್ನಿಧಾನ ಇರುತ್ತದೆ ಅಂತ ಪರಮಾತ್ಮ ತಿಳಿಸುತ್ತಾನೆ.

ಈ ಕಡೆಗೆ ಮತ್ತೆ ಯುದ್ಧ ಪ್ರಾರಂಭವಾಗಿದೆ. ಪರಸ್ಪರವಾಗಿ ಕೃಷ್ಣ, ಇಂದ್ರರು ಒಬ್ಬರ ಮೇಲೆ ಒಬ್ಬರು ಪ್ರಹಾರ ಮಾಡುತ್ತ ಇಲ್ಲ, ಒಬ್ಬರ ವಾಹನದ ಮೇಲೆ ಒಬ್ಬರು ಪ್ರಹಾರ ಮಾಡುತ್ತಾ ಇದ್ದಾರೆ ಐರಾವತದ ಮೇಲೆ ಕೃಷ್ಣ, ಗರುಡನ ಮೇಲೆ ಇಂದ್ರ ಆಯುಧಗಳ ಪ್ರಹಾರವನ್ನು ಮಾಡುತ್ತಾ ಇದ್ದಾರೆ ಯುದ್ಧಗಳು ನಡೆಯುತ್ತಾ ಇವೆ. ಘೋರವಾದ ಯುದ್ಧ. ಉಲ್ಕಾಪಾತ ನಕ್ಷತ್ರಗಳೆಲ್ಲ ಉದುರಿ ಕೆಳಗೆ ಬೀಳುತ್ತಾ ಇವೆ, ನದಿ ವಿಪರೀತವಾಗಿ ಹರಿಯುತ್ತಾ ಇದೆ, ಪರ್ವತಗಳು ನಡುಗುತ್ತಾ ಇವೆ, ಎಲ್ಲ ಕಡೆಗೆ ಬಿರುಗಾಳಿ ಬೀಸುತ್ತಾ ಇದೆ. ಎಲ್ಲರಿಗೂ ಗಾಬರಿ, ಭಯ, ನಾನಾ ವಿಧವಾದಂತಹ ಅಪಶಕುನಗಳೆಲ್ಲ ಆದಾಗ ಎಲ್ಲರೂ ಭಯಾಗ್ರಸ್ತರಾಗಿ ಎಲ್ಲಾ ಋಷಿಗಳು, ಮುನಿಗಳು, ಬ್ರಾಹ್ಮಣರು ಎಲ್ಲರೂ ಎಲ್ಲಾ ಕೆಲಸ ಬಿಟ್ಟು ಜಪ ಮಾಡುತ್ತಾ ಕುಳಿತಿದ್ದಾರೆ ಎಲ್ಲರಿಗೂ ಕ್ಷೇಮ ಆಗಲಿ ಏನೋ ಅನಾಹುತ ಆಗುತ್ತಾ ಇದೆ ಅಂತ.

ಜೇಪುರ್ಮುನಿಗಣಾ ಮನ್ತ್ರಾಜ್ಞಗತೋ ಹಿತಕಾಮ್ಯಯಾ । (75.19 ವಿಷ್ಣುಪರ್ವ)

ಎಲ್ಲ ಜ್ಞಾನಿಗಳು, ವಿದ್ವಾಂಸರು, ಮಂತ್ರಜ್ಞರು, ಪುರೋಹಿತರು, ಋತ್ವಿಜರು ಈ ಸಂದರ್ಭದಲ್ಲಿ ಹರಿವಂಶದ ಸಂದೇಶವನ್ನು ತಿಳಿಯಬೇಕು. ದೇಶಕ್ಕೆ ಏನಾದರೂ ಅನಾಹುತವಾಗುವಂತಹ ಸ್ಥಿತಿ ಇದೆ ಅತಿವೃಷ್ಟಿ, ಅನಾವೃಷ್ಟಿ, ದುರ್ಭಿಕ್ಷೆ ಅಥವಾ ಚೋರರಿಂದ ಭಯ, ಹೊರ ರಾಜ್ಯಗಳಿಂದ ಭಯ, ಇನ್ನೇನೋ ಒಂದು ಕಷ್ಟ ಇಂತಹ ಮಹಾಮಾರಿ ಮೊದಲಾದಂತಹ ಉಪದ್ರವಗಳು. ಆ ಸಂದರ್ಭದಲ್ಲಿ ಯಾರು ಹೇಳಬೇಕಾಗಿಲ್ಲ, ಕೇಳಬೇಕಾಗಿಲ್ಲ ಋತ್ವಿಜರು ಅಂತ ವರ್ಣ ಮಾಡಬೇಕಾಗಿಲ್ಲ, ದಕ್ಷಿಣೆ ಕೊಡಬೇಕಾಗಿಲ್ಲ. ಅತ್ಯಂತ ನಿಸ್ವಾರ್ಥವಾಗಿ ಸಕಲ ಸಜ್ಜನರ ಕ್ಷೇಮವಾಗಲಿ ಅನ್ನುವ ದೃಷ್ಟಿಯಲ್ಲಿ, ತಾವೇ ತಾವು ತಿಳಿದು ಯಾವ ದೇಶದಲ್ಲಿ ಯಾವ ಸಮಾಜದ ಮಧ್ಯದಲ್ಲಿ ನಾವು ಬದುಕುತ್ತಾ ಇದ್ದೇವೆ, ಯಾವ ದೇಶದ ಯಾವ ಸಮಾಜದ ಋಣ ನಮಗೆ ಇದೆ ಅಂತಹ ಸಕಲ ದೇಶದ ಎಲ್ಲ ಸಜ್ಜನರು ಕೂಡ ಸುಖವಾಗಿ ಬದುಕಬೇಕು ಅನ್ನುವ ದೃಷ್ಟಿಯಲ್ಲಿ ತಾವು ಮಾಡಬೇಕಾದಂತಹ ಪ್ರಾರ್ಥನೆ, ಜಪ, ಹೋಮ, ಶಾಂತಿಗಳು ಇವುಗಳನ್ನು ಮಾಡಿ ಜಗತ್ತಿಗೆ ಕ್ಷೇಮವನ್ನು ಬಯಸಬೇಕು ಅನ್ನುವ ಒಂದು ಸಂದೇಶವನ್ನು ಹರಿವಂಶ ಈ ಮೂಲಕವಾಗಿ ನೀಡುತ್ತಾ ಇದೆ. ನೀವೆಲ್ಲ ಸಜ್ಜನರು ಈಗ ಮಾಡುತ್ತಾನೆ ಇದ್ದೀರಿ ಅದನ್ನು ಹರಿವಂಶ ಹೇಳುತ್ತಾ ಇದೆ, ಮಾಡದೇ ಇದ್ದವರು ಇನ್ನೂ ವಿಶೇಷವಾಗಿ ಮಾಡಬೇಕು.

ಆ ಸಂದರ್ಭದಲ್ಲಿ ಬ್ರಹ್ಮ ದೇವರು ಮೊಮ್ಮಗನಾದ ಕಶ್ಯಪನನ್ನು ಕರೆಯುತ್ತಾರೆ. ಕಶ್ಯಪ, ಬ್ರಹ್ಮ ದೇವರೇ ಅಂತ ಕೈಜೋಡಿಸಿದರು ಕಶ್ಯಪ ಋಷಿಗಳು ಏನು ಮಾಡುತ್ತಾ ಇದ್ದೀಯಪ್ಪ ನಿನ್ನ ಮಕ್ಕಳಿಬ್ಬರೂ ಇಂದ್ರೋಪೇಂದ್ರರು ಯುದ್ಧವಾಡುತ್ತ ಇದ್ದಾರೆ. ನೀವಿಬ್ಬರೂ ತಂದೆ ತಾಯಿಯಾಗಿ ಸುಮ್ಮನೆ ಆಟ ನೋಡಿದ ಹಾಗೆ ನೋಡುತ್ತಾ ಕುಳಿತದ್ದೀರಲ್ಲ ಹೋಗಿ ನಿಲ್ಲಿಸಿ ಯುದ್ಧವನ್ನ ಅಂತ ಅನ್ನಲಿಕ್ಕೆ ಬರುವುದಿಲ್ಲವಾ, ಭಗವತ್ ಸಂಕಲ್ಪ ಇಷ್ಟರವರೆಗೆ ಯುದ್ಧವಾಗಬೇಕಾಗಿತ್ತು ಅನ್ನುವುದಕ್ಕಾಗಿ ಬ್ರಹ್ಮ ದೇವರು ಸುಮ್ಮನಿದ್ದಾರೆ, ಕಶ್ಯಪರು ಸುಮ್ಮನಿದ್ದಾರೆ. ಈಗ ಭಗವಂತನ



ಸಂಕಲ್ಪ ಯುದ್ಧದ ಶಾಂತಿ ಆಗಬೇಕು ಅಂತ ಬ್ರಹ್ಮ ದೇವರಲ್ಲಿ ಪ್ರೇರಣೆ ಮಾಡಿದ, ಅವರು ಕಶ್ಯಪರಿಗೆ ಪ್ರೇರಣೆ ಮಾಡಿದರು ಕಶ್ಯಪರು ಅದಿತಿ ಇಬ್ಬರೂ ಬಂದು ನಿಂತಿದ್ದಾರೆ. ಕಶ್ಯಪರು ಅದಿತಿಗಳು ಬಂದದ್ದೇ ತಡ ಐರಾವತದಿಂದ ಅವನು ಜಿಗಿದ ಗರುಡನಿಂದ ಇವನು ಜಿಗಿದ ಇಬ್ಬರೂ ಅದಿತಿ ಕಶ್ಯಪರಿಗೆ ನಮಸ್ಕಾರ ಮಾಡಿದ್ದಾರೆ ನಮಸ್ಕಾರ ಮಾಡಿದ ತಕ್ಷಣ ಕಶ್ಯಪರು ಗಂಭೀರವಾಗಿದ್ದಾರೆ ಕೈ ಮಾಡಿದರು ನೀನೇ ಮಾತನಾಡು ಅಂತ ಅದಿತಿ ಮಾತನಾಡುತ್ತ ಇದ್ದಾಳೆ ತಾಯಿ. ನೀವೇನು ಅಣ್ಣ ತಮ್ಮಂದಿರು ಅನ್ನುವ ನೆನಪು ಇಲ್ಲವಾ ಏನು ಇದು ಜಗಳ ಏನು ಬಾಣಗಳು, ಏನು ಆಯುಧಗಳು ಆ ಐರಾವತದ ಮೈಮೇಲೆ ರಕ್ತ ಎಷ್ಟು, ಆ ಗರುಡನ ಮೇಲೆ ಎಷ್ಟು ಆಯುಧಗಳ ಪ್ರಹಾರ ಮಾಡುತ್ತಾ ಇದ್ದೀರಾ ಗರುಡನಿಗೆ ಮಾತ್ರ ಏನು ಆಗಿಲ್ಲ ಅನ್ನುವುದನ್ನು ಮರೆಯಬೇಡಿ. ಹರಿವಂಶ ಹೇಳುತ್ತದೆ ಇಂದ್ರ ದೇವರ ವಜ್ರಾಯುಧಗಳನ್ನ ಪ್ರಯೋಗ ಮಾಡಿದರೂ, ನಾನಾ ವಿಧವಾದ ಆಯುಧಗಳನ್ನು ಪ್ರಯೋಗ ಮಾಡಿದರೂ ಗರುಡ ದೇವರಿಗೆ ಏನು ಆಗುತ್ತ ಇರಲಿಲ್ಲ. ಆದರೆ ಆ ವಜ್ರಾಯುಧಕ್ಕೆ ಇಂದ್ರನಿಗೆ ಒಂದು ಚೂರು ಮರ್ಯಾದೆ ಕೊಡೋಣ ಅಂತ ಒಂದೊಂದು ರೆಕ್ಕೆ ತೆಗೆದು ಹಾಕುತ್ತಿದ್ದರಂತೆ ತಾವೇ ಸುಮ್ಮನೆ ಹೀಗೆ ಒಂದು ರೆಕ್ಕೆ ಒಗೆಯುವುದು. ಅದು ರೆಕ್ಕೆಯೇ ಒಂದು ಗಿಡ ಇದ್ದ ಹಾಗೆ ಇತ್ತು ಅದು ಆ ತರಹ ಒಂದೊಂದು ರೆಕ್ಕೆ ಸುಮ್ಮನೆ ಬೀಳಿಸುವುದು ಆದರೆ ಯಾವುದೇ ಗಾಯ ಆಗಿಲ್ಲ, ದುಃಖ ಆಗಿಲ್ಲ ಇದು ಅಮೃತವನ್ನ ತಂದು ನಾಗಗಳಿಗೆ ಕೊಡುತ್ತಾರೆ ಅಂತ ಆದಿಪರ್ವದಲ್ಲಿ ಕಥೆ ಬರುತ್ತದೆ ಗರುಡ ದೇವರದು. ಆ ಸಂದರ್ಭದಲ್ಲಿಯೂ ಹೀಗೆ ಇಂದ್ರ ದೇವರು ಏನು ಪ್ರಹಾರ ಮಾಡಿದರೂ ಗರುಡ ದೇವರಿಗೆ ಏನು ಆಗುವುದಿಲ್ಲ ಈಗಲೂ ಅಷ್ಟೇ. ಆದರೂ ಈ ಘನಘೋರವಾದಂತಹ ಯುದ್ಧವನ್ನು ನೋಡಿದರೆ ನೀವು ಅಣ್ಣ ತಮ್ಮಂದಿರು ಅನ್ನುವುದನ್ನು ಮರೆತಂತೆ ಕಾಣುತ್ತ ಇದೆ.

ಅಸೋದರಾವಿವೈವಂ ಕಿಮನ್ಯೋನ್ಯಂ ಹನ್ತುಮಿಚ್ಛತಃ । (75.24 ವಿಷ್ಣುಪರ್ವ)

ನಾನು ತಾಯಿ, ಕಶ್ಯಪರು ತಂದೆ ತಂದೆ ತಾಯಿಗಳ ಮಾತನ್ನು ನೀವು ಕೇಳಬೇಕು ಅಂತ ನಿಮಗೆ ಉಂಟೋ ಇಲ್ಲವೋ ಹಾಗಿದ್ದರೆ ಈ ಕ್ಷಣಕ್ಕೆ ಜಗಳವನ್ನು ನಿಲ್ಲಿಸಿ ಅಂತ. ಆಯಿತು ನಿಲ್ಲಿಸುತ್ತೇವೆ ಅಂತ ಮುಗಿದೇ ಹೋಯಿತು ಇಷ್ಟು ಘೋರವಾದ ಯುದ್ಧ ತಾಯಿಯ ಒಂದೇ ಮಾತಿಗೆ. ಇಬ್ಬರೂ ಶಸ್ತ್ರಾಸ್ತ್ರಗಳನ್ನು ಪರಿತ್ಯಾಗ ಮಾಡಿದವರೇ ಗಂಗಾ ಸ್ನಾನಕ್ಕೆ ಹೊರಟು ಬಿಟ್ಟಿದ್ದಾರೆ ಕೈ ಹಿಡಿದುಕೊಂಡು ಅಣ್ಣ ತಮ್ಮಂದಿರು.

ತಥೇತ್ಯುಕ್ತ್ವಾ ಚ ತೌ ದೇವೌ ಸ್ನಾತುಕಾಮೌ ಮಹಾಬಲೌ ।
ಗಙ್ಗಾಂ ಜಗ್ಮತುರೇವಾಥ ಪ್ರಜಲ್ಪನ್ತೌ ಪರಸ್ಪರಮ್ ॥ (75.27 ವಿಷ್ಣುಪರ್ವ)

ಹರಟೆ ಪ್ರಾರಂಭವಾಯಿತು ಯುದ್ಧ ನಿಂತು ಹೋಯಿತು. ಏನಪ್ಪಾ ಕೃಷ್ಣ ಮತ್ತೆ ಜಗನ್ನಿಯಾಮಕ ನೀನೇ ನನಗೆ ಈ ಸ್ಥಾನ ಕೊಟ್ಟದ್ದು, ಪಾರಿಜಾತ ವೃಕ್ಷ ಕೊಟ್ಟದ್ದು, ಇಲ್ಲಿಯೇ ಇಟ್ಟುಕೋ ಅಂತ ಹೇಳಿದ್ದು ಈಗ ಬಂದು ಜಗಳ ಆಡಿ ತೊಗೊಂಡು ಹೋಗುತ್ತಿ ಹೀಗೆ ಯಾಕೆ ಮಾಡುತ್ತಾ ಇದ್ದಿ ಅದೆಲ್ಲ ಇರಲಿ ನಡಿ ಸ್ನಾನಕ್ಕೆ ಹೋಗೋಣ ಅಂದ ಕೃಷ್ಣ ಏನು ಹೆಚ್ಚು ಮಾತಾಡಲಿಲ್ಲ. ಇಂದ್ರ ಮಾತಾಡುತ್ತ ಇದ್ದ

ತ್ವಂ ಪ್ರಭುರೋಕಕೃತ್ ಕೃತ್ಸ್ನಾ ರಾಜ್ಯೇಽಹಂ ಸ್ಥಾಪಿತಸ್ತ್ವಯಾ ।
ಸ್ಥಾಪಿಯಿತ್ವಾ ಕಥಂ ನಾಮ ಪುನರ್ಮಾಮವಮನ್ಯಸೇ ॥ (75.28 ವಿಷ್ಣುಪರ್ವ)

ಇರಲಿ ಇರಲಿ ಅಂದ ಕೃಷ್ಣ ನಡಿ ಗಂಗಾ ಸ್ನಾನಕ್ಕೆ ಹೋಗೋಣ ಅಂತ ಹೋಗುತ್ತಾ ಇದ್ದಾರೆ ಹೆಚ್ಚು ಕೃಷ್ಣ ಉತ್ತರ ಕೊಟ್ಟಿಲ್ಲ. **'ಪ್ರಿಯಸಂಗಮನಂ ನಾಮ'**[1] ಇಷ್ಟು ಹೊತ್ತು ಅಣ್ಣ ತಮ್ಮಂದಿರು ಜಗಳ ಆಡಿ ಯಾವ ಒಂದು ಪ್ರದೇಶದೊಳಗೆ ಇಬ್ಬರು ಮೈತ್ರಿಯನ್ನು ಮಾಡಿದರಲ್ಲ ಅದಕ್ಕೆ ಪ್ರಿಯಸಂಗಮನ ಕ್ಷೇತ್ರ ಅಂತ ಪ್ರಸಿದ್ಧಿ ಆಯಿತು. ಆ ಪ್ರಿಯಸಂಗಮನ ಕ್ಷೇತ್ರ ಅಂತ ವಿಶೇಷವಾದ ಈ ಪ್ರಸಿದ್ಧಿಯನ್ನು ಪಡೆದಿದೆ, ಬಹಳ ಪವಿತ್ರವಾದಂತಹ ಕ್ಷೇತ್ರ ಅಲ್ಲಿಂದ ಅವರು ಸ್ನಾನಾದಿಗಳನ್ನು ಮಾಡಿಕೊಂಡು ಬಂದಿದ್ದಾರೆ. ಜಗತ್ತಿಗೆ ಒಂದು ಮಾತನ್ನು ಪರಮಾತ್ಮ ಹಿಂದೆ ನೀವು ಕೇಳಿದಿರಲ್ಲ ಕೃಷ್ಣನ ಕಥೆ ಕೇಳುವಾಗ ಯಶೋದೆ ಕೃಷ್ಣ ಪರಮಾತ್ಮನನ್ನು ಕಟ್ಟಿ ಹಾಕಬೇಕು ಅಂತ ಬಹಳಷ್ಟು ಓಡಾಡಿದಾಗಲೂ ಸಿಗದೇ ಕೊನೆಗೂ ಸಿಕ್ಕ ಭಕ್ತರಿಗೆ ವಶ ಅಂತ ತೋರಿಸುವುದಕ್ಕೆ, ಕಟ್ಟಿಸಿಕೊಳ್ಳಲಿಲ್ಲ ಏನು ಮಾಡಿದರೂ ಕೊನೆಗೂ ಕಟ್ಟಿಸಿಕೊಂಡ ತಾಯಿಗೆ ಮಗ ವಶನಾಗಿ ಇರಬೇಕು ಅಂತ ತೋರಿಸುವುದಕ್ಕೆ ಬರೀ ಅವತ್ತು ಹಗ್ಗದಿಂದ ಕಟ್ಟಿಸಿಕೊಳ್ಳುವುದಲ್ಲ. ಇವತ್ತು ತಾಯಿ ಹೇಳಿದ ಕಾರಣಕ್ಕೆ ಯುದ್ಧವನ್ನೇ ನಿಲ್ಲಿಸುವ ಮೂಲಕ ಮಕ್ಕಳು ಯಾವ ರೀತಿ ತಂದೆ ತಾಯಿಗಳಿಗೆ ವಶರಾಗಿ ಇರಬೇಕು, ಅವರ ಆಜ್ಞೆಯನ್ನು ಪರಿಪಾಲನೆ ಮಾಡಬೇಕು, ಉಲ್ಲಂಘನೆ ಮಾಡಬಾರದು ಅಂತ ತಿಳಿಸಿಕೊಡುತ್ತಾನೆ. ಇವತ್ತಿನ ಎಲ್ಲ ಯುವಕರು ಹಾಗೂ ಯುವತಿಯರು ಶ್ರೀಕೃಷ್ಣ ಪರಮಾತ್ಮನ ಈ ದಿವ್ಯವಾದ ಸಂದೇಶವನ್ನು ಚೆನ್ನಾಗಿ ತಿಳಿಯಬೇಕು. ಏನೇ ಕಲಹಗಳಿರಬಹುದು ಅಣ್ಣ ತಮ್ಮಂದಿರ ಕಲಹವೋ, ಅಕ್ಕ ಪಕ್ಕದವರ ಜೊತೆಗೆ ಕಲಹವೋ, ಅಕ್ಕ ತಂಗಿಯರ ಜೊತೆಗೆ ಕಲಹವೋ ಇನ್ನೇನೋ ನಾನಾ ವಿಧವಾದಂತಹ ಕಲಹನೇ ಇರಬೇಕು ಅಂತ ಅಲ್ಲ ಇನ್ಯಾವುದೋ ತರಹದ ಕಾರ್ಯಗಳನ್ನು ತಾವು ತಂದೆ ತಾಯಿಗಳಿಗೆ ಅಭಿಪ್ರಾಯವಿಲ್ಲದೆ ಇದ್ದದ್ದನ್ನು ಮಾಡುತ್ತಾ ಇದ್ದಾಗ ಅವರು ಹೇಳಿದ ಮೇಲೆ ಅವರ ಆಜ್ಞೆಯನ್ನು ಪರಿಪಾಲನೆ ಮಾಡುವುದಕ್ಕೆ ಕೂಡಲೇ ಆ ಕಾರ್ಯವನ್ನು ನಿಲ್ಲಿಸಿ ಶಾಸ್ತ್ರವಿಹಿತವಾದಂತಹ ಶಾಸ್ತ್ರವಿಹಿತವಾದ ಸತ್ಕಾರ್ಯಗಳನ್ನು ಮಾಡುವಾಗ ತಂದೆ ತಾಯಿಗಳು ಬೇಡ ಅಂತ ಹೇಳಿದರು ಅನ್ನುವುದನ್ನೇ ನೆಪ ಮಾಡಿಕೊಂಡು ಬಿಡಬೇಕು ಅನ್ನುವುದರಲ್ಲಿ ತಾತ್ಪರ್ಯ ಅಲ್ಲ, ಯಾವುದನ್ನು ಮಾಡಬಾರದೋ ಅಂತಹ ಕಾರ್ಯಗಳನ್ನು ಮಾಡುವಾಗ ಹಿತ ಹೇಳುವ, ಶಾಸ್ತ್ರ ಸಮ್ಮತವಾದಂತ ನುಡಿಗಳನ್ನು ನುಡಿಯುವ ತಂದೆ ತಾಯಿಗಳ ಆದೇಶವನ್ನು ಭಕ್ತಿಯಿಂದ ಪರಿಪಾಲನೆ ಮಾಡಬೇಕು ಅದರಿಂದ ಇಡೀ ಜೀವನದಲ್ಲಿ ತಮಗೆ ಹಿತ. ಇವರ ಬುದ್ಧಿ ಅಲ್ಪ, ಇವರ ಆಲೋಚನಾ ಶಕ್ತಿ ಅಲ್ಪ ದೇವರ ದೃಷ್ಟಿಯಲ್ಲಿ ಅಲ್ಲ ಲೌಕಿಕರ ದೃಷ್ಟಿಯಲ್ಲಿ, ಅಲ್ಪವಾದ ಬುದ್ಧಿ, ಅಲ್ಪವಾದ ಆಲೋಚನಾ ಶಕ್ತಿ, ದೂರ ದೃಷ್ಟಿ ಇರುವುದಿಲ್ಲ ತಮಗೆ ತಿಳಿದಿದ್ದೆ ಸತ್ಯ ಅಂತ ಅನ್ನುವಂತಹ ಭ್ರಮೆಯೊಳಗೆ ಏನೇನೋ ಮಾಡಿ ಜೀವನದಲ್ಲಿ ಸಾಕಷ್ಟು ಹಾನಿಯನ್ನು ಮಾಡಿಕೊಳ್ಳುತ್ತಾರೆ, ಆರೋಗ್ಯವನ್ನೂ ಕೆಡಿಸಿಕೊಳ್ಳುತ್ತಾರೆ, ಪುಣ್ಯವನ್ನೂ ಕಳೆದುಕೊಳ್ಳುತ್ತಾರೆ, ಸಂಪತ್ತನ್ನೂ ಕಳೆದುಕೊಳ್ಳುತ್ತಾರೆ, ಜನರ ಸಂಬಂಧವನ್ನೂ ಕಳೆದುಕೊಳ್ಳುತ್ತಾರೆ ಆಮೇಲೆ ಪಶ್ಚಾತ್ತಾಪ ಪಡುತ್ತಾರೆ. ಅನೇಕ ವರ್ಷಗಳ ಅನುಭವದ ಪರಿಪಾತದಿಂದ ವೃದ್ಧರಾದ ಹಿರಿಯರಾದ ತಂದೆ ತಾಯಿಗಳು ಯಾವುದನ್ನ ಮಾಡಿದರೆ ಹಿತ ಅನ್ನುವುದನ್ನು ಕಂಡುಕೊಂಡು ಹೇಳುತ್ತಾರೋ ಅದರಂತೆ ನಡೆದುಬಿಟ್ಟರೆ ಆ ಹಾನಿಯಿಂದ ದೂರ ಇರಬಹುದು ಅನ್ನುವ ಒಂದು ಸಂದೇಶವನ್ನು ಯುವಕ ಯುವತಿಯರಿಗೆ ಶ್ರೀಕೃಷ್ಣ ಪರಮಾತ್ಮ ಕೊಡುತ್ತ ಇದ್ದಾನೆ.

ಆಮೇಲೆ ಆ ಐರಾವತವನ್ನು ಕಳಿಸಿಬಿಟ್ಟ ಅವೆಲ್ಲ ಏನು ವಿಮಾನ ಇದ್ದ ಹಾಗೆ ಅವು ಹಾರಿ ಹೋಗುವವು ಹಾಗೆ ಹೋಗುತ್ತಾ ಇತ್ತು ಅಂತ ತಿಳಿದುಕೊಳ್ಳಬೇಡಿ ಐರಾವತವೂ ಹೋಯಿತು ಈ ಕಡೆಗೆ ಗರುಡನು ಹಿಂಬಾಲಿಸುತ್ತಾ ಇದ್ದಾನೆ ಇಬ್ಬರೂ ಒಂದೇ ವಿಮಾನದೊಳಗೆ ಪಕ್ಕಪಕ್ಕದೊಳಗೆ ಕುಳಿತಿದ್ದಾರೆ ಇಂದ್ರ, ಉಪೇಂದ್ರ ಸಂಧಾನ ಅಂತ ಇಬ್ಬರೂ ಸೇರಿ. ಪರಮಾತ್ಮನ ದಾಸಾನುದಾಸ ಅವನೇನು ಹೊಸದಾಗಿ ಸಂಧಾನ, ಎಲ್ಲರ ಸಂಧಾನ ಮಾಡಿದವನೇ

1. 75.31 ವಿಷ್ಣುಪರ್ವ



ಪರಮಾತ್ಮ, ಶರೀರದ ಸಂಧಾನ ಮಾಡಿದವನೇ ದೇವರು ಆ ಪರಮಾತ್ಮನ ಜೊತೆಗೆ ಆ ಸ್ವರ್ಗಲೋಕಕ್ಕೆ ಹೋಗಿದ್ದಾರೆ. ಅಲ್ಲಿ ಅದಿತಿ ಇಬ್ಬರನ್ನು ಕೂಡಿಸಿ ಹೇಳುತ್ತಾಳೆ ಕೃಷ್ಣ ಆ ಪಾರಿಜಾತವನ್ನು ತೆಗೆದುಕೊಂಡು ಹೋಗು, ಇಂದ್ರ ನೀನು ಸುಮ್ಮನೆ ಇರು ಜಾಸ್ತಿ ಮಾತನಾಡಬೇಡ. ಅವನು ಪಾರಿಜಾತ ವೃಕ್ಷವನ್ನು ತೆಗೆದುಕೊಂಡು ಹೋಗಲಿ ಸತ್ಯಭಾಮ ಪುಣ್ಯಕ ವ್ರತವನ್ನು ಮಾಡುತ್ತಾಳಂತೆ ವ್ರತ ಮಾಡಲಿ ಒಂದು ವರ್ಷ ಅಲ್ಲಿಯೇ ಇರಲಿ ಪಾರಿಜಾತ ವೃಕ್ಷ ಆಮೇಲೆ ಮತ್ತೆ ಪುನಃ ಅದು ಎಲ್ಲಿ ಇತ್ತೋ ನೀನು ಅಲ್ಲಿ ತಂದು ನಂದನ ವನದಲ್ಲಿ ನೀನು ಸ್ಥಾಪನೆ ಮಾಡಬೇಕು ಅಂತ ಕೃಷ್ಣನಿಗೆ ಅದಿತಿ ದೇವಿ ಹೇಳಿದಾಗ ಅವಶ್ಯವಾಗಿ ಆಗಲಿ ಅಂತ ಕೃಷ್ಣ ಪರಮಾತ್ಮ ಹೇಳಿದ್ದಾನೆ ಇಂದ್ರ ದೇವರು ಅದಕ್ಕೆ ಬೇರೆ ಮಾತನಾಡಿಲ್ಲ. ನೋಡಿ ಸಂಧಾನವಾದದ್ದೇ ತಡ ಶಚೀ ದೇವಿ ಅಯ್ಯೋ ಪಾರಿಜಾತ ವೃಕ್ಷವನ್ನು ಒಯ್ಯುತ್ತಾ ಇದ್ದಾರೆ ಅದನ್ನು ತಡೆಯಿರಿ ಅಂತ ಹೇಳಿದವಳೇ ಶಚೀ ಇಂದ್ರ ದೇವರಿಗೆ, ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಬರುತ್ತದೆ. ಈಗ ಆ ಶಚೀ ದೇವಿಯೇ ಅದಿತಿ ದೇವಿ ಯಾವಾಗ ಅದನ್ನು ಒಯ್ಯುವುದಕ್ಕೆ ಒಪ್ಪಿಗೆಯನ್ನು ಕೊಟ್ಟಳೋ ಆ ಕ್ಷಣಕ್ಕೆ 16,108 ಜನ ಮಡದಿಯರಿಗೂ ಬೇಕಾಗುವಷ್ಟು ಆಭರಣಗಳನ್ನ, ವಸ್ತ್ರಗಳನ್ನ ಉಡುಗೊರೆಯಾಗಿ ಕೊಟ್ಟು ಕಳಿಸಿದ್ದಾಳೆ ಕೃಷ್ಣನ ಜೊತೆಗೆ. ಕೃಷ್ಣನಿಗೆ ಏನೇ ಒಂದು ಉಡುಗೊರೆ ಕೊಡಬೇಕು ಅಂದರೆ ಧೋತ್ರ ಒಂದು, ಸೀರೆಗಳು ಮಾತ್ರ 16,108, ಆಭರಣಗಳು ಕೃಷ್ಣನಿಗೆ ಒಬ್ಬನಿಗೆ ಆದರೆ ಮಡದಿಯರಿಗೆ ಕೊಡುವ ಆಭರಣಗಳೇ ಅಷ್ಟು.

ಭಾರ್ಯಾಣಾಂ ಚ ಸಹಸ್ರಾಣಿ ಯಾನಿ ಷೋಡಶ ಮಾಧವೇ । (75.44 ವಿಷ್ಣುಪರ್ವ)

ಅಷ್ಟೆಲ್ಲ ಜನರಿಗೂ ಯಾವುದೇ ಸಂಕೋಚ ಇಲ್ಲದೇ ಇದ್ದಂತೆ ಏನು ಕಡಿಮೆ ಸ್ವರ್ಗ ಲೋಕದಲ್ಲಿ ಎಲ್ಲವನ್ನು ಕೊಟ್ಟು ಕಳಿಸಿದ್ದಾಳೆ ಅವರೆಲ್ಲರಿಗೆ ಉಡುಗೊರೆ ಕೊಡಬೇಕು ಅಂತ. ಶ್ರೀಕೃಷ್ಣ ಪರಮಾತ್ಮ ಬಂದ ಪಾರಿಜಾತವನ್ನು ತೆಗೆದುಕೊಂಡು ಗರುಡಾರೂಢನಾಗಿ ರೈವತ ಪರ್ವತದಲ್ಲಿ ಶ್ರೀಕೃಷ್ಣ ಪರಮಾತ್ಮ ಊರು ಹೊರಗೆ ನಿಂತು ಸಾತ್ಯಕಿಗೆ ಹೇಳುತ್ತಾನೆ ಊರಿನ ಜನರಿಗೆಲ್ಲ ಹೋಗಿ ಹೇಳು ಅತ್ಯಂತ ವೈಭವದಿಂದ ವಾದ್ಯಗಳನ್ನೆಲ್ಲ ತೆಗೆದುಕೊಂಡು ಬಂದು, ಆರತಿಗಳನ್ನು ತೆಗೆದುಕೊಂಡು ಬಂದು ವೇದ ಮಂತ್ರ ಪಠಣ ಪುರಸ್ಸರವಾಗಿ ಪಾರಿಜಾತ ವೃಕ್ಷಕ್ಕೆ ಸ್ವಾಗತ ಆಗಬೇಕು ಅಂತ. ಇದು ದೇವಲೋಕದ ವೃಕ್ಷ ವೃಕ್ಷಾಭಿಮಾನಿ ದೇವತೆ ಅವನು, ಪಾರಿಜಾತ ಅಂತ ಅಂದರೆ ಅದು ನೋಡುವುದಕ್ಕೆ ಗಿಡ ಆದರೆ ಅಭಿಮಾನಿ ದೇವತೆ ಅವನು, ಚೇತನ ಕಥೆಯಲ್ಲಿ ಹಿಂದೆ ಬರುತ್ತದೆ. ಈ ಯುದ್ಧದ ಪ್ರಸಂಗದೊಳಗೆ ಪಾರಿಜಾತ ವೃಕ್ಷಾಭಿಮಾನಿ ದೇವತೆ ಗಾಬರಿ ಆಗಿಬಿಡುತ್ತಾನೆ ಇವರಿಬ್ಬರ ಜಗಳದಲ್ಲಿ ನನ್ನದೇನು ಪರಿಸ್ಥಿತಿ ಅಂತ ಕೃಷ್ಣ ಅವನಿಗೆ ಸಮಾಧಾನ ಮಾಡುತ್ತಾನೆ ನೀನು ಏನು ಚಿಂತೆ ಮಾಡಬೇಡ, ನಿನಗೆ ಏನು ಕಷ್ಟ ಆಗದೇ ಇರುವ ಹಾಗೆ ನಾನು ನೋಡಿಕೊಳ್ಳುತ್ತೇನೆ ಅಂತ ಕೃಷ್ಣ ಪಾರಿಜಾತರ ಸಂವಾದ ಮಧ್ಯದಲ್ಲಿ ಬರುತ್ತದೆ. ಅಂತಹ ಆ ಪಾರಿಜಾತ ವೃಕ್ಷಾಭಿಮಾನಿ ದೇವತೆ ನನ್ನ ದಾಸ, ನನ್ನ ಶಿಷ್ಯ ಭಕ್ತರು ಬೇಡಿದ ಇಷ್ಟಾರ್ಥಗಳನ್ನೆಲ್ಲ ಕೊಡುವಂತಹ ಮಹಾಸಾಮರ್ಥ್ಯವನ್ನು ನಾನು ಅವನಿಗೆ ಕೊಟ್ಟಿದ್ದೇನೆ. ಅಂತಹ ಒಬ್ಬ ದೇವತೆ ಬರುತ್ತಾ ಇದ್ದಾನೆ ಅಂದರೆ ಅದಕ್ಕೆ ತಕ್ಕ ಗೌರವ ಆಗಬೇಕು ಅಂತ ಒಳ್ಳೆಯ ಮೆರವಣಿಗೆಯನ್ನು ಮಾಡಿಸಿಕೊಂಡು ಕೃಷ್ಣ ಪರಮಾತ್ಮ ಕರೆದುಕೊಂಡು ಹೋಗಿದ್ದಾನೆ ಅಂತ ಬರುತ್ತದೆ.

ಯೇ ತ್ವನ್ಧಚಕ್ಷುಷಃ ಸರ್ವೇ ತೇऽಭವನ್ ದಿವ್ಯಚಕ್ಷುಷಃ ॥ (75.56 ವಿಷ್ಣುಪರ್ವ)

ಪಾರಿಜಾತ ವೃಕ್ಷ ಬಂದದ್ದೇ ತಡ ಅನೇಕ ಜನ ಅಲ್ಲಲ್ಲಿ ಕುರುಡರಿದ್ದರಂತೆ ಕಣ್ಣು ಬಂದಿವೆ, ಕಿವುಡರಿಗೆ ಕಿವಿ ಬಂದಿವೆ, ಕುಂಟರು, ಹೆಳವರು ಎಲ್ಲರಿಗೂ ಕೈಕಾಲುಗಳು ಗಟ್ಟಿಯಾಗಿವೆ, ಬರೀ ಕಣ್ಣು ಬರುವುದಲ್ಲ ದಿವ್ಯದೃಷ್ಟಿ

ಬಂದಿದೆ ಅಂತಹ ಅದ್ಭುತವಾದ ರೀತಿಯಲ್ಲಿ ಅವರೆಲ್ಲ ಉತ್ತಮವಾದಂತಹ ಆರೋಗ್ಯವನ್ನು ಪಡೆದಿದ್ದಾರೆ. ಮತ್ತೆ ಹಿಂದೆ ಏನೇನು ನಾರದರು ಹೇಳಿದ್ದರು ಅದೆಲ್ಲ ಸುಮ್ಮನೇ ಕಥೆಯಲ್ಲ ಅನುಭವಿಸುತ್ತಾ ಇದ್ದಾರೆ ಇದ್ದಕ್ಕಿದ್ದಂತೆ ಮನೆಯಲ್ಲಿ ಕುಳಿತಲ್ಲಿಯೇನೆ, ಆಗಿನ ಕಾಲಕ್ಕೆ ಏನು ರೇಡಿಯೋ ಅಲ್ಲ, ಟಿವಿ ಅಲ್ಲ ಏನಿಲ್ಲ, ಅತ್ಯಂತ ಶ್ರೇಷ್ಠವಾದ ಭಗವಂತನ ಮಹಿಮೆಯನ್ನು ಕೊಂಡಾಡುವ ಸಂಗೀತದ ಧ್ವನಿ ಕೇಳಿಸುತ್ತಾ ಇದೆ. ಘಮ ಘಮ ಘಮ ವಾಸನೆ ಹೂವೇ ಇಲ್ಲ ಹತ್ತಿರ ಪಾರಿಜಾತ ಎಲ್ಲಿಯೋ ಇದೆ ಸತ್ಯಭಾಮಾಳ ಮನೆಯಲ್ಲಿ ಇಡೀ ದ್ವಾರಕಾ ಪಟ್ಟಣದಲ್ಲಿ ಎಲ್ಲರ ಮನೆಯಲ್ಲಿ ಸುವಾಸನೆ, ಎಲ್ಲರ ಮನೆಯಲ್ಲಿ ನಿತ್ಯ ಸಂಗೀತ ಕಾರ್ಯಕ್ರಮ, ಎಲ್ಲರ ಮನೆಯಲ್ಲಿ ಷಡ್ರಾಸನ್ನ ಭೋಜನ, ಎಲ್ಲರೂ ಆರೋಗ್ಯವಂತರು, ಎಲ್ಲರಿಗೂ ಉತ್ಸಾಹ, ಎಲ್ಲರಿಗೂ ಚೈತನ್ಯ ಆ ಪಾರಿಜಾತ ವೃಕ್ಷದಲ್ಲಿ ಅಂತರ್ಯಾಮಿಯಾಗಿ ಇರತಕ್ಕಂತಹ, ಪಾರಿಜಾತನಾಗಿ ಇರತಕ್ಕಂತಹ ಪರಮಾತ್ಮ.

ಪರಿತಃ ಜಾತಃ ಪ್ರಾದುರ್ಭೂತಃ ಅಭಿವ್ಯಕ್ತಃ ಪರಿಜಾತ ಏವ ಪಾರಿಜಾತಃ ॥

ಸರ್ವತ್ರ ತನ್ನ ವಿಶಿಷ್ಟವಾದ ಸಾಮರ್ಥ್ಯದ ಅಭಿವ್ಯಕ್ತಿಯನ್ನು ಮಾಡುವ ಪಾರಿಜಾತ ರೂಪಿಯಾದ ಪರಮಾತ್ಮ ಆ ಪಾರಿಜಾತದಲ್ಲಿ ಅಂತರ್ಯಾಮಿಯಾಗಿ ಇದ್ದು ಸಕಲರಿಗೂ ಸೌಭಾಗ್ಯವನ್ನು ಕರುಣಿಸಿದ್ದಾನೆ ಎಂಬುದಾಗಿ ಹೇಳುತ್ತಾರೆ. ಮುಂದೆ ಸತ್ಯಭಾಮಾ ದೇವಿಯ ಮನೆಯಲ್ಲಿ ಅದನ್ನ ಪ್ರತಿಷ್ಠಾಪನೆ ಮಾಡಿದ ಅದೇನು ನಾರದರು ಹಿಂದೆ ಹೇಳಿದ ಹಾಗೆ ಒಂದು ಸಣ್ಣ ಹೆಬ್ಬರಳಿನಷ್ಟು ಪುಟ್ಟದಾಗಿ ಸತ್ಯಭಾಮೆಯ ಕೈಯಲ್ಲಿಯೂ ಬರುತ್ತಾ ಇತ್ತು ಅದು ಪೂಜೆ ಮಾಡುತ್ತಾ ಇದ್ದಳು ಅವಳು. ಇಡೀ ದ್ವಾರಕಾ ಪಟ್ಟಣಕ್ಕೆಲ್ಲ ನೆರಳು ಕೊಡುವಷ್ಟು ದೊಡ್ಡದಾಗಿ ಬೆಳೆದು ನಿಲ್ಲುತ್ತಾ ಇತ್ತು ಇದ್ದಕ್ಕಿದ್ದ ಹಾಗೆ ಹೀಗೆ ವಿಚಿತ್ರವಾದ ರೀತಿಯಲ್ಲಿ ಅದು ತನ್ನ ಮಹಿಮೆಯನ್ನು ತೋರಿಸುತ್ತಾ ಇದೆ.

ಈ ಕಡೆಗೆ ಇನ್ನು ಪುಣ್ಯಕ ವ್ರತವನ್ನು ಮಾಡಬೇಕು ಅಂತ ಸಂಕಲ್ಪ ಮಾಡಿದ್ದಾಳೆ. ಆ ಶಾಸ್ತ್ರೋಕ್ತವಾದ ರೀತಿಯಲ್ಲಿ ಏನೇನು ವ್ರತದ ವಿಧಿ ವಿಧಾನಗಳು ಇವೆಯೋ ಅವುಗಳನ್ನೆಲ್ಲ ಮಾಡಿ ಆಮೇಲೆ ಆ ಒಂದು ಹೂವಿನ ಮಾಲೆಯನ್ನು ತೆಗೆದುಕೊಂಡು ಕೃಷ್ಣ ಪರಮಾತ್ಮನ ಕಂಠಕ್ಕೂ ಹಾಗೂ ಪಾರಿಜಾತ ವೃಕ್ಷಕ್ಕೂ ಅದನ್ನು ಕಟ್ಟಿ ಅದನ್ನು ದಾನ ಮಾಡಬೇಕು. ಅದಿತಿ ದೇವಿ ಕಶ್ಯಪರಿಗೆ ದಾನ ಮಾಡಿದ್ದಳು ನಾರದರಿಗೇನೆ ಅದರಂತೆ ಸತ್ಯಭಾಮಾ ದೇವಿಯೂ ಕೂಡ ಶ್ರೀಕೃಷ್ಣ ಪರಮಾತ್ಮನನ್ನ ಆ ಪಾರಿಜಾತ ವೃಕ್ಷಕ್ಕೆ ಕಟ್ಟಿ ನಾರದರಿಗೇನೇ ದಾನ ಮಾಡುತ್ತಾ ಇದ್ದಾಳೆ ಸಂಕಲ್ಪಪೂರ್ವಕವಾಗಿ. ಸಾವಿರ ಗೋವುಗಳು ಜೊತೆಗೆ ದಕ್ಷಿಣೆಯಾಗಿ ಬಂಗಾರದ ಪರ್ವತವೇ ಕಾಂಚನ ಪರ್ವತ ಮಣಿ ರತ್ನಗಳಿಂದ ಕೂಡಿದ್ದು, ಎಳ್ಳು, ಅನೇಕ ಧಾನ್ಯಗಳು ನಾನಾ ವಿಧವಾಗಿ ಇರತಕ್ಕಂತಹ ಪದಾರ್ಥಗಳಿಂದ ಸಹಿತವಾಗಿ ಶ್ರೀಕೃಷ್ಣ ಪರಮಾತ್ಮನನ್ನ ದಾನ ಮಾಡಿದ್ದಾಳೆ. ಈ ವ್ರತದ ಕ್ರಮ ಅಂದರೆ ಗಂಡನನ್ನ ದಾನ ಮಾಡುವುದು, ಮಾಡಿದ ಮೇಲೆ ಆ ಗಂಡನನ್ನ ಮತ್ತೆ ಅವರು ತಿರುಗಿ ಕೊಡುತ್ತಾರೆ ಕೊಡಬೇಕಾದರೆ ದಾನ ಕೊಟ್ಟಾಯಿತಲ್ಲ ತಿರುಗಿ ತೆಗೆದುಕೊಳ್ಳುವುದು ಕೊಂಡು ತೆಗೆದುಕೊಳ್ಳಬೇಕು, ಏನಾದರೂ ಕ್ರಯಕ್ಕೆ ಕೊಟ್ಟು ತೆಗೆದುಕೊಳ್ಳಬೇಕು. ಏನು ಕ್ರಯ ನೋಡಿ ಹಿಂದೆ ಒಂದು ಕಥೆ ನೀವು ಕೇಳಿದ್ದೀರಿ ಚ್ಯವನ ಋಷಿಗಳ ಕಥೆ ಬರುತ್ತದೆ ಮಹಾಭಾರತದಲ್ಲಿ ಆ ಚ್ಯವನ ಋಷಿಗಳನ್ನ ಮರಳಿ ಪಡೆಯಬೇಕು ಅಂದರೆ ನನಗೆ ಸಮಾನವಾದ ಬೆಲೆ ಕೊಟ್ಟು ಪಡೆಯಬೇಕು ಅಂದರೆ ಏನು ಬೆಲೆ ಅಂತ ಇಡೀ ರಾಜ್ಯ ಕೊಡುತ್ತೇನೆ ಅಂದರೂ ಕೂಡಾನೂ ನನಗೆ ಸಮಾನ ಅಲ್ಲ ಅನ್ನುತ್ತಾರೆ ಅವರು ಕೊನೆಗೆ ಒಂದು ಆಕಳು ಕೊಡುತ್ತೇನೆ ಅಂದಾಗ ಋಷಿಯಾಗುತ್ತಾರೆ, ಆಕಳಿನ ಮಹತ್ವ ಅಷ್ಟಿದೆ.

ಕಪಿಲಾಂ ಗಾಂ ಸವತ್ಸಾಂ ಭೋ ನಿಷ್ಕ್ರಯಾರ್ಥಂ ಪ್ರಯಚ್ಛ ಮೇ ॥ (76.12 ವಿಷ್ಣುಪರ್ವ)



ಇಲ್ಲಿ ಅಷ್ಟೆಲ್ಲ ಚರ್ಚೆ ಮಾಡುವುದೇ ಇಲ್ಲ ಸತ್ಯಭಾಮಾ ಸರ್ವಜ್ಞಳು ಗೊತ್ತು ಅವಳಿಗೆ ಒಂದು ಶುದ್ಧವಾದ ಒಂದು ಕರುವಿನಿಂದ ಸಹಿತವಾದ ಕಪಿಲಾ ಆಕಳನ್ನ ಗೋದಾನ ಮಾಡಿಬಿಡು ಅಂತ ನಾರದರು ಕೇಳಿದ್ದಾರೆ ಅದನ್ನು ಕೊಟ್ಟು ಬಿಟ್ಟರೆ ಕೃಷ್ಣನನ್ನು ತಿರುಗಿ ಕೊಟ್ಟುಬಿಡುತ್ತೇನೆ ಅಂತ ತಿರುಗಿ ಕೊಟ್ಟುಬಿಟ್ಟಿದ್ದಾರೆ. ಆ ಏನು ಅವಳು ದಾನ ಮಾಡಿದ್ದಳು ತಿರುಗಿ ಕಪಿಲಾ ಗೋವನ್ನು ಕೊಟ್ಟು ಕೃಷ್ಣನನ್ನ ಕೊಂಡು ತೆಗೆದುಕೊಳ್ಳುವ ಮಧ್ಯದಲ್ಲಿ ಸ್ವಲ್ಪ ಹೊತ್ತು ಕೃಷ್ಣ, ನಾರದರು ಇಬ್ಬರೂ ಆಟ ಆಡಿದ್ದಾರೆ, ನಾಟಕ ಮಾಡಿದ್ದಾರೆ ಅಂದರೆ ಕೃಷ್ಣ ಯಾಕೆ ನಾರದರ ವಶ ಆದ ಹಾಗೆ ಆಯಿತಲ್ಲ ದಾನ ಕೊಟ್ಟರೆ. ಕೃಷ್ಣ ನಾನು ಎಲ್ಲಿ ಹೇಳುತ್ತೇನೆ ಅಲ್ಲಿ ಬರಬೇಕು, ನಾನು ಏನು ಹೇಳುತ್ತೇನೆ ಅದನ್ನು ಮಾಡಬೇಕು, ಎಲ್ಲಿ ಕೂಡು ಅಂತೀನಿ ಕೂಡಬೇಕು, ನಿಲ್ಲು ಅಂದರೆ ನಿಲ್ಲಬೇಕು ನಾರದರು ಪರಮ ಭಕ್ತರು ಕ್ರೀಡೆ ಮಾಡುತ್ತಾ ಇದ್ದಾರೆ.

ಪರಿಹಾಸಂ ಬಹುವಿಧಂ ಕೃತ್ವಾ ಮುನಿವರಸ್ತದಾ ।

ತಿಷ್ಠಸ್ವ ಗಚ್ಛಾಮೀತ್ಯುಕ್ತ್ವಾ ಪರಿಹಾಸವಿಚಕ್ಷಣಃ ॥ (76.11 ವಿಷ್ಣುಪರ್ವ)

ನೀನು ಇಲ್ಲಿಯೇ ನಿಲ್ಲು ಅಂತ ಹೇಳುವುದು, ಹೊರಡು ಅಂತ ಹೇಳುವುದು ಹೀಗೆಲ್ಲ ಮಾಡುತ್ತ ಸ್ವಲ್ಪ ಹೊತ್ತು ಕ್ರೀಡೆಯನ್ನು ಮಾಡಿ ಪುನಃ ಸತ್ಯಭಾಮಾ ದೇವಿಗೆ ಕೃಷ್ಣನನ್ನ ಕೊಟ್ಟಿದ್ದಾರೆ. ಈ ರೀತಿ ಶ್ರೀಕೃಷ್ಣ ಪರಮಾತ್ಮನ ಪ್ರೀತಿಗಾಗಿ ಸತ್ಯಭಾಮಾ ದೇವಿ ಆ ವ್ರತವನ್ನು ಮಾಡಿದ್ದಾಳೆ. ಕೃಷ್ಣ ನಾರದರಿಗೆ ಕೇಳಿದ ಇಷ್ಟೆಲ್ಲ ಸೇವೆ ಮಾಡಿದಿರಲ್ಲ ನಿಮಗೇನು ನೋಡಿ ಸೇವೆ ನಾನು ಏನು ಮಾಡಿದ್ದೇನೆ ನನಗೆ ಕರೆದು ದಾನ ಕೊಟ್ಟಿದ್ದೀರಿ ನೀವು, ದಾನ ಕೊಟ್ಟು ಬಹಳ ಉಪಕಾರ ಮಾಡಿದಿ ಅಂತ ಕೃಷ್ಣನಿಗೆ ನಾರದರು ಅನ್ನಬೇಕಲ್ಲ, ನಾರದರೇ ಕೃಷ್ಣನಿಗೆ ಅನ್ನಬೇಕು ಆದರೆ ಕೃಷ್ಣ ನಾರದರಿಗೆ ಹೇಳುತ್ತಾ ಇದ್ದಾನೆ ನಾವು ಕರೆದದ್ದಕ್ಕೆ ಅಷ್ಟು ದೂರದಿಂದ ಬಂದು ದಾನ ತೊಗೊಂಡು ದೊಡ್ಡ ಉಪಕಾರ ಮಾಡಿದಿರಿ ನಿಮಗೆ ಏನು ವರ ಬೇಕು ಕೇಳಿರಿ ಅಂತ ಅರ್ಥ ಮಾಡಿಕೊಳ್ಳಿ ಯಾವ ಅನುಸಂಧಾನ ಇರಬೇಕು ಅಂತ. ನಿಮ್ಮನ್ನು ಕರೆದು ದಾನ ಕೊಟ್ಟೀನಿ ಏನು ಅಂತ ತಿಳಿದುಕೊಂಡೀರಿ ಅಂತ ಹೆದರಿಸುತ್ತಾರೆ ಕೆಲವರು ಮತ್ತೆ ವರ ಕೊಡುವುದು ಇರಲಿ ಹೆದರಿಸಿಯೇ ಬಿಡುವುದು, ಹೆದರಿಸಲಿಕ್ಕೆ ಹೋಗಬಾರದು. ನೀವು ಇಂತಹ ದೊಡ್ಡ ಜ್ಞಾನಿಗಳಾಗಿ ನಾವು ಕರೆದದ್ದಕ್ಕೆ ಒಂದು ಗೌರವ ಕೊಟ್ಟು ಇಲ್ಲಿಯವರೆಗೆ ಬಂದು ದಾನ ತೆಗೆದುಕೊಂಡು ದೊಡ್ಡ ಉಪಕಾರ ಮಾಡಿದಿರಿ ಅನ್ನುವ ರೀತಿಯಲ್ಲಿ ಅವರಿಗೆ ಆದರವನ್ನು ಸಲ್ಲಿಸಬೇಕೇ ಹೊರತು ಅವರು ಏನೋ ತೆಗೆದುಕೊಳ್ಳುವುದಕ್ಕೆ ಬಂದವರು ಅಂತ ಒಂದು ಕನಿಷ್ಠ ರೀತಿಯಲ್ಲಿ ಅವರನ್ನು ನೋಡಬಾರದು ಅಂತ. ಸರಿ ವರ ಕೇಳಿರಿ ಅಂದರೆ ನಾರದರು ಅನ್ನುತ್ತಾರೆ ಇನ್ನು ಏನು ವರ ಬೇಕು ಸ್ವಾಮಿ,

ನಿತ್ಯಮೇವಾಸ್ತು ಮೇ ಪ್ರೀತೋ ಭವಾನ್ ವಿಷ್ಣೋ ಸನಾತನ ।

ತ್ವತ್ಪ್ರಸಾದಾತ್ತು ಸಾಲೋಕ್ಯಂ ವ್ರಜೇಯಂ ತೇ ಮಹಾಮತೇ ॥ (76.16 ವಿಷ್ಣುಪರ್ವ)

ನಿನ್ನ ಪ್ರೀತಿ ಸದಾ ಕಾಲ ಇರಲಿ, ನಿನ್ನ ಲೋಕದೊಳಗೆ ವಾಸ ಮಾಡುವ ಭಾಗ್ಯ ಕೊಡು ಮತ್ತು ನಾನು ಜನ್ಮ ಪಡೆದರೆ ಮತ್ತೆ ಮತ್ತೆ ನಿನ್ನ ದಾಸನಾಗಿ, ನಿನ್ನ ಭಕ್ತನಾಗಿ, ನಿನ್ನ ಶಿಷ್ಯನಾಗಿ ಬ್ರಾಹ್ಮಣ್ಯವನ್ನು ಪಡೆದು ವೇದಾದಿ ಸಚ್ಛಾಸ್ತ್ರಗಳನ್ನು ಓದುತ್ತಾ ನಿನ್ನ ಅನುಗ್ರಹವನ್ನು ಪಡೆಯುವಂತೆ ಆಗಬೇಕು, ಎಂದಿಗೂ ನಿನ್ನ ದ್ರೋಹ ಆಗಬಾರದು ಅಥವಾ ಔದಾಸೀನ್ಯ ನನ್ನಲ್ಲಿ ಬರಬಾರದು ಅಷ್ಟು ಅನುಗ್ರಹ ಮಾಡಿದರೆ ಸಾಕು ಇನ್ನೇನು ವರ ನನಗೆ ಬೇಡ ಅಂತ ಬಹಳ ಮಹಾ ನಿಷ್ಕಾಮ ಭಕ್ತರು ನಾರದರು ಪ್ರಾರ್ಥನೆ ಮಾಡಿಕೊಂಡಿದ್ದಾರೆ.

ಮುಂದೆ ಇನ್ನು ಈ ಪುಣ್ಯಕ ವ್ರತ, ವ್ರತ ಮಾಡಿದರೆ ಮತ್ತೆ ಎಲ್ಲಾ ಸವತಿಯರಿಗೆ ಏನಾದರೂ ಆಹೇರಿ ಕೊಡಬೇಕಲ್ಲ ಸತ್ಯಭಾಮಾ ಎಂತಹ ಬುದ್ಧಿವಂತಳು ತಾನು ಏನೂ ಬೇರೆ ಆಹೇರಿ ಕೊಡಲೇ ಇಲ್ಲ, ಶಚೀ ದೇವಿ ಕೊಟ್ಟು ಕಳಿಸಿದ್ದಳಲ್ಲ ಎಲ್ಲರಿಗೂ ಆಭರಣಗಳನ್ನು ಕೊಡರಿ ಅಂತ ಅದನ್ನು ಹಂಗೆ ತೆಗೆದು ಇಟ್ಟುಕೊಂಡಿದ್ದಳು ಕೆಲಸಕ್ಕೆ ಬಂದಾಗ ಉಪಯೋಗಿಸೋಣ ಅಂತ. ತಾನು ವ್ರತ ಮಾಡಿದಾಗ ಏನು ಎಲ್ಲರಿಗೂ ಆಹೇರಿ ಕೊಡಬೇಕಾಗಿತ್ತಲ್ಲ ಆದರೆ ಶಚಿ ದೇವಿಯ ಹೆಸರನ್ನು ಹೇಳಿಕೊಟ್ಟಿದ್ದಾಳೆ 16,107 ಜನರಿಗೂ ಆಭರಣಗಳನ್ನೆಲ್ಲ ಚೆನ್ನಾಗಿ ಕೊಟ್ಟಿದ್ದಾಳೆ 16,108 ಜನರಿಗೂ ಅನ್ನಬೇಡರಿ ಮತ್ತೆ ಅವಳೂ ಒಬ್ಬಳು ಇದ್ದಾಳೆ. ಪರಮಾತ್ಮ ಇಂತಹ ಪಾರಿಜಾತ ವೃಕ್ಷ ಬಂದಿದೆ ದೇವತೆಗಳಿಗೆ ಅದು ಏನು ಮಹತ್ವ ಆಲ್ಲ ಅಲ್ಲಿಯೇ ಇರುತ್ತಾರೆ ಅವರು ಆದರೂ ಲೋಕ ನೀತಿಯನ್ನು ತೋರಿಸುತ್ತಾನೆ. ಇಂತಹ ಒಂದು ವೈಭವ ಇದ್ದಾಗ ತಾವು ಒಬ್ಬರೇ ಅನುಭವಿಸಬಾರದು ಬಂಧು ಬಳಗ ಎಲ್ಲರನ್ನೂ ಕರೆಯಬೇಕು, ಪಾಂಡವರನ್ನು ಕರೆದಿದ್ದಾನೆ. ಪಾಂಡವರು, ದ್ರೌಪದಿ, ಸುಭದ್ರಾ ತನ್ನ ಸೋದರತ್ತೆ ಶಿಶುಪಾಲನ ತಾಯಿ ಶ್ರುತಶ್ರವಾ, ಮಾವ ಭೀಷ್ಮಕ, ಅವನ ಮಕ್ಕಳು ಇವರೆಲ್ಲ ರುಕ್ಮಿ ಸತ್ತು ಹೋಗಿದ್ದಾನೆ ಬೇರೆಯವರು ಅವನ ಮಕ್ಕಳು, ಇನ್ನನೇಕ ಮಿತ್ರರು, ಇಷ್ಟರು, ಬಾಂಧವರು ಎಲ್ಲರನ್ನೂ ಕರೆಸಿ ನೋಡಿ ಈ ಪಾರಿಜಾತದ ವೈಭವ ಅಂತ ಅವರೆಲ್ಲರಿಗೂ ಆಮಂತ್ರಣ ಕೊಟ್ಟು ಜೊತೆಗೆ ಇಟ್ಟುಕೊಂಡಿದ್ದಾನೆ ಪರಮಾತ್ಮ ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ.

ಈ ರೀತಿ ಕೊನೆಗೆ ಇಂದ್ರ ದೇವರು ಅಲ್ಲಿ ಬಂದಿದ್ದಾರೆ, ಇಂದ್ರ ದೇವರಿಗೂ ಪರಮಾತ್ಮ ಹೇಳಿ ಕಳಿಸುತ್ತಾನೆ. ರುದ್ರ ದೇವರು ಹೇಳಿದ್ದಾರೆ ಆ ಎಲ್ಲ ಷಟ್ಪುರಾಸುರ ಆ ತ್ರಿಪುರಾಸುರ ಬೇರೆ ಆ ತ್ರಿಪುರಾಸುರ ಸಂಹಾರದ ಕಾಲದಲ್ಲಿಯೂ ದೇಲರೇ ವಿಶೇಷವಾಗಿ ಅನುಗ್ರಹವನ್ನು ಮಾಡಿ ಗೋರೂಪದಿಂದ ರಸಾಯನವನ್ನೆಲ್ಲ ಪಾನ ಮಾಡಿ ಶಕ್ತಿಯನ್ನು ಕೊಟ್ಟು ಸಂಹಾರ ಮಾಡಿಸಿದ್ದು. ಈ ಷಟ್ಪುರಾಸುರರನ್ನೂ ಕೂಡ ಇನ್ನು ಹತ್ತೇ ದಿನಗಳಲ್ಲಿ ಇನ್ನು ಹತ್ತು ದಿವಸ ಅವರ ಆಯುಷ್ಯ ಇದೆ, ಇನ್ನು ಹತ್ತು ದಿನಗಳಾದ ಮೇಲೆ ಅವರ ಸಂಹಾರ ಮಾಡಿ ಎಲ್ಲ ಸಜ್ಜನರಿಗೆ ಅನುಗ್ರಹವನ್ನು ಮಾಡುತ್ತೇನೆ. ಯಾವ ದೇವತೆಗಳೂ ನಮ್ಮನ್ನು ಸಂಹಾರ ಮಾಡಬಾರದು ಅಂತ ಬ್ರಹ್ಮ ದೇವರಿಂದ ವರ ಪಡೆದಿದ್ದಾರೆ. ಬ್ರಹ್ಮ ದೇವರಿಗೆ ಒಂದು ಚೂರು ಮರ್ಯಾದೆ ಕೊಡೋಣ ನಾನಂತೂ ಈಗ ದೇವೋತ್ತಮ ನಿಜ ಆದರೆ ಮನುಷ್ಯನಾಗಿ ಅವತಾರ ಮಾಡಿದ್ದೇನೆ. ಮನುಷ್ಯ ಸದೃಶವಾದ ಮನುಷ್ಯನಂತೆ ತೋರುವ ದೇಹದಲ್ಲಿ ನಾನು ಅವತಾರ ಮಾಡಿದ್ದರಿಂದ ಆ ಬ್ರಹ್ಮ ದೇವರ ವರ ಇದ್ದರೆ ಏನು ತೊಂದರೆ ಇಲ್ಲ ಆದ್ದರಿಂದ ಮತ್ತೆ ಆ ಪ್ರವರ ಒಬ್ಬ ಬ್ರಾಹ್ಮಣ ಸಾತ್ಯಕಿಯ ಜೊತೆಗೆ ಯುದ್ಧ ಮಾಡಿದನಲ್ಲ ಅವನು ಮನುಷ್ಯನೇ ಸ್ವರ್ಗಕ್ಕೆ ಬಂದಾನೆ ಅಷ್ಟೇ ಅವನೂ ನನ್ನ ಸೇವೆಗೆ ಇರಲಿ ಅಂತ ಪ್ರವರನಿಗೂ ಒಂದು ಸೇವೆಗೆ ಅವಕಾಶವನ್ನು ಕೊಟ್ಟು ನಾವೆಲ್ಲ ಸೇರಿ ಆ ಷಟ್ಪುರಾಸುರರ ಸಂಹಾರವನ್ನು ಮಾಡೋಣ ಅಂತ ಪರಮಾತ್ಮ ಈ ರೀತಿ ಹೇಳಿ ಇಂದ್ರ ದೇವರ ಆಲಿಂಗನವನ್ನು ಮಾಡಿಕೊಂಡು ಇಂದ್ರ ದೇವರನ್ನು ಕೊಟ್ಟು ಕಳಿಸಿದ್ದಾನೆ ಎಂಬ ವಿಷಯವನ್ನು ತಿಳಿಸುತ್ತಾ ಇದ್ದಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ವಿಷ್ಣುಪರ್ವ-27

* * *

ಜನಮೇಜಯ ಉವಾಚ

ಪುಣ್ಯಕಾನಾಂ ಮಮೋತ್ಪತ್ತಿಂ ಕಥಯಸ್ಯ ದ್ವಿಜೋತ್ತಮ ।

ದ್ವೈಪಾಯನಪ್ರಸಾದೇನ ಸರ್ವಂ ಹಿ ವಿದಿತಂ ತವ ।। (77.1 ವಿಷ್ಣುಪರ್ವ)

ಪುಣ್ಯಕ ವ್ರತದ ಬಗ್ಗೆ ಜನಮೇಜಯ ವೈಶಂಪಾಯನರಿಗೆ ಪ್ರಶ್ನೆಯನ್ನು ಮಾಡುತ್ತಾ ಇದ್ದಾನೆ. ಪುಣ್ಯಕ ವ್ರತವನ್ನು ಯಾರು ಮೊದಲು ಮಾಡಿದ್ದು, ಇದರ ಪ್ರವರ್ತನೆ ಹೇಗಾಯಿತು, ಯಾರೆಲ್ಲ ಮುಂದೆ ಮಾಡಿದ್ದಾರೆ ಅದರ ವಿಧಿ ವಿಧಾನಗಳು ಇವುಗಳೆಲ್ಲವುಗಳ ಬಗ್ಗೆ ತಿಳಿಸಬೇಕು ಎಂಬುದಾಗಿ ಕೇಳಿಕೊಂಡಿದ್ದಾನೆ. ಆಗ ವೈಶಂಪಾಯನರು ಹೇಳುತ್ತಾರೆ ಹಿಂದೆ ನಾರದರು ದ್ವಾರಕಾ ಪಟ್ಟಣಕ್ಕೆ ಹೋದಾಗ ರುಕ್ಮಿಣಿ ದೇವಿ ನಾರದರಿಗೆ ಪ್ರಶ್ನೆ ಕೇಳುತ್ತಾ ಇದ್ದಾಳೆ. ನೀವು ಪುಣ್ಯಕ ವ್ರತದ ಬಗ್ಗೆ ಉಪದೇಶವನ್ನು ಮಾಡಿದ್ದೀರಿ ಆ ಪುಣ್ಯಕ ವ್ರತದ ಪ್ರವೃತ್ತಿ ಹೇಗಾಯಿತು ಅನ್ನುವುದರ ಬಗ್ಗೆ ತಿಳಿಸಿ ಹೇಳಬೇಕು ಅಂತ ಕೇಳಿದ್ದಾಳೆ. ಆಗ ನಾರದರು ಹೇಳುತ್ತಾರೆ ರುದ್ರ ದೇವರ ಮಡದಿಯಾದ ಉಮಾ ದೇವಿ ಈ ವ್ರತವನ್ನು ಹಿಂದೆ ಮಾಡಿದ್ದಾಳೆ ಆನಂತರದಲ್ಲಿ ಈ ವ್ರತ ಎಲ್ಲ ಕಡೆಗೆ ಹರಡಬೇಕು ಎಲ್ಲರೂ ಸಜ್ಜನರು ಇದನ್ನು ಮಾಡಬೇಕು ಅನ್ನುವುದಕ್ಕೋಸ್ಕರ ಮುನಿ ಸ್ತ್ರೀಯರು, ದೇವತಾ ಸ್ತ್ರೀಯರು, ಗಿರಿ ಕನ್ಯೆಯರು, ಅಗ್ನಿ ಕನ್ಯೆಯರು ಹೀಗೆ ವಸು ಪತ್ನಿಯರು ಶ್ರೀ, ಧೃತಿ, ಕೀರ್ತಿ, ಆಶಾ, ಮೇಧಾ, ಪ್ರೀತಿ, ಮತೀ, ಖ್ಯಾತಿ, ಸನ್ನತಿ ಇವುಗಳಿಗೆಲ್ಲ ಅಭಿಮಾನಿ ದೇವತೆಗಳು ಅಂತಹ ಎಲ್ಲಾ ದೇವತಾ ಸ್ತ್ರೀಯರನ್ನು ಕರೆದು ಉಮಾ ದೇವಿ ಈ ವ್ರತದ ಬಗ್ಗೆ ವಿಶೇಷವಾಗಿ ತಿಳಿಸಿಕೊಟ್ಟಿದ್ದಾಳೆ. ಬಂದಂತಹ ಎಲ್ಲ ಪತಿವ್ರತಾ ಸ್ತ್ರೀಯರಿಗೆ ತಿಲ ದಾನವನ್ನು, ರತ್ನ ದಾನವನ್ನು, ಧಾನ್ಯಗಳು, ನಾನಾ ವಿಧವಾದ ವರ್ಣಗಳಿಂದ ಕೂಡಿದಂತಹ ಶ್ರೇಷ್ಠವಾದ ವಸ್ತ್ರಗಳು ಆವುಗಳನ್ನೆಲ್ಲ ಕೊಟ್ಟು ಯಥೇಚ್ಛವಾಗಿ ದಾನವನ್ನು ಮಾಡಿ ವಿಶೇಷವಾಗಿ ಪೂಜೆಯನ್ನು ಮಾಡಿದ್ದಾಳೆ.

ಎಲ್ಲರೂ ದಾನವನ್ನು ಸ್ವೀಕಾರ ಮಾಡಿ ಆವಳು ಮಾಡಿದಂತಹ ಆ ಮುತ್ತೈದೆಯ ಪೂಜೆಯನ್ನು ಸ್ವೀಕಾರ ಮಾಡಿ ಕುಳಿತಾಗ ಅರುಂಧತಿ ಸೋಮನಂದಿನಿ, ಚಂದ್ರನ ಮಗಳಾದತಹ, ವಸಿಷ್ಠರ ಪತ್ನಿಯಾದಂತಹ ಅರುಂಧತಿ ದೇವಿ ಎಲ್ಲರ ಪರವಾಗಿ ಉಮಾ ದೇವಿಗೆ ಪ್ರಶ್ನೆಯನ್ನು ಮಾಡುತ್ತಾ ಇದ್ದಾಳೆ. ನೀನು ವ್ರತ ಮಾಡಿದಿ ನಮಗೆಲ್ಲ ದಾನ ಕೊಟ್ಟಿ

ಬಹಳ ಸಂತೋಷ ಆದರೆ ಇದರ ಬಗ್ಗೆ ವಿಶೇಷವಾಗಿ ನಮಗೆ ತಿಳಿಸಿಕೊಡಬೇಕು ಅಂತ ಕೇಳಿದಾಗ ಉಮಾ ದೇವಿ ಅರುಂಧತಿ ದೇವಿಗೆ ಏನು ಹೇಳಿದಳೋ ಅದೇ ಮಾತನ್ನು ನಾನು ನಿಮಗೆ ಹೇಳುತ್ತೇನೆ ಅಂತ ರುಕ್ಮಿಣಿ ಮೊದಲಾದವರಿಗೆ, ರುಕ್ಮಿಣಿ ಸರ್ವಜ್ಞಳು ಸಾಕ್ಷಾತ್ ಮಹಾಲಕ್ಷ್ಮೀಯ ಅವತಾರ ಉಮಾ ದೇವಿಯಲ್ಲಿ ಅಂತರ್ಯಾಮಿಣಿಯಾಗಿ ಇದ್ದು ಅವಳಿಂದ ಆ ವ್ರತವನ್ನು ಮಾಡಿಸಿದ ಮಹಾನುಭಾವಳೇ ಅವಳು. ಆದರೂ ವಿಶೇಷವಾಗಿ ಗುರುಗಳಿಂದ ಉಪದೇಶ ಪಡೆದು ವ್ರತವನ್ನು ಮಾಡಬೇಕು ಅಂತ ಜಗತ್ತಿಗೆ ತಿಳಿಸಿ ಕೊಡುವುದಕ್ಕೋಸ್ಕರ ನಾರದರಿಗೆ ಪ್ರಶ್ನೆ ಮಾಡಿದ್ದು ಉಮಾ ದೇವಿ ಏನು ಉತ್ತರ ಹೇಳಿದಳೋ ಅದನ್ನೇ ನಾವು ಹೇಳುತ್ತೇವೆ ಅಂತ ನಾರದರು ಹೇಳುತ್ತಾ ಇದ್ದಾರೆ.

ನನ್ನ ಪತಿ ಮಹಾದೇವ ರುದ್ರ ದೇವರು ಆ ರುದ್ರ ದೇವರ ಒಂದು ವಿಶೇಷವಾದ ಅನುಗ್ರಹದಿಂದ ಈ ವ್ರತದ ದರ್ಶನವನ್ನು ನಾನು ಮಾಡಿಕೊಂಡಿದ್ದೇನೆ ಅಂತ ಹೇಳುತ್ತಾಳೆ. ಹೇಗೆ ಋಷಿಗಳು ಮಂತ್ರ ದರ್ಶನ ಮಾಡಿಕೊಳ್ಳುತ್ತಾರೆ ಮಂತ್ರ ದ್ರಷ್ಟಾರರು ಅಂತ ಅವರನ್ನು ಹೇಳುತ್ತಾರೆ, ಮಂತ್ರದ ದರ್ಶನವನ್ನು ಯಾವ ರೀತಿ ಋಷಿಗಳು ಮಾಡಿಕೊಳ್ಳುತ್ತಾರೋ ಹಾಗೆ ಇದೊಂದು ಅಪೂರ್ವವಾದ ವ್ರತದ ದರ್ಶನವನ್ನು ಮಾಡಿಕೊಂಡದ್ದು ನಾನು ಕಂಡುಕೊಂಡದ್ದು. ಅದು ನನ್ನ ಸಾಮರ್ಥ್ಯದಿಂದ ಅಲ್ಲ **'ಮಹಾದೇವಪಪ್ರಸಾದೇನ'**[1] ಮಹಾದೇವ ನನ್ನ ಪತಿ ರುದ್ರ ದೇವರು ಅವರ ವಿಶೇಷವಾದ ಅನುಗ್ರಹದಿಂದ ಈ ವ್ರತದ ದರ್ಶನವನ್ನು ನಾನು ಮಾಡಿಕೊಂಡಿದ್ದೇನೆ ಈ ವ್ರತವನ್ನು ಕಂಡುಕೊಂಡಿದ್ದೇನೆ. ಮಹಾದೇವ **'ಆದಿದೇವೋ ಮಹಾದೇವಃ'** ಎಂಬುದಾಗಿ ಹೇಳಿದಂತೆ ಆ ಮಹಾದೇವರಲ್ಲಿ ಅಂತರ್ಯಾಮಿಯಾದ ಮಹಾದೇವ ಸರ್ವೋತ್ತಮನಾದ ದೇವ **'ಮಹಾಂಶ್ಚ ದೇವ ಏಷ ಮೇ'** ತಾತ್ಪರ್ಯ ನಿರ್ಣಯದಲ್ಲಿ ಶ್ರೀಮದಾಚಾರ್ಯರು ಹೇಳುತ್ತಾರೆ, ವಿಷ್ಣು ಸಹಸ್ರನಾಮದಲ್ಲಿಯೂ ಉಂಟು. ಅಂತಹ ಮಹಾದೇವ ಸರ್ವೋತ್ತಮನಾದ ಶ್ರೀಹರಿ ಆ ಶ್ರೀಹರಿಯ ಪ್ರಸಾದದಿಂದ ನಾನು ಈ ವ್ರತದ ದರ್ಶನವನ್ನು ನಾನು ಮಾಡಿಕೊಂಡಿದ್ದೇನೆ ಅಂತ ಹೇಳುತ್ತಾಳೆ.

ಒಂದು ಮಾತನ್ನು ತಿಳಿಯಬೇಕು ಈ ವ್ರತವನ್ನು ಮಾಡಬೇಕಾದರೆ ಪತಿಯ ಆಜ್ಞೆಯನ್ನು ಅನುಜ್ಞೆಯನ್ನು ಪಡೆದು ಆಮೇಲೆ ವ್ರತವನ್ನು ಪ್ರಾರಂಭ ಮಾಡಬೇಕು ನಾನು ನನ್ನ ಪತಿ ಆದಂತಹ ರುದ್ರ ದೇವರ ಆಜ್ಞೆಯನ್ನು ಪಡೆದು ಅವರ ಅನುಗ್ರಹವನ್ನು ಪಡೆದು ಈ ವ್ರತವನ್ನು ಪ್ರಾರಂಭ ಮಾಡಿದ್ದೇನೆ. ಒಂದು ಮಾತನ್ನು ಎಲ್ಲ ಪತಿವ್ರತಾ ಸ್ತ್ರೀಯರು ನೀವು ಇಲ್ಲಿ ಬಂದವರು ತಿಳಿದುಕೊಳ್ಳಬೇಕು ಪುಣ್ಯಕ ವ್ರತ ಇದು ಪುಣ್ಯಕ ವ್ರತಗಳು ಅಂತ ಅನೇಕ ವ್ರತಗಳು ಇದರಲ್ಲಿ ಇವೆ ಪ್ರಧಾನವಾಗಿ ಒಂದು, ಅದಕ್ಕೆ ಸಂಬಂಧಪಟ್ಟಂತೆ ಇನ್ನು ಅನೇಕ ವ್ರತಗಳನ್ನು ಹೇಳುತ್ತಾರೆ. ಈ ಪುಣ್ಯಕ ವ್ರತವನ್ನು ಪ್ರಧಾನವಾದದ್ದನ್ನು ಅಥವಾ ಪುಣ್ಯಕ ವ್ರತಗಳನ್ನು ಇನ್ನು ಅನೇಕ ಏನು ಹೇಳುತ್ತೇವೋ ಅವುಗಳನ್ನ ಮಾಡಿ ಅದರ ಪ್ರಯೋಜನವನ್ನು ಪೂರ್ಣವಾಗಿ ಪಡೆಯಬೇಕು ಅಂತಾದರೆ ಕೆಲವು ಗುಣಗಳು ಸ್ತ್ರೀಯರಲ್ಲಿ ಇರಬೇಕು. ಶುದ್ಧವಾದ ಪಾತಿವ್ರತ್ಯವನ್ನು ಕಾಪಾಡಿಕೊಂಡು ಹೋಗಬೇಕು, ಶುದ್ಧ ಚಾರಿತ್ರ್ಯ ಸಂಪನ್ನರಾಗಬೇಕು ಶೀಲವಂತರಾಗಬೇಕು, ತನ್ನ ಪತಿಗೆ ಎಂದಿಗೂ ವಂಚನೆಯನ್ನು ಮಾಡಬಾರದು, ಚಾರಿತ್ರ್ಯವನ್ನು ಕಳೆದುಕೊಂಡರೆ, ಶೀಲದಿಂದ ಭ್ರಷ್ಟರಾದರೆ ಮಹಾನರಕವನ್ನು ಹೊಂದುತ್ತಾರೆ.

ಯೋನಿದೋಷಾತ್ ಪುಣ್ಯಫಲಂ ನಾಶ್ನನ್ತಿ ನಿರಯಜ್ಞಮಾಃ ॥ (78.6 ವಿಷ್ಣುಪರ್ವ)

ಸಾಧ್ವ್ಯೋ ಜಗಧ್ಧಾರಯನ್ತಿ ಸುಶೀಲಾಃ ಪತಿದೇವತಾಃ । (78.7 ವಿಷ್ಣುಪರ್ವ)

1. 78.2 ವಿಷ್ಣುಪರ್ವ



ಅದಕ್ಕೆ ವಿಪರೀತವಾಗಿ ನೋಡಿ, ಯಾರು ಪತಿವ್ರತಾ ಸ್ತ್ರೀಯರೋ ಅವರು ತಾವು ತಮ್ಮ ಉದ್ಧಾರವನ್ನು ಮಾಡಿಕೊಳ್ಳುತ್ತಾರೆ ಅಂತ ಮಾತ್ರವಲ್ಲ, ಜಗತ್ತಿನ ಧಾರಣೆಯನ್ನು ಮಾಡುತ್ತಾರಂತೆ. ಜಗತ್ತಿಗೆ ಬಂದ ಕಷ್ಟಗಳನ್ನು ಪರಿಹಾರ ಮಾಡುವ ಶಕ್ತಿ ಸಾಮರ್ಥ್ಯಗಳು ಪತಿವ್ರತಾ ಸ್ತ್ರೀಯರಲ್ಲಿ ಇದೆ. ಅಂತಹ ಪತಿವ್ರತಾ ಸ್ತ್ರೀಯರ ಆಶೀರ್ವಾದವನ್ನು ಪಡೆದರೆ ತಮ್ಮ ಕಷ್ಟಗಳನ್ನೆಲ್ಲ ಜನಗಳು ಪರಿಹಾರ ಮಾಡಿಕೊಳ್ಳಬಹುದು. ಅಂತಹ ಯೋಗ್ಯತೆ ಅವರಿಗೆ ಬರುತ್ತದೆ. ಅದೇ ಅವರು ತಮ್ಮ ಶೀಲವನ್ನು ಕಳೆದುಕೊಂಡರೆ ಮಾತ್ರ ಇನ್ನೊಬ್ಬರನ್ನು ಉದ್ಧಾರ ಮಾಡುವುದಂತೂ ಸಾಧ್ಯವೇ ಇಲ್ಲ, ತಾವೂ ನರಕಾದಿ ಅನರ್ಥಗಳನ್ನು ಹೊಂದಿ ದುಃಖವನ್ನು ಅನುಭವಿಸುತ್ತಾರೆ. ಆದ್ದರಿಂದ ಈ ಪುಣ್ಯಕ ವ್ರತವನ್ನು ಮಾಡುವ ಮೊದಲು ತಿಳಿಯಬೇಕಾದದ್ದು ಶುದ್ಧ ಚಾರಿತ್ರ್ಯ ಸಂಪನ್ನರಾಗಬೇಕು, ಎಂದಿಗೂ ಮಾತಿನಿಂದ ಯಾವ ಹಿರಿಯರಿಗೂ ಕೆಟ್ಟ ನುಡಿಗಳನ್ನು ನುಡಿಯಬಾರದು. **'ಅವಾಗ್ದುಷ್ಟಾಃ'**[1] ಎಲ್ಲರ ಜೊತೆಗೆ ಪ್ರೀತಿಯಿಂದ ಮಾತನಾಡಿಸಬೇಕು ಅತ್ತೆ, ಮಾವ, ಗಂಡ, ಮಕ್ಕಳು ಹಾಗೂ ಬಂಧು ಬಳಗ ಬರುವ ಅತಿಥಿ ಅಭ್ಯಾಗತರು, ಸುತ್ತಮುತ್ತಲಿನ ಜನ ಎಲ್ಲರ ಜೊತೆಗೆ ಪ್ರೀತಿಯಿಂದ ಮಾತನಾಡಿಸಬೇಕು, ಕೆಟ್ಟ ಮಾತುಗಳಿಂದ ಮಾತನಾಡಿಸಬಾರದು ಇದು ಎರಡನೆಯ ಮುಖ್ಯವಾದ ಮಾತು. ಶುದ್ಧವಾದ ಮಡಿ ಆಚಾರ ವಿಚಾರಗಳನ್ನು ಇಟ್ಟುಕೊಂಡಿರಬೇಕು **'ಶೌಚಯುಕ್ತಾ'**[2] ಧೈರ್ಯ ಇರಬೇಕು, ಧರ್ಮವನ್ನು ಮಾಡುವುದರೊಳಗೆ ಉತ್ಸಾಹ ಇರಬೇಕು.

ಸತತಂ ಸಾಧುವಾದಿನ್ಯೋ ಧಾರಯನ್ತಿ ಜಗತ್ ಖಲು । (78.8 ವಿಷ್ಣುಪರ್ವ)

ಇಂಥವರಾದರೆ ಅವರು ಇಡೀ ಜಗತ್ತಿಗೆ ಅರ್ಥಾತ್ ತಮ್ಮ ಸುತ್ತಮುತ್ತಲಿರುವ ಎಲ್ಲ ಸಜ್ಜನರಿಗೆ ಉದ್ಧಾರವನ್ನು ಮಾಡುತ್ತಾರೆ. ದೇವತಾ ಸ್ತ್ರೀಯರ ಬಗ್ಗೆ ಈಗ ತಿಳಿಯುವುದಾದರೆ ಜಗತ್ತನ್ನೇ ಅವರು ಧಾರಣೆ ಮಾಡುತ್ತಾರೆ ದೇವತಾ ಸ್ತ್ರೀಯರ ವಿಶೇಷವಾದ ಪೂಜೆಯನ್ನು ನಾವು ಮಾಡಿದರೆ ಇವತ್ತಿಗೂ ಅರುಂಧತಿ ಮೊದಲಾದ ಎಲ್ಲ ಋಷಿ ಪತ್ನಿಯರ ಪೂಜೆಯನ್ನು ಮುತ್ತೈದೆಯರು ಋಷಿಪಂಚಮೀ ಪ್ರಸಂಗದಲ್ಲಿ ಮಾಡುತ್ತಾರೆ ಹಾಗೂ ಅನೇಕ ದೇವತಾ ಸ್ತ್ರಿ ಶಚಿ ಇತ್ಯಾದಿ ದೇವತಾ ಪೂಜೆಯನ್ನು ಕೂಡ ಬೇರೆ ಬೇರೆ ಸಂದರ್ಭಗಳಲ್ಲಿ ಮಾಡುತ್ತಾರೆ, ಪುಣ್ಯಾಹವಾಚನಾದಿಗಳಲ್ಲಿಯೂ ಉಂಟು, ವಿವಾಹಾದಿಗಳ ಸಂಧರ್ಭದಲ್ಲಿಯೂ ಆ ಎಲ್ಲ ದೇವತಾ ಸ್ತ್ರೀಯರ ಪೂಜೆಯನ್ನು ಮಾಡುವುದು ಉಂಟು. ಆ ಎಲ್ಲ ದೇವತಾ ಸ್ತ್ರೀಯರ ಪೂಜೆಯನ್ನು ಮಾಡಿ ಅವರ ಅನುಗ್ರಹದಿಂದ ಸೌಭಾಗ್ಯವನ್ನು ಪಡೆಯುತ್ತಾರೆ ಅಂದರೆ ಜಗದ್ಧಾರಕರು ಅಂತ ಅರ್ಥ ಮುಖ್ಯವಾಗಿ ಇದು ದೇವತಾ ಸ್ತ್ರೀಯರಿಗೆ, ಉಳಿದವರಿಗೆ ತಮ್ಮ ಸುತ್ತಮುತ್ತಲಿನ ಜಗತ್ತಿಗೆ ಧಾರಕರು ಅಂತ ತಾತ್ಪರ್ಯ. **'ವ್ಯಾಧಿತಃ ಪತಿತೋ ವಾಪಿ'**[3] ರೋಗ ಇರಲಿ ಇನ್ಯಾವುದೇ ತರಹದ ದೋಷಗಳಿರಲಿ **'ದೀನೋ ವಾಪಿ ಕಥಞ್ಚನ'**[4] ಏನಿದ್ದರೂ ತನ್ನ ಪತಿಯನ್ನು ತ್ಯಾಗ ಮಾಡಬಾರದು.

ನ ತ್ಯಕ್ತವ್ಯಃ ಸ್ತ್ರಿಯಾ ಭರ್ತಾ ಧರ್ಮ ಏಷ ಸನಾತನಃ ॥ (78.9 ವಿಷ್ಣುಪರ್ವ)

ಇನ್ನು ಶೀಲ ಭ್ರಷ್ಟರಾದರೆ ಅದಕ್ಕೆ ಪ್ರಾಯಶ್ಚಿತ್ತವೇ ಇಲ್ಲ, ವಾಗ್ದುಷ್ಟ ಕೆಟ್ಟ ಮಾತುಗಳನ್ನ ತಪ್ಪಿ ಆಡಿದರೆ ಮಾತ್ರ ಅದಕ್ಕೆ ಪ್ರಾಯಶ್ಚಿತ್ತ ಉಂಟು ಆ ಪ್ರಾಯಶ್ಚಿತ್ತವನ್ನು ಮಾಡಿಕೊಂಡು ಮತ್ತೆ ಪುನಃ ವ್ರತವನ್ನು ಮಾಡಬೇಕು ಈ ರೀತಿಯಾಗಿ ಹೇಳುತ್ತಾರೆ. ಯಾರು ಶೀಲದಿಂದ ಭ್ರಷ್ಟರಾಗುತ್ತಾರೋ ಅವರು **'ತಿರ್ಯಗ್ಯೋನಿಸಹಸ್ರೇಷು ಪಚ್ಯತೇ'**[5] ಪಶು ಪಕ್ಷಿ ಮೊದಲಾದ ಯೋನಿಗಳಲ್ಲಿ ಸಾವಿರಾರು ಜನ್ಮಗಳನ್ನು ಅವರು ಪಡೆಯುವಂತಹ ಪ್ರಸಂಗ ಬರುತ್ತೆ

1. 78.8 ವಿಷ್ಣುಪರ್ವ, 2. 78.8 ವಿಷ್ಣುಪರ್ವ, 3. 78.9 ವಿಷ್ಣುಪರ್ವ, 4. 78.9 ವಿಷ್ಣುಪರ್ವ, 5. 78.13 ವಿಷ್ಣುಪರ್ವ

ಆದ್ದರಿಂದ ಮಾನುಷ್ಯ ಜನ್ಮವನ್ನು ಪಡೆದರೂ ಉತ್ತಮವಾದಂತಹ ಸಾಧನೆ ಮಾಡುವ ಶರೀರ ಅವರಿಗೆ ಸಿಗುವುದಿಲ್ಲ ನೀಚ ಯೋನಿಯಲ್ಲಿ ಹುಟ್ಟಿ ಕಷ್ಟವನ್ನು ಪಡಬೇಕಾಗುತ್ತದೆ. ಆದ್ದರಿಂದ ಪತಿಗೆ ಅನುಕೂಲರಾಗಿ, ಶುದ್ಧ ಚಾರಿತ್ರ್ಯ ಸಂಪನ್ನರಾಗಿ ಒಳ್ಳೆಯ ಮಾತುಗಳನ್ನು ಆಡುತ್ತಾ, ತಮ್ಮ ನಿತ್ಯದ ಧರ್ಮಾಚರಣೆಯನ್ನು ಚೆನ್ನಾಗಿ ಮಾಡುತ್ತಾ ಇರಬೇಕು. ಆನಂತರ ಈ ವ್ರತವನ್ನು ಪ್ರಾರಂಭ ಮಾಡಬೇಕು. ಶುದ್ಧವಾದ ಶ್ರೇಷ್ಠವಾದ ಕಪಿಲಾ ಗೋವು ಆ ಗೋವಿನ ಬಲ ಕೋಡು ಆ ಕೋಡಿಗೆ ಅಕ್ಷತೆಗಳು ಧರ್ಭೆ ಅಕ್ಷತೆಗಳಿಂದ ಸೇರಿಸಿದಂತಹ ನೀರನ್ನು ಹಾಕಬೇಕು ಅದನ್ನು ಪಾತ್ರೆಯಲ್ಲಿ ಹಿಡಿದುಕೊಳ್ಳಬೇಕು. ಆ ನೀರನ್ನ ಸ್ನಾನ ಮಾಡಿದ ಮೇಲೆ ಸ್ನಾನ ಮಾಡಿ ಕುಳಿತ ಗಂಡನಿಗೆ ಆ ನೀರನ್ನು ಕೊಡಬೇಕು, ಅವನು ಅದನ್ನು ಪ್ರೋಕ್ಷಣೆ ಮಾಡಿಕೊಂಡು ಇವಳಿಗೂ ಪ್ರೋಕ್ಷಣೆ ಮಾಡಬೇಕು. ಆ ರೀತಿ ಗೋವಿನ ಬಲ ಕೋಡಿಗೆ ಅಭಿಷೇಕ ಮಾಡಿದ ಆ ನೀರನ್ನು ಪ್ರೋಕ್ಷಣೆ ಗಂಡ ಮಾಡಿಕೊಂಡ ಮೇಲೆ ತಾನು ತನ್ನ ತಲೆಗೆ ಪ್ರೋಕ್ಷಣೆ ಮಾಡಿಸಿಕೊಂಡ ಮೇಲೆ ಮುಂದಿನ ವ್ರತದ ಕಾರ್ಯವನ್ನು ಪ್ರಾರಂಭ ಮಾಡಬೇಕು.

ತ್ರೈಲೋಕ್ಯಸರ್ವತೀರ್ಥೇಷು ಸ್ನಾನಮೇತದುದಾಹೃತಮ್ ॥ (78.22 ವಿಷ್ಣುಪರ್ವ)

ಇದರಿಂದ ಎಷ್ಟು ಪುಣ್ಯ ಅಂದರೆ ಮೂರು ಲೋಕಗಳಲ್ಲಿರುವ ಎಲ್ಲ ತೀರ್ಥಗಳಲ್ಲಿ ಸ್ನಾನ ಮಾಡಿದರೆ ಏನು ಫಲವೋ ಆ ಫಲ ಈ ಗೋಶೃಂಗ ತೀರ್ಥದಲ್ಲಿ ಸ್ನಾನ ಮಾಡಿದರೆ ಪ್ರೋಕ್ಷಣೆ ಮಾಡಿಕೊಂಡರೆ ಬರುತ್ತದೆ ಅಷ್ಟು ಮಹತ್ವವನ್ನು ತಿಳಿಸಿಕೊಟ್ಟಿದ್ದಾರೆ.

ಆಮೇಲೆ ಈ ವ್ರತ ಮಾಡುವವರೆಗೆ ಮಂಚದ ಮೇಲೆ ಮಲಗಬಾರದು ನೆಲದ ಮೇಲೇನೆ ಮಲಗಬೇಕು, ಕಣ್ಣೀರು ಹಾಕಬಾರದು, ಸಿಟ್ಟಿಗೆ ಬರಬಾರದು, ಯಾರ ಜೊತೆಗೆ ಜಗಳ ಆಡಬಾರದು. ಶುಭ್ರವಾದ ವಸ್ತ್ರವನ್ನು ಧಾರಣೆ ಮಾಡಬೇಕು, ಚರ್ಮದ ಚಪ್ಪಲಿಯನ್ನು ಹಾಕಬಾರದು ಹುಲ್ಲಿನ ಚಪ್ಪಲಿಯನ್ನು ಬೇಕಾದರೆ ಹಾಕಿಕೊಳ್ಳಬಹುದು. ಕಾಡಿಗೆ ಹಚ್ಚಿಕೊಳ್ಳಬಾರದು, ಇನ್ಯಾವುದೇ ತರಹದ ಸುಗಂಧ ದ್ರವ್ಯಗಳನ್ನ ಅಲಂಕಾರಕ್ಕಾಗಿ ಉಪಯೋಗಿಸಬಾರದು. ದಂತಕಾಷ್ಠದಿಂದ ದಂತಧಾವನ ಮಾಡಬಾರದು, ಎಲೆಗಳಿಂದ ದಂತಧಾವನ ಮಾಡಬಹುದು, ದ್ವಾದಶ ಗಂಡೂಶಗಳನ್ನು ಮಾಡಬೇಕು. ಈ ರೀತಿ ಇನ್ನು ಮೃತ್ತಿಕಾ ಶೌಚವನ್ನು ತಪ್ಪದೇ ಮಾಡಿಕೊಳ್ಳಬೇಕು, ಕೈ ಕಾಲುಗಳಿಗೆ ಮೃತ್ತಿಕೆಯನ್ನು ಹಚ್ಚಿಕ್ಕೊಳ್ಳಬೇಕು ತಲೆಗೆ ನೀರು ಹಾಕಿಕೊಳ್ಳುವಾಗ ಮಣ್ಣಿನ ಮಿಶ್ರಣ ಇರಬಾರದು, ಕೈಕಾಲುಗಳನ್ನು ಶುದ್ಧ ಮಾಡುವಾಗ ಮಣ್ಣಿನ ಮಿಶ್ರಣ ಇರಬೇಕು.

ಪ್ರಕ್ಷಾಲನಂ ವೈ ಶಿರಸಃ ಸದಾಮೃಣ್ಮಿಶ್ರೈರ್ಜಲೈಃ ॥ (78.30 ವಿಷ್ಣುಪರ್ವ)

ತಲೆಗೆ ಸ್ನಾನ ಮಾಡುವಾಗ ಮಾತ್ರ ಮಣ್ಣಿನಿಂದ ಮಿಶ್ರವಾಗದೇ ಇರುವಂತಹ ನೆಲ್ಲಿಕಾಯಿ ಹಾಗೂ ಬಿಲ್ವ ಫಲ, ಹಿರಡ ಹರೀತಕಿ ಇವುಗಳ ಚೂರಣ ಅದರಿಂದ ತನ್ನ ತಲೆಯನ್ನು ಶುದ್ಧ ಮಾಡಿಕೊಳ್ಳಬಹುದು ಆದರೆ ಅಭ್ಯಂಗ ಸ್ನಾನವನ್ನು ಮಾತ್ರ ಮಾಡಬಾರದು. ಆಮೇಲೆ ವಾಹನದ ಮೇಲೆ ಎಲ್ಲಿಯೂ ಓಡಾಡಬಾರದು ಎತ್ತು, ಒಂಟೆ ಮೊದಲಾದ ವಾಹನಗಳು ಆಗಿನ ಕಾಲದಲ್ಲಿ, ಯಾವ ವಾಹನಗಳು ಆ ವಾಹನಗಳ ಮೇಲೆ ಓಡಾಡಬಾರದು. ವಸ್ತ್ರ ಸಹಿತವಾಗಿಯೇ ಸ್ನಾನವನ್ನು ಮಾಡಬೇಕು ನದಿ ಉತ್ತಮ ಇಲ್ಲ ಅಂದರೆ ಕಟಾಕದಲ್ಲಿ ಅಥವಾ ದೊಡ್ಡದಾದ ಬಾವಿ ಇಳಿಯುವಂತಹ ಬಾವಿ ಇಂಥವುಗಳಲ್ಲಿ ಸ್ನಾನ ಮಾಡಬೇಕು. ಅದು ಯಾವ ಅನುಕೂಲತೆಗಳು ಇಲ್ಲದೇ ಇದ್ದರೆ ಹೊಸ ಕೊಡಗಳನ್ನು ತರಿಸಿ ಆ **'ನವೈಶ್ಚ ಕುಮ್ಭೈಃ ಸ್ನಾತವ್ಯಂ'**[1] ಅಂತಹ ನೂತನವಾದ ಕುಂಭಗಳಿಂದ ಸ್ನಾನವನ್ನು ಮಾಡಬೇಕು ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ.

1. 78.35 ವಿಷ್ಣುಪರ್ವ



ಈ ರೀತಿ ಸ್ನಾನ ಮಾಡಿ ಎಲ್ಲ ಆದಮೇಲೆ ಹನ್ನೊಂದು ಜನ ಮುತ್ತೈದೆಯರನ್ನ ಪತಿವ್ರತಾ ಸ್ತ್ರೀಯರನ್ನ ಕರೆಯಬೇಕು ವ್ರತ ಮಾಡುವಂತಹ ಹೆಣ್ಣುಮಗಳು. ಆ ಹನ್ನೊಂದು ಜನರನ್ನ ಅವರವರ ಗಂಡಂದಿರಿಂದ ಕೊಂಡು ತೆಗೆದುಕೊಳ್ಳಬೇಕು ಎಲ್ಲ ಕೇವಲ ವ್ಯವಹಾರಕ್ಕೆ ಮಾತ್ರ, ಅವರವರ ಪತಿಗಳಿಗೆ ಏನೋ ಒಂದು ಗೋವನ್ನೋ, ಹಣವನ್ನೋ ಯಾವುದನ್ನೋ ಕೊಟ್ಟು ಕ್ರಯವಾಗಿ ಇವರನ್ನು ತೆಗೆದುಕೊಂಡು ಆಚಾರ್ಯರಿಗೆ, ಪುರೋಹಿತನಿಗೆ ದಾನ ಮಾಡಬೇಕು. ದಾನ ಮಾಡಿ ಮತ್ತೆ ಆ ಪುರೋಹಿತನಿಗೆ ಅಲ್ಲಿಂದಲ್ಲೇ ಹಣ ಕೊಟ್ಟು ಅವರನ್ನು ಮರಳಿ ಪಡೆದು ಅವರವರ ಗಂಡಂದಿರಿಗೆ ತಿರುಗಿ ಕೊಡಬೇಕು. ಇಲ್ಲಿ ದತ್ತಾಪಹಾರ ದೋಷ ಅಲ್ಲ ಕ್ರಯ ಕೊಟ್ಟು ತೆಗೆದುಕೊಳ್ಳುತ್ತಾರೆ ಶಾಸ್ತ್ರದ ವಿಧಾನವೂ ಇದೆ ಆದ್ದರಿಂದ ಇಲ್ಲಿ ದತ್ತಾಪಹಾರ ದೋಷ ಅಲ್ಲ. ಪತಿಗಳಿಂದ ಕ್ರಯ ಕೊಟ್ಟು ತೆಗೆದುಕೊಂಡು ಆಚಾರ್ಯನಿಗೆ ಕೊಟ್ಟು ಅವನಿಗೆ ಕ್ರಯ ಕೊಟ್ಟು ಮತ್ತೆ ತೆಗೆದುಕೊಂಡು ಅವರವರ ಪತಿಗಳಿಗೆ ಒಪ್ಪಿಸುವಂತಹ ಒಂದು ಕ್ರಮ. ಯಾವ ಹೆಣ್ಣುಮಗಳು ವ್ರತ ಮಾಡುತ್ತಾಳೆ ಆ ಹೆಣ್ಣುಮಗಳು, ಆ ಹೆಣ್ಣುಮಗಳ ಪತಿ ಅವನು ವ್ರತದ ಮೊದಲು ಹಾಗೂ ಕೊನೆಗೆ ಅವನು ಕ್ಷೌರ ಕರ್ಮವನ್ನು ಮಾಡಿಸಿಕೊಂಡು ವ್ರತದ ದೀಕ್ಷೆಯನ್ನು ಮಾಡಬೇಕು. ಆ ಹೆಣ್ಣುಮಗಳೂ ಕೂಡ ವೇಣೀ ದಾನವನ್ನು ಪ್ರಯಾಗ ಕ್ಷೇತ್ರದಲ್ಲಿ ಹೇಗೆ ಎರಡು ಅಂಗುಲ ವೇಣೀ ದಾನವನ್ನು ಮಾಡಿಸುವ ಪದ್ಧತಿ ಇದೆ ಹಾಗೆ ಈ ವ್ರತದ ಪ್ರಾರಂಭ ಹಾಗೂ ಕೊನೆಯಲ್ಲಿ ವೇಣೀ ದಾನವನ್ನ ಎರಡು ಅಂಗುಲ ಮಾತ್ರ

ಸರ್ವಂ ಕೇಶಾನ್ ಸಮುದ್ಧೂಯ ಚ್ಛೇದಯೇದಂಗುಲಿದ್ವಯಮ್ ।
ಏವಮೇವ ಹಿ ನಾರೀಣಾಂ ವಪನಂ ಸರ್ವದಾ ಸ್ಮೃತಮ್ ॥

ಎಂಬ ಪ್ರಮಾಣಕ್ಕೆ ಅನುಗುಣವಾಗಿ ಕೇವಲ ವೇಣೀ ದಾನ ರೂಪದಲ್ಲಿ ಮಾತ್ರ ಅವರು ಅದನ್ನು ಮಾಡಬೇಕು. ಆಮೇಲೆ ಸ್ನಾನವನ್ನು ಮಾಡುವಾಗ ವಿವಾಹ ಕಾಲದಲ್ಲಿ ಸುರಿಗೆ ಸ್ನಾನ ಅಂತ ಹೇಗೆ ಮಾಡುತ್ತಾರೆ ವೈಭವದಿಂದ ಒಂದು ಮಂಗಲ ಸ್ನಾನ ಅಂತ ಅದೇ ಕ್ರಮದಲ್ಲಿ ಈ ವ್ರತ ಕಾಲದಲ್ಲಿಯೂ ಕೂಡ ಸ್ನಾನ ಮಾಡಿ ಉತ್ತಮವಾದಂತಹ ಮಾಲ್ಯಾದಿಗಳ ಧಾರಣವನ್ನ ಮಾಡಬೇಕು. ಆ ಸ್ನಾನ ಮಾಡುವ ಕಾಲದಲ್ಲಿಯೂ ಕೂಡ ಪೌರಾಣ ಮಂತ್ರಗಳು ಪುರಾಣೋತ್ತವಾದಂತಹ ಮಂತ್ರಗಳು ಆ ಅಬಭಿಮಾನಿ ದೇವತೆಗಳು, ಜಲಾಭಿಮಾನಿ ದೇವತೆಗಳು ಉತ್ತಮವಾದ ಸೌಭಾಗ್ಯವನ್ನು ನೀಡಲಿ.

ಶುಭಾವ್ಯಯಾ ಗುಣಿನೀಯುಕ್ತಧರ್ಮಾ ಭರ್ತ್ರಾ ಸಾಕಂ ಮಮ ದಾಸ್ಯಾ ವರೇಣ ।
ಮಾ ಕರ್ಮಣಾ ಮನಸಾ ವಾಪಿ ವಾಚಾ ಭರ್ತುರ್ಭವೇಯಂ ರುಷತೀ ಸ್ಯಾಂ ವಶಜ್ಞಾ ॥

(79.11 ವಿಷ್ಣುಪರ್ವ)

ಉತ್ತಮವಾದ ಗುಣಗಳು ನನ್ನಲ್ಲಿ ಬರಲಿ, ಧರ್ಮ ಸಾಧನೆ ನನ್ನಿಂದ ಆಗಲಿ ನೀವೆಲ್ಲ ಜಲಾಭಿಮಾನಿ ದೇವತೆಗಳು ಬುಧ, ವರುಣ ಮೊದಲಾದ ದೇವತೆಗಳು ಹಾಗೂ ಗಂಗಾ ದೇವಿ ದೇವತೆಗಳು ನಮಗೆಲ್ಲ ವಿಶೇಷವಾಗಿ ಅನುಗ್ರಹವನ್ನು ಮಾಡಿ ಉತ್ತಮ ಧರ್ಮಾಚರಣೆ, ಸದ್ಗುಣಗಳು ಇರಬೇಕು, ಗಂಡನಿಗೆ ಎಂದೂ ವಿರೋಧವನ್ನ ಕೃತಿಯಿಂದ, ಮನಸ್ಸಿನಿಂದ, ಮಾತಿನಿಂದ ಮಾಡದೆ ಇರುವ ಹಾಗೆ ನನಗೆ ಅನುಗ್ರಹವನ್ನು ಮಾಡಬೇಕು. ಗಂಡನಿಗೆ ನನ್ನ ಮೇಲೆ ವಿಶೇಷವಾದಂತಹ ಅಭಿಮಾನ ಪ್ರೀತಿಗಳು ಇರಬೇಕು ನಾನೂ ಅಷ್ಟೇ ಗಂಡನಿಗೆ ಅನುಸರಿಸಿ ಇರಬೇಕು ಯಾವುದೇ ರೀತಿಯ ವಿರೋಧವನ್ನು ಮಾಡಬಾರದು. ಎಲ್ಲ ಬಂಧು ಬಾಂಧವರಲ್ಲಿ ಹಾಗೂ ಸವತಿಯರ ಮಧ್ಯದಲ್ಲಿ

ನಾನು ಅತ್ಯಂತ ಪ್ರಿಯಳಾದವಳು ಅಂತ ಆಗಬೇಕು, ಯಾರಿಗೂ ನನ್ನ ಬಗ್ಗೆ ಅಸೂಯಾ, ಮಾತ್ಸರ್ಯ, ದ್ವೇಷಗಳು ಬರಬಾರದು ಇತ್ಯಾದಿ ಅನೇಕ ಶ್ಲೋಕಗಳಿಂದ ಪ್ರಾರ್ಥನೆ ಇದೆ. ಆ ಮಂತ್ರಗಳಿಂದ ನೀರು ಮೊದಲಾದವುಗಳ ಅಭಿಮಂತ್ರಣ ಮಾಡಿ ಅಂತಹ ನೀರಿನಿಂದ ತಾನು ಸ್ನಾನವನ್ನು ಮಾಡಬೇಕು. ತನ್ನ ಗಂಡನಿಗೆ ದೊಡ್ಡದಾದ ಹೊದೆಯುವ ಬಟ್ಟೆ ಇರುತ್ತದೆ ತಾನೇ ಬಟ್ಟೆಯನ್ನ ಕತ್ತರಿಸಿ ವಸ್ತ್ರವನ್ನು ತಾನೇ ದಾನ ಕೊಡಬೇಕು ಅರ್ಥಾತ್ ಗಂಡನಿಗೆ ಸಮರ್ಪಣೆ ಮಾಡಬೇಕು. ಅದು ಆಗದೇ ಇದ್ದರೆ ಶ್ರೇಷ್ಠವಾದ ಇನ್ನೊಬ್ಬರು ಮಾಡಿ ಇಟ್ಟಂತಹ ಬಟ್ಟೆಯನ್ನೇ ಕೊಡಬಹುದು **'ವಾಸಃ ಅನ್ಯದೇವ ದದ್ಯಾಚ್ಚ'**. ಅದೇ ರೀತಿ ಶ್ರೇಷ್ಠನಾದ ಒಬ್ಬ ಪುರೋಹಿತನಿಗೂ ವಸ್ತ್ರ ದಾನವನ್ನು ತಾನು ಮಾಡಬೇಕು ಅದರಂತೆ ಹಾಸಿಗೆ, ಆಸನ, ಮನೆ, ಧಾನ್ಯ, ದಾಸ ದಾಸಿಯರು, ಅಲಂಕಾರ ರತ್ನ ಪರ್ವತ, ಇದೆಲ್ಲ ದೇವತೆಗಳಿಗೆನೇ ಸಾಧ್ಯ ರತ್ನ ಪರ್ವತ ಕೊಡುವ ಯೋಗ್ಯತೆ ಮನುಷ್ಯರಿಗೆ ಎಲ್ಲಿಂದ ಬರಬೇಕು. ರತ್ನ ಪರ್ವತ ಅನೇಕ ಧಾನ್ಯಗಳು ಇವುಗಳೆಲ್ಲವನ್ನ ಅಥವಾ ತನ್ನ ಯೋಗ್ಯತೆಗೆ ತಕ್ಕಷ್ಟು ರತ್ನಗಳನ್ನು ತೆಗೆದುಕೊಂಡು ಪರ್ವತದ ಆಕಾರದಲ್ಲಿ ಅಥವಾ ಮಣ್ಣಿನ ಪರ್ವತವನ್ನು ಮಾಡಿ ರತ್ನವನ್ನು ಅದಕ್ಕೆ ಅಂಟಿಸಿ ರತ್ನದ ಪರ್ವತ ಅಂತ ಮಾಡಿ ಮನುಷ್ಯರು ತಮ್ಮ ಯೋಗ್ಯತೆಗೆ ತಕ್ಕ ಹಾಗೆ ದಾನ ಮಾಡಬಹುದು,ದೇವತಾ ಸ್ತ್ರೀಯರು ನಿಜವಾಗಿಯೇ ರತ್ನ ಪರ್ವತದ ದಾನ ಮಾಡುವ ಸಾಮರ್ಥ್ಯ ಉಳ್ಳವರು ಹಾಗೆಲ್ಲ ದಾನವನ್ನು ಮಾಡಬೇಕು.

ಗೋದಾನ ಮಾಡಬೇಕು ಗೋವಿನ ನಾನಾ ರೀತಿಯ ಪ್ರತಿಮೆಗಳನ್ನು ಮಾಡಿ ದಾನ ಮಾಡಬೇಕು ಅಂತ ಉಮಾ ಮಹೇಶ್ವರರ, ಲಕ್ಷ್ಮೀ ನಾರಾಯಣರ ಪ್ರತಿಮೆಯನ್ನು ದಾನ ಮಾಡಬಹುದು. ಉಪ್ಪಿನಿಂದ, ಬೆಣ್ಣೆಯಿಂದ, ಬೆಲ್ಲ, ಜೇನುತುಪ್ಪ, ಬಂಗಾರ ಹಾಗೂ ಗಂಧ ಇನ್ನನೇಕ ರಸಗಳು, ಹೂವು, ಬೆಳ್ಳಿ, ತಾಮ್ರ, ಹಣ್ಣುಗಳು, ಬಟ್ಟೆ, ಚಿತ್ರ ತೆಗೆದು, ಕಟ್ಟಿಗೆಯ ಪ್ರತಿಮೆ, ಕಲ್ಲಿನ ಪ್ರತಿಮೆ, ಮೊಸರು, ಹಾಲು, ತುಪ್ಪ, ದೂರ್ವ ಇವುಗಳಿಂದ ಆ ಪ್ರತಿಮೆಯನ್ನು ಮಾಡಿ ಆ ಪ್ರತಿಮೆಯನ್ನು ದಾನವಾಗಿ ಕೊಡಬೇಕು ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ. ಇವೆಲ್ಲ ಮಾಡಲಿಕ್ಕೆ ಆಗದೇ ಇದ್ದರೂ ಕೂಡ ಅಥವಾ ಇವೆಲ್ಲ ಮಡಿದರೂ ಕಪಿಲಾ ಗೋದಾವನ್ನಂತೂ ಮಾಡಲೇಬೇಕು. ಉಡುವ ಹೊದೆಯುವ ಎರಡೂ ಕೃಷ್ಣಾಜಿನಗಳ ದಾನ, ಕನ್ನಡಿಯನ್ನು ಕೊಡಬೇಕು ಹೀಗೆಲ್ಲ ದಾನವನ್ನ ಈ ಪುಣ್ಯಕ ವ್ರತ ಮಾಡುವಂತಹ ಆ ಪತಿವ್ರತಾ ಸ್ತ್ರೀ ಮಾಡಬೇಕು ಅಂತ ತಿಳಿಸಿದ್ದಾರೆ. ಉತ್ತಮವಾದ ಸೌಭಾಗ್ಯ, ಉತ್ತಮವಾದಂತಹ ಸಂಪತ್ತು, ಸಮೃದ್ಧಿ, ಪುತ್ರ ಸೌಭಾಗ್ಯ ಇವುಗಳೆಲ್ಲವನ್ನು ಕೂಡ ಪಡೆಯುವುದಕ್ಕೆ ಸಾಧ್ಯ ಇದೆ ಅಂತ ತಿಳಿಸಿಕೊಡುತ್ತಾರೆ. ಅರುಂಧತಿ, ಉಮಾ ದೇವಿ ಹೇಳುತ್ತ ಇದ್ದಾಳೆ ಇದೆಲ್ಲವನ್ನ ನಾನು ಮಾಡಿದ್ದೇನೆ, ನಮ್ಮ ಪತಿ ದೇವರ ಅನುಗ್ರಹದಿಂದ ಇದೆಲ್ಲವನ್ನ ನಾನು ಮಾಡಿದ್ದೇನೆ ಇದಕ್ಕೆ ಉಮಾವ್ರತಕ ಅಂತೇ ಹೆಸರು. ನಾನು ಮೊದಲು ಕಂಡು ಮಾಡಿದ್ದಕ್ಕೆ ಇದಕ್ಕೆ ಉಮಾವ್ರತಕ ಅಂತ ಹೆಸರಿದೆ ನೀವೂ ಕೂಡ ಇದನ್ನು ಚೆನ್ನಾಗಿ ಮಾಡಿ, ಎಲ್ಲರಿಗೂ ಕೂಡ ಇದನ್ನು ಪ್ರಚಾರ ಮಾಡಿ. ಪಾಯಸ ದಾನ ಈ ವ್ರತದಲ್ಲಿ ವಿಶೇಷವಾದದ್ದು ಅಂತ ಕೂಡ ಉಮಾ ದೇವಿ ಅರುಂಧತಿ ದೇವಿಗೆ ತಿಳಿಸಿದ್ದಾಳೆ.

ಇದರ ಜೊತೆಗೆ ಇನ್ನೊಂದು ವ್ರತ ಹೇಳುತ್ತೇನೆ ಕೇಳು ಅಂತ ಆ ವ್ರತ ಜ್ಯೇಷ್ಠಾ ಮತ್ತು ಆಷಾಢ ಎರಡು ಮಾಸಗಳು ಅಥವಾ ಬರೀ ಜ್ಯೇಷ್ಠಾ ಅಥವಾ ಬರೀ ಆಷಾಢ. ಈ ಮಾಸಗಳಲ್ಲಿ ಹಿಂದೆ ಹೇಳಿದ ಎಲ್ಲ ವ್ರತಗಳನ್ನು ಮಾಡಬೇಕು ಅಂದರೆ ಇಡೀ ತಿಂಗಳು ಅಥವಾ ಎರಡು ತಿಂಗಳು ಗೋಶೃಂಗಕ್ಕೆ ಅಭಿಷೇಕ ಮಾಡಿ ಆ ನೀರಿನಿಂದ ಪ್ರೋಕ್ಷಣ ಮಾಡಿಕೊಳ್ಳುವುದು, ನೆಲದ ಮೇಲೆ ಮಲಗುವುದು ಇತ್ಯಾದಿ ಇತ್ಯಾದಿ ವ್ರತಗಳನ್ನೆಲ್ಲ ಹೇಳಿದ್ದನ್ನ ಎರಡು ತಿಂಗಳು ಅಥವಾ ಅಶಕ್ಯವಾದರೆ ಒಂದು ತಿಂಗಳು ಮಾಡಿ ಆನಂತರ ಕೆಲವು ದಾನಗಳನ್ನು ಮಾಡಬೇಕು. ಪಾನಕ ತುಂಬಿದ ಕೊಡಗಳನ್ನು ದಾನ ಮಾಡಬೇಕು, ಹಾಲು, ಮೊಸರು, ತುಪ್ಪ, ಜೇನುತುಪ್ಪ, ನೀರು ಇವುಗಳಿಂದ ತುಂಬಿದ ಕೊಡಗಳನ್ನೂ ದಾನ ಮಾಡಬೇಕು ಶ್ರೇಷ್ಠನಾದಂತಹ ಜ್ಞಾನಿ ಜ್ಞಾನವೃದ್ಧ ಉತ್ತಮ ವ್ರತ ನಿಯಮಾದಿಗಳನ್ನು

ಮಾಡುವಂತಹ ಒಬ್ಬ ಸದಾಚಾರಿಯಾದ ವ್ಯಕ್ತಿಯನ್ನ ನೋಡಿ ಅಂಥವನಿಗೆ ದಾನವನ್ನು ಮಾಡಬೇಕು ಉತ್ತಮ ಪುತ್ರ ಸೌಭಾಗ್ಯ ಅವಳಿಗೆ ಸಿಗುತ್ತೆ. ಈ ವ್ರತವನ್ನು ಮಾಡುವಾಗ ಪುತ್ರ ಸಂತಾನವಾಗಬೇಕು ಅಂತ ಅಪೇಕ್ಷೆ ಇದ್ದರೇ ಪುಷ್ಯ ಮೊದಲಾದ ಗಂಡು ನಕ್ಷತ್ರಗಳಲ್ಲಿ ಈ ವ್ರತದ ಆಚರಣೆಯನ್ನು ಮಾಡಬೇಕು, ಸ್ತ್ರೀ ಸಂತಾನದ ಅಪೇಕ್ಷೆ ಇದ್ದರೇ ರೋಹಿಣಿ ಮೊದಲಾದಂತಹ ಹೆಣ್ಣು ನಕ್ಷತ್ರದಲ್ಲಿ ಈ ವ್ರತವನ್ನು ಆಚರಣೆ ಮಾಡಬೇಕು. ಇದನ್ನು ಕಾರ್ತಿಕ ಪೌರ್ಣಮೇಯವರೆಗೆ ಆಚರಿಸಿ ಆಮೇಲೆ ಈ ವ್ರತದ ಸಮಾಪ್ತಿಯನ್ನು ಮಾಡಬೇಕು ಇದು ಎರಡನೆಯ ವ್ರತ.

ಮೂರನೆಯ ಪುಣ್ಯಕ ವ್ರತ ಅಂದರೆ ಪುಣ್ಯವನ್ನು ಕೊಡುವಂತಹ ವ್ರತ ಅಂತ **'ಪುಣ್ಯಂ ಕರೋತಿ ಇತಿ ಪುಣ್ಯಕಂ'** ಪುಣ್ಯ ಪ್ರದವಾದಂತಹ ವ್ರತ. ಇನ್ನೊಂದು ವ್ರತ ಯಾವುದೇ ಹೊಸದಾಗಿ ಬಂದಂತಹ ಧಾನ್ಯವನ್ನು ಭಕ್ಷಣ ಮಾಡಬಾರದು, ಹೂವುಗಳನ್ನು ಧಾರಣೆ ಮಾಡಬಾರದು, ಒಪ್ಪತ್ತು ಮಾತ್ರ ಊಟ ಮಾಡಬೇಕು ಈ ತರಹದ ಒಂದು ವ್ರತ. ಹೀಗೆ ಒಂದು ವರ್ಷವನ್ನ ಮಾಡಿದರೆ ಉತ್ತಮವಾದ ಸೌಮಾಂಗಲ್ಯ ದೀರ್ಘ ಕಾಲದವರೆಗೆ ಇರುತ್ತದೆ, ಸಮೃದ್ಧವಾದ ಸಂಪತ್ತು ಎಲ್ಲವೂ ಅವರಿಗೆ ಸಿಗುತ್ತದೆ. ನೋಡಿ ಕೆಲವು ಪುರಾಣಗಳಲ್ಲಿ ಹೀಗೆ ಬರುತ್ತದೆ ಇದನ್ನು ವ್ರತವಾಗಿ ಮಾಡಬೇಕು ಅಂತ ಅಂದರೆ ಉಳಿದ ಹೊತ್ತು ನಾವು ಅದನ್ನು ಮಾಡಬಾರದು ಅಂತ ಹೀಗೆ ತಿಳಿದುಕೋಬಾರದು. ಈಗ ಈದೀಗ ಬಂತು ಈ ವ್ರತ ಮಾಡುವಾಗ ಯಾರಿಗೂ ಒಂದು ಕೆಟ್ಟ ಮಾತು ಆಡಬಾರದು ಅಂತ ಕಾಯುತ್ತಾ ಕುಳಿತಿರುವುದು ಯಾವಾಗ ವ್ರತ ಮುಗಿದೀತೋ ಅಂತ ಮುಗಿದ ತಕ್ಷಣ ಯಾರು ಯಾರಿಗೆ ಏನೇನು ಬೈಯಬೇಕು ಅಂತ ಅಂದುಕೊಂಡಿದ್ದೇನೋ ಅದನ್ನು ಬೈಯಬೇಕು ಅಂತ ಅರ್ಥ ಅಲ್ಲ ಎಂದಿಗೂ ಯಾರನ್ನೂ ಬೈಯಬಾರದು. ಆ ರೀತಿಯ ಒಂದು ರೂಢಿಯಾಗುವುದಕ್ಕೆ ವ್ರತ ಕಾಲದಲ್ಲಿ ಒಂದು ಸ್ವಲ್ಪ ದಿವಸ ಆದರೂ ಅದನ್ನು ಅಭ್ಯಾಸ ಮಾಡಿ ಆಮೇಲೆ ನಿಮಗೆ ಒಂದು ಮನೋಧೈರ್ಯ ಬರುತ್ತದೆ ಹೋ ಒಂದು ವರ್ಷ ಅಂತೂ ಯಾರನ್ನು ಬೈಯದೇ ನಾನು ಇದ್ದೇನಲ್ಲ ಇನ್ನು ಮೇಲೆ ಹೀಗೆ ಇರೋಣ ಅನ್ನುವ ಒಂದು ಧೈರ್ಯ ಬರುವುದಕ್ಕಾಗಿ ಹಾಗೆ ಹೇಳಿರುತ್ತಾರೆ ಅಷ್ಟೇ.

ಬದನೆಕಾಯಿ ತಿನ್ನಲೇಬಾರದು ಆದರೆ ವಿಶೇಷವಾಗಿ ವ್ರತ ಅಂತ ಒಂದು ವರ್ಷದವರೆಗೆ ಬದನೆಕಾಯಿ ತಿನ್ನುವುದಿಲ್ಲ ಎಂದೂ ತಿನ್ನಬಾರದು ವಿಶೇಷ ಸಂಕಲ್ಪ ಪೂರ್ವಕವಾಗಿ ಅದು ಭಗವಂತನ ಪ್ರೀತಿಗಾಗಿ, ಮದ್ಯಪಾನ ಮಾಡಬಾರದು ಭಗವಂತನ ಪ್ರೀತಿಗಾಗಿ, ಮಾಂಸ ಭಕ್ಷಣ ಮಾಡಬಾರದು ಭಗವಂತನ ಪ್ರೀತಿಗಾಗಿ ಹೀಗೆ ಈ ನಿಷಿದ್ಧ ಪದಾರ್ಥಗಳ ಭಕ್ಷಣ ಮಾಡದೇ ಇರುವುದು ಕೇವಲ ಭಗವತ್ ಪ್ರೀತಿಗಾಗಿ, ನಿಷ್ಕಾಮವಾಗಿ ದೇವರ ಅನುಗ್ರಹಕ್ಕಾಗಿ ನಿಷಿದ್ಧ ಪದಾರ್ಥಗಳ ತ್ಯಾಗ, ವಿಹಿತವಾದ ಪದಾರ್ಥಗಳ ಸೇವನೆ ಇದು ಸಕಾಮ. ಆ ಒಂದು ಮನಸ್ಸಿನಲ್ಲಿ ಕಾಮನೆ ಮಕ್ಕಳಿಗೆ ಯಾವುದೇ ರೀತಿಯ ವಿನಾಶ ಆಗಬಾರದು ಅನ್ನುವ ಅಪೇಕ್ಷೆ ಇದ್ದಂತಹ ಹೆಣ್ಣು ಪತಿವ್ರತೆ, ಅವಳು ಒಂದು ವರ್ಷದವರೆಗೆ ಆ ಉದ್ದೇಶ್ಯಕ್ಕಾಗಿ ಬದನೆಕಾಯಿ ತಿನ್ನುವುದಿಲ್ಲ ಅಂತ ಒಂದು ವ್ರತ ಮಾಡಿದರೆ ಉತ್ತಮವಾದಂತಹ ಪುತ್ರ ಸೌಭಾಗ್ಯ, ಪುತ್ರರೆಲ್ಲ ಆರೋಗ್ಯವಂತರಾಗಿ ಸುಖವಾಗಿ ಇರುತ್ತಾರೆ. ಆಮೇಲೆ ಮಾಂಸ ಭಕ್ಷಣ ಎಂದೂ ಮಾಡಲೇಬಾರದು ವಿಶೇಷವಾಗಿ ಆ ಮಾಂಸ ಭಕ್ಷಣವನ್ನ ವ್ರತ ಪೂರ್ವಕವಾಗಿ ಈ ಒಂದು ಉದ್ದೇಶ್ಯಕ್ಕಾಗಿ ವಿಷ್ಣು ಪ್ರೀತ್ಯರ್ಥಕ್ಕಾಗಿ ಯಾವಾಗಲೂ ಮಾಡುವುದೇ,ಅಪಮೃತ್ಯು ಬರಬಾರದು ಅನ್ನುವುದಕ್ಕಾಗಿ ಮಾಂಸ ಭಕ್ಷಣವನ್ನ ಒಂದು ವರ್ಷ ತ್ಯಾಗ ಮಾಡುತ್ತೇನೆ ಅಂತ ಮನಸ್ಸಿನಲ್ಲಿ ಸಂಕಲ್ಪ ಮಾಡಿದರೆ ಅಪಮೃತ್ಯು ಪರಿಹಾರವಾಗುತ್ತೆ ಅಂತ ಹೇಳುತ್ತಾರೆ. ಸೋರೆಕಾಯಿ ತಪಸಿ ಇವೇ ಮೊದಲಾದ ಅನೇಕ ನಿಷಿದ್ಧವಾದದ್ದನ್ನೂ ಕೂಡ ಒಂದು ವರ್ಷದವರೆಗೆ ಸರ್ವಥಃ ತಿನ್ನುವುದಿಲ್ಲ ಅಂತ ತಾನು ಸಂಕಲ್ಪವನ್ನು ಮಾಡಬೇಕು.

ಆಮೇಲೆ ಇನ್ನೊಂದು ವ್ರತ ತನ್ನ ಕಾಲನ್ನು ತಾನೇ ತೊಳೆದುಕೊಳ್ಳುವುದು ಅಂತ ಈಗ ಎಲ್ಲರೂ ತಮ್ಮ ಕಾಲನ್ನು ತಾವೇ ತೊಳೆದುಕೊಳ್ಳುತ್ತಾರೆ. ದೇವತಾ ಸ್ತ್ರೀಯರು, ರಾಣಿಯರು ಅಂಥವರಿಗೆ ಸೇವೆ ಮಾಡುವುದಕ್ಕೆ ಬೇರೆಯವರು ಇರುತ್ತಾರೆ ಅವರು ಕಾಲಿಗೆ ನೀರು ಹಾಕುತ್ತಾರೆ ಆದರೆ ವ್ರತ ಮಾಡುವಾಗ ಈ ಒಂದು ವ್ರತ ತನ್ನ ಕಾಲನ್ನು ತಾನೇ ತೊಳೆದುಕೊಳ್ಳುವುದು ಅನ್ನುವ ಒಂದು ವ್ರತವನ್ನು ಯಾರು ಮಾಡುತ್ತಾರೋ ಅವರಿಗೆ ಉತ್ತಮವಾದ ಪ್ರತಿಷ್ಠೆ ಲೋಕದಲ್ಲಿ ಒಂದು ವಿಶಿಷ್ಟವಾದ ಸ್ಥಾನಮಾನ ಗೌರವಗಳು ಅವರಿಗೆ ಸಿಗುತ್ತದೆ. ಅಂದರೆ ಮನುಷ್ಯ ಜೀವನದಲ್ಲಿ ತಾನು ಒಂದು ಕಡೆಗೆ ತನ್ನ ಪ್ರತಿಷ್ಠೆ ಗೌರವ ಇವುಗಳನ್ನು ತ್ಯಾಗ ಮಾಡುವುದಕ್ಕೆ ಸಿದ್ಧನಾದರೆ ಎಲ್ಲ ಕಡೆಗೆ ಪ್ರತಿಷ್ಠೆ ಅಂತ **'ಏಕತ್ರ ಅಪ್ರತಿಷ್ಠಾ ಸರ್ವತ್ರ ಪ್ರತಿಷ್ಠಾ'** ದೊಡ್ಡವರ ಎದುರಿಗೆ, ಗುರುಗಳ ಎದುರಿನಲ್ಲಿ ಬಹಳ ಪ್ರತಿಷ್ಠೆಯನ್ನು ಮಾಡಲಿಕ್ಕೆ ಹೋಗಬಾರದು ವಿನೀತನಾಗಿ ತನ್ನ ದೋಷಗಳನ್ನೆಲ್ಲ ತೋಡಿಕೊಂಡು ತಿದ್ದಿಕೊಂಡು ಸರಿ ಮಾಡಿಕೊಂಡ ಅಂದರೆ ಇಡೀ ಜಗತ್ತಿನಲ್ಲಿ ಅವನಿಗೆ ಪ್ರತಿಷ್ಠೆ ಸಿಗುತ್ತದೆ. **'ಏಕತ್ರ ಪ್ರತಿಷ್ಠಾ'** ಗುರುಗಳ ಎದುರಿಗೆ ಭಾರೀ ಪ್ರತಿಷ್ಠೆಯನ್ನು ತೋರಿದ ಅಂದರೆ ಚೆನ್ನಾಗಿ ಜ್ಞಾನವು ಬರುವುದಿಲ್ಲ, ಒಳ್ಳೆಯ ಗುಣಗಳನ್ನು ಕಲಿಯುವುದಕ್ಕೆ ಆಗುವುದಿಲ್ಲ **'ಸರ್ವತ್ರ ಅಪ್ರತಿಷ್ಠಾ'** ಹಾಗೇ ಅವನು ಹೊರಗೆ ಹೋದ ಅಂದರೆ ಎಲ್ಲಾ ಕಡೆಗೆ ಅವನಿಗೆ ಅಗೌರವವೇ ಅಪ್ರತಿಷ್ಠೆಯೇ. ಆ ಒಂದು ಸೂಚನೆಯನ್ನು ಈ ವ್ರತದ ಮೂಲಕ ಹರಿವಂಶ ಮಾಡುತ್ತಾ ಇದೆ ಅಂತ ನಾವು ಅರ್ಥ ಮಾಡಿಕೊಳ್ಳಬಹುದು. ತನ್ನ ಕಾಲನ್ನು ತಾನೇ ತೊಳೆದುಕೊಳ್ಳುವುದು ಅಂದರೆ ಅದು ಪ್ರತಿಷ್ಠೆಯನ್ನ ಬಿಟ್ಟ ಹಾಗೆ ಆ ರೀತಿ ಯಾರು ಪ್ರತಿಷ್ಠೆಯನ್ನು ಒಂದು ಕಡೆಗೆ ಬಿಡುವುದಕ್ಕೆ ತಯಾರು ಆದರೋ ಅವರಿಗೆ ಲೋಕ ಉದಯ ಅರ್ಥಾತ್ ಸೂರ್ಯೋದಯ ಆದಮೇಲೆ ತನ್ನ ಎಲ್ಲ ನಿತ್ಯದ ಪೂಜಾದಿ ಕಾರ್ಯಗಳನ್ನು ಮಾಡಿಕೊಂಡು ಆನಂತರದಲ್ಲಿ ಊಟ ಮಾಡಬೇಕು, ಸೂರ್ಯಾಸ್ತ ಆದಮೇಲೆ ಊಟ ಮಾಡುವುದೇ ಇಲ್ಲ. ಹೀಗೆ ಒಂದು ವರ್ಷ ಮಾಡಿದರೆ ಅವರ ಮಕ್ಕಳು ದೀರ್ಘ ಆಯುಷ್ಯ ಆರೋಗ್ಯವಂತರಾಗುತ್ತಾರೆ,ಎಲ್ಲ ಸವತಿಯರಿಗಿಂತಲೂ ಉತ್ತಮ ಸ್ಥಾನವನ್ನು ಅವಳು ಪಡೆಯುತ್ತಾಳೆ. ಕೊನೆಗೆ ಬಂಗಾರದ ಸೂರ್ಯನನ್ನು ಮಾಡಿ ದಾನ ಕೊಡಬೇಕು ವರ್ಷ ಆದಮೇಲೆ ಯೋಗ್ಯನಾದಂತಹ ಸೂರ್ಯನ ಕಿರಣಗಳು ಇದ್ದಾಗಲೇನೆ ಆ ಚಂದ್ರ ನಕ್ಷತ್ರಗಳ ಕಿರಣಗಳಿಂದ

ಚನ್ದ್ರನಕ್ಷತ್ರಪೂತಾನಿ ಭೋಜ್ಯಾನಿ ವರವರ್ಣಿನಿ ॥ (79.66 ವಿಷ್ಣುಪರ್ವ)

ಅದನ್ನೇ ತಿನ್ನುವ ರಾತ್ರಿ ಮಾತ್ರ ಊಟ ಮಾಡುವ ವ್ರತ ಅದನ್ನು ಒಂದು ವರ್ಷ ಮಾಡಿದರೆ ಅವಳಿಗೂ ಉತ್ತಮವಾದಂತಹ ಪುತ್ರ ಸೌಭಾಗ್ಯಾದಿಗಳು, ಯಾವುದೇ ವಿಧವಾದಂತಹ ತಾಪಗಳು ಇರುವುದಿಲ್ಲ ಚಂದ್ರನಂತೆ ತಂಪಾದ ಶರೀರವನ್ನ ಪಡೆದುಕೊಂಡು ಸುಖವಾಗಿ ಇರಬಹುದು ಎಂಬುದಾಗಿ ಹೇಳುತ್ತಾರೆ. ಇನ್ನೊಂದು ಸೂರ್ಯ ದರ್ಶನ ಆಗದೇ ಇದ್ದ ದಿನ ಊಟ ಮಾಡುವುದಿಲ್ಲ ಹಗಲು ರಾತ್ರಿ ಅಂತಲ್ಲ ಅವತ್ತು ಸೂರ್ಯ ದರ್ಶನ ಆಗಿರಬೇಕು, ಮೇಘ ಬಹಳ ಬಂತು ಸೂರ್ಯ ಕಾಣಲಿಲ್ಲ ಅವತ್ತು ಉಪವಾಸ ಹೀಗೆ.

ಅದೃಷ್ಟಾ ಯಾ ತು ನಾಶ್ನಾತಿ ಸೂರ್ಯಂ ನಾರೀ ಪತಿವ್ರತಾ । (79.71 ವಿಷ್ಣುಪರ್ವ)

ಅಂತಹ ಒಂದು ವ್ರತವನ್ನು ಮಾಡಿ ವಿಶೇಷವಾಗಿ ಸುವರ್ಣ ದಾನಾದಿಗಳನ್ನು ಮಾಡಿ ವ್ರತದ ಸಮಾಪ್ತಿಯನ್ನು ಮಾಡಬೇಕು ಎಂಬುದಾಗಿ ಈ ರೀತಿಯ ಅನೇಕ ವ್ರತಗಳನ್ನು ತಿಳಿಸುತ್ತಾರೆ. ಇನ್ನು ಕೃಷ್ಣಪಕ್ಷದ ಅಷ್ಟಮೀ ತಿಥಿ ಆ ರೀತಿಯ ಕೃಷ್ಣಪಕ್ಷದ ಅಷ್ಟಮೀ ತಿಥಿಯಂದು ಶುಭ್ರವಾದ ವಸ್ತ್ರವನ್ನು ಧಾರಣ ಮಾಡಿ ಗುರುಗಳ, ದೇವತೆಗಳ ಪೂಜೆಯನ್ನು ಮಾಡಿ ಆ ಗೋವಿನ ಬಾಲದ ಕೇಶಗಳಿಂದ ಮಾಡಿದಂತಹ ಚಾಮರ ಮತ್ತು ಧ್ವಜ ಇವುಗಳನ್ನೆಲ್ಲ ದಾನ ಮಾಡಬೇಕು ಶ್ರೇಷ್ಠವಾದ ಕೇಶ ಸೌಭಾಗ್ಯವನ್ನು ಪಡೆಯುತ್ತಾರೆ. ಗೋಮಯದಿಂದ, ಗೋಮೂತ್ರದಿಂದ ಶಿರ

ಸ್ನಾನವನ್ನ ಪ್ರತಿ ಕೃಷ್ಣಪಕ್ಷ ಚತುರ್ದಶೀಯ ದಿನ ಒಂದು ವರ್ಷದವರೆಗೆ ಮಾಡಿದರೆ ಉತ್ತಮವಾದಂತಹ ಶಿರಸ್ಸಿನ ಸೌಭಾಗ್ಯ, ತಲೆ ರೋಗಗಳು ಮೊದಲಾದವುಗಳು ಬರುವುದಿಲ್ಲ. ಲಲಾಟ ಸೌಭಾಗ್ಯ ಪ್ರತಿ ಪ್ರತಿಪದಾ ಶುಕ್ಲ ಕೃಷ್ಣ ಅಂತ ಅಲ್ಲ ಪ್ರತಿಯೊಂದು ಪ್ರತಿಪದ ಶುಕ್ಲವೇ ಇರಲಿ ಕೃಷ್ಣಪಕ್ಷದ ಪ್ರತಿಪದಾ ದಿನ ಏಕಭುಕ್ತವನ್ನು ಮಾಡಬೇಕು ಕೇವಲ ಹಾಲು, ಅನ್ನ ಮಾತ್ರ ತಿನ್ನಬೇಕು. ಹೀಗೆ ಒಂದು ವರ್ಷ ಪ್ರತಿಪದಾ ತಿಥಿ ಎಂದು ಹಾಲು ಅನ್ನವನ್ನು ಮಾತ್ರ ಸ್ವೀಕಾರ ಮಾಡಿದರೆ ಉತ್ತಮವಾದಂತಹ ಲಲಾಟ ಆ ಸ್ತ್ರೀಗೆ ಸಿಗುತ್ತೆ.

ಆಮೇಲೆ ಉತ್ತಮವಾದಂತಹ ಭ್ರೂ ಹುಬ್ಬಿನ ಸೌಭಾಗ್ಯ ಸಿಗಬೇಕು ಅಂತಂದರೆ ಒಂದು ವರ್ಷದವರೆಗೆ ಆ ವ್ರತವನ್ನು ಮಾಡಬೇಕು. ಆ ವ್ರತವನ್ನು ಶುರುವು ಮಾಡುವ ಮೊದಲು ಒಂದು ದಿನ ಪೂರ್ಣ ಉಪವಾಸವನ್ನು ಮಾಡಿ ಶಾಕಭಕ್ಷ ಪಲ್ಯ, ತರಕಾರಿ ಹಾಗೂ ಅನ್ನ ಇವುಗಳನ್ನು ಮಾತ್ರ ಸ್ವೀಕಾರ ಮಾಡಬೇಕು ಇನ್ನೇನು ಬೇರೆ ತಿನ್ನಬಾರದು ಹೀಗೆ ಒಂದು ವರ್ಷ ಮಾಡಿದರೆ ಅವಳಿಗೆ ಉತ್ತಮವಾದಂತಹ ಭ್ರೂ ಸೌಭಾಗ್ಯ. ಕಿವಿಗಳು ಚೆನ್ನಾಗಿ ಇರಬೇಕು ಅಂತಾದರೆ ಶ್ರವಣಾ ನಕ್ಷತ್ರದ ದಿನ ವಿಶೇಷವಾಗಿ ಯವ ಧಾನ್ಯದಿಂದ ಮಾಡಿದಂತಹ ಪದಾರ್ಥವನ್ನು ಮಾತ್ರ ಸ್ವೀಕಾರ ಮಾಡಬೇಕು ಹೀಗೆ ಒಂದು ವರ್ಷ ಶ್ರವಣಾ ನಕ್ಷತ್ರದ ದಿನ ಆ ಯವ ಧಾನ್ಯದಿಂದ ಮಾಡಿದ ಆಹಾರವನ್ನು ಮಾತ್ರ ಸ್ವೀಕಾರ ಮಾಡಿ ಆಮೇಲೆ ಬಂಗಾರದ ಎರಡು ಕಿವಿಗಳನ್ನು ಮಾಡಿ ತುಪ್ಪದಲ್ಲಿ ಇಟ್ಟು ಅದನ್ನು ದಾನ ಮಾಡಿದರೆ ಉತ್ತಮವಾದ ಕಿವಿಯ ಸೌಭಾಗ್ಯ. ಮೂಗಿನ ಸೌಭಾಗ್ಯ ಸಿಗಬೇಕು ಅಂತಾದರೆ ಎಳ್ಳು ಒಂದು ಕಡೆಗೆ ಇಟ್ಟು ಅದಕ್ಕೆ ನಿತ್ಯದಲ್ಲಿ ನೀರು ಹಾಕುತ್ತಾ ಇರಬೇಕು ಆ ವ್ರತ ಶುರುವು ಮಾಡುವ ಮೊದಲು ಒಂದು ದಿನ ಪೂರ್ಣ ಉಪವಾಸ ಆಮೇಲೆ ವ್ರತ ಶುರುವು ಮಾಡಬೇಕು. ವ್ರತ ಪ್ರಾರಂಭ ಆದಮೇಲೆ ಅದಕ್ಕೆ ನೀರು ಪ್ರೋಕ್ಷಣೆ ಮಾಡುತ್ತ ಮಾಡುತ್ತ ಅದಕ್ಕೆ ಮೊಳಕೆಯಾಗಿ ಹೂವು ಫಲ ಬರುವವರೆಗೆ ಹಾಗೆ ವ್ರತ ಮುಂದುವರಿಸಬೇಕು. ಎಲ್ಲ ಅದಕ್ಕೆ ಅಂಕುರ ಬಂದಮೇಲೆ ಅದನ್ನು ತುಪ್ಪದಲ್ಲಿ ಹಾಕಿ ಹೂವುಗಳಿಂದ ಸಹಿತವಾಗಿ ಅದನ್ನು ದಾನ ಮಾಡಿದರೆ ಉತ್ತಮವಾದಂತಹ ನಾಸಾ ಸೌಭಾಗ್ಯ ಸಿಗುತ್ತೆ.

ಚಕ್ಷುದಿಂದ್ರಿಯ ಕಣ್ಣು ಕಣ್ಣು ಚೆನ್ನಾಗಿ ಇರಬೇಕು ಅಂತಾದರೆ ಒಂದು ದಿನ ಉಪವಾಸವನ್ನು ಮಾಡಿ ಆ ವ್ರತವನ್ನು ಪ್ರಾರಂಭ ಮಾಡಬೇಕು ಹಾಲು ಮತ್ತು ತುಪ್ಪ ಇವುಗಳಿಂದ ಮಿಶ್ರವಾದ ಅನ್ನವನ್ನು ಮಾತ್ರ ಸ್ವೀಕಾರ ಮಾಡಬೇಕು ಒಂದು ವರ್ಷ. ಆಮೇಲೆ ಪದ್ಮ ಪತ್ರಗಳನ್ನ ಹಾಲಿನೊಳಗೆ ತೇಲಿ ಬಿಟ್ಟು ಆ ಪದ್ಮ ಪತ್ರಗಳನ್ನ ಬ್ರಾಹ್ಮಣರಿಗೆ ದಾನವನ್ನು ಮಾಡಬೇಕು. ಆಮೇಲೆ ಔಷ್ಮ ಸೌಭಾಗ್ಯ ಬೇಕು ಎಂಬ ಅಪೇಕ್ಷೆ ಇದ್ದವರು ಒಂದು ವರ್ಷವರೆಗೆ ಬರೀ ಮಣ್ಣಿನ ಪಾತ್ರೆಯಲ್ಲಿ ನೀರನ್ನು ಪಾನ ಮಾಡಬೇಕು ಪ್ರತಿ ನವಮೀ ತಿಥಿ ಶುಕ್ಲ ಅಥವಾ ಕೃಷ್ಣ ಪಕ್ಷದ ನವಮೀ ತಿಥಿ ಎರಡೂ ನವಮೀ ತಿಥಿ ಅಯಾಚಿತ ವೃತ್ತಿ ಅಂತ ತನ್ನಷ್ಟಕ್ಕೆ ತಾನೇ ಯಾರೋ ತಿಳಿದು ಕೊಟ್ಟದ್ದನ್ನು ಮಾತ್ರ ಸ್ವೀಕಾರ ಮಾಡಬೇಕು, ಬೇಡಿ ತೆಗೆದುಕೊಳ್ಳುವುದಲ್ಲ, ಅಯಾಚಿತ ವೃತ್ತಿಯಿಂದ ಪ್ರತೀ ನವಮೀ ತಿಥಿ ತಾನು ಆಹಾರವನ್ನು ಸ್ವೀಕಾರ ಮಾಡಿ ಒಂದು ವರ್ಷ ಮುಗಿದಮೇಲೆ ಹವಳವನ್ನು ದಾನ ಮಾಡಬೇಕು ಅದರಿಂದ ಉತ್ತಮವಾದ ಔಷ್ಮ ಸೌಭಾಗ್ಯ. ಉತ್ತಮವಾದ ದಂತ ಹಲ್ಲುಗಳು ಚೆನ್ನಾಗಿ ಇರಬೇಕು ಅಂತ ಅಪೇಕ್ಷೆ ಇದ್ದವರು ಪ್ರತಿ ಶುಕ್ಲಪಕ್ಷದ ಅಷ್ಟಮೀ ತಿಥಿ ಎರಡು ಊಟವನ್ನು ಮಾಡಬಾರದು, ಪೂರ್ಣ ಉಪವಾಸವನ್ನೇ ಮಾಡಬೇಕು ಶುಕ್ಲಪಕ್ಷದ ಅಷ್ಟಮೀ ತಿಥಿ ಒಂದು ವರ್ಷದವರೆಗೆ. ಆಮೇಲೆ ಹಾಲಿನೊಳಗೆ ಬೆಳ್ಳಿಯ ದಂತಗಳನ್ನು ಹಾಕಿ ಅದನ್ನು ವರ್ಷದ ನಂತರದಲ್ಲಿ ಬ್ರಾಹ್ಮಣರಿಗೆ ದಾನ ಮಾಡಿದರೆ ದಂತ ಸೌಭಾಗ್ಯ ಸಿಗುತ್ತೆ. ಇಲ್ಲಿ ಎಲ್ಲ ಕಡೆಗೂ ಒಂದು ಮಾತನ್ನು ಸಾಮಾನ್ಯವಾಗಿ ಹೇಳುತ್ತಾರೆ ಪುತ್ರ ಸೌಭಾಗ್ಯ ಅನ್ನುವುದು ಎಲ್ಲ ಕಡೆಗೆ ಒಂದು ಸಾಧಾರಣವಾದ ಫಲವನ್ನು ಹೇಳುತ್ತಾ ಜೊತೆಗೆ ಈ ಬೇರೆ ಬೇರೆ ಫಲಗಳನ್ನು ಹೇಳುತ್ತಾರೆ.

ಉತ್ತಮವಾದ ಮುಖ ಇರಬೇಕು, ಮುಖದ ಸೌಭಾಗ್ಯ ಚೆನ್ನಾಗಿ ಇರಬೇಕು ಅಂತ ಅಪೇಕ್ಷೆ ಇದ್ದರೆ ಚಂದ್ರೋದಯ ಆದಮೇಲೆ ಪೌರ್ಣಿಮಾ ತಿಥಿಯಲ್ಲಿ ಯವ ಧಾನ್ಯದಿಂದ ಮಾಡಿದ ಹಾಲು ಹಾಗೂ ಯವ ಇವುಗಳಿಂದ ಮಿಶ್ರಿತವಾದಂತಹ ಅನ್ನವನ್ನ ಬ್ರಾಹ್ಮಣರಿಗೆ ದಾನವನ್ನು ಮಾಡಬೇಕು. ಆಮೇಲೆ ಒಂದು ವರ್ಷ ಪೂರ್ಣ ಆದಮೇಲೆ ಬಂಗಾರದ ಚಂದ್ರನನ್ನ ದಾನ ಮಾಡಬೇಕು ಮತ್ತು ಅರಳಿದ ಕಮಲಗಳನ್ನು ಬ್ರಾಹ್ಮಣರಿಗೆ ದಾನವನ್ನು ಮಾಡಬೇಕು ಎಂಬುದಾಗಿ ತಿಳಿಸಿಕೊಡುತ್ತಾರೆ. ಪ್ರತಿ ದಶಮೀ ತಿಥಿ ಅಯಾಚಿತ ವೃತ್ತಿಯಿಂದ ಭೋಜನವನ್ನ ಮಾಡಬೇಕು ವರ್ಷ ಮುಗಿದ ಮೇಲೆ ಬಿಲ್ವ ಫಲದ ದಾನವನ್ನು ಮಾಡಿದರೆ ಉತ್ತಮವಾದ ಪುತ್ರ ಸೌಭಾಗ್ಯ ಹಾಗೂ ಎದೆ ಸೌಭಾಗ್ಯಗಳು ಸಿಗುತ್ತೆ. ಕೃಷವಾದ ಉದರ ಇರಬೇಕು ಅಂತಾದರೆ ಕೇವಲ ನೀರು, ಅನ್ನ ಇಷ್ಟನ್ನೇ ಸ್ವೀಕಾರ ಮಾಡಿ ಪ್ರತಿ ಪಂಚಮೀ ತಿಥಿ ಉಪವಾಸವನ್ನು ಮಾಡಿ ಒಂದು ವರ್ಷ ಆದಮೇಲೆ ಜಾಜಿ ಗಿಡದ ಲಸೆಯನ್ನ ದಕ್ಷಿಣಾ ಸಹಿತವಾಗಿ ಶ್ರೇಷ್ಠವಾದ ಬ್ರಾಹ್ಮಣನಿಗೆ ದಾನವನ್ನು ಮಾಡಬೇಕು. ಉತ್ತಮವಾದ ಹಸ್ತ ಸೌಭಾಗ್ಯ ಬೇಕು ಅಂದರೆ ಪ್ರತಿ ದ್ವಾದಶೀ ಕೇವಲ ವಿಹಿತವಾದ ನಿಷಿದ್ಧವಲ್ಲದ ತರಕಾರಿಗಳನ್ನ ಮಾತ್ರ ಸ್ವೀಕಾರ ಮಾಡಿ ದ್ವಾದಶೀ ತಿಥಿಯಂದು ಒಂದು ರೀತಿಯ ಉಪವಾಸ, ಪೂರ್ಣ ಉಪವಾಸ ಅಲ್ಲ ಆ ರೀತಿಯ ಉಪವಾಸವನ್ನು ಒಂದು ವರ್ಷ ಮಾಡಿ ಉತ್ತಮವಾದ ಬಂಗಾರದ ಪದ್ಮಗಳನ್ನು ದಾನ ಮಾಡಬೇಕು. ಆಮೇಲೆ ಕಟಿ ಸೌಭಾಗ್ಯ ಬೇಕು ಅಂತ ಅಪೇಕ್ಷೆ ಇದ್ದವರು ತ್ರಯೋದಶೀ ದಿನದಂದು ಏಕಭಕ್ತವನ್ನ ಮಾಡಬೇಕು, ಅದನ್ನು ಅಯಾಚಿತ ತನ್ನಷ್ಟಕ್ಕೆ ತಾನೇ ತಿಳಿದುಕೊಟ್ಟದ್ದನ್ನ ಸ್ವೀಕಾರ ಮಾಡಬೇಕು, ವರ್ಷ ಪೂರ್ಣ ಆದಮೇಲೆ ಲವಣ ದಾನವನ್ನ, ಕಾಂಚನ ದಾನವನ್ನ ಮಾಡಬೇಕು. ಉತ್ತಮವಾದ ವಾಕ್ ಒಳ್ಳೆಯ ವಾಣಿ ಶ್ರೇಷ್ಠವಾದಂತಹ ಸಿಹಿಯಾದ ಮಾತುಗಳನ್ನು ಆಡಬೇಕು, ಉತ್ತಮವಾದ ಸಂಗೀತವನ್ನು ಹೇಳುವ ಕಂಠ ಒಳ್ಳೆಯ ವಾಕ್ ಸೌಭಾಗ್ಯ ಬೇಕು ಅಂತಾದರೆ ಒಂದು ವರ್ಷ ಉತ್ತಮ ಪಕ್ಷ ಆಗದೇ ಇದ್ದರೆ ಒಂದು ತಿಂಗಳಾದರೂ ಅಲವಣ ವ್ರತ ಉಪ್ಪಿಲ್ಲದೆ ಊಟವನ್ನು ಮಾಡಬೇಕು. ಆಮೇಲೆ ಉತ್ತಮವಾದಂತಹ ಬ್ರಾಹ್ಮಣನನ್ನ ನೋಡಿ ಅವನಿಗೆ ಲವಣ ದಾನವನ್ನು ಮಾಡಬೇಕು ಅದರಿಂದ ಉತ್ತಮವಾದಂತಹ ಮಾತು. ಆ ಉಪ್ಪು ತಿನ್ನುವುದರಿಂದ ಸಿಟ್ಟು ಜಾಸ್ತಿ ಕೆಟ್ಟ ಮಾತುಗಳು ಬರುತ್ತೆ, ಒಂದು ವರ್ಷ ಉಪ್ಪು ತಿನ್ನದಂತೆ ಅಥವಾ ಒಂದು ತಿಂಗಳಾದರೂ ಉಪ್ಪಿಲ್ಲದ ವ್ರತವನ್ನು ಮಾಡಿ ಆ ಒಂದು ಬಿಪಿ ಚೆನ್ನಾಗಿ ಕಂಟ್ರೋಲಿಗೆ ತಂದುಕೊಂಡು ಸರಿಯಾಗಿ ಮಾತನಾಡಬೇಕು ಆಮೇಲೆ ಮುಂದೆ ಅದೇ ರೀತಿ ಮಾತನ್ನು ಅನುಸರಿಸಬೇಕು.

ಗುಲ್ಫ, ಪಾದದ ಗಂಟುಗಳು ಅವುಗಳು ಮುಚ್ಚಿರಬೇಕು ಅನ್ನುವ ಅಪೇಕ್ಷೆ ಇದ್ದವರು ಪ್ರತಿ ಷಷ್ಟೀ ತಿಥಿಯಂದು ಕೇವಲ ನೀರು, ಅನ್ನ ಮಾತ್ರ ಸ್ವೀಕಾರ ಮಾಡಬೇಕು, ಎಂದಿಗೂ ಅಗ್ನಿ, ಬ್ರಾಹ್ಮಣ ಇವರನ್ನ ಪಾದದಿಂದ ಸ್ಪರ್ಶ ಮಾಡಬಾರದು. ಏನೋ ತಪ್ಪಿ ಗೊತ್ತಾಗದೇ ಸ್ಪರ್ಶ ಆದರೆ ಭಕ್ತಿಯಿಂದ ನಮಸ್ಕಾರ ಮಾಡಿ ಕ್ಷಮಾಯಾಚನೆಯನ್ನು ಮಾಡಬೇಕು ಈ ರೀತಿ ಆ ಪಾದದ ಉತ್ತಮವಾದ ಸೌಭಾಗ್ಯವನ್ನು ಪಡೆಯುವುದಕ್ಕೆ ಸಾಧ್ಯ ಇದೆ. ಆಮೇಲೆ ಎರಡು ಬೆಳ್ಳಿಯ ಕೂರ್ಮಗಳನ್ನ ಹಾಗೂ ಅಧೋಮುಖವಾದ ಎರಡು ಪದ್ಮಗಳನ್ನ ದಾನವನ್ನ ಮಾಡಬೇಕು. ಆರೋಗ್ಯದಿಂದ ಇರಬೇಕು, ಚೆನ್ನಾಗಿ ಇರಬೇಕು ಅಂತ ಅಪೇಕ್ಷೆ ಇದ್ದರೆ ಕಾರ್ತಿಕ ಮಾಸದ ಪೌರ್ಣಿಮೇ, ಮಾಘ ಮಾಸದ ಪೌರ್ಣಿಮೇ, ಅಶ್ವಿನೀ ಮಾಸದ ಪೌರ್ಣಿಮೇಯ ತಿಥಿಯಂದು ತಂದೆ-ತಾಯಿ, ಅತಿಥಿಗಳು, ದೇವತೆಗಳು ಇವರೆಲ್ಲರಿಗೆ ವಿಶೇಷವಾಗಿ ನಮಸ್ಕಾರವನ್ನು ಮಾಡಿ, ಅವರ ಪೂಜೆಯನ್ನು ಮಾಡಿ, ಅವರ ಅನುಗ್ರಹವನ್ನು ಪಡೆದು ದಾನವನ್ನ ಮಾಡಬೇಕು ಗೃಥ ದಾನವನ್ನ ಮಾಡಬೇಕು, ಲವಣ ದಾನವನ್ನ ಮಾಡಬೇಕು ಇದು ಆ ತಿಥಿಯಂದು ವಿಶೇಷವಾಗಿ ಮಾಡಬೇಕಾದದ್ದು. ನಿತ್ಯದಲ್ಲಿಯೂ ಮನೆಯ ಸಮ್ಮಾರ್ಜನ ಕಸ ಗುಡಿಸಿ ಥಳಿ ರಂಗವಲ್ಲಿಯನ್ನು ಹಾಕಿ ಮನೆಗೆ ಅಲಂಕಾರ ಮಾಡಿದರೆ ಅದರಿಂದ ಎಲ್ಲ ವ್ರತ ಮಾಡಿದ ಪುಣ್ಯವೂ ಬರುತ್ತದೆ ಅಂತ ಹೇಳುತ್ತಾರೆ ಎಷ್ಟು ಮಹತ್ವ ಇದೆ ನೋಡಿ. ಇವತ್ತಿನ ಕಾಲದ ಜನರಿಗೆ ಅನೇಕರಿಗೆ ಇದು ಗೊತ್ತಿಲ್ಲ, ಹಿರಿಯ ಮುತ್ತೈದೆಯರಿಗೆಲ್ಲ ಗೊತ್ತು



ತಮ್ಮ ತಮ್ಮ ಮನೆಯಲ್ಲಿ ಕಸ ಗುಡಿಸಿ ಥಳಿ ಹಾಕಿ ಸಾರಿಸಿ ರಂಗವಲ್ಲಿ ಹಾಕಿ ಎಲ್ಲವನ್ನ ಶುದ್ಧವಾಗಿಟ್ಟು ಅದು ದೇವರ ಮನೆ, ಅದು ದೇವರದೇ ಅಧಿಷ್ಠಾನ ಅಂತನ್ನುವ ಅನುಸಂಧಾನದಿಂದ ಮಾಡಿದರೆ ಅದೇ ದೊಡ್ಡ ವ್ರತ ಅಂತ.

ಸಮ್ಮಾರ್ಜನಂ ಗೃಹೇ ಚೈವ ಕರೋತು ಪತಿದೇವತಾ ॥ (80.50 ವಿಷ್ಣುಪರ್ವ)

ಉಪಲೇಪನಂ ಚ ಧರ್ಮಜ್ಞೇ ಬಲಿಕರ್ಮ ಚ ಮಾನಿನಿ ॥ (80.51 ವಿಷ್ಣುಪರ್ವ)

ಗೋಮಯದಿಂದ ಸಾರಿಸಬೇಕು. ಇನ್ನೇನು ಮನೆಯಲ್ಲಿ ತನ್ನ ಪತಿ ಮಾಡುವಂತಹ ದೇವತಾ ಕಾರ್ಯಗಳು ಇರುತ್ತೆ. ಅದಕ್ಕೆ ಬೇಕಾದ ಬಲಿ ಎಂದರೆ ನೈವೇದ್ಯ, ನೈವೇದ್ಯಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಟ್ಟರೆ ಸಾಕು ಮತ್ತು ಎಲ್ಲಾ ಕನ್ಸೀಷನ್ ಕೊಡುತ್ತ ಇದ್ದಾರೆ ಕೊನೆಗೆ ಉಳಿದ ಎಲ್ಲಾ ಉಪವಾಸಾದಿಗಳನ್ನು ಮಾಡದೇ ಇದ್ದರೆ ಅಡ್ಡಿ ಇಲ್ಲ ಚೆನ್ನಾಗಿ ಮನೆಯನ್ನ ಶುದ್ಧವಾಗಿ ಇಟ್ಟು ಓರಣವಾಗಿ ಇಟ್ಟುಕೊಂಡು ಸಾರಿಸಿದರೆ ಸಾಕು ಅಂತ. ಹಾಗಾದರೆ ಕೆಟ್ಟ ಮಾತುಗಳನ್ನು ಆಡಿದರೆ ನಡೆಯುತ್ತೆ ಅಲ್ಲ ಅಂತ ಕೇಳಿದರು ಅದಕ್ಕೆ ಮಾತ್ರ ಕನ್ಸೀಷನ್ ಇಲ್ಲ ಅನ್ನುತ್ತಾರೆ **'ವಾಗ್ದುಷ್ಟಾ ಚೈವ ಮಾ ಶುಭ್ರೇ'**[1] ಆ ನಿಯಮ ಮಾತ್ರ ಇರಲೇಬೇಕು ಸರ್ವಥಃ ಕೆಟ್ಟ ಮಾತುಗಳನ್ನು ಆಡಬಾರದು. ತಾನು ಏನೇನು ಮಾಡಬೇಕು ತನ್ನ ಮನೆತನಕ್ಕೆ ಸಂಬಂಧ ಪಟ್ಟಂತಹ ದೇವತಾ ಕಾರ್ಯಗಳು, ಪಿತೃ ಕಾರ್ಯಗಳು ಇವುಗಳ ಬಗ್ಗೆ ಚೆನ್ನಾಗಿ ತಿಳಿದುಕೊಂಡಿರಬೇಕು **'ಭವತ್ಪಾತ್ಮಾರ್ಥಪಣ್ಡಿತಾ'**[2] ಮತ್ತು ಯಾವುದಾದರೂ ಒಂದು ಶಾಕವನ್ನು ಮಾತ್ರ ಸ್ವೀಕಾರ ಮಾಡಬೇಕು. ಒಬ್ಬೊಬ್ಬರು ವ್ಯಾಖ್ಯಾನಕಾರರು ಒಂದೊಂದು ರೀತಿಯಾಗಿ ಹೇಳುತ್ತಾರೆ. ಒಂದು ಶಾಕವನ್ನ ಪರಿತ್ಯಾಗ ಮಾಡಬೇಕು ಯಾವುದಾದರೂ ಒಂದನ್ನು ಹೇಗೆ ಗಯಾದಲ್ಲಿ ಒಬ್ಬೊಬ್ಬರು ಒಂದೊಂದನ್ನು ಬಿಟ್ಟು ಬರುತ್ತಾರಲ್ಲ ಹಾಗೆ ಈ ವ್ರತದ ನಿಮಿತ್ತ ಒಂದು ಶಾಕವನ್ನ ಬಿಡಬೇಕು ಅಂತ ಕೆಲವರು ಅಥವಾ ಒಂದೇ ಶಾಕವನ್ನ ಸ್ವೀಕಾರ ಮಾಡಬೇಕು ಅಂತ ಕೆಲವರು. ಕೆಟ್ಟ ಮಾತಾಡಬಾರದು, ಸುಳ್ಳು ಮಾತನಾಡಬಾರದು, ಒಂದು ಶಾಕವನ್ನು ಸ್ವೀಕಾರ ಮಾಡಬೇಕು, ಮನೆಯನ್ನು ಶುದ್ಧವಾಗಿ ಇಡಬೇಕು ಹೀಗಿದ್ದರೆ ಸಂಪೂರ್ಣವಾದ ಶರೀರವೇ ಆರೋಗ್ಯವಂತವಾಗಿ ಸುಖವಾಗಿ ಇರುತ್ತದೆ. ಇನ್ನು ಬಂಧು ಬಾಂಧವರೆಲ್ಲ ಪ್ರೀತಿ ಮಾಡಬೇಕು ಅಂತ ಅಪೇಕ್ಷೆ ಇದ್ದರೆ ಪ್ರತಿ ಸಪ್ತಮೀ ತಿಥಿಯಂದು ಉಪವಾಸವನ್ನು ಮಾಡಿ ಬಂಗಾರದ ಗಿಡವನ್ನ ದಾನ ಮಾಡಬೇಕು. ಗಿಡದಲ್ಲಿ ಅನೇಕ ಎಲೆಗಳು, ಅನೇಕ ಹೂವು ಹಣ್ಣುಗಳೆಲ್ಲ ಇರುತ್ತೆ ಹೀಗಾಗಿ ಎಲ್ಲ ಬಂಧು ಬಾಂಧವರಿಂದ ಕೂಡಿಕೊಂಡು ಪ್ರೀತಿಯಿಂದ ಇರುವುದಕ್ಕೋಸ್ಕರ ಆ ರೀತಿ ದಾನವನ್ನ ಮಾಡಬೇಕು ಅಂತ ಹೇಳುತ್ತಾರೆ. ಆಮೇಲೆ ಕರಂಜ ವೃಕ್ಷದ ಹೊಂಗೆ ಮರದ ಕೆಳಗೆ ದೀಪವನ್ನ ಹಚ್ಚಿ ದೀಪ ದಾನವನ್ನ ಕೂಡ ಮಾಡಬೇಕು ಆಮೇಲೆ ಬಂಗಾರದ ದೀಪವನ್ನ ಮತ್ತೆ ಯೋಗ್ಯನಾದ ಬ್ರಾಹ್ಮಣನಿಗೆ ವರ್ಷ ಆದಮೇಲೆ ದಾನವನ್ನ ಮಾಡಬೇಕು.

ಆಮೇಲೆ ಕೊನೆಗೆ ಉಮಾ ದೇವಿ ಹೇಳುತ್ತಾಳೆ ಬಹಳ ಮಹತ್ವದ ಮಾತು, ಇದನ್ನು ಚೆನ್ನಾಗಿ ತಿಳಿಯಬೇಕು. ಈ ಎಲ್ಲ ವ್ರತಗಳನ್ನು ಹೇಳುತ್ತಾ ಇದ್ದೇನಲ್ಲ ಅರುಂಧತಿ, ಈ ಎಲ್ಲಾ ವ್ರತಗಳನ್ನ ಮಾಡಬೇಕು ಬೇರೆ ಬೇರೆ ಅಪೇಕ್ಷೆಗಳಿದ್ದಂತಹ ಸ್ತ್ರೀಯರು ಆದರೆ ಒಂದು ಮಾತು ಹೇಳುತ್ತೇನೆ. ಕೆಲವು ನಿಯಮಗಳನ್ನ ತಪ್ಪದೇ ಪರಿಪಾಲನೆ ಮಾಡಿದರೆ ಈ ಎಲ್ಲ ಯಾವ ವ್ರತಗಳ ಅವಶ್ಯಕತೆಯೂ ಇಲ್ಲ ಅವರಿಗೆ ಎಲ್ಲ ಸೌಭಾಗ್ಯವೂ ಸಿಗುತ್ತೆ. **'ಯಾ ಶೇಷಭೋಜಿನೀ ನಿತ್ಯಂ'** ನಿತ್ಯದಲ್ಲಿ ತನ್ನ ಅತಿಥಿ ಅಭ್ಯಾಗತರಿಗೆ, ತನ್ನ ಪತಿಗೆ, ಮಕ್ಕಳಿಗೆಲ್ಲ ಊಟಕ್ಕೆ ಹಾಕಿ ತಾನು ಕೊನೆಯಲ್ಲಿ ಊಟ ಮಾಡುತ್ತಾಳೋ ಅದೇ ಒಂದು ದೊಡ್ಡ ವ್ರತ.

---

1. 80.51 ವಿಷ್ಣುಪರ್ವ, 2. 80.51 ವಿಷ್ಣುಪರ್ವ

ಯಾ ಶೇಷಭೋಜಿನೀ ನಿತ್ಯಂ ನೈವ ಚ ಸ್ಯಾದರುನ್ತುದಾ । (81.5 ವಿಷ್ಣುಪರ್ವ)

ಇನ್ನೊಬ್ಬರ ಮನಸ್ಸಿಗೆ ನೋವು ಆಗುವ ಮಾತುಗಳನ್ನು ಆಡುವುದಿಲ್ಲ, ನೋವು ಆಗುವ ಕಾರ್ಯಗಳನ್ನು ಯಾವುದನ್ನೂ ಮಾಡುವುದಿಲ್ಲ, ಒಪ್ಪತ್ತು ಊಟ, ಶುದ್ಧ ಪಾತಿವ್ರತ್ಯ, ಮಡಿ ಆಚಾರಗಳನ್ನು ಚೆನ್ನಾಗಿ ಪರಿಪಾಲನೆ ಮಾಡುತ್ತಾಳೆ, **'ಶೌಚಾನ್ವಿತಾ ಚ ಸತತಂ'** [1] ಕೆಟ್ಟ ಮಾತುಗಳನ್ನು ಆಡುವುದಿಲ್ಲ, ಅತ್ತೆ ಮಾವಂದಿರ ಸೇವೆಯನ್ನು ತಪ್ಪದೇ ಶ್ರದ್ಧೆಯಿಂದ ಮಾಡುತ್ತಾಳೆ.

ಶ್ವಶ್ರೂಶ್ವಶುರಯೋರ್ನಿತ್ಯಂ ಶುಶ್ರೂಷಾಭಿರತಾ ಸತೀ ॥ (81.6 ವಿಷ್ಣುಪರ್ವ)

ಇಷ್ಟು ಮಾಡಿದರೆ ಅತ್ತೆ ಮಾವಂದಿರ ಸೇವೆ, ಗಂಡನ ಸೇವೆ ಅವರೆಲ್ಲರಿಗೆ ಊಟಕ್ಕೆ ಹಾಕಿ ಕೊನೆಗೆ ಊಟ, ಕೆಟ್ಟ ಮಾತುಗಳನ್ನು ಆಡುವುದಿಲ್ಲ, ಸತ್ಯವಾದ ಮಾತುಗಳನ್ನೇ ಆಡುವುದು ಈ ರೀತಿ ಶುದ್ಧ ಆಚಾರ ವಿಚಾರಗಳನ್ನು ಇಟ್ಟುಕೊಂಡಿದ್ದರೆ ಬೇರೆ ಯಾವ ವ್ರತಗಳು ಬೇಕಾಗಿಲ್ಲ ಅನ್ನುತ್ತಾರೆ.

ಕಿಂ ತಸ್ಯಾ ವ್ರತಕೈಃ ಕಾರ್ಯಂ ಕಿಂ ವಾ ಸ್ಯಾದುಪವಾಸಕೈಃ ॥ (81.7 ವಿಷ್ಣುಪರ್ವ)

ಯಾವುದು ಬೇಕಾಗಿಲ್ಲ ಇದು ಪ್ರಧಾನ. ಇದನ್ನು ಮಾಡಿ ಉಳಿದದ್ದನ್ನು ಮಾಡಿದರೆ **'ಅಧಿಕಸ್ಯ ಅಧಿಕಂ'** ಇನ್ನು ವಿಶೇಷ ಫಲ ಸಿಕ್ಕೀತೆ ಹೊರತು ಇದನ್ನು ಮಾಡದೆ ಉಳಿದದ್ದನ್ನು ಮಾಡಿದರೂ ಪ್ರಯೋಜನ ಇಲ್ಲ, ಇದನ್ನು ಮಾಡಿದರೆ ಉಳಿದಿದ್ದನ್ನು ಬಿಟ್ಟರೂ ಅಡ್ಡಿ ಇಲ್ಲ. ಐತರೇಯ ಉಪನಿಷತ್ತು ಹೇಳುತ್ತದಲ್ಲ ಹಾಗೆ ವಿಷ್ಣು ಶಬ್ದಾರ್ಥವನ್ನು ತಿಳಿಯದೇ ಸಮಗ್ರ ವೇದಗಳ ಅಧ್ಯಯನ ಮಾಡಿ ಏನು ಪ್ರಯೋಜನ ವ್ಯರ್ಥ ಅಂತ ವಿಷ್ಣು ಶಬ್ದಾರ್ಥ ತಿಳಿದರೆ ಯಾಕೆ ವೇದಗಳ ಅಧ್ಯಯನ ಮಾಡಬೇಕು ಅದೆಲ್ಲ ಇದರೊಳಗೆ ಬಂತು ಅಂತ. ಹಾಗೆ ಈ ಪತಿಯ ಸೇವೆ, ಅತ್ತೆ ಮಾವಂದಿರ ಸೇವೆಯನ್ನು ಭಕ್ತಿ ಶ್ರದ್ಧೆಗಳಿಂದ ಮಾಡಿದರೇ ಇನ್ನುಳಿದ ವ್ರತಗಳನ್ನ ಮಾಡದಿದ್ದರೂ ಯಾವ ಸಮಸ್ಯೆ ಇಲ್ಲ.

ವಿಧವಾ ಸ್ತ್ರೀಯರೂ ಕೂಡ ವ್ರತವನ್ನು ಮಾಡಬಹುದು. ಅವರು ತನ್ನ ಪತಿಯ ಚಿತ್ರವನ್ನು ತೆಗೆದು ಅಥವಾ ಮಣ್ಣಿನ ಪ್ರತಿಮೆಯನ್ನು ಮಾಡಿಕೊಂಡು ಅದರ ಪೂಜೆಯನ್ನು ಮಾಡಿ ಆ ಪ್ರತಿಮೆಯ ಎದುರಿಗೇನೆ ಅನುಜ್ಞೆಯನ್ನು ಪಡೆದುಕೊಂಡು ವ್ರತೋಪಾಸಾದಿಗಳನ್ನು ಮಾಡಿಕೊಂಡರೆ ಉತ್ತಮವಾದಂತಹ ಲೋಕವನ್ನು ವಿಧವಾ ಸ್ತ್ರೀಯರು ಕೂಡ ಹೊಂದಬಹುದು ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ.

ಇನ್ನು ಮುಂದೆ ದೇವತಾ ಸ್ತ್ರೀಯರು, ಋಷಿ ಸ್ತ್ರೀಯರು ನೀವೆಲ್ಲ ಇದನ್ನೆಲ್ಲ ವಿಶೇಷವಾಗಿ ಪ್ರಚಾರ ಮಾಡಿ ಸಜ್ಜನರು ಈ ವ್ರತಗಳ ಅನುಷ್ಠಾನವನ್ನು ಮಾಡುವಂತೆ ಆಗಬೇಕು ಅಂತ. ಪರಮಾತ್ಮನ, ನಾರಾಯಣನ ಎಲ್ಲ ಅವತಾರಗಳಲ್ಲಿಯೂ ಮಹಾಲಕ್ಷ್ಮೀ ದೇವಿ ಪತ್ನಿಯಾಗಿ ಅವತಾರ ಮಾಡುತ್ತಾಳಲ್ಲ ಆ ಎಲ್ಲ ಮಹಾಲಕ್ಷ್ಮೀಯ ಅವತಾರಗಳಿಗೂ ಈ ವಿಷಯ ಗೊತ್ತು ಅಂತ. ಅಂದರೆ ನೋಡಿ ರುಕ್ಮಿಣಿ ನಾರದರಿಗೆ ಪ್ರಶ್ನೆ ಕೇಳಿದ್ದು ಕೇವಲ ಲೋಕೋದ್ಧಾರಕ್ಕಾಗಿ ತನಗೋಸ್ಕರ ಅಲ್ಲ ಅನ್ನುವುದು ಸ್ಪಷ್ಟ ಯಾಕೆ ಅಂದರೆ ಇನ್ನೂ ಈ ವ್ರತದ ಬಗ್ಗೆ ಮೊಟ್ಟ ಮೊದಲು ಮಾಡಿದಂತಹ ಉಮಾ ದೇವಿಯೇ ಪ್ರವರ್ತನೆ ಮಾಡುವಾಗಲೇ ಹೇಳುತ್ತಾಳೆ.

1. 81.6 ವಿಷ್ಣುಪರ್ವ



ಪ್ರಾದೂರ್ಭಾವೇಷು ಸರ್ವೇಷು ಭಾರ್ಯಾವಿಷ್ಣೋರ್ಮಹಾತ್ಮನಃ ।

ಜ್ಞಾಸ್ಯನ್ತಿ ಪುಣ್ಯಕವಿಧಿಂ ನಿತ್ಯಮೇವ ಸನಾತನಮ್ ॥ (81.16 ವಿಷ್ಣುಪರ್ವ)

ನಿತ್ಯದಲ್ಲಿಯೂ ಈ ವ್ರತವನ್ನ ಆ ಎಲ್ಲ ವಿಷ್ಣು ಪತ್ನಿಯರು ತಿಳಿದವರೇ ಅಂತಹ ಆ ಎಲ್ಲ ಭಗವಂತನ ಅವತಾರಗಳಲ್ಲಿ ರುಕ್ಮಿಣಿ ಮೊದಲಾದ ರೂಪದಿಂದ ಪತ್ನಿಯರಾಗಿ ಬಂದಂತಹ ಮಹಾಲಕ್ಷ್ಮೀಯ ರೂಪಗಳೇನು ಉಂಟೋ ಅವುಗಳ ಅನುಗ್ರಹದಿಂದ ನೀವು ಈ ವ್ರತವನ್ನು ಆಚರಣೆ ಮಾಡಿ ಮತ್ತೊಮ್ಮೆ ಹೇಳುತ್ತೇನೆ ಅಂತ ಕೊನೆಗೆ ಹೇಳುತ್ತಾಳೆ.

ಪತಿಭಕ್ತಿರದುಷ್ಟತ್ವಮವಾಗ್ದುಷ್ಟತ್ವಮೇವ ಚ ॥ (81.17 ವಿಷ್ಣುಪರ್ವ)

ಉತ್ತಮವಾದಂತಹ ಪತಿಯಲ್ಲಿ ಭಕ್ತಿ, ಪಾತಿವ್ರತ್ಯ ಹಾಗೂ ಶುದ್ಧವಾದ ವಚನಗಳಿಂದ ಈ ವ್ರತವನ್ನು ಮಾಡಿ ಅಂತ ತಿಳಿಸಿಕೊಟ್ಟಿದ್ದಾರೆ.

ಈ ವ್ರತವನ್ನು ಉಮಾ ದೇವಿ ಮಾಡಿದಾಗ ಉಮಾವ್ರತಕ ಅಂತ ಹೇಳುತ್ತಾ ಇದ್ದರು. ಇದನ್ನ, ಅದಿತಿ ವ್ರತ ಮಾಡಿದಳು ಆಮೇಲೆ ಅದಕ್ಕೆ ಅದಿತಿವ್ರತಕ ಅಂತ ಹೆಸರು ಬಂತು. ಆಮೇಲೆ ಸತ್ಯಭಾಮಾ ವ್ರತ ಮಾಡಿದಳು ಸತ್ಯಭಾಮಾವ್ರತಕ ಅಂತ ಆಯಿತು, ಅವಳು ಉಮಾ ದೇವಿ ಮಾಡಿದ ವ್ರತಗಳನ್ನೆಲ್ಲ ಮಾಡಿ ಪೀತಾಂಬರ ದಾನವನ್ನು ವಿಶೇಷವಾಗಿ ಮಾಡುತ್ತಾಳೆ ತಾನು ಹೊಸದಾಗಿ. ಆಮೇಲೆ ಸಾವಿತ್ರಿ ಈ ವ್ರತವನ್ನು ಮಾಡಿದ್ದಾಳೆ. ಸಾವಿತ್ರಿ, ಎಲ್ಲರೂ ಉಮಾ ದೇವಿ ಮಾಡಿದ ವ್ರತದ ಏನೊಂದು ವಿಧಾನ ಇದೆ ಅದನ್ನು ಮಾಡಿ ತಾವು ತಾವು ಕೆಲವುದನ್ನು ಜೋಡಿಸುತ್ತಾ ಬಂದಿದ್ದಾರೆ. ಸಂಧ್ಯಾ ಕಾಲದಲ್ಲಿ ವಿಶೇಷವಾಗಿ ಪೂಜಾ, ನಮಸ್ಕಾರ ಮತ್ತು ದ್ವಿಗುಣ ಜಪ, ಪ್ರಾತಃಕಾಲದಲ್ಲಿ ತಾವು ಮಾಡಿಕೊಳ್ಳುವ ಜಪಕ್ಕಿಂತಲೂ ದ್ವಿಗುಣ ಜಪವನ್ನು ಸಂಧ್ಯಾಕಾಲದಲ್ಲಿ ಮಾಡಿ ಸಾವಿತ್ರಿ ವ್ರತವನ್ನು ಆಚರಣೆ ಮಾಡಿದ್ದಾಳೆ. ಆಮೇಲೆ ಶಚಿ ದೇವಿ ವ್ರತ ಮಾಡುತ್ತಾಳೆ ಇಂದ್ರನ ಪತ್ನಿ. ಅವಳು ವ್ರತ ಮಾಡಿದಾಗ ತಾನು ರಕ್ತವಸ್ತ್ರ ದಾನವನ್ನು ವಿಶೇಷವಾಗಿ ಮಾಡಿದ್ದಾಳೆ ಹೊಸದಾಗಿ. ಆಮೇಲೆ ಅದು ಮಾತ್ರವಲ್ಲದೆ ನಾಲ್ಕನೆಯ ದಿವಸ ವಿಶೇಷವಾಗಿ ಅಹೋರಾತ್ರ ಉಪವಾಸವನ್ನು ಮಾಡಿ ಒಂದು ನೂರು ಕೊಡಗಳನ್ನು ಜಲಪೂರ್ಣವಾದ ಕುಂಭಗಳನ್ನು ದಾನ ಮಾಡಿದ್ದಾಳೆ ಶಚಿ ದೇವಿ ಇದು ಹೊಸದು ಅವಳು ಮಾಡಿದ್ದು. ಗಂಗಾ ದೇವಿ ವರುಣನ ಪತ್ನಿ ಅವಳು ವ್ರತ ಮಾಡಿದ್ದಾಳೆ, ಅವಳು ವಿಶೇಷವಾಗಿ ಪ್ರತಿನಿತ್ಯ ಪ್ರಾತಃಕಾಲದಲ್ಲಿ ಸ್ನಾನ, ತನ್ನ ನೀರಿನಲ್ಲಿಯೇ ತಾನು ಸ್ನಾನ ಮಾಡುತ್ತಾ ಇದ್ದಳು ಅಥವಾ ಕೆಲವೊಮ್ಮೆ ಬೇರೆ ನೀರಿನಲ್ಲಿಯೂ ಸ್ನಾನವನ್ನು ಮಾಡುತ್ತಾ ಇದ್ದಳು, ಮಾಘ ಶುಕ್ಲಪಕ್ಷದಲ್ಲಿ ಇನ್ನೂ ವಿಶೇಷವಾಗಿ ತಾನು ಸ್ನಾನವನ್ನು ಮಾಡುತ್ತ ಗಂಗಾವ್ರತಕ ಅಂತ ಇದಕ್ಕೆ ಹೆಸರು. ಈ ರೀತಿ ಗಂಗಾ ವ್ರತವನ್ನು ಯಾರು ಆಚರಣೆ ಮಾಡುತ್ತಾರೋ ಅವರು ಕೊನೆಗೆ ಒಂದು ಸಾವಿರ ಕುಂಭಗಳನ್ನು ದಾನ ಮಾಡಬೇಕು ಅಂತ ತಿಳಿಸುತ್ತಾರೆ.

ಯಮ ದೇವರ ಮಡದಿ ಶ್ಯಾಮಲಾ ದೇವಿ ಯಾಮರಥ ಅನ್ನುವ ವ್ರತವನ್ನು ಮಾಡುತ್ತಾಳೆ. ಅವಳು ಮಾಡುವಾಗ ವಿಶೇಷ ಅಂತಂದರೆ ಉಮಾ ದೇವಿ ಮಾಡಿದಂತೆ ಮಾಡಿ ಹೇಮಂತ ಋತುವಿನಲ್ಲಿ ಚಳಿ ಬಹಳ ಅಂತಹ ಚಳಿಗಾಲದೊಳಗೆ ಹೊರಗಡೆಗೆ ಆಕಾಶಕ್ಕೆ ಅಂದರೆ ಮೇಲೆ ಯಾವುದೇ ಆಚ್ಛಾದನೆ ಇಲ್ಲದೆ ಇರುವಂತಹ ಅಂಗಳದಲ್ಲಿ ಇದ್ದು ಎಲ್ಲ ಚಳಿಯನ್ನು ಅನುಭವಿಸುತ್ತ, ಅದನ್ನ ಸಹನೆ ಮಾಡುತ್ತ ವ್ರತವನ್ನು ಆಚರಣೆ ಮಾಡಿದ್ದಾಳೆ. ಇದೇ ರೀತಿ ರುಕ್ಮಿಣಿ ದೇವಿಯೂ ಕೂಡ ವ್ರತವನ್ನ ಮುಂದೆ ಆಚರಣೆ ಮಾಡಿದ್ದಾಳೆ, ಅವಳು ವಿಶೇಷವಾಗಿ ಹೊಸದಾಗಿ ಮಾಡಿದ್ದು

ವೃಷ ದಾನ ಎತ್ತಿನ ದಾನವನ್ನು ಮಾಡಿದ್ದು, ರತ್ನ ಮಾಲೆಯ ದಾನವನ್ನ ಮಾಡಿದ್ದು ಹಾಗೂ ಅನ್ನ ದಾನವನ್ನು ವಿಶೇಷವಾಗಿ ರುಕ್ಮಿಣಿ ದೇವಿ ಮಾಡಿದ್ದಾಳೆ. ಜಾಂಬವತಿ ರತ್ನ ವೃಕ್ಷವನ್ನು ಹೊಸವಾಗಿ ದಾನ ಮಾಡುತ್ತಾಳೆ. ಚಂದ್ರನ ಪತ್ನಿ ರೋಹಿಣಿ, ಫಾಲ್ಗುಣಿ, ಮಘ, ಶತಭೀಷ ಮೊದಲಾದ ಚಂದ್ರನ ಪತ್ನಿಯರೆಲ್ಲಾ ಅವರೂ ಕೂಡ ಈ ವ್ರತವನ್ನ ಮಾಡಿದ್ದಾರೆ ವಿಶೇಷ ಏನೂ ಮಾಡಿಲ್ಲ, ಉಮಾ ದೇವಿ ಮಾಡಿದಂತೇನೆ ವ್ರತವನ್ನು ಮಾಡಿದ್ದಾರೆ. ಹೀಗೆ ಎಲ್ಲಾ ದೇವತಾ ಸ್ತ್ರೀಯರು ಈ ವ್ರತವನ್ನ ಮಾಡುತ್ತಾ ಬಂದಿದ್ದಾರೆ ಅಂತಹ ಶ್ರೇಷ್ಠವಾದ ವ್ರತಗಳು ಈ ಪುಣ್ಯಕ ವ್ರತ ಅದರ ಬಗ್ಗೆ ಮತ್ತೆ ನಾರದರು ರುಕ್ಮಿಣಿ ದೇವಿಗೆ ತಿಳಿಸಿದ್ದನ್ನು ಜನಮೇಜಯನಿಗೆ ವೈಶಂಪಾಯನರು ತಿಳಿಸುತ್ತಾ ಇದ್ದಾರೆ. ಇಂತಹ ವ್ರತದಲ್ಲಿ ಒಂದು ವ್ರತವನ್ನ ಸತ್ಯಭಾಮಾ ದೇವಿ ತಾನು ಆ ಕಲ್ಪವೃಕ್ಷಕ್ಕೆ ಹೂವಿನ ಮಾಲೆಯನ್ನ ಕಟ್ಟಿ ಕೃಷ್ಣನ ಕೊರಳಿಗೆ ಕಟ್ಟಿ ಅದನ್ನು ನಾರದರಿಗೆ ದಾನ ಮಾಡಿ ಪುನಃ ನಾರದರಿಂದ ಪಡೆದುಕೊಂಡು ಆ ಪುಣ್ಯಕ ವ್ರತವನ್ನು ಆಚರಣೆ ಮಾಡಿದ್ದಾಳೆ.

ಈ ವ್ರತದ ಶ್ರವಣವನ್ನು ಮಾಡಿ ಎಲ್ಲ ವ್ರತಗಳ ಆಚರಣೆಯನ್ನು ಮಾಡಲಿಕ್ಕೆ ಆಗದೇ ಇದ್ದರೂ ಕೂಡ ಈ ಎಲ್ಲ ವ್ರತಗಳ ಕೊನೆಗೆ ಸಾರವನ್ನ ಹೇಳಿದ್ದಾರೆ. ಶುದ್ಧವಾದ ಪಾತಿವ್ರತ್ಯದಿಂದ ಅವಾಗ್ ದುಷ್ಟರಾಗಿ ಕೆಟ್ಟ ಮಾತುಗಳನ್ನು ಆಡದೇ, ಅತ್ತೆ ಮಾವಂದಿರ ಪತಿಯ ಸೇವೆಯನ್ನು ಮಾಡುತ್ತಾ ತನ್ನ ನಿತ್ಯದ ಧರ್ಮಾಚರಣೆಯನ್ನು ಚೆನ್ನಾಗಿ ಮಾಡುತ್ತಾ ಇದ್ದರೆ ಮನೆಯನ್ನು ಶುದ್ಧವಾಗಿಟ್ಟು ದೇವರ ಸೇವೆ ಅನ್ನುವ ಭಾವನೆಯಿಂದ ದೇವರ ಮನೆಯನ್ನೇ ಶುದ್ಧ ಮಾಡುತ್ತಾ ಇದ್ದೇನೆ, ದೇವರದೇ ಮನೆ ಇದು ಅನ್ನುವ ಭಾವನೆಯಿಂದ ತಮ್ಮ ಮನೆಯನ್ನೂ ಶುದ್ಧವಾಗಿ ಇಟ್ಟುಕೊಂಡು ಯಾರು ಪಾತಿವ್ರತ್ಯದಿಂದ ಇರುತ್ತಾರೋ ಅಂಥವರಿಗೆ ಈ ಎಲ್ಲ ವ್ರತಗಳ ಫಲ ಸಿಗುತ್ತದೆ ಎಂಬ ಮಾತನ್ನು ಹರಿವಂಶ ತಿಳಿಸಿಕೊಡುತ್ತಾ ಇದೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ವಿಷ್ಣುಪರ್ವ-28

* * *

ಜನಮೇಜಯ ಉವಾಚ

ವೈಶಮ್ಪಾಯನ ಧರ್ಮಜ್ಞ ವ್ಯಾಸಶಿಷ್ಯ ತಪೋಧನ ।
ಪಾರಿಜಾತಸ್ಯ ಹರಣೇ ಷಟ್ಪುರಂ ಪರಿಕೀರ್ತಿತಮ್ ।। (82.1 ವಿಷ್ಣುಪರ್ವ)

ಶ್ರೀಕೃಷ್ಣ ಪರಮಾತ್ಮ ಪಾರಿಜಾತ ಹರಣವನ್ನ ಮಾಡುವ ಸಂದರ್ಭದಲ್ಲಿ ಇಂದ್ರ ದೇವರ ಜೊತೆಗೆ ಯುದ್ಧವನ್ನು ಆಡುತ್ತಾನೆ. ಗರುಡ ಹಾಗೂ ಐರಾವತಗಳ ಯುದ್ಧದ ಪ್ರಸಂಗದಲ್ಲಿ ಐರಾವತ ಪಾರಿಯಾತ್ರ ಪರ್ವತದ ಮೇಲೆ ಬೀಳುತ್ತದೆ ಆಗ ಅಲ್ಲಿ ಶ್ರೀಕೃಷ್ಣ ಪರಮಾತ್ಮ ಗರುಡ ದೇವರ ಜೊತೆಗೆ ಬಂದು ಯುದ್ಧವನ್ನು ಮಾಡುತ್ತಾನೆ. ಮುಂದೆ ಪಾರಿಯಾತ್ರ ಪರ್ವತದ ಕೆಳಭಾಗದಲ್ಲಿ ಷಟ್ಪುರ ಇದೆ ಅಲ್ಲಿ ಅನೇಕ ಅಸುರರು ಇದ್ದಾರೆ ಆ ಎಲ್ಲ ಅಸುರರ ಸಂಹಾರವನ್ನು ಮುಂದೆ ನೀವು ಮಾಡಬೇಕು ಅಂತ ರುದ್ರ ದೇವರು ಶ್ರೀಕೃಷ್ಣ ಪರಮಾತ್ಮನಿಗೆ ಪ್ರಾರ್ಥನೆಯನ್ನು ಮಾಡಿರುತ್ತಾರೆ.

ಆ ಷಟ್ಪುರರ ಸಂಹಾರವನ್ನು ಭಗವಂತ ಹೇಗೆ ಮಾಡಿದ,ಷಟ್ಪುರಾಸುರರು ಆಚೆಈಚೆ ಹೋಗದಂತೆ ನೀವು ನೋಡಿಕೋ ಅಂತ ಪಾರಿಯಾತ್ರ ಪರ್ವತಾಭಿಮಾನಿ ದೇವತೆಗೇನೆ ಪರಮಾತ್ಮ ಹೇಳಿದ್ದ ಆದರೆ ಮುಂದೆ ಯಾವ ರೀತಿ ಪರಮಾತ್ಮ ಬಂದು ಅವರ ಸಂಹಾರವನ್ನು ಮಾಡಿದ, ಈ ಷಟ್ಪುರಾಸುರರ ವಧ ಮಾಡುವ ಪ್ರಸಂಗ ಏನು ಅಂತ ಅದನ್ನು ತಿಳಿಸಿಕೊಡಬೇಕು ಅಂತ ಜನಮೇಜಯ ಪ್ರಶ್ನೆಯನ್ನು ಮಾಡುತ್ತಾ ಇದ್ದಾನೆ ವೈಶಂಪಾಯನರು ತಿಳಿಸುತ್ತಾರೆ. ಹಿಂದೆ ತ್ರಿಪುರಾಸುರರ ಸಂಹಾರವನ್ನು ರುದ್ರ ದೇವರು ಮಾಡಿದರು, ಇವರು ಎಷ್ಟು ಸಂಹಾರ ಮಾಡಿದರೂ ಪುನಃ ಅಸುರರೆಲ್ಲ ದೈತ್ಯರು ಬದುಕಿ ಬರುತ್ತಾ ಇದ್ದರು. ಅಲ್ಲಿ ಒಂದು ದೊಡ್ಡ ರಸಾಯನದ ಬಾವಿ ಆ ರಸಾಯನವನ್ನ ಪಾನ ಮಾಡಿದರೆ ಅದರೊಳಗೆ ಆ ಅಸುರರನ್ನ ಮೃತವಾದ ಶರೀರವನ್ನ ಹಾಕಿದರೆ ಪುನಃ ಅವರು ಬದುಕುತ್ತಾ ಇದ್ದರು. ಆಗ ಸ್ವತಃ ಪರಮಾತ್ಮ ತಾನೇ ಬಂದು ಆ ಎಲ್ಲ ರಸಾಯನವನ್ನ ಗೋರೂಪದಿಂದ ಪಾನ ಮಾಡಿ ಬಿಡುತ್ತಾನೆ. ಆಮೇಲೆ ಮೃತರಾದ ಅಸುರರು ಪುನಃ ಬದುಕುವುದಕ್ಕೆ ದಾರಿ ಇಲ್ಲ ಹೀಗಾಗಿ ತ್ರಿಪುರಾಸುರರನ್ನು ರುದ್ರ ದೇವರು ನಾಶ

ಮಾಡುತ್ತಾರೆ. ಆ ರುದ್ರ ದೇವರ ರಥ,ಅವರ ಆಯುಧಗಳು ಅವುಗಳಲ್ಲಿಯೂ ವಿಶೇಷವಾಗಿ ಭಗವಂತ ತನ್ನ ಸನ್ನಿಧಾನವನ್ನು ತೇಜಸ್ಸನ್ನು ಇಟ್ಟು ಗೋರೂಪದಿಂದ ಆ ರಸಾಯನವನ್ನೂ ಪಾನ ಮಾಡಿ ಆ ತ್ರಿಪುರಾಸುರರ ಸಂಹಾರವನ್ನು ಮಾಡಿಸಿರುತ್ತಾನೆ. ಶ್ರೀಮದ್ಭಾಗವತದಲ್ಲಿ ವಿಶೇಷವಾಗಿ ಸಪ್ತಮಸ್ಕಂಧದಲ್ಲಿ ಈ ಒಂದು ವಿಶೇಷ ಮಹಿಮೆಯನ್ನು ನಾವು ತಿಳಿಯುತ್ತೇವೆ ಅಂತಹ ಅದ್ಭುತವಾದ ರುದ್ರ ದೇವರ ಪರಾಕ್ರಮ, ಭಗವಂತನ ವಿಶೇಷವಾದ ಅನುಗ್ರಹ.

ಆ ತ್ರಿಪುರಾಸುರ ಸಂಹಾರ ಮಾಡಿದಾಗ ಅವರ ಬಂಧು ಬಾಂಧವರು ಸುಮಾರು ಅರವತ್ತು ಲಕ್ಷ ಜನ ಅವರೆಲ್ಲ ತಮ್ಮ ಬಂಧುಗಳ ಸಂಹಾರ ಆಗಿದೆ ಇದಕ್ಕೆ ಪ್ರತೀಕಾರ ಏನಾದರೂ ಮಾಡೋಣ, ರುದ್ರ ದೇವರ ನಿಮಿತ್ತದಿಂದ ಸಂಹಾರ ಆಗಿದೆ ಹಾಗಾದರೆ ರುದ್ರ ದೇವರಿಗೆ ವಿರೋಧ ಮಾಡುವುದಕ್ಕೋಸ್ಕರ ನಾವು ಶಕ್ತಿಯನ್ನು ಪಡೆಯಬೇಕು ಅಂತ ತಪಸ್ಸು ಮಾಡುತ್ತಾ ಇದ್ದಾರೆ. ಲಕ್ಷ ವರ್ಷಗಳವರೆಗೆ ಸೂರ್ಯನಿಗೆ ಅಭಿಮುಖವಾಗಿ ನಿಂತು ತಪಶ್ಚರ್ಯವನ್ನು ಮಾಡಿದ್ದಾರೆ ಕೇವಲ **'ವಾಯು ಭಕ್ಷಃ'** ಅನ್ನ ಇಲ್ಲ, ನೀರು ಇಲ್ಲ. ನೋಡಿ ಸಜ್ಜನರಾಗಿ ಸದ್ಬುದ್ಧಿಯಿದ್ದು ಇದೇ ದೀಕ್ಷೆಯಿಂದ ತಪಸ್ಸು ಮಾಡಿದ್ದರೆ ಉತ್ತಮವಾದ ಜ್ಞಾನವನ್ನು ಪಡೆದು ಮೋಕ್ಷಕ್ಕೆ ಹೋಗುತ್ತಾ ಇದ್ದರು ಆದರೆ ಮಹಾನುಭಾವರಾದಂತಹ ರುದ್ರ ದೇವರ ವಿರೋಧ ಮನಸ್ಸಿನಲ್ಲಿ ಇಟ್ಟುಕೊಂಡು ಅವರು ಮಾಡಿದ್ದರಿಂದ ಅದೆಲ್ಲ ವ್ಯರ್ಥವಾಗಿದೆ. ಒಂದು ಲಕ್ಷ ವರ್ಷದವರೆಗೆ ಸೂರ್ಯನಿಗೆ ಅಭಿಮುಖವಾಗಿ ನಿಂತು ಆ ಬಿಸಿಲು ಅದನ್ನು ಸಹನೆ ಮಾಡುತ್ತಾ, ಕೇವಲ ವಾಯು ಭಕ್ಷರಾಗಿ ತಪಸ್ಸು ಮಾಡಿದ್ದಾರೆ ಬ್ರಹ್ಮ ದೇವರನ್ನು ಕುರಿತು. ಅಲ್ಲಿ ಅನೇಕ ವೃಕ್ಷಗಳು ಉದುಂಬರ ವೃಕ್ಷ, ಕಪಿತ್ಥ ವೃಕ್ಷ, ಸೃಗಾಲ ವೃಕ್ಷ, ವಟ ವೃಕ್ಷ ಹೀಗೆ ಬೇರೆ ಬೇರೆ ಗುಂಪು ಮಾಡಿಕೊಂಡು ಕೆಲವರು ಆ ಆ ವೃಕ್ಷದ ಅಡಿಯಲ್ಲಿ ತಪಸ್ಸನ್ನು ಮಾಡಿದ್ದಾರೆ, ಬ್ರಹ್ಮ ದೇವರು ಪ್ರತ್ಯಕ್ಷರಾದರು ಏನು ವರ ಬೇಕು ಕೇಳಿ ಅಂತ ರುದ್ರ ದೇವರ ವಿರೋಧ ಮಾಡುವುದಕ್ಕೋಸ್ಕರನೇ ನಾವು ಈ ತಪಸ್ಸು ಮಾಡಿದ್ದು, ನಮಗೆ ಇನ್ನೇನು ಬೇರೆ ವರ ಬೇಕಾಗಿಲ್ಲ. ಆ ರುದ್ರ ದೇವರ ವಿರೋಧ ಮಾಡಬೇಕು, ಅವರಿಗೆ ಪೀಡೆಯನ್ನು ಕೊಡಬೇಕು ಅನ್ನುವುದೇ ನಮ್ಮ ಅಪೇಕ್ಷೆ ಆ ವರ ಕೊಡುವುದಾದರೆ ಕೊಡಿ ಇಲ್ಲದಿದ್ದರೆ ಬೇಡ ಅಂತ ಅದು ಸಾಧ್ಯ ಇಲ್ಲ ಅಂತ ಬ್ರಹ್ಮ ದೇವರು ಹೇಳುತ್ತಾರೆ. ಆ ತರಹದ ಅಪೇಕ್ಷೆಯನ್ನು ಪಡಬೇಡಿ ಜಗತ್ತಿನ ಸಂಹಾರ ಮಾಡುವ ಶಕ್ತಿ ಸಾಮರ್ಥ್ಯಗಳು ಆ ರುದ್ರ ದೇವರಿಗೆ ಇದೆ, ಸಂಹಾರ ದೇವತೆ ಅಂತ ಪ್ರಸಿದ್ಧ ಅಂತಹ ಜಗತ್ತಿನ ಸಂಹಾರ ಮಾಡುವ ದೇವತೆಯಾದ ರುದ್ರ ದೇವರಿಗೆ ಕೇವಲ ತಿಪುರಾಸುರರ ಸಂಹಾರ ಮಾಡುವುದು ಇದೇನು ಹೊಸದಲ್ಲ ಅಥವಾ ಅವರು ಅದನ್ನು ಮಾಡದೆ ಸುಮ್ಮನೆ ಬಿಡುವವರಲ್ಲ, ನಿಮ್ಮನ್ನೂ ಸಂಹಾರ ಮಾಡುವವರೇ. ಜಗತ್ತಿನೊಳಗಿದ್ದ ಎಲ್ಲರ ಸಂಹಾರವನ್ನು ಮಾಡುವವರು ರುದ್ರ ದೇವರೇ, ತಿಪುರಾಸುರರ ಸಂಹಾರವನ್ನೂ ಮಾಡಿದ್ದಾರೆ ಅಂಥವರ ಮೇಲೆ ನೀವು ದ್ವೇಷವನ್ನು ಸಾಧಿಸಿ ಮಾಡುವುದು ಏನು ನಿಮಗೆ ಏನು ಬೇಕೋ ಆ ವರವನ್ನು ಕೇಳಿಕೊಳ್ಳಿ ಅಂತ ಈ ರೀತಿಯಾಗಿ ತಿಳಿಸಿದ್ದಾರೆ.

ಪುರಾಣಿ ಷಟ್ ಚ ನೋ ದೇವ ಭವನ್ಪ್ಪನ್ತರ್ಮಹೀತಲೇ ॥ (82.17 ವಿಷ್ಣುಪರ್ವ)

ಅವರು ಈ ಷಟ್ಪುರದಲ್ಲಿಯೇನೆ ಸುಖವಾಗಿ ನಾವು ಇರಬೇಕು, ಭೂಗರ್ಭದೊಳಗೆ ಆರು ಪುರಗಳು ನಮಗೆ ಬೇಕು, ಸರ್ವ ಕಾಮಗಳ ಸಮೃದ್ಧಿ ಇರಬೇಕು ಅಲ್ಲಿ ನಾವು ಸುಖವಾಗಿ ಇರಬೇಕು **'ಸರ್ವದೇವಾನಾಮವಧ್ಯಾಃ ಸ್ಯಾಮ ಹೇ ವಿಭೋ'**[1] ಯಾವ ದೇವತೆಗಳಿಂದಲೂ ನಮ್ಮ ಸಂಹಾರ ಆಗಬಾರದು, ರುದ್ರ ದೇವರಿಂದಲೂ ನಮಗೆ ಭಯ ಇರಬಾರದು ಅಲ್ಲಿ ಅಂತಹ ಒಂದು ವರವನ್ನು ಕೊಡಬೇಕು ಅಂದಾಗ ಆಗಲಿ ಅಂತ ಬ್ರಹ್ಮ ದೇವರು

1. 82.17 ವಿಷ್ಣುಪರ್ವ



ವರವನ್ನು ಕೊಟ್ಟಿದ್ದಾರೆ. ಇನ್ನು ಒಂದು ಬ್ರಹ್ಮ ದೇವರು ಕರಾರು ಹಾಕಿದ್ದಾರೆ ನೋಡಿ, ಲಕ್ಷ ವರ್ಷದವರೆಗೆ ತಪಸ್ಸು ಮಾಡಿದ್ದೀರಿ ಬರೀ ವಾಯು ಭಕ್ಷಣೆಯನ್ನು ಮಾಡಿ, ಇಷ್ಟು ದೊಡ್ಡ ತಪಸ್ಸು ಮಾಡಿದ್ದಕ್ಕೆ ವರ ಕೊಡದೆ ಇರಲಿಕ್ಕೆ ಸಾಧ್ಯ ಇಲ್ಲ ಅನ್ನುವುದಕ್ಕೆ ವರ ಕೊಡುತ್ತ ಇದ್ದೇನೆ. ಯಾವ ದೇವತೆಗಳಿಂದಲೂ ಸಾಯಬಾರದು ಅಂತ ಕೇಳುತ್ತೀರಲ್ಲ ಆಗಲಿ ಆದರೆ ತಮ್ಮ ವರ್ಣಾಶ್ರಮಗಳಿಗೆ ವಿಹಿತವಾದ ಸತ್ಕರ್ಮ ಅನುಷ್ಠಾನವನ್ನು ಮಾಡುವಂತಹ ತಪಸ್ವಿಗಳು, ಜ್ಞಾನಿಗಳು, ಸದ್ಬ್ರಾಮಣರು, ಋಷಿಗಳು, ಮುನಿಗಳು ಅಂಥವರ ವಿರೋಧ ಮಾಡಿದರೆ ಮಾತ್ರ ನಿಮಗೆ ಮರಣ ನಿಶ್ಚಿತ, ನೀವು ಏನು ತಪಸ್ಸು ಮಾಡಿದರೂ ಪ್ರಯೋಜನ ಇಲ್ಲ. ಅದು ಏನು ಮಾಡದೆ ಸುಮ್ಮನೆ ನಿಮ್ಮ ಪಾಡಿಗೆ ನೀವು ಷಟ್ಬುರದಲ್ಲಿದ್ದರೆ ಸುಖವಾಗಿ ಇರುತ್ತೀರಾ, ಸಜ್ಜನರ ವಿರೋಧವನ್ನು ಮಾಡಿದರೆ ಮಾತ್ರ ಆಗ ನಿಮಗೆ ಸರ್ವಥಃ ಈ ವರ ಫಲಕಾರಿ ಆಗುವುದಿಲ್ಲ ಅಂತ ಹೇಳುತ್ತಾರೆ. ಅಂದರೆ ಅರ್ಥ ಮಾಡಿಕೊಳ್ಳಿ ತಪಸ್ವಿಗಳು, ಸದ್ಬ್ರಾಮಣರು ತಮ್ಮ ಸತ್ಕರ್ಮಗಳ ಅನುಷ್ಠಾನವನ್ನು ಚೆನ್ನಾಗಿ ಮಾಡುತ್ತ ದೇವರ ಅನುಗ್ರಹವನ್ನು ಪಡೆದುಕೊಂಡು ಭಗವಂತನ ಪ್ರೀತಿಯನ್ನು ಪಡೆದಿದ್ದರೆ ಅವರ ಸಾಮರ್ಥ್ಯ ಎಷ್ಟು ಅದ್ಭುತವಾಗಿರುತ್ತದೆ ಅಂತ.

ವಿಪ್ರೋಪಘಾತಂ ಮೋಹಾಚ್ಚೇತ್ ಕರಿಷ್ಯಥ ಕಥಂಚನ ।

ನಾಶಂ ಯಾಸ್ಯಥ ವಿಪ್ರಾ ಹಿ ಜಗತಃ ಪರಮಾ ಗತಿಃ ॥ (82.21 ವಿಷ್ಣುಪರ್ವ)

ಆದ್ದರಿಂದ ಜಗತ್ತಿಗೆ ಕ್ಷೇಮವಾಗಲಿ ಅಂತ ಎಲ್ಲರ ಹಿತಕ್ಕಾಗಿ ಯಜ್ಞ ಯಾಗ, ದೇವರ ಪೂಜೆ, ಜಪ ಇತ್ಯಾದಿಗಳನ್ನು ಮಾಡುತ್ತ ಸಜ್ಜನರ ಹಿತವನ್ನು ಚಿಂತನ ಮಾಡುತ್ತಾ ಇರುತ್ತಾರೆ ಅವರು ಅಂಥವರಿಗೆ ನೀವೇನಾದರೂ ಅಹಿತವನ್ನು ಮಾಡಿದರೆ ಜಗದ್ ಹಿತನಾದ ಶ್ರೀಕೃಷ್ಣ ಪರಮಾತ್ಮ ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ ಸಂಹಾರ ಮಾಡುತ್ತಾನೆ ಆಗ ನನ್ನ ವರ ಕೆಲಸಕ್ಕೆ ಬರುವುದಿಲ್ಲ ಇದರ ಮೇಲೆ ನಿಮ್ಮ ಇಷ್ಟ ಅಂತ ಹೇಳಿ ಬ್ರಹ್ಮ ದೇವರು ಅವರನ್ನು ಕೊಟ್ಟು ಕಳಿಸಿದ್ದಾರೆ. ಷಟ್ಬುರಾಸುರರಲ್ಲಿ ಎರಡು ಭಾಗ ಆಗಿದೆ ಕೆಲವರು ರುದ್ರ ದೇವರ ವಿರೋಧಿಗಳು ಕೇವಲ ಆ ತ್ರಿಪುರಾಸುರರ ಸಂಹಾರ ಮಾಡಿದ ಒಂದು ನೆನಪನ್ನೇ ಇಟ್ಟುಕೊಂಡು ದ್ವೇಷ, ಅಸೂಯೆಗಳನ್ನ ಮಾಡತಕ್ಕಂಥವರು ಅವರಿಗೆ ಇಷ್ಟು ವರವನ್ನು ಕೊಟ್ಟು ಕಳಿಸಿದರು.

ಯೇಽಪಿ ಭಕ್ತಾ ಮಹಾದೇವಮಸುರಾ ಧರ್ಮಚಾರಿಣಃ ॥ (82.23 ವಿಷ್ಣುಪರ್ವ)

ಇನ್ನು ಕೆಲವರು ಆ ರುದ್ರ ದೇವರಲ್ಲಿ ಭಕ್ತಿ ಮಾಡುತ್ತಾ ಇದ್ದರು ಅನ್ನುವುದಕ್ಕೋಸ್ಕರ ಸ್ವಯಂ ರುದ್ರ ದೇವರೇ ನಂದಿ ವಾಹನರಾಗಿ ದರ್ಶನವನ್ನು ಕೊಟ್ಟಿದ್ದಾರೆ ಅವರಿಗೆ. ಅವರಿಗೆ ರುದ್ರ ದೇವರು ಹೇಳುತ್ತಾರೆ ಈ ಎಲ್ಲ ವೈರ, ದಂಭ ನಿಮ್ಮ ಯೋಗ್ಯತೆ ಚಿಕ್ಕದು ಅಂತ ಗೊತ್ತಿದ್ದರೂ ದೊಡ್ಡಸ್ತಿಕೆಯನ್ನು ತೋರಿಸಿಕೊಳ್ಳುವುದು ಅದು ದಂಭ ಅಂತ. **'ಆತ್ಮಾಲ್ಪತ್ವಂ ಜ್ಞಾತ್ವಾಽಪಿ ಮಹತ್ಸ್ವ ಪ್ರದರ್ಶನಂ ದಂಭಃ'** ಅಂತಹ ದಂಭ ಹಿಂಸಾಚಾರ ಇವುಗಳೆಲ್ಲವನ್ನು ಬಿಟ್ಟುಬಿಡಿ, ಉತ್ತಮವಾದಂತಹ ಸನ್ಮಾರ್ಗದಿಂದ ನೀವು ಜೀವನವನ್ನು ಮಾಡಿ, ನಿಮಗೆ ಯಾವ ಋಷಿಗಳು, ಮುನಿಗಳು ಯಜ್ಞ ಯಾಗಾದಿಗಳನ್ನು ಮಾಡಿಸಿದ್ದಾರೆ ಅಂತಹ ಮುನಿಗಳಿಂದ ಸಹಿತರಾಗಿ ಉತ್ತಮವಾದ ಲೋಕಗಳನ್ನು ಪಡೆದುಕೊಂಡು ಸುಖವಾಗಿ ಇರಬಹುದು, ನೀವು ಎಂದಿಗೂ ದ್ರೋಹವನ್ನು ಮಾಡಬೇಡಿ ಅಂತ ತಿಳಿಸಿಕೊಟ್ಟಿದ್ದಾರೆ.

ಈ ಕಪಿತ್ಥ ವೃಕ್ಷ ಇರುವಂತಹ ಕ್ಷೇತ್ರ ಇಲ್ಲಿ ಪ್ರತಿ ಪೌರ್ಣಿಮಾ ಅಥವಾ ಅಮಾವಾಸ್ಯಾ ದಿನದಂದು ವಾನಪ್ರಸ್ಥ ವಿಧಿಯಿಂದ ಇದ್ದು ಯಾರು ನನ್ನ ಪೂಜೆಯನ್ನು ಮಾಡುತ್ತಾರೋ ಅವರಿಗೆ ಒಂದು ಸಾವಿರ ವರ್ಷ ತಪಸ್ಸು ಮಾಡಿದರೆ

ಏನು ಫಲ ಬರಬೇಕೋ ಆ ಫಲ ಅಮಾವಾಸ್ಯಾ ಅಥವಾ ಪೌರ್ಣಿಮಾ ದಿನದಂದು ಯಾವ ಕಪಿತ್ಥ ವೃಕ್ಷದ ಮೂಲದಲ್ಲಿ ಇದ್ದು ನೀವೆಲ್ಲ ತಪಸ್ಸು ಮಾಡಿದ್ದೀರಿ ಈ ಕ್ಷೇತ್ರದಲ್ಲಿ ತಪಸ್ಸು ಮಾಡಿದರೆ ಅಂತಹ ಒಂದು ಮಹಾಫಲ ಅವರಿಗೆ ಸಿಗುತ್ತದೆ ಎಂಬುದಾಗಿ ರುದ್ರ ದೇವರು ಅವರಿಗೆ ವರವನ್ನು ಕೊಟ್ಟಿದ್ದಾರೆ. ಇದೇ ರೀತಿ ಔದುಂಬರ ವೃಕ್ಷ, ಸೃಗಾಲ ವೃಕ, ವಟ ವೃಕ್ಷ ಈ ಎಲ್ಲ ವೃಕ್ಷದ ಪರಿಸರದಲ್ಲಿ ಇರುವಂತಹ ಋಷಿಗಳು, ಮುನಿಗಳು ಅನೇಕ ಜನ ಇದ್ದರು ಅಲ್ಲಿ ಆ ಎಲ್ಲ ಋಷಿ ಮುನಿಗಳನ್ನು ಯಾರು ಚೆನ್ನಾಗಿ ಭಕ್ತಿಯಿಂದ ಪೂಜೆ ಮಾಡುತ್ತಾರೋ ಅವರೂ ಕೂಡ ಉತ್ತಮವಾದ ಗತಿಯನ್ನು ಹೊಂದುತ್ತಾರೆ. ಬ್ರಹ್ಮ ದೇವರು ಹೇಳಿದ ಮಾತಿನಲ್ಲಿ, ರುದ್ರ ದೇವರು ಹೇಳುವ ಮಾತಿನಲ್ಲಿ ಎರಡೂ ಕಡೆಗೆ ನೀವು ಗಮನಿಸಬೇಕಾದದ್ದು ಜ್ಞಾನಿಗಳ, ಋಷಿ ಮುನಿಗಳ ಸೇವೆ ಇದು ಬಹಳ ಮಹತ್ವದ್ದು ಭಗವಂತನ ಚಲ ಪ್ರತಿಮೆ ಇದ್ದಂತೆ.

ಮುನೀಂಶ್ಚ ಬ್ರಹ್ಮವಾದೀಯಾನ್ ಸವಿಶೇಷೇಣ ಯೇ ನರಾಃ ।
ಪೂಜಯಿಷ್ಯನ್ತಿ ಸತತಂ ತೇ ಯಾಸ್ಯನ್ತೀಪ್ಸಿತಾಂ ಗತಿಮ್ ॥ (82.33 ವಿಷ್ಣುಪರ್ವ)

ಈ ಸ್ಥಾನದಲ್ಲಿ ಇರುವಂತಹ ಸಜ್ಜನರು, ಋಷಿ ಮುನಿಗಳೆಲ್ಲ ಏನಿದ್ದಾರೆ ಬ್ರಹ್ಮಜ್ಞಾನವನ್ನು ಪಡೆದುಕೊಂಡವರು ಅಂಥವರ ಪೂಜೆಯನ್ನು ಮಾಡಬೇಕು, ಬರೀ ವ್ರತ ನಿಯಮ ಅನುಷ್ಠಾನ ಪೂಜಾದಿಗಳನ್ನು ಮಾತ್ರ ಮಾಡುವುದಲ್ಲ ಆ ಜ್ಞಾನಿಗಳ ಪೂಜೆಯನ್ನೂ ಮಾಡಬೇಕು ಅಂತ ರುದ್ರ ದೇವರು ತಿಳಿಸಿಕೊಟ್ಟಿದ್ದಾರೆ. ಕೊನೆಗೆ ಇದು ಬಹಳ ದೂರ ಇಷ್ಟು ದೂರ ಬಂದು ತಪಸ್ಸು ಮಾಡುವುದಕ್ಕೆ ಆಗುವುದಿಲ್ಲ ಅಂದರೆ ಸಂಕಲ್ಪ ಮಾಡಿದರೂ ಸಾಕು ಪುಣ್ಯ ಬರುತ್ತೆ ಅನ್ನುತ್ತಾರೆ.

ಜಮ್ಬೂಮಾರ್ಗಂ ಗಮಿಷ್ಯಾಮಿ ಜಮ್ಬೂಮಾರ್ಗೇ ವಸಾಮ್ಯಹಮ್ ।
ಏವಂ ಸಂಕಲ್ಪಮಾನೋಽಪಿ ರುದ್ರಲೋಕೇ ಮಹೀಯತೇ ॥ (82.35 ವಿಷ್ಣುಪರ್ವ)

ಈ ಕ್ಷೇತ್ರದಲ್ಲಿ ನಾನು ಬಂದು ತಪಸ್ಸು ಮಾಡುತ್ತೇನೆ ಅಂತ ಸಂಕಲ್ಪ ಮಾಡಿದರೆ ಸಾಕು, ಅಲ್ಲಿರುವ ಜ್ಞಾನಿಗಳ ಅರ್ಚನೆಯನ್ನು ಮಾಡುತ್ತೇನೆ ಅಂತ ಸಂಕಲ್ಪ ಮಾಡಿದರೆ ಸಾಕು ಅವರಿಗೆ ಉತ್ತಮವಾದ ರುದ್ರಲೋಕ ಪ್ರಾಪ್ತಿಯಾಗುತ್ತದೆ ಎಂಬುದಾಗಿ ರುದ್ರ ದೇವರು ಆ ಸ್ಥಾನದ ಬಗ್ಗೆ ಒಂದು ವಿಶೇಷವಾದ ವರವನ್ನ ಅಲ್ಲಿರುವಂತಹ ಭಕ್ತರಾದ ಕೆಲವು ಜನರಿಗೋಸ್ಕರ ಆ ವರವನ್ನ ಕೊಟ್ಟಿದ್ದಾರೆ.

ಈ ಕಡೆಗೆ ಷಟ್ಪುರರು ತಪಸ್ಸು ಮಾಡಿ ವರ ಪಡೆದ ವಿಚಾರವನ್ನು ತಿಳಿಸಿದ ಮೇಲೆ ಇನ್ನು ಅವರ ಸಂಹಾರವಾಗುವ ಪ್ರಸಂಗ ಹೇಗೆ ಬಂತು, ಯಾವ ಕಾರಣಕ್ಕೆ ಶ್ರೀಕೃಷ್ಣ ಪರಮಾತ್ಮ ಅವರನ್ನು ಅಲ್ಲಿ ಸ್ಥಿರವಾಗಿ ಇರುವಂತೆ ಪಾರಿಯಾತ್ರ ಪರ್ವತಕ್ಕೆ ಹೇಳಿ ಬಂದಿದ್ದ ಆದರೆ ಮುಂದೆ ಯಾವ ಪ್ರಸಂಗದಲ್ಲಿ ಬಂದು ಅಲ್ಲಿ ಯುದ್ಧವನ್ನು ಮಾಡಿದ ಅನ್ನುವುದನ್ನು ಹೇಳುತ್ತಾರೆ. ವಸುದೇವನ ಒಬ್ಬ ಮಿತ್ರ ಬ್ರಹ್ಮದತ್ತ ಅಂತ ವಸುದೇವನ ಸಹಾಧ್ಯಾಯಿಯೂ ಹೌದು ಯಜ್ಞಾದಿಗಳನ್ನು ಮಾಡಿಸುವಾಗ ಅಧ್ವರ್ಯುವಾಗಿಯೂ ವಸುದೇವನಾಗಿಯೇ ಅಶ್ವಮೇಧ ಯಾಗವನ್ನು ಮಾಡಿಸಿದ್ದಾನೆ ವಸುದೇವನಿಂದ. ವಸುದೇವನಿಂದ ಅಶ್ವಮೇಧ ಯಾಗವನ್ನು ಮಾಡಿಸಿದಂತಹ ಒಬ್ಬ ಪುರೋಹಿತ ಅಧ್ವರ್ಯು ಜೊತೆಗೆ ಸಹಾಧ್ಯಾಯಿ ಬ್ರಹ್ಮದತ್ತ ಅಂತ ಹೆಸರು ಯಾಜ್ಞವಲ್ಕ್ಯ ಮಹರ್ಷಿಗಳ ಪ್ರೀತಿಯ ಶಿಷ್ಯ. ಅಂತಹ ಆ ಬ್ರಹ್ಮದತ್ತ ತಾನೊಂದು ಯಜ್ಞವನ್ನು ಆ ಷಟ್ಪುರದ ಪರಿಸರದಲ್ಲಿಯೇನೆ ಆ ಆವರ್ತಾ ನದಿ ತೀರ ಆ ನದಿ ತೀರದಲ್ಲಿಯೇನೆ ವಿಶೇಷವಾಗಿ ಮಾಡುವ ಸಂಕಲ್ಪ ಮಾಡಿದ್ದಾನೆ. ಆ ಭೂಗರ್ಭದೊಳಗೇನೆ ಈ ಎಲ್ಲ ಅಸುರರು

ಇದ್ದಾರೆ ಆದರೆ ಇವನು ತನ್ನ ಪಾಡಿಗೆ ತಾನು ಆ ಶ್ರೇಷ್ಠವಾದ ಕ್ಷೇತ್ರ ಪವಿತ್ರವಾದ ಪರಿಸರ ನದಿ ತೀರ ಯಜ್ಞ ಮಾಡೋಣ ಅಂತ ಪ್ರಾರಂಭ ಮಾಡಿದ್ದಾನೆ ಸಾಕ್ಷಾತ್ ವೇದವ್ಯಾಸ ದೇವರು ಅಲ್ಲಿ ಯಜ್ಞಕ್ಕೆ ಭಾಗವಹಿಸಿದ್ದಾರೆ. ಸರ್ವಜ್ಞ ಶಿಖಾಮಣಿಗಳು ಸಕಲ ಯಜ್ಞದ ಫಲವನ್ನು ಸ್ವೀಕಾರ ಮಾಡಿ ಅನುಗ್ರಹವನ್ನು ಮಾಡುವಂತಹ ಸರ್ವೋತ್ತಮನಾದ ಭಗವಂತ ಅಲ್ಲಿ ಸಾಕ್ಷಾತ್ ಸನ್ನಿಹಿತನಾಗಿದ್ದಾನೆ. ನಾವು ಅಲ್ಲಿ ಇದ್ದೆವು ಅಂತ ಹೇಳುತ್ತಾರೆ ವೈಶಂಪಾಯನರು ಅಹಂ ಆ ಯಜ್ಞಕ್ಕೆ ನಾನು ಹೋಗಿದ್ದೆ, ಆ ಬ್ರಹ್ಮದತ್ತನ ಗುರುಗಳಾದ ಯಾಜ್ಞವಲ್ಕ್ಯರು ಬಂದಿದ್ದಾರೆ, ವೇದವ್ಯಾಸ ದೇವರ ಶಿಷ್ಯರಾದ ಸುಮಂತು, ಜೈಮಿನಿ ಮೊದಲಾದ ಅನೇಕ ಜನ ಬಂದಿದ್ದಾರೆ. ಇಂತಹ ಒಂದು ಶ್ರೇಷ್ಠವಾದಂತಹ ಯಜ್ಞ ವಸುದೇವ ದೇವಕಿಯರು ಗೆಳೆಯನ ಯಜ್ಞ ಅಂತ ಅವರೂ ಬಂದಿದ್ದಾರೆ ಈ ರೀತಿ ಯಜ್ಞ ನಡೆಯುತ್ತ ಇದೆ.

ಷಟ್ಪುರದಲ್ಲಿ ಇರುವಂತಹ ನಿಕುಂಭ ಮೊದಲಾದ ಅಸುರರಿಗೆ ಇದು ಗೊತ್ತಾಗಿದೆ. ಅವರಿಗೆ ಬ್ರಹ್ಮ ದೇವರು ಹೇಳಿದ್ದರು ನೀವು ಬ್ರಾಹ್ಮಣರ ಯಜ್ಞ ಯಾಗಾದಿಗಳನ್ನು ಮಾಡುವವರ ವಿರೋಧ ಮಾಡಿದರೆ ಮಾತ್ರ ನನ್ನ ವರ ನಿಮಗೆ ಫಲಕಾರಿ ಆಗುವುದಿಲ್ಲ ಅವಧ್ಯರಾಗುತ್ತೀರಿ ಅಂತ ವರ ಕೊಟ್ಟದ್ದು ನಿಜ ಆದರೆ ಬ್ರಾಹ್ಮಣರ ವಿರೋಧ ಮಾಡಿದರೆ ಮಾತ್ರ ನೀವು ಅವಧ್ಯರಾಗುವುದಿಲ್ಲ ಅಂತ. **'ವರದರ್ಪಿತಾಃ'.**[1] ಆ ವರದ ಉನ್ಮಾದದೊಳಗೆ ಏನು ವರ ಕೊಟ್ಟಿದ್ದಾರೆ ಅನ್ನುವುದು ಸರಿಯಾಗಿ ನೆನಪು ಇಟ್ಟುಕೊಂಡಿಲ್ಲ, ಕರಾರನ್ನು ಮರೆತು ಬಿಟ್ಟಿದ್ದಾರೆ ದುರ್ಜನರ, ದೈತ್ಯರ ಸ್ವಭಾವವೇ ಹಾಗೆ ಯಾವ ದೇವತೆಗಳಿಂದ ವರ ಪಡೆದಿರುತ್ತಾರೋ ಆ ದೇವತೆಗಳು ವರ ಕೊಡುವವರೆಗೆ ಮಾತ್ರ ಅವರ ಬಗ್ಗೆ ಗೌರವ, ತಪಸ್ಸು ಮಾಡಿ ಅವರಿಂದ ವರ ಪಡೆಯುವುದು ಪಡೆದ ಮೇಲೆ ಅವರ ಮಾತಿಗೂ ಬೆಲೆ ಇಲ್ಲ, ಅವರಿಗೂ ಬೆಲೆ ಇಲ್ಲ ಅವರಿಗೆ ಇನ್ನೊಬ್ಬರು ಪೂಜೆ ಮಾಡಿದರೂ ಸಹನೆ ಇರುವುದಿಲ್ಲ ಇವರಿಗೆ ಈ ತರಹದ ದುಷ್ಟ ಸ್ವಭಾವ ಹೀಗಾಗಿ ಅವರು ಬಂದಿದ್ದಾರೆ ಯಜ್ಞಕ್ಕೆ. ಯಜ್ಞವನ್ನು ನಿಲ್ಲಿಸಿ ಈ ಯಜ್ಞದೊಳಗೆ ನಮಗೂ ಸೋಮಪಾನ ಮಾಡುವುದಕ್ಕೆ ದೇವತೆಗಳ ಜೊತೆಗೆ ನೀವು ಅಧಿಕಾರ ಕೊಡುವುದಾದರೆ ಯಜ್ಞವನ್ನು ಮುಂದುವರೆಸಿ ಇಲ್ಲ ಅಂದರೆ ಯಜ್ಞವನ್ನು ಇಲ್ಲಿಗೆ ನಿಲ್ಲಿಸಿ. ಎರಡನೆಯದು ಈ ಬ್ರಹ್ಮದತ್ತನೆಂಬ ಬ್ರಾಹ್ಮಣನಿಗೆ, ಯಾಜ್ಞವಲ್ಕ್ಯ ಮಹರ್ಷಿಗಳ ಶಿಷ್ಯನಿಗೆ ಅನೇಕ ಜನ ಕನ್ಯೆಯರಿದ್ದಾರೆ ಅಂತ ನಮಗೆ ಗೊತ್ತಾಗಿದೆ ಆ ಎಲ್ಲ ಕನ್ಯೆಯರನ್ನ ನಮಗೆ ಕೊಟ್ಟು ವಿವಾಹ ಮಾಡಿಕೊಡಬೇಕು. ಇಷ್ಟಾದರೆ ಯಜ್ಞವನ್ನು ಮಾಡುವುದಕ್ಕೆ ಬಿಡುತ್ತೇವೆ ಇಲ್ಲದೇ ಇದ್ದರೆ ಯಜ್ಞವನ್ನು ಮಾಡಲಿಕ್ಕೆ ಬಿಡುವುದಿಲ್ಲ ಅಂತ ಹೇಳಿದ್ದಾರೆ.

ಯಜ್ಞಭಾಗೋ ನ ವಿಹಿತಃ ಪುರಾಣೇऽಸುರಸತ್ತಮಾಃ ॥ (83.13 ವಿಷ್ಣುಪರ್ವ)

ಬ್ರಹ್ಮದತ್ತ ಹೇಳುತ್ತಾನೆ ಸೋಮರಸಕ್ಕೆ ಏನು ಕಡಿಮೆ ಇಲ್ಲ ಸೋಮಪಾನವನ್ನ ನೀವು ಮಾಡುತ್ತೀರಿ ಅಂದರೆ ಮಾಡಿಸುವುದಕ್ಕೆ ಆದರೆ ಶಾಸ್ತ್ರದಲ್ಲಿ ಯಜ್ಞಕ್ಕೆ ಒಂದು ವಿಧಾನ ಅಂತ ಇದೆ ಆ ಶಾಸ್ತ್ರೋಕ್ತವಾದ ರೀತಿಯಲ್ಲಿ ಯಜ್ಞವನ್ನು ಮಾಡಬೇಕು ಇಂತಿಂತಹ ದೇವತೆಗಳಿಗೆ ಇಲ್ಲಿ ಆಹುತಿಗಳನ್ನು ಹೇಳಿದ್ದಾರೆ. ಇಲ್ಲಿ ಕುಳಿತಂತಹ ವೇದವ್ಯಾಸ ದೇವರೇ ಮೊದಲಾದ ಎಲ್ಲ ಜ್ಞಾನಿಗಳು ಇದ್ದಾರೆ.

ಪೃಚ್ಛತೇಹ ಮುನಿಶ್ರೇಷ್ಠಾನ್ ವೇದಭಾಷ್ಯಾರ್ಥಕೋವಿದಾನ್ ॥ (83.14 ವಿಷ್ಣುಪರ್ವ)

1. 83.10 ವಿಷ್ಣುಪರ್ವ

ವೇದಗಳಿಗೆ ವೇದವ್ಯಾಸ ದೇವರಿಗೆ ಸಮ್ಮತವಾದಂತಹ ಭಾಷ್ಯಗಳು ಆ ಯುಗಗಳಲ್ಲಿಯೂ ಇದ್ದವು ಅಂತ ನಾವು ಅರ್ಥ ಮಾಡಿಕೊಳ್ಳಬಹುದು. **'ವೇದಭಾಷ್ಯಾರ್ಥಕೋವಿದಾನ್'** ವೇದಗಳ, ವೇದಭಾಷ್ಯಗಳ ಅರ್ಥಗಳನ್ನೆಲ್ಲ ಚೆನ್ನಾಗಿ ತಿಳಿದುಕೊಂಡಂತಹ ಭಾರೀ ಉತ್ತಮರಾದ ಮೀಮಾಂಸಕರು, ಸರಿಯಾಗಿ ವೇದಾರ್ಥ ವಿಚಾರವನ್ನು ಮಾಡಿ ನಿರ್ಣಯ ಮಾಡಿಕೊಂಡಂತಹ ಜ್ಞಾನಿಗಳು ಋಷಿಗಳೆಲ್ಲ ಇಲ್ಲಿದ್ದಾರೆ. ಅವರಿಗೆ ಕೇಳಿ ಯಾರಿಗೆ ಸೋಮಪಾನ ಇದೆ ಶಾಸ್ತ್ರದಲ್ಲಿ ವಿಹಿತ ಅಂತ ನಿಮಗೆ ವಿಹಿತ ಆಗಿದ್ದರೆ ಕೊಡುವುದಕ್ಕೆ ನಮಗೆ ಏನು ಅಭ್ಯಂತರ ಇಲ್ಲ, ಇಲ್ಲದೇ ಇದ್ದರೆ ನಾನು ಹೇಗೆ ಕೊಡಲಿ ಅಂತ ಇವನು ಕೇಳುತ್ತಾನೆ.

ಇನ್ನು ಎರಡನೆಯದು ಕನ್ಯೆಯರ ಬಗ್ಗೆ. ಕನ್ಯೆಯರನ್ನ ಈಗಾಗಲೇ ನಾನು ಯಾರು ಯಾರಿಗೆ ಕೊಡಬೇಕು ಅಂತ ಮನಸ್ಸಿನಿಂದ ಸಂಕಲ್ಪ ಮಾಡಿ ಆಗಿದೆ, ಅವರಿಗೆ ವಚನ ಕೊಟ್ಟಾಗಿದೆ ಇನ್ನು ಮದುವೆ ಮಾಡುವುದೊಂದೆ ಉಳಿದಿದೆ ಒಳ್ಳೆಯ ಮುಹೂರ್ತದಲ್ಲಿ. **'ವಾಚಾದತ್ತಾಃ'** ಮಾತಿನಿಂದ ದಾನ ಮಾಡಿ ಆಯಿತು ವಾಗ್ದಾನ ಮಾಡಿ ಆದಮೇಲೆ, ಮನಸಾ ದಾನ ಮಾಡಿ ಆದಮೇಲೆ ನಾನು ಬೇರಯವರಿಗೆ ಹೇಗೆ ಕೊಡಲಿಕ್ಕೆ ಬರುತ್ತದೆ ಆದ್ದರಿಂದ ಅದೂ ಸಾಧ್ಯ ಇಲ್ಲ, ಮೂರನೆಯದ್ದು ಒಂದು ಕೇಳಿದ್ದರು ರತ್ನಗಳನ್ನು ನಮಗೆ ಕೊಡಿ ಅಂತ ಅದು ಬೇಕಾದರೆ ಕೊಡುತ್ತೇನೆ ಅದಕ್ಕೆ ಏನು ಅಭ್ಯಂತರ ಇಲ್ಲ. ಸೋಮಪಾನ ಮಾಡಿಸುವುದಕ್ಕೆ ಸಾಧ್ಯ ಇಲ್ಲ, ಕನ್ಯಾದಾನ ಮಾಡುವುದಕ್ಕೆ ಶಾಸ್ತ್ರ ನಿಷೇದ ಇಲ್ಲದೇ ಇದ್ದರೂ ಕೂಡ ನಾನು ಈಗಾಗಲೇ ಇನ್ನೊಬ್ಬರಿಗೆ ಕೊಟ್ಟಾದದ್ದರಿಂದ ಅದು ನಿಷೇದ, ರತ್ನ ದಾನ ಮಾಡುವುದಕ್ಕೆ ಏನು ತೊಂದರೆ ಇಲ್ಲ **'ರತ್ನಾನಿ ತು ಪ್ರಯಚ್ಛಾಮಿ'**.[1] ಇಷ್ಟು ಹೇಳಿದಾಗ ಅವರಿಗೆ ಬಹಳ ಕೋಪ ಬಂದಿದೆ ಇದು ಮೂರರಲ್ಲಿ ಒಂದಲ್ಲ ಮೂರು ನಮಗೆ ಬೇಕು ಇಲ್ಲದೇ ಇದ್ದರೆ ನಾವು ಎಲ್ಲ ಯಜ್ಞ ಧ್ವಂಸ ಮಾಡುತ್ತೇವೆ ಅಂತ ಯಜ್ಞವಾಟದ ಧ್ವಂಸವನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ವಸುದೇವ ದೇವಕಿಯರು ಅಲ್ಲಿದ್ದಾರೆ, ವೇದವ್ಯಾಸ ದೇವರು ಸರ್ವ ಸಮರ್ಥರು, ವೇದವ್ಯಾಸ ದೇವರಿಗೂ ಕೃಷ್ಣ ಪರಮಾತ್ಮನಿಗೂ ಅಬೇಧವೇ, ಯಾವ ಬೇಧವೂ ಇಲ್ಲ ಆದರೆ ಬಲ ಕಾರ್ಯವನ್ನ ಕೃಷ್ಣ ರೂಪದಿಂದ ಮಾಡಬೇಕು ಅಂತ ದೇವರ ಸಂಕಲ್ಪ. ಹೀಗಾಗಿ ವಸುದೇವ ಶ್ರೀಕೃಷ್ಣ ಪರಮಾತ್ಮನ ಸ್ಮರಣೆಯನ್ನು ಮಾಡಿದ್ದೇ ತಡ ಆಹುಕ ಹಾಗೂ ಇನ್ನು ಕೆಲವರನ್ನು ಮಾತ್ರ ದ್ವಾರಕಾ ಪಟ್ಟಣದಲ್ಲಿ ಇಟ್ಟು ಬಲರಾಮ, ಪ್ರದ್ಯುಮ್ನ, ಅನಿರುದ್ಧ, ಸಾಂಬ ಸಕಲ ಯಾದವರಿಂದ ಸಮೇತನಾಗಿ ಅಲ್ಲಿ ಶ್ರೀಕೃಷ್ಣ ಪರಮಾತ್ಮ ಪ್ರತ್ಯಕ್ಷನಾದ. ನೋಡಿ, ಸ್ಮರಣೆ ಮಾಡುವ ಮಾತ್ರದಿಂದ. ಕೇವಲ ದೇವರ ಸ್ಮರಣೆಯನ್ನು ಮಾಡಿದರೆ ಪರಮಾತ್ಮ ಅನುಗ್ರಹವನ್ನು ಮಾಡುತ್ತಾನೆ ಅಂತ ಅನ್ನವುದಕ್ಕೋಸ್ಕರ ಈ ಒಂದು ಕಥೆಯನ್ನು ತಿಳಿಸಿಕೊಡುತ್ತ ಇದ್ದಾರೆ.

ಪ್ರದ್ಯುಮ್ನನಿಗೆ ಆಜ್ಞೆಯನ್ನು ಮಾಡಿದ್ದಾನೆ. ಇವರು ಯಜ್ಞವಾಟದ ಧ್ವಂಸವನ್ನು ಮಾತ್ರ ಮಾಡಿರಲಿಲ್ಲ ಆ ಕನ್ಯೆಯರನ್ನ ಅಪಹಾರ ಮಾಡಿಕೊಂಡು ಹೊರಟಿದ್ದರು. ನಾವು ಈ ಅಸುರುರ ಜೊತೆಗೆ ಯುದ್ಧ ಮಾಡುವುದು ಅವರನ್ನು ಸಂಹಾರ ಮಾಡುವುದು ನಿಧಾನ ಮಾಡೋಣ ಮೊದಲು ಅವನ ಕನ್ಯೆಯರನ್ನು ತೆಗೆದುಕೊಂಡು ಬಂದು ಅವನಿಗೆ ಒಪ್ಪಿಸಿ ಬಿಡೋಣ ಆ ಬ್ರಾಹ್ಮಣನಿಗೆ ಆಮೇಲೆ ಯುದ್ಧ. ನಾವೆಲ್ಲ ಯುದ್ಧ ಮಾಡಿ ಅಸುರರ ಸಂಹಾರ ಮಾಡುವುದರೊಳಗೆ ಆ ಕನ್ಯೆಯರನ್ನು ಅವರು ಮದುವೆ ಮಾಡಿಕೊಂಡುಬಿಟ್ಟರೆ ಆಮೇಲೆ ಅವರು ದೂಷಿತರಾಗುತ್ತಾರೆ ಇವನು ಸಂಕಲ್ಪ ಮಾಡಿದ ರೀತಿಯಲ್ಲಿ ಕನ್ಯಾದಾನ ಮಾಡಲಿಕ್ಕೆ ಆಗುವುದಿಲ್ಲ ಅದಕ್ಕೆ ಕನ್ಯೆಯರ ರಕ್ಷಣೆ ಮೊದಲು ಮಾಡುವ ಕೆಲಸ ನಿನ್ನದು ಅಂತ ಪ್ರದ್ಯುಮ್ನ ಅವನಿಗೆ ಎಲ್ಲಾ ಮಾಯಾ ವಿದ್ಯೆಗಳು ಗೊತ್ತು. ಶ್ರೀಕೃಷ್ಣ ಪರಮಾತ್ಮನ ಅನುಗ್ರಹ, ಶ್ರೀಕೃಷ್ಣ ಪರಮಾತ್ಮನ ಆಜ್ಞೆಯಂತೆ ತನ್ನ ಮಾಯಾ ವಿದ್ಯೆಯನ್ನು ಉಪಯೋಗಿಸಿ ಅವನು

1. 83.16 ವಿಷ್ಣುಪರ್ವ



ಬೇರೆ ಕನ್ಯೆಯರನ್ನ ಸೃಷ್ಟಿ ಮಾಡಿ ಆ ನಿಜವಾದ ಕನ್ಯೆಯರನ್ನ ಪುನಃ ಯಥಾ ಸ್ಥಾನಕ್ಕೆ ಕರೆದುಕೊಂಡು ಬಂದು ಬಿಟ್ಟು ಬಿಟ್ಟ ಮೊದಲನೆಯ ಕೆಲಸ. ಆ ಅಸುರರಿಗೆ ಗೊತ್ತಾಗಿಲ್ಲ ಅವರೂ ಮಾಯಾವಿಗಳೇ, ಇವನು ಮಹಾಮಾಯಾವಿ ಅವರಿಗಿಂತಲೂ, ತಾವು ಕರೆದುಕೊಂಡು ಬಂದ ಕನ್ಯೆಯರೇ ಇವರು ಅಂತ ಏನೇನೂ ವ್ಯತ್ಯಾಸ ಗೊತ್ತಾಗದಂತೆ ಅದೇ ವೇಷ, ಅದೇ ಭೂಷಣಗಳು, ಅದೇ ಆಕಾರ, ಅದೇ ರೀತಿಯ ಮಾಯಾ ಕನ್ಯೆಯರನ್ನು ಸೃಷ್ಟಿ ಮಾಡಿ ಅವರೆಲ್ಲರನ್ನ ಆ ಅಸುರರ ಜೊತೆಗೆ ಕಳಿಸಿ ನಿಜವಾದ ಕನ್ಯೆಯರು ಏನು ಇದ್ದರೋ ಆ ಬ್ರಹ್ಮದತ್ತನ ಕನ್ಯೆಯರು ಅವರೆಲ್ಲರನ್ನ ಪುನಃ ಕೊಟ್ಟು ಕಳಿಸಿದ್ದಾನೆ ಬ್ರಹ್ಮದತ್ತನ ಹತ್ತಿರ.

ಮಾಯಾಮಯೀಶ್ಚ ಕೃತ್ವಾಽನ್ಯಾ ನ್ಯಸ್ತವಾನ್ ರುಕ್ಮಿಣೀಸುತಃ । (83.22 ವಿಷ್ಣುಪರ್ವ)

ವಸುದೇವನ ಸಖ ಅವನು ಆದರೂ ಹೆಣ್ಣು ಮಕ್ಕಳ ಬಗ್ಗೆ ದೇವಕಿ ವಿಶೇಷವಾಗಿ ಅಭಿಮಾನವನ್ನು ಮಾಡುತ್ತಾ ಇದ್ದಳು, ಕಾಳಜಿ ಮಾಡುತ್ತಾ ಇದ್ದಳು ಆ ದೇವಕಿಗೆ ಸಮಾಧಾನವನ್ನು ಹೇಳಿದ ಮೊಮ್ಮಗನಾದ ಪ್ರದ್ಯುಮ್ನ. ಈ ರೀತಿ ಆ ಎಲ್ಲ ಕನ್ಯೆಯರನ್ನು ಸುರಕ್ಷಿತವಾಗಿ ನಾನು ಮುಟ್ಟಿಸಿದ್ದೇನೆ, ನೀನು ಏನು ಚಿಂತೆ ಮಾಡವುದು ಬೇಡ ಅಂತ ದೇವಕಿ ದೇವಿಗೆ ಹೇಳುತ್ತಾನೆ. ಆ ಮಾಯಾಮಯ ಕನ್ಯೆಯರನ್ನೇ ಕರೆದುಕೊಂಡು ಅವರೆಲ್ಲ ಷಟ್ಪುರ ಪ್ರವೇಶವನ್ನು ಮಾಡಿದ್ದಾರೆ ತಮ್ಮ ತಮ್ಮ ಪಟ್ಟಣಕ್ಕೆ ಹೋಗಿದ್ದಾರೆ.

ಈ ಕಡೆಗೆ ಆ ಯಜ್ಞಕ್ಕೆ ಅನೇಕ ಜರಾಸಂಧ, ಶಿಶುಪಾಲ, ದ್ರುಪದ, ವಿರಾಟ ಈ ತರಹದ ರಾಜರುಗಳೆಲ್ಲ ಬಂದಿದ್ದಾರೆ, ಪಾಂಡವರು ಬಂದಿದ್ದಾರೆ, ಕೌರವರು ಬಂದಿದ್ದಾರೆ. ನಾರದರು ವಿಚಾರ ಮಾಡುತ್ತಾ ಇದ್ದಾರೆ ಇದೊಂದು ಸರಿಯಾದ ಸಂದರ್ಭ ಭಗವಂತನ ಸೇವೆಯನ್ನು ನಾನು ಮಾಡಬೇಕು ಅಂತ ಚಿಂತನ ಮಾಡುತ್ತಾರೆ.

ಅತ್ರ ಹೇತುರಹಂ ಯುದ್ಧೇ ತಸ್ಮಾತ್ ತತ್ ಪ್ರಯತಾಮ್ಯಹಮ್ । (83.30 ವಿಷ್ಣುಪರ್ವ)

ನಾನು ಏನಾದರೂ ಮಾಡಿ ಈ ಜರಾಸಂಧಾದಿಗಳಿಗೆ ಸರಿಯಾದ ಪಾಠ ಕಲಿಸಬೇಕು. ಈ ಜರಾಸಂಧಾದಿಗಳೆಲ್ಲ ಈಗ ಕೃಷ್ಣ ಪರಮಾತ್ಮ ಬಂದಿದ್ದಾನೆ ಬಂದು ಈ ಎಲ್ಲ ಷಟ್ಪುರಾಸುರರ ಸಂಹಾರ ಮಾಡುತ್ತಾನೆ ಅನ್ನುವುದು ನಿಶ್ಚಿತ, ಷಟ್ಪುರಾಸುರರ ಸಂಹಾರವಾಗುವುದರ ಜೊತೆಗೆ ಈ ಜರಾಸಂಧಾದಿಗಳಿಗೆ ಚೆನ್ನಾಗಿ ಮಾನಭಂಗ ಆಗಬೇಕು, ಚೆನ್ನಾಗಿ ಪೆಟ್ಟು ಕೊಡಬೇಕು. ಆ ಕೃಷ್ಣ ದ್ರೋಹ ಮಾಡುವ ಕೃಷ್ಣ ದ್ವೇಷಿಗಳಿಗೆ ಚೆನ್ನಾಗಿ ಶಿಕ್ಷೆಯಾದರೆ ಅದೇ ಒಂದು ದೊಡ್ಡ ಸೇವೆ ನಾನು ಮಾಡುವುದು ಅದು ಏನು ಮಾಡಲಿಕ್ಕೆ ಸಾಧ್ಯ ಅಸುರರಿಗೂ ಹಾಗೂ ಆ ಜರಾಸಂಧಾದಿ ರಾಜರಿಗೂ ಒಂದು ತರಹದ ಸಂಧಾನ ಮಾಡಿಸಬೇಕು ಆ ಅಸುರರು ಮಾಡುವ ಯುದ್ಧದೊಳಗೆ ಈ ಜರಾಸಂಧಾದಿಗಳು ಸಹಾಯಕ್ಕೆ ಅಂತ ಹೋಗಬೇಕು. ಸಹಾಯಕ್ಕೆ ಅಂತ ಹೋದರೆ ಆಗ ಆ ಕೃಷ್ಣನಿಂದ, ಕೃಷ್ಣನ ಜೊತೆಗೆ ಬಂದ ಯಾದವರಿಂದ, ಪ್ರದ್ಯುಮ್ನಾದಿಗಳಿಂದ ಚೆನ್ನಾಗಿ ಶಾಸನ ಈ ಜರಾಸಂಧಾದಿಗಳಿಗೆ ಆಗುತ್ತದೆ ಆಗ ಇವರಿಗೆ ಸ್ವಲ್ಪ ಬುದ್ಧಿ ಬರುತ್ತದೆ. ಆ ತರಹದ ಒಂದು ಶಾಸನವಾದರೆ ಚೆನ್ನಾಗಿ ಶಿಕ್ಷೆಯಾದರೆ, ಪೆಟ್ಟು ಕೊಟ್ಟರೆ ಅದೇ ಒಂದು ದೊಡ್ಡ ಪುಣ್ಯದ ಕೆಲಸ, ಭಗವಂತನ ದ್ರೋಹ ಮಾಡುವವರಿಗೆ ಅಷ್ಟನ್ನು ಮಾಡಿಸಬೇಕು ಅಂತ.

ಸರಿ ಅದಕ್ಕಾಗಿ ಏನು ಮಾಡಬಹುದು ನಾನು ಅಂತ ಆಲೋಚನೆಯನ್ನು ಮಾಡಿ ನಾರದರು ನೇರವಾಗಿ ಅವರಿಗೆ ಎಲ್ಲಿಯೂ ನಿಷೇದವೇ ಇಲ್ಲ ಮುಕ್ತ ದ್ವಾರ ಆ ಷಟ್ಪುರಾಸುರರ ಮುಖ್ಯಸ್ಥ ನಿಕುಂಭನ ಮನೆಗೆ ಬಂದಿದ್ದಾರೆ. ಮನೆಗೆ ಬಂದ ನಾರದರಿಗೆ ನಿಕುಂಭನು ಎದ್ದು ಬಂದು ಸ್ವಾಗತ ಮಾಡಿ ಅವನೂ ಕೂಡ ಅರ್ಘ್ಯಪಾದ್ಯಾದಿಗಳಿಂದ ಪೂಜೆ ಮಾಡಿದ್ದಾನೆ. ಪೂಜೆಯೆಲ್ಲ ಆದಮೇಲೆ ನಾರದರು ನಿಕುಂಭನಿಗೆ ಹೇಳುತ್ತಾ ಇದ್ದಾರೆ ನೀನು ಯಾದವರ

ವಿರೋಧವನ್ನು ಕಟ್ಟಿಕೊಂಡು ಇಷ್ಟು ಸುಖವಾಗಿ ಅನಾಯಾಸವಾಗಿ ನಿಶ್ಚಿಂತನಾಗಿ ಆರಾಮಾಗಿ ಕುಳಿತುಬಿಟ್ಟಿದ್ದೀಯಲ್ಲ ಅಷ್ಟು ಸುಲಭ ಅಲ್ಲ, ಅಲ್ಲಿ ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮ ಎಲ್ಲ ಸಕಲ ಯಾದವರಿಂದ ಸಮೇತನಾಗಿ ಆ ಬ್ರಹ್ಮದತ್ತನಿಗೆ ಸಹಾಯಕನಾಗಿ ಇದ್ದಾನೆ ಒಂದು. ಎರಡನೆಯದಾಗಿ ಆ ಬ್ರಹ್ಮದತ್ತನಿಗೆ ಕನ್ಯೆಯರು ಬಹಳ ಜನ ಇದ್ದಾರೆ, ಬ್ರಹ್ಮದತ್ತನಿಗೆ ಮಡದಿಯರೇ ಐದು ನೂರು ಜನ ಆ ಒಬ್ಬೊಬ್ಬರಿಗೂ ಒಂದು ಗಂಡು, ಒಂದು ಹೆಣ್ಣು ಹೀಗಾಗಿ ಐದು ನೂರು ಜನ ಗಂಡು ಮಕ್ಕಳು, ಐದು ನೂರು ಜನ ಹೆಣ್ಣುಮಕ್ಕಳು ಒಂದು ಸಾವಿರ ಜನ ಅವನಿಗೆ ಮಕ್ಕಳಿದ್ದಾರೆ. ನೀವು ಒಂದು ನೂರು ಕನ್ಯೆಯರನ್ನು ಮಾತ್ರ ಅಪಹಾರ ಮಾಡಿಕೊಂಡು ಹೋಗಿದ್ದೀರಿ, ಅದು ಮಾಯಾ ಕನ್ಯೆಯರನ್ನ ಅಂತ ಮಾತ್ರ ಹೇಳಲಿಲ್ಲ ನಾರದರು, ಇನ್ನೂ ನಾಲ್ಕು ನೂರು ಜನ ಕನ್ಯೆಯರು ಇದ್ದಾರೆ ಅವರನ್ನ ಬೇರೆ ಬೇರೆ ತಮ್ಮ ಸಂಬಂಧಿಕರಿಗೆ, ಯಾದವರಿಗೆ ಎಲ್ಲರಿಗೂ ಕೊಡುವ ನಿರ್ಧಾರವನ್ನು ಅವನು ಮಾಡಿದ್ದಾನೆ ಇಲ್ಲ ಅಂತಲ್ಲ. ಆದರೂ ಅಷ್ಟು ಜನ ಕನ್ಯೆಯರಿದ್ದಾರೆ, ಬೇಕಾದಷ್ಟು ರತ್ನಗಳಿವೆ ಎಲ್ಲವೂ ಇದೆ ಹೀಗಿರುವಾಗ ನೀವು ಇಲ್ಲಿ ಏನು ಜರಾಸಂಧಾದಿ ರಾಜರುಗಳು ಬಂದಿದ್ದಾರೆ ಅವರ ಜೊತೆಗೆ ಸ್ವಲ್ಪ ನೀವು ಸಂಧಾನವನ್ನು ಮಾಡಿಕೊಂಡು ಸಹಾಯವನ್ನು ತೆಗೆದುಕೊಂಡರೆ ಆ ಯಾದವರ ಜೊತೆಗೆ ಯುದ್ಧವನ್ನು ಮಾಡಿ ನೀವು ಗೆದ್ದು ಚೆನ್ನಾಗಿ ನಿಮ್ಮ ಪೌರುಷವನ್ನು ತೋರಿಸಿ ಆ ಎಲ್ಲ ಕನ್ಯೆಯರನ್ನೂ ಪಡೆಯಬಹುದು, ಎಲ್ಲಾ ಸಂಪತ್ತನ್ನೂ ಪಡೆದುಕೊಳ್ಳಬಹುದು. ಅದೆಲ್ಲ ಬಿಟ್ಟು ಇಷ್ಟೇ ಕನ್ಯೆಯರನ್ನ ತೆಗೆದುಕೊಂಡು ಬಂದದ್ದೆ ದೊಡ್ಡ ಪುರುಷಾರ್ಥ ಅಂತ ನಿಶ್ಚಿಂತವಾಗಿ ನೀನು ಕುಳಿತರೆ ದೊಡ್ಡ ಲಾಭದಿಂದಲೂ ವಂಚಿತರಾಗುತ್ತೀರಿ. ಎರಡನೆಯದಾಗಿ ಆ ಶ್ರೀಕೃಷ್ಣ ಪರಮಾತ್ಮನ ಯುದ್ಧದೊಳಗೆ ನೀವು ಸೋತು ಹೋಗುತ್ತೀರಾ ಅದಕ್ಕಾಗಿ ಇವರೆಲ್ಲರ ಸಹಾಯವನ್ನು ತೆಗೆದುಕೊಳ್ಳಬೇಕು ಆ ಸಹಾಯ ತೆಗೆದುಕೊಳ್ಳಬೇಕು ಅಂದರೆ ಅವರಿಗೆ ಚೆನ್ನಾಗಿ ಆದರೋಪಚಾರ ನೀವು ಮಾಡಬೇಕು. ಹೀಗೆ ನಾರದರು ಆ ನಿಕುಂಭನಿಗೆ ಹೇಳಿದಾಗ ಎರಡು ಮಾತಾಡಲಿಲ್ಲ ನಾರದರೇ ನೀವು ಹೇಳಿದ್ದು ಅತ್ಯಂತ ಸೂಕ್ತ ಅಂತ ಕೂಡಲೇ ಎಲ್ಲ ಜರಾಸಂಧಾದಿ ರಾಜರನ್ನ ತನ್ನ ಭವನಕ್ಕೆ ಕರೆಸಿ ಭಾರೀ ವೈಭವದಿಂದ ಅವರೆಲ್ಲರಿಗೂ ಸತ್ಕಾರವನ್ನು ಮಾಡಿದ.

ಪಾಂಡವರು ಶ್ರೀಕೃಷ್ಣನ ಪರಮ ಭಕ್ತರು ಅವರು ಸರ್ವಥಃ ಹೋಗಲಿಲ್ಲ ಅವನು ಕೊಡುವ ಯಾವ ಸತ್ಕಾರವನ್ನು ಸ್ವೀಕಾರ ಮಾಡಲಿಲ್ಲ ಯಾಕೆ ಅಂದರೆ ನಾರದರು ಪಾಂಡವರಿಗೆ ಸೂಚನೆಯನ್ನು ಕೊಟ್ಟಿದ್ದರು ಇದೆಲ್ಲಾ ನಾಟಕ ಮಾಡುತ್ತಾ ಇರುವುದು ನೀವು ಇದರೊಳಗೆ ಭಾಗವಹಿಸುವುದು ಬೇಡ ಅಂತ ಸ್ವಯಂ ಸರ್ವಜ್ಞರಾದ ಭೀಮಸೇನ ದೇವರಿಗೆ ಇದೆಲ್ಲ ಗೊತ್ತು. ಪಾಂಡವರನ್ನು ಮಾತ್ರ ಬಿಟ್ಟು ಇನ್ನುಳಿದ ಎಲ್ಲ ರಾಜರೂ ಕೂಡ ಅವರು ಮಾಡಿದ ಆದರ ಆತಿಥ್ಯ ಉಪಚಾರಗಳನ್ನು ಸ್ವೀಕಾರ ಮಾಡಿದ್ದಾರೆ ಸ್ವೀಕಾರ ಮಾಡಿದ ಮೇಲೆ ನಾವು ಯಾದವರ ಜೊತೆಗೆ ಯುದ್ಧ ಮಾಡುವಾಗ ನಿಮ್ಮ ಸಹಾಯ ಬೇಕು ಅಂತ ಹೇಳಿದಾಗ ಇನ್ನು ಅನಿವಾರ್ಯ ಇಷ್ಟೆಲ್ಲ ಉಪಚಾರ ಮಾಡಿಸಿಕೊಂಡಿದ್ದಾರೆ ದಾಕ್ಷಿಣ್ಯಕ್ಕೆ ಸರಿ ಅಂತ ಒಪ್ಪಿಕೊಂಡಿದ್ದಾರೆ. ನಾವು ಪಡೆಯುವ ರತ್ನ, ಕನ್ಯೆಯರೊಳಗೂ ನಿಮಗೆ ಭಾಗವನ್ನು ಕೊಡುತ್ತೇವೆ ಅಂತ ಆ ಕ್ಷತ್ರಿಯರ ಜೊತೆಗೆ ಮಾತನಾಡಿಕೊಂಡಿದ್ದಾರೆ. ಇಷ್ಟೆಲ್ಲ ಮಾತನಾಡಿಕೊಂಡು ಯುದ್ಧವನ್ನು ಮಾಡುವುದಕ್ಕೆ ಅವರು ಸಿದ್ಧರಾಗುತ್ತಾ ಇದ್ದಾರೆ.

ಈ ಕಡೆಗೆ ಶ್ರೀಕೃಷ್ಣ ಪರಮಾತ್ಮ ತಾನು ಯುದ್ಧದ ಸಿದ್ಧತೆ ಮತ್ತೆ ಪ್ರೀತಿಯ ಮಗ ಪ್ರದ್ಯುಮ್ನನಿಗೆ ಶ್ರೀಕೃಷ್ಣ ಪರಮಾತ್ಮ ಹೇಳುತ್ತಾನೆ. ನೀನು ಎಲ್ಲ ಕಡೆಗೆ ಯಾವ ಯಾವ ಶತ್ರುಗಳು ಎಲ್ಲೆಲ್ಲಿ ಬರುತ್ತಾರೆ, ಹೇಗೆ ಬರುತ್ತಾರೆ, ಎಲ್ಲಿ ತಪ್ಪಿಸಿಕೊಂಡು ಹೋಗುತ್ತಾರೆ, ಇವರೆಲ್ಲಾ ಮಾಯಾವಿಗಳು ಮೇಲೆ ಹಾರುತ್ತಾರೆ, ಅದೃಶ್ಯರಾಗಿ ಯುದ್ಧ ಮಾಡುತ್ತಾರೆ, ಎಲ್ಲಿಂದಲೋ ಆಯುಧಗಳನ್ನು ಹಾಕುತ್ತಾರೆ ನೀನು ಆಕಾಶ ಮಾರ್ಗದಲ್ಲಿಯೇ ಇರು. ಆಕಾಶ ಮಾರ್ಗದಲ್ಲಿಯೇ ಇದ್ದು ಮಾಯಾ ವಿದ್ಯೆಯನ್ನು ಉಪಯೋಗಿಸಿ ಅವರು ಮಾಡುವಂತಹ ಎಲ್ಲ ಯುದ್ಧಗಳಿಗೆ

ಪ್ರತಿಯುದ್ಧವನ್ನು ಮಾಡುವುದಕ್ಕೆ ನೀನು ಆಕಾಶ ಮಾರ್ಗದಲ್ಲಿಯೇ ಇರಬೇಕು ಎಂಬುದಾಗಿ ಅವನಿಗೆ ಹೇಳಿದ್ದಾನೆ. ಅದರಂತೆ ಹಿಂದೆ ಪಾರಿಜಾತ ಹರಣ ಕಾಲದಲ್ಲಿ ಕೃಷ್ಣನ ಎದುರಾಗಿ ಯುದ್ಧ ಮಾಡಿದವರು ಇಂದ್ರನ ಮಗ ಜಯಂತ, ಒಬ್ಬ ಬ್ರಾಹ್ಮಣ ಪ್ರವರ ಅಂತ ಬ್ರಹ್ಮ ದೇವರ ವರದಿಂದ ವಿಶೇಷವಾಗಿ ಉತ್ತಮವಾದ ಸ್ಥಾನವನ್ನು ಪಡೆದಂತಹ ವ್ಯಕ್ತಿ ಅವರಿಬ್ಬರೂ ಆಗ ಎದುರು ಯುದ್ಧ ಮಾಡಿದವರು. ಮುಂದೆ, ಶ್ರೀಕೃಷ್ಣ ಪರಮಾತ್ಮನ ಸ್ವಭಾವತಃ ಭಗವದ್ಭಕ್ತರೇ, ಅವರೂ ದಾಸರೇ, ಜ್ಞಾನೋದಯವಾಗಿ ಅಸುರಾವೇಶ ದೂರ ಆದಮೇಲೆ ದೇವರಿಗೆ ಶರಣಾದವರು, ಅವರಿಗೂ ಆಕಾಶ ಮಾರ್ಗದಲ್ಲಿದ್ದು ಯುದ್ಧ ಮಾಡುವಂತಹ ಸಾಮರ್ಥ್ಯ ಇರುವುದರಿಂದ ಅವರಿಗೂ ಅದನ್ನು ಆದೇಶ ಮಾಡಿದ್ದಾನೆ ಪರಮಾತ್ಮ.

ಆಮೇಲೆ ಆವರ್ತಾ ನದಿಯಲ್ಲಿ ಸ್ನಾನವನ್ನು ಮಾಡಿ, ಗಂಗಾ ದೇವಿಯ ವಿಶೇಷವಾದಂತಹ ಸ್ಮರಣೆಯನ್ನ ಮಾಡಿ ಅಲ್ಲಿ ತಾನೇ ಪರಮಾತ್ಮ ಹಿಂದೆ ಬಂದಾಗ ಬಿಲ್ವೋದಕೇಶ್ವರ ಅಂತ ಗಂಗೋದಕದ ಸ್ಮರಣೆ ಮಾಡಿ, ಬಿಲ್ವ ಪತ್ರದ ಚಿಂತನವನ್ನು ಮಾಡಿ ಅವುಗಳೆರಡನ್ನು ಅಲ್ಲಿ ತಂದು ಲಿಂಗದ ಪ್ರತಿಷ್ಠಾಪನೆಯನ್ನು ಮಾಡಿದ್ದ ಪರಮಾತ್ಮ. ಲೋಕಶಿಕ್ಷಣವನ್ನು ಮಾಡುವುದಕ್ಕೋಸ್ಕರ ಆ ರುದ್ರ ದೇವರ ಅಂತರ್ಯಾಮಿಯಾದ ತನ್ನ ರೂಪಕ್ಕೆ ತಾನು ಪರಮಾತ್ಮ ನಮಸ್ಕಾರವನ್ನು ಮಾಡಿದ್ದಾನೆ. ರುದ್ರ ದೇವರಿಗಿಂತಲೂ ಚಿಕ್ಕವರಾದ ಉಮಾದಿ ಸಕಲ ದೇವತೆಗಳು ಹಾಗೂ ಉಳಿದವರೆಲ್ಲ ರುದ್ರ ದೇವರ ಅನುಗ್ರಹದಿಂದ ತಮ್ಮ ಕಾರ್ಯವನ್ನು ತಾವು ಮಾಡಿಕೊಳ್ಳಬೇಕು ಅಂತ ತೋರಿಸಿ ಕೊಡುವುದಕೋಸ್ಕರ. ತನ್ನ ಸರ್ವೋತ್ತಮತ್ವವನ್ನು ಎಲ್ಲರೂ ತಿಳಿಯುವುದು ಬೇಡ ಅನ್ನುವುದಕ್ಕೋಸ್ಕರವೂ ಕೂಡ ಈ ರೀತಿಯಾಗಿ ಪರಮಾತ್ಮ ನಾಟಕವನ್ನು ಮಾಡುವುದುಂಟು ರಾಮಾವತಾರದಲ್ಲಿಯೂ ಮಾಡಿದ್ದಾನೆ, ಕೃಷ್ಣಾವತಾರದಲ್ಲಿಯೂ ಮಾಡುತ್ತಾನೆ. ಆ ರೀತಿ ಸ್ವಯಂ ಸರ್ವೋತ್ತಮನಾಗಿದ್ದರೂ ರುದ್ರ ದೇವರೇ ಒಂದು ಕಡೆಯಲ್ಲ, ಎರಡು ಕಡೆಯಲ್ಲ ಮಹಾಭಾರತದಲ್ಲಿ, ಭಾಗವತದಲ್ಲಿ ಹಾಗೂ ಅನೇಕ ಪುರಾಣಗಳಲ್ಲಿ ಆ ಭಗವಂತನನ್ನು ಅತ್ಯಂತ ಭಕ್ತಿಯಿಂದ ಸ್ತೋತ್ರವನ್ನು ಮಾಡಿ ಆ ಭಗವಂತನ ಅನುಗ್ರಹವನ್ನು ಪಡೆದದ್ದು ಉಂಟು. ಅಂತಹ ಸರ್ವೋತ್ತಮನಾದಂತಹ ಶ್ರೀಕೃಷ್ಣ ಪರಮಾತ್ಮ ಯುದ್ಧದ ಎಲ್ಲ ಸಿದ್ದತೆಗಳನ್ನು ಮಾಡಿಸಿ ಯುದ್ಧವನ್ನು ಪ್ರಾರಂಭ ಮಾಡಿದ.

ಆ ಸೈನ್ಯದಲ್ಲಿ ಯಾದವರು ಮಕರ ವ್ಯೂಹವನ್ನು ರಚನೆ ಮಾಡಿದ್ದಾರೆ. ಅಂತಹ ಅದ್ಭುತವಾದ ವ್ಯೂಹ ರಚನೆಯನ್ನು ಮಾಡಿಕೊಂಡು ಯುದ್ಧವನ್ನು ಮಾಡುತ್ತಾ ಇದ್ದಾರೆ. ಅನಾಧೃಷ್ಟಿ, ಪೃಥು ಮೊದಲಾದವರೆಲ್ಲ ಯಾದವರು ಅಲ್ಲಿದ್ದಾರೆ ಘನಘೋರವಾದ ಯುದ್ಧ ಪ್ರಾರಂಭವಾಯಿತು. ಅತ್ಯಂತ ಘೋರವಾದ ಯುದ್ಧ ಆ ಸೇನಾಪತಿಯಾಗಿ ಅನಾದೃಷ್ಟಿಯನ್ನು ಮುಂದೆ ನಿಲ್ಲಿಸಿದ್ದಾರೆ. ಆ ಅನಾಧೃಷ್ಟಿ ಬಾಣಗಳ ವೃಷ್ಟಿಯನ್ನು ಮಾಡಿದರೆ ಎದುರಿಗಿದ್ದ ಆ ನಿಕುಂಭನ ರಥವೇ ಕಂಡಿಲ್ಲ ಆ ರೀತಿಯ ಬಾಣ ವೃಷ್ಟಿಗಳನ್ನು ಮಾಡತಕ್ಕಂತಹ ಮಹಾಸಾಮರ್ಥ್ಯ. ಆದರೆ ಸ್ವಲ್ಪ ಹೊತ್ತು ನೋಡಿದಂತಹ ನಿಕುಂಭ ಆ ಅನಾಧೃಷ್ಟಿಯನ್ನ ತನ್ನ ಮಾಯಾ ವಿದ್ಯೆಯಿಂದ ಷಟ್ಪುರ ಗುಹೆಯಲ್ಲಿ ಪ್ರವೇಶ ಮಾಡಿಸಿಬಿಟ್ಟದ್ದಾನೆ ಇದ್ದಕ್ಕಿದ್ದಂತೆ. ಇವನೊಬ್ಬನನ್ನು ಮಾತ್ರ ಅಲ್ಲದಂತೆ ಶ್ರೀಕೃಷ್ಣನ ಮಗನಾದ ಚಾರುದೇಷ್ಣ ಹಾಗೂ ಭೋಜ, ವೈತರಣ, ಸನತ್ಕುಮಾರ, ಋಕ್ಷ, ಷಠ, ಉಲ್ಮುಕ ಬಲರಾಮನ ಮಕ್ಕಳು ಎಲ್ಲರನ್ನೂ ಕೂಡ ಒಬ್ಬೊಬ್ಬರನ್ನ ಒಬ್ಬೊಬ್ಬರನ್ನ ತನ್ನ ಮಾಯಾ ವಿದ್ಯೆಯಿಂದ ಬಂಧನ ಮಾಡಿ, ಅವರನ್ನು ಷಟ್ಪುರಾ ಗುಹಾದಲ್ಲಿ ಪ್ರವೇಶ ಮಾಡಿಸುತ್ತಾ ಇದ್ದಾನೆ. ಶ್ರೀಕೃಷ್ಣ ಪರಮಾತ್ಮ ನೋಡಿದ, ಇವನಿಗೆ ಸರಿಯಾದ ಪಾಠವನ್ನು ಕಲಿಸಬೇಕು ಅಂತ ಕೃಷ್ಣ ಪರಮಾತ್ಮ ನಾನಾ ವಿಧವಾದ ಆಯುಧಗಳನ್ನು ಪ್ರಯೋಗ ಮಾಡುತ್ತಾ ಇದ್ದಾನೆ. ಅವನೂ ಕೂಡ ಪರ್ವತಗಳನ್ನ, ಶಿಖರಗಳನ್ನ, ವೃಕ್ಷಗಳನ್ನ, ದೊಡ್ಡ ದೊಡ್ಡ ಶಿಲೆಗಳನ್ನ ಎಸೆಯುತ್ತಾ ಇದ್ದಾನೆ ಅದೆಲ್ಲವನ್ನ ಭಸ್ಮ ಮಾಡಿ ಹಾಕುತ್ತ ಇದ್ದಾನೆ ಶ್ರೀಕೃಷ್ಣ ಪರಮಾತ್ಮ.

ನಾರಾಯಣಾಗ್ನೀಸ್ತಾನ್ ಸರ್ವಾನ್ ದದಾಹ ಪ್ರಹಸನ್ನಿವ । (84.37 ವಿಷ್ಣುಪರ್ವ)

ಅತ್ಯಂತ ಅನಾಯಾಸವಾಗಿ ಲೀಲಾಜಾಲವಾಗಿ ಅನಂತ ಬಲನಾದ ಶ್ರೀಕೃಷ್ಣ ಪರಮಾತ್ಮನಿಗೆ ಇದೇನು ದೊಡ್ಡದು, ಸುಲಭವಾಗಿ ಆ ಎಲ್ಲ ಶಸ್ತ್ರಾಸ್ತ್ರಗಳನ್ನು ನಾಶ ಮಾಡುತ್ತಾ ಇದ್ದಾನೆ, ಯುದ್ಧ ನಡೆಯುತ್ತಾ ಇದೆ. ಶ್ರೀಕೃಷ್ಣನ ಈ ಬಾಣಗಳ ಪ್ರಹಾರವನ್ನು ತಾಳಲು ಸಾಧ್ಯವಾಗದೇ ಆಕಾಶಕ್ಕೆ ಹಾರುತ್ತಾ ಇದ್ದಾರೆ ಎಲ್ಲ ದೈತ್ಯರು, ಅವರು ಆಕಾಶಕ್ಕೆ ಹಾರಿದರೆ ಮೇಲೆ ಕಾಯುತ್ತ ಇದ್ದರು ಜಯಂತ, ಪ್ರವರ. ಅವರು ಅಲ್ಲಿ ಅವರ ಶಿರಚ್ಛೇದವನ್ನು ಮಾಡುತ್ತಾ ಇದ್ದಾರೆ, ಅಂಗಾಂಗಗಳನ್ನು ಕತ್ತರಿಸಿ ಹಾಕುತ್ತಾ ಇದ್ದಾರೆ, ಮೇಲೆ ಹೋದವರು ಕೆಳಗೆ ಬೀಳುತ್ತಾ ಇದ್ದಾರೆ ಕೈ ಕಾಲುಗಳನ್ನು ಕತ್ತರಿಸಿಕೊಂಡು. ಕೆಳಗೆ ಬಂದರೆ ಕೃಷ್ಣನ ಬಾಣಗಳು, ಮೇಲೆ ಹೋದರೆ ಕೃಷ್ಣನ ಅನುಗ್ರಹಕ್ಕೆ ಪಾತ್ರರಾದಂತಹ ಜಯಂತ ಹಾಗೂ ಪ್ರವರ, ಪ್ರದ್ಯುಮ್ನ ಅವರ ಬಾಣಗಳಿಂದ ಹತರಾಗಿ ಬೀಳುತ್ತಾ ಇದ್ದಾರೆ ಎಲ್ಲಿಯೂ ಅವರಿಗೆ ಸುಖ ಇಲ್ಲ ಒದ್ದಾಡುತ್ತಾ ಇದ್ದಾರೆ. ಈ ಕಡೆಗೆ ಪ್ರದ್ಯುಮ್ನ ತನ್ನ ಅದ್ಭುತವಾದ ವಿದ್ಯೆಯಿಂದ ಒಳಗೇನು ಹಾಕಿ ಅನೇಕ ಜನರನ್ನ ಚಾರುದೇಷ್ಣ ತನ್ನ ತಮ್ಮ ಇವರೇ ಮೊದಲಾದ ಯಾದವರನ್ನೆಲ್ಲ ಬಂಧನ ಮಾಡಿ ಇಟ್ಟಿದ್ದ ಅವರೆಲ್ಲರನ್ನು ಬಿಡಿಸಿದ್ದಾನೆ. ಅವರನ್ನು ಬಿಡಿಸುವುದು ಮಾತ್ರ ಅಷ್ಟೇ ಅಲ್ಲ ಈ ಉಳಿದ ರಾಜರುಗಳೆಲ್ಲ ಇದ್ದರಲ್ಲ ಆ ಎಲ್ಲ ರಾಜರುಗಳನ್ನೂ ಕೂಡ ಬಂಧನ ಮಾಡಿ ಹಾಕಿದ್ದಾರೆ ಜರಾಸಂಧಾದಿ ರಾಜರುಗಳೆಲ್ಲ ಏನಿದ್ದರೋ ಅವರೆಲ್ಲ ಯುದ್ಧ ಮಾಡಲಿಕ್ಕೆ ಬರುತ್ತಾ ಇದ್ದಾರಲ್ಲ ಅವರೆಲ್ಲರನ್ನ ಚೆನ್ನಾಗಿ ಬಂಧನ ಮಾಡಿಬಿಟ್ಟಿದ್ದಾನೆ ಪ್ರದ್ಯುಮ್ನ. ಅಸುರರು ಬಂಧನ ಮಾಡಿದ ಯಾದವರನ್ನ ಮೋಚನೆ ಮಾಡಿದ ತಾನು ಈ ಎಲ್ಲ ಜರಾಸಂಧಾದಿಗಳನ್ನು ಬಂಧನ ಮಾಡಿಬಿಟ್ಟಿದ್ದಾನೆ ಅವರೆಲ್ಲರೂ ಆ ಮಾಯಾ ಪಾಶದಿಂದ ಬದ್ಧರಾಗಿ ಅಲ್ಲಿ ಬಿದ್ದುಕೊಂಡಿದ್ದಾರೆ ಯುದ್ಧ ನಡೆಯುತ್ತ ಇದೆ.

ವಿಸ್ರಬ್ಧಂ ವರ್ತತಾಂ ಕರ್ಮ ಮಾ ಭೈಃ ಪಶ್ಯ ಧನಂಜಯಮ್ ॥ (84.66 ವಿಷ್ಣುಪರ್ವ)

ನ ದೇವೇಭ್ಯೋ ನಾಸುರೇಭ್ಯೋ ನಾಗೇಭ್ಯೋ ದ್ವಿಜಸತ್ತಮ ।
ಭಯಂ ಹಿ ವಿದ್ಯತೇ ತಸ್ಯ ಗೋಪ್ತಾರೋ ಯಸ್ಯ ಪಾಣ್ಡವಾಃ ॥ (84.67 ವಿಷ್ಣುಪರ್ವ)

ಘೋರವಾದಂತಹ ಯುದ್ಧ ನಡೆಯುತ್ತ ಇರುವಾಗ ಈ ಬ್ರಹ್ಮದತ್ತ ಯಜ್ಞ ಮಾಡುವ ಸ್ಥಳದಲ್ಲಿ ಪಾಂಡವರನ್ನು ನಿಲ್ಲಿಸಿದ್ದಾರೆ ಹೊರಗೆ ಯುದ್ಧ ನಡೆಯುತ್ತ ಇದೆ ನಾನೊಬ್ಬ ಇಲ್ಲಿ ಯಜ್ಞ ಮಾಡುತ್ತಾ ಕುಳಿತಿದ್ದೇನೆ ಎಲ್ಲರೂ ಯಜ್ಞಕ್ಕೆ ಬಂದವರು ಯುದ್ಧಕ್ಕೆ ಹೊರಟರು. ಉಳಿದವರೆಲ್ಲಾ ಋಷಿಗಳು ಮುನಿಗಳು ಇಲ್ಲಿ ನನಗೆ ಏನಾದರೂ ಆಪತ್ತು ಬಂದರೆ ಗತಿ ಏನು ಅಂತ ಬ್ರಹ್ಮದತ್ತ ಚಿಂತೆಯನ್ನು ಮಾಡುತ್ತಾ ಇರುವಾಗ ಅವನಿಗೆ ಧೈರ್ಯವನ್ನು ಹೇಳುತ್ತಾರೆ. ಪಾಂಡವರು ಇದ್ದಾಗ ನಿನಗೆ ಏತರ ಭಯ ಯಾವ ಯಾವ ಭಯಕ್ಕೂ ಅವಕಾಶ ಇಲ್ಲ ಅರ್ಜುನ ಇದ್ದಾನೆ, ಭೀಮಸೇನ ದೇವರು ಇದ್ದಾರೆ ಎಲ್ಲ ರೀತಿಯಿಂದಲೂ ನಿಮಗೆ ರಕ್ಷಣೆ ಆಗುತ್ತದೆ ನೀನು ಚಿಂತೆಯನ್ನು ಮಾಡಬೇಡ ಅಂತ ಅವನಿಗೆ ಭರವಸೆಯನ್ನು ಕೊಟ್ಟಿದ್ದಾರೆ. ಅನೇಕ ಅಸುರರೆಲ್ಲ ಓಡಿ ಹೋಗುತ್ತಾ ಇದ್ದಾರೆ ಈ ಪ್ರದ್ಯುಮ್ನನ ಅದ್ಭುತವಾದ ಮಾಯಾ ಯುದ್ಧ, ಜಯಂತ ಪ್ರವರರ ಪರಾಕ್ರಮ, ಶ್ರೀಕೃಷ್ಣನ ಅಪಾರವಾದಂತಹ ಪರಾಕ್ರಮ ಇದಕ್ಕೆಲ್ಲ ಭಯಗ್ರಸ್ಥರಾಗಿ ಯುದ್ಧವನ್ನು ಬಿಟ್ಟು ಸಾಕು ಅಂತ ಓಡಿ ಹೋಗುತ್ತಾ ಇದ್ದಾರೆ. ನಿಕುಂಭ ಎಲ್ಲರನ್ನು ಕರೆದು ಬೈಯುತ್ತಾ ಇದ್ದಾನೆ ನೋಡಿ, ಅಂತಹ ಅಸುರನಿಗೂ ಮತ್ತೆ ಧರ್ಮ ಗೊತ್ತಿದೆ ಯುದ್ಧದೊಳಗೆ ಬೆನ್ನು ತೋರಿಸಿ ಹೋದರೆ ಏನು ಪ್ರಯೋಜನ ಅಂತಹ ಜೀವನವೇ ವ್ಯರ್ಥ ಬದುಕಿ ಏನು ಸಾರ್ಥಕ.

ಫಲಂ ಜಿತ್ವೇಹ ಭೋಕ್ತವ್ಯಂ ರಿಪೂನ್ ಸಮರಕರ್ಕಶಾನ್ ।
ಹತೇನ ಚಾಪಿ ಶೂರೇಣ ವಸ್ತವ್ಯಂ ತ್ರಿದಿವೇ ಸುಖಮ್ ॥ (85.5 ವಿಷ್ಣುಪರ್ವ)

ಆ ರಣರಂಗದಲ್ಲಿ ಧೈರ್ಯದಿಂದ ಯುದ್ಧವನ್ನು ಆಡುತ್ತಾ ಮೃತರಾದರೆ ಸ್ವರ್ಗದಲ್ಲಿ ಸುಖವಾಗುತ್ತದೆ, ಬೆನ್ನು ತೋರಿಸಿ ಓಡಿ ಹೋದರೆ ಇಲ್ಲಿಯೂ ಅವಮಾನ ಮೇಲೆಯೂ ಸುಖ ಇಲ್ಲ ನರಕದಲ್ಲಿ ದುಃಖವನ್ನು ಅನುಭವಿಸಬೇಕಾಗುತ್ತದೆ ಅಂತ ಹೇಳಿ ತನ್ನ ಅಸುರರನ್ನೆಲ್ಲ ಮತ್ತೆ ತಿರುಗಿ ಕರೆಸಿಕೊಳ್ಳುತ್ತಾನೆ. ಅವರೂ ಬರುತ್ತಾರೆ ಆ ನಿಕುಂಭ ಕೊಟ್ಟ ಪ್ರೋತ್ಸಾಹನದಿಂದ ದ್ವಿಗುಣ ವೇಗದಿಂದ ಇನ್ನಷ್ಟು ಉತ್ಸಾಹದಿಂದ ಭಾರೀ ಯುದ್ಧವನ್ನು ಮತ್ತೆ ಪ್ರಾರಂಭ ಮಾಡುತ್ತಾರೆ ಯಜ್ಞವಾಟಕ್ಕೆ ಬಂದಂಥವರನ್ನೆಲ್ಲ ಅರ್ಜುನ ನಾಶ ಮಾಡುತ್ತಾ ಇದ್ದಾನೆ ಸಂಹಾರ ಮಾಡುತ್ತಾ ಇದ್ದಾನೆ. ಯಜ್ಞವಾಟದ ಹತ್ತಿರ ಬಂದರೆ ಯುಧಿಷ್ಠಿರ, ಭೀಮಸೇನ ದೇವರು, ಅರ್ಜುನ ನಕುಲ, ಸಹದೇವ ಪಂಚ ಪಾಂಡವರ ಪ್ರಚಂಡವಾದ ಬಾಣಗಳು, ಮೇಲೆ ಹೋಗುತ್ತೇವೆ ಅಂದರೆ ಜಯಂತ, ಪ್ರವರರ ಬಾಣಗಳು, ಈಚೆಗೆ ಬರುತ್ತೇವೆ ಅಂದರೆ ಶ್ರೀಕೃಷ್ಣ ಪರಮಾತ್ಮನಿಂದ ದೊಡ್ಡದಾದ ರಕ್ತದ ನದಿಯೇ ಹರಿಯುತ್ತ ಇದೆ ಅಂತ ಹೇಳುತ್ತಾರೆ ಅಂತಹ ಭಾರೀ ಯುದ್ಧ. **'ಸುಸ್ರಾವ ಶೋಣಿತನದೀ'**[1] ಅಂತಹ ಒಂದು ಭಾರೀ ನದಿ ಹರಿಯುತ್ತಾ ಇದೆ ಅಷ್ಟು ಆ ಎಲ್ಲ ದುಷ್ಟರಾದ ಅಸುರರ ಸಂಹಾರವನ್ನು ಮಾಡುತ್ತಾ ಇದ್ದಾರೆ ಎಲ್ಲರೂ ಸೇರಿ. ಪ್ರವರ ಹಾಗೂ ನಿಕುಂಭರ ಮಧ್ಯದಲ್ಲಿ ಯುದ್ಧ ನಡೆಯುತ್ತಾ ಇದೆ ಆ ಪ್ರವರನನ್ನ ಚೆನ್ನಾಗಿ ಹೊಡೆದಿದ್ದಾನೆ ವೈಫ ಎಂಬ ಆಯುದದಿಂದ ನಿಕುಂಭ, ಜಯಂತ ಬಂದು ಸ್ಪರ್ಶ ಮಾಡಿ ನೋಡುತ್ತಾನೆ ತನ್ನ ಮಿತ್ರನಾದಂತಹ ಪ್ರವರ ಬದುಕಿದ್ದಾನೋ ಇಲ್ಲವೋ ಅಂತ ಬದುಕಿದ್ದಾನೆ ಅಂತ ಗೊತ್ತಾಗಿದೆ ಸಂತೋಷವಾಗಿದೆ ಆಲಿಂಗನವನ್ನು ಮಾಡಿಕೊಂಡು ಅವನು ಹೊರಟಿದ್ದಾನೆ.

ಮುಂದೆ ನಿಕುಂಭ ಆಲೋಚನೆ ಮಾಡಿದ ನಾನು ಜಯಂತ ಬಂದು ಯುದ್ಧ ಮಾಡುತ್ತಾನೆ ಅವನ ಜೊತೆಗೆ ನಾನು ಯುದ್ಧ ಮಾಡಿ ಪ್ರಯೋಜನ ಏನು, ಏನೇ ಕಷ್ಟ ಆಗಲಿ ಯುದ್ಧ ಆಡಿದರೆ ಕೃಷ್ಣನ ಜೊತೆಗೆ ಆಡಬೇಕು ಸತ್ತರೆ ಅವನ ಕೈಯಿಂದ ಸಾಯಬೇಕು ಬೇರೆಯವರ ಜೊತೆಗೆ ಯುದ್ಧ ಮಾಡಿದರೆ ನನಗೆ ಮರ್ಯಾದೆ ಸರಿ ಹೋಗೋದಿಲ್ಲ ಅಂತ ಶ್ರೀಕೃಷ್ಣ ಪರಮಾತ್ಮನು ಇದ್ದಲ್ಲಿಗೆ ನಿಕುಂಭ ಬರುತ್ತಾ ಇದ್ದಾನೆ. ಇದ್ದಕ್ಕಿದ್ದ ಹಾಗೆ ಜಯಂತನ ಜೊತೆಗೆ ಯುದ್ಧ ಮಾಡುವ ನಿಕುಂಭ ಅದೃಶ್ಯನಾಗಿ ಶ್ರೀಕೃಷ್ಣ ಪರಮಾತ್ಮನು ಇದ್ದಲ್ಲಿಗೆ ಬಂದ ಅಲ್ಲಿ ಯುದ್ಧ ನಡೆಯುತ್ತ ಇದೆ ಘೋರವಾಗಿ ಇರತಕ್ಕಂತಹ ಯುದ್ಧ ಎಲ್ಲ ಪಂಚ ಪಾಂಡವರು, ಶ್ರೀಕೃಷ್ಣ ಪರಮಾತ್ಮ ಎಲ್ಲರೂ ಕೂಡ ಅಲ್ಲಿ ಇದ್ದಾರೆ ಯುದ್ಧವನ್ನು ಮಾಡುತ್ತಾ ಇದ್ದಾನೆ. ಏನು ಮಾಡಿದರೂ ಕೂಡ ಸುಲಭವಾಗಿ ಅವನನ್ನ ಸಂಹಾರ ಮಾಡಲಿಕ್ಕೆ ಆಗುತ್ತಾ ಇಲ್ಲಲ್ಲ ಯಾಕೆ ಏನು ಇವನ ಮಹತ್ವ ಅಂತ ಅರ್ಜುನ ಕೃಷ್ಣನಿಗೆ ಕೇಳುತ್ತಾನೆ ಕಾರಣ ಅರ್ಜುನ ಸಾಕಷ್ಟು ಬಾಣಗಳನ್ನು ಬಿಟ್ಟರೂ ಕೂಡ ಅದೇನು ಆ ನಿಕುಂಭನ ಒಳಗೆ ಹೋಗುತ್ತ ಇಲ್ಲ ಸುಮ್ಮನೆ ಹತ್ತಿರ ಹೋಗಿ ಹೀಗೆ ಬೀಳುತ್ತಾ ಇವೆ ಕೆಳಗೆ. ಎಂತೆಂತಹ ಪ್ರಸಂಗದಲ್ಲಿಯೂ ಎಂತಹ ಪರ್ವತಗಳನ್ನೂ ಭೇಧನ ಮಾಡಿ ಹೋಗುವಂತಹ ನನ್ನ ಬಾಣಗಳು ಈ ನಿಕುಂಭನಿಗೆ ಯಾಕೆ ಪೆಟ್ಟು ಕೊಡುತ್ತಾ ಇಲ್ಲ ಅಂತ ಸುಮ್ಮನೆ ಅವನ ಮೈಗೆ ಹತ್ತುತ್ತೆ ಕೆಳಗೆ ಬಿದ್ದುಬಿಡುತ್ತದೆ ಏನಿದು ವಿಶೇಷ ಅಂತ. ಕೃಷ್ಣ ಹೇಳುತ್ತಾನೆ ಹಿಂದೆ ಇವನು ತಪಸ್ಸು ಮಾಡಿದ್ದ **'ಶತಂ ವರ್ಷಸಹಸ್ರಾಣಾಂ'**[2] ಲಕ್ಷ ವರ್ಷಗಳವರೆಗೆ ಇವನು ತಪಸ್ಸು ಮಾಡಿ ರುದ್ರ ದೇವರನ್ನು ಕುರಿತು ವರ ಪಡೆದಿದ್ದಾನೆ ಮೂರು ದೇಹಗಳು ನನಗೆ ಬೇಕು ಅಂತ ಜೀವ ಒಬ್ಬನೇ, ಒಬ್ಬ ಜೀವನಿಗೆ ಒಂದು ದೇಹ ಅಲ್ಲ, ನಾನು ಜೀವ ಒಬ್ಬ ನನಗೆ ಮೂರು ದೇಹಗಳು ಬೇಕು, ಆ ಮೂರು ದೇಹಗಳು ಅವಧ್ಯವಾಗಿ ಇರಬೇಕು ಸಾಯಬಾರದು ಆ ರೀತಿ ನನಗೆ ವರ ಕೊಡಬೇಕು ಅಂತ ಕೇಳಿದ

1. 85.12 ವಿಷ್ಣುಪರ್ವ; 2. 85.36 ವಿಷ್ಣುಪರ್ವ

ತಥಾಸ್ತು ಅಂತ ರುದ್ರ ದೇವರು ವರ ಕೊಡುತ್ತಾರೆ. ವರ ಕೊಡುವಾಗ ರುದ್ರ ದೇವರು ಬ್ರಹ್ಮ ದೇವರು ಹೇಳಿದಂತೆ ಕರಾರು ಹಾಕುತ್ತಾರೆ ಮತ್ತೆ ನಿನಗೆ ಮೂರು ಶರೀರಗಳನ್ನು ಕೊಡುತ್ತೇನೆ ನೀನು ಯಾರಿಂದಲೂ ಸಾಯುವುದಿಲ್ಲ.

ಮಮ ವಾ ಬ್ರಾಹ್ಮಣಾನಾಂ ವಾ ವಿಷ್ಣೋರ್ವಾಪ್ರಿಯಮಾಚರನ್ ॥ (85.38 ವಿಷ್ಣುಪರ್ವ)

ಭವಿಷ್ಯಸಿ ಹರೇರ್ವಧ್ಯೋ ನ ತ್ವನ್ಯಸ್ಯ ಮಹಾಸುರ ॥ (85.39 ವಿಷ್ಣುಪರ್ವ)

ಆದರೆ ನನ್ನ ಅಥವಾ ವಿಷ್ಣುವಿನ ಅಥವಾ ನಮ್ಮ ಭಕ್ತರ ವಿರೋಧವನ್ನು ನೀನು ಮಾಡಿದರೆ ಮಾತ್ರ ಆಗ ಸಾಕ್ಷಾತ್ ಶ್ರೀಹರಿಯೇ ಬಂದು ನಿನ್ನ ಸಂಹಾರವನ್ನು ಮಾಡುತ್ತಾನೆ ಆಗ ನೀನು ಅದಧ್ಯನಾಗಿ ಇರುವುದಕ್ಕೆ ಸಾಧ್ಯ ಇಲ್ಲ, ಅದನ್ನು ಮಾಡದಂತೆ ನಿನ್ನ ಪಾಡಿಗೆ ನೀನು ಇದ್ದರೆ ಅವಶ್ಯವಾಗಿ ನೀನು ಅವಧ್ಯನಾಗಿ ಇರಬಹುದು ಅಂತ. ಅಂದರೆ ರುದ್ರ ದೇವರಿಗೆ ಅಷ್ಟು ನಿಶ್ಚಯ ಇವನು ಮಹಾದುಷ್ಟ ಅಸುರ ಇವನು ತನ್ನ ಪಾಡಿಗೆ ತಾನು ಇರುವುದೇ ಇಲ್ಲ ಸಜ್ಜನರ ದ್ರೋಹ ಮಾಡಿಯೇ ಮಾಡುತ್ತಾನೆ. ಪರಮಾತ್ಮ ಇವನನ್ನು ಸಂಹಾರ ಮಾಡುತ್ತಾನೆ ಹೀಗಾಗಿ ನಾನು ಇವನು ಅವಧ್ಯನಾಗಲಿ ಅಂತ ವರ ಕೊಟ್ಟರೆ ಏನು ತಪ್ಪಿಲ್ಲ ಇವನ ಯೋಗ್ಯತೆಗೆ ತಕ್ಕಂತೆ ಇವನು ಆ ವರವನ್ನು ಉಳಿಸಿಕೊಳ್ಳುವುದಕ್ಕೆ ಆಗುವುದಿಲ್ಲ ಅಂತ ನನಗೆ ಗೊತ್ತು ಅಂತ ಅವರು ಈ ರೀತಿಯ ವರವನ್ನು ಕೊಟ್ಟಿರುತ್ತಾರೆ. ಅದರಲ್ಲಿ ಭಾನುಮತಿಯ ಅಪಹರಣ ಮಾಡುವ ಕಾಲದಲ್ಲಿ ಇವನ ಒಂದು ದೇಹವನ್ನ ನಾನೇ ಸಂಹಾರ ಮಾಡಿದ್ದೇನೆ ಅಂತ ಕೃಷ್ಣ ಹೇಳುತ್ತಾನೆ, ಇನ್ನೊಂದು ಇವನು ದಿತಿ ತನ್ನ ತಾಯಿ ಅಸುರರ ತಾಯಿ, ದೈತ್ಯರಿಗೆ ತಾಯಿಯಾದ ದಿತಿ ದೇವಿ ಆ ದಿತಿ ದೇವಿಯ ಸೇವೆ ಮಾಡುವುದಕ್ಕೆ ಒಂದು ರೂಪದಿಂದ ಅಲ್ಲಿದ್ದಾನೆ, ಈಗ ಇನ್ನೊಂದು ರೂಪದಿಂದ ಇಲ್ಲಿ ಇದ್ದಾನೆ ಷಟ್ಪುರದಲ್ಲಿ. ಇದರ ಜೊತೆಗೆ ನಾನು ಈಗ ಯುದ್ಧವನ್ನು ಮಾಡುತ್ತಾ ಇದ್ದೇನೆ ಹೀಗೆಲ್ಲ ಆ ರುದ್ರ ದೇವರ ವರ ಇದೆ ಹೀಗಾಗಿ ನೀನು ಹೊಡೆದ ಬಾಣ ಅವನಿಗೆ ಏನು ಪೆಟ್ಟು ಕೊಡುತ್ತಾ ಇಲ್ಲ. ಹೌದಾ ಅಂತ ಇನ್ನೂ ಹೆಚ್ಚು ಕಥೆ ಕೇಳಬೇಕು ಅಂತ ಅರ್ಜುನನಿಗೆ ಉತ್ಸಾಹ ಕಥೆ ಬಹಳ ಕೇಳಬೇಡ ಮೊದಲಿಗೆ ಯುದ್ಧ ಆಗಬೇಕು ಅಂದ.

ತ್ವರಯಾಸ್ಯ ವಧೇ ವೀರ ಕಥಾ ಪಶ್ಚಾದ್ ಭವಿಷ್ಯತಿ ॥ (85.43 ವಿಷ್ಣುಪರ್ವ)

ಶೀಘ್ರದಲ್ಲಿ ಮೊದಲು ಯುದ್ಧ ಆಡೋಣ ಅಂತ ಶ್ರೀಕೃಷ್ಣ ಪರಮಾತ್ಮ ಮತ್ತೆ ಮುಂದೆ ಯುದ್ಧವನ್ನು ಮಾಡುತ್ತ ಇದ್ದಾನೆ ಘೋರವಾದಂತಹ ಯುದ್ಧ ಎಲ್ಲ ನಡೀತಾ ಇದೆ. ಆ ಯುದ್ಧವಾಡುವ ಪ್ರಸಂಗದಲ್ಲಿ ಪ್ರದ್ಯುಮ್ನ ಎಲ್ಲ ಯಾದವರನ್ನು ಮೋಚನೆ ಮಾಡಿದ ಇವರನ್ನೆಲ್ಲ ಕಟ್ಟಿ ಹಾಕಿದ್ದ ಬಂಧನ ಮಾಡಿ ಹಾಕಿದ್ದ ಜರಾಸಂಧಾದಿಗಳನ್ನ. ಆ ಜರಾಸಂಧಾದಿಗಳು ಎಲ್ಲಾ ರಾಜರುಗಳು ಕೂಡ ಹೇಗಾದರೂ ಮಾಡಿ ನಮ್ಮನ್ನು ಅಷ್ಟು ಮೋಚನೆ ಮಾಡಿಬಿಡಪ್ಪ ಈ ಪಾಶದಿಂದ ಅಂತ ದಯಮಾಡಿ ಮೋಚನೆ ಮಾಡು ಅಂತ ಕೇಳಿಕೊಳ್ಳುತ್ತಾರೆ ಕೇಳಿಕೊಂಡಾಗ ಅವರನ್ನೂ ಮೋಚನೆ ಮಾಡುತ್ತಾನೆ. ಮೋಚನೆ ಮಾಡಿದರೆ ಭಾರೀ ನಾಚಿಕೆ ಆಯಿತು ಅವರಿಗೆ ಯಾವ ಯಾದವರ ವಿರುದ್ಧವಾಗಿ ಯುದ್ಧವನ್ನು ಮಾಡಿ ನಾವು ಅಸುರರಿಗೆ ಸಹಾಯ ಮಾಡಬೇಕು ಅಂತ ಬಂದವಿ ಅಂತಹ ಯಾದವರಿಂದಲೇ ಬದ್ಧರಾಗಿ ಮತ್ತೆ ಪುನಃ ನಮ್ಮ ಮೇಲೆ ದಯೆ ತೋರಿ ಅವರು ಮೋಚನೆ ಮಾಡುವಂತಾಯಿತಲ್ಲ ಅಂತ

ಅಧೋಮುಖಮುಖಾಃ ಸರ್ವೇ ಬದ್ಧಮೌನಾ ನರಾಧಿಪಾಃ । (85.52 ವಿಷ್ಣುಪರ್ವ)

ಕೆಳಗೆ ಮುಖ ಹಾಕಿ ಮೌನದಿಂದ ನಾಚಿಕೆಯಿಂದ ಎಲ್ಲರೂ ತೆರಳಿ ಹೋಗಿದ್ದಾರೆ. ಅವರಿಗೆ ಒಂದು ನಾವು ಮಾಡಿದ ತಪ್ಪಿಗೆ ಶಿಕ್ಷೆಯನ್ನು ಪಡೆದಿದ್ದೇವೆ ಅಂತ ಇಷ್ಟು ಗೊತ್ತಾದರೆ ಸಾಕು ಶ್ರೀಕೃಷ್ಣನ ಸಾಮರ್ಥ್ಯ ಏನು, ಕೃಷ್ಣ ಭಕ್ತರ ಸಾಮರ್ಥ್ಯ ಏನು ಇದನ್ನು ಅವರಿಗೆ ತೋರಿಸಿದರೆ ಸಾಕು ಇಷ್ಟಾದರೆ ಸಾಕು ಅಂತ ನಾರದರ ಉದ್ದೇಶ್ಯ ಇತ್ತು ಅಷ್ಟಾಗಿದೆ ಅಷ್ಟು ಅವಮಾನವನ್ನು ಮಾಡಿಸಿಕೊಂಡು ಜರಾಸಂಧಾದಿಗಳು ಆಚೆಗೆ ಹೋಗಿದ್ದಾರೆ.

ಈ ಕಡೆಗೆ ಪುನಃ ಯುದ್ಧ ಪ್ರಾರಂಭವಾಗಿದೆ ಶ್ರೀಕೃಷ್ಣ ಪರಮಾತ್ಮ ಸ್ವಲ್ಪ ನಾಟಕ ಮಾಡುತ್ತಾನೆ ಆ ನಿಕುಂಭನ ಜೊತೆಗೆ ಯುದ್ಧ ಮಾಡುವಾಗ ತನಗೆ ಏನೋ ಬಹಳ ಶ್ರಮ ಆದವರ ಹಾಗೆ ಆಗ ಎಲ್ಲ ಋಷಿಗಳು ಮುನಿಗಳು ಜಪ ಮಾಡಿದ ಹಾಗೆ **'ಜೇಪುರ್ಮುನಿಗಣಾಸ್ತತ್ರ'**[1] ಈ ರೀತಿಯೆಲ್ಲ ಮಾಡುವಾಗ ರುದ್ರ ದೇವರು ಬಂದು ಶ್ರೀಕೃಷ್ಣ ಪರಮಾತ್ಮನ ಪ್ರಾರ್ಥನೆ ಮಾಡುತ್ತಾರೆ. ಯಾಕೆ ನಾಟಕವನ್ನು ಮಾಡುತ್ತೀಯಾ, ಹೆಚ್ಚು ಹೊತ್ತು ಆ ನಿಕುಂಭನ ಜೊತೆಗೆ ಯಾಕೆ ಕ್ರೀಡೆಯನ್ನು ಮಾಡುವುದು ಬೇಗನೆ ಸುದರ್ಶನ ಚಕ್ರದಿಂದ ಅವನನ್ನು ಸಂಹಾರ ಮಾಡು ಅಂತ ಪ್ರಾರ್ಥನೆ ಮಾಡಿದಾಗ ಪರಮಾತ್ಮ ಸುದರ್ಶನ ಚಕ್ರದಿಂದ ಆ ನಿಕುಂಭನನ್ನ ಸಂಹಾರ ಮಾಡಿದ್ದಾನೆ ದೇವತೆಗಳೆಲ್ಲ ದುಂಧುಭಿ ನಾದವನ್ನು ಮಾಡಿದ್ದಾರೆ, ಪುಷ್ಪವೃಷ್ಟಿಯನ್ನು ಮಾಡಿದ್ದಾರೆ, ಶ್ರೀಕೃಷ್ಣ ಪರಮಾತ್ಮನ ಸ್ತುತಿಯನ್ನು ಮಾಡುತ್ತಾರೆ. ಆ ಎಲ್ಲ ಕನ್ಯೆಯರನ್ನ ಬ್ರಹ್ಮದತ್ತನು ತಾನು ಸಂಕಲ್ಪ ಮಾಡಿದ ವರರಿಗೆ ತನ್ನ ಕನ್ಯೆಯರನ್ನು ತಾನು ಕೊಟ್ಟಿದ್ದಾನೆ, ದೈತ್ಯ ಕನ್ಯೆಯರು ಎಷ್ಟೋ ಜನ ಇದ್ದರು ಯೋಗ್ಯರಾದ ಕನ್ಯೆಯರು ಆ ಎಲ್ಲ ದೈತ್ಯರ ಸಂಹಾರವಾದ ಮೇಲೆ ಆ ಕನ್ಯೆಯರನ್ನು ಕೂಡ ಯೋಗ್ಯರಾದ ವರರನ್ನು ನೋಡಿ ಯಾದವರಲ್ಲಿ ಅನೇಕ ಸಜ್ಜನರಿಗೆ ಆ ದೈತ್ಯ ಕನ್ಯೆಯರನ್ನು ಕೊಟ್ಟು ಮದುವೆ ಮಾಡಿದ್ದಾನೆ. ಈ ರೀತಿ ಬಂದಂತಹ ಪಾಂಡವರಿಗೆ ಹಾಗೂ ಎಲ್ಲ ಜನರಿಗೂ ಕೂಡ ಬ್ರಹ್ಮದತ್ತನು ಬೇಕಾದಷ್ಟು ಮುತ್ತು ರತ್ನಗಳನ್ನೆಲ್ಲಾ ಕೊಟ್ಟಿದ್ದಾನೆ. ಬ್ರಹ್ಮದತ್ತನಿಗೆ ಆ ಷಟ್ಪುರದೊಳಗಿರುವ ಅಸುರರ ಸಂಹಾರ ಆದಮೇಲೆ ಷಟ್ಪುರ ಖಾಲಿಯಾಯಿತು ಇಲ್ಲಿಯೇ ಇದ್ದು ನೀನು ನಿನ್ನ ಎಲ್ಲ ಸತ್ಕಾರ್ಯಗಳನ್ನು ಮಾಡು ಅಂತ ಆ ಬ್ರಹ್ಮದತ್ತನಿಗೆ ಆ ಷಟ್ಪುರವನ್ನು ಕೊಟ್ಟು ಪರಮಾತ್ಮ ಅಲ್ಲಿಂದ ಹೊರಟು ಬಂದಿದ್ದಾನೆ ಅಂತ ತಿಳಿಸುತ್ತಾರೆ.

ಇದರ ಮಹತ್ವ ಏನು ಅಂದರೆ **'ಇದಂ ಪೂಸವನಂ ಪ್ರೋಕ್ತಂ'** ಈ ಷಟ್ಪುರಾಸುರರ ವಧವನ್ನ ಶ್ರೀಕೃಷ್ಣ ಪರಮಾತ್ಮ ತಾನು ಮಾಡಿದ್ದಾನೆ ಅಂತ ಯಾದವರಿಂದ, ಪ್ರದ್ಯುಮ್ನಾದಿಗಳಿಂದ, ಕೆಲವರ ಸಂಹಾರ ಮಾಡಿಸಿ ಮುಖ್ಯವಾದ ಪ್ರಧಾನ ಅಸುರನನ್ನು ತಾನು ಶ್ರೀಕೃಷ್ಣ ಪರಮಾತ್ಮ ಸಂಹಾರ ಮಾಡಿದ್ದಾನೆ ಅನ್ನುವ ಈ ಕಥೆಯನ್ನು ಯಾರು ಚೆನ್ನಾಗಿ ಕೇಳಿ ತಿಳೀತಾರೋ ಅವರಿಗೆ ಈ ಶ್ರವಣವೇ ಒಂದು ಪೂಸವನ ವ್ರತ ಇದ್ದ ಹಾಗೆ ಶ್ರೇಷ್ಯವಾದಂತಹ ಪುತ್ರ ಸಂತಾನದ ಪ್ರಾಪ್ತಿಗೆ.

ಅಪುತ್ರೋ ಲಭತೇ ಪುತ್ರಮಧನೋ ಲಭತೇ ಧನಮ್ ।
ವ್ಯಾಧಿತೋ ಮುಚ್ಯತೇ ರೋಗೀ ಬದ್ಧಶ್ಚಾಪ್ಯಥ ಬನ್ಧನಾತ್ ॥ (85.76 ವಿಷ್ಣುಪರ್ವ)

ಇದಂ ಪುಂಸವನಂ ಪ್ರೋಕ್ತಂ ಗರ್ಭಾಧಾನಂ ಚ ಭಾರತ ।
ಶ್ರಾದ್ಧೇಷು ಪಠಿತಂ ಸಮ್ಯಗಕ್ಷಯ್ಯಕರಣಂ ಸ್ಮೃತಮ್ ॥ (85.77 ವಿಷ್ಣುಪರ್ವ)

1. 85.56 ವಿಷ್ಣುಪರ್ವ

ಶ್ರಾದ್ಧ ಕಾಲದಲ್ಲಿ ಪಠಣ ಮಾಡಿದರೆ ಶ್ರೇಷ್ಠವಾದ ಫಲ ಸಿಗುತ್ತದೆ, ಅಕ್ಷಯ್ಯವಾದ ಫಲ ಸಿಗುತ್ತದೆ ಎಂಬುದಾಗಿ ವರ್ಣನೆಯನ್ನು ಮಾಡುತ್ತಾರೆ.

ಮಣಿಕನಕವಿಚಿತ್ರಪಾಣಿಪಾದೋ ನಿರತಿಶಯಾರ್ಕಗುಣೋಽರಿಹಾದಿ ನಾಥಃ ।

ಚತುರುದಧಿಶಯಶ್ಚತುರ್ವಿಧಾತ್ಮಾ ಜಯತಿ ಜಗತ್ಪುರುಷಃ ಸಹಸ್ರನಾಮಾ ॥ (85.79 ವಿಷ್ಣುಪರ್ವ)

ಅನಂತ ನಾಮಗಳಿಂದ ಪ್ರತಿಪಾದ್ಯನಾದಂತಹ ಸಮುದ್ರಶಾಯಿಯಾದ ಸಕಲ ಜಗನ್ನಿಯಾಮಕನಾಗಿ ಇರತಕ್ಕಂತಹ ಶ್ರೀಕೃಷ್ಣ ಪರಮಾತ್ಮ ಸರ್ವದಾ ಸರ್ವೋತ್ಕೃಷ್ಟನಾಗಿದ್ದಾನೆ, ಸರ್ವದಾ ಸಕಲ ಅಸುರರನ್ನ ಎಲ್ಲ ದುರ್ಜನರನ್ನ ಸೋಲಿಸಿ ಸಜ್ಜನರಿಗೆ ವಿಜಯವನ್ನು ಕೊಡುವಂತಹ ಸ್ವಾಮಿ ಸರ್ವೋತ್ಕೃಷ್ಟನಾಗಿದ್ದಾನೆ ಎಂಬುದಾಗಿ ಚಿಂತನವನ್ನು ಮಾಡಬೇಕು ಅಂತ ತಿಳಿಸುತ್ತಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ವಿಷ್ಣುಪರ್ವ-29

* * *

ಅಂಧಕನ ವಧವನ್ನು ರುದ್ರ ದೇವರು ಮಾಡಿದ್ದಾರೆ ಅಂತ ಹಿಂದೆ ವೈಶಂಪಾಯಾನರು ತಿಳಿಸಿದ್ದಾರೆ. ವೃತ್ರಾಸುರನಗಿಂತಲೂ ಹತ್ತು ಪಟ್ಟು ಬಲಿಷ್ಠನಾದವನು ಅಂಧಕ. ವೃತ್ರಾಸುರನ ಸಂಹಾರವನ್ನು ಇಂದ್ರ ಮಾಡಿದರೆ, ಇಂದ್ರನಿಗಿಂತಲೂ ಬಲಿಷ್ಠರಾದ ರುದ್ರ ದೇವರು ವೃತ್ರನಿಗಿಂತಲೂ ಬಲಿಷ್ಠನಾದಂತಹ ಅಂಧಕಾಸುರನ ಸಂಹಾರ ಮಾಡಿದ್ದಾರೆ ಅಂತ ಹಿಂದೆ ತಾವು ನಿರೂಪಣೆ ಮಾಡಿದ್ದೀರಿ, ಅದರ ಬಗ್ಗೆ ವಿಸ್ತೃತವಾಗಿ ತಿಳಿಸಬೇಕು ಅಂತ ಪ್ರಾರ್ಥನೆ ಮಾಡಿದ್ದಾರೆ ಜನಮೇಜಯರು. ಅದಕ್ಕೆ ಹೇಳುತ್ತಾರೆ ತನ್ನ ಮಕ್ಕಳೆಲ್ಲ ದೇವತೆಗಳಿಂದ ಹತರಾದದ್ದನ್ನ ಕೇಳಿ ತಿಳಿದು ದುಃಖ ತಪ್ತಳಾದ ದಿತಿ ದೇವಿ ಯಾರಿಂದಲೂ ಸಾಯದೆ ಇರುವಂತಹ ಒಬ್ಬ ಮಹಾಪರಾಕ್ರಮಿಯಾದ ಮಗ ನನಗೆ ಹುಟ್ಟಬೇಕು ಅಂತ ಕಶ್ಯಪರಿಗೆ ಶರಣು ಹೋಗುತ್ತಾಳೆ.

ಅವಧ್ಯಸ್ತೇ ಸುತೋ ದೇವಿ ದಾಕ್ಷಾಯಿಣಿ ಭವೇದಿತಿ । (86.7 ವಿಷ್ಣುಪರ್ವ)

ಅವಶ್ಯವಾಗಿ ದೇವತೆಗಳಿಗೆ ವಧ್ಯನಾಗದ, ಅವರ ಕೈಯಿಂದ ಸಾಯದ ಶ್ರೇಷ್ಠ ಬಲಿಷ್ಠ ಮಗ ನಿನಗೆ ಆಗುತ್ತಾನೆ. ಭಾರೀ ಬಲಿಷ್ಠ ಅಂತ ಆದರೆ ರುದ್ರ ದೇವರೂ ಸಂಹಾರ ಮಾಡುವುದಕ್ಕೆ ಸಾಧ್ಯ ಇಲ್ಲ ಅಂತ ಮಾತ್ರ ಹೇಳುವ ಯೋಗ್ಯತೆ ನನಗಿಲ್ಲ, ಇನ್ನುಳಿದ ದೇವತೆಗಳು ಸಂಹಾರ ಮಾಡುವುದಕ್ಕೆ ಸಾಧ್ಯ ಇಲ್ಲ ಅಂತ ಬೇಕಾದರೆ ವರ ಕೊಡುತ್ತೇನೆ ಅಂತ ಅಷ್ಟಾದರೂ ಸಾಕು ಅಂದಳು ಅವಳು. ಕಶ್ಯಪರು ವರ ಕೊಟ್ಟಿದ್ದಾರೆ.

ದೇವದೇವಮೃತೇ ರುದ್ರಂ ತಸ್ಯ ನ ಪ್ರಭವಾಮ್ಯಹಮ್ । (86.8 ವಿಷ್ಣುಪರ್ವ)

ಅವರ ಶಕ್ತಿ ಸಾಮರ್ಥ್ಯಗಳು ಬಹಳ ಮಿಗಿಲಾದದ್ದು ಅವರಿಗೂ ಕೊಲ್ಲುವುದಕ್ಕೆ ಸಾಧ್ಯವಾಗದಿರುವ ಮಗನನ್ನ ಕೊಡುವುದಕ್ಕೆ ನನಗೆ ಯೋಗ್ಯತೆ ಇಲ್ಲ, ಅಷ್ಟಕ್ಕೆ ನೀನು ಒಪ್ಪುವುದಾದರೆ ನಾನು ಮಗನನ್ನ ಕೊಡುತ್ತೇನೆ ಅಂತ ಕಶ್ಯಪರು ಹೇಳಿದ್ದಾರೆ. ದಿತಿ ಆಗಲಿ ಅಂತ ಒಪ್ಪಿಕೊಂಡದ್ದಕ್ಕೆ ಕಶ್ಯಪರು ತಮ್ಮ ತಪಸ್ಸಾಮರ್ಥ್ಯ ಹಾಗೂ ತಮ್ಮ ಸಂಕಲ್ಪ ಪೂರ್ವಕವಾಗಿ ಕೇವಲ ದಿತಿ ದೇವಿಯನ್ನು ಸ್ಪರ್ಶ ಮಾತ್ರ ಮಾಡಿದ್ದಾರೆ ಅಷ್ಟೆ, ಮಗ ಹುಟ್ಟಿಯೇ ಬಿಟ್ಟಿದ್ದಾನೆ.

ಅನ್ವಾಲಭತ ತಾಂ ದೇವೀಂ ಕಶ್ಯಪಃ ಸತ್ಯವಾಗಥ ।

ಅಜ್ಞುಲ್ಯೋದರದೇಶೇ ತು ಸಾ ಪುತ್ರಂ ಸುಷ್ಟುವೇ ತತಃ ॥ (86.9 ವಿಷ್ಣುಪರ್ವ)

ತಮ್ಮ ಬೆರಳಿನಿಂದ ಉದರ ಸ್ಪರ್ಶ ಮಾಡಿದ್ದೆ ತಡ ಹುಟ್ಟಿದ್ದಾನೆ ಮಗ ಅಂದರೆ ತಪಸ್ಸಿನ ಮಹಿಮೆ ಏನು ಅದ್ಭುತ ನೋಡಿಕೊಳ್ಳಿ ಆ ಕಶ್ಯಪರ ಸಾಮರ್ಥ್ಯ ಎಷ್ಟು ಅದ್ಭುತವಾದದ್ದು ಭಗವಂತನ ಅಚಿಂತ್ಯಾದ್ಭುತವಾಗಿರುವಂತಹ ಶಕ್ತಿ ಇದು. ಆ ಎಲ್ಲ ಋಷಿಗಳಲ್ಲಿ, ಮುನಿಗಳಲ್ಲಿ ಇದ್ದು ಪರಮಾತ್ಮ ಆ ರೀತಿಯಾದ ಶಕ್ತಿ ಸಾಮರ್ಥ್ಯಗಳನ್ನು ನೀಡುತ್ತಾನೆ ಅಂತಹ ಅದ್ಭುತವಾದ ಕಶ್ಯಪರ ಸಾಮರ್ಥ್ಯವನ್ನು ನಾವು ಇಲ್ಲಿ ಕಾಣುತ್ತೇವೆ. ಒಂದು ಪ್ರಸಂಗದಲ್ಲಿ ಮಹಾಭಾರತದಲ್ಲಿ ಇನ್ನೊಂದು ಭಾಗದಲ್ಲಿ ಬರುತ್ತದೆ ಪೃಥ್ವಿ ಮಾಡುವ ಭೂತಧಾರಣದ ಕಾರ್ಯವನ್ನು ಎಲ್ಲ ಜೀವರಾಶಿಗಳ ಜಡಪದಾರ್ಥಗಳನ್ನ ಹೊತ್ತು ನಿಂತ ಪೃಥ್ವಿಯ ಕಾರ್ಯವನ್ನು ನಾನು ಮಾಡುತ್ತೇನೆ ಬೇಕಾದರೆ, ಪೃಥ್ವಿ ತನ್ನ ಕಾರ್ಯ ಮಾಡದೆ ಸರಿದರೆ ಸರಿಯಲಿ ಅನ್ನುತ್ತಾರೆ ಕಶ್ಯಪರು ಅಂತಹ ಸಾಮರ್ಥ್ಯ ಕಶ್ಯಪರಿಗೆ ಇದೆ. ಆದರೆ ಅದರ ಜೊತೆಗೆ ಇದನ್ನೂ ತಿಳಿಯಿರಿ ಇಂತಹ ಮಹಾಸಾಮರ್ಥ್ಯ ಇದ್ದರೂ ಕಶ್ಯಪರಿಗೆ ರುದ್ರ ದೇವರ ಸಾಮರ್ಥ್ಯವನ್ನು ಮೀರುವ ಸಾಮರ್ಥ್ಯ ಇಲ್ಲ, ಇದು ಶಾಸ್ತ್ರ ತಿಳಿಸುವ ಶ್ರೀಮದಾಚಾರ್ಯರು ಹೇಳುವ ತಾರತಮ್ಯ ಯಾವ ರೀತಿಯಾಗಿ ಇತಿಹಾಸ ಪುರಾಣಗಳಲ್ಲಿ ಸ್ಪಷ್ಟವಾದ ಮಾತುಗಳಲ್ಲಿ ನಮಗೆ ನೋಡಲಿಕ್ಕೆ ಸಿಗುತ್ತದೆ. ಅಂತಹ ತಾರತಮ್ಯವನ್ನು ನಿಯಮನ ಮಾಡಿ ತಾರತಮ್ಯದ ಕೊನೆಯಲ್ಲಿ ಎಲ್ಲರಿಂದಲೂ ಪೂಜ್ಯನಾಗಿ, ನಮ್ಯನಾಗಿ, ಇಜ್ಜ್ಯನಾಗಿ ಎಲ್ಲರಿಗೂ ಫಲಪ್ರದನಾಗಿ, ರಕ್ಷಕನಾಗಿ, ಪೋಷಕನಾಗಿ ಇರುವಂತಹ ಸ್ವಾಮಿ ಶ್ರೀಹರಿ ಅವನ ಮಹಿಮೆ ಎಂಥಹದ್ದು ಅನ್ನುವುದನ್ನೂ ನಾವು ಇಲ್ಲಿ ಚಿಂತನ ಮಾಡಬೇಕು ಪದೇ ಪದೇ ಕಥೆಗಳನ್ನು ಮಾತ್ರ ತಿಳಿಯಬಾರದು.

ಸಾವಿರ ತಲೆ, ಸಾವಿರ ಬಾಹುಗಳು, ಎರಡು ಸಾವಿರ ಕಣ್ಣುಗಳು, ಎರಡು ಸಾವಿರ ಕಾಲುಗಳಿಂದ ಕೂಡಿರತಕ್ಕಂತಹ ಆ ಅಸುರ ಹುಟ್ಟಿದ. ಕಣ್ಣಿದ್ದವು ಎರಡು ಸಾವಿರ ಕಣ್ಣುಗಳು ಇವೆ ಆದರೂ ಕೂಡ ಕಣ್ಣಿಲ್ಲದವರಂತೆ ಮದೋನ್ಮತ್ತನಾಗಿ ತಿರುಗುತ್ತಾ ಇದ್ದ ಅಂತ ಅನ್ನುವುದಕ್ಕೋಸ್ಕರ ಅವನಿಗೆ ಅಂಧಕ ಅಂತ ಹೆಸರು ಬಂತು. ಏನು ವಿಚಿತ್ರ ನೋಡಿ, ಎರಡೇ ಕಣ್ಣಿದ್ದರೇನೆ ಕಣ್ಣಿದ್ದವನು ಅನ್ನುತ್ತಾರೆ, ಎರಡು ಸಾವಿರ ಕಣ್ಣಿದ್ದರೂ ಕೂಡ ಕುರುಡ ಅಂತ ಕರೆದರು ಅದೇ ಹೆಸರು ಬಿತ್ತು ಅವನಿಗೆ. ತಂದೆ ತಾಯಿಯನ್ನು ಹಿಡಿದುಕೊಂಡು ಎಲ್ಲರೂ ಅವನನ್ನು ಅಂಧಕ ಅಂತ ಕರೆದರು ಯಾಕೆ ಅಂದರೆ ಉನ್ಮತ್ತನಾಗಿದ್ದ ಅಂತ. ಅದಕ್ಕೆ ಉನ್ಮತ್ತರಾಗಿ ಯಾರಾದರು ಬರುತ್ತಾ ಇದ್ದರೆ ಏನು ಕಣ್ಣು ಮೇಲೆ ಹೋಗಿದೆಯಾ ಅಂತ ಕೇಳುತ್ತಾರೆ ಅದರ ಅರ್ಥ ಕಣ್ಣು ಕಾಣಿಸುತ್ತಾ ಇಲ್ಲ ಅಂತ ಅರ್ಥ ಅಲ್ಲ, ವಿವೇಕ ಕಳೆದುಕೊಂಡಿದ್ದೀಯಾ ಅಂತ. ಅವಿವೇಕಿ ಆಗಿದ್ದಾನೆ ಯಾಕೆ ಅಂದರೆ ಕಶ್ಯಪರ ವರ ಇದೆ, ಯಾವ ದೇವತೆಗಳು ನನ್ನನ್ನು ಸಂಹಾರ ಮಾಡಲಿಕ್ಕೆ ಸಾಧ್ಯ ಇಲ್ಲ ಅಂದಮೇಲೆ ಇನ್ನು ಯಾರಿಗೆ ಹೆದರಬೇಕು ಅಂತ ಎಲ್ಲ ದೇವತೆಗಳನ್ನು ಪೀಡಿಸುತ್ತಾ ಇದ್ದಾನೆ. ಅಪ್ಸರಾ ಸ್ತ್ರಿಯರನ್ನು ಅಪಹಾರ ಮಾಡುವುದು, ಪರಸ್ತ್ರಿಯರ ಅಪಹಾರ, ಇನ್ನೊಬ್ಬರ ಮುತ್ತು, ರತ್ನ, ಸುವರ್ಣ, ರಜತ ಎಲ್ಲವನ್ನು ಅಪಹಾರ ಮಾಡುತ್ತಾ ದುಷ್ಟ ಕಾರ್ಯಗಳನ್ನು ಮಾಡುತ್ತಾ ಇದ್ದಾನೆ. ಆಗ ಇಂದ್ರ ದೇವರು ಬಂದು ಕಶ್ಯಪರಿಗೆ ತಂದೆ ನನ್ನ ತಮ್ಮನೇ ಈ ರೀತಿ ಕೆಲಸವನ್ನು ಮಾಡುತ್ತ ಇದ್ದರೆ ನಾನೇನು ಮಾಡಲಿ, ದಿತಿಯ ಮಗ, ನನ್ನ ಚಿಕ್ಕಮ್ಮನ ಮಗ ಅವನು ಮಾಡುವಂತಹ ಕೆಲಸಕ್ಕೆ ನಾನು ಏನು ಶಿಕ್ಷೆ ಕೊಡಲಿಕ್ಕೆ ಸಾಧ್ಯ. ನೀವು ಈ ರೀತಿ ಅವನಿಗೆ ವರ ಕೊಟ್ಟು ಕೂಡಿಸಿದರೆ ಮುಂದೆ ಮಾಡಬೇಕು ಏನು, ನಾನು ಏನಾದರು ಮಾಡಿಲಿಕ್ಕೆ ಹೋದರೆ ದಿತಿ ದೇವಿಗೆ ಕೋಪ ಬರುತ್ತದೆ ನನ್ನ ಮೇಲೆ.

ಇಹಾತ್ರಭವತೀ ಕುರ್ಯಾನ್ಮನ್ಯುಂ ಮಯಿ ಹತೇ ಸುತೇ ॥ (86.18 ವಿಷ್ಣುಪರ್ವ)



ಇಂತಹ ವರ ಕೊಟ್ಟು ನೀವು ಈ ರೀತಿ ಜನರಿಗೆಲ್ಲ ಪೀಡೆಯಾಗುವಂತೆ ಮಾಡಿದರೆ ನಿಮಗೆ ಶೋಭಿಸುತ್ತದಾ ಅದು ಅಂತ ತಂದೆಗೇನೆ ವಿಜ್ಞಾಪನೆ ಮಾಡಿಕೊಳ್ಳುತ್ತಾನೆ ಇಂದ್ರ ದೇವರು ಕಶ್ಯಪರಿಗೆ. ಕಶ್ಯಪರು ಕೂಡಲೇ ಆ ಅಂಧಕನನ್ನು ಕರೆದು ದಿತಿ ಕಶ್ಯಪರು ಇಬ್ಬರೂ ಕೂಡಿ ನಿನಗೆ ಲೋಕ ಪೀಡೆಯನ್ನು ಮಾಡುವುದಕ್ಕೋಸ್ಕರ ಈ ವರ ಕೊಡಿಸಿದ್ದಲ್ಲ, ನೀನು ಭದ್ರವಾಗಿ ಇರಬೇಕು ದಿತಿಗೆ ಸಾಯದ ಒಬ್ಬ ಮಗ ಜೊತೆಗೆ ಯಾವಾಗಲೂ ಇರಬೇಕು ಅನ್ನುವ ಅಪೇಕ್ಷೆ ಅಷ್ಟಕ್ಕೆ ನಿನಗೆ ವರ ಕೊಟ್ಟರೆ ನೀನು ಇನ್ನೊಬ್ಬರಿಗೆ ಪೀಡೆ ಕೊಡುತ್ತಾ ಇದ್ದೀಯಲ್ಲ ಅಂತ ಎಷ್ಟು ಹೇಳಿದರೂ ಅವರ ಮಾತನ್ನು ಕೇಳಲಿಲ್ಲ ಅಲ್ಲಲ್ಲಿ ವೃಕ್ಷಗಳನ್ನ, ಉದ್ಯಾನಗಳನ್ನೆಲ್ಲ ಹಾಳು ಮಾಡುತ್ತ ಇದ್ದಾನೆ. ಇದನ್ನು ಬಹಳ ದೊಡ್ಡ ಅಪರಾಧ ಅಂತ ಹರಿವಂಶ ಉಲ್ಲೇಖ ಮಾಡುತ್ತಾ ಇದೆ ಅಂದರೆ ಅರ್ಥ ಮಾಡಿಕೊಳ್ಳಿ ಕಾಡಿನ ರಕ್ಷಣೆ, ಉದ್ಯಾನಗಳ ರಕ್ಷಣೆ, ವೃಕ್ಷಗಳ ರಕ್ಷಣೆ ಎಷ್ಟು ಮಹತ್ವದ್ದು ಅದಕ್ಕೆ ಶಾಸ್ತ್ರ ಎಷ್ಟು ಮಹತ್ವ ಕೊಟ್ಟಿದೆ. ಅವನು ಮಾಡಿದಂತಹ ಅಪರಾಧಗಳಲ್ಲಿ ದೊಡ್ಡ ಅಪರಾಧಗಳನ್ನು ಅನೇಕ ಹೇಳುವಾಗ ಪರಸ್ತ್ರಿಯರ ಅಪಹಾರಾಧಿಗಳು ಹೇಗೆ ದೋಷಗಳೋ ಹಾಗೆ ವೃಕ್ಷಗಳ, ಉದ್ಯಾನಗಳ ಖಂಜನವನ್ನು ಮಾಡುತ್ತಾ ಇದ್ದ ಇದು ಬಹಳ ದೊಡ್ಡ ದೋಷ ಅವನು ಮಾಡುತ್ತಾ ಇದ್ದದ್ದು.

ಶಾಸ್ತ್ರದಲ್ಲಿ ಬಹಳ ಕೂಲಂಕಷವಾಗಿ ಇದರ ಬಗ್ಗೆ ಎಲ್ಲ ತಿಳಿಸಿ ಹೇಳುತ್ತಾರೆ ವಿಷ್ಣುಸ್ಮೃತಿ ಅಂತ ಭೂದೇವಿಗೆ ವರಾಹ ದೇವರು ಉಪದೇಶ ಮಾಡಿರತಕ್ಕಂತಹ ವಿಷ್ಣುಸ್ಮೃತಿ ಎಂಬ ಗ್ರಂಥದಲ್ಲಿ ಯಾವ ಯಾವ ತರಹದ ವೃಕ್ಷಗಳ ಛೇದನ ಮಾಡಿದರೆ ರಾಜರು ಎಷ್ಟು ದಂಡ ಹಾಕಬೇಕು ಪ್ರಜೆಗಳ ಮೇಲೆ ಅಂತ ಎಲ್ಲ ಲೆಕ್ಕ ಕೊಟ್ಟಿದ್ದಾರೆ ಸಾಕ್ಷಾತ್ ವರಾಹ ರೂಪಿಯರ ಪರಮಾತ್ಮ. ಮತ್ತೆ ಭೂಮಿಯಲ್ಲಿ ಬೆಳೆಯುವ ಭೂರುಹಗಳು, ಗಿಡಗಳು ಆ ಭೂರುಹಗಳ ಛೇದನವಾದರೆ ಮಾಡಬೇಕಾದ ಪ್ರಾಯಶ್ಚಿತ್ತವೇನು ಅಂತ ಭೂವರಾಹ ಸ್ವಯಂ ಹೇಳಿದ್ದಾನೆ ಅಂದರೆ ಅದಕ್ಕಿಂತ ಹೆಚ್ಚಿನದು ಇನ್ನೇನು ಬೇಕು. ಸರ್ವೋತ್ತಮನಾದ ಭಗವಂತನೇ ಹೇಳುತ್ತಾನೆ ಕಡ್ಡಾಯವಾಗಿ ರಾಜರು ಅವರಿಗೆ ದಂಡ ಹಾಕಬೇಕು ಕಂಡ ಕಂಡಂತೆ ಗಿಡಗಳನ್ನು ಕತ್ತರಿಸುವ ಹಾಗಿಲ್ಲ. ಕುದುರೆಗಳನ್ನೆಲ್ಲ ಅಪಹಾರ ಮಾಡಿದ್ದಾನೆ ಉಚ್ಚೈಶ್ರವಸ್ಸಿನ ಮಕ್ಕಳಾದ ಕುದುರೆಗಳು, ದಿಗ್ಗಜಗಳ ಸುತಗಳು ಆ ದಿಗ್ಗಜ ಪುತ್ರ ಗಜಗಳು, ಮರಿಗಜಗಳು ಅವುಗಳನ್ನೆಲ್ಲ ಅಪಹಾರ ಮಾಡಿದ್ದಾನೆ. ಹೀಗೆ ಅನೇಕ ಯಜ್ಞ, ಧ್ಯಾನ, ತಪಸ್ಸು, ಯಾರೂ ಮಾಡುವಂತಿಲ್ಲ ಎಲ್ಲಾ ಕಡೆಗೆ ವಿಘ್ನ,ಹೀಗೆ ವಿಮಾನಗಳು ಎಲ್ಲಿ ಓಡಾಡುವ ಹಾಗಿಲ್ಲ, ಋಷಿಗಳು ತಪಸ್ಸು ಮಾಡುವ ಹಾಗಿಲ್ಲ, ಆಶ್ರಮದಲ್ಲಿ ಪಾಠ ಪ್ರವಚನಗಳನ್ನು ಮಾಡುವಂತಿಲ್ಲ. ಈ ರೀತಿಯ ಪ್ರಸಂಗದೊಳಗೆ ಋಷಿಗಳೆಲ್ಲ ಚಿಂತನ ಮಾಡಿದ್ದಾರೆ ಏನು ಮಾಡಬೇಕು ಈಗ, ದೇವತೆಗಳಿಗೆ ಶರಣು ಹೋಗುವ ಹಾಗಿಲ್ಲ ದೇವತೆಗಳಿಂದ ಸಾಯಬಾರದು ಅಂತ ವರ ಇದೆ ಏನು ಮಾಡಬೇಕು ಅಂತ. ಬೃಹಸ್ಪತ್ಯಾಚಾರ್ಯರರು ವರದ ಸೂಕ್ಷ್ಮ ತಿಳಿದಿದ್ದರು ರುದ್ರ ದೇವರನ್ನು ಹೊರೆತು ಪಡಿಸಿ ಅಂತ ವರ ಕೊಟ್ಟಿದ್ದಾರೆ ಕಶ್ಯಪರು ಅಂತ ಗೊತ್ತಿತ್ತು.

ಅಶ್ರುಪ್ರಮಾರ್ಜನಂ ದೇವಃ ಕರಿಷ್ಯತಿ ಸತಾಂ ಗತಿಃ ॥ (86.35 ವಿಷ್ಣುಪರ್ವ)

ಅದಕ್ಕಾಗಿ ನಮ್ಮೆಲ್ಲರ ಕಣ್ಣೀರು ಒರೆಸುವುದಕ್ಕೆ ರುದ್ರ ದೇವರು ಸಮರ್ಥರು ಅವರಿಗೆ ನಾವು ಶರಣು ಹೋಗೋಣ ಅಂತ ನಿಶ್ಚಯವನ್ನು ಮಾಡಿಕೊಂಡಿದ್ದಾರೆ. ರುದ್ರಾಂತರ್ಗತನಾದ ಭಾರತೀರಮಣ ಮುಖ್ಯ ಪ್ರಾಣಾಂತರ್ಗತ ಸಂಕರ್ಷಣ ಚಿಂತನವನ್ನು ಮಾಡಿದ್ದಾರೆ, ಆ ಪರಮಾತ್ಮನಿಗೆ ಶರಣು ಹೋಗಿದ್ದಾರೆ. ಬೃಹಸ್ಪತ್ಯಾಚಾರ್ಯರರು ರುದ್ರ ದೇವರ ಹತ್ತಿರ ಹೋಗುವಾಗ ತಾವು ಒಬ್ಬರೇ ಹೋಗಲಿಲ್ಲ, ಯೋಗ್ಯತೆಯಲ್ಲಿ ನಾರದರಿಗಿಂತಲೂ ದೊಡ್ಡವರು ಆದರೆ ಉಳಿದೆಲ್ಲ ಋಷಿಗಳ ದೃಷ್ಟಿಯಲ್ಲಿ ನಾರದರು ದೇವರ್ಷಿಗಳು ಅತ್ಯಂತ

ಪೂಜ್ಯರು ಮಾನ್ಯರು ಅನ್ನುವುದಕ್ಕೋಸ್ಕರ ನಾರದರನ್ನ ಮುಂದೆ ಮಾಡಿಕೊಂಡು ಬೃಹಸ್ಪತ್ಯಾಚಾರ್ಯರರು ಹೋಗುತ್ತಾರೆ. ರುದ್ರ ದೇವರು ಬೃಹಸ್ಪತ್ಯಾಚಾರ್ಯರರ ಮಾತನ್ನು ಕೇಳಿ ನೀವೇನು ಚಿಂತೆ ಮಾಡಬೇಡಿ ಅಂತ ಹೇಳಿದ್ದಾರೆ. ನಾರದರು ಬಹಳ ಸೂಕ್ಷ್ಮವಾದಂತಹ ಬುದ್ಧಿ ಅವರದು ಹಿಂದೆ ನೀವು ಕೇಳಿದ್ದೀರಿ ರುದ್ರ ದೇವರು ಪಾರಿಜಾತ ವೃಕ್ಷವನ್ನ ಕೊಡು ಅಂತ ಇಂದ್ರ ದೇವರಿಗೆ ಕೇಳಿದರೆ ರುದ್ರ ದೇವರಿಗೆ ಕೊಡಲಿಲ್ಲ ತಾವೇ ಒಂದು ಅದ್ಭುತವಾದ ಪಾರಿಜಾತಗಳ ವನವನ್ನೇ ಸೃಷ್ಟಿ ಮಾಡಿಕೊಂಡು ಮಂದಾರ ವನ ಅಂತ ಮಾಡಿಕೊಂಡು ಅಲ್ಲಿಯೇ ಉಮಾ ದೇವಿಯ ಜೊತೆಗೆ ವಿರಾಜಮಾನರಾಗಿದ್ದಾರೆ ಅಂತ ಆ ಮಂದಾರ ವನಕ್ಕೆ ಹೋಗಿದ್ದಾರೆ ನಾರದರು. ಮಂದಾರ ವನಕ್ಕೆ ಹೋಗಿ ರುದ್ರ ದೇವರಿಗೆ ನಮಸ್ಕಾರ ಮಾಡಿ ಅವರ ಅನುಜ್ಞೆಯನ್ನು ಪಡೆದು ಆ ಮಂದಾರ ವನದಲ್ಲಿ ಇರತಕ್ಕಂತಹ ಮಂದಾರ ಪುಷ್ಪದ ಮಾಲೆಯನ್ನ ದೇವರಿಗೆ ಸಮರ್ಪಣೆ ಮಾಡಿ ಆ ದೇವರ ನಿರ್ಮಾಲ್ಯವನ್ನು ತಾವು ರುದ್ರ ದೇವರ ಅನುಮತಿಯನ್ನು ಪಡೆದು ತಾವು ಅದನ್ನು ಧಾರಣೆ ಮಾಡಿಕೊಂಡು ಹೊರಟಿದ್ದಾರೆ. ಅಲ್ಲಿ ಇನ್ನೊಂದು ವಿಶೇಷ ಸಂತಾನಕ ಆ ಸಂತಾನ ವೃಕ್ಷದ ಸುಗಂಧಮಯವಾದ ಪುಷ್ಪದ ಮಾಲೆಯನ್ನೂ ಧಾರಣೆ ಮಾಡಿಕೊಂಡು ಅಂಧಕಾಸುರ ಇರುವಂತಹ ಭವನಕ್ಕೆ ನೇರವಾಗಿ ಬಂದಿದ್ದಾರೆ. ಬಂದರೆ ಏನು ಆ ದಿವ್ಯವಾದಂತಹ ಪುಷ್ಪದ ಸುಗಂಧ, ಭಾರೀ ಸುಗಂಧ ಆ ಸುಗಂಧದಿಂದ ಮೋಹಿನಾಗಿದ್ದಾನೆ ಅಂಧಕ ಏನಿದು ನಾರದರೇ ಸಾಷ್ಟಾಂಗ ನಮಸ್ಕಾರ ನಿಮಗೆ ಬನ್ನಿ ಅರ್ಘ್ಯಪಾದ್ಯಾ ಪೂಜೆ ಎಲ್ಲಾ ಆಯಿತು. ಮೊದಲು ಹೇಳಿ ಈ ಹೂವು ಎಲ್ಲಿ ಸಿಗುತ್ತದೆ ಹೇಳಿ ನನಗೆ ಇದರ ಬಣ್ಣ ಏನು, ಇದರ ವಾಸನೆ ಏನು, ಇದರ ಸ್ಪರ್ಶ ಒಂದೊಂದು ಅದ್ಭುತ ಈ ತರಹದ ಪುಷ್ಪಗಳು ನನಗೆ ಬೇಕೇ ಬೇಕು ಅಂತ ನಾರದರು ಅನ್ನುತ್ತಾರೆ ಅಷ್ಟು ಸುಲಭ ಅಲ್ಲಪ್ಪ ಇದು.

ತಪೋ ವಿಶೇಷೈರಾರಾಧ್ಯ ಹರಂ ತ್ರಿಭುವನೇಶ್ವರಮ್ ।
ಶಕ್ಯಂ ಮನ್ದಾರಪುಷ್ಪಾಣಿ ಪ್ರಾಪ್ತುಂ ಕಶ್ಯಪವಂಶಜ ॥ (86.55 ವಿಷ್ಣುಪರ್ವ)

ಎಷ್ಟೋ ಕಷ್ಟಪಟ್ಟು ತಪಸ್ಸು ಮಾಡಿ ರುದ್ರ ದೇವರ ಅನುಗ್ರಹವನ್ನು ಪಡೆದರೆ ಈ ಪುಷ್ಪಗಳನ್ನು ಪಡೆಯುವುದಕ್ಕೆ ಸಾಧ್ಯ. ರುದ್ರ ದೇವರಿಗೆ ಪ್ರಿಯವಾದ ಇಂತಹ ಎಷ್ಟೋ ವೃಕ್ಷಗಳು ಆ ಮಂದಾರ ವನದಲ್ಲಿ ಇವೆ ನಿಮಗೆ ಬೇಡಿದ ಫಲವನ್ನು ಕೊಡುತ್ತದೆ. ಬರೀ ಹೂ ಒಂದೇ ಅಲ್ಲ ಬೇಡಿದ ಫಲಗಳು, ಸ್ತ್ರೀಯರು, ಮಣಿಗಳು ವಜ್ರಗಳು ನಿಮಗೇನು ಬೇಕೋ ಕಲ್ಪವೃಕ್ಷ ಇದ್ದ ಹಾಗೆ ನಿಮಗೆ ಬೇಡಿದ ಇಷ್ಟಾರ್ಥಗಳನ್ನು ಕೊಡುವಂತಹ ಕಲ್ಪವೃಕ್ಷಗಳು ಬೇಕಾದಷ್ಟು ಮಂದಾರ ವನದಲ್ಲಿ ಇವೆ ಆದರೆ ರುದ್ರ ದೇವರ ಅನುಗ್ರಹ ಬೇಕು ಅದಿದ್ದರೆ ಮಾತ್ರ ನಿಮಗೆ ಎಲ್ಲ ಸಿಗುತ್ತದೆ.

ಸ್ತ್ರೀರತ್ನಮಣಿರತ್ನಾನಿ ಯಾನಿ ಚಾನ್ಯಾನಿ ಚಾಪ್ಯಥ ।
ಕಾಂಕ್ಷಿತಾನಿ ಫಲನ್ತಿ ಸ್ಮತೇ ದ್ರುಮಾ ಹರವಲ್ಲಭಾಃ ॥ (86.56 ವಿಷ್ಣುಪರ್ವ)

ಸೂರ್ಯನ ಪ್ರಕಾಶ ಇಲ್ಲ, ಸೋಮನ ಪ್ರಕಾಶ ಇಲ್ಲ ಸ್ವಯಂ ರುದ್ರ ದೇವರ ಪ್ರಕಾಶದಿಂದಲೇ ಅಲ್ಲಿ ಎಲ್ಲ ಕಡೆಗೆ ಬೆಳಕು ಅಂತಹ ಅದ್ಭುತವಾದ ಆ ವನ ಇದೆ ಅಂತ ಎಲ್ಲ ವರ್ಣನೆ ಮಾಡಿದರು ನಾನು ಬಹಳ ವರ್ಣನೆ ಮಾಡಲಿಕ್ಕೆ ಆಗುವುದೇ ಇಲ್ಲ ನೀನು ಕಣ್ಣಾರೆ ನೋಡಬೇಕು ಅಷ್ಟೇ. ಒಂದು ನೂರು ವರ್ಷ ನಿನ್ನ ಎದುರಿಗೆ ಕುಳಿತು ಆ ವನದ ವರ್ಣನೆ ಮಾಡಿದರೂ ಮುಗಿಯುವುದಿಲ್ಲ ಅಷ್ಟು ಅದ್ಭುತವಾದಂತಹ ವನ ಅಂತ ಹೇಳಿದರೆ ಅಂಧಕ ಬೇರೆ ವಿಚಾರನೇ ಮಾಡಲಿಲ್ಲ, ಊಟನೂ ಮಾಡಲಿಲ್ಲ ಸೈನ್ಯಕ್ಕೆ ಅಪ್ಪಣೆಯನ್ನು ಕೊಟ್ಟ ಹೊರಡಬೇಕು ಎಲ್ಲ ಅಸುರರು ಈಗ ಮಂದರ ಪರ್ವತಕ್ಕೆ, ಮಂದಾರ ವನಕ್ಕೆ, ಎಲ್ಲರೂ ಸಿದ್ದರಾಗಿದ್ದಾರೆ ಮಂದರ ಪರ್ವತದ ಹತ್ತಿರ ಬಂದಿದ್ದಾರೆ ಮಂದರ



ಪರ್ವತದ ಅಭಿಮಾನಿ ದೇವತೆಯ ರಾಜ, ಗದ್ದರಿಸಿದ್ದಾನೆ ಅಂಧಕಾಸುರ ಮಂದರಾ ಎದ್ದು ಬಾ ಅಂತ ಬಂದ ಎಲ್ಲಿದೆ ಪಾರಿಜಾತ ವನ. ನಿನ್ನ ಮಂದರ ಪರ್ವತದಲ್ಲಿ ಎಲ್ಲಿಯೋ ಪಾರಿಜಾತ ವನ, ಮಂದಾರ ವನ ಇದೆ ಅಂತಲ್ಲ ಎಲ್ಲಿದೆ ಅದನ್ನು ನನ್ನ ವಶಕ್ಕೆ ಕೊಡು ಇಲ್ಲ ಅಂದರೆ ನಿನ್ನನ್ನ ಚೂರು ಚೂರು ಮಾಡಿ ಹಾಕುತ್ತೇನೆ ನಿನ್ನ ಪರ್ವತವನ್ನ ಅಂತ ಆ ಮಂದರ ಪರ್ವತದ ಅಭಿಮಾನಿ ದೇವತೆಗೆ ಹೆದರಿಸುತ್ತಾ ಇದ್ದಾನೆ. ಅವನಿಗೆ ಏನು ಉತ್ತರ ಕೊಡಲಿಕ್ಕೆ ಗೊತ್ತಾಗಲಿಲ್ಲ ಇವನು ಮಹಾ ಅಸುರ ಕಶ್ಯಪರ ವರ ಅವಧ್ಯನಾಗಿದ್ದಾನೆ ಏನು ಮಾಡುವ ಹಾಗಿಲ್ಲ ರುದ್ರ ದೇವರ ವನ ಅದು, ನಾನು ಯಾರು ಕೊಡುವುದಕ್ಕೆ ಕೊಡುತ್ತೇನೆ ಅನ್ನುವ ಹಾಗಿಲ್ಲ, ಇಲ್ಲ ಅನ್ನುವ ಹಾಗಿಲ್ಲ ಅಂತರ್ಧಾನು ಹೊಂದು ಬಿಟ್ಟಿದ್ದಾನೆ ಉತ್ತರನೇ ಕೊಡದೆ ಮಾಯವಾಗಿ ಬಿಟ್ಟ ಪರ್ವತಾಭಿಮಾನಿ ದೇವತೆ ಮಂದರ. ಇವನಿಗೆ ಮತ್ತಷ್ಟು ಕೋಪ ಬಂತು, ಸಿಟ್ಟು ಬಂತು ಹಾಗಾದರೆ ತೋರಿಸುತ್ತೇನೆ ನನ್ನ ಪರಾಕ್ರಮ ಅಂತ ಬಾಳೆಹಣ್ಣು ಮುರಿದ ಹಾಗೆ ಒಂದು ಶಿಖರವನ್ನು ಮುರಿದ ಇನ್ನೊಂದು ಶಿಖರದ ಮೇಲೆ ಎಸೆದ ಅದರಿಂದ ಆ ಶಿಖರವೂ ಬಿದ್ದು ಹೋಗಲಿ ಅಂತ. ಆದರೆ ಆದದ್ದು ವಿಚಿತ್ರ ರುದ್ರ ದೇವರ ಅನುಗ್ರಹದಿಂದ ಶಿಖರವನ್ನು ಎಸೆಯುತ್ತ ಇದ್ದರೆ ಅಸುರರೇ ಸಾಯುತ್ತ ಇದ್ದಾರೆ ಅಲ್ಲಿ, ಪರ್ವತ ಮತ್ತೆ ಮೊದಲಿನಂತೆ ಚೆನ್ನಾಗಿಯೇ ಇರುತ್ತಾ ಇದೆ ಆ ಶಿಖರ ಎಲ್ಲಿ ಬೀಳುತ್ತದೆಯೋ ಅಲ್ಲಿ ಸಾವಿರಾರು ಲಕ್ಷಾವಧಿ ಅಸುರರು ಸಾಯುತ್ತಾರೆ ಇವನ ಅನುಯಾಯಿಗಳೇ ಇವನ ಜೊತೆಗೆ ಬಂದವರು. ಅಸುರರೂ ತಮ್ಮ ಪರಾಕ್ರಮದಿಂದ ಇವನ ಜೊತೆಗೆ ಬಂದವರು ಶಿಖರಗಳನ್ನು ಕಲ್ಲುಗಳನ್ನು ಎಲ್ಲಾ ಮುರಿದು ಮುರಿದು ಎಸೆಯುತ್ತಾ ಇದ್ದಾರೆ ಯಾರು ಎಸೀತಾರೋ ಅವರ ತಲೆಯ ಮೇಲೆ ಬಿದ್ದು ಅವರು ಸಾಯುತ್ತಾ ಇದ್ದಾರೆ. ಇವನು ಎಸೆದಾಗ ಮಾತ್ರ ಇನ್ನೊಬ್ಬರು ಸತ್ತರೆ ಉಳಿದವರು ಎಸೆದರೆ ತಾವೇ ಸಾಯುತ್ತ ಇದ್ದಾರೆ. ಈ ರೀತಿ ಅಹಂಕಾರ ತತ್ವಾಭಿಮಾನಿಗಳು ಮನೋಭಿಮಾನಿಗಳು ಮಹಾನುಭಾವರಾದಂತಹ ರುದ್ರ ದೇವರ ಅದ್ಭುತವಾದಂತಹ ಶಕ್ತಿ ಇಚ್ಛಾ ಶಕ್ತಿ ಯಾರು ಪ್ರಯೋಗ ಮಾಡುತ್ತಾರೋ ಅವರೇ ಮೃತರಾಗಿ ಹೋಗುತ್ತಾ ಇದ್ದಾರೆ. ಅಂತಹ ರುದ್ರ ದೇವರ ವಿಶೇಷವಾದ ಸ್ಮರಣೆಯನ್ನು ಮಾಡಿ ಅವರ ವಿಶೇಷ ಅನುಗ್ರಹವನ್ನು ನಾವು ಪಡೆದರೆ ಅಸುರರು, ದುರ್ಜನರು, ಯಾವುದೇ ತರಹದ ದುಷ್ಟ ಶಕ್ತಿಗಳು ನಮಗೆ ಪೀಡೆಯನ್ನು ಕೊಡುತ್ತಾ ಇದ್ದರೆ ಅವುಗಳು ಸ್ವಯಂ ನಷ್ಟವಾಗಿ ಹೋಗುತ್ತವೆ ನಿಶ್ಚಿಂತವಾಗಿ ಧರ್ಮವನ್ನು ಆಚರಣೆ ಮಾಡಬಹುದು, ಜ್ಞಾನವನ್ನು ಪಡೆಯಬಹುದು ರುದ್ರ ದೇವರ ವಿಶೇಷ ಅನುಗ್ರಹದಿಂದ ಅನ್ನುವುದನ್ನು ಈ ಕಥೆಯ ಮೂಲಕ ನಾವು ಅರ್ಥ ಮಾಡಿಕೊಳ್ಳಬೇಕು ಆ ರೀತಿ ನಡೀತಾ ಇದೆ.

ಆಮೇಲೆ ಅಂಧಕ ಸೋತ, ಸೋತ ಅಂದರೆ ಸಾಕಾಯಿತು ಅವನಿಗೆ, ಪ್ರಯೋಗ ಮಾಡಿದ ಅಸ್ತ್ರಗಳಿಂದ ಶಿಲೆಗಳಿಂದ ಪರ್ವತಾಗ್ರಗಳಿಂದ ಶಿಖರಗಳಿಂದ ನಮ್ಮವರೇ ಸಾಯುತ್ತ ಇದ್ದರೆ ಹೇಗೆ ಅಂತ ಆಗ ಅವನು ಸುಮ್ಮನೆ ನಿಂತಿದ್ದಾನೆ. ಯಾರದು ಇದೆಲ್ಲ ನನ್ನ ಎದುರಿಗೆ ಬಂದು ಅವರು ನಿಲ್ಲಲಿ ಅಂತ ಗದರಿಸಿದ್ದಾನೆ

ತತೋऽನ್ಧಕಸ್ತದಾದೃಷ್ಟ್ವಾ ಸೇನಾಂ ತಂ ಮರ್ದಿತಾಂ ತಥಾ । (87.22 ವಿಷ್ಣುಪರ್ವ)

ಆಹ್ವಯೇ ತಂ ವನಂ ಯಸ್ಯ ಯುದ್ಧಾರ್ಥಮುಪತಿಷ್ಠತು ॥ (87.23 ವಿಷ್ಣುಪರ್ವ)

ಹಿಂದೆ ನಿಂತು ಈ ರೀತಿ ನನ್ನ ಸೈನ್ಯವನ್ನ ಸಂಹಾರ ಮಾಡುತ್ತಾ ಇದ್ದಾರೆ ಯಾವುದೋ ತಮ್ಮ ಮಾಯಾ ಶಕ್ತಿಯಿಂದ, ಮಾಯಾ ಶಕ್ತಿ ಅಲ್ಲ ಅದು, ರುದ್ರ ದೇವರ ಸ್ವರೂಪ ಸಾಮರ್ಥ್ಯ ಅದು ಆದರೆ ಇವನು ತಾನು ಮಾಯಾವಿ ಆದದ್ದರಿಂದ ಅವರೂ ಮಾಯೆಯನ್ನು ಮಾಡುತ್ತಾ ಇದ್ದಾರೆ ಅಂತ ತಿಳಿದುಕೊಂಡಿದ್ದಾನೆ. ನಿಜವಾದ ಶಕ್ತಿ ಇದ್ದರೆ ನನ್ನ ಎದುರಿಗೆ ಬಂದು ಯುದ್ಧ ಮಾಡಲಿ ಅಂತ ಅನ್ನೋದೇ ತಡ ನಂದಿ ವಾಹನರಾಗಿ, ಶೂಲವನ್ನು ಧಾರಣೆ

ಮಾಡಿ ರುದ್ರ ದೇವರು ಅಲ್ಲಿ ಪ್ರತ್ಯಕ್ಷರಾಗಿದ್ದಾರೆ ಪ್ರತ್ಯಕ್ಷರಾಗಿದ್ದಾರೆ. ಅವರು ಯುದ್ಧವನ್ನು ಪ್ರಾರಂಭ ಮಾಡಿದರೆ ಮೂರು ಲೋಕಗಳು ನಡುಗಿ ಹೋಗಿವೆ, ಸಮುದ್ರ ಅಲ್ಲೋಲ ಕಲ್ಲೋಲವಾಗಿದೆ, ನದಿ ವಿಪರೀತವಾಗಿ ಹರೀತಾ ಇದೆ,ಎಲ್ಲ ಕಡೆಗೆ ಎಲ್ಲ ದಿಕ್ಕುಗಳಲ್ಲಿ ಬೆಂಕಿ ಉರೀತ ಇದೆ, ಗ್ರಹಗಳೆಲ್ಲ ವಿಪರೀತವಾಗಿ ಸುತ್ತುತ್ತಾ ಇವೆ,ಪರ್ವತಗಳು ಕಂಪಿಸುತ್ತಾ ಇವೆ, ಇದ್ದಕ್ಕಿದ್ದ ಹಾಗೆ ಕೆಂಡದ ವೃಷ್ಟಿ ಆಗುತ್ತ ಇದೆ ಅನೇಕ ಕಡೆಗೆ. ಜ್ಞಾನಿಗಳು ಬ್ರಹ್ಮ ಚಿಂತನವನ್ನು ಮಾಡುತ್ತಾ ಇದ್ದಾರೆ, ವೇದ ಪಠಣ ಮಾಡುತ್ತಾ ಇದ್ದಾರೆ ವೇದಗಳು ಸ್ಮರಣೆಗೆ ಬರುತ್ತಾ ಇಲ್ಲ, ಹೆಣ್ಣು ಕುದುರೆಗಳ ಹೊಟ್ಟೆಗಳಿಂದ ಆಕಳು ಹುಟ್ಟುತ್ತಾ ಇವೆ, ಆಕಳಿನ ಹೊಟ್ಟೆಗಳಿಂದ ಕುದುರೆಗಳು ಹುಟ್ಟುತ್ತಾ ಇವೆ ಏನೇನು ಆಗಬೇಕು ಎಲ್ಲಾ ಅಪಶಕುನಗಳೆಲ್ಲ ಆಗುತ್ತಾ ಇವೆ. ಆಗ ರುದ್ರ ದೇವರು ಇನ್ನು ಹೆಚ್ಚು ಪರೀಕ್ಷೆ ಮಾಡುವುದು ಬೇಡ ಇವನಿಗಾಗಿ ಇನ್ನುಳಿದ ಜನರಿಗೆಲ್ಲ ಪೀಡೆ ಆಗುವುದು ಬೇಡ ಇಂತಹ ದುಷ್ಟರಾದ ರಾಕ್ಷಸರಿಗೆ ಹೆಚ್ಚು ಅವಕಾಶ ಕೊಡುವುದು ಸರಿ ಅಲ್ಲ ಅಂತ ಶೂಲವನ್ನು ಪ್ರಯೋಗ ಮಾಡಿದರೆ ಆ ಶೂಲ ಕೇವಲ ಇವನಿಗೆ ಚುಚ್ಚಿದ್ದಲ್ಲ ಅಗ್ನಿಯನ್ನ ಕೆಂಡವನ್ನ ಕಾರುತ್ತ ಇವನನ್ನು ಸಂಪೂರ್ಣವಾಗಿ ಭಸ್ಮ ಮಾಡಿ ಬೂದಿ ಮಾಡಿ ಹಾಕಿದೆ. ದೇವತೆಗಳು ಪುಷ್ಪವೃಷ್ಟಿಯನ್ನು ಮಾಡಿದ್ದಾರೆ ರುದ್ರ ದೇವರಿಗೆ, ದುಂಧುಭಿಗಳು ಮೊಳಗಿವೆ, ಎಲ್ಲರೂ ಸಂತೋಷ ಪಟ್ಟಿದ್ದಾರೆ. ರುದ್ರ ದೇವರ ವಿಶೇಷವಾದ ಅನುಗ್ರಹ ಆದದ್ದೇ ತಡ ಅವರು ಪ್ರಸನ್ನರಾದಾಗ ಮನೋನಿಯಾಮಕರಾದ ರುದ್ರ ದೇವರು ಪ್ರಸನ್ನರಾದರು ಎಲ್ಲರ ಮನಸ್ಸು ಪ್ರಸನ್ನವಾಯಿತು, ಎಲ್ಲರಿಗೂ ವೇದಗಳ ಸ್ಮರಣೆಯಾಯಿತು, ಬ್ರಹ್ಮಜ್ಞಾನ ಮತ್ತೆ ಮೊದಲಿನಂತೆ ಬಂದಿದೆ, ಜಪ ಪ್ರಾರಂಭವಾಗಿದೆ, ಎಲ್ಲ ಗ್ರಹಗಳು ಸರಿಯಾಗಿ ತಿರುಗುತ್ತಾ ಇವೆ, ನದಿಗಳು ಸರಿಯಾಗಿ ಹರೀತಾ ಇವೆ, ಪರ್ವತಗಳು ಸ್ಥಿರವಾಗಿ ನಿಂತು ಎಲ್ಲವೂ ಮಂಗಲವಾಗಿವೆ. ಈ ರೀತಿ ಅಂಧಕಾಸುರನ ವಧವನ್ನು ಮಾಡಿ ದೇವತೆಗಳಿಗೆ, ಋಷಿ ಮುನಿಗಳಿಗೆ ಸಕಲ ಪ್ರಜೆಗಳಿಗೆ ಬಂದ ಕಂಟಕವನ್ನು ಪರಿಹಾರ ಮಾಡಿ ಸಕಲ ಸಜ್ಜನರ ಉದ್ಧಾರವನ್ನು ಮಾಡಿದ್ದಾರೆ ಅಂತನ್ನುವ ವಿಚಾರವನ್ನು ತಿಳಿಸುತ್ತಾರೆ.

ಆಮೇಲೆ ಈ ಕಡೆಗೆ ಶ್ರೀಕೃಷ್ಣ ಪರಮಾತ್ಮನ ಒಂದು ಮಹಿಮೆಯನ್ನು ಹೇಳುತ್ತಾರೆ ಕೃಷ್ಣ ಪರಮಾತ್ಮ ದ್ವಾರಕಾ ಪಟ್ಟಣದಲ್ಲಿ ವಾಸವಾಗಿದ್ದಾಗ ಒಮ್ಮೆ ಸಂಕಲ್ಪ ಮಾಡಿದ್ದಾನೆ. ಎಲ್ಲ ಯಾದವರಿಗೆ, ದೇವತೆಗಳೆಲ್ಲರೂ ದೇವತೆಗಳ ಅವತಾರರೇ ಆ ದೇವತೆಗಳ ಅವತಾರರಾದ ಯಾದವರಿಗೆ ದೇವಲೋಕದ ಎಲ್ಲ ಭೋಗ ಸಾಧನಗಳು ಇಲ್ಲಿ ಸಿಗವಂತಾಗಬೇಕು ಅಂತಹ ಯೋಗ್ಯತೆ ಅವರದು ಜೊತೆಗೆ ಈ ಒಂದು ನಿಮಿತ್ತದಿಂದ ಇನ್ನುಳಿದ ಸಕಲ ಜಗತ್ತಿನ ವರ್ತಮಾನ ಕಾಲದ ಪ್ರಜೆಗಳಿಗೆ ಒಂದು ಸಂದೇಶವನ್ನು ಕೊಡಬೇಕು. ಏನು ಸಂದೇಶ ನಾವು ಚೆನ್ನಾಗಿ ಪುಣ್ಯಕರ್ಮಗಳನ್ನು ಮಾಡಿದರೆ ಅದಕ್ಕೆ ಸರಿಯಾದ ಫಲವನ್ನು ದೇವರು ಕೊಡುತ್ತಾನೆ ಅಂತಹ ಅದ್ಭುತವಾದ ಶಕ್ತಿ ಸಾಮರ್ಥ್ಯಗಳು ದೇವರಿಗುಂಟು. ಏನೆಲ್ಲ ಸುಖ ಸಾಧನಗಳು, ಭೋಗ ಸಾಧನಗಳು, ವಿಹಾರ ಸಾಧನಗಳು ಸ್ವರ್ಗ ಲೋಕದಲ್ಲಿವೆ ಅಂತ ಇತಿಹಾಸ ಪುರಾಣಗಳಲ್ಲಿ ಹೇಳುತ್ತಾರೋ ಅವುಗಳನ್ನು ನಂಬುವುದು ಹೇಗೆ ಅಂತ ಆ ಕಾಲದ ದ್ವಾಪರಯುಗದ ಜನರಿಗೆ ದ್ವಾಪರ ಬಂದರೆ ದ್ವಾಪರ ಅಂದರೆ ಸಂಶಯ. ದ್ವಾಪರಯುಗದ ಜನರಿಗೆ ಈ ತರಹದ ದ್ವಾಪರ ಏನಾದರೂ ಬಂದರೆ ಅದನ್ನು ಪರಿಹಾರ ಮಾಡುವುದಕ್ಕೋಸ್ಕರ ಪರಮಾತ್ಮ ಪ್ರತ್ಯಕ್ಷವಾಗಿ ಸ್ವರ್ಗದ ಭೋಗ ಎಲ್ಲ ಭೂಲೋಕದೊಳಗೆ ಒಮ್ಮೆ ನಿಮಗೆ ತೋರಿಸುತ್ತೇನೆ ನೋಡಿ ಹೀಗೇ ನಿಮಗೂ ಸತ್ಕರ್ಮಗಳನ್ನು ಪುಣ್ಯಕರ್ಮಗಳನ್ನು ಮಾಡಿದರೆ ಭೋಗಗಳನ್ನು ಮಾಡುವುದಕ್ಕೆ ಮುಂದೆ ಸ್ವರ್ಗದಲ್ಲಿ ಅವಕಾಶ ಉಂಟು. ನಮಗೆ ಈಗ ಆ ಎಲ್ಲ ಸುಖಭೋಗಗಳನ್ನು ಮಾಡಿಸಿ ತೋರಿಸು ಅಂದರೆ ಈಗಲೇ ನಿಮಗೆ ಆ ಸಾಧನೆ ಕೊಟ್ಟರೆ ನೀವು ಪುಣ್ಯಕರ್ಮನೇ ಮಾಡುವುದೇ ಇಲ್ಲ, ಹೀಗಾಗಿ ನಿಮಗೆ ತೋರಿಸಬೇಕು ಆದರೆ ನಿಮಗೆ ಸುಖ ಕೊಟ್ಟಿರಬಾರದು ಅಂದರೆ ನೀವು ಸಾಧನೆ ಮಾಡಿ ಸುಖ ಪಡೆಯುವುದಕ್ಕೆ ಮುಂದೆ ಆಗುತ್ತಿರಾ ಇಲ್ಲದೆ ಇದ್ದರೆ ಪುಕ್ಕಟೆಯಾಗಿ ಸುಖ

ಸಿಗಲಿ ಅನ್ನುತ್ತೀರಿ ಅದಕ್ಕೆ ಯಾದವರಿಗೆ ಆ ಸುಖಗಳನ್ನೆಲ್ಲ ಕೊಟ್ಟ ಅವರು ದೇವತೆಗಳೇ ಕಣ್ಣಾರೆ ಎಲ್ಲರೂ ನೋಡಲಿಕ್ಕೆ ಆಯಿತು ಓ ಹಾಗಾದರೆ ಇದೆಲ್ಲ ಸತ್ಯ, ಶಾಸ್ತ್ರದಲ್ಲಿ ಹೇಳಿದ ಎಲ್ಲ ವಿಷಯಗಳು ಸತ್ಯ ಅಂತ ನಂಬುವುದಕ್ಕೆ ಸಾಧ್ಯವಾಯಿತು. ಅದಕ್ಕೋಸ್ಕರ ನಾನಾ ವಿಧವಾಗಿರುವಂತಹ ಅವರಿಗೆ ಬೇಕಾದ ಎಲ್ಲ ಕ್ರೀಡೆಗಳನ್ನು ಮಾಡುವುದಕ್ಕೆ ಪರಮಾತ್ಮ ಅವಕಾಶ ಕೊಟ್ಟಿದ್ದಾನೆ ಅಂತ ತಿಳಿಸುತ್ತಾರೆ.

ಉಗ್ರಸೇನ, ವಸುದೇವ ಇಬ್ಬರನ್ನ ದ್ವಾರಕಾ ಪಟ್ಟಣದಲ್ಲಿ ಕಾಯುವುದಕ್ಕೆ ಅತ್ಯಂತ ಯುವಕರಿದ್ದ ಹಾಗೆ ಅತ್ಯಂತ ವೃದ್ಧರು ಆ ವೃದ್ಧರನ್ನೇ ಯುವಕರನ್ನಾಗಿ ಮಾಡಿ ಅಲ್ಲಿ ಕೂಡಿಸಿದ್ದಾನೆ ರಕ್ಷಣೆಗೆ ಕೃಷ್ಣ ತಾನೇ ರಕ್ಷಣೆ ಮಾಡುವವ ಅಖಿಲಾಂಡಕೋಟಿ ಬ್ರಹ್ಮಾಂಡ ನಾಯಕ ಪರಮಾತ್ಮ ತಾನು ರಕ್ಷಕ ಅವರನ್ನ ರಕ್ಷಕರನ್ನಾಗಿ ನಿಮಿತ್ತಕ್ಕೆ ಅಲ್ಲಿ ಕೂಡಿಸಿದ ಇನ್ನುಳಿದವರೆಲ್ಲರನ್ನು ಪಿಂಡಾರಕ ಕ್ಷೇತ್ರಕ್ಕೆ ವಿಹಾರಕ್ಕೆ ಅಂತ ಕರೆದುಕೊಂಡು ಹೊರಟಿದ್ದಾನೆ ಎಲ್ಲಾ ಪುರುಷರು, ಸ್ತ್ರೀಯರು, ಕುಮಾರರು ಎಲ್ಲರೂ ಹೊರಟಿದ್ದಾರೆ. ಏನೇನು ಭೋಗ್ಯವಾದಂತಹ ಖಾದ್ಯ, ಪೇಹ್ಯ, ಲೇಹ್ಯ, ತೋಷ್ಯ ಎಲ್ಲ ವಿಧವಾಗಿರುವಂತಹ ಭೋಗ ಸಾಧನವಾದ ಪದಾರ್ಥಗಳನ್ನೆಲ್ಲ ತೆಗೆದುಕೊಂಡು ಹೊರಟಿದ್ದಾರೆ. ಬಲರಾಮ ದೇವರು ರೇವತಿಯ ಜೊತೆಗೆ ಹೊರಟಿದ್ದಾರೆ, ಶ್ರೀಕೃಷ್ಣ ಪರಮಾತ್ಮ 16,108 ಜನರ ಜೊತೆಗೆ ತಾನು ಹೊರಟಿದ್ದಾನೆ, ಪ್ರದ್ಯುಮ್ನ, ಸಾಂಬ, ಚಾರುದೇಷ್ಣ ಅವರೆಲ್ಲರೂ ತಮ್ಮ ತಮ್ಮ ಮಡದಿಯರ ಜೊತೆಗೆ ಹೊರಟಿದ್ದಾರೆ ಈ ರೀತಿ ಅದ್ಭುತವಾದ ಆ ಯಾತ್ರೆ ನಡೆದಿದೆ ಅದರಂತೆ ಉಳಿದ ಯಾದವರೆಲ್ಲ ಹೊರಟಿದ್ದಾರೆ.

ಸಮುದ್ರ ಹತ್ತಿರ ಬಂತು ಎಲ್ಲರೂ ಅನ್ನುತಾರೆ ಹೋಗಿ ಹೋಗಿ ಸಮುದ್ರಕ್ಕೆ ಮತ್ತೆ ನೀನು ಕರೆದುಕೊಂಡು ಬಂದೆಯಲ್ಲ ದ್ವಾರಕಾ ಪಟ್ಟಣದಲ್ಲಿಯೂ ಸಮುದ್ರ ಇದೆ ನಿಜ ಆದರೆ ನಿನ್ನ ಒಂದು ಆಜ್ಞೆಯಿಂದ ಸಮುದ್ರದ ಸುತ್ತಲೂ ಸಿಹಿ ನೀರು ಎಷ್ಟು ಬೇಕೋ ಅಷ್ಟೇ ಆಳ ಓಡಾಡಬಹುದು, ಸ್ನಾನ ಮಾಡಬಹುದು ಹೇಗೆ ಬೇಕೋ ಹಾಗೆ ಅನುಕೂಲವಾಗಿದೆ. ಈಗ ಇಲ್ಲಿ ನೀನು ಸಮುದ್ರಕ್ಕೆ ಕರೆದುಕೊಂಡು ಬಂದರೆ ಈ ಉಪ್ಪು ನೀರಿನಲ್ಲಿ ನಾವು ಏನು ವಿಹಾರ ಮಾಡುವುದು. ಇನ್ನು ಯಾವುದಾದರೂ ಒಂದು ಒಳ್ಳೆಯ ನೀರು ಇರುವ ಕ್ಷೇತ್ರಕ್ಕೆ ಕರೆದುಕೊಂಡು ಹೋಗಬಹುದಾಗಿತ್ತಲ್ಲ ಅಂತ ಇಲ್ಲಿಯೇ ಶುರುವು ಅಂದ ದೇವರು. ಅಚಿಂತ್ಯವಾದ ಅದ್ಭುತವಾದ ಶಕ್ತಿ ಭಗವಂತನಿಗೆ ಇದೆ, ನೀವು ಅಪೇಕ್ಷೆ ಪಟ್ಟದ್ದನ್ನು ಪರಮಾತ್ಮ ಮೋಕ್ಷದಲ್ಲಿ ನಿಮಗೆ ಕೊಡುತ್ತಾನೆ ಅಂತ ಶಾಸ್ತ್ರ ಹೇಳುತ್ತದೆ ಮುಕ್ತರಾದ ಜೀವರಾಶಿಗಳು ಏನು ಅಪೇಕ್ಷೆ ಪಡುತ್ತಾರೋ ಅದನ್ನು ದೇವರು ಸೃಷ್ಟಿ ಮಾಡಿ ಕೊಡುತ್ತಾನೆ ಕೂಡಲೇ.

ಯಂ ಯಂ ಸುಖೀ ಕಾಮಯತೇऽರ್ಥಮತ್ರ ಸಂಕಲ್ಪಮಾತ್ರಾತ್ ಸಕಲೋऽಪಿ ಸ ಸ್ಯಾತ್ ॥

(11 ನೇಯ ಸರ್ಗ 78 ನೇಯ ಶ್ಲೋಕ ಸುಮಧ್ವವಿಜಯ)

ಸಂಕಲ್ಪ ಮಾಡುವ ಮಾತ್ರದಿಂದ ಅವನಿಗೆ ಬೇಕಾದ ವಸ್ತು ಅವನ ಕಣ್ಣೆದುರಿನಲ್ಲಿ ಇರುತ್ತೆ, ಅವನ ಕೈಯಲ್ಲಿ ಇರುತ್ತದೆ ಅವನ ಉಪಭೋಗಕ್ಕೆ ಸಿಗುತ್ತದೆ ಹೀಗೆ ಶಾಸ್ತ್ರ ಹೇಳುತ್ತೆ ಇದು ಸತ್ಯ ಹಾಗೆ ಮಾಡುವ ಶಕ್ತಿ ದೇವರಿಗೆ ಇದೆಯಾ ಅಂತ ಜನರ ಪ್ರಶ್ನೆ ಇದ್ದರೆ ನಿಮ್ಮ ಕಣ್ಣೆದುರಿಗೆ ತೋರಿಸುತ್ತೇನೆ ಅಂದ ದೇವರು. ವರುಣ ಅಂತ ಒಂದು ಗದ್ದರಿಸಿದ ನೋಡಿ ವರುಣ ದೇವರು ಕೈಜೋಡಿಸಿ ಬಂದು ನಿಂತರು ಸಮುದ್ರ ರಾಜ ವರುಣ ದೇವರು, ನೀರು ಸಿಹಿ ಆಗಬೇಕು ಅಂದ ಆಗೇ ಹೋಯಿತು ಎರಡನೇ ಕ್ಷಣ ನೀರು ಸಿಹಿ ಆಗಿದೆ. ಬರೀ ಸಿಹಿ ನೀರಲ್ಲ ಒಬ್ಬೊಬ್ಬರಿಗೆ ಒಂದೊಂದು ಗಂಧ ರುಚಿಸುತ್ತದೆ ಅಂದರೆ ಕೆಲವರಿಗೆ ಕೆಲವು ಗಂಧ ಆಗಿ ಬರುವುದಿಲ್ಲ, ಯಾರಿಗೆ ಯಾವ ತರಹದ ವಾಸನೆ ಸೇರುತ್ತೋ ಆ ತರಹದ ವಾಸನೆ ಆ ಗಂಧದ ವಾಸನೆ ಕುಡಿಯುವ ನೀರಿನೊಳಗೆ ಇರಬೇಕು. ಕುಡಿಯುವ

ನೀರಿನೊಳಗೆ ಹಾಕುವ ಗಂಧ ದ್ರವ್ಯಗಳು ಬೇರೆ, ಸುಮ್ಮನೆ ವಾಸನೆ ನೋಡುವುದಕ್ಕೆ ಕೆಲವು ಗಂಧದ ಪದಾರ್ಥಗಳು ಬೇರೆ, ನೀರಿನಲ್ಲಿ ಹಾಕುವ ವಾಸನೆಯ ಪದಾರ್ಥಗಳೇನಿವೆ ಆ ವಾಸನೆ ಅದು ಯಾರಿಗೆ ಯಾವುದು ಹಿಡಿಸುತ್ತೋ ಆ ತರಹದ ವಾಸನೆ ಅವರು ಕುಡಿಯುವ ನೀರಿಗೆ ಬಂದಿರಬೇಕು ತಥಾಸ್ತು ತಾವು ಏನು ಆಜ್ಞೆ ಮಾಡುತ್ತೀರಿ ಅದಕ್ಕೆ ಸರಿ ಅನ್ನುತ್ತಾನೆ. ಉಪ್ಪು ಇರಬಾರದು

ಉವಾಹ ಸರ್ವಗನ್ಧಾಢ್ಯಂ ಸ್ವಚ್ಛಂ ವಾರಿ ಮಹೋದಧಿಃ ।

ತೋಯಂ ವಿಲವಣಂ ಮೃಷ್ಟಂ ವಾಸುದೇವಸ್ಯ ಶಾಸನಾತ್ ॥ (88.23 ವಿಷ್ಣುಪರ್ವ)

ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ । (9 ಬೃಹದಾರಣ್ಯಕೋಪನಿಷತ್)

ಅಂತ ಹೇಳಿದ ಹಾಗೆ ಕೇವಲ ಆಜ್ಞಾ ಮಾತ್ರದಿಂದ ಎಲ್ಲ ನೀರು ಸಿಹಿಯಾಗಿದೆ, ಘಮಘಮ ವಾಸನೆ ರುಚಿಯಾಗಿದೆ. ಮತ್ತೆ ಯಥಾಪ್ರಕಾರ ದ್ವಾರಕಾದಲ್ಲಿ ಮಾಡಿದ ಹಾಗೆ ಚಿಕ್ಕ ಚಿಕ್ಕ ಮಕ್ಕಳು ಅಲ್ಲಿ ಓಡಾಡುತ್ತ ಇದ್ದರೆ ಇಷ್ಟೇ ನೀರು,ಒಂದು ಗೇಣು ನೀರು ಅಷ್ಟೆ ಸಮುದ್ರದೊಳಗೆ ಮಕ್ಕಳು ಒಂದು ಕಡೆಗೆ ಆಟ ಆಡುತ್ತಾವಲ್ಲ ಆಡಬಹುದು ಅಷ್ಟೇ ನೀರು. ಸ್ವಲ್ಪ ದೊಡ್ಡವರು ಆಟ ಆಡುತ್ತ ಇದ್ದರೆ ಸ್ವಲ್ಪ ಮೊಣಕಾಲದಷ್ಟು ನೀರು, ಸ್ತ್ರೀಯರು ಆಟ ಆಡುತ್ತ ಇದ್ದರೆ ಕಂಠದವರೆಗೆ ನೀರು ಅವರ ಗೌರವದ ರಕ್ಷಣೆಗೆ ತಕ್ಕಂತೆ ಹೀಗೆ ಎಲ್ಲ ಕಡೆಗೆ ಹೇಗೆ ಬೇಕೋ ಆ ರೀತಿಯ ವ್ಯವಸ್ಥೆ ಎಲ್ಲಾ ಆಗಿದೆ. ಅಲ್ಲಿ ನೀವು ಕ್ರೀಡೆಯನ್ನು ಮಾಡಬಹುದು, ಯಥೇಚ್ಛವಾಗಿ ವಿಹಾರ ಮಾಡಬಹುದು ನೀವು ಮಾಡಿದಂತಹ ನಿರಂತರ ಸಾಧನೆ ದೇವರ ಸೇವೆ, ನನ್ನ ಸೇವೆಯನ್ನು ಮಾಡಿದ್ದೀರಿ, ಮಾಡುತ್ತ ಇದ್ದೀರಿ ಹಿಂದೆ ಮಾಡಿದ್ದೀರಿ ಮುಂದೆ ಮಾಡುತ್ತೀರಾ. ಆ ಹಿಂದೆ ಮಾಡಿದ ಸೇವೆಗೆ ಫಲವನ್ನು ಅನುಭವಿಸಿ. ಮುಂದೆ ಮಾಡುವ ಸಾಧಕರು ಈ ತರಹದ ಫಲವನ್ನು ದೇವರು ನಮಗೆ ಕೊಡುತ್ತಾನೆ ಅನ್ನುವ ಭರವಸೆಯಿಂದ ಅವರು ಸಾಧನೆಯನ್ನು ಮಾಡಲಿ ಕ್ರೀಡೆಯನ್ನು ಮಾಡಿರಿ ಅಂತ ಯಥೇಚ್ಛವಾಗಿ ಕ್ರೀಡೆಯನ್ನು ಮಾಡುವುದಕ್ಕೆ ಹೇಳಿದ್ದಾನೆ. ಕೆಲವರೆಲ್ಲ 16,108 ಜನ ಎಲ್ಲ ಒಂದೇ ತರಹ ಇರಲಿಲ್ಲ ಅವರು ಕೆಲವರು ತಮ್ಮ ಪಾಡಿಗೆ ತಾವು ಹೊರಟರು, ಕೆಲವರು ನೀನು ಬಂದರೆ ನಾವು ಹೆಜ್ಜೆ ಇಡುತ್ತೇವೆ ಇಲ್ಲದಿದ್ದರೆ ಮುಳುಗಿ ಹೋಗುತ್ತೇವೆ ಅಂತ ಹೆದರಿಕೆಯನ್ನು ತೋರಿಸುತ್ತಾರೆ.

ಅವಲಮ್ಬ್ಯ ಪರಾಃ ಕಣ್ಠೇ ಹರಿಂ ಹರಿಣಲೋಚನಾಃ । (88.26 ವಿಷ್ಣುಪರ್ವ)

ಯಾರಿಗೆ ಏನು ಅಪೇಕ್ಷೆ ಇದೆಯೋ ಹಾಗೆ ದೇವರು ಅನುಗ್ರಹ ಮಾಡುತ್ತ ಇದ್ದಾನೆ. ಕೆಲವರಿಗೆಲ್ಲ ಪಕ್ಷಿಯ ಆಕಾರದ, ನಾಗಾಕಾರದ, ಮೊಸಳೆಯ ಆಕಾರದ ನಾನಾ ಆಕಾರದ ದೋಣಿಗಳನ್ನೆಲ್ಲ ಮಾಡಿಸಿದ ಎಷ್ಟು ಜನರಿಗೆ ಆಡರ್ಡ ಕೊಟ್ಟಿದ್ದನೋ ಏನೋ ಯಾರಿಗೆ ಆಡರ್ಡ ಕೊಡಬೇಕು. **'ಇಚ್ಛಾಮಾತ್ರಂ'** ಇಚ್ಛಾ ಮಾಡುವ ಮಾತ್ರದಿಂದ ನಾನಾ ವಿಧವಾಗಿ ಇರತಕ್ಕಂತಹ ದೋಣಿಗಳು ಅಲ್ಲಿ ಸಿದ್ಧವಾಗಿವೆ ಅವರವರಿಗೆ ಅಪೇಕ್ಷೆ ಇದ್ದ ಆ ದೋಣಿಗಳಲ್ಲಿ ಕೂಡುತ್ತಾ ಇದ್ದಾರೆ ಅವರವರನ್ನು ಕಳಿಸುತ್ತ ಇದ್ದಾನೆ ಹೀಗೆ ಎಲ್ಲರನ್ನು. ಹಾಗಾದರೆ ಪರಮಾತ್ಮನಿಗೆ ಭೋಗದ ಆಸಕ್ತಿಯೇ ಇಷ್ಟೆಲ್ಲ ಕ್ರೀಡೆ ಆಡಬೇಕು ಅಂತ ಅಪೇಕ್ಷೆ ಇದೆಯೇ.

ಹೃಷಿಕೇಶೋಽಪಿ ಭಗವಾನ್ ಹೃಷಿಕೇಶಃ ಸನಾತನಃ ॥ (88.33 ವಿಷ್ಣುಪರ್ವ)



ಹೆಸರು ಹೃಷಿಕೇಶ, ಅವನು ಹೃಷಿಕಗಳಿಗೆ ಈಶ, ಇಂದ್ರಿಯಗಳಿಗೆ ಒಡೆಯ ಇಂದ್ರಿಯಾಭಿಮಾನಿ ದೇವತೆಗಳಿಗೂ ನಿಯಾಮಕ ನಿಯಾಮಕರಾದ, ಪ್ರಾಣ ದೇವರಿಗೂ ನಿಯಾಮಕನಾದ ಸ್ವಾಮಿ. ಅವನಿಗೆ ಎಲ್ಲಿಯ ಇಂದ್ರಿಯಗಳ ಪರವಷತೆ, ಸರ್ವಥಃ ಇಲ್ಲ. ಕೇವಲ ಭಕ್ತರಿಗೆ ಅನುಗ್ರಹ ಮಾಡುವುದಕ್ಕೆ ಈ ರೀತಿ ಪರಮಾತ್ಮ ಮಾಡುತ್ತ ಇದ್ದಾನೆ.

ಬಭೂವ ದೇಶಕಾಲೇನ ಕಾನ್ತಾವಶಗತಃ ಪ್ರಭುಃ ॥ (88.33 ವಿಷ್ಣುಪರ್ವ)

ದೇಶ ಕಾಲಗಳಿಗೆ ಅನುಗುಣವಾಗಿ ತನ್ನ 16,108 ಜನರಿಗೆ ವಶನಾದಂತೆ ತೋರಿಸಿದ ಅಂತ ಅಲ್ಲ **'ಕಾನ್ತಾವಶಗತಃ ಪ್ರಭುಃ'** ಅವರೆಲ್ಲರನ್ನ ತನ್ನ ವಶದಲ್ಲಿ ಇಟ್ಟುಕೊಂಡು ಅವರಿಗೆ ಅನುಗ್ರಹವನ್ನು ಮಾಡಿದ ಜನರಿಗೆಲ್ಲ ವಿಶೇಷವಾಗಿ ಕ್ರೀಡೆಯನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು ಅನುಗ್ರಹ ಮಾಡಿದ್ದಾನೆ.

ಆಮೇಲೆ ಅಲ್ಲಿ ನರ್ತನ ಮಾಡುವುದಕ್ಕೆ, ಹಾಡು ಹಾಡುವುದಕ್ಕೆ ಸ್ವರ್ಗಲೋಕದ ಅಪ್ಸರಾ ಸ್ತ್ರಿಯರನ್ನು ಕರೆಸುತ್ತ ಇದ್ದಾನೆ ಮತ್ತೆ ಇದಕ್ಕೆ ಇನ್ನೇನು ಬೇಕು, ಇಲ್ಲಿದ್ದ ದೇವತೆಗಳೆಲ್ಲ ತನ್ನ ಅಧೀನ ಅಂತ ತೋರಿಸುವುದರ ಜೊತೆಗೆ ನೇರವಾಗಿ ಸ್ವರ್ಗದಿಂದಲೇ ಪಂಚಚೂಡ ಅನ್ನುವ ಅಪ್ಸರಾ ಸ್ತ್ರಿಯನ್ನ ಕೆಳಗಿಳಿ ಅಂತ ಹೇಳಿದ ಎದುರಿಗೆ ಬಂದು ನಿಂತಿದ್ದಾಳೆ ಕೈಜೋಡಿಸಿಕೊಂಡು. ಕುಬೇರನ ಪಟ್ಟಣದಲ್ಲಿರುವ ಎಲ್ಲಾ ಅಪ್ಸರಾ ಸ್ತ್ರಿಯರು, ಇಂದ್ರನ ಪಟ್ಟಣದಲ್ಲಿರುವ ಎಲ್ಲಾ ಅಪ್ಸರಾ ಸ್ತ್ರಿಯರು ಇಲ್ಲಿ ಬಂದು ನಿಲ್ಲಬೇಕು ಅಂದರೆ ಕೈಜೋಡಿಸಿ ಸಾಲೋ ಸಾಲಾಗಿ ನಿಂತಿದ್ದಾರೆ.

ಕೌಬೇರ್ಯಶ್ಚ ವರಾಪ್ಸರಾಃ ಮಾಹೇನ್ದ್ರೀಶ್ಚಾನಯಾಮಾಸ ॥ (88.39 ವಿಷ್ಣುಪರ್ವ)

ಯಾರೂ ಏನು ಮಾತನಾಡುವಂತಿಲ್ಲ ಇಂದ್ರ, ಕುಬೇರ, ವರುಣ ಎಲ್ಲರೂ ಭಗವದಧೀನ ಇನ್ನುಳಿದ ದೇವತೆಗಳ ಪೂಜೆಯನ್ನು ಮಾತ್ರ ಮಾಡಿ ಪರಮಾತ್ಮನನ್ನ ಸರ್ವೋತ್ತಮತ್ವೇನ ಪೂಜೆ ಮಾಡದೆ ಇದ್ದರೆ ಪ್ರಯೋಜನ ಇಲ್ಲ. ಎಲ್ಲಾ ದೇವತೆಗಳನ್ನು ಪೂಜಿಸಬೇಕು ಸರ್ವೋತ್ತಮತ್ವೇನ ಶ್ರೀಕೃಷ್ಣ ಪರಮಾತ್ಮನ ಪೂಜೆಯನ್ನು ಮಾಡಲೇಬೇಕು ಅಂದಾಗಲೇ ನಮಗೆ ಮುಖ್ಯವಾದಂತಹ ಅಪೇಕ್ಷಿತ ಫಲ ಸಿಗುವುದಕ್ಕೆ ಸಾಧ್ಯ ಅನ್ನುವ ತತ್ವವನ್ನು ಉದಾಹರಣ ಪೂರ್ವಕವಾಗಿ ಭಗವಂತ ತೋರಿಸುತ್ತ ಇದ್ದಾನೆ, ಪ್ರತ್ಯಕ್ಷ ನಿದರ್ಶನ ಪೂರ್ವಕವಾಗಿ ತೋರಿಸುತ್ತ ಇದ್ದಾನೆ ಅರ್ಥಮಾಡಿಕೊಳ್ಳಿ ಆಗಿನ ಜನರ ಭಾಗ್ಯ ಎಂತಹದ್ದು. ಅವರೆಲ್ಲ ನಮಸ್ಕಾರ ಮಾಡಿ ಎದ್ದು ನಿಂತು ಏನು ಅಪ್ಪಣೆ ಅಂತ ಕೇಳಿದರು ಏನಿಲ್ಲ ಸ್ವರ್ಗಲೋಕದಲ್ಲಿ ಯಾವ ರೀತಿ ನೀವು ಗಾನವನ್ನ ಮಾಡುತ್ತೀರಾ, ಅಲ್ಲಿದ್ದ ಜನರಿಗೆಲ್ಲ ಸಂತೋಷ ಪಡಿಸುತ್ತೀರೋ ಈ ಎಲ್ಲ ಯಾದವರಿಗೂ ಸಂತೋಷ ಪಡಿಸಬೇಕು ಅಂತ ಹೇಳಿದಾಗ ಗಾನವನ್ನು ಮಾಡುತ್ತಾ ಇದ್ದಾರೆ, ವಾದ್ಯಗಳನ್ನು ಬಾರಿಸುತ್ತಾ ಇದ್ದಾರೆ, ನರ್ತನವನ್ನು ಮಾಡುತ್ತಾ ಇದ್ದಾರೆ. ಹೇಳಿ ಕೇಳಿ ದಿವ್ಯ ಅಪ್ಸರಾ ಸ್ತ್ರೀಯರು, ದೇವಲೋಕದ ಅಪ್ಸರಾ ಸ್ತ್ರೀಯರು ಯಾದವರನ್ನ ಕರೆದುಕೊಂಡು ತಾವು ಆಕಾಶಕ್ಕೆ ಹಾರಿ, ಅವರು ದೇವತೆಗಳ ಅವತಾರರೇ ಆದರೆ ಮನುಷ್ಯರಾಗಿ ಅವತಾರ ಮಾಡಿದ್ದಾರಲ್ಲ. ಇವರು ದೇವಲೋಕದಿಂದಲೇ ಬಂದವರು ಆಕಾಶ ಮಾರ್ಗದಲ್ಲಿ ತಾವು ಹಾರಿ ಆವಾಹ, ವಿದೋಹ ಮೊದಲಾದ ಅನೇಕ ವಾಯುಗಳ ಸ್ತರಗಳಿವೆ ಆ ಸಪ್ತ ಸ್ಕಂಧಗಳು ಆ ಎಲ್ಲ ಸ್ಕಂಧಗಳಲ್ಲಿ ಬೇರೆ ಕಡೆಗೆ ಬೇರೆ ಬೇರೆ ಯಾದವರನ್ನೆಲ್ಲ ಕರೆದುಕೊಂಡು ಹೋಗಿ ಅವರ ಎದುರಿನಲ್ಲಿ ಗಾನ, ನೃತ್ಯ ಇತ್ಯಾದಿಗಳನ್ನು ಮಾಡಿ ಸಂತೋಷ ಪಡಿಸಿ ಮತ್ತೆ ಅವರು ಬೇಕು ಅಂದ ಸ್ಥಳಕ್ಕೆ ಹೋಗಿ ಬಿಡುತ್ತಾ ಇದ್ದಾರೆ. ರೈವತ ಪರ್ವತ ಅಂದರೆ ಅಲ್ಲಿ, ದ್ವಾರಕಾ ಅಂದರೆ ದ್ವಾರಕಾ, ಮನೆಗೆ ಅಂದರೆ ಮನೆಗೆ, ಕೆಲವರು ಮನೆಗೆ ಹೋಗಿ ಮನೆ ನೋಡಿಕೊಂಡು ಮತ್ತೆ ಬಂದಿದ್ದಾರೆ ಇಲ್ಲಿ ಪಿಂಡಾರಕಕ್ಕೆ ಹೀಗೆ ವಿಚಿತ್ರವಾದ ರೀತಿಯಲ್ಲಿ ಅವರೆಲ್ಲರಿಗೆ ಪರಮಾತ್ಮ ಅನುಗ್ರಹವನ್ನು ಮಾಡಿದ್ದಾನೆ.

ಆಮೇಲೆ ವಿಶ್ವಕರ್ಮನನ್ನು ಕರೆದ ವಿಶ್ವಕರ್ಮ ದೊಡ್ಡ ದೊಡ್ಡ ಹಡಗುಗಳನ್ನು ಮಾಡು ಅಂದ ಆಯಿತು ಸ್ವಾಮಿ ಹಡಗುಗಳು ತಯಾರು ಆದವು ಎಲ್ಲಾ ದೇವತೆಗಳ ಸೃಷ್ಟಿ ಅದು. ಉದ್ದ ದೀರ್ಘ ಚತುಸ್ರವವಾದಂತಹ ಕೆಲವು ದೊಡ್ಡ ಭವನಗಳು, ಭವನಗಳು ಅಂದರೆ ದೊಡ್ಡ ದೊಡ್ಡದಾದಂತಹ ಭವನಗಳು, ಎಷ್ಟೋ ಅಂತಸ್ತಿನ ಭವನಗಳು ಹಡಗಿನೊಳಗೇನೆ. ಇವತ್ತಿನ ಕಾಲದಲ್ಲಿ ಈ ಇದೆಲ್ಲಾ ಅನುಕೂಲತೆಗಳು ಇವೆ ಆಗಿನ ಕಾಲದಲ್ಲಿ ಇರಲಿಲ್ಲ ಅಂತ ತಿಳಿದುಕೊಳ್ಳಬೇಡಿ ಆಗಲೂ ಅಷ್ಟು ಅದ್ಭುತವಾದದ್ದು ಇನ್ನೂ ಅದ್ಭುತವಾದದ್ದು.

ಪ್ರಾಸಾದಾ ನೌಷು ಕೌರವ್ಯ ವಿಹಿತಾ ವಿಶ್ವಕರ್ಮಣಾ ॥ (88.58 ವಿಷ್ಣುಪರ್ವ)

ಸ್ವಸ್ತಿಕಾಕಾರ, ವೃತ್ತಾಕಾರ, ಚತುರಸ್ರಾಕಾರ, ದೀರ್ಘ ಚತುರಸ್ರಾಕಾರ ಇಂತಹ ದೊಡ್ಡ ದೊಡ್ಡ ಪ್ರಾಸಾದಗಳನ್ನೇ ಆಜ್ಞಾ ಮಾತ್ರದಿಂದ ವಿಶ್ವಕರ್ಮ ಸಿದ್ಧ ಮಾಡಿಕೊಟ್ಟಿದ್ದಾನೆ ಅದರೊಳಗೆ ಕುಳಿತು ಯಾದವರು ವಿಹಾರ ಮಾಡುತ್ತ ಇದ್ದಾರೆ. ಅದಕ್ಕಾಗಿಯೇ ನೀವು ತಿಳಿದುಕೊಳ್ಳಿ ಮೋಕ್ಷವನ್ನೇ ಇಲ್ಲಿ ತೋರಿಸುತ್ತಾ ಇದ್ದಾನೆ ಪರಮಾತ್ಮ **'ಸಂಕಲ್ಪಮಾತ್ರಾತ್ ಸಕಲೋಽಪಿ'.** ಈ ರೀತಿ ನಿಮಗೆ ಮೋಕ್ಷದಲ್ಲಿ ನಾನು ತೋರಿಸುತ್ತೇನೆ ಅಂತ ದೇವರು ಇಷ್ಟು ತೋರಿಸಿದ ಮೇಲೂ ನಾವು ಮೋಕ್ಷ ಸಾಧನೆಯನ್ನು ಮಾಡುವುದಿಲ್ಲ, ಮೋಕ್ಷಕ್ಕಾಗಿ ಪ್ರಯತ್ನ ಮಾಡುವುದಿಲ್ಲ ಅಂದರೆ ಇದ್ದರೇನು ಇಲ್ಲದಿದ್ದರೇನು. ಇಷ್ಟೆಲ್ಲ ಶಾಸ್ತ್ರ ಹೇಳಿದ ಮೇಲೆ ನಿಷ್ಕಾಮವಾಗಿ, ಭಗವಂತನ ಪ್ರೀತಿಗಾಗಿ, ಪರಮಾತ್ಮನ ಅಪರೋಕ್ಷ ಜ್ಞಾನಕ್ಕಾಗಿ ಕರ್ಮಗಳನ್ನು ಮಾಡಬೇಕು, ಮೋಕ್ಷ ಸಾಧನೆಯನ್ನು ಮಾಡಬೇಕು, ಪೂರ್ಣವಾದ ವಿಶ್ವಾಸದಿಂದ **'ಏತಮಿತಃ ಪ್ರೇತ್ಯ ಅವಿತಂಭವಿತಾ ಅಸ್ಮಿ'**[1] ನಿಶ್ಚಿತವಾಗಿಯೂ ಪರಮಾತ್ಮನನ್ನ ನಾನು ಹೊಂದುತ್ತೇನೆ. ಆ ಪರಮಾತ್ಮ ನನ್ನ ಎಲ್ಲ ಇಷ್ಟಾರ್ಥಗಳನ್ನು ಪೂರ್ಣ ಮಾಡುತ್ತಾನೆ ಅನ್ನುವ ಸಂಪೂರ್ಣ ವಿಶ್ವಾಸದಿಂದ ಸತ್ಕರ್ಮಗಳನ್ನು ಮಾಡಬೇಕು ಅದನ್ನು ದೇವರು ತೋರಿಸಿಕೊಡುತ್ತಾ ಇದ್ದಾನೆ. ಆಮೇಲೆ ಆ ಎಲ್ಲ ದೊಡ್ಡ ದೊಡ್ಡ ಪಟ್ಟಣಗಳೇ ಆಕಾಶದಲ್ಲಿ ಹಾರಾಡಿದಂತೆ ತೋರುತ್ತಾ ಇವೆ ಆ ರೀತಿ ಹಾರಡುತ್ತಾ ಇದ್ದಾರೆ ಆ ಯಾದವರು. ನಾನಾ ವಿಧವಾದ ಉದ್ಯಾನಗಳೆಲ್ಲ ಇವೆ, ಯಥೇಚ್ಛವಾದ ಶಿಲ್ಪಗಳು, ರಥಗಳು, ಬಾವಿಗಳು ಅನೇಕ ಭವನಗಳು ದೊಡ್ಡ ಪಟ್ಟಣವೇ ಅಲ್ಲಿ ಕಂಡ ಹಾಗೆ ಸಮುದ್ರದ ಮಧ್ಯದಲ್ಲಿ ಇದೆಲ್ಲ ದ್ವಾರಕಾ ಪಟ್ಟಣ ಅಲ್ಲ, ದ್ವೀಪ ಅಲ್ಲ ಇದು ನೀರಿನ ಮೇಲೇನೆ ಇಷ್ಟೆಲ್ಲ ಆಟ ಇವೆ. ಇವತ್ತಿನ ಕಾಲದಲ್ಲಿ ಏನೇನೋ ಕೃತ್ರಿಮವಾದ ನೀರುಗಳಲ್ಲಿ ಕೆಲವು ಆಟಗಳನ್ನು ಆಡುತ್ತಾರೆ, ಅಲ್ಲಲ್ಲಿ ಸರೋವರಗಳಲ್ಲಿ ಏನೇನೋ ಮಾಡುತ್ತಾರೆ ಇಂತಹ ಸಮುದ್ರದೊಳಗೆ ಕೇವಲ ಇಚ್ಛಾ ಮಾತ್ರದಿಂದ, ಆಜ್ಞಾ ಮಾತ್ರದಿಂದ ದೇವರು ಮಾಡಿಸುತ್ತ ಇದ್ದಾನೆ ಇದು ಅದ್ಭುತ.

ನಾರಾಯಣಾಜ್ಞಯಾ ವೃಕ್ಷಾಃ ಪುಷ್ಪಾಣಿ ಮುಮುಚುರ್ಭ್ರಶಮ್ ॥ (88.72 ವಿಷ್ಣುಪರ್ವ)

ನಾನಾ ವಿಧವಾದ ಬೇಡಿದ ಬಯಸಿದ ಪುಷ್ಪಗಳು, ಎಲ್ಲಾ ಋತುವಿನ ಪುಷ್ಪಗಳು ಅವರು ಬೇಡಿದ ಮಾತ್ರಕ್ಕೆ ಅವರಿಗೆ ಸಿಗುತ್ತಾ ಇವೆ ಅಲ್ಲಿರುವಂತಹ ಪುರುಷರಿಗೂ ಸ್ತ್ರೀಯರಿಗೂ, ಬೇಡಿದ ಸ್ಪರ್ಶ, ಬೇಡಿದ ಶಬ್ದ, ಬೇಡಿದ ಗಂಧ, ಬೇಡಿದ ರಸ ಎಲ್ಲವೂ ಸಿಗುತ್ತ ಇದೆ. ಹಸಿವೆ ಇಲ್ಲ,ನೀರಡಿಕೆ ಇಲ್ಲ ಸ್ವಲ್ಪ ನಿಮಗೆ ಸೋಜಿಗ ಅನಿಸಬಹುದು ಇದು ಹೇಗೆ ಹಸಿವೆ ನೀರಡಿಕೆ ಇದ್ದರೆ ತಾನೇ ಎಲ್ಲ ತಿನ್ನಲಿಕ್ಕೆ ಚೆನ್ನಾಗಿ ಇರುತ್ತದೆ ಏನು ಇಲ್ಲ ಅಂದರೆ. ಯಾವಾಗ ಬೇಕೋ ಆವಾಗ ಹಸಿವೆ ಇದೆ ಆಕಾಲದಲ್ಲಿ ಹಸಿವೆ ಆಗುತ್ತಾ ಇರಲಿಲ್ಲ, ಆಕಾಲದಲ್ಲಿ ನೀರಡಿಕೆ ಆಗುತ್ತಾ ಇರಲಿಲ್ಲ ಅಂತ ಅರ್ಥ ಊಟದ ಹೊತ್ತು ಅಂತ ಒಂದು ಇದೆ ಆವಾಗ ಹಸಿವೆ ಆಗಬೇಕು ಅದು ಚೆನ್ನಾಗಿ ಇರುತ್ತದೆ. ಇನ್ನು

1. ಉಪನಿಷತ್ತು



ಏನೋ ಕ್ರೀಡೆ ಮಾಡಬೇಕು ಅಂತ ಹೋದಾಗ ಹಸಿವೆ ಆಯಿತು ಅಯ್ಯೋ ನನಗೆ ಇರಲಿಕ್ಕೆ ಆಗುವುದಿಲ್ಲ ಮನೆಗೆ ಹೋಗಿ ಬರುತ್ತೇನೆ ಅಂತ ಅಂದರೆ ಆ ಕ್ರೀಡೆಯನ್ನು ಪೂರ್ಣ ಆಡಲಿಕ್ಕೆ ಆಗಲಿಲ್ಲ ಅವನ ಇಷ್ಟಾರ್ಥ ಪೂರ್ಣ ಆಗದೇ ಇದ್ದ ಹಾಗೆ ಆ ತರಹದ ಹಸಿವೆ ನೀರಡಿಕೆಗಳು ಇರಲಿಲ್ಲ ಅಂತ ತಿನ್ನುವ ಹೊತ್ತಿಗೆ ಏನು ಬೇಕೋ ಆ ಹಸಿವೆ ನೀರಡಿಕೆಗಳು ಇತ್ತು. **'ನ ಕ್ಷುತ್ಪಿಪಾಸಾ ನ ಗ್ಲಾನಿರ್ನ'**[1] ಅದರಿಂದ ತೊಂದರೆ ಇರಲಿಲ್ಲ ಅಂತ ತಿಳಿಯಬೇಕು ಚಿಂತೆ ಇಲ್ಲ. ಇಂತಹ ಅದ್ಭುತವಾದ ಅನುಗ್ರಹವನ್ನು ದೇವರು ಮಾಡಿದ್ದಾನೆ.

ಪರಿಚ್ಛದಸ್ಯಾನುರೂಪಂ ಯಾನಪಾತ್ರಂ ಮಹಾತ್ಮನಃ ।
ನಾರಾಯಣಸ್ಯ ದೇವಸ್ಯ ವಿಹಿತಂ ವಿಶ್ವಕರ್ಮಣಾ ॥ (88.78 ವಿಷ್ಣುಪರ್ವ)

ರತ್ನಾನಿ ಯಾನಿ ತ್ರೈಲೋಕ್ಯೇ ವಿಶಿಷ್ಟಾನಿ ವಿಶಾಮ್ಪತೇ ।
ಕೃಷ್ಣಸ್ಯ ತಾನಿ ಸರ್ವಾಣಿ ಯಾನಪಾತ್ರೇಽತಿತೇಜಸಃ ॥ (88.79 ವಿಷ್ಣುಪರ್ವ)

ಒಟ್ಟು ಸಂಕ್ಷೇಪದೊಳಗೆ ನಿಮಗೆ ಹೇಳಬೇಕು ಅಂದರೆ ಸುಖ ಸಾಧನಗಳು ಅಂತ ಪ್ರಪಂಚದೊಳಗೆ ಉತ್ತಮವಾದವುಗಳು ಏನೆಲ್ಲ ಇವೆ ಅವುಗಳೆಲ್ಲ ಅಲ್ಲಿ ಇತ್ತು ಎಲ್ಲಿ, ವಾಹನದೊಳಗೆ ಆ ಹಡಗಿನೊಳಗೆ ಅಷ್ಟೆಲ್ಲ ಇತ್ತು ಇಂತಹ ಹಡಗುಗಳನ್ನು ನಿರ್ಮಾಣ ಮಾಡಿ ಪರಮಾತ್ಮ ಅವರೆಲ್ಲರಿಗೆ ಆನಂದವನ್ನು ನೀಡಿದ್ದಾನೆ.

ಇನ್ನು ಛಾಲಿಕ್ಯ ಕ್ರೀಡ ಅಂತ ಬಲರಾಮ ದೇವರು, ರೇವತಿ, ಶ್ರೀಕೃಷ್ಣ ಪರಮಾತ್ಮ ಎಲ್ಲ ತನ್ನ 16,108 ಜನರನ್ನು ಕರೆದುಕೊಂಡು ಸಮುದ್ರದಲ್ಲಿ ವಿಹಾರ ಮಾಡುವುದಕ್ಕೆ ಅಂತ ಹೊರಟಿದ್ದಾರೆ. ಅವರ ಎದುರಿನಲ್ಲಿ ಈ ಬಂದಂತಹ ಅಪ್ಸರಾ ಸ್ತ್ರೀಯರೆಲ್ಲ ಗಾನ ಮಾಡುವುದು, ನೃತ್ಯ ಮಾಡುವುದು ಎಲ್ಲ ಮಾಡುತ್ತ ಇದ್ದಾರೆ ಒಂದು ಮಾತನ್ನು ಹೇಳುತ್ತಾರೆ. ರರಾಜ ದೇಶದವರು ಇವರೆಲ್ಲ ಆ ಭಾಗದಲ್ಲಿ ಇದ್ದವರು ಗೋಕುಲ ವೃಂದಾವನದಿಂದ ಬಂದವರು, ಮಥುರಾದಿಂದ ಬಂದವರು ಅವರವರ ದೇಶದ ಭಾಷೆಯಲ್ಲಿ ಸ್ವರ್ಗಲೋಕದ ಅಪ್ಸರಾ ಸ್ತ್ರೀಯರು ಹಾಡಿದ್ದಾರಂತೆ. **'ತದ್ದೇಶಭಾಷಾಕೃತಿವೇಷಯುಕ್ತಾಃ'**[2] ಯಾಕೆ ಅಂದರೆ ತಮ್ಮ ಊರಿನ ಒಂದು ಏನು ಜಾನಪದ ವೇಷ ಇರುತ್ತದೆ ಅದರ ಮೇಲಿರುವ ಆ ಅಭಿಮಾನ ಬೇರೆಯದರ ಮೇಲೆ ಇರುವುದಿಲ್ಲ ಹಳ್ಳಿಯವರೆಗೆ.

ಇವರು ಪಟ್ಟಣದವರು ಮಥುರಾ ಪಟ್ಟಣದವರು ಯಾದವರು ಅಲ್ಲ ಅಂತ ಅಲ್ಲ ಆದರೆ ಆ ಮಥುರಾ ಪಟ್ಟಣದ್ದೇ ಆದ ಒಂದು ವೇಷ, ಗೋಕುಲ ವೃಂದಾವನದವರಾದರೆ ಅವರದ್ದೇ ಆದ ಒಂದು ವೇಷ, ಅವರದ್ದೇ ಆದ ಒಂದು ಭಾಷೆ ಅದೇ ಭಾಷೆಯೊಳಗೆ ಅವರಿಗೆ ತಿಳಿಯುವ ರೀತಿಯಲ್ಲಿ ಹಾಡು ಹಾಡುತ್ತ ಕುಣಿಯುತ್ತ ಅವರನ್ನು ಸಂತೋಷ ಪಡಿಸಿದ್ದಾರೆ. ಏನು ಹಾಡು ನೋಡಿ, ಅಲ್ಲಿ ಬಂದು ದೇವಲೋಕದ ಅಪ್ಸರಾ ಸ್ತ್ರೀಯರು ದೇವೇಂದ್ರನ ಮಹಿಮೆಯನ್ನ, ಅಲ್ಲಿರುವಂತಹ ಇತರ ದೇವತೆಗಳ ವರುಣ, ಚಂದ್ರ, ಬೃಹಸ್ಪತಿ ಬೇರೆ ಬೇರೆ ದೇವತೆಗಳು ಅವರ ಮಹಿಮೆ ಅದನ್ನೆಲ್ಲಾ ಕೊಂಡಾಡಿ ಹಾಡಿ ಯಾಕೆಂದರೆ ಅಲ್ಲಿಂದ ಬಂದವರಲ್ಲ, ಮಾಡಲಿಲ್ಲಾ ಆ ಕೆಲಸ, ನಾವು ಎಲ್ಲಿ ಹೋದರೂ ಸರ್ವೋತ್ತಮನಾದ ಸರ್ವನಿಯಾಮಕನಾದ ಪರ್ವದೇವೋತ್ತಮನಾದ ವ್ಯಕ್ತಿ ಈ ಶ್ರೀಹರಿಯೇ. ಲೋಕ ಬೇರೆ, ಸ್ಥಾನ ಬೇರೆ, ಭಾಷೆ ಬೇರೆ, ವೇಷ ಬೇರೆ ಆದರೆ ನಮ್ಮೆಲ್ಲರ ಧ್ಯೇಯ ಒಂದೇ ಅವನು ಭಗವಂತ ಅನ್ನುವುದನ್ನ ತೋರಿಸುವುದಕ್ಕೆ ತಿಳಿಸುವುದಕ್ಕೆ ಶ್ರೀಕೃಷ್ಣ ಪರಮಾತ್ಮನ ಲೀಲೆಗಳನ್ನೇ ಹಾಡಿದ್ದಾರೆ. ಪೂತನಾ ವಧೆಯನ್ನು ಆರಂಭ

1. 88.75 ವಿಷ್ಣುಪರ್ವ; 2. 89.7 ವಿಷ್ಣುಪರ್ವ

ಮಾಡಿಕೊಂಡು ಇಲ್ಲಿಯವರೆಗೆ ಏನೆಲ್ಲ ಶ್ರೀಕೃಷ್ಣ ಪರಮಾತ್ಮ ಲೀಲೆಗಳನ್ನು ಮಾಡಿದ ಅದೇ ಲೀಲೆಗಳನ್ನೇ ಹಾಡು ಕಟ್ಟಿ ಹಾಡಿದ್ದಾರೆ. ಅರ್ಥ ಮಾಡಿಕೊಳ್ಳಿ ಅಂದರೆ ಸಕಲ ಲೋಕಗಳಲ್ಲಿಯೂ ಆರಾಧ್ಯನಾದವನು ಭಗವಂತ ಅನ್ನುವ ಒಂದು ತತ್ವವನ್ನೂ ಪ್ರತ್ಯಕ್ಷವಾಗಿ ಪರಮಾತ್ಮ ಆ ದೇವಲೋಕದ ಅಪ್ಸರಾ ಸ್ತ್ರೀಯರ ಮುಖದಿಂದ ಇವರಿಗೆಲ್ಲ ತಿಳಿಸಿದ. ಉತ್ಸಾಹ ಬಂತು ನೋಡಿ ಬಲರಾಮ ದೇವರಿಗೆ, ಶೇಷ ದೇವರು ತಾವು ಗಾನ ಮಾಡಲಿಕ್ಕೆ ಪ್ರಾರಂಭ ಮಾಡಿದರು ರೇವತಿ ಸಹಿತರಾಗಿ.

ಬಲಃ ಪೃಥುಶ್ರೀಃ ಸ ಚುಕೂರ್ದ ರಾಮಃ । (89.16 ವಿಷ್ಣುಪರ್ವ)

ರೇವತಿ, ಬಲರಾಮರಿಬ್ಬರೂ ಕೂಡ ಚೆನ್ನಾಗಿ ಭಾರೀ ಉತ್ಸಾಹದಿಂದ ಬಲರಾಮ ದೇವರು ಗಾನ ಮಾಡುತ್ತಾ ಇದ್ದಾರೆ ಇನ್ನು ಕೇಳಬೇಕಾ ಶೇಷ ದೇವರು ಶೇಷಾವತಾರ ಶುಕ್ಲಕೇಶಾವೇಶ ಅದ್ಭುತವಾದ ಗಾನ. ಬಲರಾಮ ದೇವರ ಗಾನ ಮಾಡಿದ ಮೇಲೆ ಕೃಷ್ಣ ಜಗತ್ ಸ್ವಾಮಿ ಸತ್ಯಭಾಮಾ ಸಮೇತನಾಗಿ ಶ್ರೀಕೃಷ್ಣ ಪರಮಾತ್ಮ ಗಾನ ಮಾಡುತ್ತಾ ಇದ್ದಾನೆ, ಸುಭದ್ರಾ ಸಹಿತನಾಗಿ ಅರ್ಜುನ ಗಾನ ಮಾಡುತ್ತಾ ಇದ್ದಾನೆ ಹೀಗೆ ಎಲ್ಲ ಯಾದವರೂ ಕೂಡ ತಮ್ಮ ತಮ್ಮ ಪತ್ನಿಯರಿಂದ ಸಹಿತರಾಗಿ ಗಾನ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಏನೋ ಒಂದು ಗಲಾಟೆ ಒಬ್ಬರದು ಒಬ್ಬರಿಗೆ ಕೇಳಿಸದ ಹಾಗೆ ಅಸ್ತವ್ಯಸ್ತವಾಗಿ ಹೋಯಿತು ಅಂತ ನಿಮಗೆ ಅನ್ನಿಸುತ್ತಾ ಇದೆಯಲ್ಲ ಸರ್ವಥಃ ಇಲ್ಲ ಅದೇ ಭಗವಂತನ ಅಚಿಂತ್ಯವಾದ ಶಕ್ತಿ, ಅದ್ಭುತವಾದ ಶಕ್ತಿ ಸಾಮರ್ಥ್ಯಗಳು ಎಲ್ಲರೂ ಹಾಡುತ್ತಾ ಇದ್ದಾರೆ ಏಕ ಧ್ವನಿಯಿಂದ ಹಾಡುತ್ತಾ ಇದ್ದಾರೆ. ಆ ಗಾನವನ್ನು ಕೇಳಿ ಎಲ್ಲರಿಗೂ ಆನಂದವೇ ಆಗುತ್ತ ಇದೆಯೇ ಹೊರತು ಅದು ಯಾರು ಯಾರೋ ಏನೋ ಹೇಳುತ್ತಾ ಇದ್ದಾರೆ ಅಂತ ಅದು ಯಾರದು ಯಾರಿಗೆ ಏನೂ ಗೊತ್ತಿಲ್ಲ ಆಗ ಹಾಗೆ ಆಗುತ್ತೆ ಭಗವಂತನ ಅನುಗ್ರಹವನ್ನು ಪಡೆದ ದೇವತೆಗಳಿವರೆಲ್ಲ.

'ಕಾಮೇನ ಮೇ ಕಾಮ ಆಗಾತ್' [1] ಪರಮಾತ್ಮನ ಇಚ್ಛೆ ಏನು ಅಂತ ಅವನ ಅನುಗ್ರಹದಿಂದ ತಿಳಿದವರೇ ಇವರೆಲ್ಲ ಬಲರಾಮಾದಿಗಳಾದ್ದರಿಂದ ಅವನು ನುಡಿದಂತೇನೆ ನುಡಿದು, ನಡೆದಂತೇನೆ ನಡೆದು ಅದೇ ರಾಗ ಅದೇ ತಾಳ ಎಲ್ಲವೂ ಅದೇ ಆ ರೀತಿ ಎಲ್ಲರೂ ಹಾಡುತ್ತ ಇದ್ದರೆ ಅದು ಅತ್ಯಂತ ಸುಗಮವಾಗಿ ಇತ್ತು. ಇದರಿಂದ ನಾವು ತಿಳಿಯಬೇಕಾದದ್ದು ಭಗವಂತನ ಸಂಕಲ್ಪದಂತೆ ನಾವು ನಡೆದರೆ ಎಲ್ಲವೂ ಕೂಡ ಸುಗಮ ಆಗುತ್ತೆ ಆ ಪರಮಾತ್ಮನ ಅನುಗ್ರದಿಂದ, ಅವನ ಇಚ್ಛೆಗೆ ವಿರುದ್ಧವಾಗಿ ನಾವು ಎಂದೂ ಇಚ್ಛೆಯನ್ನು ಮಾಡಬಾರದು ಅನ್ನುವುದೇ ಇಲ್ಲಿ ತತ್ವ, ಈ ರೀತಿ ಪರಮಾತ್ಮ ಅಲ್ಲಿ ಗಾನದ ಕಾರ್ಯಕ್ರಮವನ್ನು ಯಥೇಚ್ಛವಾಗಿ ಮಾಡಿಸಿದ್ದಾನೆ.

ಸುಗನ್ಧತೋಯೋ ಭವ ಮೃಷ್ಟತೋಯಸ್ತಥಾ ಭವ ಗ್ರಾಹವಿವರ್ಜಿತಶ್ಚ । (89.33 ವಿಷ್ಣುಪರ್ವ)

ದೃಶ್ಯಾ ಚ ತೇ ರತ್ನವಿಭೂಷಿತಾ ತು ಸಾ ವೇಲಿಕಾ ಭೂರಥ ಪತ್ಸುಖಾ ಚ ॥ (89.34 ವಿಷ್ಣುಪರ್ವ)

ಮತ್ತೆ ವರುಣನನ್ನು ಕರೆದ ವರುಣ ಅಂದ ಸ್ವಾಮಿ ನಿನ್ನ ಆಜ್ಞೆಯನ್ನು ಪರಿಪಾಲನೆ ಮಾಡಿ ಆಯಿತು ಇನ್ನು ಬೇರೆ ಹೇಳುವುದು ಇದೆ ಕೇಳು ಅಂದ ಉಳಿದ್ದೆಲ್ಲ ನೀರು ಸುಗಂಧಮಯವಾಗಿದೆ, ರುಚಿಯಾಗಿದೆ ಎಲ್ಲಾ ಚೆನ್ನಾಗಿದೆ ರತ್ನಾಕರ ಅಂತ ನಿನಗೆ ಕರೆಯುತ್ತಾರೆ. ಬೇಕಾದಷ್ಟು ಮುತ್ತು, ರತ್ನ ಏನೋ ಒಳಗೆ ಇರುತ್ತದೆ ಜಿಗಿದರೆ, ಕೆಲವರೆಲ್ಲ ಡೈವರ್ಸ ಹಾಕಿಕೊಂಡು ಜಿಗಿಯುತ್ತಾರೆ, ತೆಗೆಯುತ್ತಾರೆ ನೋಡಿ ಅಂತ ಬರೀ ಸುದ್ದಿ ಕೇಳುತ್ತಾರೆ ಎಲ್ಲರೂ ಆ ಪರಿಸ್ಥಿತಿ

1. ಉಪನಿಷತ್ತು



ಬರುವುದು ಬೇಡ. ಸುಮ್ಮನೆ ಹೀಗೆ ನೆಲದ ಮೇಲೆ ಓಡಾಡುತ್ತಾ ಇದ್ದರೆ ಎಲ್ಲಾ ಕಲ್ಲು, ಮಣ್ಣು ಕಾಣಿಸುತ್ತಾವಲ್ಲ ಹಾಗೆ ಮುತ್ತು, ರತ್ನ ಎಲ್ಲರಿಗೂ ಕಾಣಿಸಬೇಕು ಹಾಗೆ ಮಾಡು ಅಂದ ಆಯಿತು ಸ್ವಾಮಿ ಅಂದ ಝಗ್ ಅಂತ ಕಾಣಿಸುತ್ತ ಇವೆ ಎಲ್ಲರಿಗೂ ರತ್ನ ಮುತ್ತುಗಳು. ಮೊಸಳೆಗಳು, ತಿಮಿಂಗಲಗಳು ಯಾವುದು ಅಡ್ಡ ಬರಬಾರದು ಇವರೆಲ್ಲ ವಿಹಾರ ಮಾಡಿ ಹೋಗಿ ಮಥುರಾ ಮುಟ್ಟುವತನಕ ಒಂದೇ ಒಂದು ಹಿಂಸ್ರವಾದಂತಹ ಜಲಚರ ಪ್ರಾಣಿ ಒಳಗೆ ಅಡ್ಡಾಬಾರದು ಮಟ್ಟಮಾಯ ಏನಿಲ್ಲ.

'ಗ್ರಾಹವಿವರ್ಜಿತಶ್ಚ ದೃಶ್ಯಾ ಚ ತೇ ರತ್ನವಿಭೂಷಿತಾ ತು' ಪರಮಾತ್ಮ ಹೇಳಿದಂತೆ ವರುಣ ದೇವರು ಎಲ್ಲವನ್ನೂ ಸಿದ್ಧಮಾಡಿ ಪರಮಾತ್ಮನಿಗೆ ಸಮರ್ಪಣೆ ಮಾಡಿದ್ದಾರೆ. ಇದೇ ಭಗವಂತನ ಸರ್ವೋತ್ತಮತ್ವ ಸಕಲ ಜಗನ್ ನಿಯಾಮಕತ್ವಕ್ಕೆ ಸ್ಪಷ್ಟವಾದಂತಹ ನಿದರ್ಶನ ಎಂಬುದಾಗಿ ಅಷ್ಟಲ್ಲದೇ ಸಮುದ್ರ ಅಂದರೆ ಏನು ಬರೀ ನೀರು ಇರುತ್ತದೆ ಅಲ್ಲಿ, ಅಲ್ಲಿ ಕಮಲಗಳ ಇರುತ್ತದಾ ಸರೋವರದಲ್ಲಿ ಕಮಲ ಇರುತ್ತದೆ ಕಮಲಗಳು ಇರಬೇಕು ಇಲ್ಲಿ. ವಿಹಾರ ಮಾಡುವುದಕ್ಕೆ ಎಲ್ಲ ಪುರುಷರು ಸ್ತ್ರೀಯರು ಬಂದಿದ್ದಾರೆ ಕಮಲಗಳು ಇದ್ದರೆ ಅವರಿಗೆ ಆನಂದವಾಗುತ್ತದೆ ಅಲ್ಲಲ್ಲಿ ಕಮಲಗಳು ಇರಬೇಕು. ಅವರಿಗೆ ಏನಾದರೂ ಪೇಯವಾದ ದ್ರವ್ಯಗಳು ಬೇಕು ಅಂತ ಅನ್ನಿಸಿದರೆ ನೀರಿನ ಮೇಲೆ ಕೊಡಗಳು ತೇಲುತ್ತಾ ಇರಬೇಕು ಬೇಕಾದಾಗ ನೀರು ಕುಡಿಯುವುದು ಬೇರೆ, ಅವರಿಗೆ ಬೇಕಾದ ಪೇಯ ದ್ರವ್ಯಗಳ ನೀರಿನ ಮೇಲೆ ಅವುಗಳು ತೇಲುತ್ತ ಇರಬೇಕು ಆಯಿತು ಸ್ವಾಮಿ ಅಂದ.

ಕುಮ್ಭಾಂಶ್ಚ ಪೂರ್ಣಾನ್ ಸ್ಥಪಯಸ್ವ ತೋಯೇ । (89.37 ವಿಷ್ಣುಪರ್ವ)

ಶ್ರೀರಾಮಚಂದ್ರ ದೇವರು ಸಮುದ್ರದ ಮೇಲೆ ಕಲ್ಲುಗಳನ್ನು ಇಟ್ಟರು ಅಂತ ನೀವು ಕೇಳುತ್ತೀರಿಲ್ಲ ಆ ರೀತಿ ಪರಮಾತ್ಮನ ಆಜ್ಞೆಯಂತೆ ವರುಣ ದೇವರು ತನ್ನ ಮೇಲೆ ಆ ಕುಂಭಗಳನ್ನೆಲ್ಲ ಇಟ್ಟಿದ್ದ ಏನು ದೇವರು ಹೇಳುತ್ತಾನೋ ಅದು ಸಿದ್ಧವಾಗುತ್ತಾ ಇದೆ ಅಲ್ಲಿ ಆ ರೀತಿ ಎಲ್ಲ ಸಿದ್ಧ ಮಾಡಿ ನಾನಾ ವಿಧವಾದ ವೇಷಗಳನ್ನು ಹಾಕಿಕೊಂಡು ಯಥೇಚ್ಛವಾಗಿ ಎಲ್ಲರೂ ಕ್ರೀಡೆಯನ್ನು ಮಾಡಿದ್ದಾರೆ. ಪರಮಾತ್ಮ ವಿಚಾರ ಮಾಡಿದ ಅದರಲ್ಲಿ ಯಾವ 16,108 ಜನರೊಳಗೆ ಒಬ್ಬ ಪರಮಾತ್ಮನ ಪತ್ನಿಗೂ ಕೂಡ ದೇವರು ನನ್ನನ್ನು ಬಿಟ್ಟು ಸರದ ಅಂತ ಅನಿಸಿಲ್ಲ, ಮಥುರೆ ಬಿಟ್ಟಾಗಿನಿಂದ ಇಲ್ಲಿಯವರೆಗೆ ನನ್ನ ಜೊತೆಗೆ ಇದ್ದಾನೆ ಕೃಷ್ಣ, ನನ್ನ ಮೇಲೆ ಮಾಡಿದಷ್ಟು ಪ್ರೀತಿ ಯಾರ ಮೇಲೂ ಮಾಡುವುದಿಲ್ಲ ಅಂತ 16,108 ಜನರಿಗೂ ಅದೇ ತರಹದ ಅನುಗ್ರಹವನ್ನು ದೇವರು ಮಾಡಿದ್ದಾನೆ. ತಾರತಮ್ಯ ಇದೆ ರುಕ್ಮಿಣಿ, ಸತ್ಯಭಾಮೆಯರಿಗೆ ಮಾಡುವುದು ಬೇರೆ, ಷಣ್ಮಹಿಷಿಯರಿಗೆ ಮಾಡುವುದು ಬೇರೆ, ಉಳಿದವರಿಗೆ ಬೇರೆ ಆದರೆ ಎಲ್ಲರಿಗೂ ಅವರವರ ಯೋಗ್ಯತೆಗೆ ತಕ್ಕಂತೆ ಅನುಗ್ರಹವನ್ನು ಪರಮಾತ್ಮ ಮಾಡಿದ್ದಾನೆ ಎಲ್ಲರ ಜೊತೆಗೆ ಭಗವಂತ ಇದ್ದಾನೆ ಇದು ಕೂಡ ಸಕಲ ಜೀವರಿಗೆ ಒಂದು ಸಂದೇಶ. ಭಗವಂತ ಇಷ್ಟೆಲ್ಲಾ ದೊಡ್ಡ ಜಗತ್ತನ್ನು ನಿಯಮನ ಮಾಡುವ ದೇವರು ನನ್ನ ಮೇಲೆ ಎಷ್ಟು ಲಕ್ಷ ಕೊಡುತ್ತಾನೋ ಕೊಡುವುದಿಲ್ಲವೋ, ಏನು ಮಾಡುತ್ತಾನೋ ಬಿಡುತ್ತಾನೋ ನಾವು ಏನೋ ಅವನನ್ನು ಬಹಳ ಭಕ್ತಿಯಿಂದ ಭಜಿಸುತ್ತೇವೆ ಯಾಕೆಂದರೆ ನಮಗೆ ಅವನೇ ಒಬ್ಬನೇ ದೇವರು. ಆದರೆ ಅವನಿಗೆ ಅನಂತ ಜೀವರು ಹೀಗಾಗಿ ಅಷ್ಟೆಲ್ಲಾ ಜನರನ್ನು ನೋಡುವಾಗ ನನ್ನನ್ನು ಯಾವಾಗ ನೋಡುತ್ತಾನೋ, ಎಷ್ಟು ನೋಡುತ್ತಾನೋ ಯಾರಿಗೆ ಗೊತ್ತು ಅನ್ನುವ ಚಿಂತೆ ಮಾಡಬೇಡಿ.

ನಿಮ್ಮ ನಿಮ್ಮ ಹೃದಯದಲ್ಲಿ ಅಂತರ್ಯಾಮಿಯಾದ ಬಿಂಬರೂಪಿಯಾದ ಪರಮಾತ್ಮ ನಿಮಗೋಸ್ಕರನೇ ಅನಾದಿಕಾಲದಿಂದ ಅನಂತಕಾಲದವರೆಗೆ ನಿಮ್ಮ ಹೃದಯದೊಳಗೇ ಇರುತ್ತಾನೆ, ನಿಮ್ಮನ್ನು ಸದಾ ರಕ್ಷಣೇ ಮಾಡುತ್ತ ಇರುತ್ತಾನೆ ಎಂದಿಗೂ ನಿಮ್ಮನ್ನು ಬಿಟ್ಟು ಸರಿಯುವುದಿಲ್ಲ. ಅಂತಹ ಬಿಂಬರೂಪಿಯಾದ ಅಂತರ್ಯಾಮಿಯಾದ

ಪರಮಾತ್ಮನ ಅನುಗ್ರಹಕ್ಕಾಗಿ ಸದಾ ಅವನ ಉಪಾಸನೆಯನ್ನು ಮಾಡಿ, ವಿಶೇಷವಾಗಿ ಅವನ ಸೇವೆಯನ್ನು ಮಾಡಿ ಅನುಗ್ರಹವನ್ನು ಪಡೆಯಿರಿ. ಅವನ ಉಪಾಸನೆಯನ್ನು ಮಾಡುವ ಯೋಗ ಸಿಗುವುದಕ್ಕೆ ಮೊದಲು ಶಾಸ್ತ್ರಗಳ ಅಧ್ಯಯನವನ್ನು ಮಾಡಿ ಜ್ಞಾನವನ್ನು ಪಡೆದುಕೊಂಡು ಗುರುಗಳ ಅನುಗ್ರಹವನ್ನು ಪಡೆದುಕೊಳ್ಳಬೇಕು ಆ ಒಂದು ತತ್ವವನ್ನು ತಿಳಿಸಿದ್ದಾನೆ ಕೃಷ್ಣ ಅಂತ ತಿಳಿಯಬೇಕು ಬರೀ ಕಥೆ ತಿಳಿಯಬಾರದು. ನಮ್ಮನ್ನು ಬಿಟ್ಟು ಅಗಲಿಲ್ಲ ಅಂತನ್ನುವ ಭಾವನೆ ಅವರಿಗೆ ಬಂದಿದೆ ಹೇಗೋ ಹಾಗೆ ಎಂದೂ ನಮ್ಮನ್ನು ಬಿಟ್ಟು ದೇವರು ಅಗಲುವುದಿಲ್ಲ, ಅಗಲಿದರೆ ನಾವು ಬದುಕುವುದು ಸಾಧ್ಯವಿಲ್ಲ, ಬದುಕಿದ್ದೇವೆ ಹಾಗಾದರೆ ಅವನು ಅಗಲಿಲ್ಲ ಅನ್ನುವ ಧೃಢವಾದ ವಿಶ್ವಾಸ ಮಾತ್ರ ಅಲ್ಲ ಆ ಪ್ರೀತಿ ನನಗಾಗಿ ಒಂದು ರೂಪವನ್ನ ಮೀಸಲಿಟ್ಟಿದ್ದಾನಲ್ಲ ಎಂತಹ ದಯೆ. ನಾನು ಯಾರು ಅತ್ಯಂತ ಕ್ಷುದ್ರ ಕುನ್ನಿ ಮಾನವನಿಗಾಗಿ ತನ್ನ ಒಂದು ಸರ್ವೋತ್ತಮ ರೂಪವನ್ನೇ ಇಟ್ಟಿದ್ದಾನೆ ಅಂದರೆ ಇದಕ್ಕಿಂತ ದೊಡ್ಡ ದಯೆ ಇನ್ನೇನು ಬೇಕು. ಆ ದಯೆಯನ್ನ ಚಿಂತನ ಮಾಡಿ ಅಂತ ಈ ಕಥೆ ನಮಗೆ ತಿಳಿಸಿಕೊಡುತ್ತ ಇದೆ.

ಶ್ರೀಕೃಷ್ಣ ಪರಮಾತ್ಮ ನೋಡಿದ ಅಯ್ಯೋ ಸಮಯ ಬಹಳ ಆಯಿತು ಊಟ ಆಗಬೇಕಲ್ಲ ಅಂತ ನೋಡಿ ಅದಕ್ಕೆ ನಾನು ಹೇಳಿದೆ ಈ ಹೊತ್ತಿಗೆ ಹಸಿವೆ ಬೇಕು ಊಟ ಆಗಬೇಕಲ್ಲ ಅಂದ ಅಷ್ಟೆ **'ಸಂಕಲ್ಪಮಾತ್ರಾತ್ ಸಕಲೋಽಪಿ'** ಎಲ್ಲಾ ಪದಾರ್ಥಗಳು ಸಿದ್ಧ ಅಲ್ಲಿ ಸಮುದ್ರದ ಮೇಲೆ, ನಾನಾ ವಿಧವಾದ ಭಕ್ಷ್ಯ ಭೋಜ್ಯಾದಿಗಳೆಲ್ಲಾ ಸಿದ್ಧವಾಗಿವೆ ಯಥೇಚ್ಛವಾಗಿ ಎಲ್ಲರೂ ಕೂಡ ಭೋಜನವನ್ನು ಮಾಡಿದ್ದಾರೆ. ಈ ಮಧ್ಯದೊಳಗೆ ನಾರದರು ಅಲ್ಲಿ ಇದ್ದರು ಅವರು ಮುನಿಗಳು ಈ ಸ್ತ್ರೀಯರು ಸಪತ್ನೀಕರಾದಂತಹ ಪುರುಷರೆಲ್ಲ ತಾವು ಕ್ರೀಡೆಯನ್ನು ಮಾಡುವುದು ಮಾಡುತ್ತ ಇದ್ದರು, ಅವರೂ ಮಧ್ಯದಲ್ಲಿ ಗಾನ ಮಾಡುತ್ತ ಇದ್ದಾರೆ, ನೃತ್ಯ ಮಾಡುತ್ತ ಇದ್ದಾರೆ ಇದು ವರ್ಣನೆ ಮಾಡುತ್ತದೆ ಹರಿವಂಶ. ರುಕ್ಮಿಣಿ ಸತ್ಯಭಾಮೆಯರು ಭಾರೀ ಗಂಭೀರ ಹಿರಿಯ ಪತ್ನಿಯರು ಅವರು ಸಾಕ್ಷಾತ್ ಮಹಾಲಕ್ಷ್ಮೀಯ ಅವತಾರ **'ಶ್ರೀಃ ಶ್ರೀಃ ಧೃತಿಃ'** ಅತ್ಯಂತ ಧೈರ್ಯ ಸ್ವರೂಪರು, ಧೀರ ಗಂಭೀರರು ಸುಮ್ಮನೆ ಹೀಗೆಲ್ಲ ನಗುವವರಲ್ಲ. ಅಂಥವರೂ ನಗುವಂತೆ ಇವರು ಚೇಷ್ಟೆಯನ್ನು ಮಾಡಿದ್ದಾರಂತೆ ನಾರದರು ಆ ರೀತಿಯ ನೃತ್ಯವನ್ನು ಮಾಡಿ, ಆ ರೀತಿಯ ಹಾಡುಗಳನ್ನು ಹಾಡಿ ರುಕ್ಮಿಣಿ ಸತ್ಯಭಾಮೆಯರನ್ನು ನಗಿಸಿದರು ಅಂತ ಸ್ಪೆಷಲ್ ಆಗಿ ಹರಿವಂಶ ಹೇಳುತ್ತದೆ ಅಂತಹ ನಾರದರ ನೃತ್ಯ ವಿಶೇಷವಾಗಿ ಛಾಲಿಕ್ಯ ಗಾನ ಅಂತ.

ಛಾಲಿಕ್ಯಗೇಯಂ ಬಹುಸಂನಿಧಾನಂ ಯದೇವ ಗಾನ್ಧರ್ವಮುದಾಹರನ್ತಿ ॥ (89.67 ವಿಷ್ಣುಪರ್ವ)

ಛಾಲಿಕ್ಯ ಗಾನ ಅಂದರೆ ಬಹಳ ಜನ ಸೇರಿ ಏನು ಸಾಮೂಹಿಕವಾಗಿ ಏಕಧ್ವನಿಯಿಂದ ಗಾನ ಮಾಡುವುದಿದೆ ಅದಕ್ಕೆ ಛಾಲಿಕ್ಯ ಗಾನ ಅನ್ನುತ್ತಾರೆ. ಸಾಮೂಹಿಕ ಭಜನೆ ಒಬ್ಬಬ್ಬರದೇ ಕಛೇರಿ ಅಲ್ಲ ಸಾಮೂಹಿಕವಾದ ಭಜನೆ ಆ ಸಾಮೂಹಿಕ ಭಜನೆಗೆ ಛಾಲಿಕ್ಯ ಗಾನ ಅಂತ ಆ ಛಾಲಿಕ್ಯ ಗಾನವನ್ನು ನಾರದರು ಅಲ್ಲಿ ಕುಳಿತು ಅನೇಕ ಗಂಧರ್ವರ ಜೊತೆಗೆ ಮಾಡಿದ್ದಾರೆ.

ಈ ಕಡೆಗೆ ಹಲ್ಲೀಸಕ ಕ್ರೀಡಾ ಅಂತ. ಹಲ್ಲೀಸಕ ಕ್ರೀಡಾ ಅಂದರೆ ಅನೇಕ ಸ್ತ್ರೀಯರ ಜೊತೆಗೆ ನೃತ್ಯವನ್ನು ಮಾಡುವುದು ಅದನ್ನು ಶ್ರೀಕೃಷ್ಣ ಪರಮಾತ್ಮ ಮಾಡಿದ್ದಾನೆ, ಅಲ್ಲಿ ಗೋಪಿಕಾ ಸ್ತ್ರೀಯರ ಜೊತೆಗೆ, ಇಲ್ಲಿ ಹಲ್ಲೀಸಕ ಸ್ತ್ರೀಯರ ಜೊತೆಗೆ. ಹಿಂದೆ ತಿಳಿದಿದ್ದೀರಿ ಶ್ರೀಕೃಷ್ಣ ಪರಮಾತ್ಮ ಗೋಪಿಕಾ ಸ್ತ್ರೀಯರ ಮೇಲೆ ಅನುಗ್ರಹ ಮಾಡುವುದಕ್ಕಾಗಿ ಮಾತ್ರ ಅಲ್ಲಿ ಕ್ರೀಡೆ ಆದದ್ದು ಆ ತರಹದ ಪರಪತ್ನಿಯರ ಜೊತೆಗೆ ಕ್ರೀಡೆ ಮಾಡುವ ಸ್ವಭಾವ ಸರ್ವಥಃ ಅಲ್ಲ ಇಲ್ಲಿ ಮಥುರಾ ಪಟ್ಟಣದಲ್ಲಿ ಕೇವಲ 16,108 ಜನ ತನ್ನ ಪತ್ನಿಯರ ಜೊತೆಗೆ ಮಾತ್ರ ಪರಮಾತ್ಮ ಹಲ್ಲೀಸಕ ಕ್ರೀಡಾ ಅಂತ ಅಂದರೆ ಸಾಮೂಹಿಕವಾದ ನೃತ್ಯ ಆ ನೃತ್ಯವನ್ನು ಪರಮಾತ್ಮ ಮಾಡಿದ್ದಾನೆ, ಅವರವರು ಅವರವರ ತಮ್ಮ ಪತ್ನಿಯರ



ಜೊತೆಗೆ ನೃತ್ಯವನ್ನು ಮಾಡಿದ್ದಾರೆ. ಇಲ್ಲಿ ಛಾಲಿಕ್ಯ ಗಾನವನ್ನು ಎಲ್ಲ ಗಂಧರ್ವರು, ನಾರದರು ಮಾಡುತ್ತಾ ಇದ್ದಾರೆ ಅದ್ಭುತವಾದದ್ದು. ನೋಡಿ ಒಂದು ಮಾತನ್ನು ತಿಳಿದುಕೊಳ್ಳಿ ಭಗವದ್ಗೀತಾ ಭಾಷ್ಯದಲ್ಲಿ ಶ್ರೀಮದಾಚಾರ್ಯರು ತಿಳಿಸುತ್ತಾರೆ ಭೋಗವನ್ನು ಮಾಡುವುದಕ್ಕೂ ಉಳಿದವರಿಗೆ ಬರುವುದಿಲ್ಲ ದೇವರೇ ನಿಜವಾಗಿ ಭೋಗ ಮಾಡುವುದು ಅಂತ **'ರಸೋಽಹಮಪ್ಸು ಕೌಂತೇಯ'**[1] ನೀರಿನೊಳಗಿನ ರಸ ಆ ರಸವನ್ನು ನಿಜವಾಗಿ ಭೋಗ ಮಾಡುವವ ದೇವರೇ. ಶಬ್ದದಿಂದ ಆಗುವ ಒಂದು ಹಾಡು ಹಾಡಿದರೆ ಏನು ಆನಂದ ಆಗಬೇಕೋ ಆ ಆನಂದ ಪರಿಪೂರ್ಣವಾಗಿ ಆಗುವುದು ದೇವರಿಗೇನೆ ಅದು. ನಾವು ಕೇಳುತ್ತ ಇರುತ್ತೇವೆ ಸಂಗಿತ ಏನೋ ನಮಗೆ ಬಹಳ ಆನಂದ ಅಂತ ಅಂದುಕೊಳ್ಳುತ್ತೇವೆ, ನಮಗೆ ಅದರ ಅರ್ಥನೇ ಆಗಿರುವುದಿಲ್ಲ, ಶಬ್ದದ ಅರ್ಥ ಅಲ್ಲ ಆ ಗಾನದ ಸ್ವಾರಸ್ಯವನ್ನೇ ತಿಳಿದುಕೊಳ್ಳುವುದಕ್ಕೆ ಆಗುವುದಿಲ್ಲ, ದೇವರು ಪರಿಪೂರ್ಣವಾಗಿ ಆನಂದವನ್ನು ಅನುಭವಿಸುತ್ತಾನೆ. **'ಶಿಶುರ್ವೇತ್ತಿ ಪಶುರ್ವೇತ್ತಿ ವೇತ್ತಿ ಗಾನರಸಂ ಫಣಿ'** ಮಗುವಿಗೂ ಆನಂದವಾಗುತ್ತದೆ ಹಾಡು ಹಾಡಿದರೆ ಚಪ್ಪಾಳೆ ತಟ್ಟುತ್ತದೆ ಆದರೆ ಒಬ್ಬ ಸಂಗೀತ ಶಾಸ್ತ್ರಜ್ಞನಿಗೆ ಆಗುವ ಆನಂದ ಮಗುವಿಗೆ ಆಗುವುದಿಲ್ಲ ಆದರೆ ಆನಂದ ಆಗಿದೆ. ಹಾಗೆ ನಮಗಾಗುವ ಆನಂದಕ್ಕೂ, ದೇವರಿಗಾಗುವ ಆನಂದಕ್ಕೂ ತಾರತಮ್ಯ ಹೇಳಲಿಕ್ಕೆ ಸಾಧ್ಯ ಇಲ್ಲ ಅನಂತ ತಾರತಮ್ಯ, ಊಹೆ ಮಾಡಲಿಕ್ಕೆ ಸಾಧ್ಯವಿಲ್ಲದೇ ಇರುವಷ್ಟು ತಾರತಮ್ಯ ಆ ಮಾತನ್ನು ಹರಿವಂಶ ಹೇಳುತ್ತದೆ.

ವಿಜ್ಞಾನಮೇತದ್ಧಿ ಪರೇ ಯಥಾವದುದ್ದೇಶಮಾತ್ರಾಚ್ಚ ಜನಾಸ್ತು ಲೋಕೇ ।
ಜಾನನ್ತಿ ಛಾಲಿಕ್ಯಗುಣೋದಯಾನಾಂ ತೋಯಂ ನದೀನಾಮಥವಾ ಸಮುದ್ರಃ ॥ (89.80 ವಿಷ್ಣುಪರ್ವ)

ಉಳಿದವರೆಲ್ಲ ಸುಮ್ಮನೆ ಈ ಛಾಲಿಕ್ಯ ಛಾಲಿಕ್ಯ ಅಂತ ಹೆಸರು ಗೊತ್ತು ಇವರಿಗೆ ಅನ್ನುತ್ತಾರೆ **'ದುದ್ದೇಶಮಾತ್ರಾಚ್ಚ ಜನಾಸ್ತು ಲೋಕೇ'** ಇದು ಛಾಲಿಕ್ಯ ಗಾನ ಹೋ ಇದು ಛಾಲಿಕ್ಯ ಗಾನ, ಛಾಲಿಕ್ಯ ಇದು ಚೆನ್ನಾಗಿ ಆಯಿತು, ಛಾಲಿಕ್ಯ ಇದು ಛೊಲೋ ಆಯಿತು ಅಂತ. ಛಾಲಿಕ್ಯ ಇದು ಛೊಲೋ ಆಯಿತು ಅಂತ ಇಷ್ಟೇ ಹೇಳಲಿಕ್ಕೆ ಗೊತ್ತು ಇವರಿಗೆ ಹೆಚ್ಚಿಗೆ ಏನು ಗೊತ್ತಿಲ್ಲ. ಇದನ್ನು ನಿಜವಾಗಿ ತಿಳಿಯಬೇಕು ಕೃಷ್ಣನೇ ತಿಳಿಯಬೇಕು ಅನ್ನುತ್ತದೆ ಹರಿವಂಶ, ಯಾವ ಮಾತನ್ನು ಶ್ರೀಮದಾಚಾರ್ಯರು ಹೇಳುತ್ತಾರೆ ಅದನ್ನು ನಮಗೆ ಇಲ್ಲಿ ವೇದವ್ಯಾಸ ದೇವರು ತಿಳಿಸಿಕೊಡುತ್ತಾರೆ.

ಜ್ಞಾತುಂ ಸಮರ್ಥೋ ಹಿ ಮಹಾಗಿರಿರ್ವಾ ಫಲಾಗ್ರತೋ ವಾ ಗುಣತೋಽಥ ವಾಪಿ ॥

(89.81 ವಿಷ್ಣುಪರ್ವ)

ಹೇಗೆ ಸಮುದ್ರದ ಆ ಆಳವನ್ನ ಪರ್ವತ ತಿಳಿಯುವುಕ್ಕೆ ಸಾಧ್ಯ ಇದೆ, ನದಿಗಳ ಬಗ್ಗೆ ಸಮುದ್ರ ಚೆನ್ನಾಗಿ ತಿಳಿದುಕೊಳ್ಳುವುದಕ್ಕೆ ಸಾಧ್ಯ ಇದೆ ಹಾಗೆ ಇವುಗಳೆಲ್ಲವನ್ನ ಚೆನ್ನಾಗಿ ತಿಳಿಯುವುದಕ್ಕೆ ಸಮರ್ಥನಾದವನು ಶ್ರೀಕೃಷ್ಣ ಪರಮಾತ್ಮ ಮಾತ್ರ **'ಛಾಲಿಕ್ಯಮೇವಂ ಮಧುಸೂದನೇನ'**[2] ಅವನೇ ಚೆನ್ನಾಗಿ ಇದರ ಆನಂದವನ್ನು ಅನುಭವಿಸಬಹುದು. ಊರೆಲ್ಲಾ ನಾವು ಕೇಳಿ ಬಂದೀವಿ ಬಹಳ ಚೆನ್ನಾಗಿತ್ತು ಅಂತ ಹೇಳುತ್ತಾ ಹೋದರು ಎಲ್ಲಾ ಯಾದವರು ಯಾರಿಗೂ ಅರ್ಥ ಆಗಿಲ್ಲ ಅದು ಅವರವರ ಯೋಗ್ಯತೆ ನಮಗಿಂತಲೂ ಬಹಳ ಅರ್ಥ ಆಗಿರುತ್ತದೆ ಅವರು ದೊಡ್ಡ ದೇವತೆಗಳು. ಆದರೆ ದೇವರ ದೃಷ್ಟಿಯಲ್ಲಿ ಅದು ಏನಲ್ಲ ಅನ್ನುತ್ತಾರೆ ಅಂದರೆ ಅರ್ಥ ಮಾಡಿಕೊಳ್ಳಿ ಎಷ್ಟು ಅದ್ಭುತವಾಗಿದೆ ಇದು ಒಂದು ಉದಾಹರಣೆ ಅಷ್ಟೇ ಬರೀ ಶಬ್ದಕ್ಕಲ್ಲ ಇದು. ಹೀಗೇನೆ ಒಂದು ಬಣ್ಣ ನೋಡಿ ಆನಂದ

1. 7.8 ಭ ಗೀತಾ; 2. 89.83 ವಿಷ್ಣುಪರ್ವ

ಪಡೆಯುವುದು ಹೇಗೆ ಅಂತೂ ನಮಗೆ ಗೊತ್ತಿಲ್ಲ ಅದನ್ನು ನೋಡಿಯೇ ಏನು ಆನಂದ ಪಡಬೇಕೋ ಅದನ್ನು ದೇವರು ಪಡೆಯುತ್ತಾನೆ, ಒಂದು ರಸದಿಂದ ಏನು ಆನಂದ ಪಡಬೇಕೋ ಅದನ್ನು ದೇವರು ಪಡೆಯುತ್ತಾನೆ ವಿಚಿತ್ರ ಅಂದರೆ ಆ ಮಹಾರಾಯನಿಗೆ ನಿತ್ಯತೃಪ್ತ, ನಿತ್ಯಪೂರ್ಣ ಆದರೂ ಆನಂದ ಪಡುತ್ತಾನೆ. ನಮಗೆ ಏನೂ ಇಲ್ಲ ಏನು ಸಿಕ್ಕರೂ ಆನಂದ ಆಗಬೇಕು ನಿಜವಾಗಿ ಆದರೂ ಏನು ಆನಂದ ಆಗುವುದಿಲ್ಲ ಯಾಕೆ ಹಣೆಬರಹನೆ ಅಷ್ಟು ಇದರಿಂದ ತಾರತಮ್ಯವನ್ನು ತಿಳಿದುಕೊಳ್ಳಿ ತಲೆ ಘಟ್ಟಿಸಿ ಘಟ್ಟಿ ಘಟ್ಟಿಯಾಗಿ ಆ ಸರ್ವೋತ್ತಮನಾದ ಭಗವಂತನಿಗೆ. ಈ ರೀತಿ ಪರಮಾತ್ಮ ಅವರೆಲ್ಲರಿಗೆ ವಿಶೇಷವಾಗಿ ಅನುಗ್ರಹವನ್ನು ಮಾಡಿದ್ದಾನೆ ಅಂತ ತಿಳಿಸಿಕೊಟ್ಟಿದ್ದಾರೆ. ಇಂತಹ ಮೋಕ್ಷಾದಿ ಸಕಲ ಪುರುಷಾರ್ಥಗಳನ್ನು ಕೊಟ್ಟು ಸಕಲ ಸಜ್ಜನರನ್ನು ಅನುಗ್ರಹವನ್ನು ಮಾಡುವಂತಹ ಶ್ರೀಹರಿಯ ಶ್ರುತಿಸ್ಮೃತಿ ರೂಪವಾದ ಆಜ್ಞೆಗಳ ಮೇಲೆ ವಿಶ್ವಾಸವನ್ನು ಇಟ್ಟು, ಅಲ್ಲಿ ಹೇಳಿದ ಕರ್ಮಗಳನ್ನು ಮಾಡಿ ಜ್ಞಾನವನ್ನು ಪಡೆದುಕೊಳ್ಳಿ. ಸಕಾಮ ಕರ್ಮ ಮಾಡಿದರೆ ತಾತ್ಕಾಲಿಕವಾದ ಸುಖ ಸ್ವರ್ಗದಲ್ಲಿ, ನಿಷ್ಕಾಮ ಕರ್ಮ ಮಾಡಿ ಜ್ಞಾನವನ್ನು ಪಡೆದರೆ ಈ ತರಹದ ಸುಖ ಅನಂತಕಾಲದವರೆಗೆ ಪರಿಪೂರ್ಣವಾಗಿ ಸಂಕಲ್ಪ ಮಾತ್ರದಿಂದ ನಿಮಗೆ ಸಿಗುತ್ತೆ ಅನ್ನುವುದನ್ನು ಇಲ್ಲಿ ತಿಳಿಸಿಕೊಟ್ಟಿದ್ದಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ವಿಷ್ಣುಪರ್ವ-30

* * *

ವೈಶಂಪಾಯನರು ಜನಮೇಜಯನಿಗೆ ಹಿಂದೆ ತಿಳಿಸಿದ್ದಾರೆ. ಭಾನುಮತಿಯ ನಿಮಿತ್ತದಿಂದ ನಿಕುಂಭನ ಮತ್ತೊಂದು ಶರೀರವನ್ನೂ ಕೂಡ ಸಂಹಾರ ಮಾಡಿದ್ದಾನೆ ಪರಮಾತ್ಮ ಅಂತ. ನಿಕುಂಭ ತನ್ನ ಮೂರು ಶರೀರಗಳನ್ನು ಇಟ್ಟುಕೊಂಡಿದ್ದ ಷಟ್ಪುರದಲ್ಲಿ ಒಂದು, ತನ್ನ ತಾಯಿಯಾದ ದಿತಿ ದೇವಿಗಾಗಿ ಸೇವೆಗಾಗಿ ಅಂತ ಒಂದು, ಈ ಭಾನುಮತಿಯ ಕಾರಣಕ್ಕಾಗಿ ಒಂದು ಶರೀರವನ್ನು ತಾನು ಕಳೆದುಕೊಳ್ಳುತ್ತಾನೆ ಅಂತ. ಅದರ ಬಗ್ಗೆ ವಿಸ್ತಾರವಾಗಿ ಹೇಳಬೇಕು ಅಂತ ಪ್ರಶ್ನೆ ಕೇಳಿದ್ದಕ್ಕೆ ಅದರ ಕಥೆಯನ್ನು ತಿಳಿಸುತ್ತಾರೆ. ಶ್ರೀಕೃಷ್ಣ ಪರಮಾತ್ಮನ ಪುತ್ರ ಭಾನು ಅಂತ ಸತ್ಯಭಾಮಾ ದೇವಿಯ ಮಗ.

ವಿವಸ್ವತೋ ಯೋಽವರಜೋಽದಿತೇಃ ಸುತಃ ಖ್ಯಾತಶ್ಚ ನಾಮ್ನಾ ಸವಿತೇತಿ ಕೃಷ್ಣಾತ್ ।।

(20.142 ಮಭಾತಾನಿರ್ಣಯ)

ಅಂತ ಶ್ರೀಮದಾಚಾರ್ಯರು ತಿಳಿಸಿದಂತೆ ವಿವಸ್ವಾನ್ ಎಂಬ ಹೆಸರಿನ ಸೂರ್ಯನ ತಮ್ಮ ಸವಿತಾ. ಆ ಸವಿತಾ ಶ್ರೀಕೃಷ್ಣ ಪರಮಾತ್ಮನಿಂದ ಸತ್ಯಭಾಮಾ ದೇವಿಯಲ್ಲಿ ಅವತಾರ ಮಾಡಿದ್ದಾನೆ ಭಾನು ಎಂಬ ಹೆಸರಿನಿಂದ. ಅವನ ಮಗಳು, ಕೃಷ್ಣನ ಮೊಮ್ಮಗಳು ಭಾನುಮತಿ ಅಂತ. ಆ ಭಾನುಮತಿಯನ್ನು ಅಪಹಾರ ಮಾಡಿಕೊಂಡು ಹೋಗುತ್ತಾನೆ ನಿಕುಂಭ ಎಂಬಂತಹ ಅಸುರ. ಅದಕ್ಕೆ ಕಾರಣ ತನ್ನ ಅಣ್ಣನಾದಂತಹ ವಜ್ರನಾಭನ ಸಂಹಾರವನ್ನು ಶ್ರೀಕೃಷ್ಣ ಪುತ್ರನಾದ ಪ್ರದ್ಯುಮ್ನ ಮಾಡಿದ್ದಾನೆ ಅಂತನ್ನುವ ಒಂದು ದ್ವೇಷ. ಹಾಗಾದರೆ ಈ ಯಾದವರಿಗೆ ಏನಾದರೂ ಮಾಡಿ ಪೀಡೆಯನ್ನು ಕೊಡಬೇಕು ಅಂತ. ಅದಕ್ಕಾಗಿ ಆ ಪ್ರದ್ಯುಮ್ನನ ತಮ್ಮನಾದ ಭಾನುವಿನ ಮಗಳನ್ನು ಅಪಹಾರ ಮಾಡಿಕೊಂಡು ಹೋಗುತ್ತಾನೆ ಅಂದರೆ ಒಂದರ್ಥದಲ್ಲಿ ಪ್ರದ್ಯುಮ್ನನ ಮಗಳೇ, ತಮ್ಮನ ಮಗಳು. ತನ್ನ ತಮ್ಮನ ಸಂಹಾರ ಮಾಡಿದ್ದಾನೆ ಅಂತ ಅವನ ತಮ್ಮನ ಮಗಳನ್ನ ಅಪಹಾರ ಮಾಡಿಕೊಂಡು ಹೋಗುತ್ತಾ ಇದ್ದಾನೆ ಅಂದರೆ ಒಂದು ಅರ್ಥದೊಳಗೆ ತನ್ನ ತಮ್ಮನ ಸಂಹಾರ ಮಾಡಿದ್ದಕ್ಕೆ, ಅವನ ತಮ್ಮನ ಸಂಹಾರ ಮಾಡಿದಂತೇನೆ. ಅದು ಹೇಗೆ ಮಗಳನ್ನು ಅಪಹಾರ ಮಾಡಿಕೊಂಡು ಹೋದರೆ ಅವನು ದುಃಖದಿಂದ ತಪ್ತನಾಗುತ್ತಾನೆ, ಕೊಂದರೆ ಒಂದೇ ಸಲ ಸಾಯುವುದು ಆದರೆ ದುಃಖದಿಂದ ನಿತ್ಯದಲ್ಲಿ ಒದ್ದಾಡುವುದು ಇದೆಯಲ್ಲ ಅದು ದೊಡ್ಡ ಸಾವು. ಆ ರೀತಿಯ ಸಾವನ್ನು ಅವನಿಗೆ ಕೊಡುವ

ರೀತಿಯಲ್ಲಿ ತನ್ನ ದ್ವೇಷವನ್ನು ಸಾಧಿಸಿಕೊಳ್ಳಬೇಕು ಅಂತ ಅಪಹಾರ ಮಾಡಿಕೊಂಡು ಹೊರಟ. ಶ್ರೀಕೃಷ್ಣ ಪರಮಾತ್ಮ ಎಲ್ಲ ಯಾದವರಿಂದ ಸಹಿತನಾಗಿ ತಾನು ಈ ಎಲ್ಲ ಕ್ರೀಡೆಗಳನ್ನು ಆಡುವುದಕ್ಕೆ ಹಿಂದೆ ಕೇಳಿದ್ದೀರಿ ಫಾಲಿಕ್ಯ ಸಂಗೀತ, ಹಲ್ಲೀಸಕ ಕ್ರೀಡಾ ನಾನಾ ವಿಧವಾದ ಜಲವಿಹಾರ ಜಲಕ್ರೀಡೆಗಳನ್ನೆಲ್ಲ ಮಾಡಿಸಿ ಉತ್ತಮವಾದ ಸಾಧನೆಯನ್ನು ಮಾಡಿದ ಸಜ್ಜನರಿಗೆ ಯಾವ ತರಹದ ಸುಖವನ್ನು ಮುಂದೆ ನಾನು ಕೊಡುತ್ತೇನೆ ಅಂತ ಇಲ್ಲಿ ಒಂದು ಪ್ರತ್ಯಕ್ಷವಾಗಿ ಭೂಲೋಕದಲ್ಲಿದ್ದ ಜನರಿಗೆ ತೋರಿಸುವುದಕ್ಕೆ ಪರಮಾತ್ಮ ಕರೆದುಕೊಂಡು ಹೋಗಿದ್ದ.

ಯಾರಿಲ್ಲ ಇಲ್ಲಿ ವಸುದೇವ, ಉಗ್ರಸೇನ ಇಬ್ಬರೇ ಇದ್ದಾರೆ ಇಬ್ಬರೂ ವೃದ್ಧರು ಪರಾಕ್ರಮಿಗಳು ಆದರೆ ವೃದ್ಧರು. ಇದೇ ಒಂದು ಸರಿಯಾದ ಸಂಧರ್ಭ ಅವಕಾಶ ಅಂತ ಆ ಹೆಣ್ಣು ಮಗಳನ್ನ ಅಪಹಾರ ಮಾಡಿಕೊಂಡು ಹೊರಟರೆ ವಸುದೇವ ಹಾಗೂ ಉಗ್ರಸೇನ ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ತಡೆಯುವುದಕ್ಕೆ ಆಗದೇ ಇರುವಾಗ ಶ್ರೀಕೃಷ್ಣ ಪರಮಾತ್ಮನಿಗೆ ಅವನು ಇದ್ದಲ್ಲಿಗೆ ಬಂದು ಈ ವಿಚಾರವನ್ನು ತಿಳಿಸಿದ್ದಾರೆ ಪಿಂಡಾರಕ ಕ್ಷೇತ್ರದಲ್ಲಿ, ತಿಳಿದಿದ್ದೇ ತಡ ಶ್ರೀಕೃಷ್ಣ ಪರಮಾತ್ಮ ಗರುಡನಿಗೆ ಆಜ್ಞೆ ಮಾಡಿದ. ಗರುಡನಿಗೆ ಪ್ರತ್ಯೇಕ ಅವತಾರ ಇಲ್ಲ, ರಾಮಾವತಾರದಲ್ಲಿಯೂ ಅಷ್ಟೇ ಕೃಷ್ಣಾವತಾರದಲ್ಲಿಯೂ ಅಷ್ಟೇ ಸಾತ್ಯಕಿಯಲ್ಲಿ ಗರುಡನ ಆವೇಶ ಇದೆ ಆದರೆ ಗರುಡನ ಸ್ವತಂತ್ರವಾದ ಅವತಾರ ಪ್ರತ್ಯೇಕ ಇಲ್ಲ, ದೇವರು ಸ್ಮರಣೆ ಮಾಡಿದಾಗೆಲ್ಲ ಅರ್ಥಾತ್ ಆಜ್ಞೆ ಮಾಡಿದಾಗೆಲ್ಲ ಬಂದು ಸೇವೆ ಮಾಡುವುದೆ ಗರುಡ ದೇವರ ಕೆಲಸ ಆ ರೀತಿ ಗರುಡ ದೇವರು ಬಂದಿದ್ದಾರೆ. ಗರುಡ ದೇವರ ಮೇಲೆ ತಾನು ಹಾಗೂ ಅರ್ಜುನ ಇಬ್ಬರೂ ಕುಳಿತಿದ್ದಾರೆ, ಪ್ರದ್ಯುಮ್ನನಿಗೆ ಮಾತ್ರ ನೀನು ರಥದಲ್ಲಿ ಕುಳಿತುಕೊಂಡು ಬಾ ಅಂತ ಹಿಂದೆಯೂ ಹಾಗೆ ಪ್ರದ್ಯುಮ್ನನಿಗೆ ರಥದಲ್ಲಿ ಕುಳಿತರೂ ಕೂಡ ತನ್ನ ಮಾಯಾ ವಿದ್ಯೆಯಿಂದ ಅತ್ಯಂತ ವೇಗದಿಂದ ಬರುವುದಕ್ಕೆ ಸಾಧ್ಯ ಇದೆ. ಆ ಒಂದು ವಿಶೇಷವಾದ ಶಕ್ತಿ ಪ್ರದ್ಯುಮ್ನನಿಗೆ ಇದೆ ಅಂತ ಅನ್ನುವುದನ್ನು ತೋರಿಸುವದಕ್ಕೆ ನೀನು ರಥದಲ್ಲಿಯೇ ಬಾ ಅಂತ ಹೇಳಿದ ತಾನು ಮಾತ್ರ ಗರುಡಾರೂಢನಾಗಿ ಹೊರಟ. ನಿಕುಂಭನ ಜೊತೆಗೆ ಯುದ್ಧ ಪ್ರಾರಂಭವಾಗಿದೆ ವಿಚಿತ್ರ ಅಂದರೆ ನಿಕುಂಭ ಎಡಗೈಯಲ್ಲಿ ಭಾನುಮತಿಯನ್ನು ಈ ರೀತಿ ತೋಳಿನಲ್ಲಿ ಹಿಡಿದುಕೊಂಡಿದ್ದಾನೆ ಇವರು ಯುದ್ಧ ಮಾಡುವುದು ಬಹಳ ಕಷ್ಟ ಆಯಿತು, ಏನು ಅಸ್ತ್ರಗಳನ್ನು ಪ್ರಹಾರ ಮಾಡಿದರೂ ತನ್ನ ಮೊಮ್ಮಗಳಿದ್ದಾಳೆ ಅಲ್ಲಿ ಅವಳಿಗೇನೆ ಪೆಟ್ಟು ಪಡೆಯುತ್ತದೆ, ಹೊಡೆಯದೇ ಇದ್ದರೆ ಇವನು ಸಾಯುವುದಿಲ್ಲ ಏನು ಮಾಡಬೇಕು ಅಂತ. ದೇವರಿಗೆ ಏನು ಸಮಸ್ಯೆ ಅಲ್ಲ ಆದರೆ ವ್ಯವಹಾರದ ದೃಷ್ಟಿಯಲ್ಲಿ ಇದೊಂದು ಸಮಸ್ಯೆ ಇದ್ದಂತೆ.

ಶ್ರೇಷ್ಠೋ ಧನುಷ್ಮತಾಂ ಪಾರ್ಥಃ ಸರ್ವಥಾ ಕುಶಲೋ ಯುಧಿ ।
ನಾಗೋಷ್ಟ್ರವಿಧಿನಾದೈತ್ಯಂ ಶರಪಜ್ಜ್ಯಾ ಜಘಾನ ಹ ॥ (90.17 ವಿಷ್ಣುಪರ್ವ)

ಆದರೂ ಕೂಡ ಹೊಡೆಯುತ್ತಾ ಇದ್ದಾನೆ. ಅರ್ಜುನನ ಕೌಶಲ ಕೇಳಬೇಕೆ ನಾಯಿ ಬೊಗಳುತ್ತಾ ಇದ್ದರೆ ಬೊಗಳುವ ನಾಯಿ ಬೊಗಳದಂತೆ ಅರ್ಜುನನಿಗೆ ಬಾಣ ಬಿಡುವುದಕ್ಕೆ ದ್ರೋಣಾಚಾರ್ಯರು ಹೇಳಿದರೆ ಬಾಣ ಬಿಡುತ್ತಾನೆ ಹೇಗೆ ಬಿಡುತ್ತಾನೆ ಅಂದರೆ ಒಂದು ಹನಿ ರಕ್ತ ಬಂದಿರುವುದಿಲ್ಲ, ಬಾಯಿಯಲ್ಲಿ ಹೋಗಿ ತುರುಕಿದಂತೆ ಬಾಣಗಳನ್ನ ಅಷ್ಟೇ ಅದು ಬಾಯಿ ಆಡಿಸುವುದಕ್ಕೆ ಬರುವುದಿಲ್ಲ, ಧ್ವನಿ ಮಾಡುವುದಕ್ಕೆ ಬರುವುದಿಲ್ಲ ಅಷ್ಟೇ ಹೊರತು ಕೊಲ್ಲುವುದಿಲ್ಲ, ರಕ್ತವೂ ಬರುವುದಿಲ್ಲ ಅದ್ಭುತವಾದ ಕೌಶಲ. ಅಲ್ಲಿಯವರೆಗೆ ವೇಗದಿಂದ ಹೋಗಿ ಅಲ್ಲಿಗೆ ಸರಿಯಾಗಿ ವೇಗ ಮುಗಿದಿರಬೇಕು ಸುಮ್ಮನೆ ಕೂತಿರಬೇಕು ಅದು ಬಾಣ ಅಷ್ಟೇ ಬಡೆದಿರಬಾರದು ಅಂತಹ ಕೌಶಲ. ಅದೇ ಕೌಶಲವನ್ನು ಉಪಯೋಗಿಸಿದ್ದಾನೆ ಅರ್ಜುನ, ಕೇವಲ ನಿಕುಂಭನಿಗೆ ಪೆಟ್ಟು ತಾಕಿರಬೇಕು ಪಕ್ಕದಲ್ಲಿರುವ ಆ ಭಾನುಮತಿಗೆ ಏನೂ ತೊಂದರೆ ಆಗಿರಬಾರದು ನಾಗೋಷ್ಟ್ರವಿಧಿ ಅಂತ. ಒಂದು ದೊಡ್ಡ ಅಜಗರ ಒಂಟೆಗೆ



ಸುತ್ತಿಕೊಂಡಾಗ ಒಂಟೆಯ ಮಾಲಿಕ ಏನು ಮಾಡಬೇಕು, ಅಜಗರನನ್ನು ಹೊಡೆಯಬೇಕು. ಆದರೆ ಜೋರಾಗಿ ಬಾಣ ತೊಗೊಂಡು ಹೊಡೆದ ಅಂದರೆ ಒಂಟೆಯೂ ಸತ್ತು ಹೋಗುತ್ತದೆ, ಮೇಲಿನ ನಾಗಕ್ಕೆ ಮಾತ್ರ ಪೆಟ್ಟು ತಟ್ಟಿರಬೇಕು ಒಂಟಿ ಸುರಕ್ಷಿತವಾಗಿ ಇರಬೇಕು ಹೇಗೋ ಹಾಗೆ ಇಲ್ಲಿಯೂ ಕೂಡ ಈ ಭಾನುಮತಿ ನಾನು ಒಂಟಿಯಾಗಿ ಸುಖವಾಗಿ ಇರಬೇಕು, ಇವನು ಮಾತ್ರ ಸಾಯಬೇಕು ಅನ್ನುವ ರೀತಿಯಲ್ಲಿ ಅರ್ಜುನ ಬಾಣ ಪ್ರಯೋಗಗಳನ್ನು ಮಾಡಿದ್ದಾನೆ. ಅದ್ಭುತವಾದ ಕಲೆ ಶಕ್ತಿ ಆ ಶಿಕ್ಷಾ ಕೌಶಲ.

ನ ಕನ್ಯಾಂ ಕಲಯಾ ಯುಕ್ತ್ಯಾ ಶಿಕ್ಷಯಾ ಚ ಮಹೀಪತೇ ॥ (90.18 ವಿಷ್ಣುಪರ್ವ)

ಹೀಗೆ ಬಹಳ ಹೊತ್ತು ಯುದ್ಧ ಆಗಿದೆ. ಕೊನೆಗೆ ಇವರ ಬಾಣದ ಪೆಟ್ಟಿಗೆ ಸಹನೆ ಮಾಡಿಕೊಳ್ಳಲಾಗದೇ ಅವನು ಓಡುತ್ತಾ ಇದ್ದಾನೆ ನಿಕುಂಭ. ಸಂಪೂರ್ಣ ಪೃಥ್ವಿಯ ಪ್ರದಕ್ಷಿಣೆ ಹಾಕಲಿಕ್ಕೆ ಹೊರಟ ಇವರೂ ಗರುಡಾರೂಢನಾಗಿ ಕೃಷ್ಣ, ಅರ್ಜುನ, ಪ್ರದ್ಯುಮ್ನ ಬೆನ್ನುಹತ್ತಿದ್ದಾರೆ ಹೋದಲ್ಲೆಲ್ಲ ಹೋಗುತ್ತಾ ಇದ್ದಾರೆ. ಕೊನೆಗೆ ಉತ್ತರ ಗೋಕರ್ಣದ ಮೇಲೆ ಹಾರಿ ಹೋಗಬೇಕು ಅಂತ ಹೋಗುತ್ತಾನೆ ಆ ರುದ್ರ ದೇವರ ಶಾಪ ಆ ಗೋಕರ್ಣವನ್ನು ಯಾರೂ ಉಲ್ಲಂಘನೆ ಮಾಡಬಾರದು ಅಂತ ಅಲ್ಲಿ ಬಿದ್ದುಬಿಟ್ಟ. ಉಲ್ಲಂಘನೆ ಮಾಡಲಿಕ್ಕೆ ಆಗಲಿಲ್ಲ ಇದೇ ಅವಕಾಶ ಅಂತ ತಿಳಿದು ಕೃಷ್ಣ ಹೇಳಿದ ಯುದ್ಧದ ಕೆಲಸ ನಾವು ನೋಡಿಕೊಳ್ಳುತ್ತೇವೆ ನೀನು ರಥದಲ್ಲಿ ಕೂಡಿಸಿಕೊಂಡು ಭಾನುಮತಿಯನ್ನು ಕರೆದುಕೊಂಡು ಹೋಗಿಬಿಡು ಅಂತ ಕೆಳಗೆ ಬಿದ್ದಿದ್ದ ಅವಳು ಒಂದು ಕಡೆಗೆ ಬಿದ್ದಿದ್ದಾಳೆ ಅವಳನ್ನು ಕರೆದುಕೊಂಡು ಅವನು ದ್ವಾರಕೆಗೆ ಹೋಗಿಬಿಟ್ಟ. ಈಗ ಯುದ್ಧ ಮಾಡುವುದು ಅತ್ಯಂತ ಸುಖವಾಗಿದೆ ಅಂತ ಬಿಟ್ಟವನೇ ಮತ್ತೆ ಬಂದಿದ್ದಾನೆ ಪ್ರದ್ಯುಮ್ನ ಕ್ಷಣ ಮಾತ್ರದಲ್ಲಿ, ಯುದ್ಧ ಪ್ರಾರಂಭವಾಗಿದೆ. ನಿಕುಂಭ ಮಾಯಾ ವಿದ್ಯೆಯಿಂದ ಅದೃಶ್ಯನಾಗಿ ಬಿಟ್ಟಿದ್ದಾನೆ. ನಿಕುಂಭ ಷಟ್ಪುರದ ದ್ವಾರದಲ್ಲಿ ನಿಂತಾಗ ಇವರು ಅವನು ಬರುತ್ತಾನೆ ಅಂತ ನೋಡುತ್ತಾ ಇರುವಾಗ ಹಿಂದಿನಿಂದ ಅದೃಶ್ಯನಾಗಿ ಬಂದು ಅರ್ಜುನನಿಗೆ ಜೋರಾಗಿ ಗದಾ ಪ್ರಹಾರ ಮಾಡಿದ ಅರ್ಜುನನಿಗೂ ಮೂರ್ಛೆ ಬಂತು, ಪ್ರದ್ಯುಮ್ನನಿಗೂ ಮೂರ್ಛೆ ಬಂತು. ಇಬ್ಬರೂ ಮೂರ್ಛಿತರಾದದ್ದನ್ನು ನೋಡಿ ಇನ್ನುಮೇಲೆ ಇವನನ್ನು ಉಪೇಕ್ಷೆ ಮಾಡುವುದು ಬೇಡ ಅಂತ ಶ್ರೀಕೃಷ್ಣ ಪರಮಾತ್ಮ ತಾನೇ ಯುದ್ಧಕ್ಕೆ ಹೊರಟ ಜೋರಾಗಿ ಪ್ರಹಾರ ಮಾಡಿದ್ದಾನೆ ಅವನೂ ಮೂರ್ಛಿತನಾದ ನಿಕುಂಭ, ತಿರುಗಿ ಪ್ರಹಾರ ಮಾಡಿದ್ದಾನೆ ಶ್ರೀಕೃಷ್ಣನ ಮೇಲೆ. ಕೃಷ್ಣನಿಗೆ ಯಾವುದೇ ವಿಧವಾದಂತಹ ಆಯಾಸ ಇಲ್ಲ ಇಡೀ ಜಗತ್ತಿನ ಬ್ರಹ್ಮಾಂಡದ ಆವರಣವಾದಂತಹ ಒಂದು ನೂರು ಕೋಟಿ ಯೋಜನದ ಆವರಣ ಯಾವ ಪರಮಾತ್ಮನ ಕಾಲಿನ ಉಗುರು ತಾಕಿದ್ದಕ್ಕೆ ಹೋಳಾಗಿ ಹೋಯಿತು, ಹೊರಗಿನ ನೀರು ಒಳಗೆ ಹರಿದು ಬಂತು ವಿಷ್ಣುಪದಿ ಆಗಿ ಅಂತಹ ಆ ಭಗವಂತನ ದೇಹಕ್ಕೆ ಈ ಸಾಮಾನ್ಯ ಒಂದು ಪುಟ್ಟ ಗದೆಯಿಂದ ಏನಾಗಬೇಕಾಗಿದೆ. ಆದರೂ ಕೂಡ ಪರಮಾತ್ಮ ಸ್ವಲ್ಪ ನಾಟಕ ಮಾಡಿದ ತನಗೂ ಪೆಟ್ಟು ತಾಕಿದೆ ಅನ್ನುವ ರೀತಿಯಲ್ಲಿ. ಹರಿವಂಶವೇ ನಿರ್ಣಯವನ್ನು ಕೊಡುತ್ತದೆ ಶ್ರೀಮದಾಚಾರ್ಯರು ಅಲ್ಲಲ್ಲಿ ನಿರ್ಣಯವನ್ನು ಹೇಳುತ್ತಾರೆ ಆ ನಿರ್ಣಯವನ್ನು ಮೂಲ ಹರಿವಂಶವೇ ಇಲ್ಲಿ ಹೇಳುತ್ತದೆ.

ನೂನಮಾತ್ಮೇಚ್ಛಯಾ ಕೃಷ್ಣಸ್ತಥಾ ಚಕ್ರೇ ಸುರೋತ್ತಮಃ ।
ಕೋ ಹಿ ಶಕ್ತೋ ಮಹಾತ್ಮಾನಂ ಯುದ್ಧೇ ಮೋಹಯಿತುಂ ಹರಿಮ್ ॥ (90.48 ವಿಷ್ಣುಪರ್ವ)

ಸ್ವತಂತ್ರನಾದ ಪರಮಾತ್ಮನಿಗೆ ಯಾರೂ ಮೂರ್ಛೆ ಬರುವಂತೆ ಮಾಡುವುದಕ್ಕೆ ಸಾಧ್ಯ ಇಲ್ಲ, ಕೇವಲ ಭಗವಂತ ತನ್ನ ಇಚ್ಛೆಯಿಂದ ಈ ರೀತಿ ಮಾಡಿದ ಅಂತ ಶ್ರೀಮದಾಚಾರ್ಯರು **'ವಿದ್ಧವತ ಮುಗ್ಧವತ'** ಅಂತ ಪೆಟ್ಟು ತಾಕದೇ ಇದ್ದರೂ ಪೆಟ್ಟು ತಾಕಿದರೆ ಹೇಗೆ ತೋರಿಸಬೇಕೋ ಹಾಗೆ ತೋರಿಸುತ್ತಾನೆ ಅಂತ ಪ್ರಮಾಣಗಳ ಉದಾಹರಣೆಯನ್ನು

ಮಾಡಿ ಶ್ರೀಮದಾಚಾರ್ಯರು ನಿರ್ಣಯವನ್ನು ನೀಡುತ್ತಾರೆ ಅದನ್ನು ನಾವು ಇಲ್ಲಿ ಹರಿವಂಶದಲ್ಲಿ ಕಾಣುತ್ತೇವೆ. ಎಂದಿಗೂ ಪರಮಾತ್ಮನಿಗೆ ಯಾವುದೇ ಶಸ್ತ್ರಾಸ್ತ್ರಗಳಿಂದ ಗಾಯ ಆಗುವುದಿಲ್ಲ ನಾಟಕ ಮಾಡಿದ ಸ್ವಲ್ಪ ಹೊತ್ತು ಮತ್ತೆ ಪರಮಾತ್ಮ ತನ್ನ ಪರಾಕ್ರಮವನ್ನು ತೋರಿಸುತ್ತಾ ಇದ್ದಾನೆ. ನಿಕುಂಭನ ಜೊತೆಗೆ ಯುದ್ಧ ಮಾಡುತ್ತಾ ಇರುವಾಗ ಸರ್ವಜ್ಞನಾದ ದೇವರಿಗೆ ಗೊತ್ತು ಆದರೂ ಪ್ರದ್ಯುಮ್ನನ ವಿದ್ಯೆ ಹೇಗಿದೆ, ವಿದ್ಯಾ ಸಾಮರ್ಥ್ಯ ಹೇಗಿದೆ ಅನ್ನುವುದನ್ನೂ ತೋರಿಸಬೇಕಾಗಿದೆ. ಪ್ರದ್ಯುಮ್ನ ಬಂದು ವಿಜ್ಞಾಪನೆ ಮಾಡಿಕೊಳ್ಳುತ್ತಾನೆ ಕೃಷ್ಣನಿಗೆ ನೀನು ಯುದ್ಧ ಮಾಡುತ್ತ ಇರುವುದು ಸುಮ್ಮನೆ ಅಲ್ಲಿ ಇಲ್ಲವೇ ಇಲ್ಲ ನಿಕುಂಭ ಆದು ಮಾಯೆ ಅಂದ ನಿಕುಂಭ ಎಲ್ಲಿಯೋ ಇದ್ದಾನೆ ಅಂತ ಆದು ಗೊತ್ತಿತ್ತು ಕೃಷ್ಣನಿಗೆ ಆದರೂ ಕೂಡ ಪರಮಾತ್ಮ ನಕ್ಕಿದ್ದಾನೆ ಮಗನ ಮಾತನ್ನು ಕೇಳಿ ಸರಿ ಆಯಿತು ಅಂತ ಅಂದ. ಆಮೇಲೆ ನೋಡುತ್ತ ಇರುವುದರೊಳಗೆ ಒಂದು ಕೋಟಿ ನಿಕುಂಭರು ಕಾಣುತ್ತ ಇದ್ದಾರೆ ನಿಕುಂಭನೇ ಒಂದು ಕೋಟಿ ರೂಪಗಳನ್ನು ತೆಗೆದುಕೊಂಡ. ಅರ್ಜುನ ಯುದ್ಧ ಆಡುತ್ತಾ ಇದ್ದರೆ ಆ ಅರ್ಜುನನ ಧನುಸ್ಸನ್ನ ಬಾಣಗಳನ್ನ ಒಬ್ಬರು ಕೈಯನ್ನು ಕಾಲನ್ನು ಹಿಡಿದುಕೊಂಡು ಹತ್ತಾರು ಜನ ರಾಕ್ಷಸರು ಅರ್ಜುನನನ್ನ ಎತ್ತಿಕೊಂಡು ಆಕಾಶಕ್ಕೆ ಹಾರುತ್ತ ಇದ್ದಾರೆ. ಹಾರುತ್ತ ಇದ್ದಾರಲ್ಲ ಬಿಡಿಸೋಣ ಅರ್ಜುನನನ್ನ ಅಂತ ನೋಡುವುದರೊಳಗೆ ಸಾವಿರಾರು ಅರ್ಜುನರು, ಕೋಟಿ ಕೋಟಿ ಅರ್ಜುನರು, ಕೋಟಿ ಕೋಟಿ ರಾಕ್ಷಸರು ಯಾರು ನಿಜವಾದ ಅರ್ಜುನ ಯಾರು ಅಲ್ಲ ಗೊತ್ತಾಗುತ್ತಾ ಇಲ್ಲ ಅನ್ನುವ ರೀತಿಯಲ್ಲಿ ಆ ವಾತಾವರಣದ ನಿರ್ಮಾಣವಾಗಿದೆ. ಸರ್ವಜ್ಞನಾದಂತಹ ಶ್ರೀಕೃಷ್ಣ ಪರಮಾತ್ಮ ಕೋಟಿ ಕೋಟಿ ಮಾಯಾ ರೂಪಗಳನ್ನು ನಿಕುಂಭ ತೋರಿಸಿದರೂ, ಅರ್ಜುನನ ರೂಪಗಳನ್ನು ತೋರಿಸಿದರೂ ನಿಜವಾದ ನಿಕುಂಭನಿಗೇನೆ ಸರಿಯಾಗಿ ಚಕ್ರದಿಂದ ಶಿರಚ್ಛೇದನವನ್ನು ಮಾಡಿದ್ದಾನೆ. ಮಾಡಿದಾಕ್ಷಣಕ್ಕೆ ಅರ್ಜುನನನ್ನು ತೆಗೆದುಕೊಂಡು ಹೋಗುತ್ತಾ ಇದ್ದದ್ದು ನಿಕುಂಭನೇ, ಉಳಿದಿದ್ದೆಲ್ಲ ಮಾಯೆ ಆ ಅರ್ಜುನ ಕೆಳಗೆ ಬೀಳುತ್ತಾ ಇದ್ದರೆ ಅವನು ಬೀಳದೆ ಇರುವ ಹಾಗೆ ಪ್ರದ್ಯುಮ್ನ ಅವನನ್ನು ಕೈಯಲ್ಲಿ ಹಿಡಿದುಕೊಂಡು ಅರ್ಜುನನನ್ನು ಸುರಕ್ಷಿತವಾಗಿ ನಿಲ್ಲುವಂತೆ ಮಾಡಿದ್ದಾನೆ. ಅರ್ಜುನ-ಪ್ರದ್ಯುಮ್ನ, ಇಂದ್ರ-ಕಾಮ ಇಬ್ಬರು ಸಮಾನ ಯೋಗ್ಯತೆ ಇದ್ದವರು ಅರ್ಜುನನನ್ನ ಧಾರಣೆ ಮಾಡುವಂತಹ ಶಕ್ತಿ ಆ ಪ್ರದ್ಯುಮ್ನನಿಗೆ ಉಂಟು ಆ ದೃಷ್ಟಿಯಲ್ಲಿ ಪ್ರದ್ಯುಮ್ನ ಅವನನ್ನು ಚೆನ್ನಾಗಿ ಧಾರಣೆ ಮಾಡಿಕೊಂಡು ಸುಖವಾಗಿ ನೆಲದ ಮೇಲೆ ಇಳಿಸುವಂತೆ ಮಾಡಿದ್ದಾನೆ.

ಇಷ್ಟೆಲ್ಲ ಆಗಿದೆ ಆಗ ನಾರದರು ಅಲ್ಲಿ ಬರುತ್ತಾರೆ ಯುದ್ಧ ಮುಗಿಯಿತು, ನಿಕುಂಭನ ಸಂಹಾರ ಆಯಿತು, ಭಾನುಮತಿ ಸುರಕ್ಷಿತವಾಗಿ ತನ್ನ ಸ್ಥಾನವನ್ನು ಸೇರಿದ್ದಾಳೆ, ಭಾನುವಿಗೆ ನಾರದರು ಹೇಳುತ್ತಾರೆ. ನೀನು ಏನು ತಲೆ ಕೆಡಿಸಿಕೊಳ್ಳಬೇಡ ಆದದ್ದೆಲ್ಲ ಒಳಿತೇ ಆಯಿತು, ನಿನ್ನ ಮಗಳು ಸುರಕ್ಷಿತವಾಗಿ ಬಂದಿದ್ದಾಳೆ ದೊಡ್ಡ ಪುಣ್ಯ ಅಂತ ಅಂದುಕೋ. ಯಾಕೆ ಇದಕ್ಕೆಲ್ಲ ಕಾರಣ ಏನು ಅಂದರೆ ಹಿಂದೆ ರೈವತ ಪರ್ವತದಲ್ಲಿ ಯಾದವರು ಮೇಲಿಂದ ಮೇಲೆ ಹೋಗುತ್ತಾ ಇರುವುದು ಒಂದು ಸಹಜವಾದ ವಾಡಿಕೆ ಅಲ್ಲಿ ಉದ್ಯಾನವನ ಕ್ರೀಡೆಯನ್ನು ಮಾಡುವುದು ಇತ್ಯಾದಿ. ಆಗ ನಿನ್ನ ಮಗಳು ಅಲ್ಲಿ ಕ್ರೀಡೆ ಮಾಡುತ್ತ ಇದ್ದಾಗ ದುರ್ವಾಸರ ತಪಸ್ಸಿಗೆ ಭಂಗ ಆಗಿದೆ ಏನೋ ಜೋರು ಜೋರಾಗಿ ಮಾತನಾಡುವುದು, ಹರಟೆ ಹೊಡೆಯುವುದು ಯಾವುದೋ ಒಂದು ರೀತಿಯಲ್ಲಿ ದುರ್ವಾಸರಿಗೆ ಕೋಪ ಬಂದಿದೆ ಅವಳ ಮೇಲೆ ಬಂದಾಗ ಶಾಪ ಕೊಟ್ಟರು ನೀನು ಶತ್ರುಗಳ ವಶ ಆಗಬೇಕು ಅಂತ. **'ಕನ್ಯಾ ಶತ್ರುಹಸ್ತಂ ಗಮಿಷ್ಯತಿ'.**[1] ಬಹಳ ಉನ್ಮತ್ತಳಾಗಿದ್ದಾಳೆ ಈ ಹುಡುಗಿ ಶತ್ರುಗಳ ವಶಕ್ಕೆ ಹೋಗಲಿ ಅಂತ ಶಾಪ ಕೊಟ್ಟಾಗ ಅಲ್ಲಿ ಇರತಕ್ಕಂತಹ ಎಲ್ಲ ದುರ್ವಾಸರ ಶಿಷ್ಯರೂ, ಎಲ್ಲ ಮುನಿಗಳೂ ಕೂಡ ದುರ್ವಾಸರಿಗೆ ಕಾಲಿಗೆ ಬಿದ್ದು ಪ್ರಾರ್ಥನೆ ಮಾಡುತ್ತಾರೆ. ಅವರೆಲ್ಲ ವಿರಕ್ತ ಶಿಖಾಮಣಿಗಳು ಮುನಿಗಳು ಆದರೂ ಕೂಡ ಈ ನಿರಪರಾಧಿಯಾದ ಕನ್ಯೆಯ ಮೇಲೆ ಒಂದು ಪ್ರೀತಿ

1. 90.69 ವಿಷ್ಣುಪರ್ವ



ಅವರಿಗೆ. ಸಣ್ಣ ಹುಡುಗಿ ಏನೋ ತಿಳಿಯದೇ ಒಂದೆರಡು ಹೆಚ್ಚಿಗೆ ಕುಚೇಷ್ಟೆಗಳನ್ನು ಮಾಡಿರಬಹುದು ಏನಾದರೂ ಒಂದು ಶಿಕ್ಷೆಯನ್ನು ಕೊಡಿ ಬೇಡ ಅಂತ ಅಲ್ಲ ಶತ್ರುಗಳ ಅಸುರರ ವಶಕ್ಕೆ ಹೋಗಬೇಕು ಅಂತ ಶಾಪ ಕೊಟ್ಟರೆ ಎಷ್ಟು ದೊಡ್ಡ ಶಾಪ ಇದು, ಬಹಳ ದೊಡ್ಡ ಶಾಪ ಆಯಿತಲ್ಲ ಅಂತ. ನನ್ನ ಮಾತನ್ನು ತಿರುಗಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಶತ್ರುಗಳ ವಶಕ್ಕೆ ಹೋಗುವುದು ನಿಶ್ಚಿತ ಆದರೆ ಯಾವುದೇ ರೀತಿಯ ಅವಳಿಗೆ ಶೀಲಭಂಗ ಆಗುವುದಿಲ್ಲ, ತೊಂದರೆ ಆಗುವುದಿಲ್ಲ ಸುರಕ್ಷಿತವಾಗಿ ಮನೆಗೆ ತಿರುಗಿ ಬರುತ್ತಾಳೆ ಅಂತ ಪುನಃ ಆ ಮುನಿಗಳ ಪ್ರಾರ್ಥನೆಗೆ ಅನುಗುಣವಾಗಿ ಅನುಗ್ರಹವನ್ನೂ ಮಾಡಿದ್ದಾರೆ ಆ ದೃಷ್ಟಿಯಲ್ಲಿ ವರವನ್ನೂ ಕೊಟ್ಟಿದ್ದಾರೆ.

ಅದೂಷಿತಾನು ಧರ್ಮೇಣ ಭರ್ತಾರಮುಪಲಪ್ಸ್ಯತಿ ।

ಬಹುಪುತ್ರಾ ಬಹುಧನಾ ಸುಭಗಾ ಚ ಭವಿಷ್ಯತಿ ॥ (90.73 ವಿಷ್ಣುಪರ್ವ)

ಯಾವ ಧರ್ಮಲೋಪ ಆಗುವುದಿಲ್ಲ ಶ್ರೇಷ್ಠ ಪತಿಯನ್ನು ಹೊಂದುತ್ತಾಳೆ ಅನೇಕ ಪುತ್ರರು, ಬೇಕಾದಷ್ಟು ಸೌಭಾಗ್ಯ ಅವಳಿಗೆ ಸಿಗುತ್ತೆ ಎಂಬುದಾಗಿ ವರವನ್ನು ಕೊಟ್ಟಿದ್ದಾರೆ ಆದ್ದರಿಂದ ನೀನು ಇನ್ನು ಚಿಂತನೆ ಮಾಡಬೇಡ ಯೋಗ್ಯ ವರನನ್ನು ನೋಡಿ ಮದುವೆ ಮಾಡು ಅಂತ ನಾರದರು ಹೇಳುತ್ತಾರೆ. ಅಂದರೆ ಈ ಕಥೆಯಿಂದ ತಿಳಿಯಬೇಕಾದದ್ದು ದೊಡ್ಡವರು, ಜ್ಞಾನಿಗಳು ಅವರು ಇದ್ದಾಗ ಹೇಗೆ ನಡೆದುಕೊಳ್ಳಬೇಕು ಅಂತ ಮಕ್ಕಳಿಗೆ ತಿಳಿಸಿಕೊಡಬೇಕು ಗಂಡು ಮಕ್ಕಳೇ ಆಗಿರಬಹುದು, ಹೆಣ್ಣು ಮಕ್ಕಳೇ ಆಗಿರಬಹುದು. ಜ್ಞಾನಿಗಳು ಬಂದಾಗ, ವಿದ್ವಾಂಸರು ಬಂದಾಗ, ದೇವಸ್ಥಾನಗಳಿಗೆ ಹೋದಾಗ, ದೊಡ್ಡವರ ಹತ್ತಿರ ಇರುವಾಗ ಹೇಗೆ ಮಾತನಾಡಬೇಕು, ಯಾವ ರೀತಿ ವ್ಯವಹಾರ ಮಾಡಬೇಕು, ಹೇಗೆ ನಮ್ಮ ಹಾವ ಭಾವಗಳು ಇರಬೇಕು ಅನ್ನುವುದನ್ನ ತಿಳಿಸಿಕೊಡಬೇಕು. ಅವರು ಜೋರಾಗಿ ಶಾಪ ಕೊಡಬೇಕಾಗಿಲ್ಲ ಮನಸ್ಸಿನಲ್ಲಿ ನೊಂದುಕೊಂಡರೂ ಸಾಕು ಅದು ಶಾಪ ಬಂದ ಹಾಗೆನೇ ಲೆಕ್ಕ. ಶ್ರೀಮದ್ಭಾಗವತದಲ್ಲಿಯೂ ಬರುತ್ತದೆ ಅವರು ಶಾಪ ಕೊಡುವುದಿಲ್ಲ ಎಷ್ಟೋ ಸಲ ದಯಾಳುಗಳು ಇರುತ್ತಾರೆ ಆದರೆ ದೇವರು ಸುಮ್ಮನೆ ಇರುವುದಿಲ್ಲ ದೊಡ್ಡವರಿಗೆ ಅಪಚಾರ ಆದರೆ ದೇವರು ಶಿಕ್ಷೆಯನ್ನು ಕೊಡುತ್ತಾನೆ. ಎಷ್ಟೋ ಸಂದರ್ಭಗಳಲ್ಲಿ ಸರಿಯಾದ ಮಾರ್ಗಕ್ಕೆ ತರಬೇಕು ಅಂತ ದೊಡ್ಡವರು ಶಾಪ ಕೊಡುವುದು ಉಂಟು ಆ ತರಹದ ಶಾಪಕ್ಕೆ ಗುರಿಯಾಗಿ ವಿನಾಕಾರಣ ದೊಡ್ಡ ಸೌಭಾಗ್ಯದಿಂದ ವಂಚಿತರಾಗಬಾರದು ಅನ್ನುವುದಕ್ಕೋಸ್ಕರ ಮಕ್ಕಳಿಗೆ, ಯುವಕ ಯುವತಿಯರಿಗೆ ವಿಶೇಷವಾಗಿ ಎಚ್ಚರಿಕೆಯನ್ನು ನೀಡಬೇಕು ಪೋಷಕರು ಅನ್ನುವ ಒಂದು ಸಂದೇಶವನ್ನು ಹರಿವಂಶ ನಮಗೆ ಇಲ್ಲಿ ತಿಳಿಸುತ್ತ ಇದೆ. ಸರಿ ಯಾರಿಗೆ ಕೊಡಬೇಕು ಇವಳನ್ನು ಅಂತ ಆಲೋಚನೆ ಮಾಡಿದ್ದಾರೆ ಶ್ರೀಕೃಷ್ಣ ಪರಮಾತ್ಮ ಅಂದ ಸಹದೇವ ಉತ್ತಮ ವರ ಆದ್ದರಿಂದ ಸಹದೇವನಿಗೆ ಕೊಟ್ಟು ಮದುವೆ ಮಾಡಿದ್ದಾರೆ. ಪಾಂಡವರ ಕೊನೆಯ ತಮ್ಮ ಸಹದೇವ ಭಾನುಮತಿಯನ್ನು ಮದುವೆಯಾಗಿದ್ದಾನೆ ಎಂಬುದಾಗಿ ತಿಳಿಸುತ್ತಾರೆ.

ಪುನಃ ಜನಮೇಜಯನಿಗೆ ಕುತೂಹಲ ಕೆರಳಿತು ಒಂದು ಕಥೆಯಲ್ಲಿ ಇನ್ನೊಂದು ಕಥೆ ಸೇರುತ್ತದೆ. ವಜ್ರನಾಭನ ಸಂಹಾರ ಮಾಡಿದ ದ್ವೇಷಕ್ಕೆ ಆ ಸೇಡು ತೀರಿಸಿಕೊಳ್ಳುವುದಕ್ಕೆ ಇವಳನ್ನು ಅಪಹಾರ ಮಾಡಿಕೊಂಡು ಹೋದ ನಿಕುಂಭ, ನಿಕುಂಭನ ಸಂಹಾರ ಆಯಿತು ಅಂತ ಹೇಳಿದಿರಲ್ಲ ಆ ವಜ್ರನಾಭನನ ಕಥೆ ಏನು ಅಂತ ಯಾಕೆ ಅವನನ್ನು ಸಂಹಾರ ಮಾಡುವ ಪ್ರಸಂಗ ಬಂತು ಅದರ ಬಗ್ಗೆ ಹೇಳುತ್ತಾರೆ. ಮೇರು ಪರ್ವತದಲ್ಲಿ ತಪಶ್ಚರ್ಯೆ ಮಾಡುತ್ತ ಇದ್ದ ವಜ್ರನಾಭ ಬ್ರಹ್ಮ ದೇವರು ಪ್ರತ್ಯಕ್ಷರಾಗಿದ್ದಾರೆ ಅವಧ್ಯನಾಗಬೇಕು ಅಂತ ವರವನ್ನು ಕೇಳಿದ್ದಾನೆ ಬ್ರಹ್ಮ ದೇವರು ತಥಾಸ್ತು ಅಂತ ವರ ಕೊಟ್ಟರು ಯಾವ ದೇವತೆಗಳೂ ಅವನನ್ನು ಸಂಹಾರ ಮಾಡುವಂತಿಲ್ಲ ಅಂತ. ಜೊತೆಗೆ ವಜ್ರಪುರ ಅಂತ ಅಭೇದ್ಯವಾದ ಪುರ ಹಿಂದೆ ರುದ್ರ ದೇವರ ತಪಸ್ಸಿನಿಂದ ಅವರ ಸಾಮರ್ಥ್ಯದಿಂದ ಮಂದಾರ ವನದ ನಿರ್ಮಾಣ

ಮಾಡಿದರು ಅಂತ ಕೇಳಿದಿರಿ, ಸೂರ್ಯ ಚಂದ್ರರ ಬೆಳಕು ಒಳಗೆ ಬರುವ ಹಾಗಿಲ್ಲ, ಗಾಳಿಯೂ ಪ್ರವೇಶ ಮಾಡುವ ಹಾಗಿಲ್ಲ ತಾವೇ ಬೆಳಕು ಕೊಡುತ್ತಾರೆ, ತಾವೇ ಗಾಳಿಯನ್ನು ಕೊಡುತ್ತಾರೆ ಅಂತ ಹಾಗೆ ಇಲ್ಲಿ ಬ್ರಹ್ಮ ದೇವರ ವರವನ್ನು ಪಡೆದಿದ್ದಾನೆ ವಾಯುವೂ ಒಳಗೆ ಪ್ರವೇಶ ಮಾಡಬಾರದು ನಾನು ಬೇಕು ಅಂದರೆ ಬರಬೇಕು ವಾಯು ಇಲ್ಲ ಅಂದರೆ ವಾಯುವೂ ಬರುವಂತಿಲ್ಲ

ಸ್ವಚ್ಛನ್ದೇನ ಪ್ರವೇಶಶ್ಚ ನ ವಾಯೋರಪಿ ಭಾರತ । (91.8 ವಿಷ್ಣುಪರ್ವ)

ಆ ರೀತಿಯ ವರವನ್ನು ಕೇಳಿದ್ದಾನೆ. ಪ್ರಧಾನವಾದ ಪುರ ಅದು ವಜ್ರಪುರ ಅದಲ್ಲದೆ ಬೇಕಾದಷ್ಟು ಸಾವಿರಾರು ಪುರಗಳನ್ನು ತಾನು ಮಾಡಿಕೊಂಡು ಆ ಮಧ್ಯದೊಳಗೆ ತಾನು ಇದ್ದಾನೆ ಬ್ರಹ್ಮ ದೇವರ ವರ ಇದೆ ಅನ್ನುವ ಕಾರಣಕ್ಕೆ ವಜ್ರಪುರದಲ್ಲಿ ಸುಮ್ಮನೆ ಕೆಲವು ದಿನ ಇದ್ದದ್ದು ಮಾತ್ರ ನೇರವಾಗಿ ಇಂದ್ರನ ಪಟ್ಟಣಕ್ಕೆ ಹೋದ ಮೂರು ಲೋಕದ ಈ ರಾಜ್ಯವನ್ನು ನೀನು ನನಗೆ ಕೊಡಬೇಕು ಇಲ್ಲ ಯುದ್ಧ ಆಡು ಎರಡೇ. ಇಂದ್ರ ದೇವರು ಹೇಳಿದ ನಾವಿಬ್ಬರು ಕಶ್ಯಪ ಋಷಿಗಳ ಮಕ್ಕಳು ನೀನು ದಿತಿಯ ಮಕ್ಕಳು, ನಾನು ಅದಿತಿಯ ಮಕ್ಕಳು ಅಣ್ಣ ತಮ್ಮಂದಿರೇ ಹೀಗಾಗಿ ಅಪ್ಪ ಹೇಗೆ ಹೇಳುತ್ತಾನೋ ಹಾಗೆ ನಮಗೆ ಯಾವ ರೀತಿ ಆಸ್ತಿಯನ್ನು ಹಂಚಿಕೊಡುತ್ತಾರೋ ಹಾಗೆ ಅಪ್ಪನ ಎದುರಿಗೆ ಈ ಜಗಳ ಇಡೋಣ ಅವರು ಹೇಳಿದ ಹಾಗೆ ಮಾಡೋಣ ಅಂತ. ಅಪ್ಪ ಈಗ ಯಜ್ಞದಲ್ಲಿ ಇದ್ದಾರೆ ಯಜ್ಞ ಎಲ್ಲ ಮುಗಿದ ಮೇಲೆ ಅವರ ಜೊತೆಗೆ ಮಾತನಾಡೋಣ ಈಗ ಮೌನದಲ್ಲಿ ಇರುತ್ತಾರೆ ಮಾತನಾಡುವುದಿಲ್ಲ. **'ವಾಗ್ಯತೋ ಭವೇತ್'** ಅಂತ ಹೇಳುತ್ತಾರೆ ಯಜ್ಞದ ಪ್ರಾರಂಭದಲ್ಲಿ, ಮಧ್ಯದಲ್ಲಿ ಹರಟೆ ಹೊಡೆಯುವಂತಿಲ್ಲ, ಯಜ್ಞದಲ್ಲಿ ಇರುವ ಮಂತ್ರಗಳನ್ನು ಬಿಟ್ಟರೆ ಬೇರೆ ಮಾತನಾಡುವ ಹಾಗಿಲ್ಲ,

ಸತ್ರೇಷು ದೀಕ್ಷಿತಃ ಸೌಮ್ಯ ಕಶ್ಯಪೋ ನಃ ಪಿತಾ ಮುನಿಃ ತಸ್ಮಿನ್ ವೃತ್ತೇ ॥ (91.17 ವಿಷ್ಣುಪರ್ವ)

ಅದು ಮುಗಿದಮೇಲೆ ಮಾತನಾಡಿಸೋಣ ಅಂತ. ಕಶ್ಯಪರ ಹತ್ತಿರನೇ ಹೋದ ಇವನು ನೇರವಾಗಿ ಇಂದ್ರನನ್ನು ಮಾತನಾಡಿಸುವುದು ಬೇಡ ಅಂತ ಅವರೂ ಇದೇ ಸೂಚನೆ ಮಾಡಿದರು ಕೈ ಸನ್ನೆಯಿಂದ ಯಜ್ಞ ಮುಗಿಯಲಿ ಆಮೇಲೆ ಮಾತಾಡೋಣ ಅಂತ ಹೇಳಿದರು ಸರಿ ಅಂತ ಅಲ್ಲಿಂದ ಸುಮ್ಮನಾಗಿ ಯಜ್ಞ ಆದಮೇಲೆ ಭೇಟಿ ಆದರೆ ಆಯಿತು ಅಂತ ತನ್ನ ಪಟ್ಟಣಕ್ಕೆ ತಾನು ಹೋಗಿದ್ದಾನೆ. ಈ ಕಡೆಗೆ ಇಂದ್ರ ವಜ್ರನಾಭ ಆಚೆಗೆ ಹೋದದ್ದೇ ತಡ ಶ್ರೀಕೃಷ್ಣ ಪರಮಾತ್ಮನಿಗೆ ಶರಣು ಹೋದ ದ್ವಾರಕಾ ಪಟ್ಟಣದಲ್ಲಿ ಬಂದು ಹೇಗಾದರೂ ಮಾಡಿ ಈ ವಜ್ರನಾಭನನ್ನು ಸಂಹಾರ ಮಾಡಿಸು ಅಂತ ಕೃಷ್ಣ ಪರಮಾತ್ಮನಿಗೆ ಪ್ರಾರ್ಥನೆಯನ್ನು ಮಾಡಿಕೊಂಡಿದ್ದಾನೆ. ಕೃಷ್ಣ ಪರಮಾತ್ಮನೂ ಹೇಳಿದ ನಮ್ಮ ಅಪ್ಪ ವಸುದೇವನು ಯಜ್ಞದಲ್ಲಿ ಇದ್ದಾನೆ ಅಶ್ವಮೇಧ ಯಾಗವನ್ನು ಮಾಡುತ್ತಾ ಇದ್ದಾನೆ ಆ ಯಜ್ಞ ಮುಗಿಯಲಿ ಆದಾದ ಮೇಲೆ ಏನಾದರು ಒಂದು ಉಪಾಯವನ್ನು ವಿಚಾರ ಮಾಡೋಣ ಅಂತ. ಈ ರೀತಿ ಶ್ರೀಕೃಷ್ಣ ಪರಮಾತ್ಮ ಹೇಳಿದ ಛಾಂದೋಗ್ಯೋಪನಿಷತ್ತಿನಲ್ಲಿ ಹೇಳುವಂತೆ **'ಅವಾಕ್ಯ- ನಾದರಃ'** ಅಂತ ದೇವರ ಸಂಕಲ್ಪ ಏನೋ ಅದಕ್ಕೆ ತಕ್ಕ ಹಾಗೆ ಎಲ್ಲ ಕೆಲಸ ನಡೆಯುತ್ತದೆ ಅವನು ಮಾತನಾಡಬೇಕು ಅಂತ ಇಲ್ಲ ದೇವರು. ದೇವರ ಅನುಗ್ರಹ ಇಲ್ಲದೇ ಪ್ರಪಂಚದೊಳಗೆ ಯಾರೂ ಮಾತನಾಡುವಂತಿಲ್ಲ ಅಂತ ಒಂದು ಅರ್ಥ ಶ್ರೀಮನ್ ಟೀಕಾಕೃತ್ಪಾದರು ಹೇಳಿದ್ದಾರೆ ಎಲ್ಲರೂ ಮಾತನಾಡುವುದು ದೇವರ ಅನುಗ್ರಹದಿಂದ ಅಂತ. ಆದರೆ ದೇವರು ಮಾತಾಡಲೇಬೇಕಾ ಮಾತಾಡಲೇಬೇಕು ಅಂತ ಏನಿಲ್ಲ ಬಹಳ ಮಾತಾಡಿದ್ದಾನೆ ಮತ್ತೆ ದೇವರು ಅವನಷ್ಟು ಯಾರೂ ಮಾತಾಡಿಲ್ಲ ಮಹಾಭಾರತ ದೇವರು ಮಾತಾಡಿದ್ದೆ ಅದು. ಅನೇಕ ಪಂಚರಾತ್ರಾದಿಗಳೆಲ್ಲ ದೇವರ ಗ್ರಂಥಗಳೇ ಆ ರೂಪದಲ್ಲಿ ಮಾತನಾಡಿದ್ದಾನೆ ಆದರೆ ಯಾರೆಲ್ಲ ಏನೇನು ಮಾಡಬೇಕು ಅಂತಿದೆ ಅದೆಲ್ಲವನ್ನು ಹೇಳಿ ಮಾಡಿಸಬೇಕು ಅಂತ ಇಲ್ಲ



ಯಾಕೆ ಅಂದರೆ **'ಧಿಯೋಯೋನಃ ಪ್ರಚೋದಯಾತ್'**. ನೋಡಿ, ಈ ಕಡೆಗೆ ಇಂದ್ರ ದೇವರು ಬಂದು ಪ್ರಾರ್ಥನೆ ಮಾಡಿದ್ದಾರೆ ವಜ್ರನಾಭನನ್ನು ಸಂಹಾರ ಮಾಡಿಸಬೇಕು ಅಂತ ಆ ಮುಂದೆ ಮಾಡಿಸುವ ವಜ್ರನಾಭನ ಸಂಹಾರಕ್ಕೆ ಬೇಕಾದ ಪೂರ್ವಪೀಠಿಕೆ ಸಿದ್ಧವಾಗುತ್ತಾ ಇದೆ. ವಸುದೇವನ ಯಜ್ಞ ನಡೆಯುತ್ತ ಇದೆ ಎಲ್ಲಾ ಋಷಿ ಮುನಿಗಳು ಬಂದುಬಿಟ್ಟಿದ್ದಾರೆ ಕೃಷ್ಣನ ತಂದೆ ಯಜ್ಞ ಮಾಡುತ್ತಾರೆ ಅಂತ ಹೇಳಿ ಎಲ್ಲರೂ ಬಂದಿದ್ದಾರೆ.

ಆ ಸಂದರ್ಭದಲ್ಲಿ ಒಬ್ಬ ನಟ ನಾಟ್ಯವನ್ನು ಮಾಡುತ್ತಾ ಇದ್ದಾನೆ ಅದ್ಭುತವಾದ ನಾಟ್ಯ. ಆ ನಾಟ್ಯವನ್ನು ನೋಡಿ ಎಲ್ಲರೂ ಸಂತೋಷ ಪಟ್ಟಿದ್ದಾರೆ ಬಹಳ ಚೆನ್ನಾಗಿ ನಾಟ್ಯವನ್ನು ಮಾಡಿದ್ದೀ ಅಂತ, ಅದರೊಳಗೆ ಮುನಿಗಳು ಮಹಾವೀರಕ್ತ ಶಿಖಾಮಣಿಗಳು ಅವರಿಗೆ ಏನೂ ಇದರೊಳಗೆ ಆಸಕ್ತಿ ಇರುವುದಿಲ್ಲ ಆದರೂ ದೇವರ ಲೀಲೆಗಳನ್ನು ತೋರಿಸುವಂತಹ ನಾಟಕಗಳು ಭಗವಂತನ ಮಹಿಮೆಯನ್ನು ಕೊಂಡಾಡುವ ಹಾಡುಗಳನ್ನು ಹಾಡುವುದು ಇದನ್ನೆಲ್ಲ ಕೇಳಿದರೆ

ಆತ್ಮಾರಾಮಾಶ್ಚ ಮುನಯೋ ನಿರ್ಗ್ರಂಥಾ ಅಪ್ಯುರುಕ್ರಮೇ ।
ಕುರ್ವಂತ್ಯಹೈತುಕೀಂ ಭಕ್ತಿಮಿತ್ಥಂಭೂತಗುಣೋ ಹರಿಃ ॥ (01.07.10..ಭಾಗವತ)

ಅಂತ ಹೇಳಿದಂತೆ ಅಂತಹ ವ್ಯಕ್ತಿಗಳಿಗೂ ಭಗವಂತನ ಕಥೆ ಅಂದರೆ ಅತ್ಯಂತ ಆಸಕ್ತಿ ಇರುತ್ತದೆ ನಿನಗೆ ಏನು ಬೇಕೋ ವರ ಕೇಳು ಅಂದುಬಿಟ್ಟರು ಆ ನಟನಿಗೆ ಭದ್ರ ಅಂತ ಅವನ ಹೆಸರು. ಏನು ಬೇಕೋ ವರ ಕೇಳು ಅಂದರೆ ಅಷ್ಟೇ ಕಾಯುತ್ತ ಇದ್ದ ಅವನು ಅನ್ನುತ್ತಾನೆ ಎಲ್ಲಿ ಹೋದರು ಯಾವುದೇ ದೇಶಕ್ಕೆ ಹೋಗಲಿ, ಯಾವುದೇ ಊರಿಗೆ ಹೋಗಲಿ ಅಲ್ಲಿರುವಂತಹ ಎಲ್ಲ ಸಜ್ಜನರು ನನಗೆ ಯಥೇಚ್ಛವಾಗಿ ಸಂಪತ್ತನ್ನು ಕೊಡಬೇಕು, ಭೋಜನವನ್ನು ಮಾಡಿಸಬೇಕು ಅನ್ನುವ ರೀತಿಯಲ್ಲಿ ನನಗೆ ಒಂದು ವರವನ್ನು ಕೊಡಿ. ನೀವು ಇಲ್ಲಿ ವರ ಬೇಕಾದಷ್ಟು ಸಂತೋಷ ಪಟ್ಟು ನನ್ನನ್ನು ಕೊಟ್ಟು ಕಳಿಸಿದರಿ ಇನ್ನುಳಿದ ಕಡೆಗೆ ನನಗೆ ಯಾರು ಕೇಳಲಿಲ್ಲ ಅಂತ ಆಗಬಾರದು, ಇಲ್ಲಿ ಎಷ್ಟು ಪ್ರೀತಿಯಿಂದ ಕೇಳಿ ನನಗೆ ಆದರ ಗೌರವಗಳನ್ನು ತೋರಿಸಿದ್ದೀರೋ ಹೀಗೆ ನನಗೆ ಎಲ್ಲಾ ಕಡೆಗೆ ಆಗಬೇಕು. ಸಪ್ತದ್ವೀಪ ಸಹಿತವಾದ ಈ ಪೃಥ್ವಿಯಲ್ಲಿ ನನಗೆ ಎಲ್ಲಿಯೂ ನಿರ್ಬಂಧ ಇಲ್ಲದೇ ಇರುವಂತೆ ಸಂಚಾರ ಮಾಡುವಂತೆ ಆಗಬೇಕು ಇದು ಎರಡನೆಯದ್ದು, ಯಾರೂ ನನ್ನನ್ನು ಕೊಲ್ಲಬಾರದು ಅಂದರೆ ಅವಧ್ಯನಾಗಬೇಕು ಅನ್ನುವುದು ಮೂರನೆಯದ್ದು. ಯಾರ ವೇಷವನ್ನು ಹಾಕಿಕೊಳ್ಳಬೇಕು ಅಂತ ನನಗೆ ಅಪೇಕ್ಷೆ ಬರುತ್ತೋ ಬದುಕಿದವರು, ಸತ್ತವರು ಮುಂದೆ ಆಗುವವರು ಅವರೆಲ್ಲರ ವೇಷದಲ್ಲಿಯೂ ನಾನು ಹೋಗುವುದಕ್ಕೆ ನನಗೆ ಯೋಗ್ಯತೆ ಬರಬೇಕು ಆ ವೇಷ ಹಾಕಿ ನಾಟ್ಯ ಮಾಡುವ ಎಲ್ಲದಕ್ಕೂ ತಥಾಸ್ತು ಅಂತ ಹೇಳಿದ್ದಾರೆ ಇಷ್ಟು ಘಟನೆ ಈ ಕಡೆಗೆ ನಡೆದಿದೆ.

ಇದಾದ ಮೇಲೆ ದೇವತೆಗಳೆಲ್ಲ ಹಂಸಗಳನ್ನು ಕರೆದು ಮಾತನಾಡಿಸುತ್ತ ಇದ್ದಾರೆ ತಮ್ಮಂದಿರಾ ಕೇಳಿ ಅಂತ ಯಾಕೆ ಅಂದರೆ ಅವುಗಳೂ ಕೂಡ ಕಶ್ಯಪರ ಮಕ್ಕಳೇ ಪಕ್ಷಿಗಳು ನೀವೆಲ್ಲ ನಮ್ಮ ತಮ್ಮಂದಿರು ನಮಗೆ ಸಹಾಯ ಮಾಡಬೇಕು ಈ ಸಂದರ್ಭದಲ್ಲಿ. ಅಸುರರು, ಸುರರು ಇವರಿಬ್ಬರ ಮಧ್ಯದಲ್ಲಿ ಯುದ್ಧ ಇದೆ ನೀವು ನಮಗೆ ತಮ್ಮಂದಿರು ಹೌದು ಆದರೆ ನಮ್ಮ ನಿಮ್ಮ ಮಧ್ಯದಲ್ಲಿ ಯಾವುದೇ ಕಲಹ ಇಲ್ಲ, ನಮಗೆ ನೀವು ಸಹಾಯ ಮಾಡಬೇಕು. ಯಾವ ರೀತಿ ಸಹಾಯ ಆಗಬೇಕು ಅಂತಂದರೆ ನೀವು ವಜ್ರನಾಭನ ಪುರಕ್ಕೆ ಹೋಗಬೇಕು ಅಲ್ಲಿ ಹೋಗಿ ಹೇಗಾದರೂ ಮಾಡಿ ಆ ವಜ್ರನಾಭನ ಮಗಳು ಪ್ರಭಾವತಿ ಅಂತ ಆ ಪ್ರಭಾವತಿಯನ್ನ ಪ್ರದ್ಯುಮ್ನನ ಜೊತೆಗೆ ಮದುವೆಯಾಗುವ ಹಾಗೆ ಮನಸ್ಸು ಒಪ್ಪಿಸಬೇಕು ಅವಳಿಗೆ ಅಷ್ಟು ಕೆಲಸ ನೀವು ಮಾಡಬೇಕು ಒಂದನೆಯ ಕೆಲಸ. ಎರಡನೆಯದಾಗಿ ಅಲ್ಲಿಯ ವೃತ್ತಾಂತಗಳನ್ನೆಲ್ಲ ನನಗೆ ಅಂದರೆ ಇಂದ್ರ ದೇವರು ಹೇಳುತ್ತಾರೆ ನನಗೆ ಮತ್ತು ದ್ವಾರಕೆಯಲ್ಲಿರುವ ಶ್ರೀಕೃಷ್ಣ

ಪರಮಾತ್ಮನಿಗೆ ನೀವು ತಿಳಿಸುತ್ತಾ ಇರಬೇಕು ಸಿಐಡಿ ತರಹ, ಏನಿದೆ ಎಲ್ಲ ವಿಚಾರಗಳು ನಮಗೆ ಕ್ಷಣ ಕ್ಷಣಕ್ಕೆ ಗೊತ್ತಾಗಬೇಕು ಅರ್ಥಾತ್ ಕಾಲಕಾಲಕ್ಕೆ ನೀವು ಪಕ್ಷಿಗಳು ಅಲ್ಲಿಯ ವಿಷಯಗಳನ್ನು ತಿಳಿದುಕೊಂಡು ನಮಗೆ ಬಂದು ಮುಟ್ಟಿಸಬೇಕು. ಹೇಗಾದರೂ ಮಾಡಿ ಆ ಪ್ರಭಾವತಿಯ ಮದುವೆ ಪ್ರದ್ಯುಮ್ನನ ಜೊತೆಗೆ ಆಗುವ ಹಾಗೆ ನೀವು ವ್ಯವಸ್ಥೆಯನ್ನು ಮಾಡಬೇಕು ಅಂತ ಇಷ್ಟು ತಿಳಿಸಿದ್ದಾರೆ ಮತ್ತು ಯಾವುದೇ ಕಾರಣದಲ್ಲಿಯೂ ಈ ನಮ್ಮ ಆಪ್ತಾಲೋಚನೆ ಹೊರಗೆ ಬರಬಾರದು. ಎಲ್ಲಿಯೇ ಬಂದರೆ ಮತ್ತೆ ಮಹಾದಂಡ ದೇವತೆಗಳ ದಂಡ ಏನು ಅಂತ ನಿಮಗೆ ಗೊತ್ತು ಎಚ್ಚರಿಕೆ ಇರಲಿ ಅಂತ ಇಷ್ಟು ಹೇಳಿ ಕೊಟ್ಟು ಕಳಿಸಿದ್ದಾರೆ ಸರಿ ಅಂತ ಆ ಹಂಸ ಪಕ್ಷಿಗಳೆಲ್ಲ ಬಂದಿವೆ. ಆ ಪ್ರಭಾವತಿಗೆ ಪಾರ್ವತಿ ದೇವಿಯ ವಿಶೇಷವಾಗಿರತಕ್ಕಂತಹ ವರವೂ ಇದೆ.

ನಾಮ್ನಾ ಪ್ರಭಾವತೀ ನಾಮ ಚನ್ದ್ರಾಮೇವ ಪ್ರಭಾವತೀ ॥ (91.41 ವಿಷ್ಣುಪರ್ವ)

ವರದಾನೇನ ಸಾ ಲಬ್ಧಾ ಮಾತ್ರಾ ಕಿಲ ವರಾನನಾ । (91.42 ವಿಷ್ಣುಪರ್ವ)

ಅವಳ ತಾಯಿಗೆ, ವಜ್ರನಾಭನ ಹೆಂಡತಿ, ಪ್ರಭಾವತಿಯ ತಾಯಿಗೆ ಪಾರ್ವತಿ ದೇವಿಯ ವಿಶೇಷ ವರದಿಂದ ಈ ಪ್ರಭಾವತಿ ಹುಟ್ಟಿದ್ದಾಳೆ. ಸ್ವಯಂವರವನ್ನು ಮಾಡಿ ಯಾರು ಯಾರಿಗೋ ಕೊಡಬೇಕು ಅಂತ ಪ್ರಯತ್ನ ಮಾಡುತ್ತಾ ಇದ್ದಾನೆ ಯಾರನ್ನು ಅವಳು ಆರಿಸುತ್ತಾ ಇಲ್ಲ. ಬಂದವರನ್ನೆಲ್ಲ ನಪಾಸು ಮಾಡಿ ಕಳಿಸುತ್ತಾ ಇದ್ದಾಳೆ ಹೇಗಾದರೂ ಮಾಡಿ ಪ್ರದ್ಯುಮ್ನನ ಜೊತೆಗೆ ಮದುವೆಯಾಗುವ ಹಾಗೆ ನೀವು ಮಾಡಬೇಕು ಅಂತ ಅಷ್ಟು ಹೇಳಿ ಕಳಿಸಿದ್ದಾರೆ. ಸರಿ ಅಂತ ಇವುಗಳೆಲ್ಲ ಅಲ್ಲಿ ಬಂದಿವೆ. ಅದ್ಭುತವಾದ ಸಂಸ್ಕೃತವನ್ನು ಮಾತನಾಡುತ್ತಾ ಇವೆ ಹಂಸ ಪಕ್ಷಿಗಳು.

ತೇ ವೈ ನದನ್ತೋ ಮಧುರಂ ಸಂಸ್ಕೃತಾಪೂರ್ವಭಾಷಿಣಃ । (92.3 ವಿಷ್ಣುಪರ್ವ)

ಸಂಸ್ಕೃತ ಭಾಷೆ, ಸುಸಂಸ್ಕೃತರು ಮಾತನಾಡುವ ರೀತಿಯಲ್ಲಿ ಅಪೂರ್ವವಾದಂತಹ ಪಕ್ಷಿಗಳು ಇಡೀ ಪಟ್ಟಣದ ಜನರಿಗೆಲ್ಲಾ ಆಶ್ಚರ್ಯವೇ ಆಶ್ಚರ್ಯ, ಮನುಷ್ಯ ವಾಣಿಯಿಂದ ಪಕ್ಷಿಗಳು ಮಾತನಾಡುತ್ತಾ ಇವೆ ಕಥೆಗಳನ್ನು ಹೇಳುತ್ತವೆ ಅಂತ ಹೇಳಿ ಎಲ್ಲ ಕಡೆಗೆ ಊರುಗಳಲ್ಲಿ ಸುದ್ದಿ ಹಬ್ಬುತ್ತಾ ಇದೆ. ಆಗ ಸಹಜವಾಗಿಯೇ ಕನ್ನಿಕೆಯರಿಗೆ ಇಂತಹ ವಿಷಯದಲ್ಲಿ ಕುತೂಹಲ ಬಹಳ. ಆ ವಜ್ರನಾಭನ ಮಗಳಾದ ಪ್ರಭಾವತಿ ಈ ಎಲ್ಲ ಹಂಸ ಪಕ್ಷಿಗಳ ಹತ್ತಿರ ಬಂದಿದ್ದಾಳೆ ಅವುಗಳಲ್ಲಿ ವಿಶೇಷವಾದ ಪರಿಚಯವಾಗಿವೆ, ಮಾತುಗಳನ್ನು ಆಡುತ್ತ ಇವೆ, ಕಥೆಗಳನ್ನು ಹೇಳುತ್ತ ಇವೆ ಹೀಗೆ ನಡೆಯುತ್ತ ಇದೆ. ಅದರಲ್ಲಿ ಶುಚಿಮುಖಿ ಅನ್ನುವ ಒಂದು ಹೆಣ್ಣು ಹಂಸ ಪಕ್ಷಿ ಅದರ ಜೊತೆಗೆ ವಿಶೇಷ ಸ್ನೇಹ ಆ ಪ್ರಭಾವತಿಗೆ ಆಗಿದೆ. ಆಗ ಇದೇ ಅವಕಾಶವನ್ನು ಕಾಯುತ್ತ ಇದ್ದಂತಹ ಆ ಶುಚಿಮುಖಿ ಪ್ರಭಾವತಿಗೆ ಆ ಪ್ರದ್ಯುಮ್ನನ ಬಗ್ಗೆ ಚೆನ್ನಾಗಿ ವರ್ಣನೆ ಮಾಡಿದೆ. ಆ ಪ್ರದ್ಯುಮ್ನನ ಸೌಂದರ್ಯ, ಅವನ ಪರಾಕ್ರಮ ದೇವತೆಗಳಲ್ಲಿ ದೇವತೆಗಳಂತೆ ಇರುತ್ತಾನೆ, ಮನುಷ್ಯರಲ್ಲಿ ಮನುಷ್ಯರ ಹಾಗೆ, ಅಸುರರ ಜೊತೆಗೆ ಅಸುರರಂತೇನೆ ಮಾಯಾ ವಿದ್ಯೆಯಿಂದ ಯುದ್ಧ ಮಾಡುವುದಕ್ಕೆ ಪ್ರಾರಂಭ, ಅವನ ಸಮಾನವಾದ ಸೌಂದರ್ಯವೇ ಪ್ರಪಂಚದೊಳಗೆ ಇನ್ನೊಬ್ಬರಿಲ್ಲ ಸಾಕ್ಷಾತ್ ಮನ್ಮಥನೇ ಅವನು ಅಂತ ಅವನ ಬಗ್ಗೆ ವರ್ಣನೆ ಮಾಡಿ ಬಹಳಷ್ಟು ಆಸಕ್ತಿ ಹುಟ್ಟುವಂತೆ ಆ ಶುಚಿಮುಖಿ ಮಾಡುತ್ತ ಇದೆ.

ಯಾನ್ ಯಾನ್ ಗುಣಾನ್ ಪೃಥುಶ್ರೋಣಿ ಮನಸಾ ಕಲ್ಪಯಿಷ್ಯಸಿ ।
ಏಷ್ವವ್ಯಾಪ್ತೇಷು ಲೋಕೇಷು ಪ್ರದ್ಯುಮ್ನೇ ಸರ್ವ ಏವ ತೇ ॥ (92.26 ವಿಷ್ಣುಪರ್ವ)

ಒಂದೇ ಮಾತಿನಲ್ಲಿ ಹೇಳುವುದಾದರೆ ಜಗತ್ತಿನಲ್ಲಿ ಏನು ಗುಣಗಳು ಬೇಕು ಅಂತ ನೀನು ಬಯಸಿ ಅನೇಕ ವರರನ್ನು ತಿರುಗಿ ಕೊಟ್ಟುಕಳಿಸುತ್ತಾ ಇದ್ದೀಯಲ್ಲ ಅಷ್ಟೆಲ್ಲ ಕೆಲಸ ಮಾಡಲೇಬೇಡ ಅಷ್ಟು ಜನರಿಗೆ ಅಸಮಾಧಾನ ಯಾಕೆ ಮಾಡುತ್ತೀಯಾ ಕರೆಸಿ ಪಾಪ ಮತ್ತೆ ಮರಳಿ ಕಳಿಸುವುದು ಪ್ರದ್ಯುಮ್ನನನ್ನ ಕೈಹಿಡಿ ನಿನಗೆ ಅಪೇಕ್ಷೆ ಇರುವ ಎಲ್ಲ ಗುಣಗಳು ಅವನಲ್ಲಿ ಇವೆ ಅಂತ ಈ ರೀತಿ ಹೇಳಿದಾಗ ಪ್ರಭಾವತಿ ಆ ಶುಚಿಮುಖಿ ಎಂಬ ಹಂಸ ಪಕ್ಷಿಗೆ ಹೇಳುತ್ತಾ ಇದ್ದಾಳೆ ಪರಮಾತ್ಮನ ಮಹಿಮೆಯನ್ನು ನಾನು ಬಹಳಷ್ಟು ಕೇಳಿದ್ದೇನೆ. ನಮ್ಮ ಅಸುರ ಕುಲದವರೇ ನಮ್ಮ ತಂದೆ, ನಮ್ಮ ಚಿಕ್ಕಪ್ಪ, ದೊಡ್ಡಪ್ಪ, ಬಂಧು ಬಳಗ ಎಲ್ಲರೂ ನಿಂದೆ ಮಾಡುವುದಕ್ಕೆ ಹೇಳುತ್ತಾರೆ ಆದರೆ ವಿಷ್ಣುವಿನ ಪರಾಕ್ರಮವನ್ನಂತೂ ವರ್ಣನೆ ಮಾಡುತ್ತಾರೆ. ಎಂತೆಂತಹ ಮಹಾಪರಾಕ್ರಮಿಗಳಾದ ಅಸುರರನ್ನ ಅನಾಯಾಸವಾಗಿ ಸಂಹಾರ ಮಾಡುತ್ತಾನೆ ಆ ಭಗವಂತ ಮತ್ತು ಮಹಾ ಬಲಿಷ್ಠರು, ಧಾರ್ಮಿಕರು, ಸಜ್ಜನರು ಯಾರೋ ಅಂಥವರ ಪಕ್ಷವನ್ನೇ ನಾವು ವಹಿಸಬೇಕು ಏನಿದ್ದರೂ ದೇವತೆಗಳು ಮಹಾಬಲಿಷ್ಠರು, ಮಹಾಬಲಶಾಲಿಗಳು ಅಂತಹ ಪರಮಾತ್ಮನ ರಕ್ಷಣೆ ಅವರಿಗಿದೆ. ಹೀಗಿದ್ದ ಮೇಲೆ ಅಂಥವರ ಕುಲವನ್ನೇ ನಾವು ಬಯಸಬೇಕು ಹೇಗಾದರೂ ಮಾಡಿ ಆ ಪ್ರದ್ಯುಮ್ನ ನನ್ನನ್ನು ಮದುವೆ ಆಗುವ ಹಾಗೆ ಮಾಡು ಅಂತ ಶುಚಿಮುಖಿ ಎಂಬ ಆ ಹಂಸ ಪಕ್ಷಿಣಿಗೆ ಹೇಳಿದಾಗ ಅವಶ್ಯವಾಗಿ ಮಾಡುತ್ತೇನೆ ಅಂತ ಮೊಟ್ಟ ಮೊದಲು ಈ ವಾರ್ತೆಯನ್ನು ಇಂದ್ರನಿಗೆ ಹಾಗೂ ಕೃಷ್ಣನಿಗೆ ಕರಾರಿನ ಪ್ರಕಾರ ನೀವು ಹೇಳಿದ ಕೆಲಸ ಆಗಿದೆ ಹೇಗಾದರೂ ಮಾಡಿ ಅವಳ ಮನಸ್ಸನ್ನು ಒಪ್ಪಿಸಬೇಕು ಅಂತ ಇತ್ತು ಆ ಕೆಲಸ ಆಗಿದೆ ಅಂತ ತಿಳಿಸಿಕೊಟ್ಟಿದ್ದಾಳೆ.

ಶುಚಿಮುಖಿ ಅದಕ್ಕೂ ಮೊದಲು ಒಂದು ಮಾತನ್ನು ಹೇಳುತ್ತಾಳೆ ಪ್ರಭಾವತಿಗೆ, ಪ್ರಭಾವತಿ ಈ ಕೆಲಸ ಸುಲಭವಾಗಿ ಆಗಬೇಕು ಅಂತಾದರೆ ನೀನು ನನಗೆ ಸಹಾಯ ಮಾಡಬೇಕು. ನಾನು ಏನು ಇಷ್ಟು ಚೆನ್ನಾಗಿ ಮಾತನಾಡುತ್ತೇನೆ ನೀವೆಲ್ಲ ಹೆಣ್ಣು ಮಕ್ಕಳಿಗೆ ನಿಮಗೆ ಆಸಕ್ತಿ ಬಹಳ ಚಿಕ್ಕ ಚಿಕ್ಕ ಯುವತಿಯರು ನೀವು ನಮ್ಮನ್ನು ಮಾತನಾಡಿಸುತ್ತೀರಿ ರಾಜನು ನಮ್ಮನ್ನು ಯಾಕೆ ಮಾತನಾಡಿಸುತ್ತಾನೆ ಅವನು ಎಲ್ಲಿಯೋ ಇರುತ್ತಾನೆ. ಹೀಗೆ ಹಂಸ ಪಕ್ಷಿ ಬಹಳ ಚೆನ್ನಾಗಿ ಕಥೆ ಹೇಳುವ ಹಂಸ ಪಕ್ಷಿ ಇದೆ ಅಂತ ಈ ಸುದ್ದಿಯನ್ನು ನೀನು ನಿಮ್ಮ ಅಪ್ಪನಿಗೆ ಹೇಳಬೇಕು, ಅವನು ನನ್ನನ್ನು ಕರೆದು ಮಾತನಾಡಿಸಬೇಕು ಹಾಗೆ ಒಂದು ವ್ಯವಸ್ಥೆ ಮಾಡಿಕೊಡು ಅಂತ ಅದಕ್ಕೆ ಏನು ದೊಡ್ಡ ವಿಷಯ ಅಂತ ಇವಳು ಹೋಗಿ ತನ್ನ ತಂದೆಗೆ ಹೇಳಿದ್ದಾಳೆ. ಹೀಗೆ ಭಾರೀ ಕಥೆಯನ್ನು ಹೇಳುವ ಪಕ್ಷಿಗಳು ನಮ್ಮ ಪುರಕ್ಕೆ ಬಂದಿವೆ ನೀನು ಒಂದು ಸಲ ನೋಡಿಯಾದರೂ ನೋಡು ಮಾತನಾಡಿಸು ಅವುಗಳನ್ನು ಅಂತ ಸರಿ ಅಂತ ಕರೆದಿದ್ದಾನೆ. ಇವಳು ಹಂಸ ಪಕ್ಷಿಣಿ ವಜ್ರನಾಭನ ಎದುರಿನಲ್ಲಿ ಶಾಂಡಿಲಿ ಅಂತನ್ನುವ ಒಬ್ಬ ಶ್ರೇಷ್ಠ ಸಾಧ್ವಿ ಶಿರೋಮಣಿ ಮೇರು ಪರ್ವತದ ಪಾರ್ಶ್ವಭಾಗದಲ್ಲಿ ಇದ್ದವಳು, ಕೌಸಲ್ಯಾ ಅಂತ ಮತ್ತೊಬ್ಬಳು ಅವಳು ಶಾಂಡಿಲಿಯ ಸಖಿ ಹಾಗೂ ಇವರೆಲ್ಲರನ್ನು ಸುಮ್ಮನೆ ಸುದ್ದಿಯನ್ನು ಹೇಳುತ್ತ ಹೀಗೆಲ್ಲ ಇವರನ್ನೆಲ್ಲನ್ನ ನಾನು ನೋಡುತ್ತಾ ಬಂದೆ ಹಾರಾಡುತ್ತಾ ಇರುವಾಗ ಒಬ್ಬ ನಟನನ್ನು ನೋಡಿದೆ. ನೋಡಿ ಈ ನಟನ ಕಥೆಯನ್ನು ಹೇಳುವುದಕ್ಕೋಸ್ಕರ ಆ ನಟನಿಗೆ ಆ ವರವನ್ನು ಕೊಡಿಸಿದ್ದು ಕೃಷ್ಣ ಅಲ್ಲಿ ಮುನಿಗಳಿಂದ, ಒಬ್ಬ ನಟನನ್ನು ನಾನು ಕಂಡೆ ಅವನು ಸಪ್ತದ್ವೀಪಗಳಿಂದ ಕೂಡಿದ ಸಮಗ್ರ ಭೂಮಿಯಲ್ಲಿ ಎಲ್ಲಿ ಬೇಕು ಅಲ್ಲಿ ಹೋಗಬಹುದು ಅಂತಹ ಸಾಮರ್ಥ್ಯ ಅವನಿಗೆ ಇದೆ. ಯಾವ ಬೇಕಾದ ವೇಷಗಳನ್ನು ಹಾಕುತ್ತಾನೆ, ಎಂಥಹ ನಾಟಕಗಳನ್ನು ಮಾಡುತ್ತಾನೆ, ಎಂಥವರು ಅವನ ನಾಟಕಕ್ಕೆ ಮನಸೋಲುತ್ತಾರೆ, ಜೀವನದಲ್ಲಿ ಕಣ್ಣಿದ್ದರೆ ಒಮ್ಮೆ ಅವನ ನಾಟಕ ನೋಡಲೇಬೇಕು. ಇಷ್ಟು ಆ ಕಥೆ ಹೇಳುತ್ತಾ ಹೇಳುತ್ತಾ ಏನೇನೋ ಕಥೆ ಹೇಳುತ್ತಾ ಈ ನಟನ ಬಗ್ಗೆ ಕಥೆ ಹೇಳುತ್ತಾ ಇದೆ ಸುಮ್ಮನೆ ಕಥೆಯನ್ನು ಹೇಳಿದೆ ಅಷ್ಟು ಹೇಳಿದ್ದೇ ತಡ ವಜ್ರನಾಭನಿಗೆ ಕುತೂಹಲ ಕೆರಳಿದೆ ಏನಾದರೂ ಮಾಡಿ ಆ ನಾಟಕದ ಕಂಪನಿ ನಮ್ಮ ಊರಿಗೆ ಬರುವ ಹಾಗೆ ನೀನು ಮಾಡಬೇಕು ಅಂತ ಆ ಶುಚಿಮುಖಿ ಹಂಸ ಪಕ್ಷಿಗೆ ಅವನು ಕೇಳಿಕೊಂಡಿದ್ದಾನೆ. ಆಯಿತು ನಾನು ಪ್ರಯತ್ನ ಮಾಡುತ್ತೇನೆ ಅಂತ

ಹೇಳಿ ಈ ವಿಚಾರವನ್ನು ಮತ್ತೆ ಕೃಷ್ಣ ಹಾಗೂ ಇಂದ್ರನಿಗೆ ತಿಳಿಸಿದೆ. ಶ್ರೀಕೃಷ್ಣ ಪರಮಾತ್ಮ ಹೇಳಿದ ಆಯಿತು ನಿನ್ನ ಕೆಲಸ ಇಷ್ಟು ಮಾಡಬೇಕಾಗಿತ್ತು ಮಾಡಿದ್ದಿ ಮುಂದಿನ ಕೆಲಸ ನಾವು ನೋಡಿಕೊಳ್ಳುತ್ತೇವೆ ಅಂತ ಆ ನಟನನ್ನು ಕಳಿಸಲೇ ಇಲ್ಲ ಕೃಷ್ಣ ಅವನು ತನ್ನ ಪಾಡಿಗೆ ತಾನು ಅಲ್ಲಲ್ಲಿ ನಾಟಕವನ್ನು ಮಾಡುತ್ತಾ ಹೊಟ್ಟೆ ತುಂಬಿಕೊಳ್ಳುತ್ತಾ ತಿರುಗುತ್ತಾ ಇದ್ದಾನೆ.

ಆ ನಟನ ಬಗ್ಗೆ ಇಂತಹ ಒಂದು ಕುತೂಹಲಕಾರಿಯಾದ ವಾರ್ತೆಯನ್ನ ಅವನ ಕಿವಿಗೆ ಹಾಕಿಸಬೇಕಾಗಿತ್ತು ಅಷ್ಟೇ ಆ ವಜ್ರನಾಭನಿಗೆ ಅದು ಕಿವಿಗೆ ಬಿದ್ದಿದ್ದೇ ತಡ ಶ್ರೀಕೃಷ್ಣ ಪರಮಾತ್ಮ ತನ್ನ ಇಚ್ಛಾ ಮಾತ್ರದಿಂದ ಆ ನಟನ ವೇಷವೇ ಅವನಂತಹ ರೂಪವೇ ಎಲ್ಲ ಯಾದವರಿಗೂ ಬರುವಂತೆ ಮಾಡಿಬಿಟ್ಟಿದ್ದಾನೆ ಕೃಷ್ಣ ಪರಮಾತ್ಮ. ಅದಕ್ಕಾಗಿಯೇನೆ ಅವನು ಇರುವುದು ಒಬ್ಬ ನಟ ಆದರೆ ಅವನ ಕಂಪನಿ ಇದ್ದ ಹಾಗೆ ಇದು ನೂರಾರು ಜನ, ಸಾವಿರಾರು ಜನ ಅಲ್ಲಿ ನರ್ತಕರು ನಟರು ನಟಿಯರು ಎಲ್ಲರೂ ಸಿದ್ಧರಾಗಿದ್ದಾರೆ. ಎಲ್ಲರೂ ಯಾದವರೇ ಅವರು ಆದರೆ ಆ ವೇಷದೊಳಗೆ ಸಿದ್ದರಾದರು ಪ್ರದ್ಯುಮ್ನ ನಾಯಕ, ಸಾಂಬ ವಿಧೂಷಕ, ಗದಾ ಶೃಥಧರ ಹೀಗೆ ಒಬ್ಬೊಬ್ಬರು ಒಂದೊಂದು ವೇಷದೊಳಗೆ ಇದ್ದಾರೆ. ಇನ್ನನೇಕ ಜನ ನಟಿಯರು ಸಿದ್ದರಾಗಿದ್ದಾರೆ ದ್ವಾರಕೆಯಲ್ಲಿ ಇರತಕ್ಕಂತಹ ಸ್ತ್ರೀಯರೆಲ್ಲ ಅನೇಕರು ನಟಿಯರು ಆಗಿದ್ದಾರೆ ಹೀಗೆ ಒಂದು ದೊಡ್ಡ ನಾಟಕದ ಒಂದು ಸಂಘವನ್ನು ಮಾಡಿಕೊಂಡು ಅಲ್ಲಿ ಹೋಗುತ್ತ ಇದ್ದಾರೆ ಸುಪುರ ಅಂತ ಅಲ್ಲಿ ಪ್ರವೇಶ ಮಾಡಿದ್ದಾರೆ ಮೊದಲು. ವಜ್ರನಾಭ ಆದೇಶ ಕೊಟ್ಟ ಯಾಕೆ ಅಂದರೆ ಈ ಶುಚಿಮುಖಿ ಹೇಳಿತ್ತು ದೊಡ್ಡ ನಟ ಅವನು ನೀವು ಹಾಗೆ ಹೀಗೆ ಅವನಿಗೆ ಉಪಚಾರ ಮಾಡಿದರೆ ನಡೆಯೋದಿಲ್ಲ ಅಂತ. ತನ್ನ ರಾಜ್ಯದ ಆಳ್ವಿಕೆಗೆ ಒಳಪಟ್ಟಂತಹ ಆ ಸುಪುರದಲ್ಲಿ ಇದ್ದ ಜನರಿಗೆಲ್ಲ ಹೇಳಿದ್ದ ಭಾರೀ ವೈಭವದಿಂದ ಇವರಿಗೆ ಆತಿಥ್ಯ ಮಾಡಿ ಅಂತ ಬೇಕಾದಷ್ಟು ವಸ್ತ್ರಗಳು, ಮುತ್ತು, ರತ್ನ ಬೇಡಿದ್ದೆಲ್ಲ ಕೊಟ್ಟು ಅವರಿಗೆ ಆತಿಥ್ಯವನ್ನು ಮಾಡಿದ್ದಾರೆ. ಅಲ್ಲಿ ರಾಮಾಯಣದ ನಾಟಕವನ್ನು ಆಡಿದ್ದಾನೆ ಭಾರೀ ಅದ್ಭುತವಾದ ರಾಮಾಯಣದ ನಾಟಕ ಆ ಲೋಮಪಾದ, ದಶರಥ, ಋಷ್ಯಶೃಂಗ ಮುನಿ, ಶಾಂತಾ ದೇವಿ ಹಿಂದೆ ಎಲ್ಲಾ ಕಥೆ ಬಂದಿದೆ. ಆ ಎಲ್ಲ ಕಥೆಗಳನ್ನು ತೋರಿಸುತ್ತಾ ತೋರಿಸುತ್ತಾ ಜನರೆಲ್ಲ ಪ್ರತ್ಯಕ್ಷವಾಗಿ ದ್ವಾಪರಯುಗದಲ್ಲಿದ್ದ ಜನ, ತ್ರೇತಾಯುಗದ ರಾಮಾಯಣವನ್ನು ಕಣ್ಣಾರೆ ಕಂಡಂತೆ ನಾಟಕವನ್ನು ಮಾಡಿ ತೋರಿಸಿದ್ದಾರೆ ಯಾದವರು ಎಲ್ಲಾ ದೇವಾಂಶ ಸಂಭೂತರು ಮಹಾನುಭಾವರು. ಒಂದು ಮಹತ್ವದ ಅಂಶವನ್ನು ತಿಳಿಸುತ್ತಾರೆ ಎಷ್ಟೋ ಜನ ಯುಗ ಯುಗಗಳವರೆಗೆ ದೀರ್ಘವಾದ ಆಯುಷ್ಯವನ್ನು ಪಡೆದುಕೊಂಡವರು ಇರುತ್ತಾರೆ ಜಾಂಬವಂತ ಅಂಥವರು ಹಾಗೆ ಜಾಂಬವಂತ ಹೇಗೆ ರಾಮ ಪಕ್ಷದವ ಇನ್ನೂ ಇದ್ದಾನೆ ದ್ವಾಪರಯುಗದಲ್ಲಿ ಹಾಗೆ ಅಸುರ ಪಕ್ಷದಲ್ಲಿಯೂ ಕೂಡ ಅನೇಕ ಜನ ತ್ರೇತಾಯುಗದವರು ರಾಮಾಯಣದ ಕಥೆಗಳನ್ನೆಲ್ಲ ನೋಡಿದವರು ಇವತ್ತಿಗೂ ಇದ್ದರು ಅವರೆಲ್ಲಾ ಅಲ್ಲಿ ಇದ್ದಾರೆ ಪಟ್ಟಣದೊಳಗೆ.

ತತ್ಕಾಲಜೀವಿನೋ ವೃದ್ಧಾ ದಾನವಾ ವಿಸ್ಮಯಂ ಗತಾಃ । (93.9 ವಿಷ್ಣುಪರ್ವ)

ಏನು ವ್ಯತ್ಯಾಸವೇ ಇಲ್ಲಲ್ಲ ಆವಾಗ ಏನು ಕಥೆ ನಡೆಯಿತೋ ಹಾಗೆ ಒಂದು ಚೂರು ವ್ಯತ್ಯಾಸ ಇಲ್ಲದೆ ಇದ್ದ ಹಾಗೆ ಮಾಡುತ್ತಾ ಇದ್ದಾರಲ್ಲ ಅಂತ ನಮ್ಮಂಥವರಿಗೆ ಅದು ಏನು ಆಶ್ಚರ್ಯ ಅನ್ನಿಸುವುದಿಲ್ಲ ಏನು ಮಾಡಿದರು ಇವನೇ ರಾಮ ಇವನೇ ರಾವಣ ಅಂತ ನಾವು ತಿಳಿದುಕೊಳ್ಳುತ್ತೇವೆ. ಯಾರಿಗೂ ನಿಜವಾದ ರಾಮ ಹೇಗಿದ್ದ, ನಿಜವಾದ ರಾವಣ ಹೇಗಿದ್ದ ಗೊತ್ತಿಲ್ಲ ಏನು ಮಾತನಾಡಿದರೂ ಗೊತ್ತಿಲ್ಲ ಆದರೆ ಪ್ರತ್ಯಕ್ಷವಾಗಿ ರಾಮಾಯಣ ಕಾಲದಲ್ಲಿದ್ದ ದಾನವರು ಆ ಘಟನೆಗಳನ್ನು ನೋಡಿದವರು ಈ ನಾಟಕವನ್ನು ನೋಡಿ ಮೆಚ್ಚುತ್ತಾ ಇದ್ದಾರೆ ಅಂದರೆ ಅದು ನಿಜವಾದ ನಾಟಕ. ಅಷ್ಟೆಲ್ಲ ಭಾರೀ ನಾಟಕ ಆಯಿತು ತಮ್ಮ ಮೈಮೇಲೆ ಇದ್ದ ಆಭರಣಗಳನ್ನೆಲ್ಲ ದಾನವರು ಕೊಡುತ್ತಾ ಇದ್ದಾರೆ ಹೀಗೆ ಊರೂರುಗಳಲ್ಲಿ ನಾಟಕಗಳು ನಡೆಯುತ್ತಾ ಇವೆ. ಕೊನೆಗೆ ತನ್ನ ಮುಖ್ಯವಾದ ರಾಜಧಾನಿ ವಜ್ರಪುರ ಅದಕ್ಕೇನೆ ಕರೆಸಿಕೊಂಡಿದ್ದಾನೆ ಅಲ್ಲಿಯಂತೂ ಉಳಿದವರು ಮಾಡಿದ ಆತಿಥ್ಯಕ್ಕಿಂತ ನೂರು ಪಟ್ಟು ಹೆಚ್ಚು

ಆತಿಥ್ಯವನ್ನು ಮಾಡಿ ಅವರಿಗೆ ವೈಭವದಿಂದ ನೋಡಿದರೆ ಇವರುಗಳೆಲ್ಲ ಶತ್ರುಗಳು ಯಾದವರು ಆದರೆ ಇವನಿಗೆ ಗೊತ್ತಿಲ್ಲ ಮೂರ್ಖ. ಭಗವಂತನ ಅದ್ಭುತವಾದ ಮಾಯಾ ಶಕ್ತಿ, ಇಚ್ಛಾ ಶಕ್ತಿ ಪರಮಾತ್ಮನದು ಮಾಯಾ ಶಕ್ತಿ ಅಂದರೆ ಇಂದ್ರಜಾಲಿಕೆ ಮಾಯೆ ಅಲ್ಲ, ಮುಖ್ಯವಾದ ಸತ್ಯವಾದ ಸೃಷ್ಟಿಯನ್ನ ಮಾಡುವುದಕ್ಕೆ ಸಾಮರ್ಥ್ಯ ಇಲ್ಲದೆ ಇದ್ದವರು ಮಾಯಾ ಸೃಷ್ಟಿಯನ್ನು ಮಾಡುತ್ತಾರೆ.

ಅಕ್ಷಮಾಃ ಸತ್ಯಸೃಷ್ಟೌ ಹಿ ಮಾಯಾಸೃಷ್ಟಿಂ ವಿತನ್ವತೇ ॥ (1.1.1 ಭಾಗವತ ತಾತ್ಪರ್ಯ ನಿರ್ಣಯ)

ಪರಮಾತ್ಮ ಸತ್ಯವಾದ ಸೃಷ್ಟಿಯನ್ನೇ ಮಾಡುವುದಕ್ಕೆ ಸಮರ್ಥ ಹೀಗಾಗಿ ನಿಜವಾಗಿಯೇ ಆ ತರಹದ ವೇಷ ಸತ್ಯವಾದ ವೇಷವನ್ನೇ ಕೊಟ್ಟ ಆ ನಟರ ವೇಷವನ್ನ ಇವರಿಗೆಲ್ಲ ಕೊಟ್ಟಿದ್ದಾನೆ ಹಾಗೆ ನಾಟಕಗಳು ನಡೆಯುತ್ತಾ ಇವೆ. ಆಮೇಲೆ ಗಂಗಾವತರಣದ ಬಗ್ಗೆ ಸಂಗೀತವನ್ನು ಮಾಡಿದ್ದಾನೆ ಪ್ರದ್ಯುಮ್ನ ಭಾರೀ ಸಂಗೀತವನ್ನು ವಾದ್ಯ ವೈಭವ ಪುರಸ್ಸರವಾಗಿ ಸಂಗೀತ ಕಛೇರಿ ಮಾಡಿದ. ರಂಭಾಭಿಸಾರ ಅಂತ ಕುಬೇರ ಪಟ್ಟಣದಲ್ಲಿ ನಡೆದಂತಹ ಒಂದು ಘಟನೆ ಆ ರಂಭೆಗೆ ರಾವಣ ಪೀಡೆ ಕೊಟ್ಟದ್ದು, ನಲಕೂಬರ ಆ ರಂಭಾಗೆ ಸಮಾಧಾನ ಮಾಡಿದ್ದು ಇದೆಲ್ಲ ಈ ಒಂದು ಕಥೆ ರಂಭಾಭಿಸಾರ ನಾಟಕ ಅಂತ ಅದನ್ನೆಲ್ಲ ಮಾಡಿದ್ದಾರೆ ಇದೆಲ್ಲ ನೋಡುತ್ತಾ ನೋಡುತ್ತಾ ಅವರೆಲ್ಲ ಮೈ ಮರೆತು ಬಿಟ್ಟಿದ್ದಾರೆ. ನೋಡಿ, ಏನು ಕೃಷ್ಣನ ರಾಜನೀತಿ ಅದ್ಭುತವಾದ ರಾಜನೀತಿ ಇದು ನಾಟಕ ಯಾಕೆ ಹಾಕಿದ ಕೃಷ್ಣ ಅಂತ ಅಲ್ಲಿ ಮುನಿಗಳಿಂದ ವರ ಕೊಡಿಸಿ ಆ ನಟನ ಅದ್ಭುತತೆ ಪ್ರಪಂಚದಲ್ಲಿ ಪ್ರಸಿದ್ಧವಾಗುವಂತೆ ಮೊದಲು ಮಾಡಿದ, ಆ ನಟನ ಬಗ್ಗೆ ಈ ಪಕ್ಷಿಗಳ ಮೂಲಕ ಅವನ ಕಿವಿಗೆ ಊದಿಸಿದ, ಆ ನಟನ ವೇಷದಲ್ಲಿ ಯಾದವರನ್ನ ಕಳಿಸಿದ, ಅವರು ಊರೂರುಗಳಲ್ಲಿ ನಾಟಕ ಮಾಡುತ್ತಾ ರಾಜಧಾನಿಯಲ್ಲಿ ಒಂದಾದ ಮೇಲೆ ಒಂದು ನಾಟಕ ಮಾಡುತ್ತಾ ಮಾಡಿದ್ದೇನು ಕೆಲಸ ಅಂದರೆ ಖಾಲಿ ಕೈ, ಅಸುರರ ಹತ್ತಿರ ಹಣನೇ ಉಳಿಯಲಿಲ್ಲ ಅಷ್ಟೆಲ್ಲ ಹಣ ಕೊಟ್ಟುಬಿಟ್ಟಿದ್ದಾರೆ.

ಧನರತ್ನೈರ್ವಿರಹಿತಾಃ ಕೃತಾಃ ಪುರುಷಸತ್ತಮ । (93.37 ವಿಷ್ಣುಪರ್ವ)

ಏನೂ ದುಡ್ಡು ಉಳಿಯಲಿಲ್ಲ ನಾಳೆ ಯುದ್ಧ ಆದರೆ ಯುದ್ಧಕ್ಕೆ ಏನಾದರೂ ಹಣ ಬೇಕಲ್ಲ ಏನು ಇಲ್ಲವೇ ಇಲ್ಲ ಖಾಲಿ ಮಾಡಿದ್ದಾರೆ ಇಷ್ಟು ಕೆಲಸ ಒಂದು ಕಡೆಗೆ ನಡೆಯುತ್ತ ಇದೆ. ಇನ್ನು ಈ ಕಡೆಗೆ ಮದುವೆ ಆಗಬೇಕಾಗಿತ್ತಲ್ಲ ಪ್ರಭಾವತಿಯ ಜೊತೆಗೆ ಪ್ರದ್ಯುಮ್ನನ ಮದುವೆ ಮಾಡಿಸು ಅಂತ ಆಜ್ಞೆ ಮಾಡಿದ್ದಾರೆ ದೇವತೆಗಳು ಈ ಪಕ್ಷಿಗಳಿಗೆ. ಆ ಪಕ್ಷಿ ಪ್ರಭಾವತಿಗೆ ಹೇಳುತ್ತಾ ಇದೆ ಯಾದವರೆಲ್ಲ ಪ್ರವೇಶ ಮಾಡಿ ಆಯಿತು ಪಟ್ಟಣದಲ್ಲಿ ಪ್ರದ್ಯುಮ್ನನು ಬಂದಿದ್ದಾನೆ ಇವತ್ತು ಬಂದು ನಿನ್ನ ಪಾಣಿಗ್ರಹಣವನ್ನು ಮಾಡುತ್ತಾನೆ ಚಿಂತೆ ಮಾಡಬೇಡ ಧೈರ್ಯದಿಂದ ಇರು ಅಂತ. ಅವಳು ಕಾಯುತ್ತ ಇದ್ದಾಳೆ ಜೊತೆಗೆ ನೀನು ಇರಬೇಕು ಪಕ್ಷಿ ನನಗೆ ಅವನ ಜೊತೆಗೆ ಮಾತನಾಡುವಷ್ಟು ಧೈರ್ಯ ಮೊದಲು ಬರುವುದಿಲ್ಲ ಅಂತ. ಪ್ರಭಾವತಿ ರಾಜಕುಮಾರಿ ಅಂತ ಎಲ್ಲ ದಾಸಿಯರೆಲ್ಲ ಶ್ರೇಷ್ಠವಾದ ಹೂವುಗಳಿಂದ ಮಾಡಿದಂತಹ ಮಾಲೆಯನ್ನು ಅವಳಿಗೋಸ್ಕರ ನಿತ್ಯವೂ ತರುವಂತೆ ತರುತ್ತಾ ಇದ್ದಾರೆ ಆ ಸುಗಂಧಯುತವಾದ ಅನೇಕ ಉತ್ತಮವಾದ, ಶ್ರೇಷ್ಠವಾದ ರಸದಿಂದ ಕೂಡಿದಂತಹ ಆ ಪುಷ್ಪಗಳ ರಸವನ್ನ ಆಸ್ವಾದನೆ ಮಾಡುವುದಕ್ಕೆ ಅನೇಕ ಭ್ರಮರಗಳು ಆ ಪುಷ್ಪದ ಸುತ್ತಲೂ ಓಡಾಡುತ್ತ ಇವೆ. ಇದೇ ಸರಿಯಾದ ಅವಕಾಶ ಅಂತ ಪ್ರದ್ಯುಮ್ನ ಅಂದುಕೊಂಡು ತಾನು ಒಂದು ಭ್ರಮರದ ವೇಷದಲ್ಲಿ ಅದರ ಜೊತೆಗೆ ಒಳಗೆ ಹೋಗಿಬಿಟ್ಟ ಹಿಂದೇನೆ ಆ ಮಾತನ್ನು ಉಲ್ಲೇಖ ಮಾಡಲಿಲ್ಲ. ಇಲ್ಲಿ ಇವನ ಪುರದಲ್ಲಿಯೂ ಯಾರೂ ಬರುವಂತೆ ಇಲ್ಲ ಆ ತರಹ ಒಂದು ವಿಶಿಷ್ಟವಾದ ವರ ಪಡೆದಿದ್ದ ಅವನು ಅನ್ನುವುದಕೋಸ್ಕರ ಆ ಭ್ರಮರದ ರೂಪದಲ್ಲಿ ಇವನು ಹೋಗಿಬಿಟ್ಟಿದ್ದಾನೆ ಒಳಗೆ. ಆ ಭ್ರಮರಗಳು ಸ್ವಲ್ಪಹೊತ್ತು ಅದರ ಜೊತೆಗೆ ಇದ್ದು ಸಂಧ್ಯಾಕಾಲದಲ್ಲಿ ಮತ್ತೆ ತಮ್ಮ ತಮ್ಮ ಗೂಡಿಗೆ ಹೋಗುತ್ತವೆ ಆ ಜೇನನ್ನು ಅಲ್ಲಿ

ಹಾಕುವುದಕ್ಕೆ. ಎಲ್ಲ ಹೋದಮೇಲೆ ನಾನೊಬ್ಬನೇ ಸುತ್ತುತ್ತಾ ಇದ್ದರೆ ಮತ್ತೆ ಸಂಶಯ ಬರುತ್ತದಲ್ಲ ಏನು ಮಾಡಬೇಕು ಅಂತ ಆಲೋಚನೆ ಮಾಡಿ ಆಗ ಆ ದೂರದಲ್ಲಿಟ್ಟ ಮಾಲೆಯ ಸುತ್ತ ಸುತ್ತುವ ಭ್ರಮರಗಳ ಗುಂಪನ್ನು ಬಿಟ್ಟು, ಕಿವಿಗಳಲ್ಲಿ ಎರಡು ಪುಷ್ಪಗಳನ್ನು ಹೀಗೆ ಧಾರಣೆ ಮಾಡಿದಳು ಅವಳು ಕಮಲ ಪುಷ್ಪಗಳನ್ನ ಅಲ್ಲಿ ಒಳಗೆ ಹೋಗಿ ಕುಳಿತಿದ್ದಾನೆ ಸೂಕ್ಷ್ಮ ರೂಪದಿಂದ ಪ್ರದ್ಯುಮ್ನ. ಆದರೆ ಅವಳಿಗೆ ಅದು ಗೊತ್ತಿಲ್ಲ ಇನ್ನು ಬಂದಿಲ್ಲ ಪ್ರದ್ಯುಮ್ನ ಇನ್ನು ಬಂದಿಲ್ಲ ಅಂತ ಪ್ರಭಾವತಿ ತಾನು ಪ್ರಾಣ ತ್ಯಾಗವನ್ನೇ ಮಾಡುತ್ತೇನೆ ಕುಮುದ್ವತಿ ಹೇಗೆ ಪ್ರಾಣತ್ಯಾಗ ಮಾಡಿದಳೋ ಹಾಗೆ ನಾನು ಪ್ರಾಣತ್ಯಾಗವನ್ನು ಮಾಡುವಂತಹ ಪ್ರಸಂಗ ಇದೆ ಅಂತ ಹೇಳುವಾಗ ಅಷ್ಟು ಕೇಳಿಸಿಕೊಂಡ ಪ್ರದ್ಯುಮ್ನ ನಿಜವಾಗಿ ನನ್ನ ಬಗ್ಗೆ ಅವಳಿಗೆ ಅಪೇಕ್ಷೆ ಇದೆ ಅಂತಾದರೆ ಮದುವೆ ಮಾಡಿಕೊಳ್ಳೋಣ ಅಂತ ದಾರಿ ಕಾಯುತ್ತ ಇದ್ದ. ಯಾವಾಗ ಈ ಮಾತು ಅವಳ ಬಾಯಿಂದ ಬಂತೋ ಅವನು ಬಂದರೆ ನಾನು ಬದುಕುತ್ತೇನೆ ಇಲ್ಲದೆ ಇದ್ದರೆ ಪ್ರಾಣ ಬಿಡುತ್ತೇನೆ ಅಂತ ಆಗ ತನ್ನ ಪುರುಷ ರೂಪವನ್ನು ಪ್ರಕಟ ಮಾಡಿದ್ದಾನೆ. ಪ್ರಕಟ ಮಾಡಿದ್ದೇ ತಡ ದಿವ್ಯವಾದ ಪ್ರಕಾಶ ಬೇರೆ ಬೆಳಕೇ ಬೇಕಾಗಿಲ್ಲ, ಇವನದೇ ಪ್ರಕಾಶದಿಂದಲೇ ಆ ಶ್ರೇಷ್ಠವಾದಂತಹ ಬೆಳಕು ಎಲ್ಲ ಕಡೆಗೆ ಹರಡಿದೆ. ಇನ್ನು ಗಾಂಧರ್ವ ವಿವಾಹವನ್ನು ಮಾಡಿಕೊಳ್ಳಬೇಕು ಅಂತ ಗಾಂಧರ್ವ ವಿವಾಹ ಮಾಡಿಕೊಳ್ಳಬೇಕು, ಅಗ್ನಿಸಾಕ್ಷಿಯಾಗಿ ಮದುವೆ ಆಗಬೇಕು ಅಂತ ವೇದಗಳು ಹೇಳುತ್ತವೆ, ಶಾಸ್ತ್ರಗಳು ಹೇಳುತ್ತವೆ ಅಗ್ನಿ ಎಲ್ಲಿ, ಪ್ರದ್ಯುಮ್ನ ಆ ಮಣಿಗಳಲ್ಲಿಯೇ ತೇಜಸ್ಸು ಇರುತ್ತೆ ಆ ಮಣಿಗಳಲ್ಲಿರುವ ತೇಜಸ್ಸಿಗೇನೆ ಅಭಿವ್ಯಕ್ತವಾಗುವಂತೆ ಮಾಡಿದ್ದಾನೆ ತನ್ನ ಸಾಮರ್ಥ್ಯದಿಂದ.

ಉಪಸ್ಪೃಶ್ಯ ತತೋ ಭೈಮೋ ಮಣಿಸ್ಥಂ ಜಾತವೇದಸಮ್ । (94.12 ವಿಷ್ಣುಪರ್ವ)

ಆ ದಿವ್ಯವಾದ ಮಣಿಗಳಲ್ಲಿರುವ ಅಗ್ನಿ ಇದು ಹೊರಗೆ ಪ್ರಕಾಶಮಾನವಾಗುವಂತೆ ಮಾಡಿದ ಪ್ರದ್ಯುಮ್ನ ಯೋಗ್ಯತೆಯಲ್ಲಿ ದೊಡ್ಡವನು ಹೌದು ಎಂಟನೆಯ ಕಕ್ಷೆಯಲ್ಲಿದ್ದವ, ಅಗ್ನಿ ಚಿಕ್ಕವ ಹದಿನೈದನೆಯ ಕಕ್ಷೆ. ದೊಡ್ಡವರ ಆಜ್ಞೆ ನೀನು ಏಳು ಅಂದರೆ ಏಳಬೇಕು, ಕೂಡು ಅಂದರೆ ಕೂಡಬೇಕು, ಅಭಿವ್ಯಕ್ತನಾಗು ಅಂದರೆ ಅಭಿವ್ಯಕ್ತನಾದ. ಅಲ್ಲಿಯೇ ಆಹುತಿಗಳನ್ನು ಆಹುತಿ ಹಾಕುವುದಕ್ಕೆ ತುಪ್ಪ, ಅಲ್ಲಿ ಹೂವುಗಳಿತ್ತು ಹೂವುಗಳ ಜೊತೆಗೆ ಬಂದಿದ್ದ ಇವನು ಆ ಹೂವುಗಳನ್ನೇ ಆಹುತಿಯಾಗಿ ಹಾಕಿದ್ದಾನೆ ಪುಷ್ಪಗಳನ್ನ, ತುಪ್ಪ ಬೇಕು ಅಂದರೆ ಸಿಗುತ್ತಿರಲಿಲ್ಲ ಅಂತ ಅರ್ಥ ಅಲ್ಲ ಅವನ ಸಂಕಲ್ಪ.

ಜುಹಾವ ಸಮಯೇ ವೀರಃ ಪುಷ್ಪೈರ್ಮನ್ತ್ರಾನುದೀರಯನ್ ॥ (94.12 ವಿಷ್ಣುಪರ್ವ)

ಆ ಪುಷ್ಪಗಳಿಂದಲೇ ಆಹುತಿಯನ್ನು ಹಾಕಿದ, ಪಾಣಿಗ್ರಹಣವನ್ನು ಮಾಡಿಕೊಂಡ ಮದುವೆ ಆಗೇ ಹೋಯಿತು ಈ ರೀತಿ ಪ್ರಭಾವತಿ ಹಾಗೂ ಪ್ರದ್ಯುಮ್ನರ ವಿವಾಹವಾಗಿದೆ. ಆನಂತರದಲ್ಲಿ ವಜ್ರನಾಭನ ತಮ್ಮ ಸುನಾಭ ಅಂತ ಸುನಾಭನಿಗೆ ಇಬ್ಬರು ಮಕ್ಕಳು ಚಂದ್ರವತಿ ಮತ್ತು ಗುಣವತಿ ಅಂತ ಪ್ರಭಾವತಿಗೆ ತಂಗಿಯರು ಚಿಕ್ಕಪ್ಪನ ಮಕ್ಕಳು ಅವರಿಬ್ಬರ ಮದುವೆಯನ್ನೂ ಮಾಡಿಸಬೇಕು, ಅವರಿಬ್ಬರನ್ನು ಯೋಗ್ಯ ವರರಿಗೆ ಕೊಟ್ಟು ಮದುವೆ ಮಾಡಿಸಿ ಬಿಡುವುದು ಒಳ್ಳೆಯದು ಅಂತನ್ನುವ ಆಲೋಚನೆ ಬಂದಿದೆ

ದೇವಾ ಧರ್ಮರತಾ ನಿತ್ಯಂ ದಮ್ಭಶೀಲಾ ಮಹಾಸುರಾಃ । (94.40 ವಿಷ್ಣುಪರ್ವ)

ಪ್ರಭಾವತಿ ಕರೆದು ಹೇಳುತ್ತಾಳೆ ಧರ್ಮವನ್ನು ಆಚರಣೆ ಮಾಡುವವರು ಅಂದರೆ ದೇವತೆಗಳು, ಕೇವಲ ತಮ್ಮ ದೊಡ್ಡಸ್ತಿಕೆಯನ್ನು ಇಲ್ಲದಿದ್ದರೂ ತೋರಿಸಿಕೊಳ್ಳುವವರು ಅಸುರರು.

ದೇವಾಸ್ತಪಸಿ ರಕ್ತಾ ಹಿ ಸುಖೇ ರಕ್ತಾ ಮಹಾಸುರಾಃ ॥ (94.40 ವಿಷ್ಣುಪರ್ವ)

ಯಾವಾಗಲೂ ತಪಸ್ಸಿನಲ್ಲಿ ಆಸಕ್ತರಾದವರು ದೇವತೆಗಳು, ಸ್ವಾರ್ಥದಲ್ಲಿ ಸುಖ ಭೋಗದಲ್ಲಿ ಆಸಕ್ತರಾದವರು ಸ್ವತಃ ಅಸುರರ ಮಗಳಾಗಿ ಈ ಮಾತನ್ನು ಹೇಳುತ್ತಾ ಇದ್ದಾಳೆ ಅಸುರರ ಮಕ್ಕಳಿಗೇನೆ.

ದೇವಾಃ ಸತ್ಯೇ ರತಾ ನಿತ್ಯಮನೃತೇ ತು ಮಹಾಸುರಾಃ ।
ಧರ್ಮಸ್ತಪಶ್ಚ ಸತ್ಯಂ ಚ ಯತ್ರ ತತ್ರ ಜಯೋ ಧ್ರುವಮ್ ॥ (94.41 ವಿಷ್ಣುಪರ್ವ)

ಧರ್ಮ, ತಪಸ್ಸು, ಸತ್ಯ ಮೂರೂ ದೇವತೆಗಳಲ್ಲಿ ಇರಲಿ ನಾವು ಯಾಕೆ ಹೋಗಬೇಕು ಅಂತ ಅನ್ನಬೇಡಿ ಅದು ಇದ್ದಲ್ಲಿಯೇ ಜಯ ಆಗುವುದು. ನಮ್ಮ ಅಸುರರು ನಮಗೆ ಬೇಕಾದಷ್ಟು ಕೊಟ್ಟಿರಬಹುದು ಕೊನೆಗೂ ಅವರು ಸೋಲುವುದು ನಿಶ್ಚಿತ ಅಂಥವರ ಮನೆಯಲ್ಲಿ ಇದ್ದು ನಾವು ಮಾಡುವುದು ಏನು ಇದೆ ಹೋಗೋಣ ದೇವತೆಗಳ ಹತ್ತಿರ ಅಂತ ಅವರ ಅಬ್ಬರ ಮನಸ್ಸನ್ನು ಒಲಿಸಿದ್ದಾಳೆ ಅವರು ಒಪ್ಪಿಕೊಂಡಿದ್ದಾರೆ. ಹಾಗಾದರೆ ಯಾರಿಗೆ ಕೊಟ್ಟು ಮದುವೆ ಮಾಡಬೇಕು ಅಂತ ಪ್ರದ್ಯುಮ್ನನಿಗೆ ಕೇಳಿದ್ದಕ್ಕೆ ಪ್ರದ್ಯುಮ್ನ ಹೇಳುತ್ತಾನೆ ಈ ಚಂದ್ರವತಿಯನ್ನು ಗದ ಅಂದರೆ ಶ್ರೀಕೃಷ್ಣನ ತಮ್ಮ ಪ್ರದ್ಯುಮ್ನನ ಚಿಕ್ಕಪ್ಪ ಅವನಿಗೆ ಚಂದ್ರವತಿಯನ್ನು ಕೊಟ್ಟು ಮದುವೆ ಮಾಡಿದ್ದಾರೆ, ಪ್ರದ್ಯುಮ್ನನ ತಮ್ಮನಾದ ಸಾಂಬನಿಗೆ ಗುಣವತಿಯನ್ನು ಕೊಟ್ಟು ಮದುವೆ ಮಾಡಿದ್ದಾರೆ. ಮೂರು ಜನರ ವಿವಾಹವು ಅಲ್ಲಿ ಆಗಿಹೋಗಿದೆ, ಕೃಷ್ಣನ ತಮ್ಮ ಒಬ್ಬ, ಮಕ್ಕಳಿಬ್ಬರು ಈ ರೀತಿ ಭಗವಂತನ ಸಂಕಲ್ಪದಂತೆ ವಿವಾಹದ ಕಾರ್ಯ ನಡೆದಿದೆ ವಿವಾಹವಾಗಿದೆ. ಇವರ ಜೊತೆಗೆ ತಾವು ಸುಖವಾಗಿ ತಮ್ಮ ತಮ್ಮ ಮಡದಿಯರ ಜೊತೆಗೆ ಇವರು ಇಲ್ಲಿ ಇದ್ದಾರೆ. ಆದರೆ ಇವರು ನಾಟಕದಲ್ಲಿ ಮುಖ್ಯ ಪಾತ್ರ ವಹಿಸುವವರು ಹಿಂದೆ ಕೇಳಿದಿರಿ ಪ್ರದ್ಯುಮ್ನನೇ ನಾಯಕ, ಸಾಂಬ ವಿದೂಷಕ ಇವರೆಲ್ಲ ಅಲ್ಲಿ ಬೇಕು ನಾಟಕದಲ್ಲಿ ಒಂದು ರೂಪದಿಂದ ಅಲ್ಲಿ ನಾಟಕವನ್ನೂ ಮಾಡುತ್ತಾ ಇದ್ದಾರೆ, ಒಂದು ರೂಪದಿಂದ ಒಳಗೂ ಇದ್ದಾರೆ ಆ ನಾಟಕಗಳು ನಡೆಯುತ್ತ ಇವೆ ಇನ್ನೂ ಊರುರುಗಳಲ್ಲಿ ಹಾಗೇನೆ. ಇಡೀ ಒಂದು ಅಧ್ಯಾಯದವರೆಗೆ ಪ್ರದ್ಯುಮ್ನ ಅನೇಕ ಆ ಪ್ರಭಾವತಿಯ ವರ್ಣನೆಯನ್ನು ಮಾಡುತ್ತಾನೆ, ಈ ಯದುಕುಲದ ವರ್ಣನೆಯನ್ನು ಮಾಡುತ್ತಾನೆ ಎಂತಹ ಯದುವಂಶ, ಯದುಕುಲವನ್ನು ನೀನು ಸೇರಿದ್ದೀ ನೀನು ಕೈ ಹಿಡಿದು ಯಾವ ಮನೆಗೆ ಬಂದಿದ್ದಿ ಅದರ ಮಹತ್ವ ಏನು ಅಂತ ಬಹಳ ಸುದೀರ್ಘವಾಗಿ ವರ್ಣನೆ ಮಾಡಿ ಕೊನೆಗೆ ಒಂದು ಮಾತನ್ನು ಹೇಳುತ್ತಾನೆ.

ವಂಶೇ ವಧೂಸ್ತ್ವಂ ಕಮಲಾಯತಾಕ್ಷಿ ಶ್ಲಾಘ್ಯಾ ಗುಣಾನಾಮತಿಪಾತ್ರಭೂತಾ ।
ಕುರು ಪ್ರಣಾಮಂ ಶಿಖರಾಗ್ರದನ್ತಿ ತಸ್ಯ ತ್ವಮೀಶಸ್ಯ ಸತಾಂ ಪ್ರಿಯಸ್ಯ ॥ (95.38 ವಿಷ್ಣುಪರ್ವ)

ನಾರಾಯಣಾಯಾತ್ಮಭವಾಯನಾಯ ಲೋಕಾಯನಾಯ ತ್ರಿದಶಾಯನಾಯ ॥
ಖಗೇನ್ದ್ರ ಕೇತೋಃ ಪುರುಷೋತ್ತಮಾಯ ಕುರು ಪ್ರಣಾಮಂ ಶ್ವಶುರಾಯ ದೇವಿ ॥ (95.39 ವಿಷ್ಣುಪರ್ವ)

ಸಕಲ ಜಗನ್ನಿಯಾಮಕನಾದ ಸರ್ವೋತ್ತಮನಾದ ಶ್ರೀಹರಿಯೇ ನಿನ್ನ ಮಾವ ನಾವಿಬ್ಬರೂ ಇಲ್ಲಿ ಏಕಾಂತದಲ್ಲಿ ಗಾಂಧರ್ವ ವಿವಾಹ ಮಾಡಿಕೊಂಡಿದ್ದೀವಿ ಮೊಟ್ಟ ಮೊದಲನೆಯ ಕೆಲಸ ನಿನ್ನ ಮಾವನಿಗೆ ಅನಂತ ಪ್ರಣಾಮಗಳನ್ನು ಮನಸಾ ಸಲ್ಲಿಸು ಈಗಲೇನೆ. ಆಮೇಲೆ ನೇರವಾಗಿ ಪ್ರತ್ಯಕ್ಷವಾಗಿ ಪ್ರಣಾಮವನ್ನು ಮಾಡು ಆದರೆ ಈಗ ಮೊದಲು

ಅವನಿಗೆ ಪ್ರಣಾಮವನ್ನು ಮಾಡು ಅಂತಹ ದೊಡ್ಡ ಭಾಗ್ಯ ನಿನಗೆ ಇದೆ ಅಂತ ತಿಳಿಸಿಕೊಟ್ಟಿದ್ದಾನೆ ಈ ರೀತಿ ಈ ಕಡೆಗೆ ನಡೆಯುತ್ತ ಇದೆ.

ವಜ್ರನಾಭನಿಗೆ ನೆನಪಾಯಿತು ಪ್ರಾಯಃ ಕಶ್ಯಪರ ಯಜ್ಞ ಮುಗಿದಿರಬಹುದು ಹೋಗಿ ಒಂದು ಮಾತು ಕೇಳಿ ಬಿಡೋಣ ನಮ್ಮಿಬ್ಬರ ಇಂದ್ರ ಮತ್ತು ನಮ್ಮಿಬ್ಬರ ಮಧ್ಯದಲ್ಲಿ ಹೇಗೆ ಆಸ್ತಿ ವಿಭಾಗ ಮಾಡುತ್ತಾರೆ ಅಂತ ಹೋಗಿ ಕೇಳಿದ. ಕಶ್ಯಪರು ಆಮೇಲೆ ಬಾ ಅಂತ ಸನ್ನೆ ಮಾಡಿ ಕಳಿಸಿದ್ದರು ಅಷ್ಟೇ ಏನೋ ಕೊಡುತ್ತಾರೆ ಏನೋ ಅಂತ ಇವನು ಹೋದರೆ ಅವರು ಉಪದೇಶ ಮಾಡಿಬಿಟ್ಟರು. ಇಂದ್ರ ದೇವರು ಮಹಾಪರಾಕ್ರಮಿ ನಿನಗೆ ಜ್ಯೇಷ್ಠ, ಗುಣಗಳಿಂದಲೂ ಜ್ಯೇಷ್ಠ, ವಯಸ್ಸಿನಿಂದಲೂ ಜ್ಯೇಷ್ಠ, ತಪಸ್ಸಿನಿಂದಲೂ ಉತ್ತಮ,

ತಪಸಾಭ್ಯಧಿಕಃ ಶಕ್ರಃ ಶಕ್ತಶ್ಚೈವ ಸ್ವಭಾವತಃ ।
ಬ್ರಹ್ಮಣ್ಯಶ್ಚ ಕೃತಜ್ಞಶ್ಚ ಜ್ಯೇಷ್ಠಃ ಶ್ರೇಷ್ಠತಮೋ ಗುಣೈಃ ॥ (96.4 ವಿಷ್ಣುಪರ್ವ)

ಅಂತಹ ಸಕಲಗುಣ ಸಂಪನ್ನನಾದಂತಹ ಇಂದ್ರನಿಗೇನೆ ಈ ತ್ರೈಲೋಕ್ಯವನ್ನ ಆಳುವ ಯೋಗ್ಯತೆ ನಿನ್ನದಲ್ಲನಿನ್ನ ಯೋಗ್ಯತೆ ಇಲ್ಲದೇ ಇದದ್ದನ್ನ ಅಪೇಕ್ಷೆ ಪಡಬೇಡ.

ಅಯೋಗ್ಯಮಿಚ್ಛನ್ ಪುರುಷಃ ಪತತ್ಯೇವ ನ ಸಂಶಯಃ ॥ (1.94 ಮಭಾತಾನಿರ್ಣಯ)

ಯೋಗ್ಯತೆ ಇಲ್ಲದೆ ಇದದ್ದನ್ನ ಅಪೇಕ್ಷೆ ಪಟ್ಟರೆ ಮತ್ತೆ ನಿನಗೆ ಒಳ್ಳೆಯದಾಗುವುದಿಲ್ಲ ಮರಣವನ್ನು ಹೊಂದಬೇಕಾಗುತ್ತದೆ ಯಾಕೆ ಅಂತಹ ದುಸ್ಸಾಹಸವನ್ನು ಮಾಡುತ್ತೀಯಾ. ಬ್ರಹ್ಮ ದೇವರು ವರ ಕೊಟ್ಟಿದ್ದಾರಲ್ಲ ಇನ್ನೇನು ಬೇಕು ನಿನಗೆ ಅವಧ್ಯನಾಗಿ ಅಭೇಧ್ಯವಾದ ಗಾಳಿಯೂ ಪ್ರವೇಶ ಮಾಡಲೂ ಸಾಧ್ಯವಿಲ್ಲದೇ ಇರುವಂತಹ ಶ್ರೇಷ್ಠವಾದ ನಿನ್ನ ವಜ್ರಪುರ ಅಂತ ಹೇಳಿ ಕೊಳ್ಳುತ್ತೀಯಾ ನಿನ್ನ ಅಪೇಕ್ಷೆ ಇದ್ದರೆ ಮಾತ್ರ ಪ್ರವೇಶ ಮಾಡಬಹುದು ಅಂತ ಅನ್ನುವುದಕ್ಕೇನೆ ಹಿಂದಿನ ಕಥೆಯಲ್ಲಿ ಆ ನಟನ ಒಂದು ಕಾರಣ ಹೇಳಿ ಬರಬೇಕು ಎಲ್ಲ ನಟರು ಅಂತ ಅವನೇ ಹೇಳಿದ್ದಕ್ಕೆ ನಟರೆಲ್ಲ ನಟರ ವೇಷದಲ್ಲಿ ಯಾದವರು ಪ್ರವೇಶ ಮಾಡಿಲಿಕ್ಕೆ ಆಯಿತು. ಹೂವಿನ ಮಾಲೆಯನ್ನು ಮಕ್ಕಳಿಗೆ ತಂದು ಕೊಡಬೇಕು ಅಂತ ಅವನ ಅಪೇಕ್ಷೆ ಇದೆ ಅನ್ನುವುದಕ್ಕೇನೆ ಮಾಲೆ ಎಂದರೆ ಮಾಲೆಯ ಜೊತೆಗೆ ಭ್ರಮರಗಳು ಬಂದೇ ಬರುತ್ತವೆ ಅನ್ನುವುದಕ್ಕೆ ಇವನಿಗೆ ಭ್ರಮರದ ರೂಪದಲ್ಲಿ ಇವನಿಗೆ ಪ್ರವೇಶ ಮಾಡಲಿಕ್ಕೆ ಆಯಿತು ಯಾಕೆ ಅಂದರೆ ಅವನ ಅಪೇಕ್ಷೆಯಂತೆ ಯಾರಾದರೂ ಬರಬಹುದು, ಅಪೇಕ್ಷೆ ಇಲ್ಲದೆ ಯಾರೂ ಬರುವ ಹಾಗೆ ಇಲ್ಲ ಅವನು ಅಪೇಕ್ಷೆ ಪಟ್ಟವರೊಳಗೇನೆ ಒಬ್ಬರಾಗಿ ಯಾದವರು ಹೋಗಿದ್ದಾರೆ ಈಗ, ಇದು ಬ್ರಹ್ಮ ದೇವರ ವರ ಅವನಿಗೆ ಇದ್ದದ್ದು. ಇಷ್ಟೆಲ್ಲಾ ನಿನಗೆ ಇದ್ದಾಗ ಯಾಕಪ್ಪ ಹೆದರುತ್ತೀಯ ನೀನು ಸುಮ್ಮನೆ ಸುಖವಾಗಿ ಇದ್ದು ಬಿಡು ಪಾಲಿಗೆ ಬಂದದ್ದೆ ಪಂಚಾಮೃತ ಅಂತ ತಿಳಿದುಕೋ ಅಂತ ಅದು ಅವನಿಗೆ ಇಷ್ಟವಾಗಲಿಲ್ಲ ಯುದ್ಧಕ್ಕೆ ಸಿದ್ದನಾಗಿದ್ದಾನೆ. ಆಗ ಶ್ರೀಕೃಷ್ಣ ಪರಮಾತ್ಮ, ಇಂದ್ರ ನಿಶ್ಚಯ ಮಾಡಿದ್ದಾರೆ ಇಂದ್ರನ ಪ್ರಾರ್ಥನೆಯಂತೆ ಯುದ್ಧ ಮಾಡಬೇಕು ಅಂತ ನಿಶ್ಚಯ ಮಾಡಿ ತನ್ನ ಸೈನ್ಯವನ್ನ ಯಾದವರನ್ನ ನಟರ ವೇಷದಲ್ಲಿ ಈಗಾಗಲೇ ಕಳಿಸಿ ಆಗಿದೆ ಇನ್ನು ಯುದ್ಧದ ಪ್ರಾರಂಭ ಮಾಡಬೇಕು ಅಷ್ಟೇ ಯುದ್ಧದ ಘೋಷಣೆಯನ್ನು ಮಾಡಿಬಿಟ್ಟ ಕೃಷ್ಣ. ಯುದ್ಧ ಮಾಡುವುದು ಅಂತ ಆ ಪಕ್ಷಿಗಳ ಮೂಲಕ ನಟರ ವೇಷದಲ್ಲಿರುವ ಯಾದವರಿಗೆ ಸುದ್ದಿಯನ್ನು ಮುಟ್ಟಿಸಿದ ಯುದ್ಧ ಪ್ರಾರಂಭ ಮಾಡಬೇಕು ಇನ್ನು ಅಂತ. ಪ್ರದ್ಯುಮ್ನ, ಸಾಂಬ, ಗದ ಗದಗದ ನಡುಗುತ್ತಾ ಇದ್ದಾರೆ ಯಾಕೆ ಈ ಅಸುರನ ಭಯಕ್ಕಲ್ಲ ಅವರು ಮದುವೆ ಮಾಡಿಕೊಂಡು ಬಿಟ್ಟಿದ್ದಾರೆ, ಮೂರೂ ಜನರ ಪತ್ನಿಯರೂ ಕೂಡ ಗರ್ಭಿಣಿಯರು ಇನ್ನೇನು ಪ್ರಸವ ಆಗಬೇಕು ಈಗ

ನೀನು ಯುದ್ಧದ ಘೋಷಣೆ ಮಾಡಿದರೆ ಗತಿ ಏನು ಅಂದರು ಅವರ ಗತಿ ಏನು. ಕೂಡಲೇ ಹಂಸ ಪಕ್ಷಿಗಳು ಕೃಷ್ಣನಿಗೆ ಸಂದೇಶ ಮುಟ್ಟಿಸಿವೆ ಕೃಷ್ಣ ಮತ್ತೆ ಉತ್ತರ ಕೊಡುತ್ತಾನೆ.

ಉತ್ಪತ್ಸ್ಯನ್ತಿ ಗುಣೈಃ ಶ್ಲಾಘ್ಯಾಃ ಪುತ್ರಾ ವಃ ಕಾಮರೂಪಿಣಃ ।
ಗರ್ಭಸ್ಥಾಃ ಸರ್ವವೇದಾಂಶ್ಚ ಸಾಙ್ಗಾನ್ ವೇತ್ಸ್ಯನ್ತನಿನ್ದಿತಾಃ ॥ (96.16 ವಿಷ್ಣುಪರ್ವ)

ಅದಕ್ಕೋಸ್ಕರ ಯುದ್ಧ ಬೇಡ ಅಂತ ಅನ್ನಬೇಡಿ ನನ್ನ ಅನುಗ್ರಹ ಇದೆ ಉತ್ತಮವಾದಂತಹ ಶಡಂಗ ಸಹಿತ ಸಕಲ ವೇದಗಳನ್ನ ತಿಳಿದ ಮಹಾಪಂಡಿತರು ಮಕ್ಕಳಾಗಿ ಹುಟ್ಟುತ್ತಾರೆ. ಈ ಯುದ್ಧದಿಂದ ಅವರಿಗೆ ಏನೂ ತೊಂದರೆ ಆಗುವುದಿಲ್ಲ ಇದರ ಪಾಡಿಗೆ ಇದು ಅದರ ಪಾಡಿಗೆ ಅದು ಯಾವ ತೊಂದರೆಯೂ ಇಲ್ಲ.

ಸತ್ಯನಾಥ ಮಹಾತ್ಮ್ಯ ರತ್ನಾಕರದಲ್ಲಿ ಗುರುಗಳ ಸ್ಮರಣೆಯ ಮಹತ್ವವನ್ನು ಹೇಳುತ್ತಾ ಸತ್ಯಾಧನವರು ಒಂದು ಕಡೆಗೆ ಹೇಳುತ್ತಾರೆ ಸಾಂಗ್ಲಿಯಲ್ಲಿ ಇರುವಾಗ ಅವರು ಮಹಾಸಮಾರಾಧನೆಯನ್ನು ಮಾಡುತ್ತ ಇದ್ದರೆ ಆ ಸಂದರ್ಭದಲ್ಲಿ ದೊಡ್ಡದಾದ ಯುದ್ಧ ಆಗುತ್ತದೆ. ಯಾರು ಭಕ್ತರು ಶ್ರೀಮಠದ ಭಕ್ತರು ಗುರುಗಳ ದರ್ಶನಕ್ಕೆ ತೀರ್ಥ ಪ್ರಸಾದಕ್ಕೆ ಅಂತ ಬಂದಿರುತ್ತಾರೆ ಅದರಲ್ಲಿ ಎಷ್ಟೋ ಜನ ಸೈನಿಕರಿದ್ದರು ಅವರೆಲ್ಲರೂ ಯುದ್ಧಕ್ಕೆ ಎದ್ದು ಹೋಗುವ ಪ್ರಸಂಗ ಬರುತ್ತದೆ. ದೂರದಲ್ಲಿ ಯುದ್ಧ ನಡೆಯುತ್ತ ಇದೆ ಘೋರವಾದ ಯುದ್ಧ ಈ ಕಡೆಗೆ ದೇವರ ಪೂಜೆ ಆಯಿತು, ತೀರ್ಥ ಪ್ರಸಾದ ಆಯಿತು ವರ್ಣನೆ ಮಾಡುತ್ತಾರೆ ಕಾವ್ಯದಲ್ಲಿ ಆಕಂಠ ಥಠಂ ಅಂತ ಕುತ್ತಿಗೆಯವರೆಗೆ ಊಟ ಮಾಡಿದರಂತೆ ಅಂದರೆ ಯುದ್ಧವನ್ನು ಒಂದು ನಾಟಕ ನೋಡಿದಂತೆ ನೋಡುತ್ತಾ ಊಟ ಮಾಡಿದ್ದಾರೆ. ಯುದ್ಧ ಮುಗಿದ ಮೇಲೆ ಅವರೆಲ್ಲರೂ ಬಂದು ಕೈಕಾಲು ತೊಳೆದು ಸ್ನಾನ ಮಾಡಿ ಬಂದು ಅವರೂ ಊಟ ಮಾಡಿದ್ದಾರೆ. ಹೇಳುವ ತಾತ್ಪರ್ಯ ಅಂತಹ ಗುರುಗಳು ಇದ್ದರೇನೆ ಎಂತಹ ಯುದ್ಧ ಇದ್ದರೂ ಯಾವುದೇ ರೀತಿಯ ತೊಂದರೆ ಆಗುವುದಿಲ್ಲ, ಜಗದ್ಗುರುವಾದ ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮ ಅಲ್ಲಿ ಸನ್ನಿಹಿತನಾಗಿ ಅನುಗ್ರಹವನ್ನು ಮಾಡಿ ಹೇಳುತ್ತಾ ಇದ್ದಾನೆ ಈ ಯುದ್ಧದಿಂದ ನಿಮಗೆ ಏನು ಸಮಸ್ಯೆ ಆಗುವುದಿಲ್ಲ ಅಂತ. ಅಷ್ಟು ಮಾತ್ರ ಅಲ್ಲ ಇನ್ನು ಆ ಮಕ್ಕಳನ್ನ ಆಟ ಆಡಿಸುವುದು, ಅವರನ್ನು ಬೆಳೆಸುವುದು, ಅವರನ್ನು ಬೇರೆ ಕಡೆ ಅದನ್ನು ಚಿಂತನೆ ಮಾಡಬೇಡಿ. ಹುಟ್ಟಿದ್ದೇ ತಡ ಅವರು ಯುವಕರಾಗಿ ನಿಮ್ಮ ಜೊತೆಗೆ ಯುದ್ಧಕ್ಕೆ ಬರುತ್ತಾರೆ ಅಂತ ಪರಮಾತ್ಮ ಹೇಳಿದ್ದೇ ತಡ ಪ್ರಭಾವತಿ ಶ್ರೇಷ್ಯನಾದ ಯುವಕನಾದ ಸರ್ವಜ್ಞನಾದಂತಹ ಮಗನನ್ನೇ ಪಡೆದಿದ್ದಾಳೆ ಅವನ ಹೆಸರನ್ನು ಮಾತ್ರ ಉಲ್ಲೇಖ ಮಾಡಲಿಲ್ಲ, ಗದನ ಹೆಂಡತಿ ಚಂದ್ರವತಿ ಚಂದ್ರಪ್ರಭ ಎಂಬ ಮಗನನ್ನ ಪಡೆದಿದ್ದಾಳೆ, ಸಾಂಬನ ಹೆಂಡತಿ ಗುಣವತಿ ಗುಣವಾನ್ ಎಂಬ ಮಗನನ್ನ ಪಡೆದಿದ್ದಾಳೆ. ಮುರೂ ಜನ ಯುವಕರಾಗಿ, ಸರ್ವಜ್ಞರಾಗಿ, ಧನುರ್ವಿದ್ಯೆಯಲ್ಲಿಯೂ ಪಾರಂಗತರಾಗಿ ಇವರ ಜೊತೆಗೆ ಎಲ್ಲಿದ್ದಾರೆ ಶತ್ರುಗಳು ಯಾವಾಗ ಯುದ್ಧ ಅಂತ ಕೇಳುತ್ತಾನೆ ಹೊರಗೆ ಬಂದಿದ್ದಾರೆ ಹೀಗೆ ಯುದ್ಧ ಪ್ರಾರಂಭವಾಗಿದೆ ಘೋರವಾಗಿರುವಂತಹ ಯುದ್ಧ. ಈ ಮೂರು ಜನ ಮಡದಿಯರೂ ಕೂಡ ಪ್ರದ್ಯುಮ್ನನ ಮಡದಿ ಹಾಗೂ ಸಾಂಬ, ಗದ ತಮ್ಮ ತಮ್ಮ ಪತಿಯರಿಗೆ ಅತ್ಯಂತ ಪ್ರೀತಿಯಿಂದ ಆಯುಧಗಳನ್ನು ಕೊಟ್ಟಿದ್ದಾರೆ.

ಆಯುಧಗಳನ್ನು ಕೊಡುವಾಗ ಹೇಳುತ್ತಾರೆ ದುರ್ವಾಸರು ವಿಶೇಷವಾಗಿ ಅನುಗ್ರಹ ಮಾಡಿ ನಮಗೆಲ್ಲ ಮಂತ್ರಗಳನ್ನು ಕೊಟ್ಟಿದ್ದು ಅವರ ಅನುಗ್ರಹದಿಂದ ಇದನ್ನು ಕೊಡುತ್ತ ಇದ್ದೇವೆ ಅಂತ ಹೇಳಿ ಜಯವನ್ನು ದೇವರಲ್ಲಿ ಪ್ರಾರ್ಥಿಸಿ ಮಡದಿಯರೇ ಯುದ್ಧಕ್ಕಾಗಿ ತಮ್ಮ ತಮ್ಮ ಅಣ್ಣ ತಮ್ಮಂದಿರನ್ನ, ತಂದೆ ಚಿಕ್ಕಪ್ಪ ಇವರೆಲ್ಲರನ್ನ ಸಂಹಾರ ಮಾಡುವುದಕ್ಕೆ ತಾವೇ ಆಯುಧಗಳನ್ನು ಕೊಡುತ್ತಾ ಇದ್ದಾರೆ. ಅಂದರೆ ನಿಜವಾದ ಸಜ್ಜನಿಕೆ ಒಳಗಿದ್ದರೆ ಎಂತಹ ಬಂಧುಗಳೇ ಇರಲಿ, ಬಳಗವೇ ಇರಲಿ ಅವರಲ್ಲಿ ದೌರ್ಜನ್ಯ ಇದ್ದರೆ, ದುರ್ಗುಣಗಳಿದ್ದರೆ, ದೋಷಗಳಿದ್ದರೆ ಅವುಗಳು

ಮಾನ್ಯವಾಗುವುದಿಲ್ಲ ಅಂತ ಇದರಿಂದ ತಿಳಿದು ಬರುತ್ತದೆ.

ಆ ರೀತಿ ಯುದ್ಧಕ್ಕೆ ಸಿದ್ಧರಾಗಿ ಹೊರಟಿದ್ದಾರೆ. ಪ್ರದ್ಯುಮ್ನ ತನ್ನ ಸಾರಥಿ ಹಂಸಕೇತುವಿಗೆ ಹೇಳಿದ ನೀನು ನನ್ನ ಜೊತೆಗೆ ಬರುವುದಕ್ಕೆ ಆಗುವುದಿಲ್ಲ ನೀನು ಇಲ್ಲಿಯೇ ಸಾಂಬ, ಗದ ಇವರ ಜೊತೆಗೆ ಇಲ್ಲಿಯೇ ಇದ್ದು ಯುದ್ಧ ಆಡು ನಾನು ಆಕಾಶ ಮಾರ್ಗದಲ್ಲಿ ನಾಗನನ್ನ ಸಹಸ್ರ ಶಿರಸ್ಸುಗಳಿಂದ ಕೂಡಿದ ನಾಗನನ್ನು ಸಾರಥಿಯಾಗಿ ಮಾಡಿಕೊಂಡು ನಾನು ಆಕಾಶ ಮಾರ್ಗದಲ್ಲಿ ಯುದ್ಧವನ್ನು ಮಾಡುತ್ತೇನೆ ಅಂತ ಅವನು ಯುದ್ಧವನ್ನು ಮಾಡುತ್ತಾ ಇದ್ದಾನೆ ಪ್ರದ್ಯುಮ್ನ. ಇಂದ್ರ ದೇವರು ಈ ಗದ, ಸಾಂಬನಿಗೋಸ್ಕರ ಗದನಿಗೆ ತನ್ನ ರಥವನ್ನೇ ಕೊಟ್ಟು ಕಳಿಸಿದ್ದಾನೆ ಮಾತಲಿಯ ಮಗನಾದ ಸುವರ್ಚಸ್ ಅನ್ನುವನನ್ನು ಕೊಟ್ಟುಕಳಿಸಿದ್ದಾನೆ ಸಾರಥಿಯಾಗಿ. ಆ ಇಂದ್ರ ದೇವರ ರಥದಲ್ಲಿ ಸುವರ್ಚಸ್ ಎಂಬ ಸಾರಥಿಯನ್ನು ಇಟ್ಟುಕೊಂಡು ಗದ ಯುದ್ಧವನ್ನು ಮಾಡುತ್ತ ಇದ್ದಾನೆ, ಸಾಂಬನಿಗೆ ಐರಾವತ ಐರಾವಣ ಅಂತ ಹೇಳುತ್ತಾರೆ ಐರಾವಣ ಆನೆಯನ್ನೇ ಕಳಿಸಿಕೊಟ್ಟಿದ್ದಾನೆ ಈ ರೀತಿ. ಇನ್ನು ಈ ಪ್ರದ್ಯುಮ್ನನಿಗೆ ರಥ ಏನೂ ಬೇಕಿಲ್ಲ ಅವನು ನಾಗನನ್ನ ಸಾರಥಿಯಾಗಿ ಇಟ್ಟುಕೊಂಡು ತನ್ನ ದಿವ್ಯವಾದ ರಥವನ್ನು ತೆಗೆದುಕೊಂಡು ಓಡಾಡುತ್ತಾ ಇದ್ದ ಆದರೆ ಸಹಾಯಕ್ಕಾಗಿ ತನ್ನ ಮಗ ಜಯಂತನನ್ನ ಮತ್ತು ಆ ಬ್ರಾಹ್ಮಣನಾದ ಪ್ರವರನನ್ನ ಕೊಟ್ಟು ಕಳಿಸಿದ್ದಾನೆ. ಹೀಗೆ ಇಂದ್ರ ಈ ಮೂರು ಜನರಿಗೂ ಸಹಾಯಕ್ಕಾಗಿ ವಾಹನಗಳನ್ನು ಹಾಗೂ ಸಹಾಯಕರನ್ನು ಕೊಟ್ಟುಕಳಿಸಿದ ಯುದ್ಧ ನಡೆಯುತ್ತ ಇದೆ.

ಇನ್ನೇನು ವಜ್ರನಾಭನನ್ನ ಸಂಹಾರ ಮಾಡಿಬಿಡೋಣ ಅನ್ನುವುದರೊಳಗೆ ಸ್ವಲ್ಪ ತಡೆಯಿರಿ ಅಂತ ಹೇಳಿದ ಪ್ರದ್ಯುಮ್ನ ಸಾಂಬ, ಗದರಿಗೆ ನಮ್ಮ ಅಪ್ಪ ಕೃಷ್ಣ ಬರಲಿ ಕೃಷ್ಣನ ಆಜ್ಞೆಯನ್ನು ತೆಗೆದುಕೊಂಡು ಆಮೇಲೆ ಸಂಹಾರ ಮಾಡೋಣ. ಸುಮ್ಮನೆ ಯುದ್ಧ ಆಡುತ್ತಾ ಇರೋಣ ಆಟ ಆಡುತ್ತಾ ಇರೋಣ ಅವನ ಜೊತೆಗೆ ಅಂತ ಏನು ಆಟ ಆಡುವುದು ಯುದ್ಧದಲ್ಲಿ ಏನು ಆಟ ಆಡುವುದು ನಾನು ಮಾಡುತ್ತೇನೆ ನೋಡಿ ಅಂದರು. ಏನು ಮಾಡಿದ್ದಾನೆ ಇದ್ದಕ್ಕಿದ್ದಂತೆ ಕೋಟಿ ಕೋಟಿ ರೂಪಗಳನ್ನು ತೆಗೆದುಕೊಂಡಿದ್ದಾನೆ ಆ ನಿಕುಂಭ ಮಾಡಿದ್ದನಲ್ಲ ಹಾಗೆ ಸ್ವಯಂ ಪ್ರದ್ಯುಮ್ನ ಕೋಟಿ ಪ್ರದ್ಯುಮ್ನರು ಯಾರು ನಿಜವಾದ ಪ್ರದ್ಯುಮ್ನ ಗೊತ್ತಿಲ್ಲದಂತೆ ಯುದ್ಧ ಮಾಡುತ್ತಾ ಇದ್ದಾರೆ. ಆ ಪ್ರದ್ಯುಮ್ನ ಅಲ್ಲವೇ ಅಲ್ಲ ಮಾಯಾ ಪ್ರದ್ಯುಮ್ನರ ಜೊತೆಗೆ ಕೋಟಿ ಕೋಟಿ ಪ್ರದ್ಯುಮ್ನರು ಅವರ ಜೊತೆಗೆ ಯುದ್ಧ ಮಾಡುತ್ತಾ ಇದ್ದಾರೆ ಹೀಗೆ ಕಾಲವನ್ನು ಕಳೆಯುತ್ತಾ ಇದ್ದಾರೆ. ಎಷ್ಟು ವಿಚಿತ್ರ ನೋಡಿ ಎಲ್ಲ ಉಪನಯನವನ್ನು ಮಾಡಿಕೊಂಡಂತಹ ಸಜ್ಜನರೆಲ್ಲ ತಿಳಿದುಕೊಳ್ಳಬೇಕು ತೈವರ್ಣಿಕರು ಸಂಧ್ಯಾವಂದನದ ಮಹತ್ವ ಎಷ್ಟಿದೆ ಅಂತ. ಇದು ಇಷ್ಟು ಘೋರವಾದ ಯುದ್ಧ, ತಾನು ಕೋಟಿ ರೂಪಗಳನ್ನು ತೆಗೆದುಕೊಂಡು ಯುದ್ಧ ಮಾಡುತ್ತ ಇದ್ದಾನೆ ಅವರೆಲ್ಲ ಕಂಗಾಲಾಗಿದ್ದಾರೆ. ಮಾಯಾವಿಗಳಾದ ಅಸುರರಿಗೂ ಅತ್ಯಂತ ಆಶ್ಚರ್ಯವಾಗುವ ರೀತಿಯ ಮಾಯೆಯನ್ನು ಸೃಷ್ಟಿ ಮಾಡಿದ್ದಾನೆ ಆದರೆ ಇಂತಹ ಸಂದರ್ಭದಲ್ಲಿ ಸಂಧ್ಯಾವಂದನದ ಚಿಂತೆ ಸಾಯಂಕಾಲ ಆಗುತ್ತ ಬಂತು ಸಂಧ್ಯಾವಂದನ ಆಗಬೇಕು ಸಂಧ್ಯಾವಂದನ ಇಲ್ಲದೆ ಹೇಗೆ ನಡೆಯುವುದು ಅಂತ ಯುದ್ಧ ನಿಲ್ಲಿಸುವ ಹಾಗಿಲ್ಲ ಅದಕ್ಕೋಸ್ಕರ ಆ ಸಂದರ್ಭದಲ್ಲಿ ಪರ್ಯಾಯ ಮಾಡಿಕೊಂಡಿದ್ದಾರೆ.

ಯಾವದ್ವಿಯೋಧಯಾಮಾಸ ಕಾರ್ಷ್ಣಿರ್ದೈತ್ಯಾನ್ ರಣಾಜಿರೇ ॥ (96.69 ವಿಷ್ಣುಪರ್ವ)

ಕಾರ್ಷ್ಣಿ ಪ್ರದ್ಯುಮ್ನ ಯುದ್ಧವನ್ನು ಮಾಡುತ್ತಾ ಇರುವಾಗ ಜಯಂತ ಓಡಿ ಹೋಗಿ ಸಂಧ್ಯಾವಂದನೆಯನ್ನು ಮಾಡಿಕೊಂಡು ಬಂದ ಗಂಗೆಯಲ್ಲಿ. ಆಮೇಲೆ ಜಯಂತ ಇಲ್ಲಿ ಬಂದು ಯುದ್ಧ ಮಾಡುತ್ತಾ ಇರುವಾಗ ಪ್ರದ್ಯುಮ್ನ ಓಡಿದ ಗಂಗೆಗೆ ಸಂಧ್ಯಾವಂದನೆಗೆ.



ಅಯೋಧಯಜ್ಜನ್ತಶ್ಚ ಯಾವದ್ಭೈತ್ಯಾನ್ ಮಹಾಬಲಃ ।

ತಾವದಾಕಾಶಗಙ್ಗಾಯಾಂ ಭೈಮಃ ಸಂಧ್ಯಾಮುಪಾಸ್ತವಾನ್ ॥ (96.70 ವಿಷ್ಣುಪರ್ವ)

ಸುಲಭವಾಗಿ ಏನು ಯುದ್ಧ ಇಲ್ಲ ಏನು ಇಲ್ಲ ಹರಟೆ ಹೊಡೆಯುತ್ತಾ ಮನೆಯಲ್ಲಿ ಕುಳಿತಿರುತ್ತಾರೆ. ಸಂಧ್ಯಾವಂದನದ ಸಮಯವಾದರೆ ಸಂಧ್ಯಾವಂದನೆ ಮಾಡುವುದಿಲ್ಲ ಇಂತಹ ಯುದ್ಧದ ಪ್ರಸಂಗದೊಳಗೂ ಮಹಾನುಭಾವರಾದ ಆ ಪ್ರದ್ಯುಮ್ನ, ಗದ, ಜಯಂತರು ಸಂಧ್ಯಾವಂದನವನ್ನು ತಪ್ಪಿಸಿಲ್ಲ ಅಂದರೆ ಎಂತಹ ದೊಡ್ಡ ಆದರ್ಶವನ್ನು ಜಗತ್ತಿಗೆ ಕೊಡುತ್ತ ಇದ್ದಾರೆ. ಮಹಾಭಾರತದ ಯುದ್ಧದ ಸಂದರ್ಭದಲ್ಲಿಯೂ ಇದನ್ನು ಹೇಳುತ್ತಾರೆ ಸಂಧ್ಯಾಕಾಲ ಯಾವ ಸಂದರ್ಭದಲ್ಲಿ ಪ್ರಾತಃಸಂಧ್ಯಾ ಇರಬಹುದು ಸಂಜೆಸಂಧ್ಯಾ ಇರಬಹುದು ಮಧ್ಯಾಹ್ನ ಸಂಧ್ಯಾ ಇರಬಹುದು ಆ ಆ ಕಾಲ ಬಂದಾಗ ಸಂಧ್ಯಾವಂದನ ಆಗಲೇಬೇಕು. ಯುದ್ಧ ನಡೆಯುತ್ತ ಇದ್ದರೂ ಅದನ್ನು ನಿಲ್ಲಿಸಿ ಕೆಲವು ಸಂದರ್ಭಗಳಲ್ಲಿ ಎಲ್ಲರೂ ಒಪ್ಪಂದದಿಂದ ಯುದ್ಧವನ್ನೇ ನಿಲ್ಲಿಸಿ ಸಂಧ್ಯಾವಂದನ ಮಾಡಿದ್ದುಂಟು. ಇನ್ನು ಕೆಲವು ಸಂದರ್ಭಗಳಲ್ಲಿ ಸಂಧ್ಯಾವಂದನ ಮಾಡುವ ಒಪ್ಪಿಗೆಯೂ ಇಲ್ಲದೇ ಇದ್ದವರು ಇರುತ್ತಾರಲ್ಲ ಕೆಲವರು ಅಂತಹ ಸಂದರ್ಭದಲ್ಲಿ ಯುದ್ಧಕ್ಕೆ ಮತ್ತೊಬ್ಬರನ್ನು ನಿಲ್ಲಿಸಿ ತಾವು ಸಂಧ್ಯಾವಂದನೆಯನ್ನು ಮುಗಿಸಿ ಬಂದು ಯುದ್ಧವನ್ನು ಮುಂದುವರಿಸಿದ ಒಂದು ದೊಡ್ಡ ಆದರ್ಶವನ್ನು ನಮಗೆ ಇಲ್ಲಿ ತೋರಿಸುತ್ತ ಇದ್ದಾರೆ ಎಂಥಹ ಪ್ರಸಂಗದಲ್ಲಿಯೂ ಸಂಧ್ಯಾವಂದನವನ್ನು ಬಿಡಬಾರದು ಅನ್ನುವ ಒಂದು ಸಂದೇಶವನ್ನು ಇದರಿಂದ ನಾವು ತಿಳಿಯಬೇಕು. ಹೀಗೆ ಯುದ್ಧ ನಡೆಯುತ್ತ ಇದೆ ಪ್ರದ್ಯುಮ್ನ ಹಾಗೂ ವಜ್ರನಾಭರ ಮಧ್ಯದಲ್ಲಿ ಯುದ್ಧ ನಡೆಯುತ್ತ ಇದೆ ಕೃಷ್ಣ ಪರಮಾತ್ಮ ಬಂದ ದ್ವಾರಕಾ ಪಟ್ಟಣದಲ್ಲಿ ಒಂದು ದೊಡ್ಡದಾದ ರುದ್ರ ದೇವರ ಉತ್ಸವ ಇತ್ತು. ಆ ಉತ್ಸವವನ್ನೆಲ್ಲ ಮುಗಿಸಿಕೊಂಡು ವಿಶೇಷವಾಗಿ ಪರಮಾತ್ಮ ರುದ್ರ ದೇವರಿಗೆ ಅನುಗ್ರಹವನ್ನು ಮಾಡಿ ಇಲ್ಲಿ ಬಂದಿದ್ದಾನೆ ವಜ್ರನಾಭನ ಜೊತೆಗೆ ಯುದ್ಧ ನಡೆಯುತ್ತ ಇದೆ. ಪ್ರದ್ಯುಮ್ನನಿಗೆ ವಜ್ರನಾಭ ಜೋರಾಗಿ ಪ್ರಹಾರವನ್ನು ಮಾಡಿದ ಪರಸ್ಪರ ಪ್ರಹಾರ ನಡೆಯುತ್ತ ಇದೆ ಪ್ರದ್ಯುಮ್ನ ಮೂರ್ಛಿತನಾಗಿದ್ದಾನೆ. ಪರಮಾತ್ಮ ಏನು ನೋಡಿ ಹೀಗೆ ಒಂದು ಸಲ ತಲೆಯ ಮೇಲೆ ಕೈ ಆಡಿಸುತ್ತಾನೆ ಕೆಲವರಿಗೆ, ಕೆಲವರಿಗೆ ಕೃಪಾದೃಷ್ಟಿಯಿಂದ ನೋಡುತ್ತಾನೆ, ಇಲ್ಲಿ ಕೇವಲ ಪಾಂಚಜನ್ಯ ಶಂಖದ ಧ್ವನಿಯನ್ನು ಮಾಡುವ ಮಾತ್ರದಿಂದ ಪ್ರದ್ಯುಮ್ನನಿಗೆ ಪುನಃ ಎಚ್ಚರ ಬಂದಿದೆ ಅಷ್ಟೇ. ಎಚ್ಚರ ಬರುವುದು ಮಾತ್ರ ಅಲ್ಲ ಕೃಷ್ಣ ತನ್ನ ಕೈಯಲ್ಲಿರುವ ಸುದರ್ಶನ ಚಕ್ರ ಪ್ರದ್ಯುಮ್ನನ ಕೈಯಲ್ಲಿ ಬರುವಂತೆ ಮಾಡಿದ ಆ ಸುದರ್ಶನ ಚಕ್ರದಿಂದಲೇ ವಜ್ರನಾಭನ ಸಂಹಾರವನ್ನು ಮಾಡಿದ್ದಾನೆ ಪ್ರದ್ಯುಮ್ನ. ತನ್ನ ಆಯುಧವನ್ನು ನೋಡಿದರೆ ಆ ಸುದರ್ಶನ ಚಕ್ರವೂ ಪ್ರದ್ಯುಮ್ನನನೇ, ಸುದರ್ಶನ ಚಕ್ರದ ಅಭಿಮಾನಿ ದೇವತೆಯೂ ಕಾಮನೇ, ಕೃಷ್ಣನ ಮಗನೂ ಕಾಮನೇ, ಪ್ರದ್ಯುಮ್ನನನೇ ಚಕ್ರ ಆದ್ದರಿಂದ ಚಕ್ರನಿಗೆ ಚಕ್ರವನ್ನು ಕೊಟ್ಟು ಅವನಿಂದ ಸಂಹಾರವನ್ನು ಮಾಡಿಸಿದ್ದಾನೆ ಪರಮಾತ್ಮ.

ಈ ಕಡೆಗೆ ಗದ ಸುನಾಭನನ್ನು ಸಂಹಾರ ಮಾಡಿದ್ದಾನೆ, ಉಳಿದೆಲ್ಲ ಅಸುರರನ್ನ ಸಾಂಬ ಸಂಹಾರ ಮಾಡಿದ್ದಾನೆ ಹೀಗೆ ಈ ಮೂವರನ್ನ ನಿಮಿತ್ತ ಮಾಡಿ ಸಕಲ ಆ ಅಸುರರನ್ನ ಸಂಹಾರ ಮಾಡಿ ಆ ಸಂಪೂರ್ಣವಾದ ಏನು ದೊಡ್ಡ ರಾಜ್ಯ ಬ್ರಹ್ಮ ದೇವರ ವರದಿಂದ ಭಾರೀ ಸಮೃದ್ಧವಾದ ರಾಜ್ಯ ಅಂತ ಮಾಡಿಕೊಂಡಿದ್ದ ಅದನ್ನು ನಾಲ್ಕು ಭಾಗ ಮಾಡಿದ್ದಾರೆ. ಜಯಂತ ಬಹಳ ಸಹಾಯ ಮಾಡಿದ್ದಾನೆ ಯುದ್ಧದಲ್ಲಿ ಜಯಂತನ ಮಗನಾದ ವಿಜಯನಿಗೆ ಒಂದು ಭಾಗ ಕೊಟ್ಟಿದ್ದಾರೆ, ಪ್ರದ್ಯುಮ್ನನಿಗೆ ಒಂದು ಭಾಗ, ಪ್ರದ್ಯುಮ್ನನ ಮಗನಿಗೆ ಅವನ ಹೆಸರು ಹೇಳಿಲ್ಲ ಅವನಿಗಾಗಿ ಒಂದು ಭಾಗ ಅಂದರೆ ಇಲ್ಲಿ ಪ್ರದ್ಯುಮ್ನ ಅನಿರುದ್ಧನ ಮಗ ಅವನು ಬೇರೆ ಈಗ ಈ ಪ್ರಭಾವತಿಯಲ್ಲಿ ಹುಟ್ಟಿದ ಪ್ರದ್ಯುಮ್ನನ ಮಗ ಅವನಿಗೆ ಒಂದು ಭಾಗ, ಆಮೇಲೆ ಚಂದ್ರಪ್ರಭಾ ಗದನ ಮಗ ಅವನಿಗೆ ಒಂದು ಭಾಗ,

ಗುಣವಾನ್ ಅವನಿಗೆ ಒಂದು ಭಾಗ ಹೀಗೆ ನಾಲ್ಕು ಭಾಗಗಳನ್ನ ಎಲ್ಲರಿಗೆ ಕೊಟ್ಟಿದ್ದಾರೆ. **'ಕೋಟ್ಯಶ್ಚತಸ್ರ'**[1] ನಾಲ್ಕು ಕೋಟಿ ಗ್ರಾಮಗಳು ಅವುಗಳನ್ನೂ ಸರಿಯಾಗಿ ಒಬ್ಬೊಬ್ಬರಿಗೆ ಒಂದೊಂದು ಕೋಟಿ ಅಂತ ಹಂಚಿದ್ದಾರೆ. ಎಲ್ಲಾ ಪದಾರ್ಥಗಳನ್ನು ನಾಲ್ಕು ಜನರಿಗೆ ಸರಿಯಾಗಿ ಹಂಚಿ ಅವರೆಲ್ಲರಿಗೆ ರಾಜ್ಯವನ್ನು ಆಳುವಂತೆ ವ್ಯವಸ್ಥೆಯನ್ನು ಮಾಡಿ ಇಂದ್ರ ದೇವರು ಹೇಳಿದ್ದಾನೆ. ಇವರಿಗೆ ಯುದ್ಧ ಕಾಲದಲ್ಲಿ ಮಾತ್ರ ನಾವು ಸಹಾಯ ಮಾಡಿದರೆ ಸಾಲದು ಇವರಿಗೆ ಯಾವಾಗಲೂ ಓಡಾಡುವುದಕ್ಕೆ ಬೇಕಾಗುವಂತಹ ಐರಾವತದ ಪುತ್ರ ಶತ್ರುಂಜಯ, ರಿಪುಂಜಯ ಅಂತ ಎರಡು ಮಕ್ಕಳು ಅವುಗಳನ್ನು ಇವರಿಗಾಗಿ ಬಿಟ್ಟುಬಿಡಿ ಯಾವಾಗ ಬೇಕೋ ದ್ವಾರಕೆಗೆ ಹೋಗಬಹುದು, ಯಾವಾಗ ಬೇಕೋ ದ್ವಾರಕೆಯಿಂದ ವಜ್ರಪುರಕ್ಕೆ ಬರಬಹುದು ಆ ತರಹದ ಒಂದು ವ್ಯವಸ್ಥೆ ಆಕಾಶ ಮಾರ್ಗದಲ್ಲಿ ಓಡಾಡುವ ಆನೆಗಳನ್ನು ಇವರಿಗಾಗಿ ಕೊಡಿ ಅಂತ ಹೇಳಿದ್ದಾನೆ. ಇವರಿಗೆ ಏನು ಬೇಕೋ ಸಹಾಯಕ್ಕೆ ಎಲ್ಲವನ್ನು ಕೊಡಬೇಕು ಅಂತ ಇಂದ್ರ ದೇವರು ಆದೇಶವನ್ನು ಮಾಡಿ ಗದ, ಪ್ರದ್ಯುಮ್ನ, ಸಾಂಬ ಇವರೆಲ್ಲ ಒಂದು ಆರು ತಿಂಗಳು ಅಲ್ಲಿದ್ದು ಆ ಮಕ್ಕಳಿಗೆಲ್ಲ ಟ್ರೇನಿಂಗ್ ಕೊಟ್ಟು ಆಮೇಲೆ ತಾವು ದ್ವಾರಕಾ ಪಟ್ಟಣಕ್ಕೆ ಹೊರಟಿದ್ದಾರೆ ಅಂತ. ಆ ವಜ್ರನಾಭನ ಸಂಹಾರವನ್ನು ಮಾಡಿ ಉತ್ತಮವಾದ ಧರ್ಮದ ರಾಜ್ಯವನ್ನ ಆ ವಜ್ರಪುರದಲ್ಲಿ ಸ್ಥಾಪನೆ ಮಾಡಿದ ವೃತ್ತಾಂತವನ್ನು ಯಾರು ಕೇಳುತ್ತಾರೋ

ಧನ್ಯಂ ಯಶಸ್ಯಮಾಯುಷ್ಯಂ ಶತ್ರುನಾಶನಮೇವ ಚ ॥ (97.43 ವಿಷ್ಣುಪರ್ವ)

ಪುತ್ರಪೌತ್ರಾ ವಿವರ್ಧನ್ತೇ ಆರೋಗ್ಯಧನಸಮ್ಪದಃ ।
ಯಶೋ ವಿಪುಲಮಾಪ್ನೋ ದ್ವೈಪಾಯನವಚೋ ಯಥಾ ॥ (97.44 ವಿಷ್ಣುಪರ್ವ)

ಎಲ್ಲ ವಿಧವಾದಂತಹ ಸಮೃದ್ಧಿ ಅವರಿಗೆ ಆಗುತ್ತದೆ ಎಂಬುದಾಗಿ ತಿಳಿಸಿಕೊಡುತ್ತ ಇದ್ದಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

1. 97.27 ವಿಷ್ಣುಪರ್ವ

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ವಿಷ್ಣುಪರ್ವ-31

* * *

ವೈಶಂಪಾಯನ ಉವಾಚ

ದದರ್ಶಾಥ ಪುರೀಂ ಕೃಷ್ಣೋ ದ್ವಾರಕಾಂ ಗರುಡೇ ಸ್ಥಿತಃ ।

ದೇವಸದ್ಮಪ್ರತೀಕಾಶಾಂ ಸಮನ್ತಾತ್ ಪ್ರತೀನಾದಿತಾಮ್ ।। (98.1 ವಿಷ್ಣುಪರ್ವ)

ಶ್ರೀಕೃಷ್ಣ ಪರಮಾತ್ಮ ವಜ್ರನಾಭನ ಸಂಹಾರವನ್ನು ಮಾಡಿಸಿ ಎಲ್ಲರ ಜೊತೆಗೆ, ಪ್ರದ್ಯುಮ್ನಾದಿಗಳ ಜೊತೆಗೆ ದ್ವಾರಕಾ ಪಟ್ಟಣದ ಪ್ರವೇಶವನ್ನು ಮಾಡುತ್ತಾ ಇದ್ದಾನೆ. ನವಮಸ್ಕಂಧದ ಭಾಗವತದಲ್ಲಿ ತಿಳಿಸುವಂತೆ ರೈವತ ರಾಜನೇ ಕುಶಸ್ಥಲೀ ಎಂಬ ಸೂಕ್ಷ್ಮವಾದ ಪಟ್ಟಣದ ನಿರ್ಮಾಣವನ್ನು ಮಾಡಿದವನು. ಶ್ರೀಕೃಷ್ಣ ಪರಮಾತ್ಮ ಕುಶಸ್ಥಲೀ ಪಟ್ಟಣವನ್ನು ಪುನಃ ವಿಸ್ತಾರಗೊಳಿಸಿದ ಅತ್ಯದ್ಭುತವಾದ ರೀತಿಯಲ್ಲಿ ದ್ವಾರಕಾ ಪಟ್ಟಣದ ನಿರ್ಮಾಣವನ್ನು ಮಾಡಿದ, ಶ್ರೀಕೃಷ್ಣ ಪರಮಾತ್ಮ ಸ್ವತಃ ವಾಯು ದೇವರಿಗೆ ಸುಧರ್ಮಾ ಎಂಬ ಹೆಸರಿನ ಸಭೆಯನ್ನೇ ತಂದು ಅಲ್ಲಿ ಇಡುವುದಕ್ಕೆ ಆಜ್ಞೆ ಮಾಡಿದ, ದೇವಾಧಿ ದೇವತೆಗಳೆಲ್ಲ ಬಂದು ಕೃಷ್ಣನ ಆಜ್ಞೆಯಂತೆ ಕೃಷ್ಣ ಹೇಳಿದ ಎಲ್ಲ ವಸ್ತುಗಳನ್ನ ಅಲ್ಲಿ ಇಟ್ಟು ಹೋಗಿದ್ದಾರೆ. ಈ ಕುಬೇರನ ನಿಧಿಗೆ ಅಭಿಮಾನಿಗಳಾದ ದೇವತೆಗಳು ಏನಿದ್ದಾರೆ ಆ ಎಲ್ಲ ಶಂಖ ಪದ್ಮ ಮೊದಲಾದ ದೇವತೆಗಳಿಗೆ ಕರೆದು ಎಲ್ಲರಿಗೆ ಯಥೇಚ್ಛವಾಗಿ ಧನವನ್ನು ಕೊಡುವುದಕ್ಕೆ ಹೇಳಿದ್ದಾನೆ ಇತ್ಯಾದಿ ಎಲ್ಲ ವಿಷಯಗಳನ್ನು ಹಿಂದೆ ತಿಳಿದಿದ್ದೀರಿ. ತಿಳಿಯಬೇಕಾದದ್ದು ಇಷ್ಟೇ ದ್ವಾರಕಾ ಪಟ್ಟಣದಲ್ಲಿ ಯಾವುದೇ ಕೊರತೆ ಇಲ್ಲ, ನ್ಯೂನತೆ ಇಲ್ಲ ಸಮೃದ್ಧಿ ಸಂಪತ್ತಿನ ಸಮೃದ್ಧಿ ಅಂತಹ ಸಮೃದ್ಧವಾದ ದ್ವಾರಕಾ ಪಟ್ಟಣವನ್ನೂ ಕೂಡ ಇನ್ನಷ್ಟು ಸಮೃದ್ಧಗೊಳಿಸಿ, ವಿಸ್ತಾರಗೊಳಿಸಿ ಕೃಷ್ಣ ಪರಮಾತ್ಮನ ಸೇವೆಯನ್ನು ಮಾಡಬೇಕು ಅಂತ ಇಂದ್ರ ದೇವರು ಸಂಕಲ್ಪವನ್ನು ಮಾಡುತ್ತಾರೆ. ಯಾವ ದೇವತೆಗಳಿಂದಲೂ ವಧ್ಯರಾಗದೇ ಇರುವಂತಹ ಇಷ್ಟೆಲ್ಲ ದಾನವರನ್ನು, ದೈತ್ಯರನ್ನು ತಾನು ಹಾಗೂ ತನ್ನ ಮಕ್ಕಳಿಂದ, ಯಾದವರಿಂದ ಸಂಹಾರ ಮಾಡಿಸಿ ಎಲ್ಲ ದೇವತೆಗಳಿಗೂ, ಋಷಿಗಳಿಗೂ, ಮುನಿಗಳಿಗೂ ಹಾಗೂ ಉಳಿದೆಲ್ಲ ಮಾನವರಿಗೂ ಬಂದ ಆಪತ್ತುಗಳನ್ನು ಪರಿಹಾರ ಮಾಡಿ ಪರಮಾನುಗ್ರಹ ಮಾಡಿದ ಶ್ರೀಕೃಷ್ಣ ಪರಮಾತ್ಮನಿಗೆ ನಾವು ಏನು ಮಾಡುವುದಕ್ಕೆ ಸಾಧ್ಯ ಇಲ್ಲ, ಆದರೂ ನಮ್ಮ ಕೃತಜ್ಞತೆಯ ಅರ್ಪಣೆಯ ರೂಪದಲ್ಲಿ ಆ ಭಗವಂತನಿಗೆ ಏನಾದರೂ ನಾವು ಮಾಡಬೇಕಲ್ಲ ಈ ದ್ವಾರಕಾ ಪಟ್ಟಣದೊಳಗೆ ಇರುವ ಎಲ್ಲ ಯಾದವರು ಕೃಷ್ಣ ಪರಮಾತ್ಮನ ಆಜ್ಞೆಯಂತೆ ಸೇವೆ

ಮಾಡಿದ್ದಾರೆ, ಪ್ರದ್ಯುಮ್ನನು ವಿಶೇಷವಾಗಿ ಸೇವೆ ಮಾಡಿದ್ದಾನೆ. ಶ್ರೀಕೃಷ್ಣ ಪರಮಾತ್ಮನ ಅನುಗ್ರಹವಂತೂ ಅಪಾರವಾದದ್ದು ಉಂಟು ಅದಕ್ಕೆ **'ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ'**[1] ನಾವೊಂದು ಕೈಜೋಡಿಸುವುದು ಒಂದೇ ನಮಗೆ ಗೊತ್ತು ಆದರೂ ಅಲ್ಪಸೇವಾ ರೂಪದೊಳಗೆ ವಿಶ್ವಕರ್ಮ ನೀನು ದೊಡ್ಡದಾಗಿ ಈ ಪಟ್ಟಣದಲ್ಲಿ ಇನ್ನೂ ಏನೇನು ಸಾಧ್ಯವೋ ಅದೆಲ್ಲವನ್ನು ತಂದು ಜೋಡಿಸು.

ಯತ್ಕಿಂಚಿತ್ತ್ರಿಷು ಲೋಕೇಷು ರತ್ನಭೂತಂ ಪ್ರಪಶ್ಯಸಿ ।
ತೇನ ಸಂಯುಜ್ಯತಾಂ ಕ್ಷಿಪ್ರಂ ಪುರೀ ದ್ವಾರವತೀ ತ್ವಯಾ ॥ (98.6 ವಿಷ್ಣುಪರ್ವ)

ರತ್ನ ಅಂದರೆ ಶ್ರೇಷ್ಠ, ಜಗತ್ತಿನಲ್ಲಿ ಏನೆಲ್ಲ ರತ್ನ ಅಂತ ಇದೆ ಉತ್ತಮವಾದ ವಸ್ತು, ಸುಖ ಸಾಧನವಾದ ವಸ್ತು ಅಂತ ಇದೆ ಅದು ಏನೇ ಇರಬಹುದು ಅದು ಮುತ್ತು, ರತ್ನ, ವಜ್ರಗಳಾಗಿರಬಹುದು, ಯಂತ್ರಗಳಾಗಿರಬಹುದು, ವಸ್ತ್ರಗಳಾಗಿರಬಹುದು, ನಾನಾ ವಿಧವಾದ ಶಿಲ್ಪಗಳಾಗಿರಬಹುದು ಅದೆಲ್ಲ ಕೇಳಬೇಡ. ಯಾವುದು ಉತ್ತಮ, ಯಾವುದು ಶ್ರೇಷ್ಠ, ಯಾವುದು ಸುಖ ಸಾಧನ, ಯಾವುದು ವಿಹಿತ ಅದೆಲ್ಲವೂ ಇಲ್ಲಿ ಬಂದು ಜೋಡಿಸಲ್ಪಟ್ಟಿರಬೇಕು ಆ ರೀತಿ ನೀನು ವ್ಯವಸ್ಥೆಯನ್ನು ಮಾಡು ಅಂತ ಆಜ್ಞೆಯನ್ನು ಮಾಡಿದ್ದಾನೆ. ನೂರಾರು ಉದ್ಯಾನಗಳು ಸ್ವರ್ಗಲೋಕದೊಳಗಿನ ಉದ್ಯಾನಗಳಿಗಿಂತಲೂ ಶ್ರೇಷ್ಠವಾದ ಉದ್ಯಾನಗಳನ್ನೆಲ್ಲ ಇಲ್ಲಿ ನೀನು ಯೋಜನೆ ಮಾಡಬೇಕು ಅಂತ ಯಾಕೆ.

ಕೃಷ್ಣೋ ಹಿ ಸುರಕಾರ್ಯೇಷು ಸರ್ವೇಷು ಸತತೋತ್ಥಿತಃ ।
ಸಂಗ್ರಾಮಾನ್ ಘೋರರೂಪಾಂಶ್ಚ ವಿಗಾಹತಿ ಮಹಾಬಲಃ ॥ (98.7 ವಿಷ್ಣುಪರ್ವ)

ಇದೇ ಇಂದ್ರ ದೇವರು ಪಾರಿಜಾತ ಹರಣ ಮಾಡುವ ಸಂದರ್ಭದಲ್ಲಿ ಆಡಿದ ಮಾತನ್ನು ನೆನಪಿಸಿಕೊಳ್ಳಿ. ಆಗ ಆಡಿದ ಮಾತು ಏನು ನಾರದರ ಎದುರಿನಲ್ಲಿ ಬೇಕಾದಷ್ಟು ಸಂದರ್ಭಗಳಲ್ಲಿ ದೇವಾಸುರ ಸಂಗ್ರಾಮಗಳಾಗುತ್ತೆ ಒಂದಕ್ಕೂ ಸಹಾಯಕ್ಕೆ ಬರುವುದಿಲ್ಲ ಕೃಷ್ಣ, ಬರೀ ತನ್ನ ಕೆಲಸದೊಳಗೆ ತಾನು ಇರುತ್ತಾನೆ ನಾವೇ ಕಷ್ಟಪಟ್ಟು ನಮ್ಮ ಕೆಲಸ ನಾವು ಮಾಡಿಕೊಳ್ಳಬೇಕಾಗುತ್ತದೆ ಅಂಥವನಿಗಾಗಿ ನಾನು ಯಾಕೆ ಪಾರಿಜಾತವನ್ನು ಕೊಡಬೇಕು ಅಂತ ಅದು ಅಸುರಾವೇಶದಿಂದ ಆಡಿದ ಮಾತು. ಈಗ ಸತ್ಯವಾದ ಮಾತನ್ನು ಹೇಳುತ್ತಾನೆ **'ಕೃಷ್ಣೋ ಹಿ ಸುರಕಾರ್ಯೇಷು ಸರ್ವೇಷು ಸತತೋತ್ಥಿತಃ'** ಯಾವುದೇ ದೇವತಾ ಕಾರ್ಯ ಇದ್ದರೂ ಕೃಷ್ಣ ಇಲ್ಲದೇ ಆಗುವುದಿಲ್ಲ ಕೃಷ್ಣ ಅಂದರೆ ಈ ಕೃಷ್ಣಾವತಾರದ ಕೃಷ್ಣ ಅಂತೇ ಅಲ್ಲ ಕೃಷ್ಣ ಅಂದರೆ ಪರಮಾತ್ಮ ವಿಷ್ಣು. ಆದು ವರಾಹ ರೂಪದಿಂದ ಇರಬಹುದು, ನರಸಿಂಹ ರೂಪದಿಂದ, ರಾಮ ರೂಪದಿಂದ ಅಥವಾ ಮೂಲ ರೂಪದಿಂದ ಬೇರೆ ಬೇರೆ ರೂಪಗಳಿಂದ ನಮ್ಮೆಲ್ಲರಲ್ಲಿ ಅಂತರ್ಯಾಮಿಯಾಗಿ, ಅಂತರ್ಯಾಮಿ ರೂಪಗಳಿಂದ ಆ ಭಗವಂತ ಮಾಡುವ ಅನುಗ್ರಹ ಇದು ಅಷ್ಟಿಷ್ಟಲ್ಲ ಅನಂತ ಅನಂತ ಅನಂತ ಅನುಗ್ರಹ. ಅಂತಹ ಭಗವಂತನಿಗೆ ನಾವು ಎಷ್ಟು ಸೇವೆ ಮಾಡಿದರು ಕಡಿಮೆ ಇದೆ ದೊಡ್ಡದಾದ ದ್ವಾರಕಾ ಪಟ್ಟಣದ ನಿರ್ಮಾಣವನ್ನು ಮಾಡು ಅಂತ ಆ ವಿಶ್ವಕರ್ಮನಿಗೆ ಇಂದ್ರ ದೇವರು ಆಜ್ಞೆಯನ್ನು ಮಾಡುತ್ತಾ ಇದ್ದಾರೆ. ಇದು ನಮಗೆಲ್ಲ ಇಡೀ ಜಗತ್ತಿಗೆ ಇಂದ್ರ ದೇವರು ಕೊಡುವಂತಹ ಒಂದು ದೊಡ್ಡದಾದ ಸಂದೇಶ.

1. 18 ಈಶಾವಾಸ್ಯೋಪನಿಷತ್

ತಾವು ತಮ್ಮ ಮನೆಯನ್ನು ದೊಡ್ಡದಾಗಿ ಕಟ್ಟಿಕೊಂಡಿರುತ್ತಾರೆ ದೇವರಿಗೆ ಅಂತ ಮನೆ ಮಾತ್ರ ಇಟ್ಟಿರುವುದಿಲ್ಲ, ಮಾಡಿದವರು ಬಹಳ ಸಣ್ಣ ಮನೆ, ಮನೆ ಅಂತ ಮಾಡಿದರೆ ಪರವಾಗಿಲ್ಲ ಎಷ್ಟೋ ದೊಡ್ಡದು ದೇವರಿಗೆ ಮನೆ ಅಂತೇ ಇರುವುದಿಲ್ಲ. ನಾಸ್ತಿಕರಂತೂ ಮನೆಯಲ್ಲಿ ದೇವರನ್ನೇ ಇಟ್ಟಿರುವುದಿಲ್ಲ, ಇನ್ನು ಆಸ್ತಿಕರು ದೇವರನ್ನು ಇಟ್ಟರೂ ಒಂದು ಮಾಡದಲ್ಲಿ ಕೂಡಿಸಿರುತ್ತಾರೆ ವರ್ಷಕ್ಕೆ ಒಂದು ಸಲ ದೇವರಿಗೆ ಪೂಜೆ ಅಂತ ಅವರೆಲ್ಲರಿಗೆ ಇಂದ್ರ ದೇವರು ಹೇಳುತ್ತ ಇದ್ದಾರೆ **'ಕೃಷ್ಣೋ ಹಿ ಸುರಕಾರ್ಯೇಷು ಸರ್ವೇಷು ಸತತೋತ್ಥಿತಃ'** ತಿಳಿದುಕೊಳ್ಳಿ. ಪ್ರತಿಯೊಂದು ಕಾರ್ಯದಲ್ಲಿಯೂ ಪರಮಾತ್ಮ ನಮಗೆ ಅನುಗ್ರಹ ಮಾಡುತ್ತಾನೆ, ಸುರಕಾರ್ಯ, ದೇವತಾ ಕಾರ್ಯಕ್ಕೆ ಮಾತ್ರ ಸಹಾಯ ಮಾಡುತ್ತಾನೆ ನಮಗೇನು ಮಾಡುವುದಿಲ್ಲ ಅಂತ ಅನ್ನಬೇಡಿ **'ಕೃಷ್ಣೋ ಹಿ ಸುರಕಾರ್ಯೇಷು ಸರ್ವೇಷು ಸತತೋತ್ಥಿತಃ'** ಬರೀ ಸುರಕಾರ್ಯಗಳಿಗೆ ಮಾತ್ರ ಅಲ್ಲ ಸರ್ವೇಷು ಮನುಷ್ಯ ಕಾರ್ಯ, ಋಷಿ ಕಾರ್ಯ ಎಲ್ಲಾ ಕಾರ್ಯಗಳಲ್ಲಿಯೂ ಅವನು ಸತತೋತ್ಥಿತನೇ. ಪ್ರತಿಯೊಬ್ಬರಿಗೂ ಭಗವಂತ ಉಪಕಾರ ಮಾಡುತ್ತಾನೆ, ಸುರಕಾರ್ಯಗಳಿಗೆ ದೇವರು ಉಪಕಾರ ಮಾಡುತ್ತಾನೆ ಅಂದರೆ ಎಲ್ಲರಿಗೂ ಉಪಕಾರ ಮಾಡುತ್ತಾನೆ ಅಂತೇ ಅರ್ಥ ಯಾಕೆಂದರೆ ನಾವು ಏನು ಮಾಡಬೇಕಾದರೂ ಅಲ್ಲಿ ಸುರಕಾರ್ಯ ಇರಲೇಬೇಕು. ನಾವು ಹೆಜ್ಜೆ ಇಡಬೇಕು ಅಂದರೆ ತತ್ವಾಭಿಮಾನಿ ದೇವತೆಗಳು ಪ್ರೇರಣೆ ಮಾಡಿದರೆ ಇಡುವುದಕ್ಕೆ ಸಾಧ್ಯ, ಕಣ್ಣು ತೆಗೆದು ನೋಡಬೇಕು ಅಂದರೆ ಸೂರ್ಯಾದಿ ದೇವತೆಗಳು ಪ್ರೇರಿಸಿದರೆ ನೋಡುವುದಕ್ಕೆ ಸಾಧ್ಯ ಹಾಗಾದರೆ ನಮ್ಮ ಕಾರ್ಯಗಳಲ್ಲಿಯೂ ಸುರಕಾರ್ಯಗಳು ನಡೆಯುತ್ತೆ, ಋಷಿ, ಮುನಿಗಳು ಕಾರ್ಯ ಮಾಡಬೇಕು ಅಂದರೂ ಅಲ್ಲಿ ಸುರ ಕಾರ್ಯಗಳು ನಡೆಯಲೇಬೇಕು.

ಹೀಗಾಗಿ ಪ್ರಪಂಚದೊಳಗಿನ ಯಾವುದೇ ಕಾರ್ಯ ನಡೆಯುವುದಕ್ಕೂ ನೇರವಾಗಿ ಅಥವಾ ಪ್ರೇರಕರಾಗಿ ಅಂತರ್ಯಾಮಿಗಳಾಗಿ, ತತ್ವಾಭಿಮಾನಿಗಳಾಗಿ ದೇವತೆಗಳು ಕೆಲಸ ಮಾಡಿದರೇನೆ ಕೆಲಸ ಉಂಟು ಇಲ್ಲದಿದ್ದರೆ ಇಲ್ಲ. ಎಲ್ಲಾ ಸುರಕಾರ್ಯಗಳಲ್ಲಿಯೂ ಭಗವಂತನ ಅನುಗ್ರಹ ಇದೆ ಅಂದರೆ ಎಲ್ಲರಿಗೂ ಪರಮಾತ್ಮನ ಅನುಗ್ರಹ ಬೇಕು ಅಂತ ಇಂದ್ರನ ಅಂತರ್ಯ ಹೀಗಾಗಿ ಎಲ್ಲರೂ ಶ್ರೀಕೃಷ್ಣ ಪರಮಾತ್ಮನಿಗೆ ಏನು ಮಾಡಬೇಕು ವಿಶ್ವಕರ್ಮನಿಗೆ ಹೇಳಿ ದೊಡ್ಡದಾದ ಪಟ್ಟಣದ ನಿರ್ಮಾಣ ಮಾಡಿಕೊಡಬೇಕು ಅಂತ ಅದು ಸಾಧ್ಯ ಇಲ್ಲ. ಹಾಗಾದರೆ ಆ ವಿಶ್ವಕರ್ಮನ ಅನುಗ್ರಹಕ್ಕೆ ಪಾತ್ರರಾದ ಅವನ ಸನ್ನಿಧಾನ ಇರುವಂತಹ ಏನು ಇವತ್ತಿನ ವಿಶ್ವಕರ್ಮರೆಲ್ಲ ಇದ್ದಾರಲ್ಲ ಅಭಿಯಂತರು ಅವರೆಲ್ಲರ ವಿಶೇಷವಾಗಿರುವಂತಹ ಮಾರ್ಗದರ್ಶನದಲ್ಲಿ ಶ್ರೇಷ್ಠವಾದ ದೇವರ ಮನೆಯನ್ನು ಮಾಡಿ, ಉತ್ತಮವಾದ ರೀತಿಯ ದೇವರ ಪೂಜೆಯನ್ನು ಮಾಡಿ, ದೇವರಿಗೆ ನೈವೇದ್ಯಾದಿಗಳ ಅರ್ಪಣೆಯನ್ನು ಮಾಡಿ ನಮ್ಮ ಕೃತಜ್ಞತೆಯನ್ನು ಅರ್ಪಣೆ ಮಾಡಲೇಬೇಕು ಅಂದರೆ ಮಾತ್ರ ಆ ಭಗವಂತನ ಉಪಕಾರವನ್ನು ಪಡೆದದ್ದಕ್ಕೆ ನಾವೆಲ್ಲ ಸರಿಯಾದ ರೀತಿಯಲ್ಲಿ ನಡೆದುಕೊಂಡಂತೆ, ಇಲ್ಲದೇ ಇದ್ದರೆ ಕೃತಘ್ನರಾಗುತ್ತೇವೆ ಅದಕ್ಕೆ ಸಮಾನವಾದ ಪಾಪ ಸಾಧನ ಇನ್ನೊಂದಿಲ್ಲ ಅದಕ್ಕೆ ಪ್ರಾಯಶ್ಚಿತ್ತವೂ ಇಲ್ಲ, ಈ ಎಚ್ಚರ ನಮಗೆ ಇರಬೇಕು.

ಈ ರೀತಿ ಇಂದ್ರ ದೇವರು ಆಜ್ಞೆಯನ್ನು ಮಾಡಿದ್ದಾರೆ ಮಾಡಿದ್ದೇ ತಡ ಸ್ವಯಂ ವಿಶ್ವಕರ್ಮ ಪರಮ ಭಗವದ್ಭಕ್ತ ಅದ್ಭುತವಾದ ರೀತಿಯಲ್ಲಿ ಅದರ ನಿರ್ಮಾಣವನ್ನು ಮಾಡಿದ್ದಾನೆ. ಪೂರ್ವ ದಿಕ್ಕಿನಲ್ಲಿ ನಾನಾ ವಿಧವಾದ ಮಣಿ ನಿರ್ಮಿತವಾದ, ಬಂಗಾರದಿಂದ ನಿರ್ಮಿತವಾದ ತೋರಣಗಳು, ದಕ್ಷಿಣ ದಿಕ್ಕಿನಲ್ಲಿ ಐದು ಬಣ್ಣದ ಭಾರೀ ಭಾರೀ ನೋಡಿ ಎಂತಹ ಅದ್ಭುತವಾದ ಕಲ್ಪನೆಯನ್ನು ಕೊಡುತ್ತ ಇದ್ದಾರೆ. ಇವತ್ತಿನ ಕಾಲದಲ್ಲಿ ಅದರೆ ಸಿಮೆಂಟು, ಕಬ್ಬಿಣ ಇವುಗಳು, ಅವತ್ತಿನ ಕಾಲದಲ್ಲಿ ಬರೀ ಎಲ್ಲಿ ನೋಡಿದರಲ್ಲಿ ಮುತ್ತು, ರತ್ನ, ಬಂಗಾರ ಅಂತೂ ಇವುಗಳಿಂದಲೇ ಮಾಡಿಬಿಟ್ಟಿದ್ದರಾ ಅಲ್ಲ, ನೈಸರ್ಗಿಕವಾದಂತಹ ಬಳ್ಳಿಗಳು, ಗಿಡಗಳು ಅವುಗಳಿಂದ ನಿರ್ಮಿತವಾದ ಬೇಕಾದಷ್ಟು ಉದ್ಯಾನಗಳು ಅದಕ್ಕೆ ಅವಕಾಶಗಳನ್ನ ಕೊಟ್ಟಿದ್ದಾರೆ. ಬಣ್ಣ ಬಣ್ಣದ ಲತೆಗಳಿಂದ ಕೂಡಿದಂತಹ ಅನೇಕ ವನಗಳು,

ಉದ್ಯಾನಗಳು ಅವುಗಳೆಲ್ಲ ದಕ್ಷಿಣ ಭಾಗದಲ್ಲಿ, ಪಶ್ಚಿಮ ಭಾಗದಲ್ಲಿ ಇಂದ್ರನ ಕಾಮನಬಿಲ್ಲಿಗೆ ಸದೃಶವಾದ ಶ್ರೇಷ್ಠವಾದಂತಹ ಬಣ್ಣಗಳಿಂದ ಕೂಡಿದ ಮನೆಗಳು, ಉತ್ತರ ದಿಕ್ಕಿನಲ್ಲಿ ಬಿದುರಿನ ಗಿಡಗಳಿಂದ ಕೂಡಿದಂತಹ ವನ ಹೀಗೆ ಅನೇಕ ವಿವಧ ವನಗಳು ಎಲ್ಲವನ್ನ ನಿರ್ಮಾಣ ಮಾಡಿದ್ದಾರೆ ಅಲ್ಲಿರುವಂತಹ ಪುರುಷರೆಲ್ಲ ಸಂತೋಷ ಪಟ್ಟರು, ಸ್ತ್ರೀಯರು ಸಂತೋಷ ಪಟ್ಟಿದ್ದಾರೆ. ಸ್ತ್ರೀಯರು ಬರೀ ಮನೆಯಲ್ಲಿ ಮಾತ್ರ ಇದ್ದು ಅಡಿಗೆಯನ್ನು ಮಾಡುವವರು ಮಾತ್ರ ಇರಲಿಲ್ಲ ಮಹಾಪರಾಕ್ರಮಿಗಳಾದ ಸ್ತ್ರೀಯರು ಇದ್ದರು. ಸತ್ಯಭಾಮಾ ದೇವಿ ಯಾವ ರೀತಿ ಕೃಷ್ಣನ ಜೊತೆಗೆ ನರಕಾಸುರನ ಸಂಹಾರದ ಸಂದರ್ಭದಲ್ಲಿ ಯುದ್ಧವಾಡುತ್ತಾಳೆ ಹಾಗೆಯೇ ದ್ವಾರಕಾ ಪಟ್ಟಣದಲ್ಲಿರುವ ಎಲ್ಲ ಸ್ತ್ರೀಯರು ಯುದ್ಧವಾಡುವುದಕ್ಕೆ ಸಮರ್ಥರಾಗಿದ್ದಾರೆ.

ಸ್ತ್ರೀಯೋಪಿ ಯಸ್ಯಾಂ ಯುಧ್ಯೇರನ್ ಕಿಮು ವೃಷ್ಣಿಮಹಾಪಥಾಃ । (98.30 ವಿಷ್ಣುಪರ್ವ)

ಅಂತಹ ಆ ಎಲ್ಲ ಸ್ತ್ರೀಯರಿಗೂ, ಪುರುಷರಿಗೂ ಮನಸ್ಸಿಗೆ ಸಂತೋಷವಾಗುವ ರೀತಿಯಲ್ಲಿ ಬೇಕಾದ ಎಲ್ಲ ಸಾಧನ ಸಲಕರಣೆಗಳನ್ನೂ ಒದಗಿಸಿದ್ದಾರೆ. ಪರಮಾತ್ಮನ ಮಂದಿರ ಅಂತೂ ಇನ್ನೂ ಅದ್ಭುತವಾದದ್ದು ನಾಲ್ಕು ಯೋಜನ ಉದ್ದ ಅಗಲದಿಂದ ಕೂಡಿದಂತಹ ಶ್ರೇಷ್ಠವಾದ ಆ ಭಗವಂತನ ಮಂದಿರ, ರತ್ನ ಸ್ಫಟಿಕಾದಿಗಳಿಂದ ನಿರ್ಮಿತವಾದಂತಹ ಸ್ತಂಭಗಳು, ರುಕ್ಮಿಣಿಯ ವಾಸ, ಸತ್ಯಭಾಮಾ ದೇವಿ ಇರುವುದಕ್ಕೆ ಯೋಗ್ಯವಾದಂತಹ ಶ್ರೇಷ್ಠವಾದ ಒಂದು ಪ್ರತ್ಯೇಕವಾದ ಭೋಗವಾನ್ ಎಂಬ ಹೆಸರಿನ ಮಂದಿರ. ನಗ್ನಜಿತ್ತಿನ ಪುತ್ರಿ ಸತ್ಯ, ನೀಲಾ ಅಂತ ಹೇಳುತ್ತಾರೆ ಮೇರು ಎಂಬ ಹೆಸರಿನ ಮಂದಿರ, ಸುಭೀಮ ಅನ್ನುವವಳಿಗೆ ಪದ್ಮಕೂಲ, ಲಕ್ಷಣಾ ಅಥವಾ ಲಕ್ಷ್ಮಣ ಎಂಬ ಎರಡೂ ಹೆಸರುಗಳನ್ನು ಹೇಳುತ್ತಾರೆ. ಸೂರ್ಯಪ್ರಭಾ ಎಂಬಂತಹ ಮಂದಿರ, ಮಿತ್ರವಿಂದಾಳಿಗೆ ಪರಾ, ಸುವರ್ತಾ ಅನ್ನುವವಳಿಗೆ ಕೇತುಮಾನ್. ಒಟ್ಟಾರೆ ಬಂದಂತಹ ದೇವತೆಗಳು, ಬ್ರಾಹ್ಮಣರು ಇತರ ಬೇರೆ ಬೇರೆ ತರಹದ ಜನರು ಬಂದಾಗ ಅವರ ಜೊತೆಗೆ ಮಂತ್ರಣೆ ವಿಚಾರಣೆಯನ್ನು ಮಾಡುವುದಕ್ಕಾಗಿ ದೇವರು ದೊಡ್ಡದಾದಂತಹ ಒಂದು ದರ್ಬಾರದಲ್ಲಿ ಕೂಡಬೇಕಲ್ಲ ಅದಕ್ಕೆ ವಿರಜ ಅಂತನ್ನುವ ಹೆಸರಿನ ಒಂದು ದೊಡ್ಡ ಮಂದಿರವನ್ನು ನಿರ್ಮಾಣ ಮಾಡಿದ್ದಾನೆ. ಹೀಗೆ ಒಂದೊಂದು ಹೆಸರಿನ ಭಾರೀ ಭಾರೀ ಅದ್ಭುತವಾದ ಮಂದಿರಗಳ ನಿರ್ಮಾಣವನ್ನು ಮಾಡಿ ಪರಮಾತ್ಮನಿಗೆ ಸಮರ್ಪಣೆಯನ್ನು ಮಾಡಿದ್ದಾನೆ. ಹಂಸಕೂಟ ಅಂತನ್ನುವ ಶ್ರೇಷ್ಠವಾದ ಪರ್ವತ ಆ ಪರ್ವತದ ಶೃಂಗವನ್ನೇ ತಂದು ಇಲ್ಲಿ ಇಟ್ಟಿದ್ದಾನೆ, ಇನ್ನು ಅನೇಕ ಶ್ರೇಷ್ಠವಾದ ಪರ್ವತಗಳ ಶೃಂಗವನ್ನ ತಂದು ಇಲ್ಲಿ ಸ್ಥಾಪನೆ ಮಾಡಿದ್ದಾನೆ, ಮೇರು ಪರ್ವತದ ಸುವರ್ಣಖಚಿತವಾದ ಸುವರ್ಣಮಯವಾದ ಶೃಂಗವನ್ನೇ ತಂದು ವಿಶ್ವಕರ್ಮ ಇಲ್ಲಿ ಸ್ಥಾಪನೆ ಮಾಡಿದ್ದಾನೆ ಇಂದ್ರ ದೇವರ ಆಜ್ಞೆಯಂತೆ. ಪಾರಿಜಾತವನ್ನಂತೂ ಸ್ವಯಂ ಶ್ರೀಕೃಷ್ಣ ಪರಮಾತ್ಮನೇ ತಂದು ಇಟ್ಟಿದ್ದಾನೆ ಇಂತಹ ದ್ವಾರಕಾ ಪಟ್ಟಣಕ್ಕೆ ಸಮಾನವಾದಂತಹ ಸ್ಥಾನವೇ ಇಲ್ಲ.

ಶ್ರೀಮದಾಚಾರ್ಯರು ತಾತ್ಪರ್ಯ ನಿರ್ಣಯದಲ್ಲಿ ಅನ್ನುತ್ತಾರೆ ಶ್ರೀಕೃಷ್ಣ ಪರಮಾತ್ಮನ ಭಕ್ತರು **'ಕೃಷ್ಣಾಶ್ರಯೋ ವಸತಿ ಯತ್ರ'**[1] ಕೃಷ್ಣ ಪರಮಾತ್ಮನ ಭಕ್ತರು ಎಲ್ಲಿ ವಾಸ ಮಾಡುತ್ತಾರೋ ಅಲ್ಲಿಯೇ ಎಲ್ಲ ಸಮೃದ್ಧಿ ಇರುತ್ತದೆ ಇನ್ನು ಸ್ವಯಂ ಶ್ರೀಕೃಷ್ಣ ಪರಮಾತ್ಮನ ಸನ್ನಿಧಾನ ಇದ್ದಲ್ಲಿ ಸಮೃದ್ಧಿ ಇದೆ ಅಂತ ಏನು ಹೇಳುವುದು ಅಂತಹ ಅದ್ಭುತವಾದ ದ್ವಾರಕಾ ಪಟ್ಟಣವನ್ನ ಸಿದ್ಧವಾದದ್ದನ್ನೆ ಪುನಃ ವಿಶೇಷವಾಗಿ ಅಲಂಕಾರಗೊಳಿಸಿ ಸಮರ್ಪಣೆ ಮಾಡಿದ್ದಾರೆ. ನಾವು ನೀವೆಲ್ಲ ಮಾಡುವುದಂತೂ ಇನ್ನೂ ಅತ್ಯಲ್ಪ ಇಂದ್ರ ದೇವರಂತಹ ಇಂದ್ರ ದೇವರೇ ನಿನ್ನದನ್ನೇ ನಿನಗೆ ಅರ್ಪಣೆ ಮಾಡುತ್ತೇವೆ ಅಂತ ನೋಡಿ ತಾನೊಂದು ಪಟ್ಟಣವನ್ನ ತಂದು ಇಂದ್ರ ದೇವರು ಕೊಟ್ಟದ್ದಿಲ್ಲ, ಕೃಷ್ಣನದೇ ಆದ ಪಟ್ಟಣವನ್ನ ಕೃಷ್ಣನಿಗೆ

1. 14.07 ಮಭಾತಾನಿರ್ಣಯ

ಅರ್ಪಣೆ ಮಾಡಿದ ಅಂದರೆ ನಾವು ನೀವು ಮಾಡುವುದೆಲ್ಲ ಇಷ್ಟೇ ಇದಕ್ಕೂ ಹೆಚ್ಚು ಇನ್ನೇನಲ್ಲ ದೇವರದನ್ನೇ ದೇವರಿಗೆ ಒಪ್ಪಿಸುವುದು. ನಮ್ಮದನ್ನ ನಾವು ಏನು ನಮ್ಮದನ್ನುವುದು ಯಾವುದು ಪ್ರತ್ಯೇಕ ಇಲ್ಲ ಎಲ್ಲವೂ ಭಗವಂತನ ಅಧೀನವೇ ಅವನದನ್ನೇ ಅವನಿಗೆ ಕೊಟ್ಟು ಕೃಷ್ಣಾರ್ಪಣ ಹೇಳುವುದೇ ನಮ್ಮದು, ಕೃತಜ್ಞತೆಯ ಅರ್ಪಣೆ ಬೇರೆ ಇನ್ನೇನಲ್ಲ ಅಂತ ಸ್ವತಃ ಇಂದ್ರ ದೇವರು ತೋರಿಸಿಕೊಟ್ಟಿದ್ದಾರೆ. ಅಂತಹ ದ್ವಾರಕಾ ಪಟ್ಟಣದಲ್ಲಿ ಶ್ರೀಕೃಷ್ಣ ಪರಮಾತ್ಮ ಅಲಂಕೃತವಾದ, ವಿಸ್ತೃತವಾದ ವೈಭವೀಕೃತವಾದಂತಹ ದ್ವಾರಕೆಯಲ್ಲಿ ಪರಮಾತ್ಮ ಪ್ರವೇಶ ಮಾಡಿದ್ದಾನೆ ಅತ್ಯಂತ ವೈಭವದಿಂದ ಎಲ್ಲರೂ ಕೂಡ ಸ್ವಾಗತ ಮಾಡಿದ್ದಾರೆ ಪರಮಾತ್ಮನಿಗೆ. ಆ ಪರಮಾತ್ಮ ಪ್ರವೇಶ ಮಾಡಿದ, ಯಾದವರೂ ಎಲ್ಲ ಆ ದ್ವಾರಕಾ ಪಟ್ಟಣದ ಸೌಂದರ್ಯವನ್ನು ನೋಡಿದ್ದಾರೆ, ಒಬ್ಬರನ್ನೊಬ್ಬರು ನೋಡಿಕೊಂಡು ಆಶ್ಚರ್ಯ ಪಡುತ್ತಾ ಇದ್ದಾರೆ, ಭಾರೀ ಕೃಷರಾದವರು ದಷ್ಟಪುಷ್ಟರಾಗಿದ್ದಾರೆ, ಏನೇನೋ ರೋಗಗಳಿದ್ದವರು ನಿರೋಗಿಗಳಾಗಿದ್ದಾರೆ ಆ ಪಾರಿಜಾತ ಪ್ರಭಾವ.

ತೇऽನ್ಯೋನ್ಯಂ ದದೃಶುರ್ವೀರಾ ದೇಹಬನ್ಧಾನಮಾನುಷಾನ್ ।
ಪಾರಿಜಾತಪ್ರಭಾವೇಣ ತತೋ ಮುಮುದಿರೇ ಜನಾಃ ॥ (99.20 ವಿಷ್ಣುಪರ್ವ)

ಅದೇನು ಮೈಕಟ್ಟು ಒಬ್ಬೊಬ್ಬರದು ಅಮಾನುಷವಾದದ್ದು ಅತಿಮಾನುಷವಾದದ್ದು ತಮಗೆ ಆಶ್ಚರ್ಯವಾಗುತ್ತಾ ಇದೆ ತಾವು ಏನು ತಿಂದಿಲ್ಲ ಉಂಡಿಲ್ಲ, ಏನು ಭಾರಿ ವ್ಯಾಯಾಮ ಮಾಡಿಲ್ಲ ಇದ್ದಕ್ಕಿದ್ದ ಹಾಗೆ ಏನು ಇದು ಬದಲಾವಣೆ ಆ ದಿವ್ಯಲೋಕದ ಪಾರಿಜಾತದ ಮಹಿಮೆ ಅಂತ ಅಂದುಕೊಂಡಿದ್ದಾರೆ. ನೀವೆಲ್ಲ ತಿಳಿದಂತೆ ಆ ಪಾರಿಜಾತದ ಅಂತರ್ಯಾಮಿಯಾಗಿ ಮುಖ್ಯವಾಗಿ ಒಳಗೆ ಇರುವಂತಹ ಶ್ರೀಕೃಷ್ಣ ಪರಮಾತ್ಮ ಹೊರಗೆ ಕುಳಿತವನೂ ಕೃಷ್ಣ, ಪಾರಿಜಾತದೊಳಗೆ ಇದ್ದವನು ಕೃಷ್ಣ ಪರಿ ಜಾತ ಸುತ್ತಲೂ ಹುಟ್ಟಿದವರು ಅಂತ ಯಾರೆಲ್ಲ ಇದ್ದಾರೆ ಅವರೆಲ್ಲರಲ್ಲಿ ಅಂತರ್ಯಾಮಿಯಾಗಿ ಇದ್ದಂತಹ ಸರ್ವಾಂತರ್ಮಿಯಾದ ಭಗವಂತ ಅವನು ಪಾರಿಜಾತ ಅಂತಹ ಪರಮಾತ್ಮನ ಅನುಗ್ರಹದಿಂದ ತಮ್ಮೆಲ್ಲರ ವೈಭವವನ್ನು ಕಂಡು ತಾವೇ ಆನಂದ ಪಟ್ಟಿದ್ದಾರೆ ಪುರುಷರು ಸ್ತ್ರೀಯರು ಎಲ್ಲರೂ ಕೂಡ. ಪರಮಾತ್ಮ ಆ ಎಲ್ಲ ಯಾದವರಿಗೂ ತಾರತಮ್ಯ ಕ್ರಮದಲ್ಲಿ ಬೇಕಾದಷ್ಟು ಮುತ್ತು ರತ್ನಗಳನ್ನೆಲ್ಲ ಯಥೇಚ್ಛವಾಗಿ ಕೊಟ್ಟಿದ್ದಾನೆ, ಗೌರವ ಮಾಡಿದ್ದಾನೆ, ನಮಸ್ಕಾರವನ್ನು ಮಾಡಿದ್ದಾನೆ ಹಿರಿಯರಿಗೆಲ್ಲ, ಕಿರಿಯರೆಲ್ಲ ನಮಸ್ಕಾರ ಮಾಡಿದ್ದಾರೆ, ತಾನು ಸರ್ವೋತ್ತಮನಾದರೂ ಲೋಕಶಿಕ್ಷಣಕ್ಕಾಗಿ ತಂದೆ ತಾಯಿ ಮೊದಲಾವರೆಲ್ಲರಿಗೂ ನಮಸ್ಕಾರವನ್ನು ಮಾಡಿ ಅವರ ಆಶೀರ್ವಾದವನ್ನು ಪಡೆದಿದ್ದಾನೆ ಪರಮಾತ್ಮ. ಈ ರೀತಿ ತಾನೆಷ್ಟೇ ದೊಡ್ಡ ಸಾಧನೆಯನ್ನು ಮಾಡಿದರೂ ಹಿರಿಯರಿಗೆ ಬಂದು ನಮಸ್ಕರಿಸಿ ಅವರ ಆಶೀರ್ವಾದವನ್ನು ಪಡೆದು ನಿಮ್ಮ ಅನುಗ್ರಹದಿಂದ ಇದೆಲ್ಲ ಆಯಿತು ಅಂತ ಒಪ್ಪಿಸಬೇಕು, ಸಮರ್ಪಣೆ ಮಾಡಬೇಕು ಹಿರಿಯರಿಗೆ, ಗುರುಗಳಿಗೆ ಅಂತನ್ನುವ ಒಂದು ತತ್ವವನ್ನು ಜಗತ್ತಿಗೆ ತಿಳಿಸಿಕೊಡುತ್ತಾ ಇದ್ದಾನೆ. ಮುಂದೆ ಗರುಡ ದೇವರಿಗೆ ಯಾವುದಕ್ಕಾಗಿ ನೀನು ಬಂದಿದ್ದಿ ಆ ಕಾರ್ಯ ಮುಗಿಯಿತು ಯುದ್ಧ ಎಲ್ಲ ಆಯಿತು ಅಂತ ಅವನಿಗೆ ಮಾಡಬೇಕಾದ ವಿಶೇಷ ಸತ್ಕಾರವನ್ನು ಮರ್ಯಾದೆಯನ್ನು ಮಾಡಿ ಗರುಡನನ್ನು ಕೊಟ್ಟುಕಳಿಸಿ ಆಯಿತು.

ಈ ಕಡೆಗೆ ಚಾಕ್ರಿಕರು ಅಂತ ಚಾಕ್ರಿಕರು ಅಂದರೆ ಚಕ್ರ ಅಂದರೆ ಆಜ್ಞೆ ರಾಜನ ಆಜ್ಞೆಯನ್ನ ಜಗತ್ತಿಗೆ ತಿಳಿಸುವಂಥವರು ಅರ್ಥಾತ್ ಆ ಪ್ರದೇಶದ ಪ್ರಜೆಗಳಿಗೆಲ್ಲ ತಿಳಿಸುವಂಥವರಿಗೆ ಚಾಕ್ರಿಕರು ಅಂತ ಅನ್ನುತ್ತಾರೆ, ಡಂಗುರ ಸಾರುವವರು ಅಂತ ಅರ್ಥ ಆ ಚಾಕ್ರಿಕರು ಘೋಷಣೆ ಮಾಡುತ್ತ ಇದ್ದಾರೆ.

ಹತಾ ಬ್ರಹ್ಮದ್ವಿಷಃ ಸರ್ವೇ ಜಯನ್ತ್ವನ್ದಕವೃಷ್ಣಯಃ ।
ರಣಾತ್ ಪ್ರತಿನಿವೃತ್ತೋऽಯಮಕ್ಷತೋ ಮಧುಸೂದನಃ ॥ (100.7 ವಿಷ್ಣುಪರ್ವ)

ಈ ಶ್ಲೋಕವನ್ನ ದ್ವಾರಕೆಯ ಒಣ ಒಣಗಳಲ್ಲಿ ಹೇಳುತ್ತ ಇದ್ದಾರೆ. ಎಲ್ಲಾ ಸಜ್ಜನರ ದ್ರೊಹ ಮಾಡುವಂತಹ, ದೇವತೆಗಳ ದ್ರೋಹ ಮಾಡುವ, ಧರ್ಮದ ದ್ರೋಹ ಮಾಡುವಂತಹ ಏನೆಲ್ಲಾ ದಾನವರು ಇದ್ದರೋ, ದುಷ್ಟರಿದ್ದರೋ ಅವರೆಲ್ಲರನ್ನು ಶ್ರೀಕೃಷ್ಣ ಪರಮಾತ್ಮ ಸಂಹಾರ ಮಾಡಿದ್ದಾನೆ. ನಮ್ಮ ಅಂಧಕರು, ವೃಷ್ಣಿಗಳು ಯಾದವರ ಕುಲಕ್ಕೆ ಜಯ, ಕೃಷ್ಣನ ಜಯ ನಮ್ಮೆಲ್ಲರ ಜಯ ಇದು ನಾವೆಲ್ಲರೂ ಕೂಡ ಸಂತೋಷ ಪಡಬೇಕು ಒಂದೇ ಒಂದು ಗಾಯ ಇಲ್ಲದಂತೆ ಅಕ್ಷತನಾಗಿ ಆ ಭಗವಂತ ಸುರಕ್ಷಿತವಾಗಿ ಬಂದಿದ್ದಾನೆ ಅಂತ. ಅವನು ಸುರಕ್ಷಿತವಾಗಿ ಬಂದಿದ್ದಾನೆ ಅನ್ನುವುದು ಏನೂ ದೊಡ್ಡ ಆಶ್ಚರ್ಯ ಅಲ್ಲ ಇಡೀ ಜಗತ್ತಿನಲ್ಲಿರುವ ಸಜ್ಜನರನ್ನು, ಧಾರ್ಮಿಕರನ್ನು ಸುರಕ್ಷಿತರನ್ನಾಗಿ ಪರಮಾತ್ಮ ಇಟ್ಟಿದ್ದಾನೆ ಅಂತ ಆ ಮಾತಿನ ತಾತ್ಪರ್ಯ ಎಲ್ಲರೂ ಅಕ್ಷತರಾಗಿರುವಂತೆ ಮಾಡಿ ಆ ಪರಮಾತ್ಮ ಬಂದಿದ್ದಾನೆ ಅಂತ ನಾವು ತಿಳಿಯಬೇಕು. ಈ ರೀತಿ ಆ ಭಗವಂತನ ಮಹಿಮೆಯನ್ನ ಎಲ್ಲ ಕಡೆಗೆ ಘೋಷಣೆಯನ್ನು ಮಾಡುತ್ತಾ ಇದ್ದಾರೆ. ನೋಡಿ ಗುರುಗಳಿಗೆ ಹಾಗೂ ಹಿರಿಯರಿಗೆ ಒಪ್ಪಿಸಬೇಕು ಅಂತ ಇದೀಗ ತಿಳಿದಿರಲ್ಲ ಆ ಮಾತನ್ನು ತಿಳಿಸುತ್ತಾರೆ.

ತತಃ ಸಾನ್ದೀಪನಿಂ ಪೂರ್ವಮಭಿಗಮ್ಯ ಜನಾರ್ದನಃ ॥ (100.9 ವಿಷ್ಣುಪರ್ವ)

ತಮಗೆ ಅರವತ್ತು ನಾಲ್ಕೇ ದಿನಗಳಲ್ಲಿ, ಅರವತ್ತು ನಾಲ್ಕು ಕಲೆಗಳನ್ನು ಕಲಿಸಿಕೊಟ್ಟಂತಹ ಆ ಸಾಂದೀಪನಿ ಗುರುಗಳು ಆ ಗುರುಗಳಿಗೆ ಇದೆಲ್ಲವನ್ನ ಸಮರ್ಪಣೆ ಮಾಡಿದ್ದಾನೆ ವಿಜಯವನ್ನ, ಆಮೇಲೆ ತಮ್ಮ ತಂದೆ ಇತ್ಯಾದಿಗಳು ರಾಜ ಉಗ್ರಸೇನ ಅವರೆಲ್ಲರಿಗೂ ಅವರವರ ತಾರತಮ್ಯ ಅನುಸಾರವಾಗಿ ಸಮರ್ಪಣೆ ಮಾಡಿದ್ದಾನೆ. ನೋಡಿ ಯಾದವರೇ ಇಷ್ಟೆಲ್ಲ ಕೆಲಸ ಮಾಡಿಕೊಂಡು ಬಂದಿದ್ದೇವೆ ನಿಮ್ಮೆಲ್ಲರ ಸಹಕಾರದಿಂದ ನೀವೆಲ್ಲ ಸಂತೋಷ ಪಡಿ ಅಂತ ಹೀಗೆ ಎರಡೂ ಕೈಗಳನ್ನು ಎತ್ತಿ ಒಂದು ಬಾರಿ ಹೇಳಿ ಮುಗಿಸಲಿಲ್ಲ ಶ್ರೀಕೃಷ್ಣ. ಯಾದವರ ಸಂಖ್ಯೆ ಲೆಕ್ಕ ಮಾಡುವುದಕ್ಕೆ ಸಾಧ್ಯ ಇಲ್ಲ ಅಷ್ಟು ಕೋಟಿ ಕೋಟಿ ಸಂಖ್ಯೆಯಲ್ಲಿ ಇದ್ದಾರೆ ಅವರೆಲ್ಲರ ಹೆಸರನ್ನ ಪ್ರತ್ಯೇಕವಾಗಿ ತೆಗೆದುಕೊಂಡು ಮಾತನಾಡಿಸಿದ್ದಾನಂತೆ ಕೃಷ್ಣ. ಸರ್ವಜ್ಞನಾದ ಭಗವಂತನಿಗೆ ಇದೇನು ದೊಡ್ಡದಲ್ಲ ಆದರೆ ನಮಗೆಲ್ಲ ಬಹಳ ಆಶ್ಚರ್ಯ ಒಬ್ಬೊಬ್ಬರ ಹೆಸರು ತೆಗೆದುಕೊಂಡಿದ್ದಾನೆ.

ಸರ್ವೇಷಾಂ ನಾಮ ಜಗ್ರಾಹ ದಾಶಾರ್ಹಾಣಾಮಧೋಕ್ಷಜಃ ॥ (100.11 ವಿಷ್ಣುಪರ್ವ)

ಒಬ್ಬೊಬ್ಬನ ಹೆಸರನ್ನು ತೆಗೆದುಕೊಂಡು ಅವನನ್ನ ಮಾತನಾಡಿಸಿ, ಆರೋಗ್ಯ ವಿಚಾರಿಸಿ ಅವನ ಎಲ್ಲ ಸಮೃದ್ಧಿಯನ್ನ ವಿಚಾರಿಸಿ ಪರಮಾತ್ಮ ತನ್ನ ವಾರ್ತೆಯನ್ನ ಅವನ ಜೊತೆಗೆ ಹಂಚಿಕೊಂಡಿದ್ದಾನೆ ಇದು ಆ ಭಗವಂತನ ಕಾರುಣ್ಯ, ಅವನ ಸರ್ವಜ್ಞತ್ವ ಎರಡನ್ನೂ ತೋರಿಸಿಕೊಡುತ್ತದೆ. ಅವರೆಲ್ಲ ದೇವತೆಗಳ ಅವತಾರರೇ ಪರಮಾತ್ಮನ ಬಂಧು ಬಳಗ ಯಾದವರು **'ಯೇ ದ್ವಾರಕಾಯಾಂ ನಿವಸನ್ತಿ ಸರ್ವೇ'** ಅಂತ ಅನ್ನುತ್ತಾರೆ ಶ್ರೀಮದಾಚಾರ್ಯರು ದ್ವಾರಕಾ ಪಟ್ಟಣದೊಳಗೆ ಇದ್ದವರೆಲ್ಲ ದೇವತೆಗಳೇ ಅಂತ ಯಾದವರು ಉಳಿದವರೆಲ್ಲರೂ. ಅಂತಹ ಎಲ್ಲಾ ದೇವಾವತಾರರು, ಮಹಾ ಮಹಾ ಸಾಧನೆಯನ್ನು ಮಾಡಿದಂತಹ ಮಹಾನುಭಾವರು ಅವರೆಲ್ಲ ಅಪರೋಕ್ಷ ಜ್ಞಾನಿಗಳು **'ನೈವ ದೈವಪದಂ ಪ್ರಾಪ್ತಾಃ ಬ್ರಹ್ಮದರ್ಶನವರ್ಜಿತಾಃ'**[1] ಅಂತಹ ಬ್ರಹ್ಮ ಜ್ಞಾನಿಗಳಾದ ದೇವಾವತಾರರಾದಂತಹ ಎಲ್ಲ ಮಹಾನುಭಾವರು, ಅವರೆಲ್ಲರನ್ನ ಪರಮಾತ್ಮ ಉದ್ಧಾರ ಮಾಡುವುದಕ್ಕೋಸ್ಕರ ಅವರ ಹೆಸರನ್ನು ತೆಗೆದುಕೊಳ್ಳುತ್ತ ಇದ್ದಾನೆ. ಅವರ ಹೆಸರನ್ನು ದೇವರು ತೆಗೆದುಕೊಂಡಿದ್ದಾನೆ ಅಂದರೆ ಅವರ ಉದ್ಧಾರದ ಕಾಲ ಬಂದಿದೆ ಅಂತ ಅರ್ಥ ಇವರು ನನಗೆ ಪ್ರಿಯರು ಅಂತ ಇಷ್ಟು ಅಂದರೆ ಸಾಕು ಪರಮಾತ್ಮ, ಅವರಿಗೆ ವಿಶೇಷವಾದ ಧರ್ಮದ ವೃದ್ಧಿ ಆಗುತ್ತದೆ ಅಂತ ಅನ್ನುತ್ತಾರೆ,

1. ಗೀತಾ ತಾತ್ಪರ್ಯ

ಪ್ರಿಯಾ ಇತ್ಯೇವ ಕಥನಾತ್ ಪಾಂಡವಾನಾಂ ಶುಭೋನ್ನತೇಃ ॥ (22.38 ಮಭಾತಾನಿರ್ಣಯ)

ಆ ದೃಷ್ಟಿಯಲ್ಲಿ ಪರಮಾತ್ಮ ಅವರೆಲ್ಲರ ಹೆಸರನ್ನ ತೆಗೆದುಕೊಂಡು ಪ್ರೀತಿಯಿಂದ ಮಾತನಾಡಿಸಿದ್ದಾನೆ. ಆಮೇಲೆ ದುರ್ಗಾ ದೇವಿ, ಕಂಸ ಕೈಯಲ್ಲಿ ಎತ್ತಿಕೊಂಡಾಗ ಆಕಾಶಕ್ಕೆ ಹಾರಿದವಳು ಅದೃಶ್ಯಳಾಗಿ ದೇವಕಿಗೆ ಮಾತ್ರ ಕಾಣಿಸುವಂತೆ ಪುನಃ ಬಂದು ದೇವಕಿಯ ಮನೆಯಲ್ಲಿ ವಸುದೇವ ದೇವಕಿಯರಿಂದ ಲಾಲಿತಳಾಗಿ ಪೋಷಿತಳಾಗಿ ಅವರಿಗೆ ಪ್ರೀತಿಯನ್ನು ಕೊಡುವುದಕ್ಕೋಸ್ಕರ ಸಂತೋಷ ಉಂಟು ಮಾಡುವುದಕ್ಕೋಸ್ಕರ ಬಂದಿದ್ದಳು ಅಂತ ನೀವೆಲ್ಲ ಕೇಳಿದ್ದೀರಿ. ಅವಳಿಗೆ ಏಕಾನಂಶ ಅಂತ ಹೆಸರು ಇಟ್ಟಿದ್ದಾರೆ ಆ ಏಕಾನಂಶ ಬಂದಿದ್ದಾಳೆ. ಕೃಷ್ಣನ ಮಡದಿಯೇ ಅವಳು ಆದರೆ ಈ ಅವತಾರದಲ್ಲಿ ತಂಗಿಯಾಗಿ ಅವತಾರ ಮಾಡಿದ್ದರಿಂದ ಈಗ ತಂಗಿ ಅಂತ ಬಂದಿದ್ದಾಳೆ ಆ ಏಕಾನಂಶ, ಯೋಗಕನ್ಯಾ, ದುರ್ಗಾ ಅನೇಕ ಹೆಸರುಗಳಿಂದ ಅವಳನ್ನು ಕರೆಯುತ್ತಾರೆ. ಅವಳು ಬಂದರೆ ಪರಮಾತ್ಮ ಬಲಗೈಯನ್ನು ಹಿಡಿದಿದ್ದಾನೆ, ಬಲರಾಮ ದೇವರು ಎಡಗೈಯನ್ನು ಹಿಡಿದಿದ್ದಾರೆ ಇಬ್ಬರು ಅಣ್ಣಂದಿರ ಮಧ್ಯದಲ್ಲಿ ತಂಗಿ ನಿಂತಿದ್ದಾಳೆ ಆ ರೀತಿ ಅವರಿಬ್ಬರೂ ಕೂಡ ವಿಶೇಷವಾಗಿ ಆ ತಂಗಿಯನ್ನ ಮಧ್ಯದಲ್ಲಿ ಇಟ್ಟುಕೊಂಡು ಅವಳನ್ನು ಪ್ರೀತಿಯಿಂದ ನೋಡಿದ್ದಾರೆ. ಇನ್ನು ಅನೇಕ ಯಾದವರು ಕೂಡ ವಿಶೇಷವಾಗಿ ಪರಮಾತ್ಮನಿಗೆ ಪೂಜೆಯನ್ನು ಮಾಡುತ್ತಾ ಇದ್ದಾರೆ ಭಗವಂತ ಅವರಿಗೆ ಮಾಡಬೇಕಾದದ್ದನ್ನೆಲ್ಲಾ ಮಾಡಿದ ಅವರೆಲ್ಲ ಪರಮಾತ್ಮನಿಗೆ ಪೂಜೆಯನ್ನು ಮಾಡುತ್ತಾರೆ.

ನಾರದರು ಈ ಸಂದರ್ಭದಲ್ಲಿ ಬರುತ್ತಾರೆ ನಮ್ಮ ಕೃಷ್ಣ ನಮ್ಮ ಕೃಷ್ಣ ನಮ್ಮ ಮಧ್ಯದಲ್ಲಿ ಓಡಾಡುವ ಕೃಷ್ಣ ಇಷ್ಟೇ ತಿಳಿದುಕೊಂಡಿದ್ದೀರಲ್ಲ ನೀವು ಯಾದವರು, ಎಲ್ಲರೂ ಜ್ಞಾನಿಗಳು ಯಾದವರು ಆದರೆ ಆ ಮಾಯೆಯಿಂದ ನಮ್ಮ ಮಧ್ಯದಲ್ಲಿ ಓಡಾಡುವ ಕೃಷ್ಣ ಅಂತ ಇಷ್ಟನ್ನೇ ನೀವು ಅಂದುಕೊಂಡು ಬಿಟ್ಟಿದ್ದೀರಿ. ಆದರೆ ಈ ಕೃಷ್ಣ ಯಾರು ಅಂತ ತಿಳಿದುಕೊಂಡಿದ್ದೀರಿ ಅಂತ ಸಾಕ್ಷಾತ್ ನಾರಾಯಣನೇ ಅವತಾರ ಮಾಡಿದ್ದು ಶ್ರೀಕೃಷ್ಣ ಅಂದರೆ ಬೇರೆ ಯಾರಲ್ಲ ಸಕಲ ಜಗನ್ ನಿಯಾಮಕನಾದ ಭಗವಂತ ಸೃಷ್ಟಿ ಸ್ಥಿತಿ ಲಯನಿಯಮನ ಜ್ಞಾನಾ ಜ್ಞಾನಾಬಂಧ ಮೋಕ್ಷಗಳನ್ನು ಕೊಡುವಂತಹ ಸ್ವಾಮಿಯೇ ನಿಮ್ಮ ಮಧ್ಯದಲ್ಲಿ ಓಡಾಡುತ್ತಾ ಇದ್ದಾನೆ. ಅದನ್ನು ತಿಳಿದುಕೊಳ್ಳಿ ಅಂತ ಹೇಳಿ ಮೊಟ್ಟ ಮೊದಲಿನಿಂದ ಪುನಃ ಆ ಮೇರು ಪರ್ವತದಲ್ಲಿ ಪರಮಾತ್ಮ ಆದೇಶ ಮಾಡಿದ್ದು, ಅವತಾರ ಮಾಡಿದ್ದು, ಪೂತನಾ ಸಂಹಾರವನ್ನು ಆರಂಭ ಮಾಡಿಕೊಂಡು ಏನೇನು ದೇವರು ಮಹಿಮೆಯನ್ನು ತೋರಿಸಿದ ಕೆಲವುದನ್ನ ನೋಡಿದ್ದಾರೆ ಕೆಲವುದನ್ನ ಕೇಳಿದ್ದಾರೆ. ಗೋಕುಲ ವೃಂದಾವನಗಳಲ್ಲಿ ಆದದ್ದೆಲ್ಲವನ್ನು ಯಾದವರು ಕಂಡಿಲ್ಲ, ಮಥುರೆಗೆ ಬಂದ ಮೇಲೆ ಆದದ್ದನ್ನು ಕಂಡಿದ್ದಾರೆ ಆದರೆ ಅದೆಲ್ಲವನ್ನ ಕ್ರೋಢೀಕರಿಸಿ ಮತ್ತೊಮ್ಮೆ ನಾರದರು ಯಾದವರಿಗೆ ಪುನಃ ಪುನಃ ಪುನಃ ಪುನಃ ಹೇಳುತ್ತಾ ಇದ್ದಾರೆ. ಒಂದೊಂದು ಎಷ್ಟು ಅದ್ಭುತ ಎಲ್ಲರೂ ದೊಡ್ಡ ದೊಡ್ಡ ದೇವತೆಗಳ ವರದಿಂದ ಅವಧ್ಯರಾದವರು ಬ್ರಹ್ಮ,ರುದ್ರ,ಸ್ಕಂದ, ಗಣಪತಿ, ಪಾರ್ವತಿ ಮೊದಲಾದವರ ಇವರೆಲ್ಲರ ವರದಿಂದ ಅವಧ್ಯರಾದಂತಹ ಭಾರೀ ಭಾರೀ ಅಸುರರ ಸಂಹಾರವನ್ನು ಮಾಡಿದ್ದಾನೆ ಶ್ರೀಕೃಷ್ಣ ಪರಮಾತ್ಮ ಅಂದಮೇಲೆ ಅವನ ಪರಾಕ್ರಮ ಎಂಥಹದ್ದು ಅಂತ ತಿಳಿದುಕೊಳ್ಳಿ. ಸರ್ವೋತ್ತಮನಾದ ಶ್ರೀಹರಿಯೇ ಅವನು ಅನ್ನುವುದನ್ನು ಚೆನ್ನಾಗಿ ಮನಗಾಣಬೇಕು ನೀವು ಗರ್ಗಾಚಾರ್ಯರು ಹೆಸರಿಡುವಾಗ ನಿಮಗೆಲ್ಲ ಹೇಳಿದ್ದಾರೆ ಇವನು ಸಾಮಾನ್ಯ ಅಲ್ಲ ವಿಷ್ಣುವೇ ಅವತಾರ ಮಾಡಿದ್ದಾನೆ ಅಂತ ಆ ಮಾತನ್ನು ನೆನಪಿಸಿಕೊಳ್ಳಿ.

ವವೃಧಾತೇ ಮಹಾವೀರ್ಯೌ ಬ್ರಹ್ಮಗಾರ್ಗೇಣ ಸಂಸ್ಕೃತೌ ॥ (101.45 ವಿಷ್ಣುಪರ್ವ)

ಒಂದೇ ಎರಡೇ ಇವರು ತೋರಿಸಿದಂತಹ ಪರಾಕ್ರಮಗಳು ಗೋವರ್ಧನೋದ್ಧಾರ, ಕಾಲಿಯ ಮರ್ದನ, ಕಂಸ ಸಂಹಾರವನ್ನ ಮಾಡಿ ಎಲ್ಲರ ವರ ಅವನಿಗೆ ಬ್ರಹ್ಮ ರುದ್ರಾದಿಗಳ ವರದಿಂದ ಅವಧ್ಯನಾದಂತಹ ಆ ಕಂಸನನ್ನ ಸಂಹಾರ ಮಾಡಿ ಇಡೀ ಜಗತ್ತಿಗೆ ಕ್ಷೇಮವನ್ನು ಮಾಡಿದ್ದಾನೆ ಪರಮಾತ್ಮ. ಅಂತಹ ಪರಮಾತ್ಮನನ್ನ ಇವನು

ಕರ್ಮ ತತ್ ಕೇಶವಾದನ್ಯಃ ಕರ್ತುಮರ್ಹತಿ ಕಃ ಪುಮಾನ್ ॥ (101.65 ವಿಷ್ಣುಪರ್ವ)

ಕೊನೆಗೆ ಒಂದು ಮಾತು ಕೇಳುತ್ತಾರೆ ಹೇಗೆ

ಕೋ ಹ್ಯನ್ಯಃ ಪುಂಡರೀಕಾಕ್ಷಾನ್ಮಹಾಭಾರತಕೃದ್ ಭವೇತ್ ॥ (2.55 ಮಭಾತಾನಿರ್ಣಯ)

ಅಂತ ಹೇಳುತ್ತಾರೆ ಆ ಮಹಾಭಾರತವನ್ನು ರಚನೆ ಮಾಡುವುದಕ್ಕೆ ನಾರಾಯಣನನ್ನು ಬಿಟ್ಟರೆ ಇನ್ನ್ಯಾರಿಗೆ ಸಾಧ್ಯ ಅಂತ ನಾರಾಯಣನೇ ವೇದವ್ಯಾಸ ದೇವರು. ಹಾಗೆ ಈ ಹಿಂದೆ ಹೇಳಿದ ಎಲ್ಲ ಅವಧ್ಯರಾದ ಅಸುರರ ಸಂಹಾರವನ್ನ ನಾರಾಯಣ ಬಿಟ್ಟರೇ ಇನ್ನ್ಯಾರು ಮಾಡುವುದಕ್ಕೆ ಸಾಧ್ಯ ಹೇಳಿ ನಾರಯಣನೇ ಶ್ರೀಕೃಷ್ಣ ಪರಮಾತ್ಮ ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ.

ಯದಿ ನಾಧಿಗತಂ ಪೂರ್ವೈಃ ಪ್ರಹ್ಲಾದಬಲಿಶಮ್ಬರೈಃ ।
ತದಿದಂ ಪ್ರಾಪಿತಂ ವಿತ್ತಂ ಶೌರಿಣಾ ಬಹುತಾಂ ಕೃತೇ ॥ (101.66 ವಿಷ್ಣುಪರ್ವ)

ಭಾರೀ ಭಾರೀ ಅಸುರರು ಮೂರು ಲೋಕಗಳನ್ನು ಗೆದ್ದಂಥವರು ಕೂಡಾನು ಏನು ಸಂಪತ್ತನ್ನ ಹೊಂದಿರಲಿಲ್ಲ ಅಷ್ಟು ಸಂಪತ್ತನ್ನು ಸುಮ್ಮನೆ ಮನೆಯಲ್ಲಿ ಕುಳಿತು ಪುಕ್ಕಟೆಯಾಗಿ ಪಡೆದಿದ್ದೀರಿ ನೀವು ಕೃಷ್ಣನ ಅನುಗ್ರಹದಿಂದ, ತಂದು ತಂದು ರತ್ನವನ್ನು ಸುರಿದಿದ್ದಾನೆ ನಿಮಗೆ. ಶ್ರೀಮದ್ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮ ಹೇಳಿದ ಮಾತನ್ನು ನೆನಪಿಸಿಕೊಳ್ಳಿ ಎಲ್ಲಾ ಕರ್ಮಗಳನ್ನು ಮಾಡುವುದು ಒಂದು ಕಡೆಗೆ, ಅಪರೋಕ್ಷ ಜ್ಞಾನವನ್ನು ಪಡೆಯುವುದು ಒಂದು ಕಡೆಗೆ.

ಯಾವಾನರ್ಥ ಉದಪಾನೇ ಸರ್ವತಃ ಸಂಪ್ಲುತೋದಕೇ ।
ತಾವಾನ್ ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ ॥ (2.46 ಭ ಗೀತಾ)

ಅಂತ ವಿವಿಧ ಕರ್ಮಗಳನ್ನು ಮಾಡಿ ನಾವೇನೇನು ಫಲವನ್ನು ಪಡೆಯಬಹುದೋ ಆ ಎಲ್ಲ ಫಲಗಳನ್ನು ಅಪರೋಕ್ಷ ಜ್ಞಾನದಿಂದ ಪಡೆಯಬಹುದು ಅಂತಹ ಮಹಾಸಾಮರ್ಥ್ಯ ಆ ಅಪರೋಕ್ಷ ಜ್ಞಾನಕ್ಕೆ ಇದೆ. ಇವರೆಲ್ಲ ಅಪರೋಕ್ಷ ಜ್ಞಾನಿಗಳೇ ಯಾದವರು ದೇವತೆಗಳ ಅವತಾರ ಹೀಗಾಗಿ ಭಗವಂತ ಏನೇನೋ ಕರ್ಮಗಳನ್ನು ಮಾಡಿ ಕಷ್ಟಪಟ್ಟು ಪಡೆಯಬಹುದಾದ ಸಂಪತ್ತನ್ನು ಸಮೃದ್ಧಿಯನ್ನು ಪುಕ್ಕಟೆಯಾಗಿ ಕೊಟ್ಟಿದ್ದಾನೆ ಅನ್ನುವುದರ ತಾತ್ಪರ್ಯ ಬೇರೆ. ಯಾವ ಕರ್ಮಗಳನ್ನು ಮಾಡದಿದ್ದರೂ ಅವರು ಮಾಡಿದಂತಹ ಏನು ತಪಸ್ಸು ಇದೆ, ಜ್ಞಾನ ಇದೆ ಆ ಜ್ಞಾನದ ಒಂದು ಕಾರಣಕ್ಕಾಗಿಯೇ ಸಂತುಷ್ಟನಾಗಿ ಅವರಿಗೆ ಎಲ್ಲ ಸಮೃದ್ಧಿಯನ್ನು ಪರಮಾತ್ಮ ಕೊಟ್ಟಿದ್ದಾನೆ. ನಾವೂ ಜ್ಞಾನವನ್ನು ಪಡೆದರೆ ನಮ್ಮ ಯೋಗ್ಯತೆಗೆ ತಕ್ಕಂತೆ ಸಕಲ ಸಮೃದ್ಧಿಯನ್ನು ದೇವರು ಕರುಣಿಸುತ್ತಾನೆ ಅಂತನ್ನುವುದನ್ನು ಇಲ್ಲಿ ಮತ್ತೆ ತೋರಿಸುತ್ತ ಇದ್ದಾರೆ. ಹಿಂದೆ ಹೇಗೆ ಕ್ರೀಡೆಗಳನ್ನು ಮಾಡಿ ತೋರಿಸಿದ ಹಲ್ಲಿಸಕಾದಿ ಕ್ರೀಡೆಗಳು ಹಾಗೆ ಜಲ ಕ್ರೀಡಾದಿಗಳಿಂದ ನಾನಾ ವಿಧವಾದ ವೈಭವಗಳು ಹಾಗೆ ಈ ಎಲ್ಲ ಸಮೃದ್ಧಿಯನ್ನು ಕೊಡುವ ಮೂಲಕವಾಗಿಯೂ ಮತ್ತು ಅದನ್ನೇ ದೇವರು

ಜಗತ್ತಿಗೆ ತೋರಿಸಿ ಕೊಡುತ್ತಾನೆ. ಜ್ಞಾನ ಮಾರ್ಗವನ್ನು ಅನುಸರಿಸಿ, ಜ್ಞಾನವನ್ನು ಪಡೆದುಕೊಳ್ಳಿ, ನನ್ನ ಉಪಾಸನೆಯನ್ನು ಮಾಡಿ, ತಪಸ್ಸನ್ನು ಮಾಡಿ ನಿಮಗೂ ಸಕಲ ಸಮೃದ್ಧಿಯನ್ನು ವೃಷ್ಟಿ ಮಾಡುತ್ತೇನೆ ಚಿಂತೆ ಮಾಡಬೇಡಿ. ನಾರದರು ಅನ್ನುತ್ತಾರೆ,

ವೀತಶೋಕಭಯಾಬಾಧಾಃ ಕೃಷ್ಣಬಾಹುಬಲಾಶ್ರಯಾಃ ।
ಯಜಧ್ವಂ ವಿವಿಧೈರ್ಯಜ್ಞೈರ್ಯಾದವಾ ವೀತಮತ್ಸರಾಃ ॥ (101.69 ವಿಷ್ಣುಪರ್ವ)

ದೇವಾನಾಂ ಸುಮಹತ್ಕಾರ್ಯಂ ಕೃತಂ ಕೃಷ್ಣೇನ ಧೀಮತಾ ।
ಪ್ರಿಯಮಾವೇದಯಾಮ್ಯೇಷ ಭವತಾಂ ಭದ್ರಮಸ್ತು ವಃ ॥ (101.70 ವಿಷ್ಣುಪರ್ವ)

ನಿಮ್ಮ ಕಷ್ಟ ಎಲ್ಲ ಕಳೆದ, ದುಃಖ ಎಲ್ಲ ಕಳೆದ, ಭಯ ಎಲ್ಲ ದೂರ ಆಯಿತು, ಎಲ್ಲಾ ಶತ್ರುಗಳು ಹತರಾದರು ಏನಿದೆ ನಿಮಗೆ ಈಗ ಸಮಸ್ಯೆ, ಅಡ್ಡಿ ಆತಂಕ ಪ್ರತಿಬಂಧ ಅಂತ ಏನಿದೆ ಹೇಳಿ ನೋಡೋಣ, ಏನೇನಿಲ್ಲ ಇನ್ನು ಯಾಕೆ ಸುಮ್ಮನೆ ಕೂಡುತ್ತಿರಿ ಮನೆಯಲ್ಲಿ. ಯಜ್ಞ ಮಾಡಿ, ಯಾಗ ಮಾಡಿ, ಪೂಜೆ ಮಾಡಿ, ಪಾಠ ಪ್ರವಚನ, ತಪಸ್ಸು ಮಾಡಿ ಆ ಸತ್ಕರ್ಮಗಳನ್ನು ಮಾಡುವುದಕ್ಕೆ ಏನು ವಿಘ್ನಗಳು ಇರಬಹುದೋ ಅವೆಲ್ಲವನ್ನು ಪರಿಹಾರ ಮಾಡಿಯಾಯಿತು ದೇವರು ಇನ್ನು ಸುಮ್ಮನೆ ಕೂಡಬಾರದು ಇದು ನಮಗೆಲ್ಲಾ ಸಂದೇಶ ಇದು. ದೇವರು ನಮಗೆ ಏನು ಕಡಿಮೆ ಮಾಡಿದ್ದಾನೆ ಎಲ್ಲಾ ಇಂದ್ರಿಯಗಳು ಚೆನ್ನಾಗಿವೆ, ಎಲ್ಲಾ ಪರಿಸರ ಚೆನ್ನಾಗಿದೆ, ಜನರೆಲ್ಲ ಚೆನ್ನಾಗಿದ್ದಾರೆ ಸುತ್ತುಮುತ್ತ ಅನುಕೂಲರಾಗಿ ಇದ್ದಾರೆ ಆದರೂ ಆಲಸ್ಯ ಮಾತ್ರ ಒಂದು ಇದೆ ದೊಡ್ಡ ಅಡ್ಡಿ ನಾರದರು ನಮ್ಮನ್ನು ಕುರಿತೇ ಹೇಳಿದ ಹಾಗಿದೆ. ದೇವರು ಇಷ್ಟೆಲ್ಲ ಅನುಕೂಲ ಮಾಡಿಕೊಟ್ಟಾಗ ಇನ್ನೂ ಆಲಸ್ಯ ಏಕೆ ಏಳಿ ಎದ್ದೇಳಿ ಸಾಧನೆಯನ್ನು ಮಾಡಿ, ಮತ್ತೆ ಸಿಗುವುದಿಲ್ಲ ಅವಕಾಶ ಅದನ್ನು ಮಾತ್ರ ನೆನಪಿನಲ್ಲಿ ಇಟ್ಟುಕೊಳ್ಳಿ. ಇದೆ ಹೀಗೆ ನೂರು, ಸಾವಿರ, ಹತ್ತು ಸಾವಿರ ವರ್ಷ, ಇಪ್ಪತ್ತು ಸಾವಿರ ವರ್ಷ ಆಯುಷ್ಯ ಅಂತ ತಿಳಿದುಕೊಂಡಿದ್ದೀರಾ ಇರುವ ಆಯುಷ್ಯವೇ ಅಲ್ಪ ಅದರಲ್ಲಿ ಅರ್ಧ ನಿದ್ರೆಯಲ್ಲಿ ಹೋಯಿತು, ಇರುವ ಅರ್ಧ ಆಯುಷ್ಯವನ್ನಾದರೂ ಸಾರ್ಥಕ ಮಾಡಿಕೊಳ್ಳಿ. ಉತ್ತಮ ಬುದ್ಧಿ ಇದ್ದರೆ ಸಂಪತ್ತನ್ನು ಪಡೆಯುವುದಕ್ಕೆ ಸಾಧ್ಯ, ಬುದ್ಧಿಯೂ ಇರಬೇಕು ಸಂಪತ್ತು, ಸಂಪತ್ತು ಅಂದರೆ ಅನ್ಯಾಯದಿಂದ ಸಂಪಾದನೆ ಮಾಡಿದ ಸಂಪತ್ತಲ್ಲ ಮತ್ತೆ, ನ್ಯಾಯದಿಂದ ಧರ್ಮದಿಂದ ಸಂಪಾದನೆ ಮಾಡಿದ ಸಂಪತ್ತು ಇದ್ದರೆ, ಕಷ್ಟಪಟ್ಟು ಸಂಪಾದನೆ ಮಾಡಿದ ಸಂಪತ್ತು ಇದ್ದರೆ ವಿನಯ ಇರುತ್ತದೆ, ಪುಕ್ಕಟೆಯಾಗಿ ಸಂಪತ್ತು ಬಂದಿದ್ದರೆ ಅಹಂಕಾರ ಇರುತ್ತದೆ. **'ಯತ್ರ ಧೀಃ'**[1] ಉತ್ತಮವಾದ ಶಾಸ್ತ್ರಕ್ಕೆ ಅನುಗುಣವಾದ ಬುದ್ಧಿ ಇದೆ ಅಲ್ಲಿ **'ಶ್ರೀಃ'** ಶ್ರೇಷ್ಠವಾದ ಧರ್ಮದಿಂದ ಸಂಪಾದನೆ ಮಾಡಿದ ಸಂಪತ್ತು ಇರುತ್ತೆ. **'ಯತ್ರ ಶ್ರೀಸ್ತತ್ರ ಸಂನತಿಃ'**[2] ಎಲ್ಲಿ ಧರ್ಮದಿಂದ ಸಂಪಾದನೆ ಮಾಡಿದ **'ಶ್ರೀ'** ಇದೆ ಸಂಪತ್ತಿದೆ ಸದ್ಗುಣಗಳು ಅಲ್ಲಿ ಸನ್ನತಿ ವಿನಯ ಇರುತ್ತೆ, ಸಜ್ಜನರ ಎದುರಿನಲ್ಲಿ ಬಾಗುವ ನಮಿಸುವ ತಗ್ಗುವ ಪ್ರವೃತ್ತಿ ಇರುತ್ತದೆ. ಇದು ಒಂದೊಂದು ಇರುವುದು ಬಹಳ ಅಪರೂಪ ಈ ಮೂರು ಕೃಷ್ಣನಲ್ಲಿವೆ ನಿಜವಾಗಿ ನೋಡಿದರೆ ಕೃಷ್ಣ ಯಾರು ಎದುರಿಗೆ ವಿನಯ ತೋರಿಸಬೇಕು ಸರ್ವೋತ್ತಮ ಅವನು ಆದರೆ ಅಷ್ಟಿದ್ದರೂ ತಂದೆ ತಾಯಿ ಗುರುಗಳು ಇವರೆಲ್ಲರ ಎದುರಿನಲ್ಲಿ ನೋಡಿ ನೀವೇ ನೋಡುತ್ತಾ ಇದ್ದೀರಲ್ಲ ಎಷ್ಟು ಸಂಪತ್ತು ರತ್ನದ ಪರ್ವತವನ್ನೇ ತಂದಿದ್ದಾನೆ. ಆ ನರಕಾಸುರನ ಮನೆಯಿಂದ ಎಷ್ಟು ಸಂಪತ್ತನ್ನು ಕಳಿಸಿದ ಆದರೆ ಪ್ರತಿ ಬಾರಿಯೂ ತಂದೆ ತಾಯಿಗಳಿಗೆ, ಗುರುಗಳಿಗೆ ಒಪ್ಪಿಸಿ ನಮಸ್ಕರಿಸಿ ಎಲ್ಲರಿಗೆ ಹಂಚಿ ಆಮೇಲೆ ತಾನೇನು ಸ್ವೀಕಾರವನ್ನು ಮಾಡುತ್ತಾ ಇದ್ದನೋ ಇಲ್ಲವೋ ಯಾಕೆ ಬೇಕು ಅವನಿಗೆ ಹೊಸದಾಗಿ ನಿತ್ಯ ತೃಪ್ತನಿಗೆ. ಈ ತರಹದ ವಿನಯವೆಂಬ ಗುಣವನ್ನ

1. 101.73 ವಿಷ್ಣುಪರ್ವ; 2. 101.73 ವಿಷ್ಣುಪರ್ವ

ಕೃಷ್ಣನಲ್ಲಿ ಕಾಣುತ್ತಾ ಇದ್ದೀರಲ್ಲ ಮತ್ತೆ ನಾನು ನಿಮಗೆ ಉಪದೇಶ ಮಾಡಬೇಕಾ, ಪಾಠ ಹೇಳಬೇಕಾ, ಅವನನ್ನು ನೋಡಿ ಕಲಿಯಿರಿ ಅಂತ ನಾರದರು ಚೆನ್ನಾಗಿ ಕೂಡಿಸಿ ಯಾದವರಿಗೆ ಪಾಠ ಹೇಳಿದ್ದಾರೆ. ಮತ್ತೆ ಪರಮಾತ್ಮನ ಮಹಿಮೆಯನ್ನ ಕೊಂಡಾಡುತ್ತಾರೆ ಮುಂದೆ ಏನೇನು ಕೃಷ್ಣ ಮಾಡುವವನಿದ್ದಾನೆ ಹಂಸ-ಡಿಭಿಕರ ವಧ ಇತ್ಯಾದಿ ಇತ್ಯಾದಿ ಪೌಂಡ್ರಕವಾಸುದೇವನ ವಧ, ಕಾಶಿ ಪಟ್ಟಣದ ದಾಹ ಇವುಗಳೆಲ್ಲ ಮುಂದೆ ಮಾಡುವಂತಹ ಇನ್ನೂ ಅನೇಕ ಮಹಿಮೆಗಳು ಆ ಎಲ್ಲ ಮಹಿಮೆಗಳನ್ನೂ ಕೂಡ ಮೊದಲಿಗೇನೆ ನಾರದರು ತಮ್ಮ ದಿವ್ಯದೃಷ್ಟಿಯಿಂದ ತಿಳಿದವರು, ಪ್ರತಿಕಲ್ಪದಲ್ಲಿಯೂ ಭಗವಂತ ಮಾಡೇ ಮಾಡುತ್ತಾನೆ ಅದನ್ನ ತಿಳಿಸಿಕೊಟ್ಟಿದ್ದಾರೆ ನಾರದರು ಎಲ್ಲರಿಗೂ ಕೂಡ.

ಏವಮೇಷ ಮಹಾಬಾಹುಃ ಶಾಸ್ತಾ ತೇಷಾಂ ದುರಾತ್ಮನಾಮ್ ।
ದೇವಾಂಶ್ಚ ಬ್ರಾಹ್ಮಣಾಂಶ್ಚೈವ ಯೇ ದ್ವಿಷನ್ತಿ ಸದಾ ನೃಪ ॥ (102.28 ವಿಷ್ಣುಪರ್ವ)

ನಾನು ಎಷ್ಟು ಅಂತ ನಿಮಗೆ ಹೇಳುತ್ತಾ ಹೋಗಲಿ ಇಂಥವರನ್ನು ಸಂಹಾರ ಮಾಡುತ್ತಾನೆ, ಅಂಥವರನ್ನು ಸಂಹಾರ ಮಾಡಿದ್ದಾನೆ ಇದೆಲ್ಲ ಒಟ್ಟು ಇಷ್ಟು ಸಾರ ಯಾರು ದೇವತೆಗಳು ಧರ್ಮ ಬ್ರಾಹ್ಮಣರು ಸಜ್ಜನರು ಸಾಧುಗಳು ತಪಸ್ವಿಗಳು ಸ್ವಕರ್ಮ ನಿರತರು ನಿರಪರಾಧಿಗಳು ಅಂಥವರಿಗೆ ಪೀಡೆ ಕೊಡುವವರು ಅಂತ ಯಾರೆಲ್ಲ ಇದ್ದಾರೆ ಅವರನ್ನ ಪರಮಾತ್ಮ ನಾಶ ಮಾಡಿಯೇ ಮಾಡುತ್ತಾನೆ ಸಂಹಾರ ಮಾಡಿಯೇ ಮಾಡುತ್ತಾನೆ ಕೆಲವೊಮ್ಮೆ ಪ್ರತ್ಯಕ್ಷವಾಗಿ ಕೆಲವೊಮ್ಮೆ ಇನ್ನೊಬ್ಬರಿಂದ ಅಂತೂ ಪರಮಾತ್ಮ ಅವರನ್ನು ನಾಶ ಮಾಡಿಸುತ್ತಾನೆ. **'ಸಂಸ್ಥಾಪ್ಯ ಧರ್ಮಾನ್ಮರ್ತ್ಯೇಷು'**[1] ಎಲ್ಲ ಕಡೆಗೆ ಧರ್ಮದ ಸಂಸ್ಥಾಪನೆ ಮಾಡುವುದಕ್ಕೆ ಅವತಾರ ಮಾಡಿದ್ದು ಅದೇ ಕೆಲಸವನ್ನ ಮಾಡುತ್ತಾನೆ. ಸಮ್ಯದ್ಧವಾದ ಯಜ್ಞ ಯಾಗಾದಿಗಳು ಎಲ್ಲ ಕಡೆಗೆ ನಡೆಯುವಂತೆ ಮಾಡಿ ದೇವತೆಗಳಿಗೆ ಸಂತೋಷ ಪಡಿಸುತ್ತಾನೆ, ದೇವತೆಗಳಿಂದ ವೃಷ್ಟಿ ಧಾನ್ಯ ಇವುಗಳನ್ನೆಲ್ಲ ಕೊಡಿಸಿ ಮನುಷ್ಯರನ್ನೂ ಸಂತೋಷ ಪಡಿಸುತ್ತಾನೆ ಈ ರೀತಿ ಆ ಪರಮಾತ್ಮನ ಅದ್ಭುತವಾದಂತಹ ವ್ಯಾಪಾರಗಳು ಲೀಲೆಗಳೆಲ್ಲ ಇರುತ್ತದೆ. ಮತ್ತೆ ಈ ದ್ವಾರಕಾ ಪಟ್ಟಣದ ಸಮೃದ್ಧಿ ಇಷ್ಟಿದೆಯಲ್ಲ ಇದೇ ಗುಂಗಿನೊಳಗೆ ಇರಬೇಡಿ, ಇದು ಬಹಳ ದಿವಸ ಇರುವುದಿಲ್ಲ, ಇನ್ನು ಕೆಲವು ದಿನಗಳಲ್ಲಿ ದ್ವಾರಕಾ ಪಟ್ಟಣ ಸಮುದ್ರದಲ್ಲಿ ಮುಳುಗಿ ಹೋಗುತ್ತದೆ ಮತ್ತೆ. ಇಷ್ಟು ನಿಮಗೆಲ್ಲ ವೈಭವದಿಂದ ಜೀವನ ಮಾಡುವುದಕ್ಕೆ ದ್ವಾರಕಾ ಪಟ್ಟಣವನ್ನು ಸ್ವರ್ಗಕ್ಕಿಂತ ಮಿಗಿಲಾಗಿ ಮಾಡಿದ್ದಾನಲ್ಲ ಆದರೆ ಇದು ಅವನು ಸಂಕಲ್ಪ ಇರುವ ಕಾಲದವರೆಗೆ ಮಾತ್ರ, ಏನು ಜ್ಞಾನಿಗಳಿಗೆ ತಪಸ್ವಿಗಳಿಗೆ ಸತ್ಕರ್ಮ ಮಾಡಿದವರಿಗೆ ಫಲ ಕೊಡುತ್ತೇನೆ ಅಂತ ತೋರಿಸುವುದಕ್ಕೆ ಇದನ್ನು ಮಾಡಿ ಇಟ್ಟಿದ್ದಾನೆ ಅಷ್ಟರೊಳಗೆ ನೀವು ಏನು ಜ್ಞಾನೋತ್ತರ ಸಾಧನೆ ಮಾಡಬೇಕೋ ಮಾಡಿಕೊಳ್ಳಿ ಯಾದವರೇ ಇದು ಬಹಳ ದಿವಸ ಉಳಿಯುವುದಿಲ್ಲ.

ದ್ವಾರಕಾಂ ವರುಣಾವಾಸಂ ಪ್ರವೇಷ್ಯತಿ ಸಕಾನನಾಮ್ ॥ (102.33 ವಿಷ್ಣುಪರ್ವ)

ಈ ಎಲ್ಲ ಅರಣ್ಯದಿಂದ ಸಹಿತವಾದ ದ್ವಾರಕಾ ಪಟ್ಟಣವನ್ನೇ ವರುಣಾ ವಾಸಕ್ಕೆ ಕಳಿಸುತ್ತಾನೆ ಪರಮಾತ್ಮ ಅಂತ ನಾರದರು ಭವಿಷ್ಯವನ್ನು ನುಡಿದಿದ್ದಾರೆ. ಅವನು ತನ್ನ ಇಚ್ಛೆಗೆ ಬಂದಂತೆ ತಾನು ಮಾಡುವವನು ಪರಮಾತ್ಮ, ಅವನಿಗೆ ಯಾವ ಕರ್ಮದ ಬಂಧ ಇಲ್ಲ, ಯಾವುದೇ ಒಂದು ಕರ್ಮದ ಒತ್ತಡದಿಂದ ಅವನು ಇಲ್ಲಿ ಹುಟ್ಟಿ ಬಂದಿದ್ದಾನೆ ಅಂತ ಕೆಲವರು ಹೇಳುತ್ತಾರೆ ಇದು ತಪ್ಪು. **'ವಿಷ್ಣುರ್ಯೇನ ದಶಾವತಾರಗಹನೇ ಕ್ಲಿಪ್ತೋ ಮಹಾನಂಕಟೇ'** ಅಂತ ತಾನು ಮಾಡಿದ ಕರ್ಮಕ್ಕೆ ಹತ್ತತ್ತು ಅವತಾರ ಎತ್ತಿ ನಾನಾ ಸಂಕಟವನ್ನು ಅನುಭವಿಸಬೇಕಾಯಿತು ಮೀನಾಗಿ, ಆಮೆಯಾಗಿ.

1. 102.31 ವಿಷ್ಣುಪರ್ವ

ಬ್ರಹ್ಮಾ ಯೇನ ಕುಲಾಲವನ್ನಿಯಮಿತೋ ಬ್ರಹ್ಮಾಂಡ ಭಾಂಡೋದರೇ
ವಿಷ್ಣುರ್ಯೇನ ದಶಾವತಾರಗಹನೇ ಕ್ಷಿಪ್ತೋ ಮಹಾನಂಕಟೇ ॥

ರುದ್ರೋ ಯೇನ ಕಪಾಲಪಾಣಿ ಪುಟಕೇ ಭಿಕ್ಷಾಟನಂ ಕಾರ್ಯತೇ ।
ಸೂರ್ಯೋ ಭ್ರಾಮ್ಯತಿ ನಿತ್ಯಮೇವ ಗಗನೇ ತಸ್ಮೈ ನಮಃ ಕರ್ಮಣೇ ॥ (ಲಕ್ಷ್ಮೀಶೋಭಾನ)

ಅಂತ ಅದು ತಪ್ಪು

ಅಪ್ರಮೇಯಸ್ಚಿನ್ಮಶ್ಚ ಯಥಾ ಕಾಮಚರೋ ವಶೀ । (102.37 ವಿಷ್ಣುಪರ್ವ)

ಶ್ರೀಮದಾಚಾರ್ಯರು ಇದನ್ನು ಉದಾಹರಣೆ ಮಾಡುತ್ತಾರೆ. ವಶೀ ಸ್ವತಂತ್ರ ಅವನು **'ಕಾಮಚರಃ'** ತನ್ನ ಇಚ್ಛೆಗೆ ಬಂದಂತೆ ತಾನು ಅವತಾರ ಮಾಡಿದ್ದಾನೆ ಲೋಕೋದ್ಧಾರಕ್ಕಾಗಿ ಅಷ್ಟೇ. **'ಅಪ್ರಮೇಯಸ್ಚಿನ್ಮಶ್ಚ'** ಅವನ ಗುಣಗಳು ಅಚಿಂತ್ಯ, ಅವನ ಮಹಿಮೆ ಅಚಿಂತ್ಯ.

ಮೋದತ್ಯೇಷ ಸದಾ ಭೂತೈರ್ಬಾಲಃ ಕ್ರೀಡನಕೈರಿವ ॥ (102.37 ವಿಷ್ಣುಪರ್ವ)
ನ ಪ್ರಮಾತುಂ ಮಹಾಬಾಹುಃ ಶಕ್ಯೋಽಯಂ ಮಧುಸೂದನಃ । (102.38 ವಿಷ್ಣುಪರ್ವ)

ಇವನನ್ನು ಯಾರೂ ತಿಳಿಯುವುದಕ್ಕೂ ಸಾಧ್ಯ ಇಲ್ಲ, ಅಳಿಯುವುದಕ್ಕೂ ಸಾಧ್ಯ ಇಲ್ಲ, ಅಳಿಸುವುದಕ್ಕಂತೂ ಸಾಧ್ಯವೇ ಇಲ್ಲ.

ಪರಂ ಹ್ಯಪರಮೇತಸ್ಮಾದ್ ವಿಶ್ವರೂಪಾನ್ನ ವಿದ್ಯತೇ ॥ (102.38 ವಿಷ್ಣುಪರ್ವ)

ಇಡೀ ಪ್ರಪಂಚದ ಸೃಷ್ಟಿಕರ್ತುವಾದ ಪರಿಪೂರ್ಣ ಸ್ವರೂಪನಾದ ಈ ಪರಮಾತ್ಮನನ್ನ ಮೀರಿಸುವ ವಸ್ತು, ಇವನಿಗಿಂತ ಉತ್ತಮವಾದ ವಸ್ತು ಪ್ರಪಂಚದೊಳಗೆ ಇಲ್ಲವೇ ಇಲ್ಲ ಆ ವಿಷ್ಣು ಸರ್ವೋತ್ತಮತ್ವವನ್ನು ನಾರದರು ಎಷ್ಟು ಚೆನ್ನಾಗಿ ಸ್ಥಾಪನೆ ಮಾಡುತ್ತಾ ಇದ್ದಾರೆ. **'ಹ್ಯಪರಮೇತಸ್ಮಾದ್ ವಿಶ್ವರೂಪಾನ್ನ ಅಪರಂ'** ಇವನನ್ನ ಬಿಟ್ಟು ಇನ್ನೊಂದು ವಸ್ತು **'ಪರಂ'** ಸರ್ವೋತ್ತಮವಾದದ್ದು ಇವನನ್ನು ಮೀರಿದ್ದು ಇಲ್ಲವೇ ಇಲ್ಲ. ಇದೇನು ನಿಮ್ಮ ಅಭಿಪ್ರಾಯ ಉಪನ್ಯಾಸ ಮಾಡುತ್ತಾ ಇದ್ದೀರಲ್ಲ ನಾರದರೇ ಇದು ನನ್ನ ಅಭಿಪ್ರಾಯವಲ್ಲ **'ಶ್ರುತೋಽಯಮೇವ ಶತಶಸ್ತಥಾ'**[1] ನೂರಾರು ಶ್ರುತಿಗಳಲ್ಲಿ ಹೇಳಿದ್ದಾರೆ ಅಂತ ಅಂದರು ಸುಮ್ಮನೆ ಕೆಲವರನ್ನು ನೋಡಿ ಯಾಕೆಂದರೆ ಅವರು ಓದಿದ್ದೇ ಅಷ್ಟು ಜಾಸ್ತಿ ಹೇಳಿದರೆ ಅರ್ಥನೇ ಆಗುವುದಿಲ್ಲ ಅಂತ. ಇನ್ನು ಕೆಲವರು ಬಹುಶ್ರುತರು ಅಲ್ಲಿ ಕುಳಿತಿದ್ದರು ಅವರನ್ನು ನೋಡಿ ಮತ್ತೆ ಹೇಳುತ್ತಾರೆ **'ತಥಾ ಶತಸಹಸ್ರಶಃ'**[2] ಲಕ್ಷ ಲಕ್ಷ ಕಡೆಗೆ, ಕೋಟಿ ಕೋಟಿ ಕಡೆಗೆ ಅನಂತ ಶ್ರುತಿಗಳಲ್ಲಿಯೂ ಕೂಡ ಈ ಪರಮಾತ್ಮನ ಸರ್ವೋತ್ತಮತ್ವವೇ ವರ್ಣಿತವಾಗಿದೆ ಇನ್ಯಾರ ಪರ್ವತ್ತೋಮತ್ವವನ್ನು ಹೇಳಿಲ್ಲ ಅಂತ **'ತತ್ತ್ವಸಮನ್ವಯಾತ್'** ಅಂತ ಯಾವುದನ್ನು ವೇದವ್ಯಾಸ ದೇವರು ತಿಳಿಸಿ ಕೊಡುತ್ತಾರೋ ಆ ತತ್ತ್ವವನ್ನ ನಾರದರು ಇಲ್ಲಿ ತಿಳಿಸಿಕೊಡುತ್ತಾ ಇದ್ದಾರೆ. ಈ ರೀತಿ ಆ ಭಗವಂತನ ಸರ್ವೋತ್ತಮತ್ವದ ಸ್ಥಾಪನೆಯನ್ನು ಆ ದ್ವಾರಕಾ ಪಟ್ಟಣದ ಭವ್ಯವಾದ ಸಭೆಯಲ್ಲಿ ಪ್ರಾಯಃ ಸುಧರ್ಮ ಸಭೆಯಲ್ಲಿ ಎಲ್ಲ ಯಾದವರ ಮಧ್ಯದಲ್ಲಿ ಸಮರ್ಥನೆ ಮಾಡಿದ್ದಾರೆ.

1. 102.39 ವಿಷ್ಣುಪರ್ವ, 2. 102.39 ವಿಷ್ಣುಪರ್ವ

ಆಮೇಲೆ ಜನಮೇಜಯ ಕೇಳುತ್ತಾ ಇದ್ದಾನೆ ಕೃಷ್ಣನ ಸಂತಾನದ ಬಗ್ಗೆ ಸ್ವಲ್ಪ ವರ್ಣನೆ ಮಾಡಿ, ಪೂರ್ಣ ಕೇಳಲಿಕ್ಕೆ ನನಗೆ ಧೈರ್ಯನೂ ಇಲ್ಲ, ಅಷ್ಟೆಲ್ಲ 16,108 ಜನರ ಸಂತತಿಯ ಶ್ರವಣವನ್ನು ಮಾಡಲಿಕ್ಕೆ ಆಗುವುದಿಲ್ಲ ಸ್ವಲ್ಪ ಹೇಳಿ. ಅಂತಹ ಶ್ರೀಕೃಷ್ಣ ಪರಮಾತ್ಮನಿಂದ ಅವತಾರ ಮಾಡಿದ್ದಾರೆ ಅಂದರೆ ಅವರೆಲ್ಲಾ ಮಹಾನುಭಾವರು ಅವರ ಹೆಸರಾದರೂ ಸ್ವಲ್ಪ ಕೇಳೋಣ ಅಂತ. ರುಕ್ಮಿಣಿಯಲ್ಲಿ ಪ್ರದ್ಯುಮ್ನ, ಚಾರುದೇಷ್ಣ, ಚಾರುಭದ್ರ, ಚಾರುಗರ್ಭ, ಸುದೇಷ್ಣ, ದ್ರುಮ, ಸುಷೇಣ, ಚಾರುಗುಪ್ತ, ಚಾರುವಿಂದ, ಚಾರುಬಾಹು ಎಂಬ ಮಕ್ಕಳಿಗೆ ಜನ್ಮವನ್ನು ಕೊಟ್ಟಿದ್ದಾಳೆ ಚಾರುಮತಿ ಅಂತನ್ನುವ ಕನ್ಯೆ ಹುಟ್ಟಿದ್ದಾಳೆ. ಇನ್ನು ಭಾನು, ಭೀಮರಥ, ರೋಹಿತ, ದೀಪ್ತಿಮಾನ್, ತಾಮ್ರಜಾಕ್ಷ, ಜಲಾಂತಕ ಅಂತನ್ನುವ ಗಂಡು ಮಕ್ಕಳು ಭಾನು, ಭೀಮಲಿಕಾ, ತಾಮ್ರಪರ್ಣಿ, ಜಲಂಧಮಾನ ಅನ್ನುವ ಹೆಣ್ಣು ಮಕ್ಕಳನ್ನ ಪರಮಾತ್ಮ ಸತ್ಯಭಾಮಾ ದೇವಿಯಲ್ಲಿ ಪಡೆದಿದ್ದಾನೆ. ಜಾಂಬವತಿಯಲ್ಲಿ ಸಾಂಬ, ಮಿತ್ರವಿಂದಾಳಲ್ಲಿ ಮಿತ್ರವಾನ್, ಮಿತ್ರವಿಂದ, ಮಿತ್ರವತಿ ಅಂತನ್ನುವ ಮಗಳು ಮಿತ್ರಬಾಹು ಸುನೀಥ. ಆಮೇಲೆ ನಾಗ್ನಜಿತಿ ನೀಲಾ ಅಥವಾ ಸತ್ಯ ಅಂತೂ ಅವಳನ್ನು ಕರೆಯುತ್ತಾರೆ. ಅವಳಲ್ಲಿ ಭದ್ರಕಾರ, ಭದ್ರವಿಂದ, ಭದ್ರವತಿ ಅನ್ನುವ ಮಗಳು. ಸುದತ್ತಾ ಅನ್ನುವವಳಲ್ಲಿ ಸಂಗ್ರಾಮಜಿತ್, ಸತ್ಯಜಿತ್, ಸೇನಜಿತ್, ಸಪತ್ನಜಿತ್. ಸುಭೀಮಾ ಅನ್ನುವಗಳಲ್ಲಿ ವ್ರಕಾಶ್ವ, ವೃಕನಿವೃತಿ, ಕುಮಾರ, ವೃಕದೀಪ್ತಿ. ಲಕ್ಷ್ಮಣಾ ಅನ್ನುವಗಳಲ್ಲಿ ಗಾತ್ರವಾನ್, ಗಾತ್ರಗುಪ್ತ, ಗಾತ್ರವಿಂದ, ಗಾತ್ರವತಿ ಅನ್ನುವವಳು ಹುಟ್ಟಿದ್ದಾಳೆ.

ಜಜ್ಞಿರೇ ಗಾತ್ರವತ್ಯಾ ಚ ಭಗಿನ್ಯಾಽನುಜಯಾ ಸಹ ॥ (103.14 ವಿಷ್ಣುಪರ್ವ)

ಆಮೇಲೆ ಅಶ್ರುತ ಅನ್ನುವವನು ಕಾಲಿಂದಿಯಿಂದ ಹುಟ್ಟಿದ್ದಾನೆ. ಆ ಕಾಲಿಂದಿಯಿಂದ ಹುಟ್ಟಿದ ಅಶ್ರುತನನ್ನು ಶ್ರುತಸೇನ ಅನ್ನುವ ತನ್ನ ಇನ್ನೊಬ್ಬ ಹೆಂಡತಿ ಅವರಿಬ್ಬರನ್ನು ಕರೆದಿದ್ದಾನೆ ಕಾಲಿಂದಿ ಮತ್ತು ಶ್ರುತಸೇನ, ಸುತಸೇನ – ಶ್ರುತಸೇನ ಅಂತ ಎರಡೂ ಪಾಠ ಇದೆ. ಆ ಸುತಸೇನ ಮತ್ತು ಕಾಲಿಂದಿ ನೀವಿಬ್ಬರೂ ಹುಟ್ಟಿದ್ದು ಕಾಲಿಂದಿಯಿಂದ ಆದರೆ ಇಬ್ಬರೂ ಸೇರಿ ನಿಮ್ಮ ಮಗನಂತೆ ಬೆಳೆಸಿರಿ ಇವನನ್ನ ಅಂತ ಪರಮಾತ್ಮ ಆ ಅಶ್ರುತನನ್ನ ಇಬ್ಬರಿಗೆ ಕೊಟ್ಟಿದ್ದಾನೆ. ಬೃಹತಿ ಅನ್ನುವವಳು ಗದನನ್ನ ಪಡೆದಿದ್ದಾಳೆ, ಶೈಬ್ಯಾ ಅಂಗದನನ್ನ, ಕುಮುದ ಶ್ವೇತ, ಶ್ವೇತಾ ಅನ್ನುವವಳನ್ನ ಆಮೇಲೆ ಸುದೇವ ಅನ್ನುವವಳು ಚಿತ್ರಸೇನ, ಚಿತ್ರ, ಚಿತ್ರವತಿ ಅನ್ನುವವರನ್ನು ಪಡೆದಿದ್ದಾರೆ ಕೌಶಿಕಿ ಅನ್ನುವವಳಲ್ಲಿ ಇವರೆಲ್ಲ ಹುಟ್ಟಿದ್ದಾರೆ. ಆಮೇಲೆ ಸುತಸೋಮ ಅನ್ನುವವಳಲ್ಲಿ ವನಸ್ತಂಭ, ಸ್ತಂಬವಾನ್, ನಿವಾಸನ, ಸ್ತಂಬವತಿ ಅನ್ನುವ ಕನ್ಯೆ. ಆಮೇಲೆ ಯೌಧಿಷ್ಠಿರಿ ಅವಳಲ್ಲಿ ಯುಧಿಷ್ಠಿರ, ಕಪಾಲಿ, ಗರುಡ ಅನ್ನುವವರು ಹುಟ್ಟಿದ್ದಾರೆ ಹೀಗೆ ಅನೇಕ ಪತ್ನಿಯರಲ್ಲಿ ಅನೇಕ ಪುತ್ರರಾಗಿದ್ದಾರೆ ಅನ್ನುವುದಕ್ಕೆ ಕೆಲವುದನ್ನ ಮಾತ್ರ ಹೇಳಿದ್ದಾರೆ. ಹೀಗೆ ಒಟ್ಟಾರೆ 16,108 ಜನರಲ್ಲಿ ಭಗವಂತ ಮಕ್ಕಳನ್ನು ಪಡೆದಿದ್ದಾನೆ ಅಂತ ಪರಮಾತ್ಮನ ಮಗನಾದ ಪ್ರದ್ಯುಮ್ನನಿಗೆ ಅನಿರುದ್ಧ ಹುಟ್ಟಿದ್ದಾನೆ. ಬಲರಾಮ ದೇವರು – ರೇವತಿ ದೇವಿಯಲ್ಲಿ ಶಠ, ಉಲ್ಮುಕ ಅಂತ ಅರ್ಯಮ ಮತ್ತು ಅಂಶಕ ಅನ್ನುವ ಸೂರ್ಯನ ಅವತಾರರು ಅಂತ ಶ್ರೀಮದಾಚಾರ್ಯರು ನಿರ್ಣಯದಲ್ಲಿ ತಿಳಿಸುತ್ತಾರೆ ಈ ರೀತಿ ಹುಟ್ಟಿದ್ದಾರೆ. ಇನ್ನು ವಸುದೇವನಿಗೆ ಸುತನು, ಸುತಾರ ಅಂತ ಇಬ್ಬರು ಸುತನುಳಲ್ಲಿ ಪೌಂಡ್ರಕವಾಸುದೇವ, ಆ ಸುತಾರಳಲ್ಲಿ ಕಪಿಲ ಅನ್ನುವವನು ಹುಟ್ಟಿದ್ದಾನೆ ಅಂತ ತಿಳಿಸುತ್ತಾರೆ. ಜರಾ ಅನ್ನುವಂತಹ ಒಬ್ಬ ನಿಷಾದ ವಸುದೇವನಿಂದಲೇನೆ ಹುಟ್ಟಿದ್ದಾನೆ. ಆಮೇಲೆ ಪ್ರದ್ಯುಮ್ನನ ಮಗನಾದ ಅನಿರುದ್ಧನಿಗೆ ವಜ್ರ, ವಜ್ರನಿಗೆ ಪ್ರತಿರಥ, ಪ್ರತಿರಥನಿಗೆ ಸುಚಾರು ಅನ್ನುವ ಮಗ ಹುಟ್ಟಿದ್ದಾನೆ. ಇನ್ನು ಮತ್ತೆ ಹಿಂದೆ ಹೇಳಿದ ವಿಷಯವನ್ನು ತಿಳಿಸುತ್ತಾರೆ ಅನಮಿತ್ರನಿಂದ ಆ ವಂಶದಲ್ಲಿ ಸಾತ್ಯಕಿ ಮೊದಲಾದವರು ಹುಟ್ಟುತ್ತಾರೆ, ಯುಗಂಧರವನನಿಗೆ ಆ ಸಾತ್ಯಕಿಯ ವಂಶ ಮುಂದುವರೆಯುತ್ತದೆ ಅಂತ ತಿಳಿಸಿಕೊಡುತ್ತಾರೆ. ಹೀಗೆ ವಂಶದ ಪರಿಚಯವನ್ನು ಜನಮೇಜಯನಿಗೆ ಮಾಡಿಸಿಕೊಟ್ಟಿದ್ದಾರೆ.

ಅದಾದ ಮೇಲೆ ಪ್ರದ್ಯುಮ ಶಂಬರಾಸುರನ ಸಂಹಾರ ಮಾಡಿದ ಅನ್ನುವ ಮಾತನ್ನು ಹಿಂದೆ ಪ್ರದ್ಯುಮ್ನನ ಮಹಿಮೆಯನ್ನ ವರ್ಣನೆ ಮಾಡುವಾಗ ಹೇಳಿದಿರಿ ಆ ಶಂಬರಾಸುರನ ಸಂಹಾರ ಮಾಡುವ ರೀತಿ ಹೇಗೆ ಅನ್ನುವುದನ್ನ ತಿಳಿಸಿಕೊಡಿ ಅಂತ ಕೇಳಿದಾಗ ವೈಶಂಪಾಯನರು ಹೇಳುತ್ತಾರೆ. ಶ್ರೀಕೃಷ್ಣ ಪರಮಾತ್ಮ ರುಕ್ಮಿಣಿ ದೇವಿಯಲ್ಲಿ ಪ್ರದ್ಯುಮನನ್ನ ಪಡೆದು ಏಳನೆಯ ದಿನಕ್ಕೆ ಆ ಪ್ರದ್ಯುಮನನ್ನ ಶಂಬರಾಸುರ ಅಪಹಾರ ಮಾಡಿಕೊಂಡು ಹೋದ. ಶ್ರೀಮದಾಚಾರ್ಯರು ತಿಳಿಸುವಂತೆ ಅವನು ಅಪಹಾರ ಮಾಡಿಕೊಂಡು ಹೋಗಿ ಸಮುದ್ರದಲ್ಲಿ ಹಾಕಿದ ಅದನ್ನು ಒಂದು ಮೀನು ನುಂಗಿದೆ, ಮೀನುಗಾರ ಅದನ್ನ ಕತ್ತರಿಸುವಾಗ ನೋಡಿದ ಆಶ್ಚರ್ಯ ಅಂತ ಅನ್ನಿಸಿತು, ಆಶ್ಚರ್ಯ ಏನೇ ಕಂಡರೂ ಅದು ರಾಜನ ಸ್ವತ್ತು ಅಂತ ರಾಜನಿಗೆ ತಂದು ಒಪ್ಪಿಸಿದ ಶಂಬರಾಸುರನಿಗೆ. ನೋಡಿ ಅಂದರೆ ತನ್ನನ್ನ ಕೊಲ್ಲುವ ವ್ಯಕ್ತಿ ಇಲ್ಲಿ ಹುಟ್ಟಿದ್ದಾನೆ ಅಂತ ಗೊತ್ತಾದದ್ದಕ್ಕೆ ಹುಟ್ಟಿದಾಗಲೇ ಅವನನ್ನ ಸಮುದ್ರದಲ್ಲಿ ಹಾಕಿಬಿಟ್ಟರೆ ನನ್ನನ್ನು ಕೊಲ್ಲುವ ಶತ್ರುವೇ ಇಲ್ಲದಂತೆ ಆಗುತ್ತದೆ ಅಂತ ಕಂಸ ಮಾಡಿದ ಆಲೋಚನೆ ಇವನದು. ಆದರೆ ಈ ಕಂಸನಂತಹ ಆಲೋಚನೆಯನ್ನ ಶಂಬರ ಮಾಡಿದರೆ ಕಂಸಾದಿ ಆಗಿರುವಂತಹ ಶ್ರೀಕೃಷ್ಣ ಪರಮಾತ್ಮ ಅದಕ್ಕೆ ಸರಿಯಾದ ವ್ಯವಸ್ಥೆಯನ್ನು ಮಾಡಿದ. ಇವನ ಮೃತ್ಯುವನ್ನ ಇವನು ಸಮುದ್ರದಲ್ಲಿ ಎಸೆದರೆ ಅದು ಮತ್ತೆ ಇವನ ಮನೆಗೆ ಬಂತು ಅದನ್ನ ತಂದು ಇವನಿಗೇ ಒಪ್ಪಿಸಿದ್ದಾರೆ. ಅದು ಗೊತ್ತಿಲ್ಲ ನಾನು ಎಸೆದ ಕೂಸೇ ಇದು ಬಂತು ಅಂತ ಶಂಬರಾಸುರ ತನ್ನ ಮಡದಿಯ ಕೈಯಲ್ಲಿ ಕೊಟ್ಟ ಇದನ್ನು ಚೆನ್ನಾಗಿ ಬೆಳೆಸು ಅಂತ ಅವಳು ಬೆಳೆಸುತ್ತಾ ಇದ್ದಾಳೆ. ಅವನ ಮಡದಿ ಯಾರು ಮಾಯಾವತಿ ಆ ಮಾಯಾವತಿ ಅಂತಂದರೆ ಅವಳು ನಿಜವಾಗಿ ಕಾಮನ ಹೆಂಡತಿ ರತಿ ಅವಳು, ಕಾಮನ ಹೆಂಡತಿ ರತಿ ದೇವಿಯೇ ಮಾಯಾವತಿಯಾಗಿ ಇಲ್ಲಿ ಬಂದಿದ್ದಾಳೆ. ಅವಳು ಯಾಕೆ ಇಲ್ಲಿ ಬಂದಳು ದೇವತಾ ಸ್ತ್ರೀಯರು ತಮ್ಮ ಪತಿಯರನ್ನು ಬಿಟ್ಟು ಬೇರೆಯವರ ಸಂಗ ಮಾಡುವುದಿಲ್ಲವಲ್ಲ ಅನಾದಿಕಾಲದಿಂದಲೂ ಅವರ ಜೊತೆಗೆ ಇರಬೇಕಲ್ಲವಾ. ಅಹುದು ಆದರೆ ಒಂದು ಸಂದರ್ಭದಲ್ಲಿ ದ್ರೌಪದಿ ದೇವಿಗೆ ಪಂಚ ಪತಿಗಳ ಸಂಯೋಗವಾಗುತ್ತೆ ಅಂತನ್ನುವ ಕಥೆಯನ್ನ ಕೇಳುವಾಗ ಇವಳು ಅಪಹಾಸ ಮಾಡುತ್ತಾಳೆ ರತಿ. ದ್ರೌಪದಿ ದೇವಿಯ ದೇಹದಲ್ಲಿ ಒಂದು ಚೇತನ ಅಲ್ಲ ಐದು ಜನ ಇದ್ದಾರೆ ಭಾರತೀ ದೇವಿಯೂ ಇದ್ದಾಳೆ, ಶ್ಯಾಮಲಾ ದೇವಿ ಇದ್ದಾಳೆ, ಶಚಿ ದೇವಿ ಇದ್ದಾಳೆ, ಉಷಾ ದೇವಿ ಇದ್ದಾಳೆ ಅವರವರಿಗೆ ಅವರವರ ಪತಿಗಳ ಸಂಯೋಗವಾಗಿದೆ ಅಂತನ್ನುವ ಶಾಸ್ತ್ರದ ತತ್ವವನ್ನ ತಿಳಿಯದಂತೆ ಅಪಹಾಸ ಮಾಡಿದ ಕಾರಣಕ್ಕೆ ಬ್ರಹ್ಮ ದೇವರು ಶಾಪ ಕೊಡುತ್ತಾರೆ ನಿನಗೆ ಅಸುರರ ಸಂಗ ಆಗಲಿ. ಅವರವರ ಪತಿಯ ಸಂಗವೇ ಆ ಆ ದೇವತಾ ಸ್ತ್ರೀಯರಿಗೆ ಆಗಿದೆ, ಪರ ಪುರುಷರ ಸಂಗ ಆಗಿಲ್ಲ.ಅದು ಆ ದೇವತೆಗಳ ಅದ್ಭುತವಾದ ಶಕ್ತಿ. ದೇಹ ಒಂದಾದರೂ ಅವರವರ ಪತಿಗಳ ಜೊತೆಗೆ ಸಂಯೋಗವಾಗುವಾಗ ಅವರವರಿಗೆ ಮಾತ್ರ ಆ ದೇಹದ ಮೇಲೆ ಅಭಿಮಾನ, ಉಳಿವರಿಗೆಲ್ಲ ಅವರೆಲ್ಲರೂ ಕೂಡ ಅಲ್ಲಿ ಸೂಕ್ತರಾಗಿ ಇರುತ್ತಾ ಇದ್ದರು. ದೇಹದ ಮೇಲೆ ಅವರಿಗೆ ಅಭಿಮಾನ ಇಲ್ಲ ಸೂಕ್ತಿ ಅಂದರೆ ಸೂಕ್ತಿ ಇದ್ದ ಹಾಗೆ ಅಲ್ಲ ವಿಲಕ್ಷಣವಾದ ರೀತಿಯಲ್ಲಿ.

ಅನ್ಯಾದೃಶೀ ಹಿ ಸುರಭುಕ್ತಿರತೋऽನ್ಯರೂಪಾ
ಮಾನುಷ್ಯಭುಕ್ತಿ ರಿತಿ ನಾತ್ರ ವಿಚಾರ್ಯಮಸ್ತಿ ॥ (19.187 ಮಭಾತಾನಿರ್ಣಯ)

ಅಂತ ಶ್ರೀಮದಾಚಾರ್ಯರು ತಿಳಿಸಿಕೊಟ್ಟಿದ್ದಾರೆ. ಪುನಃ ಪುನಃ ಜನ್ಮವಿದ್ದಂತೆನೇ ಅಂತ ಅದು ದೇಹಾಭಿಮಾನವನ್ನ ಬಿಟ್ಟರೆ ಅವರ ದೃಷ್ಟಿಯಲ್ಲಿ ಆ ದೇಹದ ಮರಣ ಹೊಸ ಜನ್ಮವೇ ಇನ್ನೊಂದು ಇನ್ನೊಬ್ಬರಿಗೆ ಅಭಿಮಾನ ಬಂತು ಅಂದರೆ ಅವರ ಜನ್ಮ ಆದ ಹಾಗೆ. ಈ ರೀತಿಯ ವಿಚಿತ್ರವಾದ ಆ ದೇವತೆಗಳ ಭೋಗದ

ಕ್ರಮವನ್ನ ತಿಳಿಯದೇ ಅಪಹಾಸ ಮಾಡಿದ್ದಕ್ಕೆ ಅಸುರರ ಸಂಗ ಆಗಲಿ ಅಂತ. ಪುನಃ ಪ್ರಾರ್ಥನೆ ಮಾಡಿಕೊಂಡಾಗ ಸರಿ ಅಸುರರ ಮನೆಯಲ್ಲಿ ಅಂತೂ ನೀನು ಇರು, ನಿನ್ನ ಶರೀರಕ್ಕೆ ಏನು ಅಸುರರ ಸಂಗ ಆಗಬೇಕು ಅಂತಿಲ್ಲ, ನೀನು ಮಾಯಾ ದೇಹವನ್ನು ಬೇಕಾದರೆ ಸೃಷ್ಟಿ ಮಾಡಿ ಅಸುರರ ಹತ್ತಿರ ಕಳಿಸು. ಅವಳಿಗೆ ಮಾಯಾ ವಿದ್ಯೆ ಗೊತ್ತಿತ್ತು ನಿಜವಾದ ಮಾಯಾವತಿ ಅಲ್ಲ ತನ್ನಂತಹ ಒಂದು ಮಾಯಾ ಮಾಯಾವತಿ ರೂಪವನ್ನು ಸೃಷ್ಟಿ ಮಾಡಿ ಶಂಭುರಾಸುರನ ಹತ್ತಿರ ಕಳಿಸುತ್ತಾ ಇದ್ದಳು ಅಷ್ಟೇ. ತಾನು ಮಾತ್ರ ಪರಿಶುದ್ಧಳಾಗಿಯೇ ಇದ್ದಾಳೆ. ಅವಳು ಈ ಪ್ರದ್ಯುಮ್ನನನ್ನ ಒಳ್ಳೆಯ ರಸಾಯನಗಳನ್ನು ಕೊಟ್ಟು ಒಂದೆರಡು ವರ್ಷದಲ್ಲಿ ಅವನನ್ನು ತರುಣನನ್ನಾಗಿ ಮಾಡಿ ಬೆಳೆಸುತ್ತಾಳೆ. ಅಂತಹ ಅದ್ಭುತವಾದ ರಸಾಯನಗಳು ಇವೆ, ಸಿಕ್ಕರೆ ನೀವುಗಳೂ ಕೂಡ ಉಪಯೋಗಿಸಬಹುದು ಕೆಲವೇ ದಿನ ಅದರ ಸೇವನೆಯನ್ನು ಮಾಡಿದರೆ ಉತ್ತಮವಾದ ತಾರುಣ್ಯ ಶಕ್ತಿ ಬಂದುಬಿಡುತ್ತದೆ

ರಸಾಯನಪ್ರಯೋಗೈಶ್ಚ ಶೀಘ್ರಮೇವ ವ್ಯವರ್ಧಯತ್ ॥ (104.13 ವಿಷ್ಣುಪರ್ವ)

ಸ್ತನ್ಯಪಾನಾದಿಗಳನ್ನು ಮಾಡಿಸುವುದಕ್ಕೆ ತಾನು ಮಾಡಿಸುತ್ತಾ ಇಲ್ಲ ಯಾಕೆಂದರೆ ನಾನು ಹೆಂಡತಿ, ನಾನು ತಾಯಿಯಾಗಿ ಬಿಟ್ಟರೆ ನಾಳೆ ಮದುವೆ ಮಾಡಿಕೊಳ್ಳಲಿಕ್ಕೆ ಆಗುವುದಿಲ್ಲ ಅಂತ ತನ್ನ ಧಾತ್ರಿ ಮತ್ತೊಬ್ಬಳಿಗೆ ಕೊಟ್ಟು ನೀನು ಸ್ತನ್ಯಪಾನಾದಿಗಳನ್ನು ಮಾಡಿಸು ಅಂತ ಹೇಳುತ್ತಾಳೆ, ತಾನು ಮಾತ್ರ ರಸಾಯನಾದಿಗಳನ್ನು ಕೊಟ್ಟು ಬೆಳೆಸುತ್ತಾಳೆ ಅಷ್ಟೇ. ದೊಡ್ಡವನಾದದ್ದೇ ತಡ ಸ್ವಲ್ಪ ನಾಚಿಕೆಯನ್ನು ತೋರಿಸುತ್ತ ಇದ್ದಾಳೆ ಅವನಿಗೆ ಆಶ್ಚರ್ಯ ಆಯಿತು ತಾಯಿಯಾಗಿ ನೀನು ಈ ರೀತಿ ಹೆಂಡತಿ ತೋರಿಸುವ ಹಾಗೆ ಯಾಕೆ ನಾಚಿಕೆಯನ್ನು ತೋರಿಸುತ್ತಾ ಇದ್ದೀಯಲ್ಲ ಅಂತ ನಾನು ತಾಯಿ ಅಲ್ಲ ನಾನು ನಿನ್ನ ಹೆಂಡತಿಯೇ ಅಂತ ಸತ್ಯ ಕಥೆಯನ್ನೆಲ್ಲ ಹೇಳುತ್ತಾಳೆ. ನೀನು ಕಾಮ ರುದ್ರ ದೇವರು ನಿನ್ನನ್ನು ಭಸ್ಮ ಮಾಡಿ ಹಾಕಿದರು, ನೀನು ದೇಹವನ್ನು ಕಳೆದುಕೊಂಡೆ, ನಾನು ಬ್ರಹ್ಮ ದೇವರ ಶಾಪದಿಂದ ಇಲ್ಲಿ ಬಂದು ಬಿದ್ದೆ ಈಗ ಪುನಃ ನಿನ್ನ ಮದುವೆಯಾಗುವ ಯೋಗ ಬಂದಿದೆ ನನ್ನನ್ನು ಮದುವೆ ಮಾಡಿಕೋ ಕರೆದುಕೊಂಡು ಹೋಗು ದ್ವಾರಕೆಗೆ ಇಷ್ಟೇ ಇರುವುದು ಕಥೆ. ನಿನ್ನ ಶಕ್ತಿ ಪರಾಕ್ರಮಗಳನ್ನು ಉಪಯೋಗಿಸಿ ಈ ಶಂಬರಾಸುರನನ್ನು ಸಂಹಾರ ಮಾಡು ನಿನಗೆ ಎಲ್ಲಾ ಮಾಯಾ ವಿದ್ಯೆಯನ್ನು ನಾನು ನಿನಗೆ ಕಲಿಸಿಕೊಡುತ್ತೇನೆ ಅಂತ ಹೇಳಿ ಆಗಲೇ ಕಲಿಸಿ ಕೊಟ್ಟುಬಿಟ್ಟಿದ್ದಾಳೆ. ಎಲ್ಲಾ ಮಾಯಾ ವಿದ್ಯೆ ಅದಕ್ಕಾಗೇನೆ ಇಷ್ಟು ದಿವಸ ಎಲ್ಲಾ ಕಥೆಯಲ್ಲಿ ಕೇಳುತ್ತಾ ಇದ್ದೀರಲ್ಲ ಪ್ರದ್ಯುಮ್ನ ನಾನಾ ವಿಧವಾದ ಮಾಯಾ ವಿದ್ಯೆಗಳನ್ನು ಉಪಯೋಗಿಸುತ್ತಾ ಇದ್ದ ಅಂತ ಅದನ್ನೆಲ್ಲ ಹೆಂಡತಿಯಿಂದ ಕಲಿತಿದ್ದೆ. ಈ ರೀತಿಯ ಮಾತುಗಳನ್ನ ಕೇಳಿ ಸರಿ ಹಾಗಾದರೆ ಭಗವಂತನ ಸಂಕಲ್ಪ ಅಂತ ತಿಳಿದುಕೊಂಡ ಯುದ್ಧವನ್ನ ಮಾಡುವುದಕ್ಕೆ ಸಿದ್ಧನಾಗಿದ್ದಾನೆ. ಏನು ಸುಮ್ಮನೇ ಯುದ್ಧ ಯಾಕೆ ಮಗ ಅಂತೇ ತಿಳಿದುಕೊಂಡಿದ್ದಾನೆ ಅವನು ಶಂಬರ, ಇವನು ಶತ್ರು ಅಂತ ಗೊತ್ತೇ ಇಲ್ಲ ಅವನಿಗೆ ಯಾವುದೋ ಒಂದು ಸಮುದ್ರದೊಳಗೆ ಸಿಕ್ಕ ಮಗು ಒಳಗೆ ಬಂದು ಬೆಳೆಯುತ್ತಾ ಇದೆ ಅಂತ. ಆದರೆ ಇವನು ಜೋರಾಗಿ ಧ್ವನಿಯನ್ನು ಮಾಡಿದ್ದಾನೆ ಧ್ವನಿ ಮಾಡುವುದಷ್ಟೇ ಅಲ್ಲ ಅಲ್ಲಿ ಅವನದೊಂದು ಧ್ವಜ ಇತ್ತು ಭಾರೀ ಧ್ವಜ ಆ ರಾಜ್ಯದ ಎಲ್ಲರನ್ನ ಸೋಲಿಸಿ ತಾನು ಗೆದ್ದು ಬಂದದ್ದರ ಚಿಹ್ನ ಆ ಧ್ವಜವನ್ನು ಕಿತ್ತು ಎಸೆದ ಮೊದಲನೆಯ ಕೆಲಸ ಪ್ರದ್ಯುಮ್ನ. ಅವನಿಗೆ ಬಹಳ ಅವಮಾನ ಆಯಿತು ಹಾಗಾದರೆ ಇವನು ನನ್ನ ಶತ್ರು ಇವನು ನನ್ನ ಮಗ ಅಲ್ಲ, ಮಗ ಆಗಿದ್ದರೆ ಧ್ವಜ ಕೆಳಗೆ ಬೀಳಿಸುತ್ತಾ ಇರಲಿಲ್ಲ ಹಾರಿಸುತ್ತಾ ಇದ್ದ ಬೀಳಿಸಿದ್ದಾನೆ ಅಂದರೆ ಇವನು ಶತ್ರು ಇವನ ಜೊತೆಗೆ ಯುದ್ಧ ಆಗಬೇಕು ಅಂತ ಎಲ್ಲಾ ಆಯುಧಗಳಿಂದ ಸಹಿತರಾಗಿ ಎಲ್ಲರೂ ಸಿದ್ಧರಾಗಿ ಅಂತ ಅಸುರರಿಗೆಲ್ಲಾ ಆಜ್ಞೆಯನ್ನು ಮಾಡಿದ್ದಾನೆ ಯುದ್ಧ ಪ್ರಾರಂಭವಾಯಿತು. ಚಿತ್ರಸೇನ, ಅತಿಸೇನ, ವಿಶಕ್ಷೇನ, ಗದ, ಶ್ರುತಸೇನ, ಸುಷೇಣ, ಸೋಮಸೇನ ಇತ್ಯಾದಿ ಎಲ್ಲ ಭಾರೀ ಭಾರೀ ಪರಾಕ್ರಮಿಗಳೆಲ್ಲ ಯುದ್ಧಕ್ಕೆ ಬಂದಿದ್ದಾರೆ

ಅವರೆಲ್ಲರ ಜೊತೆಗೆ ಯುದ್ಧವನ್ನು ಆಡುತ್ತಾ ಇದ್ದಾನೆ. ಶಂಬರಾಸುರನಿಗೆ ನೂರು ಜನ ಮಕ್ಕಳು ಇವನು ಒಬ್ಬ ಆ ನೂರು ಜನರ ಜೊತೆಗೆ ಒಬ್ಬ ಯುದ್ಧ ಆಡುತ್ತ ಇದ್ದಾನೆ.

ಶಮ್ಬರಸ್ಯ ಶತಂ ಪುತ್ರಾ ಏಕಃ ಕೃಷ್ಣಸ್ಯ ಚಾತ್ಮಜಃ । (104.53 ವಿಷ್ಣುಪರ್ವ)

ಅಸುರರ ಸಂಖ್ಯೆ ಬಹಳ ಇರಬಹುದು, ದೇವತೆಗಳ ಸಂಖ್ಯೆ ಕಡಿಮೆ ಇರಬಹುದು ಅಥವಾ ಒಬ್ಬರೇ ಇರಬಹುದು ಆದರೆ ಅವರ ಕಡೆಗೆ ಭಗವಂತ ಇರುತ್ತಾನೆ, ಧರ್ಮ ಇರುತ್ತದೆ ಅಲ್ಲಿ ವಿಜಯವಾಗುತ್ತೆ ಅನ್ನುವುದನ್ನ ಇಲ್ಲಿ ತೋರಿಸಿಕೊಡುತ್ತಾ ಇದ್ದಾರೆ.

ಶಮ್ಬರಸ್ಯ ಶತಂ ಪುತ್ರಾ ಏಕಃ ಕೃಷ್ಣಸ್ಯ ಚಾತ್ಮಜಃ । (104.53 ವಿಷ್ಣುಪರ್ವ)

ಒಬ್ಬನೇ ಒಬ್ಬ ನೂರು ಜನರನ್ನೂ ಎದುರಿಸಿದ್ದಾನೆ ಕ್ರಮವಾಗಿ ಮೊದಲಿಗೆ ಹತ್ತು ಜನರನ್ನ ಸಂಹಾರ ಮಾಡಿದ, ಚಿತ್ರಸೇನನನ್ನು ಸಂಹಾರ ಮಾಡಿದ ಹೀಗೆ ಆಮೇಲೆ ಇನ್ನು ಎಂಭತ್ತೊಂಭತ್ತು ಜನ ಅವರೆಲ್ಲರನ್ನೂ ಕೂಡ ಸಂಹಾರ ಮಾಡಿದ್ದಾನೆ ಬಾಣಗಳಿಂದ, ಒಬ್ಬೊಬ್ಬರನ್ನ ಸಂಹಾರ ಮಾಡುತ್ತ ಮಕ್ಕಳೆಲ್ಲರನ್ನ ಸಂಹಾರ ಮಾಡಿದ ಸುದ್ದಿಯನ್ನು ಅವನಿಗೆ ಹೋಗಿ ತಿಳಿಸಿದ್ದಾರೆ. ಸ್ವತಃ ಶಂಬರ ತಾನು ಹತ್ತು ಸಾವಿರ ಆನೆಗಳು, ಎರಡು ನೂರು ರಥಗಳು, ಎಂಟು ಸಾವಿರ ಕುದುರೆಗಳು, ಇಪ್ಪತ್ತು ಸಾವಿರ ಪದಾತಿಗಳು ಇವರೆಲ್ಲರನ್ನ ಕರೆದುಕೊಂಡು ತಾನು ಸ್ವತಃ ಯುದ್ಧಕ್ಕೆ ಬಂದಿದ್ದಾನೆ. ಅವನ ಜೊತೆಗೆ ಯುದ್ಧ ಮಾಡಬೇಕು ಅಂತ ಹೊರಟರೆ ನೀನೇನು ಯುದ್ಧಕ್ಕೆ ಹೋಗುತ್ತೀಯೋ ಮೂರ್ಖ ನೀನೇ ಸೋಲುತ್ತೀಯಾ ಸಾಯುತ್ತೀಯಾ ಅಂತ ಹೇಳುವ ರೀತಿಯಲ್ಲಿ ಎಲ್ಲಾ ಅಪಶಕನುಗಳು ಅವನಿಗೆ ಆಗುತ್ತಾ ಇವೆ. ನರಿಗಳೆಲ್ಲಾ ಒದರುತ್ತ ಇವೆ ಪಾಪ, ಧ್ವಜದ ತುತ್ತ ತುದಿಯ ಮೇಲೆ ಬಂದು ಹದ್ದು ಕುಳಿತಿದೆ ಇವನು ಸತ್ತರೇ ಇವನ ರಕ್ತ ಕುಡಿಯೋಣ ಅಂತ ಒಂದಲ್ಲ ಎರಡಲ್ಲ ನಾನಾ ವಿಧವಾದ ಪಕ್ಷಿಗಳು ಕ್ರೂರವಾದಂತಹ ಪಶುಗಳೆಲ್ಲ ಒದರುತ್ತ ಇವೆ, ಸೂರ್ಯನನ್ನ ರಾಹು ಗ್ರಾಸ ಮಾಡಿದ್ದಾನೆ. ಇವನ ತಲೆಯ ಮೇಲೆ ಒಂದು ಕಾಗೆ ಬಂದು ಬಿದ್ದಿದೆ, ಎಲ್ಲ ಕಡೆಗೆ ರಕ್ತದ ಪಾತವಾಗುತ್ತ ಇದೆ ಉಲ್ಕಾಪಾತವಾಗುತ್ತ ಇದೆ ಹೀಗೆಲ್ಲಾ ಅಪಶಕನುಗಳೆಲ್ಲ ಸಾಮಾನ್ಯ ಏನಾಗಬೇಕೋ ಎಲ್ಲಾ ಆಗಿದೆ ಆದರೆ ಅಪಶಕನುಗಳೆಲ್ಲ ಆಯಿತು ಇದೆಲ್ಲಾ ಇದು ಒಂದು ಸೂಚನೆ. ಟ್ರೈನ್ ಹೋಗುತ್ತಾ ಇರುವಾಗ ನಿಲ್ಲಿ ಮುಂದೆ ಹೋಗಬೇಡಿ ಅಪಾಯ ಇದೆ,ರಿಪೇರಿ ನಡೆಯುತ್ತಾ ಇದೆ ಅಂತ ರೆಡ್ ಸಿಗ್ನಲ್ ತೋರಿಸುತ್ತಾರೆ. ನಿಂತು ರಿಪೇರಿ ಮುಗಿದ ಮೇಲೆ ಹೋದರೆ ಚೆನ್ನಾಗಿರುತ್ತದೆ ಇಲ್ಲದೇ ಇದ್ದರೆ ತಾನು ಸಾಯುತ್ತಾನೆ, ತನ್ನ ಜೊತೆಗೆ ಕರೆದುಕೊಂಡು ಹೋದವರನ್ನು ಕೊಲ್ಲುತ್ತಾನೆ ಅಷ್ಟೇ ಹಾಗೆ ದೇವರು ತೋರಿಸುವಂತಹ ಸಿಗ್ನಲ್ಸ್ ಇವೆಲ್ಲ ಅಪಶಕುನಗಳು ಅಂದರೆ ಬೇರೆ ಏನೂ ಅಲ್ಲ, ಶುಭಶಕುನಗಳು ಅಷ್ಟೇ ಅದು ಶುಭ ಅದು ಗ್ರೀನ್ ಸಿಗ್ನಲ್ ಇದ್ದ ಹಾಗೆ ಶುಭ ಇದೆ ಮುಂದುವರೆಯಿರಿ ಅಂತ. ಗ್ರೀನ್ ಸಿಗ್ನಲ್ಲು, ರೆಡ್ ಸಿಗ್ನಲ್ಲು ಏನು ಇವತ್ತು ತೋರಿಸುತ್ತಾರೆ ಅಂತ ತಿಳಿದುಕೊಳ್ಳಬೇಡಿ ದೇವರು ನಾನಾ ರೀತಿಯಿಂದ ತೋರಿಸತ್ತಾನೆ ಅದನ್ನು ತೋರಿಸಿದರೂ ಅದನ್ನು ಅನುಸರಿಸುವುದಿಲ್ಲ ಅಂದರೆ ಏನು ಆಘಾತ ಆಗುತ್ತೋ ಆಗುತ್ತೆ.

ಏತಾನಚಿನ್ತಯಿತ್ವಾ ತು ಉತ್ಪಾತಾನ್ಸಮುತಸ್ಥಿತಾನ್ । (105.28 ವಿಷ್ಣುಪರ್ವ)

ಇದರ ಕಡೆಗೆ ಆಲೋಚನೆಯನ್ನೇ ಮಾಡುತ್ತ ಇಲ್ಲ ದುರ್ಯೋಧನಾದಿಗಳೂ ಅಷ್ಟೇ, ಎಲ್ಲರೂ ಅಷ್ಟೇ ಅವರು ಏನು ಶಾಸ್ತ್ರ ಗೊತ್ತಿಲ್ಲದೆ ಇಲ್ಲದವರಲ್ಲ ಎಲ್ಲ, ಕೇಳಿರುತ್ತಾರೆ ಗೊತ್ತು ಆದರೂ ಅದರ ಬಗ್ಗೆ ವಿಶ್ವಾಸ ಇಲ್ಲ, ಶ್ರದ್ಧೆ ಇಲ್ಲ ಹೇ ಇದೆಲ್ಲ ಆಗುತ್ತ ಇರುತ್ತದೆ ಬಿಡು ಇದೇನು ದೊಡ್ಡದು ನೋಡುವುದು ಅಂತನ್ನುವ ತಿರಸ್ಕಾರದಿಂದ ತಾನು ಯಾವ

ಹೆಜ್ಜೆಯನ್ನು ಇಡಬೇಕು ಅಂತ ಆಲೋಚನೆ ಮಾಡದೇ ಹುಂಬತನದಿಂದ ಹೊರಟ ಎಲ್ಲರನ್ನು ಕರೆದುಕೊಂಡು ತಾನು ಸತ್ತ ಎಲ್ಲರನ್ನು ಕೊಂದ ರೆಡ್ ಸಿಗ್ನಲ್ ಇದ್ದರೂ ಮುಂದೆ ಹೋಗಿ ತಾನೂ ಸತ್ತು ಎಲ್ಲರನ್ನೂ ಕೊಲ್ಲುವ ಚಾಲಕನಂತೆ ಹೋಗುತ್ತ ಇದ್ದಾನೆ ಯುದ್ಧ ನಡೀತಾ ಇದೆ. ದುರ್ಧರ ಅನ್ನುವಂತಹ ಒಬ್ಬ ಮಂತ್ರಿಯನ್ನು ಮೊದಲು ಮುಂದೆ ಕಳಿಸಿದ ಇಪ್ಪತ್ತೈದು ಬಾಣಗಳಿಂದ ಅವನನ್ನು ಕೊಂದುಬಿಟ್ಟಿದ್ದಾನೆ, ಕೇತುಮಾಲಿ ಅರವತ್ತು ಮೂರು ಬಾಣಗಳಿಂದ ಅವನನ್ನು ಹೊಡೆದಿದ್ದಾನೆ, ಎಪ್ಪತ್ತು ಬಾಣಗಳನ್ನ ಪ್ರಮರ್ದನನಿಗೆ ಹೊಡೆದಿದ್ದಾನೆ ಹೀಗೆ ಒಬ್ಬೊಬ್ಬರನ್ನ ಒಂದೊಂದು ಸಂಖ್ಯೆಯ ಬಾಣಗಳಿಂದ ಹೊಡೆದು ಪದ್ಮುಮ್ನ ದೂರ ಓಡಿಸುತ್ತ ಇದ್ದಾನೆ. ಆಮೇಲೆ ಪುನಃ ಅವರು ಯುದ್ಧಕ್ಕೆ ಬಂದಾಗ ಒಬ್ಬೊಬ್ಬರನ್ನ ಕ್ರಮವಾಗಿ ಸಂಹಾರನೇ ಮಾಡಿದ್ದಾನೆ ಈ ರೀತಿ ಮಕ್ಕಳೂ ಸತ್ತರು, ಮಂತ್ರಿಗಳೂ ಸತ್ತರು ಇನ್ನೇನು ಉಳಿಯಿತು ತಾನೊಬ್ಬನೇ ಉಳಿದ.

ಮಾಯಾ ಯುದ್ಧವನ್ನು ಶುರುವು ಮಾಡಿದ ಹುಲಿಗಳು ಸಿಂಹಗಳು ಆನೆಗಳು ಚಿರತೆಗಳು ಇವುಗಳನ್ನೆಲ್ಲ ಸೃಷ್ಟಿ ಮಾಡುವುದು ಇವನ ಮೈಮೇಲೆ ಹಾಕುವುದು ಅವನು, ಏನು ಇದಕ್ಕೆ ಹೆದರುತ್ತ ಇರಲಿಲ್ಲ ಇವನು ಮಾಯಾ ಮೃಗಗಳು ಅಂತ ಗೊತ್ತು ಇವನಿಗೆ, ಇವನು ಅದಕ್ಕೆ ಪ್ರತಿಯಾಗಿ ಗಾಂಧರ್ವಾಸ್ತ್ರ ಅನ್ನುವ ಬಾಣವನ್ನು ಬಿಟ್ಟು ಆ ಎಲ್ಲ ಮಾಯೆಗಳನ್ನ ನಾಶ ಮಾಡಿ ಹಾಕಿದ. ಆಮೇಲೆ ನಾಗಮಾಯಾ ಅಂತ ನಾಗ ಅಂದರೆ ಆನೆಗಳು ನಾಗಮಾಯಾ ಬರೀ ಅರವತ್ತು ವರ್ಷದ ಆನೆಗಳನ್ನೇ ತಲೆಯ ಮೇಲೆ ಸುರಿಸುತ್ತಾ ಇದ್ದಾನೆ. ಅರವತ್ತು ವರ್ಷ ಅಂದರೆ ಒಳ್ಳೆಯ ತಾರುಣ್ಯ ಇದ್ದ ಹಾಗೆ ಆನೆಗಳಿಗೆ **'ಷಷ್ಠಿ ಹಾಯನ ಯೌವನ'** ಮಹಾಭಾರತದಲ್ಲಿಯೂ ಬೇರೆ ಪುರಾಣಗಳಲ್ಲಿಯೂ ರಾಮಾಯಣದಲ್ಲಿಯೂ ಇದು ಬಹಳ ಸಲ ಬರುತ್ತದೆ ಅರವತ್ತು ವರ್ಷ ಅನ್ನುವುದನ್ನ ಆನೆಗೆ ವಿಶೇಷವಾಗಿ ಹೇಳುತ್ತಾರೆ. ಆ ಅರವತ್ತು ವರ್ಷದ ಯೌವನದಿಂದ ಕೂಡಿದ ಈ ಒಂದು ಪ್ರಕರಣದಲ್ಲಿ ಭಾರೀ ಭಾರೀ ಆನೆಗಳ ಸುರಿಮಳೆ ನಾಗಮಾಯಾ, ಇವನು ಸೈಂಹೀ ಮಾಯಾ ಆನೆಗೆ ಸರಿಯಾಗಿ ಎದುರು ಮಾಡುವದಕ್ಕೆ ಸಿಂಹಗಳನ್ನು ಸೃಷ್ಟಿ ಮಾಡಿ ಇವನು ತಿರುಗಿ ಹಾಕುತ್ತ ಇದ್ದಾನೆ ಆ ಸಿಂಹಗಳು ಆನೆಗಳನ್ನು ಕೊಂದು ಹಾಕುತ್ತಾ ಇವೆ. ಸಮ್ಮೋಹಿನಿ ಮಾಯಾವನ್ನು ಶಂಬರಾಸುರ ಪ್ರಯೋಗ ಮಾಡಿದರೆ ಇವನು ವಿಜ್ಞಾನಾಸ್ತ್ರದಿಂದ ಆ ಸಮ್ಮೋಹಿನಿ ಮಾಯೆಯನ್ನು ಪರಿಹಾರ ಮಾಡಿಬಿಟ್ಟ. ಶಂಬರಾಸುರ ಪುನಃ ಸಿಂಹ ಮಾಯಾವನ್ನು ಪ್ರಯೋಗ ಮಾಡುತ್ತಾ ಇದ್ದಾನೆ, ಇವನು ಗಾಂಧರ್ವಾಸ್ತ್ರಗಳಿಂದ ಶರಭಗಳನ್ನು ಸೃಷ್ಟಿ ಮಾಡಿದ, ನಾಲ್ಕು ಕಾಲಿನ ಸಿಂಹ ಆದರೆ ಶರಭಕ್ಕೆ ಎಂಟು ಕಾಲು ಸಿಂಹವನ್ನೂ ಹೊಡೆಯುವ ಪ್ರಾಣಿ ಅಂತಹ ಶರಭಗಳನ್ನ ಸೃಷ್ಟಿ ಮಾಡಿ ಆ ಸಿಂಹಗಳನ್ನೆಲ್ಲ ಕೊಂದು ಹಾಕಿಸಿ ಓಡಿಸಿಬಿಟ್ಟ. ಆಗ ಶಂಬರಾಸುರ ಹಣೆಗಟ್ಟಿಸಿ ಕೊಳ್ಳುತ್ತ ಇದ್ದಾನೆ ಜೋರು ಜೋರಾಗಿ ಏನಂತ ಕೂಸಿದ್ದಾಗೇ ನನ್ನ ಕೈಗೆ ಸಿಕ್ಕಿದ್ದ ಇಂವ ಆವಾಗಲೇ ಇವನನ್ನ ಕೊಂದುಬಿಡಬೇಕಾಗಿತ್ತು ಸುಮ್ಮನೆ ಮನೆಯೊಳಗೆ ಇಟ್ಟುಕೊಂಡು ಬೆಳೆಸಿರಿ ಅಂತ ಒಳಗೆ ಕೊಟ್ಟೆನಲ್ಲ ಎಂತಹ ತಪ್ಪು ಕೆಲಸ ಮಾಡಿದೆ ನಾನು.

ಅಹೋ ಮೂರ್ಖಸ್ವಭಾವೋಽಹಂ ಯನ್ಮಯಾ ನ ಹತಃ ಶಿಶುಃ ॥ (106.27 ವಿಷ್ಣುಪರ್ವ)

ಹೋಗಲಿ ಅಂತ ಹೇಳಿ ಪನ್ನಗೀ ಮಾಯಾ ಪ್ರಯೋಗ ಮಾಡಿದ್ದಾನೆ ಬರೀ ಹಾವುಗಳು, ಇವನು ಸೌಪರ್ಣೀ ಮಾಯಾ ಪ್ರಯೋಗ ಮಾಡಿದ ಗರುಡಗಳು ಆ ಹಾವುಗಳನೆಲ್ಲ ಕೊಂದು ಹಾಕಿವೆ ಈ ರೀತಿ ಯುದ್ಧ ನಡೀತಾ ಇದೆ. ಕೊನೆಗೆ ಪಾರ್ವತಿ ದೇವಿ ಕೊಟ್ಟಂತಹ ಮುದ್ಗರ ದೊಡ್ಡದಾದಂತಹ ಆ ಮುದ್ಗರ ಪ್ರಹಾರ ಅದನ್ನು ಮಾಡಿ ಇವನನ್ನು ಸಂಹಾರ ಮಾಡಿಬಿಡಬೇಕು ಅಂತ ಪಾರ್ವತಿ ದೇವಿ ಇದೇ ಮುದ್ಗರವನ್ನ ಉಪಯೋಗಿಸಿ ಶುಂಭ ನಿಶುಂಭರನ್ನ ಸಂಹಾರ ಮಾಡಿದ್ದಾಳೆ ಅಂತಹ ಮುದ್ಗರ. ಆ ಮುದ್ಗರವನ್ನ ಇವನಿಗೆ ಕೊಟ್ಟಿದ್ದಳು ನಿನಗೆ ಭಾರೀ ಪ್ರಾಣಸಂಕಟ ಬಂದರೆ ಮಾತ್ರ ಇದನ್ನು ಉಪಯೋಗಿಸು, ಇಲ್ಲದೇ ಇದ್ದರೆ ಉಪಯೋಗಿಸ ಬೇಡ ಬಹಳ ಅಪರೂಪದ ಮುದ್ಗರ



ಇದು ಅಂತ. ಅದನ್ನು ಯಾವಾಗ ಅವನು ಕೈಯಾಗ ಎತ್ತಿಕೊಂಡನೋ ತಕ್ಷಣಕ್ಕೆ ಇಂದ್ರ ದೇವರಿಗೆ ಅಲ್ಲಿ ಚಿಂತೆ ಇವನು ನಮ್ಮ ಪಕ್ಷದವ ಪ್ರದ್ಯುಮ್ನ, ಕೃಷ್ಣ ಪುತ್ರ ಇವನಿಗೆ ವಿಜಯವಾಗಬೇಕು ಈ ಮುದ್ಗರ ಪ್ರಹಾರ ಮಾಡಿದರೆ ಮಾತ್ರ ಬಹಳ ಕಷ್ಟ, ಪಾರ್ವತಿ ದೇವಿಯ ಮುದ್ಗರ ಇದು. ಯಾಕೆ ಅಂದರೆ ಪಾರ್ವತಿ ದೇವಿ ದೊಡ್ಡವಳು ಅವಳದು ಏಳನೆಯ ಕಕ್ಷೆ, ಪ್ರದ್ಯುಮ್ನ ಕಾಮ, ಇಂದ್ರ ಕಾಮ ಇಬ್ಬರೂ ಸಮಾನರು, ಎಂಟನೆಯ ಕಕ್ಷೆಯವರು. ಈ ಶಂಬರಾಸುರನ ಎಲ್ಲಾ ಮಾಯೆ ನಮಗೇನು ದೊಡ್ಡದಲ್ಲ ಇದನ್ನೆಲ್ಲ ಮಾಯೆ ಮಾಡಿಬಿಟ್ಟವಿ ಆದರೆ ಪಾರ್ವತಿಯ ವರದ ಶಕ್ತಿ ತುಂಬಿದೆ ಅದರೊಳಗೆ ಹಾಗಾದರೆ ವಿಶೇಷವಾಗಿ ಎಚ್ಚರದಿಂದ ಇರಬೇಕು ಇವನು ಅನ್ನುವುದಕ್ಕೋಸ್ಕರ ನಾರದರಿಗೆ ಆಜ್ಞೆ ಮಾಡುತ್ತ ಇದ್ದಾನೆ ಇಂದ್ರ.

ಗಚ್ಛ ನಾರದ ಶೀಘ್ರಂ ತ್ವಂ ಪ್ರದ್ಯುಮ್ನಸ್ಯ ರಥಂ ಪ್ರತಿ ॥ (106.42 ವಿಷ್ಣುಪರ್ವ)

ಅವನಿಗೆ ವೈಷ್ಣವಾಸ್ತ್ರದ ಉಪದೇಶವನ್ನು ಮಾಡಿ, ಪಾರ್ವತಿಯ ಅಸ್ತ್ರವನ್ನೂ ಮೀರುವ ಶಕ್ತಿ ಸರ್ವೋತ್ತಮ ಶಕ್ತಿ ವೈಷ್ಣವ ಶಕ್ತಿ ಅದರ ಉಪದೇಶವನ್ನು ನೀವು ಮಾಡಬೇಕು ಅಭೇದ್ಯವಾದ ಆ ವಿಷ್ಣು ಕವಚವನ್ನು ಉಪದೇಶ ಮಾಡಿ ಅವನಿಗೆ ಸುಭದ್ರತೆಯನ್ನು ಉಂಟು ಮಾಡಿ ಬರಬೇಕು ಕೂಡಲೇ. ನೋಡಿ ಈ ಕಡೆಗೆ ಮುದ್ಗರ ಪ್ರಹಾರ ಮಾಡುವುದಕ್ಕೆ ಸಿದ್ಧತೆ ಮಾಡುವುದಕ್ಕೆ ಸಿದ್ಧನಾಗುಗುತ್ತ ಇದ್ದಾನೆ ಅಷ್ಟರೊಳಗೆ ಇಂದ್ರ ಹೇಳಿದ್ದು, ನಾರದರು ಬಂದದ್ದು, ಉಪದೇಶ ಮಾಡಿದ್ದು, ಇವನು ಜಪ ಮಾಡಿ ತಯಾರು ಆದದ್ದು ಹೀಗೆ ಇದ್ದೀರಲ್ಲ ನೀವೆಲ್ಲ ಅಷ್ಟು ವೇಗದಿಂದ ಕೆಲಸ ಮಾಡಬೇಕು ಧರ್ಮದಲ್ಲಿ ವಿಲಂಬ ಇರಬಾರದು ಅಂತ ತಿಳಿಸಿಕೊಡುತ್ತಾ ಇದ್ದಾರೆ ಅರ್ಥವಾಯಿತೇ. **'ಗೃಹೀತ ಇವ ಕೇಶೇಷು ಮೃತ್ಯುನಾ ಧರ್ಮಮಾಚರೇತ್'**[1] ಕೂದಲು ಹಿಡಿದು ಎಳೀತಾ ಇದೆ ಮೃತ್ಯು ದೇವತೆ ಅಂತನ್ನುವಷ್ಟು ಅವಸರದೊಳಗೆ ಧರ್ಮವನ್ನು ಮಾಡಬೇಕು ನಾಳೆ ನಾಡಿದ್ದು ಇನ್ನೊಂದು ವರ್ಷ ಆದಮೇಲೆ ಅಂತ ಎಲ್ಲಾ ಹೇಳುತ್ತಾ ಕೂಡಬಾರದು ಬಂದಿದ್ದಾರೆ ನೋಡಿ ನಾರದರು.

ಕುಮಾರ ಪಶ್ಯ ಮಾಂ ಪ್ರಾಪತಿಂ ದೇವಗನ್ಧರ್ವನಾರದಮ್ । (106.45 ವಿಷ್ಣುಪರ್ವ)

ನಾನು ನಾರದ ಬಂದಿದ್ದೇನೆ ದೇವಗಂಧರ್ವರು ದೇವರ್ಷಿಗಳು ನಾವು,

ಪ್ರೇಷಿತಂ ದೇವರಾಜೇನ ತವ ಸಮ್ಬೋಧನಾಯ ವೈ ॥ (106.45 ವಿಷ್ಣುಪರ್ವ)

ನೀನು ಯಾರು ಅಂತ ತಿಳಿದುಕೊಂಡಿದ್ದೀ ಮೊದಲು ಅದನ್ನು ನೆನಪು ಮಾಡಿಕೋ ನೀನು ಕಾಮ, ನೀನು ಸಾಮಾನ್ಯನಲ್ಲ, ನೀನು ಮನುಷ್ಯನಲ್ಲ ನೀನು ದೇವತೆ. ರುದ್ರ ದೇವರು ನಿನ್ನ ದೇಹವನ್ನು ದಾಹ ಮಾಡಿದ್ದಕ್ಕೆ ನೀನು ಪುನಃ ಈಗ ಕೃಷ್ಣನ ಪುತ್ರನಾಗಿ ಜನಿಸಿದ್ದೀ ನೀನು ಕಾಮ, ನಿನ್ನ ಸಾಮರ್ಥ್ಯ ಬಹಳ ಅದ್ಭುತ ಅದರ ಸ್ಮರಣೆಯನ್ನು ನೀನು ಮಾಡಿಕೋ ಈ ಮಾಯಾವತಿ ನಿನ್ನ ತಾಯಿಯಲ್ಲ, ನಿನ್ನ ಹೆಂಡತಿ ಅವಳು ಎಲ್ಲ ಸುದ್ದಿಯನ್ನ ಹೇಳಿ ಆ ವೈಷ್ಣವ ಕವಚ ಅದರ ಉಪದೇಶವನ್ನ ಮಾಡಿ ಆ ಮಂತ್ರಮಯವಾದ ಕವಚವನ್ನ ತೊಡಿಸಿ ವೈಷ್ಣವಾಸ್ತ್ರದ ಉಪದೇಶವನ್ನು ಮಾಡಿ ನಾರದರು ಅದೃಶ್ಯರಾಗಿ ಹೊರಟು ಹೋಗಿದ್ದಾರೆ. ಇನ್ನು ಆ ವೈಷ್ಣವಾಸ್ತ್ರ ಪ್ರಯೋಗ ಮಾಡಿ ಶಂಬರಾಸುರನ ಸಂಹಾರ ಮಾಡುವುದಕ್ಕೆ ಆಯಿತು ಆ ಮುದ್ಗರ ಅದು ಪಾರ್ವತಿ, ಪಾರ್ವತಿ ದೊಡ್ಡವಳಲ್ಲ ಅದಕ್ಕೆ ಏನು ಮಾಡಬೇಕು ಏನು ಮಾಡಬೇಡ ನಮಸ್ಕಾರ ಮಾಡಿಬಿಡು ಸಾಕು ಪಾರ್ವತಿ ಅನುಗ್ರಹ ಮಾಡಿಬಿಡುತ್ತಾಳೆ ದೊಡ್ಡವಳಲ್ಲವಾ.

1. ಸುಭಾಷಿತ

ತದಸ್ತ್ರಪ್ರವಿಘಾತಾರ್ಥಂ ದೇವೀಂ ತ್ವಂ ಸ್ಮರ್ತುಮರ್ಹಸಿ ।

ಸ್ತವ್ಯಾ ಚೈವ ನಮಸ್ಯಾ ಚ ಮಹಾದೇವೀ ರಣೋತ್ಸುಕೈಃ ॥ (106.57 ವಿಷ್ಣುಪರ್ವ)

ಚೆನ್ನಾಗಿ ಸ್ತೋತ್ರ ಮಾಡಿಬಿಡು, ನಮಸ್ಕಾರ ಮಾಡಿಬಿಡು ಏನು ಮಾಡುತ್ತದೆ ಅದೂ ಏನು ಮಾಡುವುದಿಲ್ಲ ಮುದ್ಗರ ತೆಗೆದ ನೋಡರಿ ಅವನು ಮಹಾಆಲಸಿ ಇಷ್ಟೆಲ್ಲಾ ಮಾಡುವ ತನಕ ಅದು ಇನ್ನೂ ತೆಗೀತಾನೆ ಇದ್ದ ಪಾಪ ಮುದ್ಗರವನ್ನ ತೆಗೆದ ದ್ವಾದಶ ಆದಿತ್ಯರು ಏಕ ಕಾಲಕ್ಕೆ ಉದಯಿಸಿದ್ದಾರೆ ಅಂತಹ ಪ್ರಖರವಾದ ಸಾಮರ್ಥ್ಯ ಆ ಮುದ್ಗರದ್ದು. ಪಾರ್ವತಿ ದೇವಿಯ ಒಂದು ವಿಶಿಷ್ಟವಾದ ಯೋಗ್ಯತೆ, ಅವಳ ತಪಸ್ಸಿಗೆ ಬೆಲೆ ಕೊಡುವುದಕ್ಕೆ ವಿಷ್ಣುವನ್ನೂ ಸೇರಿದಂತೆ ಇರುವಂತಹ ಏನು ದ್ವಾದಶ ಆದಿತ್ಯರಿದ್ದಾರೆ ಎಲ್ಲರೂ ಪ್ರಖರವಾಗಿ ಪ್ರಜ್ವಲಿಸುತ್ತ ಇದ್ದಾರೆ. ಪರ್ವತಗಳು ಕಂಪಿಸುತ್ತ ಇವೆ, ಭೂಮಿ ಕಂಪಿಸುತ್ತ ಇದೆ, ಸಾಗರಗಳೆಲ್ಲ ಸುನಾಮಿ ಬಂದಂತೆ ಎಲ್ಲ ಕಡೆಗೆ ಉಕ್ಕೇರಿ ಬರುತ್ತಾ ಇದೆ ಮತ್ತೆ ಯಥಾಪ್ರಕಾರ ಏನೋ ಘೋರವಾದಂತಹ ಅನರ್ಥವಾಗುತ್ತದೆ ಅಂತ ಎಲ್ಲರೂ ಅಂದು ಕೊಂಡಿದ್ದಾರೆ. ನಾರದರು ಹೇಳಿದ ರೀತಿಯಲ್ಲಿ ಇವನು ಪಾರ್ವತಿ ದೇವಿಯ ಸ್ಮರಣೆಯನ್ನು ಮಾಡುತ್ತ ಇದ್ದಾನೆ ಭಕ್ತಿಯಿಂದ ನಮಸ್ಕಾರವನ್ನು ಮಾಡಿ

ಓಂ ನಮಃ ಕಾತ್ಯಾಯನ್ಯೈ ಗಿರೀಶಾಯೈ ನಮೋ ನಮಃ ।

ನಮಸ್ತ್ರೈಲೋಕ್ಯಮಾಯಾಯೈ ಕಾತ್ಯಾಯನ್ಯೈ ನಮೋ ನಮಃ ॥ (107.6 ವಿಷ್ಣುಪರ್ವ)

ಇತ್ಯಾದಿಯಾಗಿ ಸ್ತೋತ್ರ ಮಾಡುತ್ತಾನೆ.

ನಮಃ ಶತ್ರುವಿನಾಶಿನ್ಯೈ ನಮೋ ಗೌರ್ಯೈ ಶಿವಪ್ರಿಯೇ ।

ನಮಸ್ಯೈ ಶುಮ್ಭಮಥನೀಂ ನಿಶುಮ್ಭಮಥನೀಮಪಿ ॥ (107.7 ವಿಷ್ಣುಪರ್ವ)

ಕಾಲರಾತ್ರಿ ನಮಸ್ತುಭ್ಯಂ ಕೌಮಾರ್ಯೈ ಚ ನಮೋ ನಮಃ । (107.8 ವಿಷ್ಣುಪರ್ವ)

ಅಂತ ಭಕ್ತಿಯಿಂದ ಸ್ತೋತ್ರ ಮಾಡಿ ಕೊನೆಗೆ ಪ್ರಾರ್ಥನೆಯನ್ನು ಮಾಡುತ್ತಾನೆ

ರಕ್ಷ ಮಾಂ ದೇವಿ ಸತತಂ ಸಂಗ್ರಾಮೇ ವಿಜಯಂ ಕುರು । (107.13 ವಿಷ್ಣುಪರ್ವ)

ಬಿಟ್ಟದ್ದು ಅವನು, ಇವನು ಪ್ರಾರ್ಥನೆ ಮಾಡಿದ ನನಗೆ ವಿಜಯ ಉಂಟು ಮಾಡು ಅಂತ ಇಷ್ಟು ಹೇಳಿದ್ದೇ ತಡ ಪಾರ್ವತಿ ದೇವಿ ಬಂದೇ ಬಿಟ್ಟಳು ಅಲ್ಲಿ. ಬಂದು ಏನು ಬೇಕು ವರ ಕೇಳು ಅನ್ನುತ್ತಾಳೆ ವರ ಕೇಳು ಅಂದರೆ ಇನ್ನೇನು ವರ. ಅಲ್ಲಿ ಬರುತ್ತ ಇದೆ ನೋಡು ಮುದ್ಗರ.

ಯಸ್ತ್ವಯಾ ಮುದ್ಗರೋ ದತ್ತಃ ಶಮ್ಬರಸ್ಯಾತ್ಮಸಮ್ಭವಃ ॥ (107.17 ವಿಷ್ಣುಪರ್ವ)

ಏಷ ಮೇ ಗಾತ್ರಮಾಸಾದ್ಯ ಮಾಲಾ ಪದ್ಮವತೀ ಭವೇತ್ । (107.18 ವಿಷ್ಣುಪರ್ವ)

ಅಲ್ಲಿಂದ ಇಲ್ಲಿ ಬರುತ್ತ ಇದೆ ಮುದ್ಗರ ನೀನು ಮದ್ಗುರು, ನೀನು ಕೊಟ್ಟದ್ದು ಮುದ್ಗರ. ಆ ಮುದ್ಗರ ಇಲ್ಲಿ ಬರುವುದರೊಳಗೆ ಮದ್ಗುರುವಾದ ನಿನ್ನ ಅನುಗ್ರಹದಿಂದ ಅದೇನು ಆಗಬೇಕು ಅಂದರೆ ಪದ್ಮ ಮಾಲೆ ಆಗಬೇಕು,

ಪದ್ಮದ ಮಾಲೆ ಆಗಲಿ ತಥಾಸ್ತು ಅಂದುಬಿಟ್ಟಿದ್ದಾಳೆ. ನೋಡಿ, ನಾರದರು ಎಂತಹ ಒಳ್ಳೆಯ ಉಪಾಯ ಹೇಳಿಕೊಟ್ಟಿದ್ದಾರೆ ಆ ರೀತಿ ವಿಶೇಷವಾಗಿ ನಾರದರು ಸೇವೆ ಮಾಡಿದ್ದಾರೆ ಅಂತ. ಅರ್ಥ ನಾರದರಿಗಿಂತಲೂ ದೊಡ್ಡವನು ಪ್ರದ್ಯುಮ್ನ, ನಾರದರು ಹದಿನಾಲ್ಕನೆಯ ಕಕ್ಷೆಯವರು, ಇವನು ಎಂಟನೆಯ ಕಕ್ಷೆಯವನು ಆದ್ದರಿಂದ ಉತ್ತಮ ಆದರೂ ನಾರದರು ಒಂದು ವಿಶೇಷವಾದ ಸ್ಮರಣೆಯನ್ನು ಮಾಡಿ ಕೊಟ್ಟಿದ್ದಾರೆ. ಅದಕ್ಕೆ ತಕ್ಕಂತೆ ಇವನು ಅಲ್ಲಿ ಪ್ರಾರ್ಥನೆಯನ್ನು ಮಾಡಿದ್ದಾನೆ ತಥಾಸ್ತು ಅಂತ ಅವಳು ವರ ಕೊಟ್ಟು ಅದೃಶಳಾದಳು, ಅದು ಬಂದ್ದದ್ದೆ ಬಂದು ಇವನ ಕೊರಳಿಗೆ ಮಾಲೆಯಾಗಿ ಬಿತ್ತು. ಈ ರೀತಿ ಪ್ರಹ್ಲಾದ ರಾಜರ ಕಥೆಯಲ್ಲಿ ಕೇಳುತ್ತೀರಲ್ಲ ಹಾಗೆ ಯಾವ ರೀತಿಯಿಂದಲೂ ಅವನಿಗೆ ಮರಣವಾಗಲಿಲ್ಲ ಏನೇನು ಕೊಲ್ಲುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದರೋ ಅದೆಲ್ಲ ಅವನಿಗೆ ಪೋಷಕವೇ ಆಗುತ್ತಾ ಇತ್ತು ಅಂತ ಹಾಗೆ. ಈ ರೀತಿ ಅದನ್ನು ಸಹನೆ ಮಾಡಿಕೊಂಡಿದ್ದಾರೆ.

ವೈಷ್ಣವಂ ಪರಮಾಸ್ತ್ರಂ ತು ನಾರದೇನ ಯಥಾಹೃತಮ್ ॥ (107.23 ವಿಷ್ಣುಪರ್ವ)

ಇನ್ನು ತಾನು ನಾರದರು ಉಪದೇಶ ಮಾಡಿದ ವೈಷ್ಣವಾಸ್ತ್ರವನ್ನು ತಯಾರು ಇಟ್ಟುಕೊಂಡಿದ್ದ ಅದನ್ನು ಪ್ರಯೋಗ ಮಾಡುತ್ತಾ ಇದ್ದಾನೆ. ಏನು ಹೇಳುತ್ತಾನೆ ನಾನು ಶಂಬರಾಸುರನ ಇವನ ಮಗನೇ ಅಂತ ನನಗೆ ಹೇಳಿದ್ದರು ಮೊದಲು ಮಾಯಾವತಿ ನನ್ನ ತಾಯಿ, ಶಂಬರ ನನ್ನ ಅಪ್ಪ ಅಂತ ನನಗೆ ಹೇಳಿ ಬೆಳೆಸಿದ್ದು ಆದರೆ ಈಗ ಸತ್ಯ ಹೇಳುತ್ತಾರೆ ರುಕ್ಮಿಣಿ ನನ್ನ ತಾಯಿ,ಕೃಷ್ಣ ನನ್ನ ಅಪ್ಪ ಅಂತ. ನನ್ನ ತಾಯಿ ರುಕ್ಮಿಣಿ ಆದದ್ದೇ ಸತ್ಯವಾಗಿದ್ದರೆ, ಕೃಷ್ಣ ನನ್ನ ತಂದೆ ಅನ್ನೋದೇ ಸತ್ಯವಾಗಿದ್ದರೆ ಈ ಅಸ್ತ್ರದಿಂದ ಈ ಶಂಬರಾಸುರ ಸಾಯಬೇಕು ಅಂತ.

ಯದ್ಯಹಂ ರುಕ್ಮಿಣೀಪುತ್ರಃ ಕೇಶವಸ್ಯಾತ್ಮಜೋ ಹ್ಯಹಮ್ ॥ (107.24 ವಿಷ್ಣುಪರ್ವ)
ತೇನ ಸತ್ಯೇನ ಬಾಣೇನ ಜಹಿ ತ್ವಂ ಶಮ್ಬರಂ ರಣೇ । (107.25 ವಿಷ್ಣುಪರ್ವ)

ಅಂತ ಸಂಕಲ್ಪ ಮಾಡಿದ ಬಿಟ್ಟ ವೈಷ್ಣವಾಸ್ತ್ರವನ್ನ ಅದು ಸತ್ಯವೇ ಇತ್ತು, ಶಂಬರಾಸುರ ಸತ್ತು ಹೋದ. ಪಾಪ ಅವನ ಉತ್ತರಕ್ರಿಯೆ ಮಾಡುವುದಕ್ಕೋಸ್ಕರ ಕಟ್ಟಿಗೆಯನ್ನು ಹುಡುಕಿಕೊಂಡು ಹುಡುಕಿಕೊಂಡು ಎಷ್ಟು ತಂದರೋ ಪಾಪ ಅಂತ ವರ್ಣನೆ ಮಾಡುತ್ತ ಇದ್ದಾರಾ, ಏನು ಮಾಡಬೇಕು ಉತ್ತರ ಕ್ರಿಯೆ ಅಲ್ಲಿ ಏನು ಇಲ್ಲವೇ ಇಲ್ಲ ಅವಶೇಷನೇ ಕಾಣಿಸಲಿಲ್ಲ ಅಂತಾರೆ. ಅಸ್ತಿನೂ ಇಲ್ಲ, ಮಾಂಸನೂ ಇಲ್ಲ ಏನೇನೇನು ಸಿಗದೆ ಇದ್ದ ಹಾಗೆ ಭಸ್ಮ ಆಗಿ ಹೋಗಿದೆ.

ನ ಚಾಸ್ಯ ಮಾಂಸಂ ಸ ಸ್ನಾಯುರ್ನಾಸ್ಥಿ ನ ತ್ವಙ್ ನ ಶೋಣಿತಮ್ । (107.27 ವಿಷ್ಣುಪರ್ವ)
ಸರ್ವಂ ತದ್ಭಸ್ಮತಾದ್ಭೂತಂ ವೈಷ್ಣವಾಸ್ತ್ರಸ್ಯ ತೇಜಸಾ ॥ (107.28 ವಿಷ್ಣುಪರ್ವ)

ಇನ್ನು ದಹನಕ್ರಿಯೇನೆ ಬೇಕಾಗಿಲ್ಲ ಅಲ್ಲಿ ಭಸ್ಮಸಾಥ್ ಆಗಿಹೋಯಿತು ಆ ರೀತಿ ಅದ್ಭುತವಾದಂತಹ ವೈಷ್ಣವಾಸ್ತ್ರ. ಆ ಪರಮಾತ್ಮನ ಕ್ರೋಧಾಗ್ನಿಗೆ ಗುರಿಯಾದರೆ **'ನಾಮಾಪಿ ನಶ್ಯತೇ'** ಆಗಿ ಹೋಗುತ್ತದೆ ಮನುಷ್ಯನ ವ್ಯಕ್ತಿತ್ವ ಏನೇನೂ ಉಳಿಯುವುದಿಲ್ಲ. ಎಂದಿಗೂ ದೇವರ ತ್ರೋಹವನ್ನು ಮಾಡಬಾರದು ಅನ್ನುವುದನ್ನ ಇಲ್ಲಿ ತಿಳಿಸಿಕೊಡುತ್ತ ಇದ್ದಾರೆ ಅರ್ಥ ಮಾಡಿಕೊಳ್ಳಿ ಕಥೆ ಕೇಳಬೇಡಿ ಬರೀ. ಈ ರೀತಿ ಆ ಪರಮಾತ್ಮ ಪ್ರದ್ಯುಮ್ನನ ಮುಖಾಂತರ ಶಂಬರಾಸುರನ ಸಂಹಾರವನ್ನು ಮಾಡಿದ.

ಆಮೇಲೆ ಮಾಯಾವತಿಯನ್ನ ಕರೆದುಕೊಂಡು ಆ ಮಾಯಾ ವಿದ್ಯೆಯಿಂದಲೇ ಆಕಾಶ ಮಾರ್ಗದಿಂದ ದ್ವಾರಕಾ

ಪಟ್ಟಣಕ್ಕೆ ಬರುತ್ತಾ ಇದ್ದಾರೆ. ಯಾರಿಗೂ ಪರಿಚಯ ಇಲ್ಲ ಕೂಸಿದ್ದಾಗ ಹೋದದ್ದು ಯಾರು ಬಂದರು ಅಂತ ಎಲ್ಲರೂ ನೋಡುತ್ತ ಇದ್ದಾರೆ ಕೃಷ್ಣನ ಹಾಗೆ ಕೃಷ್ಣನೇ ಬಂದ ಅಂತ ಎಷ್ಟೋ ಜನ, ಕೃಷ್ಣ ಬಂದಾಗ ಮಾಡುವ ಸ್ವಾಗತಗಳೇನೇನೋ ಅದೆಲ್ಲವನ್ನು ಸಿದ್ಧ ಮಾಡಿಕೊಳ್ಳುತ್ತ ಇದ್ದಾರೆ ಕೆಲವರು. ಕೃಷ್ಣನಂತೆ ತೋರುತ್ತಾ ಇದ್ದಾನೆ ಆದರೆ ಇವನು ಕೃಷ್ಣನಲ್ಲ ಅಂತ ಅನ್ನಿಸುತ್ತ ಇದೆ, ಕೃಷ್ಣನ ಹೋಲಿಕೆ ಇದೆ, ರುಕ್ಮಿಣಿಯ ಹೋಲಿಕೆ ಇದೆ ಈ ರೀತಿ ಏನೇನೋ ಮಾತನಾಡಿಕೊಳ್ಳುತ್ತ ಇದ್ದಾರೆ. ಕೊನೆಗೆ ರುಕ್ಮಿಣಿ ದೇವಿ ಇವನನ್ನು ನೋಡಿ ತನ್ನ ಕೆಲವು ಸ್ವಪ್ನದ ಸುದ್ದಿಯನ್ನೆಲ್ಲ ತನ್ನ ಸವತಿಯರಿಗೆ, ಗೆಳತಿಯರಿಗೆ, ದಾಸಿಯರಿಗೆ ಎಲ್ಲ ಹೇಳಿಕೊಳ್ಳುತ್ತ ಇದ್ದಾಳೆ. ಶ್ರೀಕೃಷ್ಣ ಪರಮಾತ್ಮ ನನ್ನನ್ನು ಕರೆದು ವಿಶೇಷವಾಗಿ ಮುತ್ತಿನ ಮಾಲೆಯನ್ನು ಹಾಕಿದ ಸ್ವಪ್ನದಲ್ಲಿ, ಮತ್ತೊಬ್ಬ ಹದಿನಾರು ವರ್ಷದ ತರುಣಿ ಉತ್ತಮವಾದ ಅಭ್ಯಂಗ ಸ್ನಾನಾದಿಗಳನ್ನೆಲ್ಲ ಮಾಡಿಸಿ, ನನಗೆ ಶುಕ್ಲವಾದ ವಸ್ತ್ರವನ್ನ ನೀಡಿ ಶ್ರೇಷ್ಠವಾದ ಪದ್ಮ ಮಾಲೆಯನ್ನು ನನ್ನ ಕೊರಳಿಗೆ ಹಾಕಿದ್ದಾಳೆ. ಈ ರೀತಿ ಎಲ್ಲ ಶುಭ ಶಕುನಗಳು ನನಗಾಗಿವೆ ಏನು ಅಂತ ಗೊತ್ತಿಲ್ಲ ಅಂತ ಅವಳು ತನ್ನ ಕಥೆಯನ್ನು ಹೇಳುವುದರೊಳಗೆ ಕೃಷ್ಣನೇ ಬಂದ ಅಲ್ಲಿ ಸ್ವಪ್ನದ ಕಥೆ ಏನು ಹೇಳುತ್ತಾ ಇದ್ದೀ ಇವನು ಬೇರೆ ಯಾರಲ್ಲ ಸಾಕ್ಷಾತ್ ನಿನ್ನ ಮಗನೇ ಪ್ರದ್ಯುಮ್ನ, ಇವಳು ಮಾಯಾವತಿ ನಿನ್ನ ಸೊಸೆ. ಮಗ ಸೊಸೆ ಬಂದಿದ್ದಾರೆ ಮದುವೆ ಮಾಡಿಕೊಂಡು ಸ್ವಾಗತ ಮಾಡು ಅಂತ ಹೇಳಿದಾಗ ಅವಳಿಗೆ ಬಹಳ ಆನಂದ ಆಗಿದೆ ಶಂಬರಾಸುರನ ಸಂಹಾರ ಮಾಡಿದಂತಹ ವೃತ್ತಾಂತವನ್ನೆಲ್ಲ ತಿಳಿಸಿಕೊಟ್ಟಿದ್ದಾರೆ. ಈ ರೀತಿ ಮಗ ಪುನಃ ಮೃತನಾಗಿದ್ದಾನೆ ಸರ್ವಜ್ಞಳಾದ ರುಕ್ಮಿಣಿ ದೇವಿಗೆ ಎಲ್ಲವೂ ಗೊತ್ತು ಆದರೆ ಲೋಕದೃಷ್ಟಿಯಲ್ಲಿ ಕಳೆದುಕೊಂಡು ಹೋದಾಗ ಮೃತನಾಗಿದ್ದಾನೆ ಅಂತ ಭಾವಿಸಿದ್ದೆವು ಬರೀ ಬದುಕುವುದಷ್ಟೇ ಅಲ್ಲ ಇಂತಹ ಮಹಾಪರಾಕ್ರಮಿಯಾಗಿ ಶಂಬರಾಸುರನ ಸಂಹಾರ ಮಾಡಿ ಮಾಯಾವತಿಯನ್ನ ರತಿಯನ್ನ ಮದುವೆ ಮಾಡಿಕೊಂಡು ಬಂದಿದ್ದಾನೆ ಅಂತ ತಿಳಿದು ಬಹಳ ಸಂತೋಷ ಆಗಿದೆ.

ಕೃಷ್ಣ ಯಾದವರ ಮಧ್ಯದಲ್ಲಿ ಸ್ಪಷ್ಟೀಕರಣ ಕೊಡುತ್ತಾನೆ, ನೋಡಿ ಕೃಷ್ಣನ ಆ ಲೋಕನೀತಿ, ರಾಜನೀತಿ, ಧರ್ಮದ ಪ್ರಜ್ಞೆ ಜಗತ್ತಿನಲ್ಲಿ ಹೇಗೆ ಪರಪತ್ನಿಯನ್ನ ಶಂಬರಾಸುರನ ಸಂಹಾರ ಮಾಡಿದ, ಅವನ ಮಡದಿಯನ್ನು ಅಪಹಾರ ಮಾಡಿಕೊಂಡು ಬಂದು ಮದುವೆ ಮಾಡಿಕೊಂಡಿದ್ದಾನೆ, ಪರಸ್ತ್ರೀಯನ್ನ ಮದುವೆಯಾಗಿದ್ದಾನೆ ಅಂತ ಸರ್ವಥಃ ತಿಳಿಯಬೇಡಿ ಯಾರೂ. ಶಂಬರಾಸುರನ ಹೆಂಡತಿ ಅಲ್ಲ ಇವಳು, ಶಂಬರಾಸುರನ ಮನೆಯಲ್ಲಿ ಶುದ್ಧಳಾಗಿ ಇದ್ದ ಕನ್ಯೆ ರತಿ ದೇವಿ ಇವಳು, ಪ್ರದ್ಯುಮ್ನನ ಹೆಂಡತಿಯೇ ಇವಳು, ಇದೇ ರೂಪದ ಮಾಯಾ ಹೆಂಡತಿ ಅಲ್ಲಿದ್ದಳು ಅದು ಮಾಯಾ ಹೆಂಡತಿಯೇ ಅವಳು ಮಾಯವಾದಳು ಅಷ್ಟೇ. ನಿಜವಾದ ಮಾಯಾವತಿ ಇವಳು, ಇವಳು ಪ್ರದ್ಯುಮ್ನನ ಹೆಂಡತಿಯೇ ಹೊರತು ಶಂಬರಾಸುರನ ಹೆಂಡತಿ ಅಲ್ಲ ಅನ್ನುವ ಸ್ಪಷ್ಟೀಕರಣವನ್ನೂ ಕೂಡ ಶ್ರೀಕೃಷ್ಣ ಪರಮಾತ್ಮ ಅಲ್ಲಿ ನೀಡಿದ್ದಾನೆ.

ಕಾಮಪತ್ನೀ ನ ಕಾನ್ಯೈಷಾ ಶಮ್ಬರಸ್ಯ ರತಿಃ ಪ್ರಿಯಾ ।
ಮಾಯಾರೂಪೇಣ ತಂ ದೈತ್ಯಂ ಮೋಹಯತ್ಯಸಕೃಚ್ಚುಭಾ ॥ (108.26 ವಿಷ್ಣುಪರ್ವ)

ಅಂತ ಹೇಳಿದಾಗ ಎಲ್ಲರಿಗೂ ಸಂತೋಷವಾಗಿದೆ ಆ ಪ್ರದ್ಯುಮ್ನ ಹಾಗೂ ಮಾಯಾವತಿಯರಿಗೆ ವಿಶೇಷವಾದ ಸ್ವಾಗತವನ್ನು ಮಾಡಿ ಅಲ್ಲಿ ಆದರವನ್ನ ಸಲ್ಲಿಸಿದ್ದಾರೆ ಎಂಬುದಾಗಿ ತಿಳಿಸುತ್ತಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ವಿಷ್ಣುಪರ್ವ-32

* * *

ವೈಶಂಪಾಯಾನ ಉವಾಚ

ಅತ್ರಾಶ್ಚರ್ಯಾತ್ಮಕಂ ಸ್ತೋತ್ರಮಾಹ್ನಿಕಂ ಜಯತಾಂ ವರ ।

ಪ್ರದ್ಯುಮ್ನೇ ದ್ವಾರಕಾಂ ಪ್ರಾಪ್ತೇ ಹತ್ವಾ ತಂ ಕಾಲಶಮ್ಬರಮ್ ।। (109.1 ವಿಷ್ಣುಪರ್ವ)

ವೈಶಂಪಾಯಾನರು ಜನಮೇಜಯನಿಗೆ ನಿತ್ಯದಲ್ಲಿ ಯಾವ ತರಹದ ಅನುಸಂಧಾನವನ್ನು ಮಾಡಬೇಕು ಭಗವಂತನಿಗೆ, ಲಕ್ಷ್ಮೀ ದೇವಿ, ವಾಯು ದೇವರು ಹಾಗೂ ಭಾರತಿ, ಸರಸ್ವತಿ, ಗರುಡ, ಶೇಷ, ರುದ್ರಾದಿ ದೇವತೆಗಳಿಗೆ ತಾರತಮ್ಯ ಕ್ರಮದಲ್ಲಿ ಹೇಗೆ ಸ್ಮರಣೆ ಮಾಡಬೇಕು, ಅವರ ಅನುಗ್ರಹವನ್ನು ಪ್ರಾರ್ಥನೆ ಮಾಡಬೇಕು ಇದರ ಬಗ್ಗೆ ಪ್ರದ್ಯುಮ್ನ ಬಲರಾಮ ದೇವರಿಗೆ ಕೇಳಿ ತಿಳಿದುದ್ದನ್ನು ವೈಶಂಪಾಯಾನರು ಜನಮೇಜಯನಿಗೆ ತಿಳಿಸುತ್ತಾ ಇದ್ದಾರೆ. ಶಂಬರಾಸುರನ ಸಂಹಾರವನ್ನು ಮಾಡಿ ಪ್ರದ್ಯುಮ್ನ ದ್ವಾರಕಾ ಪಟ್ಟಣಕ್ಕೆ ಬಂದಿದ್ದಾನೆ. ಆ ಪ್ರದ್ಯುಮ್ನನಿಗೆ ಬಲರಾಮ ದೇವರು ಸಕಲ ವಿಧ ರಕ್ಷೆಗಾಗಿ, ಯಾವುದೇ ಆಪತ್ತುಗಳು ಬರಬಾರದು ಅನ್ನುವುದಕ್ಕೋಸ್ಕರ ಒಬ್ಬ ಮನುಷ್ಯ ಏನು ಮಾಡಬೇಕು ಇದನ್ನು ತಿಳಿಸಿಕೊಡುತ್ತಾ ಇದ್ದಾರೆ. ಪ್ರದ್ಯುಮ್ನ ಕಾಮನ ಅವತಾರ, ದೇವಾಂಶ ಸಂಭೂತ ಅವನಿಗೆಲ್ಲ ಗೊತ್ತು ಆದರೆ ಪ್ರದ್ಯುಮ್ನನ ಮೂಲಕ ಸಮಸ್ತ ಜೀವರಾಶಿಗಳಿಗೆ ಸಜ್ಜನರಿಗೆಲ್ಲ ಈ ಒಂದು ಉಪದೇಶವನ್ನು ಬಲರಾಮ ದೇವರು ಮಾಡುತ್ತಾರೆ ಅಂತ ನಾವು ಇಲ್ಲಿ ಭಾವಿಸಬೇಕು. ಪರಮಾತ್ಮ ಉಪದೇಶ ಮಾಡಿದ್ದನ್ನು ಬಲರಾಮ ದೇವರು, ಋಷಿಗಳು ಮುನಿಗಳು ಇತರ ಜೀವರಾಶಿಗಳಿಗೆ ಸಜ್ಜನರಿಗೆಲ್ಲ ತಿಳಿಸುವುದು ಇದು ಪರಂಪರೆಯಾಗಿ ನಡೆದು ಬಂದಂತಹದ್ದು.

ಧರ್ಮಕಾಮೈಶ್ಚ ಮುನಿಭಿರ್ಋಷಿಭಿಶ್ಚಾಪಿ ಕೀರ್ತಿತಮ್ ।। (109.3 ವಿಷ್ಣುಪರ್ವ)

ಪ್ರದ್ಯುಮ್ನ ಕೇಳಿದ ಯಾವುದಾದರೂ ಒಂದು ಸ್ತೋತ್ರವನ್ನ ನನಗೆ ಉಪದೇಶ ಮಾಡಿ ಅಂತ. ಎಷ್ಟು ಚೆನ್ನಾಗಿದೆ ನೋಡಿ, ಪ್ರದ್ಯುಮ್ನನಂತಹ ಒಬ್ಬ ಮಹಾದೇವತೆ, ಸುದರ್ಶನ ಯಾವುದೇ ಆಪತ್ತುಗಳು ಬಂದರೂ ಶ್ರೀಕೃಷ್ಣ ಪರಮಾತ್ಮ ಸುದರ್ಶನ ಚಕ್ರದಿಂದ ಭಕ್ತರ ಆಪತ್ತುಗಳನ್ನೆಲ್ಲ ಪರಿಹಾರ ಮಾಡುತ್ತಾನೆ. ಇವತ್ತಿಗೂ ಆಪತ್ತುಗಳು ಬಂದರೆ

ಆ ಸುದರ್ಶನನ ಸ್ಮರಣೆ ಮಾಡಿದರೆ ಸುದರ್ಶನ ಮಂತ್ರ ಜಪ ಮಾಡಿ, ಸುದರ್ಶನ ಹೋಮ ಮಾಡಿ ತಮ್ಮ ಆಪತ್ತುಗಳ ಪರಿಹಾರ ಮಾಡಿಕೊಳ್ಳುತ್ತಾರೆ. ಅಂತಹ ಸುದರ್ಶನ ಭಗವಂತನ ಪ್ರೀತಿಯ ಮಗ ಪರಮಾತ್ಮನ ಕೈಯಲ್ಲಿರುವ ಆಯುಧಕ್ಕೆ ಅಭಿಮಾನಿ ದೇವತೆ, ಅಂತಹ ಸುದರ್ಶನ ಆಪತ್ತುಗಳ ಪರಿಹಾರಕ್ಕೆ, ಭಯ ಪರಿಹಾರಕ್ಕೆ ಒಂದು ಮಂತ್ರ ಇದ್ದರೆ ಹೇಳಿ ಅಂತ ಅನ್ನಬೇಕಾದರೆ, ಸರ್ವರಿಗೂ ಬಂದ ಅನಿಷ್ಟಗಳನ್ನು ಪರಿಹಾರ ಮಾಡುವ ಸರ್ವೋತ್ತಮ ಶ್ರೀಹರಿ ಅನ್ನುವ ಮಾತನ್ನು ನಾವಿಲ್ಲಿ ಚಿಂತನ ಮಾಡಬಹುದು.

ಕಿಂಚಿತ್ ಸ್ತೋತ್ರಂ ಮಮ ಬ್ರೂಹಿ ಯಜ್ಜಪ್ತ್ವಾ ನಿರ್ಭಯೋಽಭವಮ್ ॥ (109.5 ವಿಷ್ಣುಪರ್ವ)

ಯಾವುದನ್ನ ಜಪ ಮಾಡಿದರೆ ನನಗೆ ಭಯ ಪರಿಹಾರವಾಗುತ್ತೆ ಅಂತಹ ಮಂತ್ರವನ್ನು ಉಪದೇಶ ಮಾಡಿ ಅಂದಾಗ ಬಲರಾಮ ದೇವರು ಹೇಳುತ್ತಾ ಇದ್ದಾರೆ, ಮೊದಲು ಗುರುಗಳ ನಮಸ್ಕಾರವನ್ನು ಮಾಡುತ್ತಾರೆ ಅದೆಲ್ಲಾ ಶಾಸ್ತ್ರ ಕ್ರಮದಲ್ಲಿ ನೀವು ತಿಳಿಯಬೇಕಾದದ್ದು. ಈಗ ನಾವೆಲ್ಲ ನಮಸ್ಕಾರ ಮಾಡುವಾಗ ಗುರುಗಳು, ಪರಮ ಗುರುಗಳು, ಮೂಲ ಗುರುಗಳು, ವೇದವ್ಯಾಸ ದೇವರು, ಶ್ರೀಮದಾಚಾರ್ಯರು. ಆಮೇಲೆ ಸರಸ್ವತಿ, ಭಾರತಿ, ವಾಯು ದೇವರು, ಬ್ರಹ್ಮ ದೇವರು, ನಾರಾಯಣ ಮಂತ್ರ ಪ್ರತಿಪಾದ್ಯ ದೇವತೆ ವಾಸುದೇವ ಅಂತ. ಈ ರೀತಿ ದ್ವಾದಶ ನಮಸ್ಕಾರಗಳನ್ನು ಮಾಡಬೇಕು ಅಂತ ತಿಳಿಸಿದ್ದಾರೆ. ಅದರಲ್ಲಿ ಕೆಲವನ್ನು ಇಲ್ಲಿ ತಿಳಿಸುತ್ತಾರೆ.

ಸುರಾಸುರಗುರುರ್ಬ್ರಹ್ಮಾ ಪಾತು ಮಾಂ ಜಗತಃ ಪತಿಃ । (109.6 ವಿಷ್ಣುಪರ್ವ)

ಬ್ರಹ್ಮ ದೇವರಿಗೆ ನಮಸ್ಕಾರ ಮಾಡುತ್ತಾ ಇದ್ದಾರೆ ಶೇಷ ದೇವರು ಗುರುಗಳು ಅಂತ. ಆನಂತರ ಭಗವಂತ ಎಲ್ಲ ವೇದಗಳಲ್ಲಿ ಅಂತರ್ಯಾಮಿಯಾಗಿದ್ದಾನೆ, ವೇದಗಳಿಂದ ಪ್ರತಿಪಾದ್ಯನಾಗಿದ್ದಾನೆ, ಇತಿಹಾಸ ಪುರಾಣಗಳಿಂದ ಪ್ರತಿಪಾದ್ಯನಾಗಿದ್ದಾನೆ, ಇತಿಹಾಸ ಪುರಾಣಗಳಲ್ಲಿ ಅಂತರ್ಯಾಮಿಯಾಗಿ ಇದ್ದು ಪ್ರತಿಪಾದನೆ ಮಾಡುವ ಶಕ್ತಿಯನ್ನು ಕೊಡುವವನು ಅವನೇ. ಪಂಚ ಮಹಾಭೂತಗಳಲ್ಲಿ ಇದ್ದಾನೆ, ಎಲ್ಲ ಋಷಿಗಳಲ್ಲಿ, ಮುನಿಗಳಲ್ಲಿ, ಅಷ್ಟ ವಸುಗಳು, ಏಕಾದಶ ರುದ್ರರು, ದ್ವಾದಶ ಆದಿತ್ಯರು ಹಾಗೂ ಹಿಮಾಲಯ ಮೇರು ಮೊದಲಾದಂತಹ ಎಲ್ಲ ಪರ್ವತಗಳು, ನಾಗಗಳು ಶೇಷ, ವಾಸುಕಿ, ತಕ್ಷಕ ಮೊದಲಾದ ಎಲ್ಲ ನಾಗಗಳು, ನಾಗಕನ್ಯೆಯರು ಇವರೆಲ್ಲರಲ್ಲಿ ಪರಮಾತ್ಮ ಅಂತರ್ಯಾಮಿಯಾಗಿ ಇದ್ದಾನೆ. ಪರ್ವತಗಳಲ್ಲಿ ವಿವಿಧ ದೊಡ್ಡ ದೊಡ್ಡ ಪರ್ವತಗಳು, ಚಿಕ್ಕ ಚಿಕ್ಕ ಪರ್ವತಗಳು, ನದಿಗಳು ಗಂಗಾ, ಯಮುನಾ, ಸರಸ್ವತಿ, ನರ್ಮದಾ, ಕೃಷ್ಣವೇಣೀ, ತಾಮ್ರಪರ್ಣಿ ಮೊದಲಾದಂತಹ ಎಲ್ಲ ನದಿಗಳಲ್ಲಿ ಪರಮಾತ್ಮ ಅಂತರ್ಯಾಮಿಯಾಗಿ ಇದ್ದಾನೆ. ಗೋದಾವರಿ ಸೀತಾ ಕಾವೇರಿ ಕೌಂಕ್ಯಣಾವತಿ, ವೀಣಾ, ಮುಕ್ತಿಮತಿ, ತಮಸಾ ಪುಷ್ಪವಾಹಿನಿ, ಜ್ಯೋತಿರಥ ಹೀಗೆ ಅನೇಕ ನದಿಗಳ ಹೆಸರನ್ನು ಹೇಳುತ್ತಾರೆ. ಇಂತಹ ಎಲ್ಲ ಪೂರ್ವ ಪಶ್ಚಿಮ ದಕ್ಷಿಣ ಉತ್ತರ ಭಾಗಗಳಲ್ಲಿ ಇರುವಂತಹ ಸಕಲ ನದಿಗಳು ಹೆಸರುಗಳನ್ನೆಲ್ಲ ಕೊಡುತ್ತಾರೆ ಹರಿವಂಶದಲ್ಲಿ ಇಷ್ಟೆಲ್ಲಾ ನದಿಗಳು ಇವೆ.

ಆ ಎಲ್ಲಾ ವೇದಗಳು, ವೇದಾಭಿಮಾನಿ ದೇವತೆಗಳು ಅವರೆಲ್ಲರಲ್ಲಿ ಅಂತರ್ಯಾಮಿಯಾದ ಭಗವದ್ರೂಪಗಳು ಅದರಂತೆ ವಸು ರುದ್ರ ಆದಿತ್ಯಾದಿ ವೇದಾಂತರ್ಗತ ಭಗವದ್ರೂಪಗಳು, ಪರ್ವತ, ನದಿ ಸಮುದ್ರಾದಿಗಳಲ್ಲಿ ಅಂತರ್ಯಾಮಿಯಾದ ಭಗವದ್ರೂಪಗಳು ಅಲ್ಲಿರುವ ತತ್ತಾಭಿಮಾನಿ ದೇವತೆಗಳು ಮತ್ತು ಅಂತರ್ಯಾಮಿ ಭಗವದ್ರೂಪಗಳು ಅವುಗಳೆಲ್ಲ ನಮಗೆ ಕಷ್ಟಗಳ ಪರಿಹಾರ ಮಾಡಲಿ, ಇಷ್ಟಾರ್ಥಗಳನ್ನು ನೀಡಲಿ, ಮಂಗಲವನ್ನು ಉಂಟು ಮಾಡಲಿ ಸುತ್ತಮುತ್ತ ಇರುವಂತಹ ಎಲ್ಲ ದೇವತೆಗಳ ಅನುಗ್ರಹವೂ ನಮ್ಮ ಮೇಲೆ ಇರಲಿ. ನೋಡಿ ನಾವು

ಅವರೆಲ್ಲರೂ ಈ ಕಷ್ಟಗಳ ಪರಿಹಾರ ಮಾಡುವುದು, ಇಷ್ಟಾರ್ಥಗಳನ್ನು ಕೊಡುವುದು ಅಂದರೆ ಏನೋ ರೋಗ ರುಜಿನಗಳು ಬಂದಾಗ ಪರಿಹಾರ ಮಾಡುವುದು ಅಂತ ಮಾತ್ರ ಅಲ್ಲ ಅದು ಸರಿ. ಮುಖ್ಯವಾಗಿ ಸಾಧನ ಮಾಡುವ ಮಾರ್ಗದಲ್ಲಿ ಏನು ವಿಘ್ನಗಳು ನಮಗೆ ಬರುತ್ತವೆ **'ಶ್ರೇಯಾಂಸಿ ಬಹುವಿಘ್ನಾನಿ'** ಅಂತ ಹೇಳಿದ ರೀತಿಯಲ್ಲಿ ಪರಮಾತ್ಮನ ಸೇವೆ ಮಾಡುವುದಕ್ಕೆ, ಶಾಸ್ತ್ರಗಳ ಅಧ್ಯಯನ ಮಾಡುವುದಕ್ಕೆ, ಪಾಠ ಪ್ರವಚನಗಳನ್ನು ಮಾಡುವುದಕ್ಕೆ, ಧರ್ಮ ಕಾರ್ಯಗಳನ್ನು ಮಾಡುವುದಕ್ಕೆ, ಪರೋಪಕಾರ ಮಾಡುವುದಕ್ಕೆ, ಕಾಮ ಕ್ರೋಧಾದಿಗಳನ್ನು ಪರಿತ್ಯಾಗ ಮಾಡಿಕೊಂಡು ಶಮದಮಾದಿ ಸಂಪತ್ತಿಯನ್ನು ಪಡೆದು ಶಾಂತವಾಗಿ ಧ್ಯಾನ ಮಾಡುವುದಕ್ಕೆ ಏನೇನು ವಿಘ್ನಗಳು ಅಂತ ಇದೆ ಆ ಎಲ್ಲಾ ವಿಘ್ನಗಳ ಪರಿಹಾರಕ್ಕೆ, ಆ ಎಲ್ಲಾ ಕಷ್ಟಗಳ ಪರಿಹಾರಕ್ಕೆ ಇವರೆಲ್ಲರ ಅನುಗ್ರಹ ಬೇಕು.

ಇವತ್ತು ನೀವೆಲ್ಲ ಮಂಗಳಾಷ್ಟಕ ಕೇಳುತ್ತೀರಾ **'ಲಕ್ಷ್ಮೀರ್ಯಸ್ಯ ಪರಿಗ್ರಹಃ ಕಮಲ ಭೂಃ'** ಅಂತ. ಅದು ಪ್ರಾಯಃ ಈ ಹರಿವಂಶದಲ್ಲಿ ಬಂದಂತಹ ವಿಷ್ಣುಪರ್ವದ 109 ನೆಯ ಅಧ್ಯಾಯದೊಳಗೆ ಬಲರಾಮ ದೇವರು ಮಾಡಿದ ಉಪದೇಶವೇನಿದೆಯೋ ಈ ಹಿನ್ನೆಲೆಯ ಮೇಲೆ ಮಾಡಿದಂತಹ ಒಂದು ಪ್ರಾರ್ಥನೆ ಇದು ಬಹಳ ವಿಸ್ತೃತ. ಅದನ್ನು ರಾಜರಾಜೇಶ್ವರ ತೀರ್ಥರು ಸಂಕ್ಷಿಪ್ತವಾಗಿ ಅನುಸಂಧಾನಕ್ಕೆ ತಂದು ಕೊಡುವ ರೀತಿಯಲ್ಲಿ ಉಪದೇಶ ಮಾಡಿದ್ದಾರೆ ಅಂತ ಭಾವಿಸಬಹುದು. ಈ ಎಲ್ಲ ಪರ್ವತಗಳ ಪ್ರಾರ್ಥನೆ ಇದೆ, ಅನೇಕ ಸರೋವರಗಳ ಪ್ರಾರ್ಥನೆಯನ್ನು ಮಾಡುತ್ತಾರೆ ಇಷ್ಟೆಲ್ಲಾ ತತ್ತಾಭಿಮಾನಿ ದೇವತೆಗಳು ಆ ನದಿಗಳಲ್ಲಿ ನಮಸ್ಕಾರ ಮಾಡುವಾಗ ಆ ಎಲ್ಲ ನದಿಗಳು ನಾನಿದ್ದಲ್ಲಿಯೇ ನನಗೆ ಸ್ನಾನ ಮಾಡಿಸಿ, ನನ್ನ ದೇಹ ಹಾಗೂ ಮನಸ್ಸು ಇಂದ್ರಿಯಗಳಲ್ಲಿರುವ ಎಲ್ಲ ದೋಷಗಳನ್ನು ದೂರ ಮಾಡಿ ನನ್ನನ್ನು ಶುದ್ಧನನ್ನಾಗಿ ಮಾಡಲಿ, ನನ್ನನ್ನು ಪೂತಾತ್ಮನನ್ನಾಗಿ ಮಾಡಲಿ,ನಾನು ಆ ಪವಿತ್ರವಾದ ಶರೀರ, ಮನಸ್ಸು, ಇಂದ್ರಿಯಗಳಿಂದ ಸತ್ಕರ್ಮಗಳನ್ನು ಮಾಡುತ್ತೇನೆ ಆ ಎಲ್ಲ ಮನೋಭಿಮಾನಿ ದೇವತೆಗಳು ಉತ್ತಮ ಮನಸ್ಸಿಗೆ ಪ್ರಚೋದನೆಯನ್ನು ಮಾಡಲಿ ಅಂತ ಪ್ರಾರ್ಥನೆಯನ್ನೆಲ್ಲ ಹೇಳಿಕೊಡುತ್ತಾರೆ ಬಲರಾಮ ದೇವರು.

ಧರ್ಮಾರ್ಥಕಾಮವಿಷಯೋ ಯಶಃಪ್ರಾಪ್ತಿಃ ಶಮೋ ದಮಃ ॥ (109.44 ವಿಷ್ಣುಪರ್ವ)

ಶಮ ಅಂದರೆ ಭಗವಂತನಲ್ಲಿ ಏಕಾಗ್ರವಾದ ಮನಸ್ಸು, ದಮ ಇಂದ್ರಿಯ ನಿಗ್ರಹ ಧರ್ಮದ ವಿಷಯದಲ್ಲಿಯೇ ಆಸಕ್ತಿ ಇವುಗಳನ್ನೆಲ್ಲ ನಮಗೆ ಕೊಡಲಿ ಈ ದೇವತೆಗಳು ಅಂತ. ಅಷ್ಟದಿಕ್ಪಾಲಕರ ಪ್ರಾರ್ಥನೆಯನ್ನು ಮಾಡುತ್ತಾರೆ ಈ ರೀತಿ ಕಾಲಾಭಿಮಾನಿ ದೇವತೆಗಳು, ಮರುತ್ ದೇವತೆಗಳು ಆಮೇಲೆ ಸ್ತ್ರೀ ದೇವತೆಗಳೆಲ್ಲ ರುದ್ರಾಣೀ, ಭದ್ರಕಾಲೀ, ಭದ್ರಾ, ಜ್ಯೇಷ್ಠಾ, ವಾರುಣೀ, ಭಾಸಿ, ಕಾಲಿಕಾ ಇತ್ಯಾದಿ ಎಲ್ಲ ದೇವತೆಗಳಿಗೆ ಪ್ರಾರ್ಥನೆಯನ್ನು ಮಾಡುತ್ತಾರೆ.

ಮಾತರೋ ಮಾತೃವತ್ಪುತ್ರಂ ರಕ್ಷನ್ತು ಮಮ ನಿತ್ಯಶಃ ॥ (109.62 ವಿಷ್ಣುಪರ್ವ)

ಅಂತಹ ಎಲ್ಲಾ ತಾಯಂದಿರು ತಾಯಿ ಮಗುವನ್ನು ಹೇಗೆ ಎಲ್ಲಾ ಆಪತ್ತುಗಳಿಂದ ರಕ್ಷಣೆ ಮಾಡುತ್ತಾಳೋ ದೊಡ್ಡ ಲಿಸ್ಟೇ ಇದೆ ಕೆಲವರ ಹೆಸರನ್ನು ತಿಳಿಸಿದೆ ಆ ಎಲ್ಲಾ ದೇವತಾ ಸ್ತ್ರೀಯರು ಮಹಾನುಭಾವರು ನಮ್ಮೆಲ್ಲರ ತಾಯಂದಿರು ಇದ್ದಂತೆ. ಅವರೆಲ್ಲರೂ ಕೂಡ ಮಕ್ಕಳಂತೆ ಇರುವ ಅನಾಥರಾದ ನಮ್ಮನ್ನು ರಕ್ಷಣೆ ಮಾಡಲಿ ತಾಯಂದಿರಾಗಿ ಒದಗಿ ಬಂದು ಅಂತ ಆ ದೇವತಾ ಸ್ತ್ರೀಯರಿಗೆಲ್ಲ ಪ್ರಾರ್ಥನೆಯನ್ನು ಮಾಡಿದ್ದಾರೆ.

ಪಾರ್ವತ್ಯಾ ರೋಷಸಮ್ಭೂತಾಃ ಸಹಸ್ರಾಣಿ ಶತಾನಿ ಚ ॥ (109.82 ವಿಷ್ಣುಪರ್ವ)

ಶಕ್ತಿಮನ್ತೋ ಧೃತಿಮನ್ತೋ ಬ್ರಹ್ಮಣ್ಯಾಃ ಸತ್ಯಸಙ್ಗರಾಃ । (109.83 ವಿಷ್ಣುಪರ್ವ)

ಅನೇಕ ರುದ್ರ ದೇವರ ಗಣ ಪಾರ್ವತಿ, ಗಣಪತಿ ಇತ್ಯಾದಿಗಳೆಲ್ಲ ಸರಿ, ಇದಲ್ಲದೇ ಬೇಕಾದಷ್ಟು ರುದ್ರ ದೇವರ ಗಣದಲ್ಲಿ ಇರತಕ್ಕಂತಹ ಆ ರುದ್ರ ದೇವರ ಅನುಚರರೆಲ್ಲ ಇದ್ದಾರೆ. ಅವರೆಲ್ಲರೂ ಕೂಡ ನಮಗೆ ಅನುಕೂಲರಾಗಿ ಇರಲಿ.

ತೇಷಾಂ ಗಣಾನಾಂ ಪತಯಃ ಸಗಣಾಃ ಪಾನ್ತು ಮಾಂ ಸದಾ ॥ (109.84 ವಿಷ್ಣುಪರ್ವ)

ಈ ಕಡೆಗೆ ಋಷಿಗಳು ನಾರದರು, ಪರ್ವತರು ಮೊದಲಾದಂತಹ ಪರ್ವತ ಅಂದರೆ ಈ ಪರ್ವತ ಅಲ್ಲ ಪರ್ವತ ಅಂತ ಋಷಿಯ ಹೆಸರು ನಾರದರ ಗೆಳೆಯ ಈ ಮೊದಲಾದ ಋಷಿಗಳು, ವೇದವ್ಯಾಸ ದೇವರೇ ಮೊದಲಾದಂತಹ ಋಷಿಗಳೆಲ್ಲ ನಮಗೆ ರಕ್ಷಣೆಯನ್ನು ಮಾಡಲಿ. ಎಲ್ಲ ಅಶ್ವಗಳು, ಎಲ್ಲ ಐರಾವತಾದಿ ಆನೆಗಳು, ಉಚ್ಚೈಶ್ರವಸ್ಸಿನ ಮೊದಲಾದ ಅಶ್ವಗಳು, ಋಷಿ ಪತ್ನಿಯರು, ಋಷಿ ಕನ್ಯೆಯರು ಅವರೆಲ್ಲ ಮಹಾಜ್ಞಾನಿಗಳು ಅಂಥವರೆಲ್ಲ ನಮಗೆ ರಕ್ಷಣೆ ಮಾಡಲಿ. ವಾಹನಗಳು ಪರಮಾತ್ಮನ ವಾಹನವಾದಂತಹ ಗರುಡ, ಈ ಕಡೆಗೆ ಹಂಸ ಬ್ರಹ್ಮ ದೇವರ ವಾಹನ, ರುದ್ರ ದೇವರ ವಾಹನ ನಂದಿ ಇಂತಹ ಎಲ್ಲ ವಾಹನಗಳು ಅವೆಲ್ಲ ದೇವತೆಗಳೇ ಅವರೆಲ್ಲ ನಮಗೆ ರಕ್ಷಣೆಯನ್ನು ಮಾಡಲಿ ಅಂತ. ನಮ್ಮ ಆಪತ್ತುಗಳು ಬಂದಾಗ ಪರಿಹಾರ ಮಾಡುವುದಕ್ಕೆ ತಮ್ಮ ತಮ್ಮ ಸ್ವಾಮಿಯನ್ನ ಪರಮಾತ್ಮನನ್ನ ನಮ್ಮ ಹತ್ತಿರ ಕರೆದುಕೊಂಡು ಬರಲಿ, ಹಂಸ ಬ್ರಹ್ಮ ದೇವರನ್ನ, ನಂದಿ ರುದ್ರ ದೇವರನ್ನ, ಮಯೂರ ಸ್ಕಂದನನ್ನ, ಇಲಿ ಗಣಪತಿಯನ್ನ ಕರೆದುಕೊಂಡು ಬರಲಿ ಅನ್ನುವ ಅರ್ಥದಲ್ಲಿ ಆ ವಾಹನಗಳಿಗೂ ಪ್ರಾರ್ಥನೆಯನ್ನು ಮಾಡುತ್ತಾರೆ. ನಾನು ಈ ಒಂದು ಅಧ್ಯಾಯದ ಆಧಾರದ ಮೇಲೆ ಪ್ರಾಯಃ ಮಂಗಳಾಷ್ಟಕದ ಪ್ರಾದುರ್ಭಾವವಾಗಿರಬಹುದು ಅಂತ ಚಿಂತನ ಮಾಡಲಿಕ್ಕೆ ಕಾರಣ ಕೊನೆಗೆ ಹೇಳುತ್ತಾರೆ.

ಯ ಇದಂ ಶ್ರಾವಯೇದ್ವಿದ್ವಾಂಸ್ತಥೈವ ಶೃಣುಯನ್ನರಃ ॥ (109.103 ವಿಷ್ಣುಪರ್ವ)

ಮಙ್ಗಲಾಷ್ಟಶತಂ ಸ್ನಾತೋ ಜಪನ್ ಪರ್ವಣಿ ಪರ್ವಣಿ । (109.104 ವಿಷ್ಣುಪರ್ವ)

ಇದಕ್ಕೆ ಮಂಗಳಾಷ್ಟಶತಕ ಅಂತ ಕರೆದಿದ್ದಾರೆ ಹರಿವಂಶದಲ್ಲಿ. ಮಂಗಳಾಷ್ಟಶತಕ ಅಂದರೆ ನೂರೆಂಟು ಶ್ಲೋಕಗಳ ಈ ಮಂಗಳಾಷ್ಟಶತಕ ಇದಾದರೆ ಸಂಕ್ಷಿಪ್ತವಾಗಿ ಮಂಗಳಾಷ್ಟಕ ಅಂತ ಅದು ಆಗಿರಬಹುದು ಅಂತ. **'ಮಙ್ಗಲಾಷ್ಟಶತಂ ಸ್ನಾತೋ'** ಇದನ್ನು ಪಾರಾಯಣ ಮಾಡಿದರೆ ಸಾಕು, ಇಲ್ಲ ಕೇಳಿದರೂ ಸಾಕು ಎಲ್ಲಾ ಪರ್ವಕಾಲಗಳಲ್ಲಿ, ಎಲ್ಲಾ ಶ್ರೇಷ್ಠ ತೀರ್ಥಗಳಲ್ಲಿ ಸ್ನಾನ ಮಾಡಿದ ಪುಣ್ಯ ಬರುತ್ತದೆ. ಎಂತಹ ಶ್ರೇಷ್ಠವಾದ ಸ್ತೋತ್ರವನ್ನ ವೇದವ್ಯಾಸ ದೇವರು ನಮಗೆ ಪರಮಾನುಗ್ರಹ ಮಾಡಿ ಕರುಣಿದ್ದಾರೆ ಅದನ್ನು ಬಲರಾಮ ದೇವರು ಉಪದೇಶ ಮಾಡಿದ್ದಾರೆ ಅನ್ನುವುದನ್ನು ನಾವು ತಿಳಿಯಬೇಕು.

ವಧಬನ್ಧಪರಿಕ್ಲೇಶಂ ವ್ಯಾಧಿ ಶೋಕಪರಾಭವಮ್ ॥ (109.104 ವಿಷ್ಣುಪರ್ವ)

ನ ಚ ಪ್ರಾಪ್ನೋತಿ ವೈಕಲ್ಯಂ ಪರತ್ರೇಹ ಚ ಶರ್ಮದಮ್ ।
ಧನ್ಯಂ ಯಶಸ್ಯಮಾಯುಷ್ಯಂ ಪವಿತ್ರಂ ವೇದಸಮ್ಮಿತಮ್ ॥ (109.105 ವಿಷ್ಣುಪರ್ವ)

ಶ್ರೀಮತ್ಸ್ವರ್ಗ್ಯಂ ಸದಾ ಪುಣ್ಯಮಪತ್ಯಜನನಂ ಶಿವಮ್ । (109.106 ವಿಷ್ಣುಪರ್ವ)

ಎಲ್ಲಾ ವಿಧವಾದ ಕಷ್ಟಗಳ ಪರಿಹಾರ ಆಗುತ್ತದೆ ಅವನಿಗೆ ಫಾಂಸೀ ಕೊಡುವ ಪ್ರಸಂಗ ಇರಬಹುದು ಸುಮ್ಮನೆ ಅಪರಾಧ ಇಲ್ಲದೆ ಇದ್ದರೂ ಕೂಡ ಅಥವಾ ವ್ಯಾಧಿ ಮೊದಲಾದಂತಹ ಅನೇಕ ಸಮಸ್ಯೆಗಳು ಇರಬಹುದು ಆಧಿ ಮಾನಸಿಕವಾದದ್ದು, ವ್ಯಾಧಿ ದೈಹಿಕವಾದದ್ದು ಅವುಗಳೆಲ್ಲವೂ ಪರಿಹಾರವಾಗುತ್ತೆ ಈ ಸ್ತೋತ್ರದ ಪಠಣದಿಂದ ಎಂಬುದಾಗಿ ತಿಳಿಸಿಕೊಡುತ್ತಾರೆ.

ಆನಂತರದಲ್ಲಿ ಇನ್ನೊಂದು ಶ್ರೀಕೃಷ್ಣ ಪರಮಾತ್ಮನ ಮಹಿಮೆಯನ್ನು ವೈಶಂಪಾಯನರು ಜನಮೇಜಯನಿಗೆ ತಿಳಿಸಿಕೊಡುತ್ತಾರೆ. ಈ ಕಡೆಗೆ ಶಂಬರಾಸುರ ಪ್ರದ್ಯುಮ್ನನನ್ನು ಅಪಹಾರ ಮಾಡಿಕೊಂಡು ಹೋದ ಅಂತ ಹಿಂದೆ ಕಥೆ ಕೇಳಿದ್ದೀರಿ ಪ್ರದ್ಯುಮ್ನ ಶಂಬರಾಸುರನನ್ನು ಸಂಹಾರ ಮಾಡಿ ಮರಳಿ ದ್ವಾರಕಾ ಪಟ್ಟಣಕ್ಕೆ ಬಂದ ಅವನ ಪರಾಕ್ರಮ, ಅವನ ವೈಭವ ಅವನ ಕಥೆಯೆಲ್ಲಾ ಕೇಳುತ್ತಾ ಇದ್ದೀರಿ ಆದರೆ ಇತಿಹಾಸವನ್ನು ಹೇಳುತ್ತಾ ಇದ್ದಾರೆ. ಯಾವಾಗ ಶಂಬರಾಸುರ ಪ್ರದ್ಯುಮ್ನನನ್ನು ಕರೆದುಕೊಂಡು ಆಚೆಗೆ ಹೋದ ಆಗಲೇ ಅದೇ ತಿಂಗಳಲ್ಲಿ ಜಾಂಬವತಿಯಲ್ಲಿ ಸಾಂಬ ಅವತಾರ ಮಾಡುತ್ತಾನೆ **'ಸಾಂಬೋ ಜಾಂಬವತೀ ಸುತಃ'**[1] ಅಂತ. ಅವನೂ ಕೂಡ ಸ್ಕಂದನ ಅವತಾರನೇ, ಪ್ರದ್ಯುಮ್ನ ಸಾಂಬ ದೇವತೆ ಒಬ್ಬನೇ ಎರಡು ಅಂಶಗಳಿಂದ ಸ್ಕಂದ ಸಾಂಬನಾಗಿಯೂ, ಈಚೆಗೆ ಪ್ರದ್ಯುಮ್ನನಾಗಿಯೂ ಅವತಾರ ಮಾಡಿದ್ದಾನೆ. ದೊಡ್ಡಪ್ಪನಾದ ಬಲರಾಮ ದೇವರಲ್ಲಿಯೇನೆ ಸಾಂಬನು ವಿದ್ಯಾಭ್ಯಾಸವನ್ನು ಮಾಡಿದ್ದಾನೆ ಹೀಗಾಗಿ ವಿಶೇಷವಾಗಿ ಬಲರಾಮ ದೇವರಿಗೆ ಅವನ ಮೇಲೆ ಪ್ರೀತಿ ಹೀಗೆ ಒಂದು ವಿಷಯವನ್ನು ತಿಳಿಸುತ್ತಾರೆ.

ಈ ಕಡೆಗೆ ಶ್ರೀಕೃಷ್ಣ ಪರಮಾತ್ಮನ ಅದ್ಭುತವಾದ ಐಶ್ವರ್ಯ, ಅವನ ಶಕ್ತಿ, ಅವನ ಸಾಮರ್ಥ್ಯ, ಅವನ ಪರಾಕ್ರಮ ಕೇಳಿ ತಿಳಿದವರು ಬೇಕಾದಷ್ಟು ಜನ, ಕೆಲವರೇ ಕಣ್ಣಾಗಿ ಕಂಡವರು ಅದರೊಳಗೂ ಅವನು ಅಲ್ಲಲ್ಲಿ ಬಂದು ತೋರಿದ ಮಹಿಮೆಯನ್ನ ಅಲ್ಲಲ್ಲಿ ಇದ್ದವರು ಕಂಡವರಿದ್ದಾರೆ. ಗೋಮಂತ ಪರ್ವತಕ್ಕೆ ಹೋಗಿ ತೋರಿಸಿದ ಮಹಿಮೆಯನ್ನ ಅಲ್ಲಿದ್ದವರು ಕಂಡರು, ಕರವೀರಪುರಕ್ಕೆ ಹೋಗಿ ಶೃಗಾಲ ವಾಸುದೇವನ ಸಂಹಾರಾದಿಗಳನ್ನ ಮಾಡಿದ್ದನ್ನು ಅಲ್ಲಿಯ ಜನ ಕಂಡರು. ಹೀಗೆ ಅಲ್ಲಲ್ಲಿರುವ ಜನ ಅಲ್ಲಲ್ಲಿ ತೋರಿದ ಮಹಿಮೆಯನ್ನು ತಿಳಿದರೂ ಕೂಡ ದ್ವಾರಕಾ ಪಟ್ಟಣದಲ್ಲಿ ಇರುವಂತಹ ಆ ಪರಿಸರದಲ್ಲಿ ದೇವರು ನಿರ್ಮಾಣ ಮಾಡಿದ ಅದ್ಭುತವಾದ ಏನು ಸೃಷ್ಟಿ, ಅದರ ಹಿನ್ನೆಲೆಯಲ್ಲಿ ತೋರಿ ಬರುವ ದೇವರ ಮಹಿಮೆ, ಅವನ ವೈಭವ ಇದನ್ನೆಲ್ಲಾ ಕಂಡಿಲ್ಲ. ಅದಕ್ಕಾಗಿ ಆ ರೈವತ ಪರ್ವತದ ಸುತ್ತಲೂ ಕೂಡ ಪರಮ ಭಕ್ತಿಯಿಂದ ಬಂದವರು ಪಾಂಡವರು, ಕೇವಲ ಕುತೂಹಲ ಬುದ್ಧಿ ಜೊತೆಗೆ ಅಸೂಯೆ, ದ್ವೇಷ ಏನಾದರೂ ಇದೆ ನೋಡೋಣ ಅನ್ನುವ ದುರ್ಬುದ್ಧಿಯಿಂದ ಬಂದವರು ಕೌರವರು. ಇದಲ್ಲದೇ ಇನ್ನನೇಕ ಸಜ್ಜನರಾದ ರಾಜರೆಲ್ಲ ಭಕ್ತಿಯಿಂದ ಬಂದಿದ್ದರು, ದುರ್ಜನರಾದವರೆಲ್ಲ ಕೌರವರಂತೆ ದುರುದ್ದೇಶದಿಂದ ಬಂದಿದ್ದಾರೆ ಅಂತೂ ಇಂತೂ ಸಾಕಷ್ಟು ರಾಜ ಮಹಾರಾಜರುಗಳೆಲ್ಲ ಬೇರೆ ಬೇರೆ ದೇಶಗಳಿಂದ ಅಲ್ಲಿ ಬಂದು ನೆಲೆಸಿದ್ದಾರೆ. ಶ್ರೀಕೃಷ್ಣ ಪರಮಾತ್ಮ ಸರ್ವೋತ್ತಮನಾದ ಶ್ರೀಹರಿ ಏನು ಈ ಎಲ್ಲಾ ರಾಜರುಗಳಿಗೆ ಏನೂ ಜಾಸ್ತಿ ಅವನು ಬೆಲೆ ಕೊಡಬೇಕಾದದ್ದಿಲ್ಲ ತಾನು ತನ್ನ ಸಿಂಹಾಸನದ ಮೇಲೆ ಕುಳಿತಿದ್ದಾನೆ ಶ್ರೀಕೃಷ್ಣ ಪರಮಾತ್ಮ, ಎಲ್ಲಾ ರಾಜಾಧಿರಾದರು, ಸಜ್ಜನರು ಅತ್ಯಂತ ಭಕ್ತಿ, ಶ್ರದ್ಧೆಗಳಿಂದ ಸುತ್ತಲೂ ಕುಳಿತಿದ್ದಾರೆ.

ಇಂತಹ ಸಂದರ್ಭದಲ್ಲಿ ಇದಕ್ಕಿದ್ದ ಹಾಗೆ ಭಾರೀ ಅದ್ಭುತವಾಗಿ ಇರುವಂತಹ ತೇಜೋಮಂಡಲ ಕಾಣಿಸುತ್ತಾ ಇದೆ, ಎಲ್ಲ ಕಡೆಗೆ ಮೇಘಗಳು ಕವಿದಿವೆ, ಮೋಡಗಳು ಕವಿದಿದ್ದರೂ ಇದ್ದಕ್ಕಿದ್ದಂತೆ ಆ ಕಾರ್ಮೋಡಗಳ ಮಧ್ಯದಲ್ಲಿ ಭೇಧನ ಮಾಡಿ ಒಂದು ತೇಜೋಮಯವಾದ ಮೂರ್ತಿ ಕೆಳಗೆ ಬಂದಂತೆ ಅದು ಯಾರಲ್ಲ ನಾರದರು, ಅದ್ಭುತವಾದಂತಹ ನಾರದರ ದಿವ್ಯ ತೇಜಸ್ಸು ಕೆಳಗೆ ಬರುತ್ತ ಇದೆ. ಆ ನಾರದರನ್ನ ಪರಮಾತ್ಮ ಸ್ವಾಗತ ಮಾಡಿದ್ದಾನೆ

1. 10.2.68.1 ಭಾಗವತ

ಪರಮ ಸಂತೋಷವಾಗಿದೆ, ನಾರದರು ಅಂದರೆ ಬಹಳ ಪ್ರೀತಿ ಪರಮಾತ್ಮನಿಗೆ, ಸ್ವಾಗತ ಮಾಡಿದ ಯೋಗ್ಯವಾದ ಶ್ರೇಷ್ಠವಾದ ಆಸನದಲ್ಲಿ ಕೂಡಿಸಿದ್ದಾನೆ. ನಾರದರು ಬಂದವರೇ ಬಂದು ಪರಮಾತ್ಮನಿಗೆ **'ಧನ್ಯೋಸಿ ಆಶ್ಚರ್ಯೋಸಿ'** ಅಂತ ಹೇಳಿ ಕುಳಿತಿದ್ದಾರೆ **'ದಕ್ಷಿಣಾಭಿಸ್ಸಾಕಂ'** ಅಂತ ಪರಮಾತ್ಮ ಉತ್ತರ ಕೊಟ್ಟ. ಎರಡು ವಾಕ್ಯಗಳನ್ನು ಅವರು ಹೇಳಿದರು **'ಧನ್ಯೋಸಿ ಆಶ್ಚರ್ಯೋಸಿ'** ಕೃಷ್ಣ ಒಂದು ವಾಕ್ಯ ಹೇಳಿದ **'ದಕ್ಷಿಣಾಭಿಸ್ಸಾಕಂ'** ದೊಡ್ಡವರು ಮಾತನಾಡುತ್ತ ಇರುವಾಗ ಉಳಿದವರೆಲ್ಲ ಅತ್ಯಂತ ಗಂಭೀರವಾಗಿ ಆಸಕ್ತಿಯಿಂದ ಕೇಳುತ್ತ ಇರಬೇಕು ಮಧ್ಯದಲ್ಲಿ ಮಾತನಾಡಬಾರದು ಅಂತಹ ದೊಡ್ಡ ಸಭೆ ಇವರಿಬ್ಬರು ಆಡಿದ ಮಾತು ಎಲ್ಲರಿಗೂ ಕೇಳಿಸಿದೆ ಯಾಕೆ ಅಂದರೆ ಅಷ್ಟು ಶಾಂತರಾಗಿ ಮೌನದಿಂದ ಕುಳಿತಿದ್ದಾರೆ. ಹೀಗಾಗಿ ಸಹಜವಾಗಿಯೇ ಎಲ್ಲರಿಗೂ ಕುತೂಹಲ ಏನಿದು **'ಧನ್ಯೋಸಿ ಆಶ್ಚರ್ಯೋಸಿ'** ಅಂತ ಅವರು ಹೇಳಿದರು **'ದಕ್ಷಿಣಾಭಿಸ್ಸಾಕಂ'** ಅಂತ ಇವನು ಹೇಳಿದ ಕೃಷ್ಣ ಏನಿದರ ಅರ್ಥ ಏನು ಆಂತರ್ಯ ಏನು ಅಂತ ಎಲ್ಲರಿಗೂ ಕುತೂಹಲ. ಆಗ ಶ್ರೇಷ್ಠವಾದ ದಿವ್ಯವಾದ ಬಂಗಾರದ ಪೀಠದಲ್ಲಿ ಕುಳಿತಿರುವಂತಹ ನಾರದರ ಕಡೆಗೆ ನೋಡಿ ಪರಮಾತ್ಮ ಹೇಳುತ್ತಾನೆ ನಾರದರೇ ಇದರ ವಿವರಣೆಯನ್ನ ನೀವೇ ಮಾಡಿಬಿಡಿ ಅಂತ.

ಸ್ವಯಮೇವಾಖಿಲಜಗದ್ರಕ್ಷಾದ್ಯಮಿತಶಕ್ತಿಮಾನ್ ।
ಅಪ್ಯಚ್ಯುತೋ ಗುರುದ್ವಾರಾ ಪ್ರಸಾದಕೃದಹಂ ತ್ವಿತಿ ॥ (26.52 ಮಭಾತಾನಿರ್ಣಯ)

ಯಾಕೆ ಅಂದರೆ ಇಡೀ ಜಗತ್ತಿನ ರಕ್ಷಣೆ ಮಾಡುವುದಕ್ಕೆ ಸ್ವಯಂ ಪರಮಾತ್ಮನಿಗೆ ಪರಿಪೂರ್ಣ ಸಾಮರ್ಥ್ಯ ಇದೆ ಅವನಿಗೇ ಸಾಮರ್ಥ್ಯ ಇರುವುದು ಸ್ವತಂತ್ರವಾಗಿ ಇನ್ನೊಬ್ಬರಿಗೆ ಇಲ್ಲವೂ ಇಲ್ಲ ಸ್ವತಂತ್ರ ಸಾಮರ್ಥ್ಯ ಅವನಿಗೇ ಇರುವುದು. ಇಷ್ಟಿದ್ದರೂ ಪರಮಾತ್ಮ ಬ್ರಹ್ಮಾದಿ ದೇವತೆಗಳು ಹಾಗೂ ಗುರುಗಳು ಅವರ ಮೂಲಕ ರಕ್ಷಣೆಯನ್ನು ಮಾಡಿಸುತ್ತೇನೆ ಅಂತ ತನ್ನ ಸಂಕಲ್ಪ. ಹಾಗೆ ಈ ಎಲ್ಲ ಭಕ್ತರಿಗೆ ನಾರದರ ಮೂಲಕ, ಗುರುಗಳ ಮೂಲಕ ಉಪದೇಶವನ್ನು ಮಾಡಿಸೋಣ ಈ ತತ್ವೋಪದೇಶವನ್ನ ಅಂತ ನಾರದರಿಗೆ ಹೇಳಿದರು, ಸರಿ ಅಂತ ನಾರದರು ನಿನ್ನ ಆಜ್ಞೆ ಅಂತ ಆ ಪ್ರಸಂಗದ ವಿವರಣೆಯನ್ನು ಕೊಡುತ್ತಾ ಇದ್ದಾರೆ. ಒಂದು ಬಾರಿ ನಾನು ನಾರದರು ಹೇಳಿಕೊಳ್ಳುತ್ತಾರೆ ನಾನು ಗಂಗಾ ಸ್ನಾನಕ್ಕೆ ಅಂತ ಹೋಗಿದ್ದೆ ಶ್ರಿಷವಣ ಸ್ನಾನ ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲ ಮೂರು ಹೊತ್ತು ಗಂಗಾ ಸ್ನಾನವನ್ನು ಮಾಡುತ್ತ ಇದ್ದೆ. ಗಂಗೆಯಲ್ಲಿ ವಿಶೇಷವಾಗಿ ಆಹ್ನಿಕವನ್ನು ಮಾಡಿಕೊಂಡು ಭಗವಂತನ ಧ್ಯಾನವನ್ನು ಮಾಡುತ್ತಾ ಇದ್ದೆ. ಒಂದು ದಿನ ಅಲ್ಲಿ ಒಂದು ದೊಡ್ಡದಾದ ಕೂರ್ಮವನ್ನು ನಾನು ನೋಡಿದೆ ಆ ಕೂರ್ಮ ಸುಮಾರು ಒಂದು ಕ್ರೋಶ, ಮೂರು ಮೈಲಿಯಷ್ಟು ಅಗಲ ಆರು ಮೈಲಿ ಉದ್ದ, ಅಂತಹ ದೊಡ್ಡದಾದ ಕೂರ್ಮ. ಎರಡು ಕಪಾಲಗಳಿಂದ ನಿರ್ಮಿತ ಮೇಲೆ ಒಂದು, ಕೆಳಗೆ ಒಂದು, ಕೆಳಗಿದ್ದದ್ದು ಅತ್ಯಂತ ಮೃದುವಾಗಿರುತ್ತದೆ ಮೇಲಿದ್ದದ್ದು ಅತ್ಯಂತ ಗಟ್ಟಿಯಾದದ್ದು ಆ ತರಹದ ಅದ್ಭುತವಾದ ಆ ಕೂರ್ಮದ ಶರೀರ ಗಂಗೆಯಲ್ಲಿ ನಾನು ಕಂಡೆ. ನಾಲ್ಕು ಕಾಲುಗಳು, ತಲೆ, ಕುಚ್ಚ ಇವುಗಳಿಂದ ಕೂಡಿದ ತನಗೆ ಇಚ್ಛೆಗೆ ಬಂದಾಗ ತಲೆ ಕಾಲು ಎಲ್ಲವನ್ನು ಹೊರಗೆ ಹಾಕುತ್ತದೆ ಇಲ್ಲದೆ ಇದ್ದರೆ ಒಳಗೆ ಮುಚ್ಚಿಕೊಂಡು ಬಿಡುತ್ತದೆ ಅಂತಹ ಅದ್ಭುತವಾದ ಶಕ್ತಿ ಆ ಕೂರ್ಮಕ್ಕೆ ಉಂಟು ಗೊತ್ತೇ ಆಗುವುದಿಲ್ಲ ಎಲ್ಲವನ್ನು ಒಳಗೆ ಮುಚ್ಚಿಕೊಂಡು ಬಿಡುತ್ತದೆ **'ಕೂರ್ಮೋಂಗಾನೀವ ಸರ್ವಶಃ'**[1] ನಾನು ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲ ಮೂರು ಹೊತ್ತು ಹರಿಪಾದೋದಕ ಸಾಕ್ಷಾತ್ ಪರಮಾತ್ಮನ ಪಾದದಿಂದ ಬಂದಂತಹ ಗಂಗೆ ವಿಷ್ಣುಪದಿ ಅಂತಹ ಪವಿತ್ರವಾದ ಜಲದ ಸ್ಪರ್ಶ ಆಗಲಿ ಅಂತ ನಾನು ಮೂರು ಹೊತ್ತು ಬಂದು ಸ್ನಾನ ಮಾಡಿ ಹೋದರೆ ಈ ಕೂರ್ಮ ಗಂಗೆಯಲ್ಲಿಯೇ ಇರುತ್ತದೆ ಅಲ್ಲ, ಇದು ಎಂತಹ ಧನ್ಯತೆಯನ್ನು ಅನುಭವಿಸುತ್ತದೆ ಏನು

1. 2.58 ಭ ಗೀತಾ

ಆಶ್ಚರ್ಯ ಅದರ ಯೋಗ್ಯತೆ, ಅದರ ಜೀವನ ಎಷ್ಟು ಧನ್ಯ ಅಂತ **'ಧನ್ಯೋಸಿ ಆಶ್ಚರ್ಯೋಸಿ'** ಅಂತ ಅಲ್ಲಿ ಮೊಟ್ಟ ಮೊದಲು ಬಾರಿ ನನ್ನಿಂದ ಉದ್ಗಾರ ಬಂತು ಆ ಕೂರ್ಮವನ್ನು ನೋಡಿದಾಗ **'ಧನ್ಯೋಸಿ ಆಶ್ಚರ್ಯೋಸಿ'** ಅಂತ. ನಾನೇನೋ ಮೈಮರೆತು ಅಂದೆ ಅಂತ ಅಂದುಕೊಳ್ಳುವಂತಿಲ್ಲ ನಾನು ಅದರ ಧನ್ಯತೆಯನ್ನು ನಿಜವಾಗಿ ಕಂಡು ಅಂದದ್ದು ಆದರೆ ಆ ಕೂರ್ಮ ಮನುಷ್ಯ ವಾಣಿಯಿಂದ ಮಾತನಾಡಿ ನನಗೆ ಉತ್ತರ ಕೊಟ್ಟಿತು ನಾನು ಧನ್ಯ ಆಶ್ಚರ್ಯ ಅಂತ. ಇಲ್ಲಿ ಶ್ರೀಮದಾಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಇದರ ತಾತ್ಪರ್ಯಾರ್ಥವನ್ನು ತಿಳಿಸಿಕೊಡುತ್ತಾರೆ ಧನ್ಯ ಅನ್ನುವುದಕ್ಕೆ ಗುಣ, ಗುಣಗಳಿಂದ ಪೂರ್ಣ ಉತ್ತಮ ಅಂತ ಅರ್ಥ.

ಅನಪೇಕ್ಷೋ ಗುಣೈಃ ಪೂರ್ಣೋ ಧನ್ಯ ಇತ್ಯುಚ್ಯತೇ ಬುಧೈಃ । (4.23.25 ಭಾಗವತತಾತ್ಪರ್ಯ)

ಅಂತ ತಾತ್ಪರ್ಯ ನಿರ್ಣಯದಲ್ಲಿ ಶ್ರೀಮದಾಚಾರ್ಯರು ತಿಳಿಸಿದ್ದಾರೆ. ಇನ್ನೊಬ್ಬರ ಅಪೇಕ್ಷೆ ಇಲ್ಲದಂತೆ ತಾನು ಪಡೆದು ಕೊಳ್ಳಲೇಬೇಕಾದ ಗುಣಗಳನ್ನ ಪಡೆದುಕೊಂಡು ಪರಿಪೂರ್ಣತೆಯನ್ನು ಪಡೆದಿದ್ದರೆ ಅವನಿಗೆ ಧನ್ಯ ಅನ್ನಬೇಕು ಅರ್ಥವಾಯಿತಲ್ಲ. ಧನ್ಯ ಶಬ್ದದ ಬಳಕೆ ಬಹಳ ಇದೆ ಧನ್ಯವಾದಗಳು, ಧನ್ಯವಾದಗಳು ಅಂತ ಹೆಜ್ಜೆ ಹೆಜ್ಜೆಗೆ ಬಳಸುತ್ತಾರೆ ಇವತ್ತು, ಆ ಧನ್ಯ ಅಂದರೆ ಏನು ಅಂತೇನೆ ಗೊತ್ತಿರುವುದಿಲ್ಲ. ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಹೇಳುತ್ತಾರೆ ಪಡೆಯಬೇಕಾದ ಗುಣಗಳನ್ನ ಪಡೆದವ ಅವನು ಧನ್ಯ ಅಂತ. ಯಾರು ಗುಣಗಳನ್ನ ಪಡೆದಿರುತ್ತಾರೆ ಪರಿಪೂರ್ಣ ಮಟ್ಟದಲ್ಲಿ ಅವರು ಉತ್ತಮರಾಗಿರುತ್ತಾರೆ. ಹೀಗಾಗಿ ಧನ್ಯ ಎಂಬ ಶಬ್ದಕ್ಕೆ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಸರ್ವೋತ್ತಮ ಅಂತ ಅರ್ಥವನ್ನು ಬರೆಯುತ್ತಾರೆ ಆಚಾರ್ಯರು. ಇನ್ನು ಆಶ್ಚರ್ಯ ಅನ್ನುವ ಶಬ್ದಕ್ಕೆ ನಿನ್ನ ಸಮಾನನಾದ ವ್ಯಕ್ತಿ ಇನ್ನೊಬ್ಬ ಇಲ್ಲ ಅಂತ ಅರ್ಥ **'ಸರ್ವೋತ್ತಮಃ ನಾಸ್ತಿ ತ್ವದೃಕ್ ಅನ್ಯಃ'** ನೀನು ಸರ್ವೋತ್ತಮನಾಗಿದ್ದೀ, ನಿನ್ನಂಥವರು ಇನ್ನೊಬ್ಬರಿಲ್ಲ ಪ್ರಪಂಚದೊಳಗೆ ಅಂತ ಆಶ್ಚರ್ಯ ಆದ್ದರಿಂದಲೇ ಅಲ್ಲವಾ. ಎಲ್ಲ ಕಡೆಗೆ ನೋಡುವಂತಹ ವಸ್ತುವನ್ನೇ ನಾವು ನೋಡಿದರೆ ಆಶ್ಚರ್ಯ ಅಂತ ಯಾಕೆ ಅನ್ನುತ್ತೇವೆ, ಅದನ್ನ ಯಾವಾಗ ಅನ್ನುತ್ತೇವೆ ಎಂದೂ ಅಂತಹ ವಸ್ತುವನ್ನು ನಾವು ಕಂಡಿಲ್ಲ ಪ್ರಾಯಃ ಆ ತರಹದ ವಸ್ತುಗಳು ಎಲ್ಲಿ ನೋಡುವುದಕ್ಕೆ ಸಿಗುವುದಿಲ್ಲ ಅಪರೂಪದ ವಸ್ತು ಆಗ ಆಶ್ಚರ್ಯ ಎಂಬ ಶಬ್ದ ಬರುತ್ತೆ. ಹೀಗಾಗಿ ಅದರ ಅಭಿಪ್ರಾಯವನ್ನ ಧನ್ಯ ಅಂದರೆ ಉತ್ತಮ ಸರ್ವೋತ್ತಮ, ಆಶ್ಚರ್ಯ ಅಂದರೆ ಅಸಮ, ಅಸದೃಶ, ನಿರೂಪಮ ಅನ್ನುವ ಅರ್ಥದಲ್ಲಿ ಈ ರೀತಿ ತಿಳಿಸಿಕೊಟ್ಟಿದ್ದಾರೆ.

ಕೂರ್ಮ ಹೇಳಿದೆ ನಾನೇನು ಅಂತಹ ಉತ್ತಮನೂ ಅಲ್ಲ ನನಗೆ ಸದೃಶರಾದವರು ಯಾರಿಲ್ಲ ಅಂತೂ ತಿಳಿಯಬೇಡ ನನ್ನಂತಹ ಬೇಕಾದಷ್ಟು ಜಲಚರ ಪ್ರಾಣಿಗಳು ಈ ಗಂಗೆಯ ಗರ್ಭದಲ್ಲಿ ಇವೆ ಅದರೊಳಗೆ ನಾನೊಬ್ಬ ನಾನೇ ಒಬ್ಬ ಭಾರೀ ಅಂತ ತಿಳಿದರೆ ನನ್ನಂತಹ ಮೂರ್ಖರು ಇನ್ಯಾರು ಇಲ್ಲ ಅಂತ ಆದೀತು ನಾನೇ ಉತ್ತಮ ಅಲ್ಲ ಗಂಗೆ ಉತ್ತಮ. ಅಹುದು ಅಂತ ಅನ್ನಿಸಿತು ಗಂಗೆಯಲ್ಲಿ ಮಿಂದು ನಾನು ಪಾವಿತ್ರ್ಯ ಪಡೆಯಬೇಕೆಂದರೆ ನಿರಂತರವಾಗಿ ಗಂಗೆಯಲ್ಲಿದ್ದದ್ದು ಈ ಕೂರ್ಮ ಎಷ್ಟು ಶ್ರೇಷ್ಠ ಅಂತ ಅಂದುಕೊಂಡೆನಲ್ಲ ಹಾಗಾದರೆ ಗಂಗೆ ನಿಜವಾಗಿ ಎಷ್ಟು ಉತ್ತಮ ಪಾವಿತ್ರ್ಯ ಕೊಡುವ ಗಂಗೆ. ಗಂಗೆಗೆ ಹೋಗಿ **'ಧನ್ಯೋಸಿ ಆಶ್ಚರ್ಯೋಸಿ'** ಅಂತ ಎಂತಹ ಧನ್ಯ ನೀನು, ಪರಮಾತ್ಮನ ಪಾದದಿಂದ ಬಂದವಳು, ಸಮುದ್ರಕ್ಕೆ ಹೋಗಿ ನೀನು ಸೇರುತ್ತೀಯಾ, ಎಷ್ಟು ನದಿಗಳು ಉಪನದಿಗಳು ನಿನ್ನಲ್ಲಿ ಬಂದು ಸೇರುತ್ತವೆ ಸಾಕ್ಷಾತ್ ಪರಮಾತ್ಮನ ಪಾದದ ಸಂಬಂಧ ಇದೆ, ಬ್ರಹ್ಮ ದೇವರ ಹಸ್ತದ ಸಂಬಂಧ, ರುದ್ರ ದೇವರ ತಲೆಯ ಸಂಬಂಧ. ಪಾದದಿಂದ ಹರಿದು ಬಂದವಳು, ಬ್ರಹ್ಮ ದೇವರು ಕೈಯಲ್ಲಿ ತೆಗೆದುಕೊಂಡರು ಪಾದಪೂಜೆ ಮಾಡಿದರು ಆ ಪಾದೋದಕವನ್ನು ರುದ್ರ ದೇವರು ತಲೆಯ ಮೇಲೆ ಧಾರಣ ಮಾಡಿದರು ಅಂತಹ ಮೂರು ಮೂರು ಜನರ ದೇವತೆಗಳ ಸಂಬಂಧ ನಿನಗುಂಟು ಅಂತ ಈ ರೀತಿ ಗಂಗೆಯ ಮಹಿಮೆಯನ್ನ ವರ್ಣನೆ

ಮಾಡುತ್ತಾರೆ ನಾರದರು ಆಗ ಹೇಳುತ್ತಾಳೆ ಬಹಳ ಹೊಗಳಬೇಡಿ ನಾರದರೇ ನನ್ನನ್ನ. ಈ ಕೂರ್ಮ ಅಂದರೆ ಯಾರು ಅಂತ ಶ್ರೀಮದಾಚಾರ್ಯರು ತಿಳಿಸಿಕೊಡುತ್ತಾರೆ ಕೂರ್ಮ ಅಂದರೆ ಇದು ಇಲ್ಲಿ ಕೇವಲ ಒಂದು ದೇವತೆ. ವಾದಿರಾಜ ಶ್ರೀಪಾದಂಗಳವರ ತಾತ್ಪರ್ಯ ನಿರ್ಣಯದ ವ್ಯಾಖ್ಯಾನದ ಅಭಿಪ್ರಾಯದ ಪ್ರಕಾರ ದೇವತಾ ತಾರತಮ್ಯ ಪ್ರಧಾನ, ಇಲ್ಲಿ ಜಡ ತಾರತಮ್ಯವನ್ನೂ ಸೂಚಿತ ಅಂತ ತಿಳಿಸಿಕೊಡುತ್ತಾರೆ. ಕೂರ್ಮ ಶರೀರ ಅದಕ್ಕಿಂತಲೂ ಗಂಗಾಜಲ ಶ್ರೇಷ್ಠ, ಅದಕ್ಕಿಂತಲೂ ಸಮುದ್ರ ಶ್ರೇಷ್ಠ, ಸಮುದ್ರಕ್ಕಿಂತಲೂ ಅದಕ್ಕೆ ಆಧಾರವಾದ ಪೃಥ್ವಿ ಶ್ರೇಷ್ಠ, ಪೃಥ್ವಿಗಿಂತಲೂ ಅದನ್ನು ಧಾರಣೆ ಮಾಡುವ ಪರ್ವತಗಳು ಶ್ರೇಷ್ಠ, ಪರ್ವತಗಳಿಗಿಂತಲೂ ಮಹತ್ತತ್ವ ಇದು ಶ್ರೇಷ್ಠ, ಮಹತ್ತತ್ವಕ್ಕಿಂತಲೂ ವೇದಗಳು, ವೇದಗಳಿಗಿಂತಲೂ ವೇದೋಕ್ತ ಯಜ್ಞಗಳು, ಯಜ್ಞಕ್ಕಿಂತಲೂ ಯಜ್ಞಗಳ ಸಮಾಪ್ತಿಗೆ ಹೇತುವಾದ ದಕ್ಷಿಣೆ ಇದು ಶ್ರೇಷ್ಠ ಇದು ಜಡ ತಾರತಮ್ಯ.

ದೇವತಾ ತಾರತಮ್ಯ ಹೇಗೆ ಅಂದರೆ ಕೂರ್ಮ ಕರ್ಮಾಭಿಮಾನಿಯಾದ ಪುಷ್ಕರ ಎಂಬ ದೇವತೆಯ ಒಂದು ಪ್ರತೀಕ ಆ ಪುಷ್ಕರ ನೋಡಿ ಸಾಮಾನ್ಯ ಅಂತ ತಿಳಿಯಬೇಡಿ ಪುಷ್ಕರ ಎಲ್ಲರ ಕರ್ಮಕ್ಕೆ ಅಭಿಮಾನಿ ದೇವತೆ. ನಾವೆಲ್ಲ ಸತ್ಕರ್ಮಗಳನ್ನು ಮಾಡಬೇಕಾದರೆ ಆ ದೇವತೆಯ ಅನುಗ್ರಹ ನಮಗೆ ಬೇಕು ಅಂತಹ ಕರ್ಮಾಭಿಮಾನಿಯಾದ ಪುಷ್ಕರ ಎಂಬ ದೇವತೆ ಇಪ್ಪತ್ತೈದನೆಯ ಕಕ್ಷೆ. ಆ ಇಪ್ಪತ್ತೈದನೆಯ ಕಕ್ಷೆಯ ಪುಷ್ಕರ ಎಂಬ ದೇವತೆ ನೀನೇ ಉತ್ತಮ ಅಂತ ಹೇಳಿದರೆ ಯಾಕೆ ಒಪ್ಪಿಕೊಂಡಾನು ನಾನು ಎಲ್ಲರಿಗಿಂತಲೂ ಚಿಕ್ಕವ **'ಪುಷ್ಕರಃ ಸರ್ವಾವರೋ ದೇವಃ'** ಶ್ರೀಮನ್ನ್ಯಾಯಸುಧಾದಲ್ಲಿ ಟೀಕಾಕೃತ್ಪಾದರು. ಹಾಗಾಗಿ ಆ ಪುಷ್ಕರ ಹೇಳಿದ ನನಗಿಂತಲೂ ಮೇಲೆ, ಎಲ್ಲ ಕಕ್ಷೆಗಳನ್ನು ಇಲ್ಲಿ ತೆಗೆದುಕೊಂಡದ್ದಲ್ಲ ಸೂಚನೆ ಮಾತ್ರ ಮಧ್ಯ ಮಧ್ಯದಲ್ಲಿ, ನನಗಿಂತಲೂ ಉತ್ತಮಳಾದವಳು ಗಂಗೆ ಗಂಗೆ ಅಂದರೆ ಗಂಗಾ ದೇವಿಯೇ. ಇಪ್ಪತ್ತನೆಯ ಕಕ್ಷೆಯಲ್ಲಿ ಬರುವಂತಹ ಗಂಗೆ ಇಪ್ಪತ್ತೈದನೆಯ ಕಕ್ಷೆಯಲ್ಲಿ ಬರುವಂತಹ ಪುಷ್ಕರನಿಗಿಂತಲೂ ಉತ್ತಮಳು ಅನ್ನುವ ದೃಷ್ಟಿಯಲ್ಲಿ ನನಗಿಂತಲೂ ಗಂಗೆ ಉತ್ತಮ. ಆ ಗಂಗೆ ಸಮುದ್ರ ಉತ್ತಮ ಅಂತ ಹೇಳಿದಳು ಸಮುದ್ರ ಅಂದರೆ ಸಮುದ್ರಾಭಿಮಾನಿಯಾದ ವರುಣ, ಗಂಗಾ ದೇವಿಯ ಪತಿಯೇ ಅವನು, ಗಂಗಾ ಪತಿಯಾಗಿರುವಂತಹ ಆ ಸಮುದ್ರ ಅವನನ್ನ ಉತ್ತಮ ಎಂಬುದಾಗಿ ಸಹಜವಾಗಿಯೇ ಅವಳು ಹೇಳಿದ್ದು ಸರಿ. ಹಾಗಾದರೆ ಇಪ್ಪತ್ತೈದನೆಯ ಕಕ್ಷೆಯಲ್ಲಿರುವ ಪುಷ್ಕರನಿಗಿಂತಲೂ ಇಪ್ಪತ್ತನೆಯ ಕಕ್ಷೆಯಲ್ಲಿರುವ ಗಂಗೆ ಅವಳಿಗಿಂತಲೂ ಹದಿಮೂರನೆಯ ಕಕ್ಷೆಯಲ್ಲಿ ಬರುವಂತಹ ವರುಣ ಉತ್ತಮ ಅಂತ.

ಆ ವರುಣನ ಹತ್ತಿರ ಹೋಗಿ ಕೇಳಿದಾಗ ನಾನು ಧನ್ಯ ಆಶ್ಚರ್ಯ ಅಲ್ಲ ಪೃಥ್ವಿ ಅಂತ ಅಲ್ಲಿ ಪೃಥಿವಿ ಅಂತಂದರೆ ಉಮಾ ದೇವಿ ಅಂತ ಅರ್ಥ ಅಂದರೆ ಉಮಾ ದೇವಿ ವಾರುಣಿ, ಸೌಪರ್ಣಿ ಉಮಾ, ವಾರುಣಿ ಸೌಪರ್ಣಿ, ಉಪಲಕ್ಷಣತೆಯ ಕೃಷ್ಣನ ಆರು ಜನ ಮಹಿಷಿಯರು ಅವರನ್ನೂ ತೆಗೆದುಕೊಳ್ಳಬೇಕು ಆರನೆಯ ಕಕ್ಷೆಯಲ್ಲಿ ಬರುವವರು. ಹೀಗಾಗಿ ಆ ಷಣ್ಮಹಿಷಿಯರು ಏಳನೆಯ ಕಕ್ಷೆಯಲ್ಲಿ ಬರುವ ಉಮಾ ದೇವಿ, ವಾರುಣಿ, ಸೌಪರ್ಣಿ ಆರನೆಯ ಕಕ್ಷೆಯಲ್ಲಿ ಬರುವಂತಹ ಷಣ್ಮಹಿಷಿಯರು ಇವರೆಲ್ಲರೂ ನನಗಿಂತಲೂ ಉತ್ತಮರು ಅಂತ ಹದಿಮೂರನೆಯ ಕಕ್ಷೆಯ ವರುಣ ಹೇಳಿದ. ಅವರು ಹೇಳಿದರು ನಾವು ಉತ್ತಮರಲ್ಲ, ಪೃಥ್ವಿ ಹೇಳಿದಳು ನಾವಲ್ಲ ಉತ್ತಮರು ಪರ್ವತ ಅಂತ ಪರ್ವತ ಅಂದರೆ ಯಾರು ಅಂದರೆ ಅದರ ಮೇಲೆ ಇದ್ದಂಥವರು. ಐದನೆಯ ಕಕ್ಷೆಯಲ್ಲಿ ಬರುವಂತಹ ಗರುಡ ಶೇಷ ರುದ್ರರಿಗೆ ಪರ್ವತ ಅಂತ ಹೆಸರು ಇದು ಏನರೀ ಗರುಡ ಶೇಷ ರುದ್ರರಿಗೆ ಪರ್ವತ ಅಂತ ಯಾಕೆ ಹೆಸರು ಗೊತ್ತಾಗುವುದಿಲ್ಲ ಹರಿವಂಶ ನೋಡಿದರೆ ನಮಗೆ ಏನೂ ಅರ್ಥವಾಗುವುದಿಲ್ಲ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಸುಂದರವಾಗಿ ತಿಳಿಸುತ್ತಾರೆ.

ಪರವಾನಾತ್ ಪರ್ವತನಾಮಧೇಯಾನ್ ॥ (20.68 ಮಭಾತಾನಿರ್ಣಯ)

ಅಂತ **'ಪರ'** ಇವರೆಲ್ಲರಿಗಿಂತಲೂ ಉತ್ತಮರಾದ ಇಂದ್ರಾದಿಗಳಿಗಿಂತಲೂ ಉತ್ತಮರಾದಂತಹ ಏನು ಸೌಪರ್ಣಿ, ವಾರುಣಿ, ಉಮಾ ಅಥವಾ ಷಣ್ಮಹಿಷಿಯರಿದ್ದಾರೆ ಅಥವಾ ಉಪಲಕ್ಷಣತೆಯ ಸಕಲ ಕೆಳಗಿನ ಎಲ್ಲ ದೇವತೆಗಳು ಅವರೆಲ್ಲರನ್ನ ಅವನ ರಕ್ಷಣೆ ಮಾಡುತ್ತಾರೆ ಈ ಗರುಡ ಶೇಷ ರುದ್ರರು ಆದ್ದರಿಂದ ಅವರಿಗೆ **'ಪರ'** ಅವನ ದೊಡ್ಡವರು ಅಂತ ಅನ್ನಿಸಿಕೊಂಡವರ ರಕ್ಷಣೆಯನ್ನೂ ಮಾಡುವುದಕ್ಕೆ ಸಮರ್ಥರಾದ್ದರಿಂದ ಅವರಿಗೆ ಪರಾವತ ಪರ್ವತ ಅಂತ **'ವರ್ಣಾಗಮೋ ವರ್ಣವಿಪರ್ಯಯಶ್ಚ ಪರ್ವತಾ'** ಎಂಬುದಾಗಿ ಅವರನ್ನು ಕರೆಯುತ್ತಾರೆ. ಇನ್ನೊಂದು ಪಾಠವೂ ಇದೆ **'ಪರಾವಾನಾತ್'** ಅಂತ ಪರ-ಪರಮಾತ್ಮ ಅವನ ಬಗ್ಗೆ ಆ ಚೆನ್ನಾಗಿ **'ವಾನಾತ'** ಅಂತ ತಿಳಿದುಕೊಂಡಿದ್ದಾರೆ ಇವರು ಗರುಡ ಶೇಷ ರುದ್ರರು ಚೆನ್ನಾಗಿ ಭಗವಂತನನ್ನು ತಿಳಿದುಕೊಂಡು ಉಪಾಸನೆ ಮಾಡುತ್ತಾರೆ ಆದ್ದರಿಂದ ಅವರಿಗೆ ಪರ್ವತ ಪರ್ವತ ಎಂಬುದಾಗಿ ಕರೆಯುತ್ತಾರೆ ಹಾಗಾದರೆ ಇವರಿಗಿಂತಲೂ ಅವರು ಉತ್ತಮರು. ಅವರ ಹತ್ತಿರ ಹೋಗಿ ನೀವೇ ಧನ್ಯರು ನೀವೇ ಆಶ್ಚರ್ಯರು ಅಂತ ನಾರದರಿಗೆಲ್ಲ ಗೊತ್ತು ದೇವರೇ ಸರ್ವೋತ್ತಮ, ಅವನೇ ಧನ್ಯ, ಅವನೇ ಆಶ್ಚರ್ಯ ಅನ್ನುವುದು ಗೊತ್ತು ಅವರಿಗೆ. ಆದರೆ ಈ ರೀತಿ ಪ್ರತ್ಯಕ್ಷವಾಗಿ ಪ್ರ್ಯಾಕ್ಟಿಕಲ್ ಆಗಿ ಒಬ್ಬೊಬ್ಬ ದೇವತೆಯ ಹತ್ತಿರ ಹೋಗಿ ನೀನೇ ಸರ್ವೋತ್ತಮ, ನೀನೇ ಅಸದೃಶ ನಿನಗೆ ಸಮಾನರು ಇನ್ನೊಬ್ಬರಿಲ್ಲ ಅಂತ ಹೋಗಿ ಹೇಳಿದಾಗಲೂ ಯಾವ ಯಾವ ದೇವತೆಗಳು ಒಪ್ಪಿಕೊಂಡದ್ದಿಲ್ಲ ಕೊನೆಗೆ ಎಲ್ಲರೂ ಸೇರಿ ಪರಮಾತ್ಮನನ್ನೇ ಸರ್ವೋತ್ತಮ ಅಂತ ಕೊಂಡಾಡಿದ್ದು ಅಂತ ಸಾರಿ ಹೇಳಬೇಕಾಗಿದೆ, ಜಗತ್ತಿನಲ್ಲಿ ತೋರಿಸಬೇಕಾಗಿದೆ.

ಇವತ್ತಿನ ದಿವಸ ಅನೇಕ ವೈಜ್ಞಾನಿಕವಾದ ಸಂಶೋಧನೆಗಳನ್ನ ಪ್ರತ್ಯಕ್ಷವಾಗಿ ನಾವು ಮಾಡಿ ನೋಡಿ ಹೇಳಿದ್ದು ಅಂತ ಹೇಳಿದರೆ ಹೇಗೆ ಜನ ನಂಬುತ್ತಾರೆ. ಬರೀ ಇನ್ನೊಬ್ಬರು ಹೇಳಿದ್ದನ್ನು ಕೇಳಿ, ಹೇಳಿದ್ದಕ್ಕಿಂತಲೂ ನಾನು ಪ್ರತ್ಯಕ್ಷವಾಗಿ ಕಂಡಿದ್ದೇನೆ ಅಂತ ಹೇಗೆ ನಂಬುತ್ತಾರಲ್ಲ ಹಾಗೆ ಈ ತತ್ವಜ್ಞಾನದ ವಿಷಯದಲ್ಲಿ ನಾನು ಬರೀ ಶಾಸ್ತ್ರ ಕೇಳಿ ಹೇಳುತ್ತಾ ಇಲ್ಲ, ಒಬ್ಬೊಬ್ಬರ ಹತ್ತಿರವೂ ಹೋಗಿ ಅವರವರಿಗೆ ಅವರವರ ವ್ಯಕ್ತಿತ್ವದ ಬಗ್ಗೆ ಏನೊಂದು ಕಲ್ಪನೆ ಇದೆ ಅದು ತಾನೆ ಮುಖ್ಯವಾದ ಪ್ರಮಾಣ ನಾನೇನು ಅನ್ನುವುದು ಅವರವರಿಗೆ ಗೊತ್ತಲ್ಲ, ನಾನೇನು ಅಂತ ಅವರವರು ತಮ್ಮ ತಮ್ಮ ಬಗ್ಗೆ ಏನು ಸ್ಪಷ್ಟವಾಗಿ ತಿಳಿದಿದ್ದಾರಾ ಅದೆಲ್ಲವನ್ನು ವಿಚಾರಿಸಿ ಸರ್ವೋತ್ತಮ ಯಾರು ಅಂತ ನಾನು ನಿರ್ಣಯ ಮಾಡಿದ್ದು ಮನೆಯಲ್ಲಿ ಕುಳಿತು ಮಾಡಿದ್ದಲ್ಲ ಅಂತ ಜಗತ್ತಿಗೆ ತಿಳಿಸುವುದಕ್ಕೋಸ್ಕರ ನಾರದರು ಈ ರೀತಿಯ ಒಂದು ನಾಟಕವನ್ನು ಮಾಡಿದ್ದಾರೆ ಯಾವ ರೀತಿ ಭೃಗು ಋಷಿಗಳು ಮಾಡಿದರೋ ಹಾಗೆ. ಸರಿ, ಅವರು ಗರುಡ ಶೇಷ ರುದ್ರರು ಹೇಳುತ್ತಾರೆ ಅವರು ಹೀಗೆ ಪರ್ವತವೋ ಒಂದು ಯಾವುದೋ ಒಂದು ತತ್ವವೋ ಅಂತ ಅವರು ಹೆಸರು ಹೇಳಲಿಲ್ಲ ಅವರು ನೇರವಾಗಿ ಬ್ರಹ್ಮ ದೇವರ ಹೆಸರನ್ನೇ ಹೇಳಿದ್ದಾರೆ ಬ್ರಹ್ಮ ದೇವರು ಮಹತ್ ತತ್ವಾಭಿಮಾನಿಗಳಾಗಿ ಇರುವಂತಹ ಬ್ರಹ್ಮ ದೇವರು ಉತ್ತಮರು ಎಂಬುದಾಗಿ ಅವರು ತಿಳಿಸಿಕೊಟ್ಟಿದ್ದಾರೆ.

ಬ್ರಹ್ಮಾ ಪ್ರಜಾಪತಿರ್ಧನ್ಯಃ ಸರ್ವಾಶ್ಚರ್ಯಃ ಸುರೇಷ್ವಪಿ ॥ (110.58 ವಿಷ್ಣುಪರ್ವ)

ಎಲ್ಲರಿಗಿಂತಲೂ ಅವರು ಅತ್ಯಂತ ಉತ್ತಮರಾದವರು ಬ್ರಹ್ಮ ದೇವರು ಅಂದರೆ ಒಂದು ಮಾತನ್ನು ಎಲ್ಲರೂ ಚೆನ್ನಾಗಿ ಗಮನಿಸಿ **'ಸುರೇಷ್ವಪಿ'** ಅಂತ ಒಂದು ಶಬ್ದವನ್ನ ಹರಿವಂಶ ಬಳಸುತ್ತ ಇದೆ. ಅಂದರೆ ಹಿಂದೆ ಬಂದಂತಹ ಏನೆಲ್ಲಾ ಕೂರ್ಮ ಗಂಗಾ ಪರ್ವತ ಪೃಥಿವಿ ಇದೆಲ್ಲ ಬರೀ ಜಡ ಪದಾರ್ಥಗಳಿಗೆ ಸಂಬಂಧಪಟ್ಟದ್ದಲ್ಲ, ದೇವತೆಗಳಿಗೆ ಸಂಬಂಧಪಟ್ಟದ್ದು ಅಂತ ಯಾಕೆ ಅಂದರೆ ಹಿಂದೆ ದೇವತೆಗಳ ಸುದ್ದಿಗೆ ಬಂದಿಲ್ಲ. ದೇವತೆಗಳ ಮಧ್ಯದಲ್ಲಿಯೂ ಬ್ರಹ್ಮ ದೇವರು ಶ್ರೇಷ್ಠರು ಅಂದರೆ ಹಿಂದೆ ದೇವತೆಗಳು ಬಂದಿದ್ದರು ತಾನೇ ಅದನ್ನು ಹೇಳಬೇಕು ಹಾಗಾದರೆ ಹಿಂದೆ ಬಂದವರೆಲ್ಲ ದೇವತೆಗಳೇ ಅನ್ನುವುದರ ಸೂಚನೆ ಹರಿವಂಶದ ಆ **'ಸುರೇಷ್ವಪಿ'** ಅನ್ನುವ ಶಬ್ದದಿಂದ ನಮಗೆ

ಗೊತ್ತಾಗುತ್ತದೆ. ಆದರೆ ಅದನ್ನು ಮಥನ ಮಾಡಿ ಚೆನ್ನಾಗಿ ತೆಗೆದು ನವನೀತ ಮಾಡಿ ನಮ್ಮ ಕೈಯಲ್ಲಿ ಕೊಟ್ಟವರು ಆ ನವನೀತಾಭಿಮಾನಿಗಳಾಗಿ ಇರುವಂತಹ ವಾಯು ದೇವರು **'ನವನೀತಂ ವಾಯುದೈವ್ಯಂ ಕಿಂಚಾಸ್ಯ ತತ್ರ ತ್ರಿವಿಕ್ರಮಃ'** ಅಂತ ನೈವೇದ್ಯದ ಅನುಸಂಧಾನದಲ್ಲಿ ನವನೀತದಲ್ಲಿ ವಾಯು ದೇವರೇ ಅಭಿಮಾನಿ ದೇವತೆಗಳು. ಕೃಷ್ಣನಿಗೆ ಬಹಳ ಸೇರುತ್ತಾ ಇತ್ತು ಬೆಣ್ಣೆ ಅಲ್ಲವಾ ಎಷ್ಟೇ ದೊಡ್ಡವರಿದ್ದರೂ ಕೆಲವು ಸಣ್ಣ ಸಣ್ಣ ವಿಷಯಗಳು ಇರುತ್ತೆ ಅವರಿಗೆ ಏನೇನೋ ಕೆಲವು ಅಪೇಕ್ಷೆಗಳು ಇರುತ್ತದೆ, ಕೆಲವು ಬೇಡ ಅಂತ ಇರುತ್ತದೆ ಅಲರ್ಜಿಗಳು, ಇನ್ನು ಕೆಲವು ಬಹಳ ರುಚಿ ಸೇರುವುದು ಇರುತ್ತೆ ಬಿಡಿ ಪಾಪ ದೊಡ್ಡ ದೊಡ್ಡವರಿಗೆ ಅಂತ ಹೀಗೆ ದಯೆ ಮಾಡುತ್ತೀರಾ ದೇವರ ಮೇಲೆ. ಅವನಿಗೆ ಬೇಕಾ ಬೆಣ್ಣೆ, ನಿತ್ಯ ತೃಪ್ತನಾದ ಪರಮಾತ್ಮನಿಗೆ ಏನು ಬೇಕಾಗಿದೆ, ಅವನಿಗೆ ಯಾವುದು ಏನಿಲ್ಲ ಅಂತ ಯಾವುದನ್ನು ಬಯಸಬೇಕು ಅವನು, ಎಲ್ಲಾ ತೃಪ್ತಿಯೂ ಇದೆ ನಿತ್ಯ ಪರಿಪೂರ್ಣ. ಆ ನವನೀತಕ್ಕೆ ಅಭಿಮಾನಿ ದೇವತೆಗಳು ವಾಯು ದೇವರು, ಅವರು ಜೀವೋತ್ತಮರು ನಿರಂತರವಾಗಿ ಪರಮಾತ್ಮನಲ್ಲಿ ಭಕ್ತಿಯನ್ನು ಮಾಡುತ್ತಾರೆ ಆ ಭಕ್ತಿ ಭಗವಂತನಿಗೆ ಬೇಕು ಅದಕ್ಕಾಗಿ ಬೆಣ್ಣೆಯನ್ನು ಪರಮಾತ್ಮ ಕದ್ದದ್ದು, ಅದಕ್ಕಾಗಿ ಬೆಣ್ಣೆಯನ್ನು ತಿಂದದ್ದು. **'ನವನೀತಂ ವಾಯುದೈವ್ಯಂ ಕಿಂಚಾಸ್ಯ ತತ್ರ ತ್ರಿವಿಕ್ರಮಃ'** ಆದ್ದರಿಂದ ಅಂತಹ ಬೆಣ್ಣೆಯನ್ನು ತೆಗೆದು ಕೊಡುವವರು ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು.

ಈ ರೀತಿ ಬ್ರಹ್ಮ ದೇವರು ಉತ್ತಮ ಅಂತ ಬ್ರಹ್ಮದೇವರು ಹೇಳಿದರು ವೇದಗಳು ಉತ್ತಮ ಅಂತ ಅಲ್ಲಿ ವೇದಗಳು ಅನ್ನುವ ಶಬ್ದಕ್ಕೆ ವೇದಾಭಿಮಾನಿನಿ ಆಗಿರುವಂತಹ ಲಕ್ಷ್ಮೀ ದೇವಿ, ಯಾವಾಗಲೂ ಪರಮಾತ್ಮನ ಎದುರಿನಲ್ಲಿ ನಿಂತು ಭಗವಂತನ ಸ್ತೋತ್ರವನ್ನು ಮಾಡುತ್ತಾ ಇರುತ್ತಾಳೆ ಅಂತಹ ಲಕ್ಷ್ಮೀ ದೇವಿ ನನಗಿಂತಲೂ ಉತ್ತಮ ಅಂತ ಬ್ರಹ್ಮ ದೇವರು ಹೇಳುತ್ತಾರೆ. ಆ ವೇದಾಭಿಮಾನಿನಿಯಾದ ಲಕ್ಷ್ಮೀಗೆ ಹೋಗಿ **'ಧನ್ಯಾಸಿ ಆಶ್ಚರ್ಯಾಸಿ'** ನೀನೇ ಸರ್ವೋತ್ತಮಳು ಅಂತ ಹೇಳಿದರೆ ಅವಳು ಅನ್ನುತ್ತಾಳೆ ಸರ್ವಥಃ ನಾನಲ್ಲ, ಯಜ್ಞಗಳು ನನಗಿಂತಲೂ ಶ್ರೇಷ್ಠ ಅಂತ. ವೇದ ಅಂದರೆ ವೇದಾಭಿಮಾನಿನಿ ಲಕ್ಷ್ಮೀ ಅಂತ ಹೇಳಿದ್ದು ಸರಿ. ಯಜ್ಞ ಅಂದರೆ ಯಾರು ಹಾಗಾದರೆ ಯಜ್ಞಭಿಮಾನಿನಿಯಾದ ಲಕ್ಷ್ಮೀ ದೇವಿ ಅಂತ ಹೇಳಬೇಕು ಮತ್ತೆ ಲಕ್ಷ್ಮೀ ದೇವಿಗಿಂತಲೂ ಲಕ್ಷ್ಮೀ ದೇವಿ ಉತ್ತಮ ಆಗುವುದು ಹೇಗೆ ಅಲ್ಲ ಲಕ್ಷ್ಮೀ ಬೇಡ, ಬೇರೆ ಯಾರನ್ನಾದರೂ ಹೇಳೋಣ, ಇನ್ಯಾರು ಲಕ್ಷ್ಮೀ ದೇವಿಗೂ ದೇವರಿಗೂ ಮಧ್ಯರಲ್ಲಿ ಇನ್ನೊಬ್ಬರು ಇಲ್ಲವೇ ಇಲ್ಲಲ್ಲ ಆನಂತರದಲ್ಲಿ ದೇವರು ಬರುತ್ತಾನೆ, ಹಾಗಾದರೆ ಯಜ್ಞಾಭಿಮಾನಿನಿ ಯಾರು ಶ್ರೀಮದಾಚಾರ್ಯರು ಅನ್ನುತ್ತಾರೆ ಯಜ್ಞಾಭಿಮಾನಿನಿ ಆದವಳು ಲಕ್ಷ್ಮೀ ದೇವಿಯೇ ಇನ್ನೊಂದು ರೂಪ ಅಷ್ಟೇ. ವೇದಾಭಿಮಾನಿನಿ ಆಗಿರುವಂತಹ ದೂರದಲ್ಲಿದ್ದು ಸ್ತೋತ್ರ ಮಾಡುವ ಲಕ್ಷ್ಮೀಗಿಂತಲೂ ಯಜ್ಞಾಭಿಮಾನಿನಿಯಾಗಿ ಪರಮಾತ್ಮನ ಶರೀರದೊಳಗೇ ಇರುವಂತಹ ಏನು ಲಕ್ಷ್ಮೀ ದೇವಿಯ ಇನ್ನೊಂದು ರೂಪ ಇದೆ ಅದು ಉತ್ತಮ ಅಂತ, ಉತ್ತಮ ಅನ್ನುವ ಶಬ್ದದ ಅಭಿಪ್ರಾಯ ಲಕ್ಷ್ಮೀ ದೇವಿಯಲ್ಲಿ ತಾರತಮ್ಯ ಅಲ್ಲ ಅವಳ ಸುಖದ ಅಭಿವ್ಯಕ್ತಿಯಲ್ಲಿ ತಾರತಮ್ಯ. ಆ ವೇದಾಭಿಮಾನಿನಿಯಾಗಿ ಎದುರು ನಿಂತು ದೇವರ ಸ್ತುತಿ ಮಾಡುವ ಲಕ್ಷ್ಮೀ ದೇವಿಗೆ ಏನೊಂದು ಆನಂದದ ಅಭಿವ್ಯಕ್ತಿ ಉಂಟೋ ಅದಕ್ಕಿಂತಲೂ ವಿಶೇಷವಾದ ಆನಂದದ ಅಭಿವ್ಯಕ್ತಿ ಯಜ್ಞಾಭಿಮಾನಿನಿಯಾಗಿ ಪರಮಾತ್ಮನ ಉರಸ್ಥಲದಲ್ಲಿಯೇ ಇರುವಂತಹ ಲಕ್ಷ್ಮೀ ದೇವಿ ಏನಿದ್ದಾಳೋ ಅವಳಿಗೆ ವಿಶೇಷವಾಗಿ ಇರುವಂತಹ ಆನಂದದ ಅಭಿವ್ಯಕ್ತಿ.

ಭಾಗವತ ತಾತ್ಪರ್ಯದಲ್ಲಿ ಶ್ರೀಮದಾಚಾರ್ಯರು ಹೇಳುತ್ತಾರೆ **'ವಿಶಿಷ್ಟಾ ದಕ್ಷಿಣಾ ಸುಖೇ ಯಾತು ಉರಸ್ಥಲಮಾಶ್ರಿತಾ'** ಅಂತ ಈ ರೀತಿ. ಹಾಗಾದರೆ ವೇದಾಭಿಮಾನಿನಿ ಆದಂತಹ ಲಕ್ಷ್ಮೀ ದೇವಿಗಿಂತಲೂ ಯಜ್ಞಾಭಿಮಾನಿನಿಯಾದ ಶ್ರೀದೇವಿ ಅವಳು ಪರಮಾತ್ಮನ ಶರೀರದಲ್ಲಿ ಯಾವ ಭಾಗದೊಳಗೆ ಇರುತ್ತಾಳೆ ನೋಡಿ

ಅವಳು ದೂರ ಒಬ್ಬಳೇ ಲಕ್ಷ್ಮೀ ಆದರೆ ವೇದಾಭಿಮಾನಿನಿಯಾದ ಅವಸ್ಥೆಯಲ್ಲಿ ದೂರ, ಯಜ್ಞಾಭಿಮಾನಿನಿಯಾದರೆ ಹತ್ತಿರ. ಅಂದರೆ ಇದನ್ನೂ ಅರ್ಥ ಮಾಡಿಕೊಳ್ಳಿ ನಾವೂ ಬರೀ ವೇದಗಳನ್ನು ಓದಿ ಮಾತ್ರ ಇದ್ದರೆ ಭಗವಂತನಿಗೆ ಅತ್ಯಂತ ಪ್ರೀತಿ ಆದರೆ ಸ್ವಲ್ಪ ದೂರ, ವೇದೋಕ್ತ ಕರ್ಮಗಳ ಅನುಷ್ಠಾನವನ್ನು ಮಾಡಿದರೆ ದೇವರು ತನ್ನ ಹತ್ತಿರ ಕರೆದುಕೊಳ್ಳುತ್ತಾನೆ ಅನ್ನುವ ಒಂದು ಸಂದೇಶವೂ ಈ ತತ್ವದಲ್ಲಿ ಇದೆ ಆ ಒಂದು ಅನುಸಂಧಾನವನ್ನು ಇಲ್ಲಿ ಮಾಡಬೇಕು. ಪರಮಾತ್ಮನಿಗೆ ವೇದೋಕ್ತ ಕರ್ಮಾಷ್ಠಗಳನ್ನು ಮಾಡಿದರೆ ದೇವರ ಆಜ್ಞೆಯಂತೆ ಇರುವ ವೇದಗಳ ಪರಿಪಾಲನೆಯನ್ನು ಮಾಡಿದರೆ ಆಜ್ಞೆಯನ್ನ ಅಷ್ಟು ಪ್ರೀತಿ. ಅದು ಎಷ್ಟು ಪ್ರೀತಿ, ಪ್ರೀತಿ ಬಹಳ ಇದ್ದಾಗ ಹೇಳೋದು ಉಂಟಲ್ವಾ ನಿಮ್ಮನ್ನು ಪೂರ್ಣ ಹೃದಯದಿಂದ ಪ್ರೀತಿಸುತ್ತೇವೆ ಅಂತ ಹೀಗಾಗಿ ಹೃದಯದಲ್ಲಿಯೇ ಇಟ್ಟುಕೊಂಡಿದ್ದಾನೆ ಪರಮಾತ್ಮ ತನ್ನ ವಕ್ಷಸ್ಥಲದಲ್ಲಿಯೇ ಇಟ್ಟುಕೊಂಡಿದ್ದಾನೆ ಶ್ರೀದೇವಿಯನ್ನ ಅದಕ್ಕೆ ಶ್ರೀವತ್ಸ ಅಂತ ಕರೆಯುತ್ತಾರೆ ಅದನ್ನ. ಶ್ರೀವತ್ಸ ಅಂದರೆ ಚಿಹ್ನ ಒಂದು ತರಹದ ರೋಮಾವರ್ತ ವಿಶೇಷಃ ಕೂದಲಿನ ಒಂದು ತರಹದ ಸುತ್ತು, ಪರಮಾತ್ಮನ ವಕ್ಷಸ್ಥಲದೊಳಗೆ ಏನಿದೆ ಅದಕ್ಕೆ ಶ್ರೀವತ್ಸ ಚಿಹ್ನ ಅಂತ ಅನ್ನುತ್ತಾರೆ ಶ್ರೀವತ್ಸಾಂಕಾ. ಹೀಗಾಗಿ ಅದಕ್ಕಾಗೇನೆ ಪರಮಾತ್ಮ ಅಷ್ಟು ಪ್ರೀತಿಯಿಂದ ಯಜ್ಞಾಭಿಮಾನಿನಿಯಾದ ಶ್ರೀದೇವಿಯನ್ನು ತನ್ನ ಉರಸ್ಥಲದಲ್ಲಿ, ವಕ್ಷಸ್ಥಲದಲ್ಲಿ ಇಟ್ಟುಕೊಂಡಿದ್ದಾನೆ ಅಂತ ಭಾಗವತ ತಾತ್ಪರ್ಯ ಹೇಳುತ್ತದೆ. ಮಹಾಭಾರತ ತಾತ್ಪರ್ಯ ನಿರ್ಣಯ ಹೇಳುವಾಗ ಅಂಕಸ್ಥ ಅಂತ ಹೇಳುತ್ತದೆ ಅಂಕಾ ಅಂಕಾ ಅಂದರೆ ಅದೇನೇ ಚಿಹ್ನ ಅದಕ್ಕಾಗೇನೆ ಶ್ರೀವತ್ಸಾಂಕಾಧಿವಾಸ ಅಂತ ಶ್ರೀವತ್ಸ ಅನ್ನುವುದೇ ಒಂದು ಅಂಕ, ಅಂಕ ಅಂದರೆ ತೊಡೆ ಅಂತ ಒಂದು ಅರ್ಥ ಇದೆ, ತೊಡೆ ಅಂತ ಅರ್ಥ ಮಾಡಿದರೆ ಭಾಗವತದ ತಾತ್ಪರ್ಯದ ವಿರೋಧ ಬರುತ್ತದೆ. ಅಂಕ ಅನ್ನುವುದಕ್ಕೆ ಚಿಹ್ನ ಅಂತ ಅರ್ಥ ಅದು ಯಾವ ಚಿಹ್ನ ಅಂದರೆ ವಕ್ಷಸ್ಥಲದಲ್ಲಿ ಇರುವ ಶ್ರೀವತ್ಸ ಎಂಬ ಒಂದು ಅಂಕ ಚಿಹ್ನ ಉರಸ್ಥಲ. ಉರಸ್ಥಲದೊಳಗಿರುವ ಆ ಅಂಕದಲ್ಲಿ ಶ್ರೀವತ್ಸಾಂಕದೊಳಗೆ ರೋಮಾವರ್ತ ವಿಶೇಷಃ ಅಲ್ಲಿ ಯಜ್ಞಾಭಿಮಾನಿನಿಯಾದ ಶ್ರೀದೇವಿ ಅಲ್ಲಿ ಸನ್ನಹಿತಳಾಗಿ ಇದ್ದಾಳೆ ಅವಳಿಗೆ ವಿಶೇಷವಾಗಿರುವಂತಹ ಸುಖದ ಅಭಿವ್ಯಕ್ತಿಯನ್ನು ಭಗವಂತ ಉಂಟು ಮಾಡುತ್ತಾನೆ. ಅವಳಿಗೆ ಹೋಗಿ ನೀನೇ ಧನ್ಯ ಆಶ್ಚರ್ಯ ಅಂತ ಹೇಳಿದರೆ ಅವಳು ಅಂದಳು ನಾನಲ್ಲ ಶ್ರೀಕೃಷ್ಣ ಪರಮಾತ್ಮ ಸರ್ವೋತ್ತಮನಾದ ಭಗವಂತ ಅವನು ನನಗಿಂತಲೂ ಧನ್ಯ ಆಶ್ಚರ್ಯ ಅಂತ ಹೇಳಿದಳು ಅದಕ್ಕೆ ನಾನು ಬಂದು ಶ್ರೀಕೃಷ್ಣ ಪರಮಾತ್ಮನಿಗೆ **'ಧನ್ಯೋಸಿ ಆಶ್ಚರ್ಯೋಸಿ'** ಅಂತ ನಾನು ಹೇಳಿದ್ದು, ಬೇರೆ ಇನ್ನೇನು ಅಲ್ಲ ಇಷ್ಟು ಇತಿಹಾಸವನ್ನು ನಾರದರು ತಿಳಿಸಿಕೊಟ್ಟಿದ್ದಾರೆ.

ಸರಿ ಹಾಗಾದರೆ ದೇವರು ಸರ್ವೋತ್ತಮ, ದೇವರಿಗೆ ಸದೃಶರಾದವರು ಇನ್ನೊಬ್ಬರಿಲ್ಲ ಅಂತ ಅನ್ನುವುದು ಅತ್ಯಂತ ಸತ್ಯವಾದ ವಿಷಯ, ಇದನ್ನು ನಾವೆಲ್ಲ ನಂಬುತ್ತೇವೆ. ಹೀಗಿರುವಾಗ **'ದಕ್ಷಿಣಾಭಿಸ್ಸಾಕಂ'** ಅಂತ ಉತ್ತರ ಯಾಕೆ ಕೊಟ್ಟ ದೇವರು **'ಧನ್ಯೋಸಿ ಆಶ್ಚರ್ಯೋಸಿ'** ಅಂತ ಹೇಳಿದಾಗ **'ಧನ್ಯೋಸ್ಮಿ ಆಶ್ಚರ್ಯೋಸ್ಮಿ'** ಅಷ್ಟೇ ಉತ್ತರ ಸಾಕಾಗಿತ್ತು **'ದಕ್ಷಿಣಾಭಿಸ್ಸಾಕಂ'** ಇದರ ಅರ್ಥ ಏನು. ಅದಕ್ಕೆ ನಾರದರು ಹೇಳಿದರು ನೋಡಿ. ಬರೀ ವೇದಗಳನ್ನು ಓದಿದರಲ್ಲ, ವೇದಗಳಲ್ಲಿ ಹೇಳಿದ ಯಜ್ಞಗಳನ್ನ ಮಾಡುವುದು ಉತ್ತಮ, ಬರೀ ಯಜ್ಞಗಳನ್ನ ಮಾಡಿ ಮಾಡಿಸಿದವರಿಗೆ ದಕ್ಷಿಣೆ ಕೊಡದೆ ಹಾಗೆ ಕಳಿಸಿದರೆ ಪ್ರಯೋಜನ ಇಲ್ಲ, ಯಜ್ಞದ ಸಮಾಪ್ತಿ ಕಾಲದಲ್ಲಿ ದಕ್ಷಿಣೆ ಕೊಟ್ಟು ಯಜ್ಞದ ಉಪಸಂಹಾರವನ್ನು ಮಾಡಬೇಕು.

ವಿಧಿಹೀನಮಸೃಷ್ಟಾನ್ನಮ್ ಮಂತ್ರಹೀನಮದಕ್ಷಿಣಮ್ ।
ಶ್ರದ್ಧಾ ವಿರಹಿತಂ ಯಜ್ಞಂ ತಾಮಸಂ ಪರಿಚಕ್ಷತೇ ॥ (17.13 ಭ ಗೀತಾ)

ದಕ್ಷಿಣೆ ಕೊಡದೆ, ಅನ್ನದಾನ ಮಾಡದೆ ಯಜ್ಞವನ್ನು ಮುಗಿಸಿದರೆ ಅದು ತಾಮಸ ಯಜ್ಞವಾಗುತ್ತದೆ ಅಂತಹ ಯಜ್ಞ ಮಾಡಬಾರದು ಅಂತ. ಆದ್ದರಿಂದ ಆ ದಕ್ಷಿಣಾಕ್ಕೆ ಅಭಿಮಾನಿನಿಯಾದಂತಹ ಒಬ್ಬ ಲಕ್ಷ್ಮೀ ದೇವಿ ಇದ್ದಾಳಲ್ಲ

ಬರೀ ಆ ಯಜ್ಞಾಭಿಮಾನಿನಿಗಿಂತಲೂ ನನ್ನನ್ನು ಉತ್ತಮ ಅಂತ ಉಪಾಸನೆ ಮಾಡಬೇಡಿ. ಆ ಯಜ್ಞಾಭಿಮಾನಿನಿಯಾದ ಶ್ರೀದೇವಿಗಿಂತಲೂ ಸುಖದಲ್ಲಿ ವಿಶೇಷ ಅಭಿವ್ಯಕ್ತಿ ಉಳ್ಳಂತಹ ಏನು ದಕ್ಷಿಣಾಭಿಮಾನಿನಿಯಾದ ದಕ್ಷಿಣಾ ಎಂಬ ಹೆಸರಿನ ಲಕ್ಷ್ಮೀ ದೇವಿ ಇದ್ದಾಳಲ್ಲ ಅವಳಿಗಿಂತಲೂ ನಾನು ಉತ್ತಮ ಅಂತ ತಿಳಿಯಿರಿ. **'ದಕ್ಷಿಣಾಭಿಸ್ಸಾಕಂ'** ದಕ್ಷಿಣಾ ದೇವಿಯಿಂದ ಸಹಿತವಾಗಿರುವಂತಹ ಏನು ಸಮಸ್ತ ಜಗತ್ತಿದೆ ಆ ಜಗತ್ತಿಗಿಂತಲೂ ನಾನು ಧನ್ಯ, ನಾನು ಆಶ್ಚರ್ಯ ಅಂತ ಅರ್ಥವಾಯಿತಲ್ಲ, ಕೆಲವರು ತಿಳಿಯುವುದು ಏನು ಬರೀ ನಾನೊಬ್ಬನೇ ಅಷ್ಟು ದೊಡ್ಡ ಯೋಗ್ಯತೆ ಇಲ್ಲ ನನಗೆ, ನಾನು ಒಂದು ಸ್ವಲ್ಪ, ದಕ್ಷಿಣಾ ಒಂದು ಸ್ವಲ್ಪ ಇಬ್ಬರೂ ಸೇರಿದರೆ ಎಲ್ಲರಿಗಿಂತಲೂ ಉತ್ತಮ ಹಾಗೆ ಅರ್ಥ ಅಲ್ಲ ದಕ್ಷಿಣಾ ದೇವಿಯಿಂದ ಸಮೇತವಾದ ಏನು ಪ್ರಪಂಚ ಇದೆಯೋ ಅದೆಲ್ಲದಕ್ಕಿಂತಲೂ ನಾನು ಉತ್ತಮ ಅಂತ. ಆ ದಕ್ಷಿಣಾ ದೇವಿ ಪುಷ್ಕರನನ್ನ ಆರಂಭ ಮಾಡಿಕೊಂಡು ಯಜ್ಞಾಭಿಮಾನಿನಿಯಾದ ಲಕ್ಷ್ಮೀ ಏನಿದ್ದಾಳೋ ಅವಳವರೆಗೆ ಇರುವ ಎಲ್ಲರಿಗಿಂತಲೂ ಸುಖದಲ್ಲಿ ವಿಶೇಷ ಅಭಿವ್ಯಕ್ತಿಯನ್ನು ಪಡೆದವಳು ಅವಳಿಗಿಂತಲೂ ಉತ್ತಮನಾದವನು ನಾನು. ಅವಳೆಲ್ಲಿದ್ದಾಳೆ ದೂರದಲ್ಲಿ ನಿಂತವಳು ವೇದಾಭಿಮಾನಿನಿ, ವಕ್ಷಸ್ಥಲದೊಳಗೆ ಇದ್ದವಳು ಯಜ್ಞಾಭಿಮಾನಿನಿ, ದಕ್ಷಿಣಾಭಿಮಾನಿನಿ ಎಲ್ಲಿದ್ದಾಳೆ ಅಂದರೆ ನನ್ನ ವಾಮಾರ್ಧ ರೂಪ ಎಡಭಾಗದಲ್ಲಿ ಅರ್ಧನಾರೀ ನರರೂಪದಲ್ಲಿ, ಅರ್ಧ ಹೆಣ್ಣು ಅರ್ಧ ಗಂಡು ಪರಮಾತ್ಮ. ಆ ಅರ್ಧನಾರೀ ರೂಪದಲ್ಲಿ ಇದ್ದವಳೇ ದಕ್ಷಿಣಾ, ಸಮಗ್ರ ಶರೀರದೊಳಗೆ ಅರ್ಧ ವಾಮಭಾಗ ಎಡಭಾಗ ಅರ್ಧ ಸಂಪೂರ್ಣ ದಕ್ಷಿಣಾ ದೇವಿ, ಬಲಭಾಗ ಪರಮಾತ್ಮ. ಪರಸ್ಪರ ಪರಮಾತ್ಮನ ಶರೀರದ ಎಡಭಾಗ ಅವಳ ಬಲಭಾಗ ಒಬ್ಬರ ಶರೀರ ಇನ್ನೊಬ್ಬರ ಶರೀರದಲ್ಲಿ ಸೇರಿಕೊಂಡು ಹೋಗಿದೆ ಹೊರಗೆ ಕಾಣಿಸುವುದು ಅರ್ಧ ಅರ್ಧ ಮಾತ್ರ ಈ ರೀತಿಯ ಅದ್ಭುತವಾದ ಆ ರೂಪ. ಅದಕ್ಕೆ ಅವಳಿಗೆ ದಕ್ಷಿಣಾಕ್ಕೆ ಅಭಿಮಾನಿನಿ ಆದದ್ದರಿಂದಲೂ ದಕ್ಷಿಣಾ ಅಂತ ಕರೆಯುತ್ತಾರೆ, ಅವಳ ದಕ್ಷ ಭಾಗಕ್ಕೆ ಬಲಭಾಗಕ್ಕೆ **'ಇನ'**, **'ಇನ'** ಅಂದರೆ ಗಂಡ ಇರುತ್ತಾನೆ ಅನ್ನುವುದಕ್ಕಾಗಿಯೂ ಅವಳಿಗೆ ದಕ್ಷಿಣಾ ಎಂಬುದಾಗಿ ಕರೆಯುತ್ತಾರೆ. ಅಂತಹ ದಕ್ಷಿಣಾ ದೇವಿಗಿಂತಲೂ ನಾನು ಉತ್ತಮನಾಗಿದ್ದೇನೆ ಅಂತನ್ನುವ ತನ್ನ ಮಹಿಮೆಯನ್ನು ಪರಮಾತ್ಮ ನನಗೆ ತಿಳಿಸಿಕೊಟ್ಟ ಉತ್ತರ ಹೇಳಿದ, ಇದು ನಮ್ಮ ಪರಸ್ಪರ ಸಂಭಾಷಣೆಯ ಸಾರಾಂಶ ಎಂಬುದಾಗಿ ನಾರದರು ಅಲ್ಲಿ ಕುಳಿತಂತಹ ಸಕಲ ಸಜ್ಜನರಿಗೆ ಹೇಳುತ್ತಾರೆ.

ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ನಮಗೆ ಮಾಡುವ ಉಪಕಾರ ಎಷ್ಟು ದೊಡ್ಡದಿದೆ ಇತಿಹಾಸವನ್ನು ನಾವು ತಿಳಿಯುತ್ತಾ ಇದ್ದೇವೆ, ಐತಿಹಾಸಿಕ ಗ್ರಂಥ ಇದು. ಇತಿಹಾಸ ರೂಪವಾದ ಈ ಗ್ರಂಥದಲ್ಲಿ ಇತಿಹಾಸವನ್ನು ಹೇಳುವಾಗಲೂ ಕೂಡ ಕಾಲವನ್ನ ನಾವು ಚೆನ್ನಾಗಿ ಅರ್ಥ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ ರೈವತ ಪರ್ವತಕ್ಕೆ ದೇವರು ಹೋಗಿದ್ದ ಅಂತ ಒಂದು ಬಾರಿ ಹೇಳುತ್ತಾರೆ. ಅಲ್ಲಿಂದ ಪರಮಾತ್ಮ ಸ್ವರ್ಗಕ್ಕೆ ಹೋಗಿ ಇಂದ್ರ ದೇವರ ಜೊತೆಗೆ ಯುದ್ಧ ಮಾಡಿದ ಪಾರಿಜಾತವನ್ನು ತೆಗೆದುಕೊಂಡು ಬಂದ ಅಂತ ಆ ರೈವತ ಪರ್ವತಕ್ಕೆ ಹೋದದ್ದು, ಯಾವಾಗ. ಇಲ್ಲಿ ನಾರದರು **'ಧನ್ಯೋಸಿ ಆಶ್ಚರ್ಯೋಸಿ'** ಅಂತ ರೈವತ ಪರ್ವತದಲ್ಲಿಯೇ ಇದ್ದಾಗಲೇ ಹೇಳಿದರೂ ಅಂತ ಹಿಂದೊಮ್ಮೆ ರೈವತ ಪರ್ವತದಿಂದ ನೇರವಾಗಿ ಮಹೇಂದ್ರಪುರಿಗೆ ಅಮರಾವತಿಗೆ ಹಾರಿದನಲ್ಲ ಗರುಡನ ಮೇಲೆ ಕುಳಿತು ಆ ಪ್ರಸಂಗ ಈ ಪ್ರಸಂಗಗಳು ಒಂದೋ ಬೇರೆಯಾ.

ಶ್ರೀಮದಾಚಾರ್ಯರು ಇದನ್ನೆಲ್ಲವನ್ನು ಸೇರಿಸಿ ಚೆನ್ನಾಗಿ ತಾತ್ಪರ್ಯ ನಿರ್ಣಯದಲ್ಲಿ ನಮಗೆ ತಿಳಿಸಿಕೊಡುತ್ತಾರೆ. ಇದೇ ಪ್ರಸಂಗ ರೈವತ ಪರ್ವತದಲ್ಲಿ ಇರುವಾಗ, ಎಲ್ಲ ರಾಜರು ಅಲ್ಲಿ ಬಂದಾಗ ನಾರದರು ಬಂದು ಪರಮಾತ್ಮನನ್ನು ಸರ್ವೋತ್ತಮ ಎಂಬುದಾಗಿ ಕೊಂಡಾಡುತ್ತಾರೆ ಆಗಲೇ ಪಾರಿಜಾತ ಪುಷ್ಪವನ್ನು ಕೊಡುತ್ತಾರೆ, ರುಕ್ಮಿಣಿಗೆ ಪರಮಾತ್ಮ ಕೊಟ್ಟ, ಆಗಲೇ ರುಕ್ಮಿಣಿ ವ್ರತ ಮಾಡಿದ್ದಳು ಅನ್ನುವುದಕ್ಕಾಗಿ ಅದರ ಒಂದು ವಿಶೇಷವಾದ ಉದ್ಯಾಪನೆಯ



ಪ್ರಸಂಗದಲ್ಲಿ ಕೃಷ್ಣ ಅವಳಿಗೆ ಕೊಟ್ಟದ್ದು, ಸತ್ಯಭಾಮೆ ಮುನಿಸಿಕೊಂಡದ್ದು, ಅವಳಿಗೆ ಸಮಾಧಾನ ಮಾಡುವುದಕ್ಕೆ ಪಾರಿಜಾತವನ್ನು ತರುತ್ತೇನೆ ಅಂತ ಭರವಸೆ ಕೊಟ್ಟದ್ದು, ಅದೇ ಪ್ರಸಂಗದಲ್ಲಿ ಅದಿತಿಯ ಕರ್ಣಕುಂಡಲಗಳನ್ನ ಅಪಹಾರ ಮಾಡಿಕೊಂಡದ್ದಕ್ಕಾಗಿ ನರಕಾಸುರನ ಸಂಹಾರ ಮಾಡಬೇಕು ಅಂತ ಇಂದ್ರ ದೇವರು ಕೇಳಿಕೊಂಡದ್ದು, ಋಷಿ ಮುನಿಗಳೆಲ್ಲ ತಮಗೆ ಪೀಡೆ ಕೊಡುವ ನರಕಾಸುರನ ಸಂಹಾರ ಮಾಡಬೇಕು ಅಂತ ಪ್ರಾರ್ಥನೆ ಮಾಡಿದ್ದು ಆಗ ನರಕಾಸುರನ ಸಂಹಾರ ಮಾಡಿ ಕರ್ಣಕುಂಡಲಗಳನ್ನ ಅದಿತಿಗೂ ಕೊಟ್ಟು, ಬರುವಾಗ ಪಾರಿಜಾತ ವೃಕ್ಷವನ್ನು ತೆಗೆದುಕೊಂಡು ಬಂದದ್ದು. ಹೀಗೆ ಎಲ್ಲವನ್ನು ಸೇರಿಸಿ ಒಟ್ಟಾಗಿ ಒಂದೇ ಒಂದು ಸೂತ್ರದಲ್ಲಿ ಕಥೆಯನ್ನು ಹೆಣೆದು ಕೊಡುತ್ತಾರೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಅಂತಹ ಶ್ರೇಷ್ಠವಾದ ಆ ಭಗವಂತನ ಮಹಿಮೆಯನ್ನು ನಾವು ತಿಳಿಯಬೇಕು. ಯಾವುದೇ ಒಂದು ಕಾರ್ಯವನ್ನು ಮಾಡುವಾಗಲೂ ಕೂಡ, ಹೊರಗಡೆ ಹೋಗುವಾಗಲೂ ಈ ಒಂದು ಪಾರಿಜಾತ ಹರಣದ ಚಿಂತನವನ್ನು ಮಾಡಬೇಕು ಅಂತ ಇದೆ.

ಪ್ರಯಾಣೇ ಗರುಡಾರೂಢಂ ಪಾರಿಜಾತ ಹರಂ ಹರಿಂ ।

ಸತ್ಯಭಾಮಾ ಹಿತಂ ವಂದೇ ಇಷ್ಟ ಕಾಮ್ಯಾರ್ಥ ಸಿದ್ಧಯೇ ॥ (ಯಾತ್ರಾ ಪ್ರಾರ್ಥನೆ)

ಅಂತಹ ಪರಮಾತ್ಮನ ಮಹಾಮಹಿಮೆಯನ್ನು ವೈಶಂಪಾಯಾನರು ತಿಳಿಸಿಕೊಡುತ್ತಾ ಇದ್ದಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ವಿಷ್ಣುಪರ್ವ-33

* * *

ಜನಮೇಜಯ ಉವಾಚ

ಭೂಯ ಏವ ಮಹಾಬಾಹೋ ಕೃಷ್ಣಸ್ಯ ಜಗತಾಂ ಪತೇಃ ।

ಮಹಾತ್ಮ್ಯಂ ಶ್ರೋತುಮಿಚ್ಛಾಮಿ ಪರಮಂ ದ್ವಿಜಸತ್ತಮ ।। (111.1 ವಿಷ್ಣುಪರ್ವ)

ಪ್ರಪಂಚದೊಳಗಿನ ಯಾವುದೇ ವಿಷಯವನ್ನು ತಿಳಿದರೂ ಕೇಳಿದರೂ ತಿಳಿದ ಮೇಲೆ ಮತ್ತೆ ತಿಳಿಯುವ ಉತ್ಸುಕತೆ ಇರುವುದಿಲ್ಲ, ಗೊತ್ತಲ್ಲ ಅನ್ನುವ ಔದಾಸೀನ್ಯ ಆದರೆ ಎಷ್ಟು ಕೇಳಿದರೂ, ಎಷ್ಟು ತಿಳಿದರೂ, ಎಷ್ಟು ಅರ್ಥ ಮಾಡಿಕೊಂಡರೂ ಇನ್ನೂ ತಿಳಿಯಬೇಕು, ಇನ್ನೂ ಅರ್ಥ ಮಾಡಿಕೊಳ್ಳಬೇಕು, ಇನ್ನಷ್ಟು ಜ್ಞಾನವನ್ನು ಪಡೆಯಬೇಕು ಅನ್ನುವ ಉತ್ಸುಕತೆ ಭಗವಂತನ ಮಹಿಮೆಯ ವಿಷಯದಲ್ಲಿ ಭಗವದ್ಭಕ್ತರಿಗೆ ಇರುತ್ತದೆ. ಆ ಭಗವಂತನ ಗುಣಗಳನ್ನು ತಿಳಿದ, ಅವನ ಮಹಿಮೆಯನ್ನು ಅರಿತವರಿಗೆ ಎಷ್ಟು ತಿಳಿದರೂ ತೃಪ್ತಿ ಇಲ್ಲ. ಜನಮೇಜಯ ಭಕ್ತಿಯಿಂದ ವೈಶಂಪಾಯನರಿಗೆ ಪ್ರಾರ್ಥನೆಯನ್ನು ಮಾಡುತ್ತಾನೆ. ಶ್ರೀಕೃಷ್ಣ ಪರಮಾತ್ಮನ, ಜಗತ್ತಿನ ಒಡೆಯನಾದ ಪರಮಾತ್ಮ, ನಮ್ಮ ಅಂತರ್ಯಾಮಿಯಾದ ಪರಮಾತ್ಮ ಅನಾದಿ ಕಾಲದಿಂದ ಅನಂತ ಕಾಲದವರೆಗೆ ಅನಂತ ಉಪಕಾರಗಳನ್ನು ಮಾಡುವ ಆ ಭಗವಂತನ ಬಗ್ಗೆ ಇನ್ನಷ್ಟು ಕೇಳಬೇಕು ಮತ್ತಷ್ಟು ತಿಳಿಯಬೇಕು ಅಂತ. ವೈಶಂಪಾಯನರು ಹಿಂದೆ ನಡೆದ ಒಂದು ಘಟನೆಯನ್ನು ತಿಳಿಸುತ್ತಾರೆ.

ಭೀಷ್ಮಾಚಾರ್ಯರು ಯುದ್ಧದ ಕೊನೆಯಲ್ಲಿ ಯುಧಿಷ್ಠಿರನಿಗೆ ತತ್ತ್ವೋಪದೇಶವನ್ನು ಮಾಡುತ್ತಾರೆ. ಶಾಂತಿ ಪರ್ವ, ಅನುಶಾಸನ ಪರ್ವಗಳಲ್ಲಿ ಅದರ ಪೂರ್ಣವಾದಂತಹ ವಿಸ್ತರ ಉಂಟು. ಅಂತಹ ಅನುಶಾಸನ ಪರ್ವ, ಶಾಂತಿ ಪರ್ವಗಳ ಉಪದೇಶದ ಪ್ರಸಂಗದಲ್ಲಿ ಭಗವಂತನ ಮಹಿಮೆಯನ್ನು ಅತ್ಯಂತ ಭಕ್ತಿಯಿಂದ ಭೀಷ್ಮಾಚಾರ್ಯರು ಕೊಂಡಾಡುತ್ತಾರೆ ಆ ಪರಮಾತ್ಮನ ಸರ್ವೋತ್ತಮತ್ವವನ್ನು. ತಾವು ಗಟ್ಟಿಯಾಗಿ ಇರುವಾಗಲೂ ಶ್ರೀ ಕೃಷ್ಣ ಪರಮಾತ್ಮನಿಗೇನೆ ಅಗ್ರ ಪೂಜೆಯಾಗಬೇಕು ಅವನೇ ಸರ್ವೋತ್ತಮ ಅಂತ ಎಲ್ಲ ದುಷ್ಟರು, ದುರುಳರು, ನಾಸ್ತಿಕರು ಅವರೆಲ್ಲರ ಮಧ್ಯದಲ್ಲಿ. ಈಚೆಗೆ ಮಹಾ ಮಹಾ ದೇವಾಧಿ ದೇವತೆಗಳು, ಋಷಿಗಳು, ಮುನಿಗಳು, ಮಾನ್ಯರು

ಅವರೆಲ್ಲರ ಮಧ್ಯದಲ್ಲಿ ಕೃಷ್ಣ ಪರಮಾತ್ಮನೇ ಸರ್ವೋತ್ತಮ ಅನ್ನುವುದನ್ನು ಸಾರಿ ಹೇಳಿದ ಮಹಾನುಭಾವರು ಮಹಾ ಭೀಷ್ಮರು ಭಿಷ್ಮಾಚಾರ್ಯರು. ಒಂದು ಕಡೆಗೆ ತಮ್ಮ ನೈಷ್ಠಿಕವಾದ ಬ್ರಹ್ಮಚರ್ಯದ ಧೀರ ವೀರ ಪ್ರತಿಜ್ಞೆಯನ್ನು ಮಾಡಿದ ಭೀಷ್ಮರು ಅಂತ ಅನ್ನಿಸಿಕೊಂಡರೆ ಇಂತಹ ದುಷ್ಟ ದುರ್ಯೋಧನಾದಿ ದುರುಳರ ಮಧ್ಯದಲ್ಲಿಯೂ ಕೂಡ ಶ್ರೀಕೃಷ್ಣ ಪರಮಾತ್ಮನೇ ಸರ್ವೋತ್ತಮ ಅನ್ನುವಂತಹ ಭೀಷ್ಮ ಉದ್ಘೋಷಣೆಯನ್ನು ಮಾಡಿದ ಕಾರಣಕ್ಕೂ ಅವರು ಭೀಷ್ಮರು ಅನ್ನುವುದನ್ನು ನಾವು ಚಿಂತನ ಮಾಡಿದರೆ ತಪ್ಪಾಗಲಿಕ್ಕಿಲ್ಲ. ಅಂತಹ ಭೀಷ್ಮಾಚಾರ್ಯರು ತಾವು ಪರಮಾತ್ಮನ ಬಗ್ಗೆ ವರ್ಣನೆ ಮಾಡಿ ತಮಗೆ ತೃಪ್ತಿ ಅನ್ನಿಸದೇ ಜುನಾಮಕ ವಸು ಅಷ್ಟ ವಸುಗಳಲ್ಲಿ ಒಬ್ಬರು. ಅಂತಹ ಶೇಷ ಶತಸ್ಥರಲ್ಲಿ ಬರುವಂತಹ ಹದಿನೆಂಟನೆಯ ಕಕ್ಷೆಯ ಅವರು. ಹದಿನೆಂಟರ ನಾನು ಹೇಳುವುದಕ್ಕಿಂತಲೂ, ಎಂಟನೆಯ ಕಕ್ಷೆಯಲ್ಲಿರುವ ಅರ್ಜುನ ನನಗಿಂತಲೂ ಹತ್ತು ಕಕ್ಷೆಯಿಂದ ಉತ್ತಮನಾದಂತಹ ಮಹಾನುಭಾವ ಅವನು ಇದರ ಬಗ್ಗೆ ಹೇಳಬೇಕು ಅಂತ ಅರ್ಜುನನಿಗೆ ಹೇಳಿದರು. ಅರ್ಜುನ ನೀನು ಹೇಳು ಕೃಷ್ಣನ ಮಹಿಮೆಯನ್ನು ಕೊಂಡಾಡು, ನೀನು ಕಂಡದ್ದನ್ನು ಹೇಳು ಅಂದಾಗ ಅರ್ಜುನ ಹೇಳುವುದಕ್ಕೆ ಪ್ರಾರಂಭ ಮಾಡುತ್ತಾನೆ. ಶ್ರೀಕೃಷ್ಣ ಪರಮಾತ್ಮ ದ್ವಾರಕಾ ಪಟ್ಟಣದಲ್ಲಿ ಸಂಕಲ್ಪವನ್ನು ಮಾಡಿದ, ಬ್ರಹ್ಮಾದಿ ದೇವತೆಗಳು ಯಾವ ಪರಮಾತ್ಮನ ಪ್ರೀತಿಗಾಗಿ ಯಜ್ಞ ಯಾಗಾದಿಳನ್ನು ಮಾಡಿ ಎಲ್ಲವನ್ನೂ ಅವನಿಗೆ ಅರ್ಪಣೆ ಮಾಡುತ್ತಾರೆ. **'ಕೃಷ್ಣೋ ಯಜ್ಞೈರಿಜ್ಯತೇ'** ಎಲ್ಲರೂ ಯಜ್ಞವನ್ನು ಮಾಡಿ ಅವನನ್ನು ಸಂತೋಷ ಪಡಿಸುತ್ತಾರೆ.

ಯಜ್ಞೋ ಯಜ್ಞಪತಿರ್ಯಜ್ವಾ ಯಜ್ಞಾಂಗೋ ಯಜ್ಞವಾಹನಃ ॥ (104 ವಿಷ್ಣುಸಹಸ್ರನಾಮ)

ಅಂತಹ ಸರ್ವೇಜ್ಯನಾದ ಎಲ್ಲರ ಯಜ್ಞಗಳಿಗೂ ಉದ್ದೇಶ್ಯನಾದ ಫಲಪ್ರದನಾದ ಸ್ವಾಮಿ ಪರಮಾತ್ಮ.

ಬ್ರಹ್ಮಾರ್ಪಣಂ ಬ್ರಹ್ಮ ಹವಿಃ ರ್ಬ್ರಹ್ಮಾಗ್ನೌ ಬ್ರಹ್ಮಣಾ ಹುತಮ್ ।
ಬ್ರಹ್ಮೈವ ತೇನ ಗಂತವ್ಯಮ್ ಬ್ರಹ್ಮಕರ್ಮಸಮಾಧಿನಾ ॥ (4.24 ಭ ಗೀತಾ)

ಯಜಮಾನರಲ್ಲಿ, ಆಹುತಿಗಳಲ್ಲಿ, ಅಗ್ನಿಯಲ್ಲಿ, ಕುಂಡದಲ್ಲಿ ಎಲ್ಲ ಕಡೆಗೂ ವ್ಯಾಪ್ತನಾಗಿ, ಋತ್ವಿಜರಲ್ಲಿ, ಮಂತ್ರಗಳಲ್ಲಿ ವ್ಯಾಪ್ತನಾಗಿ ತಾನೆ ಪ್ರತಿಪಾದ್ಯನಾಗಿ ಫಲಪ್ರದನಾದ ಸ್ವಾಮಿ ತಾನು ಸ್ವತಃ ಯಜ್ಞವನ್ನು ಮಾಡುತ್ತಾ ಇದ್ದಾನೆ ಲೋಕ ಶಿಕ್ಷಣಕ್ಕಾಗಿ ಹೀಗೆ ಯಜ್ಞವನ್ನು ಮಾಡಬೇಕು ನೀವೆಲ್ಲ ಅಂತ ಜಗತ್ತಿಗೆ ತಿಳಿಸಿಕೊಡುವುದಕ್ಕೋಸ್ಕರವಾಗಿ ತಾನು ಅಶ್ವಮೇಧ ಯಾಗವನ್ನು ಮಾಡುತ್ತಾ ಇದ್ದಾನೆ. ಆ ಅಶ್ವಮೇಧ ಯಾಗವನ್ನು ಎಷ್ಟು ದಿನಗಳವರೆಗೆ ಮಾಡಿದ, ಎಷ್ಟು ವರ್ಷಗಳವರೆಗೆ ಮಾಡಿದ ಹಾಗೆಲ್ಲ ಮಾಡಿದವರಿದ್ದಾರೆ ಎಷ್ಟೋ ವರ್ಷಗಳವರೆಗೆ ಮಾಡಿದವರಿದ್ದಾರೆ, ಪಾಂಡವರೇ ಮಾಡಿದ್ದಾರೆ ಒಂದು ದಿನದಲ್ಲಿ ಮಾಡಿದ್ದಾನೆ ಕೃಷ್ಣ. ಏಕಾಃ ಅಶ್ವಮೇಧಾ ವರ್ಷ ತಿಂಗಳುಗಟ್ಟಲೆ ಮಾಡುವಂತಹ ಯಜ್ಞವನ್ನ ಒಂದು ದಿನದಲ್ಲಿ ಮಾಡಿದ್ದಾನೆ ಅಚಿಂತ್ಯಾದ್ಭುತ ಶಕ್ತಿ ಸಾಮರ್ಥ್ಯಗಳಿಂದ ಸಂಪನ್ನನಾದ ಭಗವಂತನಿಗೆ ಏನು. ಆ ಕುದುರೆಯಲ್ಲಿ ಇಚ್ಛಾ ಮಾತ್ರದಿಂದ ಶಕ್ತಿಯನ್ನು ತುಂಬಿದ್ದಾನೆ ದಿನಕ್ಕೆ ಒಂದು ಲಕ್ಷ ಯೋಜನ ಸುತ್ತಿಕೊಂಡು ಬರಬೇಕು ಅದು ಆ ರೀತಿ ಅದ್ಭುತವಾದ ಶಕ್ತಿಯನ್ನು ಕುದುರೆಗೆ ಕೊಟ್ಟಿದ್ದಾನೆ. ಒಂದೇ ದಿನದೊಳಗೆ ಶ್ರೀಕೃಷ್ಣ ಪರಮಾತ್ಮನ ಪುತ್ರರು ಪ್ರದ್ಯುಮ್ನ, ಸಾಂಬ, ಚಾರುದೇಷ್ಣ ಮೊದಲಾದಂತಹ ಶ್ರೀಕೃಷ್ಣ ಪುತ್ರರು, ಈಚೆಗೆ ಮಹಾನುಭಾವರಾದ ಜೀವೋತ್ತಮರಾದ ಮಹಾಬಲಿಷ್ಠರಾದ ಭೀಮಸೇನ ದೇವರು, ಅರ್ಜುನ ಮೊದಲಾದ ಶ್ರೀಕೃಷ್ಣನ ಭಕ್ತರು. ಕೃಷ್ಣ ಭಕ್ತರು, ಕೃಷ್ಣ ಭಕ್ತರು ಆದ ಶ್ರೀಕೃಷ್ಣ ಪುತ್ರರು ಆದಂತಹ ಪ್ರದ್ಯುಮ್ನಾದಿಗಳು ಎಲ್ಲರೂ ಸೇರಿ ಎಲ್ಲ ರಾಜರನ್ನು ಸೋಲಿಸಿಕೊಂಡು ಕಪ್ಪ ಕಾಣಿಕೆಗಳನ್ನು ತೆಗೆದುಕೊಂಡು ಬಂದಿದ್ದಾರೆ ಒಂದೇ

ದಿನದೊಳಗೆ. **'ಹಯಃಸ್ಯತ್ ಕೃಷ್ಣ ನಿರ್ಮಿತಃ'** ದಿವ್ಯವಾದಂತಹ ಕುದುರೆ ಅದು. ಅಷ್ಟು ವೇಗದಿಂದ ಕುದುರೆಯನ್ನು ಕರೆದುಕೊಂಡು ಕುದುರೆ ಓಡಿದೆ ಕುದುರೆಯ ಜೊತೆಗೆ ಇವರೆಲ್ಲ ಆ ಪರಮಾತ್ಮನ ಪರಮಾನುಗ್ರಹದಿಂದ, ಮನೋವೇಗದಿಂದ ಜರಾಸಂಧಾಧಿಗಳಂತಹ ಮಹಾಜಟ್ಟಿಗಳನ್ನು **'ಕ್ಷಣಮಾತ್ರತಃ'** ಒಂದೇ ಕ್ಷಣದಲ್ಲಿ ಸೋಲಿಸಿ ಎಲ್ಲರನ್ನು ಸೋಲಿಸಿಕೊಂಡು ಬಂದಿದ್ದಾರೆ.

ಯಜ್ಞ ಪ್ರಾರಂಭವಾಯಿತು, ಇನ್ನೇನು ಯಜ್ಞ ಪ್ರಾರಂಭವಾಗಬೇಕು ವಿಚಿತ್ರ ನೋಡಿ ಸಾಕ್ಷಾತ್ ಸರ್ವೋತ್ತಮನಾದ ಶ್ರೀಕೃಷ್ಣ ಪರಮಾತ್ಮ ಯಜಮಾನ, ಸರ್ವೋತ್ತಮರಾದ ವೇದವ್ಯಾಸ ದೇವರು ಅಲ್ಲಿ ಯಜ್ಞವನ್ನು ಮಾಡಿಸುವವರು ಪುರೋಹಿತರು ಅಂತಹ ಅದ್ಭುತವಾದಂತಹ ಯಜ್ಞ ನಿಜವಾಗಿ ಚಿಂತನ ಮಾಡುವುದಕ್ಕೆ ಸಾಧ್ಯವಿಲ್ಲ. ಎಷ್ಟು ಚೆನ್ನಾಗಿ ಕಲಿತಿದ್ದೀರಿ ವೇದ ಒಂದು ವೇದ ಕಲತೀರಾ ಎರಡಾ ಮೂರಾ **'ಸತ್ರಿರ್ಭವ್ರ್ಧಿಧೀಯತೇ'** ಮೂರು ವೇದಗಳ ಚೆನ್ನಾಗಿ ಪರಿಚಯ ಇರಬೇಕು, ಸರಿಯಾದ ಪರಿಚಯ ಇರಬೇಕು ಯಜ್ಞ ಯಾಗಾದಿಗಳನ್ನು ಮಾಡಿಸುವುದಕ್ಕೆ. ಇಲ್ಲಿ ಏನು ಕೇಳುತ್ತೀರಾ ಅನಂತ ವೇದಗಳನ್ನ, ಅನಂತಾನಂತ ವೇದಗಳು ಯಾವ ಪರಮಾತ್ಮನ ಅದ್ಭುತವಾದ ದಿವ್ಯವಾದಂತಹ ಜ್ಞಾನವೆಂಬ ಅವ್ಯಾಕೃತ ಆಕಾಶದಲ್ಲಿ ಪರಮಾಣುವಿನಂತೆ ಸೇರಿಕೊಂಡಿವೆ ಅಂತ ಶ್ರೀಮದಾಚಾರ್ಯರು ಅನುವ್ಯಾಖ್ಯಾನದಲ್ಲಿ ಹೇಳುತ್ತಾರೆ ಅಂತಹ ಸರ್ವಜ್ಞ ಶಿಖಾಮಣಿ ಆದಂತಹ ವೇದವ್ಯಾಸ ದೇವರು ಅಲ್ಲಿ ಕುಳಿತಿದ್ದಾರೆ ಯಜ್ಞ ಮಾಡಿಸುವುದಕ್ಕೆ ಯಜ್ಞ ಪ್ರಾರಂಭ ಆಯಿತು. ತೃಣಾವಹ ಎಂಬಂತಹ ಬ್ರಾಹ್ಮಣ ಅಲ್ಲಿ ಬಂದ ನೋಡಿ ಬಂದವನೇ ಬಂದು ಹುಟ್ಟಿದ ಮಕ್ಕಳೆಲ್ಲ ಮತ್ತೆ ಮತ್ತೆ ಸಾಯುತ್ತಾ ಇದ್ದಾರೆ ಮೂರು ಮಕ್ಕಳನ್ನು ಕಳೆದುಕೊಂಡೆ ಈಗ ನಾಲ್ಕನೆಯ ಪ್ರಸವ ಆಗುವ ಸಂದರ್ಭ ಇದೆ ನನ್ನ ಮಡದಿಗೆ ಈ ಸಂದರ್ಭದಲ್ಲಿ ನೀನು ರಕ್ಷಣೆಯನ್ನು ಮಾಡಬೇಕು ಅಂತ ಶ್ರೀಕೃಷ್ಣ ಪರಮಾತ್ಮನಿಗೆ ಪ್ರಾರ್ಥನೆ ಮಾಡಿಕೊಳ್ಳುವುದಕ್ಕೆ ಬಂದಿದ್ದಾನೆ ತೃಣಾವಹ.

ಶ್ರೀಕೃಷ್ಣ ಪರಮಾತ್ಮ ಯಜ್ಞದಲ್ಲಿ ದೀಕ್ಷಿತನಾಗಿದ್ದಾನೆ ಒಮ್ಮೆ ಯಜ್ಞದಲ್ಲಿ ದೀಕ್ಷೆಯನ್ನ ತೆಗೆದುಕೊಂಡ ಮೇಲೆ ಮಧ್ಯದಲ್ಲಿ ಆಚೆಈಚೆ ಎದ್ದು ಓಡಾಡುವಂತಿಲ್ಲ. ಬ್ರಾಹ್ಮಣ ಕಷ್ಟದಲ್ಲಿ ಇದ್ದಾನೆ ದೊಡ್ಡ ಆಪತ್ತು ಮೂರು ಜನ ಮಕ್ಕಳು ಹೋಗಿದ್ದಾರೆ ಹುಟ್ಟುವ ಮಗುವೂ ಬದುಕುತ್ತೋ ಇಲ್ಲವೋ ಅನ್ನುವ ಸಂಶಯ ಇಂತಹ ಒಂದು ಕಷ್ಟದ ಪರಿಸ್ಥಿತಿಯಲ್ಲಿ ಒಬ್ಬ ಬ್ರಾಹ್ಮಣ ಕೇಳುವಾಗ ಆ ಸಂದರ್ಭದಲ್ಲಿ ಅವನ ರಕ್ಷಣೆಯನ್ನು ಮಾಡುವುದು ಬಹಳ ದೊಡ್ಡ ಧರ್ಮ. ಇದು ಎರಡೂ ಸತ್ಯ ಯಜ್ಞವನ್ನು ಬಿಡಬಾರದು, ಬ್ರಾಹ್ಮಣನ ರಕ್ಷಣೆಯನ್ನು ಮಾಡಬೇಕು ಅಂತನ್ನುವ ಸಂದರ್ಭದೊಳಗೆ ಅರ್ಜುನ ಮಧ್ಯದಲ್ಲಿ ನಾನು ರಕ್ಷಣೆ ಮಾಡುತ್ತೇನೆ ಅಂತ ಮುಂದೆ ಬರುತ್ತಾನೆ ನಿನ್ನಿಂದ ಆಗುವುದಿಲ್ಲ ಅಂತ ನಿರ್ದಾಕ್ಷಿಣ್ಯವಾಗಿ ಹೇಳಿ ಬಿಟ್ಟ ಆ ಬ್ರಾಹ್ಮಣ. ನಿನ್ನಿಂದ ಆಗುವುದಿಲ್ಲ ಇದು ಶ್ರೀಕೃಷ್ಣನೇ ರಕ್ಷಣೆ ಮಾಡಬೇಕು ಇನ್ಯಾರು ಮಾಡಲಿಕ್ಕೆ ಸಾಧ್ಯ ಇಲ್ಲ. ಈಗ ಅಂತಹ ಕೃಷ್ಣ, ಬಲರಾಮ, ಪ್ರದ್ಯುಮ್ನ, ಅನಿರುದ್ಧ ಇಂತಹ ಎಲ್ಲಾ ಮಹಾನುಭಾವರಿದ್ದೂ ಈಗ ಮೂರು ಜನ ಹೋಗಿದ್ದಾರೆ ಮಕ್ಕಳು ಇನ್ನು ಕೊನೆಗೆ ಅಷ್ಟು ನಾನು ಭಕ್ತಿಯಿಂದ ಕೃಷ್ಣನಿಗೆ ಪ್ರಾರ್ಥನೆ ಮಾಡಲಿಲ್ಲವೋ ಏನೋ, ನಾನು ಶರಣು ಹೋಗಿಲ್ಲ ಅನ್ನುವ ತಪ್ಪೋ ಏನೋ ಈಗ ನಾನು ಕೊನೆಗೆ ಕೃಷ್ಣನಿಗೆ ಶರಣು ಹೋಗೋಣ ಅನ್ಯಥಃ **'ಶರಣಂ ನಾಸ್ತಿ ತ್ವಮೇವ ಶರಣಂ ಮಮ'** ಅಂತ ರಕ್ಷಣೆಗಾಗಿ ಬಂದಿದ್ದೇನೆ ಪ್ರಾರ್ಥನೆಗಾಗಿ ನೀನು ಮಧ್ಯದಲ್ಲಿ ಮಾತ್ರ ಪ್ರವೇಶ ಮಾಡಲಿಕ್ಕೆ ಹೋಗಬೇಡ ಅರ್ಜುನ ಅಂತ ಬ್ರಾಹ್ಮಣ ಹೇಳುತ್ತಾನೆ ಕೇಳುವುದಿಲ್ಲ. ಏನು ಅಂತ ತಿಳಿದುಕೊಂಡಿದ್ದೀಯಾ **'ನ ವಿಪ್ರ ತಾದೃಶೋಸ್ಮ್ಯಹಮ್'** ನಾನೇನು ಆ ಸಾಮಾನ್ಯ ಕೃಷ್ಣ ಅಲ್ಲ ಗೊಲ್ಲರ ಕೃಷ್ಣ, ಅಲ್ಲಿಯೇ ಇದ್ದಾನೆ ಕೃಷ್ಣ, ಬಲರಾಮ ಅಲ್ಲ, ಆ ಪ್ರದ್ಯುಮ್ನ, ಅನಿರುದ್ಧ ಅಂತ ತಿಳಿದುಕೊಳ್ಳಬೇಡ ನನ್ನನ್ನ ನಾನು ಯಾರು ಅಂತ ಅಂದುಕೊಂಡಿದ್ದೀಯಾ ಮೂರು ಲೋಕಗಳಲ್ಲಿ ಏಕೈಕ ಧನುರ್ಧಾರಿ ಅಂತ ಪ್ರಸಿದ್ಧನಾಗಿ ಇರತಕ್ಕಂತಹ ಅರ್ಜುನ ನಾನು. ಖಾಂಡವ ದಹನ ಮಾಡುವ ಕಾಲದಲ್ಲಿ ಹಿಂದೆ

ಎಂತೆಂತಹ ಇಂದ್ರಾದಿ ದೇವತೆಗಳು ಬಂದು ಯುದ್ಧ ಮಾಡಿದರು, ಎಲ್ಲರನ್ನೂ ತಡೆದು ಸಂಪೂರ್ಣ ಖಾಂಡವ ವನವನ್ನ ದಾಹ ಮಾಡಿಬಿಟ್ಟೆ, ದಾಹ ಮಾಡುವುದಕ್ಕೆ ಅಗ್ನಿಗೆ ಅವಕಾಶ ಮಾಡಿಕೊಟ್ಟೆ, ಧೋ ಧೋ ಧೋ ಮಳೆ ಸುರಿಸಬೇಕು ಅಂತ ಸ್ವತಃ ಇಂದ್ರ ದೇವರು ಪಟ್ಟು ಕಟ್ಟಿ ನಿಂತರೂ ಒಂದು ತೊಟ್ಟು ಹನಿ ಕೆಳಗೆ ಬೀಳದಂತೆ ಮಾಡಿದಂತಹ ಪರಾಕ್ರಮ ನನ್ನದು.

ಭವಿಷ್ಯದ ಜ್ಞಾನವನ್ನು ನಿಮಗೆ ತೋರಿಸುತ್ತೇನೆ, ಪರಾಕ್ರಮವನ್ನು ನಿಮಗೆ ತೋರಿಸುತ್ತೇನೆ ಮುಂದೆ ನಿವಾತಕವಚರು ಅಂತ ಯಾರ ಕವಚದೊಳಗೆ ಗಾಳಿಯೂ ಹೋಗುವುದಿಲ್ಲ ಅಂಥವರ ಕವಚವನ್ನು ಭೇದನ ಮಾಡಿ ಬಾಣ ಬಿಟ್ಟು ಅವನನ್ನು ಸಂಹಾರ ಮಾಡುವವನಿದ್ದೇನೆ ಇಷ್ಟು ಪರಾಕ್ರಮ ಇದೆ ನನ್ನಲ್ಲಿ ಏನು ನಿನ್ನ ಒಂದು ಕೂಸಿನ ರಕ್ಷಣೆ ಮಾಡಲಿಕ್ಕೆ ಆಗುವುದಿಲ್ಲ ನಡಿ. ಅರ್ಜುನ ಪರಮ ಭಗವದ್ಭಕ್ತ, ಕೃಷ್ಣನ ದಾಸಾನುದಾಸ ಆ ಕ್ಷಣದಲ್ಲಿ ಅಸುರಾವೇಶವಾಗಿದೆ, ಅಸುರಾವೇಶ ಮೂಲಕವಾಗಿ ಒಳಗಿದ್ದ ಅಸುರರ ಮಾತು ಅದು ಕೃಷ್ಣನ ಬಗ್ಗೆ ಆಡಿದ ತಿರಸ್ಕಾರದ ಮಾತುಗಳು ಅರ್ಜುನನ ಮಾತಲ್ಲ. ಸರಿ ಹೊರಡುತ್ತೇನೆ ಅಂತ ಕೃಷ್ಣನ ಅಪ್ಪಣೆಯನ್ನು ಕೇಳುತ್ತಾನೆ ಕೃಷ್ಣ ಹೇಳಿದ ನಿನಗೆ ಆಗುತ್ತದಾ ಅರ್ಜುನ ಇದು, ನಿನ್ನಿಂದ ಆಗುವ ಕೆಲಸ ಅಲ್ಲ ಇದು ಅಂತ ಕೃಷ್ಣನೇ ಅಂದುಬಿಟ್ಟ. ಈ ಮಾತನ್ನ ಬ್ರಾಹ್ಮಣ ಅಂದರೆ ಅಡ್ಡಿ ಇಲ್ಲ ಕೃಷ್ಣ ಯಾವಾಗ ಆ ಮಾತಾಡಿದನೋ ಮೈ ಬೆವತು ಹೋಯಿತು, ಅರ್ಜುನನಿಗೆ ಬಹಳ ನಾಚಿಕೆ ಆಯಿತು ಒಂದು ತರಹ ತಲೆ ಮುಖ ಎಲ್ಲ ಕೆಳಗೆ ತಗ್ಗಿಸಿ ನಿಂತ, ಕೃಷ್ಣನಿಗೆ ಅನ್ನಿಸಿತು ಹೋಗಲಿ ನೋಡಿಕೊಂಡು ಬರಲಿ ಯಾರ ಮೇಲೆ ಬಹಳ ಪ್ರೀತಿ ಇರುತ್ತೆ ಅಂಥವರು ತಪ್ಪಿದಾಗ ಕೂಡಲೇ ತಿದ್ದುತ್ತಾನೆ ಪರಮಾತ್ಮ. ಅರ್ಜುನನ ಮೇಲೆ ಅತೀ ಪ್ರೀತಿ ಅತ್ಯಂತ ಪ್ರೀತಿಯ ಭಕ್ತ ಆದದ್ದರಿಂದ ಅವನಿಗೆ ಅಹಂಕಾರ ಬಹಳ ಹೊತ್ತು ಉಳಿಯುವುದು ಬೇಡ ನಾನು ದೊಡ್ಡವನಲ್ಲ, ದೇವರು ಸರ್ವೋತ್ತಮ, ನಾನು ಅವನ ಅತ್ಯಂತ ಅಧೀನ ಪರಮಾಧೀನ ಅನ್ನುವ ತತ್ವ ಅರ್ಜುನನಿಗೆ ಶೀಘ್ರದಲ್ಲಿ ಗೊತ್ತಾಗಲಿ ಅಂತ ಅರ್ಜುನನಿಗೆ ಪರಮಾತ್ಮ ಇದೊಂದು ಪರೀಕ್ಷೆಗೆ ಅವನಿಗೆ ಒಂದು ಸರಿಯಾದ ಪಾಠ ಕಲಿಸುವುದಕ್ಕೆ ಅವಕಾಶ ಮಾಡಿದ ರೀತಿಯಲ್ಲಿ ಸರಿ ಹೋಗಿ ಬಾ ಅಂದ ಅರ್ಜುನ ಹೊರಟಿದ್ದಾನೆ.

ಒಂದು ಮಾತನ್ನು ಗಮನಿಸಿ ಆಗಿನ ಕಾಲದ ರಾಜರಿಗೆ ಪ್ರಜೆಗಳ ಬಗ್ಗೆ ಇರುವಂತಹ ಏನು ಒಂದು ಪ್ರೀತಿ ದೇವರು ಅಂತ ತೆಗೆದುಕೊಂಡರೆ ಅದಕ್ಕೆ ಮಾತಾಡಲಿಕ್ಕೆ ಬರುವುದಿಲ್ಲ ಅದು ಬಹಳ ದೊಡ್ಡ ವಿಷಯ ಒಬ್ಬ ರಾಜರು ಜವಾಬ್ದಾರಿಯ ವ್ಯಕ್ತಿಗಳು ಅಂತ ಇಷ್ಟೇ ತಿಳಿದುಕೊಳ್ಳಿ. ಶ್ರೀಕೃಷ್ಣ ಪರಮಾತ್ಮ ಒಬ್ಬ ಬ್ರಾಹ್ಮಣನ ಒಂದು ಮಗುವಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅಂತಹ ಮಹಾ ಮಹಾ ಮಹಾ ಮಹಾಪರಾಕ್ರಮಿಗಳಾದ ಎಲ್ಲ ದೊಡ್ಡ ದೊಡ್ಡ ದೇವಾಂಶ ಸಂಭೂತರಾದ ಎಲ್ಲ ಯಾದವರನ್ನ ಕೊಟ್ಟು ಕಳಿಸುತ್ತಾನೆ. ಈ ಕಡೆಗೆ ಯಜ್ಞ ನಡೆಯುತ್ತ ಇದೆ ಹೇ ಯಜ್ಞ ನಡೆಯುತ್ತ ಇದೆ ಈಗ ನನಗೆ ಬರಲಿಕ್ಕೆ ಆಗುವುದಿಲ್ಲ, ನಮ್ಮ ಬಳಗದವರಿಗೂ ಯಾರಿಗೂ ಬರಲಿಕ್ಕೆ ಆಗುವುದಿಲ್ಲ ಬೇಕು ಅಂದರೆ ಯಾರಾದರೂ ಒಬ್ಬರು ಇಬ್ಬರು ಸೈನಿಕರನ್ನ ಖಾಲಿ ಇದ್ದರೆ ಕಳಿಸುತ್ತೇನೆ ಇದೆಲ್ಲ ಬೇರೆಯವರು ಆಡುವ ಮಾತುಗಳು. ಎಲ್ಲ ಯಾದವರನ್ನು ಕೊಟ್ಟು ಕಳಿಸಿದ್ದಾನೆ ಅರ್ಜುನನ ಜೊತೆಗೆ ಸಹಾಯಕ್ಕೆ ಒಬ್ಬ ಬ್ರಾಹ್ಮಣನ ಅದು ದೊಡ್ಡ ಧರ್ಮ ಇಲ್ಲಿ ನಡೆಯುತ್ತಿದೆ ಯಜ್ಞ ಯಾಗ ಅದು ದೊಡ್ಡದಲ್ಲ, ಅದು ದೊಡ್ಡ ಕೆಲಸ ಅಂತ. ಆದರೆ ಒಂದು ಮಾತ್ರ ಬಲರಾಮ ದೇವರನ್ನ, ಪ್ರದ್ಯುಮ್ನನನ್ನ, ಅನಿರುದ್ಧನನ್ನ ಮೂರು ಜನರನ್ನು ಮಾತ್ರ ಕಳಿಸಲಿಲ್ಲ ಕೃಷ್ಣ ಯಾಕೆ ಅಂದರೆ ಜವಾಬ್ದಾರಿ ಏನು, ಕರ್ತವ್ಯ ಏನು ಇರಬೇಕು ರಾಜರದು ಅಂತ ರಾಜರಿಗೆ ಒಂದು ಪಾಠ ಕಲಿಸಲಿಕ್ಕೆ ಇಡೀ ಸೈನ್ಯವನ್ನೇ ಕೊಟ್ಟುಕಳಿಸಿದ, ಯಾದವರನ್ನು ಕಳಿಸಿದ. ಆದರೆ ಈ ಸಂದರ್ಭದಲ್ಲಿ ಅರ್ಜುನ ಸಕ್ಸೆಸ್ ಆಗುವುದಿಲ್ಲ ವಾಪಸ್ಸು ಬರುತ್ತಾನೆ ಆ ವಾಪಸ್ಸು ತಲೆ ತಗ್ಗಿಸಿಕೊಂಡು ಬರುವಾಗ ಅರ್ಜುನನ ಜೊತೆಗೆ ಬಲರಾಮ, ಪ್ರದ್ಯುಮ್ನ,

ಅನಿರುದ್ಧರು ತಲೆ ತಗ್ಗಿಸಿಕೊಂಡು ಬರುವುದು ಬೇಡ, ಅವರಿಗೆ ಅವಮಾನ ಮಾಡಬಾರದು ನಾನು ಯಾಕೆಂದರೆ ಈ ಸಂದರ್ಭದಲ್ಲಿ ಅವರಿಗೆ ಅಹಂಕಾರ ಬಂದಿಲ್ಲ. ಅರ್ಜುನನಿಗೆ ಅಹಂಕಾರ ಬಂದಿದೆ ಅವನೊಬ್ಬ ಪಾಠ ಕಲಿಯಲಿ ಉಳಿದವರು ಸುಮ್ಮನೆ ಸಹಾಯಕ್ಕೆ ಅಂತ ಹೋಗಲಿ ಅರ್ಜುನನಂತಹ ಮಹಾಪರಾಕ್ರಮಿಗೆ ಆಗದೇ ಇರುವಾಗ ನಾವೇನು ಅಂತ ಉಳಿದವರು ಸುಮ್ಮನೆ ಬಂದು ಬಿಡುತ್ತಾರೆ ಅದೇನು ದೊಡ್ಡ ಅವಮಾನ ಅಲ್ಲ. ಅದಕ್ಕೋಸ್ಕರ ಪ್ರದ್ಯುಮ್ನ ಅದರೆ ಅರ್ಜುನನಿಗೆ ಸಮಾನ ಕಕ್ಷೆಯಲ್ಲಿ ಬರುತ್ತಾನೆ, ಬಲರಾಮ ದೇವರಂತೂ ಉತ್ತಮರಾಗುತ್ತಾರೆ, ಅನಿರುದ್ಧ ಚಿಕ್ಕವನಾದರೂ ಅವನ ಮೇಲೆ ಪ್ರೀತಿ ಬಹಳ ಅನ್ನುವುದಕ್ಕೋಸ್ಕರ ಈ ಸಂದರ್ಭದಲ್ಲಿ ಕೃಷ್ಣ ಪರಮಾತ್ಮ ಆ ಮೂವರನ್ನು ಕೊಟ್ಟು ಕಳಿಸಲಿಲ್ಲ. ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಮಹಾಭಾರತದ ತಾತ್ಪರ್ಯ ನಿರ್ಣಯದ ಸೂಕ್ಷ್ಮ ಹೇಗೆ ಇರುತ್ತದೆ ನೋಡಿ.

ಋತೇ ರಾಮಂ ಮಹಾಬಾಹುಂ ಪ್ರದ್ಯುಮ್ನಂ ಚ ಮಹಾಬಲಮ್ ॥ (111.17 ವಿಷ್ಣುಪರ್ವ)

ಹರಿವಂಶ ಹೇಳುತ್ತದೆ ಇವರಿಬ್ಬರನ್ನು ಕಳಿಸಲಿಲ್ಲ ಅಂತ ಬಲರಾಮ ಹಾಗೂ ಪ್ರದ್ಯುಮ್ನರನ್ನು ಅಂತ ಒಂದು **'ಚ'** ಅಂತ ಶಬ್ದವನ್ನು ಇಡುತ್ತದೆ ಹರಿವಂಶ ಆ **'ಚ'** ಎಂಬ ಶಬ್ದದಿಂದ ಅನಿರುದ್ಧನನ್ನು ತೆಗೆದುಕೊಳ್ಳಬೇಕು ಅಂತ ಆಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಹೇಳುತ್ತಾರೆ ಎಲ್ಲಿಂದ ಬಂದ ಈ ಅನಿರುದ್ಧ ಅಂತ ಗೊತ್ತಾಗುವುದಿಲ್ಲ ಅವನು **'ಚ'**.

ಋತೇ ರಾಮಂ ಮಹಾಬಾಹುಂ ಪ್ರದ್ಯುಮ್ನಂ ಚ ಮಹಾಬಲಮ್ ॥ (111.17 ವಿಷ್ಣುಪರ್ವ)

ಕಳಿಸಲಿಲ್ಲ, ಉಳಿದವರನ್ನೆಲ್ಲಾ ಕರೆದುಕೊಂಡು ಹೋದ ಆ ಗ್ರಾಮಕ್ಕೆ ಹೋಗಿದ್ದಾರೆ. ಪ್ರಸವ ಸಮಯ ಬಂತು ಏನು ಅರ್ಜುನನ ಪರಾಕ್ರಮ ಒಂದು ಸಣ್ಣ ನೀರಿನ ಹನಿ ಬಿದ್ದಿರಬಾರದು, ಅಷ್ಟು ಮಾತ್ರ ಅಲ್ಲ ಗಾಳಿ ಒಳಗೆ ಬಂದಿರಬಾರದು ಅಷ್ಟು ಭದ್ರವಾದ ಬಾಣದ ಶಾಲೆಯನ್ನ ನಿರ್ಮಾಣ ಮಾಡುತ್ತಾನೆ. ಬಾಣ ಪಂಜರವನ್ನು ನಿರ್ಮಾಣ ಮಾಡುತ್ತಾನೆ ಯಾವ ಭೂತವೂ ಒಳಗೆ ಬಂದಿರಬಾರದು ಅದನ್ನು ತೆಗೆದುಕೊಂಡು ಹೋಗಿರಬಾರದು ಅಂತ. ತನ್ನ ಎಲ್ಲಾ ಮಂತ್ರವನ್ನು ಪ್ರಯೋಗ ಮಾಡುತ್ತಾನೆ ಮಂತ್ರ ವಿದ್ಯೆ, ಧನುರ್ ವಿದ್ಯೆ ಎಲ್ಲವನ್ನು ಪ್ರಯೋಗಿಸಿ ಅಷ್ಟು ಸುಭದ್ರ ವ್ಯವಸ್ಥೆಯನ್ನು ಮಾಡಿಟ್ಟ ಅರ್ಜುನ. ಪ್ರಸವದ ಸಮಯ ಬಂತು ಬಂತು ಎಚ್ಚರಿಕೆ ಎಚ್ಚರಿಕೆ ಅಂತ ಬ್ರಾಹ್ಮಣ ಹೇಳುತ್ತ ಇದ್ದಾನೆ ಹೇಳುವುದರೊಳಗೆ ಪ್ರಸವ ಆಯಿತು ಮಗುವಿನ ಅಪಹರಣವೂ ಆಗಿ ಹೋಯಿತು ಎಲ್ಲಿಂದ ಬಂದರು, ಯಾರು ತೆಗೆದುಕೊಂಡು ಹೋದರು ಗೊತ್ತಾಗುತ್ತ ಇಲ್ಲ ಕೂಸಿನ ಧ್ವನಿ ಕೇಳಿಸುತ್ತಾ ಇದೆ. ಹರಿವಂಶ ಆ ಕೂಸು ಹೇಗೆ ಅತ್ತಿತು ಅಂತ ಅನುಕರಣೆಯನ್ನು ಮಾಡುತ್ತದೆ **'ಓಂಹೇತಿ ಹ್ರಿಯಮಾಣಸ್ಯ'**[1] ಓಂಹ ಓಂಹ ಅಂತ ಆ ಮಗುವಿನ ಅಳುವಿನ ಧ್ವನಿ ಕೇಳಿಸುತ್ತಾ ಇದೆ ಆಕಾಶ ಮಾರ್ಗದಲ್ಲಿ ಇದ್ದಕ್ಕಿದ್ದ ಹಾಗೆ ಧ್ವನಿ ಮಾಯವಾಗಿ ಹೋಯಿತು ಎಲ್ಲಿ ಹೋಯಿತು ಗೊತ್ತಾಗಲಿಲ್ಲ. ಆಗ ಬ್ರಾಹ್ಮಣ ಚೆನ್ನಾಗಿ ಬೈದಿದ್ದಾನೆ ಅರ್ಜುನನಿಗೆ ಏನೇನೂ ದಾಕ್ಷಿಣ್ಯ ಇಟ್ಟುಕೊಂಡಿಲ್ಲ ಇಷ್ಟೇ ಮಾಡಿಸಬೇಕಾಗಿತ್ತು ಕೃಷ್ಣನಿಗೆ ಅಷ್ಟಕ್ಕೆ ಇದೆಲ್ಲ ನಾಟಕ. ನಾನು ಮಹಾಪರಾಕ್ರಮಿ, ನನ್ನ ಸಮಾನ ಯಾರಿಲ್ಲ, ನಾನು ಸ್ವತಂತ್ರ ಅನ್ನುವ ಏನೊಂದು ತಪ್ಪು ಕಲ್ಪನೆ ಸ್ವಾಭಾವಿಕವಲ್ಲದಿದ್ದರೂ ಅಸುರರ ಆವೇಶದಿಂದ ಬಂದಿತ್ತೋ ಅದನ್ನು ಸ್ವಚ್ಛ ಮಾಡಬೇಕಾಗಿದೆ ಕೃಷ್ಣನಿಗೆ. ನಿರ್ಮಲವಾದ ಸ್ವಾಭಾವಿಕವಾದ ಅರ್ಜುನನ ಭಕ್ತಿಯ ಅಭಿವ್ಯಕ್ತಿಯನ್ನು ಮಾಡಬೇಕಾಗಿದೆ ಅದಕ್ಕೋಸ್ಕರನೇ ಆ ಬ್ರಾಹ್ಮಣದಿಂದ ಚೆನ್ನಾಗಿ ಬೈಸಿದ್ದಾನೆ ಏನು ಉತ್ತರ ಕೊಡಲಿಕ್ಕೆ ಆಗಲಿಲ್ಲ.

1. 112.10 ವಿಷ್ಣುಪರ್ವ

ಒಬ್ಬ ವ್ಯಕ್ತಿ ಧರ್ಮಾಚರಣೆಯನ್ನ ಮಾಡುವವ ಅವನಿಗೆ ಬಂದ ಅಡ್ಡಿ ಆತಂಕಗಳನ್ನ ವಿಘ್ನಗಳನ್ನ ಪರಿಹಾರ ಮಾಡಿ ನಿರ್ವಿಘ್ನವಾಗಿ ಅವನು ತನ್ನ ಧರ್ಮವನ್ನು ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟರೆ ಅವನು ಮಾಡುವ ಧರ್ಮದೊಳಗಿನ ನಾಲ್ಕನೆಯ ಒಂದಂಶ ಉಪಕಾರ ಮಾಡಿದವನಿಗೆ ಬರುತ್ತೆ, ವಿಪರೀತವಾಗಿ ಸಹಾಯ ಮಾಡದೇ ಇದ್ದರೆ ಅವನ ಪಾಪದೊಳಗಿನ ನಾಲ್ಕನೆಯ ಒಂದು ಭಾಗ ಬರಬೇಕಾಗುತ್ತೆ. ನೀನು ಮಹಾ ಪಾಪಿಷ್ಟನಾಗಿದ್ದಿ, ಪುಣ್ಯವಂತನಲ್ಲ, ನೀನು ಮಹಾ ಪಾಪಿಷ್ಟ ನನ್ನನ್ನು ರಕ್ಷಣೆ ಮಾಡುತ್ತೀನಿ ಅಂತ ಹೇಳಿ ಕೃಷ್ಣನನ್ನ ಬರುವವನನ್ನು ನಿಲ್ಲಿಸಿ ನೀನು ದೊಡ್ಡಸ್ತಿಕೆಯನ್ನು ತೋರಿಸಿ ಬಂದು ನನ್ನ ಮಗುವನ್ನು ಕಳೆದು ಬಿಟ್ಟಿ ಅಂತ ಚೆನ್ನಾಗಿ ನಿಂದೆಯನ್ನು ಮಾಡಿದ್ದಾನೆ. ಅರ್ಜುನನಿಗೆ ಏನು ಉತ್ತರ ಕೊಡಲಿಕ್ಕೆ ಗೊತ್ತಾಗಿಲ್ಲ ಅಷ್ಟೇ ಅಲ್ಲ ಒಂದು ವೇಳೆ ನಿನ್ನ ಮಗನನ್ನು ರಕ್ಷಣೆ ಮಾಡದೇ ಇದ್ದರೆ ನಾನು ಅಗ್ನಿಯನ್ನು ಪ್ರವೇಶ ಮಾಡುತ್ತೇನೆ ಅಂತ ಬೇರೆ ಪ್ರತಿಜ್ಞೆ ಮಾಡಿದ್ದ. ಅಲ್ಲಿಯೇ ಬ್ರಾಹ್ಮಣನ ಮನೆಯ ಮುಂದೇನೆ ಒಂದು ದೊಡ್ಡದಾದ ಅಗ್ನಿಕುಂಡವನ್ನು ನಿರ್ಮಾಣ ಮಾಡಿ ಅಗ್ನಿ ಪ್ರವೇಶ ಮಾಡಿದ್ದರೆ ಗೋವಿಂದ ಕೃಷ್ಣಾರ್ಪಣನೇ.

ಅರ್ಜುನನೂ ಭಾರೀ ಬುದ್ಧಿವಂತ ಅಲ್ಲಿಂದ ಇಲ್ಲಿಯವರೆಗೆ ಬಂದ ಕೃಷ್ಣನ ಹತ್ತಿರ. ಕೃಷ್ಣನ ಹತ್ತಿರ ಬಂದು ಆ ಕೃಷ್ಣನ ಎದುರಿಗೆ ಒಂದು ಅಗ್ನಿ ಕುಂಡ ತಯಾರು ಮಾಡಿ ಅಗ್ನಿ ಪ್ರವೇಶ ಅಗ್ನಿ ಪ್ರವೇಶ ಅಂತ ಘೋಷಣೆ ಶುರುವು ಮಾಡಿದ ಅಂದರೆ ಕೃಷ್ಣ ಬೇಡ ಅನ್ನುತ್ತಾನೆ ನಿಂತು ಬಿಡೋಣ ಅಂತ ಗೊತ್ತು ಅಷ್ಟು ಸಾಮಾನ್ಯ ವ್ಯಕ್ತಿ ಅರ್ಜುನ ಅಂತ ತಿಳಿದುಕೊಳ್ಳಬೇಡಿ. ಮಹಾಧೈರ್ಯವಂತ, ಮಹಾಬಲಿಷ್ಠ, ಮಹಾಪರಾಕ್ರಮಿ ಇಂದ್ರಾವತರ ಕೇಳಬೇಕೇ ಆದರೆ ಮಹಾ ಪ್ರಯಾಣ ಇದು ಅಗ್ನಿ ಪ್ರವೇಶ ಮಾಡಿ ಈ ದೇಹ ತ್ಯಾಗ ಹೊರಡುವುದು ಅಂದರೆ ಇದು ಒಂದು ದೊಡ್ಡದಾದಂತಹ ಪ್ರಸ್ಥಾನ, ಕೃಷ್ಣನ ಆಜ್ಞೆ ಇಲ್ಲದೇ ಹೇಗೆ ಹೋಗುವುದು ಅನ್ನುವ ಪ್ರಾಮಾಣಿಕವಾದ ಚಿಂತನೆ ಹೊರತು ಈ ತರಹದ ಭಯದಿಂದ ಅಂತ ಆಲೋಚನೆ ಮಾಡಬೇಡಿ. ಶ್ರೀಕೃಷ್ಣ ಪರಮಾತ್ಮನಿಗೆ ಹೇಳಿದ ನಾನು ಇನ್ನು ಅಗ್ನಿ ಪ್ರವೇಶ ಮಾಡುತ್ತೇನೆ ಅನುಜ್ಞೆಯನ್ನು ಕೊಡಬೇಕು ಅಂತ ಅಷ್ಟೆಲ್ಲ ಸುಲಭ ಅಂತ ತಿಳಿದುಕೊಂಡಿದ್ದೀಯಾ ಈ ಸಾಧನ ಶರೀರ ಆ ರೀತಿಯಾಗಿ ವ್ಯರ್ಥವಾಗಿ ಹಾಳು ಮಾಡಿಕೊಳ್ಳುವುದಲ್ಲ, ನಾನು ನಿನಗೆ ಹೇಳಿದ್ದೆ ನಿನ್ನಿಂದ ಆಗುವುದಿಲ್ಲ ಇಂತಹ ಪ್ರತಿಜ್ಞೆಯನ್ನೆಲ್ಲ ಮಾಡಬೇಡ ಅಂತ ಕೇಳಲಿಲ್ಲ ನಾನು ಹೇಳಿದ್ದನ್ನು ಕೇಳು ಸಾಕು. ನಾನು ಹೇಳಿದ್ದನ್ನು ಕೇಳಿದರೆ ನಿನ್ನ ಉದ್ಧಾರ ತಲೆಗೆ ಬಂದಂತೆ ಹಠ ಮಾಡಿ ಪ್ರತಿಜ್ಞೆಯನ್ನು ಮಾಡಿ ಈ ತರಹದ ಅಗ್ನಿ ಪ್ರವೇಶಾದಿಗಳನ್ನು ಮಾಡುವುದು ದೊಡ್ಡಸ್ತಿಕೆ ಅಲ್ಲ. ಯಾವ ನನ್ನ ಮುಖದಿಂದ ಅಗ್ನಿ ಬಂದ ಅಂತಹ ನನ್ನ ಮುಖದಿಂದ ಬರುವ ವಾಣಿಯನ್ನು ಚೆನ್ನಾಗಿ ನೀನು ಶ್ರದ್ಧೆಯಿಂದ ಕೇಳಿ ನನ್ನ ನುಡಿಯಂತೆ ನೀನು ನಡೆದರೆ ನಿನಗೆ ಯಾವ ಸಮಸ್ಯೆಯೂ ಜೀವನದಲ್ಲಿ ಇಲ್ಲ. ಅದು ಬಿಟ್ಟರೆ ನನ್ನ ಮುಖದಿಂದ ಬಂದ ನುಡಿಯಂತೆ ನಡೆಯದಿದ್ದರೆ ನನ್ನ ಮುಖದಿಂದಲೇ ಬಂದ ಅಗ್ನಿಯಲ್ಲಿ ಪ್ರವೇಶ ಮಾಡುವ ಪ್ರಸಂಗ ಬಂದೀತು ಈ ಘೋರ ದುರಂತಕ್ಕೆ ಒಳಗಾಗುವ ಬದಲು ಆ ಬುದ್ಧಿವಂತಿಕೆಯ ಕೆಲಸ ಮಾಡಬೇಕಾಗಿತ್ತು, ಪರವಾಗಿಲ್ಲ ಈಗಾದರೂ ಮಾಡು ರಥವನ್ನು ತೆಗೆದುಕೊಂಡು ಬಾ ಅಂತ ಹೇಳಿದ. ಅಲ್ಲ ಯಜ್ಞ ಇನ್ನೂ ಮುಗಿದಿಲ್ಲ ಸುಮ್ಮನೆ ಇರು ಮಾತನಾಡಬೇಡ **'ಯಜ್ಞೋ ಯಜ್ಞಪತಿರ್ಯಜ್ವಾ'**[1] ನಾನು ಮಾತನಾಡುತ್ತ ಇದ್ದೇನೆ ರಥವನ್ನು ತೆಗೆದುಕೊಂಡು ಬಾ ಅಂದ, ರಥ ಬಂತು ದಾರುಕ ಅಂತ ಶ್ರೀಕೃಷ್ಣ ಪರಮಾತ್ಮನ ಸಾರಥಿ, ಇಳಿ ಕೆಳಗೆ ಅಂದ, ದಾರುಕ ಕೈಜೋಡಿಸಿ ಕೆಳಗೆ ನಿಂತ. ಅರ್ಜುನ ನೀನು ಸಾರಥಿಯಾಗಿ ಕೂಡು ಅಂತ ಅರ್ಜುನನನ್ನು ಸಾರಥಿಯನ್ನಾಗಿ ಮಾಡಿಕೊಂಡು ಸರ್ವೋತ್ತಮನಾದ ಶ್ರೀಕೃಷ್ಣ ಪರಮಾತ್ಮನ ದಾಸಾನುದಾಸ ಅರ್ಜುನ ಅವನು ನಿಜವಾದ ಸಾರಥಿ, ಕೃಷ್ಣನೇ ರಥಿಕ ಅವನೇ ಸರ್ವೋತ್ತಮ ಅನ್ನುವ

1. 104 ವಿಷ್ಣುಸಹಸ್ರನಾಮ

ಸತ್ಯ ಸಂಗತಿಯನ್ನ ಮೊದಲೇ ಜಗತ್ತಿಗೆ ತೋರಿಸಿದ. ಮುಂದೆ ಮಹಾಭಾರತದ ಯುದ್ಧದ ಕಾಲದಲ್ಲಿ ಶ್ರೀಕೃಷ್ಣ ಪರಮಾತ್ಮ ಸಾರಥಿಯಾದದ್ದು, ಅರ್ಜುನ ರಥಿಕನಾಗಿ ಕುಳಿತದ್ದು ಅದು ಸುಮ್ಮನೆ ಪ್ರೀತಿಯಿಂದ ಮಕ್ಕಳನ್ನ ಹೆಗಲ ಮೇಲೆ ಕೂಡಿಸಿಕೊಂಡಂತೆ ಅಷ್ಟೇ ತಂದೆ ತಾಯಿಗಳು, ನಿಜವಾಗಿ ಸೇವೆ ಮಾಡಬೇಕಾದದ್ದು ಅರ್ಜುನನೇ ಅದನ್ನು ಮೊದಲು ತೋರಿಸಿಕೊಟ್ಟ. ಅರ್ಜುನ ಸಾರಥಿಯಾಗಿದ್ದಾನೆ ಶ್ರೀಕೃಷ್ಣ ಪರಮಾತ್ಮ ರಥಿಕನಾಗಿ ಕುಳಿತ ಶೈಬ್ಯ, ಮೇಘ, ಪುಷ್ಪ, ಬಲಾಹಕ ಕುದುರೆಗಳು ಕೃಷ್ಣ ಪರಮಾತ್ಮನ ದಿವ್ಯವಾದಂತಹ ಅನುಗ್ರಹದ ಶಕ್ತಿ ಕೇಳಬೇಕೇ ಉತ್ತರ ದಿಕ್ಕಿಗೆ ಅಭಿಮುಖವಾಗಿ ಹೊರಟಿದೆ ರಥ.

ಸಪ್ತದ್ವೀಪ, ಸಪ್ತಸಾಗರಗಳನ್ನು ದಾಟಿ ಹೋಗುತ್ತ ಇದ್ದಾನೆ. ಸಮುದ್ರಗಳು ಬಂದಾಗ ಸರ್ವೋತ್ತಮತ್ವವನ್ನು ಪರಮಾತ್ಮ ಹೇಗೆ ತೋರಿಸುತ್ತಾನೆ ನೋಡಿ ವರುಣ ಅಂದ ಅಲ್ಲಿ ಸುಮ್ಮನೆ ಮಲಗಿದ ರಾಮಾವತಾರದಲ್ಲಿ, ಇಲ್ಲಿ ಮಲಗುವುದು ಗಿಲುಗುವುದು ಏನೂ ಇಲ್ಲೇ ಇಲ್ಲ. ಗರ್ಜನೆ ಮಾಡಿದ ವರುಣ ಅಂದಾಗ ಗದ ಗದ ನಡುಗುತ್ತಾ ಬಂದು ನಿಂತ ವರುಣ ಕೈಜೋಡಿಸಿಕೊಂಡು ಸ್ವಾಮಿ ಅಪ್ಪಣೆ ಆಗಬೇಕು, ರಥ ಹೋಗಬೇಕಾಗಿದೆ ದಾರಿ ಬಿಡು ಅಂದ. ಸಮುದ್ರ ಸೃಷ್ಟಿ ಮಾಡಿದ್ದು ನೀನೇ ಅಲ್ಲ ಸ್ವಾಮಿ ನಾನು ಯಾರು, ನಿನ್ನದೇ ಸೃಷ್ಟಿ ನಿನ್ನದೇ ಅಪ್ಪಣೆ ಈ ರೀತಿ ನೀರು ಇರಬೇಕು ಅಂತ. ನೀರು ಇದೆ ಏನು ಮಾಡಬೇಕು ಅಂತೀಯ ದಾರಿ ಬಿಡು ಅಂತ ಬಿಟ್ಟು ಬಿಟ್ಟರೆ ನಾನು ದಾರಿಯನ್ನು ಮಾಡಿದೆ ಅಂದರೆ ಅಸುರರೆಲ್ಲ ಬರುತ್ತಾರೆ ಪೀಡೆಯನ್ನು ಕೊಡುತ್ತಾರೆ ಇದೆಲ್ಲಾ ದುರ್ಗಗಳ ರೂಪದಲ್ಲಿ ನೀನೇ ಸೃಷ್ಟಿಯನ್ನು ಮಾಡಿದ್ದು ಅಂತ ಅದೆಲ್ಲ ಇರಲಿ ಈಗ ದಾರಿ ಬೇಕು. ದಾರಿ ಬೇಕು ಅಂದರೆ ಸರಿ ಹಾಗಾದರೆ ನಿನ್ನ ಅಪ್ಪಣೆಯೇ ಹಾಗಿದ್ದರೆ ನಾನು ಒಣಗಿಸಿ ಬಿಡುತ್ತೇನೆ ಇಷ್ಟು ಸ್ಥಳವನ್ನ ರಥ ಹೋಗಬಹುದು ಬರಬಹುದು ನಿನ್ನದು ಎಲ್ಲ ಕೆಲಸ ಆದಮೇಲೆ ಮತ್ತೆ ನಾನು ನೀರು ತುಂಬಿಕೊಳ್ಳುತ್ತೇನೆ. ಅದೆಲ್ಲಾ ಒಣಗಿಸತಕ್ಕದ್ದಲ್ಲ, ಒಣಗಿಸಿದರೆ ಕೆಳಗಿನ ರತ್ನಗಳು ನೋಡಿ, ಅದೆಲ್ಲ ನಿನ್ನದಲ್ಲ ಅದು ನಿನ್ನದಾ ನಿನ್ನ ಅಪ್ಪನದಾ ಅಂತ ಕೇಳುತ್ತ ಇರುತ್ತಾರಲ್ಲ ಆ ತರಹ ಹಾಗಲ್ಲ ಅದು ನಿನ್ನದಲ್ಲ, ಅದು ನಿನ್ನ ಅಪ್ಪನದೇ ಅಂದರೆ ನನ್ನದೇ ಅದು, ನಿನ್ನದಲ್ಲ ಅದು ನಿನ್ನ ಅಪ್ಪನದು ನನ್ನ ಆಸ್ತಿ ಅದು ಆ ಮುತ್ತು ರತ್ನಗಳನ್ನೆಲ್ಲ ಜನರೆಲ್ಲ ಅಪಹಾರ ಮಾಡಿಕೊಂಡು ಹೋಗಿ ಬಿಡುತ್ತಾರೆ ಹಾಗೆಲ್ಲ ಒಣಗಿಸುವುದು ಬೇಡ. ಮತ್ತೆ ಏನು ಮಾಡು ಅಂತೀಯಾ ನೀರು ಇದ್ದ ಹಾಗೆ ಇರಬೇಕು ರಥ ಹೋಗಬೇಕು ಆ ರೀತಿ ನೀರು ಗಟ್ಟಿಯಾಗಬೇಕು ನೆಲದ ಹಾಗೆ ಸ್ತಂಭನ ಮಾಡು ಅಂದ ಸರಿ ಅಂತ ವರುಣ ದೇವರು ಸ್ತಂಭನ ಮಾಡಿದ್ದಾರೆ ನೀರಿನ ಮೇಲೆ ಅನಾಯಾಸವಾಗಿ ರಥ ಹೋಗಿದೆ.

ಒಂದು ಲಕ್ಷ ಯೋಜನದ ಜಂಬೂ ದ್ವೀಪ, ಒಂದು ಲಕ್ಷ ಯೋಜನ ಲವಣ ಸಮುದ್ರ ಜಂಬು, ಪ್ಲಕ್ಷ, ಕುಶ, ಶಾಲ್ಮಲಿ, ಕ್ರೌಂಚ, ಶಾಕ, ಪುಷ್ಕರ ಎಲ್ಲಾ ದ್ವೀಪಗಳನ್ನು ದಾಟಿದ. ಲವಣೋದ, ಸುರೋದ, ಇಕ್ಷುಸೋದ, ಘೃತೋದ, ದಧಿಮಂಡೋದ, ಕ್ಷೀರೋದ, ಶುದ್ಧೋದ ಇಷ್ಟು ದಾಟಿ ಬರುವುದರೊಳಗೆ ಎರಡು ಕೋಟಿ ಐವತ್ತುನಾಲ್ಕು ಲಕ್ಷ ಯೋಜನಗಳನ್ನ ದಾಟಿ ಬಂದ. ಅದನ್ನು ಬಂದಾದ ಮೇಲೆ ತೊಂಭತ್ತಾರು ಲಕ್ಷ ಯೋಜನ ಬಂಗಾರದ ಭೂಮಿ ಅದನ್ನೂ ದಾಟಿದ ಅದಾದ ಮೇಲೆ ಐವತ್ತು ಲಕ್ಷ ಐವತ್ತು ಸಾವಿರ ಲೋಕಾಲೋಕ ಪರ್ವತ ಪ್ರದೇಶ ಅದನ್ನೂ ದಾಟುತ್ತಾನೆ ಮಧ್ಯದಲ್ಲಿ ಪರ್ವತಗಳೆಲ್ಲ ಬರುತ್ತವೆ ಇಲ್ಲಿ. ದ್ವೀಪ ಸಮುದ್ರಗಳನ್ನು ದಾಟುವಾಗ ದ್ವೀಪದಲ್ಲಿ ಮಧ್ಯ ಮಧ್ಯದೊಳಗೆ ಮರ್ಯಾದಾ ಗಿರಿಗಳು ಅಂತ ಬರುತ್ತವೆ ಆ ಪರ್ವತಗಳು ಅಂತ ಬರುತ್ತವೆ. ಪರ್ವತಗಳೇ ಅಂತ ಗದ್ದರಿಸಿದ ನಮಗೆ ಧ್ವನಿ ಇಲ್ಲ ಒದರುವುದಕ್ಕೆ ಕೃಷ್ಣ ಗದ್ದರಿಸಿದ ನೋಡಿ ಪರ್ವತಗಳೇ ಅಂದರೆ ಎಲ್ಲಾ ಪರ್ವತಾಭಿಮಾನಿ ದೇವತೆಗಳು ನಡುಗಿ ಎದುರಿಗೆ ಬಂದು ನಿಂತರು ಅಪ್ಪಣೆ ಅಂದರು ದಾರಿ ಅಂದ ಕೃಷ್ಣ ಅಂದಾಕ್ಷಣಕ್ಕೆ ಪರ್ವತಗಳೆಲ್ಲ ಮಾಯ. ಒಂದು ಗುಹೆ ಮಾಡಿರಿ ಮಧ್ಯದೊಳಗೆ ಹೋಗುತ್ತೇನೆ ಅಂತ ಕೃಷ್ಣ ಅಂದರೆ ಸ್ವಾಮಿ ಅದೆಲ್ಲಾ

ಬೇರೆಯವರಿಗೆ ನಿನಗೆಲ್ಲಿ ಗುಹೆ ಅಂದರು ಮಟಾ ಮಾಯಾ ಪರ್ವತಗಳೇ ಇಲ್ಲ ಮಧ್ಯದಲ್ಲಿ ಕೃಷ್ಣ ಆಚೆ ದಾಟುವವರೆಗೆ. ಹಿಂದೆ ಕೇಳುತ್ತಾ ಇದ್ದೆವು ಮೈಸೂರು ಮಹಾರಾಜರು ಮೈಸೂರಿಂದ ಬೆಂಗಳೂರಿಗೆ ಹೊರಟರೆ ಬೆಂಗಳೂರಿನಿಂದ ಮೈಸೂರಿನವರೆಗೆ ಯಾವ ವೆಹಿಕಲ್ಸಗಳು ಬರುತ್ತಾ ಇರಲಿಲ್ಲವಂತೆ ಪೂರ್ಣ ಮೈಸೂರು ಮಹಾರಾಜರು ಬೆಂಗಳೂರು ಅರಮನೆ ಸೇರಿದ ಮೇಲೆ ಬೆಂಗಳೂರಿನಿಂದ ವೇಹಿಕಲ್ಲುಗಳು ಹೊರಡಬೇಕು. ಇದೇನಿದು ಅನಂತ ಜಗನ್ನಿಯಾಮಕನಾದಂತಹ ಸ್ವಾಮಿ ಬರುತ್ತಾನೆ ಅಂದರೆ ಪರ್ವತಗಳೇ ಮಧ್ಯದಲ್ಲಿ ಸಂಪೂರ್ಣ **'ಅಂತರ್ಧಧೀರೇ'** ಹರಿವಂಶ ವರ್ಣನೆ ಮಾಡುತ್ತದೆ.

ತತ್ಸೈವಾನ್ತರ್ಹಿತಾಃ ಸರ್ವೇ ತದಾಶ್ಚರ್ಯತರಂ ಮಮ । (113.19 ವಿಷ್ಣುಪರ್ವ)

ಅರ್ಜುನ ಹೇಳುತ್ತಾ ಇದ್ದಾನೆ ಭೀಷ್ಮಾಚಾರ್ಯರ ಎದುರಿನಲ್ಲಿ ಅತ್ಯಾಶ್ಚರ್ಯವಾಯಿತು ನನಗೆ ಇದ್ದಕ್ಕಿದ್ದ ಹಾಗೆ ಪರ್ವತಗಳೆಲ್ಲ ಮಟಾಮಾಯ ಹೋಗುತ್ತಾ ಇದ್ದಾನೆ ಕೃಷ್ಣ ಪರಮಾತ್ಮ, ಸಾರಥಿ ಅರ್ಜುನನ ಶಕ್ತಿ ಎಷ್ಟು ನೋಡಿ ಕೃಷ್ಣ ಕೊಟ್ಟಿದ್ದಾನೆ ಆ ಶಕ್ತಿಯನ್ನು. ರಥ ಹೋಗುತ್ತಾ ಇದೆ ವೇಗದಿಂದ ಆ ಐವತ್ತೈದು ಲಕ್ಷ ಯೋಜನದ ಲೋಕಾಲೋಕ ಪರ್ವತ ಪ್ರದೇಶವನ್ನೂ ದಾಟಿದ್ದಾರೆ. ಅದಾದ ಮೇಲೆ ಆರು ಕೋಟಿ ತೊಂಭತ್ತೊಂಭತ್ತು ಲಕ್ಷ ಯೋಜನದ ಅಂಧಃತಮಸ್ಸು ಕತ್ತಲೇ ಅಂದರೆ ಕತ್ತಲೇ ಕಗ್ಗತ್ತಲೇ ಎಂತಹ ಕತ್ತಲೆ ಅಂದರೆ ವರ್ಣನೆ ಮಾಡುತ್ತದೆ ಹರಿವಂಶ.

ಪಙ್ಕಭೂತಂ ಹಿ ತಿಮಿರಂ ಸ್ಪರ್ಶಾದ್ವಿಜ್ಞಾಯತೇ ನೃಪ ॥ (113.21 ವಿಷ್ಣುಪರ್ವ)

ಮೆತ್ತುತಾ ಇದೆ ಕತ್ತಲೆ ಅಂತಹ ಕತ್ತಲೆ ನಿಬಿಡವಾದಂತಹ ಕತ್ತಲೆ ಸುದರ್ಶನ ಚಕ್ರದಿಂದ ಅದನ್ನು ವಿದಾರಣ ಮಾಡಿದ ಆ ಕತ್ತಲೆಯನ್ನು ಪರಮಾತ್ಮ ಆರು ಕೋಟಿ ತೊಂಭತೊಂಭತ್ತು ಲಕ್ಷ ಯೋಜನ. ಅದಾದ ಮೇಲೆ ಘನೋಧಕ ಹದಿಮೂರು ಕೋಟಿ ತೊಂಭತ್ತೆಂಟು ಲಕ್ಷ ಯೋಜನ ಅಂತಹ ಘನೋಧಕವನ್ನೂ ದಾಟಿದ. ಆಮೇಲೆ ಬಂದದ್ದು ಸುಮಾರು ಇದು ಅಷ್ಟು ದೂರ ಹೋದದ್ದು ಎತ್ತರ ನೋಡಿದರೆ ಒಂದು ಲಕ್ಷ ಯೋಜನಕ್ಕಿಂತಲೂ ಹೆಚ್ಚು ಎತ್ತರದ ಮೇಲೆ ಇರತಕ್ಕಂತಹ ಅನಂತಾಸನ ಅಲ್ಲಿಗೆ ಬಂದಿದ್ದಾನೆ ಪರಮಾತ್ಮ. **'ಪೃಥಿವಿಸ್ಥೇಷು ಸರ್ವೇಷು ಲೋಕಃ ಅನಂತಾಸನಃ'** ಪೃಥಿವಿಯಲ್ಲಿ ಇರುವ ಎಲ್ಲ ಲೋಕಗಳಲ್ಲಿ ಅತೀ ಉನ್ನತ ಸ್ಥಾನದೊಳಗೆ ಸೂರ್ಯ ಮಂಡಲಕ್ಕಿಂತಲೂ ಚೂರು ಹೆಚ್ಚು ಎತ್ತರದಲ್ಲಿ ಇರತಕ್ಕಂತಹದ್ದು ಅನಂತಾಸನ, ಮೇರು ಪರ್ವತಕ್ಕಿಂತ ಸಾಕಷ್ಟು ಎತ್ತರದಲ್ಲಿ ಇದ್ದದ್ದುಮೇರು ಪರ್ವತದ ಮೇಲೆ ಇರುವಂತಹ ಬ್ರಹ್ಮ ದೇವರ ಸದನ ಅದಕ್ಕಿಂತಲೂ ಮೇಲಿದ್ದದ್ದು **'ವಿಶ್ವತಃ ಪೃಷ್ಠೇಷು ಸರ್ವತಃ ಪೃಷ್ಠೇಷು'**[1] ಅಂತಹ ಶ್ರೇಷ್ಠವಾದ ಆ ಅನಂತಾಸನ ಲೋಕ. ಅಂತಹ ಅನಂತಾಸನದ ದಿವ್ಯವಾದ ತೇಜೋಮಯವಾಗಿ ಇರುವಂತಹ ಏನು ಭಗವಂತನ ಸ್ಥಾನ ಇದೆ ಭಗವಂತನದೇ ಸ್ಥಾನ ಆ ತನ್ನ ಸ್ಥಾನದಲ್ಲಿ ವಾಸುದೇವ ರೂಪಿಯಾಗಿ ಪರಮಾತ್ಮ ಅಲ್ಲಿರುತ್ತಾನೆ ಶ್ವೇತ ದೀಪದಲ್ಲಿ ನಾರಾಯಣ, ವೈಕುಂಠದಲ್ಲಿ ವೈಕುಂಠ, ಅನಂತಾಸನದಲ್ಲಿ ವಾಸುದೇವ. ಆ ತನ್ನದೇ ಆದಂತಹ ವಾಸುದೇವದ ರೂಪದೊಳಗೆ ಹೋಗಿ ಪ್ರವೇಶ ಮಾಡಿ ಪರಮಾತ್ಮ ಸಂಶ್ಲೇಷ ವಿಶೇಷವನ್ನು ಹೊಂದಿ ನಲವತ್ತೆಂಟು ನಿಮಿಷ ಕೃಷ್ಣನೇ ಕಂಡಿಲ್ಲ, ಅರ್ಜುನ ಒಬ್ಬನೇ ಕೂತಿದ್ದಾನೆ ರಾಮ ರಾಮ ರಾಮ ಕೃಷ್ಣ ಕೃಷ್ಣ ಕೃಷ್ಣ ಅಂತ ಇದ್ದಾನೆ. ಒಂದು ಮುಹೂರ್ತ ನಲವತ್ತೆಂಟು ನಿಮಿಷಗಳ ಕಾಲ ಶ್ರೀಕೃಷ್ಣ ಪರಮಾತ್ಮ ಏನಿಲ್ಲ ಆನಂದ ಆನಂದ ಮತ್ತೆ ಪರಮಾನಂದ ಅಷ್ಟೇ ತನ್ನದೇ ಆಗಿರುವಂತಹ ಸ್ವರೂಪ, ತನ್ನ

1. 3.13.7 ಛಾಂದೋಗ್ಯೋಪನಿಷತ್

ಸ್ವರೂಪದೊಳಗೆ ತಾನು ಪರಣಾಮನಾಗಿ ಇದ್ದ ಆಮೇಲೆ ಹೊರಗೆ ಬಂದ ಮತ್ತೆ ಕೃಷ್ಣನಾಗಿ ಅಭಿವ್ಯಕ್ತನಾದ. ಅಭಿವ್ಯಕ್ತನಾದಂತಹ ಶ್ರೀಕೃಷ್ಣ ಪರಮಾತ್ಮ ಆ ನಾಲ್ಕು ಜನ ಮಕ್ಕಳು ಅಲ್ಲಿದ್ದರು ಅವರು ಯಾರು ಅಂತ ಅಲ್ಲಿ ನಂದಾ, ಸುನಂದಾ ಮೊದಲಾದಂತಹ ಪರಮಾತ್ಮನ ಪಾರ್ಶದರು, ದ್ವಾರಪಾಲಕರು ಅವರೇ ನಂದಾಯನಮಃ ಸುನಂದಾಯನಮಃ. ಅಂತಹ ನಾಲ್ಕು ಪಾರ್ಶದರನ್ನೇ ಪರಮಾತ್ಮ ಈ ಬ್ರಾಹ್ಮಣರ ಮಕ್ಕಳನ್ನಾಗಿ ಹುಟ್ಟಿಸಿದ್ದ ತಾನೇ, ಅರ್ಜುನನ ಗರ್ವ ಪರಿಹಾರ ಮಾಡುವುದಕ್ಕೆ ತಾನೇ ಪರಮಾತ್ಮ ಬಂದು ಅವರನ್ನ ಅಪಹಾರ ಮಾಡಿಕೊಂಡು ಹೋಗಿದ್ದ. ದೇವರು ಬಂದು ಅಪಹಾರ ಮಾಡಿಕೊಂಡು ಹೋದರೆ ಈ ಅರ್ಜುನ ಏನು ರಕ್ಷಣೆ ಮಾಡಲಿಕ್ಕೆ ಸಾಧ್ಯ ಯಾವುದೋ ಭೂತ ಬಂತು ಕರೆದುಕೊಂಡು ಹೋಯಿತು ಅಂತ ಅಂದುಕೊಂಡಿದ್ದಾರೆ ಜನಗಳು

ಏಕೋ ವಿಷ್ಣುರ್ಮಹದ್ಭೂತಂ ಪೃಥಗ್ಭೂತಾನ್ಯನೇಕಶಃ । (20 ವಿಷ್ಣುಸಹಸ್ರನಾಮ ಸ್ತೋತ್ರಂ)

ಸಕಲ ಜಗನ್ನಿಯಾಮಕನಾದಂತಹ ಸ್ವಾಮಿ ತಾನೇ ಕರೆದುಕೊಂಡು ಹೋದದ್ದು. ಆ ಕೂಸುಗಳು ಅವೆಲ್ಲಾ ಸಾಕ್ಷಾತ್ ಪರಮಾತ್ಮನ ದ್ವಾರಪಾಲಕರು ಊಂಹಾ ಊಂಹಾ ಉ ಅಂದರೆ ಉತ್ತಮ ಊ ಸರ್ವೋತ್ತಮ ಹಾ ಹರಣೆ ಮಾಡುತ್ತಾನೆ ಅಂದರೆ ಊಂಹಾ ಊಂಹಾ ಅರ್ಜುನ ನೀ ಏನು ರಕ್ಷಣೆ ಮಾಡುತ್ತೀ ಸರ್ವೋತ್ತಮನಾದ ಪರಮಾತ್ಮನೇ ನನ್ನನ್ನು ಕರೆದುಕೊಂಡು ಹೊರಟಿದ್ದಾನೆ ಅಂತ. ಈಗಿನ ಮಕ್ಕಳು ಹಾಗೆ ಅಳುತ್ತವೆ ಊಂಹಾ ಊಂಹಾ ಅಂತ ನೀವು ಯಾರು ನಮ್ಮನ್ನು ರಕ್ಷಣೆ ಮಾಡುವವರು ನಿಜವಾಗಿ ಆ ಪರಮಾತ್ಮನೇ ನಮ್ಮನ್ನು ಕಾಪಾಡುತ್ತಾನೆ ಅವನೇ ನಮಗೆ ಆಹಾರವನ್ನು ಕೊಡುತ್ತಾನೆ. ಅವನೇ ಕೊಟ್ಟ ಆ ಆಹಾರವನ್ನು ಸೃಷ್ಟಿ ಮಾಡುವವನು ಅವನೇ, ಮೊದಲು ತಾಯಿಯಲ್ಲಿ ಆಹಾರವನ್ನು ಸೃಷ್ಟಿ ಮಾಡುತ್ತಾನೆ ಹೊರಗೆ ಸೃಷ್ಟಿ ಮಾಡುತ್ತಾನೆ ಆ ಮಕ್ಕಳಿಗೆ ಬೇಕಾಗುವ ರೀತಿಯಲ್ಲಿ ಪ್ರೀತಿಯಿಂದ ಕೊಡುವ ಬುದ್ಧಿಯನ್ನು ಕೊಡುತ್ತಾನೆ. ಅಂತಹ ಅದ್ಭುತವಾದ ಆ ಪರಮಾತ್ಮನೇ ನಿಜವಾಗಿ ಯಾವಾಗಲೂ ನಮ್ಮನ್ನು ಎತ್ತಿಕೊಂಡು ಓಡಾಡುವವ ಅನ್ನುವ ಅರ್ಥದಲ್ಲಿ ಊಂಹಾ ಅಂತ ಇಲ್ಲದೆ ಇದ್ದರೆ ಆ ಶಬ್ದವನ್ನು ಹರಿವಂಶ ಉದಾಹರಣೆ ಮಾಡುವ ಅವಶ್ಯಕತೆ ಇರಲಿಲ್ಲ. ಆ ರೀತಿಯ ಶ್ರೀಕೃಷ್ಣ ಪರಮಾತ್ಮನ ಅದ್ಭುತವಾದ ಮಹಿಮೆ ಆ ನಾಲ್ಕು ಜನ ಮಕ್ಕಳನ್ನ ರಥದಲ್ಲಿ ಕೂಡಿಸಿಕೊಂಡ ಬಂದೇ ಬಿಟ್ಟ ಬಂದು ಆ ಬ್ರಾಹ್ಮಣರಿಗೆ ಒಪ್ಪಿಸಿ ಯಥೇಷ್ಟವಾಗಿ ಏನು ಅವತ್ತು ಹೋದ ನಾಲ್ಕು ಜನ ಮಕ್ಕಳು ಮತ್ತೆ ಬದುಕಿ ಬಂದಿದ್ದಾರೆ ಅಂತ ಇಡೀ ದ್ವಾರಕೆಗೆ ಭೂರಿ ಭೋಜನ ಯಥೇಷ್ಟವಾಗಿ ಯಜ್ಞವೂ ಇತ್ತು. ಯಜ್ಞ ನಡೆದಾಗ ಯಜ್ಞ ಮಂಟಪ ಬಿಟ್ಟು ಹೊರಗೆ ಹೋಗಿದ್ದೇನೆ ಅಂತ ಕೃಷ್ಣ ಪ್ರಾಯಶ್ಚಿತ್ತ ಮಾಡಿಕೊಂಡಾದ್ದಾನೆ ಅವನಿಗೆ ಏನು ಪ್ರಾಯಶ್ಚಿತ್ತ ಬೇಕು ಆದರೂ ಶಾಸ್ತ್ರೋಕ್ತವಾದ ನಿಯಮದ ಉಲ್ಲಂಘನೆಯಾದರೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು ಅಂತ ಜಗತ್ತಿಗೆ ತಿಳಿಸುತ್ತಾನೆ.

ಅಂದರೆ ಕೃಷ್ಣ ಇಲ್ಲಿಂದ ಇಷ್ಟೆಲ್ಲ ಇಷ್ಟೊತ್ತು ಕೇಳಿದರಲ್ಲ ಇಷ್ಟು ದೂರದ ಪ್ರದೇಶವನ್ನ ದಾಟಿ ಹೋದದ್ದು ಹನ್ನೆರಡು ನಿಮಿಷದಲ್ಲಿ, ಬಂದದ್ದು ಹನ್ನೆರಡು ನಿಮಿಷದಲ್ಲಿ ಅಲ್ಲಿದ್ದದ್ದು ನಲವತ್ತೆಂಟು ನಿಮಿಷ **'ಚಕ್ರೆ ಸಾರ್ಧಮುಹೂರ್ತೇನ'** ಲೆಕ್ಕ ಕೊಟ್ಟುಬಿಡುತ್ತಾರೆ ಶ್ರೀಮದಾಚಾರ್ಯರು. ಈ ರೀತಿ ಶ್ರೀಕೃಷ್ಣ ಪರಮಾತ್ಮ ಹೊರಟು ಬಂದಿದ್ದಾನೆ, ಪ್ರಾಯಶ್ಚಿತ್ತ ಮಾಡಿಕೊಂಡಿದ್ದಾನೆ, ಯಥೇಚ್ಛ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿ ದಕ್ಷಿಣೆಯನ್ನು ಕೊಟ್ಟಿದ್ದಾನೆ. ಹಿಂದೆ ಕೇಳಿದ್ದಿರಿ **'ಧಕ್ಷಿಣಾಭಿಸ್ಸಾಕಂ'** ಆ ಯಜ್ಞದ ಪೂರ್ಣವಾದ ಫಲ ದಕ್ಷಿಣೆಯಿಂದ ಬರುತ್ತದೆ ಅಂತ ಇಷ್ಟೆಲ್ಲಾ ಮಾಡಿ ಅನುಗ್ರಹವನ್ನು ಮಾಡಿದ. ಬ್ರಾಹ್ಮಣನಿಗೆ ಮಕ್ಕಳು ಸಿಕ್ಕರು ತೊಗೊಂಡು ಓಡಿ ಹೋಗಿಬಿಟ್ಟ ಅವನು ಕೃಷ್ಣನಿಗೆ ಸಾಷ್ಟಾಂಗ ಪ್ರಣಾಮ ಮಾಡಿ ಧನ್ಯೋಸ್ಮಿ ಅಂದ ಹೊರಟ.



ಅರ್ಜುನನಿಗೆ ಕುತೂಹಲ, ಅವನು ಇನ್ನು ನಿಂತೇ ಇಲ್ಲ, ಏನೋ ಪದಾರ್ಥವನ್ನು ಓಡೋಡಿ ತೆಗೆದುಕೊಂಡು ಬಂದವರು ಉಸಿರು ನಿಂತಿರುವುದಿಲ್ಲಲ್ಲ ಹಾಗೆ ಇವನು ಇನ್ನೂ ಜೋರು ಉಸಿರು ತೆಗೆದುಕೊಳ್ಳುತ್ತ ಇದ್ದಾನೆ. ಅದು ಏನು ವೇಗ, ಅದು ಏನು ಬಂದದ್ದು ಕೃಷ್ಣ, ಅದು ಏನು ನೀರಿನ ಮೇಲೆ ಹೋಗುವುದು ಏನು ರಥ, ಪರ್ವತಗಳೆಲ್ಲ ಮಾಯಾ ಆಗುವುದು ಏನು. ಅದು ಏನೋ ಒಂದು ದೊಡ್ಡ ತೇಜೋಮಯವಾದಂತಹ ವಸ್ತು ಅದು, ಏನು ಅನಂತಾಸನದೊಳಗೆ ಹೋದದ್ದು ಬಂದದ್ದು ಅದು ಗೊತ್ತಾಗಿಲ್ಲ ಅರ್ಜುನನಿಗೆ, ಏನೋ ಒಂದು ತೇಜೋಮಯವಾದಂತಹ ವಸ್ತು ಅಲ್ಲಿ ಒಳಗೆ ಹೋದ ಹೊರಗೆ ಬಂದ ಇಷ್ಟೇ ಗೊತ್ತಾಯಿತು. ಅದು ಏನು ತೇಜಸ್ಸು, ಎಲ್ಲಿ ಹೋಗಿದ್ದಿ ಏನು ಬಂದಿ ಒಂದು ಸ್ವಲ್ಪ ಕೂತೂ ಏನಾದರೂ ನೀನೂ ಹೇಳುತ್ತಿಯಾ ಅಂದರೆ ಎಲ್ಲ ಹೇಳಿದ್ದಾನೆ ಕೃಷ್ಣ. ಸಪ್ತದ್ವೀಪ, ಸಪ್ತಸಾಗರಗಳು, ವಜ್ರಲೇಪದ ಆ ಸುವರ್ಣಮಯ ಭೂಮಿ, ಲೋಕಾಲೋಕ ಪರ್ವತ, ಅಂಧಃತಮಸ್ಸು, ಘನೋಧಕ, ಅನಂತಾಸನ ಎಲ್ಲದರ ಬಗ್ಗೆ ವಿವರಣೆಯನ್ನು ಕೊಟ್ಟ ಇಷ್ಟೆಲ್ಲಾ ದಾಟಿ ನಾವು ಹೋಗಿದ್ದೇವೆ ಅದೆಲ್ಲವೂ ನನ್ನ ಅಧೀನ, ಅದೆಲ್ಲವನ್ನೂ ನಾನು ಸೃಷ್ಟಿ ಮಾಡಿದ್ದು.

ಮಾಮೇವ ತದ್ಘನಂ ತೇಜೋ ಜ್ಞಾತುಮರ್ಹಸಿ ಭಾರತ ।
ಸಮುದ್ರಃ ಸ್ತಬ್ಧತೋಯೋಽಹಮಹಂ ಸ್ತಮ್ಭಯಿತಾ ಜಲಮ್ ॥ (114.12 ವಿಷ್ಣುಪರ್ವ)

ಎಲ್ಲಾ ಹೇಳುತ್ತಾನೆ **'ಸ್ತಬ್ಧತೋಯೋಽಹಮಹಂ ಸ್ತಬ್ಧಯಿತಾ'** ಅದೇನು ಸಮುದ್ರ ಗಟ್ಟಿ ಆಯಿತು ಅಂತ. ಅದು ಗಟ್ಟಿಯಾಗಿ ನಿಂತಿತು ಅಂತ ನೋಡಿದೆಯಲ್ಲ ಅದು ನಾನೇ. ಅದು ದ್ರವ ರೂಪದೊಳಗೆ ಇದ್ದ ಹಾಗೆ ತೆರೆಗಳು ಮೇಲೆ ಮೇಲೆ ಎದ್ದು ಬರುವ ಹಾಗೆ ಮಾಡುವುದು ನಾನೇ. ಅದು ಗಟ್ಟಿಯಾಗಿ ಕಲ್ಲಿನ ಹಾಗೆ ನಿಲ್ಲುವ ಹಾಗೆ ಮಾಡಿದ್ದು ನಾನೇ ಅದೆರಡು ನನ್ನದೇ. ಪರ್ವತಗಳ ಆ ಗಟ್ಟಿಯಾದ ಸ್ವಭಾವ ಘನೀಭೂತವಾದಂತಹ ಅಚ್ಛೇದ್ಯ ಅಭೇದ್ಯವಾದ ಪರ್ವತದ ಸ್ವಭಾವವೂ ನನ್ನ ಅಧೀನ. ಈಗ ಅದು ನಮಗೆ ದಾರಿ ಕೊಟ್ಟಿದ್ದು ನನ್ನಿಂದ.

ಅಹಂ ತೇ ಪರ್ವತಾಃ ಸಪ್ತ ಯೇ ದೃಷ್ಟಾ ವಿವಿಧಾಸ್ತಥಾ । (114.13 ವಿಷ್ಣುಪರ್ವ)

ಆ ಕತ್ತಲೆಯೂ ನಾನೇ ಅನ್ನುತ್ತಾನೆ ಎಲ್ಲ ನಾನೇ ಅನ್ನುವುದಕ್ಕೆ ನನ್ನ ಅಧೀನ ಅಂತ ಅರ್ಥ.

ಪಞ್ಚಭೂತಂ ಹಿ ತಿಮಿರಂ ದೃಷ್ಟವಾನಸಿ ಯದ್ಧಿ ತತ್ ॥ (114.13 ವಿಷ್ಣುಪರ್ವ)
ಅಹಂ ತಮೋ ಘನೀಭೂತಮಹಮೇವ ಚ ಪಾಟಕಃ । (114.14 ವಿಷ್ಣುಪರ್ವ)

ಅದು ಅಷ್ಟು ಘನೀಭೂತವಾಗಿ ನಿಲ್ಲುವಂತೆ ಮಾಡಿದವನು ನಾನೇ, ಅದನ್ನು ಛೇದನ ಮಾಡಿದವನು ನಾನೇ ಇದೆಲ್ಲವೂ ನನ್ನ ಅಧೀನ. ಇಷ್ಟೆಲ್ಲಾ ನೋಡಿದ್ದು ನೀನು ಕೇವಲ ಈ ಒಂದು ಭೂಮಿಯೊಳಗೆ ಪೃಥಿವಿ ಲೋಕದೊಳಗೆ ಸುತ್ತಾಡುತ್ತಾ ಇದ್ದಿ ಆ ಪೃಥಿವಿ ಲೋಕದೊಳಗಿನ ಅತ್ಯುಚ್ಚವಾದ ಲೋಕದವರೆಗೆ ನಿನ್ನನ್ನು ಕರೆದುಕೊಂಡು ಹೋಗಿ ನಾನು ಬಂದೆ ಆದರೆ ಹೀಗೆ ಹದಿನಾಲ್ಕು ಲೋಕಗಳಿವೆ ಆ ಹದಿನಾಲ್ಕು ಲೋಕಗಳ ಹೊರಗೆ ಮತ್ತೆ ಆವರಣ ಇದೆ.

ಅಬಗ್ನೀರನಭೋಽಹಂಕೃನ್ಮಹತ್ತತ್ತ್ವಗುಣತ್ರಯ್ಯಃ ।
ಕ್ರಮಾದ್ ದಶಗುಣೈರೇತದಾವೃತಂ ಪರತಸ್ತತಃ ॥ (21.49 ಮಭಾತಾನಿರ್ಣಯ)

ವ್ಯಾಪ್ತೋಽಹಂ ಸರ್ವಗೋಽನಂತೋಽನಂತರೂಪೋ ನಿರಂತರಃ ।
ಅನಂತಶೀರ್ಷೋಽನಂತಾಕ್ಷೋಽನಂತಪಾದಕರೋರುಕಃ ।
ಅನಂತಗುಣಮಹಾತ್ಮ್ಯಶ್ಚಿದಾನಂದಶರೀರಕಃ ॥ (21.50 ಮಭಾತಾನಿರ್ಣಯ)

ಮದ್ವಶಾ ಏವ ಸರ್ವೇಽಪಿ ತ್ವಂ ಚಾನ್ಯೇ ಚ ಧನಂಜಯ ।
ಮತ್ಪ್ರಸಾದಾದ್ ಬಲಂ ಚೈವ ವಿಜಯಶ್ಚಾಖಿಲಾ ಗುಣಾಃ ॥ (21.51 ಮಭಾತಾನಿರ್ಣಯ)

ತಸ್ಮಾನ್ನ ವಿಸ್ಮಯಃ ಕಾರ್ಯೋ ನ ದರ್ಪಶ್ಚ ತ್ವಯಾನಘ ।
ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ॥ (21.52 ಮಭಾತಾನಿರ್ಣಯ)

ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ । (21.53 ಮಭಾತಾನಿರ್ಣಯ)

ಏನು ಶ್ರೀಕೃಷ್ಣ ಪರಮಾತ್ಮನ ವಚನಗಳು ಅರ್ಜುನನಿಗೆ. ಅವನಿಗೆ ಏನು ಅಹಂಕಾರ ಬಂದಿತ್ತು ನಾನು ಅಂತನ್ನುವ ಅಹಂಕಾರ ಇಷ್ಟು ಯಾರಾದರೂ ಮಾಡುತ್ತಾರಾ ಅಂದರೆ ಒಂದು ತಿಳಿದುಕೊಳ್ಳಿ. ಬರೀ ಅಹಂಕಾರ ಬಂತು ಅರ್ಜುನನಿಗೆ ಅಂತ. ಅರ್ಜುನನಿಗೆ ಬಂದ ಅಹಂಕಾರ ಪರಿಹಾರ ಮಾಡಲಿಕ್ಕೆ ಕೃಷ್ಣ ಏನೇನು ಮಾಡಿದ ನೋಡಿಕೊಳ್ಳಿ ಅಂದರೆ ಅವನ ಮೇಲೆ ಪ್ರೀತಿ ಎಷ್ಟಿದೆ ಅಂತ ಗೊತ್ತಾಗುತ್ತದೆ ಇಷ್ಟು ದೂರ. ಒಬ್ಬನಿಗೆ ಏನೋ ಒಂದು ಸ್ವಲ್ಪ ತಲೆಕೆಟ್ಟಿದೆ ಒಂದು ನನ್ನ ಜೊತೆಗೆ ವಾಕಿಂಗ್ ಬಾ ಅಂತ ಕರೆದುಕೊಂಡು ಹೋಗುತ್ತಾರೆ ಎಷ್ಟು, ಒಂದು ಹತ್ತು ನಿಮಿಷ ಅಡ್ಡಾಡಿ ನೋಡಪ್ಪಾ ಹಾಗೆಲ್ಲಾ ಮಾಡಬಾರದು ಅಂತ ಇಷ್ಟು ಹೇಳಿಬಿಟ್ಟರೆ ಮುಗಿದು ಹೋಯಿತು. ಅದೇ ತನ್ನ ಮಗನೇ ಸ್ವಲ್ಪ ತಲೆ ಏನೋ ಕೆಟ್ಟ ಹಾಗೆ ಮಾಡುತ್ತ ಇದ್ದಾನೆ ಅಂತಾದರೆ ಒಂದು ಹತ್ತು ನಿಮಿಷ ವಾಕಿಂಗ್ ಮಾಡಿ ಕಳಿಸಿಬಿಡುತ್ತಾರಾ ಇಲ್ಲ, ಪೂರ್ಣ ಅವನು ದಾರಿಗೆ ಬರುವವರೆಗೆ ಅವನನ್ನು ಬೆನ್ನು ಹತ್ತೋದು ಅಂತ ಆ ಪ್ರೀತಿ ಎಷ್ಟಿದೆ ಅದಕ್ಕೆ ತಕ್ಕ ಹಾಗೆ ಅದರ ಫಾಲೋಅಪ್ ಇದೆ. ಅರ್ಜುನನ ಮೇಲೆ ಶ್ರೀಕೃಷ್ಣ ಪರಮಾತ್ಮನಿಗೆ ಇರುವಂತಹ ಪ್ರೀತಿಯ ಅತಿಶಯ ಎಷ್ಟು ಅಂತ ನಾವು ಗಮನಿಸುವುದಾದರೆ ಎಲ್ಲಿಂದ ಎಲ್ಲಿ ಕರೆದುಕೊಂಡು ಹೋದ, ಎಲ್ಲಿಂದ ಎಲ್ಲಿ ಕರೆದುಕೊಂಡು ಬಂದ. ದ್ವಾರಕೆಯಿಂದ ಅನಂತಾಸನಕ್ಕೆ ಕರೆದುಕೊಂಡು ಹೋಗಿದ್ದಾನೆ ಇಷ್ಟೆಲ್ಲಾ ಕೋಟಿ ಯೋಜನ ದಾಟಿ ಮತ್ತೆ ಕರೆದುಕೊಂಡು ಬಂದು ಇಷ್ಟೆಲ್ಲಾ ತನ್ನ ಅದ್ಭುತವಾದ ಮಹಿಮೆಯನ್ನ ಯಾವುದನ್ನು ನಾವು ಪುರಾಣದಲ್ಲಿ ಕೇಳಿ ರೋಮಾಂಚಿತ ಗಾತ್ರರಾಗುತ್ತಾ ಇದ್ದೇವೆ. ಅಂತಹ ಶ್ರೀಕೃಷ್ಣ ಪರಮಾತ್ಮ ತನ್ನ ಮಹಿಮೆಯನ್ನ ಪ್ರತ್ಯಕ್ಷವಾಗಿ ಅರ್ಜುನನಿಗೆ ತೋರಿಸುತ್ತಾನೆ ಅಂದರೆ ಎಷ್ಟು ಪ್ರೀತಿ ಅವನ ಮೇಲೆ. ಅಂತೂ ಅರ್ಜುನನಿಗೂ ಅಹಂಕಾರ ಬಂತು ಅಂತ ಹೀಗೆ ಗೋಣು ಹಾಕುತ್ತ ನಮ್ಮ ಹಾಗೆ ಕಾಣಿಸುತ್ತದೆ ಅರ್ಜುನ ಅಂತ ತಿಳಿದುಕೊಂಡರೆ ನರಕ ಆಗುತ್ತದೆ, ಅಷ್ಟು ಪ್ರೀತಿ ಪರಮಾತ್ಮನಿಗೆ ಅಂತಹ ಉತ್ತಮಾಧಿಕಾರಿ ಅರ್ಜುನ. ಶ್ರೀಕೃಷ್ಣ ಪರಮಾತ್ಮ ಈ ರೀತಿಯಾಗಿ ಅರ್ಜುನನಿಗೆ ಎಲ್ಲ ತತ್ವಗಳನ್ನು ತಿಳಿಸಿಕೊಟ್ಟ. ನನಗೆ ಇದನ್ನೆಲ್ಲ ಹಿಂದೆ ತಿಳಿಸಿದ ಪರಮಾನುಗ್ರಹ ಮಾಡಿದ ಅಂತ ಭೀಷ್ಮಾಚಾರ್ಯರು ಯುಧಿಷ್ಠಿರ ಪಾಂಡವರು ದೊಡ್ಡ ಸಭೆ ಆ ಸಭಾ ಮಧ್ಯದಲ್ಲಿ ಅರ್ಜುನ ಇದನ್ನು ತಿಳಿಸಿಕೊಡುತ್ತ ಇದ್ದಾನೆ.

ಮನ್ತ್ರಾಶ್ಚ ವಿವಿಧಾಃ ಪಾರ್ಥ ಯಾನಿ ಶಾಸ್ತ್ರಾಣಿ ಕಾನಿಚಿತ್ ।
ವಿದ್ಯಾಶ್ಚ ವೇದಿತವ್ಯಂ ಚ ಮತ್ತಃ ಪ್ರಾದುರ್ಭವನ್ತಿ ಹಿ ॥ (114.22 ವಿಷ್ಣುಪರ್ವ)



ಯಜ್ಞಗಳು, ಮಂತ್ರಗಳು, ವೇದಗಳು, ಶಾಸ್ತ್ರಗಳು ಎಲ್ಲವೂ ನನ್ನಿಂದಲೇನೇ ಹುಟ್ಟಿ ಬಂದದ್ದು ವೇದಾದಿ ಸಕಲ ಸಚ್ಛಾಸ್ತ್ರಗಳನ್ನ ಪ್ರವರ್ತನ ಮಾಡಿದ್ದೇ ನಾನು ಅಂತ ಎಲ್ಲ ಶ್ರೀಕೃಷ್ಣ ಪರಮಾತ್ಮ ಹೇಳಿದ ಅಂತ ಆ ಭಗವಂತನ ಮಹಿಮೆಯನ್ನು ಅರ್ಜುನ ಕೊಂಡಾಡುತ್ತಾನೆ. ಇದು ಜನಮೇಜಯ ನಿಮ್ಮ ಹಿರಿಯರು ಹೇಳಿದ್ದನ್ನ ಅವರ ಮಾತಿನಲ್ಲಿಯೇ ನಾನು ನಿನಗೆ ತಿಳಿಸಿಕೊಟ್ಟಿದ್ದೇನೆ ಅಂತ ವೈಶ್ಯಂಪಾಯನರು ತಿಳಿಸಿಕೊಡುತ್ತಾ ಇದ್ದಾರೆ ಇಂತಹ ಮಹಾ ಮಹಿಮೆಯನ್ನ ನಾವು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು. ಇಂತಹ ಮಹಾಮಹಿಮೆಯನ್ನ ಶ್ರೀಕೃಷ್ಣ ಪರಮಾತ್ಮನ ದಿವ್ಯವಾದ ಮಹಿಮೆಯನ್ನ ತಿಳಿಸುವಂತಹ ಹರಿವಂಶ, ಶ್ರೀಮದ್ಭಾಗವತ ಇವುಗಳೆಲ್ಲವುಗಳ ಸಾರ ಸರ್ವಸ್ವವನ್ನ ನಿರ್ಣಯ ಮಾಡಿ ಹೇಳತಕ್ಕಂತಹ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ ಇವೆಲ್ಲವುಗಳವನ್ನ ಚೆನ್ನಾಗಿ ಅಭ್ಯಾಸವನ್ನು ಮಾಡಬೇಕು.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ವಿಷ್ಣುಪರ್ವ-34

* * *

ಜನಮೇಜಯ ಉವಾಚ

ಭೂಯ ಏವ ದ್ವಿಜಶ್ರೇಷ್ಠ ಯಮಸಿಂಹಸ್ಯ ಧೀಮತಃ ।

ಕರ್ಮಾಣ್ಯಪರಿಮೇಯಾನಿ ಶ್ರೋತುಮಿಚ್ಛಾಮಿ ತತ್ತ್ವತಃ ।। (115.1 ವಿಷ್ಣುಪರ್ವ)

ಶ್ರೀಕೃಷ್ಣ ಪರಮಾತ್ಮನ ಅತ್ಯದ್ಭುತವಾದ ಮಹಿಮೆಯನ್ನು ಅರ್ಜುನ ಭೀಷ್ಮಾಚಾರ್ಯರ ಸೂಚನೆಯಂತೆ, ಭೀಷ್ಮಾಚಾರ್ಯರು ಯುಧಿಷ್ಠಿರನಿಗೆ ಉಪದೇಶ ಮಾಡುವಂತಹ ಆ ದೊಡ್ಡ ಸಭೆಯ ಮಧ್ಯದಲ್ಲಿ ಎಲ್ಲರಿಗೆ ತಿಳಿಯುವಂತೆ ಕೃಷ್ಣ ಪರಮಾತ್ಮನ ಮಹಾಮಹಿಮೆಯನ್ನು ವರ್ಣನೆ ಮಾಡಿದ್ದಾನೆ. ಆ ಬ್ರಾಹ್ಮಣನ ಪುತ್ರರ ಸಂರಕ್ಷಣೆಯನ್ನು ಮಾಡುವುದರ ಹಿನ್ನೆಲೆಯಲ್ಲಿ ಶ್ರೀ ಕೃಷ್ಣ ಪರಮಾತ್ಮ ಆ ಸಪ್ತ ದ್ವೀಪ ಸಪ್ತ ಸಾಗರಗಳನ್ನೆಲ್ಲ ದಾಟಿ, ಲೋಕಾಲೋಕ ಪರ್ವತ, ತಮಸ್ಸು ಘನೋಧಕಗಳನ್ನು ದಾಟಿ, ಅನಂತಾಸನಕ್ಕೆ ಹೋಗಿ ಆ ಮಕ್ಕಳನ್ನು ತಂದುಕೊಟ್ಟದ್ದು ಇದು ಸಣ್ಣ ಘಟನೆ ಅಲ್ಲ, ಪರಮಾತ್ಮನ ಸರ್ವೋತ್ತಮ ಸರ್ವತ್ರ ವ್ಯಾಪ್ತ ಅನಂತಶಕ್ತಿ ಸಂಪನ್ನ, ಸೃಷ್ಟಿ ಸ್ಥಿತಿ ಲಯ ನಿಯಮನ ಜ್ಞಾನಾಜ್ಞಾನ ಬಂಧ ಮೋಕ್ಷಗಳೆಲ್ಲ ಅವನ ಅಧೀನ ಅನ್ನುವುದಕ್ಕಾಗೇನೆ ಮೃತರಾದವರಿಗೂ ಪುನರ್ಜನ್ಮವನ್ನು ನೀಡಿದ್ದಾನೆ. ಇಂತಹ ಆ ಪರಮಾತ್ಮನ ಮಹಾಮಹಿಮೆ ಇದೆ ಅಂತ ಹಿಂದೆ ತಿಳಿಸಿದರೂ ಜನಮೇಜಯನಿಗೆ ತೃಪ್ತಿ ಇಲ್ಲ, ಇನ್ನೂ ಪರಮಾತ್ಮನ ಅನೇಕ ಮಹಿಮೆಗಳನ್ನು ನನಗೆ ಉಪದೇಶ ಮಾಡಿ ಅಂತ ಜನಮೇಜಯ ವೈಶಂಪಾಯನರಿಗೆ ಕೇಳುತ್ತಾ ಇದ್ದಾನೆ. ವೈಶಂಪಾಯನರು ಅನ್ನುತ್ತಾರೆ ಹೇಳಿ ಮುಗಿಸುವುದಕ್ಕೆ ಸಾಧ್ಯವೇ ಇಲ್ಲ.

ಬಹೂನ್ಯಾಶ್ಚರ್ಯಭೂತಾನಿ ಕೇಶವಸ್ಯ ಮಹಾತ್ಮನಃ ।

ಕಥಿತಾನಿ ಮಹಾಬಾಹೋ ನಾನ್ತಂ ಶಕ್ಯಂ ಹಿ ಕರ್ಮಣಾಮ್ ।। (115.4 ವಿಷ್ಣುಪರ್ವ)

ಗನ್ತುಂ ಹಿ ಭರತಶ್ರೇಷ್ಠ ವಿಸ್ತರೇಣ ಸಮನ್ತತಃ । (115.5 ವಿಷ್ಣುಪರ್ವ)

ಪೂರ್ಣ ವಿಸ್ತರವಾಗಿ ಪರಮಾತ್ಮನ ಮಹಿಮೆಯನ್ನು ಕೊಂಡಾಡಿ ಮುಗಿಸುತ್ತೇನೆ ಅನ್ನುವ ಶಕ್ತಿ ಯೋಗ್ಯತೆ ಪ್ರಪಂಚದೊಳಗೆ ಯಾರಿಗೂ ಇಲ್ಲ. ಭೂಮಿಯಲ್ಲಿ ಇರುವ ಕಣಗಳನ್ನ ಎಣಿಸಬಹುದು, ನಕ್ಷತ್ರಗಳನ್ನ ಎಣಿಸಬಹುದು



ಭಗವಂತನ ಗುಣಗಳನ್ನು ಮಹಿಮೆಗಳನ್ನು ಎಣಿಸಿ ಮುಗಿಸಲಿಕ್ಕೆ ಸಾಧ್ಯ ಇಲ್ಲ ಅನಂತವಾದ ಭಗವಂತನ ಮಹಿಮೆ ಆದರೂ **'ಲೇಶಮಾತ್ರೇಣ ಭಾರತ'** [1] ಅತ್ಯಲ್ಪವಾಗಿ ನಿನಗೆ ನಾನು ತಿಳಿಸಿದ್ದು, ಇನ್ನು ಮುಂದೆ ತಿಳಿಸುವುದು ಕೂಡ. ನರಕಾಸುರನ ಸಂಹಾರ ಮಾಡಿದ್ದು, ಪಾರಿಜಾತ ಹರಣ ಮಾಡಿದ್ದು, ದೇವತೆಗಳೆಲ್ಲರನ್ನು ಸೋಲಿಸಿದ್ದು ಪರಮಾತ್ಮ,ವರುಣ ದೇವರನ್ನ ಸೋಲಿಸಿದ್ದು, ಶಿಶುಪಾಲ ದಂತವಕ್ತ್ರರ ಸಂಹಾರ, ಕಾಲಯವನನ ಸಂಹಾರ, ಸಾಲ್ವ ರಾಜನ ಸಂಹಾರ, ರುದ್ರ ದೇವರ ವರದಿಂದ ಅಚ್ಛೇದ್ಯ ಅಭೇದ್ಯವಾದ ಸಾಲ್ವನ ವಿಮಾನವನ್ನ ಕೆಳಗೆ ಬೀಳಿಸಿದ್ದು. ಶೋಣಿತಪುರದಲ್ಲಿ ಇರುವಂತಹ ಬಲಿ ಚಕ್ರವರ್ತಿಯ ಮಗನಾದ ಬಾಣಾಸುರನ ಸಾವಿರ ಬಾಹುಗಳನ್ನೆಲ್ಲ ಕತ್ತರಿಸಿ ಎರಡೇ ಬಾಹುಗಳು ಉಳಿಯುವಂತೆ ಮಾಡಿ ಅವನನ್ನ ಜೀವಂತ ಬಿಟ್ಟದ್ದು ರುದ್ರ ದೇವರ ಪ್ರಾರ್ಥನೆಯಂತೆ. ಜರಾಸಂಧನನ್ನ ಹದಿನೆಂಟು ಬಾರಿ ಸೋಲಿಸಿದ್ದು, ಅರ್ಜುನನಿಗೆ ಅಗ್ನಿಯಿಂದ ಗಾಂಡೀವ ಧನುಸ್ಸನ್ನ ಕೊಡಿಸಿ ಖಾಂಡವ ವನದ ದಾಹವನ್ನು ಮಾಡಿಸಿದ್ದು, ಯದುವಂಶದ ರಕ್ಷಣೆ ಮಾಡಿದ್ದು.

ನೃಗ ಎಂಬಂತಹ ರಾಜ ಜನ್ಮಾಂತರದಲ್ಲಿ ತಾನು ಕೋಟಿ ಕೋಟಿ ಗೋದಾನ ಮಾಡಿದ್ದಾನೆ ಆದರೆ ಒಬ್ಬನಿಗೆ ಕೊಟ್ಟ ಆಕಳು ಮತ್ತೆ ಮರಳಿ ಬಂದು ಇವನ ಗೋಶಾಲೆಯಲ್ಲಿ ಸೇರಿಕೊಂಡದ್ದು ಗೊತ್ತಾಗದೆ ಅದೇ ಆಕಳನ್ನು ಇನ್ನೊಬ್ಬರಿಗೆ ಕೊಟ್ಟಾಗ ಅವರಿಬ್ಬರಲ್ಲಿ ಜಗಳ ಆಗಿದೆ. ಅವರ ಶಾಪದಿಂದ ಓತಿಕಾಟ ಆಗಿ ಬಿದ್ದಂತಹ ನೃಗ ರಾಜನನ್ನ ಕೇವಲ ತನ್ನ ಸ್ಪರ್ಶ ಮಾತ್ರದಿಂದ ಪರಮಾತ್ಮ ಉದ್ಧಾರ ಮಾಡಿ ಅವನಿಗೆ ಉತ್ತಮವಾದ ಸದ್ಗತಿಯನ್ನು ಕೊಟ್ಟಿದ್ದಾನೆ. ಮೈಂದ ದ್ವಿವಿದರ ಸಂಹಾರವನ್ನು ಮಾಡಿಸಿದ್ದಾನೆ, ಜಾಂಬವಂತನ ಉದ್ಧಾರ ಮಾಡಿದ, ಸಾಂದೀಪನಿಗಳಿಗೂ ಅವರ ಮಗನನ್ನು ತಂದು ಕೊಟ್ಟ, ನಿನ್ನ ತಂದೆ ಪರೀಕ್ಷಿತ್ ರಾಜ ಮೃತನಾದ ಪರೀಕ್ಷಿತ್ ರಾಜನನ್ನು ಪುನಃ ಬದುಕಿಸಿದ ಇಂತಹ ಪರಮಾತ್ಮನ ಮಹಿಮೆಗಳನ್ನು ಎಣಿಸುತ್ತಾ ಕುಳಿತರೆ ಮುಗಿಯುವುದಕ್ಕೆ ಸಾಧ್ಯ ಇದೆಯೇ. ಒಂದು ಶ್ರೀಕೃಷ್ಣಾವತಾರದಲ್ಲಿ ದೇವರು ತೋರಿದ ಮಹಿಮೆಗಳನ್ನೇ ಹೇಳಿ ಮುಗಿಸುವುದಕ್ಕೆ ಸಾಧ್ಯ ಇಲ್ಲ, ಇನ್ನು ಆ ಶ್ರೀಕೃಷ್ಣ ಪರಮಾತ್ಮ ತಾನು ಬೇರೆ ಬೇರೆ ಅವತಾರಗಳಲ್ಲಿ ತೋರಿದ ಮಹಿಮೆಗಳು ಮೂಲರೂಪದಲ್ಲಿ ತೋರಿದಂತಹ ಮಹಿಮೆ ಅದನ್ನು ವರ್ಣನೆ ಮಾಡಲಿಕ್ಕಂತೂ ಸಾಧ್ಯವೇ ಇಲ್ಲ, ಅಂತಹ ಅಚಿಂತ್ಯನಾದ ಅಪ್ರಮೇಯನಾದಂತಹ ಸ್ವಾಮಿ ಶ್ರೀಕೃಷ್ಣ ಪರಮಾತ್ಮ ಎಂಬುದಾಗಿ ತಿಳಿಸಿದ್ದಾರೆ.

ಆಗ ಜನಮೇಜಯ ರಾಜನಿಗೆ ಮತ್ತೆ ಕುತೂಹಲ ಕೆರಳಿದೆ. ಅದೇನೋ ಹೇಳಿದರಲ್ಲ ಬಾಣಸುರನನ್ನ ಶ್ರೀಕೃಷ್ಣ ಪರಮಾತ್ಮ ಸಂಹಾರ ಮಾಡಲಿಲ್ಲ ಆದರೆ ಅವನ ಸಾವಿರ ಬಾಹುಗಳನ್ನ ಕತ್ತರಿಸಿ ಅವನನ್ನ ನಿರ್ವೀರ್ಯನನ್ನಾಗಿ ಮಾಡಿ ಶರಣಾಗತನನ್ನು ಮಾಡಿಕೊಂಡು ಪರಮಾತ್ಮ ರುದ್ರ ದೇವರ ಪ್ರಾರ್ಥನೆಯಂತೆ ಅವನನ್ನು ಮೋಚನೆ ಮಾಡಿದ ಅಂತ ಆ ಕಥೆಯನ್ನು ಸ್ವಲ್ಪ ವಿಸ್ತೃತವಾಗಿ ಕೇಳಬೇಕು ಅಂತ ಅಪೇಕ್ಷೆ ಇದೆ ಅಂತ ಜನಮೇಜಯ ಪ್ರಾರ್ಥನೆ ಮಾಡುತ್ತಾನೆ. ಪ್ರಹ್ಲಾದ ರಾಜರ ಮಗ ವಿರೋಚನ, ವಿರೋಚನನ ಮಗ ಬಲಿ, ಬಲಿ ಚಕ್ರವರ್ತಿಗೆ ನೂರು ಜನ ಮಕ್ಕಳು ಅದರಲ್ಲಿ ಹಿರಿಯ ಮಗನೇ ಬಾಣಾಸುರ. ನಿಜವಾಗಿ ನೋಡಿದರೆ ಬಾಣ ಇವನು ಶಿವ ಭಕ್ತ ಶಿವ ಭಕ್ತನೂ ಹೌದು ಶಿವಾಂತರ್ಯಾಮಿಯಾದಂತಹ ಪರಮಾತ್ಮನ ಭಕ್ತನೂ ಹೌದು ಆದರೆ ಆ ಬಾಣಾಸುರನಲ್ಲಿ ಬಾಣ ಅಂತ ಇನ್ನೊಬ್ಬ ಅಸುರ ಇದ್ದ. ಈ ಬಾಣ ಸಾತ್ವಿಕ ಇವನೊಳಗೊಬ್ಬ ಅಸುರ ಇದ್ದಾನೆ ಅವನ ಹೆಸರನೂ ಬಾಣನೇ ಆ ಬಾಣದೊಳಗೆ ಇರುವ ಬಾಣ ಎಂಬ ಅಸುರನೇನಿದ್ದನೋ ಅವನೇ ಸಾಲ್ವನಾಗಿ ಹುಟ್ಟಿದ್ದಾನೆ. ಬಲಿ ಚಕ್ರವರ್ತಿಯೂ ಬಹಳ ಸಜ್ಜನ ಅವನೂ ಪರಮ ಭಗವದ್ಭಕ್ತನೇ ಆದರೆ ಬಲಿ ಚಕ್ರವರ್ತಿಯಲ್ಲಿ ಬಲಿ ಎಂಬ ಹೆಸರಿನ ಒಬ್ಬ ಅಸುರ ಇನ್ನೊಬ್ಬ ಇದ್ದ ಅವನೇ ಮುಂದೆ ಕೀಚಕನಾಗಿ ಹುಟ್ಟುತ್ತಾನೆ. ಈ ರೀತಿ ಶ್ರೀಮದಾಚಾರ್ಯರು ಮಹಾಭಾರತ ತಾತ್ಪರ್ಯ

1. 115.5 ವಿಷ್ಣುಪರ್ವ

ನಿರ್ಣಯದಲ್ಲಿ ನಮಗೆ ತಿಳಿಸಿಕೊಡುತ್ತಾರೆ. ಅಂತಹ ಬಾಣನೆಂಬ ಅಸುರನ ಆವೇಶದಿಂದಾಗಿ ದುರ್ಬುದ್ಧಿಯನ್ನೂ ಪಡೆದುಕೊಂಡ ಸ್ವಯಂ ತಾನು ಶಿವ ಹಾಗೂ ಶಿವಾಂತರ್ಯಾಮಿಯಾದ ಶಿವನಾಮಕ ಪರಮಾತ್ಮನಲ್ಲಿ ಭಕ್ತಿಯನ್ನು ಮಾಡುವಂತಹ ಬಾಣಾಸುರ. ಸಾವಿರ ಬಾಹುಗಳನ್ನು ಪಡೆದಿದ್ದಾನೆ, ಒಂದೊಂದು ಬಾಹುವಿನಲ್ಲಿಯೂ ಒಂದೊಂದು ಆಯುಧ. ಸಾವಿರ ಬಾಹುಗಳು ಸಾವಿರ ಆಯುಧ ಅಂತಹ ಘೋರವದಂತಹ ಅವನ ರೂಪ ನೋಡುವುದಕ್ಕೆ ಸಾಧ್ಯ ಇಲ್ಲ ಅಷ್ಟು ಭಯಂಕರವಾದಂತಹ ರೂಪವನ್ನು ತೆಗೆದುಕೊಂಡು ಅವನು ಶೋಣಿತಪುರದಲ್ಲಿ ವಾಸ ಮಾಡುತ್ತಾ ಇದ್ದಾನೆ. ಅವನು ರುದ್ರ ದೇವರನ್ನು ಕುರಿತು ತಪಶ್ಚರ್ಯ ಮಾಡಿದ, ಘೋರವಾದ ತಪಸ್ಸು ಮಾಡಿದ, ರುದ್ರ ದೇವರು ಪ್ರಸನ್ನರಾದರು, ಆಶುತೋಷ ಅಂತ ಹೆಸರು ರುದ್ರ ದೇವರಿಗೆ, ಶೀಘ್ರದಲ್ಲಿ ಪ್ರಸನ್ನರಾಗಿ ಅನುಗ್ರಹವನ್ನು ಮಾಡುತ್ತಾರೆ. ಏನಪ್ಪಾ ಇಷ್ಟು ಘೋರ ತಪಸ್ಸು ಮಾಡುತ್ತಾ ಇದ್ದೀಯಲ್ಲ ನಿನಗೆ ಏನು ವರ ಬೇಕು, ನಾನು ನಿಮ್ಮ ಮಗ ಅಂತ ನೀವು ಸ್ವೀಕಾರ ಮಾಡಬೇಕು ಅಷ್ಟೇ ಮುಗಿದು ಹೋಯಿತು ಇನ್ನೇನು ಬೇಕಾಗಿಲ್ಲ. ಅದು ಇದು ಒಂದು ಎರಡು ವರಗಳನ್ನು ಕೇಳಿದರೆ ಅಷ್ಟೇ ಕೊಟ್ಟು ಬಿಡುತ್ತೀರಾ, ನನ್ನನ್ನೇ ನಿಮ್ಮ ಮಗ ಅಂತ ಸ್ವೀಕಾರ ಮಾಡಿಬಿಟ್ಟರೆ ಸಂಪೂರ್ಣವಾಗಿ ನನ್ನ ರಕ್ಷಣೆಯನ್ನು ನೀವು ಮಾಡಿಯೇ ಮಾಡುತ್ತೀರಿ. ನಾನೇನು ಬೇರೆ ಬೇರೆ ವರಗಳನ್ನು ಕೇಳಬೇಕಾದದ್ದಿಲ್ಲ ನಿಮ್ಮ ಮಗನನ್ನಾಗಿ ಸ್ವೀಕಾರ ಮಾಡಿ ತಥಾಸ್ತು ಅಂದಿದ್ದಾರೆ ರುದ್ರ ದೇವರು.

ಕನೀಯಾನ್ಕಾರ್ತಿಕೇಯಸ್ಯ ಪುತ್ರೋಽಯಂ ಪ್ರತಿಗೃಹ್ಯತಾಮ್ ॥ (116.17 ವಿಷ್ಣುಪರ್ವ)

ಅಂತ ರುದ್ರ ದೇವರು ಪಾರ್ವತಿ ದೇವಿಗೆ ಆದೇಶ ಮಾಡುತ್ತಾರೆ. ಸ್ಕಂದ ನಮ್ಮ ಮಗ, ಗಣಪತಿ ನಮ್ಮ ಮಗ, ಸ್ಕಂದನ ತಮ್ಮನನ್ನಾಗಿ ಈ ಬಾಣಾಸುರನನ್ನ ಸ್ವೀಕಾರ ಮಾಡು ಅತ್ಯಂತ ಪ್ರೀತಿಯಿಂದ ಅವನ ರಕ್ಷಣೆಯನ್ನು ಮಾಡಬೇಕು. ಸ್ಕಂದ ನೀನು ಅಣ್ಣನಾಗಿ ತಮ್ಮನನ್ನು ಹೇಗೆ ರಕ್ಷಣೆ ಮಾಡಬೇಕೋ ಹಾಗೆ ಈ ಬಾಣಾಸುರನನ್ನ ನೀನು ಚೆನ್ನಾಗಿ ರಕ್ಷಣೆ ಮಾಡು, ತಾಯಿಯಾಗಿ ಮಗನನ್ನು ಹೇಗೆ ರಕ್ಷಣೆ ಮಾಡಬೇಕೋ ಹಾಗೆ ನೀನು ರಕ್ಷಣೆ ಮಾಡು ಅಂತ ಪಾರ್ವತಿಗೆ ಹೇಳಿದ್ದಾರೆ. ನನ್ನ ಅನುಗ್ರಹ ಕವಚವಂತೂ ನಿನಗೆ ಸದಾ ಇದೆ ಚಿಂತೆ ಮಾಡಬೇಡ ಅಂತ ಭರವಸೆಯನ್ನು ಕೊಟ್ಟಿದ್ದಾರೆ, ನೀನು ಇರುವಂತಹ ಈ ಪಟ್ಟಣಕ್ಕೆ ಶೋಣಿತಪುರ ಅಂತ ಹೆಸರು ಬರುತ್ತೆ ಈ ರೀತಿ ಅವನಿಗೆ ವಿಶೇಷವಾಗಿ ಅನುಗ್ರಹವನ್ನು ಮಾಡಿದ್ದಾರೆ. ಯಾವ ಯಾವ ದೇವತೆಗಳಿಗೂ ಹೆದರುತ್ತ ಇರಲಿಲ್ಲ ಸಾವಿರ ಬಾಹುಗಳು, ರುದ್ರ ದೇವರ ರಕ್ಷಣೆ, ಪಾರ್ವತಿಯ ರಕ್ಷಣೆ, ಸ್ಕಂದನ ರಕ್ಷಣೆ ಇದೆ ನನಗೇನು ಚಿಂತೆ ಇಷ್ಟೆಲ್ಲ ದೇವತೆಗಳ ಬೆಂಬಲ ಇರುವಾಗ. ನಾನು ರುದ್ರ ದೇವರ ಮಗ, ರುದ್ರ ದೇವರಿಂದ ಸುರಕ್ಷಿತ ಯಾರೂ ನನ್ನನ್ನ ತಡೆಯುವಂತೆ ಇಲ್ಲ ಅಂತ ಎಲ್ಲ ದೇವತೆಗಳ ಜೊತೆಗೆ ಉನ್ಮತ್ತನಾಗಿ ಯುದ್ಧವನ್ನು ಮಾಡುತ್ತಾ ಇದ್ದಾನೆ ಪುನಃ ಪುನಃ. ದೇವತೆಗಳೆಲ್ಲ ಮರುತ್ ದೇವತೆಗಳು, ಸಾಧ್ಯರು, ವಸುಗಳು, ರುದ್ರರು, ಆದಿತ್ಯರು ಎಲ್ಲರೂ ಕೂಡ ಯುದ್ಧವನ್ನು ಮಾಡಿ ಮಹಾ ಪರಾಕ್ರಮಿಯಪ್ಪ ಇವನ ಜೊತೆಗೆ ಯುದ್ಧ ಮಾಡುವುದು ಸಾಧ್ಯ ಇಲ್ಲ ಅಂತ ದೂರ ಹೋಗಿದ್ದಾರೆ. ಇವನಿಗೆ ತೃಪ್ತಿ ಇಲ್ಲ ಅಂತೂ ಎಲ್ಲರೂ ಯುದ್ಧವಾಡಿ ಸೋತು ಹೋದರು. ನನಗೆ ರಾಜ್ಯ ಸಿಕ್ಕಿದೆ ಸುಖವಾಗಿ ಇದ್ದು ಬಿಟ್ಟರೆ ಆಯಿತು ಅನ್ನುವ ತೃಪ್ತಿ ಇಲ್ಲ ಬಾಣಾಸುರನಿಗೆ. ಅವನಿಗೆ ಯುದ್ಧದ ರುಚಿ, ನಿತ್ಯವೂ ಯುದ್ಧ ಬೇಕು ಅವನಿಗೆ ಅಖಂಡವಾಗಿ ಯುದ್ಧ ಮಾಡಬೇಕು ಯಾರೂ ಯುದ್ಧಕ್ಕೆ ಬರುತ್ತಾ ಇಲ್ಲಲ್ಲ ನಾನೇನು ಮಾಡಲಿ ಅಂತ. ಬಾಹುಗಳಲ್ಲಿ ಬಲ ಇದೆ ಸಾವಿರ ಬಾಹುಗಳು ಒಂದೊಂದು ಬಾಹುವಿನಲ್ಲಿಯೂ ಮಹಾಬಲ ಮಹಾಪರಾಕ್ರಮ ಶೌರ್ಯ ಇದೆ, ವೀರ್ಯ ಇದೆ, ಏನು ಮಾಡಬೇಕು ಅದನ್ನೆಲ್ಲ ಇಟ್ಟು ವ್ಯರ್ಥವಾಗಿ ಹೋಗುತ್ತದಲ್ಲ ಆ ಬಲ, ಏನು ಮಾಡಲಿ ಅಂತ ಬಹಳ ಚಿಂತೆಯನ್ನು ಮಾಡುತ್ತಾ ಇದ್ದಾನೆ ಆಗ ಪುನಃ ಅವನಿಗೆ ರುದ್ರ ದೇವರು ಹೇಳುತ್ತಾರೆ ನಿನಗೆ ಏನು ಒಂದು ಧ್ವಜವನ್ನು ಕೊಟ್ಟಿದ್ದೇವೆ ಆ ಶ್ರೇಷ್ಠವಾದಂತಹ ಧ್ವಜ ಯಾವಾಗ ಕೆಳಗೆ ಬೀಳುತ್ತದೆ ಆಗ ಯುದ್ಧ ಆಗುತ್ತದೆ.



ಧ್ವಜಾಸ್ಯಾಸ್ಯ ಯದಾ ಭಙ್ಗಸ್ತವ ತಾತ ಭವಿಷ್ಯತಿ ।

ಸ್ವಸ್ಥಾನೇ ಸ್ಥಾಪಿತಸ್ಯಾಥ ತದಾ ಯುದ್ಧಂ ಭವಿಷ್ಯತಿ ॥ (116.31 ವಿಷ್ಣುಪರ್ವ)

ಸ್ವಲ್ಪ ದಾರಿ ಕಾಯಿ ಇದ್ದಕ್ಕಿದ್ದ ಹಾಗೆ ಯಾರು ಬಂದು ಬೀಳಿಸುವುದಿಲ್ಲ ತನ್ನಷ್ಟಕ್ಕೆ ತಾನೇ ಆ ಧ್ವಜ ಕೆಳಗೆ ಬಿತ್ತು ಅಂದರೆ ಮತ್ತೆ ನಿನಗೆ ಯುದ್ಧದ ಅವಕಾಶ ಬಂತು ಅಂತ ಅರ್ಥ, ಬರುತ್ತೆ ಕಾಲ ಸಮೀಪದಲ್ಲಿದೆ ಚಿಂತೆ ಮಾಡಬೇಡ ಅಂತ ಅವನಿಗೆ ಸಮಾಧಾನವನ್ನು ಹೇಳಿದರೆ ಏನು ಆನಂದ ಅವನಿಗೆ ನರ್ತನ ಮಾಡುತ್ತಾ ಇದ್ದಾನೆ. ರೌದ್ರ ನರ್ತನ, ಆನಂದ ಭಾಷ್ಪಗಳು, ಭಾರೀ ನಾಟ್ಯ ಯಾಕೆ ಅಂದರೆ ಯುದ್ಧದ ಅವಕಾಶ ಮತ್ತೆ ನನಗೆ ಸಿಗುತ್ತೆ ಅಂತ ರುದ್ರ ದೇವರು ಹೇಳಿದರು ಅದು ಒಂದು ದೊಡ್ಡ ವರ ಕೊಟ್ಟಂತೆ, ಭಾರೀ ಸಂತೋಷದಿಂದ ಕುಣಿಯುತ್ತಾ ಇದ್ದಾನೆ. ಕುಂಭಾಂಡ ಅಂತ ಅವನ ಮಂತ್ರಿ ಆ ಕುಂಭಾಂಡನಿಗೆ ಆಶ್ಚರ್ಯವಾಗುತ್ತಾ ಇದೆ ಏನು ಬಾಣಾಸುರ, ಏನು ಕುಣೀತಾ ಇದ್ದೀ ಹಾಗಾದರೆ ನಿಮ್ಮಪ್ಪ ಬಲಿ ಚಕ್ರವರ್ತಿಯನ್ನು ಕಟ್ಟಿ ಪರಮಾತ್ಮ ಸುತಲ ಲೋಕಕ್ಕೆ ಕೊಟ್ಟು ಕಳಿಸಿದ್ದನಲ್ಲ, ಒಂದು ಪಾದದಿಂದ ಮೇಲಿನ ಲೋಕಗಳು, ಎರಡನೆಯ ಪಾದದಿಂದ ಕೆಳಗಿನ ಲೋಕಗಳನ್ನೆಲ್ಲಾ ಸ್ವೀಕರಿಸಿ, ಮೂರನೆಯ ಪಾದವನ್ನು ಅವನ ತಲೆಯ ಮೇಲೆ ಇಟ್ಟು ಕೆಳಗೆ ಒತ್ತಿದನಲ್ಲ. ಮತ್ತೇನು ಆ ಬಲಿ ಚಕ್ರವರ್ತಿಯ ಮೇಲೆ ಪ್ರೀತಿಯಿಂದ ಪುನಃ ಇಂದ್ರ ಲೋಕದ ರಾಜ್ಯವನ್ನ ಮೂರು ಲೋಕಗಳ ರಾಜ್ಯವನ್ನ ಅಮರಾವತಿಯ ಐಶ್ವರ್ಯವನ್ನ ಮತ್ತೆ ಬಲಿ ಚಕ್ರವರ್ತಿಗೆ ಏನಾದರೂ ಒಪ್ಪಿಸಿಬಿಟ್ಟನಾ ತ್ರಿವಿಕ್ರಮ ರೂಪಿಯಾರ ಪರಮಾತ್ಮ. ಏನಪ್ಪಾ ಸುಮ್ಮನೆ ನಿನಗೆ ಕೆಳಗೆ ಕಳಿಸಿಬಿಟ್ಟೆ ಅಂತ ಅವನಿಗೇ ಕನಿಕರ ಬಂದು ಪ್ರೀತಿಯಿಂದ ಬಾ ಅಂತ ಕರೆದು ನಿಮ್ಮಪ್ಪನಿಗೆ ಮರಳಿ ರಾಜ್ಯ ಕೊಟ್ಟನೋ, ನೀನು ಕುಣಿಯುವುದು ನೋಡಿದರೆ ಹಾಗೆ ಅನಿಸುತ್ತಾ ಇದೆ. ಅಥವಾ ದೇವತೆಗಳಿಗೆಲ್ಲ ಪುನಃ ಕೆಳಗಿನ ಲೋಕಗಳಿಗೆ ಕಳಿಸಿ, ಕೆಳಗಿದ್ದ ಅಸುರರನ್ನೆಲ್ಲ ಮೇಲೆ ಕಳಿಸಿ ಎಲ್ಲ ಅಸುರರು ಕೂಡ ತಮ್ಮ ತಮ್ಮ ದೇವತೆಗಳ ಸ್ಥಾನಗಳನ್ನೆಲ್ಲಾ ಅಲಂಕರಿಸಿ ಇಂದ್ರ ಚಂದ್ರ ವರುಣ ಕುಬೇರಾದಿಗಳ ಸ್ಥಾನವನ್ನ, ನಮ್ಮ ಅಸುರ ವರ್ಗದವರೇ ನಮೂಚಿ, ಶಂಬರ ಮೊದಲಾದಂತಹ ಅಸುರರೇ ಎಲ್ಲವನ್ನೂ ಆಕ್ರಮಿಸಿದ್ದಾರೋ ಹೇಗೆ. ಏನು ಈ ಸಂತೋಷಕ್ಕೆ ಕಾರಣ ಗೊತ್ತಾಗುತ್ತ ಇಲ್ಲ ಅಂತ ಕುಂಭಾಂಡ ಕೇಳುತ್ತಾ ಇದ್ದರೇ ಕುಂಭಾಂಡನಿಗೆ ಹೇಳಿದ ಅದೆಲ್ಲಾ ಏನಲ್ಲಪ್ಪ. ಅಷ್ಟೆಲ್ಲ ದೊಡ್ಡ ಅನುಗ್ರಹವನ್ನು ಇನ್ನೂ ಮಾಡಿಲ್ಲ ದೇವರು ಆದರೆ ನನಗೆ ಯುದ್ಧಕ್ಕೆ ಅವಕಾಶ ಇದೆ. ಭಾರೀ ಯುದ್ಧವನ್ನು ಆಡಿ ತೃಪ್ತಿಯನ್ನು ಪಡಬಹುದು, ನನ್ನ ಬಲ ಪರಾಕ್ರಮಗಳ ಅಭಿವ್ಯಕ್ತಿಯನ್ನು ಮಾಡಿಕೊಳ್ಳಬಹುದು ಅನ್ನುವ ಒಂದು ಅವಕಾಶ ಸಿಕ್ಕಿದೆ ಇಷ್ಟೇ ಸಂತೋಷ ಅಂತ ಹೇಳಿದ, ನೋಡಿ ಎಷ್ಟು ವಿಚಿತ್ರವಾಗಿರುತ್ತೆ.

ದೊಡ್ಡವರ ಸೇವೆಯನ್ನು ಮಾಡಬೇಕು, ಪರೋಪಕಾರವನ್ನು ಮಾಡಬೇಕು, ಜನಗಳಿಗೆ ಯಥೇಚ್ಛವಾಗಿ ದಾನವನ್ನು ಮಾಡಬೇಕು, ಧರ್ಮವನ್ನು ಮಾಡಬೇಕು, ಇಂತಹ ಅಪೇಕ್ಷೆಯನ್ನು ಇಟ್ಟುಕೊಂಡು ಆ ತರಹದ ಧರ್ಮವನ್ನ ಮಾಡುವ ಅಥವಾ ಯುದ್ಧ ಮಾಡಿದರೂ, ಸಂಹಾರ ಮಾಡಿದರೂ ದುರ್ಜನರ ದುಷ್ಟರ ಸಂಹಾರವನ್ನು ಮಾಡುವ ಪ್ರಸಂಗ ಬಂದರೆ ಸಂತೋಷ ಪಡಬೇಕು. ಭೀಮಸೇನ ದೇವರೂ ಹಾಗೆ ಸಂತೋಷ ಪಡುತ್ತಾ ಇದ್ದರು ಅಂತ ಇದೆ **'ಉದ್ಧರ್ಷಃ ಆಸ'** ಬಕಾಸುರನನ್ನ ಸಂಹಾರ ಮಾಡುವಂತಹ ಪ್ರಸಂಗ ಒದಗಿ ಬಂದಿದೆ ಅಂತ ಗೊತ್ತಾದರೆ ಭೀಮಸೇನ ದೇವರು ನರ್ತನ ಮಾಡಿದ್ದಾರೆ ಅದು ಅತ್ಯಂತ ಯೋಗ್ಯವಾದದ್ದು. ಜರಾಸಂಧನ ಸಂಹಾರ ಮಾಡುವಂತಹ ಪ್ರಸಂಗದಲ್ಲಿಯೂ ಅಷ್ಟು ಉತ್ಸಾಹದಿಂದ ಸಂಹಾರ ಮಾಡುತ್ತಾರೆ ಅಷ್ಟು ದೊಡ್ಡದಾದ ಪವಿತ್ರವಾದ ಕಾರ್ಯ ಅಂತ ಶ್ರೀಕೃಷ್ಣ ಪರಮಾತ್ಮನಿಗೆ ಅವರು ಸಮರ್ಪಣೆ ಮಾಡುತ್ತಾರೆ ಯಜ್ಞವನ್ನು. ಕೊನೆಗೆ ಭಗವಂತನಿಗೆ ಅರ್ಪಣೆ ಮಾಡುವಂತೆ ಈ ಜರಾಸಂಧನಂತಹ ದುಷ್ಟನ ಸಂಹಾರವೇ ಒಂದು ದೊಡ್ಡ ಯಜ್ಞ ಅಂತ ಅದನ್ನು ಕೃಷ್ಣ ಪರಮಾತ್ಮನಿಗೆ ಅರ್ಪಣೆ ಮಾಡಿದ್ದು ಉಂಟು. ಅದು ಸರಿಯಾದದ್ದು ಯಾಕೆಂದರೆ ಅದು ದುಷ್ಟರ ದುರ್ಜನರ

ಸಂಹಾರ, ದುರ್ಜನರ ಜೊತೆಗೆ ಯುದ್ಧವನ್ನು ಮಾಡಿ ಅವರನ್ನು ನಾಶ ಮಾಡಿ ಸಜ್ಜನರ ರಕ್ಷಣೆಯನ್ನು ಮಾಡುವಂತಹ, ಧರ್ಮದ ಸ್ಥಾಪನೆಯನ್ನು ಮಾಡುವಂತಹ ಪವಿತ್ರ ಕಾರ್ಯ. ಇದು ಹಾಗಲ್ಲ ಸುಮ್ಮನೆ ಯುದ್ಧ ಸಜ್ಜನರ ಜೊತೆಗೆ ಯುದ್ಧ ತಾನು ಅಸುರನಾಗಿ ಸಜ್ಜನರ ಜೊತೆಗೆ ಯುದ್ಧವನ್ನು ಮಾಡುವುದಕ್ಕೆ ಬಯಸುವುದು ಸರಿಯಾದದ್ದಲ್ಲ. ಈ ರೀತಿ ಇವರು ಸಂವಾದ ಮಾಡುತ್ತ ಮಾಡುತ್ತ ಇರುವಾಗಲೇನೆ ದ್ವಜ ಬಿದ್ದೇ ಹೋಗಿದೆ. ಬಿದ್ದಾಕ್ಷಣಕ್ಕೆ ಕುಂಭಾಂಡ ಅವನು ಸಜ್ಜನ, ಬಾಣನೂ ಸಜ್ಜನನೇ ಒಳಗೆ ಅಸುರಾವೇಶ ಆ ಕುಂಭಾಂಡ ಹೇಳುತ್ತಾ ಇದ್ದಾನೆ. ಇದು ಒಂದು ಧ್ವಜ ಬಿದ್ದದ್ದು ಮಾತ್ರ ಅಲ್ಲ ನನ್ನ ತಿಳುವಳಿಕೆಯ ಪ್ರಕಾರ, ಶಾಸ್ತ್ರದ ಪ್ರಕಾರ, ಶಕುನ ಶಾಸ್ತ್ರ, ಜ್ಯೋತಿಷ್ಯ ಶಾಸ್ತ್ರ, ಧರ್ಮ ಶಾಸ್ತ್ರ ಇವುಗಳೆಲ್ಲದರ ಹಿನ್ನೆಲೆಯಲ್ಲಿ ನಾನು ಹೇಳುತ್ತೇನೆ ನಿನ್ನ ಸರ್ವನಾಶ ಹತ್ತಿರ ಬಂದಿದೆ. ಅಸುರ ಕುಲಕ್ಕೆ ನಾಶವಾಗುವುದು ಹತ್ತಿರ ಬಂತು, ಉಲ್ಕಾಪಾತ ಆಗುತ್ತ ಇದೆ, ಪರ್ವಕಾಲ ಇಲ್ಲದಿದ್ದರೂ ಕೂಡ ಸೂರ್ಯ ಗ್ರಹಣವಾಗುತ್ತಾ ಇದೆ, ದಕ್ಷಿಣ ದಿಕ್ಕಿನಲ್ಲಿ ಧೂಮಕೇತು ಕಾಣಿಸುತ್ತಾ ಇದೆ, ನಾನಾ ವಿಧವಾದಂತಹ ಅಪಶಕುನಗಳು ಆಗುತ್ತಾ ಇದೆ, ಅಂಗಾರಕ ವಕ್ರವಾಗಿ ನಡೆಯುತ್ತ ಇದ್ದಾನೆ ನಿನ್ನ ಜನ್ಮ ನಕ್ಷತ್ರದಲ್ಲಿ ಎಲ್ಲ ದುಷ್ಟ ಗ್ರಹಗಳು ಸೇರಿಕೊಂಡಿವೆ ಎಚ್ಚರಿಕೆ ಎಚ್ಚರಿಕೆ ಎಚ್ಚರಿಕೆ ಅಂದ ಕುಂಭಾಂಡ. ಭಾರೀ ಊರಿನ ಎಲ್ಲ ಶೋಣಿತಪುರದ ಎಲ್ಲ ಮಹಿಳೆಯರು ಪುರುಷರು ಅತ್ಯಂತ ಭಕ್ತಿಯಿಂದ ಯಾವ ವೃಕ್ಷದ ಪೂಜೆಯನ್ನು ಮಾಡಬೇಕು ಅಂತಹ ಪವಿತ್ರವಾದ ಶ್ರೇಷ್ಠವಾದ ಪೂಜ್ಯವಾದ ದೇವತಾ ಸನ್ನಿಧಾನ ಇರುವ ವೃಕ್ಷ ಇದ್ದಕ್ಕಿದ್ದಂತೆ ಹೊತ್ತುಕೊಂಡು ಬಿದ್ದಿದೆ.

ತವ ರಾಜ್ಯವಿನಾಶಾಯ ಭವಿಷ್ಯನ್ತಿ ನ ಸಂಶಯಃ ॥ (116.71 ವಿಷ್ಣುಪರ್ವ)

ವಯಂ ಚಾನ್ಯೇ ಚ ಸಚಿವಾ ಭೃತ್ಯಾಸ್ತೇ ಚ ತವಾನುಗಾಃ ।
ಕ್ಷಯಂ ಯಾಸ್ಯನ್ತಿ ನಚಿರಾತ್ಸರ್ವೇ ಪಾರ್ಥಿವ ದುರ್ನಯಾತ್ ॥ (116.72 ವಿಷ್ಣುಪರ್ವ)

ಇದೆಲ್ಲ ನೋಡಿದರೆ ನೀನೊಬ್ಬ ಮಾಡಿದ ತಪ್ಪಿನಿಂದ ನಾವು ಹಾಗೂ ಉಳಿದೆಲ್ಲ ಮಂತ್ರಿಗಳು, ಇನ್ನೆಲ್ಲ ಅನುಚರರು ನಾಶವನ್ನು ಹೊಂದುವಂತಹ ಸಂದರ್ಭ ಇದೆ ಅಂತ ಏನು ಹೇಳಿದರೂ ಅವನ ತಲೆಯಲ್ಲಿ ಹೋಗಲಿಲ್ಲ ಯಾಕೋ ಬಾಣಾಸುರನಿಗೆ. ಮಧ್ಯಪಾನವನ್ನು ಮಾಡುತ್ತ ಇದ್ದಾನೆ, ದೈತ್ಯ ದಾನವ ಸ್ತ್ರೀಯರ ಜೊತೆಗೆ ವಿಹಾರವನ್ನು ಮಾಡುತ್ತ, ಮದ್ಯಪಾನವನ್ನು ಮಾಡುತ್ತ ಉನ್ಮತ್ತನಾಗಿ ಇದ್ದಾನೆ, ಸರಿ ಭಗವಂತನ ಸಂಕಲ್ಪ ಅಂತ ಕುಂಭಾಂಡ ಸುಮ್ಮನಾಗಿದ್ದಾನೆ.

ಸ ಕಿಂಸಖಾ ಸಾಧು ನ ಶಾಸ್ತಿ ಯೋಧಿಪಂ ಹಿತನ್ ನ ಯಸ್ಸಂಶೃಣುತೇ ಸ ಕಿಂ ಪ್ರಭುಃ ।

ಕೊನೆಗೆ ಒಂದು ಮಾತು ಹೇಳುವುದನ್ನ ಬಿಡಬಾರದು. ಮಂತ್ರಿಯಾಗಿ ಹೇಳುವುದು ನನ್ನ ಕರ್ತವ್ಯ ನಾನು ಚೆನ್ನಾಗಿ ಹಿತನುಡಿಗಳನ್ನು ನುಡಿಯಬೇಕು ಕೇಳುವುದು ಬಿಡುವುದು ಅವನಿಗೆ ಬಿಟ್ಟದ್ದು.

ಯೇ ಹಿ ದೇವೈರ್ವಿರುಧ್ಯನ್ತೇ ಪುಣ್ಯಕರ್ಮಭಿರಾಹವೇ ।
ಯಥಾ ಬಲಿರ್ನಿಯಮಿತಸ್ತಥಾ ತೇ ಯಾನ್ತಿ ಸಂಕ್ಷಯಮ್ ॥ (116.89 ವಿಷ್ಣುಪರ್ವ)

ಉದಾಹರಣೆಯನ್ನು ಹುಡುಕಿಕೊಂಡು ಹೋಗಬೇಕೇನೋ ನಿಮ್ಮಪ್ಪ ಬಲಿ ಏನಾದ ಮೂರು ಲೋಕಗಳ ರಾಜನಾಗಿದ್ದನಲ್ಲ ಏನಾದ, ಒಂದೇ ಕ್ಷಣದೊಳಗೆ ದೇವರು ಅವನನ್ನು ಕೆಳಗೆ ಅಟ್ಟಿದ, ದೇವತೆಗಳ ವಿರೋಧ ಮಾಡಿದ್ದಕ್ಕೆ. ಅಂತಹ ಪರಮ ಭಗವದ್ಭಕ್ತನಾದಂತಹ ಬಲಿಯೇ ಬಲಿಗೆ ಬಿದ್ದ, ಕೆಳಗೆ ಬಿದ್ದ. ನೀನು ಪುನಃ ಆ

ದೇವತೆಗಳ ವಿರೋಧವನ್ನು ಮಾಡುವುದಕ್ಕೆ ಹೊರಟಿದ್ದೀ ಯುದ್ಧ ಮಾಡಬೇಕು ಅಂತ ಅಂತೀಯಾ ಅದೇ ಹಣೆಬರಹ ನಿನಗೂ ಆಗುತ್ತೆ ಮತ್ತೆ ಆ ಪ್ರಯಾಸ ಮಾಡಬೇಡ ಆ ದುಷ್ಟವಾದ ಸಾಹಸ ಬೇಡ ಅಂತ ಬೇಕಾದಷ್ಟು ಹೇಳಿದ್ದಾನೆ ಅವನು ಕೇಳಿಲ್ಲ.

ಈಚೆಗೆ ರುದ್ರ ದೇವರ ಅದ್ಭುತವಾದಂತಹ ಲೀಲೆಗಳು ಪ್ರಮಥ ಗಣ ಎಲ್ಲ ಎದುರಿಗೆ ಇದೆ ಅಪ್ಸರಾ ಸ್ತ್ರೀಯರಿದ್ದಾರೆ, ಗಂಧರ್ವರಿದ್ದಾರೆ ರುದ್ರ ದೇವರ ಅನುಚರರಿದ್ದಾರೆ, ಸೇವಕರಿದ್ದಾರೆ ಪಾರ್ವತಿ ಪರಮೇಶ್ವರರ ಸಂತೋಷಕ್ಕಾಗಿ ಯಥೇಚ್ಛ ನೃತ್ಯ ಗಾನ ಎಲ್ಲಾ ನಡೆಯುತ್ತ ಇದೆ. ಆ ಸಂದರ್ಭದಲ್ಲಿ ಚಿತ್ರಲೇಖ ಅನ್ನುವ ಒಬ್ಬ ಅಪ್ಸರಾ ಸ್ತ್ರೀ ಅವಳು ಪಾರ್ವತಿಯಂತೇನೆ ವೇಷ ಹಾಕಿಕೊಂಡು ರುದ್ರ ದೇವರ ಎದುರಿಗೆ ನಾಟ್ಯವನ್ನು ಮಾಡಿದ್ದಾಳೆ, ಗಾನವನ್ನು ಮಾಡಿದ್ದಾಳೆ ರುದ್ರ ದೇವರಿಗೆ ಬಹಳ ಸಂತೋಷ ಆಯಿತು. ಪಾರ್ವತಿಯ ಹಾಗೇನೇ ಕಾಣಿಸುವ ರೀತಿಯಲ್ಲಿ ನೀನು ವೇಷ ಧಾರಣೆಯನ್ನು ಮಾಡಿ ನಿನ್ನ ಒಂದು ಕೌಶಲವನ್ನು ತೋರಿಸಿದ್ದೀ ಬಹಳ ಸಂತೋಷ ಅಂತ ಇಬ್ಬರೂ ಪಾರ್ವತಿ ಪರಮೇಶ್ವರರು ವಿಶೇಷವಾಗಿ ಅವಳಿಗೆ ಅನುಗ್ರಹ ಮಾಡಿದ್ದಾರೆ. ಉಳಿದ ಅಪ್ಸರಾ ಸ್ತ್ರೀಯರಿಗೆ ಏನೋ ಒಂದು ಅಸೂಯೆ ಇವಳೊಬ್ಬಳೇ ಏನು ಬಹಳ ದೊಡ್ಡ ಅಪ್ಸರಾ ಸ್ತ್ರೀ ನಾವೆಲ್ಲಾ ಅಲ್ಲವಾ ನಾವೂ ಕೂಡ ಹಾಗೆ ತೋರಿಸುತ್ತೇವೆ ಅಂತ ನೂರಾರು ಜನ ಪಾರ್ವತಿ ವೇಷ, ನೂರಾರು ಜನ ಅಲ್ಲಿರುವಂತಹ ಗಂಧರ್ವರು ರುದ್ರ ದೇವರ ವೇಷವನ್ನು ಹಾಕಿಕೊಂಡು ಅಲ್ಲಿ ನಾಟಕವನ್ನು ಮಾಡಿದ್ದಾರೆ. ಆಗ ಇವಳೊಬ್ಬಳೇ ಬಹಳ ದೊಡ್ಡವಳು ಅಂತನ್ನುವ ಏನೊಂದು ಕೀರ್ತಿ ಅವಳಿಗೆ ಇತ್ತೋ ಆ ಕೀರ್ತಿಯನ್ನು ಅಪಹರಿಸಿ ನಾವೆಲ್ಲರೂ ಸಮರ್ಥರು ಅಂತ ತೋರಿಸಿಕೊಳ್ಳಬೇಕು ಅಂತ ಎಲ್ಲರೂ ಕೂಡ ಪ್ರಯತ್ನ ಮಾಡಿದ್ದಾರೆ. ರುದ್ರ ದೇವರು ಯಾರಲ್ಲಿ ಗುಣ ಇದೆ ಅವರಿಗೆ ವಿಶೇಷವಾಗಿ ಅನುಗ್ರಹ, ಎಲ್ಲರೂ ಚೆನ್ನಾಗಿ ನಾಟ್ಯವನ್ನು ಮಾಡಿದ್ದಾರೆ, ಎಲ್ಲರೂ ಚೆನ್ನಾಗಿ ಗಾನವನ್ನು ಮಾಡಿದ್ದಾರೆ ಅಂತ ಅವರವರ ಯೋಗ್ಯತೆಗೆ ತಕ್ಕಂತೆ ಎಲ್ಲರಿಗೂ ಕೂಡ ರುದ್ರ ದೇವರು, ಪಾರ್ವತಿ ದೇವಿಯರೂ ಅನುಗ್ರಹವನ್ನು ಮಾಡಿದ್ದಾರೆ. ಈ ಕಡೆಗೆ ಬಾಣಾಸುರನ ಮಗಳು ಬಾಣಾಸುರ ಮಗನಾಗಿದ್ದನಲ್ಲ ಈಗ ರುದ್ರ ದೇವರಿಗೆ ಬಾಣಾಸುರನ ಮಗಳು ಅಂದರೆ ರುದ್ರ ದೇವರಿಗೆ ಮೊಮ್ಮಗಳಾದಂತೆ ಉಷಾ ದೇವಿ ಆ ಉಷಾ ದೇವಿ ಪಾರ್ವತಿ ಪರಮೇಶ್ವರರನ್ನು ನೋಡುತ್ತ ನಿಂತು ಬಿಟ್ಟಿದ್ದಾಳೆ.

ಅಂತರ್ಗತಂ ಪ್ರಾಣಭೃತಾಂ ಹಿ ವೇದ ಸರ್ವಂ ಭವಾನ್ ಭಾವಂ ಅತೋಽಭಿಧಾಸ್ಯೇ ।

(43 ರಘುವಂಶ ಮಹಾಕಾವ್ಯ ದ್ವಿತೀಯಃ ಸರ್ಗಃ)

ಪಾರ್ವತಿ ದೇವಿಗೆ ಏನು ಬಿಚ್ಚಿ ಬಾಯಿ ಬಿಟ್ಟು ಹೇಳಬೇಕಾದ ಅವಶ್ಯಕತೆ ಇಲ್ಲ ಪಾರ್ವತಿ ಪರಮೇಶ್ವರರು ಇಬ್ಬರೂ ಕೂಡ ಮಹಾನುಭಾವರು. ಆ ಮನೋಭಿಮಾನಿಗಳಾದ ರುದ್ರ ದೇವರಿಗೆ ಆ ರುದ್ರ ದೇವರ ಅಧೀನಳಾದ ವಾಗಭಿಮಾನಿನಿಯಾದಂತಹ ಮನಸ್ಸಿನಲ್ಲಿ ಇರುವುದನ್ನು ತಿಳಿಯುವ ಸಾಮರ್ಥ್ಯ ಇರುವಂತಹ ಪಾರ್ವತಿ ದೇವಿಗೆ ಉಷಾ ದೇವಿಯ ಮನಸ್ಸಿನಲ್ಲಿ ಏನು ಆಲೋಚನೆಗಳಿರಬಹುದು ಅನ್ನುವುದು ಗೊತ್ತು. ಉಷಾ ದೇವಿಗೆ ನನ್ನ ವಿವಾಹ ಯಾವಾಗ, ಪಾರ್ವತಿ ಪರಮೇಶ್ವರರು ಯಾವ ರೀತಿಯಲ್ಲಿ ಸಂತೋಷವಾಗಿದ್ದಾರೆ ಇಂತಹ ನಾಟಕ ನಾಟ್ಯಗಳು ಸಂಗೀತ ಇವೆಲ್ಲ ವೈಭವ ನಡೆಯುತ್ತ ಇದೆ, ಇದನ್ನೆಲ್ಲ ನಾನು ಯಾವಾಗ ನೋಡುವುದು, ನಾನು ಯಾವಾಗ ಮದುವೆ ಆಗುವುದು, ನನಗೆ ಯಾವಾಗ ಗಂಡನ ಜೊತೆಗೆ ವಿಹಾರ ಮಾಡುವಂತಹ ಅವಕಾಶ ಸಿಕ್ಕೀತು ಇದೆಲ್ಲ ನೀನು ಆಲೋಚನೆ ಮಾಡುತ್ತ ಇದ್ದೀ ತಾನೇ ಅಂತ ಕೇಳೇಬಿಟ್ಟಿದ್ದಾಳೆ ಪಾರ್ವತಿ. ಅವಳಿಗೆ ಮಾತನಾಡುವುದಕ್ಕೆ ಸಂಕೋಚವಾಗಿದೆ ಅದು ಸತ್ಯ ಇತ್ತು ಆಗ ಮೊಮ್ಮಗಳೇ ಅನ್ನೋದಕ್ಕೋಸ್ಕರ ವರ ಕೊಟ್ಟೇ ಬಿಟ್ಟಿದ್ದಾಳೆ ಪಾರ್ವತಿ.

ಉಷೇ ತ್ವಂ ಶೀಘ್ರಮಪ್ಯೇವಂ ಭರ್ತ್ರಾ ಸಹ ರಮಿಷ್ಯಸಿ ।
ಯಥಾ ದೇವೋ ಮಯಾ ಸಾರ್ಧಂ ಶಙ್ಕರಃ ಶತ್ರುನಾಶನಃ ॥ (117.16 ವಿಷ್ಣುಪರ್ವ)

ರುದ್ರ ದೇವರು ನನಗೆ ಹೇಗೆ ಅನುಗ್ರಹವನ್ನು ಮಾಡುತ್ತಾರೋ ನೀನು ನಿನ್ನ ಗಂಡನ ವಿಶೇಷ ಅನುಗ್ರಹಕ್ಕೆ ಪಾತ್ರಳಾಗಿ ಸುಖವಾಗಿ ಜೀವನವನ್ನು ಮಾಡುತ್ತೀಯಾ ಏನು ಚಿಂತನೆಯನ್ನು ಮಾಡಬೇಡ ಏನೂ ಮಾತನಾಡಿಲ್ಲ ಉಷಾ ದೇವಿ ಸುಮ್ಮನೆ ಇದ್ದಾಳೆ. ಆಗ ಮನಸ್ಸಿನಲ್ಲಿ ಮತ್ತೆ ಅಂದುಕೊಂಡಿದ್ದಾಳೆ ವರ ಕೊಡುತ್ತಾ ಇದ್ದಾಳೆ ಪಾರ್ವತಿ ದೇವಿ ಕಾಲವನ್ನು ಹೇಳುತ್ತಾ ಇಲ್ಲವಲ್ಲ ಯಾವತ್ತು ಅಂತ ಹೇಳಿಲ್ಲವಲ್ಲ ಎಂದೋ ಒಂದು ದಿನ ಅಂತಂದರೆ ಎಂದೋ ಒಂದು ದಿನ ಮದುವೆ ಆಗಿಯೇ ಆಗುತ್ತೆ ಅದು ಯಾವತ್ತು ಅಂತ. ಆ ಮನಸ್ಸಿನ ಭಾವನೆಯೂ ಅರ್ಥವಾಗಿದೆ ಪಾರ್ವತಿಗೆ ಮತ್ತೆ ಉತ್ತರ ಕೊಡುತ್ತಾ ಇದ್ದಾಳೆ ಪಾರ್ವತಿ ವೈಶಾಖ ಮಾಸ ಹತ್ತಿರ ಬಂತು ವೈಶಾಖ ಶುದ್ಧ ದ್ವಾದಶೀ ರಾತ್ರಿ ನೀನು ಮಲಗಿದಾಗ ಸ್ವಪ್ನದಲ್ಲಿ ಯಾವ ಒಬ್ಬ ಪುರುಷನ ದರ್ಶನ ನಿನಗಾಗುತ್ತೋ ಆ ಪುರುಷನ ಜೊತೆಗೇನೆ ನಿನಗೆ ಮದುವೆ ಆಗುತ್ತೆ ಚಿಂತೆ ಮಾಡಬೇಡ ಹೋಗು ಅಂತ ಪಾರ್ವತಿ ದೇವಿ ಹೇಳಿದ್ದಾಳೆ. ಸತ್ಯವಾದಂತಹ ವಚನ ಪಾರ್ವತಿ ದೇವಿ ನುಡಿದ ವಚನ ಅತ್ಯಂತ ಸತ್ಯವಾದದ್ದು.

ನ ಹಿ ದೇವ್ಯಾ ವಚೋ ಮಿಥ್ಯಾ ಭವಿಷ್ಯತಿ ಕದಾಚನ । (117.24 ವಿಷ್ಣುಪರ್ವ)

ಅತ್ಯಂತ ಪ್ರೀತಿಪೂರ್ವಕವಾಗಿ ಅನುಗ್ರಹಪೂರ್ವಕವಾಗಿ ಅವಳು ನುಡಿದದ್ದು ಸರ್ವಥಃ ಸುಳ್ಳು ಆಗುವುದಿಲ್ಲ ಸತ್ಯವಾಗುತ್ತೆ ಅಂತನ್ನುವ ವಿಶ್ವಾಸ ಉಷಾ ದೇವಿಗೆ ಇದೆ ಅವಳು ಆ ರೀತಿ ದಾರಿಯನ್ನು ಕಾಯುತ್ತ ಇದ್ದಾಳೆ. ಈ ರೀತಿಯಾಗಿ ಉಷಾ ದೇವಿ ಚಿಂತೆಯನ್ನು ಮಾಡುತ್ತ ಇದ್ದಾಳೆ ಯಾವಾಗ ಕಾಲ ಹತ್ತಿರ ಬಂದೀತು, ಯಾವಾಗ ಮದುವೆಯಾಗುತ್ತದೆ ಅನ್ನುವ ಆಲೋಚನೆಯೊಳಗೆ ಉಷಾ ದೇವಿ ಇದ್ದಾಳೆ. ಅವಳಿಗೆ ಏನಾಗಿದೆ ಅನ್ನುವುದು ಉಳಿದವರಿಗೆ ಗೊತ್ತಿಲ್ಲ ಪಾರ್ವತಿ ವರ ಕೊಟ್ಟದ್ದು ತೆಗೆದುಕೊಂಡದ್ದು ಇವರಿಗೆ ಗೊತ್ತು ಆದರೆ ಸಾಮಾನ್ಯರಿಗೆ ಅದು ಗೊತ್ತಿಲ್ಲ ಉಳಿದವರಿಗೆಲ್ಲ. ಏನೋ ಇವಳಿಗೆ ಮನಸ್ಸಿನಲ್ಲಿ ವ್ಯಥೆ, ಯಾವುದೋ ಚಿಂತೆಯೊಳಗೆ ಇದ್ದಾಳೆ ಅಂತ ಅನೇಕ ವೈದ್ಯರಿಗೆ ತೋರಿಸಿದ್ದಾರೆ ಆ ವೈದ್ಯರು ನಾನಾ ರೀತಿಯಾದ ಔಷಧೋಪಚಾರಗಳನ್ನು ಮಾಡಿದರೂ ಇವಳಿಗೆ ಏನು ಸಮಾಧಾನ ಆಗಿಲ್ಲ ಕೊನೆಗೆ ಹೇಳಿದರು ಇವಳು ಅತ್ಯಂತ ರೂಪವತಿ ಆದದ್ದರಿಂದ ಬಹಳ ಜನರ ದೃಷ್ಟಿ ದೋಷ ಇದೆ.

ದೃಷ್ಟಿಪಾತಃ ಕೃತಸ್ತಾಭಿಸ್ತೇನ ಪುತ್ರ್ಯಾಂ ವ್ಯಥಾಭವತ್ ।
ರಕ್ಷಾಮನ್ತ್ರೈಸ್ತಥಾ ಪೀತೈಃ ಸರ್ಷಪೈಸ್ತಾಂ ಕುಮಾರಿಕಾಮ್ ॥ (117.58 ವಿಷ್ಣುಪರ್ವ)

ಆ ದೃಷ್ಟಿ ದೋಷ ಪರಿಹಾರ ಮಾಡುವಂತಹ ಮಂತ್ರಗಳನ್ನು ಹೇಳಿ ಬಿಳಿ ಸಾಸಿವೆಗಳನ್ನೆಲ್ಲ ಉಪಯೋಗಿಸಿ ಇವಳಿಗೆ ಆ ರಕ್ಷೆಯನ್ನು ಮಾಡಿದರೆ ಇವಳಿಗೆ ದೃಷ್ಟಿ ದೋಷ ಪರಿಹಾರವಾದೀತು ಅಂತ ಉಪಾಯವನ್ನು ಹೇಳಿದ್ದಾರೆ, ಅನೇಕ ಮಂತ್ರಗಳಿಂದ ಅಭಿಮಂತ್ರಣ ಮಾಡಿದ ನೀರಿನಿಂದ ಪ್ರೋಕ್ಷಣೆ ಅಭಿಷೇಕಾದಿಗಳನ್ನೆಲ್ಲಾ ಮಾಡಿಸಿ ಅಂತ ನಾನಾ ಉಪಾಯಗಳನ್ನು ಮಾಡಿದ್ದಾರೆ. ಸಾಮಾನ್ಯವಾಗಿ ಇಂತಹ ಮಾನಸವಾದ ವ್ಯಥೆ ಏನಾದರೂ ಇದ್ದರೆ ಆ ವ್ಯಥೆಯ ಪರಿಹಾರಕ್ಕೆ ರುದ್ರ ದೇವರಿಗೆ ಅಭಿಷೇಕ ಮಾಡಿಸುವುದುಂಟು. ಪದ್ಮಾವತಿ ವಿವಾಹದ ಪ್ರಸಂಗದಲ್ಲಿ ವೇಂಕಟೇಶ ಮಹಾತ್ಮೆಯಲ್ಲಿ ಕೇಳುತ್ತೀರಿ ಆಗಸ್ತ್ಯೇಶ್ವರನ ಅಭಿಷೇಕಕ್ಕೆ ಅಂತ ಧರಣೀ ದೇವಿ ಆಕಾಶ ರಾಜ ಕೊಟ್ಟು ಕಳಿಸಿರುತ್ತಾರೆ ಪದ್ಮಾವತಿಯ ಸಖಿಯರನ್ನೆಲ್ಲ. ಆ ರೀತಿ ಇಲ್ಲಿ ಸಾಕ್ಷಾತ್ ರುದ್ರ ದೇವರೇ ಎದುರಿಗೆ ಇದ್ದಾರೆ, ಪಾರ್ವತಿ ದೇವಿಯೇ ಎದುರಿಗೆ ಇದ್ದಾಳೆ ಮನೋಭಿಮಾನಿಗಳಾದ ರುದ್ರ ದೇವರ ಪಾರ್ವತಿ ದೇವಿಯರ ಅನುಗ್ರಹಕ್ಕೆ ಪಾತ್ರಳಾದಂತಹ

ಇವಳಿಗೆ ಇನ್ನು ಪ್ರತ್ಯೇಕ ಮತ್ತೆ ಅಭಿಷೇಕ ಏನು ಅನ್ನುವ ಒಂದು ಆಲೋಚನೆ ಆದರೂ ವೈದ್ಯರು ಆ ಸೂಚನೆಯನ್ನು ಕೊಟ್ಟಿದ್ದಾರೆ.

ಪಾನೀಯೈರಭಿಷೇಕೇಣ ಪರಾ ಶಾನ್ತಿರ್ಭವಿಷ್ಯತಿ । (117.59 ವಿಷ್ಣುಪರ್ವ)

ಸರಿ ಇಷ್ಟು ಸೂಚನೆಯನ್ನು ಕೊಟ್ಟು ಅವರು ಹೋಗಿದ್ದಾರೆ. ಉತ್ತಮವಾದಂತಹ ಯೋಗ್ಯನಾದ ವರನನ್ನ ಇವಳು ಹೊಂದುವುದರದೊಳಗೆ ಯಾವುದೇ ವಿಧವಾದ ಸಂಶಯವಿಲ್ಲ

ಇಯಂ ಚ ರಾಜಕನ್ಯಾ ಹಿ ಭರ್ತೃಯೋಗ್ಯಾ ಕಿಮುಚ್ಯತೇ ।
ಪಿತುಃ ಪ್ರಸಾದಾನ್ಮಾತುಶ್ಚ ಪ್ರಾಪ್ನುಯಾತ್ಸದೃಶಂ ವರಮ್ ॥ (117.64 ವಿಷ್ಣುಪರ್ವ)

ಯೋಗ್ಯನಾದ ವರನನ್ನ ಹೊಂದುತ್ತಾಳೆ ಏನು ಚಿಂತೆ ಇಲ್ಲ ಅಂತ ಭರವಸೆಯನ್ನು ಕೊಟ್ಟಿದ್ದಾರೆ. ಈ ಕಡೆಗೆ ವೈಶಾಖ ಮಾಸ ಶುಕ್ಲಪಕ್ಷ ಬರುವುದನ್ನೇ ಕಾಯುತ್ತ ಇದ್ದಳು ವೈಶಾಖ ಮಾಸ ಬಂತು ಶುಕ್ಲಪಕ್ಷ ಏಕಾದಶೀ ಕಳೆಯಿತು ದ್ವಾದಶೀ ರಾತ್ರಿ ಬೆಳಗ್ಗೆ ಪಾರಣೆಯಾಗಿದೆ ದ್ವಾದಶೀ ರಾತ್ರಿ ಪಾರ್ವತಿ ದೇವಿಯ ಸತ್ಯ ವಚನದಂತೆ ಸ್ವಪ್ನದಲ್ಲಿ ಒಬ್ಬ ಶ್ರೇಷ್ಠ ಪುರುಷನನ್ನು ನೋಡಿದ್ದಾಳೆ. ಸೌಂದರ್ಯ ಸಾರ, ಅತೀ ಸುಂದರನಾದ ವ್ಯಕ್ತಿ, ಮಹಾಪರಾಕ್ರಮಿ ಪರಮ ಸುಂದರನಾಗಿ ಇರುವಂತಹ ವ್ಯಕ್ತಿ ಅಂತಹ ವ್ಯಕ್ತಿಯನ್ನು ನೋಡಿದ್ದಾಳೆ ಆ ವ್ಯಕ್ತಿ ಪುರುಷ ಬಂದು ಈ ಉಷಾ ದೇವಿಗೆ ವಿಶೇಷವಾಗಿ ಸಂತೋಷವನ್ನು ಪಡಿಸಿದ್ದಾನೆ. ಆಗ ಉಷಾ ದೇವಿಗೆ ಎಚ್ಚರವಾದ ಕೂಡಲೇ ಬಹಳ ದುಃಖವಾಗಿದೆ ಈ ರೀತಿ ಸ್ವಪ್ನದಲ್ಲಿ ಯಾವುದೋ ಪುರುಷನ ಸಂಗ ನನಗೆ ಆಯಿತಲ್ಲ ಅಂತ ಬಹಳ ದುಃಖ ಪಡುತ್ತಾ ಇದ್ದಾಳೆ.

ಕಥಮೇವಂ ಕೃತಾ ನಾಮ ಕನ್ಯಾ ಜೀವಿತುಮುತ್ಸಹೇ ॥ (118.14 ವಿಷ್ಣುಪರ್ವ)

ಕನ್ಯೆಯಾದ ನನಗೆ ಸ್ವಪ್ನದಲ್ಲಿಯೂ ಪರ ಪುರುಷನ ದರ್ಶನ ಇಲ್ಲಿಯವರೆಗೆ ಆಗಿಲ್ಲ ಈ ರೀತಿ ಪರಪುರುಷ ಸಂಗ ಆಗಿದೆ ಅಂತನ್ನುವುದಕ್ಕೆ ಬಹಳ ದುಃಖವನ್ನು ಪಟ್ಟು ನಾನು ದೇಹ ತ್ಯಾಗವನ್ನೇ ಮಾಡುತ್ತೇನೆ ಅಂತ ಪಾರ್ವತಿ ವರ ಕೊಟ್ಟದ್ದು ಮರೆತು ಹೋಗಿದೆ, ಆ ರೀತಿ ದುಃಖವನ್ನು ಪಡುತ್ತಾ ಇದ್ದಾಳೆ ಎಲ್ಲ ಸ್ತ್ರೀಯರು ಹಿರಿಯರು ಬಂದು ಅವಳಿಗೆ ಉಪದೇಶ ಮಾಡುತ್ತ ಇದ್ದಾರೆ.

ವ್ಯಭಿಚಾರೇಣ ತೇ ದೇವಿ ನಾಸ್ತಿ ಕಶ್ಚಿದ್ವ್ಯತಿಕ್ರಮಃ ।
ನ ಚ ಸ್ವಪ್ನಕೃತೋ ದೋಷೋ ಮರ್ತ್ಯಲೋಕೇಽಸ್ತಿ ಸುನ್ದರಿ ॥ (118.20 ವಿಷ್ಣುಪರ್ವ)

ಸ್ವಪ್ನದಲ್ಲಿ ನೀನು ಬುದ್ಧಿಪೂರ್ವಕವಾಗಿ ಯಾವುದೇ ದೋಷವನ್ನು ಮಾಡದಿರುವಾಗ ಕೇವಲ ಆ ಪುರುಷನ ಸಂಗವನ್ನ ಸ್ವಪ್ನದಲ್ಲಿ ನೀನು ಮಾಡಿದ ಮಾತ್ರಕ್ಕೆ ಅದು ಕನ್ಯಾತ್ವ ಹಾನಿ ಆಯಿತು ಅಂತ ನೀನು ತಿಳಿಯಬೇಡ ಇದನ್ನು ಯಾವ ಧರ್ಮ ಶಾಸ್ತ್ರಜ್ಞರು ಹೇಳುವುದಿಲ್ಲ.

ಏವಂ ವಿಪ್ರರ್ಷಯೋ ದೇವಿ ಧರ್ಮಾಜ್ಞಾಃ ಕಥಯನ್ತಿ ವೈ ।
ಮನಸಾ ಚೈವ ವಾಚಾ ಚ ಕರ್ಮಣಾ ಚ ವಿಶೇಷತಃ ॥ (118.21 ವಿಷ್ಣುಪರ್ವ)

ದುಷ್ಟಾ ಯಾ ತ್ರಿಭಿರೇತೈಸ್ತು ಪಾಪಾ ಸಾ ಪ್ರೋಚ್ಯತೇ ಭುವಿ ।

ಮನಸ್ಸು ಅಥವಾ ಮಾತು ಅಥವಾ ಕೃತಿ ಎಲ್ಲಿಯಾದರೂ ದೋಷ ಇದ್ದರೆ ಎಚ್ಚರ ಇದ್ದಾಗ, ಮನಸ್ಸು ಮಾತು ಕೃತಿಗಳಿಂದ ದೋಷ ನಡೆದಾಗ ಅವಳನ್ನು ದುಷ್ಟ ಅಂತ ಹೇಳುವುದು ಉಂಟು ನೀನು ಮಾನಸಿಕವಾಗಿಯೂ ಶುದ್ಧಳಾಗಿದ್ದೀ, ವಚನದಿಂದಲೂ ಶುದ್ಧಳು, ಕರ್ಮದಿಂದಲೂ ಶುದ್ಧಳು ನಿನಗೆ ತಿಳಿಯದಂತೆ ಸ್ವಪ್ನದಲ್ಲಿ ನೀನು ಸಂಗ ಮಾಡಿದ ಮಾತ್ರಕ್ಕೆ ಸರ್ವಥಃ ನಿನಗೆ ದೋಷ ಇಲ್ಲ ಅಂತ ಹೇಳಿದ್ದಾರೆ. ಅಷ್ಟಾದರೂ ಅವಳ ಮನಸ್ಸಿಗೆ ಸಮಾಧಾನವಾಗದಿರುವಾಗ ಕುಂಭಾಂಡ ಎಂಬ ಮಂತ್ರಿಯ ಮಗಳು ರಾಜಕುಮಾರಿಯಾದ ಈ ಉಷಾ ದೇವಿಗೆ ಅವಳು ಸಮಾಧಾನ ಹೇಳುತ್ತಾಳೆ ಅವಳಿಗೆ ಗೊತ್ತು ಪಾರ್ವತಿ ಕೊಟ್ಟ ವರ. ನೀನೇ ಅವತ್ತು ಹೇಳಿದ್ದೆ ಅಲ್ಲ ಪಾರ್ವತಿ ವರ ಕೊಟ್ಟಿದ್ದಾಳೆ ವೈಶಾಖ ಶುದ್ಧ ದ್ವಾದಶೀ ಪುರುಷನ ದರ್ಶನವಾಗುತ್ತದೆ ಅಂತ ಆಗಿದೆ, ದೇವಿಯ ವರದ ಪ್ರಕಾರ ದರ್ಶನವಾದಾಗ ನೀನು ಇದು ಏನೋ ಒಂದು ಅಪರಾಧ ನಡೆದಿದೆ ಅಂತನ್ನುವ ಭಾವನೆಯಿಂದ ಅಳುತ್ತಾ ಇದ್ದೀ ಪ್ರಾಣ ತ್ಯಾಗ ಮಾಡುತ್ತೇನೆ ಅಂತ ಹೇಳುತ್ತೀಯಲ್ಲ ಏನು ತಲೆ ಕೆಟ್ಟಿದೆಯಾ. ನಿನಗೆ ದೇವಿಯ ವರ ಅದನ್ನು ಶಾಪ ಅಂತ ತಿಳಿದುಕೊಳ್ಳುತ್ತಾರಾ ಯಾರಾದರೂ ಅಂತ ಓ ಹೋ ಅಂತ ನೆನಪಾಗಿದೆ ಅವಳಿಗೆ ಹೌದು ಪಾರ್ವತಿ ದೇವಿ ಹೇಳಿದ್ದಳು ಅಂತ ನೆನಪಾದಕ್ಷಣಕ್ಕೆ.

ಅಭವನ್ನಷ್ಟಶೋಕಾ ಸಾ ಬಾಣಪುತ್ರೀ ಶುಭೇಕ್ಷಣಾ ॥ (118.32 ವಿಷ್ಣುಪರ್ವ)

ಆವಾಗ ಮನಸ್ಸಿನಲ್ಲಿರುವ ಶೋಕ ತಾಪಗಳೆಲ್ಲ ಪರಿಹಾರವಾಗಿದೆ ಸಮಾಧಾನವಾಗಿದೆ ಬೇರೆಯದು ಪ್ರಾರಂಭವಾಗಿದೆ. ಮತ್ತೆ ಹಠ ಹಾಗಾದರೆ ಅವನನ್ನು ಮದುವೆ ಆಗಲೇಬೇಕು, ಅವನನ್ನು ಕರೆದುಕೊಂಡು ಬರಲೇಬೇಕು ಇವತ್ತೆ ಅವನನ್ನು ಕರೆದುಕೊಂಡು ಬಂದರೆ, ಮದುವೆ ಮಾಡಿದರೆ ನಾನು ಬದುಕುತ್ತೇನೆ ಇಲ್ಲದೇ ಇದ್ದರೆ ಪ್ರಾಣ ಬಿಡುತ್ತೇನೆ. ಇಷ್ಟು ಹೊತ್ತು ಅವನು ಯಾರು ಪುರುಷ ಬಂದದ್ದು ಸಂಗ ಮಾಡಿದ್ದು ನಾನು ಪ್ರಾಣ ತ್ಯಾಗ ಮಾಡುತ್ತೇನೆ ಅಂತ ಅಂದವಳು ಈಗ ಪಾರ್ವತಿಯ ಸಮ್ಮತಿ ಇದೆ ಅವಳ ಅನುಗ್ರಹದಿಂದ ಬಂದಂತಹ ವರ ಅಂತಾದರೆ ಹಾಗಾದರೆ ಅದು ಅಧರ್ಮ ಅಲ್ಲ ಅಂತಾಯಿತು. ಅದು ಅಧರ್ಮ ಅಲ್ಲ ಅಂತಾದರೆ ಆ ವರನ ಜೊತೆಗೆ ವಿವಾಹವಾಗಲೇಬೇಕು ಏನಾದರೂ ಮಾಡಿ ಅಂತ ಹಠಕ್ಕೆ ಬಿದ್ದಿದ್ದಾಳೆ ಏನು ಮಾಡಬೇಕು ಆ ವರ ಅಂದರೆ ಯಾವ ವರ, ಇವಳು ತಾನು ಕನಸಿನಲ್ಲಿ ಕಂಡಿದ್ದಾಳೆ ಅಕ್ಕಪಕ್ಕಲ್ಲಿದ್ದವರು ಹೇಗೆ ಕರೆದುಕೊಂಡು ಬರುವುದು. ಎಚ್ಚರದಲ್ಲಿದ್ದಾಗ ಕಂಡದ್ದನ್ನು ಅಕ್ಕಪಕ್ಕದವರು ನೋಡಬಹುದು, ಕನಸಿನಲ್ಲಿ ಕಾಣುವಾಗ ಯಾವ ವ್ಯಕ್ತಿ ಕನಸು ಕಾಣುತ್ತಾನೆ ಅವನೊಬ್ಬನೇ ಕಾಣಬಹುದು ಅಥವಾ ಅವಳೊಬ್ಬಳೇ ನೋಡಬಹುದು, ಈಗ ಇವಳೊಬ್ಬಳೇ ಕಂಡದ್ದು. ಅದಕ್ಕಾಗೇನೆ ಜಾಗ್ರದವಸ್ಥೆಯಲ್ಲಿ ತೋರುವಂತಹ ಏನು ವಸ್ತುಗಳಿವೆ ಅವುಗಳು ವಿಶ್ವ ಸಂಬಂಧಿ, ಎಲ್ಲರೂ ನೋಡಬಹುದು ಅದಕ್ಕಾಗೇನೆ ಅದನ್ನು ನೇಮಿಸುವ ಭಗವಂತನ ರೂಪಕ್ಕೆ ವಿಶ್ವ ಅಂತ ಹೆಸರು. ಯಾಕೆ ಅಂದರೆ ಅದು ವಿಶ್ವ ಸಂಬಂಧಿಯಾದ ವಸ್ತು ಅದನ್ನು ನಿಯಮನ ಮಾಡುವ ಪರಮಾತ್ಮನಿಗೆ ವೈಶ್ವಾನರ ಅಂತ ಕರೆಯುತ್ತಾರೆ ಅದು ವಿಶ್ವಕ್ಕೆ ಸಂಬಂಧ ಪಟ್ಟದ್ದು. ಸಾಪ್ನ ಪದಾರ್ಥಗಳು ಇದು ವಿಶ್ವಕ್ಕೆ ಸಂಬಂಧ ಪಟ್ಟದ್ದಲ್ಲ ಆ ಒಬ್ಬ ವ್ಯಕ್ತಿಗೆ ಮಾತ್ರ ಸಂಬಂಧ ಪಟ್ಟದ್ದು, ಅವನ ಪ್ರಜ್ಞೆಗೆ ಮಾತ್ರ ಗೋಚರವಾಗುವುದು, ಅವನ ತೇಜಸ್ಸಿಗೆ ಮಾತ್ರ ಗೋಚರವಾಗುವುದು ಅದು ತೈಜಸ ಅದನ್ನು ನಿಯಮನ ಮಾಡುವ ಭಗವಂತ ತೈಜಸ ರೂಪಿ ಆಗಿರುವಂತಹ ಪರಮಾತ್ಮ. ಹೀಗಾಗಿ ನೀನು ಕಂಡದ್ದನ್ನ ನಾವು ಎಲ್ಲಿಂದ ಕರೆದುಕೊಂಡು ಬರುವುದು ಅಂತ ಜನ ಕೇಳುತ್ತಾರೆ ಅದೆಲ್ಲಾ ನನಗೆ ಗೊತ್ತಿಲ್ಲ ಕರೆದುಕೊಂಡು ಬರಬೇಕು ಅಂತ. ಆಗ ಚಿತ್ರಲೇಖಾ ಅನ್ನುವಂತಹ ಅಪ್ಸರಾ ಸ್ತ್ರಿ ಪಾರ್ವತಿಯ ವೇಷ ಹಾಕಿ ಪಾರ್ವತಿ

ಪರಮೇಶ್ವರರಿಂದ ವಿಶೇಷವಾದ ಬಹುಮಾನವನ್ನು ಪಡೆದಂತಹ ಅಪ್ಸರಾ ಸ್ತ್ರಿ ಹೆಸರಿಗೆ ತಕ್ಕ ಹಾಗೆಯೇ ಇದ್ದಳು. ಚಿತ್ರಲೇಖಾ ಅಂತ ಅವಳ ಹೆಸರು ಬರೀ ನಾಟ್ಯ ಮಾಡುವುದು ಅಲ್ಲ ಅವಳ ಕೆಲಸ ಚಿತ್ರವನ್ನೂ ಬರೆಯುತ್ತಾ ಇದ್ದಾಳೆ ಅದ್ಭುತವಾದ ಚಿತ್ರವನ್ನು ಬಿಡಿಸುವಂತಹ ಕಲೆ ಅವಳದು, ಅವಳನ್ನು ಕರೆದಿದ್ದಾಳೆ.

ಅಪ್ಸರಾ ಚಿತ್ರಲೇಖಾ ವೈ ಕ್ಷಿಪ್ರಂ ವಿಜ್ಞಾಪ್ಯತಾಂ ಸಖಿ ॥ (118.48 ವಿಷ್ಣುಪರ್ವ)

ಅವಳನ್ನ ಬೇಗ ಹೇಳಿ ಕಳಿಸಿದ್ದಾಳೆ ಅವಳು ಬಂದಿದ್ದಾಳೆ ಅವಳ ಎದುರಿಗೆ ಈ ಎಲ್ಲ ವಿಚಾರಗಳನ್ನು ತಿಳಿಸಿದಾಗ ಅವಳು ಹೇಳಿದಳು ಒಂದು ಕೆಲಸ ಮಾಡುತ್ತೇನೆ ನಾನು. ಅವಳ ಪ್ರಾಪಂಚಿಕ ಜ್ಞಾನ ಹೇಗಿತ್ತು ಅಂತ ಆಲೋಚನೆ ಮಾಡಿ ಒಬ್ಬ ಅಪ್ಸರಾ ಸ್ತ್ರಿ ಆದರೂ ಕೂಡ ಇವತ್ತಿನ ಕಾಲದ ಯಾವುದೇ ಮಾಧ್ಯಮಗಳ ಯುಗ ಅಲ್ಲ ಅದು, ಕುಳಿತಲ್ಲಿಯೇನೆ ಎಲ್ಲವನ್ನೂ ನೋಡಬಹುದು ಕೇಳಬಹುದು ಅನ್ನುವಂತಹ ಇವತ್ತಿನ ಟೆಕ್ನಾಲಜಿಯ ಕಾಲ ಅಲ್ಲ. ಅಂತಹ ಕಾಲದಲ್ಲಿಯೂ ಅವಳು ಹೇಳುತ್ತಾಳೆ ಸಮಕಾಲದೊಳಗ ದೇವಲೋಕದಲ್ಲಿ ದಾನವರಲ್ಲಿ ಯಕ್ಷರಲ್ಲಿ ಗಂಧರ್ವರಲ್ಲಿ ನಾಗಗಳಲ್ಲಿ ರಾಕ್ಷಸರಲ್ಲಿ ಮನುಷ್ಯರಲ್ಲಿ ಯಾರೆಲ್ಲ ಯುವಕರು ಅಂತ ಇದ್ದಾರೆ, ಸುಂದರರು ಅಂತ ಇದ್ದಾರೆ, ಮನಸ್ಸಿನ ಆಕರ್ಷಣೆ ಮಾಡುವಂತಹ ಅದ್ಭುತವಾದ ಸೌಂದರ್ಯವನ್ನ ರೂಪವನ್ನ ಪಡೆದವರು ಎಷ್ಟೆಲ್ಲ ಇದ್ದಾರೆ ಎಲ್ಲರ ಚಿತ್ರವನ್ನು ಬಿಡಿಸಿ ಬಿಡುತ್ತೇನೆ ನೀನು ತಲೆಕೆಡಿಸಿಕೊಳ್ಳಲೇ ಬೇಡ. ಆದರೊಳಗೆ ನೀನು ಕಂಡದ್ದು ಯಾರನ್ನ ಅಂತ ಹೇಳಿಬಿಡು ಮುಗಿದು ಹೋಯಿತು. ಯಾಕೆಂದರೆ ನಿನಗೆ ಹೇಳಲಿಕ್ಕೆ ಬರುತ್ತಾ ಇಲ್ಲ ನೀನು ಮಹಾನುಭಾವಳು ರಾಜಕುಮಾರಿ ಆದರೆ ಚಿತ್ರ ಬರೆಯುವುದಕ್ಕೆ ಬರುವುದಿಲ್ಲ ಚಿತ್ರಾನ್ನ ತಿನ್ನಲಿಕ್ಕೆ ಬರುತ್ತಿರಬಹುದು, ನನಗೆ ಚಿತ್ರ ಬರೆಯಲಿಕ್ಕೆ ಬರುತ್ತದೆ ಆದರೆ ನಿನ್ನ ಕನಸನ್ನು ನಾನು ಊಹಿಸುವ ಹಾಗಿಲ್ಲ ಅದಕ್ಕಾಗಿ ಒಂದು ಕೆಲಸ ಮಾಡುತ್ತೇನೆ.

ದೇವದಾನವಯಕ್ಷಾಣಾಂ ಗನ್ಧರ್ವೋರಗರಕ್ಷಸಾಮ್ ।
ಯೇ ವಿಶಿಷ್ಟಾಃ ಪ್ರಭಾವೇಣ ರೂಪೇಣಾಭಿಜನೇನ ಚ ॥ (118.58 ವಿಷ್ಣುಪರ್ವ)

ಒಳ್ಳೆಯ ಕುಲ ಇರಬೇಕು ಉತ್ತಮ ರೂಪವಂತರಾಗಿರಬೇಕು ಪರಾಕ್ರಮಿಗಳಾಗಿರಬೇಕು ಅಂಥವರು ಯಾರೆಲ್ಲ ಇದ್ದಾರೆ

ಮನುಷ್ಯಲೋಕೇ ಯೇ ಚಾಪಿ ಪ್ರವರಾ ಲೋಕವಿಶ್ರುತಾಃ ॥ (118.59 ವಿಷ್ಣುಪರ್ವ)

ಬಹಳ ಮಹತ್ವದ್ದು ನೋಡಿ ಬರೀ ರೂಪವಂತವರನ್ನೆಲ್ಲ ತೋರಿಸಿ ಬಿಡುವುದಿಲ್ಲ ಆ ರೂಪ ಇದೆ ಕುಲ ಇರಲಿಲ್ಲ ಅಂದರೆ ಏನು ಮಾಡುವುದು ಅಂಥವರನ್ನು ನೀನು ಆರಿಸುವುದು ಬೇಡ ಅಂತ ರೂಪ ಕುಲ ಪರಾಕ್ರಮ ಎಲ್ಲಾ ಸದ್ಗುಣಗಳು ಇದ್ದಂಥವರು ಯಾರೋ ಅವರದೇ ಚಿತ್ರವನ್ನು ಬಿಡಿಸುತ್ತೇನೆ ಅಂತ ಹೇಳಿದ್ದಾಳೆ ಏಳು ದಿನದ ಸಮಯವನ್ನು ಕೇಳಿದ್ದಾಳೆ. ಏಳು ದಿನದೊಳಗೆ ಎಲ್ಲಾ ಚಿತ್ರಗಳನ್ನು ತಂದು ಅವಳ ಎದುರಿಗೆ ನಿಲ್ಲಿಸಿದ್ದಾಳೆ ಅದರಲ್ಲಿ ನೋಡಿದರೆ ಅನಿರುದ್ಧನೂ ಇದ್ದ ಅನಿರುದ್ಧನನ್ನ ಇವನೇ ಸ್ವಪ್ನದಲ್ಲಿ ಬಂದದ್ದು ಅಂತ. ಅಯ್ಯೋ ಇವನಾ ಇವನು ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮನ ಪೌತ್ರ ದ್ವಾರಕಾ ಪಟ್ಟಣದಲ್ಲಿ ಇರುತ್ತಾನೆ ಆದರೆ ಇವನನ್ನು ಕರೆದುಕೊಂಡು ಬರುವುದು ಬಹಳ ಕಷ್ಟ. ಬಾಣಾಸುರನ ಪಟ್ಟಣದಲ್ಲಿ ಹೇಗೆ ಭಾರೀ ದಿಗ್ಬಂಧನ ಇದೆ ಭಾರೀ ಕಾವಲು ಇದೆ ಭಾರೀ ದುರ್ಗಗಳೆಲ್ಲ ಇವೆ ಇದರ ಹತ್ತರಷ್ಟು ದ್ವಾರಕಾ ಪಟ್ಟಣದಲ್ಲಿ ಇದೆ ಅಲ್ಲಿ ಒಳಗಡೆ ಹೋಗುವುದಕ್ಕೆ ಸಾಧ್ಯ ಇಲ್ಲ ನಾನೇನು ಮಾಡಲಿ

ಅಂತ. ಆಯಿತು ಚಿತಾ ನಿರ್ಮಾಣ ಮಾಡು ಪ್ರಾಣ ತ್ಯಾಗವನ್ನು ಮಾಡುತ್ತೇನೆ ಅಷ್ಟೇ ಇರುವುದು '**ಬಾಲಾನಾಂ ರೋಧನಂ ಬಲಂ**' ಅಳುತ್ತಾ ಇದ್ದಾಳೆ ಅಷ್ಟೇ. ಸರಿ ಹಾಗೆಲ್ಲ ಮಾಡಲಿಕ್ಕೆ ಹೋಗಬೇಡ ಏನಾದರೂ ಒಂದು ಉಪಾಯವನ್ನು ಮಾಡುತ್ತೇನೆ ಅಂತ ಹೇಳಿ ಹೊರಟಿದ್ದಾಳೆ, ಯೋಗ ಪ್ರಭಾವದಿಂದ ನಾನು ಒಳಗೆ ಪ್ರವೇಶ ಮಾಡಿ ಏನೋ ಒಂದು ಮಾಡಿ ಕರೆದುಕೊಂಡು ಬರುತ್ತೇನೆ ಚಿಂತೆ ಮಾಡಬೇಡ ಅಂತ. ಅಪ್ಸರಾ ಸ್ತ್ರಿ ಅವಳು ಮಹಾ ಸಾಮರ್ಥ್ಯ ಆಕಾಶ ಮಾರ್ಗದಿಂದ ದ್ವಾರಕಾ ಪಟ್ಟಣಕ್ಕೆ ಹೋಗಿ ಮೊದಲು ಗುರುಭ್ಯೋ ನಮಃ ಗುರುಗಳ ಅನುಗ್ರಹವನ್ನು ಪಡೆಯಬೇಕು ಅಂತ ನಾರದರ ಹತ್ತಿರ ಹೋಗಿದ್ದಾಳೆ. ನಾರದರು ಆಹ್ನಿಕ ಮಾಡುತ್ತಾ ಇದ್ದರು ನಮಸ್ಕಾರ ಮಾಡಿದಳು ನಾರದರಿಗೆ ಅನುಗ್ರಹ ಮಾಡಬೇಕು ಒಳ್ಳೆಯ ಕೆಲಸಕ್ಕೆ ಹೊರಟಿದ್ದೇನೆ ಅಂತ ಹೇಳಿದಳು ತಥಾಸ್ತು ಅಂತ ಅನುಗ್ರಹ ಮಾಡಿದ್ದಾರೆ. ಅವರು ಮಹಾನುಭಾವರು ಎಲ್ಲವೂ ಗೊತ್ತು ನಮ್ಮ ಕೃಷ್ಣನ ಮೊಮ್ಮಗನ ಮದುವೆ ಆಗುತ್ತದೆ ಅಂದರೆ ನಾನು ಯಾಕೆ ಬೇಡ ಅನ್ನಲಿ ಅಂತ ಅವರಿಗೆ ಒಳಗಿನ ವಿಚಾರ ಎಲ್ಲ ಗೊತ್ತು ವಿಷಯವನ್ನು ಇವಳು ಕೂಡ ವಿಜ್ಞಾಪನೆ ಮಾಡಿಕೊಂಡಿದ್ದಾಳೆ ನಾರದರು ವಿಶೇಷವಾಗಿ ಅನುಗ್ರಹವನ್ನು ಮಾಡಿದ್ದಾರೆ. ಅನುವ್ಯಾಖ್ಯಾನದಲ್ಲಿ ಶ್ರೀಮದಾಚಾರ್ಯರು ಹೇಳುತ್ತಾರೆ ಅಲ್ಪ ಸುಖಕ್ಕಾಗಿಯೂ ಮಹಾ ದುಃಖವಾಗುವುದನ್ನು ಕೂಡಾನೂ ಸಹನೆ ಮಾಡುತ್ತಾರೆ, ಯಾರು ಅವಿವೇಕಿಗಳಲ್ಲ ಮಹಾ ವಿವೇಕಿಗಳಾಗಿರುವಂತಹ ನಾರದಾದಿ ಮಹರ್ಷಿಗಳೇ ಸಹನೆ ಮಾಡುತ್ತಾರೆ. ದುಃಖವಾದರೆ ಆಗಲಿ ಸುಖ ಆಗುವುದನ್ನ ಮಾತ್ರ ತಪ್ಪಿಸಿಕೊಳ್ಳುವುದು ಬೇಡ ಅಂತ ಏನದು ಯುದ್ಧ, ಯುದ್ಧವನ್ನು ನೋಡುವಾಗ ಏನೋ ಒಂದು ಆನಂದವಾಗುತ್ತದೆ ಒಬ್ಬರು ಹೊಡೆಯುವುದು ಒಬ್ಬರು ಹೊಡೆಸಿಕೊಳ್ಳುವುದು ಆದರೆ ಬರಿ ಆನಂದ ಆಗುತ್ತಿರುವುದಿಲ್ಲ ಆ ಯುದ್ಧದೊಳಗೆ ಬಿಡುವಂತಹ ಅಸ್ತ್ರ ಪ್ರತ್ಯಸ್ತ್ರಗಳಿಂದ ಆಗುವ ತಾಪಗಳು ಕೂಡ ಸುತ್ತಮುತ್ತಲಿದ್ದವರಿಗೆಲ್ಲ ಹರಡುತ್ತದೆ ಅದು. ಅಷ್ಟೆಲ್ಲಾ ತಾಪ ಆದರೂ ಮೈಯೆಲ್ಲಾ ಧಗ ಧಗ ಅಂತ ಉರಿದರೂ ಅದನ್ನು ಸಹನೆ ಮಾಡಿದರೂ ಅಡ್ಡಿ ಇಲ್ಲ ಆ ಯುದ್ಧವನ್ನು ನೋಡಿದರೆ ಏನು ಒಂದು ಆನಂದ ಆಗುತ್ತದೆ ನೋಡಿ '**ಯುದ್ಧರಸಾತ್ತೇನ ಜಗುಃ**' ಅಂತ ಆ ಮಾತು ಇಲ್ಲಿ ಬರುತ್ತದೆ.

ಚಿತ್ರಲೇಖಾ ದೇವಿ ಒಂದು ಕೆಲಸವನ್ನಂತೂ ಮಾಡು ನೀನು ಅನುಗ್ರಹವನ್ನು ಮಾಡು ಅನ್ನುತ್ತೀ ನಾನು ಮಾಡುತ್ತೇನೆ ಯಾಕೆಂದರೆ ನನಗೆ ಎಲ್ಲಾ ಸುದ್ದಿ ಗೊತ್ತು ಅನಿರುದ್ಧನನ್ನು ಕರೆದುಕೊಂಡು ಹೋಗುತ್ತೀಯಾ ಹೋದ ಮೇಲೆ ಅಲ್ಲಿ ಸುಮ್ಮನೆ ಎಲೆ ಅಡಿಕೆ ಕೊಟ್ಟು ಮದುವೆ ಏನು ಆಗುವುದಿಲ್ಲ ಘನಘೋರ ಯುದ್ಧ ಆಗುತ್ತದೆ ಆ ಯುದ್ಧವಾಗುವ ಪ್ರಸಂಗದೊಳಗೆ ಮಾತ್ರ ನನ್ನನ್ನು ನೆನೆಸಿಕೊ, ನನ್ನ ಸ್ಮರಣೆ ಮಾಡಿದರೆ ಸಾಕು ನಾನು ಅಲ್ಲಿ ಪ್ರತ್ಯಕ್ಷ ಆಗುತ್ತೇನೆ. ನೀವು ಬಂದು ಏನು ಮಾಡುತ್ತೀರಿ ಏನಿಲ್ಲ ಆ ಯುದ್ಧ ನೋಡುತ್ತೇನೆ ಅಂದರು ನಾರದರು ಆ ಯುದ್ಧ ನೋಡಿ ಆನಂದ ಪಡುತ್ತೇನೆ ಅನ್ನುತ್ತಾರೆ ಆ ರೀತಿ ಅವಳಿಗೆ ಹೇಳಿದ್ದಾರೆ ಅನುಗ್ರಹವನ್ನು ಮಾಡಿದ್ದಾರೆ. ಅದು ಸರಿ ನಾನು ಅನಿರುದ್ಧನನ್ನ ಇದ್ದಕ್ಕಿದ್ದ ಹಾಗೆ ಕರೆದುಕೊಂಡು ಹೋಗುವ ಮಾಯಾ ಶಕ್ತಿ ಏನೋ ನನಗೆ ಏನೋ ಇದೆ ನಾನು ಕರೆದುಕೊಂಡು ಹೋಗುತ್ತೇನೆ ಆದರೆ ಮತ್ತೆ ಇಲ್ಲಿ ಇರುವ ಯಾದವರಿಂದ, ಕೃಷ್ಣನಿಂದ ನನಗೆ ತೊಂದರೆ ಆಗುತ್ತದೆಯೋ ಏನು ತೊಂದರೆ ಆಗುವುದಿಲ್ಲ ನನ್ನ ಅನುಗ್ರಹ ಇದೆ ಹೋಗು ಅಂತ ನಾರದರು ಹೇಳಿ ಕಳಿಸಿದ್ದಾರೆ ಅಲ್ಲಿ ಬಂದಿದ್ದಾಳೆ. ತಾಮಸೀ ವಿದ್ಯೆಯನ್ನು ಅವಳಿಗೆ ಉಪದೇಶ ಮಾಡಿದ್ದಾರೆ ಮುಂದಿನ ಎಲ್ಲಾ ಕಾರ್ಯಗಳಿಗೆ ಸೌಕರ್ಯವಾಗಲಿ ಅಂತ ನಾರದರೇ ಅವಳಿಗೆ ವಿದ್ಯೋಪದೇಶವನ್ನು ಮಾಡಿ ಕೊಟ್ಟು ಕಳಿಸಿದ್ದಾರೆ. ಅವಳು ಬಂದು ಒಳಗೆ ನೋಡುತ್ತಾಳೆ ಅನಿರುದ್ಧ ತನ್ನ ಪತ್ನಿಯರ ಜೊತೆಗೆ ವಿಹಾರವನ್ನು ಮಾಡುತ್ತಾ ಇದ್ದಾನೆ ಆದರೆ ಅನಿರುದ್ಧನಿಗೂ ಇದೇ ತರಹದ ಸ್ವಪ್ನ ಬಿದ್ದಿದೆ. ಉಷಾ ದೇವಿಗೆ ಯಾವ ರೀತಿ ಅನಿರುದ್ಧ ತನ್ನ ಕನಸಿನಲ್ಲಿ ಬಂದ ಹಾಗೆ ಅನಿರುದ್ಧನ ಸ್ವಪ್ನದಲ್ಲಿ ಉಷಾ ದೇವಿಯೂ ಕಂಡಿದ್ದಾಳೆ ಅವನೂ ಕೂಡ ಮಹಾನಿರ್ಲಿಪ್ತನಾಗಿ ಅನ್ನ ಇಲ್ಲ ನೀರಿಲ್ಲ ಏನಿಲ್ಲ ಯಾವಾಗಲೂ ಅವಳನ್ನೇ ನೆನೆಸುತ್ತಾ ಅವನು ಕುಳಿತಿದ್ದಾನೆ. ಅದನ್ನು ನೋಡಿದ್ದಾಳೆ ನಾರದರು ಕೊಟ್ಟ ಆ ತಾಮಸೀ



ವಿದ್ಯೆಯಿಂದ ತಾನು ಆಚ್ಛಾದನೆ ಮಾಡಿಕೊಂಡು ಯಾರಿಗೂ ಕಾಣಿಸದಂತೆ ಅನಿರುದ್ಧನಿಗೆ ಮಾತ್ರ ಕಾಣಿಸುವಂತೆ ಅಲ್ಲಿ ನಿಂತಿದ್ದಾಳೆ, ಅನಿರುದ್ಧನಿಗೆ ಎಲ್ಲ ಕುಶಲೋಪಾಚಾರಾದಿಗಳನ್ನೆಲ್ಲ ಮಾತನಾಡಿ ಈ ಎಲ್ಲ ವಿಷಯಗಳನ್ನು ತಿಳಿಸಿ ಅವನನ್ನು ಕರೆದುಕೊಂಡು ಹೊರಟೇ ಬಿಟ್ಟಿದ್ದಾಳೆ. ಉಳಿದೆಲ್ಲ ವಿಚಾರಗಳನ್ನು ಹೇಳಿದ ನನಗೂ ಕನಸು ಬಿತ್ತು ಅದೆಲ್ಲ ಪರಸ್ಪರ ಸಂಭಾಷಣೆ ಎಲ್ಲ ಮುಗಿದಿದೆ ಸರಿ ಹಾಗಾದರೆ ಕರೆದುಕೊಂಡು ಹೋಗುತ್ತೇನೆ ಅಂತ ಕರೆದುಕೊಂಡು ಹೊರಟೇ ಬಿಟ್ಟಿದ್ದಾಳೆ. ಗಾಂಧರ್ವ ವಿವಾಹ ಆಯಿತು ಉಷಾ ದೇವಿಯ ಜೊತೆಗೆ ಬಾಣಾಸುರನ ಪಟ್ಟಣದಲ್ಲಿ ಬಾಣಾಸುರನ ಅರಮನೆಯೊಳಗೆ ಅಂತಃಪುರದೊಳಗೆ ಗಾಂಧರ್ವ ವಿವಾಹವನ್ನು ಮಾಡಿಸಿಯೇ ಬಿಟ್ಟಿದ್ದಾರೆ ಅಲ್ಲಿಯೇ ಅಗ್ನಿಯ ಸೃಷ್ಟಿ ಮಾಡಿ ಗಾಂಧರ್ವ ವಿವಾಹ ಆಗಿಯೇ ಹೋಯಿತು ಬಾಣಾಸುರನಿಗೆ ಗೊತ್ತಿಲ್ಲ ವಿಷಯ. ಅತ್ಯಂತ ಸುಖವಾಗಿ ಉಷಾ ದೇವಿ ಹಾಗೂ ಅನಿರುದ್ಧ ಇಬ್ಬರೂ ಕೂಡ ಅಲ್ಲಿ ವಿಹಾರವನ್ನು ಮಾಡುತ್ತಾ ಇದ್ದಾರೆ ಇದನ್ನು ನೋಡಿದಂತಹ ರಾಕ್ಷಸರು ಕೂಡಲೇ ತಿಳಿಸಿದ್ದಾರೆ ಬಾಣಾಸುರನಿಗೆ. ನಿನ್ನ ಪ್ರೀತಿಯ ಮಗಳು ಕನ್ಯೆ ಉಷಾ ದೇವಿ ಅವಳನ್ನ ಅನಿರುದ್ಧ ಬಂದು ತಾನು ಸ್ವೀಕಾರ ಮಾಡಿದ್ದಾನೆ ವಿವಾಹ ಮಾಡಿಕೊಂಡಿದ್ದಾನೆ ನಿನಗೆ ಗೊತ್ತಿಲ್ಲದಂತೆ ಅವಳ ಜೊತೆಗೆ ಸಂಗವನ್ನು ಮಾಡುತ್ತಾ ಇದ್ದಾನೆ ಅಂತ ಗೊತ್ತಾದ ತಕ್ಷಣ ಕೂಡಲೇ ಯುದ್ಧವನ್ನು ಮಾಡುವುದಕ್ಕೋಸ್ಕರ ಆಜ್ಞೆಯನ್ನು ಮಾಡಿದ್ದಾನೆ. ಯುದ್ಧದ ಆ ಘೋಷಣೆ ಮಾಡಿದ್ದೇ ತಡ ಚಿತ್ರಲೇಖಾ ಮರೆತಿಲ್ಲ ನೋಡಿ ಗುರುಗಳ ಆಜ್ಞೆ ನಾರದರ ಸ್ಮರಣೆಯನ್ನು ಮಾಡಿದ್ದಾಳೆ ನಾರದರು ಬಂದು ನಿಂತೇ ಬಿಟ್ಟರು ಅಲ್ಲಿ ಯುದ್ಧ ನೋಡುವುದಕ್ಕೆ.

ಸಾ ಚಿತ್ರಲೇಖಾಸ್ಮರತ ನಾರದಂ ದೇವದರ್ಶನಮ್ ॥ (119.93 ವಿಷ್ಣುಪರ್ವ)

ನಾರದರು ಬಂದಿದ್ದಾರೆ ನಾರದರು ಬಂದದ್ದು ಒಂದು ದೊಡ್ಡ ಬಲ ಅನಿರುದ್ಧನಿಗೆ ನಮ್ಮ ಪಕ್ಷದವರು ಒಬ್ಬರು ಇಲ್ಲಿದ್ದಾರೆ ಅಂತ ನಾರದರು ಅಂದರು ಏನು ಹೆದರಬೇಡ ನೀನು.

ಮಾ ಭಯಂ ಸ್ಪೃಶಿ ತೇ ವೀರ ಪ್ರಾಪ್ತೋಽಸ್ಮ್ಯದ್ಯ ಪುರಂ ತವ ॥ (119.95 ವಿಷ್ಣುಪರ್ವ)

ನಿನ್ನ ಜೊತೆಗೆ ನಾನು ಇದ್ದೇನೆ ಅಂತ ಅವರು ಏನು ಮಾಡೋರಲ್ಲ ಯುದ್ಧ, ಯುದ್ಧ ಮಾಡುವವರ ಹಿಂದೆ ನಿಲ್ಲುವವರು ಅಷ್ಟೇ ಯೋಗ್ಯತೆಯಲ್ಲಿ ಅನಿರುದ್ಧ ದೊಡ್ಡವ ಆದರೆ ಈಗ ಗುರು ಸ್ಥಾನದಲ್ಲಿದ್ದಾರೆ ಅನ್ನುವುದಕ್ಕೋಸ್ಕರ ನಾರದರು ಆಶೀರ್ವಾದವನ್ನು ಮಾಡುತ್ತಾ ಇದ್ದಾರೆ. ನಾರದರ ಆಶೀರ್ವಾದವನ್ನು ಪಡೆದು ಘೋರವಾದಂತಹ ಯುದ್ಧ ಪರಿಘ ಅಂತ ಒಂದು ಆಯುಧ ಪರಿಘ ಅನ್ನುವಂತಹ ಆಯುಧವನ್ನು ತೆಗೆದುಕೊಂಡದ್ದೇ ಬಾಣಾಸುರ ಕಳಿಸಿದಂತಹ ಎಲ್ಲಾ ಸೈನಿಕರನ್ನು ಎಲ್ಲರನ್ನೂ ಒಂದೇ ಆಯುಧದಿಂದ ಹೊಡೆದು ಓಡಿಸುತ್ತ ಇದ್ದಾನೆ. ಅವರೆಲ್ಲರೂ ಕೂಡ ಅತ್ಯಂತ ಭಯಗ್ರಸ್ಥರಾಗಿ ಯುದ್ಧವೇ ಬೇಡ ಅಂತ ಓಡಿ ಹೋಗುತ್ತಾ ಇರುವಾಗ ಬಾಣಾಸುರ ಎಲ್ಲರನ್ನು ಬೈಯುತ್ತಾ ಇದ್ದಾನೆ ಎಂತಹ ಮೂರ್ಖರು ಅನ್ನ ತಿಂದು ನನ್ನ ಮನೆಯ ಅನ್ನವನ್ನು ಉಂಡು ರಾಜ್ಯದಲ್ಲಿ ಇಷ್ಟೆಲ್ಲ ಪೋಷಣೆಯನ್ನು ಪಡೆದು ಯುದ್ಧದ ಸಂದರ್ಭದಲ್ಲಿ ನಪುಂಸಕರಂತೆ ಹೆದರಿ ಓಡುತ್ತಾ ಇದ್ದೀರಿ ನಾಚಿಕೆ ಇಲ್ಲ ಅಂತ ಎಲ್ಲರನ್ನ ಬೈಯುತ್ತಾ ಇದ್ದಾನೆ. ಸರಿ ಬೇರೆಯವರನ್ನು ಮತ್ತೆ ಕಳಿಸಿದ ಅವರ ಜೊತೆಗೂ ಮತ್ತೆ ಯುದ್ಧ ಆಗುತ್ತಾ ಇದೆ ಮೂವತ್ತೆರಡು ರೀತಿಯ ಭಾರೀ ಭಾರೀ ವಿಚಿತ್ರ ರೀತಿಯ ಯುದ್ಧಗಳನ್ನೆಲ್ಲ ಮಾಡುತ್ತಾ ಇದ್ದಾನೆ ಅನಿರುದ್ಧ ತನ್ನ ಕೌಶಲವನ್ನು ತೋರಿಸುತ್ತ ಇದ್ದಾನೆ.

'ದ್ವಾತ್ರಿಂಶತ್ ವಿಚರನ್ ನಾಭ್ಯಧೃಷ್ಯತ್' ಹೀಗೆ ಪುನಃ ಪುನಃ ತನ್ನ ಸೈನ್ಯವನ್ನೆಲ್ಲಾ ನಾಶ ಮಾಡುತ್ತಾ ಇದ್ದುದ್ದನ್ನು ಕಂಡು ಸ್ವತಃ ತಾನೇ ಕುಂಭಾಂಡನಿಗೆ ಹೇಳಿ ಬಾಣಾಸುರ ರಥದಲ್ಲಿ ಕುಳಿತು ಯುದ್ಧಕ್ಕೆ ಬರುತ್ತಾ ಇದ್ದಾನೆ. ಒಂದು

ಸಾವಿರ ಕುದುರೆಗಳನ್ನು ಕಟ್ಟಿಕೊಂಡಿದ್ದಾನೆ ತನ್ನ ರಥಕ್ಕೆ ಎಂತಹ ರಥ ಇರಬೇಕು ನೋಡಿ ಅಷ್ಟು ದೊಡ್ಡ ರಥ ಸಾವಿರ ಬಾಹುಗಳು, ಸಾವಿರ ಆಯುಧಗಳು, ಸಾವಿರ ಕುದುರೆಗಳು ಅಂತಹ ದೊಡ್ಡ ರಥದಲ್ಲಿ ಕುಳಿತು ಭಾರಿ ಘೋರವದಂತಹ ಯುದ್ಧವನ್ನು ಮಾಡುತ್ತಾ ಇದ್ದಾನೆ. ಬಾಣಗಳ ವೃಷ್ಟಿಯನ್ನೇ ಮಾಡುತ್ತಾ ಇದ್ದಾನೆ ಎಲ್ಲವನ್ನು ಅನಿರುದ್ಧ ತಡೆಯುತ್ತಾ ಇದ್ದಾನೆ ಕೇವಲ ತನ್ನ ಕೈಯಲ್ಲಿ ಇರುವಂತಹ ಚರ್ಮದಿಂದ ಆ ಎಲ್ಲ ಬಾಣಗಳನ್ನು ತಡೆದುಕೊಳ್ಳುತ್ತ ಇದ್ದಾನೆ. ಹೀಗೆ ಅಸ್ತ್ರ ಪ್ರತ್ಯಸ್ತ್ರಗಳು ನಡೆಯುತ್ತ ಇವೆ ಪರಸ್ಪರವಾಗಿ ಪ್ರಯೋಗ ಕೊನೆಗೆ ಶಕ್ತಿ ಭಾರೀ ಜ್ವಲಿಸುವಂತಹ ಶಕ್ತಿಯನ್ನ ಇವನ ಮೇಲೆ ಪ್ರಯೋಗ ಮಾಡಿದ್ದಾನೆ ಆ ಶಕ್ತಿಯನ್ನು ಕೂಡ ಇವನು ನಾಶ ಮಾಡಿದ್ದಾನೆ. ಅನಿರುದ್ಧನ ಆ ಪರಾಕ್ರಮ ಆ ಶೌರ್ಯ ಅಸ್ತ್ರಗಳ ಪ್ರಯೋಗ ಇದನ್ನ ತಾಳಲಿಕ್ಕಾಗದೇ ಕುಂಭಾಂಡ ನೋಡಿದರೆ ಸಜ್ಜನ ಆದರೆ ಒದ್ದಾಡಿ ಹೋದ ಸುತಪ್ತನಾಗಿದ್ದಾನೆ ಏನಾದರೂ ಮಾಡಿ ನೀನೂ ಬದುಕು ನಮ್ಮನ್ನೂ ಬದುಕಿಸು ನೀನು ಹೀಗೆ ಆಟ ಆಡುತ್ತಾ ಕುಳಿತರೆ ನಮ್ಮ ಗತಿ ಏನು ಸಾರಥಿಗಳಾಗಿ ಕುಳಿತವರದು **'ಮಾಯಾಮಾಶ್ರಿತ್ಯ ಯುದ್ಧಸ್ಯ'** ಆ ಮಾಯಾ ಯುದ್ಧವನ್ನು ಮಾಡಿ ಏನಾದರೂ ಮಾಡಿ ಮಹಾರಾಯ ಇವನನ್ನು ಕೊಂದು ಬಿಡು.

'ವಧ್ಯತಾಯಮ್ ಅವಯವದ್ಭ್ಯೋವ ನರಃ ಸರ್ವಾನ್ವಿಶಃ' ನಮ್ಮೆಲ್ಲರನ್ನು ಕೊಂದುಬಿಡುತ್ತಾನೆ ಇವನು, ಬೇಗನೇ ಅವನನ್ನು ಸಂಹಾರ ಮಾಡು ಅಂತ ಆ ಅನಿರುದ್ಧನ ಅಸ್ತ್ರಗಳಿಂದ ಸಂತಪ್ತನಾಗಿ ಚೆನ್ನಾಗಿ ಪೆಟ್ಟು ತಿಂದು ಕುಂಭಾಂಡ ತಾಳಲಾಗದೇ ಈ ಮಾತನ್ನು ಆಡುತ್ತಾ ಇದ್ದಾನೆ ಭಾರೀ ಜೋರಾಗಿ ಯುದ್ಧವನ್ನು ಮಾಡುತ್ತಾ ಇದ್ದಾನೆ ಬಾಣಾಸುರ ಕುಂಭಾಂಡನ ಮಾತನ್ನು ಕೇಳಿ. ಆಗ ಬಾಣಾಸುರನ ಬಲ ಜೋರಾಯಿತು ಅನಿರುದ್ಧನನ್ನ ನಾಗ ಪಾಶದಿಂದ ಕಟ್ಟಿಬಿಟ್ಟ, ಕಟ್ಟಿದ ಮೇಲೆ ಇನ್ನು ಸಂಹಾರ ಮಾಡುವುದಕ್ಕೆ ಹೊರಟಾಗ ಕುಂಭಾಂಡನಿಗೆ ಒಳಗಿನ ಸಾತ್ವಿಕತೆಯ ಜಾಗೃತಿ ಕುಂಭಾಂಡ ಹೇಳುತ್ತಾ ಇದ್ದಾನೆ ದಯವಿಟ್ಟು ಕೊಲ್ಲಬೇಡ ಇವನನ್ನು ಯಾಕೆ ಕೊಲ್ಲುತ್ತೀಯಾ ಅಂತ ಶುರುವು ಮಾಡಿಬಿಟ್ಟ. ಅಲ್ಲ ಮತ್ತೆ ಈಗ ನೀನೆ ಹೇಳಿದೆಯಲ್ಲ ಅದು ಬೇರೆ ವಿಷಯ ಆಗ ಅವನು ಬಾಣ ಪ್ರಯೋಗ ಮಾಡುತ್ತಾ ಇದ್ದ ನನಗೆ ತಡೆದುಕೊಳ್ಳುವುದಕ್ಕೆ ಆಗಲಿಲ್ಲ ಅಂತ ಆ ಮಾತು ಬಂತು ಆದರೆ ಈಗ ಅವನನ್ನು ಕಟ್ಟಿ ಬಿಟ್ಟಿದ್ದೀಯ ಅವನಿಂದ ನಮಗಂತೂ ಏನು ಭಯ ಇಲ್ಲ, ಅವನ ಪಾಡಿಗೆ ಅವನು ಅಲ್ಲಿ ಬಿದ್ದುಕೊಂಡಿರುತ್ತಾನೆ. ಯಾರು ಇದ್ದಾರೆ ಅವನ ಜೊತೆಗೆ ಒಬ್ಬನೇ ಬಂದಿದ್ದಾನೆ ಇಲ್ಲಿ ಜೊತೆಗೆ ಯಾರೂ ಸಹಾಯಕರಿಲ್ಲ ಇದ್ದವನು ಒಬ್ಬ ಅವನನ್ನು ಕಟ್ಟಿ ಬಿಟ್ಟಿದ್ದಿ ಇನ್ನು ನಮಗೆ ಇರುವ ಭಯ ಏನು ಏನೂ ಇಲ್ಲವಲ್ಲ ಯಾಕೆ ಅವನನ್ನು ಸಂಹಾರ ಮಾಡಬೇಕು.

ನಾಯಂ ವಧಕೃತಂ ದೋಷಮರ್ಹತೇ ದೈತ್ಯಸತ್ತಮ । (119.183 ವಿಷ್ಣುಪರ್ವ)

ಅರ್ಥ ಮಾಡಿಕೋ ಪರಿಸ್ಥಿತಿ ನೋಡಿಕೊಂಡು ಎಲ್ಲಾ ಕೆಲಸ ಮಾಡಬೇಕು ಗಾಂಧರ್ವ ವಿವಾಹ ಆಗಿ ಹೋಗಿದೆ ನಿನ್ನ ಮಗಳ ಜೊತೆಗೆ ಈಗ ನೀನು ಕೊಂದಿ ಅಂದರೆ ನಿನ್ನ ಅಳಿಯನನ್ನು ಕೊಂದ ಹಾಗೆ, ನಿನ್ನ ಮಗಳ ಗತಿ ಏನು ಇನ್ಯಾರು ಮದುವೆ ಮಾಡಿಕೊಳ್ಳುತ್ತಾರೆ. ಮದುವೆ ಆಗಿ ಹೋಗಿದೆ, ಮದುವೆಯಾದ ಮೇಲೆ ನಿನ್ನ ಅಳಿಯನನ್ನು ನೀನು ಕೊಂದರೆ ನಿನ್ನ ಮಗಳ ಜೀವನದ ಗತಿ ಏನು ಅದನ್ನು ವಿಚಾರ ಮಾಡು, ಹೋಗಲಿ ಬಂದವನು ಯಾರು ಅನಿರುದ್ಧ ಕೃಷ್ಣನ ಮೊಮ್ಮಗ, ಪ್ರದ್ಯುಮ್ನನ ಮಗ ಪರಮ ಸುಂದರ ಮಹಾಪರಾಕ್ರಮಿ ಇಷ್ಟೆಲ್ಲಾ ಅಸುರರನ್ನ ನಿನ್ನನ್ನ ನನ್ನನ್ನ ಈ ಪರಿಸ್ಥಿತಿಗೆ ತಂದಿಟ್ಟ. ಏನೋ ಮಾಯಾ ವಿದ್ಯೆಯಿಂದ ಅವನನ್ನ ಬಂಧನ ಮಾಡಿದ್ದಿ ಆದರೆ ನಿಜವಾಗಿ ಪರಾಕ್ರಮದಿಂದ ಅವನ ಎದುರಿಗೆ ಯುದ್ಧ ಮಾಡಲಿಕ್ಕೆ ನನಗೂ ಸಾಧ್ಯ ಇಲ್ಲ. ನಿನಗೂ ಸಾಧ್ಯ ಇಲ್ಲ ಸಾವಿರ ಬಾಹುಗಳನ್ನು ಇಟ್ಟುಕೊಂಡು ಎರಡು ಬಾಹುಗಳ ಅನಿರುದ್ಧನ ಜೊತೆಗೆ ಯುದ್ಧ ಮಾಡುವುದಕ್ಕೆ ಅವನನ್ನ ಬಂಧನ ಮಾಡಲಿಕ್ಕೆ ಇಷ್ಟೊತ್ತು ಆಯಿತು. ಇಂತಹ ಪರಾಕ್ರಮಿ ವರ ಸಿಕ್ಕಾಗ ಇನ್ನು ಮತ್ತೆ ಕೈಯಾಗ ಕುಂಡಲಿ ಹಿಡುಕೊಂಡು

ಅಲ್ಲಿ ಇಲ್ಲಿ ತಿರುಗಾಡುವುದರೊಳಗೆ ಏನು ಅರ್ಥ ಇದೆ ವರ ಬಂದಿದ್ದಾನೆ ವಿವಾಹನೂ ಆಗಿ ಹೋಗಿದೆ ಕೃಷ್ಣಾರ್ಪಣ ಅನ್ನು ಮುಗಿದೇ ಹೋಯಿತು ಜಗಳ ಆಡಬೇಡ ಅಂತ ಅವನು ಕೇಳಲಿಲ್ಲ. ಅವನು ಹೇಳುವ ಮಾತು ನೋಡಿ ಇಂತಹ ನಾಗ ಪಾಶದಿಂದ ಬಂಧನ ಮಾಡಿದಾಗ ಅಯ್ಯೋ ಬಂಧನ ಮಾಡಿಬಿಟ್ಟರಲ್ಲ ಅಂತ ಒಂದು ಚಿಂತಾ ರೇಖಾ ಆದರೂ ಕಾಣಿಸುತ್ತದೆ ಏನು ನೋಡು ಅವನ ಹಣೆಯ ಮೇಲೆ ಅಂತ ಅಂದ ಆರಾಮ ಇದ್ದಾನೆ ಅವನು ಏನೋ ಒಂದು ಡನ್ಲಪ್ ಗಾದಿ ಮೇಲೆ ಮಲಕೊಂಡ ಹಾಗೆ ನಾಗ ಪಾಶ ಕಟ್ಟಿದರೆ ನಕ್ಕೋತ ಬಿದ್ದಾನೆ ಅಳಕೋತ ಬಿದ್ದಿಲ್ಲ.

ತ್ರಿಶಿಖಾಂ ಭೃಕುಟಿಂ ಕೃತ್ವಾ ನ ಚಿನ್ತಯತಿ ನಃ ಸ್ತಿಥಾನ್ । (119.190 ವಿಷ್ಣುಪರ್ವ)

ಒಂದು ಚೂರೂ ಹುಬ್ಬು ಹಾಗೆ ಹೀಗೆ ಮಾಡಿಲ್ಲ ಹಣೆಯ ಮೇಲೆ, ರೇಖೆಯೂ ಕಾಣುತ್ತಾ ಇಲ್ಲ ಇಂತಹ ಮಹಾ ಪರಾಕ್ರಮಿ ಇದ್ದಾಗ ಎಲ್ಲಿ ಸಿಗುತ್ತೆ ಇಂತಹ ವರ.

ಕನ್ಯಾ ಚೇಯಂ ನ ಚಾನ್ಯಸ್ಯ ನಿರ್ಯಾತ್ಯೇತೇನ ಸಂಗತಾ ॥ (119.92 ವಿಷ್ಣುಪರ್ವ)

ಯದಿ ಚೇಷ್ಟತಮಃ ಕಶ್ಚಿದಯಂ ವಂಶೇ ಮಹಾತ್ಮನಾಮ್ ।
ತತಃ ಪೂಜಾಮಯಂ ವೀರಃ ಪ್ರಾಪ್ಸ್ಯತೇ ಚಾಸುರೋತ್ತಮ ॥ (119.193 ವಿಷ್ಣುಪರ್ವ)

ವಧಾ ಅಲ್ಲ ಛಂದ ವರಪೂಜಾ ಮಾಡು, ಮಾಡಿ ಮದುವೆ ಮಾಡಿಕೊಡು ಕೇಳಲಿಲ್ಲ ಅವನು ಮಹಾಮಂಡ ಶಿಖಾಮಣಿ ಸರಿ ಹೋಗಲಿ ಬಿಡು ಅಂತ ಬಿಟ್ಟಿದ್ದಾನೆ ಈ ರೀತಿ ಯುದ್ಧ ನಡೀತಾ ಇದೆ. ಈ ಕಡೆಗೆ ಅನಿರುದ್ಧ ದುರ್ಗಾ ಸ್ತೋತ್ರವನ್ನು ಮಾಡುತ್ತ ಇದ್ದಾನೆ ಹಿಂದೊಮ್ಮೆ ದುರ್ಗಾ ಸ್ತೋತ್ರ ಕೇಳಿದ್ದೀರಿ ಹಾಗೆ ಶ್ರೀಕೃಷ್ಣ ಪರಮಾತ್ಮನ ತಂಗಿ ಸಾಕ್ಷಾತ್ ಮಹಾಲಕ್ಷ್ಮೀಯ ಅವತಾರಳೇ ಅಂತಹ ದುರ್ಗಾ ದೇವಿಯನ್ನ

ಮಹೇನ್ದ್ರ ವಿಷ್ಣುಭಗಿನೀಂ ನಮಸ್ಯಾಮಿ ಹಿತಾಯ ವೈ ।
ಮನಸಾ ಭಾವಶುದ್ಧೇನ ಶುಚಿಃ ಸ್ತೋಷ್ಯೇ ಕೃತಾಞ್ಜಲಿಃ ॥ (120.6 ವಿಷ್ಣುಪರ್ವ)

ಗೌತಮೀಂ ಕಂಸಭಯದಾಂ ಯಶೋದಾನನ್ದವರ್ದ್ಧಿನೀಮ್ ।
ಮೇಧ್ಯಾಂ ಗೋಕುಲಸಮ್ಭೂತಾಂ ನನ್ದಗೋಪಸ್ಯ ನನ್ದಿನೀಮ್ ॥ (120.7 ವಿಷ್ಣುಪರ್ವ)

ಅಂತ ಸುಧೀರ್ಘವಾಗಿ ಇರುವಂತಹ ದುರ್ಗಾ ಸ್ತೋತ್ರವನ್ನು ಮಾಡಿದ್ದಾನೆ. ದುರ್ಗಾ ದೇವಿ ಪ್ರಸನ್ನಳಾಗಿದ್ದಾಳೆ ಏನು ವರ ಬೇಕು ಕೇಳಪ್ಪಾ ಅಂತ ಕೇಳಿದರೆ

ಅನಿರುದ್ಧಹಿತಾರ್ಥಾಯ ದೇವೀ ಶರಣವತ್ಸಲಾ ॥ (120.36 ವಿಷ್ಣುಪರ್ವ)
ಬದ್ಧಂ ಬಾಣಪುರೇ ವೀರಮನಿರುದ್ಧಂ ವ್ಯಮೋಕ್ಷಯತ್ ॥ (120.37 ವಿಷ್ಣುಪರ್ವ)

ನೀನು ಏನು ಚಿಂತೆ ಮಾಡಬೇಡ ನಿನಗೆ ಈ ನಾಗ ಪಾಶದಿಂದ ನಾನು ಮೋಚನೆ ಮಾಡುತ್ತೇನೆ ಆದರೂ ಕೂಡ ನಿನ್ನ ಪೂರ್ಣವಾದ ರಕ್ಷಣೆ, ನಿನ್ನ ಉದ್ಧಾರ ಶ್ರೀಕೃಷ್ಣ ಪರಮಾತ್ಮ ಬಂದ ಮೇಲೆ ಆಗುತ್ತೆ. ಅವನು ಬಂದ ಮೇಲೆ ಆ ಬಾಣಾಸುರನ ಎಲ್ಲಾ ಸಾವಿರ ಬಾಹುಗಳನ್ನ ಕತ್ತರಿಸಿ ಎರಡು ಬಾಹುಗಳನ್ನು ಮಾತ್ರ ಉಳಿಸಿ ಉಳಿದೆಲ್ಲ ಅಸುರರನ್ನು ಸಂಹಾರ ಮಾಡಿ ನಿನ್ನನ್ನು ಕರೆದುಕೊಂಡು, ಉಷಾ ದೇವಿಯನ್ನು ಕರೆದುಕೊಂಡು, ಚಿತ್ರಲೇಖೆಯನ್ನೂ

ಕರೆದುಕೊಂಡು ದ್ವಾರಕಾ ಪಟ್ಟಣಕ್ಕೆ ಸುರಕ್ಷಿತವಾಗಿ ಕರೆದುಕೊಂಡು ಹೋಗುತ್ತಾನೆ ನೀನೇನು ಚಿಂತೆ ಮಾಡಬೇಡ ಅಂತ ಇಷ್ಟು ಭರವಸೆಯನ್ನು ದುರ್ಗಾ ದೇವಿ ಅನಿರುದ್ಧನಿಗೆ ನೀಡುತ್ತಾ ಇದ್ದಾಳೆ.

ಈ ಕಡೆಗೆ ನಾರದರು ಬಂದರು ಕೃಷ್ಣನ ಹತ್ತಿರ ದ್ವಾರಕಾ ಪಟ್ಟಣಕ್ಕೆ. ಅನಿರುದ್ಧ ಈ ರೀತಿ ನಾಗ ಪಾಶದಿಂದ ಬದ್ಧನಾಗಿ ಅಲ್ಲಿ ದುಃಖ ಪಡುತ್ತ ಇದ್ದಾನೆ ನೀವೆಲ್ಲಾ ಆರಾಮ ಆಗಿ ಇದ್ದೀರಲ್ಲ ಯಾದವರು ಇಲ್ಲಿ ಏನು ಚಿಂತೆ ಇಲ್ಲದೆ ಇರುವ ಹಾಗೆ ಆ ಅನಿರುದ್ಧನನ್ನ ರಕ್ಷಣೆ ಮಾಡಬೇಕು ಅಂತ. ಈ ಮಧ್ಯದಲ್ಲಿ ಏನಾಗಿದೆ ಅಂದರೆ ಅನಿರುದ್ಧ ಅಲ್ಲಿ ಕಂಡಿಲ್ಲ ಅಂತ ಅನ್ನುವುದಕ್ಕೋಸ್ಕರ ಅಂತಃಪುರದಲ್ಲಿ ಜೋರಾಗಿ ಅಳುತ್ತಾ ಇದ್ದಾರೆ ಸ್ತ್ರೀಯರೆಲ್ಲ ಅನಿರುದ್ಧನ ಪತ್ನಿಯರು. ಇದ್ದಕ್ಕಿದ್ದ ಹಾಗೆ ಇವಳು ಮಾಯಾ ವಿದ್ಯೆಯಿಂದ ಅವನನ್ನು ಕರೆದುಕೊಂಡು ಹೋಗಿದ್ದಾಳೆ ಚಿತ್ರಲೇಖೆ ಎಲ್ಲಿ ಹೋದ, ಹೇಗೆ ಹೋದ, ಯಾಕೆ ಹೋದ ಏನೂ ಗೊತ್ತಿಲ್ಲ ಅಲ್ಲಿದ್ದವರಿಗೆ ಅಳುತ್ತಾ ಇದ್ದಾರೆ. ಆ ಅಂತಃಪುರದೊಳಗೆ ಇರುವ ಅಳುವ ಧ್ವನಿಯನ್ನ ಕೇಳಿ ಪುರುಷರೆಲ್ಲ ಒಳಗೆ ಬಂದು ಏನಾಯಿತು ಅಂತ ಯಾದವರೆಲ್ಲಾ ವಿಚಾರಿಸುತ್ತಾರೆ ಅನಿರುದ್ಧ ಕಳೆದು ಹೋಗಿದ್ದಾನೆ ಅಂತ ಗೊತ್ತಾಗಿದೆ. ಕೃಷ್ಣ ಪರಮಾತ್ಮನಿಗೆ ಬಂದು ಬೇಡಿಕೊಂಡಾಗ ಸರ್ವಜ್ಞನಾದ ಕೃಷ್ಣನಿಗೆ ಎಲ್ಲ ಗೊತ್ತಿದ್ದರೂ ರಾಜನಿಗೆ ಹೇಳಿ ಅಂದ ರಾಜನಿಗೆ ಹೇಳಿ ಚಾರರನ್ನ ಬಿಟ್ಟು ಎಲ್ಲಿದ್ದಾನೆ ಅನಿರುದ್ಧ ಅಂತ ಹುಡುಕಿಸಿಕೊಂಡು ಬನ್ನಿ ಅಂತ ಎಲ್ಲಾ ಕಡೆಗೆ ಹುಡುಕಿಕೊಂಡು ಬಂದಿದ್ದಾರೆ. ಆಗಿನ ಕಾಲದ ಚಾರರು ಕೃಷ್ಣನ ಅನುಗ್ರಹ ಮಹಾಸಾಮರ್ಥ್ಯ ಎಲ್ಲಾ ಸಪ್ತದ್ವೀಪ ಸಪ್ತಸಾಗರಗಳನ್ನೆಲ್ಲಾ ನೋಡಿಕೊಂಡು ಬಂದರು ಅಲ್ಪ ಸಮಯದೊಳಗೆ, ಎಲ್ಲಿಯೂ ಸಿಕ್ಕಿಲ್ಲ ಅನಿರುದ್ಧ ಅಂತ ಹೇಳಿದ್ದಾರೆ. ದೇವತೆಗಳೇ ಈ ಕೆಲಸ ಮಾಡಿರಬೇಕು ಅನಿರುದ್ಧನನ್ನ ಅಪಹಾರ ಮಾಡಿಕೊಂಡು ಹೋಗಿರಬೇಕು ಪಾರಿಜಾತ ಹರಣ ಅದನ್ನೆಲ್ಲ ಮಾಡಿದ್ದು ಅವರಿಗೆ ಬಹಳ ಸಿಟ್ಟು ಬಂದಿದೆಯಲ್ಲ ಹೀಗಾಗಿ ದೇವತೆಗಳೇ ಅನಿರುದ್ಧನನ್ನ ಅಪಹಾರ ಮಾಡಿಕೊಂಡು ಎಲ್ಲಿಯೋ ಮುಚ್ಚಿ ಇಟ್ಟಿರಬೇಕು ಅಂತ. ಕೃಷ್ಣ ಹೇಳಿದ ದೇವತೆಗಳ ಹೆಸರು ತೆಗೆದುಕೊಂಡರೆ ನೋಡಿರಿ ಹುಷಾರ್ ಅಂದಿದ್ದಾನೆ ಸುಮ್ಮ ಸುಮ್ಮನೆ ಅವರ ಮೇಲೆ ಅಪವಾದ ಹಾಕಬೇಡಿ.

ತತ್ಪರಸ್ತನ್ಮನಾಶ್ಚಾಸ್ಮಿ ತದ್ಭಕ್ತಸ್ತತ್ಪ್ರಿಯೇ ರತಃ ।
ಕಥಂ ಪಾಪಂ ಕರಿಷ್ಯನ್ತಿ ವಿಜ್ಞಾಯೈವಂವಿಧಂ ಹಿ ಮಾಮ್ ॥ (121.52 ವಿಷ್ಣುಪರ್ವ)

ಯಾವಾಗಲೂ ಅವರಿಗೆ ಏನು ಬೇಕೋ ಅದನ್ನು ನಾನು ಮಾಡುತ್ತೇನೆ ಅಸುರರ ಸಂಹಾರ ಮಾಡುತ್ತೇನೆ, ದೇವತೆಗಳ ರಕ್ಷಣೆ ಮಾಡುತ್ತೇನೆ, ಅಸುರರಿಂದ ರಾಜ್ಯವನ್ನು ಕಸೆದುಕೊಂಡು ದೇವತೆಗಳಿಗೆ ಕೊಟ್ಟಿದ್ದೇನೆ ಇಷ್ಟೆಲ್ಲ ಉಪಕಾರ ಮಾಡುವ ನನ್ನಲ್ಲಿ ಅವರು ಭಕ್ತಿಯನ್ನು ಮಾಡುತ್ತಾರೆ ದಾಸಾನುದಾಸರು ಅವರು ಹೇಗೆ ನನ್ನನ್ನು ವಿರೋಧ ಮಾಡಲಿಕ್ಕೆ ಸಾಧ್ಯ ಸುಮ್ಮನೆ ದೇವತೆಗಳ ಬಗ್ಗೆ ಅಪವಾದವನ್ನು ಕೊಡಬೇಡಿ ಅಂತ ಎಷ್ಟು ಪ್ರೀತಿಯಿಂದ ಪರಮಾತ್ಮ ಮಾತಾಡುತ್ತಾನೆ. ಆ ದೇವತೆಗಳು ತತ್ಪಾಭಿಮಾನಿಗಳು ಅವರ ಉಪಾಸನೆಯನ್ನು ಮಾಡಿ ಅವರ ಅನುಗ್ರಹವನ್ನು ಪಡೆಯಬೇಕು, ಅವರ ದ್ರೋಹವನ್ನು ಎಂದಿಗೂ ಮಾಡಬಾರದು ದೇವತೆಗಳಲ್ಲಿ ಭಕ್ತಿ ಮಾಡಿದರೇನೆ ಸರ್ವೋತ್ತಮನಾದ ಪರಮಾತ್ಮನಲ್ಲಿ ಆ ದೇವತೆಗಳು ಭಕ್ತಿಯನ್ನು ಮಾಡಿಸುತ್ತಾರೆ ಇಲ್ಲದೇ ಇದ್ದರೆ **'ಕುರ್ಯುರ್ವಿಷ್ಣಾವಪಿ ದ್ವೇಷಂ ದೇವಾಃ ದೇವಾವಮಾನಿನಃ'** ಭಾಗವತ ತಾತ್ಪರ್ಯದಲ್ಲಿ ಶ್ರೀಮದಾಚಾರ್ಯರು ಅನ್ನುತ್ತಾರೆ. ದೇವತೆಗಳು ಪರಮ ಭಗವದ್ಭಕ್ತರು ಆದರೆ ಅವರನ್ನ ತಾರತಮ್ಯ ಕ್ರಮದಲ್ಲಿ ನಾವು ಭಜಿಸದೆ ಇದ್ದರೆ ಪರಮಾತ್ಮನಲ್ಲಿಯೂ ದ್ವೇಷ ಮಾಡುವಂತೆ ಪ್ರಚೋದನೆ ಮಾಡಿ ನರಕಕ್ಕೆ ಹೋಗುವಂತೆ, ತಮಸ್ಸಿಗೆ ಹೋಗುವಂತೆ ಮಾಡುತ್ತಾರೆ ಅವರವರ ಯೋಗ್ಯತೆಗೆ ತಕ್ಕಂತೆ ಆದಕ್ಕಾಗಿ ಎಂದಿಗೂ ದೇವತಾ ದ್ರೋಹವನ್ನು ಮಾಡಬಾರದು. ಯಾರೋ ಒಂದು ಹೆಣ್ಣು



ಬಂದು ಆ ಅನಿರುದ್ಧನನ್ನ ಅಪಹಾರ ಮಾಡಿಕೊಂಡು ಹೋಗಿದ್ದಾಳೆ ಇಷ್ಟು ನಾನು ಹೇಳುತ್ತೇನೆ ಚಿತ್ರಲೇಖಾ ಅಂತ ಗೊತ್ತು ಹೆಸರು ಹೇಳುವುದಿಲ್ಲ ದೇವರು.

ಕದಾಚಿದಿಹ ಪುಂಶ್ಚಲ್ಯಾ ಅನಿರುದ್ಧೋ ಹೃತೋ ಭವೇತ್ । (121.54 ವಿಷ್ಣುಪರ್ವ)

ದೇವತೆಗಳು ಪರ್ವತಃ ಇದನ್ನು ಮಾಡಿದ್ದಲ್ಲ ಈ ರೀತಿ ಪರಮಾತ್ಮ ಯಾದವರಿಗೆಲ್ಲ ಸಮಾಧಾನವನ್ನು ಹೇಳಿದ್ದಾನೆ. ಆವಾಗ ನಾರದರು ಬಂದು ಈ ವಿಚಾರವನ್ನು ತಿಳಿಸಿದ್ದಾರೆ. ಸರಿ ಅಂತ ಶ್ರೀಕೃಷ್ಣ ಪರಮಾತ್ಮ ಎಲ್ಲರನ್ನು ಕರೆದುಕೊಂಡು ಶೋಣಿತಪುರಕ್ಕೆ ಹೊರಟ. ಇಷ್ಟು ಸಾವಕಾಶವಾಗಿ ನೀವು ಆನೆ ಒಂಟೆ ಕುದುರೆಗಳ ಮೇಲೆ ಹೊರಟರೆ ಹೇಗೆ ಬಹಳ ದೂರ 11,000 ಯೋಜನ ದೂರ ಇದೆ ದ್ವಾರಕಾ ಪಟ್ಟಣದಿಂದ ಶೋಣಿತಪುರ ಅದಕ್ಕೋಸ್ಕರ ಗರುಡನನ್ನೇ ಕರೆಸಬೇಕು ಅಂದಾಗ ಕೂಡಲೇ ಗರುಡ ಬಂದಿದ್ದಾನೆ. ಪರಮಾತ್ಮ ಆಜ್ಞೆ ಮಾಡೋದೆ ತಡ ಗರುಡ ಪ್ರತ್ಯಕ್ಷನಾದ. ಗರುಡ ಸ್ತೋತ್ರ ಅಂತ ಮಾಡಿಬಿಟ್ಟ ಕೃಷ್ಣ ದೊಡ್ಡ ಸ್ತೋತ್ರ, ಗರುಡ ಅಂದ ನನ್ನ ಸ್ತೋತ್ರ ಏನು ಮಾಡುತ್ತೀಯಪ್ಪ, ನಾನು ನಿನ್ನ ಸ್ತೋತ್ರ ಮಾಡಬೇಕು ನಿನ್ನ ವಾಹನ, ನೀನು ನನ್ನನೇ ಸ್ತೋತ್ರ ಮಾಡುತ್ತ ಇದ್ದೀಯಲ್ಲ

ಆತ್ಯದ್ಭುತಮಿದಂ ವಾಕ್ಯಂ ತವ ಕೃಷ್ಣ ಮಹಾಭುಜ ।
ತ್ವತ್ಪ್ರಸಾದಾಚ್ಚ ವಿಜಯಃ ಸರ್ವತ್ರೈವ ಮಹಾಭುಜ ॥ (121.113 ವಿಷ್ಣುಪರ್ವ)

ಇವತ್ತೇನಾದರೂ ಹಾರುವ ಶಕ್ತಿ ಇದೆ ನಿನಗೆ ಹೊರುವ ಶಕ್ತಿ ಇದೆ ಎಲ್ಲಿಯಾದರೂ ಕೃಷ್ಣ ಎಲ್ಲ ಹೊಗಳಿದ್ದಾನೆ ಎಲ್ಲಾ ದೇವತೆಗಳನ್ನು ಸೋಲಿಸಿ ಅಮೃತವನ್ನು ತಂದು ನಿನ್ನ ತಾಯಿಗೆ ಕೊಟ್ಟು ಅವಳನ್ನು ದಾಸ್ಯದಿಂದ ವಿಮೋಚನಾ ಮಾಡಿದಿ ವಿನಿತಾ ದೇವಿಗೆ ಅಂತ ಅದೆಲ್ಲವೂ ನಿನ್ನ ಅನುಗ್ರಹದಿಂದ ಸ್ತೋತವ್ಯ ನೀನು ತಾವಕ ಅಲ್ಲ ನೀನು ಯಾಕೆ ನನ್ನ ಸ್ತೋತ್ರ ಮಾಡುತ್ತಾ ಇದ್ದೀಯಾ.

ಸ್ತೋತವ್ಯಸ್ತ್ವಂ ಮಯಾ ಕೃಷ್ಣ ಸ್ತೌಷಿ ಮಾಂ ತ್ವಂ ಮಹಾಭುಜ । (121.114 ವಿಷ್ಣುಪರ್ವ)

ಅಂತ ಹೇಳಿ ಸುಮ್ಮನೆ ಕೂಡಬಾರದು ಇದು ದೊಡ್ಡ ಅಪರಾಧ ನಿನ್ನ ಬಾಯಿಯಿಂದ ನನ್ನ ಸ್ತೋತ್ರವನ್ನು ನಾನು ಕೇಳಿದ್ದು ಅಂತ ಹೇಳಿ ತಾನೊಂದು ಅಷ್ಟೋತ್ತರ ಶತನಾಮ ಸ್ತೋತ್ರವನ್ನೇ ಮಾಡುತ್ತಾನೆ ಗರುಡ.

ವೇದಾಧ್ಯಕ್ಷಃ ಸುರಾಧ್ಯಕ್ಷಃ ಸರ್ವಕಾಮಪ್ರದೋ ಭವಾನ್ ।
ಅಮೋಘದರ್ಶನಸ್ತ್ವಂ ಹಿ ವರಾರ್ಥೀ ವರಪ್ರದಃ ॥ (121.115 ವಿಷ್ಣುಪರ್ವ)

ಚತುರ್ಭುಜಶ್ಚತುರ್ಮೂರ್ತಿಶ್ಚಾತುರ್ಹೋತ್ರಪ್ರವರ್ತಕಃ । (121.116 ವಿಷ್ಣುಪರ್ವ)

ಇತ್ಯಾದಿಯಾಗಿ ಆ ಪರಮಾತ್ಮನ ಅದ್ಭುತವಾದ ಸ್ತೋತ್ರವನ್ನು ಮಾಡಿ **'ಸರ್ವಕಾಮಪ್ರದೋ ಭವಾನ್'** ಸರ್ವೇಷ್ಟಪ್ರದಾತ ನೀನು ಸರ್ವಾರಿಷ್ಟ ನಿವಾರಕ ಅನಂತಗುಣಗಳಿಂದ ಪರಿಪೂರ್ಣ.

ಈಶಸ್ತ್ವಂ ಚ ಮಹಾದೇವ ಅಸಂಖ್ಯೇಯಗುಣಾನ್ವಿತಃ ॥ (121.128 ವಿಷ್ಣುಪರ್ವ)

ನಿರ್ಗುಣ ಅಂತ ಅನ್ನುತ್ತಾರೆ ಪರಮಾತ್ಮನನ್ನ ಸ್ಪಷ್ಟವಾಗಿ ಸಕಲ ವೇದಾಭಿಮಾನಿ ದೇವತೆಯಾದ ಗರುಡ ಸಕಲ ವೇದಗಳ ಮಹಾತಾತ್ಪರ್ಯ ವಿಷಯವಾದದ್ದು ಯಾವುದೋ ಪರಮಾತ್ಮನ ಗುಣೋತ್ಕರ್ಷ.

ಗುಣೋತ್ಕರ್ಷೇ ದೇವದೇವಸ್ಯ ವಿಷ್ಣೋಃ ಮಹಾತಾತ್ಪರ್ಯಂ ನೈವ ಚ ಅನ್ಯತ್ರ ಸತ್ಯಂ ॥

(ವಿಷ್ಣುತತ್ವ ವಿನಿರ್ಣಯ)

ಸ್ವತಃ ಗರುಡ ಹೇಳುತ್ತಾನೆ **'ಅಸಂಖ್ಯೇಯಗುಣಾನ್ವಿತಃ'** ಎಣಿಸಲಾಗದ ಅನಂತಗುಣಗಳಿಂದ ಪರಿಪೂರ್ಣನಾಗಿದ್ದೀ ಸ್ವಾಮಿ ನೀನು ಅನುಗ್ರಹ ಮಾಡು ಅಂತ ಪ್ರಾರ್ಥನೆಯನ್ನು ಮಾಡಿದ. ಕೊನೆಗೆ ಒಂದು ಮಾತು ಹೇಳುತ್ತಾನೆ **'ಹತಾಸ್ತೇ ಯಮದಣ್ಡೇನ'**[1] ಯಾರ ಮೇಲೆ ನೀನು ಅವಕೃಪೆಯನ್ನು ಮಾಡುತ್ತಿಯೋ ಅವರು ನರಕದಲ್ಲಿ ಬಿದ್ದಂತೆ, ಯಾರನ್ನ ಪ್ರೀತಿಯಿಂದ ನೋಡುತ್ತೀಯೋ ಅವರು ಉತ್ತಮವಾದಂತಹ ಸ್ವರ್ಗಾದಿಗಳನ್ನ ಮುಖ್ಯವಾಗಿ ಮೋಕ್ಷಾದಿ ಪುರುಷಾರ್ಥಗಳನ್ನೇ ಹೊಂದಿದಂತೆ.

ಯೇ ತ್ವಯಾ ಪರಮಪ್ರೀತ್ಯಾ ಪ್ರಾಣಿನೋ ವೈ ನಿರೀಕ್ಷಿತಾಃ ॥ (121.130 ವಿಷ್ಣುಪರ್ವ)

ಇಹ ಚ ಪ್ರೀತ್ಯ ತೇ ಸರ್ವೇ ಸರ್ವಥಾ ಸ್ವರ್ಗಗಾಮಿನಃ । (121.131 ವಿಷ್ಣುಪರ್ವ)

ಆದ್ದರಿಂದ ನೀನು ಪ್ರೀತಿಯಿಂದ ನಮ್ಮನ್ನು ನೋಡಿ ಉದ್ಧಾರ ಮಾಡು ಅಂತ ಕೇಳಿದಾಗಲೂ ಪರಮಾತ್ಮ ಮತ್ತೆ ವ್ಯವಹಾರ ಬಿಟ್ಟಿಲ್ಲ ಅವನಿಗೆ ಏನು ಗರುಡನಿಗೆ ಸಲ್ಲಿಸಬೇಕಾದ ಆದರ ಗೌರವ ಆರ್ಘ್ಯಪಾದ್ಯಾದಿಗಳಿವೆಯೋ ಅವುಗಳನ್ನೆಲ್ಲ ಮಾಡಿಸಿದ್ದಾನೆ ಮಾಡಿಸಿ ಗರುಡಾರೂಢನಾಗಿ ಪರಮಾತ್ಮ ಹೊರಟಿದ್ದಾನೆ. ಅಂತರಿಕ್ಷದಲ್ಲಿ ಹೋಗುತ್ತಾ ಇರುವಾಗಲೂ ಗರುಡ ದೇವರು ಪರಮಾತ್ಮನ ಸ್ತುತಿಯನ್ನು ಮಾಡುತ್ತಾನೇ ಹೊರಟಿದ್ದಾರೆ ಅದನ್ನು ಕೇಳುತ್ತಾನೇ ಪರಮಾತ್ಮ ಹೊರಟಿದ್ದಾನೆ ಅಂತ ಹರಿವಂಶ ವರ್ಣನೆಯನ್ನು ಮಾಡುತ್ತದೆ. ಕೃಷ್ಣ ಇದ್ದಕ್ಕಿದ್ದ ಹಾಗೆ **'ದ್ವಾದ್ ಅನಂತಾನಂತಬಾಹುಕಃ'** ಅಂತ ತಂತ್ರಸಾರದಲ್ಲಿ ಶ್ರೀಮದಾಚಾರ್ಯರು ಹೇಳುತ್ತಾರೆ. ಕೃಷ್ಣನಿಗೆ ಎರಡು ಅಂದರೆ ಎರಡು ನಾಲ್ಕು ಅಂದರೆ ನಾಲ್ಕು ಎಂಟು ಅಂದರೆ ಎಂಟು ಅನಂತ ಬಾಹುಗಳು ಇವೆ ಪರಮಾತ್ಮನಿಗೆ ಯಾವಾಗ ಏನು ಬೇಕೋ ಅದನ್ನು ತೆಗೆದುಕೊಳ್ಳುತ್ತಾನೆ. ಈಗ ಇದ್ದಕ್ಕಿದ್ದ ಹಾಗೆ ಅಷ್ಟಬಾಹು ಆಗಿದ್ದಾನೆ ಕೃಷ್ಣನ ಬಲಭಾಗಕ್ಕೆ ಖಡ್ಗ ಚಕ್ರ ಗದಾ ಬಾಣ, ಎಡಭಾಗಕ್ಕೆ ಚರ್ಮ ಶಾರಂಗ ಧನುಸ್ಸು ಶಂಖ ಇವುಗಳನ್ನು ಧಾರಣ ಮಾಡಿದ್ದಾನೆ. ಸಾವಿರ ತಲೆಗಳು ಸಾವಿರ ಅಂದರೆ ಏನು ಅನಂತ ಅಂತ ಅರ್ಥ ಅನಂತ ತಲೆಗಳು ಅಷ್ಟ ಬಾಹುಗಳು ಅನಂತ ಬಾಹುಗಳನ್ನೂ ತೆಗೆದುಕೊಳ್ಳುವುದಕ್ಕೆ ಬರುತ್ತಿತ್ತು. ಲೀಲಾ, ಒಂದೊಂದು ಸಲ ಒಂದೊಂದು ರೀತಿಯ ವಿಚಿತ್ರವಾದ ಲೀಲೆ ಅವನದು ಹಿಂದೆ ಕೇಳಿದ್ದೀರಿ ಅನಂತ ಬಾಹು ಅನಂತ ಪಾದಗಳು ಹಾಗೂ ಇದೆ. ಇಲ್ಲಿ ಮಾತ್ರ ಅನಂತ ತಲೆಗಳನ್ನು ತೆಗೆದುಕೊಂಡಿದ್ದಾನೆ, ಅಷ್ಟ ಬಾಹುಗಳನ್ನು ಸ್ವೀಕಾರ ಮಾಡಿದ್ದಾನೆ ಗರುಡಾರೂಢನಾಗಿ ಅಲ್ಲಿಂದ ಹೊರಟಿದ್ದಾನೆ. ಬಲರಾಮ ದೇವರು ಕೂಡ ತಮ್ಮ ಅನಂತ ಹೆಡೆಗಳನ್ನ ಅಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ.

ಸಹಸ್ರಂ ಚೈವ ಕಾಯಾನಾಂ ವಹನ್ಸಂಕರ್ಷಣಸ್ತದಾ ॥ (122.6 ವಿಷ್ಣುಪರ್ವ)

ಇಂತಹ ಅದ್ಭುತವಾದ ರೂಪಗಳು. ಪ್ರದ್ಯುಮ್ನನೂ ತನ್ನ ಮೂಲರೂಪ ಏನಿದೆ ಕಾಮರೂಪ ಅದರ ಅಭಿವ್ಯಕ್ತಿಯನ್ನು ಮಾಡಿಕೊಂಡು ಅವನೂ ಮಹಾಪರಾಕ್ರಮದಿಂದ ಅಲ್ಲಿ ಹೊರಟಿದ್ದಾನೆ ಇವರೆಲ್ಲ ಅಲ್ಲಿ ಬಂದಿದ್ದಾರೆ.

1. 121.130 ವಿಷ್ಣುಪರ್ವ



ಯುದ್ಧಕ್ಕೋಸ್ಕರ ಎಲ್ಲರೂ ತಮ್ಮ ಮೈಗಳನ್ನು ನೋಡಿಕೊಳ್ಳುತ್ತ ಇದ್ದಾರೆ ಏನಿದು ಏನೋ ಒಂದು ವಿಚಿತ್ರವಾದ ಬೆಂಕಿಯ ಬಣ್ಣ ಬರುತ್ತಾ ಇದೆಯಲ್ಲ ನಮ್ಮ ಬಣ್ಣ ಹೀಗೆ ಇರಲಿಲ್ಲವಲ್ಲ ಅಂತ ಬಲರಾಮ ಪ್ರದ್ಯುಮ್ನ ಎಲ್ಲ ಮೈ ನೋಡಿಕೊಳ್ಳುತ್ತ ಇದ್ದಾರೆ. ನಿಮ್ಮ ಬಣ್ಣ ಅಲ್ಲ ಅಗ್ನಿ, ಅಗ್ನಿಗಳನ್ನ ಯುದ್ಧಕ್ಕೆ ಮುಂದೆ ಬಿಟ್ಟಿದ್ದಾನೆ ರುದ್ರ ದೇವರು ಆ ಬಾಣಾಸುರನ ಮೇಲಿನ ಪ್ರೀತಿಯಿಂದ ಅನೇಕ ಅಗ್ನಿಗಳನ್ನ ಅಂಗಿರಸ್ ಎಂಬ ಹೆಸರಿನ ಒಂದು ಅಗ್ನಿ. ಇದಲ್ಲದೇ ಇನ್ನು ಅನೇಕ ತರಹದ ಅಗ್ನಿಗಳು ಸ್ವಾಹಾಕಾರಕ್ಕೆ ಸಂಬಂಧ ಪಟ್ಟ ಕಲ್ಮಾಷಾ, ಕುಸುಮ, ದಹನ, ಶೋಷಣ, ತಪನ ಅಂತ ಐದು ಅಗ್ನಿಗಳು, ಸ್ವಧಾಕಾರಕ್ಕೆ ಸಂಬಂಧಪಟ್ಟಂತಹ ಪಿತರ, ಪತಗ, ಸ್ವರ್ಣ, ಗಾಧ, ಭ್ರಾಜ ಅಂತ ಐದು ತರಹದ ಅಗ್ನಿಗಳು ಅವುಗಳೆಲ್ಲವನ್ನು ಯುದ್ಧಕ್ಕೆ ಮುಂದೆ ಕಳಿಸಿದ್ದಾನೆ ಆ ಅಗ್ನಿಗಳ ಬಣ್ಣ ನಿಮ್ಮ ಮೈಮೇಲೆ ಕಾಣಿಸುತ್ತಾ ಇವೆ. ಆ ಎದುರಿಗಿರುವ ಶತ್ರುಗಳ ಬಣ್ಣ ಅದು, ಏನೋ ಬಣ್ಣ ಬಣ್ಣ ಅಂತ ನೋಡಿಕೊಳ್ಳುತ್ತಾ ಕೂಡಬೇಡರಿ ಯುದ್ಧ ಆಡಿರಿ ಅಂದ ಘೋರವಾದಂತಹ ಯುದ್ಧ ಪ್ರಾರಂಭವಾಗಿದೆ. ಆ ಎಲ್ಲ ಅಗ್ನಿಗಳನ್ನು ಕೂಡ ಪರಮಾತ್ಮ ಸುದರ್ಶನ ಚಕ್ರದಿಂದ ತೇಜಸ್ಕವಾಗುವಂತೆ ಮಾಡಿದ್ದಾನೆ ನಿರ್ವೀರ್ಯವಾಗುವಂತೆ ಮಾಡಿದ್ದಾನೆ, ಅಂಗಿರಸ್ ಎಂಬಂತಹ ಹೆಸರಿನ ಅಗ್ನಿಯನ್ನೂ ಕೂಡ ನಾಶ ಮಾಡಿಬಿಟ್ಟಿದ್ದಾನೆ ಪರಮಾತ್ಮ. ಈ ರೀತಿ ಕೋಟಿ ಕೋಟಿ ಸೈನಿಕರೆಲ್ಲ ಭಾರೀ ಭಾರೀ ಆಯುಧಗಳನ್ನು ತೆಗೆದುಕೊಂಡು ಬರುತ್ತಾ ಇದ್ದಾರೆ ಎಲ್ಲರನ್ನೂ ಕೂಡ ಪರಮಾತ್ಮ ನಾಶ ಮಾಡುತ್ತ ಇದ್ದಾನೆ.

ಕೃಷ್ಣ ಕೃಷ್ಣ ಮಹಾಬಾಹೋ ಯದೇತದ್ಪ್ರಶ್ಯತೇ ಬಲಮ್ ।
ಏತೈಃ ಸಹ ರಣೇ ಯೋದ್ಧುಮಿಚ್ಛಾಮಿ ಪುರುಷೋತ್ತಮ ॥ (122.61 ವಿಷ್ಣುಪರ್ವ)

ಬಲರಾಮ ದೇವರು ಪರಮಾತ್ಮನಿಗೆ ಕೃಷ್ಣನಿಗೆ ಹೇಳುತ್ತಾರೆ ಇದೇನು ಸಾಗರದಂತೆ ಸೈನ್ಯ ಬರುತ್ತ ಇದೆ ಬಾಣಾಸುರನ ಸೈನ್ಯ ಅವರ ಜೊತೆಗೆ ನಾನು ಯುದ್ಧ ಮಾಡಬೇಕು ಅಂತ ನನಗೆ ಯಾಕೋ ಬಹಳ ಉತ್ಸಾಹ ಬರುತ್ತ ಇದೆ ನನಗೊಂದು ಸ್ವಲ್ಪ ಅವಕಾಶ ಕೊಡು ಎಲ್ಲಾನು ನೀನೇ ಸಂಹಾರ ಮಾಡಿ ಬಿಡಬೇಡ ಅಂತ ಬೇಕಾದಷ್ಟು ಯುದ್ಧ ಮಾಡು, ಕೃಷ್ಣ ಮಾಡು ಯುದ್ಧವನ್ನು ಮಾಡು ಅಂತ ಬಲರಾಮ ದೇವರಿಗೆ ಅವಕಾಶವನ್ನು ಕೊಟ್ಟಿದ್ದಾನೆ. ಎಡಭಾಗದಲ್ಲಿ ಪ್ರದ್ಯುಮ್ನ, ಬಲಭಾಗದಲ್ಲಿ ಬಲರಾಮ, ಎದುರಿನಲ್ಲಿ ಗರುಡ, ಮಧ್ಯದಲ್ಲಿ ಶ್ರೀಕೃಷ್ಣ ಪರಮಾತ್ಮ ಈ ಕ್ರಮದಲ್ಲಿ ನಿಂತು ಯುದ್ಧವನ್ನು ಮಾಡುತ್ತ ಇದ್ದಾರೆ. ಅಲ್ಲಿಯೂ ಮತ್ತೆ ತಾರತಮ್ಯ ತೋರಿಸುತ್ತಾನೆ ನೋಡಿ ಪರಮಾತ್ಮ ಬಲಭಾಗದಲ್ಲಿ ಬಲರಾಮ, ಎಡಕ್ಕೆ ಪ್ರದ್ಯುಮ್ನ ಚಿಕ್ಕವ ಅನ್ನುವ ದೃಷ್ಟಿಯಲ್ಲಿ, ಎದುರಿಗೆ ಗರುಡನನ್ನ ನಿಲ್ಲಿಸಿ ಘೋರವಾಗಿರುವಂತಹ ಯುದ್ಧವನ್ನು ಮಾಡುತ್ತಾ ಇದ್ದಾನೆ. ಅಗ್ನಿಗಳನ್ನೆಲ್ಲ ಸೋಲಿಸಿದ ಅಂಗಿರಸ್ ಅವನನ್ನೂ ಸೋಲಿಸಿದ ಈ ಕಡೆಗೆ ಜ್ವರ ಬಂತು ನೀಮಗೆಲ್ಲರಿಗೂ ಜ್ವರ ಬರುತ್ತದೆ ನೋಡಿ ಇದೆಲ್ಲದಕ್ಕೂ ಅಭಿಮಾನಿಯಾದಂಥವನು ಆ ಜ್ವರ ರುದ್ರ ದೇವರು ಸೃಷ್ಟಿ ಮಾಡಿರುವಂತಹ ಜ್ವರ, ಶೈವ ಜ್ವರ ಅಂತ ಹೆಸರು. ಅದಕ್ಕೆ ಮೂರು ತಲೆ, ಮೂರು ಕಾಲು, ಆರು ಭುಜಗಳು, ಒಂಭತ್ತು ಕಣ್ಣುಗಳು ಅವನಿಗೆ ಅವನಿಗೆ ಆಯುಧ ಅಂದರೆ ಕೈಯಲ್ಲಿ ಭಸ್ಮವೇ ಬಾಣ ಇಲ್ಲ ಖಡ್ಗ ಇಲ್ಲ. **'ಭಸ್ಮಪ್ರಹರಣೋ'**[1] ಅಂತಹ ಪ್ರಚಂಡನಾದಂತಹ ಜ್ವರ ಅವನು ಯುದ್ಧವನ್ನು ಮಾಡುತ್ತಾ ಇದ್ದಾನೆ ಶ್ರೀಕೃಷ್ಣ ಪರಮಾತ್ಮ ಏನೂ ಅದಕ್ಕೆ ಮಹತ್ವ ಕೊಟ್ಟಿಲ್ಲ. ಆ ಜ್ವರನ ಜೊತೆಗೂ ಯುದ್ಧ ನಡೀತಾ ಇದೆ ಘೋರವಾದಂತಹ ಯುದ್ಧ ಬಲರಾಮ ದೇವರ ಮೇಲೆ ಮೊದಲು ಭಸ್ಮವನ್ನ ಪ್ರಯೋಗ ಮಾಡಿದ. ಬಲರಾಮ ದೇವರ ಸಾಮರ್ಥ್ಯ ಮಹಾಸಾಮರ್ಥ್ಯ ಶ್ವೇತಕೇಶಾವೇಶ, ಸ್ವಯಂ ಶೇಷ ದೇವರ ಅವತಾರ ಆದರೂ ಕೂಡ ಆ ಸಂದರ್ಭದಲ್ಲಿ ಆ ಜ್ವರದಿಂದ ಪೀಡಿತರಾದವರಂತೆ ನಾಟಕ ಮಾಡಿದ್ದಾರೆ. ಆಗ ಶ್ರೀಕೃಷ್ಣ ಪರಮಾತ್ಮ ಏನೂ

1. 122.72 ವಿಷ್ಣುಪರ್ವ

ಮಾಡಿಲ್ಲ ಬಲರಾಮ ದೇವರನ್ನು ಆಲಿಂಗನ ಮಾಡಿಕೊಂಡಿದ್ದಾನೆ ಮತ್ತೆ ಬಲರಾಮ ದೇವರಿಗೆ ಶಕ್ತಿ ಬಂದಿದೆ ಯುದ್ಧ ಪ್ರಾರಂಭವಾಯಿತು.

ಕೃಷ್ಣ ತಾನು ಯುದ್ಧವನ್ನು ಮಾಡುತ್ತ ಇದ್ದಾನೆ ಕೃಷ್ಣನ ಮೇಲೆ ಕೂಡಾನೂ ಭಸ್ಮ ಪ್ರಹಾರ ಮಾಡಿದ ಅದು ಕೃಷ್ಣನಿಗೆ ಏನಾಗಬೇಕು ಅದರಿಂದ ಏನೇನೇನು ಆಗಿಲ್ಲ ಕೇವಲ ನಾಟಕ ತನಗೂ ಆ ಭಸ್ಮ ಪ್ರಹಾರದಿದ ವ್ಯಥೆ ಆದವರಂತೆ ಕಿಂಚಿತ್ ನಾಟಕ ಮಾತ್ರ ಮಾಡಿದ. ಹಿಂದೇನೆ ಹೇಳಿದ್ದಾರೆ ಪರಮಾತ್ಮ ಅನಂತ ಶಕ್ತಿ ಸಾಮರ್ಥ್ಯಗಳಿದ್ದರೂ ತನಗೆ ಪೀಡೆಯಾದವರಂತೆ ತೋರಿಸುತ್ತಾನೆ ಅಂತ ಆ ರೀತಿ ನಾಟಕವನ್ನು ಮಾತ್ರ ಮಾಡಿದ್ದಾನೆ. ಪುನಃ ಪರಮಾತ್ಮ ಆ ಜ್ವರವನ್ನ ಸೋಲಿಸಿದ್ದಾನೆ ಆ ಜ್ವರವನ್ನ ಸಂಹಾರನೇ ಮಾಡಬೇಕು ಅಂತ ಶತಧಾ ಕೆಳಗೆ ಹಾಕಿ ನೂರು ಹೋಳು ಮಾಡಿ ಆ ಜ್ವರವನ್ನ ಸಂಪೂರ್ಣ ನಾಶ ಮಾಡಿಬಿಡುತ್ತೇನೆ ಅಂತ ಯಾವಾಗ ಪರಮಾತ್ಮ ಹೊರಟ ಆ ಜ್ವರ ಶರಣಾಗತವಾಯಿತು. ಶರಣಾಗತವಾದ ಮೇಲೆ ಸಂಹಾರ ಮಾಡುವ ಹಾಗಿಲ್ಲ, ಶರಣಾಗತ ರಕ್ಷಕ ಪರಮಾತ್ಮ ಏನಪ್ಪಾ ಶರಣಾಗತನಾಗಿ ಬಿಟ್ಟಿಯಲ್ಲ ಸರಿ, ಹಾಗಾದರೆ ಏನು ಮಾಡಬೇಕು ಅಂತ.

ಕೃಷ್ಣ ಕೃಷ್ಣ ಮಹಾಬಾಹೋ ಯದೂನಾಂ ನನ್ದಿವರ್ಧನ ।
ಮಾ ವಧೀರ್ಜ್ವರಮೇನಂ ತು ರಕ್ಷಣೀಯಸ್ತ್ವಯಾನಘ ॥ (123.12 ವಿಷ್ಣುಪರ್ವ)

ಆಕಾಶವಾಣಿಯಾಗಿದೆ, ಪರಮಾತ್ಮನದೇ ಸಂಕಲ್ಪ ಅದನ್ನೇ ದೇವತೆಗಳು ಆಕಾಶವಾಣಿಯ ರೂಪದಲ್ಲಿ ನುಡಿಯುತ್ತಾರೆ. ದೇವರ ಸಂಕಲ್ಪವನ್ನು ದೇವರಿಗೆ ಮತ್ತೆ ತಿಳಿಸಿಕೊಡಬೇಕಾ ನಿನಗೆ ಹೀಗೆ ಅನಿಸುತ್ತದೆ ಕಾಣಿಸುತ್ತದೆ ಅಂತ ಅವನಿಗ ಹೇಳಬೇಕಾ ಹೇಳಬೇಕಾದದ್ದಲ್ಲ. ಸಾಮಾನ್ಯರಿಗೆ ಅವರವರ ಭಾವನೆಗಳು ಅವರಿಗೆ ಸಾಕ್ಷಿ ಸಿದ್ಧ, ಸರ್ವಜ್ಞ ಶಿಖಾಮಣಿ ಆದಂತಹ ಪರಮಾತ್ಮನಿಗೆ ಏನು ಹೇಳಬೇಕು ಆಕಾಶವಾಣಿ, ಸುಮ್ಮನೆ ತಮ್ಮ ಸೇವೆ ಮಾಡುವುದಕ್ಕೆ ಈ ಜ್ವರನನ್ನ ರಕ್ಷಣೆ ಮಾಡು ಅವನು ಶರಣಾಗತನಾಗಿದ್ದಾನೆ ಅಂದಾಗ ತಥಾಸ್ತು ಅಂತ ಪರಮಾತ್ಮ ರಕ್ಷಣೆಯನ್ನು ಮಾಡಿದ. ಆ ಜ್ವರ ಸುಮ್ಮನೆ ಬದುಕಿದ್ದೇನೆ ಅಂತ ಎದ್ದು ಓಡಿ ಹೋಗುವುದು ಬಿಟ್ಟು ಮತ್ತೆ ವರ ಬೇರೆ ಕೇಳುತ್ತಾನೆ ಅವನು ಏನು ವರ ಬೇಕು ಅಂದರೆ

ಏಕ ಏವ ಜ್ವರೋ ಲೋಕೇ ಭವಾನಸ್ತು ಯಥಾ ಪುರಾ ।
ಯೋಽಯಂ ಮಯಾ ಜ್ವರಃ ಸೃಷ್ಟೋ ಮಯ್ಯೇವೈಷ ಪ್ರಲೀಯತಾಮ್ ॥ (123.18 ವಿಷ್ಣುಪರ್ವ)

ಅವನು ಕೇಳಿದ್ದ

ಅಹಮೇಕೋ ಜ್ವರಸ್ತಾತ ನಾನ್ಯೋ ಲೋಕೇ ಜ್ವರೋ ಭವೇತ್ । (123.16 ವಿಷ್ಣುಪರ್ವ)

ಅಂತ ಅದಕ್ಕೂ ತಥಾಸ್ತು ಅಂದ ಕೃಷ್ಣ. ಅಂದರೆ ಕೃಷ್ಣ ಏನು ಮಾಡಿದ ಅಂದರೆ ಈ ಶೈವ ಜ್ವರವನ್ನು ನಾಶ ಮಾಡುವುದಕ್ಕೊಂದು ವೈಷ್ಣವ ಜ್ವರ ಸೃಷ್ಟಿ ಮಾಡಿದ, ಆ ಶೈವ ಜ್ವರ ವೈಷ್ಣವ ಜ್ವರಗಳ ಯುದ್ಧದಲ್ಲಿ ವೈಷ್ಣವ ಜ್ವರ ಆ ಶೈವ ಜ್ವರವನ್ನು ಸೋಲಿಸಿದೆ ಮುಂದೆ ಆ ಶೈವ ಜ್ವರವನ್ನು ಸಂಹಾರನೇ ಮಾಡಬೇಕು ಅಂತ ಕೃಷ್ಣ ಹೊರಟ ಆಗ ಅದು ಶರಣಾಗತವಾಯಿತು ಆಕಾಶವಾಣಿ ಆಯಿತು. ಇದು ನಂದೊಂದು ಅದೊಂದು ಜ್ವರ ನಾವಿಬ್ಬರು ಜ್ವರಗಳಿದ್ದಿವಿ ಅಂದರೆ ನನ್ನ ಮಹತ್ವನೇ ಉಳಿಯುವುದಿಲ್ಲ ಮತ್ತೆ ಹೇಳಿ ಕೇಳಿ ಈ ವೈಷ್ಣವ ಜ್ವರದ ಶಕ್ತಿ ಬಹಳ ಅದಕ್ಕೋಸ್ಕರ ದಯವಿಟ್ಟು ಅದನ್ನು ಉಪಸಂಹಾರ ಮಾಡು ಅಂದಾಗ ಕೃಷ್ಣ ಆ ವೈಷ್ಣವ ಜ್ವರವನ್ನು ಉಪಸಂಹಾರ ಮಾಡಿದ್ದಾನೆ. ಶೈವ

ಜ್ವರ ಒಂದೇ ಒಂದು ಲೋಕದಲ್ಲಿ ಇರಬೇಕು ಆ ಶೈವ ಜ್ವರ ಎಲ್ಲರ ಮೇಲೂ ಅಟ್ಯಾಕ್ ಮಾಡಬಹುದು ಆ ವರ ಕೊಟ್ಟುಬಿಟ್ಟ ಮನುಷ್ಯರ ಮೇಲೆ, ಪಶುಗಳ ಮೇಲೆ ಪಕ್ಷಿಗಳ ಹಕ್ಕಿ ಜ್ವರ ಅನ್ನುತ್ತಾರೆ ನೋಡರಿ ಹಕ್ಕಿ ಜ್ವರ, ಪಶುಗಳ ಜ್ವರ ಅದೆಲ್ಲವನ್ನು ಹರಿವಂಶ ಹೇಳುತ್ತದೆ. ಅಲ್ಲಿ ಗಿಡಗಳಿಗೆ ಜ್ವರ ಬರಬಹುದು, ಚತುಷ್ಪಾದ ನಾಲ್ಕು ಕಾಲಿನ ಪ್ರಾಣಿಗಳಿಗೆ ಒಂದು ರೂಪದಿಂದ, ಎರಡನೆಯ ರೂಪದಿಂದ ಗಿಡಗಳಿಗೆ, ಮೂರನೆಯ ರೂಪದಿಂದ ಪಕ್ಷಿಗಳಿಗೆ

ತ್ರಿಧಾಭೂತಂ ವಪುಃ ಕೃತ್ವಾ ಪಕ್ಷಿಷು ತ್ವಂ ಭವಜ್ವರ ॥ (123.22 ವಿಷ್ಣುಪರ್ವ)

ಚತುರ್ಥೋ ಯಸ್ತತೀಯಸ್ಯ ಭವಿಷ್ಯತಿ ಸ ತೇ ಧ್ರುವಮ್ । (123.23 ವಿಷ್ಣುಪರ್ವ)

ಹೀಗೆಲ್ಲ ಮೂರು ರೂಪಗಳನ್ನು ತೆಗೆದುಕೊಂಡು ಎಲ್ಲವನ್ನೂ ನೀನು ವ್ಯಾಪಿಸು. ವೃಕ್ಷಗಳಲ್ಲಿ ಕೀಟ ರೂಪದಿಂದ ನೀನು ಅಭಿವ್ಯಕ್ತನಾಗು ಆ ಎಲೆಗಳೆಲ್ಲ ಒಣಗಿ ಹೋಗುತ್ತವೆ, ಹಣ್ಣುಗಳೆಲ್ಲ ಒಣಗಿ ಹೋಗುತ್ತವೆ, ನೀರಿನಲ್ಲಿ ನೀಲ ಬಣ್ಣದಿಂದ ಆ ನವಿಲುಗಳಲ್ಲಿ ಅದರ ಶಿಖೋದ್ಭೇದದ ರೂಪದಲ್ಲಿ, ಆಮೇಲೆ ಅನೇಕ ತರಹದ ಸರೋವರಗಳಲ್ಲಿ ಹಿಮದ ರೂಪದಲ್ಲಿ, ಪೃಥ್ವಿಯಲ್ಲಿ ಬಂಜರು ಭೂಮಿಯ ರೂಪದಲ್ಲಿ, ಪರ್ವತಗಳಲ್ಲಿ ದೈವಿಕಾದಿ ಧಾತುಗಳ ರೂಪದಲ್ಲಿ. ನೀನು ಅಭಿವ್ಯಕ್ತನಾಗು, ಗೋವುಗಳಲ್ಲಿ ಅಪಸ್ಮಾರದ ರೂಪದಲ್ಲಿ ಮತ್ತು ಅದರ ಖುರದ ರೋಗದ ರೂಪದಲ್ಲಿ ಹೀಗೆ ವಿವಿಧ ಪ್ರಾಣಿಗಳಲ್ಲಿ, ವಿವಿಧ ವೃಕ್ಷಗಳಲ್ಲಿ ವಿವಿಧ ರೀತಿಯಿಂದ ನೀನು ಅಭಿವ್ಯಕ್ತವಾಗಿ ಅಂತೂ ಇಂತೂ ಜ್ವರ ಇದು ಎಲ್ಲಾ ಜೀವರಾಶಿಗಳಿಗೂ ಪೀಡಿಸುವಂತೆ ಆಗಲಿ. ಅದೆಲ್ಲವೂ ನೀನೇ ಫುಲ್ ಡಿಪಾರ್ಟಮೆಂಟ್ ನಿನಗೆ ಒಪ್ಪಿಸಿ ಬಿಡುತ್ತೇನೆ, ನಾನು ವೈಷ್ಣವ ಜ್ವರವನ್ನು ಉಪಸಂಹಾರ ಮಾಡಿಬಿಡುತ್ತೇನೆ. ಅದಕ್ಕೆ ಏನು ಸಂತೋಷ ಜ್ವರಕ್ಕೆ ನನಗೆ ಇಡೀ ಜಗತ್ತಿನೊಳಗೆ ಎಲ್ಲಿ ಬೇಕು ಅಲ್ಲಿ ವ್ಯಾಪಿಸುವಂತಹ ವರ ಕೊಟ್ಟುಬಿಟ್ಟ ಕೃಷ್ಣ ಅಂತ ಹೇಳಿ ಆನಂದದಿಂದ ಅದು ಹೋಗಿ ಬಿಟ್ಟಿತು, ಪರಮಾತ್ಮನ ವರ್ಣನೆಯನ್ನು ಮಾಡುತ್ತದೆ.

ಆದ್ಯನ್ತವನ್ತಃ ಕವಯಃ ಪುರಾಣಾಃ ಸೂಕ್ಷ್ಮಾ ಬೃಹನ್ತೋऽಪ್ಯನುಶಾಸಿತಾರಃ ।
ಸರ್ವಾಞ್ಜ್ವರಾನ್ ಘ್ನನ್ತುಮಮಾನಿರುದ್ಧಪ್ರದ್ಯುಮ್ನಸಂಕರ್ಷಣವಾಸುದೇವಾಃ ॥ (123.37 ವಿಷ್ಣುಪರ್ವ)

ಕೃಷ್ಣ ಒಂದು ಮಾತು ಹೇಳಿದ ಜ್ವರಕ್ಕೆ ಬರೇ ವರ ತೊಗೊಂಡು ಓಡಿ ಹೋಗಬೇಡ ಯಾರು ನಾನು ನಿನಗೆ ವೈಷ್ಣವ ಜ್ವರದಿಂದ ಸೋಲಿಸಿ ಸಂಹಾರ ಮಾಡುವುದಕ್ಕೆ ಹೊರಟೆ, ಹೊರಟಾಗ ನೀನು ಶರಣಾಗತನಾಗಿ ಸ್ತೋತ್ರ ಮಾಡಿದಿ, ನಾನು ನಿನಗೆ ವರ ಕೊಟ್ಟೆ ಈ ಕಥೆಯನ್ನು ಯಾರು ಪಾರಾಯಣ ಮಾಡುತ್ತಾರೋ ಅವರಿಗೆ ಜ್ವರ ಬಾಧೆ ಆಗಬಾರದು ತಥಾಸ್ತು ಅಂತ ಆ ಜ್ವರ ಪರಮಾತ್ಮನ ಎದುರಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿ ಪರಮಾತ್ಮನ ಆಜ್ಞೆಯನ್ನು ಶಿರಸಾವಹಿಸಿ ಅಲ್ಲಿಂದ ಹೊರಟು ಹೋಗಿದ್ದಾನೆ.

ಈ ರೀತಿ ಯುದ್ಧ ನಡೆದಿದೆ ಬಾಣಾಸುರನ ಸೈನ್ಯದ ಜೊತೆಗೆ. ರುದ್ರ ದೇವರು ಸ್ವಯಂ ಯುದ್ಧಕ್ಕೆ ಬಂದಿದ್ದಾರೆ, ಭಾರೀ ಭಾರೀ ಅಸ್ತ್ರ ಪ್ರತ್ಯಸ್ತ್ರಗಳ ಪ್ರಯೋಗಗಳೆಲ್ಲ ಆಗಿವೆ ಕೊನೆಗೆ ಜೃಂಭಣಾಸ್ತ್ರದಿಂದ ಪರಮಾತ್ಮ ರುದ್ರ ದೇವರು ಬಾಯಿ ತೆಗೆದು ಹಾಗೇ ನಿಶ್ಚೇಷ್ಟರಾಗಿ ನಿಲ್ಲುವಂತೆ ಮಾಡಿಬಿಟ್ಟಿದ್ದಾನೆ ಆಗ ಬ್ರಹ್ಮ ದೇವರು ಸ್ವತಃ ಅಲ್ಲಿ ಬರುತ್ತಾರೆ, ಪ್ರೀತಿಯ ಮಗ ರುದ್ರ ದೇವರಿಗೆ ಹೇಳುತ್ತಾರೆ ಏನು ಮಾಡುತ್ತಾ ಇದ್ದೀಯಾ ಯಾರ ಜೊತೆಗೆ ಯುದ್ಧ ಮಾಡುತ್ತ ಇದ್ದೀ, ಅದೇ ನನ್ನ ಪರಮ ಭಕ್ತನಾದ ಬಾಣಾಸುರನನ್ನ ಸೋಲಿಸುವುದಕ್ಕೆ ಬಂದಿದ್ದಾನೆ ಕೃಷ್ಣ ದ್ವಾರಕಾ ಪಟ್ಟಣದ ಕೃಷ್ಣ. ದ್ವಾರಕಾ ಪಟ್ಟಣದ ಕೃಷ್ಣ ಅಲ್ಲ ಅವನು ಜಗನ್ನಿಯಾಮಕ ಕೃಷ್ಣ ಆ ರುದ್ರ ದೇವರನ್ನು ಹೀಗೆ ಕೈಯಲ್ಲಿ ಕರೆದುಕೊಂಡು

ಪರಮಾತ್ಮನ ಹೊಟ್ಟೆಯಲ್ಲಿ ಹೋಗಿಬಿಟ್ಟರು ಬ್ರಹ್ಮ ದೇವರು ಆ ಪರಮಾತ್ಮನ ಉದರದಲ್ಲಿ ಇಡೀ ವಿಶ್ವ, ಅಲ್ಲಿ ಬಿಲ್ವ ಅಂತನ್ನುವ ಒಂದು ಬಿಲ್ವ ವೃಕ್ಷದ ವನ. ಆ ಬಿಲ್ವ ವನದಲ್ಲಿ ರುದ್ರ ದೇವರು ಹಿಂದೆ ರುದ್ರ ಪದವಿಯನ್ನು ಪಡೆಯುವುದಕ್ಕೋಸ್ಕರ ಇದೇ ಪರಮಾತ್ಮನನ್ನು ಕುರಿತು ತಪಸ್ಸು ಮಾಡಿ ಇವನಿಂದ ವರ ಪಡೆದದ್ದು ಅದೆಲ್ಲ ಸ್ಫಾಚ್ಯು ಇದ್ದ ಹಾಗೆ ಒಳಗಡೆಗೆಲ್ಲ ಹಾಗೆ ಇದೆ ಪರಮಾತ್ಮನ ಉದರದಲ್ಲಿ ಆ ವನ ರುದ್ರ ದೇವರು ತಪಸ್ಸು ಮಾಡಿದ್ದು, ದೇವರು ವರ ಕೊಟ್ಟದ್ದು ಅದೆಲ್ಲ ಘಟನೆಗಳನ್ನು ಅಲ್ಲಿ ಪ್ರತ್ಯಕ್ಷ ನೋಡಬಹುದು ಅದನ್ನೆಲ್ಲ ತೋರಿಸಿದ್ದಾರೆ ಗೊತ್ತಾಯಿತೋ ಇಲ್ಲೋ.

'ವಿಧೇಹಿ ರುದ್ರೋ ರುದ್ರಿಯಂ ಮಹಿತ್ವಂ' ಈ ರುದ್ರ ಪದವಿ ಇಂತಹ ದೊಡ್ಡ ಮಹಾ ಮಹಿಮೆ ಮನೋಭಿಮಾನಿತ್ವ ಅಹಂಕಾರಾಭಿನಿತ್ವ ಇಂತಹ ಜಗತ್ತಿನ ಸಂಹಾರ ಮಾಡುವಂತಹ ಸಾಮರ್ಥ್ಯ, ಕೇಳಿದವರಿಗೆಲ್ಲ ವರ ಕೊಡುವಂತಹ ಯೋಗ್ಯತೆ ಇದನ್ನೆಲ್ಲ ನಿನಗೆ ಕೊಟ್ಟವರು ಯಾರು ನೋಡು, ಅಹುದು ಇದೇ ಪರಮಾತ್ಮನೇ ಕೊಟ್ಟದ್ದು ಮತ್ತೆ ಅವನ ಜೊತೆಗೆ ನೀನು ಯುದ್ಧ ಮಾಡುತ್ತಾ ಇದ್ದೀ ಅಂತ ಹೇಳಿ ಮತ್ತೆ ಹೊರಗೆ ಕರೆದುಕೊಂಡು ಬಂದಿದ್ದಾರೆ. ರುದ್ರ ದೇವರು ಪರಮಾತ್ಮನಿಗೆ ಶರಣಾಗತರಾಗಿದ್ದಾರೆ ನಾನು ಮಾಡಿದ್ದು ತಪ್ಪು ಅಂತನ್ನುವುದನ್ನ ಹೇಳಿಕೊಂಡು ಭಗವಂತನಿಗೆ ನಮಸ್ಕಾರವನ್ನು ಮಾಡಿದ್ದಾರೆ. ಬ್ರಹ್ಮ ದೇವರು, ರುದ್ರ ದೇವರು ಎಲ್ಲರೂ ಕೂಡ ಪರಮಾತ್ಮನ ಸ್ತುತಿಯನ್ನು ಮಾಡಿದ್ದಾರೆ. ಭಗವಂತ ಎಲ್ಲರಿಗೆ ಅನುಗ್ರಹವನ್ನು ಮಾಡಿ ಆ ಬಾಣಾಸುರ ಬಾಣಸುರನನ್ನ ಮಾತ್ರ ಸಂಹಾರ ಮಾಡಬೇಡ ಅವನು ನನ್ನ ಭಕ್ತ ಅವನು ಭಾರೀ ಉನ್ಮತ್ತನಾಗಿದ್ದಾನಲ್ಲ ಏನು ಮಾಡಬೇಕು ಅಂತ ಅವನ ಬಾಹುಗಳನ್ನೆಲ್ಲ ಕತ್ತರಿಸಿ ಬಿಡು ಅನ್ನುತ್ತಾನೆ. ಸುದರ್ಶನ ಚಕ್ರವನ್ನು ಬಿಟ್ಟು ಎಲ್ಲಾ ಬಾಹುಗಳನ್ನು ಕತ್ತರಿಸಿದರೆ ಅವನೇನು ಪರ್ವತದ ಹಾಗೆ ಇದ್ದ ಬಾಣಾಸುರ, ಪರ್ವತದ ಮೇಲೆ ರಕ್ತದ ಮಳೆ ಸುರಿದ ಹಾಗೆ ಅಂತಹ ಸಾವಿರ ಬಾಹುಗಳನ್ನು ಕತ್ತರಿಸಿದರೆ ಇನ್ನೇನು ಆಗಬೇಕು ಎರಡೇ ಎರಡು ಬಾಹುಗಳು ಅವಲಕ್ಷಣ ಎಲ್ಲ ಕಡೆಗೆ ಹೊಲಸುಮಯ ಆಗ ಮತ್ತೆ ವರ ಕೊಟ್ಟ. ಎಲ್ಲಿಯೂ ರಕ್ತದ ಚಿಹ್ನೆ ಇಲ್ಲದೆ ಇದ್ದ ಹಾಗೆ ಗಾಯ ಇಲ್ಲದೆ ಇದ್ದ ಹಾಗೆ, ಅವಲಕ್ಷಣ ಕಾಣಸದೆ ಇದ್ದ ಹಾಗೆ, ಸುಂದರನಾಗಿ ಕಾಣಿಸುವ ಹಾಗೆ, ಮತ್ತೆ ವರ ಕೊಟ್ಟಿದ್ದಾನೆ. ಆ ಬಾಣಾಸುರನನ್ನ ರಕ್ಷಣೆ ಮಾಡಿ ಪರಮಾತ್ಮ ಚಿತ್ರಲೇಖಾ ಅಷ್ಟು ಉಪಕಾರ ಮಾಡಿದ್ದಾಳೆ. ಅವಳನ್ನು ಬಿಟ್ಟು ಬರಬಾರದು ಅಂತ **'ಚಿತ್ರಲೇಖಾಸಮೇತೋಷಾನ್ವಿತಪೌತ್ರಸಮನ್ವಿತಃ'**[1] ಅಂತ ಅನ್ನುತ್ತಾರೆ ಶ್ರೀಮದಾಚಾರ್ಯರು. ಆ ಚಿತ್ರಲೇಖಾ, ಉಷಾ ಹಾಗೂ ಪ್ರದ್ಯುಮ್ನ ಹಾಗೂ ಅನಿರುದ್ಧ ತಾನು ಇಷ್ಟೆಲ್ಲ ಜನರನ್ನು ಗರುಡನ ಮೇಲೆ ಕೂಡಿಸಿಕೊಂಡು ದ್ವಾರಕಾ ಪಟ್ಟಣಕ್ಕೆ ಬಂದು ಶ್ರೇಷ್ಠವಾದ ಮುಹೂರ್ತದಲ್ಲಿ, ಅವನ ಮದುವೆ ಆಗಿಹೋಗಿತ್ತು ಗಾಂಧರ್ವ ವಿವಾಹ, ವೈಭವದಿಂದ ಪುನಃ ಪುರ ಪ್ರವೇಶವನ್ನು ಮಾಡಿಸಿ ಅವರೆಲ್ಲರಿಗೆ ಯೋಗ್ಯವಾಗಿ ಇರತಕ್ಕಂತಹ ಆದರ ಗೌರವಗಳನ್ನು ಸಲ್ಲಿಸಿದ್ದಾರೆ. ಚಿತ್ರಲೇಖಾ ದೇವಿಗೂ ವಿಶೇಷವಾಗಿ ಪರಮಾತ್ಮ ಅನುಗ್ರಹವನ್ನು ಮಾಡಿದ್ದಾನೆ ಅವಳು ಸ್ವರ್ಗಕ್ಕೆ ಹೋಗಿದ್ದಾಳೆ ಅಪ್ಸರಾ ಸ್ತ್ರೀ. ಅಂತೂ ಭಾರೀ ಪರಾಕ್ರಮ ಭಾರೀ ಮಹಾಮಹಾತ್ಮೆ ಇದು ಅಂತ ಅಂದ ತಕ್ಷಣ ಶ್ರೀಮದಾಚಾರ್ಯರು ಎದ್ದು ಕೂಡುತ್ತಾರೆ ಭಾರೀ ಅನ್ನಬೇಡರಿ ಅಂತ ಏನು ಭಾರೀ. ಇನ್ನೇನು ಭಾರೀ ಬೇಕು ರುದ್ರ ದೇವರನ್ನು ಸೋಲಿಸಿದ, ಅಗ್ನಿಗಳು ಬಂದರು ಪ್ರಾರಂಭದೊಳಗೆ ಆ ಅಗ್ನಿಗಳನ್ನ ಅಂಗಿರಸನನ್ನು ಸೋಲಿಸಿದ, ಬಾಣಾಸುರನನ್ನ ಇಷ್ಟೆಲ್ಲಾ ಮಾಡಿದರೆ ಇದೇನಿದು ಅಂದರು. ಒಬ್ಬ ರುದ್ರ ದೇವರು ಏನೋ ಒಂದು ಸಲ ಯುದ್ಧಕ್ಕೆ ಬಂದರು ಅವರನ್ನು ಸೋಲಿಸಿದ.

1. 22.272 ಮಭಾತಾನಿರ್ಣಯ

ಈದೃಶಾನಂತಸಂಖ್ಯಾನಾಂ ಶಿವಾನಾಂ ಬ್ರಹ್ಮಣಾಮಪಿ ।
ರಮಾಯಾ ಅಪಿ ಯದ್ವೀಕ್ಷಾಂ ವಿನಾ ನ ಚಲಿತುಂ ಬಲಂ ॥ (22.270 ಮಭಾತಾನಿರ್ಣಯ)

ನ ಚ ಜ್ಞಾನಾದಯೋ ಭಾವಾ ನ ಚಾಸ್ತಿತ್ವಮಪಿ ಕ್ವಚಿತ್ ।
ಅನಂತಶಕ್ತೇಃ ಕೃಷ್ಣಸ್ಯ ನ ಚಿತ್ರಂ ಶೂಲಿನೋ ಜಯಃ ॥ (22.271 ಮಭಾತಾನಿರ್ಣಯ)

ನನ್ನ ಎದುರಿಗೆ ಮಾತನಾಡಬೇಡಿ ಅನ್ನುತ್ತಾರೆ. ಯಾವ ಯಾವ ಇತಿಹಾಸ, ಯಾವ ಪುರಾಣಗಳು, ಯಾವ ವೇದಗಳು, ಯಾವ ಉಪನಿಷತ್ತುಗಳು ನನ್ನ ಎದುರಿಗೆ ನಿಂತುಕೊಂಡು ಇದು ಒಂದು ದೊಡ್ಡ ಆಶ್ಚರ್ಯ ಅಂತ ಅನ್ನಬೇಡಿ, ಯಾವ ಧೈರ್ಯದಿಂದ ಹೇಳುತ್ತೀರಿ. ಇಷ್ಟೆಲ್ಲ ಉಪನಿಷತ್ತುಗಳು ವೇದಗಳು ಇತಿಹಾಸ ಪುರಾಣಗಳು ಸರ್ವೋತ್ತಮ ಸರ್ವೋತ್ತಮ ಶ್ರೀಕೃಷ್ಣ ಪರಮಾತ್ಮ ಅಂತ ಹೇಳುತ್ತ ಇರುವಾಗ ಪ್ರತಿಕಲ್ಪದೊಳಗೆ **'ಸಹಸ್ರಶೋ ಯತ್ರ ವಯಂ ಭ್ರಮಾಮಃ'**[1] ಭಾಗವತ ಹೇಳುತ್ತದೆ. ಬ್ರಹ್ಮರುದ್ರಾದಿ ದೇವತೆಗಳು ಸ್ವಯಂ ಹೇಳಿಕೊಳ್ಳುತ್ತಾರೆ, ನಮ್ಮಂತಹ ಅನಂತ ಅನಂತ ಶಿವರು ಹಿಂದೆ ಆಗಿದ್ದಾರೆ ಮುಂದೆ ಆಗುವವರಿದ್ದಾರೆ, ಅನಂತ ಬ್ರಹ್ಮರು ಹಿಂದೆ ಆಗಿದ್ದಾರೆ, ಮುಂದೆ ಆಗುವವರಿದ್ದಾರೆ. ಅಂತಹ ಅನಂತ ಶಿವರ, ಅನಂತ ಬ್ರಹ್ಮರ ಹಾಗೆ ಅನಂತ ಇಂದ್ರಾದಿ ಸಕಲ ದೇವತೆಗಳ ಅನಾದ್ಯನಂತ ಕಾಲದಲ್ಲಿ ಒಬ್ಬಳೇ ಆದರೂ ಎಲ್ಲರಿಗಿಂತಲೂ ಉತ್ತಮಳಾದ, ಎಲ್ಲರಿಗೂ ಅವರವರ ಪದವಿಯನ್ನ ಈ ಅನಂತ ಶಿವ ಬ್ರಹ್ಮಾದಿಗಳಿಗೂ ಅವರವರ ಪದವಿಯನ್ನ ಕೊಡುವ ಮಹಾಲಕ್ಷ್ಮೀಯ ಅಸ್ತಿತ್ವ, ಅವಳ ಜ್ಞಾನ, ಅವಳ ಇಚ್ಛಾ, ಅವಳ ಪ್ರಯತ್ನ ಹಾಗೂ ಈ ಎಲ್ಲಾ ದೇವತೆಗಳ ಜ್ಞಾನೇಚ್ಛಾ ಪ್ರಯತ್ನಗಳು ಅಸ್ತಿತ್ವ ಅಧಿಕಾರ ಎಲ್ಲವೂ ಯಾರ ಅಧೀನ. ಅಂತಹ ಒಬ್ಬ ರುದ್ರ ದೇವರನ್ನ ಸೋಲಿಸಿದ್ದು ಬಹಳ ದೊಡ್ಡ ಆಶ್ಚರ್ಯ ಅಂತ ಹೇಳಿದರೆ ನೀವು ಅನ್ನುವುದು ಕೇಳಿಯೇ ನಮಗೆ ಆಶ್ಚರ್ಯವಾಗುತ್ತದೆ.

ಈದೃಶಾನಂತಸಂಖ್ಯಾನಾಂ ಶಿವಾನಾಂ ಬ್ರಹ್ಮಣಾಮಪಿ ।
ರಮಾಯಾ ಅಪಿ ಯದ್ವೀಕ್ಷಾಂ ವಿನಾ ನ ಚಲಿತುಂ ಬಲಂ ॥ (22.270 ಮಭಾತಾನಿರ್ಣಯ)

ನ ಚ ಜ್ಞಾನಾದಯೋ ಭಾವಾ ನ ಚಾಸ್ತಿತ್ವಮಪಿ ಕ್ವಚಿತ್ ।
ಅನಂತಶಕ್ತೇಃ ಕೃಷ್ಣಸ್ಯ ನ ಚಿತ್ರಂ ಶೂಲಿನೋ ಜಯಃ ॥ (22.271 ಮಭಾತಾನಿರ್ಣಯ)

ಎಲ್ಲ ಸಜ್ಜನರಿಗೆ ಸಾಧನೆಯನ್ನು ಮಾಡಬೇಕಾದರೆ ಮನಸ್ಸಿನ ನಿಗ್ರಹ ಬಹಳ ಮಹತ್ವದ್ದು, ಇಂದ್ರಿಯಗಳ ನಿಗ್ರಹ ಮನೋನಿಗ್ರಹ ಇದು ಬಹಳ ಮಹತ್ವದ್ದು ಇಲ್ಲದೆ ಇದ್ದರೆ ಸಾಧನೆ ಮಾಡಲಿಕ್ಕೇ ಆಗುವುದಿಲ್ಲ. ಹೇಗೆ ಮನೋನಿಗ್ರಹ ಮಾಡುವುದು

ಚಂಚಲಂ ಹಿ ಮನಃ ಕೃಷ್ಣ ಪ್ರಮಾಥಿ ಬಲವದ್ದೃಡಮ್ ।
ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿವ ಸುದುಷ್ಕರಮ್ ॥ (6.34 ಭ ಗೀತಾ)

ಚಿಂತೆಯೇ ಮಾಡಬೇಡಿ ಆ ಮನಸ್ಸು ಜಡ ಖೋಡಿ ಮನಸ್ಸು, ಚೇತನನಾದಂತಹ ಪರಮ ಸಮರ್ಥನಾದ ಈ ಜೀವನನ್ನ ಪೀಡಿಸುವ ಶಕ್ತಿ ಆ ಖೋಡಿ ಮನಸ್ಸಿಗೆ ಇಲ್ಲ ಆ ಮನೋಭಿಮಾನಿಗಳಾದ ರುದ್ರ ದೇವರು ಆ ಮನಸ್ಸಿಗೆ

1. 09.6.44 ಭಾಗವತ

ಯಾವ ರೀತಿ ಪ್ರೇರಣೆ ಮಾಡುತ್ತಾರೋ ಹಾಗೆ ಕೆಲಸ ಮಾಡುತ್ತದೆ. ಆ ಮನೋಭಿಮಾನಿಗಳಾದ ಅನಂತಾನಂತ ರುದ್ರರನ್ನೂ ಸೋಲಿಸುವ ಪರಮ ಸಮರ್ಥನಾದ ಪರಮಾತ್ಮನಿಗೆ ಒಬ್ಬ ರುದ್ರ ದೇವರು ಆ ರುದ್ರ ದೇವರಿಂದ ನಿಯಮ್ಯವಾದ ಅನಂತ ಮನಸ್ಸುಗಳಲ್ಲಿರುವ ಒಂದು ಮನಸ್ಸು ಅದನ್ನು ಚೆನ್ನಾಗಿ ನಿಯಂತ್ರಣ ಮಾಡುವುದಕ್ಕೆ ದೇವರಿಗೆ ಆಗುವದಿಲ್ಲವೇ ಈ ಕಥೆಯನ್ನು ನೆನೆಸಿ ಮನೋನಿಗ್ರಹವನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. **'ನ ಚಿತ್ರಂ ಶೂಲಿನೋ ಜಯಃ'** ಅಂತಹ ಮನಸ್ಸಿನ ಇಂದ್ರಿಯಗಳ ನಿಗ್ರಹವನ್ನು ಮಾಡುವ ಶಕ್ತಿ ಸಾಮರ್ಥ್ಯಗಳನ್ನು ಕೊಟ್ಟು ಆ ವೈರಾಗ್ಯಾಧಿಪತಿಗಳಾದ ರುದ್ರ ದೇವರ ಮೂಲಕ ವೈರಾಗ್ಯವನ್ನು ನೀಡಿ ಶುದ್ಧವಾದ ಜ್ಞಾನವನ್ನು ನೀಡಿ, ಜ್ಞಾನವನ್ನು ಕೊಡುವ ದೇವತೆಗಳು ಹೌದು, ತಪಸ್ಸನ್ನ ಮಾಡಿಸುವ ದೇವತೆಗಳು ಹೌದು ರುದ್ರ ದೇವರು. ಅವರ ಅನುಗ್ರಹದಿಂದ ಉತ್ತಮವಾದ ಜ್ಞಾನ, ಉತ್ತಮವಾದ ತಪಸ್ಸು, ಉತ್ತಮವಾದಂತಹ ಮನೋನಿಗ್ರಹವನ್ನು ಮಾಡಿಸಿ ನಮ್ಮಿಂದ ಸಾಧನೆಯನ್ನು ದೇವರು ಮಾಡಿಸುತ್ತಾನೆ ಅಂತಹ ಅಚಿಂತ್ಯಾದ್ಭುತ ಶಕ್ತಿ ಪರಮಾತ್ಮನಿಗೆ ಇದೆ ಎಂಬುವುದನ್ನ ಈ ಕಥೆಯ ಮೂಲಕ ತಿಳಿದುಕೊಡುತ್ತಾ ಇದ್ದಾರೆ. ಇಲ್ಲಿಗೆ ಹರಿವಂಶದ ಎರಡು ಪರ್ವಗಳು ಮುಕ್ತಾಯವಾಗುತ್ತಾ ಇವೆ ಹರಿವಂಶ ಪರ್ವ ಮೊದಲು ಮುಗಿಯಿತು ಈಗ ಇದು ವಿಷ್ಣುಪರ್ವ ಇಲ್ಲಿಗೆ ಸಮಾಪ್ತವಾಗುತ್ತ ಇದೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಭವಿಷ್ಯಪರ್ವ-35

* * *

ಶೌನಕ ಉವಾಚ

ಜನಮೇಜಯಸ್ಯ ಕೇ ಪುತ್ರಾಃ ಪಠ್ಯನ್ತೇ ಲೌಮಹರ್ಷಣೇ ।

ಕಸ್ಮಿನ್ ಪ್ರತಿಷ್ಠಿತಾಂ ವಂಶಃ ಪಾಣ್ಡವಾನಾಂ ಮಹಾತ್ಮನಾಮ್ ।। (1.1 ಭವಿಷ್ಯಪರ್ವ)

ಹರಿವಂಶಪರ್ವ ಹಾಗೂ ವಿಷ್ಣುಪರ್ವಗಳ ಸಮಾಪ್ತಿಯನ್ನು ಮಾಡಿ ಭವಿಷ್ಯಪರ್ವದ ಪ್ರಾರಂಭವನ್ನು ಮಾಡುತ್ತಾ ಇದ್ದಾರೆ. ಶೌನಕರು ಸೌತಿಗಳಿಗೆ ಪ್ರಶ್ನೆಯನ್ನು ಕೇಳುತ್ತಾರೆ ಜನಮೇಜಯನ ಪುತ್ರರು ಯಾರು, ಜನಮೇಜಯನ ವಂಶ ಮುಂದೆ ಹೇಗೆ ಸಾಗುತ್ತದೆ ಇದರ ಬಗ್ಗೆ ನನಗೆ ತಿಳಿಸಿಕೊಡಬೇಕು ಅಂತ ಪ್ರಶ್ನೆಯನ್ನು ಕೇಳಿದಾಗ ಸೌತಿಗಳು ಉತ್ತರವನ್ನು ನೀಡುತ್ತಾರೆ.

ಪಾರಿಕ್ಷಿತಸ್ಯ ಕಾಶ್ಯಾಯಾಂ ದ್ವೌ ಪುತ್ರೌ ಸಮ್ಬಭೂವತುಃ । (1.3 ಭವಿಷ್ಯಪರ್ವ)

ಜನಮೇಜಯ ರಾಜನಿಗೆ ಕಾಶಿ ರಾಜನ ಮಗಳಾದ ವಪುಷ್ಟಮಾ ಅನ್ನುವವಳಲ್ಲಿ ಚಂದ್ರಾಪೀಡ, ಸೂರ್ಯಾಪೀಡ ಅಂತ ಇಬ್ಬರು ಗಂಡು ಮಕ್ಕಳನ್ನು ಪಡೆದಿದ್ದಾನೆ. ಅದರಲ್ಲಿ ಕಿರಿಯ ಸೂರ್ಯಾಪೀಡ ಇವನು ಮೋಕ್ಷ ಶಾಸ್ತ್ರದಲ್ಲಿ ಆಸಕ್ತನಾದವನು, ಬ್ರಹ್ಮಜ್ಞಾನದಲ್ಲಿ ಆಸಕ್ತನಾದವನು, ಹಿರಿಯ ಚಂದ್ರಾಪೀಡ ಇವನು ಜನಮೇಜಯನಿಂದ ಉತ್ತರಾಧಿಕಾರವನ್ನು ಪಡೆದುಕೊಂಡಿದ್ದಾನೆ. ಅವನಿಗೆ ನೂರು ಜನ ಮಕ್ಕಳಾಗಿದ್ದಾರೆ. ಹೀಗೆ ಆ ಜನಮೇಜಯನ ವಂಶ ಮುಂದೆ ಸಾಗಿದೆ. ಆ ನೂರು ಜನ ಮಕ್ಕಳಲ್ಲಿ ಹಿರಿಯ ಸತ್ಯಕರ್ಣ, ಸತ್ಯಕರ್ಣನ ಮಗ ಶ್ವೇತಕರ್ಣ ಅಂತ. ಶ್ವೇತಕರ್ಣನಿಗೆ ಮಕ್ಕಳಾಗಿಲ್ಲ ಅವನು ಸ್ವಲ್ಪ ವಿರಕ್ತನೂ ಹೌದು, ವಿಶೇಷವಾಗಿ ಭಗವದ್ಭಕ್ತಿ ಭಗವಂತನಲ್ಲಿ ಆಸಕ್ತಿ ಹೀಗಾಗಿ ಮಕ್ಕಳಿಗಾಗಿ ಬಹಳ ಚಿಂತೆಯನ್ನು ಮಾಡುತ್ತಾ ಅರಣ್ಯದಲ್ಲಿ ತಪಶ್ಚರ್ಯವನ್ನು ಮಾಡಿದ್ದಾನೆ. ಅರಣ್ಯದಲ್ಲಿ ಇರುವಾಗಲೇನೆ ಯಾದವೀ ಯದುಕುಲದ ಕನ್ಯೆ ಸುಚಾರು ಅನ್ನುವವನ ಮಗಳು ಅನೇಕ ಅಣ್ಣ-ತಮ್ಮಂದಿರಿಂದ ಕೂಡಿದಂತಹ ಭ್ರಾತೃಮಾಲಿನೀ ಅನ್ನಿಸಿಕೊಂಡಂತಹ ಅವಳಲ್ಲಿ ಇವನು ವಿಶೇಷವಾಗಿ ಗರ್ಭಾದಾನವನ್ನು ಮಾಡಿದ್ದಾನೆ. ಗರ್ಭಾದಾನವನ್ನು ಮಾಡಿದವನೇ ಮಹಾ ಪ್ರಸ್ಥಾನಕ್ಕೆ ಅಂತ ಹೊರಟ ಈ ಜನ್ಮದ ಸಾಧನೆಯನ್ನು ಮಾಡಿ ಮುಗಿಸಿಯಾಯಿತು, ಬೇಕಾದಷ್ಟು ತಪಸ್ಸು ಮಾಡಿಯಾಯಿತು ಸಾಧನೆಯನ್ನು ಮಾಡಿಯಾಯಿತು ಇನ್ನು ಈ

ದೇಹವನ್ನು ಪರಿತ್ಯಾಗ ಮಾಡೋಣ ಅಂತ ಹೇಗೆ ತಮ್ಮ ಪ್ರಾಚೀನರಾದ ಪಾಂಡವರು ಮಹಾಪ್ರಸ್ಥಾನ ಅಂತ ಹೊರಟರೋ ಎಲ್ಲಿ ಶರೀರ ಬೀಳುತ್ತೋ ಅಲ್ಲಿ ಬೀಳಲಿ ಅಂತ ಹೊರಟು ಬಿಡುವುದು ಆ ರೀತಿ ಮಹಾಪ್ರಸ್ಥಾನಕ್ಕೆ ಅಂತ ಹೊರಟಿದ್ದಾನೆ. ಹೆಂಡತಿ ತುಂಬು ಗರ್ಭಿಣಿ ಮಾರ್ಗ ಮಧ್ಯದಲ್ಲಿಯೇ ಪ್ರಸವ ಆಗಿದೆ, ಪ್ರಸವ ಆದರೂ ಕೂಡ ಆ ಹೆಂಡತಿ ಗಂಡನನ್ನ ಅನುಸರಿಸುವುದಕ್ಕೆ ಹಿಂದೆ ಮುಂದೆ ನೋಡಿಲ್ಲ. ಪ್ರಸವ ಆದಮೇಲೆ ಆ ಮಗುವನ್ನ ಅಲ್ಲಿಯೇ ಅರಣ್ಯದೊಳಗೆ ಬಿಟ್ಟು ಹಾಗೆ ಗಂಡನನ್ನ ಹಿಂಬಾಲಿಸುತ್ತಾ ಇದ್ದಾಳೆ. ನಾನು ನಿಮ್ಮನ್ನು ಬಿಟ್ಟು ಇರುವುದಿಲ್ಲ ನೀವು ಮಹಾಪ್ರಸ್ಥಾನಕ್ಕೆ ಹೊರಟರೆ, ಈ ದೇಹ ತ್ಯಾಗ ಮಾಡುವುದಕ್ಕೆ ಹೊರಟರೆ ನಾನೂ ನಿಮ್ಮ ಜೊತೆಗೆ ಮಹಾಪ್ರಸ್ಥಾನ ಮಾಡಿ ದೇಹ ತ್ಯಾಗವನ್ನು ಮಾಡುತ್ತೇನೆ ಅಂತ ಹೊರಟು ಬಿಟ್ಟಿದ್ದಾಳೆ. ಈಚೆಗೆ ಹುಟ್ಟಿದ ಮಗು ಯಾರು ರಕ್ಷಕರಿಲ್ಲ, ಹಾಲು ಕುಡಿಸುವವರಿಲ್ಲ ಪೋಷಕರಿಲ್ಲ ಪಾಲಕರಿಲ್ಲ ಕಾಡು ಅಂತಹ ಅರಣ್ಯದ ಮಧ್ಯದಲ್ಲಿ ಮಗುವನ್ನು ಬಿಟ್ಟು ಹೊರಟರು. ಆಗ ಆ ಮಗು ಅಳುತ್ತಾ ಇರುವುದನ್ನು ನೋಡಿ ದೇವತೆಗಳಿಗೆ ಕನಿಕರ ಬಂದಿದೆ ದೇವತೆಗಳು ಆ ಮಗುವಿಗೆ ಬಿಸಿಲು ತಾಕಬಾರದು ಅಂತ ಮೇಘಗಳ ಸೃಷ್ಟಿಯನ್ನು ಮಾಡಿ ಮೇಘಗಳಿಂದಲೇ ಆಚ್ಛಾದನೆಯನ್ನು ಮಾಡಿ ಅದಕ್ಕೆ ತಾಪವಾಗದಂತೆ ತಂಪಾಗುವಂತೆ ವ್ಯವಸ್ಥೆಯನ್ನು ಮಾಡಿದ್ದಾರೆ.

ಛಾಯಾರ್ಥಂ ತಸ್ಯ ಮೇಧಾಸ್ತು ಪ್ರಾದುರಾಸನ್ ಸಮನ್ತತಃ ॥ (1.11 ಭವಿಷ್ಯಪರ್ವ)

ಪರ್ಜನ್ಯನಾಮಕನಾದ ಸೂರ್ಯ ಆ ಸೂರ್ಯನ ಒಂದು ವಿಶೇಷವಾದ ಕೃಪೆಯಿಂದ, ಇಂದ್ರ ದೇವರ ಕೃಪೆಯಿಂದ ಅಲ್ಲಿ ಮೇಘಗಳ ನಿರ್ಮಾಣವಾಗಿದೆ ನೆರಳಾಗಿದೆ ಆ ಮಗುವಿಗೆ ಒಂದು ತರಹದ ರಕ್ಷಣೆಯನ್ನು ಮಾಡಿದ್ದಾರೆ. ಸರಿ, ಮೇಘಗಳಾಯಿತು ನೆರಳಾಯಿತು ಆದರೆ ಮುಂದೆ ಅದನ್ನು ಬೆಳೆಸುವವರು ಯಾರು, ಆಹಾರವನ್ನು ಕೊಡುವವರು ಯಾರು. ಅದೇ ರೀತಿ ಆ ಪರ್ವತದ ಮಧ್ಯದಲ್ಲಿ ಆ ಮಗು ಅಳುತ್ತಾ ಇರುವಾಗ ಶ್ರವಿಷ್ಠಾ ಅನ್ನುವವಳ ಇಬ್ಬರು ಮಕ್ಕಳು ಋಷಿ ಕುಮಾರರು ಪಿಪ್ಪಲಾದ ಮತ್ತು ಕೌಶಿಕ ಅಂತ ಅವರಿಬ್ಬರೂ ಕೂಡ ಅತ್ಯಂತ ಪ್ರೀತಿಯಿಂದ ಅಯ್ಯೋ ಇದೊಂದು ಶ್ರೇಷ್ಠವಾದ ಸುಲಕ್ಷಣವಾದಂತಹ ಶಿಶು ಈ ರೀತಿ ಅನಾಥವಾಗಿ ಬಿದ್ದಿದೆ, ಪ್ರಸವ ಆದಮೇಲೆ ಅದನ್ನು ತೊಳೆದಿಲ್ಲ ಕೂಡ ಹಾಗೆ ಅಲ್ಲಿಯೇ ಬಿಟ್ಟು ಹೋಗಿದ್ದಾರೆ ಅಂತ ಅದನ್ನು ತೆಗೆದುಕೊಂಡು ಸ್ವಚ್ಛವಾಗಿ ನೀರಿನಿಂದ ತೊಳೆದಿದ್ದಾರೆ. ಈ ಮಗು ಮೇಕೆಯಂತೆ ಕಪ್ಪಾದ ಎಡ ಬಲ ಪಾರ್ಶ್ವಗಳನ್ನು ಪಡೆದದ್ದು ಅನ್ನುವುದಕ್ಕೆ ಅದನ್ನು ಎತ್ತಿಕೊಂಡಂತಹ ಆ ಪಿಪ್ಪಲಾದ ಮತ್ತು ಕೌಶಿಕ ಇಬ್ಬರೂ ಕೂಡ ಅಜಪಾರ್ಶ್ವ ಎಂಬ ನಾಮಕರಣವನ್ನು ಮಾಡಿದ್ದಾರೆ. ಆ ಅಜಪಾರ್ಶ್ವನನ್ನ ಅವರಿಬ್ಬರೂ ವೇಮಕ ಎಂಬ ಮುನಿಯ ಒಂದು ಆಶ್ರಮದಲ್ಲಿ ಅವನ ಮಡದಿಯಾದ ವೇಮಕಿ ಅನ್ನುವವಳ ಒಂದು ವಿಶೇಷವಾದ ಕಾಳಜಿಯಲ್ಲಿ ಆ ಮಗುವನ್ನು ಬೆಳೆಸಿದ್ದಾರೆ. ಈ ರೀತಿ ಆ ಮಗು ಬೆಳೆದು ಮುಂದೆ ತನ್ನ ಸಾಧನೆಯನ್ನು ಮಾಡಿದೆ ಎಂಬುದಾಗಿ ತಿಳಿಸುತ್ತಾರೆ. ಹೀಗೆ ಈ ಜನಮೇಜಯನ ವಂಶ ಮುಂದೆ ಸಾಗಿದೆ. ಹಿಂದೆ ಯಯಾತಿ ಮೂಲತಃ ಈ ವಂಶಕ್ಕೆ ಪುರು ರಾಜ ಯಯಾತಿಯ ಮಗನಾದ ಪುರುವಿನ ವಂಶ ಇದು ಆ ಪುರು ತನ್ನ ತಾರುಣ್ಯವನ್ನ ತನ್ನ ತಂದೆಯಾದ ಯಯಾತಿಗೆ ಅರ್ಪಿಸಿ ಯಯಾತಿಯ ವಾರ್ಧಕ್ಯವನ್ನ ತಾನು ತೆಗೆದುಕೊಂಡು ಒಂದು ದೊಡ್ಡ ತಪಸ್ಸನ್ನೇ ಮಾಡಿದ್ದ ಆ ಪುರು ರಾಜ. ಆ ಪುರು ರಾಜ ಮಾಡಿದ ತಪಸ್ಸಿಗೆ, ಪುರು ರಾಜ ಮಾಡಿದ ಪಿತೃಭಕ್ತಿಗೆ ಅತ್ಯಂತ ಪ್ರೀತಿಯಿಂದ ಯಯಾತಿ ವರ ಕೊಟ್ಟಿದ್ದ ನಿನ್ನ ರಾಜ್ಯ ಇದು ಆಚಂದ್ರಾರ್ಕವಾಗಿ ಇರಲಿ ಅಂತ.

ಆಚನ್ದ್ರಾರ್ಕಗ್ರಹಾ ಭೂಮಿರ್ಭವೇದಪಿ ನ ಸಂಶಯಃ ।
ಅಪೌರವಾ ನ ತು ಮಹೀ ಭವಿಷ್ಯತಿ ಕದಾಚನ ॥ (1.18 ಭವಿಷ್ಯಪರ್ವ)

ಯಯಾತಿಯ ಮಾತು, ಸೂರ್ಯ ಚಂದ್ರರು ಒಂದು ವೇಳೆ ಭೂಮಿಯ ಮೇಲೆ ಕಾಣದೇ ಇರಬಹುದು ಆದರೆ ಪುರು ರಾಜ ನಿನ್ನ ವಂಶ ಮಾತ್ರ ಭೂಮಿಯ ಮೇಲೆ ಇಲ್ಲದೇ ಇರುವುದಿಲ್ಲ, ಒಂದಿಲ್ಲ ಒಂದು ನಿನ್ನ ವಂಶದ ಕುಡಿ ಭೂಮಿಯ ಮೇಲೆ ಇದ್ದೇ ಇರುತ್ತೆ ಅಂತನ್ನುವ ಒಂದು ವರವನ್ನ ಯಯಾತಿ ಕೊಟ್ಟದ್ದನ್ನು ಇಲ್ಲಿ ಸ್ಮರಿಸಬಹುದು ಎಂಬುದಾಗಿ ಸೌತಿಗಳು ಶೌನಕಾಚಾರ್ಯರಿಗೆ ತಿಳಿಸುತ್ತಾ ಇದ್ದಾರೆ.

ಈ ಕಡೆಗೆ ಪುನಃ ಶೌನಕರು ಪ್ರಶ್ನೆ ಮಾಡುತ್ತಾರೆ ಬೇಕಾದಷ್ಟು ಇತಿಹಾಸವನ್ನು ನೀವು ಇಷ್ಟು ಹೊತ್ತು ನಮಗೆ ಉಪದೇಶ ಮಾಡಿದ್ದೀರಿ ಧನ್ಯರಾಗಿದ್ದೇವೆ ನಾವು ನಿಮ್ಮ ಮುಖದಿಂದ ಉಪದೇಶವನ್ನು ಕೇಳಿ ಆದರೂ ತೃಪ್ತಿ ಇಲ್ಲ ಇನ್ನಷ್ಟು ಕೇಳಬೇಕು ಅಂತ ಅಪೇಕ್ಷೆ ಇದೆ.

ಪ್ರೀಣಾತ್ಯಸ್ಮಾನಮೃತವತ್ ಸರ್ವಪಾಪವಿನಾಶನಮ್ ॥ (2.2 ಭವಿಷ್ಯಪರ್ವ)

ಎಲ್ಲ ಪಾಪಗಳ ಪರಿಹಾರವನ್ನು ಮಾಡುವ ಇತಿಹಾಸವನ್ನು ನಿಮ್ಮ ಮುಖಕಮಲದಿಂದ ನಾವು ಕೇಳಿದರೆ ತೃಪ್ತಿಯೇ ಇಲ್ಲ ಇನ್ನಷ್ಟು ಕೇಳಬೇಕು ಅಂತ ಅನ್ನಿಸುತ್ತದೆ ಅದಕ್ಕಾಗಿ ಜನಮೇಜಯ ಸರ್ಪಸತ್ರ ಮಾಡಿದ ಅಂತ ಹಿಂದೆ ತಿಳಿಸಿದಿರಿ. ಆ ಸರ್ಪಸತ್ರವನ್ನ ಆಸ್ತಿಕರು ಬಂದು ತಡೆಯುತ್ತಾರೆ ಆಸ್ತಿಕ ಋಷಿಗಳು ಈ ಸರ್ಪಸತ್ರವನ್ನು ನಿಲ್ಲಿಸಬೇಕೆಂದು ಅಂತ ಕೇಳಿದ ಮೇಲೆ ಅವರ ಅಪೇಕ್ಷೆಗೆ ತಕ್ಕಂತೆ ಅವರಿಗೆ ನಿಮ್ಮ ಅಪೇಕ್ಷೆಯನ್ನು ಪೂರ್ಣ ಮಾಡುತ್ತೇನೆ ಅಂತ ವಚನ ಕೊಟ್ಟ ಜನಮೇಜಯ ವಚನಕ್ಕೆ ಬದ್ಧನಾಗಿ ಸರ್ಪಸತ್ರವನ್ನು ನಿಲ್ಲಿಸುತ್ತಾನೆ, ಎಲ್ಲ ಸರ್ಪಗಳಿಗೆ ಶಾಂತಿಯಾಗುತ್ತದೆ ಅಂತ ನೀವು ಹಿಂದೆ ತಿಳಿಸಿದ್ದೀರಿ. ಆದರೆ ಮುಂದೆ ಜನಮೇಜಯನ ಜೀವನದ ಕಥೆ ಏನಾಯಿತು, ಸರ್ಪಸತ್ರ ನಿಂತಾಯಿತು, ಪರೀಕ್ಷಿತ್ ರಾಜನನ್ನ ಸರ್ಪ ತಕ್ಷಕ ಬಂದು ಕಚ್ಚಿದೆ ಎನ್ನುವ ಒಂದು ದ್ವೇಷಕ್ಕೆ ಎಲ್ಲ ಸರ್ಪಗಳ ನಾಶವನ್ನು ಮಾಡುವಂತಹ ಒಂದು ಉಗ್ರವಾದಂತಹ ಏನು ಒಂದು ಸಂಕಲ್ಪ ಇತ್ತೋ ಅದರಿಂದ ನಿವೃತ್ತನಾದ ಇದು ಒಂದು ಘಟ್ಟ. ಜನಮೇಜಯನ ಜೀವನದಲ್ಲಿ ಅವನಿಗಿರುವಂತಹ ಶ್ರದ್ಧೆ ಏನು ಎಂತಹ ದೊಡ್ಡ ಸಂಕಲ್ಪ ಮಾಡಿದ್ದಾನೆ ಇವತ್ತಿನ ಕಾಲದಲ್ಲಿ ಹೇಳುತ್ತಾರಲ್ಲ ಪ್ರೆಸ್ಟೀಜ್ ಇಶ್ಯೂ ಅಂತ ನಾನು ಈ ಕಾರ್ಯ ಪ್ರಾರಂಭ ಮಾಡಿದ ಮೇಲೆ ನಿಲ್ಲಿಸುವುದು ಹೇಗೆ ಅಂತ. ಆದರೆ ಅದಕ್ಕೆ ತನ್ನ ಸ್ವಾಭಿಮಾನಕ್ಕೆ ಬಲಿಯಾಗದಂತೆ ಬ್ರಾಹ್ಮಣರಿಗೆ ಋಷಿಗಳಿಗೆ ತಾನು ಕೊಟ್ಟ ವಚನಕ್ಕೆ ಬದ್ಧನಾಗಿ ತನ್ನ ಸಂಕಲ್ಪವನ್ನು ಬಿಟ್ಟರೂ ಅಡ್ಡಿ ಇಲ್ಲ ದೊಡ್ಡವರ ಮಾತನ್ನು ನಡೆಸಬೇಕು ಅನ್ನುವಂತಹ ಒಂದು ತಮ್ಮ ಹಿರಿಯರು ಹಾಕಿಕೊಟ್ಟಂತಹ ಏನು ಒಂದು ಧರ್ಮದ ಮಾರ್ಗ ಇದೆ ಅದನ್ನು ಅನುಸರಿಸುತ್ತಾ ಜನಮೇಜಯ ಉಪಸಂಹಾರ ಮಾಡಿದ್ದಾನೆ.

ಆಮೇಲೆ ಮಾಡಿದ ಕಾರ್ಯವೇನು ಅಂತ ಕೇಳಿದ್ದಕ್ಕೆ ಸೌತಿಗಳು ಹೇಳುತ್ತಾರೆ ಆಮೇಲೆ ಅವನು ಅಶ್ವಮೇಧ ಯಾಗವನ್ನು ಮಾಡಲಿಕ್ಕೆ ಪ್ರಾರಂಭ ಮಾಡುತ್ತಾನೆ. ಭಾರೀ ವೈಭವದ ಯಾಗ ಅಶ್ವಮೇಧ ಯಾಗಗಳನ್ನು ಒಂದು ಬಾರಿ ಅಲ್ಲ, ಎರಡು ಬಾರಿ ಅಲ್ಲ, ಪುನಃ ಪುನಃ ಪುನಃ ಪುನಃ ಒಂದಾದ ಮೇಲೆ ಒಂದು ಒಂದಾದ ಮೇಲೆ ಒಂದು ಅಶ್ವಮೇಧ ಯಾಗಗಳನ್ನು ಮಾಡುತ್ತಾನೇ ಇದ್ದಾನೆ. ಎಲ್ಲ ಋತ್ವಿಜರು ಪುರೋಹಿತರನ್ನು ಕರೆದು ಹೇಳಿದ **'ಹಯ ಉತ್ಸ್ರಜ್ಯತಾಮಿತಿ'**[1] ವೇದವ್ಯಾಸ ದೇವರು ಅಲ್ಲಿ ಬಂದಿದ್ದಾರೆ ವೇದವ್ಯಾಸ ದೇವರಿಗೆ ಅರ್ಘ್ಯಪಾದ್ಯಾದಿಗಳಿಂದ ಪೂಜೆಯನ್ನು ಮಾಡಿದ್ದಾನೆ. ವೇದವ್ಯಾಸ ದೇವರಿಗೆ ಹೇಳಿದ ಏನು ಅದ್ಭುತವಾದ ಮಹಾಭಾರತದ ರಚನೆಯನ್ನು ಮಾಡಿ ನಮಗೆಲ್ಲ ಕೊಟ್ಟಿದ್ದೀರಿ.

---

1. 2.6 ಭವಿಷ್ಯಪರ್ವ

ಕೋ ಹ್ಯನ್ಯಃ ಪುಂಡರೀಕಾಕ್ಷಾನ್ಮಹಾಭಾರತಕೃದ್ ಭವೇತ್ । (2.55 ಮಭಾತಾನಿರ್ಣಯ)

ನೀವೇ ರಚನೆ ಮಾಡುವುದಕ್ಕೆ ಸಾಧ್ಯ ಅದು ಸಾಕ್ಷಾತ್ ಶ್ರೀಮನ್ನಾರಾಯಣನ ಅವತಾರರಾದ ನೀವು ಮಹಾಭಾರತದ ರಚನೆ ಮಾಡುವುದನ್ನು ಬಿಟ್ಟರೆ ಇನ್ನು ಯಾರು ಮಾಡುವುದಕ್ಕೆ ಸಾಧ್ಯ ಅಂತಹ ಮಹಾಭಾರತವನ್ನ ವೈಶಂಪಾಯನರಿಂದ ನಾನು ಕೇಳಿ ಧನ್ಯನಾಗಿದ್ದೇನೆ. ನಿಮಗೆ ಅನಂತ ಅನಂತ ನಮನಗಳು, ಅನಂತ ಅನಂತ ಕೃತಜ್ಞತೆಗಳು. ಶಂಖದಲ್ಲಿ ಹಾಲನ್ನು ಹಾಕಿ ದೇವರಿಗೆ ಅಭಿಷೇಕ ಮಾಡಿದರೆ ಹೇಗೆ ಮಹಾಪುಣ್ಯ ಬರುತ್ತದೆ ಆ ರೀತಿ ನೀವು ನಿಮ್ಮ ವಾಣಿಯಲ್ಲಿ ಆ ಮಹಾಭಾರತದ ಸಂಪೂರ್ಣ ಇತಿಹಾಸವನ್ನು ತುಂಬಿ ನಮಗೆಲ್ಲ ಕೊಟ್ಟು ಅಮೃತವನ್ನು ಉಣಿಸಿದ್ದೀರಿ ಅಂತ ವೇದವ್ಯಾಸ ದೇವರಿಗೆ ಭಿನ್ನವಿಸಿಕೊಂಡಿದ್ದಾನೆ.

ತಥಾ ತೃಪ್ತಿಂ ನ ಗಚ್ಛಾಮಿ ಶ್ರುತ್ವೇಮಾಂ ಭಾರತೀಂ ಕಥಾಮ್ । (2.13 ಭವಿಷ್ಯಪರ್ವ)

ಅಮೃತವನ್ನು ಕುಡಿದರೆ ತೃಪ್ತಿ ಆಗುವುದಿಲ್ಲ, ಸ್ವರ್ಗದಲ್ಲಿ ಸುಖವನ್ನು ಅನುಭವಿಸುವವರಿಗೆ ಪುಣ್ಯ ಮುಗಿಯಿತು ಹೋಗಿ ಅಂತ ಕಳಿಸಬೇಕೇ ಹೊರತು ಸಾಕು ಅಂತ ಅನಿಸುವುದಿಲ್ಲ ಸ್ವರ್ಗದ ಸುಖ. ಆ ರೀತಿ ಮಹಾಭಾರತದ ಕಥೆ ಸಾಕು ಅಂತ ಅನಿಸುವುದಿಲ್ಲ ಅಂತ ಮಹಾಭಾರತದ ಬಗ್ಗೆ ವರ್ಣನೆಯನ್ನು ಮಾಡಿ ಕೇಳುತ್ತಾನೆ. ಒಂದು ಪ್ರಶ್ನೆ ಇತ್ತು ವೈಶಂಪಾಯನರು ಮಹಾಭಾರತದ ಕಥೆಯನ್ನೆಲ್ಲ ಹೇಳಿದರು ಅಲ್ಲಿ ರಾಜಸೂಯ ಯಾಗದ ಕಥೆಯನ್ನು ನಾನು ಅನೇಕ ಬಾರಿ ಕೇಳಿದೆ ಬೇರೆ ಬೇರೆ ದೇವತೆಗಳು ರಾಜರು ಮಾಡಿದ್ದು. ಯಾರು ರಾಜಸೂಯ ಯಾಗ ಮಾಡಿದರೂ ರಾಜಸೂಯ ಯಾಗದ ನಂತರ ಒಂದು ದೊಡ್ಡ ಕಾಳಗ, ಭಾರೀ ದೊಡ್ಡ ಯುದ್ಧ ಯಾಕೆ ಹೀಗೆ ಆಗುತ್ತ ಇತ್ತು ಅದಕ್ಕೂ ಅದಕ್ಕೂ ಏನು ಸಂಬಂಧ ಅಂತ. ಸೋಮ ಚಂದ್ರ ರಾಜಸೂಯ ಯಾಗವನ್ನು ಮಾಡಿದ ಲೋಕೋತ್ತರವಾದ ರಾಜಸೂಯ ಯಾಗ ಅಷ್ಟು ಅದ್ಭುತವಾದ ರಾಜಸೂಯ ಯಾಗವನ್ನ ಸ್ವತಃ ಚಂದ್ರ ದೇವತೆ, ಯಜ್ಞ ಸಾಧನ ಸಂಭಾರಗಳನ್ನು ಸೇರಿಸುವ ಶ್ರದ್ಧೆ ನಮ್ಮ ಮನಸ್ಸಿನಲ್ಲಿ ಬರಬೇಕು ಆ ಉತ್ಸಾಹ ಬರಬೇಕು ಯಜ್ಞವನ್ನು ಮಾಡುವುದಕ್ಕೆ ಅಂದರೆ ಆ ಯಜ್ಞ ಸಾಧನ ಸಂಭಾರ ಸಂಗ್ರಹಣಕ್ಕೆ ಬೇಕಾದ ಮಾನಸಿಕ ಶ್ರದ್ಧೆಗೆ ಅಭಿಮಾನಿ ದೇವತೆಯೇ ಚಂದ್ರ ಅಂತ ಐತರೇಯ ಭಾಷ್ಯದಲ್ಲಿ ಶ್ರೀಮದಾಚಾರ್ಯರು ತಿಳಿಸಿಕೊಡುತ್ತಾರೆ. ಅಂತಹ ಚಂದ್ರ ತಾನೇ ಯಜ್ಞ ಮಾಡಿದರೆ ಇನ್ನು ಹೇಗಿರಬೇಕು ಅಷ್ಟು ಅದ್ಭುತವಾದ ಯಜ್ಞವನ್ನು ಮಾಡಿದ ಆದರೆ ಏನಾಯಿತು ಯಜ್ಞ ಮುಗಿದ ಮೇಲೆ ತಾರಕಾಮಯ ಯುದ್ಧ ಭಾರೀ ಘೋರವಾದಂತಹ ಯುದ್ಧ ಅಂತಹ ಘೋರವಾದ ದೇವಾಸುರ ಸಂಗ್ರಾಮ ಆ ಚಂದ್ರನಿಗೋಸ್ಕರ ಬೃಹಸ್ಪತ್ಯಾಚಾರ್ಯರಿಗೋಸ್ಕರ ಆಯಿತು ಅಂತ ನಾವು ಕೇಳುತ್ತೇವೆ. ವರುಣ ಯಜ್ಞ ಮಾಡಿದ ಆಗಲೂ ದೇವಾಸುರ ಸಂಗ್ರಾಮವಾಗಿದೆ, ಹರಿಶ್ಚಂದ್ರ ಯಜ್ಞ ಮಾಡಿದ ಆಗ ವಸಿಷ್ಠ ವಿಶ್ವಾಮಿತ್ರರ ಒಂದು ನೆಪದೊಳಗೆ ಘೋರವಾದ ಯುದ್ಧವಾಗಿದೆ ಆಡೀಬಕ ಯುದ್ಧ ಅಂತ ಆಡೀ ಅಂತ ಒಂದು ಜಾತಿಯ ಜಲಚರ ಪ್ರಾಣಿ ಒಂದು ಜಾತಿಯ ಮೀನು ಬಕಪಕ್ಷಿ. ಋಷಿಗಳಾಗಿ ಜಗಳ ಆಡುವುದು ಚೆನ್ನಾಗಿ ಕಾಣಿಸುವುದಿಲ್ಲ ಅಂತ ಆ ಆಡೀ ಮತ್ತು ಬಕ ಎಂಬ ವೇಷದಲ್ಲಿ ಆಡೀ ರೂಪದೊಳಗೆ ವಸಿಷ್ಠರು ಮೀನಿನ ರೂಪದಲ್ಲಿ, ಬಕಪಕ್ಷಿಯ ರೂಪದಲ್ಲಿ ವಿಶ್ವಾಮಿತ್ರರು, ಅವರಿಗೆ ಅನುಚರರಾರಾಗಿ ಇನ್ನುಳಿದವರೆಲ್ಲ ಸೇರಿಕೊಂಡು ಘೋರವಾದ ಯುದ್ಧ. ಹರಿಶ್ಚಂದ್ರನ ರಾಜಸೂಯ ಯಾಗದ ನಂತರದಲ್ಲಿಯೂ ಆಗಿದೆ, ಪಾಂಡವರು ಮಾಡಿದ್ದಾರೆ ರಾಜಸೂಯ ಯಾಗ ಮಹಾಭಾರತದ ಯುದ್ಧವೇ ಆಯಿತು ಯಾಕೆ ಹೀಗೆ **'ಕಿಮರ್ಥಂ ನ ನಿವಾರಿತಃ'**[1] ಇಂತಹ ಯುದ್ಧವನ್ನ ತಡೆಯುವುದಕ್ಕೆ ಯಾರೂ ಯಾಕೆ ಪ್ರಯತ್ನ ಮಾಡುವುದಿಲ್ಲ ಇತ್ಯಾದಿ ಪ್ರಶ್ನೆಗಳನ್ನೆಲ್ಲ ಕೇಳಿದ್ದಾನೆ ಜನಮೇಜಯ ನೇರವಾಗಿ ವೇದವ್ಯಾಸ ದೇವರಿಗೆ. ನೀವು

1. 2.20 ಭವಿಷ್ಯಪರ್ವ

ಸರ್ವಜ್ಞರು, ಸರ್ವಜ್ಞ ಶಿಖಾಮಣಿಗಳು, ಸರ್ವರಿಗೂ ಉತ್ತಮವಾದ ಮಾರ್ಗದರ್ಶನವನ್ನು ಮಾಡಿ ಉದ್ಧಾರವನ್ನು ಮಾಡುವವರು ನೀವು ನಮಗೆ ಇದರ ಬಗ್ಗೆ ಉಪದೇಶವನ್ನು ಮಾಡಬೇಕು. ಆಗ ವೇದವ್ಯಾಸ ದೇವರು ಹೇಳುತ್ತಾರೆ ನನಗೆ ಕೇಳಿದ್ದರೆ ನಾನು ಹೇಳುತ್ತಾ ಇದ್ದೆ ನನಗೆ ಯಾರು ಕೇಳಿರಲಿಲ್ಲ ಈಗ ನೀನು ಕೇಳುತ್ತಾ ಇದ್ದಿ ನಿನಗೆ ಹೇಳುತ್ತೇನೆ ಈ ರೀತಿ ನಾವು ಯಜ್ಞವನ್ನು ಮಾಡುತ್ತೇವೆ ಮುಂದೆ ಏನಾದರೂ ಇದರಿಂದ ಅನರ್ಥ ಆಗುತ್ತದಾ ಯುದ್ಧಗಳು ಆಗುತ್ತದಾ ಅಂತ ಕೇಳಿದ್ದರೆ ಹೇಳಬಹುದು.

ನಾಪೃಷ್ಟಃ ಕಸ್ಯಚಿದ್ಬ್ರೂಯಾನ್ನ ಚಾನ್ಯಾಯೇನ ಪೃಚ್ಛತಃ ।
ಜಾನನ್ನಪಿ ಹಿ ಮೇಧಾವೀ ಜಡವಲ್ಲೋಕ ಆಚರೇತ್ ॥ (ಮನುಸ್ಮೃತಿ)

ನ ಮಾಂ ಭವಿಷ್ಯಂ ಪೃಚ್ಛನ್ತಿ ನ ಚಾಪೃಷ್ಟೋ ಬ್ರವೀಮ್ಯಹಮ್ । (2.24 ಭವಿಷ್ಯಪರ್ವ)

ನನಗೆ ಯಾರು ಕೇಳಿಲ್ಲ ಈಗ ನೀನು ಕೇಳುತ್ತಾ ಇದ್ದಿ ನಿನಗೆ ಹಿತವನ್ನು ಹೇಳುತ್ತೇನೆ ಕೇಳು. ಯಾವುದೇ ಸಂದರ್ಭದಲ್ಲಿಯೂ ವಿಧಿ ಲಿಖಿತವನ್ನು ಬದಲಿಸುವುದಕ್ಕೆ ಸಾಧ್ಯ ಇಲ್ಲ ನೀನು ರಾಜಸೂಯ ಯಾಗವನ್ನು ಮಾಡು ಈಗಾಗಲೇ ನೂರಾರು ರಾಜಸೂಯ ಯಾಗಗಳನ್ನು ನೀನು ಮಾಡಿದ್ದಿ ಮುನ್ನೂರಕ್ಕೆ ಹತ್ತಿರ ಬಂದಿದೆ. ಈಗ ರಾಜಸೂಯ ಯಾಗವನ್ನು ಮಾಡಿದರೆ ಮಾತ್ರ ಇಂದ್ರ ದೇವರು ಅದನ್ನು ಸಹನೆ ಮಾಡುವುದಿಲ್ಲ ಏನೋ ಒಂದು ರೀತಿಯಿಂದ ಬಂದು ವಿಘ್ನ ಮಾಡುತ್ತಾರೆ. ಬ್ರಾಹ್ಮಣರಿಗೂ ನಿನಗೂ ಕಲಹವಾಗುತ್ತದೆ ಶಾಪವಾಗುತ್ತದೆ ಅಲ್ಲಿಗೆ ರಾಜಸೂಯ ಯಾಗ ನಿಂತು ಹೋಗುತ್ತದೆ ಮುಂದೆ ಆಗುವುದನ್ನು ಈಗಲೇ ನಿನಗೆ ಹೇಳಿದ್ದೇನೆ ತಿಳಿದುಕೋ ಇದರ ಮೇಲೆ ನಿನ್ನ ಇಷ್ಟ. ನೀನು ಮಾಡಿದಷ್ಟು ಯಜ್ಞ ಯಾಗಗಳನ್ನು ಯಾರೂ ಮಾಡಿಲ್ಲ ಅಷ್ಟು ಯಜ್ಞ ಯಾಗಗಳನ್ನು ಮಾಡಿದ್ದಿ ಇಷ್ಟಕ್ಕೆ ತೃಪ್ತನಾಗು ಇದಕ್ಕೆ ಮೇಲೆ ನೀನು ಯಜ್ಞವನ್ನು ಮಾಡಬೇಕು ಅಂತ ಬಯಸಿದರೆ

ಅಯೋಗ್ಯಮಿಚ್ಛನ್ ಪುರುಷಃ ಪತತ್ಯೇವ ನ ಸಂಶಯಃ ॥ (1.94 ಮಭಾತಾನಿರ್ಣಯ)

ಯೋಗ್ಯತೆಗೆ ಮೀರಿ ಸಾಧನೆ ಮಾಡುವುದು ಅಂದರೆ ಅದು ದೇವರಿಗೆ ಸಮ್ಮತ ಅಲ್ಲ, ಯೇದಮಾನದ್ವಿಟ ಅಂತ ಪರಮಾತ್ಮನನ್ನು ಕರೆಯುತ್ತಾರೆ. ಯಾರು ಯೋಗ್ಯತೆಗೆ ಮೀರಿ ಸಾಧನೆಯನ್ನು ಮಾಡುತ್ತಾರೋ ಆ ಸಾಧನೆಗೆ ವಿಘ್ನವನ್ನು ಉಂಟು ಮಾಡಿ, ಅವರ ಯೋಗ್ಯತೆಗೆ ತಕ್ಕಷ್ಟು ಮಾತ್ರ ಸಾಧನೆ ಮಾಡಿಸಿ, ಪುಣ್ಯವನ್ನು ಕೊಡುವುದು ಭಗವಂತನ ಸಂಕಲ್ಪ. ನಾನು ಇಷ್ಟು ಹೇಳಿದರೂ ನೀನು ಕೇಳುವುದಿಲ್ಲ ನೀನು ಮಾಡೋದು ಮಾಡುತ್ತೀಯಾ ಯಜ್ಞ, ಇಂದ್ರ ದೇವರು ವಿಘ್ನ ಮಾಡುತ್ತಾರೆ ನಿಲ್ಲುತ್ತದೆ ಬ್ರಾಹ್ಮಣರ ಶಾಪ ಆಗುತ್ತದೆ ಇಷ್ಟು ಮುಂದೆ ನಡೆಯುವ ಘಟನೆ ಅಂತ ವೇದವ್ಯಾಸ ದೇವರು ತಿಳಿಸಿಕೊಟ್ಟಿದ್ದಾರೆ. ಮತ್ತು ನೀನೇನು ಈ ರಾಜಸೂಯ ಯಾಗ, ಅಶ್ವಮೇಧ ಯಾಗವನ್ನು ಮಾಡುತ್ತೀಯಾ ಈ ಅಶ್ವಮೇಧ ಯಾಗ ಇದು ಕೊನೆಯ ಯಾಗ ಪ್ರಾಯಃ ಮುಂದೆ ಯಾರೂ ಅಶ್ವಮೇಧ ಯಾಗ ಇನ್ನು ಕಲಿಯುಗದಲ್ಲಿ ಮಾಡುವುದಿಲ್ಲ ಅಂತ ಹೇಳಿದಾಗ ಒಬ್ಬರೂ ಮಾಡುವುದಿಲ್ಲವೇ ಮುಂದಿನ ಪರಂಪರೆಯಲ್ಲಿ ಹಾಗಾದರೆ ಈ ಅಶ್ವಮೇಧ ಯಾಗ ಸಂಪೂರ್ಣವಾಗಿ ನಿಂತು ಹೋಗುತ್ತದೋ ಅಂತ ಕೇಳಿದಾಗ ಒಬ್ಬ ಮಾಡುತ್ತಾನೆ ಅಂತ ವೇದವ್ಯಾಸ ದೇವರು ಹೇಳುತ್ತಾರೆ.

ಔದ್ಭಿಜ್ಜೋ ಭವಿತಾ ಕಶ್ಚಿತ್ ಸೇನಾನೀಃ ಕಾಶ್ಯಪೋ ದ್ವಿಜಃ । (2.40 ಭವಿಷ್ಯಪರ್ವ)

ಕಶ್ಯಪ ಗೋತ್ರದಲ್ಲಿ ಬಂದಂತಹ ಸೇನಾನೀ ಅನ್ನುವಂತಹ ಒಬ್ಬ ಬ್ರಾಹ್ಮಣ ಕಲಿಯುಗದಲ್ಲಿಯೂ ಅಶ್ವಮೇಧ ಯಾಗವನ್ನು ಮಾಡುತ್ತಾನೆ, ಅವನ ವಂಶದಲ್ಲಿ ಬಂದ ಮತ್ತೊಬ್ಬ ರಾಜ ರಾಜಸೂಯ ಯಾಗವನ್ನೂ ಮಾಡುತ್ತಾನೆ ಅಷ್ಟೇ. ಆನಂತರ ಸುಮ್ಮನೇ ಏನೋ ತಕ್ಕಮಟ್ಟಿಗೆ ರಾಜಸೂಯ, ಅಶ್ವಮೇಧ ಅಂತ ಹೆಸರಿಗೆ ಮಾಡಬಹುದು, ಉತ್ತಮ ಕಲ್ಪದಲ್ಲಿ ಯಾವ ರೀತಿ ರಾಜಸೂಯ, ಅಶ್ವಮೇಧ ಯಾಗಗಳನ್ನು ಮಾಡಬೇಕೋ ಆ ರೀತಿ ಮಾಡುವವರು ಕಲಿಯುಗದಲ್ಲಿ ಮುಂದೆ ಬಹಳ ವಿರಳ ಎಂಬುದಾಗಿ ವೇದವ್ಯಾಸ ದೇವರು ತಿಳಿಸಿಕೊಟ್ಟಿದ್ದಾರೆ. ಮುಂದೆಲ್ಲ ಹಿಂದಿನ ಎಲ್ಲ ಹಿರಿಯರು ಪ್ರಾಚೀನರು ವೃದ್ಧರು ಮಹಾನುಭಾವರು ಯಾವ ರೀತಿ ತಮ್ಮ ಸರ್ವೇಂದ್ರಿಯಗಳನ್ನ ಪರಮಾತ್ಮನ ಸೇವೆಗೆ ಅಂತ ಅರ್ಪಣೆ ಮಾಡಿರುತ್ತಾ ಇದ್ದರೋ ಹಾಗೆ ಮಾಡುವುದಕ್ಕೆ ಮುಂದಿನವರು ಸಿದ್ದರಾಗುವುದಿಲ್ಲ.

ತದಾ ಪ್ರಭೃತಿ ಹಾಸ್ಯನ್ತಿ ನೃಣಾಂ ಪ್ರಾಣಾಃ ಪುರಾಕೃತೀಃ । (2.43 ಭವಿಷ್ಯಪರ್ವ)

ನಮ್ಮ ಹಿರಿಯರು ಹೀಗೆ ಮಾಡಿದ್ದಾರೆ, ಪ್ರಾಚೀನರು ಮಾಡಿದ್ದಾರೆ ನಾವೇಕೆ ಮಾಡಬಾರದು ಅನ್ನುವ ಉತ್ಸಾಹ ಹಿಂದಿನ ಯುಗಗಳಲ್ಲೆಲ್ಲ ಹೇಗೆ ಇರುತ್ತಾ ಇತ್ತೋ ಕಲಿಯುಗದಲ್ಲಿ ಹಿಂದಿನವರು ಮಾಡಿದ್ದಾರಲ್ಲ ಮಾಡಲಿ ಬಿಡಿ ಆಗಿನ ಕಾಲದಲ್ಲಿ ಎಲ್ಲಾ ಅನುಕೂಲತೆ ಇತ್ತು ಯಜ್ಞ ಯಾಗ ಪೂಜೆ ದಾನ ಧರ್ಮ ತಪಸ್ಸು ಎಲ್ಲಾ ಮಾಡುತ್ತಾ ಇದ್ದರು ಅದೆಲ್ಲ ಈಗೆಲ್ಲಿ ಮಾಡಲಿಕ್ಕೆ ಆಗುತ್ತೆ ಅಂತ ಈ ತರಹದ ಧ್ವನಿ ಕಲಿಯುಗದಲ್ಲಿ ಕೇಳಿಸುತ್ತ ಇರುತ್ತದೆ. ಹಿಂದೆ ಹಾಗಲ್ಲ ನಮ್ಮ ತಂದೆ ಮಾಡಿದರು ತಾತ ಮುತ್ತಾತ ಮಾಡಿದ್ದಾರೆ ನಾವು ಯಾಕೆ ಮಾಡಬಾರದು ಅಂತನ್ನುವ ಉತ್ಸಾಹ ಪ್ರಾಚೀನ ಯುಗದಲ್ಲಿಯಾದರೆ ತದ್ವಿರುದ್ಧವಾಗಿ ಕಲಿಯುಗದಲ್ಲಿ ಧರ್ಮ ಶಿಥಿಲವಾಗುತ್ತಾ ಹೋಗುತ್ತದೆ. ಏನೋ ಅಲ್ಪಸ್ವಲ್ಪ ತಪಸ್ಸು ಪುಣ್ಯ ಅಲ್ಲಲ್ಲಲ್ಲಿ ಮಾಡುವವರು ಕಾಣಿಸುತ್ತಾರೆ ಆದರೆ ಒಂದು ಮಾತ್ರ ಕಲಿಯುಗದ ಗುಣ ಅಲ್ಪ ಸಾಧನೆ ಮಾಡಿದರು ಫಲ ಮಾತ್ರ ಸಿಗುತ್ತದೆ. ಬಹಳಷ್ಟು ಸಾಧನೆ ಮಾಡಿ ಏನು ಪುಣ್ಯವನ್ನು ಪಡೆಯಬೇಕಾಗಿತ್ತು ಪ್ರಾಚೀನ ಯುಗಗಳಲ್ಲಿ

ತದಾ ಹ್ಯಲ್ಪೇನ ತಪಸಾ ಸಿದ್ಧಿಂ ಪ್ರಾಪ್ಸ್ಯನ್ತಿ ಮಾನವಾಃ ।
ಧನ್ಯಾ ಧರ್ಮಂ ಚರಿಷ್ಯನ್ತಿ ಯುಗಾನ್ತೇ ಜನಮೇಜಯ ॥ (2.45 ಭವಿಷ್ಯಪರ್ವ)

ಸ್ವಲ್ಪೇ ತಪಸ್ಸು ಮಾಡುತ್ತಾರೆ ಒಂದು ಪುಟ್ಟ ತಪಸ್ಸು ಏಕಾದಶೀ ಉಪವಾಸ ಒಂದೇ ದಿನದ ತಪಸ್ಸು ಅಷ್ಟಕ್ಕೆ ಪುಣ್ಯವನ್ನು ಪಡೆಯುತ್ತಾರೆ, ಪುಟ್ಟ ಪುಟ್ಟ ವ್ರತಗಳು, ಪುಟ್ಟ ಪುಟ್ಟ ತಪಸ್ಸುಗಳು ಆದರೆ ಅಷ್ಟಕ್ಕೆ ಮಹಾ ಪುಣ್ಯವನ್ನು ಪಡೆಯುತ್ತಾರೆ. ನೂರಾರು ವರ್ಷ ಸಾಧನೆ ಮಾಡಿದರೆ, ತಪಸ್ಸು ಮಾಡಿದರೆ, ವ್ರತೋಪವಾಸಗಳನ್ನು ಮಾಡಿದರೆ ಹಿಂದಿನ ಯುಗಗಳಲ್ಲಿ ಪಡೆಯುವ ಫಲವನ್ನ ಅಲ್ಪ ಸಾಧನೆಯಿಂದ ಪಡೆಯುತ್ತಾರೆ ಅನ್ನುವ ಒಂದು ಗುಣ ಮಾತ್ರ ಕಲಿಯುಗದಲ್ಲಿ ಇದೆ ಅಂತ ಹೇಳುತ್ತಾರೆ. ಆ ಕಲಿಯುಗದ ಅವಸ್ಥೆ ಏನಾಗುತ್ತೆ, ಯಾವ ರೀತಿ ಧರ್ಮಾಚರಣೆಯನ್ನ ಕಲಿಯುಗದಲ್ಲಿ ಮಾಡಬೇಕು ಇದರ ಬಗ್ಗೆ ಜನಮೇಜಯ ಪುನಃ ಪ್ರಶ್ನೆ ಕೇಳಿದ್ದಕ್ಕೆ ವೇದವ್ಯಾಸ ದೇವರು ಹೇಳುತ್ತಾರೆ. ಕಲಿಯುಗದ ಬಗ್ಗೆ ಏನು ಕೇಳುತ್ತೀಯಾ ಅಧರ್ಮವೇ ಬಹಳ, ಧರ್ಮ ಬಹಳ ಬಹಳ ಸ್ವಲ್ಪ ಅತ್ಯಲ್ಪ ಧರ್ಮ ಅಷ್ಟು ಸ್ವಲ್ಪ ಧರ್ಮ ಕಂಡರೇನೆ ಭಾರೀ ಸಂತೋಷ ಪಡಬೇಕು ಎಷ್ಟು ಜನ ಧಾರ್ಮಿಕರು ಇದ್ದಾರೆ ಅಂತ. ಆದರೆ ಅವರಲ್ಲಿರುವ ಧಾರ್ಮಿಕತೆ ಅಂದರೆ ಬಹಳ ಸ್ವಲ್ಪ ಏನೋ ದೇವರಿಗೆ ಒಂದು ಕೈಯೆತ್ತಿ ಮುಗಿಯುತ್ತಾರೆ ಅಂದರೆ ಧಾರ್ಮಿಕರು ಅಂತ ತಿಳಿದುಕೊಳ್ಳಬೇಕು, ಒಬ್ಬರಿಬ್ಬರಿಗೆ ಏನೋ ಕೈಯೆತ್ತಿ ಹತ್ತು ರೂಪಾಯಿ ಕೊಡುತ್ತಾರೆ ಅಂದರೆ ಮಹಾಧಾರ್ಮಿಕರು ಅಂತ ಅಂದುಕೊಳ್ಳಬೇಕು, ಒಂದು ಉಪವಾಸ ಮಾಡುತ್ತಾರೆ ಅಂದರೆ ಧಾರ್ಮಿಕರು ಅಂತ ಅಂದುಕೊಳ್ಳಬೇಕು ಅಷ್ಟೇ ಹೊರತು ನಿಜವಾದ ಏನು ಪ್ರಾಚೀನ ಯುಗದ ಧರ್ಮ ಅನುಷ್ಠಾನ ಇದೆ,

ಧರ್ಮಾಚರಣೆ ಇದೆ, ಧರ್ಮಶಾಸ್ತ್ರಗಳಲ್ಲಿ ಹೇಳಿದಂತಹ ಏನು ಅತ್ಯಂತ ವಿಸ್ತೃತವಾದಂತಹ ಧರ್ಮದ ವಿರಾಟ್ ರೂಪ ಇದೆ ಅದು ಮಾತ್ರ ಕಲಿಯುಗದಲ್ಲಿ ನೋಡುವುದಕ್ಕೆ ಸಿಗುವುದೇ ಇಲ್ಲ.

ಅರಕ್ಷಿತಾರೋ ಹರ್ತಾರೋ ಬಲಿಭಾಗಸ್ಯ ಪಾರ್ಥಿವಾಃ । (3.5 ಭವಿಷ್ಯಪರ್ವ)

ರಾಜರು ಇರುವುದು ಪ್ರಜೆಗಳ ರಕ್ಷಣೆಗಾಗಿ ಆದರೆ ಪ್ರಜೆಗಳ ಸಂಪತ್ತನ್ನ ದೋಚಿ ತಾವು ಹೇಗೆ ಶ್ರೀಮಂತರಾಗಬಹುದು, ಭೋಗ ಮಾಡಬಹುದು, ತಾವು ಹೇಗೆ ಸುಖವಾಗಿ ಇರಬಹುದು ಇದನ್ನು ನೋಡುತ್ತಾರೆ. ಪ್ರಜೆಗಳ ರಕ್ಷಣೆಯನ್ನು ಮಾಡುವುದರ ಕಡೆಗೆ ಅವರಿಗೆ ಗಮನವೇ ಇಲ್ಲ ಸ್ವಾರ್ಥದಲ್ಲಿ ದೃಷ್ಟಿ. ಪರಂಪರೆಯಿಂದ ಕ್ಷತ್ರಿಯರೆಲ್ಲಾ ರಾಜರಾಗುತ್ತಾ ಬಂದಿರುತ್ತಾರೆ ಆದರೆ ಇದ್ದಕ್ಕಿದ್ದಂತೆ ಆ ಕ್ಷತ್ರಿಯರ ರಾಜರ ಪರಂಪರೆ ನಿಂತು ಹೋಗುತ್ತೆ, ಕ್ಷತ್ರಿಯರಲ್ಲದವರೆಲ್ಲ ಪರಂಪರೆ ಇಲ್ಲದವರೆಲ್ಲ ರಾಜರಾಗುವುದಕ್ಕೆ ಪ್ರಾರಂಭ ಮಾಡುತ್ತಾರೆ. ತಮ್ಮ ತಮ್ಮ ವರ್ಣಾಶ್ರಮಗಳ ಧರ್ಮಗಳನ್ನು ಬಿಡುತ್ತಾರೆ, ಧರ್ಮದಲ್ಲಿ ಆಸಕ್ತಿಯೇ ಇಲ್ಲದ ನಾಸ್ತಿಕರು ಒಂದು ಕಡೆಗೆ ಆದರೆ ಇನ್ನೊಂದು ವಿಚಿತ್ರ ಆಸ್ತಿಕ ನಾಸ್ತಿಕ ಮಿಶ್ರಣ ಏನದು ಧರ್ಮ ಮಾಡಬೇಕು ಅಂತ ಅನ್ನುತ್ತಾರೆ ಆದರೆ ಯಾವ ಧರ್ಮ ಮಾಡಬೇಕು ಅಂತ ಹೇಳುತ್ತಾರೆ ಅದನ್ನು ಬಿಟ್ಟು ಬೇರೆ ಮಾಡುವುದರೊಳಗೆ ಆಸಕ್ತಿ. ಇದು ನಿನ್ನ ವರ್ಣ, ನಿನ್ನ ಆಶ್ರಮ ನಿನ್ನ ಲಿಂಗಕ್ಕೆ ತಕ್ಕಂತೆ ಈ ಧರ್ಮವನ್ನು ನೀನು ಆಚರಣೆ ಮಾಡಬೇಕು ಅಂದರೆ ಇದು ಬೇಡ ನಾನು ಇನ್ನೊಂದನ್ನು ಮಾಡುತ್ತೇನೆ ಅನ್ನುತ್ತಾರೆ, ನಾನು ಇದನ್ನೇ ಯಾಕೆ ಮಾಡಬೇಕು ಅಂತ ಅನ್ನುತ್ತಾರೆ. ಧರ್ಮಾಚರಣೆಯನ್ನು ಮಾಡಿದರೆ ನಮಗೆ ಫಲ ಕೊಡುವುದು ದೇವರು, ಧರ್ಮ ಇದು ಜಡ ಅದು ನೇರವಾಗಿ ಫಲ ಕೊಡುವುದಲ್ಲ, ಧರ್ಮವನ್ನು ನೋಡಿ ಸಂತುಷ್ಟನಾಗಿ ಫಲ ಕೊಡಬೇಕಾದವನು ಧರ್ಮಾಧ್ಯಕ್ಷನಾದಂತಹ ಪರಮಾತ್ಮ. ಆ **'ಧರ್ಮಾಧ್ಯಕ್ಷ ಸುರಾಧ್ಯಕ್ಷಃ'** ಅಂತಹ ದೇವರು ನಮಗೆ ಫಲ ಕೊಡಬೇಕು ಅವನು ಹೇಳಿದಂತೆ ಮಾಡಿದರೆ ಫಲ ಕೊಟ್ಟಾನು. ಅವನ ಆಜ್ಞೆಯನ್ನು ಉಲ್ಲಂಘನೆ ಮಾಡಿ ಯಾವುದನ್ನು ಬೇಡ ಅಂತ ಹೇಳಿದ್ದಾನೆ ಆ ಧರ್ಮವನ್ನು ಮಾಡಿ ಫಲ ಕೊಡು ಅಂತ ಕೈ ಹಿಡಿದು ಕಸಿದುಕೊಳ್ಳುವ ಯೋಗ್ಯತೆ ನಮಗೆ ಉಂಟಾ ಆ ಸ್ವತಂತ್ರನಾದ ಪರಮಾತ್ಮನಿಂದ ನಾವೇನು ಫಲ ಕಸಿದುಕೊಳ್ಳುವುದಕ್ಕೆ ಸಾಧ್ಯ ಈ ಪ್ರಜ್ಞೆ ಇರುವುದಿಲ್ಲ. ಆಸ್ತಿಕ್ಯ ಇದೆ ಅಂತ ತೋರಿಸಿಕೊಳ್ಳುತ್ತಾರೆ ಆದರೆ ಸ್ವಧರ್ಮವನ್ನು ಅನುಷ್ಠಾನ ಮಾಡುವುದರಲ್ಲಿ ಉತ್ಸಾಹವಿಲ್ಲದಂತೆ ಪರಧರ್ಮವನ್ನು ಪರಿಪಾಲನೆ ಮಾಡುವಂತಹ ಒಂದು ಹಠ ವಾದ ಪ್ರಾರಂಭವಾಗುತ್ತದೆ. ಈ ರೀತಿ ಜನರೆಲ್ಲ ಯಾವ ರೀತಿ ಆಹಾರದಲ್ಲಿ ಶುದ್ಧಿ ಇರಬೇಕು, ಸಜ್ಜನರು ಭಗವದ್ಭಕ್ತರು, ದೇವರಿಗೆ ಅರ್ಪಿತವಾದದ್ದನ್ನೇ ಸ್ವೀಕಾರ ಮಾಡುವ ಸಂಕಲ್ಪ ಇಟ್ಟುಕೊಂಡವರು ಅಂತಹ ಸಜ್ಜನರ ಜೊತೆಗೆ ತಾನು ಭೋಜನವನ್ನು ಮಾಡಬೇಕು ಅದೆಲ್ಲ ಹೋಗಿಬಿಡುತ್ತದೆ.

ಯಾರಲ್ಲಿ ಸಜ್ಜನಿಕೆ ಇಲ್ಲ, ಧರ್ಮಾನುಷ್ಠಾನ ಇಲ್ಲ ಅಂಥವರ ಜೊತೆಗೂ ಸೇರಿಕೊಂಡು ನಿವೇದಿತವಾಗದೆ ಇರುವಂತಹ ಅನ್ನವನ್ನು ತಿನ್ನುವಂತಹ ಕೇವಲ ಪಶುವಿನ ಪಶು ಪ್ರವೃತ್ತಿ, ಪಶುಗಳಿಗೆ ಹಸಿವೆ ಆದರೆ ಏನು ಕಾಣಿಸುತ್ತದೋ ತಿನ್ನುತ್ತವೆ ಅಷ್ಟೇ ಹಾಗೆ ಮನುಷ್ಯರ ಪ್ರವೃತ್ತಿ ಆಗಿ ಹೋಗುತ್ತೆ. ಮನುಷ್ಯ ಪಶು ವ್ಯತ್ಯಾಸ ಏನು ವಿವೇಕವೇ ವ್ಯತ್ಯಾಸ ಯಾವುದನ್ನು ತಿನ್ನಬೇಕು ಯಾವುದನ್ನು ತಿನ್ನಬಾರದು, ಯಾವುದು ಪವಿತ್ರ ಯಾವುದು ಅಪವಿತ್ರ, ಯಾವುದು ಹಿತ ಯಾವುದು ಅಹಿತ ಅದಕ್ಕೆ ಶಾಸ್ತ್ರ ಇದೆ. ಆ ಶಾಸ್ತ್ರದ ಅಧ್ಯಯನವೇ ಇಲ್ಲದಂತೆ ಕಂಡ ಕಂಡದ್ದನ್ನ ತಿನ್ನುತ್ತಾರೆ, ಸುಳ್ಳು ಮಾತನಾಡುತ್ತಾರೆ, ಮದ್ಯಪಾನ ಮಾಂಸ ಭಕ್ಷಣವನ್ನ ಮಾಡಬಾರದು, ಮದ್ಯಪಾನ ಮಾಂಸ ಭಕ್ಷಣ ಅತ್ಯಂತ ಸಹಜವಾಗಿ ಹೋಗುತ್ತದೆ, ಅದನ್ನು ಮಾಡದೇ ಇದ್ದರೇನೆ ಇವನಿಗೆ ಏನು ತಿಳುವಳಿಕೆ ಇಲ್ಲ ಅಂತ ಬೈಯುವ ಪರಿಸ್ಥಿತಿ ಬಂದು ಹೋಗುತ್ತದೆ. ಇವತ್ತಿನ ಕಾಲದಲ್ಲಿ ಆ ಪರಿಸ್ಥಿತಿ ಬಂದು ಹೋಗಿದೆ. ಈಗಾಗಲೇ ಕಲಿಯುಗದಲ್ಲಿ ಏನೇನೋ ಪಾರ್ಟಿಗಳು ಅಂತ ಮಾಡುತ್ತಾರೆ, ಸಜ್ಜನರು ಕೆಲವರು ಅಂಥದ್ದೆಲ್ಲ ನಾನು ಮದ್ಯಪಾನ

ಮಾಂಸ ಭಕ್ಷಣಾದಿಗಳನ್ನು ಮಾಡುವುದಿಲ್ಲ, ನಿಮ್ಮ ಜೊತೆಗೆ ಬರುವುದಿಲ್ಲ ನಮ್ಮನ್ನು ಬಿಟ್ಟುಬಿಡಿ ಅಂದರೆ ಕೇಳುವುದಿಲ್ಲ ಕೆಲಸದಿಂದ ತೆಗೆದುಹಾಕುತ್ತೇವೆ ಅಂತ ಅನ್ನುತ್ತಾರೆ. ಈ ಅವಸ್ಥೆ ಬಂದು ಹೋಗಿದೆ **'ಮದ್ಯಾಮಿಷಪ್ರಿಯಾಃ'**[1]. ಚೋರರೆಲ್ಲ ರಾಜರಾಗುತ್ತಾರೆ, ರಾಜರೆಲ್ಲ ಚೋರರಾಗುತ್ತಾರೆ ಹೇಳಿದ ಕೆಲಸವನ್ನ ಬಿಟ್ಟು ಆಜ್ಞೆಯನ್ನು ಪರಿಪಾಲನೆ ಮಾಡದಂತೆ ತನ್ನ ಸ್ವಾಮಿಗೆನೇ ವಂಚನೆಯನ್ನು ಮಾಡಿ, ಮೋಸವನ್ನು ಮಾಡಿ ಅವನ ಸಂಪತ್ತನ್ನೇ ಕಸೆದುಕೊಂಡು ಯಥೇಚ್ಛವಾಗಿ ಭೋಗವನ್ನು ಮಾಡುತ್ತಾರೆ ಭೃತ್ಯರು. ದಾಸರು ಭೃತ್ಯರು ಸೇವಕರು ಯಾವ ರೀತಿಯ ಧರ್ಮವನ್ನು ಪರಿಪಾಲನೆ ಮಾಡಬೇಕು ತಮ್ಮದೇ ಆದಂತಹ ಧರ್ಮವನ್ನು ಪರಿಪಾಲನೆ ಮಾಡುವುದಿಲ್ಲ, ಹಣ ಒಂದೇ ಒಂದು ಪೂಜ್ಯವಾದಂತಹ ಸ್ಥಾನವನ್ನು ಪಡೆಯುತ್ತದೆ.

ಒಬ್ಬ ವ್ಯಕ್ತಿ ಒಂದು ತಪ್ಪು ಮಾಡಿದ ಅಂದರೆ ಪ್ರಾಚೀನ ಕಾಲದಲ್ಲಿ ತಿದ್ದಿ ಹೇಳುವವರು ನೂರಾರು ಜನ ತಂದೆ ತಾಯಿ ಮೊದಲು, ಗುರುಗಳು, ಅಕ್ಕ ಪಕ್ಕದ ಮನೆಯವರು, ಸಮಾಜದ ಜನರು ನೀನು ಮಾಡಿದ್ದು ತಪ್ಪು ಇದನ್ನು ಮಾಡಬಾರದು ಮಾಡಬೇಡ ಅಂತ ಮೊದಲು ಹೇಳುತ್ತಾರೆ. ಆದರೂ ಮಾಡಿದ ಅಂದರೆ ಮಾಡಿದ್ದು ತಪ್ಪು ಅಂತ ತಿಳುವಳಿಕೆಯನ್ನು ಕೊಡುವುದು ಮಾತ್ರ ಅಲ್ಲ ಚೆನ್ನಾಗಿ ನಿಂದೆ ಮಾಡುತ್ತಾರೆ, ದೂರ ಇಡುತ್ತಾರೆ ಇನ್ನೊಮ್ಮೆ ತಪ್ಪು ಮಾಡಬಾರದು ಅಂತನ್ನುವ ಪ್ರಜ್ಞೆ ಅವನಿಗೆ ಬರುವಂತೆ ಎಲ್ಲ ಕಾಳಜಿಯನ್ನು ವಹಿಸುತ್ತಾ ಇದ್ದರು, ಅದು ಕಲಿಯುಗದಲ್ಲಿ ಇರುವುದಿಲ್ಲ. ಯಾರು ಏನು ತಪ್ಪು ಮಾಡಿದರೂ ಮುಕ್ತ ದ್ವಾರ **'ಅಕುತ್ಸನಾ ಚ ಪತಿತೇ'**[2] ಪತಿತರನ್ನ, ತಪ್ಪು ಮಾಡಿದವರನ್ನ ನಿಂದೆ ಮಾಡುವುದಕ್ಕೂ ಹಿಂದೇಟು ಹಾಕುತ್ತಾರೆ ಇನ್ನು ಅವನನ್ನು ದೂರ ಇಡುವುದಂತೂ ದೂರ ಉಳಿಯಿತು. ವಿವೇಕವನ್ನು ಕಳೆದುಕೊಳ್ಳುತ್ತಾರೆ ಯಾವುದೇ ರೀತಿಯ ಪರ ಪುರುಷರು ಪರ ಸ್ತ್ರೀಯರನ್ನ ಯಾವ ರೀತಿಯ ಗೌರವದಿಂದ ನೋಡಬೇಕೋ ಆ ಗೌರವ ಇಲ್ಲ ಯಾವುದೇ ರೀತಿಯ ನಿಯಮ ನಿರ್ಬಂಧನೆಗಳಿಲ್ಲದೇ ಇರುವಂತೆ ಕೇವಲ ತಮ್ಮ ಮನಸ್ಸಿಗೆ ಬಂದಂತಹ ಪ್ರವೃತ್ತಿ ಎಲ್ಲ ಕಡೆಗೆ ಪ್ರಾರಂಭವಾಗುತ್ತದೆ. ಪಕ್ವವಾದ ಅನ್ನವನ್ನ ಎಂದಿಗೂ ಮಾರಬಾರದು, ಅನ್ನ ಇರುವುದು ದಾನಕ್ಕಾಗಿ ಮಾರಾಟಕ್ಕಾಗಿ ಅಲ್ಲ, ಅನ್ನವನ್ನು ಮಾರಿ ಜೀವನವನ್ನು ಮಾಡುತ್ತಾರೆ. ಮಂತ್ರಗಳು ವೇದಗಳು ಇವುಗಳೆಲ್ಲ ಉಪದೇಶಕ್ಕಾಗಿ, ತತ್ವಜ್ಞಾನದ ಪ್ರಸಾರಕ್ಕಾಗಿ, ಧರ್ಮಗಳ ತಿಳುವಳಿಕೆ ಧರ್ಮದ ಅನುಷ್ಠಾನಕ್ಕಾಗಿ ಅಂತಹ ಮಂತ್ರಗಳನ್ನು ವೇದಗಳನ್ನು ಮಾರಿಕೊಳ್ಳುತ್ತಾರೆ.

ಅಟ್ಟಶೂಲಾ ಜನಪದಾಃ ಶಿವಶೂಲಾಶ್ಚತುಷ್ಪಥಾಃ ।
ಪ್ರಮದಾಃ ಕೇಶಶೂಲಾಶ್ಚ ಭವಿಷ್ಯನ್ತಿ ಯುಗಕ್ಷಯೇ ॥ (3.12 ಭವಿಷ್ಯಪರ್ವ)

ಸ್ತ್ರೀಯರೂ ಕೂಡ ತಮ್ಮ ಧರ್ಮವನ್ನು ಪರಿತ್ಯಾಗ ಮಾಡಿ ಪತಿಗಳ ಅತಿಕ್ರಮಣವನ್ನು ಮಾಡಿ ಮನಸ್ಸಿಗೆ ಬಂದಂತೆ ಸಂಚಾರ ಮಾಡುತ್ತಾರೆ ಈ ರೀತಿ. ಎಲ್ಲ ಶಾಖೆಗಳ ಅಧ್ಯಯನವನ್ನು ಮಾಡಬೇಕು **'ಸತ್ರಿರ್ಭಿರ್ವಿಧೀಯತೇ'** ಅಂತ ಮೂರು ಶಾಖೆಗಳ ಮೂರೂ ವೇದಗಳ ಅಧ್ಯಯನ ಮಾಡಿದರೇನೇ ಅಗ್ನಿಹೋತ್ರಾದಿಗಳನ್ನ ದರ್ಶಪೂರ್ಣಮಾಸಾದಿ ಯಾಗಗಳನ್ನು ಮಾಡಲಿಕ್ಕೆ ಬರುತ್ತದೆ. ಯಾರೂ ವೇದಗಳ ಅಧ್ಯಯನವನ್ನೇ ಮಾಡುವುದಿಲ್ಲ ಕೇವಲ ಒಂದೊಂದೇ ಶಾಖೆಗಳ ಅಧ್ಯಯನ ಮಾಡುತ್ತಾರೆ ಕೆಲವು ದಿನ ಆಮೇಲೆ ಆ ವೇದಾಧ್ಯನಯನವೇ ಲುಪ್ತವಾಗಿ ಹೋಗಿಬಿಡುತ್ತದೆ. ತಪಸ್ಸು ಯಜ್ಞ ಇತ್ಯಾದಿಗಳೆಲ್ಲ ಅಲ್ಲಲ್ಲಲ್ಲಿ ಸ್ವಲ್ಪ ದಿನ ನೋಡಲಿಕ್ಕೆ ಸಿಗುತ್ತದೆ ಆದರೆ ಅದೂ ಎಲ್ಲಾ ಮಾರಾಟಕ್ಕೆ ಹಣಕ್ಕಾಗಿ ಮಾಡುವುದು. ಭಕ್ತಿಯಿಂದ ಶ್ರದ್ಧೆಯಿಂದ ಆತ್ಮೋದ್ಧಾರಕ್ಕಾಗಿ ನಿಷ್ಕಾಮವಾಗಿ ಮಾಡಿ ಅಪರೋಕ್ಷ ಜ್ಞಾನವನ್ನು ಪಡೆಯಬೇಕು ಅಂತನ್ನುವ ಅಪೇಕ್ಷೆ ಜನಗಳಲ್ಲಿ ಇಲ್ಲ ನಾಸ್ತಿಕರೆಲ್ಲ

1. 3.8 ಭವಿಷ್ಯಪರ್ವ; 2. 3.10 ಭವಿಷ್ಯಪರ್ವ

ಅಲ್ಲಲ್ಲಲ್ಲಿ ಕಾಣಿಸಿಕೊಳ್ಳುತ್ತಾರೆ. ಹೀಗೆ ಕಲಿಯುಗದ ನಾನಾ ವಿಧವಾಗಿರುವಂತಹ ಮ್ಲೇಚ್ಛರು ಇರುವ ಸ್ಥಳದಲ್ಲಿ ಮಧ್ಯ ದೇಶದಲ್ಲಿ ಇರಬೇಕಾದ ಸಜ್ಜನರು ಇರುತ್ತಾರೆ, ಸಜ್ಜನರು ಇರಬೇಕಾದ ಸ್ಥಳದಲ್ಲಿ ಮ್ಲೇಚ್ಛರು ಬಂದು ವಾಸ ಮಾಡುತ್ತಾರೆ. ಎಲ್ಲರೂ ವಾಣಿಜ್ಯ ಪ್ರಿಯರು ವೈಶ್ಯರು ವಾಣಿಜ್ಯವನ್ನು ಮಾಡಬೇಕು ಉಳಿದವರು ತಮ್ಮ ತಮ್ಮ ಕರ್ತವ್ಯಗಳನ್ನು ಮಾಡುತ್ತಿದ್ದರು, ಎಲ್ಲರಿಗೂ ವ್ಯಾಪಾರದಲ್ಲಿ ಆಸಕ್ತಿ ಹಣವನ್ನು ಗಳಿಸುವುದರಲ್ಲಿಯೇ ಆಸಕ್ತಿ ವೈಶ್ಯರು ಮಾತ್ರ ಮಾಡಬೇಕು ಅನ್ನುವ ನಿಯಮ ಹೋಗಿಬಿಡುತ್ತೆ.

ಪುರುಷರು ಕಡಿಮೆಯಾಗುತ್ತಾರೆ ಸ್ತ್ರೀಯರು ಬಹಳ ಆಗುತ್ತಾರೆ. ಯಾರು ಎಷ್ಟು ಕೇಳಿದರೂ ಸುಮ್ಮನೇ ಅಪೇಕ್ಷೆ ಇದೆ ಅಂತ ಗೊತ್ತಾದರೆ ತಿಳಿದು ತಾನೇ ಮನೆಯ ತನಕ ಹೋಗಿ ಕೊಟ್ಟಬರಬೇಕು ದಾನ ಅಂತ ಮಹಾಭಾರತದಲ್ಲಿ ಹಿಂದೆ ಕೇಳುತ್ತೇವೆ ಅನುಶಾಸನ ಪರ್ವದಲ್ಲಿ. ಇಲ್ಲಿ ತಾನೇ ಹೋಗಿ ಕೊಟ್ಟು ಬರುವುದಲ್ಲ ಕಾಡಿ ಬೇಡಿದರೂ ಕೈಯೆತ್ತಿ ಕೊಡುವುದಿಲ್ಲ ಅಂತಹ ಸ್ವಾರ್ಥಿಗಳು ಜಗತ್ತಿನಲ್ಲಿ ಹುಟ್ಟಿಕೊಳ್ಳುತ್ತಾರೆ ಇದೆಲ್ಲಾ ಬಹಳ ಘೋರವಾದಂತಹ ಸ್ಥಿತಿ ನಾಸ್ತಿಕ್ಯವೇ ಎಲ್ಲ ಕಡೆಗೆ ಕಾಣುತ್ತದೆ. **'ಶಾಸ್ತ್ರೋಕ್ತಸ್ಯಾಪ್ರವಕ್ತಾರೋ'**[1] ಶಾಸ್ತ್ರದಲ್ಲಿ ಹೀಗೆ ಹೇಳಿದೆ ಅಂತ ಹೇಳುವ ಧೈರ್ಯವೂ ಯಾರಿಗಿಲ್ಲ, ಏನೋ ತಮ್ಮ ಪಾಡಿಗೆ ನಾಲ್ಕು ಜನ ಓದಿಕೊಂಡು ತಮ್ಮ ಮನೆಯಲ್ಲಿ ತಾವು ಇರುತ್ತಾರೆ ಹೊರತು ಇನ್ನೊಬ್ಬರಿಗೆ ಉಪದೇಶ ಮಾಡಲಿಕ್ಕೂ ಹೋಗುವುದಿಲ್ಲ, ಯಾಗ ಮಾಡುವುದಕ್ಕೆ ಯೋಗ್ಯತೆ ಇಲ್ಲದೆ ಅಧಿಕಾರ ಇಲ್ಲದೇ ಇದ್ದವರಿಂದ ಯಾಗ ಮಾಡಿಸುವುದು, ಅಭಕ್ಷ ಭಕ್ಷಣ, ಅಗಮ್ಯ ಗಮನ, ಅಪೇಯ ಪಾನ ಇವುಗಳಲ್ಲಿ ಆಸಕ್ತರಾಗುತ್ತಾರೆ. ಎಲ್ಲರೂ ಪಂಡಿತರೇ ಪಂಡಿತರು ನಿಜವಾಗಿ ಯಾರು, ಜ್ಞಾನಿಗಳು ಯಾರು, ಮಹಾನುಭಾವರು ಅವರಿಂದ ಉಪದೇಶ ಪಡೆಯುವುದು ಇಲ್ಲಾ ನಾನೇ ಪಂಡಿತ ನಾನು ಯಾಕೆ ಇನ್ನೊಬ್ಬರಿಂದ ಉಪದೇಶ ಪಡೆಯಬೇಕು.

ಸರ್ವೇ ಸರ್ವಂ ಹಿ ಜಾನನ್ತಿ ವೃದ್ಧಾನನುಪಸೇವ್ಯ ವೈ । (3.33 ಭವಿಷ್ಯಪರ್ವ)

ವೃದ್ಧರ ಸೇವೆ ಮಾಡದೆ, ಗುರುಗಳ ಸೇವೆ ಮಾಡದೆ ಪಡೆದ ವಿದ್ಯೆ ಅದು ವಿದ್ಯೆಯೇ ಅಲ್ಲ. ನನಗೆ ಬುದ್ಧಿವಂತಿಕೆ ಇದೆ ನಾನು ವಿದ್ಯೆಯನ್ನು ಪಡೆಯುತ್ತೇನೆ ಅನುವಾದ ಪುಸ್ತಕಗಳನ್ನು ಓದುತ್ತೇನೆ ನಾನು ಪಂಡಿತನಾಗುತ್ತೇನೆ **'ನ ಕಶ್ಚಿದಕವಿರ್ನಾಮ'**[2] ನಾನೇ ಕವಿ, ನಾನು ದಡ್ಡನೆ ಅಲ್ಲ. ನಾನು ಯಾಕೆ ಇನ್ನೊಬ್ಬರಿಂದ ಉಪದೇಶ ಪಡೆಯಬೇಕು ಅನ್ನುವಂತಹ ದುರ್ಬುದ್ಧಿ ಎಲ್ಲರಲ್ಲಿ ಪ್ರಾರಂಭವಾಗುತ್ತದೆ. ಈ ತರಹದ ಪಾಪ, ಈ ತರಹದ ಅಧರ್ಮ ಅನ್ಯಾಯಗಳು ಎಲ್ಲ ಕಡೆಗೆ ಹರಡಿದಾಗ ಅದರ ಪರಿಣಾಮ ಎಷ್ಟರ ಮಟ್ಟಿಗೆ ಎಂದರೆ ನಕ್ಷತ್ರಗಳು ಗ್ರಹಗಳು ಯಾವ ಯಾವ ಸ್ಥಾನದಲ್ಲಿ ಇರಬೇಕೋ ಆ ಆ ಸ್ಥಾನಗಳಲ್ಲಿ ಇರುವುದಿಲ್ಲ ತಮ್ಮ ತಮ್ಮ ಸ್ಥಾನದಿಂದಲೇ ಚಲಿಸಿ ಹೋಗುತ್ತವೆ.

ನಕ್ಷತ್ರಾಣಿ ವಿಯೋಗೀನಿ ವಿಪರೀತಾ ದಿಶಸ್ತಥಾ । (3.38 ಭವಿಷ್ಯಪರ್ವ)

ಎಲ್ಲ ನಕ್ಷತ್ರಗಳೂ ಕೂಡ ತಮ್ಮ ತಮ್ಮ ಸ್ಥಾನದಿಂದ ಚಲಿಸುವಂತಹ ಪ್ರಸಂಗ ಬರುತ್ತದೆ. ತಂದೆಗೆ ಮಕ್ಕಳು ಆದೇಶ ಮಾಡುತ್ತಾರೆ, ಮಕ್ಕಳಿಗೆ ತಂದೆ ತಾಯಿಗಳು ಆದೇಶ ಮಾಡಬೇಕು ವಿಪರೀತವಾಗಿ ಮಕ್ಕಳೇ ತಂದೆ ತಾಯಿಗಳಿಗೆ ಆಜ್ಞೆ ಮಾಡುತ್ತಾರೆ ಈ ಕೆಲಸ ಮಾಡಿಕೊಂಡು ಬನ್ನಿ ಆ ಕೆಲಸ ಮಾಡಿಕೊಂಡು ಬನ್ನಿ ಅಂತ ತಾವು ಚೇರ್ ಮೇಲೆ ಕುಳಿತು ತಂದೆ ತಾಯಿಗಳಿಂದ ಕೆಲಸವನ್ನು ಮಾಡಿಸುತ್ತಾರೆ ಉನ್ಮತ್ತರಾದಂತಹ ಮಕ್ಕಳು. ಇದು ಘೋರವಾದ ಕಲಿಯುಗದ ಚಿಹ್ನ ಅನ್ನುತ್ತಾರೆ ವೇದವ್ಯಾಸ ದೇವರು. ಯಾವ ತಂದೆ ತಾಯಿಗಳು ತಮ್ಮನ್ನು ಹುಟ್ಟಿಸಿ ಬೆಳಿಸಿ ಉಪಕಾರವನ್ನು

1. 3.33 ಭವಿಷ್ಯಪರ್ವ; 2. 3.34 ಭವಿಷ್ಯಪರ್ವ

ಮಾಡಿರುತ್ತಾರೆ ಅವರಿಗೆ ವಯಸ್ಸಾದಾಗ ಅವರಿಗೆ ಸೇವೆಯನ್ನು ಮಾಡಿ ಅವರ ಆಶೀರ್ವಾದವನ್ನು ಪಡೆಯಬೇಕಾದ ಮಕ್ಕಳು ವಿಪರೀತವಾಗಿ ಉನ್ಮತ್ತರಾಗಿ ವರ್ತಿಸುತ್ತಾರೆ. ಅದರಂತೆ ಸೊಸೆಯರು ಅತ್ತೆ ಮಾವಂದಿರ ಸೇವೆ ಮಾಡಬೇಕು ಅವರಿಗೇ ಕೆಲಸ ಹೇಳುತ್ತಾರೆ, ಶಿಷ್ಯರು ಗುರುಗಳಿಗೆ ಕೆಲಸ ಹೇಳುತ್ತಾರೆ ನಿಂದೆ ಮಾಡುತ್ತಾರೆ. ಬಂದಂತಹ ಅತಿಥಿ ಅಭ್ಯಾಗತರಿಗೆ ಹಿರಿಯರಿಗೆ ಮಕ್ಕಳಿಗೆ ಎಲ್ಲರಿಗೆ ಕೊಟ್ಟು ಕೊನೆಗೆ ಪವಿತ್ರವಾದ ಆ ಅನ್ನವನ್ನು ತಾವು ಸ್ವೀಕಾರ ಮಾಡಬೇಕು ಗೃಹಸ್ಥರಾದವರು ಅದಿಲ್ಲ ತಾವೇ ಮೊದಲು ಊಟ ಮಾಡುತ್ತಾರೆ. ಹೀಗೆಲ್ಲ ಅನೇಕ ಅಧರ್ಮಗಳು ಕಲಿಯುಗದಲ್ಲಿ ನಮಗೆ ಕಾಣಲಿಕ್ಕೆ ಸಿಗುತ್ತದೆ. ಇದೆಲ್ಲ ಕಲ್ಕಿ ಅವತಾರ ಮಾಡಿ ಎಲ್ಲ ದುರ್ಜನರ ನಾಶ ಮಾಡಿ, ಅಧರ್ಮವನ್ನೆಲ್ಲ ನಾಶ ಮಾಡಿ ಪುನಃ ಧರ್ಮದ ಸಂಸ್ಥಾಪನೆಯನ್ನು ಮಾಡುತ್ತಾನೆ ಕೃತಯುಗದ ಪ್ರಾರಂಭವನ್ನು ಮಾಡಿಸುತ್ತಾನೆ ಅಲ್ಲಿಯವರೆಗೆ ಇದೇ ಹಣೆಬರಹ. ಮತ್ತೆ ಅತೀ ಉತ್ಕೃಷ್ಟವಾದಂತಹ ಧರ್ಮ ಧರ್ಮಯುಗ ಪ್ರಾರಂಭವಾಗುತ್ತದೆ ಸತ್ಯಯುಗ ಕೃತಯುಗ ಧರ್ಮಯುಗ ಅದು ಅಂತಹ ಶ್ರೇಷ್ಠವಾದ ಯುಗ ಪುನಃ ಪ್ರಾರಂಭವಾಗುತ್ತದೆ ಅಂತ ಈ ರೀತಿ ತಿಳಿಸುತ್ತಾರೆ.

ಕಥೆಗಳನ್ನು ಕೇಳುವಾಗ ಜನ ಕೆಲವರು ಕಥೆನೇ ಕೇಳದೆ ಇದ್ದವರದು ಒಂದು ಗುಂಪು ಬೇರೆ ಕಥೆಗಳನ್ನು ಕೇಳುತ್ತಾರೆ ಅಂತೆ, ಇತಿಹಾಸ ಪುರಾಣಗಳನ್ನು ಕೇಳುತ್ತಾರೆ ಬಹಳ ಶ್ರದ್ಧೆಯಿಂದ ಕೇಳುತ್ತಾರೆ ಎಷ್ಟು ಚೆನ್ನಾಗಿದೆ ಅಲ್ಲ ಕಥೆ ನಿಜವಾಗಿ ನಮ್ಮ ಈ ಪ್ರಾಚೀನರ ಅದ್ಭುತವಾದ ಕಥೆಯನ್ನು ಕೇಳಿದರೆ ನಮಗೆ ಬಹಳ ಅಭಿಮಾನ ಬರುತ್ತದೆ ನಮ್ಮ ಭಾರತ ದೇಶ, ನಮ್ಮ ಭಾರತೀಯ ಸಂಸ್ಕೃತಿ, ಎಂತಹ ಇತಿಹಾಸ, ಎಂತಹ ಪುರಾಣ ಅಂತ ಇಷ್ಟು ವರ್ಣನೆ ಮಾಡಿ ಎದ್ದು ಹೋಗಿ ಬಿಡುತ್ತಾರೆ ಅಷ್ಟೇ. ಅದನ್ನು ನಾನು ಜೀವನದಲ್ಲಿ ಅನುಷ್ಠಾನದಲ್ಲಿ ತರಬೇಕು ಅನ್ನುವ ಪ್ರಜ್ಞೆ ಬರುವುದಿಲ್ಲ.

ಉತ್ಪನ್ನಾ ಯೇ ಕೃತಯುಗೇ ಪ್ರಧಾನಪುರುಷಾಶ್ರಯಾಃ ।
ಕಥಾಯೋಗೇನ ತಾನ್ ಸರ್ವಾನ್ ಪೂಜಯಿಷ್ಯನ್ತಿ ಮಾನವಾಃ ॥ (4.21 ಭವಿಷ್ಯಪರ್ವ)

ಅವರ ಕಥೆ ಕೇಳಿದರೆ ಹೋ ನಮ್ಮ ಪ್ರಾಚೀನರಿಗೆಲ್ಲ ನಾವು ಮರ್ಯಾದೆ ಕೊಟ್ಟ ಹಾಗೆ ಆಯಿತು ಅವರದೆಲ್ಲ ಇತಿಹಾಸ ಅವರದೊಂದು ದೊಡ್ಡ ಗೋಷ್ಠಿನೇ ಇಟ್ಟುಕೊಂಡಿದ್ದೆವು ನಾವು ಎಲ್ಲಾ ಕಥೆಗಳನ್ನ ಹೇಳಿಸಿದ್ದಿವಿ, ಅಷ್ಟಕ್ಕೆ ಮುಗಿಯಲಿಲ್ಲ ಆ ಪರಂಪರೆಯನ್ನು ಮುಂದುವರಿಸಬೇಕಲ್ಲ, ಆ ಧರ್ಮಾನುಷ್ಠಾನ ನಿಮ್ಮಲ್ಲಿ ಕಾಣಬೇಕಲ್ಲ ಅದು ಬೇಡ ಈ ಪರಿಸ್ಥಿತಿ ಬಂದು ಹೋಗುತ್ತದೆ. ತಮ್ಮ ತಮ್ಮ ದೇಶಗಳನ್ನ ಬಿಟ್ಟು ಹೊರದೇಶಗಳಿಗೆ ತಿರುಗುತ್ತಾರೆ

ಸ್ವದೇಶೇಭ್ಯಃ ಪರಿಭ್ರಷ್ಟಾ ನಿಃಸಾರಾಃ ಸಹ ಬನ್ಧುಭಿಃ ।
ನರಾಃ ಸರ್ವೇ ಭವಿಷ್ಯನ್ತಿ ತದಾ ಕಾಲಪರಿಕ್ಷಯಾತ್ ॥ (4.29 ಭವಿಷ್ಯಪರ್ವ)

ಬಂಧುಗಳನ್ನ ಬಿಟ್ಟು, ತಂದೆ ತಾಯಿಗಳನ್ನ ಬಿಟ್ಟು ತಮ್ಮ ದೇಶವನ್ನ ಜನ್ಮ ಭೂಮಿಯನ್ನೇ ಬಿಟ್ಟು ದೇಶಭ್ರಷ್ಟರಾಗಿ ಬೇರೆ ದೇಶಗಳಲ್ಲಿ ಹೋಗಿ ತಾವು ದುಡ್ಡು ಸಂಪಾದನೆ ಮಾಡಬೇಕು ಅಂತ ಅಪೇಕ್ಷೆ ಪಡುತ್ತಾರೆ. ನದಿಗಳೆಲ್ಲ ಸ್ವಾಭಾವಿಕವಾಗಿ ದೇವರ ಸೃಷ್ಟಿಯಲ್ಲಿ ಹರಿಯುವಂತಹ ನದಿಗಳಿಗೆಲ್ಲ ಮಧ್ಯದಲ್ಲಿ ಗೋಡೆಗಳನ್ನು ಕಟ್ಟಿ ತಾವು ತಮ್ಮ ಕೆಲಸಕ್ಕೆ ಬಳಸಿಕೊಳ್ಳಬೇಕು ಅಂತ ಅಪೇಕ್ಷೆ ಪಡುತ್ತಾರೆ ಹೀಗೆ ಜನಗಳ ಪ್ರವೃತ್ತಿ. ಸಕಲಶಾಸ್ತ್ರ ಪ್ರತಿಪಾದ್ಯನಾದವನು, ಸಕಲ ವೇದಗಳಿಂದ ಪ್ರತಿಪಾದ್ಯನಾದವನು ಭಗವಂತ ಸರ್ವೋತ್ತಮ ಸರ್ವವೇದ ಪ್ರತಿಪಾದ್ಯ ಅನ್ನುವುದನ್ನ ಮರೆತು ಕೇವಲ ಐಹಿಕವಾದಂತಹ ಪುರುಷಾರ್ಥಗಳು ಆಮುಷ್ಮಿಕವಾದ ಸ್ವರ್ಗಾದಿ ಪುರುಷಾರ್ಥಗಳಿಗೆ ಮಾತ್ರ ವೇದ ಇದೆ ಅಂತ. ಧನ

ಕನಕಾದಿಗಳಿಗಾಗಿ, ಪುತ್ರಪೌತ್ರಾದಿಗಳಿಗಾಗಿ, ಸ್ವರ್ಗಾದಿಗಳಿಗಾಗಿ ಮಾತ್ರ ಕರ್ಮ ಅದಕ್ಕಾಗಿ ವೇದ ಇಷ್ಟೇ ತಿಳಿದುಕೊಂಡು ವೇದ ಶಾಸ್ತ್ರಗಳ ನಿಜವಾದ ಮರ್ಮವನ್ನು ತಿಳಿಯದೇ ಆ ಭಗವಂತನ ಸರ್ವೋತ್ತಮತ್ವವನ್ನು ತಿಳಿಸಿ ಅದನ್ನ ತಿಳಿದವರಿಗೆ ಮೋಕ್ಷವನ್ನೇ ಕೊಡುವುದಕ್ಕೆ ವೇದಗಳು ಇವೆ.

ಅದುಃಖ ಮಿತರತ್ ಸರ್ವಂ ಜೀವಾ ಏವ ತು ದುಃಖಿನಃ !

ತೇಷಾಂ ದುಃಖ ಪ್ರಹಾಣಾಯ ಶ್ರುತಿರೇಷಾ ಪ್ರವರ್ತತೇ ॥ (ತತ್ವವಾದ)

ಅದನ್ನು ಅರ್ಥ ಮಾಡಿಕೊಳ್ಳುವುದಿಲ್ಲ ಇಂತಹ ಜನರ ಉದ್ಧಾರವಾಗಬೇಕು ಅಂತಾದರೆ ಸಜ್ಜನರ ಸಹವಾಸ, ಸಜ್ಜನರ ಸಮಾಗಮ ಆಗಬೇಕು, ಸಜ್ಜನರ ಸಹವಾಸದಿಂದ ಅಲ್ಪಸ್ವಲ್ಪ ಧರ್ಮ ಮಾಡಿದರೂ ಸಾಕು, ಈ ಕಲಿಯುಗದೊಳಗೆ ಹರಿನಾಮ ಸ್ಮರಣೆ ಮಾಡಿದರೂ ಸಾಕು ಅವರ ಪಾಪಗಳ ಪರಿಹಾರವಾಗುತ್ತವೆ ಅಷ್ಟನ್ನಾದರೂ ಮಾಡಬೇಕು ಅಂತ ವೇದವ್ಯಾಸ ದೇವರು ಉಪದೇಶವನ್ನು ಮಾಡಿದ್ದಾರೆ. ಇಷ್ಟು ಹೇಳಿ ವೇದವ್ಯಾಸ ದೇವರು ಅಲ್ಲಿಂದ ಹೊರಟರೆ ವೇದವ್ಯಾಸ ದೇವರು ಬಂದಿದ್ದಾರೆ ಅಂದರೆ ಸಾವಿರ ಸಾವಿರ ಜನ ಋಷಿಗಳು, ತಪೋಧನರು, ಮಹಾನುಭಾವರು, ತಪಸ್ವಿಗಳೆಲ್ಲಾ ಅಲ್ಲಿ ನೆರೆದಿದ್ದಾರೆ. ಅವರಿಗೇನು ಈ ಜನಮೇಜಯ ರಾಜನಿಂದ ದಕ್ಷಿಣೆ ಬೇಕಾಗಿದ್ದಿಲ್ಲ ಅದಕ್ಕಾಗಿ ಬಂದವರಲ್ಲ ಅವರು, ವೇದವ್ಯಾಸ ದೇವರು ಬಂದರಲ್ಲ ಸರ್ವಜ್ಞ ಶಿಖಾಮಣಿಯಾದ ಪರಮಾತ್ಮನ ಮುಖಾರವಿಂದದಿಂದ ಉಪದೇಶವನ್ನು ಪಡೆಯುವ ಭಾಗ್ಯ ಸಿಗುತ್ತದೆ ಅಂತ ಬಂದಿದ್ದರು ವೇದವ್ಯಾಸ ದೇವರ ಜೊತೆಗೆ ಹೊರಟುಬಿಟ್ಟಿದ್ದಾರೆ ಅವರೆಲ್ಲ ವೇದವ್ಯಾಸ ದೇವರನ್ನು ಹಿಂಬಾಲಿಸಿ ಹೊರಟರು.

ಲೋಕೇ ಪ್ರವದತಾಂ ಶ್ರೇಷ್ಠಂ ಯೇ ವಿಶಿಷ್ಟಾಸ್ತಪೋಧನಾಃ ॥ (5.6 ಭವಿಷ್ಯಪರ್ವ)

ಈ ಕಡೆಗೆ ಜನಮೇಜಯ ರಾಜ ಮತ್ತೆ ತಾನು ಹಸ್ತಿನಾವತಿಗೆ ಬಂದಿದ್ದಾನೆ ಅಶ್ವಮೇಧ ಯಾಗವನ್ನು ಮಾಡುತ್ತಾ ಇದ್ದಾನೆ. ವೇದವ್ಯಾಸ ದೇವರು ಹೇಳಿದ್ದರು ಇದಕ್ಕೆ ವಿಘ್ನ ಬರುತ್ತದೆ ಅಂತ ಆದರೂ ಅದನ್ನೂ ಹೇಳಿದ್ದಾರೆ ವೇದವ್ಯಾಸ ದೇವರು ನಾನು ಇಷ್ಟು ಹೇಳಿದರು ನೀನು ಏನು ನಿಲ್ಲಿಸುವುದಿಲ್ಲ ಮಾಡುವುದು ಮಾಡುತ್ತೀಯಾ ವಿಘ್ನ ಆಗುವದು ಆಗುತ್ತದೆ ಅಂತ ಹೇಳಿದ್ದರು ಹಾಗೆ ಆಯಿತು. ಮಾಡಿಬಿಡೋಣ ಯಾಕೆ ಬಿಡಬೇಕು ಅಂತ ಅಶ್ವಮೇಧ ಯಾಗವನ್ನು ಪ್ರಾರಂಭ ಮಾಡಿದ, ಕಾಶ್ಯಾ, ಕಾಶಿ ದೇಶದ ರಾಜನ ಮಗಳು ವಪುಷ್ಟಮಾ ಹೆಂಡತಿ ಅವಳಿಗೆ ಆ ಯಜ್ಞ ಶಾಲೆಯಲ್ಲಿ ಮಲಗಿಸಿದ್ದಾನೆ, ಅಲ್ಲಿ ಇಂದ್ರ ದೇವರು ಆ ಆಶ್ವದಲ್ಲಿ ಪ್ರವೇಶ ಮಾಡಿ ಅವಳ ಸಂಗವನ್ನು ಮಾಡಿದ್ದಾರೆ. ಅದು ಗೊತ್ತಾದ ತಕ್ಷಣ ಇವನಿಗೆ ಬಹಳ ಕೋಪ ಬಂದಿದೆ ಎಲ್ಲ ಋತ್ವಿಜರನ್ನ ನಿಂದೆ ಮಾಡುತ್ತ ಇದ್ದಾನೆ, ಅಲ್ಲಿರುವಂತಹ ವ್ಯವಸ್ಥಾಪಕರು ಅಶ್ವಶಾಲಾ ರಕ್ಷರಿಗೆಲ್ಲ ಬೈಯುತ್ತಾ ಇದ್ದಾನೆ.

ಅದ್ಯಪ್ರಭೃತಿ ದೇವೇನ್ದ್ರ ಮಜಿತೇನ್ದ್ರಿ ಯಮಸ್ಥಿರಮ್ ।

ಕ್ಷತ್ರಿಯಾ ವಾಜಿಮೇಧೇನ ನ ಯಕ್ಷ್ಯನ್ತೀತಿ ಶೌನಕ ॥ (5.17 ಭವಿಷ್ಯಪರ್ವ)

ಇಂದ್ರ ದೇವರಿಗೂ ಕೂಡ ನಿಂದೆಯನ್ನು ಮಾಡುತ್ತಾ ಇದ್ದಾನೆ, ಶಾಪ ಕೊಡುತ್ತಾ ಇದ್ದಾನೆ. ಇಂದ್ರನ ಮಗನೇ ಅರ್ಜುನ, ಅರ್ಜುನನ ಮಗ ಅಭಿಮನ್ಯು, ಅಭಿಮನ್ಯುವಿನ ಮಗ ಪರೀಕ್ಷಿತ, ಪರೀಕ್ಷಿತನ ಮಗನೇ ಜನಮೇಜಯ ತನ್ನ ವಂಶದ ಮೂಲಪುರುಷ ಇಂದ್ರ ಅಂತಹ ಇಂದ್ರ ದೇವರಿಗೇನೆ ಶಾಪ ಕೊಡುತ್ತಾ ಇದ್ದಾನೆ. ಇನ್ನುಮೇಲೆ ಯಾರೂ ನಿನ್ನ ಪ್ರೀತಿಗಾಗಿ ಅಶ್ವಮೇಧ ಯಾಗವನ್ನು ಮಾಡುವುದು ಬೇಡ ನನ್ನ ಅಶ್ವಮೇಧ ಯಾಗಕ್ಕೆ ನೀನು ವಿಘ್ನವನ್ನು ಉಂಟು

ಮಾಡುತ್ತಾ ಇದ್ದಿ ಅಂತ ಇಂದ್ರ ದೇವರಿಗೆ ಶಾಪ ಕೊಟ್ಟ. ಇಂದ್ರ ದೇವರಿಗೆ ಶಾಪ ಕೊಡುವುದು ಅಷ್ಟೇ ಅಲ್ಲ ಅಲ್ಲಿ ಬಂದಂತಹ ಪುರೋಹಿತರ ಮೇಲೆ ಋತ್ವಿಜರ ಮೇಲೆ ಸಿಟ್ಟು ಮಾಡುತ್ತಾ ಇದ್ದಾನೆ ನೀವೆಲ್ಲ ನನ್ನ ಯಜ್ಞವನ್ನು ಪೂರ್ಣ ಮಾಡಲಿಲ್ಲ ಈ ರೀತಿ ಯಜ್ಞಕ್ಕೆ ವಿಘ್ನವನ್ನು ಉಂಟು ಮಾಡಿದ್ದೀರಿ ಅಂತ ಹೇಳಿ ನನ್ನ ರಾಜ್ಯದೊಳಗೆ ನೀವು ಇರತಕ್ಕದ್ದಲ್ಲ ಹೋಗಬೇಕು. ಈ ರೀತಿ ಯಜ್ಞದಲ್ಲಿ ಋತ್ವಿಜರು ಪುರೋಹಿತರೇ ಬಹಳ ಪ್ರಧಾನ ಅವರ ಆಶೀರ್ವಾದದಿಂದಲೇನೇ ಯಜ್ಞ ಪರಿಪೂರ್ಣವಾಗುವುದು ಅವರನ್ನ ಸಂತೋಷ ಪಡಿಸಬೇಕು, ಅವರನ್ನೇ ನಿಂದೆ ಮಾಡಿ ನೀವೆಲ್ಲ ನನ್ನ ರಾಜ್ಯವನ್ನು ಬಿಟ್ಟು ಹೊರಗೆ ಹೋಗಬೇಕು ಅಂತ ಅವರಿಗೂ ನಿಂದೆ ಮಾಡಿದ್ದಾನೆ. ಅವರಿಗೆ ಬಹಳ ಕೋಪ ಬಂದಿದೆ ಅವರೂ ಕೂಡ ಶಾಪವನ್ನು ಕೊಟ್ಟಿದ್ದಾರೆ ಬಹಳ ಕ್ರುದ್ಧರಾಗಿ ಅಲ್ಲಿಂದ ಹೊರಟಿದ್ದಾರೆ.

ಇತ್ಯುಕ್ತಾಸ್ತತ್ಯಜುರ್ವಿಪ್ರಾಸ್ತಂ ನೃಪಂ ಜಾತಮನ್ಯವಃ ॥ (5.19 ಭವಿಷ್ಯಪರ್ವ)

ಆಮೇಲೆ ಅಲ್ಲಿ ಅನೇಕ ಸ್ತ್ರೀಯರು ಸಖಿಯರು ಹಿರಿಯರು ಯಾರೆಲ್ಲಾ ಆ ರಾಣಿಯ ಜೊತೆಗೆ ರಕ್ಷಣೆಗಾಗಿ ಮಾರ್ಗದರ್ಶನಕ್ಕಾಗಿ ಇದ್ದವರು ಇದ್ದರೋ ಗೆಳತಿಯರಾಗಲಿ ಹಿರಿಯರಾಗಲಿ ಅವರೆಲ್ಲರಿಗೆ ಆಜ್ಞೆಯನ್ನು ಮಾಡುತ್ತಾ ಇದ್ದಾನೆ ನನ್ನ ಹೆಂಡತಿಯನ್ನು ಕೂಡ ಹೊರಗೆ ಹಾಕಬೇಕು ಅಂತ. **'ಅಸತೀಂ ವಪುಷ್ಟಮಾಮೇತಾಂ'** [1] ಇಂದ್ರನಿಗೆ ಶಾಪ ಕೊಟ್ಟ, ಋತ್ವಿಜರಿಗೆ ಬೈದು ಕಳಿಸಿದ, ಹೆಂಡತಿಯನ್ನ ಹೊರಗೆ ಕಳಿಸುವುದಕ್ಕೆ ಜೊತೆಗೆ ಇರುವಂತಹ ಸ್ತ್ರೀಯರಿಗೆಲ್ಲ ಹೇಳುವಾಗ ವಿಶ್ವಾವಸು ಎಂಬ ಗಂಧರ್ವ ಅಲ್ಲಿ ಬಂದಿದ್ದಾನೆ,

ಕೃಶಾನುವಿಶ್ವಾವಸು ನಾಮಧೇಯಂ ಗಂಧರ್ವಯುಗ್ಮಂ ಗಗನೇ ಚಚಾರ ।

ಆ ವಿಶ್ವಾವಸು ಎಂಬಂತಹ ಗಂಧರ್ವನನ್ನ ಇವನು ಸ್ವಾಗತ ಮಾಡಿದ್ದಾನೆ. ವಿಶ್ವಾವಸು ಹೇಳಿದ ನೀನು ಏನು ಕೆಲಸ ಮಾಡುತ್ತ ಇದ್ದೀಯಾ, ಏನು ತಪ್ಪು ಮಾಡಿದ್ದಾರೆ ಇಂದ್ರ ದೇವರು. ಅವಳನ್ನು ನಿನ್ನ ಮಡದಿ ಅಂತ ತಿಳಿದುಕೊಂಡಿದ್ದಿಯಲ್ಲ ಅವಳು ಅಪ್ಸರಾ ಸ್ತ್ರೀ ರಂಭಾ ಸ್ವರ್ಗಲೋಕದಲ್ಲಿ ಇರುವ ರಂಭಾ ಅಪ್ಸರಾ ಸ್ತ್ರೀ ಅವಳನ್ನು ನೀನು ಮದುವೆಯಾಗಿದ್ದಿ. ಅವಳು ಕಾಶಿ ರಾಜನ ಮಗಳಾಗಿ ಬಂದಿದ್ದಾಳೆ ಅವಳನ್ನು ನೀನು ಮದುವೆಯಾಗಿದ್ದಿ ರಾಜಕುಮಾರಿ ಅಂತ ತಿಳಿದಿದ್ದೀ ಅವಳು ಕೇವಲ ರಾಜಕುಮಾರಿ ಅಲ್ಲ ಸ್ವರ್ಗಲೋಕದ ಅಪ್ಸರಾ ಸ್ತ್ರೀ. ಸ್ವರ್ಗಲೋಕದ ಅಪ್ಸರಾ ಸ್ತ್ರೀ ಆದ ರಂಭಾ ಊರ್ವಶಿ ಇವರೆಲ್ಲ ದೇವಲೋಕದಲ್ಲಿ ಇರುವಂತಹ ದೇವತೆಗಳನ್ನು ಸಂತೋಷ ಪಡಿಸುವಂತಹ ಸ್ತ್ರೀಯರವರು ಅಂತಹ ರಂಭೆಯ ಜೊತೆಗೆ ಇಂದ್ರ ದೇವರು ಸಂಗವನ್ನು ಮಾಡಿದರೆ ನಿನಗೇನು ಕಷ್ಟ ಸ್ವರ್ಗಲೋಕದ ಸ್ತ್ರೀಯರೇ ಕಾರಣ ವಶದಿಂದ ಇಲ್ಲಿ ಭೂಲೋಕದಲ್ಲಿ ಬಂದವಳು ಅಷ್ಟೇ.

ರಮ್ಭಾನಾಮಾಪ್ಸರಾ ದೇವೀ ಕಾಶೀರಾಜಸುತಾ ಮತಾ ।
ಸೈಷಾ ಯೋಷಿದ್ವರಾ ರಾಜನ್ ರತ್ನಭೂತಾನುಭೂಯತಾಮ್ ॥ (5.26 ಭವಿಷ್ಯಪರ್ವ)

ಅಪ್ಸರಾ ಸ್ತ್ರೀಯರಿಗೆ ಪುರುಷರ ನಿಯಮವೇ ಇರುವುದಿಲ್ಲ ಆದ್ದರಿಂದ ಅವಶ್ಯವಾಗಿ ಇಂದ್ರ ದೇವರು ಅವಳ ಮೇಲೆ ಅನುಗ್ರಹ ಮಾಡಿದ್ದು ಸರಿ. ನೀನು ಆ ಪತ್ನಿಯನ್ನು ಮನೆ ಬಿಟ್ಟು ಹೊರಗೆ ಹಾಕುವ ಕಾರಣ ಇಲ್ಲ. ಅಪ್ಸರಾ ಸ್ತ್ರೀ ಆದದ್ದರಿಂದ ಅವಶ್ಯವಾಗಿ ನೀನು ಅವಳನ್ನು ಸುರಕ್ಷಿತವಾಗಿ ಮನೆಯಲ್ಲಿ ಇಟ್ಟುಕೊಂಡು ಮೊದಲಿನಂತೆ ವಿಶೇಷವಾಗಿ ನೀನು ಅವಳ ಮೇಲೆ ಪ್ರೀತಿಯನ್ನು ಮಾಡಬೇಕು ಅಂತ ಉಪದೇಶವನ್ನು ಮಾಡಿದ್ದಾನೆ ವಿಶ್ವಾವಸು

1. 5.21 ಭವಿಷ್ಯಪರ್ವ

ಎಂಬಂತಹ ಗಂಧರ್ವ. ಈ ರೀತಿ ವೇದವ್ಯಾಸ ದೇವರು ಮೊದಲೇ ನಿನಗೆ ತಿಳಿಸಿದಂತೆ ಇಂದ್ರ ದೇವರು ನಿನ್ನ ಯೋಗ್ಯತೆಗೆ ಎಷ್ಟು ಯಜ್ಞ ಮಾಡುವ ಸಾಧ್ಯತೆ ಇದೆ ಅಷ್ಟನ್ನು ಮಾಡಿ ಅದಕ್ಕೆ ಮೀರಿ ನೀನು ಯಜ್ಞವನ್ನು ಮಾಡುತ್ತಾ ಇದ್ದೀ **'ತ್ರಿಯಜ್ಞಶತಯಾಜಿನಃ'**[1] ಮೂರುನೂರಕ್ಕೆ ಹತ್ತಿರ ಬರುವಷ್ಟು ಯಜ್ಞವನ್ನು ನೀನು ಮಾಡಿದ್ದೀ ಆ ಪುರೋಹಿತರು ಮಾಡಿಸಿದ್ದಾರೆ ಅಂಥವರನ್ನು ನೀನು ಬೈಯ್ದು ಊರು ಬಿಟ್ಟು ಹೋಗಿ ಅಂತ ಕಳಿಸುತ್ತ ಇದ್ದೀಯಲ್ಲ. ಇದೆಲ್ಲ ನಿನಗೆ ಇನ್ನು ಮುಂದೆ ಯಜ್ಞವನ್ನು ಮಾಡುವ ಪುಣ್ಯ ಸಿಗಬಾರದು ಅನ್ನುವುದಕ್ಕೆ ದೇವತೆಗಳು ಈ ರೀತಿ ಮಾಡಿದ್ದಾರೆ ಅದಕ್ಕೆ ತಕ್ಕ ಹಾಗೆ ನೀನು ಪ್ರತಿಕ್ರಿಯೆಯನ್ನು ಮಾಡಿ ದೊಡ್ಡ ಅನಾಹುತವನ್ನು ತಂದುಕೊಂಡಿದ್ದಿ. ಆ ರೀತಿ ಯಾರ ನಿಂದೆಯನ್ನು ಮಾಡಬೇಡ ಇವಳನ್ನು ಮನೆಯಲ್ಲಿ ಇಟ್ಟುಕೋ, ಆ ಎಲ್ಲ ಬ್ರಾಹ್ಮಣರಿಗೂ ಸ್ವಾಗತ ಮಾಡು, ನಿನ್ನ ಶಕ್ತಿಗೆ ಅನುಕೂಲವಾಗಿ ಎಷ್ಟು ಸಾಧ್ಯವೊ ಅಷ್ಟು ಧರ್ಮಾಚಾರಣೆಯನ್ನು ನೀನು ಮಾಡುತ್ತಾ ಹೋಗು. ಈ ಯಜ್ಞವನ್ನು ಮಾತ್ರ ಮಾಡಿ ಇಂದ್ರ ದೇವರ ವಿರೋಧವನ್ನು ಕಟ್ಟಿಕೊಳ್ಳುವುದಕ್ಕೆ ಹೋಗಬೇಡ ಅಂತ ವಿಶ್ವಾವಸು ಗಂಧರ್ವ ಹೇಳಿದಾಗ ಆ ಗಂದರ್ವನ ಮಾತಿಗೆ ಬೆಲೆ ಕೊಟ್ಟು ತನ್ನ ಮಡದಿಯನ್ನೂ ಮೊದಲಿನಂತೆ ಪ್ರೀತಿ ಮಾಡುತ್ತಾ ಇದ್ದಾನೆ, ಬ್ರಾಹ್ಮಣರನ್ನೂ ಮತ್ತೆ ಕರೆಸಿಕೊಂಡ, ಇಂದ್ರ ದೇವರಿಗೂ ಶರಣಾಗತನಾಗಿದ್ದಾನೆ.

ನ ಹಿ ವಿರಮತಿ ವಿಪ್ರಪೂಜನಾ ನ್ನ ಚ ವಿನಿವರ್ತತಿ ಯಜ್ಞದಾನಶೀಲಾತ್ ।

ನ ವಿಷಯಪರಿರಕ್ಷಣಾಚ್ಚ್ಯುತೋಽಭೂ ನ್ನ ಚ ಪರಿಗರ್ಹತಿ ತಾಂ ವಪುಷ್ಟಮಾಂ ಚ ॥ (6.3 ಭವಿಷ್ಯಪರ್ವ)

ತನ್ನ ಕುಲದ ಮೂಲಪುರುಷ ಮಹಾನುಭಾವ ದೇವತೆ ಆ ರೀತಿ ಧರ್ಮ ಕರ್ಮಗಳನ್ನು ಮಾಡುತ್ತಾ ಯಾವ ಬ್ರಾಹ್ಮಣರನ್ನು ನಿಂದೆ ಮಾಡಲಿಲ್ಲ, ಯಜ್ಞ ದಾನಾದಿಗಳನ್ನು ತನಗೆ ಏನು ಯೋಗ್ಯವೋ ಅದನ್ನು ನಿಲ್ಲಿಸಲಿಲ್ಲ, ದಾನ ಧರ್ಮಾಧಿಗಳನ್ನು ಮಾಡುತ್ತಾ ಇದ್ದಾನೆ, ಪ್ರಜೆಗಳನ್ನ ಅತ್ಯಂತ ಧರ್ಮದಿಂದ ಪಾಲನೆ ಮಾಡುತ್ತಾ ಇದ್ದಾನೆ, ಹೆಂಡತಿಯನ್ನು ಪ್ರೀತಿಯಿಂದ ರಕ್ಷಣೆ ಮಾಡುತ್ತಾ ಇದ್ದಾನೆ. ಈ ರೀತಿ ಜನಮೇಜಯ ಅತ್ಯಂತ ಧರ್ಮದಿಂದ ರಾಜ್ಯವನ್ನು ಆಳುತ್ತಾ ಇದ್ದಾನೆ ಅಂತ ಸೌತಿಗಳು ಶೌನಕಾದಿಗಳಿಗೆ ತಿಳಿಸುತ್ತಾರೆ.

ಪ್ರಕೃಷ್ಟಮಾಯುಃ ಸಮವಾಪ್ಯ ದುರ್ಲಭಂ ಲಭೇಚ್ಚ ಸರ್ವಜ್ಞಫಲಂ ಚ ಕೇಶವಮ್ ॥ (6.5 ಭವಿಷ್ಯಪರ್ವ)

ಇಂತಹ ಈ ಜನಮೇಜಯನ ಚರಿತ್ರೆಯನ್ನ ಈ ಇತಿಹಾಸವನ್ನ ವೇದವ್ಯಾಸ ದೇವರು ಉಪದೇಶ ಮಾಡಿದ್ದನ್ನು ಯಾರು ಕೇಳುತ್ತಾರೋ ದೀರ್ಘವಾದ ಉತ್ತಮವಾದಂತಹ ಸಕಲ ಜ್ಞಾನದ ಫಲ, ಸಕಲ ಯಜ್ಞದ ಫಲ ಅಂತಹ ಪರಮಾತ್ಮನ ಪ್ರಾಪ್ತಿ ಆಗುತ್ತದೆ. ಅಪುತ್ರರಿಗೆ ಪುತ್ರ ಪ್ರಾಪ್ತಿ, ಧನ ಇಲ್ಲದವರಿಗೆ ಧನ, ರೋಗ ಇದ್ದವರಿಗೆ ರೋಗಗಳ ಪರಿಹಾರ, ಎಲ್ಲ ವಿಧವಾಗಿರುವಂತಹ ವಿಜಯ ಕ್ಷತ್ರಿಯರಿಗೆ, ಸಂಪತ್ತು ವೈಶ್ಯರಿಗೆ ಅವರವರಿಗೆ ಬೇಕಾದ ಇಷ್ಟಾರ್ಥಗಳು ಎಲ್ಲರಿಗೂ ಸಿಗುತ್ತದೆ ಎಂಬುದಾಗಿ ಇದರ ಫಲ ಶ್ರುತಿಯನ್ನು ಕೂಡ ತಿಳಿಸುತ್ತಾ ಇದ್ದಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

1. 5.31 ಭವಿಷ್ಯಪರ್ವ

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಭವಿಷ್ಯಪರ್ವ-36

* * *

ಜನಮೇಜಯ ಉವಾಚ

ಪ್ರಭಾವಂ ಪದ್ಮನಾಭಸ್ಯ ಸ್ವಪತಃ ಸಾಗರಾಮ್ಭಸಿ ।
ಪುಷ್ಕರೇ ವೈ ಯತೋದ್ಭೂತಾ ದೇವಾಃ ಸರ್ಷಿಗಣಾಃ ಪುರಾ ।। (7.1 ಭವಿಷ್ಯಪರ್ವ)

ಈ ಗ್ರಂಥದ ಶ್ರವಣದ ಮಹಾತ್ಮ್ಯವನ್ನು ಈ ಹಿಂದೆ ತಿಳಿಸಿದ್ದಾರೆ. ಮತ್ತೆ ಕೆಲವು ಪ್ರಶ್ನೆಗಳನ್ನು ಜನಮೇಜಯ ವೈಶಂಪಾಯನರಿಗೆ ಮಾಡುತ್ತಾನೆ. ಭಗವಂತ ಸೃಷ್ಟಿಯನ್ನು ಮಾಡುತ್ತಾನೆ, ಪ್ರಲಯ ಕಾಲದಲ್ಲಿ ಯೋಗ ನಿದ್ರೆಯನ್ನು ಮಾಡುತ್ತಾನೆ, ಎಲ್ಲ ಪದಾರ್ಥಗಳ ಸಂಹಾರವನ್ನು ಮಾಡಿ, ಎಲ್ಲ ಜೀವರಾಶಿಗಳನ್ನು ತನ್ನ ಉದರದಲ್ಲಿ ಹಾಕಿಕೊಂಡು ಯೋಗ ನಿದ್ರೆಯನ್ನು ಮಾಡುತ್ತಾನೆ ಅಂತ ನಾವೆಲ್ಲ ಕೇಳಿದ್ದೇವೆ. ಎಷ್ಟು ಕಾಲದವರೆಗೆ ಯೋಗ ನಿದ್ರೆಯನ್ನು ಮಾಡುತ್ತಾನೆ, ಸೃಷ್ಟಿಯನ್ನು ಮಾಡುವ ಕಾಲ ಎಷ್ಟು, ಪರಮಾತ್ಮನ ಹಗಲು ಹಾಗೂ ಅವನ ರಾತ್ರಿ ಇವುಗಳನ್ನು ಹೇಗೆ ತಿಳಿಯುವುದು, ಇದರ ಬಗ್ಗೆ ಭಗವಂತನ ಯಶಸ್ಸು ಭಗವತ್ ಸ್ವರೂಪಭೂತವಾದದ್ದು.

ಐಶ್ವರ್ಯಸ್ಯ ಸಮಗ್ರಸ್ಯ ವೀರ್ಯಸ್ಯ ಯಶಸಃ ಶ್ರೀಯಃ ।
ಜ್ಞಾನ ವೈರಾಗ್ಯಯೋಶ್ಚೈವ ಜ್ಞಾನ ವಿಜ್ಞಾನ ಯೋಶ್ಚೈವ ಷಣ್ಣಾಂ ಭಗ ಇತೀರಣ ।। (ವೇದಮಂತ್ರ)

ಅಂತಹ ಪರಮಾತ್ಮನ ದಿವ್ಯವಾದಂತಹ ಸ್ವರೂಪಭೂತವಾದ ಯಶಸ್ಸು ಏನಿದೆ ಆ ಯಸಸ್ಸಿನ ಬಗ್ಗೆ ನಮಗೆ ತಿಳಿಸಿಕೊಡಬೇಕು ಅಂತ ನಾವೆಲ್ಲ ಎದುರಿಗೆ ಕುಳಿತವರು ಶ್ರಾದ್ಧರು ಅನ್ನುತ್ತಾನೆ ಜನಮೇಜಯ. ಶ್ರಾದ್ಧರು ಅಂತ ಶಬ್ದ ಕೇಳಿದಾಗ ಸ್ವಲ್ಪ ಗಾಬರಿಯಾಗಬಹುದು ಕೆಲವರಿಗೆ, ಶ್ರಾದ್ಧರು ಅಂದರೆ ಬೇರೆ ಏನೂ ಅಲ್ಲ, ಶ್ರದ್ಧೆಯಿಂದ ಕೇಳುವುದಕ್ಕೆ ಕುಳಿತವರು.

ಶ್ರದ್ಧಾನಾಮುಪವಿಷ್ಟಾನಾಂ ಭಗವನ್ ವಕ್ತುಮರ್ಹಸಿ ।। (7.10 ಭವಿಷ್ಯಪರ್ವ)

ನಾವೆಲ್ಲ ಶ್ರದ್ಧೆಯಿಂದ ತತ್ವವನ್ನು ಕೇಳುವುದಕ್ಕೆ ಕುಳಿತಿದ್ದೇವೆ. ಸರ್ವೋತ್ತಮನಾದ ಭಗವಂತ ನಮ್ಮೆಲ್ಲರ ಸೃಷ್ಟಿಯನ್ನು ಮಾಡಿದ್ದು ಸತ್ಯ, ಪ್ರಲಯವನ್ನು ಮಾಡುವುದು ಸತ್ಯ, ಅವನ ಮಹಿಮೆ ಸತ್ಯ ಇದರ ಬಗ್ಗೆ ನಮಗೆ ಶ್ರದ್ಧೆ ಇದೆ, ವಿಶ್ವಾಸ ಇದೆ ಆದರೆ ಅದರ ವಿವರ ಗೊತ್ತಿಲ್ಲ ಅದನ್ನು ತಿಳಿಸಿಕೊಡಬೇಕು ಅಂತ ಕೇಳಿದಾಗ ವೈಶಂಪಾಯನರು ಅನ್ನುತ್ತಾರೆ. ಪ್ರಶ್ನೆಗಳಿಗೆ ಉತ್ತರ ಕೊಡುವುದು ಮುಂದೆ, ಮೊದಲನೆಯದು ನೀನು ಪ್ರಶ್ನೆ ಮಾಡಿದ್ದೀ ಅಲ್ಲ ಆ ಪ್ರಶ್ನೆಯೇ ಬಹಳ ಅದ್ಭುತವಾದದ್ದು, ನಿನ್ನ ಕುಲಕ್ಕೆ ಕೀರ್ತಿಯನ್ನು ತಂದುಕೊಡುವಂತಹ ಪ್ರಶ್ನೆ.

ನಾರಾಯಣಯಶೋಜ್ಞಾನೇ ಯಾ ಭವೇದ್ ಭವತಃ ಸ್ಪೃಹಾ ।

ತ್ವದ್ವಂಶಾನಘ ಪೂತಸ್ಯ ಕಾರ್ಯಂ ಕುರುಕುಲರ್ಷಭ ॥ (7.11 ಭವಿಷ್ಯಪರ್ವ)

ನಾರಾಯಣನ ಯಶಸ್ಸನ್ನು ತಿಳಿಯಬೇಕು, ಅವನ ಮಹಿಮೆಯನ್ನು ತಿಳಿಯಬೇಕು ವೇದ ಇತಿಹಾಸ ಪುರಾಣದಿಗಳಲ್ಲಿ ಅವನ ಬಗ್ಗೆ ಏನು ಹಾಡಿ ಹೊಗಳಿದ್ದಾರೆ ಆ ಮಹಿಮೆಯನ್ನು ತಿಳಿಯಬೇಕು ಅಂತ ನಿನಗೊಂದು ಆಸಕ್ತಿ ಉಂಟಾಗಿದೆಯಲ್ಲ ಇದು ನಿನ್ನ ವಂಶಕ್ಕೆ ಅತ್ಯಂತ ಉಚಿತವಾಗದದ್ದು, ನಿನ್ನ ಎಲ್ಲ ಪಾಪಗಳನ್ನು ಪರಿಹಾರ ಮಾಡುವುದಕ್ಕೆ, ನಿನ್ನ ನಿಮಿತ್ತ ಯಾರೆಲ್ಲ ಇದನ್ನು ಕೇಳುತ್ತಾರೋ ಅವರೆಲ್ಲರ ಪಾಪಗಳನ್ನೂ ಪರಿಹಾರ ಮಾಡುವುದಕ್ಕೆ ಕಾರಣವಾದದ್ದು. ಎಷ್ಟೋ ಜನ್ಮಗಳಲ್ಲಿ ಮಾಡಿದ ಯಜ್ಞ ಯಾಗಾದಿಗಳ ಫಲ, ಅನ್ನದಾನಾದಿಗಳ ಫಲ, ಹಿರಿಯರ ಗುರುಗಳ ಸೇವೆ ಮಾಡಿದ ಫಲ ಇವತ್ತು ನಿನಗೆ ಇಂತಹ ಒಂದು ಪ್ರಶ್ನೆಯನ್ನ ಕೇಳಬೇಕು ಅಂತ ಅನ್ನಿಸಿದೆ, ದೇವರ ಬಗ್ಗೆ ಮಹಿಮೆಯನ್ನು ಕೇಳಬೇಕು ಅಂತ ಆಸಕ್ತಿ ಹುಟ್ಟಿದೆ ಅನ್ನುತ್ತಾರೆ ವೈಶಂಪಾಯನರು ಬಹಳ ಮಹತ್ವದ ಮಾತು. **'ಪೂತಸ್ಯ ಕಾರ್ಯಂ'** ಪವಿತ್ರವಾದ ಯಜ್ಞ ಯಾಗಾದಿ ಧರ್ಮಗಳ ಒಂದು ಫಲ ಇಂತಹ ಒಂದು ಅಪೇಕ್ಷೆ, ದೇವರ ಮಹಿಮೆಯನ್ನು ತಿಳಿಯಬೇಕು ಅನ್ನುವ ಅಪೇಕ್ಷೆಯೇ ಇಷ್ಟು ದೊಡ್ಡದು ಅಂತ. ಇವತ್ತು ಅನೇಕ ಸಜ್ಜನರಲ್ಲಿ ಸಚ್ಛಾಸ್ತ್ರಗಳನ್ನ ಶ್ರವಣ ಮಾಡಬೇಕು ಅನ್ನುವ ಅಪೇಕ್ಷೆ ಇದೆ, ದೇವರ ಮಹಿಮೆಯನ್ನು ತಿಳಿಯುವ ಒಂದು ಅಪೇಕ್ಷೆ ಇದೆ ಅಂತಾದರೆ, ಜಿಜ್ಞಾಸೆ ಇದೆ ಅಂತಾದರೆ ಎಷ್ಟೋ ಜನ್ಮಗಳ ಪುಣ್ಯದ ಫಲ ನಮಗೆ ಒದಗಿ ಬಂದಿದೆ ಅಂತ ಭಾವಿಸಬೇಕು. ಭಗವಂತ ಪರಮಾನುಗ್ರಹವನ್ನು ಮಾಡಿ ಆ ಒಂದು ಅಪೇಕ್ಷೆಯನ್ನು ಜಿಜ್ಞಾಸೆಯನ್ನು ನಮಗೆ ನೀಡಿದ್ದಾನೆ ಅಂತ ಅದಕ್ಕಾಗಿ ಪರಮಾತ್ಮನಿಗೆ ಕೃತಜ್ಞತೆಗಳನ್ನು ಹೇಳಬೇಕು ಅನ್ನುವುದು ಈ ವೈಶಂಪಾಯನರ ಮಾತಿನಿಂದ ಸ್ಪಷ್ಟವಾಗುತ್ತದೆ. ನನ್ನ ಪ್ರಜ್ಞೆ, ನನ್ನ ಅಧ್ಯಯನ, ನಾನು ವೇದವ್ಯಾಸ ದೇವರ ಮುಖದಿಂದ ಮಾಡಿದ ಶ್ರವಣ ಅದರಲ್ಲಿ ನನಗೆ ಅರ್ಥವಾದಷ್ಟು ನಾನು ನಿನಗೆ ಅದರ ಬಗ್ಗೆ ವಿವರಣೆಯನ್ನು ಕೊಡುತ್ತೇನೆ ಅಂತ ಜನಮೇಜಯನಿಗೆ ವೈಶಂಪಾಯನರು ಹೇಳುತ್ತಾ ಇದ್ದಾರೆ. ಒಂದು ಮಾತು,ಯಾರಾದರೂ ಪೂರ್ಣವಾಗಿ ಪರಮಾತ್ಮನ ಯಶಸ್ಸನ್ನು ಮಹಿಮೆಯನ್ನು ಹೇಳುತ್ತೇವೆ ಅಂತ ಹೊರಟರೆ ಅದು ಅಸಾಧ್ಯವಾದ ಮಾತು ಅದನ್ನು ನಂಬುವಂತೆಯೇ ಇಲ್ಲ, ಅದೊಂದು ತರಹದ ಮೌಢ್ಯ ಅಜ್ಞಾನ ಅದು, ದೇವರ ಬಗ್ಗೆ ನಾನು ಪೂರ್ಣ ತಿಳಿದಿದ್ದೇನೆ ಅಂತ ಯಾರಾದರೂ ತಿಳಿದರೆ ಅದೇ ಒಂದು ದೊಡ್ಡದಾದ ತಪ್ಪು ತಿಳುವಳಿಕೆ ಅವರದು.

ಕಃ ಸಮುತ್ಸಹತೇ ಜ್ಞಾತುಂ ಪರಂ ನಾರಾಯಣಾತ್ಮಕಮ್ ।

ವಿಶ್ವಾತ್ಮನೋ ಯಂ ಬ್ರಹ್ಮಾಪಿ ನ ವೇದಯತಿ ತತ್ತ್ವತಃ ॥ (7.15 ಭವಿಷ್ಯಪರ್ವ)

ಸ್ವತಃ ಬ್ರಹ್ಮ ದೇವರು ಪರಮಾತ್ಮನನ್ನ ಪರಿಪೂರ್ಣವಾಗಿ ತಿಳಿದಿಲ್ಲ, ನಮ್ಮೆಲ್ಲರಿಗಿಂತಲೂ ಬಹಳಷ್ಟು ತಿಳಿದಿದ್ದಾರೆ ಆದರೆ ಬ್ರಹ್ಮ ದೇವರೂ ಪರಿಪೂರ್ಣವಾಗಿ ಪರಮಾತ್ಮನನ್ನು ತಿಳಿದಿಲ್ಲ. ಇಲ್ಲಿ **'ಬ್ರಹ್ಮಾ ಅಪಿ ಬ್ರಹ್ಮ ಅಪಿ'**, ಲಕ್ಷ್ಮೀ ದೇವಿಗೂ ಬ್ರಹ್ಮ ಅಂತ ಕರೀತಾರೆ.

ಮಮಯೋನಿರ್ಮಹದ್ಬ್ರಹ್ಮ ತಸ್ಮಿನ್ ಗರ್ಭಂ ದಧಾಮ್ಯಹಮ್ ॥ (14.3 ಭ ಗೀತಾ)

ಅಂತ ಕೃಷ್ಣ ಪರಮಾತ್ಮ ಭಗವದ್ಗೀತೆಯಲ್ಲಿ ಹೇಳುತ್ತಾನಲ್ಲ. ಹೀಗಾಗಿ ಬ್ರಹ್ಮ ಅಪಿ ಲಕ್ಷ್ಮೀ ದೇವಿಯೂ ಪರಮಾತ್ಮನನ್ನ ಪೂರ್ಣವಾಗಿ ತಿಳಿದಿಲ್ಲ, ಬ್ರಹ್ಮಾಪಿ ಚತುರ್ಮುಖ ಬ್ರಹ್ಮ ದೇವರೂ ಪರಮಾತ್ಮನನ್ನ ತಿಳಿದಿಲ್ಲ ಇನ್ನುಳಿದವರು ತಿಳಿದಿಲ್ಲ ಅಂತ ಏನು ಹೇಳುವುದು. ಎಲ್ಲರ ಶರೀರದಲ್ಲಿ ಅಂತರ್ಯಾಮಿಯಾಗಿ ಅವರ ಇಂದ್ರಿಯಗಳಿಗೆ ಪ್ರಾಣಗಳಿಗೆ ಮನಸ್ಸಿಗೆ ಎಲ್ಲದಕ್ಕೂ ಪ್ರೇರಕನಾಗಿ ಆಧ್ಯಾತ್ಮಿಕವಾದ ವಸ್ತುಗಳನ್ನು ನಿಯಮನ ಮಾಡುವ ಭಗವಂತನ ರೂಪಗಳು, ಎಲ್ಲ ದೇವತೆಗಳಲ್ಲಿ ಅಂತರ್ಯಾಮಿಯಾಗಿ ಅಧಿ ದೈವದಲ್ಲಿ ದೇವತಾಂತರ್ಮಿಯಾದ ಭಗವಂತನ ರೂಪಗಳು ಹಾಗೂ ಪಂಚ ಮಹಾಭೂತಗಳು ಹಾಗೂ ಭೌತಿಕವಾದ ವಸ್ತುಗಳಲ್ಲಿ ಅಂತರ್ಯಾಮಿಯಾದಂತಹ ಆ ಪರಮಾತ್ಮನ ರೂಪಗಳು. ಈ ಆಧ್ಯಾತ್ಮಿಕ ಆಧಿದೈವಿಕ ಆಧಿಭೌತಿಕ ಎಲ್ಲ ವಿಧವಾಗಿರುವಂತಹ ಭಗವದ್ರೂಪಗಳನ್ನು ನಾವು ಯಥಾ ಶಕ್ತಿ ತಿಳಿಯುವ ಪ್ರಯತ್ನ ಮಾಡೋಣ, ಪೂರ್ಣವಾಗಿಯಂತೂ ತಿಳಿಯುವುದಕ್ಕೆ ಸಾಧ್ಯ ಇಲ್ಲ.

ಯಃ ಕರ್ತಾ ಕಾರಕೋ ಬುದ್ಧಿರ್ಮನಃ ಕ್ಷೇತ್ರಜ್ಞ ಏವ ಚ ।
ಪ್ರಧಾನಂ ಪುರುಷಃ ಶಾಸ್ತಾ ಏಕಸ್ತದಭಿಶಬ್ದ್ಯತೇ ॥ (7.19 ಭವಿಷ್ಯಪರ್ವ)

ಕರ್ತಗಳಾದ ಜೀವರಲ್ಲಿದ್ದು ಎಲ್ಲ ಕಾರ್ಯಗಳನ್ನು ಮಾಡಿ, ಮಾಡಿಸುವ ಕರ್ತಾ ಅವನೇ, ಕಾರಕಗಳಾದ ಇಂದ್ರಿಯಾದಿಗಳಲ್ಲಿ ಇದ್ದು ಹಾಗೂ ಬಾಹ್ಯವಾದ ಸಾಧನಗಳಲ್ಲಿಯೂ ಇದ್ದು ಕರ್ಮಗಳನ್ನು ಮಾಡಿಸುವವನು ಅವನೇ, ಬುದ್ಧಿ ಮನಸ್ಸುಗಳಿಗೆ ಪ್ರೇರಕ, ಸರ್ವಜ್ಞನಾದವನು, ಪ್ರಕೃತಿಯನ್ನು ಪೂರ್ಣವಾಗಿ ತಿಳಿದವನು, ಪ್ರಕೃತಿಗೆ ನಿಯಾಮಕನಾದವನು. ಆ ಎಲ್ಲ ವಸ್ತುಗಳನ್ನು ಹೇಳಿಕೊಡುವ ಸಕಲ ಶಬ್ದಗಳಿಂದ ವಾಚ್ಯನಾಗಿರುವಂತಹ ಪರಮಾತ್ಮ ಅವನ ಮಹಿಮೆಯನ್ನು ಎಷ್ಟು ಅಂತ ನಾವು ಹೇಳೋಣ.

ಸ ಏವ ಭಗವಾನ್ ಸರ್ವಂ ಕರೋತಿ ವಿಕರೋತಿ ಚ । (7.21 ಭವಿಷ್ಯಪರ್ವ)
ಯೋಽಸ್ಮಾನ್ ಕಾರಯತೇ ಕರ್ಮ ತೇನಾಸ್ಮ ವ್ಯಾಕುಲೀಕೃತಾಃ ॥ (7.22 ಭವಿಷ್ಯಪರ್ವ)

ಅವನೇ ಎಲ್ಲವನ್ನು ತಾನು ಮಾಡಿಸುತ್ತಾನೆ ವಿವಿಧ ರೀತಿಯಲ್ಲಿ ಮಾಡಿಸುವವನು ಅವನೇ, ಮಾಡದಿರುವಂತೆ ಮಾಡುವವನು ಅವನೇ ವಿಹಿತ ಕರ್ಮಗಳನ್ನು ಮಾಡಿಸುವವನು, ನಿಷಿದ್ಧ ಕರ್ಮಗಳನ್ನು ಮಾಡಿಸದೇ ಇರುವವನು, ಅಯೋಗ್ಯರಾಗಿದ್ದರೆ ನಿಷಿದ್ಧ ಕರ್ಮಗಳನ್ನು ಮಾಡಿಸುತ್ತಾನೆ, ವಿಹಿತ ಕರ್ಮಗಳನ್ನು ಮಾಡಿಸುವುದಿಲ್ಲ ಅವುಗಳಿಗೆ ತಕ್ಕಂತೆ ಫಲ ಕೊಡುತ್ತಾನೆ. ತನ್ನ ಇಚ್ಛೆಗೆ ಬಂದಂತೆ ಫಲವನ್ನು ಕೊಡುವಂತಹ ಸ್ವಾಮಿ ಸರ್ವೋತ್ತಮನಾದ ಪರಮಾತ್ಮ ಅವನೇ ನಮ್ಮಲ್ಲಿ ನಿಂತು ನುಡಿಸುವವ ಅವನ ಬಗ್ಗೆಯೇ ನಾವು ಮಹಿಮೆಯನ್ನು ಹೇಳಬೇಕು, ನಮ್ಮಲ್ಲಿ ನಿಂತು ಹೇಳಿಸುವವನು ಅವನೇ. ಒಟ್ಟು ಹೇಳಬೇಕು ಅಂದರೆ ಪ್ರಪಂಚದೊಳಗಿನ ಎಲ್ಲ ಇತಿಹಾಸ ಪುರಾಣಗಳು, ವೇದಗಳು, ಉಪನಿಷತ್ತುಗಳು ಎಲ್ಲವೂ ಭಗವಂತನ ಮಹಿಮೆಯನ್ನೇ ಕೊಂಡಾಡುವುದಕ್ಕೆ ಇರುವುದು ಅವನ ಯಶಸ್ಸನ್ನೇ ಕೊಂಡಾಡುವುದು. ನಾವು ಏನಾದರೂ ದೇವರ ಮಹಿಮೆಯನ್ನ ಹೇಳುವುದಕ್ಕೆ ಇತಿಹಾಸ ಪುರಾಣಗಳಲ್ಲಿ, ವೇದೋಪನಿಷತ್ತುಗಳಲ್ಲಿ ಇರುವಂತಹ ಸಾರವನ್ನು ತೆಗೆದು ಹೇಳುತ್ತೇವೆ ಎಂದರೆ ನಮಗೆ ಎಲ್ಲವನ್ನು ತಿಳಿಯುವುದಕ್ಕೆ ಶಕ್ತಿ ಇಲ್ಲ, ಯೋಗ್ಯತೆ ಇಲ್ಲ ಅನ್ನುವುದಕ್ಕೋಸ್ಕರ ಯಥಾಶಕ್ತಿ ಯಥಾಮತಿ ಅಲ್ಪಸ್ವಲ್ಪ ಹೇಳುತ್ತೇವೆ ಅಂತ ಅರ್ಥವೇ

ಹೊರತು, ಉಳದುದ್ದೆಲ್ಲ ಅಸಾರ ಇದು ಮಾತ್ರ ಸಾರ ಅಂತ ಹೇಳುವಂತಿಲ್ಲ, ಎಲ್ಲವೂ ಭಗವಂತನ ಮಹಿಮೆಯನ್ನೇ ಹೇಳುವುದು.

ಯಾಃ ಕಥಾಶ್ಚೈವ ವರ್ತನ್ತೇ ಶ್ರುತಯೋ ವಾಥ ಗಹ್ವರಾಃ ।
ವಿಶ್ವಂ ವಿಶ್ವಪತಿರ್ದೇವಾಃ ಸರ್ವಂ ನಾರಾಯಣಾತ್ಮಕಮ್ ॥ (7.24 ಭವಿಷ್ಯಪರ್ವ)

ಎಲ್ಲ ಕಥೆಗಳು ಭಗವಂತನ ಮಹಿಮೆಯನ್ನ ಕೊಂಡಾಡುತ್ತವೆ ಅದು ರಾಜರ ಕಥೆ ಇರಬಹುದು, ಋಷಿಗಳ ಕಥೆ ಇರಬಹುದು, ದೇವತೆಗಳ ಕಥೆ ಆಗಿರಬಹುದು. ನೇರವಾಗಿ ಭಗವದವತಾರಗಳ ಕಥೆ ಇದ್ದರಂತೂ ಪ್ರಶ್ನೆಯೇ ಇಲ್ಲ ಅವುಗಳೆಲ್ಲವೂ ಭಗವಂತನ ಮಹಿಮೆಯನ್ನೇ ಆ ರಾಜರಲ್ಲಿ ಮುನಿಗಳಲ್ಲಿ ಋಷಿಗಳಲ್ಲಿದ್ದು ದೇವರು ತಾನು ಮಾಡಿಸಿದಂತಹ ಅದ್ಭುತವಾದ ಕಾರ್ಯಗಳನ್ನೇ ಅವುಗಳು ವರ್ಣನೆ ಮಾಡುತ್ತವೆ. ಸಕಲ ಜಗತ್ತಿಗೂ ಅವನೇ ನಿಯಾಮಕನಾಗಿದ್ದಾನೆ, ದೇವತೆಗಳಿಗೂ ನಿಯಾಮಕನಾಗಿದ್ದಾನೆ.

ಯತ್ಸತ್ಯಂ ಯದನೃತಮಾದಿಮಕ್ಷರಂ ವೈ ಯದ್ಭೂತಂ ಭವತಿ ಮಿಥಶ್ಚ ಯದ್ಭವಿಷ್ಯಮ್ ॥

(7.25 ಭವಿಷ್ಯಪರ್ವ)

ಕಾರ್ಯ ಕಾರಣಾತ್ಮಕವಾದ ಸಮಸ್ತ ಪ್ರಪಂಚದಲ್ಲಿ, ಚರಾ ಚರಾತ್ಮಕವಾದ ಪ್ರಪಂಚದಲ್ಲಿ ಇರುವಂತಹ ಪುರುಷ ವರ ಅಂದರೆ ಪರಮಾತ್ಮ ನಾರಾಯಣ, ಪುರುಷ ಶಬ್ದ ವಾಚ್ಯನಾದವನು, ಪುರುಷಸೂಕ್ತ ಪ್ರತಿಪಾದ್ಯನಾದವನು ಮುಖ್ಯವಾಗಿ ಭಗವಂತನೇ ಅನ್ನುವುದನ್ನೂ ವೈಶಂಪಾಯನರು ಸ್ಪಷ್ಟ ಮಾಡಿ ಹೇಳುತ್ತಾರೆ. ಆ ಸಕಲ ಶಾಸ್ತ್ರ ಪ್ರತಿಪಾದ್ಯನಾದ ನಾರಾಯಣನೇ ಪುರುಷ, ಪುರುಷನೇ ಪುರುಷಸೂಕ್ತ ಪ್ರತಿಪಾದ್ಯ. ಸಕಲ ಶಾಸ್ತ್ರ ಪ್ರತಿಪಾದ್ಯನಾದವನು ಅಂತನ್ನುವ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಏನು ಸಕಲ ಶಾಸ್ತ್ರ ಪ್ರತಿಪಾದ್ಯತ್ವವನ್ನು ಪರಮಾತ್ಮನಿಗೆ ತಿಳಿಸಿಕೊಡುತ್ತಾರೆ. ಪುರುಷಸೂಕ್ತ ಪ್ರತಿಪಾದ್ಯನಾದವನು ವಿಷ್ಣುವೇ ಅನ್ನುವುದನ್ನು ಹೇಳಿಕೊಡುತ್ತಾರೆ. ಆ ಮಾತನ್ನು ಹರಿವಂಶದಲ್ಲಿ ನಾವು ಸ್ಪಷ್ಟವಾಗಿ ತಿಳಿಯುತ್ತೇವೆ.

ಆಮೇಲೆ ಹೇಳುತ್ತಾರೆ ಭಗವಂತ ಹಗಲು ಎಷ್ಟೋ ಅಷ್ಟೇ ರಾತ್ರಿ, ನಿಜವಾಗಿ ಅವನಿಗೆ ಹಗಲಿಲ್ಲ ರಾತ್ರಿ ಇಲ್ಲ ಆದರೆ ಇಡೀ ಬ್ರಹ್ಮ ದೇವರ ಸಮಗ್ರವಾದ ಒಂದು ನೂರು ವರ್ಷದ ಆಯುಷ್ಯ ಅಂದರೆ ಒಂದು ನಿಮೇಷ ಮಾತ್ರ ಅಂತ ಹೇಳುತ್ತಾರೆ. ಅಂತಹದ್ದು ಭಗವಂತನ ಅದು ಔಪಚಾರಿಕವಾಗಿ ಅಂತಹ ಅದ್ಭುತವಾದ ಆ ಪರಮಾತ್ಮನ ಕಾಲ. ಹೀಗಿರುವಾಗ ಸಾಮಾನ್ಯವಾಗಿ ನಮಗೆ ಒಂದು ಕಲ್ಪನೆಯನ್ನು ಕೊಡುತ್ತಾರೆ. ದೇವಮಾನದಿಂದ ನಮ್ಮ ಒಂದು ವರ್ಷ ಅಂದರೆ ದೇವತೆಗಳಿಗೆ ಒಂದು ದಿನ ಅಷ್ಟೇ ಹೀಗಾಗಿ ಈ ಲೆಕ್ಕದಲ್ಲಿ ದೇವಮಾನದಿಂದ 4,000 ವರ್ಷಗಳು ಅಂತಂದರೆ ಕೃತಯುಗ ಉತ್ತಮವಾದ ಧರ್ಮ ಇಲ್ಲಿ ಐದು ಪಾದಗಳು ಅಂತ. ಸಾಮಾನ್ಯವಾಗಿ ನೀವು ತಿಳಿಯುವುದು ನಾಲ್ಕು ಪಾದಗಳು ಅಂತ ಹರಿವಂಶ ಹೇಳುವಾಗ ಐದು ಪಾದಗಳು ಅನ್ನುವ ಲೆಕ್ಕದಲ್ಲಿ ತಿಳಿಸುತ್ತದೆ ನಾಲ್ಕು ಪಾದ ಧರ್ಮ, ಒಂದು ಪಾದ ಅಧರ್ಮ ಏನೋ ಇದೆಯೋ ಇಲ್ಲೋ ಅನ್ನುವ ತರಹ ಅಧರ್ಮ. ಅಧರ್ಮವೂ ತಪಸ್ಸು ಮಾಡುತ್ತಂತೆ ತಪಸ್ವಿಗಳೆಲ್ಲ ಹೇಗೆ ತಪಸ್ಸು ಮಾಡುತ್ತಾರೆ ಒಂದು ಕಾಲಿನ ಮೇಲೆ ನಿಂತು ತಪಸ್ಸು ಮಾಡುತ್ತಾರೆ ಕೃತಯುಗದೊಳಗೆ ಅಧರ್ಮವೂ ಒಂದು ತಪಸ್ವಿಯಾಗಿತ್ತು ಅಂತ ಅದರ ಅರ್ಥ ಒಂದು ಕಾಲ ಮೇಲೆ ನಿಂತಿತ್ತು ಅಂತ ಅಲ್ಪ ಅಧರ್ಮ ಇತ್ತು ಅಂತ ಇರಲೋ ಬೇಡವೋ ಅನ್ನುವ ತರಹ, ಧರ್ಮವೇ ಪ್ರಶಸ್ತವಾಗಿ ಇದ್ದದ್ದು. ಎಲ್ಲ ಕಡೆಗೂ ಸತ್ಯ, ಎಲ್ಲ ವರ್ಣಾಶ್ರಮ ಧರ್ಮಗಳು ಪರಿಪೂರ್ಣ ಮಟ್ಟದಲ್ಲಿ ಪರಿಪಾಲನೆ ಆಗುತ್ತ ಇವೆ ಅಂತಹ

ಶ್ರೇಷ್ಠವಾದ ಕಾಲ ಅದು ಕೃತಯುಗ. 4,000 ವರ್ಷ ದೇವಮಾನದಿಂದ, ಮನುಷ್ಯ ಮಾನದಿಂದ 17,28,000 ವರ್ಷಗಳವರೆಗೆ ಕೃತಯುಗ, ಇನ್ನು ಸಂಧಿಕಾಲ ಹಿಂದೆ 400 ವರ್ಷ ಮುಂದೆ 400 ವರ್ಷ ಸಂಧಿಕಾಲ ಕೃತಯುಗಕ್ಕೆ. ಅದರಂತೆ ತ್ರೇತಾಯುಗ ದೇವಮಾನದಿಂದ 3,000 ವರ್ಷಗಳವರೆಗೆ ತ್ರೇತಾಯುಗ, ಹಿಂದೆ 300 ಮುಂದೆ 300 ವರ್ಷ ಸಂಧಿಕಾಲ, ಮನುಷ್ಯಮಾನದಿಂದ 12,96,000 ವರ್ಷ ತ್ರೇತಾಯುಗ ಸ್ವಲ್ಪ ಅಧರ್ಮ ಪ್ರವೇಶ ಮಾಡುತ್ತದೆ. ಐದು ಪಾದಗಳಲ್ಲಿ ಎರಡು ಪಾದ ಅಧರ್ಮ, ಮೂರು ಪಾದ ಧರ್ಮ ಇರುತ್ತದೆ ತ್ರೇತಾಯುಗದಲ್ಲಿ, ಸ್ವಲ್ಪ ಕಾಮ ಕ್ರೋಧಾದಿ ದೋಷಗಳಿಗೆ, ಸ್ವಲ್ಪ ಚಾತುರ್ವರ್ಣ್ಯ ಧರ್ಮಕ್ಕೆ ಅಲ್ಲಲ್ಲಲ್ಲಿ ದೌರ್ಬಲ್ಯ ಕಾಣಿಸುತ್ತ ಇರುತ್ತದೆ. ಮುಂದೆ ದ್ವಾಪರಯುಗ ದೇವಮಾನದಿಂದ 2,000 ವರ್ಷ ದ್ವಾಪರಯುಗ, ಹಿಂದೆ 200 ಮುಂದೆ 200 ವರ್ಷ ಸಂಧಿಕಾಲ, ಮನುಷ್ಯ ಮಾನದಿಂದ 8,64,000 ವರ್ಷ ದ್ವಾಪರಯುಗ ಅಲ್ಲಿ ಅಧರ್ಮ ಇನ್ನೂ ಜಾಸ್ತಿ ಆಗುತ್ತದೆ ವಿಪರೀತ. ಎರಡು ಅಧರ್ಮ ಮೂರು ಧರ್ಮ ತ್ರೇತಾಯುಗದಲ್ಲಿ ಇದ್ದರೆ ಇಲ್ಲಿ ಎರಡು ಧರ್ಮ, ಮೂರು ಅಧರ್ಮ ದ್ವಾಪರಯುಗದಲ್ಲಿ. ಆಮೇಲೆ 1,000 ವರ್ಷ ಕಲಿಯುಗ ಹಿಂದೆ 100 ಮುಂದೆ 100 ಸಂಧಿ ಕಾಲ ಒಟ್ಟು ಸೇರಿದರೆ ಸಂಧಿಕಾಲಗಳೆಲ್ಲ ಸೇರಿ 2,000 ವರ್ಷ,ಮುಖ್ಯಕಾಲ 10,000 ವರ್ಷ ದೇವಮಾನದಿಂದ 12,000 ವರ್ಷ ದೇವಮಾನದಿಂದ ಆದರೆ ಸಂಧಿಕಾಲದಿಂದ ಸಹಿತವಾದ ನಾಲ್ಕು ಯುಗಗಳು ಮುಗಿದಂತೆ ಈ ರೀತಿ ಆಗುತ್ತೆ, ಮನುಷ್ಯ ಮಾನದಿಂದ ಕಲಿಯುಗ 4,32,000 ವರ್ಷಗಳವರೆಗೆ ಕಲಿಯುಗ ಇರುತ್ತದೆ. ಈ ರೀತಿ ಒಟ್ಟು ದೇವಮಾನದಿಂದ 12,000 ವರ್ಷ ಆದರೆ ಚತುರ್ಯುಗ ಮಹಾಯುಗ ಅಂತ ಕರೆಯುತ್ತಾರೆ. ಈ ರೀತಿ ದೇವ ಮಾನದಿಂದ ಯುಗಗಳಾದರೆ 1,000 ವರ್ಷ ಅಂತಾದರೆ ಅದು ಒಂದು ಹಗಲು, ಅಷ್ಟೇ ಒಂದು ರಾತ್ರಿ ಅಷ್ಟು ಕಾಲ ಹಗಲಿನಲ್ಲೆಲ್ಲ ಸೃಷ್ಟಿ ಸ್ಥಿತಿ, ರಾತ್ರಿ ಕಾಲದಲ್ಲಿ ಪ್ರಲಯವನ್ನು ಮಾಡುತ್ತಾನೆ ಪರಮಾತ್ಮ. ಎಷ್ಟು ಕಾಲ ದೇವರು ಯೋಗ ನಿದ್ರೆಯನ್ನು ಮಾಡುತ್ತಾನೆ ಅಂತ ಕೇಳಿದೆಯಲ್ಲಪ್ಪ, ಇಷ್ಟು ಕಾಲ ಪರಮಾತ್ಮನಿಗೆ ನಿದ್ರೆಯೇ ಇಲ್ಲ **'ಅಸುಪ್ತಃ ಸುಪ್ತಾನಭಿಚಾಕಶೀತಿ'**[1] ಸರ್ವಥಃ ಸುಕ್ತಿ ಇಲ್ಲ ಪರಮಾತ್ಮನಿಗೆ.

ವಾಯು ದೇವರಿಗೆ ಮನಸ್ಸಿನ ಉಪರಮ ಇಲ್ಲ, ಕೇವಲ ಬಾಹ್ಯೇಂದ್ರಿಯದ ಉಪರಮ, ಮನಸ್ಸಿನ ಉಪರಮ ಪ್ರಲಯ ಕಾಲದಲ್ಲಿ ವಾಯು ದೇವರಿಗೇ ಇಲ್ಲ. **'ಯೌಸೌ ಪ್ರಲಯಕಾಲೇಪಿ ಪ್ರತಿಘಾತಪರಾವರಃ'** ಅತೀತಾನಾಗತ ಸಕಲ ವಸ್ತು ವಿಷಯಕವಾಗಿ ಇರುವಂತಹ ಜ್ಞಾನ ವಾಯು ದೇವರಿಗೆ ಪ್ರಲಯ ಕಾಲದಲ್ಲಿಯೂ ಜಾಗೃತವಾಗಿರುತ್ತದೆ. ಭಗವಂತನ ವಿಶೇಷವಾದಂತಹ ಧ್ಯಾನವನ್ನು ಮಾಡುತ್ತಾ ಇರುತ್ತಾರೆ. ಹೀಗಿರುವಾಗ ಸರ್ವಜ್ಞ ಶಿಖಾಮಣಿಯಾದಂತಹ ಪ್ರಕೃತಿಗಿಂತಲೂ ಪರನಾದಂತಹ ಸತ್ವಗುಣ, ರಜೋಗುಣ ಮತ್ತು ತಮೋಗುಣಗಳ ಸಂಬಂಧವೇ ಇಲ್ಲದೇ ಇರುವ ಆ ಪರಮಾತ್ಮನಿಗೆ ಎಲ್ಲಿಯ ನಿದ್ರೆ ಸರ್ವಥಃ ನಿದ್ರೆ ಇಲ್ಲ. **'ಚಕ್ಷುರ್ನಿಮೀಲನಂ'** ಕೇವಲ ಚಕ್ಷುದಿಂದ್ರಿಯದ ನಿಮೀಲನ ಮಾಡುವುದು ಮಾತ್ರ ಅಷ್ಟೇ ಆ ಪರಮಾತ್ಮನಿಗೆ ಸುಕ್ತಿ ಅಂತ ಔಪಚಾರಿಕವಾಗಿ ಕರೆಯುವುದು, ಅಷ್ಟನ್ನು ಬಿಟ್ಟರೆ ಪ್ರತ್ಯೇಕವಾದ ನಿದ್ರೆ ಇಲ್ಲ ಈ ರೀತಿ ಆ ಭಗವಂತನ ಸೃಷ್ಟಿ ಕಾಲ ಮತ್ತು ಪ್ರಲಯ ಕಾಲ ಇರುತ್ತದೆ. ಪ್ರಲಯ ಇದು ತನ್ನಷ್ಟಕ್ಕೆ ತಾನೇ ಆಗುತ್ತೆ ಸೂರ್ಯ ಬರುತ್ತಾನೆ ದ್ವಾದಶ ಆದಿತ್ಯರು ಬಂದು ಭಾರೀ ತಾಪವನ್ನು ಕೊಟ್ಟು ಎಲ್ಲವನ್ನ ಒಣಗಿಸಿ ಬಿಡುತ್ತಾನೆ ಎಲ್ಲ ರಸ ಭಾಗ ಏನೇನು ಆರ್ದ್ರವಾದದ್ದಿದೆ ಅದೆಲ್ಲವನ್ನು ಮೇಲೆ ಸೆಳೆದುಕೊಳ್ಳುತ್ತಾರೆ, ಪೂರ್ಣ ಭೂಮಿ ಶುಷ್ಕವಾಗಿ ಹೋಗುತ್ತದೆ ಆಮೇಲೆ ಗಾಳಿ, ಆಮೇಲೆ ಅಗ್ನಿ ಸಂಕರ್ಷಣ ಮುಖದಿಂದ ಕೆಳಗಿನಿಂದ ಅಗ್ನಿ ಪ್ರಾರಂಭವಾಗುತ್ತದೆ. ಆ ಶೇಷಾಂತರ್ಗತ ಸಂಕರ್ಷಣನಾಮಕ ಪರಮಾತ್ಮನ ಮುಖದಿಂದ ಬರುವಂತಹ ಜ್ವಾಲೆಯಿಂದ ಕೆಳಗಿನಿಂದ ಸುಡುತ್ತಾ ಬರುತ್ತದೆ. ಆ ರೀತಿ ಲೋಕಗಳೆಲ್ಲ ಸುಡುತ್ತ ಇದ್ದರೆ

1. ಬೃಹದಾರಣ್ಯಕೋಪನಿಷತ್

ಮೇಲಿನ ಮೇಲಿನ ಲೋಕದಲ್ಲಿ ಇದ್ದವರೆಲ್ಲ ಮೇಲೆ ಮೇಲೆ ಹೋಗುತ್ತಾರೆ ಹಾಗೆ ಸುಡುತ್ತದೆ, ಕೊನೆಗೆ ಸಂಪೂರ್ಣ ಲೋಕಗಳೆಲ್ಲ ಸುಟ್ಟ ಮೇಲೆ ಆಮೇಲೆ ಧಾರಾಕಾರವಾದ ಮಳೆ, ಎಲ್ಲ ಕಡೆಗೂ ಕೇವಲ ನೀರೇ ನೀರು. ಏಕಾರಾಣವ ಒಂದೇ ಒಂದು ಸಮುದ್ರ ಎಲ್ಲ ಕಡೆಗೂ ಇರುತ್ತದೆ ಆದರೆ ಹರಿವಂಶ ಹೇಳುತ್ತದೆ ಇದು ಕೇವಲ ಆ ಆ ಸೂರ್ಯನ ಗಾಳಿಯ ಬೆಂಕಿಯ ಶಕ್ತಿ ಅಂತ ತಿಳಿಯಬೇಡಿ ಅವೆಲ್ಲ ನಿಮಿತ್ತ ಮಾತ್ರ. **'ಭೂತ್ವಾ ಸೂರ್ಯಶ್ಚಕ್ಷುಷೀ ಚಾದದಾನೋ'**[1] ತಾನೇ ಸ್ವಯಂ ಪರಮಾತ್ಮ ಸೂರ್ಯಂತರ್ಗತನಾಗಿ

ತಾಪನೀ ಪಾಚಿಕಾ ಚೈವ ಶೋಷಣೀ ಚ ಪ್ರಕಾಶನೀ ।

ನೈವ ರಾಜನ್ ರನೇಃ ಶಕ್ತಿಃ ಶಕ್ತಿರ್ನಾರಾಂರಣಸ್ಯ ಸಾ -ಹಾದ್ಮ ॥ (2-3-2-16 ಐತರೇಯ ಉಪನಿಷತ್)

ಆ ಸೂರ್ಯನೊಳಗೆ ಏನು ತಾಪ ಕೊಡುವ ಶಕ್ತಿ ಇದೆ, ಭೂಮಿಯೊಳಗಿರುವ ರಸವನ್ನೆಲ್ಲ ಶೋಷಣ ಮಾಡುವ ಶಕ್ತಿ ಇದೆ ಅದು ನಾರಾಯಣನ ಶಕ್ತಿ ಅಂತ ತಿಳಿಸಿಕೊಟ್ಟಿದ್ದಾರೆ ಶ್ರೀಮದಾಚಾರ್ಯರು ಪ್ರಮಾಣ ವಚನದ ಉದಾಹರಣ ಮಾಡಿ. ಅದೇ ಮಾತನ್ನು ಹರಿವಂಶ ಹೇಳುತ್ತದೆ.

ಭೂತ್ವಾ ನಾರಾಯಣೋ ಯೋಗೀ ಸಪ್ತಮೂರ್ತಿರ್ವಿಭಾವಸುಃ । (9.1 ಭವಿಷ್ಯಪರ್ವ)

ಸ್ವಯಂ ಪರಮಾತ್ಮನೇ ತಾನು ನಾನಾ ರೂಪಗಳನ್ನು ತೆಗೆದುಕೊಳ್ಳುತ್ತಾನೆ ಸೂರ್ಯನಲ್ಲಿ, ಅಗ್ನಿಯಲ್ಲಿ ವಾಯುವಿನಲ್ಲಿ ಅಂತರ್ಯಾಮಿಯಾಗಿ ತಾನೇ ತನ್ನ ಅಚಿಂತ್ಯಾದ್ಭುತ ಶಕ್ತಿ ಸಾಮರ್ಥ್ಯಗಳಿಂದ ಜಗತ್ತನ್ನೆಲ್ಲ ಒಣಗಿಸುತ್ತಾನೆ ಸುಡುತ್ತಾನೆ, ನೀರಿನಿಂದ ಎಲ್ಲವನ್ನು ಮುಳುಗಿಸಿ ಬಿಡುತ್ತಾನೆ ಸಮಗ್ರವಾದ ಪ್ರದೇಶವನ್ನ ಹಾಗೆ ಪರಮಾತ್ಮ ತಾನು ಸರ್ವಾಂತರ್ಯಾಮಿಯಾಗಿ.

ಮೇಘೋ ಭೂತ್ವಾ ಭೂಯ ಏವಾಭ್ಯವರ್ಷತ್ ॥ (8.26 ಭವಿಷ್ಯಪರ್ವ)

ತತ್ರ ತತ್ರ ಸ್ಥಿತೋ ವಿಷ್ಣುಸ್ತತ್ಶಕ್ತೀಃ ಪ್ರಬೋಧಯನ್ ।

ಏಕ ಏವ ಮಹಾವಿಷ್ಣುಃ ಕುರುತೇ ಸರ್ವಮಂಜಸಾ ॥

ಅನ್ನುವ ತತ್ವವನ್ನ ಇಲ್ಲಿ ಸ್ಪಷ್ಟವಾಗಿ ಹರಿವಂಶ ನಮಗೆ ತಿಳಿಸಿಕೊಡುತ್ತ ಇದೆ. ತಾನು ಆ ಪರಮಾತ್ಮ ನಾನಾ ರೂಪಗಳನ್ನು ತೆಗೆದುಕೊಂಡು ಇಂತಹ ಪ್ರಲಯವನ್ನು ಮಾಡಿ ಆ ಪ್ರಲಯದಲ್ಲಿ ವಟಪತ್ರಶಾಯಿಯಾಗಿ ಪರಮಾತ್ಮ ಇರುತ್ತಾನೆ. ಲಕ್ಷ್ಯಾತ್ಮಕವಾದ ವಟವೃಕ್ಷ ವಟಪತ್ರ ಅದರ ಮೇಲೆ ತಾನು ಸಪ್ತಕೋಟಿ ಯೋಜನ ಮಾನತಃ ಅಂತ ಹೇಳುತ್ತಾರೆ ವಾಯುಪುರಾಣದಲ್ಲಿ ಏಳು ಕೋಟಿ ಯೋಜನ ಅಷ್ಟು ವಿಸ್ತೀರ್ಣವಾಗಿರುವಂತಹ ಆ ಎಲೆಯ ಮೇಲೆ ಮಗುವಾಗಿ ಮಲಗುತ್ತಾನೆ ಮಗು ಅಂದ ತಕ್ಷಣ ಪುಟ್ಟ ಮಗು ಅಂತ ತಿಳಿದುಕೊಂಡಿರುತ್ತಾರೆ ಅಂತಹ ಅದ್ಭುತವಾದ ಆ ಭಗವಂತನ ಲೀಲೆ. ಆ ಪರಮಾತ್ಮನಲ್ಲಿ ಎಲ್ಲ ವಿಧವಾಗಿರುವಂತಹ ಜಗತ್ತು ಅವನ ಉದರದಲ್ಲಿ ಆಶ್ರಿತವಾಗಿರುತ್ತದೆ.

ಹಿಂದೊಮ್ಮೆ ಮಾರ್ಕಂಡೇಯರು ಪರಮಾತ್ಮನಿಗೆ ಪ್ರಾರ್ಥನೆಯನ್ನು ಮಾಡಿರುತ್ತಾರೆ. ಶೌನಕರು ಸೌತಿಗಳಿಗೆ ಪ್ರಶ್ನೆಯನ್ನು ಮಾಡಿದ್ದಾರೆ, ಸೌತಿಗಳು ವೈಶಂಪಾಯನರು ಜನಮೇಜಯನಿಗೆ ಹೇಳಿದ ವಿಚಾರವನ್ನು ತಿಳಿಸುತ್ತಾ ಇದ್ದಾರೆ

1. 8.26 ಭವಿಷ್ಯಪರ್ವ

ಶೌನಕಾದಿಗಳಿಗೆ ಹೀಗಾಗಿ ಈ ಸಂದರ್ಭದಲ್ಲಿ ಪ್ರಲಯದ ಕಥೆಯನ್ನು ಹೇಳುವಾಗ ಮಾರ್ಕಂಡೇಯರ ಕಥೆಯನ್ನು ಸೇರಿಸುತ್ತಾರೆ ಯಾಕೆ ಅಂದರೆ ಆ ಭಾರ್ಗವ ವಂಶದಲ್ಲೇ ಬಂದವರು ಶೌನಕರು, ತಮ್ಮ ವಂಶದ ಪೂರ್ವಜರ ಹಿರಿಯರ ಮಹಿಮೆಯನ್ನು ಹೇಳಿದರೆ ವಿಶೇಷವಾಗಿ ಸಂತೋಷವಾಗುತ್ತದೆ ತಿಳಿಯಬೇಕು. ತಮ್ಮ ತಮ್ಮ ವಂಶದ ಹಿರಿಯರ ಮಹಿಮೆಯನ್ನ ಗೋತ್ರ ಪ್ರವರ್ತಕರು ಗೋತ್ರದಲ್ಲಿ ಬಂದವರು ಮಹಾನುಭಾವರು ಮಹನೀಯರು ಯಾರೆಲ್ಲ ಇರುತ್ತಾರೆ ಅವರ ತಪಸ್ಸು, ಅವರ ಸಿದ್ಧಿ ಇವುಗಳ ಬಗ್ಗೆ ತಿಳಿದುಕೊಂಡರೆ ಅದರೊಳಗಿನ ಒಂದು ಸಣ್ಣ ಏಕದೇಶವನ್ನಾದರೂ ಅನುಸರಣೆ ಮಾಡುವ ಪ್ರವೃತ್ತಿ ನಮ್ಮಲ್ಲಿ ಬರುತ್ತದೆ. ಇಷ್ಟೆಲ್ಲ ದೊಡ್ಡ ಕೆಲಸ ಮಾಡಿದ್ದಾರೆ ಹಿಂದಿನವರು ಅದರೊಳಗೊಂದು ಸ್ವಲ್ಪಾದರೂ ನಾವು ಮಾಡೋಣ ಅನ್ನುವ ಪ್ರವೃತ್ತಿ ಬರುತ್ತೆ ಆ ಆದರ್ಶವನ್ನು ಇಟ್ಟುಕೊಂಡು ನಡೆಯಬಹುದು ಅನ್ನುವುದು ಒಂದು ಲಾಭ. ಎರಡನೆಯದು ದೊಡ್ಡವರ ಹೆಸರನ್ನ ಕೇಳಿದರೇನೆ ಒಂದು ಪುಣ್ಯ, ಅವರ ತಪಸ್ಸಿನ ಮಹಿಮೆಗಳನ್ನ ಕೇಳುವುದರಿಂದಲೇ ಪಾಪಗಳ ಪರಿಹಾರವಾಗುತ್ತದೆ ಅನ್ನುವ ದೃಷ್ಟಿಯಲ್ಲಿಯೂ ಕೂಡ ಆ ಮಾರ್ಕಂಡೇಯರ ಚರಿತ್ರೆಯನ್ನ ಈ ಮಧ್ಯದಲ್ಲಿ ಸೇರಿಸಿ ಹೇಳುತ್ತ ಇದ್ದಾರೆ ವೈಶಂಪಾಯನರು ಅದನ್ನು ಸೌತಿಗಳು ತಿಳಿಸುತ್ತ ಇದ್ದಾರೆ. ಮಾರ್ಕಂಡೇಯರು ಪರಮಾತ್ಮನ ಈ ದಿವ್ಯವಾದ ಮಹಿಮೆಯನ್ನ ನೋಡಬೇಕು ಅಂತ ಬಹಳ ಅಪೇಕ್ಷೆ, ಪ್ರಲಯ ಕಾಲದಲ್ಲಿಯಂತೂ ಏನು ಎಚ್ಚರ ಇರುವುದಿಲ್ಲ ಪ್ರತ್ಯೇಕವಾಗಿ ಆ ಪ್ರಲಯದ ದರ್ಶನ ನನಗೆ ಆಗಬೇಕು ಅಂತ ಬಯಸಿರುತ್ತಾರೆ. ಒಮ್ಮೆ ಪರಮಾತ್ಮ ಅವರಿಗೂ ಈ ತರಹದ ಪ್ರಲಯವನ್ನು ತೋರಿಸಿದ ಅನ್ನುವುದನ್ನು ಇಲ್ಲಿ ನೆನಪು ಮಾಡಿಕೊಡುತ್ತಾರೆ.

ಭಗವಂತ ಹದಿನಾರು ತರಹದ ಯಜ್ಞದಲ್ಲಿ ಬೇಕಾದ ಋತ್ವಿಜರನ್ನೆಲ್ಲ ತನ್ನ ಶರೀರದಿಂದಲೇ ವಿವಿಧ ಭಾಗಗಳಿಂದ ಸೃಷ್ಟಿ ಮಾಡುತ್ತಾನೆ ಉದ್ಗಾತಾ, ಹೋತಾ, ಅಧ್ವರ್ಯು, ಬ್ರಾಹ್ಮಣಾತ್ಛಂಸ್ಸಿ, ಪ್ರಸ್ತೋತಾ, ಮಿತ್ರ, ವರುಣ, ಪ್ರತಿಷ್ಠಾತಾ, ಪ್ರತಿಹರ್ತಾ, ಪೋತಾ, ಅಚ್ಛಾವಕಾ, ನೇಷ್ಟಾ, ಆಗ್ನೀಧ್ರ, ಸುಬ್ರಹ್ಮಣ್ಯ, ಗಾವೋಸ್ತೋತಾ, ಉನ್ನೇತಾ ಅಂತ. ಇದರ ಜೊತೆಗೆ ಹದಿನಾರು ತರಹದ ಗುಣಗಳು ಯಾವುದರ ಪ್ರತೀಕವಾಗಿ ಈ ಋತ್ವಿಜರೆಲ್ಲ ಇದ್ದಾರೆ ಅಂತಹ ಹದಿನಾರು ತರಹದ ಗುಣಗಳನ್ನು ಸದ್ಗುಣಗಳನ್ನು ಕೂಡ ಪರಮಾತ್ಮ ಸೃಷ್ಟಿ ಮಾಡುತ್ತಾನೆ ಅಂತ. ಪ್ರಣವ ಪ್ರಣವಾರ್ಥ ಚಿಂತನ ಸತ್ಯವಚನ ಪ್ರಾಣಜಯ ಬುದ್ಧಿತ್ಯೈಕ್ಷಣ್ಯ ಪೂರ್ವಸ್ಮೃತಿ ಆಚಾರ ಅಪಾನಜಯ ಭಾವೀ ದುಃಖಚಿಂತ ಈಶಪೂಜ ದಾನ ಯೋಗೋತ್ಸಾಹ ಸಾತ್ವಿಕ ಶ್ರದ್ಧಾ ವೇದಾಂತ ಶ್ರವಣ ಇಂದ್ರಿಯ ಶೌರ್ಯ **'ಯೋಗಾಂಗಾನಾಂ ಊರ್ಜಿತಿಃ'.** ಈ ತರಹದ ಹದಿನಾರು ಗುಣಗಳು ಹಾಗೂ ಹದಿನಾರು ಋತ್ವಿಜರು ಇವರೆಲ್ಲರನ್ನ ತನ್ನ ಶರೀರದಿಂದಲೇ ಯಜ್ಞಮಯವಾದಂತಹ ಶರೀರ ಪರಮಾತ್ಮನದು ಆ ಯಜ್ಞವಪುಃ ಅಂತಹ ಯಜ್ಞ ಶರೀರನಾದ ಪರಮಾತ್ಮ ಯಜ್ಞ ಸಾಧನವಾದಂತಹ ಸ್ರುಕಸ್ರುವಾದಿಗಳನ್ನ ದರ್ಭಾದಿಗಳನ್ನೆಲ್ಲ ವರಾಹ ರೂಪದಿಂದ ಪರಮಾತ್ಮ ಸೃಷ್ಟಿ ಮಾಡಿದ್ದಾನೆ ಅಂತ ಹೇಳುತ್ತಾರೆ, ಭಾಗವತದಲ್ಲಿ ಬರುತ್ತದೆ ತೃತೀಯ ಸ್ಕಂಧದಲ್ಲಿ ಅದೊಂದು ಬೇರೆ, ಈ ಋತ್ವಿಜರನ್ನೂ ಕೂಡ ಪರಮಾತ್ಮ ತಾನು ಸೃಷ್ಟಿ ಮಾಡಿದ್ದಾನೆ ಅನೇಕ ಸದ್ಗುಣಗಳನ್ನು ಸೃಷ್ಟಿ ಮಾಡಿದ್ದಾನೆ.

ತದೇಷ ವೈ ವೇದಮಯಃ ಪುರುಷೋ ಯಜ್ಞಸಮ್ಮಿತಃ ।
ವೇದಾಶ್ಚ ತನ್ಮಿಯಾಃ ಸರ್ವೇ ಸಾಙ್ಗೋಪನಿಷದಕ್ರಿಯಾಃ ॥ (10.11 ಭವಿಷ್ಯಪರ್ವ)

ಅಂತ ಆ ಪರಮಾತ್ಮನ ಮಹಿಮೆಯನ್ನು ಹೇಳಿ ಇಂತಹ ಪರಮಾತ್ಮ ಆ ಏಕಾರಣವದಲ್ಲಿ ವಟಪತ್ರಶಾಯಿಯಾಗಿ ಪರಮಾತ್ಮ ಮಲಗಿರುತ್ತಾನೆ. ಮಾರ್ಕಂಡೇಯರು ಹತ್ತಿರ ಹೋಗುತ್ತಾರೆ ಆ ಪರಮಾತ್ಮ ಜೋರಾಗಿ ದೇವರು ಶ್ವಾಸ ತೆಗೆದುಕೊಂಡರೆ ಅವನ ಮೂಗಿನಿಂದ ಒಳಗೆ ಹೋಗಿಬಿಡುತ್ತಾರೆ. ಒಳಗೆ ನೋಡಿದರೆ ಮತ್ತೆ ಇದೇ ತರಹದ

ಅದ್ಭುತವಾದ ದೃಶ್ಯ ಮತ್ತೆ ಅಲ್ಲಿ ನೀರು, ಅಲ್ಲಿ ಇದೇ ತರಹದ ಸಮುದ್ರ, ಇದೇ ತರಹದ ಗಾಳಿ, ಇದೇ ತರಹದ ತೆರೆಗಳು ನೋಡುತ್ತಾರೆ. ಮತ್ತೆ ಪರಮಾತ್ಮನ ಮುಖದಿಂದ ದೇವರು ಶ್ವಾಸ ಬಿಟ್ಟರೆ ಹೊರಗೆ ಬೀಳುತ್ತಾರೆ ಸಮುದ್ರದಲ್ಲಿ ಹೀಗೆ ಒಳಗೆ ಬರುವುದು ಹೊರಗೆ ಹೋಗುವುದು. ಆ ಭಗವಂತನ ಅದ್ಭುತವಾದ ಮಹಿಮೆಯನ್ನು ನೋಡಿ ಆಶ್ಚರ್ಯ ಚಕಿತರಾಗಿದ್ದಾರೆ ಅವರಿಗೆ ಅರ್ಥವೇ ಆಗುತ್ತಾ ಇಲ್ಲ, ಎಷ್ಟು ಜನ ಬ್ರಾಹ್ಮಣರು ವೇದಗಳು ಯಜ್ಞಗಳು ಎಲ್ಲವೂ ದೇವರ ಉದರದಲ್ಲಿ ಕಾಣಿಸುತ್ತದೆ ಮತ್ತೆ ಹೊರಗೆ ಬರುತ್ತಾರೆ. ಈ ರೀತಿ ನಡೆಯುತ್ತಾ ಇರುವಾಗ ಪರಮಾತ್ಮ ಇವರ ಪರಿಸ್ಥಿತಿಯನ್ನು ನೋಡಿ ಏನೋ ಮಗು ಅಂದು ಬಿಡುತ್ತಾನೆ ಒಂದೇ ಸಲಕ್ಕೆ ಇವರಿಗೆ ಅನ್ನಿಸುತ್ತದೆ ನನ್ನಷ್ಟು ವೃದ್ಧರೇ ಯಾರಿಲ್ಲ, ಎಷ್ಟೋ ಮನ್ವಂತರಗಳು ಕಳೆದುಹೋಗಿವೆ ಈಗ ನನಗೆ ಯಾರಪ್ಪ ಇಲ್ಲಿ ವತ್ಸ ಅಂತ ಕರೆಯುತ್ತಾ ಇದ್ದಾರೆ, ಮಗು ಅಂತ ಅನ್ನುತ್ತಾ ಇದ್ದಾರೆ, ಬಾಲ ಅಂತಾರಲ್ಲ.

ಮಾರ್ಕಣ್ಡೇಯ ಮುನೇ ಧೀರ ಬಾಲಸ್ತ್ವಂ ಶ್ರಮಪೀಡಿತಃ ॥ (10.36 ಭವಿಷ್ಯಪರ್ವ)

ಸಣ್ಣ ಮಗು ನೀನು ಬಹಳ ಪೀಡೆಯಾಗಿರಬೇಕು ನಿನಗೆ ಈ ಪ್ರಲಯ ಜಲದಲ್ಲಿ ಅಂತ ನನಗೆ ಮಾತನಾಡಿಸುತ್ತ ಇದ್ದಾರಲ್ಲ ನನಗೆ ಒಂದು ಅರ್ಥದಲ್ಲಿ ಏನೋ ಅವಮಾನ ಆದಹಾಗೆ ಆಗುತ್ತಾ ಇದೆ ನಾನಾದರೋ ಇಷ್ಟು ಮುದುಕ ನನ್ನನ್ನು ಯಾರು ಬಾಲ ಅಂತ ಕರೆಯುತ್ತ ಇದ್ದಾರೆ ನಾನು ವೃದ್ಧನಲ್ಲವಾ. ಬ್ರಹ್ಮ ದೇವರು ನನ್ನನ್ನು ಎಷ್ಟೋ ಬಾರಿ ಸಂಬೋಧನೆ ಮಾಡಿದ್ದುಂಟು ವೃದ್ಧ ಅಂತ ಇದು ಯಾರು ನನ್ನನ್ನು ಬಾಲ ಅಂತ ಕರೆಯುತ್ತಾರೆ ಅಂತ. ಪರಮಾತ್ಮ ಮತ್ತೆ ಇವರಿಗೆ ಉತ್ತರ ಕೊಡುತ್ತಾನೆ ನೀನು ಬೇಕಾದಷ್ಟು ವೃದ್ಧನಾಗಿರಬಹುದು ಆದರೆ ನಿಮ್ಮಪ್ಪ ನಾನು ಅಂತ ಪರಮಾತ್ಮ ನಿಮ್ಮೆಲ್ಲರಿಗೆ ಸೃಷ್ಟಿ ಮಾಡಿದವನು ನಾನು, ನಮ್ಮ ಎದುರಿನಲ್ಲಿ ನೀನು ಬಾಲನೇ.

ಅಹಂ ತೇ ಜನಕೋ ವತ್ಸ ಹೃಷೀಕೇಶಃ ಪಿತಾ ಗುರುಃ ।

ಆಯುಃಪ್ರದಾತಾ ಪೌರಾಣಃ ಕಿಮರ್ಥಂ ನೋಪಸರ್ಪತಿ ॥ (10.41 ಭವಿಷ್ಯಪರ್ವ)

ನಿನಗೆ ಆಯುಷ್ಯ ಕೊಟ್ಟವನು ನಾನೇ ರುದ್ರ ದೇವರಲ್ಲಿ ಅಂತರ್ಯಾಮಿಯಾಗಿ ನರಸಿಂಹ ರೂಪಿಯಾಗಿ ನರಸಿಂಹ ಪುರಾಣದಲ್ಲಿ ಬರುತ್ತದೆ ನರಸಿಂಹ ದೇವರ ವಿಶೇಷ ಉಪಾಸನೆಯನ್ನು ಮಾರ್ಕಂಡೇಯರು ಮಾಡುತ್ತಾರೆ ಮಾಡಿದ್ದಕ್ಕೇನೆ ಅವರಿಗೆ ದೀರ್ಘವಾದ ಆಯುಷ್ಯ ಬರುತ್ತದೆ ಅಂತ. ಅಂತಹ ನರಸಿಂಹ ರೂಪದಿಂದ ರುದ್ರಾಂತರ್ಗತನಾಗಿ ನಿನಗೆ ಆಯುಷ್ಯವನ್ನು ಕೊಟ್ಟವನು ನಾನು, ಎಲ್ಲ ಬ್ರಾಹ್ಮಣರಿಗೆ ನಿಮ್ಮ ತಂದೆ ನಮಸ್ಕಾರ ಮಾಡಿಸುತ್ತಾ ಇದ್ದ ಮನೆಗೆ ಬಂದ, ಆಶ್ರಮಕ್ಕೆ ಬಂದ ಎಲ್ಲ ಬ್ರಾಹ್ಮಣರಿಗೆ ನಮಸ್ಕಾರ ಮಾಡಿ ಅವರಿಂದ ಆಶೀರ್ವಾದ ಕೊಡಿಸಿ ನಿನಗೆ ದೀರ್ಘಾಯುಷ್ಯ ಕೊಡಿಸಿದ್ದಾನೆ ಆ ಎಲ್ಲ ಬ್ರಾಹ್ಮಣರಲ್ಲಿದ್ದು ನಿನಗೆ ಆಶೀರ್ವಾದವನ್ನು ಮಾಡಿದವನು ನಾನೇ ಆಯುಃ ಪ್ರದಾತಾ. ಎಲ್ಲರ ಇಂದ್ರಿಯಗಳಿಗೆ ಪ್ರೇರಕ ನಿನ್ನ ತಂದೆ, ನಿನ್ನ ಗುರು, ನಿನ್ನ ಸರ್ವಸ್ವ ನಾನು, ನಿಮ್ಮಪ್ಪ ಮಕ್ಕಳಾಗಿಲ್ಲ ಅಂತ ನನ್ನನ್ನು ಕುರಿತು ತಪಸ್ಸು ಮಾಡಿಯೇ ನಿನ್ನನ್ನು ಮಗನನ್ನಾಗಿ ಪಡೆದದ್ದು ಆ ಕಥೆಯನ್ನೂ ತಿಳಿದುಕೊಂಡಿರು.

ಪೂರ್ವಮಾರಾಧಯಾಮಾಸ ತಪಸ್ತೀವ್ರಮುಪಾಶ್ರಿತಃ ॥ (10.42 ಭವಿಷ್ಯಪರ್ವ)

ಆಮೇಲೆ ನಿನ್ನನ್ನು ನಾನು ಕೊಟ್ಟೆ ನೀನು ಹುಟ್ಟಿ ಬಂದಿದ್ದೀಯಾ ಹೀಗಿರುವಾಗ ನೀನು ನನ್ನ ಮಗು ಅಲ್ಲದೇ ಇನ್ನೇನು ನೀನು ಮಗುವೇ. ನಾನು ಬಹಳ ದೊಡ್ಡವನು ಅಂತನ್ನುವ ಅಹಂಕಾರ ಇರಬಾರದು. ದೇವರ ಎದುರಿನಲ್ಲಿ ದೇವತೆಗಳ ಎದುರಿನಲ್ಲಿ ಹಿರಿಯರ ಮುಂದೆ ನಾವು ಚಿಕ್ಕವರು ಅಂತನ್ನುವ ಪ್ರಜ್ಞೆ ನಮ್ಮಲ್ಲಿ ಯಾವಾಗಲೂ

ಜಾಗೃತವಾಗಿ ಇರಬೇಕು ಆ ವಿನಯ ನಮ್ಮಲ್ಲಿ ಇರಬೇಕು ಅನ್ನುವುದನ್ನು ದೇವರು ತೋರಿಸಿಕೊಡುತ್ತ ಇದ್ದಾನೆ. ಮಹಾನುಭಾವರೇ ಮಾರ್ಕಂಡೇಯರೇ ಋಷಿಗಳೇ ಅಂತ ಕರೆಯಬಹುದಾಗಿತ್ತು ದೇವರು ಆದರೆ ಮಾರ್ಕಂಡೇಯರು ವಿನೀತರೇ ಆದರೂ ಎಲ್ಲರಿಗೂ ಈ ತರಹ ನಾವು ಚಿಕ್ಕವರು ಅನ್ನುವಂತಹ ಪ್ರಜ್ಞೆ ಇರಬೇಕು. ನಾನು ಬಹಳ ಸಣ್ಣವ, ಗುಣಗಳಿಂದಲೂ ಸಣ್ಣವ, ಕಾರ್ಯಗಳಿಂದಲೂ ಸಣ್ಣವ, ಯೋಗ್ಯತೆಯಿಂದ ಸಣ್ಣವ, ವಯಸ್ಸಿನಿಂದಲೂ ಚಿಕ್ಕವ ನನ್ನನ್ನು ಮೀರಿದವರು ಎಲ್ಲ ದೃಷ್ಟಿಯಲ್ಲಿಯೂ ನನ್ನ ಅತ್ಯಯವನ್ನ ಮಾಡಿದವರು, ಅತಿಕ್ರಮಣ ಮಾಡಿದವರು ಸಾವಿರ ಸಾವಿರ ಲಕ್ಷ ಲಕ್ಷ ಜನ, ನಾನೊಬ್ಬ ಸಾಮಾನ್ಯ ವ್ಯಕ್ತಿ ಅಂತನ್ನುವಂತಹ ವಿನಯ ಯಾವಾಗಲೂ ಇರಬೇಕು ಆದರಿಂದ ಮನುಷ್ಯನಿಗೆ ಅನೇಕ ತರಹದ ದೋಷಗಳು ದೂರವಾಗುತ್ತವೆ. ಅಹಂಕಾರದಿಂದಲೇ ಸಾಕಷ್ಟು ಪಾಪಗಳನ್ನು ಮನುಷ್ಯ ಮಾಡುವುದು ಅದಕ್ಕೋಸ್ಕರ ಪರಮಾತ್ಮ ಈ ಮಾತನ್ನು ತಿಳಿಸಿಕೊಟ್ಟಿದ್ದಾನೆ.

ಮೂರ್ಧ್ನಿ ಬದ್ಧಾಞ್ಜಲಿಪುಟೋ ಮಾರ್ಕಣ್ಡೇಯೋ ಮಹಾತಪಾಃ ॥ (10.45 ಭವಿಷ್ಯಪರ್ವ)

ಮಾರ್ಕಂಡೇಯರು ತಲೆಯ ಮೇಲೆ ಕೈಯೆತ್ತಿ ಜೋಡಿಸಿ **'ಮೂರ್ಧನ್ಯೇ ಕೇಶೋಞ್ಜಲಿನಿರ್ಮೇ'** ಅಂತ ತ್ರಿವಿಕ್ರಮ ಪಂಡಿತಾಚಾರ್ಯರು ಹೇಳಿದ ಹಾಗೆ ತಲೆಯ ಮೇಲೆ ಎರಡೂ ಕೈಗಳನ್ನು ಇಟ್ಟು ಅಂಜಲಿಬದ್ಧವನ್ನು ಮಾಡಿ ನಮಸ್ಕಾರವನ್ನು ಮಾಡಿ ಸಾಷ್ಟಾಂಗ ಪ್ರಣಾಮವನ್ನು ಮಾಡಿದ್ದಾರೆ.

ಅಥಾಕರೋನ್ನಮಸ್ಕಾರಂ ಪ್ರಣತಃ ಶಿರಸಾ ಪ್ರಭುಮ್ ॥ (10.46 ಭವಿಷ್ಯಪರ್ವ)

ನಮಸ್ಕಾರದ ಕ್ರಮ ಹೇಗೆ ಅಂತ ಮಾರ್ಕಂಡೇಯರು ತೋರಿಸಿಕೊಡುತ್ತಾ ಇದ್ದಾರೆ ಹರಿವಂಶ ಪುರಾಣ ನಮಗೆ ಹೇಳುತ್ತಾ ಇದೆ. ನಮಸ್ಕಾರ ಮಾಡುವಾಗ ಕೆಲವರು ಭಕ್ತಿ ಇರುತ್ತದೆ ನಮಸ್ಕಾರ ಮಾಡುತ್ತಾರೆ ಸಾಷ್ಟಾಂಗ ಪ್ರಣಾಮ, ಉದ್ದ ನಮಸ್ಕಾರ ಆದರೊಳಗೆ ಏನು ವ್ಯತ್ಯಾಸ ಇಲ್ಲ ಮಾಡಿ ಮೇಲೆ ಎಲ್ಲಿಯೋ ನೋಡುತ್ತಾ ಹಿಂದೆ ಕೈಕಟ್ಟಿಕೊಂಡು ನಿಂತುಬಿಡುತ್ತಾರೆ ಅಷ್ಟೇ, ಬೇರೆ ಯಾವುದೋ ಕೆಲಸ ಮಾಡುತ್ತಾ ಇರುತ್ತಾರೆ. ಹಾಗಲ್ಲ ಮೊದಲು ತಲೆಯ ಮೇಲೆ ಕೈಜೋಡಿಸಬೇಕು ಬಗ್ಗಬೇಕು ವಿನಯ ಭಕ್ತಿ ಭಾವನೆ ಅದು ದೇಹದ ಚೇಷ್ಟೆಗಳಿಂದ ತೋರಿಸಬೇಕು ಆ ರೀತಿ ನಮಸ್ಕಾರ ಇರಬೇಕು ಅಂತ **'ಭಕ್ತಿಭರಾನತಾ'** ಅಂತ ಅನ್ನುತ್ತಾರೆ ಭಕ್ತಿಯ ಭಾರದಿಂದ ಬಾಗಿರಬೇಕು. ಶ್ರೀಮದಾಚಾರ್ಯರು ಹಾಗೆ ನಮಸ್ಕಾರ ಮಾಡಿದರು ಅಂತ ಸುಮಧ್ವವಿಜಯದಲ್ಲಿ ವರ್ಣನೆಯನ್ನು ಕೇಳುತ್ತೇವೆ ವೇದವ್ಯಾಸ ದೇವರಿಗೆ ಹೇಗೆ ನಮಸ್ಕಾರ ಮಾಡಿದರು ಅಂತ **'ಹರಿಭಕ್ತಿಭರಾನತಾ ಗುರುಭಕ್ತಿಭರಾನತಾಕೃತಿಃ'** ಆ ಭಕ್ತಿಯ ಭಾರದಿಂದ ದೇಹ ಬಾಗಿರಬೇಕು ತಲೆಯ ಮೇಲೆ ಎರಡೂ ಕೈಗಳನ್ನು ಜೋಡಿಸಿ ಆಮೇಲೆ ಸಾಷ್ಟಾಂಗ ಪ್ರಣಾಮ ಮಾಡಿ, ಮತ್ತೆ ತಲೆಯ ಮೇಲೆ ಕೈ ಜೋಡಿಸಿ ಬಗ್ಗಿ ನಿಲ್ಲಬೇಕು. ಅದು ಬಿಟ್ಟು ಒಂದು ಸಲ ನಮಸ್ಕಾರ ಮಾಡಿದ್ದೇನಲ್ಲ ಅಂತ ಬೆನ್ನು ಮಾಡಿಕೊಂಡು ನಿಲ್ಲುವುದು ಯಾವ ಕಡೆಗೋ ನೋಡುವುದು ಎಲ್ಲಿಯೋ ನೋಡುವುದು ಅದಲ್ಲ ಆ ರೀತಿ ನಮಸ್ಕಾರ ಮಾಡಿ ತೋರಿಸಿದ್ದಾರೆ ಮಹಾನುಭಾವರು. **'ಮೂರ್ಧ್ನಿ ಬದ್ಧಾಞ್ಜಲಿಪುಟೋ'** ಮೊದಲು **'ಅಥಾಕರೋನ್ನಮಸ್ಕಾರಂ'** ನಂತರ ಮತ್ತೆ **'ಪ್ರಣತಃ ಶಿರಸಾ ಪ್ರಭುಮ್'** ಮತ್ತೆ ತಲೆಯ ಮೇಲೆ ಕೈ ಜೋಡಿಸಿಕೊಂಡು ನಿಂತಿದ್ದಾರೆ.

ಉರಸಾ ಶಿರಸಾ ದೃಷ್ಟ್ಯಾ ಮನಸಾ ವಚತಾ ತಥಾ ।
ಪದ್ಭ್ಯಾಂ ಕರಾಭ್ಯಾಂ ಜಾನುಭ್ಯಾಂ ಪ್ರಣಾಮೋಷ್ಟಾಂಗ ಈರಿತಃ ॥

ಈ ರೀತಿ ಅದಕ್ಕಾಗೇನೆ ಶಿರಸಾ ಸಾಷ್ಟಾಂಗ ನಮಸ್ಕಾರ ಅಂತ ಸಾಷ್ಟಾಂಗ ನಮಸ್ಕಾರ ಹಾಕುವಾಗ ಅದರೊಳಗೆ ಎಲ್ಲ ಅಂಗಗಳು ಬಂತು ಶಿರಸ್ಸೂ ಬಂತು ಅದರಲ್ಲಿ ಆದರೆ ಮತ್ತೆ ಶಿರಸಾ ಅಂತ ಪ್ರತ್ಯೇಕ ಹೇಳುವುದು ಯಾಕೆ ಅಂದರೆ ಮೊದಲು ತಲೆ ಬಾಗಿ ಸಾಷ್ಟಾಂಗ ಪ್ರಣಾಮ ಮಾಡಿ, ಎದ್ದು ನಿಂತ ಮೇಲೂ ತಲೆ ಬಾಗಿ ಕೈಜೋಡಿಸಿ ನಿಲ್ಲಬೇಕಾದದ್ದು ಅನ್ನುವ ದೃಷ್ಟಿಯಲ್ಲಿ ಶಿರಸಾ ಸಾಷ್ಟಾಂಗ ನಮಸ್ಕಾರ ಅಂತ ಈ ರೀತಿ ನಮಸ್ಕಾರವನ್ನು ಮಾಡಿ ಆ ಪರಮಾತ್ಮನ ಅನುಗ್ರಹವನ್ನು ಪಡೆದಿದ್ದಾರೆ. ಪರಮಾತ್ಮ ಉಪದೇಶ ಮಾಡುತ್ತಾ ಇದ್ದಾನೆ

ಅಹಂ ನಾರಾಯಣೋ ಬ್ರಹ್ಮಾ ಸಮ್ಭವಃ ಸರ್ವದೇಹಿನಾಮ್ ।
ಸರ್ವಭೂತೋದ್ಭವಕರಃ ಸರ್ವಭೂತವಿನಾಶನಃ ॥ (10.49 ಭವಿಷ್ಯಪರ್ವ)

ಏನು ಭಾಗ್ಯ ನೋಡಿ ಮಾರ್ಕಂಡೇಯರದು ಪರಮಾತ್ಮನೇ ನೇರವಾಗಿ ನೀನ್ಯಾರು ಅಂತ ಕೇಳುತ್ತಾರೆ.

ಕಿಂಸಜ್ಞಃ ಕಶ್ಚ ಭಗವಾಂಲ್ಲೋಕೇ ವಿಜ್ಞಾಯಸೇಽನಘ ॥ (10.48 ಭವಿಷ್ಯಪರ್ವ)

ಅಂತ ನೀನು ಸಾಮಾನ್ಯನಲ್ಲ ನೀನು ಸರ್ವೋತ್ತಮನಾದ ವ್ಯಕ್ತಿ ಇಂತಹ ಪ್ರಲಯ ಜಲದಲ್ಲಿ ಈ ರೀತಿ ವಟಪತ್ರಶಾಯಿಯಾಗಿ ಮಲಿಗಿದ್ದೀ ನಿನ್ನ ಸ್ವರೂಪವನ್ನು ನನಗೆ ತಿಳಿಸಿಕೊಡು ಅಂತ ಕೇಳಿದ್ದಕ್ಕೆ ಪರಮಾತ್ಮ ತನ್ನ ಸ್ವರೂಪವನ್ನು ತಿಳಿಸುತ್ತಾನೆ. ಸಕಲ ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳನ್ನು ಮಾಡುವಂತಹ ಸರ್ವೋತ್ತಮನಾದ ನಾರಾಯಣನೇ ನಾನು, ಇಂದ್ರ ಪದವಿಯಲ್ಲಿ ಇಂದ್ರನಲ್ಲಿ ಅಂತರ್ಯಾಮಿಯಾಗಿದ್ದು ಆ ಮೂರು ಲೋಕಗಳನ್ನು ಆಳುವವನು ನಾನು, ಋತುಗಳು ವತ್ಸರಗಳು ಯುಗಗಳು ಮಹಾಯುಗ ಎಲ್ಲ ಕಾಲಗಳಲ್ಲಿ ಅಂತರ್ಯಾಮಿಯಾಗಿ ಕಾಲ ನಿಯಾಮಕನಾಗಿ ಕಾಲ ಕ್ಷಣಗಳ ಹಾಗೂ ಇನ್ನಿತರ ಆವಾಂತರ ಕಾಲಗಳ ಸೃಷ್ಟಿಯನ್ನು ಮಾಡಿ ಕಾಲನಾಮಕನಾಗಿ ಸರ್ವಜ್ಞ ಶಿಖಾಮಣಿಯಾಗಿ ಕಲಕಾಮಧೇನುಃ ಸಕಲಗುಣ ಪರಿಪೂರ್ಣನಾಗಿ ಕಾಲದಲ್ಲಿ ಅಂತರ್ಯಾಮಿಯಾಗಿ ಇದ್ದವನು ನಾನು. ಎಲ್ಲ ಸರ್ಪಗಳಲ್ಲಿ ಶೇಷ ದೇವರಲ್ಲಿ ನನ್ನದು ವಿಶೇಷವಾದ ವಿಭೂತಿರೂಪ ಇದೆ, ಪಕ್ಷಿಗಳಲ್ಲಿ ಗರುಡ **'ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್'** ಎಂಬುದಾಗಿ ಯಾವ ಪುರುಷನನ್ನು ಹೇಳುತ್ತಾರೆ ಅಂತಹ ಅನಂತ ತಲೆ ಕೈ ಕಾಲು ಮೊದಲಾದ ಅವಯವಗಳಿಂದ ಕೂಡಿದ, ಇಡೀ ಜಗತ್ತಿನಲ್ಲಿ ವ್ಯಾಪ್ತವಾದಂತಹ ರೂಪವನ್ನು ಪಡೆದವನು ನಾನು. ಸೂರ್ಯ ಅಗ್ನಿ ಪೃಥಿವಿ ಎಲ್ಲ ಕಡೆಗೆ ಇದ್ದವನು.

ಅಹಂ ಧರ್ಮಸ್ತಪಶ್ಚಾಹಂ ಸರ್ವಾಶ್ರಮನಿವಾಸಿನಾಮ್ ॥ (10.56 ಭವಿಷ್ಯಪರ್ವ)

ಎಲ್ಲಾ ವರ್ಣ ಆಶ್ರಮಗಳು ಅವುಗಳಲ್ಲಿ ಇದ್ದಂತಹ ಜನರು ಪರಿಪಾಲನೆ ಮಾಡುವ ಧರ್ಮ ಅದಕ್ಕೆ ಉಪದೇಶಕ, ಅದಕ್ಕೆ ಕಾರಕ, ಅದಕ್ಕೆ ಫಲಪ್ರದಾತ ಎಲ್ಲವೂ ನಾನು. ಸಾಂಖ್ಯ ಯೋಗ ಎಲ್ಲವನ್ನು ಪ್ರವರ್ತನೆ ಮಾಡುತ್ತೇನೆ.

ಕ್ಷಾರಾಬ್ಧಿಸಂಗತಮಹಾಜಲಪಾತ್ರವಾಡವಾಗ್ನಿಸ್ವರೂಪಪರಮಾಣುಗತಾಣುರೂಪ ॥

(13 ಶ್ರೀವೇದವ್ಯಾಸಕರಾವಲಂಬನಸ್ತೋತ್ರಂ)

ವಾಡವಾನಲ ರೂಪದಲ್ಲಿ ಆ ಸಮುದ್ರದಲ್ಲಿದ್ದು ಅಗ್ನಿ ನೀರನ್ನು ಪಾನ ಮಾಡತಕ್ಕಂಥವನು ನಾನು.

ಯತ್ಕಿಂಚಿತ್ ಪಶ್ಯಸೇ ಚೈವ ಯಚ್ಚಾಣೋಷಿ ಚ ಕಿಂಚನ ।
ಯಚ್ಚಾನುಭವಸೇ ಲೋಕೇ ತತ್ ಸರ್ವಂ ಮಾಮಕಂ ಸ್ಮೃತಮ್ ॥ (10.62 ಭವಿಷ್ಯಪರ್ವ)

ಒಂದೊಂದೇ ವಿಭೂತಿ ರೂಪಗಳನ್ನು ಹೇಳುತ್ತ ಹೇಳುತ್ತ ಕೊನೆಗೆ ಅನ್ನುತ್ತಾನೆ ಎಷ್ಟು ಅಂತ ಹೇಳೋದು ಏನೆಲ್ಲಾ ನೀನು ನೋಡುತ್ತೀಯಾ ಯಾವುದನ್ನು ಕೇಳುತ್ತೀಯಾ ಅಥವಾ ಅನುಮಾನದಿಂದ ತಿಳಿಯುತ್ತೀಯಾ, ಯಾವುದೇ ಪ್ರಮಾಣಕ್ಕೆ ಗೋಚರವಾಗುವ ಯಾವುದೇ ವಸ್ತು ಇದ್ದರೂ ಅದರಲ್ಲಿ ಅಂತರ್ಯಾಮಿಯಾಗಿ ನಾನಿದ್ದೇನೆ ಸರ್ವತ್ರ ವ್ಯಾಪ್ತನಾಗಿದ್ದೇನೆ ಅಂತ ತಿಳಿ. ಓಂಕಾರ ಪ್ರತಿಪಾದ್ಯ ನಾನು, ವ್ಯಾಹರ್ತಿ ಪ್ರತಿಪಾದ್ಯ ನಾನು, ತ್ರಿಪದಾ ಗಾಯತ್ರಿಯಿಂದ ಪ್ರತಿಪಾದ್ಯನಾದವನು ನಾನು ಆದ್ದರಿಂದಲೇ ಪುರುಷಸೂಕ್ತ ಪ್ರತಿಪಾದ್ಯ ಆದ್ದರಿಂದಲೇ ಸರ್ವವೇದ ಪ್ರತಿಪಾದ್ಯನಾದವನು ನಾನು ಅಂತ ಹೇಳುತ್ತಾನೆ.

ಅಹಮೇಕಾಕ್ಷರೋ ಮನ್ತ್ರಸ್ತ್ರ್ಯಕ್ಷರಶ್ಚೈವ ಸರ್ವಶಃ ।
ತ್ರಿಪದಶ್ಚೈವ ಪರಮಸ್ತ್ರಿವರ್ಗಾರ್ಥನಿದರ್ಶನಃ ॥ (10.66 ಭವಿಷ್ಯಪರ್ವ)

ಈ ರೀತಿ ಯಾವುದನ್ನು ಶ್ರೀಮದಾಚಾರ್ಯರು ಅನುವ್ಯಾಖ್ಯಾನದಲ್ಲಿ ತಿಳಿಸುತ್ತಾರೆ ಓಂಕಾರ ಪ್ರತಿಪಾದ್ಯನಾದದ್ದರಿಂದ ವ್ಯಾಹರ್ತಿ ಪ್ರತಿಪಾದ್ಯ, ವ್ಯಾಹರ್ತಿ ಪ್ರತಿಪಾದ್ಯನಾದದ್ದರಿಂದ ಗಾಯತ್ರಿ, ಗಾಯತ್ರಿ ಪ್ರತಿಪಾದ್ಯನಾದದ್ದರಿಂದ ಪುರುಷಸೂಕ್ತ ಪ್ರತಿಪಾದ್ಯ. ಪುರುಷಸೂಕ್ತ ಪ್ರತಿಪಾದ್ಯನಾದದ್ದರಿಂದ ಸರ್ವವೇದ ಪ್ರತಿಪಾದ್ಯನಾಗಿದ್ದಾನೆ ಅಂತ ಆ ಮಾತನ್ನು ಹರಿವಂಶ ಇಲ್ಲಿ ತಿಳಿಸಿಕೊಡುತ್ತ ಇದೆ. ಅಂತಹ ಸರ್ವವೇದ ಪ್ರತಿಪಾದ್ಯನಾದ ಸರ್ವೋತ್ತಮನಾದ ಸರ್ವ ಸೃಷ್ಟಿಕರ್ತುವಾದ ಈಗ ಪ್ರಲಯವನ್ನ ನಿನಗೆ ನಿನ್ನ ಅಪೇಕ್ಷೆಯಂತೆ ತೋರಿಸಿದ ನಾರಾಯಣನೇ ನಾನು ಅಂತ ಪರಮಾತ್ಮ ತನ್ನ ಸ್ವರೂಪವನ್ನು ತಿಳಿಸಿಕೊಟ್ಟು ಮಾರ್ಕಂಡೇಯರಿಗೆ ಪರಮಾನುಗ್ರಹವನ್ನು ಮಾಡಿದ್ದಾನೆ.

ಇಂತಹ ಆ ಪರಮಾತ್ಮನ ಅದ್ಭುತವಾದ ಆ ನಾಭಿಯಿಂದಲೇ ಕಮಲ ಬಂದದ್ದು. ಆ ಕಮಲದಲ್ಲಿಯೇ ಬ್ರಹ್ಮ ದೇವರು ಜನಿಸಿದ್ದು, ಬ್ರಹ್ಮ ದೇವರನ್ನು ಪರಮಾತ್ಮ ಸೃಷ್ಟಿ ಮಾಡಿದ್ದಾನೆ ಅದ್ಭುತವಾದಂತಹ ಕಮಲ. ಆ ಕಮಲ ಅಂದರೆ ಅದರ ಕಮಲದ ದಲಗಳಿಂದಲೇ ಕಮಲದಲ್ಲಿ ಮೊದಲು ಮೂರು ಭಾಗ ಮಾಡಿ, ಅದರಿಂದ ಭೂಃ ಭುವಃ ಸ್ವಹಃ ಅಂತ ಮೂರು ಲೋಕಗಳ ವಿವಕ್ಷೆಯಿಂದ ಮೂರು ಲೋಕಗಳ ವಿಶೇಷವಾದ ಉಪಚಯವನ್ನು ಪೂರ್ವ ಸೃಷ್ಟವಾದ ಲೋಕಗಳನ್ನೇ ಬ್ರಹ್ಮ ದೇವರು ವಿಶೇಷವಾಗಿ ಅಭಿವೃದ್ಧಗೊಳಿಸುತ್ತಾರೆ. ಮತ್ತೆ 14 ಭಾಗವನ್ನು ಮಾಡಿ 14 ಲೋಕಗಳ ಕಲ್ಪನೆ ಆ ಚತುರ್ದಶ ಲೋಕಗಳನ್ನೂ ಕೂಡ ಈ ಕಮಲದ ಚತುರ್ದಶ ದಲಗಳಿಂದ ವಿಶೇಷವಾಗಿ ಅಭಿವೃದ್ಧಿಯನ್ನು ಮಾಡುತ್ತಾರೆ. ಅಲ್ಲಿ ನಾನಾ ತರಹದ ಜೀವರಾಶಿಗಳು ಪರಮಾತ್ಮನ ಆಜ್ಞೆಯಂತೆ ಅವನ ಸಂಕಲ್ಪದಂತೆ ತಮ್ಮ ತಮ್ಮ ಸಾಧನೆಯನ್ನು ಮಾಡಿಕೊಂಡು ಅವರವರಿಗೆ ಯೋಗ್ಯವಾದಂತಹ ಗತಿಯನ್ನು ಹೊಂದುತ್ತಾರೆ. ಪುಣ್ಯವಂತರು ಊರ್ಧ್ವ ಲೋಕವನ್ನು ಹೊಂದುತ್ತಾರೆ, ಪಾಪಿಗಳು ಅಧೋ ಲೋಕಗಳನ್ನು ಹೊಂದಿ ದುಃಖವನ್ನು ಅನುಭವಿಸುತ್ತಾರೆ. ಪುಣ್ಯವನ್ನು ಮಾಡಿ ಪಾಪಗಳನ್ನು ಮಾಡದಂತೆ ಉತ್ತಮ ಲೋಕಗಳನ್ನು ಹೊಂದಿ ಭಗವಂತನ ಅನುಗ್ರಹವನ್ನು ಪಡೆಯಬೇಕು ಅಂತ ತಿಳಿಸಿಕೊಟ್ಟಿದ್ದಾರೆ ವೈಶಂಪಾಯನರು.

ಪರಮಾತ್ಮ ಸರ್ವದಾ ಕ್ರೀಡೆಯನ್ನು ಮಾಡುವವನು ಅದಕ್ಕೆ ಅವನನ್ನು ದೇವರು ಅಂತ ಕರೆಯುವುದು **'ಯೂ ಕ್ರೀಡಾಯಾಂ'** ಕ್ರೀಡಾದಿ ಗುಣದ ವಿಶಿಷ್ಟ ಅಂತ ಇಡೀ ಜಗತ್ತಿನ ಸೃಷ್ಟ್ಯಾದಿಗಳನ್ನು ಮಾಡಿದರೂ ದೇವರ ದೃಷ್ಟಿಯಲ್ಲಿ ಅದು ಕ್ರೀಡೆ. ಅವನಿಗೆ ಏನು ಆಯಾಸ ಇಲ್ಲ ಇದರಿಂದ ಪ್ರಯೋಜನವೂ ಇಲ್ಲ, ಪಡೆಯಬೇಕಾದ ಇಲ್ಲಿಯವರೆಗೆ

ಪಡೆಯದಿರುವ ಪ್ರಯೋಜನ ಅಂತ ಯಾವುದಿಲ್ಲ, ಕ್ರೀಡೆ ಮಾಡುವುದಕ್ಕೋಸ್ಕರ ಅಂತೂ ಅಲ್ಲ ಸೃಷ್ಟಿಯೇ ಕ್ರೀಡೆ ಕ್ರೀಡಾ ರೂಪವಾದದ್ದು ಆ ಪರಮಾತ್ಮನ ಸೃಷ್ಟಿ ಅಂತಹ ಅದ್ಭುತವಾದ ಆ ಪರಮಾತ್ಮನ ಕ್ರೀಡೆ. ಆ ಕ್ರೀಡೆಯನ್ನು ಮಾಡುವುದಕ್ಕೋಸ್ಕರ ಅಂತೇನೆ ಪರಮಾತ್ಮ ಬ್ರಹ್ಮ ದೇವರಿಗೆ ಪ್ರಚೋದನೆ ಮಾಡಿದ, ತಾನು ವೇದಗಳ ಉಚ್ಚಾರಣೆಯನ್ನು ಮಾಡುವಾಗ ಸಚ್ಚಿದಾನಂದಾತ್ಮಕವಾದ ಶರೀರ ಅವನಿಗೆ ಏನು ಶ್ರಮವೇ ಇಲ್ಲ, ಆದರೂ ಶ್ರಮವಾದಂತೆ ನಾಟಕ ಮಾಡಿ, ಶ್ರಮವಾದಾಗ ಬೆವರಿನ ಹನಿಗಳು ದೇಹದ ಮೇಲೆ ಕಾಣಿಸಿಕೊಳ್ಳುತ್ತಾವಲ್ಲ ಆ ತರಹ ಆ ಪರಮಾತ್ಮನ ಕಿವಿಯಲ್ಲಿ ವೇದಬಿಂದು ಬೆವರಿನ ಹನಿಗಳು ಕಾಣಿಸಿಕೊಂಡವಂತೆ, ಅವುಗಳಿಂದ ಮಧು ಕೈಟಭ ಇವರಿಬ್ಬರ ಸೃಷ್ಟಿ. ಆ ಮಧು ಕೈಟಭರಿಗೆ ಬ್ರಹ್ಮ ದೇವರ ವರ ಅವಧ್ಯರಾಗಿ ಅಂತ ಅವರಲ್ಲಿ ಪ್ರಭಂಜನನ ಆವೇಶ ವಾಯು ದೇವರ ವಿಶೇಷ ಆವೇಶ ಯಾಕೆ ಅಂದರೆ ಅವರಲ್ಲಿ ಬಲ ವಿಶೇಷವಾಗಿ ಬರಬೇಕು, ಅವರು ದೇವರ ಜೊತೆಗೆ ಯುದ್ಧ ಮಾಡಬೇಕು ಸೋಲಬೇಕು. ಏನೂ ಶಕ್ತಿ ಇಲ್ಲದ ಅಶಕ್ತ ಕೋಳಿಗಳು ಯುದ್ಧವಾಡಿ ಸೋತವು ಅಂತಾದರೆ ದೇವರ ಮಹಿಮೆ ಏನು ಅಭಿವ್ಯಕ್ತಿ ಆಗುವುದಿಲ್ಲ, ಮಹಾಪರಾಕ್ರಮಿಗಳು ಆದರೂ ದೇವರಿಂದ ಸೋತರು ಅಂತಾದರೆ ಆಗ ದೇವರ ಮಹಿಮೆ ಅಭಿವ್ಯಕ್ತವಾಗುತ್ತದೆ ಅಂತ ಅನ್ನುವ ದೃಷ್ಟಿಯಲ್ಲಿ ದೇವರ ಸೇವೆ. ದೇವರ ಮಹಿಮೆಯ ಅಭಿವ್ಯಕ್ತಿಯ ಕಾರಣಕ್ಕಾಗಿ ತಾವು ವಾಯು ದೇವರು ಇವರಿಬ್ಬರಲ್ಲಿ ಪ್ರವೇಶ ಮಾಡಿ ಅವರನ್ನು ಬಲಿಷ್ಠರನ್ನಾಗಿ ಮಾಡಿದ್ದಾರೆ ಬ್ರಹ್ಮ ದೇವರು ವರ ಕೊಟ್ಟಿದ್ದಾರೆ ಅಂತಹ ಮಧು ಕೈಟಭರು. ಭಾರೀ ಯುದ್ಧವಾಗಿದೆ, ಮಧು ಕೈಟಭರು ಮೊದಲು ಬ್ರಹ್ಮ ದೇವರ ಹತ್ತಿರ ಬರುತ್ತಾರೆ ಏನು ಕಮಲದಲ್ಲಿ ಕುಳಿತು ಏನೋ ಧ್ಯಾನ ಮಾಡುತ್ತಾ ಇದ್ದೀರಿ ಏನು ಮಾಡುತ್ತಾ ಇದ್ದೀರಿ.

ಏಹ್ಯಾವಯೋರ್ಬಾಹುಯುದ್ಧಂ ಪ್ರಯಚ್ಛ ಕಮಲೋದ್ಭವ ॥ (13.11 ಭವಿಷ್ಯಪರ್ವ)

ನಮ್ಮ ಜೊತೆಗೆ ಯುದ್ಧ ಮಾಡು ಸುಮ್ಮನೆ ಈ ರೀತಿ ದ್ಯಾನ ಮಾಡಿದರೆ ಏನು ಪ್ರಯೋಜನ, ನಿನ್ನನ್ನು ಸೃಷ್ಟಿ ಮಾಡಿದ್ದು ಯಾರು, ರಕ್ಷಣೆ ಮಾಡುವವರು ಯಾರು, ಯಾರಿಗೋಸ್ಕರ ದ್ಯಾನ ಇದೆಲ್ಲಾ, ನಮ್ಮನ್ನು ಬಿಟ್ಟು ಇದ್ದಾರೆ ಯಾರು ಪ್ರಪಂಚದೊಳಗೆ, ನಾವೇ ಎಲ್ಲರಿಗಿಂತಲೂ ಉತ್ತಮರು ನಮ್ಮ ಧ್ಯಾನ ಮಾಡು ಬೇಕಾದರೆ, ಇಲ್ಲಾ ಯುದ್ಧಕ್ಕೆ ಬಾ ಅಂತ ಬ್ರಹ್ಮ ದೇವರ ಎದುರಿಗೆ ಹೇಳುತ್ತಾರೆ.

ನವಯೋಃ ಪರಮಂ ಲೋಕೇ ಕಿಂಚಿದಸ್ತಿ ಮಹಾಮತೇ ॥ (13.14 ಭವಿಷ್ಯಪರ್ವ)

ನಮ್ಮಿಬ್ಬರನ್ನು ಬಿಟ್ಟರೆ ಯಾರೂ ಉತ್ತಮರಿಲ್ಲ ನಾವೇ ಎಲ್ಲರಿಗಿಂತಲೂ ಉತ್ತಮರು **'ಆವಾಂ ಭಾಧಯತಾಂ ವಿಶ್ವಂ'** ಏನು ಎಷ್ಟು ವಿಚಿತ್ರ ನೋಡಿ. ಬ್ರಹ್ಮ ದೇವರೇ ಇವರಿಗೆ ವರ ಕೊಟ್ಟವರು ಅವಧ್ಯತ್ವ ವರ ಕೊಟ್ಟವರೇ ಬ್ರಹ್ಮ ದೇವರು, ವಾಯು ದೇವರ ಆವೇಶದಿಂದಲೇ ಇವರಿಗೆ ಬಲ ಬಂದಿದೆ, ಪರಮಾತ್ಮನ ಕರ್ಣಕುಟದಿಂದ ಹುಟ್ಟಿದವರು ಇಷ್ಟಿದ್ದು ನಮ್ಮನ್ನು ಬಿಟ್ಟರೆ ಯಾರೂ ಉತ್ತಮರೇ ಇಲ್ಲ ಪ್ರಪಂಚದೊಳಗೆ ಅಂತ ಮಾತಾಡುತ್ತಾರೆ. ಆಗ ಬ್ರಹ್ಮ ದೇವರು ಅಂದರು ಇಡೀ ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣನಾದಂತಹ ಸ್ವಾಮಿ ಅಲ್ಲಿದ್ದಾನೆ ಯಾವ ಪರಮಾತ್ಮನ ನಾಭಿ ಕಮಲದಿಂದ ನಾನು ಬಂದಿದ್ದೇನೆ ಅವನು ಜಗತ್ತಗೆ ಕಾರಣ ಅವನಿಗೆ ಹೋಗಿ ಕೇಳಿ ಅಂತ ಅವನ ಜೊತೆಗೆ ಬೇಕು ಅಂದರೆ ಯುದ್ಧ ಆಡಿ ಸಮರ್ಥನಾಗಿದ್ದಾನೆ. ಆ ಪರಮಾತ್ಮನ ಜೊತೆಗೆ ನೀವು ಯುದ್ಧವನ್ನು ಮಾಡಿ ನಿಮ್ಮನ್ನು ಪೂರ್ಣವಾಗಿ ನಾಶ ಮಾಡಿಬಿಡುತ್ತಾನೆ ಅಂತ ಪರಮಾತ್ಮನ ಹತ್ತಿರ ಹೋಗಿದ್ದಾರೆ.

ಪದ್ಮನಾಭಂ ಹೃಷೀಕೇಶಂ ಪ್ರಣಮ್ಯಾವೋಚತಾಮುಭೌ ॥ (13.21 ಭವಿಷ್ಯಪರ್ವ)

ನೋಡಿ ಹತ್ತಿರ ಬಂದು ನಮಸ್ಕಾರ ಮಾಡಿ ಜಗಳ ಆಡುತ್ತಾ ಇದ್ದಾರೆ **'ಪ್ರಣಮ್ಯಾವೋಚತಾಮುಭೌ ಜಾನೀವಸ್ತ್ವಂ'** ಇಬ್ಬರು ಸೇರಿ ಮಾತನಾಡಿದ್ದಾರೆ ಅಂತ ಕಾಣಿಸುತ್ತದೆ ಪ್ರಾಯಃ ಅದಕ್ಕಾಗಿ ಏಕ ವಚನ ಪ್ರಯೋಗ ಮಾಡಿದ್ದಾರೆ.

ಪ್ರಣಮ್ಯಾವೋಚತಾಮುಭೌ ಜಾನೀವಸ್ತ್ವಂ ವಿಶ್ವಯೋನಿಮೇಕಂ ಪುರುಷಸತ್ತಮಮ್ ॥

(13.21/22 ಭವಿಷ್ಯಪರ್ವ)

ಇಡೀ ಜಗತ್ತಿಗೆ ನೀನು ಕಾರಣ ಅಂತ ನಮಗೆ ಗೊತ್ತು ಸರ್ವೋತ್ತಮ ಅಂತೂ ನಮಗೆ ಗೊತ್ತು ಆದರೆ ನಮಗೆ ಮಾತ್ರ ನೀನು ಯುದ್ಧ ಬಿಕ್ಷೆಯನ್ನು ಕೊಡಬೇಕು. ಒಂದು ಮಾತನ್ನು ಗಮನಿಸಿ ಅಂದರೆ ಮಧು ಕೈಟಭರಂತಹ ಮಹಾದೈತ್ಯರು ಅವರೇ ದೇವರನ್ನು ನೀನು ಪುರುಷ ಸತ್ತಮ ಸರ್ವೋತ್ತಮ ಸಕಲ ಜಗತ್ತಿಗೆ ಕಾರಣ ಅಂತ ಹೇಳುತ್ತ ಇರುವಾಗ ಇನ್ನುಳಿದವರು ಅಲ್ಲ ಅಂತ ಹೇಳಿದರೆ ಅದಕ್ಕೆ ಏನು ಬೆಲೆ. ಯಾರು ವಿರುದ್ಧ ಪಕ್ಷದವರು ಅಂತಹ ಅತ್ಯಂತ ವಿರೋಧಿಗಳು ದೈತ್ಯರು ಅಸುರರು ಅಂತ ಅನ್ನಿಸಿಕೊಂಡವರು ಪರಮಾತ್ಮನ ಜೊತೆಗೆ ಜಗಳ ಆಡಲಿಕ್ಕೆ ಅಂತ ಬಂದವರು ಜಗಳ ಆಡಲಿ ಅದು ಬೇರೆ ವಿಚಾರ ಆದರೆ ಜಗತ್ತಿಗೆ ಕಾರಣ ನೀನು ಜಗತ್ಜನ್ಮಾದಿ ಕಾರಣ ನೀನು, ಸರ್ವೋತ್ತಮ ನೀನು ಅಂತ ಅನ್ನುತ್ತಾರೆ ಆದ್ದರಿಂದಲೇ ನಮ್ಮ ಜೊತೆಗೆ ಯುದ್ಧ ಮಾಡು ನಿನ್ನ ಜೊತೆಗೆ ಯುದ್ಧ ಮಾಡಿದರೆ ನಮಗೆ ಪೌರುಷ ತೋರಿಸಿಕೊಂಡ ಹಾಗೆ ಅಂತ.

ತದಿಚ್ಛಾವೋ ವರಂ ದತ್ತಂ ತ್ವಯಾ ಹ್ಯಾವಾಮರಿಂದಮ ॥ (13.24 ಭವಿಷ್ಯಪರ್ವ)

ಪರಮಾತ್ಮ ಅಂದ ಇನ್ನೇನು ವರ ಕೊಡುವುದು ನಿಮಗೆ ಬೇಕಾದಷ್ಟು ದೀರ್ಘ ಆಯುಷ್ಯ ಎಲ್ಲ ಕೊಟ್ಟಾಗಿದೆ ಬ್ರಹ್ಮ ದೇವರು ವರ ಕೊಟ್ಟುಬಿಟ್ಟಿದ್ದಾರೆ ಅವರಿಗೆ ಆಜ್ಞೆ ಮಾಡಿ ನಾನೇ ಕೊಡಿಸಿದ್ದು. **'ಚಿಕ್ರೀಡಿಷಾಸಂಭವಯಾ'** ಅಂತ ಶ್ರೀಮದಾಚಾರ್ಯರು ತಾತ್ಪರ್ಯ ನಿರ್ಣಯದಲ್ಲಿ ಹೇಳಿದಂತೆ ನಾನೇ ಅವರಿಗೆ ಆಜ್ಞೆ ಮಾಡಿ ವರ ಕೊಡಿಸಿದ್ದು, ವಾಯು ದೇವರು ವಿಶೇಷವಾಗಿ ನಿಮ್ಮಲ್ಲಿ ಪ್ರವೇಶ ಮಾಡಿ ಬಲ ತುಂಬಿದ್ದಾರೆ.

ತಸ್ಮಾದ್ ಯದೇಷ ವಾಂ ಯತ್ನಸ್ತತ್ ಪ್ರಾಪ್ನುತಂ ಮಹಾಬಲೌ ॥ (13.26 ಭವಿಷ್ಯಪರ್ವ)

ಇನ್ನೇನು ನೀವು ಬಹಳ ದಿವಸ ಬದುಕುವುದಿಲ್ಲ ಇನ್ನು ನೀವು ಸಾಯುವುದು ನಿಶ್ಚಿತ ಅಂದುಬಿಟ್ಟ ದೇವರು, ವರ ಕೊಡು ಅಂತ ನಾವು ಕೇಳಿದರೆ ಸಾಯುವುದು ನಿಶ್ಚಿತ ಅಂತ ಹೇಳುತ್ತೀರಲ್ಲ.

ವಧ್ಯೌ ಭವನ್ತೌ ತು ಸ್ಯಾತಾಂ ತಾವಿತ್ಯೇವಾಬ್ರವೀದ್ಧರಿಃ । (13.26 ಭವಿಷ್ಯಪರ್ವ)

ಹಾಗಾದರೆ ಒಂದು ಕೆಲಸ ಮಾಡು ಯಾವ ಸ್ಥಳದಲ್ಲಿ ಎಂದೂ ಯಾರೂ ಸತ್ತಿಲ್ಲ ಅಂತಹ ಇತಿಹಾಸನೇ ಇಲ್ಲ ಅಂತಹ ಸ್ಥಳದೊಳಗೆ ನಮ್ಮನ್ನು ಸಂಹಾರ ಮಾಡು ಹೋಗಲಿ ಅಷ್ಟಾದರೂ ಮಾಡು ನಾವು ಸಾಯುವುದು ನಿಶ್ಚಿತ ಅಂತ ಅಂತೀಯಲ್ಲ ಮತ್ತೆ ನೀನು ಹೇಳಿದ ಮೇಲೆ ಇನ್ನೇನು ಮಾಡುವುದು. ನೀನೇ ಸರ್ವೋತ್ತಮ ಅಲ್ಲವಾ ಸರ್ವ ಕಾರಣ ಅಲ್ಲವಾ ನೀನು ಹೇಳಿದ ಮೇಲೆ ಅದಕ್ಕೆ ಇನ್ನು ಬೇರೆ ರೀತಿ ನಡೆಯುವುದಕ್ಕೆ ಆಗುವುದೇ ಇಲ್ಲ, ಅದು ಆಗುವುದು ನಿಶ್ಚಿತ ಆಗಲಿ ಆದರೆ ಒಂದು ನಮಗೆ ಒಂದು ವರ ಕೊಡು.

ಯಸ್ಮಿನ್ ನ ಕಶ್ಮಿನ್ಶ್ಚಿತವಾಂಸ್ತಸ್ಮಿನ್ ದೇಶೇ ವಿಭೋ ವಧಮ್ ।
ಇಚ್ಛಾವಃ ಪುತ್ರತಾಂ ಯಾತುಂ ತವ ಚೈವ ಸುರಾಧಿಪ ॥ (13.27 ಭವಿಷ್ಯಪರ್ವ)

ಅಂತಹ ಅಪೂರ್ವವಾದ ಪ್ರದೇಶದಲ್ಲಿ ನಮ್ಮನ್ನ ಕೊಲ್ಲಬೇಕು ನಿನ್ನ ಮಕ್ಕಳಾಗಿ ನಾವು ಇರಬೇಕು ಅಂತ ಮುಂದಿನ ಕಲ್ಪದಲ್ಲಿ ನೀವು ಮಕ್ಕಳಾಗಿ ಈಗ ಮಾತ್ರ ಅಪೂರ್ವವಾದ ಪ್ರದೇಶದಲ್ಲಿ ನಿಮ್ಮನ್ನು ಕೊಲ್ಲುತ್ತೇನೆ ಅಂತ. ಧನುರ್ಬಾಣಗಳನ್ನು ತೆಗೆದುಕೊಂಡು ಧನುರ್ಬಾಣವನ್ನೇನೋ ಬಿಡುತ್ತಾನೆ ಅವರ ಮೇಲೆ ಬಿಟ್ಟ ಮೇಲೆ ಅವರ ಇಬ್ಬರ ಶರೀರವನ್ನು ತೆಗೆದುಕೊಂಡು ತನ್ನ ತೊಡೆಯ ಮೇಲೆ ಹಾಕಿಕೊಳ್ಳುತ್ತಾನೆ. ಹಯಗ್ರೀವ ರೂಪದಿಂದ ಅಂತ ಕೆಲವು ಪುರಾಣಗಳಲ್ಲಿ ತಿಳಿಸಿಕೊಟ್ಟಿದ್ದಾರೆ ಅದನ್ನು ಶ್ರೀಮದಾಚಾರ್ಯರು ಸೂಚನೆ ಮಾಡುತ್ತಾರೆ. ಇವರಿಬ್ಬರೂ ವೇದಗಳನ್ನು ಅಪಹಾರ ಮಾಡಿಕೊಂಡು ಹೋಗಿರುತ್ತಾರೆ ಆ ವೇದಗಳನ್ನು ತಂದದ್ದು ಹಯಗ್ರೀವ ರೂಪದಿಂದ, ಕೊಂದದ್ದು ಪರಮಾತ್ಮ ತನ್ನ ಮೂಲ ರೂಪದಿಂದ ಅಂತ ಕೆಲವರ ಅಭಿಪ್ರಾಯ ಕೆಲವು ಗ್ರಂಥಗಳಲ್ಲಿ, ಹಯಗ್ರೀವ ರೂಪದಿಂದಲೇ ಸಂಹಾರ ಮಾಡಿದ ಅಂತೂ ಹೇಳುತ್ತಾರೆ. ಅಂತೂ ಪರಮಾತ್ಮ ಅವರನ್ನ ತನ್ನ ತೊಡೆಯ ಮೇಲೆ ಹಾಕಿಕೊಂಡು ತೊಡೆಯ ಮೇಲೆ ಹೊಸೆದು ಬಿಡುತ್ತಾನೆ ಚೆಂದಾಗಿ ತಿಕ್ಕಿ ತಿಕ್ಕಿ ತಿಕ್ಕಿ ಆ ಶರೀರ ಎಲ್ಲ ಜರ್ಜರವಾಗಿ ಮಾಂಸ ಮೇದಸ್ಸು ಎಲ್ಲಾ ಹೊರಗೆ ಬಂದು, ಪೂರ್ಣ ಅವರು ಸತ್ತು ಹೋಗಿ ಆ ಮೇದಸ್ಸೇನು ಹೊರಗೆ ಬರುತ್ತದೆ ಆ ಭೂಮಿಯ ಮೇಲೆ ಅದನ್ನೇ ಕೆಳಗೆ ಚೆಲ್ಲುತ್ತಾನೆ ಅದರಿಂದಲೇ ಭೂಮಿಗೆ ಮೇದಿನೀ ಅಂತ ಅನ್ನಿಸಿಕೊಳ್ಳುತ್ತೆ ಅಂತ ಭೂಮಿಗೆ ಮೇದಿನೀ ಅಂತ ಹೆಸರು ಬರುತ್ತದೆ. ಅನ್ನುವುದಕ್ಕಾಗೆಯೇ ಕೆಲವು ಪವಿತ್ರ ವಸ್ತುಗಳನ್ನು ನೆಲದ ಮೇಲೆ ಇಡಬೇಡಿ ಅನ್ನುತ್ತಾರೆ ಯಾಕೆ ಅಂದರೆ ನೆಲ ಇದು ಮಧು ಕೈಟಭರ ಮೇದಸ್ಸಿನಿಂದ ಲಿಪ್ತವಾದದ್ದು ಅಪವಿತ್ರವಾದದ್ದು ಅಂತನ್ನುವುದಕ್ಕೋಸ್ಕರ ಯಾವುದಾದರೂ ಒಂದು ತಟ್ಟೆಯಲ್ಲಿ ಪದಾರ್ಥದಲ್ಲಿ ಪವಿತ್ರವಾದಂತಹ ವಸ್ತುಗಳನ್ನು ಪುಸ್ತಕ ಸಾಲಿಗ್ರಾಮ ಇತ್ಯಾದಿಗಳನ್ನು ಒಂದು ಪವಿತ್ರವಾದ ರೀತಿಯಲ್ಲಿ ಇಡಬೇಕು ನೇರವಾಗಿ ಭೂಮಿಯ ಮೇಲೆ ಇಡಬಾರದು ಅಂತ. ಸಾಲಿಗ್ರಾಮವನ್ನ ಭೂಮಿಯ ಮೇಲೆ ಇಡಬಾರದು, ಶಂಖವನ್ನು ಭೂಮಿಯ ಮೇಲೆ ಇಡಬಾರದು, ಪುಸ್ತಕಗಳನ್ನು ನೆಲದ ಮೇಲೆ ಇಡಬಾರದು, ಬಂಗಾರವನ್ನು ನೆಲದ ಮೇಲೆ ಇಡಬಾರದು, ವಜ್ರವನ್ನು ನೆಲದ ಮೇಲೆ ಇಡಬಾರದು. ಹೀಗೆಲ್ಲಾ ಬ್ರಹ್ಮವೈವರ್ತ ಪುರಾಣದಲ್ಲಿ ನೆಲದ ಮೇಲೆ ಏನೇನು ಇಡಬಾರದು ಅಂತ ಅನೇಕ ವಸ್ತುಗಳ ಬಗ್ಗೆ ತಿಳಿಸಿಕೊಟ್ಟಿದ್ದಾರೆ ಪ್ರಾಯಃ ಪವಿತ್ರವಾದ ಪದಾರ್ಥಗಳನ್ನು, ಶ್ರೇಷ್ಠವಾದ ವಸ್ತುಗಳನ್ನು ನೆಲದ ಮೇಲೆ ಇಡಬಾರದು ಅಂತ. ಆ ರೀತಿ ಪರಮಾತ್ಮ ಇವರಿಬ್ಬರ ಸಂಹಾರವನ್ನು ಮಾಡಿ ಭೂಮಿಯನ್ನು ನಿರ್ಮಾಣ ಮಾಡಿದ್ದಾನೆ.

ಮುಂದೆ ಬ್ರಹ್ಮ ದೇವರು ಮತ್ತೆ ಘೋರವಾಗಿರುವಂತಹ ತಪಶ್ಚರ್ಯವನ್ನು ಮಾಡಿದ್ದಾರೆ. ಪರಮಾತ್ಮ **'ಯೋಗಾಚಾರ್ಯೋ ಸಾಂಖ್ಯಾಚಾರ್ಯಾಶ್ಚ'**[1] ದತ್ತಾತ್ರೇಯ ಹಾಗೂ ಕಪಿಲ ಎರಡೂ ಪರಮಾತ್ಮನ ರೂಪಗಳೇ ಆ ರೂಪಗಳಿಂದ ಪರಮಾತ್ಮ ಬ್ರಹ್ಮ ದೇವರಿಗೆ ವಿಶೇಷವಾಗಿ ದರ್ಶನವನ್ನು ಕೊಟ್ಟು ತತ್ತ್ವೋಪದೇಶವನ್ನು ಮಾಡಿದ್ದಾನೆ. **'ಭೂಃ ಭುವಃ ಸ್ವಃ ಭೂರ್ಭುವಸ್ವಃ'** ಆ ವ್ಯಾಹೃತಿಯನ್ನ ವಿಶೇಷವಾಗಿ ಪರಮಾತ್ಮ ಉಪದೇಶ ಮಾಡಿದ್ದಾನೆ ಅದನ್ನು ಬ್ರಹ್ಮ ದೇವರು ಜಪ ಮಾಡಿದ್ದಾರೆ ಅನುಸಂಧಾನ ಮಾಡಿದ್ದಾರೆ. ಆ ಬ್ರಹ್ಮ ದೇವರು ನಿರಂತರವಾಗಿ ಬ್ರಹ್ಮ ದೇವರು ಮಾಡುವ ಅನುಸಂಧಾನ ಏನು ಅದ್ಭುತವಾದ ಅನುಸಂಧಾನ.

ಅವನಿವನವನಧ್ರು ಗ್ವಾಯುಖಾಹಮ್ಮ ಹತ್ಸು
ಪ್ರಕೃತಿಗುಣಸಮೇತಾವ್ಯಾಕೃ ತಾಕಾಶ ಏಕಮ್ ॥
ತತಮತನುಮನಾಃ ಸೋಚಿಂತಯತ್ ಸತ್ಸಮಾಧಾ-
ವಸುರಸುರನರೇಭ್ಯಃ ಸದ್ಗುಣಂ ನಾಥಮನ್ಯಮ್ ॥ (14 ನೇ ಸರ್ಗ 48 ನೇ ಶ್ಲೋಕ ಸುಮಧ್ವವಿಜಯ)

1. 14.4 ಭವಿಷ್ಯಪರ್ವ

ಅಂತ ಶ್ರೀಮದಾಚಾರ್ಯರು ಹಾಗೇ ಧ್ಯಾನ ಮಾಡುತ್ತಾ ಇದ್ದರು ಭಾವೀ ಬ್ರಹ್ಮರು ಅಂತ ಕೇಳುತ್ತೀರಿ. ಇಲ್ಲಿ ಸ್ವಯಂ ಬ್ರಹ್ಮ ದೇವರು **'ಬ್ರಹ್ಮಾತು ಸರ್ವಗಂ ಪಶ್ಯೇತ್'** ಆ ಸರ್ವತ್ರ ವ್ಯಾಪ್ತನಾಗಿರುವಂತಹ ಪರಮಾತ್ಮನ ಧ್ಯಾನವನ್ನು ಮಾಡುತ್ತಾ ಮಾಡುತ್ತಾ ಅವರು ಜಪವನ್ನು ಮಾಡಿದ್ದಾರೆ ಆ ರೀತಿಯ ಜಪವನ್ನು ಮಾಡಿ ವಿಶೇಷವಾಗಿ ಭಗವಂತನ ದರ್ಶನವನ್ನು ಮಾಡಿಕೊಂಡಿದ್ದಾರೆ. ಬ್ರಹ್ಮ ದೇವರಿಗೆ ನೂರು ಜನ್ಮಗಳ ಹಿಂದೇನೆ ಅಪರೋಕ್ಷ ಜ್ಞಾನ ಇದೆ ವಿಶೇಷವಾಗಿ ಭಗವಂತನ ದರ್ಶನದ ಅಭಿವೃದ್ಧಿ ಭಕ್ತಿ ಅಭಿವೃದ್ಧಿ ಆಗುತ್ತಾನೆ ಇರುತ್ತದೆ **'ಆಮುಕ್ತೇಃ ವರ್ಧಮಾನಂ'** ಅಂತ ಆ ರೀತಿ ನಿತ್ಯದಲ್ಲಿ ಅಭಿವರ್ಧಮಾನವಾದಂತಹ ಜ್ಞಾನ ಭಕ್ತಿಯ ಪಡೆದುಕೊಂಡಂತಹ ಮಹಾನುಭಾವರು ಬ್ರಹ್ಮ ದೇವರು. ಅವರು ಅದೇ ಹೆಸರಿನ ಮೂರು ಜನ ಮಕ್ಕಳನ್ನು ಸೃಷ್ಟಿ ಮಾಡಿದ್ದಾರೆ ಮಾನಸ ಪುತ್ರರನ್ನ **ಭುಃ ಭುವಃ ಭೂರ್ಭುವಃ** ಅಂತ ಮಾನಸ ಪುತ್ರರ ಸೃಷ್ಟಿಯನ್ನು ಮಾಡಿದ್ದಾರೆ. ಆ ಮಾನಸ ಪುತ್ರರ ಸೃಷ್ಟಿಯನ್ನು ಮಾಡಿ ಅವರೆಲ್ಲರೂ ಕೂಡ ವಿಶೇಷವಾಗಿ ಆ ಕಪಿಲನಾಮಕ ಪರಮಾತ್ಮನಿಂದ, ದತ್ತಾತ್ರೇಯ ರೂಪಿಯಾದ ಪರಮಾತ್ಮನಿಂದ ಸಾಂಖ್ಯ ತತ್ವವನ್ನ ಯೋಗವನ್ನ ಚೆನ್ನಾಗಿ ತಿಳಿದುಕೊಂಡು ಇನ್ನಷ್ಟು ಹೆಚ್ಚಿನ ಮೋಕ್ಷ ಸಾಧನೆಯನ್ನ ಮಾಡುವುದಕ್ಕೆ ಆ ಭಗವಂತನ ಪ್ರೀತ್ಯತಿಶೇಯ ಸಾಧನವಾದಂತಹ ತಪಸ್ಸನ್ನು ಮಾಡುವುದಕ್ಕೆ ಅವರೆಲ್ಲ ಹೊರಟಿದ್ದಾರೆ. ಅವರು ಯಾರೂ ಬ್ರಹ್ಮ ದೇವರ ಸೃಷ್ಟಿ ಕಾರ್ಯದಲ್ಲಿ ಸೇವೆ ಮಾಡಲಿಕ್ಕೆ ಬರಲಿಲ್ಲ ವಿರಕ್ತರಾಗಿ ಅವರೆಲ್ಲ ಮಾನಸ ಪುತ್ರರು ಸನಕಾದಿಗಳು ಸಾಧನೆಯನ್ನು ಮಾಡುತ್ತ ಇದ್ದಾರೆ. ಆಮೇಲೆ ಮತ್ತೆ ಪುನಃ ಬ್ರಹ್ಮ ದೇವರು ತಮ್ಮದೇ ಶರೀರದಿಂದ ಹೆಂಡತಿಯನ್ನು ಭಾರ್ಯಾ ಸೃಷ್ಟಿಯನ್ನ ಮಾಡಿಕೊಂಡು ತಾವೇ ಸೃಷ್ಟಿ ಮಾಡಿ ಅವಳಲ್ಲಿ ಪುನಃ ಅಪತ್ಯೋತ್ಪಾದನವನ್ನು ಮಾಡುತ್ತ ಇದ್ದಾರೆ ಅನೇಕ ಪ್ರಜಾಪತಿಗಳ ಸೃಷ್ಟಿಯನ್ನು ಮಾಡಿ, ಅವರ ಮೂಲಕ ಈ ಜಗತ್ತಿನಲ್ಲಿ ಪ್ರಜಾಭಿವೃದ್ಧಿ ಆಗುವಂತೆ ಬ್ರಹ್ಮ ದೇವರು ಮಾಡಿದ್ದಾರೆ. ಆ ಮರೀಚಿ, ಅತ್ರಿ, ಅಂಗಿರಸ, ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠ ಈ ಎಲ್ಲ ಋಷಿಗಳ ಸೃಷ್ಟಿಯನ್ನು ಮಾಡಿದ್ದಾರೆ ಅವರ ಮೂಲಕ ಮತ್ತೆ ಸೃಷ್ಟಿ ಮುಂದುವರೆದಿದೆ. ದಕ್ಷಪ್ರಜಾಪತಿ ಅವನಿಗೆ ಅನೇಕ ಕನ್ಯೆಯರು ಅವರನ್ನೆಲ್ಲಾ ಮರೀಚಿ ಋಷಿಗಳ ಮಕ್ಕಳಾದ ಕಶ್ಯಪರಿಗೆ ತನ್ನ ಹದಿಮೂರು ಜನ ಮಕ್ಕಳನ್ನು ಕೊಟ್ಟು ಮದುವೆ ಮಾಡಿದ್ದಾನೆ ಆಮೇಲೆ ಇಪ್ಪತ್ತೇಳು ಜನರನ್ನ ಚಂದ್ರನಿಗೆ ಕೊಟ್ಟು ಮದುವೆ ಮಾಡಿದ್ದಾನೆ ನಕ್ಷತ್ರಾಭಿಮಾನಿ ದೇವತೆಗಳನ್ನ ಈ ರೀತಿ ಬೇರೆ ಬೇರೆಯವರಿಗೆ ಕೊಟ್ಟು ದಕ್ಷಪ್ರಜಾಪತಿ ಮದುವೆಯನ್ನು ಮಾಡಿದ್ದಾನೆ ಅವರ ಸಂತತಿ ಮುಂದೆ ಬೆಳೆದಿದೆ. ಲಕ್ಷ್ಮೀ, ಕೀರ್ತಿ, ಸಾಧ್ಯ, ವಿಶ್ವಾ, ಮರುತ್ವತೀ ಈ ರೀತಿ ಇವರೆಲ್ಲರನ್ನ ಯಮಧರ್ಮನಿಗೆ ಕೊಟ್ಟು ಮದುವೆ ಮಾಡಿದ್ದಾನೆ ಮಹಾಲಕ್ಷ್ಮೀ ದೇವಿ ಅಲ್ಲ ಲಕ್ಷ್ಮೀ ದೇವಿ ಅಂತ ಹೆಸರನ್ನು ಇಟ್ಟುಕೊಂಡವಳು. ಸುರಭೀ ಅನ್ನುವವಳನ್ನ ಸೃಷ್ಟಿ ಮಾಡಿ ಗೋರೂಪದಿಂದ ಅವಳಲ್ಲಿ ಬ್ರಹ್ಮ ದೇವರು ಈ ಗೋಸಂತತಿ ಹುಟ್ಟುವಂತೆ ಮಾಡಿದ್ದಾರೆ. ಏಕಾದಶ ರುದ್ರರನ್ನೂ ಆ ಸುರಭಿಯಿಂದಲೇ ಸೃಷ್ಟಿ ಮಾಡಿದ್ದಾರೆ ಅಂತ ಬರುತ್ತದೆ ಅವರೆಲ್ಲ ಹುಟ್ಟಿದ ಕೂಡಲೇ ನಮ್ಮ ಹೆಸರು ಏನು, ನಮಗೆ ಸ್ಥಾನ ಏನು, ನಮ್ಮ ಮಡದಿ ಯಾರು, ನಮ್ಮ ಕೆಲಸ ಏನು ಬೇಗನೆ ಹೇಳು ಅಂತ ಅಳಲಿಕ್ಕೆ ಪ್ರಾರಂಭ ಮಾಡಿದ್ದರಿಂದ ಅವರಿಗೆ ರುದ್ರ ಅಂತ ಹೆಸರು ಬಂದಿದೆ.

ರೋದನಾದ್ ರಾವಣಾಚ್ಚೈವ ತತೋ ರುದ್ರಾ ಇತಿ ಸ್ಮೃತಾಃ ॥ (14.39 ಭವಿಷ್ಯಪರ್ವ)

ಹೆಸರು ಏನು ಅಂತ ಅಳುತ್ತಾ ಇದ್ದೀರಲ್ಲ ನೀವು ಅಳುವುದರಿಂದಲೇ ನಿಮ್ಮ ಹೆಸರು ಏನು ಅಂತ ನಿಶ್ಚಿತವಾಗಿಬಿಟ್ಟಿದೆ **'ರೋದನಾದ್ ರುದ್ರಃ'** ಎಂಬುದಾಗಿ ಅವರಿಗೆ ಹೆಸರನ್ನು ಕೊಟ್ಟಿದ್ದಾನೆ. ಪ್ರತ್ಯೇಕ ಹೆಸರುಗಳನ್ನೂ ಕೊಟ್ಟಿದ್ದಾನೆ ನಿರ್ಯತಿ, ಸರ್ಪ, ಅಜೈಕಪಾತ್, ಮೃಗವ್ಯಾಧ, ಪಿನಾಕೀ, ದಹನ, ಈಶ್ವರಥ, ಅಹಿರ್ಬುಧ್ನ್ಯ, ಕಪಾಲೀ, ಅಪರಾಜಿತ, ಸೇನಾನೀ ಅನ್ನುವ ಬೇರೆ ಬೇರೆ ಹೆಸರುಗಳನ್ನು ಆ ಹನ್ನೊಂದು ಜನರಿಗೆ ಕೊಟ್ಟಿದ್ದಾನೆ. ಈ ರೀತಿ ಮತ್ತೆ ಆ ಯಮ ಧರ್ಮನಿಂದ ಲಕ್ಷ್ಮೀ ಅನ್ನುವವಳಲ್ಲಿ ಕಾಮ, ಸಾಧ್ಯ ಅನ್ನುವವಳಲ್ಲಿ ಸಾಧ್ಯರು ಮತ್ತು ಚವನ, ಪ್ರಭವ,

ಈಶಾನ ಇವರೆಲ್ಲ ಆ ಸುರಭಿಯಿಂದ ಹುಟ್ಟಿದ್ದಾರೆ. ಆರುಂಧತಿ, ಆರುಣಿ, ವಿಶ್ವಾವಸು, ಬಲಧ್ರುವ, ಮಹೀಷ, ತನುಜ, ಮತ್ಸರ, ವಿಭೂತಿ ಹೀಗೆ ಸುರಭಿಯಿಂದ ಯಮಧರ್ಮನಲ್ಲಿ ಅನೇಕ ಜನ ಮಕ್ಕಳಾಗಿದ್ದಾರೆ. ಸುಪರ್ವತ, ವಿಷ, ನಾಗ, ಸಾಧ್ಯ ಇವರೆಲ್ಲರನ್ನೂ ಕೂಡ ಮತ್ತೆ ಸುರಭಿ ಪಡೆದಿದ್ದಾಳೆ. ಧರ,ಧ್ರುವ, ವಿಶ್ವಾವಸು, ಸೋಮ, ಪರ್ವತ, ಯೋಗೇಂದ್ರ, ವಾಯು, ನಿರ್ಋತಿ ಎಂಬ ಎಂಟು ಜನ ವಸುಗಳನ್ನೂ ಕೂಡ ಆ ಸುರಭಿಯಲ್ಲಿ ಯಮಧರ್ಮ ಪಡೆದಿದ್ದಾನೆ. ಇನ್ನು ವಿಶ್ವ ಅನ್ನುವ ಹೆಂಡತಿಯಲ್ಲಿ ಯಮಧರ್ಮ ವಿಶ್ವೇ ದೇವತೆಗಳನ್ನು ಪಡೆದಿದ್ದಾನೆ ಈ ರೀತಿ ಅನೇಕ ಜನರನ್ನ ದಕ್ಷಯಜ್ಞ ವಸು, ಸುಧರ್ಮ, ಶಂಖಪಾತ್, ವರ್ಪುಷ್ಮಾನ್, ಅನಂತ, ಮಹೀರಣ, ವಿಶ್ವಾವಸು, ಸುಪರ್ವಾ, ವಿಶ್ವರ, ರುರು ಇವರೆಲ್ಲರನ್ನ ಆ ವಿಶ್ವ ಅನ್ನುವವಳಲ್ಲಿ ಯಮಧರ್ಮ ರಾಜ ಪಡೆದಿದ್ದಾನೆ. ಮರುತ್ವತೀ ಅನ್ನುವವಳು ಅನೇಕ ಮರುತ್ವಾನ್ ನಾಮಕರಾದ ದೇವತೆಗಳನ್ನ ಅಗ್ನಿ, ಚಕ್ಷು, ಹರ್ವಿ, ಜ್ಯೋತಿ, ಸಾವಿತ್ರ, ಮಿತ್ರ, ಅಮರ, ಶರವೃಷ್ಟಿ, ಸಂಕ್ಷಯ, ವಿರಜ, ಶುಕ್ರ, ವಿಶ್ವಾವಸು, ವಿಭಾವಸು, ಅಶ್ಮ, ಚಿತ್ರರಶ್ಮೀ, ನಿಶ್ಕುಪಿತ, ನಹುಷಾ, ಆಹುತಿ, ಚಾರಿತ್ರ, ಬಹುಪನ್ನಗ, ಬೃಹನ್, ಬೃಹದ್ರೂಪ, ಪರತಾಪನ ಇಷ್ಟೆಲ್ಲ ಜನ ಮಕ್ಕಳನ್ನ ಪಡೆದಿದ್ದಾನೆ.

ಅದಿತಿಯಲ್ಲಿ ಕಶ್ಯಪರು ಇಂದ್ರ, ವಿಷ್ಣು, ಭಗ, ತ್ವಷ್ಟಾ, ವರುಣ, ಅಂಶ, ಅರ್ಯಮಾ, ರವಿ, ಪೂಷಾ, ಮಿತ್ರ ವರದ, ಮನುಪರ್ಜನ್ಯ ಎಂಬ ದ್ವಾದಶ ಆದಿತ್ಯರನ್ನು ಪಡೆದಿದ್ದಾರೆ. ಈ ಅಂಶ ಮತ್ತು ಅರ್ಯಮಾ ಅಂತ ಇಬ್ಬರು ಆದಿತ್ಯರ ಹೆಸರನ್ನು ಇಲ್ಲಿ ಕೇಳುತ್ತಾ ಇದ್ದೀರಿ ಅಂಶ ಎಂಬ ಹೆಸರಿನ ಆದಿತ್ಯ ಪ್ರಸಿದ್ಧನೇ ಇಲ್ಲ ಶ್ರೀಮದಾಚಾರ್ಯರು ಬಲರಾಮ ದೇವರಿಗೆ ಇಬ್ಬರು ಮಕ್ಕಳು ಶಠ, ಉಲ್ಮುಕ ಅಂತ ಇವರು ಅರ್ಯಮಾ ಮತ್ತು ಅಂಶ ಎಂಬ ಆದಿತ್ಯರ ಅವತಾರ ಅಂತ ಹೇಳಿದ್ದಾರೆ. ಅಂಶ ಅಂತ ಎಲ್ಲಿಯ ಆದಿತ್ಯ ಇವನು ಅಂತ ಚರ್ಚೆ ಮಾಡುತ್ತಾರೆ ಅಲ್ಲಿ ಟಿಪ್ಪಣಿಕಾರರು ಅಂಶ ಎಂಬ ಹೆಸರಿನ ಆದಿತ್ಯನೂ ಉಂಟು ಅಂತ ಆ ಮಾತನ್ನು ಹರಿವಂಶದಲ್ಲಿ ಕಾಣಬಹುದು. ಆ ಹೆಸರಿನ ಆದಿತ್ಯ ಇದ್ದಾನೆ ಅವನಿಂದ ಆ ಶಠ, ಉಲ್ಮುಕ ಎಂಬಂತಹ ಅರ್ಯಮಾ ಅಂಶ ಎಂಬ ಆದಿತ್ಯರ ಅವತಾರರು ಅಂತ ಶ್ರೀಮದಾಚಾರ್ಯರು ಹೇಳಿದ್ದನ್ನು ನಾವು ಇಲ್ಲಿ ಅನುಸಂಧಾನ ಮಾಡಬಹುದು. ಆಮೇಲೆ ದನುವಿನಲ್ಲಿ ದಾನವರೆಲ್ಲ ದಿತಿಯಲ್ಲಿ ದೈತ್ಯರು, ಕಾಲಾ ಅನ್ನುವವಳಲ್ಲಿ, ಕಾಲಕೇಯರು, ಅಸುರರು, ರಾಕ್ಷಸರು ದನಾಯುಷಾ ಅನ್ನುವವಳಲ್ಲಿ, ಅಧಿವ್ಯಾಧಗಳು ಸಿಂಹಿಕಾ ಅನ್ನುವವಳಲ್ಲಿ, ರಾಹು, ಮುನೀ ಅನ್ನುವವಳಲ್ಲಿ ಗಂಧರ್ವರು, ಪ್ರಭೋಧಾ ಅನ್ನುವವಳಲ್ಲಿ, ಅಪ್ಸರಾ ಸ್ತ್ರೀಯರು ಸುರಸಾ ಅವಳಲ್ಲಿ, ಸರ್ಪಗಳು, ಕ್ರೋಧಾ ಅನ್ನುವವಳಲ್ಲಿ, ಭೂತಾ, ಪಿಶಾಚಾ, ಯಕ್ಷ, ಗುಹ್ಯಕರು ಹಾಗೂ ಆಕಳನ್ನು ಬಿಟ್ಟು ಇನ್ನುಳಿದ ನಾಲ್ಕು ಕಾಲಿನ ಪ್ರಾಣಿಗಳೆಲ್ಲ ಆ ಕ್ರೋಧ ಅನ್ನುವವಳಲ್ಲಿ, ಅರುಣಾ ಹಾಗೂ ಗರುಡ ವಿನತಾ ದೇವಿಯಲ್ಲಿ, ಸರ್ಪ, ನಾಗ ಹಾಗೂ ಪರ್ವತಗಳು ಎಲ್ಲ ಕದ್ರು ದೇವಿಯಲ್ಲಿ ಈ ರೀತಿ ಸೃಷ್ಟಿಯಾಗಿದೆ. ಬ್ರಹ್ಮ ದೇವರು ಹೀಗೆ ತಮ್ಮ ಸಂತತಿಯಿಂದ ಪುನಃ ಜಗತ್ತಿನ ಅಭಿವೃದ್ಧಿಯನ್ನ ಮಾಡಿಸಿದ್ದಾರೆ ಈ ಎಲ್ಲ ಪ್ರಜಾಪತಿಗಳ ಮೂಲಕವಾಗಿ ಅಂತ ತಿಳಿಸಿಕೊಡುತ್ತಾರೆ.

ಮುಂದೆ ಅನೇಕ ಪ್ರಾಚೀನರ ಋಷಿಗಳ ಮುನಿಗಳ ದೇವತೆಗಳ ಚರಿತ್ರೆಯನ್ನು ಕೇಳಿ ಜನಮೇಜಯ ಹೇಳುತ್ತಾನೆ ಇನ್ನಷ್ಟು ಕೇಳಬೇಕು ಅಂತ ನನಗೆ ಅಪೇಕ್ಷೆ ಇದೆ ವಿಸ್ತೃತವಾಗಿ ನನಗೆ ವರ್ಣನೆಯನ್ನು ಮಾಡಿ ಅಂತ ಹೇಳಿದಾಗ ಮತ್ತೆ ವೈಶಂಪಾಯನರು ಆ ಭಗವಂತನ ಮಹಿಮೆಯನ್ನು ಉಪದೇಶ ಮಾಡುತ್ತಾರೆ.

ಸರ್ವತಃಪಾಣಿಪಾದಂ ತಂ ಸರ್ವತೋಽಕ್ಷಿಶಿರೋಮುಖಮ್ ।

ಸರ್ವತಃಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ ॥ (16.6 ಭವಿಷ್ಯಪರ್ವ)

ಭಗವದ್ಗೀತೆಯಲ್ಲಿಯೂ ಈ ಮಾತನ್ನು ಕೃಷ್ಣ ಅರ್ಜುನನಿಗೆ ಉಪದೇಶ ಮಾಡಿದ್ದು ಉಂಟು. ಪರಮಾತ್ಮನ ಸ್ವರೂಪ ಹೇಗಿದೆ ಅಂದರೆ ಅವನ ಎಲ್ಲಾ ಇಂದ್ರಿಯಗಳಲ್ಲಿಯೂ ಎಲ್ಲಾ ಶಕ್ತಿಯೂ ಇದೆ **'ಸರ್ವತಃಪಾಣಿಪಾದಂ ತತ'** ಕೈಯಿಂದ ಮಾಡುವ ಕೆಲಸವನ್ನ ತನ್ನ ಶರೀರದೊಳಗೆ ಯಾವ ಅವಯವದಿಂದಲೂ ಮಾಡಬಹುದು. ಕಾಲಿನಿಂದ ಮಾಡುವ ಕೆಲಸವನ್ನ ಎಲ್ಲಾ ಅವಯವಗಳಿಂದಲೂ ಮಾಡಬಹುದು, ಎಲ್ಲ ಕಡೆಯಿಂದಲೂ ನೋಡಬಹುದು, ಎಲ್ಲಾ ಅವಯವಗಳಿಂದಲೂ ಕೇಳಬಹುದು ಇಂತಹ ಶಕ್ತಿ ಆ ಪರಮಾತ್ಮನಿಗೆ. ಇನ್ನೊಂದು ಅರ್ಥವನ್ನು ಶ್ರೀಮದಾಚಾರ್ಯರು ಹೇಳುತ್ತಾರೆ. **'ಅಣೋರಣುತ ಕೈಃ ರೂಪೈಃ ಪಾಣಿಪಾದಾದಿಸಂಯುತೈಃ'** ಅಂತ ಯಾಕೆ ಪರಮಾತ್ಮ **'ಸರ್ವತಃಪಾಣಿಪಾದ'** ಅಂದರೆ ಎಲ್ಲಾ ಅವಯವಗಳಿಂದಲೂ ಎಲ್ಲಾ ಕಾರ್ಯಗಳನ್ನು ಮಾಡುವ ಶಕ್ತಿ ಪಡೆದಿದ್ದಾನೆ ಅನ್ನುವುದು ಮಾತ್ರ ಅಲ್ಲ ಎಲ್ಲಾ ಅವಯವಗಳು ಎಲ್ಲಾ ಕಡೆಗೆ ಇವೆ ಜಗತ್ತಿನೊಳಗೆ ಅಂತ ಅದು ಹೇಗೆ ಇರುತ್ತದೆ ಅಂತ ಇರಲೇಬೇಕಲ್ಲ ಅನ್ನುತ್ತಾರೆ ಶ್ರೀಮದಾಚಾರ್ಯರು. ಒಂದು ಪರಮಾಣುವಿನಲ್ಲಿಯೂ ಪರಮಾತ್ಮ ಇದ್ದಾನೆ ಹೇಗಿದ್ದಾನೆ ಆ ಪರಮಾಣುವಿನಲ್ಲಿ ಇರುವ ಪರಮಾತ್ಮ ಏನಿಲ್ಲ ನಿರ್ವಯವನಾಗಿ ನಿರಾಕಾರನಾಗಿ ಇದ್ದಾನಾ ಇಲ್ಲ. ಆ ಪರಮಾಣುವಿನಲ್ಲಿ ಇರುವಂತಹ ಪರಮಾತ್ಮನಿಗೂ ಕಣ್ಣು ಕಿವಿ ಮೂಗು ತಲೆ ಕೈ ಬಾಯಿ ಎಲ್ಲಾ ಇದೆ ಹಾಗಾಗಿ ಪರಮಾತ್ಮನ ಕೈ ಕಾಲುಗಳೆಲ್ಲಾ ಎಲ್ಲಿದೆ ಇಲ್ಲಿದೆ, ಈ ಪರಮಾಣುವಿನಲ್ಲಿ ಇದೆ, ಅದರ ಪಕ್ಕದಲ್ಲಿ ಇನ್ನೊಂದು ಪರಮಾಣು ಅಲ್ಲಿಯೂ ಇದೆ. ಇಡೀ ಜಗತ್ತಿನಲ್ಲೆಲ್ಲ ಕಡೆಗೂ ಪರಮಾಣುಗಳು ತುಂಬಿಕೊಂಡಿವೆ ಅಲ್ಲಲ್ಲಿ ಆ ಎಲ್ಲಾ ಪರಮಾಣುಗಳಲ್ಲಿ ಪಾರ್ಥಿವ, ಜಲೀಯ, ತೈಜಸ, ವಾಯುವೀಯ, ಆಕಾಶದ ಅಥವಾ ಭೂತಾಕಾಶದ ಪರಮಾಣುಗಳು ಅಥವಾ ಅವ್ಯಾಕೃತ ಆಕಾಶದ ಅನಂತಾನಂತ ಅಂಶಗಳು ಆ ಎಲ್ಲಾ ಅಂಶಗಳಲ್ಲಿಯೂ ಪರಮಾತ್ಮನ ರೂಪಗಳಿವೆ ಆ ಎಲ್ಲ ರೂಪಗಳಿಗೂ ಎಲ್ಲಾ ಅವಯವಗಳು ಇವೆ. ಈ ರೀತಿ ಪರಮಾತ್ಮನಿಗೆ ಜಗತ್ತಿನಲ್ಲೆಲ್ಲ ಕಂಡ ಕಂಡಲ್ಲೆಲ್ಲ ಪರಮಾತ್ಮನ ಕಣ್ಣು ಕಿವಿ ಮೂಗು ನಾವು ಮಾತನಾಡಿದ್ದು ದೇವರಿಗೆ ಕೇಳಿಸೋದಿಲ್ಲ ಅಂತ ಸಂಶಯವೇ ಬೇಡ, ಆ ಚಿಂತೆಯೇ ಬೇಡ. ನಾವು ತಪ್ಪು ಮಾಡಿದ್ದು ಗೊತ್ತು ಸರಿಯಾಗಿ ಶಿಕ್ಷೆಯನ್ನು ಕೊಡುತ್ತಾನೆ, ನಾವು ಮಾಡಿದ ಪುಣ್ಯಕರ್ಮಗಳನ್ನು ಅವನು ಚೆನ್ನಾಗಿ ನೋಡಿ, ಕೇಳಿ ತಿಳಿದು ಅದಕ್ಕೆ ಪೂರ್ಣವಾದ ಫಲವನ್ನು ಕೊಟ್ಟೆ ಕೊಡುತ್ತಾನೆ ಅನ್ನುವ ಭರವಸೆ ಇರಲಿ ಅಂತ ಈ ಮೂಲಕವಾಗಿ ನಮಗೆ ಶಾಸ್ತ್ರ ತಿಳಿಸಿಕೊಡುತ್ತದೆ. ಎಲ್ಲ ಕಡೆಗೆ ಇದ್ದಾನೆ ಆದರೆ ತೋರುವುದಿಲ್ಲ ಕಟ್ಟಿಗೆಯಲ್ಲಿ ಅಗ್ನಿ ಇರುತ್ತದೆ ಮಥನ ಮಾಡಿದಾಗ ಅಭಿವ್ಯಕ್ತವಾಗುತ್ತದೆ, ಶಾಸ್ತ್ರದಿಂದ ಪರಮಾತ್ಮನನ್ನ ಮಥನ ಮಾಡಿದರೆ ಆ ದೇವರನ್ನು ತಿಳಿಯಬಹುದು. ಆದರೆ ದೇವರ ಅಸ್ತಿತ್ವ ಮಾತ್ರ ಎಲ್ಲ ಕಡೆಗೆ ಇದೆ ಪರಮಾತ್ಮ ನೀರಿನಲ್ಲಿ ತಾನು ಸನ್ನಿಹಿತನಾಗಿ ಇದ್ದಾನೆ ಸಮುದ್ರಶಾಯಿಯಾಗಿ ಇದ್ದಾನೆ ಆದ್ದರಿಂದ ಪರಮಾತ್ಮನನ್ನು ನಾರಾಯಣ ಎಂಬುದಾಗಿ ಕರೆಯುತ್ತಾರೆ. ಆ ಪರಮಾತ್ಮ ಮಾತ್ರ ಸ್ವರಾಟ್ ಸ್ವತಂತ್ರ ಸ್ವಭಾವ ಅಂತ ಕರೆಯುತ್ತಾರೆ ಪರಮಾತ್ಮನನ್ನ ಸ್ವತಂತ್ರವಾದ ಭಾವ ಅಂದರೆ ಪದಾರ್ಥ, ಸ್ವತಂತ್ರ ವಸ್ತು ಆದದ್ದರಿಂದ ಪರಮಾತ್ಮನಿಗೆ ಸ್ವಭಾವ ಅನ್ನುತ್ತಾರೆ ಅಂತಹ ಸ್ವಭಾವನಾಮಕನಾದ ಸ್ವತಂತ್ರನಾದ ಪರಮಾತ್ಮನಿಂದಲೇ ಈ ಎಲ್ಲ ಜಗತ್ತಿನ ಸೃಷ್ಟ್ಯಾದಿಗಳು ಆಗುತ್ತದೆ. ಹಿಂದೆ ದೇವರು ಸೃಷ್ಟಿಯನ್ನು ಮಾಡಿದಾಗ, ನೀರಿನೊಳಗೆ ಭೂಮಿ ಮುಳುಗಿದಾಗ ನನ್ನನ್ನು ಉದ್ಧಾರ ಮಾಡು ಅಂತ ದೇವರಿಗೆ ಶರಣು ಹೋದಾಗ ವರಾಹ ರೂಪವನ್ನು ತೆಗೆದುಕೊಂಡು ಆ ಪರಮಾತ್ಮನೇ ಈ ಭೂಮಿಯನ್ನ ಉದ್ಧಾರ ಮಾಡಿದವ, ಸೃಷ್ಟಿಯನ್ನು ಮಾಡುವುದು ಮಾತ್ರ ಅಲ್ಲ ಮತ್ತೆ ಕಾಲ ಬಂದಾಗ ಆ ಜಗತ್ತಿನ ಸಂಹಾರವನ್ನೂ ಕೂಡ ಆ ಪರಮಾತ್ಮನೇ ಮಾಡುತ್ತಾನೆ ಎಂಬುದಾಗಿ ತಿಳಿಸಿಕೊಡುತ್ತಾರೆ.

ಈ ವರಾಹ ರೂಪಿಯಾದ ಪರಮಾತ್ಮ ಭೂಮಿಯನ್ನು ಉದ್ಧಾರ ಮಾಡಿ, ಹಿರಣ್ಯಾಕ್ಷನ ಸಂಹಾರವನ್ನು ಮಾಡಿ, ಭೂಮಿಯನ್ನು ಉದ್ಧಾರ ಮಾಡಿ ಏನು ನಿಂತನಲ್ಲ ಆ ಪರಮಾತ್ಮನ ಎರಡು ಪಾದಗಳ ಸಂಧಿ ಭಾಗದೊಳಗೇನೆ ಮೇರು ಷರ್ವತದ ಶೃಂಗ ಬರುತ್ತದೆ ಹಾಗೆ ನಿಂತಿದ್ದಾನೆ ಪರಮಾತ್ಮ. ಈ ಕಡೆಗೊಂದು ಆ ಕಡೆಗೊಂದು ಕಾಲು ಮಾಡಿ

ನಿಂತ ಅಂದರೆ ಆ ಪರಮಾತ್ಮನ ಎರಡು ಕಾಲುಗಳ ಮಧ್ಯದಲ್ಲಿ ಪುಟ್ಟ ಒಂದು ವರಾಹ ದೇವರ ಪ್ರತಿಮೆ ಚಿಂತನ ಮಾಡಿ ಆ ಎರಡರ ಮಧ್ಯದಲ್ಲಿ ಇಂತಹ ದೊಡ್ಡ ಮೇರು ಪರ್ವತ ಹೇಗಿರಬಹುದು ಅಂತ ನೋಡಬೇಡಿ. ಆ ಪರಮಾತ್ಮನ ಅದ್ಭುತವಾದ ವಿರಾಟ್ ರೂಪ ಅಂತಹ ದೊಡ್ಡದಾದ ವರಾಹ ರೂಪ, ಎರಡು ಕಾಲನ್ನು ಆಚೆಈಚೆ ಇಟ್ಟರೆ ಮಧ್ಯದಲ್ಲಿ ಮೇರು ಪರ್ವತ. ಒಂದು ಲಕ್ಷ ಒಂದು ನೂರು ಯೋಜನ ಅಷ್ಟು ಎತ್ತರದ ಅದರಲ್ಲಿ 16,000 ಯೋಜನ ಭೂಮಿಯ ಒಳಗೆ ಹೋಗಿದೆ ಅನ್ನುವುದನ್ನ ಭಾಗವತದಲ್ಲಿ ತಿಳಿಸಿದ್ದಾರೆ ಅಂತಹ ಮೇರು ಪರ್ವತ. ಅದಕ್ಕೆ ನಾಲ್ಕರಷ್ಟು ವಿಸ್ತಾರ ಸುತ್ತಲೂ ನಾಲ್ಕು ಶಿಲೆಗಳು, ನೂರು ನೂರು ಯೋಜನದ ವಿಸ್ತೃತವಾದ ಶಿಲೆಗಳು ಇಂತಹ ಆ ಮೇರು ಪರ್ವತದ ಮೇಲೆ ಬ್ರಹ್ಮ ದೇವರ ಸಭೆ, ಉಳಿದೆಲ್ಲ ದಿಕ್ಪಾಲಕರ ಲೋಕಗಳು ಆ ಮಧ್ಯದಲ್ಲಿ ಬ್ರಹ್ಮ ದೇವರು ವಿರಾಜಮಾನರಾಗಿ ಇರುತ್ತಾರೆ ಅಲ್ಲಿ ಪರಮಾತ್ಮ ಅವರಿಂದ ಉಪಾಸ್ಯನಾಗಿ ಇರುತ್ತಾನೆ ಎಂಬುದಾಗಿ ತಿಳಿಸುತ್ತಾರೆ. ಭಗವಂತ, ಭಗವಂತ ಸರ್ವೋತ್ತಮನಾದ ಸರ್ವಜ್ಞನ ಸೋಮ ಅಂತ ಕರೆದಿದ್ದಾರೆ ಪರಮಾತ್ಮನನ್ನ **'ಮಾ'** ಅಂದರೆ ಜ್ಞಾನ ಉತ್ಕೃಷ್ಟವಾದ **'ಮಾ'** ಉಮಾ ಸೋಮ ಸರ್ವಜ್ಞ ಸಿಖಾಮಣಿಯಾದ ಸರ್ವಜ್ಞನಾದಂತಹ ಪರಮಾತ್ಮ ತ್ರಿವಿಕ್ರಮರೂಪಿಯಾದ ಭಗವಂತನ

ವಾಮಪಾದಾಂಗುಷ್ಠ ನಖ ನಿರ್ಭಿನ್ನೋರ್ಧ್ವಾಂಡಕಟಾಹವಿವರೇಣಾ ॥

ವಿವರದಿಂದ ಏನು ಜಲಧಾರಾ ಹರಿದು ಬರುತ್ತದೆ ಆ ಜಲಧಾರೆ ಸಾಕ್ಷಾತ್ ಪರಮಾತ್ಮನ ಪ್ರತಿಮೆ ಅಂತ ಹೇಳುತ್ತದೆ ಹರಿವಂಶ.

ಸೋಮಾತ್ ಸೋಮಃ ಸಮುತ್ಪನ್ನೋ ಧಾರಾಸಲಿಲವಿಗ್ರಹಾತ್ ॥ (17.23 ಭವಿಷ್ಯಪರ್ವ)

ಆ ಧಾರಾತ್ಮಕವಾಗಿ ಏನು ನೀರು ಬರುತ್ತದೋ ಅದೇ ಒಂದು ಪರಮಾತ್ಮನ ವಿಗ್ರಹ ಶರೀರ ಇದ್ದಂತೆ ಜಡವಾದ ಪ್ರತಿಮೆ ಅದರೊಳಗೆ ಸಚ್ಚಿದಾನಂದಾತ್ಮಕವಾದ ಪರಮಾತ್ಮನ ಸನ್ನಿಧಾನ ಇದೆ ಅದರಿಂದ ರುದ್ರ ದೇವರು ತಮ್ಮ ತಲೆಯ ಮೇಲೆ ಅಭಿಷೇಕ ಮಾಡಿಕೊಳ್ಳುತ್ತಾರೆ. **'ಆತ್ಮನಃ ಪಾವನಾರ್ಥಾಯ ಶಿರಸಾ ಧಾರಯಾಮ್ಯಹಮ್'** ಅಂತ ಪದ್ಮಪುರಾಣ ಹೇಳಿದಂತೆ ಆ ಪರಮಾತ್ಮನ ಪಾದೋದಕವನ್ನು ನಾನು ಶಿರಸಾ ಧಾರಣೆ ಮಾಡುತ್ತೇನೆ ನನ್ನ ಪಾವಿತ್ರ್ಯಕ್ಕಾಗಿ ಅಂತ. ಅವರಿಗೆ ಉತ್ತಮವಾದಂತಹ ರುದ್ರ ಪದವಿಯಲ್ಲಿ ಸ್ಥಿರವಾಗಿ ಇರುವಂತೆ ಪರಮ ಪವಿತ್ರರು ಅವರ ನಾಮಸ್ಮರಣೆ ಮಾಡಿದರೆ ನಮಗೆ ಮಂಗಲ.

ಯಚ್ಛೌಚನಿಃಸೃತಸರಿತ್ ಪ್ರವರೋದಕೇನ
ತೀರ್ಥೇನ ಮೂರ್ಧ್ನ್ಯಧಿಧೃತೇನ ಶಿವಃ ಶಿವೋಽಭೂತ್ ॥
ಧ್ಯಾತುರ್ಮನಃಶಮಲಶೈಲನಿಸೃಷ್ಟವಜ್ರಂ
ಧ್ಯಾಯೇಚ್ಚಿರಂ ಭಗವತಶ್ಚರಣಾರವಿಂದಮ್ ॥ (03.29.22 ಭಾಗವತ)

ಆ ರೀತಿ ಅವರಿಗೆ ಪಾವನತ್ವವನ್ನ ಶಿವತ್ವವನ್ನ ಮಂಗಲತ್ವವನ್ನ ಕೊಟ್ಟು ಅವರ ಸ್ಮರಣೆ ಮಾಡುವ ಮಾತ್ರದಿಂದ ಸನಕಾದಿಗಳಿಗೂ ಪರಮಂಗಲವಾಗಬೇಕು ಅಂತಹ ಮಹಾಮಹಿಮೆಯನ್ನು ರುದ್ರ ದೇವರಿಗೆ ಕೊಟ್ಟಿದ್ದಾನೆ ಪರಮಾತ್ಮ. ಅದು ಯಾವಾಗಲೂ ಧೋ ಧೋ ಧೋ ಅಂತ ಶಬ್ದವನ್ನು ಮಾಡುತ್ತದೆ ಆ ಶಬ್ದ ಮಾಡುತ್ತೆ **'ನದಶಬ್ದೇ'** ಅನ್ನುವುದಕ್ಕೊಸ್ಕರ **'ನದಿ'** ಅಂತ ಹೆಸರು ಬಂತು, **'ಗಾಂ ಗತಾ'** ಸ್ವರ್ಗದಲ್ಲಿ ಇದ್ದದ್ದು ಆಮೇಲೆ ಭೂಮಿಗೆ ಬಂತು

'ಸ್ವರ್ಗಂಗಾ ಸ್ವರ್ಗಂಗಚ್ಛತಿ' ಮೊದಲು ಆಮೇಲೆ, ಭೂಮಿಯ ಮೇಲೆ ಹರಿದು ಬಂತು **'ಗಾಂಗತಾ'** ಆಯಿತು. ಆದ್ದರಿಂದ ಅದಕ್ಕೆ ಸ್ವರ್ಗಂಗಾ ಗಂಗಾ ತ್ರಿಪಥಗಾ ಇತ್ಯಾದಿ ಶಬ್ದಗಳಿಂದ ಕರೆಯುತ್ತಾರೆ ಮುಂದೆ ಅನೇಕ ಕಡೆಗೆ ಅದು ಹರಿದು ಬರುತ್ತದೆ ಬೇರೆ ಬೇರೆ ಹೆಸರುಗಳಿಂದ ಈ ರೀತಿ ಆ ಪರಮಾತ್ಮನ ಅದ್ಭುತವಾದಂತಹ ಮಹಿಮೆ ಇದೆ. ಈ ಗಂಗಾದಿ ನದಿಗಳಲ್ಲಿ ಸ್ನಾನವನ್ನು ಪರಮಾತ್ಮನ ಶುದ್ಧವಾದ ಪಾದೋದಕ, ತೀರ್ಥಪಾದ ಅಂತೇ ಪರಮಾತ್ಮನಿಗೆ ಹೆಸರು ಅಂತಹ ಪರಮಾತ್ಮನ ಪಾದದಿಂದ ಬಂದ ಗಂಗಾದಿ ನದಿಗಳಲ್ಲಿ ಸ್ನಾನವನ್ನು ಮಾಡಿದಂತಹ ಈ ಕರ್ಮಭೂಮಿಯಾದ ಭಾರತ ದೇಶದ ಜನರು ತಮ್ಮ ದೇಹವನ್ನೂ ಮನಸ್ಸನ್ನೂ ಪವಿತ್ರಗೊಳಿಸಿಕೊಂಡು ಚಾತುರ್ವರ್ಣ್ಯವನ್ನು ಪರಿಪಾಲನೆ ಮಾಡುತ್ತಾರೆ, ನಾಲ್ಕು ಆಶ್ರಮಗಳ ಧರ್ಮವನ್ನೂ ಪರಿಪಾಲನೆ ಮಾಡುತ್ತಾರೆ ಆ ಆಶ್ರಮ ಧರ್ಮಗಳ ಪರಿಪಾಲನೆಯನ್ನು ಮಾಡುತ್ತಾ ಆ ಪರಮಾತ್ಮನನ್ನ ಉಪಾಸನೆ ಮಾಡುತ್ತಾರೆ.

ಬ್ರಹ್ಮಚರ್ಯೇಣ ವ್ಯಕ್ತೇನ ಗೃಹಸ್ಥೇನ ಚ ಪಾವನೇ ॥ (17.30 ಭವಿಷ್ಯಪರ್ವ)

ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸ ಈ ನಾಲ್ಕೂ ಆಶ್ರಮಗಳಿಂದ ಕೆಲವರು ಸಕಾಮ ಕರ್ಮಗಳನ್ನು ಮಾಡಿ ಸ್ವರ್ಗಾದಿಗಳನ್ನು ಹೊಂದುತ್ತಾರೆ ಆದರೆ ನಿಜವಾದ ಜ್ಞಾನಿಗಳು ಗುರುಗಳ ಉಪದೇಶವನ್ನು ಪಡೆದವರು, ಸಜ್ಜನರ ಉಪದೇಶವನ್ನು ಪಡೆದವರು, ಭಗವದ್ಗೀತೆಯ ಅಧ್ಯಯನವನ್ನು ಮಾಡಿದಂತಹ ಮಹಾನುಭಾವರು **'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ'**[1] ಅನ್ನುವ ನಿಷ್ಕಾಮ ಕರ್ಮ ಯೋಗವನ್ನು ತಿಳಿದವರು ನಿಷ್ಕಾಮವಾದ ಕರ್ಮವನ್ನು ಮಾಡಿ, ಅಪರೋಕ್ಷ ಜ್ಞಾನವನ್ನು ಪಡೆದುಕೊಂಡು ಮೋಕ್ಷವನ್ನು ಹೊಂದುತ್ತಾರೆ. ವಿಶೇಷವಾಗಿ ಬ್ರಹ್ಮಚರ್ಯವನ್ನು ಪರಿಪಾಲನೆ ಮಾಡಬೇಕಾದವರು ಸಿದ್ಧಾಸನವನ್ನು ಮಾಡಬೇಕು ಅಂತ ಹೇಳುತ್ತಾರೆ ತಮ್ಮ ಎರಡೂ ಹಿಂಬಡಗಳಿಂದ ಆ ಪ್ರಶನಗಳನ್ನ ನಿಬಂಧನ ಮಾಡಿ ಸಿದ್ಧಾಸನದಲ್ಲಿ ಕುಳಿತು ಧ್ಯಾನವನ್ನು ಮಾಡಿದರೆ ಉತ್ತಮವಾದ

ಪದ್ಭ್ಯಾಂ ಸಮ್ಪೀಡ್ಯ ವೃಷಣಾವೃಷಿಭಿಸ್ತೈರ್ವಿಚಾರ್ಯತೇ ॥ (17.34 ಭವಿಷ್ಯಪರ್ವ)

ಆ ರೀತಿಯ ಸಿದ್ಧಾಸನದಲ್ಲಿ ಕುಳಿತು ಬ್ರಹ್ಮಚರ್ಯವನ್ನು ಪರಿಪಾಲನೆ ಮಾಡಿ ಉತ್ತಮವಾದಂತಹ ಬ್ರಹ್ಮನ ಜ್ಞಾನವನ್ನು ಪಡೆದುಕೊಳ್ಳುತ್ತಾರೆ ಸಿದ್ಧರು ಮಹಾನುಭಾವರು ಅನೇಕರು. ವೇದಾದಿ ಸಚ್ಛಾಸ್ತ್ರಗಳ ಅಧ್ಯಯನವನ್ನು ಮಾಡುತ್ತಾರೆ ವೇದ ಅಂತ ಹೆಸರು ಬಂದದ್ದೇ ಪರಮಾತ್ಮನ ವೇದನೆಗೆ ಸಾಧನ, ಜ್ಞಾನಕ್ಕೆ ಸಾಧನ ಅದು.

ತೇನ ವೇದತ್ವಮಾಪನ್ನಾ ಯಸ್ಮಾದ್ ವಿನ್ದನ್ತಿ ತತ್ಪದಮ್ ॥ (17.49 ಭವಿಷ್ಯಪರ್ವ)

ಆ ಭಗವಂತನ ಸ್ವರೂಪವನ್ನು ತಿಳಿಸಿಕೊಳ್ಳುವುದಕ್ಕೆ ಸಾಧನವಾದದ್ದರಿಂದ ವೇದ, ಬರೀ ಸ್ವರ್ಗಾದಿಗಳನ್ನು ಪಡೆದುಕೊಳ್ಳುದಕ್ಕಾಗಿ ಅಲ್ಲ ಇದು ಅದು ತಾತ್ಕಾಲಿಕವಾದ ನಶ್ವರವಾದ ಫಲ. ಮುಖ್ಯವಾದ ಫಲ ಇದು ಭಗವಂತನ ಜ್ಞಾನವೇ ವೇದಾದಿ ಸಚ್ಛಾಸ್ತ್ರಗಳ ಅಧ್ಯಯನದ ಮುಖ್ಯವಾದ ಫಲ ಚಾತುರ್ವರ್ಣ್ಯದ ಹಾಗೂ ಚಾತುರಾಶ್ರಮ್ಯದ ಅನುಷ್ಠಾನದ ಫಲವೂ ಕೂಡ ಆ ಭಗವಂತನ ಜ್ಞಾನವೇ. ಅದಕ್ಕಾಗಿ ಹೇಳುತ್ತಾರೆ

ಅನಾದಾನೇನ ಮನಸಾ ರಾಜನ್ ಕರ್ಮಣಿ ಕರ್ಮಣಿ ॥ (17.67 ಭವಿಷ್ಯಪರ್ವ)

ಆದಾನಾದ್ ಬಧ್ಯತೇ ಜನ್ತುರ್ನಿರಾದಾನಾತ್ ಪ್ರಮುಚ್ಯತೇ । (17.68 ಭವಿಷ್ಯಪರ್ವ)

1. 2.47 ಭ ಗೀತಾ

ಫಲಾಪೇಕ್ಷೆಯನ್ನು ಮಾಡಿದರೆ ಬದ್ಧನಾಗುತ್ತಾನೆ, ಫಲಾಪೇಕ್ಷೆಯ ಆದಾನವನ್ನು ಮಾಡದಿದ್ದರೆ ನಿಷ್ಕಾಮ ಕರ್ಮಗಳನ್ನು ಮಾಡಿದರೆ ಅದರಿಂದ ಮುಕ್ತನಾಗುತ್ತಾನೆ ಎಂಬ ತತ್ವವನ್ನು ಇಲ್ಲಿ ವೈಶಂಪಾಯನರು ತಿಳಿಸಿಕೊಡುತ್ತಾರೆ.

ಯಥಾಶಕ್ತಿಯಾಗಿ ನಿಷ್ಕಾಮ ಕರ್ಮಗಳನ್ನು ಮಾಡುವಂತೆ ಪ್ರಯತ್ನ ಮಾಡಬೇಕು ಎಲ್ಲ ಕರ್ಮಗಳನ್ನು ನಿಷ್ಕಾಮವಾಗಿ ಮಾಡಲಿಕ್ಕೆ ಆಗದೆ ಇದ್ದರೂ ಕೊನೆಯ ಪಕ್ಷ ಎಲ್ಲ ಕರ್ಮಗಳನ್ನು ಸಕಾಮವಾಗಿ ಮಾಡುತ್ತೇವೆ ಅನ್ನುವ ದುರಾಗ್ರಹ ಬಿಟ್ಟರೂ ಆಯಿತು. ಕೆಲವಾದರೂ ಕರ್ಮಗಳನ್ನ ಸ್ನಾನ ಸಂಧ್ಯಾವಂದನ ದೇವತಾರ್ಚನೆ ಪಾಠ ಪ್ರವಚನಗಳು ಸಚ್ಛಾಸ್ತ್ರಗಳ ಶ್ರವಣ ಪರೋಪಕಾರ ಇಂತಹ ಕರ್ಮಗಳನ್ನಾದರೂ ನಿಷ್ಕಾಮವಾಗಿ ಕೇವಲ ವಿಷ್ಣು ಪ್ರೀತಿಗಾಗಿ ಮಾಡಬೇಕು. ಇನ್ನೇನೋ ಸಕಾಮ ಕರ್ಮಗಳನ್ನು ಮಾಡುವುದು ಅನಿವಾರ್ಯ ಅಂತಾದರೆ ಮಾಡಬೇಕು ಅಂತ ಶಾಸ್ತ್ರ ವಿಧಾನ ಮಾಡಿಲ್ಲ ಆದರೆ ಮಾಡದೇ ಇರಲಿಕ್ಕೆ ಆಗುವುದೇ ಇಲ್ಲ ನಮ್ಮ ಹಣೆಬರಹಕ್ಕೆ ಅಂದರೆ ಅಷ್ಟನ್ನು ಮಾಡಿದರೆ ಮಾಡಲಿ. ಆದರೆ ಎಲ್ಲಾ ಕಾರ್ಯಗಳನ್ನು ಸಕಾಮವಾಗಿಯೇ ಮಾಡುತ್ತಾ ಕುಳಿತರೆ ಆಗುವ ಹಾನಿ ಏನು ಅಂದರೆ ಮುಂದೆ ಹೋಗುವುದೇ ಇಲ್ಲ ಹಿಂದೆ ಹೋಗುವುದು, ಇದ್ದಲ್ಲಿಯೇ ಇರುವುದು ಮೇಲೆ ಹೋಗುವುದೇ ಇಲ್ಲ, ಉನ್ನತಿಯೇ ಇಲ್ಲ, ಪ್ರಗತಿಯೇ ಇಲ್ಲ ಸಂಸಾರದಲ್ಲಿಯೇ ಇರಬೇಕಾಗುತ್ತದೆ.

ಮುಕ್ತಶ್ಚೇನ್ದ್ರಿಯ ಬನ್ಧೇನ ಪ್ರಾಪ್ತಶ್ಚ ಪರಮಂ ಪದಮ್ ।
ನ ಭೂಯಃ ಪುನರಾಯಾತಿ ಮಾನುಷಂ ದೇಹವಿಗ್ರಹಮ್ ॥ (17.69 ಭವಿಷ್ಯಪರ್ವ)

ಅದಕ್ಕಾಗಿ ಮತ್ತೆ ಈ ಮಾನುಷ್ಯವನ್ನು ಪಡೆಯಬಾರದು ಅಂತಾದರೆ ಈ ಎಲ್ಲ ವಿಧವಾದ ಇಂದ್ರಿಯಗಳ ಆಸಕ್ತಿಯನ್ನು ತೊರೆದು, ನಿಷ್ಕಾಮ ಕರ್ಮಗಳನ್ನು ಮಾಡಿ ಆ ಪರಮಾತ್ಮನನ್ನು ಸಂತೋಷ ಪಡಿಸಬೇಕು ಎಂಬ ತತ್ವವನ್ನು ತಿಳಿಸಿಕೊಡುತ್ತಾ ಇದ್ದಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಭವಿಷ್ಯಪರ್ವ-37

* * *

ಜನಮೇಜಯ ಉವಾಚ

ಉಪಸರ್ಗಂ ಚ ಯೋಗಂ ಚ ಧ್ಯಾತವ್ಯಂ ಚೈವ ಯತ್ಪದಮ್ ।
ನ ಭೂಯಃ ಪುನರಾಯಾತಿ ಮಾನುಷಂ ದೇಹವಿಗ್ರಹಮ್ ।। (18.1 ಭವಿಷ್ಯಪರ್ವ)

ಪರಮಾತ್ಮ ಅನೇಕ ಅವತಾರಗಳನ್ನು ತೆಗೆದುಕೊಂಡು ಯಾವ ರೀತಿ ದೇವತೆಗಳ ಸಜ್ಜನರ ರಕ್ಷಣೆಯನ್ನು ಮಾಡುತ್ತಾನೆ ಅಂತ ಹಿಂದೆ ತಿಳಿಸಿಕೊಟ್ಟಿದ್ದಾರೆ. ವರಾಹ ರೂಪವನ್ನ ಸ್ವೀಕಾರ ಮಾಡಿ ಭೂದೇವಿಯ ಪ್ರಾರ್ಥನೆಯಂತೆ, ದೇವತೆಗಳ ಪ್ರಾರ್ಥನೆಯಂತೆ ಭೂಮಿಯನ್ನು ಉದ್ಧಾರ ಮಾಡಿ, ಹಿರಣ್ಯಾಕ್ಷನನ್ನು ಸಂಹಾರ ಮಾಡಿ, ತನ್ನ ಶರೀರದಿಂದಲೇ ಸಕಲ ಯಜ್ಞದ ಸಂಭಾರಗಳ ಸೃಷ್ಟಿಯನ್ನು ಮಾಡಿ ಯಜ್ಞ ಯಾಗಗಳನ್ನು ಮಾಡುವುದಕ್ಕೆ ಬೇಕಾದಂತಹ ಅಧಿಷ್ಠಾನ, ಅಂತಹ ಶ್ರೇಷ್ಠವಾದ ಭೂಮಿಯೆಂಬ ಅಧಿಷ್ಠಾನವನ್ನೂ ಜೀವರಾಶಿಗಳಿಗೆಲ್ಲ ಕಲ್ಪಿಸಿ ಕೊಟ್ಟಿದ್ದಾನೆ.

ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಂ ।
ವಿವಿಧಾಶ್ಚ ಪೃಥಕ್ಚೇಷ್ಟಾಃ ದೈವಂ ಚೈವಾತ್ರ ಪಂಚಮಂ ।। (18.14 ಭ ಗೀತಾ)

ಕೇವಲ ಭೂಮಿಯೆಂಬ ಅದಿಷ್ಠಾನವನ್ನು ಕಲ್ಪಿಸಿ ಕೊಡುವುದು ಮಾತ್ರ ಅಲ್ಲದೇ ಯಜ್ಞವನ್ನ ಮಾಡುವುದಕ್ಕೆ ಬೇಕಾದ ಇನ್ನುಳಿದ ಸಾಧನ ಸಲಕರಣೆಗಳನ್ನೆಲ್ಲ ಸ್ರುಕ್ಕುವಾದಿಗಳನ್ನ ದರ್ಭಾದಿಗಳನ್ನ ತನ್ನ ಶರೀರದಿಂದಲೇ ಸೃಷ್ಟಿ ಮಾಡಿದ್ದಾನೆ, ಎಲ್ಲ ತರಹದ ಋತ್ವಿಜರನ್ನೂ ತನ್ನ ಶರೀರದಿಂದ ಸೃಷ್ಟಿ ಮಾಡಿದ್ದಾನೆ. ವೇದಗಳು ವೇದಗಳ ಸಂಹಿತೆ ಆ ವೇದಗಳಿದ್ದರೆ ತಾನೇ ಯಜ್ಞವನ್ನು ಮಾಡುವುದಕ್ಕೆ ಸಾಧ್ಯ, ಆ ವೇದಗಳ ಸಂಹಿತೆಗೆ ನಿಯಾಮಕನಾದವನು ಕೂಡ ವರಾಹ ರೂಪಿಯಾದ ಪರಮಾತ್ಮ. ಪದಪಾಠಕ್ಕೆ ವಾಮನ ದೇವರು, ಕ್ರಮಕ್ಕೆ ನರಸಿಂಹ ದೇವರು ಅಂತ ಹೇಳುತ್ತಾರೆ. ಅಂತಹ ವೇದಗಳ ಸಂಹಿತೆಗಳಿಗೆ ನಿಯಾಮಕನಾಗಿ ಮಂತ್ರಗಳನ್ನೂ ನಮಗೆ ಕೊಟ್ಟ, ಯಜ್ಞ ಸಾಧನಗಳನ್ನೂ

ಒದಗಿಸಿದ, ಅಧಿಷ್ಠಾನವನ್ನೂ ಕರುಣಿಸಿದ. ಏನಾದರೂ ಯಜ್ಞ ಮಾಡುವಾಗ ಪ್ರಮಾದ ಆದರೆ ಅದಕ್ಕೆ ಪ್ರಾಯಶ್ಚಿತ್ತವನ್ನು ಮಾಡುವುದಕ್ಕೂ ವ್ಯಾಹರ್ತಿಗಳ ಮೂಲಕ ಆ ವರಾಹ ದೇವರ ಪ್ರಾರ್ಥನೆಯನ್ನೇ ಮಾಡಿ, ಯಜ್ಞದ ಸಮಾಪ್ತಿಯನ್ನು ಮಾಡುವುದಕ್ಕುಂಟು. ಈ ರೀತಿ ಮೊದಲಿನಿಂದ ಕೊನೆಯವರೆಗೆ ಎಲ್ಲವನ್ನೂ ನೀಡಿ ಉತ್ತಮವಾದ ಯಜ್ಞವನ್ನ ವರ ಶ್ರೇಷ್ಠವಾದ ಅಂತಹ ಯಜ್ಞ ಯಾರ ಅನುಗ್ರಹದಿಂದ ಜಗತ್ತಿನಲ್ಲಿ ನಡೆಯುತ್ತೋ ಅಂಥವನು ವರಾಹ ಆ ರೀತಿಯ ವರಾಹ ದೇವರ ಮಹಿಮೆಯನ್ನು ತಿಳಿಸಿಕೊಟ್ಟಿದ್ದಾರೆ.

ಜನಮೇಜಯ ಮತ್ತೆ ಪ್ರಶ್ನೆ ಮಾಡುತ್ತಾನೆ. ಜೀವನದಲ್ಲಿ ಮನುಷ್ಯ ಯೋಗ ಸಾಧನೆಯನ್ನ ಮಾಡೋದೇ ಬಹಳ ಕಷ್ಟ. ಯಮ ಆಸನ, ಪ್ರಾಣಾಯಾಮ, ಪ್ರತ್ಯಾಹಾರ ಧಾರಣ, ಧ್ಯಾನ, ಸಮಾಧಿ ಈ ಎಲ್ಲ ಅಷ್ಟಾಂಗ ಯೋಗದ ಅಭ್ಯಾಸವನ್ನು ಮಾಡುವುದೇ ಬಹಳ ಕಷ್ಟ, ಅಹಿಂಸ ಸತ್ಯ ಅಸ್ತೇಯ ಬ್ರಹ್ಮಚರ್ಯ ಅಪರಿಗ್ರಹ ಇವುಗಳೆಲ್ಲ ಯಮ ಅಂತ ಅನ್ನಿಸಿಕೊಳ್ಳುತ್ತೆ. ಮನಸ್ಸು ಮಾತು ಕೃತಿ ಈ ಮೂರರಿಂದಲೂ ಯಾರಿಗೂ ಹಿಂಸೆಯಾಗದಂತೆ ನೋಡಿಕೊಳ್ಳುವುದು ಅಹಿಂಸ ಇದೊಂದು ಯಮ. ಯಾವುದೇ ದೇಶ ಕಾಲಗಳ ನಿರ್ಬಂಧವಿಲ್ಲದಂತೆ ಎಲ್ಲ ದೇಶದಲ್ಲಿಯೂ, ಎಲ್ಲ ಕಾಲದಲ್ಲಿಯೂ ಮಾಡಬೇಕಾದಂತಹ ಕರ್ತವ್ಯಗಳಿವು. ಇವತ್ತೊಂದು ದಿನ ಅಹಿಂಸೆ, ನಾಳೆಯಿಂದ ಹಿಂಸೆ, ಈ ಊರಲ್ಲಿ ಅಹಿಂಸೆ, ಇನ್ನೊಂದು ಊರಲ್ಲಿ ಹಿಂಸೆ ಹಾಗೆಲ್ಲ ಅಲ್ಲ, ಎಲ್ಲ ದೇಶದಲ್ಲಿಯೂ, ಎಲ್ಲ ಕಾಲದಲ್ಲಿಯೂ ಮಾಡಲೇಬೇಕಾದಂತಹ ಕರ್ತವ್ಯಗಳು ಅಹಿಂಸಾ. ಸತ್ಯವಚನ ಅಸ್ತೇಯ ಯಾರು ಯಾವ ವಸ್ತುವಿಗೆ ಸ್ವಾಮಿಯೋ ನಿಯಾಮಕರೋ ಅವರ ಅನುಜ್ಞೆ ಇಲ್ಲದಂತೆ ಒಂದು ಹುಲ್ಲುಕಡ್ಡಿಯನ್ನು ಎತ್ತಿಕೊಳ್ಳಬಾರದು ಅಂತಹ ಶುದ್ಧವಾದ ಅಸ್ತೇಯ, ಚೌರ್ಯ ಮಾಡದೇ ಇರುವುದು. ಪರಿಗ್ರಹ ಮಾಡಬಾರದು ಅದರಲ್ಲಿಯೂ ಉಗ್ರ ಪ್ರತಿಗ್ರಹ, ಪಾಪಿಗಳಿಂದ ಅಯೋಗ್ಯರಿಂದ ದುರ್ಜನರಿಂದ ಒಂದು ಕಾಸನ್ನೂ ತೆಗೆದುಕೊಳ್ಳುವಂತಿಲ್ಲ, ಒಂದು ಅಗಳನ್ನೂ, ಒಂದು ಹನಿ ನೀರನ್ನೂ ತೆಗೆದುಕೊಳ್ಳುವುದಿಲ್ಲ, ಕಾರಣ ಆ ಪಾಪಿಗಳಿಂದ ನಾವು ಯಾವುದೇ ವಸ್ತುಗಳನ್ನು ತೆಗೆದುಕೊಂಡರೂ ಅವರ ಪಾಪಗಳು ನಮಗೆ ಜೊತೆಗೆ ಬಂದು ಬಿಡುತ್ತವೆ. ಆಮೇಲೆ ಬ್ರಹ್ಮಚರ್ಯ ಉತ್ತಮವಾದಂತಹ ಬ್ರಹ್ಮಚರ್ಯಾಶ್ರಮಕ್ಕೆ ವಿಹಿತವಾದ ಬ್ರಹ್ಮಚರ್ಯ ಇದೆ, ಗೃಹಸ್ಥಾಶ್ರಮಿಗಳಿಗೆ ವಿಹಿತವಾದ, ವಾನಪ್ರಸ್ಥಾಶ್ರಮಗಳಿಗೆ ವಿಹಿತವಾದ, ಸನ್ಯಾಸಿಗಳಿಗೆ ವಿಹಿತವಾದ ಬ್ರಹ್ಮಚರ್ಯವೂ ಉಂಟು ಅವರವರಿಗೆ ವಿಹಿತವಾದಂತಹ ಬ್ರಹ್ಮಚರ್ಯವನ್ನ ಅತ್ಯಂತ ಶ್ರದ್ಧೆಯಿಂದ ಪರಿಪಾಲನೆ ಮಾಡಬೇಕು. ಬ್ರಹ್ಮನಲ್ಲಿಯೇ ಪರಮಾತ್ಮನಲ್ಲಿಯೇ ಎಲ್ಲ ಇಂದ್ರಿಯಗಳು ವಿಶೇಷವಾಗಿ ಪ್ರವಣವಾಗಿರಬೇಕು, ಭಗವಂತನ ಸೇವೆಗಾಗಿ ತೊಡಗಿರಬೇಕು, ಜೀವನಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರ ವಿಷಯಗಳ ಭೋಗವನ್ನು ಮಾಡಬೇಕು. ಇನ್ನುಳಿದ ರೀತಿಯಲ್ಲಿ ಆ ಇಂದ್ರಿಯಗಳೆಲ್ಲ ಪರಮಾತ್ಮನ ಸೇವೆಗಾಗಿ ಮೀಸಲಾಗಿರಬೇಕು ಅದೇ ಬ್ರಹ್ಮಚರ್ಯ. ಇದರಂತೆ ತಪಸ್ಸು ಸ್ವಾಧ್ಯಾಯ ಶೌಚ ತುಷ್ಟಿ ಪರಮಾತ್ಮನ ಪೂಜಾ, ಶಾಸ್ತ್ರೋಕ್ತವಾದ ರೀತಿಯಲ್ಲಿ ಭಗವಂತನ ಪೂಜೆ ಇವುಗಳೆಲ್ಲ ನಿಯಮಗಳು. ವೀರಾಸನ, ಸ್ವಸ್ತಿಕಾಸನ, ಪದ್ಮಾಸನ ಮೊದಲಾದಂತಹ ಭಗವಂತನ ಧ್ಯಾನ ಮಾಡುವುದಕ್ಕೆ, ಚಿಂತನ ಮಾಡುವುದಕ್ಕೆ, ಸ್ವಾಧ್ಯಾಯವನ್ನ ಮಾಡುವುದಕ್ಕೆ, ಪೂಜಾದಿಗಳನ್ನ ಮಾಡುವುದಕ್ಕೆ ಮನಸ್ಸಿನ ಏಕಾಗ್ರತೆ ಯಾವ ತರಹದ ಆಸನದಲ್ಲಿ ಕುಳಿತರೆ ಇವನಿಗೆ ಸಾಧ್ಯವೋ ಅಂತಹ ಯೋಗ್ಯವಾದ ಆಸನಗಳನ್ನು, ಹಿಂದೆ ಕೇಳಿದ್ದೀರಿ, ಸಿದ್ಧಾಸನ ಹೀಗೆ ಅನೇಕ ಆಸನಗಳನ್ನು ಹೇಳಿದ್ದಾರೆ ಆ ಆಸನಗಳ ಜಯ. ಪ್ರಾಣಾಯಾಮ ರೇಚಕ, ಪೂರಕ, ಕುಂಭಕ ಈ ಕ್ರಮದಲ್ಲಿ ಪ್ರಾಣಾಯಾಮವನ್ನು ಮಾಡುವುದು, ಆಮೇಲೆ ಧಾರಣ ಪರಮಾತ್ಮನ ಒಂದೊಂದೇ ಅವಯವಗಳ ಧ್ಯಾನವನ್ನು ಮಾಡುತ್ತಾ ಹೋಗುವುದು.

ಏಕೈಕಶೋಽಂಗಾನಿ ಧಿಯಾಽನುಭಾವಯೇತ್ ಪಾದಾದಿ ಯಾವದ್ ಹಸಿತಂ ಗದಾಭೃತಃ ।
ಜಿತಂಜಿತಂ ಸ್ಥಾನಮಪೋಹ್ಯ ಧಾರಯೇತ್ ಪರಂಪರಂ ಶುಧ್ಯತಿ ಧೀರ್ಯಥಾಯಥಾ ॥

(02.2.14 ಭಾಗವತ)

ಒಂದೊಂದೇ ಒಂದೊಂದೇ ಅವಯವಗಳನ್ನ, ಪರಮಾತ್ಮನ ಪಾದವನ್ನೇ ಮೊದಲು ಚಿಂತನ ಮಾಡಬೇಕು. ಆ ಭಗವಂತನ ಪಾದ **'ಯಚ್ಛೌಚನಿಃಸೃತಸರಿತ್ ಪ್ರವರೋದಕೇನ'**[1] ಇದೇ ಪಾದದಿಂದ ಹರಿದು ಬಂದ ಗಂಗೆಯನ್ನ ರುದ್ರ ದೇವರು ಶಿರಸಾಧಾರಣೆ ಮಾಡಿದರು ಅಂತ ಇಡೀ ಜಗತ್ತನ್ನೇ ಪವಿತ್ರಗೊಳಿಸಿತು ಗಂಗೆ. ಅಂತಹ ಗಂಗಾಜನಕವಾದ ಪಾದ ಅಂತ ಆ ಪಾದದ ಚಿಂತನ. ಅನಂತ ಸೂರ್ಯರ ಪ್ರಕಾಶ ಇರುವಂತಹ ಪಾದ, ಧ್ವಜ ವಜ್ರ ಅಂಕುಶ ಪದ್ಮಗಳ ಚಿಹ್ನದಿಂದ ಕೂಡಿದ ಪಾದ ಅಂತ ಹೀಗೆ ಪಾದವನ್ನೇ ಯಥಾಶಕ್ತಿ ಚಿಂತನ ಮಾಡುವುದಕ್ಕೆ ಪ್ರಯತ್ನ ಮಾಡಿ. ಆ ಪಾದ ಧ್ಯಾನ ಮಾಡಲಿಕ್ಕೆ ಆದಮೇಲೆ ಅದರ ಮೇಲೆ ಮೊಳಕಾಲು, ತೊಡೆ, ಕಟಿ ಪ್ರದೇಶ, ಉದರ, ವಕ್ಷಸ್ಥಲ, ಮುಖ, ಶಿರಸ್ಸು ಹೀಗೆ ಒಂದೊಂದೇ ಅಯವಯವನ್ನು ಧ್ಯಾನ ಮಾಡುವುದಕ್ಕೆ ರೂಢಿ ಮಾಡಿಕೊಂಡು ಸಮಗ್ರವಾದ ಅವಯವಗಳ ಚಿಂತನ ಮಾಡಿದರೆ ಅದು ಧ್ಯಾನ, ಒಂದೊಂದು ಅವಯವಗಳ ಚಿಂತನವನ್ನು ಮಾಡಿದರೆ ಅದು ಧಾರಣ ಹೀಗೆ ಧಾರಣ ಧ್ಯಾನ. ಆಮೇಲೆ ಪ್ರಯತ್ನಪೂರ್ವಕವಾಗಿ ಏಕಾಗ್ರ ಮನಸ್ಸಿನಿಂದ ನಿರಂತರವಾಗಿ ಧ್ಯಾನ ಮಾಡುತ್ತಾ ಇದ್ದರೆ ಅದು ಬರೀ ಧ್ಯಾನ ಅಂತ ಅನಿಸುತ್ತದೆ, ಪ್ರಯತ್ನ ಇಲ್ಲದೆ ಅನಾಯಾಸವಾಗಿ ಭಗವಂತನ ಧ್ಯಾನವನ್ನು ಮಾಡುವಂತಹ ಒಂದು ಯೋಗವನ್ನು ನಾವು ಪಡೆದುಕೊಂಡರೆ ಅದು ಸಮಾಧಿ. ಈ ರೀತಿಯ ಸಮಾಧ್ಯವಸ್ಥೆಯಲ್ಲಿ ಎಷ್ಟೋ ದಿನಗಳವರೆಗೆ ನಿರಂತರವಾಗಿ ಪ್ರಯತ್ನ ಮಾಡಿದಾಗ ಆ ಧ್ಯಾನ ಇದು ಪಕ್ವವಾದ ಅವಸ್ಥೆಯನ್ನು ಪಡೆದರೆ ಆನಂತರದಲ್ಲಿ ಆ ಧ್ಯಾನದಿಂದ ನಮಗೆ ಪರಿಪಕ್ವವಾದ ಭಕ್ತಿ ಬರುತ್ತದೆ, ಆ ಪರಿಪಕ್ವ ಭಕ್ತಿಯಿಂದ ಭಗವಂತನ ಅಪರೋಕ್ಷ ಜ್ಞಾನವಾಗುತ್ತದೆ, ಅಪರೋಕ್ಷ ಜ್ಞಾನವಾದ ಮೇಲೆ ಅಸಂಪ್ರಜ್ಞಾತ ಸಮಾಧಿ. ಬಾಹ್ಯವಾದಂತಹ ಪದಾರ್ಥಗಳ ಯಾವ ಪರಿವೆಯೇ ಇಲ್ಲದಂತೆ ಪರಮಾತ್ಮನಲ್ಲಿಯೇ ಆಸಕ್ತನಾಗಿ ಭಗವಂತನ ದರ್ಶನ, ಆ ಭಗವಂತನ ಜೊತೆಗೆ ಸಂಭಾಷಣಾದಿಗಳನ್ನು ಮಾಡುತ್ತ ಏಕಾಗ್ರ ಮನಸ್ಸಿನಿಂದ ನಾವು ಭಗವಂತನಲ್ಲಿ ತಲ್ಲೀನರಾದರೆ ಅದು ಅಸಂಪ್ರಜ್ಞಾತ ಸಮಾಧಿ. ಆಮೇಲೆ ಮುಂದೆ ಪ್ರಾರಬ್ಧ ಕರ್ಮಗಳ ಭೋಗ ಎಲ್ಲ ಆದಮೇಲೆ ಅತಿಪರಿಪಕ್ವ ಭಕ್ತಿ, ಅದರಿಂದ ಪರಮಾತ್ಮನ ಅತ್ಯರ್ಥ ಪ್ರಸಾದ, ಅದರಿಂದ ಮೋಕ್ಷವಾಗುತ್ತದೆ ಅಂತ ಈ ರೀತಿಯಾಗಿ ಈ ಕ್ರಮ ಇದೆ.

ಶ್ರೀಮದ್ಭಾಗವತ ಒಂದು ಮಾತನ್ನು ಹೇಳುತ್ತದೆ. ಇದರಲ್ಲಿ ಕೇವಲ ಪ್ರಾಣಾಯಾಮಾದಿಗಳನ್ನು ಮಾಡಿ ಯೋಗ ಮಾರ್ಗದಿಂದಲೇ ಆ ಪರಮಾತ್ಮನ ದರ್ಶನವನ್ನ ಪಡೆದು ಮೋಕ್ಷವನ್ನು ಹೊಂದುವುದಕ್ಕೆ ಸಾಧ್ಯ ಇದೆ. ಎಷ್ಟು ಬೇಕೋ ಅಷ್ಟು ಯೋಗವನ್ನು ಮಾಡಿ ವಿಶೇಷವಾಗಿ ಭಕ್ತಿಯನ್ನು ಮಾಡಿಯೂ ಪರಮಾತ್ಮನ ದರ್ಶನವನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯ ಇದೆ. ಈ ಎರಡು ಮಾರ್ಗಗಳಲ್ಲಿ ಕೇವಲ ಯೋಗ ಮಾರ್ಗದಿಂದ ಹೋದರೆ ಬಹಳ ಶ್ರಮ, ಭಾರೀ ಕಷ್ಟ ಆದರೆ ಒಂದೇ ಒಂದು ಲಾಭ ಶೀಘ್ರದಲ್ಲಿ ಅಪರೋಕ್ಷ ಜ್ಞಾನವಾಗಿ ಮೋಕ್ಷವಾಗುತ್ತದೆ, ಕಷ್ಟ ಮಾತ್ರ ಬಹಳ, ಶ್ರಮ ಬಹಳ ಆದರೆ ಶೀಘ್ರದಲ್ಲಿ ಆಗುತ್ತದೆ ಅನ್ನುವುದು ಒಂದು. ಭಕ್ತಿ ಮಾರ್ಗದಲ್ಲಿ ಹೋದರೆ ಸ್ವಲ್ಪ ನಿಧಾನ ಆದರೆ ಶ್ರಮ ಇಲ್ಲ, ಮಾರ್ಗದಲ್ಲಿಯೂ ಸೌಕರ್ಯ, ಆಯಾಸ ಇಲ್ಲ ಸ್ವಲ್ಪ ವಿಲಂಬವಾಗುತ್ತೆ ಆದರೆ ಸುಖದಲ್ಲೇನು ಕಡಿಮೆಯಾಗುವುದಿಲ್ಲ ಸುಖ ವಿಶೇಷವಾಗಿ ಆಗುತ್ತೆ. ಸುಖ ಬೇಗ ಸಿಗುತ್ತೆ ಯೋಗ ಮಾರ್ಗದಲ್ಲಿ ಸ್ವಲ್ಪ ಕಡಿಮೆ,

1. 03.29.22 ಭಾಗವತ

ನಿಧಾನವಾಗಿ ಸಿಗುತ್ತೆ ಆದರೆ ಬಹಳ ಸುಖ ಸಿಗುತ್ತದೆ ಭಕ್ತಿ ಯಾವುದೇ ಆಯಾಸವೂ ಇಲ್ಲ ಮಾರ್ಗದಲ್ಲಿ ಅಂತ ಆದರೆ ಆ ಮಾರ್ಗದಲ್ಲಿ ಶ್ರಮ ಉಂಟು, ಭಕ್ತಿ ಮಾರ್ಗದಲ್ಲಿ ಶ್ರಮ ಇಲ್ಲ ಎಂಬ ಮಾತನ್ನು ತಿಳಿಸುತ್ತಾರೆ.

ಪಾನೇನ ತೇ ದೇವ ಕಥಾಸುಧಾಯಾಃ ಪ್ರವೃದ್ಧಭಕ್ತ್ಯಾ ವಿಶದಾಶಯಾ ಯೇ ।
ವೈರಾಗ್ಯಸಾರಂ ಪ್ರತಿಲಭ್ಯ ಬೋಧಂ ಯಥಾಽಂಜಸಾ ತ್ವೇಯುರಕುಂಠಧಿಷ್ಣ್ಯಮ್ ॥ (03.6.24 ಭಾಗವತ)

ತಥಾಽಪರೇ ತ್ವಾತ್ಮಸಮಾಧಿಯೋಗ ಬಲೇನ ಜಿತ್ವಾ ಪ್ರಕೃತಿಂ ಬಲಿಷ್ಠಾಮ್ ।
ತ್ವಾಮೇವ ಧೀರಾಃ ಪುರುಷಂ ವಿಶಂತಿ ತೇಷಾಂ ಶ್ರಮಃ ಸ್ಯಾನ್ನ ತು ಸೇವಯಾ ತೇ ॥ (03.6.25 ಭಾಗವತ)

ಇಂತಹ ಆ ಯೋಗ ಮಾರ್ಗಕ್ಕೂ ಕೂಡ ಎಷ್ಟೋ ಸಂದರ್ಭಗಳಲ್ಲಿ ಉಪಸರ್ಗಗಳು ನಾನಾ ರೀತಿಯ ವಿಘ್ನಗಳು ಬರುವುದು ಉಂಟು ಯಾಕೆ ಅಂದರೆ ಕೊಡಬೇಕಾದ ಫಲ ಬಹಳ ದೊಡ್ಡ ಫಲವನ್ನು ದೇವರು ಕೊಡಬೇಕು ಅಂತ ಸಂಕಲ್ಪ ಮಾಡಿದ್ದಾನೆ. ಅನಂತಕಾಲದ ಸುಖ ಆ ಮೋಕ್ಷ ಅಂದರೆ ಏನು ಸಣ್ಣ ಫಲ ಅಲ್ಲ ಅದು ಅಂತಹ ಫಲವನ್ನು ಕೊಡುತ್ತಾನೆ ಅಂದಮೇಲೆ ಸಾಕಷ್ಟು ಪರೀಕ್ಷೆಯನ್ನು ಮಾಡುತ್ತಾನೆ. ಆ ಪರೀಕ್ಷೆಯಲ್ಲಿ ನಾವು ಉತ್ತೀರ್ಣರಾಗಿ ಎಷ್ಟೇ ವಿಘ್ನಗಳನ್ನ ದೇವರು ತಂದು ತೋರಿಸಿದರೂ ಆ ಪರಮಾತ್ಮನ ಅನುಗ್ರಹದಿಂದಲೇ ವಾಯು ದೇವರ ಗುರುಗಳ ಅನುಗ್ರಹದಿಂದಲೇ ಆ ವಿಘ್ನಗಳನ್ನ ನಾವು ಪರಿಹರಿಸಿಕೊಂಡು ಅತ್ಯಂತ ಶ್ರದ್ಧೆಯಿಂದ ಹಠದಿಂದ ಆ ಯೋಗವನ್ನು ಮಾಡಿದರೆ ಆಗ ಪರಮಾತ್ಮ ಅನುಗ್ರಹವನ್ನು ಮಾಡುತ್ತಾನೆ. ಯೋಗದಲ್ಲಿ ಆಸಕ್ತರಾಗಿರುವಂತಹ ಯೋಗಿಗಳಿಗೆ ಕೆಲವು ಸಂದರ್ಭಗಳಲ್ಲಿ ಹೊಗೆ ಧೂಮ ಕಾಣಿಸುತ್ತದೆ ಕಣ್ಣೆದುರಿನಲ್ಲಿ, ಬೇರೆ ಬೇರೆ ಬಣ್ಣದ ಹೊಗೆ ಕೆಂಪು ನೀಲಿ ವೈಢೂರ್ಯದ, ಪದ್ಮದ ಬಣ್ಣ, ಪಾರಿವಾಳದ ಬಣ್ಣ ಹೀಗೆ ವಿವಿಧ ವಿಚಿತ್ರವಾದ ಕಾಮನಬಿಲ್ಲಿನಂತೆ ನಾನಾ ತರಹದ ಬಣ್ಣ ಬಣ್ಣದ ಹೊಗೆ ಬಂದಂತೆ ಅವನಿಗೆ ಭಾಸವಾಗುತ್ತದೆ. ಆಮೇಲೆ ಆ ಹೊಗೆಗಳಿಂದಲೇ ಮೇಘ ನಿರ್ಮಾಣವಾದ ಹಾಗೆ ಅನ್ನಿಸುತ್ತದೆ, ಮಳೆ ಸುರಿದ ಹಾಗೆ ಆಗುತ್ತದೆ, ಇದ್ದಕ್ಕಿದ್ದಂತೆ ಅವನ ದೇಹದಲ್ಲಿ ಒಂದು ವಿಲಕ್ಷಣವಾದ ತೇಜಸ್ಸಿನ ಸಂಚಾರವಾಗುತ್ತದೆ, ದೇಹದಲ್ಲಿ ಭಾರೀ ಶಾಖ ಉತ್ಪನ್ನವಾಗಿ ಮೈಯಿಂದ ಹೊರಗೆ ಕಿಡಿಗಳು ಹಾರಿದಂತೆ ಆಗುತ್ತದೆ.

ವಿಸಸ್ರುಃ ಸರ್ವಗಾತ್ರೇಭ್ಯೋ ಜ್ವಲನ್ನಿವ ಯುಗಾಗ್ನಯಃ ॥ (18.12 ಭವಿಷ್ಯಪರ್ವ)

ಅಗ್ನಿಯ ಕಿಡಿಗಳು ಹಾರಿದಂತೆ ಅವನಿಗೆ ತೋರುತ್ತದೆ. ಏನು ಅವನಿಗೆ ಧಾರಾಕಾರವಾಗಿ ಮೇಘಗಳಿಂದ ಮಳೆ ಬಂದಂತೆ ಮೊದಲು ತೋರುತ್ತಾ ಇತ್ತೋ ಅಷ್ಟೇ ವಿಪರೀತವಾಗಿ ಅಗ್ನಿಗಳು ಕಿಡಿಗಳು ಇವನಿಂದ ಹೊರಗೆ ಬಂದಂತೆ ತೋರುತ್ತದೆ. ಆಮೇಲೆ ಭಾರೀ ಗಾಳಿ ವಾಯು ಸಂಚಾರ ಇವನಲ್ಲಿ ಆಗುತ್ತದೆ, ವಿಚಿತ್ರವಾದಂತಹ ಧ್ವನಿ ಆ ವಾಯುವಿನಿಂದ ಇವನಿಗೆ ಬರುತ್ತದೆ ಹೀಗೆಲ್ಲ ಆಗುತ್ತಾ ಆಗುತ್ತಾ ಕೊನೆಗೆ ಭಗವಂತನ ದರ್ಶನವನ್ನು ಪಡೆದುಕೊಳ್ಳುತ್ತಾನೆ. ನಾನಾ ರೂಪದಿಂದ ಅವನವನ ಯೋಗ್ಯತೆಗೆ ತಕ್ಕಂತೆ ಅವನ ಗುರುಗಳು ಅವನಿಗೆ ಯಾವ ರೂಪದ ಉಪದೇಶವನ್ನು ಮಾಡಿರುತ್ತಾರೋ ಆ ರೂಪದ ಧ್ಯಾನವನ್ನು ಮಾಡಿರುತ್ತಾನೆ. ಆ ರೂಪದ ಧ್ಯಾನವನ್ನು ಮಾಡಿದ್ದಕ್ಕೆ ತಕ್ಕಂತೆ ಆ ರೂಪದ ದರ್ಶನವನ್ನು ದೇವರು ಅವನಿಗೆ ಮಾಡಿಸಿ ಅನುಗ್ರಹವನ್ನು ಮಾಡುತ್ತಾನೆ ಅಂತಹ ಪರಮಾತ್ಮನ ದರ್ಶನದಿಂದ ಅವನು ಪೂರ್ಣವಾಗಿ ಸಂತೃಪ್ತನಾಗುತ್ತಾನೆ ಅಂತ ತಿಳಿಸಿಕೊಡುತ್ತಾರೆ. ಆದರೆ ಈ ತರಹದ ಯೋಗ ಮಾರ್ಗದಲ್ಲಿ ಹೋಗಿ ಅಪರೋಕ್ಷ ಜ್ಞಾನವನ್ನು ಪಡೆದುಕೊಳ್ಳಬೇಕು ಅಂತ ಅಪೇಕ್ಷೆ ಇದ್ದ ವ್ಯಕ್ತಿ ಮಾತ್ರ ಸಕಾಮ ಕರ್ಮಗಳನ್ನು ಮಾಡಬಾರದು, ನಿಷ್ಕಾಮ ಕರ್ಮಗಳನ್ನು ಮಾಡುತ್ತಾ ಇದ್ದ ಅಂದರೆ ಅದು ಹಾಗೆ

ನಿರ್ವಿಘ್ನವಾಗಿ ಮೋಕ್ಷದವರೆಗೆ ಅವನನ್ನು ಕರೆದುಕೊಂಡು ಹೋಗುತ್ತದೆ. ಸಕಾಮ ಕರ್ಮ ಮಾಡಿದ ಅಂದರೆ ಅದೇ ಉಪಸರ್ಗಗಳು ವಿಘ್ನಗಳು ಬಂದಂತೆ ಮತ್ತೆ ವಿಲಂಬ, ಯಾವ ಕಾಮನೆಯಿಂದ ಅವನು ಕರ್ಮ ಮಾಡಿರುತ್ತಾನೋ ಆ ಕಾಮನೆಗೆ ತಕ್ಕಂತೆ ಫಲವನ್ನು ಅನುಭವಿಸಬೇಕು ಅಂದರೆ ಮತ್ತೆ ಸಂಸಾರದಲ್ಲಿಯೇ ಇರಬೇಕು ಅವನು ಸಕಾಲ ಕರ್ಮದ ಫಲವನ್ನ ಮೋಕ್ಷದಲ್ಲಿ ಏನು ಅನುಭವಿಸುವ ಹಾಗಿಲ್ಲ. ನಿಷ್ಕಾಮ ಕರ್ಮವನ್ನು ಅಪರೋಕ್ಷ ಜ್ಞಾನವಾಗುವಗಿಂತಲೂ ಮೊದಲು ಮಾಡಿದ್ದರೆ ಅದರ ಫಲವಾಗಿ ಅಪರೋಕ್ಷ ಜ್ಞಾನವನ್ನು ಪಡೆಯುತ್ತಾನೆ. ಅಪರೋಕ್ಷ ಜ್ಞಾನವಾದ ಮೇಲೆ ಮತ್ತೆ ನಿಷ್ಕಾಮ ಕರ್ಮ ಮಾಡಿದರೆ ಮೋಕ್ಷದಲ್ಲಿ ವಿಶೇಷವಾದ ಆನಂದದ ಅಭಿವೃದ್ಧಿವನ್ನು ಹೊಂದುತ್ತಾನೆ ಆದರೆ ಸಕಾಮ ಕರ್ಮ ಮಾಡಿದರೆ ಮಾತ್ರ ಮತ್ತೆ ಸಂಸಾರದಲ್ಲಿಯೇ ಇರಬೇಕಾಗುತ್ತದೆ.

ಧೂಮೋ ರಾತ್ರಿಸ್ತಥಾ ಕೃಷ್ಣಃ ಷಣ್ಮಾಸಾ ದಕ್ಷಿಣಾಯನಮ್ ।
ತತ್ರ ಚಾಂದ್ರಮಸಂ ಜ್ಯೋತಿಃ ಯೋಗೀ ಪ್ರಾಪ್ಯ ನಿವರ್ತತೇ ॥ (8.25 ಭ ಗೀತಾ)

ಪುನಃ ಧೂಮಾದಿ ಮಾರ್ಗದಿಂದ ಅವನು ಈ ಸಂಸಾರದಲ್ಲಿಯೇ ಹುಟ್ಟಿ ಬರುತ್ತಾನೆ. ನಿಷ್ಕಾಮ ಕರ್ಮವನ್ನು ಮಾಡಿದ ಅಂತಾದರೆ ಉತ್ತರಾಯಣ ಮಾರ್ಗದಿಂದ ಬ್ರಹ್ಮ ಪ್ರಾಪ್ತಿಯನ್ನು ಪಡೆಯುವುದಕ್ಕೆ ಸಾಧ್ಯ ಇದೆ ಎಂಬುದಾಗಿ ತಿಳಿಸುತ್ತಾರೆ. ಈ ರೀತಿ ಈ ಸಕಾಮ ಕರ್ಮದ ವಿಘ್ನ ಇವನಿಗೆ ಬರುತ್ತದೆ ಅದರಿಂದ ತಪ್ಪಿಸಿಕೊಳ್ಳಬೇಕು.

ಹಿಂದೆ ತಿಳಿದಂತೆ ದೇವತೆಗಳ ಮಾನದಿಂದ 12,000 ವರ್ಷ ಅಂದರೆ ಒಂದು ಮಹಾಯುಗ ಆಗುತ್ತದೆ. ಆ ರೀತಿ 1,000 ಯುಗಗಳು ಕಳೆದರೆ ಆಗ ಬ್ರಹ್ಮ ದೇವರ ಒಂದು ಹಗಲು, ಅಷ್ಟೇ ರಾತ್ರಿ ಆ ಹಗಲಿನಲ್ಲಿ ಸೃಷ್ಟಿ, ರಾತ್ರಿಯಲ್ಲಿ ಪ್ರಳಯ ಆ ಸಂಪೂರ್ಣವಾಗಿರುವಂತಹ ಪ್ರಲಯವಾದ ಮೇಲೆ ಮಹಾಪ್ರಲಯ ಕಾಲದಲ್ಲಿ ಬ್ರಹ್ಮ ದೇವರ ಜೊತೆಗೆ ಇವನಿಗೆ ಮೋಕ್ಷವಾಗುತ್ತದೆ. ಒಂದು ದಿನ ಕಳೆದ ಕೂಡಲೇ ಅಲ್ಲ ಸಂಪೂರ್ಣ ಬ್ರಹ್ಮ ದೇವರ ಒಂದು ನೂರು ವರ್ಷದ ಆಯುಷ್ಯ ಸಂಪೂರ್ಣ ಮುಗಿಯಬೇಕು ಅಷ್ಟೊತ್ತಿಗೆ ಯಾರ ಸಾಧನೆ ಸಂಪೂರ್ಣವಾಗಿದೆ ಅವರೆಲ್ಲರೂ ಕೂಡ ಬ್ರಹ್ಮ ದೇವರ ಜೊತೆಗೆ ವಿರಜಾ ನದಿ ಸ್ನಾನದಿಂದ ಲಿಂಗ ಭಂಗವನ್ನು ಮಾಡಿಕೊಂಡು ಮೋಕ್ಷವನ್ನು ಹೊಂದುತ್ತಾರೆ ಎಂಬುದಾಗಿ ತಿಳಿಸಿಕೊಡುತ್ತಾರೆ. ಬ್ರಹ್ಮ ದೇವರು ಯೋಗಿಗಳಿಗೆಲ್ಲ ಮಾರ್ಗದರ್ಶಕರು ಮಹಾಯೋಗಿಗಳು ಅವರು ಮಹಾಭಕ್ತರು ಹೌದು, ಮಹಾಯೋಗಿಗಳು ಹೌದು ಅವರ ಉಪದೇಶದಂತೆ ಅವರು ಪ್ರವರ್ತನೆ ಮಾಡಿದಂತಹ ಈ ಯೋಗ ಮಾರ್ಗದಲ್ಲಿ ಯೋಗಿಗಳೆಲ್ಲ ಯಥಾಶಕ್ತಿ ಯೋಗ ಸಾಧನೆಯನ್ನು ಮಾಡುತ್ತಾರೆ. ಆಕಾಶದಲ್ಲಿ ವ್ಯಾಪ್ತನಾದ ಪರಮಾತ್ಮನ ಚಿಂತನವನ್ನು ಮಾಡಿದರೆ ಆಕಾಶದಲ್ಲಿ ಯಥೇಚ್ಛವಾಗಿ ತಮ್ಮ ಬುದ್ಧಿಗೆ ಇಚ್ಛೆಗೆ ಅನುಗುಣವಾಗಿ ಅವರು ವಿಹಾರ ಮಾಡುವ ಶಕ್ತಿ ಬರುತ್ತದೆ. ವಾಯು ತತ್ವದಲ್ಲಿ ಭಗವಂತ ಅಂತರ್ಯಾಮಿಯಾಗಿದ್ದಾನೆ ನಿಯಾಮಕನಾಗಿದ್ದಾನೆ ಅಂತ ಉಪಾಸನೆ ಮಾಡಿ ಆ ಪರಮಾತ್ಮನ ಸಾಕ್ಷಾತ್ಕಾರವನ್ನು ಮಾಡಿಕೊಂಡವರಿಗೆ ಯಥೇಚ್ಛವಾಗಿ ವಾಯುವಿನಂತೆ, ವಾಯುವಿನ ಜೊತೆಗೆ ಎಲ್ಲ ಕಡೆಗೆ ಸಂಚಾರ ಮಾಡುವಂತಹ ಶಕ್ತಿ ಬರುತ್ತದೆ ಯಾವ ಆಶ್ರಯ ಅವರಿಗೆ ಬೇಕಾಗಿಲ್ಲ.

ನಿರಾಲಮ್ಬೋ ನಿರಾಲಮ್ಬಾನ್ನಾಲಮ್ಬ್ಯ ಮನಸಾ ತತಃ ॥ (19.12 ಭವಿಷ್ಯಪರ್ವ)

ಯಾವ ಆಲಂಬನ ಇಲ್ಲದೇ ಆಶ್ರಯ ಇಲ್ಲದೇ ಆಕಾಶದಲ್ಲಿ ಪಕ್ಷಿಗಳಂತೆ ಅವರು ಎಲ್ಲಿ ಬೇಕಲ್ಲಿ ಅವರು ಹೋಗಬಹುದು ಎಷ್ಟು ದೂರಾದರೂ ಹೋಗಬಹುದು ದೂರ ದೇಶದ ಗಮನ ಯೋಗಿಗಳಿಗೆ ಸುಲಭ

ಸಾಧ್ಯವಾಗಿದೆ. ಅಂತಹ ಯೋಗಿಗಳು ಸಂಚಾರ ಮಾಡುವಾಗ ಸಾಮಾನ್ಯರಿಗೆ ಅವರು ತೋರುವುದಿಲ್ಲ ಕೂಡ ಅವರನ್ನ ನೋಡಬೇಕಾದರೇನೆ ದೊಡ್ಡ ತಪಸ್ಸು ಬೇಕಂತೆ.

ಓಂಕಾರಂ ಯೈ ತ್ವಧೀಯನ್ತೇ ಮನಸಾ ಬ್ರಹ್ಮಸತ್ತಮಾಃ ।
ವಿಮುಕ್ತಾಃ ಸರ್ವಕರ್ಮಭ್ಯಸ್ತೇ ತಂ ಪಶ್ಯನ್ತಿ ಸಾಧವಃ ॥ (19.14 ಭವಿಷ್ಯಪರ್ವ)

ವಿಶೇಷವಾಗಿ ಓಂಕಾರ ಪ್ರತಿಪಾದ್ಯನಾದ ಪರಮಾತ್ಮನನ್ನ ಉಪಾಸನೆ ಮಾಡಿ ಆ ಭಗವದನುಗ್ರಹವನ್ನು ಪಡೆದುಕೊಂಡಂತಹ ತಪಸ್ವಿಗಳಿಗೆ ಇಂತಹ ಯೋಗಿಗಳ ದರ್ಶನವಾಗುತ್ತದೆ. ಜ್ಞಾನಿಗಳ ದರ್ಶನ ಶ್ರೀಮನ್ನ್ಯಾಯ ಸುಧಾದಲ್ಲಿಯೂ ಹೇಳುತ್ತಾರೆ ನಮ್ಮ ಯೋಗ್ಯತೆಯನ್ನ ತಿಳಿದುಕೊಂಡ ಗುರುಗಳು ಬಂದು ನಮಗೆ ನಿನ್ನ ಯೋಗ್ಯತೆ ಇಷ್ಟು, ಇಷ್ಟು ಗುಣಗಳ ಉಪಾಸನೆ ಮಾಡಬೇಕು, ಇಷ್ಟು ದಿನ ಉಪಾಸನೆ ಮಾಡಬೇಕು ಈ ಕ್ರಮದಲ್ಲಿ ಉಪಾಸನೆ ಮಾಡಬೇಕು ನಿನಗೆ ಅಪರೋಕ್ಷ ಜ್ಞಾನವಾಗುತ್ತದೆ ಅಂತ ಉಪದೇಶ ಮಾಡುತ್ತಾರೆ ಆ ಕ್ರಮದಲ್ಲಿ ನಾವು ಮಾಡಿದರೆ ನಮಗೆ ಅಪರೋಕ್ಷ ಜ್ಞಾನವಾಗುತ್ತದೆ. ಅಂತಹ ಗುರುಗಳು ಯಾವಾಗ ಸಿಗುತ್ತಾರೆ, ಅಂತಹ ಗುರುಗಳು ಸಿಗುವುದಕ್ಕೆ ಎಷ್ಟೋ ಜನ್ಮಗಳಲ್ಲಿ ಶಾಸ್ತ್ರಗಳ ಶ್ರವಣ ಮನನಾದಿಗಳನ್ನು ಮಾಡಿದ್ದರೆ ಆ ತಪಸ್ಸಿನಿಂದ ಆ ಪುಣ್ಯದಿಂದ ಅಂತಹ ಗುರುಗಳ ದರ್ಶನವಾಗುತ್ತದೆ ಆಮೇಲೆ ಅವರು ಉಪದೇಶ ಮಾಡುತ್ತಾರೆ, ಅವರು ಹೇಳಿದ ಕ್ರಮದಲ್ಲಿ ಉಪಾಸನೆ ಮಾಡಿದರೆ ಆಮೇಲೆ ಅಪರೋಕ್ಷ ಜ್ಞಾನವಾಗುತ್ತದೆ. ಹೀಗಾಗಿ ದೊಡ್ಡವರ ಯೋಗಿಗಳ ಜ್ಞಾನಿಗಳ ದರ್ಶನವಾಗುವುದಕ್ಕೂ ಒಂದು ತಪಸ್ಸು ಬೇಕು ಅನ್ನುತಾರೆ ಅಂತಹ ತಪಸ್ವಿಗಳಿಗೆ ಮಾತ್ರ ಇವರ ದರ್ಶನವಾಗುತ್ತದೆ. ಇವರು ಪರಮಾತ್ಮನ ವಿಶೇಷವಾಗಿರುವಂತಹ ಪೂಜೆಯನ್ನು ಮಾಡುತ್ತಾರೆ

ವೇದಾತ್ಮಕಂ ತದಾ ಯಜ್ಞಂ ಚಿನ್ತಯನ್ತೋ ಮನೀಷಿಣಃ ॥ (19.18 ಭವಿಷ್ಯಪರ್ವ)
ಬ್ರಹ್ಮಲೋಕಂ ಕಾಂಕ್ಷಮಾಣಾ ವೈಷ್ಣವಂ ಪದಮುತ್ತಮಮ್ ॥ (19.19 ಭವಿಷ್ಯಪರ್ವ)

ಮುಖ್ಯವಾದ ಗುರಿ ಈ ಎಲ್ಲ ಯೋಗಿಗಳಿಗೆ ವೈಷ್ಣವ ಪದ, ವಿಷ್ಣುವಿನ ಸ್ಥಾನವನ್ನು ಹೊಂದಬೇಕು, ಆ ಪರಮಾತ್ಮನ ಲೋಕವನ್ನು ಹೊಂದಬೇಕು ಅನ್ನುವುದೇ ಗುರಿ. ಭಗವಂತನೇ ಸರ್ವೋತ್ತಮ, ಸರ್ವೋತ್ತಮನಾದ ಪರಮಾತ್ಮನ ಸ್ಥಾನವನ್ನು ಹೊಂದುವುದಕ್ಕೆ ಬ್ರಹ್ಮ ದೇವರನ್ನ ಆರಂಭ ಮಾಡಿಕೊಂಡು ತೃಣ ಜೀವದವರೆಗೆ ಎಲ್ಲ ಸಜ್ಜನರು, ಎಲ್ಲ ಅಧಿಕಾರಿಗಳು ಕೂಡ ಪ್ರಯತ್ನವನ್ನು ಮಾಡುವುದು ಅವರವರ ಯೋಗ್ಯತಾನುಸಾರೇಣ ಪೂಜಾದಿಗಳನ್ನು ಮಾಡುತ್ತಾರೆ.

ತ್ರಿಭಿರ್ಮಾಲ್ಯೋಪಹಾರೈಶ್ಚ ಪ್ರತಿಭಾವೈಶ್ಚ ವೈ ದ್ವಿಜಾಃ ।
ಯಜನ್ತಿ ಪರಮಾತ್ಮಾನಾಂ ವಿಷ್ಣುಂ ಸತ್ಯಪರಾಕ್ರಮಮ್ ॥ (19.21 ಭವಿಷ್ಯಪರ್ವ)

ಆ ಸತ್ಯವಾದಂತಹ ಪರಾಕ್ರಮ, ಸತ್ಯವಾದ ವಿಕ್ರಮ ಇಡೀ ಜಗತ್ತಿನ ಸೃಷ್ಟ್ಯಾದಿ ಕಾರ್ಯಗಳೆಲ್ಲ ಪರಮ ಸತ್ಯವಾದದ್ದು, ಅಂತಹ ಸತ್ಯಪರಾಕ್ರಮನಾದ ಸತ್ಯವ್ರತನಾದ ಆ ಪರಮಾತ್ಮನನ್ನ ನಾನಾ ವಿಧವಾದ ಪೂಜೆಗಳಿಂದ ಸಂತೋಷ ಪಡಿಸುತ್ತಾರೆ, ಧ್ಯಾನದಿಂದ ಆ ಪರಮಾತ್ಮನನ್ನೇ ಚಿಂತನ ಮಾಡುತ್ತಾರೆ, ಯಜ್ಞದಿಂದಲೂ ಅವನನ್ನು ಕುರಿತೇ ಯಜ್ಞ ಮಾಡುತ್ತಾರೆ.

ಯಜನಂ ವಿಕ್ರಮಂ ಚೈವ ಬ್ರಹ್ಮಪೂರ್ವಾಃ ಪ್ರಚಕ್ರಿರೇ ।
ಬ್ರಹ್ಮಾಪಿ ವೈಷ್ಣವಂ ತೇಜೋ ವೇದೋಕ್ತೈರ್ವಚನೈರ್ನೃಪ ॥ (19.22 ಭವಿಷ್ಯಪರ್ವ)

ಯಜ್ಞ ದಾನ ತಪಸ್ಸು ಎಲ್ಲಾ ಮಾರ್ಗಗಳಿಂದಲೂ ಬ್ರಹ್ಮಾದಿ ಸಕಲ ದೇವತೆಗಳೂ ಪೂಜೆ ಮಾಡುವುದು ಒಬ್ಬನನ್ನೇ ವಿಷ್ಣುವನ್ನ ಅವನೇ ಸರ್ವೇಷ್ಟದಾತ ಸರ್ವಾರಿಷ್ಟ ನಿವಾರಕ.

ತದೇವ ಪರಮಂ ಬ್ರಹ್ಮ ವೈಷ್ಣವಂ ಪರಮಾದ್ಭುತಮ್ ॥ (19.24 ಭವಿಷ್ಯಪರ್ವ)

ಎಷ್ಟು ಸ್ಪಷ್ಟವಾಗಿ ಹರಿವಂಶ ಆ ವಿಷ್ಣುವೇ ಸರ್ವೋತ್ತಮ ಸಕಲ ದೇವತೆಗಳಿಂದಲೂ, ಋಷಿ ಮುನಿಗಳಿಂದಲೂ, ಮನುಷ್ಯೋತ್ತಮರಿಂದಲೂ ಇಜ್ಯನಾದವನು ಅಂತ ಅನ್ನುವುದನ್ನ ಇಲ್ಲಿ ನಮಗೆ ತಿಳಿಸಿಕೊಡುತ್ತ ಇದೆ. ಸರಿ, ಇಷ್ಟೆಲ್ಲಾ ಇದೆ ಅಂದ ಮಾತ್ರಕ್ಕೆ ಆ ಯೋಗ ಮಾರ್ಗದಲ್ಲಿ ಪರಮಾತ್ಮ ಹಿಂದೆ ಹೇಳಿದ ಹಾಗೆ ಪರೀಕ್ಷೆ ಮಾಡುವುದಕ್ಕೆ ನಾನಾ ತರಹದ ವಿಘ್ನಗಳು. ವಿಷ್ಣುತೀರ್ಥರೂ ಕೂಡ ತಮ್ಮ ಶಿಷ್ಯರಿಗೆಲ್ಲ ಪತ್ರದಲ್ಲಿ ತಿಳಿಸುತ್ತಾರೆ ಬಂಧು ಬಳಗದವರೊಳಗೇನೆ ಕಲಿ ಪ್ರವೇಶ ಮಾಡಿ ವಿಘ್ನ ಮಾಡುತ್ತಾನೆ ಅಂತೆ. ಯಾರೋ ಶತ್ರುಗಳು ಬಂದು ನೀನು ಸಾಧನೆ ಮಾಡಬೇಡ, ದೇವರ ಪೂಜೆ ಮಾಡಬೇಡ, ಯಜ್ಞ ಮಾಡಬೇಡ, ಯಾಗ ಮಾಡಬೇಡ, ಪ್ರಾಣಾಯಾಮ ಮಾಡಬೇಡ ಅಂದರೆ ನಾವು ಕೇಳುವುದೇ ಇಲ್ಲ ಅವನು ಹೇಗಿದ್ದರೂ ಶತ್ರು ಅವನ ಮಾತು ಕೇಳಬಾರದು ಅಂತೇ ನಾವು ಇಟ್ಟುಕೊಂಡಿರುತ್ತೇವೆ ಹಾಗೆ ಮಾಡುವುದಿಲ್ಲ ಕಲಿ. ಭಗವಂತ ಪರೀಕ್ಷೆ ಮಾಡುವುದಕ್ಕೆ ಅಸುರರಿಗೆ ಪ್ರೇರಣೆ ಮಾಡಿ, ಅಸುರರ ದ್ವಾರಾ ನಮಗೆ ವಿಘ್ನವನ್ನು ತಂದು ಕೊಡುತ್ತಾನೆ. ಆ ವಿಘ್ನ ಮಾಡಿದ್ದಕ್ಕೆ ಅಸುರರಿಗೆ ದುರ್ಗತಿ ಆಗುತ್ತದೆ ಆದರೆ ವಿಘ್ನ ಮಾಡಿದರೂ ವಿಘ್ನಿತರಾಗದೇ ನಾವು ಸಾಧನೆ ಮಾಡಿದರೆ ನಮಗೆ ಅನುಗ್ರಹವನ್ನು ಮಾಡುತ್ತಾನೆ ಆ ಎಚ್ಚರ ನಮಗಿರಬೇಕು. ಇದು ಎಲ್ಲಾ ಯಾಕೆ ಮಾಡುತ್ತೀರಿ ಇಷ್ಟೆಲ್ಲಾ ಉಪವಾಸ ಬೇಡ, ಪೂಜೆಗಳು ಬೇಡ, ಯಜ್ಞ ಯಾಗಾದಿಗಳು ಬೇಡ, ಪ್ರಾಣಾಯಾಮ ಬೇಡ, ಶಾಸ್ತ್ರಗಳ ಅಧ್ಯಯನ ಬೇಡ ಅಂತ ಗೆಳೆಯರೇ ಹೇಳುತ್ತಾರೆ, ಬಂಧು ಬಾಂಧವರೇ ಹೇಳುತ್ತಾರೆ, ಹಿರಿಯರೇ ಹೇಳುತ್ತಾರೆ ಅಂತಹ ವಿಘ್ನಗಳು ಬರುತ್ತದೆ, ಸ್ತ್ರೀಯರಿಂದ ವಿಘ್ನ ಬರುತ್ತದೆ, ಪುತ್ರರಿಂದ ವಿಘ್ನ ಬರುತ್ತದೆ. ಅಷ್ಟೆಲ್ಲ ವಿಘ್ನಗಳು ಬಂದಾಗಲೂ ಇವನು ಅದಕ್ಕೆ ಯಾವುದೇ ರೀತಿಯಿಂದ ಕೇಳಬಾರದು.

ಪುತ್ರಾದಿ ನಕ್ರ ನಿಗೃಹೀತ ಶರೀರೀಕಸ್ಯ
ಸ್ತ್ರೀಭೂತಾಶ್ಚ ತತಃ ಸರ್ವೇ ಯುಜ್ಞಾನಾಶ್ಚಾವಲಮ್ಬಿರೇ ।
ಕಣ್ಠೇಽಸ್ಯ ಬಹೂರೂಪತ್ವಾದ್ ವಿಘ್ನೈಶ್ಚೈವ ಪ್ರಲೋಭಯನ್ ॥ (19.38 ಭವಿಷ್ಯಪರ್ವ)

ಮತ್ತೆ ಕೆಟ್ಟ ಮಾತನಾಡುವುದಿಲ್ಲ ಯಾರೂ, ಬಹಳ ಸಿಹಿಯಾದ ಮಾತನ್ನು ಆಡುತ್ತಾರೆ.

ಮಧುರೈರಭಿಧಾನೈಶ್ಚ ವ್ಯಾಪರನ್ತಿ ನ ಭೀತವತ್ ।
ಪತನ್ತಿ ಯುಗಪತ್ ಸರ್ವೇ ಪಾದಯೋರ್ಮೂರ್ಧಭಿರ್ಯುತಾಃ ॥ (19.39 ಭವಿಷ್ಯಪರ್ವ)

ಪ್ರೀತಿಯಿಂದ ಪಾದಕ್ಕೆ ನಮಸ್ಕಾರ ಮಾಡುತ್ತಾರೆ, ತಲೆ ಗಟ್ಟಿಸುತ್ತಾರೆ, ನಮಸ್ಕಾರ ಮಾಡಿ ಕೇಳಿಕೊಳ್ಳುತ್ತಾರೆ ಆ ರೀತಿ ವಿಚಿತ್ರವಾದ ರೀತಿಯಿಂದ ವಿಘ್ನಗಳನ್ನ ಮಾಡುವವರೆಲ್ಲ ಇರುತ್ತಾರೆ ಆ ಎಲ್ಲ ವಿಘ್ನಗಳನ್ನು ಪರಿಹಾರ

ಮಾಡಿಕೊಳ್ಳಬೇಕು. ಗಣಪತಿಯಲ್ಲಿ ಅಂತರ್ಯಾಮಿಯಾದಂತಹ ಭಾರತೀರಮಣ ಮುಖ್ಯಪ್ರಾಣಾಂತರ್ಗತ ವಿಶ್ವಂಭರನಾಮಕ ಪರಮಾತ್ಮನಿಗೆ ಶರಣು ಹೋಗಬೇಕು. ಇನ್ನೇನಾದರೂ ಕೆಟ್ಟ ಕೆಲಸ ನಾವು ಮಾಡಲಿಕ್ಕೆ ಹೊರಟರೆ ವಿಘ್ನರಾಜ ಅಂತ ಅವನಿಗೆ ಹೆಸರು ಗಣಪತಿಗೆ, ಗಣಪತಿಗೆ ಏನು ಪ್ರಾರ್ಥನೆ ಮಾಡಬೇಕು ಅಂದರೆ ವಿಘ್ನ ಕೊಡು ನಾವೇನಾದರೂ ಕೆಟ್ಟ ಕೆಲಸ ಮಾಡಿದರೆ, ಶಾಸ್ತ್ರದಲ್ಲಿ ನಿಷೇಧ ಮಾಡಿದಂತಹ ನಿಷಿದ್ಧ ಕಾರ್ಯಗಳನ್ನು ನಾವು ಏನಾದರೂ ಮಾಡಲಿಕ್ಕೆ ಹೊರಟರೆ ವಿಘ್ನಗಳನ್ನು ಕೊಡು ಯಾಕೆ ಅಂದರೆ ವಿಘ್ನಗಳು ನಿನ್ನ ಅಧೀನ ಹೋಗು ಅಂದರೆ ಬರುತ್ತವೆ, ನೀನು ಬೇಡ ಅಂದರೆ ಬಿಡುತ್ತವೆ. ಕೆಟ್ಟ ಕಾರ್ಯಗಳಿಗೆ ವಿಘ್ನಗಳನ್ನು ಕೊಡು, ಸತ್ಕಾರ್ಯಗಳನ್ನು ಮಾಡುವುದಕ್ಕೆ, ದೇವರ ಸೇವೆ ಪಾಠ ಪ್ರವಚನಗಳು ಯೋಗ ಪ್ರಾಣಾಯಾಮ ಧ್ಯಾನ ಇಂತಹ ಸತ್ಕಾರ್ಯಗಳನ್ನು ಮಾಡುವುದಕ್ಕೆ ಬರುವ ವಿಘ್ನಗಳನ್ನ ಪರಿಹಾರ ಮಾಡು ಅಂತ ಆ ಗಣಪತಿಗೆ ಪ್ರಾರ್ಥನೆ ಮಾಡಬೇಕು. ಭಗವಂತ ಎಲ್ಲ ಕ್ಷಣ ಲವ ಮುಹೂರ್ತ ಕಲಾ ಕಾಷ್ಟ ಅಹೋರಾತ್ರ ಪಕ್ಷ ಮಾಸ ಸಂವತ್ಸರ ಯುಗ ಮಹಾಯುಗ ಕಲ್ಪ ಮೊದಲಾದ ಎಲ್ಲಾ ಕಾಲಗಳಲ್ಲಿಯೂ ಆ ಆ ನಾಮಕನಾಗಿ ಪರಮಾತ್ಮನೇ ಅಂತರ್ಯಾಮಿಯಾಗಿ ಆ ಎಲ್ಲ ಕಾಲಗಳನ್ನು ನಿಯಾಮನ ಮಾಡುವನು ಅಂತಹ ಸಕಲ ಕಾಲಗಳಲ್ಲಿ ಅಂತರ್ಯಾಮಿಯಾದ ಆ ಪರಮಾತ್ಮ ಯಾವ ಕಾಲವೂ ನಮಗೆ ವ್ಯರ್ಥವಾಗಿ ಹೋಗದಂತೆ ಅನುಗ್ರಹ ಮಾಡಲಿ. ಯಾವ ಕಾಲದಲ್ಲಿಯೂ ದೇವರ ಸೇವೆ ಇಲ್ಲದೇ ಇರಬಾರದು, ಸಾಧನೆ ಇಲ್ಲದೇ ಇರಬಾರದು ಯೋಗಗಳಿಗೆ ವಿಘ್ನ ಯಾವ ಕಾಲದಲ್ಲಿಯೂ ಬರಬಾರದು ಏನೋ ಅವನ ಗ್ರಹಗತಿ ಸರಿ ಇಲ್ಲ ಅಂತ ಗ್ರಹಗತಿ ಸರಿ ಇಲ್ಲ ಅಂದರೆ ಒಂದು ತುತ್ತು ಊಟ ಕಡಿಮೆ ಆದರೆ ಆಗಲಿ ಆದರೆ ಸಾಧನೆಗೆ ವಿಘ್ನ ಆಗಬಾರದು **'ಸಕಲ ಗ್ರಹಬಲ ನೀನೇ ಸರಸಿಜಾಕ್ಷ'.**

ತಾರಾಣಾಂ ಗತಯಶ್ಚೈವ ಗ್ರಹಾಣಾಂ ಚ ವಿಶೇಷತಃ ॥ (19.46 ಭವಿಷ್ಯಪರ್ವ)

ಎಲ್ಲಾ ಗ್ರಹಗಳಿಗೂ ನಕ್ಷತ್ರಗಳಿಗೂ ಪರಮಾತ್ಮನೇ ಸ್ವಾಮಿ, ಕಾಲಗಳಿಗೂ ಪರಮಾತ್ಮನೇ ಸ್ವಾಮಿ ಎಲ್ಲ ಕಾಲಗಳೂ ಸಾರ್ಥಕವಾಗಲಿ, ಎಲ್ಲ ಗ್ರಹಗಳೂ ಅನುಕೂಲವಾಗಲಿ ದೇವರ ಸೇವೆಗೆ ಯಾವುದು ವಿಘ್ನವನ್ನು ಉಂಟು ಮಾಡುವುದು ಬೇಡ ಅಂತ ಪ್ರಾರ್ಥನೆ ಮಾಡಿಕೊಂಡು ತನ್ನ ಯೋಗಗಳಿಗೆ ಬಂದಂತಹ ವಿಘ್ನಗಳನ್ನ ಉಪಸರ್ಗಗಳನ್ನ ಪರಿಹಾರ ಮಾಡಿಕೊಳ್ಳಬೇಕು ಅಂತ ತಿಳಿಸಿಕೊಟ್ಟಿದ್ದಾರೆ. ಈ ರೀತಿ ಬ್ರಹ್ಮ ದೇವರು ಅವರಂತೂ ಕೇಳಬೇಕೆ ನಿರಂತರವಾಗಿ ಭಗವದ್ ಧ್ಯಾನದಲ್ಲಿಯೇ ಆಸಕ್ತರಾಗಿರುತ್ತಾರೆ, ನಿರಂತರವಾಗಿ ಭಗವಂತನ ಧ್ಯಾನ ಚಿಂತನವನ್ನ ಮಾಡುವುದರಲ್ಲಿ ಆಸಕ್ತರಾದ ಬ್ರಹ್ಮ ದೇವರಿಗೆ ಯಾವಾಗಲೂ ಪರಿಪೂರ್ಣವಾದ ಶಕ್ತಿ ಸಾಮರ್ಥ್ಯಗಳು ಪರಮಾತ್ಮನ ಕೃಪೆಯಿಂದ.

ಸರ್ವಾಙ್ಗಧಾರಣಾಂ ಕೃತ್ವಾ ಮನಸಾ ಪ್ರಹಸನ್ನಿವ ॥ (20.2 ಭವಿಷ್ಯಪರ್ವ)

ಪರಮಾತ್ಮನ ಸಕಲಾಂಗಗಳ ಧ್ಯಾನವನ್ನು ಸದಾ ಕಾಲದಲ್ಲಿ ಮಾಡುತ್ತ ಇರುತ್ತಾರೆ. ಮಾಡುತ್ತ ಮಾಡುತ್ತ ಆ ಪರಮಾತ್ಮನ ಅನುಗ್ರಹದಿಂದ ಅವನ ಆದೇಶದಿಂದ ಈ ಜಗತ್ತಿನ ಸೃಷ್ಟಿಯನ್ನು ಕೂಡ ಬ್ರಹ್ಮ ದೇವರು ಮಾಡಿದ್ದಾರೆ. ಜಗತ್ತಿನ ಸೃಷ್ಟಿಯನ್ನು ಮಾಡುವುದಕ್ಕೆ ಬೇಕಾದ ಶಕ್ತಿ ಸಾಮರ್ಥ್ಯಗಳು ಬ್ರಹ್ಮ ದೇವರಿಗೆ ಬಂದದ್ದು ಆ ಭಗವದ್ ಧ್ಯಾನದಿಂದ ಭಗವದನುಗ್ರಹದಿಂದ. ಕೇವಲ ಬ್ರಹ್ಮ ದೇವರು ತಮ್ಮ ಮನಸ್ಸಿನಿಂದಲೇ ಸನಕಾದಿಗಳ ಸೃಷ್ಟಿಯನ್ನು ಮಾಡಿದ್ದಾರೆ, ಕಣ್ಣಿನಿಂದ ಅಪ್ಸರಾ ಸ್ತ್ರೀಯರ ಸೃಷ್ಟಿಯನ್ನು ಮಾಡಿದ್ದಾರೆ, ನಾಸಿಕಾಗ್ರದಿಂದ ಗಂಧರ್ವರ ಸೃಷ್ಟಿಯನ್ನು ಮಾಡುತ್ತಾರೆ ತುಂಬುರು ಮೊದಲಾದ ಗಂಧರ್ವರನ್ನ. ಆಮೇಲೆ ಶ್ರೇಷ್ಠಳಾಗಿರುವಂತಹ ವೇದಾಭಿಮಾನಿನಿ ದೇವತೆ ವೇದವಾಣಿ ಅದರ ಅಭಿವ್ಯಕ್ತಿ ಉಚ್ಚಾರಣೆ ಮಾತ್ರ ಸೃಷ್ಟಿ ಇಲ್ಲ, ವೇದಗಳು ಅಪೌರುಷೇಯ, ಅಪೌರುಷೇಯವಾಗಿ

ಇರುವಂತಹ ವೇದಗಳನ್ನ ಉಚ್ಚಾರಣೆ ಮಾಡಿದ್ದಾರೆ. ಆ ವೇದಗಳನ್ನ ನಿರಂತರವಾಗಿ ನಾಲ್ಕು ವೇದಗಳನ್ನ ನಾಲ್ಕು ಮುಖಗಳಿಂದ ಅಖಂಡವಾಗಿ ಉಚ್ಚಾರಣೆ ಮಾಡಿ ಆ ವೇದ ಶಾಸ್ತ್ರಗಳ ಪರಂಪರೆ ನಿರಂತರವಾಗಿ ಬರುವಂತೆ, ಪೂರ್ವಕಲ್ಪದಲ್ಲಿ ಹೇಗೆ ಉಚ್ಚಾರಣೆ ಮಾಡಿದ್ದನೋ ಪರಮಾತ್ಮ ಅದೇ ರೀತಿಯಾಗಿ ಉಚ್ಚಾರಣೆಯನ್ನು ಈಗ ಮಾಡುತ್ತಾನೆ ಹಯಗ್ರೀವ ರೂಪದಿಂದ. ಆ ಭಗವಂತನ ಉಪದೇಶವನ್ನು ಪಡೆದುಕೊಂಡಂತಹ ಬ್ರಹ್ಮ ದೇವರೂ ಕೂಡ ಅದೇ ರೀತಿ ಉಚ್ಚಾರಣೆಯನ್ನು ಮಾಡುತ್ತಾರೆ. ಆಮೇಲೆ ಗಂಧರ್ವ ಶಾಸ್ತ್ರದ ರಚನೆಯನ್ನು ಮಾಡಿದ್ದಾರೆ ಎರಡು ತರಹ ಲೌಕಿಕವಾದ ಗಂಧರ್ವ ಶಾಸ್ತ್ರ, ಸಂಗೀತ ಶಾಸ್ತ್ರ ಒಂದು ಬೇರೆ, ವೇದಗಳಲ್ಲಿ ಸಾಮವೇದದೊಳಗೆ ಬಳಸುವಂತಹ ಏನೊಂದು ಗಾನ ಪದ್ಧತಿ ಇದೆ ಅದನ್ನೂ ಕೂಡ ಪ್ರವರ್ತನ ಮಾಡಿದ್ದಾರೆ ಬ್ರಹ್ಮ ದೇವರು.

ಅನ್ಯೇಷಾಂ ಚೈವ ವಿಪ್ರಾಣಾಂ ಗಾನಂ ಬ್ರಹ್ಮ ಪ್ರಭಾಷಿತಮ್ ॥ (20.9 ಭವಿಷ್ಯಪರ್ವ)

ಬ್ರಹ್ಮ ದೇವರು ತಮ್ಮ ಪಾದಗಳಿಂದ ನಾನಾ ತರಹದ ಜೀವರಾಶಿಗಳ ಸೃಷ್ಟಿ ಮಾಡಿದ್ದಾರೆ. ಮನುಷ್ಯರು ಕಿನ್ನರರು ಯಕ್ಷರು ಪಿಶಾಚರು ನಾಗಗಳು ರಾಕ್ಷಸರು ಆನೆಗಳು ಸಿಂಹಗಳು ಹುಲಿಗಳು ನಾನಾ ವಿಧವಾದ ಮೃಗಗಳು ತೃಣಜಾತಿಗಳು ಇವುಗಳೆಲ್ಲವನ್ನೂ ಕೂಡ ತಮ್ಮ ಪಾದದಿಂದಲೇ ಬ್ರಹ್ಮ ದೇವರು ಸೃಷ್ಟಿ ಮಾಡಿದ್ದಾರೆ. ಶಾಸ್ತ್ರ ವಿಹಿತವಾದಂತಹ ಏನೆಲ್ಲ ಕರ್ಮಗಳಿವೆ ಆ ಕರ್ಮಗಳನ್ನ ತಮ್ಮ ಕೈಗಳಿಂದ ಸೃಷ್ಟಿ ಮಾಡಿದ್ದಾರೆ. ಮನಸ್ಸಿನಿಂದ ಮಾಡಬೇಕಾದದ್ದನ್ನೆಲ್ಲ ಮನಸ್ಸಿನೆಂದಲೇ ನಾನಾ ವಿಧವಾದ ಮಾನಸಿಕವಾದ ಭಾವನೆಗಳಿವೆ ಅವುಗಳೆಲ್ಲವನ್ನು ಮನಸ್ಸಿನಿಂದಲೇ ಸೃಷ್ಟಿ ಮಾಡಿದ್ದಾರೆ. ಹೀಗೆ ವಿಚಿತ್ರವಾದ ಸೃಷ್ಟಿ, ಹೃದಯದಿಂದ ಗೋವುಗಳನ್ನ ಸೃಷ್ಟಿ ಮಾಡಿದ್ದಾರೆ, ಬಾಹುಗಳಿಂದ ಪಕ್ಷಿಗಳನ್ನ ಇನ್ನು ಅನೇಕ ವಿಧವಾದ ವಸ್ತುಗಳನ್ನ. ಅಂಗಿರಸ್ ಎಂಬಂತಹ ಋಷಿಗಳು ಭಾರೀ ಪ್ರಚಂಡವಾದಂತಹ ತಪಸ್ಸು ಎಲ್ಲಾ ಇಂದ್ರಿಯಗಳ ನಿಗ್ರಹವನ್ನು ಮಾಡಿಕೊಂಡಂಥವರು ಅಂತಹ ಅತ್ಯಂತ ತಪಸ್ವಿಗಳಾದ ಅಂಗಿರಸ್ ಋಷಿಗಳನ್ನ ಸೃಷ್ಟಿ ಮಾಡಿದ್ದಾರೆ ತಮ್ಮ ಭ್ರೂ ಮಧ್ಯದಿಂದ ಬ್ರಹ್ಮ ದೇವರು. ಭೃಗು ಋಷಿಗಳನ್ನ ಲಲಾಟದಿಂದ ಸೃಷ್ಟಿ ಮಾಡಿದ್ದಾರೆ, ನಾರದರು ಮತ್ತು ಸನತ್ಕುಮಾರರನ್ನ ತಮ್ಮ ತಲೆಯಿಂದ ಸೃಷ್ಟಿ ಮಾಡಿದ್ದಾರೆ. ಬೇರೆ ಬೇರೆ ರೀತಿಯಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಸೃಷ್ಟಿ ಮಾಡಿದ್ದಾರೆ ಅಂತ ಇಟ್ಟುಕೊಳ್ಳಬೇಕು **'ಉತ್ಸಂಗಾನ್ನಾರದೋ ಜಜ್ಞೇ'** ಅಂತೂ ಹೇಳಿದ್ದಾರೆ. ಇಲ್ಲಿ ಮೂರ್ಧ್ನಃ ಅಂತ ಎರಡೂ ರೀತಿಯಿಂದ ಸೃಷ್ಟಿ ಮಾಡಿದ್ದಾರೆ. ಸೋಮನನ್ನ ಚಂದ್ರನನ್ನ ಸೃಷ್ಟಿ ಮಾಡಿ ಬ್ರಹ್ಮ ದೇವರು ಹಿಂದೊಮ್ಮೆ ಬಂದಿದೆ ಆ ಚಂದ್ರನಿಗೆ ಎಲ್ಲ ಬ್ರಾಹ್ಮಣರಿಗೂ ನೀನು ರಾಜನಾಗು, ಎಲ್ಲ ವನಸ್ಪತಿಗಳಿಗೂ ನೀನು ರಾಜನಾಗು ಅಂತ ಆ ಚಂದ್ರನಿಗೆ ಪಟ್ಟಾಭಿಷೇಕ ಮಾಡಿದ್ದಾರೆ ಬ್ರಹ್ಮ ದೇವರು. ಈ ರೀತಿ ಆ ಬ್ರಹ್ಮ ದೇವರು ವಿವಿಧ ವಿಚಿತ್ರವಾದ ಸೃಷ್ಟಿಗಳನ್ನೆಲ್ಲ ಮಾಡಿದ್ದಾರೆ. ತನ್ನ ತಪಸ್ಸು ರಾಜಸೂಯಾದಿ ಯಾಗಗಳು ಇನ್ನನೇಕ ವಿಧವಾದ ಪುಣ್ಯಕರ್ಮಗಳಿಂದ ಆ ಚಂದ್ರ ಈ ವಿಶಿಷ್ಟವಾದ ಅನುಗ್ರಹವನ್ನ ಬ್ರಹ್ಮ ದೇವರಿಂದ ಪಡೆದಿದ್ದಾನೆ. ಇದಲ್ಲದೇ ಇನ್ನನೇಕ ಸ್ಥಾವರ ಜಂಗಮ ಜೀವರಾಶಿಗಳನ್ನು ಬ್ರಹ್ಮ ದೇವರು ಸೃಷ್ಟಿ ಮಾಡಿ ಆ ಎಲ್ಲ ಸೃಷ್ಟಿಯನ್ನೂ ಕೂಡ ಪರಮಾತ್ಮನ ಸೇವೆ ಎಂಬುದಾಗಿ ಪರಮಾತ್ಮನಿಗೆ ಅರ್ಪಣೆ ಮಾಡಿದ್ದಾರೆ. ದೇವರೇ ಆಜ್ಞೆ ಮಾಡಿದ್ದು ಸೃಷ್ಟಿಯನ್ನು ಮಾಡುವುದಕ್ಕೆ, ದೇವರೇ ಶಕ್ತಿಯನ್ನು ಕೊಟ್ಟದ್ದು. ಅವನು ಕೊಟ್ಟ ಶಕ್ತಿಯಿಂದ ಅವನ ಆಜ್ಞೆಯಂತೆ ತಾವು ಮಾಡಿದ ಸೃಷ್ಟಿಯನ್ನ ಆ ಪರಮಾತ್ಮನಿಗೆ ಸಮರ್ಪಣೆ ಮಾಡಿದ್ದಾರೆ ಬ್ರಹ್ಮ ದೇವರು ಅಂತ ತಿಳಿಸಿಕೊಡುತ್ತಾರೆ.

ಇನ್ನು ಅನೇಕ ತರಹದ ವರ್ಣಾಶ್ರಮ ಧರ್ಮಗಳೆಲ್ಲ ಇವೆ. ನಾನಾ ವಿಧವಾಗಿರುವಂತಹ ಧರ್ಮಗಳು, ಅತೀ ಶುದ್ಧವಾಗಿ ಇರುವಂತಹ ಶಾಸ್ತ್ರಗಳು, ಯಜನ ಯಾಜನ ಅಧ್ಯಯನ ಅಧ್ಯಾಪನ ದಾನ ಪ್ರತಿಗ್ರಹ ಅನ್ನುವಂತಹ ಷಟ್ ಕರ್ಮಗಳನ್ನ ಬ್ರಾಹ್ಮಣನಿಗೆ ವಿಶೇಷವಾಗಿ ಹೇಳಿದ್ದಾರೆ. ಅಂತಹ ಕರ್ಮಗಳನ್ನು ನಿಷ್ಕಾಮವಾಗಿ ಮಾಡಿ ಭಗವಂತನ



ಪ್ರೀತಿಗಾಗಿ ಮಾಡಿ ಪರಮಾತ್ಮನಿಗೆ ಅರ್ಪಣೆ ಮಾಡಬೇಕು. ಫಲಾಪೇಕ್ಷೆ ಇರಬಾರದು ದೇವರೇ ಕರ್ತಾ ಕಾರಯಿತಾ ಅನ್ನುವಂತಹ ಅನುಸಂಧಾನದಿಂದ ಮಾಡಬೇಕು, ದೇವರ ಸರ್ವೋತ್ತಮತ್ವದ ಅನುಸಂಧಾನ ಇರಬೇಕು. ಅವನೇ ಒಳಗಿದ್ದು ಮಾಡಿಸುತ್ತಾನೆ ಅನ್ನುವ ಅನುಸಂಧಾನದೊಂದಿಗೆ ಅವನ ಪ್ರೀತಿಗಾಗಿ ಈ ಕರ್ಮಗಳನ್ನು ಮಾಡುತ್ತೇವೆ ಅಂತ ಎಲ್ಲ ವರ್ಣದವರು, ಎಲ್ಲ ಆಶ್ರಮದವರು ಕೂಡ ಕರ್ಮಗಳನ್ನು ಮಾಡಿ ಪರಮಾತ್ಮನಿಗೆ ಸಮರ್ಪಣೆಯನ್ನು ಮಾಡಬೇಕು ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ.

ಹಿಂದೆ ಆ ಕಥೆ ವಿಸ್ತೃತವಾಗಿ ಬಂದಿದೆ ಮತ್ತೆ ಹೇಳಬೇಕಾದದ್ದಿಲ್ಲ ದಕ್ಷಪ್ರಜಾಪತಿ, ಕಶ್ಯಪಪ್ರಜಾಪತಿ, ಚಂದ್ರ ಇವರೆಲ್ಲರಲ್ಲಿ ಇದ್ದು ಆ ಎಲ್ಲ ಸೃಷ್ಟಿಯನ್ನು ಮಾಡಿದವನು ದೇವರೇ ಅಂತ ಹೇಳುತ್ತಾರೆ ಹರಿವಂಶದಲ್ಲಿ. ದಕ್ಷನಾಗಿ ಪರಮಾತ್ಮ ಸೃಷ್ಟಿ ಮಾಡಿದ ಅಂತ ಆದರ ಅರ್ಥ ದಕ್ಷಪ್ರಜಾಪತಿಯಲ್ಲಿ ದಕ್ಷನಾಮಕನಾಗಿ ಸಕಲ ಕಾರ್ಯಗಳಲ್ಲಿ ಅತ್ಯಂತ ದಕ್ಷನಾದ ಆ ಪರಮಾತ್ಮ ದಕ್ಷಪ್ರಜಾಪತಿಯಲ್ಲಿ ಅಂತರ್ಯಾಮಿಯಾಗಿ ಇದ್ದು ಆ ಮೂಲಕ ಅನೇಕ ಜನ ಹೆಣ್ಣು ಮಕ್ಕಳನ್ನು ಸೃಷ್ಟಿ ಮಾಡಿ, ಕಶ್ಯಪರಿಗೆ ಸೋಮನಿಗೆ ಯಮಧರ್ಮನಿಗೆ ಎಲ್ಲಾ ಆ ಹೆಣ್ಣು ಮಕ್ಕಳನ್ನ ಕೊಡಿಸಿ, ಅವರ ಮೂಲಕವಾಗಿ ಜಗತ್ತಿನ ಸೃಷ್ಟಿ ಮಾಡಿದ್ದು ಪರಮಾತ್ಮನೇ ಎಂಬುದಾಗಿ ತಿಳಿಸಿಕೊಡುತ್ತಾರೆ. ಬ್ರಹ್ಮ ದೇವರು ಅತ್ಯದ್ಭುತವಾದ ರೀತಿಯಲ್ಲಿ ಪುಷ್ಕರದಲ್ಲಿ ಇವತ್ತು ನಮ್ಮ ಭಾರತ ದೇಶದೊಳಗೆ ಬ್ರಹ್ಮ ದೇವರ ದೇವಸ್ಥಾನ ಇರುವುದು ಪುಷ್ಕರದಲ್ಲಿ ಮಾತ್ರ, ಬ್ರಹ್ಮ ದೇವರಿಗೆ ದೇವಸ್ಥಾನ ಇಲ್ಲ. ಎಲ್ಲ ಕಡೆಗೆ ಬ್ರಹ್ಮ ದೇವರಿದ್ದಾರೆ, ಎಲ್ಲ ಕಡೆಗೆ ಪರಮಾತ್ಮನ ಉಪಾಸನೆಯನ್ನು ಮಾಡುತ್ತಾರೆ, ಎಲ್ಲಾ ಕಡೆಗೆ ಅವರು ವ್ಯಾಪ್ತರಾಗಿದ್ದಾರೆ ಮಹತ್ತತ್ತ್ವದ ಪರ್ಯಂತ ಆದರೆ ಆ ಬ್ರಹ್ಮ ದೇವರ ಸ್ಪಷ್ಟವಾದ ದೇವಸ್ಥಾನ ಪುಷ್ಕರದಲ್ಲಿ ನಮಗೆ ಸಿಗುತ್ತೆ. ಅಲ್ಲಿ ಬ್ರಹ್ಮ ದೇವರು ಹಿಂದೆ ಯಜ್ಞ ಮಾಡಿದರು.

ಯಜತೇ ಪುಷ್ಕರೇ ಬ್ರಹ್ಮಾ ಮೇಧಯಾ ಸಹ ಸಂಗತಃ । (23.9 ಭವಿಷ್ಯಪರ್ವ)

ಆ ಬ್ರಹ್ಮ ದೇವರು ಮಾಡಿದ ಯಜ್ಞ ಏನು ವರ್ಣನೆ ಮಾಡುತ್ತಾರೆ ಅದ್ಭುತವಾದಂತಹ ವರ್ಣನೆ. ಎಲ್ಲಾ ದೇವತೆಗಳು ಋಷಿಗಳು ಮುನಿಗಳು ಪಾಂಡವರು ಯಜ್ಞ ಮಾಡಿದರೇನೆ ಎಲ್ಲರೂ ಬಂದಿದ್ದರು ಎಲ್ಲಾ ಲೋಕಗಳಿಂದ ಅಂತ ಹೇಳುತ್ತಾರೆ. ಇನ್ನು ಅಲ್ಲಿ ಭಾವಿ ಬ್ರಹ್ಮರಾದ ಭೀಮಸೇನ ದೇವರು ಇದ್ದರು, ಸ್ವತಃ ಬ್ರಹ್ಮ ದೇವರೇ ದೇವತೆಗಳು ತಾವು ಬಂದು ಭರತ ಭೂಮಿಯಲ್ಲಿ ಪುಷ್ಕರದಲ್ಲಿ ಯಜ್ಞವನ್ನು ಮಾಡುತ್ತ ಇದ್ದರೆ ಹದಿನಾಲ್ಕು ಲೋಕಗಳಲ್ಲಿ ಇರುವಂತಹ ಎಲ್ಲಾ ಸಜ್ಜನರು ಅಲ್ಲಿ ಬಂದಿದ್ದಾರೆ. ಆ ಆ ಮಂತ್ರಗಳ ದ್ರಷ್ಟಾರರಾದ ಋಷಿಗಳೇ ಆ ಆ ಮಂತ್ರಗಳ ಪಠಣವನ್ನು ಮಾಡಿ ವೇದಗಳ ಉಚ್ಚಾರ್ಣೆಯನ್ನು ಮಾಡುತ್ತ ಇದ್ದಾರೆ, ದೇವತೆಗಳು ಸ್ವಯಂ ವೇದ ಪಠಣ ಮಾಡುತ್ತಾ ಇದ್ದಾರೆ, ಇಂದ್ರ ದೇವರು ವಿಶೇಷವಾಗಿ ಅಲ್ಲಿ ಸಾಮವೇದದ ಗಾನವನ್ನ ಮಾಡಿಸುತ್ತ ಇದ್ದಾರೆ ಅಂತ ಬರುತ್ತದೆ.

ಇನ್ದ್ರ ಪ್ರೋಕ್ತಾನಿ ಸಾಮಾನಿ ಗೀಯನ್ತೆ ಬ್ರಹ್ಮವಾದಿಭಿಃ ॥ (23.9 ಭವಿಷ್ಯಪರ್ವ)

ಅಂತ. ಆ ರೀತಿ ಪರಮಾತ್ಮನ ಜ್ಞಾನದಲ್ಲಿಯೂ ವಯಸ್ಸಿನಲ್ಲಿಯೂ ತಪಸ್ಸಿನಲ್ಲಿಯೂ ಯೋಗದಲ್ಲಿಯೂ ಎಲ್ಲ ದೃಷ್ಟಿಯಿಂದಲೂ ವೃದ್ಧರಾದವರು ಪರಿಪೂರ್ಣರಾದವರು ಬ್ರಹ್ಮ ದೇವರು.

ಬ್ರಹ್ಮವೃದ್ಧೋ ವಯೋವೃದ್ಧಸ್ತಪೋವೃದ್ಧಶ್ಚ ಭಾರತ ।
ಬ್ರಹ್ಮಜ್ಞಾನಮಯೋ ದೇವೋ ವಿಧಯಾ ಸಹ ಸಂಗತಃ ॥ (23.20 ಭವಿಷ್ಯಪರ್ವ)

ಆ ಸರಸ್ವತಿ ಸಮೇತರಾದ ಜ್ಞಾನವೃದ್ಧರೂ ತಪೋವೃದ್ಧರೂ ವಯೋವೃದ್ಧರೂ ಎಲ್ಲವೂ ಆಗಿರುವಂತಹ ಪರಮಾತ್ಮನ ಲಕ್ಷ್ಮೀ ದೇವಿಯ ನಂತರದಲ್ಲಿ ಆ ಪರಮಾತ್ಮ ಹಾಗೂ ಲಕ್ಷ್ಮೀ ದೇವಿಯನ್ನ ಬಿಟ್ಟರೆ ಅವರಿಬ್ಬರನ್ನ ಕೊಂಡಾಡುವ ಸೂಕ್ತಗಳನ್ನ ಬಿಟ್ಟು ಸಕಲ ವೇದಗಳಿಂದ ಪ್ರತಿಪಾದ್ಯರು ಅನಂತಗುಣ ಪರಿಪೂರ್ಣರು ಅಂತಹ ಮಹಾನುಭಾವರು ಬ್ರಹ್ಮ ದೇವರು. ಅಂತಹ ಬ್ರಹ್ಮ ದೇವರು ಅಲ್ಲಿ ಯಜ್ಞವನ್ನು ಮಾಡುತ್ತಾ ಇದ್ದಾರೆ, ಮರುತ್ ದೇವತೆಗಳೆಲ್ಲ ಸೇವೆಯನ್ನು ಮಾಡುತ್ತಾರೆ. ಎಲ್ಲಾ ವೇದ ವೇದಾಂಗಾದಿಗಳ ದ್ರಷ್ಟಾರರು ಅಲ್ಲಿ ಇದ್ದಾರೆ ಅಂಥವರ ಜೊತೆಗೆ

ವೇದವೇದಾಙ್ಗವಿದ್ಭಿಶ್ಚ ವಿನೀತೈರ್ಬ್ರಹ್ಮವಾದಿಭಿಃ ॥ (23.27 ಭವಿಷ್ಯಪರ್ವ)

ಬ್ರಹ್ಮಲೋಕವೇ ಭೂಲೋಕದಲ್ಲಿ ಪುಷ್ಕರದಲ್ಲಿ ಬಂದು ನಿಂತಿದೆ ಅಂತ ಅನ್ನಿಸುತ್ತಾ ಇದೆ.

ಬ್ರಹ್ಮಲೋಕ ಇವಾಭಾತಿ ಬ್ರಹ್ಮಣಃ ಸ ಮಹಾಕ್ರತುಃ ॥ (23.28 ಭವಿಷ್ಯಪರ್ವ)

ಈ ರೀತಿ ಅಲ್ಲಿ ಯಜ್ಞವನ್ನು ಮಾಡಿದ್ದಾರೆ. ಇಷ್ಟೆಲ್ಲ ಮಾಡಿದ ಯಜ್ಞಕ್ಕೆ ಉದ್ದೇಶ್ಯ ಏನು ಮತ್ತೆ ಏನಿಲ್ಲ ವಿಷ್ಣು ಪ್ರೀತಿಯೇ ಉದ್ದೇಶ್ಯ.

ಪದಂ ವಿಷ್ಣೂರಜೋ ಬ್ರಹ್ಮ ನಿರ್ದ್ವನ್ದ್ವಂ ನಿಷ್ಪರಿಗ್ರಹಮ್ ।
ಯತಃ ಪದಸಹಸ್ರಾಣಿ ಭವಿಷ್ಯನ್ತ್ಯುದ್ಭವನ್ತಿ ಚ ॥ (23.33 ಭವಿಷ್ಯಪರ್ವ)

ಯಾವ ಪರಮಾತ್ಮನ ಕೃಪಾಕಟಾಕ್ಷ ಲೇಶದಿಂದ ಸಾವಿರಾರು ಸ್ಥಾನಗಳು ಬ್ರಹ್ಮಾದಿಗಳ ಪದವಿಗಳು ಉದ್ಭವಿಸುತ್ತವೆ ಮತ್ತೆ ಪ್ರಲಯವನ್ನ ಹೊಂದುತ್ತವೆ ಅಂತಹ ಅನಂತ ಬ್ರಹ್ಮರ, ಅನಂತ ರುದ್ರರ ಉತ್ಪತ್ತಿ ಸ್ಥಿತಿ ಲಯಗಳಿಗೆ ಕಾರಣನಾದ ಪರಮಾತ್ಮನ ಪ್ರಾಪ್ತಿ, ಆ ಭಗವಂತನ ಪ್ರೀತಿ ಅದೇ ಉದ್ದೇಶ್ಯವಾಗಿತ್ತು ಈ ಯಜ್ಞಕ್ಕೆ ಇನ್ನೇನೂ ಉದ್ದೇಶ್ಯ ಇಲ್ಲ. ಅಂತಹ ಪರಮಾತ್ಮನ ಪ್ರೀತಿಗಾಗಿ ಈ ಮಹಾಯಜ್ಞವನ್ನು ಮಾಡಿ ಸಮರ್ಪಣೆ ಮಾಡಿದ್ದಾರೆ.

ಯಜ್ಞಾವಸಾನೇ ಶೈಲೇನ್ದ್ರಂ ದ್ವಿಜೇಭ್ಯಃ ಪ್ರದದೌ ಪ್ರಭುಃ ॥ (23.40 ಭವಿಷ್ಯಪರ್ವ)

ಯಜ್ಞವಾದ ಮೇಲೆ ದೊಡ್ಡದಾದ ಪರ್ವತ, ಆ ಪರ್ವತವನ್ನೇ ದಕ್ಷಿಣೆಯಾಗಿ ಕೊಟ್ಟುಬಿಟ್ಟರು. ದಕ್ಷಿಣೆಯಾಗಿ ಕೊಟ್ಟರೆ ಕೊಡುವುದು ಸುಲಭ, ಮುಂದೆ ಅವರು ಮನೆಗೆ ಹೇಗೆ ತೊಗೊಂಡು ಹೋಗುವುದು ಪರ್ವತವನ್ನ. ಆ ಪರ್ವತದೊಳಗೆ ಆಸ್ತಿಗಳನ್ನ ವಿಭಾಗ ಮಾಡಿಕೊಳ್ಳೋಣ ಅಂತ ಪ್ರಯತ್ನ ಮಾಡಿದರೆ ಯಾರಿಗೂ ಮಾಡಲಿಕ್ಕೆ ಆಗುತ್ತ ಇಲ್ಲ.

ನ ಶೇಕುಃ ಪ್ರವಿಭಾಗಾರ್ಥಂ ಭೇತ್ತುಂ ಸರ್ವೋದ್ಯಮೈರಪಿ ॥ (23.41 ಭವಿಷ್ಯಪರ್ವ)

ಏನು ಮಾಡಿದರೂ ಆ ಪರ್ವತದ ಭೇದ ಮಾಡಿ ವಿಭಾಗ ಮಾಡಿಕೊಂಡು ತೆಗೆದುಕೊಳ್ಳೋಣ ಅಂದರೆ ಋಷಿಗಳಿಗೆ ಆಗಲಿಲ್ಲ. ಆಗ ಸುಪಾರ್ಶ್ವ ಎಂಬ ಪರ್ವತಾಭಿಮಾನಿ ದೇವತೆ ತಾನೇ ಬಂದು ಹೇಳುತ್ತಾನೆ ಹೀಗೆಲ್ಲ ನೀವು ವಿಭಾಗ ಮಾಡಿಕೊಳ್ಳುವುದಲ್ಲ ಬ್ರಹ್ಮ ದೇವರು ಅನುಗ್ರಹ ಮಾಡಿಕೊಟ್ಟಿದ್ದಾರೆ. ಇದೆಲ್ಲ ಸಾಧನೆಗೆ ಉಪಯೋಗಿಸಬೇಕು

ಈ ಪರ್ವತವನ್ನ ಅಂತ ಇಷ್ಟು ಅಂದು ಕೊಂಡುಬಿಡಿ ಸಾಕು ಅಷ್ಟೇ ಅದನ್ನು ವಿಭಾಗ ಮಾಡಿ ಮನೆಗೆ ತೆಗೆದುಕೊಂಡು ಹೋಗುವ ಆಲೋಚನೆ ಮಾಡಬೇಡಿ.

ಬಲಂ ಹಿ ರಾಗದ್ವೇಷಾಭ್ಯಾಂ ವರ್ಧತೇ ಬ್ರಹ್ಮಸತ್ತಮಾಃ ।
ವಿಮುಕ್ತಂ ರಾಗದ್ವೇಷಾಭ್ಯಾಂ ಬ್ರಹ್ಮ ವರ್ಧತಿ ಶಾಶ್ವತಮ್ ॥ (23.46 ಭವಿಷ್ಯಪರ್ವ)

ನಿಮ್ಮ ಬ್ರಹ್ಮಜ್ಞಾನ, ವೇದಜ್ಞಾನ ಇವುಗಳ ಅಭಿವೃದ್ಧಿ ಆಗಬೇಕು ಅಂದರೆ ರಾಗದ್ವೇಷಗಳಿಂದ ನೀವು ವಿಮುಕ್ತರಾಗಿ ನಿಷ್ಕಾಮರಾಗಿ ಆ ಬ್ರಹ್ಮ ದೇವರ ಅನುಗ್ರಹ ಅಂತ ತಿಳಿದುಕೊಂಡು ಸಾಧನೆಗೆ ಅದನ್ನು ಉಪಯೋಗಿಸಿಕೊಳ್ಳಿ. ಈ ರೀತಿ ಆ ಪರ್ವತವನ್ನ ಭೇದನ ಮಾಡುವ ಪ್ರಯತ್ನವನ್ನು ನಿಲ್ಲಿಸಿ ಅಂತ ಹೇಳಿದಾಗ ಸ್ವಯಂ ವಿರಕ್ತರೇ ಅವರೆಲ್ಲ ಅದರ ಬಗ್ಗೆ ಚಿಂತನೆಯನ್ನು ಮಾಡದೆ ಬ್ರಹ್ಮ ದೇವರು ಕೊಟ್ಟದ್ದಕ್ಕೆ ಸಂತೋಷಪಟ್ಟು ಅಲ್ಲಿಂದ ಹೊರಟಿದ್ದಾರೆ ಅಂತನ್ನುವ ವಿಚಾರವನ್ನು ತಿಳಿಸುತ್ತಾರೆ.

ರಾಜನಾದಂತಹ ವ್ಯಕ್ತಿ ತನ್ನ ರಾಜ್ಯದಲ್ಲಿ ಪ್ರಜೆಗಳು ಕೇವಲ ಸುಖವಾಗಿರಬೇಕು ಉಂಡು ತಿಂದು ಆರೋಗ್ಯವಂತರಾಗಿ ಮನೆ ಹೊಲ ಎಲ್ಲ ಇಟ್ಟುಕೊಂಡು ಸುಖವಾಗಿದ್ದರೆ ಸಾಕು ಅಂತ ಇಷ್ಟಕ್ಕೆ ತೃಪ್ತರಾಗಬಾರದು ಅದು ಬೇಸಿಕ್ಕು. ಸುಖವಾಗಿದ್ದರೆ ಧರ್ಮ ಮಾಡಲಿಕ್ಕೆ ಆಗುತ್ತೆ ಅನ್ನುವುದಕ್ಕೆ ಹೊಟ್ಟೆ ಬಟ್ಟೆಗೆ ಕಡಿಮೆ ಇಲ್ಲದೆ ಇದ್ದಂತೆ ಅವರಿಗೆ ಎಲ್ಲ ರೀತಿಯ ಸೌಕರ್ಯಗಳನ್ನು ಒದಗಿಸಬೇಕು ಅಷ್ಟೇ ಆದರೆ ಇಷ್ಟು ಮಾಡಿದರೆ ನನ್ನ ಕೆಲಸ ಮುಗಿಯಿತು ಅಂತ ರಾಜ ತಿಳಿದುಕೊಳ್ಳತಕ್ಕದ್ದಲ್ಲ. ಅವರೆಲ್ಲರೂ ಅವರವರ ವರ್ಣಾಶ್ರಮಗಳಿಗೆ ವಿಹಿತವಾದ ಧರ್ಮಗಳನ್ನು ಪರಿಪಾಲನೆ ಮಾಡುತ್ತಾರೋ ಇಲ್ಲವೋ ಅನ್ನುವುದನ್ನೂ ನೋಡಿ, ಅವರವರಿಗೆ ವಿಹಿತವಾದ ಧರ್ಮವನ್ನು ಅವರು ಮಾಡದೇ ಇದ್ದರೆ ಅವರಿಗೆ ಶಾಸನವನ್ನೂ ಮಾಡಬೇಕು. ಧರ್ಮವನ್ನು ಮಾಡಲೇಬೇಕು ಅಂತ ಕಡ್ಡಾಯವಾಗಿ ಅವರಿಗೆ ಹೇಳಬೇಕೇ ಹೊರತು, ಧರ್ಮ ಮಾಡುವುದು ಬಿಡುವುದು ನಿಮ್ಮ ವೈಯಕ್ತಿಕ ಇಚ್ಛೆ ಬೇಕು ಅಂದರೆ ಮಾಡಬಹುದು, ಬೇಡ ಅಂದರೆ ಬಿಡಬಹುದು ಉಂಡು ತಿಂದು ಸುಖವಾಗಿದ್ದರೆ ಸಾಕು ಕೆಲಸ ಮಾಡಿಕೊಂಡು ಅಂತ ಹೇಳಬಾರದು ಅನ್ನುತ್ತಾರೆ.

ನಾವೇದವಿದ್ಯಾನಾಗಚ್ಛೇನ್ನಾಪಿ ರೌದ್ರಂ ವ್ರತಂ ಚರೇತ್ ।
ನ ಚ ತ್ಯಾಗೇನ ಗಚ್ಛೇತ ಗೃಹಧರ್ಮಂ ನ ಚ ತ್ಯಜೇತ್ ॥ (24.10 ಭವಿಷ್ಯಪರ್ವ)

ವೇದವನ್ನು ಓದುವ ಅಧಿಕಾರ ಇದ್ದವರು ವೇದವನ್ನು ಓದದೇ ಇರಬಾರದು, ಶಾಸ್ತ್ರ ಓದುವ ಅಧಿಕಾರ ಇದ್ದವರು ಶಾಸ್ತ್ರ ಓದದೇ ಇರಬಾರದು, ಗೃಹಸ್ಥ ಧರ್ಮ ಪರಿಪಾಲನೆಯನ್ನು ಮಾಡಬೇಕಾದವರು ಅದನ್ನು ಮಾಡಲೇಬೇಕು. ಬ್ರಹ್ಮಚಾರಿಗಳು ಯತಿಗಳು ವಾನಪ್ರಸ್ಥರು ಯಾರು ಯಾರು ಯಾವ ಧರ್ಮಗಳನ್ನು ಮಾಡಬೇಕೋ ಅವರಿಗೆ ಸರಿಯಾಗಿ ಅನುಕೂಲತೆಗಳನ್ನೂ ಮಾಡಿಕೊಡಬೇಕು, ಮಾಡದಿದ್ದರೆ ಅವರಿಗೆ ಸರಿಯಾಗಿ ಶಾಸನವನ್ನು ಮಾಡಬೇಕು ಅಂತ ವೈಶಂಪಾಯನರು ತಿಳಿಸಿಕೊಡುತ್ತ ಇದ್ದಾರೆ. ಈ ರೀತಿ ಆ ಧರ್ಮಾಚರಣೆಯನ್ನ ಮಾಡುವುದಕ್ಕೆ ವಿಶೇಷವಾಗಿ ಶ್ರೀಮದಾಚಾರ್ಯರೂ ಹೇಳುತ್ತಾರೆ ವೇದ ಓದುವ ಅಧಿಕಾರ ಇದ್ದು, ವೇದ ಓದದೇ ಇದ್ದರೆ **'ವೇದೋಜ್ಝಿತಾನ್ ತಾನ್ ವಿದ್ಧಿ ಚಾನೂನಬುದ್ಧೀನ್'** ಬುದ್ಧಿ ಇದೆ, ಶಕ್ತಿ ಇದೆ, ಅಧಿಕಾರ ಇದೆ ಉತ್ತಮ ಸೌಭಾಗ್ಯವನ್ನು ದೇವರು ಕೊಟ್ಟಿದ್ದಾನೆ ಆದರೂ ಶಾಸ್ತ್ರಗಳ ಅಧ್ಯಯನ ಮಾಡದೇ ಇದ್ದರೆ ಅದು ತಪ್ಪು.

ವೇದಾಂಶ್ಚ ಪಂಚರಾತ್ರಾಣಿ ಸೇತಿಹಾಸಪುರಾಣಕಾನ್ ।

ಜ್ಞಾತ್ವಾ ವಿಷ್ಣುಪರಾನೇವ ಮುಚ್ಯತೇ ನಾನ್ಯಥಾ ಕ್ವಚಿತ್ ॥ (1.83 ಮಭಾತಾನಿರ್ಣಯ)

ಅಂತ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಶ್ರೀಮದಾಚಾರ್ಯರು ಹೇಳುತ್ತಾರೆ. ವೇದಗಳು, ಪಂಚರಾತ್ರಗಳು ಇತಿಹಾಸ ಪುರಾಣಗಳನ್ನೆಲ್ಲಾ ಅಧ್ಯಯನ ಮಾಡಿ ಇವುಗಳೆಲ್ಲ ವಿಷ್ಣುವಿನ ಸರ್ವೋತ್ತಮತ್ವವನ್ನು ಪ್ರತಿಪಾದನೆ ಮಾಡುತ್ತದೆ, ವಿಷ್ಣುವಿನ ಮಹಿಮೆಯನ್ನು ಕೊಂಡಾಡುತ್ತದೆ ಅಂತ ತಿಳಿದುಕೊಂಡು ವಿಷ್ಣುವಿನ ಆದೇಶ ಏನು ನಮಗೆ ಅನ್ನುವುದನ್ನೂ ಅರ್ಥ ಮಾಡಿಕೊಂಡು ಯಾರು ಆ ಎಲ್ಲ ಶಾಸ್ತ್ರಗಳನ್ನ ಪರಮಾತ್ಮನಲ್ಲಿ ಸಮರ್ಪಣೆ ಮಾಡುತ್ತಾರೆ ಹಾಗೂ ಯಜ್ಞಾದಿ ಸತ್ಕರ್ಮಗಳನ್ನು ತಮಗೆ ವಿಹಿತವಾದದ್ದನ್ನು ಮಾಡುತ್ತಾರೋ ಅಂಥವರು ಮಾತ್ರ ಉತ್ತಮವಾದ ಸ್ಥಾನವನ್ನು ಪಡೆಯುವುದಕ್ಕೆ ಸಾಧ್ಯ ಇಲ್ಲದಿದ್ದರೆ ಇಲ್ಲ ಎಂಬುದಾಗಿ ತಿಳಿಸಿಕೊಡುತ್ತಾರೆ.

ಯಸ್ಯ ನೈವ ಶ್ರುತಂ ಬ್ರಹ್ಮ ನ ಗೃಹೀತಂ ವಿಶಾಮ್ಪತೇ ।

ಕಾಮಂ ತಂ ಧಾರ್ಮಿಕೋ ರಾಜಾ ॥ (24.13 ಭವಿಷ್ಯಪರ್ವ)

ಆದ್ದರಿಂದ ಯಾರು ನೋಡಿ ಏನು ಶಿಕ್ಷೆ ಕೊಡಬೇಕು ಅಂತೂ ಹೇಳುತ್ತಾರೆ. ವೇದ ಓದುವ ಅಧಿಕಾರ ಇದ್ದರೂ ಅವನು ವೇದ ಓದದಿದ್ದರೆ ಅವನಿಂದ ಕೆಲಸ ಮಾಡಿಸಬೇಕು ಅಂತೆ, ದುಡಿಸಬೇಕಂತೆ ಅದೇ ಅವನಿಗೆ ಶಿಕ್ಷೆ. ಮತ್ತೆ ಅವನು ತಾನು ತನ್ನ ಶಾಸ್ತ್ರಗಳ ಅಧ್ಯಯನವನ್ನ ಮಾಡುವುದಕ್ಕೆ ಪ್ರವೃತ್ತನಾಗಬೇಕು. ಆ ರೀತಿ ಅವನಿಗೆ ಪ್ರಚೋದನೆಯನ್ನು ಮಾಡಬೇಕು ಅಂತ ತಿಳಿಸಿಕೊಟ್ಟಿದ್ದಾರೆ. ಈ ರೀತಿ ಆ ಭಗವಂತನ ಮಹಾಮಹಿಮೆಯನ್ನು ಹಾಗೂ ಸಕಲ ವರ್ಣಾಶ್ರಮಗಳ ಕರ್ತವ್ಯವನ್ನು ವೈಶಂಪಾಯನರು ಜನಮೇಜಯನಿಗೆ ತಿಳಿಸಿಕೊಡುತ್ತಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಭವಿಷ್ಯಪರ್ವ-38

* * *

ವೈಶಂಪಾಯನ ಉವಾಚ

ತೇ ತು ಗೋಬ್ರಾಹ್ಮಣಾ ನಾಗಾಶ್ಚನ್ದ್ರಾದಿತ್ಯ ಪುರಸ್ಕೃತಾಃ ।
ಬ್ರಾಹ್ಮಣಾನ್ ಪೂಜಯನ್ ದೇವಾನ್ ವಸುಭಿರ್ಬ್ರಹ್ಮಸಮ್ಭವೈಃ ।। (25.1 ಭವಿಷ್ಯಪರ್ವ)

ನಾರದಾದಿ ಮಹರ್ಷಿಗಳು, ಗಂಧರ್ವರು, ಋಷಿಗಳು, ಎಲ್ಲ ಸಜ್ಜನರು ಬ್ರಾಹ್ಮಣರು, ನಾಗಗಳು, ಚಂದ್ರ ಸೂರ್ಯ ಮೊದಲಾದ ದೇವತೆಗಳು ಎಲ್ಲರೂ ಕೂಡ ಪರಮಾತ್ಮನ ಪೂಜೆಯನ್ನು ಮಾಡುತ್ತ ಇದ್ದಾರೆ, ಯಜ್ಞವನ್ನು ಮಾಡುತ್ತಾರೆ, ಬ್ರಾಹ್ಮಣರ ಪೂಜೆಯನ್ನು ಮಾಡುತ್ತಾರೆ, ಸಜ್ಜನರ ಸತ್ಕಾರವನ್ನು ಮಾಡುತ್ತಾರೆ, ಸರ್ವೋತ್ತಮನಾದ ಸರ್ವಾಂತರ್ಯಾಮಿಯಾದ ಶ್ರೀಹರಿಯನ್ನು ತಾರತಮ್ಯದ ಕೊನೆಯಲ್ಲಿ ಪರಮಾತ್ಮನ ಪೂಜೆಯನ್ನು ಮಾಡಿ ಎಲ್ಲವನ್ನೂ ಅವನಿಗೆ ಸಮರ್ಪಣೆ ಮಾಡುತ್ತಾರೆ.

ಕುರ್ವನ್ತಿ ಸತತಂ ಯಜ್ಞೈ ಕ್ರಮಪ್ರಾಪ್ತಂ ಪಿತಾಮಹಮ್ ।। (25.2 ಭವಿಷ್ಯಪರ್ವ)

ಆ ತಾರತಮ್ಯ ಕ್ರಮದಲ್ಲಿ ಎಲ್ಲರಿಗೆ ಪಿತಾಮಹನಾದ, ಪ್ರಪಿತಾಮಹಾನಾದ ಮೂಲಕಾರಣನಾದ ಪರಮಾತ್ಮನನ್ನ ಸರ್ವೋತ್ತಮತ್ವೇನ ಪೂಜೆಯನ್ನು ಮಾಡುತ್ತಾರೆ ಎಲ್ಲ ದೇವತೆಗಳು, ಋಷಿಗಳು, ಗಂಧರ್ವರು ಎಲ್ಲರೂ ಕೂಡ. ಈ ರೀತಿ ಪರಮಾತ್ಮನ ನಂತರ ಪಿತಾಮಹ ಅಂದರೆ ಬ್ರಹ್ಮ ದೇವರು ಅವರನ್ನ ಜೀವೋತ್ತಮತ್ವೇನ ಪೂಜೆಯನ್ನು ಮಾಡುತ್ತಾರೆ. ವೇದಾದಿ ಸಕಲ ಸಚ್ಛಾಸ್ತ್ರಗಳ ಮರ್ಮವನ್ನರಿತು ಸಕಲ ವೇದಗಳ ಮುಖ್ಯ ತಾತ್ಪರ್ಯ ವಿಷಯನಾದ ಪರಮಾತ್ಮನ ಪಾರಮ್ಯವನ್ನ ತಿಳಿದು ಅವನನ್ನ ಪೂಜೆ ಮಾಡುವಂತಹ ಈ ಎಲ್ಲ ದೇವತೆಗಳು, ಋಷಿಗಳು, ಮುನಿಗಳನ್ನ ಬ್ರಹ್ಮ ದೇವರು ಬಹಳ ಪ್ರೀತಿಯಿಂದ ಪ್ರಶಂಸೆ ಮಾಡುತ್ತಾರೆ **'ದಿಷ್ಟ್ಯಾ ದಿಷ್ಟ್ಯಾ'** ಬಹಳ ದೊಡ್ಡ ಭಾಗ್ಯ ನಿಮ್ಮದು **'ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯ'.** ವೇದಗಳ ಮೇಲ್ನೋಟದ ಅರ್ಥವನ್ನು ತಿಳಿದು, ಬೇರೆ ಬೇರೆ ದೇವತೆಗಳನ್ನೇ ಸರ್ವೋತ್ತಮ ಅಂತ ಭಾವಿಸಿ, ಸ್ವರ್ಗ ಮೊದಲಾದ ನಶ್ವರವಾದ ಪುರುಷಾರ್ಥಗಳು, ಐಹಿಕವಾದಂತಹ ಧನಕನಕಾದಿಗಳೇ ಪುರುಷಾರ್ಥಗಳು ಅಂತ ಭಾವಿಸಿ ಮುಗ್ಧರಾದ ಜನರು ಪರಮಾತ್ಮನ

ಉಪಸಾನೆಯನ್ನೇ ಮಾಡದೇ ಇದ್ದವರೇ ಬಹಳ ಜನ. ಹೀಗಿರುವಾಗ ಅತ್ಯಂತ ಭಕ್ತಿ ಶ್ರದ್ಧೆಗಳಿಂದ ನೀವೆಲ್ಲ ಉಪಾಸನೆ ಮಾಡುತ್ತಾ ಇದ್ದೀರಿ ಅಂದರೆ **'ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯ' 'ದಿಷ್ಟ್ಯಾ ದಿಷ್ಟ್ಯೇತಿ ಭಾರತ'** [1] ದೊಡ್ಡ ಭಾಗ್ಯ ನಿಮ್ಮದು ಅಂತ ಬ್ರಹ್ಮ ದೇವರು ಎಲ್ಲರಿಗೆ ಪ್ರಶಂಸೆಯನ್ನು ಮಾಡಿದ್ದಾರೆ ಬಹಳ ಮಹತ್ವದ್ದು. ಸತ್ಕಾರ್ಯಗಳನ್ನು ಮಾಡಿದಾಗ ಅದಕ್ಕೆ ಪ್ರಶಂಸೆಯನ್ನು ಮಾಡಿದರೆ ಇನ್ನಷ್ಟು ಹೆಚ್ಚು ಸತ್ಕಾರ್ಯವನ್ನು ಮಾಡುತ್ತಾರೆ. ತಪ್ಪು ಮಾಡಿದಾಗ ತಿದ್ದಿ ಹೇಳುವುದು ಎಷ್ಟು ಅವಶ್ಯಕವೋ, ಸತ್ಕಾರ್ಯಗಳನ್ನು ಮಾಡಿದಾಗ ಪ್ರಶಂಸೆ ಮಾಡುವುದು, ಪ್ರೋತ್ಸಾಹನೆ ಕೊಡುವುದು ಅಷ್ಟೇ ಅಗತ್ಯವಾದದ್ದು ಆ ದೃಷ್ಟಿಯಲ್ಲಿ ಬ್ರಹ್ಮ ದೇವರು ಎಲ್ಲರನ್ನು ಬೆನ್ನು ಚಪ್ಪರಿಸಿದ್ದಾರೆ.

ಆಮೇಲೆ ಕಶ್ಯಪರನ್ನು ಕರೆಯುತ್ತಾರೆ. ಕಶ್ಯಪರೇ, ನೀವು ಯಜ್ಞ ಮಾಡುತ್ತ ಇದ್ದೀರಿ, ಪೂಜೆ ಮಾಡುತ್ತ ಇದ್ದೀರಿ, ಭಗವಂತನ ಸೇವೆಯನ್ನು ಮಾಡುತ್ತ ಇದ್ದೀರಿ ನೀವು ಮಾತ್ರ ಮಾಡುವುದಲ್ಲ, ನಿಮ್ಮ ಮಕ್ಕಳು ಅವರೂ ಮುಂದೆ ಯಜ್ಞವನ್ನು ಮಾಡಬೇಕು ಮಾಡುತ್ತಾರೆ. ನೀವೆಲ್ಲ ಅವರಿಗೆ ಉಪದೇಶವನ್ನು ಮಾಡಬೇಕು. ದೇವತೆಗಳು ಯಕ್ಷರು ಕಿನ್ನರರು ಸಿದ್ಧರು ಸಾಧ್ಯರು ಎಲ್ಲರೂ ನಿಮ್ಮ ಸಂತತಿ ತಾನೇ ಅವರೆಲ್ಲ ವಿಶೇಷವಾಗಿ ಮುಂದೆ ಯಜ್ಞವನ್ನು ಮಾಡಬೇಕು **'ಯಕ್ಷಾಃ ಸುರಾಶ್ಚ ತೇ ಸರ್ವೇ'** [2] ಅವರವರ ಯೋಗ್ಯತೆಗೆ ತಕ್ಕಂತೆ. ದೇವತೆಗಳು ಸತ್ವ ಪ್ರಧಾನರು ಸತ್ವಗುಣ ಪ್ರಧಾನರಾಗಿ ದೇವತೆಗಳು, ಕೆಲವರು ರಜೋಗುಣ ಪ್ರಧಾನರು, ಕೆಲವರು ತಮೋಗುಣ ಪ್ರಧಾನರಾಗಿರಬಹುದು ಆದರೆ ಅವರವರ ಯೋಗ್ಯತೆಗೆ ತಕ್ಕಂತೆ ಅವರವರು ಯಜ್ಞವನ್ನು ಮಾಡುತ್ತಾರೆ, ಮಾಡಬೇಕು, ಮಾಡುವಂತೆ ನೀವು ಪ್ರಚೋದನೆ ಮಾಡಬೇಕು, ಯಜ್ಞ ದಾನ ತಪಸ್ಸುಗಳನ್ನ ಎಲ್ಲರೂ ಮಾಡುವಂತೆ ಪ್ರಚೋದನೆ ಮಾಡುವುದೇ ಒಂದು ದೊಡ್ಡ ದೇವರ ಸೇವೆ ಅಂತ ಭಾವಿಸಿ. ಕಶ್ಯಪರಿಗೆ ಬ್ರಹ್ಮ ದೇವರು ಈ ಮಾತನ್ನು ಹೇಳುವ ಮೂಲಕ ಎಲ್ಲ ಪಾಲಕರಿಗೂ ಬ್ರಹ್ಮ ದೇವರು ಆದೇಶವನ್ನು ಕೊಡುತ್ತ ಇದ್ದಾರೆ. ನೀವು ಮಾತ್ರ ಯಜ್ಞ ಯಾಗಾದಿಗಳನ್ನು ಮಾಡಿದರೆ, ನೀವು ಮಾತ್ರ ಧರ್ಮವನ್ನು ಆಚರಣೆ ಮಾಡಿದರೆ ಸಾಲದು, ನಿಮ್ಮ ಮಕ್ಕಳಿಂದ ಧರ್ಮಾಚರಣೆಯನ್ನು ಮಾಡಿಸಿ, ಅವರನ್ನೂ ಧರ್ಮ ಮಾರ್ಗದಲ್ಲಿ ಬರುವಂತೆ ಮಾಡಿ, ಧರ್ಮದ ಮಹತ್ವ ಏನು ಅಂತ ತಿಳಿಸಿ. ನೀವು ನಿಮ್ಮ ಕಾಲದಲ್ಲಿ ಧರ್ಮವನ್ನು ಮಾಡಿದಾಗ ಏನು ಫಲವನ್ನು ಅನುಭವಿಸಿದ್ದೀರಿ ಅದನ್ನೂ ಬಣ್ಣಿಸಿ, ನಿಮ್ಮ ಹಿರಿಯರು, ನಿಮ್ಮ ಪ್ರಾಚೀನರು ಅಥವಾ ಇತಿಹಾಸ ಪುರಾಣಗಳಲ್ಲಿ ನೀವು ಕೇಳಿ ತಿಳಿದ ವಿಷಯ ಇವುಗಳೆಲ್ಲವನ್ನ ಅವರಿಗೆ ಹೇಳಿ ಆ ಧರ್ಮದಲ್ಲಿ ಆಸಕ್ತಿ ಹುಟ್ಟುವಂತೆ ಮಾಡಬೇಕು ಅದು ದೊಡ್ಡ ಸೇವೆ. ನೀವು ಮಾತ್ರ ಊಟ ಮಾಡಿ ಮಕ್ಕಳನ್ನ ಉಪವಾಸ ಇರುವ ಹಾಗೆ ಮಾಡುತ್ತೀರಾ, ನಿಮ್ಮ ಮನಸ್ಸು ಒಪ್ಪುತ್ತದಾ ಇಲ್ಲ ಹಾಗಾದರೆ ಮಕ್ಕಳಿಗೆ ಊಟ ಮಾಡಿಸಿ, ಊಟ ಮಾಡಬೇಕು ಅನ್ನುವ ಪ್ರೀತಿ ನಿಮ್ಮಲ್ಲಿ ಇದೆಯಲ್ಲ ಆ ಹೊಟ್ಟೆಗೆ ಆಹಾರವನ್ನು ನೀಡುವುದರೊಳಗೆ ನಿಮಗಿರುವ ಪ್ರೀತಿ ಅವರ ಬುದ್ಧಿಗೆ,ಅವರ ಆತ್ಮಕ್ಕೆ ಉತ್ತಮವಾದ ಜ್ಞಾನವೆಂಬ ಆಹಾರವನ್ನ, ಧರ್ಮವೆಂಬ ಆಹಾರವನ್ನ ನೀಡಿ ಅವರನ್ನು ಉದ್ಧಾರ ಮಾಡುವಲ್ಲಿ ಅಷ್ಟೇ ಆಸಕ್ತಿ, ಅಷ್ಟೇ ಪ್ರೀತಿ ನಿಮಗಿರಬೇಕು. ಈ ರೀತಿ ಒಂದು ದೊಡ್ಡ ಸಂದೇಶವನ್ನು ಎಲ್ಲ ಪಾಲಕರಿಗೆ ಬ್ರಹ್ಮ ದೇವರು ನೀಡುತ್ತ ಇದ್ದಾರೆ.

ಸರಿ, ದೇವತೆಗಳು ಅತ್ಯಂತ ಭಕ್ತಿ ಶದ್ಧೆಗಳಿಂದ ಸತ್ವ ಗುಣದಿಂದ ಯಜ್ಞ ಯಾಗಾದಿಗಳನ್ನು ಮಾಡಿದರು ದೇವರ ಉಪಾಸನೆ ಮಾಡಿದರು. ಕೆಲವರು ರಜೋ ಗುಣಗಳಿಂದ ಆದರೆ ದೈತ್ಯರು ಮಾತ್ರ ತಮೋ ಗುಣದಿಂದ ಯುಕ್ತರಾಗಿ ತಾಮಸವಾದ ಭಾವನೆಯಿಂದ ಅವರು ಯಜ್ಞ ಯಾಗಾದಿಗಳನ್ನು ಮಾಡುತ್ತಾರೆ. ಅವರ ಮನಸ್ಸು ಶುದ್ಧವಾಗಿ ಇಲ್ಲ, ಅವರ ಹೃದಯದಲ್ಲಿ ನಿಷ್ಕಾಮವಾದ ಭಕ್ತಿ ಇಲ್ಲ, ಸ್ವಾರ್ಥ ಇದೆ, ವಂಚನೆ ಇದೆ, ಡಂಭ ಇದೆ ನಾವೂ ಬಹಳ ಧಾರ್ಮಿಕರು ಅಂತ ತೋರಿಸಿಕೊಳ್ಳಬೇಕು ಎಂಬಂತಹ ಅಪೇಕ್ಷೆ ಇದೆ.

---

1. 25.4 ಭವಿಷ್ಯಪರ್ವ; 2. 25.6 ಭವಿಷ್ಯಪರ್ವ

ವಯಂ ಯಕ್ಷ್ಯಾಮಹೇ ಪೂರ್ವಂ ಪೂರ್ವಂ ಯಕ್ಷ್ಯಾಮಹೇ ವಯಮ್ । (25.7 ಭವಿಷ್ಯಪರ್ವ)

ಈ ರೀತಿಯಾಗಿ ಪರಸ್ಪರವಾಗಿ ಘರ್ಷಣೆಯನ್ನು ಮಾಡುತ್ತ ಯಜ್ಞ ಯಾಗಾದಿಗಳನ್ನು ಅವರೆಲ್ಲ ಮಾಡಿದ್ದಾರೆ ಅವರವರ ಯೋಗ್ಯತೆಗೆ ತಕ್ಕಂತೆ. ಆದರೆ ದೇವ ದೈತ್ಯರ ಮಧ್ಯದಲ್ಲಿ ಯುದ್ಧವಾದಾಗ, ದೇವತೆಗಳು ಎಷ್ಟು ತಮ್ಮ ಪರಾಕ್ರಮವನ್ನು ಉಪಯೋಗಿಸಿದರೂ ಸೋಲು ಬರುತ್ತ ಇದೆ, ಪರಮಾತ್ಮನ ಉಪಾಸನೆಯನ್ನು ಮಾಡೋಣ ಅಂತ ಒಂದೊಂದು ಅಧಿಷ್ಠಾನದಲ್ಲಿ ಭಗವಂತನ ಉಪಾಸನೆಯನ್ನು ಮಾಡುತ್ತ ಇದ್ದಾರೆ ದೇವತೆಗಳು. ಅಗ್ನಿ ವಾಯು ಮೊದಲಾದ ಒಂದೊಂದು ಅಧಿಷ್ಠಾನದಲ್ಲಿ ಪರಮಾತ್ಮನ ಉಪಾಸನೆ ಮಾಡಿದರೆ ಆ ಆ ಅಧಿಷ್ಠಾನ ದೇವತೆಗಳ ಮೇಲೆ ದೈತ್ಯರು ಆಕ್ರಮಣ ಮಾಡಿ ಆ ಅಧಿಷ್ಠಾನವನ್ನು ಅಶುದ್ಧ ಮಾಡುತ್ತಾರೆ. ಅನ್ನೋದಕ್ಕಾಗೇನೆ ಅಗ್ನಿಯು ವಾಗೇಂದ್ರಿಯಕ್ಕೆ ಅಭಿಮಾನಿ ದೇವತೆ, ಮಾತನಾಡಬೇಕಾದದ್ದನ್ನು ಮಾತನಾಡುತ್ತೇವೆ, ಮಾತನಾಡಬಾರದ್ದನ್ನು ಕೆಲವೊಮ್ಮೆ ಮಾತನಾಡುತ್ತೇವೆ ನಾವು ಯಾಕೆ ಅಂದರೆ ಆ ಅಗ್ನಿ ದೇವತೆಯ ಮೇಲೆ ದೈತ್ಯರ ಆಕ್ರಮಣ. ಚಕ್ಷುದಿಂದ್ರಿಯ ನೋಡಬೇಕಾದ್ದನ್ನು ನೋಡುತ್ತದೆ, ನೋಡಬಾರದ್ದನ್ನು ನೋಡುತ್ತದೆ ಯಾಕೆ ಅಂದರೆ ಸೂರ್ಯನ ಮೇಲೂ ಆಕ್ರಮಣ ಆಗಿದೆ ದೈತ್ಯರದು. ಹೀಗೆ ಎಲ್ಲ ದೇವತೆಗಳ ಮೇಲೆ ದೈತ್ಯರು ಆಕ್ರಮಣ ಮಾಡಿದ್ದಕ್ಕೆ ಯಾವ ದೇವತೆಯ ಅಧಿಷ್ಠಾನದಲ್ಲಿ ಪರಮಾತ್ಮನ ಉಪಾಸನೆ ಮಾಡಬೇಕು ಅಂದರೂ ಆಗುತ್ತಾ ಇಲ್ಲ. ಕೊನೆಗೆ ವಾಯು ದೇವರಲ್ಲಿ ಪರಮಾತ್ಮನ ಉಪಾಸನೆಯನ್ನು ಮಾಡಿದ್ದಾರೆ ಮುಖ್ಯಪ್ರಾಣ ದೇವರಲ್ಲಿ, ಮುಖ್ಯಪ್ರಾಣ ದೇವರ ಮೇಲೂ ದೈತ್ಯರು ಆಕ್ರಮಣ ಮಾಡುವುದಕ್ಕೆ ಪ್ರಯತ್ನ ಮಾಡಿ ತಾವೇ ವಿಧ್ವಸ್ಥರಾಗಿ ಹೋಗಿದ್ದಾರೆ. ದೊಡ್ಡದಾದ ಬಂಡೆಗಲ್ಲಿನ ಮೇಲೆ ಮಣ್ಣಿನ ಹೆಂಟೆ ಒಗೆದರೆ ಹೇಗೆ ಪುಡಿ ಪುಡಿ ಆಗಬೇಕೋ ಹಾಗೆ ಎಲ್ಲ ದೈತ್ಯರೂ ಕೂಡ ತಾವೇ ನಶಿಸಿ ಹೋಗಿದ್ದಾರೆ ಆಕ್ರಮಣ ಮಾಡಲಿಕ್ಕೆ ಆಗಿಲ್ಲ. ಅಂತಹ ಶುದ್ಧವಾದ ವಾಯು ದೇವರೆಂಬ ಮುಖ್ಯಪ್ರಾಣ ದೇವರೆಂಬ ಅಧಿಷ್ಠಾನದಲ್ಲಿ ಯಾವಾಗ ದೇವತೆಗಳು ಪರಮಾತ್ಮನ ಉಪಾಸನೆಯನ್ನು ಮಾಡುತ್ತಾರೆ ಉದ್ಗೀಥನಾಮಕನಾದ ಆ ಪರಮಾತ್ಮನ ಉಪಾಸನೆಯನ್ನು ಮಾಡಿದಾಗ ದೇವತೆಗಳಿಗೆ ವಿಜಯ ಪ್ರಾಪ್ತವಾಗುತ್ತದೆ ಅಂತ ಉಪನಿಷತ್ತಿನಲ್ಲಿ ಹೇಳುವ ತತ್ವವನ್ನು ಇಲ್ಲಿ ತಿಳಿಸಿಕೊಡುತ್ತಾರೆ. ಆ ರೀತಿ ದೇವತೆಗಳೆಲ್ಲ ಭಗವಂತನ ವಾಯು ದೇವರ ಅನುಗ್ರಹದಿಂದ ಗೆದ್ದಿದ್ದಾರೆ. ಈ ರೀತಿ ಮುಂದೆ ನಾನಾ ವಿಧವಾಗಿರುವಂತಹ ವಿಘ್ನಗಳು ಸಾಕಷ್ಟು ತಪಸ್ಸಿಗೆ ಇವರು ಮಾಡುವಂತಹ ಯಜ್ಞ ಯಾಗಾದಿಗಳಿಗೆ ಬರುತ್ತದೆ ಅಷ್ಟಿದ್ದರೂ ಕೂಡ ಅದೆಲ್ಲವನ್ನು ಮೀರಿ ಆ ಪರಮಾತ್ಮನ ಅನುಗ್ರಹದಿಂದ ಋಷಿ ಮುನಿಗಳು, ದೇವತೆಗಳು ತಮ್ಮ ಸಾಧನೆಯನ್ನು ಮುಂದುವರೆಸಿದ್ದಾರೆ.

ಈ ಕಡೆಗೆ ಮಧು-ಕೈಟಭರ ಕಥೆ ಹಿಂದೆ ಬಂದಿದೆ ಅದನ್ನು ಮತ್ತೆ ವರ್ಣನೆ ಮಾಡುತ್ತಾರೆ. ಆ ಮಧು ದೈತ್ಯ ಹಿಂದೆ ತಿಳಿದಂತೆ ವಾಯು ದೇವರ ಆವೇಶದಿಂದ ಬಲ ಇದೆ, ಬ್ರಹ್ಮದೇವರ ವರದಿಂದ ಅವಧ್ಯರು, ದೇವರ ಕಿವಿಯಿಂದ ಹುಟ್ಟಿದವರು ಭಾರೀ ಉಗ್ರವಾದಂತಹ ಯುದ್ಧವನ್ನು ಮಾಡುತ್ತ ಇದ್ದಾರೆ ಪರಮಾತ್ಮನ ಜೊತೆಗೆ. ಪರಮಾತ್ಮನ ಜೊತೆಗೆ ಯುದ್ಧವನ್ನು ಮಾಡುತ್ತ ಇರುವಾಗ ಇಂದ್ರ ದೇವರು ಮಧ್ಯದಲ್ಲಿ ಬಂದಿದ್ದಾರೆ. ಇಂದ್ರ ದೇವರು ಯಾರು ಅಂತ ಗೊತ್ತಿಲ್ಲ ಮಧುವಿಗೆ, ಪ್ರಹ್ಲಾದನಿಗೆ ಕೇಳಿದ್ದಾನೆ ಇಂದ್ರ ಅಂದರೆ ಹೇಗಿರುತ್ತಾನೆ, ಅವನು ಯಾರು ಇಷ್ಟು ಜನ ಇದ್ದಾರಲ್ಲ ಇದರೊಳಗೆ ಇಂದ್ರ ಯಾರು, ಇಂದ್ರನ ಲಕ್ಷಣವನ್ನು ಹೇಳಿದ್ದಾನೆ. ಇಂದ್ರನ ಲಕ್ಷಣಗಳನ್ನು ಹೇಳಿದಾಗ **'ವಜ್ರಹಸ್ತ ಸಹಸ್ರಾಕ್ಷಃ'** ಆ ಇಂದ್ರ ದೇವರ ಗುರುತನ್ನು ತಿಳಿದು, ಇಂದ್ರ ದೇವರನ್ನು ಪಾಶದಿಂದ ಬಂಧನ ಮಾಡಿ ಇಟ್ಟಿದ್ದಾನೆ ಮಧು ದೈತ್ಯ.

ತಂ ವೈ ಪ್ರಹ್ಲಾದವಚನಾತಲ್ಲಕ್ಷಣಜ್ಞಶ್ಚ ಭಾರತ ।
ಐಶ್ವರ್ಯಮೈನ್ದ್ರ ಮಾಕಾಂಕ್ಷನ್ ಭವಿಷ್ಯಂ ಬುದ್ಧಿಸಂಕ್ಷಯಾತ್ ॥ (26.2 ಭವಿಷ್ಯಪರ್ವ)

ಬುದ್ಧ್ವೈನ್ದ್ರಂ ಸಹಸಾ ಮಧ್ಯೇ ಪಾಶೈರ್ಮರ್ಮವಿವರ್ಜಿತೈಃ ॥ (26.3 ಭವಿಷ್ಯಪರ್ವ)

ಕಬ್ಬಿಣದ ಪಾಶಗಳಿಂದ ಇಂದ್ರನನ್ನ ಬಂಧನ ಮಾಡಿದ್ದಾನೆ. ಬಂಧನ ಮಾಡಿ ನನ್ನ ಜೊತೆಗೆ ಯುದ್ಧ ಆಡಬೇಕು ಅಂದರೆ ನೀವು ಯಾರಲ್ಲ ವಿಷ್ಣುವೇ ಯುದ್ಧ ಆಡಬೇಕು, ನೀವೆಲ್ಲ ಹತ್ತಿರ ಬರಬೇಡಿ ಅಂದ ಪರಮಾತ್ಮನ ಜೊತೆಗೆ ಯುದ್ಧವನ್ನು ಮಾಡುತ್ತ ಇದ್ದಾನೆ. ಈ ಕಡೆಗೆ ಆ ದೇವ ದಾನವರ ಮಧ್ಯದಲ್ಲಿ ಘೋರವಾದಂತಹ ಯುದ್ಧ ನಡೆಯುತ್ತ ಇದೆ, ಮಧು, ವಿಷ್ಣು ಉಪಲಕ್ಷಣ ಕೈಟಭನೂ ಯುದ್ಧ ಮಾಡುತ್ತ ಇದ್ದಾನೆ, ಮಧು-ಕೈಟಭರ ಜೊತೆಗೆ ಯುದ್ಧ ನಡೆಯುತ್ತ ಇದೆ ಬ್ರಹ್ಮ ದೇವರು ಒಂದು ಉಪಾಯವನ್ನು ಹೇಳಿದರು. ಎಲ್ಲ ಗಂಧರ್ವರಿಗೆ ನೀವು ಹಾಡು ಹಾಡಿ ಅಂತ ಹೇಳಿದರು ಗಂಧರ್ವರು, ಕಿನ್ನರರು ನೀವೆಲ್ಲ ವಾದ್ಯಗಳನ್ನು ಬಾರಿಸಿ ಹಾಡು ಹಾಡಿ, ಸಂಗೀತ ಕಾರ್ಯಕ್ರಮ ಮಾಡಿ. ಅಲ್ಲ ಸ್ವಾಮಿ ಯುದ್ಧ ನಡೆಯುತ್ತ ಇದೆ ನಾನು ಹೇಳಿದಷ್ಟು ಕೇಳಿ ಅಂದರು, ಯುದ್ಧ ನಡೆಯಲಿ ನೀವು ಸಂಗೀತ ಕಛೇರಿಯನ್ನು ಮಾಡಬೇಕು ಅಂತ ಬ್ರಹ್ಮ ದೇವರು ಆಜ್ಞೆಯನ್ನು ಮಾಡಿದ್ದಾರೆ. ವೀಣಾ ತೆಗೆದುಕೊಂಡಿದ್ದಾರೆ ಇನ್ನು ಅನೇಕ ಮೃದಂಗ ಮೊದಲಾದ ವಾದ್ಯಗಳು, ವೀಣಾದಿ ವಾದ್ಯಗಳು ಅವುಗಳೆಲ್ಲವನ್ನ ಅತ್ಯಂತ ರಮಣೀಯವಾಗಿ ಬಾರಿಸುತ್ತ ದಿವ್ಯವಾದ ಗಾನ ಕೇಳಬೇಕೇ, ದೇವತೆಗಳು ಗಂಧರ್ವರು ಭಾರೀ ಗಾನವನ್ನು ಮಾಡುತ್ತ ಇದ್ದಾರೆ. ಉದ್ದೇಶ್ಯ ಏನು ಅಂದರೆ ಆ ಮಧುವಿನ ಮನಸ್ಸು ಯುದ್ಧದಲ್ಲಿ ಆಸಕ್ತವಾಗದಂತೆ ಈ ಸಂಗೀತದೊಳಗೆ ಆಸಕ್ತವಾದರೆ ಅವನು ಯುದ್ಧವನ್ನು ಚೆನ್ನಾಗಿ ಆಡಲಿಕ್ಕೆ ಆಗುವುದಿಲ್ಲ. ಅವನ ಗಮನ ಆಚೆಈಚೆ ಹೋಗುತ್ತದೆ ಹಾಗಾದಾಗ ಅವನನ್ನು ಸೋಲಿಸಲಿಕ್ಕೆ ಸಾಧ್ಯ ಅಂತ. ದೇವರಿಗೆ ಇಂತಹ ಎಲ್ಲ ಸಹಾಯ ಬೇಕಿಲ್ಲ ಅಚಿಂತ್ಯವಾದ ಅದ್ಭುತವಾದ ಅನಂತ ಬಲ ಇರುವ ಪರಮಾತ್ಮನಿಗೆ ಈ ಮಧುವನ್ನು ಸೋಲಿಸುವುದು ಯಾವ ದೊಡ್ಡ ಮಾತೂ ಅಲ್ಲ ಆದರೂ ನಮ್ಮದೊಂದು ಸೇವೆ ಇರಲಿ ಅಂತ ಆ ಮಧುವಿನ ಮನಸ್ಸನ್ನು ಈಚೆಗೆ ಸೆಳೆದು ಅವನ ಬಲವನ್ನ ಕುಂದುವಂತೆ ಮಾಡಬೇಕು ಅಂತ ಪ್ರಯತ್ನ ಮಾಡುತ್ತ ಇದ್ದಾರೆ. ಅವರು ಆ ರೀತಿ ಆಜ್ಞೆಯನ್ನು ಮಾಡಿದ್ದಾರೆ.

ಏತಾನ್ ವಿಕಾರಾನ್ ಕುರ್ವನ್ತಿ ಗನ್ಧರ್ವಾಃ ಸತ್ಯವಾದಿನಃ ॥ (26.8 ಭವಿಷ್ಯಪರ್ವ)

ಈ ಕಡೆಗೆ ಪರಮಾತ್ಮ ಆ ಮಧುವಿನ ಜೊತೆಗೆ ಯುದ್ಧವನ್ನು ಮುಂದುವರೆಸಿದ್ದಾನೆ. ಯುದ್ಧ ಮಾಡುತ್ತ ಮಾಡುತ್ತ ಇರುವಾಗ ಜೋರಾಗಿ ತನ್ನ ಭುಜದಿಂದ ಪರಮಾತ್ಮನ ಶಂಖ ಧಾರಣ ಮಾಡಿದ ಕೈಗೆ ಜೋರಾಗಿ ಹೊಡೆದಿದ್ದಾನೆ. ಶಂಖ ಚಕ್ರ ಗದಾ ಪದ್ಮಗಳನ್ನ ಧಾರಣೆ ಮಾಡಿದ ಭಗವಂತನ ಭುಜಗಳಲ್ಲಿ ಒಂದಾದ ಶಂಖವನ್ನ ಧಾರಣೆ ಮಾಡಿದ ಪರಮಾತ್ಮನ ಎಡ ಭುಜಕ್ಕೆ ಜೋರಾಗಿ ಪ್ರಹಾರವನ್ನು ಮಾಡಿದ್ದಾನೆ. ಕಂಪಿಸಿ ಹೋಗಿದೆ, ಕಂಪಿಸಿದೆಯಾ ನಿಜವಾಗಿ, ಪರಮಾತ್ಮನಿಗೆ ಯಾವುದೇ ವಿಧವಾದಂತಹ ಕಂಪ ಇಲ್ಲ ಆದರೂ ಸ್ವಲ್ಪ ಕಂಪನ ಮಾಡಿದಂತೆ ನಾಟಕ ಮಾಡಿದ. ತಾನೊಂದು ಜೋರಾಗಿ ಹೊಡೆದ ನೋಡಿ ಪರಮಾತ್ಮ **'ನ ಚಕಮ್ಪೇ ಪದಾತ್ಪದಮ್'**[1] ಭಗವಂತನಿಗೆ ಯಾವುದೇ ವಿಧವಾಗಿರುವಂತಹ ಕಂಪ ಇಲ್ಲ, ಕ್ಷೋಭ ಇಲ್ಲ, ವಿಸ್ಪಲತೇ ಇಲ್ಲ, ಶ್ರಮ ಇಲ್ಲ. ಇವನಿಗೆ ಏನೋ ಒಂದು ತೃಪ್ತಿ ನಾನು ಜೋರಾಗಿ ಹೊಡೆದೆ ಗುದ್ದಿದೆ ದೇವರಿಗೆ ಅಂತ ಆದರೆ ಹೇಗೆ ಹನುಮಂತ ದೇವರಿಗೆ

1. 25.6 ಭವಿಷ್ಯಪರ್ವ

ರಾವಣ ಗುದ್ದಿದರೆ ಏನಾಗಲಿಲ್ಲ. ತಿರುಗಿ ಹನುಮಂತ ದೇವರು ಒಂದು ಹೊಡೆಯುತ್ತಾರೆ ನೋಡಿ ಹತ್ತೂ ಮುಖಗಳಿಂದ ರಕ್ತ ಕಾರಿ ಬೀಳುತ್ತಾನಲ್ಲ ಹಾಗೆ ಹನುಮಂತ ದೇವರಿಗಿಂತಲೂ ಅನಂತ ಪಟ್ಟು ಬಲಶಾಲಿಯಾದ ಪರಮಾತ್ಮ ಆ ಮಧುವಿಗೆ ಜೋರಾಗಿ ಗುದ್ದಿದರೆ ಎರಡೂ ಮೊಳಕಾಲ ಮೇಲೆ ಕೆಳಗೆ ಕುಳಿತು ರಕ್ತ ಕಾರಿ ಒದ್ದಾಡುತ್ತ ಇದ್ದಾನೆ ಮಧು. ಇನ್ನೊಂದು ಗುದ್ದಿದ್ದರೆ ಸತ್ತೆ ಹೋಗುತ್ತ ಇದ್ದ ದೇವರು ಗುದ್ದಲಿಲ್ಲ ಯಾಕೆ ಅಂದರೆ ಬಾಹು ಯುದ್ಧ ನಡೆದಿದೆ ಒಂದೊಂದು ಯುದ್ಧಕ್ಕೆ ಒಂದೊಂದು ನಿಯಮಗಳು ಇರುತ್ತದೆ. ಬಾಹು ಯುದ್ಧ ನಡೆದಾಗ ಇಬ್ಬರೂ ನಿಂತು ಯುದ್ಧ ಮಾಡಬೇಕು ಅವನು ಕೆಳಗೆ ಬಿದ್ದಿದ್ದಾನೆ ಈಗ, ಮೊಳಕಾಲ ಮೇಲೆ ನಿಂತಿದ್ದಾನೆ, ರಕ್ತ ಕಾರುತ್ತಾ ಇದ್ದಾನೆ. ಅವನಿಗೆ ಅವಕಾಶ ಕೊಟ್ಟ ಸುಧಾರಿಸಿಕೋ ಎಷ್ಟು ರಕ್ತ ಕಾರುತ್ತೀ ಕಾರು, ಎದ್ದು ನಿಲ್ಲು ಗಟ್ಟಿಮುಟ್ಟಿಯಾಗಿ ನಿಂತು ಯುದ್ಧ ಮಾಡುವುದಕ್ಕೆ ಪ್ರಾರಂಭ ಮಾಡು ಆಮೇಲೆ ನಾನು ಯುದ್ಧ ಮಾಡುತ್ತೇನೆ ಅಂತ.

ಬಾಹುಯುದ್ಧೇ ಹಿ ಸಮಯಂ ಮತ್ವಾಚಿನ್ತ್ಯಪರಾಕ್ರಮ ॥ (26.14 ಭವಿಷ್ಯಪರ್ವ)

ಅವನಿಗೆ ಏನು ಭಯ ಹೇ ಎದ್ದರೆ ಮತ್ತೇನು ಮಾಡುತ್ತಾನೋ ಅಂತ ಭಯ ಇದೆಯಾ ದೇವರಿಗೆ ಅಚಿಂತ್ಯ ಶಕ್ತಿ ಸಂಪನ್ನನಾದ ಭಗವಂತನಿಗೆ ಭಯವಿಲ್ಲ, ಅವನಿಗೆ ಅವಕಾಶ ಕೊಟ್ಟ ಏಳು ಸುಧಾರಿಸಿಕೊಂಡು ಎದ್ದು ಯುದ್ಧ ಮಾಡು ಅಂತ ಮತ್ತೆ ಎದ್ದಿದ್ದಾನೆ, ಮತ್ತೆ ಯುದ್ಧ ಆಗುತ್ತ ಇದೆ. ಶ್ರೀಮದಾಚಾರ್ಯರು ನಿರ್ಣಯ ಕೊಟ್ಟಿದ್ದಾರೆ ಅನೇಕ ಕಡೆಗೆ **'ವಿದ್ಧವನ್ ಮುಗ್ಧವಚ್ಚೈವ ಕೇಶವೋ ವೇದನಾರ್ತವತ್'** ಗಾಯ ಆದಂತೆ ತೋರಿಸುತ್ತಾನೆ, ರಕ್ತ ಬಂದಂತೆ ತೋರಿಸುತ್ತಾನೆ ದೇವರು, ಎಲ್ಲಿದೆ ಆ ಪರಮಾತ್ಮನಿಗೆ ಪ್ರಾಕೃತವಾದ ಶರೀರ.

ನ ತಸ್ಯ ಪ್ರಾಕೃತಾ ಮೂರ್ತಿರ್ಮಾಂಸಮೇದೋಽಸ್ಥಿಸಂಭವಾತ್ ॥ (75.44 ರುದ್ರ ಗೀತಾ)

ಮಾಂಸ ಮೇದಸ್ಸು ಅಸ್ಥಿ ರಕ್ತ ಇವುಗಳೆಲ್ಲವೂ ದೇವರಿಗೆ ಇದೆ ಆದರೆ ಪ್ರಾಕೃತವಾದದ್ದಿಲ್ಲ. ಅಪ್ರಾಕೃತವಾದ ಚಿನ್ಮಯವಾದಂತಹ ಶರೀರ, ಚಿನ್ಮಯವಾದ ರಕ್ತ, ಚಿನ್ಮಯವಾದ ಮಾಂಸ, ಚಿನ್ಮಯವಾದ ಅಸ್ಥಿಗಳು ಆ ಪರಮಾತ್ಮನಿಗೆ ಅಂತಹ ಪರಮಾತ್ಮನಿಗೆ ಯಾವುದೇ ಭೇದ ಭೇಧಾದಿ ವಿಕಾರಗಳಿಲ್ಲ, ಆದರೂ ಕೂಡ ಎರಡು ದೊಡ್ಡ ಪರ್ವತಗಳು ಯುದ್ಧವಾಡುತ್ತ ಇವೆ ಅನ್ನುವ ಹಾಗೆ ದೊಡ್ಡ ರೂಪವನ್ನು ತೆಗೆದುಕೊಂಡು ಮಧು ಇದ್ದಾನೆ, ಮಧುಸೂದನ ಈ ಕಡೆಗೆ ಅಷ್ಟೇ ದೊಡ್ಡ ರೂಪವನ್ನು ತೆಗೆದುಕೊಂಡು ಯುದ್ಧವಾಡುತ್ತ ಇದ್ದಾನೆ ಎರಡು ಪರ್ವತಗಳಂತೆ. ಒಬ್ಬರಿಗೊಬ್ಬರು ಗಾಯ ಮಾಡಿಕೊಂಡರೆ ಪರ್ವತದ ಮೇಲಿನಿಂದ ಅನೇಕ ನದಿಗಳು ಹರಿದಂತೆ, ಅನೇಕ ಗೈರಿಕಾದಿ ಧಾತುಗಳು ಕೆಂಪಾದ ತಮ್ಮ ರಸಗಳನ್ನು ಸುರಿಸಿದಂತೆ ಇಬ್ಬರ ಮೈ ಮೇಲಿಂದ ರಕ್ತದ ಧಾರೆ ಸುರಿಯುತ್ತ ಇದೆ ಅಂತೆ ಎಲ್ಲ ನಾಟಕ ದೇವರದು ಆ ರೀತಿ ನಾಟಕ ಮಾಡಿದ್ದಾನೆ. ಈ ಕಡೆಗೆ ಎಲ್ಲರೂ ಸ್ತೋತ್ರ ಮಾಡುತ್ತಾರೆ ಸಾಕು ಇನ್ನು ಕ್ರೀಡೆ ಆಟ ಆಡಬೇಕು ಅಂತ ನಿನಗೆ ಇದೆ, ಇವರೆಲ್ಲ ಮಕ್ಕಳ ಜೊತೆಗೆ ಆಟ ಆಡುತ್ತ ಇದ್ದ ಹಾಗೆ ಆಟ ಆಡುತ್ತಾ ಇದ್ದೀಯಾ, ನಿನ್ನ ಅದ್ಭುತವಾದ ಪರಾಕ್ರಮ, ಅಚಿಂತ್ಯವಾದ ಶಕ್ತಿಯನ್ನು ಉಪಯೋಗಿಸಿದರೆ ಒಂದು ಕ್ಷಣ ಸಾಕು ಇಂತಹ ಎಲ್ಲ ದುಷ್ಟ ಶಕ್ತಿಗಳ ದಮನ ಮಾಡಲಿಕ್ಕೆ. ಮಧು ಈ ಶಬ್ದವೇ ಹೇಳುವಂತೆ ಮಧು ಅಂದರೆ ಮಧುರವಾದ ವಿಷಯಗಳು ಆ ವಿಷಯಗಳ ಬಗ್ಗೆ ಇರುವಂತಹ ಆಸಕ್ತಿ ಸಾಧಕರು ಸಜ್ಜನರು ಮೋಕ್ಷ ಸಾಧನೆಯನ್ನು ಮಾಡುವಂತಹ ಅಪೇಕ್ಷೆ ಇರುವಂತಹ ಭಕ್ತರಿಗೆ ಏನು ಈ ಮಧು ಮಧುರ ವಿಷಯಗಳ ಆಕರ್ಷಣೆ ಅವರ ಸಾಧನೆಗೆ ವಿಘ್ನ ರೂಪದಲ್ಲಿ ಅಡ್ಡಿಯಾಗಿ ಆತಂಕವಾಗಿ ಬರುತ್ತೋ ಅದೆಲ್ಲವನ್ನು ಪರಿಹಾರ ಮಾಡಿ ಅವರು ನಿರಾತಂಕವಾಗಿ ತಮ್ಮ ಸಾಧನೆಯನ್ನು ಮಾಡುವುದಕ್ಕೆ ಪರಮಾತ್ಮ ಅನುಗ್ರಹ ಮಾಡುತ್ತಾನೆ ಅನ್ನುವುದರ ಒಂದು

ಸಂಕೇತ ಇದು. ಮಧುನಾಮಕ ದೈತ್ಯನನ್ನ ಪರಮಾತ್ಮ ಸಂಹಾರ ಮಾಡಬೇಕಾಗಿದೆ ಎಲ್ಲರೂ ಆಕಾಶ ಮಾರ್ಗದಲ್ಲಿ ಬಂದು ಆ ಪರಮಾತ್ಮನ ಸ್ತೋತ್ರವನ್ನು ಮಾಡುತ್ತಾರೆ, ಪರಮಾತ್ಮನ ಅದ್ಭುತವಾದ ಸ್ತುತಿಯನ್ನು ಮಾಡಿದ್ದಾರೆ. ಅನಂತ ರೂಪಗಳು ನಿನಗೆ, ಅಂತರ್ಯಾಮಿ ರೂಪಗಳು ಅನಂತ, ಅವತಾರ ರೂಪಗಳೂ ಅನಂತ ಅಂತಹ ಅಂತರ್ಯಾಮಿ ರೂಪಗಳಿಂದಲೂ ಜಗತ್ತಿನ ರಕ್ಷಣೆಯನ್ನು ಮಾಡುತ್ತೀ, ಅವತಾರಗಳನ್ನು ಸ್ವೀಕಾರ ಮಾಡಿ ಜಗತ್ತಿನ ರಕ್ಷಣೆಯನ್ನು ಮಾಡುತ್ತೀ.

ಸುರೂಪೋ ಬಹುರೂಪಾಂಸ್ತಾನ್ಲೋಕಾನ್ ಸಂಚರತೇ ವಶೀ ॥ (26.27 ಭವಿಷ್ಯಪರ್ವ)

ಗೋವುಗಳಿಗೆ ಹಾಲನ್ನು ಕೊಟ್ಟು ಕರುಗಳನ್ನ ರಕ್ಷಣೆ ಮಾಡುತ್ತೀಯಾ, ಅಶ್ವಗಳಿಗೆ ವಿಶೇಷವಾದ ಶಕ್ತಿಯನ್ನು ಕೊಟ್ಟಿದ್ದೀ, ಯಜ್ಞಗಳಲ್ಲಿ ಪ್ರೋಕ್ಷಿತವಾದ ಅಶ್ವಗಳನ್ನ ಆಹುತಿಯಾಗಿ ಕೊಟ್ಟು ಅವುಗಳು ಉತ್ತಮವಾದ ಸ್ವರ್ಗಾದಿ ಲೋಕಗಳನ್ನು ಹೊಂದುವಂತೆ ಮಾಡುತ್ತೀಯಾ, ಪಿತೃಗಳಿಗೆ ಊಷ್ಮವನ್ನೇ ಆಹಾರವಾಗಿ ಕೊಟ್ಟಿದ್ದೀ, ದೇವತೆಗಳಿಗೆ ಹವಿಸ್ಸನ್ನ ಇನ್ನಿತರ ಮಾನವರಿಗೆ ಯೋಗ್ಯವಾದಂತಹ ಅನ್ನವನ್ನ ಅವರಿಗೆ ಕೊಟ್ಟಿದ್ದೀ ಒಟ್ಟು ಸಪ್ತಾನ್ನಗಳು. ಮನಸ್ಸು ವಾಕ್ ಪ್ರಾಣ ಇವುಗಳನ್ನ ದೇವರು ತಾನು ತನಗಾಗಿ ಇಟ್ಟುಕೊಂಡಿದ್ದಾನೆ ಅಂತೇನೆ ಮನಸ್ಸಿನಿಂದ ಧ್ಯಾನ, ಮಾತಿನಿಂದ ಸ್ತುತಿ, ಕ್ರಿಯಾ ಶಕ್ತಿಯಿಂದ ಪರಮಾತ್ಮನ ಕೈಂಕರ್ಯವನ್ನ ಮಾಡಿದರೆ ಪರಮಾತ್ಮನಿಗೆ ಸಂತೋಷವಾಗುತ್ತದೆ ಅದೇ ದೇವರಿಗೆ ಪ್ರೀತಿಯ ಅನ್ನ. ದೇವತೆಗಳಿಗೆ ಹುತ ಪ್ರಹುತ ಅಂತ ಎರಡು ಅನ್ನಗಳನ್ನ ಕೊಟ್ಟಿದ್ದಾನೆ, ಪಶುಗಳಿಗೆ ಹಾಲನ್ನು ಕೊಟ್ಟಿದ್ದಾನೆ. ಇನ್ನುಳಿದ ಅನ್ನ ಎಲ್ಲರಿಗೆ ಸಾಧಾರಣವಾದ ಎಲ್ಲರೂ ಸ್ವೀಕಾರ ಮಾಡುವಂತಹ ಒಂದು ಅನ್ನ ಹೀಗೆ ಸಪ್ತಾನ್ನಗಳನ್ನು ಕೊಟ್ಟು ಜಗತ್ತಿನ ರಕ್ಷಣೆ ಮಾಡುವಂತಹ ಸ್ವಾಮಿ ನೀನು. ಏಳು ಜನ ಪಿತೃಗಳು ಹಿಂದೆ ಹೇಳಿದಂತೆ ಪಿತೃ ಕಲ್ಪದಲ್ಲಿ ಕವ್ಯವಾಟ್, ಅನಲ, ಯಮ ಸೋಮ, ಅರ್ಯಮ, ಅಗ್ನಿಸ್ವತ್ತ, ಸೋಮಪ ಅಂತ ಅದರಲ್ಲಿ ಮೂರು ಜನರು ಸೂರ್ಯನನ್ನ, ನಾಲ್ಕು ಪಿತೃಗಳು ಚಂದ್ರನನ್ನ ವಿಶೇಷವಾಗಿ ಸಂತೋಷ ಪಡಿಸುತ್ತಾರೆ ಅದೆಲ್ಲವೂ ನಿನ್ನ ಪ್ರೇರಣೆಯಂತೆ. ಜಗತ್ತಿನೊಳಗಿರುವಂತಹ ಎಲ್ಲ ತೇಜಸ್ಸನ್ನ ಸ್ವೀಕಾರ ಮಾಡಿ, ನೀರನ್ನ ಸ್ವೀಕಾರ ಮಾಡಿ ಮಳೆಯನ್ನು ಕೊಡುತ್ತೀಯಾ ಆದ್ದರಿಂದಲೇ ನಿನಗೆ ಆದಿತ್ಯ ಅಂತ ಕರೆಯುತ್ತಾರೆ.

ಯದಾದತ್ಸಿ ಜಗತ್ ಸರ್ವಂ ರಶ್ಮಿಭಿಃ ಪ್ರದಹನ್ನಿವ ॥ (26.37 ಭವಿಷ್ಯಪರ್ವ)

ಪ್ರಲಯ ಕಾಲದಲ್ಲಿಯೂ ದ್ವಾದಶ ಆದಿತ್ಯರಲ್ಲಿ ಇದ್ದು ಒಬ್ಬ ಆದಿತ್ಯ ಸಾಕ್ಷಾತ್ ವಿಷ್ಣುವೇ, ಇನ್ನುಳಿದ ಆದಿತ್ಯರಲ್ಲಿ ನೀನೇ ಅಂತರ್ಯಾಮಿಯಾಗಿ ಇದ್ದು ಸಂಪೂರ್ಣವಾದ ಜಗತ್ತನ್ನೇ ಸುಟ್ಟು ಭಸ್ಮ ಮಾಡುತ್ತೀಯಾ ಅನ್ನುವುದಕ್ಕಾಗಿಯೇ ನಿನ್ನನ್ನ ಆದಿತ್ಯ ಅಂತ ಕರೆಯುತ್ತಾರೆ. ವನಸ್ಪತಿ ಓಷಧಿಗಳು ಎಲ್ಲವನ್ನೂ ಕೂಡ ವಿಶೇಷವಾಗಿ ನೀನು ಚಂದ್ರನಲ್ಲಿದ್ದು ಅವುಗಳಿಗೆಲ್ಲ ಅಭಿವೃದ್ಧಿಯನ್ನು ಉಂಟು ಮಾಡುತ್ತೀಯಾ. ಇಂತಹ ದೇವಯಾನ ಮತ್ತು ಪಿತೃಯಾನ ಅಂತ ಸಕಾಮ ಕರ್ಮವನ್ನು ಮಾಡಿದವರು ಪಿತೃಯಾನದಿಂದ ಹೋಗುತ್ತಾರೆ ಪುನಃ ಭೂಮಿಯಲ್ಲಿ ಹುಟ್ಟಿ ಬರುತ್ತಾರೆ, ನಿಷ್ಕಾಮ ಕರ್ಮವನ್ನು ಮಾಡಿದವರು ದೇವಯಾನದಿಂದ ಹೋಗಿ ಮೋಕ್ಷವನ್ನೇ ಹೊಂದುತ್ತಾರೆ. ಅಂತಹ ಸಕಾಮ ಕರ್ಮ, ನಿಷ್ಕಾಮ ಕರ್ಮಗಳನ್ನ ಅವರವರಿಗೆ ತಕ್ಕಂತೆ ಮಾಡಿಸುವವ ನೀನು, ದೇವಯಾನ ಪಿತೃಯಾನಗಳನ್ನ, ಧೂಮಾದಿ ಮಾರ್ಗ ಅರ್ಚಿತಾದಿ ಮಾರ್ಗಗಳನ್ನ ನಿರ್ಮಾಣ ಮಾಡಿದವನು ನೀನು, ಅಲ್ಲಿ ಆ ಜೀವರನ್ನು ಕರೆದುಕೊಂಡು ಹೋಗಿ ಆ ಸ್ಥಾನವನ್ನು ಮುಟ್ಟಿಸಿ ಆ ಆ ಫಲವನ್ನು ಕೊಡುವವನು ನೀನು ಇಂತಹ ಸರ್ವ ನಿಯಾಮಕನಾದಂತಹ ಸ್ವಾಮಿ ನೀನು, ಅವಹ ವಿವಹ ಪ್ರವಹ ಮೊದಲಾದಂತಹ ಅನೇಕ ವಾಯುಗಳ ಮೂಲಕ ಜಗತ್ತಿನ ಧಾರಣವನ್ನು

ನೀನು ಮಾಡುತ್ತೀಯಾ. ಇಂತಹ ಸರ್ವೋತ್ತಮನಾದ ನೀನು ಜಗತ್ತಿನ ಸೃಷ್ಟಿ ಸ್ಥಿತ್ಯಾದಿಗಳಿಗೆ ಕಾರಣನಾದಂತಹ ಸ್ವಾಮಿ ದಯಮಾಡಿ ಈ ಮಧುವನ್ನ ಬೇಗ ಸಂಹಾರ ಮಾಡು, ಕ್ರೀಡೆಯನ್ನು ಬಹಳ ಹೊತ್ತು ಮಾಡಬೇಡ. ನಮ್ಮೆಲ್ಲರ ಮನಸ್ಸಿನಲ್ಲಿರುವ ಆ ಮಧುರ ವಿಜಯ ಸುಖದ ಆಕರ್ಷಣೆಯನ್ನು ಕಿತ್ತಿ ಎಸೆ, ನಮ್ಮ ಸಾಧನೆಯನ್ನು ನಿರ್ವಿಘ್ನವಾಗಿ ಮಾಡಿಸು ಅಂತ ಪ್ರಾರ್ಥನೆ ಮಾಡಿದಾಗ ಪರಮಾತ್ಮ ಹಯಗ್ರೀವ ರೂಪವನ್ನು ಧಾರಣೆ ಮಾಡಿದ, ವಿಷ್ಣು ರೂಪದಿಂದಲೇ ಯುದ್ಧವನ್ನು ಮಾಡುತ್ತ ಇದ್ದಾನೆ ಮಧುಸೂದನ.

ಈಗ ಹಯಗ್ರೀವ ರೂಪವನ್ನು ಧಾರಣ ಮಾಡಿದ ವೇದಮಯವಾದ ರೂಪ **'ನಸ್ತೋ ಮುಖಾದಪಿ ನಿರಂತರ ಮುಗ್ಗಿರಂತಂ'** ತನ್ನ ಮೂಗಿನಿಂದಲೂ ಮುಖದಿಂದಲೂ ಸಕಲ ವಿದ್ಯೆಗಳ ಉಚ್ಚಾರಣೆಯನ್ನು ಮಾಡತಕ್ಕಂತಹ ಸಕಲ ವೇದಮಯ, ಸಕಲ ದೇವಮಯ ಅಂತೆ. ಎಲ್ಲ ದೇವತೆಗಳಿಗಿಂತಲೂ ಉತ್ತಮವಾದ ಸಕಲ ವೇದಗಳ ಉಚ್ಚಾರಣೆ ಮಾಡುವ **'ಕೃತ್ವಾ ವೇದಮಯಂ ರೂಪಂ ಸರ್ವದೇದಮಯಂ ವಪುಃ'**[1] ಆ ರೀತಿ ಪರಮಾತ್ಮ ತನ್ನ ತಲೆಯಲ್ಲಿ ರುದ್ರ ದೇವರಿಗೆ ಆಶ್ರಯವನ್ನು ಕೊಟ್ಟಿದ್ದಾನೆ, ಹೃದಯದಲ್ಲಿ ಬ್ರಹ್ಮ ದೇವರಿಗೆ ಕಣ್ಣುಗಳಲ್ಲಿ ಸೂರ್ಯ ಚಂದ್ರರಿಗೆ, ತನ್ನ ಮೊಳಕಾಲಿನಲ್ಲಿ ವಸುಗಳಿಗೆ, ಎಲ್ಲ ಸಂಧಿಗಳಲ್ಲಿ ಸಾಧ್ಯರಿಗೆ, ನಾಲಿಗೆಯಲ್ಲಿ ಅಗ್ನಿಗೆ ಅವಕಾಶ ಕೊಟ್ಟಿದ್ದಾನೆ. ಈ ರೀತಿ ಸರಸ್ವತೀ ದೇವಿ ಮರುತ್ ದೇವತೆಗಳು ವರುಣ ಇವರೆಲ್ಲರನ್ನೂ ತನ್ನ ಶರೀರದಲ್ಲಿ ಪರಮಾತ್ಮ ಇಟ್ಟುಕೊಂಡಿದ್ದಾನೆ ಸರ್ವಾಧಾರ, ಸರ್ವಾಶ್ರಯ, ಸರ್ವ ದೇವತೆಗಳಿಗೆ ಆಶ್ರಯವಾದಂತಹ ರೂಪ ಆ ಹಯಗ್ರೀವ ರೂಪ, ಸಕಲ ಜಗತ್ ಕಾರಣವಾದ ರೂಪ ಆ ಹಯಗ್ರೀವ ರೂಪ, ಸಕಲ ಶಾಸ್ತ್ರಗಳಿಗೆ ಪ್ರವರ್ತಕವಾದದ್ದು ಆ ಹಯಗ್ರೀವ ರೂಪ. **'ಅಸ್ಯ ನಿಶ್ವಸಿತಮೇತದ್ಯಗ್ವೇದೋ ಯಜುರ್ವೇದಃ'** ಅಂತ ಇತ್ಯಾದಿಯಾಗಿ ಹೇಳುತ್ತಾರೆ. ಅಂತಹ ಶ್ರೇಷ್ಠವಾದ ಜ್ಞಾನಪ್ರದವಾದ ಹಯಗ್ರೀವ ರೂಪವನ್ನ ಸ್ವೀಕಾರ ಮಾಡಿ ಆ ಮಧುನಾಮಕ ದೈತ್ಯನನ್ನ ಹಿಂದೆ ನೀವು ಕೇಳಿದಂತೆ ಅವರು ಕೇಳಿದ್ದರಲ್ಲ ವರ ಯಾರಿಗೂ ಕೊಲ್ಲದ ವೇಷದಲ್ಲಿ ನಮ್ಮನ್ನು ಕೊಲ್ಲಬೇಕು ಅಂತ ತೊಡೆಯ ಮೇಲೆ ಹಾಕಿಕೊಂಡು ಅವರನ್ನು ತಿಕ್ಕಿ ಅವರ ಮೇದಸ್ಸಿನಿಂದ ಮೇದಿನೀಯನ್ನು ನಿರ್ಮಾಣ ಮಾಡಿದ್ದಾನೆ ಅಂತ. ಅದು ಹೇಗೆ ಕಾಣಿಸುತ್ತಾ ಇತ್ತು ಅಂದರೆ ಬಿಳಿ ಬಣ್ಣದ ಮೇದಸ್ಸಿನ ಹರಹು ಪೃಥ್ವಿ ಅವಳು ಶುಭ್ರವಾದ ವಸ್ತ್ರವನ್ನು ಧಾರಣೆ ಮಾಡಿದಂತೆ ಕಾಣಿಸುತ್ತಾ ಇದೆ ಅಂತೆ. ಆ ರೀತಿ ಅದ್ಭುತವಾದ ಆ ಭಗವಂತನ ಪರಾಕ್ರಮದ ವರ್ಣನೆಯನ್ನು ಮಾಡುತ್ತಾರೆ ಈ ರೀತಿ ಆ ಮಧುವಿನ ಸಂಹಾರ ಮಾಡಿತಂತಹ ಮಧುಸೂದನ ಪರಮಾತ್ಮ.

ಈ ಕಡೆಗೆ ಸುಪಾರ್ಶ್ವ ಎಂಬಂತಹ ಪರ್ವತ ಪುಷ್ಕರದ ಸಮೀಪದಲ್ಲಿ ಇರುವಂತಹ ಆ ಸುಪಾರ್ಶ್ವ ಎಂಬಂತಹ ಪರ್ವತ ಪರ್ವತಾಭಿಮಾನಿ ದೇವತೆ ಅಂತ ಅರ್ಥ. ಪರ್ವತ ಜಡ ಆ ಪರ್ವತಾಭಿಮಾನಿ ದೇವತೆಗೆ ಎಲ್ಲಿಲ್ಲದ ಸಂತೋಷ ಹಯಗ್ರೀವ ರೂಪದಿಂದ ಪರಮಾತ್ಮ ಮಧುನಾಮಕ ದೈತ್ಯನ ಸಂಹಾರವನ್ನು ಮಾಡಿದ ಎಷ್ಟು ದೊಡ್ಡ ಅನುಗ್ರಹ ಮಾಡಿದ್ದಾನೆ ಅಂತ. ಆ ದೈತ್ಯರ ಅಸುರರ ಕಾಟದಿಂದ ಸತ್ವಹೀನವಾಗಿ ತೇಜೋಹೀನವಾಗಿ ಕಳೆ ಇಲ್ಲದಂತೆ ಅವಕಳೆಯಿಂದ ಅವಲಕ್ಷಣವಾಗಿ ತೋರುವಂತಹ ಎಲ್ಲ ಪರ್ವತಗಳು ಕಂಗೊಳಿಸುತ್ತಾ ಇವೆ. ಎಲ್ಲ ಕಡೆಗೂ ಉಲ್ಲಾಸ, ಎಲ್ಲ ಕಡೆಗೂ ಬೇಕಾದಷ್ಟು ವೃಕ್ಷಗಳೆಲ್ಲ ಚಿಗುರಿ ನಿಂತಿವೆ ಅದ್ಭುತವಾದಂತಹ ಗೈರಿಕಾದಿ ಧಾತುಗಳೆಲ್ಲ ಎಲ್ಲ ಕಡೆಗೆ ಪ್ರಕಾಶಮಾನವಾಗಿವೆ ಅಂತಹ ಸುಪಾರ್ಶ್ವ, ಹಿಮಾಲಯ ಮೇರು ಪರ್ವತ ಮೊದಲಾದಂತಹ ಎಲ್ಲ ಪರ್ವತಗಳೂ ಕೂಡ ನಾನಾ ವಿಧವಾದ ಗಂಧರ್ವರು ಯಕ್ಷರು ಕಿನ್ನರರು ಅಪ್ಸರಾ ಸ್ತ್ರೀಯರಿಂದ ಶೋಭಿಸುತ್ತ ಇವೆ. ಈ ರೀತಿ ಆ ಪರಮಾತ್ಮ ಮಾಡಿದಂತಹ ಒಂದು ಅನುಗ್ರಹದ ಕಾರ್ಯ ಜಗತ್ತಿನಲ್ಲಿ ತೋರುತ್ತ ಇದೆ. ಅದರ ಅರ್ಥ ಆ ಎಲ್ಲ ಪರ್ವತಗಳ ಮೇಲೆ ತಪಸ್ಸು ಮಾಡುವಂತಹ ಏನೆಲ್ಲ ಋಷಿಗಳು ಮುನಿಗಳು ಜ್ಞಾನಿಗಳು ಇದ್ದರೋ ಅವರೆಲ್ಲ

1. ಲಕ್ಷ್ಮೀ ಶೋಭಾನ

ನಿಶ್ಚಿಂತರಾದರು, ಅಸುರರ ಬಾಧೆ ದೂರ ಆಯಿತು, ಯಥೇಚ್ಛವಾಗಿ ಸಾಧನೆಯನ್ನು ನಿರಾತಂಕವಾಗಿ ಮಾಡುವುದಕ್ಕೆ, ಪರಮಾತ್ಮನ ಭಜನೆಯನ್ನು ಮಾಡುವುದಕ್ಕೆ ಅವರಿಗೆಲ್ಲ ಸಾಧ್ಯವಾಯಿತು ಅನ್ನುವುದರ ರೀತಿಯಲ್ಲಿ ಆ ಜಗತ್ತಿನಲ್ಲಿ ಆದಂತಹ ಮಂಗಲಮಯವಾದ ವಾತಾವರಣದ ವರ್ಣನೆಯನ್ನು ಹರಿವಂಶ ಮಾಡುತ್ತ ಇದೆ.

ವಿಷ್ಣುರ್ಮಧೋರ್ನಿಹನ್ತಾ ಚ ಚಕಾರ ಮಧುವಾಹಿನೀಮ್ ॥ (27.22 ಭವಿಷ್ಯಪರ್ವ)

ಮಧುವಾಹಿನೀ ಅನ್ನುವ ಒಂದು ನದಿಯನ್ನೇ ಪರಮಾತ್ಮ ಸೃಷ್ಟಿ ಮಾಡಿದ್ದಾನೆ. ಆ ನದಿಯ ಉಸುಕು ಹೇಗೆ ಅಂದರೆ ಕೆಂಡದಂತೆ ಫಳ ಫಳ ಫಳ ಹೊಡೆಯುವಂತಹ ಉಸುಕಿನ ಕಣಗಳು ಅಂತಹ ಶ್ರೇಷ್ಠವಾದ ಮಧುವಾಹಿನೀ ಎಂಬ ನದಿಯನ್ನ ಪರಮಾತ್ಮ ಸೃಷ್ಟಿ ಮಾಡಿದ್ದಾನೆ. ಅದು ಬ್ರಹ್ಮ ದೇವರ ಆಜ್ಞೆಯಂತೆ ಈ ಪುಷ್ಕರ, ಪುಷ್ಕರ ಕ್ಷೇತ್ರದಲ್ಲಿ ಇರುವ ಪುಷ್ಕರ ಅನ್ನುವ ದೊಡ್ಡ ತೀರ್ಥ ಇದೆಯಲ್ಲ ಆ ತೀರ್ಥದಲ್ಲಿ ಬಂದು ಸೇರುತ್ತಾ ಇದೆ ಆ ನದಿ. ಈ ಕಡೆಗೆ ಪೃಥ್ವಿ ಪರಮಾತ್ಮ ಮಾಡಿದ ಅನುಗ್ರಹವನ್ನು ಸ್ಮರಣೆ ಮಾಡುತ್ತ ತಾನು ಸ್ವಯಂ ಕಪಿಲಾ ಗೋ ಕಪಿಲ ವರ್ಣದ ಗೋರೂಪವನ್ನು ಧಾರಣೆ ಮಾಡಿದವಳಾಗಿ ಆ ಪೃಥ್ವಿ ಅಮೃತಮಯವಾದಂತಹ ಹಾಲನ್ನು ಜಗತ್ತಿಗೆ ಕೊಡುತ್ತಾ ಇದ್ದಾಳೆ ಬ್ರಹ್ಮ ದೇವರ ಆಜ್ಞೆಯಂತೆ. ಈ ರೀತಿ ಆ ಪರಮಾತ್ಮನ ಅನುಗ್ರಹದಿಂದ ನಡೆಯುತ್ತ ಇದೆ.

ಸರಸ್ವತ್ಯಾಃ ಸಮದ್ಭೂತಂ ಬ್ರಹ್ಮಕ್ಷೇತ್ರೇ ತಮೋನುದಮ್ ।
ಮರುತೀರ್ಥಮತಿಕ್ರಮ್ಯ ಪುಷ್ಕರೇಷು ವಿಸರ್ಪತಿ । (27.27 ಭವಿಷ್ಯಪರ್ವ)

ಸುಚಾರುರೂಪಾ ಧರ್ಮಜ್ಞಾ ಅಜಾ ರೂಪೇಣ ಧಾರಯನ್ ॥ (27.28 ಭವಿಷ್ಯಪರ್ವ)

ಈ ಕಡೆಗೆ ಆ ಸರಸ್ವತೀ ತನ್ನ ವಿಶಿಷ್ಟವಾದಂತಹ ರೂಪದಿಂದ ಅಲ್ಲಿ ಸನ್ನಿಧಾನವನ್ನು ಇಟ್ಟಿದ್ದಾಳೆ. ಇವತ್ತಿಗೂ ಸರಸ್ವತೀಯ ಮಂದಿರವೂ ಕೂಡ ಒಂದು ಕಡೆಗೆ ಪುಷ್ಕರದಲ್ಲಿ ಬ್ರಹ್ಮ ಮಂದಿರ ಪರ್ವತದ ತುತ್ತತುದಿಯಲ್ಲಿ ಸರಸ್ವತೀ ಮಂದಿರವನ್ನು ನಾವು ಕಾಣುತ್ತೇವೆ ಸರಸ್ವತೀಯ ವಿಶೇಷ ಸನ್ನಿಧಾನ ಅಲ್ಲಿದೆ. ಪರಮಾತ್ಮನ ದರ್ಶನವನ್ನು ಮಾಡಿಕೊಳ್ಳಬೇಕು ಅಂತಾದರೆ ಯಾರು ವಿಶೇಷವಾಗಿ ಭಗವಂತನ ಉಪಾಸನೆಯನ್ನು ಮಾಡಿ, ದುರ್ಗೆಯ ಉಪಾಸನೆಯನ್ನು ಮಾಡಿ ಮಾಯಾತರಣವನ್ನು ಮಾಡುತ್ತಾರೋ ಅವರು ಮಾತ್ರ ಭಗವಂತನ ದರ್ಶನವನ್ನು ಮಾಡಿಕೊಳ್ಳುವುದಕ್ಕೆ ಸಾಧ್ಯ, ಉಳಿದವರಿಗೆ ಸಾಧ್ಯ ಇಲ್ಲ. ಈ ರೀತಿ ಆ ಪರಮಾತ್ಮ ತನ್ನ ಮಹಿಮೆಯನ್ನು ಎಲ್ಲರಿಗೂ ಕೂಡ ತೋರಿಸಿಕೊಟ್ಟಿದ್ದಾನೆ. ಇಲ್ಲಿ ಗೌರೀ ರುದ್ರ ದೇವರ ಪತ್ನಿ, ಲಕ್ಷ್ಮೀ ದೇವಿ, ಆನಂತರ ಸರಸ್ವತೀ, ಆನಂತರ ಪಾರ್ವತಿ ಇವರ ಅನುಗ್ರಹ ಇದ್ದರೆ ಮಾತ್ರ ಶುದ್ಧವಾದಂತಹ ಜ್ಞಾನವನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯ. ಅವರೆಲ್ಲಾ ವಿದ್ಯಾ ದೇವತೆಗಳು ಅಂತಹ ದೇವತೆಗಳ ವಿಶೇಷವಾದ ಅನುಗ್ರಹವನ್ನು ಪಡೆದು ಯಾರು ಆ ಪರಮಾತ್ಮನ ಪ್ರೀತಿಗಾಗಿ ಶುದ್ಧವಾದ ನಿಷ್ಕಾಮ ಕರ್ಮಗಳನ್ನು ಮಾಡುತ್ತಾರೆ, ಪರಮಾತ್ಮನ ಬಾಹ್ಯವಾದ ರೂಪಗಳನ್ನ ಹಾಗೂ ಅಂತರ್ಯಾಮಿ ರೂಪಗಳ ಚಿಂತನ ಮಾಡುತ್ತಾರೆ, ಸರ್ವಾಂತರ್ಯಾಮಿಯ ರೂಪವನ್ನ ಹಾಗೂ ವಿರಾಟ್ ರೂಪರಾದ ಬ್ರಹ್ಮ ದೇವರನ್ನ, ಸೂತ್ರನಾಮಕರಾದ ವಾಯು ದೇವರನ್ನ ಹಾಗೂ ತನ್ನ ಅಂತರ್ಯಾಮಿಯಾದ ರೂಪವನ್ನ ಯಾರು ಚಿಂತನ ಮಾಡುತ್ತಾರೋ ಅಂಥವರು ಈ ಸಂಸಾರದ ಬಂಧನದಿಂದ ಮುಕ್ತರಾಗಿ ಭಗವಂತನ ಅನುಗ್ರಹವನ್ನು ಪಡೆಯುತ್ತಾರೆ ಎಂಬುದಾಗಿ ಇಲ್ಲಿ ತಿಳಿಸಿಕೊಡುತ್ತ ಇದ್ದಾರೆ.

ಈ ಪುಷ್ಕರ ಕ್ಷೇತ್ರದಲ್ಲಿ ಒಂದು ದಾನ ಮಾಡಿದರೆ ಒಂದು ಸಾವಿರ ಪಟ್ಟು ದಾನ ಮಾಡಿದಂತಹ ಪುಣ್ಯ ಬರುತಿದೆ. ಒಂದೇ ರೂಪಾಯಿ ದಾನ ಮಾಡಿದರೆ ಸಾವಿರ ರೂಪಾಯಿ ದಾನ ಮಾಡಿದ ಫಲ, ಒಂದು ಗೋದಾನ ಮಾಡಿದರೆ ಸಾವಿರ ಗೋದಾನ ಮಾಡಿದ ಫಲ ಈ ರೀತಿ ಅದ್ಭುತವಾದಂತಹ ಫಲ ಅಲ್ಲಿ ಸಿಗುತ್ತೆ. ಅಂತಹ ಶ್ರೇಷ್ಠವಾದ ಪುಷ್ಕರ ಕ್ಷೇತ್ರದಲ್ಲಿ ಸ್ವಲ್ಪ ಧರ್ಮವನ್ನು ಆಚರಣೆ ಮಾಡಿದರೂ

ನಾಫಲೋ ವಿದ್ಯತೇ ಧರ್ಮಶ್ಚರಿತೋ ಧರ್ಮಚಾರಿಣಾ । (27.48 ಭವಿಷ್ಯಪರ್ವ)

ಅದಕ್ಕೆ ವೈಫಲ್ಯ ಇಲ್ಲ, ಎಲ್ಲವೂ ಮಹಾ ಫಲಪ್ರದ. ಧರ್ಮವನ್ನ ಎಲ್ಲಿ ಆಚರಣೆ ಮಾಡಿದರೂ ಫಲ ಇದೆ ಅದರಲ್ಲಿಯೂ ವಿಶೇಷವಾದ ಕಾಲದಲ್ಲಿ, ವಿಶೇಷವಾದ ದೇಶಗಳಲ್ಲಿ ಮಾಡಿದರೆ ಇನ್ನೂ ವಿಶೇಷವಾದ ಫಲ ಅಂತ ಮಾತ್ರ ತಾತ್ಪರ್ಯ, ಅಲ್ಲಿ ಮಾಡಿದರೆ ಮಾತ್ರ ಅಷ್ಟೇ ಫಲ, ಬೇರೆ ಕಡೆ ಮಾಡಿದರೆ ಫಲ ಇಲ್ಲ ಅಂತ ಸರ್ವಥಃ ಅಭಿಪ್ರಾಯವಲ್ಲ.

ಆಮೇಲೆ ಪರಮಾತ್ಮ ಅವತಾರ ಮಾಡುವುದೇ ಲೋಕಶಿಕ್ಷಣಕ್ಕಾಗಿ. ಭಗವಂತ ತಾನು ಸ್ವಯಂ ಪುಷ್ಕರದಲ್ಲಿ ತಪಸ್ಸು ಮಾಡುತ್ತ ಇದ್ದಾನೆ, ತಾನು ತಪಸ್ಸು ಮಾಡಿದರೆ ಎಲ್ಲರೂ ತಪಸ್ಸು ಮಾಡುತ್ತಾರೆ ಅಂತ. ಇವತ್ತಿಗೂ ಬದರಿಕಾಶ್ರಮದಲ್ಲಿ ನಾರಾಯಣ ದೇವರು ತಪಸ್ಸು ಮಾಡುವ ಭಂಗಿಯಲ್ಲಿ ಇದ್ದಾರೆ, ಧ್ಯಾನ ಮಾಡುವ ಯೋಗ ಮುದ್ರೆಯಲ್ಲಿ ಇದ್ದಾರೆ. ಯಾಕೆ ಅಂದರೆ ತಪಸ್ಸನ್ನೂ ಮಾಡಿ, ಧ್ಯಾನವನ್ನೂ ಮಾಡಿ ಅಂತ ಜಗತ್ತಿಗೆ ತೋರಿಸಿಕೊಡುವುದಕ್ಕೆ ಪರಮಾತ್ಮ ತಪಸ್ಸು ಮಾಡುತ್ತ ಇದ್ದಾನೆ. ಹಾಗೆ ಹತ್ತು ಸಾವಿರ ವರ್ಷಗಳವರೆಗೆ ಪುಷ್ಕರದಲ್ಲಿ ಪುಷ್ಪರೇಕ್ಷಣನಾದ ಭಗವಂತ ತಪಶ್ಚರ್ಯವನ್ನು ಮಾಡಿದ್ದಾನೆ, ಅವನು ಮಾಡುವ ಅವಶ್ಯಕತೆಯೇ ಇಲ್ಲ ಲೋಕಶಿಕ್ಷಣಕ್ಕಾಗಿ ದೇವರು ತಪಸ್ಸು ಮಾಡುತ್ತ ಇದ್ದಾನೆ. ನಮ್ಮ ಉದ್ಧಾರಕ್ಕಾಗಿ, ದೇವರ ಅನುಗ್ರಹಕ್ಕಾಗಿ ಮೋಕ್ಷದಲ್ಲಿ ಆನಂದ ಅಭಿವೃದ್ಧಿಗಾಗಿ ನಾವೂ ಮಾಡೋಣ ಅಂತ ಚಂದ್ರ ತಪಸ್ಸು ಮಾಡುವುದಕ್ಕೆ ಪ್ರಾರಂಭ ಮಾಡಿದ. ಒಂಬತ್ತು ಸಾವಿರ ವರ್ಷಗಳವರೆಗೆ ಚಂದ್ರ ತಪಶ್ಚರ್ಯವನ್ನು ಮಾಡಿದ್ದಾನೆ. ತಪಶ್ಚರ್ಯವನ್ನು ಮಾಡಿ ವಿಶಿಷ್ಟವಾದ ಸಿದ್ಧಿಯನ್ನು ಪಡೆದಿದ್ದಾನೆ.

ಈ ಕಡೆಗೆ ರುದ್ರ ದೇವರು ತಪಶ್ಚರ್ಯವನ್ನು ಪ್ರಾರಂಭ ಮಾಡಿದರು ಎತ್ತಿನ ರೂಪದಲ್ಲಿ ನಿಂತು ವೃಷ ಅವರ ವಾಹನ ಎತ್ತು ಆದರೆ ಈಗ ರುದ್ರ ದೇವರು ತಾವೇ ಎತ್ತಾಗಿ ತಪಶ್ಚರ್ಯವನ್ನು ಮಾಡುತ್ತ ಇದ್ದಾರೆ. ಒಂಬತ್ತು ಸಾವಿರ ವರ್ಷಗಳವರೆಗೆ ರುದ್ರ ದೇವರು ತಪಶ್ಚರ್ಯ ಮಾಡಿದ್ದಾರೆ. ನಿಮಗೆಲ್ಲ ಗೊತ್ತು ಸಾಮಾನ್ಯ ಎತ್ತು ಶ್ವಾಸ ಬಿಟ್ಟರೆ ಅದರ ಬಾಯಿಯಿಂದ ಒಂದು ತರಹ ಜೋರಾಗಿ ಬುರಗು ಬರುತ್ತದೆ. ಅಹಂಕಾರ ತತ್ವಾಭಿಮಾನಿಗಳು, ಪಂಚ ಮಹಾಭೂತಗಳಿಗೆ ಪ್ರೇರಕರು, ಇಂದ್ರಿಯ ಪ್ರೇರಕರು ಅಂತಹ ಮಹಾನುಭಾವರು ರುದ್ರ ದೇವರು ಎತ್ತಿನ ರೂಪದೊಳಗೆ ತಪಸ್ಸು ಮಾಡುತ್ತಾ ಜೋರಾಗಿ ತಮ್ಮ ಶ್ವಾಸ ವಾಯುವನ್ನು ಬಿಟ್ಟರೆ ಅದು ಭಾರೀ ಬುರುಗಾಗಿ ಹೊರಗೆ ಬರುತ್ತ ಇದೆ.

ಅಥ ವಾಯುರ್ಘನೀಭೂತೋ ಅನ್ತೇ ಚರತಿ ಗೋಪತೇಃ ।

ಫೇನಿಭೂತಂ ಸಮುದ್ಗಾರೈಃ ಪವನಂ ನಿರ್ಗಿರನ್ಮುಖಾತ್ ॥ (28.10 ಭವಿಷ್ಯಪರ್ವ)

ಅದು ಕ್ರಮವಾಗಿ ಅದು ರಸದ ರೂಪದಲ್ಲಿ ಸೋರುತ್ತ ಇದೆ ಆ ಬುರುಗು ಹಾಗೇ ಹಾರುತ್ತ ಹಾರುತ್ತ, ಇಷ್ಟಿಷ್ಟೇ ಬುರುಗು ಅಂತ ಚಿಂತನ ಮಾಡಬೇಡಿ, ರುದ್ರ ದೇವರು ಎತ್ತಾಗಿ ಅಂತಹ ಬೃಹಾಕಾರವಾಗಿ ನಿಂತರೆ

ಅದೇನದು ಭಾರೀ ಬುರುಗು ಬಂದು ಮೇಲೆಲ್ಲಾ ಹಾರಿ ಅದೇ ಮೇಘಗಳ ರೂಪದಲ್ಲಿ ಪರಿಣಾಮವನ್ನು ಹೊಂದಿ ಮಳೆ ಸುರಿಸುತ್ತ ಇದೆ. ಅಂತಹ ಅದ್ಭುತವಾದ ತಪಸ್ಸು ರುದ್ರ ದೇವರು ಮಾಡುವಂಥಹದ್ದು.

ನಿರಾಲಮ್ಬೇ ನಿರಾಲಮ್ಬಸ್ಯಾಣಿ ಸಮಪದ್ಯತ । (28.13 ಭವಿಷ್ಯಪರ್ವ)

ತೇ ಕ್ಷಿಪನ್ತಿ ಪಯೋ ಭೂಮಾವಾತ್ಮಾನ ಸ್ವೇನ ಘಟ್ಟಿತಾಃ ॥ (28.14 ಭವಿಷ್ಯಪರ್ವ)

ಆ ಒಂದೊಂದು ಮೇಘಗಳ ಘರ್ಷಣೆಯಾಗಿ ಮಳೆ ಸುರಿಯುತ್ತ ಇದೆ. ರುದ್ರ ದೇವರು ತಪಸ್ಸು ಮಾಡಿದರೆ ಇಡೀ ಜಗತ್ತಿಗೆ ಸುಭಿಕ್ಷೆ ಆಗಿದೆ ಎಲ್ಲ ಕಡೆಗೆ ಮಳೆ ಸುರೀತಾ ಇದೆ ಆ ರೀತಿ ತಪಶ್ಚರ್ಯವನ್ನು ಮಾಡಿದ್ದಾರೆ ಮಹಾನುಭಾವರಾದಂತಹ ರುದ್ರ ದೇವರು. ಆಮೇಲೆ ವಾಯು ದೇವರು ಸಾವಿರ ವರ್ಷಗಳವರೆಗೆ ತಪಶ್ಚರ್ಯವನ್ನು ಮಾಡಿದ್ದಾರೆ. ಅಗ್ನಿ ಜಠಾಧಾರಿಯಾಗಿ ಚೀರವಲ್ಕಲ ಧಾರಣ ಮಾಡಿ ನಾಲ್ಕು ಸಾವಿರ ವರ್ಷ ಅಗ್ನಿ ತಪಶ್ಚರ್ಯವನ್ನು ಮಾಡಿದ್ದಾರೆ. ಆ ಅಗ್ನಿ ಅದ್ಭುತವಾದಂತಹ ತಪಶ್ಚರ್ಯದಿಂದ ದಿವ್ಯವಾದ ಸ್ವಯಂ ತೇಜೋಮಯನಾದ ಅಗ್ನಿ ಇನ್ನೂ ವಿಶೇಷವಾದ ತೇಜಸ್ಸನ್ನು ಪಡೆದುಕೊಂಡು ಭೂತಪ್ರಕಾಶ ಎಂಬ ಹೆಸರಿನಿಂದ ಪ್ರಸಿದ್ಧನಾಗಿದ್ದಾನೆ, ಸೂರ್ಯ ತಪಶ್ಚರ್ಯವನ್ನು ಮಾಡಿದ್ದಾನೆ.

ನೋಡಿ, ದೇವರು ತಪಶ್ಚರ್ಯವನ್ನು ಮಾಡಿದ್ದೇ ತಡ ಸಾಲೋ ಸಾಲಾಗಿ ದೇವತೆಗಳೆಲ್ಲ ತಪಶ್ಚರ್ಯವನ್ನು ಮಾಡುತ್ತಾ ಇದ್ದಾರೆ. ಪುಷ್ಪಮಿತ್ರ ಅಂತ ಒಬ್ಬ ಯಕ್ಷ ಘೋರವಾದ ತಪಶ್ಚರ್ಯವನ್ನು ಮಾಡುತ್ತಾನೆ, ಆ ಪರ್ವತದ ಮೇಲಿನಿಂದ ಬರುವ ಎಲ್ಲ ಜಲಧಾರಗಳನ್ನ ತಲೆಯ ಮೇಲೆ ಧಾರಣ ಮಾಡುತ್ತಾನೆ, ಆ ರೀತಿ ಶೈತ್ಯವನ್ನ ಸಹನೆ ಮಾಡುವ ತಪಶ್ಚರ್ಯ **'ಹಿಮವರ್ಷರವಿಪ್ರಭಾಸಹಾಃ'**. ಮತ್ತೊಮ್ಮೆ ಆ ಪುಷ್ಪಮಿತ್ರ ಒಂದು ಸಾವಿರ ವರ್ಷಗಳವರೆಗೆ ಮೊಳಕಾಲಿನಿಂದ ನೆಲದ ಮೇಲೆ ಊರಿ ಕುಳಿತುಕೊಂಡು ಮೇಲೆ ತಲೆ ಮಾಡಿ, ಭಾರೀ ಬಿಸಿಲು ಒಂದು ಸ್ವಲ್ಪ ಹೊತ್ತು ಸೂರ್ಯನನ್ನು ನೋಡುವುದೇ ಕಷ್ಟ ಆ ಸೂರ್ಯನ ಎಲ್ಲ ಕಿರಣಗಳನ್ನ ಆಗ್ರಹಣ ಮಾಡುತ್ತಾ, ನಿರಂತರವಾಗಿ ಸೂರ್ಯ ದರ್ಶನವನ್ನು ಮಾಡುತ್ತ, ಎಲ್ಲಾ ರಶ್ಮಿಗಳನ್ನ ಪಾನ ಮಾಡುತ್ತ ತಪಶ್ಚರ್ಯ ಹೀಗೆ ತಪಶ್ಚರ್ಯವನ್ನು ಮಾಡುತ್ತಾ ಇದ್ದಾನೆ. ಆಮೇಲೆ ಪದ್ಮಾಸನದಲ್ಲಿ ಕೆಲವೊಮ್ಮೆ ಕೂಡುತ್ತಾನೆ ಹೀಗೂ ತಪಶ್ಚರ್ಯವನ್ನು ಮಾಡುತ್ತ ಇದ್ದಾನೆ. ಆ ತಪಶ್ಚರ್ಯದ ಫಲವಾಗಿ ಉತ್ತಮವಾದಂತಹ ಶರೀರ ಪಡೆದು ಅಪ್ಸರಾ ಸ್ತ್ರೀಯರ ಜೊತೆಗೆ ವಿಹಾರಾದಿಗಳನ್ನು ಮಾಡುತ್ತ ಮೇರು ಶಿಖರದಲ್ಲಿ ಇದ್ದು ಪುನಃ ತಪಶ್ಚರ್ಯವನ್ನು ಮಾಡಿ ಮುಂದೇ ಅವನೇ ಕುಬೇರನ ಸ್ಥಾನವನ್ನು ಪಡೆಯುತ್ತಾನೆ ಕುಬೇರನಾಗುತ್ತಾನೆ ಕುಬೇರ ಪದವಿಯನ್ನು ಹೊಂದುತ್ತಾನೆ.

ಈ ಎಲ್ಲಾ ತಪಶ್ಚರ್ಯ ಮಾಡುತ್ತಾರಲ್ಲ ಇಷ್ಟೆಲ್ಲಾ ದೇವತೆಗಳು ಇವರಿಗೆಲ್ಲಾ ಯಾರು ಫಲ ಕೊಡುತ್ತಾರೆ ಅಂತ ಇನ್ನೂ ಮುಂದೆ ಅನೇಕ ಜನರ ತಪಸ್ಸನ್ನು ಹೇಳುವವರಿದ್ದಾರೆ ಮಧ್ಯದಲ್ಲಿ ಆ ತಪಶ್ಚರ್ಯಗಳಿಗೆ ಫಲ ಕೊಡುವವನು ಯಾರು ಅಂತ ಹರಿವಂಶ ಹೇಳುತ್ತದೆ.

ವಿಷ್ಣುರೇವ ತಪೋಽಧ್ಯಕ್ಷಸ್ತೇಜಸೋಽನ್ತೇ ವಿಜೃಮ್ಭತಿ ॥ (28.29 ಭವಿಷ್ಯಪರ್ವ)

ನ ಹಿ ಕಶ್ಚಿತ್ ಪುಮಾನಸ್ತಿ ಯ ಏವಂ ತಪ ಆಚರೇತ್ ।

ತ್ರಿಷು ಲೋಕೇಷು ರಾಜೇನ್ದ್ರ ಋತೇ ವಿಷ್ಣುಂ ಸನಾತನಮ್ ॥ (28.30 ಭವಿಷ್ಯಪರ್ವ)

ಧರ್ಮಾಧ್ಯಕ್ಷ ತಪೋಧ್ಯಕ್ಷ ಪುರಾಧ್ಯಕ್ಷ ಪರಮಾತ್ಮನೇ ವಿಷ್ಣುವೇ ಇವರೆಲ್ಲರೊಳಗಿದ್ದು ತಪಸ್ಸು ಮಾಡಿಸುವವನೂ ಅವನೇ, ಆ ತಪಸ್ಸಿಗೆ ಫಲ ಕೊಡುವವನೂ ಅವನೇ ಆ ಭಗವಂತನೇ ತಪಸ್ಸು ಮಾಡಿಸುತ್ತಾನೆ ಅಂತ **'ಯ ಏವಂ ತಪ ಆಚರೇತ್'** ಅನ್ನುತ್ತಾರೆ. ತಪಸ್ಸು ಮಾಡಿಸುವವನೂ ಅವನೇ ಒಳಗಿದ್ದು, ಫಲ ಕೊಡಿಸುವವನೂ ಅವನೇ ಅಧ್ಯಕ್ಷನಾಗಿದ್ದು ಅಂತಹ ಪರಮಾತ್ಮನ ಅನುಗ್ರಹದಿಂದ ಎಲ್ಲ ದೇವತೆಗಳೂ ಕೂಡ ತಮ್ಮದೇ ಆಗಿರುವಂತಹ ಸ್ಥಾನವನ್ನು ಪಡೆದಿದ್ದಾರೆ.

ಈ ಕಡೆಗೆ ಅನೇಕ ಶಿರಸ್ಸುಗಳನ್ನ ಪಡೆದಂತಹ ವಾಸುಕೀಯೂ ತಪಶ್ಚರ್ಯವನ್ನು ಮಾಡುತ್ತ ಇದ್ದಾನೆ ಮೌನದಿಂದ ತಪಶ್ಚರ್ಯ ಬಹಳ ಪುಣ್ಯ ಅದು ವಾಸುಕೀ ಮಾತಾಡಿದರೆ ಗತಿ ಏನು ಎದುರಿಗಿದ್ದವರದು, ಮೌನದಿಂದ ತಪಶ್ಚರ್ಯವನ್ನು ಮಾಡಿದ್ದಾನೆ ಅಂತೆ **'ನಾಗೇನ್ದ್ರೋ ಮೌನಮಾಶ್ಥಿತಃ'**[1]. ಆದರೆ ಶೇಷ ದೇವರು ಮಾತ್ರ ವಿಚಿತ್ರ ಒಂದು ದೊಡ್ಡದಾದ ವೃಕ್ಷ ಆ ವೃಕ್ಷಕ್ಕೆ ತಮ್ಮ ಬಾಲವನ್ನು ಸ್ತುತಿ ಮುಖ ಕೆಳಗೆ ಮಾಡಿ ವಿಷ ಫೂತ್ಕಾರವನ್ನು ಮಾಡುತ್ತ ತಪಶ್ಚರ್ಯ ಮಾಡುತ್ತಾ ಇದ್ದಾರೆ. ಅವರು ತಪಶ್ಚರ್ಯ ಮಾಡಿದರು ಅವರಿಗೆ ದೇವರು ವರ ಕೊಟ್ಟರು, ಅವರು ಮಹಾಸಿದ್ಧಿಯನ್ನು ಪಡೆದರು ಆ ಫೂತ್ಕಾರ ಮಾಡಿದ್ದರ ವಿಷ ಏನು ಇತ್ತು ನೋಡಿ ಅದೇ ಕಾಲಕೂಟ ವಿಷ ಅಂತ ಪ್ರಸಿದ್ಧವಾದದ್ದು. ಘೋರವಾದ ವಿಷ ಅದರ ಅವಶೇಷಗಳು ಅಲ್ಲಲ್ಲಲ್ಲಿ ಹರಡಿ ಅದೇ ಇಡೀ ಜಗತ್ತಿನ ತುಂಬೆಲ್ಲ ವಿಷಮಯವಾದಂತಹ ಜಂತುಗಳು ಅಂತ ಏನಾದವೋ ಈ ಸಮುದ್ರಮಥನ ಕಾಲದಲ್ಲಿ ಬಂದಂತಹ ವಿಷದ ಅವಶೇಷ ಅದೂ ಕೂಡ ಆ ವಿಷವನ್ನ ವಾಯು ದೇವರು ತಾವು ಪಾನ ಮಾಡುತ್ತಾರೆ ರುದ್ರ ದೇವರಿಗೆ ಕೊಡುತ್ತಾರೆ ಅದನ್ನ ಮಥನ ಮಾಡಿ. ರುದ್ರ ದೇವರಿಗೆ ಕೊಡುವಾಗ ಒಂದೆರಡು ಹನಿ ಕೆಳಗೆ ಬೀಳುತ್ತದಲ್ಲ ಅದನ್ನೇ ಸ್ವೀಕಾರ ಮಾಡಿದಂತಹ ಹಾವು ಚೇಳು ಮೊದಲಾದಂತಹ ವಿಷಮಯವಾದ ಪ್ರಾಣಿಗಳು ಜಗತ್ತಿನ ತುಂಬೆಲ್ಲ ಹರಡಿವೆ ಅಂತ ಹಾಗೂ ಇದೆ.

ಕಾಲಕೂಟಂ ವಿಷಂ ತದ್ಧಿ ಸುಮಹತ್ ಸಮುಪದ್ಯತ ।
ಯೇನ ಲೋಕೋ ಹ್ಯಭಿಗ್ರಸ್ತೋ ನ ಸುಖಂ ವಿನ್ದತೇ ನೃಪ ॥ (28.34 ಭವಿಷ್ಯಪರ್ವ)

ಇಲ್ಲಿ ಹೇಳುವಂತೆ ಆ ಶೇಷ ದೇವರ ತಪಸ್ಸಿನಿಂದ ಬಂದಂತಹ ಏನು ಕಾಲಕೂಟ ವಿಷ ಇತ್ತೋ ಅದನ್ನು ಸಹನೆ ಮಾಡಲಿಕ್ಕೆ ಆಗದೇ ಇದ್ದಾಗ ಬ್ರಹ್ಮ ದೇವರು ಬಂದರು ಅಲ್ಲಿ ಏನಪ್ಪಾ ಶೇಷ ಏನು ಮಾಡಿದಿ ನೀನೆಲ್ಲ ಪುಣ್ಯವಂತನಾದಿ ವಿಷ ಈ ರೀತಿ ಹರಡಿ ಬಿಟ್ಟೀಯಲ್ಲ, ನೀವು ಇದ್ದೀರಲ್ಲ ಪರಿಹಾರ ಮಾಡಲಿಕ್ಕೆ ಅಂದ ಶೇಷ ದೇವರು. ಆಗ ಬ್ರಹ್ಮ ದೇವರು ತಾವು ಜೀವೋತ್ತಮರು ಆದರೂ ಕೂಡ ಲೋಕೋದ್ಧಾರಕ್ಕಾಗಿ ಗರುಡ ಮಂತ್ರವನ್ನು ಉಪದೇಶ ಮಾಡುತ್ತಾರೆ ಸಜ್ಜನರಿಗೆ, ನೀವು ಗರುಡ ಮಂತ್ರದ ಜಪ ಮಾಡಿದರೆ ಈ ವಿಷ ಬಾಧೆ ಪರಿಹಾರವಾಗುತ್ತದೆ ಅಂತ.

ಗರುತ್ಮಾನ್ ವಿತತೈಃ ಪಕ್ಷೈರ್ನಖಾಗ್ರೈಃ ಸಲಿಲಂ ಮಹೀಮ್ ।
ಸಮಾಃ ಸಹಸ್ರಂ ಸಮ್ಪೂರ್ಣಂ ಚೂಲಾಗ್ರೇಣಾವಲಮ್ಬಿನಾ ॥ (28.38 ಭವಿಷ್ಯಪರ್ವ)

ಇತ್ಯಾದಿಯಾಗಿ ಜನ ಶ್ಲೋಕಾದಿಗಳನ್ನು ಹೇಳಿ ಆ ಮಂತ್ರದ ಉಪದೇಶವನ್ನು ಮಾಡುತ್ತಾರೆ ಗರುಡ ಮಂತ್ರವನ್ನ ಜಪ ಮಾಡಿದರೆ ವಿಷ ಪರಿಹಾರವಾಗುತ್ತದೆ ಸತ್ಯವಾದ ವಿಷ. ವಿಷ ಸುಳ್ಳಲ್ಲ ಆದರೆ ಗರುಡನ ಧ್ಯಾನವನ್ನು ಮಾಡಿದರೆ

1. 28.31 ಭವಿಷ್ಯಪರ್ವ

ಸತ್ಯವಾದಂತಹ ವಿಷದ ಪರಿಹಾರವಾಗುತ್ತದೆ ಅದೇ ರೀತಿ ಆ ಪರಬ್ರಹ್ಮನ ಜ್ಞಾನವನ್ನು ನಾವು ಮಾಡಿಕೊಂಡರೆ ಸತ್ಯವಾದ ಸಂಸಾರದ ನಿವೃತ್ತಿ ಆಗುತ್ತದೆ ಎಂಬುದಾಗಿ ಶ್ರೀಮನ್ನ್ಯಾಯಸುಧಾ ಗ್ರಂಥದಲ್ಲಿ ಟೀಕಾಕೃತ್ಪಾದರು ತಿಳಿಸುತ್ತಾರೆ. ಗರುಡನ ಜ್ಞಾನ ಗರುಡನ ಧ್ಯಾನದಿಂದ ಹೇಗೆ ವಿಷದ ಬಾಧೆಯನ್ನು ನಾವು ಪರಿಹಾರ ಮಾಡಿಕೊಳ್ಳಬಹುದೋ ಹಾಗೆ ಪರಬ್ರಹ್ಮನ ಜ್ಞಾನನಿಂದ, ಆ ಪರಬ್ರಹ್ಮನ ಉಪಾಸನೆಯಿಂದ ಸತ್ಯವಾದ ಈ ಸಂಸಾರದ ಬಂಧನವನ್ನ ನಾವು ಕಳೆದುಕೊಂಡು ನಾವು ಮುಕ್ತರಾಗಬಹುದು ಎಂಬುದಾಗಿ ತಿಳಿಸಿಕೊಡುತ್ತಾರೆ. **'ಇತ್ಯುಕ್ತೇರ್ಬಂಧಮಿಥ್ಯಾತ್ವಂ ನೈವ ಮುಕ್ತಿರಪೇಕ್ಷತೇ'** ಆ ರೀತಿ ಆ ಗರುಡ ದೇವರ ಮಂತ್ರವನ್ನ ಬ್ರಹ್ಮ ದೇವರು ಉಪದೇಶ ಮಾಡಿದ್ದಾರೆ. ಮುಂದೆ ಹಿಮಾಲಯ ಪರ್ವತ ತಪಶ್ಚರ್ಯ ಮಾಡುತ್ತಾ ಇದೆ, ಹಿಮಾಲಯ ಪರ್ವತದ ಅಭಿಮಾನಿ ದೇವತೆ ಒಂದೇ ಪಾದದಿಂದ ನಿಂತು ಹನ್ನೊಂದು ನೂರು ವರ್ಷ ತಪಶ್ಚರ್ಯವನ್ನು ಮಾಡುತ್ತಾನೆ. ಆಮೇಲೆ ಪರಮಾತ್ಮ ಅವರೆಲ್ಲರಿಗೆ ಫಲವನ್ನು ಕೊಟ್ಟಿದ್ದಾನೆ.

ಯೋಽಸೌ ವಿಷ್ಣುರಗಾಧಾತ್ಮಾ ಪರಮಾತ್ಮಾ ನಿರಾಕೃತಿಃ ॥ (28.45 ಭವಿಷ್ಯಪರ್ವ)

ಹೆಜ್ಜೆ ಹೆಜ್ಜೆಗೆ ಭಗವಂತನ ಮಹಿಮೆಯನ್ನು ಹೇಳುತ್ತದೆ **'ಆದವಂತೇ ಚ ಮಧ್ಯೇ ಚ ವಿಷ್ಣುಃ ಸರ್ವತ್ರ ಗೀಯತೇ'**

ಸತ್ಯಸಂಧಃ ಸ ಧರ್ಮಾತ್ಮಾ ಕಾಮಕಾರಕರೋ ಭವೇತ್ ॥ (28.46 ಭವಿಷ್ಯಪರ್ವ)

ಅಚಿಂತ್ಯ ಶಕ್ತಿ ಸಂಪನ್ನನಾದ ಪರಮಾತ್ಮ ತನ್ನ ಇಚ್ಛೆಗೆ ಬಂದಂತೆ ಎಲ್ಲ ಕಾರ್ಯಗಳನ್ನು ಮಾಡುತ್ತಾನೆ ಎಲ್ಲರಿಗೂ ಫಲವನ್ನು ಕೊಡುತ್ತಾನೆ ಅಂತಹ ಪರಮಾತ್ಮನ ಅನುಗ್ರಹದಿಂದ ಇವರೆಲ್ಲ ತಪಸ್ಸಿನ ಫಲವನ್ನು ಪಡೆದಿದ್ದಾರೆ. ಶ್ರೀಮದಾಚಾರ್ಯರು ಒಂದು ಮಾತನ್ನು ದ್ವಾದಶ ಸ್ತೋತ್ರದಲ್ಲಿ ಹೇಳುತ್ತಾರೆ **'ಕೇವಲೋದ್ಯೋಗಿನೋಽನಿಶಮ್'**[1] ಅಂತ. ಆ ಪರಮಾತ್ಮನ ಭುಜಗಳು ಹೇಗಿವೆ ಅಂದರೆ ಅವುಗಳು ಸುಮ್ಮನೆ ಕೂತಿರುವುದೇ ಇಲ್ಲವಂತೆ ನಿರಂತರ ಉದ್ಯೋಗ ಶೀಲ, ಭಕ್ತರ ಉದ್ಧಾರ ಮಾಡುವುದಕ್ಕೆ ಯಾವಾಗಲೂ ತೊಡಗಿರುತ್ತವೆ ಪರಮಾತ್ಮನ ಭುಜಗಳು ಅಂತ ಆ ರೀತಿಯಾಗಿ ಇಲ್ಲಿ ವರ್ಣನೆ ಬರುತ್ತದೆ.

ತಸ್ಯ ಯಃ ಸೋದ್ಯತಃ ಪಾಣಿಃ ಪೃಥಿವ್ಯಾಂ ಪೃಥಿವೀಸಮಃ ॥ (28.47 ಭವಿಷ್ಯಪರ್ವ)

ನಿರಂತರವಾಗಿ ಪರಮಾತ್ಮ ತನ್ನ ಎರಡೂ ಬಾಹುಗಳಿಂದ ಹಸ್ತಗಳಿಂದ ಜಗತ್ತಿನ ರಕ್ಷಣೆಯನ್ನು ಮಾಡುತ್ತಾನೆ ಪೃಥ್ವಿಯ ರಕ್ಷಣೆಯನ್ನು ಮಾಡುತ್ತಾನೆ ಅಂತ. ಪೃಥ್ವಿ ಸ್ವಯಂ ತಪಶ್ಚರ್ಯವನ್ನು ಮಾಡಿದ್ದಾಳೆ, ಸರಸ್ವತೀ ತಪಶ್ಚರ್ಯವನ್ನು ಮಾಡಿದ್ದಾಳೆ. ಸರಸ್ವತೀ ತಾನು ವಾಣಿಯನ್ನ ಉಚ್ಚಾರಣೆ ಮಾಡಿದರೆ ಎಲ್ಲರೂ ಉಚ್ಚಾರಣೆ ಮಾಡಬಹುದು, ಅವಳು ಮೌನ ಮಾಡಿದರೆ ನಮಗೆಲ್ಲ ಮೌನ ಆ ಮಾತನ್ನು ಹೇಳುತ್ತದೆ ಹರಿವಂಶ. ಸರಸ್ವತೀ ಒಳಗಿದ್ದು ಪ್ರೇರಕಳಾಗಿ ನಮ್ಮಿಂದ ವೇದಾದಿ ಸಚ್ಛಾಸ್ತ್ರಗಳನ್ನ ತಾನು ನುಡಿದು ನುಡಿಸಿದರೆ ನಾವು ನುಡಿಯಬಹುದು. ಅವಳು ಸಂಕಲ್ಪವನ್ನು ಮಾಡಲಿಲ್ಲ ಮೌನವನ್ನು ವಹಿಸಿದಳು ಅಂದರೆ ಪ್ರಪಂಚದೊಳಗೆ ಎಲ್ಲರೂ ಮೌನ, ರುದ್ರಾದಿ ಸಕಲ ದೇವತೆಗಳೂ ಮೌನವನ್ನೇ ವಹಿಸಬೇಕು. ಅಂತಹ ಮಹಾನುಭಾವಳು ಸರಸ್ವತೀ ಅವಳು ತಪಶ್ಚರ್ಯವನ್ನು ಮಾಡಿ ಪರಮಾತ್ಮನಿಂದ ವಿಶಿಷ್ಟವಾದಂತಹ ಅನುಗ್ರಹವನ್ನು ಪಡೆದಿದ್ದಾಳೆ ಅಂತ ತಿಳಿಸಿಕೊಡುತ್ತಾರೆ. ಒಟ್ಟು ಎಲ್ಲ ವಸು ರುದ್ರ ಆದಿತ್ಯರು ಗಂಧರ್ವರು ಕಿನ್ನರರು ನಾಗರು ಎಲ್ಲರೂ ತಪಶ್ಚರ್ಯವನ್ನು ಮಾಡಿದ್ದಾರೆ ಪುಷ್ಕರದಲ್ಲಿ ಒಟ್ಟು

1. 1 ದ್ವಾದಶಸ್ತೋತ್ರ

ದೇವರು ತಪಶ್ಚರ್ಯ ಮಾಡುತ್ತಾನೆ ಅಂದರೆ ನಾವು ಯಾಕೆ ಮಾಡಬಾರದು, ನಾವೆಲ್ಲ ಮಾಡಬೇಕು ಅಂತೇ ದೇವರು ಮಾಡಿದ್ದು. ದೇವರು ಸಾಕಷ್ಟು ಲೀಲೆಗಳನ್ನು ತೋರಿಸಿದ್ದಾನೆ ಯಾಕೆ ಅಂದರೆ ನೀವು ಹೀಗೆ ಮಾಡಿ ಅಂತ ತಂದೆ ತಾಯಿಗಳ ಸೇವೆಯನ್ನು ಮಾಡಿ ಅಂತ ತೋರಿಸಲಿಕ್ಕೆ ತಾನು ತಂದೆ ತಾಯಿಗಳ ಸೇವೆಯನ್ನು ಮಾಡಿದ್ದಾನೆ. ನಾವೆಲ್ಲ ಕಥೆ ಕೇಳಿ ಬಹಳ ಚೆನ್ನಾಗಿ ಮಾಡಿದ ದೇವರು ಅಂತ ವರ್ಣನೆ ಮಾಡಿ ಮುಗಿಸಿಬಿಡುತ್ತೇವೆ ಆದರೆ ದೇವತೆಗಳು ಹಾಗೆ ಮಾಡಲಿಲ್ಲ ದೇವರು ಯಾವುದನ್ನು ತನಗೆ ಕಲಿಸುವುದಕ್ಕೆ ಮಾಡಿದ್ದಾನೆ ಅದನ್ನು ಮಾಡಿದ್ದಾರೆ ಅವರು, ಮಾಡಿ ಪರಮಾತ್ಮನಿಗೆ ಸಮರ್ಪಣೆಯನ್ನು ಮಾಡಿದ್ದಾರೆ. ಈ ರೀತಿ ತಪಶ್ಚರ್ಯವೆಲ್ಲಾ ಆಗಿದೆ. ಅಗ್ನಿ ತಪಶ್ಚರ್ಯ ಮಾಡಿದ ಭಾರೀ ಘೋರವಾದಂತಹ ತಪಶ್ಚರ್ಯವನ್ನು ಮಾಡಿದಾಗ, ಐರಾವತ ನಾಗ ತನ್ನ ಸೊಂಡಿಲಲ್ಲಿ ನೀರನ್ನು ತೆಗೆದುಕೊಂಡು ಆ ಅಗ್ನಿಯ ಮೇಲೆ ಸೇಚನೆ ಮಾಡಿದೆ, ಅವನಿಗೆ ಒಂದು ಸ್ವಲ್ಪ ಶಾಂತಿ ಆಗಲಿ, ತಾಪ ಉಪಶಮನವಾಗಲಿ ಅಂತ. ಆ ರೀತಿ ಪರಮಾತ್ಮ ಐರಾವತದ ಮೂಲಕ ಅನುಗ್ರಹವನ್ನು ಮಾಡಿಸಿದ್ದಾನೆ.

ಪುನಃ ದೇವತೆಗಳಲ್ಲಿ ದೈತ್ಯರಲ್ಲಿ ಘೋರವಾಗಿರುವಂತಹ ಯುದ್ಧ ಆಗಿದೆ ನಾನಾ ವಿಧವಾದ ಮಾಯಾ ಯುದ್ಧಗಳನ್ನು ಮಾಡಿದ್ದಾರೆ ವಿಶೇಷವಾಗಿ ಅಗ್ನಿಯ ತಪಸ್ಸನ್ನು ಭಂಗ ಮಾಡಬೇಕು ಅಂತ ಪ್ರಯತ್ನ ಮಾಡಿದ್ದಾರೆ ದೈತ್ಯರು. ಏನಾದರೂ ಪರಮಾತ್ಮನ ಅನುಗ್ರಹದಿಂದ ಅಗ್ನಿಯ ತಪಸ್ಸಿಗೆ ಭಂಗವಾಗಿಲ್ಲ ಅಗ್ನಿಯೇ ಪರಮಾತ್ಮನ ಅನುಗ್ರಹದ ಬಲದಿಂದ ತಾನೇ ಆಕಾಶ ಮಾರ್ಗದಲ್ಲಿ ಸಂಚಾರ ಮಾಡಿ ಎಲ್ಲೆಲ್ಲಿ ದೈತ್ಯರಿದ್ದಾರೋ ಅಲ್ಲೆಲ್ಲ ಕಿಡಿಯನ್ನು ಕಾರಿದ್ದಾನೆ, ದೈತ್ಯರೇ ನಶಿಸಿ ಹೋಗಿದ್ದಾರೆ.

ಸ ಚಾಗ್ನಿರ್ವೈಷ್ಣವೈರ್ಯೋಕೈರ್ವಿದ್ಯುದ್ಭಿಃ ಸಹ ಸಂಗತಃ ।
ಅನ್ತರಿಕ್ಷಚರಾನ್ ದೈತ್ಯಾನ್ ನಿರ್ದಹನ್ ವ್ಯಚರದ್ ದಿವಿ ॥ (28.90 ಭವಿಷ್ಯಪರ್ವ)

ಏನು ಅದ್ಭುತವಾಗಿ ಹೇಳುತ್ತಾರೆ ನೋಡಿ. ವಿಷ್ಣು ಭಕ್ತರಾದಂತಹ ದೇವತೆಗಳ ಸಹಾಯವನ್ನು ಪಡೆದ ಅಗ್ನಿ ವಿದ್ಯುತ್ ಅಭಿಮಾನಿ ದೇವತೆಗಳ ಸಹಾಯವನ್ನು ಪಡೆದು ಅಲ್ಲಲ್ಲಿ ಸಿಡಿಲು ಮಿಂಚು ಕಿಡಿಗಳು ಕೆಂಡಗಳನ್ನು ಕಾರುತ್ತಾ ಆ ದೈತ್ಯರನ್ನೆಲ್ಲಾ ನಾಶ ಮಾಡಿದ್ದಾನೆ ಅಗ್ನಿ. ಪುನಃ ಮತ್ತೆ ಆ ಐರಾವತ ನಾಗ ಎಲ್ಲ ಕಡೆಗೂ ದೈತ್ಯರ ಸಂಹಾರ ಆಯಿತು ಜೊತೆಗೆ ಉಳಿದವರಿಗೆ ತೊಂದರೆ ಆಗಬಾರದು ಅಂತ ತಾನು ತನ್ನ ಸೊಂಡಿಲಿನಿಂದ ಎಲ್ಲ ಕಡೆಗೆ ನೀರನ್ನು ಹಾಕಿ ಎಲ್ಲರಿಗೂ ಶಾಂತಿಯಾಗುವಂತೆ ಮಾಡುತ್ತ ಇದೆ. ಈ ರೀತಿ ಅದ್ಭುತವಾದ ಪರಮಾತ್ಮನ ತಪಸ್ಸಿನ ಒಂದು ಆದರ್ಶವನ್ನು ಇಟ್ಟುಕೊಂಡು ದೇವತೆಗಳು ಮಾಡಿದ ತಪಸ್ಸಿನ ವರ್ಣನೆಯನ್ನು ಹರಿವಂಶ ನಮಗೆ ಮಾಡುತ್ತ ಇದೆ.

ಇದಾದ ಮೇಲೆ ಎಲ್ಲರೂ ಕೂಡ ವಿಶೇಷವಾಗಿ ಯಜ್ಞವನ್ನು ಮಾಡಿದ್ದಾರೆ ಆ ಪುಷ್ಕರದಲ್ಲಿ ಮಂತ್ರ ಪೂರ್ವಕವಾಗಿ ಎಲ್ಲರೂ ಯಜ್ಞವನ್ನು ಮಾಡುತ್ತಾರೆ. ಅಗ್ನಿ ವಿಶಿಷ್ಟವಾಗಿ ಇರುವಂತಹ ತನ್ನ ತೇಜಸ್ಸನ್ನ ಬ್ರಹ್ಮದಂಡ ಅನ್ನುವಂತಹ ಅದ್ಭುತವಾದ ರೀತಿಯಲ್ಲಿ ತನ್ನ ಪ್ರಕಾಶವನ್ನ ಅಲ್ಲಿ ಬೆಳೆಗಿದ್ದಾನೆ ನಾನಾ ವಿಧವಾದ ಆಯುಧಗಳು ನೇಗಲು ಚಕ್ರ ಬಾಣ ಚರ್ಮ ಕೊಡಲಿ ಮೊದಲಾದ ವಿವಿಧ ಆಯುಧಗಳನ್ನ ಧಾರಣ ಮಾಡಿದ್ದಾನೆ. ಪರಮಾತ್ಮ ಚಕ್ರ ಖಡ್ಗ ಮುಸಲ ಲಾಂಗಲಾ ಮೊದಲಾದ ಆಯುಧಗಳನ್ನ ದೇವರು ಧಾರಣ ಮಾಡಿದ್ದಾನೆ. ಇಂದ್ರ ದೇವರು ವಜ್ರಾಯುಧವನ್ನು ಧಾರಣ ಮಾಡಿದ್ದಾರೆ, ಶೂಲವನ್ನ ರುದ್ರ ದೇವರು, ದಂಡವನ್ನ ಯಮ ದೇವರು, ಪಾಶವನ್ನ ವರುಣ ದೇವರು, ತ್ವಷ್ಟ ಪರುಶುವನ್ನ, ಪರಶ್ವಧಾಯುಧವನ್ನ ಕುಬೇರ, ವಿಶ್ವಕರ್ಮ ಅವನಂತೂ ಹೇಳಿ ಕೇಳಿ ವಿಶ್ವಕರ್ಮ ನಾನಾ ವಿಧವಾದ ಆಯುಧಗಳನ್ನ ಮಾಡಿಕೊಂಡಿದ್ದಾನೆ ವಿವಿಧ ಆಯುಧಗಳನ್ನ ಧಾರಣ ಮಾಡಿದ್ದಾನೆ ಅಸುರರನ್ನ ಸಂಹಾರ ಮಾಡುವುದಕ್ಕೆ. ತಪಸ್ಸು ಆಯಿತು, ಹೋಮ ಆಯಿತು ವಿವಿಧ ಆಯುಧಗಳನ್ನ ಧಾರಣೆ ಮಾಡಿ ಎಲ್ಲರೂ ಅಸುರರ ಸಂಹಾರಕ್ಕಾಗಿ ಸಿದ್ಧರಾಗಿದ್ದಾರೆ. ಪರಮಾತ್ಮ ಕೆಲವರಿಗೆ ತಾನೇ ಅನುಗ್ರಹ ಪೂರ್ವಕವಾಗಿ ರಥವನ್ನು ಕೊಡುತ್ತಾನೆ

ತೇಜೋಮಯವಾದ ಅಗ್ನಿರಥ ಅಂತ ಹೆಸರು ಅದಕ್ಕೆ ಇಂದ್ರನಿಗೆ ಸೂರ್ಯನಿಗೆ ರುದ್ರ ದೇವರಿಗೆ ಮೂರೂ ಜನರಿಗೂ ಸ್ವಯಂ ಪರಮಾತ್ಮ **'ದದೌಕೃಷ್ಣಃ'** ಮೂಲರೂಪಿಯಾದ ಪರಮಾತ್ಮನಿಗೂ ಕೃಷ್ಣ ಅಂತ ಕರೆಯುತ್ತಾರೆ. ಆ ಕೃಷ್ಣ ಪರಮಾತ್ಮ ಎಲ್ಲರಿಗೆ ರಥವನ್ನು ಕೊಟ್ಟಿದ್ದಾನೆ. ತ್ವಷ್ಟ ಭಾರೀ ಸೈನ್ಯವನ್ನು ಸಿದ್ಧ ಪಡಿಸಿದ್ದಾನೆ ಅದ್ಭುತವಾದ ವೇದೋಕ್ತವಾದ ರೀತಿಯಲ್ಲಿ ವೇದದೊಗಳಗೆ ಹೇಳದೇ ಇದ್ದದ್ದೇ ಇಲ್ಲ. **'ಅನುಕ್ತಂ ಪಂಚಭಿರ್ವೇದೈಃ ನ ವಸ್ತ್ರೃಸ್ತಿ ಕುತಶ್ಚನ'** ಯಾವ ರೀತಿ ಸೈನ್ಯದ ನಿರ್ಮಾಣ ಮಾಡಬೇಕು ಅನ್ನುವುದನ್ನು ವೇದದಲ್ಲಿ ಹೇಳಿದ್ದಾರೆ ಆ ವೇದೋಕ್ತವಾದ ರೀತಿಯಲ್ಲಿ ತ್ವಷ್ಟ ಸೈನ್ಯದ ನಿರ್ಮಾಣವನ್ನು ಮಾಡಿದ್ದಾನೆ, ವಿಶ್ವಕರ್ಮ ಅದ್ಭುತ ವಿಮಾನಗಳ ನಿರ್ಮಾಣವನ್ನ ಮಾಡಿದ್ದಾನೆ, ಪರಮಾತ್ಮ ನಾನಾ ವಿಧವಾದ ತನ್ನದೇ ಆದ ರೂಪಗಳನ್ನ ಅವತಾರಗಳನ್ನ ಅಲ್ಲಲ್ಲಲ್ಲಲ್ಲಿ ಮಾಡಿ ಭಕ್ತರ ರಕ್ಷಣೆಗಾಗಿ **'ರಾಮಃ ಪುರಸ್ತಾತ್ ಪರತೋಪಿ ರಾಮಃ'** ಅಂತ ಇದ್ದ ಹಾಗೆ ವಿಷ್ಣುವೇ ತನ್ನ ಅನಂತ ರೂಪಗಳನ್ನ ಅಲ್ಲಲ್ಲಲ್ಲಲ್ಲಿ ಪ್ರಾದುರ್ಭಾವಗೊಳಿಸಿದ್ದಾನೆ.

ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ಸೂರ್ಯಾಚಂದ್ರಮಸೌ ವಿಧೃತೌ ತಿಷ್ಠತಸ್ ॥

(9 ಬೃಹದಾರಣ್ಯಕೋಪನಿಷತ್)

ಅನ್ನುವ ಹಾಗೆ ಕೇವಲ ಆಜ್ಞಾ ಮಾತ್ರದಿಂದ ಸೂರ್ಯ ಚಂದ್ರಾದಿಗಳನ್ನ ತಮ್ಮ ತಮ್ಮ ಸ್ಥಾನದಲ್ಲಿ ಇರುವಂತೆ ಮಾಡಿದ್ದಾನೆ.

'ವಾಚಾ ವೈ ಸಮಕಲ್ಪಯತ್'[1] ಆಜ್ಞಾ ಮಾತ್ರದಿಂದ ಅವರೆಲ್ಲರನ್ನ ಪರಮಾತ್ಮ ಅವರವರ ಸ್ಥಾನದಲ್ಲಿ ನಿಲ್ಲಿಸಿದ್ದಾನೆ ಬೆಳಕು ಬೇಕಲ್ಲ ಯುದ್ಧ ಮಾಡುವುದಕ್ಕೆ. ಅದಾದ ಮೇಲೆ ಅಸ್ತ್ರಗಳನ್ನ ಅನೂಚಾನ ಪರಂಪರೆಯಿಂದ ಪ್ರಾಪ್ತವಾದ ಅಸ್ತ್ರಗಳು ಧನುರ್ವೇದ ಅದರ ಉಪದೇಶವನ್ನು ಮಾಡಿದ್ದಾನೆ. ಬ್ರಹ್ಮ ದೇವರು ಮೊಟ್ಟಮೊದಲು ಉಪದೇಶ ತೆಗೆದುಕೊಂಡಿದ್ದಾರೆ. ಐಂದ್ರಾಸ್ತ್ರ ವಾಯವ್ಯಾಸ್ತ್ರ ಆಗ್ನೇಯಾಸ್ತ್ರ ರೌದ್ರಾಸ್ತ್ರ ಹೀಗೆ ನಾನಾ ವಿಧವಾದ ಅಸ್ತ್ರಗಳ ಉಪದೇಶವನ್ನು ಮಾಡಿದ ಆಯುಧಗಳನ್ನ ಕೊಟ್ಟ, ರಥ ಕೊಟ್ಟ. ನೋಡಿ ಅಂದರೆ **'ಸರ್ವಂ ವಿಷ್ಣು-ಮಯಂ ಜಗತ'** ಆಯುಧಗಳು ದೇವರು ಕೊಡಬೇಕು, ತಪಸ್ಸು ದೇವರು ಮಾಡಿಸಬೇಕು, ಫಲ ದೇವರು ಕೊಡಬೇಕು, ವರ ದೇವರು ಕೊಡಬೇಕು, ಅಸ್ತ್ರಗಳು ಮಂತ್ರಗಳ ಉಪದೇಶ ದೇವರು ಮಾಡಿದ್ದಾನೆ ಎಲ್ಲವನ್ನೂ ಭಗವಂತನೇ ಮಾಡುತ್ತಾನೆ **'ತೇನವಿನಾ ತೃಣಮಪಿ ನ ಚಲತಿ'** ಅನ್ನುವುದನ್ನ ಸ್ಪಷ್ಟವಾಗಿ ಹರಿವಂಶ ತೋರಿಸಿಕೊಡುತ್ತಾ ಇದೆ. ಈ ರೀತಿ ಆ ಎಲ್ಲ ದೇವತೆಗಳಿಗೆ ಬೇಕಾದಂತಹ ಬಲವನ್ನು ಯಥೇಚ್ಛವಾಗಿ ಕೊಟ್ಟು ಅದರಿಂದ ಅಸುರರ ಸಂಹಾರವನ್ನು ಪರಮಾತ್ಮ ಮಾಡಿಸಿದ್ದಾನೆ.

ಚತುರಙ್ಗಂ ಬಲಂ ಸರ್ವಂ ಸಂಹೃತ್ಯ ತಮಸಃ ಪ್ರಭುಃ ।
ವಿಷ್ಣುರೇವ ಮಹಾಯೋಗಾಂಶ್ಚಚಾರ ವಸುಧಾತಲೇ ॥ (29.20 ಭವಿಷ್ಯಪರ್ವ)

ಈ ರೀತಿ ತಪಶ್ಚರ್ಯವನ್ನು ಮಾಡಿಸಿ ಆಯುಧಾದಿಗಳನ್ನು ಕೊಟ್ಟು ಅಸುರರ ಸಂಹಾರವನ್ನು ಮಾಡಿಸಿದ್ದಾನೆ, ದೇವತೆಗಳಿಗೆ ವಿಜಯವನ್ನು ತಂದುಕೊಟ್ಟದ್ದಾನೆ ಪರಮಾತ್ಮ ಎಂಬ ಆ ಭಗವಂತನ ಮಹಾಮಹಿಮೆಯನ್ನು ಹರಿವಂಶ ತಿಳಿಸಿಕೊಡುತ್ತಾ ಇದೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

---

1. 29.14 ಭವಿಷ್ಯಪರ್ವ

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಭವಿಷ್ಯಪರ್ವ-39

* * *

ಜನಮೇಜಯ ಉವಾಚ

ಬ್ರಹ್ಮನ್ ಖಿಲೇ ವರ್ತಮಾನೇ ನಿರ್ಮರ್ಯಾದೇ ಮಹಾಗ್ರಹೇ ।
ಅವಿನಾಶೇ ಚ ಭೂತಾನಾಂ ಕಥಮಾಸನ್ ಪ್ರಜಾಸ್ತದಾ ।। (30.1 ಭವಿಷ್ಯಪರ್ವ)

ಭಗವಂತ ಎಲ್ಲ ದೇವತೆಗಳಿಗೆ ತಪಸ್ಸನ್ನು ಮಾಡುವ ರೀತಿಯನ್ನು ತೋರಿಸಿಕೊಟ್ಟು, ತಾನು ಸ್ವಯಂ ತಪಶ್ಚರ್ಯವನ್ನು ಮಾಡಿ, ಅವರೆಲ್ಲರಿಂದಲೂ ತಪಸ್ಸನ್ನು ಮಾಡಿಸಿ, ತಪಸ್ಸಿನ ಫಲವಾಗಿ ಅವರೆಲ್ಲರಿಗೆ ಪೂರ್ಣವಾಗಿ ಅನುಗ್ರಹವನ್ನು ಮಾಡಿ ಅವರಿಗೆ ಯೋಗ್ಯವಾದ ಆನಂದದ ಅಭಿವೃದ್ಧಿಯನ್ನ ಕರುಣಿಸಿ, ಜೊತೆಗೆ ಇಹಲೋಕದಲ್ಲಿ ನಾನಾ ವಿಧವಾದ ರಥ ಆಯುಧಗಳು ದೈತ್ಯರನ್ನು ಸಂಹಾರ ಮಾಡಿ ವಿಜಯವನ್ನು ಪಡೆದು, ಧರ್ಮದ ಸಂಸ್ಥಾಪನೆಯನ್ನು ಮಾಡುವುದಕ್ಕೆ ಬೇಕಾದ ಎಲ್ಲ ತರಹದ ಶಕ್ತಿಯನ್ನು ಸಾಮರ್ಥ್ಯವನ್ನು ಪರಮಾತ್ಮ ದೇವತೆಗಳಿಗೆ ನೀಡಿದ್ದಾನೆ. ಅಂತ ಹಿಂದೆ ನಾವೆಲ್ಲ ತಿಳಿದಿದ್ದೇವೆ. ಮುಂದೆ ಸ್ವಾಯಂಭುವ ಮನುವಿನ ವಂಶದಲ್ಲಿ ಅಂಗರಾಜ ಅಂತ ಬರುತ್ತಾನೆ ಆ ಅಂಗರಾಜನ ಮಗ ವೇನ, ಅವನು ಮಹಾದುಷ್ಟ. ಅವನ ದುಷ್ಟತನಕ್ಕೆ ಬೇಸತ್ತು ತಮ್ಮ ಹೂಂಕಾರದಿಂದಲೇ ಅವನನ್ನ ಸಂಹಾರ ಮಾಡುತ್ತಾರೆ ಋಷಿಗಳು. ಅವನ ತೊಡೆಯನ್ನ ಮಥನ ಮಾಡಿದಾಗ ಒಬ್ಬ ಹುಟ್ಟುತ್ತಾನೆ ಆದರೆ ರಾಜ್ಯವನ್ನು ಆಳುವುದಕ್ಕೆ ಯೋಗ್ಯನಲ್ಲ ಅಂತ ಅವನನ್ನು ಕೊಟ್ಟು ಕಳಿಸುತ್ತಾರೆ. ಅವನ ಬಾಹುವನ್ನ ಮಥನ ಮಾಡಿದಾಗ ಭಗವಂತನ ವಿಶೇಷ ಸನ್ನಿಧಾನಕ್ಕೆ ಪಾತ್ರನಾದ ಪೃಥು ರಾಜ, ಲಕ್ಷ್ಮೀ ದೇವಿಯ ಸನ್ನಿಧಾನಕ್ಕೆ ಪಾತ್ರಳಾದ ಅರ್ಚಿರ್ ದೇವಿ ಇಬ್ಬರೂ ಅಲ್ಲಿ ಪ್ರಾದುರ್ಭೂತರಾಗುತ್ತಾರೆ ಆ ಪೃಥು ರಾಜನಿಗೆ ಪಟ್ಟಾಭಿಷೇಕವನ್ನು ಮಾಡಿ ರಾಜನನ್ನಾಗಿ ಮಾಡುತ್ತಾರೆ ಬ್ರಹ್ಮ ದೇವರ ಆಜ್ಞೆಯಂತೆ. ಋಷಿ ಮುನಿಗಳೆಲ್ಲ ನಿಮಿತ್ತರು ಪ್ರಧಾನವಾಗಿ ಪರಮಾತ್ಮನ ಆಜ್ಞೆ, ಬ್ರಹ್ಮ ದೇವರ ಆಜ್ಞೆಯಂತೆ ಆ ಭಗವಂತನ ಸನ್ನಿಧಾನಕ್ಕೆ ಪಾತ್ರನಾದ ಪರಮಾತ್ಮನ ವಿಶೇಷ ಆವೇಶಕ್ಕೆ ಪಾತ್ರನಾದಂತಹ ಪೃಥು ರಾಜನನ್ನು ರಾಜನನ್ನಾಗಿ ಮಾಡುತ್ತಾರೆ. ಹಿಂದೆ ಹರಿವಂಶದಲ್ಲಿ ಪೃಥು ರಾಜನ ಚರಿತ್ರೆ ಒಂದು ಬಾರಿ ಬಂದಿದೆ ಎಲ್ಲ ವರ್ಗಗಳಲ್ಲಿಯೂ ಉತ್ತಮರಾದವರನ್ನ ಒಬ್ಬೊಬ್ಬರನ್ನ ಆರಿಸಿ ಅವರನ್ನ ಮುಂದೆ ಮಾಡಿಕೊಂಡು, ಕರುವಾಗಿ ಮಾಡಿಕೊಂಡು ಗೋರೂಪಳಾದ ಪೃಥ್ವಿಯಿಂದ ನಾನಾ ತರಹದ ಪದಾರ್ಥಗಳನ್ನ

ದೋಹನ ಮಾಡಿ ಕ್ಷೀರ ರೂಪದಲ್ಲಿ ಪಡೆದು ಅವರವರಿಗೆ ಬೇಕಾದ ವಸ್ತುವಿನ ರೂಪದಲ್ಲಿ ಅದನ್ನು ಪರಿಣಾಮಗೊಳಿಸಿ ಅವರೆಲ್ಲರಿಗೆ ವಿತರಣೆ ಮಾಡಿರುತ್ತಾನೆ ಅನ್ನುವ ಮಹಿಮೆಯನ್ನು ನೀವು ಹಿಂದೆ ಕೇಳಿದ್ದೀರಿ, ಭಾಗವತದಲ್ಲಿಯೂ ಕೇಳಿರುತ್ತೀರಿ ಅಂತಹ ಮಹಾನುಭಾವ ಆ ಪೃಥು ಚಕ್ರವರ್ತಿ. ಮುಂದೆ ಕೃತಯುಗ ಮುಗಿದು ತ್ರೇತಾಯುಗ ಪ್ರವೃತ್ತವಾಗುತ್ತಾ ಇದೆ ಆ ಸಂದರ್ಭದಲ್ಲಿ ಎಲ್ಲ ಕಡೆಗೆ ಧರ್ಮ, ಧರ್ಮದ ಸ್ಥಾಪನೆಯನ್ನು ಪೃಥು ಚಕ್ರವರ್ತಿ ಮಾಡಿರುತ್ತಾನೆ.

ಕುರುತಾಧೋಕ್ಷಜಧಿಯಸ್ತರ್ಹಿ ಮೇऽನುಗ್ರಹಃ ಕೃತಃ ॥ (04.21.25 ಭಾಗವತ)

ಅಂತ ಘೋಷಣೆ ಮಾಡುತ್ತಾನೆ ಮಹಾರಾಯಾ. ಎಲ್ಲಾ ಪ್ರಜೆಗಳನ್ನು ಕೂಡಿಸಿ, ವಿಷ್ಣು ಭಕ್ತಿಯನ್ನು ಮಾಡಿ, ಪರಮಾತ್ಮನ ಆದೇಶದ ರೂಪದಲ್ಲಿರುವಂತಹ ಶ್ರುತಿಸ್ಮೃತಿಗಳಲ್ಲಿ ವಿಹಿತವಾದ ಧರ್ಮಗಳ ಅನುಷ್ಠಾನವನ್ನು ಮಾಡಿ ಅದರಿಂದಲೇ ನಿಮ್ಮ ಉದ್ಧಾರ ಧರ್ಮವನ್ನು ಬಿಟ್ಟು ಜೀವನವನ್ನು ಮಾಡಬೇಡಿ ಅಂತ ಧರ್ಮೋಪದೇಶವನ್ನು ಮಾಡುತ್ತಾನೆ. ರಾಜನಾಗಿ ಕೇವಲ ಪ್ರಜೆಗಳಿಗೆ ಹೊಟ್ಟೆ ಬಟ್ಟೆಗೆ ಮಾತ್ರ ಕೊಡುವುದು ತನ್ನ ಕರ್ತವ್ಯವಲ್ಲ ಅವರು ಧರ್ಮದಿಂದ ಜೀವನ ಮಾಡುವುದು ಕೂಡ ರಾಜನ ಜವಾಬ್ದಾರಿ ಅನ್ನುವುದನ್ನ ತೋರಿಸಿಕೊಟ್ಟಿದ್ದಾನೆ. ಅದರ ಪರಿಣಾಮ ಏನಾಯಿತು ಅಂದರೆ ಎಲ್ಲಿ ಧರ್ಮ ಇರುತ್ತೆ ಯಾವ ರಾಜ್ಯದಲ್ಲಿ ಅಂತಹ ಧರ್ಮದ ರಾಜ್ಯ ಇದ್ದರೆ ಎಲ್ಲ ಕಡೆಗೆ ಸುಭಿಕ್ಷೆ, ಎಲ್ಲ ಕಡೆಗೆ ಸಮೃದ್ಧಿ, ಗೋವುಗಳು ಯಥೇಚ್ಛವಾಗಿ ಹಾಲನ್ನು ಕೊಡುತ್ತವೆ, ವೃಕ್ಷಗಳೆಲ್ಲ ಯಥೇಚ್ಛವಾಗಿ ಫಲ ಪುಷ್ಪಗಳನ್ನು ಕೊಡುತ್ತವೆ. ಬರೀ ಫಲ ಪುಷ್ಪಗಳನ್ನು ಕೊಡುವುದಲ್ಲ ಉತ್ತಮ ಜಾತಿಯ ಫಲ ಪುಷ್ಪಗಳನ್ನು ಕೊಡುತ್ತವೆ ಭಾರೀ ಸುಗಂಧಯುತವಾದ ಪುಷ್ಪಗಳು, ಅತ್ಯಂತ ರಸವತ್ತಾದ ಫಲಗಳನ್ನು ಕೊಡುತ್ತವೆ ವೃಕ್ಷಗಳು ಇದು ಜಗತ್ತಿನಲ್ಲಿ ಜನರು ಧಾರ್ಮಿಕರಾದದ್ದರ ಸಂಕೇತ. ಆ ಪೃಥು ರಾಜನ ಆಳ್ವಿಕೆಯಲ್ಲಿ ಎಲ್ಲರೂ ಧಾರ್ಮಿಕರಾದದ್ದರಿಂದ ಎಲ್ಲ ಕಡೆಗೆ ಸುಗಂಧಮಯವಾದಂತಹ ಪುಷ್ಪಗಳು, ಫಲವತ್ತಾದಂತಹ ವೃಕ್ಷಗಳೆಲ್ಲ ಕಾಣುತ್ತಾ ಇವೆ. ಗಂಧಮಾದನ ಪರ್ವತದ ಶಿಖರಗಳಲ್ಲಿ ಆ ತರಹದ ಭಾರೀ ಸುಗಂಧದ ವೃಕ್ಷಗಳ ಪುಷ್ಪಗಳ ವಾಸನೆ ಅಸುರರಿಗೆ ಬಂದಿದೆ, ದೇವತೆಗಳಿಗೂ ಆ ವಾಸನೆ ಬಂತು ವರ್ಣನೆ ಮಾಡುವುದಕ್ಕೆ ಸಾಧ್ಯ ಇಲ್ಲ. ಈಗ ನೋಡಿ ಎಂದೂ ಮನೆಯಲ್ಲಿ ಹೂವೇ ಕಾಣದೆ ಇರುವವರಿಗೆ ಸಾಮಾನ್ಯ ಪುಷ್ಪವನ್ನು ನೋಡಿದರೂ ಭಾರೀ ಆನಂದವಾಗಿ ಬಿಡುತ್ತದೆ ದೇವತೆಗಳಂತಹ ದೈತ್ಯರಂತಹ ಬೇಕಾದಷ್ಟು ಸಮೃದ್ಧಿಯನ್ನು ಪಡೆದ, ಬೇಕಾದಷ್ಟು ವನಗಳನ್ನು ಕಂಡ ಭಾರೀ ಭಾರೀ ಪುಷ್ಪಗಳ ವಾಸನೆಯನ್ನು ಅನುಭವಿಸಿದವರಿಗೆ ಈ ವಾಸನೆ ಆಕರ್ಷಣೆ ಮಾಡಬೇಕು ಅಂತಾಗಿದ್ದರೆ ಅದು ಎಂತಹ ಪುಷ್ಪಗಳು ಇರಬೇಕು ನೋಡಿ ಅಷ್ಟು ಸುಗಂಧವನ್ನು ಬೀರುವಂತಹ ಪುಷ್ಪಗಳು. ಆ ಪುಷ್ಪಗಳ ವಾಸನೆಯನ್ನು ಅವರು ಸ್ವೀಕಾರ ಮಾಡಿ ಏನು ಆಲೋಚನೆ ಮಾಡಿದ್ದಾರೆ ಅಂದರೆ ಈ ಗಿಡಗಳ ಹೂವುಗಳ ವಾಸನೆಯೇ ನಮ್ಮ ಮನಸ್ಸನ್ನು ಇಷ್ಟು ಆಕರ್ಷಣೆ ಮಾಡುತ್ತದೆ ಅಂದರೆ ಆ ಹಣ್ಣುಗಳು ಹೇಗೆ ಇರಲಿಕ್ಕಿಲ್ಲ, ಆ ಗಿಡಗಳ ಒಳಗಿರುವ ಅಂತಃಸತ್ವ ಅದು ಹೇಗಿರಲಿಕ್ಕಿಲ್ಲ, ಹಾಗಾದರೆ ಅಂತಹ ಹಣ್ಣುಗಳು, ಪುಷ್ಪಗಳು, ತೊಗಟೆಗಳು, ಇನ್ನನೇಕ ಲತೆಗಳು ಹಾಗೂ ಕಾಂಡಗಳು ಅದರ ತ್ವಚಾಗಳು, ಮೇಲಿನ ತೊಗಟೆಗಳು ಇವುಗಳೆಲ್ಲವನ್ನ ಸೇರಿಸಿ ಸಮುದ್ರದೊಳಗೆ ಹಾಕಿ ಮಥನ ಮಾಡಿದರೆ ಏನೋ ಒಂದು ಅದ್ಭುತವಾದ ರಸ ಬರಬಹುದಲ್ಲ, ಅದರಿಂದ ನಾವು ಅಮರರಾಗಬಹುದಲ್ಲ, ಅಮೃತವೇ ಬರಬಹುದಲ್ಲ ಅನ್ನುವ ಆಲೋಚನೆಯನ್ನು ಮಾಡಿದ್ದಾರೆ.

ಅಮೃತ ಮಥನದ ಕಥೆಯನ್ನು ಮಹಾಭಾರತದ ಆದಿಪರ್ವದಲ್ಲಿ ಅಥವಾ ಶ್ರೀಮದ್ಭಾಗವತದಲ್ಲಿ ಒಂದು ರೀತಿ ನಾವು ಕೇಳುತ್ತೇವೆ ಹರಿವಂಶದಲ್ಲಿ ಒಂದು ರೀತಿಯ ವರ್ಣನೆ ಬರುತ್ತಾ ಇದೆ. ಅಂದರೆ ದೇವತೆಗಳು ಐಶ್ವರ್ಯದಿಂದ ಭ್ರಷ್ಟರಾಗುತ್ತಾರೆ, ಮರಳಿ ಐಶ್ವರ್ಯವನ್ನು ಪಡೆಯುವುದಕ್ಕೆ ಪರಮಾತ್ಮನ ಹತ್ತಿರ ಪ್ರಾರ್ಥನೆ ಮಾಡಿದಾಗ, ಅಸುರರ

ಜೊತೆಗೆ ಸಂಧಾನ ಮಾಡಿಕೊಂಡು ಅಮೃತ ಮಥನ ಮಾಡೀ ಅಂತ ದೇವರು ಆದೇಶ ಮಾಡಿ ಕಳಿಸುತ್ತಾನೆ ಆಗ ಅಮೃತ ಮಥನಕ್ಕೆ ಬರುತ್ತಾರೆ ಅನ್ನುವ ಒಂದು ಕಥೆಯನ್ನು ನಾವೆಲ್ಲ ಕೇಳುವುದುಂಟು. ಆ ರೀತಿಯಾದ ಕಥೆಯನ್ನೇ ಶ್ರೀಮದಾಚಾರ್ಯರು ಕೂಡ ಮಹಾಭಾರತದ ತಾತ್ಪರ್ಯ ನಿರ್ಣಯದಲ್ಲಿ ಶ್ರೀಮನ್ಮಹಾಭಾರತ ಭಾಗವತಾದಿಗಳಿಗೆ ಅನುಗುಣವಾಗಿ ನಿರೂಪಣೆ ಮಾಡಿದ್ದಾರೆ ಆ ತರಹದ ಒಂದು ಕಥೆ ಉಂಟು. ಅದರ ಜೊತೆಗೆ ಹರಿವಂಶ ಹೇಳುತ್ತದೆ ಹೀಗೂ ಒಂದು ಅದರ ಹಿನ್ನೆಲೆ. ದೇವತೆಗಳಿಗೆ ರಾಜ್ಯವನ್ನು ಪಡೆದುಕೊಳ್ಳಬೇಕು ಮತ್ತೆ ಅಂತ ಅನ್ನುವಂತಹ ಆಸೆ ಒಂದು ಕಡೆಗಾದರೆ, ಭಗವಂತನ ಸಂಕಲ್ಪಕ್ಕೆ ಅನುಗುಣವಾಗಿ ಆ ತರಹದ ಸಂಕಲ್ಪವನ್ನು ದೇವತೆಗಳು ಒಂದು ಕಡೆಗೆ ಮಾಡಿದರೆ, ಇನ್ನೊಂದು ಕಡೆಗೆ ಈ ಒಂದು ವಿವಿಧವಾದ ಭಗವಂತನ ಅತ್ಯದ್ಭುತವಾದ ಅಚಿಂತ್ಯವಾದ ಶಕ್ತಿಯಿಂದ ಆಗಿರುವಂತಹ ಏನು ಸೃಷ್ಟಿ ಇದೆ ಆ ಸೃಷ್ಟಿಯ ವೈಚಿತ್ರ್ಯವನ್ನು ಕಂಡಾಗ, ಆ ಸೃಷ್ಟಿಯ ಅದ್ಭುತವಾದಂತಹ ವಿರಾಟ್ ರೂಪದೊಳಗೆ ನಾನಾ ವಿಧವಾದಂತಹ ಅಮೂಲ್ಯವಾದ ವಸ್ತುಗಳನ್ನು ದೇವರು ಏನು ನಿರ್ಮಾಣ ಮಾಡಿ ಇಟ್ಟಿದ್ದಾನೆ ಅದನ್ನು ಕಂಡಾಗ ಇವುಗಳ ಸದುಪಯೋಗವನ್ನು ನಾವು ಮಾಡಿಕೊಳ್ಳಬಹುದು ಅನ್ನುವ ಆಲೋಚನೆಯೂ ದೇವತೆಗಳಿಗೆ ಬಂದಿದೆ, ಭಗವಂತನ ಆದೇಶವೂ ಆಗಿದೆ. ಇವೆರಡೂ ಸೇರಿ ಅವರು ಅಮೃತ ಮಥನಕ್ಕೆ ಹೊರಟಿದ್ದಾರೆ ಅಂತ ಹರಿವಂಶ ಹಾಗೂ ಭಾಗವತಗಳನ್ನೆಲ್ಲ ನಾವೂ ಸೇರಿಸಿ ಅರ್ಥ ಮಾಡಿಕೊಳ್ಳಬಹುದು. ಸರಿ, ಆ ರೀತಿ ಆಲೋಚನೆಯನ್ನು ಮಾಡಿದ್ದಾರೆ.

ತಸ್ಮಾದ್ ವಯಂ ಪಯೋಮಧ್ಯೇ ಓಷಧ್ಯೋ ನಿರ್ಮಥಾಮಹೇ ॥ (30.11 ಭವಿಷ್ಯಪರ್ವ)

ಮಂದರ ಪರ್ವತವನ್ನ ತೆಗೆದುಕೊಂಡು ಆ ಕ್ಷೀರ ಸಮುದ್ರದ ಮಧ್ಯದಲ್ಲಿ ನಾವು ಇದನ್ನು ಇಟ್ಟು ಮಂದರ ಪರ್ವತವನ್ನು ಮಥನ ಮಾಡೋಣ. ಮಥನ ಮಾಡೋಣ ಅಂತ ಬರೀ ಸಂಕಲ್ಪ ಮಾಡಿದ್ದಾರೆ ಆದರೆ ಆ ಮಂದರ ಪರ್ವತವನ್ನ ತಂದು ಮಥನ ಮಾಡಿ ಅಮೃತವನ್ನು ಪಡೆಯುವಷ್ಟು ಸಾಮರ್ಥ್ಯ ಅವರಿಗಿಲ್ಲ, ಪರಮಾತ್ಮನಿಗೇ ಶರಣು ಹೋಗಿದ್ದಾರೆ.

ವಿಷ್ಣುರೇವಾಗ್ರಣೀಸ್ತೇಷಾಂ ಭವಿಷ್ಯತಿ ಮಹಾಬಲಃ । (30.13 ಭವಿಷ್ಯಪರ್ವ)

ಸರ್ವೋತ್ತಮನಾದಂತಹ ಸ್ವಾಮಿ ಪರಮಾತ್ಮ ಶ್ರೀಹರಿ ಅವನೇ ಅವರಿಗೆ ಅಗ್ರನಾಯಕನಾಗಿ ಆ ಶಕ್ತಿಯನ್ನು ಬಲವನ್ನು ಕೊಟ್ಟು ಅಮೃತ ಮಥನವನ್ನು ಮಾಡಿಸಿದ್ದಾನೆ ಅನ್ನುವ ಮಾತನ್ನು ತಿಳಿಸುತ್ತಾರೆ. ಎಲ್ಲಾ ದೇವತೆಗಳು ದಾನವರು ಸೇರಿ ಸಂಧಾನ ಎಲ್ಲಾ ಮಾಡಿಕೊಂಡರು ಇಬ್ಬರೂ ಸೇರಿ ಅಮೃತ ಮಥನ ಮಾಡುವುದು ಅಂತಾಯಿತು, ಅಮೃತ ಮಥನ ಮಾಡುವುದಕ್ಕೆ ಆ ಮಂದರ ಪರ್ವತವನ್ನ ಎತ್ತಬೇಕು ಅಂತ ಹೊರಟರೆ ಅದನ್ನ ಅಲಿಗಾಡಿಸುವುದಕ್ಕೂ ಆಗಿಲ್ಲ, ಕಂಪನ ಮಾಡುವುದಕ್ಕೂ ಆಗಿಲ್ಲ ಎತ್ತುವುದಂತೂ ದೂರ ಉಳಿಯಿತು. ಇದಕ್ಕೆ ಕಾರಣವನ್ನು ಶ್ರೀಮದಾಚಾರ್ಯರು ತಾತ್ಪರ್ಯ ನಿರ್ಣಯದಲ್ಲಿ ತಿಳಿಸುತ್ತಾರೆ ಏನು ಇಂತಿಂತಿಹ ಮಹಾದೇವತೆಗಳಿಗೆ ಪರ್ವತವನ್ನು ಎತ್ತಲಿಕ್ಕೆ ಆಗಲಿಲ್ಲ ನಮಗೆ ಅಸಾಧ್ಯ ಆದರೆ ದೇವತೆಗಳ ಬಲ ಎಂತಹದ್ದು ಅಂತಹ ತತ್ವಾಭಿಮಾನಿಗಳಾಗಿರುವ ಮಹಾ ಮಹಾಸಾಮರ್ಥ್ಯ ಸಂಪನ್ನರಾದ

ಅಚಿಂತ್ಯಾಃ ಶಕ್ತಯಸ್ತಾಸಾಂ ದೃಶ್ಯಂತೇ ಮುನಿಭಿಶ್ಚ ತಾಃ ॥ (ಬ್ರಹ್ಮಸೂತ್ರಭಾಷ್ಯಮ್)

ಅಂತಹ ಅಚಿಂತ್ಯ ಸಂಪನ್ನರಾದ ದೇವತೆಗಳಿಗೆ ಪರ್ವತವನ್ನು ಎತ್ತಲಿಕ್ಕೆ ಆಗಲಿಲ್ಲ ಅಂದರೆ ರುದ್ರ ದೇವರ ವರ ಇತ್ತು ಯಾರೂ ಎತ್ತುವುದಕ್ಕೆ ಸಾಧ್ಯ ಆಗಬಾರದು ಅಂತ ಆ ಮಂದರ ಪರ್ವತಕ್ಕೆ. ನೋಡಿ ಅಂದರೆ

ಮಹಾನುಭಾವರಾದ ರುದ್ರ ದೇವರ ಒಂದು ವಚನ ಅದಕ್ಕೆಷ್ಟು ಶಕ್ತಿ ಇದೆ ನೋಡಿಕೊಳ್ಳಿ ಆ ರುದ್ರ ದೇವರ ಈ ಎಲ್ಲ ಇಂದ್ರಾದಿ ದೇವತೆಗಳಿಗಿಂತಲೂ ಉತ್ತಮರಾದ ಮಹಾನುಭಾವರಾದ ರುದ್ರ ದೇವರ ಒಂದೇ ಒಂದು ವಚನದ ಬಲದಿಂದ ಎಲ್ಲಾ ದೇವತೆಗಳು ಒಗ್ಗೂಡಿ ಎತ್ತಿದರೂ ಎತ್ತಲಿಕ್ಕೆ ಆಗಿಲ್ಲ ಬ್ರಹ್ಮ ದೇವರಿಗೆ ಶರಣು ಹೋಗಿದ್ದಾರೆ. ಬ್ರಹ್ಮ ದೇವರು ಹೇಳುತ್ತಾರೆ ಒಂದು ಕೆಲಸ ಮಾಡಿ ನೀವು ವಸು ರುದ್ರ ಆದಿತ್ಯ ಮರುತ್ ದೇವತೆಗಳು ಯಕ್ಷರು ಗಂಧರ್ವರು ಕಿನ್ನರರು ಎಲ್ಲರೂ ಸೇರಿ ಒಂದೇ ಸಲ ಎತ್ತಿರಿ ಅಂದರೆ ಮಂದರ ಪರ್ವತವನ್ನು ಎತ್ತಲಿಕ್ಕೆ ಆಗುತ್ತೆ. ಆ ರೀತಿ ಅವರು ಪ್ರಯತ್ನ ಮಾಡಿ ಮಂದರ ಪರ್ವತವನ್ನ ಎತ್ತಿ ತೆಗೆದುಕೊಂಡು ಬಂದು ಸಮುದ್ರದಲ್ಲಿ ಇಡುತ್ತಾರೆ ಅಂತ ಹರಿವಂಶದಲ್ಲಿ ಕಥೆ ಬರುತ್ತದೆ. ಆದರೆ ಆದಿಪರ್ವ ಮಹಾಭಾರತದಲ್ಲಿ, ಶ್ರೀಮದ್ಭಾಗವತದ ಅಷ್ಟಮಸ್ಕಂಧದಲ್ಲಿ ಬರುವಂತಹ ಕಥೆ ಏನು ಮಾಡಿದರೂ ಅವರಿಗೆ ಎತ್ತಲಿಕ್ಕೆ ಆಗಿಲ್ಲ, ಸ್ವತಃ ಭಗವಂತನೇ ಆ ಪರ್ವತವನ್ನು ಎತ್ತಿ ಗರುಡ ದೇವರ ಮೇಲೆ ಇಡುತ್ತಾನೆ, ಆ ಗರುಡ ದೇವರು ಅದನ್ನು ತೆಗೆದುಕೊಂಡು ಬಂದು ಸಮುದ್ರದಲ್ಲಿ ಇಡುತ್ತಾರೆ ಅಂತ ಕಥೆ ಇದೆ.

ಅದರಲ್ಲಿಯೂ ಆದ ಘಟನೆ ಏನು ಅಂದರೆ ಮೊದಲು ಎತ್ತುವುದಕ್ಕೆ ಪ್ರಯತ್ನ ಮಾಡುತ್ತಾರೆ, ರುದ್ರ ದೇವರ ವರ ಎತ್ತುವುದಕ್ಕೆ ಸಾಧ್ಯ ಆಗುವುದಿಲ್ಲ. ದೇವರ ಆದೇಶ ಜೊತೆಗೆ ರುದ್ರ ದೇವರಿಗೆ ಯೋಗ್ಯತೆಯಲ್ಲಿ ಸಮಾನರಾದಂತಹ ಗರುಡ ದೇವರು ಹೀಗಾಗಿ ಗರುಡ ದೇವರಿಗೆ ಆ ರುದ್ರ ದೇವರ ವಚನವನ್ನೂ ಮೀರಿ ಪರಮಾತ್ಮನ ಅನುಗ್ರಹದ ಬಲದಿಂದಲೂ ಎತ್ತುವುದಕ್ಕೆ ಸಾಧ್ಯ ಇದೆ. ರುದ್ರ ದೇವರ ವರ ಇದ್ದರೂ ಕಿಂಚಿತ್ತು ಆಲೋಚನೆ ಮಾಡದೆ ಪರಮಾತ್ಮ ಅತ್ಯಂತ ಅನಾಯಾಸವಾಗಿ ಲೀಲೆಯಿಂದ ದೇವರೇ ತನ್ನ ಕೈಯಿಂದ ಎತ್ತಿ ಎಡಗೈಯಿಂದ ಎತ್ತಿ ಗರುಡ ದೇವರ ಮೇಲೆ ಇಡುತ್ತಾನೆ. ಗರುಡ ದೇವರು ಪರಮಾತ್ಮನ ಅನುಗ್ರಹದಿಂದ ಆ ಪರ್ವತವನ್ನು ದಾರಣ ಮಾಡುತ್ತಾರೆ ದೇವತೆಗಳ ಬಲಕ್ಕೂ ಪರಮಾತ್ಮನ ಬಲಕ್ಕೂ ಎಷ್ಟು ಅಂತರ ಇದೆ ನೋಡಿ. ದೇವತೆಗಳಿಗೆ ಕುತೂಹಲ ಒಂದು ಚಾಪಲ್ಯ ನಾವು ತಂದು ಇಟ್ಟೆವು ಅಂತ ಒಂದು ತೃಪ್ತಿ ಬೇಕು ನಮಗೆ ಅಂತ ಗರುಡ ದೇವರು ಒಂದು ಸಲ ಎತ್ತಿ ಕೊಂಡಿದ್ದಾರಲ್ಲ ಕೆಳಗಿನಿಂದ ಎತ್ತುವುದು ಕಷ್ಟ, ಮೇಲೆ ಎತ್ತಿ ಕೊಟ್ಟ ಮೇಲೆ ಎತ್ತಿ ಕೊಳ್ಳುವುದು ಸುಲಭ ಈಗಾದರೂ ನಮಗೆ ಕೊಡುತ್ತೀಯಾ ಅಂತ ಸರಿ ತೆಗೆದುಕೊಳ್ಳಿ ಅಂದ. ಮತ್ತೆ ಆ ಪರ್ವತವನ್ನ ತೆಗೆದುಕೊಳ್ಳುವ ಪ್ರಯತ್ನ ಮಾಡಿ ಮೈ ಮೇಲೆ ಹಾಕಿಕೊಂಡು ಕೈಕಾಲು ತಲೆ ಎಲ್ಲ ಜಜ್ಜಿ ಹೋಗಿದೆ ದೇವತೆಗಳಿಗೆ, ರುದ್ರ ದೇವರ ವರ ಅಂದರೆ ಅಂತಹ ಅದ್ಭುತವಾದದ್ದು. ಅದಕ್ಕೆ ಮತ್ತೆ ಹೇಳಿದ ಪರಮಾತ್ಮ ತಾರತಮ್ಯವನ್ನು ಚೆನ್ನಾಗಿ ತಿಳಿದುಕೊಳ್ಳಿ ನೀವೆಲ್ಲ ರುದ್ರ ದೇವರಗಿಂತ ಚಿಕ್ಕವರು, ಅವರ ವಚನದ ಉಲ್ಲಂಘನೆ ಮಾಡಲಿಕ್ಕೆ ನಿಮಗೆ ಸಾಧ್ಯ ಇಲ್ಲ, ನನಗೆ ಸಾಧ್ಯ ಇದೆ ಅಂತ ಪುನಃ ಆ ಪರ್ವತವನ್ನು ಗರುಡ ದೇವರ ಮೇಲೆ ಇಟ್ಟು ಒಮ್ಮೆ ಎಲ್ಲ ಕೈಕಾಲೆಲ್ಲ ಮುರಿದುಕೊಂಡು ಬಿದ್ದ ದೇವತೆಗಳ ಕಡೆಗೆ ನೋಡುತ್ತಾನೆ ಅಷ್ಟೇ **'ಪ್ರಸನ್ನ ದೃಷ್ಟ್ಯಾ'** ಪ್ರಸನ್ನವಾದ ದೃಷ್ಟಿಯಿಂದ ನೋಡಿದ್ದೇ ತಡ ಮತ್ತೆ ಮೊದಲಿನಂತೆ ದೇವತೆಗಳು ದಷ್ಟಪುಷ್ಟರಾಗಿ ಎದ್ದು ನಿಲ್ಲುತ್ತಾರೆ. ಅಂದರೆ ಮುಂದೆ ಬರುವ ಅಮೃತ ಇದು ಕೇವಲ ನಿಮಿತ್ತ ಮಾತ್ರ ಅಮೃತ ದೃಷ್ಟಿಯಿಂದಲೇ ಎಲ್ಲರನ್ನು ನಾನು ಬದುಕಿಸಬಲ್ಲೆ ಅಂತ ಅಮೃತ ಮಥನದ ಮೊದಲೇ ದೇವರು ತೋರಿಸಿಕೊಟ್ಟ. ಅಮೃತವೇ ಬಂದಿಲ್ಲ ಇನ್ನೂ ಕೇವಲ ತನ್ನ ದೃಷ್ಟಿಯಿಂದಲೇ ಎಲ್ಲ ದೇವತೆಗಳನ್ನು ಎಬ್ಬಿಸುತ್ತಾನೆ ಆಮೇಲೆ ಮಂದರ ಪರ್ವತವನ್ನು ಒಯ್ದು ಅಲ್ಲಿ ಇಟ್ಟು ಮಥನ ಮಾಡುತ್ತಾರೆ ಅಂತ ಕಥೆ ಬಂದಿದೆ ಆದರೆ ಹರಿವಂಶದಲ್ಲಿ ಮಾತ್ರ ಬ್ರಹ್ಮ ದೇವರು ಹೇಳುತ್ತಾರೆ.

ಸಮೇತ್ಯ ಸಹಿತೈಃ ಸರ್ವೈಃ ಶಕ್ಯ ಉದ್ಧರಿತುಂ ಗಿರಿಃ । (30.22 ಭವಿಷ್ಯಪರ್ವ)

ನೀವು ಒಬ್ಬೊಬ್ಬರು ಎತ್ತಿದರೆ ಸಾಧ್ಯ ಇಲ್ಲ, ಕೂಡಿ ಎತ್ತಿದರೆ ಮಾತ್ರ ಸಾಧ್ಯ ಇದೆ ಅಂತ ಆದರೆ ಕೂಡಿ ಎತ್ತಲೂ ಸಾಧ್ಯವಾಗದೇ ಪರಮಾತ್ಮ ಅದನ್ನ ಎತ್ತಿ ಗರುಡ ದೇವರ ಮೇಲಿಟ್ಟು ತಂದದ್ದು ಕಥೆ ನಮಗೆ ಬೇರೆ ಗ್ರಂಥಗಳಲ್ಲಿ ನೋಡಲಿಕ್ಕೆ ಸಿಗುತ್ತದೆ, ಮಹಾಭಾರತದಲ್ಲಿಯೂ ಇದೆ. ಹಾಗಾದರೆ ಈ ಮಾತಿಗೆ ಅರ್ಥ ಏನು ಮಾಡಬೇಕು.

ಸಮೇತ್ಯ ಸಹಿತೈಃ ಸರ್ವೈಃ ಶಕ್ಯ ಉದ್ಧರಿತುಂ ಗಿರಿಃ । (30.22 ಭವಿಷ್ಯಪರ್ವ)

ಅಂದರೆ ನಿಮಗೆ ಈ ಪರ್ವತವನ್ನು ಎತ್ತಲಿಕ್ಕೆ ಆಗುವುದೇ ಇಲ್ಲ, ನೀವು ದೇವರಿಗೆ ಶರಣು ಹೋಗಿ **'ಸಂ ಏತ್ಯ ಅ ಕ ಯೈ ಸಂಭೂವಂ ಸಖಃ ವಿಷ್ಣುವಾಚಕಃ'** ಅಂತ ಇದೆ **'ಸಂ'** ಎಂಬ ಶಬ್ದಕ್ಕೆ ಅತ್ಯಂತ ಸಮೀಚಿನವಾದ ಗುಣಗಳಿಂದ ಯುಕ್ತನಾದ ಪರಮಾತ್ಮನಿಗೆ **'ಸಂ'** ಅಂತ ಕರೆಯುತ್ತಾರೆ. ಇದನ್ನು ಯಾರೋ **'ಸಂ'** ಹೇಳಿದ್ದಾರೆ ಅಂತ ತಿಳಿದು ಕೊಳ್ಳಬೇಡಿ ಸಮ್‌ಬಡಿ ಇದನ್ನು ಐತರೇಯ ಭಾಷ್ಯದಲ್ಲಿ ಶ್ರೀಮದಾಚಾರ್ಯರು ಕೋಶಗಳನ್ನು ಉದಾಹರಣೆ ಮಾಡಿ ಹೇಳಿದ್ದು **'ಸಂ'** ಅನ್ನುವ ಶಬ್ದಕ್ಕೆ ಸಾಕ್ಷಾತ್ ವಿಷ್ಣು ಪರಮಾತ್ಮ ಅಂತ ಅರ್ಥ. **'ಸಂ ಏತ್ಯ'** ಆ ಪರಮಾತ್ಮನಿಗೆ ಶರಣು ಹೋಗಿ ಶರಣು ಹೋದಾಗ ಭಗವಂತ ಗರುಡ ದೇವರಿಗೆ ಆಜ್ಞೆ ಮಾಡುತ್ತಾನೆ ಅಂತಹ ಗರುಡ ದೇವರ ಜೊತೆಗೆ ನೀವು ಸೇರಿಕೊಂಡು ಅವರಿಗೆ ಕೇಳಿಕೊಂಡಾಗ ಗರುಡ ದೇವರು ಇದನ್ನು ಧಾರಣ ಮಾಡುತ್ತಾರೆ ಆಗ ನೀವು ಅವರ ಜೊತೆಗೆ ಮೆರವಣಿಗೆಯಲ್ಲಿ ಬಂದ ಹಾಗೆ ಬನ್ನಿ ಅಷ್ಟೇ. **'ಸಹಿತೈಃ'** ಹಿತ ಅಂದರೆ ಇಡೀ ಜಗತ್ತಿಗೆ ಹಿತವನ್ನು ಉಪದೇಶ ಮಾಡುವಂತಹ ವೇದ ಆ ವೇದಾಭಿಮಾನಿಯಾಗಿ ಇರುವಂತಹ ಗರುಡ ದೇವರು. **'ಸಹಿತೈಃ'** ನೀವೆಲ್ಲ ಒಟ್ಟಾಗಿ ಅಂತ ಅರ್ಥ ಅಲ್ಲ **'ಸ ಹಿತೈಃ'** ಸಕಲರಿಗೂ ಹಿತವನ್ನ ಬೋಧನೆ ಮಾಡುವಂತಹ ಆ ಗರುಡ ದೇವರಿಂದ ಯುಕ್ತರಾಗಿ ನೀವು ಇದನ್ನು ಎತ್ತಿಕೊಂಡು ಬರಬಹುದು. ಅಂದರೆ ಅವರು ಎತ್ತಿಕೊಂಡು ಬರುತ್ತಾರೆ, ನೀವು ಮುಂದೆ ಮುಂದೆ ಮೆರವಣಿಗೆಯಲ್ಲಿ ಬಂದು ನಾವೆಲ್ಲ ಸೇರಿ ತಂದೆವು ಅಂತ ಹೇಳಿಕೊಳ್ಳುವುದಕ್ಕೆ ಬೇಕು ಅಂದರೆ ಸಾಧ್ಯಇದೆ. ನಿಜವಾಗಿ ಪರಮಾತ್ಮ ಎತ್ತಬೇಕು, ಆಮೇಲೆ ಗರುಡ ಅದನ್ನು ತರಬೇಕು ಆದ್ದರಿಂದ ನಿಮಗೆ ಅದು ಸಾಧ್ಯ ಇಲ್ಲ ಅನ್ನುವುದು ಇಲ್ಲಿ ಒಳಗಿರುವಂತಹ ಆಂತರ್ಯ, ಸರಿ ಅದನ್ನು ತೆಗೆದುಕೊಂಡು ಬಂದಿದ್ದಾರೆ. ಆಮೇಲೆ ಆ ಮಂದರ ಪರ್ವತವನ್ನ ಎಲ್ಲಿಟ್ಟರು ಅಂತ ವಿಚಾರ ಶ್ರೀಮದ್ಭಾಗವತ ಹೇಳುತ್ತದೆ ಸ್ಪಷ್ಟವಾಗಿ. ಆ ಮಂದರ ಪರ್ವತವನ್ನ ಕ್ಷೀರ ಸಾಗರದಲ್ಲಿ ಇಟ್ಟು ಅವರು ಮಥನ ಮಾಡುತ್ತಾರೆ.

ಕ್ಷಿಪ್ತ್ವಾ ಕ್ಷೀರೋದಧೌ ಸರ್ವಾ ವೀರುತ್ತೃಣಲತೌಷಧೀಃ ।
ಮಂಥಾನಂ ಮಂದರಂ ಕೃತ್ವಾ ನೇತ್ರಂ ಕೃತ್ವಾತು ವಾಸುಕಿಮ್ ॥ (08.6.22 ಭಾಗವತ)

ಅಂತ ಪರಮಾತ್ಮ ದೇವತೆಗಳಿಗೆ ಆದೇಶ ಮಾಡುತ್ತಾನೆ ಎಲ್ಲಾ ಔಷಧಿಗಳು ವನಸ್ಪತಿಗಳು ಲತೆಗಳನ್ನ ಎಲ್ಲವುಗಳನ್ನ ಕ್ಷೀರ ಸಮುದ್ರದಲ್ಲಿ ಹಾಕಿ ಮಂದರ ಪರ್ವತವನ್ನ ಇಟ್ಟು ಮಥನ ಮಾಡಿ ಅಂತ. ಹಾಗಾದರೆ ಭಾಗವತ ಹೇಳುವಂತೆ, ಶ್ರೀಮದಾಚಾರ್ಯರು ತಾತ್ಪರ್ಯ ನಿರ್ಣಯದಲ್ಲಿ ತಿಳಿಸುವಂತೆ ಕ್ಷೀರ ಸಮುದ್ರದಲ್ಲಿ ಈ ಅಮೃತ ಮಥನ ಆದದ್ದು ಆದರೆ ಲವಣ ಸಮುದ್ರದಲ್ಲಿ ಅಮೃತ ಮಥನವಾಗಿದೆ ಅನ್ನುವ ಮಾತನ್ನು ಹರಿವಂಶ ಹೇಳುತ್ತದೆ.

ಸುರಾಸುರಗಣಾಃ ಸರ್ವೇ ಸಹಿತಾಃ ಲವಣಾಮ್ಭಸಃ ।
ಮನ್ದರಂ ಪುಷ್ಕರಂ ಕೃತ್ವಾ ನೇತ್ರಂ ವಾಹುಕಿಮೇವ ಚ ॥ (30.26 ಭವಿಷ್ಯಪರ್ವ)

ಲವಣ ಸಮುದ್ರದಲ್ಲಿ ಆ ಮಂದರ ಪರ್ವತವನ್ನ ಕಡುಗೋಲನ್ನಾಗಿ ಇಟ್ಟು ಮಥನ ಮಾಡಿದರು ಸಾವಿರ ವರ್ಷಗಳವರೆಗೆ.

ಸಮಾಃ ಸಹಸ್ರಂ ಮಥಿತಂ ಜಲಮೋಷಧಿಭಿಃ ಸಹ । (30.27 ಭವಿಷ್ಯಪರ್ವ)

ಆ ರೀತಿ ಮಥನ ಮಾಡಿದ್ದಾರೆ ಅಂತ ಬರುತ್ತದೆ ಆದರೆ ಒಂದು ವಿಚಿತ್ರ ಅಂದರೆ ಮುಂದಿನ ಶ್ಲೋಕದಲ್ಲಿ ಹೇಳುತ್ತದೆ.

ಕ್ಷೀರಭೂತಂ ಸಮಾಯೋಗಾದಮೃತಂ ಸಮಪದ್ಯತ ॥ (30.27 ಭವಿಷ್ಯಪರ್ವ)

ಆ ಉಪ್ಪು ನೀರು ಕ್ರಮವಾಗಿ ಹಾಲಾಯಿತು, ಆಮೇಲೆ ಅದು ಅಮೃತವಾಯಿತು ಅಂತ ಹರಿವಂಶ ಹೇಳುತ್ತದೆ. ಆದರೆ ಆ ಎಲ್ಲ ಔಷಧಿ ವನಸ್ಪತಿಗಳನ್ನ ಲತೆಗಳನ್ನ ಹಾಕೋದೇ ಕ್ಷೀರ ಸಾಗರದಲ್ಲಿ ಹಾಕಿ ಅಂತ ಭಾಗವತ ಹೇಳುತ್ತದೆ. ಹಾಗಾದರೆ ಅದರ ಅಭಿಪ್ರಾಯ ಮೊದಲು ಲವಣ ಸಮುದ್ರಕ್ಕೆ ಹೋದರು, ಅಲ್ಲಿ ಮಥನ ಪ್ರಾರಂಭ ಆಯಿತು, ಆಮೇಲೆ ಕ್ರಮವಾಗಿ ಆ ಲವಣ ಸಮುದ್ರವೇ ಕ್ಷೀರ ಸಮುದ್ರವಾಗಿ ಪರಿಣಮಿಸಿತು ಅಂತ ಹೀಗೆ ಅಭಿಪ್ರಾಯವಲ್ಲ ಹರಿವಂಶಕ್ಕೆ. ಕ್ಷೀರ ಸಮುದ್ರದಲ್ಲಿಯೇ ಹಾಕಬೇಕು ಅಂತ ಭಾಗವತ ಹೇಳುತ್ತದೆ, ತಾತ್ಪರ್ಯ ನಿರ್ಣಯದಲ್ಲಿಯೂ ಹಾಗೆ ಶ್ರೀಮದಾಚಾರ್ಯರು ನಿರ್ಣಯವನ್ನು ನೀಡಿದ್ದಾರೆ. ಹಾಗಾದರೆ ಆಲೋಚನೆ ಲವಣ ಸಮುದ್ರದಲ್ಲಿ ಹಾಕೋಣವೇ ಅಂತ ಆಲೋಚನೆ, ಆಲೋಚನೆ ಮಾತ್ರ ಮಾಡಿದರು ಅದೆಲ್ಲ ಲವಣ ಸಮುದ್ರದಲ್ಲಿ ಹಾಕಿದರೆ ಕೆಲಸ ಆಗುವುದಲ್ಲ, ಕ್ಷೀರ ಸಮುದ್ರದಲ್ಲಿ ಹಾಕಿದರೆ ಮಾತ್ರ ಕೆಲಸವಾಗುತ್ತೆ ಅಂತ ದೇವರು ಆದೇಶ ಮಾಡಿದ, ಕ್ಷೀರ ಸಮುದ್ರದಲ್ಲಿಯೇ ಅದನ್ನು ಹಾಕಿದರು, ಅಲ್ಲಿಯೇ ಅಮೃತ ಬಂತು ಅಂತ ಅರ್ಥ. ಯಾಕೆ ಅಂದರೆ **'ಕ್ಷೀರಭೂತಂ ಸಮಾಯೋಗಾದ್',** ಸಮಾಯೋಗಾದ್ ಅಂದರೆ ಆ ಮಂದರ ಪರ್ವತವನ್ನು ಇಟ್ಟು ಮಥನ ಮಾಡಿದ್ದರಿಂದ ಉಪ್ಪು ನೀರು ಹಾಲಾಯಿತು ಅಂತ ಅರ್ಥ ಅಲ್ಲ. **ವಿಚಾರಮಾಯೋಗಾದ್** ಇಲ್ಲಿ ಮಾಡಿದರೆ ಕೆಲಸ ಆಗುವುದಿಲ್ಲ ಅಂತ ಆಲೋಚನೆ ಮಾಡಿ, ಇವರ ಆಲೋಚನೆಯಲ್ಲಿ ಆ ಲವಣ ಸಮುದ್ರದ ಸ್ಥಾನದಲ್ಲಿ ಕ್ಷೀರ ಸಮುದ್ರ ಬಂತು ಅಂದರೆ ಇಲ್ಲಿ ಮಥನ ಮಾಡೋಣ ಅಂತ. ಇದೀಗ ಹೇಳಿದ ಮಾತನ್ನು ನೆನಪಿಸಿಕೊಳ್ಳಿ **'ಸಂ'** ಅಂದರೆ ಪರಮಾತ್ಮ ಆಯೋಗ ಅನ್ನುವುದಕ್ಕೆ ನಿಯೋಗ ಆಜ್ಞೆ ಅಂತ ಅರ್ಥ ಸಮಾಯೋಗಾತ್ ಪರಮಾತ್ಮನ ಆಜ್ಞೆ ಇದೆ ಶ್ರೀಮದ್ಭಾಗವತದಲ್ಲಿ.

ಕ್ಷಿಪ್ತ್ವಾ ಕ್ಷೀರೋದಧೌ ಸರ್ವಾ ವೀರುತ್ತೃಣಲತೌಷಧೀಃ ।
ಮಂಥಾನಂ ಮಂದರಂ ಕೃತ್ವಾ ನೇತ್ರಂ ಕೃತ್ವಾತು ವಾಸುಕಿಮ್ ॥ (08.6.22 ಭಾಗವತ)

'ಸಂ' ಆ ಪರಮಾತ್ಮನ ಆಯೋಗದಿಂದ ಆಜ್ಞೆಯಿಂದ ಕ್ಷೀರ ಸಮುದ್ರವೇ ಮಥನಕ್ಕೆ ಯೋಗ್ಯವಾಯಿತು ಅಂತ ಅರ್ಥ ಹರಿವಂಶಕ್ಕೆ. ಅಲ್ಲಿ ಮಥನ ಮಾಡಿದಾಗ ಅಮೃತ ಬಂತು ಈ ರೀತಿ ನಾವು ಚಿಂತನ ಮಾಡಿದಾಗ ಭಾಗವತ ಹರಿವಂಶ ಎಲ್ಲವೂ ಕೂಡ ಏಕಾಭಿಪ್ರಾಯವನ್ನ ತಿಳಿಸುತ್ತಾ ಇವೆ ಅಂತ ಅರ್ಥ ಮಾಡಿಕೊಳ್ಳಬಹುದು. ಆ ರೀತಿ ಮಥನ ಮಾಡಿದ್ದಾರೆ ಸಾಕ್ಷಾತ್ ನಿಮಗೆ ಗೊತ್ತಿದ್ದ ಹಾಗೆ ಮೊದಲು ವಿಷ ಬಂತು ಆ ವಿಷವನ್ನ ಸ್ವಲ್ಪ ತೆಗೆದುಕೊಂಡು ಮಥನ ಮಾಡಿ ರುದ್ರ ದೇವರಿಗೆ ಕೊಟ್ಟಿದ್ದಾರೆ ಅವರು ಪಾನ ಮಾಡಿದ್ದಾರೆ. ಪದ್ಮಪುರಾಣ ಹೇಳುವಂತೆ **'ಅಚ್ಯುತಾಯ ನಮಃ ಅನಂತಾಯ ನಮಃ ಗೋವಿಂದಾಯ ನಮಃ'** ಎಂಬ ನಾಮತ್ರಯವನ್ನ ಜಪ ಮಾಡುತ್ತ ಆ ವಿಷವನ್ನ ಪಾನ ಮಾಡಿದ್ದಕ್ಕೆ ಅದರಿಂದ ಯಾವ ಬಾಧೆಯೂ ಆಗಿಲ್ಲ ಕಂಠ ಮಾತ್ರ ನೀಲ ಆಗಿದೆ. ಶಿರಸ್ಸಿನ ಮೇಲೆ ಚಂದ್ರನನ್ನು ಇಟ್ಟುಕೊಂಡಿದ್ದಾರೆ ಗಂಗೆಯನ್ನು ಇಟ್ಟುಕೊಂಡಿದ್ದಾರೆ ಶೈತ್ಯಕ್ಕೋಸ್ಕರವಾಗಿ. ಅಂತಹ ಲೋಕಹಿತಕ್ಕಾಗಿ ನಾನು ಈ ವಿಷವನ್ನು ಪಾನ ಮಾಡುತ್ತೇನೆ ಅಂತ ಶ್ರೀಮದ್ಭಾಗವತ ವರ್ಣನೆ ಮಾಡುವ ರೀತಿಯಲ್ಲಿ ವಾಯು ದೇವರು ಮಥನ ಮಾಡಿ ಕೊಟ್ಟ

ವಿಷವನ್ನು ರುದ್ರ ದೇವರು ಪಾನ ಮಾಡಿ ನೀಲಕಂಠರಾಗಿದ್ದಾರೆ. ಉಳಿದ ಸಮಗ್ರವಾದ ವಿಷವನ್ನ ವಾಯು ದೇವರು ಪಾನ ಮಾಡಿದ್ದಾರೆ ಕೈಯಿಂದ ಸ್ವಲ್ಪ ಬಿದ್ದದ್ದು ಅದು ಹಾವು ಚೇಳು ಮೊದಲಾದ ವಿಷಾರಿ ಪ್ರಾಣಿಗಳಲ್ಲಿ ಸೇರಿಕೊಂಡಿದೆ ಅಂತ ಈ ಹಿಂದೆ ಕೇಳಿದ್ದೀರಿ. ಶೇಷ ದೇವರು ತಪಸ್ಸು ಮಾಡುವಾಗ ಹೂತ್ಕಾರ ಮಾಡಿ ಬಿಟ್ಟ ವಿಷ ವಾಯು ದೇವರು ಕೈಯಿಂದ ಸ್ವಲ್ಪ ಕೆಳಗೆ ಚೆಲ್ಲಿದ ವಿಷ ಬೇಕು ಅಂತ ಮುಂದೆ ಸ್ವಲ್ಪ ಇರಲಿ ಅಂತ ಪಾಪ ಮಾಡಿದವರಿಗೆ ಅಂತಹ ವಿಷದಿಂದಲೇ ವಿಷ ಜಂತುಗಳೆಲ್ಲಾ ಮುಂದೆ ಪ್ರಾರಂಭವಾಗಿವೆ ಅಂತ ಹೇಳುತ್ತಾರೆ. ಆಮೇಲೆ ಸಾಕ್ಷಾತ್ ಮಹಾಲಕ್ಷ್ಮೀ ದೇವಿ ಅರ್ಥಾತ್ ಶ್ರೀದೇವಿ ಅಲ್ಲಿ ಪ್ರಾದುರ್ಭೂತಳಾಗಿದ್ದಾಳೆ ಪರಮಾತ್ಮ ವಿವಾಹ ಮಾಡಿಕೊಂಡು ತನ್ನ ವಕ್ಷಸ್ಥಲದಲ್ಲಿ ಅವಳಿಗೆ ಸ್ಥಾನವನ್ನು ಕೊಟ್ಟಿದ್ದಾನೆ. ಕೌಸ್ತುಭ ಮಣಿ ಚಂದ್ರ ಉಚ್ಚೈಶ್ರವಸ್ಸು ಕುದುರೆ ಅದನ್ನು ದೈತ್ಯರು ತೆಗೆದುಕೊಂಡಿದ್ದಾರೆ, ಐರಾವತ ಇಂದ್ರ ತೆಗೆದುಕೊಂಡಿದ್ದಾನೆ ಹೀಗೆಲ್ಲ ಅಲ್ಲಿ ಪದಾರ್ಥಗಳು ಬಂದಿವೆ ಅಮೃತ ಸಾಕ್ಷಾತ್ ಧನ್ವಂತರೀ ರೂಪಿಯಾಗಿ ಇರುವಂತಹ ಪರಮಾತ್ಮ ಪ್ರಾದುರ್ಭೂತನಾಗಿ ಅಮೃತವನ್ನು ನೀಡಿದ್ದಾನೆ. ದೈತ್ಯರು ಅಪಹಾರ ಮಾಡಿಕೊಂಡು ಹೋಗಿದ್ದಾರೆ ಸರ್ವಸಮರ್ಥನದರೂ ದೇವರು ಕೈಬಿಟ್ಟ ಅವರು ಮೋಸ ಮಾಡುತ್ತಾರೆ, ಸತ್ಯವನ್ನ ಪರಿಪಾಲನೆ ಮಾಡಿಲ್ಲ ಅನ್ನುವುದಕ್ಕೆ ಅಮೃತವನ್ನು ನಾನು ಕೊಟ್ಟಿಲ್ಲ ಅಂತ ತೋರಿಸುವುದಕ್ಕೆ ಶಕ್ತಿ ಇದ್ದರೂ ಬಿಟ್ಟ. ಅಸುರರು ತೆಗೆದುಕೊಂಡಿದ್ದಾರೆ ನೋಡಿ **'ಧಿಯೋಯೋನ ಪ್ರಚೋದಯಾತ್'**[1] ಕೈಯಲ್ಲಿ ಅಮೃತದ ಕಲಶ ಇಟ್ಟುಕೊಂಡಿದ್ದಾರೆ ಗಟ ಗಟ ಅಂತ ಕುಡಿಯಬಾರದಾ, ಜಗಳ ಆಡುತ್ತ ಇದ್ದಾರೆ ನನಗೆ ನನಗೆ ಅಂತ ಒಬ್ಬರೂ ಹನಿಯನ್ನು ಬಾಯಿಯಲ್ಲಿ ಹಾಕಿಕೊಂಡಿಲ್ಲ ಇದು ಭಗವಂತನ ಅದ್ಭುತವಾದ ಲೀಲೆ.

ಕೊನೆಗೆ ಪರಮಾತ್ಮ ತಾನೇ ಮೋಹಿನೀ ರೂಪವನ್ನು ತೆಗದುಕೊಂಡು ದೇವತೆಗಳಿಗೆ ಅಮೃತವನ್ನು ಉಣಬಡಿಸಿ, ಅಸುರರಿಗೆ ಮಾತ್ರ ಅಮೃತವನ್ನು ಕೊಟ್ಟಿಲ್ಲ ಕಾರಣ ಅದಕ್ಕೆ ಅವರು ಯೋಗ್ಯರಲ್ಲ ದುಷ್ಟರು, ಅಯೋಗ್ಯರು, ಎಲ್ಲ ಸಜ್ಜನರಿಗೆ ಪೀಡೆಯನ್ನು ಕೊಡುವಂಥವರು ಅಂಥವರಿಗೆ ಅಮೃತವನ್ನು ಪಾನ ಮಾಡಿಸುವುದು ಯೋಗ್ಯ ಅಲ್ಲ. ಯಾರು ಮೋಕ್ಷವನ್ನು ಹೊಂದುವುದಕ್ಕೆ ಯೋಗ್ಯರೋ ಸಜ್ಜನರೋ ಧಾರ್ಮಿಕರೋ ಭಗವದ್ಭಕ್ತರೋ ಅಂಥವರಿಗೇನೆ ಅಮೃತ ಕೊಡಬೇಕು ಅನ್ನುವುದಕ್ಕೆ ಪರಮಾತ್ಮ ಅವರಿಗೆ ಕೊಡಲಿಲ್ಲ, ರಾಹು ಮಾತ್ರ ಕುಡಿಯುವ ಪ್ರಯತ್ನ ಮಾಡಿದ ಸುದರ್ಶನ ಚಕ್ರದಿಂದ ಅವನನ್ನು ಸಂಹಾರ ಮಾಡಿದ್ದಾನೆ. ಗೊತ್ತಾಗದೇ ಅವನ ಕೈಯಲ್ಲಿ ಹಾಕಿದ ಅಂತ ತಿಳಿಯಬಾರದು, ಸಾವಿರ ಜನ್ಮಗಳಲ್ಲಿ ಅವನು ತಪಶ್ಚರ್ಯ ಮಾಡಿದ್ದ ರಾಹು ಅಮೃತ ಪಾನ ಮಾಡಬೇಕು ಅಂತ ಅನ್ನೋದಕ್ಕಾಗಿ ಅವನ ಕೈಯಲ್ಲಿ ಅಮೃತವನ್ನು ಹಾಕಿ ಪಾನ ಮಾಡುವುದಕ್ಕೆ ಮಾತ್ರ ಅವಕಾಶ ಕೊಟ್ಟ. ಯೋಗ್ಯತೆ ಇರಲಿಲ್ಲ ಅಯೋಗ್ಯವಾದದ್ದಕ್ಕಾಗಿ ಪ್ರಯತ್ನ ಮಾಡಿದರೆ ಫಲ ಪೂರ್ಣ ಸಿಗುವುದಿಲ್ಲ, ಸುಮ್ಮನೆ ಫಲ ಕೊಟ್ಟಂತೆ ಮಾಡಿದ ಆದರೆ ಅದು ಫಲಕಾರಿಯಾಗದೆ ಅವನ ಶಿರಸ್ಸನ್ನು ಛೇದನ ಮಾಡಿದ್ದಾನೆ. ಅವನ ಶಿರಸ್ಸಿನಲ್ಲಿ ದೇವತೆಗಳ ಸನ್ನಿಧಾನ ಇದ್ದದ್ದಕ್ಕೆ ಅದು ಗ್ರಹತ್ವವನ್ನು ಹೊಂದಿದೆ ಪೂಜೆಯನ್ನ ಸ್ವೀಕಾರ ಮಾಡುತ್ತದೆ ಆ ಕೆಳಗಿನ ಭಾಗ ಶುಭೋದ ಸಾಗರದಲ್ಲಿ ಹಾಗೆ ಪರಮಾತ್ಮ ಎಸೆದಿದ್ದಾನೆ ಎಂಬುದಾಗಿ ತಿಳಿಸುತ್ತಾರೆ. ಈ ರೀತಿ ಆ ಅಮೃತ ಮಥನದ ವಿಚಾರವನ್ನು ಹೇಳಿದರು. ಸರಿ, ದೇವತೆಗಳು ಅಮೃತ ಪಾನ ಮಾಡಿದರು, ದೈತ್ಯರನೆಲ್ಲ ಸೋಲಿಸಿದರು ರಾಜ್ಯವನ್ನ ಪಡೆದು ಕೊಂಡಿದ್ದಾರೆ. ಮತ್ತೆ ಪುನಃ ಅಸುರರು ವಿಶೇಷವಾಗಿ ತಮ್ಮ ಶುಕ್ರಾಚಾರ್ಯರ ಬಲದಿಂದ ಆ ಬ್ರಾಹ್ಮಣರ ಮಂತ್ರದ ಬಲ, ತಪಸ್ಸಿನ ಬಲ ಅದರಿಂದ ಪುನಃ ಯುದ್ಧಕ್ಕೆ ಬಂದಿದ್ದಾನೆ ಬಲಿ ಚಕ್ರವರ್ತಿ, ಮತ್ತೆ ಪುನಃ ರಾಜ್ಯವನ್ನು ಕಸಿದುಕೊಂಡಿದ್ದಾನೆ ಆಗ ಪರಮಾತ್ಮ ಪುನಃ ಬಲಿ ಚಕ್ರವರ್ತಿಯಿಂದ ರಾಜ್ಯವನ್ನು ಪಡೆದುಕೊಂಡು ಇಂದ್ರ ದೇವರಿಗೆ ಕೊಟ್ಟಂತಹ ವಿಚಾರ ವಾಮನಾವತಾರದಲ್ಲಿ ಅದನ್ನು ತಿಳಿಸಿಕೊಡುತ್ತಾರೆ. ನೋಡಿ ಇಲ್ಲಿ ಮತ್ತೆ ಹೇಗಿದೆ ಗೂಢವಾದ ಭಾಷೆಯಲ್ಲಿ ವೇದವ್ಯಾಸ ದೇವರು ಉಪದೇಶ ಮಾಡುತ್ತಾರೆ ಸಾಮಾನ್ಯರಿಗೆ ಮೇಲ್ನೋಟಕ್ಕೆ ಅರ್ಥವಾಗಿರಬಾರದು,

1. ಗಾಯತ್ರಿ ಮಂತ್ರ

ತಪ್ಪು ತಿಳುವಳಿಕೆಯನ್ನೇ ಮಾಡಿಕೊಂಡು ತಪ್ಪಾಗಿ ತಿಳಿದು ಅವರು ಅನರ್ಥವನ್ನೇ ಹೊಂದಬೇಕು ಯೋಗ್ಯತೆ ಇಲ್ಲದೆ ಇದ್ದವರು. ಸಜ್ಜನರು ಮಾತ್ರ ಅನೇಕ ಪುರಾಣಗಳ ಇತಿಹಾಸಗಳ ಪರ್ಯಾಲೋಚನೆಯನ್ನು ಮಾಡಿ ಶ್ರೀಮದಾಚಾರ್ಯರ ನಿರ್ಣಯಕ್ಕೆ ಅನುಗುಣವಾಗಿ ಸರಿಯಾದ ಕಥೆಯನ್ನು ತಿಳಿದುಕೊಂಡು ಯಥಾರ್ಥ ಜ್ಞಾನದಿಂದ ಉತ್ತಮವಾದಂತಹ ಗತಿಯನ್ನು ಹೊಂದಬೇಕು ಅನ್ನುವುದಕ್ಕೋಸ್ಕರ ಗಂಭೀರವಾದ ಭಾಷೆಯಲ್ಲಿ ಹೇಳುತ್ತಾರೆ.

ಹಿರಣ್ಯಕಶಿಪು ಯಜ್ಞವನ್ನು ಪ್ರಾರಂಭ ಮಾಡಿದ ಅಂತ ಯಜ್ಞವನ್ನು ಮಾಡಿದ್ದು ಬಲಿ ಚಕ್ರವರ್ತಿ, ಹಿರಣ್ಯಕಶಿಪು ಅಲ್ಲ ಆದರೆ ಹರಿವಂಶ ಹೇಳುತ್ತದೆ ಹಿರಣ್ಯಕಶಿಪು ಯಜ್ಞ ಮಾಡಿದ ಆಗ ವಾಮನ ದೇವರು ಬಂದರು ಅಂತ. ಇಲ್ಲಿ ಹಿರಣ್ಯಕಶಿಪು ಅನ್ನುವ ಶಬ್ದಕ್ಕೆ ಐತರೇಯ ಭಾಷ್ಯದಲ್ಲಿ ಶ್ರೀಮದಾಚಾರ್ಯರು ತಿಳಿಸುವಂತೆ ತಂದೆಯ ಹೆಸರು ಮಕ್ಕಳಿಗೆ, ಮಕ್ಕಳ ಹೆಸರಿನಿಂದ ಪಿತೃಗಳಿಗೆ ವ್ಯವಹಾರ ಮಾಡುವುದು ಉಂಟು ಅಂತ ತಿಳಿಸಿಕೊಡುತ್ತಾರೆ. ಆದ್ದರಿಂದ ಪರಮಾತ್ಮ ಆ ಬಾಲನಾ ಆಪಃ ಇಡೀ ಜಗತ್ತಿಗೆ ರಕ್ಷಕನಾದದ್ದರಿಂದ ಭಗವಂತನ ಅನೇಕ ರೂಪಗಳಿಗೆ ಆಪಃ ಅನ್ನುತ್ತಾರೆ, ದೇವತೆಗಳಿಗೂ ಆಪಃ ಅನ್ನುತ್ತಾರೆ ಯಾಕೆ ಅಂದರೆ ಆ ಭಗವಂತನ ಸಂತತಿಯಲ್ಲಿ ಬಂದವರು. ಹಾಗೆ ಹಿರಣ್ಯಕಶಿಪು ಅವನ ಮಗ ಪ್ರಹ್ಲಾದ, ಪ್ರಹ್ಲಾದನ ಮಗ ವಿರೋಚನ, ವಿರೋಚನನ ಮಗ ಬಲಿ ಹೀಗಾಗಿ ಹಿರಣ್ಯಕಶಿಪುವಿನ ವಂಶದಲ್ಲಿ ಬಂದದ್ದರಿಂದ ಅವನಿಗೆ ಹಿರಣ್ಯಕಶಿಪು ಅಂತ ಕರದದ್ದೇ ಹೊರತು ಹಿರಣ್ಯಕಶಿಪುವೇ ಯಜ್ಞ ಮಾಡಿದ ಆಗ ವಾಮನ ದೇವರು ಅವತಾರ ಮಾಡಿದರು ಅಂತ ನಾವು ಸರ್ವಥಃ ಇಲ್ಲಿ ತಿಳಿಯಬಾರದು. ಜೊತೆಗೆ ಕಶಿಪು ಕಶಿಪು ಅನ್ನುವ ಶಬ್ದ ಇದೆ ನೋಡಿ ಈ ಕಶಿಪು ಎಂಬ ಶಬ್ದಕ್ಕೆ ಒಂದು ಹಾಸಿಗೆ ಅಂತ ಅರ್ಥ ಶಯ್ಯಾ ಅಂತ ಇನ್ನೊಂದು ಅನ್ನ ವಸ್ತ್ರಗಳು ಅಂತ ಹೊಟ್ಟೆ ಬಟ್ಟೆ ಅಂತ ಒಂದು ಜೋಡಿಯನ್ನು ನಾವು ವ್ಯವಹಾರ ಮಾಡುತ್ತೇವಲ್ಲ ಹೊಟ್ಟೆ ಬಟ್ಟೆ ಅಂತ ಒಂದು ಫ್ರೇಸ್ ಆ ತರಹ. ಆ ರೀತಿ ಮಿಲಿತವಾಗಿ ಹೊಟ್ಟೆ ಬಟ್ಟೆ ಅನ್ನ ಮತ್ತು ವಸ್ತ್ರಗಳಿಗೆ ಸೇರಿ ಕಶಿಪು ಅನ್ನುವ ಹೆಸರನ್ನು ಮೇದಿನಿ ಕೋಶ ಹೇಳುತ್ತದೆ.

ಅಸ್ತ್ರೇ ಕಶಿಪುಶಯ್ಯಾಯಾಂ ವಸ್ತ್ರೇಽನ್ನೇ ತದ್ವ್ಯಯೇಽಪಿ ಚ ॥

ಬರೀ ವಸ್ತ್ರ ಅನ್ನ ಅಥವಾ ಅನ್ನ ವಸ್ತ್ರಗಳು ಸೇರಿ ಕಶಿಪು ಅಂತ ಹೀಗಾಗಿ ಬಲಿ ಚಕ್ರವರ್ತಿಯನ್ನು ಹಿರಣ್ಯಕಶಿಪು ಅಂತ ಯಾಕೆ ಕರೆದರು ಅಂದರೆ ಹಿರಣ್ಯಕಶಿಪು ದಾತೃತ್ವಾತ್ ಹಿರಣ್ಯಕಶಿಪು ಅಂತ. ತುಪ್ಪ ಸಕ್ಕರೆ ಅಂತ ಕೆಲವು ಫ್ಯಾಮಿಲಿಗಳಿವೆ ತುಪ್ಪ ಸಕ್ಕರೆ ಅಂದರೆ ಯಥೇಚ್ಛವಾಗಿ ಬಂದಂತಹ ಅತಿಥಿ ಅಭ್ಯಾಗತರಿಗೆ ತುಪ್ಪ ಸಕ್ಕರೆಯನ್ನು ದಾನ ಮಾಡುತ್ತಾರೆ ಅವರು ಅನ್ನುವುದಕ್ಕೆ ಅವರ ವಂಶಕ್ಕೇನೆ ತುಪ್ಪ ಸಕ್ಕರೆ ಅಂತ ಹೆಸರಿದೆ ಈಗಲೂ ಆ ತರಹದ ವಂಶಗಳು ಉತ್ತರ ಕರ್ನಾಟಕದಲ್ಲಿ ಇದೆ. ಹಾಗೆ ಇಲ್ಲಿ ಹಿರಣ್ಯಕಶಿಪು ಅಂತ ಯಾಕೆ ಕರೆದಿದ್ದಾರೆ ಅಂದರೆ ಹಿರಣ್ಯಕಶಿಪುವನ್ನು ದಾನ ಮಾಡುತ್ತ ಇದ್ದ ಹಿರಣ್ಯ ಅಂದರೆ ಬಂಗಾರ, ಕಶಿಪು ಅಂದರೆ ಅನ್ನ ವಸ್ತ್ರ, ಬಲಿ ಚಕ್ರವರ್ತಿ ದಾನಕ್ಕೆ ಪ್ರಸಿದ್ಧ ಯಥೇಚ್ಛವಾಗಿ ತನ್ನ ಯಜ್ಞದಲ್ಲಿ ಬಂದವರಿಗೆ ಏನು ಬೇಡಿದ್ದು ಕೊಟ್ಟಿದ್ದಾನೆ ಬಂಗಾರ ಕೊಟ್ಟಿದ್ದಾನೆ, ಅನ್ನ ಕೊಟ್ಟಿದ್ದಾನೆ, ವಸ್ತ್ರ ಕೊಟ್ಟಿದ್ದಾನೆ ಅದಕ್ಕಾಗಿಯೇ ಅವನನ್ನು ಹಿರಣ್ಯಕಶಿಪು ಅಂತ ಕರದದ್ದೇ ಹೊರತು ಹಿರಣ್ಯಕಶಿಪುವೇ ಯಜ್ಞ ಮಾಡಿದ ಅಂತ ಸರ್ವಥ ತಿಳಿಯಬಾರದು ಬಲಿ ಚಕ್ರವರ್ತಿ ಮಾಡಿದ್ದು ಯಜ್ಞವನ್ನು. ಸರಿ, ಯಜ್ಞವನ್ನು ಮಾಡಿದ ಶುಕ್ರಾಚಾರ್ಯರು ತಮ್ಮ ಮಗನ ಜೊತೆಗೆ ಸೇರಿಕೊಂಡು ಯಜ್ಞವನ್ನು ಮಾಡಿಸಿದ್ದಾರೆ.

ಪರಮಾತ್ಮ ವಾಮನ ರೂಪಿಯಾಗಿ ಅದಿತಿ ದೇವಿಯಲ್ಲಿ ಪ್ರಾದುರ್ಭೂತನಾಗಿ ಬಂದಿದ್ದಾನೆ ನೋಡಿ ಯಜ್ಞದಲ್ಲಿ ಎಲ್ಲರೂ ಎದ್ದು ನಿಂತಿದ್ದಾರೆ ಯಾರು ಅಂತ ಗೊತ್ತಿಲ್ಲ ಆದರೆ ಆ ತೇಜಸ್ಸಿನಿಂದಲೇ ಪ್ರಭಾವಿತರಾಗಿ ಎಲ್ಲರೂ ಎದ್ದು

ನಿಂತು ಸ್ವಾಗತ ಮಾಡಿದ್ದಾರೆ ನಮಸ್ಕಾರ ಮಾಡಿದ್ದಾರೆ ಏನು ಬೇಕು ಅಂತ ಕೇಳಿದ ಬಲಿ ಚಕ್ರವರ್ತಿ ಮೂರು ಪಾದ ಭೂಮಿಯನ್ನು ಕೊಡು ಇಷ್ಟೇ ಸಾಕು ನನಗೆ ಇನ್ನೇನು ಬೇಡ ಅಂದ. ಒಂದು ಪಾದದಿಂದ ಮೇಲಿನ ಲೋಕಗಳನ್ನ, ಎರಡನೆಯ ಪಾದದಿಂದ ಕೆಳಗಿನ ಲೋಕಗಳನ್ನೆಲ್ಲ ಅಳೆದು ಮೂರನೆಯ ಪಾದವನ್ನು ಅವನ ತಲೆಯ ಮೇಲೆ ಇಟ್ಟು ಅವನನ್ನ ಸುತಲ ಲೋಕಕ್ಕೆ ಕೊಟ್ಟು ಕಳಿಸಿದ್ದಾನೆ. ಇಂದ್ರ ದೇವರಿಗೆ ಸಂಪೂರ್ಣವಾದಂತಹ ರಾಜ್ಯವನ್ನು ಪುನಃ ಪರಮಾತ್ಮ ಕೊಟ್ಟ ಪರಮಾನುಗ್ರಹವನ್ನು ಮಾಡಿ ಇಂದ್ರ ದೇವರು ಅದ್ಭುತವಾದ ಆ ಭಗವಂತನ ಅನುಗ್ರಹದ ಸೌಭಾಗ್ಯವನ್ನು ಪಡೆದು ರಾಜ್ಯವನ್ನು ಆಳಿದ್ದಾರೆ. ಜೋರಾಗಿ ಒಂದು ಶಂಖ ಧ್ವನಿಯನ್ನು ಮಾಡಿದ್ದಾರೆ ನೋಡಿ ಆ ಶಂಖ ಧ್ವನಿಯನ್ನು ಮಾಡಿದರೆ ಎಲ್ಲ ದೇವತೆಗಳಿಗೂ ಋಷಿಗಳಿಗೂ ಮುನಿಗಳಿಗೂ ಮನುಷೋತ್ತಮರಿಗೂ ಸಂತೋಷವಾಗಿದೆ ಅತ್ಯಂತ ಧಾರ್ಮಿಕನಾಗಿರುವಂತಹ ನಮ್ಮ ರಾಜ ಇಂದ್ರ ದೇವರು ಮತ್ತೆ ರಾಜನಾಗಿ ಬಂದಿದ್ದಾನೆ ನಮ್ಮ ಮೂರು ಲೋಕಗಳಿಗೆ ಒಡೆಯನಾಗಿ ಅಂತ ಜಗತ್ತೆಲ್ಲ ಸಂತೋಷ ಪಟ್ಟಿದೆ. ಬಲಿ ಚಕ್ರವರ್ತಿಯೂ ವಿಷ್ಣು ಭಕ್ತನೇ ಅವನೂ ಭಗವದ್ಭಕ್ತನೇ ಆದರೆ ಬಲಿ ಚಕ್ರವರ್ತಿಗಿಂತಲೂ ಯೋಗ್ಯತೆಯಲ್ಲಿ ಬಹಳ ಉತ್ತಮನಾದವನು ಇಂದ್ರ ದೇವರು ಆದ್ದರಿಂದ ಅಂತಹ ಇಂದ್ರ ದೇವರ ರಾಜ್ಯವನ್ನು ಎಲ್ಲರೂ ಕೂಡ ಸ್ವಾಗತಿಸಿದ್ದಾರೆ ಸಂತೋಷ ಪಟ್ಟಿದ್ದಾರೆ ಅಂತ ತಿಳಿಸಿಕೊಡುತ್ತಾರೆ.

ಇದಾದ ಮೇಲೆ ಈ ಕಡೆಗೆ ದಕ್ಷಪ್ರಜಾಪತಿ ಯಜ್ಞವನ್ನು ಮಾಡುತ್ತಾ ಇದ್ದಾನೆ. ಆ ದಕ್ಷಪ್ರಜಾಪತಿ ಯಜ್ಞವನ್ನು ಮಾಡುವಂತಹ ಸಂದರ್ಭ ಬೃಹಸ್ಪತ್ಯಾಚಾರ್ಯರೇ ಯಜ್ಞವನ್ನು ಮಾಡಿಸುತ್ತಾ ಇದ್ದಾರೆ.

ಪ್ರಾಚೇತಸಂ ತತೋ ದಕ್ಷಂ ದೀಕ್ಷಿತ್ವಾ ವೈ ಬೃಹಸ್ಪತಿಃ ।
ವಾಜಿಮೇಧಾಯ ಭಗವಾನೃಷಿಭಿಃ ಪರಿವಾರಿತಃ ॥ (32.3 ಭವಿಷ್ಯಪರ್ವ)

ಯಾವ ಯಜ್ಞದಲ್ಲಿ ರುದ್ರ ದೇವರು ಬಂದು ವಿಘ್ನವನ್ನು ಮಾಡುತ್ತಾರೆ, ಯಜ್ಞ ಧ್ವಂಸ ಮಾಡುತ್ತಾರೆ ಅಂತಹ ಯಜ್ಞದ ವರ್ಣನೆಯನ್ನು ಮಾಡುತ್ತಾ ಇದ್ದಾರೆ. ಆ ಯಜ್ಞವನ್ನು ಮಾಡಿಸುವುದಕ್ಕೆ ಪುರೋಹಿತರಾಗಿ ಬೃಹಸ್ಪತ್ಯಾಚಾರ್ಯರೇ ಬಂದಿದ್ದಾರೆ ಅಂತ ಆದರೆ ಮತ್ತೆ ನೋಡಿ ಎಷ್ಟು ಗಂಭೀರವಾದಂತಹ ಭಾಷೆ. ಶ್ರೀಮದ್ಭಾಗವತ ಹೇಳುತ್ತದೆ ಮೊದಲು ದಕ್ಷಪ್ರಜಾಪತಿ ಬ್ರಹ್ಮ ದೇವರ ಪುತ್ರ, ಬ್ರಹ್ಮ ದೇವರ ಅಂಗುಷ್ಠದಿಂದ ಹುಟ್ಟಿದವನು ದಕ್ಷಿಣಾಂಗುಷ್ಠದಿಂದ ಅಂತಹ ದಕ್ಷಪ್ರಜಾಪತಿ ಯಜ್ಞವನ್ನು ಮಾಡಿದ ಆ ಯಜ್ಞ ಮಾಡುವಾಗ ರುದ್ರ ದೇವರಿಗೆ ಅಪಚಾರ ಮಾಡಿದ, ರುದ್ರ ದೇವರ ದ್ರೋಹ ಮಾಡಿದ ಆ ಒಂದು ಪಾಪದಿಂದಾಗಿ **'ಸ್ವತೋ ಮಹದವಜ್ಞಾನಾತ್ ಅಜನ್ಯ ಜನಯೋನಿಜಃ'** ಅಂತ ಮುಂದೆ ಪ್ರಾಚೇತರರಿಂದ ಮತ್ತೆ ಹುಟ್ಟಿ ಬರುತ್ತಾನೆ ದಕ್ಷಪ್ರಜಾಪತಿ ಮಾರಿಷಾಳಲ್ಲಿ ಇನ್ನೊಮ್ಮೆ. ಹಾಗಾದರೆ ದಕ್ಷಪ್ರಜಾಪತಿ ಪ್ರಾಚೇತಸರಿಂದ ಹುಟ್ಟಿ ಬಂದದ್ದು ರುದ್ರ ದೇವರ ವಿರೋಧ ಮಾಡಿದ ನಂತರ ಆದರೆ ಹರಿವಂಶ ಹೇಳುತ್ತದೆ ಪ್ರಾಚೇತಸನಾದ ದಕ್ಷನಿಗೇನೆ ಬೃಹಸ್ಪತ್ಯಾಚಾರ್ಯರು ಯಜ್ಞ ಮಾಡಿಸುತ್ತ ಇದ್ದಾರೆ ಅಂತ ಇನ್ನೂ ಅವನು ಪ್ರಾಚೇತಸನಾಗಿಲ್ಲ ಅವನು ಇನ್ನು ಬ್ರಹ್ಮ ದೇವರ ಪುತ್ರ. ಅದಕ್ಕಾಗಿ ಇಲ್ಲಿ ಪ್ರಾಚೇತಸಂ ಅನ್ನುವುದಕ್ಕೆ ಭಾವೀ ಪ್ರಾಚೇತಸಂ ಹೇಗೆ ವಾಯು ದೇವರನ್ನು ಬ್ರಹ್ಮ ಅಂದರೆ ಭಾವೀ ಬ್ರಹ್ಮ **'ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ'** ಅಂತ ಅಂದರೆ ಪರಬ್ರಹ್ಮನಾದ ಪರಮಾತ್ಮನ ಅಧಿಷ್ಠಾನರಾದವರು ಮುಖ್ಯಪ್ರಾಣ ದೇವರು ಅಂತನ್ನುವುದು ಒಂದು ಅರ್ಥ ಭಾವೀ ಬ್ರಹ್ಮರು ಅಂತ ಅನ್ನುವುದಕ್ಕಾಗಿಯೂ ಅವರನ್ನು ಬ್ರಹ್ಮ ಅಂತ ಕರೆಯುವುದು ಪ್ರಧಾನವಾದ ಅರ್ಥ ಪರಮಾತ್ಮನ ಅಧಿಷ್ಠಾನ ಅಂತ ಭಾವೀ ಬ್ರಹ್ಮರು ಅಂತ. ಆ ಅರ್ಥದಲ್ಲಿ ಭಾವೀ ಪ್ರಾಚೇತಸ ಮುಂದೆ ಪ್ರಚೇತಸರ ಮಗನಾಗಿ ಹುಟ್ಟುವಂಥವನು ಅನ್ನುವುದಕ್ಕೋಸ್ಕರ ಪ್ರಾಚೇತಸ ಅಂತ ಕರೆದಿದ್ದಾರೆ ಅಥವಾ

ಪ್ರಚೇತಾಃ ಅಂದರೆ ಬ್ರಹ್ಮ ದೇವರು, ಪ್ರಚೇತಸ್ ಅವರ ಮಗ ಆದ್ದರಿಂದ ಪ್ರಾಚೇತಸ ಯಾಕೆ, ಇನ್ನೇನು ಬ್ರಹ್ಮ ದೇವರು ಪ್ರಚೇತ ಅಲ್ಲದೇ ಇನ್ನು ಯಾರು ಆಗಬೇಕು.

'ಪ್ರಕೃಷ್ಟಂ ಚೇತಃ ಯಸ್ಯಸಃ ಸುತೈಸಹ' ಏನು ಆ ಬ್ರಹ್ಮ ದೇವರ ಚೇತಸ್ಸು ಅವರ ಮನಸ್ಸು ಅವರ ತಪಸ್ಸು ಅವರ ಜ್ಞಾನ ಸಕಲ ಶಾಸ್ತ್ರಗಳು ಅವರಿಗೆ ಮನೋಗತ ಭಗವಂತನ ಅನಂತಾನಂತ ರೂಪಗಳನ್ನು ಸರ್ವತ್ರವ್ಯಾಪ್ತವಾದ ಭಗವದ್ರೂಪಗಳನ್ನು ಚಿಂತನ ಮಾಡುವವರು, ಧ್ಯಾನ ಮಾಡುವವರು, ಎಲ್ಲ ಜೀವರಾಶಿಗಳಿಗೆ ಪ್ರೇರಕರು ಹೀಗಾಗಿ ಅವರ ಬುದ್ಧಿ, ಅವರ ಮನಸ್ಸು, ಅವರ ಜ್ಞಾನ ಎಷ್ಟು ಪ್ರಕೃಷ್ಟಾ ಅಂತ ಹೇಳುವುದಕ್ಕೆ ಸಾಧ್ಯ ಇಲ್ಲ. ಅಂತಹ ಪ್ರ ಚೇತಃ ಬ್ರಹ್ಮ ದೇವರು ಬ್ರಹ್ಮ ದೇವರ ಮಗನಾದಂತಹ ದಕ್ಷಪ್ರಜಾಪತಿಗೇನೆ ಬೃಹಸ್ಪತ್ಯಾಚಾರ್ಯರು ಯಜ್ಞವನ್ನು ಮಾಡಿಸುತ್ತಾ ಇದ್ದಾರೆ ಅಂತ ಹರಿವಂಶದ ಮಾತಿಗೆ ನಾವು ಅರ್ಥವನ್ನು ಮಾಡಿಕೊಂಡಾಗ ಶ್ರೀಮದ್ಭಾಗವತ ಹರಿವಂಶಗಳಲ್ಲಿ ಯಾವುದೇ ರೀತಿಯ ವಿರೋಧ ಕಾಣುವುದಿಲ್ಲ ಅಂತಹ ಯಜ್ಞವನ್ನ ಮಾಡುತ್ತಾ ಇದ್ದಾರೆ ದಕ್ಷಪ್ರಜಾಪತಿ. ಯಜ್ಞ ಮಾಡುತ್ತ ಇರುವಾಗ ಕಥೆ ನಿಮಗೆ ಗೊತ್ತು ಭಾಗವತದಲ್ಲಿ ಕೇಳಿರುತ್ತೀರಿ ಶಚೀ ದೇವಿ ಯಜ್ಞದಲ್ಲಿ ಬಂದಿದ್ದಾಳೆ ರುದ್ರ ದೇವರಿಗೆ ಅಲ್ಲಿ ಸ್ವಾಹಾಕಾರ ಇಲ್ಲ ಅವರಿಗೆ ಆಹುತಿಗಳನ್ನು ಸಮರ್ಪಣೆ ಮಾಡುತ್ತಾ ಇಲ್ಲ ಅಂತ ಅನ್ನುವುದಕ್ಕೋಸ್ಕರ ತಾನು ತನ್ನ ಯೋಗಾಗ್ನಿಯಲ್ಲಿ ಶರೀರವನ್ನು ತ್ಯಾಗ ಮಾಡಿದ್ದಾಳೆ ಶಚೀ ದೇವಿ. ಅದು ಗೊತ್ತಾದದ್ದೇ ತಡ ರುದ್ರ ದೇವರು ಬಂದಿದ್ದಾರೆ ತಮ್ಮದೇ ಆದಂತಹ ಜಟೆಯನ್ನು ಅಪ್ಪಳಿಸಿ ವೀರಭದ್ರನ ರೂಪವನ್ನು ಸೃಷ್ಟಿ ಮಾಡಿ ಕೊಟ್ಟುಕಳಿಸುತ್ತಾರೆ.

ರುದ್ರ ದೇವರಲ್ಲಿ ಅಂತರ್ಯಾಮಿಯಾದಂತಹ ಪರಮಾತ್ಮ ನರಸಿಂಹ ರೂಪಿಯಾದಂತಹ ಪರಮಾತ್ಮ **'ಉಗ್ರಂ ವೀರಂ ಮಹಾವಿಷ್ಣುಂ'**[1] ಅಂತ ನೀವೆಲ್ಲಾ ಕೇಳುತ್ತೀರಿ. ಹಾಗಾದರೆ ವೀರ ಅಂದರೆ ನರಸಿಂಹ ದೇವರು **'ನರಸಿಂಹಂ ಭೀಷಣಂ ಭದ್ರಂ'**[2] ಭದ್ರ ಅಂದರೆ ನರಸಿಂಹ ದೇವರು ವೀರಭದ್ರ. ಆ ವೀರ ಭದ್ರ ಎಂಬ ಹೆಸರಿನ ನರಸಿಂಹ ರೂಪಿಯಾದ ಪರಮಾತ್ಮನ ವಿಶೇಷ ಸನ್ನಿಧಾನಕ್ಕೆ ಪಾತ್ರರಾದದ್ದರಿಂದ ವೀರಭದ್ರ ಅಂತನ್ನುವ ಹೆಸರನ್ನು ಪಡೆದುಕೊಂಡಂತಹ ತನ್ನದೇ ಆದಂತಹ ಒಂದು ರೂಪವನ್ನ ರುದ್ರ ದೇವರು ಕೊಟ್ಟುಕಳಿಸುತ್ತಾ ಇದ್ದಾರೆ. ಅಲ್ಲಿ ವೀರಭದ್ರ ರೂಪದಿಂದ ಬಂದಿದ್ದಾರೆ ರುದ್ರ ದೇವರು, ರುದ್ರ ದೇವರ ಗಣ ಎಲ್ಲ ಇದೆ ಸಂಪೂರ್ಣ ಯಜ್ಞದ ಧ್ವಂಸ ಒಬ್ಬರು ಪಶುವನ್ನು ಕಿತ್ತಿ ಎಸೆಯುತ್ತಾರೆ, ಒಬ್ಬರು ಆ ವ್ಯೂಪವನ್ನ ಪಶುವನ್ನು ಕಟ್ಟುವುದಕ್ಕೆ ಇರುವ ಸ್ತಂಭ ಆ ವ್ಯೂಪವನ್ನ ಕಿತ್ತಿ ಎಸೆದಿದ್ದಾರೆ, ಅಗ್ನಿಯಲ್ಲಿ ನೀರನ್ನು ಹಾಕಿ ಅಗ್ನಿಯನ್ನು ಶಾಂತಗೊಳಿಸುತ್ತಾರೆ, ಬಂಗಾರದ ವೃಕ್ಷಗಳನ್ನು ಅಲ್ಲಲ್ಲಿ ಅಲಂಕಾರಕ್ಕೆ ಇಟ್ಟಿದ್ದಾನೆ ಮಹಾರಾಯ ದಕ್ಷಪ್ರಜಾಪತಿ, ಕಿತ್ತಿ ಎಸೆಯುತ್ತ ಇದ್ದಾರೆ ಏನು ಬೇಕಾಗಿದೆ ಅವರಿಗೆ ಬಂಗಾರ **'ವೈರಾಗ್ಯಾಧಿಪತಯೇ ರುದ್ರಾಯ ನಮಃ'** ಮಹಾವಿರಕ್ತ ಶಿಖಾಮಣಿಗಳು ಕಿತ್ತಿ ಎಸೆದರು ಬಂಗಾರದ ಎಲ್ಲ ಪರ್ವತಗಳನ್ನ.

ಚಿಚ್ಛದುಃ ಕಾಞ್ಚನಾನ್ ವೃಕ್ಷಾಞ್ಶೊಭಾರ್ಥಮುಪಕಲ್ಪಿತಾನ್ ॥ (32.18 ಭವಿಷ್ಯಪರ್ವ)

ಸಂಪೂರ್ಣವಾದ ಯಜ್ಞವನ್ನೆಲ್ಲ ಧ್ವಂಸ ಮಾಡಿಬಿಟ್ಟಿದ್ದಾರೆ. ಆಗ ಒಂದು ಮಾತನ್ನು ಗಮನಿಸಿ ರುದ್ರ ದೇವರು ವೀರಭದ್ರ ರೂಪವನ್ನೂ ಕಳಿಸಿದ್ದಾರೆ, ತಾವು ಸ್ವತಃ ಮೂಲರೂಪದಿಂದಲೂ ಅನಂತರ ಬಂದಿದ್ದಾರೆ. ಎರಡು ರೂಪಗಳಿಂದ ಬಂದು ಅಲ್ಲಿ ಯುದ್ಧವನ್ನು ಮಾಡಿದ್ದಾರೆ ಅಂತ ಶ್ರೀಮದಾಚಾರ್ಯರು ಭಾಗವತ ತಾತ್ಪರ್ಯದಲ್ಲಿ

1. ಶ್ರೀ ನರಸಿಂಹ ಮಹಾಮಂತ್ರ ; 2. ಶ್ರೀ ನರಸಿಂಹ ಮಹಾಮಂತ್ರ

ನಿರ್ಣಯವನ್ನು ಕೊಡುತ್ತಾರೆ. ಆ ಭಾಗವತ ತಾತ್ಪರ್ಯದಲ್ಲಿ ಶ್ರೀಮದಾಚಾರ್ಯರು ಕೊಟ್ಟ ನಿರ್ಣಯದ ಮೂಲವನ್ನ ಅಲ್ಲಿ ಪ್ರಮಾಣ ಕೊಟ್ಟು ಹೇಳಿದ್ದಾರೆ, ಇಲ್ಲಿಯೂ ಕೂಡ ಅಲ್ಲಿ ಬ್ರಾಹ್ಮ ಪುರಾಣದ ವಚನವನ್ನು ಶ್ರೀಮದಾಚಾರ್ಯರು ಕೊಡುತ್ತಾರೆ.

ವೀರಭದ್ರಾಖ್ಯರೂಪೇಣ ಯೇನ ಪೂರ್ವಂ ಯಯೌ ಹರಃ ।

ಮೂಲರೂಪೇಣ ಪಶ್ಚಾತ್ತು ಧ್ಯಾತ್ವಾ ದಕ್ಷಮಧಾವತೀ ॥

ಅಂತ ಬ್ರಾಹ್ಮ ಪುರಾಣದ ವಚನ ಕೊಟ್ಟರೆ, ಹರಿವಂಶದಲ್ಲಿ ಅದರ ಸೂಚನೆ ಸಿಗುತ್ತದೆ.

ರುದ್ರಸ್ಯೈವ ಹಿ ತದ್ರೂಪಂ ದ್ವಿಧಾಭೂತಂ ತದೀಪ್ಸಯಾ । (32.5 ಭವಿಷ್ಯಪರ್ವ)

ರುದ್ರ ದೇವರೇ ಮೂಲರೂಪ ಹಾಗೂ ಅವತಾರರೂಪ, ಎರಡು ರೂಪಗಳಿಂದ ಅಲ್ಲಿ ಬಂದು ಸಂಹಾರ ಮಾಡಿದ್ದಾರೆ ಅಂತ. ವೀರಭದ್ರ ರೂಪದಿಂದ ಸಂಹಾರ ಮಾಡಲಿಕ್ಕೆ ಆಗದೇ ಮೂಲರೂಪದಿಂದ ಬಂದು ಇದೊಂದು ಯಜ್ಞ ಅಂತ ಕಲ್ಪನೆ ಮಾಡಿ ಆ ಯಜ್ಞದಲ್ಲಿ ಒಂದು ಪಶು ಇವನು ಅಂತ ಯಾಕೆ ಅಂದರೆ ಅವನು ಯಜ್ಞದಲ್ಲಿ ಯಜಮಾನನಾಗಿ ಮಂತ್ರದಿಂದ ದೀಕ್ಷಿತನಾದರೆ ಅವನನ್ನು ಅವನನ್ನ ಸಂಹಾರ ಮಾಡಲಿಕ್ಕೆ ಆಗುವುದಿಲ್ಲ. ಹೀಗಾಗಿ ಇದು ಯಜ್ಞವೇ ಯಜ್ಞದೊಳಗೇ ಇವನು ಪಶು ಯಜ್ಞದ ಅಂತರ್ಗತವಾಗಿಯೇ ಇವನನ್ನು ಸಂಹಾರ ಮಾಡುತ್ತೇನೆ ಅಂತ ಅನುಸಂಧಾನ ಮಾಡಿ ದಕ್ಷಪ್ರಜಾಪತಿಯ ಶಿರಸ್ಸನ್ನ ಛೇದನ ಮಾಡಿದ್ದಾರೆ ಕಕಚ್ಛೇದ ಅಂತ ಅನ್ನುತ್ತಾರೆ ಇದಕ್ಕೆ. **'ಕ'** ಅಂದರೆ ದಕ್ಷಪ್ರಜಾಪತಿ **'ಕ'** ಅಂದರೆ ತಲೆ ಚ್ಛೇದ ಅಂದರೆ ಕತ್ತರಿಸುವುದು ಕಕಚ್ಛೇದವನ್ನು ಮಾಡಿ ರುದ್ರ ದೇವರು ಅದ್ಭುತವಾದ ನೃತ್ಯವನ್ನು ಮಾಡಿದ್ದಾರೆ. ಈ ಮಧ್ಯದಲ್ಲಿ ಏನಾಗಿದೆ ಅಂದರೆ ಯಜ್ಞಾಭಿಮಾನಿಯಾದ ಒಬ್ಬ ದೇವತೆ ಇರುತ್ತಾನಲ್ಲ ಈ ಯಜ್ಞ ಧ್ವಂಸ ಮಾಡುವುದು ನೋಡಿ ಭಯಗ್ರಸ್ತನಾಗಿ ಆ ಯಜ್ಞಾಭಿಮಾನಿಯಾದ ದೇವತೆ ಒಂದು ಮೃಗದ ರೂಪವನ್ನ ಧಾರಣೆ ಮಾಡಿ ಓಡುತ್ತಾ ಇದ್ದಾನೆ.

ಮೃಗೋ ಭೂತ್ವಾ ನರ್ದಮಾನೋ ಬ್ರಹ್ಮಾಣಮುಪಧಾವತಿ । (32.24 ಭವಿಷ್ಯಪರ್ವ)

ಬ್ರಹ್ಮ ದೇವರಿಗೆ ಶರಣು ಹೋದ ಬ್ರಹ್ಮ ದೇವರೇ ಯಜ್ಞ ಧ್ವಂಸ ನಡೆಯುತ್ತ ಇದೆ, ರುದ್ರ ದೇವರೇ ಬಂದು ಧ್ವಂಸ ಮಾಡುತ್ತ ಇದ್ದಾರೆ ಗತಿ ಏನು ನಮ್ಮದು ಅಂತ ಏನು ಗತಿ ಊರ್ಧ್ವಗತಿ ಅಂದರು ಬ್ರಹ್ಮ ದೇವರು. ಆ ಯಜ್ಞಾಭಿಮಾನಿಯಾದ ಮೃಗನಿಗೆ ಗತಿ ಕೇಳಬೇಡ ಊರ್ಧ್ವಗತಿ ಮೇಲೆ ಹಾರು ಅಂದರು ಆ ಮೃಗ ರೂಪದಿಂದ ಬಂದ ಯಜ್ಞಾಭಿಮಾನಿ ದೇವತೆಗೆ. ಬ್ರಹ್ಮ ದೇವರು ಅನುಗ್ರಹ ಮಾಡಿದರೆ ಅವನು ಮೇಲೆ ಹಾರಿದ್ದಾನೆ, ಮೇಲೆ ಹಾರಿ ನೀನು ಅಲ್ಲಿಯೇ ಇದ್ದು ಬಿಡು ಕೆಳಗೆ ಬರಲಿಕ್ಕೆ ಹೋಗಬೇಡ ಅಂತ ಹೇಳಿದರು ಅದೇ ಮೃಗಶಿರಾ ನಕ್ಷತ್ರ ಅಂತ ಆಯಿತು.

ಶಿಷ್ಟನ್ ನಕ್ಷತ್ರಶಿರಸಿ ಸಹ ರುದ್ರೇಣ ನಿತ್ಯಶಃ । (32.28 ಭವಿಷ್ಯಪರ್ವ)

ಆ ರೀತಿ ಆ ಯಜ್ಞಾಭಿಮಾನಿ ದೇವತೆಯೇ ಮೃಗಶಿರಾ ನಕ್ಷತ್ರಕ್ಕೆ ಅಭಿಮಾನಿ ದೇವತೆಯಾದ ಯಾಕೆ ಅಂದರೆ ಮೃಗ ರೂಪದಿಂದ ಹೋಗಿ ಅಲ್ಲಿ ನಿಂತದ್ದಕ್ಕೆ ಅಂತ ತಿಳಿಸುತ್ತಾರೆ ಈ ರೀತಿ ಆ ದೇವತೆಯನ್ನು ಆ ನಕ್ಷತ್ರದಲ್ಲಿ ರಕ್ಷಣೆ

ಮಾಡಿದ್ದಾರೆ ಬ್ರಹ್ಮ ದೇವರು. ಮುಂದೆ ಯುದ್ಧ ನಡೆಯುತ್ತ ಇರುವಾಗ ನೋಡಿ, ಎಷ್ಟು ಸೂಕ್ಷ್ಮ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರ ಒಂದೊಂದು ವಚನ ಎಷ್ಟು ಪ್ರಮಾಣಭೂತವಾದದ್ದು, ಪ್ರಮಾಣ ಪುಂಜದಿಂದ ಯುಕ್ತವಾದದ್ದು.

ಉಕ್ತಮುಕ್ತಮಭಿಧೇಯಮುತ್ತಮಂ ವೇದವಾಕ್ಯಮನುವಾದಯನ್ ಮುಹುಃ ।
ವ್ಯಂಜಯತ್ ಸ್ಮೃತಿವಚೋಭಿರಂಜಸಾ ತಸ್ಯ ಚಾರ್ಥಮತಿಯುಕ್ತಯುಕ್ತಿಮತ್ ॥

(9ನೆಯ ಸರ್ಗ 9ನೆಯ ಶ್ಲೋಕ ಸುಮಧ್ವವಿಜಯ)

ಶ್ರೀಮದಾಚಾರ್ಯರು ಹೇಳುತ್ತಾರೆ ಎಲ್ಲರನ್ನೂ ಸೋಲಿಸಿದ್ದಾರೆ ರುದ್ರ ದೇವರು ಆ ಯುದ್ಧದಲ್ಲಿ ಪರಮಾತ್ಮನನ್ನ ಮಾತ್ರ ಸೋಲಿಸಲಿಕ್ಕೆ ಆಗಲಿಲ್ಲ, ಪರಮಾತ್ಮ ಎರಡು ರೂಪಗಳಿಂದ ಇದ್ದ ಉಪೇಂದ್ರ ಮತ್ತು ನಾರಾಯಣ ಆ ಎರಡೂ ರೂಪದಿಂದ ಇದ್ದ ಪರಮಾತ್ಮನನ್ನ ಸೋಲಿಸಲಿಕ್ಕೆ ಆಗಲಿಲ್ಲ ಅವನಿಂದಲೇ ಸೋತರು ಅಂತ ಅದು ಸ್ಪಷ್ಟವಾಗಿ ಭಾಗವತದಲ್ಲಿ ನಮಗೆ ತೋರುವುದಿಲ್ಲ, ತಾತ್ಪರ್ಯದಲ್ಲಿ ಶ್ರೀಮದಾಚಾರ್ಯರು ಹೇಳುತ್ತಾರೆ, ಹರಿವಂಶದಲ್ಲಿ ಇದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಹರಿವಂಶದಲ್ಲಿ ಹೇಳುತ್ತಾರೆ ಪರಮಾತ್ಮ ಅರ್ಥಾತ್ ಉಪೇಂದ್ರ ವಾಮನ ರೂಪಿಯಾದ ಪರಮಾತ್ಮ ಅಂತೆ ಅರ್ಥ ತಾತ್ಪರ್ಯಕ್ಕೆ ಅನುಗುಣವಾಗಿ ಶ್ರೀಮದಾಚಾರ್ಯರು ಬ್ರಾಹ್ಮ ಪುರಾಣದ ವಚನವನ್ನು ಕೊಡುತ್ತಾರೆ.

ತತ್ರ ಉಪೇಂದ್ರೇಣ ಹರಿಣಾ ಜಿತೋ ಧರ್ಮಾತ್ಮಜೇನ ಚ ।
ಅನ್ಯಾನ್ ಜಿಗಾಯ ಪ್ರಯಯೌ ಕೈಲಾಸಂ ಸ್ವಂ ನಿವೇಶನಂ ॥

ಅಂತ. ಆ ಪರಮಾತ್ಮ ನಾರಾಯಣ ರೂಪದಿಂದ ಹಾಗೂ ಉಪೇಂದ್ರ ರೂಪದಿಂದ ಪರಮಾತ್ಮ ಯುದ್ಧವನ್ನು ಮಾಡುತ್ತಾ ಇದ್ದಾನೆ ಶಾರಂಗ ಧನುಸ್ಸನ್ನು ತೆಗೆದುಕೊಂಡು,ಪಿನಾಕ ಧನುಸ್ಸಿನಿಂದ ರುದ್ರ ದೇವರು ಯುದ್ಧ ಮಾಡುತ್ತ ಇದ್ದಾರೆ ಘನಘೋರವಾದಂತಹ ಯುದ್ಧ ಏನು ಮಾಡಿದರೂ ಪರಮಾತ್ಮನನ್ನು ಸೋಲಿಸಲಿಕ್ಕೆ ಅವರಿಗೆ ಆಗಿಲ್ಲ. ಕೊನೆಗೆ ಪರಮಾತ್ಮ ತಾನೇ ತನ್ನ ಧನುಸ್ಸನ್ನ ಅವರ ಕಂಠದಲ್ಲಿ ಹಾಕಿ ಶಾರಂಗ ಧನುಸ್ಸನ್ನು ಎಳೀತಾನೆ, ವಿಷದಿಂದ ನೀಲವಾದಂತಹ ಕಂಠ ಪರಮಾತ್ಮ ಧನುಸ್ಸನ್ನು ಹಾಕಿ ತಿಕ್ಕಿದಾಗ ಇನ್ನಷ್ಟು ನೀಲವಾಗಿದೆ.

ಕಣ್ಠೇ ಜಗ್ರಾಹ ಭಗವಾನ್ ನೀಲಕಣ್ಠಸ್ತತೋऽಭವತ್ ॥ (32.48 ಭವಿಷ್ಯಪರ್ವ)

ಆ ರೀತಿ ರುದ್ರ ದೇವರನ್ನು ಪರಮಾತ್ಮ ಯುದ್ಧದಲ್ಲಿ ಸೋಲಿಸಿದ್ದಾನೆ. ನಂದಿ ಯುದ್ಧಕ್ಕೆ ಬರುತ್ತಾನೆ ಪರಮಾತ್ಮ ಹತ್ತಿರ ಜೋರಾಗಿ ಪರಮಾತ್ಮನ ತಲೆಯ ಮೇಲೇನೆ ಆ ಪಿನಾಕ ಧನುಸ್ಸನ್ನ, ನಮ್ಮ ರುದ್ರ ದೇವರ ಕಂಠದಲ್ಲಿ ನೀನು ಶಾರಂಗ ಧನುಸ್ಸನ್ನು ಹಾಕಿದರೆ, ನಿನ್ನ ತಲೆಯ ಮೇಲೆ ಪಿನಾಕ ಧನುಸ್ಸನ್ನು ಹಾಕುತ್ತೀನಿ ಅಂತ ನಂದಿ ಪಾಪ ಪ್ರಯತ್ನ ಮಾಡಿದರೆ ಆಗ ಪರಮಾತ್ಮ ಸ್ತಂಭಯಾಮಾಸ ಅದು ಹೇಗೆ ಇದ್ದ ಹಾಗೆ ಸ್ಟ್ಯಾಚ್ಯು ಪ್ರತಿಮೆಯಂತೆ ನಿಲ್ಲಿಸಿ ಬಿಟ್ಟಿದ್ದಾನೆ ಆಚೆಈಚೆ ಸರಿಯುವ ಹಾಗೆ ಇಲ್ಲ, ಬಾಯಿ ತೆಗೆದದ್ದು ಹಾಗೆ ನಿಂತು ಬಿಟ್ಟಿದೆ ನಂದಿ. ಆಗ ಪರಮಾತ್ಮ **'ಅಚಿನ್ತ್ಯಶ್ಚಾಪ್ರಮೇಯಶ್ಚ ಹ್ಯಚೇಯಶ್ಚಾಪ್ಯರಿಂದಮಃ'** ಶ್ರೀಮದಾಚಾರ್ಯರು ಹೇಳಿದ ಭಾಗವತ ತಾತ್ಪರ್ಯದ ನಿರ್ಣಯಕ್ಕೆ ಹರಿವಂಶದಲ್ಲಿ ಇದಕ್ಕಿಂತ ಹೆಚ್ಚು ಇನ್ನೇನು ಪ್ರಮಾಣ ಬೇಕು.

ಅಚಿನ್ಯಶ್ಚಾಪ್ರಮೇಯಶ್ಚ ಹ್ಯಜೇಯಶ್ಚಾಪ್ಯರಿಂದಮಃ ।
ಯುಗಾನ್ತಾಗ್ನಿಸಮೋ ಭೂತ್ವಾ ಶಾನ್ತಾತ್ಮಾ ಹರಿರವ್ಯಯಃ । (32.56 ಭವಿಷ್ಯಪರ್ವ)

ಏನು ಅದ್ಭುತ ಅಚಿಂತ್ಯಾದ್ಭುತ ಸಂಪನನ್ನಾಗಿ ಅಜೇಯನಾಗಿ ಪರಮಾತ್ಮ ಆ ಯಜ್ಞದ ಪರಿಪೂರ್ಣತೆಯನ್ನು ಮಾಡಿದ್ದಾನೆ ತಾನೇ, ರುದ್ರ ದೇವರನ್ನು ಕರೆದು ದಕ್ಷಪ್ರಜಾಪತಿಗೆ ಪುನಃ ಉಜ್ಜೀವನವನ್ನು ಮಾಡಿಸಿ ಸಂಧಾನವನ್ನು ಮಾಡಿಸಿ ಯಜ್ಞ ಪೂರ್ಣವಾಗುವಂತೆ ಮಾಡಿದ್ದಾನೆ.

ವಿಷ್ಣುಧರ್ಮಪರೋ ನಿತ್ಯಂ ತ್ಯಕ್ತಕಾಮಃ ಸುರೋತ್ತಮಃ । (32.57 ಭವಿಷ್ಯಪರ್ವ)
ವಿಷ್ಣುನಾ ಚೈವ ರಾಜೇನ್ದ್ರ ಸ ಯಜ್ಞಃ ಸಂಧಿತಃ ಪುನಃ ॥ (32.58 ಭವಿಷ್ಯಪರ್ವ)

ಪುನಃ ಆ ಯಜ್ಞದ ಪೂರ್ಣತೆಯನ್ನು ಮಾಡಿದ್ದಾನೆ ಅನ್ನುವ ಆ ಭಗವಂತನ ಸರ್ವೋತ್ತಮತ್ವದ ಒಂದು ಪ್ರಮೇಯವನ್ನು ಶ್ರೀಮದಾಚಾರ್ಯರು ಭಾಗವತ ತಾತ್ಪರ್ಯದಲ್ಲಿ ಸ್ಪಷ್ಟವಾಗಿ ನಿರೂಪಣೆ ಮಾಡಿದ್ದನ್ನು ಹರಿವಂಶ ಅತಿ ಸ್ಪಷ್ಟವಾಗಿ ನಿರೂಪಣೆ ಮಾಡಿ ನಮಗೆ ಕೊಡುತ್ತಾ ಇದೆ ಅಂತ ನಾವು ಇಲ್ಲಿ ತಿಳಿಯಬೇಕು.

ಅವಾಪ್ಯ ಕಾಮಾನಿಹ ವೀತಶೋಕಃ ಪರತ್ರ ಚ ಕಲಾ ಸ್ವರ್ಗಫಲಾನಿ ಭುಙ್ಕ್ತೇ ॥ (32.64 ಭವಿಷ್ಯಪರ್ವ)

ಈ ಭಗವಂತನ ಮಹಿಮೆಯನ್ನು ಕೇಳಿದರೇನೆ ಐಹಿಕ ಪಾರಲೌಹಿಕ ಸಕಲ ವಿಧ ಇಷ್ಟಾರ್ಥಗಳನ್ನು ಹೊಂದುತ್ತಾನೆ ಅಂತಹ ಮಹಾಮಹಿಮೆ ಪರಮಾತ್ಮದು ಅಂತ ಹೇಳುತ್ತಾರೆ.

ಮುಂದೆ ವರಾಹ ರೂಪಿಯಾಗಿರುವಂತಹ ಪರಮಾತ್ಮನ ಒಂದು ವಿಶೇಷವಾದ ಮಹಿಮೆಯನ್ನು ಹಿಂದೆ ನೀವು ಹೇಳಿದ್ದೀರಿ ಮತ್ತೆ ಹೇಳಿ ಅಂತ ಜನಮೇಜಯ ಕೇಳುತ್ತಾನೆ ಅಷ್ಟು ಕುತೂಹಲ. ಇವತ್ತಿನವರಿಗಾದರೆ ಆಗಿತ್ತಲ್ಲ, ಒಂದು ಸಲ ಆಗಿದೆ ಕೇಳಿದೆ ನಾವು ಕೇಳಿಲ್ಲ ಆದರೂ ನಮ್ಮ ತಂದೆ ತಾಯಿ, ನಮ್ಮ ತಾತ ಕೇಳಿದ್ದರು ಇದನ್ನೆಲ್ಲ ಭಾಗವತವನ್ನು ಒಂದು ಬಾರಿ ಸಂಪೂರ್ಣ ನಮ್ಮ ತಾತ ಎಲ್ಲ ಕೇಳಿದ್ದರು ಆದ್ದರಿಂದ ಅದನ್ನು ಮತ್ತೆ ಕೇಳುವುದು ಬೇಕಾಗಿಲ್ಲ ಅನ್ನುವಂತಹ ಜನ ಇವತ್ತು, ತಾತ ಕೇಳಿದರೆ ನಿನಗೆ ಏನೋ ಬಂತು. ಆದರೆ ಜನಮೇಜಯ ನೋಡಿ ಒಂದು ಬಾರಿ ಹೇಳಿದರೆ ತೃಪ್ತಿ ಇಲ್ಲ ಆವನಿಗೆ, ಇನ್ನಷ್ಟು ವಿಸ್ತಾರವಾಗಿ ಮತ್ತೆ ನನಗೆ ವರಾಹ ಅವತಾರದ ವರ್ಣನೆಯನ್ನು ಮಾಡಿ ಅಂತ ಕೇಳುತ್ತಾ ಇದ್ದಾಗ ವೈಶಂಪಾಯನರು ಆ ಭಗವಂತನ ಅದ್ಭುತವಾದ ಪ್ರಲಯ ಕಾಲದಲ್ಲಿ ದೇವರು ತೋರುವಂತಹ ಮಹಾಮಹಿಮೆ ಏನು ಅದನ್ನು ಮೊದಲು ವರ್ಣನೆ ಮಾಡುತ್ತಾರೆ. ತಾನೇ ಸ್ವಯಂ ಶೇಷ ದೇವರೊಳಗೆ ಅಂತರ್ಯಾಮಿಯಾಗಿ ಸಂಕರ್ಷಣ ರೂಪದಿಂದ ಅಗ್ನಿಯ ಸೃಷ್ಟಿಯನ್ನು ಮಾಡಿ ಎಲ್ಲವನ್ನು ಸುಟ್ಟು ಹಾಕುತ್ತಾನೆ ಲೋಕಗಳನ್ನ. ಹಿಂದೆ ಬಂದಿದೆ ತಾನೇ ಸೂರ್ಯನಲ್ಲಿ ನಿಂತು ಮೇಲಿನಿಂದ ತಾಪ ಕೊಡುತ್ತಾನೆ, ತಾನೇ ವಾಯುವಿನಲ್ಲಿ ನಿಂತು ಶೋಷಣೆ ಮಾಡುತ್ತಾನೆ, ತಾನೇ ಮೇಘಗಳಲ್ಲಿ ನಿಂತು ಎಲ್ಲ ಕಡೆಗೆ ನೀರನ್ನು ತುಂಬುವಂತೆ ಮಾಡುತ್ತಾನೆ ಈ ರೀತಿ ಆ ಪ್ರಲಯ ಕಾಲದಲ್ಲಿ. ಅನೇಕ ಜನ ಕೇಳುವುದು ಉಂಟು ಮೂವತ್ತು ಮೂರು ಕೋಟಿ ದೇವತೆಗಳ ಅನ್ನುವ ಉಲ್ಲೇಖವೇ ಎಲ್ಲಿಯೂ ಬಂದಿಲ್ಲ ಪುರಾಣಗಳಲ್ಲಿ ಅಂತ ಕೆಲವರ ಅಭಿಪ್ರಾಯ ಇಲ್ಲಿ ಉಲ್ಲೇಖ ಬರುತ್ತದೆ.

ಸರ್ವೇ ದೇವಗಣಾಶ್ಚೈವ ತ್ರಯಸ್ತ್ರಿಂಶಚ್ಚ ಕೋಟಯಃ ॥ (33.18 ಭವಿಷ್ಯಪರ್ವ)

ತಸ್ಮಿನ್ನಹನಿ ಸಮ್ಪ್ರಾಪ್ತೇ ತಂ ಹಂಸಂ ಮಹದಕ್ಷರಮ್ । (33.19 ಭವಿಷ್ಯಪರ್ವ)

ಆ ಮೂವತ್ತು ಮೂರು ಕೋಟಿ ದೇವತೆಗಳೂ ಕೂಡ ಪ್ರಲಯ ಕಾಲದಲ್ಲಿ ಹಂಸ ರೂಪಿಯಾದ ನಾಶ ರಹಿತನಾದ ಶುದ್ಧನಾದ ಆ ಪರಮಾತ್ಮನಲ್ಲಿ ಪ್ರವೇಶ ಮಾಡುತ್ತಾರೆ. ಸೃಷ್ಟಿ ಕಾಲದಲ್ಲಿ ಭಗವಂತನ ಉದರದಿಂದ ಹೊರಗೆ ಬರುತ್ತಾರೆ ತಮ್ಮ ತಮ್ಮ ಸಾಧನೆಯನ್ನು ಮಾಡಿಕೊಳ್ಳುತ್ತಾರೆ, ಪ್ರಲಯ ಕಾಲದಲ್ಲಿ ಆ ಮೂವತ್ತು ಮೂರು ಕೋಟಿ ದೇವತೆಗಳು ಭಗವಂತನ ಉದರದಲ್ಲಿ ಆಶ್ರಯವನ್ನು ಪಡೆದು ಇರುತ್ತಾರೆ ಅಂತ ಹರಿವಂಶ ವರ್ಣನೆ ಮಾಡುತ್ತದೆ. ಈ ರೀತಿ ಆ ಪರಮಾತ್ಮ ಪ್ರಲಯ ಕಾಲದಲ್ಲಿ ಇರುತ್ತಾನೆ. ಭಗವಂತ ತಪತ್ರಶಾಯಿಯಾಗಿ ಮಲಗಿರುತ್ತಾನೆ ಲಕ್ಷ್ಮೀ ದೇವಿ ಮಾತ್ರ ಇರುತ್ತಾಳೆ ಯಾರೂ ಇರುವುದಿಲ್ಲ **'ಏಕೋ ನಾರಾಯಣ ಆಸೀನ್ ನ ಬ್ರಹ್ಮಾ ನ ಚ ಶಂಕರಃ'** ಯಾವ ಯಾವ ದೇವತೆಗಳೂ ಇರುವುದಿಲ್ಲ ಪರಮಾತ್ಮ ಒಬ್ಬನೇ ಒಬ್ಬ ಇರುತ್ತಾನೆ, ಉಳಿದವರೆಲ್ಲರೂ ಭಗವಂತನ ಉದರದಲ್ಲಿ ಇರುತ್ತಾರೆ ಮತ್ತೆ ಒಂದು ಸಾವಿರ ಯುಗ ಕಳೆದ ಮೇಲೆ ಪುನಃ ಸೃಷ್ಟಿ ಮಾಡುತ್ತಾನೆ ಈ ರೀತಿ ಆ ಭಗವಂತನ ಬಹಳ ದೊಡ್ಡ ಮಹಿಮೆ ಇದು. **'ಅಜ್ಞಾನಂ ಪಾರತಂತ್ರ್ಯಂ ಚ ಪ್ರಲಯೇಭಾವ ಏವ ಚ'**[1] ಅಂತ ಅಜ್ಞಾನ ಪಾರತಂತ್ರ್ಯ ಪ್ರಲಯ ಕಾಲದಲ್ಲಿ ಇಲ್ಲದೇ ಇರುವುದು ಅನ್ನುವುದು ಇನ್ನೆಲ್ಲ ದೇವತೆಗಳಿಗೆ ಅದು ದೋಷ ಆದರೆ ಆ ತರಹದ ಅಜ್ಞಾನವೂ ಇಲ್ಲ. ಪ್ರಲಯ ಕಾಲದಲ್ಲಿಯೂ ತಾನಿದ್ದು ಸಮಸ್ತ ಜಗತ್ತಿನ ಸೃಷ್ಟಿ ಮಾಡುವ ಸರ್ವೋತ್ತಮನಾದ ಸರ್ವ ಸೃಷ್ಟಿಕರ್ತುವಾದ ದೇವ ಒಬ್ಬನೇ ಒಬ್ಬ ನಾರಾಯಣ ಸರ್ವೋತ್ತಮ ಅನ್ನುವುದನ್ನ ಘಂಟಾಘೋಷವಾಗಿ ಹರಿವಂಶ ಪುರಾಣ ಹೇಳುತ್ತಾ ಇದೆ ಆ ರೀತಿ ಸೃಷ್ಟಿ ಮಾಡುತ್ತಾನೆ. **'ನಾರಾಯಣಪರಾ ದೇವಾ'** ಭಾಗವತದಲ್ಲಿಯೂ ಈ ವಚನ ಬರುತ್ತದೆ

ನಾರಾಯಣಪರಾ ದೇವಾ ನಾರಾಯಣಪರಾಃ ಕ್ರಿಯಾಃ ।

ನಾರಾಯಣಪರೋ ಯಜ್ಞೋ ನಾರಾಯಣಪರಾ ಶ್ರುತಿಃ ॥ (33.36 ಭವಿಷ್ಯಪರ್ವ)

ನಾರಾಯಣಪರೋ ಮೋಕ್ಷೋ ನಾರಾಯಣಪರಾ ಗತಿಃ ॥ (33.37 ಭವಿಷ್ಯಪರ್ವ)

ಎಲ್ಲಾ ವೇದಗಳು ಭಗವಂತನ ಮಹಿಮೆಯನ್ನು ಕೊಂಡಾಡುತ್ತವೆ, ಎಲ್ಲ ಯಜ್ಞಗಳು ಭಗವಂತನ ಪ್ರೀತಿಗಾಗಿ, ಮೋಕ್ಷ ಕೊಡುವವನು, ದೇವ, ಧರ್ಮ ಮಾಡಿಸುವವನು, ಧರ್ಮಗಳಿಗೆ ಫಲ ಕೊಡುವವನು ಪರಮಾತ್ಮ, ತಪಸ್ಸು, ಸತ್ಯ ಎಲ್ಲದಕ್ಕೂ ಮೂಲಭೂತನಾದವನು ನಾರಾಯಣ ನಾರಾಯಣ ನಾರಾಯಣ ಅಂತ ಪುನಃ ಪುನಃ ಹೇಳುತ್ತದೆ. ಒಂದು ಮಾತನ್ನು ಶ್ರೀಮದಾಚಾರ್ಯರು ಹೇಳುತ್ತಾರೆ ದೇವರು ತಿಳಿದದ್ದನ್ನು ಎಲ್ಲರೂ ತಿಳಿಯುವುದಕ್ಕೆ ಸಾಧ್ಯ ಇಲ್ಲ ಆದರೆ ಎಲ್ಲರೂ ತಿಳಿದಿದ್ದನ್ನು ದೇವರು ತಿಳಿಯುತ್ತಾನೆ ಅಂತ ಭಾಗವತ ತಾತ್ಪರ್ಯದಲ್ಲಿ ಶ್ರೀಮದಾಚಾರ್ಯರು ಹೇಳುತ್ತಾರೆ. ಆ ಮಾತನ್ನು ಎಷ್ಟು ಸ್ಪಷ್ಟವಾಗಿ ಹರಿವಂಶ ಹೇಳುತ್ತದೆ **'ಯದ್ವೇದಿತವ್ಯಂ ತ್ರಿದಶೈಸ್ತದೇಷ ಪರಿವಿನ್ದತಿ'**[2]**.**

ಎಲ್ಲಾ ದೇವತೆಗಳು ಏನೇನು ತಿಳಿದಿದ್ದಾರೋ ಅದೆಲ್ಲಾ ದೇವರಿಗೆ ಗೊತ್ತು ಆದರೆ **'ಯಚ್ಚ ವೇದ್ಯಂ ಭಗವತೋ ದೇವಾ ಅಪಿ ನ ತದ್ ವಿದುಃ'** ದೇವರು ತಿಳಿದದ್ದನ್ನು ಮಾತ್ರ ಯಾರೂ ತಿಳಿದಿಲ್ಲ. ಜೈಮಿನ್ಯಾದಿ ಋಷಿಗಳು ದೇವರು ತಿಳಿದದ್ದರೊಳಗೇನೆ ಏಕದೇಶವನ್ನು ತಿಳಿಯುತ್ತಾರೆ ಆದರೆ ಎಲ್ಲರೂ ತಿಳಿದಿದ್ದನ್ನು ವೇದವ್ಯಾಸ ದೇವರು ತಿಳಿದಿದ್ದಾರೆ ಇದು ಆ ಭಗವಂತನ ಮಹಾಮಹಿಮೆ.

---

1. ಪ್ರಥಮಾಧ್ಯಾಯಃ ಪ್ರಥಮಃ ಪಾದಃ 96ನೆಯ ಶ್ಲೋಕ ಅನುಶಾಸನ ಪರ್ವ; 2. 33.40 ಭವಿಷ್ಯ ಪರ್ವ

ಯಚ್ಚ ವೇದ್ಯಂ ಭಗವತೋ ದೇವಾ ಅಪಿ ನ ತದ್ ವಿದುಃ ।

ಪ್ರಜಾನಾಂ ಪತಯಃ ಥಾ ಸಪ್ತ ಋಷಯಶ್ಚ ಸಹಾಮರೈಃ ॥ (33.41 ಭವಿಷ್ಯಪರ್ವ)

ನಾಸ್ಯಾನ್ತಮಧಿಗಚ್ಛನ್ತಿ ತತೋಽನನ್ತ ಇತಿ ಶ್ರುತಿಃ । (33.42 ಭವಿಷ್ಯಪರ್ವ)

ಅಷ್ಟೇಕೆ ದೇವರಿಗೆ ಅನಂತ ಅನಂತ ಅಂತ ಯಾಕೆ ಕರೆಯುತ್ತಾರೆ ಏನೋ ಅನಂತ ಅಂತ ಹೆಸರು ಇಟ್ಟಿರಬೇಕು ಅವರಪ್ಪ ಯಾರೋ ಹೆಸರಿಟ್ಟಿದ್ದಲ್ಲ ಅದು. ಯಾಕೆ ದೇವರನ್ನು ಅನಂತ ಅಂತ ಕರೆಯುತ್ತಾರೆ ಅಂದರೆ ಎಲ್ಲಾ ಪ್ರಜಾಪತಿಗಳು, ಎಲ್ಲಾ ಋಷಿಗಳು, ಎಲ್ಲಾ ದೇವತೆಗಳು ಸೇರಿದರೂ ಯಾವ ಪರಮಾತ್ಮನ ದೇಶತಃ ಅಂತ, ಕಾಲತಃ ಅಂತ, ಗುಣತಃ ಅಂತವನ್ನು ತಿಳಿಯಲಿಕ್ಕೆ ಸಾಧ್ಯವೇ ಇಲ್ಲ, ಯಾಕೆ ಇಲ್ಲವೇ ಇಲ್ಲ, ಅಂತಹ ಅನಂತ ಗುಣ ಪರಿಪೂರ್ಣನಾದ ಸರ್ವ ದೇಶ ಕಾಲಗಳಲ್ಲಿ ವ್ಯಾಪ್ತನಾದ ಸ್ವಾಮಿ ಪರಮಾತ್ಮನಿಗೆ ಅನಂತ ಅಂತ ಕರೆಯುತ್ತಾರೆ. ಇಷ್ಟು ಸ್ಪಷ್ಟವಾಗಿ ಅನಂತ ಶಬ್ದದ ಅರ್ಥವನ್ನ ಹರಿವಂಶ ಹೇಳುತ್ತದೆ. ಭಾಗವತ ಹೇಳುತ್ತದೆ **'ಮಹದ್-ಗುಣತ್ವಾದ್ ಯಾಮ್ ಅನಂತಮ್ ಆಹುಃ'** ಅಂತ ಸ್ಪಷ್ಟವಾದ ಭಾಗವತದ ಉಪಲಬ್ಧ ವಚನ ಇದೆ ಇಷ್ಟಿದ್ದು ಯಾವ ವಸ್ತುಗಳಿಂದಲೂ ಭೇದ ಇಲ್ಲದೇ ಇರುವುದರಿಂದ ಭಗವಂತನನ್ನ ಅನಂತ ಅಂತ ಕರೆಯುತ್ತಾರೆ ಅಂತ ವ್ಯಾಖ್ಯಾನ ಮಾಡುವುದು ಸರ್ವಥಾ ಶಾಸ್ತ್ರ ಸಮ್ಮತವಾದದ್ದಲ್ಲ. ಸಕಲ ಜೀವ ಜಡಾತ್ಮಕ ಪ್ರಪಂಚದಿಂದ ಅತ್ಯಂತ ಭಿನ್ನನಾಗಿ ಹಿಂದಿನ ಮುಂದಿನ ವಾಕ್ಯಗಳನ್ನು ನೋಡಿ ಯಾವ ಪರಮಾತ್ಮ ತಿಳಿದದ್ದನ್ನ ಇನ್ನು ಯಾರೂ ತಿಳಿಯುವುದಕ್ಕೆ ಸಾಧ್ಯ ಇಲ್ಲ, ಎಲ್ಲರೂ ತಿಳಿದದ್ದನ್ನ ಇವನು ತಿಳಿಯುತ್ತಾನೆ ಅಂತ ಭೇದವನ್ನ ಹೇಳುತ್ತಾರೆ. ಮುಂದೆ ಮತ್ತೆ ಭೇದವನ್ನ ಹೇಳುತ್ತಾರೆ ಸಕಲ ಜಗತ್ತಿನ ಸೃಷ್ಟಿ ಸ್ಥಿತಿ ಪ್ರಲಯಗಳನ್ನು ಮಾಡುತ್ತಾನೆ ಅಂತ ಹೀಗಿರುವಾಗ ಯಾವ ವಸ್ತುಗಳಿಂದಲೂ ಭೇದ ಇಲ್ಲದೇ ಇರುವುದರಿಂದ ಅನಂತ ಅಂತ ಹೇಳುತ್ತಾರೆ ಅನ್ನುವ ವ್ಯಾಖ್ಯಾನ ಇದು ಸರಿಯಾದ ವ್ಯಾಖ್ಯಾನ ಅಲ್ಲ. ಹೇಳುತ್ತದೆ **'ನಾಸ್ಯಾನ್ತಮಧಿಗಚ್ಛನ್ತಿ ತತೋಽನನ್ತ ಇತಿ ಶ್ರುತಿಃ'** ಸ್ವಯಂ ತಾನು ಪರಮ ಪ್ರಮಾಣ ಹರಿವಂಶ ಮತ್ತೆ ಈ ವೇದವನ್ನು ಉದಾಹರಣೆ ಮಾಡುತ್ತದೆ. ಇಂತಹ ಆ ಪರಮಾತ್ಮನ

ಪ್ರಾದುರ್ಭಾವೇಷು ಸಮ್ಭೂತಂ ಯತ್ ತದರ್ಚನ್ತಿ ದೇವತಾಃ ।

ಯನ್ನ ದರ್ಶಿತವಾನ್ ದೇವಃ ಕಸ್ತದನ್ವೇಷ್ಟುಮರ್ಹತಿ ॥ (33.43 ಭವಿಷ್ಯಪರ್ವ)

ಆ ಆ ದೇವತೆಗಳ ಯೋಗ್ಯತೆಯನ್ನು ತಿಳಿದು ಎಷ್ಟು ರೂಪಗಳನ್ನು ದೇವರು ತೋರಿಸಿದ್ದಾನೆ ಅಷ್ಟು ನೋಡಬಹುದು, ಎಲ್ಲಾ ರೂಪಗಳನ್ನು ನೋಡುವುದಕ್ಕೆ ಯಾರಿಗೆ ಸಾಧ್ಯವಾಗುತ್ತದೆ ಸಾಧ್ಯವೇ ಆಗುವುದಿಲ್ಲ ಅನ್ನುತ್ತಾರೆ. ಅನಂತಾನಂತ ರೂಪಗಳು ಪರಮಾತ್ಮನಿಗೆ ಇವೆ. **'ಯನ್ನ ದರ್ಶಿತವಾನ್ ದೇವಃ ಕಸ್ತದನ್ವೇಷ್ಟುಮರ್ಹತಿ'** ತಾನು ಅನುಗ್ರಹ ಪೂರ್ವಕವಾಗಿ ದೇವರು ತೋರಿಸಿದರೆ ಉಂಟು ಇಲ್ಲ ಅಂದರೆ ಇಲ್ಲ. ಶ್ರೀಮನ್ನ್ಯಾಯಸುಧಾದಲ್ಲಿ ಟೀಕಾಕೃತ್ಪಾದರು ಹೇಳುತ್ತಾರೆ **'ಸಹಸ್ರೇಣಾ ವಿಪ್ರಯತ್ನಾ'** ಸಾವಿರ ಸಾವಿರ ಪ್ರಯತ್ನ ಮಾಡಿದರೂ ದೇವರನ್ನು ನೋಡಲಿಕ್ಕೆ ಸಾಧ್ಯ ಇಲ್ಲ ಅವ್ಯಕ್ತ ಸ್ವಭಾವ ದೇವರದು, ಅನುಗ್ರಹ ಮಾಡಿದರೆ ಉಂಟು ಇಲ್ಲಾ ಇಲ್ಲ. ಅಂತಹ ಆ ಭಗವಂತನ ಮಹಾಮಹಿಮೆಯನ್ನು ವೈಶಂಪಾಯನರು ವರ್ಣನೆ ಮಾಡುತ್ತಾರೆ ಜನಮೇಜಯ ರಾಜನಿಗೆ.

ಈ ರೀತಿ ಪ್ರಲಯ ಎಲ್ಲಾ ಆದಮೇಲೆ ಪುನಃ ಪರಮಾತ್ಮ ಹಿರಣ್ಮಯವಾದಂತಹ ಬ್ರಹ್ಮಾಂಡದ ಸೃಷ್ಟಿಯನ್ನು ಮಾಡುತ್ತಾನೆ ಅದರಲ್ಲಿ ಎರಡು ಭಾಗಗಳನ್ನು ಮಾಡಿ ಮೇಲೆ ಏಳು ಲೋಕಗಳು, ಕೆಳಗೆ ಏಳು ಲೋಕಗಳು ಹದಿನಾಲ್ಕು ಲೋಕಗಳ ಸೃಷ್ಟಿಯನ್ನು ಮಾಡುತ್ತಾನೆ ಮತ್ತೆ ಎಂಟು ಭಾಗ ಮಾಡಿ ನಾಲ್ಕು ದಿಕ್ಕುಗಳು ನಾಲ್ಕು

ವಿದಿಕ್ಕುಗಳು ಅಂತ ಮಾಡುತ್ತಾನೆ. ಅಲ್ಲಲ್ಲಲ್ಲಿ ಪರ್ವತಗಳ ಸೃಷ್ಟಿಯನ್ನು ಮಾಡುತ್ತಾನೆ ಪರಮಾತ್ಮ ಈ ರೀತಿ ಆ ಭಾರೀ ಭಾರೀ ಪರ್ವತಗಳ ಭಾರ ಆಗಿ ಆ ನೀರಿನೊಳಗೆ ಭೂಮಿ ಮುಳುಗಿ ಹೋಗುತ್ತದೆ ಆಗ ಭೂದೇವಿ ಪರಮಾತ್ಮನಿಗೆ ಪ್ರಾರ್ಥನೆ ಮಾಡುತ್ತಾಳೆ. ಭೂದೇವಿ ಮಾಡುವ ಪ್ರಾರ್ಥನೆ ನೋಡಿ

ತ್ರಿವಿಕ್ರಮಾಯಾಮಿತವಿಕ್ರಮಾಯ ಮಹಾನೃಸಿಂಹಾಯ ಚತುರ್ಭುಜಾಯ ।

ಶ್ರೀಶಾರ್ಙ್ಗಚಕ್ರಾಸಿಗದಾಧರಾಯ ನಮೋಽಸ್ತು ತಸ್ಮೈ ಪುರುಷೋತ್ತಮಾಯ ॥ (34.18 ಭವಿಷ್ಯಪರ್ವ)

ಅಂತ ಹೇಳಿ ನೋಡಿ ಭೂದೇವಿಗೆ ಹೆಸರು ಧರಣಿ ಎಲ್ಲವನ್ನು ಧಾರಣೆ ಮಾಡುತ್ತಾಳೆ ಅದಕ್ಕೆ ಧರಣಿ ಧರಣಿ ಅಂತ ಅವಳನ್ನ ಕರೆಯುವುದು. ಅವಳು ಅನ್ನುತ್ತಾಳೆ ನಾನೆಲ್ಲಿ ಧರಣಿ ಹಾಡೇ ಹಾಡಿರಬೇಕು ಅವಳು **'ನಾನೆಲ್ಲಿ ಧರಣಿಯೋ ನಾನೆಲ್ಲಿ ಭೂಮಿಯೋ ನೀನೇ ಧರಣಿ ನೀನೇ ಭೂಮಿ'** ಏನು ಮಾತು ಹೇಳುತ್ತಾಳೆ.

ಯತ್ ತ್ವಯಾ ಧಾರ್ಯತೇ ಕಿಂಚಿತ್ ತೇಜಸಾ ಚ ಬಲೇನ ಚ ।

ತತಸ್ತವ ಪ್ರಸಾದೇನ ಮಯಾ ಪಶ್ಚಾತ್ ತು ಧಾರ್ಯತೇ ॥ (34.20 ಭವಿಷ್ಯಪರ್ವ)

ಏನು ಶ್ರೀಮದಾಚಾರ್ಯರ ಸಿದ್ಧಾಂತವನ್ನ ನಾವು ಒಂದೊಂದು ಮಾತಿನಲ್ಲಿ ಹೇಗೆ ಕಾಣುತ್ತೇವೆ ಅಂತರ್ಯಾಮಿಯ ಪ್ರಸಾದ ಇಲ್ಲದೆ ಏನೇನೂ ನಡೆಯುವುದಿಲ್ಲ ಅನ್ನುತ್ತಾರೆ ಶ್ರೀಮದಾಚಾರ್ಯರು ಐತರೇಯ ಭಾಷ್ಯದಲ್ಲಿ ಹೇಳುತ್ತಾರೆ ಶೇಷ ದೇವರು ಹೊತ್ತಿದ್ದಲ್ಲ ಬ್ರಹ್ಮಾಂಡವನ್ನ ಒಳಗೆ ಸಂಕರ್ಷಣ ಹೊತ್ತದ್ದು. ಭೂಮಿ ಹೇಳುತ್ತಾಳೆ ನೋಡಿ ನೀನು ಧಾರಣೆ ಮಾಡುತ್ತೀಯಾ ಎಲ್ಲ ಜೀವರಾಶಿಗಳನ್ನ ಪರ್ವತಗಳನ್ನ ನದಿಗಳನ್ನ ಸಮುದ್ರಗಳನ್ನ ನನಗೆ ಕೀರ್ತಿ ಅಷ್ಟೇ ನಾ ಧಾರಣೆ ಮಾಡಿದೆ ಅಂತ ನಾನೇನು ಧಾರಣೆ ಮಾಡುವುದು, ನೀನೇ ಒಳಗಿದ್ದು ಮಾಡುವುದು ನಿನ್ನ ಪ್ರಸಾದದಿಂದ ನಾನು ಧಾರಣೆ ಮಾಡಿದ್ದೇನೆ.

ತ್ವಯಾ ಧೃತಂ ಧಾರಯಾಮಿ ನಾಧೃತಂ ಧಾರಯಾಮ್ಯಹಮ್ ॥ (34.21 ಭವಿಷ್ಯಪರ್ವ)

ದೇವರು ನೀನು ಧಾರಣೆ ಮಾಡಿಲ್ಲ ಅಂದರೆ ನಾನು ಧಾರಣೆ ಮಾಡಲಿಕ್ಕೆ ಸಾಧ್ಯ ಇಲ್ಲ. ಈಗ ನನ್ನೊಳಗಿದ್ದು ನೀನು ಈ ಪರ್ವತಗಳ ಧಾರಣೆ ಮಾಡುತ್ತ ಇಲ್ಲ ಯಾಕೋ ಉದಾಸೀನ ಮಾಡಿದ್ದೀ ಹೀಗಾಗಿ ಆ ಪರ್ವತಗಳ ಭಾರವನ್ನು ಹೊರಲಾಗದೇ ನಾನು ಸಮುದ್ರದಲ್ಲಿ ಮುಳುಗುತ್ತಾ ಇದ್ದೇನೆ ಅದಕ್ಕೆ ಕಾರಣ ನಿನ್ನ ಅನುಗ್ರಹ ಕಡಿಮೆಯಾಗಿದೆ. ಅಲ್ಲ, ಎಲ್ಲಾ ಏನು ನಾನು ಧಾರಣೆ ಮಾಡಿಲ್ಲವಲ್ಲ ಪೃಥ್ವಿ ಕೆಲವುದನ್ನು ನಾನು ಧಾರಣೆ ಮಾಡಿದ್ದೇನೆ ಅಲ್ಲ ಅಂದರೆ

ನ ಹಿ ತದ್ ವಿದ್ಯತೇ ರೂಪಂ ಯತ್ ತ್ವಯಾ ನ ತು ಧಾರ್ಯತೇ ॥ (34.21 ಭವಿಷ್ಯಪರ್ವ)

ನೀನು ಧಾರಣೆ ಮಾಡದೇ ಇರದ ವಸ್ತುವೇ ಪ್ರಪಂಚದಲ್ಲಿ ಇಲ್ಲ ಯಾಕೆ ಹೇಳುತ್ತೀಯಾ ಹಾಗೆ ನಾನು ಧಾರಣೆ ಮಾಡಿಲ್ಲ ಅಂತ ಎಲ್ಲವೂ ನೀನೇ ಧಾರಣೆ ಮಾಡುವುದು ನನ್ನ ಭಾರವನ್ನು ಪರಿಹಾರ ಮಾಡುವುದಕ್ಕೆ, ನೀನೇ ಅನೇಕ ಅವತಾರಗಳನ್ನು ಮಾಡುತ್ತೀಯಾ ಭೂಭಾರಹರಣಕ್ಕಾಗಿ.

ಮಮ ಭಾರಾವತರಣಂ ಜಗತೋ ಹಿತಕಾಮ್ಯಯಾ । (34.22 ಭವಿಷ್ಯಪರ್ವ)

ತ್ರಾಯಸ್ವ ಮಾಂ ಸುರಶ್ರೇಷ್ಠ ತ್ವಾಮೇವ ಶರಣಂ ಗತಾಮ್ ॥ (34.23 ಭವಿಷ್ಯಪರ್ವ)

ಈ ಕಡೆಗೆ ದಾನವರ ಪೀಡೆ, ಈ ಕಡೆಗೆ ಪರ್ವತಗಳ ಭಾರ ನನ್ನನ್ನು ಉದ್ಧಾರ ಮಾಡು ಅಂತ ಕೇಳಿದಾಗ ಪರಮಾತ್ಮ ಸರ್ವಜ್ಞ ಶಿಖಾಮಣಿ ಅವನಿಗೆ ಆಲೋಚನೆ ಇಲ್ಲ, ಆಲೋಚನೆ ಮಾಡಿದಂತೆ ನಾಟಕ ಮಾಡಿ ಹಾಗಾದರೆ ಏನು ಮಾಡಲಿ, ಯಾವ ರೂಪವನ್ನು ತೆಗೆದುಕೊಂಡು ಇವಳನ್ನು ಉದ್ಧಾರ ಮಾಡಬೇಕು ಅಂತ ಆಗ ಪರಮಾತ್ಮ ತೆಗೆದುಕೊಂಡ ರೂಪವೇ ವರಾಹ ರೂಪ ಅಪ್ಪ ಜನಮೇಜಯ ಕೇಳು.

ಜಲಕ್ರೀಡಾರುಚಿಸ್ತಸ್ಮಾದ್ ವಾರಾಹಂ ರೂಪಮಸ್ಮರತ್ ॥ (34.29 ಭವಿಷ್ಯಪರ್ವ)

ನಾನು ನಾರಾಯಣ, ನೀರಿನಲ್ಲಿ ಕ್ರೀಡೆ ಮಾಡುವುದು ನನಗೆ ಸೇರುತ್ತದೆ ಹಾಗಾದರೆ ವರಾಹ ರೂಪವನ್ನು ತೆಗೆದುಕೊಂಡು ನೀರಿನಲ್ಲಿ ಕ್ರೀಡೆಯನ್ನು ಮಾಡಬೇಕು ಅಂತ ವರಾಹ ರೂಪವನ್ನು ಹತ್ತು ಯೋಜನ ಅಗಲ, ನೂರು ಯೋಜನ ಎತ್ತರ ಶ್ವೇತ ವರಾಹ, ಉಗ್ರವಾದಂತಹ ದ್ರೌಂಷ್ಟ್ರಗಳು, ಅದ್ಭುತವಾದಂತಹ ಶರೀರ. **'ವಿಪುಲಂ ವಾರಾಹಮಮಿತಂ ಹರಿಃ'**[1] ಹತ್ತು ಯೋಜನ ಅಗಲ, ನೂರು ಯೋಜನ ಎತ್ತರ ಅಂದರೆ ಇಷ್ಟೇ ಅಂತ ತಿಳಿದುಕೊಳ್ಳಬೇಡಿ ಅಂತ ಹರಿವಂಶ ಹೇಳುತ್ತದೆ. **'ಅಮಿತಂ ಹರಿಃ'** ಕಾಣುವುದಕ್ಕೆ ಸಾಮಾನ್ಯರಿಗೆ ಯೋಗಿಗಳಿಗೆ ಅಷ್ಟು ತೋರಿಸಿದ್ದು ದೇವರು ನಿಜವಾಗಿ ಅನಂತ ಆ ಪರಮಾತ್ಮನ ರೂಪಕ್ಕೆ ಪರಿಚ್ಛೇದವೇ ಇಲ್ಲ. ಸಮಗ್ರ ಯಜ್ಞಮಯವಾದಂತಹ ಶರೀರವನ್ನ ಪರಮಾತ್ಮ ಸ್ವೀಕಾರ ಮಾಡಿ ರಸಾತಲದಲ್ಲಿ ಮುಳುಗಿದ ಭೂಮಿಯನ್ನ ತನ್ನ ಕೋರೆ ಹಲ್ಲಿನಿಂದ ಎತ್ತಿ ತಂದು ಸ್ಥಿರವಾಗಿ ತನ್ನ ಸ್ಥಾನದಲ್ಲಿ ತಾನು ನಿಲ್ಲುವಂತೆ ಮಾಡಿದ್ದಾನೆ ಭೂದೇವಿ ಪರಮಾತ್ಮನಿಗೆ ನಮಸ್ಕಾರ ಮಾಡಿ ಆ ಭಗವಂತನಿಗೆ ಅನಂತ ಕೃತಜ್ಞತೆಗಳನ್ನು ಅರ್ಪಣೆ ಮಾಡಿದ್ದಾಳೆ.

ಚಕಾರ ಚ ನಮಸ್ಕಾರಂ ತಸ್ಮೈ ದೇವಾಯ ಶಮ್ಭವೇ ॥ (34.45 ಭವಿಷ್ಯಪರ್ವ)

ಹೀಗೆ ಪರಮಾತ್ಮ ಭೂಮಿಯನ್ನ ಉದ್ಧಾರಣ ಮಾಡಿದ್ದಾನೆ. ಆ ಭೂಮಿಯನ್ನು ಉದ್ಧಾರ ಮಾಡಿ ಆ ಭೂಮಿಯಲ್ಲಿ ಪರ್ವತಗಳು ನದಿಗಳು ಎಷ್ಟು ಚೆನ್ನಾಗಿ ಹೇಳುತ್ತಾರೆ ನೋಡಿ ಕಲ್ಪನೆ ಎಲ್ಲ ಇದೆಲ್ಲ ಶಾಸ್ತ್ರದ ಪ್ರಮಾಣದಿಂದ. ಇವತ್ತು ಕೆನಾಲ್‌ಗಳನ್ನು ಮಾಡುತ್ತಾರೆ ದೊಡ್ಡ ದೊಡ್ಡ ಕಾಲುವೆಗಳನ್ನ ಭಾರೀ ಭಾರೀ ಇಂಜಿನೀಯರುಗಳೆಲ್ಲಾ ತಮ್ಮ ಬುದ್ಧಿಯನ್ನೆಲ್ಲಾ ಉಪಯೋಗಿಸಿ ಎಲ್ಲಿಂದ ಹೇಗೆ ಹೋದರೆ ಸರಿಯಾಗಿರುತ್ತದೆ, ಹೇಗೆ ಹೋದರೆ ಅನುಕೂಲವಾಗುತ್ತೆ ಎಲ್ಲ ಆಲೋಚನೆ ಮಾಡಿ ನಕ್ಷೆಯನ್ನು ಮಾಡುತ್ತಾರೆ ಮೊದಲು ಆ ನಕ್ಷೆಗೆ ತಕ್ಕ ಹಾಗೆ ಆಮೇಲೆ ಕೆನಾಲ್‌ಗಳನ್ನು ಮಾಡುತ್ತಾರೆ. ಸ್ವತಃ ಸ್ವಾಮಿ ವರಾಹ ರೂಪಿಯಾಗಿರುವಂತಹ ಪರಮಾತ್ಮ ಭೂಮಿಯ ಮೇಲೆ ಪರ್ವತಗಳು ಎಲ್ಲಿರಬೇಕು, ನದಿಗಳು ಎಲ್ಲಿರಬೇಕು, ಗಂಗಾ ನದಿ ಎಲ್ಲಿಂದ ಎಲ್ಲಿ ಉಗಮ, ಎಲ್ಲಿ ಸಮುದ್ರಕ್ಕೆ ಸೇರಬೇಕು ರೇಖೆ ಎಳೆದನಂತೆ **'ವಿಲೇಖನಂ'**. ಗಂಗಾ ಹೀಗೆ, ಯಮುನಾ ಹೀಗೆ, ಗೋದಾವರಿ ಹೀಗೆ ಏನು ಇಂಜಿನೀಯರು ಅಭಿಯಂತ ಅಂದರೆ ಏನು ಅಭಿಯಂತಾ ಸರ್ವಯಂತಾ ಸರವೋತ್ತಮನಾದಂತಹ ಸ್ವಾಮಿ ಪರಮಾತ್ಮ ಹೇಳುತ್ತಾರೆ ನೋಡಿ.

ತತಃ ಸ ಚಿನ್ತಯಾಮಾಸ ಪ್ರವಿಭಾಗಂ ಕ್ಷಿತೇರ್ವಿಭುಃ ।
ಸಮುಚ್ಛ್ರಯಂ ಚ ಸರ್ವೇಷಾಂ ಪರ್ವತಾನಾಂ ನದೀಷು ಚ ॥ (35.2 ಭವಿಷ್ಯಪರ್ವ)
ವಿಲೇಖನಂ ಪ್ರಮಾಣಂ ಚ ಗತಿಂ ಪ್ರಸ್ರವಮೇವ ಚ ॥ (35.3 ಭವಿಷ್ಯಪರ್ವ)

1. 34.33 ಭವಿಷ್ಯಪರ್ವ

ಎಲ್ಲಿ ಹರಿಯಬೇಕು, ಅದು ಎಷ್ಟು ಎತ್ತರ ಇರಬೇಕು ಪರ್ವತ, ನದಿ ಎಲ್ಲಿ ಹರಿಯಬೇಕು ಎಲ್ಲ ಸರಿಯಾಗಿ ಅದಕ್ಕೆ ಮಾರ್ಗದ್ಯಾಪನವನ್ನು ಮಾಡುವ ರೇಖೆಗಳನ್ನು ಮಾಡಿ ಈ ರೀತಿ ಹರಿಯಬೇಕು ಅದು ಪ್ರಶಾಸನ ದೇವರದು ಹಾಗೇ ಹರಿಯಬೇಕು. ಎಷ್ಟು ಖರ್ಚು, ಎಷ್ಟು ಜನ ದುಡಿದು, ಎಷ್ಟು ವರ್ಷಗಳವರೆಗೆ ಪ್ರಯತ್ನ ಮಾಡಿ ಮತ್ತೆ ಕೆಲಸ ಮುಗಿಯುವದರೊಳಗೆ ರಿಪೇರಿ ಪ್ರಾರಂಭ ಇವೆಲ್ಲಾ ಪ್ರೊಜೆಕ್ಟಗಳು ಕೃಷ್ಣಾ ಪ್ರೊಜೆಕ್ಟು ಆ ಪ್ರೊಜೆಕ್ಟು. ಇದೇನಿದು ಗಂಗಾಕ್ಕೆ ಯಾರು ಮಾಡಿದ್ದಾರೆ ಪ್ರೊಜೆಕ್ಟು, ಯಮುನಾಕ್ಕೆ ಯಾರು ಮಾಡಿದ್ದಾರೆ ಎಷ್ಟು ಸಾವಿರ ವರ್ಷಗಳಾಯಿತು ಎಷ್ಟು ಲಕ್ಷ ವರ್ಷಗಳಾಯಿತು ಇನ್ನೂ ಹಾಗೆಯೇ ಹರಿಯುತ್ತದೆ ನದಿ ಎಂತಹ ಅದ್ಭುತವಾದ ವ್ಯವಸ್ಥೆ ವರಾಹ ದೇವರು ಮಾಡಿದ್ದು. ನಾಲ್ಕು ಕಡೆಗೆ ಸಮುದ್ರಗಳು ಮಧ್ಯದಲ್ಲಿ ಭೂಮಿ ಚತುರಂತ ಅಂತ ಮಾಡಿದ, ಚತುಃಸಮುದ್ರಗಳನ್ನ ಮಾಡಿ ಮಧ್ಯದಲ್ಲಿ ಪೃಥ್ವಿ, ಮೇರು ಪರ್ವತ, ಪೂರ್ವ ದಿಕ್ಕಿನಲ್ಲಿ ಉದಯ ಪರ್ವತ ನೂರು ಯೋಜನ ವಿಸ್ತಾರ, ಸಾವಿರ ಯೋಜನ ಎತ್ತರ ಆ ಉದಯ ಪರ್ವತವನ್ನು ಮಾಡಿದ್ದಾನೆ. ಹೀಗೆ ಇನನ್ನೇಕ ಪರ್ವತಗಳು ಸೌಮನಸ ಪರ್ವತ, ಸಹಸ್ರಶೃಂಗ, ಅರವತ್ತು ಯೋಜನ ಎತ್ತರ ಶಿಶಿರ ಪರ್ವತ, ವಸುಧಾರಾ ಅಂತ ನದಿಯನ್ನ ಸೃಷ್ಟಿ ಮಾಡಿದ್ದಾನೆ ಪರಮಾತ್ಮ. ದಕ್ಷಿಣ ದಿಕ್ಕಿನಲ್ಲಿ ಅನೇಕ ಪರ್ವತಗಳನ್ನು ಮಾಡಿದ್ದಾನೆ ಕುಂಜರ ಪರ್ವತ, ಋಷಭ ಪರ್ವತ, ಮಹೇಂದ್ರ ಪರ್ವತ, ಮಲಯ ಪರ್ವತ ಯಾವ ಮಲಯ ಪರ್ವತದಲ್ಲಿ ಚಂದನ ವೃಕ್ಷಗಳೆಲ್ಲ ವಿಶೇಷವಾಗಿ ಬೆಳೆಯುತ್ತವೆ.

ಅತಿಪರಿಚಯದವಜ್ಞಾ ಸಂತತಗಮನಾದನಾದರೋ ಭವತಿ ।
ಮಲಯೇ ಭಿಲ್ಲಪುರಂಧ್ರಿ ಚಂದನತರುಕಾಷ್ಟಮಿಂಧನಂ ಕುರುತೇ ॥ (ಸುಭಾಷಿತ)

ಅಂತ ಆ ಚಂದನ ವೃಕ್ಷ ಏನು ಅದ್ಭುತ ದೇವರ ಸೃಷ್ಟಿ. **'ಪುಣ್ಯೋ ಗಂಧಃ ಪೃಥಿವ್ಯಾಂ ಚ'**[1] ಎಂತಹ ಸುಗಂಧವನ್ನು ಆ ಚಂದನದಲ್ಲಿ ಇಟ್ಟಿರುತ್ತಾನೆ ಚಂದನ ವೃಕ್ಷದಲ್ಲಿ ದೇವರು ಆ ಚಂದನ ವೃಕ್ಷಗಳಿಂದ ಕೂಡಿದಂತಹ ಮಲಯ ಪರ್ವತವನ್ನ ವರಾಹ ದೇವರು ಸೃಷ್ಟಿ ಮಾಡಿದ್ದಾನೆ. ವಿಂಧ್ಯ ಪರ್ವತ ಪಯೋಧಾರಾ ಅನ್ನುವ ನದಿ, ಈ ಕಡೆಗೆ ಪಶ್ಚಿಮ ದಿಕ್ಕಿನಲ್ಲಿ ನೂರು ಯೋಜನ ಎತ್ತರದ ಪರ್ವತವನ್ನು ಮಾಡಿದ್ದಾನೆ, ಅರವತ್ತು ಸಾವಿರ ಪರ್ವತಗಳನ್ನು ಮಾಡಿದ್ದಾನೆ ಪಶ್ಚಿಮ ದಿಕ್ಕಿನಲ್ಲಿ, ಸಹಸ್ರ ಜಲಧಾರಾ ಅನ್ನುವಂತಹ ಪರ್ವತ ಅರವತ್ತು ಯೋಜನ ಎತ್ತರದ ಪರ್ವತ, ವಾರಾಹ ಪರ್ವತ ವೈಢೂರ್ಯದಿಂದ ಮಾಡಿದಂತಹ ಪರ್ವತ ವಾರಾಹ ಪರ್ವತವನ್ನು ಮಾಡಿದ್ದಾನೆ. ಚಕ್ರ ಪರ್ವತ, ಶಂಖ ಪರ್ವತ, ಪಾರಿಜಾತ ವೃಕ್ಷ ಭಾರೀ ಹೂವುಗಳಿಂದ ಕೂಡಿದಂತಹ ಪುಷ್ಪಹಾಸ ಮಾಡುವ ಪಾರಿಜಾತ ವೃಕ್ಷ. ವಿಷ್ಣು ಸಹಸ್ರನಾಮದಲ್ಲಿ ಬರುವ **'ಪುಷ್ಪಹಾಸಃ ಪ್ರಾಜಗರಃ'**[2] ಪುಷ್ಪಹಾಸಃ ಅಂದರೆ ಪುಷ್ಪಹಾಸದಿಂದ ಯುಕ್ತವಾದ ಪಾರಿಜಾತ ವೃಕ್ಷದ ಸೃಷ್ಟಿ ಮಾಡಿದವನಾದದ್ದರಿಂದ ಪರಮಾತ್ಮನಿಗೆ ಪುಷ್ಪಹಾಸ ಎಂಬ ವಿಷ್ಣುಸಹಸ್ರನಾಮದ ವ್ಯಾಖ್ಯಾನವನ್ನು ಹರಿವಂಶ ಮಾಡಿದ ಹಾಗೆ ಆಯಿತು ಈಗ.

ಸ್ರಷ್ಟಾ ಪಾತಾ ಚ ಸಂಹರ್ತಾ ನಿಯನ್ತಾ ಚ ಪ್ರಕಾಶಿತಾ ।
ಯತಃ ಸರ್ವಸ್ಯ ತೇನಾಹಂ ಸರ್ವೋಽತ್ಯೃಷಿಭಃ ಸ್ತುತಃ ॥

(7 ನೇಯ ಅಧ್ಯಾಯ 5 ನೇಯ ಶ್ಲೋಕ ಗೀತಾಭಾಷ್ಯ)

1. 7.9 ಭ ಗೀತಾ; 2. 102 ವಿಷ್ಣುಸಹಸ್ರನಾಮ

ಅಂತ ಗೀತಾಭಾಷ್ಯದಲ್ಲಿ ಹೇಳಿದಂತೆ ಯಾವುದರ ಸೃಷ್ಟಿ ಮಾಡುತ್ತಾನೋ ಆ ಹೆಸರು ಬರುತ್ತದೆ ಸರ್ವ ಸೃಷ್ಟಿಕರ್ತುವಾದದ್ದರಿಂದ ದೇವರಿಗೆ ಸರ್ವ ಅಂತ ಕರೆಯುತ್ತಾರೆ, ಪುಷ್ಪಹಾಸವಾದ ಪಾರಿಜಾತ ವೃಕ್ಷದ ಸೃಷ್ಟಿ ಮಾಡಿದ್ದರಿಂದ ದೇವರಿಗೆ ಪುಷ್ಪಹಾಸ ಅಂತ ಕರೆದರು ಪುಷ್ಪಹಾಸಃ. ಸೌಮ್ಯ ಅಂತ ಉತ್ತರ ದಿಕ್ಕಿನಲ್ಲಿ ಸೌಮ್ಯಗಿರಿ ಮಾಡಿದ್ದಾನೆ ಅದು ಹೇಗಿದೆ ಅಂದರೆ ಭಯಂಕರ ಪ್ರಕಾಶ ಅದು ಸೂರ್ಯನಷ್ಟು ಎತ್ತರದಲ್ಲಿದೆ ಲಕ್ಷ ಯೋಜನೆಯ ಎತ್ತರದ ಪರ್ವತ ಅದು. ಹೀಗಾಗಿ ಅಂತಹ ಪರ್ವತ ಆ ಪರ್ವತದ ಆಚೆಗೆ ಇದ್ದವರಿಗೆ ಸೂರ್ಯನ ಪ್ರಕಾಶನೇ ಇರುವುದಿಲ್ಲ ಆದರೆ ಈ ಪರ್ವತದ ಪ್ರಕಾಶದಿಂದಲೇ ಅವರ ಕೆಲಸ ಆಗುತ್ತದೆ ಅಷ್ಟೇ ಅಲ್ಲ ಸೂರ್ಯ ಉದಯ ಆದಾಗ ಪ್ರಖರನಾದ ಸೂರ್ಯ ಇರುವಾಗ ಚಂದ್ರ ಕಾಣಿಸುವುದಿಲ್ಲ ಪಕ್ಕದಲ್ಲಿ ಇದ್ದರೂ ಹಾಗೆ ಈ ಸೌಮ್ಯಗಿರಿಯ ಪ್ರಕಾಶದೊಳಗೆ ಸೂರ್ಯ ಕಾಣಿಸುವದಿಲ್ಲಂತೆ ಅಂತಹ ಪ್ರಕಾಶ. ಇದೆಲ್ಲ ವರಾಹ ದೇವರ ಅದ್ಭುತವಾದ ಸೃಷ್ಟಿ. **'ಓಂ ಭುಃ ಭುವಃ ಪತಯೇ'** ಸುಮ್ಮನೆ ವರಾಹ ದೇವರು ಅಲ್ಲಿ ಭೂದೇವಿ ಅಂತ ಯಾವುದೋ ಹುಡುಗಿ ಕಾಣಿಸಿತು ಮದುವೆ ಮಾಡಿಕೊಂಡರು ಭೂಪತಿ ಅಂತ ಹಾಗೆ ತಿಳಿದುಕೊಳ್ಳಬೇಡಿರಿ ಇಡೀ ಭೂಮಿಗೆ ಪತಿ ಭುವರ್ಲೋಕಕ್ಕೆ ಪತಿ, ಸ್ವರ್ಲೋಕಕ್ಕೆ ಪತಿ ಅಂತಹ ಅದ್ಭುತವಾದಂತಹ ಸ್ವಾಮಿ ಪರಮಾತ್ಮ. ಕೆಲವರೆಲ್ಲಾ ಏನು ಬರೀ ಭೂಪತಿ ಭುವರ್ಲೋಕಕ್ಕೆ ಏನು ಸಂಬಂಧ ಸೌಮ್ಯಗಿರಿ ನೋಡಿ ಇದು ಅಂತರಿಕ್ಷ ಲೋಕದವರೆಗೆ ಒಂದು ಲಕ್ಷ ಯೋಜನ ಅಂದರೆ ಅಂತರಿಕ್ಷ ಲೋಕ ಬಂತು ಅಲ್ಲಿ, ಅಲ್ಲಿಯವರೆಗೆ ಈ ಸೌಮ್ಯಗಿರಿಯನ್ನು ಸೃಷ್ಟಿ ಮಾಡಿದ್ದಾನೆ ಪರಮಾತ್ಮ **'ಓಂ ಭುಃ ಭುವಃ ಪತಯೇ'.** ನೋಡಿ, ಭೂಪತಿ ಅಂತೂ ವರಾಹ ದೇವರು ಭೂಮಿಯನ್ನು ಉದ್ಧಾರ ಮಾಡಿದವ ಗೊತ್ತು ಚಾಂದೋಗ್ಯೋಪನಿಷತ್ತಿನಲ್ಲಿ ಹೇಳುತ್ತಾರೆ ಆಕಾಶದಲ್ಲಿ ಹಾರಾಡುವ ಪಕ್ಷಿಗಳಿಗೆಲ್ಲ ವರಾಹ ದೇವರೇ ಆಶ್ರಯ ಅಂತ ಹಾಗಾದರೆ ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳಿಗೆ ಆಶ್ರಯ ಅಂದರೆ ಭುವರ್ಲೋಕಕ್ಕೂ ಪತಿ. ಅಷ್ಟು ಮಾತ್ರ ಅಲ್ಲ ಋಗ್ವೇದ ಸಂಹಿತೆಗೆ ಒಟ್ಟಾರೆ ವೇದಗಳ ಸಂಹಿತೆಗೆ ನಿಯಾಮಕನಾದವನು ವರಾಹ ಹಾಗಾದರೆ ಆ ಸಂಹಿತೆಗಳ ಮೂಲಕ ಯಜ್ಞ ಯಾಗಾದಿಗಳನ್ನು ಮಾಡಿದರೆ ಸ್ವರ್ಗ ಸಿಗುವಂತೆ ಮಾಡುವವನು ವರಾಹವೇ ಆದದ್ದರಿಂದ ಸ್ವಪತಿಯೂ ಆದದ್ದರಿಂದ **'ಓಂ ಭುಃ ಭುವಃ ಪತಯೇ'** ಅಂತ ಕರೆಯುತ್ತಾರೆ ಅದು ಎಷ್ಟು ಅನ್ವರ್ಥಕವಾದದ್ದು ಅಂತ ಈ ಸಂದರ್ಭದಲ್ಲಿ ನಾವು ಚಿಂತನ ಮಾಡಬೇಕು, ಮಂಥನ ಮಾಡಬೇಕು. ಅದಕ್ಕಾಗಿಯೇ ಮಂದರ ಪರ್ವತವನ್ನು ಸೃಷ್ಟಿ ಮಾಡಿದ್ದಾನೆ ಅಂತ ಬಂತು ನೋಡಿ ಮಂದರ ಪರ್ವತವನ್ನು ಪರಮಾತ್ಮ ಸೃಷ್ಟಿ ಮಾಡಿದ್ದಾನೆ, ಗಂಧಮಾದನ ಪರ್ವತವನ್ನು ಸೃಷ್ಟಿ ಮಾಡಿದ್ದಾನೆ, ಜಂಬೂ ವೃಕ್ಷವನ್ನು ಸೃಷ್ಟಿ ಮಾಡಿದ್ದಾನೆ, ಹಿಮಾಲಯವನ್ನ ಮಧುಧಾರಾ ಸೃಷ್ಟಿ ಮಾಡಿದ್ದಾನೆ ಹೀಗೇ ಎಷ್ಟು ಪರ್ವತಗಳೋ, ಎಷ್ಟು ನದಿಗಳೋ ಲೆಕ್ಕ ಇಲ್ಲ ಅಂತಹ ಇಡೀ ಜಗತ್ತಿನಲ್ಲಿ ಸರ್ವೋತ್ತಮನಾದ ಅಭಿಯಂತ ಅಂದರೆ ವರಾಹ ದೇವರು. ಅನೇಕ ಜನ ಇಂಜಿನೀಯರುಗಳು ನೀವೆಲ್ಲ ಪ್ರವಚನ ಕೇಳುತ್ತಾ ಇರಬಹುದು ಅಥವಾ ನಿಮ್ಮ ತಂದೆ, ನಿಮ್ಮ ಗಂಡ, ನಿಮ್ಮ ಅಣ್ಣ ತಮ್ಮ ಇಂಜಿನೀಯರುಗಳು ಇರಬಹುದು ಅವರಿಗೆ ಹೇಳಿ ವರಾಹ ದೇವರ ಸ್ಮರಣೆ ಮಾಡಿ ಅಂತ ಹೇಳಿ ನಿತ್ಯ ಮತ್ತೆ ನಾವೇ ಬಹಳ ದೊಡ್ಡ ಇಂಜಿನೀಯರು ಅಂತ ಭಾರೀ ಸೊಕ್ಕಿನಿಂದ ತಿರುಗಾಡುವುದು ಬೇಡ, ನಮ್ಮೆಲ್ಲರ ಅಂತರ್ಯಾಮಿಯಾಗಿ ವರಾಹ ದೇವರು ಮುಖ್ಯವಾದ ಇಂಜಿನೀಯರು.

ಆಮೇಲೆ ಪರಮಾತ್ಮ ತನ್ನ ಮುಖದಿಂದ ಬ್ರಹ್ಮ ದೇವರ ಸೃಷ್ಟಿಯನ್ನು ಮಾಡಿದ್ದಾನೆ ಆ ಬ್ರಹ್ಮ ದೇವರಿಂದ ಮತ್ತೆ ಜಗತ್ತಿನ ಸೃಷ್ಟಿಯನ್ನು ಮಾಡಿಸುತ್ತಾ ಇದ್ದಾನೆ. ಬ್ರಹ್ಮ ದೇವರು ಪರಮಾತ್ಮನಿಂದ ಮೊದಲು ಓಂ ಓಂಕಾರವನ್ನು ಪಡೆದಿದ್ದಾರೆ ಓಂಕಾರದ ಅಭಿವ್ಯಕ್ತಿ ಪ್ರಣವ. ಆಮೇಲೆ **'ವಷಟ್ ಕಾರಃ'** [1] ವಷಟ, ವಷಟ ಅಂದರೆ ಪರಮಾತ್ಮ

1. 36.9 ಭವಿಷ್ಯಪರ್ವ

'ಷಟ್' ಅಂದರೆ ಷಡ್ಗುಣಗಳು **'ವ'** ಯಾರಲ್ಲಿ ವರ್ತಮಾನವಾಗಿವೆ ಅವನು **'ವರ್ತನ್ತೇ ಷಡ್ಗುಣಾಃ ಅಸ್ಮಿನ್'** ಆದ್ದರಿಂದ ವಷಟ್ ಅಂತಹ ವಷಟ್ ಕಾರದ ಪ್ರಾಧುರ್ಭುವ ಆಗಿದೆ **'ಓಂ ಭೂಃ ಓಂ ಭುವಃ ಓಂ ಸುವಃ'** ಎಂಬ ವ್ಯಾಹೃತಿಗಳು, ಆಮೇಲೆ ಗಾಯತ್ರಿ, ಪುರುಷಸೂಕ್ತ, ಮೂರು ವೇದಗಳು ಈ ರೀತಿ ಆ ಸಕಲ ವೇದಗಳ ಉಪದೇಶವನ್ನು ಪರಮಾತ್ಮ ಮಾಡಿದ್ದಾನೆ ಬ್ರಹ್ಮ ದೇವರಿಗೆ.

ತೇನೇ ಬ್ರಹ್ಮ ಹೃದಾ ಯ ಆದಿಕವಯೇ ಮುಹ್ಯಂತಿ ಯಂ ಸೂರಯಃ ॥ (01.1.1 ಭಾಗವತ)

ಅತ್ಯಂತ ಪ್ರೀತಿಯಿಂದ ತಾನೇ ಪರಮಾತ್ಮ ಎಲ್ಲವನ್ನೂ **'ತೇನೇ'** ಆ ಬ್ರಹ್ಮ ದೇವರಿಗೆ ಒತ್ತಾಯ ಮಾಡಿ ಅಲ್ಲ, ಹಠ ಮಾಡಿ ಅಲ್ಲ **'ಹೃದಾತಾನೇತೇನೇ'** ಅಂತಹ ಪ್ರೀತಿಯಿಂದ ವೇದಗಳ ಉಪದೇಶವನ್ನು ಪರಮಾತ್ಮ ಬ್ರಹ್ಮ ದೇವರಿಗೆ ಮಾಡಿದ್ದಾನೆ. ಸನ ಸನಕ ಸನಾತನ ಸನಂದನ ಸನತ್ಕುಮಾರ ಇನ್ನೊಬ್ಬ ಸನಾತನ ಒಟ್ಟು ಆರು ಜನ ಮಾನಸವಾದ ಋಷಿಗಳನ್ನು ಬ್ರಹ್ಮ ದೇವರು ಸೃಷ್ಟಿ ಮಾಡಿದ್ದಾರೆ. ಆಮೇಲೆ ಮರೀಚಿ, ಅತ್ರಿ, ಪುಲಸ್ತ್ಯ, ಪುಲಹ, ಕ್ರತು, ಭೃಗು, ಅಂಗಿರಸ, ಸ್ವಾಯಂಭುವ ಮನು, ದಕ್ಷಪ್ರಜಾಪತಿಯನ್ನು ಬಲ ಅಂಗುಷ್ಠದಿಂದ, ಎಡ ಅಂಗುಷ್ಠದಿಂದ ಅವನ ಪತ್ನಿಯನ್ನ ಪರಮಾತ್ಮ ಸೃಷ್ಟಿ ಮಾಡಿದ್ದಾನೆ ಹೀಗೆ ದಕ್ಷಪ್ರಜಾಪತಿ ಅದರ ಕಥೆ ಹಿಂದೆ ಬಂದಿದೆ. ದಕ್ಷಪ್ರಜಾಪತಿಯ ಕನ್ಯೆಯರು ಕಶ್ಯಪಾದಿಗಳಿಗೆ ಕೊಟ್ಟು ಅವರಿಂದ ಅನೇಕ ಸೃಷ್ಟಿಯನ್ನು ಮಾಡಿಸಿದ್ದಾನೆ ಈ ರೀತಿ ಸೃಷ್ಟಿಯ ಅಭಿವೃದ್ಧಿಯನ್ನು ಮಾಡಿಸಿದ್ದಾರೆ ಬ್ರಹ್ಮ ದೇವರು ಅನ್ನುವ ಮಾತನ್ನು ಇಲ್ಲಿ ತಿಳಿಸಿಕೊಡುತ್ತಾರೆ. ಸಪ್ತಋಷಿಗಳು ದಕ್ಷಪ್ರಜಾಪತಿ ಕಶ್ಯಪ ಪ್ರಜಾಪತಿಗಳಿಗೆ ತನ್ನ ಹೆಣ್ಣು ಮಕ್ಕಳನ್ನು ಕೊಟ್ಟು ಮದುವೆ ಮಾಡುತ್ತಾನೆ ಅಂತ ಎಲ್ಲಾ ಬರುತ್ತದೆ. ದಕ್ಷಪ್ರಜಾಪತಿಯಿಂದ ಅದಿತಿ ಮೊದಲಾದವರನ್ನು ಪಡೆದು ಎಲ್ಲ ದೇವ, ದಾನವ, ಯಕ್ಷ, ಕಿನ್ನರರು, ಸಾಧ್ಯರರು, ನಾಗಗಳು ಎಲ್ಲ ತರಹದ ಜಾತಿಗಳಿಗೆ ಪ್ರವರ್ತಕರಾಗಿ ಮಹಾನುಭಾವರು ಕಶ್ಯಪ ಋಷಿಗಳು ಈ ಸಂತತಿಯನ್ನ ಮುಂದೆವರಿಸಿದಂಥವರು. ಅತ್ರಿ ಋಷಿಗಳು ತಪಶ್ಚರ್ಯವನ್ನು ಮಾಡಿ ಸಾಕ್ಷಾತ್ ಯೋಗ ಪ್ರವರ್ತಕನಾದ ದತ್ತ, ದುರ್ವಾಸರು ರುದ್ರಾವತಾರರು ಬ್ರಹ್ಮ ದೇವರ ಆವೇಶದಿಂದ ಕೂಡಿದ ಸೋಮನನ್ನ ಪಡೆದ ಮಹಾನುಭಾವರು ಅತ್ರಿ ಋಷಿಗಳು. ಭರದ್ವಾಜ ಋಷಿಗಳು ಬೃಹಸ್ಪತ್ಯಾಚಾರ್ಯರಿಂದ ಉಚಥ್ಯರಿಂದ ಇಬ್ಬರಿಂದ ಹುಟ್ಟಿದ್ದರಿಂದ ದ್ವಾಜ ಅಂತ ಭರದ್ವಾಜರು ಅಂತಹ ಮಹಾನುಭಾವರು ಭರದ್ವಾಜನಾಮಕನಾದ ಪರಮಾತ್ಮನ ವಿಶೇಷ ಸನ್ನಿಧಾನಕ್ಕೆ ಪಾತ್ರರಾದವರು. ಐತರೇಯ ಉಪನಿಷತ್ತಿನಲ್ಲಿ **'ಈಶೌ ಏವ ಬಿಭ್ರತ್ ವಾಜಾನ್'** ಎಲ್ಲರಿಗೆ ಅನ್ನವನ್ನ ಕೊಟ್ಟು ಪೋಷಣೆ ಮಾಡುವ ಪರಮಾತ್ಮನಿಗ ಭರದ್ವಾಜ ಅನ್ನುತ್ತಾರೆ ಅಂತಹ ಪರಮಾತ್ಮನ ಅಧಿಷ್ಠಾನಭೂತರಾದಂತಹ ಭರದ್ವಾಜರು.

ವಿಶ್ವಾಮಿತ್ರ ಋಷಿಗಳು ತಮ್ಮ ಅದ್ಭುತವಾದ ತಪಶ್ಚರ್ಯದಿಂದ ಪ್ರತಿ ಸ್ವರ್ಗವನ್ನೇ ನಿರ್ಮಾಣ ಮಾಡಿದವರು ನಮ್ಮಲ್ಲರಿಗೆ ಗಾಯತ್ರಿ ಮಂತ್ರದ ದರ್ಶನವನ್ನು ಮಾಡಿ ಕೊಟ್ಟು ಜಪ ಮಾಡುವ ದೊಡ್ಡ ಸೌಭಾಗ್ಯವನ್ನು ಕೊಟ್ಟಂತಹ ಮಹಾನುಭಾವರು ವಿಶ್ವಾಮಿತ್ರರು. ಗೌತಮರು ಮಹಾನುಭಾವರು ಗೌತಮ ಋಷಿಗಳು ಉತ್ತಮವಾದಂತಹ ಆ ಗೋದಾವರಿ ನದಿಯನ್ನ ಕೊಟ್ಟವರೇ ಗೌತಮ ಋಷಿಗಳು ಅರ್ಥಾತ್ ತಾವು ಪ್ರಾರ್ಥನೆ ಮಾಡಿ ಗೋವನ್ನು ಬದುಕಿಸುವುದಕ್ಕೆ ಆ ಗೋದಾವರಿಯನ್ನ ಹರಿಸಿದಂತಹ ಮಹಾನುಭಾವರು ಗೌತಮ ಋಷಿಗಳು. ಜಮದಗ್ನಿ ಋಷಿಗಳು ಪರಶುರಾಮ ದೇವರ ಅವತಾರಕ್ಕೆ ನಿಮಿತ್ತರಾದಂತಹ ಮಹಾನುಭಾವರು ಜಮದಗ್ನಿ ಋಷಿಗಳು, ವಸಿಷ್ಠರು **'ದಿಗ್ಬಲಂ ಕ್ಷತ್ರಿಯ ಬಲಂ ಬ್ರಹ್ಮ ತೇಜೋ ಬಲಂ ಬಲಮ್'** ಅಂತ ತೋರಿಸಿಕೊಟ್ಟ ಮಹಾನುಭಾವರು. ಎಲ್ಲಾ ಕ್ಷಾತ್ರ ತೇಜಸ್ಸನ್ನು ಉಪಯೋಗಿಸಿ ವಸಿಷ್ಠ ಋಷಿಗಳ ಮೇಲೆ ಆಕ್ರಮಣ ಮಾಡುವುದಕ್ಕೆ ವಿಶ್ವಾಮಿತ್ರರು

ಬಂದರೂ ಕೂಡ ತಮ್ಮ ಪೂರ್ವಾಶ್ರಮದಲ್ಲಿ. ಆ ವಸಿಷ್ಠ ಋಷಿಗಳ ಕೇವಲ ಬ್ರಹ್ಮ ತೇಜಸ್ಸಿನಿಂದ ಸಂಪೂರ್ಣವಾದಂತಹ ಕ್ಷಾತ್ರ ತೇಜಸ್ಸನ್ನ ನಿರ್ಮಾಮ ಮಾಡಿ ಹಾಕಿದಂತಹ ಮಹಾನುಭಾವರು ವಸಿಷ್ಠ ಋಷಿಗಳು ಅಂತಹ ವಸಿಷ್ಠರ ಅತ್ಯಂತ ಪತಿವ್ರತಾ ಶಿರೋಮಣಿ ಆದಂತಹ ಸಾಧ್ವಿ ಶಿರೋಮಣಿ ಅರುಂಧತಿ. ಹೀಗೆ ಕಶ್ಯಪ ಅತ್ರಿ ಭರದ್ವಾಜ ಜಮದಗ್ನಿ ಗೌತಮ ವಿಶ್ವಾಮಿತ್ರ ವಸಿಷ್ಠ ಎಲ್ಲ ಮಹಾಋಷಿಗಳು, ಅರುಂಧತಿ ಅವರ ಸ್ಮರಣೆಯನ್ನು ಮಾಡಬೇಕು ಇಂತಹ ಎಲ್ಲ ಋಷಿಗಳು ಮುನಿಗಳು ಇವರೆಲ್ಲರ ಸೃಷ್ಟಿಯನ್ನು ಇಲ್ಲಿ ತಿಳಿಸುತ್ತಾ ಇದ್ದಾರೆ.

ಬ್ರಹ್ಮ ದೇವರು ಎಲ್ಲರಿಗೆ ಲೋಕಾಧಿಪತ್ಯವನ್ನು ಹಂಚಿ ಕೊಡುತ್ತಾರೆ ಅಂತ ಇಲ್ಲಿ ಬರುತ್ತದೆ. ಗಮನಿಸಿ ಮುಂದೆ ಇದೇ ಹರಿವಂಶದಲ್ಲಿ ಹೇಳುತ್ತಾರೆ ನೀನೇ ನಮಗೆಲ್ಲ ಈ ಲೋಕಾಧಿಪತ್ಯವನ್ನು ಹಂಚಿ ಕೊಟ್ಟಿದ್ದೀ ಅಂತ ದೇವತೆಗಳು ಬಂದು ಪರಮಾತ್ಮನಿಗೆ ಹೇಳುತ್ತಾರೆ. ಹಿಂದಿನ ಅಧ್ಯಾಯದಲ್ಲಿ ಹೇಳುತ್ತಾರೆ ಬ್ರಹ್ಮ ದೇವರು ಹಂಚಿ ಕೊಟ್ಟರು ಅಂತ ಹಾಗಾದರೆ ಮತ್ತೆ ಸ್ಪಷ್ಟ ಎಲ್ಲ ಕಾರ್ಯಗಳನ್ನ ಅಂತರ್ಯಾಮಿಯಾದ ಪರಮಾತ್ಮನೇ ಮಾಡಿಸುತ್ತಾನೆ ಅನ್ನುವುದನ್ನು ಹರಿವಂಶ ಸ್ಪಷ್ಟವಾಗಿ ಹೇಳುತ್ತದೆ ಬ್ರಹ್ಮ ದೇವರು ಎಲ್ಲರಿಗೆ ಕೊಟ್ಟಿದ್ದಾರೆ. ಪರಮಾತ್ಮ ಕಶ್ಯಪರಿಂದ ಅವತಾರ ಮಾಡಿದಾಗ ಕುಶಗಳಿಂದ ಬ್ರಾಹ್ಮಣರು ಅವನನ್ನ ಧಾರಣೆ ಮಾಡಿದ್ದಕ್ಕೆ ಕೌಶಿಕ ಅಂತ ಅವನಿಗೆ ಹೆಸರು ಬಂತು. ಸೋಮನಿಗೆ ಯಜ್ಞ, ತಪಸ್ಸು ಬ್ರಾಹ್ಮಣರು,ಓಷಧಿಗಳು ಇವುಗಳ ಮೇಲೆ ರಾಜ್ಯವನ್ನು ಕೊಟ್ಟಿದ್ದಾನೆ. ಎಲ್ಲ ಪ್ರಜಾಪತಿಗಳಿಗೆ ದಕ್ಷಪ್ರಜಾಪತಿಯನ್ನು ರಾಜನನ್ನಾಗಿ ಮಾಡಿದ್ದಾನೆ, ನೀರಿಗೆ ವರುಣ, ಪಿತೃಗಳಿಗೆ ಯಮ ದೇವರನ್ನ, ಗಂಧ ಹಾಗೂ ಎಲ್ಲ ಜೀವರಾಶಿಗಳು ಶಬ್ಧ ಆಕಾಶ, ಬಲ ಇವುಗಳಿಗೆ ವಾಯು ದೇವರನ್ನ ನಿಯಾಮಕರನ್ನಾಗಿ ಮಾಡಿದ್ದಾನೆ. ಎಲ್ಲ ಭೂತ ಪಿಶಾಚ ಮೃತ್ಯು ಗೋವುಗಳು ಉತ್ಪಾತ ಗ್ರಹಗಳು ರೋಗಗಳು ವ್ಯಾಧಿಗಳು ವ್ರತಗಳು ಇವುಗಳಿಗೆ ರುದ್ರ ದೇವರನ್ನ ನಿಯಾಮಕರನ್ನಾಗಿ ಮಾಡಿದ್ದಾನೆ. ನೋಡಿ ಮಹಾಮಾರಿ ಪರಿಹಾರಕ್ಕೆ ರುದ್ರ ದೇವರ ಅನುಗ್ರಹ ಬೇಕು ರೋಗ ಪತಿಗಳು ಅವರು ರೋಗವನ್ನು ನಿವಾರಣ ಮಾಡುವ ಶಕ್ತಿಯೂ ಅವರಲ್ಲಿದೆ ಅಂತಹ ರುದ್ರ ದೇವರನ್ನ ಅವುಗಳಿಗೆಲ್ಲ ಪತಿಯನ್ನಾಗಿ ಮಾಡಿದ್ದಾನೆ. ಯಕ್ಷ, ರಾಕ್ಷಸರು ಗುಹ್ಯಕರು ಸಂಪತ್ತು ರತ್ನಗಳಿಗೆ ಕುಬೇರನನ್ನ, ಸಕಲ ದೌಂಷ್ಟ್ರಗಳಿಗೂ ಶೇಷ ದೇವರನ್ನ, ಅದರೊಳಗಿನ ನಾಗ ಎಂಬ ಪ್ರಭೇದಕ್ಕೆ ವಾಸುಕಿಯನ್ನ, ಸರೀಸೃಪಗಳಿಗೆ ತಕ್ಷಕನನ್ನ ಪತಿಯನ್ನಾಗಿ ಮಾಡಿದ್ದಾನೆ. ಮೇಘಗಳು ಸಾಗರಗಳು ವೃಷ್ಟಿ ಇವುಗಳಿಗೆ ಪರ್ಜನ್ಯನನ್ನ ಗೀತಾಭಾಷ್ಯದಲ್ಲಿ ಶ್ರೀಮದಾಚಾರ್ಯರು ಹೇಳುತ್ತಾರೆ **'ಆದಿತ್ಯಾಜ್ಜಾಯತೇ ವೃಷ್ಟಿಃ'** ಆ ಪರ್ಜನ್ಯನಾಮಕ ಸೂರ್ಯನಿಂದಲೇ ವೃಷ್ಟಿಯಾಗುವುದು ಅಂತ ಆ ವೃಷ್ಟಿಗೆ ಪರ್ಜನ್ಯನನ್ನ ಅಧಿಪತಿಯನ್ನಾಗಿ ಮಾಡಿದ್ದಾರೆ ಬ್ರಹ್ಮ ದೇವರು.

ಗಂಧರ್ವರಿಗೆಲ್ಲ ಚಿತ್ರರಥನನ್ನ ಅಧಿಪತಿ ಮಾಡಿದ್ದಾರೆ ಬಹಳ ಕಡೆಗೆ ಬರುತ್ತಾನೆ ಈ ಚಿತ್ರರಥ ಗಂಧರ್ವಾಧಿಪತಿ, ಅರ್ಜುನನ ಜೊತೆಗೆ ಯುದ್ಧ ಆಡುತ್ತಾನೆ ಸೋಲುತ್ತಾನೆ, ಪಾಂಡವರಿಗೆ ಸಹಾಯ ಮಾಡಿ ದುರ್ಯೋಧನಾದಿಗಳನ್ನೆಲ್ಲ ಕಟ್ಟಿಕೊಂಡು ಹೋಗುತ್ತಾನೆ ಚಿತ್ರರಥ ಭಾರೀ ಪರಾಕ್ರಮಿ ದುರ್ಯೋಧನ ಅಂತಹ ದುರ್ಯೋಧನ ದುಶ್ಯಾಸನಾದಿಗಳನ್ನೆಲ್ಲ ಬ್ರಹ್ಮ ದೇವರು ಇಂದ್ರ ದೇವರು ಕೊಟ್ಟ ಬಲದಿಂದ ಕಟ್ಟಿಕೊಂಡು ಹೋದ ಮಹಾನುಭಾವ ಈ ಚಿತ್ರರಥ. ನಾರಾಯಣವರ್ಮದ ಪ್ರಸಂಗದಲ್ಲಿಯೂ ಬರುತ್ತದೆ ಈ ಚಿತ್ರರಥ ಅಂತಹ ಗಂಧರ್ವಾಧಿಪತಿಯನ್ನಾಗಿ ಮಾಡಿದ್ದಾರೆ ಚಿತ್ರರಥನನ್ನ. ಆ ಅಪ್ಸರಾ ಸ್ತ್ರೀಯರಿಗೆಲ್ಲಾ ಕಾಮನನ್ನು ಅಧಿಪತಿಯನ್ನಾಗಿ ಮಾಡಿದ್ದಾರೆ, ಎಲ್ಲಾ ವಾಹನಗಳಿಗೆ ನಾಲ್ಕು ಕಾಲಿನ ಎಲ್ಲಾ ಪ್ರಾಣಿಗಳಿಗೆ ನಂದಿಯನ್ನು ಅಧಿಪತಿಯಾಗಿ ಮಾಡಿದ್ದಾರೆ ಎಲ್ಲಾ ವಾಹನಗಳು ಅಂದರೆ ಗರುಡನನ್ನು ಬಿಟ್ಟು ಮತ್ತೆ ಅದು ಮುಂದೆ ಬೇರೆ ಬರುತ್ತದೆ ಗರುಡನಿಗೆ ಇವನು ನಿಯಾಮಕನಲ್ಲ, ಇನ್ನುಳಿದ ನಾಲ್ಕು ಕಾಲಿನ ಪ್ರಾಣಿಗಳಿಗೂ ಹಾಗೂ ಬೇರೆ ವಾಹನಗಳಿಗೂ ನಿಯಾಮಕನಾಗಿದ್ದಾನೆ ನಂದಿ. ದೈತ್ಯರಿಗೆ ಹಿರಣ್ಯಾಕ್ಷ,

ಹಿರಣ್ಯಕಶಿಪು ಯುವರಾಜರಾಗಿದ್ದಾನೆ, ಕಾಲಕೇಯರಿಗೆಲ್ಲ ಮಹಾಕಾಲ, ದನಾಯುಷಾ ಅಂತ ತ್ವಷ್ಟುವಿನ ಹೆಂಡತಿ ಆ ತ್ವಷ್ಟು ಪುತ್ರರಿಗೆಲ್ಲ ವೃತ್ರ ಇವನು ನಿಯಾಮಕ, ಸಿಂಹಿಕಾ ಪುತ್ರರಿಗೆಲ್ಲಾ ರಾಹು, ಉತ್ಪಾತಗಳಿಗೆ ಅಶುಭಗಳಿಗೆ ಎಲ್ಲದಕ್ಕೂ ಆ ರಾಹುವನ್ನು ನಿಯಾಮಕರನ್ನಾಗಿ ಮಾಡಿದ್ದಾರೆ, ಎಲ್ಲಾ ಕಾಲಗಳಿಗೆ ಸಂವತ್ಸರವನ್ನು ನಿಯಮಕರನ್ನಾಗಿ ಮಾಡಿದ್ದಾರೆ, ಎಲ್ಲ ಪಕ್ಷಿಗಳಿಗೆ ಕಣ್ಣಿರುವ ಎಲ್ಲ ವಸ್ತುಗಳಿಗೂ ಗರುಡನನ್ನು ನಿಯಾಮಕರನ್ನಾಗಿ ಮಾಡಿದ್ದಾರೆ ಆದಕ್ಕೆ ದೂರದಲ್ಲಿ ಇದ್ದದ್ದನ್ನು ನೋಡುತ್ತವೆ ಹದ್ದುಗಳು ಹದ್ದಿನ ಕಣ್ಣು ಅಂತ ಅನ್ನುತ್ತಾರೆ. ಭಾರೀ ದೂರದಲ್ಲಿ ಇದ್ದದ್ದನ್ನು ಚಕ್ಷುಷಾಂ ಅನ್ನುತ್ತಾರೆ ಆ ಅದ್ಭುತವಾದ ಕಣ್ಣಿನ ಸಾಮರ್ಥ್ಯ ಇರುವಂತಹ ವಸ್ತುಗಳಿಗೆಲ್ಲ ಗರುಡ ನಿಯಾಮಕನಾಗಿದ್ದಾನೆ. ಯೋಗ ಮತ್ತು ಯೋಗಿಗಳಿಗೆ ಸಾಧ್ಯರಿಗೆ ಅರುಣ ಅವನು ವಿನೀತಾ ಪುತ್ರ ಅವನು ನಿಯಾಮಕನಾಗಿದ್ದಾನೆ. ಆಮೇಲೆ ಕಶ್ಯಪರ ಮಗ ವಿರಥ ಇವನು ಪೂರ್ವ ದಿಕ್ಕಿಗೆ, ಯಮ ಇವನು ದಕ್ಷಿಣ ದಿಕ್ಕಿಗೆ, ವರುಣ ಇವನು ಪಶ್ಚಿಮ ದಿಕ್ಕಿಗೆ, ಕುಬೇರ ಉತ್ತರ ದಿಕ್ಕಿಗೆ ನಿಯಾಮಕರಾಗಿದ್ದಾರೆ. ಈ ರೀತಿ ಅವರೆಲ್ಲರಿಗೆ ಬೇರೆ ಬೇರೆ ಲೋಕಗಳನ್ನು ಹಂಚಿಕೊಟ್ಟು ವಿಭಾಗ ಮಾಡಿಕೊಟ್ಟಿದ್ದಾರೆ. ಯಾರು ಪುಣ್ಯವಂತರೋ ಅವರು ಇಂತಹ ಉತ್ತಮವಾದ ಲೋಕಗಳನ್ನು ಹೊಂದಬಹುದು, ಪಾಪಿಷ್ಟರಿಗೆ ಈ ಲೋಕಗಳನ್ನ ಹೊಂದುವುದಕ್ಕೆ ಆಗುವುದಿಲ್ಲ ಅಂತ ಈ ರೀತಿಯಾಗಿ ಎಲ್ಲರಿಗೆ ವಿಭಾಗ ಮಾಡಿ ಕೊಟ್ಟು ಬ್ರಹ್ಮ ದೇವರು ತಮ್ಮ ಸ್ಥಾನಕ್ಕೆ ತಾವು ಹೊರಟು ಹೋಗಿದ್ದಾರೆ.

ವರಾಹ ದೇವರೇ ಎಲ್ಲ ಪರ್ವತಗಳಿಗೆ ರೆಕ್ಕೆಗಳನ್ನು ಕೊಟ್ಟು, ಎಲ್ಲಿ ಬೇಕಲ್ಲಿ ಹಾರಾಡುವಂತೆ ಆ ಪರ್ವತಗಳಿಗೆ ಶಕ್ತಿಯನ್ನು ಕೊಟ್ಟಿದ್ದರು. ಆ ಪರ್ವತಗಳು ಹಾರಾಡುತ್ತಾ ಹಾರಾಡುತ್ತಾ ಹೋದವು ಒಂದು ಕಡೆಗೆ. ಹಿರಣ್ಯಾಕ್ಷ ಇರುವಂತಹ ಒಂದು ಪ್ರದೇಶ ಅಲ್ಲಿ ಒಂದು ದೊಡ್ಡ ಸರೋವರ ಸರೋವರ ಅಂದರೆ ಎಂತಹ ಸರೋವರ ಅದು ಎಷ್ಟೋ ಕಿಲೋಮೀಟರುಗಟ್ಟಲೇ ಇರಬಹುದು ಸರೋವರ ಎಷ್ಟೋ ಯೋಜನ ವಿಸ್ತೀರ್ಣವಾದದ್ದು ಯಾಕೆ ಅಂದರೆ ಪರ್ವತಗಳು ಅಲ್ಲಿ ಹೋಗಿ ಅಲ್ಲಿ ಸ್ನಾನ ಮಾಡುತ್ತಾ ಇವೆ ಅಂತಹ ಸರೋವರ. ರೆಕ್ಕೆಗಳಿತ್ತು ಹಾರಾಡುತ್ತ ಇತ್ತು, ವಾಗೇಂದ್ರಿಯ ಇತ್ತು ಮಾತನಾಡುತ್ತ ಇವೆ ಏನು ಮಾತನಾಡುತ್ತ ಇವೆ ದೇವತೆಗಳ ವೈಭವ, ದೇವತೆಗಳ ರಾಜ್ಯ ಇವುಗಳನ್ನು ವರ್ಣನೆ ಮಾಡುತ್ತಾ ಇವೆ ಅಲ್ಲಿ ಹಿರಣ್ಯಾಕ್ಷನ ರಾಜ್ಯ ಅದು ಅವನಿಗೆ ಆ ಸುದ್ದಿ ಕಿವಿಗೆ ಕೇಳಿಸಿತು. ಅಯ್ಯೋ ಇಂತಹ ವೈಭವ, ಇಂತಹ ಐಶ್ವರ್ಯ ಇದೆಯೇ ಈ ಪರ್ವತಗಳೆಲ್ಲ ಬಂದು ಸುದ್ದಿ ಹೇಳುತ್ತಾ ಇವೆ ಅಂತ ಹೇಳಿ ಆ ಪರ್ವತಗಳ ಮುಖದಿಂದ ಪರ್ವತಗಳು ಅಂದರೆ ಪರ್ವತಾಭಿಮಾನಿ ದೇವತೆಗಳು, ಪರ್ವತಾಭಿಮಾನಿ ದೇವತೆಗಳ ಮುಖದಿಂದ ಆ ವಾರ್ತೆಯನ್ನು ಕೇಳಿದ ಹಿರಣ್ಯಾಕ್ಷ ಮಾಡಿದ ಕೆಲಸ ಏನು ಎರಡನೇ ಕ್ಷಣನೇ ನಗಾರಿ ಬಾರಿಸಿದ ನಡೆಯಿರಿ ದೇವತೆಗಳ ಜೊತೆಗೆ ಯುದ್ಧಕ್ಕೆ ಹೋಗೋಣ ಅಂತ. ಆ ದೇವತೆಗಳ ಐಶ್ವರ್ಯವನ್ನು ನಮಗೆ ಸಹನೆ ಮಾಡಲಿಕ್ಕೆ ಆಗುವುದಿಲ್ಲ ಈ ಪರ್ವತಗಳೆಲ್ಲ ಸುದ್ದಿ ಹೇಳುತ್ತವೆ ಹೌದು ಇಲ್ಲರಪ್ಪಾ ಪರ್ವತರಾಯರೇ ಅಂತ ಕೇಳಿದ, ಹೌದು ಹೌದು ಭಾರೀ ಐಶ್ವರ್ಯ ನಡೆಯಿರಿ ಹಾಗಾದರೆ ಯುದ್ಧಕ್ಕೆ ಅಂತ ಘನಘೋರವಾದಂತಹ ಯುದ್ಧವಾಗಿದೆ. ಆ ಹಿರಣ್ಯಾಕ್ಷನ ಎದುರಿಗೆ ನಿಲ್ಲುವುದಕ್ಕೆ ಆಗಿಲ್ಲ ಇಂದ್ರ ದೇವರಿಗೆ ಮೊದಲು ಯುದ್ಧ ಮಾಡಿದ್ದಾರೆ ಸ್ವಲ್ಪ ಹೊತ್ತು ಆದರೆ ಹಿರಣ್ಯಾಕ್ಷನ ಪರಾಕ್ರಮ ಹೆಚ್ಚಾಯಿತು ಬ್ರಹ್ಮ ದೇವರ ವರ.

ನ ಶೇಕುಶ್ಚಲಿತುಂ ದೇವಾ ಹಿರಣ್ಯಾಕ್ಷಾರ್ದಿತಾ ಯುಧಿ ॥ (38.31 ಭವಿಷ್ಯಪರ್ವ)

ಹೀಗಾಗಿ ಎಷ್ಟೇ ಪ್ರಯತ್ನ ಮಾಡಿದರೂ ಆಗಲಿಲ್ಲ ಇಂದ್ರಾದಿ ದೇವತೆಗಳಿಗೆ ಆಗ ಪರಮಾತ್ಮ ಸ್ವಯಂ ತಾನು ಅಲ್ಲಿ ಬಂದಿದ್ದಾನೆ. ತಾನೇ ನಿರ್ಮಾಣ ಮಾಡಿದ ವರಾಹ ಪರ್ವತದಲ್ಲಿ ಸನ್ನಿಹಿತನಾದ ವರಾಹ ರೂಪಿಯಾಗಿ ಇರತಕ್ಕಂತಹ ಪರಮಾತ್ಮ ಇಂದ್ರ ದೇವರ ಈ ಅವಸ್ಥೆಯನ್ನು ನೋಡಿ ತಾನೇ ಯುದ್ಧದಲ್ಲಿ ಪ್ರಾದುರ್ಭೂತನಾಗಿ ಆ

ಹಿರಣ್ಯಾಕ್ಷನ ಜೊತೆಗೆ ಯುದ್ಧವನ್ನು ಮಾಡಿದ್ದಾನೆ. ಯುದ್ಧವನ್ನು ಮಾಡಿ ಆ ಸುದರ್ಶನ ಚಕ್ರದಿಂದ ಹಿರಣ್ಯಾಕ್ಷನನ್ನು ಸಂಹಾರ ಮಾಡಿದ್ದಾನೆ ಎಲ್ಲರೂ ಕೂಡ ಪುಷ್ಪವೃಷ್ಟಿಯನ್ನು ಮಾಡಿದ್ದಾರೆ ಅಂತನ್ನುವ ವಿಷಯವನ್ನು ಇಲ್ಲಿ ತಿಳಿಸುತ್ತಾರೆ. ಇಲ್ಲಿ ಆ ಮಾತನ್ನು ನಾವು ಕಾಣುತ್ತೇವೆ

ಸಹಸ್ರಾರಂ ಚ ತಚ್ಚಕ್ರಂ ಚಕ್ರಪರ್ವತಸಂನಿಭಮ್ । (39.3 ಭವಿಷ್ಯಪರ್ವ)

ಮಹಾದೇವೋ ಮಹಾಬುದ್ಧಿರ್ಮಹಾಯೋಗೀ ಮಹೇಶ್ವರಃ ।
ಪಶ್ಯತೇ ಯೋಽಮರೈಃ ಸರ್ವೈರ್ಗುಹ್ಯೈರ್ನಾಮಭಿರವ್ಯಯ ॥ (39.4 ಭವಿಷ್ಯಪರ್ವ)

ಆ ಭಗವಂತನೇ ಸಕಲ ನಾಮಗಳಿಂದ ಪ್ರತಿಪಾದ್ಯನಾದವನು, ಎಲ್ಲ ದೇವತೆಗಳಿಗೆ ಸ್ಥಾನವನ್ನು ಕಲ್ಪಿಸಿದವನು ಈ ಪರಮಾತ್ಮನೇ ಅಂತ ಅಂದರೆ ಹಿಂದೆ ಬ್ರಹ್ಮ ದೇವರು ಕಲ್ಪಿಸಿಕೊಟ್ಟದ್ದು ವರಾಹ ದೇವರ ಪ್ರೇರಣೆಯಂತೆ ಅಂತರ್ಯಾಮಿಯಾದ ವರಾಹ ದೇವರೇ ಎಲ್ಲರಿಗೆ ಸ್ಥಾನವನ್ನು ಕಲ್ಪಿಸಿದ್ದು ಅಂತ. ಅವನು ಭಾರೀ ದೊಡ್ಡ ಶಕ್ತಿ ಆಯುಧವನ್ನು ಪ್ರಯೋಗ ಮಾಡಿದರೂ ಹುಂ ಅಂತ ದೇವರು ಹೂಂಕಾರ ಮಾಡುವ ಮಾತ್ರದಿಂದ ಅದನ್ನು ಕೆಳಗೆ ಬೀಳಿಸುತ್ತಾನೆ, ತನ್ನ ಸುದರ್ಶನ ಚಕ್ರದಿಂದ ಅವನನ್ನು ಸಂಹಾರ ಮಾಡಿ ದೇವತೆಗಳಿಗೆ ಪುನಃ ರಾಜ್ಯವನ್ನು ಪರಮಾತ್ಮ ಅನುಗ್ರಹ ಮಾಡಿಕೊಡುತ್ತಾನೆ ಅಂತನ್ನುವ ಮಾತನ್ನು ತಿಳಿಸುತ್ತಾರೆ.

ಆಮೇಲೆ ಇಂದ್ರ ದೇವರು ಪರ್ವತಗಳನ್ನೆಲ್ಲ ನೋಡಿದ ನಿಮ್ಮದೇ ಕಿತಾಪತಿ ಅಂದ ನೀವೇ ಹೋಗಿ ಅವರಿಗೆ ಈ ಸುದ್ದಿಯನ್ನು ಹೇಳಿದ್ದಕ್ಕೆ ಇಷ್ಟೆಲ್ಲಾ ಆಯಿತು ನಿಮಗೆ ಯಾರು ಅಲ್ಲಿ ಸ್ನಾನಕ್ಕೆ ಹೋಗು ಅಂತ ಹೇಳಿದ್ದರು, ಅವರಿಗೆ ಯಾರು ಈ ಸುದ್ದಿಯನ್ನು ಹೇಳಿ ಅಂತ ಹೇಳಿದ್ದರು ಇನ್ನೊಮ್ಮೆ ಇಂತಹ ಕೆಲಸ ಮಾಡತಕ್ಕದ್ದಲ್ಲ, ನೀವು ಹೇಳಿದ್ದನ್ನು ಕೇಳುತ್ತೀರೋ ಇಲ್ಲವೋ ವಿಶ್ವಾಸ ಇಲ್ಲ ಅಂತ ಹೇಳಿ ಎಲ್ಲ ರೆಕ್ಕೆಗಳನ್ನು ಕತ್ತರಿಸಿ ಬಿಟ್ಟ ವಜ್ರಾಯುಧದಿಂದ. ಒಂದು ಮೈನಾಕ ಪರ್ವತಕ್ಕೆ ಮಾತ್ರ ಕತ್ತರಿಸಲಿಲ್ಲ ವಾಯು ದೇವರು ಅದಕ್ಕೆ ರಕ್ಷಣೆಯನ್ನು ಕೊಟ್ಟಿದ್ದರು ಇನ್ನೆಲ್ಲ ಪರ್ವತಗಳ ರೆಕ್ಕೆಗಳನ್ನ ಕತ್ತರಿಸಿ ಹಾಕಿದ್ದಾನೆ ಇಂದ್ರ ದೇವರು ಇಂತಹ ಶ್ರೇಷ್ಠವಾದ ಆ ಪರಮಾತ್ಮನ ಅದ್ಭುತವಾಗಿರುವಂತಹ ಮಹಿಮೆ. ಪರಮಾತ್ಮ ಇಷ್ಟು ಉಪಕಾರ ಮಾಡಿದಿಯಲ್ಲ ನಾವೇನು ಮಾಡೋಣ ಅಂತ ಕೇಳುತ್ತಾರೆ ವರಾಹ ದೇವರಿಗೆ ಎಲ್ಲಾ ದೇವತೆಗಳು ನಾವೇನು ಸೇವೆ ಮಾಡಬೇಕು, ಏನು ಸೇವೆ ಮಾಡಬೇಕು ನಾನು ಏನು ಕೊಟ್ಟಿದ್ದೇನಲ್ಲ ಆ ಎಲ್ಲ ಲೋಕಗಳನ್ನ ಅಧಿಕಾರಗಳನ್ನ ಚೆನ್ನಾಗಿ ಪರಿಪಾಲನೆ ಮಾಡಿಕೊಂಡು ಹೋಗಿ ಮೊದಲನೆಯ ಮಾತು. ಎರಡನೆಯ ಮಾತು ಯಾರು ತಪಸ್ಸು ಮಾಡುತ್ತಾರೆ, ವೇದವಿಹಿತ ಕರ್ಮಗಳನ್ನು ಮಾಡುತ್ತಾರೆ, ಇನ್ನೊಬ್ಬರ ಮೇಲೆ ಮಾತ್ಸರ್ಯ ಅಸೂಯೆ ಇವುಗಳನ್ನು ಮಾಡುವುದಿಲ್ಲ ಅಂತಹ ಸತ್ಯವಂತರಿಗೆ ಧರ್ಮವಂತರಿಗೆ ಕಾಮ ಕ್ರೋಧಾದಿಗಳನ್ನ ಬಿಟ್ಟವರಿಗೆ ಸ್ವರ್ಗದಲ್ಲಿ ಪ್ರವೇಶ ಕೊಡಬೇಕು. ಯಾರು ಸುಳ್ಳು ಮಾತನಾಡುತ್ತಾರೆ ಶ್ರದ್ಧೆ ಇಲ್ಲ, ನಾಸ್ತಿಕರಾಗಿದ್ದಾರೆ, ಕಾಮ ಕ್ರೋಧಾದಿಗಳಿಗೆ ವಶರಾಗಿದ್ದಾರೆ, ವೇದಾದಿಗಳ ವಿರೋಧ ಮಾಡುತ್ತಾರೆ ಅಂಥವರಿಗೆಲ್ಲ ನರಕದಲ್ಲಿ ಹಾಕಬೇಕು ಅರ್ಥ ಆಯಿತಲ್ಲ ಎಲ್ಲರಿಗೆ, ಅರ್ಥ ಆಯಿತು ಸ್ವಾಮಿ ಇಷ್ಟೇ ನೀವು ಮಾಡಬೇಕಾದ ಕೆಲಸ ಸಜ್ಜನರಿಗೆ ಸದ್ಗತಿ, ದುರ್ಜನರಿಗೆ ದುರ್ಗತಿಯನ್ನು ಕೊಡಬೇಕು ನಾನು ಕೊಟ್ಟ ಲೋಕಗಳನ್ನು ಚೆನ್ನಾಗಿ ಪರಿಪಾಲನೆ ಮಾಡಿಕೊಂಡು ಹೋಗಬೇಕು ಅಂತ.

ಇಚ್ಛಾಮಃ ಪಾದಶುಶ್ರೂಷಾಂ ತವ ಕರ್ತುಂ ಸನಾತನ ॥ (40.4 ಭವಿಷ್ಯಪರ್ವ)

ನಿನ್ನ ಪಾದ ಸೇವೆ ಮಾಡಿಕೊಂಡು ನೀನು ಹೇಳಿದ ಆಜ್ಞೆಯನ್ನು ಪರಿಪಾಲನೆ ಮಾಡಿಕೊಂಡು ಇರುತ್ತೇವೆ ಅಂತ ದೇವತೆಗಳೆಲ್ಲ ತಿಳಿಸಿಕೊಟ್ಟಿದ್ದಾರೆ. ಈ ವರಾಹ ದೇವರ ಕಥೆಯನ್ನು ಮಾತ್ರ ಬಹಳ ಏಕಾಂತದಲ್ಲಿ ಹೇಳಬೇಕು ಮಡಿಯಿಂದ ಕೇಳಬೇಕು

ನಾಶುಚೇರ್ನ ಕೃತಘ್ನಾಯ ನನೃಶಂಸಾಯ ಕೀರ್ತಯೇತ್ ॥ (40.22 ಭವಿಷ್ಯಪರ್ವ)

ಶಿಷ್ಯರಿಗೆ ಹೇಳಬೇಕು, ಮಡಿಯಿಂದ ಕೇಳುವರಿಗೆ ಹೇಳಬೇಕು, ಕೃತಘ್ನರಿಗೆ ಹೇಳಬಾರದು, ಯಾರಿಗೆ ಜಯ ಬೇಕೋ ಅವರು ಇದನ್ನು ಕೇಳಬಹುದು. ಇದನ್ನು ಕೇಳಿದರೆ ನಿಧಾನವಾಗಿ ಒಂದು ನೂರು ವರ್ಷಗಳ ನಂತರ ಜಯವಾಗುತ್ತದೆ ಅಂತ ತಿಳಿಯಬೇಡಿ.

ಪಾವನಃ ಸರ್ವಸತ್ತ್ವಾನಾಂ ತತ್ಕಾಲವಿಜಯಪ್ರದಃ ॥ (40.25 ಭವಿಷ್ಯಪರ್ವ)

ಭಕ್ತಿಯಿಂದ ಯಾರು ವರಾಹ ದೇವರ ಕಥೆಯನ್ನು ಶ್ರವಣ ಮಾಡುತ್ತಾರೆ ಅವರಿಗೆ ತತ್ಕಾಲದಲ್ಲಿಯೇ ವಿಜಯವನ್ನು ಕೊಡತಕ್ಕಂಥ ಸ್ವಾಮಿ ವರಾಹ ದೇವರು ಪರಮಾತ್ಮ.

ಲೋಕಾಯನಾಯ ತ್ರಿದಶಾಯನಾಯ ಬ್ರಹ್ಮಾಯನಯಾತ್ಮಭವಾಯನಾಯ ।
ನಾರಯಣಾಯಾತ್ಮಹಿತಾಯನಾಯ ಮಹಾವರಾಹಾಯಾ ನಮಸ್ಕುರುಷ್ವ ॥ (40.28 ಭವಿಷ್ಯಪರ್ವ)

ಎಂಬುದಾಗಿ ವೈಶಂಪಾಯನರು ತಿಳಿಸಿಕೊಡುತ್ತಾ ಇದ್ದಾರೆ ವರಾಹ ದೇವರ ಮಹಾಮಹಿಮೆಯನ್ನು.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಭವಿಷ್ಯಪರ್ವ-40

* * *

ವೈಶಂಪಾಯನ ಉವಾಚ

ವರಾಹ ಏಷ ಕಥಿತೋ ನಾರಸಿಂಹಮತಃ ಶೃಣು ।

ಯತ್ರ ಭೂತ್ವಾ ಮೃಗೇನ್ದ್ರೇಣ ಹಿರಣ್ಯಕಶಿಪುರ್ಹತಃ ।। (41.1 ಭವಿಷ್ಯಪರ್ವ)

ಸಕಲ ಸಜ್ಜನರು ಮಾಡುವ ಧರ್ಮಕ್ಕೆ ಅಧಿಷ್ಠಾನ ಭೂತವಾದಂತಹ ಪೃಥ್ವಿಯನ್ನು ಜಗತ್ತಿಗೆ ಕರುಣಿಸಿ ಪರಮೋಪಕಾರ ಮಾಡಿದ ವರಾಹ ದೇವರ ದಿವ್ಯಮಂಗಲ ಚರಿತ್ರೆಯನ್ನು ವೈಶಂಪಾಯನರು ಜನಮೇಜಯನಿಗೆ ನಿರೂಪಣೆ ಮಾಡಿ ಆನಂತರದಲ್ಲಿ ನರಸಿಂಹ ದೇವರ ಅವತಾರವನ್ನು ವರ್ಣನೆ ಮಾಡುತ್ತೇನೆ ಅನ್ನುತ್ತಾರೆ. ಹಿಂದೆ ಹರಿವಂಶಪರ್ವದಲ್ಲಿಯೂ ನರಸಿಂಹ ದೇವರ ಅವತಾರದ ವರ್ಣನೆ ಬಂದಿದೆ ಆನಂತರ ವಿಷ್ಣುಪರ್ವ ಆನಂತರ ಭವಿಷ್ಯಪರ್ವ. ಈ ಭವಿಷ್ಯಪರ್ವದಲ್ಲಿ ಪುನಃ ನರಸಿಂಹ ದೇವರ ಅವತಾರದ ವರ್ಣನೆಯನ್ನು ಮಾಡುತ್ತ ಇದ್ದಾರೆ. ಒಂದು ಸೋಜಿಗದ ಸಂಗತಿ ಅಂದರೆ ಹರಿವಂಶಪರ್ವದಲ್ಲಿಯೂ ನರಸಿಂಹ ಅವತಾರದ ವರ್ಣನೆ 41ನೆಯ ಅಧ್ಯಾಯದಲ್ಲಿ ಬರುತ್ತದೆ, ಭವಿಷ್ಯಪರ್ವದಲ್ಲಿಯೂ ನರಸಿಂಹ ದೇವರ ಅವತಾರದ ವರ್ಣನೆ 41ನೆಯ ಅಧ್ಯಾಯದಲ್ಲಿಯೇ ಬರುತ್ತಾ ಇದೆ. 41 ಅನ್ನುವುದನ್ನು ತಿರುಗಿಸಿದರೆ 14 41 1 4 14 ನರಸಿಂಹ ದೇವರು ಅವತಾರ ಮಾಡಿದ್ದು ವೈಶಾಖ ಶುದ್ಧ ಚತುರ್ದಶೀ **'ವೈಶಾಖ ಶುಕ್ಲ ಭೂತೋತ್ಥಾಯ ನಮಃ'** ಅಂತ ನರಸಿಂಹ ಅಷ್ಟೋತ್ತರ ಶತನಾಮಾವಳಿಯಲ್ಲಿ ಬರುತ್ತದೆ. ಭೂತ ಅಂದರೆ ಚತುರ್ದಶೀ **'ವೈಶಾಖ ಶುಕ್ಲ ಭೂತೋತ್ಥಾಯ ನಮಃ'** 14ನೆಯ ಚತುರ್ದಶೀ ತಿಥಿಯಲ್ಲಿ ಅವತಾರ ಮಾಡಿದ ನರಸಿಂಹ ದೇವರ ಕಥೆ ಇದು 41ನೆಯ ಅಧ್ಯಾಯದಲ್ಲಿಯೇನೆ ಎರಡೂ ಪರ್ವಗಳಲ್ಲಿ ಬರುತ್ತಾ ಇರುವುದು ಒಂದು ವಿಶೇಷ. ಜೊತೆಗೆ 4 1 41 4 ಮತ್ಸ್ಯ, ಕೂರ್ಮ, ವರಾಹ, ನರಸಿಂಹ 4 ನೆಯ ಅವತಾರ ಆದದ್ದು 1 ಕೃತ ಯುಗದಲ್ಲಿ ಆದ್ದರಿಂದ ಇದೊಂದು ಸಂಖ್ಯಾಶಾಸ್ತ್ರದ ದೃಷ್ಟಿಯಲ್ಲಿ ಒಂದು ಯೋಚನೆಯನ್ನು ಚಿಂತನ ಮಾಡಬಹುದು. 14 ಲೋಕಗಳಿಗೆ ಒಡೆಯನಾದಂತಹ ನರಸಿಂಹ ಸ್ವಾಮಿ ಆದ್ದರಿಂದಲೇ 14 ರುಕ್ಕುಗಳ ಮನ್ಯುಸುಕ್ತ ಇದು ನರಸಿಂಹ ದೇವರನ್ನ ವರ್ಣನೆ ಮಾಡುತ್ತದೆ. 14 ಲೋಕಗಳಿಗೆ ಒಡೆಯ, 14 ನೆಯ ತಿಥಿಯಲ್ಲಿ ಚತುರ್ದಶೀಯಲ್ಲಿ ಅವತಾರ ಮಾಡಿದವ, 14 ರುಕ್ಕುಗಳ ಮನ್ಯುಸುಕ್ತ ಅವನನ್ನು ಕೊಂಡಾಡುವುದಕ್ಕೆ

ಇದ್ದಂತಹದ್ದನ್ನು ನಾವು ಇಲ್ಲಿ ಗಮನಿಸಬಹುದು, **'ತದಾವಷ್ಟಬ್ಧಪಾತಾಲಂ ಮೂರ್ಧವಿಷ್ಟಪ್ತ್ರಿವಿಷ್ಟಪಮ್'** ಎಂಬುದಾಗಿ ಆ ನರಸಿಂಹ ದೇವರನ್ನು ಹೇಳುತ್ತಾರೆ.

'ಭುಜಪ್ರವಿಷ್ಟಾಷ್ಟಧಿಶಂ ಮಹಾವಿಷ್ಣುಂ ನಮಾಮ್ಯಾಹಂ' ಅಹಿರ್ಬುಧ್ನ್ಯ ಸಂಹಿತೆಯಲ್ಲಿ ನರಸಿಂಹ ದೇವರ ವರ್ಣನೆ ಮಾಡುವಾಗ 14 ಲೋಕಗಳನ್ನು ವ್ಯಾಪಿಸಿದ ಸ್ವಾಮಿ ಆದದ್ದರಿಂದಲೇ ಅವನನ್ನು ಮಹಾವಿಷ್ಣು ಎಂಬುದಾಗಿ ಕರೆಯುತ್ತಾರೆ ಅಂತ ರುದ್ರ ದೇವರು ಅಹಿರ್ಬುಧ್ನ್ಯ ಸಂಹಿತೆಯಲ್ಲಿ ನರಸಿಂಹ ಮಂತ್ರಾರ್ಥವನ್ನು ನಿರೂಪಣೆ ಮಾಡಿದಾಗ ನಾವು ತಿಳಿದುಕೊಳ್ಳುತ್ತೇವೆ. ಅಂತಹ ನರಸಿಂಹ ದೇವರ ವರ್ಣನೆಯನ್ನು ಮಾಡುತ್ತಾ ಇದ್ದಾರೆ ವೈಶಂಪಾಯನರು. ನರಸಿಂಹ ದೇವರು ಹಿರಣ್ಯಕಶಿಪುವಿನ ಸಂಹಾರ ಮಾಡುವುದಕ್ಕೋಸ್ಕರ ಬರುತ್ತಾ ಇದ್ದಾರೆ ಹಿಂದೆ ನೀವು ತಿಳಿದಂತೆ, ಹಿಂದೆ ಬಂದಂತೆಯೇ ಕಥೆ ಇಲ್ಲಿ ಬಂದಿದೆ. ಕಲ್ಪಬೇಧೇನ ವ್ಯವಸ್ಥೆ ಪ್ರಹ್ಲಾದ ರಾಜರ ಪ್ರಾರ್ಥನೆಯಂತೆ ಸ್ತಂಭದಲ್ಲಿ ನರಸಿಂಹ ದೇವರು ಪ್ರಕಟವಾದದ್ದು ಭಾಗವತದಲ್ಲಿ ಹೇಳಿದ್ದು. ಇಲ್ಲಿ ನರಸಿಂಹ ದೇವರು ನರಸಿಂಹ ರೂಪವನ್ನ ತೆಗೆದುಕೊಂಡೇ ಸಭೆಯಲ್ಲಿ ಪ್ರವೇಶ ಮಾಡುತ್ತಾರೆ ಅಂತನ್ನುವ ವರ್ಣನೆ ಬರುತ್ತದೆ. ಅದಕ್ಕೆ ಕಾರಣ ಹಿರಣ್ಯಕಶಿಪು ತಪಶ್ಚರ್ಯವನ್ನು ಮಾಡಿದ್ದಾನೆ, ತಾನು ಅವಧ್ಯನಾಗಬೇಕು ಅನ್ನುವುದಕ್ಕೋಸ್ಕರ. ವರಾಹ ದೇವರು ಹಿರಣ್ಯಾಕ್ಷನನ್ನ ಸಂಹಾರ ಮಾಡಿದರು ಏನಾದರೂ ಮಾಡಿ ನಾನು ತಪಶ್ಚರ್ಯ ಮಾಡಿ ಎಲ್ಲ ದೇವತೆಗಳನ್ನು ಸೋಲಿಸಿ ಆ ವಿಷ್ಣುವನ್ನೂ ಸಂಹಾರ ಮಾಡಬೇಕು, ನಾನೇ ಸಕಲ ಲೋಕಾಧಿಪತಿ ಆಗಬೇಕು ಅನ್ನುವ ದುರಾಸೆ. ಅಂತಹ ಅಯೋಗ್ಯವಾದ ದುರಾಸೆಯನ್ನು ಇಟ್ಟುಕೊಂಡು ತಪಶ್ಚರ್ಯವನ್ನು ಮಾಡಿದ್ದಾನೆ.

ದಶವರ್ಷ ಸಹಸ್ರಾಣಿ ಶತಾನಿ ದಶ ಪಞ್ಚ ಚ ॥ (41.3 ಭವಿಷ್ಯಪರ್ವ)

11,000 ವರ್ಷ ಮೇಲೆ 500, 11,500 ವರ್ಷ ತಪಶ್ಚರ್ಯವನ್ನು ಮಾಡಿದ್ದಾನೆ ಅಂತ ಹರಿವಂಶ ತಿಳಿಸುತ್ತ ಇದೆ. ಹರಿವಂಶಪರ್ವದಲ್ಲಿಯೂ ಇದೇ ಶ್ಲೋಕ ಬಂದಿದೆ ಅಲ್ಲಿ 41 ನೆಯ ಅಧ್ಯಾಯ 41 ನೆಯ ಶ್ಲೋಕದಲ್ಲಿಯೇ ಬಂದಿದೆ ಈ ಮಾತು, ಭವಿಷ್ಯಪರ್ವದಲ್ಲಿಯೂ ಈ ಮಾತನ್ನು ಹೇಳುತ್ತಾರೆ. ಆದರೆ ಶ್ರೀಮದ್ಭಾಗವತದಲ್ಲಿ ಮಾತ್ರ

ನಿರಂಬುರ್ಧಾರಯೇತ್ ಪ್ರಾಣಾನ್ ಕೋ ವೈ ದಿವ್ಯಸಮಾಃ ಶತಮ್ ॥ (07.3.20 ಭಾಗವತ)

ಅಂತ ಬರುತ್ತದೆ. ನೂರು ದಿವ್ಯ ವರ್ಷಗಳವರೆಗೆ ತಪಶ್ಚರ್ಯವನ್ನು ಮಾಡಿದ ಅಂತ ಭಾಗವತದ ಮಾತಿನಿಂದ ನಮಗೆ ತೋರಿ ಬರುತ್ತದೆ ಬ್ರಹ್ಮ ದೇವರ ಮಾತು ಇದು, ನಿನ್ನಂತೆ ತಪಶ್ಚರ್ಯ ಮಾಡುವವರು ಯಾರಿದ್ದಾರಪ್ಪ ನೂರು ದಿವ್ಯ ವರ್ಷಗಳವರೆಗೆ ನೀನು ತಪಶ್ಚರ್ಯವನ್ನು ಮಾಡಿದ್ದೀ ಅಂತ. ನಮ್ಮ ಒಂದು ವರ್ಷ ಅಂದರೆ ದೇವತೆಗಳಿಗೆ ಒಂದು ದಿವಸ, ದೇವಮಾನದಿಂದ ನೂರು ವರ್ಷ ಆಗಬೇಕು ಅಂದರೆ ಅದು 36,000 ವರ್ಷ ಆಗುತ್ತದೆ ನಮಗೆ ಹಾಗಾದರೆ 36,000 ವರ್ಷ ತಪಶ್ಚರ್ಯ ಮಾಡಿದ್ದಾನೆ ಅಂತ ಅನ್ನುವುದರ ಸೂಚನೆ ಭಾಗವತದಿಂದ ಬರುತ್ತದೆ. ಇಲ್ಲಿ 11,500 ಅಂತ ಇದೀಗ ತಿಳಿದಂತೆ ಕಥೆಯಲ್ಲಿಯೂ ವ್ಯತ್ಯಾಸ ಇದೆ ಆದ್ದರಿಂದ ಕಲ್ಪಬೇಧೇನ ವ್ಯವಸ್ಥೆಯನ್ನ ನಾವು ತಿಳಿಯಬೇಕು. ಒಂದು ಕಲ್ಪದಲ್ಲಿ 11,500 ವರ್ಷ ತಪಶ್ಚರ್ಯ ಮಾಡಿದ್ದಾನೆ ಮತ್ತೊಂದು ಕಲ್ಪದಲ್ಲಿ 36,000 ವರ್ಷ ತಪಶ್ಚರ್ಯ ಮಾಡಿದ್ದಾನೆ, ಅದನ್ನು ಭಾಗವತ ಉಲ್ಲೇಖ ಮಾಡಿದೆ ಅಂತ. ನಾವು ತಿಳಿದುಕೊಳ್ಳುವುದಕ್ಕೆ ಬರುತ್ತೆ ಆದರೆ ಭಾಗವತದಲ್ಲಿ ಹೇಳಿದಂತಹ 36,000 ವರ್ಷ ಅನ್ನುವುದನ್ನೂ ಕೂಡ ಚಿಂತನ ಮಾಡುವುದಕ್ಕೆ ಬರುತ್ತದೆ. ಕಲ್ಪಬೇಧೇನ ವ್ಯವಸ್ಥೆ ಅಂತೂ ಇದ್ದೇ ಇದೆ ಜೊತೆಗೆ ಮಹಾಭಾರತ ಎಲ್ಲ ಕಲ್ಪದ ವ್ಯವಸ್ಥೆಯನ್ನೂ ಸೂಚನೆ ಮಾಡಿದೆ ಅಂತೂ ನಾವು ಚಿಂತನ ಮಾಡಬಹುದು. ಹೇಗೆ ಅಂದರೆ **'ದಶವರ್ಷ ಸಹಸ್ರಾಣಿ'** 10,000 ವರ್ಷಗಳು ಆದಾದ ನಂತರ **'ಶತಾನಿ ದಶ ಪಞ್ಚ ಚ'** ಅಂತ ಇದೆ, ದಶ ದಶ ಶತಾನಿ,ದಶ ಶತಾನಿ ಅಂದರೆ

1,000,ದಶ ದಶ ಶತಾನಿ 10,000, ದಶ ದಶ ಶತಾನಿ 10,000 ಅಲ್ಲಿಗೆ 30,000 ಆಯಿತು, ಪಂಚ ದಶ ಶತಾನಿ 5,000 ಆಯಿತು **'ಚ'** ಅನ್ನುವ ಶಬ್ದ ಇರುವುದರಿಂದ ಬರೀ ದಶ ಶತಾನಿ ಅಂತ 1,000 ಅಲ್ಲಿಗೆ 36,000 ಆಯಿತು. **'ದಶವರ್ಷ ಸಹಸ್ರಾಣಿ'** 10, ದಶ ದಶ ಶತಾನಿ ಮತ್ತೆ 10, ದಶ ದಶ ಶತಾನಿ ಮತ್ತೆ 10,000, 30,000, ಪಂಚ ದಶ ಶತಾನಿ 5,000, 35,000, ಬರೀ ದಶ ಶತಾನಿ ಬರೀ ಹತ್ತುನೂರು ಅಂದರೆ 1,000, 36,000 ಹೀಗೆ ಆವೃತ್ತಿಯಿಂದ ನಾವು ಇದನ್ನ ಚಿಂತನ ಮಾಡಬಹುದು ಅಂತ ಇಲ್ಲಿ ತಿಳಿಯಬೇಕು.

ಜಲವಾಸೀ ಸಮಭವತ್ ಸ್ಥಾನಮೌನವ್ರತಸ್ಥಿತಃ ॥ (41.3 ಭವಿಷ್ಯಪರ್ವ)

ಹೇಗೆ ತಪಶ್ಚರ್ಯ ಮಾಡಿದ ಅಂತ.ಅವನು ನೀರಿನೊಳಗೆ ಕುಳಿತು ತಪಶ್ಚರ್ಯ ಮಾಡಿದ ಅಂತ ಮೇಲ್ನೋಟಕ್ಕೆ ಅರ್ಥ ತೋರುತ್ತದೆ ಕಲ್ಪಬೇಧೇನ ವ್ಯವಸ್ಥೆಯನ್ನಂತೂ ಇಟ್ಟುಕೊಳ್ಳಬಹುದು ತೊಂದರೆ ಇಲ್ಲ ಆದರೆ ಭಾಗವತದಲ್ಲಿ ಹೇಳಿದ ತಪಶ್ಚರ್ಯದ ಕ್ರಮ ನೋಡಿದರೆ ನೀರಿನಲ್ಲಿ ತಪಶ್ಚರ್ಯ ಮಾಡಿದ ಅಂತ ಅನ್ನಿಸುವುದಿಲ್ಲ **'ಪಾದಾಂಗುಷ್ಠಾಶ್ರಿತಾವನಿಃ'**[1] ಭೂಮಿಯ ಮೇಲೆ ಅಂಗುಷ್ಠವನ್ನು ಇಟ್ಟು ಮಾಡಿದ ಅಂತ. ನೀರೊಳಗೆ ಇದ್ದ ಭೂಮಿಯ ಮೇಲೆ ಅಂಗುಷ್ಠ ಇಟ್ಟ ಅಂತ ಇಟ್ಟುಕೊಳ್ಳಬಹುದು ಆದರೆ ತಲೆಯ ಮೇಲೆ ಹುತ್ತು ಬೆಳೆಯಿತು ಅಂತ ಅನ್ನುತ್ತಾರೆ. ನೀರಿನೊಳಗೆ ಹುತ್ತು ಬೆಳೆಯುವುದು ಹೇಗೆ ಹಾಗಾದರೆ ತಲೆಯ ಮೇಲೆ ಹುತ್ತು ಬೆಳೆದಿದೆ ಅಂತ ಭಾಗವತದಲ್ಲಿ ವರ್ಣನೆ ಬರುತ್ತದೆ ವಲ್ಮೀಕ ಇತ್ತು ಅಂತ ಹಾಗಾದರೆ ಕಲ್ಪಬೇಧೇನ ಒಂದು ಬಾರಿ ನೀರಿನಲ್ಲಿ, ಒಂದು ಬಾರಿ ಭೂಮಿಯ ಮೇಲೆ ನಿಂತು ತಪಶ್ಚರ್ಯ ಮಾಡಿದ ಅಂತ ತಿಳಿಯಬಹುದು. ಇನ್ನೊಂದು ಹರಿವಂಶಪರ್ವದಲ್ಲಿ ಇದೇ ಕಥೆ ಬರೆಯುವಾಗ ಅಲ್ಲಿ ಜಲವಾಸೀ ಅಂತ ಶಬ್ದ ಇಲ್ಲ ಜಲೋಪವಾಸ ಅಂತ ಇದೆ ಆದ್ದರಿಂದ ಕೇವಲ ನೀರನ್ನ ಸ್ವೀಕಾರ ಮಾಡಿ ಉಪವಾಸದಿಂದ ಇದ್ದು ತಪಶ್ಚರ್ಯ ಮಾಡಿದ ಅಂತ ಅರ್ಥ ಮಾಡಿದರೆ ಭಾಗವತ ಹಾಗೂ ಹರಿವಂಶಗಳಿಗೆ ಯಾವುದೇ ವಿಧವಾದ ವಿರೋಧ ಬರುವುದಿಲ್ಲ ಅನ್ನುವುದನ್ನೂ ನಾವು ಅರ್ಥ ಮಾಡಿಕೊಳ್ಳಬಹುದು. ಈ ರೀತಿ ತಪಶ್ಚರ್ಯವನ್ನು ಮಾಡಿದ್ದಾನೆ ಹಿರಣ್ಯಕಶಿಪು ಆಗ ಬ್ರಹ್ಮ ದೇವರು ಬಂದಿದ್ದಾರೆ. ಎಲ್ಲಾ ದೇವತೆಗಳು ಸಿದ್ಧರು ಸಾಧ್ಯರು ಯಕ್ಷರು ಕಿನ್ನರರು ಋಷಿಗಳು ಮುನಿಗಳು ಗಂಧರ್ವರು ಅಪ್ಸರಾ ಸ್ತ್ರಿಯರು ಎಲ್ಲರನ್ನೂ ಕರೆದುಕೊಂಡು ಬಂದಿದ್ದಾರೆ ಬ್ರಹ್ಮ ದೇವರು ಬನ್ನಿ ಹೋಗೋಣ ಅಂತ. ಹಿರಣ್ಯಕಶಿಪು ತಪಶ್ಚರ್ಯ ಮಾಡುತ್ತ ಇದ್ದಾನೆ ಆ ಹಿರಣ್ಯಕಶಿಪುವಿಗೆ ವಿಶೇಷವಾಗಿ ಇರುವಂತಹ ವರ ಕೊಡಬೇಕಾಗಿದೆ ನೀವೆಲ್ಲ ಬನ್ನಿ ಅಂತ ಎಲ್ಲರನ್ನೂ ಕಳೆದುಕೊಂಡು ಬಂದಿದ್ದಾರೆ ಅವರೆಲ್ಲ ಬಂದರು. ಏನು ವರ ಕೇಳುತ್ತಾನೆ ಹಿರಣ್ಯಕಶಿಪು, ನಿಮಗೆಲ್ಲಾ ಗೊತ್ತು ದೇವತೆಗಳು ಅಸುರರು ಗಂಧರ್ವರು ಯಕ್ಷರು ನಾಗಗಳು ರಾಕ್ಷಸರು ಮನುಷ್ಯರು ಪಿಶಾಚಜಳು ಋಷಿಗಳು ಮುನಿಗಳು ಯಾರೂ ನನ್ನನ್ನು ಸಂಹಾರ ಮಾಡಬಾರದು, ಯಾರೂ ಶಾಪ ಕೊಡಬಾರದು, ಶಸ್ತ್ರಾಸ್ತ್ರಗಳಿಂದಲೂ ಸಂಹಾರ ಮಾಡಬಾರದು, ಒಣಗಿದ ಹಸಿ ಯಾವುದೇ ತರಹದ ವಸ್ತುಗಳಿಂದ ಸ್ವರ್ಗದಲ್ಲಿ ಆಕಾಶದಲ್ಲಿ ಪಾತಾಲದಲ್ಲಿ ಭೂಮಿಯಲ್ಲಿ ಮೇಲೆ ಕೆಳಗೆ ಹಗಲು ರಾತ್ರಿ ಯಾವ ಸಂದರ್ಭದಲ್ಲಿಯೂ ನನಗೆ ಸಾವು ಬರಬಾರದು. ಆ ರೀತಿ ಅನುಗ್ರಹವನ್ನು ಮಾಡಬೇಕು ಅಂತ ಕೇಳಿದಾಗ ಬ್ರಹ್ಮ ದೇವರು ಅಂದರು ಇಂತಹ ವರನೇ ಯಾರು ಕೇಳಿಲ್ಲಪ್ಪ ನನಗೆ, ಏನು ಭಾರೀ ವರವನ್ನು ಕೇಳುತ್ತಾ ಇದ್ದೀ, ತಥಾಸ್ತು ಅಂತ ವರ ಕೊಟ್ಟಿದ್ದಾರೆ. ಆದರೆ ಒಂದು ಮಾತನ್ನು ಮಹಾರಾಯ ಜೋಡಿಸಿದ್ದಾನೆ ಆಯುಧಗಳನ್ನೂ ಬಳಸದೇ, ಶಾಪನೂ ಕೊಡದೇ, ಕೇವಲ ತನ್ನ ಬಾಹು ಬಲದಿಂದ, ಪಾಣಿ ಪ್ರಹಾರದಿಂದ, ಕೈಯಿಂದ ಯಾರಾದರೂ ಸಂಹಾರ ಮಾಡುತ್ತಿದ್ದರೆ ಮಾಡಲಿ ಬೇಕಾದರೆ, ಇನ್ನು ಬೇರೆ ರೀತಿಯಿಂದ ಮಾತ್ರ ನನ್ನನ್ನು ಸಂಹಾರ ಮಾಡಬಾರದು ಅಂತ. ಒಳ್ಳೆಯ ವರ ಕೇಳಿದ್ದಿ ಅಂದರು ಬ್ರಹ್ಮ ದೇವರು ನಮ್ಮಪ್ಪ ಕೈಯಿಂದಲೇ ನಿನ್ನನ್ನು ಸಂಹಾರ ಮಾಡುತ್ತಾನೆ ಏನು ಚಿಂತೆ ಮಾಡಬೇಡ ತಥಾಸ್ತು ಅಂದಿದ್ದಾರೆ.

1. 07.3.2 ಭಾಗವತ

ಏತೇ ದಿವ್ಯಾ ವರಾಸ್ತಾತ ಮಯಾ ದತ್ತಾಸ್ತವಾದ್ಭುತಾಃ ॥ (41.20 ಭವಿಷ್ಯಪರ್ವ)

ಅಂದರು ನಿನಗೆ ಕೊಟ್ಟಂತಹ ವರ ಇದು ಭಾರೀ ವರ ಅಂತ ಇನ್ನೊಬ್ಬರು ಅನ್ನುವುದಲ್ಲ ವರ ಕೊಡುವ ನಾನೇ ಹೇಳುತ್ತ ಇದ್ದೇನೆ ಇಂತಹ ವರ ಯಾರಿಗೂ ಕೊಟ್ಟಿಲ್ಲ, ನಾನು ಅದ್ಭುತವಾದ ವರಗಳನ್ನು ನಿನಗೆ ಕೊಟ್ಟಿದ್ದೇನೆ ಅಂತ ಅವನಿಗೆ ಬಹಳ ಸಂತೋಷ ಆಯಿತು ಇಷ್ಟು ದಿವಸ ತಪಶ್ಚರ್ಯ ಮಾಡಿದ್ದು ಸಾರ್ಥಕ ಆಯಿತು ಅಂತ. ಅವನಿಗೆ ಒಳಗೆ ಜಯ ಇದ್ದಾನೆ ಎಲ್ಲಾ ನಿಜ ಆದರೆ ಅಸುರ ಅವನಿಗೆ ಏನು ತಿಳಿಯುವುದಿಲ್ಲ **'ಅದ್ಭುತ'** ಅಂದರೆ ಆಶ್ಚರ್ಯ ಅಂತ ಆಶ್ಚರ್ಯಕರವಾದ ಭಾರೀ ವರಗಳನ್ನು ಕೊಟ್ಟಿದ್ದೇನೆ ಅಂತ ಆದರೆ ಒಳಗಿನ ಅರ್ಥ ಅದ್ಭುತ **'ಅದಿ ಭೂಭ್ಯಾಂ ಡುತ ಚ ಅದ ಭೂ ಡುತಚ್ ಪ್ರತ್ಯಯ' 'ಅದ'** ಮತ್ತು **'ಭೂ'** ಎಂಬ ಎರಡು ಧಾತುವಿನಿಂದ ಬಂದದ್ದು. ಹೀಗಾಗಿ ಅದು **'ಅದ ಅನ್ನ ಅದ್ಯತೇ ಇತಿ ಅನ್ನ'** ಅಂತ **'ಅದ'** ಅಂದರೆ ದೇವರು ನಾನು ಕೊಟ್ಟ ವರವನ್ನೆಲ್ಲ ನಾಶ ಮಾಡಿ ನಿನ್ನನ್ನು ಸಂಹಾರ ಮಾಡಿಬಿಡುತ್ತಾನೆ. ಎಲ್ಲಾ ನೀನು ಏನೇನು ಕೇಳಿದ್ದೀ ಹಸಿ ಇರಬಾರದು, ಒಣಗಿರಬಾರದು, ಮೇಲೆ ಕೆಳಗೆ, ಆಯುಧ ಬೇಡ, ಶಾಪ ಬೇಡ ಎಲ್ಲಾ ತರಹದ ವರಗಳನ್ನೂ ಹೊಂದಿಸಿಕೊಂಡು ನಿನ್ನನ್ನು ಸಂಹಾರ ಮಾಡುತ್ತಾನೆ. ನನ್ನನ್ನು ಯಾರು ಸಂಹಾರ ಮಾಡಲಿಕ್ಕೆ ಸಾಧ್ಯ ಇಲ್ಲ ಅಂತ ಏನು ನೀನು ತಲೆಯಲ್ಲಿ ಇಟ್ಟುಕೊಂಡಿದ್ದೀ ಅಲ್ಲ ಆ ಉದ್ದೇಶ ಇಡೇರುವುದಿಲ್ಲ ಅದು **'ಅದ', 'ಅದ'**ಅಂದರೆ ಸಂಹಾರ ಮಾಡುತ್ತಾನೆ ದೇವರು ಅದನ್ನು ನಾಶ ಮಾಡಿ ಹಾಕುತ್ತಾನೆ, ತಿಂದು ಹಾಕುತ್ತಾನೆ. **'ಅದ್ಯತೇ'** ಸ್ವಲ್ಪ ತಕ್ಕ ಮಟ್ಟಿಗೆ ಕೆಲವು ದಿನ **'ಭುತ'** ಕೆಲವು ದಿನ ಮಾತ್ರ ಇದು ಸತ್ತಾದೊಳಗೆ ಇರುತ್ತೆ ಇದು ವರ ಆದರೆ ಆಮೇಲೆ ಇದೆಲ್ಲವನ್ನು ಹೊಂದಿಸಿಕೊಂಡು ನಿನ್ನನ್ನು ಸಂಹಾರ ಮಾಡಿ ಮುಗಿಸುತ್ತಾನೆ ಅನ್ನುವ ಅರ್ಥದಲ್ಲಿ **'ಅದ್ಭುತ'** ಎಂಬ ಅದ್ಭುತ ಶಬ್ದ ಪ್ರಯೋಗ ಮಾಡಿದ್ದಾರೆ ಅದು ಬ್ರಹ್ಮ ದೇವರು ಮಹಾನುಭಾವರು. ಸರಿ, ದೇವತೆಗಳೆಲ್ಲ ಅಂದರು ನಮ್ಮನ್ನು ಯಾಕೆ ಕರೆದುಕೊಂಡು ಬಂದರಿ ಇಲ್ಲಿ ಇಂತಹ ವರ ಕೊಟ್ಟರೆ ನಮ್ಮ ಗತಿ ಏನು ಮುಂದೆ, ನಮ್ಮನ್ನೆಲ್ಲ ಅವನು ಸಂಹಾರ ಮಾಡುತ್ತಾನೆ, ಯಾರು ಅವನನ್ನು ಕೊಲ್ಲುವವರಿಲ್ಲ ಅಂದರೆ ನಮ್ಮನ್ನು ಅವನು ಕೊಂದು ಬಿಡುತ್ತಾನೆ, ಮುಂದೆ ಗತಿ ಏನು ಅಂತ ಬ್ರಹ್ಮ ದೇವರು ಅಂದರು ನಾನು ಏನು ಮಾಡಲಿ.

ಅವಶ್ಯಂ ತ್ರಿದಶಾಸ್ತೇನ ಪ್ರಾಪ್ತವ್ಯಂ ತಪಸಃ ಫಲಮ್ । (41.26 ಭವಿಷ್ಯಪರ್ವ)

ತಪಸ್ಸು ಮಾಡಿದಾಗ ವರ ಕೊಡಲಿಲ್ಲ ಅಂದರೆ ಬೇರೆಯವರು ಯಾಕೆ ತಪಸ್ಸು ಮಾಡುತ್ತಾರೆ, ತಪಸ್ಸು ಮಾಡಿದಾಗ ವರ ಕೊಡಲೇಬೇಕು ಇದು ದೇವರ ಆದೇಶ. ಇಲ್ಲದಿದ್ದರೆ ಇನ್ನುಳಿದವರಿಗೆ ತಪಸ್ಸಿನ ಮೇಲೆ ವಿಶ್ವಾಸ ಹೋಗುತ್ತದೆ, ದೇವತೆಗಳ ಮೇಲೆ ವಿಶ್ವಾಸ ಹೋಗುತ್ತದೆ, ವೇದಗಳ ಮೇಲೆ ವಿಶ್ವಾಸ ಹೋಗುತ್ತದೆ ಹೀಗಾಗಿ ನಾವು ತಪಸ್ಸಿಗೆ ಫಲ ಕೊಡಲೇಬೇಕು. ಆದರೆ ನೀವು ಚಿಂತೆ ಮಾಡಬೇಡಿ ದೇವರು ಇವನನ್ನು ಸಂಹಾರ ಮಾಡುತ್ತಾನೆ ಇವನಿಂದ ನಿಮಗೆ ಯಾವ ಭಯ ಇಲ್ಲದೇ ಇದ್ದ ಹಾಗೆ ನಿಮ್ಮನ್ನು ರಕ್ಷಣೆ ಮಾಡುತ್ತಾನೆ ಅಂತ ಭರವಸೆಯನ್ನು ಕೊಟ್ಟಿದ್ದಾರೆ, ಸಮಾಧಾನದಿಂದ ದೇವತೆಗಳೆಲ್ಲ ಮನೆಗೆ ಹೋದರು.

ಈ ಕಡೆಗೆ ಇವನು ತನ್ನ ಉಗ್ರವಾದ ಪ್ರವೃತ್ತಿಯನ್ನು ಪ್ರಾರಂಭ ಮಾಡಿದ ಸತ್ಯ ಧರ್ಮ ಶಾಂತಿ ದಮ ಇಂದ್ರಿಯ ನಿಗ್ರಹ ತಪಶ್ಚರ್ಯ ಮಾಡುವಂತಹ ಸಜ್ಜನರಿಗೆ ಪೀಡೆಯನ್ನು ಕೊಡುತ್ತ ಇದ್ದಾನೆ. ಯಜ್ಞವನ್ನು ಮಾಡುವವರಿಗೆಲ್ಲ ಯಜ್ಞವನ್ನು ಮಾಡಬೇಡ ಅಂತ ಹೇಳಿದ, ಮಾಡುವುದಾದರೆ ದೈತ್ಯರನ್ನು ಕುರಿತು ಯಜ್ಞವನ್ನು ಮಾಡಿ, ದೇವತೆಗಳನ್ನು ಕುರಿತು ಯಜ್ಞವನ್ನು ಮಾಡಬೇಡಿ ಅಂತ ಅನ್ನುತ್ತಾನೆ. ಈ ರೀತಿ ಎಲ್ಲ ಕಡೆಗೆ ಧರ್ಮದ ಧ್ವಂಸವನ್ನು ಮಾಡುತ್ತಾ ಇದ್ದರೆ ಆ ವಸು ರುದ್ರ ಆದಿತ್ಯಾದಿ ಸಕಲ ದೇವತೆಗಳು ಕೂಡ ಪರಮಾತ್ಮನಿಗೆ ಶರಣು ಹೋಗಿದ್ದಾರೆ.

ತ್ವಂ ಹಿ ನಃ ಪರಮೋ ಧಾತಾ ತ್ವಂ ಹಿ ನಃ ಪರಮೋ ಗುರುಃ ।

ತ್ವಂ ಹಿ ನಃ ಪರಮೋ ದೇವೋ ಬ್ರಹ್ಮಾದೀನಾಂ ಸುರೋತ್ತಮ ॥ (41.35 ಭವಿಷ್ಯಪರ್ವ)

ನೀನೇ ರಕ್ಷಕ ನೀನೇ ಗುರು ನೀನೇ ದೇವ ನೀನೇ ಸರ್ವಸ್ವ ರಕ್ಷಣೆ ಮಾಡು ಹಿರಣ್ಯಕಶಿಪುವನ್ನು ಸಂಹಾರ ಮಾಡಿ ನಮ್ಮನ್ನು ಕಾಪಾಡು ಅಂತ ಪರಮಾತ್ಮನಿಗೆ ಎಲ್ಲರೂ ಪ್ರಾರ್ಥನೆ ಮಾಡಿದಾಗ **'ಭಯಂ ತ್ಯಜಧ್ವಮಮರಾ'**[1] ಬಿಟ್ಟುಬಿಡಿ ನೀವು ಭಯವನ್ನ ನಾನು ಸಂಹಾರ ಮಾಡುತ್ತೇನೆ ಅಂತ. ಇಲ್ಲಿ ಪ್ರಹ್ಲಾದ ರಾಜರನ್ನು ನಿಮಿತ್ತ ಮಾಡಿಕೊಂಡು ಸಂಹಾರ ಮಾಡಿದ ಕಥೆಯನ್ನು ಉಲ್ಲೇಖ ಮಾಡುವುದಿಲ್ಲ ಹರಿವಂಶ, ನಿಷೇಧವನ್ನೂ ಮಾಡುವುದಿಲ್ಲ ಅವರ ಪ್ರಾರ್ಥನೆಗೆ ಪರಮಾತ್ಮ ತಥಾಸ್ತು ಅಂತ ಹೇಳಿ ನರಸಿಂಹ ರೂಪವನ್ನು ಸ್ವೀಕಾರ ಮಾಡಿಬಿಟ್ಟಿದ್ದಾನೆ ಅಷ್ಟೇ.

ನಾರಸಿಂಹಮನಾಧೃಷ್ಯಂ ದೈತ್ಯದಾನವರಕ್ಷಸಾಮ್ ॥ (41.42 ಭವಿಷ್ಯಪರ್ವ)

ನರಸಿಂಹ ರೂಪವನ್ನು ಧಾರಣ ಮಾಡಿದ್ದಾನೆ. ನರಸಿಂಹ ರೂಪವನ್ನು ಧಾರಣ ಮಾಡಿ ಓಂಕಾರದ ಸಹಾಯವನ್ನು ಪಡೆದಿದ್ದಾನೆ ಅಂತ ಬರುತ್ತೆ. ಇದು ಹರಿವಂಶ ಪರ್ವದಲ್ಲಿ ಬಂದಿಲ್ಲ, ಭವಿಷ್ಯ ಪರ್ವದಲ್ಲಿ ಬರುವ ಒಂದು ವಿಶೇಷ ವಿಷಯ ಅಂದರೆ ಓಂಕಾರದ ಸಹಾಯವನ್ನು ಪಡೆದು ಪರಮಾತ್ಮ ಹಿರಣ್ಯಕಶಿಪುವನ್ನು ಸಂಹಾರ ಮಾಡಿದ. ಓಂಕಾರದ ಸಹಾಯವನ್ನು ಪಡೆದು ಅಂದರೆ ಏನು ಓಂಕಾರ ಇದು ಅಕ್ಷರ, ಇದು ಜಡ ಅದರ ಸಹಾಯವನ್ನು ಪಡೆದು ಪರಮಾತ್ಮ ತಾನು ಸಂಹಾರ ಮಾಡಿದ್ದಾನೆ ಅನ್ನುವುದರ ಅಭಿಪ್ರಾಯ ಏನು ಅಂತ. ಅದಕ್ಕೆ ಸರಿಯಾಗಿ ತಿಳಿಯಬೇಕು ಪರಮಾತ್ಮನಿಗೆ ಯಾರ ಸಹಾಯ ಬೇಕಾಗಿಲ್ಲ, ಓಂಕಾರದ ಜಪ ಮಾಡಿದ ಅಂತ ಅರ್ಥವಾ ಅಲ್ಲ, ಅವನೇ ಓಂಕಾರ ಪ್ರತಿಪಾದ್ಯ, ಓಂಕಾರ ನಿಯಾಮಕ.

ಕೃಷ್ಣೋ ರಾಮೋ ನೃಸಿಂಹಶ್ಚ ವರಾಹೋ ವಿಷ್ಣುರೇವ ಚ

ಪರಂಜ್ಯೋತಿಃ ಪರಂಬ್ರಹ್ಮ ನಾಸುದೇವ ಇತಿ ಕ್ರಮಾತ್ ॥ (ಶ್ರೀವಿಷ್ಣುಸಹಸ್ರನಾಮ ಸಂಪುಟ 2)

ಓಂಕಾರ ಪ್ರತಿಪಾದ್ಯವಾದ ರೂಪಗಳು ಇವೆಲ್ಲ ಪರಮಾತ್ಮನದು **ಅ ಊ ಮ. ಮ** ಅಂದರೆ ನರಸಿಂಹ ಹೀಗಾಗಿ ಓಂಕಾರ ಪ್ರತಿಪಾದ್ಯನಾಗಿದ್ದಾನೆ ಪರಮಾತ್ಮ, ಓಂಕಾರ ಪ್ರತಿಪಾದ್ಯವಾದ ಅನಂತಗುಣಗಳಿಂದ ಪರಿಪೂರ್ಣನಾಗಿದ್ದಾನೆ, ಅನಂತಗುಣಗಳ ಪರಿಪೂರ್ಣತ್ವವೇ ಆ ಓಂಕಾರದ ಅರ್ಥ ಅನಂತಗುಣಗಳಿಂದ ಪರಿಪೂರ್ಣನಾಗಿದ್ದಾನೆ. ಹಾಗಾದರೆ ಓಂಕಾರದ ಸಹಾಯವನ್ನು ಪಡೆದ ಅನ್ನುವ ಶಬ್ದದ ತಾತ್ಪರ್ಯ ಭಗವಂತ ಇನ್ಯಾರ ಸಹಾಯವನ್ನು ಪಡೆಯಲಿಲ್ಲ ಅಂತ. **'ಸಾಗರಂ ಸಾಗರಂ ಸಾಗರೋಪಮಂ'** ಅನ್ನುವುದಕ್ಕೆ ಅರ್ಥ ಏನು **'ರಾಮ ರಾವಣಯೋರ್ಯುದ್ಧಂ ರಾಮ ರಾವಣಯೋರಿವ'** ಅಂತ ಇನ್ನೊಂದು ಅನುಮಾನವೇ ಇಲ್ಲ ಅಂತ ತಾತ್ಪರ್ಯ. ಆ ರೀತಿ **'ಸಾಗರಶ್ಚ ಸಾಗರಶ್ಚ ಸಾಗರಶ್ಚ ಸಾಗರಶ್ಚ ಏತೇಷಾಂ ಸಮಾಹಾರಃ ಸಾಗರಂ ಸಾಗರಂ ಸಾಗರೋಪಮಂ'** ಆ ಸಾಗರಕ್ಕೆ ಉಪಮಾನ ಇನ್ನೊಂದು ಇಲ್ಲ ಅಂತ. ಹಾಗೆ ದೇವರಿಗೆ ಸಹಾಯ ಮತ್ತೊಬ್ಬರಿಲ್ಲ ಅಂತ ಹೇಳುವುದನ್ನ ಈ ಭಾಷೆಯಲ್ಲಿ ಹೇಳುತ್ತಾ ಇದೆ ಹರಿವಂಶ. ಓಂಕಾರದ ಸಹಾಯ ಅಂದರೆ ಓಂಕಾರ ಪ್ರತಿಪಾದ್ಯವಾದ, **'ಮ'**ಕಾರ ಪ್ರತಿಪಾದ್ಯವಾದ ನರಸಿಂಹ ರೂಪದ ಸಹಾಯವನ್ನೇ ನರಸಿಂಹ ತೆಗೆದುಕೊಂಡ ಅದರ ಅರ್ಥ ಏನು, ಯಾರ ಸಹಾಯವನ್ನೂ ತೆಗೆದುಕೊಳ್ಳಲಿಲ್ಲ ಅಂತ. ಅಥವಾ ಆ ಗುಣಪೂರ್ಣನಾದದ್ದರಿಂದ ತನ್ನ ಗುಣಪೂರ್ಣತ್ವದಿಂದಲೇ ತಾನು ಅನಂತಬಲ ಪರಾಕ್ರಮಗಳಿದ್ದದ್ದರಿಂದ ಹಿರಣ್ಯಕಶಿಪುವಿನ ಸಂಹಾರ ಮಾಡಿದನೇ ಹೊರತು ಇನ್ನೊಬ್ಬರ ಸಹಾಯವನ್ನು ತೆಗೆದುಕೊಂಡಿಲ್ಲ ಅನ್ನುವ ಅಭಿಪ್ರಾಯದಲ್ಲಿ.

1. 41.37 ಭವಿಷ್ಯಪರ್ವ

ಅಥೋಙ್ಕಾರಸಹಾಯೋಽಸೌ ಭಗವಾನ್ ವಿಷ್ಣುರವ್ಯಯಃ ॥ (41.43 ಭವಿಷ್ಯಪರ್ವ)

ಪರಮಾತ್ಮ ಅರ್ಧ ನರ, ಅರ್ಧ ಸಿಂಹದ ಶರೀರವನ್ನು ತೆಗೆದುಕೊಂಡಿದ್ದಾನೆ ಬಂದಿದ್ದಾನೆ. ಒಂದು ನೂರು ಯೋಜನ ವಿಸ್ತೀರ್ಣವಾದಂತಹ ಸಭಾ ಒಂದೂವರೆ ನೂರು ಯೋಜನ ಎತ್ತರ, ಒಂದು ನೂರು ಯೋಜನ ಅಗಲ ಎಲ್ಲಿ ಬೇಕಲ್ಲಿ ಹಾರಾಡುವಂತಹ ಸಭೆ ಅದು ಹಿರಣ್ಯಕಶಿಪುವಿನ ಸಭೆ ಅಂತಹ ದಿವ್ಯವಾದ ಸಭೆ. ಆ ಸಭಾ ಭವನ ಎಷ್ಟು ದೊಡ್ಡದು ಇತ್ತು ಅಂದರೆ ಅದರ ಮಧ್ಯದಲ್ಲಿ ಅಲ್ಲಲ್ಲಿ ಸರೋವರಗಳು ಇತ್ತು, ಅಲ್ಲಲ್ಲಿ ಕಾಲುವೆಗಳು ಇವೆ, ಉದ್ಯಾನಗಳು ಇವೆ, ವನಗಳು ಇವೆ ಅಂತಹ ದೊಡ್ಡದಾದಂತಹ ಭಾರೀ ಸಭೆ ಅದು ಮತ್ತು ಆ ಸಭೆಯಲ್ಲಿ ನೋಡಿ ಪ್ರಾಚೀನ ಕಾಲದ ವ್ಯವಸ್ಥೆ ಹೇಗಿತ್ತು ಅಂತ. ಅದು ಹಿರಣ್ಯಕಶಿಪುವಿನ ಸಭೆ ಅನ್ನುವ ವಿಚಾರ ಇರಲಿ ಆದರೆ ಅವತ್ತಿನ ಕಾಲದ ವಿಜ್ಞಾನ ಹೇಗೆ ಇತ್ತು ನೋಡಿ ಏನಿಲ್ಲ, ಹೊರಗೆ ಬಿಸಿಲು ಇದೆ ಅಂದರೆ ಒಳಗೆ ತಂಪಾಗಬೇಕು, ಹೊರಗೆ ತಂಪು ಇದೆ ಅಂದರೆ ಒಳಗೆ ಬೆಚ್ಚಗಿರಬೇಕು ಆ ರೀತಿಯ ವ್ಯವಸ್ಥೆ. ಒಳಗೆ ಪ್ರವೇಶ ಮಾಡಿದ ಮೇಲೆ ಮಧ್ಯ ಮಧ್ಯದಲ್ಲಿ ಸಭಾ ನಡೆದಾಗ, ವಿಚಾರ ವಿನಿಮಯಗಳು ನಡೆದಾಗ, ಸಂಗೀತ ಕಾರ್ಯಕ್ರಮಗಳು ನಡೆದಾಗ ಹಾಲು, ಹಣ್ಣು, ಹಣ್ಣಿನ ರಸ ತೊಗೊಳ್ಳಿ ತಿನ್ನಿ ಡಿಸ್ಟರ್ಬನ್ಸ್ ಇಲ್ಲ, ಹಸಿವೆಯೇ ಇಲ್ಲ, ನೀರಡಿಕೆಯೇ ಇಲ್ಲ ಅಲ್ಲಿ ಕುಳಿತರೆ.

ನ ಕ್ಷುತ್ಪಿಪಾಸೇ ನ ಗ್ಲಾನಿಂ ಪ್ರಾಪ್ಯ ತಾಂ ಪ್ರಾಪ್ನುವನ್ತಿ ಹಿ । (41.53 ಭವಿಷ್ಯಪರ್ವ)

ಅಂತಹ ಸಭಾ ನಿರ್ಮಾಣ ಮಾಡಿದ್ದಾನೆ. ನೀರು, ಅಲ್ಲಲ್ಲಿ ಸರೋವರಗಳಿವೆ ನೀರು ಹರೀತಾ ಇದೆ ನೀರಡಿಕೆಯೇ ಇಲ್ಲ, ಆದರೂ ಎದಕ್ಕಾದರೂ ನೀರನ್ನು ಕ್ರೀಡೆಗಾಗಿ ಉಪಯೋಗಿಸಬೇಕು ಅಂದರೆ ಚಳಿಗಾಲದಲ್ಲಿ ಬಿಸಿಯಾಗುತ್ತದೆ ಆ ನೀರು, ಬೇಸಿಗೆಯಲ್ಲಿ ತಂಪು ಆಗುತ್ತದೆ ಆ ನೀರು ಇಂತಹ ವ್ಯವಸ್ಥೆಯನ್ನು ಮಾಡಿದ್ದಾನೆ.

ಉಷ್ಣೇ ಶೀತಾನಿ ತೋಯಾನಿ ಶೀತೇ ಚೋಷ್ಣಾನಿ ಸನ್ತಿ ವೈ । (41.57 ಭವಿಷ್ಯಪರ್ವ)

ಸಕಲ ಪುಷ್ಪಗಳು, ಸಕಲ ಫಲಗಳಿಂದ ಕೂಡಿದಂತಹ ಸಕಲ ವಿಧವಾದ ವೃಕ್ಷಗಳು ಅಲ್ಲಿವೆ ಇಂತಹ ಸಭೆಗೆ ಪರಮಾತ್ಮ ನರಸಿಂಹ ರೂಪದಿಂದ ಬರುತ್ತಾ ಇದ್ದಾನೆ. ಹಿರಣ್ಯಕಶಿಪು ಒಂಬತ್ತು ನಲ್ವ ಪರಿಮಾಣದ ಆಸನದ ಮೇಲೆ ಕುಳಿತಿದ್ದಾನೆ ಅಂತಹ ದೊಡ್ಡ ಸಭಾ, ದೊಡ್ಡ ಆಸನ ಅದರ ಮೇಲೆ ತಾನು ಕುಳಿತಿದ್ದಾನೆ ಮಹಾರಾಯ. ನಾಲ್ಕುನೂರು ಮಳ ಅಂದರೆ ಒಂದು ನಲ್ವ ಅಂತಹದ್ದು ಒಂಬತ್ತು ನಲ್ವ ಪರಿಮಾಣ ಅಷ್ಟು ಅಗಲ ಅಷ್ಟು ಎತ್ತರದ ಆಸನದ ಮೇಲೆ ಕುಳಿತಿದ್ದಾನೆ. ದೇವತೆಗಳು ಗಂಧರ್ವರು ಅಪ್ಸರಾ ಸ್ತ್ರೀಯರು ಎಲ್ಲರನ್ನೂ ಹೆದರಿಸಿ ಬೆದರಿಸಿ ಅಲ್ಲಿ ಇಟ್ಟುಕೊಂಡಿದ್ದಾನೆ ಹೀಗಾಗಿ ಅವರೆಲ್ಲಾ ಹಾಡು ಹಾಡುತ್ತಾ ಇದ್ದಾರೆ, ಅಪ್ಸರಾ ಸ್ತ್ರೀಯರು ನರ್ತನ ಮಾಡುತ್ತಾ ಇದ್ದಾರೆ, ಸಾವಿರಾರು ಜನ ಸ್ತ್ರೀಯರೆಲ್ಲಾ ಅಲ್ಲಿ ಹಿರಣ್ಯಕಶಿಪುವಿನ ಸುತ್ತಲೂ ಕುಳಿತಿದ್ದಾರೆ ಈ ರೀತಿ ಅವನು ಅಲ್ಲಿ ಇದ್ದಾನೆ. ಅಲ್ಲಿ ಪ್ರಹ್ಲಾದ ರಾಜರೂ ಇದ್ದಾರೆ ಮಗ, ಅವನ ಮಗ ಬಲಿ, ಅವನ ಮಗ ವಿರೋಚನ ಎಲ್ಲರೂ ಸಭೆಯಲ್ಲಿ ಇದ್ದಾರೆ ಅಂತ ವರ್ಣನೆ ಬರುತ್ತದೆ, ಪ್ರಹ್ಲಾದ ರಾಜರು ಪರಮ ಭಗವದ್ಭಕ್ತರು, ಬಲಿ ಚಕ್ರವರ್ತಿಯೂ ಭಕ್ತ ಆದರೆ ಸಭಾ ಮಧ್ಯದಲ್ಲಿ ಇದ್ದಾನೆ. ಇಂತಹ ಸಭೆಯಲ್ಲಿ ನರಸಿಂಹ ದೇವರು ಪ್ರವೇಶ ಮಾಡಿದ್ದಾರೆ ನೋಡಿ ಸಾವಿರ ಅಲ್ಲ ಅನಂತ ಸೂರ್ಯ ಪ್ರಕಾಶ ಆದರೂ ಪರಮಾತ್ಮ ಸ್ವಲ್ಪ ಸೌಮ್ಯವಾಗಿಯೇ ಹೋಗಿದ್ದಾನೆ ಮೊದಲು. **'ಸಹಸ್ರಶಶಿ ಸಂನಿಭಮ್'**[1] ಸಾವಿರ ಚಂದ್ರನಂತೆ ತಂಪಾದ ಪ್ರಕಾಶವನ್ನು ಪರಮಾತ್ಮ ಅಲ್ಲಿ ಹರಡಿಸುತ್ತಾ ಪ್ರವೇಶ ಮಾಡಿದ್ದಾನೆ. ಶಂಖಿದಂತೆ ಮಲ್ಲಿಗೆಯಂತೆ ಚಂದ್ರನಂತೆ ಶುಭ್ರವಾಗಿ ತಂಪಾಗಿ ಸುಗಂಧವನ್ನ ಬೀರುತ್ತಾ ಭಗವಂತ ಪ್ರವೇಶ ಮಾಡಿದ್ದಾನಂತೆ **'ಶಙ್ಖಕುನ್ದೇನ್ದು ಸಂನಿಭಮ್'**[2] ಪ್ರಹ್ಲಾದ ರಾಜರು ಪರಮ ಭಕ್ತಿಯಿಂದ ನರಸಿಂಹ ದೇವರ

1. 43.2 ಭವಿಷ್ಯಪರ್ವ ; 2. 43.3 ಭವಿಷ್ಯಪರ್ವ

ದರ್ಶನವನ್ನು ಮಾಡುತ್ತ ಇದ್ದಾರೆ ದಿವ್ಯವಾದ ಚಕ್ಷುಷನಿಂದ ಸಾಕ್ಷಾತ್ ಸರ್ವೋತ್ತಮನಾದ ಶ್ರೀಹರಿಯೇ ನರಸಿಂಹ ಬಂದಿದ್ದಾರೆ ಅಂತ ಪ್ರಹ್ಲಾದ ರಾಜರು ಅರ್ಥ ಮಾಡಿಕೊಂಡಿದ್ದಾರೆ ಉಳಿದವರಿಗೆ ಗೊತ್ತಾಗಿಲ್ಲ ಒಂದು ಸಿಂಹ ಬಂತು ಅರ್ಧ ಸಿಂಹ, ಅರ್ಧ ಪುರುಷ ಇದೇನೋ ವಿಚಿತ್ರ ಪ್ರಾಣಿ ಅಂತ ತಿಳಿದುಕೊಂಡಿದ್ದಾರೆ ಅಷ್ಟೇ. ಪ್ರಹ್ಲಾದ ರಾಜರು ಮಾತ್ರ ಭಕ್ತಿಯಿಂದ ತಮ್ಮ ತಂದೆಯಾದ ಹಿರಣ್ಯಕಶಿಪುವಿಗೆ ಹೇಳುತ್ತ ಇದ್ದಾರೆ ಹಿರಣ್ಯಕಶಿಪು ಇದು ಸಾಮಾನ್ಯ ಸಿಂಹ ಅಲ್ಲ ಇದು ಸಾಕ್ಷಾತ್ ಶ್ರೀಮನ್ ನಾರಾಯಣನೇ.

ನ ಶ್ರುತಂ ನೈವ ದೃಷ್ಟಂ ಚ ನಾರಸಿಂಹಮಿದಂ ವಪುಃ ॥ (43.7 ಭವಿಷ್ಯಪರ್ವ)

ಎಲ್ಲಿಯೂ ಕೇಳಿಲ್ಲ ಎಲ್ಲಿಯೂ ನೋಡಿಲ್ಲ ಅಂತಹ ಶ್ರೇಷ್ಠವಾದ ರೂಪ ಇದು ಆದರೆ ಒಂದು ಮಾತನ್ನು ಎಚ್ಚರಿಕೆ ನಾನು ಹೇಳುತ್ತ ಇದ್ದೇನೆ. ದೈತ್ಯರ ನಾಶದ ಕಾಲ ಹತ್ತಿರ ಬಂತು, ನಿನ್ನ ನಾಶವಾಗುವ ಕಾಲ ಹತ್ತಿರ ಬಂತು, ವಿರೋಧ ಮಾಡಬೇಡ ಶರಣಾಗತನಾಗು ಉದ್ಧಾರವಾಗುತ್ತದೆ ನಿನಗೆ, ಇಲ್ಲ ಅಂದರೆ ನಿನಗೆ ಸಾವು ತಪ್ಪಿದ್ದಲ್ಲ ಇಷ್ಟು ಎಚ್ಚರಿಕೆಯನ್ನು ಪ್ರಹ್ಲಾದ ರಾಜರು ಕೊಟ್ಟಿದ್ದಾರೆ. ಹೇಳುತ್ತಾರೆ ಪ್ರಹ್ಲಾದ ರಾಜರು ಏನು ನಿನಗೆ ಏನು ಅಂತಹ ದೊಡ್ಡದು ಇಲ್ಲ ಕಾಣಿಸುತ್ತ ಇದೆ ಒಂದು ಸಿಂಹ ಬಂದರೆ ಇಷ್ಟು ಹೆದರಬೇಕಾ ಅಂತ ಹಿರಣ್ಯಕಶಿಪು ಕೇಳಿದರೆ ಪ್ರಹ್ಲಾದ ರಾಜರು ಅನ್ನುತ್ತಾರೆ ಸಿಂಹ ಅಲ್ಲ ಅದು ನೋಡು ಸಂಪೂರ್ಣ ಜಗತ್ತೇ ಈ ಪರಮಾತ್ಮನ ಶರೀರದಲ್ಲಿ ಕಾಣುತ್ತ ಇದೆ ಹಿರಣ್ಯಕಶಿಪುವಿಗೆ ಕಾಣಿಸುತ್ತ ಇಲ್ಲ ಪ್ರಹ್ಲಾದ ರಾಜರಿಗೆ ಕಾಣಿಸುತ್ತ ಇದೆ ದಿವ್ಯ ಚಕ್ಷುಷು ಇರುವುದರಿಂದ. ಪ್ರಹ್ಲಾದ ರಾಜರು ಅನ್ನುತ್ತಾರೆ ಸೂರ್ಯ ಚಂದ್ರ ನಕ್ಷತ್ರಗಳು ನಾಗಗಳು ಪಿಶಾಚ ರಾಕ್ಷಸರು ದೇವತೆಗಳು ಗಂಧರ್ವರು ಋಷಿಗಳು ಮುನಿಗಳು ಕಾಣಿಸುತ್ತಾ ಇಲ್ಲವಾ ನಿನಗೆ ನೋಡು ರುದ್ರ ದೇವರು ಬ್ರಹ್ಮ ದೇವರು ಪರಮಾತ್ಮನ ಲಲಾಟದಲ್ಲಿ ಇದ್ದಾರೆ. **'ಲಲಾಟಸ್ಥಾಃ ಬ್ರಹ್ಮದೇವ ಪಶುಪತಿಃ ಲಲಾಟಸ್ಥಾಃ ವಿಭಾಂತಿ ತೇ'** ಎಲ್ಲಾ ಸ್ಥಾವರ ಜಂಗಮ ಪದಾರ್ಥಗಳು ನದಿಗಳು ಸಮುದ್ರಗಳು ಎಲ್ಲವೂ ಕಾಣಿಸುತ್ತಾ ಇದೆ ಸನಕಸನಂದಾನಿ ಋಷಿಗಳು ಕಾಣಿಸುತ್ತಾ ಇದ್ದಾರೆ, ಸರ್ವಾಧಾರಾನಾಗಿ ವಿಶ್ವ ರೂಪವನ್ನು ದೇವರು ತೋರಿಸುತ್ತಾ ಇದ್ದಾನೆ ನಿನಗೆ ಯಾಕೆ ಕಾಣಿಸುತ್ತಾ ಇಲ್ಲವೋ ಮಹಾರಾಯ, ನಿನಗೆ ಯಾಕೆ ಕಾಣಿಸುತ್ತಾ ಇದೆಯೋ ಮಹಾರಾಯ ಅಂತ ಅವನು ಕೇಳಿದ.

ಈ ರೀತಿ ಆ ಪರಮಾತ್ಮನಲ್ಲಿ ವಿರಾಡ್ ರೂಪದಲ್ಲಿ, ವಿಶ್ವ ರೂಪದಲ್ಲಿ ಇಡೀ ಜಗತ್ತು ಆಶ್ರಿತವಾದದ್ದನ್ನ ತಮ್ಮ ಯೋಗ್ಯಾತಾನುಸಾರೇಣ ಪ್ರಹ್ಲಾದ ರಾಜರು ನೋಡಿ ಹಿರಣ್ಯಕಶಿಪುವಿಗೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ ನೀನು ನರಸಿಂಹ ದೇವರ ವಿರೋಧವನ್ನು ಮಾಡಬೇಡ ಅಂತ ಕೇಳಲಿಲ್ಲ ಅವನು ಅಸುರ. ಒಳಗೆ ಭಕ್ತ ಇದ್ದಾನೆ ಆದರೆ ಅಸುರನ ಕೈ ಜೋರಾಗಿದೆ ಅಸುರನ ಸ್ವಭಾವಕ್ಕೆ ತಕ್ಕಂತೆ ಹೊಡೆಯಿರಿ ಬಡೆಯಿರಿ ಈ ಸಿಂಹವನ್ನು ಓಡಿಸಿರಿ ಅಂತ ತನ್ನ ಎಲ್ಲ ದೈತ್ಯರಿಗೆ ಆದೇಶವನ್ನು ಮಾಡಿದ. ಅಷ್ಟೇ ಬೇಕಾಗಿತ್ತು ದೈತ್ಯರಿಗೆ ಎಲ್ಲಾ ತರಹದ ಅಸ್ತ್ರಗಳನ್ನು ಪ್ರಕ್ಷೇಪ ಮಾಡುತ್ತ ಇದ್ದಾರೆ ಸ್ವಯಂ ಹಿರಣ್ಯಕಶಿಪುವೂ ಅಸ್ತ್ರಗಳನ್ನ ಹಾಕುತ್ತಾ ಇದ್ದಾನೆ ನರಸಿಂಹ ದೇವರ ಮೇಲೆ ಕೆಲವು ಆಯುಧಗಳು, ಕೆಲವು ಮಂತ್ರಪೂತವಾದ ಅಸ್ತ್ರಗಳು. ಸುಮಾರು ಐವತ್ತೊಂದು ತರಹದ ಶಸ್ತ್ರಾಸ್ತ್ರಗಳನ್ನ ನರಸಿಂಹ ದೇವರ ಮೇಲೆ ಪ್ರಕ್ಷೇಪ ಮಾಡಿದ್ದಾನೆ. ವಿಚಿತ್ರ ವಿಚಿತ್ರವಾದ ಹೆಸರುಗಳೆಲ್ಲಾ ಇವೆ ಸುಭೈರವ, ಕಾಲಚಕ್ರ, ವಿಷ್ಣುಚಕ್ರ, ಧರ್ಮಚಕ್ರ, ಮಹಾಚಕ್ರ, ಐಯಿಂದ್ರಚಕ್ರ, ಪೈತಾಮಹಸ್ತ್ರ, ಋಷಿಚಕ್ರ, ಅಶನೀ, ರೌದ್ರಾಸ್ತ್ರ, ಶೂಲಾಸ್ತ್ರ ಈ ರೀತಿ ಒಂದಲ್ಲ ಎರಡಲ್ಲ ಐವತ್ತೊಂದು ತರಹದ ಶಸ್ತ್ರಾಸ್ತ್ರಗಳನ್ನ ನರಸಿಂಹ ದೇವರ ಮೇಲೆ ಪ್ರಕ್ಷೇಪ ಮಾಡಿದ್ದಾನೆ ಏನು ಆಗಬೇಕು ನರಸಿಂಹ ದೇವರಿಗೆ ಏನಿಲ್ಲ ಪುಷ್ಪಾರ್ಚನೆ ಮಾಡಿದ ಹಾಗೆ ಆಗಿದೆ ಏನು ಮಾಡಿಲ್ಲ. ನರಸಿಂಹ ದೇವರು ಗಂಭೀರವಾಗಿ ಧೀರ ಗಂಭೀರ ಮುದ್ರೆಯಲ್ಲಿ ಅತ್ಯಂತ ನಿಶ್ಚಿಂತರಾಗಿ ನೀನೇನು ಪ್ರಯೋಗ ಮಾಡುತ್ತೀಯೋ ಮಾಡು ನಿನ್ನದೆಲ್ಲಾ ಶಕ್ತಿ

ಉಪಯೋಗಿಸು ಅಂತ ಅವಕಾಶ ಕೊಟ್ಟಿದ್ದಾರೆ ಏನು ಆಗಿಲ್ಲ ನರಸಿಂಹ ದೇವರಿಗೆ. ಬಾಣಗಳ ವೃಷ್ಟಿಯನ್ನು ಮಾಡುತ್ತ ಇದ್ದಾರೆ ವಜ್ರಗಳು ಮುದ್ಗರಗಳು ಕೂಡಪಾಶಾದಿ ಆಯುಧಗಳನ್ನ.

ಸ್ವಲ್ಪಮಪ್ಯಸ್ಯ ನ ಕ್ಷುಣ್ಣಮೂರ್ಜಿತಸ್ಯ ಮಹಾತ್ಮನಃ ॥ (44.21 ಭವಿಷ್ಯಪರ್ವ)

ಒಂದೇ ಒಂದು ಗಾಯ ಆಗಿಲ್ಲ, ಒಂದು ಹನಿ ರಕ್ತ ಬಂದಿಲ್ಲ, ಒಂದು ಕೂದಲಿಗೆ ಧಕ್ಕೆ ಆಗಿಲ್ಲ ನರಸಿಂಹ ದೇವರಿಗೆ. ನರಸಿಂಹ ದೇವರ ಉಪಾಸನೆಯನ್ನು ಮಾಡಿದರೆ ಎಲ್ಲ ಕಷ್ಟಗಳ ಪರಿಹಾರ ಆಗುತ್ತದೆ, ಯಾವುದೇ ಭೂತ ಪ್ರೇತ ಪಿಶಾಚಗಳ ಬಾಧೆ ಇರಬಹುದು, ಶಸ್ತ್ರಾಸ್ತ್ರಗಳ ಬಾಧೆ ಇರಬಹುದು, ಇನ್ನನೇಕ ವಿಧವಾದ ದುಷ್ಟರ ಉಪಟಳಗಳು ಇರಬಹುದು ಅವುಗಳೆಲ್ಲವೂ ದೂರವಾಗುತ್ತವೆ ಅಂತನ್ನುವುದಕ್ಕೆ ಇದು ಪ್ರತ್ಯಕ್ಷವಾದ ನಿದರ್ಶನ. ಹರಿವಂಶ ಹೇಳುತ್ತಾ ಇದೆ ಈ ರೀತಿ ನೀವು **'ತಂ ಯಥಾ ಯಥಾ ಉಪಾಸತೇ ಸ ತಥೈವ ಭವತಿ'** ನರಸಿಂಹ ದೇವರಿಗೆ ಯಾವ ಯಾವ ಶಸ್ತ್ರಾಸ್ತ್ರಗಳಿಂದಲೂ ಕಿಂಚಿತ್ತು ಬಾಧೆ ಆಗಿಲ್ಲ ಅಂತ. ಚಿಂತನ ಮಾಡಿದರೆ ನಿಮಗೂ ಯಾವ ದುಷ್ಟರಿಂದಲೂ ಬಾಧೆ ಆಗುವುದಿಲ್ಲ ಅನ್ನುವುದನ್ನು ನಮಗೆ ಶಾಸ್ತ್ರ ತಿಳಿಸಿಕೊಡುತ್ತದೆ ಅಂತಹ ಅದ್ಭುತವಾದ ನರಸಿಂಹ ದೇವರ ರೂಪ. ಕಂಪನನೇ ಮಾಡಿಲ್ಲ ನರಸಿಂಹ ದೇವರು, ನಗು ನಗುತ್ತಾ ಕುಳಿತಿದ್ದಾರೆ ಆದಕ್ಕಾಗೇನೆ **'ಸಹಸ್ರಶಶಿ ಸಂನಿಭಮ್'** ಚಂದ್ರನಂತೆ ಅತ್ಯಂತ ಸೌಮ್ಯರಾಗಿ ಮಂದಹಾಸವನ್ನು ಮಾಡುತ್ತ ನಿಮ್ಮ ಎಲ್ಲಾ ಶಸ್ತ್ರಾಸ್ತ್ರಗಳ ಪ್ರಯೋಗಗಳನ್ನು ಮಾಡಿ ಮುಗಿಸಿ ನೋಡೋಣ ಆಮೇಲೆ ಅಂತ. ಆಮೇಲೆ ಬೇರೆ ಬೇರೆ ಅಸುರರೆಲ್ಲ ಹಿಂದೆ ನೀವು ಕೇಳಿದ ಹಾಗೆ ವಿಚಿತ್ರ ಮುಖಗಳು ಹುಲಿ ಸಿಂಹ ಕರಡಿ ಚಿರತೆ ಕತ್ತೆ ಹೀಗೆ ನಾನಾ ವಿಧವಾದ ಮುಖಗಳಿಂದ ಕೂಡಿದ ಅಸುರರು, ಕಾಗೆ ಹದ್ದು ಮೊದಲಾದ ಪಕ್ಷಿಗಳ ಮುಖದ ಅಸುರರು, ಎಲ್ಲಾ ತರಹದ ಅಸುರರು ಬಂದು ನಾನಾ ವಿಧವಾದಂತಹ ಚಕ್ರಗಳನ್ನು ಪರಮಾತ್ಮನ ಮೇಲೆ ಎಸೆದಿದ್ದಾರೆ, ಅದನ್ನೆಲ್ಲ ನುಂಗಿ ಬಿಟ್ಟಿದ್ದಾನೆ ಪರಮಾತ್ಮ. ಭಾರೀ ಘೋರವಾದ ಶಕ್ತಿಯನ್ನು ಪ್ರಯೋಗ ಮಾಡಿದ್ದಾರೆ, ಹೂಂಕಾರದಿಂದಲೇ ಶಕ್ತಿಯನ್ನು ನಾಶ ಮಾಡಿದ್ದಾನೆ, ಗರ್ಜನೆ ಮಾಡುವ ಮಾತ್ರದಿಂದ ಎಲ್ಲಾ ಸೈನಿಕರು ಓಡಿ ಹೋಗುತ್ತ ಇದ್ದಾರೆ. ಕಲ್ಲುಗಳ ವೃಷ್ಟಿಯನ್ನು ಮಾಡುತ್ತಾರೆ ಪರಮಾತ್ಮನ ಮೇಲೆ, ಏನು ಪರಮಾತ್ಮನಿಗೆ ವಿಕಾರ ಇಲ್ಲ, ಧೋ ಧೋ ಧೋ ಮಳೆ ಸುರಿಯುವಂತೆ ಮಾಡಿದ್ದಾರೆ ನೀರಿನ ವೃಷ್ಟಿ, ಪರಮಾತ್ಮನ ಸುತ್ತಲೂ ಮಳೆ ಬೀಳುತ್ತಾ ಇದೆ. ಒಂದು ಹನಿಯೂ ದೇವರಿಗೆ ಸಿಡಿದಿಲ್ಲ, ಸಿಡಿದರೂ ಏನು ಆಗುತ್ತ ಇರಲಿಲ್ಲ ಅನ್ನುವ ವಿಚಾರ ಬೇರೆ ಆದರೆ ಪರಮಾತ್ಮ ತನ್ನ ಅದ್ಭುತವಾದ ಶಕ್ತಿಯನ್ನು ತೋರಿಸುತ್ತಾನೆ. ಆ ಪರ್ಜನ್ಯ, ಆ ವರುಣ, ಆ ಇಂದ್ರ ಎಲ್ಲರೂ ಅಧೀನ, ಇವರು ಯಾವುದೇ ಮಂತ್ರಗಳನ್ನು ಪ್ರಯೋಗ ಮಾಡಿ ಏನೇ ಅಸ್ತ್ರಗಳನ್ನು ಬಿಟ್ಟರೂ, ಅವರೆಲ್ಲಾ ದೇವತೆಗಳು ಪರಮಾತ್ಮನ ಸೇವಾ ರೂಪದಲ್ಲಿ ಸುತ್ತಲೂ ಮಳೆ ಸುರಿಸುತ್ತಾ ಇದ್ದಾರೆ. ಒಂದು ಹನಿ ದೇವರಿಗೆ ಅಪಚಾರವಾಗುವ ರೀತಿಯಲ್ಲಿ ಮಳೆಯನ್ನು ಸುರಿಸುತ್ತಾ ಇಲ್ಲ.

ನೋಡಿ, ಪರಮಾತ್ಮ **'ತಿಳಿಯದೋ ನಿನ್ನಾಟ ತಿರುಪತಿಯ ವೆಂಕಟರಮಣ'** ಒಂದೊಂದು ಅವತಾರದಲ್ಲಿ ಒಂದೊಂದು ರೀತಿ. ಅಲ್ಲಿ ಮಳೆ ಸುರಿಸಿದರೆ ಇಂದ್ರ ಗೋವರ್ಧನ ಪರ್ವತವನ್ನು ಎತ್ತುವ ಮೂಲಕ ಎಲ್ಲರನ್ನು ರಕ್ಷಣೆ ಮಾಡಿದ ಒಂದು ಹನಿ ನೀರು ಸಿಡಿಯದೇ ಇದ್ದ ಹಾಗೆ ನೋಡಿಕೊಂಡ. ಈಗ ಯಾವ ಪರ್ವತವೂ ನನಗೆ ಬೇಕಾಗಿಲ್ಲ ಅನ್ನುವುದನ್ನು ತೋರಿಸಿಕೊಡುತ್ತಾ ಇದ್ದಾನೆ ದೇವರು, ಮಳೆ ಸುರೀತಾ ಇದೆ ಒಂದು ಹನಿ ಸಿಡೀತಾ ಇಲ್ಲ ಪರ್ವತದ ಅಪೇಕ್ಷೆಯೂ ನನಗಿಲ್ಲ ಅನ್ನುವುದನ್ನ ಪರಮಾತ್ಮ ತಿಳಿಸುತ್ತಾನೆ. ಆ ಪರ್ವತಕ್ಕೆ ಅನ್ನುವುದಕ್ಕೆ ಪರಮಾತ್ಮ ಪರ್ವತದ ಮೇಲೆ ಕುಳಿತಿದ್ದಾನೆ **'ಏಳುಕೊಂಡಲವಾಡಾ'** ಪರ್ವತವೂ ನನ್ನ ಅಧೀನ. ಪರ್ವತದ ಮೇಲೆ, ಪರ್ವತವನ್ನೂ ಮೀರಿ ನಿಂತವ ಅಂತ ಅಹೋಬಲದ ನರಸಿಂಹ ಪರ್ವತದ ಮೇಲೆ ಕುಳಿತಿದ್ದಾನೆ, ಪರ್ವತದ ಅವಶ್ಯಕತೆಯೂ ನನಗಿಲ್ಲ. ನನ್ನ ಸ್ವರೂಪ ಸಾಮರ್ಥ್ಯದಿಂದಲೇ ನಾನೆಲ್ಲವನ್ನು ಮಾಡಿಕೊಳ್ಳಬಹುದು ಅಂತ.

ಬಾಹ್ಯತೋ ವವೃಷೇ ವರ್ಷಂ ನೋಪರಿವಿಷ್ಟಾತ್ ತು ತೋಯದಃ । (45.25 ಭವಿಷ್ಯಪರ್ವ)

ಇವನ ತಲೆಯ ಮೇಲೆ ಒಂದು ಹನಿ ಮಳೆ ಬಿದ್ದಿಲ್ಲ, ಸರಿ ಆಮೇಲೆ ಮಾಯಾ ಯುದ್ಧವನ್ನು ಪ್ರಾರಂಭ ಮಾಡಿದರು ಭಾರೀ ಅಗ್ನಿಯನ್ನು ಸೃಷ್ಟಿ ಮಾಡಿ ವಾಯುವನ್ನ ಪ್ರಚೋದನೆಗೆ ಬಿಟ್ಟು ಅಗ್ನಿ ಹೊತ್ತುವಂತೆ ಮಾಡಿದ್ದಾರೆ ಏನು ಮಾಡಿದರೂ ಆ ಅಗ್ನಿ ಪರಮಾತ್ಮನ ಹತ್ತಿರ ಬರುತ್ತ ಇಲ್ಲ ಭಗವಂತ ಸುಮ್ಮನೆ ಇದ್ದಾನೆ. ಇಂದ್ರ ದೇವರು ನೋಡಿ, ಈಗ ಆ ಪರಮಾತ್ಮನ ಸೇವೆಯನ್ನು ಮಾಡುವುದಕ್ಕೆ ಧೋ ಧೋ ಮಳೆ ಸುರಿಸಿ ಆ ಅಗ್ನಿಯನ್ನು ಶಮನ ಮಾಡಿಬಿಟ್ಟಿದ್ದಾರೆ, ಕತ್ತಲೆಯನ್ನು ಸೃಷ್ಟಿ ಮಾಡಿದ್ದಾರೆ ಭಗವಂತನ ನೈಜವಾದ ಅನಂತ ಸೂರ್ಯ ಪ್ರಕಾಶದಿಂದಲೇ ಕತ್ತಲೆ ನಶಿಸಿ ಹೋಗಿದೆ ಏನೂ ಮಾಡಲಿಕ್ಕೂ ಆಗುತ್ತ ಇಲ್ಲ ದೈತ್ಯರಿಗೆ. ಈ ರೀತಿ ಘನಘೋರವಾದಂತಹ ಯುದ್ಧ ಮುಂದುವರೆಯುತ್ತ ಇದೆ. ಸ್ವತಃ ಹಿರಣ್ಯಕಶಿಪು ಯಾವಾಗ ಯುದ್ಧಕ್ಕೆ ಪ್ರಾರಂಭ ಮಾಡಿದ್ದಾನೆ ಜೋರಾಗಿ ಹೆಜ್ಜೆಗಳನ್ನು ಇಡುತ್ತಾ ಇದ್ದಾನೆ ಅವನು ಎಂತಹ ಪರಾಕ್ರಮಿ ನೋಡಿ ಅವನು ಹೆಜ್ಜೆ ಇಡುತ್ತಾ ಇದ್ದರೆ ಭೂಮಿಯ ಮೇಲೆ ಭೂಕಂಪ ಆಗುತ್ತಾ ಇದೆ, ಆವಾಹ ಪ್ರವಾಹ ವಿವಾಹ ಪರವಾಹ ಸಮವಾಹ ಉದ್ವಾಹ ಪರಿವಾಹ ಎಂಬ ಸಪ್ತ ವಾಯುಗಳೆಲ್ಲ ಕ್ಷುಬ್ಧವಾಗುತ್ತ ಇವೆ, ಸಮುದ್ರಗಳು ಕ್ಷುಬ್ಧವಾಗುತ್ತ ಇವೆ,ನದಿಗಳೆಲ್ಲಾ ವಿಪರೀತವಾಗಿ ಹರಿಯುತ್ತ ಇವೆ, ಉಲ್ಕಾಪಾತ ಆಗುತ್ತ ಇದೆ, ರಕ್ತದ ವೃಷ್ಟಿ ಆಗುತ್ತ ಇದೆ. ನಾನಾ ವಿಧವಾದಂತಹ ವಿಚಿತ್ರವಾದ ಶಕುನಗಳು ದೇವಸ್ಥಾನದಲ್ಲಿ ಇರುವ ದೇವತೆಗಳ ಪ್ರತಿಮೆಗಳೆಲ್ಲಾ ಮಾತನಾಡುತ್ತಾ ಇವೆ ಅಳುತ್ತಾ ಇವೆ ಇವೆಲ್ಲಾ ಅಪಶಕುನಗಳು. ಹಿರಣ್ಯಕಶಿಪು ದೈತ್ಯ ಗುರುಗಳಾದ ಶುಕ್ರಾಚಾರ್ಯರಿಗೆ ಹೋಗಿ ಕೇಳಿದ ಇದೆಲ್ಲಾ ಏನು ನಡೆಯುತ್ತಾ ಇದೆ ಅಂತ ಏನಿಲ್ಲ ನೀನು ಸಾಯುತ್ತೀ ಅಂತ ಹೇಳಿಬಿಟ್ಟರು ಅಷ್ಟೇ. ನಿನ್ನ ಮಗ ಪ್ರಹ್ಲಾದ ಹೇಳಿದ ಹಾಗೆ ಕೇಳಿ ಸುಮ್ಮನೇ ನಮಸ್ಕಾರ ಮಾಡಿದಿ ಶರಣಾಗನಾದಿ ಬದುಕುತ್ತೀ ಇಲ್ಲ ಅಂದರೆ ಏನು ಇಲ್ಲೇ ಇಲ್ಲ.

ಬೃಹತ್ ಭಯಂ ಹಿ ನಚಿರಾದ್ ಭವಿಷ್ಯತಿ ನ ಸಂಶಯಃ ॥ (46.30 ಭವಿಷ್ಯಪರ್ವ)

ಅಂತ ಹೇಳಿದರು ಶುಕ್ರಾಚಾರ್ಯರು. ದೊಡ್ಡ ಭಯ ಬರುತ್ತಾ ಇದೆ. ನೀನು ಈ ರೀತಿ ಅಸುರರ ವಿನಾಶಕ್ಕೆ ಒಂದು ದೊಡ್ಡ ದಾರಿಯನ್ನು ಮಾಡಿಕೊಡುತ್ತ ಇದ್ದೀ, ನರಸಿಂಹ ದೇವರ ದ್ರೋಹವನ್ನು ಮಾಡಬೇಡ ಅಂತ ಅವರೂ ಹೇಳಿದ್ದಾರೆ ಕೇಳಿಲ್ಲ, ನಾನಾ ವಿಧವಾದಂತಹ ನಾಗಗಳು ಪ್ರಕ್ಷುಬ್ಧವಾಗಿವೆ, ನದಿಗಳೆಲ್ಲ ಪ್ರಕ್ಷುಬ್ಧವಾಗುತ್ತಾ ಇವೆ, ಇಂತಹ ಸಂದರ್ಭದಲ್ಲಿ ಎಲ್ಲಾ ಪರ್ವತಗಳು ಕಂಪಿಸುತ್ತಾ ಇವೆ ಆಗ ಆದಿತ್ಯರು ಸಾಧ್ಯರು ವಿಶ್ವೇ ದೇವತೆಗಳು ರುದ್ರರು ಎಲ್ಲಾ ದೇವತೆಗಳು ನರಸಿಂಹ ದೇವರಿಗೆ ಶರಣಾಗತರಾಗುತ್ತ ಇದ್ದಾರೆ. ನಿನಗೆ ಏನೇನು ಆಗಿಲ್ಲ, ನಿನ್ನ ಕೂದಲಿಗೂ ಧಕ್ಕೆ ಆಗಿಲ್ಲಾ ಸರಿ ಸ್ವಾಮಿ ಆದರೆ ಯಾಕೆ ತಡ, ಹಿರಣ್ಯಕಶಿಪುವಿನ ಸಂಹಾರ ಬೇಗ ಆಗಲಿ. ಅದರಿಂದ ಎಷ್ಟು ಇಡೀ ಜಗತ್ತಿನಲ್ಲಿ ಕ್ಷೋಭವಾಗುತ್ತ ಇದೆ ಎಲ್ಲ ಕಡೆಗೆ, ಇಚ್ಛಾ ಮಾತ್ರದಿಂದ ನೀನು ಅವನನ್ನು ಸಂಹಾರ ಮಾಡಬಹುದು. ನಿನಗೇನು ಅನಂತ ಪರಾಕ್ರಮ ಇರುವ ನಿನಗೆ ಒಂದು ಇಚ್ಛಾ ಮಾತ್ರದಿಂದ ಹಿರಣ್ಯಕಶಿಪುವನ್ನು ಸಂಹಾರ ಮಾಡಲಿಕ್ಕೆ ಸಾಧ್ಯ ಇದೆ, ಯಾಕೆ ಆಟ ಆಡುತ್ತ ಇದ್ದೀರಿ.

ಜಹಿ ದೇವ ದಿತೇಃ ಪುತ್ರಂ ದಾನವಂ ಲೋಕನಾಶನಮ್ । (47.3 ಭವಿಷ್ಯಪರ್ವ)

ತ್ವಂ ಗುರುಃ ಸರ್ವಲೋಕಾನಾಂ ತ್ವಮಿನ್ದ್ರಸ್ತ್ವಂ ಪಿತಾಮಹಃ ।
ಋತೇ ತ್ವದನ್ಯಚ್ಛರಣಂ ನ ಭೂತಂ ನ ಭವಿಷ್ಯತಿ ॥ (47.5 ಭವಿಷ್ಯಪರ್ವ)

ನಮ್ಮೆಲ್ಲರಿಗೆ ದೇವತೆಗಳಿಗೆ ರಕ್ಷಕ ಶರಣ ಅರಣ ನೀನೇ, ಹಿಂದೂ ಯಾರು ನಮಗೆ ರಕ್ಷಕರಿರಲಿಲ್ಲ ಇನ್ನು ಮುಂದೂ ನಮಗೆ ರಕ್ಷಕರಿಲ್ಲ ಸರ್ವ ರಕ್ಷಕ ಸರ್ವದಾ ನೀನೇ. ಆದ್ದರಿಂದ ದಯಮಾಡಿ ಶೀಘ್ರದಲ್ಲಿ ಸಂಹಾರವನ್ನು ಮಾಡು ಅಂತ ಪ್ರಾರ್ಥನೆಯನ್ನ ಮಾಡಿದ್ದೇ ತಡ ನರಸಿಂಹ ದೇವರು ಒಂದು ಗರ್ಜನೆಯನ್ನು ಮಾಡಿದ್ದಾರೆ ನೋಡಿ, ಗರ್ಜನೆ ಮಾಡಿದರೆ ಎಲ್ಲ ಅಸುರರು ನಡುಗಿ ಹೋಗಿದ್ದಾರೆ. ನಾನಾ ವಿಧವಾದಂತಹ ಅಸುರರ ಗುಂಪೆಲ್ಲಾ ಅಲ್ಲಿತ್ತು ಕಾಲಕೇಯರು, ಸಂಹ್ಲಾದೀಯರು ನಾನಾ ತರಹದ ವಿಚಿತ್ರ ವಿಚಿತ್ರವಾದ ಗಣಗಳು ವೇಗ ವೇಗಲೇಯ ಸಂಹ್ಲಿಕೇಯರು ಕ್ರೋಧವಶರು ಎಲ್ಲಾ ಗಣದ ಅಸುರರು ಇದ್ದರು ಎಲ್ಲರೂ ತತ್ತರಿಸಿ ಹೋಗಿದ್ದಾರೆ. ಯುದ್ಧಕ್ಕೆ ಅಂತ ಬಂದಿದ್ದಾರೆ ಆದರೆ ನರಸಿಂಹ ದೇವರು ಓಂಕಾರ ಪ್ರತಿಪಾದ್ಯವಾದ, ಅನಂತಗುಣ ಪೂರ್ಣರಾಗಿ ಇರುವಂತಹ ಆ ನರಸಿಂಹ ದೇವರು ಸ್ವತಃ ತಾವು ತಮ್ಮ ಅದ್ಭುತವಾದಂತಹ ಪರಾಕ್ರಮವನ್ನು ಉಪಯೋಗಿಸಿ ಅವನನ್ನು ಸಂಹಾರ ಮಾಡಿದ್ದಾರೆ.

ಯತ್ ತ್ವಯಾ ವಿಹಿತಂ ದೇವ ನಾರಸಿಂಹಮಿದಂ ವಪುಃ ।

ಏತದೇವಾರ್ಚಯಿಷ್ಯನ್ತಿ ಪರಾವರವಿದೋ ಜನಾಃ ॥ (47.17 ಭವಿಷ್ಯಪರ್ವ)

ದೇವತೆಗಳೆಲ್ಲ ಬಂದು ನರಸಿಂಹ ದೇವರ ಸ್ತೋತ್ರವನ್ನು ಮಾಡುತ್ತ ಇದ್ದಾರೆ ಎಂತಹ ದೊಡ್ಡ ಅನುಗ್ರಹವನ್ನು ಮಾಡಿದ್ದೀ ಹಿರಣ್ಯಕಶಿಪುವನ್ನು ಸಂಹಾರ ಮಾಡಿ ಮತ್ತೆ ಹಿರಣ್ಯಕಶಿಪು ಏನು ವರ ಕೇಳಿದ್ದ ಹಾಗೆ ಸಂಹಾರ ಮಾಡಿದ್ದಾರೆ ಕೇವಲ ಹಸ್ತದಿಂದ ಯಾವ ಆಯುಧಗಳು ಇಲ್ಲದೇ ಕೇವಲ ತಮ್ಮ ಉಗುರಿಗಳಿಂದಲೇನೆ ಸಂಹಾರ ಮಾಡಿದ್ದಾರೆ. ಸಂಹಾರ ಮಾಡಿ ಎಲ್ಲ ದೇವತೆಗಳು ಕೂಡ ಅವರನ್ನು ಸ್ತೋತ್ರ ಮಾಡುತ್ತ ಇದ್ದಾರೆ, ಬ್ರಹ್ಮದೇವರು ವಿಶೇಷವಾಗಿ ಸ್ತೋತ್ರ ಮಾಡಿದ್ದಾರೆ. ಎಲ್ಲಾ ಸಿದ್ಧಿ ಮಂತ್ರಗಳು ಪುರಾಣಗಳು ಹವಿಸ್ಸು ಯಜ್ಞ ಹೋತ್ರುಗಳು ಋತ್ವಿಜರು ಮನುಷ್ಯ ಶರೀರ ಮನಸ್ಸು ಬುದ್ಧಿ ಇಂದ್ರಿಯಗಳು ಎಲ್ಲದಕ್ಕೂ ಪ್ರೇರಕನಾದಂತಹ ಸ್ವಾಮಿ ನೀನು, ಪ್ರತಿಕ್ಷಣದಲ್ಲಿ ನಿನ್ನ ಅನಂತ ಉಪಕಾರ ಶರೀರದ ಒಳಗೂ ಹೊರಗೂ ಎಲ್ಲ ಜೀವರಾಶಿಗಳಿಗೆ ಇರುತ್ತೆ. ಅಂತಹ ನೀನು ಇದೀಗ ಒಂದು ಹೊಸ ಉಪಕಾರ ಮಾಡಿದ್ದೀ ಅಂತ ಎಂದೂ ಮಾಡದೇ ಮಾಡಿದ್ದೀ ಅಂತ ಸರ್ವಥಃ ಅಲ್ಲ ನಿರಂತರ ಉಪಕಾರ ಮಾಡುವಂತಹ ನೀನು ಈಗಲೂ ವಿಶೇಷ ಪರಮಾನುಗ್ರಹವನ್ನು ಮಾಡಿದ್ದೀ ಆದ್ದರಿಂದ ನಿನಗೆ ಅನಂತ ಅನಂತ ನಮನಗಳು ಅಂತ ನಮಸ್ಕಾರ ಮಾಡಿದ್ದಾರೆ. ನರಸಿಂಹ ದೇವರು ಎಲ್ಲರಿಗೆ ಅನುಗ್ರಹವನ್ನು ಮಾಡಿ ಕ್ಷೀರ ಸಾಗರದ ಉತ್ತರ ತೀರಕ್ಕೆ ನರಸಿಂಹ ದೇವರು ದಿಗ್ವಿಜಯವನ್ನು ಮಾಡಿದ್ದಾರೆ ಅಲ್ಲಿ ಮತ್ತೆ ಪುನಃ ತಮ್ಮ ಮೂಲರೂಪ ಪದ್ಮನಾಭ ರೂಪದಲ್ಲಿ ಒಂದು ರೂಪದಿಂದ ನರಸಿಂಹ ದೇವರು ಯಾವಾಗಲೂ ಇದ್ದೇ ಇದ್ದಾರೆ, ಅನಂತ ರೂಪಗಳಿಂದ ಎಲ್ಲ ಕಡೆಗೆ ವ್ಯಾಪ್ತರಾಗಿಯೂ ಇದ್ದಾರೆ. ಆ ಅವತಾರ ಕಾರ್ಯ ಮುಗಿದಿದೆ ಅನ್ನುವುದಕ್ಕೆ ತಾವು ಆ ರೂಪದಲ್ಲಿ ಸಂಶ್ಲೇಷ ವಿಶೇಷವನ್ನು ಒಂದು ರೂಪದಿಂದ ಬಂದಿದ್ದಾರೆ ಅಂತ ಇಲ್ಲಿ ತಿಳಿಸುತ್ತಾರೆ.

ನರಸಿಂಹಾವತಾರವಾದ ಮೇಲೆ ವಾಮನಾವತಾರದ ಬಗ್ಗೆ ವೈಶಂಪಾಯನರು ತಿಳಿಸುತ್ತಾರೆ. ಪರಮಾತ್ಮ ಇಂದ್ರ ದೇವರ ಸೃಷ್ಟಿಯನ್ನು ಮಾಡಿದವ, ಇಂದ್ರ ದೇವರಿಗೆ ತಮ್ಮನಾಗಿ ಯಾಕೆ ಹುಟ್ಟಿದ, ಸಕಲ ಲೋಕ ನಮಸ್ಕೃತನಾಗಿ ಇರತಕ್ಕಂತಹ ಪರಮಾತ್ಮ ಸರ್ವನಿಯಾಮಕ ಅಂತಹ ಪರಮಾತ್ಮ ಯಾಚನೆಯನ್ನು ಯಾಕೆ ಮಾಡಿದ ಅಂತೆಲ್ಲ ಜನಮೇಜಯರು ಪ್ರಶ್ನೆ ಕೇಳಿದ್ದಕ್ಕೆ ವೈಶಂಪಾಯನರು ತಿಳಿಸುತ್ತಾ ಇದ್ದಾರೆ. ನರಸಿಂಹ ದೇವರು ಹಿರಣ್ಯಕಶಿಪುವನ್ನ ಸಂಹಾರ ಮಾಡಿದ್ದು, ವರಾಹ ದೇವರು ಹಿರಣ್ಯಾಕ್ಷನನ್ನ ಸಂಹಾರ ಮಾಡಿದ್ದು ಇದೆಲ್ಲ ಸಹನೆ ಮಾಡಿಕೊಳ್ಳುವುದಕ್ಕೆ ಆಗಿಲ್ಲ ದೈತ್ಯರಿಗೆ. ಎಲ್ಲರೂ ಒಂದು ಸಮಾಲೋಚನಾ ಸಭೆಯನ್ನು ಮಾಡಿದ್ದಾರೆ ಏನು ಮಾಡಬೇಕು, ಈಗ



ದೇವತೆಗಳ ವಿರೋಧ ಮಾಡಬೇಕು, ಈಗ ನಮಗೆ ಒಬ್ಬ ನಾಯಕ ಬೇಕು. ಆ ಹಿರಣ್ಯಕಶಿಪುವಿನ ಮರಿ ಮಗ ಬಲಿಚಕ್ರವರ್ತಿ ಅವನನ್ನೇ ನಮ್ಮ ನಾಯಕನನ್ನಾಗಿ ಮಾಡಿಕೊಳ್ಳೋಣ ಅವನನ್ನು ಮುಂದೆ ಮಾಡಿಕೊಂಡು ನಾವು ಯುದ್ಧ ಮಾಡೋಣ ಮತ್ತೆ ನಮ್ಮ ರಾಜ್ಯವನ್ನು ನಾವು ಪಡೆಯೋಣ ಅಂತ ಅವರೆಲ್ಲ ವಿಚಾರವನ್ನು ಮಾಡುತ್ತಾ ಇದ್ದಾರೆ.

ತತ್ ಪಿತಾಮಹರಾಜ್ಯಂ ತ್ವಂ ಪ್ರತ್ಯಾಹರ್ತುಮಿಹಾರ್ಹಸಿ ।

ಅಸ್ಮಾಭಿಃ ಸಹಿತೋ ನಾಥ ತ್ರೈಲೋಕ್ಯಮಿದಮವ್ಯಯಮ್ ॥ (48.27 ಭವಿಷ್ಯಪರ್ವ)

ನೋಡಪ್ಪ ಬಲಿಚಕ್ರವರ್ತಿ, ನಿನ್ನ ಪರಾಕ್ರಮ, ನಿನ್ನ ತಪಸ್ಸು, ನೀನು ಬಹಳ ಧಾರ್ಮಿಕನಾಗಿದ್ದೀ ಆ ಸತ್ಯ ಧರ್ಮ ತಪಸ್ಸು ನಿನ್ನಲ್ಲಿದೆ ಆ ಸತ್ಯ ಧರ್ಮ ತಪಸ್ಸುಗಳಿಂದಲೇ ದೇವತೆಗಳು ನಮ್ಮನ್ನು ಸೋಲಿಸುತ್ತ ಇದ್ದಾರೆ. ನಮ್ಮಲ್ಲಿ ಅಷ್ಟು ಸತ್ಯ ಧರ್ಮ ತಪಸ್ಸು ಶುದ್ಧ ಸದಾಚಾರಗಳು ಯಾವುದು ಇಲ್ಲ ಅನ್ನುವುದಕ್ಕೆ ಸೋಲುತ್ತ ಇದ್ದೇವೆ ಆದರೆ ನಿನ್ನಲ್ಲಿ ಅದೆಲ್ಲಾ ಇದೆ, ನೀನು ನಮ್ಮ ಪರವಾಗಿ ಮುಂದೆ ನಿಂತರೆ ನಿನ್ನಿಂದ ನಾವು ಗೆಲುವನ್ನು ಸಾಧಿಸಬಹುದು. ಈ ಮಾತನ್ನು ನಾವು ಹೇಳುತ್ತಾ ಇಲ್ಲ ಹರಿವಂಶ ಹೇಳುತ್ತಾ ಇದೆ.

ದೃಷ್ಟ್ವಾ ಧರ್ಮಪರಂ ನಿತ್ಯಂ ಸತ್ಯವಾಕ್ಯಂ ಜಿತೇನ್ದ್ರಿಯಮ್ ।

ಶೌರ್ಯಾಧ್ಯಯನಸಮ್ಪನ್ನಂ ಸರ್ವಜ್ಞಾನವಿಶಾರದಮ್ ॥ (48.18 ಭವಿಷ್ಯಪರ್ವ)

ಪರಾವರಗೃಹೀತಾರ್ಥಂ ತತ್ತ್ವದರ್ಶಿನಮವ್ಯಯಮ್ ॥ (48.19 ಭವಿಷ್ಯಪರ್ವ)

ಇಷ್ಟೆಲ್ಲಾ ಸತ್ಯದರ್ಶನ, ತತ್ವದರ್ಶನ, ಸತ್ಯಧರ್ಮರತ ಈ ಎಲ್ಲ ಒಳ್ಳೆಯ ಗುಣಗಳು ನಿನ್ನಲ್ಲಿ ಇದ್ದದ್ದಕೋಸ್ಕರ ನಿನ್ನನ್ನು ನಾವು ರಾಜನನ್ನಾಗಿ ಮಾಡುತ್ತ ಇದ್ದೇವೆ ಅಂದರೆ ಇನ್ನೇನು ಹೇಳಬೇಕು ಹೇಳಿರಿ ಯಾರು ಸರ್ಟಿಫೀಕೇಟು ಕೊಡಬೇಕು ಧರ್ಮ ಇದ್ದರೆ ಜಯ ಅನ್ನುವ ಮಾತು ಅಸುರರ ಬಾಯಿಯಿಂದ ಬರುತ್ತಾ ಇದೆ. ಸತ್ಯ ಇದ್ದಲ್ಲಿ, ತಪಸ್ಸು ಇದ್ದಲ್ಲಿ, ಅಧ್ಯಯನ ಇದ್ದಲ್ಲಿ, ಹರಿಭಕ್ತಿ ಇದ್ದಲ್ಲಿ ಜಯ ಅನ್ನುವ ಮಾತನ್ನು ಅಸುರರೇ ಒಪ್ಪಿಕೊಳ್ಳುತ್ತಾ ಇದ್ದಾರೆ ಆದರೆ ಅವರಿಗೆ ಬೇಕಾದದ್ದು ದೇವರ ದ್ರೋಹ. ಆದರೆ ಗೆಲ್ಲಬೇಕು ಅನ್ನುವುದಕ್ಕೆ ಒಬ್ಬ ವಿಷ್ಣು ಭಕ್ತನೇ ಬೇಕು ಅನ್ನುತ್ತಾರೆ ಅವರು, ಇದು ಬಹಳ ಅದ್ಭುತ. ಅಂದಮೇಲೆ ಸತ್ಯ ಧರ್ಮಗಳಿಂದ ತಪಸ್ಸಿನಿಂದ ನಾವು ಸಂಸಾರವನ್ನು ಗೆಲ್ಲಬೇಕು ಅನ್ನುವ ಸಂದೇಶವನ್ನು ಹರಿವಂಶದಿಂದ ನಾವು ಪಡೆಯುವುದಕ್ಕೆ ಸಾಧ್ಯ ಇದೆ. ಸರಿ, ಬಲಿ ಚಕ್ರವರ್ತಿ ಅಂದ ಅವನು ಪರಮ ವಿಷ್ಣು ಭಕ್ತ ಆದರೆ ನಾನು ಅಸುರ ಕುಲದಲ್ಲಿ ಹುಟ್ಟಿದ್ದರಿಂದ ಅಸುರರಿಗೆ ಜಯವನ್ನು ತಂದು ಕೊಡುವ ಕೆಲಸ ನನ್ನದು ಭಗವಂತನ ಸಂಕಲ್ಪ ತತ್ವಗುಣದ ಉನ್ನಾಹ ಆದಾಗ ದೇವತೆಗಳಿಗೆ, ತಮೋಗುಣದ ಉನ್ನಾಹ ಆದಾಗ ಅಸುರರಿಗೆ ಪರಮಾತ್ಮ ಜಯವನ್ನು ಕೊಡುತ್ತಾನೆ ಅನ್ನುವ ದೃಷ್ಟಿಯಲ್ಲಿ ಈಗ ನಾನು ಅಸುರರಿಗಾಗಿ ಪ್ರಯತ್ನವನ್ನು ಮಾಡುತ್ತೇನೆ ಅಂತ ಒಪ್ಪಿಕೊಂಡಿದ್ದಾನೆ.

ತ್ರೈಲೋಕ್ಯಮದ್ಯೈವ ಜಯಾಮ ಸರ್ವಮ್ ॥ (49.1 ಭವಿಷ್ಯಪರ್ವ)

ಮೂರು ಲೋಕಗಳನ್ನೂ ಗೆದ್ದು ಬಿಡೋಣ ಏನು ಚಿಂತೆ ಇಲ್ಲ ಅಂತ ಹೇಳುತ್ತಾನೆ. ಆಗ ಯಾರೆಲ್ಲ ಅಸುರರು ಅಲ್ಲಿ ಸೇರಿದ್ದರು ಅಂತ ವೈಶಂಪಾಯನರು ಒಂದು ಲಿಸ್ಟ ಕೊಡುತ್ತಾರೆ ಬಹಳ ದೊಡ್ಡ ಲಿಸ್ಟ ಇದೆ, ಇಷ್ಟೆಲ್ಲಾ ಲಿಸ್ಟ ಹೇಳಿ

ಕೊನೆಗೆ ಅನ್ನುತ್ತಾರೆ **'ಯಥಾಸ್ಮೃತಿ ಮಯಾ ಪ್ರೋಕ್ತಾ'**[1] ನೆನಪಿದ್ದಷ್ಟು ಹೇಳಿದ್ದೇನೆ ಇನ್ನು ಬಹಳ ಇದೆ ಅಂತ ಯಾಕೆ ಅಂದರೆ ಹೇಳಲಿಕ್ಕೆ ಸಾಧ್ಯವೇ ಇಲ್ಲ, ಅದು ದೇವತೆಗಳ ಸಂಖ್ಯೆಗಿಂತಲೂ ಅಸುರರ ಸಂಖ್ಯೆ ಹೆಚ್ಚು ಅಂತ. **'ಕಾನೀಯಸಾ ಏವ ದೇವಾ ಜ್ಯಾಯಸಾ ಅಸುರಾಃ'**[2] ಅಂತ ಉಪನಿಷತ್ತು ಹೇಳುತ್ತದೆ ಹೀಗಾಗಿ ದೇವತೆಗಳ ಸಂಖ್ಯೆಗಿಂತಲೂ ಅಸುರರ ಸಂಖ್ಯೆ ಹೆಚ್ಚು ಅದನ್ನು ಎಷ್ಟು ಅಂತ ಹೇಳೋಣ ಆದರೆ ಸುಮ್ಮನೆ ಕೆಲವನ್ನು ಮಾತ್ರ ಹೆಸರನ್ನು ನಾವು ಇಲ್ಲಿ ತಿಳಿಯುವುದಾದರೆ ಕೃಷ್ಣಾವತಾರದಲ್ಲಿ ಶ್ರೀಕೃಷ್ಣ ಪರಮಾತ್ಮ, ಬಲರಾಮ ಸಂಹಾರ ಮಾಡಿದ ಕೆಲವು ಅಸುರರೆಲ್ಲ ಇದ್ದಾರಲ್ಲ ಅವರೆಲ್ಲಾ ಈ ಲಿಸ್ಟೊಳಗೆ ಇದ್ದಾರೆ. ಇವರೇ ಮುಂದೆ ಅವತಾರ ಮಾಡಿ ಬಂದವರು ಪ್ರಲಂಬಾಸುರ ಇದ್ದಾನೆ, ನರಕಾಸುರ ಇದ್ದಾನೆ, ಧೇನುಕಾಸುರ ಬರುತ್ತಾನೆ ಈ ಲಿಸ್ಟೊಳಗೆ ಇನ್ನು ಅನೇಕ ಜನ ಇದ್ದಾರೆ ಇವರೆಲ್ಲಾ ಭಾರೀ ಭಾರೀ ಅಸುರರೆಲ್ಲ ಅಲ್ಲಿ ಸಮಾವೇಶ ಮಾಡಿ, ಸಮಾಲೋಚನೆ ಮಾಡಿ ಏನಾದರೂ ಮಾಡಿ ದೇವತೆಗಳ ವಿರೋಧವನ್ನು ಮಾಡಬೇಕು.

ಸರ್ವೇ ಮಾಯಾಧರಾ ದೈತ್ಯಾಃ ಸರ್ವೇ ದಿವ್ಯಸ್ತ್ರಯೋಧಿನಃ ।
ಸರ್ವೇಮದಬಲೋತ್ಸಿಕ್ತಾಃ ಸರ್ವೇ ಲಬ್ಧವರಾಃ ಪುರಾ ॥ (49.22 ಭವಿಷ್ಯಪರ್ವ)

ಒಬ್ಬೊಬ್ಬರು ಹೇಗಿದ್ದರು ಎಲ್ಲರಿಗೂ ಮಾಯಾವಿದ್ಯೇ ಗೊತ್ತು, ಎಲ್ಲರಿಗೂ ದಿವ್ಯವಾದ ಅಸ್ತ್ರಗಳೂ ಗೊತ್ತು ಮಂತ್ರಪೂರಿತವಾದ ಅಸ್ತ್ರಗಳನ್ನು ಬಿಡುವುದಕ್ಕೂ ಸಮರ್ಥರು. ಎಲ್ಲರಿಗೂ ವರ ಇದೆ ಬ್ರಹ್ಮ ದೇವರ ವರ, ರುದ್ರ ದೇವರ ವರ, ಗಣಪತಿಯ ವರ, ಸ್ಕಂದನ ವರ ಹೀಗೆ ಬೇರೆ ಬೇರೆ ವರಗಳನ್ನೆಲ್ಲಾ ಪಡೆದುಕೊಂಡಿದ್ದಾರೆ ಅಂತಹ ಮಹಾ ಮಹಾ ದೈತ್ಯರು ಅಲ್ಲಿ ದೇವತೆಗಳ ಜೊತೆಗೆ ಯುದ್ಧ ಮಾಡುವುದಕ್ಕೋಸ್ಕರ ಸಿದ್ಧರಾಗಿದ್ದಾರೆ. ಸುಬಾಹು, ಮೇಘನಾದ, ಭೀಮಗರ್ಭ, ಕನಕಮೂರ್ಧ, ವೇದವಾನ್ ಅನ್ನುವಂತಹ ಐದು ಜನ ಅತ್ಯಂತ ಭಾರೀ ಪರಾಕ್ರಮಿಗಳಾದ ದಾನವರು ಇಲ್ಲಿ ಮುಖ್ಯವಾಗಿ ವ್ಯವಸ್ಥಾಪಕರಾಗಿ ಯುದ್ಧದಲ್ಲಿ ನಿಂತಿದ್ದಾರೆ. ಬಲ ಅನ್ನುವ ಅಸುರ, ಒಂದು ಲಕ್ಷ ರಥಗಳು ಅವನ ಸುತ್ತಲಿವೆ ಅಂತೆ ಅವನ ಜೊತೆಗೆ ಸಹಾಯ ಮಾಡುವುದಕ್ಕೆ ಇರತಕ್ಕಂತಹ ಅಸುರ ಯೋಧರು ಸಹಾಯಕರಾಗಿ. **'ಬಲಭಿತ್'** ಅನ್ನುತ್ತಾರೆ ಇಂದ್ರನಿಗೆ ಆ ಬಲನನ್ನು ಸಂಹಾರ ಮಾಡುತ್ತಾನೆ ಅಂತಹ ಬಲ ಎಂಬ ಅಸುರನ ಸುತ್ತಲೂ ಒಂದು ಲಕ್ಷ ಜನ ಅಸುರರು ಸಹಾಯಕರಾಗಿ ನಿಂತಿದ್ದಾರೆ ಅಂತಹ ದೊಡ್ಡದಾದ ಒಂದು ಗುಂಪನ್ನು ತೆಗೆದುಕೊಂಡು ಕಾಗೆಯ ಧ್ವಜ ಅವನದು. ಅವನ ರಥ ಅದು ಒಂದು ಸಾವಿರ ಕರಡಿಗಳಿಂದ ಕೂಡಿದಂತಹ ಒಂದು ರಥ ಆ ರಥದೊಳಗೆ ಬಲ ಕುಳಿತಿದ್ದಾನೆ ಲಕ್ಷ ಜನ ಸುತ್ತಲೂ ರಥಿಕರಿದ್ದಾರೆ, ಕಾಗೆಯ ಧ್ವಜ ಇವನು ಸತ್ತರೆ ಕಾಗೇನೆ ತಿನ್ನಬೇಕು ಮುಂದೆ ಅನ್ನುವುದಕ್ಕೆ. ಇನ್ನು ನಮುಚಿ 60 ಸಾವಿರ ಜನ ರಥಿಕರು ಅವನ ಸುತ್ತಲೂ ಆಮೇಲೆ ತಾನು ಸಾವಿರಾರು ಕತ್ತೆಗಳಿಂದ ಕೂಡಿದಂತಹ ಒಂದು ರಥ ಅಂತಹ ರಥದಲ್ಲಿ ನಮುಚಿ ಕುಳಿತಿದ್ದಾನೆ ಶಾರ್ದೂಲ ಧ್ವಜ ಅವನದು. ಆಮೇಲೆ ಇದೇ ರೀತಿ ವ್ಯಾಘ್ರ ಸಹಸ್ರ ಯುತವಾದಂತಹ ಶ್ರೇಷ್ಠವಾದ ರಥದಲ್ಲಿ ಹುಲಿ ಸಾವಿರ ಹುಲಿಗಳಿಂದ ಕೂಡಿದ ರಥದಲ್ಲಿ ಅವನು ಕುಳಿತಿದ್ದಾನೆ ಹುಲಿ ಧ್ವಜ ಅವನದು. ಈ ರೀತಿ ಇವನು ಇದ್ದಾನೆ.

ಮಯಾಸುರ ಒಂದು ರಥದಲ್ಲಿ ಕುಳಿತಿದ್ದಾನೆ ಅವನ ರಥಕ್ಕೂ ಸಾವಿರ ಕರಡಿಗಳು ಆ ರಥ ಎಷ್ಟು ದೊಡ್ಡದಿತ್ತು ಅಂದರೆ 8 ನಲ್ವ ಇದೀಗ ಕೇಳಿದಿರಿ 1 ನಲ್ವ ಅಂದರೆ 400 ಮಳ 8 ನಲ್ವ ಪರಿಮಾಣ, ಅವನದು. 9 ನಲ್ವದ ಪರಿಮಾಣದ ಎತ್ತರದ ಸಿಂಹಾಸನದ ಮೇಲೆ ಕುಳಿತಿದ್ದ ಅಂತ ಹಿರಣ್ಯಕಶಿಪು ಇವನು 8 ನಲ್ವ ಪರಿಮಾಣದ

1. 49.15 ಭವಿಷ್ಯಪರ್ವ, 2. ಮಂತ್ರ 1 [I.iii.1] ಬೃಹದಾರಣ್ಯಕೋಪನಿಷತ್.

ದೊಡ್ಡದಾದ ರಥ ಅಂತಹ ರಥದೊಳಗೆ ಕುಳಿತಿದ್ದಾನೆ ಸಾವಿರ ಕರಡಿಗಳು ಅದನ್ನು ಹೊತ್ತುಕೊಂಡು ಹೋಗುವುದು ಸಿಂಹ ಧ್ವಜ ಇವನು ಮಯಾಸುರ. ಇವರೆಲ್ಲ ವಾಮನ ದೇವರ ಜೊತೆಗೆ ಮುಂದೆ ಯುದ್ಧಕ್ಕೆ ಬರುತ್ತಾರೆ ಎಲ್ಲಾ ಸೋತು ಹೋಗುತ್ತಾರೆ ಆ ವಿಷಯ ಬೇರೆ ಆದರೆ ದೇವತೆಗಳ ಜೊತೆಗೆ ಯುದ್ಧ ಮಾಡುವುದಕ್ಕೇ ಅಂತ ಇವರೆಲ್ಲ ತಯಾರು ಆಗುತ್ತ ಇದ್ದಾರೆ. ಇನ್ನು ಪುಲೋಮ ಅನ್ನುವಂತಹ ಅಸುರ ಕಬ್ಬಿಣದ ರಥದಲ್ಲಿ ಕುಳಿತಿದ್ದಾನೆ, ಮಧ್ಯದಲ್ಲಿ ಕಬ್ಬಿಣದ ಜಾಳಿಗೆ, 8,000 ಒಂಟೆಗಳು ಅವನ ರಥಕ್ಕೆ ಕಟ್ಟಿದ್ದಾರೆ ಅದು ಎಷ್ಟು ದೊಡ್ಡ ರಥ ಇರಬೇಕು. ಹೇಗೆ ಅದನ್ನು ಸಾರಥಿಗಳು ಮತ್ತೆ ನಿಯಂತ್ರಣ ಮಾಡುತ್ತ ಇದ್ದರು ಅಂತ ಚಿಂತನೆ ಮಾಡಿರಿ, ನಾಲ್ಕು ಕುದುರೆಗಳಿದ್ದರೇನೆ ಕಷ್ಟ ಎರಡು ಕುದುರೆಗಳು ಇದ್ದರೆ ಪರವಾ ಇಲ್ಲ. ನಾಲ್ಕು ಕುದುರೆಗಳನ್ನು ಕಟ್ಟಿಕೊಂಡು ಹೋಗುವುದೇ ಬಹಳ ಕಷ್ಟ, ಇದೇನಿದು 1,000, 8,000 ಅದೂ ಕುದುರೆಗಳಷ್ಟೇ ಅಲ್ಲಾ ಕರಡಿಗಳು ಒಂಟೆಗಳು ಇಂತಹ ಎಲ್ಲಾ ವಿಚಿತ್ರವಾದ ಪ್ರಾಣಿಗಳು ಅಂತಹ 8,000 ಒಂಟೆಗಳಿಂದ ಕೂಡಿದ ರಥದಲ್ಲಿ ಪುಲೋಮ ಕುಳಿತಿದ್ದಾನೆ ಅವನ ಸುತ್ತಲೂ 60,000 ರಥಗಳು ಸಹಾಯಕವಾಗಿ ಇವೆ. ಹಯಗ್ರೀವ ಎಂಬಂತಹ ಅಸುರ ಎಲ್ಲರೂ ಹಯಗ್ರೀವರೇ ಅವರು ಕುದುರೆ ಮುಖದ ಅಸುರರು ಒಂದು ಲಕ್ಷ ರಥಗಳಿಂದ ಕೂಡಿದಂತಹ ಕುದುರೆ ಮುಖದ ಅಸುರರು ಅವನ ಸುತ್ತಲೂ ಸಹಾಯಕರಾಗಿ ಇದ್ದಾರೆ ನಾಗ ಧ್ವಜ ಅವನಿಗೆ. ಪ್ರಹ್ಲಾದ ರಾಜ ಪರಮ ಭಗವದ್ಭಕ್ತ ಆದರೆ ಅಸುರ ಕುಲದಲ್ಲಿ ಇದ್ದದ್ದಕ್ಕೆ ಅಸುರರ ಜೊತೆಗೆ ಅನಿವಾರ್ಯವಾಗಿ ಯುದ್ಧಕ್ಕೆ ಹೋಗಿದ್ದಾನೆ ಮೊಮ್ಮಗ ರಾಜನಾಗಿದ್ದಾನೆ ಬಲಿ ಅನ್ನುವುದಕ್ಕೆ ಪಿತಾಮಹನಾದ ಪ್ರಹ್ಲಾದ ಭಕ್ತಿ ಪೂರಿತವಾದಂತಹ ಮನಸ್ಸಿನಿಂದಲೇ ಬಂದಿದ್ದಾನೆ ಅಲ್ಲಿ ನೋಡಿರಿ ಹಾಗೆ ವರ್ಣನೆ ಮಾಡುತ್ತಾರೆ.

ಸರ್ವಮಾಯಾಧರಃ ಶ್ರೀಮಾನ್ ಯಷ್ಟಾಕ್ರತುಶತೈರಪಿ ॥ (50.13 ಭವಿಷ್ಯಪರ್ವ)

ನೂರಾರು ಯಜ್ಞ ಯಾಗಗಳನ್ನು ಮಾಡಿ ಪರಮಾತ್ಮನನ್ನ ಸಂತೋಷ ಪಡಿಸುವಂತಹ ಪ್ರಹ್ಲಾದ ಆದರೆ ಮಾಯಾ ವಿದ್ಯೆಯೂ ಅವನಿಗೆ ಗೊತ್ತು ಅಂತಹ ಸಾವಿರಾರು ದೈತ್ಯರಿಂದ ಸಹಿತನಾಗಿ ಅಲ್ಲಿ ಪಿತಾಮಹನಾದಂತಹ ಪ್ರಹ್ಲಾದ ರಾಜನೂ ಬಂದಿದ್ದಾನೆ. ಶಂಬರಾಸುರ ಅಲ್ಲಿದ್ದಾನೆ, ಅವನ ಜೊತೆಗೆ 30 ಲಕ್ಷ ಜನ ಅಸುರರು ಇದ್ದಾರೆ ಪ್ರದ್ಯುಮ್ನನಿಂದ ಹತನಾದ ಅಂತ ಹಿಂದೆ ನೀವು ಕೇಳಿದ್ದೀರಿ ಅಲ್ಲಿ, ಮೂಲರೂಪದಲ್ಲಿ ಆ ಶಂಬರಾಸುರನೇ ಇಲ್ಲಿ 30 ಲಕ್ಷ ಜನ ಅಸುರರಿಂದ ಸಹಿತನಾಗಿ ಕ್ರೌಂಚ ಪಕ್ಷಿಯ ಧ್ವಜವನ್ನು ಇಟ್ಟುಕೊಂಡು ಅಲ್ಲಿ ಯುದ್ಧದೊಳಗೆ ತೊಡಗಿದ್ದಾನೆ. ಈ ರೀತಿ ಇವರೆಲ್ಲ ಯುದ್ಧಕ್ಕೋಸ್ಕರ ಸಿದ್ಧರಾಗುತ್ತ ಇದ್ದಾರೆ ಇಂತಹ ಘನಘೋರವಾದ ಯುದ್ಧವನ್ನು ಮಾಡಬೇಕು ಅಂತ ಇವರೆಲ್ಲ ಸಿದ್ಧರಾಗುತ್ತ ಇದ್ದಾರೆ.

ಈ ಕಡೆಗೆ ದೇವತೆಗಳ ಪಕ್ಷದಲ್ಲಿದ್ದದ್ದು ತಪೋ ಬಲ, ವಿಷ್ಣು ಭಕ್ತಿಯ ಬಲ, ವಿಷ್ಣು ಸ್ಮರಣದ ಬಲ,ವಿಷ್ಣುವಿನ ಕೃಪಾಕಟಾಕ್ಷದ ಬಲ ದೇವತೆಗಳಿಗೆ ಇದೆ. ಆ ಭಗವಂತನ ಅನುಗ್ರಹದಿಂದ ದೇವತೆಗಳಲ್ಲಿಯೂ ಬೇಕಾದಷ್ಟು ಆಯುಧಗಳಿವೆ ಅಸ್ತ್ರಗಳಿವೆ ಶಸ್ತ್ರಗಳಿವೆ ರಥಗಳಿವೆ ಎಲ್ಲವೂ ಇದೆ. ಆದರೆ ಈ ಎಲ್ಲವನ್ನೂ ಮೀರಿದ್ದು ಆ ಭಗವಂತನ ಅನುಗ್ರಹದ ಬಲ ಇದೆ ಅನ್ನುವುದಕ್ಕಾಗಿ ದೇವತೆಗಳಿಗೆ ಮೊದಲು ಸೋಲು ಬಂದರೂ ಕೂಡ, ಪ್ರಾರಂಭದಲ್ಲಿ ಮೊದಲು ವಿಷ ಬರುವುದೇ ಆಮೇಲೆ ಪರಮಾತ್ಮನ ಅನುಗ್ರಹದಿಂದ ದೇವತೆಗಳೇ ಗೆಲುವನ್ನು ಪಡೆಯುತ್ತಾರೆ ದೇವತೆಗಳಿಗೇನೆ ವಿಜಯವಾಗುತ್ತೆ ಅಂತನ್ನುವ ವಿಚಾರವನ್ನ ತಿಳಿಸುತ್ತಾರೆ. ಮುಂದೆ ವಾಮನಾವತಾರದ ತ್ರಿವಿಕ್ರಮಾವತಾರದ ವರ್ಣನೆಯನ್ನೂ ಕೂಡ ಮುಂದೆ ಮಾಡುತ್ತಾರೆ, ಬಹಳ ವಿಸ್ತಾರವಾಗಿದೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಭವಿಷ್ಯಪರ್ವ-41

* * *

ವೈಶಂಪಾಯನ ಉವಾಚ

ಅನುಹ್ಲಾದಶ್ಚ ತತ್ರೈವ ದೈತ್ಯಃ ಪರಮದುರ್ಜಯಃ ।
ಹಿರಣ್ಯಕಶಿಪೋಃ ಪುತ್ರಃ ಪ್ರಯಯೌ ಯುದ್ಧಲಾಲಸಃ ।। (51.1 ಭವಿಷ್ಯಪರ್ವ)

ಯಾವ ರೀತಿಯ ರಥಗಳಲ್ಲಿ ಕುಳಿತು ಎಂತೆಂತಹ ದೈತ್ಯರು ಬಂದರು ಅಂತ ಹಿಂದೆ ಸ್ವಲ್ಪ ತಿಳಿದಿದ್ದೇವೆ ಇನ್ನೂ ಅನೇಕ ದೈತ್ಯರು ಅದೇ ರೀತಿ ಯುದ್ಧಕ್ಕಾಗಿ ಸಿದ್ಧರಾಗುತ್ತಾ ಇದ್ದಾರೆ. ಪ್ರಹ್ಲಾದ ರಾಜರ ತಮ್ಮ ಅನುಹ್ಲಾದ ಹಿರಣ್ಯಕಶಿಪುವಿನ ಮಗ ಅವನು ಹನ್ನೆರಡು ನೂರು ಮಳದ ದೊಡ್ಡ ರಥದಲ್ಲಿ ಕುಳಿತು ಯುದ್ಧಕ್ಕೆ ಬರುತ್ತಾ ಇದ್ದಾನೆ ಅವನ ಜೊತೆಗೆ ಒಂದು ಕೋಟಿ ಜನ ರಥದಲ್ಲಿ ದೈತ್ಯರು ಸುತ್ತಮುತ್ತಲೂ ಅವನಿಗೆ ರಕ್ಷಕರಾಗಿ ಇದ್ದಾರೆ ಒಂದು ಕೋಟಿ ರಥಗಳು ಅವನ ಸುತ್ತಲಿವೆ ಅಂತಹ ಅನುಹ್ಲಾದ ಯುದ್ಧಕ್ಕೆ ಸಿದ್ಧನಾಗುತ್ತಾ ಇದ್ದಾನೆ. ಈ ಕಡೆಗೆ ಪ್ರಹ್ಲಾದನ ಮಗ ವಿರೋಚನ ಅವನೂ ಕೂಡ ಸಾವಿರ ಕುದುರೆಗಳಿಂದ ಕೂಡಿದಂತಹ ಒಂದು ರಥದಲ್ಲಿ ಕುಳಿತುಕೊಂಡು ಯುದ್ಧಕ್ಕಾಗಿ ಸಿದ್ಧನಾಗಿದ್ದಾನೆ. ಪ್ರಹ್ಲಾದನ ಇನ್ನೊಬ್ಬ ಮಗ ಕುಜಂಭ, ವಿರೋಚನನ ತಮ್ಮ, ಅನ್ನುವ ದಾನವ ಸಾವಿರಾರು ರಥಗಳಿಂದ ಸಹಿತನಾಗಿ ಅನೇಕ ರಥಿಕರಿಂದ ಕೂಡಿಕೊಂಡು ತಾಲ ವೃಕ್ಷದ ಧ್ವಜವನ್ನು ಇಟ್ಟುಕೊಂಡು ಅವನು ಸಿದ್ಧನಾಗಿದ್ದಾನೆ. ಅಸಿಲೋಮಾ ಎಂಬಂತಹ ದೈತ್ಯ ಸಹಸ್ರಾರು ದೈತ್ಯರಿಂದ ಕೂಡಿಕೊಂಡು ಅವನು ಸಿದ್ಧನಾಗಿದ್ದಾನೆ. ವೃತ್ರಾಸುರ ಸಾವಿರ ಕುದುರೆಗಳಿಂದ ಯುಕ್ತವಾದಂತಹ ರಥದಿಂದ ಅವನು ಬಂದಿದ್ದಾನೆ,ಅವನ ಭ್ರಾತಾ ತಮ್ಮ ವೃತ್ರಾ ಭ್ರಾತಾ ಅವನೂ ಕೂಡ ಕತ್ತೆಗಳಿಂದ ಕೂಡಿದಂತಹ ನಾಗ ಧ್ವಜದಿಂದ ಯುಕ್ತವಾದ ರಥದಲ್ಲಿ ಕುಳಿತಿದ್ದಾನೆ ಸಹಸ್ರಾರು ರಥಿಕರು ಅವನಿಗೆ ಸಹಾಯಕರಾಗಿದ್ದಾರೆ.

ಈ ಕಡೆಗೆ ರಾಹು ನೂರು ತಲೆಗಳು ದೊಡ್ಡ ಹೊಟ್ಟೆ ಶತೋದರಃ ಅಂತ ಹೇಳುತ್ತಾರೆ ನೂರು ಹೊಟ್ಟೆಗಳು ಅಂತ ಆದರೆ ಇದೇ ಹರಿವಂಶದಲ್ಲಿ ಮುಂದೆ ಮಹೋದರಃ ಅಂತ ಬರುತ್ತೆ ಹೀಗಾಗಿ ಶತೋದರಃ ಅನ್ನುವ ಶಬ್ದದ ಅಭಿಪ್ರಾಯ ಮಹೋದರಃ, ಬಹಳ ದೊಡ್ಡದಾದಂತಹ ಹೊಟ್ಟೆ ಅಂತಹ ಹೊಟ್ಟೆಯಿಂದ ಕೂಡಿದಂತಹ ರಾಹು

ಯುದ್ಧಕ್ಕೆ ಸಿದ್ಧನಾಗಿದ್ದಾನೆ. ವಿಪ್ರಚಿತ್ತಿ ಭಾರೀ ದುಷ್ಟ ಕಲಿಯ ನಂತರದಲ್ಲಿ ಬರುವಂಥವನು ಅಂತಹ ವಿಪ್ರಚಿತ್ತಿ ಎಂಬಂತಹ ದಾನವ ಅವನು ನೋಡಿ ಬಹಳ ವಿಚಿತ್ರ ದಾನವ ಆದರೆ ಬೇಕಾದಷ್ಟು ಯಜ್ಞಗಳನ್ನು ಮಾಡಿದ್ದಾನೆ. ಪ್ರಹ್ಲಾದ ರಾಜರಂತೆ ಬಲಿ ಚಕ್ರವರ್ತಿಯಂತೆ ಭಕ್ತ ಏನಲ್ಲ ಅವನು ಮಹಾದುಷ್ಟನೇ ಆದರೂ ಡಾಂಭಿಕ, ಡಂಭದಿಂದ ತಾನು ನಾನಾ ವಿಧವಾದ ಯಜ್ಞಗಳನ್ನು ಮಾಡಿದ್ದಾನೆ, ಸಾವಿರ ಸಾವಿರ ಯಜ್ಞಗಳನ್ನು ಮಾಡಿದ್ದಾನೆ, ತಪಸ್ಸು ಮಾಡಿದ್ದಾನೆ, ಬ್ರಹ್ಮ ದೇವರಿಂದ ವರ ಪಡೆದಿದ್ದಾನೆ ವಶಿತ್ವಾ ಈಶಿತ್ವಾ ಮೊದಲಾದಂತಹ ಅನೇಕ ಐಶ್ವರ್ಯಗಳನ್ನು ಪಡೆದಿದ್ದಾನೆ. ಪುತ್ತ ಪೌತ್ರಾ ್ಯದಿಗಳೆಲ್ಲಾ ಮಹಾಮಾಯಾವಿಗಳು ಹಂಸ ಧ್ವಜರು, ಸರ್ವರೂ ಶ್ವೇತಾಂಬರಧರರು, ಶ್ವೇತ ಮಾಲ್ಯ, ಶ್ವೇತದ ಛತ್ರ ಇಂತಹ ಒಂದು ದೊಡ್ಡದಾದ ತನ್ನ ಮಕ್ಕಳು ಮೊಮ್ಮಕ್ಕಳು ಮರಿಮಕ್ಕಳು ಅದೇ ಒಂದು ದೊಡ್ಡದಾಗಿರುವಂತಹ ಸೈನ್ಯವನ್ನ ಮಾಡಿಕೊಂಡು ತ್ರೈಲೋಕ್ಯ ವಿಜಯವೆಂಬ ರಥದಲ್ಲಿ ಕುಳಿತು 3,200 ಮಳ ದೊಡ್ಡದಾದಂತಹ ರಥದೊಳಗೆ ಕುಳಿತು ಯುದ್ಧಕ್ಕೆ ಬರುತ್ತಾ ಇದ್ದಾನೆ ವಿಪ್ರಚಿತ್ತಿ.

ಈ ಕಡೆಗೆ ಕೇಶಿ ಮಹಾದುಷ್ಟ ಕೋಣಗಳಿಂದ ಕೂಡಿದಂತಹ ರಥ, ಒಂಟೆಯ ಚಿಹ್ನ ಇರುವಂತಹ ಧ್ವಜ ಒಂದು ಲಕ್ಷ ರಥಿಕರು ಅವನ ಸುತ್ತಮುತ್ತಲೂ ಸಹಾಯಕರಾಗಿ ಇದ್ದಾರೆ ಕೇಶಿ ಎಂಬಂತಹ ಅಸುರ ಬರುತ್ತಾನೆ. ಈ ಕಡೆಗೆ ವೃಷಪರ್ವ ಯಯಾತಿಯ ಮಾವ ಶರ್ಮಿಷ್ಠೆಯ ಅಪ್ಪ ಅಂತಹ ವೃಷಪರ್ವ ಅನ್ನುವಂತಹ ಅಸುರ, ಅವನೂ ಕೂಡ ದೊಡ್ಡದಾದಂತಹ ಮೇರು ಶೃಂಗದಂತೆ ಇರುವಂತಹ ಅತ್ಯಂತ ವಿಶಾಲವಾದ ರಥದಲ್ಲಿ ಕುಳಿತು ಅವನು ಬರುತ್ತಾ ಇದ್ದಾನೆ. ರಾಜ ಬಲಿ ಚಕ್ರವರ್ತಿ ಬರುತ್ತಾ ಇದ್ದಾನೆ ನೋಡಿ 6,400 ಮಳದಷ್ಟು ದೊಡ್ಡದಾದಂತಹ ರಥ, ಅದು ಹೇಗೆ ರಥ ಹೋಗುತ್ತಿತ್ತೋ, ಆ ರಥ ಹೋಗುವ ದಾರಿಗಳು ಹೇಗಿದ್ದವೋ, ಅವೆಲ್ಲಾ ಆಕಾಶ ಮಾರ್ಗದಲ್ಲಿ ಓಡಾಡುವ ರಥಗಳು ಹೀಗಾಗಿ ದಾರಿ ಮಾಡುವ ಅವಶ್ಯಕತೆ ಇರಲಿಲ್ಲವೋ ಏನೋ ಅಂತಹ ದೊಡ್ಡ ರಥದೊಳಗೆ ಕುಳಿತು ಬರುತ್ತಾ ಇದ್ದಾನೆ. ಅವನ ರಥವನ್ನ ವಹನ ಮಾಡುವಂಥವರು ಅವರು ಯಾರು ಕತ್ತೆಗಳು ಅಲ್ಲ, ಕುದುರೆಗಳು ಅಲ್ಲ ಯಾರೂ ಅಲ್ಲ ಆನೆಯ ಮುಖ ಇರುವಂತಹ ವಿಕೃತಾಕೃತಿಯ ಅಸುರರೇ ಅವನ ರಥವನ್ನು ಒಯ್ಯುತ್ತಾ ಇದ್ದಾರೆ ಪಶುಗಳಲ್ಲ ಅಸುರರೇ.

ಯುಕ್ತಂ ಸಹಸ್ರೇಣ ದಿತೇಃ ಸುತಾನಾಂ ಗಜಾನನಾನಾಂ ವಿಕೃತಾಕೃತೀನಾಮ್ । (51.74 ಭವಿಷ್ಯಪರ್ವ)

ಅನೇಕ ದೈತ್ಯರು ಅವನ ರಥವನ್ನ ಎಳೆದು ಒಯ್ಯುತ್ತಾ ಇದ್ದಾರೆ, ನರ ವಾಹನ ಇದ್ದ ಹಾಗೆ ಅಸುರ ವಾಹನ, ಅಸುರ ಅವನು ಬಲಿ ಅಂತಹ ಅದ್ಭುತವಾದ ವಾಹನದೊಳಗೆ ಕುಳಿತು ವಿಜಯಕ್ಕಾಗಿ ಹೊರಟಿದ್ದಾನೆ. ಅವನಿಗೆ ವಿಜಯ ಮಾಲಾವನ್ನ ದುರ್ಗಾ ದೇವಿಯನ್ನು ಕುರಿತು ವಿಶೇಷ ಉಪಾಸನೆ ಮಾಡಿದ್ದಕ್ಕೆ ದುರ್ಗಾ ದೇವಿಯೇ ಪ್ರಸನ್ನಳಾಗಿ ಅವನಿಗೆ ಒಂದು ವಿಜಯ ಮಾಲಾವನ್ನು ಕೊಡುತ್ತಾಳೆ. ಅಸುರರಿಗೆ ಜಯವಾಗುವ ಕಾಲ ಅದು, ಭಗವಂತನ ಪಠಣಗಳನ್ನು ಮಾಡುತ್ತಾ ಇದ್ದಾರೆ ನಾನಾ ವಿಧವಾದ ಓಷಧಿಗಳು ವನಸ್ಪತಿಗಳು ದಿವ್ಯವಾದ ಶಕ್ತಿಯನ್ನು ಕೊಡುವಂತಹ ಪುಷ್ಟಿಯನ್ನು ಕೊಡುವ ರಸಾಯನಗಳು ಅವುಗಳನ್ನೆಲ್ಲ ಕೊಟ್ಟು ಇವನನ್ನು ಗಟ್ಟಿ ಮುಟ್ಟಿಯಾಗಿ ಮಾಡಿ ಕಳಿಸುತ್ತಾ ಇದ್ದಾರೆ. ಇವನೂ ಕೂಡ ಯಥೇಚ್ಛವಾಗಿ ಗೋದಾನ ವಸ್ತ್ರದಾನ ಭೂದಾನ ದ್ರವ್ಯದಾನ ಎಲ್ಲವನ್ನು ದಾನ ಮಾಡಿದ್ದಾನೆ, ದಾನ ಮಾಡಿ ಎಲ್ಲರ ಆಶೀರ್ವಾದವನ್ನು ಪಡೆದಿದ್ದಾನೆ ನನಗೆ ವಿಜಯವಾಗಬೇಕು ಅಂತ ಅಷ್ಟೆಲ್ಲಾ ಆಶೀರ್ವಾದವನ್ನು ಪಡೆದು ಹೊರಟಿದ್ದಾನೆ ಬಲಿ ಚಕ್ರವರ್ತಿ ಯುದ್ಧಕ್ಕೋಸ್ಕರವಾಗಿ.

ಈ ಕಡೆಗೆ ಸಮುದ್ರಾಭಿಮಾನಿ ದೇವತೆಗಳು, ಪರ್ವತಾಭಿಮಾನಿ ದೇವತೆಗಳು, ಎಲ್ಲ ದಿಕ್ಪಾಲಕರು, ಪಿತೃಗಳು, ಗಂಧರ್ವರು, ರಾಜಋಷಿಗಳು ಎಲ್ಲರೂ ಸಿದ್ಧರಾಗಿದ್ದಾರೆ ಒಂದೇ ಒಂದು ಇಂದ್ರ ದೇವರ ಆದೇಶ ಯುದ್ಧಕ್ಕೆ

ಹೊರಡಬೇಕು ಅಂತ. ಮುಗುಧೋಧ್ರ ದೇವರ ಯಾನ ಅದ್ಭುತವಾದಂತಹ ಯಾನ, ಸಹಸ್ರ ಸಹಸ್ರ ನಕ್ಷತ್ರಗಳಿಂದ ಕೂಡಿದಂತಹ ಆ ಅದ್ಭುತವಾದಂತಹ ಯಾನ, ಶ್ರೇಷ್ಠವಾದಂತಹ ಧ್ವಜ ಶ್ರೀದೇವಿಯ ಚಿಹ್ನದಿಂದ ಕೂಡಿದಂತಹ ಅದ್ಭುತವಾದಂತಹ ಧ್ವಜ ಅಂತಹ ಧ್ವಜದಿಂದ ಯುಕ್ತನಾಗಿ ಇಂದ್ರ ದೇವರು ಹೊರಟಿದ್ದಾರೆ ವಜ್ರಾಯುಧವನ್ನು ಧಾರಣೆ ಮಾಡಿಕೊಂಡು. ಮುಖ್ಯವಾಗಿ ಮಂತ್ರಪಠಣ ಪುರಸ್ಸರವಾಗಿ ಆಶೀರ್ವಾದಾದಿಗಳನ್ನು ಮಾಡಿದ್ದಾರೆ, ಯೋಗ್ಯತೆಯಲ್ಲಿ ಚಿಕ್ಕವರಾದರೂ ಮಂತ್ರಪಠಣ ಪುರಸ್ಸರವಾಗಿ ಭಗವಂತನಲ್ಲಿ ಇಂದ್ರ ದೇವರ ಜಯಕ್ಕಾಗಿ ಪ್ರಾರ್ಥನೆ ಮಾಡಿದ್ದಾರೆ. ಯುದ್ಧದಲ್ಲಿ ಮೊದಲು ದೇವತೆಗಳಿಗೆ ಪರಾಜಯವಾಗಿದೆ ಹಾಗಾದರೆ ಇವರೆಲ್ಲ ಮಾಡಿದ ಪ್ರಾರ್ಥನೆ ವ್ಯರ್ಥವೇ ಅಂತ ಚಿಂತನ ಮಾಡಬಾರದು ಮುಂದೆ ಮಹಾಜಯವಾದದ್ದು ದೇವತೆಗಳಿಗೇನೆ. ಪ್ರಾರಂಭದಲ್ಲಿ ಅಸುರರಿಗೆ ಜಯ ಅಂತ ತೋರಿದರೂ ಕೂಡ ಮುಂದೆ ಇಂದ್ರದೇವರಿಗೇನೆ ವಾಮನ ದೇವರು ಮಹಾರಾಜ್ಯವನ್ನ ದಾನ ಮಾಡಿ ಪರಮಾನುಗ್ರಹ ಮಾಡಿದ್ದಾರೆ ಅಂತನ್ನುವುದನ್ನು ನಾವು ತಿಳಿಯಬೇಕು. ಬ್ರಹ್ಮಋಷಿಗಳು, ಮಹರ್ಷಿಗಳು, ರಾಜಋಷಿಗಳು ಎಲ್ಲರೂ ಕೂಡ ನೆಲದ ಮೇಲೆ ಹೇಗೆ ಅನಾಯಾಸವಾಗಿ ಓಡಾಡಬೇಕೋ ಹಾಗೆ ಆಕಾಶ ಮಾರ್ಗದಲ್ಲಿ ಇಂದ್ರ ದೇವರ ಜೊತೆಗೆ ಇವರೆಲ್ಲರೂ ಕೂಡ ಪುಣ್ಯವಂತರು ಸೇವೆಗಾಗಿ ಬರುತ್ತಾ ಇದ್ದಾರೆ. ಅವನ ಎದುರಿನಲ್ಲಿ ಸಾವಿರಾರು ಯಕ್ಷರು ರಾಕ್ಷಸರು ಕುಬೇರನ ಅನುಚರರೆಲ್ಲ ರಾಕ್ಷಸರಾದರೂ ಅವರು ಅಸುರರ ಪಕ್ಷಕ್ಕೆ ಹೋಗಿಲ್ಲ ದೇವತೆಗಳ ಪಕ್ಷದಲ್ಲಿದ್ದಾರೆ ಅವರು ಯುದ್ಧಕ್ಕಾಗಿ ಸಾವಿರ ಕುದುರೆಗಳಿಂದ ಯುಕ್ತವಾದ ಶ್ರೇಷ್ಠ ರಥದಲ್ಲಿ ಬರುತ್ತಾ ಇದ್ದಾರೆ.

ಈ ಕಡೆಗೆ ಯಮ ದೇವರು ಸಹ ಪಾಪಿಗಳಿಗೆ ದುರ್ಗತಿಯನ್ನು ಕೊಡುವ, ಪುಣ್ಯವಂತರಿಗೆ ಸದ್ಗತಿಯನ್ನು ಕೊಡುವಂತಹ ಧರ್ಮಮೂರ್ತಿ ಪುಣ್ಯಮೂರ್ತಿ ಅಂತ ಅನ್ನಿಸಿಕೊಂಡ ಧರ್ಮರಾಜ ಯಮ ದೇವರು **'ಪುಣ್ಯಃ ಪ್ರಭುಃ ಪ್ರಾಣಪತಿರ್ಜಿತಾತ್ಮಾ'** [1]ಅಂತಹ ಮಹಾನುಭಾವರಾದ ಯಮ ದೇವರು ಒಂದು ನೂರು ಕುದುರೆಗಳಿಂದ ಯುಕ್ತವಾದಂತಹ ಸೂರ್ಯ ಸದೃಶವಾದ ಶ್ರೇಷ್ಠ ರಥದಲ್ಲಿ ಕುಳಿತಿದ್ದಾರೆ. ಭಾರೀ ದಂಡ ಆಯುಧವನ್ನು ಕೈಯಲ್ಲಿ ಧಾರಣೆ ಮಾಡಿದ್ದಾರೆ, ಬಂಗಾರದ ಕಮಲದ ಮಾಲೆಯನ್ನು ಧಾರಣೆ ಮಾಡಿಕೊಂಡು ಅವರು ಹೊರಟಿದ್ದಾರೆ ಅವರ ಸೈನಿಕರು ಯಾರು ಕುಬೇರನ ಸೈನಿಕರು ರಾಕ್ಷಸರಾದರೆ, ಯಮ ದೇವರ ಸೈನಿಕರು ರೋಗಗಳು. ಆ ರೋಗಾಭಿಮಾನಿಗಳನ್ನೇ ಜ್ವರ ಮೊದಲಾದ ವಿಚಿತ್ರ ವಿವಿಧ ರೋಗಗಳ ಅಭಿಮಾನಿಗಳನ್ನೇ ತಮ್ಮ ಸೈನಿಕರನ್ನಾಗಿ ಮಾಡಿಕೊಂಡಿದ್ದಾರೆ ಅವರು ಅಟ್ಯಾಕ್ ಮಾಡಿದರೆ ರೋಗ ಬರಬೇಕು ಎದುರಿಗೆ ಇದ್ದವರಿಗೆ ಆ ತರಹ ಯಮ ದೇವರು ಈ ರೀತಿ ಹೊರಟಿದ್ದಾರೆ. ವರುಣ ದೇವರು ಅದ್ಭುತವಾದ ನಾಗಗಳಿಂದ ಯುಕ್ತವಾದಂತಹ ರಥದಲ್ಲಿ ಅವರು ಕುಳಿತಿದ್ದಾರೆ ಪಾಶಾಯುಧವನ್ನು ಧಾರಣೆ ಮಾಡಿ ಅನೇಕ ನಾಗಗಳೇ ಅಲ್ಲಿ ಅವರ ಸುತ್ತಮುತ್ತಲೂ ಸೇವೆಗಾಗಿ ಇವೆ.

ಈ ಕಡೆಗೆ ಇನ್ನನೇಕ ದೇವತೆಗಳು ಧಾತಾ, ಆರ್ಯಮ, ಅಂಶ, ಭಗ, ವಿವಸ್ವಾನ್, ಪರ್ಜನ್ಯ, ಮಿತ್ರ, ಸೋಮ, ತ್ವಷ್ಟಾ, ವಿಶ್ವಕರ್ಮ, ಪೂಷಾ ಈ ಮೊದಲಾದ ದೇವತೆಗಳೆಲ್ಲ ಯುದ್ಧಕ್ಕಾಗಿ ವಿವಿಧ ವಾಹನಗಳಲ್ಲಿ ವಿವಿಧಾಯುಧಗಳಿಂದ ಯುಕ್ತರಾಗಿ ಹೊರಟಿದ್ದಾರೆ. ಅಶ್ವಿ ದೇವತೆಗಳು ಹೊರಡುತ್ತಾರೆ, ಅಷ್ಟ ವಸುಗಳ ಸೈನ್ಯ ಆಕಾಶ ತುಂಬೆಲ್ಲ ವ್ಯಾಪಿಸಿದೆ. **'ಗಗನೈರ್ಬಲೌಘೈಃ'**[2] ಗಗನೋ ವ್ಯಾಪ್ತವಾದ ಸೈನ್ಯವನ್ನು ತೆಗೆದುಕೊಂಡು ಆ ಮಹಾನುಭಾವರಾದ ಸಾಧ್ಯರು ಹೊರಟಿದ್ದಾರೆ ಎಲ್ಲರೂ ಅವರಿಗೆ ವಿಶೇಷವಾದ ಪೂಜೆಯನ್ನು ಮಾಡುತ್ತಾ ಇದ್ದಾರೆ.

1. 52.30 ಭವಿಷ್ಯಪರ್ವ, 2. 52.53 ಭವಿಷ್ಯಪರ್ವ

ಆಮೇಲೆ ಸಾಂಖ್ಯಿಕವಾದ ಯುದ್ಧವೂ ಆಗಿದೆ ವಿಚಿತ್ರವಾದ ರೀತಿಯಲ್ಲಿ. ಸಾವಿತ್ರ ಎಂಬ ಮರುತ್ ಹಾಗೂ ಬಾಣಾಸುರ ಇವರಿಬ್ಬರಲ್ಲಿ ಯುದ್ಧ, ಬಲ ಎಂಬ ಅಸುರ ಧ್ರುವ ಎಂಬ ವಸು, ನಮೂಚಿ ಎಂಬಂತಹ ಅಸುರ ಧರ ಎಂಬಂತಹ ದೇವತೆ. ವಿಶ್ವಕರ್ಮರಿಬ್ಬರು ಇಬ್ಬರು ಅಂದರೆ ದೇವತೆಗಳ ವಿಶ್ವಕರ್ಮ ತ್ವಷ್ಟಾ, ಅಸುರರ ವಿಶ್ವಕರ್ಮ ಅಂದರೆ ಮಯಾಸುರ ಅವರಿಬ್ಬರಲ್ಲಿ ದ್ವಂದ್ವ ಯುದ್ಧವಾಗಿದೆ. ಪುಲೋಮಾ ಮತ್ತು ವಾಯು, ಹಯಗ್ರೀವ ಪೂಷಾ, ಶಂಬರ ಭಗ, ಶರಭ ಸೋಮ, ವಿರೋಚನಾ, ವಿಷ್ಣಕ್ಸೇನ, ಕುಜಂಭ ಹಾಗೂ ಅಂಶ ಎಂಬಂತಹ ಆದಿತ್ಯ. ಇಲ್ಲಿ ಕುಜಂಭನನ್ನ ಹಿರಣ್ಯಕಶಿಪುವಿನ ಮಗ ಅಂತ ಮತ್ತೆ ಹೇಳುತ್ತಾರೆ ಹಿಂದೆನೇ ಬಂತು ಕುಜಂಭ ಇವನು ಪ್ರಹ್ಲಾದನ ಮಗ ಅಂತ ಹೀಗಾಗಿ ಹಿರಣ್ಯಕಶಿಪುವಿನ ಮಗ ಎಂಬ ಶಬ್ದಕ್ಕೆ ಮೊಮ್ಮಗ ಅಂತ ಅರ್ಥವನ್ನು ತಿಳಿದುಕೊಳ್ಳಬೇಕು.

ಅಸಿಲೋಮಾ ಹಾಗೂ ವಾಯು, ವೃತ್ರಾಸುರ ಅಶ್ವಿ ದೇವತೆಗಳು, ಬಲ ಮತ್ತು ವಿಶ್ವಭ್ರಾತಾ ಹಾಗೂ ಮೃಗವ್ಯಾಧ ಎಂಬ ರುದ್ರ, ರಾಹು ಮತ್ತು ಅಜೈಕಪಾತ ಎಂಬ ರುದ್ರ, ಕೇಶಿ ಮತ್ತು ಕುಬೇರ, ವೃಷಪರ್ವ ಮತ್ತು ನಿಷ್ಕುಂಭ ಎಂಬಂತಹ ವಿಶ್ವೇದೇವ. ಆಮೇಲೆ ಪ್ರಹ್ಲಾದ ರಾಜ ಮತ್ತು ಯಮ ದೇವರು, ಕುಬೇರ ಹಾಗೂ ಅನುಹ್ಲಾದ, ವಿಪ್ರಚಿತ್ತಿ ಮತ್ತು ವರುಣ, ಬಲಿ ಮತ್ತು ಇಂದ್ರ ಈ ರೀತಿಯಾಗಿ ಇವರಲ್ಲಿ ದ್ವಂದ್ವ ಯುದ್ಧ ನಡೆಯುತ್ತ ಇದೆ. ಇನ್ನುಳಿದವರು ಪರಸ್ಪರವಾಗಿ ದೊಡ್ಡವರ ಕೆಲವರ ಹೆಸರುಗಳನ್ನು ಹೇಳಿದರು ಇನ್ನನೇಕ ದೇವತೆಗಳು ಹಾಗೂ ದೈತ್ಯರು ಪರಸ್ಪರವಾಗಿ ದ್ವಂದ್ವ ಯುದ್ಧವನ್ನು ಮಾಡುತ್ತಾ ಇದ್ದಾರೆ. ಆದರೆ ಅಪಶಕುನಗಳು ಆಗುತ್ತಾ ಇವೆ ಯಥಾಪ್ರಕಾರ **'ಸಪ್ತ ಆವಹ ವಿವಾಹಾದಿ ಸಪ್ತಂ'** ವಾಯುಗಳಲ್ಲಿ ಕ್ಷೋಭ ಉಂಟಾಗುತ್ತ ಇದೆ, ಸಮುದ್ರದಲ್ಲಿ ಕ್ಷೋಭ, ಪರ್ವತದಲ್ಲಿ ಕಂಪ, ನದಿ ವಿಚಿತ್ರವಾಗಿ ಹರಿಯುತ್ತ ಇರುವುದು ಇದೆಲ್ಲಾ ದೇವತೆಗಳಿಗೆ ಜಯವಾಗುವುದಿಲ್ಲ ಪರಾಜಯವಾಗುತ್ತೋ ಅನ್ನುವ ರೀತಿಯಲ್ಲಿ ಸೂಚನೆಯನ್ನು ನೀಡುವಂತಹ ವಿಚಿತ್ರವಾದ ಶಕುನಗಳು ನಡದಿವೆ ಆದರೂ ಕೂಡ ದೇವತೆಗಳು ದೈತ್ಯರು ಯುದ್ಧವನ್ನು ಮಾಡುತ್ತಾ ಇದ್ದಾರೆ.

ಬ್ರಹ್ಮ ದೇವರು ಬಂದಿದ್ದಾರೆ, ಪರಮಾತ್ಮ ಬಂದಿದ್ದಾನೆ ಎಲ್ಲರೂ ಈ ದೇವ ದಾನವ ಸಂಗ್ರಾಮವನ್ನು ನೋಡುತ್ತಾ ಇದ್ದಾರೆ ಋಷಿಗಳು ಮುನಿಗಳೂ ಎಲ್ಲರೂ ಕೂಡ ದೇವತೆಗಳಿಗೆ ಜಯವಾಗಲಿ ಅಂತ ಸಜ್ಜನರು, ಅಸುರರಿಗೆ ಜಯವಾಖಲಿ ಅಂತ ದುರ್ಜನರು ಘೋಷಣೆಯನ್ನು ಮಾಡುತ್ತಾ ಇದ್ದಾರೆ, ಅವರವರ ಅಪೇಕ್ಷೆಯನ್ನು ವ್ಯಕ್ತ ಮಾಡುತ್ತ ಇದ್ದಾರೆ. ಬ್ರಹ್ಮ ದೇವರು ಆಕಾಶ ಮಾರ್ಗದಲ್ಲಿ ಬಂದು ನಿಂತರೆ ಪರಮಾತ್ಮ ಬ್ರಹ್ಮ ದೇವರು ಯುದ್ಧವನ್ನು ನೋಡುವುದಕ್ಕೆ ಬಂದು ನಿಂತಿದ್ದಾರೆ ಆದರೆ ಬ್ರಹ್ಮಋಷಿಗಳು, ದೇವಋಷಿಗಳು, ರಾಜಋಷಿಗಳು, ಗಂಧರ್ವರು ಅಲ್ಲಿ ಬ್ರಹ್ಮ ದೇವರ ಪರಮಾತ್ಮನ ಸ್ತೋತ್ರವನ್ನು ಮಾಡುತ್ತಾರೆ. ಅಂತಹ ಸಂದರ್ಭದೊಳಗೂ ಆ ಸ್ಥಾನಕ್ಕೆ ತಕ್ಕಂತೆ ಅವರ ಸ್ತೋತ್ರವನ್ನು ಮಾಡುತ್ತಾ, ಸೇವೆಯನ್ನು ಮಾಡುತ್ತ ಅವರ ಅನುಗ್ರಹವನ್ನು ಪ್ರಾರ್ಥನೆ ಮಾಡುತ್ತಾ ಇದ್ದಾರೆ ವೇದಾದ್ಯಭಿಮಾನಿ ದೇವತೆಗಳೂ ಕೂಡ.

ಪೀಠೇ ರತ್ನೋಕಪಕ್ಷಪ್ತೇ ರುಚಿರರುಚಿಮಣಿಜ್ಯೋತಿಷಾ ಸನ್ನಿಷಣ್ಣಂ ।
ಬ್ರಹ್ಮಾಣಂ ಭಾವಿನಂ ತ್ವಾಂ ಜ್ವಲತಿ ನಿಜಪದೇ ವೈದಿಕಾದ್ಯಾ ಹಿ ವಿದ್ಯಾಃ ॥ (35 ವಾಯುಸ್ತುತಿ)

ಅಂತ ಹೇಳಿದಂತೆ ಋಗ್ ಯಜುರ್ವೇದ ಸಾಮವೇದಾದಿಗಳಿಗೆ ಅಭಿಮಾನಿ ದೇವತೆಗಳೆಲ್ಲ ಬಂದು ಬ್ರಹ್ಮ ದೇವರ, ಪರಮಾತ್ಮನ ಸ್ತುತಿಯನ್ನು ಮಾಡುತ್ತಾ ಇದ್ದಾರೆ ಈ ರೀತಿ ಆ ಯುದ್ಧದ ದರ್ಶನವನ್ನು ಮಾಡುತ್ತ ಆಕಾಶದಲ್ಲಿ ಎಲ್ಲರೂ ನಿಂತಿದ್ದಾರೆ. ಇದೊಂದು ದೊಡ್ಡದಾದಂತಹ ಯಜ್ಞ ಇದ್ದಂತೆ ಅಂತ ವರ್ಣನೆ ಮಾಡುತ್ತಾರೆ ಈ ಯುದ್ಧ

ಒಂದು ಯಜ್ಞ ಇದ್ದ ಹಾಗೆ ಪ್ರಹ್ಲಾದ ರಾಜರು ಈ ಯಜ್ಞದ ನೇತಾರರಾಗಿದ್ದಾರೆ ಮುಖ್ಯಸ್ಥರು, ವಿರೋಚನ ಅಧ್ವರ್ಯು ಇದ್ದಂತೆ, ನಮೂಚಿ ಹೋತಾ ಹೀಗೆ ವೃತ್ರಾಸುರ ಇವನು ಉಪಕಲ್ಪಕ, ಉಳಿದೆಲ್ಲ ದೈತ್ಯರು ನಾನಾ ವಿಧವಾದ ಮಂತ್ರಗಳ ಪಠಣ ಮಾಡುವಂತೆ ಕಿರುಚುತ್ತಾ ಯುದ್ಧವನ್ನು ಮಾಡುತ್ತಾ ಇದ್ದರೆ ಹೀಗೆ ಮಯಾಸುರ ಉದ್ಗಾತ. ಹೀಗೆ ಒಬ್ಬೊಬ್ಬ ಅಸುರರು ಒಂದೊಂದು ರೀತಿಯ ಋತ್ವಿಜರಿದ್ದಂತೆ ಕೆಲವರು ಬೇರೆ ಬೇರೆ ತರಹದ ಕಾರ್ಯಗಳನ್ನು ಮಾಡುವಂತಹ ಯಜ್ಞದಲ್ಲಿ ಸಹಾಯ ಮಾಡುವ ಇನ್ನಿತರ ಸೇವಕರು ಸದಸ್ಯರು ಇತ್ಯಾದಿ ಆದರೆ ಇಷ್ಟೆಲ್ಲ ಮಾಡಿ ಯಜ್ಞ ಯಾರಿಗೋಸ್ಕರ ಈ ದೇವತೆಗಳ ಜೊತೆಗೆ ಮಾಡುವ ಯುದ್ಧ ಇದೊಂದು ಯಜ್ಞ, ಯಾರು ಯಜ್ಞ ಮಾಡುತ್ತ ಇರುವುದು ದೈತ್ಯರು. ದೈತ್ಯರು ಮಾಡುವ ಈ ಯುದ್ಧ ಯಜ್ಞಕ್ಕೆ ಇಜ್ಯನಾದವನು, ಯಜ್ಞದಲ್ಲಿ ಉದ್ದೇಶ್ಯನಾದವನು, ಪೂಜ್ಯನಾದವನು ಯಾರು ಅಂದರೆ ವಿಷ್ಣು ಅಂತ ಹೇಳುತ್ತಾರೆ ಅರ್ಥ ಮಾಡಿಕೊಳ್ಳಿ ಅಂದರೆ ದೈತ್ಯರಿಗೂ ಯಜ್ಞದಲ್ಲಿ ಪೂಜ್ಯನಾದವನು ಮತ್ತೊಬ್ಬನಿಲ್ಲ ವಿಷ್ಣುವೇ ಪೂಜ್ಯ ಅವನಿಂದಲೇ ವರ ಪಡೆಯಬೇಕು.

ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ ।

ನ ತು ಮಾಮಭಿಜಾನಂತಿ ತತ್ತ್ವೇನಾತಶ್ಚ್ಯವಂತಿ ತೇ ॥ (9.24 ಭ ಗೀತಾ)

ಪರಮಾತ್ಮನ ಪೂರ್ಣವಾದ ಯಥಾರ್ತ ಜ್ಞಾನವನ್ನು ಪಡೆದುಕೊಂಡು ಮಾಡುವುದಿಲ್ಲ ಎಲ್ಲರೂ ಅನ್ನುವುದಕ್ಕಾಗಿ ಅವರಿಗೆ ಸದ್ಗತಿ ಆಗುವುದಿಲ್ಲ. ಬಲಿ ಚಕ್ರವರ್ತಿ ಪ್ರಹ್ಲಾದ ರಾಜರಂತಹ ಮಹಾನುಭಾವರು ಪರಮಾತ್ಮನ ಮಹಿಮೆಯನ್ನು ತಿಳಿದುಕೊಂಡು ಮಾಡುತ್ತಾರೆ ಅವರಿಗೆ ಉತ್ತಮವಾದ ಫಲವನ್ನು ದೇವರು ಕೊಡುತ್ತಾನೆ ಆದರೆ ಇನ್ನುಳಿದವರಿಗೆ ಆ ಅನುಸಂಧಾನ ಇಲ್ಲ ಅನ್ನುವುದಕ್ಕೆ ಕೊಡುವುದಿಲ್ಲ ಅನ್ನುವುದನ್ನ ನಾವು ತಿಳಿಯಬೇಕು. ವೈಶಂಪಾಯನರು ಹೇಳುತ್ತಾರೆ **'ಹೂಯತೇ ತು ಅಸುರೈಃ ತತ್ರ ದೇವೋ ವಿಷ್ಣುಃ ಸುರೈಃ ಸಹ'** ಪರಮಾತ್ಮನೇ ಅವರಿಂದ ಅಲ್ಲಿ ಇಜ್ಯನಾದವನು ಅಂತ. ಇಂತಹ ಒಂದು ವಿಚಿತ್ರವಾದ ರೀತಿಯ ಯುದ್ಧವೆಂಬಂತಹ ಶ್ರೇಷ್ಠವಾದ ಯಜ್ಞವನ್ನು ಮಾಡುತ್ತೇವೆ ಅನ್ನುವ ರೀತಿಯಲ್ಲಿ ಅವರು ಆ ಯುದ್ಧವನ್ನು ಮಾಡುತ್ತಾ ಇದ್ದಾರೆ ಈ ರೀತಿ ಆ ಯುದ್ಧ ನಡೆಯುತ್ತಾ ಇದೆ. ಹಿಂದೆ ಹೇಳಿದ ರೀತಿಯಲ್ಲಿ ಸಾವಿತ್ರ ಮತ್ತು ಬಾಣ, ಸಾವಿತ್ರ ಎಂಬ ಮರುತ್ ಮತ್ತು ಬಾಣಾಸುರ ಇವರಿಬ್ಬರಲ್ಲಿ ಯುದ್ಧ ನಡೆಯುತ್ತಾ ಇದೆ. ಸಾವಿತ್ರನನ್ನ ಸಂಹಾರ ಮಾಡುವುದಕ್ಕಾಗಿ ಬಾಣಾಸುರ ಘೋರವಾದಂತಹ ಬಾಣವನ್ನು ಬಿಟ್ಟಿದ್ದಾನೆ ಅದನ್ನು ಸಾವಿತ್ರ ಛೇದನ ಮಾಡುತ್ತಾನೆ ಆ ರೀತಿ ಯುದ್ಧ ನಡೆಯುತ್ತಾ ಇದೆ ಆದರೆ ಸ್ವಲ್ಪೇ ಹೊತ್ತಿನಲ್ಲಿ ಸಾವಿತ್ರನನ್ನ ಬಾಣಾಸುರ ಸೋಲಿಸಿದ್ದಾನೆ.

ಏಷ ವಿಪ್ರಬಲೋದರ್ಕಃ ಸಂಪ್ರತ್ಯೂರ್ಜಿತವಿಕ್ರಮಃ । (08.14.31 ಭಾಗವತ)

ಭಾಗವತದಲ್ಲಿ ಹೇಳುವ ಹಾಗೆ **'ಏಷ ವಿಪ್ರಬಲೋದರ್ಕಃ'** ದುರ್ಗೆಯ ಅನುಗ್ರಹ, ಶುಕ್ರಾಚಾರ್ಯರ ತಪಸ್ಸು ಈಗ ಆ ಎಲ್ಲ ಬ್ರಾಹ್ಮಣರ ಆಶೀರ್ವಾದವನ್ನು ಪಡೆದು, ಅವರಿಂದ ಯಜ್ಞ ಯಾಗಾದಿಗಳನ್ನು ಮಾಡಿಸಿ ಆ ವಿಶಿಷ್ಟವಾದ ಶಕ್ತಿಯನ್ನು ತುಂಬಿಕೊಂಡು ಬಂದಿದ್ದಾನೆ ಬಲಿ ಚಕ್ರವರ್ತಿ ಆ ದೈವಬಲ ಹಿಂದಿದೆ ಈಗ ಅವರಿಗೆ ವಿಜಯವಾಗಬೇಕು ಅನ್ನುವುದು ಭಗವಂತನ ಸಂಕಲ್ಪ. ಈಗ ಅವರು ಪಡೆದ ಪುಣ್ಯಕ್ಕೆ ತಕ್ಕಂತೆ ಬ್ರಾಹ್ಮಣರ, ಆಚಾರ್ಯರ ಆಶೀರ್ವಾದಕ್ಕೆ ಬೆಲೆ ಕೊಡುವುದಕ್ಕೆ ವಿಜಯವಾಗಬೇಕು ಅನ್ನುವ ಭಗವಂತನ ಸಂಕಲ್ಪ ಹೀಗಾಗಿ ದೇವತೆಗಳಿಗೆ ಒಬ್ಬೊಬ್ಬರಿಗೆ ಪರಾಜಯವಾಗುತ್ತಾ ಇದೆ ಮೊದಲು ಆ ಸಾವಿತ್ರನನ್ನ ಬಾಣಾಸುರ ಸೋಲಿಸಿದ್ದಾನೆ. ಆ ಧ್ರುವ ಎಂಬಂತಹ ವಸು ಮತ್ತು ಬಲ ಎಂಬ ಅಸುರ ಇವರಿಬ್ಬರಲ್ಲಿ ಯುದ್ಧವಾಗುತ್ತಾ ಇದೆ. ಆ ಧೃವ ಎಂಬ ವಸುವಿಗೆ ಸಹಾಯಕರಾಗಿ

ಇನ್ನುಳಿದ ವಸುಗಳೆಲ್ಲ ಇದ್ದಾರೆ ಆದರೂ ಕೂಡ ಆ ವಸುವಿನ ಜೊತೆಗೆ ಬಹಳ ಹೊತ್ತು ಯುದ್ಧವಾಗಿದೆ ಆನಂತರದಲ್ಲಿ ಆ ಧ್ರುವ ಪರಾಜಿತನಾಗಿದ್ದಾನೆ. ಧ್ರುವ ಎಂಬಂತಹ ವಸು ಮತ್ತು ಬಲ ಮತ್ತು ಬಲಾಕ ಅಂತ ಇಬ್ಬರು ಅಸುರರು ಆ ಬಲ ಎಂಬ ಅಸುರನಿಂದ ಸೋತರೂ ಪುನಃ ಯುದ್ಧಕ್ಕೆ ಬರುತ್ತಾನೆ ಧ್ರುವ ವಸು ಆದರೆ ಬಲಾಕ ಎಂಬ ಅಸುರನಿಂದ ಪರಾಜಿತನಾಗಿ ಹೋಗುತ್ತಾನೆ. ನಮೂಚಿ ಮತ್ತು ಧರರಲ್ಲಿ ಘೋರವಾದಂತಹ ಯುದ್ಧವಾಗುತ್ತದೆ ಆ ಧರ ಎಂಬಂತಹ ದೇವತೆಯನ್ನ ನಮೂಚಿ ಸೋಲಿಸುತ್ತಾನೆ. ತ್ವಷ್ಟಾ ಮತ್ತು ಮಯಾಸುರ ಇವರಿಬ್ಬರಲ್ಲಿ ವಿಶ್ವಕರ್ಮರಲ್ಲಿ ದೇವ ವಿಶ್ವಕರ್ಮ, ಅಸುರ ವಿಶ್ವಕರ್ಮ, ತ್ವಷ್ಟಾ ಮತ್ತು ಮಯಾಸುರ ಇವರಿಬ್ಬರಲ್ಲಿ ಘೋರವಾದಂತಹ ಯುದ್ಧವಾಗುತ್ತದೆ, ಭಾರೀ ಘೋರವಾದ ಯುದ್ಧವಾದ ಮೇಲೆ ಆ ತ್ವಷ್ಟಾ ಅವನು ಪರಾಜಿತನಾಗುತ್ತಾನೆ. ಮುಂದೆ ಪುಲೋಮಾ ಮತ್ತು ವಾಯು ಇವರಿಬ್ಬರ ಮಧ್ಯದಲ್ಲಿ ಘನಘೋರವಾದಂತಹ ಯುದ್ಧವಾಗುತ್ತದೆ ಆದರೆ ಇಲ್ಲಿ ಮಾತ್ರ ವಾಯು ದೇವರು ಸೋಲುವುದಿಲ್ಲ. ಪುಲೋಮಾ ಮತ್ತು ವಾಯು ಇವರಿಬ್ಬರ ಮಧ್ಯದಲ್ಲಿ ಯುದ್ಧವಾದಾಗ ಲಕ್ಷ ಲಕ್ಷ ಅಸುರರನ್ನ ವಾಯು ದೇವರು ಸಂಹಾರ ಮಾಡುತ್ತಾರೆ.

ಕೃತ್ವಾ ಮಾರ್ಗಂ ಸುರಶ್ರೇಷ್ಠೋ ನನಾದ ಸುಮಹಾರಥಃ ॥ (55.86 ಭವಿಷ್ಯಪರ್ವ)

ಆಮೇಲೆ ಆ ಭಾರೀ ಅಸುರರ ಸಂಗ್ರಾಮ ನಡೆದಾಗ, ಅಸುರರೆಲ್ಲ ಮುಂದೆ ನಿಂತಾಗ ದೊಡ್ಡದಾದಂತಹ ಒಂದು ಮಾರ್ಗವನ್ನೇ ನಿರ್ಮಾಣ ಮಾಡಿ, ಮಧ್ಯದಲ್ಲಿ ಇದ್ದವರೆನ್ನೆಲ್ಲಾ ಸಂಹಾರ ಮಾಡಿ ಅದೊಂದು ವಾಯುರಥ ವಾಯುರಥ ಅಂತ ಒಂದು ವಿಶಿಷ್ಟವಾದ ಮಾರ್ಗ ಇವತ್ತಿಗೂ ಆಕಾಶದಲ್ಲಿ ನಮಗೆ ತೋರುತ್ತದೆ ಅಂತ ಉಲ್ಲೇಖ ಮಾಡುತ್ತದೆ.

ನಾಮ್ನಾ ವಾಯುರಥೋ ನಾಮ ಸಿದ್ಧಾಃ ಪಶ್ಯನ್ತಿ ತಂ ದಿವಿ ॥ (55.87 ಭವಿಷ್ಯಪರ್ವ)

ಇಂದಿಗೂ ಆ ವಾಯು ದೇವರು ಮಾಡಿದಂತಹ ಏನು ಮಾರ್ಗ ಇದೆ ಆ ಒಂದು ವಿಲಕ್ಷಣವಾದಂತಹ ಮಾರ್ಗ ಇವತ್ತಿಗೂ ನಮಗೆ ಆಕಾಶದಲ್ಲಿ ನೋಡುವುದಕ್ಕೆ ಸಾಧ್ಯವಾಗುತ್ತದೆ ಅಂತ ಹರಿವಂಶ ಉಲ್ಲೇಖ ಮಾಡುತ್ತದೆ ಆ ರೀತಿ ಆ ವಾಯು ದೇವರು ಪುಲೋಮನನ್ನು ಗೆದ್ದಿದ್ದಾರೆ. ಈ ಕಡೆಗೆ ಹಯಗ್ರೀವಾಸುರ ಹಾಗೂ ಪೂಷಾ ಇವರಿಬ್ಬರ ಮಧ್ಯದಲ್ಲಿ ಭಾರೀ ಯದ್ಧವಾಗಿದೆ ಯುದ್ಧವಾಗಿದೆ ಹಯಗ್ರೀವಾಸುರನನ್ನ ಕೊನೆಗೆ ಆ ಪೂಷಾ ಸೋತಿದ್ದಾನೆ. ಇಲ್ಲಿ ಎಲ್ಲಾ ದೇವತೆಗಳು ಸೋತಿದ್ದಾರೆ ಅಂದರೆ ಒಂದೇ ಸಲ ಸೋತರು ಅಂತ ತಿಳಿದುಕೊಳ್ಳಬೇಡಿ ಬಹಳ ವಿಸ್ತಾರವಾದ ವರ್ಣನೆ ಇದೆ. ಕೋಟಿ ಕೋಟಿ ಅಸುರರನ್ನ, ಲಕ್ಷ ಲಕ್ಷ ಅಸುರರನ್ನ ಸಂಹಾರ ಮಾಡುತ್ತಾರೆ ಆ ಮುಖ್ಯನಾದ ಅಸುರ ಎದುರಾಳಿಯನ್ನೂ ಕೂಡ ಸೋಲಿಸುತ್ತಾರೆ ಧ್ವಜ, ರಥ ಎಲ್ಲವನ್ನೂ ಬೀಳಿಸುತ್ತಾರೆ ಕೊನೆಗೆ ಭಗವಂತನ ಸಂಕಲ್ಪದಿಂದ ಪರಾಜಿತರಾಗುತ್ತಾರೆ ಅಷ್ಟೇ ಪರಾಕ್ರಮವನ್ನು ತೋರಿಸಿಲ್ಲ ಅಂತ ತಿಳಿದುಕೊಳ್ಳಬಾರದು. ಈ ಕಡೆಗೆ ಶಂಬರಾಸುರ ಮತ್ತು ಭಗ ಎಂಬ ದೇವತೆ ಇವರಿಬ್ಬರ ಮಧ್ಯದಲ್ಲಿ ಯುದ್ಧವಾಗಿದೆ ಶಂಬರಾಸುರನ ಪರಾಕ್ರಮದಿಂದ ಭಯಭೀತನಾಗಿ ಆ ಭಗ ಇಂದ್ರ ದೇವರು ಹತ್ತಿರ ಓಡಿ ಹೋಗಿದ್ದಾನೆ. ಇವರೆಲ್ಲ ಸೋತವರು ನೇರವಾಗಿ ತಮ್ಮ ರಕ್ಷಣೆಗೆ ಇಂದ್ರ ದೇವರ ಸುತ್ತಲೂ ನಿಂತರೆ ನಮಗೆ ರಕ್ಷಣೆ ಅಂತ ಇಂದ್ರ ದೇವರು ಇದ್ದಲ್ಲಿ ಓಡಿ ಹೋಗುತ್ತ ಇದ್ದರು.

ರಥಂ ತ್ಯಕ್ತ್ವಾ ಮಹಾಭಾಗೋ ಮಹೇನ್ದ್ರಂ ಶರಣಂ ಗತಃ ॥ (55.146 ಭವಿಷ್ಯಪರ್ವ)

ಇಂದ್ರ ದೇವರಿಗೆ ಶರಣು ಹೋಗಿದ್ದಾರೆ. ಸೋಮ, ಸೋಮನೂ ಕೂಡ ಸೋತಿಲ್ಲ ಹೇಗೆ ವಾಯು ಸೋಲಲಿಲ್ಲ ಯುದ್ಧದಲ್ಲಿ ಸೋಮನು ಸೋತಿಲ್ಲ ಭಾರೀ ಅದ್ಭುತವಾದ ರೀತಿಯಲ್ಲಿ ಸೋಮ ಯುದ್ಧವನ್ನು

ಮಾಡುತ್ತಾನೆ. ಯುದ್ಧವನ್ನು ಮಾಡಿ ಎಲ್ಲ ದೈತ್ಯರು ಕೂಡ ಭಯಗ್ರಸ್ತರಾಗಿ ಓಡಿ ಹೋಗುವಂತೆ ಮಾಡುತ್ತಾನೆ ಚಂದ್ರ ಸೋಮ ಸೋಮನ ಕೈ ಮೇಲಾಗುತ್ತೆ ಅವನು ಸೋಲುವುದಿಲ್ಲ, ಈ ಕಡೆಗೆ ವಿರೋಚನ ಮತ್ತು ವಿಶಕ್ಷೇನ ಇವರಿಬ್ಬರಲ್ಲಿಯೂ ಯುದ್ಧ ನಡೆಯುತ್ತದೆ, ವಿಷಕ್ಷೇನನ ಎಲ್ಲ ಸೈನಿಕರನ್ನು ಓಡಿಸುತ್ತಾನೆ. ಅವನ ಸುತ್ತಮುತ್ತಲೂ ರಕ್ಷಕರಾಗಿರುವ ದೇವತೆಗಳನ್ನೆಲ್ಲ ವಿರೋಚನಾ ಸೋಲಿಸುತ್ತಾನೆ ಆದರೆ ವಿಶಕ್ಷೇನನನ್ನು ಸೋಲಿಸಲಿಕ್ಕೆ ಆಗುವುದಿಲ್ಲ, ವಿಶಕ್ಷೇನ ಮಾತ್ರ ಗಟ್ಟಿಯಾಗಿ ನಿಲ್ಲುತ್ತಾನೆ ಯುದ್ಧದಲ್ಲಿ ಆದರೆ ಅವನ ಸೈನಿಕರೆಲ್ಲ ಸೋತರು ಅನ್ನುವುದಕ್ಕೋಸ್ಕರ ವಿರೋಚನಾ ನಾನು ಗೆದ್ದೆ ಅಂತ ಅಂದುಕೊಳ್ಳುತ್ತಾನೆ. ಈ ಕಡೆಗೆ ಕುಜಂಭ, ಅಂಶ ಎಂಬಂತಹ ದ್ವಾದಶಾದಿತ್ಯರಲ್ಲಿ ಒಬ್ಬನಾದಂತಹ ಅಂಶ ಹಿಂದೆ ಕೇಳಿದ್ದೀರಿ ಅವನೇ ಉಲ್ಮುಖ ಎಂಬುದಾಗಿ ಬಲರಾಮನ ಮಗನಾಗಿ ಹುಟ್ಟುತ್ತಾನೆ ಅಂತ. ಅಂತಹ ಅಂಶ ಎಂಬಂತಹ ದ್ವಾದಶ ಆದಿತ್ಯರಲ್ಲಿ ಒಬ್ಬನಾದಂತಹ ದೇವತೆ ಕುಜಂಭ ಪ್ರಹ್ಲಾದ ರಾಜರ ಮಗ ಅವನ ಜೊತೆಗೆ ಯುದ್ಧವನ್ನು ಮಾಡುತ್ತಾನೆ ಭಾರೀ ಅದ್ಭುತವಾದಂತಹ ಯುದ್ಧ. ಆ ಅಂಶ ಆದಿತ್ಯ ಇವನು ನಾನಾ ವಿಧವಾದ ಆನೆಗಳನ್ನು ತೆಗೆದುಕೊಂಡು ಬರುತ್ತಾನೆ ಭಾರೀ ಆನೆಗಳ ಗುಂಪು ಅವನದು ಅಂತಹ ಭಾರೀ ಭಾರೀ ಮದೋನ್ಮತ್ತವಾದ ಗಜಗಳನ್ನ ಕುಜಂಭನ ಮೇಲೆ ಬಿಟ್ಟರೆ ಕುಜಂಭ ಅವುಗಳೆಲ್ಲವನ್ನೂ ಕೂಡ ಗದೆಯಿಂದ ಹೊಡೆದು ನಾಶ ಮಾಡಿ ಹಲ್ಲು ಮುರಿದು, ತಲೆ ಸೀಳಿ ಎಷ್ಟೋ ಗಜಗಳನ್ನು ಓಡಿಸಿ ಬಿಡುತ್ತಾನೆ ಈ ರೀತಿ ಘೋರವಾಗಿರುವಂತಹ ಯುದ್ಧ ಅವರಿಬ್ಬರ ಮಧ್ಯದಲ್ಲಿ ನಡೆಯುತ್ತದೆ. ಪುನಃ ಆ ಎಲ್ಲ ಗಜ ಹಾಗೂ ಗಜದ ಮೇಲೆ ಇರುವಂತಹ ಯೋಧರು ಅವರೆಲ್ಲರನ್ನ ಸೋಲಿಸುತ್ತಾನೆ, ಎಷ್ಟೋ ಜನರನ್ನ ಸಂಹಾರ ಮಾಡುತ್ತಾನೆ ಗಜದ ಮೇಲೆ ಕುಳಿತು ಯುದ್ಧ ಆಡುವಂತಹ ಅಂಶನ ಸಹಾಯಕರನ್ನು ಆದರೆ ಅಂಶನನ್ನ ಮಾತ್ರ ನೇರವಾಗಿ ಸೋಲಿಸುವುದಿಲ್ಲ ಅನ್ನುವುದನ್ನು ಗಮನಿಸಬೇಕು. ಸೋಮ, ವಾಯು, ವಿಶ್ವಕರ್ಮ, ಅಂಶ ಇವರು ಯಾರು ಸೋಲುವುದಿಲ್ಲ ಆದರೆ ಅವರ ಸೈನಿಕರನ್ನ ಸೋಲಿಸುತ್ತಾರೆ ಅಷ್ಟೇ.

ಆಮೇಲೆ ಅಸಿಲೋಮಾ ಅನ್ನುವಂತಹ ದೈತ್ಯ ಅವನೂ ಭಾರೀ ಯುದ್ಧವನ್ನು ಮಾಡುತ್ತಾನೆ, ಎಲ್ಲ ದೇವತೆಗಳನ್ನು ಓಡಿಸುತ್ತಾನೆ. ಅತ್ಯಂತ ಉಗ್ರವಾದ ರೀತಿಯಲ್ಲಿ ಯುದ್ಧವನ್ನು ಮಾಡುತ್ತಾನೆ 31,000 ಯೋಧರನ್ನ ದೇವತೆಗಳ ಪಕ್ಷದವರನ್ನ ಅವನು ನಾಶ ಮಾಡುತ್ತಾನೆ. ಆಮೇಲೆ ವೃತ್ರಾಸುರ ಹಾಗೂ ಅಶ್ವಿ ದೇವತೆಗಳು ಇವರಿಬ್ಬರಲ್ಲಿ ಇಬ್ಬರು ನಾಸತ್ಯದಸ್ರರು ವೃತ್ರಾಸುರ ಹಾಗೂ ಅಶ್ವಿ ದೇವತೆಗಳು ಇವರಿಬ್ಬರ ಮಧ್ಯದಲ್ಲಿ ಯುದ್ಧವಾಗುತ್ತದೆ, ವೃತ್ರಾಸುರನ ಕೈ ಮೇಲಾಗುತ್ತದೆ ಅಶ್ವಿ ದೇವತೆಗಳು ವೃತ್ರಾಸುರನಿಂದ ಪರಾಜಿತರಾಗುತ್ತಾರೆ. ರಣಾಜಿ ಎಂಬ ಹೆಸರಿನ ಒಬ್ಬ ಸಾಧ್ಯರಲ್ಲಿ ಸೇರಿದ ಒಬ್ಬ ದೇವತೆ ರಣಾಜಿ ರಣಾಜಿ ಅಂತ ಆ ರಣಾಜಿ ಮತ್ತು ಏಕಚಕ್ರ ಎಂಬ ಅಸುರ ಇವರಿಬ್ಬರ ಮಧ್ಯದಲ್ಲಿ ಯುದ್ಧವಾಗುತ್ತದೆ. ಆ ಘೋರವಾಗಿರುವಂತಹ ಯುದ್ಧದಲ್ಲಿ ರಣಾಜಿ ಸಾಕಷ್ಟು ಪರಾಕ್ರಮವನ್ನು ತೋರಿಸುತ್ತಾನೆ. ಲಕ್ಷ ಲಕ್ಷ ಅಸುರರ ಸಂಹಾರವನ್ನು ಮಾಡುತ್ತಾನೆ ಆದರೆ ಕೊನೆಗೂ ಈ ಏಕಚಕ್ರನ ಬಲ ಬಹಳವಾದದ್ದನ್ನು ನೋಡಿ ತಾನು ಯುದ್ಧವನ್ನು ಬಿಟ್ಟು ಇಂದ್ರ ದೇವರ ಹತ್ತಿರ ಹೋಗುತ್ತಾನೆ ಅನ್ನುವುದನ್ನು ತಿಳಿಸುತ್ತಾರೆ. ಮೃಗವ್ಯಾಧ ಅನ್ನುವಂತಹ ರುದ್ರರಲ್ಲಿ ಒಬ್ಬ ಆ ಮೃಗವ್ಯಾಧನ ಜೊತೆಗೆ ಈ ಏಕಚಕ್ರನ ಯುದ್ಧವಾಗುತ್ತದೆ ಭಾರೀ ಘೋರವಾಗಿರುವಂತಹ ಯುದ್ಧ. ಆ ಮೃಗವ್ಯಾಧ ಎಂಬಂತಹ ರುದ್ರ ದೇವರ ಮೇಲೆ ದೊಡ್ಡದಾದ ಪರ್ವತದ ಒಂದು ಶೃಂಗವನ್ನೇ ಕಿತ್ತಿ ಎಸೆಯುತ್ತಾನೆ ಬಲ ಎಂಬಂತಹ ದೈತ್ಯ ಆಗ ಅವರೂ ಕೂಡ ಮೃಗವ್ಯಾಧ ಎಂಬ ರುದ್ರ ದೇವರು ಅಲ್ಲಿಂದ ಹೊರಟು ಹೋಗುತ್ತಾರೆ. ಮುಂದೆ ಇನ್ನೊಬ್ಬ ಅಜೈಕಪಾತ್ ಮತ್ತು ರಾಹು ಇವರಿಬ್ಬರ ಮಧ್ಯದಲ್ಲಿ ಯುದ್ಧವಾಗುತ್ತದೆ ಆ ಅಜೈಕಪಾತ್ ಎಂಬಂತಹ ರುದ್ರ ದೇವರನ್ನೂ ಕೂಡ ರಾಹು ಸೋಲಿಸುತ್ತಾನೆ ಅವರೂ ಅಲ್ಲಿಂದ ಹೊರಟು ಹೋಗುತ್ತಾರೆ ಈ ರೀತಿ ಘೋರವಾಗಿರುವಂತಹ ಯುದ್ಧ. ಕೇಶಿ ಆ ಕೇಶಿಯೂ ಕೂಡ ಭಾರೀ ಪರಾಕ್ರಮವನ್ನು ತೋರಿಸುತ್ತಾನೆ, ವೃಷಪರ್ವ ಮತ್ತು ನಿಷ್ಕುಂಭ ಎಂಬ ಹೆಸರಿನ ವಿಶ್ವೇ ದೇವತೆಗಳಲ್ಲಿ ಒಬ್ಬ

ಅವರಿಬ್ಬರಲ್ಲಿ ಘೋರವವಾಗಿರುವಂತಹ ಯುದ್ಧವಾಗುತ್ತದೆ. ಆ ವೃಷಪರ್ವ ಶಕ್ತಿ ಭಾರೀ ಶಕ್ತಿ ಅವನು ಪರಾಕ್ರಮ ಬೇರೆ ಕಡೆಗೆ ಅಷ್ಟು ಬರುವುದಿಲ್ಲ.

ನ ಸ್ಥಾತುಂ ದೇವತಾಃ ಶಕ್ತಾಃ ಕಿಂ ಪುನುರ್ಯೋಧುಮಾಹವೇ । (59.6 ಭವಿಷ್ಯಪರ್ವ)

ಎದುರು ನಿಲ್ಲುವುದಕ್ಕೆ ಹೆದರುತ್ತಾರೆ ದೇವತೆಗಳು ಯುದ್ಧ ಮಾಡುವುದು ದೂರ ಉಳಿಯಿತು ಅಂತಹ ಯುದ್ಧವನ್ನು ಮಾಡುತ್ತಾನೆ. ಈ ನಿಷ್ಕುಂಭ ಏನು ಸಾಮಾನ್ಯ ಅಲ್ಲ ವಿಶ್ವೇ ದೇವತೆಗಳಲ್ಲಿ ಒಬ್ಬ ಸಾಕಷ್ಟು ಅವನನ್ನು ಪೀಡಿಸಿದ್ದಾನೆ ವೃಷಪರ್ವ, ರಕ್ತ ಕಾರಿ ಬೀಳುವಂತೆ ಮಾಡಿದ್ದಾನೆ ಕೊನೆಗೂ ಆ ವೃಷಪರ್ವನ ಶಕ್ತಿ ಹೆಚ್ಚಾಗಿದೆ ಅನ್ನುವುದಕ್ಕೋಸ್ಕರ ಈ ನಿಷ್ಕುಂಭನ ಸೈನಿಕರೆಲ್ಲಾ ಅಲ್ಲಿ ಸೋಲುತ್ತಾರೆ ಅನ್ನುವುದಕ್ಕೆ ಅವನೂ ಕೂಡ ಬಿಟ್ಟು ಹೋಗುತ್ತಾನೆ.

ತಸ್ಯ ದಾನವವೀರಸ್ಯ ಯುದ್ಧಕಾಲೇ ಜಯಕ್ರಿಯಾಃ ॥ (59.25 ಭವಿಷ್ಯಪರ್ವ)

ಈ ಕಡೆಗೆ ಪ್ರಹ್ಲಾದ ರಾಜರು, ಯಮ ದೇವರ ಯುದ್ಧ ಪ್ರಾರಂಭ. ಪ್ರಹ್ಲಾದ ರಾಜರು ಪರಮ ಭಗವದ್ಭಕ್ತರು ಆದರೂ ಕೂಡ ಈಗ ಭಗವದ್ ಸಂಕಲ್ಪದಂತೆ ಅವರು ಅಸುರ ಪಕ್ಷದಲ್ಲಿದ್ದು ಯುದ್ಧ ಮಾಡುತ್ತಾ ಇದ್ದಾರೆ ಎದುರಿಗೆ ಇದ್ದವರು ಯಮ ದೇವರು, ಪ್ರಹ್ಲಾದ ರಾಜರ ಯಮ ದೇವರ ಯುದ್ಧ ಪ್ರಾರಂಭವಾಗಿದೆ. ಒಂದರ್ಥದಲ್ಲಿ ಹೀಗೂ ಚಿಂತನ ಮಾಡಬಹುದು ಹಿಂದೆ ಹಿರಣ್ಯಕಶಿಪು ಇರುವಾಗ ಪ್ರಹ್ಲಾದ ರಾಜರನ್ನ ಸಂಹಾರ ಮಾಡಬೇಕು ಅಂತ ಅನೇಕ ಪ್ರಯತ್ನಗಳನ್ನು ಮಾಡಿದ, ಪರ್ವತದ ಮೇಲಿನಿಂದ ಧುಮುಕಿಸಿದ, ಆನೆಯ ಕಾಲಿನಿಂದ ತುಳಿಸಿದ, ಆಭಿಚಾರಿಕ ಪ್ರಯೋಗಗಳನ್ನು ಮಾಡಿಸಿದ, ಹಾವುಗಳಿಂದ ಕಚ್ಚಿಸಿದ, ವಿಷ ಕುಡಿಸಿದ ಏನು ಮಾಡಿದರೂ ಸಾಯಲಿಲ್ಲ ಅನ್ನುತ್ತಾರೆ. ಆ ಒಂದು ನರಸಿಂಹ ದೇವರ ಅನುಗ್ರಹವನ್ನೇ ಈ ಕಥೆಯ ರೂಪದಲ್ಲಿ ಸೂಚನೆ ಮಾಡುತ್ತಾ ಇದ್ದಾರೋ ಏನೋ ಯಮ ದೇವರ ಜೊತೆಗೆ ಯುದ್ಧ ಮಾಡಿದರೂ ಪ್ರಹ್ಲಾದ ರಾಜರು ಸೋಲಲಿಲ್ಲ ಯಮ ದೇವರೇ ಸೋತರು ಅಂದರೆ ನರಸಿಂಹ ದೇವರ ಅನುಗ್ರಹದಿಂದ ಆ ಮೃತ್ಯುವನ್ನೂ ದೂರ ಮಾಡಿಕೊಂಡರು ಹಿಂದೆ ಪ್ರಹ್ಲಾದ ರಾಜರು ಅನ್ನುವುದನ್ನ ಈ ರೀತಿ ಸಾಂಕೇತಿಕವಾಗಿ ತೋರಿಸುತ್ತಾರೋ ಅಂತ **'ಮೃತ್ಯು ಮೃತ್ಯು ನಮಾಮ್ಯಹಂ'**[1] ಅನ್ನುವ ರೀತಿಯಲ್ಲಿ. ಈ ದೇವ ದಾನವ ಸಂಗ್ರಾಮದೊಳಗೆ ದೇವತೆಗಳ ಪರಾಜಯ ಅನ್ನುವ ರೀತಿಯಲ್ಲಿ ಆಗಿದ್ದರೂ ಕೂಡ ಇದು ಸಾಂಕೇತಿಕವಾಗಿ ನರಸಿಂಹ ದೇವರು ಪ್ರಹ್ಲಾದ ರಾಜರ ಮೇಲೆ ಮಾಡಿದ ಒಂದು ಅನುಗ್ರಹ ಅನ್ನುವುದನ್ನೂ ನಾವು ಇಲ್ಲಿ ಅರ್ಥ ಮಾಡಿಕೊಳ್ಳಬಹುದು.

ನೋಡಿ, ಉಳಿದೆಲ್ಲ ದೈತ್ಯರ ಯುದ್ಧದ ಪ್ರಸಂಗದಲ್ಲಿ ಯುದ್ಧ ಆಯಿತು ಇವರು ಪರಸ್ಪರ ಯುದ್ಧ ಮಾಡಿದರು, ಕೆಲವು ಸಲ ದೇವತೆಗಳು ಕೈ ಮೇಲೆ ಆಗುತ್ತಾ ಇತ್ತು, ಕೆಲವೊಮ್ಮೆ ದೈತ್ಯರ ಕೈ ಮೇಲೆ ಆಗುತ್ತಾ ಇತ್ತು ಕೊನೆಗೆ ದೇವತೆಗಳು ಅವರು ಸೋಲದಿದ್ದರೂ ಅವರ ಸೈನಿಕರು ಸೋತರು ಅನ್ನುವುದಕ್ಕೋಸ್ಕರ ಅವರು ಇಂದ್ರ ದೇವರ ಹತ್ತಿರ ಅಂತ ಇಷ್ಟೇ ಹೇಳುತ್ತಾ ಬಂದರು. ಆದರೆ ಪ್ರಹ್ಲಾದ ರಾಜರ ಬಗ್ಗೆ ಹೇಳುವಾಗ ಮಾತ್ರ ಅವರು ಉಳಿದವರಂತೆ ಸುಮ್ಮನೆ ಯುದ್ಧಕ್ಕೆ ಬರಲಿಲ್ಲ, ಅತ್ಯಂತ ಭಕ್ತಿಯುತರಾದದ್ದರಿಂದ ಅವರೆಲ್ಲ ಶಾಸ್ತ್ರೀಯವಾದಂತಹ ಯಜ್ಞ ಯಾಗಾದಿಗಳನ್ನ ಮಾಡಿಸಿಕೊಂಡು, ಶುಕ್ರಾಚಾರ್ಯರು ಇದ್ದಾರೆ ಅಂತ ಹೇಳಿ ವಿಶೇಷವಾಗಿ ಹೋಮ ಹವನಾದಿಗಳನ್ನು ಮಾಡಿದ್ದಾರೆ ಶುಕ್ರಾಚಾರ್ಯರು, ಬಂದ ಎಲ್ಲ ಬ್ರಾಹ್ಮಣರಿಗೆ ತಲೆಬಾಗಿ ನಮಸ್ಕಾರ ಮಾಡಿ ಆಶೀರ್ವಾದ ಪಡೆದಿದ್ದಾರೆ ಪ್ರಹ್ಲಾದ ರಾಜರು. ಅವರು ಹೊರಟಾಗ ವಿಜಯ ಸೂಚನೆಯಾಗುವ ರೀತಿಯಲ್ಲಿ

1. ನರಸಿಂಹ ಸ್ತೋತ್ರ

ಸುಗಂಧಮಯವಾದಂತಹ ಹೋಮದ ತುಪ್ಪದ ಹೊಗೆಯಿಂದ ಕೂಡಿದಂತಹ ಗಾಳಿ ಬೀಸುತ್ತಾ ಇದೆ, ಶ್ರೇಷ್ಠವಾದಂತಹ ಜಯಕ್ಕೋಸ್ಕರವಾಗಿ ಅಭಿಮಂತ್ರಣ ಮಾಡಿದ ವಿವಿಧ ವಿಚಿತ್ರವಾದ ಮಾಲೆಗಳನ್ನು ಬ್ರಾಹ್ಮಣರು ಪ್ರಹ್ಲಾದ ರಾಜರ ಕೊರಳಿಗೆ ಹಾಕಿದ್ದಾರೆ. ಹೀಗೆಲ್ಲ ಪುರೋಹಿತರು ಜಪ ಮಾಡಿಸುತ್ತಿರುತ್ತಾರೆ ನೋಡಿ ಗ್ರಹಸ್ಥರಿಗೋಸ್ಕರ 10,000 ಜನ ಶುಕ್ರಾಚಾರ್ಯರ ಶಿಷ್ಯರು ಪ್ರಹ್ಲಾದ ರಾಜರ ಜಯಕ್ಕೋಸ್ಕರವಾಗಿ ಜಪ ಮಾಡುವುದಕ್ಕೆ ಸಾಲಾಗಿ ಕುಳಿತಿದ್ದಾರೆ ಈ ಕಡೆಗೆ ಪ್ರಹ್ಲಾದ ರಾಜರು ಯುದ್ಧ ಮಾಡುತ್ತಾ ಇದ್ದಾರೆ.

ದಶ ಶಿಷ್ಯಸಹಸ್ರಾಣಿ ಭಾರ್ಗವಸ್ಯ ಮಹಾತ್ಮನಃ ॥ (59.29 ಭವಿಷ್ಯಪರ್ವ)

ಯಾನಿ ದಾನವವೀರಾಣಾಂ ಜೇಪುಃ ಶಾನ್ತಿಮನುತ್ತಮಾಮ್ । (59.30 ಭವಿಷ್ಯಪರ್ವ)

ಪ್ರಹ್ಲಾದ ರಾಜರಿಗೆ ಶಾಂತಿ ಆಗಲಿ ಜಯವಾಗಲಿ ಅಂತ ಹೇಳಿ 10,000 ಜನ ಅಲ್ಲಿ ಶುಕ್ರಾಚಾರ್ಯರ ಶಿಷ್ಯರು ಜಪ ಮಾಡುತ್ತ ಇದ್ದಾರೆ ಅಥರ್ವವೇದದ ವಿಶೇಷವಾದಂತಹ ಪಠಣವನ್ನು ಮಾಡುತ್ತ ಇದ್ದಾರೆ, ಅಥರ್ವವೇದೋಕ್ತವಾದ ವಿಜಯಪ್ರಾಪ್ತಿಗೆ ಸಾಧನವಾದಂತಹ ಏನು ಕರ್ಮಗಳಿವೆ ಅವುಗಳೆಲ್ಲವನ್ನ ಮಾಡಿದ್ದಾರೆ. ಭಾರೀ ವಿದ್ಯಾ ಸಂಪನ್ನರು, ತಪಸ್ವಿಗಳು ಇವರೆಲ್ಲ ಸ್ವಸ್ತಿ ಪುಣ್ಯಾಹವಾಚನಾದಿಗಳನ್ನು ಮಾಡಿಸಿ ಮಂತ್ರಪೂರಿತವಾದ ಕವಚ, ಮಂತ್ರಪೂರಿತವಾದ ಮಾಲೆ, ಮಂತ್ರಪೂರಿತವಾದ ಕಿರೀಟಾದಿಗಳನ್ನು ಧಾರಣೆ ಮಾಡಿಸಿ ಪ್ರಹ್ಲಾದ ರಾಜರನ್ನು ಕೊಟ್ಟು ಕಳಿಸಿದ್ದಾರೆ. ಸಾವಿರಾರು ದೈತ್ಯರು ಅವರಿಗೆ ಸಹಾಯಕರಾಗಿ ಹೊರಟಿದ್ದಾರೆ 70,000 ರಥಗಳು, 70,000 ಆನೆಗಳು ಅವನ ಸುತ್ತಮುತ್ತಲೂ ರಕ್ಷಣೆಗಾಗಿ ನಿಂತಿವೆ. ಈ ಕಡೆಗೆ ಕಾಲನೇಮಿಯೂ ಕೂಡ ಪ್ರಹ್ಲಾದನಿಗೆ ಸಹಾಯಕನಾಗಿ ನಿಂತಿದ್ದಾನೆ ಅವನಿಗೆ ಸಹಾಯಕರಾಗಿ ಮತ್ತೆ ಒಂದು ಲಕ್ಷ ಜನ ಅಸುರರು ರಥಗಳಿಂದ ಕೂಡಿಕೊಂಡು ನಿಂತಿದ್ದಾರೆ. ಈ ರೀತಿ 60,000 ರಥಗಳಿಂದ ಕೂಡಿದಂತಹ ದಾನವರು ನಾನಾ ವಿಧವಾದಂತಹ ಆಯುಧಗಳು ಆಯುಧಗಳಿಗಂತೂ ಲೆಕ್ಕವೇ ಇಲ್ಲ ಅನ್ನುತ್ತಾರೆ.

ನಾನಾಪ್ರಹರಣಾನಾಂ ಚ ಪರಿಮಾಣಂ ನ ವಿದ್ಯತೇ । (59.42 ಭವಿಷ್ಯಪರ್ವ)

ಇಂತಹ ಯುದ್ಧ ಅಲ್ಲಿ ನಡೆಯುತ್ತಾ ಇದೆ. ಪ್ರಹ್ಲಾದ ರಾಜರು ಅಷ್ಟು ಭಗವದ್ಭಕ್ತರಾದರೂ ಕೂಡ ಆ ಪ್ರಸಂಗದಲ್ಲಿ ಅಸುರರಿಗೆ ಉತ್ಸಾಹ ಬರುವಂತೆ ಮಾತನಾಡುತ್ತಾ ಇದ್ದಾರೆ ನೋಡಿ ನನ್ನ ಪರಾಕ್ರಮವನ್ನ ಯಾವ ರೀತಿಯಾಗಿ ದೇವತೆಗಳನ್ನ ನಾನು ಸೋಲಿಸುತ್ತೇನೆ ನೋಡಿ.

ಅದ್ಯ ನಿವರ್ತಯಿಷ್ಯನ್ತಿ ಶತ್ರುಮಾಂಸಾನಿ ದಾನವಾಃ ॥ (59.53 ಭವಿಷ್ಯಪರ್ವ)

ಹಿಂದೇನು ದಾನವರನ್ನ ದೇವತೆಗಳು ಸಂಹಾರ ಮಾಡಿದ್ದಾರೆ ಅದಕ್ಕೆಲ್ಲ ನಾನು ಪ್ರತೀಕಾರವನ್ನು ಮಾಡಿ ತೋರಿಸುತ್ತೇನೆ ಅಂತ ಹೇಳಿ ಭಾರೀ ಘೋರವಾಗಿರುವಂತಹ ಯುದ್ಧವನ್ನು ಮಾಡುತ್ತಾ ಇದ್ದಾರೆ. ಈ ಕಡೆಗೆ ಪ್ರಹ್ಲಾದ ರಾಜನ ಮಕ್ಕಳು ಕೆಲವರು ವಿರೋಚನ ಮಹಾದುಷ್ಟ ಆದರೆ ಇನ್ನೂ ಅನೇಕ ಜನ ಮಕ್ಕಳು ಅವರೆಲ್ಲ ಪ್ರಹ್ಲಾದ ರಾಜನ ಆದೇಶದಂತೆ ಪ್ರಹ್ಲಾದ ರಾಜರು ಹೇಗೆ ಹೋಮ ಹವನ ನಮಸ್ಕಾರ ಆಶೀರ್ವಾದ ಎಲ್ಲಾ ತೆಗೆದುಕೊಂಡು ನಮಸ್ಕಾರ ಮಾಡಿ ಆಶೀರ್ವಾದ ಪಡೆದುಕೊಂಡು ಬಂದರೋ ಹಾಗೆ ವೃಷಪರ್ವ ಕೂಡ **'ತೈಸ್ತು ಕ್ರತುಶತೈರಿಷ್ಟಂ'**[1] ಮೂರು ಯಜ್ಞಗಳನ್ನು ಮಾಡಿದ್ದಾರೆ.

1. 59.64 ಭವಿಷ್ಯಪರ್ವ

ಕ್ಷಾನ್ತಾ ಧರ್ಮಪರಾ ನಿತ್ಯಂ ಸತ್ಯವ್ರತಪರಾಯಣಃ ॥ (59.64 ಭವಿಷ್ಯಪರ್ವ)

ದಾತಾರಃ ಪ್ರಿಯವಕ್ತಾರೋ ವಕ್ತಾರಃ ಶಾಸ್ತ್ರವಸ್ತುಷು । (59.65 ಭವಿಷ್ಯಪರ್ವ)

ಶಾಸ್ತ್ರದ ಚರ್ಚೆಯನ್ನು ಮಾಡುವುದಕ್ಕೆ ಸಮರ್ಥರು, ಮಹಾ ದಾನಶೂರರು, ಯಜ್ಞ ಯಾಗಾದಿಗಳನ್ನು ಮಾಡಿದವರು, ಸತ್ಯವಂತರು, ಧರ್ಮನಿಷ್ಠರು ಎಂದಿಗೂ ಪರಸ್ತ್ರೀಯರನ್ನು ನೋಡಿದವರಲ್ಲ.

ಸ್ವದಾರನಿರತಾ ದಾನ್ತಾಃ ಬ್ರಹ್ಮಣ್ಯಾಃ ಸತ್ಯಸಙ್ಗರಾಃ ॥ (59.65 ಭವಿಷ್ಯಪರ್ವ)

ಇಷ್ಟೆಲ್ಲ ಪುಣ್ಯದ ತಪಸ್ಸಿನ ದಾನದ ಅಧ್ಯಯನದ ಶ್ರವಣದ ಸೇವೆಯ ನಮಸ್ಕಾರದ ಬಲವನ್ನು ಪಡೆದುಕೊಂಡು ಪ್ರಹ್ಲಾದ ರಾಜನ ಪುತ್ರರೆಲ್ಲ ಆ ಪ್ರಹ್ಲಾದ ರಾಜರಿಗೆ ಸಹಾಯಕರಾಗಿ ಇದ್ದಾರೆ ಈ ರೀತಿ ಪ್ರಹ್ಲಾದ ರಾಜರು ಆ ಕಡೆಯಿಂದ ಯುದ್ಧಕ್ಕೆ ಬರುತ್ತಾ ಇದ್ದಾರೆ. ಈ ಕಡೆಗೆ ಯಮ ದೇವರು ಎಲ್ಲಾ ರೋಗಾಭಿಮಾನಿಗಳಿಂದ ಸಹಿತರಾಗಿ ಭಾರೀ ಉಗ್ರವಾದ ರೂಪವನ್ನು ತೆಗೆದುಕೊಂಡು ಯಮ ದೇವರು ಯುದ್ಧಕ್ಕೆ ಬರುತ್ತಾ ಇದ್ದಾರೆ ಘೋರವಾದಂತಹ ಯುದ್ಧ ಪ್ರಾರಂಭವಾಗಿದೆ ಪರಸ್ಪರವಾಗಿ ಒಬ್ಬರ ಮೇಲೆ ಒಬ್ಬರು ಅತ್ಯದ್ಭುತವಾದ ಯುದ್ಧವಾಗಿದೆ. ಈ ಯುದ್ಧದ ವರ್ಣಿಸುವುದಕ್ಕೆ ಸಾಧ್ಯವಿಲ್ಲ ಅನ್ನುತ್ತಾರೆ.

ತಾದೃಶಂ ಸರ್ವಲೋಕೇಷು ನ ಭೂತಂ ನ ಭವಿಷ್ಯತಿ ॥ (59.102 ಭವಿಷ್ಯಪರ್ವ)

ಹಿಂದೆ ಇಂತಹ ಯುದ್ಧವಾಗಿಲ್ಲ ಮುಂದೆಯೂ ಆಗುವುದಿಲ್ಲ ಅಂತಹ ಯುದ್ಧ ಪ್ರಹ್ಲಾದ ರಾಜರಿಗೂ ಮತ್ತು ಯಮ ದೇವರಿಗೂ ನಡೆದಿದೆ.

ಪ್ರಹ್ಲಾದಸ್ತ್ವಥ ವೃದ್ಧೋಽತ್ರ ಕಾಲಸ್ತ್ವಪಸೃತೋ ರಣಾತ್ ॥ (59.103 ಭವಿಷ್ಯಪರ್ವ)

ಕೊನೆಗೂ ಪ್ರಹ್ಲಾದ ರಾಜರ ಕೈ ಜೋರಾಗಿದೆ, ಯಮ ದೇವರು ಯುದ್ಧವನ್ನು ಬಿಟ್ಟು ಹೊರಟು ಹೋಗಿದ್ದಾರೆ.

ಈ ಕಡೆಗೆ ಅನುಹ್ಲಾದ ಮತ್ತು ಕುಬೇರ ಇವರಿಬ್ಬರ ಮಧ್ಯದಲ್ಲಿ ಘೋರವಾದಂತಹ ಯುದ್ಧವಾಗಿದೆ. ಆ ಅನುಹ್ಲಾದ ಕುಬೇರ ಇವರಿಬ್ಬರ ಯುದ್ಧದಲ್ಲಿ ಅನುಹ್ಲಾದ ಭಾರೀ ಅದ್ಭುತವಾಗಿರುವಂತಹ ಗದೆಯನ್ನ ಕುಬೇರ ದೇವರು ಎಸೆದಾಗ ಸುಲಭವಾಗಿ ಆ ಗದೆಯನ್ನು ನಾಶ ಮಾಡುತ್ತಾನೆ. ತಾನು ದೊಡ್ಡದಾಗಿರುವಂತಹ ಪರ್ವತವನ್ನ ಗಿರಿಶೃಂಗವನ್ನೇ ಎತ್ತಿ ಕುಬೇರನ ಮೇಲೆ ಎಸೆಯುವುದಕ್ಕೆ ಹೊರಡುತ್ತಾನೆ ಒಮ್ಮೆ ಗಿರಿಶೃಂಗವನ್ನು ನಾಶ ಮಾಡುತ್ತಾರೆ. ಪುನಃ ಮತ್ತೊಂದು ಗಿರಿಶೃಂಗವನ್ನು ತಂದು ಇನ್ನೇನು ಕುಬೇರನ ಮೇಲೆ ಎಸೆಯಬೇಕು ಅಂದಾಗ ಇನ್ನು ಹೆಚ್ಚು ಇವನ ಜೊತೆಗೆ ಯುದ್ಧ ಮಾಡಿ ಪ್ರಯೋಜನವಿಲ್ಲ ಭಗವದ್ ಸಂಕಲ್ಪ ಇವನಿಗೆ ಜಯ ಕೊಡಬೇಕು ಅಂತ ಇದೆ ಅಂತ ತಿಳಿದಂತಹ ಕುಬೇರ ಅಲ್ಲಿಂದ ಹೊರಟು ಹೋಗಿದ್ದಾನೆ. ಈ ರೀತಿ ಆ ಕುಬೇರ ಹಾಗೂ ಅನುಹ್ಲಾದ ಇವರಿಬ್ಬರ ಮಧ್ಯದಲ್ಲಿ ಯುದ್ಧವಾಗಿದೆ ಕುಬೇರ ಅಲ್ಲಿಂದ ಹೊರಟು ಹೋಗಿದ್ದಾನೆ.

ವಿಪ್ರಚಿತ್ತಿ ಮತ್ತು ವರುಣರಲ್ಲಿ ಯುದ್ಧ ಪ್ರಾರಂಭ ಆಯಿತು. ವರುಣ ದೇವರು ಭಾರೀ ಭಯಂಕರವಾದ ರೀತಿಯಲ್ಲಿ ಯುದ್ಧವನ್ನು ಮಾಡಿದ್ದಾರೆ ವಿಪ್ರಚಿತ್ತಿಯ ಜೊತೆಗೆ.

ತ್ರಿದಶಾ ವರುಣಶ್ಚೈವ ನ ಶೇಕುಃ ಸ್ಥಾತುಂ ಭಯಾತ್ ।
ತತ್ರಾಪೀನ್ದ್ರಿರ್ಭಯಸ್ತ್ವೇಕಃ ಕೌಶಿಕೋ ವಾಸವಃ ಪ್ರಭುಃ ॥ (61.16 ಭವಿಷ್ಯಪರ್ವ)

ಆ ವಿಪ್ರಚಿತ್ತಿಯ ಮುಂದೆ ಎಲ್ಲಾ ದೇವತೆಗಳು ಹೆದರಿದ್ದಾರೆ, ಇಂದ್ರ ಮಾತ್ರ ಭಯರಹಿತನಾಗಿ ಅಲ್ಲಿ ನಿಂತದ್ದು, ಇನ್ನುಳಿದವರೆಲ್ಲರೂ ಭಯಗ್ರಸ್ತರಾಗಿದ್ದಾರೆ.

ಭೂಯಶ್ಚೈನಂ ತದಾऽऽಭ್ಯಾಮ್ಯ ವರುಣಾಯ ನ್ಯಪಾತಯತ್ ॥ (61.19 ಭವಿಷ್ಯಪರ್ವ)

ವರುಣ ದೇವರ ಮೇಲೆ ಪರಿಘ ಎಂಬಂತಹ ಆಯುಧವನ್ನು ಎಸೆದಿದ್ದಾನೆ ವಿಪ್ರಚಿತ್ತಿ ಆ ಪರಿಘ ಎಂಬ ಆಯುಧ ವರುಣ ದೇವರ ಮೇಲೆ ಬಿದ್ದರೆ ಪುಡಿ ಪುಡಿಯಾಗಿ ಹಾರಿ ಹೋಗಿದೆ ಬೂದಿಯ ಹಾಗೆ ಅಂತಹ ಶರೀರ ವರುಣ ದೇವರದು. ಪುನಃ ವರುಣ ದೇವರು ನಾನಾ ವಿಧವಾದ ನಾಗಗಳನ್ನು ಮುಂದೆ ಮಾಡಿಕೊಂಡು ಯುದ್ಧ ಮಾಡಿದ್ದಾರೆ ಗರುಡಾಸ್ತ್ರವನ್ನ ಬಿಟ್ಟು, ವಿಪ್ರಚಿತ್ತಿ ಆ ನಾಗಗಳನ್ನೆಲ್ಲ ನಾಶ ಮಾಡಿದ್ದಾನೆ. ಎಲ್ಲಾ ಎಷ್ಟು ವಿಚಿತ್ರ ಇದೆ ನೋಡಿ ಗರುಡ ದೇವರು ದೇವತೆಗಳು ಆದರೆ ಆ ಗರುಡ ಮಂತ್ರವನ್ನು ಹೇಳಿ ಗರುಡಾಸ್ತ್ರವನ್ನ ಅಭಿಮಂತ್ರಣ ಮಾಡಿ ಬಿಟ್ಟರೆ ಅವರು ಯಾರೇ ಇರಲಿ ದೇವತೆಗಳೇ ಇರಲಿ, ದೈತ್ಯರೇ ಇರಲಿ ಯಾರು ಆ ಮಂತ್ರವನ್ನು ಜಪ ಮಾಡುತ್ತಾರೋ ಅವರಿಗೆ ಆ ಫಲವನ್ನು ಕೊಡಬೇಕು ಅನ್ನುವುದು ದೇವರ ಆದೇಶ. ವಿಪ್ರಚಿತ್ತಿ ಗರುಡಾಸ್ತ್ರವನ್ನು ಬಿಟ್ಟರೆ ಗರುಡ ದೇವರು, ವರುಣ ದೇವರು ಪ್ರಯೋಗ ಮಾಡಿದ ನಾಗಾಸ್ತ್ರಗಳನ್ನು ನಾಶ ಮಾಡಿ ಹಾಕುತ್ತಾರೆ. ಈ ರೀತಿ ಆ ವಿಪ್ರಚಿತ್ತಿ ಅಲ್ಲಿ ಜಯವನ್ನು ಪಡೆದಿದ್ದಾನೆ ವರುಣ ದೇವರು ಇಂದ್ರ ದೇವರಿಗೆ ಶರಣು ಹೋಗಿದ್ದಾರೆ.

ಆಮೇಲೆ ಅಗ್ನಿ ದೇವರನ್ನ ಎಲ್ಲಾ ಬ್ರಹ್ಮಋಷಿಗಳು, ದೇವಋಷಿಗಳು, ರಾಜಋಷಿಗಳು ಎಲ್ಲರೂ ಅಗ್ನಿಯ ಸ್ತುತಿ ಮಾಡಿದ್ದಾರೆ ಏನಾದರೂ ಮಾಡಿ ನಿಮ್ಮ ದೇವತಾ ಪಕ್ಷಕ್ಕೆ ಜಯವಾಗುವ ಹಾಗೆ ಮಾಡು, ದೇವತಾ ಪಕ್ಷ ಕ್ಷೀಣವಾಗುತ್ತ ಇದೆ ಏನಾದರೂ ಮಾಡಬೇಕು ಅಂತ. ಅತ್ಯಂತ ವಿಸ್ತೃತವಾದ ಅಗ್ನಿಯ ಸ್ತೋತ್ರ ಇದೆ, ಅಗ್ನಿಯ ನಾಮಾವಳಿ ಅನೇಕ ನಾಮಗಳಿಂದ ಅಗ್ನಿಯ ಮಹಿಮೆಯನ್ನು ಕೊಂಡಾಡುತ್ತ ಸ್ತೋತ್ರವನ್ನು ಮಾಡಿದ್ದಾರೆ ಅಗ್ನಿ ದೇವರು ಭಾರೀ ಭಯಾನಕವಾದಂತಹ ತಮ್ಮ ರೂಪವನ್ನು ತೋರಿಸಿ ಅಲ್ಲಿ ಯುದ್ಧವನ್ನು ಮಾಡುತ್ತಾ ಇದ್ದಾರೆ. ಅಗ್ನಿ ಯಾರಿಗೂ ಕಾಣಿಸುತ್ತ ಇಲ್ಲ ಆದರೆ ಎಲ್ಲ ಆಯುಧಗಳು ಸುಡುತ್ತ ಇವೆ, ರಥಗಳು ಸುಡುತ್ತ ಇವೆ, ಧ್ವಜಗಳು ಸುಡುತ್ತ ಇವೆ, ಸಾರಥಿಗಳು ಸಾಯುತ್ತ ಇದ್ದಾರೆ, ಕುದುರೆಗಳು ಸಾಯುತ್ತ ಇವೆ, ವಾಹನಗಳು ಸುಟ್ಟು ಹೋಗುತ್ತ ಇವೆ ಯುದ್ಧ ಮಾಡಬೇಕು ಅಂದರೆ ಎದುರಿಗೆ ಅಗ್ನಿ ಕಾಣಿಸುತ್ತ ಇಲ್ಲ ಅದೃಶ್ಯನಾಗಿ ಅಗ್ನಿ ಎಲ್ಲರನ್ನು ಸುಡುತ್ತ ಇದ್ದಾನೆ. ಈ ರೀತಿ ಆ ಅಗ್ನಿ ದೇವರು ಯುದ್ಧ ಮಾಡುವಾಗ ಮಯಾಸುರ ಮತ್ತು ಶಂಬರಾಸುರ ಇವರಿಬ್ಬರು ಮತ್ತೆ ನೋಡಿ ಬಿಟ್ಟದ್ದು ಪರ್ಜನ್ಯಾಸ್ತ್ರ ವಾರುಣಾಸ್ತ್ರ ದೇವತೆಗಳಿಗೆ ಮತ್ತೆ ದೇವತೆಗಳಿಂದಲೇನೆ ಹೇಗೆ ನಮ್ಮ ಶಾಸ್ತ್ರದಲ್ಲಿ ಹೇಳುವಾಗ ಪ್ರತ್ಯಕ್ಷಕ್ಕೆ ಅನುಮಾನ ಆಗಮಗಳಿಂದ ಬಾಧ ಇಲ್ಲ, ಪ್ರತ್ಯಕ್ಷಕ್ಕೆ ಬಲವತ್ ಪ್ರತ್ಯಕ್ಷದಿಂದಲೇ ಬಾಧ ಅಂತ ಹಾಗೆ ದೇವತೆಗಳನ್ನ ಅಸುರರು ಅಸುರರಾಗಿ ಸೋಲಿಸಲಿಕ್ಕೆ ಆಗಿಲ್ಲ ಮತ್ತೆ ದೇವತೆಗಳ ಸಹಾಯವನ್ನೇ ಪಡೆದು ಸೋಲಿಸಿದ್ದಾರೆ ಅಂತ ಅಂತಹ ಪರಾಕ್ರಮ ದೇವತೆಗಳಲ್ಲಿ ಇದೆ ಅನ್ನುವುದನ್ನ ನಾವು ಇಲ್ಲಿ ಅರ್ಥ ಮಾಡಿಕೊಳ್ಳಬಹುದು. ಆ ಪರ್ಜನ್ಯಾಸ್ತ್ರ ವಾರುಣಾಸ್ತ್ರಗಳನ್ನು ಬಿಟ್ಟು ಈ ಅಗ್ನಿಯನ್ನು ಮತ್ತೆ ಶಾಂತಗೊಳಿಸಿದ್ದಾರೆ ಮಯಾಸುರ ಮತ್ತು ಶಂಬರಾಸುರ ಆಗ ಬೃಹಸ್ಪತ್ಯಾಚಾರ್ಯರು ಅಂದರು ಅಗ್ನಿ ದೇವರಿಗೆ ಅಗ್ನಿ, ಪರ್ಜನ್ಯಾಸ್ತ್ರ ವಾರುಣಾಸ್ತ್ರಗಳನ್ನು ಬಿಟ್ಟರು ಅಂತ ನೀನು ಶಾಂತನಾದರೆ ಹೇಗೆ ಅಂತ ಮತ್ತೆ ಬೃಹಸ್ಪತ್ಯಾಚಾರ್ಯರು ಮತ್ತೊಮ್ಮೆ ಅಗ್ನಿಯ ಸ್ತೋತ್ರವನ್ನು ಮಾಡಿದ್ದಾರೆ.

ದೊಡ್ಡವರು ಬೃಹಸ್ಪತ್ಯಾಚಾರ್ಯರು ಅಗ್ನಿಗಿಂತಲೂ ಆದರೂ ಅಗ್ನಾಂತರ್ಯಮಿಯಾದ ಪರಶುರಾಮರ ಸ್ತೋತ್ರವನ್ನು ಮಾಡುತ್ತೇವೆ ಎಂಬ ಅನುಸಂಧಾನದಿಂದ ಮಾಡಿದ್ದಾರೆ. ಶ್ರೀಮದಾಚಾರ್ಯರು ನಿರ್ಣಯವನ್ನು ಹೇಳುತ್ತಾರ **'ಸದೇಹಮಾನಿಹರಯೇ ಪ್ರಣಮೇತ್ ಕೇವಲಾಯ ವಾ'**[1] ಅಂತ ಉತ್ತಮರಾದವರು ಕೆಲವೊಮ್ಮೆ ಅಧಮರ ಸ್ತೋತ್ರವನ್ನು ಮಾಡುವ ಸಂದರ್ಭ ಬಂದರೆ **'ಪ್ರಣಮೇತ್ ಕೇವಲಾಯ ವಾ'** ಅಂತರ್ಯಾಮಿಯಾದ ಪರಮಾತ್ಮನಿಗೆ ಮಾತ್ರ ಅವರು ಸ್ತೋತ್ರವನ್ನು ಮಾಡುತ್ತಾರೆ ಅಂತ ಆ ದೃಷ್ಟಿಯಲ್ಲಿ ಬೃಹಸ್ಪತ್ಯಾಚಾರ್ಯರು ಅಗ್ನಿಯ ಸ್ತೋತ್ರವನ್ನು ಮಾಡಿದ್ದಾರೆ.

ತ್ವಮೇವಾಗ್ನೇ ಸರ್ವಮಸಿ ತ್ವಯಿ ಸರ್ವಮಿದಂ ಜಗತ್ ।
ತ್ವಂ ಧಾರಯಸಿ ಭೂತಾನಿ ಭುವನಂ ತ್ವಂ ಬಿಭರ್ಷಿ ಚ ॥ (62.32 ಭವಿಷ್ಯಪರ್ವ)

ಸಕಲ ಜಗತ್ತಿಗೆ ನೀನೇ ಆಧಾರ, ನಿನ್ನಿಂದಲೇ ಎಲ್ಲರೂ ಬದುಕುವುದು, ನೀನಿಲ್ಲದೆ ಯಾರಿಗೂ ಹೊಟ್ಟೆಗೆ ಅನ್ನ ಇಲ್ಲ ಅಂತಹ ಮಹಾನುಭಾವ ನೀನು ಹೇಗಾದರೂ ಮಾಡಿ ಪುನಃ ಯುದ್ಧವನ್ನು ಮಾಡು, ಅಸುರರನ್ನು ನಾಶ ಮಾಡು ಅಂತ ನೀರು ಬಿತ್ತು ಅಂತ ನೀನು ಶಾಂತನಾಗುತ್ತಿಯಲ್ಲ ನೀರನ್ನು ಹುಟ್ಟಿಸಿದವನು ನೀನೇ ತಾನೇ, ನಿನ್ನಿಂದಲೇ ನೀರು ಹುಟ್ಟಿದ್ದಲ್ಲ. **'ಕಾಶ ದ್ವಾಯುಃ ವಯೋ ರಾಗ್ನಿಃ ಅಗ್ನೇ ರಾಪಃ ಅದ್ಭ್ಯಃ'**[2] ನಿನ್ನಿಂದ ಹುಟ್ಟಿದ ನೀರು ಆ ನೀರಿನಿಂದ ನೀನು ಶಾಂತನಾಗುವುದು ಏಕೆ ಅದು ಭಗವಂತನ ಸಂಕಲ್ಪ, ಉಳಿದ ಸಂದರ್ಭದಲ್ಲಿ ಸರಿ.

ತಾಂ ಸ್ವಯೋನಿಂ ಸಮಾಸಾದ್ಯ ಕಿಂ ವಿಷೀದಸಿ ಪಾವಕ । (62.39 ಭವಿಷ್ಯಪರ್ವ)

ಈಗ ಮಾತ್ರ ಅದಕ್ಕಾಗಿ ಯಾಕೆ ನೀನು ಈ ರೀತಿ ಶಾಂತನಾಗುತ್ತೀಯಾ ನಿನ್ನ ಪರಾಕ್ರಮವನ್ನು ತೋರಿಸು ಅಂತ ಈ ರೀತಿಯಾಗಿ ಹೇಳಿದಾಗ ಪುನಃ ಅನೇಕ ಜನರನ್ನ ಅಗ್ನಿ ದೇವರು ಸಂಹಾರ ಮಾಡಿದ್ದಾರೆ, ಅದ್ಭುತವಾಗಿರುವಂತಹ ಅಗ್ನಿಯ ಪರಾಕ್ರಮ ಮತ್ತೆ ಪ್ರಕಟವಾಗಿದೆ, ದೈತ್ಯರೆಲ್ಲಾ ಸುಟ್ಟು ಬೂದಿ ಆಗುತ್ತ ಇದ್ದಾರೆ. ಆಗ ಪುನಃ ಪ್ರಹ್ಲಾದ ರಾಜರು ಬಲಿ ಚಕ್ರವರ್ತಿಗೆ ಹೇಳುತ್ತಾರೆ ಈಗ ಸುಮ್ಮನೆ ಕೂಡುವುದು ಬೇಡ ನಿನ್ನ ಪರಾಕ್ರಮವನ್ನು ತೋರಿಸು,ನೀನೇನು ಸಾಮಾನ್ಯನಲ್ಲ ಬ್ರಾಹ್ಮಣರ ಆಶೀರ್ವಾದ ಪಡೆದು ಬಂದಿದ್ದೀ **'ಏಷ ವಿಪ್ರಬಲೋದರ್ಕಃ'.** ಶುಕ್ರಾಚಾರ್ಯರ ಆಶೀರ್ವಾದವನ್ನು ಪಡೆದು ಬಂದಿದ್ದೀಯಾ, ಯಜ್ಞ ಯಾಗಾದಿಗಳನ್ನು ಮಾಡಿಸಿಕೊಂಡಿದ್ದಿ, ಬ್ರಹ್ಮ ದೇವರ ವಿಶೇಷ ಅನುಗ್ರಹ ಇದೆ ನಿನಗೆ, ಅಷ್ಟೈಶ್ವರ್ಯಗಳನ್ನು ಪಡೆದುಕೊಂಡಿದ್ದಿ, ವಶಿತ್ವ ಮೊದಲಾದಂತಹ ಶಕ್ತಿಗಳೆಲ್ಲ ನಿನಗೆ ಇದೆ, ಅಣಿಮಾ ಮಹಿಮಾದಿ ಶಕ್ತಿಗಳೆಲ್ಲಾ ನಿನಗೆ ಇವೆ ಇಷ್ಟೆಲ್ಲ ಇದ್ದಾಗ ಯಾಕೆ ನೀನು ಹೆದರುತ್ತಾ ಇದ್ದಿ. ಅಗ್ನಿ ಬಂದು ಸುಡುತ್ತ ಇದ್ದಾನೆ ಅಂತ ಭಯ ಪಡಬೇಡ ಉತ್ಸಾಹದಿಂದ ಮುಂದಾಗು ಅಂತ ಪ್ರಹ್ಲಾದ ರಾಜರು ಮೊಮ್ಮಗನಾದ ಬಲಿಗೆ ಪ್ರೋತ್ಸಾಹನೆಯನ್ನು ಕೊಟ್ಟಿದ್ದಕ್ಕೆ ಮತ್ತೆ ಬಲಿ ಚಕ್ರವರ್ತಿ ಪ್ರೋತ್ಸಾಹದಿಂದ ಭಾರೀ ಯುದ್ಧವನ್ನು ಮಾಡುತ್ತಾ ಇದ್ದಾನೆ. ಈ ಕಡೆಗೆ ದೇವತೆಗಳೆಲ್ಲ ಇಂದ್ರನಿಗೆ ಶರಣು ಹೋದರು ಸ್ವತಃ ಬಲಿ ಚಕ್ರವರ್ತಿ ಘೋರವಾದ ಯುದ್ಧವನ್ನು ಮಾಡುತ್ತಾ ಇದ್ದಾನೆ ನೀವು ಯಾಕೆ ಉಪೇಕ್ಷೆ ಮಾಡುತ್ತಾ ಇದ್ದೀರಿ, ನಾವೆಲ್ಲ ಸೋತಿದ್ದೇವೆ ಉಳಿದದ್ದು ನೀವೊಬ್ಬರು ನೀವೇ ಯುದ್ಧವನ್ನು ಮಾಡಿ ಅಂತ ಅಂದಾಗ ಬಲಿ ಚಕ್ರವರ್ತಿಗೂ, ಇಂದ್ರ ದೇವರಿಗೂ ಭಾರೀ ಯುದ್ಧ ಪ್ರಾರಂಭವಾಗುತ್ತಾ ಇದೆ. ಪ್ರಹ್ಲಾದ ರಾಜರು ಮಧ್ಯೆ ಮಧ್ಯೆ ಪ್ರೋತ್ಸಾಹ ಕೊಡುತ್ತಾರೆ ಬಲಿ ಚಕ್ರವರ್ತಿಗೆ ಸ್ತೋತ್ರ ಮಾಡುತ್ತಾರೆ ನಿನ್ನ ಬಲ ಹೀಗೆ, ನಿನ್ನ ಶಕ್ತಿ ಹೀಗೆ ನೀನು ಇಷ್ಟು ಆಶೀರ್ವಾದವನ್ನು ಪಡೆದುಕೊಂಡು ಬಂದಿದ್ದಿ ಅಂತ.

1. ವೇದಸ್ಮೃತಿ , 2. ಶಿವ ಪುರಾಣ

ಪ್ರಹ್ಲಾದೇನ ಸ್ತುತಿಶತೈಃ ಕರ್ಮಭಿರ್ಜಯಸಮ್ಮತೈಃ ।
ಪ್ರಭೋಧಿತೋ ದೈತ್ಯಪತಿಃರಗ್ನಿರಿದ್ಧ ಇವಾಬಭೌ ॥ (64.16 ಭವಿಷ್ಯಪರ್ವ)

ಅವರು ಒಂದೊಂದು ಮಾತು ಹೇಳಿದ ಹಾಗೆ ಹೇಳಿದ ಹಾಗೆ ಬಲಿ ಚಕ್ರವರ್ತಿಗೆ ಶಕ್ತಿ ಬರುತ್ತಾ ಇದೆ ಮತ್ತೆ ಉತ್ಸಾಹ ಆ ರೀತಿಯ ಯುದ್ಧ ನಡೆಯುತ್ತಾ ಇದೆ. ಈ ಕಡೆಗೆ ಇಂದ್ರ ದೇವರು ಆಗ್ನೇಯಾಸ್ತ್ರವನ್ನು ಬಿಟ್ಟರೆ ಬಲಿ ಚಕ್ರವರ್ತಿ ವಾರುಣಾಸ್ತ್ರವನ್ನು ಬಿಟ್ಟರು ಎಲ್ಲ ದೇವತೆಗಳದೇ ವಾರುಣಾಸ್ತ್ರವನ್ನು ಬಿಟ್ಟು ಆ ಆಗ್ನೇಯಾಸ್ತ್ರವನ್ನು ಶಾಂತಗೊಳಿಸಿದ್ದಾರೆ. ಪುನಃ ಇಂದ್ರ ದೇವರು ವಜ್ರಾಯುಧವನ್ನೇ ತೆಗೆದುಕೊಂಡು ವಜ್ರಾಯುಧ ಪ್ರಹಾರ ಮಾಡಿ ಬಲಿ ಚಕ್ರವರ್ತಿಯನ್ನ ಸಂಹಾರ ಮಾಡುತ್ತೇನೆ ಅಂತ ಹೊರಟಾಗ ಆಕಾಶವಾಣಿ ಆಗಿದೆ ಇಂದ್ರ ನಿಲ್ಲು ಅಂತ ಅಶರೀರವಾಣಿ ಆಯಿತು.

ನಿವರ್ತಸ್ವ ಮಹಾಬಾಹೋ ಸುರಾಣಾಂ ನನ್ದಿವರ್ಧನ । (64.23 ಭವಿಷ್ಯಪರ್ವ)

ಇದು ನಿಮ್ಮ ಜಯಕಾಲ ಅಲ್ಲ. ಈಗ ಬಲಿ ಚಕ್ರವರ್ತಿಗೆ ಜಯ ಕೊಡಬೇಕು ಅಂತ ಭವಗವಂತನ ಸಂಕಲ್ಪ ಇದೆ. ಈಗ ನೀನು ಯುದ್ಧದಿಂದ ನಿವೃತ್ತನಾಗು, ನಿಮಗೆ ಜಯವಿಲ್ಲ ಅಂತ ತಿಳಿದುಕೊಳ್ಳಬೇಡ ನಿಮಗೇ ಶಾಶ್ವತವಾದ ಜಯ, ಸ್ವಲ್ಪ ದಿನ ಕಾಯಬೇಕು. ಏನು ಅದ್ಭುತವಾದ ಮಾತನ್ನು ಅಶರೀರಃ ವಾಯುಃ ಅಂತಹ ಅಶರೀರ ವಾಣಿಯಲ್ಲಿ ಆಕಾಶವಾಣಿಯಲ್ಲಿ ವಾಯು ದೇವರು ಹೇಳುತ್ತಾರೆ ಪರಾಯಃ ಅಂತ ಅಂದುಕೊಳ್ಳಬೇಡ. ಈ ಬಲಿ ಚಕ್ರವರ್ತಿಯನ್ನ ಸೋಲಿಸುವ ಒಬ್ಬ ವ್ಯಕ್ತಿ ಬರುತ್ತಾನೆ ಮುಂದೆ ಸ್ವಯಂ

ನೈಷ ಶಕ್ಯಸ್ತ್ವಯಾ ಜೇತುಂ ತ್ರಿದಶೈರ್ವಾ ಸುರೇಶ್ವರ ॥ (64.25 ಭವಿಷ್ಯಪರ್ವ)

ಎಲ್ಲಾ ದೇವತೆಗಳು ಕೂಡಿದರು ಈಗ ಇವನನ್ನು ಗೆಲ್ಲುವುದಕ್ಕೆ ಸಾಧ್ಯ ಇಲ್ಲ.

ಯೋ ಹ್ಯಸ್ಯ ಜೇತಾ ಭಗವಾಂಸ್ತಂ ಶೃಣುಷ್ವ ಸಮಾಹಿತಃ ॥ (64.25 ಭವಿಷ್ಯಪರ್ವ)
ಬ್ರಹ್ಮಣಃ ಸ ಹಿ ಸರ್ವಸ್ವಂ ದೇವಾನಾಂ ಚೈವ ಸಾ ಗತಿಃ । (64.26 ಭವಿಷ್ಯಪರ್ವ)

ಚತುರ್ಮುಖ ಬ್ರಹ್ಮನಿಗೂ ಸರ್ವಸ್ವವನ್ನು ಕೊಟ್ಟವ, ಎಲ್ಲ ದೇವತೆಗಳಿಗೆ ಪರಮಗತಿ, ಸಕಲ ಸಚ್ಛಾಸ್ತ್ರಗಳ ಮಹಾ ತಾತ್ಪರ್ಯ ವಿಷಯ **'ಪರಂ ರಹಸ್ಯಂ'**[1] ಎಲ್ಲ ಧರ್ಮಗಳಿಗೆ ಫಲಪ್ರದನಾದವನು ಗತಿಯಾದವನು ಪರಮನಾದವನು.

ಪರಾತ್ಪರತರಃ ಶೀಮಾನ್ ಪರಾವಗತಿಃ ಪ್ರಭುಃ ।
ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ॥ (64.27 ಭವಿಷ್ಯಪರ್ವ)

ಪುರುಷಸೂಕ್ತದಲ್ಲಿ ಪುರುಷ ಶಬ್ದದಿಂದ ನಾರಾಯಣನನ್ನು ತೆಗದುಕೊಳ್ಳಬೇಕೋ ಇನ್ಯಾರನ್ನಾದರನ್ನು ತೆಗದುಕೊಳ್ಳಬೇಕೋ ಅಂತ ಚರ್ಚೆ ಮಾಡುತ್ತಾರೆ. ಏನು ಹೇಳುತ್ತದೆ ಹರಿವಂಶ.

---

1. 64.26 ಭವಿಷ್ಯಪರ್ವ

ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ॥ (64.27 ಭವಿಷ್ಯಪರ್ವ)

ಶಙ್ಖಚಕ್ರಗದಾಪಾಣಿಃ ಪೀತವಾಸಾಃ ಸುರಾರಿಹಾ । (64.28 ಭವಿಷ್ಯಪರ್ವ)

ಅಂತಹ ಸಾಕ್ಷಾತ್ ಪರಮ ಪುರುಷ ನಾರಾಯಣ ಬ್ರಹ್ಮಾದಿ ದೇವತೆಗಳಿಗೆ ವರಪ್ರದ ಫಲಪ್ರದ ಧರ್ಮಚಕ್ಷ ಧರ್ಮಶಾಸ್ತ ಅಂತಹ ಪರಮಾತ್ಮನೇ ವಾಮನನಾಗಿ ಅವತಾರ ಮಾಡಿ ತ್ರಿವಿಕ್ರಮನಾಗಿ ನಿಂತು ಬಲಿ ಚಕ್ರವರ್ತಿಯಿಂದ ರಾಜ್ಯವನ್ನು ಕಿತ್ತಿಕೊಂಡು ನಿನಗೆ ಕೊಡುತ್ತಾನೆ ಇಂದ್ರ, ಆಗ ನೀನು ರಾಜನಾಗುವಂತಿ ಸುಮ್ಮನೆ ಕುಳಿತಲ್ಲಿಯೇ ಕುಳಿತು ರಾಜನಾಗುವ ಯೋಗ ನಿನಗಿದೆ, ಯಾಕೆ ಇಷ್ಟು ಕಷ್ಟಪಟ್ಟು ಯುದ್ಧ ಆಡುತ್ತಿ ನಡಿ ಮನೆಗೆ ಅಂದರು. ಆಶರೀರವಾಣಿ ಆದಮೇಲೆ ಅದು ಯಾಕೆ ಇಷ್ಟೆಲ್ಲಾ ನಾನು ಮಹಾಪರಾಕ್ರಮಿ ಹಾಗೆ ಹೀಗೆ ಏನೂ ಆರ್ಗ್ಯುಮೆಂಟಿಲ್ಲ, ದೇವರ ಆಜ್ಞೆ ಆಯಿತು ಎರಡನೆಯ ಮಾತೇ ಇಲ್ಲ ತಲೆಬಾಗಿ ನಮಸ್ಕಾರ ಮಾಡಿದರು ಇಂದ್ರ ದೇವರು, ಐರಾವತಕ್ಕೆ ಒಂದೆರಡು ಬಡಿದರು ತಲೆಯ ಮೇಲೆ ಆದು ತಿರುಗಿತು ನೇರವಾಗಿ ತಮ್ಮ ಸ್ಥಾನಕ್ಕೆ ತಾವು ಹೊರಟು ಹೋಗಿದ್ದಾರೆ. ಬಲಿ ಚಕ್ರವರ್ತಿ ರಾಜ್ಯವನ್ನು ಆಳುತ್ತ ಇದ್ದಾನೆ, ಭಾರೀ ವೈಭವವೇ ವೈಭವ ಕೇಳಬೇಕೇ ದೈತ್ಯರ ಚೀರಾಟ ಕಿರುಚಾಟ ಕುಣದಾಟ ಅದ್ಭುತವಾದ ರೀತಿಯಲ್ಲಿ ಬಲಿ ಚಕ್ರವರ್ತಿಗೆ ಅವರು ಅಲ್ಲಿ ಪಟ್ಟಾಭಿಷೇಕ ಮಾಡಿಸಿದ್ದಾರೆ.

ಯಾಂ ಯಾಂ ಪರೇಶ ಉರುಧೈವ ಕರೋತಿ ಲೀಲಾಂ

ತಾಂ ತಾಂ ಕರೋತ್ಯನು ತಥೈವ ರಮಾऽಪಿ ದೇವೀ । (5.35 ಮಭಾತಾನಿರ್ಣಯ)

ಈಗ ಬಲಿ ಚಕ್ರವರ್ತಿಗೆ ರಾಜ್ಯವನ್ನು ಕೊಡಬೇಕು ಅನ್ನುವುದು ದೇವರ ಸಂಕಲ್ಪ ಅಂದರೆ ಮತ್ತೆ ಲಕ್ಷ್ಮೀ ದೇವಿ ಏನು ಮಾಡುತ್ತಾಳೆ ಅವಳೂ ಬಂದಿದ್ದಾಳೆ ಅಲ್ಲಿ. ಲಕ್ಷ್ಮೀ ದೇವಿ ಬಂದು ಬಲಿ ಚಕ್ರವರ್ತಿಗೆ ಹೇಳುತ್ತಾ ಇದ್ದಾಳೆ ನಿನ್ನ ಧರ್ಮ, ನಿನ್ನ ಶ್ರದ್ಧೆ, ನಿನ್ನ ಭಕ್ತಿ ಇವುಗಳಿಗೆ ನಾನು ಪ್ರಸನ್ನಳಾಗಿದ್ದೇನೆ, ನಿನ್ನಲ್ಲಿ ಪೂರ್ಣಳಾಗಿ ಸನ್ನಿಹಿತಳಾಗುತ್ತೇನೆ ನೀನೇನು ಚಿಂತೆ ಮಾಡಬೇಡ ಎಲ್ಲಿಯವರೆಗೆ ನೀನು ರಾಜನಾಗಬೇಕು ಅಂತ ನನ್ನ ಸ್ವಾಮಿಯ ಸಂಕಲ್ಪ ಇದೆ ಶ್ರೀಹರಿಯ ಸಂಕಲ್ಪ ಅಲ್ಲಿಯವರೆಗೆ ನಾನು ನಿನ್ನಲ್ಲಿ ಸನ್ನಿಹಿತಳಾಗಿ ಇರುತ್ತೇನೆ ಅಂತ. ಲಕ್ಷ್ಮೀದೇವಿ ಒಳಗೆ ಹೆಜ್ಜೆ ಇಟ್ಟದ್ದೇ ತಡ ಹಿಂದೆ ಬಂದರು ನೋಡಿ ಎಲ್ಲಾ ದೇವತಾ ಸ್ತ್ರೀಯರು ಪ್ರಭಾ, ಧೃತಿ, ಕ್ಷಮಾ, ಭೂತಿ, ನೀತಿ, ವಿದ್ಯಾ, ಸ್ಮೃತಿ, ದಯಾ, ಕೃತಿ, ದಿತಿ, ಶ್ರುತಿ, ಶ್ರೀ, ಪ್ರೀತಿ, ಕೀರ್ತಿ, ಶಾಂತಿ, ಪುಷ್ಟಿ, ಕ್ರಿಯಾ ಇವರೆಲ್ಲ ಸದ್ಗುಣಗಳಿಗೆ ಅಭಿಮಾನಿಯಾದ ದೇವತೆಗಳು ಆ ಎಲ್ಲ ಸಾತ್ವಿಕವಾದ ಪ್ರವೃತ್ತಿಗಳಿಗೆ ಅಭಿಮಾನಿ ದೇವತೆಗಳೆಲ್ಲ ಲಕ್ಷ್ಮೀ ದೇವಿಯ ಜೊತೆಗೆ ಬಂದರು. ಮುಂದೊಮ್ಮೆ ಲಕ್ಷ್ಮೀ ದೇವಿ ಹೊರಟದ್ದು ಬರುತ್ತದೆ ಅದು ಮಹಾಭಾರತದಲ್ಲಿ ಹಿಂದೆ ಬಂದಿದೆ ಆ ಸಂದರ್ಭದಲ್ಲಿ ಅವರೆಲ್ಲ ಹೊರಗೆ ಬರುತ್ತಾರೆ ಮತ್ತೆ ಆ ಕಥೆ ಬೇರೆ. ಆದರೆ ಈಗ ಆ ಬಲಿ ಚಕ್ರವರ್ತಿಗೆ ಐಶ್ವರ್ಯವನ್ನು ಕೊಡಬೇಕು ಅಂತ ದೇವರ ಸಂಕಲ್ಪ ಅದಕ್ಕಾಗಿ ಲಕ್ಷ್ಮೀ ದೇವಿ ಸಕಲ ಗುಣಗಳಿಂದ ಸಹಿತಳಾಗಿ ಅವನಲ್ಲಿ ಸನ್ನಿಹಿತಳಾಗಿದ್ದಾಳೆ.

ಈ ಕಡೆಗೆ ಇಂದ್ರ ದೇವರು ನೇರವಾಗಿ ಬಂದು ತಾಯಿಯ ಮುಂದೆ ಆಳುತ್ತಾ ಇದ್ದಾರೆ ಅಮ್ಮಾ ಅಂದರು ಅದಿತಿ ದೇವಿ ಏನಾಯಿತಪ್ಪಾ ಅಂದಳು ಹೀಗೆ ಆಗಿದೆ ನಮ್ಮ ಪರಿಸ್ಥಿತಿ ಹಾಗಾದರೆ ತಂದೆಯಾದ ಕಶ್ಯಪ ಋಷಿಗಳ ಹತ್ತಿರ ಹೋಗೋಣ, ಅವರಿಗೆ ಪ್ರಾರ್ಥನೆ ಮಾಡೋಣ. **'ಆದ್ಯಂ ದೇವಂ ಗುರುಂ ದಿವ್ಯಂ'** ಅವರ ತಲಿನೇ ಒಣಗುತ್ತಿರಲಿಲ್ಲವಂತೆ ಭಯಂಕರ ದೊಡ್ಡ ಜಟ ಪ್ರಾತಃ ಸ್ನಾನ ಮಾಡುವುದು, ಇನ್ನೇನು ಒಣುಗುತ್ತದೆ ಅನ್ನುವುದರೊಳಗೆ ಮಧ್ಯಾಹ್ನದ ಸ್ನಾನ, ಮತ್ತೆ ಒಣುಗುತ್ತದೆ ಅನ್ನುವುದರೊಳಗೆ ಸಂಜೆಯ ಸ್ನಾನ ಯಾವಾಗ ಒಣಗಬೇಕು ಅದು.

ಆದ್ಯಂ ದೇವಂ ಗುರುಂ ದಿವ್ಯಂ ಕ್ಲಿನ್ನಂ ತ್ರಿಷವಣಾಮ್ಬುಭಿಃ । (66.8 ಭವಿಷ್ಯಪರ್ವ)

ಯಾವಾಗಲೂ ಸ್ನಾನ ಮಾಡಿ ಮಾಡಿ ಒದ್ದೇನೆ ಇರುತ್ತಿತ್ತು ಅವರ ತಲೆ ಅಂತಹ ಅದ್ಭುತವಾದ ತಪಸ್ವಿಗಳು ಮಹಾನುಭಾವರು ಪಾಠ ಪ್ರವಚನದಲ್ಲಿ ನಿರತರು. ನೋಡಿ ಎಲ್ಲಾ ದೇವತೆಗಳು ಅವರ ಮಕ್ಕಳು, ಎಲ್ಲಾ ದೈತ್ಯರು ಅವರ ಮಕ್ಕಳು, ದಾನವರು, ಯಕ್ಷರು, ರಾಕ್ಷಸರು, ಕಿನ್ನರರು, ನಾಗಗಳು ಎಲ್ಲರೂ ಅವರ ಮಕ್ಕಳು ಸಂತತಿ ಇಷ್ಟಿದ್ದು ಎಲ್ಲಾ ನಮ್ಮದೇ ಇದೆ ಇನ್ನೇನು ಅಂತ ಆರಾಮಾಗಿ ಹಾಸಿಗೆ ಹಾಸಿಕೊಂಡು ಮಲಗಿಕೊಂಡಿಲ್ಲ **'ಸ್ವಾಧ್ಯಾಯನಿರತಂ'**[1] ನಿರಂತರ ವೇದಾಧ್ಯಯನ ಜಪ ಧ್ಯಾನ ಇದರಲ್ಲಿ ಆಸಕ್ತರಾಗಿದ್ದಾರೆ. ಅಲ್ಲಿ ಹೋಗಿ ದೇವತೆಗಳೆಲ್ಲ ನಮಸ್ಕಾರ ಮಾಡಿದರು ನಡೆದಿದ್ದನ್ನೆಲ್ಲಾ ತಿಳಿಸಿದರು ಅವರಂದರು ನಾನು ನಿಮ್ಮಪ್ಪ ಅನ್ನುವುದಕ್ಕೆ ನೀವೆಲ್ಲ ನನ್ನ ಹತ್ತಿರ ಬಂದೀರಲ್ಲ ನಮ್ಮ ತಾತನ ಹತ್ತಿರ ಹೋಗೋಣ ಅಂತ. ನಮ್ಮಪ್ಪ ಮರೀಚಿಗಳು ಅವರು ಬೇಡ, ಅವರಪ್ಪ ಬ್ರಹ್ಮ ದೇವರು ಬ್ರಹ್ಮ ದೇವರಿಗೆ ಶರಣು ಹೋಗೋಣ ಜೀವೋತ್ತಮರು ಸರ್ವಜ್ಞರು ಪರಮಾತ್ಮನಿಗೆ ಅತ್ಯಂತ ಪ್ರೀಯರು **'ದೀನಂ ದೂನಂ ಅನಾಥಂ ಶರಣಾಗತಂ ಏನಂ ಉದ್ಧರ'** ಅಂತ ನಿನ್ನ ಪರವಾಗಿ ಅವರು ಪ್ರಾರ್ಥನೆ ಮಾಡಿದರೆ ಪರಮಾತ್ಮನಿಗೆ, ಪರಮಾತ್ಮ ನಿಮ್ಮೆಲ್ಲರನ್ನು ಉದ್ಧಾರ ಮಾಡುತ್ತಾನೆ ಆದ್ದರಿಂದ ಆ ಜೀವೋತ್ತಮರಾದ ಬ್ರಹ್ಮ ದೇವರ ಹತ್ತಿರ ಹೋಗೋಣ ಅಂತ.

ಆ ಬ್ರಹ್ಮ ದೇವರ ಹತ್ತಿರ ಬಂದರೆ ಏನು ಅದು ಅದ್ಭುತವಾಗಿರುವಂತಹ ವೈಭವ ಇದೀಗ ಕೇಳಿದಿರಿ ಅದನ್ನು ಮತ್ತೆ ವರ್ಣನೆ ಮಾಡುತ್ತಾರೆ ಅವರು ಯುದ್ಧಕ್ಕೆ ಅಂತ ದರ್ಶನಕ್ಕೆ ಬಂದಾಗಲೇ ಎಲ್ಲಾ ವೇದಾಭಿಮಾನಿ ದೇವತೆಗಳು ಸ್ತೋತ್ರ ಮಾಡುತ್ತ ಇದ್ದರು ಅಂದರೆ ಇನ್ನು ಅವರು ತಮ್ಮ ಸತ್ಯಲೋಕದೊಳಗೆ ಅವರು ಕುಳಿತಾಗ ಅವರ ವೈಭವ ಕೇಳಬೇಕೆ. ಎಲ್ಲಾ ವೇದಾಭಿಮಾನಿ ದೇವತೆಗಳು, ವೇದಾಂಗಾಭಿಮಾನಿ ದೇವತೆಗಳು ಎಲ್ಲರೂ ಅವರ ಸ್ತೋತ್ರವನ್ನು ಮಾಡುತ್ತಾ ಇದ್ದಾರೆ, ಎಂತೆಂತಹ ಪಂಡಿತರು ಅಲ್ಲಿ ಇದ್ದರು ಬ್ರಹ್ಮ ಲೋಕದೊಳಗೆ ಅಂತ ವರ್ಣನೆ ಮಾಡುತ್ತಾರೆ. ಕೇಳಿ ಕೆಲವರೆಲ್ಲ ಇವತ್ತಿನವರು ಆಗೆಲ್ಲಾ ಏನು ಇತ್ತು ಬರೇ ವೇದಗಳು ಅಷ್ಟೇ ಯಾವ ಭಾಷ್ಯಗಳಿಲ್ಲ,ಯಾವ ಮೀಮಾಂಸೆಗಳಿಲ್ಲ, ಯಾವ ವ್ಯಾಕರಣಗಳಿಲ್ಲ ಇಲ್ಲ, ಹಾಗೆಲ್ಲಾ ಇಲ್ಲ ಎಲ್ಲಾ ಸಕಲ ಶಾಸ್ತ್ರಗಳು ಇತ್ತು ಪರಂಪರೆಗಳಿಂದ **'ಮೀಮಾಂಸಾಹಿತವಾಕ್ಯಜ್ಞೈಃ'**[2] ಮೀಮಾಂಸಾ ಶಾಸ್ತ್ರವನ್ನು ತಿಳಿದಿದ್ದಾರೆ **'ಶಬ್ದನಿರ್ವಚನಾರ್ಥಂ'**[3] ಯಾವ ಶಬ್ದಕ್ಕೆ ಏನರ್ಥ ಅಂತ ನಿರ್ವಚನ ಮಾಡಿ ಹೇಳತಕ್ಕಂತಹ ಶಾಸ್ತ್ರಗಳು ಅಂತಹ ನಿರುಕ್ತ ಶಾಸ್ತ್ರವನ್ನು ತಿಳಿದವರು ಅಲ್ಲಿದ್ದಾರೆ, ಶಿಕ್ಷಾಶಾಸ್ತ್ರವನ್ನು ತಿಳಿದವರಿದ್ದಾರೆ, ವ್ಯಾಕರಣ ಶಾಸ್ತ್ರವನ್ನು ತಿಳಿದವರಿದ್ದಾರೆ, ಭಾರೀ ಭಾರೀ ಸ್ವರಜ್ಞಾನ ಇದ್ದವರು ಇವರೆಲ್ಲ ಆ ಬ್ರಹ್ಮ ಲೋಕದಲ್ಲಿ ಚರ್ಚೆ ಮಾಡುತ್ತಾ ಇದ್ದಾರೆ, ಅಲ್ಲಲ್ಲಲ್ಲಿ ಪ್ರವಚನ ಮಾಡುತ್ತಾ ಇದ್ದಾರೆ, ಪಾಠಗಳು ನಡೆಯುತ್ತಾ ಇವೆ ಇದನ್ನೆಲ್ಲಾ ನೋಡುವುದರಿಂದಲೇ ನಾವು ಪವಿತ್ರರಾದೆವು ಅಂತ ಭಾವಿಸಿದರಂತೆ.

ಪೂತಾನ್ಯಾತ್ಮಶರೀರಾಣಿ ಮೇನಿರೇ ತು ನ ಸಂಶಯಃ ॥ (66.26 ಭವಿಷ್ಯಪರ್ವ)

ಅದು ಆ ಬ್ರಹ್ಮ ಲೋಕದ ವೈಭವ ನಮಸ್ಕಾರ ಮಾಡುತ್ತಾ ಇದ್ದಾರೆ ಪುನಃ ಪುನಃ ಪುನಃ ಪುನಃ ಸಾಷ್ಟಾಂಗ ಪ್ರಣಾಮ ಮಾಡುತ್ತ ಇದ್ದಾರೆ ಬ್ರಹ್ಮ ದೇವರಿಗೆ ದೇವತೆಗಳು ಒಂದಲ್ಲ ಎರಡಲ್ಲ.

ನಮಸ್ಕುರ್ವನ್ತಿ ಚ ಪುನರ್ಗುರುಂ ಲೋಕಗುರುಂ ಪ್ರಭುಮ್ । (66.28 ಭವಿಷ್ಯಪರ್ವ)

1. 66.10 ಭವಿಷ್ಯಪರ್ವ, 2. 66.25 ಭವಿಷ್ಯಪರ್ವ, 3. 66.22 ಭವಿಷ್ಯಪರ್ವ



ನಮಸ್ಕಾರ ಮಾಡಿಯೇ ಬಂದರು ಮತ್ತೆ ಮತ್ತೆ ನಮಸ್ಕಾರ ಮಾಡುತ್ತ ಇದ್ದಾರೆ. ಆ ರೀತಿ ಆ ಬ್ರಹ್ಮ ದೇವರಿಗೆ ನಮಸ್ಕಾರ ಮಾಡಿ, ಸ್ತೋತ್ರ ಮಾಡಿ ಅಲ್ಲಿ ಅನೇಕ ಪೂರ್ವಪಕ್ಷಿಗಳು ಇದ್ದರು ಚಾರ್ವಾಕರು ಮೊದಲಾದವರೆಲ್ಲ ಅವರನ್ನೆಲ್ಲ ಈ ಉತ್ತಮರಾದಂತಹ ವೇದಭಾಷ್ಯಾದಿಗಳನ್ನು ತಿಳಿದುಕೊಂಡಂತಹ ಶಾಸ್ತ್ರಜ್ಞರು ನಿರಾಕರಣೆ ಮಾಡುತ್ತಾರೆ, ಸಿದ್ಧಾಂತದ ಸ್ಥಾಪನೆ ಮಾಡುತ್ತಾರೆ.

ಲೋಕಾಯತಿಕಮುಖ್ಯೈಶ್ಚ ಶುಶ್ರುವುಃ ಸ್ವನಮೀರಿತಮ್ ॥ (66.30 ಭವಿಷ್ಯಪರ್ವ)

ಆ ರೀತಿ ಅಂತಹ ಪೂರ್ವಪಕ್ಷಿಗಳು ಇದ್ದಾರೆ, ಸಿದ್ಧಾಂತಿಗಳು ಇದ್ದಾರೆ, ವಾಕ್ಯಾರ್ಥಗಳು ನಡೆಯುತ್ತದೆ, ಸಿದ್ಧಾಂತದ ಸ್ಥಾಪನೆ ಆಗುತ್ತದೆ ಏನದು ಬ್ರಹ್ಮಲೋಕ ಯಾವುದನ್ನು ಶ್ರೀಮದಾಚಾರ್ಯರು ಸರ್ವ ಮೂಲ ಗ್ರಂಥಗಳಲ್ಲಿ ತಾವು ಮಾಡುತ್ತಾರೆ ಭಾವೀ ಬ್ರಹ್ಮರು ಈಗ ನಮಗೆ ಮಾಡಿ ತೋರಿಸಿದ್ದಾರೆ ಅದು ಬ್ರಹ್ಮ ದೇವರ ಸಭೆಯಲ್ಲಿಯೂ ಆ ಸಿದ್ಧಾಂತದ ಸ್ಥಾಪನೆ ನಿರಂತರವಾಗಿ ನಡೆಯುತ್ತಾ ಇರುತ್ತದೆ ಅದೇ ಪರಮಾತ್ಮನ ದೊಡ್ಡ ಪೂಜೆ. **'ವಿವಿಕ್ತದೃಷ್ಟಿಃ ತದುತಾರ್ಹಣಂ ಮೇ'** ಜೀವ ಜಡಾತ್ಮಕ ಪ್ರಪಂಚದಿಂದ ಅತ್ಯಂತ ಭಿನ್ನನಾಗಿದ್ದಾನೆ ಪರಮಾತ್ಮ ಸರ್ವೋತ್ತಮನಾಗಿದ್ದಾನೆ ಅಂತ ಸಮರ್ಥನೆ ಮಾಡುವುದೇ ಒಂದು ದೇವರ ದೊಡ್ಡ ಪೂಜೆ ಆ ಪೂಜೆಯನ್ನು ಮಾಡದೆ ಬ್ರಹ್ಮ ದೇವರು ಇನ್ನೇನು ಮಾಡುತ್ತಾರೆ ಬೇರೆ. ಋಷಭನಾಮಕ ಪರಮಾತ್ಮ ತನ್ನ ಮಕ್ಕಳಿಗೆ ಹೇಳಿದ ಆ ಪರಮಾತ್ಮನ ನಿಜವಾದ ಪ್ರಧಾನ ಮಕ್ಕಳು ಆ ಬ್ರಹ್ಮ ದೇವರು ಅವರು ಆ ಕಾರ್ಯ ಮಾಡದೇ ಇರುತ್ತಾರಾ ಅದೇ ಕಾರ್ಯ ಅಲ್ಲಿ ನಡೆಯುತ್ತಾ ಇದೆ. ಇಂತಹ ಬ್ರಹ್ಮ ಲೋಕದಲ್ಲಿ ಇವರೆಲ್ಲ ಪ್ರವೇಶ ಮಾಡಿದ್ದಾರೆ, ದೇವತೆಗಳು ಪ್ರಾರ್ಥನೆ ಮಾಡಿದ್ದಾರೆ.

ಸರ್ವಾಣಿ ಶ್ರುತಿಶಾಸ್ತ್ರಾಣಿ ಗಾಥಾಶ್ಚ ನಿಯಮಾಸ್ತಥಾ ॥ (66.40 ಭವಿಷ್ಯಪರ್ವ)
ಭಾಷ್ಯಾಣಿ ಸರ್ವಶಾಸ್ತ್ರಾಣಿ ದೇಹವನ್ತಿ ವಿಶಾಮ್ಪತೇ । (66.41 ಭವಿಷ್ಯಪರ್ವ)

ವೇದಾಭಿಮಾನಿ ದೇವತೆಗಳಷ್ಟೇ ಅಲ್ಲ, ವೇದಭಾಷ್ಯಾಭಿಮಾನಿಗಳು ಶುದ್ಧವಾದ ಭಗವಂತನಿಗೆ ಸಮ್ಮತವಾದ ಭಾಷ್ಯಗಳು ಇದ್ದವು ಆ ಭಾಷ್ಯಾಭಿಮಾನಿಗಳ ದೇವತೆಗಳಿದ್ದಾರೆ, ಕಾಲಾಭಿಮಾನಿ ದೇವತೆಗಳಿದ್ದಾರೆ, ಗ್ರಹಾಭಿಮಾನಿ ದೇವತೆಗಳು ಇನ್ನನ್ನೇಕ ತರಹದ ದೇವತೆಗಳೆಲ್ಲ ಆ ಬ್ರಹ್ಮ ದೇವರಿಗೆ ತಲೆ ಗಟ್ಟಿಸಿ ನಮಸ್ಕಾರ ಮಾಡುತ್ತ ಇರುವಂತಹ ಒಂದು ವಾತಾವರಣ. ಒಂದು ಅಧ್ಯಾಯ ಕೇವಲ ಬ್ರಹ್ಮ ದೇವರ ವರ್ಣನೆ ಇದೆ. ಇಂತಹ ಬ್ರಹ್ಮ ದೇವರಿಗೆ ನಮಸ್ಕಾರ ಮಾಡಿದರು ಸರಿ ಯಾಕೆ ಬಂದಿದ್ದೀರಿ, ಏನಪ್ಪ ನೀನು ಯಾಕೆ ಬಂದಿದ್ದೀ ನಿನ್ನ ಅಭಿಪ್ರಾಯ ಏನು, ಏನು ಯಾರನ್ನೂ ಮಾತನಾಡಿಸಲೇ ಇಲ್ಲ ಬ್ರಹ್ಮ ದೇವರು ನೇರವಾಗಿ ತಮ್ಮದೇ ಉಪನ್ಯಾಸ ಪ್ರಾರಂಭನೇ ನೀವು ಯಾಕೆ ಬಂದಿದ್ದೀರಿ ನನಗೆ ಗೊತ್ತು, ನಿಮ್ಮದೇನು ಹಣೆಬರಹ ತಿಳಿದಿದೆ ಅದಕ್ಕೆ ಏನು ಉಪಾಯ ಹೇಳುತ್ತೀನಿ ಕೇಳಿ ಅಂತ. ಕೆಲವರೆಲ್ಲಾ ಭಾರೀ ಜ್ಯೋತಿಷಿಗಳು ಇರುತ್ತಾರೆ ಒಳಗೆ ಬರುತ್ತಾ ಇರುವಾಗಲೇ ಇದಕ್ಕೋಸ್ಕರ ಬಂದಿದ್ದೀರಿ ಗೊತ್ತು ಅದಕ್ಕೆ ಇದು ಪರಿಹಾರ ಹೋಗಿ ಅಂತ ಹೇಳಿ ಕಳಿಸುತ್ತಾರೆ. ಇವರೇನು ಇವರು ಎಲ್ಲಾ ಗ್ರಹಾಭಿಮಾನಿ ದೇವತೆಗಳು, ವೇದಾಭಿಮಾನಿ ದೇವತೆಗಳು ಇವರಿಗೆ ನತಮಸ್ತಕರಾಗಿದ್ದಾರೆ ಅಂತಹ ಸರ್ವಜ್ಞ ಶಿಖಾಮಣಿಗಳಾದ ಬ್ರಹ್ಮ ದೇವರಿಗೆ ಯಾರು ಏನು ಹೇಳಬೇಕು.

ವಿಜಾನಾಮ್ಯಹಮವ್ಯಗ್ರ ಏತತ್ ಸರ್ವಂ ಮಹಾಬಲಾಃ ॥ (67.1 ಭವಿಷ್ಯಪರ್ವ)

ನನಗೆಲ್ಲ ಗೊತ್ತು ನೀವು ಯಾಕೆ ಬಂದಿದ್ದೀರಿ ಅಂತ ಚಿಂತೆ ಮಾಡಬೇಡಿ ಪರಮಾತ್ಮ ಅವತಾರ ಮಾಡುತ್ತಾನೆ ಪರಮಾತ್ಮನಿಗೆ ಶರಣು ಹೋಗಿ. ನೋಡಿರಿ ಅಮ್ಮನ ಹತ್ತಿರ ಹೋದ ಇಂದ್ರ, ಅಪ್ಪನ ಹತ್ತಿರ ಹೋಗೋಣ ಅಂತ

ಕರೆದುಕೊಂಡು ಬಂದಿದ್ದಾಳೆ, ಅಪ್ಪ ತಾತನ ಹತ್ತಿರ ಹೋಗೋಣ ಅಂತ ಬ್ರಹ್ಮ ದೇವರು, ಬ್ರಹ್ಮ ದೇವರು ನಮ್ಮ ಅಪ್ಪನ ಹತ್ತಿರ ಹೋಗಿ ಅಂತ ಕಳಿಸುತ್ತಾರೆ. ಕ್ಷೀರಸಾಗರದ ಉತ್ತರ ದಿಕ್ಕಿನ ತೀರದಲ್ಲಿ ಇರುವಂತಹ ಭಗವಂತನ ಹತ್ತಿರ ಹೋಗಿ ಅಲ್ಲಿ ಪರಮಾತ್ಮನನ್ನು ಕುರಿತು ತಪಶ್ಚರ್ಯ ಮಾಡಿ ಒಂದೇ ದಿವಸಕ್ಕೆ ದೇವರು ನಿಮಗೆ ದರ್ಶನ ಕೊಡುವುದಿಲ್ಲ, ದಿವ್ಯ ವರ್ಷ ಸಹಸ್ರಗಳವರೆಗೆ ಅಲ್ಲಿ ತಪಶ್ಚರ್ಯ ಮಾಡಿ, ತಪಶ್ಚರ್ಯ ಮಾಡಿದ ಮೇಲೆ ದೇವರು ನಿಮಗೆ ದರ್ಶನವನ್ನು ಕೊಡುತ್ತಾನೆ. ಆಮೇಲೆ ನೀವು ಆ ಪರಮಾತ್ಮನ ಅನುಗ್ರಹದಿಂದ ವರವನ್ನು ಪಡೆದುಕೊಂಡು ಬನ್ನಿ ಅಂತ ಹೇಳಿ ಕಳಿಸುತ್ತಾರೆ. ಅಲ್ಲಿ ಕಶ್ಯಪರು ಬರುತ್ತಾರೆ ತಪಶ್ಚರ್ಯವನ್ನು ಮಾಡುತ್ತಾರೆ, ಸಹಸ್ರ ವರ್ಷಗಳವರೆಗೆ ತಪಶ್ಚರ್ಯ ಮಾಡಿ ಪರಮಾತ್ಮನ ಸ್ತುತಿಯನ್ನು ಮಾಡುತ್ತಾರೆ. ಆ ಸ್ತುತಿಯೇ ಅದ್ಭುತವಾದ ಸ್ತುತಿ, ಗದ್ಯ ರೂಪವಾದ ಸ್ತುತಿ ಕಶ್ಯಪರು ಮಾಡುವಂತಹ ಪರಮಾತ್ಮನ ಸ್ತೋತ್ರ.

ನಮೋಽಸ್ತು ದೇವದೇವೇಶ ಏಕಶೃಙ್ಗ ವರಾಹ ವೃಷಾರ್ಚಿಷ
ವೃಷಸಿನ್ಧೋ ವೃಷಾಕಪೇ ಸುರವೃಷಭ ಸುರನಿರ್ಮಿತ ಅನಿರ್ಮಿತ
ಭದ್ರಕಪಿಲ ವಿಷ್ವಕ್ಸೇನ ಧ್ರುವ ಧರ್ಮ ಧರ್ಮರಾಜ । (68.1 ಭವಿಷ್ಯಪರ್ವ)

ಹೀಗೆ ಅತೀ ವಿಸ್ತೃತವಾಗಿರುವಂತಹ ಆ ಪರಮಾತ್ಮನ ಸ್ತುತಿಯನ್ನು ಮಾಡುತ್ತಾರೆ. ಸಕಲ ಜಗತ್ತಿಗೆ ನಿಯಾಮಕನಾದವನು, ಎಲ್ಲರಿಗೆ ಬೇಕಾದ ಇಷ್ಟಾರ್ಥಗಳನ್ನು ಕೊಡುವವನು ಭೂರ್ದ ಭುವರ್ದ ಸ್ವರ್ದ ಆ ಆ ಲೋಕಗಳ ಆಧಿಪತ್ಯವನ್ನು ದೇವತೆಗಳಿಗೆಲ್ಲ ಅನಾದಿಕಾಲದಿಂದ ಕರುಣಿಸುತ್ತ ಬಂದವನು ನೀನೇ ಅಂತಹ ಸ್ವಾಮಿ.

ವಿಶ್ವಪಾಸ್ತ್ವಂ ತ್ವಮೇವ ವಿಶ್ವಂ ಬಿಭರ್ಷಿ ವರಾರ್ಥಿನೋ ನಸ್ತ್ರಾಯಸ್ವೇತಿ ॥ (68.7 ಭವಿಷ್ಯಪರ್ವ)

ವರ ಬೇಡುವುದಕ್ಕೆ ಬಂದಿದ್ದೇವೆ ನಮ್ಮನ್ನು ಕಾಪಾಡು ಅಂತ ಸುಧೀರ್ಘವಾಗಿ ಒಂದು ಏಳು ಗದ್ಯಗಳಿಂದ ಆ ಪರಮಾತ್ಮನ ಸ್ತೋತ್ರವನ್ನು ಮಾಡಿದ್ದಾರೆ ಕಶ್ಯಪರು. ಆ ರೀತಿ ಸ್ತೋತ್ರವನ್ನೆಲ್ಲ ಕೇಳಿದ ಮೇಲೆ ಪರಮಾತ್ಮ ಏನು ವರ ಬೇಕು ಕೇಳಿ ಅಂತ ಹೇಳಿದಾಗ ನೋಡಿ ಬ್ರಹ್ಮ ದೇವರು ನೀನು ಈ ವರ ಕೇಳಬೇಕು, ನೀನು ಈ ವರ ಕೇಳಬೇಕು ಅಂತ ಬಾಯಿಪಾಠ ಮಾಡಿಸಿ, ರಿಹರ್ಸಲ್ ಮಾಡಿಸಿ ಕಳಿಸಿರುತ್ತಾರೆ ಕಶ್ಯಪರಿಗೆ ಅದಿತಿಗೆ ಹಾಗೇ ವರ ಕೇಳುತ್ತಾರೆ. ಕಶ್ಯಪರು ಅನ್ನುತ್ತಾರೆ ನೀನೇ ಅವತಾರ ಮಾಡಬೇಕು ಇಂದ್ರನಿಗೆ ತಮ್ಮನಾಗಿ ಅಂತ, ಅದಿತಿ ದೇವಿ ನೀನು ಮಗನಾಗಿ ಅವತಾರ ಮಾಡಬೇಕು ಅಂತ ಪ್ರಾರ್ಥನೆ ಮಾಡುತ್ತಾಳೆ, ದೇವತೆಗಳು ನೀನು ತಮ್ಮನಾಗಿ ರಕ್ಷಕನಾಗಿ ಪೋಷಕನಾಗಿ ಪಾಲಕನಾಗಿ ಉದ್ಧಾರಕನಾಗಿ ಅವತಾರ ಮಾಡಬೇಕು ಅಂತ ದೇವತೆಗಳೆಲ್ಲ ಪ್ರಾರ್ಥನೆ ಮಾಡಿದಾಗ ತಥಾಸ್ತು ಅಂತ ಪರಮಾತ್ಮ ವರ ಕೊಡುತ್ತಾನೆ. ನೀವು ಏನು ಚಿಂತೆ ಮಾಡಬೇಡಿ ಶೀಘ್ರದಲ್ಲಿ ನೀನು ರಾಜನಾಗುತ್ತೀಯಾ ಮತ್ತೆ ಎಲ್ಲರಿಗೂ ಯಥಾಪ್ರಕಾರ ಯಜ್ಞ ಯಾಗಾದಿಗಳಲ್ಲಿ ಹವಿಸ್ಸುಗಳು, ಪಿತೃ ದೇವತೆಗಳಿಗೆ ಶ್ರಾದ್ಧಾದಿಗಳಲ್ಲಿ ಸಿಗಬೇಕಾದಂತಹ ಏನೇನು ಸ್ವಧಾಕಾರಾದಿಗಳಿಂದ ಸಿಗಬೇಕಾದ ಅವರಿಗೆ ಯೋಗ್ಯವಾದ ಅನ್ನ ಅವರಿಗೆ ಸಿಗುತ್ತದೆ ಅವರು ಕ್ರವ್ಯಾದರಾದರು, ನೀವು ಹವ್ಯಾದರಾಗುತ್ತೀರಿ ಯಾರು ಚಿಂತೆಯನ್ನು ಮಾಡಬೇಡಿ ಎಲ್ಲರೂ ಸುಖವಾಗಿ ಇರುತ್ತೀರಿ ಅಂತ ಹೇಳಿ ಪರಮಾತ್ಮ ಭರವಸೆಯನ್ನು ಕೊಟ್ಟಿದ್ದಾನೆ. ಇಷ್ಟೆಲ್ಲ ಭರವಸೆಯನ್ನು ಕೊಟ್ಟು ನೀವು ನೀವು ನಿಮ್ಮ ನಿಮ್ಮ ಆಶ್ರಮಗಳಿಗೆ ಹೋಗಬೇಕು ಅಂತ ಹೇಳಿದಾಗ ನೋಡಿ, ಬರೀ ಆಶ್ರಮಕ್ಕೆ ಹೋಗಿರಿ ಅಂತ ಅನ್ನಲಿಲ್ಲ, ನಾನು ವರ ಕೊಟ್ಟಿದ್ದೇನೆ ಹೇಗೂ ನಮಗೆಲ್ಲ ಸಿಕ್ಕೆ ಸಿಗುತ್ತೆ ಅಂತ ಅನ್ನಬೇಡಿ ಆಶ್ರಮಕ್ಕೆ ಹೋಗಿ ಅಧ್ಯಯನ ಬಿಡಬೇಡಿ, ಪಾಠ ಪ್ರವಚನವನ್ನು ಬಿಡಬೇಡಿ ಅನ್ನುತ್ತಾನೆ.

ಚೇರುಃ ಸ್ವಾಧ್ಯಾಯನಿಯತಾ ಅದಿತ್ಯಾ ಗರ್ಭಮೀಪ್ಸವಃ ॥ (69.18 ಭವಿಷ್ಯಪರ್ವ)

ದೇವರು ಅವತಾರ ಮಾಡಬೇಕು ಅಂತ ಇಷ್ಟು ತಪಶ್ಚರ್ಯ ಮಾಡಿ ದೇವರಿಂದ ವರ ಪಡೆದ ಮೇಲೂ ನಿರಂತರ ವೇದ ಪಠಣಾದಿಗಳನ್ನು ಮಾಡುತ್ತಾ ದೇವರ ಸ್ವಾಗತಕ್ಕಾಗಿ ಕಾಯುತ್ತಾ ಇದ್ದಾರೆ. ಗರ್ಭವಾಸದ ದುಃಖವೇ ಇಲ್ಲ ಪರಮಾತ್ಮನಿಗೆ ಆದರೂ ಅದಿತಿ ದೇವಿ ಕಶ್ಯಪರಿಂದ ಗರ್ಭಧಾರಣೆಯನ್ನು ಮಾಡಿದ್ದಾಳೆ ಒಂದು ಸಾವಿರ ವರ್ಷದವರೆಗೆ ಗರ್ಭಧಾರಣೆ ಮಾಡಿದ್ದಾಳೆ ಹಾಗೆ. ಆ ಪರಮಾತ್ಮ ಸರ್ವತ್ರವ್ಯಾಪ್ತ ಅವನಿಗೆ ಯಾವ ಶುಕ್ಲಶೋಣಿತ ಸಂಬಂಧದಿಂದ ನಿರ್ಮಿತವಾದ ದೇಹ ಇಲ್ಲ, ಸಚ್ಚಿದಾನಂದಾತ್ಮಕ ದೇಹ ಸರ್ವತ್ರವ್ಯಾಪ್ತನಾದ ಭಗವಂತ ವಿಶೇಷವಾಗಿ ಅದಿತಿ ದೇವಿಯ ಗರ್ಭದಲ್ಲಿ ಸನ್ನಿಹಿತನಾಗಿದ್ದ ಅಷ್ಟೇ ಯಾವ ದೋಷಗಳು ಇಲ್ಲ, ಒಂದು ಸಾವಿರ ವರ್ಷಗಳಾದ ಮೇಲೆ ಪರಮಾತ್ಮ ಅವತಾರ ಮಾಡುತ್ತಾ ಇದ್ದಾನೆ. ಎಲ್ಲಾ ಋಷಿಗಳು, ಎಲ್ಲಾ ಮುನಿಗಳು, ಎಲ್ಲಾ ದೇವತೆಗಳು ಎಲ್ಲರೂ ಕೂಡ ಆ ಪರಮಾತ್ಮನ ಸ್ತೋತ್ರವನ್ನು ಮಾಡಿದ್ದಾರೆ, ಅಪ್ಸರಾ ಸ್ತ್ರಿಯರು ಆ ಎಲ್ಲ ದೇವತೆಗಳ ಹೆಸರುಗಳನ್ನೆಲ್ಲ ಹೇಳುತ್ತಾರೆ, ಶ್ರೀವತ್ಸಾಂಕ ಶ್ರೀವತ್ಸ ಚಿಹ್ನದಿಂದ ಕೂಡಿ ಸಕಲ ಲಕ್ಷಣಗಳಿಂದ ಸಕಲಾಭರಣಗಳಿಂದ ಭೂಷಿತನಾಗಿ ಪರಮಾತ್ಮ ಪ್ರಾದುರ್ಭೂತನಾಗಿದ್ದಾನೆ, ದೇವತೆಗಳಿಗೆ ಕೇಳಿದ ಏನು ಬೇಕು ಹೇಳಿ ಅವತಾರ ಮಾಡಿದ್ದೇನೆ.

ಕಂ ಕರೋಮಿ ಸುರಶ್ರೇಷ್ಠಾಃ ಕಂ ವರಂ ಚ ದದಾಮಿ ವಃ ॥ (70.43 ಭವಿಷ್ಯಪರ್ವ)

ನಿಮಗೆ ಏನು ವರ ಬೇಕು ಅಂತ ಕೇಳಿದಾಗ ಅವರು ವರ ಕೇಳಿದ್ದಾರೆ ಬಲಿ ಚಕ್ರವರ್ತಿಯಿಂದ ರಾಜ್ಯವನ್ನು ಪಡೆದುಕೊಂಡು ಕೊಡಬೇಕು ಅಂತ ಒಂದೇ ಮಾತು ಹೇಳಿದ ಪರಮಾತ್ಮ ಯಜ್ಞಕ್ಕೆ ನನ್ನನ್ನು ಕರೆದುಕೊಂಡು ಹೋಗಿ ಮುಂದಿನ ಕೆಲಸ ಎಲ್ಲ ನಾನು ಮಾಡುತ್ತೇನೆ ಅಂತ ಪರಮಾತ್ಮ ಯಜ್ಞಕ್ಕೆ ಹೊರಟಿದ್ದಾನೆ. ಅದೇನು ಕರೆದುಕೊಂಡು ಹೋಗುವುದು ಬೇಕಾಗಿದ್ದಿಲ್ಲ ಆದರೆ ಆ ಒಂದು ಸೇವೆಯನ್ನು ಅವರಿಗೆ ಕೊಡೋಣ ಅಂತ ಬೃಹಸ್ಪತ್ಯಾಚಾರ್ಯರು ಸ್ವಯಂ ತಾವು ಪರಮಾತ್ಮನನ್ನ ಅತ್ಯಂತ ವೈಭವದಿಂದ ಆ ಬಲಿ ಚಕ್ರವರ್ತಿ ಮಾಡುತ್ತಾ ಇರುವಂತಹ ಯಜ್ಞದಲ್ಲಿ ಕರೆದುಕೊಂಡು ಹೋಗಿದ್ದಾರೆ. ಪರಮಾತ್ಮ ಪ್ರವೇಶ ಮಾಡಿದ್ದಾನೆ ನೋಡಿ, ಪ್ರವೇಶ ಮಾಡಿದ ಅವನ ತೇಜಸ್ಸಿನಿಂದಲೇ ಧರ್ಷಿತರಾಗಿ ಎಲ್ಲರೂ ಎದ್ದು ನಮಸ್ಕಾರ ಮಾಡಿದರು ಅಂತ ಭಾಗವತ ವರ್ಣನೆ ಮಾಡುತ್ತದೆ, ಹರಿವಂಶ ಹೇಳುತ್ತದೆ ಬರೀ ತೇಜಸ್ಸಿನಿಂದ ಧರ್ಷಿತರಾಗುವುದಲ್ಲ ಪರಮಾತ್ಮ ಅಲ್ಲಿ ವಾಕ್ಯಾರ್ಥ ಮಾಡಿದ್ದಾನೆ, ಎಲ್ಲರಿಗೆ ಪ್ರಶ್ನೆಗಳನ್ನು ಕೇಳಿದ್ದಾನೆ. ಶುಕ್ರಾಚಾರ್ಯರೇ ಮೊದಲಾದಂತಹ ಎಲ್ಲ ಅಲ್ಲಿ ಇರುವಂತಹ ಭಾರೀ ಭಾರೀ ಋಷಿಗಳು ಅಂತ ಏನಿದ್ದರೋ ಅಸುರ ಪಕ್ಷದಲ್ಲಿ ಬಲಿ ಚಕ್ರವರ್ತಿಗೆ ಯಜ್ಞ ಮಾಡಿಸುವುದಕ್ಕೆ ಅಂತ ಕುಳಿತಂತಹ ಋಷಿಗಳು ಋತ್ವಿಜರು ಎಲ್ಲರಿಗೂ ಪ್ರಶ್ನೆಗಳನ್ನು ಕೇಳಿದ್ದಾನೆ ನಿರುತ್ತರರನ್ನಾಗಿ ಮಾಡಿದ್ದಾನೆ. ಇವರನ್ನು ಮೀರಿದ ಪಂಡಿತರೇ ಇಲ್ಲ, ಇವರನ್ನು ಮೀರಿದ ಋಷಿಗಳೇ ಇಲ್ಲ, ನನಗೆ ಜಯ ಕೊಡಿಸಿದವರೇ ಇವರು, ಭಾರೀ ತಪಸ್ವಿಗಳು, ಭಾರೀ ಮೇಧಾವಿಗಳು ಅಂತ ನಾನು ಅಂದುಕೊಂಡಿದ್ದೆ ಇವರೇನು ಬಾಯೀನೆ ತೆಗೆಯುತ್ತಾ ಇಲ್ಲ ಅಲ್ಲ ಅಂತ ಆ ಬಲಿ ಚಕ್ರವರ್ತಿಯ ಮನಸ್ಸಿನಲ್ಲಿ ಮೊದಲಿಗೆ ತನ್ನ ಆಚಾರ್ಯರ ಬಗ್ಗೆ ಇರುವ ಗೌರವವನ್ನು ಕಳೆದುಬಿಟ್ಟ ದೇವರು, ಅಲ್ಲಿಯೇ ದೊಡ್ಡದು ಬಿತ್ತು ಕೊಡಲಿಯ ಪೆಟ್ಟು. **'ಏಷ ವಿಪ್ರಬಲೋದರ್ಕಃ'** ಅವರ ಮೇಲಿನ ಶ್ರದ್ಧೆ, ಅವರ ಮೇಲಿನ ಭಕ್ತಿ ಆ ಅನುಗ್ರಹದಿಂದಲೇ ಇಷ್ಟು ಮೇಲೆ ಬಂದಿದ್ದ ಬಲಿ ಚಕ್ರವರ್ತಿ ಆ ಗುರುಗಳ ಬಗ್ಗೆ ಇರುವ ಶ್ರದ್ಧೆಯನ್ನೇ ಕಳೆದುಬಿಟ್ಟ ದೇವರು ಮೊದಲು. ಆ ಗುರುಗಳ ಬಗ್ಗೆ ಯಾವಾಗ ಇವನಿಗೆ ಶ್ರದ್ಧೆ ಕಡಿಮೆಯಾಯಿತೋ ಆಗ ಇವನ ಬಲ ಕಡಿಮೆಯಾಯಿತು ಆಗ ಇವನನ್ನು ಪರಮಾತ್ಮ ಸೋಲಿಸುತ್ತಾ ಇದ್ದಾನೆ ಇದರರ್ಥ ಅವರ ಬಲ ಇತ್ತು ಅಂದರೆ ದೇವರಿಗೆ ಸೋಲಿಸಲಿಕ್ಕೆ ಆಗುತ್ತಿರಲಿಲ್ಲ ಅಂತ ಅಲ್ಲ. ಆದರೆ ಭಗವಂತನದೇ ಸಂಕಲ್ಪ, ಬ್ರಾಹ್ಮಣರ ಆಶೀರ್ವಾದದ

ಬಲ ಇದ್ದಾಗ ಅದಕ್ಕೆ ಬೆಲೆ ಕೊಡಬೇಕು ಅನ್ನುವುದಕ್ಕೆ ಬಲಿಯನ್ನ ಇಷ್ಟು ದಿನ ರಕ್ಷಣೆ ಮಾಡಿದ್ದ, ಈಗ ಆ ಬ್ರಾಹ್ಮಣರ ಅನುಗ್ರಹದ ಬಲವೇ ಕಡಿಮೆ ಆಗಬೇಕು ಅನ್ನುವುದಕ್ಕೋಸ್ಕರ

ಸರ್ವಾನೇವ ನಿಜಾಗ್ರಾಹ ಚಕಾರ ಚ ನಿರುತ್ತರಾನ್ ॥ (70.64 ಭವಿಷ್ಯಪರ್ವ)

ಎಲ್ಲರನ್ನೂ ನಿಜಗ್ರಹೀತರನನ್ನಾಗಿ ಮಾಡಿದ ಎಲ್ಲರೂ ನಿಜಗ್ರಹೀತರಾಗಿದ್ದಾರೆ, ನಿರುತ್ತರರಾಗಿದ್ದಾರೆ ಇವರೆಲ್ಲರನ್ನು ನಿರುತ್ತರರನ್ನಾಗಿ ಮಾಡಿದ್ದನ್ನು ನೋಡಿ ಗಾಬರಿಯಾಗಿ ಬಿಟ್ಟ ಬಲಿ.

ತತೋ ನಿರುತ್ತರಾನ್ ದೃಷ್ಟ್ವಾ ಸೋಪಾಧ್ಯಾಯಾನೃಷೀಂಶ್ಚ ತಾನ್ ।
ಅವೃದ್ಧೇನಾಪಿ ವೃದ್ಧಾಂಸ್ತಾನ್ ವಾಮನೇನ ಮಹೌಜಸಾ ॥ (70.67 ಭವಿಷ್ಯಪರ್ವ)

ಅದ್ಭುತಂ ಚಾಪಿ ಮೇನೇ ಸ ವಿರೋಚನಸುತೋ ಬಲೀ । (70.68 ಭವಿಷ್ಯಪರ್ವ)

ಇಷ್ಟು ಚಿಕ್ಕ ಹುಡುಗ ಏನೋ ಅದ್ಭುತ ವ್ಯಕ್ತಿ ಅಂತ ಅಂದುಕೊಂಡ ಸಾಷ್ಟಾಂಗ ನಮಸ್ಕಾರ ಮಾಡಿದ ಬಲಿ ಚಕ್ರವರ್ತಿ ನೀನು ಯಾರು ಅಂತ ನನಗೆ ಗೊತ್ತಾಗುತ್ತಾ ಇಲ್ಲ, ನೀನು ಯಾರೋ ಏನೋ ಆದರೆ ನಿನಗೆ ಏನು ಬೇಕು ಅದನ್ನು ಕೇಳು ಕೊಟ್ಟುಬಿಡುತ್ತೇನೆ ಅಂತ ಇಷ್ಟು ಅಂದುಬಿಟ್ಟ.

ಯೊಽಸಿ ಸೋಽಸಿ ನಮಸ್ತೇಽಸ್ತು ಬ್ರೂಹಿ ಕಿಂ ಕರವಾಣಿ ತೇ ॥ (70.72 ಭವಿಷ್ಯಪರ್ವ)

ನಿನಗೆ ಏನು ಆಗಬೇಕು ನನ್ನ ಯಜ್ಞಕ್ಕೆ ಬಂದಿದ್ದೀ ಆಗ ಪರಮಾತ್ಮ ಹೇಳಿದ ವರ್ಣನೆ ಮಾಡಲಿಕ್ಕೆ ಶುರುವು ಮಾಡಿಬಿಟ್ಟ ಬಲಿಚಕ್ರವರ್ತಿಯನ್ನ. ಏನು ನಿನ್ನ ಯಜ್ಞ ಎಂತಹ ಅದ್ಭುತ ಯಜ್ಞ, ಯಾರೂ ಮಾಡದೆ ಇರುವಂತಹ ಯಜ್ಞವನ್ನು ಮಾಡುತ್ತಾ ಇದ್ದಿ, ವರುಣ ದೇವರು ಮಾಡಿಲ್ಲ, ಇಂದ್ರ ದೇವರು ಮಾಡಿಲ್ಲ, ಯಮ ಮಾಡಿಲ್ಲ ಅಂತಹ ಯಜ್ಞವನ್ನು ಮಾಡುತ್ತಾ ಇದ್ದಿ ನಿನ್ನ ಯಜ್ಞ ಅದ್ಭುತ. ಎಲ್ಲ ಆಶ್ರಮಗಳಲ್ಲಿ ಗೃಹಸ್ಥಾಶ್ರಮ ಶ್ರೇಷ್ಠ ಯಾಕೆಂದರೆ ಎಲ್ಲಾ ಆಶ್ರಮಗಳ ರಕ್ಷಣೆಯನ್ನು ಮಾಡುತ್ತಾರೆ ಅವರು, ನರರಲ್ಲಿ ದ್ವಿಜಾತಿಗಳು ಶ್ರೇಷ್ಠ ಹಾಗೆ ಅಸುರರಲ್ಲಿ ನೀನು ಶ್ರೇಷ್ಠ, ಯಜ್ಞಗಳಲ್ಲಿ ನೀನು ಮಾಡುವ ಈ ಅಶ್ವಮೇಧ ಯಜ್ಞ ಇದು ಶ್ರೇಷ್ಠ ಅಂತ. ದಾನ ತೆಗೆದುಕೊಳ್ಳುವುದಕ್ಕೆ ಬಂದ ವ್ಯಕ್ತಿ ಕೊಡುವ ವ್ಯಕ್ತಿಯನ್ನು ಸ್ತೋತ್ರ ಮಾಡಿ ಸಂತೋಷ ಪಡಿಸಿ ದಾನವನ್ನು ತೆಗೆದುಕೊಳ್ಳಬೇಕು ಅಂತ ತೋರಿಸುತ್ತಾನೆ. ಹೋಗಿ ಅವರನ್ನು ಬೈದು ಅಂದು ಜಗಳ ಆಡಿದರೆ ಕೊಡುವದನ್ನು ಬಿಟ್ಟುಬಿಡುತ್ತಾರೆ ಹಾಗೆ ಮಾಡಬಾರದು ಅವರನ್ನು ಸಂತೋಷ ಪಡಿಸಬೇಕು ಅಂತ.

ನಾಯಾಂಜ್ಞ್ಯಾಽಹಂ ಪ್ರತಿಹನ್ಮಿ ತಂ ಬಲಿಂ
ಶುಭಾನನೇತ್ಯೇವ ತತೋಽಭ್ಯಯಾಚತ ॥ (3.47 ಮಭಾತಾನಿರ್ಣಯ)

ಅಂತ ಶ್ರೀಮದಾಚಾರ್ಯರು ನಿರ್ಣಯ ಕೊಡುತ್ತಾರೆ. ಯಾಕೆ ಬಲಿ ಚಕ್ರವರ್ತಿಗೆ ದಾನ ಬೇಡಬೇಕಾಗಿತ್ತು, ಯುದ್ಧ ಮಾಡಿಸಿ ಸೋಲಿಸಿ ಬಿಡಬಹುದಾಗಿತ್ತಲ್ಲ ಅಲ್ಲ, ನಾನು ನಿನ್ನ ಮೊಮ್ಮಗನನ್ನ ಸಂಹಾರ ಮಾಡುವುದಿಲ್ಲ, ಯಾಚನೆ ಮಾಡುವ ಮೂಲಕ ಅವನ ಐಶ್ವರ್ಯವನ್ನು ತೆಗೆದುಕೊಳ್ಳುತ್ತೇನೆ ಹೊರತು ಸಂಹಾರ ಮಾಡಿ, ಸೋಲಿಸಿ

ಅವನಿಂದ ನಾನು ತೆಗೆದುಕೊಳ್ಳುವುದಿಲ್ಲ ಅಂತ ಪರಮಾತ್ಮ ಪ್ರಹ್ಲಾದ ರಾಜರಿಗೆ ವಚನ ಕೊಟ್ಟಿದ್ದ ಅನ್ನುವುದಕ್ಕೋಸ್ಕರವಾಗಿ ಪರಮಾತ್ಮ ಹೇಳಿದ ನನಗೆ ಏನು ಬೇಡ

ಗುರ್ವರ್ಥಂ ಮೇ ಪ್ರಯಚ್ಛಸ್ವ ಪದಾನಿ ತ್ರೀಣಿ ದಾನವ । (71.11 ಭವಿಷ್ಯಪರ್ವ)

ಮೂರು ಪಾದ ಭೂಮಿ ಕೊಟ್ಟುಬಿಡು ಸಾಕು. ನಾನೊಬ್ಬ ವಟು ಬ್ರಹ್ಮಚಾರಿ, ನಾನು ಅಧ್ಯಯನ ಮಾಡಬೇಕು,ನಮ್ಮ ಗುರುಗಳು ಕೂಡಬೇಕು, ನಾನು ಕೂಡಬೇಕು ಒದಿಕೊಳ್ಳಬೇಕು ಮೂರು ಪಾದ ಭೂಮಿ ಬೇಕು. ಶುಕ್ರಾಚಾರ್ಯರು ಎದ್ದು ನಿಂತರು ನೋಡಿ ಸರ್ವಥಃ ಕೊಡಬೇಡ ಬಲಿ ಚಕ್ರವರ್ತಿ ಇವನು ಸಾಮಾನ್ಯ ಬ್ರಹ್ಮಚಾರಿ ಅಲ್ಲ ಇವನು ವಿಷ್ಣು ಈ ರೂಪದಲ್ಲಿ ಬಂದಿದ್ದಾನೆ, ಸಂಪೂರ್ಣವಾದ ನಿನ್ನ ರಾಜ್ಯವನ್ನು ಕಸಿದುಕೊಂಡು ದೇವತೆಗಳಿಗೆ ಕೊಡುತ್ತಾನೆ ಅಂತ ಸ್ಪಷ್ಟವಾಗಿ ಹೇಳುತ್ತಾ ಇದ್ದಾರೆ.

ಏಷ ಮಾಯಾಪ್ರತಿಚ್ಛನ್ನೋ ಭಗವಾನ್ ಪ್ರವರೋ ಹರಿಃ ॥ (71.13 ಭವಿಷ್ಯಪರ್ವ)

ಭಗವಾನ್ ಅನ್ನುತ್ತಾರೆ ಮತ್ತೆ ಷಡ್ಗುಣೈಶ್ವರ್ಯ ಸಂಪನ್ನ ಸರ್ವೋತ್ತಮ ಸಾಕ್ಷಾತ್ ಶ್ರೀಹರಿ ಆದರೆ ನೀನು ಮಾತ್ರ ಅವನಿಗೆ ಕೊಡಲಿಕ್ಕೆ ಹೋಗಬೇಡ, ನೀನು ಆಮೇಲೆ ಬೀದಿಗೆ ಬರಬೇಕಾಗುತ್ತೆ ಅಂತ ಅವನು ಕೇಳಲಿಲ್ಲ ಏನಿದ್ದರೂ ನಾನು ದಾನವನ್ನು ಕೊಡುವುದೇ ಅಂತ ಮತ್ತೆ ವಾಮನ ದೇವರಿಗೆ ಕೇಳುತ್ತಾ ಇದ್ದಾನೆ ಏನು ಬೇಕು ಕೇಳು ಅಂತ. ಶುಕ್ರಾಚಾರ್ಯರು ಅಂದರು ಅವನು ವಂಚಿತನಾಗುವುದಿಲ್ಲ ನಿನಗೆ ವಂಚನೆ ಮಾಡುತ್ತಾನೆ ಅವನು ಮಹಾವಂಚಕ ವಿಷ್ಣು, ನೀನು ಅವನ ಬಲಿಗೆ ಬೀಳಬೇಡ ನಿನ್ನ ಹೆಸರು ಬಲಿ ಬೀಳಬೇಡ ಆಗ ಅನ್ನುತ್ತಾನೆ ಬಲಿ. ಎಷ್ಟು ಸಲ ವಿಷ್ಣು ವಿಷ್ಣು ವಿಷ್ಣು ಅನ್ನುತ್ತೀರಿ, ಮತ್ತೆ ನಿಮಗೇನು ಇಂತಹ ದೊಡ್ಡ ಆಚಾರ್ಯರಾಗಿ ಇಷ್ಟೂ ಗೊತ್ತಾಗುವುದಿಲ್ಲವಾ, ವಿಷ್ಣುವಿನಂತಹ ಶ್ರೇಷ್ಠ ಪಾತ್ರ ಇನ್ನೊಂದು ಇದೆಯಾ ಪ್ರಪಂಚದೊಳಗೆ. ಆ ಭಗವಂತನ ನಾಮಸ್ಮರಣೆ ಮಾಡುವವರು ನಮ್ಮ ಹತ್ತಿರ ಬಂದು ದಾನ ಕೇಳುತ್ತಾರೆ ಅಥವಾ ನಾವು ಹುಡುಕಿಕೊಂಡು ಹೋದರೆ ದಾನ ತೆಗೆದುಕೊಳ್ಳುವುದಕ್ಕೆ ಸಿಗುತ್ತಾರೆ ಅಂದರೆ ನಮ್ಮ ದೊಡ್ಡ ಭಾಗ್ಯ ಅದು, ಹರೇ ರಾಮ ಕೃಷ್ಣ ಅಂತ ಅನ್ನುವ ಬಾಯಿಯಿಂದ ಅನ್ನುವ ವ್ಯಕ್ತಿಗಳು ಸಿಕ್ಕರೆ ಸಾಕು. ಅಂತಹದ್ದು ಋಷಿಗಳು ಮುನಿಗಳು ದೇವತೆಗಳು ಹೀಗೆ ತಾರತಮ್ಯ ಕ್ರಮದಲ್ಲಿ ಉತ್ತಮೋತ್ತಮ ಅಧಿಷ್ಠಾನರು ಸಾಕ್ಷಾತ್ ಶ್ರೀಹರಿಯೇ ಸರ್ವೋತ್ತಮ ಪಾತ್ರ ಬಂದಾಗ ದಾನ ಕೊಡಬೇಡ ಅಂತ ಉಪದೇಶ ಮಾಡುತ್ತೀರಲ್ಲ ನೀವು ಎಂತಹ ಗುರುಗಳು ಅಂದ ಅವನು.

ಕೋ ವಾನ್ಯಃ ಪಾತ್ರಭೂತೋಽಸ್ಮಾದ್ ವಿಷ್ಣೋಃ ಪರತರೋ ಭವೇತ್ ॥ (71.20 ಭವಿಷ್ಯಪರ್ವ)

ಇವನಿಗಿಂತ ಉತ್ತಮ ಪಾತ್ರ ಇನ್ಯಾವುದು ಸಿಗುತ್ತೆ ಮತ್ತೆ ವಾಮನ ಅದೇ ಹೇಳುವುದು ನೀನು ಏನು ಹೆಚ್ಚಿನದು ಕೊಡಬೇಡ ಮೂರು ಪಾದ ಭೂಮಿ ಕೊಡು ಸಾಕು ಅಷ್ಟು ಹೇಳಿದಾಗ ಪೂರ್ವಾಭಿಮುಖವಾಗಿ ನಿಂತಿದ್ದಾನೆ ನೀರು ತರಿಸಿದ. ಪ್ರಹ್ಲಾದ ರಾಜರೂ ಬಂದು ಶುಕ್ರಾಚಾರ್ಯರಂತೆ ಹೇಳುತ್ತಾ ಇದ್ದಾರೆ ಪರೀಕ್ಷೆ ಮಾಡುವುದಕ್ಕೆ ಅವರು ಭಕ್ತರು ಆದರೂ ಹೇಳುತ್ತಾರೆ ಕೊಡಬೇಡ. ನೀರು ಬಿಡಬೇಡ, ನಿನ್ನ ರಾಜ್ಯವನ್ನು ಕಸಿದುಕೊಳ್ಳುತ್ತಾನೆ ಅಂತ ತನ್ನ ಅಜ್ಜನಾದ ಪ್ರಹ್ಲಾದನಿಗೂ ಅದೇ ಉತ್ತರವನ್ನು ಕೊಡುತ್ತಾನೆ ಬಲಿ. ನಾನು ಕೊಡುವವನೇ ನೀವು ಯಾರು ಹೇಳಿದರೂ ಸರ್ವಥಃ ಬಿಡುವುದಿಲ್ಲ ಒಮ್ಮೆ ಬ್ರಾಹ್ಮಣನಿಗೆ ಕೊಡುತ್ತೇನೆ ಅಂತ ಸಂಕಲ್ಪ ಮಾಡಿ ಕೊಡದೇ ಇದ್ದರೆ ಅದಕ್ಕಿಂತ ದೊಡ್ಡ ಪಾಪ ಪ್ರಪಂಚದೊಳಗೆ ಇನ್ನೊಂದಿಲ್ಲ ನಾನು ಕೊಡುತ್ತೇನೆ ಅಂತ ಸಂಕಲ್ಪ ಮಾಡಿದ್ದೇನೆ ಕೊಡಲೇಬೇಕು. ಮತ್ತೆ ಮತ್ತೆ

ಪ್ರಹ್ಲಾದ ರಾಜರು ಅನ್ನುತ್ತಾರೆ ನರಸಿಂಹಾವತಾರ ಮಾಡಿದಂತಹ ವಿಷ್ಣು, ವರಾಹಾವತಾರ ಮಾಡಿ ಹಿರಣ್ಯಾಕ್ಷನ ಸಂಹಾರ ಮಾಡಿದ್ದು ವಿಷ್ಣು, ನರಸಿಂಹಾವತಾರ ಮಾಡಿ ನಮ್ಮಪ್ಪನನ್ನು ಸಂಹಾರ ಮಾಡಿದ ವಿಷ್ಣು ಅವನೇ ಇಲ್ಲಿ ಅವತಾರ ಮಾಡಿ ಬಂದಿದ್ದಾನೆ ವಾಮನನಾಗಿ ಅದೆಲ್ಲ ಗೊತ್ತು.

ಪ್ರತಿಜ್ಞಾಯ ತು ಯೋ ವಿಪ್ರೇ ನ ದದಾತಿ ಪ್ರತಿಗ್ರಹಮ್ ।
ಸ ಯಾತಿ ನರಕಂ ಪಾಪೀ ಮಿತ್ರಗೋತ್ರಸಮನ್ವಿತಃ ॥ (71.36 ಭವಿಷ್ಯಪರ್ವ)

ಇವನಿಗೆಲ್ಲ ಪಾಠ ಕಲಿಸಿದವರು ಅವರೇ ಅಜ್ಜ ಮೊಮ್ಮಗನಿಗೆ ಚೆನ್ನಾಗಿ ಪಾಠ ಕಲಿತಿದ್ದಾನೋ ಇಲ್ಲೋ ಅಂತ ಪರೀಕ್ಷೆ ಮಾಡುತ್ತಾ ಇದ್ದಾರೆ ಅಷ್ಟೇ ಪ್ರಹ್ಲಾದ ರಾಜರು, ಬಲಿ ಚಕ್ರವರ್ತಿ ಆದರಲ್ಲಿ ಉತ್ತೀರ್ಣನಾಗುತ್ತಾ ಇದ್ದಾನೆ. ಒಮ್ಮೆ ಪ್ರತಿಜ್ಞೆ ಮಾಡಿದ ಮೇಲೆ ಕೊಡದೆ ಇದ್ದರೆ ಮಹಾನರಕವಾಗುತ್ತದೆ ಅಂತ ಶಾಸ್ತ್ರ ಹೇಳುತ್ತದೆ ನೋಡಿರಿ ಅಸುರನ ಬಾಯಿಯಲ್ಲಿ ಶಾಸ್ತ್ರ, ಪ್ರಹ್ಲಾದ ರಾಜರಾಗಲಿ, ಬಲಿ ಚಕ್ರವರ್ತಿಯಾಗಲಿ ಇವರೆಲ್ಲ ಸ್ವರೂಪತಃ ಅಸುರರಲ್ಲ, ಅಸುರರಾಗಿ ಆ ಕುಲದಲ್ಲಿ ಹುಟ್ಟಿದವರಷ್ಟೇ, ಸ್ವರೂಪತಃ ಇವರೆಲ್ಲ ಸಜ್ಜನರೇ ಅಂತ ಗೀತಾ ತಾತ್ಪರ್ಯದಲ್ಲಿ ಶ್ರೀಮದಾಚಾರ್ಯರು ನಿರ್ಣಯ ಮಾಡಿದ್ದಾರೆ. ಅಂತಹ ಸ್ವರೂಪತಃ ಸಜ್ಜನರಾದದ್ದರಿಂದ ಅವರು ಹೇಳುತ್ತಾರೆ ನಾನು ಸರ್ವಥಃ ಕೊಟ್ಟ ಮಾತಿಗೆ ಹಿಂದೆ ಹೋಗುವುದಿಲ್ಲ ಇಂತಹ ಪಾತ್ರ ಸಿಗುವುದಿಲ್ಲ

ನಾಧಿಕೋ ವಿದ್ಯತೇ ಯಸ್ಮಾತ್ ತದ್ ದದಾಮಿ ವಸುಂಧರಾಮ್ । (71.38 ಭವಿಷ್ಯಪರ್ವ)

ಅಂತ ಹೇಳಿ ದಾನವನ್ನು ಮಾಡುತ್ತಾನೆ. ನೋಡಿ ಒಂದು ಮಾತು ಭಾಗವತದಲ್ಲಿ ಬರುತ್ತದೆ ದಾನ ಏನೋ ಕೊಟ್ಟ, ಭಕ್ತಿ ಮಾಡಿದ ಒಂದು ಸಣ್ಣ ಮಾತು ತಪ್ಪಿದ ನಿನಗೆ ಬುದ್ಧಿ ಇಲ್ಲೇನೋ ಅಂತ ಅನ್ನುತ್ತಾನೆ **'ತ್ವಂ ಬಾಲೋ ಬಾಲಿಶಮತಿಃ'**[1] ಅಂತ ಭಾಗವತದಲ್ಲಿ

ಸ್ವಲ್ಪೈಃ ಸ್ವಲ್ಪಮತೇ ಕಿಂ ತೇ ಪದೈಸ್ತ್ರಿಭಿರನುತ್ತಮಮ್ ॥ (71.40 ಭವಿಷ್ಯಪರ್ವ)

ಇಲ್ಲಿ ಅದೇ ಒಂದು ತಪ್ಪಿದ ಅವನು ಸ್ವಲ್ಪಮತೇ ಏನು ಅಲ್ಪ ಬುದ್ಧಿ ನಿನಗೆ ಮೂರೇ ಪಾದ ಭೂಮಿ ಕೇಳುತ್ತಿಯಲ್ಲ ಅಂತ ದೇವರಿಗೆ ಅಂದು ಬಿಡುತ್ತಾನೆ ಇಷ್ಟೊತ್ತಿನ ತನಕ ದೇವರು ಅಂತ ಶುಕ್ರಾಚಾರ್ಯರು ಹೇಳಿದರು, ಪ್ರಹ್ಲಾದ ರಾಜರು ಹೇಳಿದರು,ತಾನು ಅದನ್ನು ಒಪ್ಪಿದ ಇಷ್ಟಾಗಿ ಸ್ವಲ್ಪಮತೇ ಅಂತ ಯಾಕೆ ಅನ್ನಬೇಕು. ಅದು ಒಂದು ಚೂರು ಅಸುರಾವೇಶ ಆ ಬಲಿಯಲ್ಲಿ ಬಲಿ ಅನ್ನುವ ಹೆಸರಿನ ಒಬ್ಬ ಅಸುರನೇ ಇದ್ದ ಅವನೇ ಸಾಲ್ವನಾಗಿ ಹುಟ್ಟುತ್ತಾನೆ ಮುಂದೆ, ಆ ಅಸುರಾವೇಶ ಮೂಲಕವಾಗಿ ದೇವರಿಗೆ ಸ್ವಲ್ಪಮತೇ ಬಾಲಿಶಮತೇ ಅಂತ ಅನ್ನುತ್ತಾನೆ. ಅದು ಅಂದದ್ದೇ ತಡ ದೇವರು ಮುಂದೆ ಪಾಶವನ್ನು ಬಂಧನ ಮಾಡುವುದಕ್ಕೋಸ್ಕರ ವ್ಯವಸ್ಥೆ ಮಾಡಿಕೊಂಡ ಆದರೆ ಈಗ ದಾನ ಕೊಡು ಅಂದ ಇದಕ್ಕಿಂತ ಹೆಚ್ಚು ನನಗೆ ಬೇಕಾಗಿಲ್ಲ ಇಷ್ಟು ಕೊಡು ಅಂತ. ಸರಿ, ಸಿಂಧ್ಯಾವಳಿಯನ್ನು ಕರೆದಿದ್ದಾನೆ ಬಂಗಾರದ ಪಾತ್ರೆಯನ್ನು ತೆಗೆದುಕೊಂಡು ಬಂದು ಕೈಯಲ್ಲಿ ನೀರು ಹಾಕಿದ್ದೇ ತಡ **'ತೋಯೇ ತು ಪತಿತೇ ಹಸ್ತೇ'** ಅಂತ ಅನ್ನುತ್ತದೆ ಹರಿವಂಶ ಬಲಿ ಚಕ್ರವರ್ತಿಯ ಕೈಯಲ್ಲಿ ನೀರು ಬಿದ್ದಿದ್ದೇ ತಡ ಅಲ್ಲಿ ವಾಮನ ಇಲ್ಲವೇ ಇಲ್ಲ ತ್ರಿವಿಕ್ರಮನಾಗಿ ನಿಂತು ಬಿಟ್ಟಿದ್ದಾನೆ.

1. 08.18.18 ಭಾಗವತ

ತೋಯೇ ತು ಪತಿತೇ ಹಸ್ತೇ ವಾಮನೋಽಭೂದವಾಮನಃ ।

ಸರ್ವದೇವಮಯಂ ರೂಪಂ ದರ್ಶಯಾಮಾಸ ವೈ ವಿಭುಃ ॥ (71.43 ಭವಿಷ್ಯಪರ್ವ)

ಹದಿನಾಲ್ಕು ಲೋಕಗಳನ್ನು ವ್ಯಾಪಿಸಿದಂತಹ ತನ್ನ ವಿಶ್ವರೂಪವನ್ನು ತೋರಿಸಿದ್ದಾನೆ ಎಲ್ಲಾ ದೇವತೆಗಳು, ಎಲ್ಲಾ ಗ್ರಹಗಳು, ಎಲ್ಲಾ ನಕ್ಷತ್ರಗಳು ಇಡೀ ಜಗತ್ತೇ ಪರಮಾತ್ಮನ ಶರೀರದಲ್ಲಿ ಆಶ್ರಿತವಾಗಿದೆ. ಪರಮಾತ್ಮ ಬೆಳೆಯುತ್ತಾ ಇರುವಾಗ ಮೊದಲು ಭಗವಂತನ ಶಿರಸ್ಸಿನ ಹತ್ತಿರ ಕಾಣಿಸುತ್ತಾ ಇತ್ತು ಸೂರ್ಯ ಚಂದ್ರರು ಕಂಠಕ್ಕೆ ಬಂದರು, ಹೃದಯಕ್ಕೆ ಬಂದರು ಜಾಹ್ನುವಿಗೆ ಬಂದರು ಪಾದಕ್ಕೆ ಬಂದ ಹಾಗೆ ಕಾಣಿಸುತ್ತಾ ಇದೆ ಅಷ್ಟು ಭಗವಂತನ ಅದ್ಭುತವಾದಂತಹ ರೂಪ ಬೆಳೆಯುತ್ತಾ ಇದೆ ಜಾನು ದೇಶದಲ್ಲಿ ಸೂರ್ಯ ಚಂದ್ರರು ಕಾಣಿಸುತ್ತಾ ಇದ್ದಾರೆ. ಈ ರೀತಿ ಪರಮಾತ್ಮ ಸಕಲ ಲೋಕಗಳನ್ನು ವ್ಯಾಪಿಸಿ ಮೂರನೆಯ ಪಾದವನ್ನ ಇಲ್ಲಿ ಸ್ಪಷ್ಟವಾಗಿ ಬಂದಿಲ್ಲ, ಭಾಗವತದಲ್ಲಿ ಬರುತ್ತದೆ, ಮೂರನೆಯ ಪಾದವನ್ನು ಬಲಿ ಚಕ್ರವರ್ತಿಯ ತಲೆಯ ಮೇಲೆ ಇಟ್ಟು ಅವನನ್ನ ಸುತಲ ಲೋಕಕ್ಕೆ ಕೊಟ್ಟು ಕಳಿಸಿದ್ದಾನೆ. ಬಲಿ ಚಕ್ರವರ್ತಿ ಅಂದ ಮುಂದೆ ನನ್ನ ಗತಿ ಏನು ಅಂತ ಕೇಳುತ್ತಾ ಇದ್ದಾನೆ ಬಲಿ ಚಕ್ರವರ್ತಿ ನಿನ್ನ ಗತಿ ಏನು ದೇವರೇ ಗತಿ ಅಂದ ನಾನೇ ಗತಿ ಅಂತ, ಅರ್ಥ ಸ್ವಯಂ ಪರಮಾತ್ಮ ತಾನು ಗದಾಪಾಣಿಯಾಗಿ ಬಲಿ ಚಕ್ರವರ್ತಿಯ ದ್ವಾರದಲ್ಲಿ ನಿಂತಿದ್ದಾನೆ.

ಚಾಮರವ್ಯಗ್ರಹಸ್ತಂ ಮಾಮೇವಂ ಕುರ್ವಿತಿ ವಕ್ಷ್ಯತಿ ॥

ಕದಾಽಹಂ ರಾಜರಾಜೇನ ಗಣನಾಥೇನ ಚೋದಿತಃ ।

ಚರೇಯಂ ಭಗವತ್ಪಾದಪರಿಚರ್ಯಾಸು ವರ್ತನಮ್ ॥ (27-28 ಜಿತಂತೇ ಸ್ತೋತ್ರಮ್ ಹಂಸ ಬ್ರಹ್ಮಸಂವಾದೇ)

ಅಂತ ಬ್ರಹ್ಮ ದೇವರು ಕೇಳಿಕೊಳ್ಳುತ್ತಾರೆ. ಯಾವಾಗ ನೀನು ಆಜ್ಞೆ ಮಾಡುತ್ತೀ, ಯಾವಾಗ ನಿನ್ನ ಆಜ್ಞೆಯನ್ನು ನಾನು ಪರಿಪಾಲನೆ ಮಾಡಲಿ ಅಂತ ಬ್ರಹ್ಮಾದಿ ದೇವತೆಗಳು ಯಾವ ಪರಮಾತ್ಮನ ಬಾಗಿಲಲ್ಲಿ ಕಾಯುತ್ತಾ ನಿಂತಿರುತ್ತಾರೆ ಅಂತಹ ಪರಮಾತ್ಮ ದಯೆಯಿಂದ ಪ್ರೀತಿಯಿಂದ ವಾತ್ಸಲ್ಯದಿಂದ ಬಲಿ ಚಕ್ರವರ್ತಿಯ ಬಾಗಿಲದಲ್ಲಿ ನಿಲ್ಲುತ್ತಾನೆ ಅಂದರೆ ಇದಕ್ಕಿಂತ ದೊಡ್ಡ ಅನುಗ್ರಹ ಏನು ದೇವರು ಮಾಡುವುದು ನೀನು ಏನು ಚಿಂತನೆ ಮಾಡಬೇಡ ನಾನು ನಿನಗೆ ರಕ್ಷಕನಾಗಿ ನಿಲ್ಲುತ್ತೇನೆ ಅಂತ ಪರಮಾತ್ಮ ನಿಂತಿದ್ದಾನೆ. ಎರಡು ಮಾತನ್ನು ಹೇಳಿದ್ದಾನೆ ಒಂದು ಮಾತ್ರ ತಿಳಿದುಕೋ ನೀನು ಪರಮ ಭಗವದ್ಭಕ್ತ ಮುಂದಿನ ಮನ್ವಂತರದಲ್ಲಿ ನೀನೇ ಇಂದ್ರನಾಗುತ್ತೀಯಾ ಏನು ಚಿಂತೆ ಮಾಡಬೇಡ. ಸಾವರ್ಣಿ ಮನ್ವಂತರದಲ್ಲಿ ನೀನೇ ಇಂದ್ರ ಆದರೆ ಈಗ ಮಾತ್ರ ಯಾವ ಪುರಂದರ ಇಂದ್ರನಾಗಿದ್ದಾನೆ ಅವನ ಆಜ್ಞೆಯನ್ನು ಮೀರಬಾರದು, ಯಾವ ಯಾವ ದೇವತೆಗಳ ವಿರೋಧವನ್ನೂ ನೀನು ಮಾಡಬಾರದು, ಮಾಡಿದರೆ ಮಾತ್ರ ನಿನಗೆ ಸುಮ್ಮನೆ ಬಿಡುವುದಿಲ್ಲ ನಾನು. ಉಳಿದವರು ಏನೇ ನಿನಗೆ ಪೀಡೆ ಕೊಟ್ಟರೂ ನಿನ್ನ ರಕ್ಷಣೆ ಮಾಡುವುದಕ್ಕೆ ಗದಾಪಾಣಿಯಾಗಿ ನಾನು ಹೊರಗೆ ಇರುತ್ತೇನೆ, ನೀನೇನಾದರು ದೇವತೆಗಳ ಶಾಸನವನ್ನು ಮೀರಿದರೆ ಮಾತ್ರ ಅದೇ ಗದೆಯನ್ನು ನಿನ್ನ ಮೇಲೆ ಹಾಕುತ್ತೇನೆ ಎಚ್ಚರಿಕೆ.

ನ ಚ ತೇ ದೇವದೇವಸ್ಯ ಶಕ್ರಸ್ಯಾಮಿತತೇಜಸಃ ।

ಶಾಸನಂ ಪ್ರತಿಹನ್ತವ್ಯಂ ಸ್ಮರತಾ ಶಾಸನಂ ಮಮ ॥ (72.41 ಭವಿಷ್ಯಪರ್ವ)

ನನ್ನ ಆಜ್ಞೆ ಇದು ನೀನು ಯಾವ ದೇವತೆಗಳ ಆಜ್ಞೆಯನ್ನು ಮೀರತಕ್ಕದ್ದಲ್ಲ ಅವರ ವಿರೋಧ ಮಾಡತಕ್ಕದ್ದಲ್ಲ ಅವನು ಪ್ರಾರ್ಥನೆ ಮಾಡುತ್ತಾನೆ ಬರೀ ನೀನು ಅಲ್ಲಿ ಇರು, ನೀನು ಯಾರ ಆಜ್ಞೆ ಮೀರಬೇಡ ಹಾಗೆ ಮಾಡಬೇಡ ಹೀಗೆ ಮಾಡಬೇಡ ಅಂತ ನನಗೆಲ್ಲಾ ಹೇಳಿದೆ ಅದೆಲ್ಲ ಕೇಳುತ್ತೀನಿ ನನ್ನ ಹೊಟ್ಟೆಯ ಗತಿ ಏನು ನನಗೆ ಯಾರು ಊಟಕ್ಕೆ ಹಾಕುವರು. ಅದಕ್ಕೆ ಪರಮಾತ್ಮ ಹೇಳಿದ ಎಂತಹ ದೊಡ್ಡ ಮಾತನ್ನು ಹೇಳುತ್ತಾನೆ ಇದು ಬಲಿ ಚಕ್ರವರ್ತಿಗೆ ವರ ಉಳಿದವರೆಲ್ಲರಿಗೂ ಒಂದು ದೊಡ್ಡ ಎಚ್ಚರಿಕೆಯ ಗಂಟೆಯನ್ನು ಬಾರಿಸುತ್ತ ಇದ್ದಾನೆ ಪರಮಾತ್ಮ, ಬಲಿ ಚಕ್ರವರ್ತಿಗೆ ಹೇಳುತ್ತಾನೆ ಯಾರಾದರೂ ಚೆನ್ನಾಗಿ ವೇದ ಶಾಸ್ತ್ರಗಳ ಅಧ್ಯಯನ ಮಾಡದೆ ಅರ್ಧರ್ಧ ಓದಿ ಏನೇನೋ ಅಲ್ಪ ಸ್ವಲ್ಪ ತಿಳಿದುಕೊಂಡು ತಪ್ಪು ತಪ್ಪಾಗಿ ಯಜ್ಞ ಮಾಡುತ್ತಾರಲ್ಲ ಆ ಯಜ್ಞದಲ್ಲಿ ಸಮರ್ಪಣೆ ಮಾಡಿದ ಆಹುತಿಗಳು ಯಾವುದು ದೇವತೆಗಳಿಗೆ ಸೇರುವುದಿಲ್ಲ ಅದೆಲ್ಲ ನಿನಗೆ ಬಂದು ಸೇರುತ್ತದೆ. **'ಅಶ್ರೋತ್ರಿಯಂ'** ಶ್ರಾದ್ಧಾದಿ ಕರ್ಮಗಳನ್ನು ಚೆನ್ನಾಗಿ ಯಾರು ಮಾಡುವುದಿಲ್ಲ ಸರಿಯಾಗಿ ಮಾಡಿದರೆ ಪಿತೃ ದೇವತೆಗಳಿಗೆ ಹೋಗುತ್ತದೆ ಅವರ ಪಿತೃಗಳ ಉದ್ಧಾರ ಆಗುತ್ತದೆ, ಸರಿ ಮಾಡಲಿಲ್ಲ ಆ ಎಲ್ಲಾ ಶ್ರಾದ್ಧಾದಿಗಳಲ್ಲಿ ಸಮರ್ಪಣೆ ಮಾಡಿದ್ದು ನಿನಗೇ ಬಂದು ಸೇರುತ್ತದೆ.

ಅಶ್ರೋತ್ರಿಯಂ ಶ್ರಾದ್ಧಮಧೀತಮವ್ರತ-
ಮದಕ್ಷಿಣಂ ಯಜ್ಞಮನರ್ತ್ವಿಜಾ ಹುತಮ್ ॥ (72.49 ಭವಿಷ್ಯಪರ್ವ)

ಚೆನ್ನಾಗಿ ವ್ರತಾದಿಗಳನ್ನು ಮಾಡಿ ಅಧ್ಯಯನವನ್ನ ನಿಯಮ ಪೂರ್ವಕವಾಗಿ ಮಾಡದೆ ಏನೇನು ಕರ್ಮಗಳನ್ನು ಮಾಡಿದರೆ ಆ ಕರ್ಮದಿಂದ ಬಂದ ಫಲ ಎಲ್ಲಾ ನಿನಗೇ ಬರುತ್ತದೆ. ದಕ್ಷಿಣೆ ಕೊಡಲಿಲ್ಲ ಯಜ್ಞದಲ್ಲಿ ಅಂತಹ ಯಜ್ಞದಲ್ಲಿ ಸಮರ್ಪಣೆ ಮಾಡಿದ ಆಹುತಿ ಎಲ್ಲ ನಿನಗೆ, ಶ್ರದ್ಧೆ ಇಲ್ಲದೆ ದಾನ ಮಾಡಿದ್ದು, ಉತ್ತಮ ಸಂಸ್ಕಾರಗಳನ್ನು ಮಾಡದೆ ಇದ್ದದ್ದು ಅದೆಲ್ಲ ನಿನಗೆ ಬರುತ್ತದೆ ನಿನಗೆ ನಿನ್ನವರಿಗೆ ದೈತ್ಯರಿಗೆ ಸೇರುತ್ತದೆ. ಅಂದರೆ ಇದರಿಂದ ದೈತ್ಯರ ಹೊಟ್ಟೆಯ ವ್ಯವಸ್ಥೆ ಮಾಡಿದ ಅಂತ ಒಂದಾಯಿತು ನಾವು ನೀವುಗಳೆಲ್ಲ ಎಷ್ಟು ಹುಷಾರು ಆಗಿರಬೇಕು ಅನ್ನುವುದನ್ನು ತಿಳಿಸುತ್ತಾ ಇದ್ದಾನೆ. ಭಕ್ತಿ ಪೂರ್ವಕವಾಗಿ ಯಜ್ಞ ಮಾಡದೇ ಇದ್ದರೆ, ಶ್ರದ್ಧಾ ಪೂರ್ವಕವಾಗಿ ಮಾಡದೇ ಇದ್ದರೆ, ವಿಧಿ ಪೂರ್ವಕವಾಗಿ ಮಾಡದೇ ಇದ್ದರೆ, ವೇದಾರ್ಥಗಳ ಅನುಸಂಧಾನ ಇಲ್ಲದೇ ಮಾಡಿದರೆ, ದಕ್ಷಿಣೆಯನ್ನು ಕೊಡದೇ ಇದ್ದರೆ ಅದೆಲ್ಲ ದೈತ್ಯರಿಗೆ ಹೋಗುತ್ತದೆ. ಇದು ಕೇವಲ ಆಹುತಿಗಳಷ್ಟೇ ಅಲ್ಲ ಪುಣ್ಯ, ಪುಣ್ಯದ ರಾಶಿ ರಾಶಿ ಬಂದು ನಿನಗೆ ಬೀಳುತ್ತದೆ ನೀನು ಯಾಕೆ ಕಾಳಜಿ ಮಾಡುತ್ತೀ. ಇನ್ನೊಬ್ಬರು ಮಾಡಿದ ಪುಣ್ಯ ನನಗೆ ಯಾಕೆ ಬರುತ್ತದೆ, ನಾನು ಹೇಳುತ್ತೇನೆ ಕೇಳು ನನಗೆ ಕೇಳುತ್ತೀ ಏನು, ನಾನೇ ಪುಣ್ಯ ಪಾಪಗಳಿಗೆ ನಿಯಾಮಕ ನಾನು ಹೇಳುತ್ತಾ ಇದ್ದೇನೆ ಕೇಳು ಯಾರು ನನ್ನ ದ್ವೇಷಿಗಳು ಕೆಲವರು ಯಜ್ಞ ಯಾಗಾದಿಗಳನ್ನು ಮಾಡುತ್ತಾರೆ ಆ ಪುಣ್ಯ, ನನ್ನ ಭಕ್ತರ ದ್ವೇಷಿಗಳು ಕರ್ಮ ಮಾಡಿದರೆ ಆ ಪುಣ್ಯ ನಿನಗೆ ಬರುವುದು ದೈತ್ಯರಿಗೆ.

ಪುಣ್ಯಂ ಮದ್ ದ್ವೇಷಿಣಾಂ ಯಚ್ಚ ಮದ್ಭಕ್ತ ದ್ವೇಷಿಣಾಂ ತಥಾ । (72.50 ಭವಿಷ್ಯಪರ್ವ)

ಇನ್ನು ದುಡ್ಡಿಗಾಗಿ ಹಣಕ್ಕಾಗಿ ಯಜ್ಞ ಯಾಗಾದಿಗಳನ್ನು ಮಾಡುತ್ತಾರೆ ತಪಸ್ಸನ್ನು ಮಾರಾಟ ಮಾಡಿಕೊಳ್ಳುತ್ತಾರೆ ಅಂತಹ ಪುಣ್ಯ ನಿನಗೆ ಬರುತ್ತದೆ, ಅಶ್ರದ್ಧೆಯಿಂದ ಮಾಡಿದ ದಾನದ ಪುಣ್ಯ ನಿನಗೆ ಬರುತ್ತದೆ, ಯಜ್ಞದ ಪುಣ್ಯ ನಿನಗೆ ಬರುತ್ತದೆ ಏನು ಚಿಂತೆ ಮಾಡಬೇಡ. ಬೇಕಾದಷ್ಟು ಪುಣ್ಯ ಬಂತು, ಬೇಕಾದಷ್ಟು ಆಹುತಿಗಳು, ಬೇಕಾದಷ್ಟು ಸಮೃದ್ಧಿ ಶ್ರಾದ್ಧಾದಿಗಳ ಪಿಂಡಗಳು ಎಲ್ಲವೂ ನಿನಗೆ ಬರುತ್ತವೆ ಬಹಳ ಸಂತೋಷ ಆಯಿತು ಅಂದು ಬಿಟ್ಟ ಅವನು ಇನ್ನೇನು ಬೇಕು ನನಗೆ. ಹಾಗಾದರೆ ಸುಖವಾಗಿ ನೀನು ಇರು ನನ್ನ ಸ್ಮರಣೆ ಮಾಡುತ್ತಾ ಮುಂದಿನ ಮನ್ವಂತರದಲ್ಲಿ ನಿನ್ನನ್ನು

ಇಂದ್ರನನ್ನಾಗಿ ಮಾಡುತ್ತೇನೆ ಅಂತ ಅನುಗ್ರಹ ಮಾಡಿದ್ದಾನೆ ಪರಮಾತ್ಮ. ದೊಡ್ಡ ಸಂದೇಶ ಇದು ನಾವೆಲ್ಲ ಎಷ್ಟು ಭಕ್ತಿ ಶ್ರದ್ಧೆಗಳಿಂದ ಅರ್ಥಾನುಸಂಧಾನ ಪೂರ್ವಕವಾಗಿ ಯಜ್ಞ ಯಾಗಾದಿಗಳನ್ನು ಮಾಡಬೇಕು, ದೇವರ ಪೂಜೆಯನ್ನು ಮಾಡಬೇಕು, ಸತ್ಕರ್ಮಗಳನ್ನು ಮಾಡಬೇಕು ಇಲ್ಲದಿದ್ದರೆ ಈ ಮಾನವ ಜನ್ಮ ಸಿಗುವುದೇ ದುರ್ಲಭ, ಶ್ರದ್ಧಾ ಭಕ್ತಿಗಳು ಸಿಗುವುದಂತು ಇನ್ನೂ ದುರ್ಲಭ. ಅಂತಹ ಸಜ್ಜನರ ಸಹವಾಸ ಇದ್ದಾಗ, ಶಾಸ್ತ್ರವನ್ನು ಹೇಳುವವರು, ಉಪದೇಶ ಮಾಡುವವರು ಇದ್ದಾಗ ಅದನ್ನೆಲ್ಲ ಬಿಟ್ಟು ನಾವು ಶ್ರದ್ಧಾರಹಿತರಾಗಿ ಕರ್ಮಗಳನ್ನು ಮಾಡಿದರೆ ದೈತ್ಯರು ತೆಗೆದುಕೊಳ್ಳುತ್ತಾರೆ ನಮಗೆ ಅದರಿಂದ ಯಾವ ಫಲವೂ ಸಿಗುವುದಿಲ್ಲ.

ಇನ್ನು ಪರಮಾತ್ಮ ಇಂದ್ರ ದೇವರಿಗೆ ಮೂರು ಲೋಕದ ಆಧಿಪತ್ಯ ಕೊಟ್ಟ ವಿಶೇಷವಾಗಿ ಪೂರ್ವ ದಿಕ್ಕನ್ನು ಕೊಟ್ಟ, ದಕ್ಷಿಣ ದಿಕ್ಕನ್ನು ಯಮ ದೇವರಿಗೆ,ಪಶ್ಚಿಮ ದಿಕ್ಕನ್ನು ವರುಣ ದೇವರಿಗೆ, ಉತ್ತರ ದಿಕ್ಕನ್ನು ಕುಬೇರನಿಗೆ, ಅಧೋ ದಿಕ್ಕನ್ನು ನಾಗರಾಜನಿಗೆ, ಊರ್ಧ್ವ ದಿಕ್ಕನ್ನು ಸೋಮನಿಗೆ ಈ ರೀತಿ ಎಲ್ಲ ದಿಕ್ಕುಗಳನ್ನೆಲ್ಲ ಹಂಚಿ ಪರಮಾತ್ಮ ತಾನು ಅದೃಶ್ಯನಾಗಿದ್ದಾನೆ.

ಈ ಕಡೆಗೆ ನಾರದರು ವಿಶೇಷವಾಗಿ ಬಂದು ಅವನನ್ನು ಪಾಶದಿಂದ ಬಂಧನ ಮಾಡಿಬಿಟ್ಟಿದ್ದರು ಬಲಿ ಚಕ್ರವರ್ತಿಯನ್ನ, ನಾರದರು ಬಂದರು. ಬಲಿ ಚಕ್ರವರ್ತಿ ಪರಮಾತ್ಮನಿಗೆ ದಾನವನ್ನು ಮಾಡಿ ಮಹಾಪುಣ್ಯವನ್ನು ಗಳಿಸಿದ್ದೀ ಆದರೂ ಆ ಭಗವಂತನಿಗೆ ಮೂರು ಪಾದವನ್ನು ಕೊಡುತ್ತಿದ್ದಿ ಅಂತ ಹೇಳಿದ್ದೀ ಮೂರೂ ಕೊಡಲಿಕ್ಕೆ ಆಗಲಿಲ್ಲ ನಿನಗೆ ಅನ್ನುವುದಕ್ಕೆ ಪಾಶದಿಂದ ಬಂಧನ ಮಾಡಿದ್ದಾರೆ. ಈ ರೀತಿ ಆ ಪರಮಾತ್ಮನು ಬಲಿ ಚಕ್ರವರ್ತಿಯನ್ನು ಬಂಧನ ಮಾಡಿದಾಗ ಆ ಬಲಿ ಚಕ್ರವರ್ತಿಯ ಮೋಚನೆಗೆ ಅಂತ ಒಂದು ಸ್ತೋತ್ರವನ್ನು ಉಪದೇಶ ಮಾಡುತ್ತಾರೆ ಅದ್ಭುತವಾದಂತಹ ಸ್ತೋತ್ರ ನಿಜವಾಗಿ ಬಹಳ ಅದ್ಭುತವಾದ ಸ್ತೋತ್ರ.

ಓಂ ನಮೋಽಸ್ತ್ವನಂತಪತಯೇ ಅಕ್ಷಯಾಯ ಮಹಾತ್ಮನೇ ।
ಜಲೇಶಯಾಯ ದೇವಾಯ ಪದ್ಮನಾಭಾಯ ವಿಷ್ಣವೇ ॥ (72.66 ಭವಿಷ್ಯಪರ್ವ)

ಸಪ್ತಸೂರ್ಯವಪುಃ ಕೃತ್ವಾ ತ್ರೀಂಲ್ಲೋಕಾನ್ ಕ್ರಾಂತವಾನಸಿ ।
ಭಗವನ್ ಕಾಲಕಾಲಸ್ತ್ವಂ ತೇನ ಸತ್ಯೇನ ಮೋಕ್ಷಯ ॥ (72.67 ಭವಿಷ್ಯಪರ್ವ)

ಆ ಪರಮಾತ್ಮನ ಒಂದೊಂದು ಅವತಾರದ ಮಹಿಮೆಯನ್ನು ಇದು ಸರ್ವೋತ್ತಮವಾದ ಈ ತ್ರಿವಿಕ್ರಮಾವತಾರದ ಮಹಿಮೆಯನ್ನು ವರ್ಣನೆ ಮಾಡುವುದಲ್ಲದೆ ಬೇರೆ ಬೇರೆ ಅವತಾರಗಳ ವರ್ಣನೆಯನ್ನು ಮಾಡುವುದು **'ತೇನ ಸತ್ಯೇನ ಮೋಕ್ಷಯ' 'ತೇನ ಸತ್ಯೇನ ಮೋಕ್ಷಯ'** ಅಂತ ಹೀಗೆ ದೊಡ್ಡ ಸ್ತೋತ್ರವನ್ನು ಮಾಡುತ್ತಾರೆ. ಪರಮಾತ್ಮನ ಎಲ್ಲ ಅವತಾರಗಳು, ಎಲ್ಲಾ ಅನುಗ್ರಹ ಕಾರ್ಯಗಳು ಏನೇನು ಜಗತ್ತಿನಲ್ಲಿ ದೇವರು ಪರಮೋಪಕಾರ ಮಾಡುತ್ತಾನೆ ಆ ಒಂದೊಂದನ್ನ ಸ್ಮರಣೆ ಮಾಡಿ ಅಂತಹ ಸ್ವಾಮಿ ನೀನು ನನ್ನನ್ನು ಮೋಚನೆಗೊಳಿಸು ಅಂತ ಈ ಮಂತ್ರವನ್ನು ಅನ್ನು ನಿನಗೆ ಮೋಕ್ಷವಾಗುತ್ತದೆ. ಆ ಮಂತ್ರ ಪಠಣ ಮಾಡಿದ್ದಾನೆ ಪಾಶಗಳಿಂದ ಅವನಿಗೆ ಮೋಕ್ಷವಾಗಿದೆ ಅವನನ್ನು ಎಲ್ಲ ಪಾಶಗಳಿಂದ ಗರುಡ ದೇವರು ಮೋಚನೆ ಮಾಡಿದ್ದಾರೆ ಆ ಗರುಡ ದೇವರು ಕೂಡ ಪರಮಾತ್ಮ ಹೇಳಿದ ಮಾತನ್ನೇ ಪುನಃ ಬಲಿ ಚಕ್ರವರ್ತಿಗೆ ನೆನಪು ಮಾಡಿಕೊಟ್ಟಿದ್ದಾರೆ. ಆ ಗರುಡ ದೇವರು ಪಾಶ ಮೋಚನೆ ಮಾಡುವತನಕ ಅಲ್ಲಿಯೇ ಹತ್ತಿರದಲ್ಲಿ ನಿಂತಿದ್ದರಲ್ಲ ಬಲಿ ಚಕ್ರವರ್ತಿ ಸುಮ್ಮನೆ ಕೂಡಲಿಲ್ಲ ಕೆಲವರಿಗೆ ಆ ಸ್ವಭಾವ ಇರುತ್ತದೆ ತಪ್ಪಿ ಹೋಗಿರುತ್ತಾರೆ. ಮುಖ್ಯಸ್ಥರು ಯಾರೋ ಅವರು ಹೇಳಿರುತ್ತಾರೆ ಎಲ್ಲ ನಿಮ್ಮ ಕೆಲಸ

ಆಗುತ್ತದೆ ಅಂತ ಅಕ್ಕಪಕ್ಕದಲ್ಲಿ ಇದ್ದವರಿಗೆ ಕೆಲಸದವರಿಗೆ ಮತ್ತೊಬ್ಬರಿಗೆ ಎಲ್ಲರಿಗೂ ಕೇಳುತ್ತಾ ಇರುತ್ತಾರೆ. ಹಾಗೆ ಸ್ವತಃ ಸರ್ವೋತ್ತಮನಾದ ಶ್ರೀಹರಿ ನಿನೇನು ಚಿಂತೆ ಮಾಡಬೇಡ ನಿನಗೆ ಎಲ್ಲಾ ಕೊಡುತ್ತೇನೆ ಅಂತ ಹೇಳಿದ ಮೇಲೂ ಈ ಗರುಡ ದೇವರಿಗೆ ಮತ್ತೆ ಕೇಳುತ್ತಾನೆ ಬಲಿ ಮುಂದೆ ನನ್ನ ಗತಿ ಏನು, ನನ್ನ ಹೊಟ್ಟೆಯ ಗತಿ ಏನು. ಇಷ್ಟು ಹೊತ್ತು ಏನು ಹೇಳಿದ ಸ್ವಾಮಿ ತ್ರಿವಿಕ್ರಮನೇ ಹೇಳಿದ ಮೇಲೆ ಮತ್ತೆ ನನಗೆ ಕೇಳುತ್ತಿಯಲ್ಲ ನೀನು ಚಿಂತೆ ಮಾಡಬೇಡ ಸುಮ್ಮನೆ ಇರು.

ಒಂದು ಸ್ಪಷ್ಟೀಕರಣ ಕೊಟ್ಟಿದ್ದಾನೆ ಗರುಡ ಭಾಷ್ಯಾಕಾರ ಇದ್ದ ಹಾಗೆ ಪರಮಾತ್ಮನ ಮಾತಿಗೆ ಕೆಲವರು ತಪ್ಪು ಮಾಡುತ್ತಾರೆ ತಪ್ಪು ಮಾಡಿದ ಯಜ್ಞಗಳ ಫಲವನ್ನೆಲ್ಲ ನೀನು ಅನುಭವಿಸು ಅಂತ ದೇವರು ಹೇಳಿದ ಅಂದ ಮಾತ್ರಕ್ಕೆ ಯಾವುದೋ ಒಂದೆರಡು ಬರಲಿಲ್ಲ ಅಂದರೆ ಬೇಜಾರು ಮಾಡಿಕೊಳ್ಳಬೇಡ ಯಾಕೆ ಅಂದರೆ ತಪ್ಪು ಮಾಡಿ ಕೆಲವರು ಪ್ರಾಯಶ್ಚಿತ್ತ ಮಾಡಿ ಬಿಡುತ್ತಾರಲ್ಲ ಅದು ಬರುತ್ತದೆ. **'ಪ್ರಾಯಶ್ಚಿತ್ತಮಜಾನನ್ತೋ'**[1] ಪ್ರಾಯಶ್ಚಿತ್ತವನ್ನು ಮಾಡದೇ ಬಿಟ್ಟರೆ ಆ ಯಜ್ಞದ ಫಲ ಎಲ್ಲಾ ನಿನಗೆ, ಸರಿ ಅಂತ ಮತ್ತೆ ಅವನು ಸಂತೋಷ ಪಟ್ಟಿದ್ದಾನೆ. ಈ ಸ್ತೋತ್ರವನ್ನು ಯಾರು ಪಠಣ ಮಾಡುತ್ತಾರೋ ನಿತ್ಯದಲ್ಲಿ ಅವರಿಗೆ ಎಲ್ಲ ಆಪತ್ತುಗಳು ಪರಿಹಾರವಾಗುತ್ತದೆ, ಎಲ್ಲಾ ರೀತಿಯ ವಿಜಯ ಅವರಿಗೆ ಸಿಗುತ್ತದೆ.

ಪುತ್ರಪೌತ್ರಾಶ್ಚ ವರ್ಧನ್ತೇ ಆರೋಗ್ಯಂ ಗುಣಸಮ್ಪದಃ ॥ (72.108 ಭವಿಷ್ಯಪರ್ವ)

ಸಕಲ ಇಷ್ಟಾರ್ಥಗಳು ಪುತ್ರ ಪೌತ್ರ ವೃದ್ಧಿ ಸೌಭಾಗ್ಯ, ಆರೋಗ್ಯ, ಸಕಲವಿಧ ಸದ್ಗುಣಗಳ ಪ್ರಾಪ್ತಿ, ಎಲ್ಲ ಕಾಮಿತಾರ್ಥಗಳ ಪ್ರಾಪ್ತಿಯಾಗುತ್ತದೆ ಈ ನಾರದರು ಉಪದೇಶ ಮಾಡಿದಂತಹ **'ತೇನ ಸತ್ಯೇನ ಮೋಕ್ಷಯ'** ಅಂತನ್ನುವಂತಹ ಏನು ಒಂದು ದೊಡ್ಡ ಸ್ತೋತ್ರ ಇದೆ ಇದನ್ನು ಪಠಣ ಮಾಡಿದರೆ ಎಲ್ಲವೂ ಅವರಿಗೆ ಪ್ರಾಪ್ತವಾಗುತ್ತದೆ ಅಂತ ಫಲಶ್ರುತಿಯನ್ನು ತಿಳಿಸುತ್ತಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

1. 72.97 ಭವಿಷ್ಯಪರ್ವ

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಭವಿಷ್ಯಪರ್ವ-42

* * *

ಜನಮೇಜಯ ಉವಾಚ

ಕಿಮರ್ಥಂ ಭಗವಾನ್ ವಿಷ್ಣುರ್ದೇವದೇವೋ ಜನಾರ್ದನಃ ।

ಗತಃ ಕೈಲಾಸಶಿಖರಮಾಲಯಂ ಶಂಕರಸ್ಯ ಚ ।। (73.1 ಭವಿಷ್ಯಪರ್ವ)

ಜಗತ್ಪಾಲಕನಾದ ಭಗವಂತ ಬಲಿ ಚಕ್ರವರ್ತಿಯ ರಾಜ್ಯವನ್ನು ದಾನವಾಗಿ ಸ್ವೀಕರಿಸಿ, ಇಂದ್ರ ದೇವರಿಗೆ ದಾನವಾಗಿ ಕೊಟ್ಟು ಮೂರು ಲೋಕಗಳಿಗೆ ಒಡೆಯನಾದವ ಇಂದ್ರ ಅಂತ ಜಗತ್ತಿನಲ್ಲಿ ಸಾರಿ, ದೇವತೆಗಳಿಗೆಲ್ಲಾ ಅವರವರ ಸ್ಥಾನವನ್ನು ಮತ್ತೆ ಕಲ್ಪಿಸಿಕೊಟ್ಟು ಬಲಿ ಚಕ್ರವರ್ತಿಗೆ ಬರುವ ಸಾವರ್ಣಿ ಮನ್ವಂತರದಲ್ಲಿ ಇಂದ್ರ ಪದವಿಯನ್ನು ಕೊಡುವ ಆಶ್ವಾಸನೆಯನ್ನು ನೀಡಿ, ಸುತಲ ಲೋಕಕ್ಕೆ ಕಳಿಸಿ ಕೊಟ್ಟಿದ್ದಾನೆ ಪರಮಾತ್ಮ. ತ್ರಿವಿಕ್ರಮ ರೂಪಿಯಾದಂತಹ ಭಗವಂತ ಹದಿನಾಲ್ಕು ಲೋಕಗಳನ್ನ ವ್ಯಾಪಿಸಿದಂತಹ ಸ್ವಾಮಿ ಸಕಲ ದೇವತೆಗಳು ಯಾವ ಪರಮಾತ್ಮನನ್ನು ಆಶ್ರಯಿಸಿದ್ದಾರೆ ಅಂತಹ ಸರ್ವಾಶ್ರಯನಾದಂತಹ ಸರ್ವಾಧಾರಾನಾದ ಪರಮಾತ್ಮ ಅಂತಹ ಭಗವಂತನ ವರ್ಣನೆಯನ್ನು ಪೂರ್ವಾಧ್ಯಾಯದಲ್ಲಿ ಮಾಡಿ, ಉತ್ತರಾಧ್ಯಾಯದಲ್ಲಿ ಶ್ರೀಕೃಷ್ಣ ಪರಮಾತ್ಮ ತಾನು ಮಕ್ಕಳನ್ನ ಪಡೆಯುವುದಕ್ಕೆ ತಪಶ್ಚರ್ಯ ಮಾಡಬೇಕು ಅಂತ ಕೈಲಾಸಕ್ಕೆ ಹೊರಟ ಅನ್ನುವ ವಾರ್ತೆಯನ್ನು ತಿಳಿಸುತ್ತಾ ಇದ್ದಾರೆ. ಹಿಂದಿನ ಅಧ್ಯಾಯದಲ್ಲಿ ಇಡೀ ಜಗತ್ತು ಭಗವಂತನಲ್ಲಿ ಆಶ್ರಿತವಾಗಿದೆ ಅಂತ ವರ್ಣನೆ ಮಾಡಿ ಬ್ರಹ್ಮರುದ್ರಾದಿ ದೇವತೆಗಳಿಗೂ ಪರಮಾತ್ಮ ಆಶ್ರಯನಾಗಿದ್ದಾನೆ ಅನ್ನುವಂತಹ ಮಹಾಮಹಿಮೆಯನ್ನ ಹಿಂದೆ ತಿಳಿಸಿದ್ದಾರೆ.

ಅಂತಹ ಭಗವಂತನ ಮಹಾಮಹಿಮೆಯನ್ನು ಹಿಂದೆ ತಿಳಿಸಿ ಈ ಚರಿತ್ರೆಯನ್ನು ಮುಂದೆ ಹೇಳುವ ಮೂಲಕ ಇದು ಕೇವಲ ನಾಟಕ ಅನ್ನುವುದನ್ನು ಹರಿವಂಶ ಸೂಚನೆ ಮಾಡುತ್ತ ಇದೆ. ಬ್ರಹ್ಮರುದ್ರಾದಿ ದೇವತೆಗಳು ಆ ಪರಮಾತ್ಮನನ್ನ ಆಶ್ರಯಿಸಿದ್ದಾರೆ ಅಂತ ಹೇಳಿದ ಮೇಲೆ, ಇಡೀ ಜಗತ್ತಿಗೆ ಒಡೆಯ ಅಂತ ಆದಮೇಲೆ ಅಂತಹ ಪರಮಾತ್ಮ ತನಗೆ ಮಕ್ಕಳಾಗಬೇಕು ಅನ್ನುವುದಕ್ಕೆ ಮತ್ತೊಬ್ಬರನ್ನು ಕುರಿತು ತಪಶ್ಚರ್ಯವನ್ನು ಮಾಡುವ ಅವಶ್ಯಕತೆ ಉಂಟೇ. ಸರ್ವಥಃ ಇಲ್ಲಾ ಅನ್ನುವುದನ್ನ ತೋರಿಸಿಕೊಡುವುದಕ್ಕೋಸ್ಕರನೇ ಅಷ್ಟು ಸುಂದರವಾಗಿ ಹಿಂದೆ

ವಾಮನಾವತಾರವನ್ನು, ತ್ರಿವಿಕ್ರಾಮಾವತಾರವನ್ನು ಆ ವಿಶ್ವರೂಪವನ್ನು ಇಡೀ ಜಗತ್ತಿಗೆ ಸಕಲ ದೇವತೆಗಳಿಗೆ ಆಶ್ರಯನಾದ ಆ ಭಗವಂತನ ಮಹಿಮೆಯನ್ನು ವರ್ಣಿಸಿ ಆನಂತರದಲ್ಲಿ ಈ ಕಥೆಯನ್ನು ತಿಳಿಸುತ್ತಾ ಇದ್ದಾರೆ. ಒಂದು ದಿನ ರುಕ್ಮಿಣಿ ದೇವಿ ಪರಮಾತ್ಮನ ಸಂಕಲ್ಪವನ್ನು ತಿಳಿದು ಪ್ರಾರ್ಥನೆ ಮಾಡುತ್ತಾಳೆ ಭಗವಂತನ ಸಂಕಲ್ಪ ರುಕ್ಮಿಣಿ ದೇವಿಗೆ ಗೊತ್ತು.

ಯಾಂ ಯಾಂ ಪರೇಶ ಉರುಧೈವ ಕರೋತಿ ಲೀಲಾಂ

ತಾಂ ತಾಂ ಕರೋತ್ಯನು ತಥೈವ ರಮಾऽಪಿ ದೇವೀ ॥ (5.35 ಮಭಾತಾನಿರ್ಣಯ)

ಭಗವಂತ ತಾನು ಸರ್ವೋತ್ತಮನಾಗಿದ್ದರೂ ಕೂಡ ತನ್ನ ಸರ್ವೋತ್ತಮತ್ವವನ್ನು ಅಷ್ಟು ಸುಲಭವಾಗಿ ಎಲ್ಲರೂ ತಿಳಿಯುವುದು ಬೇಡ, ಅದರ ಬಗ್ಗೆ ಅನೇಕ ಜನರಿಗೆ ಸಂಶಯ ಹಾಗೆ ಇರಲಿ, ಅದು ರಹಸ್ಯವಾದ ತತ್ವ ಅನ್ನುವ ದೃಷ್ಟಿಯಿಂದ. ತಾನು ಸರ್ವೋತ್ತಮನಾಗಿದ್ದರೂ ಬೇರೆ ದೇವತೆಗಳನ್ನು ಕುರಿತು ತಪಶ್ಚರ್ಯವನ್ನ ಮಾಡಿ ಅವರಿಂದ ವರ ಪಡೆದಂತೆ ನಾಟಕ ಮಾಡಬೇಕು ಅಂತ ದೇವರ ಸಂಕಲ್ಪ ಇದು ರುಕ್ಮಿಣಿ ದೇವಿಗೆ ಗೊತ್ತು. ಅದಕ್ಕೋಸ್ಕರ ಆ ಪರಮಾತ್ಮ ಈಗ ಕೈಲಾಸವನ್ನು ಕುರಿತು ಹೋಗಿ ರುದ್ರ ದೇವರನ್ನು ಕುರಿತು ತಪಶ್ಚರ್ಯವನ್ನು ಮಾಡಬೇಕು ಅಂತ ಮನಸ್ಸಿನಲ್ಲಿ ಸಂಕಲ್ಪ ಮಾಡಿದ್ದಾನೆ ಅಂತ ಗೊತ್ತಾದ ರುಕ್ಮಿಣಿ ಅದಕ್ಕನುಗುಣವಾಗಿ ತಾನೂ ನಾಟಕವನ್ನು ಮಾಡುತ್ತಾಳೆ.

ಯಂ ಕಾಮಯೇ ತಂ ತಂ ಉಗ್ರಂ ಕೃಷ್ಣೋಮಿ ।

ತಂ ಬ್ರಹ್ಮಣಂ ತಂ ಋಷಿಂ ತಂ ಸುಮೇಧಸಂ ॥ (10.125.5 ಋಗ್ವೇದ)

ಯಾವ ರುಕ್ಮಿಣಿದೇವಿ ತಾನು ಸ್ವಯಂ ತಾನೇ ಸ್ವತಃ ಬ್ರಹ್ಮರುದ್ರಾದಿಗಳಿಗೆ ಪದವಿಯನ್ನು ಕೊಡುವವಳು, ಬ್ರಹ್ಮರುದ್ರಾದಿ ಪದಾದ್ಯಾರ್ಯಾತ್ ಸ್ವಯಂ ಶ್ರಿಯಾ ಅಂತಹ ಮಹಾಲಕ್ಷ್ಮೀ ದೇವಿ ಶ್ರೀದೇವಿ ರುಕ್ಮಿಣಿ ದೇವಿ ತಾನು ಪರಮಾತ್ಮನಿಗೆ ಪ್ರಾರ್ಥನೆ ಮಾಡುತ್ತಾಳೆ ನನಗೆ ಶ್ರೇಷ್ಠನಾದ ಪುತ್ರನನ್ನು ಅನುಗ್ರಹಿಸಬೇಕು.

ದಾತುಮರ್ಹಸಿ ಪುತ್ರಂ ತ್ವಂ ವೀರ್ಯವನ್ತಂ ಜನಾರ್ದನ ॥ (73.25 ಭವಿಷ್ಯಪರ್ವ)

ಮಹಾಪರಾಕ್ರಮಿ ಆಗಿರುವಂತಹ ಶ್ರೇಷ್ಠನಾದ ಸತ್ಪುತ್ರ ನನಗೆ ಆಗುವಂತೆ ನೀನು ಅನುಗ್ರಹವನ್ನು ಮಾಡಬೇಕು ಅಂತ ರುಕ್ಮಿಣಿ ಪ್ರಾರ್ಥನೆ ಮಾಡುತ್ತಾಳೆ. ಪ್ರಾರ್ಥನೆ ಮಾಡುವಾಗ ಒಂದು ಮಾತನ್ನು ಅನ್ನುತ್ತಾಳೆ ನಾನು ನಿನ್ನ ಭಕ್ತಳಾಗಿದ್ದರೆ ಅನುಗ್ರಹ ಮಾಡು ಇಲ್ಲ ಅಂದರೆ ಬಿಡು.

ವಕ್ತವ್ಯಂ ಕಿಮು ದೇವೇಶ ಯದಿ ಭಕ್ತಾಸ್ಮಿ ಕೇಶವ ॥ (73.24 ಭವಿಷ್ಯಪರ್ವ)

ನಾನು ನಿನ್ನ ಭಕ್ತಳು ಅಂತ ನಿನಗೆ ವಿಶ್ವಾಸ ಇದ್ದರೆ ಶ್ರೇಷ್ಠ ಸತ್ಪುತ್ರನನ್ನು ನನಗೆ ದಯಪಾಲಿಸು. ಪರಮಾತ್ಮ ಅನ್ನುತ್ತಾನೆ ಬ್ರಹ್ಮಾದಿ ದೇವತೆಗಳಿಗಿಂತಲೂ ಅಪರಿಮಿತವಾದ ಭಕ್ತಿಯನ್ನು ಮಾಡುವಂತಹ ಮಹಾನುಭಾವಳು ನೀನು, ಕೋಟಿ ಗುಣದಿಂದ ಅಧಿಕಳು ಶ್ರೀರಮಾ, ಕೋಟಿ ಪಟ್ಟು ಉತ್ತಮಳಾದವಳು ಅಂತಹ ನೀನು ಪರಮ ಭಕ್ತಳು ಅನ್ನುವುದರಲ್ಲಿ ಯಾವ ಸಂಶಯ ಇಲ್ಲ.

ದಾತಾಸ್ಮಿ ತಾದೃಶಂ ಪುತ್ರಂ ಯಂ ತ್ವಮಿಚ್ಛಸಿ ಭಾಮಿನಿ ॥ (73.27 ಭವಿಷ್ಯಪರ್ವ)

ನಿತ್ಯಂ ಭಕ್ತಾಸಿ ಮೇ ದೇವಿ ನಾತ್ರಕಾರ್ಯಾವಿಚಾರಣಾ । (73.28 ಭವಿಷ್ಯಪರ್ವ)

ಎಂತಹ ಗುಣವಂತ, ಎಂತಹ ವೀರ್ಯವಂತ, ಎಂತಹ ಧಾರ್ಮಿಕನಾದ ಪುತ್ರ ಬೇಕು ಅಂತ ನಿನ್ನ ಮನಸ್ಸಿನಲ್ಲಿ ಅಪೇಕ್ಷೆ ಇದೆ ಅಂತಹ ಸತ್ಪುತ್ರನನ್ನೇ ನಿನಗೆ ಕೊಡುತ್ತೇನೆ ಯಾಕೆ ಚಿಂತೆ ಮಾಡುತ್ತೀಯಾ ನನ್ನ ಭಕ್ತಳು ಅನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಪುತ್ರ ಅಂತ ಯಾರನ್ನು ಕರೆಯಬೇಕು ಪುತ ಅಂದರೆ ನರಕ.

ನರಕಂ ಪುದಿತಿ ಖ್ಯಾತಂ ದುಃಖಂ ಚ ನರಕಂ ವಿದುಃ । (73.29 ಭವಿಷ್ಯಪರ್ವ)

ಪುದಸ್ತ್ರಾಣಾತ್ ತತಃ ಪುತ್ರಮಿಹೇಚ್ಛತಿ ಪರತ್ರ ಚ ॥ (73.30 ಭವಿಷ್ಯಪರ್ವ)

'ಪುತ್' ಎಂಬ ಶಬ್ದಕ್ಕೆ **'ನರಕ'** ಅಂತ ಅರ್ಥ ನರಕ ಅಂದರೆ ದುಃಖ. ದುಃಖದಿಂದ ಯಾರನ್ನ ಯಾರು ರಕ್ಷಣೆ ಮಾಡುತ್ತಾರೋ ಅಂಥವರಿಗೆ ಪುತ್ರ **'ಪುತ ತ್ರ ಪುತ್ರ ಪುತ್'** ಅಂದರೆ ನರಕ, ನರಕ ಅಂದರೆ ದುಃಖ ನಾನಾ ವಿಧವಾದ ದುಃಖಗಳಿಂದ ನರಕಾದಿ ಅನರ್ಥಗಳಿಂದ ಯಾರು ರಕ್ಷಣೆ ಮಾಡುತ್ತಾರೆ ಅಂಥವರನ್ನು ಪುತ್ರ ಅಂತ ಕರೆಯಬೇಕು. ಅಂತಹ ಪುತ್ರ ಅಂದರೆ ಯಾರು ಆಗುತ್ತಾನೆ ಕುಪುತ್ರ ಅಲ್ಲ, ಅಧಾರ್ಮಿಕನಾದ ಪುತ್ರ ಅಲ್ಲ, ಆಧಾರ್ಮಿಕನಾದ ಪುತ್ರ ಹುಟ್ಟುವುದಕ್ಕಿಂತಲೂ ಪುತ್ರ ಹುಟ್ಟದಿರುವುದೇ ವಾಸಿ. ಹಾಗಾದರೆ ಧಾರ್ಮಿಕನಾದ ಪುತ್ರ, ಗುಣವಂತನಾದ ಪುತ್ರ, ವಿಷ್ಣು ಭಕ್ತನಾದಂತಹ ಪುತ್ರ ಅಂತಹ ಪುತ್ರ ತನ್ನ ತಂದೆ ತಾಯಿ ಹಾಗೂ ಅವರಿಬ್ಬರ ಕುಲವನ್ನೇ ಉದ್ಧಾರ ಮಾಡುತ್ತಾನೆ ಅವರಿಗೆ ಉತ್ತಮವಾದಂತಹ ಸುಖವನ್ನು ನೀಡುತ್ತಾನೆ, ನರಕವನ್ನು ದುಃಖವನ್ನು ಪರಿಹಾರ ಮಾಡುತ್ತಾನೆ. ತಾನು ಮಾಡುವ ಪುಣ್ಯಗಳ ಮೂಲಕ.

ಕುಪುತ್ರೋ ನರಕೇ ಯಸ್ಮಾತ್ ಸುಪುತ್ರಾತ್ ಸ್ವರ್ಗ ಏವ ಹಿ ॥ (73.33 ಭವಿಷ್ಯಪರ್ವ)

ಕುಪುತ್ರನಿಂದ ನರಕ, ಸುಪುತ್ರನಿಂದ ಸ್ವರ್ಗ ಆದ್ದರಿಂದ ಬರೀ ವಿದ್ಯಾವಂತನಾದರೆ ಸಾಲದು ವಿನೀತನಾಗಿರಬೇಕು. ಉನ್ಮತ್ತನಾದ, ದೇವ ಬ್ರಾಹ್ಮಣರ ದ್ರೋಹವನ್ನು ಮಾಡುತ್ತ ಇದ್ದ, ಸಜ್ಜನರ ದ್ರೋಹವನ್ನ ಮಾಡುತ್ತ ಇದ್ದ ಅಂದರೆ ಅಂತಹ ಪುತ್ರನಿಂದ ಮತ್ತೆ ನರಕವೇ.

ವಿದ್ಯಯಾ ವಿನಯೋ ಯಸ್ಮಾದ್ ವಿದ್ಯಾಯುಕ್ತಂ ಸುಧಾರ್ಮಿಕಮ್ ।
ಇಚ್ಛೇತ್ ಪುತ್ರಂ ಪುತ್ರಕಾಮಃ ಪುರುಷೋ ಯತ್ನವಾನ್ ಬುಧಃ ॥ (73.34 ಭವಿಷ್ಯಪರ್ವ)

ವಿದ್ಯಾವಂತ ವಿನಯವಂತನಾದಂತಹ ಶೀಲವಂತನಾದ ಧಾರ್ಮಿಕನಾದ ಪುತ್ರನನ್ನು ಅಪೇಕ್ಷೆ ಪಡಬೇಕು ಜನರು ಅಂತಹ ಪುತ್ರನನ್ನೇ ನಿನಗೆ ಕೊಡುತ್ತೇನೆ ಏನು ಚಿಂತೆ ಮಾಡಬೇಡ. ನೀವು ಹಿಂದೆ ಕಥೆ ಕೇಳಿದ್ದೀರಿ ಏಕಲವ್ಯನ ಜೊತೆಗೆ ಯುದ್ಧವನ್ನ ಮಾಡುವಂತಹ ಪ್ರಸಂಗದಲ್ಲಿ ಶ್ರೀಕೃಷ್ಣ ಪರಮಾತ್ಮ ತಾನೇ ತನ್ನ ಉದರದಿಂದ ಪ್ರದ್ಯುಮ್ನನನ್ನ ತತ್ಕಾಲದಲ್ಲಿ ಸೃಷ್ಟಿ ಮಾಡಿ ಯುದ್ಧಕ್ಕೆ ಕಳಿಸುತ್ತಾನೆ. ಮಗುವನ್ನಲ್ಲ, ಯುವಕನಾದ ಕವಚ ಆಭರಣಗಳಿಂದ ಸಹಿತನಾದ ಶಸ್ತ್ರಾಸ್ತ್ರಗಳನ್ನು ಧಾರಣೆ ಮಾಡಿದ ಮಹಾಸಮರ್ಥನಾದ ಪರಾಕ್ರಮಿಯಾದ ಪ್ರದ್ಯುಮ್ನನನ್ನ ತಾನು ತನ್ನ ಉದರದಿಂದಲೇ ಹೊರಗೆ ಸೃಷ್ಟಿ ಮಾಡಿ. ರುಕ್ಮಿಣಿ ದೇವಿಯ ಅಪೇಕ್ಷೆ ಇಲ್ಲದಂತೆ ಏಕಲವ್ಯನ ಜೊತೆಗೆ ಯುದ್ಧ ಮಾಡಿಸಿ ಸೋಲಿಸಿ ಅವನನ್ನ ಓಡಿಸಿ ಪುನಃ ಆ ಪ್ರದ್ಯುಮ್ನನನ್ನ ತನ್ನ ಉದರದಲ್ಲಿ ಹಾಕಿಕೊಂಡಂತಹ ಸ್ವಾಮಿ. ಅಂತಹ ಪರಮಾತ್ಮನಿಗೆ ತಾನು ಮಕ್ಕಳನ್ನ ಪಡೆಯುವುದಕ್ಕೆ ತಪಸ್ಸು ಮಾಡಿ ವರ ಪಡೆಯಬೇಕಾದ ಅವಶ್ಯಕತೆ ಉಂಟೇ ಸರ್ವಥಃ ಇಲ್ಲ ಆದರೂ ಪರಮಾತ್ಮ ಹೇಳುತ್ತಾನೆ ಲೋಕಮೋಹನಕ್ಕಾಗಿ.

ತತ್ತೋಷಾಸ್ಯ ಮಹಾದೇವಂ ಶಂಕರಂ ನೀಲಲೋಹಿತಮ್ ।

ತತೋ ಲಬ್ಧಾಸ್ಮಿ ಪುತ್ರಂ ತೇ ಭವಾದ್ ಭೂತಹಿತೇ ರತಾತ್ ॥ (73.36 ಭವಿಷ್ಯಪರ್ವ)

ರುದ್ರ ದೇವರ ಪ್ರೀತಿಯನ್ನು ಸಂಪಾದಿಸಿ ಅವರನ್ನು ಕುರಿತು ತಪಸ್ಸು ಮಾಡಿ ಅವರಿಂದ ನಾನು ವರ ಪಡೆದು ನಿನಗೆ ಪುತ್ರನನ್ನು ಕೊಡುತ್ತೇನೆ ಅಂತ. ಆದರೆ ಈ ರೀತಿ ಪರಮಾತ್ಮ ಮೋಹನಕ್ಕಾಗಿ ಮಾತನ್ನಾಡಿದರು ಕೂಡ ಶಾಸ್ತ್ರಗಳ ಅನುಗುಣವಾಗಿ ಇದೇ ಹರಿವಂಶದ ಮುಂದಿನ ವಚನಗಳು ಸ್ವಯಂ ರುದ್ರ ದೇವರು ಆಡುವಂತಹ ವಚನಗಳಿಗೆ ಅನುಗುಣವಾಗಿ ಹಿಂದೆಲ್ಲ ಬಂದಂತಹ ಮಹಾಭಾರತ ಹರಿವಂಶಗಳಲ್ಲಿ ಬಂದ ಅದ್ಭುತವಾದ ಭಗವಂತನ ಸರ್ವೋತ್ತಮತ್ವವನ್ನ ತಿಳಿಸುವ ವಾಕ್ಯಗಳಿಗೆ ಅನುಗುಣವಾಗಿ ಈ ವಾಕ್ಯಗಳಿಗೆ ನಾವು ಸರಿಯಾದ ಆಂತರ್ಯವನ್ನೂ ತಿಳಿಯಬೇಕು.

ಆದಿದೇವೋ ಮಹಾದೇವೋ ದೇವೇಶೋ ದೇವಭೃದ್ಗುರುಃ (52 ವಿಷ್ಣುಸಹಸ್ರನಾಮ)

ಇಲ್ಲಿ ಮಹಾದೇವ ಅಂದರೆ ತಾನೇ ಮಹಾದೇವನನ್ನು ಕುರಿತು ತಪಶ್ಚರ್ಯ ಮಾಡುತ್ತೇನೆ ಅಂದರೆ ನನ್ನ ನನ್ನನ್ನು ಕುರಿತೇ ನಾನು ತಪಶ್ಚರ್ಯ ಮಾಡುತ್ತೇನೆ, ರುದ್ರಾಂತರ್ಗತವಾದ ನನ್ನ ರೂಪವನ್ನೇ ನಾನು ಚಿಂತನ ಮಾಡುವುದು, ಧ್ಯಾನ ಮಾಡುವುದು, ನನ್ನ ಕಾರ್ಯವನ್ನು ನಾನೇ ಮಾಡಿಕೊಳ್ಳುತ್ತೇನೆ ಅಂತನ್ನುವ ಆಂತರ್ಯ ಒಳಗಿದೆ. ಅಂತಹ ಪರಮಾತ್ಮ ತನ್ನ ಸಂಕಲ್ಪವನ್ನು ರುಕ್ಮಿಣಿ ದೇವಿಗೆ ಹೇಳಿದ್ದಾನೆ ಹೇಳಿ ಅವತ್ತು ರಾತ್ರಿ ಕಳೆದ ಮೇಲೆ ಪ್ರಾತಃಕಾಲ ಎದ್ದು ನೋಡಿ, ಪರಮಾತ್ಮ ತನ್ನ ಆಹ್ನಿಕವನ್ನು ಮಾಡಿ, ಅಗ್ನಿಹೋತ್ರಾದಿಗಳನ್ನೆಲ್ಲ ಮಾಡಿ, ಸಂಧ್ಯಾವಂದನ, ಧ್ಯಾನ ಇತ್ಯಾದಿ ಕರ್ಮಗಳನ್ನೆಲ್ಲ ತಾನು ಮಾಡಿ ಆಮೇಲೆ ಒಂದು ದೊಡ್ಡ ಸಭೆ ಕರೆಯುತ್ತಾನೆ. ಸಂಧ್ಯಾವಂದನಾದಿಗಳಿಲ್ಲದೇ ತ್ರೈವರ್ಣಿಕರು ಇರಕೂಡದು, ಅಗ್ನಿಹೋತ್ರಾದಿಗಳನ್ನು ಮಾಡದೇ ಇರಬಾರದು ಅನ್ನುವುದನ್ನು ಜಗತ್ತಿಗೆ ತೋರಿಸಿ ಕೊಡುತ್ತಾನೆ ಪರಮಾತ್ಮ **'ಹುತಾಗ್ನಿಃ ಕೃತಕಲ್ಯಾಣಃ'**[1] ನಿತ್ಯದಲ್ಲಿ ಗೋದಾನ ಮಾಡುತ್ತ ಇದ್ದ ಪರಮಾತ್ಮ.

ಗಾಶ್ಚ ದತ್ತಾ ಪ್ಲವ ವಿಪ್ರೇಭ್ಯೋ ನಮಸ್ಕೃತ್ಯ ದ್ವಿಜೋತ್ತಮಾನ್ । (74.2 ಭವಿಷ್ಯಪರ್ವ)

ಗೋದಾನವನ್ನು ಮಾಡಿ ಎಲ್ಲ ಬ್ರಾಹ್ಮಣರಿಗೆ ನಮಸ್ಕಾರ ಮಾಡಿ ಆಮೇಲೆ ಆಸ್ಥಾನ ಮಂಟಪದಲ್ಲಿ ದರ್ಬಾರಕ್ಕೆ ಬರುತ್ತಾನೆ. ಬಂದು ಅಲ್ಲಿ ಎಲ್ಲ ಪರಮಾತ್ಮ ತಾನು ಸರ್ವ ರಾಜಾಧಿರಾಜ ಆದರೆ ಹೆಸರಿಗೆ ರಾಜ ಉಗ್ರಸೇನ ಇದ್ದಾನೆ ಅವನನ್ನು ಕೂಡಿಸಿ ತಾನು ಸರ್ವೋತ್ತಮನಾದ ರಾಜಾಧಿರಾಜ ಎಲ್ಲರನ್ನು ಸಂಭೋಧನೆ ಮಾಡಿ ಹೇಳುತ್ತಾ ಇದ್ದಾನೆ. ಉಗ್ರಸೇನ, ಬಲರಾಮ ಹಾಗೂ ಇನ್ನುಳಿದವರಿಗೆಲ್ಲ ಉದ್ಧವ, ಉದ್ಧವನಿಗೆ ಬಹಳ ವಿಶೇಷವಾಗಿ ಈ ಅಧ್ಯಾಯದಲ್ಲಿ ಪ್ರಾಶಸ್ತ್ಯ ಕೊಟ್ಟು ಹೇಳುತ್ತಾರೆ. ಉದ್ಧವ ಬೃಹಸ್ಪತ್ಯಾಚಾರ್ಯರರ ಅವತಾರ ನಮಗೆ ನಿಮಗೆ ಎಲ್ಲರಿಗೂ ಸದ್ಬುದ್ಧಿ ಬರಬೇಕು ಅಂತಾದರೆ ಆ ಬೃಹಸ್ಪತ್ಯಾಚಾರ್ಯರರ ಅನುಗ್ರಹ ಬೇಕು. **'ಬುದ್ಧಿಭೂತಂ ತ್ರಿಲೋಕೇಶಂ ತಂ ನಮಾಮಿ ಬೃಹಸ್ಪತಿಂ'**[2] ಅಂತ ಅಂತಹ ದೇವತೆಗಳಿಗೂ ಮುನಿಗಳಿಗೂ ಬುದ್ಧಿಯನ್ನ ಕೊಡುವಂತಹ ದೊಡ್ಡ ದೇವತೆ, ದೇವತೆಗಳ ಗುರು ಬೃಹಸ್ಪತ್ಯಾಚಾರ್ಯರರು ಅವರ ಅವತಾರ ಉದ್ಧವ ಅದಕ್ಕಾಗಿ ವರ್ಣನೆ ಮಾಡುತ್ತಾರೆ.

---

1. 74.1 ಭವಿಷ್ಯಪರ್ವ; 2. ನವಗ್ರಹ ಮಂತ್ರ

ಯಸ್ಯ ಬುದ್ಧಿಂ ಸಮಾಶ್ರಿತ್ಯ ಜೀವನ್ತೇ ಯಾದವಾಃ ಸುಖಮ್ ॥ (74.4 ಭವಿಷ್ಯಪರ್ವ)

ನೇತಾ ಚ ಯದುವೃಷ್ಣೀನಾಂ ಸ ತು ಧರ್ಮಪರಃ ಸದಾ ।

ಯಸ್ಯ ಬಿಭ್ಯತಿ ದೇವಾಶ್ಚ ನೀತೇಸ್ತಸ್ಯ ಮಹಾತ್ಮನಃ ॥ (74.5 ಭವಿಷ್ಯಪರ್ವ)

ದೇವತೆಗಳೂ ಯಾವ ಬೃಹಸ್ಪತ್ಯಾಚಾರ್ಯರರಿಗೆ ಹೆದರುತ್ತಾರೆ, ದೇವತೆಗಳಿಗೂ ಬುದ್ಧಿಯನ್ನು ಕೊಡುವವರು, ಮುನಿಗಳಿಗೂ ಬುದ್ಧಿಯನ್ನು ಕೊಡುವವರು ಈಗ ದೇವಾವತಾರರಾದ ಯಾದವರಿಗೂ ಮಾರ್ಗದರ್ಶಕರಾಗಿ ಇದ್ದವರು ಆ ಬೃಹಸ್ಪತ್ಯಾಚಾರ್ಯರರು ಅಂತಹ ಬೃಹಸ್ಪತ್ಯಾಚಾರ್ಯರ ಅವತಾರನಾದಂತಹ ಉದ್ಧವನನ್ನೂ ಪರಮಾತ್ಮ ಕರೆಯುತ್ತಾನೆ. ಅಲ್ಲಿ ಹೇಳುವಾಗ ಹರಿವಂಶ ಹೇಳುತ್ತದೆ

ಯಸ್ಯ ಬುದ್ಧಿಬಲಾದ್ ವಿಷ್ಣುಃ ಶಶಾಸ ಪೃಥಿವೀಂ ಸದಾ ॥ (74.6 ಭವಿಷ್ಯಪರ್ವ)

ಈ ಉದ್ಧವನ ಬುದ್ಧಿಯನ್ನು ಉಪಯೋಗಿಸಿ, ಅವನ ನೀತಿಯನ್ನೇ ತಿಳಿದುಕೊಂಡು ಪರಮಾತ್ಮ ಪೃಥ್ವಿಯ ಶಾಸನವನ್ನು ಮಾಡುತ್ತಾನೆ ಅಂತ ಈ ಉದ್ಧವನಿಂದ ಬುದ್ಧಿಯನ್ನು ಪಡೆದು ಪರಮಾತ್ಮ ಶಾಸನ ಮಾಡುವುದಲ್ಲ ಮುಂದೆ ಉದ್ಧವನೇ ಪರಮಾತ್ಮನಿಗೆ ಹೇಳುತ್ತಾನೆ ನಿನ್ನ ಅನುಗ್ರಹದಿಂದ ನಾವು ಬದುಕಿದ್ದೇವೆ ಅಂತ. ಹಾಗಾದರೆ ಈ ಉದ್ಧವನ ಬುದ್ಧಿಯನ್ನು ನಿಮಿತ್ತ ಮಾಡಿಕೊಂಡು ಈ ಬೃಹಸ್ಪತ್ಯಾಚಾರ್ಯರರ ಮೂಲಕ ಬುದ್ಧಿಯನ್ನು ವಿವೇಕವನ್ನು ಜನರಿಗೆ ಕೊಡಿಸಿ ಆ ಮೂಲಕವಾಗಿ ಜಗತ್ತಿನ ರಕ್ಷಣೆಯನ್ನು ಮಾಡುತ್ತಾನೆ ಅಂತ ಅರ್ಥವೇ ಹೊರತು ತಾನು ಅವನಿಂದ ಬುದ್ಧಿಯನ್ನು ಪಡೆಯುತ್ತಾನೆ ಅಂತ ಅರ್ಥ ಅಲ್ಲ. ಯಾದವರು, ಉದ್ಧವ ಉಗ್ರಸೇನ ಸಾತ್ಯಕಿ ಎಲ್ಲರೂ ಕುಳಿತಿದ್ದಾರೆ ಪರಮಾತ್ಮ ಆಗ ಹೇಳುತ್ತಾನೆ ನಾನು ಭೂಭಾರಹರಣ ಮಾಡುವುದಕ್ಕಾಗಿ ಅವತಾರ ಮಾಡಿ ಬಾಲ್ಯದಿಂದ ಅನೇಕ ಲೀಲೆಗಳನ್ನು ತೋರಿಸಿದ್ದೇನೆ, ಅನೇಕ ಮಹಿಮೆಗಳನ್ನೂ ತೋರಿಸಿದ್ದೇನೆ. ಪೂತನಾ ಸಂಹಾರವನ್ನು ಆರಂಭ ಮಾಡಿಕೊಂಡು ಪೂತನಾ, ಕೇಶೀಯ ಸಂಹಾರ, ಗೋವರ್ಧನೋದ್ಧಾರ, ಕಂಸ ಸಂಹಾರ,ಉಗ್ರಸೇನನ ಪಟ್ಟಾಭಿಷೇಕ, ನರಕಾಸುರನ ಸಂಹಾರ, ದ್ವಾರಕಾ ನಿರ್ಮಾಣ, ಜರಾಸಂಧನನ್ನ ಭೀಮಸೇನ ದೇವರಿಂದ ಸಂಹಾರ ಮಾಡಿಸಿದ್ದು, ಶೃಗಾಲನ ಸಂಹಾರ ಇವುಗಳನ್ನೆಲ್ಲ ಮಾಡಿದ್ದೇನೆ ಆದರೆ ಇನ್ನೊಬ್ಬ ಇದ್ದಾನೆ ಪೌಂಡ್ರಕ ವಾಸುದೇವ ಮಹಾದುಷ್ಟ. ನಮ್ಮ ಅಣ್ಣನೇ ವಸುದೇವನ ಮಗನೇ ಆದರೆ ಮಹಾದುಷ್ಟ ನಾನೇ ದೇವರು ಅಂತ ಹೇಳಿಕೊಳ್ಳುತ್ತಾನೆ, ನಾನೇ ವಾಸುದೇವ, ಕೃಷ್ಣ ವಾಸುದೇವನೇ ಅಲ್ಲ ಅಂತ ಹೇಳಿಕೊಳ್ಳುತ್ತಾನೆ. ವೇನ ಅವನೇ ಪೌಂಡ್ರಕ ವಾಸುದೇವನಾಗಿ ಅವತಾರ ಮಾಡಿದ್ದಾನೆ ಮಹಾದುಷ್ಟನಾದವನು ಅವನು ಮಾತ್ರ ದ್ವಾರಕಾ ಪಟ್ಟಣದ ಮೇಲೆ ಆಕ್ರಮಣ ಮಾಡಬೇಕು, ಯಾದವರಿಗೆ ಪೀಡೆಯನ್ನು ಕೊಡಬೇಕು ಅಂತ ಹೊಂಚು ಹಾಕಿದ್ದಾನೆ ಯಾವ ಸಂಧರ್ಭದಲ್ಲಿ ಬರುತ್ತಾನೆ ಗೊತ್ತಿಲ್ಲ. ಸರ್ವಜ್ಞನಾದ ಭಗವಂತನಿಗೆ ಗೊತ್ತು ಆದರೆ ಒಬ್ಬ ರಾಜ ಯಾವ ರೀತಿ ರಾಜ್ಯವನ್ನು ಆಳುವಾಗ ರಾಜ್ಯದ ರಕ್ಷಣೆಯ ಬಗ್ಗೆ ತನ್ನ ಕಾಳಜಿಯನ್ನು ತೋರಿಸಬೇಕು, ಯಾವ ರೀತಿ ಅದರ ವ್ಯವಸ್ಥೆಯನ್ನು ಮಾಡಬೇಕು ಬರೀ ತೋರಿಸುವುದಲ್ಲ ವ್ಯವಸ್ಥೆಯನ್ನು ಮಾಡಬೇಕು ಅನ್ನುವ ರಾಜನೀತಿಯನ್ನು ರಾಜರಿಗೆ ತಿಳಿಸುವುದಕ್ಕೆ ಪರಮಾತ್ಮ ಈ ರೀತಿ ಮಾತನಾಡುತ್ತಾ ಇದ್ದಾನೆ. ಅವನು ಹೇಳಿದ ಅವನು ಯಾವಾಗ ಮುತ್ತಿಗೆ ಹಾಕುತ್ತಾನೆ ಗೊತ್ತಿಲ್ಲ ನೀವೆಲ್ಲರೂ ಎಚ್ಚರದಿಂದ ಇರಬೇಕು, ಯಾರೂ ಮಲಗತಕ್ಕದ್ದಲ್ಲ ಯಾವಾಗಲೂ ಶಸ್ತ್ರಾಸ್ತ್ರಪಾಣಿಗಳಾಗಿ, ಅತ್ಯಂತ ಜಾಗರೂಕರಾಗಿ ದ್ವಾರಕಾ ಪಟ್ಟಣದ ರಕ್ಷಣೆ ಮಾಡಬೇಕು. ನಾನು ಕೈಲಾಸಕ್ಕೆ ಹೋಗಿ ಬರುತ್ತಾ ಇದ್ದೇನೆ ಯಾಕೆ ಅಂತ ಹೇಳಲಿಲ್ಲ.

ಅಹಂ ತು ಯಾಸ್ಯೇ ಕೈಲಾಸಂ ಕುತಶ್ಚಿತ್ ಕಾರಣಾನ್ನೃಪಾಃ ॥ (74.19 ಭವಿಷ್ಯಪರ್ವ)

ನೋಡಿ, ಅಂದರೆ ಮಕ್ಕಳನ್ನ ಪಡೆಯುವುದಕ್ಕೋಸ್ಕರ ನಾನು ತಪಶ್ಚರ್ಯ ಮಾಡುವುದಕ್ಕೆ ಹೋಗುತ್ತೇನೆ ಅಂತೇನೆ ನಿಜ ಆಗಿದ್ದರೆ ಅದನ್ನು ಹೇಳಿ ಬಿಡಬಹುದಾಗಿತ್ತು ಆದರೆ ಅದು ಕೇವಲ ಮೋಹನಕ್ಕಾಗಿ ನುಡಿದ ಮಾತು ನಿಜವಾಗಿ ತಾನು ಹೋಗುತ್ತಾ ಇರುವುದು ಮಕ್ಕಳನ್ನ ಪಡೆಯುವುದಕ್ಕೆ ಅಲ್ಲವೇ ಅಲ್ಲ 16,108 ಜನರೊಳಗೂ ಮಕ್ಕಳಾಗಿದ್ದಾರೆ. ಈಗ ಮತ್ತೇನು ಹೊಸದಾಗಿ ಮಕ್ಕಳಾಗುವುದಕ್ಕಾಗಿ ತಪಶ್ಚರ್ಯ ಮಾಡಬೇಕಾಗದದ್ದಿದೆ ಹಾಗಾದರೆ **'ಕುತಶ್ಚಿತ್ ಕಾರಣಾನ್ತ್ಪಾಃ'** ಅನ್ನುತ್ತಾನೆ ಏನೋ ಒಂದು ಬೇರೆ ಕಾರಣ ಇದೆ ಅದಕ್ಕೋಸ್ಕರ ಹೋಗುತ್ತೇನೆ. ಅದೇನೋ ಒಂದು ಕಾರಣ, ಏನು ನಾನೇ ಸರ್ವೋತ್ತಮ ಅನ್ನುವಂತಹ ತತ್ವವನ್ನ ಚೆನ್ನಾಗಿ ಎಲ್ಲರೂ ತಿಳಿಯುವುದು ಬೇಡ ಅನ್ನುವುದಕ್ಕೋಸ್ಕರ ಕಲಿಯುಗದಲ್ಲಿರುವ ಜನರಿಗೆ ನನ್ನ ಸರ್ವೋತ್ತಮತ್ವದ ತಿಳುವಳಿಕೆ ಸರಿಯಾಗಿ ಬರುವುದು ಬೇಡ. ಸಜ್ಜನರಿಗೆ ತಿಳುವಳಿಕೆ ಬರಲಿ ಎಲ್ಲರಿಗೂ ಆ ತಿಳುವಳಿಕೆ ಬರುವುದು ಬೇಡ ಅನ್ನುವ ದೃಷ್ಟಿಯಲ್ಲಿಯೇ ನಾನು ಹೋಗುತ್ತಾ ಇದ್ದದ್ದು ಅನ್ನುವುದನ್ನು ಸೂಚನೆ ಮಾಡುವುದಕ್ಕೆ ದೇವರು ಅಂದ **'ಪುತ್ರ ಕಾರಣಾತ್'** ಅನ್ನಲಿಲ್ಲ **'ಕುತಶ್ಚಿತ್ ಕಾರಣಾತ್'.** ಆ ಕಾರಣ ಒಂದು ಬೇರೇನೆ ಇದೆ ಅದಕ್ಕೋಸ್ಕರ ನಾನು ಹೋಗುತ್ತಾ ಇದ್ದೇನೆ ಆ ಸಂದರ್ಭದಲ್ಲಿ ದ್ವಾರಕೆಯನ್ನು ರಕ್ಷಣೆ ಮಾಡುವುದು ನಿಮ್ಮ ಜವಾಬ್ದಾರಿ ಒಪ್ಪಿಸಿ ಹೋಗುತ್ತಾ ಇದ್ದೇನೆ.

ಭಾರೀ ಭಾರೀ ಕಲ್ಲುಗಳನ್ನೆಲ್ಲ ಸಿದ್ಧ ಮಾಡಿ ಇಟ್ಟುಕೊಂಡು ಇರಿ ಪೌಂಡ್ರಕ ವಾಸುದೇವ ಬಂದರೆ ತಲೆಯ ಮೇಲೆ ಹಾಕಲಿಕ್ಕೆ, ಆಯುಧಗಳನ್ನು ಸಿದ್ಧ ಮಾಡಿಕೊಂಡು ಇರಿ, ಎಲ್ಲ ಒಬ್ಬ ಹಿರಿಯ ಮನೆಯಿಂದ ಹೊರಗೆ ಹೋಗಬೇಕಾದರೆ ಹೇಗೆ ಹೇಳುತ್ತಾರೆ ಅದನ್ನು ದೇವರು ಕಲಿಸುತ್ತಾನೆ ನೋಡಿ. ದ್ವಾರಕಾ ಪಟ್ಟಣ ಹೇಳಿ ಕೇಳಿ ಹೆಸರೇ ದ್ವಾರಾವತಿ ಬೇಕಾದಷ್ಟು ದ್ವಾರಗಳಿವೆ, ಎಲ್ಲಾ ದ್ವಾರಗಳನ್ನು ಬಂದು ಮಾಡಿ ಒಂದೇ ಒಂದು ದ್ವಾರವನ್ನು ತೆಗೆಯಬೇಕು ಯಾರೇ ಹೋಗುವುದಿದ್ದರೂ ಅದೇ, ದ್ವಾರದಿಂದ ಬರುವುದಿದ್ದರೂ ಅದೇ ದ್ವಾರದಿಂದ. ಈ ಪೂರ್ವ ಭಾಗದಲ್ಲಿ ಇದ್ದವರಿಗೆ ಓಡಾಡುವುದಕ್ಕೆ ಒಂದು ದ್ವಾರ ಬೇರೆ, ದಕ್ಷಿಣ ಭಾಗಕ್ಕೆ ಪಶ್ಚಿಮ ಉತ್ತರ, ಹೆಣ್ಣು ಮಕ್ಕಳಿಗೆ, ಚಿಕ್ಕ ಮಕ್ಕಳಿಗೆ, ವೃದ್ಧರಿಗೆ ಏನೇನೋ ಬೇರೆ ಬೇರೆ ಅದ್ಭುತವಾದಂತಹ ವಿಶ್ವಕರ್ಮನ ನಿರ್ಮಾಣ ಇದೆ ಆದರೆ ಈಗ ನಾನು ಇರುವಾಗ ಅದೆಲ್ಲ ಸರಿ. ನಾನು ಕೈಲಾಸಕ್ಕೆ ಹೋದಾಗ ಇಲ್ಲಿ ಎಲ್ಲ ದ್ವಾರಗಳನ್ನು ಮುಚ್ಚಿ ಒಂದು ದ್ವಾರವನ್ನು ತೆಗೆಯಬೇಕು, ಎಲ್ಲರೂ ಅಲ್ಲಿ ಕಾವಲು ನಿಲ್ಲಬೇಕು ಯಾರು ಹೋಗುತ್ತಾರೆ, ಯಾರು ಬರುತ್ತಾರೆ ಪರೀಕ್ಷೆ ಮಾಡಿ ಬಿಡಬೇಕು, ಪರೀಕ್ಷೆ ಮಾಡಿ ಒಳಗೆ ಕರೆದುಕೊಳ್ಳಬೇಕು. ಒಂದು ಮುದ್ರಿಕೆಯನ್ನು ಮಾಡಿರುತ್ತಾನೆ ಕೃಷ್ಣ ರಾಜ ಮುದ್ರಿಕೆ ಈ ರಾಜ ಮುದ್ರಿಕೆಯನ್ನು ತೋರಿಸಿದವರು ದ್ವಾರಕಾ ಪಟ್ಟಣದ ನಮ್ಮ ಪ್ರಜೆಗಳು ಅಂತ ಅರ್ಥ ಅವರನ್ನು ಮಾತ್ರ ಬಿಡಬೇಕು, ಬೇರೆಯವರು ಯಾರನ್ನು ಬಿಡತಕ್ಕದ್ದಲ್ಲ ಅಷ್ಟು ವ್ಯವಸ್ಥೆಯನ್ನು ಮಾಡುತ್ತಾನೆ.

ಮುದ್ರಯಾ ಸಹ ಗಚ್ಛನ್ತು ರಾಜ್ಞೋ ಯೇ ಗನ್ತುಮಿಪ್ಸವಃ । (74.24 ಭವಿಷ್ಯಪರ್ವ)
ನ ಚಾಮುದ್ರಃ ಪ್ರವೇಷ್ಟವ್ಯೋ ದ್ವಾರಪಾಲಸ್ಯ ಪಶ್ಯತಃ ॥ (74.25 ಭವಿಷ್ಯಪರ್ವ)

ದ್ವಾರಪಾಲಕ, ಮುದ್ರಿಕೆಯನ್ನು ನೋಡಿ ಬಿಡುವ ವ್ಯವಸ್ಥೆ ಮಾಡಿ ಮುದ್ರೆ ಇದ್ದವರನ್ನು ಮಾತ್ರ ಒಳಗೆ ಬಿಡಬೇಕು, ಮುದ್ರೆ ಇಲ್ಲದೇ ಇದ್ದವರನ್ನ ದ್ವಾರಕಾ ಪಟ್ಟಣದಲ್ಲಿ ಪ್ರವೇಶ ಮಾಡಿಸಬಾರದು ಅಂತ ಕೃಷ್ಣ ಪರಮಾತ್ಮ ಹೇಳುತ್ತಾನೆ. ಶ್ರೀಕೃಷ್ಣ ಪರಮಾತ್ಮನ ಮಾತನ್ನು ಚೆನ್ನಾಗಿ ಗಮನಿಸಿ ಮುದ್ರೆ ಇದ್ದವರು ಮಾತ್ರ ದ್ವಾರಕಾ ಪಟ್ಟಣದಲ್ಲಿ ಪ್ರವೇಶ ಮಾಡಬೇಕು, ಮುದ್ರೆ ಇಲ್ಲದವರು ದ್ವಾರಕಾ ಪಟ್ಟಣದಲ್ಲಿ ಪ್ರವೇಶ ಮಾಡಬಾರದು ಅಂತ ಇದು ಒಬ್ಬ ರಾಜ ತನ್ನ ರಾಜ್ಯದ ರಕ್ಷಣೆಗೆ ಮಾಡಬೇಕಾದ ವ್ಯವಸ್ಥೆ ಅದನ್ನು ಪರಮಾತ್ಮ ಕಲಿಸಿಕೊಡುತ್ತಾನೆ. ದೇವರು ಏನು ಕಲಿಸಿ ಕೊಟ್ಟಿಲ್ಲ ಹೇಳಿ ತಂದೆಯಾಗಿ ಮಕ್ಕಳನ್ನು ಹೇಗೆ ಬೆಳೆಸಬೇಕು ಕಲಿಸುತ್ತಾನೆ, ರಾಜನಾಗಿ ರಾಜ್ಯವನ್ನು ಹೇಗೆ ರಕ್ಷಣೆ ಮಾಡಬೇಕು

ಕಲಿಸುತ್ತಾನೆ, ಗಂಡನಾಗಿ ಹೆಂಡತಿಯ ಇಚ್ಛೆಯನ್ನು ಹೇಗೆ ಪೂರ್ಣ ಮಾಡಬೇಕು ಅದನ್ನು ಕಲಿಸುತ್ತಾನೆ. ತಾನು ಸರ್ವೋತ್ತಮನಾಗಿದ್ದರೂ ಕೂಡ ಆ ಸರ್ವೋತ್ತಮತ್ವದ ಜ್ಞಾನ ಯಾರಿಗೆ ಮಾಡಿಸಿಕೊಡಬೇಕೋ ಅವರಿಗೆ ಮಾಡಿಸಿ ಕೊಡಬೇಕು, ಯಾರಿಗೆ ಮಾಡಿಸಿಕೊಡಬಾರದೋ ಅವರಿಗೆ ಮಾಡಿಸಿಕೊಡಬಾರದು, ಎಲ್ಲಾ ತಥ್ಯಗಳನ್ನು ಎಲ್ಲಾ ವಿಷಯಗಳನ್ನು ಎಲ್ಲರಿಗೂ ಹೇಳಬಾರದು ಅನ್ನುವುದನ್ನು ತಿಳಿಸಿಕೊಡುತ್ತಾನೆ.

ಇವತ್ತು ನಮಗೆಲ್ಲ ಸಂತೋಷದ ಸಂಗತಿ, ಹೆಮ್ಮೆಯ ಸಂಗತಿ ಅಂದರೆ ಈ ಶ್ರೀಕೃಷ್ಣ ಪರಮಾತ್ಮ ಮುದ್ರೆ ಇದ್ದವರಿಗೆ ಮಾತ್ರ ಒಳಗೆ ಪ್ರವೇಶ ಕೊಡುತ್ತಿದ್ದ ಇಲ್ಲದಿದ್ದವರಿಗೆ ಇಲ್ಲ ಅನ್ನುವ ಹರಿವಂಶದ ಈ ವಚನ, ಈ ನುಡಿ ಅತ್ಯಂತ ಸತ್ಯ ಪ್ರಾಮಾಣಿಕ ಅನ್ನುವುದು ಇವತ್ತಿನ ಸಂಶೋಧನೆಯಿಂದ ಸಿದ್ಧವಾಗಿದೆ. ನಮ್ಮವರೇ ಆಗಿರುವಂತಹ ಶ್ರೀಯುತ ಎಸ್ ಆರ್. ರಾವ್ ಅನ್ನುವಂಥವರು ಅತ್ಯಂತ ಹಿರಿಯ ಸಂಶೋಧಕರು, ದ್ವಾರಕಾ ಪಟ್ಟಣದಲ್ಲಿ ಸರಕಾರದ ವಿಶೇಷ ಸಹಾಯದಿಂದ ಸಂಶೋಧನೆಯನ್ನು ಮಾಡಿ, ಆರ್ಕೀಯಾಲಾಜಿಯ ವತಿಯಿಂದ ಸಮುದ್ರದ ಆಳದಲ್ಲಿ ಹೋಗಿ, ದ್ವಾರಕಾ ಪಟ್ಟಣದ ಸಮುದ್ರದ ಆಳದೊಳಗಿರುವ ಎಲ್ಲ ಅವಶೇಷಗಳನ್ನೆಲ್ಲ ಶೋಧನೆ ಮಾಡಿ ತೆಗೆದರೆ ಈ ಮುದ್ರೆಗಳು ಸಿಕ್ಕಿವೆ. ಯಾವ ಮುದ್ರೆಗಳನ್ನು ಶ್ರೀಕೃಷ್ಣ ಪರಮಾತ್ಮ ಒಳಗೆ ಹೋಗುವಾಗ ಬರುವಾಗ ಉಪಯೋಗಿಸಬೇಕು ಅಂತ ಕರಾರು ಮಾಡಿದ್ದ ಆ ಮುದ್ರೆಗಳು ಇವತ್ತಿಗೂ ಸಮುದ್ರದೊಳಗೆ ಸಿಕ್ಕದ್ದು ಮ್ಯೂಸಿಯಂದಲ್ಲಿ ನೋಡಲಿಕ್ಕೆ ಸಿಗುತ್ತದೆ ನಿಮಗೆ. ಇತಿಹಾಸ ಪುರಾಣಗಳಲ್ಲಿ ಬರುವ ಕಥೆಗಳೆಲ್ಲ ಸುಳ್ಳು ಅಂತ ಹೇಳುವಂತಹ, ಆಕ್ಷೇಪ ಮಾಡುವಂತಹ ಇವತ್ತಿನ ನಾಸ್ತಿಕರಿಗೆ ಸ್ಪಷ್ಟವಾಗಿ ಉತ್ತರವನ್ನು ಕೊಡುವಂತೆ ಶ್ರೀಕೃಷ್ಣ ಪರಮಾತ್ಮ ದ್ವಾರಕೆಯಲ್ಲಿ ಉಪಯೋಗಿಸುವ ಅನೇಕ ಬೇರೆ ಬೇರೆ ಪಾತ್ರೆಗಳು, ಪದಾರ್ಥಗಳು, ನಾನಾ ವಿಧವಾದ ವಸ್ತುಗಳೆಲ್ಲ ಸಿಕ್ಕಿವೆ ಅದರ ಜೊತೆಗೆ ಮುಖ್ಯವಾಗಿ ಈ ಮುದ್ರೆಗಳು ಸಿಕ್ಕಿವೆ. ಹೇಗೆ ಸಾಕ್ಷಾತ್ ಪ್ರಭು ಶ್ರೀರಾಮಚಂದ್ರ ಲಕ್ಷ ಲಕ್ಷ ವರ್ಷಗಳ ಹಿಂದೆ ಮಾಡಿದಂತಹ ಸೇತುವೆ ಇವತ್ತಿಗೂ ನಮಗೆ ನೋಡುವುದಕ್ಕೆ ಸಿಗುತ್ತೆ ಆ ಸಮುದ್ರದ ಆಳದೊಳಗೆ ಅದೆಲ್ಲ ನೀವು ನೋಡಿದ್ದೀರಿ ಸೆಟಲೈಟಿನಿಂದ ಆ ಸೇತುವೆಯ ಚಿತ್ರವನ್ನು ಜಗತ್ತಿಗೆಲ್ಲ ತೋರಿಸುವುದಕ್ಕೆ ಅವಕಾಶವನ್ನು ಮಾಡಿಕೊಟ್ಟದ್ದನ್ನು ನೀವು ಗಮನಿಸಿದ್ದೀರಿ. ಎಂತಹ ಸತ್ಯ ರಾಮಾಯಣ, ಎಂತಹ ಪರಮ ಸತ್ಯವಾದದ್ದು ಮಹಾಭಾರತ,ಭಾಗವತ ಅಲ್ಲಿ ಬಂದಂತಹ ಕಥೆಗಳೆಲ್ಲ ಇವತ್ತು ಐತಿಹಾಸಿಕವಾಗಿ ಸತ್ಯ ಅಂತ ನಮಗೆ ದಾಖಲೆ ಆಗುತ್ತಾ ಇರುವುದು ಇದು ಅತ್ಯಂತ ಸಂತೋಷದ ಸಂಗತಿ. ಇದನ್ನು ಎಲ್ಲ ಸನಾತನ ಧರ್ಮದ ಪ್ರತಿಯೊಬ್ಬ ವ್ಯಕ್ತಿಗಳೂ ಕೂಡ ಅತ್ಯಂತ ಅಭಿಮಾನದಿಂದ ತಿಳಿಯಬೇಕು ಬಾಗಬೇಕು ನಮಿಸಬೇಕು ಶ್ರೀಕೃಷ್ಣ ಪರಮಾತ್ಮನ ಪಾದಾರವಿಂದಗಳಿಗೆ. ಸರಿ, ಇಷ್ಟೆಲ್ಲಾ ಆಜ್ಞೆಯನ್ನು ಮಾಡಿದ್ದಾನೆ ಪರಮಾತ್ಮ ಆಮೇಲೆ ಹೇಳಿದ ಆಟ ಆಡಬೇಡಿರಿ ಯಾರೂ, ನಾನು ಇದ್ದಾಗ ಆಟ ಆಡಿರಿ ಬೇಕಾದಷ್ಟು ಆಟ ಆಡಿರಿ ಬೇಟೆ ಆಡಲಿಕ್ಕೆ ಯಾರೂ ಹೋಗತಕ್ಕದ್ದಲ್ಲ.

ಮೃಗಯಾ ನಾತ್ರ ಕರ್ತವ್ಯಾ ನ ಚ ಕ್ರೀಡಾಬಹಿಃ ಪುರಾತ್ । (74.26 ಭವಿಷ್ಯಪರ್ವ)

ಆಟ ಆಡುವುದಾಗಿದ್ದರೆ ಬಾಗಿಲು ಹಾಕಿಕೊಂಡು ಆಟ ಆಡಿರಿ ಅಂಗಳದಲ್ಲಿ, ಊರು ಹೊರಗೆ ಯಾರು ಆಟ ಆಡತಕ್ಕದ್ದಲ್ಲ. ಸರ್ವತ್ರ ಇದ್ದಾನೆ ಪರಮಾತ್ಮ ನಿಮಗೆ ಕಾಣುವಂತೆ ಪ್ರತ್ಯಕ್ಷವಾಗಿ ನಾನಿದ್ದಾಗ ನಿಮಗೆ ಭಯ ಇಲ್ಲ, ಎಲ್ಲಿಯಾದರೂ ಆಟ ಆಡಿರಿ, ಸಮುದ್ರದೊಳಗೂ ಆಟ ಆಡಿರಿ ತಪ್ಪಿಲ್ಲ ಆದರೆ ನಾನು ಬೇರೆ ಊರಿಗೆ ಹೋದಾಗ ಮಾತ್ರ ಊರು ಹೊರಗೆ ಆಟ ಆಡತಕ್ಕದ್ದಲ್ಲ.

ಸಾತ್ಯಕೇ ಶೃಣು ಮದ್ವಾಕ್ಯಂ ಯತ್ತೋ ಭವ ಯುಧಾಂ ವರ । (75.1 ಭವಿಷ್ಯಪರ್ವ)

ಸಾತ್ಯಕಿಯನ್ನು ಕರೆದ ಸಾಮಾನ್ಯವಾಗಿ ಎಲ್ಲರಿಗೂ ನಾನು ಹೇಳಿದೆ ಎಚ್ಚರದಿಂದ ಇರಿ ಅಂತ ಆದರೆ ನಿನಗೆ ವಿಶೇಷವಾಗಿ ಹೇಳುತ್ತ ಇದ್ದೇನೆ ನೀನಂತೂ ಮಲಗತಕ್ಕದ್ದೇ ಅಲ್ಲ. ನಿನ್ನ ಗುರು ಅರ್ಜುನ ಅವನಿಗೆ ಬುಡಾಕೇಶ ಅಂತ ಹೆಸರು ನಿದ್ರೆಯನ್ನು ಗೆದ್ದವ ಅಂತ ಅರ್ಥ ಬುಡಾಕೇಶ ಅಂದರೆ ನಿದ್ರೆಯನ್ನ ಗೆದ್ದ ಗುರುವಿನ ಶಿಷ್ಯ ನೀನು ಅದಕ್ಕಾಗಿ ನಿದ್ರೆಯನ್ನ ಗೆಲ್ಲುವ ಅಭ್ಯಾಸ ನಿನಗೆ ಚೆನ್ನಾಗಿರುತ್ತೆ. ಗುರು ಧನುರ್ವಿದ್ಯೆಯನ್ನು ಕಲಿಸುವುದರ ಜೊತೆಗೆ ಈ ನಿದ್ರಾ ಗೆಲ್ಲುವ ವಿದ್ಯೆಯನ್ನೂ ಕಲಿಸಿರಬಹುದು ಪ್ರಾಯಃ ನಿನಗೆ ಅದಕ್ಕಾಗಿ ನಿನಗೆ ಹೇಳುತ್ತೇನೆ.

ನ ಚ ನಿದ್ರಾ ತ್ವಯಾ ಕಾರ್ಯಾ ರಾತ್ರೌ ಯದುವೃಷ ಪ್ರಭೋ ॥ (75.2 ಭವಿಷ್ಯಪರ್ವ)

ಸರಿ ನಿದ್ರೆ ಮಾಡುವುದಿಲ್ಲ ಯಾವಾಗಲೂ ಎಚ್ಚರದಿಂದ ಇರುತ್ತೇನೆ ನಿನ್ನ ಆಜ್ಞೆ ಅಂದ. ಇನ್ನೊಂದು ಮಾತು ಅಂದ ಕೃಷ್ಣ ಆಜ್ಞೆ ಆಗಬೇಕು ಅನ್ನುತ್ತಾನೆ ಸಾತ್ಯಕಿ, ಏನು ಪಾಠ ಪ್ರವಚನ ಮಾಡಿಕೊಳ್ಳುತ್ತ ಕುಳಿತುಕೊಳ್ಳಬೇಡ ನೀನು, ಧ್ಯಾನ ಮಾತ್ರ ಮಾಡು ಮನಸ್ಸಿನಿಂದ. ಅಂದರೆ ಅರ್ಥ ಮಾಡಿಕೊಳ್ಳಿ ಯಾದವರು ನಿರಂತರವಾಗಿ ಶಾಸ್ತ್ರ ಗ್ರಂಥಗಳ ಪಾಠ ಪ್ರವಚನ, ವೇದಗಳ ಅಧ್ಯಯನ, ವಾದ ವಿವಾದಗಳು, ಪ್ರತಿವಾದಿಗಳ ಜೊತೆಗೆ ವಾಕ್ಯಾರ್ಥ ಮಾಡಿ ವಿಷ್ಣು ಸರ್ವೋತ್ತಮತ್ವವನ್ನು ಸ್ಥಾಪನೆ ಮಾಡುತ್ತಾ ಇದ್ದರು ಯಾದವರೆಲ್ಲ ದೇವತೆಗಳು. ಏನು ಹೇಳುತ್ತಾನೆ ನೋಡಿ ಕೃಷ್ಣ.

ನ ಚ ವ್ಯಾಖ್ಯಾ ತ್ವಯಾ ಕಾರ್ಯೋ ಶಾಸ್ತ್ರಾಣಾಂ ಶಾಸ್ತ್ರತತ್ಪರ । (75.3 ಭವಿಷ್ಯಪರ್ವ)

ಈಗ ಪಾಠ ಹೇಳುತ್ತಾ ಕೂಡಬೇಡ ಅನಾಧ್ಯಾಯ ನಾನು ಬರುವವರೆಗೆ ಆಮೇಲೆ ಪಾಠ ಹೇಳು ನಿನಗೆ ಶಾಸ್ತ್ರದೊಳಗೆ ಆಸಕ್ತಿ ಬಹಳ ಇದೆ. ಶಾಸ್ತ್ರ ಪುಸ್ತಕ ಬಿಟ್ಟು ಒಂದು ಕ್ಷಣ ಇರಬೇಕು ಅಂತ ಕೆಲವರು ಶಾಸ್ತ್ರ ಪುಸ್ತಕ ಒಂದು ಕ್ಷಣ ಮುಟ್ಟಬಾರದು ಅಂತ ಸಂಕಲ್ಪ ಮಾಡಿರುತ್ತಾರೆ, ಶಾಸ್ತ್ರ ಪುಸ್ತಕವನ್ನು ಬಿಟ್ಟು ಇರುವುದಕ್ಕೆ ನಿನಗೆ ಮನಸ್ಸಿಲ್ಲ ನನಗೆ ಗೊತ್ತು **'ಶಾಸ್ತ್ರತತ್ಪರ'** ಆದರೆ ಈಗ ಮಾತ್ರ ಬೇಡ.

ನ ಚ ವಾದಸ್ತ್ವಯಾ ಕಾರ್ಯೋ ವಾದಿಭಿಃ ಸಹ ವೃಷ್ಣಿಪ । (75.3 ಭವಿಷ್ಯಪರ್ವ)

ಸರಿ ಪಾಠ ಪ್ರವಚನ ಇಲ್ಲ ಯಾರಾದರೂ ಪ್ರತಿವಾದಿಗಳು ಬಂದರೆ ವಾಕ್ಯಾರ್ಥ ಎಲ್ಲ ಅದನ್ನೆಲ್ಲ ಮಾಡು ನಾನಿದ್ದಾಗ ಮಾಡು. ಪ್ರತಿವಾದಿಗಳು ಬಂದರೆ ಅವರಿಗೆ ಮುದ್ದತ್ತು ಕೊಡು ಮತ್ತೊಂದು ದಿನ ವಾದ ಮಾಡುತ್ತೇನೆ ಅಂತ ಹೇಳು ಆದರೆ ಈಗ ವಾದ ಮಾಡಬೇಡ ಯಾಕೆ ಅಂದರೆ ಈ ಪೌಂಡ್ರಕ ವಾಸುದೇವ ಬಂದು ಏನಾದರೂ ದ್ವಾರಕೆಯ ಮೇಲೆ ಆಕ್ರಮಣ ಮಾಡಿದರೆ ಎಲ್ಲರೂ ಉದ್ಧಸ್ತ್ರರಾಗಿ ಹೋಗುತ್ತಾರೆ ಆಮೇಲೆ ವಾದ ಏನು ಶಾಸ್ತ್ರ ಏನು. ಅದಕ್ಕೋಸ್ಕರ ಲೋಕ ನೀತಿಯನ್ನು ಅನುಸರಿಸಿ ಈಗ ನೀನು ವಾದ ಮಾಡಬೇಡ, ಪ್ರವಚನ ಮಾಡಬೇಡ, ಧ್ಯಾನ ಮಾಡು, ಮನಸ್ಸಿನಲ್ಲಿ ನನ್ನ ಸ್ಮರಣೆ ಮಾಡು ಅದೇ ದೊಡ್ಡ ಸಾಧನೆ ನಿನಗೆ.

ತ್ವಂ ಹಿ ಯೋದ್ಧಾ ಬಲೀ ಜ್ಞಾತಾ ಧನುರ್ವೇದಾಖ್ಯಿವೇದವಿತ್ । (75.4 ಭವಿಷ್ಯಪರ್ವ)
ತಥಾ ಕುರು ಯಥಾ ವೀರ ನೋಪಹಾಸ್ಯಾ ಭವೇದಿಯಮ್ ॥ (75.4 ಭವಿಷ್ಯಪರ್ವ)

ಇಂತಹ ದೊಡ್ಡ ದ್ವಾರಕಾ ಪಟ್ಟಣ ಇದು ಉಪಹಾಸಕ್ಕೆ ಈಡಾಗಬಾರದು ಇದು ನಿನ್ನ ಜವಾಬ್ದಾರಿ. ಸಾಷ್ಟಾಂಗ ಪ್ರಣಾಮ ಮಾಡಿ ಹೇಳುತ್ತಾನೆ ನಿನ್ನ ಆಜ್ಞೆ ಸ್ವಾಮಿ ನೀನೇ ಹೇಳಿದ್ದಿ ಅಂತ ನಾವು ಪಾಠ ಪ್ರವಚನ ಮಾಡುತ್ತಾ ಇದ್ದಿವಿ ಆದರೆ ನೀನು ಈ ಸೇವೆಯನ್ನು ಮಾಡು ಅಂದರೆ ಅದನ್ನೇ ಮಾಡುತ್ತೇನೆ.

ಭೃತ್ಯವತ್ ಪ್ರಚರಿಷ್ಯಾಮಿ ಕಾಮಪಾಲಸ್ಯ ಮಾಧವ ॥ (75.6 ಭವಿಷ್ಯಪರ್ವ)

ಕಾಮಪಾಲ ಅಂದರೆ ಬಲರಾಮ ದೇವರು ಬಲರಾಮ ದೇವರ ದಾಸಾನುದಾಸನಾಗಿ ಇರುತ್ತೇನೆ ಅವನೇನು ಹೇಳುತ್ತಾನೆ ಬಲರಾಮ ಅದನ್ನು ಅದನ್ನು ಕೇಳುತ್ತೇನೆ ಅಷ್ಟೇ ಮುಗಿದು ಹೋಯಿತು ನಿನ್ನ ಅನುಗ್ರಹ ಮಾತ್ರ ಇರಬೇಕು ನನ್ನ ಬಲದಿಂದ ಏನು ಆಗುವುದಿಲ್ಲ. ಹಿಂದೆ ಕೇಳಿದ್ದೀರಿ ಕೃಷ್ಣಪಕ್ಷಾಭಿಮಾನಿ ದೇವತೆ ಇವನು ಸಾತ್ಯಕಿ ಅವನಲ್ಲಿ ಸಾಕ್ಷಾತ್ ಪರಮಾತ್ಮನ ಆವೇಶ, ಗರುಡ ದೇವರ ಆವೇಶ, ಸಂಹ ಎಂಬ ಮರುತ್ತಿನ ಆವೇಶ ಇದೆ ಸ್ವಯಂ ಕೃಷ್ಣಪಕ್ಷಾಭಿಮಾನಿ ದೇವತೆ, ಸುದರ್ಶನ ಚಕ್ರದ ಆವೇಶ ಇದೆ, ಚಕ್ರಾಭಿಮಾನಿಯಾದಂತಹ ಪ್ರದ್ಯುಮ್ನನ ಆವೇಶ ಇದೆ ಸಾತ್ಯಕಿಯಲ್ಲಿ ಹೀಗೆ ಪಂಚರೂಪಿ ಅವನು, ಸ್ವಯಂ ಕೃಷ್ಣಪಕ್ಷಾಭಿಮಾನಿ ದೇವತೆ ಇನ್ನು ನಾಲ್ಕು ಜನರ ಆವೇಶ ಹೀಗಾಗಿ ಪಾಠ ಪ್ರವಚನ ಮಾಡದೆ ಹೇಗೆ ಇರುತ್ತಾನೆ ಅವನು.

ಪ್ರಸಾದಸ್ತವ ಗೋವಿನ್ದ ಯದಿ ಸ್ಯಾನ್ಮಯಿ ಮಾಧವ ।
ಕಿಂ ನಾಮ ಮೇ ಚ ದುಃಸಾಧ್ಯಂ ಶತ್ರೂಣಾಂ ನಿಗ್ರಹೇ ರಣೇ ॥ (75.7 ಭವಿಷ್ಯಪರ್ವ)

ನಿನ್ನ ಅನುಗ್ರಹ ಪ್ರಸಾದ ಒಂದಿದ್ದರೆ ಸಾಕು ಎಂತಹ ಶತ್ರುಗಳು ಬಂದರು ನಾನು ಸೋಲಿಸುತ್ತೇನೆ ಅದು ಮಾತ್ರ ಇರಬೇಕು. ಇಂದ್ರ ಬರಲಿ, ಯಮ ಬರಲಿ, ಕುಬೇರ ಬರಲಿ ಯಾರೇ ಬರಲಿ ಅವರನ್ನು ನಾನು ನಿನ್ನ ಅನುಗ್ರಹ ಇದ್ದರೆ ಸೋಲಿಸುತ್ತೇನೆ ಇಲ್ಲ ಅಂದರೆ ನನಗೆ ಹುಲ್ಲುಕಡ್ಡಿಯನ್ನು ಅಲ್ಲಾಡಿಸುಲಿಕ್ಕೂ ನನಗೆ ಆಗುವುದಿಲ್ಲ, ಸರಿ, ಸಾತ್ಯಕಿ ನಿನ್ನ ಕೆಲಸ ನೀನು ನೋಡಿಕೋ ಅಂದ.

ಶೃಣೂದ್ಧವ ತ್ವಂ ವಾಕ್ಯಂ ಮೇ ಕುರ್ಯಾಸ್ತ್ವೇತತ್ ಪ್ರಯತ್ನವಾನ್ । (75.10 ಭವಿಷ್ಯಪರ್ವ)
ಯತ್ತೋ ಭವ ಸದಾ ತಾತ ಕುರು ಸಾಹಾಯ್ಯಮತ್ರ ನಃ ॥ (75.11 ಭವಿಷ್ಯಪರ್ವ)

ಉದ್ಧವನನ್ನು ಕರೆದ ಅತ್ಯಂತ ಜಾಗರೂಕನಾಗಿ ಇದರ ರಕ್ಷಣೆಯನ್ನು ಮಾಡಬೇಕು ನೀನು ದ್ವಾರಕಾ ಪಟ್ಟಣದ ರಕ್ಷಣೆಯನ್ನ, ನಿನಗೆ ಹೇಳುವುದಕ್ಕೆ ಯಾಕೋ ನನಗೆ ಸ್ವಲ್ಪ ನಾಚಿಕೆ ಆಗುತ್ತಾ ಇದೆ. ನೀನು ಹಿರಿಯ ವೃದ್ಧ ಅಂತಹ ನಿನಗೆ ನಾನೇನು ಹೇಳುವುದು ಚಿಕ್ಕವನಾಗಿ ಅಂತ ದೇವನು ಅನ್ನುತ್ತಾನೆ ಮತ್ತೆ ಮೋಹಕವಾದ ಮಾತುಗಳನ್ನು ಆಡುತ್ತಾನೆ.

ತ್ವಂ ಹಿ ನೇತಾ ಸಮಸ್ತಸ್ಯ ವಿದ್ಯಾಪಾರಸ್ಯ ಸರ್ವತಃ । (75.12 ಭವಿಷ್ಯಪರ್ವ)

ನೋಡಿ ನೀನು ಮಹಾ ವಿದ್ಯಾವಂತ, ಎಲ್ಲರಿಗೂ ವಿದ್ಯೆಯನ್ನು ಉಪದೇಶ ಮಾಡುವವ ಅಂತಹ ನಿನಗೆ ನಾನು ಏನು ಮತ್ತೆ ಉಪದೇಶ ಮಾಡುವುದು.

ಕೋ ನು ಶಕ್ನ್ಯತಿ ಮೇಧಾವೀ ವಕ್ತುಂ ವಿದ್ಯಾವತಃ ಪುರಃ ॥ (75.12 ಭವಿಷ್ಯಪರ್ವ)

ನಿನ್ನಂತಹ ವಿದ್ಯಾವಂತನ ಮುಂದೆ ಯಾರು ಮಾತನಾಡುವುದಕ್ಕೆ ಸಾಧ್ಯ ಅಂತ ಹೇಳಿದಾಗ, ಉದ್ಧವ ಅನ್ನುತ್ತಾನೆ ಯಾಕಪ್ಪ ಪರಮಾತ್ಮ, ಹೀಗೆ ನಾಟಕ ಮಾಡುತ್ತಿದ್ದೀ, ನಾನೇನು ವಿದ್ಯಾವಂತ ನಿನ್ನ ಮುಂದೆ.

ಅಹೋ ಪ್ರಸನ್ನತಾ ಮಹ್ಯಂ ಕಿಂತು ಪ್ರೀತಿರಿಯಂ ತವ । (75.14 ಭವಿಷ್ಯಪರ್ವ)

ಜಾನಾಮ್ಯಹಂ ಜಗನ್ನಾಥ ಪ್ರಸಾದಸೈ್ಯಷ ವಿಸ್ತರಃ । (75.15 ಭವಿಷ್ಯಪರ್ವ)

ನನ್ನ ಮೇಲೆ ಅತ್ಯಂತ ಪ್ರೀತಿಯನ್ನು ಮಾಡುತ್ತೀಯಾ ನೀನು, ಅನುಗ್ರಹವನ್ನು ಮಾಡುತ್ತೀಯಾ ಆ ಅನುಗ್ರಹವನ್ನ ಮಾಡುವುದನ್ನೆ, ಪ್ರೀತಿ ಮಾಡುವದನ್ನೆ ಈ ಭಾಷೆಯಲ್ಲಿ ಅಭಿವ್ಯಕ್ತಿ ಮಾಡುತ್ತಾ ಇದ್ದೀಯಾ ಅಷ್ಟೇ. ಚಿಕ್ಕ ಮಕ್ಕಳಿಗೆ ತಂದೆ ತಾಯಿಗಳು ಹಿರಿಯರು ನೀನೇ ಬಹಳ ಬುದ್ಧಿವಂತ ಮಹಾನುಭಾವ ಅಂತ ವರ್ಣನೆ ಮಾಡಿ ಪ್ರೋತ್ಸಾಹನೆ ಕೊಡುವಂತೆ ನನಗೆ ಮಾಡುತ್ತಾ ಇದ್ದೀ ಅನ್ನುವುದು ನನಗೆ ಚೆನ್ನಾಗಿ ಗೊತ್ತು.

ತ್ವಂ ಹಿ ಸರ್ವಸ್ಯ ಜಗತಃ ಕರ್ತಾ ಹರ್ತಾ ಪ್ರಧಾನತಃ । (75.16 ಭವಿಷ್ಯಪರ್ವ)

ಸಕಲ ಜಗತ್ತಿನ ಸೃಷ್ಟ್ಯಾದಿ ಕರ್ತುವಾದವನು ನೀನು, ಧ್ಯಾನ ಮಾಡಿಸುವವನೂ ನೀನೇ, ಧ್ಯೇಯನೂ ನೀನೇ ಆ ಧ್ಯಾನವೆಂಬ ಆ ಜ್ಞಾನದೊಳಗೆ ಮಾನಸವಾಸನಮಯ ವಸ್ತುತ್ವವಲೋಕನ ರೂಪವಾದ ಧ್ಯಾನದೊಳಗೆ ಅಂತರ್ಯಾಮಿಯಾಗಿ ಇದ್ದವನು ನೀನೇ.

ಧ್ಯಾತಾ ಧ್ಯಾನಮಯೋ ಧ್ಯೇಯ ಇತಿ ಬ್ರಹ್ಮವಿದೋ ವಿದುಃ । (75.17 ಭವಿಷ್ಯಪರ್ವ)

ಅದರರ್ಥ ಸಾಧಕರೊಳಗೂ ನೀನಿದ್ದಿ, ಸಾಧನೆಯನ್ನೂ ನೀನೇ ಮಾಡಿಸುತ್ತೀಯಾ ಕೊನೆಗೇ ಗಮ್ಯನಾದ ಗುರಿಯೂ ನೀನೇ ಅಂತಹ ನೀನು ನನ್ನಿಂದ ಏನು ಅಪೇಕ್ಷೆ ಪಡುತ್ತೀಯಪ್ಪ ಆದರೂ ನಿನ್ನ ಆಜ್ಞೆ ನಾನು ಮಾಡುತ್ತೇನೆ ಸಾಮ,ದಾನ, ಭೇದ ಮತ್ತು ದಂಡ ಈ ಕ್ರಮದೊಳಗೆ ನಾನು ಇಲ್ಲಿ ರಾಜನೀತಿಗೆ ತಕ್ಕಂತೆ ಯಾವಾಗ ಏನು ವ್ಯವಸ್ಥೆ ಮಾಡಬೇಕೋ ಅದನ್ನು ನೋಡಿಕೊಂಡು ನಾನು ಮಾಡುತ್ತೇನೆ ನಿನ್ನ ಅನುಗ್ರಹ ಇರಲಿ ಸಾಕು ಅಂತ ಉದ್ಧವ ಹೇಳಿದ್ದಾನೆ. ಆಮೇಲೆ ಬಲರಾಮ ದೇವರಿಗೆ, ಉಗ್ರಸೇನನಿಗೆ ಕರೆದು ಮತ್ತೆ ಕೊನೆಗೆ ಪರಮಾತ್ಮ ಹೇಳಿದ ಆಗ ಬಲರಾಮ ದೇವರು ಹೇಳಿದರು

ಬಾಢಮಿತ್ಯಬ್ರವೀದ್ ರಾಮಃ ಕೃಷ್ಣಂ ವೃಷ್ಣಿಕುಲೋದ್ಭವಮ್ ॥ (75.29 ಭವಿಷ್ಯಪರ್ವ)

ನೀನು ಗದಾಪಾಣಿಯಾಗಿ ಯಾವಾಗಲೂ ದ್ವಾರಕಾ ಪಟ್ಟಣದ ರಕ್ಷಣೆಗಾಗಿ ನೋಡಿಕೊಂಡು ಇರಬೇಕು ಅಂತ ಬಲರಾಮ ದೇವರಿಗೂ ಪರಮಾತ್ಮ ಹೇಳಿದ್ದಾನೆ ಆಗಲಿ ಅಂತ ಬಲರಾಮ ದೇವರು ಶ್ರೀಕೃಷ್ಣ ಪರಮಾತ್ಮನ ಮಾತನ್ನು ಒಪ್ಪಿದ್ದಾರೆ.

ಈ ಕಡೆಗೆ ಶ್ರೀಕೃಷ್ಣ ಪರಮಾತ್ಮ ತಾನು ಕೈಲಾಸಕ್ಕೆ ಹೊರಡಬೇಕು ಅಂತ ಸಂಕಲ್ಪ ಮಾಡಿದ ಗರುಡನನ್ನ ಚಿಂತನ ಮಾಡಿದ. ಗರುಡನನ್ನ ಚಿಂತನ ಮಾಡಿದ್ದೇ ತಡ, ಗರುಡ ಎದುರಿಗೆ ಬಂದಿದ್ದಾನೆ.

ತತಃ ಸ ಭಗವಾಂಸ್ತಾರ್ಕ್ಷ್ಯೋ ವೇದರಾಶಿರಿತಿ ಸ್ಮೃತಃ । (76.2 ಭವಿಷ್ಯಪರ್ವ)

ಎಂತಹ ಗರುಡ ಸಕಲ ವೇದಾಭಿಮಾನಿಯಾದ ಗರುಡ ಯಾವ ಗರುಡನನ್ನ

ಛಂದೋಮಯೇ ನ ಗರುಡೇನ ಸಮುಹ್ಯಮಾನಃ । (08.3.29 ಭಾಗವತ)

ಅನ್ನುತ್ತಾರೆ ಅಂತಹ ಪರಮಾತ್ಮನ ವಾಹನನಾದ ಗರುಡ ಇವನು ಸಕಲ ವೇದಗಳಿಗೆ ಅಭಿಮಾನಿ ಆದದ್ದರಿಂದ ಅವನನ್ನ ವೇದರಾಶಿ ಅಂತ ಕರೆಯುತ್ತಾರೆ ಅಂತೆ. ನೋಡಿ, ಎಷ್ಟು ವಿಚಿತ್ರವಾಗಿದೆ ಅಂದರೆ ಭಗವಂತನನ್ನು ನಮ್ಮ ತನಕ ತಂದು ತಿಳಿಸುವ ಗ್ರಂಥಗಳು ವೇದಗಳು ಹೀಗಾಗಿ ವೇದಗಳು ಒಂದರ್ಥದಲ್ಲಿ ದೇವರ ವಾಹನಗಳು. ದೇವರನ್ನು ನಮ್ಮ ಮನಸ್ಸಿಗೆ ತಂದು ಒಪ್ಪಿಸುವ ಮಾಧ್ಯಮಗಳೇ ವೇದಗಳು ಹಾಗಾಗಿ ವೇದಗಳು ಒಂದರ್ಥದಲ್ಲಿ ದೇವರ ವಾಹನಗಳು ಅಂತಹ ವೇದ ದೇವರ ವಾಹನಗಳಾದ ವೇದಗಳಿಗೆ ಅಭಿಮಾನಿ ದೇವತೆ ಆ ದೇವರ ವಾಹನನಾದ ಗರುಡನೇ. ಅಂತಹ ಗರುಡ ಪರಮಾತ್ಮನ ಆ ಮೂರ್ತಿಯನ್ನ ಒಂದು ಕಡೆಯಿಂದ ಇನ್ನೊಂದು ಕಡೆಗೆ ಕರೆದುಕೊಂಡು ಹೋಗುವವನು ಮಾತ್ರ ಅಲ್ಲ ಆ ಗರುಡ ದೇವರು ನಮ್ಮೆಲ್ಲರ ಮನೋ ಮಂದಿರಕ್ಕೆ ಆ ಪರಮಾತ್ಮನನ್ನ ಕರೆತರುವ ವಾಹನರೂ ಹೌದು ವೇದಗಳ ಮೂಲಕ ಅನ್ನುವುದನ್ನ ನಮಗೆ ಹರಿವಂಶ ಈ ಮೂಲಕವಾಗಿ ತಿಳಿಸಿಕೊಡುತ್ತಾ ಇದೆ. ಅಂತಹ ವೇದಮೂರ್ತಿ ಆಗಿರುವಂತಹ ಗರುಡ ಬಂದು ಪರಮಾತ್ಮನ ಎದುರಿಗೆ ಕೈಜೋಡಿಸಿ ಬಾಗಿ ನಿಂತು ಪ್ರಾರ್ಥನೆ ಮಾಡುತ್ತಾನೆ.

ನಮಸ್ತೇ ದೇವದೇವೇಶ ಹರೇ ಸ್ವಾಮಿನ್ನಿತಿ ಬ್ರುವನ್ । (76.7 ಭವಿಷ್ಯಪರ್ವ)

ಅಂತ ಪರಮಾತ್ಮನಿಗೆ ನಮಸ್ಕಾರ ಮಾಡಿ ಆಜ್ಞೆ ಆಗಬೇಕು ಅಂತ ಕೇಳಿದಾಗ ಪರಮಾತ್ಮ ತನ್ನ ಹಸ್ತ ಸ್ಪರ್ಶವನ್ನು ಮಾಡಿ ಅನುಗ್ರಹವನ್ನು ಮಾಡಿದ್ದಾನೆ. ಹೇಳುತ್ತಾನೆ ನಾನು ಕೈಲಾಸಕ್ಕೆ ಹೋಗಬೇಕು ಅದಕ್ಕಾಗಿ ನಿನ್ನನ್ನು ಕರೆದದ್ದು ಅಂತ ಹೇಳಿದಾಗ ಸರಿ ಅಂತ ಪರಮಾತ್ಮನನ್ನ ಕರೆದುಕೊಂಡು **'ಪ್ರಾಗುತ್ತರಾಂ ಹರಿಃ'**[1] ಈಶಾನ್ಯ ದಿಕ್ಕಿಗೆ ಅಭಿಮುಖವಾಗಿ ಗರುಡ ದೇವರು ಹೊರಟಿದ್ದಾರೆ. ಆ ಗರುಡ ದೇವರ ವೇಗ ಪರಮಾತ್ಮ ಹೊರಟಿದ್ದಾನೆ ಪರಮಾತ್ಮ ಹೊರಟರೇ ದೇವಾಧಿ ದೇವತೆಗಳೆಲ್ಲಾ ಬೆನ್ನು ಹತ್ತಿಬಿಟ್ಟಿದ್ದಾರೆ, ಬೆನ್ನು ಹತ್ತುವುದಲ್ಲ ದೇವತೆಗಳು ಗಂಧರ್ವರು ಸೇರಿ ಎಲ್ಲರೂ ಪರಮಾತ್ಮನ ಸ್ತೋತ್ರ ಮಾಡುತ್ತಾ ಇದ್ದಾರೆ.

ತತೋ ದೇವಾಃ ಸಗನ್ಧರ್ವಾ ಆಕಾಶೇऽಧಿಷ್ಠಿತಾಸ್ತದಾ । (76.12 ಭವಿಷ್ಯಪರ್ವ)
ಜಯ ದೇವ ಜಗನ್ನಾಥ ಜಯ ವಿಷ್ಣೋ ಜಗತ್ಪತೇ ।
ಜಯಾಚೇಯ ನಮೋ ದೇವ ಭೂತಭಾವನಭಾವನ ॥ (76.13 ಭವಿಷ್ಯಪರ್ವ)

ಎಲ್ಲ ಜೀವರಾಶಿಗಳ ಸೃಷ್ಟಿಯನ್ನು ಮಾಡುವ ಬ್ರಹ್ಮಾದಿಗಳಿಗೂ ಸೃಷ್ಟಿಯನ್ನು ಮಾಡುವ **'ಭೂತಭಾವನಭಾವನ'** ನೀನು ಅಂತಹ ಸರ್ವೋತ್ತಮ. ನೋಡಿ, ಅಂದರೆ ಒಂದು ಮಗುವಿಗಾಗಿ ಪರಮಾತ್ಮ ತಪಸ್ಸಿಗೆ ಹೋಗುವ ಅಗತ್ಯ ಇಲ್ಲ, ಭೂತಭಾವನಭಾವನ ಸಕಲ ಜೀವರಾಶಿಗಳ ಸೃಷ್ಟಿಯನ್ನು ಮಾಡುವ, ಬ್ರಹ್ಮಾದಿಗಳಿಗೂ ಸೃಷ್ಟಿಯನ್ನು ಮಾಡುವಂತಹ ಸರ್ವೇಶ್ವರ ಸರ್ವ ಸೃಷ್ಟಿಕರ್ತ ಕೇವಲ ನಾಟಕಕ್ಕಾಗಿ ಹೊರಟಿದ್ದಾನೆ ಅಂತ ಪದೇ ಪದೇ ಹರಿವಂಶ ನಮಗೆ ತಿಳಿಸಿಕೊಡುತ್ತಾ ಇದೆ. ಆ ರೀತಿ ಸ್ತೋತ್ರವನ್ನು ಮಾಡುತ್ತಾ ಇದ್ದರೆ **'ನಮಸ್ತೇ ಸಕಲೇಶಾಯ'**[2] ಸರ್ವೋತ್ತಮನಾದಂತಹ ನಿನಗೆ ನಮನಗಳು, ನಿನಗಿಂತಲೂ ಉತ್ತಮರು ಇನ್ನೊಬ್ಬರಿಲ್ಲ, ನಿನಗೆ ವರ ಕೊಡುವವರು ಮತ್ತೊಬ್ಬರಿಲ್ಲ ಅಂತ ದೇವತೆಗಳೆಲ್ಲ ಸ್ತೋತ್ರ ಮಾಡುತ್ತಾರೆ. ಪರಮಾತ್ಮ ಅವರು ಮಾಡುವ ಸ್ತೋತ್ರ ಮಾಡುತ್ತಾರೆ ಅಂತ ನಿಂತು ಬಿಡಲಿಲ್ಲ ಸ್ತೋತ್ರ ಮಾಡುವುದನ್ನು ಕೇಳುತ್ತಾ ಕೇಳುತ್ತಾ ಹಾಗೇ ಹೊರಟಿದ್ದಾನೆ ಗರುಡಾರೂಢನಾಗಿ ಪರಮಾತ್ಮ. ಆ ರೀತಿ ಹೊರಟು ಮೊದಲು ಕೈಲಾಸಕ್ಕೆ ಹೋಗಲಿಲ್ಲ, ಬದರಿಕಾಶ್ರಮಶಕ್ಕೆ ಬಂದಿದ್ದಾನೆ.

1. 76.10 ಭವಿಷ್ಯಪರ್ವ 2. 76.16 ಭವಿಷ್ಯಪರ್ವ

ಶ್ರೀಮದಾಚಾರ್ಯರು ತಾತ್ಪರ್ಯ ನಿರ್ಣಯದಲ್ಲಿ **'ಪ್ರೀಯಂ ಬದರಿಕಾಶ್ರಮಂ'** ಅಂತ ಅನ್ನುತ್ತಾರೆ ಅದು ತನ್ನದು ಅಂತ ಇಡೀ ಜಗತ್ತೆ ಪರಮಾತ್ಮನದು ವಿಶೇಷವಾಗಿ ನರ ನಾರಾಯಣ ನಾರಾಯಣನಲ್ಲಿ ಆವೇಶ ಸಾಕ್ಷಾತ್ ನಾರಾಯಣ ರೂಪದಿಂದ ತಾನು ಅಲ್ಲಿ ಸನ್ನಿಹಿತನಾದದ್ದರಿಂದ **'ಪ್ರೀಯಂ ಬದರಿಕಾಶ್ರಮಂ'** ತನ್ನ ಊರಿಗೆ ತಾನು ಬಂದ ಅನ್ನುತ್ತಾರೆ ಶ್ರೀಮದಾಚಾರ್ಯರು, ಹರಿವಂಶವೂ ಹೇಳುತ್ತದೆ.

ವರ್ಷಾಯುತಂ ತಪಸ್ತಪ್ತಂ ವಿಷ್ಣುನಾ ಪ್ರಭವಿಷ್ಣುನಾ । (76.20 ಭವಿಷ್ಯಪರ್ವ)

10,000 ವರ್ಷಗಳವರೆಗೆ ತಾನೇ ಪರಮಾತ್ಮ ಯಮಧರ್ಮನ ಪುತ್ರನಾಗಿ ನಾರಾಯಣ ಎಂಬ ಹೆಸರಿನಿಂದ ಅವತಾರ ಮಾಡಿ, ನರ ನರನಲ್ಲಿ ವಿಶೇಷ ತನ್ನ ಆವೇಶವನ್ನು ಇಟ್ಟು, ಶೇಷಾವತಾರನಾದ ನರ. ಈ ನರ ನಾರಾಯಣ ರೂಪದಿಂದ ಎಲ್ಲಿ 10,000 ವರ್ಷಗಳವರೆಗೆ ತಪಶ್ಚರ್ಯ ಮಾಡಿದನೋ ಅಂತಹ ಬದರಿಕಾಶ್ರಮ, ಎಲ್ಲಿ ನಾರಾಯಣ ಪರ್ವತಗಳ ಆ ಸನ್ನಿಧಾನದಲ್ಲಿ ಗಂಗಾ ನದಿ ರೋಧಿಸುತ್ತಾ ಇದೆ, ಅದ್ಭುತವಾದ ಅಲಕನಂದಾ ನದಿ.

ಗಙ್ಗಾ ಯತ್ರ ಸರಿಚ್ಛ್ರೇಷ್ಠಾ ಮಧ್ಯೇ ಧಾವತಿ ಪಾವನೀ । (76.22 ಭವಿಷ್ಯಪರ್ವ)

ಅಲ್ಲಿ ಆ ನರ ನಾರಾಯಣ ಪರ್ವತಗಳ ಮಧ್ಯದಲ್ಲಿ ಗಂಗಾ ನದಿ ಹರಿಯುತ್ತೆ ಅಂತಹ ಬದರಿಕಾಶ್ರಮ, ಎಲ್ಲಿ ವೃತ್ರಾಸುರನ ಸಂಹಾರ ಮಾಡಿದ ಇಂದ್ರ ದೇವರು ವಿಶೇಷವಾಗಿ ತಪಶ್ಚರ್ಯ ಮಾಡುವುದಕ್ಕೋಸ್ಕರ ಬಂದಿದ್ದಾರೆ 10,000 ವರ್ಷಗಳವರೆಗೆ ಇಂದ್ರ ದೇವರು ಎಲ್ಲಿ ತಪಶ್ಚರ್ಯ ಮಾಡಿದ್ದಾರೋ ಅಂತಹ ಬದರಿಕಾಶ್ರಮ, ರಾವಣಾಸುರನ ಸಂಹಾರ ಮಾಡಿದ ಶ್ರೀರಾಮಚಂದ್ರ ಯಾವ ಬದರಿಕಾಶ್ರಮಕ್ಕೆ ಬಂದು ಅಲ್ಲಿ ತಪಶ್ಚರ್ಯ ಮಾಡಿದ ಅಂತಹ ಬದರಿಕಾಶ್ರಮ ಅಲ್ಲಿ ಶ್ರೀಕೃಷ್ಣ ಪರಮಾತ್ಮ ಬರುತ್ತಾ ಇದ್ದಾನೆ. ಆ ಬದರಿಕಾಶ್ರಮ ಅಲ್ಲಿ ಹೋಗುವುದು ಇರಲಿ ವಿಶಾಲಾ ವಿಶಾಲಾ ವಿಶಾಲಾ ಬದರೀ ಅಂತ ಸ್ಮರಣೆ ಮಾಡಿದರೆ ಸಾಕು, ನರ ನಾರಾಯಣರ ಸ್ಮರಣೆ, ಅಲಕನಂದಾ ಸ್ಮರಣೆ ಮಾಡಿದರೆ ಸಾಕು ಸ್ವರ್ಗವಾಗುತ್ತದೆ

ಯಸ್ಯಾಃ ಸ್ಮರಣಮಾತ್ರೇಣ ನರಃ ಸ್ವರ್ಗಂ ಗಮಿಷ್ಯತಿ ॥ (76.26 ಭವಿಷ್ಯಪರ್ವ)

ಶತ್ರುಗಳೆಲ್ಲ ಮಿತ್ರರಾಗುತ್ತಾರೆ **'ಶತ್ರವೋ ಮಿತ್ರತಾಂ ಯಾನ್ತಿ'**[1] ಇದೇ ಬದರಿಕಾಶ್ರಮದಲ್ಲಿ ಪರಮಾತ್ಮನ ಆರಾಧನೆಯನ್ನು ಮಾಡಿದವರೆಲ್ಲ ಶ್ರೇಷ್ಠವಾದಂತಹ ಸದ್ಗತಿಯನ್ನು ಹೊಂದಿದ್ದಾರೆ ಅದಕ್ಕಾಗಿ ಇದನ್ನು ವಿಶಾಲಾ ಅಂತೂ ಕರೆಯುತ್ತಾರೆ, ಸಿದ್ಧ ಕ್ಷೇತ್ರ ಅಂತೂ ಕರೆಯುತ್ತಾರೆ ಯಾಕೆ ಅಂದರೆ ಇಲ್ಲಿ ಸಾಧನೆ ಮಾಡಿದವರಿಗೆಲ್ಲ ಸಿದ್ಧಿ ಸುಲಭವಾಗಿ ಸಿಗುತ್ತದೆ. ಒಂದೇ ದಿನ ತಪಶ್ಚರ್ಯ ಮಾಡಿದರೆ 10,000 ವರ್ಷ ತಪಶ್ಚರ್ಯ ಮಾಡಿದ ಫಲ ಬರುತ್ತದೆ ಬದರಿಕಾಶ್ರಮದಲ್ಲಿ ಅಂತಹ ಮಹಾಫಲ. ಈ ರೀತಿ ಆ ಬದರಿಕಾಶ್ರಮದ ಮಹಿಮೆಯನ್ನು ಹೇಳುತ್ತಾರೆ.

ಸಹಸ್ರವರ್ಮ ಅಂತ ಒಬ್ಬ ಅಸುರ ಆ ಸಹಸ್ರವರ್ಮ ಎಂಬಂತಹ ಅಸುರ ಸೂರ್ಯನನ್ನು ಕುರಿತು ತಪಶ್ಚರ್ಯವನ್ನು ಮಾಡಿ, ವರ್ಮ ಅಂದರೆ ಕವಚ, ಸಹಸ್ರವರ್ಮ ಅಂದರೆ ಸಾವಿರ ಪದರುಗಳಿಂದ ಕೂಡಿದಂತಹ ಕವಚವನ್ನು ಪಡೆದುಕೊಂಡ. ಇಷ್ಟು ಕವಚ ಇದ್ದರೂ ನಿನ್ನನ್ನು ಯಾರು ಸಾಯಿಸಲಿಕ್ಕೆ ಸಾಧ್ಯವೇ ಇಲ್ಲ ಅಂತೇನಲ್ಲ ಏನು ಕವಚ ಹಾಕಿಕೊಂಡರೂ ಅದನ್ನು ಭೇದನ ಮಾಡಲಿಕ್ಕೆ ಬೇರೆ ಉಪಾಯಗಳು ಇದ್ದೇ ಇರುತ್ತದೆ, ಇಲ್ಲ ಹಾಗಲ್ಲ ನನಗೆ ಬರೀ ಕವಚ ಕೊಟ್ಟರೆ ಅಲ್ಲ ವರ ಕೊಡಬೇಕು ಅಂತ. ಏನು ವರ ಕೊಡಬೇಕು ಅಂದರೆ ಇದರೊಳಗಿನ ಒಂದು

1. 76.27 ಭವಿಷ್ಯಪರ್ವ

ಕವಚವನ್ನ ಭೇದನ ಮಾಡಬೇಕಾದರೂ 10,000 ವರ್ಷ ಯಾರು ತಪಶ್ಚರ್ಯ ಮಾಡುತ್ತಾರೋ ಅವರಿಗೆ ಸಾಧ್ಯವಾಗಬೇಕು,ಕವಚದ ಇನ್ನೊಂದು ಪದರನ್ನ ಭೇದನ ಮಾಡಲಿಕ್ಕೆ ಮತ್ತೆ 10,000 ವರ್ಷ ತಪಶ್ಚರ್ಯ ಅಷ್ಟೆಲ್ಲ ಮಾಡಿ ಯಾರು ಮಾಡುತ್ತಾರೆ ಯಾರು ಮಾಡುವುದಿಲ್ಲ ಹಾಗಾದರೆ ನಾನು ಅವಧ್ಯನಾಗಿ ಹೀಗೆ ಇರುತ್ತೇನೆ ಅಂತ ಆ ಅಸುರನ ಆಲೋಚನೆ. ಅದಕ್ಕೆ ಈ ನಾರಾಯಣ ಏನು ಮಾಡಿದ ಅಂದರೆ ಬದರಿಕಾಶ್ರಮದಲ್ಲಿ ಬಂದು ತಪಶ್ಚರ್ಯ ಮಾಡಿದ, ನಾರಾಯಣನಿಗೆ ತಪಶ್ಚರ್ಯವೇ ಬೇಕಿಲ್ಲ ಅಚಿಂತ್ಯಾನಂತ ಸಾಮರ್ಥ್ಯ ಸಂಪನ್ನನಾದವನು ಭಗವಂತ, ಸೂರ್ಯನ ಮಾತಿಗೆ ಬೆಲೆ ಕೊಡುವುದಕ್ಕೋಸ್ಕರ ಈ ಬದರಿಕಾಶ್ರಮದಲ್ಲಿ ಒಂದೇ ದಿನ ತಪಶ್ಚರ್ಯ ಮಾಡುವುದು ಒಂದು ಕವಚವನ್ನು ಒಡೆಯುವುದು. ಯಾಕೆ ಅಂದರೆ ಒಂದು ದಿನ ತಪಶ್ಚರ್ಯ ಮಾಡಿದರೆ 10,000 ವರ್ಷ ತಪಶ್ಚರ್ಯ ಮಾಡಿದ ಫಲ ಉಂಟು ಅಲ್ಲವಾ ಆದ್ದರಿಂದ ಒಂದು ದಿನ ತಪಶ್ಚರ್ಯ ಮಾಡಿ ಒಂದು ಕವಚ ಒಡೆಯುವುದು. ಹೀಗೆ ಸಾವಿರ ದಿನದಲ್ಲಿ ಸಾವಿರ ಕವಚಗಳನ್ನು ಒಡೆದು ಬಿಟ್ಟ. ಆ ಸಹಸ್ರವರ್ಮ ಎಂಬಂತಹ ಅಸುರನಿಗೆ ಈ ರೀತಿ ವರ ಕೊಟ್ಟು ನಮ್ಮ ದೇವತೆಗಳಿಗೆಲ್ಲ ಪೀಡೆಯಾಗುವಂತೆ ಯಾಕಪ್ಪ ನೀನು ಮಾಡಿದಿ ಅಂತ ಹೇಳಿ ಆ ಸೂರ್ಯನಿಗೇನೆ ಇಂದ್ರಾದಿ ದೇವತೆಗಳು ಅನ್ನುತ್ತಾರೆ ನೀನೇ ಆ ಅಸುರನಿಂದ ಅವಿಷ್ಟನಾಗಿ ಹುಟ್ಟು ಅಂತ ಅದಕ್ಕೆ ಅವನು ಕರ್ಣನಾಗಿ ಹುಟ್ಟಿದ ಅಂತಹ ಮಹಿಮೆ ಈ ಬದರಿಕಾಶ್ರಮಕ್ಕೆ ಇದೆ.

ಸಹಸ್ರವರ್ಮನಾಮಿನಾಸುರೇಣ ವೇಷ್ಟಿತೋಽಜನಿ ॥ (11.156 ಮಭಾತಾನಿರ್ಣಯ)

ದೇವರಿಗೆ ಬದರಿಕಾಶ್ರಮದಿಂದ ಏನು ವಿಶೇಷ ಬಂತು ಅಂತ ತಿಳಿದುಕೊಳ್ಳಬೇಡಿ ಭಗವಂತನ ಸನ್ನಿಧಾನದಿಂದ ಬದರಿಕಾಶ್ರಮಕ್ಕೆ ಈ ಮಹಾಮಹಿಮೆ ಅಂತಹ ಮಹಾಮಹಿಮೆಯಿಂದ ಕೂಡಿದ ಆ ಬದರಿಕಾಶ್ರಮದಲ್ಲಿ ಪರಮಾತ್ಮ ಬರುತ್ತಾನೆ. ಬರುವ ಹೊತ್ತಿಗೆ ಸಾಯಂಕಾಲ ಆಯಿತು ಏನು ಆ ಬದರಿಕಾಶ್ರಮದ ವಾತಾವರಣ ಸಾಯಂಕಾಲದ ಅಗ್ನಿಹೋತ್ರಕ್ಕೆ ಎಲ್ಲ ಮುನಿಗಳು ಸಿದ್ದರಾಗಿದ್ದಾರೆ ಅಗ್ನಿಹೋತ್ರ ನಡೆಯುತ್ತಾ ಇದೆ, ಆಕಳುಗಳೆಲ್ಲ ಮೇಯ್ದು ಬಂದಿವೆ ಹಾಲು ಕರೆಯುತ್ತಾ ಇದ್ದಾರೆ, ಸಾಯಂಕಾಲದ ಆಹುತಿಗಳಿಗೋಸ್ಕರ ಎಲ್ಲ ಹವಿಷನ್ನು ಸಿದ್ಧತೆ ಮಾಡುತ್ತಾ ಇದ್ದಾರೆ ಅಲ್ಲಲ್ಲಲ್ಲಿ ವಾತಾವರಣ ವರ್ಣನೆ ಮಾಡುತ್ತದೆ ಹರಿವಂಶ.

ಅಧಿಶ್ರೀತೇಷು ಹವಿಷು ಜ್ವಾಲ್ಯಮಾನೇಷು ಚಾಗ್ನಿಷು । (76.33 ಭವಿಷ್ಯಪರ್ವ)

ಅತಿಥಿಗಳು ಸಾಯಂಕಾಲ ಬಂದಾಗ ಅತಿಥಿ ಅಭ್ಯಾಗತರಿಗೆ ಸತ್ಕಾರ ನಡೆಯುತ್ತಾ ಇದೆ ಇಂತಹ ವಾತಾವರಣ ಸಹಸ್ರಾರು ಮುನಿಗಳು ಅಲ್ಲಿ ಅಂತಹ ವಾತಾವರಣದೊಳಗೆ ಪರಮಾತ್ಮ ಬದರಿಕಾಶ್ರಮದಲ್ಲಿ ಪ್ರವೇಶ ಮಾಡುತ್ತಾ ಇದ್ದಾನೆ. ಎಲ್ಲರೂ ಅಗ್ನಿಹೋತ್ರವನ್ನ ಮುಗಿಸಿಕೊಂಡು ಅತಿಥಿ ಅಭ್ಯಾಗತರು ಬಂದವರಿಗೆಲ್ಲ ಸತ್ಕಾರವನ್ನು ಮಾಡಿ ಬಂದು ನೋಡುತ್ತಾ ಇದ್ದಾರೆ ಶ್ರೀಕೃಷ್ಣ ಪರಮಾತ್ಮ ಬಂದಿದ್ದಾನೆ ಆನಂದವೇ ಆನಂದ ಋಷಿಗಳಿಗೆ. ಎಂತೆಂತಹ ಋಷಿಗಳು ಕೆಲವರೆಲ್ಲ ಸ್ವಚ್ಛವಾಗಿ ಮುಂಡನ ಮಾಡಿಕೊಂಡವರು, ಕೆಲವರು ಜಟಾ ಬಿಟ್ಟವರು **'ಜಟಿನೋ ಮುಣ್ಡಿನಃ'**[1] ಅವರವರ ಇಚ್ಛೆಗೆ ತಕ್ಕಂತೆ ಸಾಧನೆಯನ್ನು ಮಾಡುವವರು, ಯಾರಿಗೂ ಕಾಮ ಕ್ರೋಧ ಲೋಭ ಮೋಹ ಮದ ಮಾತ್ಸರ್ಯಾದಿ ದೋಷಗಳಿಲ್ಲ ಅಖಂಡ ಹರಿನಾಮ ಸ್ಮರಣೆಯಲ್ಲಿ ತತ್ಪರರಾದವರು. ಅವರ ದೇಹದಲ್ಲಿ ಧಾತುಗಳೇ ಇಲ್ಲ ಎಷ್ಟೋ ಜನರಿಗೆ ನಿರ್ಮಜ್ಜಾಃ ಮಜ್ಜಾ ಧಾತುವೇ ಇಲ್ಲ ಅಷ್ಟು ಘೋರವಾದ ತಪಶ್ಚರ್ಯವನ್ನು ಮಾಡಿದ್ದಾರೆ. ಕೇವಲ ಅಸ್ತಿ ಮಾತ್ರ ಇದೆ ಕೆಲವರಿಗೆ, ಕೇವಲ ಚರ್ಮ ಕಾಣಿಸುತ್ತಾ ಇದೆ ಏನು ಮಾಂಸ ಇಲ್ಲ, ಮಜ್ಜಾ ಇಲ್ಲ

1. 77.2 ಭವಿಷ್ಯಪರ್ವ

ಧಾತುಗಳಿಲ್ಲ ಪ್ರೇತಗಳು ಕಂಡ ಹಾಗೆ ಕಾಣಿಸುತ್ತಾರೆ ಆದರೆ ಅವರೆಲ್ಲ ಮಹಾ ಮಹಾ ಋಷಿಗಳು **'ವೇತಾಲಾ ಇವ ಕೇಚನ'**[1] ಕೇವಲ ಕಲ್ಲಿನಿಂದ ಕುಟ್ಟಿಕೊಂಡು ತಿನ್ನುವವರು ಕೆಲವರು, ಎಲೆಗಳನ್ನು ತಿನ್ನುವವರು ಕೆಲವರು.

ಅಶ್ಮಕುಟ್ಟಾಶನಪರಾಃ ಪರ್ಣಭಕ್ಷಾಸ್ತಥಾ ಪರೇ ॥ (77.3 ಭವಿಷ್ಯಪರ್ವ)

ಅಖಂಡವಾಗಿ ವೇದಾಧ್ಯಯನವನ್ನು ಮಾಡುತ್ತ ಇದ್ದವರು ಪಾಠ ಹೇಳುವವರು. ಕೆಲವರಂತೂ ಏನೂ ಆಹಾರವನ್ನು ಸ್ವೀಕಾರ ಮಾಡದೆ ನಿರಾಹಾರವಾಗಿ ಇದ್ದಂತಹ ಮಹಾ ತಪಸ್ವಿಗಳು ಕೆಲವರು ಆದರೆ ಎಲ್ಲರೂ ಹರಿ ಸ್ಮರಣವನ್ನು ಮಾತ್ರ ಮಾಡತ್ತಾರೆ ಇನ್ನೇನು ಮಾಡುವುದಿಲ್ಲ.

ಸ್ಮರನ್ತಃ ಸರ್ವದಾ ವಿಷ್ಣುಂ ತದ್ಭಕ್ತಾಸ್ತತ್ಪರಾಯಣಾಃ ॥ (77.4 ಭವಿಷ್ಯಪರ್ವ)

ಇನ್ನೇನು ಶೀಘ್ರದಲ್ಲಿ ಅಪರೋಕ್ಷ ಜ್ಞಾನವಾಗಿ ಮೋಕ್ಷವನ್ನು ಹೊಂದುವುದು ಸಮೀಪ ಅನ್ನುವ ರೀತಿ, ಮೋಕ್ಷ ಬ್ರಹ್ಮ ದೇವರ ಜೊತೆಗೆ ಆಗುವುದು. ಆದರೆ ಅಪರೋಕ್ಷ ಜ್ಞಾನವನ್ನು ಪಡೆದುಕೊಂಡು, ಅಪ್ರಾರಬ್ಧವಾದ ಎಲ್ಲ ಕರ್ಮಗಳ ಕ್ಷಯ ರೂಪವಾದ ಮೋಕ್ಷವನ್ನು ಹೊಂದುವುದು ಇನ್ನೇನು ಸಮೀಪ ಅನ್ನುವಂತಹ ಎಷ್ಟೊ ಜನ ಇದ್ದರಂತೆ ಅಲ್ಲಿ.

ಆಸನ್ನಮುಕ್ತಯಃ ಕೇಚಿತ್ ಕೇಚಿತ್ ಧ್ಯಾನೈಕತತ್ಪರಾಃ ॥ (77.5 ಭವಿಷ್ಯಪರ್ವ)

ಕೆಲವರು ಧ್ಯಾನವನ್ನು ಮಾಡುತ್ತಾ ಇದ್ದಾರೆ ವರ್ಷಕ್ಕೆ ಒಂದು ಬಾರಿ ಊಟ ಮಾಡುವವರು ಕೆಲವರು, ಕೇವಲ ನೀರು ಕುಡಿದು ಬದುಕಿದವರು ಕೆಲವರು ಇದನ್ನೆಲ್ಲ ನೋಡಿದರೆ ಇಂದ್ರ ದೇವರು ಕ್ಷಣ ಕ್ಷಣಕ್ಕೆ ಹೆದರಿದಂತೆ, ಅವರಿಗೆ ಹೆದರಿಕೆ ಇಲ್ಲ ತಾತ್ಪರ್ಯ ಅಂತಹ ತಪಸ್ಸನ್ನು ಮಾಡುವಂಥವರು ಆ ಬದರಿಕಾಶ್ರಮದಲ್ಲಿ ಇದ್ದರು. ವಸಿಷ್ಠರು ವಾಮ ದೇವರು ರೈಭ್ಯರು ಧೂಮ್ರ ಜಾಬಾಲಿ ಕಶ್ಯಪ ಕಣ್ವ ಭರದ್ವಾಜ ಭಿಬ್ರ ಗೌತಮ ಅಶ್ವಶಿರ ಅತ್ರಿ ಭದ್ರ ಶಂಖ ಶಂಖನಿಧಿ ಕುಣಿ ಪಾರಾಶ್ಯರ್ಯ ವೇದವ್ಯಾಸ ದೇವರು ಸಾಕ್ಷಾತ್ ಆಗಿ ಅಲ್ಲಿ ಇದ್ದಾರೆ. ಯಾಜ್ಞವಲ್ಕ್ಯರು ಕಕ್ಷೀವಾನ್ ಅಂಗೀರಃ ದೀಪ್ತತಪಾ ಅಸಿತ ದೇವಲ ವಾಲ್ಮೀಕಿ, ರಾಮಾಯಣ ರಚನೆಯನ್ನು ಮಾಡಿದ ವಾಲ್ಮೀಕಿ ಅಲ್ಲಿದ್ದಾರೆ, ಸರ್ವೋತ್ತಮರಾದ ವೇದವ್ಯಾಸ ದೇವರು ಅಲ್ಲಿದ್ದಾರೆ. ಇಂತಹ ಎಲ್ಲ ಋಷಿಗಳು ಕೂಡ ಶ್ರೀಕೃಷ್ಣ ಪರಮಾತ್ಮ ಬಂದಿದ್ದಾನೆ ಅಂತ ತಿಳಿದು ಸ್ವಾಗತ ಮಾಡಿದ್ದಾರೆ, ವೇದವ್ಯಾಸ ದೇವರು ಆಲಿಂಗನ ಮಾಡಿಕೊಂಡಿರುತ್ತಾರೆ. ಇನ್ನುಳಿದವರೆಲ್ಲ ಪರಮಾತ್ಮನಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿದ್ದಾರೆ, ಅರ್ಘ್ಯಪಾದ್ಯಾದಿಗಳಿಂದ ಪರಮಾತ್ಮನಿಗೆ ಪೂಜೆ ಮಾಡಿದ್ದಾರೆ.

ನಮೋಽಸ್ತು ಕೃಷ್ಣ ಕೃಷ್ಣೇತಿ ದೇವದೇವೇತಿ ಕೇಶವಮ್ । (77.12 ಭವಿಷ್ಯಪರ್ವ)

ಕೃತಂ ಸರ್ವಂ ಮುನಿವರಾ ವರ್ಧತಾಂ ತಪ ಉತ್ತಮಮ್ ॥ (77.16 ಭವಿಷ್ಯಪರ್ವ)

ಏನು ದೇವರ ಆಶೀರ್ವಾದ ನಿಮಗೆಲ್ಲ ಆರೋಗ್ಯ ಆಗಲಿ ಅದೆಲ್ಲ ಏನು ಇಲ್ಲೇ ಇಲ್ಲ ನೇರವಾಗಿ **'ವರ್ಧತಾಂ ತಪ ಉತ್ತಮಮ್'** ನಿಮ್ಮ ತಪಸ್ಸು ಇನ್ನೂ ವೃದ್ಧಿಯಾಗಲಿ ಅಭಿವೃದ್ಧಿಯಾಗಲಿ ದಿನೇ ದಿನೇ ಕ್ಷಣೇ ಕ್ಷಣೇ ನಿಮ್ಮ ತಪಸ್ಸಿನ

1. 77.3 ಭವಿಷ್ಯಪರ್ವ

ವೃದ್ಧಿಯಾಗಲಿ, ನಿಮ್ಮ ಜ್ಞಾನದ ವೃದ್ಧಿಯಾಗಲಿ ಅಂತ ಪರಮಾತ್ಮ ಆಶೀರ್ವಾದ ಮಾಡಿದ್ದಾನೆ ಇದಕ್ಕಿಂತ ಹೆಚ್ಚು ಏನು ಬೇಕು ಅವರಿಗೆ. ಅಗ್ನಿಹೋತ್ರಗಳು ಚೆನ್ನಾಗಿ ನಡೆಯುತ್ತಾ ಇದೆ ತಾನೇ, ನಿಮ್ಮ ಶಿಷ್ಯರೆಲ್ಲ ಚೆನ್ನಾಗಿ ಸೇವೆ ಮಾಡುತ್ತಾರೆ ತಾನೇ ಅಂತ ಎಲ್ಲ ಅವರ ಕುಶಲೋಪಚಾರವನ್ನೆಲ್ಲ ಕೇಳಿದ್ದಾನೆ ಅವರೂ ಕೂಡ ನಿನ್ನ ಅನುಗ್ರಹದಿಂದ ಸರ್ವವೂ ಕುಶಲ ಅಂತ ಹೇಳುತ್ತಾರೆ. ಆಮೇಲೆ ಪರಮಾತ್ಮನಿಗೆ ತಾವೇ ತಂದ ಮೂಲ ಫಲಗಳನ್ನ ತಾವು ಏನು ಆಹಾರ ಸ್ವೀಕಾರ ಮಾಡುತ್ತ ಇದ್ದರೋ ಆ ಪವಿತ್ರವಾದ ಮುನಿಗಳ ಆಹಾರ ಗೆಡ್ಡೆ ಗೆಣಸು ಮೊದಲಾದ ಆಹಾರಗಳನ್ನ ಪವಿತ್ರವಾದದ್ದನ್ನು ತಂದು ದೇವರಿಗೆ ಸಮರ್ಪಣೆ ಮಾಡಿದ್ದಾರೆ.

ದೇವಾನಾಮಥ ಸರ್ವೇಷಾಂ ವಿಷ್ಣೋಃ ಕೃಷ್ಣಸ್ಯ ಯತ್ನತಃ । (77.20 ಭವಿಷ್ಯಪರ್ವ)

ಪರಮಾತ್ಮ ಪ್ರೀತಿಯಿಂದ ಅವರು ಕೊಟ್ಟ ಆತಿಥ್ಯವನ್ನ ಸ್ವೀಕಾರ ಮಾಡಿದ್ದಾನೆ. **'ಅವತಾರೇಷು ಸ್ಥೂಲಮಪಿ ಭುಂಕ್ತೇ'** ಟೀಕಾಕೃತ್ಪಾದರು ಹೇಳುತ್ತಾರೆ ಪ್ರಮೇಯ ದೀಪಿಕಾದಲ್ಲಿ ಹಾಗೆ ಅವರು ಸಮರ್ಪಣೆ ಮಾಡಿದಂತಹ ಸ್ಥೂಲವಾದದ್ದನ್ನ ಸ್ವೀಕಾರ ಮಾಡಿದ್ದಾನೆ. **'ನ ಕರ್ಮಣಾ ವರ್ಧತೇ ನೋಕನೀಯಾನ್'** ಅದರಿಂದ ಏನು ವೃದ್ಧಿ ಹ್ರಾಸ ಸಗಳು ತಿಂದರೆ ವೃದ್ಧಿ ಇಲ್ಲದಿದ್ದರೆ ಹ್ರಾಸ ಇಲ್ಲ ಕೇವಲ ಅವರ ಮೇಲೆ ಅನುಗ್ರಹ ಮಾಡುವುದಕ್ಕೆ ಸ್ವೀಕಾರ ಮಾಡಿದ್ದಾನೆ. ಮಾಡಿ ಪರಮಾತ್ಮ ಆ ಬದರಿಕಾಶ್ರಮದಲ್ಲಿ ನಾರಾಯಣ ರೂಪದಿಂದ ತಾನು ಯಾವ ತಪೋವನದಲ್ಲಿ ತಪಸ್ಸು ಮಾಡಿದ್ದ ಅದೇ ತಪೋವನದಲ್ಲೇನೆ ಮತ್ತೆ ತಪಸ್ಸು ಮಾಡಬೇಕು ಅಂತನ್ನುವ ದೃಷ್ಟಿಯಲ್ಲಿ ಪರಮಾತ್ಮ ಅಲ್ಲಿ ಬಂದು ಕುಳಿತಿದ್ದಾನೆ. ಕುಳಿತು ಸಮಾಧಿಯಲ್ಲಿ ತಾನು ಪರಮಾತ್ಮ ಧ್ಯಾನವನ್ನು ಮಾಡುತ್ತಾ ಇದ್ದಾನೆ, ಏನು ಧ್ಯಾನ ಮಾಡಿದ ಅಂತ ಪ್ರಶ್ನೆ ಬರುತ್ತದೆ ಏನು ಹೇಳಬೇಕು ಹರಿವಂಶ ಏನೋ ಮಾಡಿದ ಅಂತ ಹೇಳಿ ಬಿಡುತ್ತದೆ ಅಷ್ಟೇ.

ಕಿಮಪ್ಯೇಷ ಜಗನ್ನಾಥೋ ಧ್ಯಾತ್ವಾ ದೇವೇಶ್ವರಃ ಸ್ಥಿತಃ ॥ (78.4 ಭವಿಷ್ಯಪರ್ವ)

ಯಾರನ್ನು ಧ್ಯಾನ ಮಾಡಬೇಕು ಅವನು,ತಾನೇ ಸರ್ವೋತ್ತಮ ಕೇವಲ ಲೋಕಶಿಕ್ಷಣಕ್ಕಾಗಿ ಧ್ಯಾನವನ್ನು ಮಾಡಿದಂತೆ ನಾಟಕ ಮಾಡಬೇಕಾಗಿದೆ ಏನು ಧ್ಯಾನ ಮಾಡಬೇಕು, ಅವನಿಗೆ ಧ್ಯೇಯರಾದವರೇ ಯಾರಿಲ್ಲ ಅವನೇ ಸರ್ವೋತ್ತಮ ಅದಕ್ಕೆ ಅಂದರು.

ಕಿಮಪ್ಯೇಷ ಜಗನ್ನಾಥೋ ಧ್ಯಾತ್ವಾ ದೇವೇಶ್ವರಃ ಸ್ಥಿತಃ ॥ (78.4 ಭವಿಷ್ಯಪರ್ವ)

ಏನೋ ಧ್ಯಾನ ಮಾಡಿದವರಂತೆ ಕುಳಿತನಂತೆ. ಅಲ್ಲಿ **'ಕಿಮಪ್ಯೇಷ'** ಅಂತಂದರೆ

ಏಕಂ ಸ್ವಯಂಜ್ಯೋತಿರನನ್ಯಮವ್ಯಯಂ ಸ್ವಸಂಸ್ಥಯಾ ನಿತ್ಯನಿರಸ್ತಕಲ್ಮಷಂ ।
ಬ್ರಹ್ಮಾಖ್ಯಮಸ್ಯೋದ್ಭವನಾಶಹೇತುಭಿಃ ಸ್ವಶಕ್ತಿಭಿರ್ಲಕ್ಷಿತಭಾವನಿರ್ವೃತಿಂ ॥ (10.2.70.5 ಭಾಗವತ)

ಅಂತ ಭಾಗವತದಲ್ಲಿ ತಿಳಿಸಿದಂತೆ

ಬ್ರಾಹ್ಮೇ ಮುಹೂರ್ತ ಉತ್ಥಾಯ ವಾರ್ಯುಪಸ್ಪೃಶ್ಯ ಮಾಧವಃ ।
ದಧ್ಯೌ ಪ್ರಸನ್ನಕರಣ ಆತ್ಮಾನಂ ತಮಸಃ ಪರಂ ॥ (10.2.70.4 ಭಾಗವತ)

ಅಂತ ಹೇಳಿದ್ದಾರೆ. ತನ್ನ ಸ್ವರೂಪವನ್ನೇ ತಾನು ಧ್ಯಾನ ಮಾಡಿದ ಅನ್ನುವುದನ್ನ ತಿಳಿಯಬೇಕು ಹಾಗಾದರೆ **'ಕಿಮಪ್ಯೇಷ'** ಅಂತ ಯಾಕೆ ಅಂದರು **'ಕಿಂ'** ಅಂದರೆ ತನ್ನನ್ನು ಅಂತೇ ಅರ್ಥ.

ಏಕೋ ನೈಕಃ ಸವಃ ಕಃ ಕಿಂ ಯತ್ತತ್ಪದಮನುತ್ತಮಮ್ । (78 ವಿಷ್ಣುಸಹಸ್ರನಾಮ)

'ಕಿಂ' ಅಂದರೆ ಪರಮಾತ್ಮ ಅಂತ ಅರ್ಥ ಹಾಗಾದರೆ **'ಕಿಮಪಿ'** ಲೋಕ ವಿಲಕ್ಷಣವಾದಂತಹ ಲೋಕೋತ್ತರವಾದಂತಹ ಪರಮಾತ್ಮನ ಏನು ಒಂದು ಪರಮಾತ್ಮನ ಅದ್ಭುತವಾದ ಸ್ವರೂಪ ಇದೆ ಅದನ್ನು **'ಕಿಂ'** ಅನ್ನುತ್ತಾರೆ ಎಲ್ಲರಿಗೂ ಅದು ಏನೂ ಅಂತ ಪ್ರಶ್ನೆಯ ಚಿಹ್ನವಾಗಿಯೇ ಉಳಿದಿದೆ ಪೂರ್ಣವಾಗಿ ಯಾರಿಗೂ ಅರ್ಥವಾಗಿಲ್ಲ.

ಯತೋ ವಾಚೋ ನಿವರ್ತಂತೇ । ಅಪ್ರಾಪ್ಯ ಮನಸಾ ಸಹ । (2.9 ತೈತ್ತಿರೀಯೋಪನಿಷತ್)

ಹೀಗಾಗಿ ಆ ಪರಮಾತ್ಮ ಎಲ್ಲರಿಗೂ **'ಕಿಂ'** ಅಂತಹ ಎಲ್ಲರಿಗೂ ಪ್ರಶ್ನೆಯಾಗಿ ಅರ್ಥಾತ್ ಪರಿಪೂರ್ಣವಾಗಿ ತಿಳಿಯದೆ ಲೋಕೋತ್ತರನಾಗಿ ಇರುವಂತಹ ಏನು ಆ ಸರ್ವೋತ್ತರನಾದ ಉತ್ತರನಾದ ಪರಮಾತ್ಮ ಇದ್ದಾನೆ ಅಂತಹ ಲೋಕ ವಿಲಕ್ಷಣನಾದಂತಹ ತನ್ನ ಸ್ವರೂಪವನ್ನೇ ತಾನು ಧ್ಯಾನ ಮಾಡಿದ್ದಾನೆ ಪರಮಾತ್ಮ.

ಕಿಮಪ್ಯೇಷ ಜಗನ್ನಾಥೋ ಧ್ಯಾತ್ವಾ ದೇವೇಶ್ವರಃ ಸ್ಥಿತಃ ॥ (78.4 ಭವಿಷ್ಯಪರ್ವ)

ಅಷ್ಟರಲ್ಲಿ ಘೋರವಾದಂತಹ ಶಬ್ದಗಳು ಕೇಳಿಸುತ್ತಾ ಇವೆ ಭಾರೀ ಘೋರವಾದಂತಹ ಧ್ವನಿ ಹೊಡೆಯಿರಿ ಬಡೆಯಿರಿ ಕಡೆಯಿರಿ ಕತ್ತರಿಸಿರಿ ಜೊತೆಗೆ.

ಏಷ ವಿಷ್ಣುರಯಂ ಕೃಷ್ಣೋ ಹರಿರೀಶ ಇತೋಚ್ಯುತಃ ।
ನಮೋಽಸ್ತು ವಿಷ್ಣೋ ದೇವೇಶ ಸ್ವಾಮಿನ್ ಮಾಧವ ಕೇಶವ ॥ (78.7 ಭವಿಷ್ಯಪರ್ವ)

ಎರಡು ವಿಚಿತ್ರ ವಿರುದ್ಧ ಹರೇ ಕೃಷ್ಣ ಸ್ವಾಮಿ ಜಗನ್ನಾಥ ಪರಮಾತ್ಮ ರಕ್ಷಣೆ ಮಾಡಪ್ಪ, ಎಲ್ಲಿದ್ದೀಯಾ ಬೇಗ ದರ್ಶನ ಕೊಡು ಅಂತ ಒಂದು ಕಡೆ ಧ್ವನಿ ಕೇಳಿಸುತ್ತದೆ ಜೊತೆ ಜೊತೆಗೆ ಅದೇ ಧ್ವನಿ ಅದೇ ಕಂಠದಿಂದಲೇ ಇನ್ನೊಂದು ಶಬ್ದ ಬರುತ್ತದೆ ಹೊಡೆಯಿರಿ ಬಡೆಯಿರಿ ಕಡೆಯಿರಿ ಕತ್ತರಿಸಿ ಹಾಕಿರಿ, ಕೊಂದು ಹಾಕಿರಿ ಇದೇನಿದು ವಿಚಿತ್ರ. ಆ ಪರಮಾತ್ಮ ಧ್ಯಾನಮಗ್ನನಾದವನಂತೆ ಕುಳಿತಿದ್ದ ಭಗವಂತ ಆ ರೀತಿ ಧ್ಯಾನಮಗ್ನನಾಗಿ ಕುಳಿತಂತಹ ದೇವರಿಗೆ ಈ ಧ್ವನಿ ಕೇಳಿಸಿದೆ ಇದೇನು ವಿಚಿತ್ರವಾದ ಧ್ವನಿ ಒಂದು ಕಡೆಗೆ ಹಿಂಸೆಯ ಮಾತುಗಳು, ಇನ್ನೊಂದು ಕಡೆಗೆ ಭಕ್ತಿಯ ಮಾತುಗಳು. ಆ ರೀತಿ ನೋಡುತ್ತಾ ನೋಡುತ್ತಾ ಇರುವಾಗ ದೇವರ ಸುತ್ತಮುತ್ತಲೂ ಸಾವಿರಾರು ಮೃಗಗಳು ಬಂದು ಶರಣು ಹೋಗಿವೆ ದೇವರಿಗೆ ಯಾಕೆ ಅಂದರೆ ಆ ಮೃಗಗಳನ್ನು ಸಂಹಾರ ಮಾಡುತ್ತಾ ಬರುತ್ತಾ ಇದ್ದಾರೆ ಅಲ್ಲಿ ಹಿಂದೆ ಅನ್ನುವುದಕ್ಕೆ ಆ ಮೃಗಗಳೆಲ್ಲ ದೇವರ ಸುತ್ತಲೂ ಶರಣು ಬಂದಿವೆ. ಸರಿ, ಮೃಗಗಳು ಬಂದಿವೆ ಅಂತ ದೇವರು ಅವುಗಳಿಗೆ ಶರಣು ಕೊಡುವುದರೊಳಗೆ ಹಿಂದೆ ದೀಪಗಳು ಕಾಣಿಸುತ್ತ ಇವೆ ಆ ದೀಪಗಳ ಹಿಂದೆ ಪಿಶಾಚಿಗಳು ಬರುತ್ತಾ ಇವೆ. ಆ ಪಿಶಾಚಿಗಳು ಭೂತಗಳು ಅವುಗಳೆಲ್ಲ ತಮ್ಮ ಪಿಶಾಚ ಕ್ರೀಡೆಯನ್ನು ಮಾಡುತ್ತಾ, ಈ ಎಲ್ಲ ಮೃಗಗಳ ಹಿಂಸೆಯನ್ನು ಮಾಡುತ್ತಾ, ಜನರ ಹಿಂಸೆಯನ್ನು ಮಾಡುತ್ತಾ, ಬ್ರಾಹ್ಮಣರ ಹಿಂಸೆಯನ್ನು ಮಾಡುತ್ತಾ, ಮಾಂಸಗಳನ್ನು ಭಕ್ಷಣ ಮಾಡುತ್ತಾ, ರಕ್ತವನ್ನು ಪಾನ ಮಾಡುತ್ತಾ ಈ ಕಡೆಗೆ ದೇವರ ನಾಮ ಸ್ಮರಣೆಯನ್ನು ಮಾಡುತ್ತಾ ಬರುತ್ತಾ ಇವೆ,

ಆ ಪಿಶಾಚಿಗಳು ಹರೇ ಕೃಷ್ಣ ಅನ್ನುತ್ತಾ ಇವೆ ಆಗ ಪರಮಾತ್ಮ ಆ ಹಿಂಸೆಯ ಜೊತೆಗೆ ಅವರು ಮಾಡುವ ಭಕ್ತಿಯ ಸ್ತುತಿಗಳನ್ನು ಕೇಳಿ ಅವರ ಮೇಲೆ ಪ್ರಸನ್ನನಾಗುತ್ತಾನೆ, ಪ್ರೀತನಾಗುತ್ತಾನೆ. ಪ್ರೀತನಾಗಿ ಒಂದು ಮಾತಾಡುತ್ತಾನೆ ದೇವರು ನನಗೆ ಈ ಸ್ತೋತ್ರವನ್ನು ಕೇಳಿದರೆ ಈ ಧ್ವನಿ ಕೇಳಿದರೆ ಯಾಕೋ ಪ್ರೀತಿ ಬರುತ್ತಾ ಇದೆಯಲ್ಲ ಹಾಗಾದರೆ ಯಾರಿಗೋ ಮೋಕ್ಷ ಹತ್ತಿರ ಬಂದಿದೆಯಾ ನನ್ನ ಪ್ರೀತಿಯಾಗಿದೆ ಎಂದರೆ ಮೋಕ್ಷ ಆಗಬೇಕಲ್ಲ ಅನ್ನುತ್ತಾನೆ ಪರಮಾತ್ಮ ಎಂತಹ ಮಾತು. ಪ್ರಸಾದದಿಂದಲೇ ಮೋಕ್ಷ ಅನ್ನುವ ಶ್ರೀಮದಾಚಾರ್ಯರ ಸಿದ್ಧಾಂತ ಎಷ್ಟು ಸ್ಪಷ್ಟವಾಗಿ ಹೇಳುತ್ತದೆ.

ಕೋ ನು ಮಾಂ ಸ್ತೌತಿ ಭಕ್ತ್ಯಾ ವೈ ಭವಿಷ್ಯೇ ಪ್ರೀತಿಮಾನಹಮ್ ॥ (78.25 ಭವಿಷ್ಯಪರ್ವ)

ಆ ಸ್ತುತಿ ಕೇಳಿದರೆ ನನಗೆ ಪ್ರೀತಿ ಬರುತ್ತಾ ಇದೆಯಲ್ಲಾ ಉಕ್ಕೇರುತ್ತಾ ಇದೆಯಲ್ಲಾ

ಕಸ್ಯ ಮುಕ್ತಿಃ ಸಮಾಯಾತಾ ಪ್ರೀತೇ ಮಯಿ ಸುದುರ್ಲಭಾ ॥ (78.26 ಭವಿಷ್ಯಪರ್ವ)

ಯಾರ ಮುಕ್ತಿ ಹತ್ತಿರ ಬಂದಿದೆ ನನಗೆ ಪ್ರೀತಿ ಆಗುತ್ತಾ ಇದೆ ಅಂದರೆ ಅವನಿಗೆ ಮೋಕ್ಷ ಆಗಬೇಕು ಹಾಗಾದರೆ ಯಾರದೋ ಮೋಕ್ಷ ಹತ್ತಿರ ಬಂದಿದೆ ಕಾಣಿಸುತ್ತದೆ ಅನ್ನುತ್ತಾನೆ ದೇವರು ಎಂತಹ ಅದ್ಭುತವಾದ ಮಾತನ್ನ

ಯಥಾ ದೃಷ್ಟ್ವಾ ಪ್ರಸನ್ನಃ ಸನ್ ರಾಜಾ ಬಂಧಾಪನೋದಕೃತ್ ।
ಏವಂ ದೃಷ್ಟಸ್ಸ ಭಗವಾನ್ ಕುರ್ಯಾತ್ ಬಂಧವಿಭೇದನಂ ॥

ಇವನಿಗೆ ತಾತ್ಕಾಲಿಕವಾದ ಮೋಕ್ಷವನ್ನು ಕೊಟ್ಟು ಮುಂದೆ ಮಹಾಮೋಕ್ಷ ಕೊಡುತ್ತಾನೆ ಆದರೆ ಪ್ರೀತಿ, ಪ್ರಸಾದ, ದೇವರ ಅನುಗ್ರಹ ಇದು ಮೋಕ್ಷ ಸಾಧನ ಅನ್ನುವ ಮಾತನ್ನ ಪರಮಾತ್ಮ ಇಲ್ಲಿ ತೋರಿಸುತ್ತಾ ಇದ್ದಾನೆ. ಸರಿ, ಅಷ್ಟರೊಳಗೆ ಹಿ ಹಾ ಹೇತವಾದಿ ನೌ ಘೋರವಾಗಿ ಆ ಪಿಶಾಚಿಗಳು ತಮ್ಮ ಶಬ್ದಗಳನ್ನು ಮಾಡುತ್ತ ಬರುತ್ತಾ ಇವೆ, ಮೈಯೆಲ್ಲಾ ನಾನಾ ವಿಧವಾದ ಪ್ರಾಣಿಗಳ ಹಿಂಸೆಯನ್ನು ಮಾಡಿ ಕರಳು ಮಾಲೆಗಳನ್ನು ಹಾಕಿಕೊಂಡಿವೆ ಎರಡು ಪಿಶಾಚಿಗಳು ಅವು ಘಂಟಾಕರ್ಣ, ಕರ್ಣ ಅಂತ. ಆ ಪಿಶಾಚಿಗಳು ನಾನಾ ವಿಧವಾಗಿ ಇರುವಂತಹ ಶವಗಳನ್ನು ಎಳೆದುಕೊಂಡು ಬರುತ್ತಾ ಇವೆ, ಯಾರು ಯಾರನ್ನೋ ಕೊಲ್ಲುವುದು ಆ ಶವಗಳನ್ನೆಲ್ಲ ಕಟ್ಟಿಕೊಂಡು ಎಳೆದುಕೊಂಡು ಬರುವುದು, ಯಾವಾಗ ಯಾವಾಗ ಹಸಿವೆ ಆಗುತ್ತದೋ ಆ ಮಾಂಸಗಳನ್ನು ತಿನ್ನುವುದು ಇದು ಅವರ ಕೆಲಸ. ಅಂತಹ ಶವಗಳನ್ನು ಎಳೆಯುತ್ತಾ ನಾಲಿಗೆಯನ್ನು ಚಾಚಿ ರಕ್ತಗಳನ್ನೆಲ್ಲ ಪಾನ ಮಾಡುತ್ತಾ ವಿಚಿತ್ರವಾದಂತಹ ಪ್ರಾಣಿಗಳ ಮಾಂಸ ಮೇದಸ್ಸು ಮಜ್ಜ ಸ್ನಾಯು ಇವುಗಳಿಂದ ಮೈಮೇಲೆಲ್ಲ ಅದೇ ಅಲಂಕಾರ ಅವರಿಗೆ ಆದರೆ ಕೃಷ್ಣ ಕೃಷ್ಣ ಮಾಧವ ಮಾಧವ ಗೋವಿಂದ ಗೋವಿಂದ **'ಕದಾ ನು ದ್ರಕ್ಷ್ಯತೇ ವಿಷ್ಣುಃ ಸ'**[1] ಯಾವಾಗ ದೇವರ ದರ್ಶನ, ಎಲ್ಲಿದ್ದಾನೆ ದೇವರು ಅಂತ ಅನ್ನುತ್ತಾ ಇವೆ. ಚರ್ಯೆ ನೋಡಿದರೆ ಪಿಶಾಚ ಚರ್ಯೆ, ಮನಸ್ಸು ನೋಡಿದರೆ ಅತ್ಯಂತ ಪಾವನವಾದ ಮನಸ್ಸು, ಭಕ್ತಿಪೂರವಾದ ಮನಸ್ಸು ಎಲ್ಲಿದ್ದಾನೆ ದೇವರು ಸರ್ವೋತ್ತಮನಾದಂತಹ ಸ್ವಾಮಿ ಜಗನ್ನಿಯಾಮಕ ಅಂತಹ ಪರಮಾತ್ಮನ ದರ್ಶನ ಪ್ರಲಯ ಕಾಲದೊಳಗೆ ಹದಿನಾಲ್ಕು ಲೋಕಗಳನ್ನು ತನ್ನ ಉದರದೊಳಗೆ ಇಟ್ಟುಕೊಂಡ ಮಹಾಸ್ವಾಮಿ ಎಲ್ಲಿದ್ದಾನೆ.

ಅನ್ತಕಾಲೇ ಜಗನ್ನಾಥಂ ಪ್ರವಿವೇಶ ಜಗತ್ತ್ರಯಮ್ । (79.10 ಭವಿಷ್ಯಪರ್ವ)

ತಮಜಂ ವಿಶ್ವಕರ್ತಾರಂ ಕುತೋ ದ್ರಕ್ಷ್ಯಾಮ ಸಾಮ್ಪ್ರತಮ್ ॥ (79.11 ಭವಿಷ್ಯಪರ್ವ)

1. 79.7 ಭವಿಷ್ಯಪರ್ವ

ಯಾವಾಗ ದರ್ಶನ ವಾದೀತು **'ಎಂದಿಗಾಹುದೋ ನಿನ್ನ ದರುಶನ ಅಂದಿಗಲ್ಲದೇ ಬಂಧ ನೀಗದೋ'** ಅಂತ ಹೇಳುತ್ತಾ ಹೇಳುತ್ತಾ ಆ ಪಿತಾಚಗಳು ಬರುತ್ತಾ ಇವೆ. **'ಅಹೋ ನೌ ದುಷ್ಕೃತಂ ಕರ್ಮ'**[1] ಏನು ಪಾಪ ಕರ್ಮ ಮಾಡಿದ್ದೇವೋ ಈ ಪಿಶಾಚ ಜನ್ಮ ನಮಗೆ ಬಂದು ಹೋಗಿದೆ ಆದರೆ ಎಷ್ಟು ವಿಚಿತ್ರ. ಈ ಪಿಶಾಚ ಜನ್ಮ ಇದು ನೀಚ ಜನ್ಮ ಇದು ಬರಬಾರದು ಅಂತೂ ಒಂದು ಕಡೆಗೆ ವಿವೇಕ ಇದೆ ನಮಗೆ ಆದರೆ ಈ ಪಿಶಾಚ ಜನ್ಮದ ಮೇಲೆ ಭಾರೀ ಪ್ರೀತಿ ಇದೆ ನಮಗೆ ಎಂತಹ ಶರೀರ, ಏನು ಅದ್ಭುತ ಮಾಂಸ, ಏನು ಭಾರೀ ರಕ್ತ ಅಂತ ಆನಂದ ಬೇರೆ ಇದೆ ಮತ್ತೆ ಇದು ಏನು ಮೋಹ.

ಅತ್ರೈವ ಮಹತೀ ಪ್ರೀತಿರ್ವರ್ತತೇ ಸರ್ವದಾ ತಥಾ ॥ (79.14 ಭವಿಷ್ಯಪರ್ವ)

ಈ ಪಿಶಾಚ ಜನ್ಮ ಅದರ ಮೇಲೆ ಇರುವ ಈ ಪ್ರೀತಿ ಇದೆಲ್ಲಾ ಯಾವಾಗ ಹೋಗುತ್ತದೆ ನಮಗೆ, ಈ ಪ್ರಾರಬ್ಧ ಕರ್ಮದಿಂದ ಮೋಕ್ಷ ಯಾವಾಗ ನಮಗೆ.

ಯಾವನ್ನೌ ದುಷ್ಕೃತಂ ಕರ್ಮ ತಾವತ್ಸ್ಥಾಸ್ಯತಿ ತಾದೃಶೀ । (79.15 ಭವಿಷ್ಯಪರ್ವ)

ತತ್ವಜ್ಞಾನ ಇದೆ ಅವುಗಳಿಗೆ, ಪಿಶಾಚಿಗಳು ಅನ್ನುತ್ತವೆ ನಮ್ಮ ಕರ್ಮಗಳು ಇರುವವರೆಗೆ ಈ ಹಣೆಬರಹ ತಪ್ಪಿದ್ದಲ್ಲ. ಸಂಸಾರದಿಂದ ಮೋಚನೆ ಆಗಬೇಕು ವಿಷ್ಣುವಿನಿಂದಲೇ ಆಗಬೇಕು, ಬಾಲ್ಯದಲ್ಲಿ ತಿಳುವಳಿಕೆ ಇರುವುದಿಲ್ಲ, ಯೌವನದಲ್ಲಿ ವಿಷಯಾಸಕ್ತಿ, ವೃದ್ಧರಾದ ಮೇಲೆ ವ್ಯಾಧಿಗಳಿಂದ ಪೀಡಿತರಾಗಿ ಸಾಧನೆ ಮಾಡದೆ ಹಾಗೆ ವ್ಯರ್ಥ ಕಾಲಹರಣ ಮಾಡುತ್ತಾರೆ ಮತ್ತೆ ಗರ್ಭವಾಸ, ಮತ್ತೆ ದುಃಖ. ಈ ಸಂಸಾರ ಏನಾದರೂ ದೂರ ಆಗಬೇಕು ಅಂತಾದರೆ ಒಂದೇ ಒಂದು ದಾರಿ

ಅಸ್ಯೈವ ದುಃಖಮೂಲಸ್ಯ ಸಂಸಾರಸ್ಯ ಸದಾ ಹರಿಃ ।
ಭೇಷಜಂ ಸರ್ವಯಾ ದೇವಃ ಶಙ್ಖಚಕ್ರಗದಾಧರಃ ॥ (79.28 ಭವಿಷ್ಯಪರ್ವ)

ಇಂತಹ ಸಂಸಾರದ ಮೋಚನೆಯನ್ನ ಮಾಡುವುದಕ್ಕೆ ಒಬ್ಬನೇ ಒಬ್ಬ ಸಮರ್ಥ ಶ್ರೀಹರಿ ಇನ್ನೇನು ಬೇಕಪ್ಪ ಪಿಚಾಚಿಗಳು ಹೇಳುತ್ತ ಇವೆ. ಸರ್ವ ರಕ್ಷಕನಾದವನು ಭಗವಂತ ಬಿಟ್ಟರೆ ಬೇರೆ ಇನ್ಯಾರು ಅಲ್ಲ ಅಂತ ಮುನಿಗಳು ಹೇಳಿದರು, ಋಷಿಗಳು ಹೇಳಿದರು, ದೇವತೆಗಳು ಹೇಳಿದರು ಮಾತ್ರ ಅಲ್ಲ ಪಿಶಾಚಿಗಳು ಹೇಳುತ್ತಾ ಇವೆ ಈ ಮಾತನ್ನ. ಆಗ ಪರಮಾತ್ಮ ನೋಡಿದ ಆ ಪಿಶಾಚಿಗಳನ್ನ ಆ ಪಿಶಾಚಿಗಳಿಗೆ ಕೃಷ್ಣನ ಪರಿಚಯ ಇಲ್ಲ ದೇವರನ್ನ ಹುಡುಕಿಕೊಂಡು ಹೊರಟಿವೆ ಆದರೆ ಇವನು ದೇವರು ಅಂತ ಅವುಗಳಿಗೆ ಗೊತ್ತಿಲ್ಲ.

ತತಸ್ತಾವೂಚತುರ್ವಿಷ್ಣುಮನ್ತರೀಕೃತ್ಯ ಕೇಶವಮ್ ॥ (80.3 ಭವಿಷ್ಯಪರ್ವ)

'ಅನ್ತರೀಕೃತ್ಯ ಕೇಶವಮ್' ಆಗ ಇವನು ಕೇಶವ ಅಂತ ಗೊತ್ತಾಗದೇ ಕೇಶವನ ಜೊತೆಗೆ ಮಾತನಾಡುತ್ತಾ ಇದ್ದಾರೆ ಯಾರು ನೀನು, ಇಲ್ಲಿ ಯಾಕೆ ಬಂದಿ ನಾವೆಲ್ಲ ಇಷ್ಟು ಘೋರ ಪಿಶಾಚಿಗಳು ಓಡಾಡುವ ಸ್ಥಳದೊಳಗೆ ನೀನೊಬ್ಬನೇ ಯಾಕಪ್ಪ ಇಲ್ಲಿ ಏನೋ ಕಣ್ಣು ಮುಚ್ಚಿಕೊಂಡು ಧ್ಯಾನ ಮಾಡುತ್ತಾ ಕುಳಿತ್ತಿದ್ದೀಯಲ್ಲ ಏನು ಕೆಲಸ ನಿನಗೆ ಅಂತ ಕೃಷ್ಣನನ್ನೇ ಮಾತನಾಡಿಸುತ್ತವೆ. ಕೃಷ್ಣ ಎಲ್ಲಿದ್ದಾನೆ ಸರ್ವೋತ್ತಮನಾದ ಭಗವಂತ ಅಂತ ಹುಡುಕಿಕೊಂಡು

1. 79.14 ಭವಿಷ್ಯಪರ್ವ



ಹೊರಟ ಪಿಶಾಚಿಗಳು ಪಾಪ ಕೃಷ್ಣನ ಪರಿಚಯವಿಲ್ಲದೆ ಕೃಷ್ಣನನ್ನು ಮಾತನಾಡಿಸುತ್ತಾ ಇವೆ. ಬಹಳ ಚೆನ್ನಾಗಿ ಕಾಣಿಸುತ್ತಾ ಇದ್ದೀ ವಿಷ್ಣು ಕಂಡ ಹಾಗೆ ಕಾಣಿಸುತ್ತಿಯಲ್ಲ ಅಂತ ಅನ್ನುತ್ತವೆ ಪಾಪ. ಸಾಕ್ಷಾತ್ **'ವಿಷ್ಣುರಿವಾಪರಃ'** ಯಾವ ಕೃಷ್ಣನ ವಿಷ್ಣುವಿನ ದರ್ಶನಕ್ಕೆ ನಾವು ಪರಿತಪಿಸುತ್ತಾ ಇದ್ದೇವೆ ಅಂತಹ ವಿಷ್ಣುವೇ ಬಂದು ನಿಂತಂತೆ ಇದೆ ಕೃಷ್ಣಮೂರ್ತಿ ಕಣ್ಣ ಮುಂದೆ ಬಂದು ನಿಂತಂತೆ ಇದೆಯಲ್ಲ ಯಾರು ನೀನು.

ಅಸ್ಮಾತ್ಪ್ರೀತಿಕರಃ ಸಾಕ್ಷಾತ್ ಪ್ರಾಪ್ತೋ ವಿಷ್ಣುರಿವಾಪರಃ । (80.7 ಭವಿಷ್ಯಪರ್ವ)

ಯಾರು ಹೇಳು ದೇವತೆಯೋ ಯಕ್ಷನೋ ಗಂಧರ್ವನೋ ಕಿನ್ನರನ್ನೋ ಕುಬೇರನೋ ಯಮನೋ ಇಂದ್ರನೋ ವರುಣನೋ ಯಾರು ನೀನು, ಸಾಮಾನ್ಯ ವ್ಯಕ್ತಿಯಂತೂ ಅಲ್ಲ ಏನೋ ಒಂದು ಅದ್ಭುತವಾದ ತೇಜಸ್ಸು ನಿನ್ನಲ್ಲಿ ಕಾಣಿಸುತ್ತಾ ಇದೆ ಅಂತ. ಕೃಷ್ಣ ಹೇಳಿದ ನಾನು ಒಬ್ಬ ಕ್ಷತ್ರಿಯ **'ಕ್ಷತ್ರಿಯೋಽಸ್ಮೀತಿ ಮಾಮಾಹು'.** ನೋಡಿ **'ಇತಿ ಕೇಚಿದಾಹುಃ'** ಅನ್ನುತ್ತಾನೆ ನನಗೆ ಯಾವ ಜಾತಿ ಇಲ್ಲ, ಗೋತ್ರ ಇಲ್ಲ ನಾನು ಸ್ವತಂತ್ರ ವಿಷ್ಣು ಅನ್ನುವುದನ್ನ ತೋರಿಸುವುದಕ್ಕೆ ನಾನು ಕ್ಷತ್ರಿಯ ಅನ್ನುವುದಿಲ್ಲ ನನ್ನನ್ನು ಕ್ಷತ್ರಿಯ ಅಂತ ಅನ್ನುತ್ತಾರೆ ಕೆಲವರು ಅಂದ.

ಕ್ಷತ್ರಿಯೋಽಸ್ಮೀತಿ ಮಾಮಾಹುರ್ಮನುಷ್ಯಾಃ ಪ್ರಕೃತಿಸ್ಥಿತಾಃ ॥ (80.10 ಭವಿಷ್ಯಪರ್ವ)

ಪ್ರಕೃತಿ ಬಂಧದಲ್ಲಿ ಸಿಲುಕಿದ ಜನ ಪ್ರಾಕೃತ ಬುದ್ಧಿಯಿಂದ ನನ್ನನ್ನು ಮನುಷ್ಯ ಕ್ಷತ್ರಿಯ ಅಂತ ಅನ್ನುತ್ತಾರೆ. ಯದು ವಂಶದಲ್ಲಿ ನಾನು ಅವತಾರ ಮಾಡಿದ್ದು

ಲೋಕಾನಾಮಥ ಪಾತಾಸ್ಮಿ ಶಾಸ್ತಾ ದುಷ್ಟಸ್ಯ ಸರ್ವದಾ । (80.11 ಭವಿಷ್ಯಪರ್ವ)

ಆದರೆ ದುಷ್ಟರ ಶಾಸಕ, ಶಿಷ್ಟರ ರಕ್ಷಕ ನಾನು, ಇಷ್ಟೇ ಹೇಳಿದ್ದಾನೆ ವಿಷ್ಣು ಅಂತ ಹೇಳಿಕೊಂಡಿಲ್ಲ ಇಷ್ಟು ಹೇಳಿದ. ಆಗ ನೀವು ಇಲ್ಲಿ ಬಂದಿದ್ದೀರಿ ಇದು ಪರಮ ಪವಿತ್ರವಾದ ಕ್ಷೇತ್ರ.

ನೇದೃಶಂ ಸ್ಥಲಮಲಂ ಶಮಲಘ್ನಂ ನಾಸ್ಯ ತೀರ್ಥಸಲಿಲಸ್ಯ ಸಮಂ ವಾಃ ।
ನಾಸ್ತಿ ವಿಷ್ಣುಸದೃಶಂ ನನು ದೈವಂ ನಾಸ್ಮದುಕ್ತಿಸದೃಶಂ ಹಿತರೂಪಮ್ ॥ (ಶ್ಲೋಕ)

ಏಷಾ ಹಿ ಮಹತೀ ಪುಣ್ಯಾ ನಾನಾವಿಪ್ರನಿಷೇವಿತಾ ।
ಬದರೀಯಂ ಸಮಾಖ್ಯಾತಾ ನ ಕ್ಷುದ್ರೈರಾಶ್ರಿತಾ ಕ್ವಚಿತ್ ॥ (80.13 ಭವಿಷ್ಯಪರ್ವ)

ಕೃಷ್ಣ ಹೇಳುತ್ತಾನೆ ಇದು ಬದರೀ ಕ್ಷೇತ್ರ ಈ ಕ್ಷೇತ್ರಕ್ಕೆ ಸಮಾನವಾದ ಕ್ಷೇತ್ರ ಇಲ್ಲ, ಇಲ್ಲಿ ಬಂದು ಏನು ಕೆಲಸ ಮಾಡುತ್ತ ಇದ್ದೀರಿ, ಎಷ್ಟು ಮೃಗಗಳ ಹಿಂಸೆ ಮೃಗಗಳೆಲ್ಲ ಸ್ವಚ್ಛಂದವಾಗಿ ಓಡಾಡಬೇಕು ಇಲ್ಲಿ. ಇಲ್ಲಿ ಋಷಿಗಳು ಮುನಿಗಳು ತಪಸ್ಸು ಮಾಡುವ ಸ್ಥಳ ನೀವು ಬೇರೆ ಕಡೆಗೆ ಹೋಗಿ ಇಲ್ಲಿ ಎಲ್ಲ ಹೊಲಸು ಮಾಡುವುದು ಅಲ್ಲ ಎಂತಹ ಕೆಲಸ ಮಾಡುತ್ತಾ ಇದ್ದೀರಿ.

ನ ಹನ್ತವ್ಯಾ ಮೃಗಾಶ್ಚಾತ್ರ ಮೃಗಯಾ ನಾತ್ರ ವರ್ತತೇ ।
ನ ತು ಕ್ಷುದ್ರೈಃ ಪ್ರವೇಷ್ಟವ್ಯಾ ನ ಕೃತಘ್ನೈರ್ನ ನಾಸ್ತಿಕೈಃ ॥ (80.15 ಭವಿಷ್ಯಪರ್ವ)

ಇಲ್ಲಿ ಯಾವ ನಾಸ್ತಿಕರು ಪ್ರವೇಶ ಮಾಡುವ ಹಾಗಿಲ್ಲ, ಯಾವ ಕೃತಘ್ನರು ಪ್ರವೇಶ ಮಾಡುವ ಹಾಗಿಲ್ಲ ಭಕ್ತರು ಮಾತ್ರ ಪ್ರವೇಶ ಮಾಡಬೇಕು ಇದು ಬದರಿಕಾಶ್ರಮದಲ್ಲಿ, ನೀನು ಯಾರು ಹೇಳುವವನು ನಾನು ಈ ಬದರಿಕಾಶ್ರಮದ ರಕ್ಷಕ ಅನ್ನುತ್ತಾನೆ ಕೃಷ್ಣ.

ಅಹಮಸ್ಯ ತು ದೇಶಸ್ಯ ರಕ್ಷಿತಾ ನಾತ್ರ ಸಂಶಯಃ । (80.16 ಭವಿಷ್ಯಪರ್ವ)

ತಿಳಿದುಕೋ ಏನಾದರೂ ಹೇಳಿದ ಮಾತನ್ನು ಉಲ್ಲಂಘನ ಮಾಡಿದಿರಿ ಒಳ್ಳೆಯದಾಗಲಿಕ್ಕಿಲ್ಲ ನಿಮಗೆ. ಸರಿ, ನನ್ನ ಪರಿಚಯ ಹೇಳಿದ್ದೇನೆ, ಎಚ್ಚರಿಕೆಯನ್ನೂ ಕೊಟ್ಟದ್ದೇನೆ ನೀವಿಬ್ಬರು ಯಾರು ಹೇಳಿ ಅಂದ ಕೃಷ್ಣ, ಯಾಕೆ ಬಂದಿದ್ದೀರಿ.

ಕೌ ಭವನ್ತೌ ಕ್ವ ನು ಯುವಾಂ ಕಸ್ಯೇಯಂ ಮಹತೀ ಚಮೂಃ ॥ (80.17 ಭವಿಷ್ಯಪರ್ವ)

ಏನಿದು ಭಯಂಕರ ನಾಯಿಗಳಲ್ಲಿ ಸಾವಿರಾರು ನಾಯಿಗಳನ್ನು ಕರೆದುಕೊಂಡು ಬಂದಿದ್ದಾರೆ ಅಲ್ಲಿ ಈ ಎಲ್ಲ ನಾಯಿಗಳನ್ನು ಯಾಕೆ ಕರೆದುಕೊಂಡು ಬಂದಿದ್ದೀರಿ ಏನು ಕೆಲಸ ನಿಮಗೆ, ಇದೇ ಲಾಸ್ಟು ಇನ್ನೊಮ್ಮೆ ಇಲ್ಲಿ ಪ್ರವೇಶ ಮಾಡತಕ್ಕದ್ದಲ್ಲ ನೀವು. ಈ ರೀತಿ ಧ್ಯಾನ ಮಾಡುವವರಿಗೆಲ್ಲ ಹಿಂಸೆ ಮಾಡಿ ಒದರುವುದೇನು ಚೀರುವುದೇನು ಕೊಲ್ಲುವುದೇನು ಇದನ್ನೆಲ್ಲ ಮಾಡಬೇಡಿ ಅಂತ ಹೇಳಿದಾಗ ಅವರು ಹೇಳುತ್ತಾರೆ. ಮಂಗಳಾಚರಣ ಮಾಡುತ್ತವೆ ತಮ್ಮ ಪರಿಚಯವನ್ನು ತಾವು ಹೇಳಬೇಕಾದರೆ ದೇವರಿಗೆ ನಮಸ್ಕಾರ ಮಾಡುತ್ತವೆ ಎದುರಿಗೆ ಇದ್ದವನು ದೇವರು ಅಂತ ಗೊತ್ತಾಗುತ್ತಾ ಇಲ್ಲ ಅವರಿಗೆ.

ನಮಸ್ಕೃತ್ಯ ಜಗನ್ನಾಥಂ ಹರಿಂ ಕೃಷ್ಣಂ ಜಗತ್ಪತಿಮ್ ॥ (80.21 ಭವಿಷ್ಯಪರ್ವ)
ಆದಿದೇವಮಜಂ ವಿಷ್ಣುಂ ವರೇಣ್ಯಮನಘಂ ಶುಚಿಮ್ । (80.22 ಭವಿಷ್ಯಪರ್ವ)

ಆ ಸರ್ವೋತ್ತಮನಾದ ಶ್ರೀಹರಿಗೆ ಎರಡೂ ಪಿಶಾಚಿಗಳು ನಮಸ್ಕಾರ ಮಾಡಿ ಹೇಳುತ್ತಾ ಇವೆ. ಇಲ್ಲಿ ಘಂಟಾಕರ್ಣ ಪಿಶಾಚ ಹೇಳಿತು, ಘಂಟಾಕರ್ಣ ಪಿಶಾಚನೇ ಮುಂದೆ ಧ್ಯಾನ ಮಾಡಿದ, ಅವನಿಗೆ ದೇವರ ಸಾಕ್ಷಾತ್ಕಾರ ಆಯಿತು ಅಂತ ಹೀಗೆ ಏಕವಚನ ಬರುತ್ತದೆ ಹರಿವಂಶದಲ್ಲಿ, ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಘಂಟಾಕರ್ಣ ಅವನ ತಮ್ಮ ಕರ್ಣ ಎರಡೂ ಪಿಶಾಚಿಗಳು ಧ್ಯಾನ ಮಾಡಿದವು, ಎರಡೂ ಸ್ತೋತ್ರ ಮಾಡಿದವು, ಎರಡಕ್ಕೂ ಸಾಕ್ಷಾತ್ಕಾರ ಆಯಿತು ಅಂತ ಯೋಚನ ಪ್ರಯೋಗವನ್ನು ಮಾಡುತ್ತಾರೆ ಆದ್ದರಿಂದ ಇಲ್ಲಿ ಬರುವ ಘಂಟಾಕರ್ಣ ಎಂಬ ಶಬ್ದ ಉಪಲಕ್ಷಣ ಎಂಬುದಾಗಿ ನಾವು ತಿಳಿಯಬೇಕು. ಇಬ್ಬರೂ ಕೂಡ ಪರಮಾತ್ಮನ ಭಕ್ತರೇ ಅದರ ಸೂಚನೆ ಮಾತ್ರ ಇಲ್ಲಿ ಸಿಗುತ್ತೆ ನನ್ನ ಉದ್ಧಾರ ಮಾತ್ರ ಮಾಡಬೇಡ ನನ್ನ ತಮ್ಮನ ಉದ್ಧಾರನೂ ಮಾಡು ಅಂತ ಘಂಟಾಕರ್ಣ ಕೇಳಿದ ಮಾತು ಹರಿವಂಶದಲ್ಲಿ ಬರುತ್ತದೆ, ಉದ್ಧಾರ ಮಾಡಿದ ಕಥೆಯೂ ಬರುತ್ತದೆ. ಧ್ಯಾನ ಮಾಡುವ ಪ್ರಸಂಗದಲ್ಲಿ ಮಾತ್ರ ದ್ವಿವಚನ ಇಲ್ಲಿ ಕಾಣಿಸುವುದಿಲ್ಲ ಅದನ್ನು ತಾತ್ಪರ್ಯ ನಿರ್ಣಯಕ್ಕೆ ಅನುಗುಣವಾಗಿ ನಾವು ತಿಳಿದುಕೊಳ್ಳಬೇಕು. ಈ ರೀತಿ ಆ ಘಂಟಾಕರ್ಣ ಪಿಶಾಚ ಪರಮಾತ್ಮನಿಗೆ ನಮಸ್ಕಾರ ಮಾಡಿ ಹೇಳುತ್ತಾ ಇದೆ ನಾನು ಕುಬೇರನ ಒಬ್ಬ ಸೇವಕ ನಾವಿಬ್ಬರೂ ಘಂಟಾಕರ್ಣ, ಕರ್ಣ ಗಂಧರ್ವರು, ನಾವು ಮಾಡಿದಂತಹ ಮಹಾಪಾಪದಿಂದ ಈ ರೀತಿ ಪಿಶಾಚಿ ಯೋನಿಯಲ್ಲಿ ಬಂದಿದ್ದೇವೆ. ಮತ್ತೆ ಇಷ್ಟೆಲ್ಲಾ ಪ್ರಾಣಿಗಳ ಹಿಂಸೆ ಎಲ್ಲ ಮಾಡುತ್ತಿರಲ್ಲ ಯಾಕೆ ಇಷ್ಟೆಲ್ಲ ಮೃಗಗಳನ್ನು ಕೊಲ್ಲುವುದು ನೀವು, ಎಷ್ಟು ಮೃಗಗಳನ್ನು ಕೊಂದು ಮಾಂಸ ತೆಗೆದುಕೊಂಡು ಬಂದಿದ್ದೀರಿ ಇಲ್ಲಿ, ಇದೆಲ್ಲ ಏನು ಕೆಲಸ ಮಾಡುತ್ತ ಇದ್ದೀರಿ. ಇದೆಲ್ಲ ಏನು ಕೆಲಸ ಮಾಡುತ್ತ ಇದ್ದೀರಿ

ಯಾಕೆ ಹಾಗೆ ಅನ್ನುತ್ತೀರಿ, ನಾವು ವಿಷ್ಣು ಪೂಜೆಯನ್ನು ಮಾಡುತ್ತಾ ಇದ್ದೇವೆ, ಪಿಶಾಚಗಳ ಧರ್ಮವೇ ಮಾಂಸ ಭಕ್ಷಣ ಮಾಡುವುದು, ರಕ್ತಪಾನ ಮಾಡುವುದು ಮತ್ತೆ ನಾವು ಏನು ಭಕ್ಷಣ ಮಾಡುತ್ತೇವೆಯೋ ಅದನ್ನು ದೇವರಿಗೆ ನೈವೇದ್ಯ ಮಾಡಿ ನಾವು ತೆಗೆದುಕೊಳ್ಳುತ್ತೇವೆ ನಾವು ಮಾಡುವುದು ವಿಷ್ಣು ಪೂಜೆ ಹೇಳುತ್ತವೆ.

ಮೃಗಯೇಯಂ ಸುಮಹತೀ ವಿಷ್ಣೋಃ ಪೂಜಾರ್ಥಮಿತ್ಯುತ । (80.25 ಭವಿಷ್ಯಪರ್ವ)

ವಿಷ್ಣು ಪೂಜೆಗಾಗಿ ನಾನು ಈ ಎಲ್ಲ ಬೇಟೆ ಮಾಡಿ ಆ ಮಾಂಸವನ್ನು ನೈವೇದ್ಯ ಮಾಡಿಕೊಳ್ಳುತ್ತೇವೆ ಯಾಕೆ ಅಂತ ಯಾಕೆ ಕೇಳುತ್ತೀಯಪ್ಪ ನೀನು ಅಂತ ಈ ರೀತಿಯಾಗಿ ಹೇಳುತ್ತವೆ. ಅದು ಸರಿ ನಿನಗೆ ಘಂಟಾಕರ್ಣ ಅಂತ ಯಾಕಪ್ಪ ಹೆಸರಿಟ್ಟರು, ಯಾರು ಅವರು ಇಟ್ಟವರು, ನಿಮ್ಮಪ್ಪ ಯಾರು ಅಂತ ಕೇಳಿದ ದೇವರು. ನಮ್ಮಪ್ಪನ ಬಗ್ಗೆ ಕೇಳಬೇಡ ನನಗೆ ಘಂಟಾಕರ್ಣ ಅಂತ ಯಾಕೆ ಹೆಸರಿಟ್ಟಿದ್ದಾರೆ ಅಂದರೆ ನನಗೆ ಮೊದಲು ಅಷ್ಟು ವಿಷ್ಣುವಿನ ಬಗ್ಗೆ ದ್ವೇಷ ಇತ್ತು ಮೂಲತಃ ನಾವು ಗಂಧರ್ವರು ವಿಷ್ಣು ಭಕ್ತರು ಆದರೆ ಶಾಪದಿಂದ ಈ ಪಿಶಾಚಿ ಯೋನಿಯಲ್ಲಿ ಬಂದಿದ್ದೇವೆ. ಪಿಶಾಚಗಳಾದಾಗ ನಮಗೆ ವಿಷ್ಣುವಿನ ಬಗ್ಗೆ ಭಾರೀ ದ್ವೇಷ ಬಂತು ಅದಕ್ಕೆ ಎಲ್ಲಿಯಾದರೂ ಹರೇ ನಾರಾಯಣ ಕೃಷ್ಣ ಅಂತ ಯಾರಾದರೂ ಹರಿ ಭಕ್ತರು ಹೇಳುತ್ತಾನೆ ಇರುತ್ತಾರೆ ಅಲ್ಲಲ್ಲಲ್ಲಲ್ಲಿ ಆ ಶಬ್ದ ಕಿವಿಗೆ ಬೀಳಬಾರದು ಅಂತ ಕಿವಿಗೆ ಎರಡು ಘಂಟಿ ಕಟ್ಟುಕೊಂಡಿದ್ದೇನೆ ಢಣಾ ಢಣಾ ಯಾವಾಗಲೂ ಘಂಟಿ ಬಾರಿಸುತ್ತಾ ಇರಬೇಕು ನಾರಾಯಣ ಕೃಷ್ಣ ಅನ್ನುವ ಶಬ್ದನೇ ಕಿವಿಗೆ ಬೀಳಬಾರದು ಅಂತ. ಮತ್ತೆ ಅಷ್ಟು ವಿಷ್ಣುವಿನ ದ್ವೇಷ ಮಾಡುತ್ತಾ ಇದ್ದರೆ ಮಹಾರಾಯ ಈಗ ಮತ್ತೆ ನೀನೇ ನಾರಾಯಣ ಕೃಷ್ಣ ಅಂತ ಅಂದುಕೊಳ್ಳುತ್ತಾ ಬರುತ್ತಾ ಇದ್ದೀಯಲ್ಲ ಯಾಕೆ ಅಂತ ಅದು ಮೊದಲು ಆ ದ್ವೇಷ ಇತ್ತು ಹೀಗಾಗಿ ಕಿವಿಗೆ ಘಂಟಿ ಕಟ್ಟುಕೊಂಡಿದ್ದೆ ಆಗ ಘಂಟಾಕರ್ಣ ಅಂತ ಹೆಸರು ಬಂತು ಈಗ ಆ ದ್ವೇಷ ಹೋಯಿತು. ಈಗ ಯಾಕಪ್ಪ ದ್ವೇಷ ಹೋಯಿತು ನಿಮಗೆ ಅಂತ ಕೃಷ್ಣ ಕೇಳಿದಾಗ ಘಂಟಾಕರ್ಣ ಪಿಶಾಚ ಹೇಳಿತು ಈಗ ಯಾಕೆ ದ್ವೇಷ ಹೋಯಿತು ಅಂದರೆ ನನಗೆ ಮೋಕ್ಷ ಬೇಕಾಗಿದೆ. ಏನು ನೋಡಿ ಆ ಪರಮಾತ್ಮನ ಸರ್ವೋತ್ತಮತ್ವ ಶ್ರೀಮದಾಚಾರ್ಯಾರು ಹೇಳುವ ಸಿದ್ಧಾಂತ ಎಷ್ಟು ಜಬರ್ದಸ್ತಾಗಿ ಹೇಳುತ್ತಾ ಇದೆ ಹರಿವಂಶ. ನಮ್ಮಿಬ್ಬರಿಗೂ ಅಣ್ಣ ತಮ್ಮಂದಿರಿಗೆ ಮೋಕ್ಷ ಬೇಕು ಅಂತ ಇಚ್ಛೆಯಾಯಿತು ಆ ಮೋಕ್ಷಕ್ಕೋಸ್ಕರ ನಾವು ಏನು ಮಾಡಿದೆವು ಅಂದರೆ ನಾವಿಬ್ಬರು ಕೈಲಾಸಕ್ಕೆ ಹೋದೆವು ತಪಶ್ಚರ್ಯೆ ಮಾಡಿದೆವು ರುದ್ರ ದೇವರು ಪ್ರತ್ಯಕ್ಷರಾದರು ಏನು ಬೇಕು ವರ ಕೇಳಿ ಅಂತ ಕೇಳಿದರು.

ಆರಾಧ್ಯ ತಂ ಮಹಾದೇವಮಸ್ತುವಂ ಸತತಂ ಶಿವಮ್ । (80.28 ಭವಿಷ್ಯಪರ್ವ)

ರುದ್ರ ದೇವರು ಅನ್ನುತ್ತಾರೆ **'ವೃಣೀಷ್ವೇತಿ ವರಂ'**[1] ಆಗ ನಾನು ಕೇಳಿದೆ ನಮ್ಮಿಬ್ಬರಿಗೂ ಮೋಕ್ಷವನ್ನು ಕೊಟ್ಟುಬಿಡಬೇಕಪ್ಪ ಅಂತ ಹೇಳಿದಾಕ್ಷಣಕ್ಕೆ ರುದ್ರ ದೇವರು ಕೈ ಎತ್ತಿ ಬಿಟ್ಟರು ಮೋಕ್ಷ ನನಗೆ ಕೊಡಲಿಕ್ಕೆ ಆಗುವುದಿಲ್ಲ, ಮೋಕ್ಷ ಕೊಡಬೇಕು ಅಂದರೆ ವಿಷ್ಣುವೇ ಕೊಡಬೇಕು ಅವನೇ ಮೋಕ್ಷ ಪ್ರದ, ನಾನಲ್ಲ ಮೋಕ್ಷ ಪ್ರದ ನನ್ನ ಹತ್ತಿರ ಯಾಕೆ ಬಂದಿರಿ ಅನ್ನುತ್ತಾರೆ ರುದ್ರ ದೇವರು.

ಮುಕ್ತಿಂ ಪ್ರಾರ್ಥಯಮಾನಂ ಮಾಂ ಪುನರಾಹ ತ್ರಿಲೋಚನಃ ।
ಮುಕ್ತಿಪ್ರದಾತಾ ಸರ್ವೇಷಾಂ ವಿಷ್ಣುರೇವ ನ ಸಂಶಯಃ ॥ (80.30 ಭವಿಷ್ಯಪರ್ವ)

1. 80.29 ಭವಿಷ್ಯಪರ್ವ

ಕೊಡಬೇಕು ಮೋಕ್ಷ ವಿಷ್ಣುವೇ ಕೊಡಬೇಕು ನಾನಲ್ಲ ಮೋಕ್ಷ ಕೊಡುವುದು ಯಾಕೆ ಬಂದಿರಿ ಇಲ್ಲಿ ಅಡ್ರೆಸ್ಸು ತಪ್ಪಿ ಬಂದಿದ್ದೀರಿ ಅನ್ನುತ್ತಾರೆ ರುದ್ರ ದೇವರು, ಹೋಗಿ ವಿಷ್ಣುವನ್ನು ಭಜನೆ ಮಾಡಿ ಅಲ್ಲಿ ಸಿಗುತ್ತೆ ನಿಮಗೆ ಮೋಕ್ಷ. **'ಅಹಂ ಭೋಗಪ್ರದೋವತ್ಸ ಮೋಕ್ಷದಸ್ತು ಜನಾರ್ದನಃ'** ಏನಾದರೂ ಬೇರೆ ಭೋಗ ಬೇಕು, ಹೊಟ್ಟೆ ಬಟ್ಟೆಗೆ ಬೇಕು ಆ ಲೋಕ ಬೇಕು, ಈ ಲೋಕ ಬೇಕು ಸ್ವರ್ಗ ಬೇಕು ಕೇಳಿ ಕೊಡುತ್ತೇನೆ, ಮೋಕ್ಷ ಕೊಡುವುದು ನನ್ನ ಯೋಗ್ಯತೆ ಅಲ್ಲ ನನ್ನ ಅಧಿಕಾರವೇ ಅಲ್ಲ.

ಮುಕ್ತಿಪ್ರದಾತಾ ಸರ್ವೇಷಾಂ ವಿಷ್ಣುರೇವ ನ ಸಂಶಯಃ ॥ (80.30 ಭವಿಷ್ಯಪರ್ವ)

ತಸ್ಮಾದ್ ಗತ್ವಾ ಚ ಬದರೀಂ ತತ್ರಾರಾಧ್ಯ ಜನಾರ್ದನಮ್ ।
ಮುಕ್ತಿಂ ಪ್ರಾಪ್ನುಹಿ ಗೋವಿನ್ದಾನ್ನರನಾರಾಯಣಾಶ್ರಮೇ ॥ (80.31 ಭವಿಷ್ಯಪರ್ವ)

ಕೈಲಾಸಕ್ಕೆ ಬಂದಿದ್ದೀರಿ ಬೇರೆ ಫಲಗಳನ್ನು ನಿಮಗೆ ಅವಶ್ಯವಾಗಿ ನಾನು ಕೊಡುತ್ತೇನೆ ಪರಮಾತ್ಮನ ಅನುಗ್ರಹದಿಂದ ಬೇಕಾದಷ್ಟು ದೇವರು ನನಗೂ ಸಾಮರ್ಥ್ಯ ಕೊಟ್ಟಿದ್ದಾನೆ ಆದರೆ ಮೋಕ್ಷ ಬೇಕು ಅಂದರೆ ಆ ವಿಷ್ಣು ಕ್ಷೇತ್ರಕ್ಕೆ ಹೋಗಿ ಅಲ್ಲಿ ನೀವು ಮೋಕ್ಷವನ್ನು ಪಡೆದುಕೊಳ್ಳಿ. **'ಗೋವಿನ್ದಾನ್ನರನಾರಾಯಣಾಶ್ರಮೇ ಇತ್ಯುಕ್ತೋ ದೇವದೇವೇನ'**[1] ಹೀಗಾಗಿ ಅಂದಿನಿಂದ ನಾನು ವಿಷ್ಣು ಭಕ್ತಿಯನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದೆ ಆ ವಿಷ್ಣು ಎಲ್ಲಿದ್ದಾನೆ ಅಂತ ಹುಡುಕಿಕೊಂಡು ಇಲ್ಲಿ ಬಂದೆ. ಇಲ್ಲಿ ಯಾಕೆ ಬಂದಿ ಬದರಿಕಾಶ್ರಮಕ್ಕೆ ಅಂತ ನೀನು ಕೇಳುತ್ತೀಯಲ್ಲ ನಾನು ವಿಷ್ಣುವನ್ನು ಹುಡುಕಿಕೊಂಡು ಬಂದಿದ್ದೇನೆ ವಿಷ್ಣು ಇಲ್ಲಿದ್ದಾನೆ ಅಂತ ಹೇಳಿದ್ದಾರೆ ನನಗೆ ಮತ್ತು ದ್ವಾರಕಾ ಪಟ್ಟಣದಲ್ಲಿ ಒಂದು ರೂಪದಿಂದ ಇದ್ದಾನಂತೆ ಕೃಷ್ಣಾವತಾರ ಮಾಡಿದ್ದಾನಂತೆ ಆ ಕೃಷ್ಣನ ದರ್ಶನವನ್ನೂ ಮಾಡಬೇಕಾಗಿದೆ. ಬದರಿಕಾಶ್ರಮದಲ್ಲಿ ನಾರಾಯಣನ ದರ್ಶನ ಮಾಡಿ, ದ್ವಾರಕೆಯಲ್ಲಿ ಕೃಷ್ಣನ ದರ್ಶನ ಮಾಡಿಕೊಂಡು ಅವನ ಅನುಗ್ರಹದಿಂದ ಈ ಪಿಶಾಚ ಜನ್ಮದಿಂದ ಮೋಕ್ಷವನ್ನು ಪಡೆದು ಮುಂದೆ ಸಾಧನೆ ಮಾಡಿ ಮಹಾಮೋಕ್ಷವನ್ನು ಪಡೆಯುವ ಪ್ರಯತ್ನದೊಳಗೆ ನಾವಿದ್ದೇವೆ ಇದು ನಮ್ಮ ಸುದ್ದಿ ಅನ್ನುತ್ತಾರೆ. ತಿಳಿದುಕೊಳ್ಳಿ ಏನು ಅದ್ಭುತವಾಗಿದೆ ವಿಷ್ಣು ಸರ್ವೋತ್ತಮತ್ವ.

ತಮೇವ ಪರಮಂ ಮತ್ವಾ ಗೋವಿನ್ದಂ ಗರುಡಧ್ವಜಮ್ । (80.32 ಭವಿಷ್ಯಪರ್ವ)
ತಸ್ಮಾತ್ ಪ್ರಾರ್ಥಯಮಾನಃ ಸನ್ಮುಕ್ತಿಂ ದೇಶಮಮುಂ ಗತಃ ॥ (80.33 ಭವಿಷ್ಯಪರ್ವ)

ಇದು ಮುಕ್ತಿ ದೇಶ ಅದಕ್ಕಾಗಿ ನಾನು ಬದರಿಕಾಶ್ರಮಕ್ಕೆ ಬಂದಿದ್ದೇನೆ, ಇಲ್ಲಿ ಮುಗಿಸಿಕೊಂಡು ಪಶ್ಚಿಮ ಸಮುದ್ರದ ಮಧ್ಯದಲ್ಲಿ ಇರುವ ದ್ವಾರಕಾ ಪಟ್ಟಣಕ್ಕೂ ಹೋಗುವ ಸಂಕಲ್ಪ ನಮ್ಮದಿದೆ ಎಂಬುದಾಗಿ ಅವರು ಹೇಳಿದ್ದಾರೆ. ಹೇಳುವುದಷ್ಟೇ ಅಲ್ಲ ಘಂಟಾಕರ್ಣನಿಗೆ ಸುಮ್ಮನೆ ಅಂದರೆ ನೀನು ಎಲ್ಲಿ ಹೋಗಿದ್ದೀ, ಇಲ್ಲಿ ಹೋಗಿದ್ದೆ, ಇಲ್ಲಿ ಬಂದಿದ್ದೆ ಇಷ್ಟೇ ಅವನು ಮಾತು ಮಾತಿಗೆ ವಿಷ್ಣು ಸುಮ್ಮನೆ ಸುದ್ದಿ ಒಂದೆರಡು ನಿಮಿಷ ಹೇಳಿದ ಅಷ್ಟೇ. ಆ ಸುದ್ದಿ ಹೇಳುವಾಗಲೂ ವಿಷ್ಣು ಸರ್ವೋತ್ತಮತ್ವವನ್ನು ಹೇಳುತ್ತಾನೆ ಮತ್ತೆ ದೇವರ ಸ್ತೋತ್ರ ಆದಿಯಲ್ಲಿ ದೇವರ ಸ್ತೋತ್ರ ಮಾಡಿ ಪ್ರಾರಂಭ ಮಾಡಿದ, ಮಧ್ಯದಲ್ಲಿ ದೇವರೇ ಮೋಕ್ಷ ಪ್ರಧಾನ ಅಂತ ಮಹಿಮೆ ಹೇಳಿದ ತಾನು ಹೇಳುವ ಸುದ್ದಿ ಮುಗಿಸಿದ ಮೇಲೆ ಮತ್ತೆ ಸ್ತೋತ್ರ ಮಾಡುತ್ತಾನೆ ಘಂಟಾಕರ್ಣ ಘಂಟೆಗಟ್ಟಲೆ ಸ್ತೋತ್ರ ಮಾಡುತ್ತಾನೆ.

1. 80.32 ಭವಿಷ್ಯಪರ್ವ

ಕರ್ತಾ ಸಮಸ್ತಸ್ಯ ಹರಿಃ ಪುರಾತನಃ ಪ್ರಭುಃ ಪ್ರಭೂಣಾಮಪಿ ಯಃ ಸದಾತ್ಮಕಃ ।

ತಮಾದಿದೇವಂ ವರದಂ ವರೇಣ್ಯಂ ದ್ರಷ್ಟುಂ ಹರಿಂ ಸಮ್ಮತಿ ಸಂಯತಾಃ ಸ್ಮ ॥ (80.38 ಭವಿಷ್ಯಪರ್ವ)

ಶ್ರೀಹರಿಯನ್ನು ನೋಡುವುದಕ್ಕೆ ಹೊರಟಿದ್ದೇವೆ ಇಷ್ಟೇ ಹೇಳಬೇಕಾಗಿದೆ ಅವನಿಗೆ ಆ ಶ್ರೀಹರಿ ಎಂಥವನು ಅಂತ ಇಡೀ ಅಧ್ಯಾಯದಿಂದ ವರ್ಣನೆ ಮಾಡುತ್ತದೆ ಪಿಶಾಚ. ತಿಳಿದುಕೊಳ್ಳಿರಿ ಒಳ್ಳೆಯ ಬುದ್ಧಿ ಇದ್ದು ಸಜ್ಜನರ ಸಹವಾಸ ಇದ್ದೂ ದೇವರ ಸ್ತುತಿಯನ್ನ ಚೆನ್ನಾಗಿ ಮಾಡುವುದಿಲ್ಲ ಆ ಪಿಶಾಚ ಎಷ್ಟು ಚೆನ್ನಾಗಿ ಸ್ತೋತ್ರ ಮಾಡುತ್ತ ಇದೆ.

ಯಸ್ಯೋದರಾದ್ ವಿಶ್ವಮಿದಂ ಪ್ರಭೂತಂ ಲಯಂ ಚ ತಸ್ಮಿನ್ ಸಮುಪೈತಿ ಕಲ್ಪೇ ।

ತಸ್ಯೈವ ಸಾಕ್ಷಾದ್ ವಶವರ್ತಿ ವಿಶ್ವಂ ದ್ರಕ್ಷ್ಯಾಮ ದೇವಂ ಪುರುಷೋತ್ತಮಂ ಹರಿಮ್॥(80.40 ಭವಿಷ್ಯಪರ್ವ)

ಸೃಷ್ಟಿ ಸ್ಥಿತಿ ಪ್ರಲಯಗಳಿಗೆ ಕರ್ತ ನಿಯಾಮಕ ಮೋಕ್ಷಪ್ರದ ಆ ಪರಮಾತ್ಮನನ್ನ ದರ್ಶನ ಮಾಡುವುದಕ್ಕೆ ಹೊರಟಿದ್ದೇವೆ ಇತ್ಯಾದಿಯಾಗಿ ಅದ್ಭುತವಾದ ಸ್ತೋತ್ರವನ್ನೆಲ್ಲ ಮಾಡಿದ್ದಾರೆ. ಅಷ್ಟೆಲ್ಲ ಸ್ತೋತ್ರ ಮಾಡಿದ ಮೇಲೆ ಇಬ್ಬರೂ ನೋಡಿಕೊಳ್ಳುತ್ತಾರೆ ಅಣ್ಣ ತಮ್ಮ ಹೇ ಸಮಯ ಆಯಿತೋ ತಪಸ್ಸಿನ ಸಮಯ ಆಯಿತು, ಧ್ಯಾನದ ಸಮಯ ಆಯಿತು ನಮ್ಮದು. ಸುಮ್ಮನೆ ಯಾರೋ ಒಬ್ಬ ಹುಡುಗ ಬಂದಿದ್ದಾನೆ ಅಂತ ಇವನ ಜೊತೆಗೆ ಜಾಸ್ತಿ ಮಾತನಾಡುವುದು ಬೇಡ, ಧ್ಯಾನ ಮಾಡೋಣ ನಾವು **'ನಿಯಮೋಽಪಸ್ತಿ ನೋ ಮರ್ತ್ಯ'** ಅನ್ನುತ್ತಾರೆ, ಕೃಷ್ಣನಿಗೆ ಗೊತ್ತಿಲ್ಲ ಪಾಪ ಅವರಿಗೆ.

ನಿಯಮೋಽಪ್ಯಸ್ತಿ ನೋ ಮರ್ತ್ಯ ಯಥೇಷ್ಟಂ ಗಚ್ಛ ಸಾಮ್ಪ್ರತಮ್ ॥ (80.53 ಭವಿಷ್ಯಪರ್ವ)

ನಮ್ಮ ಧ್ಯಾನದ ಸಮಯ ಆಯಿತು ಏನು ಸಮಯ ಆಯಿತು ಸಂಧ್ಯಾಕಾಲನ ಅಲ್ಲ, ಏನು ಮಧ್ಯ ರಾತ್ರಿ ಆಯಿತು ಅಂತ ಅಂದರೆ ನಿಶಾಚರರಿಗೆ ಅದೇ ಕಾಲ ಮಧ್ಯರಾತ್ರಿ ಆಯಿತು. ಈಗ ಈ ಮಧ್ಯರಾತ್ರಿ ಕಾಲ ನಮ್ಮ ಧ್ಯಾನ ಕಾಲ, ನಮ್ಮ ತಪಸ್ಸಿನ ಕಾಲ ನೀನು ಹೆಚ್ಚು ಹೊತ್ತು ಮಾತನಾಡಿಸಬೇಡ, ಇನ್ನು ನಿನ್ನ ಪ್ರಶ್ನೆಗೆ ನಿನಗೆ ಉತ್ತರ ಕೊಟ್ಟಿದ್ದೇವೆ ನಿನ್ನ ಕೆಲಸ ನೀನು ಮಾಡಿಕೋ, ನಮ್ಮ ಕೆಲಸ ನಾವು ಮಾಡಿಕೊಳ್ಳುತ್ತೇವೆ, ಆಯಿತು ನೀವು ಧ್ಯಾನ ಮಾಡಿಕೊಳ್ಳಿ. ಧ್ಯಾನ ಮಾಡಿಕೊಳ್ಳಿ ಅಂತ ಅಂದ ತಕ್ಷಣ ಇನ್ನು ಆಚಮನ ಮಾಡಿ ಶಿಸ್ತಾಗಿ ಎಲ್ಲ ಪ್ರಾಣಾಯಾಮಾದಿಗಳನ್ನು ಮಾಡಿ ಧ್ಯಾನಕ್ಕೆ ಕೂಡಬೇಕಲ್ಲ ಏನು ಆಚಮನ ರಕ್ತ, ಗಟ ಗಟ ಅಂತ ಒಂದೆರಡು ಕೊಡ ರಕ್ತ ಕುಡಿದರು, ಒಂದಿಷ್ಟು ಮಾಂಸ ತಿಂದಿದ್ದಾರೆ ಆದರೆ ದರ್ಭಾಸನ ಮತ್ತೆ ದರ್ಭಾಸನ ಹಾಕಿ ಪ್ರೋಕ್ಷಣೆ ಮಾಡಿದ್ದಾರೆ.

ಆಸನಂ ಕುಶಸಂಯುಕ್ತಂ ಕೃತ್ವಾ ಚಾಭ್ಯುಕ್ಷ್ಯ ವಾರಿಣಾ ॥ (80.57 ಭವಿಷ್ಯಪರ್ವ)

ಭಾರೀ ಮಡಿ ಅಷ್ಟೆಲ್ಲಾ ರಕ್ತ ಪಾನ, ಮಾಂಸ ಭಕ್ಷಣ ಎಲ್ಲಾ ಮಾಡಿದ ಮೇಲೆ ಹೇ ಎಲ್ಲರೂ ದೂರ ಸರಿಯಿರಿ ಅಂತ ಹೇಳಿ ದರ್ಭಾಸನವನ್ನ ಹಾಕಿಕೊಂಡು ನೀರಿನಿಂದ ಪ್ರೋಕ್ಷಣೆ ಮಾಡಿ ಭಾರೀ ಶುದ್ಧ ಮಡಿಯಿಂದ ಎರಡೂ ಪಿಶಾಚಗಳು ಧ್ಯಾನಕ್ಕೆ ಕುಳಿತಿವೆ.

ಸುಖಾಸನಂ ಸಮಾಸ್ಥಾಯ ಸಮಾಧೌ ಯತತೇ ಶ್ವಪಃ ॥ (80.58 ಭವಿಷ್ಯಪರ್ವ)

ಸುತ್ತಲೂ ನಾಯಿಗಳು ಮಧ್ಯದಲ್ಲಿ ಕುಳಿತು ಇವರ ಧ್ಯಾನ ಆ ನಾಯಿ ಪಾಲಕರು. ಈ ರೀತಿ ಧ್ಯಾನ ಮಾಡುತ್ತಾ ಇವೆ ಅದ್ಭುತವಾದ ಸ್ತೋತ್ರ

ಓಂ ನಮೋ ನಾರಾಯಣಾಯ ವಿಷ್ಣವೇ ಪ್ರಭವಿಷ್ಣವೇ । (80.60 ಭವಿಷ್ಯಪರ್ವ)

ನಮ್ಮ ಮನಸ್ಸಿಗೆ ಶುದ್ಧಿಯನ್ನು ಕೊಡು ಪರಮಾತ್ಮ **'ಮಮ ಭೂಯಾನ್ಮನಃ ಶುದ್ಧಿಃ'**[1] ಅವರು ತಿನ್ನುವುದು ನೋಡಿದರೆ ವಿಚಿತ್ರ,ಪ್ರಾರ್ಥನೆ ನೋಡಿದರೆ ಅತೀ ಶುದ್ಧ. ಶುದ್ಧವಾದ ಮನಸ್ಸನ್ನು ನಮಗೆ ಕೊಡು, ದೇವದೂತನಾಗಿ ಬದುಕುವ ಭಾಗ್ಯವನ್ನ ನನಗೆ ಕೊಡು, ಗಂಧರ್ವ ನಾನು ದೇವದೂತನಾಗಿ ಬದುಕುವ ಭಾಗ್ಯ ಕೊಡು. ನನ್ನ ಸಂಹಾರ ಮಾತ್ರ ನಿನ್ನ ಚಕ್ರದಿಂದ ಆಗಲಿ ಇನ್ಯಾರಿಂದಲೂ ಆಗುವುದು ಬೇಡ, ಯಾವುದೇ ಜನ್ಮ ಬಂದರೂ ಇನ್ನೂ ನೀಚ ಜನ್ಮ ಬೇಕಾದರೆ ನಮ್ಮ ಕರ್ಮದ ಪ್ರಕಾರ ಬರುತ್ತಿದ್ದರೆ ಬರಲಿ, ನಿನ್ನ ಸ್ಮರಣೆ ಮಾತ್ರ ಹೋಗಬಾರದು.

ಯತ್ರ ಯತ್ರ ಭವೇಜ್ಜನ್ಮ ತತ್ರ ತತ್ರ ಭವಾನ್ ಹೃದಿ ॥ (80.63 ಭವಿಷ್ಯಪರ್ವ)
ವರ್ತತಾಂ ಮಮ ದೇವೇಶ ಪ್ರಾರ್ಥನೈಷಾ ಮಮಾಪರಾ । (80.64 ಭವಿಷ್ಯಪರ್ವ)

ಯಾವ ನೀಚ ಯೋನಿಯಲ್ಲಿ ಹುಟ್ಟಿದರೂ ನಿನ್ನ ವಿಸ್ಮರಣೆ ಮಾತ್ರ ಆಗಬಾರದು. ಇದೇ ತರಹದ ಪ್ರಾರ್ಥನೆಯನ್ನು ಜಿತಂತೇ ಸ್ತೋತ್ರದಲ್ಲಿ ನೀವು ಕೇಳುತ್ತೀರಿ.

ಜನ್ಮಾಂತರೇಽಪಿ ದೇವೇಶ ಮಾ ಭೂದಸ್ಯ ಪರಿಕ್ಷಯಃ ॥ (4.11 ಜಿತಂತೇ ಸ್ತೋತ್ರ)
ದುರ್ಗತಾವಪಿ ಜಾತಾಯಾಂ ತ್ವದ್ಗತೋ ಮೇ ಮನೋರಥಃ ।
ಯದಿ ನಾಶಂ ನ ವಿಂದೇತ ತಾವತಾಽಸ್ಮಿ ಕೃತೀ ಸದಾ ॥ (4.12 ಜಿತಂತೇ ಸ್ತೋತ್ರ)

ಎಂತಹ ದುರ್ಗತಿಯಲ್ಲಿ ಹುಟ್ಟಿದರೂ ಮನಸ್ಸು ಮಾತ್ರ ನಿನ್ನಲ್ಲಿ ಇರಲಿ. ನೋಡಿ, ಜನ್ಮಾಂತರದಲ್ಲಿ ಈ ಪ್ರಾರ್ಥನೆಯನ್ನೂ ಮಾಡಿದ್ದಾರೆ ಆ ಗಂಧರ್ವರು ಅನ್ನುವುದಕ್ಕೋಸ್ಕರನೇ ಈ ಪಿಶಾಚಿಗಳಾದರೂ ಅವರಿಗೆ ದೇವರಲ್ಲಿ ಮನಸ್ಸು ಹೋಗಿಲ್ಲ, ನಿರಂತರ ಹರಿಸ್ಮರಣೆ ಇದೆ, ಹರಿ ಸ್ತೋತ್ರವನ್ನು ಮಾಡುತ್ತಾರೆ. ಇದೇ ತರಹ ಜನ್ಮ ಜನ್ಮಾಂತರಕ್ಕೂ ಇರಲಿ ಅಂತ ಮತ್ತೆ ಪ್ರಾರ್ಥನೆ ಮಾಡುತ್ತಾರೆ ಅಂದರೆ ಏನು ಇದೆಲ್ಲ ಪ್ರಾರ್ಥನೆ ಮಾಡಿದರೆ ಹೇಗೆ ಸಾಧ್ಯ ಬೇರೆ ಯೋನಿಗಳಲ್ಲಿ ದೇವರ ಸ್ಮರಣೆ ಬರುವುದು, ಅಸಾಧ್ಯ ಅಲ್ಲ ಅನ್ನುವುದಕ್ಕೆ ಇದೇ ಉದಾಹರಣೆ ಅಂತಹ ಪ್ರಾರ್ಥನೆಯನ್ನೇ ಮತ್ತೆ ಮಾಡುತ್ತಾರೆ.

ದಿನೇ ದಿನೇ ಕ್ಷಣ ಚಿತ್ತಂ ತ್ವಯ ಸಂಸ್ಥಂ ಭವತ್ವಿತಿ । (80.66 ಭವಿಷ್ಯಪರ್ವ)

ಪ್ರತಿ ದಿನವೂ ಪ್ರತಿ ಕ್ಷಣವೂ ನಿನ್ನಲ್ಲಿ ನಮ್ಮ ಮನಸ್ಸಿರಲಿ, ಯಾರಿಗೂ ನಮ್ಮಿಂದ ಮನಸ್ಸಿಗೆ ನೋವಾಗುವುದು ಬೇಡ, ಪೀಡೆಯಾಗುವುದು ಬೇಡ ನಿರಂತರ ಹಿಂಸೆ ಮಾಡುತ್ತವೆ ನೋಡಿದರೆ ಆದರೆ ಪ್ರಾರ್ಥನೆ ಹೀಗಿದೆ ನಮ್ಮಿಂದ ಯಾರಿಗೂ ಕಷ್ಟವಾಗಬಾರದು ಅಂತ ಆ ರೀತಿ ಎಲ್ಲ ಪ್ರಾರ್ಥನೆಯನ್ನು ಮಾಡಿದ್ದಾರೆ. ಪ್ರಾರ್ಥನೆಯನ್ನು ಮಾಡಿ ನಮ್ಮ ಮಾತು ನಿನ್ನ ಸ್ತುತಿಯನ್ನು ಮಾಡಲಿ, ಯಾರ ನಿಂದೆಯನ್ನು ಮಾಡಬಾರದು, ಮನಸ್ಸು ಪರದ್ರವ್ಯ ಪರಸ್ತ್ರೀಯರನ್ನು ಎಂದಿಗೂ ಅಪೇಕ್ಷೆ ಪಡುವುದು ಬೇಡ ಯಾವಾಗಲೂ ನಿನ್ನಲ್ಲಿ ಭಕ್ತಿ ನಮಗೆ ಇರಲಿ. **'ಬಹುನಾತ್ರ ಕಿಮುಕ್ತೇನ'**[2] **'ಸುಖವಾಗಲಿ ಬಹು ದುಃಖವಾಗಲಿ ಸಖನೀನಾಗಿರು ಪಾಂಡುರಂಗ'** ಅಷ್ಟು ಮಾಡಿಬಿಡು ಸಾಕು ಇನ್ನೇನು ಬೇಡ.

1. 80.60 ಭವಿಷ್ಯಪರ್ವ; 2. 80.80 ಭವಿಷ್ಯಪರ್ವ

ಸುಖೇ ದುಃಖೇ ಚ ರಾಗೇ ಚ ಭೋಜನೇ ಗಮನೇ ತಥಾ ।

ಜಾಗ್ರತ್ಸ್ವಪ್ನೇಷು ಸರ್ವತ್ರ ತ್ವಯ್ಯೇವ ರಮತಾಂ ಮನಃ ॥ (80.81 ಭವಿಷ್ಯಪರ್ವ)

ಸುಖ ದುಃಖ ಜಾಗ್ರತಾವಸ್ಥ ಸ್ವಪ್ನಾವಸ್ಥ ಎಲ್ಲಾ ಅವಸ್ಥೆಗಳಲ್ಲಿಯೂ ನಿನ್ನಲ್ಲಿ ಮನಸ್ಸಿರಲಿ ಸಾಕು ಇದಕ್ಕಿನ್ನು ಹೆಚ್ಚು ನಾವು ಇನ್ನೇನು ಪ್ರಾರ್ಥನೆ ಮಾಡಬೇಕು ಈ ರೀತಿ ಪ್ರಾರ್ಥನೆಯನ್ನು ಮಾಡುತ್ತ ಮಾಡುತ್ತ ಪರಮಾತ್ಮನನ್ನೇ ಧ್ಯಾನ ಮಾಡುತ್ತ ಆ ಪಿಶಾಚಿಗಳು ಕುಳಿತಿವೆ ಪಾಪ. ಪರಮಾತ್ಮನಿಗೆ ದಯಾ ಬಂದು ಹೋಯಿತು ಅವುಗಳನ್ನು ನೋಡಿ ಎಷ್ಟು ಭಕ್ತಿ ಮಾಡುತ್ತವೆ ಪಾಪ ಇವುಗಳು ಅಂತ ನೋಡಿ ಪರಮಾತ್ಮ ಅನ್ನುತ್ತಾನೆ ಗುರುಗಳ ಉಪದೇಶ ಇದೆಯೋ ಇಲ್ಲವೋ, ಗುರು ಅನುಗ್ರಹ ಇಲ್ಲದೆ ನಾನು ಉದ್ಧಾರ ಮಾಡುವ ಹಾಗಿಲ್ಲ.

ಸ್ವಯಮೇವಾಖಿಲಜಗದ್ರಕ್ಷಾದ್ಯಮಿತಶಕ್ತಿಮಾನ್ ।

ಅಪ್ಯಚ್ಯುತೋ ಗುರುದ್ವಾರಾ ಪ್ರಸಾದಕೃದಹಂ ತ್ವಿತಿ ॥ (26.52 ಮಭಾತಾನಿರ್ಣಯ)

ಗುರುಗಳ ದ್ವಾರಾನೇ ಉದ್ಧಾರ ಮಾಡುವುದು. ಹೌದು ಗುರುಗಳ ಉಪದೇಶ ಇದೆ ಕುಬೇರನೇ ಇವರಿಗೆ ಗುರು ಕುಬೇರ ಉಪದೇಶ ಮಾಡಿ ಕಳಿಸಿದ್ದಾನೆ.

ಧನದಸ್ಯೋಪದೇಶೇನ ಪತನ್ ಸುಬಹುಶಃ ಕ್ಷಿತೌ ।

ವಾಸುದೇವೇತಿ ಕೃಷ್ಣೇತಿ ಮಾಧವೇತಿ ಚ ಮಾಂ ಸದಾ ॥ (81.4 ಭವಿಷ್ಯಪರ್ವ)

ಆ ವಾಸುದೇವಾದಿ ಮಂತ್ರಗಳನ್ನ ಕುಬೇರನೇ ಉಪದೇಶ ಮಾಡಿದ್ದಾನೆ, ಗುರೂಪದೇಶವನ್ನು ಪಡೆದು ಬಂದಿದ್ದಾರೆ ಆದ್ದರಿಂದ ಇವರನ್ನು ಉದ್ಧಾರ ಮಾಡುವುದಕ್ಕೆ ಏನು ತಪ್ಪಿಲ್ಲ, ಉದ್ಧಾರ ಮಾಡೋಣ ಅಂತ ಹೇಳಿ ಪರಮಾತ್ಮ ಅನ್ನುತ್ತಾನೆ. ಪಶುಗಳ ಹಿಂಸೆಯನ್ನು ಮಾಡುತ್ತಾರೆ, ಬ್ರಹ್ಮಹತ್ಯೆಯನ್ನು ಮಾಡುತ್ತಾರೆ,ಅನೇಕ ಜನರನ್ನು ಕೊಲ್ಲುತ್ತಾರೆ, ಶವಗಳನ್ನು ತೆಗೆದುಕೊಂಡು ಬಂದಿದ್ದಾರೆ ಆದರೆ **'ನಾಹಂ ಕರ್ತಾ ಹರಿಕರ್ತಾ' 'ನಾಹಂ ಕರ್ತಾ ಹರಿಕರ್ತಾ'** ಅನ್ನುವ ಅನುಸಂಧಾನದಿಂದ ಇವರು ಮಾಡುತ್ತಾ ಇದ್ದಾರೆ.

ಹನನೇ ಭೋಜನೇ ಚೈಷ ಜಾಗ್ರತ್ಸ್ವಪ್ನೇ ತಥೈವ ಚ ।

ಸರ್ವೇಷ್ವಪಿ ಚ ಕಾರ್ಯೇಷು ಕರ್ತಾಹಮಿತಿ ಮನ್ಯತೇ ॥ (81.8 ಭವಿಷ್ಯಪರ್ವ)

'ಅಹಮ್' ಅಂದರೆ ಕೃಷ್ಣ ನಾನು ಕರ್ತಾ ಅನ್ನುವ ಅನುಸಂಧಾನ ಇವರಿಗೆ ಇದೆಯಲ್ಲ ಹಾಗಾದರೆ ನಿಜವಾದ ಭಕ್ತರು ಇವರು ಇವರನ್ನ ನಾನು ಉದ್ಧಾರ ಮಾಡಬೇಕು ಅಂತ ಹೇಳಿ ಪರಮಾತ್ಮ ತನ್ನ ಸಾಕ್ಷಾತ್ಕಾರ ಅವರಿಬ್ಬರೂ ಧ್ಯಾನ ಮಾಡುತ್ತಾ ಕುಳಿತಿದ್ದಾರೆ. ಅಲ್ಲಿಯೇ ಮನಸ್ಸಿನಲ್ಲಿ ತನ್ನ ರೂಪ ಅವರಿಗೆ ದರ್ಶನ ಆಗುವ ಹಾಗೆ ಮಾಡಿ ಬಿಟ್ಟಿದ್ದಾನೆ.

ಅದರ್ಶಯತ್ ಸ್ವಮಾತ್ಮಾನಮನನ್ಯಸ್ಯ ಜಗತ್ಪತಿಃ ।

ಶುದ್ಧೇಽನ್ತಃಕರಣೇ ತಸ್ಯ ಪಿಶಾಚಸ್ಯಾಪಿ ಭೂಮಿಪ ॥ (81.10 ಭವಿಷ್ಯಪರ್ವ)

ಪಿಶಾಚವಾದರೂ ಭಕ್ತಿ ಇದೆ ಅನ್ನುವುದಕ್ಕೋಸ್ಕರ ಆ ಪಿಶಾಚದಲ್ಲಿ ಇಲ್ಲಿರುವ ಅಪಿ ಶಬ್ದಕ್ಕೆ ಎರಡು ಅರ್ಥ ಒಂದು ಪಿಶಾಚವಾದರೂ ಅಡ್ಡಿ ಇಲ್ಲ ಆಗ ಭಕ್ತಿಯನ್ನು ನೋಡಿ ಮೆಚ್ಚಿದ ಅಂತ. ಇನ್ನೊಂದು ಈ ಒಬ್ಬ ಪಿಶಾಚನಿಗಲ್ಲ, ಅವನ ತಮ್ಮನಿಗೂ ದರ್ಶನ ಕೊಟ್ಟ ಅಂತ ತಾತ್ಪರ್ಯ ನಿರ್ಣಯದಲ್ಲಿ ಹೇಳಿದ ಅರ್ಥ ಸೂಚನೆ ಮಾಡುವುದಕ್ಕೂ **'ಅಪಿ'** ಶಬ್ದ **'ತಸ್ಯ ಪಿಶಾಚಸ್ಯಾಪಿ' 'ಪಿಶಾಚಸ್ಯಾಪಿ' 'ತಸ್ಯಾಪಿ'** ಇವನಿಗೂ, ಇವನ ತಮ್ಮನಿಗೂ **'ಪಿಶಾಚಸ್ಯಾಪಿ'** ಪಿಶಾಚ ಯೋನಿಯಲ್ಲಿ ಇದ್ದರೂ ಕೂಡ, ಪರಮಾತ್ಮ ತಾನು ಭಕ್ತಿಗೆ ಮೆಚ್ಚಿ ದರ್ಶನವನ್ನು ಕೊಟ್ಟಿದ್ದಾನೆ. ಅದ್ಭುತವಾದ ಆ ಭಗವಂತನ ದರ್ಶನವನ್ನು ಮಾಡಿದರೆ ಪರಮಾನಂದವಾಗಿದೆ ಅವುಗಳೆರಡಕ್ಕೂ ಕೂಡ, ಇದೇ ದರ್ಶನಕ್ಕಾಗಿ ಎಷ್ಟು ದಿನಗಳಿಂದ ನಾವು ಕಾಯುತ್ತಾ ಇದ್ದಿವಿ. ಹಿಂದೆ ತಿಳಿದಿದ್ದೀರಿ ಶ್ರೀಮನ್ನ್ಯಾಯಸುಧಾದಲ್ಲಿ ಟೀಕಾಕೃತ್ಪಾದರು ಹೇಳುವ ಹಾಗೆ ದರ್ಶನವಾಗಬೇಕು ಅಂದರೂ ದೇವರ ಪ್ರಸಾದದಿಂದಲೇ ಆಗಬೇಕು ಅವ್ಯಕ್ತ ಸ್ವಭಾವ ಪರಮಾತ್ಮ ಆ ಮಾತನ್ನು ಹೇಳುತ್ತದೆ.

ಅಥ ದೃಷ್ಟೋ ಹರಿರ್ವಿಷ್ಣುಃ ಸಾಕ್ಷಾದ್ ಸರ್ವತ್ರಗಃ ಶುಭಃ ।
ಪ್ರಸನ್ನೋ ಹಿ ಹರಿರ್ಮಹ್ಯಂ ತೇನಾಹಂ ದೃಷ್ಟವಾನ್ ಹರಿಮ್ ॥ (81.16 ಭವಿಷ್ಯಪರ್ವ)

ದೇವರ ಪ್ರಸಾದ ಇದೆ ಅನ್ನುವುದಕ್ಕೆ ನನಗೆ ದರ್ಶನ ಆಗಿದೆ, ಪ್ರಸಾದ ಇಲ್ಲದೇ ಇದ್ದರೆ ಅವ್ಯಕ್ತ ಸ್ವಭಾವನಾದ ಪರಮಾತ್ಮನ ದರ್ಶನ ನಮಗೆ ಆಗುವುದಕ್ಕೆ ಸಾಧ್ಯ ಇಲ್ಲ ಅಂತ ಆ ಪಿಶಾಚಗಳು ಹೇಳುತ್ತವೆ ಈಗ ಬಂತು ನೋಡಿ.

ಯೋಽಸೌ ಮಮಾನುಜಃ ಸಾಕ್ಷಾತ್ ಸ ಚ ಭಕ್ತಸ್ತಥಾ ಹರೌ । (81.19 ಭವಿಷ್ಯಪರ್ವ)
ಕಾಲೇನ ಚೈವ ನಿರ್ಮುಕ್ತೋ ವಿಷ್ಣೋಃ ಸಾಯುಜ್ಯಮಾಪ್ನುಯಾತ್ ॥ (81.20 ಭವಿಷ್ಯಪರ್ವ)

ನನ್ನ ತಮ್ಮನಿಗೂ ಮೋಕ್ಷವಾಗಲಿ ಅಂತ ಈ ರೀತಿಯಾಗಿ ಅವನು ಪ್ರಾರ್ಥನೆಯನ್ನು ಮಾಡಿಕೊಂಡಿದ್ದಾನೆ. ಅವರು ಇಷ್ಟು ಭಗವಂತನ ಆ ಮನಸ್ಸಿನಲ್ಲಿ ಕಣ್ಣು ತೆಗೆದಿಲ್ಲ ಸ್ಪಷ್ಟವಾದ ಕಣ್ಣುಗಳಿಂದ ದೇವರ ದರ್ಶನ ಅಲ್ಲ, ಸಾಕ್ಷಾತ್ಕಾರ ಮನಸ್ಸಿನಿಂದ ಆ ಮಾತು ಅತೀ ಸ್ಪಷ್ಟವಾಗಿ ಇಲ್ಲಿ ಬರುತ್ತದೆ.

ಮನಸ್ಯೇವಂ ಜಗನ್ನಾಥಂ ದೃಷ್ಟ್ವಾ ವಿಷ್ಣುಮನೇಕಧಾ ।
ಅನುನ್ಮೀಲ್ಯೈವ ನಯನೇ ಕೃತಾರ್ಥೋಽಸ್ಮೀತ್ಯಮನ್ಯತ ॥ (81.15 ಭವಿಷ್ಯಪರ್ವ)

ಕಣ್ಣು ತೆಗೆದಿಲ್ಲ ಮನಸ್ಸಿನಿಂದ ಪರಮಾತ್ಮನ ಆ ಸಾಕ್ಷಾತ್ಕಾರ ಮಾಡಿಕೊಂಡಿದ್ದಾರೆ.

ಹೃದಾ ಮನೀಷಾ ಮನಸಾಭಿಕ್ಲೃಪ್ತೋ ಯ ಏತದ್ ವಿದುರಮೃತಾಸ್ತೇ ಭವಂತಿ ।

(3.13 ಶ್ವೇತಾಶ್ವತರೋಪನಿಷತ್)

ಆ ರೀತಿ ಮನಸ್ಸಿನಿಂದ ಪರಮಾತ್ಮನ ದರ್ಶನವನ್ನು ಮಾಡಿಕೊಂಡಿದ್ದಾರೆ ಆದರೆ ಅವರು ಅಂದರು ಇಷ್ಟೊತ್ತು ನಾವು ಒಬ್ಬ ಹುಡುಗನ ಜೊತೆಗೆ ಮಾತನಾಡಿದೆವಲ್ಲ ಅವನೂ ಹೀಗೆ ಇದ್ದಾನಲ್ಲ ಹಾಗಾದರೆ ಒಳಗೆ ಯಾವ ಭಗವಂತನ ಸಾಕ್ಷಾತ್ಕಾರ ನಮಗೆ ಆಗಿದೆ ಅವನೇ ಈ ಕೃಷ್ಣ, ಅವನೇ ವಿಷ್ಣುವೇ ಅಂತ ಕಣ್ಣು ತೆಗೆದು ನೋಡುತ್ತಾರೆ ಹಾಗೇ ಇದ್ದಾನೆ ಪರಮಾತ್ಮ, ಅದೇ ರೂಪ ಹಾಗಾದರೆ ಇವನೇ ಆ ಪರಮಾತ್ಮ ಅಂತ ಗೊತ್ತಾಗಿ ಸಾಷ್ಟಾಂಗ ಪ್ರಣಾಮ ಮಾಡಿವೆ ಆಗ ಗೊತ್ತಾಯಿತು ಅವರಿಗೆ ನಮ್ಮ ಎದುರಿನಲ್ಲಿ ನಿಂತವನು ಕೃಷ್ಣ.

ಯಸ್ಯ ಪ್ರಸಾದಾಜ್ಜಗದೇತದಾದೌ ವಿರಾಜತೇ ಚನ್ದ್ರಮಸೇವ ರಾತ್ರೀಃ ॥ (82.5 ಭವಿಷ್ಯಪರ್ವ)

ಇವನೇ ಕೂರ್ಮರೂಪದಿಂದ ಮಂದರ ಪರ್ವತವನ್ನ ಧಾರಣೆ ಮಾಡಿ ದೇವತೆಗಳಿಗೆ ಅಮೃತ ಕೊಟ್ಟವ, ವರಾಹ ರೂಪದಿಂದ ಹಿರಣ್ಯಾಕ್ಷನನ್ನು ಸಂಹಾರ ಮಾಡಿದವ, ನರಸಿಂಹ ರೂಪದಿಂದ ಹಿರಣ್ಯಕಶಿಪುವನ್ನು ಸಂಹಾರ ಮಾಡಿದ. ಪರಶುರಾಮ ರೂಪ, ಶ್ರೀರಾಮಚಂದ್ರನಾಗಿ, ಶ್ರೀಕೃಷ್ಣನಾಗಿ ಅವತಾರ ಮಾಡಿ ಅನೇಕ ಲೀಲೆಗಳನ್ನು ತೋರಿಸಿದ ಎಲ್ಲ ಕಥೆ ಗೊತ್ತು ಅವರಿಗೆ ಕೃಷ್ಣನ ಕಥೆ ಪೂತನಾ ಸಂಹಾರವನ್ನು ಆರಂಭ ಮಾಡಿಕೊಂಡು ಇವತ್ತಿನವರೆಗೆ ಏನೆಲ್ಲ ಲೀಲೆಗಳನ್ನು ಪರಮಾತ್ಮ ತೋರಿಸಿದ್ದಾನೆ ಆ ಎಲ್ಲ ಲೀಲೆಗಳನ್ನು ಅನುವಾದ ಮಾಡುತ್ತಾರೆ. ಇಂತಿಂತಹ ಅಸುರರ ಸಂಹಾರ ಮಾಡಿದಿ, ಕಂಸನ ಸಂಹಾರ ಮಾಡಿದಿ, ಗೋವರ್ಧನೋದ್ಧಾರ ಮಾಡಿದಿ, ಗೋಪಾಲಕರನ್ನು ರಕ್ಷಣೆ ಮಾಡಿದಿ, ಗೋಪಿಕಾ ಸ್ತ್ರೀಯರನ್ನು ಸಂತೋಷ ಪಡಿಸಿದಿ ಅಂತಹ ಪರಮಾತ್ಮನೇ ನಮ್ಮ ಹೃದಯದಲ್ಲಿ ದರ್ಶನ ಕೊಟ್ಟವ ನೀನೇ ಈಗ ಕಣ್ಣು ಎದುರಿನಲ್ಲಿ ಬಂದು ನಿಂತಿದ್ದೀಯಲ್ಲ ಪರಮಾತ್ಮ ಎಷ್ಟು ದೊಡ್ಡ ಅನುಗ್ರಹ. ನಿನ್ನ ದರ್ಶನವಾಯಿತು ಅಂದರೆ ಇನ್ನು ಮೋಕ್ಷ ಆಗುತ್ತೋ ಇಲ್ಲವೋ ದರ್ಶನ ಆಯಿತು ಮೋಕ್ಷ ಆಗಬೇಕಲ್ಲ ಆ ಸಂಶಯವೇ ಇಲ್ಲ ದರ್ಶನವಾಗಿದೆ **'ತಂ ದೃಷ್ಟ್ವಾ ಮುಚ್ಯತೇ ಏವ'** ದರ್ಶನವಾಗಿದೆ ಅಂದರೆ ಮೋಕ್ಷವಾಗಲೇಬೇಕು ಎಂದಿಗೂ ಮೋಕ್ಷವಾಗದೇ ಇರಲಿಕ್ಕೆ ಸಾಧ್ಯವೇ ಇಲ್ಲ.

ಯೇನ ದೃಷ್ಟೋ ಹರಿಃ ಸಾಕ್ಷಾತ್ ತಸ್ಯ ಮುಕ್ತಿಃ ಕರೇ ಸ್ಥಿತಾ ।
ಸೋಽಯಮೇಷ ಹರಿಃ ಸಾಕ್ಷತ್ ಪ್ರತ್ಯಕ್ಷಮಿಹ ವರ್ತತೇ ॥ (82.39 ಭವಿಷ್ಯಪರ್ವ)

ಅಂತಹ ಪರಮಾತ್ಮನ ದರ್ಶನ ನಮಗೆ ಆಯಿತು ಇನ್ನೇನು ಇನ್ನೇನು ಅಂತ ಅಂದಿದ್ದಾನೆ ಘಂಟಾಕರ್ಣ. ಸರಿ, ಬಹಳ ಸಂತೋಷ ಆಯಿತು ದೇವರೇ ಇಲ್ಲಿ ನಮಗೆ ದರ್ಶನ ಕೊಟ್ಟಿದ್ದಾನೆ ಇಷ್ಟು ಹೊತ್ತು ದೇವರ ಜೊತೆಗೆ ನಾವು ಮಾತಾಡಿದ್ದೇವೆ ನಮಗೆ ಗೊತ್ತಾಗಲಿಲ್ಲ ಅಂತ ಹೇಳಿ ಆ ದೇವರಿಗೆ ಏನಾದರು ಉಪಹಾರ ಕೊಡಬೇಕು ಅಂತ ಒಬ್ಬ ಬ್ರಾಹ್ಮಣನ ಶವ ತೆಗೆದುಕೊಂಡು ಬಂದಿದ್ದರು ಯಾವುದೋ ಬ್ರಾಹ್ಮಣನನ್ನು ಕೊಂದು. ಆ ಶವವನ್ನ ಸರಿಯಾಗಿ ಎರಡು ಕತ್ತರಿಸಿ ಪಾತ್ರೆ ಮಾತ್ರ ಮತ್ತೆ ಶುದ್ಧವಾದದ್ದನ್ನ ಹುಡುಕುತ್ತಾರೆ **'ವಿಧಾಯ ಪಾತ್ರೇ ಸುಶುಭೇ'** [1] ಸ್ವಚ್ಛವಾದ ಒಂದು ಪಾತ್ರೆಯನ್ನು ತಂದು ಚೆನ್ನಾಗಿ ತೊಳೆದು ಪವಿತ್ರ ಮಾಡಿ ಇವೆಲ್ಲ ಪಂಚಗವ್ಯದಿಂದ ಶುದ್ಧ ಮಾಡಿ ಒಳಗೆ ಈ ಹೆಣವನ್ನು ಇಡುತ್ತಾರೆ. ಎರಡು ಹೆಣದ ತುಂಡುಗಳನ್ನಿಟ್ಟು ಕೃಷ್ಣಾರ್ಪಣ ಹೇಳುತ್ತಾರೆ ದೇವರಿಗೆ ನೈವೇದ್ಯವನ್ನು ಮಾಡುತ್ತಾರೆ.

ಭಕ್ತೇನಮ್ಮಾ ವಯಂ ವಿಷ್ಣೋ ನಾತ್ರ ಕಾರ್ಯಾ ವಿಚಾರಣಾ । (83.5 ಭವಿಷ್ಯಪರ್ವ)

ಪರಮಾತ್ಮ, ಇದನ್ನು ಸ್ವೀಕಾರ ಮಾಡು ಬಹಳ ದಿವಸ ಆಗಿದೆ ತಂಗಳ ಅಂತ ತಿಳಿದುಕೊಳ್ಳಬೇಡ ಮತ್ತೆ, ಈಗ ಕೊಂದೀವಿ.

ನವಂ ಸುಸಂಸ್ಕೃತಂ ಭಕ್ಷ್ಯಂ ಬ್ರಹ್ಮಣ್ಯಂ ಶವಮುತ್ತಮಮ್ । (83.6 ಭವಿಷ್ಯಪರ್ವ)

ಶ್ರೇಷ್ಠ ಬ್ರಾಹ್ಮಣ ಶುದ್ಧವಾದಂತಹ ಸದಾಚಾರ ಸಂಪನ್ನ ಬ್ರಾಹ್ಮಣನ ಮಾಂಸ ಇದು ಸ್ವೀಕಾರ ಮಾಡಬೇಕು ಅಂತ ಅಂದಿದ್ದಾರೆ. ಪರಮಾತ್ಮ ನಗುತ್ತಾ ಇದ್ದ ಯಾಕೆ ನಗುತ್ತೀ ಅನ್ನುತ್ತಾರೆ ಪಿಶಾಚಿಗಳು ನಗುತ್ತೀ ಯಾಕೆ.

1. 83.3 ಭವಿಷ್ಯಪರ್ವ

ಅಸ್ಮಾಕಂ ಪಿಶಿತಾಶಾನಾಂ ಶಾಸ್ತ್ರೇ ನಿಯತಮೇವ ಹಿ ॥ (83.6 ಭವಿಷ್ಯಪರ್ವ)

ನಮಗೂ ಶಾಸ್ತ್ರ ಇದೆ ಪಿಶಾಚ ಶಾಸ್ತ್ರ, ನಮ್ಮ ಶಾಸ್ತ್ರದೊಳಗೆ ಮಾಂಸ ಭಕ್ಷಣನೇ ನಮಗೆ ಹೇಳಿದ್ದು, ಮತ್ತೆ ನಮಗೆ ಏನು ಹೇಳಿದ್ದಾರೋ ಅದನ್ನು ನಾವು ನೈವೇದ್ಯ ಮಾಡುತ್ತೇವೆ.

ತಸ್ಮಾದ್ ಗೃಹಾಣ ಭಗವನ್ ಯದಿ ದೋಷೋ ನ ವಿದ್ಯತೇ । (83.7 ಭವಿಷ್ಯಪರ್ವ)

ಮತ್ತೆ ನೀನು ತೊಗೊಳ್ಳುತ್ತೀಯೋ ಬಿಡುತ್ತೀಯೋ ಗೊತ್ತಿಲ್ಲ, ನಮಗಂತೂ ಇದು ವಿಹಿತ ನಾವು ಇದನ್ನು ತಿನ್ನುತ್ತೇವೆ, ನೈವೇದ್ಯ ಮಾಡಿದ್ದೇವೆ ತೊಗೊಳ್ಳುವುದು ಬಿಡುವುದು ನಿನಗೆ ಬಿಟ್ಟದ್ದು. ನಿನಗೆ ಏನೂ ಅಭ್ಯಂತರ ಇಲ್ಲ ಅಂದರೆ ತಗೆದುಕೋ ನಮ್ಮ ಹತ್ತಿರಂತೂ ಬೇರೆ ಏನು ಅಕ್ಕಿ ಬೇಳೆ ಇಲ್ಲ ನಮ್ಮ ಹತ್ತಿರ ಇರುವುದೇ ಇದು ಆಗ ದೇವರು ಅನ್ನುತ್ತಾನೆ ನಿಮ್ಮ ಭಕ್ತಿಗೆ ನಾನು ಮೆಚ್ಚಿದ್ದೇನೆ.

ಅಲಮೇತೇನ ಸರ್ವತ್ರ ಪಿಶಾಚ ಪಿಶಿತಾಶನ ।

ಅಸ್ಪೃಶ್ಯಂ ಮಾದೃಶೈರೇತದ್ ಬ್ರಾಹ್ಮಣ್ಯಂ ಶವಮುತ್ತಮಮ್ ॥ (83.10 ಭವಿಷ್ಯಪರ್ವ)

ನಮ್ಮಂಥವರು ಸರ್ವಥಾ ಶವವನ್ನ ಈ ರೀತಿ ಮಾಂಸ ಭಕ್ಷಣವನ್ನ ಮಾಡಬಾರದು, ಮಾಂಸ ಭಕ್ಷಣ ಮಾಡಬಾರದು ಅಷ್ಟೇ ಅಲ್ಲ ಅಂತಹ ಶ್ರೇಷ್ಠನಾದ ಸದ್ಬ್ರಾಹ್ಮಣನ ಶವವನ್ನ ನಾವು ಮುಟ್ಟಲೂಬಾರದು ಈ ದೃಷ್ಟಿಯಿಂದ. ಸಂಸ್ಕಾರ ಮಾಡುವುದಕ್ಕೆ ಮುಟ್ಟುವುದು ಬೇರೆ ಆದರೆ ಈ ರೀತಿ ಭಕ್ಷಣ ಮಾಡುವ ದುರುದ್ದೇಶದಿಂದ ಎಂದಿಗೂ ಶವವನ್ನು ಮುಟ್ಟುವುದು ಸರಿಯಲ್ಲ. ನೀವು ಪಿಶಾಚಿಗಳು ಏನೋ ಮಾಡುತ್ತೀರಾ ಅದು ಬೇರೆ.

ಪಿಶಾಚಾ ಘೋರಕರ್ಮಾಣೋ ಯತನ್ತೇ ಬ್ರಹ್ಮಹಿಂಸನೇ ॥ (83.11 ಭವಿಷ್ಯಪರ್ವ)

ಆದರೆ ಅದು ಮಾಡುವುದು ಬಹಳ ಒಳ್ಳೆಯದು ಅಂತ ತಿಳಿದುಕೊಳ್ಳಬೇಡಿ ಇನ್ನು ಮೇಲೆ ಇಂತಹ ಹಿಂಸಾ ಕೃತ್ಯವನ್ನು ಸರ್ವಥಾ ಮಾಡಬೇಡಿ. ನನ್ನ ದರ್ಶನ ಆಗಿದೆಯಲ್ಲ ನನ್ನ ಆಜ್ಞೆಯನ್ನು ಕೇಳುತ್ತಿರೋ ಇಲ್ಲವೋ ಇನ್ನೊಮ್ಮೆ ಇಂತಹ ಹಿಂಸಾ ಕೃತ್ಯವನ್ನು ಮಾಡಬಾರದು ನೀವು

ನ ಹನ್ತವ್ಯಾಃ ಸದಾ ವಿಪ್ರಾಸ್ತದ್ಧಿಂಸಾ ನರಕಾವಹಾ । (83.12 ಭವಿಷ್ಯಪರ್ವ)

ಮಹಾ ನರಕವಾಗುತ್ತದೆ. **'ಯೋ ಬ್ರಾಹ್ಮಣಾಯ ಗುರವೇ ತಂ ಶತೇನಯಾತಯೇ'** ಶತೇನಯಾತ ನರಕ ಆಗುತ್ತದೆ ವದೋದ್ಯಮ ಪ್ರಯತ್ನವನ್ನು ಮಾಡಿದರೆ ಅಂತ ಶೃತಿ ಹೇಳುತ್ತದೆ ಅಪ್ಪ ಸರ್ವಥಾ ಮಾಡಬೇಡ.

ತಸ್ಮಾದಸ್ಪೃಶ್ಯಮಸ್ಮಾಭಿರ್ನಾತ್ರ ಕಾರ್ಯಾ ವಿಚಾರಣಾ ॥ (83.12 ಭವಿಷ್ಯಪರ್ವ)

ಇದು ನಮಗೆ ಅಸ್ಪೃಶ್ಯ ಈ ನೈವೇದ್ಯವನ್ನು ನಾನು ಸರ್ವಥಃ ಸ್ವೀಕಾರ ಮಾಡುವುದಿಲ್ಲ ಆದರೆ ನಿಮ್ಮ ಉದ್ಧಾರ ಮಾಡುತ್ತೇನೆ ಯಾಕೆ ಅಂದರೆ ನಿಮ್ಮ ಮನಸ್ಸಿನಲ್ಲಿ ಭಕ್ತಿ ಇದೆ ಆ ಭಕ್ತಿಗೆ ಮೆಚ್ಚಿ ನಿಮ್ಮನ್ನು ಉದ್ಧಾರ ಮಾಡುತ್ತೇನೆ ಅಂತ ಪರಮಾತ್ಮ ಹೇಳುತ್ತಾನೆ ಹೇಳಿ ಆ ಪಿಶಾಚಗಳ ಎರಡಕ್ಕೂ ಹೀಗೆ ಪ್ರೀತಿಯಿಂದ ಕೈ ಆಡಿಸಿದ. ಏನೋ ಪಿಶಾಚಿಗಳು

ಮಾಂಸ ಮೈಯೆಲ್ಲಾ ಕರಳು ಮಾಲೆ ಹೊಲಸು ಅಂತ ಹೇಳಿ ಏನಿಲ್ಲ, ದೇವರಿಗೆ ಏನು ಪರಮ ಮಂಗಲಮೂರ್ತಿಯಾದ ಪರಮಾತ್ಮನಿಗೆ ಯಾವ ದೋಷಗಳ ಲೇಪ ಆಗಬೇಕಾಗಿದೆ. ಪ್ರೀತಿಯಿಂದ ಅತ್ಯಂತ ಸಣ್ಣ ಮಗುವನ್ನು ಮುದ್ದಾಡಿಸುವಂತೆ ಆ ಉಗ್ರ ಕ್ರೂರ ರೂಪದೊಳಗಿರುವ ಪಿಶಾಚಗಳನ್ನ ಪರಮಾತ್ಮ ಮುದ್ದಾಡಿದ್ದಾನೆ ಮೈಯೆಲ್ಲ ಕೈಯಾಡಿಸಿದ, ಮುಗಿದು ಹೋಯಿತು ದಿವ್ಯವಾದ ಗಂಧರ್ವ ರೂಪ ಬಂತು ನೋಡಿ, ಹೋಗೇ ಬಿಟ್ಟಿತು ಆ ಪಿಶಾಚ ಜನ್ಮ ಪಿಶಾಚ ದೇಹ ಹೋಗಿದೆ.

ಜ್ಞಾನವಾನ್ ಸತ್ತ್ವಸಮ್ಪನ್ನಃ ಸಾಕ್ಷಾದಿನ್ದ್ರ ಇವಾಪರಃ ॥ (83.18 ಭವಿಷ್ಯಪರ್ವ)
ಗನ್ಧರ್ವ ಇವ ಗಾಯಂಸ್ತು ಸಿದ್ಧಃ ಸಿದ್ಧ ಇವ ಸ್ವಯಮ್ । (83.19 ಭವಿಷ್ಯಪರ್ವ)

ಇಬ್ಬರು ಗಂಧರ್ವರು ನಿಂತಂತೆ ಕಾಣುತ್ತ ಇದೆ ಗಂಧರ್ವರೇ ಅವರು ಆ ಗಂಧರ್ವರಂತೆ ಗಾನವನ್ನು ಮಾಡುತ್ತಾ ಪರಮಾತ್ಮನ ಸ್ತೋತ್ರವನ್ನು ಮಾಡುತ್ತ ಇದ್ದಾರೆ ಆ ಪಿಶಾಚ ದೇಹ ಹೋಗಿಬಿಟ್ಟಿದೆ. ಪರಮಾತ್ಮ ಹೇಳಿದ ಅಕ್ಷಯವಾದ ಸ್ವರ್ಗವಾಸವನ್ನು ನಿಮಗೆ ಕೊಡುತ್ತೇನೆ ಈ ಇಂದ್ರ ಇರುವವರೆಗೆ ಈ ಮನ್ವಂತರದವರೆಗೆ ಸ್ವರ್ಗದಲ್ಲಿ ಸುಖವಾಗಿ ಇರಿ ಆಮೇಲೆ ನೀವು ನನ್ನ ಲೋಕಕ್ಕೆ ಬನ್ನಿ ಅಂತ ಪರಮಾತ್ಮ ಅನುಗ್ರಹವನ್ನು ಮಾಡಿದ್ದಾನೆ. ಇದು ಅವರು ಕೇಳಿದ್ದು ಅಲ್ಲ ದೇವರು ತಾನಾಗಿಯೇ ವರ ಕೊಟ್ಟುಬಿಟ್ಟದ್ದು ಆ ಜ್ಞಾನದಿಂದ ಪ್ರಸನ್ನನಾಗಿಯೇ ದೇವರು ಈ ವರ ಕೊಟ್ಟ. ಇನ್ನೇನಾದರೂ ನಿಮಗೆ ಬೇಕಾಗಿದ್ದರೆ ಬೇರೆ ವರ ಕೇಳಿ ಅಂತ ಬೇರೆ ವರನಾ ಏನು ಕೇಳುತ್ತಾನೆ ನೋಡಿ ಘಂಟಾಕರ್ಣ ನಾವು ಪಿಶಾಚಿಗಳಾಗಿ ನಿನ್ನ ಸ್ತುತಿಯನ್ನು ಮಾಡಿ, ಧ್ಯಾನ ಮಾಡಿ, ನಿನ್ನ ಸಾಕ್ಷಾತ್ಕಾರವನ್ನು ಪಡೆದುಕೊಂಡು ನಿನ್ನ ಅನುಗ್ರಹದಿಂದ ಈ ಜನ್ಮದಿಂದ ಮುಕ್ತರಾಗಿ ಉತ್ತಮವಾದ ಲೋಕವನ್ನು ಹೊಂದಿದ್ದೇವೆ ಎಂಬ ಈ ಕಥೆಯನ್ನು ಯಾರು ಕೇಳುತ್ತಾರೋ ಅವರ ಎಲ್ಲ ಪಾಪಗಳ ಪರಿಹಾರ ಆಗಬೇಕು, ನಿನ್ನಲ್ಲಿ ಪರಮ ಭಕ್ತಿ ಅವರಿಗೆ ಬರಬೇಕು, ಅವರ ಅಂತಃಕರಣ ಶುದ್ಧಾತ್ಮ ಅತೀ ಶುದ್ಧವಾಗಬೇಕು ಇಷ್ಟೇ ವರ ಬೇಕು ಇನ್ನೇನು ನನಗೆ ವರ ಬೇಡ ಅನ್ನುತ್ತಾನೆ ಎಂತಹ ನಿಷ್ಕಾಮವಾದ ಭಕ್ತಿ ನೋಡಿ.

ಯಶ್ಚೇಮಂ ಸಂಗಮಂ ದೇವ ಸಂಸ್ಮರೇನ್ನಿಯತಾತ್ಮವಾನ್ ।
ಭಕ್ತಿಸ್ತಸ್ಯಾಚಲಾ ದೇವ ತ್ವಯಿ ಭೂಯಾಜ್ಜನಾರ್ದನ ॥ (83.27 ಭವಿಷ್ಯಪರ್ವ)

ಮನಃಶುದ್ಧಿರ್ಭವೇತ್ ತಸ್ಯ ಮಾ ಭೂತ್ ಕಲುಷತಾ ಹರೇ । (83.28 ಭವಿಷ್ಯಪರ್ವ)

ಇಷ್ಟೇ ವರ ಸಾಕು ಅಂತ ಹೇಳಿದಾಗ ತಥಾಸ್ತು ಅಂತ ಪರಮಾತ್ಮ ವರ ಕೊಟ್ಟಿದ್ದಾನೆ. ಭಕ್ತಿಯಿಂದ ಅನೇಕ ಸ್ತೋತ್ರಗಳು ಇಲ್ಲಿ ಬಂದಿವೆ, ಘಂಟಾಕರ್ಣ ಮಾಡಿದಂತಹ ಸ್ತೋತ್ರಗಳು. ಆ ಸ್ತೋತ್ರಗಳ ಪಠಣವನ್ನು ಯಾರು ಮಾಡುತ್ತಾರೋ ಅವರಿಗೆ ನಿಶ್ಚಿತವಾಗಿಯೂ ಮನಃಶುದ್ಧಿ ಬರುತ್ತದೆ. ಜನಮೇಜಯ ನಿತ್ಯ ಪಠಣ ಮಾಡು, ಸುಮ್ಮನೆ ಕೇಳಬೇಡ ಪುರಾಣ ಅಂತ ವೈಶಂಪಾಯನರು ಅನ್ನುತ್ತಾರೆ.

ತಸ್ಮಾತ್ ಪಠ ಸದಾ ರಾಜನ್ ಮನಃ ಶುದ್ಧಿಂ ಯದೀಚ್ಛಸಿ ।
ಮನಶ್ಚ ಶುದ್ಧಂ ಭವತಿ ಪಠತಸ್ತೇ ಜಗತ್ಪತೇ ॥ (83.32 ಭವಿಷ್ಯಪರ್ವ)

ನೀನು ದೊಡ್ಡ ರಾಜ ಇರಬಹುದು, ಸಮಯ ಇಲ್ಲ ಅಂತ ಅನ್ನಬೇಡ ಸಮಯ ಮಾಡಿಕೋ ನೀನು ಜಗತ್ಪತಿ ಅಂದರೆ ಭೂಪತಿ ರಾಜ ನೀನು, ಅವನು ಜಗತ್ಪತಿಗಳಿಗೆಲ್ಲ ಪತಿ ಆ ಪತಿಯ ಸ್ಮರಣೆ ಮಾಡು ನಿನ್ನ ಮನಸ್ಸು ಶುದ್ಧವಾಗುತ್ತದಪ್ಪ ಉತ್ತಮವಾದ ಅಪರೋಕ್ಷ ಜ್ಞಾನವನ್ನು ಪಡೆದು ಭಗವಂತನ ಅನುಗ್ರಹದಿಂದ ಮೋಕ್ಷಾದಿ ಪುರುಷಾರ್ಥಗಳನ್ನ ಹೊಂದಬಹುದು ಅಂತ ವೈಶಂಪಾಯನರು ಜನುಮೇಜಯನಿಗೆ ತಿಳಿಸಿಕೊಡುತ್ತಾರೆ. ಅಂತಹ ಆ ಭಗವಂತನ ಸರ್ವೋತ್ತಮತ್ವವನ್ನು ತಿಳಿಸುವಂತಹ ಈ ಕಥೆಯನ್ನ ಭಕ್ತಿಯಿಂದ ಸ್ಮರಣೆ ಮಾಡಿ ಪರಮಾತ್ಮನ ಅನುಗ್ರಹವನ್ನು ಸರ್ವರೂ ಪಡೆಯಬೇಕು.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಭವಿಷ್ಯಪರ್ವ-43

* * *

ವೈಶಂಪಾಯನ ಉವಾಚ

ತತಃ ಸ ಭಗವಾನ್ ವಿಷ್ಣುರ್ಮುನಿಭ್ಯಸ್ತತ್ತ್ವ ಮಾದಿತಃ ।
ಕಥಯಾಮಾಸ ಯದ್ ವೃತ್ತಂ ಪಿಶಾಚಸ್ಯ ಮಹಾತ್ಮನಃ ।। (84.1 ಭವಿಷ್ಯಪರ್ವ)

ಶ್ರೀಕೃಷ್ಣ ಪರಮಾತ್ಮ ಬದರಿಕಾಶ್ರಮದಲ್ಲಿ ಶಾಪದಿಂದಾಗಿ ಪಿಶಾಚ ಜನ್ಮವನ್ನು ಹೊಂದಿದಂತಹ ಘಂಟಾಕರ್ಣ, ಕರ್ಣ ಎಂಬ ಪಿಶಾಚಗಳನ್ನು ತನ್ನ ಅಮೃತಮಯವಾದ ಹಸ್ತಗಳಿಂದ ಸ್ಪರ್ಶ ಮಾಡಿ ಅವುಗಳನ್ನು ಉದ್ಧಾರ ಮಾಡಿದ್ದಾನೆ. ತಮ್ಮ ಮೂಲರೂಪವನ್ನು ಗಂಧರ್ವ ರೂಪವನ್ನು ಹೊಂದಿ ವಿಶೇಷವಾಗಿ ಭಗವಂತನ ಸ್ತುತಿಯನ್ನು ಮಾಡಿ ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾಗಿದ್ದಾರೆ. ಆ ಇಬ್ಬರು ಗಂಧರ್ವರು ಭಗವಂತನ ಸರ್ವೋತ್ತಮತ್ವವನ್ನ ಸಾರಿ ಸಾರಿ ಹೇಳಿವೆ ಈ ಕೃಷ್ಣ ಪರಮಾತ್ಮನೇ ಮೋಕ್ಷಪ್ರದ ಎಂಬುದಾಗಿ ರುದ್ರ ದೇವರೇ ಹೇಳಿ ನಮ್ಮನ್ನು ಕೊಟ್ಟು ಕಳಿಸಿದ್ದಾರೆ ಕೃಷ್ಣ ಪರಮಾತ್ಮನ ಸೇವೆಗಾಗಿ ಉಪಾಸನೆಗಾಗಿ ದರ್ಶನಕ್ಕಾಗಿ ಅಂತ ಹೇಳುವ ಮೂಲಕ ಪರಮಾತ್ಮನೇ ಸಕಲ ಸಜ್ಜನರ ಸಂಸಾರ ರೋಗವನ್ನು ಪರಿಹರಿಸಿ ಮೋಕ್ಷವನ್ನು ಕೊಡುವಂತಹ ಸರ್ವೋತ್ತಮನಾದ ದೇವ ಅನ್ನುವ ತತ್ವವನ್ನು ಆ ಘಂಟಾಕರ್ಣ, ಕರ್ಣ ಪಿಶಾಚಗಳು ತಿಳಿಸಿವೆ. ಏನೆಲ್ಲ ನಡೆಯಿತು ಅಂತನ್ನುವ ಕುತೂಹಲ ಇರುವ ಮುನಿಗಳಿಗೆ ಕೃಷ್ಣ ಪರಮಾತ್ಮ ಎಲ್ಲವನ್ನು ತಿಳಿಸಿದ್ದಾನೆ ಯಾವ ಪಿಶಾಚಗಳು ಇವು, ಎಲ್ಲಿಂದ ಬಂದವು, ಯಾಕೆ ಬಂದವು, ಏನೆಲ್ಲ ನಡೆಯಿತು ಅದೆಲ್ಲವನ್ನು ಋಷಿ ಮುನಿಗಳಿಗೆ ತಿಳಿಸಿದಾಗ ಪರಮಾಶ್ಚರ್ಯಪಟ್ಟಿದ್ದಾರೆ, ಭಗವಂತನನ್ನು ಇನ್ನಷ್ಟು ಭಕ್ತಿಯಿಂದ ಪ್ರೀತಿಯಿಂದ ನಮಸ್ಕರಿಸಿದ್ದಾರೆ.

ಅಹೋಽಸ್ಯ ಕರ್ಮಣಃ ಪಾಕಸ್ತವ ಸಂದರ್ಶನಾದಿತಿ । (84.2 ಭವಿಷ್ಯಪರ್ವ)

ನಿನ್ನ ದರ್ಶನ ಮಾತ್ರದಿಂದ ಇವರ ಎಲ್ಲ ಕರ್ಮಗಳ ಪಾಪಗಳ ಮೋಚನೆ ಆಯಿತಲ್ಲ, ನಿನ್ನ ದರ್ಶನದಿಂದ ಕರ್ಮಕ್ಷಯವಾಗುತ್ತೆ ಮೋಕ್ಷವಾಗುತ್ತದೆ ಅಂತನ್ನುವ ವಿಷಯದಲ್ಲಿ ಯಾವ ಸಂಶಯವೂ ಇಲ್ಲ ಪ್ರತ್ಯಕ್ಷವಾಗಿ ನಾವು ಕಾಣುತ್ತ ಇದ್ದೇವೆ ಅಂತ ಮುನಿಗಳೆಲ್ಲ ವರ್ಣನೆ ಮಾಡಿದ್ದಾರೆ.

ಈ ಕಡೆಗೆ ಮತ್ತೆ ಪರಮಾತ್ಮ ಬದರಿಕಾಶ್ರಮದಿಂದ ತಾನು ಸಂಕಲ್ಪ ಮಾಡಿದ ರೀತಿಯಲ್ಲಿ ಗರುಡಾರೂಢನಾಗಿ ಕೈಲಾಸಕ್ಕೆ ಹೊರಟಿದ್ದಾನೆ. ಎಂತಹ ಕೈಲಾಸ ರುದ್ರ ದೇವರು ವಾಸ ಮಾಡುವಂತಹ ಕೈಲಾಸ, ಕುಬೇರ ಅಲ್ಲಿ ತಪಶ್ಚರ್ಯವನ್ನು ಮಾಡಿದ್ದಾನೆ, ಅನೇಕ ಸಿದ್ದರು ತಪಶ್ಚರ್ಯವನ್ನು ಮಾಡುತ್ತಾರೆ, ಮಾನಸ ಸರೋವರ ಇದೆ, ಭೃಂಗಿ, ರಿಟಿ ಮೊದಲಾದಂತಹ ಅನೇಕ ರುದ್ರ ದೇವರ ಅನುಚರರು ಅಲ್ಲಿ ತಪಸ್ಸು ಮಾಡುತ್ತಾರೆ. ಕ್ರೂರವಾದ ಮೃಗಗಳೆಲ್ಲ ಸಿಂಹ ಹುಲಿ ಮೊದಲಾದ ಎಲ್ಲ ಕ್ರೂರ ಮೃಗಗಳು ಆನೆ ಸಿಂಹ ಇವುಗಳಿಗೆ ವೈರ ಇದೆ, ಆಕಳು ಹುಲಿ ಇವುಗಳಿಗೆಲ್ಲ ವೈರ ಇದೆ ಆದರೆ ಅಲ್ಲಿ ಮಾತ್ರ **'ಪರಸ್ಪರ ಹಿತೇರತಃ'** ಎಲ್ಲವೂ ಅತ್ಯಂತ ಪ್ರೀತಿಯಿಂದ ಕ್ರೂರವಾದ ಮೃಗಗಳು, ಸೌಮ್ಯವಾದ ಮೃಗಗಳು ಜೊತೆ ಜೊತೆಗೆ ಓಡಾಡುತ್ತ ಇರುತ್ತವೆ ಅತ್ಯಂತ ಸ್ನೇಹದಿಂದ ಇದು ಆ ಕೈಲಾಸದ ಗುಣ. ಮನೋಭಿಮಾನಿಗಳಾದವರು ರುದ್ರ ದೇವರು ಆ ಎಲ್ಲ ಪಶುಗಳ ಮನಸ್ಸಿಗೆ ಸರಿಯಾದ ಪ್ರೇರಣೆಯನ್ನು ಮಾಡಿ, ಅವುಗಳಲ್ಲಿ ಯಾವುದೇ ವೈರ ಇಲ್ಲದೇ ಇದ್ದಂತೆ ಮಾಡುವಂತಹ ಮಹಾಶಕ್ತಿ ಆ ಮಹಾದೇವರಿಗೆ ರುದ್ರ ದೇವರಿಗೆ ಉಂಟು ಅವರು ಪಶುಪತಿಗಳೇ ಪಶು ಅಂದರೆ ಜೀವ, ಜೀವರಿಗೆ ನಿಯಾಮಕರು. ಪಶುಪತಿಗಳು ಅಂದರೆ ಈ ಪಶುಗಳಿಗೂ ಪತಿಗಳಾಗಿ, ಪಶುಗಳ ಮನಸ್ಸಿನಲ್ಲಿಯೂ ಪ್ರಚೋದಕರಾಗಿ ಅವರು ಸದ್ಬುದ್ಧಿಯನ್ನು ಕೊಡುತ್ತಾರೆ, ಪಶುವಿನ ಮೇಲೆ ನಂದಿಯ ಮೇಲೆ ಕುಳಿತು, ನಂದಿ ವಾಹನರಾಗಿ ಇರುತ್ತಾರೆ ಅಂತಹ ಮಹಾನುಭಾವರು ರುದ್ರ ದೇವರು ವಾಸ ಮಾಡುವಂತಹ ಶ್ರೇಷ್ಠವಾದ ಆ ಕೈಲಾಸ. ಇದನ್ನು ಎತ್ತುವ ಪ್ರಯತ್ನ ಮಾಡಿ ಸಾಧ್ಯವಾಗದೆ ರಾವಣನೂ ಕೂಡ ಹಿಂದೆ ಸರದಿದ್ದಾನೆ ಅಂತಹ ಕೈಲಾಸ ಪರ್ವತಕ್ಕೆ ಶ್ರೀಕೃಷ್ಣ ಪರಮಾತ್ಮ ಬರುತ್ತ ಇದ್ದಾನೆ.

ಮಾನಸ ಸರೋವರದ ಉತ್ತರ ತೀರದಲ್ಲಿ ತಪಶ್ಚರ್ಯವನ್ನು ಮಾಡುವಂತಹ ಸಂಕಲ್ಪವನ್ನು ಮಾಡಿದ್ದಾನೆ ಭಗವಂತ ಜಟಾಧಾರಿಯಾಗಿ ಶೀರವಸನವನ್ನ ಧಾರಣ ಮಾಡಿ ತಪಶ್ಚರ್ಯವನ್ನು ಮಾಡುತ್ತ ಇದ್ದಾನೆ ಪರಮಾತ್ಮ, ಅದ್ಭುತವಾದ ಭಗವಂತನ ನಾಟಕ ಹನ್ನೆರಡು ವರ್ಷಗಳ ಕಾಲ ತಪಶ್ಚರ್ಯವನ್ನು ಮಾಡುತ್ತೇನೆ ಅಂತ ಭಗವಂತನ ಸಂಕಲ್ಪ. ಆ ರೀತಿ ರುದ್ರ ದೇವರಿಗೆ ಹೇಳಿದ್ದ ಹನ್ನೆರಡು ವರ್ಷ ನಿನ್ನನ್ನು ಕುರಿತು ತಪಶ್ಚರ್ಯವನ್ನು ಮಾಡಿ ನಾನು ಮಕ್ಕಳನ್ನು ಪಡೆದಂತೆ ನಾಟಕವನ್ನು ಮಾಡುತ್ತೇನೆ ನೀನು ವರ ಕೊಡಬೇಕು ಅಂತ. ಪರಮಾತ್ಮ ಮೊದಲೇ ಹೇಳಿದ್ದ ಅದಕ್ಕೆ ತಕ್ಕ ಹಾಗೆ ಹನ್ನೆರಡು ವರ್ಷ ತಪಶ್ಚರ್ಯ ಮಾಡಬೇಕು, ದೇವರು ಎಲ್ಲಿ ಹನ್ನೆರಡು ವರ್ಷ ತಪಶ್ಚರ್ಯ ಮಾಡುತ್ತಾನೆ, ಪರಮಾತ್ಮ ಹೇಳಿದ ನಾನು ಒಂದೇ ದಿವಸ ತಪಶ್ಚರ್ಯ ಮಾಡುವುದು ಆ ಒಂದು ದಿನದೊಳಗೆ ಹನ್ನೆರಡು ವರ್ಷಗಳಲ್ಲಿ ಏನಾಗಬೇಕೋ ಗ್ರಹಗಳ ಗತಿ ಅದೆಲ್ಲಾ ಆಗಿರಬೇಕು. ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಬೃಹಸ್ಪತಿ ಹೋಗಬೇಕಾದರೆ ಗುರು ಬೃಹಸ್ಪತಿ ತಾನು ಒಂದು ರಾಶಿಯಿಂದ ಇನ್ನೊಂದು ರಾಶಿಯಲ್ಲಿ ಪ್ರವೇಶ ಮಾಡುವುದಕ್ಕೆ ಒಂದು ವರ್ಷ ಬೇಕು. ಆ ಬೃಹಸ್ಪತ್ಯಾಚಾರ್ಯರನ್ನೇ ಕರೆದ ಬೃಹಸ್ಪತ್ಯಾಚಾರ್ಯರೇ, ನೀವು ಒಂದೇ ದಿನ ಹನ್ನೆರಡೂ ರಾಶಿಗಳನ್ನು ಸುತ್ತಿಕೊಂಡು ಬರಬೇಕು ಅಂತ ಆಜ್ಞಾ, ನಿನ್ನ ಆಜ್ಞೆ ಶಿರಸಾಧಾರಿವಾದದ್ದು ಪರಮಾತ್ಮ ದೊಡ್ಡ ಭಾಗ್ಯ, ನಿನ್ನ ಸೇವೆಯನ್ನು ಮಾಡುವುದಕ್ಕೆ ಏನು ಹೇಳಿದರೂ ಅದನ್ನು ನಾವು ಕೇಳುವುದಕ್ಕೆ ಸಿದ್ಧ **'ಸಕಲ ಗ್ರಹ ಬಲ ನೀನೇ ಸರಸಿಜಾಕ್ಷ'** ಎಲ್ಲ ಗ್ರಹಗಳಿಗೆ ನಿಯಾಮಕ. ಅಂತಹ ಸೂರ್ಯ ಚಂದ್ರರಿಗೆ ನಿಯಮಾಕನಾದಂತಹ, ಸಕಲ ಗ್ರಹಗಳಿಗೆ ನಿಯಾಮಕನಾದಂತಹ, ಜ್ಯೋತಿರ್ಮಂಡಲಕ್ಕೆ ಸ್ವಾಮಿಯಾದ ಶಿಂಶುಮಾರ ರೂಪಿಯಾದ ಸ್ವಾಮಿ ನೀನು, ನಿನ್ನನ್ನು ಆಶ್ರಯಿಸಿಕೊಂಡು ಎಲ್ಲ ಗ್ರಹಗಳಿವೆ, ಎಲ್ಲ ನಕ್ಷತ್ರಗಳಿವೆ. ನಾವೆಲ್ಲ ನಿನ್ನನ್ನು ಆಶ್ರಯಿಸಿಕೊಂಡಿದ್ದೇವೆ, ನಿನ್ನ ಆಜ್ಞೆಯಂತೆ ನಮ್ಮ ಬದುಕು ನಮ್ಮ ಚಲನವಲನಾದಿಗಳೆಲ್ಲವೂ ಕೂಡ, ನಾವು ಮಾಡುವುದೆಲ್ಲ ನಿನ್ನ ಸೇವೆಗಾಗಿ ನಿನ್ನ ಪ್ರೀತಿಗಾಗಿ. ನಿತ್ಯವೂ ಮಾಡುವಂತೆ ವರ್ಷಕ್ಕೊಂದು ರಾಶಿಯಲ್ಲಿ ಸಂಚಾರ ಮಾಡುವುದು ಬಿಟ್ಟು ಒಂದೇ ದಿನದಲ್ಲಿ ಹನ್ನೆರಡು ರಾಶಿಗಳಲ್ಲಿ ಸಂಚಾರ ಮಾಡಬೇಕು ಅಂತನ್ನುವ ಒಂದು ದೊಡ್ಡ ಸೇವಾ ಭಾಗ್ಯವನ್ನು ಕೊಟ್ಟದ್ದೀ ಅವಶ್ಯವಾಗಿ

ಆ ರೀತಿಯಾಗಿ ಮಾಡುತ್ತೇನೆ ಅಂತ ಬೃಹಸ್ಪತ್ಯಾಚಾರ್ಯರು ಒಂದೇ ದಿನದಲ್ಲಿ ಹನ್ನೆರಡು ರಾಶಿಗಳನ್ನು ಸುತ್ತಿಕೊಂಡು ಬಂದಿದ್ದಾರೆ.

ಇನ್ನು ಹನ್ನೆರಡು ರಾಶಿಗಳಲ್ಲಿ ಬೃಹಸ್ಪತಿ ಸುತ್ತಿ ಬಂದದ್ದಾಯಿತು ಆದರೆ ಹನ್ನೆರಡು ವರ್ಷಗಳವರೆಗೆ ಮಾಡುವ ತಪಶ್ಚರ್ಯದ ನಿಯಮಗಳು ಇರುತ್ತಲ್ಲ, ವಿಧಾನಗಳೆಲ್ಲ ಇರುತ್ತದಲ್ಲ ಒಂದೊಂದು ತಿಂಗಳು ಈ ತರಹ ಮಾಡಬೇಕು ಅಂತ ಸ್ನಾನ ಹೋಮ ಜಪ ಪಾರಾಯಣ ದಾನ ಹಾಗೂ ಇನ್ನನೇಕ ಪ್ರಾಣಾಯಾಮಾದಿಗಳು ಮತ್ತು ಉಪವಾಸ ವ್ರತಾದಿಗಳು ಇವುಗಳೆಲ್ಲ ಇರುತ್ತದೆ ಅದನ್ನೆಲ್ಲ ಹೇಗೆ ಮಾಡುವುದು. ಬೃಹಸ್ಪತಿ ತಿರುಗಿ ಬಂದಾಯಿತು ಆದರೆ 12 ವರ್ಷಗಳಲ್ಲಿ ಮಾಡುವ ಎಲ್ಲ ವ್ರತ ನಿಯಮಗಳನ್ನು ಮಾಡಿದರೆ ಅದು 12 ವರ್ಷದ ತಪಶ್ಚರ್ಯವಾದಂತೆ ಲೆಕ್ಕ ಹೇಗೆ ಸಾಧ್ಯ, ಭಗವಂತನಿಗೆ ಏನು ಅಸಾಧ್ಯ. ನೋಡಿ ದಿನಕ್ಕೆ ಶ್ವಾಸಗಳು ಎಷ್ಟು 21,600 ಶ್ವಾಸಗಳು ಒಂದು ದಿನಕ್ಕೆ ಆ ಶ್ವಾಸಗಳ ಲೆಕ್ಕದಲ್ಲಿ ದೇವರು ಒಂದೇ ದಿನದಲ್ಲಿ 21,600 ಶ್ವಾಸಗಳಲ್ಲಿ 12 ವರ್ಷದ ವಿಭಾಗವನ್ನು ಮಾಡಿದ್ದಾನೆ. ಐದು ಶ್ವಾಸಗಳು ಅಂದರೆ ಒಂದು ದಿವಸ ಅಂತ ಲೆಕ್ಕ ಅರ್ಥ ಮಾಡಿಕೊಳ್ಳಿ ಐದೇ ಐದು ಶ್ವಾಸೋಚ್ಛ್ವಾಸಗಳನ್ನು ಮಾಡಿದರೆ ಅದು ಒಂದು ದಿನ ಅಂತ ಲೆಕ್ಕ. ಒಂದು ದಿನದಲ್ಲಿ ಮಾಡಬೇಕಾದಂತಹ ಸ್ನಾನ ಹೋಮ ದಾನ ತಪಸ್ಸು ಎಲ್ಲವನ್ನೂ ಐದು ಶ್ವಾಸಗಳ ಕಾಲದೊಳಗೆ ಮಾಡಿ ಮುಗಿಸುತ್ತಿದ್ದ ದೇವರು ಅಷ್ಟು ವೇಗ, ಐದೇ ಐದು ಶ್ವಾಸಗಳನ್ನು ಬಿಡುವುದರೊಳಗೆ ಅಷ್ಟು ಕಾಲದೊಳಗೆ ಎಲ್ಲಾ ಒಂದು ದಿನದ ಕೆಲಸ ಮುಗಿದು ಹೋಯಿತು. ಸೇವೆ ಮಾಡುವುದಕ್ಕೆ ಯಾರು, ಸೇವೆ ಮಾಡುವುದಕ್ಕೆ ಯಾರು ಬೇಕಾಗಿಲ್ಲ ದೇವರಿಗೆ ಆದರೆ ಸೇವೆ ಮಾಡುವುದಕ್ಕೆ ಅವರಿಗೊಂದು ಅವಕಾಶ ಕೊಟ್ಟು ಭಾಗ್ಯವನ್ನು ಕೊಟ್ಟ ಗರುಡ ದೇವರು ಹೋಮಕ್ಕೆ ಇಂಧನಗಳನ್ನು ತರುವ ಕೆಲಸ. ಅತೀ ವೇಗದಲ್ಲಿ ಒಂದು ದಿನದ ಇಂಧನ ತರುವುದರೊಳಗೆ ಇನ್ನೊಂದು ದಿನದ ಇಂಧನವನ್ನು ತಂದಿರಬೇಕು ಮತ್ತೆ ಅದನ್ನು ಬೇರೆಯವರಿಗೆ ಯಾರಿಗಾದರೂ ಒಪ್ಪಿಸಿದರೆ ಆಗುವುದಿಲ್ಲ ಗರುಡ ವೇಗ ಆ ಗರುಡ ದೇವರಿಗೆ ಆ ಕಾರ್ಯವನ್ನು ಒಪ್ಪಿಸಿದ್ದಾನೆ. ಇಂಧನಗಳನ್ನು ತಂದು ಹೋಮಕ್ಕೆ ಸಿದ್ಧ ಮಾಡಿ ಇಟ್ಟಿದ್ದಾರೆ, ಮಾಡುತ್ತ ಇದ್ದರು ನಿತ್ಯದಲ್ಲಿ ಗರುಡ ದೇವರು.

ಇನ್ನು ಬೇರೆ ಬೇರೆ ಕಾರ್ಯಗಳಿಗೆ ತನ್ನ ಆಯುಧಾಭಿಮಾನಿ ದೇವತೆಗಳು ಶಂಖ ಚಕ್ರ ಗದಾ ಖಡ್ಗ ಅವುಗಳಿಗೆ ಹೇಳಿದ್ದಾನೆ. ಚಕ್ರ ಹೂವುಗಳನ್ನು ತಂದು ಕೊಡುತ್ತ ಇತ್ತು ಚಕ್ರಾಭಿಮಾನಿ ಆದಂತಹ ಸುದರ್ಶನ ಅವನು ಹೂವುಗಳನ್ನು ತಂದು ಕೊಡುತ್ತಾನೆ. ಶಂಖ ಸುತ್ತಲೂ ಯಾವ ತರಹದ ಅಶುದ್ಧಿ ಆಗದೇ ಇದ್ದಂತೆ, ಯಾವುದೇ ತರಹದ ಭೂತಗಳ ಪಿಶಾಚಗಳ ಬಾಧೆ ಆಗದೇ ಇರುವ ಹಾಗೆ ಸುತ್ತಲೂ ಸಂಚಾರ ಮಾಡಿ ರಕ್ಷಣೆ ಮಾಡುತ್ತ ಇದೆ ಶಂಖ ತನ್ನ ಧ್ವನಿಯ ಮೂಲಕವಾಗಿ. ಇವತ್ತಿಗೂ ಹೇಳುತ್ತಾರೆ ಆ ಶಂಖದ ಧ್ವನಿಯನ್ನು ಚೆನ್ನಾಗಿ ನಾವು ಊದಿ ಹೊರಗೆ ಬರುವಂತೆ ಮಾಡಿದರೆ ಆ ಧ್ವನಿಯಿಂದ ಎಷ್ಟೆಷ್ಟೋ ರೋಗಾಣುಗಳು ದುಷ್ಟವಾದಂತಹ ಕೀಟಗಳು ವೈರಸ್ಸುಗಳು ಬ್ಯಾಕ್ಟೀರಿಯಾಗಳು ಎಲ್ಲಾ ದೂರ ಆಗುತ್ತವೆ ಅಂತಹ ಒಂದು ವಿಶಿಷ್ಟ ಶಕ್ತಿ ಆ ಧ್ವನಿಯಲ್ಲಿ ಇದೆ ಅಂತ ಅನೇಕ ವಿಜ್ಞಾನಿಗಳ ಅಭಿಪ್ರಾಯ. ಆ ತರಹದ ದೋಷಗಳನ್ನ ಬ್ಯಾಕ್ಟೀರಿಯಾಗಳನ್ನ ರೋಗಾಣುಗಳನ್ನ ಶಂಖ ಧ್ವನಿಯಿಂದ ಪರಮಾತ್ಮ ದೂರ ಮಾಡುತ್ತಾನೆ ಜೊತೆಗೆ ಭೂತ ಪ್ರೇತ ಪಿಶಾಚಾದಿಗಳ ಬಾಧೆಯನ್ನೂ ಕೂಡ ಭಗವಂತ ದೂರ ಮಾಡುತ್ತಾನೆ. ಈಗ ಬಂದಿರುವಂತಹ ಎಲ್ಲ ರೋಗಗಳ ನಿವಾರಣೆಯನ್ನು ಪರಮಾತ್ಮ ತನ್ನ ಶಂಖ ಧ್ವನಿಯ ಮೂಲಕ ಮಾಡಲಿ ಎಂಬುದಾಗಿ ನಾವು ಚಿಂತನ ಮಾಡಬೇಕು.

ಆಮೇಲೆ ಖಡ್ಗ ದರ್ಭಗಳನ್ನು ತಂದುಕೊಡುತ್ತ ಇದೆ ಆ ಖಡ್ಗ ಸಾಕ್ಷಾತ್ ಲಕ್ಷ್ಮೀ ದೇವಿ ಆ ಖಡ್ಗ ರೂಪದಲ್ಲಿ ಪರಮಾತ್ಮನ ಆ ಕುಶಗಳನ್ನು ತಂದುಕೊಡುತ್ತ ಇದ್ದಾಳೆ, ಗದಾ ನಾನಾ ವಿಧವಾದಂತಹ ಗದಾಭಿಮಾನಿಗಳಾದವರು

ವಾಯು ದೇವರು ವಿವಿಧ ಸೇವೆಗಳನ್ನೆಲ್ಲಾ ಅವರು ಮಾಡುತ್ತ ಇದ್ದಾರೆ. ಶಾರಂಗ ಧನುಸ್ಸು ಸರಸ್ವತಿ **'ಶಾರ್ಙ್ಗಂ ಚ ವಿದ್ಯೇತಿ ರಮೈವ ಖಡ್ಗಃ'**[1] ಅಂತ ತಾತ್ಪರ್ಯ ನಿರ್ಣಯದಲ್ಲಿ ಹೇಳಿದ್ದಾರೆ ಹೀಗಾಗಿ ಆ ಶಾರಂಗ ಧನುಸ್ಸಿಗೆ ಅಭಿಮಾನಿಯಾದ ಸರಸ್ವತಿ ಕೈಜೋಡಿಸಿ ಯಾವಾಗಲೂ ಎದುರಿಗೆ ನಿಂತದ್ದು ನೀನು ಏನು ಹೇಳುತ್ತೀಯೋ ಅದನ್ನು ಮಾಡುತ್ತೇನೆ ಅಂತ. ಒಂದೊಂದು ಕೆಲಸವನ್ನು ಒಬ್ಬೊಬ್ಬರಿಗೆ ಒಪ್ಪಿಸುವುದು ಬೇರೆ ಎಕ್ಸಟ್ರಾ ಏನಾದರೂ ಕಾರ್ಯಗಳು ಇದ್ದರೂ ಕೂಡ ಅದನ್ನು ಮಾಡುವುದಕ್ಕೆ ಸರಸ್ವತಿ ಎದುರಿಗೆ ಯಾವಾಗಲೂ ನಿಂತಿದ್ದಳಂತೆ ಕೈಜೋಡಿಸಿಕೊಂಡು. ಈ ರೀತಿ ನಾನಾ ವಿಧವಾದ ಸೇವೆಗಳನ್ನು ದೇವಾಧಿ ದೇವತೆಗಳೆಲ್ಲ ಋಷಿಗಳು ಮುನಿಗಳು ಮಾಡುತ್ತಾ ಇದ್ದಾರೆ ಹೀಗೆ ಪರಮಾತ್ಮ ಆ ವ್ರತವನ್ನು ಮಾಡಿದ.

ಐದು ಶ್ವಾಸಗಳಾಗುವಷ್ಟು ಕಾಲದಲ್ಲಿ ಒಂದು ದಿನದ ಕಾರ್ಯವನ್ನು ಮಾಡುತ್ತ ಇದ್ದ ಹಾಗಾದರೆ 150 ಶ್ವಾಸಗಳು ಅಂತಂದರೆ ಒಂದು ತಿಂಗಳಿದ್ದಂತೆ ಲೆಕ್ಕ, 1,800 ಶ್ವಾಸಗಳು ಅಂತಂದರೆ ಒಂದು ವರ್ಷ ಅಂತ ಲೆಕ್ಕ, 21,600 ಶ್ವಾಸಗಳು ಅಂತಂದರೆ 12 ವರ್ಷ ಅಂತಾಯಿತು ಹಾಗಾದರೆ ಒಂದೇ ದಿನದಲ್ಲಿ 12 ವರ್ಷಗಳಲ್ಲಿ ಮಾಡಬೇಕಾದ ಎಲ್ಲ ವ್ರತ ನಿಯಯಮೋಪಾಸಾದಿಗಳನ್ನು ದೇವರು ತಾನು ಮಾಡಿ 12 ವರ್ಷದ ವ್ರತ ಮುಗಿಯಿತು ಅಂತ ಮಾಡಿಬಿಟ್ಟ ಈ ರೀತಿ ಆಯಿತು. ನಿಜವಾಗಿ ಎಲ್ಲ ವ್ರತ ನಿಯಯಗಳನ್ನು ಚೆನ್ನಾಗಿ ನಿಯಮ ಬದ್ಧವಾಗಿ ಪಾಲನೆ ಮಾಡಿದರೇನೆ ವರ ಸಿಗುವುದು ಬಹಳ ಕಷ್ಟ ಇದೆ ಮತ್ತೇನಾದರು ಲೋಪ ದೋಷಗಳು ಆಗಿರುತ್ತದೆ ಅಂತ ಹೇಳಿ ಆ ವರ ಸಿಗುವುದರೊಳಗೆ ಹೆಚ್ಚು ಕಡಿಮೆಯಾಗುತ್ತೆ ಅಷ್ಟು ಸೂಕ್ಷ್ಮವಾಗಿರುತ್ತದೆ ಅದರಲ್ಲಿಯೂ ವಿಶೇಷವಾಗಿ ಇಂತಹ ಕಾಮನೆಗಳನ್ನು ಇಟ್ಟುಕೊಂಡು ವ್ರತ ಮಾಡಿದಾಗ ಸಕಾಮವಾದ ವ್ರತ ಮಾಡಿದರೆ. ಆದರೆ ಪರಮಾತ್ಮ 12 ವರ್ಷ ಮಾಡಬೇಕಾದ ವ್ರತವನ್ನು ಸ್ವಲ್ಪ ಅಲ್ಪ ಸಂಕೋಚ ಅಲ್ಲ, ಅತಿ ಮಹಾಸಂಕೋಚ ಮಾಡಿ ಒಂದೇ ದಿನದೊಳಗೆ ಮಾಡಿದ್ದಾನೆ ಇದರಿಂದೇ ಗೊತ್ತಾಗುತ್ತೆ ನಿಜವಾಗಿಯೂ ರುದ್ರ ದೇವರಿಂದ ವರ ಪಡೆಯುವುದಕ್ಕೆ ಮಾಡಿದ ವ್ರತವೇ ಅಲ್ಲ ಇದು ನಾಟಕಕ್ಕಾಗಿ ಮಾಡಿದ ವ್ರತ. ನಾಟಕದಲ್ಲಿ ಹೇಗಿರುತ್ತೆ ನೋಡಿ ನಾಟಕದಲ್ಲಿ ಹೇಗಿರುತ್ತೆ ಹೀಗೆ ಬರುವುದರೊಳಗೆ ಮಗು ಹುಟ್ಟಿತು ಅಂತ ತೋರಿಸುತ್ತಾರೆ ಅಷ್ಟರೊಳಗೆ ಮದುವೆ ಆಗುತ್ತದೆ, ಮಕ್ಕಳು ಆಗುತ್ತಾರೆ, ಮೊಮ್ಮಕ್ಕಳು ಆಗಿ ಮರಿಮಕ್ಕಳು ಆಗಿಬಿಡುತ್ತಾರೆ ಒಂದು ತಾಸಿನ ನಾಟಕದೊಳಗೆ ಎಲ್ಲವೂ ಮುಗಿದು ಹೋಗಿ ಬಿಟ್ಟಿರುತ್ತದೆ. ಯಾಕೆ ಏನು ಇಷ್ಟು ಬೇಗ ಹೇಗೆ, ಇದೀಗ ಶಿಶು ಹುಟ್ಟಿದ ಹಾಗೆ ತೋರಿಸಿದರು ಇದು ಹೇಗೆ ಮದುವೆ ಇಷ್ಟು ಬೇಗ ಹೇಗೆ ಆಯಿತು, ಮಕ್ಕಳು ಹೇಗೆ, ಆದರು ಇದು ನಾಟಕರೀ ಅಂತ ಉತ್ತರ ಕೊಡುತ್ತಾರೋ ಇಲ್ಲವೋ ಅದೇ ಉತ್ತರ ಇಲ್ಲಿ, ಇಷ್ಟು ಬೇಗ ಹೇಗೆ 12 ವರ್ಷದ ವ್ರತ ಆಯಿತು ಇದೂ ನಾಟಕರೀ ಇದು ನಿಜವಾದ ವ್ರತ ಅಲ್ಲವೇ ಅಲ್ಲ ಇದು. ಇದು ನಾಟಕ ಆದರೆ ಆ ನಾಟಕದಲ್ಲಿಯೂ ಅಷ್ಟೆಲ್ಲ ಅದ್ಭುತವಾದ ರೀತಿಯೊಳಗೆ ವೇಗದಿಂದ ಪರಮಾತ್ಮ ಅದನ್ನೆಲ್ಲ ಮಾಡಿ ತೋರಿಸಿದ ಅನ್ನುವುದು ಅವನ ಅಚಿಂತ್ಯಾದ್ಭುತವಾದಂತಹ ಶಕ್ತಿ ಆ ರೀತಿ ಪರಮಾತ್ಮ ವ್ರತವನ್ನು ಮಾಡಿದ್ದಾನೆ. ಪರಮಾತ್ಮನ ದರ್ಶನಕ್ಕಾಗಿ ಬಂದಿದ್ದಾರೆ ನೋಡಿ ಆ ಭಗವಂತ ವ್ರತ ಮಾಡುತ್ತಾ ಇದ್ದದ್ದನ್ನು ನೋಡಿ ಎಲ್ಲರೂ ಬಂದಿದ್ದಾರೆ. ಪರಮಾತ್ಮ ಉಪನಿಷತ್ತಿನ ಪಾರಾಯಣ ಮಾಡುತ್ತಾ ಇದ್ದನಂತೆ.

ಆರಣ್ಯಕಂ ಪಠನ್ ವಿಷ್ಣುಃ ಸಾಕ್ಷಾತ್ ಸರ್ವೇಶ್ವರೋ ಹರಿಃ । (84.28 ಭವಿಷ್ಯಪರ್ವ)

ಈ ಒಂದು ತಪಸ್ಸಿನ ಬಗ್ಗೆ ಹೇಳುವ ಪ್ರಕರಣದಲ್ಲಿ ಗಮನಿಸಬೇಕಾದ ಒಂದು ಅಂಶ ಹೆಜ್ಜೆ ಹೆಜ್ಜೆಗೆ ಪರಮಾತ್ಮನನ್ನು ಸರ್ವೇಶ್ವರ ಸರ್ವೇಶ್ವರ ವಿಶ್ವೇಶ್ವರ ಸರ್ವೇಶ್ವರ ಅಂತ ಮೇಲಿಂದ ಮೇಲೆ ಹೇಳುತ್ತಾರೆ ಅಂದರೆ ಪುನಃ

1. 3.74 ಮಭಾತಾನಿರ್ಣಯ



ಪುನಃ ಹರಿವಂಶ ನಮಗೆ ದೃಢಪಡಿಸುತ್ತ ಇದೆ. ಪರಮಾತ್ಮ ಸರ್ವೋತ್ತಮ ರುದ್ರ ದೇವರನ್ನು ಕುರಿತು ತಪಸ್ಸು ಮಾಡಿ ವರ ಪಡೆದದ್ದು ರುದ್ರ ದೇವರ ಅನುಗ್ರಹಕ್ಕಾಗಿ ಸರ್ವಥ ಅಲ್ಲ ಅವನು ಸರ್ವೇಶ್ವರ ಸರ್ವೇಶ್ವರ ಕೇವಲ ಮೋಹನಕ್ಕಾಗಿ ಇದನ್ನು ಮಾಡಿದ್ದಾನೆ ಅಂತ ಸ್ಪಷ್ಟವಾಗಿ ಹರಿವಂಶ ನಮಗೆ ತಿಳಿಸುವುದಕ್ಕೆ ಈ ವಿಶೇಷಣಗಳನ್ನು ಇನ್ನಿತರ ಅಧ್ಯಾಯಗಳಲ್ಲಿ ಇಷ್ಟಾಗಿ ಬಳಸದೆ ಇಲ್ಲಿ ಬಳಿಸುವ ಮೂಲಕ ಅದನ್ನು ನಮಗೆ ತೋರಿಸಿಕೊಡುತ್ತಾರೆ. ಮತ್ತೆ ಬಂತು ನೋಡಿ **'ದ್ರಷ್ಟುಂ ಸರ್ವೇಶ್ವರಂ ವಿಷ್ಣುಂ'**[1] ಆ ಸರ್ವೇಶ್ವರನಾದ ಪರಮಾತ್ಮನನ್ನು ನೋಡುವುದಕ್ಕೆ ಇಂದ್ರ, ವರುಣ, ವಸು, ರುದ್ರ, ಆದಿತ್ಯ ಎಲ್ಲ ದೇವತೆಗಳು ಬಂದಿದ್ದಾರೆ ಬರುವುದು ಅಷ್ಟೇ ಅಲ್ಲ ಬಂದವರು ಏನಂತಾರೆ.

ಆಶ್ಚರ್ಯಂ ಖಲು ನ ಪಶ್ಯಧ್ವಂ ನ ಭೂತಂ ನ ಭವಿಷ್ಯತಿ ।
ಯೋಗಿಧ್ಯೇಯಃ ಸ್ವಯಂ ಕೃಷ್ಣೋ ಯತ್ ತಪ್ಯತಿ ಗುರುಃ ಸ್ವಯಮ್ ॥ (85.8 ಭವಿಷ್ಯಪರ್ವ)

ಜಗದ್ಗುರು ಇಡೀ ಜಗತ್ತು ಯಾವ ಪರಮಾತ್ಮನ ಧ್ಯಾನವನ್ನು ಮಾಡಿ ತನ್ನ ಇಷ್ಟಾರ್ಥಗಳನ್ನು ಪಡೆಯುತ್ತೆ ಅಂತಹ ಸ್ವಾಮಿ ಏನು ಧ್ಯಾನ ಮಾಡುತ್ತಾನೆ ಇವನು, ಏನು ತಪಶ್ಚರ್ಯ ಮಾಡುತ್ತಾನೆ, ಏನು ನಾಟಕ ಇದು, ಎಂತಹ ಆಶ್ಚರ್ಯ ಇದನ್ನು ನೋಡಬೇಕು ಅನ್ನೋದಕ್ಕೇನೆ ಎಲ್ಲರೂ ಬಂದಿದ್ದಾರೆ. ದೊಡ್ಡ ಅಧಿಕಾರಿಗಳು ಮಂತ್ರಿಗಳು ರಾಜರು ಅಂಥವರು ಏನೋ ಒಂದು ಸಣ್ಣ ಕೆಲಸ ಮಾಡುತ್ತಾರೆ ಅಂತಾದರೆ ಅದನ್ನು ನೋಡುವುದಕ್ಕೆ ಎಲ್ಲರೂ ಬರುತ್ತಾರೆ. ನಿತ್ಯವೂ ತಮ್ಮ ತಮ್ಮ ಮನೆಯಲ್ಲಿ ಸ್ವಚ್ಛ ಮಾಡಿಕೊಳ್ಳುತ್ತಾರೆ ಕಸಗುಡಿಸುತ್ತಾರೆ ಒರಿಸುತ್ತಾರೆ ಅದನ್ನು ಯಾರು ನೋಡಲಿಕ್ಕೆ ಬರುತ್ತಾರಾ ಬೇರೆಯವರು ಇಲ್ಲ ಆದರೆ ಒಬ್ಬ ರಾಷ್ಟ್ರಪತಿಗಳು ಪ್ರಧಾನಮಂತ್ರಿಗಳು ಮಾಡುತ್ತಾರೆ ಎಂದರೆ ಎಷ್ಟು ಜನ ಕ್ಯಾಮರಾ ಹಿಡಿದುಕೊಂಡು ಬರುತ್ತಾರೆ. ಯಾಕೆ ಅಷ್ಟು ದೊಡ್ಡವರು ಇಷ್ಟು ಚಿಕ್ಕ ಕೆಲಸವನ್ನು ಮಾಡುವ ಅಗತ್ಯ ಇಲ್ಲ ಆದರೂ ಕೂಡ ಮಾಡುತ್ತ ಇದ್ದಾರೆ ಈ ರೀತಿ ನೀವೆಲ್ಲ ಸ್ವಚ್ಛತೆಯನ್ನು ಭಾರತದಲ್ಲಿ ಮಾಡಬೇಕು ಅಂತ ತೋರಿಸಲಿಕ್ಕೆ ಅವರು ಸ್ವಚ್ಛ ಭಾರತದ ಆಂದೋಲನಕ್ಕಾಗಿ ಸ್ವಚ್ಛತೆಯನ್ನು ಮಾಡಿ ತೋರಿಸುತ್ತಾರೆ ಅನ್ನುವುದಕ್ಕೋಸ್ಕರ ಎಲ್ಲರೂ ಬರುತ್ತಾರಲ್ಲ ಹಾಗೆ ನಿಜವಾಗಿ ಭಗವಂತ ತಪಶ್ಚರ್ಯ ಮಾಡಿದ್ದಲ್ಲ. ಸ್ವಚ್ಛ ಮನಸ್ಸಿನ ಆಂದೋಲನ ಇದು, ಸ್ವಚ್ಛ ಭಾರತ ಆಂದೋಲನ ಅಲ್ಲ, ಇದು ಸ್ವಚ್ಛಾಂತಃಕರಣ ಆಂದೋಲನ ನಿಮ್ಮ ನಿಮ್ಮ ಮನಸ್ಸನ್ನು ಶುದ್ಧ ಮಾಡಿಕೊಳ್ಳುವುದಕ್ಕೆ ನೀವು ನಿಮಗಿಂತಲೂ ಉತ್ತಮರಾದ ದೇವತೆಗಳನ್ನು ಕುರಿತು ತಪಶ್ಚರ್ಯ ಮಾಡಿ ಅಂತ ತೋರಿಸುವುದಕ್ಕೆ, ತನಗೆ ಯಾರೂ ಉತ್ತಮರು ಇಲ್ಲದೆ ಇದ್ದರೂ ಕೂಡ ಪರಮಾತ್ಮ ತಪಶ್ಚರ್ಯವನ್ನು ಮಾಡುತ್ತಾನೆ ಅನ್ನುವುದಕ್ಕೋಸ್ಕರ ಈ ತರಹದ ಆಶ್ಚರ್ಯ ಅಂತ ದೇವತೆಗಳೆಲ್ಲ ಅಲ್ಲಿ ಕೊಂಡಾಡುತ್ತಾ ಇದ್ದಾರೆ. ರುದ್ರದೇವರು ನಂದಿ ವಾಹನರಾಗಿ ಬಂದಿದ್ದಾರೆ ದರ್ಭದ ಕಮಂಡಲು ಡಿಂಡಿಮ ದೀಪಿಕಾ ಶೂಲ ಇವುಗಳನ್ನು ನಾಲ್ಕು ಬಾಹುಗಳಲ್ಲಿ ಧಾರಣೆ ಮಾಡಿ ಅದ್ಭುತವಾದ ವೈಭವದಿಂದ ದಕ್ಷ ಯಜ್ಞದ ಧ್ವಂಸವನ್ನು ಮಾಡಿದಂತಹ ರುದ್ರ ದೇವರು ಬರುತ್ತ ಇದ್ದಾರೆ ಅಲ್ಲಿ.

ರುದ್ರಂ ರೋದನನಾಮಾನಮಾಹುರ್ವಿಶ್ವೇಶ್ವರಂ ಶಿವಮ್ । (85.18 ಭವಿಷ್ಯಪರ್ವ)

ರೋದನನಾ ರುದ್ರಃ ಅಂತ ಯಾವ ರುದ್ರ ದೇವರನ್ನು ಕರೆಯುತ್ತಾರೋ ಅಂತಹ ರುದ್ರ ದೇವರು ಅಷ್ಟ ಮೂರ್ತಿಗಳು ಅವರಿಗೆ.

1. 85.1 ಭವಿಷ್ಯಪರ್ವ

ಭೂಮಿರಾಪೋಽನಲೋ ವಾಯುಃ ಖಂ ಸೂರ್ಯಶ್ಚ ತಥಾ ಶಶೀ ।

ಅಗ್ನಿಶ್ಚ ಯಜಮಾನಶ್ಚ ಪ್ರಕೃತಿಶ್ಚೈವಮಷ್ಟಧಾ ॥ (85.21 ಭವಿಷ್ಯಪರ್ವ)

ಈ ರೀತಿ ಆ ಪಂಚ ಮಹಾಭೂತಗಳು ಸೂರ್ಯ ಚಂದ್ರ ಯಜಮಾನ ಮೊದಲಾದ ಎಂಟು ಪ್ರತಿಮೆಗಳು ಆ ರುದ್ರ ದೇವರಿಗೆ. ಅಹಂಕಾರ ತತ್ವಾಭಿಮಾನಿ ದೇವತೆಗಳು ಅಹಂಕಾರ ತತ್ವದಿಂದಲೇ ಈ ಪಂಚ ಮಹಾಭೂತಗಳ ಸೃಷ್ಟಿಯಾಗುತ್ತದೆ ಅಂದಮೇಲೆ ಇಡೀ ಪೃಥಿವಿ ಸಂಪೂರ್ಣವಾದ ನೀರು ಅಗ್ನಿ ವಾಯು ಆಕಾಶ ಹಾಗೂ ಸೂರ್ಯ ಚಂದ್ರರು ಯಜಮಾನ ಪ್ರಕೃತಿ ಇವುಗಳೆಲ್ಲ ಆ ರುದ್ರ ದೇವರ ಶ್ರೇಷ್ಠವಾದಂತಹ ಪ್ರತಿಮೆಗಳು ಅಂತಹ ಮಹಾನುಭಾವರು ರುದ್ರ ದೇವರು ಬಂದಿದ್ದಾರೆ.

ಹರಿವಂಶದ ಮಹಾಭಾರತದ ಒಂದೊಂದು ಶಬ್ದವನ್ನು ಚೆನ್ನಾಗಿ ಗಮನಿಸಿ ಪರಮಾತ್ಮನ ಪಾರಮ್ಯವನ್ನು ಶ್ರೀಕೃಷ್ಣ ಪರಮಾತ್ಮನ ಸರ್ವೋತ್ತಮತ್ವವನ್ನು ಎಷ್ಟು ಸುಂದರವಾಗಿ, ಎಷ್ಟು ಗೂಢವಾಗಿ, ಎಷ್ಟು ವ್ಯಕ್ತವಾಗಿ ಕೆಲವೊಮ್ಮೆ ಗೂಢವಾಗಿ ಕೆಲವೊಮ್ಮೆ ಅತಿಸುವ್ಯಕ್ತವಾಗಿ ಮಹಾಭಾರತ ವರ್ಣನೆ ಮಾಡುತ್ತದೆ. ಸಾಮಾನ್ಯವಾಗಿ ಬ್ರಹ್ಮ ದೇವರು ಹಿರಣ್ಯಕಶಿಪುವಿಗೆ ವರ ಕೊಡುವುದಕ್ಕೆ ಬಂದರು ಅಥವಾ ಇನ್ನೊಬ್ಬರು ಯಾರೋ ಮುನಿಗಳು ಋಷಿಗಳು ತಪಶ್ಚರ್ಯ ಮಾಡುವಾಗ ವರ ಕೊಡುವುದಕ್ಕೆ ದೇವರು ಬಂದರು ಅಂದರೆ ಅವನಿಗೆ ತನ್ನ ದರ್ಶನವನ್ನು ಕೊಡುವುದಕ್ಕೆ,ಉದ್ಧಾರ ಮಾಡುವುದಕ್ಕೆ, ಅವನ ಇಷ್ಟಾರ್ಥಗಳನ್ನು ಪೂರ್ಣ ಮಾಡುವುದಕ್ಕೆ ಬಂದರು ಅಂತ ಹೀಗೆ ಶಬ್ದಗಳು ಇರುತ್ತೆ. ಇಲ್ಲಿ ದರ್ಶನ ಕೊಡುವುದಕ್ಕೆ ರುದ್ರ ದೇವರು ಬಂದರು ಅಂತ ಇಲ್ಲವೇ ಇಲ್ಲ ಶಬ್ದ **'ದ್ರಷ್ಟುಂ ವಿಶ್ವೇಶ್ವರಂ ವಿಷ್ಣುಂ'.**[1] ಭಗವಂತನ ದರ್ಶನ ಪಡೆಯುವುದಕ್ಕೆ ರುದ್ರ ದೇವರು ಬಂದರು ಅಂತ ಮಹಾಭಾರತ ಹೇಳುತ್ತದೆ ಪರಮಾತ್ಮನಿಗೆ ತಮ್ಮ ದರ್ಶನ ಕೊಡುವುದಕ್ಕಲ್ಲ ಭಗವಂತನ ದರ್ಶನ ಮಾಡುವ ಸೌಭಾಗ್ಯ ನನಗೆ ಸಿಕ್ಕಿತು ಅಂತ. ಅವನು ತಪಶ್ಚರ್ಯ ಮಾಡಿದ್ದಕ್ಕೆ ಈ ನಿಮಿತ್ತದಿಂದ ಕೃಷ್ಣನ ದರ್ಶನ ಮಾಡುವುದಕ್ಕೆ ನನಗಾಯಿತಲ್ಲ ಅಂತ ಸಂತೋಷದಿಂದ ರುದ್ರ ದೇವರು ಬಂದಿದ್ದಾರೆ ಅಂತ ತಿಳಿಸುತ್ತಾರೆ. ಈ ರೀತಿ ಆ ರುದ್ರ ದೇವರು ಅಲ್ಲಿ ಬಂದಿದ್ದಾರೆ. ರುದ್ರ ದೇವರು ಬರುವಾಗ ಅವರ ಜೊತೆಗೆ ನಾನಾ ವಿಧವಾದ ಪಿಶಾಚಗಳು ಭೂತಗಣ ಹಿಂದೆ ಘಂಟಾಕರ್ಣ, ಕರ್ಣ ಪಿಶಾಚಗಳ ಕಥೆ ಕೇಳಿದಿರಲ್ಲ ಹಾಗೆ ಅನೇಕ ಶವಗಳನ್ನ ಜೊತೆಗೆ ತೆಗೆದುಕೊಂಡು ಬಂದಿದ್ದಾರೆ ತಮ್ಮ ಆಹಾರವನ್ನ, ರಕ್ತ ಪಾನವನ್ನ ಮಾಡುತ್ತ ಇದ್ದಾರೆ. ಈ ಕಡೆಗೆ ಅನೇಕ ಮುನಿಗಳು ಋಷಿಗಳು ವೇದ ಪಠಣ ಮಾಡುತ್ತಾರೆ, ಅತ್ಯಂತ ವಿರಕ್ತ ಶಿಖಾಮಣಿಗಳಾಗಿ ಇರತಕ್ಕಂತಹ ಅನೇಕ ಋಷಿಗಳು ಸಾಧುಗಳು ಯತಿಗಳು ಎಲ್ಲ ಜೊತೆಗೆ ಇದ್ದಾರೆ. ಈ ಕಡೆಗೆ ಭೂತಗಣನೂ ಇದೆ ಸಿದ್ಧ ಗಂಧರ್ವರೂ ಇದ್ದಾರೆ, ಅಪ್ಸರಾ ಸ್ತ್ರಿಯರು,ವಿದ್ಯಾಧರರು ಎಲ್ಲರಿಂದ ಸ್ತುತ್ಯರಾಗಿ ಆ ಮಹಾ ವೈಭವದಿಂದ ರುದ್ರ ದೇವರು ಬರುತ್ತ ಇದ್ದಾರೆ.

ಯತ್ರ ವಿಶ್ವೇಶ್ವರೋ ವಿಷ್ಣುಸ್ತಪಸ್ತೇಪೇ ಸುದಾರುಣಮ್ ॥ (86.16 ಭವಿಷ್ಯಪರ್ವ)

ಆ ಭಗವಂತ ತಪಸ್ಸು ಮಾಡುವಂತಹ ಸ್ಥಳದಲ್ಲಿ ಬರುತ್ತಾರೆ. ಒಂದು ಬಾರಿ ಅಲ್ಲ ಮತ್ತೆ ಮತ್ತೆ ಎರಡನೆಯ ಮುಂದಿನ ಅಧ್ಯಾಯದ ಕೊನೆಗೂ ಮತ್ತೆ ಹೇಳುತ್ತಾರೆ.

ದ್ರಷ್ಟುಂ ಹರಿಂ ವಿಷ್ಣುಮುದಾರವಿಕ್ರಮೋ ॥ (86.18 ಭವಿಷ್ಯಪರ್ವ)

1. 85.22 ಭವಿಷ್ಯಪರ್ವ

ಆ ಭಗವಂತನ ದರ್ಶನ ಪಡೆದು ತಾವು ಧನ್ಯರಾಗುವುದಕ್ಕೆ ರುದ್ರ ದೇವರು ಅತ್ಯಂತ ಉತ್ಸಾಹದಿಂದ ಬರುತ್ತ ಇದ್ದಾರೆ ಬೇಗ ಬೇಗ. ಭಗವಂತ ಆ ರುದ್ರಾಂತರ್ಗತವಾದ ತನ್ನದೇ ಆದಂತಹ ಶಿವನಾಮಕವಾದ ರೂಪ, ಈ ಮಾತನ್ನು ರುದ್ರ ದೇವರೇ ಮುಂದಿನ ಅಧ್ಯಾಯಗಳಲ್ಲಿ ತಿಳಿಸುವವರಿದ್ದಾರೆ ನೀನೇ ನಮ್ಮಲ್ಲಿ ನಿಂತು ಸಂಹಾರಾದಿ ಕಾರ್ಯಗಳನ್ನು ಮಾಡಿಸುತ್ತೀಯಾ ಅಂತ. ಅಂತಹ ರುದ್ರಾಂತರ್ಯಾಮಿಯಾದ ರುದ್ರನಾಮಕವಾದ,

ರುಜಂ ದ್ರಾವಯತೇ ಯಸ್ಮಾತ್ ರುದ್ರಸ್ ತಸ್ಮಾತ್ ಜನಾರ್ದನಃ ॥ (03.66 ಬ್ರಹ್ಮಸೂತ್ರಭಾಷ್ಯಮ್)

ಎಲ್ಲ ರೋಗಗಳ ಪರಿಹಾರವನ್ನು ಮಾಡುತ್ತಾನೆ ಅನ್ನುವುದಕ್ಕಾಗಿ ಪರಮಾತ್ಮನಿಗೆ ರುದ್ರ ಅಂತ ಕರೆಯುತ್ತಾರೆ. **'ಸರ್ವಃ ಶರ್ವಃ ಶಿವಃ ಸ್ಥಾಣು'**[1] ಸರ್ವ ಶರ್ವ ಶಿವ ಸ್ಥಾಣು ಈ ಎಲ್ಲ ಶಬ್ದಗಳಿಂದ ವಾಚ್ಯನಾದವನು ವಿಷ್ಣು ಅಂತ ವಿಷ್ಣುಸಹಸ್ರನಾಮದಲ್ಲಿ ನೀವು ಕೇಳುತ್ತೀರಿ. **'ಆದಿದೇವೋ ಮಹಾದೇವಃ'** ಅಂತ ಮಹಾದೇವ ಶಬ್ದ ವಾಚ್ಯನಾದವನು ವಿಷ್ಣು ಅಂತ ವಿಷ್ಣುಸಹಸ್ರನಾಮದಲ್ಲಿ ತಿಳಿಯುತ್ತೀರಲ್ಲ, ಅಂತಹ ಶಿವ ಮಹಾದೇವ ಶರ್ವ ಸ್ಥಾಣು ಇತ್ಯಾದಿ ಶಬ್ದಗಳಿಂದ ವಾಚ್ಯನಾಗಿರುವಂತಹ ಪರಮಾತ್ಮ ರುದ್ರ ದೇವರ ಆ ತನ್ನದೇ ಆದಂತಹ ರುದ್ರಾಂತರ್ಮಿಯಾದ ರೂಪವನ್ನು ಭಗವಂತ ಸ್ತೋತ್ರ ಮಾಡುತ್ತ ಇದ್ದಾನೆ. ಆ ರುದ್ರ ದೇವರ ಸ್ತುತಿಯನ್ನು ಮಾಡಿ ಕೊನೆಗೆ ಭಗವಂತ ಅನ್ನುತ್ತಾನೆ ರುದ್ರ ದೇವರಿಗೆ, ಕ್ಷಮೆ ಮಾಡು ನನ್ನನ್ನ ಏನಾದರೂ ಅಪರಾಧ ಇದ್ದರೆ ಅಂತ ಪರಮಾತ್ಮ ನಾಟಕ ಮಾಡುವುದಕ್ಕೆ. **'ಪ್ರಕಾಶಂ ಕುರು ಚಾತ್ಮಾನಾಮಪ್ರಕಾಶಂ ಚ ಮಾಂ ಕುರು'** ನಿನ್ನ ಪ್ರಕಾಶ ಲೋಕದಲ್ಲಿ ಆಗುವಂತೆ, ನನ್ನ ಪ್ರಕಾಶ ಆಗದಿರುವಂತೆ ಮಾಡು ಅಂತೇನೆ ಪರಮಾತ್ಮ ರುದ್ರ ದೇವರಿಗೆ ಆಜ್ಞೆ ಮಾಡಿದ್ದು, ಅದಕ್ಕೆ ತಕ್ಕಂತೆ ನಾಟಕ ಮಾಡಿ ಹೇಳುತ್ತಾನೆ

ಕ್ಷಮಸ್ವ ಭಗವನ್ ದೇವ ಭಕ್ತೋಽಹಂ ತ್ರಾಹಿ ಮಾಂ ಹರ ।
ಸರ್ವಾತ್ಮನ್ ಸರ್ವಭೂತೇಶ ತ್ರಾಹಿ ಮಾಂ ಸತತಂ ಹರ ॥ (87.37 ಭವಿಷ್ಯಪರ್ವ)

ನನ್ನನ್ನು ಕ್ಷಮಾ ಮಾಡು, ನಿನ್ನ ಭಕ್ತ ನಾನು ನನ್ನನ್ನು ರಕ್ಷಣೆ ಮಾಡು ಅಂತ. ಮೇಲ್ನೋಟಕ್ಕೆ ಓ ಭಗವಂತ ಏನೋ ಅಪರಾಧ ಮಾಡಿದವ ಅನ್ನುವುದಕ್ಕೆ ಕ್ಷಮಾ ಕೇಳುತ್ತ ಇದ್ದಾನೆ ರುದ್ರ ದೇವರಿಗೆ ಅಂತ ತೋರಬೇಕು. ಹಾಗೆ ತೋರಲಿ ಅನ್ನುವುದಕ್ಕೆ ದೇವರು ಹೇಳಿದ್ದು ಆದರೆ ನಿಜವಾದ ಆಂತರ್ಯ ಏನು ಒಳಗಿದ್ದದ್ದು, ಅದನ್ನೇ ಈ ಪ್ರಮಾಣ ವಚನ ತಿಳಿಸಿಕೊಡುತ್ತದೆ. **'ಅಪ್ರಕಾಶಂ ಚ ಮಾಂ ಕುರು'** ಎಲ್ಲರಿಗೂ ನನ್ನ ಮಹಿಮೆ ತಿಳಿಯುವುದು ಬೇಡ, ನಿಜವಾದ ಭಕ್ತರಿಗೆ ಯೋಗ್ಯರಿಗೆ ಮಾತ್ರ ನನ್ನ ಮಹಿಮೆ ತಿಳಿಯಲಿ, ಉಳಿದವರೆಲ್ಲರಿಗೂ ತಿಳಿಯುವುದು ಬೇಡ. ನೋಡಿ, ಈ ಶ್ಲೋಕದ ಅರ್ಥ ಎಷ್ಟು ಸುಂದರವಾಗಿ ಇದೆ. ನನಗೆ ಬಹಳ ಜನ ಭಕ್ತರಿದ್ದಾರೆ, ಭಕ್ತಿ ಮಾಡುವ ಯೋಗ್ಯತೆ ಇರುವಂತಹ ಭಕ್ತರೂ ಇದ್ದಾರೆ, ಭಕ್ತಿ ಮಾಡುವ ಯೋಗ್ಯತೆ ಇಲ್ಲದೇ ಇರುವ ಭಕ್ತರೂ ಇದ್ದಾರೆ ಅಂತಹ ದೊಡ್ಡ ಭಕ್ತರ ಗುಂಪು ನನಗಿದೆ. ಯೋಗ್ಯರು ಅದರೊಳಗೆ ಇದ್ದಾರೆ, ಅಯೋಗ್ಯರು ಇದ್ದಾರೆ ಅದಕ್ಕಾಗಿ ನನ್ನನ್ನು ಭಕ್ತ ಅಂತ. ಭಕ್ತ ಅಂದರೆ ರುದ್ರ ದೇವರ ಭಕ್ತ ನಾನು ಅಂತ ಅರ್ಥ ಅಲ್ಲ **'ಭಕ್ತೋಽಹಂ'** ಅನ್ನುವ ಶಬ್ದಕ್ಕೆ. **'ಭಕ್ತಾಃ ಸಂತಿ ಅಸ್ಯ ಇತಿ ಭಕ್ತಃ'** ನನಗೆ ಅನೇಕ ಭಕ್ತರಿದ್ದಾರೆ, ಯೋಗ್ಯ ಭಕ್ತರಿದ್ದಾರೆ, ಅಯೋಗ್ಯ ಭಕ್ತರಿದ್ದಾರೆ ಇಂತಹ ಸಂದರ್ಭದಲ್ಲಿ ನೀವು ಏನು ಮಾಡಬೇಕು ಅಂದರೆ ನನ್ನನ್ನು ರಕ್ಷಣೆ ಮಾಡಬೇಕು. ಏನು ರಕ್ಷಣೆ ಮಾಡುವುದು ಅಯೋಗ್ಯರಾದ ಭಕ್ತರು ನನ್ನ ಉಪಾಸನೆ ಮಾಡದಂತೆ ಅವರಿಂದ ನನ್ನನ್ನು ರಕ್ಷಣೆ ಮಾಡು ಅಂತ. ಅದರರ್ಥ ಅಯೋಗ್ಯರಿಗೆ ನನ್ನ ಉಪಾಸನೆ ಮಾಡುವುದಕ್ಕೆ ಅವಕಾಶ ಕೊಡುವುದು ಬೇಡ. ಯೋಗ್ಯರಾದ ಭಕ್ತರು ಮಾತ್ರ ನನ್ನನ್ನು ಉಪಾಸನೆ ಮಾಡಬೇಕು.

1. 4 ವಿಷ್ಣುಸಹಸ್ರನಾಮ

ಈ ಪುಸ್ತಕವನ್ನು ಚೆನ್ನಾಗಿ ರಕ್ಷಣೆ ಮಾಡಬೇಕಪ್ಪಾ ಅರ್ಥ ಏನು, ಹರಿಯದೇ ಇದ್ದ ಹಾಗೆ ರಕ್ಷಣೆ ಮಾಡಬೇಕು ಅನ್ನುವುದಲ್ಲ. ಈ ಪುಸ್ತಕವನ್ನು ಯಾರು ಓದಬೇಕು ಅವರು ಓದಲಿ, ಓದುವ ಯೋಗ್ಯತೆ ಇಲ್ಲದೇ ಇದ್ದವರ ಕೈಗೆ ಇದು ಸಿಗದೇ ಇರುವ ಹಾಗೆ ಇದನ್ನು ಚೆನ್ನಾಗಿ ಜೋಪಾನವಾಗಿ ಇಡು, ರಕ್ಷಣೆ ಮಾಡು ಅಂತ ಅರ್ಥ ಅದಕ್ಕೆ. ಹಾಗೆ ನನ್ನನ್ನು ರಕ್ಷಣೆ ಮಾಡು ಅಂದರೆ ನನಗೆ ಬಹಳ ಆಪತ್ತು ಇದೆ. ಬಹಳ ಕಷ್ಟ ಇದೆ ನನ್ನನ್ನು ರಕ್ಷಣೆ ಮಾಡು ಅಂತ ಅಲ್ಲ. ನನ್ನ ಭಕ್ತರ ಗುಂಪಿನಲ್ಲಿ ಯೋಗ್ಯರು ಅಯೋಗ್ಯರು ಎಲ್ಲರೂ ಸೇರಿಕೊಂಡಿದ್ದಾರೆ. ಅದರೊಳಗೆ ಯೋಗ್ಯರಾದವರಿಗೆ ಮಾತ್ರ ನನ್ನ ಉಪಾಸನೆ ಮಾಡುವ ಒಂದು ಅವಕಾಶ ಸಿಗಬೇಕು, ಅಯೋಗ್ಯರಿಗೆ ಸಿಗಬಾರದು ಅವರಿಗೆ ಸಿಗದಂತೆ ನನ್ನ ಸ್ವರೂಪವನ್ನ ಜೋಪಾನವಾಗಿ ಗುಪ್ತವಾಗಿ ರಕ್ಷಣೆ ಮಾಡು ಅಂತನ್ನುವ ಅಭಿಪ್ರಾಯದಲ್ಲಿ ಪರಮಾತ್ಮ **'ತ್ರಾಹಿ ಮಾಂ'** ಅಂತ ಅನ್ನುತ್ತಾನೆ. ಅದು ಸರಿ **'ತ್ರಾಹಿ ಮಾಂ'** ಅಂತ ಕೇಳಿದ್ದು ಸರಿ **'ಕ್ಷಮಸ್ವ'** ಅಂತ ಯಾಕೆ ಕೇಳಿದ್ದು ಅಂತ ಅಲ್ಲ ಈ ತರಹ ನಾನು ಮಾಡುವುದು ಹೇಗೆ, ನೀನು ಸರ್ವೋತ್ತಮ ಶ್ರೀಹರಿ ಸರ್ವೋತ್ತಮ, ವಿಷ್ಣು ಸಕಲ ವೇದಗಳಿಂದ ಸಕಲ ಶಾಸ್ತ್ರಗಳಿಂದ ನೀನು ಸರ್ವೋತ್ತಮ ಅಂತ ಸಿದ್ಧನಾದಾಗ, ನೀನು ಸರ್ವೋತ್ತಮನಲ್ಲ ಅಂತ ನಾನು ಹೇಗೆ ಪ್ರತಿಪಾದನೆ ಮಾಡುವುದು, ಯಾವ ರೀತಿ ಆ ಅಯೋಗ್ಯರಾದ ಜನರಿಗೆ ನಾನು ಬೋಧನೆ ಮಾಡುವುದಕ್ಕೆ ಸಾಧ್ಯ ಅಂತ ಕೇಳಿದಾಗ ಅದೆಲ್ಲಾ ನೀನು ಯಾಕೆ ಚಿಂತನ ಮಾಡುತ್ತೀ. ನಾನಿದ್ದೇನೆ ಸರ್ವ ಸಮರ್ಥನಾದಂತಹ ನಾನು ನಿನಗೆ ಒಳಗೆ ಪ್ರೇರಕನಾಗಿದ್ದು ಆ ಕಾರ್ಯವನ್ನು ನಾನೇ ಮಾಡಿಸುತ್ತೇನೆ, ನನ್ನ ಆಜ್ಞೆಯಯಂತೆ ನೀನು ಮಾಡು, ನಿನಗೆ ಯಾವ ವಿಧವಾದ ದೋಷಗಳು ಅದರಿಂದ ಬರುವುದಿಲ್ಲ ಅಂತ. **'ಕ್ಷಮಸ್ವ'** ಅಂತ ಸಂಭೋಧನ ಅದು ಕ್ರಿಯಾಪದ ಅಲ್ಲ **'ಹೇ ಕ್ಷಮಸ್ವ'** ಕ್ಷಮ ಅಂದರೆ ಸರ್ವ ಸಮರ್ಥನಾದ **'ಸ್ವ'** ಸ್ವತಂತ್ರನಾದಂತಹ ಪರಮಾತ್ಮನನ್ನ ಅಂತರ್ಯಾಮಿಯಾಗಿ ಪಡೆದ ನಿನಗೆ ಯಾಕೆ ಅದರ ಚಿಂತೆ **'ಹೇ ಕ್ಷಮಸ್ವ'** ಶಿವ ಸರ್ವಕ್ಷಮನಾದ ಕ್ಷಮ ಅನ್ನುವುದು ವಿಷ್ಣುಸಹಸ್ರನಾಮದಲ್ಲಿ ಪರಮಾತ್ಮನ ಹೆಸರು. **'ಕ್ಷಮ'** ಸರ್ವ ಸಮರ್ಥನಾದ **'ಸ್ವ'** ಸ್ವತಂತ್ರವಾಗಿ ಇರುವಂತಹ ಅಂತರ್ಯಾಮಿಯಾದ ನನ್ನನ್ನ ನಿಯಾಮಕನನ್ನಾಗಿ ಪಡೆದ ನಿನಗೆ ನನ್ನ ಪ್ರೇರಣೆ ಇರುವಾಗ ಯಾಕೆ ಚಿಂತೆ, ನಾನು ಹೇಳಿದಂತೆ ಮಾಡು, ಎಲ್ಲ ಕಾರ್ಯವೂ ಯಶಸ್ವಿಯಾಗುತ್ತದೆ ಮುಂದೂ ಆಗುತ್ತದೆ ಅನ್ನುವ ಅರ್ಥದಲ್ಲಿ **'ಕ್ಷಮಸ್ವ ಭಗವನ್ ದೇವ ಭಕ್ತೋಽಹಂ ತ್ರಾಹಿ ಮಾಂ ಹರ'** ಎಂಬುದಾಗಿ ಪರಮಾತ್ಮ ಪ್ರಾರ್ಥನೆಯನ್ನು ಮಾಡಿದಂತೆ ನಾಟಕ ಮಾಡುತ್ತ ಇದ್ದಾನೆ ವಸ್ತುತಃ ಆದೇಶವನ್ನು ಮಾಡುತ್ತ ಇದ್ದಾನೆ. ನೋಡಿ, ನಿಜವಾಗಿ ರುದ್ರ ದೇವರನ್ನು ಕುರಿತು ದೇವರು ಸ್ತುತಿಯನ್ನೇ ಮಾಡಿ, ಪ್ರಾರ್ಥನೆಯನ್ನೇ ಮಾಡಿ ತಾನು ಚಿಕ್ಕವ ಅನ್ನುವುದಕ್ಕಾಗೇನೆ ಅವನನ್ನ ಸಂತೋಷ ಪಡಿಸಿದ್ದರೆ ರುದ್ರ ದೇವರು ಅನುಗ್ರಹವನ್ನು ಮಾಡಬೇಕಾಗಿತ್ತು ತಲೆಯ ಮೇಲೆ ಕೈ ಇಟ್ಟು. ತಲೆಯ ಮೇಲೆ ಕೈ ಇಟ್ಟಿಲ್ಲ. **'ಕರಂ ಕರೇಣ ಸಂಸ್ಪೃಶ್ಯ'**[1] ರುದ್ರ ದೇವರು ಪರಮಾತ್ಮನ ಕೈಯನ್ನು ಹಿಡಿದುಕೊಂಡಿದ್ದಾರೆ, ಆಶೀರ್ವಾದವನ್ನು ಮಾಡಿಲ್ಲ. ನೀನು ಸರ್ವೋತ್ತಮ ಯಾಕೆ ನನ್ನ ಸ್ತೋತ್ರವನ್ನು ಮಾಡುತ್ತೀ, ಪೂಜೆಯನ್ನು ಮಾಡುತ್ತೀ ಅಂತನ್ನುವ ಅರ್ಥದಲ್ಲಿ ರುದ್ರ ದೇವರು ಅನ್ನುತ್ತಾರೆ.

ಕಿಮಿದಂ ದೇವದೇವೇಶ ಚಕ್ರಪಾಣೇ ಜನಾರ್ದನ ।
ತಪಶ್ಚರ್ಯಾ ಕಿಮರ್ಥಂ ತೇ ಪ್ರಾರ್ಥನಾ ತವ ಕಾ ವಿಭೋ ॥ (88.3 ಭವಿಷ್ಯಪರ್ವ)

ಯಾಕೆ ತಪಶ್ಚರ್ಯ, ಯಾಕೆ ನೀನು ಪ್ರಾರ್ಥನೆಯನ್ನು ಮಾಡುತ್ತೀ.

ಸ್ವಯಂ ವಿಷ್ಣುರ್ಭವಾನ್ ನಿತ್ಯಸ್ತಪಸ್ತ್ವಂ ತಪಸಾಂ ಹರೇ । (88.4 ಭವಿಷ್ಯಪರ್ವ)

1. 88.1 ಭವಿಷ್ಯಪರ್ವ

ಜಗತ್ತಿನೊಳಗೆ ತಪಸ್ಸು ಮಾಡುವವರು ಅಂತ ಯಾರೆಲ್ಲ ಇದ್ದಾರೆ ಅವರೆಲ್ಲರ ತಪಸ್ಸಿಗೆ ಫಲ ಪ್ರಧಾನನಾದಂತಹ ವ್ಯಕ್ತಿ ನೀನು, ತಪಸ್ಸು ಮಾಡಿಸುವವನು ನೀನು, ತಪಸ್ಸಿಗೆ ಫಲ ಕೊಡುವವನು ನೀನು ಹೀಗಿರುವಾಗ ನೀನು ಯಾಕೆ ಮತ್ತೆ ತಪಶ್ಚರ್ಯವನ್ನು ಮಾಡಬೇಕಾಗಿತ್ತು ಅಂತ ಸ್ವತಃ ರುದ್ರ ದೇವರೇ ಕೇಳುತ್ತ ಇದ್ದಾರೆ. ಇಲ್ಲ ಮಕ್ಕಳಿಗಾಗಿ, ಮಕ್ಕಳನ್ನು ಪಡೆಯುವುದಕ್ಕಾಗಿ, ಮಗನನ್ನ ಪಡೆಯುವುದಕ್ಕಾಗಿ ತಪಶ್ಚರ್ಯವನ್ನು ಮಾಡುತ್ತ ಇದ್ದೀಯಾ ಅಂತ ಗೊತ್ತಾಯಿತು ನಿನಗೆ ಮಗನನ್ನ ಕೊಡುವುದಕ್ಕೆ ನಾನು ವರ ಕೊಡಬೇಕೇ ನಿನಗೆ, ನನಗಾಗಿ ನೀನು ತಪಶ್ಚರ್ಯ ಮಾಡಬೇಕೇ, ಬೇಕಾದಷ್ಟು ಇಡೀ ಜಗತ್ತನಲ್ಲಿ ಸೃಷ್ಟಿಯನ್ನ ಮಾಡುವವನೇ ನೀನು, ಜಗತ್ತಿನಲ್ಲಿ ಇದ್ದವರೆಲ್ಲ ನಿನ್ನ ಮಕ್ಕಳೇ, ನಾವೆಲ್ಲ ನಿನ್ನಿಂದ ಹುಟ್ಟಿದವರು ಹೀಗಿರುವಾಗ ನಿನಗೆ ಪುತ್ರನ ವರವನ್ನ ಕೊಡುವುದಕ್ಕೆ ನಾನ್ಯಾರು. ಇಷ್ಟಕ್ಕೂ ಮೀರಿ ಪ್ರದ್ಯುಮ್ನನನ್ನ ನೀನೇ ಮೊದಲೇ ನಿನ್ನ ಉದರದಿಂದ ಸೃಷ್ಟಿಯನ್ನು ಮಾಡಿದ್ದೀ. ಏಕಲವ್ಯನ ಜೊತೆಗೆ ಯುದ್ಧ ಮಾಡುವಾಗ ಒಮ್ಮೆ ಪ್ರದ್ಯುಮ್ನನನ್ನ ತನ್ನ ಉದರದಿಂದ ತೆಗೆದು ಸೃಷ್ಟಿ ಮಾಡಿ ಏಕಲವ್ಯನನ್ನ ಸಂಹಾರ ಮಾಡಿಸಿ ಮತ್ತೆ ಉದರದಲ್ಲಿ ಹಾಕಿಕೊಂಡಿದ್ದಾನೆ ದೇವರು. ಇದೀಗ ಬ್ರಹ್ಮ ದೇವರ ವರದಿಂದ ಅವಧ್ಯನಾಗಿದ್ದರೂ ಒಬ್ಬ ವಕ್ರನೆಂಬ ಅಸುರನನ್ನ ಸಂಹಾರ ಮಾಡುವುದಕ್ಕೆ ಪ್ರದ್ಯುಮ್ನನನ್ನ ಒಂದೇ ಕ್ಷಣದೊಳಗೆ ತನ್ನ ಉದರದಿಂದ ಹೊರಗೆ ತೆಗೆದು, ಅವನು ಯುವಕನಾಗಿ ಪರಮಾತ್ಮನ ಆಜ್ಞೆಯಂತೆ ಆ ವಕ್ರನೆಂಬ ಅಸುರನನ್ನ ಸಂಹಾರ ಮಾಡಿ, ಅವನಿರುವ ವನವನ್ನೂ ಸುಟ್ಟು, ಪರಮಾತ್ಮನ ಅನುಗ್ರಹದ ಶಕ್ತಿ ಇದ್ದದ್ದರಿಂದ ಪುನಃ ಪರಮಾತ್ಮನ ಉದರದಲ್ಲಿ ಪ್ರವೇಶ ಮಾಡುತ್ತಾನೆ ಒಂದು ಕ್ಷಣದೊಳಗೆ ಇಷ್ಟೆಲ್ಲಾ ಕೆಲಸ ಆಗುತ್ತದೆ. ಈ ರೀತಿ ಇದೀಗ ಆ ಪ್ರದ್ಯುಮ್ನನನ್ನ ಹೊರಗೆ ತೆಗೆದು ಆ ಅಸುರನನ್ನ ಸಂಹಾರ ಮಾಡಿಸಿ ವನವನ್ನ ಸುಟ್ಟು ಮತ್ತೆ ಅವನನ್ನು ಒಳಗೆ ಹಾಕಿಕೊಂಡು ನನಗೆ ಮಗನನ್ನು ಕೊಡು ಅಂತ ಕೇಳುತ್ತೀಯಲ್ಲ ಏನು ನಾಟಕ ಇದು. ಎಲ್ಲರಿಗೆ ತೋರಿಸಿದ್ದಾರೆ ರುದ್ರ ದೇವರು ಇದು ನೋಡಿ ಪರಮಾತ್ಮ ಮಾಡುವ ನಾಟಕ. ಮಗನನ್ನ ತಾನೇ ತಾನು ಹುಟ್ಟಿಸಿ ಕೆಲಸ ಎಲ್ಲ ಮುಗಿಸಿ ಮತ್ತೆ ನನಗೆ ಕೇಳುತ್ತಾನೆ ಆದರೆ ನಿನ್ನ ಅಪೇಕ್ಷೆಯಂತೆ, ನಿನ್ನ ಆಜ್ಞೆಯಂತೆ ನಾನೇ ವರ ಕೊಟ್ಟಿದ್ದೇನೆ ಅಂತ ಪ್ರಸಿದ್ಧವಾಗಲಿ.

ಯಾವ ಕಾಮನನ್ನ ಹಿಂದೆ ನಾನು ತಪಶ್ಚರ್ಯ ಮಾಡುವಾಗ ನನ್ನ ತಪಸ್ಸಿನ ಭಂಗಕ್ಕಾಗಿ ಇಂದ್ರ ದೇವರು ಕಾಮನನ್ನು ಕಳಿಸಿದರು, ನಾನು ನನ್ನ ಕ್ರೋಧದಿಂದ ಅಗ್ನಿಯನ್ನು ಸೃಷ್ಟಿ ಮಾಡಿ ಆ ಕಾಮನನ್ನ ಭಸ್ಮ ಮಾಡಿ ಹಾಕಿದೆ. ಆಮೇಲೆ ರತಿದೇವಿ ಬಂದು ನನ್ನನ್ನು ಪ್ರಾರ್ಥನೆ ಮಾಡಿದಳು ನನ್ನ ಗಂಡನನ್ನು ಮತ್ತೆ ಹುಟ್ಟಿಸು ನನಗೆ ಕೊಡು ಅಂತ ಅವಳ ಪ್ರಾರ್ಥನೆಗೆ ನಾನು ಓಗೊಟ್ಟು ಪುನಃ ಕಾರುಣ್ಯದಿಂದ ಆ ಕಾಮನಿಗೆ ಈಗ ನಿನ್ನಲ್ಲಿ ಅವತಾರ ಮಾಡುವುದಕ್ಕೆ ಹೇಳುತ್ತೇನೆ. ಈಗಾಗಲೇ ಅವತಾರ ಮಾಡಿದ್ದಾನೆ ಆದರೆ ನಿನ್ನ ಆಜ್ಞೆ ಇದ್ದದ್ದರಿಂದ ಪುನಃ ನಾನು ವರ ಕೊಟ್ಟೆ ಅನ್ನುವ ಪ್ರಸಿದ್ಧಿ ಬರುವ ರೀತಿಯಲ್ಲಿ ನಾನು ಆ ಕಾಮನಿಗೆ ಅವತಾರ ಮಾಡುವುದಕ್ಕೆ ಹೇಳುತ್ತೇನೆ ಅವನು ಪ್ರದ್ಯುಮ್ನ ಎಂಬ ಹೆಸರಿನಿಂದ ನಿನ್ನಲ್ಲಿ ಅವತಾರ ಮಾಡುತ್ತಾನೆ ಅಂತ ಇಷ್ಟು ರುದ್ರ ದೇವರು ಹೇಳುತ್ತಾರೆ. ಅವರು ಅನ್ನುತ್ತಾರೆ ಇಷ್ಟು ಸುಮ್ಮನೆ ಯಾವುದು ನಾಟಕ ಮಾಡಬೇಕಾಗಿತ್ತೋ ಅಷ್ಟು ಸ್ಟೇಜ್ ಮೇಲೆ ನಾಟಕ ಮಾಡಿದ್ದೇ ತಡ ಕೈಯಲ್ಲಿ ಮೈಕ್ ತೆಗೆದುಕೊಂಡರು ನೋಡಿರಿ ರುದ್ರ ದೇವರು ಉಪನ್ಯಾಸಕ್ಕೆ. ಮೈಕ್ ತೆಗೆದುಕೊಂಡರು ಅನ್ನುವ ತಾತ್ಪರ್ಯ ಎಲ್ಲ ಋಷಿಗಳಿಗೆ ಮುನಿಗಳಿಗೆ ಇಂದ್ರಾದಿ ಸಕಲ ದೇವತೆಗಳಿಗೆ ಸರಿಯಾದ ತತ್ವ ಏನು ಅಂತ ಹೇಳುವುದಕ್ಕೋಸ್ಕರ ರುದ್ರ ದೇವರು ನಿಂತಿದ್ದಾರೆ ಇದೇ ಸರಿಯಾದ ತತ್ವ ಅಂತ ತಿಳಿಯಬೇಡಿ ಕೃಷ್ಣ ಚಿಕ್ಕವನು, ನಾನು ಉತ್ತಮ ಅಂತ ಸರ್ವಥಃ ತಿಳಿಯಬೇಡಿ ಹರಿವಂಶ ಎಷ್ಟು ಸ್ಪಷ್ಟವಾಗಿ ಹೇಳುತ್ತದೆ ನೋಡಿ. ಯಾಕೆ ಈ ಮಾತನ್ನು ಮೇಲಿಂದ ಮೇಲೆ ಹೇಳುವುದು ಅಂದರೆ ಕೃಷ್ಣ ರುದ್ರ ದೇವರ ಸ್ತುತಿ ಮಾಡಿದ, ರುದ್ರ ದೇವರು ಕೃಷ್ಣನ ಸ್ತುತಿ ಮಾಡಿದರು ಎರಡೂ ಪರಸ್ಪರವಾಗಿದೆ, ಇಬ್ಬರೂ ಒಂದೇ ಸಮಾನ ಅನ್ನುವ ಅರ್ಥವನ್ನೂ ಸರ್ವಥ ಇಲ್ಲಿ ತಿಳಿಯುವಂತೆ ಇಲ್ಲ. ಹರಿವಂಶದ ಶಬ್ದಗಳನ್ನು ಬಹಳ ಚೆನ್ನಾಗಿ ಗಮನಿಸಿ

ಇತ್ಯುಕ್ತ್ವಾ ಪುನರಾಹೇದಂ ಯಾಥಾತ್ಮ್ಯಂ ದರ್ಶಯನ್ನಿವ ॥ (88.14 ಭವಿಷ್ಯಪರ್ವ)

ವಸ್ತು ಸ್ಥಿತಿಯನ್ನು ತಿಳಿಸುವುದಕ್ಕೋಸ್ಕರ ರುದ್ರದೇವರು ಎದ್ದು ನಿಂತು ಉಪನ್ಯಾಸ ಮಾಡುತ್ತಾ ಇದ್ದಾರೆ.

ಮುನೀನಾಂ ಶ್ರೋತುಕಾಮಾನಾಂ ಯಾಥಾತ್ಮ್ಯಂ ತತ್ರ ಸತ್ತಮಃ । (88.15 ಭವಿಷ್ಯಪರ್ವ)

ಎರಡೆರಡು ಬಾರಿ ಒಂದೇ ಶ್ಲೋಕದಲ್ಲಿ **'ಯಾಥಾತ್ಮ್ಯ'** ಎಂಬ ಶಬ್ದವನ್ನು ಬಳಸುತ್ತಾರೆ ನಿಜವಾದ ಸತ್ಯ ಸಂಗತಿಯನ್ನು ತಿಳಿಸುವುದಕ್ಕೋಸ್ಕರ ರುದ್ರ ದೇವರು ಉಪದೇಶ ಮಾಡುತ್ತಾ ಇದ್ದಾರೆ, ಏನು ಉಪದೇಶ ಮಾಡಿದ್ದಾರೆ ಅಂತ ಕೇಳಿದರೆ ಮೊದಲು ಪರಮಾತ್ಮನಿಗೆ ನಮಸ್ಕಾರ ಮಾಡಿದ್ದಾರೆ ರುದ್ರ ದೇವರು. **'ಅಞ್ಜಲಿಂ ಸಮ್ಪುಟಮ್ ಕೃತ್ವಾ'**[1] ಪರಮಾತ್ಮನಿಗೆ ಕೈಜೋಡಿಸಿ ನಮಸ್ಕಾರ ಮಾಡಿ ರುದ್ರ ದೇವರು, ಯಾವಾಗ ದೇವರ ತಪಶ್ಚರ್ಯಕ್ಕೆ ವರ ಕೊಡುವುದಕ್ಕೆ ಅಂತ ಬಂದ ರುದ್ರ ದೇವರೇ ದೇವರಿಗೆ ನಮಸ್ಕಾರ ಮಾಡಿದರೆ ಸಾಷ್ಟಾಂಗ ಪ್ರಣಾಮ ಮಾಡಿದರೆ, ಎಲ್ಲಾ ದೇವಾಧಿ ದೇವತೆಗಳು ಶ್ರೀಕೃಷ್ಣ ಪರಮಾತ್ಮನಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿದ್ದಾರೆ.

ಮುನಯೋ ದೇವಗನ್ಧರ್ವಾಃ ಸಿದ್ಧಾಶ್ಚ ಸಹ ಕಿನ್ನರಾಃ ।
ಅಞ್ಜಲಿಂ ಚಕ್ರಿರೇ ವಿಷ್ಣೌ ದೇವದೇವೇಶ್ವರೇ ಹರೌ ॥ (88.17 ಭವಿಷ್ಯಪರ್ವ)

ಎಲ್ಲರೂ ಸಾಷ್ಟಾಂಗ ಪ್ರಣಾಮ ಮಾಡಿದ್ದಾರೆ. ಆಗ ರುದ್ರದೇವರು ಹೇಳುತ್ತಾರೆ ಯಾರು ಅಂತ ತಿಳಿದುಕೊಂಡಿದ್ದೀ ಮೂಲವಾದಂತಹ ಏನು ಸತ್ವ, ರಜಸ್ಸು ಮತ್ತು ತಮೋಗುಣಾತ್ಮಕವಾದ ಪ್ರಕೃತಿ ಇದೆ ಆ ಪ್ರಕೃತಿಯಲ್ಲಿ ಪ್ರಕೃತಿನಾಮಕನಾಗಿ ಇದ್ದು, ಪ್ರಕೃತಿಯೊಳಗೆ ಕ್ಷೋಭ ಉಂಟು ಮಾಡಿ ಅದರಿಂದ ಮಹತ್ತತ್ವ ಹುಟ್ಟುವಂತೆ ಮಾಡಿದವ ಇವ, ಮಹತ್ತತ್ವಾಭಿಮಾನಿ ಬ್ರಹ್ಮ ದೇವರ ಸೃಷ್ಟಿ ಆಮೇಲೆ ಆ ಮಹತ್ತತ್ವದಿಂದ ಅಹಂಕಾರ ತತ್ವ, ಅಹಂಕಾರ ತತ್ವ ಹುಟ್ಟುತ್ತೇ, ಅಹಂಕಾರ ಎಂಬ ಹೆಸರಿನಿಂದ ಅದರೊಳಗಿದ್ದು ಅದು ಹುಟ್ಟುವಂತೆ ಮಾಡುವವನು ಇವ ಅನ್ನುತ್ತಾರೆ ರುದ್ರ ದೇವರು. ಆ ಅಹಂಕಾರ ತತ್ವಾಭಿಮಾನಿಯಾದ ನನಗೂ ಸೃಷ್ಟಿಯನ್ನು ಮಾಡಿದವರು, ಗರುಡ ಶೇಷ ರುದ್ರರಿಗೆ ನಮ್ಮೆಲ್ಲರಿಗೆ ಸೃಷ್ಟಿಯನ್ನು ಮಾಡಿದವನು ಇವ. ಶಬ್ದ ಸ್ಪರ್ಶ ರೂಪ ರಸ ಗಂಧಗಳು, ಪೃಥ್ವಿ ಅಗ್ನಿ ವಾಯು ಆಕಾಶ ಜಲ ಪಂಚ ಮಹಾಭೂತಗಳು, ಪಂಚ ಜ್ಞಾನೇಂದ್ರಿಯ, ಪಂಚ ಕರ್ಮೇಂದ್ರಿಯ, ಮನಸ್ಸು ಇವುಗಳೆಲ್ಲವನ್ನು ಸೃಷ್ಟಿ ಮಾಡಿದವ, ಇವುಗಳೆಲ್ಲವುಗಳಲ್ಲಿ ಅಂತರ್ಯಾಮಿಯಾದವ ಇವುಗಳಿಗೆ ಪ್ರೇರಕನಾದವ. ಶ್ರೀಮದಾಚಾರ್ಯರು ಹೇಳುವ ತತ್ವಗಳು ಇತಿಹಾಸ ಪುರಾಣಗಳಲ್ಲಿ ಎಷ್ಟು ಸ್ಪಷ್ಟವಾಗಿ ನಮಗೆ ತಿಳಿದು ಬರುತ್ತದೆ ಅಂತ ನೋಡಿದರೆ ಆಶ್ಚರ್ಯವಾಗುತ್ತದೆ ಆನಂದವಾಗುತ್ತದೆ ರೋಮಾಂಚನವಾಗುತ್ತದೆ. ಮೇಲ್ನೋಟಕ್ಕೆ ಈ ಎಲ್ಲ ಪಂಚ ಮಹಾಭೂತಗಳು, ಪಂಚ ಜ್ಞಾನೇಂದ್ರಿಯ, ಪಂಚ ಕರ್ಮೇಂದ್ರಿಯಗಳು ಇವುಗಳೆಲ್ಲ ಸಾಕ್ಷಾತ್ ಪರಮಾತ್ಮನೇ ಅಂತ ಹೇಳುವ ಹಾಗೆ, ಅಭೇದ ಹೇಳುವ ಹಾಗೆ ತೋರುತ್ತದೆ ಆದರೆ ಅದೇ ಹರಿವಂಶ ಮತ್ತೆ ತನ್ನ ಮಾತಿನ ವ್ಯಾಖ್ಯಾನವನ್ನು ತಾನೇ ಮಾಡುತ್ತದೆ.

ಮನಃಷಷ್ಠಂ ತಥಾ ದೇವ ಪ್ರೇರಕಂ ತತ್ರ ತತ್ರ ಹ ॥ (88.24 ಭವಿಷ್ಯಪರ್ವ)

ಈ ಎಲ್ಲ ಪಂಚ ಮಹಾಭೂತಾದಿಗಳೇ ಪರಮಾತ್ಮ ಅಂತ ಹಿಂದೆ ಹೇಳಿದೆವಲ್ಲ ಅದರ ಅರ್ಥ ಅಭೇದ ಅಂತ ತಿಳಿದುಕೊಳ್ಳಬೇಡಿ, ಅವುಗಳೆಲ್ಲದಕ್ಕೂ ಪ್ರೇರಕನಾಗಿ ಪರಮಾತ್ಮ ಅಂತರ್ಯಾಮಿಯಾಗಿದ್ದಾನೆ ಅನ್ನುವುದಕ್ಕೋಸ್ಕರ.

1. 88.15 ಭವಿಷ್ಯಪರ್ವ

ತ್ವಮೇವ ತಾನಿ ಸರ್ವಾಣಿ ಕರೋಷಿ ನಿಯತಾತ್ಮವಾನ್ ॥ (88.25 ಭವಿಷ್ಯಪರ್ವ)

ಅವುಗಳೆಲ್ಲದಕ್ಕೆ ಕರ್ತು ನೀನಾಗಿದ್ದೀ. ಈ ಕೃಷ್ಣನನ್ನ ತೋರಿಸಿ ಹೇಳುತ್ತಾ ಇದ್ದಾರೆ, ನೀನೇ ಕರ್ತು ಆಗಿದ್ದೀ ಸ್ವಾಮಿ ಅಂತ ರುದ್ರ ದೇವರು. ಹಾಗಾದರೆ ಶ್ರೀಮದಾಚಾರ್ಯರು ಗೀತಾಭಾಷ್ಯದಲ್ಲಿ ಹೇಳಿದ ತತ್ವವನ್ನು ಇಲ್ಲಿ ರುದ್ರ ದೇವರು ತಿಳಿಸಿಕೊಡುತ್ತಾ ಇದ್ದಾರೆ **'ಸ್ರಷ್ಟಾ ಪಾತಾ ಚ ಸಂಹರ್ತಾ'** ಪರಮಾತ್ಮ ಸಕಲ ಜಗತ್ತಿಗೆ ಸ್ರಷ್ಟುವಾದದ್ದರಿಂದ ಅವನನ್ನ ಜಗತ್ತು ಅಂತ ಕರೆಯುತ್ತಾರೆ. **'ಯತಃ ಸರ್ವಸ್ಯ ತೇನಾಹಂ ಸರ್ವೋಽತ್ಯೃಷಿಭಃ ಸ್ಮೃತಃ'** ಅದನ್ನು ರುದ್ರ ದೇವರು ಹೇಳುತ್ತಾರೆ. ನೀನು ಸರ್ವ ಕರ್ತುವಾದದ್ದರಿಂದ ನಿನ್ನನ್ನು ಸರ್ವ ಅಂತ ಅನ್ನುತ್ತಾರೆ, ನೀನು ಸರ್ವಾಂತರ್ಯಾಮಿಯಾದದ್ದರಿಂದ ನಿನ್ನನ್ನು ಸರ್ವ ಅಂತ ಅನ್ನುತ್ತಾರೆ, ಸರ್ವಪ್ರೇರಕನಾದದ್ದರಿಂದ ನಿನ್ನನ್ನು ಸರ್ವ ಅಂತ ಅನ್ನುತ್ತಾರೆ **'ಅಂತಃ ಸ್ಥಿತ್ವಾ ಜಗದ್ ಗುರೋ'** [1] ಅಂತರ್ಯಾಮಿ ಆದದ್ದರಿಂದ ನಿನ್ನನ್ನು ಸರ್ವ ಅಂತ ಕರೆಯುತ್ತಾರೆ, ನೀನು ಸರ್ವಾಭಿನ್ನ ಆದದ್ದರಿಂದ ನಿನ್ನನ್ನು ಸರ್ವ ಅಂತ ಕರೆಯುವುದಿಲ್ಲ ಏನು ಅದ್ಭುತವಾಗಿ ರುದ್ರ ದೇವರು ಹೇಳುತ್ತಾರೆ, ಅಂತಹ ಪಂಚ ಮಹಾಭೂತಾದಿಗಳ ಮೂಲಕ ಇಡೀ ಜಗತ್ತಿನ ಎಲ್ಲರ ಶರೀರಗಳನ್ನ ನಿರ್ಮಾಣ ಮಾಡಿ ಎಲ್ಲರನ್ನು ಹುಟ್ಟಿಸುವ ಸ್ವಾಮಿ ಈ ಶ್ರೀಕೃಷ್ಣ ಅವನಿಗೆ ಏನು ಪುತ್ರರನ್ನ ಪಡೆಯುವುದಕ್ಕೆ ನನ್ನ ವರ ಬೇಕಾಗಿದೆ. ಸರಿಯಾಗಿ ತಿಳಿದುಕೊಳ್ಳಿ ಅಂತ ಮತ್ತೆ ಮತ್ತೆ ಹೇಳುತ್ತಾರೆ ಋಷಿ ಮುನಿಗಳಿಗೆ ಸಂಪೂರ್ಣ ಪುರುಷಸೂಕ್ತ ಪ್ರತಿಪಾದ್ಯನಾದವನು ಶ್ರೀಕೃಷ್ಣ ಪರಮಾತ್ಮ ಅನ್ನುತ್ತಾರೆ ರುದ್ರ ದೇವರು.

ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ । (88.33 ಭವಿಷ್ಯಪರ್ವ)

ಇಡೀ ಜಗತ್ತನ್ನು ವ್ಯಾಪಿಸಿ ಇದ್ದದ್ದರಿಂದ ಇವನನ್ನೇ ಭೂತ ಭವ್ಯ ಭವಿಷ್ಯದಾತ್ಮಕವಾದಂತಹ

ಯದ್ಭೂತಂ ಯಚ್ಚ ಭಾವ್ಯಮ್ ಉತಾಮೃತತ್ವಸ್ಯೇಶಾನೋ ಯದನ್ನೇನಾತಿರೋಹತಿ ॥ (2 ಪುರುಷ ಸೂಕ್ತಮ್)

ಸಕಲ ವರ್ಣಗಳನ್ನ ತನ್ನ ಅಂಗಗಳಲ್ಲಿ ಸೃಷ್ಟಿ ಮಾಡಿದಂತಹ ಸ್ವಾಮಿ ಈ ಪರಮಾತ್ಮ, ತನ್ನ ಅಂಗಾಂಗಗಳಿಂದ ಎಲ್ಲ ದೇವತೆಗಳನ್ನ ಸೃಷ್ಟಿ ಮಾಡಿದವ, ಅನಂತ ತಲೆ ಕಾಲು ಕೈ ಕಣ್ಣು ಮೊದಲಾದ ಅವಯವಗಳಿಂದ ಕೂಡಿದ ಪುರುಷಸೂಕ್ತ ಪ್ರತಿಪಾದ್ಯನಾದ ಮಹಾಪುರುಷ ಶ್ರೀಹರಿ. ನಾನಲ್ಲ ಈ ಪುರುಷ, ಪಶುಪುರುಷ ನಾನು, ಮಹಾಪುರುಷ ಆ ಪುರುಷಸೂಕ್ತ ಪ್ರತಿಪಾದ್ಯನಾದ ಸಹಸ್ರಶೀರ್ಷಾ ಪುರುಷ ಈ ಶ್ರೀಕೃಷ್ಣ ಪರಮಾತ್ಮ ಅಂತ ಅಷ್ಟು ಭಕ್ತಿಯಿಂದ ರುದ್ರ ದೇವರು ಹೇಳುತ್ತಾರೆ. ಹೇಳುವುದರ ಜೊತೆಗೆ ಮತ್ತೆ ಅನ್ನುತ್ತಾರೆ ರುದ್ರ ದೇವರು, ಈ ಪರಮಾತ್ಮನಿಗೆ ಅನೇಕ ಹೆಸರುಗಳಿವೆ, ಆ ಹೆಸರುಗಳ ಮಹಿಮೆಯನ್ನ ಅವುಗಳ ಅರ್ಥವನ್ನು ತಿಳಿದುಕೊಳ್ಳಿ.

ವ್ಯಾಪ್ಯ ಸರ್ವಾನಿಮಾಲ್ಲೋಕಾನ್ ಸ್ಥಿತಃ ಸರ್ವತ್ರ ಕೇಶವ ।
ತತಶ್ಚ ವಿಷ್ಣುನಾಮಾಸಿ ಧಾತೋರ್ವ್ಯಾಪ್ತೇಶ್ಚ ದರ್ಶನಾತ್ ॥ (88.43 ಭವಿಷ್ಯಪರ್ವ)

ಇಡೀ ಜಗತ್ತನ್ನು ವ್ಯಾಪಿಸಿ ಇದ್ದಾನೆ ಈ ಪರಮಾತ್ಮ ಆದ್ದರಿಂದ ಇವನಿಗೆ ವಿಷ್ಣು ಅಂತ ಹೆಸರು, ವಿಶಲೃವ್ಯಾಪ್ತೌ ಎಂಬ ಧಾತು ಇದೆ ಆ ಧಾತುವಿನಿಂದ ನಿಷ್ಪನ್ನವಾದ ಶಬ್ದ ಇದು. ಆದ್ದರಿಂದ ಪರಮಾತ್ಮನಿಗೆ ಸರ್ವತ್ರವ್ಯಾಪ್ತನಾದ ಕಾರಣ ವಿಷ್ಣು ಎಂಬುದಾಗಿ ಕರೆಯುತ್ತಾರೆ ಅಂತ ರುದ್ರ ದೇವರು ಹೇಳುತ್ತಾರೆ.

1. 88.30 ಭವಿಷ್ಯಪರ್ವ

ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭಾವ್ಯಮ್ । (2 ಪುರುಷಸೂಕ್ತಂ)

ಜಗತ್ತಿನಿಂದ ಅಭಿನ್ನನಲ್ಲ ಅನ್ನುವ ಶಬ್ದಕ್ಕೆ ಸರ್ವತ್ರವ್ಯಾಪ್ತ ಅಂತೇ ಹೊರತು ಅವನೇ ಸರ್ವ ಪದಾರ್ಥಗಳಿಂದ ಅಭಿನ್ನನಲ್ಲ ಅನ್ನುವ ರೀತಿಯಲ್ಲಿ ಒಂದು ಕಡೆಗೆ ಪುರುಷ ಸೂಕ್ತದ ವ್ಯಾಖ್ಯಾನವೂ ಹೌದು, ವಿಷ್ಣು ಶಬ್ದದ ಅರ್ಥವನ್ನೂ ಹೇಳುತ್ತಾ ಇದ್ದಾರೆ ರುದ್ರ ದೇವರು. ನಾರಾಯಣ ಅಂತ ಕರೆಯುತ್ತಾರೆ ತಾನೇ ನೀರಿನ ಸೃಷ್ಟಿಯನ್ನು ಮಾಡಿ ಆ ನೀರಿನೊಳಗೆ ಪರಮಾತ್ಮ ಸನ್ನಹಿತನಾದದ್ದರಿಂದ ಅವನಿಗೆ ನಾರಾಯಣ ಅಂತ ಕರೆಯುತ್ತಾರೆ. ಎಲ್ಲರನ್ನ ಸಂಹಾರ ಕಾಲದಲ್ಲಿ ಹರಸಿ ಅವರ ಪ್ರಾಣ ಹರಣ ಮಾಡಿ ಸಂಹಾರ ಮಾಡುತ್ತೀಯಾ ಅನ್ನುವುದಕ್ಕೆ ಪರಮಾತ್ಮನನ್ನ ಹರಿ ಎಂಬುದಾಗಿ ಕರೆಯುತ್ತಾರೆ. ನಾನಲ್ಲ ನಿಜವಾದ ಶಂಕರ ನೀನೇ ಶಂಕರ ಅನ್ನುತ್ತಾನೆ.

ಶಂಕರೋಽಸಿ ಸದಾ ದೇವ ತತಃ ಶಂಕರತಾಂ ಗತಃ ॥ (88.45 ಭವಿಷ್ಯಪರ್ವ)

ಎಲ್ಲರಿಗೆ **'ಶಂ'** ಸುಖವನ್ನು ಉಂಟು ಮಾಡುತ್ತೀಯಾ ಆದ್ದರಿಂದ ನೀನೇ ನಿಜವಾದ ಶಂಕರ, ನೀನು ಸ್ವಯಂ ಗುಣಗಳಿಂದ ಪರಿಪೂರ್ಣ ಅವರವರ ಯೋಗ್ಯತೆಗೆ ತಕ್ಕಂತೆ ಅವರನ್ನ ಪೂರ್ಣರನ್ನಾಗಿ ಮಾಡುತ್ತೀಯಾ ಆದ್ದರಿಂದ ನಿನಗೆ ಬ್ರಹ್ಮ ಅಂತ ಕರೆಯುತ್ತಾರೆ.

ಬೃಹತ್ತ್ವಾದ್ ಬೃಂಹಣತ್ವಾಚ್ಚ ತಸ್ಮಾದ್ ಬ್ರಹ್ಮೇತಿ ಶಬ್ದಿತಃ । (88.46 ಭವಿಷ್ಯಪರ್ವ)

ಮಧು ಅಂದರೆ ನಾನಾ ವಿಧವಾದ ಸುಖಗಳ ಭೋಗವನ್ನ ಮಾಡುವುದಕ್ಕೆ ವಿಷಯಗಳನ್ನ ಸಂಪರ್ಕಿಸುವ ಇಂದ್ರಿಯಗಳು ಮಧು ಅಂತಹ ಇಂದ್ರಿಯಗಳನ್ನೆಲ್ಲಾ ನೀನು ದಮನ ಮಾಡುತ್ತೀಯಾ, ಇಂದ್ರಿಯ ನಿಗ್ರಹ ಮಾಡಬೇಕೆಂಬ ಅಪೇಕ್ಷೆ ಇರುವಂತಹ ಸಜ್ಜನರಿಗೋಸ್ಕರ ಆದ್ದರಿಂದ ನೀನು ಮಧುಸೂದನ. ಈಗ ಮಾಸ ನಿಯಾಮಕ ಹೃಷಿಕೇಶ, ಹೃಷಿಕೇಶ ಶಬ್ದಾರ್ಥವನ್ನು ಹೇಳುತ್ತಾನೆ ಪರಮಾತ್ಮ.

ಹೃಷಿಕಾಣೀನ್ದ್ರಿಯಾಣ್ಯಾಹುಸ್ತೇಷಾಮೀಶೋ ಯತೋ ಭವಾನ್ । (88.47 ಭವಿಷ್ಯಪರ್ವ)

ಹೃಷಿಕ ಅಂದರೆ ಇಂದ್ರಿಯಗಳು ಇಂದ್ರಿಯಗಳಿಗೆ ಒಡೆಯನಾದದ್ದರಿಂದ ನಿನಗೆ ಹೃಷಿಕೇಶ ಅಂತ ಅನ್ನುತ್ತಾರೆ. ಎಷ್ಟು ಸ್ಪಷ್ಟವಾಗಿ ಮುಂದಿನ ಮಾತನ್ನು ಕೇಶವ ಶಬ್ದಾರ್ಥವನ್ನು ಹೇಳುತ್ತಾರೆ ಕೇಳಿ ರುದ್ರ ದೇವರೇ ಉತ್ತಮ ಅಥವಾ ರುದ್ರ ಹಾಗೂ ವಿಷ್ಣುಗಳಿಗೆ ಅಭೇಧವಿದೆ ಅನ್ನುವ ರೀತಿಯಲ್ಲಿ ಮುಂದೆ ಕೆಲವು ಮಾತುಗಳು ಬರುತ್ತೆ ಇಬ್ಬರಿಗೂ ಯಾವುದೇ ಅಂತರ ಇಲ್ಲ ಅಂತ ಆದರೆ ಉಪಸಂಹಾರಗಳಿಗೆ ಅನುಗುಣವಾಗಿ ವಾಕ್ಯಗಳಿಗೆ ಅರ್ಥ ಮಾಡಬೇಕು ಅಂತ.

ಆವಯೋರನ್ತರಂ ನಾಸ್ತಿ ಶಬ್ದೈರರ್ಥೈರ್ಜಗತ್ಪತೇ ॥ (88.60 ಭವಿಷ್ಯಪರ್ವ)

ಅಂತ 88ನೆಯ ಅಧ್ಯಾಯ 60ನೆಯ ಶ್ಲೋಕದಲ್ಲಿ ನಮ್ಮಿಬ್ಬರಲ್ಲಿ ಯಾವುದೇ ಅಂತರ ಇಲ್ಲ ಅಂತ ಆದರೆ ಅದೇ ಅಧ್ಯಾಯದ ಈ 48ನೆಯ ಶ್ಲೋಕದಲ್ಲಿ ಪರಮಾತ್ಮನ ಬಗ್ಗೆ ರುದ್ರ ದೇವರು ಹೇಳುತ್ತಾರೆ **'ಕ ಇತಿ ಬ್ರಹ್ಮಣೋ ನಾಮ' 'ಕ'** ಅಂದರೆ ಬ್ರಹ್ಮ ದೇವರು **'ಈಶೋಽಹಂ ಸರ್ವದೇಹಿನಾಮ್'**[1] ಎಲ್ಲ ಜೀವರಾಶಿಗಳಿಗೆ ಪಾರ್ವತಿಯನ್ನ

1. 88.48 ಭವಿಷ್ಯಪರ್ವ

ಮೊದಲು ಮಾಡಿಕೊಂಡು ಕೆಳಗಿನ ಎಲ್ಲ ಜೀವರಾಶಿಗಳಿಗೆ ನಿಯಾಮಕನಾದದ್ದರಿಂದ ನನಗೆ ಈಶಾ ಅಂತ ಕರೆಯುತ್ತಾರೆ.

ಆವಾಂ ತವಾಜ್ಞಸಮ್ಭೂತೌ ತಸ್ಮಾತ್ ಕೇಶವನಾಮಾವಾನ್ ॥ (88.48 ಭವಿಷ್ಯಪರ್ವ)

ನಮ್ಮಿಬ್ಬರಿಗೆ ಜನಕನಾದದ್ದರಿಂದ ನಮ್ಮಿಬ್ಬರಿಗೆ ಪ್ರವರ್ತಕನಾದದ್ದರಿಂದ ನಿನಗೆ ಕೇಶವ ಅಂತ ಕರೆಯತ್ತಾರೆ ಅಂತ ಪರಮಾತ್ಮನಿಂದ ಹುಟ್ಟಿದವರು ನಾನು ಮತ್ತು ಬ್ರಹ್ಮ ದೇವರು ನಮಗೆ ಪ್ರವರ್ತಕ ಅವನು ಆದಕ್ಕಾಗಿ ಅವನನ್ನು ಕೇಶವ ಅಂತ ಕರೆಯತ್ತಾರೆ ಅಂತ ಹೇಳುತ್ತಾರೆ. ಮತ್ತೆ ಮುಂದೆ ಉಪಸಂಹಾರದಲ್ಲಿ ಆ ಭಗವಂತನ ಮಹಿಮೆಯನ್ನು ಕೊಂಡಾಡುತ್ತಾರೆ ರುದ್ರ ದೇವರು ಹೀಗಾಗಿ ಮಧ್ಯದಲ್ಲಿ ಬರುವಂತಹ ಆ ಶಬ್ದಕ್ಕೆ ಅರ್ಥವನ್ನು ನಾವು ಚೆನ್ನಾಗಿ ಮಾಡಿಕೊಳ್ಳಬೇಕು. ನನಗೂ ಪರಮಾತ್ಮನಿಗೂ ಅಂತರ ಇಲ್ಲ ಅಂದರೆ ಭೇದ ಇಲ್ಲ, ಭೇದ ಅಂದರೆ ಕಲಹ ಜಗಳ ಮಿತ್ರಭೇದ ಅಂತ ಅನ್ನುತ್ತಾರೆ ಮಿತ್ರಭೇದ ಮಿತ್ರ ಸಂಪ್ರಾಪ್ತಿ ಎಲ್ಲ ಕೇಳುತ್ತೀರಲ್ಲ ಮಿತ್ರಭೇದ ಅಂದರೆ ಏನು ಮಿತ್ರರಲ್ಲಿ ಆಗುವ ಕಲಹ ಅಂತ ಅರ್ಥ. **'ಆವಯೋರನ್ತರಂ ನಾಸ್ತಿ'** ನಮ್ಮಿಬ್ಬರಲ್ಲಿ ಎಂದಿಗೂ ಭೇದ ಕಲಹ ಇಲ್ಲ ಯಾವಾಗಲೂ ಆ ಭಗವಂತನ ಮನಸ್ಸನ್ನು ತಿಳಿದುಕೊಂಡು ಆ ಪರಮಾತ್ಮನಿಗೆ ಅನುಗುಣವಾಗಿ ನಾವು ಮಾಡುವುದು. ಯಾವಾಗೋ ಆಗೊಮ್ಮೆ ಈಗೊಮ್ಮೆ ಕಲಹ ಆಗಿರಬಹುದು ಬಾಣಾಸುರನ ಯುದ್ಧದ ಸಂದರ್ಭದಲ್ಲಿ, ರಾವಣಾಸುರನ ಯುದ್ಧದ ಪ್ರಸಂಗದಲ್ಲಿ ಅದು ತಾತ್ಕಾಲಿಕ ಅಷ್ಟೇ ಆದರೆ ಉಳಿದೆಲ್ಲ ಹೊತ್ತಿಗೆ ಆ ಭಗವಂತನಲ್ಲಿ ಪರಮ ಭಕ್ತಿಯನ್ನು ಮಾಡುವವನೇ ನಾನು ಅಂದಮೇಲೆ ನಮ್ಮಿಬ್ಬರಲ್ಲಿ ಯಾವುದೇ ವಿಧವಾದಂತಹ ವಿರೋಧ ಇಲ್ಲ ಅನ್ನುವ ಅರ್ಥದಲ್ಲಿ ಆ ಮಾತಿದೆ ಅಂತ ಈ ಮಾತಿನಿಂದ ನಾವು ಸ್ಪಷ್ಟವಾಗಿ ತಿಳಿಯಬೇಕು. ನಿನಗೆ ವಾಮನ ಅಂತ ಕರೆಯುತ್ತಾರೆ, ಸೂಕ್ಷ್ಮ ರೂಪವನ್ನು ತೆಗೆದುಕೊಂಡಿದ್ದೀ ಮೂರು ವೇದಗಳಿಂದ ಪ್ರತಿಪಾದ್ಯನಾದದ್ದರಿಂದ ನಿನ್ನನ್ನ ತ್ರಿವಿಕ್ರಮ ಅಂತ ಕರೆಯುತ್ತಾರೆ. ಯಾವಾಗಲೂ ಎಲ್ಲ ಜ್ಞಾನಿಗಳಲ್ಲಿದ್ದು ಯುಕ್ತಿಗಳಿಂದ ತತ್ವಗಳ ಚಿಂತನವನ್ನು ಮಾಡಿಸಿ ದೃಢಪಡಿಸುತ್ತಿಯಾ ಆದ್ದರಿಂದ ಮನನ ಮಾಡಿಸುವ ಕಾರಣ ನಿನಗೆ ಮುನಿ ಅಂತ ಕರೆಯುತ್ತಾರೆ. ಇಂದ್ರಿಯ ನಿಯಮನವನ್ನ ಒಳಗಿದ್ದು ಮಾಡಿಸುತ್ತೀಯಾ ಅನ್ನುವುದಕ್ಕೆ ನಿನಗೆ ಯತಿ ಅಂತ ಕರೆಯುತ್ತಾರೆ, ತಪಶ್ಚರ್ಯವನ್ನು ಮಾಡಿಸುತ್ತೀಯಾ ಅನ್ನುವುದಕ್ಕೆ ತಪಸ್ವಿ ಅಂತ ಕರೆಯುತ್ತಾರೆ. ಇವೆಲ್ಲ ಶಬ್ದಗಳ ಸಕಲ ವಿಭೂತಿ 10ನೆಯ ಅಧ್ಯಾಯ ಭಗವದ್ಗೀತೆಯಲ್ಲಿ ಏನು ಪರಮಾತ್ಮ ತಾನು ವಿಭೂತಿಯ ರೂಪಗಳನ್ನು ಹೇಳುತ್ತಾನೆ ಅದೆಲ್ಲವನ್ನು ರುದ್ರ ದೇವರು ಹೇಳುತ್ತಾರೆ ಪ್ರಾಯಃ. **'ರುದ್ರಾಣಾಂ ಶಂಕರಶ್ಚಾಸ್ಮಿ'**[1] ಅಂತ ಅಲ್ಲಿ ಹೇಳಿದ್ದಾನೆ ಅದನ್ನು ಹೇಳುತ್ತಾರೆ.

ರುದ್ರಾಣಾಮಹಮೇವಾಸಿ ವಸೂನಾಂ ಪಾವಕೋ ಭವಾನ್ ॥ (88.55 ಭವಿಷ್ಯಪರ್ವ)

ಹೀಗೆ ಜಗತ್ತಿನಲ್ಲಿ ಯಾವದು ಯಾವದು ಉತ್ತಮ ವಸ್ತುಗಳು ಅಂತ ಇದೆ ಆ ಎಲ್ಲ ಉತ್ತಮ ವಸ್ತುಗಳಲ್ಲಿ ಉತ್ತಮತ್ವವನ್ನು ಕೊಡುವದಕ್ಕಾಗಿ, ಸರ್ವಾಂತರ್ಯಾಮಿಯಾಗಿ ಇದ್ದು, ನಿನ್ನ ವಿಭೂತಿ ರೂಪವನ್ನಿಟ್ಟು ಅವುಗಳನ್ನು ಉತ್ತಮ ಅಂತ ಮಾಡಿದಂತಹ ಸ್ವಾಮಿ ನೀನು. ನಮಗೇನು ಹೆಸರಿದೆ ಬ್ರಹ್ಮ ರುದ್ರಾದಿ ದೇವತೆಗಳಿಗೆ ನಮಗೆಲ್ಲ ಋಷಿಗಳಿಗೆ ಮುನಿಗಳಿಗೆ ಏನೆಲ್ಲ ಹೆಸರುಗಳಿವೆ ಆವು ನಿನ್ನ ಹೆಸರುಗಳೇ.

ನಾಮಾನಿ ತವ ಗೋವಿನ್ದ ಯಾನಿ ಲೋಕೇ ಮಹಾನ್ತಿ ಚ ॥ (88.61 ಭವಿಷ್ಯಪರ್ವ)

ಇಡೀ ಜಗತ್ತಿನಲ್ಲಿ ಏನೆಲ್ಲಾ ನಾಮಗಳಿವೆ ಅವು ನಿನ್ನ ನಾಮಗಳು.

1. 10.23 ಭ ಗೀತಾ

ತಾನ್ಯೇವ ಮಮ ನಾಮಾನಿ ನಾತ್ರ ಕಾರ್ಯಾ ವಿಚಾರಣಾ ॥ (88.61 ಭವಿಷ್ಯಪರ್ವ)

ನನಗೇನು ರುದ್ರ ಶಿವ ಶಂಕರ ಅನೇಕ ಹೆಸರುಗಳಿವೆ ಅಥವಾ ಬ್ರಹ್ಮದೇವರಿಗೆ ಬ್ರಹ್ಮ ಕಮಲಾಸನ ಇತ್ಯಾದಿ ಹೆಸರುಗಳಿವೆ ಅಜ ಸ್ವಯಂಭು ಅದೆಲ್ಲ ನಿನ್ನ ಹೆಸರುಗಳೇ. ಶ್ರೀಮದಾಚಾರ್ಯರು ಹೇಳುವ ತತ್ವ ಭಗವಂತನ ನಾಮಗಳೇ ಇನ್ನುಳಿದವರಿಗೆಲ್ಲ ಬಂದದ್ದು ಅಂತ ಅಷ್ಟು ಸ್ಪಷ್ಟವಾಗಿ ರುದ್ರ ದೇವರು ಇಲ್ಲಿ ತಿಳಿಸಿಕೊಡುತ್ತಾ ಇದ್ದಾರೆ.

ನಿನ್ನನ್ನು ನಾನು ಅತ್ಯಂತ ಭಕ್ತಿಯಿಂದ ಕಾಣುತ್ತೇನೆ ನೀನು ಅಷ್ಟು ವಾತ್ಸಲ್ಯದಿಂದ ನನ್ನನ್ನು ನೋಡುತ್ತೀಯಾ ಅನ್ನುವುದಕ್ಕೆ ನಮ್ಮಿಬ್ಬರಲ್ಲಿಯೂ ಒಂದು ತಾದಾತ್ಮ್ಯ ಬಂದಂತೆ ವ್ಯವಹಾರ ಅಷ್ಟೇ.

ಯಶ್ಚ ತ್ವಾಂ ದ್ವೇಷ್ಟಿ ದೇವೇಶ ಸ ಮಾಂ ದ್ವೇಷ್ಟಿ ನ ಸಂಶಯಃ ॥ (88.62 ಭವಿಷ್ಯಪರ್ವ)

ನಿನ್ನ ದ್ವೇಷ ಮಾಡಿದರೆ ನನ್ನ ದ್ವೇಷ ಮಾಡಿದ ಹಾಗೆ, ನನ್ನಲ್ಲಿ ಪ್ರೀತಿ ಮಾಡಿದರೆ ನಿನ್ನಲ್ಲಿ ಪ್ರೀತಿ ಮಾಡಿದ ಹಾಗೆ, ನಿನ್ನಲ್ಲಿ ಪ್ರೀತಿ ಮಾಡಿದರೆ ನನ್ನಲ್ಲಿ ಪ್ರೀತಿ ಮಾಡಿದ ಹಾಗೆ ಆ ಅರ್ಥದೊಳಗೆ ನಮ್ಮಿಬ್ಬರಲ್ಲಿ ಅಂತರ ಇಲ್ಲ ಅಂತ ಹೇಳಿದ್ದು ಅಷ್ಟೇ ಹೊರತು ಅವಶ್ಯವಾಗಿ ಅತ್ಯಂತ ಭೇದ ಉಂಟು ಅನ್ನುವುದನ್ನು ರುದ್ರ ದೇವರು ಸಮರ್ಥನೆ ಮಾಡುತ್ತಾ ಇದ್ದಾರೆ. ರುದ್ರ ದೇವರು ಪರಮಾತ್ಮನನ್ನು ಕುರಿತು ಇಷ್ಟು ಹೇಳಿದ್ದಾರೆ ಮುನಿಗಳನ್ನು ಕುರಿತು ಪರಮಾತ್ಮನ ತತ್ವ ಇದು, ಇದನ್ನು ಸರಿಯಾಗಿ ತಿಳಿಯಿರಿ ನಾನು ಸರ್ವೋತ್ತಮ ಅಂತ ತಿಳಿಯಬೇಡಿ ಅಂತ ಹೇಳಿದರೆ ತೃಪ್ತಿ ಆಯಿತಾ ರುದ್ರ ದೇವರಿಗೆ 88ನೆಯ ಅಧ್ಯಾಯದಲ್ಲಿ 89ನೆಯ ಅಧ್ಯಾಯದಲ್ಲಿ ಪುನಃ ಹೇಳುತ್ತಾರೆ ರುದ್ರ ದೇವರು ಮತ್ತೆ.

ಏವಂ ಜಾನೀತ ಹೇ ವಿಪ್ರಾ ಯೇ ಭಕ್ತಾ ದ್ರಷ್ಟುಮಾಗತಾಃ ॥ (89.1 ಭವಿಷ್ಯಪರ್ವ)

ಏನೂ ವ್ಯತ್ಯಾಸ ಮಾಡತಕ್ಕದ್ದಲ್ಲ ಇದರಲ್ಲಿ

ಏತದೇವ ಪರಂ ವಸ್ತು ನೈತಸ್ಮಾತ್ ಪರಮಸ್ತಿ ವಃ । (89.2 ಭವಿಷ್ಯಪರ್ವ)

ಇವನೇ ಸರ್ವೋತ್ತಮ ವಸ್ತು ಇವನಿಗಿಂತ ಉತ್ತಮ ವಸ್ತು ಇನ್ನೊಂದು ಇಲ್ಲ ಅಂತ ಮತ್ತೆ ಮತ್ತೆ ಹೇಳುತ್ತ ಇದ್ದಾರೆ ರುದ್ರ ದೇವರಿಗೆ ಎಷ್ಟು ಇದಕ್ಕೆ ಅಭ್ಯಾಸ ಅನ್ನುತ್ತಾರೆ, ಒಂದು ಬಾರಿ ಹೇಳುವುದಲ್ಲದೇ ಮತ್ತೆ ಮತ್ತೆ ಹೇಳುವುದು ಉಂಟಲ್ಲ ಇದಕ್ಕೆ ಅಭ್ಯಾಸ ಅನ್ನುತ್ತಾರೆ. ಅದು ತಾತ್ಪರ್ಯ ಲಿಂಗ ರುದ್ರ ದೇವರು ಸುಮ್ಮನೆ ಹೇಳಿದ್ದಲ್ಲ ನಾಟಕಕ್ಕಾಗಿ, ಪರಮಾತ್ಮ ಒಂದು ಬಾರಿ ಸ್ತೋತ್ರ ಮಾಡಿ ಸುಮ್ಮನಾದ ಮುಂದೆ ಏನು ಮಾತನಾಡಲೇ ಇಲ್ಲ ದೇವರು. ಆದರೆ ರುದ್ರ ದೇವರು ಮಾತ್ರ ಮತ್ತೆ ಮತ್ತೆ ದೇವರ ಸ್ತೋತ್ರ ಮಾಡುವ ಮೂಲಕ ದೇವರೇ ಸರ್ವೋತ್ತಮ ಅಂತನ್ನುವ ವಿಷಯದಲ್ಲಿ ತಮಗೆ ಮಹಾತಾತ್ಪರ್ಯ ಇದೆ ಅಂತ ತೋರಿಸುತ್ತಾರೆ. ಪರಮಾತ್ಮ ಮಾತ್ರ ನಾನು ಕೇವಲ ನಾಟಕಕ್ಕಾಗಿ ಮಾಡಿದ್ದು ಅನ್ನುವುದಕ್ಕೆ ಒಂದು ಬಾರಿ ನಮಸ್ಕಾರ ಮಾಡಿ ಸ್ತೋತ್ರ ಮಾಡಿ ಸುಮ್ಮನೆ ಆಗಿಬಿಟ್ಟ, ಪ್ರತಿಯೊಂದು ಬಾರಿ ಏವಕಾರ ಹಾಕುತ್ತಾರೆ

ಏತದೇವ ಸದಾ ವಿಪ್ರಾ ಧ್ಯೇಯಂ ಸತತಮಾನಸೈಃ । (89.3 ಭವಿಷ್ಯಪರ್ವ)

ಇವನ ಧ್ಯಾನವನ್ನೇ ನೀವು ಮಾಡಬೇಕು, ಇವನ ಪ್ರೀತಿಗಾಗಿಯೇ ತಪಶ್ಚರ್ಯ ಮಾಡಬೇಕು, ಇವನೇ ನಿಮಗೆ ಫಲಪ್ರದ, ಇವನೇ ನಿಮಗೆ ಮೋಕ್ಷದಾತ ಘಂಟಾಕರ್ಣರಿಗೆ ಹೇಳುವುದಲ್ಲ, ದೇವತೆಗಳಿಗೆ ಮುನಿಗಳಿಗೂ ಅದೇ ಮಾತನ್ನು ಮತ್ತೆ ಹೇಳುತ್ತಾರೆ ರುದ್ರ ದೇವರು.

ಏಷ ವೋ ಮೋಕ್ಷದಾತಾ ಚ ಏಷ ಮಾರ್ಗ ಉದಾಹೃತಃ । (89.5 ಭವಿಷ್ಯಪರ್ವ)

'ಏಷ ಪಂಥಾ ಏತತ್ ಕರ್ಮಃ' ಅಂತ ಐತರೇಯ ಉಪನಿಷತ್ತಿನಲ್ಲಿ ಹೇಳಿದಂತೆ ಇವನೇ ನಿಮಗೆ ಮೋಕ್ಷವನ್ನು ಹೊಂದುವುದಕ್ಕೆ ಮಾರ್ಗನು ಹೌದು ಮೋಕ್ಷವನ್ನು ಕೊಡುವವನು ಅವನೇ. ವೇದ ಪ್ರತಿಪಾದ್ಯ ಇವನೇ ಅಂತ ಹೇಳಿ ಮತ್ತೆ ತೃಪ್ತಿ ಇಲ್ಲದೆ

ಏವಮೇವ ವಿಜಾನೀತ ನಾತ್ರ ಕಾರ್ಯಾ ವಿಚಾರಣಾ । (89.8 ಭವಿಷ್ಯಪರ್ವ)

ಇದರೊಳಗೆ ಏನೂ ವ್ಯತ್ಯಾಸ ಮಾಡತಕ್ಕದ್ದಲ್ಲ.

ಹರಿರೇಕಃ ಸದಾ ಧ್ಯೇಯೋ ಭವದ್ಭಿಃ ಸತ್ತ್ವಮಾಸ್ಥಿತೈಃ ॥ (89.8 ಭವಿಷ್ಯಪರ್ವ)

ನಾನ್ಯೋ ಜಗತಿ ದೇವೋಽಸ್ತಿ ವಿಷ್ಣೋರ್ನಾರಾಯಣಾತ್ ಪರಃ । (89.9 ಭವಿಷ್ಯಪರ್ವ)

ದೇವರಿಗಿಂತಲೂ ಉತ್ತಮನಾದ ಇನ್ನೊಬ್ಬವ, ವಿಷ್ಣುವಿಗಿಂತಲೂ ಉತ್ತಮನಾದವನು ಸರ್ವಥಃ ಸರ್ವಥಃ ಇಲ್ಲ ಓಂಕಾರ ಪ್ರತಿಪಾದ್ಯನಾದವನು ಇವನೇ, ಓಂಕಾರದ ಜಪ ಮಾಡಿ ಎಲ್ಲ ಯತಿಗಳು ಮುನಿಗಳು ನೀವೆಲ್ಲಾ ಈ ವಿಷ್ಣುವೇ ಓಂಕಾರ ಪ್ರತಿಪಾದ್ಯನಾಗಿದ್ದಾನೆ, ಮೋಕ್ಷ ಪ್ರದನಾಗಿದ್ದಾನೆ ಅನ್ನುವ ಅನುಸಂಧಾನದಿಂದ.

ಓಮಿತ್ಯೇವಂ ಸದಾ ವಿಪ್ರಾಃ ಪಠತ ಧ್ಯಾತ ಕೇಶವಮ್ ॥ (89.9 ಭವಿಷ್ಯಪರ್ವ)

ತತೋ ನಿಃಶ್ರೇಯಸಪ್ರಾಪ್ತಿರ್ಭವಿಷ್ಯತಿ ನ ಸಂಶಯಃ । (89.10 ಭವಿಷ್ಯಪರ್ವ)

ಆ ಮೋಕ್ಷ ನಿಮ್ಮ ಧ್ಯಾನದಿಂದ, ನಿಮ್ಮ ಜ್ಞಾನದ ಮಹಿಮೆಯಿಂದ ಆಗುತ್ತದೆ ಅಂತ ತಿಳಿದುಕೊಳ್ಳಬೇಡಿ.

ಏವಂ ಧ್ಯಾತೋ ಹರಿಃ ಸಾಕ್ಷಾತ್ ಪ್ರಸನ್ನೋ ವೋ ಭವಿಷ್ಯತಿ ॥ (89.10 ಭವಿಷ್ಯಪರ್ವ)

ಭವನಾಶಮಯಂ ದೇವಃ ಕರಿಷ್ಯತಿ ದೃಢಂ ಹರಿಃ । (89.11 ಭವಿಷ್ಯಪರ್ವ)

ಪ್ರಸನ್ನನಾಗಿ ತನ್ನ ಪ್ರಸಾದದಿಂದ ನಿಮಗೆ ಮೋಕ್ಷವನ್ನು ಕೊಡುತ್ತಾನೆ ಅಂತಹ ಪರಮಾತ್ಮನ ಸ್ಮರಣೆಯನ್ನ ಸದಾಕಾಲದಲ್ಲಿ ನೀವು ಮಾಡಬೇಕು ಅಂತ ರುದ್ರ ದೇವರು ಅಷ್ಟು ಗಟ್ಟಿಯಾಗಿ ಹೇಳುತ್ತಾರೆ. ಹಾಗಾದರೆ ಬ್ರಹ್ಮ ರುದ್ರಾದಿ ದೇವತೆಗಳ ಉಪಾಸನೆಯನ್ನು ಮಾಡಲೇಬಾರದು ನಮ್ಮೆಲ್ಲರ ಉಪಾಸನೆಯನ್ನು ಅಂತ ತಿಳಿದುಕೊಳ್ಳಬೇಡಿ, ಮಾಡಿ ನಾವೆಲ್ಲ ಈ ಪರಮಾತ್ಮನ ಪ್ರಾಪ್ತಿಗೆ ಉಪಾಯರಾಗಿದ್ದೇವೆ ಅಂತ ತಿಳಿಯಿರಿ. ನಮ್ಮ ಉಪಾಸನೆ ಮಾಡಿದರೆ ಆ ಭಗವಂತನ ಧ್ಯಾನ ಮಾಡುವ, ಸೇವೆ ಮಾಡುವ, ಭಜನೆ ಮಾಡುವ ಒಂದು ಭಾಗ್ಯವನ್ನು ನಿಮಗೆ ಕೊಡುತ್ತೇವೆ ಅದರಿಂದ ನೀವು ಆ ಪರಮಾತ್ಮನ ದರ್ಶನವನ್ನು ಪಡೆಯಬಹುದು. ಅದಕ್ಕಾಗಿ ನಮ್ಮ ಸೇವೆ, ನಮ್ಮನ್ನೇ ಹೊಂದುವುದಕ್ಕಾಗಿ ಅಲ್ಲ, ನಮ್ಮಿಂದಲೇ ಮೋಕ್ಷವನ್ನು ಪಡೆಯುವುದಕ್ಕಾಗಿ ಅಲ್ಲ ಆ ಪರಮಾತ್ಮನನ್ನ ಪಡೆಯುವುದಕ್ಕೋಸ್ಕರ ನಾವು ಉಪಾಯರು ಮಾರ್ಗರಾಗುತ್ತೇವೆ ಅನ್ನುವುದಕ್ಕೆ ಅಂತ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಶ್ರೀಮದಾಚಾರ್ಯರು ತಿಳಿಸಿಕೊಟ್ಟಿದ್ದಾರೆ ಆ ಮಾತನ್ನು ಹರಿವಂಶ ಅತೀ ಸ್ಪಷ್ಟವಾಗಿ ಹೇಳುತ್ತದೆ.

ಉಪಾಯೋಽಯಂ ಮಯಾ ಪ್ರೋಕ್ತೋ । (89.15 ಭವಿಷ್ಯಪರ್ವ)

ಉಪಾಸ್ಯೋಽಹಂ ಸದಾ ವಿಪ್ರಾ ಉಪಾಸ್ಯೇಽಸ್ಮಿನ್ ಹರೌ ಸ್ಥಿತಃ ॥ (89.14 ಭವಿಷ್ಯಪರ್ವ)

ಈ ಪರಮಾತ್ಮನ ಉಪಾಸನೆ ಮಾಡಬೇಕು ಅಂತಾದರೆ ನನ್ನ ಉಪಾಸನೆಯನ್ನು ಮಾಡಿ ಯಾಕೆ ಅಂದರೆ ಇದು ಉಪಾಯ, ನಮ್ಮ ಉಪಾಸನೆ ಮಾಡಿದರೆ ನಿಮಗೆ ಪರಮಾತ್ಮನ ಉಪಾಸನೆಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ ಅದಕ್ಕಾಗಿ ಉಪಾಸನೆ ಮಾಡಿ ಅಂತ. ಇಷ್ಟು ಹೇಳಿದಾಗ ದೇವತೆಗಳಿಗೆ ಮುನಿಗಳಿಗೆ ಎಲ್ಲ ಪೂರ್ಣವಾಗಿ ಮನಸ್ಸಿನಲ್ಲಿ ಗೊತ್ತು ದೃಢವಾಗಿ ಗೊತ್ತು ವಿಷ್ಣುವೇ ಸರ್ವೋತ್ತಮ ಅಂತ ಆದರೂ ಕೇವಲ ಯುಕ್ತಿಗಳಿಂದ ಏನೋ ಅಲ್ಪಸ್ವಲ್ಪ ಸಂಶಯಗಳು ಬಂದಿದ್ದರೆ ಅದನ್ನೂ ರುದ್ರ ದೇವರು ಪರಿಹಾರ ಮಾಡಿದ್ದಾರೆ, ಸಂಶಯವನ್ನು ಸಂಪೂರ್ಣವಾಗಿ ಪರಿಹಾರ ಮಾಡಿ ವಿಷ್ಣು ಸರ್ವೋತ್ತಮತ್ವದ ಸ್ಥಾಪನೆ ಮಾಡಿದ್ದಾರೆ ಅಂತ ಶ್ರೀಮದಾಚಾರ್ಯರು ತಾತ್ಪರ್ಯ ನಿರ್ಣಯದಲ್ಲಿ ತಿಳಿಸುತ್ತಾರೆ ಆ ಮಾತನ್ನೂ ಹರಿವಂಶ ಇಲ್ಲಿ ಹೇಳುತ್ತದೆ.

ಛಿನ್ನೋ ನಃ ಸಂಶಯಃ ಸರ್ವೋ ಗೃಹೀತೋऽರ್ಥಃ ಸ ತಾದೃಶಃ ॥ (89.18 ಭವಿಷ್ಯಪರ್ವ)

ನಮ್ಮ ಎಲ್ಲ ಸಂಶಯಗಳು ಪರಿಹಾರವಾಯಿತು ಅಂತ ಅವರು ಹೇಳಿದ್ದಾರೆ.

ಯಥಾऽಹ ಭಗವಾನ್ ರುದ್ರೋ ಯತಾಮಃ ಸತತಂ ಹರೌ ।
ಇತಿ ತೇ ಮುನಯಃ ಪ್ರೀತಾಃ ಪ್ರಣೇಮುಃ ಕೇಶವಂ ಹರಿಮ್ ॥ (89.20 ಭವಿಷ್ಯಪರ್ವ)

ಆಮೇಲೆ ರುದ್ರ ದೇವರು ಹೇಳಿದ ರೀತಿಯಲ್ಲಿ ವಿಷ್ಣುವನ್ನೇ ಸರ್ವೋತ್ತಮ ಅಂತ ತಿಳಿದ ನಾವು ಇನ್ನುಮೇಲೆ ಉಪಾಸನೆ ಮಾಡುತ್ತೇವೆ, ಇಷ್ಟು ದಿವಸವೂ ಮಾಡುತ್ತ ಇದ್ದಿವಿ, ಇನ್ನೂ ದಾರ್ಢ್ಯದಿಂದ ಇನ್ನು ಮುಂದೆ ಉಪಾಸನೆ ಮಾಡುತ್ತೇವೆ ಅಂತ ಪುನಃ ಸಾಷ್ಟಾಂಗ ಪ್ರಣಾಮ ಮಾಡಿದ್ದಾರೆ ಶ್ರೀಕೃಷ್ಣ ಪರಮಾತ್ಮನಿಗೆ. ಉಪದೇಶ ಎಲ್ಲ ಮಾಡಿದರು ಇಷ್ಟೊತ್ತು ಎರಡು ಅಧ್ಯಾಯಗಳಿಂದ ಋಷಿ ಮುನಿಗಳನ್ನು ದೇವತೆಗಳನ್ನು ಕುರಿತು ರುದ್ರ ದೇವರು ಉಪದೇಶವನ್ನು ಮಾಡಿ ಪುನಃ 90ನೆಯ ಅಧ್ಯಾಯದಲ್ಲಿ ತಾವು ಪರಮಾತ್ಮನ ಸ್ತುತಿಯನ್ನು ಮಾಡುತ್ತಾರೆ ಮತ್ತೆ ನೇರವಾಗಿ. ಆ ಸ್ತುತಿಯನ್ನು ಮಾಡುವಾಗಲೂ ಹರಿವಂಶ ಹೇಳುತ್ತದೆ ನಾಟಕಕ್ಕಾಗಿ ಮಾಡುವ ಸ್ತುತಿಯಲ್ಲ ಇದು.

ಅಥ್ಯಾಭಿಸ್ತು ತದಾ ವಾಗ್ಭಿರ್ಮುನೀನಾಂ ಶೃಣ್ವತಾಂ ತಥಾ । (90.1 ಭವಿಷ್ಯಪರ್ವ)

ಅತ್ಯಂತ ಸಾರ್ಥಕವಾದ ಪರಮ ಸಿದ್ಧಾಂತವನ್ನು ಹೇಳುವಂತಹ ಮಾತುಗಳಿಂದ ರುದ್ರ ದೇವರು ಸ್ತುತಿಯನ್ನು ಮಾಡುತ್ತಾರೆ ಅಂತ ಹರಿವಂಶ ತಿಳಿಸಿಕೊಡುತ್ತದೆ. ಅತ್ಯದ್ಭುತವಾದ ಸ್ತೋತ್ರವನ್ನು ಮಾಡಿದ್ದಾರೆ ರುದ್ರ ದೇವರು ಸಕಲ ಜಗದ್ ಕಾರಣನಾದಂತಹ ಸರ್ವಾಂತರ್ಯಾಮಿಯಾದ ಸರ್ವದೇವ ಪ್ರೇರಕನಾದ, ಸಕಲವೇದ ಪ್ರತಿಪಾದ್ಯನಾದ ಆ ಪರಮಾತ್ಮನ ವರ್ಣನೆಯನ್ನು ಸುಧೀರ್ಘವಾಗಿ ಮಾಡಿ ಕೊನೆಗೆ ಆ ಸ್ತೋತ್ರದ ಫಲಶ್ರುತಿಯನ್ನು ಹೇಳುತ್ತಾರೆ ಇದಕ್ಕೂ ತಾತ್ಪರ್ಯ ಲಿಂಗ ಅನ್ನುತ್ತಾರೆ.

ಉಪಕ್ರಮೋಪ ಸಂಹಾರೌ ಅಭ್ಯಾಸೋ ಪೂರ್ವತಾ ಫಲಂ ।
ಅರ್ಥವಾದೋ ಪಪತ್ತೀ ಚ ಲಿಂಗಂ ತಾತ್ಪರ್ಯ ನಿರ್ಣಯೇ ॥

ಫಲವನ್ನು ಹೇಳುತ್ತಾರೆ

ಇದಂ ಸ್ತೋತ್ರಮಧೀಯಾನಾ ನಿತ್ಯಂ ವ್ರಜತ ಕೇಶವಮ್ ॥ (90.29 ಭವಿಷ್ಯಪರ್ವ)

ನೀವು ದೇವರ ದರ್ಶನಕ್ಕೆ ನಿತ್ಯ ಹೋಗುವಾಗ ಈ ಸ್ತೋತ್ರದ ಪಠಣ ಮಾಡಿ ಅನ್ನುತ್ತಾರೆ ತಾವು ಮಾಡುವಂತಹ ಸ್ತೋತ್ರ.

ನಮೋ ಭಗವತೇ ತುಭ್ಯಂ ವಾಸುದೇವಾಯ ಧೀಮತೇ ।
ಯಸ್ಯ ಭಾಸಾ ಜಗತ್ ಸರ್ವಂ ಭಾಸತೇ ನಿತ್ಯಮಚ್ಯುತ ॥ (90.2 ಭವಿಷ್ಯಪರ್ವ)

ಇತ್ಯಾದಿಯಾಗಿ ಮಾಡಿದಂತಹ ಏನು ಸ್ತುತಿ ಇದೆ ಈ ಸ್ತೋತ್ರವನ್ನು ನೀವು ಪಠಣ ಮಾಡುತ್ತ ನಿತ್ಯದಲ್ಲಿ ಭಗವಂತನ ದರ್ಶನವನ್ನು ಪಡೆದುಕೊಳ್ಳಿ.

ಶರಣ್ಯಂ ಸರ್ವಭೂತಾನಾಂ ತತ್ರ ಶ್ರೇಯೋ ವಿಧಾಸ್ಯತಿ ।
ಯೇ ಚೇಮಂ ಧಾರಯಿಷ್ಯನ್ತಿ ಸ್ತವಂ ಪಾಪವಿಮೋಚನಮ್ ॥ (90.30 ಭವಿಷ್ಯಪರ್ವ)

ತೇಷಾಂ ಪ್ರೀತಃ ಪ್ರಸಾನ್ನಾತ್ಮಾ ಪಠತಾಂ ಶೃಣ್ವತಾಂ ಹರಿಃ ।
ಶ್ರೇಯೋ ದಾಸ್ಯತಿ ಧರ್ಮಾತ್ಮಾ ನಾತ್ರ ಕಾರ್ಯ ವಿಚಾರಣಾ ॥ (90.31 ಭವಿಷ್ಯಪರ್ವ)

ಸಕಲ ಶ್ರೇಯಸ್ಸನ್ನು ಪರಮಾತ್ಮ ಕರುಣಿಸುತ್ತಾನೆ ಅಂತಹ ಶ್ರೇಷ್ಠವಾದ ಸ್ತೋತ್ರ ಇದು ಅಂತ ರುದ್ರ ದೇವರು ಹೇಳಿದಾಗ, ಮತ್ತೆ ಮುನಿಗಳು ಇನ್ನಷ್ಟು ಆಶ್ಚರ್ಯಚಕಿತರಾಗಿ,

ತಮೇವ ಪರಮಂ ತತ್ತ್ವಂ ಮತ್ವಾ ನಾರಾಯಣಂ ಹರಿಮ್ ।
ವಿಸ್ಮಯಂ ಪರಮಂ ಗತ್ವಾ ಮೇನಿರೇ ಸ್ವಕೃತಾರ್ಥತಾಮ್ ॥ (90.34 ಭವಿಷ್ಯಪರ್ವ)

ಸಾಕ್ಷಾತ್ ತಪಸ್ಸಿಗೆ ಅಭಿಮಾನಿಗಳು, ಮನೋಭಿಮಾನಿಗಳು, ಯುಕ್ತಿಗಳಿಗೆ ಅಭಿಮಾನಿಗಳು, ಮನನಗಳನ್ನು ಮಾಡಿಸುವುದಕ್ಕೆ ವಿಶೇಷವಾಗಿ ಪ್ರೇರಕರು. ಅಂತಹ ಅಷ್ಟಮೂರ್ತಿಗಳಾದ ಮಹಾನುಭಾವರಾದ ರುದ್ರ ದೇವರ ಮುಖದಿಂದ ಉಪದೇಶ ಪಡೆಯುವ ಭಾಗ್ಯ ನಮಗೆ ಸಿಕ್ಕಿತು, ವಿಷ್ಣುವಿನ ಸರ್ವೋತ್ತಮತ್ವವನ್ನು ರುದ್ರ ದೇವರ ಮುಖದಿಂದ ನಾವು ಕೇಳಿದಿವಿ ಅಂತ. **'ಮೇನಿರೇ ಸ್ವಕೃತಾರ್ಥತಾಮ್'** ನಾವೆಲ್ಲ ಧನ್ಯರಾದೆವು ಅಂತ ಇಂದ್ರಾದಿ ದೇವತೆಗಳು ಹಾಗೂ ಬಂದಂತಹ ಎಲ್ಲ ಋಷಿ ಮುನಿಗಳು ಭಾವಿಸಿಕೊಂಡಿದ್ದಾರೆ.

ಇಷ್ಟೆಲ್ಲಾ ಆದಮೇಲೆ ರುದ್ರ ದೇವರು ತಮ್ಮ ಲೋಕಕ್ಕೆ ಹೊರಟರು, ಇಂದ್ರಾದಿ ದೇವತೆಗಳು ತಮ್ಮ ತಮ್ಮ ಲೋಕಕ್ಕೆ ಹೊರಟಿದ್ದಾರೆ. ಪರಮಾತ್ಮನೂ ಕೂಡ ಗರುಡಾರೂಢನಾಗಿ ಕೈಲಾಸದಿಂದ ಬದರಿಕಾಶ್ರಮಕ್ಕೆ ಹೊರಡುತ್ತ ಇದ್ದಾನೆ. ಎಲ್ಲ ಮುನಿಗಳಿಂದ ಋಷಿಗಳಿಂದ ಅರ್ಚಿತನಾಗಿ ಪೂಜಿತನಾಗಿ ಬದರಿಕಾಶ್ರಮದಲ್ಲಿ ಪರಮಾತ್ಮ ಸುಖವಾಗಿ ಇದ್ದಾನೆ. ಮೂರು ದಿವಸದೊಳಗೆ ಇಷ್ಟೆಲ್ಲಾ ಕೆಲಸ ಮಾಡಿಕೊಂಡು ಮತ್ತೆ ದ್ವಾರಕಾ ಪಟ್ಟಣಕ್ಕೆ ಮುಂದೆ ಹೋಗುತ್ತಾನೆ ಆದರೆ 12 ವರ್ಷದ ವ್ರತ ಒಂದೇ ದಿನ, ಒಂದು ದಿನ ಬದರಿಕಾಶ್ರಮ, ಒಂದು ದಿನ ಕೈಲಾಸ ಮತ್ತೊಂದು ದಿನ

ಬದರಿಕಾಶ್ರಮ, ದ್ವಾರಕಾ ಪಟ್ಟಣಕ್ಕೆ ಬಂದದ್ದು ಅಷ್ಟೇ. ಆದರೆ 12 ವರ್ಷದ ವ್ರತವನ್ನು ಒಂದು ದಿನದಲ್ಲಿ ಮಾಡಿ ಅದ್ಭುತವಾದ ಲೀಲೆಯನ್ನು ಪರಮಾತ್ಮ ತೋರಿಸಿದ್ದಾನೆ ಎಂಬ ಪರಮಾತ್ಮನ ಸರ್ವೋತ್ತಮತ್ವದ ಸಮರ್ಥನೆಯನ್ನು, ಶ್ರುತಿಸ್ಮೃತಿ ಇತಿಹಾಸ ಪುರಾಣಗಳ ಪ್ರಧಾನವಾದ ಪ್ರಮೇಯವನ್ನು ಅತ್ಯದ್ಭುತವಾದ ರೀತಿಯಲ್ಲಿ ಹರಿವಂಶ ನಿರೂಪಣೆ ಮಾಡಿದೆ. ರುದ್ರ ದೇವರು ಅದರ ಸಮರ್ಥನೆಯನ್ನು ಮಾಡಿದ್ದಾರೆ. ಅಂತಹ ತತ್ವವನ್ನು ಶ್ರೀಮದಾಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಅತೀ ಸ್ಪಷ್ಟವಾಗಿ ತಿಳಿಸಿಕೊಡುತ್ತಾರೆ. ಅಂತಹ ತತ್ವದ ಅನುಸಂಧಾನ ಎಲ್ಲರಿಗೂ ಬರುವಂತೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಅನುಗ್ರಹವನ್ನು ಮಾಡಲಿ ಅಂತ ಪ್ರಾರ್ಥನೆಯನ್ನು ಮಾಡೋಣ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಭವಿಷ್ಯಪರ್ವ-44

* * *

ವೈಶಂಪಾಯನ ಉವಾಚ

ಏತಸ್ಮಿನ್ನೇವ ಕಾಲೇ ತು ಪೌಂಡ್ರ್ರೋ ನೃಪವರೋತ್ತಮಃ ।
ಬಲವಾನ್ ಸತ್ಯಸಂಪನ್ನೋ ಯೋದ್ಧಾ ವಿಪುಲವಿಕ್ರಮಃ ।। (91.1 ಭವಿಷ್ಯಪರ್ವ)

ಶ್ರೀಕೃಷ್ಣ ಪರಮಾತ್ಮ ಘಂಟಾಕರ್ಣ, ಕರ್ಣ ಎಂಬ ಪಿಶಾಚಗಳನ್ನು ಉದ್ಧಾರ ಮಾಡಿ, ಅವರ ಮೂಲರೂಪವಾದ ಗಂಧರ್ವ ರೂಪವನ್ನು ಅವರಿಗೆ ಕೊಟ್ಟು ಪಾಪದಿಂದ ಮೋಚನೆ ಮಾಡಿ, ತನ್ನ ಸಾಕ್ಷಾತ್ಕಾರವನ್ನು ನೀಡಿ ಪರಮಾನುಗ್ರಹವನ್ನು ಮಾಡಿದ್ದಾನೆ. ರುದ್ರ ದೇವರಿಂದ ಸ್ತುತನಾಗಿ, ಸಕಲ ಋಷಿ ಮುನಿ ದೇವತೆಗಳ ಮಧ್ಯದಲ್ಲಿ ತನ್ನ ಸರ್ವೋತ್ತಮತ್ವವನ್ನು ರುದ್ರ ದೇವರು ಸ್ಥಾಪನೆ ಮಾಡಿದ್ದನ್ನು ಕೇಳಿ ಸಂತೋಷ ಪಟ್ಟು ಅನುಗ್ರಹವನ್ನು ಮಾಡಿ, ಪುನಃ ಬದರಿಕಾಶ್ರಮಕ್ಕೆ ಬಂದಿದ್ದಾನೆ ಎಂಬ ವೃತ್ತಾಂತವನ್ನು ಹಿಂದೆ ತಿಳಿದಿದ್ದೇವೆ. ಸರ್ವಜ್ಞ ಶಿಖಾಮಣಿಯಾದ ಶ್ರೀಕೃಷ್ಣ ಪರಮಾತ್ಮ ಮುಂದೆ ಆಗುವುದನ್ನೆಲ್ಲ ಮೊದಲೇ ತಿಳಿದವ, ಅತೀತ ಅನಾಗತ ವರ್ತಮಾನ ಎಲ್ಲವನ್ನೂ ಭಗವಂತನ ಅನುಗ್ರಹವನ್ನು ಪಡೆದ ಜ್ಞಾನಿಗಳು ಯೋಗಿಗಳೇ ತಿಳಿಯುತ್ತಾರೆ ಅಂದಮೇಲೆ ಯೋಗೇಶ್ವರನಾದ ಸರ್ವಜ್ಞ ಶಿಖಾಮಣಿಯಾದಂತಹ ಭಗವಂತ ಸಕಲ ಅತಿತಾನಾಗತಗಳನ್ನು ತಿಳಿದಿದ್ದಾನೆ ಅನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಅಂತಹ ಪರಮಾತ್ಮ ಮೊದಲೇ ಹೇಳಿದ್ದ ದ್ವಾರಕಾ ಪಟ್ಟಣದಲ್ಲಿ ಇದ್ದ ಉಗ್ರಸೇನ, ಬಲರಾಮ, ಸಾತ್ಯಕಿ ಎಲ್ಲರಿಗೂ ಕೂಡ ಪೌಂಡ್ರಕ ವಾಸುದೇವ ಬಂದು ಯುದ್ಧವನ್ನು ಆಡುವ ಸಾಧ್ಯತೆ ಇದೆ, ನೀವೆಲ್ಲ ಎಚ್ಚರದಿಂದ ಇರಬೇಕು ಅಂತ.

ಆ ಭಗವಂತನ ಸೂಚನೆಯಂತೆನೇ ಪೌಂಡ್ರಕ ವಾಸುದೇವ ದ್ವಾರಕಾ ಪಟ್ಟಣದ ಮೇಲೆ ಆಕ್ರಮಣವನ್ನು ಮಾಡುವಂತಹ ಆಲೋಚನೆಯನ್ನು ಮಾಡುತ್ತಾ ಇದ್ದಾನೆ, ತನ್ನ ಎಲ್ಲ ರಾಜರುಗಳನ್ನು ಕರೆದು ಎಲ್ಲರ ಜೊತೆಗೆ ಸಮಾಲೋಚನೆಯನ್ನು ಮಾಡುತ್ತಾ ಇದ್ದಾನೆ, ದೊಡ್ಡ ಸಭೆಯನ್ನು ಮಾಡಿದ್ದಾನೆ. ವಸುದೇವನ ಮಗನೇ ಇವನು

ಪೌಂಡ್ರಕ ವಾಸುದೇವ. ಕಾಶಿ ರಾಜನ ಮಗಳು ವಸುದೇವ ಕಶ್ಯಪ, ಕಶ್ಯಪರ ಅವತಾರ, ಅದಿತಿ ದೇವಿಯೇ ದೇವಕಿಯಾಗಿ ಹುಟ್ಟಿದ್ದಾಳೆ, ಸುರಭಿ ಮೂಲರೂಪದಲ್ಲಿ ಕಶ್ಯಪರ ಪತ್ನಿಯಾದ ಸುರಭಿಯೇ ಇಲ್ಲಿ ರೋಹಿಣಿಯಾಗಿ ಬಲರಾಮನ ತಾಯಿಯಾಗಿ ಹುಟ್ಟಿದ್ದು, ಎಲ್ಲ ದೈತ್ಯರ ತಾಯಿಯಾದ ದಿತಿ ಅವಳು ಕಾಶಿ ರಾಜನ ಮಗಳಾಗಿ ಹುಟ್ಟಿದ್ದಳು. ಆ ಕಾಶಿ ರಾಜನ ಮಗಳಾದ ದಿತಿ ದೇವಿಯನ್ನು ವಸುದೇವ ಮದುವೆ ಮಾಡಿಕೊಂಡಿದ್ದಾನೆ, ಅವಳಲ್ಲಿ ಹುಟ್ಟಿದವನೇ ಈ ಪೌಂಡ್ರಕ ವಾಸುದೇವ. ಆದರೆ ಆ ಕಾಶಿ ರಾಜ ಒಂದು ಕರಾರಿನಿಂದ ತನ್ನ ಮಗಳನ್ನು ಕೊಟ್ಟಿದ್ದ ನನ್ನ ಮಗಳಲ್ಲಿ ಹುಟ್ಟುವ ಮಗನನ್ನು ನನಗೆ ಕೊಡಬೇಕು ಅಂತ. **'ಪುತ್ರಿಕಾ ಪುತ್ರ ಧರ್ಮ'** ಆ ಕರಾರಿನ ಪ್ರಕಾರ ದಿತಿಯ ಅವತಾರಳಾದ ಕಾಶಿ ರಾಜನ ಮಗಳಲ್ಲಿ ಹುಟ್ಟಿದ ಈ ಪೌಂಡ್ರಕ ವಾಸುದೇವನನ್ನು ಕಾಶಿ ರಾಜನಿಗೆ ಕೊಟ್ಟಿದ್ದ ವಸುದೇವ. ಆ ಕಾಶಿ ರಾಜನ ಮಗಳು ಈ ಪೌಂಡ್ರಕ ವಾಸುದೇವನ ತಾಯಿ, ಅವಳನ್ನೂ ತವರು ಮನೆಗೇನೆ ಕಳಿಸಿ ಬಿಟ್ಟಿದ್ದ, ಕಾರಣ ಮಕ್ಕಳೆಲ್ಲ ದೈತ್ಯರು ಅನ್ನುವುದಕ್ಕೆ.

ಅದರಂತೆ ಶೃಗಾಲ ವಾಸುದೇವ, ಅವನೂ ಕೂಡ ಕರವೀರಪುರದ ಕೊಲ್ಹಾಪುರದ ರಾಜನ ಮಗಳ ಮಗ. ಆ ಕೊಲ್ಹಾಪುರದ ರಾಜನ ಮಗಳು ಅಂದರೆ ಅವಳು ದನು, ದಾನವರ ತಾಯಿ ದನು ಕಶ್ಯಪರ ಹೆಂಡತಿ ಅವಳು ಅವತಾರ ಮಾಡಿದ್ದಾಳೆ. ಅವಳಲ್ಲಿ ಹುಟ್ಟಿದ ಶೃಗಾಲ ವಾಸುದೇವನನ್ನು ಕರವೀರಪುರದ ರಾಜನಿಗೇನೆ ಕೊಟ್ಟಿದ್ದ. ಆ ದನುವನ್ನೂ ಅಲ್ಲಿಗೆ ಕಳಿಸಿದ್ದ. ಆ ಶೃಗಾಲ ವಾಸುದೇವನ ಸಂಹಾರವಾದ ಚರಿತ್ರೆಯನ್ನು ಹಿಂದೆ ನೀವು ಕೇಳಿದ್ದೀರಿ. ಈಗ ಈ ಪೌಂಡ್ರಕ ವಾಸುದೇವ ಕಾಶಿ ರಾಜನ ಮಗಳ ಮಗ ಕಾಶಿ ಪಟ್ಟಣದಲ್ಲಿಯೇ ಇದ್ದು ತನ್ನ ಮಾತಾಮಹನ ಉತ್ತರಾಧಿಕಾರಿಯಾಗಿ ಅಲ್ಲಿ ರಾಜ್ಯವನ್ನು ಆಳುತ್ತಾ ಇರುವಂತಹ ವ್ಯಕ್ತಿ. ಅವನು ಯಾರು ಅಂದರೆ ಶ್ರೀಮದ್ಭಾಗವತದ ಚತುರ್ಥಸ್ಕಂಧದಲ್ಲಿ ಬರುತ್ತದೆ ಹಾಗೂ ಹರಿವಂಶದಲ್ಲಿಯೂ ಹಿಂದೆ ಬಂತು ವೇನ, ಅಂಗರಾಜನ ಮಗ ವೇನ. ಅತ್ಯಂತ ದುಷ್ಟ ನಾನೇ ದೇವರು ನನ್ನನ್ನು ಬಿಟ್ಟು ಪ್ರತ್ಯೇಕ ದೇವರಿಲ್ಲ, ಯಾರೂ ಯಜ್ಞ ಯಾಗಾದಿಗಳನ್ನು ಮಾಡಬೇಡಿ, ಶ್ರಾದ್ಧಾದಿಗಳನ್ನು ಮಾಡಬೇಡಿ ಅಂತ ಹೇಳುವಂತಹ ಮಹಾನಾಸ್ತಿಕ ಅಂತಹ ವೇನನೇ ಈಗ ಪೌಂಡ್ರಕ ವಾಸುದೇವನಾಗಿ ಹುಟ್ಟಿದ್ದಾನೆ. ವೇನನಾದಾಗ ಯಾವ ರೀತಿ ದೇವರಿಲ್ಲ, ನಾನೇ ದೇವರು ಪ್ರತ್ಯೇಕ ಯಜ್ಞ ಯಾಗ ಪೂಜೆಗಳು ಏನೂ ಬೇಡ, ಮಾಡುವುದಾದರೆ ನನಗೇ ಮಾಡಿ ಅಂತ ಹೇಳುತ್ತಾ ಇದ್ದನೋ ಈಗಲೂ ಅದನ್ನೇ ಮಾಡುತ್ತಾ ಇದ್ದಾನೆ. ದೊಡ್ಡ ಸಭೆ ಸೇರಿಸಿದ್ದಾನೆ ಎಲ್ಲಾ ರಾಜರು ಕುಳಿತಿದ್ದಾರೆ, ಬೇರೆ ಬೇರೆ ಜನರೆಲ್ಲ ಕುಳಿತಿದ್ದಾರೆ ಹೇಳುತ್ತಾನೆ ಶಂಖ ಚಕ್ರ ಗದಾ ಪದ್ಮಗಳನ್ನು ಧಾರಣೆ ಮಾಡಿದ ಶ್ರೀವತ್ಸ ಚಿಹ್ನವನ್ನು ಧಾರಣೆ ಮಾಡಿದಂತಹ ವಾಸುದೇವ ಅಂದರೆ ನಿಜವಾಗಿ ನಾನೇ. ಆ ಗೋಪಾಲಕ ಗೊಲ್ಲರವನು ವಾಸುದೇವ ಅಂತ ನೀವೆಲ್ಲಾ ಕರೆಯುತ್ತಾ ಇದ್ದೀರಿ ಇನ್ನು ಮೇಲೆ ಯಾರೂ ಅವನನ್ನು ವಾಸುದೇವ ಅಂತ ಹೇಳಲಿಕ್ಕಿಲ್ಲ, ಶಂಖ ಚಕ್ರ ಗದಾ ಪದ್ಮ ಧಾರಣೆ ಮಾಡಿದಂತಹ ವಾಸುದೇವ ಅಂದರೆ ನಾನೇ ವಾಸುದೇವ ಅಂತ ಇನ್ನು ಮೇಲೆ ಹೇಳಬೇಕು ಎಂಬುದಾಗಿ. ಶ್ರೀವತ್ಸ ಚಿಹ್ನ ಎಲ್ಲಿಂದ ಬರಬೇಕು ತಾನೇ ತನ್ನ ವಕ್ಷಸ್ಥಲ ಸ್ವಲ್ಪ ಸುಟ್ಟುಕೊಂಡು ಶ್ರೀವತ್ಸ ಚಿಹ್ನ ನನಗಿದೆ ಅಂತ ಗರುಡ ನಾನು ಗರುಡಾರೂಢ ಅಂತ ಹೇಳಿಕೊಳ್ಳುವುದಕ್ಕೆ ಒಂದು ಬಂಗಾರದ ಗರುಡನನ್ನು ಮಾಡಿಕೊಂಡಿದ್ದಾನೆ. ಬಂಗಾರದ ಕೃತ್ರಿಮ ಗರುಡ, ಮೈಸುಟ್ಟುಕೊಂಡು ಶ್ರೀವತ್ಸ ಚಿಹ್ನವಂತೆ ಇನ್ನು ಯಾವುದೋ ಆಟಿಕೆ ಸಾಮಾನುಗಳು ಇದ್ದ ಹಾಗೆ ಏನೋ ಕಬ್ಬಿಣದ್ದು ಅದು ಇದು ಬೇರೆ ಬೇರೆ ಲೋಹಗಳಿಂದ ಮಾಡಿದಂತಹ ಆಯುಧಗಳನ್ನು ಚಕ್ರ ಖಡ್ಗ ಅದೇ ರೀತಿ ಬತ್ತಳಿಕೆ ಬಾಣ ಶಾರಂಗ ಧನುಸ್ಸು, ಕೌಮೋದಕಿ ಗದಾ, ನಂದಕ ಖಡ್ಗ ಇವುಗಳೆಲ್ಲ ಕೃತಿಮವಾದದ್ದನ್ನು ಮಾಡಿಕೊಂಡು ನಾನೇ ವಾಸುದೇವ ಅಂತ ನೀವು ಎಲ್ಲ ಕಡೆಗೆ ಹೇಳಬೇಕು ಯಾರೂ ಆ ವಾಸುದೇವನನ್ನ ಅರ್ಥಾತ್ ಶ್ರೀಕೃಷ್ಣನನ್ನ ವಾಸುದೇವ ಅಂತ ಹೇಳಬಾರದು.

ವಾಸುದೇವೇತಿ ಮಾಂ ಬ್ರೂತ ನ ತು ಗೋಪಂ ಯದೂತ್ತಮಮ್ ॥ (91.14 ಭವಿಷ್ಯಪರ್ವ)

ಆ ಗೋಪಾಲಕನನ್ನ ಆ ವಾಸುದೇವನನ್ನ ಇನ್ನು ಮೇಲೆ ಕರೆಯಬಾರದು ಅಂತ ಒಂದು ಕರಾರು ಮಾಡಿದ. ಒಂದು ವೇಳೆ ನೀವೇನಾದರೂ ಕೃಷ್ಣನನ್ನು ವಾಸುದೇವ ಅಂತ ಕರೆದರೆ ಅವನನ್ನ ಶಂಖ ಚಕ್ರ ಗದಾ ಪದ್ಮಧಾರಿ ಶ್ರೀವತ್ಸ ಚಿಹ್ನಧಾರಿ ಅಂತ ಯಾರಾದರೂ ಕರೆದದ್ದೇ ಆದರೆ ಅವರಿಗೆ ದಂಡ ಹಾಕುತ್ತೇನೆ. ಏನು ದಂಡ ಎರಡು ಲಕ್ಷ ತೊಲೆ ಬಂಗಾರ ಕೊಡಬೇಕು ಅವರು **'ದಣ್ಡ್ಯಾ ಭಾರಶತೈಃ ಶತಮ್'**[1] ಅನ್ನುತ್ತಾರೆ ವ್ಯಾಖ್ಯಾನಕಾರರು **'ಭಾರಶತೈಃ ಶತಮ್'** ಅಂದರೆ **'ಅಯುತಂ'** ಅಂತ ಹೇಳುತ್ತಾರೆ. ಹತ್ತು ಸಾವಿರ ಭಾರ ಒಂದು ಭಾರ ಅಂದರೆ ಇಪ್ಪತ್ತು ತೊಲೆ ಎರಡು ಲಕ್ಷ ತೊಲೆ ಬಂಗಾರ ಅವರು ನಮಗೆ ಇಲ್ಲಿ ದಂಡವಾಗಿ ಕೊಡಬೇಕು, ಇಲ್ಲಾ ಅಷ್ಟು ಭಾರದ ಧಾನ್ಯವನ್ನಾದರೂ ಕೊಡಬೇಕು ಅಂತೂ ಅವರಿಗೆ ನಾನು ದಂಡವನ್ನು ಮಾಡುತ್ತೇನೆ ಅಂತ ಎಲ್ಲರಿಗೂ ಹೆದರಿಸಿದ್ದಾನೆ. ಸರಿ, ಕೆಲವರಿಗೆ ನಾಚಿಕೆ ಆಯಿತು ಏನು ಶ್ರೀಕೃಷ್ಣ ಪರಮಾತ್ಮನ ಯೋಗ್ಯತೆ ಏನು, ಇವನು ಏನು ಮಾತಾಡುತ್ತಾನೆ ನಿಜವಾದ ವಾಸುದೇವ ಸರ್ವೋತ್ತಮ ಸ್ವತಂತ್ರನಾದ ಆ ಭಗವಂತನನ್ನ ವಾಸುದೇವ ಅಂತ ಕರೆಯುವುದು ಬಿಟ್ಟು ಇವನನ್ನು ಯಾಕೆ ನಾವು ಕರೆಯಬೇಕು ಅಂತ ನಾಚಿಕೆಯಿಂದ ಇವನ ಎದುರಿಗೆ ಏನು ಮಾತನಾಡಲಿಕ್ಕೆ ಆಗದೆ ಬಹಳ ದುಷ್ಟ ಅಂತ ಹೆದರಿಕೆಯಿಂದ ಮುಖ ತಗ್ಗಿಸಿಕೊಂಡು ಕೂತಿದ್ದಾರೆ ಸಜ್ಜನರು. ಕೆಲವರು ಮಾತ್ರ ನೀನು ಹೇಳಿದ ಹಾಗೇನೆ ನಾವು ಮಾಡುತ್ತೇವೆ ಅಂತ ಒಪ್ಪಿಕೊಂಡಿದ್ದಾರೆ ಯುದ್ಧಕ್ಕಾಗಿಯೂ ಸಿದ್ದರಾಗಿದ್ದಾರೆ ಎಲ್ಲರೂ ಕೂಡ ಕಲವರು ದುಷ್ಟರು.

ಈ ಕಡೆಗೆ ಕೈಲಾಸದಲ್ಲಿ ಶ್ರೀಕೃಷ್ಣ ಪರಮಾತ್ಮನನ್ನು ರುದ್ರ ದೇವರು ಮಾಡಿದಂತಹ ಸ್ತೋತ್ರ, ಅದ್ಭುತವಾದ ಆ ರುದ್ರ ದೇವರ ಉಪನ್ಯಾಸ, ವಿಷ್ಣು ಸರ್ವೋತ್ತಮತ್ವ ಸಮರ್ಥನೆ ಮಾಡುವಂತಹ ರುದ್ರ ದೇವರ ಯುಕ್ತಿ ಬದ್ಧವಾದ, ಪ್ರಮಾಣ ಬದ್ಧವಾದಂತಹ ದಿವ್ಯವಾದ ಉಪದೇಶ ಅದೆಲ್ಲವನ್ನು ಕೇಳಿದಂತಹ ನಾರದರು ಸಂತೋಷದಿಂದ ಅಲ್ಲಿಂದ ನೇರವಾಗಿ ಪೌಂಡ್ರಕ ವಾಸುದೇವನ ಅರಮನೆಗೆ ಬಂದಿದ್ದಾರೆ ಕಾಶಿ ಪಟ್ಟಣಕ್ಕೆ. ನಾರದರು ಬಂದಿದ್ದಾರೆ ಅಂತ ಶ್ರೇಷ್ಠವಾದ ಶುಭ್ರವಾದ ಆಸನವನ್ನು ಹಾಕಿ ಆರ್ಘ್ಯಪಾದ್ಯಾದಿಗಳಿಂದ ಪೂಜೆಯನ್ನೆಲ್ಲ ಮಾಡಿದ್ದಾನೆ. ಪೂಜೆಯನ್ನು ಮಾಡಿ ನಾರದರಿಗೆ ಮತ್ತೆ ಇದೇ ಸಂದೇಶ ನಾರದರೇ, ನೀವಂತೂ ಇಡೀ ಜಗತ್ತಿನಲ್ಲಿ ಬ್ರಹ್ಮಾಂಡದೊಳಗೆ ಎಲ್ಲ ಕಡೆಗೆ ಸಂಚಾರ ಮಾಡುತ್ತೀರಾ.

ಭವಾನ್ ಸರ್ವತ್ರ ಕುಶಲಃ ಸರ್ವಕಾರ್ಯೇಷು ಪಣ್ಡಿತಃ ।
ಪ್ರಥಿತೋ ದೇವ ಸಿದ್ಧೇಷು ಗನ್ಧರ್ವೇಷು ಮಹಾತ್ಮಸು ॥ (92.5 ಭವಿಷ್ಯಪರ್ವ)
ಅಗಮ್ಯಂ ತವ ವಿಪ್ರೇನ್ದ್ರ ಬ್ರಹ್ಮಾಣ್ಡೇ ನ ಹಿ ಕಿಂಚನ ॥ (92.6 ಭವಿಷ್ಯಪರ್ವ)

ನಿಮಗೆ ಅಗಮ್ಯ ಸ್ಥಳ ಅಂತೇ ಇಲ್ಲ ಬ್ರಹ್ಮಾಂಡದೊಳಗೆ ಎಲ್ಲ ಕಡೆಗೂ ಸಂಚಾರ ಮಾಡುವ ಶಕ್ತಿ ನಿಮಗಿದೆ ಆದ್ದರಿಂದ ನಿಮಗೆ ನಾನು ಒಂದನ್ನು ಕೇಳಿಕೊಳ್ಳುತ್ತೇನೆ ಎಲ್ಲ ಕಡೆಗೂ ನಾನೇ ವಾಸುದೇವ ಅನ್ನುವ ಸಿದ್ಧಾಂತವನ್ನ ನೀವು ಪ್ರಚಾರ ಮಾಡಿ, ನಿಮಗೆ ದೊಡ್ಡ ಪುಣ್ಯ ಬರುತ್ತದೆ. ಶಂಖ ಚಕ್ರ ಗದಾ ಪದ್ಮಧಾರಿ ನಾನೇ ಅಂತ ಹೇಳಿ ಎಲ್ಲರಿಗೆ ಶಾಸ್ತಾ, ಮಹಾಬಲಿಷ್ಠ, ಅಜೇಯ, ಎಲ್ಲರಿಗೆ ಬೇಕಾದ ಇಷ್ಟಾರ್ಥಗಳನ್ನು ಕೊಡುವವ, ಅರಿಷ್ಟ ನಿವಾರಕ ಎಲ್ಲವೂ ನಾನೇ ಪೌಂಡ್ರಕ ವಾಸುದೇವನೇ ಅಂತ ಎಲ್ಲ ಕಡೆಗೆ ಹೇಳಿಕೊಂಡು ಹೋಗಬೇಕು ನೀವು ಅಂತ ಹೇಳಿದಾಗ

1. 91.15 ಭವಿಷ್ಯಪರ್ವ

ನಾರದರು ಅನ್ನುತ್ತಾರೆ. ನೀನು ಯಾರೋ ಕೆಲವು ಸಲ ನಾರದರು ಹೌದಪ್ಪ ನೀನೇ ನಿನ್ನ ಸಮಾನ ಯಾರು ಇಲ್ಲ ಅಂತ ಆ ತರಹವೂ ಮೋಹಕವಾದ ಮಾತುಗಳನ್ನು ಆಡುತ್ತಾರೆ ಈ ಸಂದರ್ಭದಲ್ಲಿ ಮೋಹಕ ಮಾತುಗಳನ್ನು ಆಡುತ್ತಾ ಇಲ್ಲ ನಾರದರು ನೇರವಾಗಿ ಹೇಳುತ್ತಾ ಇದ್ದಾರೆ.

ಮಹೀಂ ಶಾಸತಿ ದೇವೇಶೇ ಚಕ್ರಪಾಣೌ ಜನಾರ್ದನೇ ॥ (92.18 ಭವಿಷ್ಯಪರ್ವ)

ವಿಷ್ಣೌ ಸರ್ವತ್ರಗೇ ದೇವೇ ದುಷ್ಟಾನ್ ಹತ್ವಾ ನ ಸಜ್ಞಾನ್ವಾನ್ ।

ವಾಸುದೇವೇತಿ ಕೋ ನಾಮ ತಿಷ್ಠತ್ಯಸ್ಮಿನ್ ಹರಾವಿತಿ ॥ (92.19 ಭವಿಷ್ಯಪರ್ವ)

ಅಂತಹ ಸರ್ವೋತ್ತಮನಾದ ಸರ್ವಶಾಸ್ತ್ರವೂ ಆದ ಸರ್ವನಿಯಾಮಕನಾದ ಶ್ರೀಕೃಷ್ಣ ಪರಮಾತ್ಮ ವಾಸುದೇವ ಶಬ್ದವಾಚ್ಯನಾಗಿ

ವಾಸನಾತ್ ವಾಸುದೇವೋಸಿ ವಾಸಿತಂ ತೇ ಜಗತ್ರಯಮ್ । (ಹರಿಕಥಾಮೃತಸಾರ)

ಇಡೀ ಜಗತ್ತಿನಲ್ಲಿ ತಾನು ಸರ್ವತ್ರ ವ್ಯಾಪ್ತನಾಗಿದ್ದಾನೆ, ಮಹಾಲಕ್ಷ್ಮೀಯನ್ನು ಆರಂಭ ಮಾಡಿಕೊಂಡು ತೃಣ ಜೀವದವರೆಗೆ ಎಲ್ಲ ಚೇತನರಿಗೂ ವಾಸ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾನೆ, ವಾಸ ಮಾಡಿಸುತ್ತಾನೆ ಆದ್ದರಿಂದ ಆ ಪರಮಾತ್ಮನಿಗೆ ವಾಸುದೇವ ಎಂಬುದಾಗಿ ಹೇಳುತ್ತಾರೆ. **'ವಾ'** ಜ್ಞಾನ ರೂಪನಾಗಿದ್ದಾನೆ, **'ಸು'** ಇಡೀ ಜಗತ್ತಿನ ಸೃಷ್ಟಿಯನ್ನು ಮಾಡುತ್ತಾನೆ, **'ದೇ'** ಭಕ್ತರು ಬೇಡಿದ ಇಷ್ಟಾರ್ಥಗಳನ್ನು ಕೊಡುತ್ತಾನೆ, **'ವ'** ಬಲ ರೂಪನಾದದ್ದರಿಂದ ಅವನಿಗೆ **'ವಾ ಸು ದೇ ವ'** ಎಂಬುದಾಗಿ ಕರ್ಮನಿರ್ಣಯದಲ್ಲಿ ಶ್ರೀಮದಾರಾಚಾರ್ಯರು ಆ ವಾಸುದೇವ ಶಬ್ದಾರ್ಥವನ್ನು ತಿಳಿಸಿಕೊಡುತ್ತಾರೆ. ಅಂತಹ ವಾಸುದೇವ ಶಬ್ದವಾಚ್ಯನಾಗಿ ಇರುವಂತಹ ಪರಮಾತ್ಮ ಶ್ರೀಕೃಷ್ಣನು ಇರುವಾಗ ನೀನು ಯಾವನೋ ವಾಸುದೇವ ನಗುತ್ತಾರೆ ಅಷ್ಟೇ ನಿನ್ನನ್ನು ವಾಸುದೇವ ಅಂದರೆ, ಸುಮ್ಮನೇ ವಸುದೇವನ ಮಗ ಅನ್ನುವುದಕ್ಕೆ ವಾಸುದೇವ ಅಂತ ನಿನಗೆ ಕರೆಯುತ್ತಾರೆ ಅಷ್ಟೇ ಹೊರತು ನಿಜವಾದ ಶಂಕ ಚಕ್ರ ಗದಾ ಪದ್ಮಧಾರಿಯಾದಂತಹ ವಾಸುದೇವ ಶ್ರೀಕೃಷ್ಣನೇ ಇದರಲ್ಲಿ ಯಾವ ಸಂಶಯವೂ ಇಲ್ಲ. ನಿನಗೆ ಬಹಳ ಸೊಕ್ಕು ಬಂದಿದೆ ತಾಳು ಅತೀ ಶೀಘ್ರದಲ್ಲಿ ಶ್ರೀಕೃಷ್ಣ ಪರಮಾತ್ಮ ಬಂದು ನಿನ್ನ ದರ್ಪದ ಭಂಜನವನ್ನು ಮಾಡುತ್ತಾನೆ, ನಿನ್ನನ್ನು ಸಂಹಾರ ಮಾಡುತ್ತಾನೆ ಅಂತ ಸ್ಪಷ್ಟವಾಗಿ ಹೇಳಿ ನಾರದರು ಹೊರಟು ಬಿಟ್ಟಿದ್ದಾರೆ. ಇವನಿಗೆ ಸಿಟ್ಟು ಬಂತು ಸಿಟ್ಟು ಬಂದರೂ ಸ್ವಲ್ಪ ಭಯ ಇದೆ ನಾನು ಯುದ್ಧಕ್ಕೆ ಹೋಗಬೇಕು ದ್ವಾರಕಾ ಪಟ್ಟಣಕ್ಕೆ ಯುದ್ಧಕ್ಕೆ ಹೋಗಬೇಕಾದರೆ ನೀವು ಮೊದಲು ತಿಳಿದಿದ್ದೀರಿ ಕಾಲಯವನನಂತಹ ಮಹಾದುಷ್ಟನಾದ ವ್ಯಕ್ತಿಯೂ ಯುದ್ಧಕ್ಕೆ ಹೊರಡುವಾಗ ಅನೇಕ ಪುರೋಹಿತರ ಬ್ರಾಹ್ಮಣರ ಆಶೀರ್ವಾದವನ್ನು ಪಡೆದು ಪುಣ್ಯಾಹವಾಚನ ಮಾಡಿಸಿಕೊಂಡು ಯುದ್ಧಕ್ಕೆ ಹೋಗಿದ್ದಾನೆ ನನಗೆ ವಿಜಯ ಆಗಬೇಕು ಅಂತ ಆದರೆ ದೇವರ ವಿರುದ್ಧ ಹೊರಟಾಗ ಯಾವ ಪುಣ್ಯಾಹವಾಚನ ಮಾಡಿದರೂ ಏನೂ ನಡೆಯುವುದಿಲ್ಲ ಅದು ಬೇರೆ ವಿಷಯ. ಆದರೆ ಅಂಥವರಿಗೂ ಒಳಗೆ ಆ ಒಂದು ಭಯ, ಭೀತಿ ಇರುತ್ತದೆ ಆ ದೃಷ್ಟಿಯಲ್ಲಿ ಇವನಂದ ನೀವು ಏನಾದರೂ ಶಾಪ ಬೇರೆ ಕೊಡುತ್ತಿರಾ ಸುಮ್ಮನೆ ಹೋಗಿ ಇಲ್ಲಿಂದ ಎದ್ದು ಅಂತ ಅಂದ ಅಷ್ಟೇ ನಾರದರಿಗೆ ಬೇರೆ ಏನು ಮಾತಾಡಲಿಲ್ಲ.

ಗಚ್ಛ ತ್ವಂ ಕಾಮಮಥ ವಾ ಮುನೇ ಶಾಪಪ್ರದಃ ಸದಾ ॥ (93.2 ಭವಿಷ್ಯಪರ್ವ)

ಶಾಪ ಕೊಡುವಂತಹ ಸ್ವಭಾವ ಇರುತ್ತದೆ ನಿಮಗೆ ಮುನಿಗಳಿಗೆ ಆದ್ದರಿಂದ ಹೆಚ್ಚು ನೀವೂ ಮಾತನಾಡುವುದು ಬೇಡ, ನಾನು ಮಾತಾಡುವುದು ಬೇಡ, ನಿಮಗೆ ನನ್ನ ಬಗ್ಗೆ ಪ್ರಚಾರ ಮಾಡುವ ಇಚ್ಛೆ ಇಲ್ಲ ಅಂದರೆ ಬಿಡಿ, ಬೇಗ ಹೋಗಿ ಇಲ್ಲಿಂದ ಅಂತ ಅಂದ, ಆಯಿತು ನಿನ್ನ ಹತ್ತಿರ ಹೆಚ್ಚು ಕೂಡುವುದು ಬೇಕೆ ಆಗಿಲ್ಲ ಅಂತ ಹೊರಟರು. ನೇರವಾಗಿ ಬದರಿಕಾಶ್ರಮಕ್ಕೆ ಬಂದರು ಇನ್ನೂ ಶ್ರೀಕೃಷ್ಣ ಪರಮಾತ್ಮ ಬಂದಿಲ್ಲ. ಹಿಂದೆ ಕೇಳಿದ್ದೀರಿ ಮೂರು ದಿನದ ಪ್ರವಾಸ ಎರಡು ದಿನಗಳಾಗಿದೆ ಇನ್ನೂ ಬದರಿಕಾಶ್ರಮದಲ್ಲಿ ಇದ್ದಾನೆ ಪರಮಾತ್ಮ. ಆ ಬದರಿಕಾಶ್ರಮದಲ್ಲಿ ಇರುವಂತಹ ದೇವರಿಗೆ ದರ್ಶನ ಮಾಡಿ, ಸಾಷ್ಟಾಂಗ ಪ್ರಣಾಮ ಮಾಡಿ ಪ್ರಾರ್ಥನೆ ಮಾಡುತ್ತ ಇದ್ದಾರೆ ಈ ರೀತಿ ಮಹಾಉನ್ಮತ್ತನಾಗಿದ್ದಾನೆ ಪೌಂಡ್ರಕ ವಾಸುದೇವ, ಅವನಿಗೆ ಸರಿಯಾದ ಶಾಸನವನ್ನು ಮಾಡಬೇಕು ಅಂತ ಚಿಂತೆ ಮಾಡಬೇಡಿ ನಾಳೇನೆ ಅವನ ಕಥೆ ಮುಗಿಯಿತು. ನೀವು ಏನು ಚಿಂತೆ ಮಾಡಬೇಡಿ ಅಂತ ಪರಮಾತ್ಮ ನಾರದರಿಗೆ ಭರವಸೆಯನ್ನು ಕೊಟ್ಟಿದ್ದಾನೆ.

ಈ ಕಡೆಗೆ ಪೌಂಡ್ರಕ ವಾಸುದೇವ ಯುದ್ಧಕ್ಕೆ ಹೊರಟ ದ್ವಾರಕಾ ಪಟ್ಟಣಕ್ಕೆ. ಸಾವಿರಾರು ಕುದುರೆಗಳು,ಕೋಟಿ ಕೋಟಿ ಆಯುಧಗಳು ಶಸ್ತ್ರಾಸ್ತ್ರಗಳು, ಏಕಲವ್ಯ ಮೊದಲಾದ ರಾಜರು, ಎಂಟು ಸಾವಿರ ರಥಗಳು, ಹತ್ತು ಸಾವಿರ ಆನೆಗಳು, ಒಂದು ಅಬ್ಜ ಅರ್ಬುದ ಪದಾತಿಗಳು ಕಾಲಾಳುಗಳು ಇಷ್ಟೆಲ್ಲ ಜನರನ್ನು ಕರೆದುಕೊಂಡು ದ್ವಾರಕಾ ಪಟ್ಟಣದ ಮೇಲೆ ಮುತ್ತಿಗೆ ಹಾಕುತ್ತ ಇದ್ದಾನೆ. ಮೂರು ಅಕ್ಷೌಹಿಣೀ ಸೈನ್ಯ ಕರೆದುಕೊಂಡು ಬಂದಿದ್ದಾನೆ ದ್ವಾರಕಾ ಪಟ್ಟಣದ ಮೇಲೆ ಮುತ್ತಿಗೆ ಹಾಕುವುದಕ್ಕೆ ಆಗ ಅವನು ಬಂದಂತಹ ಕಾಲ ಯಾವುದು ಘಂಟಾಕರ್ಣ, ಕರ್ಣ ಪಿಶಾಚಿಗಳು ಹೇಗೆ ಮಧ್ಯ ರಾತ್ರಿಯಲ್ಲಿ ಜಪ ಮಾಡಲಿಕ್ಕೆ ಪ್ರಾರಂಭ ಮಾಡಿದವು ಅಂತ ಕೇಳದಿರಲ್ಲ ಅವರು ಪುಣ್ಯಾತ್ಮರು ಆದರೆ ಇವನು ಪಾಪಾತ್ಮ ಮಹಾದುಷ್ಟ ಮಧ್ಯರಾತ್ರಿಯಲ್ಲಿ ಯುದ್ಧಕ್ಕೆ ಬಂದಿದ್ದಾನೆ. ಆದು ಯುದ್ಧಕ್ಕೆ ಬರುವ ಸಮಯವೇ ಅಲ್ಲ ಆದು ಕಳ್ಳರು ಬರುವ ಸಮಯ ಆದು, ಪರಾಕ್ರಮಿಗಳಾದವರು ಬರುವಂತಹ ಸಮಯ ಅಲ್ಲ ಆದು. ಚೆನ್ನಾಗಿ ಬೆಳಕು ಇರುವಾಗ ಸೂರ್ಯೋದಯ ಆದಮೇಲೆ ಒಳ್ಳೆಯ ವಾದ್ಯ ವೈಭವಗಳಿಂದ ಬಂದಿದ್ದೇವೆ ಅಂತ ಹೇಳಿ ಯುದ್ಧ ಮಾಡಬೇಕು ನಿಜವಾಗಿ ಪರಾಕ್ರಮ ಇದ್ದರೆ. ಆದರೆ ಇವರು ಕಳ್ಳತನದಿಂದ ಮಧ್ಯರಾತ್ರಿಯಲ್ಲಿ ದೀಪಗಳನ್ನು ಹಿಡಿದುಕೊಂಡು ಬಂದು ಮುತ್ತಿಗೆ ಹಾಕಿದ್ದಾರೆ, ಆವಾಗ ಭೇರೀ ನಾದವನ್ನು ಬಾರಿಸುತ್ತಾ ಬನ್ನಿ ಧೈರ್ಯ ಇದ್ದರೆ ಯುದ್ಧಕ್ಕೆ ಬನ್ನಿ ಅಂತ ಕರೆಯುತ್ತ ಇದ್ದಾರೆ. ಉಗ್ರಸೇನ, ಸಾತ್ಯಕಿ, ಬಲರಾಮ ಏನೋ ಭಾರೀ ಭಾರೀ ಪರಾಕ್ರಮಿಗಳು ಅಂತ ಎಲ್ಲ ಹೇಳುಕೊಳ್ಳುತ್ತೀರಲ್ಲ ಯಾರಿದ್ದೀರಿ ಬನ್ನಿ ಅಂತ ಹೆಸರು ಕೊಟ್ಟು ಒದರುತ್ತ ಇದ್ದಾರೆ. ಯಾದವರಿಗೆ ಗೊತ್ತಾಯಿತು ಶ್ರೀಕೃಷ್ಣ ಪರಮಾತ್ಮ ಹೇಳಿದ್ದ ಪೌಂಡ್ರಕ ವಾಸುದೇವ ಬರುವ ಸಾಧ್ಯತೆ ಇದೆ ಅಂತ ಶ್ರೀಕೃಷ್ಣ ಪರಮಾತ್ಮ ಹೇಳಿದಂತೇನೆ ಆಯಿತು ಅಂತ ಹೇಳಿ ಮಧ್ಯರಾತ್ರಿ ಆಗಿದ್ದರೂ ಶ್ರೀಕೃಷ್ಣ ಪರಮಾತ್ಮನ ಆದೇಶದಂತೆ ಹಿಂದೆ ಮುಂದೆ ನೋಡದಂತೆ ಪ್ರಜೆಗಳ ರಕ್ಷಣೆ ಮಾಡಬೇಕು.

ನಾರಾಯಣ ದ್ವಿಟ್ ತದನುಬಂಧಿನಿಗ್ರಹಃ ಕ್ಷತ್ರಿಯಾಣಾಂ ।
ಪರಮೋಧರ್ಮಃ ತದ್ವಿರುದ್ಧಃ ಸರ್ವೋऽಪ್ಯಧರ್ಮಃ ॥

ಯಾರು ಭಗವಂತನ ದ್ವೇಷವನ್ನು ಮಾಡುತ್ತಾರೋ ಅಂತಹ ದುರ್ಜನರು ಹಾಗೂ ಅವರಿಗೆ ಸಹಾಯ ಮಾಡುವವರಿಗೆ ಚೆನ್ನಾಗಿ ಶಾಸನ ಮಾಡಲೇಬೇಕು, ಇದೇ ಧರ್ಮ ಅಂತಹ ಅಧರ್ಮವನ್ನು ಮಾಡುವವರಿಗೆ, ದ್ವೇಷ ಮಾಡುವವರಿಗೂ ಪ್ರೋತ್ಸಾಹನೆಯನ್ನು ನೀಡಿದರೆ ಉದಾಸೀನ ಮಾಡಿದರೆ ಅದೇ ದೊಡ್ಡ ಅಧರ್ಮ. ಇವನು ದೇವರು ಇಲ್ಲ, ಧರ್ಮ ಇಲ್ಲ ಅಂತ ಹೇಳುತ್ತಾನೆ ನಾಸ್ತಿಕ, ತಾನು ನಾಸ್ತಿಕನಾಗುವುದಲ್ಲ ಎಲ್ಲರನ್ನೂ ಮಾಸ್ತಿಕರನ್ನಾಗಿ

ಮಾಡುವ ಪ್ರಯತ್ನ ಮಾಡುತ್ತಾನೆ ಅಂತಹ ದುಷ್ಟವಾದ ಪ್ರವೃತ್ತಿ ಇರುವ ಪೌಂಡ್ರಕ ವಾಸುದೇವನನ್ನು ಚೆನ್ನಾಗಿ ಶಾಸನ ಮಾಡಲೇಬೇಕು ಇದೇ ನಮ್ಮ ದೊಡ್ಡ ಸೇವೆ, ಇದೇ ದೊಡ್ಡ ವಿಷ್ಣು ಪೂಜೆ ಅಂತ ತಿಳಿದು ಆ ಮಧ್ಯರಾತ್ರಿಯಲ್ಲಿಯೇ ಯಾವುದೇ ಭಯ ಇಲ್ಲದಂತೆ ಎಲ್ಲರೂ ಯುದ್ಧಕ್ಕೆ ಕವಚಾದಿಗಳನ್ನು ಧಾರಣೆ ಮಾಡಿಕೊಂಡು ಬಲರಾಮ, ಸಾತ್ಯಕಿ, ಕೃತವರ್ಮ, ಷಠ ಬಲರಾಮನ ಮಗ, ಉದ್ಧವ, ಉಗ್ರಸೇನ ಎಲ್ಲ ಯಾದವರು ಸಿದ್ಧರಾಗಿದ್ದಾರೆ ಆ ಪೌಂಡ್ರಕ ವಾಸುದೇವ ಇರುವಂತಹ ಸ್ಥಳಕ್ಕೆ ಬರುತ್ತಾ ಇದ್ದಾರೆ ದೀಪಗಳನ್ನು ಹಿಡಿದುಕೊಂಡು. ಯುದ್ಧ ಪ್ರಾರಂಭವಾಗಿದೆ ಕುದುರೆಯ ಮೇಲೆ ಕುಳಿತವರು ಪರಸ್ಪರವಾಗಿ ಯುದ್ಧ, ರಥದ ಮೇಲೆ ಕುಳಿತುವರು ಪರಸ್ಪರವಾಗಿ, ಆನೆಗಳ ಮೇಲೆ ಹೀಗೆ ಕಾಲಾಳುಗಳು ಆ ರೀತಿ ಪರಸ್ಪರ ದ್ವಂದ್ವ ಯುದ್ಧವನ್ನು ಮಾಡುತ್ತಾ ಇದ್ದಾರೆ ಘೋರವಾಗಿ ಇರುವಂತಹ ಯುದ್ಧ ನಡೆದಿದೆ. ಎಷ್ಟೋ ಜನರು ಪ್ರಾಣಗಳನ್ನು ಕಳೆದುಕೊಳ್ಳುತ್ತಾ ಇದ್ದಾರೆ, ಕೆಲವರು ಕೈಕಾಲುಗಳನ್ನು ಮುರಿದುಕೊಂಡು ಬೀಳುತ್ತ ಇದ್ದಾರೆ, ರಕ್ತದ ನದಿಯೇ ಹರೀತಾ ಇದೆ ಈ ರೀತಿ ಘನಘೋರವಾದ ಯುದ್ಧ ಪ್ರಾರಂಭವಾಗಿ ಹೋಯಿತು ರಾತ್ರಿ ಕೇವಲ ದೀಪದ ಬೆಳಕಿನಲ್ಲಿ,

ಅಷ್ಟರಲ್ಲಿ ಏಕಲವ್ಯ ಹಿಂದೆ ಕೇಳಿದ್ದೀರಿ ಅವನೂ ಶ್ರೀಕೃಷ್ಣನ ಚಿಕ್ಕಪ್ಪನ ಮಗ, ವಸುದೇವನ ತಮ್ಮನ ಮಗನೇ ಏಕಲವ್ಯ ಆದರೆ ಬೇರೆ ಕಡೆಗೆ ಬೆಳೆದಿರುತ್ತಾನೆ ಅನ್ನುವುದಕ್ಕೋಸ್ಕರ ಸ್ವಭಾವತಃ ಅಸುರ ಅಂತಹ ದುಷ್ಟ ಏಕಲವ್ಯನೂ ಕೂಡ ಭಾರೀ ಯುದ್ಧವನ್ನು ಮಾಡುತ್ತಾ ಇದ್ದಾನೆ. ಆ ರೀತಿ ಯುದ್ಧವನ್ನು ಮಾಡುತ್ತ ಇಲ್ಲಿ ಬಂದಂತಹ ಏನೇನು ಯಾದವರು ಇದ್ದರೋ ಷಠ ಅವನಿಗೆ ಇಪ್ಪತ್ತೈದು ಬಾಣಗಳನ್ನ, ಸಾರಣನಿಗೆ ಹತ್ತು, ಕೃತವರ್ಮನಿಗೆ ಐದು, ಉಗ್ರಸೇನನಿಗೆ ತೊಂಭತ್ತು, ಏಳು ಬಾಣಗಳಿಂದ ವಸುದೇವ, ಉದ್ಧವನಿಗೆ ಹತ್ತು, ಅಕ್ರೂರನಿಗೆ ಐದು ಈ ರೀತಿ ಒಬ್ಬರಾದ ಮೇಲೆ ಒಬ್ಬೊಬ್ಬರನ್ನ ತಾನು ಯುದ್ಧದಲ್ಲಿ ಸೋಲಿಸುತ್ತ ಇದ್ದಾನೆ ಏಕಲವ್ಯ ಬಾಣಗಳನ್ನು ಬಿಟ್ಟು. ಈ ರೀತಿ ಭಾರೀ ಪರಾಕ್ರಮವನ್ನು ಅವನು ತೋರಿಸುತ್ತಾ ಇರುವಾಗ ಸಾತ್ಯಕಿ ಬರುತ್ತಾ ಇದ್ದಾನೆ. ಈ ಕಡೆಗೆ ಆ ಏಕಲವ್ಯನ ಪರಾಕ್ರಮದಿಂದ ಭಯಗ್ರಸ್ಥರಾಗಿ ಎಲ್ಲರೂ ಕೂಡ ತಮ್ಮ ತಮ್ಮ ಶಿಬಿರಗಳಿಗೆ ಹೋಗಿದ್ದಾರೆ, ಮನೆಗಳಿಗೆ ಹೋಗಿದ್ದಾರೆ, ಮತ್ತೆ ಬಂದಿದ್ದಾರೆ ಪುನಃ ಯುದ್ಧಕ್ಕೆ, ಮಧ್ಯದಲ್ಲಿ ಸ್ವಲ್ಪ ಯುದ್ಧಕ್ಕೆ ವಿರಾಮ ಅಷ್ಟು ಭಾರಿ ಪರಾಕ್ರಮವನ್ನು ತೋರಿಸಿ ಎಲ್ಲರನ್ನು ಓಡಿಸಿ ಬಿಟ್ಟಿದ್ದಾನೆ. ಪುನಃ ಎಲ್ಲರೂ ಕೂಡ ದೀಪಗಳೆಲ್ಲ ಶಾಂತವಾಗಿ ಹೋದವು ಅಂತ ಪುನಃ ದೀಪಗಳನ್ನು ಹಚ್ಚಿಕ್ಕೊಂಡು ಮತ್ತೆ ಬೆಳಕು ಮಾಡಿಕೊಂಡು ಯುದ್ಧಕ್ಕೆ ಬಂದಿದ್ದಾರೆ ಎಲ್ಲರೂ ಕೂಡ. ಆಗ ಪೌಂಡ್ರಕ ವಾಸುದೇವ ಆ ಮಧ್ಯದಲ್ಲಿ ಹೇಳುತ್ತಾನೆ ಇವರೆಲ್ಲ ತಿರುಗಿ ಹೋದಾಗ ಸುಮ್ಮನೆ ಬಿಡಬೇಡಿ ಅಲ್ಲಲ್ಲಿರುವಂತಹ ಎಲ್ಲ ಪ್ರಾಕಾರಗಳನ್ನ ಗೋಪುರಗಳನ್ನ ಮಂದಿರಗಳನ್ನ ಭವನಗಳನ್ನ ಎಲ್ಲವನ್ನು ಧ್ವಂಸ ಮಾಡಿ, ಅಲ್ಲಿರುವಂತಹ ಎಲ್ಲ ಪದಾರ್ಥಗಳನ್ನು ಸ್ವೀಕಾರ ಮಾಡಿ, ದಾಸ ದಾಸಿಯರನ್ನ ಸ್ವೀಕಾರ ಮಾಡಿ, ಕನ್ನಿಕೆಯರನ್ನು ಸ್ವೀಕಾರ ಮಾಡಿ.

ಗೃಹ್ಯನ್ತಾಂ ಕನ್ಯಕಾಃ ಸರ್ವಾ ದಾಸ್ಯಶ್ಚೈವ ಸಮನ್ತತಃ ॥ (95.5 ಭವಿಷ್ಯಪರ್ವ)

ಹಣ ಏನು ಕೈಗೆ ಸಿಗುತ್ತೋ ಎಲ್ಲವನ್ನು ತೆಗೆದುಕೊಂಡು ಅಪಹಾರ ಮಾಡಿಕೊಂಡು ಹೊರಟು ಬಿಡಿ ಅಂತ ತನ್ನ ಸೈನಿಕರಿಗೆಲ್ಲ ಆದೇಶ ಮಾಡುತ್ತ ಇದ್ದಾನೆ. ಆಗ ಸಾತ್ಯಕಿ ಹೇಳುತ್ತಾನೆ ಮಹಾಚೋರ ನೀನು ಮಧ್ಯರಾತ್ರಿಯಲ್ಲಿ ಬಂದು ಯುದ್ಧವನ್ನು ಮಾಡಿ ಎಲ್ಲವನ್ನು ಅಪಹಾರ ಮಾಡಿಕೊಂಡು ಹೋಗುತ್ತೇನೆ ಅಂತ ಹೇಳುತ್ತೀಯಲ್ಲ, ನಾವು ಅಷ್ಟು ಸುಲಭವಾಗಿ ಬಿಡುವುದಿಲ್ಲ ಶ್ರೀಕೃಷ್ಣ ಪರಮಾತ್ಮ ನಮಗೆ ಆಜ್ಞೆಯನ್ನು ಮಾಡಿದ್ದಾನೆ ದ್ವಾರಕಾ ಪಟ್ಟಣದ ರಕ್ಷಣೆಯನ್ನು ಮಾಡುವುದಕ್ಕೆ ಅಂತ ಸಾತ್ಯಕಿ ಭಾರೀ ಪರಾಕ್ರಮಿಯಾಗಿ ಬರುತ್ತಾನೆ ನೋಡಿ.

ಮಯಿ ಸರ್ವಂ ಸಮಾರೋಪ್ಯ ಕೇಶವೋ ಯಾದವೇಶ್ವರಃ ।

ಗತಃ ಕೈಲಾಸಶಿಖರಂ ದ್ರಷ್ಟುಂ ಶಂಕರಮವ್ಯಯಮ್ ॥ (95.10 ಭವಿಷ್ಯಪರ್ವ)

ಕೃಷ್ಣ ಕೈಲಾಸಕ್ಕೆ ಹೋಗುವಾಗ ದ್ವಾರಕಾ ಪಟ್ಟಣವನ್ನು ಚೆನ್ನಾಗಿ ನೋಡಿಕೊಳ್ಳಿ ಅಂತ ನಮಗೆ ಹೇಳಿದ್ದಾನೆ. ನೀವು ಸಾತ್ಯಕಿಯ ಬಗ್ಗೆ ಕೇಳುವಾಗ ತಿಳಿದಿದ್ದೀರಿ ಸಾತ್ಯಕಿ ಇವನು ಕೃಷ್ಣಪಕ್ಷ ಅಭಿಮಾನಿ ದೇವತೆ, ಗರುಡ ದೇವರ ಆವೇಶ, ವಿಷ್ಣುವಿನ ಆವೇಶ, ಸಂವಹ ಎಂಬ ಮರುತ್ ಇದ್ದಾನೆ, ಸುದರ್ಶನ ಚಕ್ರದ ಆವೇಶ ಅಂತ ಪಂಚ ಮೂರ್ತಿ ಅವನು. ಹಾಗಾದರೆ ಕೃಷ್ಣ ಪರಮಾತ್ಮ ಸಾತ್ಯಕಿಗೆ ದ್ವಾರಕೆಯನ್ನ ಚೆನ್ನಾಗಿ ನೋಡಿಕೊಳ್ಳಬೇಕೆಂಬ ಜವಾಬ್ದಾರಿಯನ್ನು ಕೊಟ್ಟಿದ್ದಾನೆ ಅನ್ನುವುದರ ಅರ್ಥ ಎಷ್ಟಾಗುತ್ತೆ ಅಂದರೆ ಒಂದು ಸಾತ್ಯಕಿಯಲ್ಲಿ ವಿಷ್ಣುವಿನ ಆವೇಶವೇ ಇದೆ. ಹಾಗಾದರೆ ದ್ವಾರಕಾ ಪಟ್ಟಣದ ರಕ್ಷಣೆಯ ಜವಾಬ್ದಾರಿಯನ್ನು ದೇವರು ತಾನೇ ತೆಗೆದುಕೊಂಡಿದ್ದಾನೆ ಅಂತೇ ಅರ್ಥ ಸಾತ್ಯಕಿಗೆ ಒಪ್ಪಿಸಿದ್ದಾನೆ ಅಂದರೆ, ಬಲರಾಮ ದೇವರಿಗೆ ಒಪ್ಪಿಸಿದ್ದಾನೆ ಅಂದರೆ ತಾನೇ ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾನೆ ಒಂದು ರೂಪದಿಂದ. ಪರಮಾತ್ಮ ಕೈಲಾಸ, ಬದರಿಕಾಶ್ರಮಗಳಲ್ಲಿದ್ದರೆ ಒಂದು ರೂಪದಿಂದ ದ್ವಾರಕಾ ಪಟ್ಟಣದಲ್ಲಿ ಬಲರಾಮ ದೇವರಲ್ಲಿ ಶುಕ್ಲಕೇಶಾವೇಶ, ಸಾತ್ಯಕಿಯಲ್ಲಿಯೂ ವಿಷ್ಣುವಿನ ಆವೇಶ ಹೀಗಾಗಿ ತನ್ನ ರೂಪದಿಂದಲೇ ತಾನು ದ್ವಾರಕಾ ಪಟ್ಟಣದ ರಕ್ಷಣೆಯನ್ನು ಮಾಡುತ್ತಾ ಇದ್ದಾನೆ ಅಂತ ಒಂದು ಅರ್ಥ. ಇನ್ನೊಂದು ಪೌಂಡ್ರಕ ವಾಸುದೇವ ಇದೀಗ ನೀವು ತಿಳಿದ ಹಾಗೆ ನಾಸ್ತಿಕ್ಯ ನಾನೇ ದೇವರು, ದೇವರು ಬೇರೆ ಇಲ್ಲ ಅಂತ ಹೇಳುವಂಥವನು ಅಂತಹ ನಾಸ್ತಿಕನಾದ ಪೌಂಡ್ರಕ ವಾಸುದೇವನನ್ನು ನಿರಾಕರಣೆ ಮಾಡುವುದಕ್ಕೆ, ದೂಷಣೆ ಮಾಡುವುದಕ್ಕೆ, ಅವನಿಗೆ ಶಾಸನ ಮಾಡುವುದಕ್ಕೆ ಸಾತ್ಯಕಿಗೆ ಒಪ್ಪಿಸುತ್ತಾ ಇದ್ದಾನೆ ಅಂದರೆ ಗರುಡ ದೇವರಿಗೆ ಒಪ್ಪಿಸುತ್ತಾ ಇದ್ದಾನೆ ಅಂತ ಅರ್ಥ. ಗರುಡ ದೇವರು ಅಂದರೆ ವೇದಗಳು, ವೇದಾದಿ ಸಕಲ ಸಚ್ಛಾಸ್ತ್ರಾದಿಗಳ ಮೂಲಕ ನಾಸ್ತಿಕ್ಯವಾದ ನಿರಾಸನನ್ನ ಮಾಡುವುದಕ್ಕೆ ಪರಮಾತ್ಮ ಆ ರೀತಿ ಮಾಡುತ್ತಾ ಇದ್ದಾನೆ. ನಿಜವಾಗಿ ವೇದಾದಿ ಸಚ್ಛಾಸ್ತ್ರಗಳ ಅಧ್ಯಯನವನ್ನು ಚೆನ್ನಾಗಿ ಭಾಷ್ಯಾನುಗುಣವಾಗಿ ನಾವು ಮಾಡಿದರೆ ಶುದ್ಧವಾದ ಶ್ರೀಮದಾಚಾರ್ಯರಂತಹ ಶ್ರೀಮದಾಚಾರ್ಯರ ಭಾಷ್ಯ ಅದಕ್ಕೂ ಪೂರ್ವದಲ್ಲಿ ವಾಯು ದೇವರು ಮೊದಲಾದ ಜ್ಞಾನಿಗಳು ಮಾಡಿದಂತಹ ಏನು ವ್ಯಾಖ್ಯಾನಗಳು ಇವೆ ಅವುಗಳಿಗೆ ತಕ್ಕಂತೆ ವೇದಗಳ ಅರ್ಥವನ್ನು ತಿಳಿದರೆ ನಾಸ್ತಿಕ್ಯವಾದ ನಿರಾಸವಾಗುತ್ತದೆ ಅನ್ನುವುದರ ಸೂಚನೆ ಸಾತ್ಯಕಿಗೆ ಪರಮಾತ್ಮ ಆ ಪೌಂಡ್ರಕ ವಾಸುದೇವನನ್ನು ಚೆನ್ನಾಗಿ ನೋಡಿಕೋ ಅಂತ ಹೇಳುವ ಮೂಲಕ ಸೂಚನೆ ಮಾಡಿದ್ದಾನೆ ಅಂತ ನಾವು ಭಾವಿಸಬೇಕು.

ಆ ರೀತಿ ಸಾತ್ಯಕಿ ಬಂದಿದ್ದಾನೆ ಯುದ್ಧಕ್ಕೋಸ್ಕರ, ದಾರುಕ ಸಿದ್ಧಮಾಡಿ ಇಟ್ಟಂತಹ ರಥದಲ್ಲಿ ತಾನೇ ಸ್ವತಃ ರಥವನ್ನ ಕೈಯಲ್ಲಿ ತೆಗೆದುಕೊಂಡಿದ್ದಾನೆ, ತಾನೇ ಸಾರಥಿ, ತಾನೇ ಯೋದ್ಧ ಭಾರೀ ಕವಚ ಕುಂಡಲಾದಿಗಳನ್ನು ಧಾರಣ ಮಾಡಿಕೊಂಡು ಪರಮಾತ್ಮನ ಸ್ಮರಣೆಯನ್ನು ಮಾಡಿ ಸಾತ್ಯಕಿ ಬಂದಿದ್ದಾನೆ, ಬಲರಾಮ ದೇವರು ಉದ್ಧವಾದಿಗಳು ಎಲ್ಲರೂ ಪೂರ್ವದ್ವಾರಕ್ಕೆ ಬಂದು ಯುದ್ಧವನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದರು. ನೋಡಿ, ಇದೀಗ ತಿಳಿದ ಹಾಗೆ ಆ ಸಾತ್ಯಕಿ ಮೊಟ್ಟಮೊದಲು ಉಪಯೋಗಿಸಿದ ಅಸ್ತ್ರ ವಾಯುವ್ಯಾಸ್ತ್ರ ಆ ವಾಯುವ್ಯಾಸ್ತ್ರವನ್ನು ಬಿಟ್ಟದ್ದೇ ತಡ ಅಷ್ಟು ಜೋರಾಗಿ ಗಾಳಿ ಬೀಸಿದೆ ಗಾಬರಿಯಾಗಿದ್ದಾರೆ, ಪೌಂಡ್ರಕ ವಾಸುದೇವ ಎಲ್ಲಿದ್ದಾನೆ ಏನು ಅಂತ ಗೊತ್ತಾಗದೇ ಇರುವ ಹಾಗೆ ಏನೆಲ್ಲಾ ಆ ಪೌಂಡ್ರಕ ವಾಸುದೇವನ ದೊಡ್ಡ ಸೈನ್ಯ ಇಕ್ಕೋ ಆ ಸೈನ್ಯ ನಿಂತ ಸ್ಥಳದಿಂದ ಎಷ್ಟೋ ದೂರ ಹಾರಿ ಹೋಗಿ ಎಲ್ಲಿಯೋ ಹೋಗಿ ಬಿದ್ದಿದ್ದಾರೆ. ಈ ಕಡೆಗೆ ಪೌಂಡ್ರಕ ವಾಸದೇವ ಎಲ್ಲಿದ್ದಾನೆ ಅಂತ ಹುಡುಕಿಕೊಂಡು ಬರುತ್ತಾ ಇದ್ದಾನೆ ಸಾತ್ಯಕಿ ಪರಸ್ಪರವಾಗಿ ಯುದ್ಧ ಪ್ರಾರಂಭವಾಗಿದೆ. ಜಗತ್ ಸ್ವಾಮಿಯಾಗಿರುವಂತಹ ಪರಮಾತ್ಮನನ್ನ ಬಾಯಿಗೆ ಬಂದ ಹಾಗೆ ನಿಂದೆ ಮಾಡುತ್ತಿದ್ದಿ, ನಾನೇ ವಾಸುದೇವ ಅಂತ ಹೇಳಿಕೊಳ್ಳುತ್ತೀಯಾ.

ಜಿಹ್ವಾ ತೇ ಶತಧಾ ಧೀರ್ಯಾದ್ ದದತಾಸಾದೃಶಂ ವಚಃ ॥ (96.3 ಭವಿಷ್ಯಪರ್ವ)

ನಿನ್ನ ನಾಲಿಗೆ ನೂರಾರು ಸಾವಿರಾರು ಹೋಳಾಗಿ ಸೀಳಿ ಬೀಳಬೇಕು, ನಾಚಿಕೆ ಬರುವುದಿಲ್ಲ ನಿನಗೆ, ಇಂತಹ ಪಾಪಿಷ್ಟ ಅಯೋಗ್ಯ ನಿನ್ನ ಯೋಗ್ಯತೆ ಏನು, ದೇವರ ಯೋಗ್ಯತೆ ಏನು ಅಂತಹ ಸರ್ವೋತ್ತಮನಾದ ಭಗವಂತ ನಾನೇ ಅಂತ ಹೇಳಿಕೊಳ್ಳುತ್ತಿಯಲ್ಲ.

ಏಕ ಏವ ಜಗನ್ನಾಥಃ ಕರ್ತಾ ಸರ್ವಸ್ಯ ಸರ್ವಗಃ ।

ದುರಾತ್ಮನ್ ಸರ್ವಥಾ ದೇವೋ ಭವಿಷ್ಯತಿ ನ ಸಂಶಯಃ ॥ (96.6 ಭವಿಷ್ಯಪರ್ವ)

ಏಷ ತೇಽಹಂ ಶಿರಃ ಕಾಯಾತ್ ಪಾತಯಿಷ್ಯಾಮಿ ರಾಜಕ । (96.7 ಭವಿಷ್ಯಪರ್ವ)

ನಿನ್ನ ತಲೆ ಕೆಳಗೆ ಬೀಳಿಸಿ ಸಂಹಾರ ಮಾಡಿ ಬಿಡುತ್ತೇನೆ ಸಿದ್ಧನಾಗು ಯುದ್ಧಕ್ಕೆ ಅಂತ ಹೇಳಿ ಯುದ್ಧವನ್ನು ಪ್ರಾರಂಭ ಮಾಡಿದ್ದಾನೆ. ಪ್ರಾರಂಭ ಮಾಡಿದ್ದೆ ಒಂದು ಜೋರಾಗಿ ಪೌಂಡ್ರಕ ವಾಸದೇವನ ಮೇಲೆ ಬಾಣವನ್ನು ಬಿಟ್ಟರೆ ಅತೀ ಬಿಸಿ ಬಿಸಿಯಾದ ರಕ್ತವನ್ನು ಕಾರಿ ಕಾರಿ ಕೆಳಗೆ ಬಿದ್ದಿದ್ದಾನೆ ಪೌಂಡ್ರಕ ವಾಸದೇವ ಅಷ್ಟು ಜೋರಾಗಿ ಬಾಣವನ್ನು ಬಿಟ್ಟಿದ್ದಾನೆ ಸಾತ್ಯಕಿ. ಏನು ಪರಾಕ್ರಮ ಇರುತ್ತೆ ನೋಡಿ ಆ ಎಲ್ಲ ದೈತ್ಯರಿಗೂ ಕೂಡ ದೇವತೆಗಳಿಗೂ ಸರಿ, ದೈತ್ಯರಿಗೂ ಸರಿ ಅಂತಹ ರಕ್ತವನ್ನು ಕಾರಿ ಕೆಳಗೆ ಬಿದ್ದರೆ ಏನು ಆಸ್ಪತ್ರೆಗೆ ಹೋಗಿ ಸೇರಿಕೊಂಡು ಬಿಡಲಿಲ್ಲ ಅಷ್ಟೇ ಸ್ವಲ್ಪ ಸುಧಾರಿಸಿಕೊಂಡು, ಒಂದು ಕ್ಷಣ ವಿರಾಮ ಮಾಡಿದ್ದು ಮತ್ತೆ ಯುದ್ಧಕ್ಕೆ ಸಿದ್ಧರಾಗುತ್ತ ಇದ್ದರು. ಪುನಃ ಒಂಭತ್ತು ಹತ್ತು ಬಾಣಗಳಿಂದ ಸಾತ್ಯಕಿಯನ್ನು ಹೊಡೆಯುತ್ತ ಇದ್ದಾನೆ, ನಾರಾಚ ಕಬ್ಬಿಣದಿಂದ ಮಾಡಿದಂತಹ ಬಾಣವನ್ನು ಜೋರಾಗಿ ತೆಗೆದುಕೊಂಡು ಸಾತ್ಯಕಿಗೆ ಹೊಡೆದರೆ, ಸಾತ್ಯಕಿಗೆ ಸ್ವಲ್ಪ ಹೊತ್ತು ಮೂರ್ಛೆ ಬಂದಂತೆ ಆಗಿದೆ ನಿಶ್ಚೇಷ್ಟನಾಗಿ ರಥದಲ್ಲಿ ಕುಳಿತಿದ್ದಾನೆ. ಪುನಃ ಸಿದ್ಧನಾಗಿದ್ದಾನೆ ಸಾರಥಿಯನ್ನು ಇಪ್ಪತ್ತೈದು ಬಾಣಗಳಿಂದ ಹೊಡೆದಿದ್ದಾನೆ, ಹತ್ತು ಬಾಣಗಳಿಂದ ಸಾರಥಿಯನ್ನ,ಇಪ್ಪತ್ತೈದು ಬಾಣಗಳಿಂದ ಕುದುರೆಗಳನ್ನ ಈ ರೀತಿ ಸಾತ್ಯಕಿಯ ಸಾರಥಿ, ಕುದುರೆಗಳು ರಥ ಎಲ್ಲವನ್ನೂ ಧ್ವಂಸ ಮಾಡಿದ್ದಾನೆ ಪೌಂಡ್ರಕ ವಾಸುದೇವ ಆದರೂ ಇವನೇನು ಹೆದರಿಲ್ಲ ಅತ್ಯಂತ ಧೈರ್ಯದಿಂದ ಪುನಃ ಯುದ್ಧವನ್ನು ಮಾಡುತ್ತಾ ಇದ್ದಾನೆ. ಆಮೇಲೆ ಜೋರಾಗಿ ಬಾಣವನ್ನ ಬಿಟ್ಟು ಅವನು ಮತ್ತೆ ರಕ್ತವನ್ನು ಕಾರುವಂತೆ ಮಾಡುತ್ತಾ ಇದ್ದಾನೆ, ಹಲ್ಲಾಯುಧದಿಂದ ಅವನ ಧ್ವಜವನ್ನ ನಾಶ ಮಾಡಿ ಅವನ ರಥವನ್ನ,ಅವನ ಸಾರಥಿಯನ್ನ ಎಲ್ಲವನ್ನೂ ಧ್ವಂಸ ಮಾಡಿದ್ದಾನೆ ಸಾತ್ಯಕಿ, ಚಕ್ರವನ್ನು ಬಿಟ್ಟರೆ ಅದನ್ನು ಪುಡಿ ಪುಡಿ ಮಾಡಿ ಹಾಕಿದ್ದಾನೆ ಅಂತಹ ಮಹಾಪರಾಕ್ರಮಿ ಈ ರೀತಿ ಸಾತ್ಯಕಿ ಅವನು ಬಿಡುವಂತಹ ಎಲ್ಲಾ ಬಾಣಗಳನ್ನ, ಎಲ್ಲಾ ಆಯುಧಗಳನ್ನು ನಾಶ ಮಾಡುತ್ತಾ ಇದ್ದಾನೆ. ಕೊನೆಗೆ ಪೌಂಡ್ರಕ ವಾಸುದೇವ ಗದೆಯನ್ನು ತೆಗೆದುಕೊಂಡು ಯುದ್ಧ ಮಾಡುತ್ತಾ ಇದ್ದಾನೆ ಪರಸ್ಪರವಾಗಿ ಯುದ್ಧವನ್ನು ಮಾಡುತ್ತಾ ಇದ್ದಾರೆ. ಈ ಕಡೆಗೆ ಗದೆಯನ್ನೇ ತೆಗೆದುಕೊಂಡು ಜೋರಾಗಿ ಪೌಂಡ್ರಕ ವಾಸುದೇವನನ್ನ ಸಾತ್ಯಕಿ ಹೊಡೆದಿದ್ದಾನೆ, ಸಾತ್ಯಕಿಗೆ ಪೌಂಡ್ರಕ ವಾಸುದೇವ ಹೊಡೆಯುತ್ತ ಇದ್ದಾನೆ ಗದಾ ಯುದ್ಧ ನಡೆಯುತ್ತ ಇದೆ. ನಾನಾ ತರಹದ ಯುದ್ಧವನ್ನು ಮಾಡುತ್ತಾ ಇದ್ದಾರೆ. ಬರೀ ಗದೆಗಳಿಂದ ಯುದ್ಧ, ಮೊದಲು ಬಾಣ ಯುದ್ಧ ಆಯಿತು ಆಮೇಲೆ ಗದಾ ಯುದ್ಧ ಮಾಡಿದ್ದಾರೆ, ತಲ ಯುದ್ಧ ಅಂತ ಕೇವಲ ಹಸ್ತ ತಲದಿಂದ ಒಬ್ಬರಿಗೊಬ್ಬರು ಹೊಡೆದು ಕೊಳ್ಳುವುದು, ಜಾನು ಯುದ್ಧ ಕೇವಲ ಮೊಳಕಾಲಿನಿಂದ ಹೊಡೆದಾಡುವುದು, ಬಾಹು ಯುದ್ಧ ಎದೆಯಿಂದ ಎದೆಗೆ ಗುದ್ದುವುದು ಹೀಗೆ ಉರೋ ಯುದ್ಧ ಅಂತ.

ಜಾನುಭ್ಯಾಂ ಮುಷ್ಠಿಭಿಶ್ಚೈವ ಬಾಹುಭ್ಯಾಂ ಶಿರಸಾ ತದಾ । (97.15 ಭವಿಷ್ಯಪರ್ವ)

ತಲೆ ತಲೆ ಗಟ್ಟಿಸಿಕೊಳ್ಳುವುದು ಬಾಹುಗಳಿಗೆ ಮುಷ್ಠಿಗಳಿಂದ ಮೊಳಕಾಲಿನಿಂದ ಎದೆಯಿಂದ ಕೈಗಳಿಂದ ತಲಗಳಿಂದ ಹೀಗೆ ಈ ರೀತಿ ನಾನಾ ರೀತಿಯ ಯುದ್ಧಗಳನ್ನು ಮಾಡಿದ್ದಾರೆ. ಎಂತಹ ಪರಾಕ್ರಮಿ ನೋಡಿ ಒಬ್ಬನೇ ಒಬ್ಬ ಸಾತ್ಯಕಿ ಆ ಪೌಂಡ್ರಕ ವಾಸುದೇವನನ್ನು ಎದುರಿಸುತ್ತಾ ಇದ್ದಾನೆ. ಈ ರೀತಿ ಅವರಿಬ್ಬರಲ್ಲಿ ಘನಘೋರವಾಗಿರುವಂತಹ ಯುದ್ಧ ನಡೆಯುತ್ತಾ ಇದೆ.

ಈ ಕಡೆಗೆ ಏಕಲವ್ಯ, ಏಕಲವ್ಯ ಯುದ್ಧವನ್ನು ಮಾಡುತ್ತಾ ಇದ್ದಾನೆ ಬಲರಾಮ ದೇವರ ಜೊತೆಗೆ ಭಾರೀ ಯುದ್ಧವನ್ನು ಮಾಡುತ್ತಾ ಇದ್ದಾನೆ. ಜೋರಾಗಿ ಖಡ್ಗವನ್ನು ಎಸೆದರೆ ಪುಡಿ ಪುಡಿಯಾಗಿ ಮಾಡಿ ಹಾಕಿದ್ದಾರೆ ಬಲರಾಮ ದೇವರು ಅವನ ಖಡ್ಗವನ್ನ, ಮತ್ತೊಂದು ಖಡ್ಗವನ್ನು ತೆಗೆದುಕೊಂಡ ಅದನ್ನೂ ಧ್ವಂಸ ಮಾಡಿದ್ದಾರೆ. ಶಕ್ತಿ ಎಂಬ ಆಯುಧ, ಭಾರೀ ಆಯುಧ ಅದಕ್ಕೆ ಅನೇಕ ಘಂಟೆಗಳು ಅಂತಹ ಘಂಟೆಗಳಿಂದ ಕೂಡಿದ ಶಕ್ತಿ ಎಂಬ ಆಯುಧವನ್ನ ಬಲರಾಮ ದೇವರ ಮೇಲೆ ಎಸೆಯುತ್ತಾನೆ. ಏನು ಆಗಬೇಕು ಬಲರಾಮ ದೇವರಿಗೆ ಆ ಶಕ್ತಿ ಎಂಬ ಆಯುಧವನ್ನೇ ಕೈಯಲ್ಲಿ ತೆಗೆದುಕೊಂಡು ಮತ್ತೆ ಅದರಿಂದಲೇ ಜೋರಾಗಿ ಏಕಲವ್ಯನನ್ನ ಹೊಡೆದಿದ್ದಾರೆ, ಎಲ್ಲರಿಗೂ ಆಶ್ಚರ್ಯವೇ ಆಶ್ಚರ್ಯ. ಅಂತಹ ಘೋರವಾದ ಶಕ್ತ್ಯಾಯುಧವನ್ನ ಬರೀ ತಡಿಯೋದಲ್ಲ, ಭೇಧನ ಮಾಡುವುದಲ್ಲ ಅದನ್ನೇ ಕೈಯಲ್ಲಿ ಹಿಡಿದುಕೊಂಡು ತಿರುಗಿ ಎಸೆದು ಅವನ ಮೇಲೆ ಪ್ರಹಾರ ಮಾಡುತ್ತಾರಲ್ಲ ಅದ್ಭುತವಾದ ಪರಾಕ್ರಮ ಅಂತ ಎಲ್ಲರೂ ಹೊಗಳಿದ್ದಾರೆ ಬಲರಾಮ ದೇವರನ್ನ. ಎಂಭತ್ತೆಂಟು ಸಾವಿರ ಜನರನ್ನ ತನ್ನ ಅನುಚರರನ್ನ ಸೈನಿಕರನ್ನ ಕರೆದುಕೊಂಡು ಬಂದಿದ್ದಾನೆ ಏಕಲವ್ಯ ಒಬ್ಬನೇ ಬಂದಿಲ್ಲ ಅವನು ಎಂಭತ್ತೆಂಟು ಸಾವಿರ ಜನ ಅವನ ಸೈನಿಕರು ಆ ಎಲ್ಲ ಸೈನಿಕರನ್ನು ಕೂಡ ಬಲರಾಮ ದೇವರು ಕ್ಷಣ ಮಾತ್ರದಲ್ಲಿ ನಾಶ ಮಾಡಿದ್ದಾರೆ.

ಕ್ಷಣೇನ ತನ್ಮಹಾರಾಜ ಹತ್ವಾ ಸರ್ವಾನ್ ಮಹಾಬಲಾನ್ ॥ (98.23 ಭವಿಷ್ಯಪರ್ವ)

ಅವರೇನು ಸಾಮಾನ್ಯರಿರಲಿಲ್ಲ ಒಬ್ಬೊಬ್ಬರು ಮಹಾಪರಾಕ್ರಮಿಗಳು ಅಂತಹ ಪರಾಕ್ರಮಿಗಳಾದ ಎಂಭತ್ತೆಂಟು ಸಾವಿರ ಜನರನ್ನ ಶುಕ್ಲಕೇಶಾವೇಶದಿಂದ ಕೂಡಿದಂತಹ ಶೇಷಾವತಾರರಾದ ಬಲರಾಮ ದೇವರು ಅತ್ಯಂತ ಅನಾಯಾಸವಾಗಿ ನಾಶ ಮಾಡಿ ಹಾಕಿದ್ದಾರೆ. ನೋಡಿ ಆ ಕಡೆಗೆ ಸಾತ್ಯಕಿ ಗರುಡನ ಆವೇಶದಿಂದ ಕೂಡಿದ ಸಾತ್ಯಕಿ ವೇದಾದಿ ಶಾಸ್ತ್ರಗಳ ಪ್ರತೀಕ ಈ ಕಡೆಗೆ ಬಲರಾಮ ದೇವರು ಶೇಷ ದೇವರು ಪೌರುಷೇಯವಾದ ಗ್ರಂಥಗಳ ಅಭಿಮಾನಿ ದೇವತೆಗಳು, ಇತಿಹಾಸ ಪುರಾಣಗಳ ಸ್ಮೃತಿ ಗ್ರಂಥಗಳ, ಪೌರುಷೇಯ ಗ್ರಂಥಗಳ ಪ್ರತೀಕ. ಈ ಪೌರುಷೇಯವಾದ ಅಪೌರುಷೇಯವಾದ ಎಲ್ಲ ಸದಾಗಮಗಳಿಂದಲೂ ಕೂಡ ಈ ನಾಸ್ತಿಕ್ಯವಾದದ ನಿರಾಸ ದೇವರು ಸರ್ವೋತ್ತಮ ಅಲ್ಲ, ನಾನೇ ದೇವರು ಅಂತ ಹೇಳುವಂತಹ ವಾದದ ನಿರಾಸವನ್ನ ಭಗವಂತ ಮಾಡಿಸುತ್ತ ಇದ್ದಾನೆ ಅನ್ನುವುದರ ಪ್ರತೀಕ ಈ ಸಾಂಕೇತಿಕವಾಗಿ ನಾವು ಈ ಯುದ್ಧದಿಂದ ತಿಳಿಯಬೇಕು ಅಂತಹ ಭಾರೀ ಯುದ್ಧವನ್ನ ಬಲರಾಮ ದೇವರು ಮಾಡಿದ್ದಾರೆ. ಇವರೆಲ್ಲರ ಈ ಯುದ್ಧದ ಸಂದರ್ಭದೊಳಗೆ ಲಾಭ ಆದದ್ದು ಪಿಶಾಚಗಳಿಗೆ ಭೂತಗಳಿಗೆ ರಾಕ್ಷಸರಿಗೆ ಹದ್ದುಗಳಿಗೆ ನಾಯಿಗಳಿಗೆ ನರಿಗಳಿಗೆ ಅಷ್ಟು ಮಾಂಸ ಸಿಕ್ಕಿದೆ, ಅಷ್ಟು ರಕ್ತ ಸಿಕ್ಕಿದೆ ಎಂದೂ ಜನ್ಮದೊಳಗೆ ನೋಡಲಿಕ್ಕೆ ಸಾಧ್ಯ ಇಲ್ಲ ಅವು.

ರಾಕ್ಷಸಾಶ್ಚ ಪಿಶಾಚಾಶ್ಚ ಪಿಬನ್ತಃ ಶೋಣಿತಂ ಬಹು ।
ಆಶಿಖಂ ಭುಞ್ಜತೇ ರಾಜನ್ಭವಸ್ಯ ಪಿಶಿತಾಶನಾಃ ॥ (99.2 ಭವಿಷ್ಯಪರ್ವ)

ಕಾಲಿನಿಂದ ತಲೆಯವರೆಗೆ ಕೂದಲಷ್ಟು ಬಿಟ್ಟರೆ ಇನ್ನೆಲ್ಲಾ ತಿನ್ನುತ್ತಿದ್ದವಂತೆ **'ಆಶಿಖಂ ಭುಞ್ಜತೇ ರಾಜಞ್ಛವಸ್ಯ ಪಿಶಿತಾಶನಾಃ'** ಈ ರೀತಿ ಆ ಘನಘೋರವಾದಂತಹ ಯುದ್ಧದೊಳಗೆ ಆ ಎಲ್ಲ ಪಶು ಪಕ್ಷಿ ಪ್ರಾಣಿಗಳಿಗೆ ಹಾಗೂ ಭೂತ ಪ್ರೇತ ಪಿಶಾಚಾದಿಗಳಿಗೆ ದೊಡ್ಡ ಹಬ್ಬ ಉತ್ಸವ. ಈ ಯುದ್ಧ ನಡೆಯುತ್ತ ಇದೆ ಗದಾ ಯುದ್ಧ ನಡೆಯುತ್ತ ಇದೆ ಪೌಂಡ್ರಕ-ಸಾತ್ಯಕಿ, ಈ ಕಡೆಗೆ ಏಕಲವ್ಯ ಹಾಗೂ ಬಲರಾಮ ದೇವರು ಯುದ್ಧವನ್ನು ಮಾಡುತ್ತ ಇದ್ದಾರೆ ಘೋರವಾದ ಯುದ್ಧವನ್ನ.

ಇಷ್ಟರೊಳಗೆ ಈ ಕಡೆಗೆ ಪರಮಾತ್ಮ ಆ ಎರಡನೆಯ ರಾತ್ರಿಯನ್ನು ಬದರಿಕಾಶ್ರಮದಲ್ಲಿ ಕಳೆದಿದ್ದ ಬದರಿಕಾಶ್ರಮದಿಂದ ಇನ್ನು ದ್ವಾರಕಾ ಪಟ್ಟಣಕ್ಕೆ ಹೊರಡಬೇಕು ಪುನಃ ತನ್ನ ಪ್ರಾತಾಃಹ್ನಿಕಗಳನ್ನು ಮುಗಿಸಿಕೊಂಡು ಅಲ್ಲಿರುವ ಮುನಿಗಳಿಗೆಲ್ಲ ನಮಸ್ಕಾರ ಮಾಡಿದಂತೆ ನಾಟಕ ಮಾಡಿ, ವಸ್ತುತಃ ಅವರಿಂದಲೇ ಸ್ತುತನಾಗಿ ಅವರಿಗೆ ಆಶೀರ್ವಾದವನ್ನು ಮಾಡಿ ಗರುಡಾರೂಢನಾಗಿ ಪರಮಾತ್ಮ ಬರುತ್ತಾ ಇದ್ದಾನೆ ದ್ವಾರಕಾ ಪಟ್ಟಣಕ್ಕೆ. ಬರುತ್ತಾ ಇರುವಾಗ ಪಾಂಚಜನ್ಯ ಶಂಖದ ದ್ವನಿಯನ್ನು ಮಾಡಿದ್ದಾನೆ ನೋಡಿ ಆ ಘೋರವಾಗಿರುವಂತಹ ಯುದ್ಧದ ವಾತಾವರಣದಲ್ಲಿ ಶ್ರೀಕೃಷ್ಣ ಪರಮಾತ್ಮನ ಪಾಂಚಜನ್ಯ ಶಂಖದ ದ್ವನಿ ಕೇಳಿಸಿದ್ದೇ ತಡ ಎಲ್ಲ ಯಾದವರಿಗೆ ಶಕ್ತಿ ಬಂದಿದೆ, ಉತ್ಸಾಹ ಬಂದಿದೆ ಕೃಷ್ಣ ಬಂದ ಇನ್ನೇನು ಚಿಂತೆ ಇಲ್ಲ ಅನ್ನುವಂತಹ ಧೈರ್ಯ ಎಲ್ಲರ ಮನಸ್ಸಿನಲ್ಲಿ ಮೂಡಿದೆ.

ನಿರ್ಭಯಾಃ ಸಮಪದ್ಯನ್ತ ವೃಷ್ಣಯೋ ಯಾದವಾಶ್ಚ ತೇ । (100.10 ಭವಿಷ್ಯಪರ್ವ)

ಆ ಪಾಂಚಜನ್ಯ ಶಂಖದ ದ್ವನಿ ಕೇಳಿಸಿದೆ ಇನ್ನೂ ಕೃಷ್ಣ ಕಂಡಿಲ್ಲ, ಗರುಡನ ದೊಡ್ಡದಾದ ರೆಕ್ಕೆಗಳು ಕಾಣಿಸುತ್ತ ಇವೆ ಅದರ ಮೇಲೆ ಕೃಷ್ಣ ಪರಮಾತ್ಮ ಕುಳಿತಿದ್ದಾನೆ ಅವರಿಗೆ ಮೊದಲಿಗೆ ಕೃಷ್ಣ ಕಾಣಿಸಿಲ್ಲ, ಗರುಡ ಕಾಣಿಸಿದಾಗ ಇನ್ನಷ್ಟು ಧೈರ್ಯ ಆಮೇಲೆ ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮನ ದರ್ಶನವಾಗಿದೆ ಸೂತಮಾಗದ ಬಂಧಿಗಳೆಲ್ಲ ಭಗವಂತನ ಸ್ತೋತ್ರವನ್ನು ಮಾಡುತ್ತಾ ಇದ್ದಾರೆ. ಯಾದವರೆಲ್ಲ ಸುತ್ತುವರೆದಿದ್ದಾರೆ ಆ ಯುದ್ಧದಲ್ಲಿ ತೊಡಗಿದ ಯಾದವರು ಅದನ್ನು ಅಷ್ಟಕ್ಕೇ ನಿಲ್ಲಿಸಿ ಓಡಿ ಬಂದಿದ್ದಾರೆ ಕೃಷ್ಣನ ದರ್ಶನಕ್ಕಾಗಿ. ಅಷ್ಟರೊಳಗೆ ಅಂತಹ ಅವಸರದೊಳಗೆ ಯುದ್ಧದ ಗಡಿಬಿಡಿಯೊಳಗೆ ಇಷ್ಟು ಘೋರ ಯುದ್ಧ ನಡೆದಿದೆ ಆದರೆ ಪರಮಾತ್ಮ ಅಂತಹ ಸಂದರ್ಭದಲ್ಲಿಯೂ ವ್ಯವಹಾರ ನೋಡಿ ಹೇಗೆ. ಅಲ್ಲಿಂದ ಇಲ್ಲಿ ಗರುಡ ಕರೆದುಕೊಂಡು ಹೋದ ಬದರಿಕಾಶ್ರಮಕ್ಕೆ ಕೈಲಾಸಕ್ಕೆ ಮತ್ತೆ ಕರೆದುಕೊಂಡು ಬಂದ ಅವನನ್ನು ಹಾಗೆ ಅಲ್ಲಿಯೇ ನಿಲ್ಲಿಸಿ ಯುದ್ಧಕ್ಕೆ ಬಂದು ಬಿಡಲಿಲ್ಲ ಕೃಷ್ಣ ಆ ಗರುಡನನ್ನ ಚೆನ್ನಾಗಿ ಮಾತನಾಡಿಸಿ ನಿನ್ನ ಕೆಲಸ ಆಯಿತು ನೀನು ಸ್ವರ್ಗಕ್ಕೆ ಹೋಗಬಹುದು ಅಂತ.

ಇತ್ಯುಕ್ತ್ವಾ ಗರುಡಂ ವಿಷ್ಣುರ್ವಿಸೃಜ್ಯ ಯದುನನ್ದನಃ ॥ (100.13 ಭವಿಷ್ಯಪರ್ವ)

ದಾರುಕನಿಗೆ ಕರೆದ ರಥವನ್ನು ತೆಗೆದುಕೋ ದಾರುಕ ನಡಿ ಯುದ್ಧಕ್ಕೆ ಮನೆಗೆ ಹೋಗುವುದೇ ಬೇಡ ನಡಿ ರಣರಂಗಕ್ಕೆ ಅಂತ ಹೇಳಿದ್ದಾನೆ. ಪೌಂಡ್ರಕ ವಾಸುದೇವ ಕೃಷ್ಣನನ್ನ ನೋಡಿದ್ದೆ ತಡ ಉತ್ಸಾಹ ಬಂತು ಅವನಿಗೆ ಯುದ್ಧಕ್ಕೆ ಸಾತ್ಯಕಿಯನ್ನು ಬಿಟ್ಟು ಕೃಷ್ಣನ ಹತ್ತಿರ ಓಡಿ ಬಂದರೆ, ಸಾತ್ಯಕಿ ಭಾರೀ ಹಠಿ ಅವನು ನನ್ನನ್ನು ಬಿಟ್ಟು ಹೇಗೆ ಯುದ್ಧಕ್ಕೆ ಹೋಗುತ್ತಿದ್ದಿ ನನ್ನನ್ನು ಸೋಲಿಸದೇ ನನ್ನನ್ನು ಬಿಟ್ಟು ನೀನು ಹೋಗುವಂತಿಲ್ಲ, ಸೋಲಿಸಬೇಕು ಆಮೇಲೆ ಮುಂದೆ ಹೋಗಬೇಕು. ಅವನು ಕೇಳಲಿಲ್ಲ ಹೊರಟು ಬಿಟ್ಟ ಪೌಂಡ್ರಕ ವಾಸುದೇವ ನೀನು ಬೇಡ ಕೃಷ್ಣನ ಜೊತೆಗೆ ಯುದ್ಧ ಆಡುತ್ತಿನಿ ಅಂತ ಸಾತ್ಯಕಿ ಹಾರಿ ಬಂದು ಪೌಂಡ್ರಕ ವಾಸುದೇವನ ಮುಂದೆ ನಿಲ್ಲುತ್ತಾನೆ. ನೀನು ಹೇಗೆ ಮುಂದೆ ಹೋಗುತ್ತೀ ಕೃಷ್ಣ ಮಹಾಪರಾಕ್ರಮಿ, ಸರ್ವೋತ್ತಮ, ಸರ್ವಜ್ಞ, ಅನಂತ ಬಲ ಆದರೆ ಅವನ ಭಕ್ತನಾದ ನನ್ನನ್ನು

ಸೋಲಿಸು ಮೊದಲು ಸಾಕು ಆಮೇಲೆ ನೀನು ಅವನನ್ನು ಸೋಲಿಸು. ಆಗ ಕೃಷ್ಣ ಅಂದ ಹೋಗಲಿ ಬಿಡು ನಿನಗೆ ಅವನನ್ನು ಸೋಲಿಸುವ ಶಕ್ತಿ ಸಾಮರ್ಥ್ಯಗಳು ಇರಬಹುದು ಆದರೆ ಅವನು ಬಂದು ಯುದ್ಧ ಆಡುತ್ತೇನೆ ಅಂತ ಬರುತ್ತಾನೆ ಬರಲಿ, ಎಲ್ಲಿಯೋ ಒಂದು ಕಡೆ ಸಾಯುತ್ತಾನೆ ಸಾಯಲಿ, ನೀನ್ಯಾಕೆ ಅಷ್ಟು ಚಿಂತೆ ಮಾಡುತ್ತೀಯಾ ಬಿಟ್ಟು ಬಿಡು ಅವನನ್ನ ಅಂತ ಕೃಷ್ಣ ಪರಮಾತ್ಮ ಯಾವಾಗ ಆದೇಶ ಮಾಡಿದ ಆಗ ಸಾತ್ಯಕಿ ಶಿರಸಾವಹಿಸಿ ತಾನು ದೂರ ನಿಂತಿದ್ದಾನೆ. ಕೃಷ್ಣನ ಜೊತೆಗೆ ಯುದ್ಧ ಮಾಡುವುದಕ್ಕೆ ಅವನು ಬಂದ, ಬಂದವನೇ ಬಂದು ಮತ್ತೆ ಇಷ್ಟು ಹೊತ್ತು ಎಲ್ಲರ ಜೊತೆಗೆ ಏನು ಮಾತನಾಡುತ್ತಾ ಇದ್ದನೋ ಅದನ್ನೇ ಮಾತನಾಡಿದ್ದಾನೆ.

ಶ್ರೀಮದಾಚಾರ್ಯರು ತಾತ್ಪರ್ಯ ನಿರ್ಣಯದಲ್ಲಿ ಹೇಳುತ್ತಾರೆ ಈ ಮಧ್ಯದಲ್ಲಿ ಶ್ರೀಕೃಷ್ಣ ಪರಮಾತ್ಮ ಅವನನ್ನು ಮೊದಲು ಸೋಲಿಸುತ್ತಾನೆ, ಸೋಲಿಸಿದಾಗ ಅವನು ತಿರುಗಿ ತನ್ನ ಪಟ್ಟಣಕ್ಕೆ ಹೋಗುತ್ತಾನೆ ಹೋಗಿ ಮತ್ತೆ ಬರುತ್ತಾನೆ ಎಲ್ಲಾ ಮತ್ತೆ ಸಿದ್ಧ ಮಾಡಿಕೊಂಡು. ಆಗ ಮಧ್ಯದಲ್ಲಿ ತಾನು ಊರಿಗೆ ಹೋಗಿ ದೂತನನ್ನು ಕೊಟ್ಟು ಕಳಿಸುತ್ತಾನೆ ಶ್ರೀಕೃಷ್ಣನಿಗೆ ತನ್ನ ಶಂಖ ಚಕ್ರ ಗದಾ ಪದ್ಮ ಮತ್ತು ತನ್ನ ವಸುದೇವ ಎಂಬ ಹೆಸರು ಎಲ್ಲವನ್ನೂ ಬಿಟ್ಟು ಕೊಡು ಅಂತ ಹೇಳು ಇಲ್ಲದೇ ಇದ್ದರೇ ಒಳ್ಳೆಯದು ಆಗಲಿಕ್ಕಿಲ್ಲ ಅಂತ. ಈ ಮಧ್ಯದಲ್ಲಿ ದೂತನನ್ನು ಕೊಟ್ಟು ಕಳಿಸಿದರೆ ಕೃಷ್ಣ ಹೇಳುತ್ತಾನೆ ಅವಶ್ಯವಾಗಿ ಕೊಡುತ್ತೇನೆ ಬಾ ಯುದ್ಧದಲ್ಲಿಯೇ ಕೊಡುತ್ತೇನೆ ಮನೆಯಲ್ಲಿ ಕೊಡಲಿಕ್ಕೆ ಆಗುವುದಿಲ್ಲ ರಣರಂಗಕ್ಕೆ ಬಾ. ಆ ರಣರಂಗದೊಳಗೇನೆ ನನ್ನ ಶಂಖ ಚಕ್ರ ಗದ ಪದ್ಮ ಆಯುಧ ನನ್ನ ಹೆಸರು ಎಲ್ಲಾ ನಿನಗೆ ಬಿಟ್ಟು ಕೊಡುತ್ತೇನೆ ಮಹಾರಾಯ ಬಾರಪ್ಪ ಅಂತ ಉಪಹಾಸವನ್ನು ಮಾಡಿ ಕೃಷ್ಣ ಹೇಳಿ ಕಳಿಸುತ್ತಾನೆ. ಆಮೇಲೆ ಅವನು ಮತ್ತೆ ಯುದ್ಧಕ್ಕೆ ಬಂದಾಗ ಶ್ರೀಕೃಷ್ಣ ಪರಮಾತ್ಮನ ಜೊತೆಗೆ ಘೋರವಾಗಿರುವಂತಹ ಯುದ್ಧವನ್ನು ಮಾಡುತ್ತಾನೆ, ಏನೇನೋ ಬಯ್ಯುತ್ತಾನೆ ಬಾಯಿಗೆ ಬಂದ ಹಾಗೆ ನೀಚ ನೀನೆಲ್ಲ ಸ್ತ್ರೀಹತ್ಯೆಯನ್ನು ಮಾಡಿದ್ದಿ, ಗೋಹತ್ಯೆಯನ್ನು ಮಾಡಿದ್ದಿ. ಎಲ್ಲ ಗೋವುಗಳನ್ನ ರಕ್ಷಣೆ ಮಾಡಿದ್ದಾನೆ ಭಗವಂತ, ಎಲ್ಲ ಬಾಲಕರನ್ನ ರಕ್ಷಣೆ ಮಾಡಿದ್ದಾನೆ, ಸ್ತ್ರೀಯರನ್ನ ರಕ್ಷಣೆ ಮಾಡಿದ್ದಾನೆ, ವೃದ್ಧರನ್ನ ರಕ್ಷಣೆ ಮಾಡಿದ್ದಾನೆ ಅಂತಹ ಪರಮಾತ್ಮನನ್ನ ನೀನು ಗೋಹತ್ಯೆಯನ್ನು ಮಾಡಿದವನು, ಸ್ತ್ರೀಹತ್ಯೆಯನ್ನು ಮಾಡಿದವನು ಹಾಗೇ ಹೀಗೇ ಅಂತ ಏನೇನೋ ಬಯ್ಯುತ್ತಾನೆ. ಕರುವಿನ ರೂಪದಲ್ಲಿ ಒಬ್ಬ ದೈತ್ಯ ಬಂದಿದ್ದ ವತ್ಸಾಸುರ,ಎತ್ತಿನ ರೂಪದಲ್ಲಿ ಒಬ್ಬ ಅಸುರ ಬಂದಿದ್ದ ಅರಿಷ್ಟಾಸುರ ಅಂತ ಅವರ ಸಂಹಾರವನ್ನು ಪರಮಾತ್ಮ ಮಾಡಿದ್ದಾನೆ ಆದರೆ ಅವುಗಳು ನಿಜವಾದ ಗೋ ಅಲ್ಲ ಅದು, ನಿಜವಾದ ಅಸುರರು ಆ ವೇಷದಲ್ಲಿ ಬಂದದ್ದಕ್ಕೆ ಪರಮಾತ್ಮ ಅವರನ್ನ ಸಂಹಾರ ಮಾಡಿದ್ದಷ್ಟೇ. ಎಲ್ಲ ಗೋವುಗಳ ರಕ್ಷಣೆ ಮಾಡುವಂತಹ ಗೋಪಾಲಕೃಷ್ಣ ಪರಮಾತ್ಮ ಅಂತಹ ಭಗವಂತನನ್ನು ಈ ದುಷ್ಟ ಈ ರೀತಿಯಾಗಿ ನಿಂದೆ ಮಾಡುತ್ತಾ ಇದ್ದಾನೆ. ಇವತ್ತಿನ ಕಾಲದ ಅನೇಕ ಜನ ನಾಸ್ತಿಕರು ಹಾಗೆ ಗುಣಗಳನ್ನ ನೋಡದೆ ಏನೇನೋ ದೋಷಗಳನ್ನ ಭಗವಂತನಲ್ಲಿ ಹೇಳಿ ತಮ್ಮ ಬಾಯಿಯನ್ನು ಹೊಲಸು ಮಾಡಿಕೊಳ್ಳುತ್ತಾರೆ, ತಮಗೆ ಯೋಗ್ಯವಾದ ದುರ್ಗತಿಗೆ ಸಾಧನವನ್ನು ತಾವು ಮಾಡಿಕೊಳ್ಳುತ್ತಾರೆ ಹಾಗೆ ಆ ಪೌಂಡ್ರಕ ವಾಸುದೇವ ಏನೇನೋ ಬಯ್ಯುತ್ತಾ ಇದ್ದಾನೆ. ಆಗ ಪರಮಾತ್ಮ ಹೇಳಿದ ಏನು ಚಕ್ರ ನಿನ್ನದು ಸುಮ್ಮನೇ ಯಾವುದೋ ಒಂದು ಕಬ್ಬಿಣವನ್ನ ಗುಂಡಾಗಿ ಕತ್ತರಿಸಿ ತೆಗೆದುಕೊಂಡು ಬಂದು ಚಕ್ರ ಅಂತ ಅಂತೀಯಲ್ಲ ಹೆಸರಿಗೆ ಚಕ್ರ ಅದು. ನನಗೆ ಗೋಪ ಅಂತ ಯಾಕೆ ಕರೆಯುತ್ತಾರೆ ಗೊತ್ತಾ ಪರಮಾತ್ಮ ಸ್ವಯಂ ಹೇಳುತ್ತಾನೆ.

ಗೋಪೋಽಹಂ ಸರ್ವದಾ ರಾಜನ್ ಪ್ರಾಣಿನಾಂ ಪ್ರಾಣದಃ ಸದಾ । (100.41 ಭವಿಷ್ಯಪರ್ವ)

ಗೋಪ ಅಂದರೆ ಗೋ ಗೋವುಗಳನ್ನ ಪಾಲನೆ ಮಾಡುವ ಗೊಲ್ಲರವ ಅನ್ನುವುದಂತೂ ಸರಿ ಅಷ್ಟು ಮಾತ್ರ ಅಲ್ಲ **'ಗೋಪಾಯತೀತಿ ಗೋಪಃ'** ಎಲ್ಲರನ್ನ ಇಡೀ ಜಗತ್ತನ್ನೇ ರಕ್ಷಣೆ ಮಾಡುತ್ತೇನೆ ಅನ್ನುವುದಕ್ಕೆ ನನಗೆ ಗೋಪ ಅನ್ನುತ್ತಾರೆ.

ಗೋಪ್ತಾ ಸರ್ವೇಷು ಲೋಕೇಷು ಶಾಸ್ತಾ ದುಷ್ಟಸ್ಯ ಸರ್ವದಾ ॥ (100.41 ಭವಿಷ್ಯಪರ್ವ)

ನಿಮ್ಮಂತಹ ದುಷ್ಟರ ಶಾಸನ ಮಾಡುವುದಕ್ಕೆ, ಸಜ್ಜನರ ಗೋಪ ಗೋಪನ ರಕ್ಷಣೆ ಮಾಡುವುದಕ್ಕೆ ನಾನು ಅವತಾರ ಮಾಡಿದ್ದು ಅದಕ್ಕಾಗಿ ನನ್ನನ್ನು ಗೋಪ ಅಂತ ಕರೆಯುತ್ತಾರೆ. ನಿನಗೇನಾದರೂ ನನ್ನ ಆಯುಧಗಳು ಬೇಕು ಬೇಕು ಅಂತ ಹೇಳಿ ಕಳಿಸಿದ್ದೆ ಅಲ್ಲ ದೂತರಿಂದ, ನನ್ನನ್ನು ಸಂಹಾರ ಮಾಡು ಆಮೇಲೆ ಆಯುಧಗಳನ್ನು ತೆಗೆದುಕೋ ಬಾ ಯುದ್ಧಕ್ಕೆ ಹೆಚ್ಚು ಮಾತನಾಡಬೇಡ ಅಂತ ಕೃಷ್ಣ ಗದ್ದರಿಸಿದ್ದಾನೆ. ಒಂದು ಜೋರಾಗಿ ಬಾಣವನ್ನು ಹೊಡೆದಿದ್ದಾನೆ ನೋಡಿ ಶ್ರೀಕೃಷ್ಣ ಪರಮಾತ್ಮ ಪೌಂಡ್ರಕ ವಾಸುದೇವನಿಗೆ ತತ್ತರಿಸಿ ಹೋದ ಆದರೂ ಮತ್ತೆ ಸುಧಾರಿಸಿಕೊಂಡು ಕೃಷ್ಣನ ಮೇಲೆ ಹತ್ತು ಬಾಣಗಳ ಪ್ರಯೋಗವನ್ನು ಮಾಡುತ್ತಾನೆ, ಸಾರಥಿಗೆ ಕುದುರೆಗಳಿಗೆ ಹೊಡೆಯುತ್ತಾನೆ. ಕೃಷ್ಣನ ಮೇಲೆ ಎಪ್ಪತ್ತು ಬಾಣಗಳನ್ನು ಬಿಡುತ್ತಾನೆ ಆಗ ಶ್ರೀಕೃಷ್ಣ ಪರಮಾತ್ಮ ಪುನಃ ಅವನ ಮೇಲೆ ಬಾಣಗಳನ್ನ ಪ್ರಯೋಗ ಮಾಡುತ್ತಾ ಅವನೇನು ಕೃತ್ರಿಮವಾದ ಚಕ್ರವನ್ನ ಇಟ್ಟುಕೊಂಡಿದ್ದ ಅದನ್ನೆಲ್ಲ ನಾಶ ಮಾಡಿ ಹಾಕಿದ, ಅವನ ಖಡ್ಗವನ್ನ ಎಲ್ಲಾ ಆಯುಧಗಳನ್ನ ನಾಶ ಮಾಡಿ ಹಾಕಿದ್ದಾನೆ. ಇನ್ನೊಂದು ಭಾರೀ ಕಬ್ಬಿಣದ ಒಂದು ದುಂಡಾದ ದೊಡ್ಡ ಚಕ್ರವನ್ನ ಇಟ್ಟುಕೊಂಡಿದ್ದ ಅದನ್ನ ಪ್ರಯೋಗ ಮಾಡಿದರೆ ಶ್ರೀಕೃಷ್ಣ ಪರಮಾತ್ಮ ಅದನ್ನು ಹೇಗೆ ಪ್ರಯೋಗ ಮಾಡಿದ ಕೃಷ್ಣ ಪರಮಾತ್ಮ ಸುಮ್ಮನೆ ಆದೇಶ ಮಾಡಿದರೆ ಸಾಕು ಇಂಥವನನ್ನು ಸಂಹಾರ ಮಾಡಿ ಬಾ ಅಂದರೆ ಆ ಸುದರ್ಶನ ಚಕ್ರ ಹೋಗಿ ಸಂಹಾರ ಮಾಡಿ ಬಂದು ಬಿಡುತ್ತದೆ. ಇವನಿಗೆ ಏನು ಆಗಬೇಕು ಕೃತ್ರಿಮ ಚಕ್ರ ಅದು ಕಬ್ಬಿಣದ ಗುಂಡು ಅದನ್ನು ಗರ ಗರ ಅಂತ ನೂರು ಸಲ ತಿರುಗಿಸಿ ಕೈ ಎಲ್ಲಾ ರಕ್ತ ಅಷ್ಟು ಕಷ್ಟಪಟ್ಟು ಏನೋ ಮಾಡಿ ಅದನ್ನು ತಿರುಗಿಸಿ ಶ್ರೀಕೃಷ್ಣ ಪರಮಾತ್ಮನ ಮೇಲೆ ಬಿಟ್ಟರೆ, ಕೃಷ್ಣ ಪರಮಾತ್ಮ ಏನೂ ಮಾಡಲಿಲ್ಲ ಆಟ ಆಡುತ್ತ ಇದ್ದಾನೆ ಅವನ ಜೊತೆಗೆ ಪಕ್ಕಕ್ಕೆ ಸರಿದು ಬಿಟ್ಟ ಅಷ್ಟೇ. ರಥದೊಳಗೆ ನಿಂತವ ಕೆಳಗಿಳಿದು ಪಕ್ಕಕ್ಕೆ ಸರದ ಎಲ್ಲಿಯೋ ಹೋಗಿ ಬಿದ್ದು ಹೋಗಿದೆ ಹೀಗೆ ಸ್ವಲ್ಪ ಹೊತ್ತು ಆಟ ಆಡಿದ ಅಂತಾರೆ **'ವಿಕ್ರೀಡ್ಯ ಭಗವಾನ್ ಹರಿಃ'** ಅವನ ಜೊತೆಗೆ ಆಟ ಆಡಿ ತಾನು ನಿಜವಾದ ಸುದರ್ಶನ ಚಕ್ರವನ್ನು ತೆಗೆದ ನೋಡಿ ಸುದರ್ಶನ ಚಕ್ರವನ್ನು ತೆಗೆದು ಪೌಂಡ್ರಕ ವಾಸುದೇವನಿಗೆ ಬಿಟ್ಟರೆ ಪೌಂಡ್ರಕ ವಾಸುದೇವನನ್ನೂ ಸಂಹಾರ ಮಾಡಿದೆ. ಆ ಪೌಂಡ್ರಕ ವಾಸುದೇವನನ್ನು ಸಂಹಾರ ಮಾಡುವುದು ಮಾತ್ರ ಅಲ್ಲ ಅವನ ಮಾತಾಮಹಾ ಕಾಶಿ ರಾಜ ಅವನೂ ಸಹಾಯಕ್ಕೆ ಬಂದಿದ್ದಾನೆ ಅವನೂ ಮಹಾದುಷ್ಟ ಇವನಿಗೆ ಸಹಾಯಕ್ಕೆ ಬಂದಂತಹ ಮಹಾನಾಸ್ತಿಕನಾದ ಪೌಂಡ್ರಕ ವಾಸುದೇವನಿಗೆ ಸಹಾಯಕನಾದ ಅವನ ಮಾತಾಮಹಾನನ್ನೂ ಕೃಷ್ಣ ಪರಮಾತ್ಮ ಸಂಹಾರ ಮಾಡಿ ಎಲ್ಲ ಯಾದವರಿಂದ ಸ್ತುತನಾಗಿ ಸುಧರ್ಮ ಸಭೆಗೆ ಪರಮಾತ್ಮ ಬಂದಿದ್ದಾನೆ ಎಂಬುದಾಗಿ ತಿಳಿಸಿಕೊಡುತ್ತಾರೆ.

ಈ ಪೌಂಡ್ರಕ ವಾಸುದೇವನ ಮಗ ಅವನೂ ಕೂಡ ತಪಶ್ಚರ್ಯವನ್ನು ಮಾಡಿ ಕೃಷ್ಣನನ್ನ ಹೇಗಾದರೂ ಮಾಡಿ ಸಂಹಾರ ಮಾಡಬೇಕು ನಮ್ಮ ಅಪ್ಪನನ್ನು ಸಂಹಾರ ಮಾಡಿದ್ದಾನೆ ಅಂತ ಅವನು ಪ್ರಯತ್ನವನ್ನು ಮಾಡುತ್ತಾನೆ ಸುದಕ್ಷಿಣ. ಆಗ ರುದ್ರ ದೇವರನ್ನು ಕುರಿತು ಮೊದಲು ತಪಸ್ಸು ಮಾಡುತ್ತಾನೆ,ರುದ್ರ ದೇವರು ಅಸುರಾವೇಶದಿಂದ ಅವನಿಗೆ ವರವನ್ನು ಕೊಡುತ್ತಾರೆ ದಕ್ಷಿಣಾಗ್ನಿ, ಪ್ರಧಾನ ಅಗ್ನಿಯ ಪುತ್ರ ದಕ್ಷಿಣಾಗ್ನಿ ಆ ದಕ್ಷಿಣಾಗ್ನಿಯೇ ಒಂದು ಕೃತ್ಯಾ ರೂಪದಲ್ಲಿ ತಯಾರಾಗಿ ಶ್ರೀಕೃಷ್ಣ ಪರಮಾತ್ಮನನ್ನ ಸಂಹಾರ ಮಾಡಬೇಕು ಅಂತ. ಆ ಅಗ್ನಿಯಲ್ಲಿಯೂ ಅಸುರಾವೇಶ ಕೃಷ್ಣನನ್ನ ಸಂಹಾರ ಮಾಡುವುದಕ್ಕೆ ಹೋಗಬೇಕು ಅಂದರೆ ಆಗಲಿ ಅಂತ ಒಪ್ಪಿಕೊಂಡಿದ್ದಾನೆ ನೋಡಿದರೆ ಭಗವದ್ಭಕ್ತ ಅಗ್ನಿ, ಅಗ್ನಿ ಪುತ್ರ ಅಗ್ನಿ ಅವನು ಆದರೂ ಅಸುರಾವೇಶ ಮೂಲಕವಾಗಿ ಅಂತಹ ದುರ್ಭಾವನೆ ಬಂದಿದೆ. ಕೃಷ್ಣ ಪರಮಾತ್ಮನನ್ನ ಸಂಹಾರ ಮಾಡುವುದಕ್ಕೆ ಅಂತ ಬಂದರೆ ಶ್ರೀಕೃಷ್ಣ ಪರಮಾತ್ಮ ಸುದರ್ಶನ ಚಕ್ರವನ್ನು ಬಿಟ್ಟರೆ ಆ ಕೃತ್ಯಾ

ಹೋಗಿ ಕೃತ್ಯೆಯನ್ನ ದಕ್ಷಿಣಾಗ್ನಿಯನ್ನು ಅಟ್ಟಿಸಿಕೊಂಡು ಹೋಗಿದೆ ಸುದರ್ಶನ ಚಕ್ರ. ದಕ್ಷಿಣಾಗ್ನಿಯನ್ನು ಅಟ್ಟಿಸಿಕೊಂಡು ಹೋದರೆ ಎಲ್ಲಿ ಹೋಗಿದೆ ನೇರವಾಗಿ ಕಾಶಿ ಪಟ್ಟಣದೊಳಗೆ ಪೌಂಡ್ರಕ ವಾಸುದೇವನ ಮಗ ಇದ್ದ ಆಲ್ಲಿಯೇ ಹೋಗಿ ಅವನನ್ನೇ ಸುಟ್ಟಿದೆ ಆ ಕೃತ್ಯ. ಸುದರ್ಶನ ಚಕ್ರ ಏನು ಮಾಡಿಲ್ಲ ಆ ಕೃತ್ಯೆಯನ್ನೇ ಮತ್ತೆ ಬೆನ್ನಟ್ಟಿಸಿಕೊಂಡು ಹೋಗಿ ಯಾರು ಆ ಕೃತ್ಯಾ ಪ್ರಯೋಗ ಮಾಡಿದ್ದರೋ ಅವನಿಗೇ ಆ ಕೃತ್ಯಾ ಸುಟ್ಟು ಬಿಡುವಂತೆ ಮಾಡಿದೆ. ಇದರಿಂದ ಏನು ತೋರಿಸುತ್ತಾರೆ ಭಾಗವತದಲ್ಲಿ ಒಂದು ಕಡೆಗೆ ಬರುತ್ತಲ್ಲ ಹಾಗೆ **'ಏವ ಮೇವ ಮಹತಾಭಿಚಾರಾತಿಕ್ರಮಃ ಕಾರ್ತ್ಸ್ನೇನ ಆತ್ಮನೇ ಫಲತಿ'** ಅಂತ. ದೊಡ್ಡವರಿಗೆ ಏನಾದರೂ ಅಪಚಾರವನ್ನು ಮಾಡುವುದಕ್ಕೆ ಹೋದರೆ ಅದು ಅವರಿಗೆ ಪೀಡೆ ಆಗುವುದಿಲ್ಲ, ಪ್ರಯೋಗ ಮಾಡಿದವರಿಗೆ ಅದರಿಂದ ಪೀಡೆ ಆಗುತ್ತೆ ಅಂತ. ಕೃಷ್ಣ ಪರಮಾತ್ಮನ ಮೇಲೆ ಆ ಕೃತ್ಯಾ ಪ್ರಯೋಗವನ್ನು ಮಾಡಿದರೆ ಪ್ರಯೋಗ ಮಾಡಿದಂತಹ ಆ ಪೌಂಡ್ರಕ ವಾಸುದೇವನ ಮಗನನ್ನೇ ಅದು ಸುಟ್ಟು ಹಾಕಿದೆ. ಆಮೇಲೆ ಸುದರ್ಶನ ಚಕ್ರ ಅಷ್ಟಕ್ಕೆ ಸುಮ್ಮನೆ ಬರದೆ ಸಂಪೂರ್ಣ ವಾರಣಾಸಿ ಪಟ್ಟಣವನ್ನೇ ಸುಟ್ಟು ಮತ್ತೆ ಶ್ರೀಕೃಷ್ಣ ಪರಮಾತ್ಮನ ಕೈಯಲ್ಲಿ ಬಂದು ಕುಳಿತಿದೆ ಸುದರ್ಶನ ಚಕ್ರ. ಈ ರೀತಿ ಪೌಂಡ್ರಕ ವಾಸುದೇವ, ಅವನ ಮಗ,ಅವನ ಮಾತಾಮಹಾ,ಅವನ ರಾಜ್ಯ ಎಲ್ಲವನ್ನೂ ಧ್ವಂಸ ಮಾಡಿದ್ದಾನೆ ಪರಮಾತ್ಮ ಈ ರೀತಿ ಅವನನ್ನ ಸಂಹಾರ ಮಾಡಿದ.

ಈ ಕಡೆಗೆ ಬಲರಾಮ ದೇವರು ಏಕಲವ್ಯ ಇವರಿಬ್ಬರ ಮಧ್ಯದಲ್ಲಿ ಯುದ್ಧ ನಡೆಯುತ್ತ ಇದೆ, ಭಾರೀ ಯುದ್ಧ ನಡೆಯುತ್ತ ಇದೆ ಓಡಿ ಓಡುತ್ತಾ ಹೋಗುತ್ತ ಇದ್ದಾನೆ ಬಲರಾಮ ದೇವರ ಪರಾಕ್ರಮವನ್ನು ನೋಡಿ ಸಹಿಸಲಾಗದೆ, ತಡೆದುಕೊಳ್ಳಲಿಕ್ಕೆ ಆಗದೆ ಏಕಲವ್ಯ ಓಡುತ್ತಾ ಇದ್ದಾನೆ. ಬಲರಾಮ ದೇವರು ಅವನನ್ನ ಬಿಟ್ಟಿಲ್ಲ ಹಠ ಅವರದು ಎಲ್ಲಿ ಹೋದರು ಬಿಡಬಾರದು ಅಂತ ಬಲರಾಮ ದೇವರು ಹೊರಟರೆ ಕೊನೆಗೆ ಸಮುದ್ರದೊಳಗೆ ಹಾರಿ ಆ ಸಮುದ್ರದೊಳಗೆ ಎಂಬತ್ತು ಯೋಜನ ದಾಟಿ ಒಳಗೆ ಹೋಗಿದ್ದಾನೆ ಒಂದು ದ್ವೀಪ ಆ ದ್ವೀಪದಲ್ಲಿ ಅವನು ಕುಳಿತಿದ್ದಾನೆ. ಅಲ್ಲಿ ಹೋದಮೇಲೆ ಬಲರಾಮ ದೇವರು ಇನ್ನೇನು ಅವನು ಈಚೆಗೆ ಬರುವುದಿಲ್ಲ ಅನ್ನುವುದಕ್ಕೋಸ್ಕರ ಅವನನ್ನ ಸೋಲಿಸಿ ಸಮುದ್ರದೊಳಗೆ ದ್ವೀಪದೊಳಗೆ ವಾಸ ಮಾಡುವಂತೆ ಅವನನ್ನ ಕಳಿಸಿದ್ದಾರೆ ಮುಂದೆ ಮತ್ತೆ ಪರಮಾತ್ಮ ಆ ಏಕಲವ್ಯನನ್ನೂ ಕೂಡ ಕೃಷ್ಣ ಪರಮಾತ್ಮನೇ ಸಂಹಾರ ಮಾಡುತ್ತಾನೆ. ಈ ರೀತಿ ಅವನನ್ನ ಆ ಕಡೆಗೆ ಓಡಿಸಿ, ಎಲ್ಲ ಯಾದವರನ್ನ ಕೂಡಿಸಿ ಇನ್ನು ಮೇಲೆ ಈಗ ಊರಿಗೆ ಬರುವುದರೊಳಗೇನೆ ಮೊದಲು ಪೌಂಡ್ರಕ ವಾಸುದೇವನ ಯುದ್ಧ ಅವನನ್ನ ಸಂಹಾರ ಮಾಡಿ, ಏಕಲವ್ಯನನ್ನ ಸೋಲಿಸಿ ಓಡಿಸಿ ಆಮೇಲೆ ಸುಧರ್ಮ ಸಭೆಯಲ್ಲಿ ಕುಳಿತು ಎಲ್ಲ ಯಾದವರಿಗೆ ತಾನು ಬದರಿಕಾಶ್ರಮಕ್ಕೆ ಹೋಗಿದ್ದು, ಪಿಶಾಚಗಳಿಗೆ ಮೋಕ್ಷ ಕೊಟ್ಟದ್ದು, ರುದ್ರ ದೇವರು ತನ್ನನ್ನ ಸ್ತುತಿ ಮಾಡಿದ್ದು, ತಾನು ನಾಟಕೀಯವಾಗಿ ತಪಸ್ಸು ಮಾಡಿದ್ದು, ಒಂದೇ ದಿನದಲ್ಲಿ ಬೃಹಸ್ಪತ್ಯಾಚಾರ್ಯರು ಹನ್ನೆರಡು ರಾಶಿಗಳಲ್ಲಿ ಸಂಚಾರ ಮಾಡಿದ್ದು ಎಲ್ಲ ಸುದ್ದಿಯನ್ನ ಕೃಷ್ಣನೇ ತಾನು ಹೇಳಿದ್ದಾನೆ, ತಿಳಿದುಕೊಳ್ಳಿ ಏನು ಭಾಗ್ಯ ಇರಬೇಕು ಯಾದವರದು. ಎಷ್ಟೋ ಸಾವಿರ ವರ್ಷಗಳಾದ ಮೇಲೆ ಯಾರೋ ನಮ್ಮಂಥವರು ಅಜ್ಞಾನಿಗಳು ಅಲ್ಪಜ್ಞರು ಏನೋ ಕೃಷ್ಣನ ಕಥೆ ಹೇಳುತ್ತೀವಿ, ನಾಲ್ಕು ಜನ ಕೇಳುತ್ತಾರೆ, ಸಂತೋಷ ಪಡುತ್ತಾರೆ ಸ್ವತಃ ಕೃಷ್ಣನ ಮುಖದಿಂದಲೇ ಕೃಷ್ಣನ ಚರಿತ್ರೆಯನ್ನು ಕೇಳಬೇಕಾಗಿದ್ದರೆ ಆ ಯಾದವರ ಭಾಗ್ಯ ಎಂಥಹದ್ದು.

ಆದರೂ ನಮ್ಮೆಲ್ಲರ ಭಾಗ್ಯವೂ ದೊಡ್ಡದೇ ಸಾಕ್ಷಾತ್ ವೇದವ್ಯಾಸ ದೇವರು ಭಗವಂತನೇ ರಚನೆ ಮಾಡಿದಂತಹ ಗ್ರಂಥಗಳು ಆ ಶ್ಲೋಕಗಳನ್ನೇ ನಾವು ಕೇಳುತ್ತೇವೆ ಅಂದರೆ ವೇದವ್ಯಾಸ ದೇವರ ವಾಣಿಯನ್ನೇ ಕೇಳಿದಂತೆ ಅಂತಹ ವೇದವ್ಯಾಸ ದೇವರ ವಾಣಿಯಲ್ಲಿ ಶ್ರೀಕೃಷ್ಣ ಪರಮಾತ್ಮನ ಚರಿತ್ರೆಯನ್ನು ಕೇಳಿದ್ದಾರೆ ಆ ಎಲ್ಲ ಸಜ್ಜನರು. ಮತ್ತೆ

ಪ್ರತ್ಯೇಕವಾಗಿ ಸತ್ಯಭಾಮಾ ರುಕ್ಮಿಣಿಯರಿಗೆ ಏಕಾಂತದೊಳಗೆ ಎಲ್ಲ ಸುದ್ದಿಯನ್ನ ಪ್ರತ್ಯೇಕವಾಗಿ ಹೇಳಿದ್ದಾನೆ ಪರಮಾತ್ಮ ಅವರ ಮೇಲೆ ವಿಶೇಷವಾದ ಅನುಗ್ರಹವನ್ನು ತೋರಿಸಿದ್ದಾನೆ. ಇಷ್ಟೆಲ್ಲ ಮಾಡಿ ಯಥೇಚ್ಛವಾಗಿ ಬ್ರಾಹ್ಮಣರಿಗೆ ಗೋದಾನವನ್ನ ದ್ರವ್ಯದಾನವನ್ನ ಮಾಡಿ, ಅಗ್ನಿಹೋತ್ರಾದಿಗಳಿಗೆಲ್ಲ ವ್ಯವಸ್ಥೆ ಮಾಡಿ, ತಾನು ಮಾಡಬೇಕಾದ ಯಜ್ಞ ಯಾಗಾದಿಗಳನ್ನೆಲ್ಲ ಮಾಡಿ ಈ ರೀತಿ ಯಾವುದೇ ಒಂದು ಸತ್ಕರ್ಮವನ್ನು ಮಾಡಿದಾಗಲೂ ಸತ್ಕರ್ಮ ಮಾಡುವ ಮೊದಲೂ ದಾನವನ್ನು ಮಾಡಬೇಕು, ದೇವರ ಪ್ರಾರ್ಥನೆಯನ್ನು ಮಾಡಬೇಕು, ಮುಗಿದ ಮೇಲೂ ಪುನಃ ದಾನಾದಿಗಳನ್ನು ಮಾಡಿ ಪರಮಾತ್ಮನಿಗೆ ಸಮರ್ಪಣೆ ಮಾಡಬೇಕು ಅನ್ನುವ ಒಂದು ಲೋಕಶಿಕ್ಷಣವನ್ನು ಕೊಟ್ಟಿದ್ದಾನೆ ಪರಮಾತ್ಮ.

ತಸ್ಮಿಞ್ಶಾಸತಿ ದೇವೇಶೇ ರಾಜ್ಯಂ ನಿಷ್ಕಣ್ಟಕಂ ಪ್ರಭೋ ।
ಸುಖಮೇವ ಪ್ರಜಾಃ ಸರ್ವಾಃ ಜೀವನ್ತಿ ಬ್ರಾಹ್ಮಣಾದಯಃ ॥ (102.24 ಭವಿಷ್ಯಪರ್ವ)

ಆ ಭಗವಂತ ರಾಜ್ಯವನ್ನು ಆಳುತ್ತಾನೆ ಹೆಸರಿಗೆ ರಾಜ ಉಗ್ರಸೇನ ನಿಜವಾದ ರಾಜ್ಯವನ್ನು ಪರಮಾತ್ಮನೇ ಆಳುತ್ತಾ ಇದ್ದರೆ, ಎಲ್ಲ ಪ್ರಜೆಗಳು ಹೇಗಿದ್ದರು ಅಂದರೆ ಯಾವುದೇ ಬಾಧೆ ಇಲ್ಲದೆ ಇದ್ದಂತೆ, ನಿಶ್ಚಿಂತರಾಗಿ ನಿರಾಬಾಧೆಯಿಂದ ಸುಖವಾಗಿ ಇದ್ದಾರೆ ಎಂಬುದಾಗಿ ತಿಳಿಸುತ್ತ ಇದ್ದಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಭವಿಷ್ಯಪರ್ವ-45

* * *

ಜನಮೇಜಯ ಉವಾಚ

ಭೂಯ ಏವ ದ್ವಿಜಶ್ರೇಷ್ಠ ಶಙ್ಖಚಕ್ರಗದಾಭೃತಃ ।
ಚರಿತಂ ಶ್ರೋತುಮಿಚ್ಛಾಮಿ ವಿಸ್ತರೇಣ ತಪೋಧನ ।। (103.1 ಭವಿಷ್ಯಪರ್ವ)

ಶ್ರೀಕೃಷ್ಣ ಪರಮಾತ್ಮ ಪೌಂಡ್ರಕ ವಾಸುದೇವನನ್ನು ನಾನೇ ನಿಜವಾದ ವಾಸುದೇವ ಶಂಖ ಚಕ್ರ ಗದಾ ಪದ್ಮ ಖಡ್ಗಧಾರಿಯಾದಂತಹ ವಾಸುದೇವ ಶ್ರೀವತ್ಸ ಚಿಹ್ನದಿಂದ ಕೂಡಿದವನು ನಾನೇ ಅಂತ ಹೇಳಿಕೊಳ್ಳುವಂತಹ ಪೌಂಡ್ರಕ ವಾಸುದೇವನಿಗೆ ಶ್ರೀಕೃಷ್ಣ ಪರಮಾತ್ಮ ಸುದರ್ಶನ ಚಕ್ರದಿಂದ ಸಂಹಾರವನ್ನು ಮಾಡಿದ್ದಾನೆ ಅಂತ ಹಿಂದೆ ತಿಳಿಸಿದ್ದಾರೆ. ಶ್ರೀಮದಾಚಾರ್ಯರು ವಿಷ್ಣುತತ್ವ ನಿರ್ಣಯದಲ್ಲಿ ತಿಳಿಸುವಂತೆ ನಾವೆಲ್ಲ ನಾನೇ ಸ್ವತಂತ್ರ ಕರ್ತ ಅಂತ ತಿಳಿದುಕೊಂಡರೆ ದೇವರೇ ನಾವು ಎಂದು ತಿಳಿದುಕೊಂಡಂತೇನೆ ಲೆಕ್ಕ ಆದು, ನಿಜವಾದ ಸ್ವತಂತ್ರ ಕರ್ತ ದೇವರು. ನಾನು ಸ್ವತಂತ್ರ ಕರ್ತ, ನಾನೇ ಮಾತನಾಡುವುದು, ನಾನೇ ಓಡಾಡುವುದು, ನಾನೇ ಕೂಡುವುದು, ನಾನೇ ನಿಲ್ಲುವುದು ಎಲ್ಲ ಸ್ವತಂತ್ರನಾಗಿ ಮಾಡುತ್ತೇನೆ ಅಂತ ದೇಹ ಇಂದ್ರಿಯ ಮನಸ್ಸು ಪ್ರಾಣಗಳೆಲ್ಲ ನನ್ನ ಅಧೀನ ಅಂತ ನಾನು ತಿಳಿದುಕೊಂಡರೆ ಆ ಸ್ವಾತಂತ್ರ್ಯ ದೇವರಲ್ಲಿರುವ ಧರ್ಮ. ಆ ದೇವರಲ್ಲಿರುವ ಸ್ವಾತಂತ್ರ್ಯವನ್ನು ನನ್ನಲ್ಲಿ ತಿಳಿದುಕೊಂಡರೆ ನಾನೇ ದೇವರು ಅಂತ ತಿಳಿದುಕೊಂಡಂತೆ, ನಾನೇ ವಾಸುದೇವ ಅಂತ ತಿಳಿದುಕೊಂಡಂತೆ. ವೇನ ಅಥವಾ ಅವನ ಅವತಾರನಾದ ಪೌಂಡ್ರಕ ವಾಸುದೇವ ಯಾವ ರೀತಿ ನಾನೇ ವಾಸುದೇವ ಅಂತ ಹೇಳಿಕೊಂಡನೋ ಹಾಗೆ ನಾನೇ ಸ್ವತಂತ್ರ ಅಂತ ತಿಳಿದರೆ ಭಗವಂತನ ಪ್ರೀತಿಗೆ ನಾವು ಪಾತ್ರರಾಗದೇ ಅವಕೃಪೆಗೆ ಪಾತ್ರರಾಗಬೇಕಾಗುತ್ತದೆ ಅಂತನ್ನುವ ತತ್ವವನ್ನು ಇಲ್ಲಿ ತಿಳಿಸಿಕೊಟ್ಟಿದ್ದಾರೆ. ಅದಕ್ಕಾಗಿ ಆ ಭಗವಂತನೇ ಸ್ವತಂತ್ರ ನಾವೆಲ್ಲ ಅವನ ದಾಸರು ಅಂತನ್ನುವ ತತ್ವವನ್ನೇ ಚೆನ್ನಾಗಿ ತಿಳಿಯಬೇಕು. **'ದಾಸೋಹಂ'** ಹನುಮಂತ ದೇವರು ಯಾವುದನ್ನು ನಮಗೆಲ್ಲ ತಿಳಿಸಿಕೊಟ್ಟರು **'ದಾಸೋಹಂ ಕೋಸಲೇಂದ್ರಸ್ಯ'** ಆ ಸರ್ವೋತ್ತಮನಾದ ಶ್ರೀರಾಮಚಂದ್ರನ ದಾಸ ನಾನು ಅಂತ ಹನುಮಂತ ದೇವರು ವಾಲ್ಮೀಕಿ ರಾಮಾಯಣದಲ್ಲಿ ಹೇಳಿದ್ದನ್ನು ಕೇಳುತ್ತೀರಲ್ಲ ಆ ಅನುಸಂಧಾನ ನಮಗೆ ಯಾವಾಗಲೂ ಇರಬೇಕು. ಅಹಿರ್ಬುಧ್ನ್ಯ ಸಂಹಿತೆಯಲ್ಲಿ ರುದ್ರ ದೇವರು ಕೂಡ ನರಸಿಂಹ ದೇವರ ಬಗ್ಗೆ ಹೇಳುವಾಗ

ದಾಸಭೂತಾ ಯತಃ ಸರ್ವೇ ಹ್ಯಾತ್ಮನಃ ಪರಮಾತ್ಮನಃ ।
ಅತೋಽಹಮಪಿ ತೇ ದಾಸಃ ಇತಿ ಮತ್ವಾ ನಮಾಮ್ಯಹಮ್ ॥ (11 ನರಸಿಂಹ ಸ್ತೋತ್ರ)

ಅಂತ ಸ್ವತಃ ರುದ್ರ ದೇವರು ಅಹಿರ್ಬುಧ್ನ್ಯ ಸಂಹಿತೆಯಲ್ಲಿ ಹೇಳಿದಂತಹ ಮಾತನ್ನು ನಾವು ಕೇಳುತ್ತೇವೆ. ಪಂಚರಾತ್ರ ಆಗಮದಲ್ಲಿ ಬರುವಂತಹ ಅಹಿರ್ಬುಧ್ನ್ಯ ಸಂಹಿತೆ **'ದಾಸಭೂತಾ ಯತಃ ಸರ್ವೇ ಹ್ಯಾತ್ಮನಃ ಪರಮಾತ್ಮನಃ'** ಜಗತ್ತಿನಲ್ಲಿ ಇರುವ ಎಲ್ಲ ಜೀವರಾಶಿಗಳು ಕೂಡ ಆ ಪರಮಾತ್ಮನ ದಾಸರು, ನರಸಿಂಹ ದೇವರ ದಾಸರು ಅಂತ ಸರಿ, ಎಲ್ಲರೂ ದಾಸರಾಗಿರಬಹುದು ನನ್ನೊಬ್ಬನನ್ನು ಬಿಟ್ಟು ಇನ್ನುಳಿದವರು ದಾಸರು ಅಂತ ಹೇಳಿಕೊಳ್ಳುವುದಿಲ್ಲ

ದಾಸಭೂತಾ ಯತಃ ಸರ್ವೇ ಹ್ಯಾತ್ಮನಃ ಪರಮಾತ್ಮನಃ ।
ಅತೋಽಹಮಪಿ ತೇ ದಾಸಃ ಇತಿ ಮತ್ವಾ ನಮಾಮ್ಯಹಮ್ ॥ (11 ನರಸಿಂಹ ಸ್ತೋತ್ರ)

ನಾನೂ ನಿನ್ನ ದಾಸಾನುದಾಸ ಅನ್ನುವುದಕ್ಕೋಸ್ಕರ ನಮಸ್ಕಾರ ಮಾಡುತ್ತೇನೆ ಅಂತ ರುದ್ರ ದೇವರು ಹೇಳುವ ಮಾತನ್ನೂ ನಾವು ಕೇಳುತ್ತೇವೆ ಆ ಒಂದು ಅನುಸಂಧಾನ ನಮಗೆ ಯಾವಾಗಲೂ ಇರಬೇಕು ಅನ್ನುವುದು ಈ ಪೌಂಡ್ರಕ ವಾಸುದೇವನ ವಧದ ಹಿನ್ನೆಲೆಯಲ್ಲಿ ಇರುವಂತಹ ಸಂದೇಶ ಎಂಬುದಾಗಿ ನಾವು ತಿಳಿಯಬೇಕು.

ಮುಂದೆ ಜನಮೇಜಯ ವೈಶಂಪಾಯನರಿಗೆ ಪ್ರಶ್ನೆ ಮಾಡುತ್ತಾ ಇದ್ದಾನೆ ಅವನಿಗೆ ತೃಪ್ತಿ ಇಲ್ಲ, ಎಷ್ಟು ಶ್ರೀಕೃಷ್ಣ ಪರಮಾತ್ಮನ ಚರಿತ್ರೆಯನ್ನು ಕೇಳಿದರೂ ತೃಪ್ತಿ ಆಗುತ್ತ ಇಲ್ಲ

ನ ಹಿ ಮೇ ತೃಪ್ತಿರಸ್ತೀಹ ಶೃಣ್ವತಃ ಕೈಶವೀಂ ಕಥಾಮ್ । (103.2 ಭವಿಷ್ಯಪರ್ವ)

ಆ ಕೇಶವನ ಕಥೆಯನ್ನು ಎಷ್ಟು ಕೇಳಿದರೂ ತೃಪ್ತಿ ಇಲ್ಲ ವೈಶಂಪಾಯನರೇ ಇನ್ನಷ್ಟು ನನಗೆ ಆ ಶ್ರೀಕೃಷ್ಣ ಪರಮಾತ್ಮನ ಚರಿತ್ರೆಯನ್ನು ಹೇಳಿ ಹಿಂದೆ ನೀವು ಹೇಳಿದ್ದೀರಿ ಹಂಸ-ಡಿಭಿಕ ಅಂತ. ಡಿಭಿಕ ಅಂತ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಶ್ರೀಮದಾಚಾರ್ಯರು ಅನ್ನುತ್ತಾರೆ ಒಂದು ಕಡೆಗೆ ಮಾತ್ರ ಡೀಭಿಕ ಅಂತೂ ಹೇಳುತ್ತಾರೆ ಡಿಭಿಕ ಆದರೆ ಹರಿವಂಶ ಡಿಂಭಕ ಅಂತ ಹೇಳುತ್ತ ಇದೆ. ಹೀಗೆ ನಾವು ತಿಳಿಯಬಹುದು ಅವನು ಡಿಭಿಕ ಅವನ ಹೆಸರು ಡಿಭಿಕ ಎಲ್ಲರಿಗೆ ಅವನು ಹಿಂಸೆಯನ್ನು ಮಾಡುತ್ತಾನೆ ಆದ್ದರಿಂದ ಅವನು ಡಿಭಿಕ ಅಂತ ಆ ಹಿಂಸಾರ್ಥಕವಾದ ಧಾತುವಿನಿಂದ ಡಿಭ ಧಾತುವಿನಿಂದ ಬಂದದ್ದು ಡಿಭಿಕ. ಆದರೆ ಶ್ರೀಕೃಷ್ಣ ಪರಮಾತ್ಮನ ಎದುರಿನಲ್ಲಿ ಇವರು ಯಾರು ಹಂಸ-ಡಿಭಿಕರು ಅಂದರೆ ಬೇರೆ ಯಾರಲ್ಲ ಮಧು-ಕೈಟಭರು. ಪರಮಾತ್ಮ ಹಯಗ್ರೀವ ರೂಪವನ್ನು ತೆಗೆದುಕೊಂಡು ಯಾರನ್ನು ತನ್ನ ತೊಡೆಯ ಮೇಲೆ ಹೊಸೆದು ಯಾರ ಮೇದಸ್ಸಿನಿಂದ ಮೇದಿನಿಯನ್ನು ನಿರ್ಮಾಣ ಮಾಡಿದ ಅಂತ ಹಿಂದೆ ಕಥೆ ಕೇಳಿದ್ದೀರಿ ಅಂತಹ ಮಧು ಮತ್ತು ಕೈಟಭರೇ ಈಗ ಹಂಸ ಮತ್ತು ಡಿಭಿಕರಾಗಿ ಅವತಾರ ಮಾಡಿದ್ದಾರೆ ಪುನಃ. ಅಂತಹ ಮಹಾದುಷ್ಟರಾಗಿರಬಹುದು ಆ ಹಂಸ-ಡಿಭಿಕರು ಎಲ್ಲರಿಗೂ ಹಿಂಸೆ ಕೊಡುವವರಾಗಿರಬಹುದು ಆದರೆ ದೇವರ ಎದುರಿನಲ್ಲಿ ಅವನು ಡಿಂಭಕ ಅಂತ ಡಿಂಭಕ ಅಂದರೆ ಶಿಶು ಮಗು ಅವನು ಡಿಂಭಕನೇ. ಅವನು ಎಂತಹ ಡಿಭಿಕನಾದರೂ, ಎಂತಹ ಹಿಂಸಕನಾದರೂ ದೇವರ ಮುಂದೆ ಅವನು ಡಿಂಭಕ ಒಂದು ಸಣ್ಣ ಶಿಶು ಇದ್ದಂತೆ ಅಂತ ಸೂಚನೆ ಮಾಡುವುದಕ್ಕೋ ಏನೋ ಅನ್ನುವಂತೆ ಡಿಭಿಕ ಎಂಬ ಹೆಸರಿದ್ದರೂ ಕೂಡ ಹರಿವಂಶ ಅವನನ್ನು ಡಿಂಭಕ ಎಂಬುದಾಗಿ ಹೇಳುತ್ತಾ ಇದೆ ಅಂತ ಎರಡೂ ಹೆಸರುಗಳನ್ನು ಇಟ್ಟುಕೊಳ್ಳಬಹುದು ಮತ್ತು ಮೂಲರೂಪದಲ್ಲಿ

ಅವನು ಪರಮಾತ್ಮನ ಡಿಂಭಕನೇ. ಪರಮಾತ್ಮನಿಂದಲೇ ಹುಟ್ಟಿದವನು, ಭಗವಂತನ ಕರ್ಣದಲ್ಲಿರುವ ಸ್ವೇದ ರೂಪವಾದಂತಹ ಜಲದಿಂದಲೇ ಇವರು ಉತ್ಪನ್ನರಾದವರು ಆ ದೃಷ್ಟಿಯಲ್ಲಿ ಭಗವಂತನ ಡಿಂಭಕ. ದೇವರ ಎದುರಿನಲ್ಲಿ ಇವನು ಎಷ್ಟೇ ದೊಡ್ಡವನಾದರೂ ಡಿಂಭಕ ಅನ್ನುವ ಅರ್ಥದಲ್ಲಿ ಹರಿವಂಶ ಅವನನ್ನು ಡಿಂಭಕ ಎಂಬುದಾಗಿ ಹೇಳಿದೆ ಅಂತ ನಾವು ತಿಳಿಯಬೇಕು, ಶ್ರೀಮದಾಚಾರ್ಯರು ಡಿಭಿಕ ಎಂಬ ಹೆಸರನ್ನು ಹೇಳುತ್ತಾರೆ. ಈ ಹಂಸ-ಡಿಭಿಕರ ಸಂಹಾರವನ್ನ ಮೂಲರೂಪದಲ್ಲಿ ಮಧು-ಕೈಟಭರಾದಾಗಲೂ ಪರಮಾತ್ಮನೇ ಸಂಹಾರ ಮಾಡಿದ ಈಗ ಹಂಸ-ಡಿಭಿಕರಾದಾಗಲೂ ಪರಮಾತ್ಮನೇ ಹಂಹಾರವನ್ನು ಮಾಡಿದ್ದಾನೆ ಕೃಷ್ಣಾವತಾರದಲ್ಲಿ ವಿಚಕ್ರ ಅಂತ ಅವರಿಬ್ಬರಿಗೆ ಸಹಾಯ ಮಾಡುವ ಒಬ್ಬ ಅಸುರ ಅವನನ್ನೂ ಪರಮಾತ್ಮ ಸಂಹಾರ ಮಾಡಿದ ಅಂತ ಹಿಂದೆ ನೀವು ಸಂಕ್ಷೇಪವಾಗಿ ತಿಳಿಸಿದ್ದೀರಿ ಅದರ ಬಗ್ಗೆ ನಮಗೆ ವಿಸ್ತಾರವಾಗಿ ಕೇಳಬೇಕು ಅಂತ ಅಪೇಕ್ಷೆ ಇದೆ ಅಂತ ಜನಮೇಜಯ ರಾಜ ಹೇಳುತ್ತ ಇದ್ದಾನೆ ಮತ್ತು ಈ ಹಂಸ-ಡಿಭಿಕರೇನು ಸಾಮಾನ್ಯರಲ್ಲ ಬೇಕಾದಷ್ಟು ಜನರನ್ನು ದೇವರು ಸಂಹಾರ ಮಾಡಿದ್ದಾನೆ, ಎಷ್ಟೋ ಅಕ್ಷೌಹಿಣೀ ಸೈನ್ಯವನ್ನು ಸಂಹಾರ ಮಾಡಿದ್ದಾನೆ ಅದರೊಳಗೆ ಇವರು ಒಂದಿಬ್ಬರು ಅದು ಏನು ಪ್ರತ್ಯೇಕ ಕೇಳುವುದು ಅಂತ ಅದು ಹಾಗಲ್ಲ.

ತೌ ಸುತೌ ವೀರ್ಯಸಮ್ಪನ್ನೌ ಶಿಷ್ಯೌ ಭೃಗುಸುತಸ್ಯ ಹ । (103.6 ಭವಿಷ್ಯಪರ್ವ)

ಇವರಿಬ್ಬರೂ ರಾಜಕುಮಾರರು ಅಂತ ನೋಡಿ ಎಷ್ಟು ವಿಚಿತ್ರ **'ತೌ ಸುತೌ'** ಯಾರ ಮಕ್ಕಳು ಅಂತ ಹೇಳಲೇ ಇಲ್ಲ **'ಸುತೌ'** ಮಕ್ಕಳು ಅಂತ ವ್ಯಾಖ್ಯಾನಕಾರರು ರಾಜಕುಮಾರರು ಅನ್ನುವ ಅರ್ಥದಲ್ಲಿ **'ಸುತೌ'** ಅಂತ ಕರೆದಿದ್ದಾರೆ ಅಂತ. ಆದರೆ ನಾವು ಶ್ರೀಮದಾಚಾರ್ಯರು ಹೇಳುವ ಹಿನ್ನೆಲೆಯಲ್ಲಿ ನೋಡಿದರೆ ಇವರು ಮಧು-ಕೈಟಭರು ಅಂತ ತಿಳಿದುಕೊಂಡರೆ **'ಸುತೌ'** ದೇವರಿಗೆ ಮಕ್ಕಳು ಇವರು. ಪೂರ್ವ ಮೂಲರೂಪದಲ್ಲಿ ದೇವರಿಗೇ ಮಕ್ಕಳಾದವರು ಈಗ ರಾಜಕುಮಾರರಾಗಿ ಹುಟ್ಟಿದವರು, ಭಾರ್ಗವ ಶಿಷ್ಯರು ಅಂತಹ ಈ ಹಂಸ-ಡಿಭಿಕರು ರುದ್ರ ದೇವರಿಂದ ವರ ಪಡೆದವರು ಮಹಾಸಮರ್ಥರು. ವಿಚಕ್ರ ಎಂಬ ಅಸುರ ಇವರ ಜೊತೆಗೆ ಇದ್ದ. ಅವನಿಗೆ 88,000 ಅಸುರರ ಸಹಾಯ ಅಷ್ಟೆಲ್ಲ ದಾನವರ ಸಹಾಯವನ್ನು ಪಡೆದುಕೊಂಡು ಈ ಹಂಸ-ಡಿಭಿಕರು ಭಾರೀ ಉನ್ಮತ್ತರು, ದೇವತೆಗಳ ಜೊತೆಗೂ ಯುದ್ಧ ಮಾಡುವುದಕ್ಕೆ ಸಮರ್ಥರು. ಅಂತಹ ಹಂಸ-ಡಿಭಿಕರ ಸಂಹಾರವನ್ನ ಕೃಷ್ಣ ಪರಮಾತ್ಮ ಮಾಡಿದ ಅಂತ ನಾವು ಕೇಳಿದ್ದೇವೆ, ಅದು ಹೇಗೆ ಅಂತ ವಿಸ್ತಾರವಾಗಿ ನಮಗೆ ಹೇಳಬೇಕು ಅಂತ ಜನಮೇಜಯರು ಪ್ರಾರ್ಥನೆ ಮಾಡಿದ್ದಾರೆ ವೈಶಂಪಾಯನರಿಗೆ. ಆಗ ವೈಶಂಪಾಯನರು ಹೇಳುತ್ತಾರೆ ಸಾಲ್ವ ದೇಶದಲ್ಲಿ ಬ್ರಹ್ಮದತ್ತ ಎಂಬ ರಾಜನಾಗಿದ್ದ. ಆ ಬ್ರಹ್ಮದತ್ತ ರಾಜ ಬಹಳ ಧಾರ್ಮಿಕನೇ ಆಗಿದ್ದ, ಪಂಚ ಯಜ್ಞಗಳನ್ನು ಮಾಡುತ್ತಾ ಇದ್ದ, ಇಂದ್ರಿಯ ನಿಗ್ರಹ ಇತ್ತು, ವೇದಗಳನ್ನು ಚೆನ್ನಾಗಿ ಅಧ್ಯಯನ ಮಾಡಿದ್ದ, ಯಜ್ಞ ಯಾಗಾದಿಗಳನ್ನೆಲ್ಲ ತಪ್ಪದೇ ಮಾಡುತ್ತ ಇರುವಂತಹ ಒಬ್ಬ ರಾಜ ಸಾಲ್ವ ದೇಶದ ರಾಜ ಆ ಬ್ರಹ್ಮದತ್ತ ಅಂತ.

ಹಿಂದೆ ಭೀಷ್ಮಾಚಾರ್ಯರು ವಿಚಿತ್ರವೀರ್ಯ ಮತ್ತು ಚಿತ್ರಾಂಗದನಿಗೋಸ್ಕರ ಮೂರು ಜನರನ್ನು ಕರೆದುಕೊಂಡು ಬರುತ್ತಾರೆ ಅಂಬಾ, ಅಂಬಿಕಾ, ಅಂಬಾಲಿಕಾ ಅಂತ. ಅದರಲ್ಲಿ ಅಂಬಾ ನಾನು ಸಾಲ್ವ ರಾಜನನ್ನ ಮದುವೆಯಾಗಬೇಕು, ವಿಚಿತ್ರವೀರ್ಯ ಮತ್ತು ಚಿತ್ರಾಂಗದರ ಜೊತೆಗೆ ಮದುವೆಯಾಗಲು ನನಗೆ ಇಷ್ಟ ಇಲ್ಲ ಅಂತ ಹೇಳಿದಾಗ ಆ ಅಂಬಾಳನ್ನ ಸರಿ ಹೋಗು ಅಂತ ಕೊಟ್ಟು ಕಳಿಸುತ್ತಾನೆ. ಒಂದು ಬಾರಿ ಭೀಷ್ಮಾಚಾರ್ಯರು ನಿನ್ನನ್ನು ಕರೆದುಕೊಂಡು ಹೋಗಿದ್ದಾರೆ ರಥದಲ್ಲಿ ಅಂದಮೇಲೆ ನಾನು ಮತ್ತೆ ನಿನ್ನನ್ನು ಮದುವೆ ಆಗುವುದಿಲ್ಲ ಅಂತ ಆ ಬ್ರಹ್ಮದತ್ತನೂ ಮದುವೆ ಮಾಡಿಕೊಳ್ಳದೇ ಇವಳನ್ನು ತಿರುಗಿ ಕಳಿಸುತ್ತಾನೆ. ಮೂಲರೂಪದಲ್ಲಿ ಅವಳು ಭೀಷ್ಮಾಚಾರ್ಯರ ಹೆಂಡತಿಯೇ ವರಾಂಗೀ ಆ ಭೀಷ್ಮಾಚಾರ್ಯರ ಜೊತೆಗೆ ಸಂಗ ಆಗುವುದಿಲ್ಲ, ಅವಳು ಹಾಗೆ

ಮುಂದೆ ದ್ರುಪದ ರಾಜನ ಮನೆಯ ಎದುರಿನಲ್ಲಿ ಪ್ರಾಣವನ್ನು ಬಿಡುತ್ತಾಳೆ, ಅವಳೇ ಮುಂದೆ ಶಿಖಂಡಿಯಾಗಿ ಹುಟ್ಟುತ್ತಾಳೆ ಇತ್ಯಾದಿ ವಿಚಾರಗಳೆಲ್ಲ ನೀವು ಕೇಳಿದ್ದೀರಿ. ಅಂತಹ ಅಂಬಾ ಯಾವ ಸಾಲ್ವ ರಾಜನನ್ನ ಹಿಂದೆ ಬಯಸಿದ್ದಳೋ ಅವನೇ ಬ್ರಹ್ಮದತ್ತ. ಆ ಬ್ರಹ್ಮದತ್ತನಿಗೆ ಇಬ್ಬರು ಹೆಂಡಂದಿರು, ತಾಮ್ರಪರ್ಣೀ ಆಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯ ವ್ಯಾಖ್ಯಾನದಲ್ಲಿ ಸ್ಪಷ್ಟ ಪಡಿಸುತ್ತಾರೆ. ಆ ಬ್ರಹ್ಮದತ್ತ ರಾಜನಿಗೆ ಇಬ್ಬರು ಹೆಂಡಂದಿರು ಹಿರಿಯ ಮಡದಿಯಲ್ಲಿ ಹುಟ್ಟಿದವ ಅವನು ಸಾಲ್ವ ರಾಜ ಸೌಭಪತಿ ಅಂತ. ರುದ್ರ ದೇವರಿಂದ ಅಭೇದ್ಯವಾದ ವಿಮಾನವನ್ನು ಪಡೆದು ಬಂದಂತಹ ಸಾಲ್ವ ರಾಜ ಅವನನ್ನೂ ಕೂಡ ಶ್ರೀಕೃಷ್ಣ ಪರಮಾತ್ಮನೇ ಸಂಹಾರ ಮಾಡುತ್ತಾನೆ. ಇನ್ನೊಬ್ಬ ಕಿರಿಯ ಮಡದಿಯಲ್ಲಿ ಹುಟ್ಟಿದವರು ಇವರಿಬ್ಬರು ಮಧು-ಕೈಟಭರ ಅವತಾರರಾದಂತಹ ಹಂಸ ಮತ್ತು ಡಿಭಿಕರು. ಹೀಗೆ ಬ್ರಹ್ಮದತ್ತನಿಗೇನೆ ಮೂರು ಜನ ಆ ಸೌಭಪತಿ ಸಾಲ್ವ ಒಬ್ಬ,ಹಂಸ ಡಿಭಿಕರು ಇಬ್ಬರು.

ಈ ಬ್ರಹ್ಮದತ್ತ ರಾಜನಿಗೆ ಅತ್ಯಂತ ಪ್ರೀತಿಯ ಒಬ್ಬ ಮಿತ್ರ, ಮಿತ್ರಸಹ ಅಂತೇ ಅವನ ಹೆಸರು, ಅವನು ಒಬ್ಬ ವಿಪ್ರ ಅಂತಹ ವಿಪ್ರನಾದ ಒಬ್ಬ ಗೆಳೆಯ ಈ ಬ್ರಹ್ಮದತ್ತ ರಾಜನಿಗೆ ಇರುತ್ತಾನೆ. ಅವನು ವೇದ ವೇದಾಂತಾದಿ ಶಾಸ್ತ್ರಗಳಲ್ಲಿ ಪಾರಂಗತನಾದಂತಹ ಒಬ್ಬ ದೊಡ್ಡ ಪಂಡಿತ ಮಿತ್ರಸಹಾಚಾರ್ಯ. ಆ ಬ್ರಹ್ಮದತ್ತನಿಗೂ ಹಾಗೂ ಆ ಮಿತ್ರಸಹನಿಗೂ ಇಬ್ಬರೂ ಗೆಳೆಯರು ಇವರಿಬ್ಬರಿಗೂ ಮಕ್ಕಳು ಇರಲಿಲ್ಲ. ಅವನು ವಿಪ್ರ, ಇವನು ರಾಜ ಕ್ಷತ್ರಿಯ. ಆಗ ಬ್ರಹ್ಮದತ್ತ ಹತ್ತು ವರ್ಷಗಳವರೆಗೆ ರುದ್ರ ದೇವರನ್ನು ಕುರಿತು ತಪಶ್ಚರ್ಯವನ್ನು ಮಾಡುತ್ತಾನೆ ಮಕ್ಕಳಾಗಬೇಕು ಅಂತ. ಆ ಮಿತ್ರಸಹಾಚಾರ್ಯ ವೇದ ವೇದಾಂತಾದಿಗಳನ್ನು ಅಧ್ಯಯನ ಮಾಡಿರತಕ್ಕಂತಹ ವ್ಯಕ್ತಿ, ವೇದ ವೇದಾಂತಾದಿಗಳ ಸಾರ ಸರ್ವಸ್ವನಾಗಿರತಕ್ಕಂತಹ ಸರ್ವೋತ್ತಮನಾದ ವಿಷ್ಣುವನ್ನು ಕುರಿತೇ ನಾನು ಭಜನೆ ಮಾಡುವುದು ಅಂತ ಐದು ವರ್ಷಗಳವರೆಗೆ ವಿಷ್ಣುವನ್ನು ಕುರಿತು ತಪಶ್ಚರ್ಯವನ್ನು ಮಾಡುತ್ತಾನೆ ಮಿತ್ರಸಹಾ. ಬ್ರಹ್ಮದತ್ತ ರುದ್ರ ದೇವರನ್ನು ಕುರಿತು ಹತ್ತು ವರ್ಷ ತಪಶ್ಚರ್ಯ ಮಾಡುತ್ತಾನೆ, ರುದ್ರ ದೇವರು ಸ್ವಪ್ನದಲ್ಲಿ ಬ್ರಹ್ಮದತ್ತನಿಗೆ ದರ್ಶನವನ್ನು ಕೊಡುತ್ತಾರೆ, ಪ್ರತ್ಯಕ್ಷವಾಗಿ ಬರುವುದಿಲ್ಲ. ಸ್ವಪ್ನದಲ್ಲಿ ದರ್ಶನವನ್ನು ಕೊಟ್ಟು ಏನಪ್ಪಾ ನಿನಗೆ ಬೇಕು, **'ಸ್ವಪ್ನೇ ರಾಜಾನಮಬ್ರವೀತ್'**[1] ರಾಜ ಹೇಳಿದ, ನನಗೆ ಮಕ್ಕಳಿಲ್ಲ ಇಬ್ಬರು ಮಕ್ಕಳು ಬೇಕು ಅಂತ. ಅದಕ್ಕಾಗಿ ಹತ್ತು ವರ್ಷ ನಾನು ತಪಶ್ಚರ್ಯ ಮಾಡಿದ್ದೇನೆ ಐದೈದು ವರ್ಷ ಒಬ್ಬೊಬ್ಬರಿಗಾಗಿ. **'ಪುತ್ರೌ ಮಮ ಭವೇತಾಂ ಹಿ'**[2] ಇವನು ಹತ್ತು ವರ್ಷ ತಪಶ್ಚರ್ಯ ಮಾಡಿದರೆ ಎರಡೇ ಅಕ್ಷರ ತಥಾ ಇಷ್ಟು ಹೇಳಿದ್ದಾರೆ ಅದೃಶ್ಯರಾಗಿದ್ದಾರೆ ಸ್ವಪ್ನದಲ್ಲಿ ರುದ್ರ ದೇವರು ತಥಾಸ್ತು ಅಂತ ತಥಾ ಅಂತ ಹೇಳಿ. **'ತಥೇತ್ಯುಕ್ತ್ವಾ ವೃಷಧ್ವಜಃ ಅನ್ತರ್ಧಾನಂ ಗತಃ'**[3] ಸರಿ, ರುದ್ರ ದೇವರ ಅನುಗ್ರಹವಾಯಿತು ಅಂತ ಸಂತೋಷ ಪಟ್ಟ.

ಈ ಕಡೆಗೆ ಮಿತ್ರಸಹಾ ಐದು ವರ್ಷ ತಪಶ್ಚರ್ಯ ಮಾಡಿದಾಗ ಪರಮಾತ್ಮ ಅವನಿಗೆ ವರವನ್ನು ಕೊಟ್ಟಿದ್ದಾನೆ, ಶ್ರೇಷ್ಠನಾದ ಸತ್ಪುತ್ರ ಒಬ್ಬ ಮಗನನ್ನ ಪರಮಾತ್ಮ ಅನುಗ್ರಹ ಮಾಡಿದ್ದಾನೆ. ಬ್ರಹ್ಮದತ್ತನಿಗೆ ಇಬ್ಬರು ಮಡದಿಯರು ಚಿಕ್ಕವರು, ಹಿರಿಯ ಮಡದಿ ಬೇರೆ ಆ ಇಬ್ಬರು ಕಿರಿಯ ಮಡದಿಯರಲ್ಲಿ ಇಬ್ಬರು ಮಕ್ಕಳಾಗಿದ್ದಾರೆ, ವಿಪ್ರನಿಗೂ ಕೂಡ ತನ್ನ ಮಡದಿಯಲ್ಲಿ ಒಬ್ಬ ಮಗನಾಗಿದ್ದಾನೆ. ಏಕಕಾಲಕ್ಕೆ ಎಲ್ಲ ಸಂಸ್ಕಾರ ಕರ್ಮಗಳನ್ನು ಮಾಡುತ್ತಾ ಇದ್ದಾರೆ ಜಾತಕರ್ಮ ನಾಮಕರಣ ಒಂದೇ ವಯಸ್ಸು, ಆ ವಿಪ್ರ ತನ್ನ ಮಗನಿಗೆ ಜನಾರ್ದನ ಅಂತ ಹೆಸರು ಇಟ್ಟ. ಈ ಬ್ರಹ್ಮದತ್ತ ತನ್ನ ಇಬ್ಬರು ಮಕ್ಕಳಿಗೆ ಹಂಸ ಮತ್ತು ಡಿಂಭಕ ಅಥವಾ ಡಿಭಿಕ ಎಂಬ ಹೆಸರನ್ನು ಇಟ್ಟಿದ್ದಾನೆ. ಈ ರೀತಿ ಅವರು ಬೆಳೆಯುತ್ತಾ ಇದ್ದಾರೆ. ಆಗ ಆ ಹಂಸ-ಡಿಭಿಕರು ಸ್ವಲ್ಪ ದೊಡ್ಡವರಾದ ಮೇಲೆ ತಮಶ್ಚರ್ಯವನ್ನು ಮಾಡಬೇಕು ಅಂತ ಹೊರಟಿದ್ದಾರೆ. ತಮ್ಮಪ್ಪ ತಮಶ್ಚರ್ಯವನ್ನು ಮಾಡಿ ತಮ್ಮಿಬ್ಬರನ್ನ ಪಡೆದಿದ್ದಾನೆ, ನಾವಿಬ್ಬರು ಮತ್ತೆ

1. 104.8 ಭವಿಷ್ಯಪರ್ವ ; 2.104.9 ಭವಿಷ್ಯಪರ್ವ, 3. 104.9 / 104.10 ಭವಿಷ್ಯಪರ್ವ

ಅದೇ ರುದ್ರ ದೇವರನ್ನೇ ಕುರಿತು ತಪಶ್ಚರ್ಯ ಮಾಡಿ ಯಾರಿಂದಲೂ ಸಾಯಬಾರದು, ಯಾರಿಂದಲೂ ಸೋಲಬಾರದು ಅಂತ ವರ ಪಡೆಯೋಣ ಅಂತ ಹಂಸ-ಡಿಭಿಕರು ತಮಶ್ಚರ್ಯ್ಯವನ್ನು ಮಾಡುತ್ತಾರೆ. **'ವಾಯ್ವಮ್ಬುಪ್ರಾಶಿನೌ ನೃಪ'**[1] ಕೇವಲ ಗಾಳಿ ಮತ್ತು ನೀರನ್ನು ಮಾತ್ರ ಸೇವನೆಯನ್ನು ಮಾಡುತ್ತಾ ಏಕಾಗ್ರ ಮನಸ್ಸಿನಿಂದ ಅವರು ರುದ್ರ ದೇವರ ನಾಮಗಳನ್ನ ಹೇಳುತ್ತಾ ತಮಶ್ಚರ್ಯ್ಯವನ್ನು ಮಾಡುತ್ತಾ ಇದ್ದಾರೆ. ಏಕಾದಶ ರುದ್ರರು ಪ್ರಧಾನ ರುದ್ರ ಒಬ್ಬರೇ ಆದರೆ ಒಟ್ಟು ರುದ್ರರು ಏಕಾದಶ 11 ಜನ ರುದ್ರರು 22 11 2 22, 22 ನಾಮಗಳಿಂದ ಆ ರುದ್ರ ದೇವರ ಸ್ಮರಣೆಯನ್ನು ಮಾಡುತ್ತಾ ವಿಶೇಷವಾಗಿ, ಇದಲ್ಲದೇ ಅನೇಕ ನಾಮಗಳಿಂದಲೂ ಆ ರುದ್ರ ದೇವರ ಸ್ಮರಣೆಯನ್ನು ಮಾಡುತ್ತಾ ಅವರು ಜಪ ಮಾಡುತ್ತಾ ತಮಶ್ಚರ್ಯ್ಯವನ್ನು ಮಾಡಿದ್ದಾರೆ ಏನದು ಅಂತ.

ನಮಸ್ತೇ ದೇವ ದೇವೇತಿ ಶಂಕರೇತಿ ದಿವಾನಿಶಮ್ ।
ಹರ ಶರ್ವ ಶಿವಾನನ್ದ ನೀಲಗ್ರೀವ ಉಮಾಪತೇ ॥ (105.4 ಭವಿಷ್ಯಪರ್ವ)

ವೃಷಧ್ವಜ ವಿರೂಪಾಕ್ಷ ಹರ್ಯಕ್ಷ ಜಗತಾಂ ಪತೇ ।
ಭಕ್ತಪ್ರಿಯ ಗಿರೀಶೇಶ ವಸುದೇವ ಶಿವಾಚ್ಯುತ ॥ (105.5 ಭವಿಷ್ಯಪರ್ವ)

ಸದ್ಯೋಜಾತ ಮಹಾದೇವ ದೇವದೇವ ಗುಹಾಶಯ ।
ಭೂತಭಾವನ ದೇವೇಶ ಪ್ರಣವಾತ್ಮನ್ ಸದಾಶಿವ ॥ (105.6 ಭವಿಷ್ಯಪರ್ವ)

ಇತ್ಯಾದಿ ನಾಮಗಳಿಂದ ರುದ್ರ ದೇವರ ಸ್ತುತಿಯನ್ನು ಮಾಡುತ್ತ ಇದ್ದಾರೆ. ಇಲ್ಲಿ ಹಾಗೆ ನೋಡಿದರೆ ಮೇಲ್ನೋಟಕ್ಕೆ 25 ಹೆಸರುಗಳು ಕಾಣುತ್ತವೆ ಆದರೆ ದೇವ ದೇವ ಎಂಬ ನಾಮ ಎರಡು ಬಾರಿ ಬಂದಿದೆ ಅದೊಂದನ್ನು ನಾವು ಕಡಿಮೆ ಮಾಡಿಕೊಂಡರೆ 24 ಆಗುತ್ತೆ. ಆಮೇಲೆ ಗಿರೀಶ ಈಶ ಅಂತ ಬಿಡಿಸಿದರೆ, ವಾಸುದೇವ ಶಿವ ಅಂತ ಬಿಡಿಸಿದರೆ 24 ಆಗುತ್ತೆ ಆದರೆ ಅದನ್ನು ಕೂಡಿಸಿದರೆ ಗಿರೀಶೇಶ ಒಂದು ಕಡಿಮೆ ಆಯಿತು, ವಾಸುದೇವಶಿವ ಒಂದು ಕಡಿಮೆ ಆಯಿತು ಈ ರೀತಿ ಮಾಡಿಕೊಂಡರೆ 22 ಆಗುತ್ತೆ. ಏನು ವಿಶೇಷ ಅಂತ, ವಾಸುದೇವ ಅನ್ನುವುದು ಭಗವಂತನ ನಾಮ, ಆ ಭಗವಂತನ ನಾಮದಿಂದ ರುದ್ರ ದೇವರನ್ನ ಕರೆದಿಲ್ಲ ಅಂತ ನಾವು ಇಟ್ಟುಕೊಂಡು ವಾಸುದೇವ ಶಿವ ಅಂತ ಎರಡು ಶಬ್ದ ಅಲ್ಲ ವಾಸುದೇವಶಿವ ಅಂತ ಶಬ್ದ. ಆ ವಾಸುದೇವನಾದ ಪರಮಾತ್ಮನ ಪಾದೋದಕವನ್ನ ಧಾರಣೆ ಮಾಡಿದ್ದರಿಂದ ಶಿವನಾದವನು ಅಂತ.

ಯಚ್ಚೌಚನಿಃಸೃತಸರಿತ್ ಪ್ರವರೋದಕೇನ
ತೀರ್ಥೇನ ಮೂರ್ಧ್ನ್ಯಧಿಕೃತೇನ ಶಿವಃ ಶಿವೋಭೂತ್ ॥ (03.29.22 ಭಾಗವತ)

ಅಂತ ಭಾಗವತದಲ್ಲಿ ಹೇಳಿದ ಮಾತನ್ನು ನಾವು ಚಿಂತನ ಮಾಡಿದಾಗ ವಾಸುದೇವನಿಂದ ಶಿವನಾದವನು ಆದ್ದರಿಂದ ವಾಸುದೇವಶಿವ ಅಂತ. 25 ಹೆಸರುಗಳಾದರೆ ಏನು ತಪ್ಪು ಇಲ್ಲ. ಆಗ ವಾಸುದೇವನ ವಿಶೇಷ ಪ್ರೀತಿ ಪಾತ್ರನಾದದ್ದರಿಂದ ವಾಸುದೇವ ಅಂತನ್ನುವ ಅರ್ಥದಲ್ಲಿಯೂ ಬಳಸಬಹುದು ವಾಸುದೇವ ಅಧೀನನಾದರಿಂದ ವಾಸುದೇವ ಅಂತ. ಇನ್ನು ಈ ರೀತಿಯಾಗಿಯೂ ಒಂದು ಚಿಂತನ, ವಾಸುದೇವ 11 ರುದ್ರರು 22 ನಾಮಗಳನ್ನು

1. 105.3 ಭವಿಷ್ಯಪರ್ವ

ಜೋಡಿಸೋಣ ಅಂತ ಅಷ್ಟೇ 25 ಆದರೆ ತಪ್ಪು ಅನ್ನುವ ಅಭಿಪ್ರಾಯ ಸರ್ವಥಃ ಅಲ್ಲ. ಗಿರೀಶೇಶ ಗಿರಿ ಕೈಲಾಸ ಗಿರಿಗೆ ಈಶ ಗಿರೀಶ ಈಶ ಎಲ್ಲರಿಗೆ ನಿಯಾಮಕ ಅಂತ ಬಿಡಿಸಿದರೆ ಅರ್ಥ ಕೂಡಿಸಿದರೆ ಗಿರೀಶೇಶ ಅಂತ ಗಿರೀಶ ಅಂದರೆ ಪರಮಾತ್ಮ ರುದ್ರಾಂತರ್ಗತ ನರಸಿಂಹ ಆಲ್ಲವಾ ಗಿರಿ ಅಹೋಬಲ ಅದಕ್ಕೆ ಈಶ ನರಸಿಂಹ ಗಿರೀಶೇಶ. ಆ ಗಿರೀಶನಾದ ನರಸಿಂಹನೇ ಈಶನಾಗಿ ಉಳ್ಳವ ಗಿರೀಶೇಶ, ಗಿರಿ ವೇಂಕಟಗಿರಿ ಗಿರೀಶ ವೇಂಕಟಗಿರೀಶ ಅವನೇ ಈಶನಾಗಿ ಇದ್ದವ ಗಿರೀಶೇಶ ಅಂತ ಅತೀ ಪ್ರೀತಿಯಿಂದ ವೇಂಕಟೇಶ ದೇವರು ವೇಂಕಟೇಶ ಮಹಾತ್ಮ್ಯದಲ್ಲಿ ರುದ್ರ ದೇವರನ್ನ ಮೊಮ್ಮಗ ಅಂತ ಮಾತನಾಡಿಸಿದ ಕಥೆಯನ್ನು ನೀವು ಕೇಳುತ್ತೀರಾ ಆದ್ದರಿಂದ ಗಿರೀಶೇಶ ಅಥವಾ ಗಿರಿ ಅಂದರೆ ಮುಖ್ಯಪ್ರಾಣ ದೇವರು.

ಗಿರಿಃ ಪ್ರಾಣಃ ಸಮುದ್ದಿಷ್ಟಃ ತತ್ಸುತಾ ವೇದವಾಕ್ ಸ್ಮೃತಾ ।

ಅಂತ ಚತುರ್ಥಸ್ಕಂಧ ತಾತ್ಪರ್ಯದಲ್ಲಿ ಶ್ರೀಮದಾಚಾರ್ಯರು ಹೇಳಿದಂತೆ ಗಿರಿ ಅಂದರೆ ಮುಖ್ಯಪ್ರಾಣ ದೇವರು. ಗಿರೀಶ ಮುಖ್ಯಪ್ರಾಣ ದೇವರಿಗೆ ಈಶನಾಗಿ ಇರುವಂತಹ ಪರಮಾತ್ಮ ಅವನೇ ಈಶ ಸ್ವಾಮಿಯಾಗಿದ್ದವರು ರುದ್ರ ದೇವರು ಆದ್ದರಿಂದ ಗಿರೀಶೇಶ ಅಂತ. ಶಿವಾನಂದ ಶಿವ **'ಸರ್ವಃ ಶರ್ವಃ ಶಿವಃ ಸ್ಥಾಣು'** ಅಂತ ವಿಷ್ಣುಸಹಸ್ರನಾಮ ಶಿವ ಅಂದರೆ ಪರಮಾತ್ಮ ವಿಷ್ಣು, ಅವನಲ್ಲಿ ಅವನ ಚಿಂತನದಲ್ಲಿ ಧ್ಯಾನದಲ್ಲಿ ಯಾರಿಗೆ ಆನಂದವೋ ಅಂತಹ ರುದ್ರ ದೇವರು ಶಿವಾನಂದ ಅಂತ ಹೀಗೆ ಶಿವಾನಂದ ಗಿರೀಶೇಶ ವಾಸುದೇವಶಿವ ಈ ಎಲ್ಲ ಅಪರೂಪದ ಶಬ್ದಗಳ ಅಭಿಪ್ರಾಯವನ್ನು ನಾವು ಈ ರೀತಿಯಾಗಿ ಚಿಂತನ ಮಾಡಬಹುದು.

ಇಬ್ಬರು ಅಹಂಕಾರ ಮಮಕಾರಗಳನ್ನು ಬಿಟ್ಟು ಮೌನವ್ರತದಲ್ಲಿ ನೀರು ಗಾಳಿಗಳನ್ನು ಮಾತ್ರ ಸೇವಿಸಿ **'ವರ್ಷಾಣೀಹ ತದಾ ಪಂಚ'** ಐದು ವರ್ಷಗಳವರೆಗೆ ತಪಶ್ಚರ್ಯವನ್ನು ಮಾಡಿದ್ದಾರೆ ಆಗ ಆಶುತೋಷ ಶೀಘ್ರದಲ್ಲಿ ಪ್ರಸನ್ನರಾಗುವಂತಹ ಮಹಾನುಭಾವರು ರುದ್ರ ದೇವರು ಐದೇ ವರ್ಷದಲ್ಲಿ ಪ್ರಸನ್ನರಾಗಿದ್ದಾರೆ. ಪ್ರಸನ್ನರಾದಾಗ ಏನು ಬೇಕು ವರ ಕೇಳಿ ಅಂತ ರುದ್ರ ದೇವರು ಕೇಳಿದ್ದಕ್ಕೆ ಇವರು ಹೇಳುತ್ತಾರೆ, ದೇವತೆಗಳು ಯಕ್ಷರು ಗಂಧರ್ವರು ದಾನವರು ಯಾರೂ ನಮ್ಮನ್ನು ಸೋಲಿಸಬಾರದು, ನಾವು ಸಾಯಬಾರದು ಆ ರೀತಿ ಒಂದು ವರ. ಇನ್ನೊಂದು ನಮಗೆ ಅನೇಕ ಅಸ್ತ್ರಗಳು ಬೇಕು ರೌದ್ರಾಸ್ತ್ರ ಬ್ರಹ್ಮಶಿರಸ್ ಮತ್ತು ಅಭೇದ್ಯವಾದ ಕವಚ ಬೇಕು, ಅಭೇದ್ಯವಾದಂತಹ ಧನುಸ್ಸು ಮತ್ತು ಪರಶು ಇವುಗಳೆಲ್ಲ ನಮಗೆ ಬೇಕು ಮತ್ತೆ ನಿಮ್ಮ ಭೂತ ಗಣಗಳಲ್ಲಿರುವವರು ಇಬ್ಬರು ನಮಗೆ ಸಹಾಯಕರಾಗಿ ಬೇಕು ಇಬ್ಬರನ್ನು ಕೊಟ್ಟು ಕಳಿಸಬೇಕು. ಏನಪ್ಪಾ ಇದು ವರ ಭಾರೀ ಆಯಿತಲ್ಲ ಅಜಯರಾಗಬೇಕು,ಅವಧ್ಯರಾಗಬೇಕು, ಅಭೇದ್ಯವಾದ ಕವಚ ಧನುಸ್ಸು ಎಲ್ಲಾ ಬೇಕು, ಆಯುಧಗಳು ಬೇಕು ಇದಕ್ಕೆ ಮೇಲೆ ನನ್ನವರೇ ಇಬ್ಬರು ನಿಮಗೆ ಸಹಾಯಕರಾಗಿ ಬರಬೇಕು ತಥಾಸ್ತು ಅಂದಿದ್ದಾರೆ ಅವರ ತಪಸ್ಸಿಗೆ ಪ್ರಸನ್ನರಾಗಿ ಇಬ್ಬರನ್ನು ಕೊಟ್ಟು ಕಳಿಸಿದ್ದಾರೆ. ಅವರು ಯಾರು ಅಂತ ಹೇಳುತ್ತಾರೆ ಮಹೋದರ ಮತ್ತು ಕುಂಡಧಾರಿ ಅಂತ ಇಬ್ಬರನ್ನ ಕೊಟ್ಟು ಕಳಿಸಿದ್ದಾರೆ ಅಂತ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಶ್ರೀಮದಾಚಾರ್ಯರು ತಿಳಿಸುತ್ತಾರೆ, ಹರಿವಂಶದಲ್ಲಿ ಕುಂಡೋದರ ಮತ್ತು ವಿರೂಪಾಕ್ಷ ಅಂತ ಇಬ್ಬರನ್ನ ಕಳಿಸಿದ್ದಾರೆ ಅಂತ ಇಲ್ಲಿ ಹೇಳುತ್ತಾರೆ. ಹೀಗೂ ತಿಳಿಯಬಹುದು ವಿರೂಪಾಕ್ಷ, ವಿರೂಪಾಕ್ಷರಾದ ರುದ್ರ ದೇವರ ದಾಸರಾದದ್ದರಿಂದ ಅವರಿಗೂ ಸ್ವಲ್ಪ ವಿರೂಪಾಕ್ಷತ್ವ ಬಂದಿತ್ತು ಏನೋ ಅನ್ನುವುದಕ್ಕೆ ವಿರೂಪಾಕ್ಷರಾದ ಇವರಿಬ್ಬರು, ಯಾರಿಬ್ಬರು ಮಹೋದರ ಮತ್ತು ಕುಂಡಧಾರಿ ಅಂತ ಇಬ್ಬರನ್ನು ಸೇರಿಸಿ ಒಂದೇ ಹೆಸರಿನಲ್ಲಿ ಹೇಳಿದೆ ಕುಂಡೋದರ ಅಂತ ಹರಿವಂಶ ಕುಂಡೋದರ ಅಂತ ಕರೆದಿದೆ. ಕುಂಡೋದರ ಅಂತ ಒಬ್ಬ ಅಲ್ಲ ಅದರೊಳಗೆ ಕುಂಡಧಾರಿ ಒಬ್ಬ, ಮಹೋದರ ಇನ್ನೊಬ್ಬ

ಮಹೋದರ ಕುಂಡಧಾರಿ ಅಂತ ಇಬ್ಬರು ಅಂತ ಶ್ರೀಮದಾಚಾರ್ಯರು ಅದರ ವಿಭಾಗವನ್ನು ಮಾಡಿ ನಮಗೆ ತಿಳಿಸಿಕೊಟ್ಟರು ಹಾಗಾದರೆ ಕುಂಡೋದರ ಮತ್ತು ವಿರೂಪಾಕ್ಷ ಅಂತ ಇದೆ ಅಲ್ಲ ಅಂದರೆ ಆ ಕುಂಡ ಮತ್ತು ಉದರ.

ಕುಂಡಶ್ಚ ಉದರಶ್ಚ ಹನಯೋಃ ಸಮಾಹಾರಃ ಕುಂಡೋದರಂ ।

ಆ ಕುಂಡೋದರ ಇಬ್ಬರು ಹೇಗಿದ್ದರು ಅಂದರೆ ವಿರೂಪಾಕ್ಷರಾಗಿ ಇದ್ದರು ಅಂತ ವಿಶೇಷಣ ಅದು. ಈ ದೃಷ್ಟಿಯಲ್ಲಿ ಇಟ್ಟುಕೊಂಡರೆ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಹೇಳಿದ್ದು ಇಲ್ಲಿ ನಮಗೆ ತಿಳಿದು ಬರುತ್ತದೆ ಅಂತ ಅರ್ಥ ಮಾಡಿಕೊಳ್ಳಬಹುದು. ಕೆಲವು ವ್ಯಾಖ್ಯಾನಕಾರರ ಅಭಿಪ್ರಾಯ ಏನು ಅಂದರೆ ಒಟ್ಟು ನಾಲ್ಕು ಜನರನ್ನು ಕಳಿಸಿದ್ದಾರೆ ಅಂತ ಭೃಂಗಿ, ರಿಟಿ, ಕುಂಡೋದರ, ವಿರೂಪಾಕ್ಷ ಮತ್ತೆ ಇಬ್ಬರು ಅಂತ ಅವನು ಕೇಳಿದ್ದರೆ ನಾಲ್ಕು ಜನರನ್ನು ಇವರು ಯಾಕೆ ಕಳಿಸಿದ್ದು ಅಂತ ಕೇಳಿದರೆ ಅದಕ್ಕೆ ಗುಂಪು ಅಂತ ಭೃಂಗಿ - ರಿಟಿ ಅವರ ಒಂದು ಗುಂಪು, ಮಹೋದರ-ಕುಂಡಧಾರಿ ಇವರಿಬ್ಬರ ಗುಂಪು ಒಂದು ಹೀಗೆ ಇಬ್ಬರನ್ನ ಅಂತ ಎರಡು ಗುಂಪುಗಳನ್ನು ಕಳಿಸಿದರು ಅಂತ ಇಲ್ಲಿಯ ಹರಿವಂಶದ ವ್ಯಾಖ್ಯಾನಕಾರರ ಅಭಿಪ್ರಾಯ ಇರಲಿ. ಶ್ರೀಮದಾಚಾರ್ಯರು ಹೇಳಿದ ರೀತಿಯಲ್ಲಿ ಆ ಮಹೋದರ ಮತ್ತು ಕುಂಡಧಾರಿ ಅಂತ ಅವರಿಬ್ಬರನ್ನ ಕೊಟ್ಟು ಕಳಿಸಿದ್ದಾರೆ ಅವರಿಗೂ ವರ ನೀವು ಸೋಲಲೇಬಾರದು ಅಂತ. ಎಷ್ಟು ಸೂಕ್ಷ್ಮ ವಿಚಾರಗಳನ್ನು ಶ್ರೀಮದಾಚಾರ್ಯರು ತಿಳಿಸುತ್ತಾರೆ ಅವರಿಗೂ ಸೋಲಬಾರದು ಅಂತ ವರ ಇದ್ದರೆ ಅವರಿಗೂ ಅಹಂಕಾರ ಬಂದುಬಿಡುತ್ತದೆ ಈ ಹಂಸ-ಡಿಭಿಕರರಿಗೆ ಅವರು ಯಾಕೆ ಅನುಚರರಾಗಿ ಕೆಲಸ ಮಾಡುತ್ತಾರೆ, ನಮಗೂ ವರ ಕೊಟ್ಟಿದ್ದಾರೆ ರುದ್ರ ದೇವರು ಯಾರಿಂದಲೂ ಸೋಲಬಾರದು ಅಂತ ನಿಮಗೂ ಕೊಟ್ಟಿದ್ದಾರೆ ನೀವು ನಾವು ಇಬ್ಬರೂ ಸಮಾನ ನಿಮಗೆ ಯಾಕೆ ನಾವು ಸಹಾಯಕರಾಗಬೇಕು ನಾವೇ ರಾಜರು, ನಿಮಗೆ ಅನುಚರರು ಆಗಬೇಕು ಯಾಕೆ ಅಂತ ಅವರು ಕೇಳಬಾರದು ಅಂತ ರುದ್ರ ದೇವರು ವರ ಹೇಗೆ ಕೊಟ್ಟಿದ್ದರು ಅಂತ ಶ್ರೀಮದಾಚಾರ್ಯರು ತಿಳಿಸುತ್ತಾರೆ.

ತಯೋಸ್ಸಹಾಯ ಏವ ತೌ ವರಾತ್ ಶಿವಸ್ಯ ಭೂತಕೌ ।
ಅಜೇಯತಾಂ ಅವಾಪತುಃ ನ ಚ ಅನ್ಯಥಾऽಮರಾವಪಿ ॥

ಇವರಿಬ್ಬರಿಗೆ ನೀವು ಸಹಾಯಕರಾಗಿ ಅನುಚರರಾಗಿ ಅನುಸರಿಸಿ ಇದ್ದರೆ ಮಾತ್ರ ನಾನು ಕೊಟ್ಟ ಅಜೇಯತ್ವ ವರ ನಿಮಗೆ ಫಲಕಾರಿ ಆಗುತ್ತದೆ, ನೀವೇನಾದರೂ ಅವರಿಗೆ ಎದುರು ಮಾತನಾಡಿದರೆ ನಾನು ಕೊಟ್ಟ ಅಜೇಯತ್ವ ವರ ನಿಮಗೆ ಫಲಕಾರಿ ಆಗುವುದಿಲ್ಲ. ಹೀಗೆ ಹೇಳಿದ್ದರಿಂದ ಅನಿವಾರ್ಯವಾಗಿ ಹಂಸ-ಡಿಭಿಕರಿಗೆ ಅನುಯಾಯಿಗಳಾಗಿ ಅವರು ಇರಬೇಕಾಗಿತ್ತು ಆ ರೀತಿ ರುದ್ರ ದೇವರು ವರ ಕೊಟ್ಟು ಕಳಿಸಿದ್ದಾರೆ ಅಂತಹ ವರವನ್ನು ಪಡೆದುಕೊಂಡಂತಹ ಅವರು ಇವರಿಗೆ ಸಹಾಯಕರಾಗಿ ಬಂದಿದ್ದಾರೆ. ಇವರು ನಿತ್ಯದಲ್ಲಿಯೂ ರುದ್ರ ದೇವರ ವರದಿಂದಲೇ ತಾವು ಇಬ್ಬರು ಹುಟ್ಟಿದ್ದು ತಮ್ಮಪ್ಪನಿಗೆ ಈಗ ಪುನಃ ಆ ರುದ್ರ ದೇವರ ವರದಿಂದಲೇ ಅಜೇಯರಾಗಿ ಅವಧ್ಯರಾಗಿ ಈ ಭೂತಗಳನ್ನು ಪಡೆದದ್ದು ಸಹಾಯವಾಗಿ ಅಂತ ಒಂದು ಅವರಲ್ಲಿರುವಂತಹ ಮೆಚ್ಚಬೇಕಾದ ಗುಣ ಅಂದರೆ ನಿತ್ಯದಲ್ಲಿ ರುದ್ರ ದೇವರ ಪೂಜೆಯನ್ನು ಮಾಡುತ್ತ ಇದ್ದರು. ಕೆಲವರೆಲ್ಲ ವರ ಪಡೆದ ಮೇಲೆ ಆ ವರ ಕೊಟ್ಟ ದೇವತೆಯನ್ನು ಮರೆತು ಬಿಟ್ಟು ಅವನನ್ನೇ ವಿರೋಧ ಮಾಡುವಂತಹ ಜನ, ಇವರು ದುಷ್ಟರೇ ಮಧು-ಕೈಟಭರು, ಹಂಸ-ಡಿಭಿಕರು ಆದರೆ ಏನೋ ರುದ್ರ ದೇವರ ಪೂಜೆಯನ್ನಂತೂ ನಿತ್ಯದಲ್ಲಿ ಅತ್ಯಂತ ಭಕ್ತಿಯಿಂದ ಮಾಡುತ್ತ ಇದ್ದರು.

ಅತ್ಯನ್ತಭಕ್ತೌ ದೇವೇಶೇ ಶಂಕರೇ ನೀಲಲೋಹಿತೇ ॥ (105.19 ಭವಿಷ್ಯಪರ್ವ)

ನಿತ್ಯೋತ್ಸವಕರೌ ದೇವೇ ಭಸ್ಮೋದ್ಧೂಲನಶೋಭಿನೌ । (105.20 ಭವಿಷ್ಯಪರ್ವ)

ನಿತ್ಯ ರುದ್ರ ದೇವರಿಗೆ ಉತ್ಸವ ಮಾಡುತ್ತಾರೆ, ಪೂಜೆಯನ್ನು ಮಾಡುತ್ತಾರೆ ನಿಜವಾಗಿ ರುದ್ರ ದೇವರಲ್ಲಿ ಭಕ್ತಿಯಿಂದ ಪೂಜೆ ಮಾಡುತ್ತ ಇಲ್ಲ ಸ್ವಾರ್ಥಕ್ಕಾಗಿ ಮಾಡುತ್ತ ಇದ್ದಾರೆ ಅಂತೂ ಮಾಡುತ್ತ ಇದ್ದಾರೆ ಇಷ್ಟು ನಿಜ ಪೂಜೆಯನ್ನ. ಆ ರೀತಿ ಅವರಿಬ್ಬರೂ ಕೂಡ ಪೂಜೆಯನ್ನು ಮಾಡುತ್ತಾ ತಮ್ಮ ಮನೆಯಲ್ಲಿ ಇದ್ದಾರೆ ಬ್ರಹ್ಮದತ್ತ ತಮ್ಮಪ್ಪ ಆ ಅಪ್ಪನ ಪಾದವನ್ನು ಹಿಡಿದು ತಾವು ಏನು ವರ ಪಡೆದುಕೊಂಡು ಬಂದಿದ್ದಾರೆ ಅದನ್ನು ತಿಳಿಸಿಕೊಟ್ಟಿದ್ದಾರೆ. ಈ ಕಡೆಗೆ ಆ ಮಿತ್ರಸಹಾಚಾರ್ಯರ ಮಗ ಜನಾರ್ದನಾಚಾರ್ಯ ಆ ಜನಾರ್ದನಾಚಾರ್ಯ ಬ್ರಹ್ಮದತ್ತನ ಗೆಳೆಯನ ಮಗ ಅವನು ವೇದಾದಿ ವಿದ್ಯೆಗಳನ್ನು ಚೆನ್ನಾಗಿ ಕಲಿತುಕೊಂಡು ವಿದ್ಯೆಯ ಪಾರವನ್ನು ಮುಟ್ಟಿದ್ದಾನೆ ಅರ್ಥಾತ್ ವೇದಗಳು, ಷಡಂಗಗಳು, ಉಪನಿಷತ್ತುಗಳು, ವೇದಾಂತಗಳು ಎಲ್ಲವನ್ನೂ ಅಧ್ಯಯನ ಮಾಡಿದ್ದಾನೆ.

ವಿದ್ಯಾಪಾರಂ ಮಹಾಬುದ್ಧಿರ್ಯುಕ್ತೇನಾಸಾವುಪೇಯಿವಾನ್ ॥ (105.24 ಭವಿಷ್ಯಪರ್ವ)

ವಿದ್ಯೆಯ ಪಾರವನ್ನು ಅರ್ಥಾತ್ ತನ್ನ ಯೋಗ್ಯತೆಗೆ ತಕ್ಕಷ್ಟು ವಿದ್ಯೆಯನ್ನ ಅಭ್ಯಾಸ ಮಾಡಿದ್ದಾನೆ. ಅವನು ಮಾತ್ರ ನಿತ್ಯದಲ್ಲಿ ವಿಷ್ಣು ಭಕ್ತ, ಇವರಿಬ್ಬರೂ ಹಂಸ-ಡಿಭಿಕರು ಶಿವನ ಪೂಜೆಯನ್ನು ಮಾಡುತ್ತ ಇದ್ದಾರೆ, ಆ ಜನಾರ್ದನಾಚಾರ್ಯರು ನಿತ್ಯದಲ್ಲಿ ಪರಮಾತ್ಮನ ಪೂಜೆಯನ್ನು ವಿಷ್ಣುವಿನ ಪೂಜೆಯನ್ನು ಮಾಡುತ್ತಾನೆ, ವಿಷ್ಣುವನ್ನೇ ಧ್ಯಾನ ಮಾಡುತ್ತಾನೆ. ಮುರೂ ಜನರಿಗೂ ಮದುವೆಯಾಗಿದೆ ಎಲ್ಲಾ ಏಕ ಕಾಲಕ್ಕೆ, ಎಲ್ಲರೂ ಕೂಡ ಸ್ವದಾರ ನಿರತರಾಗಿ, ಗುರು ಶುಶ್ರೂಷಾರತರಾಗಿ ಧರ್ಮದಲ್ಲಿ ರತರಾಗಿದ್ದಾರೆ ಅವರಿಬ್ಬರು ಶಿವಭಕ್ತರಾಗಿ, ಇವನೊಬ್ಬ ವಿಷ್ಣು ಭಕ್ತನಾಗಿ ಅಂತೂ ಅವರವರ ಧರ್ಮದಲ್ಲಿ ಅವರವರು ಆಸಕ್ತರಾಗಿ ಇದ್ದಾರೆ. ಈ ರೀತಿ ಕೆಲವು ದಿನಗಳು ಕಳೆಯುತ್ತಾ ಇದೆ ಹಂಸ-ಡಿಭಿಕರಿಗೆ ಸಹಜವಾಗಿಯೇ ಅವರು ಕ್ಷತ್ರಿಯರೂ ಹೌದು, ಮೂಲರೂಪದಲ್ಲಿ ಅಸುರರೂ ಹೌದು ಹಿಂಸೆ ಮಾಡುವುದು ಸಹಜವಾದಂತಹ ಸ್ವಭಾವ ಪ್ರಾಯಃ ಹಿಂಸೆ ಮಾಡುತ್ತಾರೆ ಅನ್ನುವುದಕ್ಕೇನೆ ಈ ಹೆಸರುಗಳು ಬಂದಿದೆ ಅವರಿಗೆ. **'ನಿರುಕ್ತತ್ವಾತ್ ವರ್ಣಾಗಮೋ ವರ್ಣವಿಪರ್ಯಯಶ್ಚ'** ಅಂತ ಹೇಳಿದ ರೀತಿಯಲ್ಲಿ ಹನನ ಮಾಡುತ್ತಾನೆ ಅನ್ನುವುದಕ್ಕೆ ಹಂಸ, ಹಿಂಸೆ ಮಾಡುತ್ತಾನೆ ಅನ್ನುವುದಕ್ಕೆ ಹಂಸ, ಡಿಭ ಅನ್ನುವುದಕ್ಕೂ ಹಿಂಸೆ ಅಂತೇ ಅರ್ಥ ಹಿಂಸೆ ಮಾಡುತ್ತಾನೆ ಅದಕ್ಕೆ ಡಿಭಿಕ ಡಿಂಭಕ ಅಂತ ಹೆಸರು ಹೀಗಾಗಿ ಆ ಹಂಸ-ಡಿಭಿಕರು ಹಂಸ-ಡಿಂಭಕರು ಎಲ್ಲ ಮೃಗಗಳ ಹಿಂಸೆಯನ್ನು ಮಾಡುವುದಕ್ಕೆ ಹೊರಟಿದ್ದಾರೆ ಬೇಟೆಯಾಡುವುದಕ್ಕೆ. ಹುಲಿಗಳನ್ನು ಸಿಂಹಗಳನ್ನು ವರಾಹಗಳನ್ನು ಇನ್ನನೇಕ ಮೃಗಗಳನ್ನ ಎಲ್ಲ ಹಿಂಸೆ ಮಾಡುತ್ತ ಇದ್ದಾರೆ ತಮ್ಮ ಜೊತೆಗೆ ಅನೇಕ ನಾಯಿಗಳನ್ನೆಲ್ಲ ಕರೆದುಕೊಂಡು ಹೋಗಿದ್ದಾರೆ, ಎಲ್ಲ ಕಡೆಗೆ ಬೇಟೆಯಾಡುತ್ತಾ ಇದ್ದಾರೆ. ಬೇಟೆಯಾಡುತ್ತಾ ಇರುವಾಗ ಇಡೀ ಅರಣ್ಯದ ತುಂಬಾ ಇವರ ಧ್ವನಿಗಳೇ, ಇವರು ಇವರ ಅನುಚರರ ಧ್ವನಿಗಳು ಸಂಛ್ಛಿಧಿ ಅಲ್ಲಿ ಹೊಡಿ, ಇಲ್ಲಿ ಬಡಿ ಇದೇ ಮಾತುಗಳು ಎಲ್ಲ ಕಡೆಗೆ ಕೇಳಿಸುತ್ತಾ ಇವೆ.

ಏತೇ ಖಲು ಮೃಗಾಃ ಸಾರ್ಧಂ ಶಾವೈರ್ಬಾಧನ್ತಿ ಸರ್ವಶಃ । (106.5 ಭವಿಷ್ಯಪರ್ವ)

ಒಂದು ಸೂಕ್ಷ್ಮವನ್ನು ಗಮನಿಸಿ ಕೆಲವು ಮೃಗಗಳನ್ನು ಹೊಡೆಯಬೇಕು ಅಂತ ಅವರು ಹೊರಟರೆ ಅವು ಮರಿಗಳ ಜೊತೆ ಜೊತೆಗೆ ಓಡಾಡುತ್ತಿದ್ದವಂತೆ ಇವರಿಗೆ ಸಿಟ್ಟು ಬರುತ್ತಾ ಇತ್ತು. ಆ ಮರಿಗಳಿಗೆ ಹೊಡೆಯುವುದಕ್ಕೆ ಮನಸ್ಸಿಲ್ಲ ಮರಿಗಳ ಜೊತೆಗೆ ಓಡಾಡುತ್ತವೆ ಇವು ಎಷ್ಟು ಮನಸ್ಸಿಗೆ ನಮಗೆ ಬಾಧೆ ಕೊಡುತ್ತವೆ. ಬಿಡಿಯಾಗಿ

ಪ್ರತ್ಯೇಕವಾಗಿ ಓಡಾಡಿದರೆ ನಾವು ಕೊಂದು ಬಿಡಬಹುದು, ಮರಿಗಳ ಜೊತೆಗೆ ಓಡಾಡಿದರೆ ಹೇಗೆ ಕೊಲ್ಲುವುದು ಮನಸ್ಸು ಬರುವುದಿಲ್ಲವಲ್ಲ ಅಂತ ಒದರಾಡುತ್ತಾ ಇದ್ದರಂತೆ ಹಂಸ-ಡಿಭಿಕರು. ಜೊತೆಗೆ ಕೆಲವಂತೂ ಹೆಣ್ಣು ಮೃಗಿಗಳು ಆ ಮೃಗಿಗಳ ಮರಿಗಳು ತಾಯಿಯ ಹಾಲನ್ನು ಕುಡಿಯುವಂತಹ ಸಂದರ್ಭದಲ್ಲಿ ಇವರಿಗೆ ಬೇಟೆ ಆಡುವುದು ಕಷ್ಟ ಆಗುತ್ತಾ ಇತ್ತಂತೆ.

ಶಾವಂ ಸ್ತನಂ ಪಿಬತ್ಸಾಧು ಹನ್ತವ್ಯಮಿದಂ ಶುಭಮ್ । (106.6 ಭವಿಷ್ಯಪರ್ವ)

ಆ ಅವಸ್ಥೆಯಲ್ಲಿ ತಾಯಿಯ ಹಾಲನ್ನು ಕುಡಿಯುವಾಗ ಆ ತಾಯಿಯನ್ನು ಕೊಲ್ಲುವುದು ಸರಿಯಲ್ಲ ಅಂತ ಅಂದರೆ ಬೇಟೆ ಆಡುವಾಗಲೂ ಒಂದು ತರಹದ ಧರ್ಮವನ್ನ ಶಾಸ್ತ್ರ ಹೇಳಿದೆ ಅದನ್ನು ಅನುಸರಣೆ ಮಾಡುತ್ತ ಇದ್ದಾರೆ, ಇವರು ದುಷ್ಟರೇ ಆದರೂ ಯಾವುದು ಗುಣವೋ ಅದನ್ನು ತಿಳಿದುಕೊಳ್ಳಬೇಕು. ಆ ಬೇಟೆಯ ಧರ್ಮವನ್ನು ಪರಿಪಾಲನೆ ಮಾಡುತ್ತಾ ಇದ್ದಾರೆ ಕೊಲ್ಲುತ್ತಾ ಇಲ್ಲ, ಕಾಯ್ದು ಕೊಲ್ಲುತ್ತ ಇದ್ದಾರೆ ಹಾಲು ಕುಡಿದಾದ ಮೇಲೆ ಕೊಲ್ಲುತ್ತಾ ಇದ್ದಾರೆ ಹಾಗೆ. ಈ ರೀತಿ ಘೋರವಾದ ಆ ಬೇಟೆಯನ್ನೆಲ್ಲ ಮಾಡುತ್ತ ಇದ್ದಾರೆ. ಬಹಳ ಶ್ರಮವಾಗಿದೆ ಕೊನೆಗೆ ಆ ಶ್ರಮವಾಗಿ ಒಂದು ಕಡೆಗೆ ಎಲ್ಲಾದರೂ ಕುಳಿತು ನೀರು ಕುಡಿಯಬೇಕು, ಶ್ರಮ ಪರಿಹಾರ ಮಾಡಿಕೊಳ್ಳಬೇಕು ಅಂತ ಹುಡುಕುತ್ತ ಇದ್ದಾರೆ ಒಂದು ಸರೋವರ ಕಂಡಿದೆ. ಯಾವ ಸರೋವರ ಪುಷ್ಕರ, ದೊಡ್ಡ ಸರೋವರ ಬ್ರಹ್ಮ ದೇವರ ದೇವಸ್ಥಾನ ಇರುವಂತಹ, ಸರಸ್ವತಿಯ ದೇವಸ್ಥಾನ ಆ ಕ್ಷೇತ್ರ ಅಲ್ಲಿರುವಂತಹ ಸರೋವರ ಪುಷ್ಕರ ಆ ಪುಷ್ಕರ ಸರೋವರಕ್ಕೆ ಬಂದಿದ್ದಾರೆ. ಅತ್ಯಂತ ಶಾಂತವಾದ ಪ್ರದೇಶ ಋಷಿ ಮುನಿಗಳ ಆಶ್ರಮ **'ವೀಜನ್ ಮಾರುತಸಾನೂಪಂ'**[1] ನೀರಿರುವ ಪ್ರದೇಶ, ತಂಪಾದ ಗಾಳಿ, ವಿಶ್ರಾಂತಿಗೆ ಉತ್ತಮವಾದ ಸ್ಥಾನ ಅಂತ ಅಲ್ಲಿ ಬಂದಿದ್ದಾರೆ ನೀರು ಕುಡಿದಿದ್ದಾರೆ. ಅನೇಕ ಜನ ಋಷಿಗಳು ಮುನಿಗಳು ಅಲ್ಲಿ ತಪಶ್ಚರ್ಯವನ್ನು ಮಾಡುತ್ತ ಇದ್ದರು ಅದರಲ್ಲಿ ಕಶ್ಯಪ ಋಷಿಗಳ ಆಶ್ರಮದಲ್ಲಿ ಇವರು ಪ್ರವೇಶ ಮಾಡಿದ್ದಾರೆ ಆ ಕಶ್ಯಪ ಋಷಿಗಳ ಆಶ್ರಮದಲ್ಲಿ ಸಾಕಷ್ಟು ಜನ ಋಷಿಗಳು ಮುನಿಗಳು ಯಜ್ಞ ಯಾಗಾದಿಗಳನ್ನೆಲ್ಲ ವೈಭವದಿಂದ ಮಾಡುತ್ತ ಇದ್ದಾರೆ. ಇವರು ಬಂದದ್ದಕ್ಕೆ ಒಳ್ಳೆಯ ರಾಜಕುಮಾರರು ಕಂಡ ಹಾಗೆ ಕಾಣಿಸುತ್ತ ಇದ್ದಾರೆ ಆ ಜನಾರ್ದನಾಚಾರ್ಯ ಅಂತೂ ಒಳ್ಳೆಯ ಬ್ರಾಹ್ಮಣ ಅನ್ನುವುದಕ್ಕೆ ಯೋಗ್ಯವಾದಂತಹ ಸತ್ಕಾರವನ್ನು ಮಾಡಿದ್ದಾರೆ ಕಶ್ಯಪರ ಆಶ್ರಮದಲ್ಲಿ ಋಷಿ ಮುನಿಗಳು. ಬಂದಂತಹ ಅತಿಥಿಗಳಿಗೆ ಸತ್ಕಾರ ಮಾಡಬೇಕು ಅಂತ ಇವರಿಗೆ ಯೋಗ್ಯವಾದ ಸತ್ಕಾರವನ್ನೆಲ್ಲ ಮಾಡಿದ ಮೇಲೆ ಇವರಿಬ್ಬರು ಹೇಳುತ್ತಾರೆ ನಮ್ಮಪ್ಪ ಬ್ರಹ್ಮದತ್ತ ನಾವು ಅವನ ಮಕ್ಕಳು, ನಮ್ಮಪ್ಪ ರಾಜಸೂಯ ಯಾಗವನ್ನು ಮಾಡಬೇಕು ಅಂತ ಅನ್ನುತ್ತಾನೆ. ನೀವೆಲ್ಲಾ ಆ ರಾಜಸೂಯ ಯಾಗಕ್ಕೆ ಬರಬೇಕು, ನೀವೆಲ್ಲ ಋತ್ವಿಜರಾಗಿದ್ದು ನಮ್ಮಪ್ಪನಿಂದ ಆ ರಾಜಸೂಯ ಯಾಗವನ್ನು ಮಾಡಿಸಬೇಕು ಅಂತ ಹಂಸ-ಡಿಭಿಕರು ಆ ಋಷಿ ಮುನಿಗಳಿಗೆ ಕೇಳಿಕೊಂಡಿದ್ದಾರೆ.

ಶ್ರೀಮದಾಚಾರ್ಯರು ಇಲ್ಲಿ ನಿರ್ಣಯವನ್ನು ಕೊಡುತ್ತಾರೆ. ರಾಜಸೂಯ ಯಾಗ ಇದು ವೈಷ್ಣವ ಯಾಗ, ವಿಷ್ಣುವನ್ನ ವಿಶೇಷವಾಗಿ ಪೂಜ್ಯ ಅಂತ ಇಟ್ಟುಕೊಂಡು ವಿಷ್ಣು ಪ್ರೀತಿಗಾಗಿ ಮಾಡುವಂತಹ ವಿಷ್ಣು ದೇವತಾಕವಾದಂತಹ ಯಾಗ ಇದು ರಾಜಸೂಯ ಯಾಗ. ಆ ರಾಜಸೂಯ ಯಾಗ ಮಾಡುವಂತಹ ಯೋಗ್ಯತೆ ಆ ಆಲೋಚನೆ ಇವರಿಗೆ ಬಂತು ಹೇಗೆ ಅಂತ ಪ್ರಶ್ನೆ ಅದಕ್ಕೆ ಹೇಳುತ್ತಾರೆ ಇವರಿಬ್ಬರಿಗೂ ವಿಷ್ಣು ಭಕ್ತಿ ಇರಲಿಲ್ಲ, ಇವರು ಶಿವಭಕ್ತರೇ ಆದರೆ ಆ ರಾಜಸೂಯ ಯಾಗ ಅನ್ನುವುದು ಬಹಳ ದೊಡ್ಡ ಯಾಗ ಎಲ್ಲ ರಾಜರ ಜೊತೆಗೆ ಯುದ್ಧ ಮಾಡಿ, ಎಲ್ಲ ರಾಜರನ್ನ ಸೋಲಿಸಿ ಕಪ್ಪ ಕಾಣಿಕೆಗಳನ್ನ ತೆಗೆದುಕೊಂಡು ಬಂದು ಮಾಡುವ ಯಾಗ. ಹೀಗಾಗಿ ಆ ಯಾಗ ಮಾಡಿದರೆ ಬಹಳ

1. 106.10 ಭವಿಷ್ಯಪರ್ವ

ಕೀರ್ತಿ ಬರುತ್ತದೆ, ಇಡೀ ಜಗತ್ತಿನಲ್ಲಿ ಪ್ರಸಿದ್ಧಿಯಾಗುತ್ತದೆ, ಎಲ್ಲ ಲೋಕಗಳನ್ನ ಗೆದ್ದವರು ಅಂತ ಒಂದು ಕೀರ್ತಿ ಇರುತ್ತದೆ ಅನ್ನುವುದಕ್ಕೋಸ್ಕರ ಆ ಸ್ವಾರ್ಥಕ್ಕಾಗಿ ತಮ್ಮಪ್ಪನಿಗೆ ಆ ಕೀರ್ತಿ ಬರಲಿ ಅನ್ನುವುದಕ್ಕಾಗಿ ಹಂಸ-ಡಿಭಿಕರು ಏನು ಮಾಡಿದ್ದಾರೆ ಅಂದರೆ ಆ ರಾಜಸೂಯ ಯಾಗವನ್ನ ಡಾಂಭಿಕವಾಗಿ ಮಾಡಬೇಕು ಅಂತ ಸಂಕಲ್ಪ ಮಾಡಿದ್ದಾರೆ. ಹಾಗಾದರೆ ಒಂದು ಸಮಸ್ಯೆ ಉಂಟು ಅಲ್ಲವಾ ಎಲ್ಲರನ್ನು ಗೆಲ್ಲಬೇಕು ಅಂತ ಆ ಕಾಲದಲ್ಲಿ ಜರಾಸಂಧ ಮಹಾಪರಾಕ್ರಮಿ ಇದ್ದ, ಇವರು ಹೇಗೆ ಅವರನ್ನು ಗೆಲ್ಲುತ್ತಾ ಇದ್ದರು ಅಂತ ಅದಕ್ಕೂ ಶ್ರೀಮದಾಚಾರ್ಯರು ಉತ್ತರ ಕೊಡುತ್ತಾರೆ. ಇವರಿಬ್ಬರೂ ಜರಾಸಂಧನ ಶಿಷ್ಯರೇ, ಜರಾಸಂಧ ಇವರಿಬ್ಬರಿಗೆ ಗುರು, ಗುರು ಆದದ್ದರಿಂದ ಶಿಷ್ಯರು ಯಾಗ ಮಾಡುತ್ತಾರೆ ಅಂದರೆ ಅವನು ಏನು ವಿರೋಧ ಮಾಡುತ್ತಾ ಇರಲಿಲ್ಲ ನೀವು ಮಾಡಿಕೊಳ್ಳಿ ಅನ್ನುತ್ತಿದ್ದ ಅನ್ನುವುದಕ್ಕೋಸ್ಕರ ಜರಾಸಂಧನ ಭಯವೂ ಇವರಿಗೆ ಇರಲಿಲ್ಲ. ಹೀಗಾಗಿ ಡಾಂಭಿಕವಾಗಿ ಆ ರಾಜಸೂಯ ಯಾಗವನ್ನ ಮಾಡುವ ಸಂಕಲ್ಪವನ್ನು ಮಾಡಿದ್ದಾರೆ ಅದಕ್ಕಾಗಿ ಮುನಿಗಳಿಗೆಲ್ಲ ಆಮಂತ್ರಣವನ್ನು ಕೊಟ್ಟಿದ್ದಾರೆ. ಮುನಿಗಳೆಲ್ಲ ಎಷ್ಟು ಚೆನ್ನಾಗಿ ಉತ್ತರ ಕೊಡುತ್ತಾರೆ ಅಂದರೆ ನಡೆಯಿರಿ ಹೋಗೋಣ ಮಾಡಿಸೋಣ ಅಂತ ಅನ್ನುವುದಿಲ್ಲ ಅವರು, ಒಂದು ವೇಳೆ ನಿಮ್ಮಪ್ಪ ರಾಜಸೂಯ ಯಾಗ ಮಾಡಿದ್ದೇ ನಿಜವಾದರೆ ನಾವು ಬರುತ್ತೇವೆ ಇಲ್ಲ ಅಂದರೆ ನಾವು ಬರುವುದಿಲ್ಲ ಅಂತ ಅವನು ಮಾಡುವುದೇ ಕಷ್ಟ ಅಂತ ಅವರಿಗೆ ಗೊತ್ತಿತ್ತು ಅದಕ್ಕೋಸ್ಕರ ಹೇಳುತ್ತಾರೆ.

ಯದಿ ಸ್ಯಾತ್ ತತ್ರ ಗಚ್ಛಾಮೋ ವಯಂ ಅಸ್ಮಹೇ ವಾನ್ಯಥಾ ರಾಜನ್ ॥ (107.10 ಭವಿಷ್ಯಪರ್ವ)

ಇಲ್ಲ ಅಂದರೆ ಇಲ್ಲ ನಿಜವಾಗಿ ರಾಜಸೂಯ ಯಾಗ ಮಾಡುವುದು ನಿಶ್ಚಿತ್ತವಾದರೆ ನಮಗೆ ತಿಳಿಸಿ ನಾವು ಬರುತ್ತೇವೆ ಅಂತ ಮುನಿಗಳೆಲ್ಲ ಹೇಳಿದ್ದಾರೆ ಸರಿ, ಇಷ್ಟು ಆಮಂತ್ರಣವನ್ನು ಕೊಟ್ಟಿದ್ದಾರೆ. ಮತ್ತೆ ಆ ಪುಷ್ಕರದ ಒಂದು ಭಾಗದಲ್ಲಿ ಕಶ್ಯಪರ ಆಶ್ರಮ ಇತ್ತು, ಮತ್ತೊಂದು ಭಾಗದಲ್ಲಿ ಉತ್ತರ ದಿಕ್ಕಿನಲ್ಲಿ ದುರ್ವಾಸರ ಆಶ್ರಮ, ವರ್ಣನೆ ಮಾಡುತ್ತಾರೆ ಆ ದುರ್ವಾಸರ ಆಶ್ರಮವನ್ನ, ಏನು ದುರ್ವಾಸರು ಸಾಕ್ಷಾತ್ ರುದ್ರ ದೇವರ ಅವತಾರ. ಇವರು ನೋಡಿ ಮತ್ತೆ ಅಸುರ ಸ್ವಭಾವ ತಾವು ರುದ್ರ ದೇವರನ್ನು ಕುರಿತೇ ತಪಸ್ಸು ಮಾಡಿ ವರ ಪಡೆದಿದ್ದಾರೆ ಅಜೇಯರು ಅವಧ್ಯರಾಗಬೇಕು ಅಂತ ಅಂತಹ ಮಹಾನುಭಾವರಾದ, ರುದ್ರಾಂಶ ಸಂಭೂತರಾದ ದುರ್ವಾಸರ ವಿರೋಧವನ್ನೇ ಮಾಡುವುದಕ್ಕೆ ಹೊರಟಿದ್ದಾರೆ ಎಂತಹ ಕೃತಘ್ನರು. ನಾವು ಮೊದಲು ತಿಳಿದೆವು ಕೃತಜ್ಞರಾಗಿದ್ದರು ಇವರು ರುದ್ರ ದೇವರನ್ನು ಕುರಿತು ವರ ಪಡೆದು, ನಿತ್ಯ ರುದ್ರ ದೇವರ ಪೂಜೆಯನ್ನು ಮಾಡುತ್ತ ಇದ್ದರು ಅಂತ ಅಷ್ಟು ಅಂಶದಲ್ಲಿ ಗುಣ ಅಂತ ಇಟ್ಟುಕೊಂಡರೆ ಈ ಕಡೆಗೆ ನೋಡಿ ಸ್ವಭಾವಕ್ಕನುಗುಣವಾಗಿ ಆ ರುದ್ರಾವತಾರರಾದ ದುರ್ವಾಸರ ದ್ರೋಹವನ್ನು ಮಾಡುತ್ತ ಇದ್ದಾರೆ. ಹೇಗಿದ್ದರು ಮಹಾನುಭಾವರು ದುರ್ವಾಸರು **'ಮನ್ತ್ರಬ್ರಹ್ಮನಿಷೇವಿಣಃ ಬ್ರಹ್ಮಸೂತ್ರಪದೇ'**[1] ಯಾವಾಗಲೂ ವೇದಾದಿ ಸಚ್ಛಾಸ್ತ್ರಗಳ ಪಾಠ ಪ್ರವಚನದಲ್ಲಿ ಆಸಕ್ತರು, ವೇದವ್ಯಾಸ ದೇವರು ರಚನೆ ಮಾಡಿರುವಂತಹ ಬ್ರಹ್ಮಸೂತ್ರಗಳ ಪಾಠ ಪ್ರವಚನವನ್ನು ಮಾಡುತ್ತ ಇದ್ದಾರೆ. ಆ ಬ್ರಹ್ಮಸೂತ್ರಗಳನ್ನ ಕೇವಲ ಸೂತ್ರಗಳನ್ನ ಹೇಳಿ ಕಂಠ ಪಾಠ ಮಾಡಿಸುವುದಲ್ಲ ಶಿಷ್ಯರಿಗೆ **'ಸಕ್ತಾಸ್ತದರ್ಥಾಲೋಕತತ್ಪರಾಃ'**[2] ಆ ಬ್ರಹ್ಮ ಸೂತ್ರಗಳ ಅರ್ಥವನ್ನ ಅವಲೋಕನ ಮಾಡುವುದರಲ್ಲಿ, ಅದರ ಜ್ಞಾನವನ್ನ ಶಿಷ್ಯರಿಗೆ ಮಾಡಿಸಿಕೊಳ್ಳುವುದರಲ್ಲಿ ಶುದ್ಧ ಸಾಂಪ್ರದಾಯಿಕವಾದಂತಹ ಬ್ರಹ್ಮ ಸೂತ್ರಗಳ ಮರ್ಮವನ್ನು ತಮ್ಮ ಎಲ್ಲ ಶಿಷ್ಯರಿಗೆ ಉಪದೇಶ ಮಾಡುವಂತಹ ಮಹಾನುಭಾವರು ಈ ದುರ್ವಾಸರು. ಅಹಂಕಾರ ಇಲ್ಲ, ಮಮಕಾರ ಇಲ್ಲ **'ಕೌಪೀನಾಚ್ಛಾದನವ್ರತಾಃ'**[3] ಕೌಪೀನಾ ಮೊದಲಾದಂತಹ ಆಚ್ಛಾದನಗಳನ್ನು ಮಾತ್ರ ಇಟ್ಟುಕೊಂಡಂತಹ ವಿರಕ್ತ ಶಿಖಾಮಣಿಗಳು.

---

1. 107.12 ಭವಿಷ್ಯಪರ್ವ: 2. 107.12 ಭವಿಷ್ಯಪರ್ವ, 3. 107.13 ಭವಿಷ್ಯಪರ್ವ

ಶ್ರೀಮದಾಚಾರ್ಯರು ತಾತ್ಪರ್ಯ ನಿರ್ಣಯದಲ್ಲಿ ಕೌಪಿನ ಅಂತ ಹ್ರಸ್ವ ಬಳಸುತ್ತಾರೆ. ಅದಕ್ಕೆ ವಾದಿರಾಜರು ಹಾಗೂ ತಾಮ್ರಪರ್ಣೀ ಆಚಾರ್ಯರು ಇಬ್ಬರೂ ತಿಳಿಸುತ್ತಾರೆ ಇದು ಮೂಲತಃ ಕೌಪಿನ ಶಬ್ದವೇ ಕೌಪೀನಾ ಅಂದರೂ ತಪ್ಪಿಲ್ಲ ಕೌಪಿನಾ ಎರಡೂ ಶಬ್ದಗಳು ಸರಿಯಾದದ್ದೇ ಅಂತ. ಯಾಕೆ ಅಂದರೆ **'ಕು'** ಅಂದರೆ ಕುತ್ಸಿತವಾಗಿರುವಂತಹ ಇಂದ್ರಿಯ ಅದರ **'ಪಿ'** ಅಂದರೆ ಪಿಧಾನ ಅದರ **'ನ'** ಅಂದರೆ ನಯನ ಯಾವುದರಿಂದ ಆಗುತ್ತೋ ಅದು ಕುಪಿನ **'ಕು'** ಕುತ್ಸಿತವಾದದ್ದರ **'ಪಿ'** ಪಿಧಾನದ **'ನ'** ನಯನ ಯಾವುದರಿಂದ ಆಗುತ್ತೋ ಅದು ಕುಪಿನ ಆ ಕುಪಿನಕ್ಕೆ ಸಂಬಂಧಪಟ್ಟದ್ದು ಕೌಪಿನಾ ಅಂತ ಹ್ರಸ್ವ ಶಬ್ದವೇ ಅದು ಅಂತ **'ಕುಪಿನ ಸಂಬಂಧೀ ವಸ್ತ್ರಂ ಕೌಪೀನಂ'.** ಮತ್ತೆ ಕೌಪೀನಾ ಅಂತ ಇದೆಯಲ್ಲ ಅಂದರೆ ಅದು ನಿರುಕ್ತತ್ವಾತ್ ಹ್ರಸ್ವ ಇ ಕಾರದ ಶಬ್ದದಲ್ಲಿ ದೀರ್ಘ ಈ ಕಾರ ಬಂದು ಕೌಪಿನನೇ ಕೌಪೀನಾ ಅಂತೂ ಆಗುತ್ತೆ ಎಂಬುದಾಗಿ ವಾದಿರಾಜ ಶ್ರೀಪಾದಂಗಳವರು ಹಾಗೂ ತಾಮ್ರಪರ್ಣೀ ಆಚಾರ್ಯರು ತಿಳಿಸಿಕೊಡುತ್ತಾರೆ. ಅಂತಹ ಕೌಪೀನ ಮೊದಲಾದ ಆಚ್ಛಾದನಗಳನ್ನ ಮಾತ್ರ ಇಟ್ಟುಕೊಂಡಂತಹ ವಿರಕ್ತ ಶಿಖಾಮಣಿಗಳಾದ ಯತಿಗಳೆಲ್ಲ ಅಲ್ಲಿ ಇದ್ದಾರೆ, ಎಲ್ಲರೂ ವಿಷ್ಣುವನ್ನು ಧ್ಯಾನ ಮಾಡುತ್ತಾ ಇದ್ದಾರೆ ಸರ್ವೋತ್ತಮನಾದ **'ವೇದಾನ್ತಮೂರ್ತಿಮವ್ಯಕ್ತಮನನ್ತಂ'**[1] ದೇಶತಃ ಕಾಲತಃ ಗುಣತಃ ಅಂತರಹಿತನಾದ ವೇದಾಂತ ಪ್ರತಿಪಾದ್ಯನಾದ ಆ ಪರಮಾತ್ಮನ ಧ್ಯಾನದಲ್ಲಿ ಆಸಕ್ತರಾಗಿದ್ದಾರೆ. ಉತ್ತಮ ತಾರ್ಕಿಕರು ಎಲ್ಲರೂ ಕೂಡ ಬ್ರಹ್ಮತರ್ಕಾದಿಗಳ ಅಧ್ಯಯನವನ್ನು ಮಾಡಿ **'ತರ್ಕನಿಶ್ಚಿತತತ್ತ್ವಾರ್ಥಾ'** ಆ ಬ್ರಹ್ಮತರ್ಕಕ್ಕೆ ಅನುಗುಣವಾಗಿ ಉಪಕ್ರಮೋಪ ಸಂಹಾರಾದಿಗಳಿಂದ ಸಕಲ ಶಾಸ್ತ್ರಗಳ ತತ್ವ ನಿರ್ಣಯವನ್ನು ಮಾಡಿಕೊಂಡಂತಹ ಮಹಾನುಭಾವರು ಆ ಮುನಿಗಳು. ಈ ಎಲ್ಲ ಶಾಸ್ತ್ರಗಳ ಅಧ್ಯಯನ ಚರ್ಚೆ ತರ್ಕಗಳು ವಾಕ್ಯಾರ್ಥಗಳು ಇವೆಲ್ಲ ಇತ್ತೀಚೆಗೆ ಪ್ರಾರಂಭವಾದದ್ದು ಪ್ರಾಚೀನ ಕಾಲದಲ್ಲಿ ಏನು ಇರಲಿಲ್ಲ ಸುಮ್ಮನೆ ವೇದ ಪಾರಾಯಣ ಮಾಡುತ್ತಾ, ಜಪ ಮಾಡುತ್ತಾ ಕೂಡುತ್ತಾ ಇದ್ದರು ಅಂತ ತಿಳಿಯಬೇಡಿ. ಹೇಳುತ್ತಾರೆ ನೋಡಿ

ದುರ್ವಾಸಸಾ ಸಮೋಪಾಸ್ಯಂ ವಂದಾನ್ಯೈಕರಸಂ ಗುರುಮ್ ।
ತರ್ಕನಿಶ್ಚಿತತತ್ತ್ವಾರ್ಥಾ ಜ್ಞಾನನಿರ್ಮಲಚೇತಸಃ ॥ (107.16 ಭವಿಷ್ಯಪರ್ವ)

ಎಲ್ಲ ವಿಶೇಷಣವನ್ನು ಕೊಡುತ್ತಾರೆ. ಅಂತಹ ಹಂಸರು ಪರಮಹಂಸರು ಎಲ್ಲ ಶಿಷ್ಯರು ದುರ್ವಾಸರಿಗೆ, ಸಾವಿರಾರು ಜನ ಶಿಷ್ಯರು ದುರ್ವಾಸರು ಗುರುಗಳು ದೊಡ್ಡ ಆಶ್ರಮ,ವಿರಕ್ತರಾಗಿ ಧ್ಯಾನಾದಿಗಳಲ್ಲಿ ಆಸಕ್ತರಾಗಿ ಇದ್ದಾರೆ.

ದುರ್ವಾಸಸಂ ಮಹಾಬುದ್ಧಿಂ ವಿಚಿನ್ವಾನಂ ಪರಂ ಪದಮ್ । (107.18 ಭವಿಷ್ಯಪರ್ವ)

ದುರ್ವಾಸರು ಆ ಪರಮಾತ್ಮನ ಏನು ಪರಮ ಪದವಿ ಇದೆ ಅದನ್ನು ಪಡೆಯುವುದಕ್ಕಾಗಿ ಧ್ಯಾನಾದಿಗಳಲ್ಲಿ ಆಸಕ್ತರಾದಂತಹ ಇಂತಹ ಮಹಾನುಭಾವರ ಹತ್ತಿರ ಹೋಗಿ ಹಂಸ-ಡಿಭಿಕರು ಕುಚೇಷ್ಟೇಯನ್ನು ಮಾಡುತ್ತಾ ಇದ್ದಾರೆ. ಏನು ಕುಚೇಷ್ಟೇ ಅಂದರೆ ಏನಿದು ಸನ್ಯಾಸ ಅಂತ ಸನ್ಯಾಸಾಶ್ರಮವನ್ನೇ ಬೈಯುತ್ತಾ ಇದ್ದಾರೆ ಯಾರು ಹೇಳಿದರು ನಿಮಗೆ ಸನ್ಯಾಸಾಶ್ರಮ ತೆಗದುಕೊಳ್ಳು ಅಂತ.

ಕೋ ನಾಮಸೌ ಮಹಾಭೂತಃ ಕಾಷಾಯೀ ವರ್ಣವಿತ್ತಮಃ ।
ಕಶ್ಚಾಯಮಾಶ್ರಮೋ ನಾಮ ವಿಹಾಯ ಚ ಗೃಹಾಶ್ರಮಮ್ ॥ (107.21 ಭವಿಷ್ಯಪರ್ವ)

1. 107.14 ಭವಿಷ್ಯಪರ್ವ

ಗೃಹಸ್ಥಾಶ್ರಮ ಇದು ಶ್ರೇಷ್ಠ ಎಲ್ಲ ಯಜ್ಞ ಯಾಗಾದಿಗಳನ್ನು ಮಾಡುತ್ತಾ, ಅತಿಥಿ ಅಭ್ಯಾಗತರಿಗೆ ಸತ್ಕಾರವನ್ನು ಮಾಡುತ್ತಾ ಎಲ್ಲರಿಗೂ ಪೋಷಣೆಯನ್ನು ಮಾಡಬಹುದು ಎಂತಹ ಶ್ರೇಷ್ಠವಾದ ಗೃಹಸ್ಥಾಶ್ರಮ ಅದನ್ನು ಬಿಟ್ಟು ಏನಿದು ಕೌಪಿನ, ಏನಿದು ಕೆಂಪು ಬಟ್ಟೆ, ಕಾಷಾಯ ವಸ್ತ್ರ ನಿಮ್ಮ ವೇಷ, ನಿಮ್ಮ ಭೂಷಣ ಇದನ್ನೆಲ್ಲ ನೋಡಲಿಕ್ಕೆ ಆಗುವುದಿಲ್ಲ ನನಗೆ. ಬಿಡಿ ಇದು ಆಶ್ರಮ, ಸುಮ್ಮನೇ ಗೃಹಸ್ಥಾಶ್ರಮವನ್ನು ಆಶ್ರಯಣ ಮಾಡಿ ಸುಖವಾಗಿ ಇರಿ ಇದೆಲ್ಲಾ ಏನು ಮಾಡುತ್ತೀರಿ ಅಂತ ಅವರ ಜೊತೆಗೆ ಜಗಳ ಆಡುತ್ತ ಇದ್ದಾರೆ ಸುಮ್ಮನಿದ್ದಾರೆ ಏನೂ ಮಾತನಾಡಿಲ್ಲ, ಮೊದಲು ಎಲ್ಲಾ ಋಷಿಗಳಿಗೂ ಮುನಿಗಳಿಗೂ ಅಲ್ಲಿರುವ ಸನ್ಯಾಸಿಗಳಿಗೂ ಸಾವಿರಾರು ಜನ ಸನ್ಯಾಸಿಗಳು ಇದ್ದಾರೆ ಎಲ್ಲರಿಗೂ ಬೈಯುತ್ತಾ ಇದ್ದಾರೆ ಕೊನೆಗೆ ದುರ್ವಾಸರನ್ನು ಬೈಯುತ್ತಾರೆ. ನಿಮಗೆಲ್ಲಾ ನಾಯಕರು ಯಾರು ಮುಖ್ಯಸ್ಥರು ಯಾರು ಇಲ್ಲಿ ಅಂತ ನಮ್ಮ ಗುರುಗಳು ದುರ್ವಾಸರು ಅಂತ ಅವರು ಹೇಳಿದರು ಆ ದುರ್ವಾಸರನ್ನು ಬೈಯುತ್ತಾ ಇದ್ದಾರೆ ನೀವು ಒಬ್ಬರು ಹಾಳಾಗುವುದಲ್ಲದೆ ಇಷ್ಟೆಲ್ಲಾ ಜನರನ್ನು ಕರೆದುಕೊಂಡು ಹಾಳು ಮಾಡುತ್ತಾ ಇದ್ದೀರಲ್ಲ ಅವರೆಲ್ಲರಿಗೂ ಸನ್ಯಾಸಾಶ್ರಮವನ್ನು ಕೊಟ್ಟು, ಏನು ಪುರುಷಾರ್ಥ ಗಳಿಸಿದ ಹಾಗೆ ಆಯಿತು ಅಂತ ದುರ್ವಾಸರನ್ನ ಹೇಗೆ ಅಂದರೆ ಹಾಗೆ ನಿಂದೆ ಮಾಡುತ್ತಾ ಇದ್ದಾರೆ. ಆಗ ಈ ರೀತಿ ನಿಂದೆ ಮಾಡುವುದನ್ನು ನೋಡಿ ಪಕ್ಕದಲ್ಲಿ ಜನಾರ್ದನಾಚಾರ್ಯ ಇದ್ದನಲ್ಲ ಅವರ ಗೆಳೆಯ ಆ ಜನಾರ್ದನಾಚಾರ್ಯ ಹಣೆ ಗಟ್ಟಿಸಿಕೊಳ್ಳುತ್ತಾ ಇದ್ದಾನೆ ಏನಾಗಿದೆ ಹಂಸ-ಡಿಭಕರೇ ನಿಮಗೆ ಎಂತಹ ಕೆಲಸ ಮಾಡುತ್ತಾ ಇದ್ದೀರಿ,ನಿಮಗೇನು ಬೇಕಾಗಿದೆ ದಣಿವಾಗಿದೆ ಬೇಟೆಯಾಡಿ ನೀರು ಕುಡಿಯುವುದಕ್ಕೆ ಬಂದಿದ್ದೀರಿ ಪುಷ್ಕರದಲ್ಲಿ ನೀರು ಕುಡಿದಿದ್ದೀರಿ ಏನೋ ನಿಮ್ಮ ಅಪ್ಪ ಯಜ್ಞ ಮಾಡುತ್ತಾನೆ ಅಂತ ಆಮಂತ್ರಣ ಕೊಟ್ಟಿರಿ ಕೆಲವು ಮುನಿಗಳಿಗೆ ಅಷ್ಟಾಯಿತಲ್ಲ ಕೆಲಸ. ಬಂದು ಈ ಸನ್ಯಾಸಿಗಳನ್ನ ಬೈಯ್ದು ಯಾಕೆ ಪಾಪ ಕಟ್ಟಿಕೊಳ್ಳುತ್ತಾ ಇದ್ದೀರಿ ಎಂತಹ ಜ್ಞಾನಿಗಳು, ಎಂತಹ ತಪಸ್ವಿಗಳು, ರುದ್ರಾಂಶ ಸಂಭೂತರು ಸಾಷ್ಟಾಂಗ ಪ್ರಣಾಮ ಮಾಡಿ ಅವರ ಆಶೀರ್ವಾದ ಪಡೆಯುವುದು ಬಿಟ್ಟು ಅವರನ್ನು ನಿಂದೆ ಮಾಡಿ ಯಾವ ನರಕಕ್ಕೆ ಹೋಗುತ್ತೀರಿ ನೀವು ಅಂತ ಅವನು ಬುದ್ಧಿವಾದವನ್ನು ಹೇಳುತ್ತಾ ಇದ್ದಾನೆ. ಬುದ್ಧಿವಾದ ಹೇಳುವುದಲ್ಲ ಸ್ಪಷ್ಟವಾಗಿ ಎಚ್ಚರಿಕೆ ಕೊಡುತ್ತ ಇದ್ದಾನೆ ನಿಮ್ಮ ಕಾಲ ಹತ್ತಿರ ಬಂದಿದೆ, ಸತ್ತು ಹೋಗುತ್ತೀರಿ ನೀವು ಈ ರೀತಿ ದೊಡ್ಡವರ ನಿಂದೆ ಮಾಡಿದರೆ

ಸರ್ವಥಾ ಕಾಲ ಏವಾಯಂ ಯುವಯೋರ್ಮನ್ಯುಚೇತಸೋಃ ।

ಸಮಾಪ್ತ ಆಯುಷಃ ಶೇಷೋ ಬ್ರಹ್ಮದಣ್ಡಹತೌ ಯುವಾಮ್ ॥ (108.10 ಭವಿಷ್ಯಪರ್ವ)

ಅಂತ ಭವಿಷ್ಯ ಹೇಳಿ ಬಿಡುತ್ತಾನೆ. ಬ್ರಾಹ್ಮಣರ ನಿಂದೆಯನ್ನು ಮಾಡುತ್ತಾ ಇದ್ದೀರಿ ಅದರಲ್ಲಿಯೂ ಸನ್ಯಾಸಿಗಳು, ಅದರಲ್ಲಿಯೂ ಸಾಮಾನ್ಯರಲ್ಲ ದುರ್ವಾಸರಂತಹ ಮಹಾನುಭಾವರು ರುದ್ರಾಂಶ ಸಂಭೂತರು ಅವರಿಗೆ ನಿಂದೆ ಮಾಡುತ್ತಾ ಇದ್ದೀರಿ ಅಂದರೆ ಅವರ ಶಾಪದಿಂದ ಬ್ರಹ್ಮ ದಂಡದಿಂದ ಹತರಾಗಿ ನಿಮ್ಮ ಆಯುಷ್ಯವನ್ನ ಹಾಳು ಮಾಡಿಕೊಳ್ಳುತ್ತೀರಿ ಆಯುಷ್ಯ ಮುಗಿದು ಹೋಯಿತು ಅಂತ ತಿಳಿದುಕೊಳ್ಳಿ. ಅಷ್ಟಲ್ಲದೇ ಹೇಳುತ್ತಾನೆ ಏನಿದು ಆಶ್ರಮ ಅಂತ ನಿಂದೆ ಮಾಡುತ್ತೀರಲ್ಲ ನಿಮಗೆ ಏನು ಗೊತ್ತಿದೆಯಾ ಧರ್ಮಶಾಸ್ತ್ರ ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸ ಅಂತ ನಾಲ್ಕು ಆಶ್ರಮಗಳು ಶಾಸ್ತ್ರ ವಿಹಿತವಾದದ್ದು ಅದರಲ್ಲಿ ಸನ್ಯಾಸಾಶ್ರಮವನ್ನು ಅವರು ತೆಗೆದುಕೊಂಡಿದ್ದಾರೆ ಅದೇ ಶ್ರೇಷ್ಠ ಎಲ್ಲ ಆಶ್ರಮಗಳಲ್ಲಿ ಶ್ರೇಷ್ಠವಾದದ್ದು ಸನ್ಯಾಸಾಶ್ರಮ ಪರಮಾತ್ಮನಿಗೆ ವಿಷ್ಣುವಿಗೆ ಅತ್ಯಂತ ಸಂತೋಷಕಾರಕವಾದದ್ದು. ಗೀತಾ ಭಾಷ್ಯದಲ್ಲಿ ಶ್ರೀಮದಾಚಾರ್ಯರು ಹೇಳುತ್ತಾರೆ **'ದೀಕ್ಷಾಂ ಮಮ ಸುತೋಷಿಣೀಂ'** ಅಂತ ಪರಮಾತ್ಮನಿಗೆ ಅತ್ಯಂತ ಪ್ರೀತಿಯಾಗುವಂತಹ ದೀಕ್ಷೆ ಅಂದರೆ ಅದು ಸನ್ಯಾಸ ದೀಕ್ಷೆ ಅಂತ **'ತದ್ ಭಕ್ತೋಪಿ ಹಿ ಯದ್ ಗಚ್ಛೇತ್ ತದ್ ಗೃಹಸ್ಥೋ ನ ಧಾರ್ಮಿಕಃ'** ಅನ್ನುತ್ತಾರೆ. ಒಬ್ಬ ಯತಿ ಅಲ್ಲ, ಆ ಯತಿಯ ಸೇವೆಯನ್ನ ಮಾಡುವಂತಹ ಒಬ್ಬ ಯತಿಯ ಶಿಷ್ಯ ಭಕ್ತ ಏನು ಪುಣ್ಯವನ್ನು, ಯಾವ ಸ್ಥಾನವನ್ನ ಹೊಂದಬಹುದೋ ಅದನ್ನು ಒಬ್ಬ ಗೃಹಸ್ಥ ತಾನು



ಉತ್ತಮ ಧಾರ್ಮಿಕನಾಗಿ ತನ್ನ ಎಲ್ಲಾ ಕರ್ತವ್ಯ ಕರ್ಮಗಳನ್ನು,ಯಜ್ಞ ಯಾಗಾದಿಗಳನ್ನು, ಅತಿಥಿ ಅಭ್ಯಾಗತರ ಸೇವಾದಿಗಳನ್ನು ಮಾಡಿದರೂ ಒಬ್ಬ ಯತಿಯ ಶಿಷ್ಯ ಹೊಂದುವ ಸ್ಥಾನವನ್ನು ಈ ಗ್ರಹಸ್ಥ ಹೊಂದುವುದಿಲ್ಲ ಅನ್ನುತ್ತಾರೆ. ಅಷ್ಟು ಯತಿಗಳಿಗೆ ಮಹತ್ವ ಇದೆ ಅಪ್ಪ ನೀವು ಅದನ್ನು ತಿಳಿಯದೇ ಇದೇನು ಆಶ್ರಮ, ಇದೇನು ವೇಷ ಅಂತ ನಿಂದೆ ಮಾಡುತ್ತ ಇದ್ದೀರಿ ಇದು ನಿಮಗೆ ಗೊತ್ತಿಲ್ಲ, ಅರಮನೆಯನ್ನು ಬಿಟ್ಟು ಹೊರಗೆ ಬಂದಿಲ್ಲ ನೀವು ಶಾಸ್ತ್ರವನ್ನು ಸ್ವಚ್ಛವಾಗಿ ಹೇಳುತ್ತಾ ಇದ್ದಾನೆ ಶಾಸ್ತ್ರವನ್ನು ಚೆನ್ನಾಗಿ ಓದಬೇಕು, ದೊಡ್ಡವರ ಸೇವೆ ಮಾಡಿದರೆ ವಿದ್ಯೆ ಚೆನ್ನಾಗಿ ಬರುತ್ತದೆ ಬರೀ ಪುಸ್ತಕ ತೆಗೆದರೆ ವಿದ್ಯೆ ಬರುವುದಿಲ್ಲ.

ನೋಪಾಸಿತಾ ಭವಾದ್ಭ್ಯಾಂ ಚ ವೃದ್ಧಾಃ ಸಮ್ಯಗ್ ವಿನೀತವತ್ । (108.15 ಭವಿಷ್ಯಪರ್ವ)

ವೃದ್ಧರ ಸೇವೆ ನೀವು ಚೆನ್ನಾಗಿ ಮಾಡಿದ ಹಾಗೆ ಇಲ್ಲ, ಮಾಡಿದರೆ ನಿಮ್ಮ ಗುರುಗಳು ನಿಮಗೆ ಚೆನ್ನಾಗಿ ಉಪದೇಶ ಮಾಡುತ್ತಾ ಇದ್ದರು. ಸನ್ಯಾಶಾಶ್ರಮ ಅಂತ ಒಂದು ಆಶ್ರಮ ಇದೆ ಅಂತೆ ಗೊತ್ತಿಲ್ಲ ಅಂದರೆ ನೀವು ಏನು ಅಧ್ಯಯನ ಮಾಡಿದ್ದೀರಿ, ನಿಮ್ಮ ಅಧ್ಯಯನವೇ ಸರಿಯಾದದ್ದಲ್ಲ ಗುರುಗಳ ಸೇವೆ ಸರಿಯಾಗಿ ನೀವು ಮಾಡಿಲ್ಲ. ನಾನು ಚೆನ್ನಾಗಿ ಗುರುಗಳ ಸೇವೆ ಮಾಡಿದ್ದಕ್ಕೆ ನನಗೆಲ್ಲಾ ಗುರುಗಳು ಚೆನ್ನಾಗಿ ಉಪದೇಶ ಮಾಡಿದ್ದಾರೆ ಅಂತ ಜನಾರ್ದನಾಚಾರ್ಯ ಗಿಳಿ ಮಾತು ಹೇಳಿಯಾಯಿತು, ಎಲ್ಲವನ್ನು ತಿಳಿಸಿ ತಿಳಿಸಿ ಹೇಳಿದ್ದಾನೆ ಏನು ಹೇಳಿದರೂ ಅವರ ತಲೆಯಲ್ಲಿ ಹೋಗಲಿಲ್ಲ. ಕೊನೆಗೆ ಆ ಜನಾರ್ದನ ಎಷ್ಟು ಭಕ್ತ ನೋಡಿ, ಸ್ವರೂಪ ಯೋಗ್ಯತೆ ಹಾಗೆ ಇರುತ್ತದೆ ಇವರಿಬ್ಬರು ಅಸುರರು, ಅವನು ಅತ್ಯಂತ ಭಕ್ತ ಅವನು ಏನು ಅನ್ನುತ್ತಾನೆ ನೀವು ದುರ್ವಾಸರಂತಹ ಮಹಾನುಭಾವರಿಗೆ, ರುದ್ರ ದೇವರಿಗೆ ಹಾಗೂ ಅವರ ಜೊತೆಗೆ ಬಂದ ಎಲ್ಲ ಭಗವದ್ಭಕ್ತರಿಗೆ ನಿಂದೆ ಮಾಡುತ್ತಾ ಇದ್ದೀರಲ್ಲ ಇದನ್ನು ಕೇಳಿದ್ದಕ್ಕೆ ನಾನು ವಿಷ ತೆಗೆದುಕೊಂಡು ಸಾಯುತ್ತೇನೆ, ಪರ್ವತದ ಮೇಲಿನಿಂದ ಹಾರಿ ಸಾಯುತ್ತೇನೆ, ತಲೆಯ ಕಲ್ಲು ಹಾಕಿಕೊಂಡಾದರೂ ಸಾಯುತ್ತೇನೆ ನೀವು ಆಡುವ ಸಜ್ಜನರ ನಿಂದೆಯನ್ನು ಮಾತ್ರ ಕಿವಿಯಿಂದ ಕೇಳುವುದಿಲ್ಲ ಅನ್ನುತ್ತಾನೆ ಎಂತಹ ಭಕ್ತ. ದೊಡ್ಡವರ ನಿಂದೆಯನ್ನು ಕೇಳಬಾರದು ಅನ್ನುವ ಸಂದೇಶವನ್ನು ಹರಿವಂಶ ಇಲ್ಲಿ ನಮಗೆ ತಿಳಿಸಿಕೊಡುತ್ತಾ ಇದೆ.

ಯುವಾಂ ವಿಹಾಯ ಯಾಸ್ಯೇ ವಾ ಪತೇಯಂ ಶಿಲಾತಲಮ್ ।

ಪಿಬೇಯಂ ವಾ ವಿಷಂ ಘೋರಂ ಪತೇಯಂ ವಾ ಮಹೋರ್ಮಿಷು ॥ (108.18 ಭವಿಷ್ಯಪರ್ವ)

ಸಮುದ್ರದಲ್ಲಿ ಆದರೂ ನಾನು ಸಾಯುತ್ತೇನೆ ನಿಮ್ಮ ಮಾತು ಕೇಳುವುದಿಲ್ಲ ಮಹಾರಾಯ ಅಂತ ಅನ್ನುತ್ತಾನೆ ಅದರ ತಾತ್ಪರ್ಯ ಅವನು ಆ ಕೂಡಲೇ ಸಾಯುವುದಿಲ್ಲ ಆದರೆ ಅಷ್ಟು ಪಶ್ಚಾತ್ತಾಪವಾಗಿರುತ್ತದೆ ದುಃಖ ಪಡುತ್ತಾ ಇರುತ್ತಾನೆ ಈ ನಿಂದೆಯನ್ನು ಕೇಳಿದ್ದಕ್ಕೆ ಈ ಕಡೆಗೆ ದುರ್ವಾಸರಿಗೆ ಸಿಟ್ಟು ಬಂದಿದೆ ಕೆಂಡ ಭಾರೀ ಸಿಟ್ಟು ಬಂದಿದೆ ಏನು ವಿಚಿತ್ರ ವರ್ಣನೆ ಬರುತ್ತದೆ ನೋಡಿ ಹರಿವಂಶದಲ್ಲಿ. ಈ ಕಡೆಗೆ ಜನಾರ್ದನಾಚಾರ್ಯ ಅತ್ಯಂತ ಭಕ್ತಿಯಿಂದ ಶ್ರದ್ಧೆಯಿಂದ ಮಾತನಾಡುವುದನ್ನು ಕೇಳಿ ಅವರಲ್ಲಿ ಪ್ರೀತಿಯೂ ಉಕ್ಕೇರಿದೆ, ಒಂದು ಕಡೆಗೆ ಈ ಹಂಸ-ಡಿಭಿಕರು ಮಾತನಾಡುವ ನಿಂದೆಯ ನುಡಿಗಳನ್ನ ಕೇಳಿ ಸಿಟ್ಟೂ ಬಂದಿದೆ, ಏಕ ಕಾಲಕ್ಕೆ ಸಿಟ್ಟು ಪ್ರೀತಿ ಎರಡನ್ನೂ ಕಣ್ಣಿನಲ್ಲಿ ವ್ಯಕ್ತ ಮಾಡಿದ್ದಾರಂತೆ. ಭಾರೀ ಆಶ್ಚರ್ಯ ಅಷ್ಟು ಸುಲಭ ಅಲ್ಲ ಅದು, ಅದು ಹೇಗೆ ಎರಡು ಕಣ್ಣು ಒಂದು ಕಣ್ಣಿನಲ್ಲಿ ಸಿಟ್ಟು ಕೆಂಪು ಮಾಡಿದ್ದಾರಂತೆ. ಸಿಟ್ಟಿನಿಂದ, ಕೆಂಪು ಕಣ್ಣಿನಿಂದ ಹಂಸ-ಡಿಭಿಕರನ್ನು ನೋಡುತ್ತಾ ಇದ್ದಾರಂತೆ, ಇನ್ನೊಂದು ಕಣ್ಣು ಅತೀ ಶಾಂತ ಪ್ರಸನ್ನ ಆ ಪ್ರಸನ್ನವಾದಂತಹ ಕಣ್ಣಿನಿಂದ ಜನಾರ್ದನಾಚಾರ್ಯನನ್ನು ನೋಡುತ್ತಾ ಇದ್ದಾರೆ, ಸಾಮಾನ್ಯರಿಗೆ ಸಾಧ್ಯ ಇಲ್ಲ ಇದು.

ಏಕೇನಾಕ್ಷ್ಣಾಥ ದುರ್ವಾಸಾ ರೌದ್ರೇಣಾಗ್ನಿಯುಜಾ ಸದಾ ॥ (109.1 ಭವಿಷ್ಯಪರ್ವ)

ಬ್ರಾಹ್ಮಣಂ ಚಕ್ಷುಷಾ ಪಶ್ಯನ್ ಸೌಮ್ಯೇನಾನ್ಯೇನ ಕೇವಲಮ್ । (109.3 ಭವಿಷ್ಯಪರ್ವ)

ಕೆಂಡ ಕಾರುತ್ತ ಇದ್ದಾರೆ ಒಂದು ಕಣ್ಣಿನಿಂದ ಹಂಸ-ಡಿಭಿಕರನ್ನ, ಅತೀ ಸೌಮ್ಯವಾದ ಕಣ್ಣಿನಿಂದ ವಿಪ್ರನನ್ನು ನೋಡುತ್ತಾ ಇದ್ದಾರೆ. ಅಂತಹ ರುದ್ರ ದೇವರಂತಹ ಮಹಾನುಭಾವರಿಗೆ ಮಾತ್ರ ಇದು ಸಾಧ್ಯ, ಏಕಕಾಲದಲ್ಲಿ ಒಂದು ಕಣ್ಣಿನಿಂದ ಸಿಟ್ಟು ಇನ್ನೊಂದು ಕಣ್ಣಿನಿಂದ ಶಾಂತಿ, ಪ್ರಸಾದ ಎರಡನ್ನೂ ಕೊಡುತ್ತಾ ಇದ್ದಾರೆ. ಆ ಸಂದರ್ಭದಲ್ಲಿ ದುರ್ವಾಸರು ಹೆಚ್ಚು ಮಾತನಾಡಿಲ್ಲ ಹೋಗಿ ಇಲ್ಲಿಂದ, ನಿಲ್ಲಬೇಡಿ ಅಂತ ಹೇಳಿದ್ದಾರೆ ಹಂಸ-ಡಿಭಿಕರಿಗೆ ಅಷ್ಟೇ, ಅಷ್ಟು ಹೇಳುವುದಲ್ಲದೇ ದುರ್ವಾಸರು ತಮ್ಮ ಶಿಷ್ಯರಿಗೂ ಹೇಳುತ್ತಾ ಇದ್ದಾರೆ ನಾವೂ ಇಲ್ಲಿಂದ ಹೊರಡಬೇಕು ಈ ದುಷ್ಟರ ಸಹವಾಸ ಯಾಕೆ, ಜಗಳ ಯಾಕೆ ಇವರ ಜೊತೆಗೆ ಇನ್ನು ಅಂತ ಅಲ್ಲಿಂದ ಹೊರಟೇ ಬಿಟ್ಟಿದ್ದಾರೆ ಹೊರಟರೆ ಆ ದುಷ್ಟನಾಗಿರುವಂತಹ ಹಂಸ ದುರ್ವಾಸರ ಬಾಹುವನ್ನು ಹಿಡಿದು ಎಳೆಯುತ್ತಾನೆ. ಇವರು ಇಷ್ಟು ಬೈಯ್ದರೂ ಒಂದೂ ಉತ್ತರ ಕೊಡದೆ ನೀವು ಹೊರಡಿ ಅಂತ ಹೇಳಿದರು, ಅವರು ಕೇಳಲಿಲ್ಲ ತಾವೇ ಎದ್ದು ಹೊರಟರು ಅಷ್ಟೇ ಹೆಚ್ಚಿಗೆ ಏನೂ ಮಾತನಾಡಿಲ್ಲ ದುರ್ವಾಸರು ಅತ್ಯಂತ ಶಾಂತರಾಗಿ. ದುರ್ವಾಸರು ಅಂದರೆ ಬರೀ ಸಿಟ್ಟು ಮಾಡುವವರು ಅಂತಲ್ಲ ಮೊದಲು ಸಾಮದಿಂದ ಹೇಳಿದ್ದಾರೆ ಹೋಗಿ ಅಂತ, ಹೇಳುವುದಷ್ಟೇ ಅಲ್ಲದೆ ತಾವೇ ಎದ್ದು ಹೊರಟರು, ಹೊರಟರೂ ಅವನು ಕೇಳಲಿಲ್ಲ ಕೈ ಹಿಡಿದು ಕೌಪೀನವನ್ನು ಹರಿದು ಎಸೆದಿದ್ದಾನೆ ಈ ರೀತಿ ಅವಮಾನ ಮಾಡಿದ್ದಾನೆ ದುರ್ವಾಸರಿಗೆ. ಆಗ ಮತ್ತೆ ಜನಾರ್ದನ ಮಿತ್ರ ಬೈಯುತ್ತಾ ಇದ್ದಾನೆ ಎಂತಹ ಅನ್ಯಾಯ ಮಾಡುತ್ತಾ ಇದ್ದೀ ಯತಿಗಳಿಗೆ ಆ ರೀತಿ ಅವಮಾನ ಮಾಡಬಾರದು, ತಿರಸ್ಕಾರ ಮಾಡಬಾರದು ಮಹಾನುಭಾವರು, ಎಂದಿಗೂ ಅವರ ತಿರಸ್ಕಾರ ಮಾಡಬೇಡ ಅಂತ ಅದೇನು ಹೇಳಿದರೂ ಕೇಳುತ್ತಾ ಇಲ್ಲ ಹಂಸ. ಕೌಪೀನವನ್ನು ಹರಿದು ಹಾಕಿದ, ನೀರನ್ನು ಇಟ್ಟುಕೊಳ್ಳುವ ಕಮಂಡಲು, ಅದಲ್ಲದೇ ಇನ್ನನೇಕ ಪಾತ್ರೆಗಳು ಭೋಜನವನ್ನು ಮಾಡುವುದಕ್ಕೆ ಇರುವಂತಹ ಯತಿಗಳಿಗೆ ಯೋಗ್ಯವಾದ ಪಾತ್ರೆ, ಕಟ್ಟಿಗೆಯ ಪಾತ್ರೆಗಳು ಯಾವುದೂ ಬೆಳ್ಳಿ ಬಂಗಾರ ಪಾತ್ರೆಗಳಲ್ಲ ಹೀಗೆ ಏನೇನು ಪಾತ್ರೆಗಳನ್ನು ಅವರು ಇಟ್ಟುಕೊಂಡಿದ್ದರೋ ಅಂತಹ ಪಾತ್ರೆಗಳನ್ನೆಲ್ಲ ಮುರಿದು ಮುರಿದು ಎಸೆಯುತ್ತ ಇದ್ದಾನೆ ಆಗ ದುರ್ವಾಸರು ಒಂದು ಮಾತನ್ನು ಹೇಳುತ್ತಾರೆ.

ಶಾಪೇನಾಹಂ ಸಮರ್ಥೋಽಪಿ ಹನ್ತುಂ ರಾಜಕುಲಾಧಮೌ ॥ (109.11 ಭವಿಷ್ಯಪರ್ವ)

ತಥಾಪಿ ನ ಕರೋಮ್ಯನ್ತಂ ಯತಯೋ ಹ್ಯತ್ರ ತೇ ವಯಮ್ । (109.12 ಭವಿಷ್ಯಪರ್ವ)

ನೋಡಪ್ಪ, ಶಾಪ ಕೊಟ್ಟು ನಿನ್ನನ್ನ ಸುಟ್ಟು ಬೂದಿ ಮಾಡುವುದಕ್ಕೆ ನನಗೆ ಬರುತ್ತದೆ ಹಂಸ-ಡಿಭಿಕ ಆದರೆ ನಾವು ಯತಿಗಳು ಅಂತ ನಿನ್ನನ್ನು ಕ್ಷಮೆ ಮಾಡುತ್ತ ಇದ್ದೇನೆ ಸುಮ್ಮನಿದ್ದೇನೆ. ಸುಮ್ಮನೆ ಇರುತ್ತೀನಿ ಅಂತ ಮಾತ್ರ ನೀನು ಉನ್ಮತ್ತತನ ಮಾಡಬೇಡ ಯಾಕೆಂದರೆ ದೇವರು ಶ್ರೀಕೃಷ್ಣ ಪರಮಾತ್ಮ ನಿಮ್ಮನ್ನು ನೋಡಿಕೊಳ್ಳುತ್ತಾನೆ ಆಮೇಲೆ. ನಾನು ಸುಮ್ಮನೆ ಇರುತ್ತೇನೆ ಆದರೆ ಶ್ರೀಕೃಷ್ಣ ಪರಮಾತ್ಮ ಬಂದದ್ದೇ ಭೂಭಾರಹರಣಕ್ಕೆ ನಿಮ್ಮಿಬ್ಬರನ್ನೂ ಸಂಹಾರ ಮಾಡುತ್ತಾನೆ, ಸುಮ್ಮನೆ ಹೋಗಿ ಮನೆಯಲ್ಲಿ ಕೂಡಿ ಇಲ್ಲ ಅಂದರೆ ಕೃಷ್ಣನ ಕೈಗೆ ಸಿಕ್ಕು ಸತ್ತು ಹೋಗುತ್ತೀರಾ.

ಯೋ ಹಿ ದೇವೋ ಜಗನ್ನಾಥಃ ಕೇಶವೋ ಯಾದವೇಶ್ವರಃ ॥ (109.12 ಭವಿಷ್ಯಪರ್ವ)

ಶಙ್ಖಚಕ್ರಗದಾಪಾಣಿರ್ಗರ್ವಂ ವಾಂ ವ್ಯಪನೇಷ್ಯತಿ । (109.13 ಭವಿಷ್ಯಪರ್ವ)



ನಿಮ್ಮ ಸೊಕ್ಕು ಮುರಿದು ಬಿಡುತ್ತಾನೆ, ನಿಮ್ಮನ್ನು ಸೋಲಿಸುತ್ತಾನೆ, ಸಂಹಾರನು ಮಾಡುತ್ತಾನೆ ಅದಕ್ಕಾಗಿ ಸರ್ವಥ ನೀವು ಈ ರೀತಿಯ ಉನ್ಮಾದದಿಂದ ಮಾತುಗಳನ್ನು ಆಡಬೇಡಿ. ನಮ್ಮ ಎಲ್ಲ ಪಾತ್ರೆಗಳನ್ನ ವಸ್ತ್ರಗಳನ್ನೆಲ್ಲ ಧ್ವಂಸ ಮಾಡಿದ್ದೀರಿ ಇಷ್ಟಾದರೂ ನಾವು ಸಹನೆ ಮಾಡಿಕೊಂಡಿದ್ದೇವೆ, ಇನ್ನಾದರೂ ಸುಮ್ಮನೆ ಇರಿ ಅಂತ ಹೇಳುತ್ತಾರೆ ದುರ್ವಾಸರು.

ಇಲ್ಲಿ ಒಂದು ಮಾತನ್ನ ನಾವು ಚಿಂತನ ಮಾಡಬೇಕು. ಹರಿವಂಶದಲ್ಲಿ ದುರ್ವಾಸರು ಹೇಳುತ್ತಾ ಇದ್ದಾರೆ **'ಶಾಪೇನ ಅಹಂ ಸಮರ್ಥೋಽಪಿ ಹನ್ತುಂ'** ಶಾಪ ಕೊಟ್ಟು ನಿಮ್ಮನ್ನು ಸಾಯಿಸುವ ಸಾಮರ್ಥ್ಯ ನನಗಿದ್ದರೂ ನಾನು ಮಾಡುವುದಿಲ್ಲ ಯಾಕೆ ಅಂದರೆ ಯತಿ ಆದದ್ದರಿಂದ ಅಂತ. ಆದರೆ ಶ್ರೀಮದಾಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ನಿರ್ಣಯವನ್ನು ಹೇಳುವಾಗ ಇವರು ಶಾಪ ಕೊಡುವುದಕ್ಕೆ ಸಾಧ್ಯ ಇರಲಿಲ್ಲ ಅಂತ ಹೇಳುತ್ತಾರೆ ಯಾಕೆ ಅಂದರೆ ವರ ಕೊಟ್ಟವರೇ ಅವರು, ರುದ್ರ ದೇವರೇ ವರ ಕೊಟ್ಟದ್ದು ಯಾರೂ ಸೋಲಿಸುವುದಕ್ಕೆ ಸಾಧ್ಯ ಇಲ್ಲ, ಕೊಲ್ಲುವುದಕ್ಕೆ ಸಾಧ್ಯ ಇಲ್ಲ, ಯಾರು ಅಂದರೆ ಯಾರು ದೇವತೆಗಳು ಋಷಿಗಳು ಮುನಿಗಳು ಯಕ್ಷರು ಗಂಧರ್ವರು ಕಿನ್ನರರು ಯಾರೂ ಸೋಲಿಸುವುದಕ್ಕೆ ಸಾಧ್ಯ ಇಲ್ಲ, ಯಾರೂ ಸಂಹಾರ ಮಾಡಲಿಕ್ಕೆ ಸಾಧ್ಯ ಇಲ್ಲ, ಯಾರೂ ಅಂದರೆ ತಾವೂ ಬಂದರಲ್ಲ ಅದರಲ್ಲಿ, ತಾವೂ ಒಬ್ಬ ದೇವತೆಗಳೇ. ಹಾಗಾದರೆ ದೇವತೆಗಳಿಂದ ಸೋಲಿಸುವುದಕ್ಕೆ ಸಂಹಾರ ಮಾಡಲಿಕ್ಕೆ ಸಾಧ್ಯ ಇಲ್ಲ, ಅಂತ ತಾವೇ ವರ ಕೊಟ್ಟ ಮೇಲೆ ಸಾಯಿ ಅಂತ ಶಾಪ ಕೊಡುವುದಕ್ಕ ಶಕ್ತಿ ಇಲ್ಲ ಇವರಿಗೆ ಮತ್ತೆ. ಶ್ರೀಮದಾಚಾರ್ಯರು ಅನ್ನುತ್ತಾರೆ **'ವರಾತ್ ಸ್ವ ಸಂಭವಾದಸೌ ನ ಶಾಪಶಕ್ತಿಮಾನ್ ಅಭೂತ್'** ತಾವೇ ವರ ಕೊಟ್ಟದ್ದಕ್ಕಾಗಿ ತಾವೇ ಶಾಪ ಕೊಡುವ ಹಾಗೆ ಇರಲಿಲ್ಲ ಅಂತ ಅದಕ್ಕೆ ಮತ್ತೆ ಇಲ್ಲಿ ಶಾಪ ಕೊಡಲಿಕ್ಕೆ ನಾನು ಸಮರ್ಥನಾಗಿದ್ದೆ ಅಂತ **'ಶಾಪೇನ ಅಹಂ ಸಮರ್ಥಃ'** ಅಂತ ಹರಿವಂಶ ಹೇಳುತ್ತದೆ. **'ನ ಶಾಪಶಕ್ತಿಮಾನ್ ಅಭೂತ್'** ಅಂತ ತಾತ್ಪರ್ಯ ನಿರ್ಣಯದಲ್ಲಿ ಇದೆ ಏನಿದರ ಅಭಿಪ್ರಾಯ ಅಂತ. ಅದಕ್ಕೆ **'ಶಾಪೇನಾಹಂ ಸಮರ್ಥೋಽಪಿ ಹನ್ತುಂ ರಾಜಕುಲಾಧಮೌ'** ಶಾಪ ಕೊಟ್ಟು ನಿನ್ನನ್ನು ಕೊಲ್ಲುವ ಸಾಮರ್ಥ್ಯ ನನಗೆ ಇದೆ ಅಂತ ಅರ್ಥವಲ್ಲ ಹರಿವಂಶಕ್ಕೆ. **'ಶಾಪೇನಾಹಂ ಸಮರ್ಥಃ' 'ಶಾಪೇನ ಹನ್ತುಂ ಸಮರ್ಥಃ'** ಅಲ್ಲ ರಾಜಕುಲಾಧಮರಾದ ಇವರಿಬ್ಬರನ್ನ **'ಹನ್ತುಂ ಶಾಪೇ'** ಕೊಲ್ಲುವುದಕ್ಕೆ ಒಂದು ಶಾಪ ಕೊಡಬೇಕಲ್ಲ ಆ ಶಾಪ ಕೊಡುವ ವಿಷಯದಲ್ಲಿ **'ನಾಹಂ ಸಮರ್ಥಃ'** ನನಗೆ ಶಕ್ತಿಯೇ ಇಲ್ಲ ಯಾಕೆ ಅಂದರೆ ನಾನೇ ವರ ಕೊಟ್ಟದ್ದೇನೆ ಹಾಗೆ ಅರ್ಥ ಈ ಶ್ಲೋಕಕ್ಕೆ. **'ಶಾಪೇನಾಹಂ ಸಮರ್ಥೋಽಪಿ ಹನ್ತುಂ ರಾಜಕುಲಾಧಮೌ'** ಅದು ಸರಿ ಆದರೆ ಮುಂದಿನ ವಾಕ್ಯದ ಅನ್ವಯನೇ ಹೊಂದುವುದಿಲ್ಲ ಇಷ್ಟಿದ್ದರೂ ನಾನು ಕೊಲ್ಲುವುದಿಲ್ಲ ಯಾಕೆ ಅಂದರೆ ನಾನು ಸನ್ಯಾಸಿ ಆದದ್ದಕ್ಕೆ ಅಂತನ್ನುತ್ತಾರೆ.

ತಥಾಪಿ ನ ಕರೋಮ್ಯನ್ತಂ ಯತಯೋ ಹ್ಯತ್ರ ತೇ ವಯಮ್ । (109.12 ಭವಿಷ್ಯಪರ್ವ)

ಅಂತ ಇದೆ. ಅದಕ್ಕೆ ಇನ್ನೂ ಒಂದು ಕಾರಣವನ್ನು ಹೇಳುತ್ತಾರೆ ಒಂದು ನನಗೆ ಶಾಪ ಕೊಡುವ ಶಕ್ತಿ ಇಲ್ಲ ಯಾಕೆ ಅಂದರೆ ನಾನೇ ವರ ಕೊಟ್ಟದ್ದು. ಇನ್ನೊಂದು ಈ ಯಾವ ಕಾರಣ **'ಯತಯಃ'** ನಾವು ಯತಿಗಳಾಗಿ ಇದ್ದೇವೋ, ಸನ್ಯಾಸ ಧರ್ಮದಲ್ಲಿ ಇದ್ದೇವೋ ಆದ್ದರಿಂದಲೂ ಕೂಡ **'ಅನ್ತಂ ನ ಕರೋಮ್ಯಪಿ'** ನಿನ್ನನ್ನ ನಾನು ಸಂಹಾರ ಮಾಡುವುದಿಲ್ಲ, ಒಂದು ವರ ಕೊಟ್ಟದ್ದು ನಾನೇ ಶಾಪ ಕೊಡುವ ಶಕ್ತಿ ಇಲ್ಲ, ಎರಡನೆಯದು ಆ ಪ್ರಯತ್ನವನ್ನೂ ನಾನು ಮಾಡುವುದಿಲ್ಲ ಯಾಕೆ ಅಂದರೆ ನಾನು ಯತಿಯಾಗಿದ್ದೇನೆ. ಈ ಅಭಿಪ್ರಾಯದಲ್ಲಿ ಮುಂದಿನ ವಾಕ್ಯವನ್ನು ನಾವು ಜೋಡಿಸಿಕೊಂಡರೆ ಮಹಾಭಾರತ ತಾತ್ಪರ್ಯ ನಿರ್ಣಯ ಹಾಗೂ ಹರಿವಂಶಗಳೆರಡೂ ಕೂಡ ಏಕಾಭಿಪ್ರಾಯದಲ್ಲಿ ಇವೆ ಅಂತ ನಮಗೆ ತಿಳಿದು ಬರುತ್ತದೆ.

ಸರಿ, ಜನಾರ್ದನಾಚಾರ್ಯರಿಗಂತೂ ನೋಡಿ, ಅಷ್ಟು ಸಿಟ್ಟು ಬಂದಿದೆ ಅಂತ ಹಿಂದೆ ಬರೀ ಕಣ್ಣಿನೊಳಗೆ ತೋರಿಸಿದರು ಒಂದು ಸಿಟ್ಟು ಒಂದು ಪ್ರೀತಿ ಬರೇ ಕಣ್ಣಿನೊಳಗಲ್ಲ ಮಾತನಾಡುವಾಗಲೂ ಅಷ್ಟೇ ಅವರ ಜೊತೆಗೆ ಜೋರಾಗಿ ಮಾತಾಡಿದ್ದಾರೆ ನಿಮ್ಮನ್ನು ದೇವರು ನೋಡಿಕೊಳ್ಳುತ್ತಾನೆ ಅಂತ ಆದರೆ ಜನಾರ್ದನಾಚಾರ್ಯರನ್ನ ಮಾತ್ರ ಅತ್ಯಂತ ಪ್ರೀತಿಯಿಂದ ಮಾತನಾಡಿಸುತ್ತ ಇದ್ದಾರೆ ಜನಾರ್ದನಾಚಾರ್ಯ ನಿನಗೆ ಮಂಗಲವಾಗಲಿ ಅಪ್ಪ.

ಸ್ವಸ್ತಿಸ್ತು ತವ ವಿಪ್ರೇನ್ದ್ರ ಭಕ್ತಿರಸ್ತು ಜನಾರ್ದನೇ ॥ (109.18 ಭವಿಷ್ಯಪರ್ವ)

ನಿನಗೊಂದು ಶ್ರೇಷ್ಠ ವರ ಕೊಡಲಾ ಅವಶ್ಯ ಕೊಡಿ. ನೀನು ಯಾರ ಹೆಸರು ಇಟ್ಟುಕೊಂಡಿದ್ದೀಯಲ್ಲ ಜನಾರ್ದನ ಅಂತ ಆ ಜನಾರ್ದನನಾದ ಪರಮಾತ್ಮನಲ್ಲಿಯೇ ನಿನಗೆ ಭಕ್ತಿ ಬರಲಿ. **'ನ ಜಾನಯತೇ ಇತಿ ಜನಃ'** ಯಾರಿಗೆ ಜನ್ಮವಿಲ್ಲವೋ ಅವನಿಗೆ ಜನ ಅಂತ ಕರೀತಾರೆ, **'ಅರ್ದಯತಿ ಸಂಸಾರಂ'** ಎಲ್ಲ ಭಕ್ತರ ಸಂಸಾರವನ್ನ ಪರಿಹಾರ ಮಾಡುತ್ತಾನೆ ಆದ್ದರಿಂದ ಅವನಿಗೆ ಅರ್ದನ ಅನ್ನುತ್ತಾರೆ, **'ಜನಶ್ಚಾಸೌ ಅರ್ದನಶ್ಚ ಜನಾರ್ದನಃ'** ತಾನು ಜನ್ಮರಹಿತ ಅಂದರೆ ಸಂಸಾರರಹಿತ ಇನ್ನೊಬ್ಬರ ಸಂಸಾರವನ್ನು ಪರಿಹಾರ ಮಾಡುತ್ತಾನೆ ಆದ್ದರಿಂದ ಜನಾರ್ದನ ಅಂತಹ ಜನಾರ್ದನನಲ್ಲಿ ನಿನಗೆ ಭಕ್ತಿ ಬರಲಿ. ಗೀತಾ ಭಾಷ್ಯದಲ್ಲಿ ಶ್ರೀಮದಾಚಾರ್ಯರು ತಿಳಿಸುತ್ತಾರೆ ಅಂತಹ ಜನಾರ್ದನನ ಭಕ್ತನಾಗು ಇನ್ನಷ್ಟು ವಿಶೇಷವಾಗಿ ಆ ಪರಮಾತ್ಮನನ್ನ ಶೀಘ್ರದಲ್ಲಿ ದರ್ಶನದ ಮಾಡುವ ಭಾಗ್ಯ ನಿನಗೆ ಸಿಗಲಿ ಅಂತ. ಶೀಘ್ರದಲ್ಲಿ ಅಂದರೆ ಒಂದೆರಡು ವರ್ಷದಲ್ಲಿ ಹತ್ತು ವರ್ಷದಲ್ಲಿ ಅಂತನಾ ಎಷ್ಟು ಶೀಘ್ರದಲ್ಲಿ ಅಂತ ಕೇಳಿದರೆ **'ಅದ್ಯ'** ಇವತ್ತೇ **'ಶ್ವೋ ವಾ ಪರಶ್ವೋ ವಾ'** ಇವತ್ತು ನಾಳೆ ನಾಡದ್ದು ಇಷ್ಟರೊಳಗೆ ನಿನಗೆ ಪರಮಾತ್ಮನ ಶ್ರೀಕೃಷ್ಣನ ದರ್ಶನವಾಗಲಿ ಅಂತ ಆ ಜನಾರ್ದನಾಚಾರ್ಯನಿಗೆ ವರವನ್ನು ಕೊಟ್ಟಿದ್ದಾರೆ. ಕೊನೆಗೆ ಒಂದು ಮಾತು ಅನ್ನುತ್ತಾರೆ ನೋಡಪ್ಪಾ ಈ ದುಷ್ಟರ ಜೊತೆಗೆ ನೀನು ಇದ್ದೀಯಾ ಅಂದ ಮಾತ್ರಕ್ಕೆ ನೀನೇನು ದುಷ್ಟನಲ್ಲ ನೀನು ಸಜ್ಜನನೇ, ನೀನು ಸಜ್ಜನ ಅಂದಮೇಲೆ ನಿನಗೆ ಎಂದಿಗೂ ದೇವರು ನಾಶ ಮಾಡುವುದಿಲ್ಲ ನಿನಗೆ ರಕ್ಷಣೆ ಮಾಡೇ ಮಾಡುತ್ತಾನೆ **'ನ ಮೇ ಭಕ್ತ ಪ್ರಣಶ್ಯತಿ'** ಅಂತ ಅವನ ಪ್ರತಿಜ್ಞೆ ಇದೆ.

ನ ಹಿ ಸಾಧೋರ್ವಿನಾಶೋಽಸ್ತಿ ಲೋಕಯೋರುಭಯೋರಪಿ ।
ಗಚ್ಛ ಸರ್ವಂ ಪಿತುರ್ಬ್ರೂಹಿ ಜ್ಞಾತ್ವಾ ವೃತ್ತಂ ಯಥಾಖಿಲಮ್ ॥ (109.20 ಭವಿಷ್ಯಪರ್ವ)

ನೋಡಿ, ಈ ಜನಾರ್ದನಾಚಾರ್ಯನ ಮೇಲೆ ಅಷ್ಟೇ ಪ್ರೀತಿ ಇಲ್ಲ,ಅವರಪ್ಪ ಮಿತ್ರಸಹಾಚಾರ್ಯ ಅವನೂ ಪರಮ ಭಕ್ತ ಇದೆಲ್ಲ ಸುದ್ದಿಯನ್ನು ನಿಮ್ಮಪ್ಪನಿಗೂ ಹೇಳಪ್ಪ ಹೀಗೆಲ್ಲಾ ಆಯಿತು ಅಂತ ಅವನಿಗೂ ವಿಶೇಷವಾಗಿ ಅನುಗ್ರಹ ಮಾಡಿದ್ದೇವೆ ಅಂತ ತಿಳಿಸು ಅಂತ ದುರ್ವಾಸರು ಆ ಜನಾರ್ದನಾಚಾರ್ಯನನ್ನ ಬಿಟ್ಟುಕೊಟ್ಟಿದ್ದಾರೆ.

ಈ ಕಡೆಗೆ ಹಂಸ-ಡಿಭಿಕರು ಯಥಾಪ್ರಕಾರ ಆ ಎಲ್ಲ ಋಷಿಗಳ ಮುನಿಗಳ ಕಮಂಡಲು ಇತ್ಯಾದಿಗಳನ್ನೆಲ್ಲ ಧ್ವಂಸ ಮಾಡುತ್ತಾ ಇದ್ದಾರೆ, ದಂಡಗಳನ್ನು ಮುರಿದಿದ್ದಾರೆ, ನಾನಾ ರೀತಿಯ ಹಿಂಸಾ ಕಾರ್ಯವನ್ನು ಮಾಡುತ್ತಾ ಇದ್ದಾರೆ. ಅಷ್ಟು ಮಾಡುವುದಲ್ಲದೇ ಅನೇಕ ಬೇಡರನ್ನ ಕರೆದು ಅನೇಕ ಮೃಗಗಳನ್ನ ಕೊಲ್ಲಿಸಿ ಅವುಗಳ ಮಾಂಸವನ್ನೆಲ್ಲ ಬೇಯಿಸಿ ತಾವು ತಿಂದು ಅವರ ಆಶ್ರಮದಲ್ಲಿ ಆ ರೀತಿಯ ಎಲ್ಲ ಕುಕೃತ್ಯಗಳನ್ನು ಮಾಡಿ ಅಲ್ಲಿಂದ ಹೊರಟಿದ್ದಾರೆ. ಜನಾರ್ದನನಿಗೆ ಮನಸ್ಸಿಲ್ಲ ಈ ದುಷ್ಟರ ಜೊತೆಗೆ ಹೋಗುವುದಕ್ಕೆ ಅವರ ಜೊತೆಗೇನೆ ಬಂದಿದ್ದಾನೆ ಗೆಳೆಯರು ಅನ್ನುವುದಕ್ಕೆ ಅವರ ಜೊತೆಗೆ ಹೋಗುವುದಕ್ಕೂ ಮನಸ್ಸಿಲ್ಲ ಮನಸ್ಸಿಲ್ಲದಿದ್ದರೂ ಕೂಡ ಅನಿವಾರ್ಯವಾಗಿ ಅವರ ಜೊತೆಗೆ ಹೋಗಿದ್ದಾನೆ ಆದರೆ ಮಾನಸಿಕವಾಗಿ ಮಾತ್ರ,ಅವರಿಗೆ ಸಹಕಾರ ಇಲ್ಲ ಕೇವಲ ದೈಹಿಕವಾಗಿ ಅವರ ಜೊತೆಗೆ ಹೋಗಿದ್ದಾನೆ ಅಷ್ಟೇ

ಜನಾರ್ದನ. ಈ ರೀತಿ ಅಲ್ಲಿಂದ ಅವರು ಹೊರಟು ಹೋಗಿದ್ದಾರೆ. ದುರ್ವಾಸರು ಎಲ್ಲ ಯತಿಗಳನ್ನ ಕೂಡಿಸಿ ಹೇಳುತ್ತಾ ಇದ್ದಾರೆ ನೀವು ಯಾರು ಚಿಂತೆ ಮಾಡಬೇಡಿ, ಏನೋ ದೊಡ್ಡ ಅನಾಹುತ ಆಯಿತು ಅಂತ ಬಹಳ ಚಿಂತಾಕ್ರಾಂತರಾಗಿದ್ದೀರಿ ದೇವರು ನಮಗೆ ರಕ್ಷಣೆ ಮಾಡುವನಿದ್ದಾನೆ. ಆ ಸರ್ವ ರಕ್ಷಕನಾಗಿರುವಂತಹ ಭಗವಂತನು ಇರುವಾಗ ನಾವು ಯಾವ ಚಿಂತೆ ಮಾಡುವುದು ಬೇಡ, ದೇವರಿಗೆ ಶರಣು ಹೋಗೋಣ ಬನ್ನಿ ದ್ವಾರಕಾ ಪಟ್ಟಣಕ್ಕೆ ಹೋಗೋಣ ಅಂತ ಎಲ್ಲ ಯತಿಗಳಿಗೆ ಹೇಳುತ್ತಾರೆ ಆ ಪರಮಾತ್ಮನಿಗೆ ನಾವು ಪ್ರಾರ್ಥನೆ ಮಾಡೋಣ.

ಆದ್ಯೋ ಲೋಕಗುರುರ್ವಿಷ್ಣುರ್ಯತಾತ್ಮಾ ತತ್ತ್ವವಿತ್ತ್ವಿಯಃ ।
ಉದ್ಧೃತ್ಯ ಕಣ್ಟಕಾನ್ ಸರ್ವಾಞ್ಛಾಸ ಪೃಥಿವೀಮಿಮಾಮ್ ॥ (110.8 ಭವಿಷ್ಯಪರ್ವ)

ಮೂಲ ಗುರು ನಮಗೆ ಅವನೇ ಅವನ ಪರಂಪರೆಯಲ್ಲಿಯೇ ನಾವು ಬಂದವರು.

ಶ್ರೀಹಂಸಂ ಪರಮಾತ್ಮಾನಂ ವಿರಿಂಚಿಂ ಸನಕಾದಿಕಾನ್ ।
ದೂರ್ವಾಸಸೋ ಜ್ಞಾನನಿಧೀನ್ ವೀಂದ್ರವಾಹನತೀರ್ಥಕಾನ್ ॥

ಅಂತಹ ಹಂಸನಾಮಕ ಪರಮಾತ್ಮನ ಪರಂಪರೆಯಲ್ಲಿ ಬಂದವರೇ ನಾವು,ನಮಗೆ ಅವನು ಆದ್ಯ ಗುರು **'ಆದ್ಯೋ ಲೋಕಗುರುರ್ವಿಷ್ಣು'** ಹೀಗಾಗಿ ಅವನಿಗೆ ನಾವು ಶರಣು ಹೋಗೋಣ ಅವನು ನಮ್ಮನ್ನು ರಕ್ಷಣೆ ಮಾಡುತ್ತಾನೆ ಅಂತ ಹೇಳಿದ್ದಾರೆ. ಎಷ್ಟು ಪ್ರಾಕ್ಟಿಕಲ್ ಆಗಿ ಹೇಳುತ್ತಾರೆ ನೋಡಿ ದುರ್ವಾಸರು, ಅವರು ಅನ್ನುತ್ತಾರೆ ಹೋಗಿ ನಮಗೆಲ್ಲಾ ಬಹಳ ತೊಂದರೆ ಕೊಟ್ಟ ಅಂತ ಇಷ್ಟೇ ಹೇಳಿಬಿಟ್ಟರೆ ಅದಕ್ಕೆ ಏನು ಪ್ರೂಫು ಅಂತ ಕೇಳಬಾರದು ಯಾರು ನಾಳೆ ಮಂತ್ರಿಗಳು. ಕೃಷ್ಣ ಸರ್ವಜ್ಞ ಅವನಿಗೆಲ್ಲ ಗೊತ್ತು ಆದರೆ ಅಕ್ಕಪಕ್ಕದವರು ಕೇಳಬಾರದು ಅದಕ್ಕೆ ಆ ಎಲ್ಲ ಪಾತ್ರೆಗಳನ್ನ ಗಂಟು ಕಟ್ಟಿಕೊಂಡು ತೊಗೊಂಡು ನಡೆಯಿರಿ ಅಂತ ಅನ್ನುತ್ತಾರೆ. ಮುರಿದ ಕಮಂಡಲು ಮತ್ತೆ ಏನೇನು ಒಡೆದಂತಹ ಪಾತ್ರೆಗಳೆಲ್ಲ ಇವೆ ದ್ವಿದಲ ಕರ್ವಟ ಅಂತ ಹೀಗೆ ಮುಚ್ಚಲಿಕ್ಕೆ ಬರುವಂತಹ ಕಟ್ಟಿಗೆಯ ಪಾತ್ರೆಗಳು, ಹರಿದ ಕೌಪೀನಗಳು ಏನೇನು ಧ್ವಂಸ ಮಾಡಿದ್ದಾರೆ ಬಟ್ಟೆಗಳನ್ನ ಪಾತ್ರೆಗಳನ್ನ ಅವುಗಳೆಲ್ಲವನ್ನು ತೆಗೆದುಕೊಂಡು ಕೃಷ್ಣನ ಎದುರಿಗೆ ಇಡೋಣ, ತೋರಿಸೋಣ ಇಷ್ಟೆಲ್ಲಾ ತೊಂದರೆ ಕೊಟ್ಟಿದ್ದಾರೆ ಹಂಸ-ಡಿಭಿಕರು ಅಂತ ಹೇಳಿ ನಮ್ಮ ದುಃಖವನ್ನು ಅವನ ಎದುರಿಗೆ ತೋಡಿಕೊಂಡು ಪ್ರಾರ್ಥನೆ ಮಾಡಿಕೊಳ್ಳೋಣ ಬನ್ನಿ ಅಂತ ಕರೆದುಕೊಂಡು ಹೊರಟಿದ್ದಾರೆ. ಎಷ್ಟು ಜನರನ್ನು ಕರೆದುಕೊಂಡು ಹೊರಟರು ಅಂತ **'ಪಞ್ಚ ಚೈವ ಸಹಸ್ರಾಣಿ'**[1] 5,000 ಜನ ಸನ್ಯಾಸಿಗಳು ಹೊರಟಿದ್ದಾರೆ ದುರ್ವಾಸರನ್ನ ಮುಂದೆ ಮಾಡಿಕೊಂಡು.

ದುರ್ವಾಸಸಂ ತಪೋಯೋನಿಮೀಶ್ವರಸ್ಯಾತ್ಮಸಮ್ಭವಮ್ । (110.14 ಭವಿಷ್ಯಪರ್ವ)

ರುದ್ರಾಂಶ ಸಂಭೂತರಾದಂತಹ ದುರ್ವಾಸರನ್ನ ಮುಂದೆ ಮಾಡಿಕೊಂಡು ಹೊರಟ್ಟಿದ್ದಾರೆ. ಇಲ್ಲಿ ಮತ್ತೆ ಚಿಂತನವನ್ನು ಮಾಡಬೇಕು ಯಾಕೆ ಅಂದರೆ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಶ್ರೀಮದಾಚಾರ್ಯರು 3,000 ಸನ್ಯಾಸಿಗಳು ಅಂತ ಹೇಳಿದ್ದಾರೆ.

1. 110.14 ಭವಿಷ್ಯಪರ್ವ

ದಶತ್ರಿಕೈಃ ಶತೈರ್ವೃತೋ ಯತೀಶ್ವರೈಃ ಸರ್ವವಿತ್ ।
ವಿಪಾಟತಾತ್ಮಕೌಪಿನಾದಿ ಸರ್ವಮಾತ್ರಕೋಽಭವತ್ ॥ (17.239 ಮಭಾತಾನಿರ್ಣಯ)

ಅಂತ ಶ್ರೀಮದಾಚಾರ್ಯರು ತಿಳಿಸಿಕೊಟ್ಟಿದ್ದಾರೆ ಆದರೆ 3,000 ಸಾವಿರ ಜನ ಯತಿಗಳು ಅಂತ ತಾತ್ಪರ್ಯ ನಿರ್ಣಯ ಹೇಳುತ್ತದೆ, 5,000 ಜನ ಯತಿಗಳು ಅಂತ ಹರಿವಂಶ ಹೇಳುತ್ತಾ ಇದೆಯಲ್ಲ ಅಂತ ಪ್ರಶ್ನೆ ಬಂದರೆ ತಾತ್ಪರ್ಯ ನಿರ್ಣಯದ ವಾಕ್ಯವನ್ನು ಗಮನಿಸಿ. 3,000 ಸನ್ಯಾಸಿಗಳಿಂದ ಸಹಿತರಾದ ದುರ್ವಾಸರು ಏನಾದರು **'ವಿಪಾಟತಾತ್ಮಕೌಪಿನಾದಿ ಸರ್ವಮಾತ್ರಕೋಽಭವತ್'** ಕೌಪೀನ ಮೊದಲಾದ ವಸ್ತ್ರಗಳು ಹಾಗೂ ಕಮಂಡಲು ಮೊದಲಾದ ಪಾತ್ರೆಗಳು ಇವೆಲ್ಲವೂ ಧ್ವಸ್ತವಾಗಿದ್ದವು. ಆ ಹಂಸ-ಡಿಭಿಕರಿಂದ ಧ್ವಂಸಕ್ಕೊಳಗಾದಂತಹ ಬಟ್ಟೆ ಮತ್ತು ಪಾತ್ರೆಗಳುಳ್ಳವರಾದರು ದುರ್ವಾಸರು, ಎಷ್ಟು ಜನರಿಂದ ಸಹಿತರಾಗಿ 3,000 ಜನರಿಂದ ಸಹಿತರಾಗಿ ಅಂತ ಅಂದರೆ ಆ ಹಂಸ-ಡಿಭಿಕರ ಆಕ್ರಮಣಕ್ಕೆ ಒಳಗಾದ ಯತಿಗಳು ಮೂರೇ ಸಾವಿರ ಜನ ಅದನ್ನು ಶ್ರೀಮದಾಚಾರ್ಯರು ಹೇಳಿದ್ದಾರೆ. ಒಟ್ಟು ದ್ವಾರಕಾ ಪಟ್ಟಣಕ್ಕೆ ಹೋದವರು 5,000 ಜನ, 3,000 ಜನ ಅದರೊಳಗೆ ಸಂತ್ರಸ್ತರು, ಇನ್ನೆರಡು ಸಾವಿರ ಜನ ಅವರಿಗೆ ಸಹಾಯಕರಾಗಿ ಬೆಂಬಲಿಗರಾಗಿ ಅಯ್ಯೋ ನಮ್ಮ ಸನ್ಯಾಸಿಗಳ ಗುಂಪಿಗೆ ಹೀಗಾಯಿತಲ್ಲ ಅಂತ ಅತ್ತಇತ್ತ ಇದ್ದ ಸನ್ಯಾಸಿಗಳೆಲ್ಲ ಸೇರಿಕೊಂಡು 5,000 ಜನ ದ್ವಾರಕಾ ಪಟ್ಟಣಕ್ಕೆ ಹೋದವರು ಅಂತ ತಿಳಿದುಕೊಂಡರೆ ಆಗ ಹರಿವಂಶಕ್ಕೂ ಹಾಗೂ ತಾತ್ಪರ್ಯ ನಿರ್ಣಯಕ್ಕೂ ಯಾವುದೇ ವಿರೋಧ ಬರುವುದಿಲ್ಲ. ಅದರ ಸೂಚನೆಯೂ ಈ ಹರಿವಂಶದಲ್ಲಿ ಸಿಗುತ್ತದೆ ನೋಡಿ ಹೇಗೆ ಅಲ್ಲಿ ಹಿಂದೆ ಇದೆ.

ಛಿನ್ನಂ ತಾಭ್ಯಾಂ ಸಮಾದಾಯ ಶಿಕ್ಯಂದಾರುಮಯಂ ತಥಾ ।
ದ್ವಿದಲಂ ಕರ್ವಟಂ ಚೈವ ಕೌಪೀನಮಥ ವಲ್ಕಲಮ್ ॥ (110.12 ಭವಿಷ್ಯಪರ್ವ)

ಕಮಣ್ಡಲುಂ ತಥಾ ರಾಜನ್ನರ್ಧಪ್ರೋತಕಪಾಲಕಮ್ ।
ಏತಾನನ್ಯಾನ್ ಸಮಾದಾಯ ದ್ರಷ್ಟುಂ ಕೇಶವಮಾಯಯುಃ ॥ (110.13 ಭವಿಷ್ಯಪರ್ವ)

ಅಂತ. ಅಂದರೆ ಅದರ ಮೇಲ್ನೋಟದ ಅರ್ಥ ಅವೆಲ್ಲ ಒಡೆದ ಪಾತ್ರೆಗಳ ಲಿಸ್ಟ್, ಕೊಟ್ಟಿದ್ದಾರೆ, ಇಷ್ಟೇ ಅಲ್ಲ ಇನ್ನೂ ಕೆಲವು ಪದಾರ್ಥಗಳನ್ನು ತೆಗೆದುಕೊಂಡು ಹೊರಟರು ಅಂತ ಅದು ಬಹಳ ಸೂಕ್ಷ್ಮ ಅದು ವಾಕ್ಯ **'ಏತಾನನ್ಯಾನ್ ಸಮಾದಾಯ'** ಅಂತ ಅದು ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರ ದೃಷ್ಟಿಗೆ ಗೋಚರವಾಯಿತು. ಅದು ನಮಗೆಲ್ಲ ಮೇಲ್ನೋಟಕ್ಕೆ ಬರೀ ಈ ಪಾತ್ರೆಗಳು, ಇನ್ನುಳಿದ ಪಾತ್ರೆಗಳು ಅಂತ ಅದು ಬರೀ ಇನ್ನುಳಿದ ಪಾತ್ರೆಗಳನ್ನ ಹೇಳುವುದಕ್ಕೆ ಹೊರಟದ್ದಲ್ಲ **'ಏತಾನನ್ಯಾನ್ ಸಮಾದಾಯ' 'ಏತಾನ್'** ಸಂತ್ರಸ್ತರಾದವರು, **'ಅನ್ಯಾನ್'** ಸಂತ್ರಸ್ತರಲ್ಲದ ಬೇರೆ ಮುನಿಗಳು ಅಂತ ಬರೀ ಪಾತ್ರೆಗಳನ್ನು ಯಾಕೆ ತೆಗೆದುಕೊಳ್ಳಬೇಕು ಅಲ್ಲಿ **'ಏತಾನನ್ಯಾನ್ ಸಮಾದಾಯ'.** ಈ ಮುನಿಗಳು ಬೇರೆ ಮುನಿಗಳನ್ನು ಕರೆದುಕೊಂಡು ಹೊರಟರು ಅಂತ ಇಟ್ಟುಕೊಂಡರೆ 5,000 ಅಂತ ಅನ್ನುವುದು ಸರಿಯಾಗಿ ಹೊಂದುತ್ತೆ ಈ ರೀತಿ ಹೊರಟರು. ಎಲ್ಲಿದೆ ಪುಷ್ಕರ, ದ್ವಾರಕೆಗೆ ಬರಬೇಕು ಇವತ್ತಿನ ಕಾಲಕ್ಕೆ ಏನು ಬರುವುದು ಸುಲಭ ವಿಮಾನದಲ್ಲಿ ಆದರೆ ಆಗಿನ ಕಾಲಕ್ಕೆ ಬರಬೇಕಲ್ಲ ಯತಿಗಳು ನಡೆಯುತ್ತಾ ಆದರೂ ಆ ಮಹಾನುಭಾವರಾದ ಯತಿಗಳು ಶ್ರೀಕೃಷ್ಣ ಪರಮಾತ್ಮನ ದರ್ಶನದ ಆ ಉತ್ಸುಕತೆಯಿಂದ ತಮ್ಮ ವಿಶಿಷ್ಟ ಸಾಮರ್ಥ್ಯದಿಂದ ಒಂದೇ ರಾತ್ರಿಯೊಳಗೆ ಬಂದು ಬಿಟ್ಟಿದ್ದಾರೆ. ವೇಗದಿಂದ ಬಂದಿದ್ದಾರೆ ಒಂದು ದಿನ ಅಂತಂದುಕೊಳ್ಳಿ ಅಹೋರಾತ್ರ ಒಂದು ಹಗಲು, ಒಂದು ರಾತ್ರಿ ಅಷ್ಟರೊಳಗೆ ದ್ವಾರಕಾ

ಪಟ್ಟಣವನ್ನು ಬಂದು ಸೇರಿದ್ದಾರೆ ರಾಜಸ್ಥಾನದಿಂದ ಗುಜರಾತ್ **'ಯುಯುರ್ದಾನ್ತಾ ಮಹಾತ್ಮಾನೋ'**[1] ಎಲ್ಲರೂ ಹೇಗಿದ್ದಾರೆ ಮೈಮೇಲೆ ಅಷ್ಟೇ ಕೂದಲುಗಳು, ತಲೆಯ ಮೇಲೆ ಕೂದಲುಗಳು ಇಲ್ಲ ಎಲ್ಲರೂ ಸ್ವಚ್ಛವಾಗಿ ಮುಂಡನ ಮಾಡಿಕೊಂಡಿದ್ದಾರೆ. **'ಲೋಮಶಾಃ'** ಆದರೆ **'ಕೇಶವರ್ಜಿತಾಃ'** ಅಂತಹ ಮುಂಡನ ಮಾಡಿಕೊಂಡವರು ಅಂದರೆ ಆ ದುರ್ವಾಸರು ಬಂದಿದ್ದಾರೆ ದ್ವಾರಕಾ ಪಟ್ಟಣಕ್ಕೆ.

ಶ್ರೀಹಂಸಂ ಪರಮಾತ್ಮಾನಂ ವಿರಿಂಚಿಂ ಸನಕಾದಿಕಾನ್ ।
ದೂರ್ವಾಸಸೋ ಜ್ಞಾನನಿಧೀನ್ ವೀಂದ್ರವಾಹನತೀರ್ಥಕಾನ್ ॥

ಅದೇನು ಅನುಚ್ಚಾನವಾದ ಪರಂಪರೆ ಇದೆ ದುರ್ವಾಸರು ಬಂದರೆ ದ್ವಾರಕಾ ಪಟ್ಟಣಕ್ಕೆ ನೋಡಿದರೆ ದ್ವಾರಕಾ ಪಟ್ಟಣದ ಸುತ್ತಲಿರುವಂತಹ ಸಮುದ್ರ ಆ ಸಮುದ್ರ ಎಲ್ಲಾ ಸಿಹಿ ನೀರು ಮಾಡಿದ್ದ, ಆದು ನದಿಗಿಂತಲೂ ಒಳ್ಳೆಯ ಸಿಹಿ ನೀರು ಆಗಿತ್ತು. ಅಲ್ಲಿಯೇ ಸ್ನಾನ ಮಾಡಿ ನೀರು ಪಾನ ಮಾಡಬಹುದು, ಎಲ್ಲಾನು ಮಾಡಬಹುದು ಏನು ತೊಂದರೆ ಇಲ್ಲ ಆದರೂ ಒಂದು ವಿಶಿಷ್ಟವಾದ ರೀತಿಯಲ್ಲಿ ಶ್ರೀಕೃಷ್ಣ ಪರಮಾತ್ಮನೇ ನಿರ್ಮಾಣ ಮಾಡಿದ ಬಾವಿಯಲ್ಲಿ ಸ್ನಾನ ಮಾಡಿದ್ದಾರೆ ಆ ಬಾವಿ ಸ್ನಾನ ಬೇಕು ಅಂತ ದುರ್ವಾಸರಿಗೆ ಅವಗಾಹನ ಸ್ನಾನ ಬಾವಿಯಲ್ಲಿಯೇ ಮಾಡಬೇಕು ಅಂತ ದೊಡ್ಡದಾದ ಒಂದು ಇಳಿಯುವ ಬಾವಿ.

ಪ್ರಾತಃ ಪವಿಶ್ಯ ರಾಜೇನ್ದ್ರ ವಾಪಿಕಾಯಾಂ ಯತೀಶ್ವರಾಃ ।
ಸ್ನಾತ್ವೋಪಸ್ಪೃಶ್ಯ ತೇ ಸರ್ವೇ ಯತ್ನೇನ ಮಹತಾ ತದಾ ॥ (110.16 ಭವಿಷ್ಯಪರ್ವ)

ಅಲ್ಲಿ ದೊಡ್ಡದಾದ ಇಳಿಯುವ ಬಾವಿ 5,000 ಜನ ಯತಿಗಳು ಸ್ನಾನ ಮಾಡಿ, ಕೌಪೀನಾ ಬಟ್ಟೆ ಎಲ್ಲ ಒಣಗಿ ಹಾಕಿಕೊಂಡು ತಮ್ಮ ಎಲ್ಲಾ ಆಹ್ನಿಕವನ್ನು ಮಾಡಿಕೊಂಡಿದ್ದಾರೆ. ಅಷ್ಟೆಲ್ಲಾ ಮಾಡಿಕೊಂಡು ಶ್ರೀಕೃಷ್ಣ ಪರಮಾತ್ಮನ ದರ್ಶನಕ್ಕಾಗಿ ಕೃಷ್ಣ ಪರಮಾತ್ಮನ ಮಂದಿರಕ್ಕೆ ಹೊರಟಿದ್ದಾರೆ.

ಕೃಷ್ಣ ಪರಮಾತ್ಮ ಏನು ಮಾಡುತ್ತ ಇದ್ದ ಅಲ್ಲಿ ಸಾತ್ಯಕಿಯ ಜೊತೆಗೆ ಲತ್ತ ಆಡುತ್ತಾ ಕುಳಿತಿದ್ದಾನೆ ಯಾಕೆ ಅಂತ ಯಾಕೆ ಅಂದರೆ ಇನ್ನೇನು ಮಾಡಬೇಕು ಅಂತ ಹರಿವಂಶ ಕೇಳುತ್ತದೆ. ಎಲ್ಲ ಅಸುರರ ಸಂಹಾರ ಆಯಿತು, ಭೂಭಾರಹರಣ ಮಾಡಿದ್ದಾನೆ ಖಾಲಿ ಇದ್ದ ಬೇರೆ ಏನು ಕೆಲಸ ಇರಲಿಲ್ಲ ಆನ್ನೋದಕ್ಕೋಸ್ಕರ ಪರಮಾತ್ಮ ಲತ್ತಾ ಆಡುತ್ತಾ ಇದ್ದ ಅಂತ ವರ್ಣನೆ ಮಾಡುತ್ತದೆ ಹರಿವಂಶ.

ಅನ್ಯವ್ಯಾಪಾರರಹಿತೋ ಭೂತಾತ್ಮಾ ಭೂತಭಾವನಃ । (111.7 ಭವಿಷ್ಯಪರ್ವ)

ಸರ್ವಥ ಹಾಗೆ ತಿಳಿಯಬಾರದು. ಪರಮಾತ್ಮ ಪ್ರತಿಕ್ಷಣದಲ್ಲಿಯೂ ಅನಂತ ಜೀವರಾಶಿಗಳಿಗೆ ಅನಂತ ಉಪಕಾರಗಳನ್ನು ಮಾಡುತ್ತಾನೆ ಇರುತ್ತಾನೆ, ಇಡೀ ಜಗತ್ತಿನೊಳಗೆ ಅನಂತ ಕಾರ್ಯಗಳನ್ನು ದೇವರು ನಿರಂತರವಾಗಿ ಮಾಡುತ್ತಾನೆ. ಏನು ವ್ಯಾಪಾರ ಇಲ್ಲದೆ ಖಾಲಿ ಇದ್ದ ಅಂತ ಅನ್ನುವುದೇ ಅಲ್ಲ. ಆದರೆ ಆ ಮಾತಿಗೆ ತಾತ್ಪರ್ಯವೇನು ಅಂದರೆ ಭಗವಂತ ತನ್ನ ಮೂಲರೂಪದಿಂದ ಹಾಗೂ ಅನೇಕ ರೂಪಗಳಿಂದ ಅನಂತ ಕಾರ್ಯಗಳನ್ನು ಮಾಡುತ್ತಾ ಇದ್ದರೂ ಕೂಡ ಒಂದು ಕ್ಷಣವೂ ನಿಷ್ಕ್ರಿಯನಾಗಿ ದೇವರು ಇಲ್ಲದೇ ಇದ್ದರೂ **'ಅನ್ಯವ್ಯಾಪಾರರಹಿತಃ'** ಎಂಬ ಶಬ್ದಕ್ಕೆ

1. 110.15 ಭವಿಷ್ಯಪರ್ವ

ಅಭಿಪ್ರಾಯ ಈ ಕೃಷ್ಣ ರೂಪದಲ್ಲಿ ಅದು ಅನಂತ ವ್ಯಾಪಾರಗಳನ್ನ, ಅನೇಕ ವ್ಯಾಪಾರಗಳನ್ನ ಅವ್ಯಕ್ತವಾಗಿ ಮಾಡುತ್ತಾ ಇದ್ದರೂ ವ್ಯಕ್ತವಾಗಿ, ಯೋಗಿಗಳಿಗೆ ಕಾಣುವ ರೀತಿಯಲ್ಲಿ ಇನ್ನೇನು ವ್ಯಾಪಾರವನ್ನು ಮಾಡುವಂತೆ ಇರಲಿಲ್ಲ ಈ ಕೃಷ್ಣ ರೂಪದೊಳಗೆ ಕಾಣುವಂತೆ ಆ ದೃಷ್ಟಿಯಲ್ಲಿ ಭಗವಂತ ಲತ್ತವನ್ನ ಆಡುತ್ತಾ ಇದ್ದ ಅಂತ ಆ ಮಾತಿಗೆ ನಾವು ಅರ್ಥವನ್ನು ತಿಳಿಯಬೇಕು. ದ್ವಾರಪಾಲಕರು ಒಳಗೆ ಬಿಡಲಿಲ್ಲ ಕೃಷ್ಣ ಪರಮಾತ್ಮ ಲತ್ತ ಆಡುತ್ತಾ ಇದ್ದಾನೆ, ಕ್ರೀಡೆ ಮಾಡುತ್ತಾ ಇದ್ದಾನೆ ಆನಂತರದಲ್ಲಿ ನೀವು ಬರಬೇಕು ಅಂತ ಕಾಯ್ದಿದ್ದಾರೆ ನೋಡಿ ದುರ್ವಾಸರು ಬಹಳ ಸೌಮ್ಯ ರೂಪವನ್ನು ತೋರಿಸಿದ್ದಾರೆ ಇಲ್ಲಿ ಸುಮ್ಮನೆ ಇದ್ದಾರೆ. ಆಯಿತು ಕೃಷ್ಣ ಪರಮಾತ್ಮ ಕ್ರೀಡೆಯನ್ನು ಮಾಡುತ್ತಾನೆ ಅವನು ದೇವ **'ದಿವು ಕ್ರೀಡಾಯಾಂ'** ಅವನು ಇಡೀ ಜಗತ್ತಿನ ಸೃಷ್ಟ್ಯಾದಿಗಳನ್ನು ಮಾಡುವುದೇ ಅವನ ಆಟ, ಅದನ್ನು ತೋರಿಸುವುದಕ್ಕೆ ಪರಮಾತ್ಮ ಆಟ ಆಡುತ್ತಾ ಇದ್ದಾನೆ ತನಗೆ ಏನು ಕೆಲಸ ಇಲ್ಲದೇ ಇದ್ದವರಂತೆ, ತಾನು ಮಾಡುವ ಎಲ್ಲ ಕೆಲಸವೂ ತನಗೆ ಆಟ ಅಂತ ತೋರಿಸುವುದಕ್ಕೆ ಆಟ ಆಡುತ್ತಾನೆ ಆಡಲಿ ಅಂತ ಶಾಂತವಾಗಿ ನಿಂತಿದ್ದಾರೆ. ಆಮೇಲೆ ಎಲ್ಲ ಮುಗಿದ ಮೇಲೆ ಒಳಗೆ ಪ್ರವೇಶ ಮಾಡಿದ್ದಾರೆ ಯತಿಗಳು ಪರಮಾತ್ಮ ಏನು ಸರ್ವಜ್ಞ ಶಿಖಾಮಣಿ ನೋಡಿ ಅಂದರೆ ಒಂದು ಕಣ್ಣಿನಿಂದ ಹಂಸ-ಡಿಭಿಕರನ್ನು ಸಿಟ್ಟಿನಿಂದ ನೋಡಿ, ಇನ್ನೊಂದು ಕಣ್ಣಿನಿಂದ ಜನಾರ್ದನಾಚಾರ್ಯರನ್ನು ಪ್ರೀತಿಯಿಂದ ಕಂಡ ಒಂದು ಮಹಾ ವೈಭವ ದುರ್ವಾಸರಲ್ಲಿ ನಾವು ಕಂಡೆವು. ಅದು ದುರ್ವಾಸರಿಗೆ ಮಾತ್ರ ಹಾಗೆ ಮಾಡಲಿಕ್ಕೆ ಬರುತ್ತೆ ನನಗೆ ಮಾಡಲಿಕ್ಕೆ ಬರುವುದಿಲ್ಲ ಅಂತ ತಿಳಿದುಕೊಳ್ಳಬೇಡಿ ನನಗೂ ಬರುತ್ತದೆ ಬೇಕಾದಷ್ಟು ಅಂತ ತೋರಿಸುವ ಹಾಗೆ ಕೃಷ್ಣ ಒಂದು ಕಣ್ಣಿನಿಂದ ಲತ್ತದ ಕಡೆಗೆ ನೋಡಿ ಆಟ ಆಡುತ್ತಾ ಇದ್ದಾನೆ, ಒಂದು ಕಣ್ಣಿನಿಂದ ದುರ್ವಾಸರನ್ನ ಆಶೀರ್ವದಿಸುತ್ತಾ ಇದ್ದಾನೆ ಏಕಕಾಲದಲ್ಲಿ.

ಏಕೇನಾಕ್ಷ್ಣಾ ಹ್ಲಾದಯನ್ತಂ ಪರೇಣಾನ್ಯೇನ ಗೋಲಕಮ್ ॥ (111.12 ಭವಿಷ್ಯಪರ್ವ)

ಒಂದು ಕಣ್ಣಿನಿಂದ ಆ ಕಡೆಗೆ ಲತ್ತ,ಒಂದು ಕಣ್ಣಿನಿಂದ ಈ ದುರ್ವಾಸರನ್ನು ನೋಡಿ ಪರಮಾತ್ಮ ಅನುಗ್ರಹ ಮಾಡುತ್ತಾ ಇದ್ದಾನೆ ಅಂದರೆ ನಿಮಗಿರುವ ಆ ಶಕ್ತಿ ನನ್ನಿಂದಲೇ ಬಂದದ್ದು ಅಂತ ಪರಮಾತ್ಮ ತೋರಿಸುತ್ತಾನೆ. ದುರ್ವಾಸರು ಬಹಳ ವಿಚಿತ್ರವಾದ ವೇಷದಲ್ಲಿದ್ದಾರೆ ಕೌಪೀನ ಎಲ್ಲ ಹರಿದು ಹೋಗಿದೆ, ಬಟ್ಟೆ ಹರಿದು ಹೋಗಿದೆ, ಪಾತ್ರೆಗಳು ಮುರಿದಿವೆ ಹಾಗೇ ಹೋಗಿದ್ದಾರೆ ಪರಮಾತ್ಮನ ಎದುರಿನಲ್ಲಿ ಆ ಸ್ಥಿತಿಯಲ್ಲಿ ದುರ್ವಾಸರನ್ನು ಪರಮಾತ್ಮ ನೋಡುತ್ತಾ ಇದ್ದಾನೆ. ಮೊದಲು ಆಸನ ಗ್ರಹಣ ಮಾಡಬೇಕು ಅಂತ ಯಾದವರೆಲ್ಲ ತೋರಿಸಿದ್ದಾರೆ ಆಸನವನ್ನ ಸ್ವತಃ ಕೃಷ್ಣ ಪರಮಾತ್ಮ ಬಂದು ಗೌರವದಿಂದ ದುರ್ವಾಸರಿಗೆ ಆಸನವನ್ನು ಕೊಟ್ಟಿದ್ದಾನೆ, ಅರ್ಘ್ಯಪಾದ್ಯಾದಿ ಉಪಚಾರಗಳೆಲ್ಲ ಆಗಿವೆ. ನೀವು ಸನ್ಯಾಸಿಗಳು ಯಾವ ಅಪೇಕ್ಷೆಯೂ ನಿಮಗೆ ಇರುವುದಿಲ್ಲ ಎಲ್ಲವನ್ನೂ ಮೀರಿರುತ್ತೀರಿ ನೀವು

ನಿಃಸ್ಪೃಹಾಶ್ಚ ಸದಾ ಯೂಯಮಸ್ಮತ್ತೋ ದ್ವಿಜಪುಙ್ಗವಾಃ । (111.25 ಭವಿಷ್ಯಪರ್ವ)

ಹೀಗಾಗಿ ನಮ್ಮಂಥವರ ಹತ್ತಿರ ಬಂದು ರಾಜರ ಹತ್ತಿರ ಏನು ಕೇಳುವುದು ನಿಮಗೆ ಇರುವುದೇ ಇಲ್ಲ.

ಸ್ಪೃಹಾಪ್ರೇರಿತಕರ್ಮಾಣಃ ಕ್ಷತ್ರಿಯಾನ್ ಯಾನ್ತಿ ಸುವ್ರತಃ । (111.26 ಭವಿಷ್ಯಪರ್ವ)

ಮನಸ್ಸಿನೊಳಗೊಂದು ಅಪೇಕ್ಷೆ ಅಂತ ಇದ್ದರೆ ರಾಜರ ಹತ್ತಿರ ಹೋಗುತ್ತಾರೆ, ನಿಮಗೆ ಏನೂ ಅಪೇಕ್ಷೆ ಇಲ್ಲ ಅಂದಮೇಲೆ ನಮ್ಮಂಥವರ ಹತ್ತಿರ ಬರುವ ಕೆಲಸನೇ ಇಲ್ಲ ಆದರೂ ಬಂದಿದ್ದೀರಿ. ಹಾಗಾದರೆ ಏನೋ ಒಂದು ಮಹತ್ಕಾರ್ಯ ಇರಬಹುದು ಏನು ಆದೇಶ ಮಾಡಬೇಕು ನಾನು ಕಾರ್ಯ ಮಾಡುತ್ತೇನೆ, ನನಗಂತೂ ಏನೂ ಗೊತ್ತಿಲ್ಲ ತಾವು ಯಾಕೆ ಬಂದಿದ್ದೀರೋ ಏನೋ ಅಂತ ಅಂದ ಕೃಷ್ಣ. ಹೌದು ಇಂಥದೆಲ್ಲ ಸಮಸ್ಯೆ ಇತ್ತು ಅದಕ್ಕೆ

ಬಂದಿದ್ದೇವೆ ಅಂತ ಹೇಳಬೇಕಲ್ಲ ದುರ್ವಾಸರು ಹೇಳಿದರು ಆದರೆ ಬಹಳ ಸಿಟ್ಟು ಬಂತು ಸರ್ವಜ್ಞ ಶಿಖಾಮಣಿಯಾಗಿ ನನಗೇನು ಗೊತ್ತಿಲ್ಲ ಅಂತಾನಲ್ಲ ಕೃಷ್ಣ, ನಾವು ಹೇಳಬೇಕಾಗುತ್ತದಾ ಕೃಷ್ಣನಿಗೆ ನಮಗೆ ಅಲ್ಲಿ ಏನು ತೊಂದರೆ ಆಗಿದೆ ಅಂತ ಇಲ್ಲಿ ಕುಳಿತೇ ಅವನು ತಿಳಿದುಕೊಂಡಿದ್ದಾನೆ ಆಗಲೇ ಅಲ್ಲಿ ಬಂದು ರಕ್ಷಣೆ ಮಾಡಬೇಕಾಗಿತ್ತು. ಹೋಗಲಿ, ನಾವು ಬಂದಾದ ಮೇಲೂ ನಮ್ಮನ್ನು ರಕ್ಷಣೆ ಮಾಡುತ್ತೇವೆ ಅಂತ ಒಂದು ಭರವಸೆ ಕೊಟ್ಟು ಬಿಟ್ಟರೆ ಸಾಕು ನೀವು ಯಾಕೆ ಬಂದಿದ್ದೀರೋ ಏನೋ ಪಾಪ ಅಂತ ಕೇಳುತ್ತಾನಲ್ಲ ಈ ನಾಟಕ ಯಾಕೆ ಮಾಡುತ್ತಾನೆ. ಆ ಸಿಟ್ಟು ಎಷ್ಟು ಚೆನ್ನಾಗಿದೆ ನೋಡಿ ಸಿಟ್ಟು, ಸಿಟ್ಟಿನೊಳಗೆ ಬೈಯುತ್ತಾ ಇದ್ದಾರೆ ದುರ್ವಾಸರು ಕೃಷ್ಣನನ್ನ, ಬೈಯುತ್ತಾ ಇದ್ದಾರೆ ಅಂದರೆ ನಿಂದೆ ಅಂತ ತಿಳಿದುಕೋಬೇಡಿ ಅದು ಎಂತಹ ಸಿಟ್ಟು ಅಂದರೆ ಕೃಷ್ಣನ ಸರ್ವೋತ್ತಮತ್ವವನ್ನು ವರ್ಣನೆ ಮಾಡುತ್ತಾರೆ. ಸರ್ವೋತ್ತಮನಾಗಿದ್ದೀ ನನಗೇನು ಗೊತ್ತಿಲ್ಲ ಅಂತೀಯಾ ಸರ್ವಜ್ಞ ಶಿಖಾಮಣಿಯಾಗಿದ್ದೀ ಬ್ರಹ್ಮರುದ್ರಾದಿಗಳಿಗೆ ಸೃಷ್ಟಿಯನ್ನು ಮಾಡುತಿದ್ದಿ, ಇಡೀ ಜಗತ್ತು ನಿನ್ನಲ್ಲೇ ಆಶ್ರಿತವಾಗಿದೆ ಇದು ನೋಡಿ ಇದು ಎಂತಹದ್ದು, ಇದು ನಿಂದೆ ಅಲ್ಲ ಇದು ಸ್ತೋತ್ರ ಇದು. ಆ ನಿಂದೆ ಮಾಡುವ ರೀತಿಯಲ್ಲಿ ಸ್ತೋತ್ರವನ್ನೇ ಮಾಡುತ್ತಾ ಇದ್ದಾರೆ ಅಂತಹ ಸಕಲ ಜಗನ್ನಿಯಮಕನಾಗಿ, ಸರ್ವೋತ್ತಮನಾಗಿ, ಸರ್ವದೇವತಾ ನಿಯಾಮಕನಾಗಿ, ಸೃಷ್ಟಿ ಸ್ಥಿತ್ಯಾದಿಗಳಿಗೆ ಕಾರಣನಾಗಿ, ಓಂಕಾರ ವಾಚ್ಯ, ಬ್ರಹ್ಮಶಬ್ದ ವಾಚ್ಯ, ಸಕಲವೇದ ಪ್ರತಿಪಾದ್ಯ, ಸರ್ವಾಂತರ್ಯಾಮಿ, ಪೃಥಿವಿ ಅಪ ತೇಜ ವಾಯು ಆಕಾಶ ಈ ಎಲ್ಲ ಭೂತಗಳಲ್ಲಿ ನಿನ್ನ ಧ್ಯಾನ ಮಾಡುತ್ತೇವೆ ನಾವು, ನಾನೂ ಧ್ಯಾನ ಮಾಡುತ್ತೇನೆ. ಧ್ಯಾನ ಮಾಡಿದರೆ ಆ ಆ ಆಕಾರದಲ್ಲಿ ಸರ್ವತ್ರ ಸರ್ವದಾ ಸರ್ವಾಕಾರ ಸರ್ವಾಧಾರ ಸರ್ವಾಶ್ರಯ ಅಂತ ಹೇಳುವ ಹಾಗೆ ಆ ಪೃಥಿವ್ಯಾದಿಗಳಲ್ಲಿ ತದಾಕಾರನಾಗಿ ತದಂತರ್ಯಾಮಿಯಾಗಿ ತನ್ ನಿಯಾಮಕನಾಗಿ ತನ್ ಪ್ರೇರಕನಾಗಿ ನಮಗೆ ದರ್ಶನವನ್ನು ಕೊಡುತ್ತೀಯಾ ನೀನು. ಇದೆಲ್ಲ ಇದೆ ವಿಸ್ತಾರವಾಗಿ ಶ್ಲೋಕಗಳನ್ನು ಓದಿದರೆ ಬಹಳ ಸಮಯವಾಗುತ್ತೆ.

ಪೃಥಿವೀ ವಿಷ್ಣುಃ ರಸೋಽಗ್ನಂ ದೇವೈಃ ಯದಾ ।
ತ್ವಂ ತೇಜ ಇತ್ಯೆವಂ ಚಂದ್ರಮಾಃ ಸೂರ್ಯಃ ॥

ಸೂರ್ಯ ಚಂದ್ರರಲ್ಲಿ ನಿನ್ನ ಧ್ಯಾನ ಮಾಡಿದರೆ ಸೂರ್ಯಕಾರದೊಳಗೆ ಚಂದ್ರಾಕಾರದೊಳಗೆ ಚಂದ್ರ ನಿಯಾಮಕನಾಗಿ ಚಂದ್ರಾಂತರ್ಯಾಮಿಯಾಗಿ ನಮಗೆ ದರ್ಶನವನ್ನು ಕೊಡುತ್ತೀಯಾ ಇಂತಹ ಸರ್ವಾಂತರ್ಯಾಮಿ ಸರ್ವಪ್ರೇರಕ ಸರ್ವಜ್ಞ ನಿನಗೆ ಆ ಹಂಸ-ಡಿಭಿಕರು ನಮಗೆ ತೊಂದರೆ ಕೊಟ್ಟದ್ದು ಗೊತ್ತಾಗಿಲ್ಲ ಅಂದರೆ ನಾನು ಹೇಗೆ ನಂಬುವುದು ಆದ್ದರಿಂದ ನಿನಗೆಲ್ಲಾ ಗೊತ್ತಿದೆ ಹಾಗೆ ಅನ್ನಬೇಡ ಇದೆಲ್ಲ ನೋಡು ಪಾತ್ರೆಗಳನ್ನು, ವಸ್ತ್ರಗಳನ್ನು ತಂದಿದ್ದೇವೆ ಇಲ್ಲಿ ಸಾಕ್ಷಿಯಾಗಿ ನಮ್ಮನ್ನು ನೀವು ರಕ್ಷಣೆ ಮಾಡಬೇಕು. ನೀನೇನಾದರೂ ಅವರಿಬ್ಬರನ್ನು ಸಂಹಾರ ಮಾಡಲಿಲ್ಲ, ಉದಾಸೀನ ಬಿಟ್ಟರೆ ನಾವು ಇಲ್ಲಿ ಬಂದವರು 5,000 ಜನ, ಅದರೊಳಗೆ ಸಂತ್ರಸ್ಥರು 3,000 ಜನ ಇಷ್ಟು ಮಾತ್ರ ಅಲ್ಲ ಪ್ರಪಂಚದೊಳಗೆ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಯಾವ ವರ್ಣಗಳನ್ನೂ ಇವರು ಉಳಿಸುವುದಿಲ್ಲ, ಎಲ್ಲರನ್ನೂ ನಾಶ ಮಾಡಿ ಹಾಕುತ್ತಾರೆ ಇನ್ನೊಂದು ಸ್ವಲ್ಪ ದಿವಸಕ್ಕೆ ಅಷ್ಟು ಉನ್ಮತ್ತರಾಗಿದ್ದಾರೆ ಅವರು, ಅವರನ್ನ ನೀನು ಸಂಹಾರ ಮಾಡಲೇಬೇಕು. ಇಲ್ಲದೇ ಇದ್ದರೆ ರಕ್ಷಕ ಶರಣಾಗತ ರಕ್ಷಕ ಪಾಲಕ ಅನ್ನುವ ನಿನ್ನ ಬಿರುದೇ ಸುಳ್ಳಾಗಬೇಕಾಗುತ್ತೆ ಅಂತ ದಾಸರಾಯರು ಹೇಳುತ್ತಾರೆ ನೋಡಿ ಶರಣಾಗತ ರಕ್ಷಕ ಎಂಬ ಬಿರುದು ಸುಳ್ಳಾಗುತಿದೆ ಅಂತ ಆ ಬಿರುದು ಸುಳ್ಳಾಗಬೇಕಾದೀತು ಅಂತ. ಆ ಭಾಷೆ ದಾಸ ಸಾಹಿತ್ಯದ ಭಾಷೆ ದಾಸ ಸಾಹಿತ್ಯದಲ್ಲಿ ಇದೆ ಮೂಲದಲ್ಲಿ **'ಬಹುನಾತ್ರ ಅನ್ಯಥಾ ರಕ್ಷಸೀತ್ಯೇವಂ ವ್ಯರ್ಥಃ ಶಬ್ದೋಽತ್ರ ಜಾಯತೇ'** ರಕ್ಷಕ ಅಂತ ನಿನಗೇನು ಬಿರುದು ಇದೆ ಅದು ವ್ಯರ್ಥವಾಗಬೇಕಾದೀತು ನೋಡು ಕೃಷ್ಣ ಹಾಗಾದರೆ ಅದನ್ನು ಉಳಿಸಿಕೊಳ್ಳುವುದಕ್ಕಾದರೂ ನಮ್ಮನ್ನು ರಕ್ಷಣೆ ಮಾಡು ಅಂತ ದುರ್ವಾಸರು ಕೇಳಿಕೊಳ್ಳುತ್ತಾರೆ.

ಇವತ್ತು ನಮಗೆ ಅನೇಕ ಜನರಿಂದ ಪೀಡೆ ಇದೆ, ನಮ್ಮ ನಮ್ಮ ಧರ್ಮಗಳನ್ನು ನಾವು ಆಚರಣೆ ಮಾಡಬೇಕು, ಭಕ್ತಿಯಿಂದ ಶ್ರದ್ಧೆಯಿಂದ ವರ್ಣಾಶ್ರಮೋಚಿತವಾದ ಧರ್ಮಗಳನ್ನು ನಾವು ಪರಿಪಾಲನೆ ಮಾಡಬೇಕು ಅಂದರೆ ನಾನಾ ಜನರಿಂದ ಭಯ ಇದೆ, ನಾನಾ ರೀತಿಯ ಪೀಡೆ ಇದೆ, ದೇವಸ್ಥಾನಗಳ ಧ್ವಂಸ, ಶುದ್ಧವಾದ ರೀತಿಯಲ್ಲಿ ದೇವರ ಅರ್ಚನೆ ಪೂಜೆ ನಡೆಯಬೇಕು ಅಂದರೆ ಅದಕ್ಕೆ ವಿಘ್ನಗಳು. ಹೀಗೆ ಅನೇಕ ಸಮಸ್ಯೆಗಳಿದ್ದಾಗ ನಾವು ನೀವೆಲ್ಲ ಯಾರಿಗೆ ಶರಣು ಹೋಗಬೇಕು ಶ್ರೀಕೃಷ್ಣ ಪರಮಾತ್ಮನಿಗೆ ಶರಣು ಹೋಗಬೇಕು, ಭಗವದ್ಗೀತೆಗೆ ಶರಣು ಹೋಗಬೇಕು, ಕೃಷ್ಣ ಪರಮಾತ್ಮ ಹೇಳಿದಂತಹ ಉಪದೇಶವನ್ನು ನಾವು ಅನುಷ್ಠಾನ ಮಾಡಬೇಕು, ಅವನಿಗೇನೆ ಪ್ರಾರ್ಥನೆ ಮಾಡಬೇಕು, ಅವನ ನಾಮ ಸ್ಮರಣೆ ಮಾಡಬೇಕು. ನೀನೇ ರಕ್ಷಕ ಅಂತ ಆ ಪರಮಾತ್ಮನಿಗೆ ನಾವು ಶರಣು ಹೋದರೆ ಇಂತಹ ಆಪತ್ತುಗಳಿಂದ ದೇವರು ನಮ್ಮನ್ನು ರಕ್ಷಣೆ ಮಾಡುತ್ತಾನೆ ಅನ್ನುವ ಸಂದೇಶವನ್ನು ಈ ಕಥೆ ನಮಗೆ ತಿಳಿಸಿಕೊಡುತ್ತಾ ಇದೆ. ಪರಮಾತ್ಮ ಎಲ್ಲರ ಮಾತುಗಳನ್ನು ಕೇಳಿ ನಾನು ನಿಮ್ಮ ರಕ್ಷಣೆ ಮಾಡಬೇಕಾಗಿತ್ತು ಕ್ಷಮಾ ಮಾಡಿ ನನ್ನನ್ನ ಅಂತ ಕೃಷ್ಣ ಪರಮಾತ್ಮ ನಾಟಕವನ್ನು ಮಾಡುತ್ತಾನೆ ಜೊತೆಗೆ ಒಂದು ಮಾತು ಹೇಳುತ್ತಾನೆ ನೋಡಿ.

ಗಿರೀಶೋ ವಾ ವರಂ ದದ್ಯಾಚ್ಛಕ್ರೋ ವಾ ಧನದೋಽಪಿ ವಾ ॥ (112.3 ಭವಿಷ್ಯಪರ್ವ)

ಯಮೋ ವಾ ವರುಣೋ ವಾಪಿ ಬ್ರಹ್ಮಾ ವಾಥ ಚತುರ್ಮುಖಃ । (112.4 ಭವಿಷ್ಯಪರ್ವ)

ಇಷ್ಟು ಸ್ಪಷ್ಟವಾಗಿ ಏನೆಲ್ಲ ಶ್ರೀಕೃಷ್ಣ ಪರಮಾತ್ಮನ ಚರಿತ್ರೆಯಲ್ಲಿ ನಾವು ಕೇಳುತ್ತೇವೆ ಬೇರೆ ಬೇರೆ ದೇವತೆಗಳು ವರ ಕೊಟ್ಟಿದ್ದರೂ ಕೂಡ ಅವಧ್ಯರಾಗಲಿ ಅಂತ ಅವರೆಲ್ಲರನ್ನ ಶ್ರೀಕೃಷ್ಣ ಪರಮಾತ್ಮ ಸಂಹಾರ ಮಾಡಿದ ಆ ಎಲ್ಲ ದೇವತೆಗಳ ವರವನ್ನ ಮೀರಿ ಅಂತ ಅದು ಕೇವಲ ಕಥೆಯಿಂದ ತಿಳಿಯುವುದಲ್ಲ ಸ್ವತ ವಚನದಿಂದ ಕೃಷ್ಣ ಹೇಳುತ್ತಾನೆ ನೋಡಿ. ರುದ್ರ ದೇವರು ಇರಲಿ, ಕುಬೇರ ಇರಲಿ, ವರುಣ ಇರಲಿ, ಯಮ ಇರಲಿ, ಬ್ರಹ್ಮ ದೇವರು ಇರಲಿ ಯಾರೇ ಇರಲಿ ಯಾವುದೇ ವರ ಕೊಟ್ಟಿರಲಿ ಆ ಎಲ್ಲಾ ವರವನ್ನೂ ಮೀರಿ ಅವರನ್ನು ಸಂಹಾರ ಮಾಡುವ ಶಕ್ತಿ ಸಾಮರ್ಥ್ಯಗಳು ನನಗಿದೆ ಅಂತ ಕೃಷ್ಣ ಪರಮಾತ್ಮ ಹೇಳಿಕೊಳ್ಳುತ್ತಾನೆ. ಈ ಮಾತನ್ನು ಶ್ರೀಮದಾಚಾರ್ಯರು ಸಂಗ್ರಹ ಮಾಡಿದ್ದಾರೆ ಸಣ್ಣ ಶಬ್ದದಲ್ಲಿ ತಾತ್ಪರ್ಯ ನಿರ್ಣಯದಲ್ಲಿ ಹರಿವಂಶದ ಶ್ಲೋಕದ ಸಾರವನ್ನ.

ತತಃ ಸಮಸ್ತ ಭಂಜನೋರುಶಕ್ತಿಮಾಪ ಕೇಶವಮ್ ॥ (17.240 ಮಭಾತಾನಿರ್ಣಯ)

ಯಾಕೆ ದುರ್ವಾಸರು ಕೇಶವನ ಶರಣು ಹೋದರು ಅಂದರೆ **'ತತಃ ಸಮಸ್ತ ಭಂಜನೋರುಶಕ್ತಿಮ್'** ಎಲ್ಲಾ ದೇವತೆಗಳ ವರವನ್ನೂ ಮೀರುವ ಶಕ್ತಿ ದೇವರಿಗೆ ಇದೆ ಅನ್ನುವದಕ್ಕಾಗಿ ದೇವರಿಗೆ ಶರಣು ಹೋದರು ಅಂತ. ಇನ್ನೂ ಒಂದನ್ನು ಗಮನಿಸಿ ಬರೀ ಶ್ರೀಮದಾಚಾರ್ಯರು ಈ ಎಲ್ಲ ದೇವತೆಗಳನ್ನು ಸೇರಿಸಿ ಸಮಸ್ತ ಅಂತ ಸಂಕ್ಷೇಪ ಮಾಡಿ ಹೇಳಿದ್ದು ಮಾತ್ರ ಅಲ್ಲ ಇಲ್ಲಿ ಶ್ರೀಕೃಷ್ಣ ಪರಮಾತ್ಮ ಹೇಳಿದ ಅಂತ ಹೇಳುವಾಗ ಹರಿವಂಶ ಬಳಿಸಿದ ಶಬ್ದವೂ ಕೇಶವ ಎಂಬ ಶಬ್ದವನ್ನ

ಯತೇರ್ವಚನಮಾಕರ್ಣ್ಯ ಮನ್ಯಮುಚ್ಚೈಸ್ಯ ಕೇಶವಃ । (112.1 ಭವಿಷ್ಯಪರ್ವ)

ಅಂತ ಹರಿವಂಶ ಹೇಳುತ್ತದೆ ಅದೇ ಶಬ್ದವನ್ನ ಬಳಸುತ್ತಾರೆ ಶ್ರೀಮದಾಚಾರ್ಯರು **'ತತಃ ಸಮಸ್ತ ಭಂಜನೋರುಶಕ್ತಿಮಾಪ ಕೇಶವಮ್'** ಯಾವ ಶಬ್ದವನ್ನ ಹರಿವಂಶ ಈ ಸಂದರ್ಭದಲ್ಲಿ ಬಳಿಸುತ್ತದೆ ಎಲ್ಲರ ವರವನ್ನೂ ಮೀರುವ ಶಕ್ತಿ ದೇವರಿಗಿದೆ ಯಾಕೆ **'ಕ ಈ ಶ'** ಅವಬ್ಬರಿಗೂ **'ವ'** ಪ್ರವರ್ತಕ ಇವನು. ಅಂದಮೇಲೆ ಬ್ರಹ್ಮಾದಿಗಳ ವರವನ್ನೂ ಮೀರುವ ಶಕ್ತಿ ಇವನಿಗೆ ಇದೆ ಅಂತ ಸೂಚನೆ ಮಾಡಲಿಕ್ಕೆ ಹರಿವಂಶ ಕೇಶವ ಶಬ್ದ ಬಳಸಿದರೆ ಅದೇ ಕೇಶವ

ಶಬ್ದವನ್ನು ಬಳಸಿ ಆಚಾರ್ಯರು ನಿರ್ಣಯವನ್ನು ಹೇಳುತ್ತಾರೆ ಅಂದರೆ ಎಷ್ಟು ಸೊಗಸಾಗಿ ಸರಸವಾಗಿ ಶ್ರೀಮದಾಚಾರ್ಯರು ನಮಗೆ ನಿರ್ಣಯವನ್ನು ತಿಳಿಸಿಕೊಡುತ್ತಾರೆ ಅನ್ನುವುದನ್ನ ನಾವು ಇಲ್ಲಿ ಚಿಂತನ ಮಾಡಬೇಕು. ಅಷ್ಟು ಪರಮಾತ್ಮ ಹೇಳಿ ಅವರಿಗೆ ಭರವಸೆ ಕೊಡುತ್ತಾನೆ ನೀವು ಏನೂ ಚಿಂತೆ ಮಾಡಬೇಡಿ, ನಿಮ್ಮ ನಿಮ್ಮ ಆಶ್ರಮದಲ್ಲಿ ಶಾಸ್ತ್ರಗಳ ಪಾಠ ಪ್ರವಚನ ಮಾಡಿಕೊಂಡು ನಿಶ್ಚಿಂತವಾಗಿ ಇರಿ ನಾನು ಅವರಿಬ್ಬರನ್ನು ನೋಡಿಕೊಳ್ಳುತ್ತೇನೆ ಅಂತ ಪರಮಾತ್ಮ ಅವರಿಗೆ ಹೇಳಿದ್ದಾನೆ. ದುರ್ವಾಸರು ಕ್ಷಮಾ ಕೇಳುತ್ತಾರೆ ನಾನೇನೋ ಸಿಟ್ಟಿನಿಂದ ಮಾತನಾಡಿದೆ ನೋಡಿದರೆ ಸ್ತೋತ್ರನೇ ಮಾಡಿದ್ದಾರೆ ಆದರೂ ನೀನು ಯಾಕೆ ನನಗೆ ಗೊತ್ತಿಲ್ಲ ಅಂದಿ ಅಂತ ಜೋರಾಗಿ ಆಕ್ಷೇಪ ಮಾಡಿದೆನಲ್ಲ ಅಷ್ಟು ಮಾಡಿದ್ದಕ್ಕೂ ನನ್ನಿಂದ ಅಪರಾಧ ಆಗಿದ್ದರೆ

ಅಜ್ಞಾನಾದಥವಾ ಜ್ಞಾನಾದ್ ಯನ್ಮಯೋಕ್ತಂ ಕ್ಷಮಸ್ವ ತತ್ ॥ (112.15 ಭವಿಷ್ಯಪರ್ವ)

'ತ್ವಮೇವ' ನೀನೇ ಸರ್ವಸಮರ್ಥ ಕ್ಷಮೆ ಮಾಡು, ನನ್ನನ್ನ ಉದ್ಧಾರ ಮಾಡು ಅಂತ ಪ್ರಾರ್ಥನೆ ಮಾಡಿಕೊಂಡಿದ್ದಾರೆ. ಪರಮಾತ್ಮ ಹೇಳುತ್ತಾನೆ ನಾನು ಕ್ಷಮಾ ಮಾಡುತ್ತೇನೆ ನೀವು ಕ್ಷಮೆ ಮಾಡಿ ನಾನು ನಿಮ್ಮನ್ನು ಇಷ್ಟು ತಡ ಮಾಡಿ ರಕ್ಷಣೆ ಮಾಡುತ್ತಾ ಇದ್ದೇನೆ ಬೇಗ ಬರಲಿಲ್ಲ ರಕ್ಷಣೆಗೆ ಅಂತ ನಾಟಕ ಮಾಡುತ್ತಾನೆ. ಮಾಡುವುದರ ಜೊತೆಗೆ ಎಲ್ಲರಿಗೂ ಒಂದು ತತ್ವವನ್ನು ತಿಳಿಸಿ ಕೊಡುತ್ತಾನೆ ಕ್ಷಮಾ ಇದು ಬಹಳ ದೊಡ್ಡದು ಅದರಲ್ಲಿಯೂ ಯತಿಗಳು ವಿಶೇಷವಾಗಿ ಕ್ಷಮಾ ಮಾಡಬೇಕು ಅಂತ.

ಕ್ಷನ್ತವ್ಯಂ ಭವತಾ ವಿಪ್ರ ಕ್ಷಮಾಸಾರಾ ವಯಂ ಸದಾ ।
ಸಂನ್ಯಾಸಿನಃ ಕ್ಷಮಾಸಾರಾಃ ಕ್ಷಮಾ ತೇಷಾಂ ಪರಂಬಲಮ್ ॥ (112.17 ಭವಿಷ್ಯಪರ್ವ)

ಕ್ಷಮೆಯೇ ಅವರ ಬಲ, ಕ್ಷಮಾ ಇದು ಮೋಕ್ಷವನ್ನು ಕೊಡುತ್ತದೆ ಶ್ರೇಷ್ಠವಾದ ತತ್ತ್ವಜ್ಞಾನ ಧರ್ಮ ಸತ್ಯ ದಾನ ಕೀರ್ತಿ ಸ್ವರ್ಗ ಎಲ್ಲವೂ ಕ್ಷಮೆಯಲ್ಲಿ ಅಡಗಿದೆ ಆದ್ದರಿಂದ ಕ್ಷಮಾ ನೀವು ಮಾಡಲೇಬೇಕು ಅಂತ ಹೇಳಿದ್ದಾನೆ, ನಾನೇನು ಕ್ಷಮಾ ಮಾಡುವುದು ಸ್ವಾಮಿ ನೀನು ನಮ್ಮನ್ನು ಕ್ಷಮಿಸಬೇಕು ಅಂತ ದುರ್ವಾಸರು ಕೇಳಿಕೊಂಡಿದ್ದಾರೆ. ಸರಿ, ಹೊರಟು ಬನ್ನಿ ಅಂತ ಹೇಳಿದ ತಕ್ಷಣಕ್ಕೆ ಹೇಳುತ್ತಾನೆ ಒಂದು ಕ್ಷಣ ನಿಲ್ಲಿ, ಬಹಳ ಕಷ್ಟಪಟ್ಟು ಅಷ್ಟು ದೂರದಿಂದ ಬಂದಿದ್ದೀರಿ ಇಷ್ಟು ಯತಿಗಳು 5,000 ಯತಿಗಳು ಏಕಕಾಲಕ್ಕೆ ಮನೆಗೆ ಬಂದಿದ್ದೀರಿ ಎಲ್ಲರ ಬಿಕ್ಷೆ ಆಗಬೇಕು ಅಂದ ಪರಮಾತ್ಮ, 5,000 ಯತಿಗಳಿಗೆ ಅತ್ಯಂತ ವೈಭವದಿಂದ ದ್ವಾರಕಾ ಪಟ್ಟಣದಲ್ಲಿ ಬಿಕ್ಷೆ ಮಾಡಿಸಿದ್ದಾನೆ.

ಭೋಕ್ತವ್ಯಾ ಯತಯೋ ವಿಪ್ರಾ ಭಿಕ್ಷುಕಾಃ ಸರ್ವ ಏವ ಹಿ । (112.21ಭವಿಷ್ಯಪರ್ವ)

ಎಲ್ಲರಿಗೂ ಯಥೇಚ್ಛವಾದ ಭೋಜನವನ್ನ ಸ್ವತಃ ಪರಮಾತ್ಮನೇ ಅಲ್ಲಿದ್ದಾನೆ ಮಹಾನೈವೇದ್ಯ ಪ್ರತ್ಯಕ್ಷವಾಗಿ ಶ್ರೀಕೃಷ್ಣ ಪರಮಾತ್ಮ ನೈವೇದ್ಯವನ್ನ ಸ್ವೀಕಾರ ಮಾಡಿ ಅವರೆಲ್ಲರಿಗೆ ತನ್ನ ನೈವೇದ್ಯವನ್ನು ಕೊಟ್ಟಿದ್ದಾನೆ.

ಚತುರ್ವಿಧಂ ತಥಾऽಹಾರಂ ಕಾರಯಿತ್ವಾ ಯಥಾವಿಧಿ ॥ (112.22 ಭವಿಷ್ಯಪರ್ವ)

ಭಕ್ಷ್ಯ ಭೋಜ್ಯ ಲೇಹ್ಯ ಪೇಯ ಚೋಷ್ಯ ಎಲ್ಲವನ್ನು ಕೊಟ್ಟಿದ್ದಾನೆ ಅದನ್ನು ಸ್ವೀಕಾರ ಮಾಡಿ ಎಲ್ಲರೂ ಸಂತುಷ್ಟರಾಗಿದ್ದಾರೆ. ಅವರಗೆಲ್ಲ ಕೌಪೀನಾದಿ ಬಟ್ಟೆಗಳೆಲ್ಲ ಹರೆದಿದ್ದವಲ್ಲ, ದೊಡ್ಡ ಠಾಣ ಹೊಸ ಬಟ್ಟೆಗಳನ್ನು ತರಿಸಿ ತಾನೇ ಹರಿದು ಕೊಟ್ಟಿದ್ದಾನೆ ಕೃಷ್ಣ

ಛಿತ್ತ್ವಾ ಛಿತ್ತ್ವಾ ಚ ದೇವೇಶೋ ದುಕೂಲಾನಿ ಮೃದೂನಿ ಸಃ ॥ (112.23 ಭವಿಷ್ಯಪರ್ವ)

ಅದೂ ಕೂಡ ಬೇಗ ಒಣಗಬೇಕು ಯಾಕೆಂದರೆ ಅವತ್ತಿಂದ ಅವತ್ತೆ ಒಣಗಿಸಿ ಉಟ್ಟು ಕೊಳ್ಳುವವರು ಇವರೆಲ್ಲ ದುರ್ವಾಸರು, ಯತಿಗಳು ಹೀಗಾಗಿ ಇಂತಹ ದಪ್ಪ ಇದ್ದರೆ ಬೇಗ ಒಣಗುವುದಿಲ್ಲ ಅಂತ ಹೇಳಿ **'ಸೂಕ್ಷ್ಮಾನೀ ದುಕೂಲಾನಿ ಮೃದೂನಿ ಸಃ'** ಮೃದುವಾಗಿ ಇರಬೇಕು, ಸೂಕ್ಷ್ಮವಾಗಿ ಇರಬೇಕು, ಬೇಗ ಒಣಗಬೇಕು. ಅಂತಹ ಹೊಸ ಬಟ್ಟೆಗಳನ್ನ ಕಾಷಾಯ ಬಣ್ಣ ಎದ್ದಿ ಆ ಪ್ರೀತಿ ಪರಮಾತ್ಮನಿಗೆ ರುದ್ರ ದೇವರ ಮೇಲೆ, ದುರ್ವಾಸರ ಮೇಲೆ ತಾನೇ ಸ್ವತಃ ಹರೆದು ಹರೆದು ಕೊಟ್ಟಿದ್ದಾನೆ ಎಲ್ಲರಿಗೆ. **'ಛಿತ್ತ್ವಾ ಛಿತ್ತ್ವಾ ಚ ದೇವೇಶಃ'** ಮತ್ತು ಹರೆದು ಹರೆದು ಹೊಲೆದು ಹೊಲೆದು ಉಟ್ಟು ಕೊಳ್ಳಬೇಕು ಯತಿಗಳು ಅನ್ನುವುದಕ್ಕಾಗಿಯೂ **'ಛಿತ್ತ್ವಾ ಛಿತ್ತ್ವಾ ಚ ದೇವೇಶೋ ದುಕೂಲಾನಿ ಮೃದೂನಿ ಸಃ',** ಎಲ್ಲರಿಗೆ ವಸ್ತ್ರಗಳನ್ನು ಕೊಟ್ಟು, ಪಾತ್ರೆಗಳನ್ನೂ ಹೊಸ ಹೊಸದಾಗಿ ಕೊಟ್ಟು. ಅದು ಹರಿವಂಶದಲ್ಲಿ ಬಂದಿಲ್ಲ ಆದರೆ ಶ್ರೀಮದಾಚಾರ್ಯರು ತಾತ್ಪರ್ಯ ನಿರ್ಣಯದಲ್ಲಿ ತಿಳಿಸುತ್ತಾರೆ ವಸ್ತ್ರ ಮಾತ್ರ ಅಲ್ಲ ಪಾತ್ರೆಗಳನ್ನೂ ಕೊಟ್ಟ ಅಂತ. ಹರಿವಂಶದಲ್ಲಿ **'ಚ'** ಶಬ್ದ ಇದೆ **'ದುಕೂಲಾನಿ ಚ' 'ಚ'** ಎಂಬ ಶಬ್ದದಿಂದ ಪಾತ್ರೆಗಳನ್ನು ಅಂತ ತಿಳಿದುಕೊಳ್ಳಬೇಕು. ಪಾತ್ರೆಗಳನ್ನೂ ಕೊಟ್ಟು, ವಸ್ತ್ರಗಳನ್ನೂ ಕೊಟ್ಟು ಯಥೇಚ್ಛ ಭೋಜನವನ್ನು ಮಾಡಿಸಿ ಅವರೆಲ್ಲರಿಗೆ ಗೌರವವನ್ನು ಮಾಡಿ ಕೊಟ್ಟು ಕಳಿಸಿದ್ದಾನೆ ಪರಮಾತ್ಮ ಎಂಬ ತತ್ವವನ್ನು ಇಲ್ಲಿ ತಿಳಿಸುತ್ತಾ ಇದ್ದಾರೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಭವಿಷ್ಯಪರ್ವ-46

* * *

ವೈಶಂಪಾಯನ ಉವಾಚ

ದುರ್ವಾಸಾಸ್ತ್ವಥ ತತ್ರೈವ ನಾರದೇನ ಮಹಾತ್ಮನಾ ।
ಚಿನ್ತಯನ್ ಬ್ರಹ್ಮಣಸ್ತತ್ತ್ವಂ ವಿಜಹಾರ ಯಥಾಸುಖಮ್ ।। (113.1 ಭವಿಷ್ಯಪರ್ವ)

ಶ್ರೀಕೃಷ್ಣ ಪರಮಾತ್ಮ ಹಂಸ-ಡಿಭಿಕರ ಸಂಹಾರವನ್ನು ಮಾಡುವ ಸಂಕಲ್ಪವನ್ನು ಮಾಡಿದ್ದಾನೆ ಅದಕ್ಕೆ ತಕ್ಕಂತೆ **'ಧಿಯೋಯೋನಃ ಪ್ರಚೋದಯಾತ್'** ಆ ಹಂಸ-ಡಿಭಿಕರಲ್ಲಿ ಬುದ್ಧಿಯ ಪ್ರಚೋದನೆಯನ್ನು ಮಾಡಿದ್ದಾನೆ. ಅವರು ಸ್ವಯಂ ದುಷ್ಟರು ಮಧು-ಕೈಟಭರ ಅವತಾರ ಆಗಿದ್ದರೂ ಕೂಡ ಈ ಅವತಾರ ಕಾಲದಲ್ಲಿಯೂ ಅನೇಕ ಪಾಪ ಕರ್ಮಗಳನ್ನು ಮಾಡಿದ್ದಾರೆ ಅನ್ನುವುದಕ್ಕಾಗಿ ಪರಮಾತ್ಮ ಅವರ ಸಂಹಾರ ಮಾಡಿದ ಅನ್ನುವುದು ಜನರಿಗೆ ಗೊತ್ತಾಗಬೇಕು, ನಿರಪರಾಧಿಗಳನ್ನು ಸಂಹಾರ ಮಾಡಿದ ಅಂತಾಗಬಾರದು. ಅದಕ್ಕಾಗಿ ಅವರು ಸಾಕಷ್ಟು ಅಪರಾಧಗಳನ್ನು ಮಾಡುತ್ತಾನೆ ಇದ್ದರೂ ಕೂಡಾನೂ ವ್ಯಕ್ತವಾಗಿ ಎಲ್ಲರಿಗೆ ಗೊತ್ತಾಗುವಂತೆ ದುರ್ವಾಸರೇ ಮೊದಲಾದ 3,000 ಯತಿಗಳಿಗೆ ಒಬ್ಬ ಯತಿಯ ದ್ರೋಹವನ್ನ ಮಾಡುವುದೇ ಮಹಾಅನರ್ಥ ಕಾರಣ. ಅದರಲ್ಲಿಯೂ ಮಹಾನುಭಾವರಾದ ರುದ್ರಾಂಶ ಸಂಭೂತರಾದ ಋಷಿ ಶ್ರೇಷ್ಠರು, ಯತಿ ಶ್ರೇಷ್ಠರಾದಂತಹ, ದೇವ ಶ್ರೇಷ್ಠರಾದಂತಹ ಆ ದುರ್ವಾಸರನ್ನ ಪೀಡಿಸಿದ್ದಕ್ಕಾಗಿ ಮಹಾಪಾಪ ಇವರಿಗೆ ಬಂದಿದೆ ಆ ಕಾರಣಕ್ಕಾಗಿ ಅವರನ್ನು ಸಂಹಾರ ಮಾಡುವುದು ಅತ್ಯಂತ ಸೂಕ್ತ ಅಂತ ಜಗತ್ತಿಗೆ ಪರಮಾತ್ಮ ತೋರಿಸಿಕೊಟ್ಟಿದ್ದಾನೆ.

ದುರ್ವಾಸರಿಗೆ ಹಾಗೂ ಅವರ ಜೊತೆಗೆ ಬಂದಂತಹ ಎಲ್ಲ 5,000 ಮುನಿಗಳಿಗೆ ಯಥೇಚ್ಛವಾಗಿ ವಸ್ತ್ರವನ್ನ, ಪಾತ್ರೆಗಳನ್ನ ಕೊಟ್ಟು ಅನ್ನದಾನಾದಿಗಳನ್ನು ಮಾಡಿ ಸಂತೋಷ ಪಡಿಸಿದ್ದಾನೆ ಆನಂತರ ಆ ಸಶಿಷ್ಯರಾದಂತಹ ದುರ್ವಾಸರನ್ನ ದ್ವಾರಕಾ ಪಟ್ಟಣದಲ್ಲಿಯೇ ಇಟ್ಟುಕೊಂಡಿದ್ದಾನೆ ಪರಮಾತ್ಮ, ನಾರದರೂ ಅಲ್ಲಿಯೇ ಇದ್ದಾರೆ. ಏನು ಕೆಲಸ ನಾರದರು ಹಾಗೂ ದುರ್ವಾಸರು ದ್ವಾರಕಾ ಪಟ್ಟಣದಲ್ಲಿದ್ದು ಮಾಡಿದ್ದು ಏನು ಅಂತ ಏನು ಅದ್ಭುತವಾದಂತಹ ಜ್ಞಾನಿಗಳ ದಿನಚರಿ ನೋಡಿ, ಏನಿಲ್ಲ ನಿರಂತರವಾಗಿ ಬ್ರಹ್ಮತತ್ವ ವಿಚಾರ. ಶ್ರೀಕೃಷ್ಣ ಪರಮಾತ್ಮ ಅಲ್ಲಿಯೇ ಇದ್ದಾನೆ ಅಂತ

ಅವನ ಎದುರಿಗೆ ಹೋಗಿ ಸಭಾ ಮಧ್ಯದಲ್ಲಿ ಆಸನದಲ್ಲಿ ಕುಳಿತು ಕೇವಲ ಅಲ್ಲಿಯ ರಾಜ್ಯದ ಕಾರ್ಯಭಾರ ಅಥವಾ ಅಲ್ಲಿ ಆಗುವಂತಹ ನಾಟ್ಯಗಳು, ನೃತ್ಯಗಳು, ಸಂಗೀತಗಳು ಅದನ್ನು ನೋಡುವುದಕ್ಕೆ ಕೇಳುವುದಕ್ಕೆ ಕುಳಿತವರಲ್ಲ ಇವರು. **'ಚಿನ್ತಯನ್ ಬ್ರಹ್ಮಣಸ್ತತ್ತ್ವಂ'** ಪರಬ್ರಹ್ಮನಾದ ಸರ್ವೋತ್ತಮನಾದ ಶ್ರೀಕೃಷ್ಣ ಪರಮಾತ್ಮನ ಆ ತತ್ವ ಏನಿದೆ ಶಾಸ್ತ್ರಗಳಲ್ಲಿ, ಬ್ರಹ್ಮಸೂತ್ರಗಳಲ್ಲಿ, ವೇದಾಧಿ ಶಾಸ್ತ್ರಗಳಲ್ಲಿ ಹೇಳಿದ ತತ್ವಗಳ ಚಿಂತನವನ್ನು ಮಾಡುತ್ತ, ಅದರ ಬಗ್ಗೆ ಚರ್ಚೆಯನ್ನು ಮಾಡುತ್ತ, ಆ ಭಗವತ್ತತ್ವದ ಧ್ಯಾನವನ್ನು ಮಾಡುತ್ತ ನಾರದರು ಹಾಗೂ ದುರ್ವಾಸರು ಕಾಲ ಕಳೆದಿದ್ದಾರೆ ಎಂಬುದಾಗಿ ಹರಿವಂಶ ಹೇಳುತ್ತದೆ. ಭೀಷ್ಮಾಚಾರ್ಯರ, ದ್ರೋಣಾಚಾರ್ಯರ ಬಗ್ಗೆ ಹೇಳುವಾಗಲೂ ಇದೇ ಮಾತನ್ನ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ತಿಳಿಸುತ್ತಾರೆ ಇಬ್ಬರೂ ಮಹಾನುಭಾವರು ಬೃಹಸ್ಪತ್ಯಾಚಾರ್ಯರ ಅವತಾರ ದ್ರೋಣಾಚಾರ್ಯರು, ಜುನಾಮಕ ವಸುವಿನ ಅವತಾರ ಭೀಷ್ಮಾಚಾರ್ಯರು, 525 ವರ್ಷಗಳವರೆಗೆ ಸತತವಾದ ಅಧ್ಯಯನ ಭೀಷ್ಮಾಚಾರ್ಯರದು. ಅಂತಹ ಅಧ್ಯಯನ ಸಂಪನ್ನರಾದ ಭೀಷ್ಮಾಚಾರ್ಯರು ದ್ರೋಣಾಚಾರ್ಯರು ಒಂದು ಕಡೆಗೆ ಸೇರಿದರು ಅಂದರೆ ಏನು ಕೆಲಸ ಇಲ್ಲ ನಿರಂತರ ಚಿಂತನವನ್ನು ಮಾಡುವುದು. ದೊಡ್ಡ ದೊಡ್ಡ ದೇವತೆಗಳು ಈ ರೀತಿ ಮಾಡುವಾಗ ನಾವೆಲ್ಲ ಎಷ್ಟು ಶಾಸ್ತ್ರಗಳ ಚಿಂತನವನ್ನು ಮಾಡಬೇಕು ಅಂತ ಶಾಸ್ತ್ರ ನಮಗೆ ತೋರಿಸಿಕೊಡುತ್ತೆ ಪರಮಾತ್ಮ ಅತ್ಯಂತ ಪ್ರೀತಿಯಿಂದ ಅವರಿಗೆ ಅನುಗ್ರಹವನ್ನು ಮಾಡಿದ್ದಾನೆ ಇದೇ ರೀತಿ ನೀವು ಶಾಸ್ತ್ರಾರ್ಥ ಚಿಂತನವನ್ನು ಮಾಡಿ ಅಂತ.

ಭಗವಾನಪಿ ಗೋವಿನ್ದಸ್ತಯೋರ್ವಾಸಮಮನ್ಯತ । (113.2 ಭವಿಷ್ಯಪರ್ವ)

ನೀವು ಯಾಕೆ ಇಷ್ಟು ದಿವಸ ಇದ್ದದ್ದು ಕೆಲಸ ಆಯಿತಲ್ಲ ಹೋಗಬಹುದು ಅಂತ ಅನ್ನಲಿಲ್ಲ ದೇವರು. ಅವಶ್ಯವಾಗಿ ನೀವು ಶಾಸ್ತ್ರಾರ್ಥ ಚಿಂತನವನ್ನು ಮಾಡಬೇಕು ಅಂತ ಪರಮಾತ್ಮ ಅವರಿಗೆ ಅನುಮತಿಯನ್ನು ಕೊಟ್ಟಿದ್ದಾನೆ.

ಈ ಕಡೆಗೆ ಹಂಸ-ಡಿಭಿಕರು ತಾವು ಸಂಕಲ್ಪ ಮಾಡಿಕೊಂಡ ರೀತಿಯಲ್ಲಿ ತಮ್ಮಪ್ಪನಿಗೆ ಬ್ರಹ್ಮದತ್ತ ರಾಜನಿಗೆ ಹೋಗಿ ಹೇಳಿದ್ದಾರೆ ಇದೇ ತಿಂಗಳಲ್ಲಿ ರಾಜಸೂಯ ಯಾಗವನ್ನು ನೀನು ಮಾಡು **'ಅಸ್ಮಿನ್ ಮಾಸಿ ನೃಪಶ್ರೇಷ್ಠ'** [1] ನಿನಗೆ ಏನು ಬೇಕೋ ಅದರ ವ್ಯವಸ್ಥೆಯನ್ನು ಮಾಡುತ್ತೇವೆ. ಮುಖ್ಯವಾದ ವ್ಯವಸ್ಥೆ ಏನು ಎಲ್ಲ ರಾಜರನ್ನ ಗೆದ್ದು ಬರಬೇಕು ನಾವಿಬ್ಬರೂ ಇದ್ದೇವಲ್ಲ ಅಣ್ಣ-ತಮ್ಮಂದಿರು ಎಲ್ಲರನ್ನೂ ಗೆದ್ದು ಬರುತ್ತೇವೆ, ರುದ್ರ ದೇವರ ವರ ಇದೆ, ನಾವು ಹುಟ್ಟಿದ್ದೇ ರುದ್ರ ದೇವರ ಅನುಗ್ರಹದಿಂದ ನೀನೇ ತಪಸ್ಸು ಮಾಡಿದ್ದೀ. ಈಗ ನಾವು ಮತ್ತೆ ತಪಸ್ಸು ಮಾಡಿ ಅಜೇಯರಾಗಬೇಕು ಅವಧ್ಯರಾಗಬೇಕು ಅಂತ ವರ ಪಡೆದಿದ್ದೇವೆ ಯಾರು ಸೋಲಿಸುವಂತಿಲ್ಲ ಕೊಲ್ಲುವಂತಿಲ್ಲ ಹಾಗಾದರೆ ನಾವು ಎಲ್ಲರನ್ನ ಗೆದ್ದು ವೈಭವದ ರಾಜಸೂಯ ಯಾಗವನ್ನು ಮಾಡಿಸುತ್ತೇವೆ ನೀನು ಮಾಡಬೇಕು ಅಂತ ಹೇಳಿದಾಗ ಆಯಿತು ಅಂತ ತಂದೆ ಬ್ರಹ್ಮದತ್ತ ಒಪ್ಪಿಕೊಂಡಿದ್ದಾನೆ.

ಈ ಕಡೆಗೆ ಹಿಂದೆ ಕೇಳಿದ್ದೀರಲ್ಲ ಈ ಬ್ರಹ್ಮದತ್ತನ ಗೆಳೆಯನಾದ ಮಿತ್ರಸಹಾಚಾರ್ಯನ ಮಗನಾದಂತಹ ಪರಮ ಭಗವದ್ಭಕ್ತನಾದಂತಹ ಜನಾರ್ದನಾಚಾರ್ಯ ಈ ಹಂಸ-ಡಿಭಿಕರ ಗೆಳೆಯ ಅವನು ಹೇಳುತ್ತಾನೆ ಏನು ಸಾಹಸ ಮಾಡುತ್ತಾ ಇದ್ದೀರಪ್ಪ ರಾಜಸೂಯ ಯಾಗ ಮಾಡುವುದು ಸುಲಭನಾ, ರಾಜಸೂಯ ಯಾಗ ಮಾಡಬೇಕಾದರೆ ಎಲ್ಲಾ ರಾಜರನ್ನ ಗೆಲ್ಲುವ ಶಕ್ತಿ ನಮಗೆ ಇದೆಯಾ ಅಂತ ಮೊದಲು ಆಲೋಚನೆ ಮಾಡಬೇಕು. ಈ ಕಾಲದಲ್ಲಿ ಯಾರೆಲ್ಲ ಇದ್ದಾರೆ ಅಂತ ನಿನಗೆ ಲಿಸ್ಟ್ ಹೇಳುತ್ತೇನೆ ಕೇಳು ಅಂತ ನೋಡಿ ಇದೀಗ ಭೀಷ್ಮಾಚಾರ್ಯರನ್ನು

1. 113.4 ಭವಿಷ್ಯಪರ್ವ;

ನನೆಸಿಕೊಂಡೆವಲ್ಲ ಅವರ ಹೆಸರನ್ನೇ ಮೊದಲು ತೆಗೆದುಕೊಳ್ಳುತ್ತಾನೆ. **'ಸ್ಥಿತೇ ಭೀಷ್ಮೇ'**[1] ಮಹಾಪರಾಕ್ರಮಿಗಳಾದ ಭೀಷ್ಮಾಚಾರ್ಯರು ಇದ್ದಾರೆ, ಜರಾಸಂಧ ಇದ್ದಾನೆ, ಬಾಹ್ಲೀಕ ಇದ್ದಾನೆ, ಯಾದವರಿದ್ದಾರೆ, ಶ್ರೀಕೃಷ್ಣ ಪರಮಾತ್ಮ ಇದ್ದಾನೆ ಇಂಥವರೆಲ್ಲ ಇರುವಾಗ ಅವರನ್ನ ಸೋಲಿಸುವುದಕ್ಕೆ ನಿನಗೆ ಏನಾಗುತ್ತೆ, ನೀನೇನು ರಾಜಸೂಯ ಯಾಗವನ್ನು ಮಾಡುತ್ತೀಯಾ ಇದೆಲ್ಲಾ ಆಗುವ ಮಾತಲ್ಲ. ಆ ಭೀಷ್ಮಾಚಾರ್ಯರ ಬಗ್ಗೆ ಒಂದು ಮಾತು ಹೇಳುತ್ತಾನೆ ಅದು ಕೇವಲ ದೇವರು ನಾಟಕ ಮಾಡಿದ್ದು 21 ಬಾರಿ ಭೂಪ್ರದಕ್ಷಿಣ ಮಾಡಿ ಎಲ್ಲ ದುಷ್ಟ ಕ್ಷತ್ರಿಯರ ನಾಶ ಮಾಡಿ ಸಜ್ಜನರ ರಕ್ಷಣೆ ಮಾಡಿದಂತಹ ಪರಶುರಾಮ ದೇವರು,ಯಾವ ಭೀಷ್ಮಾಚಾರ್ಯರ ಎದುರಿನಲ್ಲಿ ಸೋತು ಬಿಟ್ಟಿದ್ದಾರೋ ಅಂತಹ ಭೀಷ್ಮಾಚಾರ್ಯರು ಇರುವಾಗ ನೀನೇನು ರಾಜಸೂಯ ಯಾಗ ಮಾಡುತ್ತೀಯಾ ಅಂತ ಪರಶುರಾಮ ದೇವರು ಸರ್ವಥಃ ಸೋತದ್ದಲ್ಲ ಕೇವಲ ಶಿಷ್ಯ ಭೀಷ್ಮಾಚಾರ್ಯರು ಬೇರೆ ಯಾರಲ್ಲ ಪರಶುರಾಮ ದೇವರ ಶಿಷ್ಯರೇ. ಶಿಷ್ಯನಿಗೆ ಒಂದು ಕೀರ್ತಿಯನ್ನು ಕೊಡಬೇಕು ಅನ್ನುವುದಕ್ಕೋಸ್ಕರ ಪರಶುರಾಮ ದೇವರು ಸೋತಂತೆ ನಾಟಕ ಮಾಡಿದ್ದಷ್ಟೇ ಹೊರತು ಸರ್ವಥಃ ಸೋತದ್ದಲ್ಲ ಅನ್ನುವುದನ್ನು ನಾವು ತಿಳಿಯಬೇಕು. ಆದರೆ ಆ ಹಂಸ-ಡಿಭಿಕರಿಗೆ ಭೀಷ್ಮಾಚಾರ್ಯರ ಮಹತ್ವವನ್ನು ತಿಳಿಸಿಕೊಡುವುದಕ್ಕೆ ಮಾತ್ರ ಜನಾರ್ದನಾಚಾರ್ಯ ಆ ರೀತಿ ಹೇಳಿದ್ದಾನೆ ಮತ್ತು ಆ ರೀತಿ ಪರಶುರಾಮ ದೇವರು ತಾವು ಸೋತಂತೆ ನಾಟಕ ಮಾಡಿದ್ದು ಅಸುರರ ಮೋಹನಕ್ಕಾಗೇನೆ, ಅಯೋಗ್ಯರಿಗೆ ಮೋಹನ ಮಾಡಲಿಕ್ಕೇನೆ. ಹೀಗಾಗಿ ಈ ಅಯೋಗ್ಯರಾದ ಹಂಸ-ಡಿಭಿಕರಿಗೆ ಆ ತಪ್ಪು ತಿಳುವಳಿಕೆ ಬಂದು ಅವರಿಗೆ ಯೋಗ್ಯವಾದ ಗತಿಯನ್ನು ಅವರು ಹೊಂದಲಿ ಅನ್ನುವುದಕ್ಕಾಗೇನೆ ಶುದ್ಧ ತತ್ವಜ್ಞಾನಿಯಾದ ಜನಾರ್ದನಾಚಾರ್ಯರು ಆ ರೀತಿ ಮಾತನಾಡಿದ್ದಾರೆ ಅಂತ ನಾವು ಅರ್ಥ ಮಾಡಿಕೊಳ್ಳಬಹುದು.

ಮುಂದೆ ಬಲರಾಮ ದೇವರ ಮಹಿಮೆಯನ್ನು ವರ್ಣನೆ ಮಾಡುತ್ತಾರೆ. ಎಲ್ಲರನ್ನು ತನ್ನ ಹಲಾಯುಧದಿಂದ ಸಂಹಾರ ಮಾಡುವ ಶಕ್ತಿ ಸಾಮರ್ಥ್ಯಗಳಿವೆ, ಹಸ್ತಿನಾಪುರವನ್ನೇ ಎಳೆದು ಗಂಗೆಯಲ್ಲಿ ಹಾಕುವುದಕ್ಕೆ ಹೊರಟವರು, ಯಮುನೆಯನ್ನೇ ಎಳೆದು ಹತ್ತಿರ ಕರೆದವರು ಅಂತಹ ಮಹಾಮಹಿಮರು ಅವರೆಲ್ಲ ಇರುವಾಗ ನೀನೇನೋ ಯಜ್ಞ ಮಾಡುತ್ತೀಯಾ ಅಂತ ಬೇಕಾದಷ್ಟು ಹೇಳಿ ಕೊನೆಗೆ ಒಂದು ಮಾತನ್ನು ಹೇಳುತ್ತಾನೆ. ನೀವು ಪುಷ್ಕರದಲ್ಲಿ ನಾನು ಎಷ್ಟು ಬೇಡ ಅಂದರೂ ಕೇಳಲಿಲ್ಲ ದುರ್ವಾಸರ ವಿರೋಧ ಮಾಡಿದಿರಿ, ಅವರ ವಸ್ತ್ರಗಳನ್ನೆಲ್ಲ ಹರಿದು, ಪಾತ್ರೆಗಳನ್ನೆಲ್ಲ ಧ್ವಂಸ ಮಾಡಿ ಬಹಳ ಅಪಮಾನ ಮಾಡಿದಿರಿ. ಇಷ್ಟಾಗಿ ಅವರು ನಮಗೆ ಹೆದರಿಕೊಂಡು ಸುಮ್ಮನೆ ಅಲ್ಲಿ ಕುಳಿತಿದ್ದಾರೆ ಅಂತ ನೀವು ಅಂದು ಕೊಂಡುಬಿಟ್ಟಿದ್ದೀರಾ ಅವರು ಅಲ್ಲಿಂದ ನೇರವಾಗಿ ದ್ವಾರಕಾ ಪಟ್ಟಣಕ್ಕೆ ಹೋಗಿ ಕೃಷ್ಣ ಪರಮಾತ್ಮನಿಗೆ ಈ ವಾರ್ತೆಯನ್ನು ತಿಳಿಸಿದ್ದಾರೆ. ಈಗಾಗಲೇ ಕೃಷ್ಣ ಪರಮಾತ್ಮ ನಿಮ್ಮಿಬ್ಬರ ಮೇಲೆ ಕಟಾಕ್ಷ ಮಾಡಿದ್ದಾನೆ ಸಂಹಾರ ಮಾಡುವ ಸಂಕಲ್ಪ ಮಾಡಿರುತ್ತಾನೆ ಇದು ನನಗೆ ಗೊತ್ತು ಆದ್ದರಿಂದ ಈ ಸಂದರ್ಭದಲ್ಲಿ ನೀವು ರಾಜಸೂಯ ಯಾಗದ ವಿಚಾರನೇ ಮಾಡಬೇಡಿ ಅಂತ ಇಷ್ಟೆಲ್ಲ ತಿಳಿಸಿ ಹೇಳುತ್ತಾನೆ. ಹಂಸ ಅಣ್ಣ ಭಾರೀ ಉನ್ನತನಾಗಿ ಮಾತನಾಡುತ್ತಾನೆ ಯಾರು ಅವರು ಭೀಷ್ಮ ಯಾವಾಗಿಂದೋ ಪರಾಕ್ರಮದ ಸುದ್ದಿಯನ್ನು ಹೇಳುತ್ತೀಯಾ ನೀನು, ಈಗ ವೃದ್ಧನಾಗಿ ಹೀನ ಬಲನಾಗಿರುವಂತಹ ಆ ಮುದುಕ ಭೀಷ್ಮಾಚಾರ್ಯರು ಅವರೇನು ನನ್ನ ಜೊತೆಗೆ ಯುದ್ಧ ಮಾಡುತ್ತಾರೆ. ಯಾದವರಂತೆ ಯಾದವರು ಕೃಷ್ಣ ಯಾರು,ಬಲರಾಮ ಯಾರು ಇವರು ಯಾರೂ ನಮ್ಮ ಜೊತೆಗೆ ಯುದ್ಧ ಮಾಡುವುದಕ್ಕೆ ಸಮರ್ಥರಲ್ಲ ಅತ್ಯಂತ ಸುಲಭವಾಗಿ ನಾನು ಅವರೆಲ್ಲರನ್ನು ಸೋಲಿಸಬಹುದು ನನ್ನ ಎದುರಿಗೆ ಹೆಸರು ಹೇಳುವುದೇ ಸರಿಯಲ್ಲ ನೀನು.

1. 113.9 ಭವಿಷ್ಯಪರ್ವ

ಇನ್ನು ಜರಾಸಂಧ, ಜರಾಸಂಧ ಮಹಾಪರಾಕ್ರಮಿ ಹೌದು ಅಂತ ಒಪ್ಪಿಕೊಳ್ಳುತ್ತಾನೆ ಮತ್ತೆ ದುಷ್ಟರಿಗೆ ದುಷ್ಟರಿಗೆ ಆ ತರಹದ ಒಂದು ಪ್ರೇಮ ಇರುತ್ತದೆ. ಜರಾಸಂಧ ಮಹಾಪರಾಕ್ರಮಿ ಆದರೆ ಆ ಜರಾಸಂಧ ನಮ್ಮ ಗುರು ಅವನು ಯಾಕೆ ವಿರೋಧ ಮಾಡುತ್ತಾನೆ ನಮಗೆ ಯಜ್ಞ ಮಾಡುವುದಕ್ಕೆ ವಿರೋಧ ಮಾಡುವುದೇ ಇಲ್ಲ ಅವನೇ ಸ್ವಯಂ ಯಜ್ಞ ಮಾಡಿಲ್ಲ. ಇಷ್ಟು ದಿನ ಜರಾಸಂಧನಿಗೆ ನೀನು ಯಾಕೆ ಈ ಯಜ್ಞ ಮಾಡುವುದಿಲ್ಲ ಅಂತ ಕೇಳಿದಾಗ ಅದಕ್ಕೆ ಉತ್ತರ ಹೇಳಿದ್ದಾನಲ್ಲ ನಾನು ಶಿವ ಭಕ್ತ, ವಿಷ್ಣು ಭಕ್ತನಲ್ಲ ಇದು ವೈಷ್ಣವ ಯಜ್ಞವಾದದ್ದರಿಂದ ಅನ್ನುವುದಕ್ಕಾಗಿ ಜರಾಸಂಧ ಆ ಯಜ್ಞವನ್ನು ಮಾಡಿಲ್ಲ. ನಾವೂ ಶಿವ ಭಕ್ತರೇ ವಿಷ್ಣು ಭಕ್ತರಲ್ಲ ಆದರೂ ಕೂಡ ನಮ್ಮ ತಂದೆ ಈ ಯಜ್ಞವನ್ನು ಮಾಡಿದರೆ ಒಂದು ಕೀರ್ತಿ ಬರುತ್ತೆ ಅನ್ನುವುದಕ್ಕೆ ನಾವು ಯಜ್ಞ ಮಾಡುತ್ತಾ ಇದ್ದೇವೆ ಅನ್ನುವ ಸಂಗತಿಯನ್ನು ತಿಳಿಸಿಯಾಗಿದೆ ಹೀಗಾಗಿ ಆ ಜರಾಸಂಧನೂ ನಮಗೆ ಯುದ್ಧಕ್ಕೆ ಬರುವುದಿಲ್ಲ. ನೋಡಿದರೆ ಜರಾಸಂಧ ನಮಗೆ ಪೂರ್ಣ ಸಹಕಾರ ಮಾಡುತ್ತಾನೆ ಅಂತ ಇವನು ಅಂದುಕೊಂಡಿದ್ದಾನೆ.

ಜರಾಸಂಧಸ್ತು ಧರ್ಮಾತ್ಮಾ ಬನ್ಧುರೇವ ಸದಾ ಮಮ । (113.21 ಭವಿಷ್ಯಪರ್ವ)

ಅವನಂತೂ ನಮಗೆ ಬಂಧುವೇ ಅಂತ. ಆದರೆ ಶ್ರೀಮದಾಚಾರ್ಯರು ನಿರ್ಣಯ ಹೇಳುತ್ತಾರೆ ಜರಾಸಂಧ ಇವರ ಗುರು ಹೌದು, ಇವರಿಗೆ ಬಂಧು ಹೌದು ಅತ್ಯಂತ ಆತ್ಮೀಯ ಆದರೆ ಯಾವ ಸಂದರ್ಭದಲ್ಲಿ ಇವರು ಪುಷ್ಕರದಲ್ಲಿ ಇರುವಂತಹ ದುರ್ವಾಸರೇ ಮೊದಲಾದ ಯತಿಗಳಿಗೆ ಪೀಡೆಯನ್ನ ಕೊಟ್ಟ ವಾರ್ತೆ ಜರಾಸಂಧನಿಗೆ ಗೊತ್ತಾಗುತ್ತೋ ಆ ಕ್ಷಣದಿಂದ ಜರಾಸಂಧ ಇವರಿಬ್ಬರಿಗೆ ಬಹಿಷ್ಕಾರ ಹಾಕಿ ಬಿಟ್ಟ ಯಾಕೆ ಅಂದರೆ ದುರ್ವಾಸರು ರುದ್ರಾವತಾರರು ತಾನು ರುದ್ರ ಭಕ್ತ. ಶಿವ ಭಕ್ತನಾದ ತಾನು ಶಿವ ದ್ವೇಷಿಗಳಿವರು ದುರ್ವಾಸರ ದ್ರೋಹ ಮಾಡಿದ್ದಾರೆ ಅನ್ನುವುದಕ್ಕೋಸ್ಕರ ಅಂದಿನಿಂದ ಈ ಘಟನೆ ಆದಾಗಿನಿಂದ ಇವರಿಬ್ಬರನ್ನ ದೂರ ಇಟ್ಟಿದ್ದಾನೆ ಅದು ಅವರಿಗೆ ಗೊತ್ತಿಲ್ಲ. ಜರಾಸಂಧ ನಮಗೆ ಬಹಳ ಸಹಕಾರ ಮಾಡಬಹುದು ಅಂತ ಅವರು ಅಂದುಕೊಂಡಿದ್ದಾರೆ ಆದರೆ ಅವನು ಏನು ಸಹಕಾರ ಮಾಡಲಿಲ್ಲ ಅಂತನ್ನುವುದು ನಿಜವಾದ ತಥ್ಯ ಇದನ್ನು ಶ್ರೀಮದಾಚಾರ್ಯರು ತಿಳಿಸಿದ್ದಾರೆ. ಸರಿ, ಅದೆಲ್ಲ ಇರಲಿ ನಾನು ಹೇಳಿದ್ದು ಕೇಳು ನೀನು ಇಲ್ಲಿಂದ ಹೊರಡು ಮೊದಲು ದೂತನಾಗಿ ಕೃಷ್ಣನಿಗೆ ಹೋಗಿ ಹೇಳು ನಾವು ಯಜ್ಞ ಮಾಡುತ್ತಾ ಇದ್ದೇವೆ, ರಾಜಸೂಯ ಯಾಗದ ಕರಾರು ಏನು ಯಜ್ಞಕ್ಕೆ ಬೇಕಾದ ಸಂಪತ್ತನ್ನು ಕಪ್ಪು ಕಾಣಿಕೆಗಳನ್ನೆಲ್ಲ ಕೊಡಬೇಕು. ಆ ಯಜ್ಞಕ್ಕೆ ಬೇಕಾದ ಸಂಪತ್ತನ್ನು, ಕಾಣಿಕೆಯನ್ನು ಕೊಡದಿದ್ದರೆ ಯುದ್ಧ ಮಾಡಿ ಸೋಲಿಸಿ ತೆಗೆದುಕೊಂಡು ಬರುವುದು ಇರುವುದೇ ಇಷ್ಟು, ಸುಮ್ಮನೆ ಪ್ರೀತಿಯಿಂದ ಕೊಟ್ಟರೆ ಯುದ್ಧ ಏನು ಇಲ್ಲ ಅಲ್ಲಿ ಅಂದರೆ ಒಂದರ್ಥದಲ್ಲಿ ಶರಣಾಗತರಾಗಿ ಕೊಟ್ಟ ಹಾಗೆ. ಶ್ರೀಕೃಷ್ಣ ಪರಮಾತ್ಮನ ಹತ್ತಿರ ಹೋಗಿ ಕರ ಕೊಡಬೇಕು,ಕಪ್ಪು ಕಾಣಿಕೆಗಳನ್ನ ಕೊಡಬೇಕು, ಸರಂಡರ್ ಆಗಬೇಕು ಅಂದ ಹಾಗೆ ಶರಣಾಗತರಾಗಿ ನಮಗೆ ಯಜ್ಞಕ್ಕೆ ಬೇಕಾದದ್ದನ್ನು ಕಳಿಸಬೇಕು ಅಂತ ನೀನು ಸಂದೇಶವನ್ನು ಹೇಳು ಅಂತ ಇವನಿಗೆ ಹೇಳುತ್ತಾನೆ. ಏ ಅದೆಲ್ಲಾ ಹೇಳಲಿಕ್ಕೆ ಆಗುವುದಿಲ್ಲ, ಅವನು ಮಹಾಪರಾಕ್ರಮಿ ಅಂತಹ ಕೆಲಸ ಎಲ್ಲ ಮಾಡಬೇಡ, ನೀನು ಸಾಹಸ ಮಾಡಬೇಡ ಹೀಗೆ ಹತ್ತು ಸಲ ಹೇಳಿದ್ದಾನೆ ಜನಾರ್ದನ. ಮತ್ತೆ ನಿನ್ನ ಉಪನ್ಯಾಸ ಪ್ರಾರಂಭ ಮಾಡಬೇಡ,

ನ ಬ್ರೂಯಾಶ್ಚೋತ್ತರಂ ವಿಪ್ರ ಶಪೇಯಂ ತ್ವಾಂ ಪ್ರಿಯೋಽಸಿ ಮೇ । (113.24 ಭವಿಷ್ಯಪರ್ವ)

ತಿರುಗಿ ಉತ್ತರ ಕೊಡಬೇಡ ನಾನು ನಿನಗೆ ಏನು ಹೇಳುತ್ತೇನೆ ಅಷ್ಟು ಕೇಳು ನೀನು ನನ್ನ ಮಿತ್ರ,ಮಿತ್ರ ಅಂದಮೇಲೆ ಮಿತ್ರನಿಗೆ ಸಹಾಯ ಮಾಡಬೇಕು ಈಗ ನೀನು ದೂತನಾಗಿ ನನ್ನ ಕೆಲಸ ಮಾಡಬೇಕು ಹೋಗು ಅಂದ.

ಆಗ ಅವನು ಅಂದ ಆಯಿತು ಹೊರಡುತ್ತೇನೆ ಅಂದ **'ಏಕ ಏವ ಚ ಧರ್ಮಾತ್ಮಾ'**[1] ಒಬ್ಬನೇ ಒಬ್ಬ ಕುದುರೆಯ ಮೇಲೆ ಕುಳಿತು ಹೊರಟಿದ್ದಾನೆ.

ಪ್ರಾತರೇವ ಜಗಾಮಾಶು ದ್ರಷ್ಟುಂ ದ್ವಾರವತೀಂ ದ್ವಿಜಃ ।
ಹರಿಂ ಕೃಷ್ಣಂ ಹೃಷೀಕೇಶಂ ಮನಸಾ ಸಂಸ್ಮರನ್ ದ್ವಿಜಃ ॥ (113.28 ಭವಿಷ್ಯಪರ್ವ)

ಇವನು ಪರಮ ಭಗವದ್ಭಕ್ತ ಇಂತಹ ಭಕ್ತ ಯದ್ಯಪಿ ಶತ್ರು ಪಕ್ಷದಲ್ಲಿ ಕೊಟ್ಟು ಕಳಿಸುತ್ತಾ ಇದ್ದದ್ದರಿಂದ ಜೊತೆಗೆ ಸಹಾಯಕರಾಗಿ ನಾಲ್ಕು ಜನ ಅಂಗರಕ್ಷಕರು ಇವರನ್ನೆಲ್ಲ ಕಳಿಸಬೇಕಾಗಿತ್ತು, ಯಾರನ್ನು ಕಳಿಸಲಿಲ್ಲ ಅಂತ ವಿಶೇಷವಾಗಿ ಹೇಳುತ್ತದೆ ಹರಿವಂಶ **'ಏಕ ಏವ ಚ ಧರ್ಮಾತ್ಮಾ'.** ಯಾಕೆ ಅಂದರೆ ಶ್ರೀಕೃಷ್ಣ ಪರಮಾತ್ಮ ಇಂತಹ ಭಕ್ತನಾದ ವ್ಯಕ್ತಿ ಹತ್ತಿರ ಬಂದಾಗ ಅತ್ಯಂತ ಪ್ರೀತಿಯಿಂದ ನೋಡಿಕೊಳ್ಳುತ್ತಾನೆ ಹೊರತು ಯಾವ ರೀತಿಯಿಂದಲೂ ತೊಂದರೆ ಕೊಡುವುದಿಲ್ಲ, ಅಷ್ಟೇ ಅಲ್ಲದೆ ಎಂತಹ ದುಷ್ಟರು ಬಂದರೂ ದೂತರಾಗಿ ಬಂದಾಗ ಅವರಿಗೆ ಏನನ್ನು ಮಾಡಬಾರದು ಅನ್ನುವುದೇ ರಾಜನೀತಿ. ಜಗತ್ತಿಗೆ ನೀತಿಯನ್ನು ಹೇಳುವ ಪರಮಾತ್ಮ ತಾನೇ ಮಾಡಿದ ನೀತಿಯ ಧರ್ಮದ ಉಲ್ಲಂಘನವನ್ನು ಯಾಕೆ ಮಾಡುತ್ತಾನೆ ಆ ರೀತಿಯ ಒಂದು ವಿಶ್ವಾಸವನ್ನು ತೋರಿಸುವುದಕ್ಕೆ **'ಏಕ ಏವ ಚ ಧರ್ಮಾತ್ಮಾ'** ಅಂತ ಪ್ರತ್ಯೇಕವಾಗಿ **'ಏಕ ಏವ'** ಅಂತ ಒತ್ತು ಕೊಟ್ಟು ಹೇಳುತ್ತೆ ಹರಿವಂಶ. ಬಂದಿದ್ದಾನೆ ಬರುತ್ತಾ ಬರುತ್ತಾ ಇರುವಾಗ ಹರಿವಂಶ ವರ್ಣನೆ ಮಾಡುತ್ತದೆ ಭಾರೀ ಧಗೆ ಇರುವಂತಹ ಸಂದರ್ಭದಲ್ಲಿ ಬೇಸಿಗೆಯೊಳಗೆ ಬಿಸಿಲಲ್ಲಿ ನಡೆದು ನಡೆದು ಸುಸ್ತಾಗಿ ನೀರಡಿಸಿದ ವ್ಯಕ್ತಿ ಎಷ್ಟು ವೇಗದಿಂದ ಬಂದು ಮನೆಯಲ್ಲಿ ನೀರು ಕುಡಿದು ತನ್ನ ನೀರಡಿಕೆಯನ್ನು ಶಾಂತ ಮಾಡಿಕೊಳ್ಳಬೇಕೋ ಹಾಗೆ ಒಂದು ಜನ್ಮದ್ದಲ್ಲ, ಎರಡು ಜನ್ಮದ್ದಲ್ಲ ಎಷ್ಟೋ ಜನ್ಮಗಳವರೆಗೆ ನಿರಂತರವಾಗಿ ದೇವರನ್ನ ಕಾಣಬೇಕು ಕಾಣಬೇಕು ಕಾಣಬೇಕು ಅನ್ನುವ ಅಪೇಕ್ಷೆಯಿಂದ ಅಖಂಡವಾಗಿ ಅದೆಷ್ಟು ವ್ರತಗಳೋ, ನಿಯಮಗಳೋ, ಜಪಗಳೋ ಉಪವಾಸಗಳೋ ಇವುಗಳನ್ನೆಲ್ಲ ಮಾಡಿ ದೇವರ ದರ್ಶನ **'ಎಂದಿಗಾಹುದೋ ನಿನ್ನ ದರ್ಶನ'** ಅಂತ ಕಾಯುತ್ತ ಇರುವಂತಹ ಈ ಸಾಧಕನಿಗೆ ಜನಾರ್ದನನಿಗೆ ಈಗ ದೇವರ ಹತ್ತಿರನೇ ನಾನು ಹೊರಟಿದ್ದೇನಲ್ಲ ದರ್ಶನಕ್ಕೆ ಅಂದರೆ ಅದು ಎಷ್ಟು ಸಂತೋಷ ಅಂದರೆ ಓಡುತ್ತಾ ಇದ್ದಾನೆ ಎಷ್ಟು ಸಾಧ್ಯವೋ ಅಷ್ಟು ಶೀಘ್ರದಲ್ಲಿ ಪರಮಾತ್ಮನ ದರ್ಶನವಾಗಬೇಕು ಅಂತ.

ಯಥಾ ನಿದಾಘಸಮಯೇ ಸೂರ್ಯಾಂಶುಪರಿಪೀಡಿತಃ ।
ಪಾನ್ಥೋ ಯಾತಿ ಜಲಂ ದೃಷ್ಟ್ವಾ ತ್ವರಿತಂ ತತ್ಪಿಪಾಸಯಾ ॥ (114.2 ಭವಿಷ್ಯಪರ್ವ)
ಧಾವತ್ಯೇವ ತಥಾ ವಿಪ್ರೋ ಹರಿಂ ದ್ರಷ್ಟುಂ ಜನಾರ್ದನಃ । (114.3 ಭವಿಷ್ಯಪರ್ವ)

ಆ ಪರಮಾತ್ಮನ ದರ್ಶನಕ್ಕಾಗಿ ಓಡುತ್ತಾ ಓಡುತ್ತಾ ಅರ್ಥಾತ್ ಅಷ್ಟು ಜೋರಾಗಿ ಕುದುರೆಯನ್ನು ಓಡಿಸುತ್ತಾ ಓಡಿಸುತ್ತಾ ಬರುತ್ತಾ ಇದ್ದಾನೆ. ಹಂಸ ಬಹಳ ದುಷ್ಟ ನನ್ನ ಗೆಳೆಯ ಏನೋ ನಮ್ಮಪ್ಪ ಅವರಪ್ಪ ಗೆಳೆಯ ಅನ್ನುವುದಕ್ಕೆ ನಾವೆಲ್ಲ ಗೆಳೆಯರಾದೆವು ಆದರೆ ಇವರು ಇಷ್ಟು ದುಷ್ಟರಿದ್ದಾರೆ ಅಣ್ಣ ತಮ್ಮಂದಿರು ಹಂಸ-ಡಿಭಿಕರು. ಆದರೆ ನನಗಂತೂ ಉಪಕಾರನೇ ಮಾಡಿದ್ದಾರೆ ಅವರು ಅಪಕಾರ ಏನು ಮಾಡಲಿಲ್ಲ,ಅವರು ಹೇಳುವುದು ಒಳ್ಳೆಯ ಸುದ್ದಿಯೋ ಕೆಟ್ಟ ಸುದ್ದಿಯೋ ಕೃಷ್ಣನಿಗೆ ನೀನು ಕರ ಕೊಡಬೇಕು ಅಂತ ಕೇಳುವುದು ದೊಡ್ಡ ಅಪರಾಧ. ಇಡೀ ಜಗತ್ತು ಅವನಿಗೆ ಕರ ಕೊಡಬೇಕು ಅವನು ಯಾರಿಗೆ ಕರ ಕೊಡುವುದು ಅಲ್ಲ ಆದರೆ ಇಂತಹ ಸಂದರ್ಭದಲ್ಲಿ ಈ

1. 113.21 ಭವಿಷ್ಯಪರ್ವ

ನಿಮಿತ್ತದಿಂದ ಕೃಷ್ಣನ ದರ್ಶನವಾಯಿತಲ್ಲ ಅವನು ದೂತನಾಗಿ ಕಳಿಸಿದ್ದಿಲ್ಲಾ ಅಂದರೆ ನಾನು ಯಾಕೆ ಹೋಗುತ್ತಿದ್ದೆ ಅಷ್ಟು ದೂರ ಹಾಗಾದರೆ ಇದೇ ಒಂದು ದೊಡ್ಡ ಸೌಭಾಗ್ಯ ನನ್ನದು, ನನ್ನ ಸಮಾನರು ಯಾರು ಇಲ್ಲ ಅಂತ ಹೇಳಿಕೊಳ್ಳುತ್ತಾನೆ.

ಅಹಮೇವ ಸದಾ ಧನ್ಯೋ ಮತ್ತೋ ಹ್ಯಭ್ಯಧಿಕೋ ನ ಹಿ । (114.5 ಭವಿಷ್ಯಪರ್ವ)

ನನಗಿಂತಲೂ ಉತ್ತಮರು ಯಾರು ಇಲ್ಲ ಕಾರಣ ದೇವರ ದರ್ಶನ ಮಾಡುವ ಭಾಗ್ಯ ಸಿಕ್ಕಿದೆ ಅಂತ ಎರಡನೆಯ ಕ್ಷಣಕ್ಕೆ ಅನ್ನುತ್ತಾನೆ ನಾನು ಎಷ್ಟು ಧನ್ಯನೋ ನನ್ನ ತಾಯಿ ಎಷ್ಟು ಧನ್ಯಳು ಅಂತ.

ಸಾ ಹಿ ಮೇ ಜನನೀ ಧನ್ಯಾ ಹರಿಂ ದೃಷ್ಟ್ವಾ ಪುನರ್ಗತಮ್ ।
ಕೃತಾರ್ಥಂ ಸರ್ವದಾ ದೇವೀ ದ್ರಕ್ಷ್ಯತ್ಯೇಷಾ ಮನಸ್ವಿನೀ ॥ (114.6 ಭವಿಷ್ಯಪರ್ವ)

ಅವನ ಅನುಸಂಧಾನ ನೋಡಿ, ಶ್ರೀಕೃಷ್ಣ ಪರಮಾತ್ಮನನ್ನ ನೋಡಿ ಮನೆಗೆ ಬಂದ ಮಗನನ್ನು ನಿತ್ಯ ನೋಡುತ್ತಾಳಲ್ಲ ನಾಳೆಯಿಂದ ನನ್ನ ತಾಯಿ ಅವಳ ಭಾಗ್ಯ ಎಷ್ಟು, ತಾಯಿ ಅಂದರೆ ಜೊತೆಗೆ ತಂದೆಯನ್ನು ಇಟ್ಟುಕೊಳ್ಳಬೇಕು, ತಂದೆಯಂತೂ ದೊಡ್ಡ ವಿದ್ವಾಂಸನೇ ಮಿತ್ರಸಹಾಚಾರ್ಯ ಆ ವಿಚಾರ ಬೇರೆ. ಮಗ ಪ್ರತ್ಯಕ್ಷವಾಗಿ ದೇವರನ್ನ ಕಂಡು ಅನುಗ್ರಹ ಪಡೆದು ಬಂದಿದ್ದಾನೆ ಅಂತ ಆ ತಂದೆ ತಾಯಿಗಳು ನನ್ನನ್ನು ಪ್ರೀತಿಯಿಂದ ನಿತ್ಯದಲ್ಲಿ ನೋಡುವಾಗ ಕೃಷ್ಣನ ಸ್ಮರಣೆ ಮಾಡುತ್ತಾರಲ್ಲ ಅವರ ಭಾಗ್ಯ ಎಷ್ಟು ಅಂತ ಅಂದುಕೊಂಡಿದ್ದಾನೆ. ಇದು ಬಹಳ ಮಹತ್ವದ ಮಾತು ಜೀವನದಲ್ಲಿ ದೇವರ ದರ್ಶನ ನಮಗೆ ಬೇಕಾದಷ್ಟು ಸಲ ಆಗುತ್ತದೆ ಅಂದರೆ ಸಾಕ್ಷಾತ್ ಪರಮಾತ್ಮನ ದರ್ಶನ ಅಲ್ಲ ಭಗವಂತನ ಮೂಲ ಸ್ವಯಂ ವ್ಯಕ್ತವಾದಂತಹ ಕ್ಷೇತ್ರಗಳಲ್ಲಿರುವ ಪ್ರತಿಮೆಗಳು. ರಾಮ ದೇವರ ದರ್ಶನವನ್ನು ಮಾಡುತ್ತೀರಿ,ಮೂಲರಾಮ ದೇವರ, ದಿಗ್ವಿಜಯರಾಮ ದೇವರ, ವೇದವ್ಯಾಸ ದೇವರ ದರ್ಶನ, ವೇಂಕಟೇಶ ದೇವರ ದರ್ಶನ, ಶ್ರೀಕೃಷ್ಣ ಪರಮಾತ್ಮನ ದರ್ಶನ ಉಡುಪಿಯಲ್ಲಿ ಹೀಗೆ ಮಾಡಿದಾಗ ದರ್ಶನ ಮಾಡುವುದೇ ಒಂದು ದೊಡ್ಡ ಪುಣ್ಯ. ಮುಂದೆ ಈ ದರ್ಶನದ ಸೌಭಾಗ್ಯವನ್ನು ದೇವರು ಕೊಟ್ಟಿದ್ದಾನೆ ಅಂತ ಆ ದೇವರಿಗೆ ನಾವು ಕೃತಜ್ಞರಾಗಿರಬೇಕು, ನಮ್ಮ ಧನ್ಯತೆಯನ್ನು ಅನುಭವಿಸಬೇಕು, ಇದು ಎಷ್ಟು ದೊಡ್ಡ ಸೌಭಾಗ್ಯ, ಎಂತಹ ದೊಡ್ಡ ಅಧಿಷ್ಠಾನ ಅನ್ನುವ ಅನುಸಂಧಾನ ಬರುತ್ತ ಇರಬೇಕು, ಅದು ಎಷ್ಟು ಅನುಸಂಧಾನ ಬರುತ್ತೋ ಅಷ್ಟು ಅದರ ಲಾಭ ನಮಗೆ ಆಗುತ್ತದೆ. ಸುಮ್ಮನೆ ನೋಡಿದರೆ ಒಂದು ಪುಣ್ಯ ಬಂದರೆ ಆ ಭಕ್ತಿ ಶ್ರದ್ಧೆ ಧನ್ಯತೆಯ ಒಂದು ಮನೋಭಾವದಿಂದ ನಾವು ದರ್ಶನ ಮಾಡಿದಾಗ ಸಾವಿರ ಲಕ್ಷ ಕೋಟಿಯಷ್ಟು ಪುಣ್ಯವನ್ನ ಪಡೆದುಕೊಳ್ಳುವುದಕ್ಕೆ ಸಾಧ್ಯವಿದೆ ಅನ್ನುವುದನ್ನು ಈ ಹರಿವಂಶ ಜನಾರ್ದನಾಚಾರ್ಯರ ವೃತ್ತಾಂತದಿಂದ ನಮಗೆ ತಿಳಿಸಿಕೊಡುತ್ತಾ ಇದೆ.

ಆ ಪರಮಾತ್ಮ ಏನು ಮಾಡಬಹುದು ಅಂತ ಎಲ್ಲ ನನೆಪು ಮಾಡಿಕೊಳ್ಳುತ್ತಾ ಇದ್ದಾನೆ. ಹೋದ ತಕ್ಷಣ ನನ್ನನ್ನು ಪ್ರೀತಿಯಿಂದ ನೋಡುತ್ತಾನೆ, ಚೆನ್ನಾಗಿದ್ದೀಯಾ ಅಂತ ಮಾತನಾಡಿಸಬಹುದಲ್ಲ ಹೀಗೆಲ್ಲಾ ಆ ಭಗವಂತ ಏನು ಮುಂದೆ ತನಗೆ ಮಾಡಬಹುದು ಸ್ವಾಗತವನ್ನ ಪ್ರೀತಿಯನ್ನ ಅದೆಲ್ಲವನ್ನ ನೆನೆಸುತ್ತಾ ನೆನೆಸುತ್ತಾ ಹೋಗಿದ್ದಾನೆ. ಕಾರಣ ಇಷ್ಟೇ ಘಟನೆ ನಡೆಯುವುದು ಅಲ್ಪ ಸಮಯದಲ್ಲಿ ಯಾವಾಗಲೂ ಮಾತನಾಡಿಸುವುದು ನೋಡುವುದು ಒಂದು ನಿಮಿಷ. ಅದೇ ಬಹಳ ಹೆಚ್ಚಾಯಿತು. ದೇವರ ಹತ್ತಿರ ಒಂದು ನಿಮಿಷ ಅಂದರೆ ಕೆಲವು ಕ್ಷಣಗಳೋ ಒಂದು ನಿಮಿಷವೋ ಮಾತನಾಡಿಸಬಹುದು, ಒಂದು ನಿಮಿಷ ನೋಡಬಹುದು ಆದರೆ ಅದರ ಸ್ಮರಣೆ ಉಂಟಲ್ಲ ಪುನಃ ಪುನಃ ಪುನಃ

ಅದನ್ನು ನಾವು ಹತ್ತು ನೂರು ಸಾವಿರ ಬಾರಿ ಮಾಡುವುದಕ್ಕೂ ನಮಗೆ ಸಾಧ್ಯ ಇದೆ. ಇವನು ನೋಡುವ ಮೊದಲೂ ಮುಂದಾಗುವುದನ್ನು ಊಹಿಸಿಕೊಳ್ಳುತ್ತಾ ಇದ್ದಾನೆ, ಬರುವಾಗಲೂ ಅದನ್ನೆ ನೆನೆಸುತ್ತಾ ಇದ್ದಾನೆ ಇದು ಬಹಳ ಮಹತ್ವದ್ದು. ಒಂದು ಕ್ಷಣ ನೋಡಿ ಕಣ್ಣು ಮುಚ್ಚಿ ಈ ಕಡೆಗೆ ಮುಖ ತಿರುಗಿದ್ದೇ ತಡ ಮತ್ತೆ ಲೌಕಿಕ ವಿಷಯಗಳ ಚಿಂತೆ, ಏನೋ ಹಾಳು ಹರಟೆಯೊಳಗೆ ನಮ್ಮ ತಲೆ ಹೋಗಿಬಿಟ್ಟರೆ ಅದು ಪ್ರಯೋಜನ ಅಲ್ಲ ನಿರಂತರವಾಗಿ ಹರಿ ಸ್ಮರಣೆ ಇರಬೇಕು ಅನ್ನುವುದನ್ನು ತೋರಿಸುತ್ತ ಇದ್ದಾನೆ. ಆ ಪರಮಾತ್ಮನ ಸ್ಮರಣೆ ಮಾಡುತ್ತಾ ಇರುವಾಗ ಈಗಲೇ ನನಗೆ ರೋಮಾಂಚನವಾಗುತ್ತಾ ಇದೆ ರೋಮಾಂಚನವಾಗುವುದು ಅಷ್ಟೇ ಅಲ್ಲ **'ಸಹಾಯಾತಿ ಪುರೋ ಯಾತಿ ಪುರಃ ಪ್ರೇರಯತೇ ಹರಿಃ'**[1] ದೇವರು ನಮ್ಮ ಜೊತೆಗೆ ಬರುತ್ತಾನೆ, ನಮ್ಮ ಮುಂದೆ ನಡೆಯುತ್ತಾ ಇದ್ದಾನೆ, ಹಿಂದಿನಿಂದ ನಮ್ಮನ್ನು ಮುಂದೆ ನಡೆಯುವ ಹಾಗೆ ಪ್ರೇರಣೆ ಮಾಡುತ್ತಾ ಇದ್ದಾನೆ ಅಂತ ಚಿಂತನ ಮಾಡಬೇಕು ಅಂತ ಹೇಳುತ್ತಾರಲ್ಲ ಹಾಗೆ ಚಿಂತನ ಮಾಡುತ್ತಾ ಇದ್ದಾನೆ.

ಗಚ್ಛತಶ್ಚ ಪುರೋ ಭಾತಿ ಶಙ್ಖಚಕ್ರಗದಾಸಿಮಾನ್ ॥ (114.14 ಭವಿಷ್ಯಪರ್ವ)

ಶಂಖ ಚಕ್ರ ಗದಾ ಖಡ್ಗಧಾರಿಯಾಗಿ ಆ ಪರಮಾತ್ಮನನ್ನ ರಕ್ಷಣೆಯನ್ನು ಮಾಡುವುದಕ್ಕೋಸ್ಕರ ಮುಂದೆ ಹೊರಟಿದ್ದಾನೆ ಅಂತ ಅನುಸಂಧಾನ ಮಾಡುತ್ತಾ ಇದ್ದಾನಂತೆ.

ಅಗ್ರತೋ ನಾರಸಿಂಹಶ್ಚ ಪೃಷ್ಠತೋ ಗೋಪಿನಂದನಃ ।
ಉಭಯೋ ಪಾರ್ಶ್ವಯೋರಾಸ್ತಾಂ ಸಶರೌ ರಾಮಲಕ್ಷ್ಮಣೌ ॥

ಅಂತ ನಿತ್ಯದಲ್ಲಿ ಚಿಂತನ ಮಾಡುತ್ತಾ ಇದ್ದರಂತೆ ಯಾದುವಾರ್ಯರು ಮಹಾನುಭಾವರು. ನಿಜವಾಗಿಯೂ ನರಸಿಂಹ ದೇವರು, ಕೃಷ್ಣ ರಾಮ ಲಕ್ಷ್ಮಣರು ಅವರ ರಕ್ಷಣೆಗಾಗಿ ಜೊತೆ ಜೊತೆಗೆ ಹೋಗುತ್ತಾ ಇದ್ದರು ಅಂದರೆ ಅವರ ಭಕ್ತಿ ಎಷ್ಟು, ಅವರ ಶ್ರದ್ಧೆ ಎಷ್ಟು, ಅವರ ಯೋಗ್ಯತೆ ಎಂಥಹದ್ದು ಅಂತ ನಾವು ಚಿಂತನ ಮಾಡಬೇಕು ಆ ರೀತಿ ಜನಾರ್ದನಾಚಾರ್ಯ ಚಿಂತನ ಮಾಡುತ್ತ ಇದ್ದಾನೆ.

ಯಾತೀವ ಚ ಪುರೋ ಭಾತಿ ಮಹ್ಯಂ ದೇವೋ ಜಗದ್ಗುರುಃ । (114.15 ಭವಿಷ್ಯಪರ್ವ)

ನಮ್ಮ ಮುಂದೆ ಹೊರಟಿದ್ದಾನೆ ಅಂತ ನನಗೆ ಅನ್ನಿಸುತ್ತಾ ಇದೆ ಇಷ್ಟು ಸಂತೋಷದ ಸಂಗತಿ. ದುಃಖದ ಸಂಗತಿ ಏನು ಇಂತಹ ಕೃಷ್ಣನಿಗೆ ಹೋಗಿ ಕರ ಕೊಡು ಅಂತ ನಾನು ಕೇಳಬೇಕಲ್ಲ **'ಇದಂ ದುಃಖತರಂ ಮನ್ಯೇ'**[2] ಅದೇ ಬಹಳ ದುಃಖ ಸಾಧನವಾದದ್ದು. ಅವನು ಬೇರೆ ಹೇಳಿದ್ದಾನೆ ಬಾಕಿಯವರೆಲ್ಲ ಏನೇನೋ ಕೊಟ್ಟರೆ ನಡೆಯುತ್ತೆ ಇನ್ನುಳಿದವರೆಲ್ಲ ಏನಾದರೂ ಕೊಡಬಹುದು ಕೃಷ್ಣ ಪರಮಾತ್ಮ ಮಾತ್ರ ಸುಮ್ಮನೆ ಏನೋ ಅದು ಇದು ಕಳಿಸಿದರೆ ಅಲ್ಲ, ಏನೋ ಒಂದಿಷ್ಟು ದುಡ್ಡು, ಒಂದಿಷ್ಟು ಬಟ್ಟೆ ಅಲ್ಲ, ಸಮುದ್ರದ ಮಧ್ಯದಲ್ಲಿ ಇದ್ದವರು ಅವರು ಹೀಗಾಗಿ ಬೇಕಾದಷ್ಟು ಮುತ್ತು ರತ್ನಗಳ ರಾಶಿಯೇ ಇರುತ್ತದೆ, ಸಮುದ್ರದೊಳಗಿನ ಮುತ್ತು ರತ್ನಗಳು ಮೊದಲಾದ ಅಪರೂಪದ ವಸ್ತುಗಳು ಏನೇನು ಇದೆಯೋ ಅದೆಲ್ಲವನ್ನು ತಂದುಕೊಡಬೇಕು.

ಲವಣಾನಿ ಬಹೂನ್ಯಾಶು ದಾತವ್ಯಾನಿ ಕರಾತ್ಮನಾ । (114.19 ಭವಿಷ್ಯಪರ್ವ)

1. ವೇದಮಂತ್ರ ; 2. 114.16 ಭವಿಷ್ಯಪರ್ವ

ಬೇಕಾದಷ್ಟು ಉಪ್ಪುಗಳು, ಉಪ್ಪಿನ ಸಮುದ್ರ ಅಲ್ಲವಾ ಬೇಕಾದಷ್ಟು ಉಪ್ಪು ಸಿಗುತ್ತೆ ಮೂಟೆಗಟ್ಟಲೇ ಉಪ್ಪು ತಂದು ಹಾಕಲಿ ಅಂತ ಅಡಿಗೆಗೆ ಎಲ್ಲ ಉಪಯೋಗಸಲಿಕ್ಕೆ ಬರುತ್ತೆ ಅಂತ ಹೀಗೆ ಅರ್ಥ ತೋರುತ್ತೆ ಮೇಲ್ನೋಟಕ್ಕೆ. ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ತಾತ್ಪರ್ಯ ನಿರ್ಣಯದಲ್ಲಿ ಲಾವಣಾನಿ ಅಂತ ಮಾಡಿದ್ದಾರೆ ಇಲ್ಲಿ ಲವಣಾನಿ ಅಂತ ಇದೆ ಶ್ರೀಮದಾಚಾರ್ಯರು ಅದನ್ನು ಲಾವಣಾನಿ ಅಂತ ವ್ಯಾಖ್ಯಾನ ಮಾಡಿದ್ದಾರೆ ಹರಿವಂಶಕ್ಕೆ. ಅಂದರೆ ಲವಣ ಅಂದರೆ ಉಪ್ಪು, ಉಪ್ಪು ತೆಗೆದುಕೊಂಡು ಬಾ ಅಂತ ಕೇಳಿಲ್ಲ ಅವನು ಅದು ಏನು ದೊಡ್ಡ ಕರ ಅಲ್ಲ, ಉಪ್ಪಿನ ಸಮುದ್ರದ ಆಳದೊಳಗೆ ಇರುವಂತಹ ರತ್ನಗಳನ್ನ ಲವಣ ಸಮುದ್ರ ಸಂಬಂಧಿಯಾದ ರತ್ನಗಳನ್ನ ತೆಗೆದುಕೊಂಡು ಬಾ ಅನ್ನುವ ಅರ್ಥದಲ್ಲಿ ಲವಣಾನಿ ಅಂತ ಅಂದದ್ದೇ ಹೊರತು ಉಪ್ಪು ತೆಗೆದುಕೊಂಡು ಬಾ ಅಂತ ಅರ್ಥವಲ್ಲ ಅನ್ನುವ ವ್ಯಾಖ್ಯಾನವನ್ನ ಶ್ರೀಮದಾಚಾರ್ಯರು ಒಂದು ದೀರ್ಘ ಪ್ರಯೋಗ ಮಾಡುವ ಮೂಲಕನೇ ಮಾಡುತ್ತಾರೆ ಲಾವಣಾನಿ ಅಂತ ಅಂದರೆ ಲವಣ ಸಮುದ್ರ ಸಂಬಂಧಿಯಾದಂತಹ ರತ್ನಗಳನ್ನು ತೆಗೆದುಕೊಂಡು ಬಾ ಅನ್ನುವುದು ಅವನ ಅಭಿಪ್ರಾಯ. ಇದನ್ನೆಲ್ಲ ನಾನು ಹೇಗೆ ಕೇಳುವುದು ಕೇಳುವುದಿಲ್ಲ ಅನ್ನಲಿಕ್ಕೆ ಬರುವುದಿಲ್ಲ ಮಾತು ಕೊಟ್ಟು ಬಂದಿದ್ದೇನೆ ಗೆಳೆತನ ಮಿತ್ರಭಾವ ಅದಕ್ಕೆ ದ್ರೋಹ ಮಾಡುವಂತಿಲ್ಲ ಕೇಳಿದರೆ ದೊಡ್ಡ ಅಪರಾಧ ತಾನೆ ಸಮಾಧಾನ ಮಾಡಿಕೊಳ್ಳುತ್ತಾನೆ. ಒಂದು ಮಾತ್ರ ಮನಸ್ಸಿಗೆ ಸಮಾಧಾನ ಏನು ಅಂದರೆ ದೇವರು ಸರ್ವಜ್ಞ ಅವನಿಗೆ ನನ್ನ ಮನಸ್ಸಂತು ಗೊತ್ತು, ನಾನು ನನ್ನ ಮನಸ್ಸಿನಿಂದ ಕೇಳುತ್ತಾ ಇಲ್ಲ ಅವರ ಒತ್ತಾಯಕ್ಕೆ ಕೇಳುತ್ತಾ ಇರುವುದು ಅಂದರೆ ಏನು ಕೇವಲ ಸುದ್ದಿ ಹೇಳುವುದು ಅಷ್ಟೇ. ಈ ರೀತಿ ಅವರು ಸಂದೇಶ ಕಳಿಸಿದ್ದಾರೆ ಅಂತ ಅವರ ಸಂದೇಶವನ್ನು ಮುಟ್ಟಿಸುವುದು, ನನ್ನ ಹೃದಯದ ಮಾತು ಅಲ್ಲ ಇದು ಅನ್ನುವುದು ಸರ್ವಜ್ಞನಾದ ಕೃಷ್ಣನಿಗೆ ಗೊತ್ತು. ಅವನು ನನ್ನ ಮೇಲೆ ದಯೆ ಮಾಡಿಯೇ ಮಾಡುತ್ತಾನೆ ಸರ್ವಥಃ ನನ್ನನ್ನ ಕ್ರೋಧದಿಂದ ನೋಡುವುದಿಲ್ಲ ಅನ್ನುವ ಒಂದು ವಿಶ್ವಾಸವೂ ಅವನಿಗೆ ಇದೆ. ಎಷ್ಟು ಜನ್ಮಗಳಲ್ಲಿ ನಾನು ಯಜ್ಞ ಯಾಗಾದಿಗಳನ್ನು ಮಾಡಿದ್ದೆನೋ, ಏನು ವ್ರತ ನಿಯಮ ಉಪವಾಸಾದಿಗಳನ್ನು ಮಾಡಿದ್ದೆನೋ ಗೊತ್ತಿಲ್ಲ ಇವತ್ತು ಅದರ ಫಲ ನನಗೆ ಸಿಗುತ್ತಾ ಇದೆ.

ಅದ್ಯ ಮೇ ಸಫಲಾ ಯಜ್ಞಾಃ ಸಾಕ್ಷಾತ್ಕೃತವತೋ ಹರಿಮ್ ।
ನೇತ್ರೇ ಮೇ ಸಫಲೇ ವಿಷ್ಣುಂ ಪಶ್ಯತಶ್ಚ ಜಗನ್ಮಯಮ್ ॥ (114.27 ಭವಿಷ್ಯಪರ್ವ)

ಆ ಪರಮಾತ್ಮನನ್ನ ನೋಡದಿರುವ ಕಣ್ಣು ಇಷ್ಟು ದಿನ ವ್ಯರ್ಥವಾಗಿತ್ತು **'ಕಂಗಳಿದ್ಯಾತಕೋ ಕಾವೇರಿ ರಂಗನ ನೋಡದ'** ಅಂತಹ ಪರಮಾತ್ಮನ ದರ್ಶನ ಇವತ್ತು ಆದರೆ ನನ್ನ ಕಣ್ಣುಗಳು ಸಾರ್ಥಕ ಅಂತ. ಅವನು ಅನ್ನುತ್ತಾನೆ ಹೋಗುವಾಗ, ನೋಡಿ ಇದೆಲ್ಲಾ ಯಾಕೆ ಹೇಳಬೇಕು ವೇದವ್ಯಾಸ ದೇವರು, ಹೋದ ದರ್ಶನ ಮಾಡಿಕೊಂಡು ಬಂದ ಅಂತ ಹೇಳಿದರೆ ಮುಗಿದು ಹೋಗುತ್ತಲ್ಲ ಆದರೆ ಎಷ್ಟು ಸುಂದರವಾಗಿ ವರ್ಣನೆ ಮಾಡುತ್ತಾರೆ.

ಆಮೂಲಮಸಕೃದ್ ವಿಷ್ಣುಂ ಪಶ್ಯಾಮಿ ಚ ಪುನಃ ಪುನಃ । (114.29 ಭವಿಷ್ಯಪರ್ವ)

ಪಾದದಿಂದ ಅಡಿಯಿಂದ ಮುಡಿಯವರಿಗೆ ಪುನಃ ಪುನಃ ಪುನಃ ಪುನಃ ಕೆಳಗಿನಿಂದ ಮೇಲೆ ಮೇಲಿನಿಂದ ಕೆಳಗೆ ನೋಡುತ್ತಾನೆ ನೋಡುತ್ತಾನೆ ಇರುತ್ತೇನೆ ಬಹಳ ಹೊತ್ತು ನೋಡುತ್ತೇನೆ ಅಂತ ಮೊದಲೇ ದೃಢ ಮಾಡಿಕೊಳ್ಳುತ್ತಾ ಇದ್ದಾನೆ ಅಲ್ಲಿ ಹೋದಾಗ ಅವಸರ ಪಟ್ಟು ಯಾಕೆ ಅಂದರೆ ಮುಂದೆ ನಾನು ಈಚೆಗೆ ಬಂದಮೇಲೆ ಧ್ಯಾನ ಮಾಡಲಿಕ್ಕೆ ನನಗೆ ಅನುಕೂಲ ಆಗಬೇಕು. ದೇವರ ಕಣ್ಣು ಕಿವಿ ಎಲ್ಲ ಶಾಸ್ತ್ರದಲ್ಲಿ ಓದಿ ಕೇಳಿ ಏನೋ ಒಂದು ಕಲ್ಪನೆ ಮಾಡಿಕೊಂಡಿರುವುದು ಬೇರೆ, ಪ್ರತ್ಯಕ್ಷವಾಗಿ ದರ್ಶನ ಮಾಡುವಾಗ ಅಂದರೆ ದೇವರ ದರ್ಶನ, ದೇವರ ಪ್ರತಿಮೆಯ



ದರ್ಶನ ಮಾಡುವಾಗಲೂ ಹೇಗೆ ಮಾಡಬೇಕು ಅಂತ ಜನಾರ್ದನಾಚಾರ್ಯರು ಕಲಿಸುತ್ತಾ ಇದ್ದಾರೆ ಪುನಃ ಪುನಃ ಪುನಃ ಪುನಃ ನೋಡಬೇಕಂತೆ. ಓ ಪರಮಾತ್ಮನ ಬಾಹುಗಳು ಶಂಖ ಚಕ್ರ ಕಿರೀಟ ಮುಖ ಕಣ್ಣು ಎಲ್ಲವನ್ನೂ ಎಷ್ಟು ಸಾಧ್ಯವೋ ಅಷ್ಟು ಬಾರಿ ನೋಡಿ ಮತ್ತೆ ಕಣ್ಣು ಮುಚ್ಚಿ ಕಣ್ಣು ಮುಂದೆ ಬಂತಾ ಆ ರೂಪ ಅಂತ. ಬಂದಿಲ್ಲ ಅಂದರೆ ಮತ್ತೊಮ್ಮೆ ನೋಡುವುದು ಮತ್ತೆ ರೂಢಿ ಮಾಡಿಕೊಳ್ಳುವುದು ಈ ರೀತಿ ಧ್ಯಾನ ಮಾಡುವುದಕ್ಕೋಸ್ಕರ ಆ ಪರಮಾತ್ಮನನ್ನ ಪುನಃ ಪುನಃ ನೋಡಬೇಕು ಅನ್ನುವ ಒಂದು ಸಂದೇಶವನ್ನು ಕೊಟ್ಟಿದ್ದಾನೆ, ಸುಮ್ಮನೆ ಕೇಳಬಾರದು ಪುರಾಣವನ್ನ ಅಲ್ಲಿ ಹೇಳಿದ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನವನ್ನು ಮಾಡಬೇಕು. **'ಧಾರಯಿಷ್ಯಾಮ್ಯಹಂ ಪಾಂಸುಂ'**[1] ಆ ಪರಮಾತ್ಮ ನಿಂತಿರುತ್ತಾನೆ ಮಾತನಾಡಿಸಿ ಆಚೆ ಹೋದದ್ದೇ ತಡ ಆ ಪಾದ ಧೂಲಿಯನ್ನು ಎತ್ತಿ ನನ್ನ ಹತ್ತಿರ ಇಟ್ಟುಕೊಳ್ಳಬೇಕು ಸಾಕ್ಷಾತ್ ಭಗವಂತನ ಪಾದ ಸ್ಪರ್ಶವಾದಂತಹ ಪಾದ ಧೂಲಿಯನ್ನು ಇಟ್ಟುಕೊಂಡರೆ ಅದು ಸಾಕ್ಷಾತ್ ಮೋಕ್ಷವನ್ನೇ ನೀಡುತ್ತೆ ಅದು, ವೈಕುಂಠಕ್ಕೇನೇ ಮಾರ್ಗ ಅದು ಈ ರೀತಿ ಎಲ್ಲ ಚಿಂತನ ಮಾಡುತ್ತಾ ಮಾಡುತ್ತಾ ಬಂದಿದ್ದಾನೆ.

ತತಃ ಕೃತಾರ್ಥತಾಂ ಯಾಸ್ಯೇ ಸ್ವರ್ಗಮಾರ್ಗೋ ಹಿ ತದ್ರಜಃ ॥ (114.30 ಭವಿಷ್ಯಪರ್ವ)
ಸವ್ಯೇ ದ್ಯೋತನ್ಮಹಾಶಙ್ಖಂ ರಶ್ಮಿಜಾಲವಿರಾಜಿತಮ್ ॥ (114.34 ಭವಿಷ್ಯಪರ್ವ)

ಆ ಪರಮಾತ್ಮನ ರೂಪವನ್ನು ಧ್ಯಾನ ಮಾಡುತ್ತಾನೆ ಎಡಗೈಯಲ್ಲಿ ಶಂಖ ಅಂತ ಶ್ರೀಮದಾಚಾರ್ಯರು ವರ್ಣನೆ ಮಾಡುವಾಗಲೂ

ಧ್ಯಾಯೇತ್ ಹರಿನ್ಮಣಿನಿಭಂ ಜಗದೇಕವಂದ್ಯಂ ।
ಸೌಂದರ್ಯಸಾರಂ ಅರಿಶಂಖವರಾಭಯಾನಿ ॥

ಬಲಗೈ ಮೇಲೆ ಹರಿ ಚಕ್ರ, ಎಡಗೈ ಮೇಲೆ ಶಂಖ, ಕೆಳಗೆ ವರ ಮತ್ತೆ ಬಲಗೈಯಲ್ಲಿ ಅಭಯ, ಹರಿ ಚಕ್ರ ಶಂಖ ವರ ಅಭಯ ಹಾಗಾದರೆ ಎಡಗೈಯಲ್ಲಿ ಶಂಖ ಬಂತು ಆ ಮಾತನ್ನು ಹೇಳುತ್ತಾರೆ **'ಸವ್ಯೇ ದ್ಯೋತನ್ಮಹಾಶಙ್ಖಂ'** ಶಂಖವನ್ನು ಧಾರಣ ಮಾಡಿದಂತಹ ಶಂಖ ಚಕ್ರ ಗದಾ ಪದ್ಮಾದಿಗಳ ಧಾರಣವನ್ನು ಮಾಡಿ ಶ್ರೀವತ್ಸ ಲಾಂಛನದಿಂದ ಕೂಡಿಕೊಂಡು ಅದ್ಭುತವಾದಂತಹ ದಿವ್ಯವಾದ ತೇಜೋಮಯವಾದಂತಹ ಕಿರೀಟ. ಆ ಪರಮಾತ್ಮ ಹೇಗೆ ಅಂದರೆ ಅವನು ಒಂದು ಅಮೃತ ಇದ್ದ ಹಾಗೆ ಬಹಳ ಮಹತ್ವದ್ದು, ಸುಮ್ಮನೆ ಏನೋ ರೂಪಕ ಅಲ್ಲ ಇದು ಒಂದು ಉದಾಹರಣೆ ಕೊಟ್ಟದ್ದಲ್ಲ. ನಿಜವಾಗಿಯೂ ಸಕಲ ವೇದಾದಿ ಸಚ್ಛಾಸ್ತ್ರಗಳ ಸಾರ ಸರ್ವಸ್ವ ಪರಮಾತ್ಮನೇ, ಸಕಲ ವೇದಗಳ ಮಹಾತಾತ್ಪರ್ಯ ವಿಷಯನಾದವನು ಶ್ರೀಮನ್ ನಾರಾಯಣ ಅನ್ನುವುದನ್ನು ಹೇಳುತ್ತಾನೆ. ವೇದ ಅನ್ನುವುದು ಅದು ಒಂದು ದೊಡ್ಡ ಸಾಗರ, ಬುದ್ಧಿ ಅನ್ನುವುದೇ ಒಂದು ದೊಡ್ಡ ಮಂದರ ಪರ್ವತ ಆ ಶಾಸ್ತ್ರಗಳು ಏನಿವೆ ಬ್ರಹ್ಮ ಮೀಮಾಂಸಾದಿ ಶಾಸ್ತ್ರಗಳು ಅವುಗಳೇ ತಕ್ಷಕ ಇದ್ದಂತೆ. ಆ ಬುದ್ಧಿ ಎಂಬ ಮಂದರ ಪರ್ವತಕ್ಕೆ ಬ್ರಹ್ಮ ಮೀಮಾಂಸಾದಿ ಶಾಸ್ತ್ರಗಳೆಂಬ ಸರ್ಪವನ್ನು ಕಟ್ಟಿ ವೇದವೆಂಬ ಸಾಗರವನ್ನು ಕಡೆದಾಗ ನಿರ್ಣೀತವಾದ ಏನು ತತ್ವ ಇದೆ ನಾರಾಯಣ ತತ್ವ, ವಿಷ್ಣು ಸರ್ವೋತ್ತಮತ್ವ ಅದೇ ಅಮೃತ ಇದ್ದ ಹಾಗೆ ಆ ಅಮೃತವನ್ನು ನಾನು ಪಾನ ಮಾಡುವುದಕ್ಕೆ ಹೊರಟಿದ್ದೇನೆ ಅಂತ.

ಆಲೋಚ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ ।
ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಃ ಸದಾ ॥ (33 ಓಂ ನಮೋ ನಾರಾಯಣ ಅಷ್ಟಾಕ್ಷರ)

1. 114.30 ಭವಿಷ್ಯಪರ್ವ

ಅಂತ ಏನು ಶ್ರೀಮದಾಚಾರ್ಯರು ಹೇಳುತ್ತಾರೆ ಆ ತತ್ವವನ್ನು ಹರಿವಂಶ ತಿಳಿಸುತ್ತಾ ಇದೆ. ಸಕಲ ವೇದಗಳ ಮಥನ ಮಾಡಿದರೂ ಸಿದ್ಧವಾಗುವ ತತ್ವ ಒಂದೇ ಅದು ನಾರಾಯಣ ವಿಷ್ಣು ಸರ್ವೋತ್ತಮ ಅನ್ನುವ ತತ್ವ ಅಂತಹ ಪರಮಾತ್ಮನ ದರ್ಶನವನ್ನು ಮಾಡುತ್ತೇನೆ ಅಂತ ಹೊರಟಿದ್ದಾನೆ.

'ಸುಧರ್ಮ ತಥಾ' ಶ್ರೀಕೃಷ್ಣ ಪರಮಾತ್ಮನ ದೊಡ್ಡದಾದ ಸಭಾ, ವಾಯು ದೇವರೇ ತಂದಿಟ್ಟಂತಹ ಸಭಾ ಆ ಸಭಾದಲ್ಲಿ ಪರಮಾತ್ಮ ಕುಳಿತಿದ್ದಾನೆ, ಬಲರಾಮ ದೇವರು ಇದ್ದಾರೆ, ದುರ್ವಾಸರು ಇದ್ದಾರೆ, ನಾರದರು ಇದ್ದಾರೆ, ಗಂಧರ್ವರು ಅಪ್ಸರಾ ಸ್ತ್ರೀಯರು, ದೂತ ಮಾಗದ ಬಂದಿಗಳು ಎಲ್ಲರೂ ಕುಳಿತಿದ್ದಾರೆ ಶ್ರೀಕೃಷ್ಣ ಪರಮಾತ್ಮ ಉಚ್ಚವಾದ ಆಸನದಲ್ಲಿ ಕುಳಿತಿದ್ದಾನೆ. ಆಗ ಜನಾರ್ದನ ಸಾಷ್ಟಾಂಗ ಪ್ರಣಾಮವನ್ನು ಮಾಡಿದ್ದಾನೆ, ಜನಾರ್ದನೋಸ್ಮಿ ತನ್ನ ಹೆಸರನ್ನು ಹೇಳಿಕೊಂಡಿದ್ದಾನೆ ನಾನು ಜನಾರ್ದನ ಅಂತ. ಮೊದಲು ಕೃಷ್ಣನಿಗೆ ನಮಸ್ಕಾರ ಮಾಡಿದ್ದಾನೆ ಅಣ್ಣನಾದರೂ ಬಲರಾಮನಿಗೆ ಮಾಡಲಿಲ್ಲ ಸರ್ವೋತ್ತಮನಾದವನು ಕೃಷ್ಣ ಅನ್ನುವುದಕ್ಕೋಸ್ಕರ ಆ ಪರಮಾತ್ಮನಿಗೆ ಮೊದಲು ನಮಸ್ಕಾರ ಮಾಡಿ ಆಮೇಲೆ ಬಲರಾಮನಿಗೆ ನಮಸ್ಕಾರವನ್ನು ಮಾಡಿ ತನ್ನ ಪರಿಚಯವನ್ನು ಹೇಳಿಕೊಂಡಿದ್ದಾನೆ. ನಾನು ಯಾಕೆ ಬಂದಿದ್ದೇನೆ ಅಂತ ಹೇಳುವುದಕ್ಕೆ ಹೊರಟ ಕೃಷ್ಣ ಅಂದ ಸುಮ್ಮನೆ ಇರು ತಾಳು ಅಷ್ಟು ಅವಸರ ಬೇಡ, ಮೊದಲು ಕೂಡು ಅಷ್ಟು ದೂರದಿಂದ ಶ್ರಮಪಟ್ಟು ನಡೆದು ಬಂದಿದ್ದೀಯಾ ಆಸನ ಗ್ರಹಣ ಮಾಡು, ವಿಶ್ರಾಂತಿಯನ್ನು ಪಡಿ, ಸ್ವಲ್ಪ ಮಾರ್ಗಾಯಾಸವನ್ನು ಕಡಿಮೆ ಮಾಡಿಕೋ ಆಮೇಲೆ ನಿನ್ನ ವಿಚಾರವನ್ನು ಹೇಳು ಅಂತ ಆತಿಥ್ಯವನ್ನು ಹೇಗೆ ಮಾಡಬೇಕು ಅನ್ನುವುದನ್ನ ತಿಳಿಸಿಕೊಡುತ್ತಾ ಇದ್ದಾನೆ. ಹಾಗೆ ಕೆಲವರಂತೂ ಬಾಗಲಾನೇ ತೆಗೆಯುವುದಿಲ್ಲ ಕಿಟಕಿ ತೆಗೆದು ಏನು ಯಾಕೆ ಬಂದಿದ್ದೀರಿ, ಇಲ್ಲ ನಿಮಗೆ ಬೇಕಾದವರು ಯಾರು ಇಲ್ಲ ಹೋಗಿರಿ ಅಂತ ಹೇಳಿ ಕಿಟಕಿ ಬಾಗಿಲು ಹಾಕಿಬಿಡುತ್ತಾರೆ ಅಷ್ಟೇ. ಮೊದಲು ಕರೆದು ಮಾತನಾಡಿಸಿ ಆಸನ ಕೊಟ್ಟು ಅವರ ಮಾರ್ಗಾಯಾಸ ಕಡಿಮೆಯಾದ ಮೇಲೆ ಯಾಕೆ ಬಂದಿದ್ದೀರಿ ಅಂತ ಆಮೇಲೆ ಕೇಳುವುದು. ಆಗಲಿ ಅಂತ ಪರಮಾತ್ಮನ ಆಜ್ಞೆಯಿಂದ ಸ್ವಲ್ಪ ಹೊತ್ತು ಕುಳಿತು ಆನಂತರದಲ್ಲಿ ಮಾತನಾಡುತ್ತಾ ಇದ್ದಾನೆ.

ಆಸ್ಸ್ವೇದಂ ವಿಷ್ಟರಂ ಪೂರ್ವಂ ಪಶ್ಚಾದ್ ಬ್ರೂಹಿ ಪ್ರಯೋಜನಮ್ । (115.8 ಭವಿಷ್ಯಪರ್ವ)
ಕುಶಲಂ ಬ್ರಹ್ಮದತ್ತಸ್ಯ ಪಿತುಶ್ಚ ಮಮ ಕೇಶವ । (115.11 ಭವಿಷ್ಯಪರ್ವ)

ಪರಮಾತ್ಮ ಎಲ್ಲ ಯೋಗ ಕ್ಷೇಮವನ್ನು ವಿಚಾರ ಮಾಡಿದ ನಿಮ್ಮ ತಂದೆ ಹೇಗಿದ್ದಾರೆ, ಬ್ರಹ್ಮದತ್ತ ಹೇಗಿದ್ದಾನೆ, ಹಂಸ-ಡಿಭಿಕರು ಎಲ್ಲಾ ಕೇಳಿದಾಗ ನನ್ನ ತಂದೆ ಮಿತ್ರಸಹಾಚಾರ್ಯ ಬ್ರಹ್ಮದತ್ತ ಇಬ್ಬರೂ ಚೆನ್ನಾಗಿದ್ದಾರೆ, ಹಂಸ-ಡಿಭಿಕರು ಚೆನ್ನಾಗಿದ್ದಾರೆ ಅಂತ ಹೇಳಿದ. ನೋಡಿ ಎಂತಹ ದುಷ್ಟರು ಆದರೂ ಅವರ ಕುಶಲವನ್ನ ಯೋಗ ಕ್ಷೇಮವನ್ನ ವಿಚಾರ ಮಾಡುತ್ತಾನೆ ಪರಮಾತ್ಮ ಹಂಸ-ಡಿಭಿಕರು ಚೆನ್ನಾಗಿ ಇದ್ದಾರೋ ಇಲ್ಲವೋ ಅವರ ಯೋಗ್ಯವಾದ ಸಾಧನೆ ದುರ್ಗತಿಗೆ ಬೇಕಾದ ಸಾಧನೆಯನ್ನ ಚೆನ್ನಾಗಿ ಮಾಡಿಕೊಂಡು ಪಾಪಘಟವನ್ನ ತುಂಬಿಕೊಳ್ಳುತ್ತಾ ಇದ್ದಾರೆ ತಾನೇ ಪಾಪ ಏನಾದರೂ ತೊಂದರೆ ಆಗಿಬಿಟ್ಟರೆ ಆ ಘಟ ಪೂರ್ಣ ಆಗಲಿಕ್ಕಿಲ್ಲಲ್ಲ ಅನ್ನುವ ದೃಷ್ಟಿಯಲ್ಲಿ ಅವರ ಯೋಗ ಕ್ಷೇಮವನ್ನೂ ವಿಚಾರ ಮಾಡಿದ್ದಾನೆ. ಆಗ ಇನ್ನೊಂದು ಮಾತನ್ನು ಪರಮಾತ್ಮ ಹೇಳಿದ ಸರ್ವಜ್ಞನಾದ ಭಗವಂತ ನೀನು ಏನೂ ಸಂಕೋಚ ಮಾಡಬೇಡ ಇವನು ಸಂಕೋಚ ಮಾಡಿಕೊಳ್ಳುತ್ತಾ ಇದ್ದಾನೆ ಅಂತ ಗೊತ್ತು ಅವನಿಗೆ ನಿನಗೆ ಏನು ಸಂಕೋಚ ಬೇಡ ನೀನು ದೂತ, ನಿನ್ನ ಸ್ವಂತ ಮಾತು ಏನಿಲ್ಲ ಇದರಲ್ಲಿ ಅವರ ಮಾತನ್ನು ನೀನು ಹೇಳುವುದಕ್ಕೆ ಬಂದಿದ್ದೀ ಏನಿದೆ ಇದ್ದ ಹಾಗೆ ಹೇಳಿಬಿಡು ಅಷ್ಟೇ.

ವಾಚ್ಯಂ ವಾಪ್ಯಥವಾವಾಚ್ಯಂ ಕರ್ತವ್ಯಮಥ ಚೇತರತ್ । (115.13 ಭವಿಷ್ಯಪರ್ವ)



ಕರ್ತವ್ಯವೋ ಅಕರ್ತವ್ಯವೋ, ವಾಚ್ಯವೋ ಅವಾಚ್ಯವೋ ನಿನಗೆ ಏನು ಹೇಳಿದ್ದಾರೋ ಅಷ್ಟು ಹೇಳಿಬಿಡು ಸಾಕು ದೂತನಾದದ್ದರಿಂದ ನಿನಗೆ ಯಾವ ದೋಷ ಇಲ್ಲ ಅಂತ. ಅವನು ಅನ್ನುತ್ತಾನೆ ದುರ್ವಾಸರು ಹಿಂದೆ ಕೇಳಿದ್ದೀರಲ್ಲ ಬಹಳ ಜೋರಾಗಿ ಸಿಟ್ಟಿನಿಂದ ಸರ್ವೋತ್ತಮ ಸ್ವತಂತ್ರ ಜಗನ್ನಿಯಾಮಕ ನಿನಗೆ ಗೊತ್ತಿಲ್ಲ ಅಂದರೆ ಏನು ಅಂತ ಸೋತ್ರ ಮಾಡುತ್ತಾ ಕ್ರೋಧ ಮಾಡಿದರು ಅಂತ. ಆ ತರಹ ಕ್ರೋಧ ಮಾಡಿಲ್ಲ ಆದರೆ ಅತ್ಯಂತ ವಿನಯದಿಂದ ಕೇಳುತ್ತಾ ಇದ್ದಾನೆ ಪರಮಾತ್ಮ ಸರ್ವಜ್ಞನಾದ ನಿನಗೆ ನಾನೇನು ಹೇಳುವುದು.

ಅಜಾನನ್ನಿವ ಕಿಂ ಬ್ರೂಷೇ ಸರ್ವಂ ಪ್ರತ್ಯಕ್ಷದರ್ಶಿವಾನ್ ॥ (115.16 ಭವಿಷ್ಯಪರ್ವ)

ಜಿತಂತೇ ಸ್ತೋತ್ರದಲ್ಲಿ ಕೇಳುತ್ತೀರಲ್ಲ **'ನೈವ ಕಿಂಚಿತ್ ಪರೋಕ್ಷಂತೇ ಪ್ರತ್ಯಕ್ಷೆಸಿ ನ ಕಸ್ಯಚಿತ್'** ಯಾವುದು ದೇವರಿಗೆ ಪರೋಕ್ಷ ಅಲ್ಲ ಎಲ್ಲವೂ ಪ್ರತ್ಯಕ್ಷ ಆದ್ದರಿಂದ ಎಲ್ಲವನ್ನು ಪ್ರತ್ಯಕ್ಷವಾಗಿ ಕಾಣುವ ನಿನಗೆ ಗೊತ್ತಿಲ್ಲದೆ ಇರುವಂತಹ ವಿಚಾರವೇ ಇಲ್ಲ, ಎಲ್ಲವೂ ನಿನಗೆ ಗೊತ್ತು.

ಸರ್ವಂ ಹಿ ಮನಸಾ ಪಶ್ಯನ್ ಕಿಂ ತ್ವಮಾತ್ಥ ವದೇತಿ ಮಾಮ್ ॥ (115.17 ಭವಿಷ್ಯಪರ್ವ)

ಯಾಕೆ ನನಗೆ ಹೇಳು ಅಂತೀಯಾ ನಿನಗೆ ಗೊತ್ತಾಗಿದೆಯಲ್ಲ ಏನೋ ಕಳಿಸಿದ್ದಾರೆ ಬಂದಿದ್ದೇನೆ ಒಂದಿಷ್ಟು ನಮಸ್ಕಾರ ಮಾಡಿಕೊಂಡು ಹೋಗಿಬಿಡುತ್ತೇನೆ ಸಾಕು ಎಲ್ಲಾ ನಿನಗೆ ಗೊತ್ತೇ ಇದೆ ನಾನೇನು ಹೇಳುವುದು ಅಂತ ಹೇಳುತ್ತಾನೆ.

ವಿಧ್ವದ್ಭಿರ್ಗೀಯಸೇ ವಿಷ್ಣುಸ್ತ್ವಮೇವ ಜಗತೀಪತೇ । (115.18 ಭವಿಷ್ಯಪರ್ವ)

ಎಲ್ಲರೂ ಕೂಡ ಸಾಹಿತ್ಯದ ಕಡೆಗೆ ಗಮನ ಕೊಟ್ಟು ಕೇಳಿ **'ವಿಧ್ವದ್ಭಿರ್ಗೀಯಸೇ ವಿಷ್ಣುಸ್ತ್ವಮೇವ ಜಗತೀಪತೇ'** ಜಗತ್ತಿಗೆ ಪತಿ ಸ್ವಾಮಿ ಪೃಥ್ವಿ ಅಂತ ಅರ್ಥ ಪೃಥ್ವಿ ಸಮಗ್ರವಾದ ಜಗತ್ತು ಎಲ್ಲದಕ್ಕೂ ಪತಿ ಒಡೆಯ ನಿಯಾಮಕ ನೀನು ಅಂತ ವರ್ಣನೆ ಮಾಡುತ್ತಾನೆ.

ಇಚ್ಛಯಾ ಸರ್ವಮಾಪ್ನೋಷಿ ದೃಷ್ಟಾದೃಷ್ಟವಿವೇಚನಮ್ ॥ (115.18 ಭವಿಷ್ಯಪರ್ವ)

ಜಗತ್ತಿನೊಳಗಿನ ಎಲ್ಲಾ ವಸ್ತುಗಳನ್ನೂ ನೀನು ಪಡೆಯಬಹುದು, ಕುಳಿತಲ್ಲಿಯೇನೆ ಎಲ್ಲ ವಸ್ತುಗಳನ್ನು ಪಡೆದುಕೊಳ್ಳುತ್ತೀಯಾ **'ತ್ವಮೇವೇದಂ ಜಗತ್ ಸರ್ವಂ'**[1] ನೀನೇ ಈ ಜಗತ್ತು. ಗಮನಿಸಿದಿರಾ ನೀನು ಜಗತ್ತಿನ ಒಡೆಯ ಅಂತ ಮೊದಲು ಹೇಳುತ್ತಾನೆ ನಿನಗೆ ಬೇಕಾದದ್ದನ್ನೆಲ್ಲ ಪಡೆದುಕೊಳ್ಳುವ ಸಾಮರ್ಥ್ಯ ಇದೆ ಏನೆಲ್ಲ, ಇಡೀ ಜಗತ್ತಿನೊಳಗಿದ್ದದ್ದನ್ನೆಲ್ಲವನ್ನು ಪಡೆದುಕೊಳ್ಳುತ್ತೀಯಾ **'ಸರ್ವಮಾಪ್ನೋಷಿ'** ಅಂತ ಮೂರನೆಯ ಮಾತಿನಲ್ಲಿ ಹೇಳುತ್ತಾನೆ ನೀನೇ ಜಗತ್ತು ಅಂತ ಅಂದರೆ ಶ್ರೀಮದಾಚಾರ್ಯರು ಮಾಡುವ ವ್ಯಾಖ್ಯಾನ ಎಷ್ಟು ಸೊಗಸಾದ ವ್ಯಾಖ್ಯಾನ ಅಂತ ಗಮನಿಸಿ. ದೇವರೇ ಜಗತ್ತು ಅಂದರೆ ಕಲ್ಲು ಮಣ್ಣು ಕಡ್ಡಿ ಕ್ರಿಮಿ ಕೀಟ ಪಶು ಎಲ್ಲವೂ ದೇವರು ಅಂತ ಸರ್ವಥಃ ಅರ್ಥವಲ್ಲ, ಜೀವರೂ ದೇವರಲ್ಲ, ಜಡವೂ ದೇವರಲ್ಲ ಹಾಗಾದರೆ ಯಾಕೆ ನೀನೇ ಜಗತ್ತು ಅಂತ ತಾನು ಕರೀತಾ ಇದ್ದೇನೆ ಅಂತ ಆ ಜನಾರ್ದನಾಚಾರ್ಯ ಅರ್ಥಾತ್ ವೇದವ್ಯಾಸ ದೇವರು ಅವನು ಆಡಿದ್ದನ್ನು ತಿಳಿಸುವಾಗ ಹಿಂದೆ ಮುಂದೆ ಎಷ್ಟು ಸುಂದರವಾದ ವ್ಯಾಖ್ಯಾನಗಳನ್ನು ಮಾಡಿ ಮಧ್ಯದಲ್ಲಿ ಮಣಿಯಂತೆ ಆ ಶಬ್ದವನ್ನು ಜೋಡಿಸುತ್ತಾರೆ

1. 115.19 ಭವಿಷ್ಯಪರ್ವ

ನೀನೇ ಜಗತ್ತು ಅನ್ನುತ್ತಾರೆ. ಯಾಕೆ ನೀನೇ ಜಗತ್ತು **'ಜಗತೀಪತೇ'** ಜಗತ್ತಿಗೆ ಒಡೆಯ. **'ಯದಧೀನಾ ಯಸ್ಯ ಸತ್ತಾ ತತ್ತದಿತ್ಯೇವ ಭಣ್ಯತೇ'**[1] ಇಡೀ ಜಗತ್ತಿನ ಅಸ್ತಿತ್ವ ನಿನ್ನ ಅಧೀನವಾದದ್ದರಿಂದ ನೀನೇ ಜಗತ್ತು ಅಂತ ಕರೆದದ್ದು ಅಂತ ವ್ಯಾಖ್ಯಾನ ಮೊದಲೇ ಮಾಡಿ ಮುಂದೆ ನೀನೇ ಜಗತ್ತು ಅನ್ನುತ್ತಾನೆ. ಎರಡನೆಯದು ಗೀತೆ ಮಾಡಿದ ವ್ಯಾಖ್ಯಾನ **'ಸರ್ವಂ ಸಮಾಪ್ನೋಷಿ ತತೋಽಸಿ ಸರ್ವಃ'**[2] ನೀನೇ ಸರ್ವ ಅನ್ನುತ್ತಾರೆ ಯಾಕೆ ಅಂದರೆ ನೀನು ಸರ್ವ ಅಲ್ಲ ಸರ್ವವನ್ನು ಹೊಂದುತೀಯಾ ಅನ್ನುವುದಕ್ಕೆ ನೀನು ಸರ್ವ. ಆ ಮಾತನ್ನೂ ಹೇಳುತ್ತಾನೆ **'ತ್ವಮೇ ಇಚ್ಛಯಾ ಸರ್ವಮಾಪ್ನೋಷಿ'** ಅಂತ ಮಧ್ಯದಲ್ಲಿ **'ತ್ವಮೇವೇದಂ ಜಗತ್ ಸರ್ವಂ'** ಅನ್ನುತ್ತಾನೆ. ಅದರ ಮುಂದೆ **'ಜಗಚ್ಚ ತ್ವಯಿ ತಿಷ್ಠತಿ'**[3] ನೀನೇ ಜಗತ್ತು ಇದರರ್ಥ ಎರಡು ವ್ಯಾಖ್ಯಾನ ಆಯಿತು. ಮೂರನೆಯ ವ್ಯಾಖ್ಯಾನ ಇಡೀ ಜಗತ್ತಿಗೆ ನೀನು ಆಶ್ರಯನಾಗಿದ್ದೀ ಜಗತ್ತಿಗೆ ಆಶ್ರಯನಾದದ್ದರಿಂದ ನೀನೇ ಜಗತ್ತು ಅಂತ ಈ ವ್ಯಾಖ್ಯಾನವನ್ನೂ ಶ್ರೀಮದಾಚಾರ್ಯರು ಮಾಡುತ್ತಾರೆ.

ಪಾತಾಲಮೇತಸ್ಯ ಹಿ ಪಾದಮೂಲಂ ಪತಂತಿ ಪಾರ್ಷ್ಣಿಪ್ರಪದೇ ರಸಾತಲಂ । (02.1 26 ಭಾಗವತ)

ಈ ಶ್ಲೋಕಕ್ಕೆ ವ್ಯಾಖ್ಯಾನ ಮಾಡುವಾಗ **'ತಜ್ಜತ್ವಾತ್ ತದಾಶ್ರಿತತ್ವಾತ್ ತಜ್ಜಾನಿ ತದಾಶ್ರಿತಾನಿ'** ಅನ್ನುತ್ತಾರೆ. ಪರಮಾತ್ಮನ ಪಾದವೇ ಪಾತಾಲ ಅಲ್ಲ,ಪಾದ ಮೂಲವೇ ಪಾತಾಲ ಅಲ್ಲ, ಪಾದ ಮೂಲವನ್ನ ಆಶ್ರಯಿಸಿದೆ ಪಾತಾಲ ಅಂತ ಅರ್ಥ ಮಾಡುತ್ತಾರೆ. ಆ ವ್ಯಾಖ್ಯಾನವನ್ನೂ ಮಾಡುತ್ತಾನೆ ಜನಾರ್ದನಾಚಾರ್ಯ **'ತ್ವಯಿ ಸರ್ವಂ ತಿಷ್ಠತಿ'** ಆದ್ದರಿಂದ ನೀನೇ ಜಗತ್ತು ಅಂತ ಕರೆದದ್ದು ಅಂತ ಜಗತ್ತಿಗೆ ಆಶ್ರಯನಾದದ್ದರಿಂದ ಈ ರೀತಿ ವ್ಯಾಖ್ಯಾನ ಮಾಡುತ್ತಾರೆ. ಅದಲ್ಲದೆ ಹಿಂದೆ ತಿಳಿದ ಹಾಗೆ ಭಗವದ್ಗೀತೆಯ ಭಾಷ್ಯದಲ್ಲಿ ಶ್ರೀಮದಾಚಾರ್ಯರು ಹೇಳುತ್ತಾರೆ **'ಸ್ರಷ್ಟಾ ಪಾತಾಚ ಸಂಹರ್ತಾ'** ಅದನ್ನೂ ಹೇಳುತ್ತಾನೆ.

ಸಂಹಾರಕರ್ಮಕೃತ್ ಸಂಸಾರಸ್ಯ ಭವಾನ್ ಸ್ರಷ್ಟಾ ॥ (115.20/21 ಭವಿಷ್ಯಪರ್ವ)

ಸಷ್ಟಿ ಕರ್ತಾ ಸ್ಥಿತಿ ಕರ್ತಾ ಸಂಹಾರ ಕರ್ತಾ ಆದ್ದರಿಂದ ನೀನೇ ಜಗತ್ತು,ನಿನ್ನ ಅಧೀನವಾಗಿದೆ ಅದಕ್ಕಾಗಿ ನೀನು ಅಂತ ಹೇಳುವುದು, ನಿನ್ನಲ್ಲಿ ಆಶ್ರಿತವಾಗಿದೆ ಅದಕ್ಕಾಗಿ ನೀನು ಅಂತ ಹೇಳುವುದು, ನೀನು ಅದನ್ನೆಲ್ಲ ಪಡೆದಿದ್ದಿ ಆದ್ದರಿಂದ ನೀನು ಅಂತ ಹೇಳುವುದು. ಆ ಶ್ರೀಮದಾಚಾರ್ಯರು ಮಾಡುವ ಭಗವದ್ಗೀತೆಯಲ್ಲಿ ಬರುವ ಅನೇಕ ಪ್ರಮಾಣ ವಚನಗಳಲ್ಲಿರುವ ವ್ಯಾಖ್ಯಾನಗಳನ್ನೆಲ್ಲ ಒಳಗೊಂಡಂತೆ ಇಷ್ಟು ಸುಂದರವಾಗಿ ಹರಿವಂಶ ಆ ಪರಮಾತ್ಮನಿಗೆ ಜೀವ ಜಡಾತ್ಮಕ ಪ್ರಪಂಚದಿಂದ ಅತ್ಯಂತ ಭೇದ ಇದೆ ಅನ್ನುವುದನ್ನ ತಿಳಿಸಿಕೊಟ್ಟು ಆದರೂ **'ಸರ್ವ ಖಲ್ವಿದಂ ಬ್ರಹ್ಮ'** ಎಂಬುದಾಗಿ ಹೇಳುವ ಮಾತಿಗೂ ಎಷ್ಟು ಸೊಗಸಾದ ಅರ್ಥ ಇದೆ ಅಂತ ತಿಳಿಸಿಕೊಡುತ್ತದೆ. ಇದನ್ನು ಚಿಂತನ ಮಾಡಿದರೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಹೇಳುವ ತತ್ವಗಳು ಎಷ್ಟು ಹಾಸು ಹೊಕ್ಕಾಗಿವೆ ಶಾಸ್ತ್ರಗಳಲ್ಲಿ ಅಂತ ನಮಗೆ ತಿಳಿದು ಬರುತ್ತದೆ.

ಆಮೇಲೆ ಪರಮಾತ್ಮನಿಗೆ ಹೇಳುತ್ತಾನೆ ಸರಿ, ಇಷ್ಟೆಲ್ಲಾ ಆದರೂ ಕೂಡ ಹೇಳು ಅಂತ ಒಂದು ಆಜ್ಞಾ ಮಾಡಿದ್ದೀಯಲ್ಲ ಮಹಾರಾಯ. ಹೇಳು ಅಂತ ಆಜ್ಞೆ ಮಾಡಿದ ಮೇಲೆ ನಾನು ಹೇಳದೇ ಇದ್ದರೆ ನನಗೆ ಪಾಪ ಬರುತ್ತದೆ ಅದಕ್ಕಾಗಿ ಹೇಳುತ್ತೇನೆ ನೀನು ಸರ್ವಜ್ಞನಾಗಿದ್ದರೂ ಹೇಳುತ್ತೇನೆ ಅಂತ ವಿಷಯವನ್ನು ತಿಳಿಸಿದ ಹಂಸ-ಡಿಭಿಕರು ಹೇಳಿ ಕಳಿಸಿದ್ದಾರೆ ಬ್ರಹ್ಮದತ್ತ ಯಜ್ಞ ಮಾಡುತ್ತಾನೆ, ಎಲ್ಲ ರತ್ನಗಳನ್ನು ತೆಗೆದುಕೊಂಡು ಬರಬೇಕಂತೆ,

1. ತತ್ವವಾದ ; 2. 33.6.40 ಭೀಷ್ಮಪರ್ವ, 3. 115.19 ಭವಿಷ್ಯಪರ್ವ

ಕಪ್ಪು ಕಾಣಿಕೆಯನ್ನು ಕೊಡಬೇಕು ಕೃಷ್ಣ ನಕ್ಕುಬಿಟ್ಟಿದ್ದಾನೆ ಯಾರು ಹಂಸ-ಡಿಭಿಕರು ಏನು ಮಾತನಾಡುತ್ತಾರೆ ನಕ್ಕಿದ್ದಾನೆ ಪರಮಾತ್ಮ. ತಾನು ನಗುವುದಲ್ಲ ಅಂದರೆ ಆ ದುಷ್ಟರಿಗೆ ಅಯೋಗ್ಯರಿಗೆ ಅಪಹಾಸ ಮಾಡಿದರೂ ಒಂದು ಪುಣ್ಯನೇ ಅದಕ್ಕೋಸ್ಕರನೇ ಭೀಮಸೇನ ದೇವರು ದುರ್ಯೋಧನನನ್ನು ನೋಡಿ ನಕ್ಕಿದ್ದು. ಇಲ್ಲಿ ಶ್ರೀಕೃಷ್ಣ ಪರಮಾತ್ಮ ಎಲ್ಲ ಯಾದವರಿಗೆ ಕೇಳಿಸುವ ಹಾಗೆ ಇವರು ಹೇಳಿದ ಸುದ್ದಿಯನ್ನು ಹೇಳಿ ಎಂತಹ ಹಾಸ್ಯ ನೋಡಿ ಅಂತ ಎಲ್ಲರೂ ಜೋರಾಗಿ ನಗುವ ಹಾಗೆ ಮಾಡಿದ್ದಾನೆ ಕೃಷ್ಣ **'ಹಾಸ್ಯಮೇತದ್ ಯದುಶ್ರೇಷ್ಠಾ'**[1] ಇದು ನೋಡಿ ಎಂತಹ ಅಪಹಾಸದ ಮಾತನ್ನು ಹೇಳುತ್ತಾ ಇದ್ದಾನೆ ಇವನು, ನಾವೆಲ್ಲ ಕರ ಕೊಡಬೇಕಂತೆ ಒಯ್ದು ಅವನಿಗೆ, ಅವನು ಯಾರು **'ಹಾಸ್ಯಂ ಹಾಸ್ಯಮಿದಂ ಭೂಯಃ'**[2] ಅಂತ ಮತ್ತೆ ಮತ್ತೆ ಹೇಳಿ ಹೇಳಿದರೆ ಇಡೀ ಆ ಎಲ್ಲ ಯಾದವರ ಗುಂಪು ಸೇರಿ ಬಲರಾಮ ದೇವರನ್ನೂ ಸೇರಿಕೊಂಡು ಜೋರಾಗಿ ನಕ್ಕಿದ್ದಾರೆ, ಕೈತಟ್ಟಿದ್ದಾರೆ ಒಬ್ಬರಿಗೊಬ್ಬರು ಕೈ ತಟ್ಟಿ ತಟ್ಟಿ ನಕ್ಕಿದ್ದಾರೆ ಅಷ್ಟು ಜೋರಾಗಿ ನಕ್ಕಿದ್ದಾರೆ. ಕಾರಣ ಶ್ರೀಕೃಷ್ಣನ ಆ ಒಂದೊಂದು ನಗು,ಆ ಒಂದೊಂದು ತಾಲ ಹೊಡೆಯುವುದು ಇದು ದೇವರು ಸರ್ವೋತ್ತಮ, ಇವರು ಯಾರು ಭಗವಂತನಿಗೆ ಕರ ಕೊಡು ಅಂತ ಹೇಳುವವರು ಅನ್ನುವ ದೃಷ್ಟಿಯಲ್ಲಿ ಆ ಪರಮಾತ್ಮನ ಪಾರಮ್ಯವನ್ನ ಸಮರ್ಥನೆಯ ಮಾಡುವ ಹಿನ್ನೆಲೆಯಲ್ಲಿ ಆ ನಗುವುದು ಅದೆಲ್ಲಾ ಮಹಾ ಪುಣ್ಯದಾಯಕ ಆ ರೀತಿ ನಕ್ಕಿದ್ದಾರೆ. ಜನಾರ್ದನನಿಗೆ ಬಹಳ ನಾಚಿಕೆಯಾಗಿದೆ ನಾನು ದೂತನಾಗಿ ಬಂದದ್ದೇ ತಪ್ಪಾಯಿತು ಕೃಷ್ಣನ ದರ್ಶನ ದೊಡ್ಡ ಭಾಗ್ಯ ಆದರೆ ಈ ತಪ್ಪು ಸಂದೇಶವನ್ನು ಹೇಳುತ್ತಾ ಇದ್ದೀನಲ್ಲ ಕ್ಷಮಾ ಮಾಡಬೇಕು ಅಂತ ಕೇಳಿಕೊಂಡಿದ್ದಾನೆ. ಕೃಷ್ಣ ಉತ್ತರ ಹೇಳಿದ ನೋಡಪ್ಪ ನೀನು ಹೇಳುವುದು ಹೇಳಿ ಆಯಿತು ಇನ್ನು ನಕ್ಕರೆ ನಿನಗೆ ಅರ್ಥ ಆಗಬೇಕಲ್ಲ, ನಮ್ಮ ಉತ್ತರ ಇಷ್ಟೇ ಏನು ಅವನಿಗೆ ಕರ ಕೊಡಬೇಕೋ ಅದನ್ನು ರಣರಂಗದಲ್ಲಿ ಕೊಡುತ್ತೇನೆ ಅಂತ ಹೇಳು, ತೀಕ್ಷ್ಣವಾದ ಬಾಣಗಳಿಂದ ಅವನಿಗೆ ಉತ್ತರ, ಖಡ್ಗದಿಂದ ಉತ್ತರ, ಚಕ್ರದಿಂದ ಉತ್ತರ. ಅವನಿಗೆ ಬೇರೆ ಕಪ್ಪು ಕಾಣಿಕೆಗಳೆಲ್ಲ ಏನು ಕೊಡುವುದಿಲ್ಲ ಯುದ್ಧದಲ್ಲಿ ಉತ್ತರವನ್ನು ಕೊಡುತ್ತೇನೆ ಅಂತ ಹೇಳು ಅಂತ ಹೇಳಿ ಕಳಿಸಿದ್ದಾನೆ. ಯಾರು ಅವನ ರಕ್ಷಣೆಗೆ ಬರುತ್ತಾರೋ ಬರಲಿ, ಅವನಿಗೆ ವರ ಕೊಟ್ಟಂತಹ ರುದ್ರ ದೇವರು ರಕ್ಷಣೆಗೆ ಬಂದರೂ ತಪ್ಪಿಲ್ಲ.

ಯೋ ವರಂ ದತ್ತವಾನ್ ರುದ್ರೋ ಯುವಯೋರ್ಧಾರ್ಷ್ಟ್ಯಕಾರಣಮ್ ।

ಸ ಏವ ರಕ್ಷಿತಾ ವಾಂ ಸ್ಯಾತ್ ತಂ ಜಿತ್ವಾ ವಾಂ ನಿಹನ್ಮ್ಯಹಮ್ ॥ (116.4 ಭವಿಷ್ಯಪರ್ವ)

ಆ ರುದ್ರ ದೇವರು ನನ್ನ ಭಕ್ತರು ಅವರನ್ನ ನಾನು ಗೆಲ್ಲುತ್ತೇನೆ, ನಿಮ್ಮನ್ನು ಕೊಲ್ಲುತ್ತೇನೆ ಅಂತ **'ತಂ ಜಿತ್ವಾ ವಾಂ ನಿಹನ್ಮ್ಯಹಮ್'** ಆದರೆ ನಿಮ್ಮನ್ನು ಬಿಡುವುದಿಲ್ಲ ಅಂತ ಕೃಷ್ಣ ಪರಮಾತ್ಮ ಸಂದೇಶವನ್ನು ಕಳಿಸಿದ್ದಾನೆ. ಇಷ್ಟೇ ಬೇಕು ಈಗ ಜಾಸ್ತಿ ಮಾತು ಇಲ್ಲ, ಟೈಮ್ ಇಲ್ಲ ಪುಷ್ಕರನಾ, ಪ್ರಯಾಗನಾ, ಮಥುರಾನಾ ಅವರು ಎಲ್ಲಿ ಹೇಳುತ್ತಾರೋ ಅಲ್ಲಿ ಯುದ್ಧ ಚಾಯ್ಸ್ ಅವರಿಗೆ ಬಿಟ್ಟಿದ್ದು. ಮಥುರಾ ಅಂದರೆ ಇಲ್ಲಿಯೇ ಗೋವರ್ಧನದ ಹತ್ತಿರ ಬಹಳ ಸ್ಥಳ ಇದೆ ಅಲ್ಲಿ ಯುದ್ಧ ಆಡೋಣ, ಪುಷ್ಕರ ಅಂದರೆ ಪುಷ್ಕರ, ಪ್ರಯಾಗ ಅಂದರೆ ಪ್ರಯಾಗ ಇವತ್ತು ಅಂದರೆ ಇವತ್ತು, ನಾಳೆ ಅಂದರೆ ನಾಳೆ, ನಾಡಿದ್ದು ಅಂದರೆ ನಾಡಿದ್ದು ಯಾವತ್ತು ಅನ್ನುತ್ತಾರೋ ಅವತ್ತು ಯುದ್ಧ ಇಷ್ಟನ್ನು ಕೃಷ್ಣ ಪರಮಾತ್ಮ ಹೇಳಿ ಕಳಿಸಿದ್ದಾನೆ. ನಿನ್ನ ಮೇಲೆ ನನಗೆ ಸರ್ವಥಃ ಕೋಪ ಇಲ್ಲ ನೀನು ಇನ್ನಷ್ಟು ವಿಷ್ಣು ಭಕ್ತಿಯನ್ನು ಮಾಡುತ್ತಾ, ನನ್ನ ಸೇವೆಯನ್ನು ಮಾಡುತ್ತಾ ಉದ್ಧಾರವನ್ನು ಹೊಂದು ಅಂತ ಅವನಿಗೆ ಆಶೀರ್ವಾದವನ್ನು ಮಾಡಿ ಅವನನ್ನು ಕೊಟ್ಟು ಕಳಿಸಿದ್ದಾನೆ. ಈ ಕಡೆಗೆ ಸಾತ್ಯಕಿಯನ್ನು ನೋಡಿದ ಸಾತ್ಯಕಿ, ಅವನು ಪಾಪ ಹೆದರಿಕೊಳ್ಳುತ್ತಾನೋ ಏನೋ ಬಹಳ

1. 115.33 ಭವಿಷ್ಯಪರ್ವ; 2. 115.35 ಭವಿಷ್ಯಪರ್ವ

ಮೃದುವಾದ ವ್ಯಕ್ತಿ, ವಿನೀತನಾದ ವ್ಯಕ್ತಿ, ಸ್ವಲ್ಪ ಭಯ ಜಾಸ್ತಿ ಅಂತ ಅನಿಸುತ್ತದೆ ಅದಕ್ಕಾಗಿ ಅವನು ನಿನ್ನ ಜೊತೆಗೆ ಬರಲಿ ಸಂದೇಶವನ್ನೆಲ್ಲ ನೀನೇ ಹೇಳು ಗಟ್ಟಿಯಾಗಿ ಹೇಳಿ ಬಾ ಅಂತ ಸಾತ್ಯಕಿಯನ್ನು ಕೊಟ್ಟು ಕಳಿಸುತ್ತಾ ಇದ್ದಾನೆ. ಸಾತ್ಯಕಿ ನೋಡಿ ಇವನೂ ಒಂದೇ ಕುದುರೆಯ ಮೇಲೆ ಹೊರಟ ಒಬ್ಬನೇ ಯಾಕೆ ಅಂದರೆ ಅಲ್ಲಿ ಬರುವಾಗ ಬೇರೆ, ಇಲ್ಲಿ ಇವನಿಗೆ ಆ ಪರಾಕ್ರಮ ಇದೆ ಅವರು ಏನಾದರೂ ಅಕಸ್ಮಾತ್ ದೂತ ಏನು ಮಾಡುವುದಿಲ್ಲ ಆದರೂ ವಿರೋಧ ಮಾಡಿದರೂ ನಾನು ಒಬ್ಬನೇ ಎದುರಿಸುತ್ತೇನೆ ಅನ್ನುವಂತಹ ಧೈರ್ಯ ಅವನಿಗೆ ಸಾತ್ಯಕಿಗೆ, ಕುದುರೆಯ ಮೇಲೆ ಕುಳಿತಿದ್ದಾನೆ, ಬ್ರಾಹ್ಮಣ ತನ್ನ ಕುದುರೆಯ ಮೇಲೆ ತಾನು ಕುಳಿತ ಅವರಿಬ್ಬರೇ ಹೊರಟಿದ್ದಾರೆ. ಸಾಲ್ವ ನಗರಕ್ಕೆ ಬಂದಿದ್ದಾರೆ ಇವನು ಸಾತ್ಯಕಿ ಅಂತ ಪರಿಚಯ ಮಾಡಿಸಿದ ಮಹಾ ಪರಾಕ್ರಮಿ ಹಿಂದೆ ಕೇಳಿದ್ದೀರಿ ದ್ವಾರಕಾ ಪಟ್ಟಣದ ರಕ್ಷಣೆ ಮಾಡು ಅಂತ ಹೇಳುವಾಗ ಕೃಷ್ಣ ಹೇಗೆ ಹೇಳಿದ ಏನು ನೀನು ಬಹಳ ಶಾಸ್ತ್ರ, ಪಾಠ ಪ್ರವಚನ, ಚಿಂತನೆ, ವಾಕ್ಯಾರ್ಥ, ವಾದ ವಿವಾದಗಳನ್ನೆಲ್ಲಾ ಮಾಡಿ ವಿಷ್ಣು ಸರ್ವೋತ್ತಮತ್ವದ ಸ್ಥಾಪನೆ ಮಾಡುವುದರೊಳಗೆ ನಿನಗೆ ಆಸಕ್ತಿ ಬಹಳ, ಈಗ ನಾನು ಕೈಲಾಸಕ್ಕೆ ಹೋಗಿ ಬರುವ ತನಕ ಅಂತೂ ಅದನ್ನೆಲ್ಲ ಮಾಡಬೇಡ, ದ್ವಾರಕಾದ ರಕ್ಷಣೆ ಮಾಡು ಅಂತ ಹೇಳಿದ್ದ ಕೃಷ್ಣ ಆದರ ತಾತ್ಪರ್ಯ ಅಂತಹ ಮಹಾ ದೊಡ್ಡ ಪಂಡಿತ ಆ ಸಾತ್ಯಕಿ ಇಲ್ಲಿ ಹೇಳುತ್ತಾರೆ.

ಧನುರ್ವೇದೇ ಚ ವೇದೇ ಚ ಶಾಸ್ತ್ರೇ ಶಸ್ತ್ರೇ ತಥೈವ ಚ ॥ (117.10 ಭವಿಷ್ಯಪರ್ವ)

ವೇದ ಶಾಸ್ತ್ರ ಶಸ್ತ್ರ ಎಲ್ಲಾ ಗೊತ್ತು ಅವನಿಗೆ ಅಂತಹ ಮಹಾಪಂಡಿತ ಪರಾಕ್ರಮಿ ಇಲ್ಲಿ ಬಂದಿದ್ದಾನೆ. ಹೇಳುವಾಗ ಒಂದು ಮಾತನ್ನು ಹೇಳುತ್ತಾನೆ ಜನಾರ್ದನಾಚಾರ್ಯ.

ದೂತೋಽಯಂ ಸಾತ್ಯಕಿಃ ಪ್ರಾಪ್ತಃ ಸರ್ವ್ಯೋ ಬಾಹುರಯಂ ಹರೇಃ । (117.9 ಭವಿಷ್ಯಪರ್ವ)

ಮಾತನಾಡುವಾಗ ಅನ್ನುತ್ತಾರೆ ನೋಡಿ ಹೇ ಇವನು ಬಲಗೈ ಇದ್ದ ಹಾಗೆ ಅಷ್ಟು ನಮಗೆ ಸಹಾಯಕ ಅಂತ ಹಾಗೆ ಇಲ್ಲಿ ಎಡಗೈ ಇದ್ದ ಹಾಗೆ ಅಂತ ಕೃಷ್ಣನ ಎಡಗೈ ಅಂದರೆ ಸಾತ್ಯಕಿ ಅಷ್ಟು ಶ್ರೀಕೃಷ್ಣ ಪರಮಾತ್ಮನಿಗೆ ಪ್ರಿಯ, ಕೃಷ್ಣ ಪರಮಾತ್ಮನಿಗೆ ಸೇವೆಯನ್ನು ಮಾಡುವಂಥವನು ಅನ್ನುವ ದೃಷ್ಟಿಯಲ್ಲಿ **'ಸರ್ವ್ಯೋ ಬಾಹುರಯಂ ಹರೇಃ'** ಅನ್ನುತ್ತಾರೆ. ಇದರ ಒಳ ಆಂತರ್ಯ ಏನು ಅಂತ ನಾವು ತಿಳಿಯಬೇಕು, ಹರಿವಂಶದ ಅಂತರಂಗ ಏನು ಅಂತ ಶ್ರೀಮದಾಚಾರ್ಯರು ಬೃಹದಾರಣ್ಯಕೋಪನಿಷತ್ತಿನಲ್ಲಿ ಭಾಷ್ಯದಲ್ಲಿ ಹೇಳುತ್ತಾರೆ. ಪರಮಾತ್ಮನ ತಲೆಗೆ **'ಭೂಃ'** ಅಂತ ಕರೀತಾರೆ **'ಭುವಃ'** ಅಂದರೆ ಎರಡು ಬಾಹುಗಳು, **'ಸ್ವಃ'** ಅಂದರೆ ಎರಡು ಪಾದಗಳು ಅಂತ. ಯಾಕೆ ಅಂತಂದರೆ ಪರಮಾತ್ಮ ತನ್ನ ತಲೆಯಿಂದ ಅರ್ಥಾತ್ ಸಂಪೂರ್ಣವಾದದ್ದೆಲ್ಲ ಇದು ತಲೆ ಅಂದರೆ ನೋಡಿ ಮತ್ತು ಮಾತಿನಿಂದ **'ದೃಷ್ಟ್ಯಾ ವಾಚಾ ಚ ರಕ್ಷತೀ'** ಆದ್ದರಿಂದ ತಲೆಗೆ **'ಭೂಃ'** ಅನ್ನುತ್ತಾರೆ. **'ಉತ್ಪಾದನಾತ್ ಭೂನಾಮಾಸ್ಯಾತ್'** ಬಲಗೈ ಜಗತ್ತಿನ ಉತ್ಪಾದನೆಯನ್ನು ಮಾಡುತ್ತಾನೆ ಆದ್ದರಿಂದ ಅದಕ್ಕೆ **'ಭೂಃ'** ಅನ್ನುತ್ತಾರೆ. ಆಮೇಲೆ **'ವಿನಾಶನಾತ್ ವೈತ್ಯುಕ್ತಃ ಸರ್ವ್ಯೋ ಬಾಹುಷು ಪರಾತ್ಮನಃ'** ಎಲ್ಲರನ್ನ ನಾಶ ಮಾಡುತ್ತಾನೆ **'ವಾ-ಗತಿ ಗಂಧನಯೋಃ ಗತಿಃ'** ಗತಿ ಅಂದರೆ ನಾಶ ಅಂತ ಅರ್ಥ ಇಟ್ಟುಕೊಂಡು ಎಲ್ಲರನ್ನ ನಾಶ ಮಾಡುತ್ತಾನೆ ಅನ್ನುವುದಕ್ಕೋಸ್ಕರ ಪರಮಾತ್ಮನ ಎಡಗೈಗೆ **'ವ'** ಅಂತ ಕರೀತಾರೆ, **'ಸು'** ಅಂದರೆ ಬಲಗಾಲು ಆನಂದವನ್ನು ಕೊಡುತ್ತದೆ, **'ವ'** ಅಂದರೆ ಜ್ಞಾನವನ್ನು ಕೊಡುತ್ತದೆ ಎಡಗಾಲು ಅಂತ ಹೀಗೆ **'ಭೂಃ ಭುಃ ಸ್ವಃ'** ಅಂತ ಹೇಳಿದ್ದಾರೆ. ನಮಗೆ ಈಗ ಬೇಕಾದದ್ದು ಎಡಗೈ **'ವ' 'ವಿನಾಶನಾತ್ ವೈತ್ಯುಕ್ತಃ'** ಅಂತ ಹಾಗಾದರೆ ಸಾತ್ಯಕಿಯ ಪರಿಚಯವನ್ನು ಏನು ಅಂತ ಮಾಡಿಸುತ್ತಾ ಇದ್ದಾನೆ **'ಸರ್ವ್ಯೋ ಬಾಹುರಯಂ ಹರೇಃ'** ಅಂತ ಪರಮಾತ್ಮನ ಎಡಗೈ ಅಂತ. ಪರಮಾತ್ಮನ ಎಡಗೈ ಅಂದರೆ **'ವ'** ಅದರ ಅರ್ಥ ಏನು ವಿನಾಶನ

ಮಾಡುತ್ತಾನೆ, ನಿನ್ನ ನಾಶ ಮಾಡಲಿಕ್ಕೆ ಬಂದಿದ್ದಾನೆ. ನಿನ್ನನ್ನ ನಾಶ ಮಾಡಿಯೇ ಮಾಡುತ್ತೇನೆ ಅಂತ ದೇವರು ಹೇಳುವುದಕ್ಕೋಸ್ಕರ ಸಾತ್ಯಕಿಯನ್ನು ಕಳಿಸಿದ್ದಾನೆ. ಇವನು ಎಡಗೈ ಅಂದರೆ ಎಡಗೈ ಸಂದೇಶ ಏನು ನಾಶ ಮಾಡುವುದು ನಿನ್ನ ಸಂಹಾರ ಮಾಡುವುದಕ್ಕೆ ದೇವರು ಸಂದೇಶ ಕಳಿಸಿದ್ದಾನೆ ಅನ್ನುವ ಗಂಭೀರವಾದಂತಹ ಒಳಗಿರುವ ಆಶಯ ಆ ರೀತಿ ಜನಾರ್ದನಾಚಾರ್ಯ ಹೇಳಿದ್ದಾನೆ. ಎಲ್ಲರೂ ಕುಶಲವನ್ನು ಹೇಳಿ ಸ್ಥೂಲವಾಗಿ ನೇರವಾಗಿ ಮೊದಲು ಜನಾರ್ದನಾಚಾರ್ಯನಿಗೆ ಕೇಳುತ್ತಾನೆ ಅವನು ಹಂಸ ಏನಪ್ಪಾ ಕೃಷ್ಣನನ್ನ ನೋಡಿ ಬಂದೀಯಾ ಅಂತ ಅವನು ಸಂದೇಶ ಏನೂ ಅಂತ ಹೇಳಲೇ ಇಲ್ಲ ಕೃಷ್ಣನ ವರ್ಣನೆ ಮಾಡಲಿಕ್ಕೆ ಪ್ರಾರಂಭ ಮಾಡಿಬಿಟ್ಟ ಇಡೀ ಒಂದು ಅಧ್ಯಾಯ.

ಅದ್ರಾಕ್ಷಮದ್ರಾಕ್ಷಮಹಂ ಜನಾರ್ದನಂ ಹಸ್ತಸ್ಥಶಙ್ಖಂ ವರಚಕ್ರಧಾರಿಣಮ್ । (118.2 ಭವಿಷ್ಯಪರ್ವ)

ಅಂತ ದೊಡ್ಡದಾದ ಕೃಷ್ಣನ ಧ್ಯಾನದ ಶ್ಲೋಕಗಳನ್ನ ಸಾಲೋ ಸಾಲಾಗಿ ಹೇಳುತ್ತಾ ಇದ್ದಾನೆ. ನೋಡಿದೆ ಅಂದರೆ ತೃಪ್ತಿ ಇಲ್ಲ ನೋಡಿದೆ ನೋಡಿದೆ ನೋಡಿದೆ ಅಂತ ಆ ಪರಮಾತ್ಮನ ರೂಪವನ್ನ ವರ್ಣನೆ ಮಾಡುವುದರೊಳಗೆ ತನ್ಮಯನಾಗಿ ವರ್ಣನೆ ಮಾಡುತ್ತಾನೆ. ಅಂತಹ ಏನು ಪರಮಾತ್ಮನ ಮಹಿಮೆ ಅದ್ಭುತವಾದ ರೂಪ, ರುಕ್ಮಿಣಿ ಸತ್ಯಭಾಮಾ ಸಮೇತನಾಗಿ ಇರುವಂತಹ ಪರಮಾತ್ಮ, ಸಕಲ ಶಾಸ್ತ್ರಾರ್ಥ ತಾತ್ಪರ್ಯ ವಿಷಯನಾದಂತಹ ಆ ಪರಮಾತ್ಮ, ನಗುತಾ ನಗುತಾ ಇರುವಂತಹ ಭಗವಂತ.

ಹಸನ್ತಮೇನಮದ್ರಾಕ್ಷಂ ಕರದಂ ಹಾಸ್ಯತತ್ಪರಮ್ ।
ವದನ್ತಂ ನಾರದೇ ವಾಚಂ ದುರ್ವಾಸಸಿ ಯತೀಶ್ವರೇ ॥ (118.14 ಭವಿಷ್ಯಪರ್ವ)

ನಾರದರ ಜೊತೆಗೆ ಮಾತನಾಡುತ್ತಾನೆ, ದುರ್ವಾಸರ ಜೊತೆಗೆ ಮಾತನಾಡುತ್ತಾನೆ, ಏನು ಮಾತನಾಡುತ್ತಾನೆ ಯಾರೋ ರಾಜಕಾರಣಿಗಳು ಉದ್ಧವ ಅಕ್ರೂರ ಬಲರಾಮ ಇಂಥವರು ಬಂದರು ಅಂದರೆ ಅವರ ಜೊತೆಗೆ ರಾಜನೀತಿಯ ಬಗ್ಗೆ ಮಾತನಾಡುತ್ತಾನೆ, ದುರ್ವಾಸರು ನಾರದರು ಬಂದರು ಅಂದರೆ ಬ್ರಹ್ಮಸೂತ್ರಗಳ ಬಗ್ಗೆ ಮಾತನಾಡುತ್ತಾನೆ ಅನ್ನುತ್ತಾನೆ. ನೋಡಿ, ಸ್ವತಃ ಶ್ರೀಕೃಷ್ಣ ಪರಮಾತ್ಮ ಬ್ರಹ್ಮಸೂತ್ರದ ಬಗ್ಗೆ ಪಾಠ ಹೇಳುತ್ತಾ ಇದ್ದ ಅದರ ಬಗ್ಗೆ ಅವರಿಗೆಲ್ಲ ಉಪದೇಶವನ್ನು ಮಾಡುತ್ತಾ ಇದ್ದ.

ಬ್ರಹ್ಮಸೂತ್ರಪದಾಂ ವಾಣೀಂ ದಾಪಯನ್ತಂ ಮುನೀಶ್ವರಮ್ ॥ (118.15 ಭವಿಷ್ಯಪರ್ವ)

ಇಂತಹ ಆ ಮಹಾ ಪರಮಾತ್ಮನ ಮಹಾ ಮಹಿಮೆಯನ್ನು ಕಂಡು ಬಂದೆ ಅಂತಹ ಪರಮಾತ್ಮನ ಜೊತೆಗೆ ಸರ್ವಥಃ ವಿರೋಧ ಮಾಡಲಿಕ್ಕೆ ಹೋಗಬೇಡ ನಿನಗೆ ಒಳ್ಳೆಯದಾಗುವುದಿಲ್ಲ ಅಂತ ಹೇಳಿಬಿಟ್ಟ. ಹೇಳಿದ ತಕ್ಷಣ ಸಿಟ್ಟು ಬಂತು ನೋಡಿ

ಅರೇ ಬ್ರಾಹ್ಮಣದಾಯಾದ ಕಾ ನಾಮ ತವ ವಾಗಿಯಮ್ । (118.18 ಭವಿಷ್ಯಪರ್ವ)

ನನ್ನ ಎದುರಿನಲ್ಲಿ ನಿಂತು ನನಗೆ ಪರಾಕ್ರಮ ಇಲ್ಲ ಯುದ್ಧ ಮಾಡಬೇಡ ಇದನ್ನು ಹೇಳಲಿಕ್ಕೆ ನಿನಗೆ ಕಳಿಸಿದ್ದು ನಾನು ಅವರನ್ನು ಸಂಹಾರ ಮಾಡುತ್ತೇನೆ ಅಂತ ಹೇಳು ಕಪ್ಪು ಕಾಣಿಕೆ ಕೊಡದೆ ಇದ್ದರೆ ಅಂತ ಅವರಿಗೆ ಹೆದರಿಸು ಅಂದರೆ ನನಗೆ ಬಂದು ಹೆದರಿಸುತ್ತಾ ಇದ್ದೀಯಾ ನಿಜವಾಗಿ ನಿನ್ನನ್ನು ನಾನು ಸುಮ್ಮನೆ ಬಿಡಬಾರದು ಇಲ್ಲಿಯೇ ಮುಗಿಸಿ ಬಿಡಬೇಕು, ಸಂಹಾರನೇ ಮಾಡಬೇಕು ಆದರೆ ಮಾಡುವುದಿಲ್ಲ ಮಿತ್ರ ಅನ್ನುವುದಕ್ಕೆ ಸುಮ್ಮನೆ ಬಿಡುತ್ತಾ

ಇದ್ದೇನೆ ಅಷ್ಟೇ ಮತ್ತೊಂದೇನಲ್ಲ, ಆ ಕೃಷ್ಣ ಮಹಾಮಾಯಾವಿ ಹೀಗಾಗಿ ನಿನ್ನ ಬುದ್ಧಿ ಭ್ರಮಣೆ ಆಗುವ ಹಾಗೆ ಮಾಡಿದ್ದಾನೆ, ನೀನು ನಮ್ಮ ಮೇಲೆ ಅಷ್ಟು ಸ್ನೇಹ ಇಟ್ಟುಕೊಂಡಂತಹ ಮಿತ್ರ ನಿನಗೆ ನಮ್ಮ ಬಗ್ಗೆ ದ್ವೇಷ ಹುಟ್ಟುವಂತೆ ಏನೋ ಮಾಯಾ ಮಾಟ ಮಾಡಿ ಕಳಿಸಿದ್ದಾನೆ ಕೃಷ್ಣ ಅದಕ್ಕಾಗಿ ನಿನಗೆ ಈ ಭ್ರಮ ಬಂದಿದೆ ಆದರೂ ನಾನು ಏನೋ ದಯೆ ಮಾಡಿ ನಿನ್ನನ್ನು ಬಿಡುತ್ತೇನೆ. ನನ್ನ ಕಣ್ಣೆದುರಿಗೆ ನಿಲ್ಲಬೇಡ ಹೋಗು ಮೊದಲು ಇಲ್ಲಿಂದ ಬಹಳ ಹೊತ್ತು ನಿಂತರೆ ಸತ್ತೇ ಹೋಗುತ್ತೀಯಾ ನಡಿ ಆಚೆ ಅಂತ ಕಳಿಸಿ ಬಿಡುತ್ತಾನೆ, ಹೋದರೆ ಸಾಕಾಗಿದೆ ಮಹಾರಾಯ ನಿನ್ನ ಕಣ್ಣು ತಪ್ಪಿಸಿ ಅಂತ ಹೊರಟ. ಈ ಕಡೆಗೆ ಸಾತ್ಯಕಿ ಧೈರ್ಯದಿಂದ ನಿಂತಿದ್ದಾನೆ ನಾನು ಹೇಳುತ್ತೇನೆ ಕೇಳು ಬಾಣಗಳಿಂದ ಖಡ್ಗಗಳಿಂದ ಅಸ್ತ್ರಗಳಿಂದ ನಿನಗೆ ಕೃಷ್ಣ ಕರವನ್ನು ಕೊಡಬೇಕು ಅಂತ ಸಂಕಲ್ಪ ಮಾಡಿದ್ದಾನೆ. ಕಾಲ ಹೇಳು, ದೇಶ ಹೇಳು ಜಾಸ್ತಿ ಮಾತಾಡಬೇಡ ಇವತ್ತೋ, ನಾಳೆಯೋ, ನಾಡಿದ್ದೋ ಪುಷ್ಕರನೋ ಮಥುರಾನೋ, ಪ್ರಯಾಗನೋ ಬೇಗ ಹೇಳು ತಡ ಮಾಡಬೇಡ ಅಂತ ಹೇಳಿದಾಗ ಅವನು ಅನ್ನುತ್ತಾನೆ. ಯಾರು ಯಾರು ನಾವು ಇರುತ್ತೇವೆ ಯುದ್ಧದೊಳಗೆ ಲಿಸ್ಟ ಕೊಟ್ಟುಬಿಟ್ಟ ಹತ್ತು ಜನರ ಲಿಸ್ಟ ಬಲಭದ್ರ ಸಾತ್ಯಕಿ, ಕೃತವರ್ಮಾ, ನಿಶಠ, ಬಭ್ರು, ಉತ್ಕಲ, ತಾರಣ, ಸಾರಂಗ, ವಿಪೃಥು, ಉದ್ಧವ ಇವರೆಲ್ಲ ನಾವು ಇರುತ್ತೇವೆ ಕೃಷ್ಣನ ಜೊತೆಗೆ ಯುದ್ಧಕ್ಕೆ. ನಿಜವಾಗಿ ಹೇಳಲಾ ಹಂಸ-ಡಿಭಿಕ ಕೂತಿದ್ದೀರಲ್ಲ ಮೇಲೆ ನಾನು ಒಬ್ಬ ಸಾಕು ನಿಮ್ಮಿಬ್ಬರನ್ನು ಸಂಹಾರ ಮಾಡಿ ಹೋಗಲಿಕ್ಕೆ ನಿಮ್ಮನ್ನು ಇಲ್ಲಿಯೇ ಒರಿಸಿ ಅರೆದು ಕುಟ್ಟಿ ಹೋಗಿಬಿಡುತ್ತೇನೆ. ರಾಜರಿಗೆ ಮಾತನಾಡುತ್ತಾ ಇದ್ದಾನೆ ದೂತ ಆದರೆ ನನಗೆ ದೂತ ಅಂತ ಕಳಿಸಿದ್ದಾರೆ ಈಗ ನಾನೊಬ್ಬ ಯೋಧನಾಗಿ ಬಂದಿಲ್ಲ ನಾನೊಬ್ಬ ದೂತನಾಗಿ ಬಂದಿದ್ದೇನೆ. ದೂತನಿಗೆ ಒಂದು ಧರ್ಮ ಇರುತ್ತದೆ ಸಂದೇಶ ಕೊಡುವುದು ಹೋಗೋದು ಅಷ್ಟೇ ಆದ್ದರಿಂದ ನಾನು ವಾಪಸ್ಸು ಹೋಗುತ್ತಾ ಇದ್ದೇನೆ. ಇಲ್ಲದೆ ಇದ್ದರೆ ಇಲ್ಲಿಯೇ ನಿನ್ನನ್ನು ಸಂಹಾರ ಮಾಡೇ ಬಿಡುತ್ತಿದ್ದೆ ಅಂತ ಎಷ್ಟು ಅವಮಾನ ಆಯಿತು ಅವನಿಗೆ ಕೈ ತಿಕ್ಕುತ್ತಾ ಇದ್ದಾನೆ.

ಅರೇ ಯಾದವದಾಯಾದ ಕಿಂ ಬ್ರೂಷೇ ನಃ ಪುರೋ ಗತಃ । (119.4 ಭವಿಷ್ಯಪರ್ವ)

ನಿನ್ನನ್ನು ಕೊಂದೇ ಬಿಡುತ್ತಿದ್ದೆ ಈಗ ದೂತ ಅಂತ ಬಿಟ್ಟಿದ್ದೇನೆ ಇಲ್ಲದೆ ಇದ್ದರೆ ನಿನ್ನನ್ನು ಸಂಹಾರ ಮಾಡುತ್ತಾ ಇದ್ದೆ ಅಂತ ಅವನು ಹೇಳಿದ. ಇಡೀ ಜಗತ್ತನ್ನೇ ಕುಟ್ಟಿ ಪುಡಿ ಮಾಡುವ ಸಾಮರ್ಥ್ಯ ಇದೆ ನಮಗೆ ಶಕ್ತಿ ಇದೆ ಯಾರು ನೀನು **'ಈಶ್ವರೌ ನೌ ವರಂ ದಾತಾ'**[1] ರುದ್ರ ದೇವರ ವರ ಇದೆ ಮಹೋಧರ, ಕುಂಡಧಾರಿ ಅಂತ ಎರಡು ಭೂತಗಳನ್ನು ಕಳಿಸಿದ್ದಾರೆ ಅವರಿಗೂ ವರ ಇದೆ. ಇಷ್ಟೆಲ್ಲ ಇದ್ದರೆ ನಮಗೇನೂ ಹೆದರಿಕೆ ಇಲ್ಲ ಸ್ಥಳ ಮಾತ್ರ ಪುಷ್ಕರನೇ ನಾಳೆಯೂ ಆಗಬಹುದು ನಾಡಿದ್ದು ಆಗಬಹುದು ಯುದ್ಧ, ಅದು ನಿಮ್ಮ ಚಾಯ್ಸ್ ಅಂತ ಸಾತ್ಯಕಿ ಅಂದಿದ್ದಾನೆ ಹೊರಟೇ ಬಿಟ್ಟಿದ್ದಾನೆ. ಆ ರೀತಿ ದೌತ್ಯವನ್ನ ತನ್ನ ಕರ್ಮವನ್ನು ಮುಗಿಸಿಕೊಂಡು ಸಾತ್ಯಕಿ ಈ ಕಡೆಗೆ ಬಂದ ಶ್ರೀಕೃಷ್ಣ ಪರಮಾತ್ಮನಿಗೆ ವಿಷಯವನ್ನೆಲ್ಲ ನಿವೇದನೆ ಮಾಡಿಕೊಂಡಿದ್ದಾನೆ. ಕೃಷ್ಣ ಪರಮಾತ್ಮ ಆಯಿತು ತಡ ಯಾಕೆ ನಾಳೆ ನಾಡಿದ್ದು ಅಂದಿದ್ದಾನಲ್ಲ ನಾಳೆ ಮುಗಿಸಿಬಿಡೋಣ ಹೊರಟೇ ಬಿಡಿ ಅಂದ ಎಲ್ಲ ಸೈನಿಕರು ಕೂಡ ಸಿದ್ಧರಾಗಿ ಹೊರಟಿದ್ದಾರೆ. ಶ್ರೀಕೃಷ್ಣ ಪರಮಾತ್ಮ ರಥದಲ್ಲಿ ಕುಳಿತು ಹಂಸ-ಡಿಭಿಕರಿಗಿಂತಲೂ ಮೊದಲೇ ಅಲ್ಲಿ ಬಂದೇ ಬಿಟ್ಟಿದ್ದಾನೆ ಪುಷ್ಕರಕ್ಕೆ. ಆಶ್ರಮದಲ್ಲಿ ಇದ್ದ ಯತಿಗಳಿಗೆ ಮುನಿಗಳಿಗೆ ತಿರಸ್ಕಾರ ಮಾಡಿದ್ದರು ನೀಚ ಹಂಸ-ಡಿಭಿಕರು. ನೋಡಿ, ಬಂದ ತಕ್ಷಣ ಮೊಟ್ಟ ಮೊದಲಿಗೆ ಮಾಡಿದ್ದು ಕೃಷ್ಣ ಪರಮಾತ್ಮ ತಾನು ಸರ್ವೋತ್ತಮನಾಗಿದ್ದರೂ ಅಲ್ಲಿರುವ ಎಲ್ಲ ಯತಿಗಳಿಗೆ ಮುನಿಗಳಿಗೆ ನಮಸ್ಕಾರ ಮಾಡಿ ಅವರಿಗೆಲ್ಲ ಆದರೋಪಚಾರಗಳನ್ನು ಮಾಡಿದ್ದಾನೆ. ದೇವರು ಯಾರಿಗೆ ನಮಸ್ಕಾರ ಮಾಡುವುದು ಬೇಕಿಲ್ಲದಿದ್ದರೂ ಒಂದು ಸಂದೇಶ ಕೊಟ್ಟ ಅಲ್ಲಿರುವ ಯತಿಗಳಿಗೆ ತಿರಸ್ಕಾರ ಮಾಡಿ ಯುದ್ಧಕ್ಕೆ ಬಂದರೂ ಹಂಸ-ಡಿಭಿಕರು ಸೋತಿದ್ದಾರೆ ನಾಶವನ್ನು ಹೊಂದಿದ್ದಾರೆ. ಅಲ್ಲಿರುವ ಯತಿಗಳಿಗೆ ಮುನಿಗಳಿಗೆ ಆದರಿಸಿ ಗೌರವಿಸಿ

1. 119.8 ಭವಿಷ್ಯಪರ್ವ

ಸತ್ಕರಿಸಿ ಯುದ್ಧಕ್ಕೆ ಬಂದ ಎಲ್ಲ ಯಾದವರಿಂದಲೂ ನಮಸ್ಕಾರ ಮಾಡಿಸಿದ ಅನ್ನುವುದಕ್ಕಾಗಿ ಮಹಾ ವಿಜಯಶಾಲಿಗಳಾಗಿ ಯಾದವರು ಬಂದಿದ್ದಾರೆ. ಆದ್ದರಿಂದ ದೊಡ್ಡವರ ಸೇವೆ ಮಾಡಬೇಕು ಅವರ ಅನುಗ್ರಹ ಪಡೆಯಬೇಕೇ ಹೊರತು ಅವರ ದ್ರೋಹವನ್ನು ಮಾಡಿದರೆ ಜೀವನದಲ್ಲಿ ಸರ್ವಥಾ ವಿಜಯವಾಗುವುದಿಲ್ಲ ಅನ್ನುವ ಒಂದು ತತ್ವವನ್ನು ಜಗತ್ತಿಗೆ ಪರಮಾತ್ಮ ತೋರಿಸಿಕೊಡುತ್ತಾನೆ.

ಅಲ್ಲೆಲ್ಲಾ ವೇದ ಪಾರಾಯಣ ಮಾಡುತ್ತಾ ಇದ್ದರು ಕೇಳುತ್ತಾ ಇದ್ದಾನೆ ಏನು ಧನ್ಯರು ಯಾರೋ ಒಬ್ಬರು ಓದಿಕೊಂಡವರು ವೇದವನ್ನು ಅಧ್ಯಯನ ಮಾಡಿದವರು ಪಂಡಿತರು ನಾವು ಮಾಡುವ ಪಾರಾಯಣ ಕೇಳುತ್ತಾರೆ ಅಂದರೆ ನಮಗೆ ಎಷ್ಟು ಸಂತೋಷ ಆಗುತ್ತದೆ.

ಶೃಣ್ವನ್ ವೇದಧ್ವನಿಂ ವಿಷ್ಣುರ್ಬ್ರಾಹ್ಮಣಾನಾಂ ಸಮನ್ತತಃ ॥ (120.19 ಭವಿಷ್ಯಪರ್ವ)

ಅಂಥಹದ್ದು ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮ ಪ್ರತ್ಯಕ್ಷವಾಗಿ ಅವರು ಮಾಡುವ ವೇದ ಧ್ವನಿಯನ್ನೆಲ್ಲ ಕೇಳಿ ಆಶೀರ್ವಾದವನ್ನು ಮಾಡುತ್ತಾ ಇದ್ದಾನೆ.

ಈ ಕಡೆಗೆ ಇವುಗಳು ಹಂಸ-ಡಿಭಿಕರೆಲ್ಲ ತಮ್ಮ ಸೈನ್ಯವನ್ನು ಕರೆದುಕೊಂಡು ಬಂದಿದ್ದಾರೆ ಆ ಹಂಸ-ಡಿಭಿಕರ ಸೈನ್ಯ ಹತ್ತು ಅಕ್ಷೌಹಿಣೀ ಸೈನ್ಯ ಇತ್ತು. ಈ ಕಡೆಗೆ ಅಕ್ಷೌಹಿಣೀಯ ಬಗ್ಗೆ ನೀವೆಲ್ಲಾ ತಿಳಿದಿದ್ದೀರಿ 21,870 ರಥಗಳು, ಕುದುರೆಗಳು, 65,610 ಆನೆಗಳು ಈ ಕಡೆಗೆ 1,09,350 ಪದಾತಿಗಳು ಹೀಗೆಲ್ಲ ಸೇರಿದ ಒಂದು ಅಕ್ಷೌಹಿಣೀ ಸೈನ್ಯವಾದರೆ, ಹತ್ತು ಅಕ್ಷೌಹಿಣೀ ಸೈನ್ಯ ಹಂಸ-ಡಿಭಿಕರದು, ಆರು ಅಕ್ಷೌಹಿಣೀ ಸೈನ್ಯ ವಿಚಕ್ರ ಅಂತ ಒಬ್ಬ ಅಸುರ ಇದ್ದ ಅವನೊಬ್ಬ ಮಹಾನುಭಾವ ಮಹಾದುಷ್ಟ. ಇವರಿಬ್ಬರಿಗೆ ರುದ್ರ ದೇವರ ವರ, ಅವನಿಗಂತೂ ಬ್ರಹ್ಮ ದೇವರ ವರವೇ ಬ್ರಹ್ಮ ದೇವರನ್ನು ಕುರಿತು ತಪಸ್ಸು ಮಾಡಿ ಅಜೇಯನಾಗಿ ಅವಧ್ಯನಾಗಿ ಇದ್ದಾನೆ ವಿಚಕ್ರ ಆರು ಅಕ್ಷೌಹಿಣೀ ಸೈನ್ಯವನ್ನು ಕರೆದುಕೊಂಡು ಬಂದಿದ್ದಾನೆ. ಹಿಡಿಂಬಾಸುರ ಆ ವಿಚಕ್ರನ ಗೆಳೆಯ ವಿಚಕ್ರನ ಗೆಳೆಯನಾದದ್ದರಿಂದ ಹಂಸ-ಡಿಭಿಕರಿಗೂ ಗೆಳೆಯನಾದ, ವಿಚಕ್ರ ಇವರಿಬ್ಬರ ಗೆಳೆಯ ಹಾಗಾದರೆ ಅವನದು ಒಂದು ಅಕ್ಷೌಹಿಣೀ ಸೈನ್ಯ. ಹತ್ತು ಆರು ಒಂದು ಒಟ್ಟು ಹದಿನೇಳು ಅಕ್ಷೌಹಿಣೀ ಸೈನ್ಯವನ್ನು ತೆಗೆದುಕೊಂಡು ಪುಷ್ಕರಕ್ಕೆ ಬಂದಿದ್ದಾರೆ ಎಲ್ಲರೂ ಕೂಡ ಮತ್ತೆ ಭಾರೀ ಭಾರೀ ವರಗಳನ್ನೆಲ್ಲಾ ತೆಗೆದುಕೊಂಡು ಬಂದಿದ್ದಾರೆ. ನೋಡಿ, ಶ್ರೀಮದಾಚಾರ್ಯರು ಹೇಳಿದ ಮಾತು ಹರಿವಂಶದಲ್ಲಿ ಬರುತ್ತಾ ಇದೆ ಕಾರಣ ಸ್ಪಷ್ಟ ಇಲ್ಲ ಶ್ರೀಮದಾಚಾರ್ಯರು ಕಾರಣವನ್ನು ತಿಳಿಸುತ್ತಾರೆ ಅಂತಹ ಮಹಾಸೈನ್ಯವನ್ನು ತೆಗೆದುಕೊಂಡು ಎಲ್ಲರೂ ಬಂದಾಗ ಜರಾಸಂಧ ಮಾತ್ರ ಸಹಾಯ ಮಾಡಲಿಲ್ಲ ಅಂತ ಹರಿವಂಶ ಹೇಳುತ್ತದೆ.

ತತಃ ಶ್ರುತ್ವಾ ಜರಾಸಂಧೋ ವಿಗ್ರಹಂ ಯದುಭಿಃ ಸಹ ।

ನಾಕರೋನ್ನೃಪಸಾಹಾಯ್ಯಂ ಪಾಪಂ ಮೇ ಭವತೇತಿ ಹ ॥ (121.16 ಭವಿಷ್ಯಪರ್ವ)

ಯದುಗಳ ಜೊತೆಗೆ ಯುದ್ಧ ಮಾಡುತ್ತಾರೆ ಇವರು ಅಂತ ಗೊತ್ತಾದರೂ ತಮ್ಮ ಶಿಷ್ಯರಾದರೂ ಸಹಾಯಕ್ಕೆ ಬರಲಿಲ್ಲ ಜರಾಸಂಧ ನನಗೆ ಯಾಕೆ ಪಾಪ ಅಂತ. ಇದನ್ನು ನೋಡಿದರೆ ಅಂತು ಪಾಪ ಭಕ್ತಿ ಮಾಡುತ್ತಾನೆ ಕೃಷ್ಣನ ಮೇಲೆ ಯಾಕೆ ಅಂದರೆ ನನಗೆ ಯಾಕೆ ಪಾಪ ಅಂತತ್ತಾನೆ ಅಂದರೆ ಕೃಷ್ಣನ ವಿರೋಧ ಮಾಡಿದರೆ ಪಾಪ ಬರುತ್ತದೆ ಅದಕ್ಕೋಸ್ಕರ ನಾನು ಸಹಾಯ ಮಾಡಬಾರದು ಅಂತ ಅವನ ಅಭಿಪ್ರಾಯ ಅಂತ ಅನ್ನಿಸುತ್ತದೆ. ಅದು ವಿರುದ್ಧ ತಾನೇ ಹದಿನೆಂಟು ಸಲ ಕೃಷ್ಣನ ಜೊತೆಗೆ ಯುದ್ಧ ಮಾಡಿದ್ದಾನೆ ಕೃಷ್ಣನ ಜೊತೆಗೆ ಯುದ್ಧ ಮಾಡುವುದು ಪಾಪ ಅಂತ

ಅವನು ಹೇಗೆ ಅಂದುಕೊಳ್ಳುತ್ತಾನೆ ಪಾಪ ಹಾಗೆ ಅಂದುಕೊಂಡರೆ ನಮಗೆ ಪಾಪ ಬಂದೀತು ಪಾಪ. ಹಾಗಾದರೆ ಏನು ಅರ್ಥ ಅದಕ್ಕೆ ಶ್ರೀಮದಾಚಾರ್ಯರು ವ್ಯಾಖ್ಯಾನ ಮಾಡಿದರು ತಾನು ಯಾವ ರುದ್ರ ದೇವರ ಉಪಾಸನೆಯನ್ನು ಮಾಡುತ್ತಾನೆ ಅಂತಹ ರುದ್ರಾವತಾರರಾದ ದುರ್ವಾಸರ ವಿರೋಧ ಮಾಡಿದ್ದರಿಂದ ಅವರಿಗೆ ಸಹಾಯ ಮಾಡಿದರೆ ನನಗೆ ಪಾಪ ಬರುತ್ತದೆ ಅಂತನ್ನುವುದು ಅವನ ಅಭಿಪ್ರಾಯ ಎಂಬುದಾಗಿ ನಾವು ತಿಳಿಯಬೇಕು.

ತತಃ ಶ್ರುತ್ವಾ ಜರಾಸಂಧೋ ವಿಗ್ರಹಂ ಯದುಭಿಃ ಸಹ ।
ನಾಕರೋನ್ನೃಪಸಾಹಾಯ್ಯಂ ಪಾಪಂ ಮೇ ಭವತೇತಿ ಹ ॥ (121.16 ಭವಿಷ್ಯಪರ್ವ)

ಹೀಗೆ ಅರ್ಥ ಮಾಡಬೇಕು ಅದಕ್ಕೆ **'ತತಃ ಶ್ರುತ್ವಾ ಜರಾಸಂಧಃ ವಿಗ್ರಹಂ ಯದುಭಿಃ ಸಹ ನಾ' 'ನಾ'** ಅಂದರೆ **'ಪುರುಷಃ ಯದುಭಿಃ ಸಹ ನಾ'** ಆ ಯಾದವರ ಜೊತೆಗೆ ಒಬ್ಬ ಪುರುಷ ಇದ್ದಾನಲ್ಲ ಕೆಲವು ದಿನಗಳಿಂದ ಯಾರು ದುರ್ವಾಸರು ಅವರು ಅಲ್ಲಿಯೇ ಇದ್ದಾರೆ ಚಿಂತನ ಮಾಡುತ್ತಾ **'ಯದುಭಿಃ ಸಹ ಯಹನಾ ತೇನ ಸಹ ವಿಗ್ರಹಂ ಮತ್ವಾ'** ಅವರ ಜೊತೆಗೆ ಇವನು ಜಗಳ ಆಡಿದ್ದಾನೆ ಅನ್ನುವುದನ್ನ ತಿಳಿದು ನನಗೆ ಪಾಪ ಬರುತ್ತದಪ್ಪ ಮಹಾರಾಯ ಬೇಡ ಅಂತ ಅಲ್ಲಿಂದ ಅವನು ದೂರ ಇದ್ದಾನೆ ಹತ್ತಿರ ಬಂದಿಲ್ಲ.

ಈ ಕಡೆಗೆ ಆ ಅತ್ಯಂತ ಮಂಗಲವಾದಂತಹ ಪುಷ್ಕರದ ವರ್ಣನೆ ಮಾಡುತ್ತಾರೆ. ಪರಮ ಪವಿತ್ರವಾದ ಋಷಿ ಮುನಿಗಳಿಂದ ಸೇವಿತವಾದ ಮಹಾ ಪುಣ್ಯಪ್ರದವಾದ ಪುಷ್ಕರ ಕ್ಷೇತ್ರ, ಪುಷ್ಕರ ಮತ್ತು ಪುಂಡರೀಕಾಕ್ಷ ಇವರಿಬ್ಬರ ವರ್ಣನೆಯನ್ನು ಮಾಡುತ್ತದೆ ಹರಿವಂಶ. ಇವರಿಬ್ಬರ ಹೆಸರನ್ನು ತೆಗೆದುಕೊಂಡರೂ ಪಾಪ ಪರಿಹಾರ, ಇವರಿಬ್ಬರ ದರ್ಶನ ಮಾಡಿದರೆ ಪಾಪ ಪರಿಹಾರ, ಇವರಿಬ್ಬರ ಸ್ಪರ್ಶ ಮಾಡಿದರೂ ಅವರಿಬ್ಬರೂ ಅಲ್ಲಿ ಸೇರಿದ್ದಾರೆ ಪುಂಡರೀಕಾಕ್ಷನಾದ ಕೃಷ್ಣನೂ ಸೇರಿದ್ದಾನೆ, ಪುಷ್ಕರ ತೀರ್ಥವೂ ಅಲ್ಲಿದೆ ಇವೆರಡು ಒತ್ತಟ್ಟಿಗೆ ಸೇರಿದ್ದು ದೊಡ್ಡದಾದಂತಹ ಒಂದು ಅಭೂತಪೂರ್ವವಾದ ಸಮಾಗಮ.

ಪುಷ್ಕರಂ ಪುಣ್ಡರೀಕಾಕ್ಷೋ ದ್ವಾವೇವ ನೃಪಸತ್ತಮ ।
ಸೇವ್ಯಮಾನೌ ಮುನಿಶ್ರೇಷ್ಠೈರಮರೌಘೈರ್ಮಹಾತ್ಮಭಿಃ ॥ (121.22 ಭವಿಷ್ಯಪರ್ವ)
ದ್ವಾವೇವ ಹಿ ನೃಪಶ್ರೇಷ್ಠ ಸರ್ವಪಾಪಪ್ರಣಾಶಕೌ । (121.23 ಭವಿಷ್ಯಪರ್ವ)

ಅಂತಹ ಜ್ಞಾನಿಗಳು ಅದರ ಲಾಭ ಪಡೆದಿದ್ದಾರೆ ಕೃಷ್ಣನ ದರ್ಶನ ಪುಷ್ಕರ ದರ್ಶನ, ಕೃಷ್ಣನ ಸ್ಪರ್ಶ ಪುಷ್ಕರ ಸ್ಪರ್ಶ ಏಕಕಾಲಕ್ಕೆ ಮಾಡಿಕೊಂಡು ಧನ್ಯ ಧನ್ಯರಾಗಿ ಹೋಗಿದ್ದಾರೆ ಅಲ್ಲಿರುವಂತಹ ಸಜ್ಜನರೆಲ್ಲಾ. ಮಧ್ಯದಲ್ಲಿ ವೈಶಂಪಾಯನರು ಜನಮೇಜಯನಿಗೆ ಹೇಳುತ್ತಾರೆ ನಮಸ್ಕಾರ ಮಾಡು. ಪ್ರಾಚೀನ ಕಾಲದಲ್ಲಿ ಆ ಪದ್ಧತಿ ಇತ್ತು ಪುರಾಣ ಹೇಳುವಾಗ ಮಧ್ಯದಲ್ಲಿ ದೇವರ ಹೆಸರು ಬಂದರೆ ನಮಸ್ಕಾರ ಮಾಡುವುದು ಕೃಷ್ಣ ಕೃಷ್ಣ ಬಂದ ಅಂದಾಕ್ಷಣ ಇಲ್ಲಿ ನಿಮ್ಮ ಎದುರಿಗೆ ಬಂದ ಹಾಗೇನೆ ಕೃಷ್ಣನಿಗೆ ನಮಸ್ಕಾರ ಮಾಡಬೇಕು. ಪರಶುರಾಮ ದೇವರು, ವೇದವ್ಯಾಸ ದೇವರು ಹೀಗೆ ಭೀಮಸೇನ ದೇವರು, ಅರ್ಜುನ ಇವರೆಲ್ಲ ದೇವಾಂಶ ಸಂಭೂತರು, ಸಾತ್ಯಕಿ ಏನು ಕಡಿಮೆ ಅಲ್ಲ, ಮುನಿಗಳು ಋಷಿಗಳು ದುರ್ವಾಸರು ಹೀಗೆ ಪುಷ್ಕರ, ಗಂಗಾ, ಯಮುನಾ ಹೆಸರು ಬಂತು ಅಂದರೆ ನಮಸ್ಕಾರ ಮಾಡುವುದು ಪದ್ಧತಿ ಅದನ್ನ ವೈಶಂಪಾಯನರು ಹೇಳುತ್ತಾರೆ.

ತಾಭ್ಯಾಂ ಕುರು ನಮಸ್ಕಾರಂ ಮನಸಾ ನೃಪಸತ್ತಮ । (121.25 ಭವಿಷ್ಯಪರ್ವ)

ಪ್ರವಚನ ಕೇಳುತ್ತಾ ಇದ್ದೀಯಲ್ಲ ಈಗಲೇ ಮನಸ್ಸಿನಿಂದ ನಮಸ್ಕಾರ ಮಾಡು ಪುಷ್ಕರಕ್ಕೆ ಆ ಪುಷ್ಕರೇಕ್ಷಣನಾದಂತಹ ಭಗವಂತನಿಗೆ. ಬೋಲೋ ಪುಂಡರೀಕಾಕ್ಷ ಮಹಾರಾಜಕೀ ಜೈ ಪುಷ್ಕರ ಕ್ಷೇತ್ರಕೀ ಜೈ.

ತಾಭ್ಯಾಂ ಕುರು ನಮಸ್ಕಾರಂ ಮನಸಾ ನೃಪಸತ್ತಮ । (121.25 ಭವಿಷ್ಯಪರ್ವ)

ಈ ರೀತಿಯಾಗಿ ವೈಶಂಪಾಯನರು ಆದೇಶವನ್ನು ಮಾಡಿದ್ದಾರೆ. ಪರಮಾತ್ಮ ಯುದ್ಧಕ್ಕಾಗಿ ಸಿದ್ಧನಾಗಿದ್ದಾನೆ ಎರಡೂ ಕಡೆಗೆ ಎರಡೂ ಸೈನ್ಯಗಳು ಸಿದ್ಧವಾಗಿವೆ, ಎಲ್ಲಾ ತರಹದ ಆಯುಧಗಳು,ಎಲ್ಲಾ ತರಹದ ವಾಹನಗಳು ಎಲ್ಲರೂ ಸಿದ್ಧರಾಗಿದ್ದಾರೆ 87,000 ಆನೆಗಳಿವೆ ಹಾಗೇ ಬೇಕಾದಷ್ಟು ಅಕ್ಷೌಹಿಣೀ ಸೈನ್ಯದೊಳಗೆ ಸಾಕಷ್ಟಿತ್ತು. ಒಂದು ಸಂದರ್ಭದಲ್ಲಿ ಯುದ್ಧಕ್ಕೆ ನಿಂತಾಗ 30,000 ಮತ್ತು 10,000 ಒಟ್ಟು 40,000 ಕುದುರೆಗಳು, ಒಂದು ಲಕ್ಷ ರಥಗಳು. 30 ಕೋಟಿ ಪತಾತಿಗಳು ಅಲ್ಲಿದ್ದಾರೆ. ಇಷ್ಟೆಲ್ಲಾ ಜನ ಸೇರಿ ಘೋರವಾಗಿರುವಂತಹ ಯುದ್ಧ ಅಲ್ಲಿ ನಡೆಯುತ್ತಾ ಇದೆ. ಈ ರೀತಿ ಯುದ್ಧ ನಡೆಯುತ್ತಾ ನಡೆಯುತ್ತಾ ಇರುವಂತಹ ಸಂದರ್ಭದಲ್ಲಿ ವಿಚಕ್ರ, ದ್ವಂದ್ವ ಯುದ್ಧ ಪ್ರಾರಂಭ ಆಯಿತು ಕೆಲವರ ಜೊತೆಗೆ ಕೆಲವರ ಯುದ್ಧ. ವಿಚಕ್ರನ ಜೊತೆಗೆ ಯಾಕೆಂದರೆ ಜೀವೋತ್ತಮರಾದ ಬ್ರಹ್ಮ ದೇವರ ವರ ಇತ್ತು ಅಂತ ಸರ್ವೋತಮನಾದ ಪರಮಾತ್ಮನೇ ಅವನನ್ನು ಹಿಡಕೊಂಡ ವಿಚಕ್ರನ ಜೊತೆಗೆ ಪರಮಾತ್ಮ ಯುದ್ಧ ಮಾಡುತ್ತಾ ಇದ್ದಾನೆ. ರುದ್ರ ದೇವರ ವರ ಇರುವಂತಹ ಹಂಸನ ಜೊತೆಗೆ ಶೇಷಾವತಾರರಾದ ಶುಕ್ಲಕೇಶಾವೇಶ ಇರುವಂತಹ ಬಲರಾಮ ದೇವರು ಯುದ್ಧ ಮಾಡುತ್ತಾ ಇದ್ದಾರೆ, ಡಿಭಿಕನ ಜೊತೆಗೆ ಗರುಡನ ಆವೇಶದಿಂದ ಕೂಡಿದಂತಹ ಸಾತ್ಯಕಿ ಯುದ್ಧವನ್ನು ಮಾಡುತ್ತಾ ಇದ್ದಾನೆ. ಅವರಿಬ್ಬರ ಅಪ್ಪ ಬ್ರಹ್ಮದತ್ತ ಆ ಬ್ರಹ್ಮದತ್ತನ ಜೊತೆಗೆ ಗದ ಅಂತ ಒಬ್ಬ ಕೃಷ್ಣನ ತಮ್ಮ, ಬಲರಾಮನ ತಮ್ಮ ಅವನು ನಿಜವಾಗಿ ರೋಹಿಣಿಯಲ್ಲಿ ಹುಟ್ಟಿದವ ಬಲರಾಮನ ಖಾಸ ತಮ್ಮ, ಶ್ರೀಕೃಷ್ಣ ಪರಮಾತ್ಮನಿಗೆ ತಮ್ಮನೇ.

ಗದೋಽಥ ಶೌರೇರಿವ ಕರ್ಮಕೃತ್ ಪ್ರಿಯಃ

ಸುಭಕ್ತಿಮಾನ್ ವಿಶ್ವವಿದೋಽನುಜೋಽಭವತ್ ॥ (4ನೆಯ ಸರ್ಗ 26ನೆಯ ಶ್ಲೋಕ ಸುಮಧ್ವವಿಜಯ)

ಅಂತಹ ಆ ಗದ. ಅವನು ಯಾರು ಅಂದರೆ ಅವನು ಪರಮಾತ್ಮನ ಒಬ್ಬ ಪಾರ್ಶದ ದ್ವಾರಪಾಲಕ ಚಂಡ ಅಂತ. ಅವನ ಹೆಸರು ಚಂಡ ಅಂತ, ಅವನ ಹೆಸರು ವಿಶ್ವಕ್ಸೇನ ಅಂತ, ಅವನ ಹೆಸರೇ ನಿವೇದಿತಾಶನ ಅಂತ ಹೀಗೆ ಅನೇಕ ತಾತ್ಪರ್ಯ ನಿರ್ಣಯದ ವ್ಯಾಖ್ಯಾನಕಾರರು ಅನೇಕ ರೀತಿಯ ಅಭಿಪ್ರಾಯ ಪಡುತ್ತಾರೆ. ಅಂತೂ ವಾದಿರಾಜರು ಹೇಳುವುದು ಪರಮಾತ್ಮ ಒಂದೊಮ್ಮೆ ತಾನು ವೈಕುಂಠದಿಂದ ಹೊರಗೆ ವಿಹಾರ ಮಾಡುವುದಕ್ಕೆ ಹೊರಟಾಗ ನಿತ್ಯ ತೃಪ್ತನಾಗಿದ್ದರೂ ಲೀಲೆಯಿಂದ ಪರಮಾತ್ಮ ನೈವೇದ್ಯವನ್ನು ಏನಾದರೂ ಕೊಡು ಅಂತ ಕೇಳಿದಾಗ ಓಡಿ ತಂದು ಮೊಸರನ್ನ ಆ ದಧ್ಯನ್ನವನ್ನ ಪರಮಾತ್ಮನಿಗೆ ಸಮರ್ಪಣೆ ಮಾಡಿದಂತಹ ವ್ಯಕ್ತಿ. ಆ ಉಪೇಂದ್ರನಿಗೆ ಆ ಪರಮಾತ್ಮನಿಗೆ ದಧ್ಯನ್ನವನ್ನ ಸಮರ್ಪಣೆ ಮಾಡಿದ ಆ ಪುಣ್ಯದಿಂದ ಈಗ ಅವನು ಪರಮಾತ್ಮನ ತಮ್ಮನಾಗಿ ಹುಟ್ಟಿದ್ದಾನೆ ರೋಹಿಣಿಯಲ್ಲಿ ಗದ ಆ ಗದ ಈ ಬ್ರಹ್ಮದತ್ತನ ಜೊತೆಗೆ ಯುದ್ಧ ಮಾಡುತ್ತಾ ಇದ್ದಾನೆ. ಈ ರೀತಿ ಅಲ್ಲಿ ಘೋರವಾಗಿರುವಂತಹ ಯುದ್ಧ ಅಲ್ಲಿ ನಡೆದಿದೆ, ಇನ್ನುಳಿದ ಸೈನಿಕರ ಜೊತೆಗೆ ಯಾದವರೆಲ್ಲ ಯುದ್ಧವನ್ನು ಮಾಡುತ್ತಾ ಇದ್ದಾರೆ. ಆ ವಿಚಕ್ರನ ಜೊತೆಗೆ ಯುದ್ಧವಾಯಿತು 73 ಬಾಣಗಳನ್ನು ಪರಮಾತ್ಮ ಬಿಟ್ಟಿದ್ದಾನೆ ಆ ವಿಚಕ್ರನ ಮೇಲೆ, ಅವನೂ ಕೂಡ ಒಂದೇ ಒಂದು ಬಾಣವನ್ನು ಜೋರಾಗಿ ಬಿಟ್ಟರೆ ರಕ್ತ ಏನೂ ಇಲ್ಲದೆ ಇದ್ದರೂ ನಾಟಕ ದೇವರದು

'ವಿದ್ಧವನ್ ಮುಗ್ಧವತ್ ಚೈವ ಕೇಶವೋ ವೇದನಾರ್ಥವತ್' ತನಗೆ ಯಾವ ಗಾಯ ಆಗದಿದ್ದರೂ ಆದಂತೆ ನಾಟಕ ಮಾಡಿದ ಏನೋ ರಕ್ತ ಬಂದಂತೆ. ಮತ್ತೆ ಪರಮಾತ್ಮ ಅವನಿಗೆ ನಾನಾ ವಿಧವಾಗಿರುವಂತಹ ಆಯುಧಗಳಿಂದ ಪ್ರಹಾರವನ್ನು ಮಾಡಿದ್ದಾನೆ. ಅವನು ದೊಡ್ಡದಾದ ಶಿಲೆಯನ್ನ ಪರ್ವತವನ್ನೇ ಕೃಷ್ಣನ ಮೇಲೆ ಎಸೆದರೆ ಅದನ್ನೇ ಕೈಯಲ್ಲಿ ಹಿಡಿದು ಮತ್ತೆ ಅವನ ತಲೆಯ ಮೇಲೆ ಹಾಕಿದರೆ ಮೂರ್ಛೆ ಹೋಗುವಂತೆ ಕೆಳಗೆ ಬಿದ್ದಿದ್ದಾನೆ. ಮತ್ತೆ ಎದ್ದು ಪರಿಘ ಎಂಬ ಆಯುಧ ಹಾಕಿದರೆ ಪರಮಾತ್ಮ ಕೈಯಲ್ಲಿ ಅದನ್ನು ತೆಗೆದುಕೊಂಡು ಮುರಿದು ಹಾಕಿದ್ದಾನೆ, ದೊಡ್ಡ ಗಿಡವನ್ನು ಹಾಕಿದ ಅದನ್ನೂ ಖಡ್ಗದಿಂದ ಕತ್ತರಿಸಿ ಹಾಕಿದ. ಕೊನೆಗೆ ಪರಮಾತ್ಮ ಸುದರ್ಶನ ಚಕ್ರವನ್ನು ತೆಗೆದುಕೊಂಡು ಬಹಳ ಹೊತ್ತು ಕ್ರೀಡೆ ಮಾಡುವುದು ಬೇಡ, ಏನೋ ಬ್ರಹ್ಮ ದೇವರ ವರ ಇತ್ತು ಅಂತ ಸ್ವಲ್ಪ ಅವನಿಗೆ ಯುದ್ಧ ಆಡುವುದಕ್ಕೆ ಅವಕಾಶ ಕೊಟ್ಟಂತೆ ಮಾಡಿದ ಚಕ್ರವನ್ನ ತೆಗೆದುಕೊಂಡದ್ದೇ ಶಿರಚ್ಛೇದನವನ್ನು ಮಾಡಿದ್ದಾನೆ ವಿಚಕ್ರ ಎಂಬ ಅಸುರನನ್ನ ಸಂಹಾರ ಮಾಡಿಬಿಟ್ಟ ಪರಮಾತ್ಮ. ಸುದರ್ಶನ ಚಕ್ರದಿಂದ ಪರಮಾತ್ಮ ಸಂಹಾರ ಮಾಡಿದ ಅಂತ ಶ್ರೀಮದಾಚಾರ್ಯರು ಹೇಳುತ್ತಾರೆ.

ಪುನಶ್ಚ ಪಾದಪಾನ್ ಗಿರಿನ್ ಪ್ರಮುಂಚತೋಽರಿಣಾಽರಿಹಾ ।
ಶಿರೋ ಜಹಾರ ದೇವತಾ ವಿನೇದುರತ್ರ ಹರ್ಷಿತಾಃ ॥ (17.255 ಮಭಾತಾನಿರ್ಣಯ)

ಅಂತ ತಾತ್ಪರ್ಯ ನಿರ್ಣಯದಲ್ಲಿ ಶ್ರೀಮದಾಚಾರ್ಯರು ತಿಳಿಸುತ್ತಾರೆ. ನಾನಾ ವಿಧವಾದ ವೃಕ್ಷಗಳನ್ನ ಪರ್ವತಗಳನ್ನ ಎಸೆಯುವ ಅವನನ್ನ ಚಕ್ರದಿಂದ ಶಿರಚ್ಛೇದನ ಮಾಡಿ ಸಂಹಾರ ಮಾಡಿದ ಪರಮಾತ್ಮ ಅಂತ. ಆದರೆ ಹರಿವಂಶ ಮಾತ್ರ ಬಾಣವನ್ನು ಬಿಟ್ಟು ಪರಮಾತ್ಮ ಸಂಹಾರ ಮಾಡಿದ ಅಂತ ಹೇಳುತ್ತದೆ

ಆಗ್ನೇಯಾಸ್ತ್ರೇಣ ಸಂಯೋಜ್ಯ ಜಘಾನೈನಂ ಮಹಾನ್ ಹರಿಃ ॥ (123.20 ಭವಿಷ್ಯಪರ್ವ)
ಸಂದಹ್ಯ ಸ ಶರೋ ದೈತ್ಯಂ ಸರ್ವಲೋಕಸ್ಯ ಪಶ್ಯತಃ । (123.21 ಭವಿಷ್ಯಪರ್ವ)

ಒಂದು ಬಾಣವನ್ನು ಬಿಟ್ಟು ಪರಮಾತ್ಮ ಅವನನ್ನು ಸಂಹಾರ ಮಾಡಿದ ಅಂತ ಇಲ್ಲಿ ಬರುತ್ತೆ. ಅದಕ್ಕೆ ಹೀಗೆ ನಾವು ತಿಳಿಯಬಹುದು ಪರಮಾತ್ಮ ಬಾಣವನ್ನೂ ಬಿಟ್ಟ ಆ ಆಗ್ನೇಯಾಸ್ತ್ರದಿಂದ ಕೂಡಿದ ಅರ್ಥಾತ್ ಆಗ್ನೇಯ ಮಂತ್ರದಿಂದ ಅಭಿಮಂತ್ರಿತವಾದ ಬಾಣವನ್ನ ಬಿಟ್ಟು ಅವನ ಮೈಯೆಲ್ಲಾ ಸುಟ್ಟು ನಿಶ್ಯಕ್ತ ಆಗುವಂತೆ, ನಿವೀರ್ಯವಾಗುವಂತೆ ಹಣ್ಣಣ್ಣು ಮಾಡಿಟ್ಟು ಆಮೇಲೆ ಶಿರಸ್ಸನ್ನ ಸುದರ್ಶನ ಚಕ್ರದಿಂದ ಕತ್ತರಿಸಿದ. ಅದನ್ನು ಹರಿವಂಶವೂ ಉಲ್ಲೇಖ ಮಾಡಿಲ್ಲ ಆದರೆ ಬಾಣವನ್ನ ಹೊಡೆದಿಲ್ಲ ಅನ್ನುವುದೇನಲ್ಲ, ಶೀಮದಾಚಾರ್ಯರ ಅಭಿಪ್ರಾಯ ಬಾಣದಿಂದಲೂ ಮೊದಲು ಹೊಡೆದು ಅದರಿಂದ ಅವನನ್ನ ಸುಟ್ಟು ತಲೆ ಹಾಗೇ ಇದೆ. ಹೇಳುತ್ತಾರಲ್ಲ ಕೆಲವು ಸಲ ಡಾಕ್ಟರ್ಸ್ ಇಷ್ಟು ಪರ್ಸಂಟೇಜ್ ಆಗಿದೆ ಅಂತ 40 ಪರ್ಸಂಟ ಸುಟ್ಟಿದೆ, 60 ಸುಟ್ಟಿದೆ, 70 ಸ್ವಲ್ಪ ಲೈಫ್ ರಿಸ್ಕ ಏನಿಲ್ಲ ಅಂತ ಕೆಲವು ಸಲ ಅನ್ನುತ್ತಾರೆ, ಕೆಲವು ಸಲ ಇದೆ ಅನ್ನುತ್ತಾರೆ ಹಾಗೆ ಸಾಕಷ್ಟು ಲೈಫ್ ರಿಸ್ಕ ಆಗುವ ರೀತಿಯಲ್ಲಿ ದೇವರು ಸುಟ್ಟಿದ್ದಾನೆ ಅಂದರೆ ಕೊಂದಿಲ್ಲ ಇನ್ನೇನು ಹಾಗಾದರೆ ಎಲ್ಲಿಯಾದರೂ ಚಿಕಿತ್ಸಾಲಯದಲ್ಲಿ ಅಡ್ಮಿಟ್ ಮಾಡೋಣ ಅಂತ ಅವನ ಪರಿವಾರದವರು ಎತ್ತಿಕೊಂಡು ಹೋಗುವುದರೊಳಗೆ ಚಕ್ರ ಬಿಟ್ಟು ರುಂಡವನ್ನೂ ಕತ್ತರಿಸಿ ಹಾಕಿದ ಅಂತ ತಿಳಿದುಕೊಂಡರೆ ಯಾವ ವಿರೋಧವು ಇಲ್ಲ ಅಂತ ನಾವು ಅರ್ಥ ಮಾಡಿಕೊಳ್ಳಬಹುದು. ಅಥವಾ ಶರ ಅನ್ನುವ ಶಬ್ದಕ್ಕೇನೆ ಚಕ್ರ ಅಂತ ಅರ್ಥ ಯಾಕೆ ಅಂದರೆ ಶರ ಅಂದರೆ ಶರವಣ ಅಂತ ಕೇಳಿರಬಹುದಲ್ಲವಾ ಹೆಸರು ಕೇಳಿರುತ್ತೀರಾ ಶರವಣದಲ್ಲಿ ಹುಟ್ಟಿದವರು ಯಾರು ಶರವಣ, ಶರ ಅಂದರೆ ಒಂದು ತರಹದ ಹುಲ್ಲು, ಅದರ ವನ ಅದು ಶರವಣ. ಆ

ಶರವಣದಲ್ಲಿ ಹುಟ್ಟಿದವರು ಯಾರು ಅಂದರೆ ಕಾರ್ತಿಕೇಯ ಸ್ಕಂದ ಆ ಸ್ಕಂದನೇ ಚಕ್ರಕ್ಕೆ ಅಭಿಮಾನಿ ಸ್ಕಂದ ಪ್ರದ್ಯುಮ್ನ ಭರತ ರಾಮಾವತಾರದಲ್ಲಿ ಅವನೇ ಪರಮಾತ್ಮನ ಸುದರ್ಶನ ಚಕ್ರಕ್ಕೆ ಅಭಿಮಾನಿ. ಹಾಗಾದರೆ ಶರ ಅಂದರೆ ಶರವನದಲ್ಲಿ ಹುಟ್ಟಿದ ಶರಜ ಶರಜನಾದದ್ದರಿಂದ ಶರ, ಇದೀಗ ಹೇಳಿದರಲ್ಲ **'ಪಾತಾಲಮೇತಸ್ಸ ಹಿ ಪಾದಮೂಲಂ ತಜ್ಜಾನಿ ತದಾಶ್ರಿತಾನಿ'** ಶರ ಅಂದರೆ ಶರವಣದಲ್ಲಿ ಹುಟ್ಟಿದಂತಹ ಸ್ಕಂದ, ಅವನಿಂದ ಅಭಿಮನ್ಯಮಾನವಾದಂತಹ ಸುದರ್ಶನ ಚಕ್ರ ಅದಕ್ಕೆ ಶರ ಅಂತ ಹೆಸರು. ಅಂತಹ ಶರವನ್ನ ಸುದರ್ಶನ ಚಕ್ರವನ್ನು ಪರಮಾತ್ಮ ಬಿಟ್ಟು ಅವನನ್ನು ಸಂಹಾರ ಮಾಡಿದ ಅಂತ ತಾತ್ಪರ್ಯ ನಿರ್ಣಯದಲ್ಲಿ ಹೇಳಿದ ಏನು ತತ್ವ ಇದೆ ಅದನ್ನೇ ಗಂಭೀರವಾದ ಭಾಷೆಯಲ್ಲಿ ಹರಿವಂಶ ನಿರೂಪಣೆ ಮಾಡಿದೆ. ಸುಲಭವಾಗಿ ಎಲ್ಲರಿಗೆ ಆ ಭಗವಂತನ ಲೀಲೆ ತಿಳಿಯುವುದು ಬೇಡ ಅನ್ನುವ ದೃಷ್ಟಿಯಲ್ಲಿ ಅಂತ ನಾವು ಚಿಂತನ ಮಾಡಿದಾಗ ಶ್ರೀಮದಾಚಾರ್ಯರು ಹೇಳುವಂತಹ ಮಾತು ಅತ್ಯಂತ ಶಾಸ್ತ್ರ ಸಮ್ಮತವಾದದ್ದು ಅನ್ನುವುದನ್ನ ನಾವಿಲ್ಲಿ ಅರ್ಥ ಮಾಡಿಕೊಳ್ಳಬಹುದು. ಇಂತಹ ವಿಚಕ್ರನನ್ನ ಸಂಹಾರ ಮಾಡಿ ಭಗವಂತ ಬಹಳ ದೊಡ್ಡ ಅನುಗ್ರಹವನ್ನು ಮಾಡಿದ. ಬ್ರಹ್ಮ ದೇವರ ವರದಿಂದ ಅವಧ್ಯನಾಗಿರುವಂತಹ ಮಹಾಉನ್ಮತ್ತನಾದ ಅವನನ್ನ ಸಂಹಾರ ಮಾಡುವ ಮೂಲಕ ಯಾವುದೇ ವಿಧವಾದ ಆಪತ್ತುಗಳು ಇವತ್ತು ನಮಗೆ ಬಂದಿಲ್ಲ ಅನ್ನುವುದನ್ನ ಪರಮಾತ್ಮ ತೋರಿಸಿಕೊಡುತ್ತಾನೆ, ಇಲ್ಲ ಅಂದರೆ ಅವರು ಇವತ್ತು ಇರುತ್ತಾ ಇದ್ದರು ನಿಮಗೆಲ್ಲ ಭೇಟಿಯಾಗುತ್ತಿದ್ದರು ಅವಧ್ಯರಾದಂತಹ ವಿಚಕ್ರರೇ ಮೊದಲಾದವರು.

ವಿಚಕ್ರಾತ್ ವಿಚಕ್ರಂ ವಿಚಕ್ರಂ ವಿಚಕ್ರಂ ವಿಚಕ್ರೋ ವಿಚಕ್ರೋ ವಿಚಕ್ರಂ ವಿಚಕ್ರೇ ।
ವಿಚಕ್ರೋ ವಿಚಕ್ರಂ ವಿಚಕ್ರಂ ವಿಚಕ್ರಂ ವಿಚಕ್ರಂ ವಿಚಕ್ರಂ ವಿಚಕ್ರಂ ವಿಚಕ್ರೇ ॥

ಚಕ್ರ ಅಂದರೆ ದೊಡ್ಡದಾದ ಆಜ್ಞೆಯನ್ನು ಹೊರಡಿಸಿ ಇಡೀ ಜಗತ್ತಿನೊಳಗೆ ಅದಕ್ಕೆ ಚಕ್ರವರ್ತಿಗಳು ಅಂತ ಕರೆಯುತ್ತಾರೆ. ಚಕ್ರವರ್ತಿಗಳು ಅಂದರೆ ಇವತ್ತೆಲ್ಲಾ ತಿಳಿದುಕೊಂಡಿದ್ದು ಏನು ಅಂದರೆ ಎರಡು ಗಾಲಿ ಗಾಡಿ ಮೇಲೆ ಓಡಾಡುತ್ತಾರಲ್ಲ ದ್ವಿಚಕ್ರ ದ್ವಿಚಕ್ರ ವಾಹನದ ಮೇಲೆ ಇದ್ದವರು ದ್ವಿಚಕ್ರವರ್ತಿಗಳು, ನಾಲ್ಕು ಗಾಡಿ ಮೇಲೆ ಓಡಾಡುವವರು ಚತುಃಚಕ್ರವರ್ತಿಗಳು ಇದೆಲ್ಲ ಚಕ್ರವರ್ತಿ ಅಲ್ಲ, ಚಕ್ರ ಅಂದರೆ ಆಜ್ಞೆ ತಮ್ಮ ಆಜ್ಞೆಯೊಳಗೆ ಇಡೀ ಜಗತ್ತು ಇರುವ ಹಾಗೆ ಮಾಡಿಕೊಳ್ಳುವವರು ಏನಿದ್ದಾರೆ ಅವರಿಗೆ ಚಕ್ರವರ್ತಿಗಳು ಅಂತ. ಜೀವೋತ್ತಮರಾದಂತಹ ಇಡೀ ಹದಿನಾಲ್ಕು ಲೋಕಗಳ ನಾಯಕತ್ವವನ್ನ ವಹಿಸುವಂತಹ ಬ್ರಹ್ಮ ದೇವರು ಏನಿದ್ದಾರೆ ವಿಶಿಷ್ಟವಾದಂತಹ ಚಕ್ರ ಇದ್ದವರು ಅವರು ವಿಚಕ್ರರು. ಆ ವಿಚಕ್ರರಿಂದ ವಿಚಕ್ರನಾದವ ಇವ, ಬ್ರಹ್ಮ ದೇವರ ವರದಿಂದ ಈ ಜನ್ಮ ಮರಣಗಳ ಚಕ್ರವನ್ನ ಕಳೆದುಕೊಂಡವ ಅವಧ್ಯನಾದವ ಈ ವಿಚಕ್ರ **'ವಿಚಕ್ರಾತ್ ವಿಚಕ್ರಂ ವಿಚಕ್ರಂ ವಿಚಕ್ರಂ'** ಬರೀ ಅವಧ್ಯನಾಗಿದ್ದರೆ ಏನು ದೇವರು ಏನು ಸಂಹಾರ ಮಾಡುತ್ತರಲಿಲ್ಲ ಪಾಪ ಒಳ್ಳೆಯವನಿದ್ದರೆ ಬದುಕಿಕೊಂಡು ಹೋಗಲಿ ಅಂತ ಅನ್ನಬಹುದಾಗಿತ್ತು **'ವಿಚಕ್ರಂ'**. ಅದೇನು ಭಗವದ್ಗೀತೆಯಲ್ಲಿ ಹೇಳುವ ಚಕ್ರ ಉಂಟಲ್ಲ

ಅನ್ನಾದ್ಭವಂತಿ ಭೂತಾನಿ ಪರ್ಜನ್ಯಾದನ್ನಸಂಭವಃ ।
ಯಜ್ಞಾದ್ಭವತಿ ಪರ್ಜನ್ಯೋ ಯಜ್ಞಃ ಕರ್ಮ ಸಮುದ್ಭವಃ ॥ (3.14 ಭ ಗೀತಾ)

ಆ ಚಕ್ರದೊಳಗೆ ಭಾಗವಹಿಸದೇ ಇದ್ದವ ಅಂತ ಅಂದರೆ ಯಜ್ಞ ಯಾಗಾದಿಗಳನ್ನು ಮಾಡಿ ಪರಮಾತ್ಮನ ಸೇವೆ ಮಾಡುವಂತಹ ಭಕ್ತನಲ್ಲ ಇವನು ಮಹಾದುಷ್ಟ ಅವಧ್ಯನಾಗಿದ್ದಾನೆ ಆದರೆ ಭಕ್ತ ಅಲ್ಲ ಅನ್ನುವುದಕ್ಕೋಸ್ಕರ **'ವಿಚಕ್ರೋ ವಿಚಕ್ರಃ'** ವಿಶಿಷ್ಟವಾದ ಚಕ್ರ ಸುದರ್ಶನ ಚಕ್ರವೆಂಬ ಆಯುಧವನ್ನು ಪಡೆದುಕೊಂಡಂತಹ ವಿಚಕ್ರಃ. ಆ ಪರಮಾತ್ಮ ಆ

ಭಗದ್ಗೀತೆಯ ಚಕ್ರದೊಳಗೆ ಪ್ರವೇಶ ಮಾಡಿದವನೇ, ಏನು ಅವನೂ ಯಜ್ಞ ಯಾಗ ಮಾಡುತ್ತಾನೆ, ಯಜ್ಞ ಯಾಗ ಮಾಡುವವರಷ್ಟೇ ಚಕ್ರ ಪ್ರವೇಶ ಮಾಡುವುವವರಲ್ಲ ಬ್ರಹ್ಮನೂ ಇದ್ದಾನಲ್ಲಿ.

ಕರ್ಮಬ್ರಹ್ಮೋದ್ಭವಂ ವಿದ್ಧಿ ಬ್ರಹ್ಮಾಕ್ಷರ ಸಮುದ್ಭವಮ್ । (3.15 ಭ ಗೀತಾ)

ಹಾಗಾದರೆ ಆ ಭಗವದ್ಗೀತೊಕ್ತವಾದ ಏನು ಆ ಚಕ್ರ ಇದೆ ಆ ಚಕ್ರದೊಳಗೆ ಪ್ರವೇಶ ಮಾಡಿದವ,ಸುದರ್ಶನ ಚಕ್ರವನ್ನ ಧಾರಣೆ ಮಾಡಿದವ, ವಿಲಕ್ಷಣವಾದ ಬ್ರಹ್ಮ ದೇವರೂ ಲಕ್ಷ್ಮಿ ದೇವಿಯೂ ಸೇರಿಕೊಂಡಂತೆ ಎಲ್ಲರಿಗೂ ತನ್ನ ಚಕ್ರದೊಳಗೆ ಆಜ್ಞೆಯೊಳಗೆ ಹಿಡಿದು ಹಾಕಿದವ. **'ಯದ್ಭಾವಿತಂತ್ಯಾಂ ಗುಣಕರ್ಮ ನಾಮಭಿಃ'** ಮೂಗುದಾಣ ಹಾಕಿ ಎಲ್ಲಾ ಪಶುಗಳನ್ನ ವಶದಲ್ಲಿ ಇಟ್ಟುಕೊಂಡಂತೆ ಇಡೀ ಜಗತ್ತನ್ನ ವಶದಲ್ಲಿ ಇಟ್ಟಕೊಂಡ ವಿಚಕ್ರ ಅಂದರೆ ಶ್ರೀಕೃಷ್ಣ. ಅಂತಹ ಪರಮಾತ್ಮ ಏನು ಮಾಡಿದ **'ವಿಚಕ್ರಂ ವಿಚಕ್ರೇ'** ಇವನನ್ನ ಚಕ್ರ ಅಂದರೆ ಚಂಕ್ರಮಣ ಸ್ಪಂದನ ಆಚೆಈಚೆ ಓಡಾಡದಂತೆ ಮಾಡಿಬಿಟ್ಟ ಅಂದರೆ ಮರಣ ಹೊಂದುವಂತೆ ಮಾಡಿದ. ಬ್ರಹ್ಮ ದೇವರ ವರದಿಂದ ಅವಧ್ಯನಾದ, ದುಷ್ಟನಾದ, ಯಜ್ಞ ಯಾಗಾದಿಗಳನ್ನು ಮಾಡದ ವಿಚಕ್ರನನ್ನು ಸುದರ್ಶನ ಚಕ್ರ ಧಾರಣೆ ಮಾಡಿದ, ಬ್ರಹ್ಮಾದಿ ದೇವತೆಗಳನ್ನೂ ವಶದಲ್ಲಿ ಇಟ್ಟುಕೊಂಡ ಅನ್ನುವುದಕ್ಕೆ ವರ ಮೀರಲಿಕ್ಕೆ ಆಯಿತು. ಬ್ರಹ್ಮಾದಿ ದೇವತೆಗಳನ್ನೂ ವಶದಲ್ಲಿ ಇಟ್ಟುಕೊಂಡ ಪರಮಾತ್ಮ ಇವನು ಆಚೆಈಚೆ ಚಂಕ್ರಮಣ ಮಾಡದಂತೆ ಮೃತನಾಗುವಂತೆ ಮಾಡಿದ ಅನ್ನುವುದನ್ನ ಈ ರೀತಿಯಾಗಿ ಕವಿಗಳು ಹೇಳುತ್ತಾರೆ.

ವಿಚಕ್ರಾತ್ ವಿಚಕ್ರಂ ವಿಚಕ್ರಂ ವಿಚಕ್ರಂ ವಿಚಕ್ರೋ ವಿಚಕ್ರೋ ವಿಚಕ್ರಂ ವಿಚಕ್ರೇ ।

ಹೋ ಹಳೆ ಸುದ್ದಿ, ಹಳೆ ಸುದ್ದಿ ಅಲ್ಲ ಇವತ್ತೂ ನಮಗೆ ದೇವರು ಅನುಗ್ರಹ ಮಾಡುತ್ತ ಇದ್ದಾನೆ ಮಾಡಿದ್ದಾನೆ ಆ ಉಪಕಾರ ಸ್ಮರಣೆ ಮಾಡಬೇಕು ಆ ಜನಾರ್ದನಾಚಾರ್ಯನಂತೆ ನಮಗೂ ಅನುಗ್ರಹ ಮಾಡಿದ್ದಾನೆ.

ವಿಚಕ್ರೋ ವಿಚಕ್ರಂ ವಿಚಕ್ರಂ ವಿಚಕ್ರಂ ವಿಚಕ್ರಂ ವಿಚಕ್ರಂ ವಿಚಕ್ರೇ ।

ನಮಗೂ ದೇವರು ಅನುಗ್ರಹ ಮಾಡಿದ್ದಾನೆ ವಿಚಕ್ರಃ. ಅಂತಹ ಇಡೀ ಜಗತ್ತನ್ನ ವಶದಲ್ಲಿ ಇಟ್ಟುಕೊಂಡಂತಹ ಪರಮಾತ್ಮ ನಾವೆಲ್ಲ ಹೇಗಿದ್ದಿವಿ, ನಮ್ಮ ಹಳೆಯದನ್ನೆಲ್ಲ ನೆನೆಸಿಕೊಳ್ಳಬೇಕು ಈ ಜನ್ಮದೊಳಗೆ ಜನ್ಮಾಂತರದೊಳಗೆಲ್ಲ ಹೇಗಿದ್ದಿವಿ ನಾವು ನಮಗೇನೂ ಗೊತ್ತಿರಲಿಲ್ಲ, ಹಿಂದಿನ ಜನ್ಮ ಪಶು ಪಕ್ಷಿ ಕ್ರಿಮಿ ಕೀಟ ಆಗಿದ್ದಿವಿ ಬೇಡ ಆಮೇಲೂ ಎಷ್ಟೋ ಅಜ್ಞನ್ಮಗಳಲ್ಲಿ ಅಜ್ಞಾನಿಗಳಾಗಿ ಧರ್ಮ ಗೊತ್ತಿಲ್ಲ, ದೇವರು ಗೊತ್ತಿಲ್ಲ, ಪೂಜೆ ಇಲ್ಲ ಪುನಸ್ಕಾರ ಇಲ್ಲ ಹಾಗೆ ಎಷ್ಟೋ ಜನ್ಮ ಕಳಿದಿದ್ದೇವೆ. ಈ ಜನ್ಮದೊಳಗೂ ಹುಟ್ಟಿದ ಮೇಲೆ ಎಷ್ಟೋ ಹೊತ್ತು ಅಜ್ಞಾನದೊಳಗೆ ವಿವೇಕ ಇಲ್ಲದೆ, ದೇವರ ಸೇವೆ ಮಾಡದೆ ಎಷ್ಟೋ ವ್ಯರ್ಥ ಕಾಲಹರಣ ಮಾಡಿದ್ದೇವೆ. ಈಗ ಏನು ಬಹಳ ಸಾರ್ಥಕ ಮಾಡಿಕೊಂಡಿಲ್ಲ ಆದರೆ ತಕ್ಕಮಟ್ಟಿಗೆ ದೇವರು ಧರ್ಮ ಅಂತ ಒಂದಿಷ್ಟು ಗೊತ್ತಾಗಿದೆ, ಒಂದಿಷ್ಟು ಪೂಜಾ ಪುನಸ್ಕಾರ ಮಾಡಿಕೊಂಡು ಭಕ್ತಿಯನ್ನು ಮಾಡುವ ಹಾಗೆ, ಸನ್ಮಾರ್ಗದಲ್ಲಿ ನಡೆಯುವ ಹಾಗೆ, ದೇವರು ನಮ್ಮನ್ನು ಮಾಡಿದ್ದಾನಲ್ಲ ದೊಡ್ಡ ಅನುಗ್ರಹ ದೇವರು ನಮಗೆ ಮಾಡಿದ್ದು ವಿಚಕ್ರಃ. ಅಂತಹ ಅದ್ಭುತವಾದ ಎಲ್ಲರನ್ನೂ ತನ್ನ ಆಜ್ಞೆಯಲ್ಲಿ ಇಟ್ಟುಕೊಂಡಂತಹ ಸ್ವಾಮಿ, ಅದ್ಭುತವಾದಂತಹ ಈ ಜಗತ್ ಚಕ್ರವನ್ನ ನಡೆಸುವಂತಹ ಸ್ವಾಮಿ, ಅದ್ಭುತವಾದ ಸೂರ್ಯನನ್ನ ತನ್ನೊಳಗೆ ಇಟ್ಟುಕೊಂಡ, ಚಕ್ರ ಅನ್ನುವುದಕ್ಕೆ ಸೂರ್ಯ ಅಂತೂ ಅರ್ಥ ಇದೆ. ಜ್ಯೋತಿಷ್ಯದ ಭಾಷೆಯಲ್ಲಿ ಚಕ್ರ ಸಿದ್ಧಾಂತ ಅಂದರೆ ಸೂರ್ಯ ಸಿದ್ಧಾಂತ, ಸ್ಥಂಭ ಸಿದ್ಧಾಂತ ಅಂತ ಆರ್ಯಭಟ ಸಿದ್ಧಾಂತ ಅಂತ,

ಅಂತಹ ವಿಲಕ್ಷಣವಾದ ಸೂರ್ಯನನ್ನ ತನ್ನ ಕಣ್ಣಲ್ಲಿ ಇಟ್ಟುಕೊಂಡ, ಜಗತ್ತನ್ನ ತನ್ನ ವಶದಲ್ಲಿ ಇಟ್ಟುಕೊಂಡಂತಹ ಆ ವಿಚಕ್ರನಾದ ಪರಮಾತ್ಮ **'ವಿಚಕ್ರಂ'.** ಯಜ್ಞ ಯಾಗಾದಿಗಳನ್ನು ಮೊದಲು ಮಾಡುತ್ತಾ ಇರಲಿಲ್ಲ ನಾವು **'ವಿಚಕ್ರಂ'** ಗೋಪಿ ಚಂದನದಿಂದ ಶೀತಲ ಮುದ್ರಾಧಾರಣ, ಗುರುಗಳಿಂದ ತಪ್ತ ಮುದ್ರಾಧಾರಣವನ್ನೂ ಮಾಡಿಸಿಕೊಳ್ಳದೇ ಇರುವ **'ವಿಚಕ್ರಂ'**. ಮೊದಲು ಮೊದಲು **'ವಿಚಕ್ರಂ'** ಚಕ್ರ ಅಂದರೆ ಚಕ್ರಾಭಿಮಾನಿಯಾದಂತಹ ಕಾಮ, **'ವಿಚಕ್ರಂ'** ಅಂದರೆ ಶುಭವಾದಂತಹ ಕಾಮನೆಗಳೂ ನಮಗಿರಲಿಲ್ಲ ಸದಿಚ್ಛೆಗಳು. ಶಾಸ್ತ್ರ ಓದಬೇಕು, ಪಾಠ ಪ್ರವಚನ ಮಾಡಬೇಕು, ದೇವರ ಸೇವೆ ಮಾಡಬೇಕು ಅದು ಇಚ್ಛೇನೆ ಇಲ್ಲ ಎಲ್ಲಿಯೋ ಪೆದ್ದರ ಹಾಗೆ ಕುಡಿದು ಕುಳಿತುಕೊಂಡು ವ್ಯರ್ಥ ಕಾಲಹರಣ ಮಾಡುತ್ತಾ ಇದ್ದಂತಹ ಜನ **'ವಿಚಕ್ರಂ'**. ಇಂಥವರನ್ನೆಲ್ಲ ಏನು ಮಾಡಿದ ಈಗ ದೇವರು **'ವಿ'** ಅರ್ಥ ಅದೆ ಅಲ್ಲಿ **'ವಿ'** ಅಂದರೆ ಇಲ್ಲ ಅಂತ ಅರ್ಥ ಈಗ **'ವಿ'** ಅಂದರೆ ವಿಶಿಷ್ಟ. ಉತ್ತಮವಾದಂತಹ ಚಕ್ರ ಯಜ್ಞ ಯಾಗಾದಿಗಳನ್ನು ಮಾಡುವಂತೆ, ಉತ್ತಮವಾದ ರೀತಿಯ ಗೋಪಿಚಂದನ ಮುದ್ರಾಧಾರಣ ಮಾಡುವಂತೆ, ವಿಚಕ್ರ ಉತ್ತಮವಾದ ರೀತಿಯ ಇಚ್ಛೆಗಳನ್ನ ಸದಿಚ್ಛೆಗಳನ್ನ ಮಾಡುವಂತೆ, ಸುದರ್ಶನ ಚಕ್ರದಿಂದ ಕೂಡಿದ ವಿಲಕ್ಷಣವಾದ ಚಕ್ರಯುತವಾದ ಶಾಲಿಗ್ರಾಮಗಳ ಪೂಜೆ, ಚಕ್ರಾಂಕಿತದ ಪೂಜೆ ಇವುಗಳನ್ನೆಲ್ಲ ಮಾಡುವಂತೆ. ಆ ಭಗವಂತನ ಚಕ್ರ ಶ್ರುತಿಸ್ಮೃತಿ ಹರೇರಾಜ್ಞೆ ಅವುಗಳನ್ನ ವಿಶಿಷ್ಟವಾದ ರೀತಿಯಲ್ಲಿ ಪರಿಪಾಲನೆ ಮಾಡುವಂತಹ ದೇವರು **'ವಿಚಕ್ರೇ'** ನಮ್ಮನ್ನೆಲ್ಲ ಮಾಡಿದ್ದಾನೆ ಇದು ದೊಡ್ಡ ಅನುಗ್ರಹ ದೇವರದು ಅಂತ. ಅಂದರೆ **'ವಿಚಕ್ರೇ'** ಯಾಕೆ ದೀಟ್ಲಕಾರ ಪರೋಕ್ಷನಾ ನಿಮಗೆ ಮಾಡಿದ್ದು ನಿಮಗೆ ಗೊತ್ತಿಲ್ಲವಾ ಅಂತ ನಾವೇನು ಮಾಡುತ್ತಾ ಇದ್ದೀವಿ ನಮಗೆ ಗೊತ್ತು, ನಮಗೇನು ದೇವರು ಮಾಡಿದ ಅನ್ನುವುದು ಗೊತ್ತಿಲ್ಲ.

ಪ್ರತ್ಯಕ್ಷೈಶ್ಚಾ ಕರ್ತೃತಾ ಜೀವಸಂಸ್ಥಾ ತೇನಾನುಮೇಯಾ ಪ್ರೇರಣಾ ಕೇಶವಸ್ಯ । (ತತ್ತ್ವವಾದ)

ದೇವರ ಪ್ರೇರಣೆ ಇದು ಅನುಮೇಯ ಅದು ನಮಗೆ ಗೊತ್ತಾಗುವುದಿಲ್ಲ, ಸಾಕ್ಷಾತ್ಕಾರ ಆಗಿಲ್ಲ ಅದಕ್ಕಾಗಿ ವಿಚಕ್ರೇ ಹಾಗಾದರೆ

ವಿಚಕ್ರಾತ್ ವಿಚಕ್ರಂ ವಿಚಕ್ರಂ ವಿಚಕ್ರಂ ವಿಚಕ್ರೋ ವಿಚಕ್ರೋ ವಿಚಕ್ರಂ ವಿಚಕ್ರೇ ।
ವಿಚಕ್ರೋ ವಿಚಕ್ರಂ ವಿಚಕ್ರಂ ವಿಚಕ್ರಂ ವಿಚಕ್ರಂ ವಿಚಕ್ರಂ ವಿಚಕ್ರಂ ವಿಚಕ್ರೇ ॥

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

।। ಶ್ರೀ ।।

।। ಶ್ರೀ ದಿಗ್ವಿಜಯ ರಾಮೋ ವಿಜಯತೇ ।।

ಹರಿವಂಶ

ಶ್ರೀಮನ್ಮಹಾಭಾರತದ ಖಿಲಭಾಗ

ಭವಿಷ್ಯಪರ್ವ-47

* * *

ವೈಶಂಪಾಯನ ಉವಾಚ

ಬಲದೇವಸ್ತು ಧರ್ಮಾತ್ಮಾ ಧನುರಾದಾಯ ಸತ್ವರಮ್ ।

ಜಘಾನ ಹಂಸಂ ದಶಭಿರ್ಬಾಣೈರ್ಬಾಣಭೃತಾಂ ವರಃ ।। (124.1 ಭವಿಷ್ಯಪರ್ವ)

ಶ್ರೀಕೃಷ್ಣ ಪರಮಾತ್ಮ ಸಕಲ ಸಜ್ಜನರ ರಕ್ಷಣೆಗಾಗಿ ಭೂಭಾರಹರಣ ಮಾಡುವುದಕ್ಕೋಸ್ಕರ ಬ್ರಹ್ಮಾದಿ ದೇವತೆಗಳ ವರಗಳಿಂದ ಅವಧ್ಯರಾದಂತಹ ಮಹಾಅಸುರರ ಸಂಹಾರವನ್ನು ಮಾಡಿ, ಅಧರ್ಮದ ನಿವಾರಣೆಯನ್ನು ಮಾಡಿ ಧರ್ಮದ ಸ್ಥಾಪನೆಯನ್ನು ಮಾಡುತ್ತಾ ಇದ್ದಾನೆ. ಬ್ರಹ್ಮ ದೇವರ ವರದಿಂದ ಅವಧ್ಯನಾದಂತಹ ಹಂಸ-ಡಿಭಿಕರ ಮಿತ್ರ ವಿಚಕ್ರ ಎಂಬ ಅಸುರನನ್ನು ತನ್ನ ಸುದರ್ಶನ ಚಕ್ರದಿಂದ ಸಂಸಾರವನ್ನು ಮಾಡಿ ಶ್ರೀಕೃಷ್ಣ ಪರಮಾತ್ಮ ಎಲ್ಲರಿಗೆ ಅಭಯವನ್ನು ನೀಡಿದ್ದಾನೆ. ಇನ್ನು ಹಂಸ-ಡಿಭಿಕರು ಉಳಿದಿದ್ದಾರೆ ಅವರ ಸಂಹಾರ ಆಗಬೇಕು ಅವರು ಯುದ್ಧವನ್ನು ಮಾಡುತ್ತಾ ಇದ್ದಾರೆ.

ಮೊದಲು ಹಂಸನ ಜೊತೆಗೆ ಬಲರಾಮ ದೇವರು ಯುದ್ಧವನ್ನು ಮಾಡುತ್ತಾ ಇದ್ದಾರೆ. ರುದ್ರ ದೇವರ ವರದಿಂದ ಅವಧ್ಯನಾದಂತಹ ಅಜೇಯನಾದ ಹಂಸ ಶೇಷ ದೇವರ ಸಮಾನ ಕಕ್ಷೆಯಲ್ಲಿ ಬರುವ ರುದ್ರ ದೇವರ ವರ ಮಾತ್ರ ಅವನಿಗೆ, ಬಲರಾಮ ದೇವರು ಸ್ವಯಂ ಶೇಷ ದೇವರು ಅಷ್ಟು ಮಾತ್ರವಲ್ಲ ಶುಕ್ಲಕೇಶದ ಆವೇಶ ಶೇಷಾವತಾರರಾದ ಅಂತಹ ಮಹಾಪರಾಕ್ರಮಿಗಳಾದ ಬಲರಾಮ ದೇವರು ಯುದ್ಧವನ್ನು ಮಾಡುತ್ತಾ ಇದ್ದಾರೆ. ಭಾರೀ ತೀಕ್ಷ್ಣವಾದ ಹತ್ತು ಬಾಣಗಳಿಂದ ಬಲರಾಮ ದೇವರು ಹಂಸನಿಗೆ ಜೋರಾಗಿ ಗಾಯವನ್ನು ಮಾಡಿದರೆ ಪ್ರತಿಯಾಗಿ ಐದು ಬಾಣಗಳನ್ನು ಹಂಸ ಬಿಟ್ಟಿದ್ದಾನೆ. ಮತ್ತೆ ಬಲರಾಮ ದೇವರು ಹತ್ತು ಬಾಣಗಳನ್ನು ಬಿಟ್ಟಿದ್ದಾರೆ ಅಷ್ಟು ಮಾತ್ರ ಅಲ್ಲದೇ ಒಂದು ತೀಕ್ಷ್ಣವಾದಂತಹ ಬಾಣವನ್ನು ಬಿಟ್ಟರೆ ಹಂಸ ಪ್ರಜ್ಞೆ ತಪ್ಪಿ ಮೂರ್ಛೆ ಹೋಗಿ ಬಿದ್ದಿದ್ದಾನೆ. ಪುನಃ ಎಂತಹ ಪರಾಕ್ರಮ ಅವನಿಗೆ ಅಸುರರಿಗೆ ಅಂದರೆ ದೇವತೆಗಳಾಗಲಿ, ಅಸುರರಾಗಲಿ ಯುದ್ಧದೊಳಗೆ ಅಲ್ಪಸ್ವಲ್ಪ ಪರಾಕ್ರಮವನ್ನು ತೋರಿಸುವುದಿಲ್ಲ ತಮ್ಮ ಮಹಾಪರಾಕ್ರಮವನ್ನು ತೋರಿಸುತ್ತಾರೆ. ಮೂರ್ಛೆ ಹೋಗಿ ಬಿದ್ದಾಗ

ಯಾವ ಔಷಧೋಪಚಾರಾದಿಗಳ ಅವಕಾಶವೂ ಇರುವುದಿಲ್ಲ ಮತ್ತೆ ಸುಧಾರಿಸಿಕೊಂಡು ಹಂಸ ಜೋರಾಗಿ ಬಾಣವನ್ನು ಬಿಟ್ಟರೆ ಬಲರಾಮ ದೇವರಿಗೆ ರಕ್ತ ಬರುತ್ತಾ ಇದೆ ಆ ರೀತಿ ಭಾರೀ ರಕ್ತ ಬರುವ ರೀತಿಯಲ್ಲಿ ಬಾಣವನ್ನು ಬಿಟ್ಟಿದ್ದಾನೆ. ಮತ್ತೆ ಬಲರಾಮ ದೇವರು ಬಾಣಗಳ ವೃಷ್ಟಿಯನ್ನು ಮಾಡುತ್ತಾರೆ ಹಂಸನ ಮೇಲೆ ಒಂದು ಲಕ್ಷ ಬಾಣಗಳನ್ನು ಬಿಡುತ್ತಾರೆ ಏಕಕಾಲಕ್ಕೆ ಅತ್ಯದ್ಭುತವಾದ ಸಾಮರ್ಥ್ಯ ಬಲರಾಮ ದೇವರದು. ಶೇಷ ದೇವರ ಆವೇಶ ಇರುವಂತಹ ಅರ್ಜುನ, ಸ್ವಯಂ ಇಂದ್ರಾವತಾರ ಶೇಷಾವೇಶದಿಂದ ಕೂಡಿದ ಅರ್ಜುನನ ಬಾಣಗಳ ವೃಷ್ಟಿಯ ಮಹಿಮೆಯನ್ನೇ ನೀವು ಕೇಳುತ್ತೀರಿ ಮಹಾಭಾರತದ ಯುದ್ಧದಲ್ಲಿ. ಸಾಕ್ಷಾತ್ ಶೇಷಾವತಾರರಾದಂತಹ ಬಲರಾಮ ದೇವರು ಏನು ಬಾಣಗಳ ವೃಷ್ಟಿ ಮಾಡಿದ್ದಾರೆ ಅಂದರೆ ಲಕ್ಷ ಲಕ್ಷ ಬಾಣಗಳ ವೃಷ್ಟಿಯನ್ನು ಮಾಡಿದ್ದಾರೆ ಹಂಸನ ಆ ಎಲ್ಲ ಸಾಧನಗಳ ಮೇಲೆ ಅವನ ರಥ, ಧನುಸ್ಸು, ಬತ್ತಳಿಕೆ, ಸಾರಥಿಯ ಮೇಲೆ. ಎಲ್ಲದರ ಮೇಲೆ ಬಾಣಗಳ ವೃಷ್ಟಿ ಮಾಡಿದಾಗ ಹಂಸ ಭಾರೀ ಕ್ರುದ್ಧನಾಗಿದ್ದಾನೆ ಬಲರಾಮ ದೇವರ ಪರಾಕ್ರಮವನ್ನು ನೋಡಿ. ಒಂದು ಕಡೆಗೆ ಆಶ್ಚರ್ಯವಾಗುತ್ತಾ ಇದೆ, ಒಂದು ಕಡೆಗೆ ಕ್ರೋಧ ಬಂದಿದೆ. ಆ ಕ್ರೋಧದಿಂದ ಹಂಸ ತಾನು ಬಲರಾಮ ದೇವರ ಸಾರಥಿಯನ್ನು ಸಂಹಾರ ಮಾಡಿದ್ದಾನೆ, ಕುದುರೆಗಳನ್ನು ನಾಶ ಮಾಡಿದ್ದಾನೆ, ಧ್ವಜವನ್ನು ನಾಶ ಮಾಡಿದ್ದಾನೆ, ರಥವನ್ನು ಮುರಿದಿದ್ದಾನೆ ಆಗ ಬಲರಾಮ ದೇವರು ಗದೆಯನ್ನು ತೆಗೆದುಕೊಂಡಿದ್ದಾರೆ.

ಬಲರಾಮ ದೇವರಿಗೆ ಗದೆಯ ಮೇಲೆ ಬಹಳ ಪ್ರೀತಿ ದುರ್ಯೋಧನ ಬಲರಾಮ ಹತ್ತಿರನೇ ಬಂದು ಗದಾ ಯುದ್ಧವನ್ನು ಕಲಿತ ಅಂತ ಹೇಳುತ್ತಾರೆ. ಭೀಮಸೇನ ದೇವರು ಗದಾ ಯುದ್ಧವನ್ನ ಸ್ವಯಂ ತಾವು ತಿಳಿದಿದ್ದರೂ, ಸರ್ವಜ್ಞರಾಗಿದ್ದರೂ ಕೂಡ ಬಲರಾಮ ದೇವರಲ್ಲಿ ಕಲಿಯುತ್ತಾರೆ ಯಾಕೆ ಕೃಷ್ಣನ ಹತ್ತಿರನೇ ಕಲಿಯಬಹುದಾಗಿತ್ತಲ್ಲ ಸರ್ವಜ್ಞ ಶಿಖಾಮಣಿಯಾದ ಶ್ರೀಕೃಷ್ಣನ ಹತ್ತಿರ ಅಂತ. ಗದಾ ಯುದ್ಧ ಅಂದರೆ ಪುಸ್ತಕ ತೆಗೆದುಕೊಂಡು ಓದುವ ಪಾಠ ಅಲ್ಲ ಅದು, ಗದೆಯಿಂದ ಗುರುಗಳ ಜೊತೆಗೇನೆ ಯುದ್ಧ ಮಾಡಿ ಯುದ್ಧವನ್ನು ಕಲಿಯಬೇಕು. ಆ ಸಂದರ್ಭದಲ್ಲಿ ಕೃಷ್ಣನ ಮೇಲೆ ಗದೆಯನ್ನು ಎತ್ತುವ ಪ್ರಸಂಗ ಬರುತ್ತಲ್ಲ ಕಲಿಯುವಾಗ ಅಷ್ಟಾದರು ಯಾಕೆ ಕೃಷ್ಣನ ವಿರೋದ ಮಾಡಬೇಕು, ಕೃಷ್ಣನ ಎದುರಿನಲ್ಲಿ ಆಯುಧವನ್ನು ಎತ್ತುವುದೇ ಮಹಾಪರಾಧ ನಾನು ಗದಾ ಯುದ್ಧವನ್ನು ಕೃಷ್ಣನಲ್ಲಿ ಕಲೆಯುವುದಿಲ್ಲ ಬಲರಾಮ ದೇವರ ಎದುರಿನಲ್ಲಿ ಕಲಿಯುತ್ತೇನೆ ಅಂತ. ಬಲರಾಮ ದೇವರಲ್ಲಿಯೂ ಶುಕ್ಲಕೇಶದ ಪರಮಾತ್ಮನ ಸನ್ನಿಧಾನ ಉಂಟಲ್ಲ ಆ ಸನ್ನಿಧಾನದ ಅಭಿವ್ಯಕ್ತಿ ಯಾವಾಗಾದರೂ ಆದರೆ ಅದು ಗೊತ್ತಾಗುತ್ತಾ ಇತ್ತು ಸರ್ವಜ್ಞರಾದ ಭೀಮಸೇನ ದೇವರಿಗೆ. ಶುಕ್ಲಕೇಶಾವೇಶದ ಅಭಿವ್ಯಕ್ತಿ ಆಗಿದೆ ಅಂತ ಗೊತ್ತಾದರೆ ಆಗ ಬಲರಾಮ ದೇವರ ಎದುರಿನಲ್ಲಿ ಗದೆಯನ್ನು ಎತ್ತುತ್ತಾ ಇರಲಿಲ್ಲ ಸುಮ್ಮನೆ ಕೈ ಕೆಳಗೆ ಹಿಡಿದುಕೊಂಡು ಅವರು ಹೊಡೆದರೆ ಹೊಡೆಸಿಕೊಂಡು ಸೋಲುತ್ತಾ ಇದ್ದರು ಭೀಮಸೇನ ದೇವರು. ಆ ಶುಕ್ಲಕೇಶಾವೇಶ ಅಭಿವ್ಯಕ್ತವಾಗದಾಗ ಕೇವಲ ಶೇಷ ದೇವರಾಗಿ ಬಲರಾಮ ದೇವರು ಯುದ್ಧ ಮಾಡುವಾಗ ಭೀಮಸೇನ ದೇವರು ಗದೆ ಎತ್ತಿ ಯುದ್ಧ ಮಾಡುತ್ತಾ ಇದ್ದರು, ತಾವು ಗೆಲ್ಲುತ್ತಾ ಇದ್ದರು ಅನ್ನುವುದನ್ನು ಕೂಡ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ತಿಳಿಸಿಕೊಟ್ಟಿದ್ದಾರೆ. ಅಂತಹ ಗದಾ ಯುದ್ಧದಲ್ಲಿ ಪಾರಂಗತರಾದ ಮಹಾನುಭಾವರು ಬಲರಾಮ ದೇವರು ಹೀಗಾಗಿ ಅವರು ಗದಾ ಯುದ್ಧವನ್ನ ಮಾಡುತ್ತಾ ಗದೆಯಿಂದಲೇ ಹಂಸನ ರಥ, ಕುದುರೆಗಳು, ಸಾರಥಿ, ಧ್ವಜ ಎಲ್ಲವನ್ನು ಪುಡಿ ಪುಡಿ ಮಾಡಿ ಹಾಕಿದ್ದಾರೆ.

ಬಭಞ್ಜ ತಿಲಶಃ ಸರ್ವಂ ನನಾದ ಚ ಪುನಃ ಪುನಃ ॥ (124.11 ಭವಿಷ್ಯಪರ್ವ)

ಹಂಸನು ಗದಾವನ್ನು ತೆಗೆದುಕೊಂಡು ಯುದ್ಧ ಮಾಡುತ್ತಾ ಇದ್ದಾನೆ ಬಾಣಗಳ ಯುದ್ಧವನ್ನು ನಿಲ್ಲಿಸಿ ಗದಾ ಯುದ್ಧವನ್ನು ಪ್ರಾರಂಭ ಮಾಡಿದ್ದಾನೆ ಭಾರೀ ಘೋರವಾಗಿ ಗದಾ ಯುದ್ಧ ನಡೆಯುತ್ತ ಇದೆ. ಆ ಗದಾ ಯುದ್ಧದಲ್ಲಿ

ಅನೇಕ ಕ್ರಮಗಳು ಒಬ್ಬರು ಬಲಕ್ಕೆ ಒಬ್ಬರು ಎಡಕ್ಕೆ ಬರುವುದು, ಬಲರಾಮ ದೇವರು ದಕ್ಷಿಣ ಮಾರ್ಗಕ್ಕೆ ಬಂದರೆ ಅವನು ಎಡಭಾಗಕ್ಕೆ ಹೋಗುತ್ತಾನೆ, ಅವನು ಬಲಭಾಗಕ್ಕೆ ಬಂದರೆ ಇವರು ಎಡಭಾಗಕ್ಕೆ ಬರುತ್ತಾರೆ ಈ ರೀತಿ ನಾನಾ ವಿಧವಾದ ರೀತಿಯಲ್ಲಿ ಆ ಗದಾ ಯುದ್ಧವನ್ನು ಮಾಡುತ್ತ ಇದ್ದಾರೆ. ಇಂತಹ ಯುದ್ಧವನ್ನೇ ನಾವು ಕಂಡಿಲ್ಲ ಅಂತ ದೇವತೆಗಳು, ಗಂಧರ್ವರು, ಕಿನ್ನರುರೆಲ್ಲ ಆಕಾಶದಲ್ಲಿ ನಿಂತು ಹೊಗಳುತ್ತಾ ಇದ್ದಾರೆ, ಇವರಿಬ್ಬರನ್ನು ನೋಡಿ ಆಶ್ಚರ್ಯ ಪಡುತ್ತಾ ಇದ್ದಾರೆ.

ಅಹೋ ಖಲ್ವೀದೃಶಂ ಯುದ್ಧಂ ದೃಷ್ಟಂ ಪೂರ್ವಂ ನ ಚ ಶ್ರುತಮ್ । (124.20 ಭವಿಷ್ಯಪರ್ವ)

ಎಂದೆಂದಿಗೂ ನಾವು ನೋಡಿಲ್ಲ ಅಂತಹ ಅದ್ಭುತವಾದ ಯುದ್ಧ ಇವತ್ತೇ ಕಾಣುತ್ತಾ ಇದ್ದೇವೆ ಅಂತ. ಈ ರೀತಿ ಬಲರಾಮ ದೇವರ, ಹಂಸನ ಯುದ್ಧ ಆಚೆಗೆ ನಡೆಯುತ್ತ ಇದೆ.

ಈ ಕಡೆಗೆ ಹಂಸನ ತಮ್ಮ ಡಿಭಕನಿಗೂ ಹಾಗೂ ಸಾತ್ಯಕಿಗೂ ಭಾರೀ ಘೋರವಾದಂತಹ ಯುದ್ಧ ನಡೆಯುತ್ತ ಇದೆ. ನಾರಾಯಣವರ್ಮದಲ್ಲಿ ಪ್ರಾರ್ಥನೆಯನ್ನು ಮಾಡುವಾಗ ಪರಮಾತ್ಮನ ಎಲ್ಲ ಆಯುಧಗಳು, ವಾಹನಗಳು ಇವುಗಳೆಲ್ಲ ನಮ್ಮನ್ನು ರಕ್ಷಣೆ ಮಾಡಲಿ ಅಂತ ಪ್ರಾರ್ಥನೆ ಮಾಡಿದ್ದಾರೆ. ಅಂದರೆ ಪರಮಾತ್ಮನ ಆಯುಧಗಳು ಶಂಖ ಚಕ್ರ ಪದ್ಮ ಗದಾದಿ ಆಯುಧಗಳು ಹಾಗೂ ಶೇಷ, ಗರುಡ ಮೊದಲಾದಂತಹ ಭಗವಂತನ ಆಸನ, ವಾಹನ ಇವುಗಳೆಲ್ಲವೂ ಕೂಡ ಭಗವಂತನ ವಿಶೇಷ ಸನ್ನಿಧಾನಕ್ಕೆ ಪಾತ್ರವಾದದ್ದರಿಂದ ಆ ಅಭಿಮಾನಿ ದೇವತೆಗಳಲ್ಲಿ ಭಗವಂತನ ವಿಶೇಷ ಸನ್ನಿಧಾನ ಇರುವುದರಿಂದ ಅವುಗಳೆಲ್ಲ ನಮ್ಮನ್ನು ಎಲ್ಲ ಆಪತ್ತುಗಳಿಂದ ರಕ್ಷಣೆ ಮಾಡುತ್ತವೆ ಅಂತ ಅನ್ನುವುದಕ್ಕೆ ಈ ತರಹ ಕಥೆಗಳನ್ನು ಹೇಳುವ ಮೂಲಕ ನಮಗೆ ಹರಿವಂಶ, ಮಹಾಭಾರತಗಳು, ಪುರಾಣಗಳು ತಿಳಿಸಿಕೊಡುತ್ತಾ ಇವೆ. ಪರಮಾತ್ಮನ ವಾಹನ ಗರುಡ ದೇವರು ಗರುಡನ ಆವೇಶ ಸಾತ್ಯಕಿಯಲ್ಲಿ, ಪರಮಾತ್ಮನ ಆಸನ ಶೇಷ ದೇವರು ಹಾಗಾದರೆ ದೇವರ ಸನ್ನಿಧಾನ ಇರುವಂತಹ ವ್ಯಕ್ತಿಗಳ ಅನುಗ್ರಹ ಇದ್ದರೇನೆ ನಮ್ಮ ಆಪತ್ತುಗಳ ಪರಿಹಾರವಾಗುವಾಗ ದೇವರ ಅನುಗ್ರಹದಿಂದ ಪರಿಹಾರವಾಗುತ್ತದೆ ಅಂತ ಏನು ಹೇಳುವುದು ಅನ್ನುವ ಅಂತ ಕೈಮುಕ್ಯವನ್ನು ನಾರಾಯಣವರ್ಮ ತಿಳಿಸಿಕೊಡುತ್ತದೆ. ಅದನ್ನು ಈ ರೀತಿಯ ಕಥೆಗಳಿಂದ ದೃಷ್ಟಾಂತ ಪೂರ್ವಕವಾಗಿ ವಿವರಣೆಯನ್ನು ಮಾಡುತ್ತಾ ತಿಳಿಸಿಕೊಡುತ್ತಾರೆ ಶಾಸ್ತ್ರದಲ್ಲಿ ಅಂತ ನಾವು ಅರ್ಥ ಮಾಡಿಕೊಳ್ಳಬೇಕು.

ಸಾತ್ಯಕಿ ಯುದ್ಧವನ್ನು ಮಾಡುತ್ತಾ ಇದ್ದಾನೆ ಹತ್ತು ಬಾಣಗಳನ್ನು ಬಿಟ್ಟ, ಡಿಭಿಕ ಐದು ಸಾವಿರ ಬಾಣಗಳನ್ನು ಬಿಟ್ಟಿದ್ದಾನೆ ಸಾತ್ಯಕಿಯ ಮೇಲೆ ಅವುಗಳೆಲ್ಲವನ್ನು ಕತ್ತರಿಸಿ ಸಾತ್ಯಕಿ ಏಳೇ ಏಳು ಬಾಣಗಳನ್ನು ಬಿಟ್ಟಿದ್ದಾನೆ. ಎಷ್ಟು ಮಾತನಾಡುತ್ತಾರೆ ಅನ್ನುವುದು ಮುಖ್ಯವಲ್ಲ ಆ ಮಾತಿನೊಳಗೆ ಏನು ಧಾರ್ಢ್ಯ ಇದೆ, ಅದರೊಳಗೆ ಏನು ಯುಕ್ತಿಗಳನ್ನು ಹೇಳಿದ್ದಾರೆ, ಎಂತಹ ಪ್ರಮಾಣಗಳನ್ನು ಕೊಟ್ಟಿದ್ದಾರೆ ಅನ್ನುವುದು ಮುಖ್ಯ. ಶ್ರೀಮದಾಚಾರ್ಯರ ವಚನಗಳು ಬಹಳ ಅಲ್ಪ, ಸಂಕ್ಷಿಪ್ತವಾದ ಭಾಷ್ಯ, ಸಂಕ್ಷಿಪ್ತವಾದ ಅನುವ್ಯಾಖ್ಯಾನ ಆದರೆ ಒಳಗಿರುವಂತಹ ಯುಕ್ತಿಗಳು ಮಾತ್ರ ಅಗಾಧ್ಯವಾದ ಯುಕ್ತಿಗಳು. ಆ ರೀತಿಯಲ್ಲಿ ಆ ಡಿಭಿಕ ಬಹಳಷ್ಟು ಬಾಣಗಳನ್ನು ಬಿಟ್ಟರೂ ಕೂಡ ಸಾತ್ಯಕಿ ತನ್ನ ಕೆಲವೇ ಬಾಣಗಳಿಂದ ಅವುಗಳನ್ನ ನಾಶ ಮಾಡುತ್ತಾ ಇದ್ದ ಅವನು ಐದು ಸಾವಿರ ಬಾಣಗಳನ್ನು ಬಿಟ್ಟರೆ ಇವನು ಏಳೇ ಬಾಣಗಳನ್ನು ಬಿಟ್ಟಿದ್ದಾನೆ. ಅವನು ಒಂದು ಲಕ್ಷ ಬಾಣಗಳನ್ನು ಬಿಡುತ್ತಾನೆ ಡಿಭಿಕ ಅವುಗಳನ್ನೆಲ್ಲ ಇವನು ಕತ್ತರಿಸಿ ಹಾಕುತ್ತಾನೆ ಸಾತ್ಯಕಿ ಅಷ್ಟು ಮಾತ್ರ ಅಲ್ಲ ಅವನ ಧನುರ್ಭಂಗವನ್ನು ಮಾಡುತ್ತಾನೆ. ಧನುರ್ಭಂಗ ಮಾಡಿದರೆ ಅವನು ಜೋರಾಗಿ ಚೂರಿಯಿಂದ ಇವನನ್ನ ಹೊಡೆಯುವುದಕ್ಕೆ ಬರುತ್ತಾನೆ ಅದನ್ನೂ ಇವನು ನಾಶಮಾಡಿ ಹಾಕುತ್ತಾನೆ. ಪುನಃ ಪುನಃ ಇವನು ಧನುರ್ಭಂಗ ಮಾಡಬೇಕು ಸಾತ್ಯಕಿ, ಡಿಭಿಕನು ಹೊಸ ಧನುಸ್ಸು ತೊಗೊಳ್ಳಬೇಕು, ಸಾತ್ಯಕಿ ಒಂದಾದ

ಮೇಲೆ ಒಂದು, ಒಂದಾದ ಮೇಲೆ ಒಂದು ಇಂತಹ 110 ಧನುಸ್ಸುಗಳನ್ನು ಭಂಗ ಮಾಡಿದ್ದಾನೆ ಏನು ಸಾತ್ಯಕಿಯ ಪರಾಕ್ರಮ ನೋಡಿರಿ ಎಷ್ಟು ಧನಸ್ಸುಗಳನ್ನು ಅವನು ತೆಗೆದುಕೊಳ್ಳುತ್ತಾನೋ ಆ ಎಲ್ಲ ಧನಸ್ಸುಗಳ ಭಂಗವನ್ನು ಮಾಡುತ್ತಾ ಇದ್ದಾನೆ. ಭಗವಂತನ ಸರ್ವೋತ್ತಮತ್ವವನ್ನ ವಿರೋಧ ಮಾಡುವುದಕ್ಕೆ ಅವನ ಸರ್ವೋತ್ತಮತ್ವವನ್ನು ಒಪ್ಪದೇ, ದೇವರೇ ನಮಗೆ ಶರಣಾಗತನಾಗಿ ಬರಬೇಕು, ಅವನೇ ನಮಗೆ ಕಪ್ಪು ಕಾಣಿಕೆಗಳನ್ನು ಕೊಡಬೇಕು ಅಂತ ಬಂದವರು ಇವರು ಡಿಭಿಕರು.

ಶ್ರೀಕೃಷ್ಣನೇ ನಮಗೆ ಕಪ್ಪು ಕಾಣಿಕೆಗಳನ್ನು ಕೊಡಬೇಕು ಅಂತ ಬಂದವರು ಇದರ ಅರ್ಥ ಕೃಷ್ಣನನ್ನ ಸರ್ವೋತ್ತಮ ಅಂತ ಒಪ್ಪದೇ ಆ ಶ್ರೀಕೃಷ್ಣ ಪರಮಾತ್ಮನನ್ನ ತನಗಿಂತಲೂ ಚಿಕ್ಕವರು ಅಂತನ್ನುವಂತಹ ದುರ್ಬುದ್ಧಿಯಿಂದ ಬಂದವರು ಅನ್ನುವುದಕ್ಕೆ ಅಂಥವರು ಶ್ರೀಕೃಷ್ಣ ಪರಮಾತ್ಮನ ಸರ್ವೋತ್ತಮತ್ವವನ್ನು ಅಲ್ಲಗಳೆಯುವುದಕ್ಕೆ ಸಾಧ್ಯವಿಲ್ಲ. ಯಾವುದೇ ಅಸ್ತ್ರಗಳಿಂದ ಶಸ್ತ್ರಗಳಿಂದ ತನ್ನನ್ನೇ ಸೋಲಿಸಲಿಕ್ಕೆ ಆಗುವುದಿಲ್ಲ ಅಂದರೆ ತನ್ನ ಸ್ವಾಮಿಯಾದ ಪರಮಾತ್ಮನನ್ನು ಸೋಲಿಸುವುದಕ್ಕೆ ಏನು ಆಗುತ್ತದೆ ಅನ್ನುವುದನ್ನು ಸಾತ್ಯಕಿ ತೋರಿಸಿಕೊಡುತ್ತ ಇದ್ದಾನೆ. ಅವರು ಪ್ರಯೋಗ ಮಾಡಿದ ಎಲ್ಲ ಅಸ್ತ್ರಗಳನ್ನ ಶಸ್ತ್ರಗಳನ್ನ ಪ್ರಯೋಗ ಮಾಡುವುದಕ್ಕೆ ಬೇಕಾದ ಧನುಸ್ಸುಗಳನ್ನು ಬೇಧನ ಮಾಡುವ ಮೂಲಕ ಕೃಷ್ಣನ ಪಾರಮ್ಯವನ್ನು ವಿರೋಧಿಸುವ ಯಾವುದೇ ತರಹದ ಪ್ರಮಾಣಗಳನ್ನು ಕೊಡುವುದಕ್ಕೆ ಸಾಧ್ಯ ಇಲ್ಲ ಆ ಎಲ್ಲ ಪ್ರಮಾಣಗಳಿಗೂ ಸರಿಯಾದಂತಹ ಸಮಾಧಾನವಿದೆ ಅನ್ನುವುದನ್ನ ಸೂಚನೆ ಮಾಡುತ್ತ ಇದ್ದಾನೆ ಸಾತ್ಯಕಿ. ಕೊನೆಗೆ ಈ ಧನಸ್ಸುಗಳಿಂದ ಯುದ್ಧವನ್ನು ಮಾಡುವುದಕ್ಕೆ ಹೊರಟರೆ ಸಾತ್ಯಕಿ ಬಿಡುವುದಿಲ್ಲ ನಿಶ್ಚಿತವಾಗಿಯೂ ಧನುರ್ಭಂಗವನ್ನು ಮಾಡುವ ಕಲೆಯಲ್ಲಿ ನಿಪುಣ ಇವನು ಅಂತ ಇಬ್ಬರೂ ಖಡ್ಗವನ್ನು ತೆಗೆದುಕೊಂಡು ಯುದ್ಧವನ್ನ ಪ್ರಾರಂಭ ಮಾಡಿದ್ದಾರೆ ಭಾರೀ ಯುದ್ಧ ನಡೆಯುತ್ತ ಇದೆ. ದುಶ್ಯಾಸನನ ಮಗ ಭೂರಿಶ್ರವ ಅಭಿಮನ್ಯು ನಕುಲ ಹಾಗೂ ಸಾತ್ಯಕಿ ಡಿಭಿಕ ಈ ಆರು ಜನರು ಖಡ್ಗ ಯುದ್ಧದಲ್ಲಿ ನಿಸ್ಸೀಮರು ತಾತ್ಪರ್ಯ ಭಾರೀ ಅದ್ಭುತವಾದಂತಹ ಯುದ್ಧವನ್ನು ಆಡುವವರು ಅಂತ ಆರು ಜನರ ಲಿಸ್ಟ ಇದೆ ಅದರೊಳಗೆ ಇವರಿಬ್ಬರು ಬರುತ್ತಾರೆ ಸಾತ್ಯಕಿ ಮತ್ತು ಡಿಭಿಕರು ಅಂದಮೇಲೆ ಕೇಳಬೇಕೇ.

ಏತೇಷ್ವೇತೌ ನೃಪಶ್ರೇಷ್ಠೌ ಷಟ್ ಸು ವೈ ನೃಪಸತ್ತಮ ॥ (125.16 ಭವಿಷ್ಯಪರ್ವ)

ಇವತ್ತೆಲ್ಲಾ ಹೇಳುತ್ತಾ ಇರುತ್ತಾರಲ್ಲ ಹತ್ತೇ ಜನರನ್ನ ನಮ್ಮ ದೇಶದೊಳಗೆ ಆರಿಸಿದ್ದಾರೆ ಅದರೊಳಗೆ ಇವರು ಒಬ್ಬರು ಯಾವುದೋ ಒಂದು ಕ್ಷೇತ್ರದೊಳಗೆ ಡಾಕ್ಟರ್ಸೋ ಇಂಜಿನೀಯರ್ಸೋ. ಇಡೀ ದೇಶದೊಳಗೆ ಆರೇ ಆರು ಜನರು ಮಹಾ ಖಡ್ಗಯುದ್ಧ ಪಾರಂಗತರು ಅದರಲ್ಲಿ ಇವರಿಬ್ಬರು ಅಂತ ಇವರಿಬ್ಬರ ಬಗ್ಗೆ ಹೇಳಬೇಕಾಗಿದ್ದರೆ ಎಂತಹ ಭಾರೀ ಯೋಗ್ಯತೆ. ಶ್ರೀಮದಾಚಾರ್ಯರು ಸಂಕ್ಷಿಪ್ತವಾಗಿ ಹೇಳಿದ್ದಾರೆ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಮೂವತ್ತೆರಡು ಪ್ರಭೇದಗಳಿಂದ ಯುದ್ಧವನ್ನು ಮಾಡುತ್ತಾರೆ ಅಂತ. ಆ ಮೂವತ್ತೆರಡು ಪ್ರಭೇದಗಳನ್ನ ಹರಿವಂಶ ತಿಳಿಸಿಕೊಡುತ್ತ ಇದೆ.

ಭ್ರಾನ್ತಮುದ್ ಭ್ರಾನ್ತಮಾವಿದ್ಧಂ ಪ್ರವಿದ್ಧಂ ಬಾಹುನಿಃಸೃತಮ್ ॥ (125.17 ಭವಿಷ್ಯಪರ್ವ)

ಆಕರಂ ವಿಕರಂ ಭಿನ್ನಂ ನಿರ್ಮರ್ಯಾದಮಮಾನುಷಮ್ ।
ಸಂಕೋಚಿತಂ ಕುಲಚಿತಂ ಸವ್ಯಜಾನು ವಿಜಾನು ಚ ॥ (125.18 ಭವಿಷ್ಯಪರ್ವ)

ಆಹಿಕಂ ಚಿತ್ರಕಂ ಕ್ಷಿಪ್ತಂ ಕುಸುಮ್ಬಂ ಲಮ್ಬನಂ ಧೃತಮ್ ।
ಸರ್ವಬಾಹು ವಿನಿರ್ಬಾಹು ಸವ್ಯೇತರಮಥೋತ್ತರಮ್ ॥ (೧೨೫.೧೯ ಭವಿಷ್ಯಪರ್ವ)

ತ್ರಿಬಾಹು ತುಙ್ಗಬಾಹುತ್ವಂ ಸವ್ಯೋನ್ನತಮುದಾಸಿ ಚ ।
ಪಟ್ಟಿಕಂ ಮೌಷ್ಟಿಕಂ ಚೈವ ಯೌಧಿಕಂ ಪ್ರಥಿತಂ ತಥಾ ॥ (125.20 ಭವಿಷ್ಯಪರ್ವ)

ಹೀಗೆ ಮೂವತ್ತೆರಡು ಪ್ರಭೇದಗಳಿವೆ ಖಿಡ್ಗ ಯುದ್ಧದೊಳಗೆ ಆ ಎಲ್ಲಾ ಪ್ರಭೇದಗಳನ್ನ ಇಬ್ಬರೂ ಆಡಿದ್ದಾರೆ. ಯಾರೂ ಸೋಲುತ್ತಾ ಇಲ್ಲ, ಯಾರೂ ಗೆಲ್ಲುತ್ತಾ ಇಲ್ಲ ಅಂತಹ ಪರಾಕ್ರಮಿಗಳು, ಜನರೆಲ್ಲ ಆಶ್ಚರ್ಯ ಪಟ್ಟಿದ್ದಾರೆ.

ಅರ್ಜುನಃ ಸಾತ್ಯಕಿಶ್ಚೈವ ವಾಸುದೇವೋ ಜಗತ್ಪತಿಃ ।
ತ್ರಯ ಏತೇ ಮಹಾವೀರಾಃ ಪ್ರಥಿತಾಃ ಸಜ್ಞರೇ ಸದಾ ॥ (125.25 ಭವಿಷ್ಯಪರ್ವ)

ಡಿಮ್ಭಕಃ ಶಕಿತಿಭೃಚ್ಛರ್ವಸ್ತ್ರಯ ಏತೇ ಮಹಾರಥಾಃ । (125.26 ಭವಿಷ್ಯಪರ್ವ)

ಈ ಕಡೆಗೆ ಅರ್ಜುನ ಸಾತ್ಯಕಿ ಕೃಷ್ಣ, ಸಾತ್ಯಕಿ ಮೇಲೆ ಅರ್ಜುನ ಆಮೇಲೆ ಕೃಷ್ಣ, ಈ ಕಡೆಗೆ ಡಿಂಭಕ ಸ್ಕಂಧ ಶಿವ ಇವರು ಮಾತ್ರ ಈ ತರಹದ ಯುದ್ಧವನ್ನು ಮಾಡುವುದಕ್ಕೆ ಸಮರ್ಥರಾದವರು. ಅಂತಹ ಘನಘೋರವಾದ ಯುದ್ಧವನ್ನು ಮೂವತ್ತೆರಡು ಪ್ರಭೇದಗಳಿಂದ ಯುಕ್ತವಾದದ್ದನ್ನ ಮಾಡಿ ಅವರು ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಇನ್ನೇನು ಪ್ರಯೋಜನ ಇಲ್ಲ ಅಂತ ಮತ್ತೆ ಬೇರೆಯವರ ಜೊತೆಗೆ ಯುದ್ಧ ಮಾಡೋಣ ಯಾಕೆಂದರೆ ಯಾರು ಗೆಲ್ಲುತ್ತಾ ಇಲ್ಲ ಸೋಲುತ್ತಾ ಇಲ್ಲ ಅಂತ ಹೊರಟಿದ್ದಾರೆ.

ಈ ಕಡೆಗೆ ವಸುದೇವ ಉಗ್ರಸೇನ ವೃದ್ಧರು ಇಬ್ಬರೂ ಕೂಡ **'ಜರಾಜರಿತಸರ್ವಾಙ್ಗೌ'**[1] ಅಷ್ಟು ವಯಸ್ಸಾಗಿದೆ ಮುಪ್ಪು, ಕೂದಲು ಬಿಳಿಯಾಗಿವೆ, ಚರ್ಮ ಎಲ್ಲಾ ಜೋತು ಬಿದ್ದಿವೆ. ಅಂತಹ ವಾರ್ಧಕ್ಯದೊಳಗೂ ಕೂಡ ದೇಶದ ರಕ್ಷಣೆ ಮಾಡುವುದು ನಮ್ಮ ಕರ್ತವ್ಯ, ಧರ್ಮಕ್ಕಾಗಿ ಯುದ್ಧವನ್ನು ಮಾಡಬೇಕು, ಧರ್ಮದ ಸಂರಕ್ಷಣೆಯನ್ನು ಮಾಡುವುದಕ್ಕೆ ಯುದ್ಧವನ್ನು ಮಾಡಬೇಕು ಇಲ್ಲದೇ ಇದ್ದರೆ ನಾವು ಬದುಕಿ ಏನು ಸಾರ್ಥಕ.

ನಾರಾಯಣ ದ್ವಿಟ್ ತದನುಬಂಧಿನಿಗ್ರಹಃ ಕ್ಷತ್ರಿಯಾಣಾಂ ।
ಪರಮೋಧರ್ಮಃ ತದ್ವಿರುದ್ಧಃ ಸರ್ವೋಽಪ್ಯಧರ್ಮಃ ॥

ಯಾರು ಶ್ರೀಕೃಷ್ಣ ಪರಮಾತ್ಮನ ದ್ವೇಷವನ್ನು ಮಾಡುತ್ತಾರೋ, ಶ್ರೀಕೃಷ್ಣ ಪರಮಾತ್ಮನ ಆಜ್ಞಾ ರೂಪವಾದಂತಹ ಶ್ರುತಿಸ್ಮೃತಿಗಳನ್ನು ಅಲ್ಲಗಳೆಯುತ್ತಾರೋ ಅವರನ್ನ ಚೆನ್ನಾಗಿ ನಿಗ್ರಹ ಮಾಡಬೇಕಾದದ್ದೇ ನಮ್ಮ ಕರ್ತವ್ಯ ಅನ್ನುವ ದೃಷ್ಟಿಯಲ್ಲಿ ಆ ವಾರ್ಧಕ್ಯದೊಳಗೂ ಕೂಡ **'ಜ್ಞಾನವಿಜ್ಞಾನಸಮ್ಪನ್ನೌ'**[2] ಒಳ್ಳೆಯ ಜ್ಞಾನವನ್ನೂ ಪಡೆದಂತಹ ಮಹಾನುಭಾವರು ತಿಳುವಳಿಕೆ ಇದೆ ಯುದ್ಧವನ್ನು ಮಾಡುತ್ತಾ ಇದ್ದಾರೆ. ಸಾವಿರಾರು ಬಾಣಗಳನ್ನು ಎಸೆಯುತ್ತಾ ಇದ್ದಾರೆ ಅಂತಹ ವಯಸ್ಸಾದಾಗ ಯಾರ ಜೊತೆಗೆ ಯುದ್ಧ ಇವರದು ಹಿಡಿಂಬ ಎಂಬ ರಾಕ್ಷಸ ಏನು ಸಾಮಾನ್ಯನೇ ಭಾರೀ ದೊಡ್ಡದಾದಂತಹ ಪರ್ವತ ಪ್ರಾಯವಾದ ರೂಪ ಅವನದು ಅಷ್ಟು ದೊಡ್ಡ ಆಕಾರ, ದೊಡ್ಡ ಉದರ, ದೊಡ್ಡ

1. 126.1 ಭವಿಷ್ಯಪರ್ವ ; 2. 126.2 ಭವಿಷ್ಯಪರ್ವ

ಕಣ್ಣು ವಿಚಿತ್ರವಾದಂತಹ ಅವನ ಒಂದು ದೊಡ್ಡ ಆಕೃತಿ. ಅಂತಹ ಭೂತಾ ಕೃತಿಯಲ್ಲಿ ನಿಂತಂತಹ, ಪರ್ವತಾಕಾರನಾಗಿ ನಿಂತಂತಹ ಹಿಡಿಂಬನ ಜೊತೆಗೆ ಈ ಇಬ್ಬರು ವೃದ್ಧರು ಅಷ್ಟು ಧೈರ್ಯದಿಂದ ಯುದ್ಧವನ್ನು ಮಾಡುತ್ತಾ ಇದ್ದಾರೆ. ಅವನು ಏನು ಆಟ ಆಡುತ್ತಾ ಇದ್ದಾನೆ ಸುಮ್ಮನೆ ಹುಳಗಳ ಜೊತೆಗೆ ಆಟ ಆಡಿದ ಹಾಗೆ ಸಣ್ಣ ಸಣ್ಣ ಮರಿಗಳ ಜೊತೆಗೆ ಆನೆಗಳು ಕುದುರೆಗಳು ಒಂಟೆಗಳು ರಥಗಳು ಪದಾತಿಗಳು ಅವರವರೊಳಗೆ ಯುದ್ಧವನ್ನು ಮಾಡಿಸುವುದು ಅವರೆಲ್ಲರನ್ನ ಸ್ವಾಹ ಮಾಡುವುದು. ಹೇಗೆ ಕೇವಲ ಬಾಯಿಯಲ್ಲಿ ಹಾಕಿಕೊಂಡು ತಿನ್ನುವುದಲ್ಲ ತಾನು ಮೂಗಿನೊಳಗೆ ಜೋರಾಗಿ ಶ್ವಾಸ ತೆಗೆದುಕೊಂಡರೆ ಮೂಗಿನೊಳಗೆ ಹೋಗಬೇಕು ಆ ರೀತಿ ತಾನು ಆಹಾರ ಮಾಡುತ್ತಾ ಇದ್ದಾನೆ.

ಮನುಷ್ಯಾನ್ ಸ ಪುರೋ ದೃಷ್ಟ್ವಾ ನಾಸ್ಯಗ್ರಾಸಂ ಚಕಾರ ಸಃ । (126.9 ಭವಿಷ್ಯಪರ್ವ)

ಜೋರಾಗಿ ಶ್ವಾಸ ತೆಗೆದುಕೊಂಡ ಅಂದರೆ ಅದು ಹೊಟ್ಟೆಯಲ್ಲಿ ಹೋಗಬೇಕು ಅಂತಹ ದೊಡ್ಡ ಮೂಗುಗಳು ಹಿಡಿಂಬಿನವು ಹಾಗೆ ಯುದ್ಧ ಮಾಡುತ್ತಾ ಇದ್ದಾನೆ ಎಲ್ಲ ಯಾದವರು ತತ್ತರಿಸಿ ಹೋಗಿದ್ದಾರೆ. ಏನೋ ಬಾಣಗಳನ್ನು ಹೊಡೆಯುತ್ತಾನೆ ಅಂದರೆ ತಿರುಗಿ ಬಾಣ ಹೊಡೆಯಬಹುದು ಒಳಗೆ ನುಂಗಿದರೆ ಏನು ಮಾಡಬೇಕು ಎಷ್ಟೋ ಜನರನ್ನು ತಿಂದು ಬಿಟ್ಟಿದ್ದಾನೆ.

ಕ್ಷಣೇನೈಕೇನ ಸರ್ವಾಂಸ್ತಾನ್ ಭಕ್ಷಯಾಮಾಸ ರಾಕ್ಷಸಃ ॥ (126.12 ಭವಿಷ್ಯಪರ್ವ)

ಎಷ್ಟೋ ಜನ ಹೆದರಿ ಓಡಿ ಹೋಗಿದ್ದಾರೆ, ಕೆಲವರನ್ನೆಲ್ಲ ತಿಂದು ಬಿಟ್ಟಿದ್ದಾನೆ. ಈ ರೀತಿ ಯುದ್ಧ ನಡೆಯುತ್ತಾ ಇದೆ. ಕೊನೆಗೆ ಈ ಉಗ್ರಸೇನ ಮತ್ತು ವಸುದೇವ ಇವರಿಬ್ಬರನ್ನು ನುಂಗಿ ಬಿಡುತ್ತೇನೆ ಮತ್ತು ಇವರ ಕೈಯಲ್ಲಿದ್ದ ಧನುಸ್ಸನ್ನು ಕಸಿದುಕೊಂಡು ಬಾಯಿಯಲ್ಲಿ ಹಾಕಿಕೊಳ್ಳಬೇಕು ಅಂತ ಜೋರಾಗಿ ದೊಡ್ಡ ಬಾಯಿಯನ್ನು ತೆಗೆದುಕೊಂಡು ಬರುತ್ತಾ ಇದ್ದಾನೆ. ಇವರಿಬ್ಬರೂ ಕೂಡ ಗಾಬರಿಯಾಗಿ ನೋಡುತ್ತಾ ಇದ್ದಾರೆ.

ಏಷ ವಾಂ ಭಕ್ಷ್ಯಯಿಷ್ಯಾಮಿ ವಸುದೇವಂ ತ್ವಯಾ ಸಹ ।
ಉಗ್ರಸೇನ ಕಿಮರ್ಥಂ ತ್ವಂ ತಿಷ್ಠಸೇ ಮತ್ಪುರೋಗಮಃ ॥ (126.22 ಭವಿಷ್ಯಪರ್ವ)

ವಸುದೇವನನ್ನ ಕೈಯಲ್ಲಿ ಹಿಡಿದಿದ್ದಾನೆ, ಉಗ್ರಸೇನ ದೂರದಲ್ಲಿ ನಿಂತರೆ ಯಾಕೆ ದೂರದಲ್ಲಿ ನಿಂತಿದ್ದೀ ಬಾ ಇಬ್ಬರನ್ನು ತಿಂದು ಬಿಡುತ್ತೇನೆ ಅಂತ ಅನ್ನುತ್ತಾನೆ. ಇಂತಹ ಸಂದರ್ಭದಲ್ಲಿ ಬಲರಾಮ ದೇವರು ನೋಡಿದರು ಇದು ಸರಿಯಾದದ್ದಲ್ಲ, ಬಲರಾಮ ದೇವರು ಹಂಸನ ಜೊತೆಗೆ ಯುದ್ಧ ಮಾಡುತ್ತ ಇದ್ದರು. ಆ ಹಂಸನನ್ನ ಕೃಷ್ಣನ ಹತ್ತಿರ ಕಳಿಸಿ ಕೃಷ್ಣನಿಗೆ ಹೇಳಿದ ನೀನು ಎಲ್ಲರನ್ನು ನೋಡಿಕೊಳ್ಳುವುದಕ್ಕೆ ಸರ್ವ ಸಮರ್ಥ ನೀನೇ ಹಂಸನ ಜೊತೆಗೆ ಯುದ್ಧವನ್ನು ಮಾಡು. ನಾನು ವಸುದೇವ ಹಾಗೂ ಉಗ್ರಸೇನರನ್ನ ಈ ಹಿಡಿಂಬನ ಆಹುತಿ ಆಗದೇ ಇರುವಂತೆ ಅವರನ್ನು ಮೋಚನೆ ಮಾಡಬೇಕು ಅಂತ ಶೀಘ್ರದಲ್ಲಿ ಓಡಿ ಹೋಗಿ ಆ ಹಿಡಿಂಬನ ಜೊತೆಗೆ ಯುದ್ಧವನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದರು. ಯಾವಾಗ ಬಲರಾಮ ದೇವರು ಬಂದರು ಮಹಾ ಪರಾಕ್ರಮಿ ಎದುರಿಗೆ ಬಂದಿದ್ದಾನೆ ಅವನ ಜೊತೆಗೆ ಯುದ್ಧ ಮಾಡುವುದು ಅಂದರೆ ನನಗೊಂದು ದೊಡ್ಡ ಪೌರುಷ ಅದೊಂದು ನನಗೆ ಗೌರವ ಅವನು ಇದ್ದಾಗ ಈ ವೃದ್ಧರ ಜೊತೆಗೆ ಯುದ್ಧ ಮಾಡಿದರೆ ನನಗೆ ಅಪಕೀರ್ತಿ ಅನ್ನುವ ದೃಷ್ಟಿಯಲ್ಲಿ ಅವರನ್ನು ಬಿಟ್ಟುಬಿಟ್ಟ ಬಲರಾಮ ದೇವರ ಜೊತೆಗೆ ಯುದ್ಧಕ್ಕೆ ಬಂದ. ಅದೇ ಬೇಕಾಗಿತ್ತು ಬಲರಾಮ ದೇವರಿಗೆ ಆ ವೃದ್ಧರನ್ನ ತಂದೆ ಹಾಗೂ ರಾಜನಾದ ಉಗ್ರಸೇನನನ್ನ ಪೀಡಿಸಬಾರದು ಅನ್ನುವುದಕ್ಕೋಸ್ಕರ ಬಲರಾಮ ದೇವರು ಯುದ್ಧವನ್ನು

ಮಾಡುತ್ತಾ ಇದ್ದಾರೆ. ಭಾರೀ ಘೋರವಾದ ಯುದ್ಧವನ್ನು ಮಾಡುತ್ತ ಅವನು ಹೇಗೆ ಮಾಡುತ್ತ ಇದ್ದ ಯುದ್ಧ ಈಗ ಬಾಣ ಗೀಣ ಎಲ್ಲಾ ಬಿಡುವುದು ಬರೀ ತಿನ್ನುವುದು ಒಂದೇ ಕೆಲಸ ಅವನದು ದೊಡ್ಡ ಬಾಯಿಯನ್ನ ತೆಗೆದು ಹಾಗೆ ಬಾಯಿ ತೆಗೆದುಕೊಂಡೇ ಮುಂದೆ ಬರುತ್ತ ಇದ್ದಾನೆ, ಯಾರು ಯಾರು ದಾರಿಯಲ್ಲಿ ಬರುತ್ತಾರೋ ಅವರೆಲ್ಲ ಒಳಗೆ ಹೋಗುತ್ತ ಇರಬೇಕು.

ಹಾಗೆ ಬಲರಾಮ ದೇವರನ್ನೂ ನುಂಗುವುದಕ್ಕೆ ಅಂತ ಬರುತ್ತಾನೆ ಆದರೆ ಬಲರಾಮ ದೇವರು ಅವನನ್ನ ಮುಷ್ಟಿಯಿಂದ ಜೋರಾಗಿ ಒಂದು ಹೊಡೆಯುತ್ತಾರೆ ಆಮೇಲೆ ಮುಷ್ಟಿ ಯುದ್ಧ ಪ್ರಾರಂಭವಾಗುತ್ತದೆ ಒಬ್ಬರಿಗೊಬ್ಬರು ಮುಷ್ಟಿ ಯುದ್ಧ. ಬಲರಾಮ ದೇವರು ನೋಡಿದರು ಇವನ ವರ್ಣನೆ ಕೇಳಿದಿರಿ ಎಂತಹ ಪರ್ವತ ಪ್ರಾಯವಾದ ದೇಹ, ಬಲರಾಮ ದೇವರು ಎಲ್ಲಿಯೋ ಒಂದು ಕಡೆಗೆ ಮುಷ್ಟಿಯಿಂದ ಗುದ್ದಿದರೆ ಏನಾಗಬೇಕು ಅಂತ ಅಂದುಕೋಬೇಡಿ ಇವರ ಮುಷ್ಠಿ ಪ್ರಹಾರ ತಾಳುವುದಕ್ಕೆ ಆಗಿಲ್ಲ ಅವನಿಗೆ. ಕೊನೆಗೆ ತಲ ಹಸ್ತತಲ ಆ ಕೈಯಿಂದ ಬಲರಾಮ ದೇವರು ಜೋರಾಗಿ ಹೊಡೆದರೆ ಜೋರಾಗಿ ಪೆಟ್ಟು ಬಿದ್ದಿದೆ ಕೆಳಗೆ ಬಿದ್ದಿದ್ದಾನೆ ಮೇಲೆ ಏಳುವುದಕ್ಕೆ ಆಗುತ್ತ ಇಲ್ಲ ಮೊಳಕಾಲ ಮೇಲೆ ನಿಂತಿದ್ದಾನೆ ಇದೇ ಅವಕಾಶ ಅಂತ ಬಲರಾಮ ದೇವರು ಅವನ ಎರಡೂ ಕಾಲಗಳನ್ನು ಚೆನ್ನಾಗಿ ಹಿಡಿದಿದ್ದಾರೆ. ಅಂತಹ ಕ್ರೂರವಾದಂತಹ ವಿಕೃತವಾದ ಪರ್ವತ ಪ್ರಾಯವಾದ ರೂಪವನ್ನು ಇಟ್ಟುಕೊಂಡಂತಹ ಹಿಡಿಂಬನ ಎರಡೂ ಕಾಲುಗಳನ್ನು ಹಿಡಿದು ಗರ ಗರ ಗರ ತಿರುಗಿಸುತ್ತಾರೆ ಬಲರಾಮ ದೇವರು. ಬಲರಾಮ ದೇವರ ಸಾಮರ್ಥ್ಯ ಏನು ನೋಡಿಕೊಳ್ಳಿ ಇಡೀ ಬ್ರಹ್ಮಾಂಡವನ್ನೇ ತಲೆಯ ಮೇಲೆ ಸಾಸಿವೆ ಕಾಳಿನಂತೆ ಧಾರಣೆ ಮಾಡಿದವರಿಗೆ ಇದೇನು ಆಶ್ಚರ್ಯ ಗರ ಗರ ಅಂತ ತಿರುಗಿಸಿ ಎಸೆದರೆ ಎಷ್ಟು ದೂರ ಹೋಗಿ ಬೀಳುತ್ತಾನೆ ಅಂತ.

ಗವ್ಯೂತಿಮಾತ್ರಂ ಚಿಕ್ಷೇಪ ತತೋ ದೇಶಾದ್ಬಲಾಯುದಃ । (126.43 ಭವಿಷ್ಯಪರ್ವ)

ಮುಂದೆ ಭೀಮಸೇನ ದೇವರು ಹಿಡಿಂಬನನ್ನು ಸಂಹಾರ ಮಾಡಬೇಕಾಗಿದೆ ಅದಕ್ಕೋಸ್ಕರ ಬಲರಾಮ ದೇವರು ಸಂಹಾರ ಮಾಡಲಿಲ್ಲ ಎಸೆದು ಬಿಟ್ಟರು ಅಷ್ಟೇ. ಗವ್ಯೂತಿ ಅಂತ ಗವ್ಯೂತಿ ಅಂದರೆ ಎರಡು ಕ್ರೋಷಗಳು ಹಿಂದೆ ಬಂದಿದೆ ಒಂದು ಸಾವಿರ ಧನುಸ್ಸ್ಯದಷ್ಟು ಪ್ರಮಾಣ ಅಳತಿ ಅದಕ್ಕೆ ಒಂದು ಕ್ರೋಷ ಅನ್ನುತ್ತಾರೆ, ಅದರ ಎರಡರಷ್ಟು ಎರಡು ಕ್ರೋಷ. ಎರಡು ಸಾವಿರ ಧನುಸ್ಸುಗಳಷ್ಟು ಪ್ರಮಾಣಕ್ಕೆ ಒಂದು ಗವ್ಯೂತಿ ಅಂತ ಕರೆಯುತ್ತಾರೆ. ಎರಡು ಸಾವಿರ ಧನುಸ್ಸುಗಳಷ್ಟು ದೂರ ಹಿಡಿಂಬನನ್ನು ಎಸೆದಿದ್ದಾರೆ ಬಲರಾಮ ದೇವರು ಅಂತ ಹರಿವಂಶ ನಮಗೆ ತಿಳಿಸುತ್ತಾ ಇದೆ. ಆದರೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಹೇಳುವಾಗ ಒಂದು ಪಾದ ಯೋಜನ ಅಂತ ಹೇಳುತ್ತಾರೆ.

ಅಥೈನಮುದ್ಧತಂ ಬಲಾದ್ ಬಲಃ ಸ ದೂರ ಆಕ್ಷಿಪತ್ ।
ಪಪಾತ ಪಾದಯೋಜನೇ ಸ ನಾಜಗಾಮ ತಂ ಪುನಃ ॥ (17.264 ಮಭಾತಾನಿರ್ಣಯ)

ಅಂತ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಶ್ರೀಮದಾಚಾರ್ಯರು ಹೇಳುವಾಗ ಬಲರಾಮ ದೇವರು ಎಷ್ಟು ದೂರ ಎಸೆದರು ಅಂದರೆ ಪಾದ ಯೋಜನಾ ಅಂತ. ವಾದಿರಾಜ ಶ್ರೀಪಾದಂಗಳವರು, ಜನಾರ್ದನ ಭಟ್ಟರು ಹಾಗೂ ವರದರಾಜಾಚಾರ್ಯರು ಹೀಗೆ ಎಲ್ಲ ವ್ಯಾಖ್ಯಾನಕಾರರು ಕೂಡ ಆ ಪಾದ ಯೋಜನ ಶಬ್ದಕ್ಕೆ ಅರ್ಥ ಬರೆಯುತ್ತಾರೆ. ಪಾದ ಯೋಜನ ಅಂದರೆ ಯೋಜನದ ಪಾದ ಅಂತ ಅರ್ಥ ಅಲ್ಲ, ಪಾದ ಸಹಿತವಾದ ಯೋಜನ ಅಂತ. ಇದೀಗ ಕೇಳಿದಿರಲ್ಲ ಒಂದು ಸಾವಿರ ಧನುಸ್ಸು ಪ್ರಮಾಣ ಒಂದು ಕ್ರೋಷ, ಎರಡು ಕ್ರೋಷ ಅಂದರೆ ಒಂದು

ಗವ್ಯೂತಿ, ನಾಲ್ಕು ಕ್ರೋಷ ಅಂದರೆ ಒಂದು ಯೋಜನ ಅಂದರೆ ನಾಲ್ಕು ಸಾವಿರ ಧನುಸ್ಸುಗಳ ಪ್ರಮಾಣವಾಗುತ್ತದೆ ಅದು ಒಂದು ಯೋಜನ. ಅದಕ್ಕೆ ಮತ್ತೆ ಒಂದು ಪಾದ ಸೇರಿಸಬೇಕು ಅಂದರೆ ಯೋಜನದ ಒಂದು ಪಾದ ಅಂದರೆ ಎಷ್ಟು ನಾಲ್ಕು ಕ್ರೋಷ ಅಂದರೆ ಒಂದು ಯೋಜನ. ಅದರ ಒಂದು ನಾಲ್ಕಾಂಶ ಅಂದರೆ ಒಂದು ಕ್ರೋಷ ಹಾಗಾದರೆ ನಾಲ್ಕು ಕ್ರೋಷಗಳು ಜೊತೆಗೆ ಒಂದು ಕ್ರೋಷ ಸೇರಿದರೆ ಐದು ಕ್ರೋಷ ಅಂತಾಯಿತು ಪಂಚಕ್ರೋಷ ಅಂತ ವಾದಿರಾಜ ಶ್ರೀಪಾದಂಗಳವರು ಹಾಗೂ ಎಲ್ಲ ವ್ಯಾಖ್ಯಾನಕಾರರು ಬರೆದಿದ್ದಾರೆ. ಹಾಗಾದರೆ ಪಾದ ಯೋಜನ ಅಂದರೆ ಐದು ಕ್ರೋಷಗಳು ಪಂಚ ಕ್ರೋಷ ಆದರೆ ಇಲ್ಲಿ ಹರಿವಂಶವು ಹೇಳುವ ಪ್ರಕಾರ ಗವ್ಯೂತಿ, ಗವ್ಯೂತಿ ಅಂದರೆ ಎರಡೇ ಕ್ರೋಷಗಳು ಆಯಿತು. ಪಾದ ಯೋಜನ ಶಬ್ದಕ್ಕೆ ಹೀಗೂ ಅರ್ಥ ಮಾಡಬಹುದು ಪಾದ ಯೋಜನ ಅಂದರೆ ಯೋಜನದ ನಾಲ್ಕನೆಯ ಒಂದು ಭಾಗ ಅಂದರೆ ಒಂದೇ ಕ್ರೋಷ ಅಂತೆ ಆಗಲೂ ಹರಿವಂಶದ ವಿರೋಧ ಬರುತ್ತದೆ. ಯೋಜನದ ನಾಲ್ಕನೆಯ ಒಂದು ಭಾಗ ಅಂದರೆ ಒಂದು ಕ್ರೋಷ ಆಗುತ್ತೆ ಎರಡು ಕ್ರೋಷ ಅಂತ ಹೇಳುವ ಹರಿವಂಶದ ವಿರೋಧ, ಟಿಪ್ಪಣಿಕಾರರು ಹೇಳುವ ರೀತಿಯಲ್ಲಿ ಪಂಚ ಕ್ರೋಷ ಅಂತ ಇಟ್ಟುಕೊಂಡರೆ ಜಾಸ್ತಿ ಆಯಿತು ಇಲ್ಲಿ ಎರಡೇ ಹೇಳಿದ್ದಾರೆ ಆಗ ಹೇಗೆ ಅಂತ. ಈ ರೀತಿ ಚಿಂತನೆ ಬಂದರೆ ಅದಕ್ಕೊಂದು ನಾವು ಇಲ್ಲಿ ಶ್ರೀಮದಾಚಾರ್ಯರ ಶಬ್ದ ಪ್ರಯೋಗಗಳು ಬಹಳ ಗಂಭೀರವಾದದ್ದು ಇರುತ್ತದೆ ನೋಡಿ ಇಷ್ಟು ನೋಡಿದರೆ ಅಯ್ಯೋ ವಿರೋಧ ಬಂತಲ್ಲ ಅಂತ ಅನಿಸುತ್ತೆ ಮತ್ತೊಮ್ಮೆ ಶ್ರೀಮದಾಚಾರ್ಯರ ವಾಕ್ಯವನ್ನು ಪಾರಾಯಣ ಮಾಡಿದರೆ ಆಗ ನಮಗೆ ತೋರುತ್ತದೆ. ನೋಡಿ ಹರಿವಂಶದ ವಾಕ್ಯ **'ಗವ್ಯೂತಿ ಮಾತ್ರಂ ಚಿಕ್ಷೇಪ'** ಎರಡು ಕ್ರೋಷಗಳಷ್ಟು ದೂರ ಬಲರಾಮ ದೇವರು ಎಸೆದರು ಅಂತ ಇದೆ. ಶ್ರೀಮದಾಚಾರ್ಯರ ಶಬ್ದ ಪ್ರಯೋಗ ನೋಡಿ, **'ಪಪಾತ ಪಾದಯೋಜನೇ ಸ ನಾಜಗಾಮ ತಂ ಪುನಃ'** ಎಸೆದದ್ದರ ಬಗ್ಗೆ ಹೇಳಲಿಲ್ಲ ಎಸೆದರು ಅಂತ ಹೇಳಿದ್ದಾರೆ ಶೀರಮದಾಚಾರ್ಯರು ಎಷ್ಟು ಅಂತ ಹೇಳಿಲ್ಲ.

ಅಥೈನಮುದ್ಧತಂ ಬಲಾದ್ ಬಲಃ ಸ ದೂರ ಅಕ್ಷಿಪತ್ ।
ಪಪಾತ ಪಾದಯೋಜನೇ ಸ ನಾಜಗಾಮ ತಂ ಪುನಃ ॥ (17.264 ಮಭಾತಾನಿರ್ಣಯ)

ದೂರ ಎಸೆದ ಅಂತ ಹೇಳಿಬಿಟ್ಟರು ಎಷ್ಟು ದೂರ ಹೇಳಲಿಲ್ಲ. ಅದು ಎಷ್ಟು ದೂರ ಅಂದರೆ ಗವ್ಯೂತಿ, ಹರಿವಂಶ ಹೇಳಿದೆ ಅಲ್ಲ ಮತ್ತೆ ನಾವು ಏನು ಹೇಳುವುದು ಅಂತ ಬಿಟ್ಟರು ಶ್ರೀಮದಾಚಾರ್ಯರು. ಎರಡು ಗವ್ಯೂತಿ ಎರಡು ಕ್ರೋಷಗಳಷ್ಟು ದೂರ ಬಲರಾಮ ದೇವರು ಎಸೆದದ್ದು, ಎಸೆದಾಗ ಅಷ್ಟಕ್ಕೆ ಬಿದ್ದ ಅವನು. ಬಿದ್ದ ಮೇಲೆ ಏನು ಉರುಳುತ್ತಾ ಉರುಳುತ್ತಾ ಮುಂದೆ ಹೋದ ನೋಡಿ, ಆ ಹೋದದ್ದು ಮತ್ತೆ ಮೂರು ಕ್ರೋಷ, ಒಟ್ಟು ಸೇರಿ ಐದು ಕ್ರೋಷ ಕೊನೆಗೆ ಹೋಗಿ ಬಿದ್ದು ನಿಂತನಲ್ಲ ಅದು ಐದು ಕ್ರೋಷ. ಅದಕ್ಕಾಗಿ ಶ್ರೀಮದಾಚಾರ್ಯರು ಪಪಾತ ಆಗ ಪಾದ ಯೋಜನ ಅಂದಿದ್ದಾರೆ, ದೂರ ಎಷ್ಟು ದೂರ ಹೇಳಲಿಲ್ಲ. ಹೀಗೆ ಶ್ರೀಮದಾಚಾರ್ಯರ ಶಬ್ದಗಳ ಸ್ವಾರಸ್ಯ ಇರುತ್ತದೆ.

ನೀವು ಗಮನಿಸಬಹುದು ಅಂದರೆ ಯಾವುದಾದರೂ ಒಂದು ವಸ್ತುವನ್ನು ಎಸೆದರೆ ಒಂದು ಪಾಯಿಂಟ್‌ಗೆ ಅದು ನೆಲವನ್ನು ಕಚ್ಚುತ್ತದೆ ಆದರೆ ಅಲ್ಲಿ ನಿಲ್ಲಲ್ಲ ಮತ್ತೆ ಮುಂದೆ ಹೋಗುತ್ತದೆ ಹಾಗೆ. ಹಾಗೆ ಬಲರಾಮ ದೇವರ ಆ ಬಲ ಹೇಳಿ ಕೇಳಿ ಬಲರಾಮ ದೇವರು ಅವರ ಬಲ ಎಷ್ಟು ಅಷ್ಟು ಜೋರಾಗಿ ಅವನನ್ನು ಎಸೆದರೆ ಎರಡು ಕ್ರೋಷಗಳಿಗೆ ನೆಲ ಕಚ್ಚಿ ಮುಂದೆ ಮೂರು ಕ್ರೋಷಗಳವರೆಗೆ ಉರುಳಿ ಉರುಳಿ ಉರುಳಿ ಉರುಳಿ ಹೋಗಿದ್ದಾನೆ.

ಆಮೇಲೆ ಅಲ್ಲಿ ಬಿದ್ದ ನೋಡುತ್ತಾನೆ ಅವಮಾನ ಆಗಿಹೋಯಿತು. ಇನ್ನೇನು ತಿರುಗಿ ಹೋಗುವುದು ಇನ್ನು ಗೆದ್ದರೂ ಸೋತ ಹಾಗೇನೆ ಇಷ್ಟು ದೂರ ನನ್ನನ್ನು ಎಸೆದ ಮೇಲೆ ಎಂತಹ ಅವಮಾನ ಇನ್ನು ನಾನು ತಿರುಗಿ ಹೋಗುವುದಿಲ್ಲ ಅಂತ ಅವನು ಓಡಿ ಹೋಗಿ ಬಿಟ್ಟ. ಹಂಸ-ಡಿಭಿಕರ ಸಹಾಯಕ್ಕೆ ಬಂದ ವಿಚಕ್ರ ಮೃತನಾದ, ಹಿಡಿಂಬ ಓಡಿ ಹೋದ. ಆ ರೀತಿ ಬಲರಾಮ ದೇವರು ಅವನನ್ನು ಓಡಿಸಿ ಬಿಟ್ಟಿದ್ದಾರೆ ಅಷ್ಟರೊಳಗೆ ಸೂರ್ಯಾಸ್ತವಾಗುತ್ತಾ ಇದೆ. ಸೂರ್ಯಾಸ್ತವಾಗಿದೆ ಆಗ ಜೋರಾಗಿ ಉದ್ಘೋಷಣೆ ಮಾಡಿದ್ದಾರೆ. ಹಂಸ-ಡಿಭಿಕರೇ ಇನ್ನು ಮೇಲೆ ಇಲ್ಲಿ ಯುದ್ಧ ಆಗುವುದಿಲ್ಲ ಸೂರ್ಯಾಸ್ತ ಆಯಿತು ಸೂರ್ಯೋದಯ ಆಗುವ ಹೊತ್ತಿಗೆ ನೀನು ಗೋವರ್ಧನಕ್ಕೆ ಬರಬೇಕು ಅಂತ ನೋಡಿ ಯಾಕೆಂದರೆ ಇಬ್ಬರಿಗೂ ಸಮ ಸಮ ಆಗಬೇಕಲ್ಲ. ಎಲ್ಲಿ ಯುದ್ಧ ಪುಷ್ಕರದಲ್ಲಿ ಯುದ್ಧ ಅಂತ ಹೇಳಿದವ ಹಂಸ ಮತ್ತು ಡಿಭಿಕ ಅವರ ಅಪೇಕ್ಷೆಗೆ ತಕ್ಕಂತೆ ಪುಷ್ಕರಕ್ಕೆ ಬಂದಾಯಿತು ಈಗ ನೀನು ಹೇಳಿದಲ್ಲಿ ಮಾತ್ರ ಯಾಕೆ ಒಂದು ಸಲ ನಾವು ಹೇಳಿದಲ್ಲಿ ನೀವು ಬನ್ನಿ ಯುದ್ಧಕ್ಕೆ ನಾಳೆ ಬೆಳಗಾಗುವುದರೊಳಗೆ ಗೋಕುಲ ಹತ್ತಿರ ಇರುವ ಗೋವರ್ಧನ ಪರ್ವತಕ್ಕೆ ಬರುವುದಕ್ಕೆ ಹೇಳಿದ್ದಾರೆ. ಸರಿ ಬೆಳಗಾಗುವುದರೊಳಗೆ ಗೋವರ್ಧನ ಪರ್ವತಕ್ಕೆ ಬಂದಿದ್ದಾರೆ ಎಲ್ಲರೂ ಕೂಡ ಕೃಷ್ಣ ಪರಮಾತ್ಮ ಬಂದಿದ್ದಾನೆ, ಹಂಸ-ಡಿಭಿಕರು ಬಂದಿದ್ದಾರೆ ಅಲ್ಲಿ ಮತ್ತೆ ಯುದ್ಧ ಪ್ರಾರಂಭವಾಗಿದೆ. ಹಂಸ-ಡಿಭಿಕ ಇಬ್ಬರೆ ಉಳಿದಿದ್ದಾರೆ ಈಗ ಅಂದರೆ ಪ್ರಧಾನರಾದವರು ಸೈನ್ಯ ಬೇಕಾದಷ್ಟು ಇದೆ ಆ ಸೈನ್ಯವನ್ನೂ ನಾಶ ಮಾಡಿದ್ದಾರೆ ಯಾದವರು ಬೇಕಾದಷ್ಟು. ಹಂಸ-ಡಿಭಿಕರ ಮೇಲೆ ಬಾಣಗಳ ವೃಷ್ಟಿ ಎಲ್ಲ ಕಡೆಯಿಂದ ಉಗ್ರಸೇನ 73 ಬಾಣಗಳನ್ನು ಬಿಟ್ಟಿದ್ದಾನೆ. ಈ ರೀತಿ 36,000 ಎಡಭಾಗದಲ್ಲಿರುವ ನಾಡಿಗಳು, 36,000 ಬಲಭಾಗದಲ್ಲಿರುವ ನಾಡಿಗಳು, 72,000 ಮಧ್ಯದಲ್ಲಿ ಇರುವ ನಾಡಿ ಅನ್ನುವ ಲೆಕ್ಕದಲ್ಲಿ 73 ಆ ಎಲ್ಲಾ ನಾಡಿಗಳ ಮೇಲೆ ಕಂಪನ ಉಂಟಾಗುವ ರೀತಿಯಲ್ಲಿ ಉಗ್ರಸೇನ 73 ಬಾಣಗಳನ್ನು ಬಿಟ್ಟಿದ್ದಾನೆ. ವಿರಾಟ 30 ಬಾಣಗಳನ್ನು ಬಿಟ್ಟಿದ್ದಾನೆ ಏನೇನು ತಾನು ಮೂವತ್ತು ಭಾಗವತ ಧರ್ಮಗಳ ಪರಿಪಾಲನೆಯನ್ನು ಮಾಡಿದ್ದಾನೆ ಅವುಗಳ ವಿಶೇಷವಾದ ಶಕ್ತಿಯನ್ನು ಉಪಯೋಗಿಸಿ ಈ ಅಧರ್ಮವನ್ನು ಧ್ವಂಸ ಮಾಡೋಣ ಅಂತ ಈ ರೀತಿ ಅನೇಕ ಅನುಸಂಧಾನಗಳಿಂದ. ಸಾತ್ಯಕಿ 7 ಬಾಣಗಳನ್ನು ಬಿಟ್ಟಿದ್ದಾನೆ **'ಸಪ್ತ ಶಿವಾಸು ಮಾತೃಷು'** ಅಂತ ಆ 7 ಏನು ಶಾಸ್ತ್ರಗಳಿವೆ 4 ವೇದಗಳು ಪುರಾಣ ಇತಿಹಾಸ ಪಂಚರಾತ್ರ ಅವುಗಳಿಂದ ಎಲ್ಲ ಆ ವಿಷ್ಣು ಸರ್ವೋತ್ತಮತ್ವ ವಿರೋಧಿಯಾದ ವಾದಗಳನ್ನು ನಿರಾಕರಣೆ ಮಾಡುವ ರೀತಿಯಲ್ಲಿ 7 ಬಾಣಗಳನ್ನು ಸಾತ್ಯಕಿ ಬಿಟ್ಟಿದ್ದಾನೆ. ವಿಪೃಥು 80 ಬಾಣಗಳನ್ನು, ಉದ್ಧವ 10 ಬಾಣಗಳನ್ನ, ಪ್ರದ್ಯುಮ್ನ 30, ಸಾಂಬ 7, ಅನಾದೃಷ್ಟಿ 61 ಹೀಗೆ ಅವನ ಮೇಲೆ ಬಾಣಗಳ ವೃಷ್ಟಿಯನ್ನು ಮಾಡುತ್ತ ಇದ್ದಾರೆ ಹಂಸ ಹಾಗೂ ಡಿಭಿಕರ ಮೇಲೆ. ಈ ಕಡೆಗೆ ಪರಮಾತ್ಮ ಅವರ ಜೊತೆಗೆ ಯುದ್ಧವನ್ನು ಮಾಡುತ್ತ ಇದ್ದಾನೆ ಅವರು ಸುಮ್ಮನೆ ಸ್ವಲ್ಪ ಹೊತ್ತು ಕುಳಿತಿದ್ದರು ಏನೇನು ಹಾಕುತ್ತೀರಿ ಹಾಕಿರಿ ಅಂತ ಏನು ಆಟ ನೋಡಿರಿ ಅವರದು ಇಷ್ಟೆಲ್ಲಾ ಬಾಣಗಳನ್ನು ಹಾಕುತ್ತಾ ಇದ್ದರೆ ಸುಮ್ಮನೆ ಕೂತಿದ್ದಾರೆ ಏನೋ ಸುರಸಿದ ಹಾಗೆ. ತಿರುಗಿ ತಾವೂ ಬಾಣಗಳನ್ನು ಬಿಡುವುದಕ್ಕೆ ಪ್ರಾರಂಭ ಮಾಡಿದರು ಎಲ್ಲ ಯಾದವರು ಹೆದರಿ ಓಡಿ ಹೋಗಿಬಿಡುತ್ತ ಇದ್ದಾರೆ ಇಬ್ಬರೇ ಬಲರಾಮ ಕೃಷ್ಣ ಇಬ್ಬರು ಗಟ್ಟಿಯಾಗಿ ನಿಂತು ಯುದ್ಧ ಮಾಡುತ್ತ ಇದ್ದಾರೆ ಉಳಿದವರೆಲ್ಲರೂ ಹೆದರಿದ್ದಾರೆ ಅಂತಹ ಪರಾಕ್ರಮಿ ಅವರಿಬ್ಬರೂ ಕೂಡ. ಈ ರೀತಿ ಯಾದವರು ಹಂಸ-ಡಿಭಿಕರ ಮೇಲೆ ಮಾಡುವ ಬಾಣಗಳ ವೃಷ್ಟಿ ಪ್ರತಿಯಾಗಿ ಅವರಿಬ್ಬರು ಮಾಡುವಂತಹ ಬಾಣಗಳ ವೃಷ್ಟಿ, ಅದರಿಂದ ಹೆದರಿ ಯಾದವರು ಓಡುವ ಪ್ರಸಂಗ, ಕೃಷ್ಣ ಬಲರಾಮರು ಇಬ್ಬರು ಮಾತ್ರ ಗಟ್ಟಿಯಾಗಿ ನಿಂತಂತಹ ಒಂದು ಕ್ಷಣ ಆ ಸಂದರ್ಭದಲ್ಲಿ ಇಷ್ಟೊತ್ತು ಕಾಣದಿದ್ದ ಆ ಎರಡು ಭೂತಗಳು ಎರಡು ಭೂತಗಳು ಸಹಾಯಕ್ಕೆ ಬರುತ್ತವೆ ಅಂತ ಹೇಳಿದ್ದರಲ್ಲ ರುದ್ರ ದೇವರು.

ಮಹೋಧರಂ ಚ ಕುಂಡಧಾರಿಣಂ ಚ ಭೂತಕಾವುಭೌ । (17.227 ಮಭಾತಾನಿರ್ಣಯ)

ಆ ಮಹೋಧರ ಹಾಗೂ ಕುಂಡಧಾರಿ ಆ ಎರಡು ಭೂತಗಳು ಇವರಿಬ್ಬರಿಗೆ ಸಹಾಯ ಮಾಡುವ ತನಕ ನೀವು ಅಜೇಯರಾಗುತ್ತೀರಿ ಅಂತ ವರ ಇತ್ತು ಅವಧ್ಯರಾಗುತ್ತೀರಿ ಅಂತ ಅನ್ನುವುದಕ್ಕೋಸ್ಕರ ಆ ಎರಡು ಭೂತಗಳು ಬಂದಿವೆ ನೋಡಿ ಅವರಿಬ್ಬರೂ ಬಂದು ಯುದ್ಧವನ್ನು ಮಾಡುತ್ತ ಇದ್ದಾರೆ. ಭಾರೀ ಘೋರವಾದಂತಹ ಯುದ್ಧವನ್ನು ಮಾಡುತ್ತ ಇದ್ದಾರೆ ಶ್ರೀಕೃಷ್ಣ ಪರಮಾತ್ಮನ ಮೇಲೆ ಶೂಲವನ್ನು ಪ್ರಯೋಗ ಮಾಡಿ ಚೆನ್ನಾಗಿ ಕೃಷ್ಣ ಪರಮಾತ್ಮನನ್ನ ತಿವಿಯುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಬಹಳ ವಿಚಿತ್ರವಾದ ಪ್ರಯೋಗ ಸಾಮಾನ್ಯವಾಗಿ ಈ ರೀತಿ ಅನುಪ್ರಯೋಗ ಮಾಡಿದಾಗ ಜೊತೆಗೆ ಇರುತ್ತವೆ ಆ ಮಧ್ಯದಲ್ಲಿ ಬೇರೆ ಶಬ್ದ ಬರುವುದಿಲ್ಲ **'ಏಧಾಂಚಕಾರ ಏಧಾಂಚಕ್ರೇ ಏಧಾಮಾಸ ಏಧಾಂಬಭೂವ'** ಇಲ್ಲಿ

ಶೂಲೇನ ಪೋಥಯಾಂ ರಾಜಞ್ಚಕ್ರತುರ್ಯಾದವೇಶ್ವರಮ್ ॥ (127.22 ಭವಿಷ್ಯಪರ್ವ)

ಆ ಶೂಲದಿಂದ ಶ್ರೀಕೃಷ್ಣ ಪರಮಾತ್ಮನನ್ನ ಚೆನ್ನಾಗಿ ತಿವಿಯುವುದಕ್ಕೆ ಪ್ರಯತ್ನ ಮಾಡಿದ್ದಾರೆ ಏನಾಗಿಲ್ಲ ಶ್ರೀ ಕೃಷ್ಣ ಪರಮಾತ್ಮನಿಗೆ ನಗುತ್ತಾ ನಿಂತಿದ್ದಾನೆ. **'ಈಷತ್ಸ್ಮಿತಾಧರೋ ದೇವಃ'**[1] ಮುಗುಳ್ನಗೆಯಿಂದ ನಗುತ್ತ ಇದ್ದಾನೆ ಏನೋ ತುರಿಸಿದ ಹಾಗೆ ಮಾಡುತ್ತಾ ಇದ್ದಾರೆ ಅಂತ. ಆಮೇಲೆ ಪರಮಾತ್ಮ ರಥದಿಂದ ಕೆಳಗೆ ಇಳಿದವನೇ ಅವರಿಬ್ಬರನ್ನು ಕೈಯಲ್ಲಿ ತೆಗೆದುಕೊಂಡ ನೋಡಿ ಬಲರಾಮ ದೇವರು ಹಿಡಿಂಬನನ್ನು ಹಿಡಿದ ಹಾಗೆ ಕೃಷ್ಣ ಇವರಿಬ್ಬರನ್ನು ಹಿಡಿದ ಬಲರಾಮ ಕೃಷ್ಣರ ಏನು ಅನಂತ ತಾರತಮ್ಯ ಆದರೆ ವ್ಯತ್ಯಾಸ ಆದರೂ ಅಲ್ಲಿ ಒಬ್ಬ ಹಿಡಿಂಬ ಇಲ್ಲಿ ಇಬ್ಬರು ಮಹೋಧರ ಹಾಗೂ ಕುಂಡಧಾರಿ ಅಜೇಯರು ಅವಧ್ಯರು. ಅವರಿಬ್ಬರನ್ನೂ ಹಿಡಿದು ಗರ ಗರ ಅಂತ ತಿರುಗಿಸಿ ಬೀಸಿ ಎಸೆದ ನೋಡಿರಿ ನಿಮಗೆಲ್ಲ ಗೊತ್ತಿದೆ ಎಲ್ಲಿದೆ ಗೋವರ್ಧನ ಗೋಕುಲ ಮಥುರಾ ಎಲ್ಲಿ ಬರುತ್ತದೆ ಅಂತ ಎಲ್ಲಾ ಗೊತ್ತು. ಆ ಗೋವರ್ಧನ ಗಿರಿಯ ಹತ್ತಿರ ನಿಂತು ಕೃಷ್ಣ ಎಸೆದರೇ ಹೋದರು ಹೋದರು ಹೋದರು ಬದರಿಕಾಶ್ರಮ ದಾಟಿ ಕೈಲಾಸಕ್ಕೆ ಹೋಗಿ ಶಂಕರನ ಮುಂದೆ ಬಿದ್ದಿದ್ದಾರೆ **'ಶಂಕರಾಲಯೇ'**. ಶ್ರೀಮದಾಚಾರ್ಯರು ಅನ್ನುತ್ತಾರೆ **'ಅಮಿತಸ್ಯ ಕಿಂ ತತಃ'** ಅಂತ ಅನಂತ ಬಲನಾದ ಪರಮಾತ್ಮನಿಗೆ ಇದು ಏನು ಭಾರೀ ಆಶ್ಚರ್ಯ ಅಂತ ಇನ್ನು ಯಾರ ಮುಂದಾದರು ಹೊಗಳಲಿಕ್ಕೆ ಹೋಗಬೇಡರಿ ಅಪ್ಪ ನಮ್ಮ ದೇವರಿಗೆ ಬಹಳ ಸಣ್ಣದು ಇದು ಅನಂತ ಪರಾಕ್ರಮಿ ಇರುವ ದೇವರಿಗೆ ಇದೇನು ದೊಡ್ಡದು ಅಷ್ಟು ಜೋರಾಗಿ ತಿರುಗಿಸಿ ಎಸೆದಿದ್ದಾನೆ. ಅಂದರೆ ಪಂಚ ಕ್ರೋಷ ಪಂಚ ಕ್ರೋಷ ಐದು ಸಾವಿರ ಧನುಸ್ಸುಗಳ ಪ್ರಮಾಣದಷ್ಟು ದೂರ ಹಿಡಿಂಬನನ್ನ ಎಸೆದ ಬಲರಾಮನ ಪರಾಕ್ರಮಕ್ಕೂ, ಗೋವರ್ಧನ ಗಿರಿಯಿಂದ ನೇರವಾಗಿ ಕೈಲಾಸಕ್ಕೆ ಇವರಿಬ್ಬರನ್ನ ಎಸೆದಂತಹ ಶ್ರೀಕೃಷ್ಣನ ಪರಾಕ್ರಮಕ್ಕೂ ಎಂತಹ ಅಂತರ ಇದೆ ನೋಡಿ ಆ ತಾರತಮ್ಯವನ್ನು ತೋರಿಸುತ್ತ ಇದ್ದಾರೆ ಅಷ್ಟು ದೂರ ಎಸೆದಿದ್ದಾನೆ ಪರಮಾತ್ಮ.

ಇಲ್ಲಿ ಅವರಿಬ್ಬರೂ ಶೂಲದಿಂದ ಪರಮಾತ್ಮನನ್ನ ತಿವಿಯುವುದಕ್ಕೆ ಪ್ರಯತ್ನ ಮಾಡಿದರು ಅಂತ ಹರಿವಂಶ ಹೇಳುತ್ತದೆ. ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಶ್ರೀಮದಾಚಾರ್ಯರು ಹೇಳಿದ್ದು ಅವರಿಬ್ಬರೂ ಶ್ರೀಕೃಷ್ಣ ಪರಮಾತ್ಮನ ಹೆಗಲ ಮೇಲೆ ಬಂದು ಕೂಡುತ್ತಾರೆ ಒಂದು ಕಡೆಗೆ ಮಹೋಧರ ಇನ್ನೊಂದು ಕಡೆಗೆ ಕುಂಡಧಾರಿ. ಬಂದು ಕುಳಿತು ಕೃಷ್ಣನ ಕಿವಿಯನ್ನ ಕಚ್ಚುತ್ತಾರೆ ಹಲ್ಲಿನಿಂದ, ಕಚ್ಚುವುದಕ್ಕೆ ಪ್ರಯತ್ನ ಮಾಡುತ್ತಾರೆ ಅಂತ ಅರ್ಥ ಕೃಷ್ಣನಿಗೆ ಏನು ಆಗುವುದಿಲ್ಲ ಅದರಿಂದ. ಸುಕರ್ಣಕೌ ಅಂತ ಅಲ್ಲೆಲ್ಲಾ ಸತ್ಯಾಭಿನವ ತೀರ್ಥರು ಬಹಳ ಸುಂದರವಾಗಿ ವರ್ಣನೆ ಮಾಡುತ್ತಾರೆ ಯಾಕೆ ಸುಕರ್ಣಕೌ ಅಂತ ಶ್ರೀಮದಾಚಾರ್ಯರು ಶಬ್ದ ಪ್ರಯೋಗ ಮಾಡಿದ್ದಾರೆ ಅಂದರೆ ಇವರು

1. 127.23 ಭವಿಷ್ಯಪರ್ವ

ಇಷ್ಟು ಕಚ್ಚಿದರು ಏನು ಆಗಿಲ್ಲ ಕರ್ಣಗಳಿಗೆ ಅಂತ ಏನು ಗಾಯ ಇಲ್ಲ ಕೃಷ್ಣನಿಗೆ ನಗು ನಗುತ್ತಾ ಇದ್ದಾನೆ. ಇವರೇನೋ ಹಲ್ಲುಗಳಿಂದ ಕಚ್ಚಬೇಕು ಅಂತ ಪ್ರಯತ್ನ ಮಾಡಿದರು ಆಗಲಿಲ್ಲ ಆಯಿತಾ ನಿಮ್ಮ ಪ್ರಯತ್ನ ಈಗ ನೋಡಿರಿ ಅಂದ ಹೀಗೆ ಹಾರಿಸಿದ ನೋಡಿ ಎರಡೂ ಭುಜಗಳನ್ನು ಹಾರಿಸಿದರೆ ಕೈಲಾಸಕ್ಕೆ ಹೋಗಿ ಬಿದ್ದರು ಅಂತ ಶ್ರೀಮದಾಚಾರ್ಯರು ತಾತ್ಪರ್ಯ ನಿರ್ಣಯದಲ್ಲಿ ತಿಳಿಸುತ್ತಾರೆ. ಆದರೆ ಇಲ್ಲಿ ಮಾತ್ರ ಶೂಲದಿಂದ ಹೊಡೆಯುವ ಪ್ರಸಂಗದಲ್ಲಿ ತನ್ನ ಭುಜ ಪ್ರಯೋಗದಿಂದ ಪರಮಾತ್ಮ ನೂರು ಬಾರಿ ಅವರನ್ನು ತಿರುಗಿಸಿ ಎಸೆದ ಅಂತ ಹರಿವಂಶ ಹೇಳುತ್ತದೆ. ಇದರ ಅಭಿಪ್ರಾಯ ಆ ಪರಮಾತ್ಮನಿಗೆ ಶೂಲದಿಂದ ತಿವಿದರು ಅನ್ನುವ ಶಬ್ದಕ್ಕೆ ನೀವೆಲ್ಲ ಆ ರಾಕ್ಷಸರನ್ನು ನೋಡಿದ್ದೀರಲ್ಲ ಪಾಪ, ನೋಡಿದ್ದೀರಾ ಇಲ್ಲ ಕೇಳಿದ್ದೀರಿ ಅಂತ ಕೇಳುತ್ತಾ ಇದ್ದೀರಿ ವರ್ಣನೆ ಹೇಗೆ ಇರುತ್ತದೆ ಅವರ ಹಲ್ಲುಗಳು ಅಂತ, ಅಂತಹ ಕ್ರೂರವಾದಂತಹ ಹಲ್ಲುಗಳು ಶೂಲದಂತೆ ಇರುತ್ತದೆ. ದೊಡ್ಡ ದೊಡ್ಡ ದೊಡ್ಡ ಸೈನಿಕರ ಗುಂಪನ್ನೇ ನುಂಗಬೇಕು ಅಂದರೆ ಅವರ ಬಾಯಿ, ಅವರ ಹಲ್ಲುಗಳು ಹೇಗೆ ಇತ್ತು ಅಂತ ಊಹೆ ಮಾಡಿಕೊಳ್ಳಿ ಹಾಗಾದರೆ ಅಂತಹ ದೊಡ್ಡದಾದ ಶೂಲದಂತೆ ಉದ್ದಾದ ಹಲ್ಲುಗಳಿಂದ ಕೃಷ್ಣನನ್ನ ಕಚ್ಚುವುದಕ್ಕೆ ಪ್ರಯತ್ನ ಮಾಡಿದರು ಅಂತ ಹರಿವಂಶದ ಅರ್ಥ ಅನ್ನುವುದು ಶ್ರೀಮದಾಚಾರ್ಯರ ಅಭಿಪ್ರಾಯ.

ಸಮಸ್ತ ಯಾದವಾನ್ ರಣೇ ವಿಧೂಯ ತೌ ಜನಾರ್ದನಮ್ ।

ಉಪೇತ್ಯ ಚಾಂಸಗೌ ಹರೇರದಂಶತಾಂ ಸುಕರ್ಣಕೌ ॥ (17.257 ಮಭಾತಾನಿರ್ಣಯ)

ಪ್ರಮಾಣಾಂತರಗಳಿಗೆ ಅನುಗುಣವಾಗಿ ಶ್ರೀಮದಾಚಾರ್ಯರ ಹಲ್ಲುಗಳಿಂದ ಕಚ್ಚಿದರು ಅಂತ ಏನು ಹೇಳುತ್ತಾರೋ ಅದರ ಅರ್ಥ ಶೂಲದಂತೆ ಚೂಪಾದ ಹಲ್ಲುಗಳಿಂದ ಪರಮಾತ್ಮನನ್ನು ಕಚ್ಚುವುದಕ್ಕೆ ಪ್ರಯತ್ನ ಮಾಡಿದರು ಅಂತ. ಪ್ರಯತ್ನ ಮಾಡಿದಾಗ ಪರಮಾತ್ಮ ಅವರನ್ನ ದೂರದಲ್ಲಿ ಎಸೆದ ಅಂತ ಅದರ ಬಗ್ಗೆ ಸ್ಪಷ್ಟವಾಗಿ ಶ್ರೀಮದಾಚಾರ್ಯರು ಏನು ಹೆಗಲನ್ನೇ ಹಾರಿಸಿ ಎಸೆದ ಅಂತ ಇಲ್ಲದೇ ಇರುವುದರಿಂದ ಹರಿವಂಶದಲ್ಲಿ ಹೇಳಿದ ಹಾಗೆ ಅವರನ್ನ ಕೆಳಗೆ ಹಾಕಿ ಕೈಯಿಂದ ನೂರು ಬಾರಿ ತಿರುಗಿಸಿ, ಎಸೆದ ಅಂತ ಹರಿವಂಶದಲ್ಲಿ ಹೇಳಿದ ಹಾಗೆ ಸ್ವೀಕಾರ ಮಾಡಿದರೆ ಯಾವುದೇ ವಿರೋಧ ಅಂತೂ ಇಲ್ಲ. ಆದರೆ ಶೂಲದಿಂದ ಕಚ್ಚಿದರು ಅಥವಾ ಶೂಲದಿಂದ ತಿವಿದರು ಅಂತ ಅನ್ನುವುದಕ್ಕೆ ಇಲ್ಲಿ ಬಂದ ವಿರೋಧವನ್ನು ನಾವು ಈ ರೀತಿ ಪರಿಹಾರ ಮಾಡಿಕೊಳ್ಳಬಹುದು ಅಂತ ಅರ್ಥ ಮಾಡಿಕೊಳ್ಳಬೇಕು. ಆ ರೀತಿ ಅವರನ್ನು ಎಸೆದಿದ್ದಾನೆ ಪರಮಾತ್ಮ, ಎಸೆದಾಗ ಅವರು ಅಲ್ಲಿ ಹೋಗಿ ಬಿದ್ದಿದ್ದಾರೆ. ಮುಂದೆ ಹಂಸನ ಜೊತೆಗೆ ಯುದ್ಧ ಪ್ರಾರಂಭವಾಗುತ್ತ ಇದೆ. **'ಬ್ರಹ್ಮದತ್ತೋ ಮಹೀಪಾಲೋ'**[1] ನಮ್ಮಪ್ಪ ಯಜ್ಞ ಮಾಡುತ್ತಾನೋ ಅದಕ್ಕೋಸ್ಕರ ಒಂದಿಷ್ಟು ಕಪ್ಪು ಕಾಣಿಕೆ ಕೊಟ್ಟುಬಿಟ್ಟರೆ ನಿನ್ನನ್ನು ಬಿಟ್ಟುಬಿಡುತ್ತೇನೆ ಕೃಷ್ಣ, ಯಾಕೆ ಇಷ್ಟು ಕಷ್ಟ ಪಡುತ್ತಾ ಇದ್ದೀ, ಯಾಕೆ ಯುದ್ಧ ಮಾಡುತ್ತಾ ಇದ್ದೀ ಕಪ್ಪು ಕಾಣಿಕೆ ಕೊಡು, ಇಲ್ಲದೆ ಇದ್ದರೆ ಸತ್ತು ಹೋಗುತ್ತಿ ನೋಡು ಅಂತ ಕೃಷ್ಣನಿಗೇ ಹೇಳುತ್ತಾನೆ. ಕೃಷ್ಣ ಏನು ಮಾತನಾಡುತ್ತಾ ಇಲ್ಲ ಸುಮ್ಮನೆ ಇದ್ದಾನೆ ಜೋರಾಗಿ ಒಂದು ಬಾಣದಿಂದ ಕೃಷ್ಣನ ಹಣೆಗೆ ಹೊಡೆದ ನಗುತ್ತಾ ನಿಂತಿದ್ದಾನೆ ಶ್ರೀಕೃಷ್ಣ ಪರಮಾತ್ಮ. ಶ್ರೀಕೃಷ್ಣ ಪರಮಾತ್ಮ ಸಾತ್ಯಕಿಗೆ ಹೇಳಿದ ಸಾತ್ಯಕಿ ಈ ದಾರುಕ ಸಾರಥಿ, ಭಾರೀ ಸಮರ್ಥ ಆದರೆ ಈಗ ಅವನ ಸಾರಥ್ಯ ಸಾಲದು ನೀನು ಕುಳಿತುಕೋ ಸಾರಥಿಯಾಗಿ ದಾರುಕ ಹಿಂದೆ ಕೂಡಲಿ, ಭಾರೀ ವೇಗದಿಂದ ರಥವನ್ನು ಓಡಿಸಬೇಕಾದಂತಹ ಪ್ರಸಂಗ ಇದೆ ಅಂತ ವಿಚಿತ್ರ ವಿಚಿತ್ರ ಮಾರ್ಗಗಳಿಂದ ರಥವನ್ನು ಓಡಿಸುತ್ತಾ ಇದ್ದಾನೆ ಅರ್ಜುನನ ಶಿಷ್ಯ ಅವನು ಸಾತ್ಯಕಿ ಅದ್ಭುತವಾದ ರೀತಿಯಲ್ಲಿ ರಥವನ್ನು ಕೃಷ್ಣನ ಆಜ್ಞೆಯಂತೆ ಓಡಿಸುತ್ತಾ ಇದ್ದಾನೆ. ಕೃಷ್ಣ ಪರಮಾತ್ಮ ಆಗ್ನೇಯಾಸ್ತ್ರವನ್ನು ಬಿಟ್ಟ, ಕೃಷ್ಣ

1. 127.28 ಭವಿಷ್ಯಪರ್ವ



ಪರಮಾತ್ಮ ಆಗ್ನೇಯಾಸ್ತ್ರವನ್ನು ಬಿಟ್ಟರೆ ಅವನು ಅದಕ್ಕೆ ಪ್ರತಿಯಾಗಿ ವಾರುಣಾಸ್ತ್ರವನ್ನು ಬಿಡುತ್ತಾ ಇದ್ದಾನೆ. ಕೃಷ್ಣ ಅನ್ನುತ್ತಾನೆ ನೋಡು, ನಾನೇನು ನಿನಗೆ ಶಸ್ತ್ರಾಸ್ತ್ರಗಳಿಂದ ಸಂಹಾರ ಮಾಡಬೇಕಾಗೇ ಇಲ್ಲ, ಎಂತಹ ಮಹತ್ವದ ಮಾತನ್ನು ಹೇಳುತ್ತಾನೆ. ನೀನೇನು ಆ ದುರ್ವಾಸರೇ ಮೊದಲಾದಂತಹ 3,000 ಯತಿಗಳಿಗೆ ವಸ್ತ್ರಗಳನ್ನ ಹರಿದು, ಪಾತ್ರೆಗಳನ್ನ ಮುರಿದು, ನಾನಾ ರೀತಿಯ ನಿಂದೆಗಳನ್ನು ಮಾಡಿ, ಅವರ ಸನ್ಯಾಸಾಶ್ರಮದ ಧರ್ಮವನ್ನೇ ನಿಂದಿಸಿ ಅಪಚಾರ ಮಾಡಿದ್ದೀಯಲ್ಲ ಆ ಪಾಪದಿಂದಲೇ ನೀನು ಸತ್ತು ಹೋಗುತ್ತೀಯಾ ಅಂತಹ ಘೋರವಾದ ಪಾಪ ಇದೆ ನಿನಗೆ. ಅದರಿಂದ ನೀನು ದೊಡ್ಡ ಶಾಪವನ್ನು ಪಡೆದಿದ್ದೀಯ ಅವರೇನು ನಿನಗೆ ಶಾಪ ಕೊಟ್ಟಿರಲಿಕ್ಕಿಲ್ಲ ಬಾಯಿಯಿಂದ ಆದರೆ **'ಸತಾಂ ಉತ್ಪಾದ್ಯ ಸಂತಾಪಂ ಶಾಪಂ ದೇಹೀತಿ ನೋವದೇತ್'** ಅವರಿಗೆ ಸಂತಾಪ ಉಂಟು ಮಾಡಿದ್ದೀಯಾ ಅಂದರೆ ನಿನಗೆ ಶಾಪ ಬಂದಿದೆ ಅಂತ ಅರ್ಥ.

ಶಾಪೇನ ಯತಿಮುಖ್ಯಾನಾಂ ಹತ ಏವ ನರಾಧಮ ॥ (127.39 ಭವಿಷ್ಯಪರ್ವ)

ನೀನು ಸತ್ತೇ ಹೋಗಿದ್ದೀ ಅವತ್ತೇ, ಈಗ ನಾನು ಬಿಡುವ ಅಸ್ತ್ರಗಳು ಶಸ್ತ್ರಗಳು ಕೇವಲ ನಿಮಿತ್ತ ಮಾತ್ರ ಅಂತ ಕೃಷ್ಣ ಪರಮಾತ್ಮ ಅನ್ನುತ್ತಾನೆ ಅಂದರೆ ತಾತ್ಪರ್ಯ ಶ್ರೀಕೃಷ್ಣ ಪರಮಾತ್ಮನ ಆಜ್ಞಾರೂಪವಾದ ಶಾಸ್ತ್ರಗಳ ಉಲ್ಲಂಘನೆಯನ್ನು ಮಾಡಿ ಶಾಸ್ತ್ರೋಕ್ತವಾದ ಧರ್ಮಗಳನ್ನು ನಿಂದೆ ಮಾಡಿದವರಿಗೆ ಅನರ್ಥವಾಗುವುದು ನಿಶ್ಚಿತ, ಉಳಿದದ್ದು ಎಲ್ಲ ನಿಮಿತ್ತ ಮಾತ್ರ ಅನ್ನುವುದನ್ನ ಕೃಷ್ಣ ಪರಮಾತ್ಮ ತೋರಿಸುತ್ತಾನೆ. ಆದರೆ ಸ್ವಲ್ಪ ಹೊತ್ತು ಕ್ರೀಡೆಯಾಡಿದ್ದಾನೆ ರುದ್ರ ದೇವರ ವರದಿಂದ ಅಷ್ಟು ಅವಧ್ಯನಾದಾಗ ಒಂದೇ ಕ್ಷಣದಲ್ಲಿ ಕೊಲ್ಲುವುದು ಬೇಡ ಅಂತ. ಕೃಷ್ಣ ಆಗ್ನೇಯಾಸ್ತ್ರವನ್ನು ಬಿಟ್ಟರೆ ಇಲ್ಲೆಲ್ಲ ಅಸ್ತ್ರ ಬಿಡುವುದು ಅಂದರೆ ಪ್ರಾರ್ಥನೆ ಮಾಡುವುದು ಅಲ್ಲ ಅಗ್ನಿ ದೇವರಿಗೆ ಹೋಗಪ್ಪ ಅವನನ್ನು ಸುಟ್ಟು ಬರಬೇಕು ಆಜ್ಞೆ ಇದು ಪ್ರಾರ್ಥನೆ ಅಲ್ಲ, ಅಗ್ನಿಗೆ ಆಜ್ಞೆಯನ್ನು ಮಾಡುತ್ತಾನೆ ಹೋಗು ಸುಟ್ಟು ಬಾ ಅಂತ ಅವನು ವರುಣ ದೇವರಿಗೆ ಪ್ರಾರ್ಥನೆ ಮಾಡಬೇಕು, ಪ್ರಾರ್ಥನೆ ಮಾಡಿ ಅವನು ಅಸ್ತ್ರ ಬಿಡುತ್ತಾನೆ. ಆಮೇಲೆ ವಾರುಣಸ್ತ್ರ ಬಿಟ್ಟರೆ ಕೃಷ್ಣ ವಾಯುವ್ಯಾಸ್ತ್ರವನ್ನು ಬಿಡುತ್ತಾನೆ, ಅವನು ಮಾಹೇಂದ್ರಾಸ್ತ್ರ ಬಿಡುತ್ತಾನೆ, ಕೃಷ್ಣ ಮಾಹೇಶ್ವರಾಸ್ತ್ರ ಬಿಡುತ್ತಾನೆ, ಅವನು ರೌದ್ರಾಸ್ತ್ರವನ್ನು ಬಿಡುತ್ತಾನೆ. ಆಮೇಲೆ ಕೃಷ್ಣ ಮೂರು ಅಸ್ತ್ರಗಳನ್ನು ಬಿಡುತ್ತಾನೆ ಗಾಂಧರ್ವಾ, ರಾಕ್ಷಸಾ, ಪೈಶಾಚ ಅದಕ್ಕೆ ಅವನು ನಾಲ್ಕು ಅಸ್ತ್ರಗಳನ್ನು ಬಿಡುತ್ತಾನೆ ಬ್ರಹ್ಮಾಸ್ತ್ರ, ಕೌಬೇರಾಸ್ತ್ರ, ಆಸುರಾಸ್ತ್ರ, ಯಾಮ್ಯಾಸ್ತ್ರ ಅಂತ. ಆಮೇಲೆ ಕೃಷ್ಣ ಪರಮಾತ್ಮ ಬ್ರಹ್ಮಶಿರಸ್ ಎಂಬ ಅಸ್ತ್ರವನ್ನು ಬಿಡುತ್ತಾನೆ ಅವನೂ ಪ್ರತಿಯಾಗಿ ಬ್ರಹ್ಮಶಿರಸ್ ಎಂಬ ಅಸ್ತ್ರವನ್ನು ಬಿಡುತ್ತಾನೆ. ಕೊನೆಗೆ ಕೃಷ್ಣನಿಗೆ ತಾರತಮ್ಯವನ್ನೇ ತೋರಿಸಬೇಕಾಗಿದೆ ಈ ಎಲ್ಲಾ ಅಸ್ತ್ರಗಳನ್ನು ಬಿಟ್ಟರೂ ಅದಕ್ಕೆ ಪ್ರತಿಯಾದ ಅಸ್ತ್ರಗಳು ಇತ್ತು.

ನ ತ್ವತ್ಸಮೋಸ್ತ್ಯಭ್ಯಧಿಕಃ ಕುತೋಽನ್ಯೋ ಲೋಕತ್ರಯೇಽಪ್ಯ ಪ್ರತಿಮಪ್ರಭಾವ ॥ (11.43 ಭ ಗೀತಾ)

ಆದರೆ ಯಾವುದಕ್ಕೆ ಸಮ ಇಲ್ಲ ಉತ್ತಮ ಇಲ್ಲ ಅಂತಹ ಅಸ್ತ್ರ ಅದು ನಾರಾಯಣಾಸ್ತ್ರ, ನಾರಾಯಣಾಸ್ತ್ರವನ್ನು ಯಾವಾಗ ಶ್ರೀಕೃಷ್ಣ ಪರಮಾತ್ಮ ಬಿಡುತ್ತಾನೋ ಏನು ಮಾಡಲಿಕ್ಕೆ ಆಗಲಿಲ್ಲ ಅದಕ್ಕೆ ಪ್ರತಿಯಾದ ಅಸ್ತ್ರವೇ ಇರಲಿಲ್ಲ ಅನ್ನುವುದಕ್ಕಾಗಿ ರಥದಿಂದ ಜಿಗಿದು ಓಡುತ್ತ ಇದ್ದಾನೆ ಅಷ್ಟೇ ಹಂಸ ಇನ್ನೇನು ಮಾಡುತ್ತಾ ಇಲ್ಲ ಯಮುನಾ ನದಿಗೆ ಹೋದ ಹೋದವನೇ ಆ ಯಮುನಾ ನದಿಯಲ್ಲಿ ಹಾರಿದ್ದಾನೆ. ಏನು ಶ್ರೀಕೃಷ್ಣ ಪರಮಾತ್ಮನಿಗೆ ಹೀಗೆ ಹೇಳಬಾರದು ಅನ್ನುತ್ತಾರೆ ಶ್ರೀಮದಾಚಾರ್ಯರು **'ಅಮಿತ ಬಲಸ್ಯ ಕಿಂ ತತಃ'** ಅಂತ ಲೌಕಿಕ ದೃಷ್ಟಿಯಲ್ಲಿ ಏನು ಕೃಷ್ಣನ ಪರಾಕ್ರಮ. ಅವನು ಅಷ್ಟು ವೇಗದಿಂದ ಹೋಗಿ ಯಮುನಾ ನದಿಯಲ್ಲಿ ಬಿದ್ದರೆ, ಕೃಷ್ಣ ಪರಮಾತ್ಮ ಜೋರಾಗಿ ಹಾರಿದ ನೋಡಿ

ಗೋವರ್ಧನ ಗಿರಿಯಿಂದ ಯಮುನಾ ನದಿಯಲ್ಲಿ ಹಾರಿ ಹಂಸ ಇನ್ನೇನು ಬೀಳಬೇಕು ಅಷ್ಟರೊಳಗೆ ತನ್ನ ಎರಡೂ ಕಾಲುಗಳಿಂದ ಅಷ್ಟು ಜೋರಾಗಿ ಝಾಡಿಸಿ ಒದ್ದಿದ್ದಾನೆ ಅವನ ತಲೆಗೆ ಕೃಷ್ಣ ಪರಮಾತ್ಮ.

ಪ್ರಾಹರತ್ ತಂ ಮಹಾಬಾಹುಃ ಪಾದಾಭ್ಯಾಮಥ ಕೇಶವಃ ॥ (128.6 ಭವಿಷ್ಯಪರ್ವ)

ಎಲ್ಲಿಂದ ಎಲ್ಲಿ ಹಾರಿದ್ದಾನೆ ನೋಡಿ, ಕೃಷ್ಣನಿಗೆ ಏನು ಅದ್ಭುತವಾದ ಶಕ್ತಿ ಆ ರೀತಿ ಕೃಷ್ಣ ಪರಮಾತ್ಮ ಒದ್ದ ಅವನು ಒಳಗೆ ಮುಳುಗಿದ ಇಷ್ಟು ಆಯಿತು ಕಥೆ. ಹರಿವಂಶ ಹೇಳುತ್ತದೆ ಮುಂದೆ ಏನಾಯಿತು **ಗೊತ್ತಿಲ್ಲ** ಅಂತ, **ಗೊತ್ತಿಲ್ಲ** ಅಂದರೆ ವೇದವ್ಯಾಸ ದೇವರಿಗೆ ಗೊತ್ತಿಲ್ಲ ಅಂತ ಅರ್ಥ ಅಲ್ಲ, ವೈಶಂಪಾಯನರು ಜನಮೇಜಯನಿಗೆ ಹೇಳುತ್ತಾರೆ, ಇದು ರಹಸ್ಯ ಅನ್ನುವ ದೃಷ್ಟಿಯಲ್ಲಿ ಇರಬಹುದು. ಅವರು ಅನ್ನುತ್ತಾರೆ ಅವನು ಏನು ಸತ್ತನೋ ಅಥವಾ ಅವನು ಯಾವುದಾದರು ಹಾವಿನ ಬಾಯಿಗೆ ಬಿದ್ದನೋ ಏನಾಯಿತೋ ಗೊತ್ತಿಲ್ಲ ಅಂತ.

ಮಮಾರ ಚ ನೃಪಶ್ರೇಷ್ಠ ಕೇಚಿದೇವಂ ವದನ್ತಿ ಹಿ ॥ (128.7 ಭವಿಷ್ಯಪರ್ವ)

ಅವನು ಕೂಡಲೇ ಕೃಷ್ಣನ ಹೊಡೆತಕ್ಕೆ ಸತ್ತೇ ಹೋದ ಅಂತ ಕೆಲವರು ಅನ್ನುತ್ತಾರೆ ಯಾಕೆ ಅಂದರೆ ಮೇಲೆ ಅಂತೂ ಬರಲಿಲ್ಲ ಅವನು, ಏನಾಯಿತು ಗೊತ್ತಿಲ್ಲ ಸತ್ತ ಅಂತ ಕೆಲವರು ಹೇಳುತ್ತಾರೆ, ಕೆಲವರು ಅನ್ನುತ್ತಾರೆ ಆ ಕೃಷ್ಣನ ಹೊಡೆತಕ್ಕೆ ವೇಗದಿಂದ ಪಾತಾಲಕ್ಕೆ ಹೋದ. ಒಂದು ಗಮನಿಸಿ ಇದು ಎಲ್ಲಿ ಬಿದ್ದದ್ದು, ಯಾವ ಸ್ಥಾನದೊಳಗೆ ಶ್ರೀಕೃಷ್ಣ ಪರಮಾತ್ಮ ಕಾಲಿಯ ಮರ್ದನ ಮಾಡಿದನಲ್ಲ ಸರಿಯಾಗಿ ಆ ಮಡುವಿಗೇ ಹೋಗಿ ಹಾರಿದ್ದ ಇವನು ಆ ಮಡುವು ಎಷ್ಟು ಆಳ ಇತ್ತು ಅಂದರೆ ಪಾತಾಲದವರೆಗೆ ಇತ್ತು ಅದು. ಹೀಗಾಗಿ ಅಂತಹ ಮಡುವಿನಲ್ಲಿಯೇ ಇವನು ಹಾರಿದ್ದ, ಕೃಷ್ಣ ಪರಮಾತ್ಮ ಕಾಲಿನಿಂದ ಒದ್ದ, ಒದ್ದರೆ ಪಾತಾಲಕ್ಕೆ ಹೋದ ಇವನು ಅಲ್ಲಿ ಸರ್ಪಗಳು ಇವನನ್ನು ತಿಂದವು ಅಂತ ಕೆಲವರು ಹೇಳುತ್ತಾರೆ ಅಂತ ವೈಶಂಪಾಯನರು ಹೇಳಿಬಿಟ್ಟರು ಆದರೆ ಶ್ರೀಮದಾಚಾರ್ಯರು ಮಾತ್ರ ಸ್ಪಷ್ಟವಾಗಿ ನಿರ್ಣಯವನ್ನೇ ಕೊಡುತ್ತಾರೆ ಅವನು ಸಾಯಲಿಲ್ಲ. ಕೃಷ್ಣ ಜೋರಾಗಿ ಒದ್ದದ್ದು,ಒದ್ದಾಗ ಅವನು ಕೆಳಗೆ ಹೋದ, ಅಲ್ಲಿ ದೊಡ್ಡದಾದ ನಾಗ ಅನೇಕ ನಾಗಗಳು ಅವನನ್ನು ಎಲ್ಲವೂ ಸೇರಿ ತಿಂದಿವೆ ಅಂತ ಹಾಗೇನಲ್ಲ ಒಂದೇ ಒಂದು ನಾಗ ಧಾರ್ತರಾಷ್ಟ್ರ ಅಂತ ಆ ಧಾರ್ತರಾಷ್ಟ್ರ ಆ ದೊಡ್ಡ ನಾಗ ಬಾಯಿ ತೆಗೆದಿತ್ತು ಅದರೊಳಗೆ ಹೋದ ಇವನು. ಶ್ರೀಕೃಷ್ಣ ಪರಮಾತ್ಮ ಒದ್ದದಕ್ಕೆ ಮೇಲಿನಿಂದ ಕೆಳಗೆ ಹೋಗಿ ಆ ನಾಗದೊಳಗೆ ಹೋದ ಆ ನಾಗ ಬಾಯಿ ಮುಚ್ಚಿಕ್ಕೊಂಡುಬಿಟ್ಟಿತು ಆ ನಾಗದ ಹೊಟ್ಟೆಯಲ್ಲಿಯೇ ಇದ್ದಾನೆ. ಎಲ್ಲಿ ಸುಖವಾಗಿ ಇದ್ದಾನಾ, ಏನೂ ಸುಖವಾಗಿ ಇಲ್ಲ ಶ್ರೀಮದಾಚಾರ್ಯರು ಅನ್ನುತ್ತಾರೆ.

ಸ ಧಾರ್ತರಾಷ್ಟ್ರಕೋದರೇ ಯಥಾ ತಮೋಂಽಧಮೇಯಿವಾನ್ ।
ತಥಾ ಸುದುಃಖ ಸಂಯುತೋ ವಸನ್ ಮನೋಃ ಪರಂ ಮ್ರೀಯೇತ್ ॥ (17.293 ಮಭಾತಾನಿರ್ಣಯ)

ಎಷ್ಟು ದುಃಖ ಅನುಭವಿಸುತ್ತಾನೆ ಅಂದರೆ **'ಯಥಾ ತಮೋಂಽಧಮೇಯಿವಾನ್'** ಅಂದಃತಮಸ್ಸಿನೊಳಗೆ ಇದ್ದವರು ಹೇಗೆ ದುಃಖ ಅನುಭವಿಸಬೇಕು ಅಷ್ಟು ಘೋರವಾದ ದುಃಖವನ್ನು ಅನುಭವಿಸುತ್ತಾ ಇದ್ದಾನೆ. ಒಂದೇ ಸಲಕ್ಕೆ ಸತ್ತಿದ್ದರೆ ಅಷ್ಟು ದುಃಖ ಆಗುತ್ತಿರಲಿಲ್ಲ ಅನ್ನುವುದಕ್ಕೆ ದೊಡ್ಡ ಶಿಕ್ಷೆ ಕೊಟ್ಟ ಕೃಷ್ಣ ಆ ಧಾರ್ತರಾಷ್ಟ್ರ ನಾಗದ ಉದರದಲ್ಲಿ ಅಂದಃತಮಸ್ಸಿನಲ್ಲಿ ಅನುಭವಿಸಬೇಕಾದ ದುಃಖವನ್ನು ಅನುಭವಿಸುತ್ತಾ ಒದ್ದಾಡುತ್ತಾ ಇದ್ದಾನೆ. ಇವತ್ತು ಇದ್ದಾನಾ ಇನ್ನೂ ಇದ್ದಾನೆ ಇದು ಏನಿದು, ವೈವಸ್ವತ ಮನ್ವಂತರದ 28 ನೆಯ ಕಲಿಯುಗದೊಳಗೆ ನಾವಿದ್ದೇವೆ, ದ್ವಾಪರ

ಯುಗದೊಳಗೆ ಅವನು ಬಿದ್ದ ಈಗ ಒಂದು ಯುಗ ಹೋಗುತ್ತಾ ಇದೆ ಇನ್ನೂ ನಡೆಯುತ್ತಾ ಇದೆ ಕಲಿಯುಗ. ಇದಾದ ಮೇಲೆ ಒಟ್ಟು 71 ಮಹಾಯುಗಗಳು ಕಳಿಯಬೇಕು ಅಂದರೆ ವೈವಸ್ವತ ಮನ್ವಂತರ ಮುಗಿಯುತ್ತಿದೆ ಈಗ 28 ನಡೆಯುತ್ತಾ ಇದೆ. ಆ 71 ಮಹಾಯುಗಗಳು ಮುಗಿದ ಮೇಲೆ ವೈವಸ್ವತ ಮನ್ವಂತರ ಪೂರ್ಣ ಆದಮೇಲೆ ಸಾಯುತ್ತಾನೆ ಅಲ್ಲಿಯವರೆಗೆ ದುಃಖವನ್ನು ಅನುಭವಿಸುತ್ತಾ ನಾಗದ ಹೊಟ್ಟೆಯಲ್ಲಿ ಇರುತ್ತಾನೆ ಇವತ್ತಿಗೂ ಹಂಸ ಇದ್ದಾನೆ ಒದ್ದಾಡುತ್ತಾ ಅಲ್ಲಿ. ಇದು ಶ್ರೀಮದಾಚಾರ್ಯರು ಕೊಡುವಂತಹ ನಿರ್ಣಯ ಆ ನಿರ್ಣಯದ ಸೂಚನೆ ಹರಿವಂಶದಲ್ಲಿ ಇದೆ.

ಅನ್ಯೇ ಪಾತಾಲಮಾಯಾತೋ ಭಕ್ಷಿತಃ ಪನ್ನಗೈರಿತಿ । (128.8 ಭವಿಷ್ಯಪರ್ವ)

ಕೆಲವರು ಹೇಳುತ್ತಾರೆ ಹಾವುಗಳು ಭಕ್ಷಣೆ ಮಾಡಿವೆ ಅಂತ ಒಂದು ಪಕ್ಷ ಹೇಳಿದ್ದಾರೆ ವೈಶಂಪಾಯನರು ಅದೇ ನಿರ್ಣಯ ಅಂತ ಶ್ರೀಮದಾಚಾರ್ಯರು ತಿಳಿಸಿಕೊಡುತ್ತಾರೆ. ಈ ರೀತಿ ಆ ಹಂಸನನ್ನ ಪರಮಾತ್ಮ ಚೆನ್ನಾಗಿ ಹೊಡೆದು ಆ ನಾಗದ ಹೊಟ್ಟೆಯಲ್ಲಿ ಕಳಿಸಿ ಅಲ್ಲಿ ದುಃಖವನ್ನು ಅನುಭವಿಸುವಂತೆ ಮಾಡಿದ್ದಾನೆ. ಅವನಿಂದ ಯಾವ ಸಜ್ಜನರಿಗೂ ಪೀಡೆ ಆಗದಿರುವಂತೆ ವ್ಯವಸ್ಥೆ ಮಾಡಿದ ಇನ್ನು ಮುಂದೆ ಕಣ್ಣಿಗಂತೂ ಅವನು ಕಾಣಿಸುವುದಿಲ್ಲ ಅಲ್ಲಿಯೇ ಸಾಯುತ್ತಾನೆ.

ಸರಿ ಈ ಕಡೆಗೆ ಬಲರಾಮ ದೇವರು, ಡಿಭಿಕ ಇವರಿಬ್ಬರೂ ಯುದ್ಧ ಮಾಡುತ್ತಾ ಇದ್ದಾರೆ. ಅಣ್ಣ ಸತ್ತ ಅನ್ನುವ ವಾರ್ತೆ ಬಂದಾಕ್ಷಣಕ್ಕೆ ಅವನು ಬಲರಾಮ ದೇವರ ಜೊತೆಗೆ ಯುದ್ಧ ಮಾಡುವುದನ್ನು ಬಿಟ್ಟು ತಾನೇ ತಾನು ಹೋಗಿ ಯಮುನಾ ನದಿಯಲ್ಲಿ ಹಾರಿದ್ದಾನೆ ತಮ್ಮ, ಅವನನ್ನು ಯಾರೂ ಹೊಡೆದಿಲ್ಲ ಕೃಷ್ಣನೂ ಏನು ಮಾಡಿಲ್ಲ ಸುಮ್ಮನೆ ಬಿಟ್ಟುಬಿಟ್ಟ ಅವನನ್ನು. ಯಮುನಾ ನದಿಯಲ್ಲಿ ಹೋಗಿ ಒಳಗೆ ಬಿದ್ದ ಡಿಭಿಕ ಅಣ್ಣ ಎಲ್ಲಿ ಹೋಗಿದ್ದಾನೆ ಅಂತ ಹುಡುಕುತ್ತ ಇದ್ದಾನೆ ಎಲ್ಲಿ ಹುಡುಕಿದರೂ ಸಿಗಲಿಲ್ಲ ಮೇಲೆ ಬರುತ್ತಾನೆ ಕೆಳಗೆ ಹೋಗುತ್ತಾನೆ, ಮೇಲೆ ಬರುತ್ತಾನೆ ಕೆಳಗೆ ಹೋಗುತ್ತಾನೆ ಕೃಷ್ಣನಿಗೆ ಕೇಳುತ್ತಾನೆ ಎಲ್ಲಿಯಾದರೂ ಕಳಿಸಿದ್ದೀಯಾ ನನ್ನ ಅಣ್ಣನ್ನ ಅಂತ ಆ ಯಮುನಾ ದೇವಿಗೆ ಕೇಳು ಅಂದ ಕೃಷ್ಣ. ಮತ್ತೆ ಒಳಗೆ ಹೋಗಿ ಹುಡುಕುತ್ತಾನೆ ಹುಡುಕುತ್ತಾನೆ ಎಲ್ಲಿಯೂ ಸಿಗುವುದಿಲ್ಲ ಕೊನೆಗೆ ಬಹಳ ಹತಾಶನಾಗಿ ನಮ್ಮ ಅಣ್ಣ ಸಿಗುತ್ತಾ ಇಲ್ಲ ಅಂತ ತನ್ನ ಹಿಂದಿನ ಕಿರುನಾಲಿಗೆಯನ್ನು ಜೋರಾಗಿ ಎಳೆದುಕೊಂಡು ತಾನೇ ಸತ್ತು ಹೋಗುತ್ತಾನೆ. ಅವನೂ ವೈವಸ್ವತ ಮನ್ವಂತರದ ನಂತರ ಸಾಯುತ್ತಾನೆ ಅಣ್ಣ ಆದರೆ ಅಣ್ಣ ಸತ್ತಿದ್ದಾನೆ ಅಂತ ಇವನು ತಿಳಿದುಕೊಂಡು ಇವನು ಈಗೇ ಸತ್ತು ಹೋದ.

ಹಸ್ತೇನ ಜಿಹ್ವಾಮಾಕೃಷ್ಯ ಭೂಯೋ ಭೂಯೋ ವಿಲಪ್ಯ ಚ । (129.12 ಭವಿಷ್ಯಪರ್ವ)

ಮಮಾರಾನ್ತರ್ಜಲೇ ರಾಜನ್ ಡಿಮ್ಭಕೋ ನರಕಾಯ ವೈ । (129.13 ಭವಿಷ್ಯಪರ್ವ)

ಹಂಸ-ಡಿಭಿಕರು ಇಬ್ಬರೂ ಸತ್ತು ಹೋಗಿದ್ದಾರೆ ಅರ್ಥಾತ್ ಡಿಭಿಕ ಸತ್ತ, ಹಂಸ ಸತ್ತಂತೆ ಆದ. ಅವರಿಬ್ಬರನ್ನ ಸಂಹಾರ ಮಾಡಿ ಶ್ರೀಕೃಷ್ಣ ಪರಮಾತ್ಮ ಗೋವರ್ಧನ ಗಿರಿಯಲ್ಲಿ ಆರಾಮಾಗಿ ಎಲ್ಲ ಯಾದವರ ಜೊತೆಗೆ ವಿಹಾರ ಮಾಡುತ್ತಾ ಇದ್ದಾನೆ. ಗೋವರ್ಧನ ಪರ್ವತದ ಉದ್ಧಾರ ಮಾಡಿದವನೇ ಕೃಷ್ಣ ಇದೇ ಗೋಕುಲ ವೃಂದಾನಗಳಲ್ಲೆಲ್ಲಾ ವಿಹಾರ ಮಾಡಿದ್ದ ಆದರೆ ಈಗ ಮಥುರೆಯಲ್ಲಿ ಕೃಷ್ಣ ಪರಮಾತ್ಮ ಇದ್ದಾನೆ. ಈ ಯುದ್ಧದ ನಿಮಿತ್ತ ಗೋವರ್ಧನಕ್ಕೆ ಬಂದಿದ್ದ ಅಷ್ಟೇ ಆದರೆ ಅಷ್ಟರೊಳಗೆ ಈ ವಾರ್ತೆ ಆ ವೃಂದಾನದೊಳಗೆ ಇರುವಂತಹ ನಂದ ಯಶೋದಾ ಅವರಿಗೆಲ್ಲ ಗೊತ್ತಾಗಿದೆ. ಕೃಷ್ಣ ಮಥುರೆಗೆ ಹೋದವ ತಿರುಗಿ ಈ ಕಡೆಗೆ ಬಂದೇ ಇಲ್ಲ, ವೃಂದಾವನದ ಹತ್ತಿರ ಗೋವರ್ಧನಕ್ಕೆ

ಬಂದಿದ್ದಾನೆ ಅಂತ ಗೊತ್ತಾದ ಕ್ಷಣ ನೋಡಿ ಪಾಪ ಓಡೋಡಿ ಬರುತ್ತ ಇದ್ದಾರೆ. ಎಲ್ಲಾ ಗೋಪಿಕಾ ಸ್ತ್ರಿಯರು, ನಂದ ಯಶೋದಾ ಬೆಣ್ಣೆ, ಮೊಸರು, ಪಾಯಸ, ನಾನಾ ವಿಧವಾದ ಪುಷ್ಪಗಳು ಕೃಷ್ಣನಿಗೆ ಪ್ರೀತಿಯ ಆ ನವಿಲು ಗೆರೆಗಳು ಅವುಗಳನ್ನೆಲ್ಲಾ ತೆಗೆದುಕೊಂಡು ಓಡೋಡಿ ಓಡೋಡಿ ಬರುತ್ತ ಇದ್ದಾರೆ ಕೃಷ್ಣನಿಗೆ ಸಮರ್ಪಣೆ ಮಾಡಬೇಕು ಅಂತ. ಶ್ರೀಕೃಷ್ಣ ಪರಮಾತ್ಮ ನಂದ ಯಶೋದೆಯರು ಬಂದದ್ದನ್ನು ನೋಡಿ ಕೃಷ್ಣ ಬಲರಾಮ ಇಬ್ಬರೂ ನಮಸ್ಕಾರ ಮಾಡಿದ್ದಾರೆ ಪ್ರೀತಿಯಿಂದ ಅವರು ಆಲಿಂಗನ ಮಾಡಿಕೊಂಡಿದ್ದಾರೆ. ಕೃಷ್ಣ ಎಲ್ಲರ ಬಗ್ಗೆ ಯೋಗ ಕ್ಷೇಮವನ್ನು, ವಿಚಾರಿಸುತ್ತಾನೆ ಎಷ್ಟು ಚೆನ್ನಾಗಿ ವಿಚಾರ ಮಾಡುತ್ತಾನೆ ಅಂದರೆ ಆಕಳುಗಳೆಲ್ಲ ಚೆನ್ನಾಗಿ ಇವೆಯಲ್ಲ, ಹಾಲು ಕೊಡುತ್ತಾ ಇವೆಯಲ್ಲ **'ಅಪಿ ಗಾವಃ ಕ್ಷೀರವತ್ಯೋ'**[1] ಕರುಗಳು ಅತೀ ಪುಟ್ಟ ಕರುಗಳು ಕೆಲವೇ ದಿನಗಳಲ್ಲಿ ಜನ್ಮ ತಾಳಿದ ವತ್ಸತರ ಅವುಗಳು ಹೇಗಿವೆ, ಅವುಗಳಿಗೆಲ್ಲ ಕಟ್ಟುವುದಕ್ಕೆ ಹಗ್ಗಗಳು ಚೆನ್ನಾಗಿ ಇವೆಯಾ ಅಂದರೆ ಕೃಷ್ಣನಂತಹ ಸರ್ವೋತ್ತಮನಾದ ಪರಮಾತ್ಮನ ಬಾಯಿಯಲ್ಲಿ ಎಷ್ಟು ಸಣ್ಣ ಸಣ್ಣ ವಿಷಯಗಳನ್ನು ಕೇಳುತ್ತಾ ಇದ್ದಾನೆ ನೋಡಿ. ಅಂದರೆ ಇದು ಏನು ತೋರಿಸುತ್ತದೆ **'ತೇನ ವಿನಾ ತೃಣಮಪಿ ನ ಚಲತಿ'** ಆ ಭಗವಂತನ ಆ ಪ್ರೇರಣೆ ಇಲ್ಲದೆ, ಅನುಗ್ರಹ ಇಲ್ಲದೆ ಒಂದು ಸಣ್ಣ ಹುಲ್ಲುಕಡ್ಡಿಯೂ ಆಚೆ ಈಚೆ ಸರಗಾಡುವಂತಿಲ್ಲ. ಅವುಗಳಿಗೆ ಕಟ್ಟುವುದಕ್ಕೆ ಹಗ್ಗ ಎಲ್ಲ ಸರಿಯಾಗಿ ಇದೆಯಾ, ಹುಲ್ಲುಗಳೆಲ್ಲ ಚೆನ್ನಾಗಿ ಸಿಗುತ್ತಾ ಇದೆಯಾ, ಚಕ್ಕಡಿ ಬಂಡಿಗಳು ಯಾವುದು ಮುರಿದಿಲ್ಲ ತಾನೇ, ಚಕ್ರಗಳೆಲ್ಲಾ ಚೆನ್ನಾಗಿ ಇವೆಯಲ್ಲಾ, ಕೊಡಗಳಿಗೆ ಯಾವುದು ತೂತು ಬಿದ್ದಿಲ್ಲಲ್ಲ ಅಂತ ಕೇಳುತ್ತಾನೆ. ಎಲ್ಲಾ ಕೊಡ ಚೆನ್ನಾಗಿದೆಯಲ್ಲ ಹಾಲಿನ ಕೊಡ **'ಘಟಾಃ ಕಿಂ ಬಹವೋ ಮಾತಿರಭಿನ್ನಾಃ'**[2] ಯಾವುದೂ ಒಡೆದು ಮುರಿದು ತೂತು ಬಿದ್ದು ಏನು ಆಗಿಲ್ಲಲ್ಲ, ಬೇಕಾದಷ್ಟು ಹಾಲು ಮೊಸರು ಬೆಣ್ಣೆ ಎಲ್ಲಾ ಸಮೃದ್ಧಿ ಇದೆ ತಾನೇ ಎಲ್ಲ ಕೇಳಿದ್ದಕ್ಕೆ ಹೇಳುತ್ತಾರೆ ನಿನ್ನ ಅನುಗ್ರಹ ಇದ್ದಾಗ ಯಾವುದಕ್ಕೆ ಕಡಿಮೆ ಇದೆ.

ರಕ್ಷಣಾತ್ ತವ ದೇವೇಶ ಸದಾ ಕುಶಲಿನೋ ವಯಮ್ । (130.13 ಭವಿಷ್ಯಪರ್ವ)

ನೀನು ಇಡೀ ವಿಶ್ವವನ್ನ ರಕ್ಷಣೆ ಮಾಡುತ್ತಾ ಇರುವಾಗ ನಮಗೆ ಏನು ಚಿಂತೆ, ಯಾವ ಚಿಂತೆಯೂ ಇಲ್ಲ. ಇಷ್ಟು ಹೇಳಿ ನೋಡಿ ಅಷ್ಟೇ ಪರಮಾತ್ಮ ಅವರ ಪುಣ್ಯ ಎಷ್ಟೋ ಅಷ್ಟೇ ನಂದ ಯಶೋದಾ ಬಂದಿದ್ದೀರಿ ಮಾತನಾಡಿಸಿದ್ದೀರಿ, ಪ್ರೀತಿಯಿಂದ ಬೇಕಾದಷ್ಟು ಉಣ್ಣುವುದಕ್ಕೆ ತಿನ್ನುವುದಕ್ಕೆ ಕೊಟ್ಟಿರಿ, ಆಲಿಂಗನ ಮಾಡಿಕೊಂಡಿರಿ ಹೋಗಿರಿ ಇನ್ನು ಮನೆಗೆ ಅಂದು ಬಿಡುತ್ತಾನೆ ಅಷ್ಟೇ.

ಏವಮಾದಿ ವಿಲಪ್ಯನ್ತಂ ಗಚ್ಛೇತ್ಯಾಹ ಸ ಕೇಶವಃ । (130.15 ಭವಿಷ್ಯಪರ್ವ)

ತಾಯಿಗೂ ಹೇಳಿದ **'ಮಾತರ್ಗಚ್ಛ ಗೃಹಂ ಪ್ರತಿ'**[3] ಮನೆಗೆ ಹೋಗಿ ಹೊತ್ತಾಗುತ್ತಾ ಇದೆ ಅಂತ ಅವರಿಬ್ಬರಿಗೆ ಹೇಳಿದಾಗ ಹೇಳಿ ಒಂದು ಅನುಗ್ರಹವನ್ನು ಮಾಡುತ್ತಾನೆ ಯಶೋದೆಗೆ. ಯಶೋದಾ ಮನೆಗೆ ಹೋಗು ಅಂತ ಹೇಳುತ್ತಾ ಇದ್ದೇನೆ ಅಂತ ಬೇಜಾರು ಮಾಡಿಕೊಳ್ಳಬೇಡ ನಿನ್ನ ಯೋಗ್ಯತೆ ಎಷ್ಟು, ನಿನ್ನ ಪುಣ್ಯ ಎಷ್ಟು ಇನ್ನೂ ಇದಕ್ಕೂ ಹೆಚ್ಚು ಪುಣ್ಯ ಇಲ್ಲ ಅಂತ ಕಳಿಸುತ್ತ ಇದ್ದೇನೆ ಅಷ್ಟು ಪುಣ್ಯ ಪಡೆದಿದ್ದೀ. ಎಷ್ಟು ಪುಣ್ಯವನ್ನು ಪಡೆದುಕೊಂಡಿದ್ದೀ ಅಂದರೆ ನಿನ್ನ ಹೆಸರು ಹೇಳಿದರೆ ಅವರು ಸ್ವರ್ಗಕ್ಕೆ ಹೋಗುತ್ತಾರೆ, ನೀನಲ್ಲ ನಿನ್ನ ಹೆಸರು ಹೇಳಿದವರು.

ಯೇ ಚ ತ್ವಾಂ ಕೀರ್ತಯಿಷ್ಯನ್ತಿ ತೇ ಚ ಸ್ವರ್ಗಮವಾಪ್ನುಯುಃ । (130.16 ಭವಿಷ್ಯಪರ್ವ)

ಅಂದಮೇಲೆ ನಿನಗೆ ಉತ್ತಮ ಗತಿ ಆಗುತ್ತದೆ ಅಂತ ಏನು ಹೇಳುವುದು.

---

1. 130.6 ಭವಿಷ್ಯಪರ್ವ ; 2. 130.10 ಭವಿಷ್ಯಪರ್ವ ; 3. 130.15 ಭವಿಷ್ಯಪರ್ವ

ಯೇ ಕೇಚಿತ್ ತ್ವಾಂ ನಮಸ್ಯನ್ತಿ ತೇ ಮೇ ಪ್ರಿಯತರಾಃ ಸದಾ । (130.16 ಭವಿಷ್ಯಪರ್ವ)

ಮದ್ಭಕ್ತಾಃ ಸರ್ವದಾ ಸನ್ತು ಗಚ್ಛೇತ್ಯಾಹ ಚ ತಾಂ ಹರಿಃ ॥ (130.17 ಭವಿಷ್ಯಪರ್ವ)

ನಿನಗೆ ನಮಸ್ಕಾರ ಮಾಡಿದರೆ ಅವರು ನನಗೆ ಪ್ರಿಯರಾಗುತ್ತಾರೆ, ನನ್ನಲ್ಲಿ ವಿಶೇಷ ಭಕ್ತಿಯನ್ನು ಪಡೆಯುತ್ತಾರೆ ಅಷ್ಟು ದೊಡ್ಡ ಒಂದು ಪುಣ್ಯದ ರಾಶಿಯನ್ನು ನೀನು ಪಡೆದುಕೊಂಡಿದ್ದೀ, ನನ್ನ ಅನುಗ್ರಹ ನಿನಗೆ ಆಗಿದೆ ಅಂತ ಅವಳಿಗೆ ಹೇಳಿ ಪರಮಾತ್ಮ ಕೊಟ್ಟು ಕಳಿಸುತ್ತಾ ಇದ್ದಾನೆ.

ಯ ಏತಚ್ಛ್ರಾಣುಯಾನ್ನಿತ್ಯಂ ಪಠೇದ್ ವಾಪಿ ಸಮಾಹಿತಃ ।

ಪುತ್ರವಾನ್ ಧನವಾಂಶ್ಚೈವ ಅನ್ತೇ ಮೋಕ್ಷಂ ಚ ಗಚ್ಛತಿ ॥ (130.20 ಭವಿಷ್ಯಪರ್ವ)

ಈ ರೀತಿ ಶ್ರೀಕೃಷ್ಣ ಹಾಗೂ ಬಲರಾಮರು ಮಾಡಿದಂತಹ ಪರಾಕ್ರಮ ಹಾಗೂ ಈ ನಂದ ಯಶೋದೆಯರ ಸಮಾಗಮ ಈ ಎಲ್ಲ ವಿಚಾರವನ್ನು ಯಾರು ಕೇಳುತ್ತಾರೋ, ಇದನ್ನು ಯಾರು ಶ್ರವಣ ಮಾಡುತ್ತಾರೋ ಅವರಿಗೆ ಶ್ರೇಷ್ಠವಾದಂತಹ ಪುತ್ರಪ್ರಾಪ್ತಿ ಧನಪ್ರಾಪ್ತಿಯಾಗುತ್ತದೆ ಮುಖ್ಯವಾಗಿ ಪರಮಾತ್ಮನ ಸಾಕ್ಷಾತ್ಕಾರವಾಗಿ ತದ್ವಾರಾ ಮೋಕ್ಷವಾಗುತ್ತದೆ ಎಂಬುದಾಗಿ ತಿಳಿಸುತ್ತಾರೆ.

ಆಮೇಲೆ ಆ ಪರಮಾತ್ಮ ಅಷ್ಟೇ ತನ್ನ ಕೆಲಸ ಮುಗಿಯಿತು ಅಲ್ಲಿಂದ ಹೊರಟ, ಗೋವರ್ಧನದಿಂದ ಹೊರಟು ದ್ವಾರಕಾ ಪಟ್ಟಣಕ್ಕೆ ಬರುತ್ತಾ ಇದ್ದಾನೆ. ದ್ವಾರಕಾ ಪಟ್ಟಣಕ್ಕೆ ಬರುವಾಗ ಮಧ್ಯದಲ್ಲಿ ಪುಷ್ಕರದೊಳಗೆ ಯಾವ ಮುನಿಗಳಿಗೋಸ್ಕರ ಇಷ್ಟೆಲ್ಲ ಮಾಡಿದ್ದು ಹಂಸ-ಡಿಭಿಕರ ಸಂಹಾರ ಆ ಮುನಿಗಳನ್ನ ಮತ್ತೆ ಭೇಟಿಯಾಗುತ್ತಾನೆ. ಅಲ್ಲಿಂದಲೇ ಹೊರಟಿದ್ದು ಇವರು ಅವರಿಗೆಲ್ಲ ಭೇಟಿಯಾಗಿ ವಿಶೇಷ ಅನುಗ್ರಹವನ್ನು ಮಾಡುತ್ತಾನೆ. ಅರ್ಘ್ಯಪಾದ್ಯಾದಿಗಳಿಂದ ಅವರೆಲ್ಲ ಪೂಜೆಯನ್ನು ಮಾಡಿ ಪರಮಾತ್ಮನನ್ನ ವರ್ಣನೆಯನ್ನು ಮಾಡುತ್ತಾರೆ.

ಪ್ರೋಚುರ್ವಿಶ್ವೇಶ್ವರಂ ವಿಷ್ಣುಂ ಭೂತಭವ್ಯಭವತ್ಪ್ರಭುಮ್ ।

ಅತ್ಯದ್ಭುತಮಿದಂ ವಿಷ್ಣೋ ತವ ವೀರ್ಯಂ ಜನಾರ್ದನ ॥ (131.3 ಭವಿಷ್ಯಪರ್ವ)

ನೀವು ತೋರಿಸಿದ ಪರಾಕ್ರಮ ಅತ್ಯದ್ಭುತ ಇದು, ಸಾಧ್ಯವೇ ಇಲ್ಲ ಬ್ರಹ್ಮ ರುದ್ರಾದಿಗಳ ವರದಿಂದ ಅವಧ್ಯರಾದ ಇವರೆಲ್ಲರನ್ನು ಸಂಹಾರ ಮಾಡುವುದು ಅಂತ ನಾವು ಅಂದುಕೊಂಡರೆ ಅನಾಯಾಸವಾಗಿ ಎಲ್ಲರನ್ನ ಸಂಹಾರ ಮಾಡಿ ಈ ಅದ್ಭುತವಾದಂತಹ ವಿಕ್ರಮವನ್ನ ನೀವು ತೋರಿಸಿದ್ದು ನಮಗೆ ಬಹಳ ಆಶ್ಚರ್ಯವಾಗಿದೆ ಎಂಬುದಾಗಿ ಹೇಳುತ್ತಾ ಇದ್ದಾರೆ.

ನಿಷ್ಕಲ್ಮಷಾ ಭವಿಷ್ಯಾಮಸ್ತವ ಸಂಸ್ಮರಣಾದ್ಧರೇ ।

ತ್ವಂ ಹಿ ಸರ್ವಸ್ಯ ದುಃಖಸ್ಯ ಹರ್ತಾ ತ್ವಾಂ ಧ್ಯಾಯತಾಂ ಸದಾ ॥ (131.6 ಭವಿಷ್ಯಪರ್ವ)

ತ್ವದನುಸ್ಮರಣಂ ಜನ್ತೋಃ ಸದಾ ಪುಣ್ಯಪ್ರದಂ ಪ್ರಭೋ ।

ತ್ವಂ ಹಿ ನಃ ಸತತಂ ಧಾತಾ ವಿಧಾತಾ ತಹಸೋ ಹರೇ ॥ (131.7 ಭವಿಷ್ಯಪರ್ವ)

ತ್ವಮೋಂಕಾರೋ ವಷಟ್‌ಕಾರಸ್ತ್ವಂ ಯಜ್ಞಸ್ತ್ವಂ ಪಿತಾಮಹಃ । (131.8 ಭವಿಷ್ಯಪರ್ವ)

ನಿನ್ನ ಸ್ಮರಣೆಯಿಂದ ನಾವು ಪಾಪಗಳನ್ನು ಪರಿಹಾರ ಮಾಡಿಕೊಳ್ಳುತ್ತೇವೆ. ಸಕಲ ವೇದ ಪ್ರತಿಪಾದ್ಯ, ಓಂಕಾರಾದಿಗಳಿಂದ ಪ್ರತಿಪಾದ್ಯ, ಸಕಲ ಯಜ್ಞಗಳಲ್ಲಿ ಪೂಜ್ಯನಾದವನು ಅಂತಹ ನೀನು ನಮಗೆ ವಿಶೇಷವಾಗಿ ಅನುಗ್ರಹವನ್ನು ಮಾಡು ಎಂಬುದಾಗಿ ಆ ಎಲ್ಲ ಋಷಿ ಮುನಿಗಳು ಪರಮಾತ್ಮನಿಗೆ ಪ್ರಾರ್ಥನೆಯನ್ನು ಮಾಡಿದ್ದಾರೆ. ಈ ರೀತಿ ಆ ಭಗವಂತನ ಮಹಿಮೆಯನ್ನು ತಿಳಿಸಿಕೊಡುತ್ತಾರೆ ವೈಶಂಪಾಯನರು. ಜನಮೇಜಯ ಕೇಳುತ್ತಾನೆ ಮಹಾಭಾರತದ ಶ್ರವಣ ಹಾಗೂ ಈ ಹರಿವಂಶದ ಶ್ರವಣವನ್ನ ಯಾವ ರೀತಿ ಮಾಡಬೇಕು ಅಂತ ಕೇಳಿದ್ದಕ್ಕೆ ಅವರು ಹೇಳುತ್ತಾರೆ ನೋಡಿ ಮಹಾಭಾರತ ಅಂದರೆ ಏನು, ಮಹಾಭಾರತದೊಳಗೆ ಸಾಕ್ಷಾತ್ ವಿಷ್ಣುವಿನ ಸರ್ವೋತ್ತಮತ್ವವನ್ನ ಪ್ರತಿಪಾದನೆ ಮಾಡುವುದಕ್ಕೆ ಹೊರಟದ್ದು ಮಹಾಭಾರತ. ಆದರೆ ಆ ಮಹಾಭಾರತದೊಳಗಿನ ವೈಶಿಷ್ಟ್ಯ ಅಂದರೆ ಕೇವಲ ವಿಷ್ಣುವಿನ ಸರ್ವೋತ್ತಮತ್ವವನ್ನು ಪ್ರತಿಪಾದನೆ ಮಾಡುವುದು ಮಾತ್ರ ಅಲ್ಲ, ಅಲ್ಲಿ ಮಹಾಲಕ್ಷ್ಮಿ ದೇವಿ ರುಕ್ಮಿಣಿ, ಸತ್ಯಭಾಮಾದಿ ರೂಪದಿಂದ ಇರುವಂತಹ ಮಹಾಲಕ್ಷ್ಮೀ ದೇವಿಯ ಮಹಿಮೆಯ ವರ್ಣನೆ ಇದೆ, ಹನುಮಂತ ದೇವರು ಭೀಮಸೇನ ದೇವರ ವರ್ಣನೆ ಇದೆ, ವಾಯು ದೇವರ ವರ್ಣನೆ ಇದೆ, ಬ್ರಹ್ಮ ದೇವರ ಮಹಿಮೆ ಇದೆ. ತಾರತಮ್ಯ ಯೋಕ್ತವಾಗಿ ಎಲ್ಲ ದೇವತೆಗಳ ಸರಸ್ವತಿ ಭಾರತೀಯರ, ಗರುಡ ಶೇಷ ರುದ್ರಾದಿಗಳ ಇದು ವೈಶಂಪಾಯನರು ಹೇಳುವ ಮಾತು, ಎಲ್ಲಾ ದೇವತೆಗಳ ವರ್ಣನೆ ಇದೆ, ಎಲ್ಲ ಋಷಿಗಳ ವರ್ಣನೆ ಇದೆ, ಮುನಿಗಳು, ಮಹಾ ಮಹಾ ರಾಜಋಷಿಗಳು ಎಲ್ಲರ ವರ್ಣನೆ ಇದೆ. ಯಾರು ಯಾರು ವಿಷ್ಣು ಭಕ್ತರೋ ಒಬ್ಬೊಬ್ಬರ ನಾಮ ಸ್ಮರಣೆ ಮಾಡಿದರೆ ಮಹಾಪುಣ್ಯ, ಅವರ ನಾಮ ಇದೆ, ಅವರ ಚರಿತ್ರೆ ಇದೆ, ಅವರ ವೀರ್ಯ ಇದೆ, ಅವರ ಪರಾಕ್ರಮ ಇದೆ, ಅವರ ಗುಣಗಾತ್ಯ ಎಲ್ಲಾ ಇದೆ ಇಲ್ಲಿ ಇಂತಹ ಮಹಾಭಾರತದ ಶ್ರವಣ ಮಾಡಿದರೆ ಎಷ್ಟು ಪುಣ್ಯ ಬರುತ್ತದೆ ಅಂತ ಹೇಳುವುದಕ್ಕೆ ಯಾರಿಗೆ ಸಾಧ್ಯ.

ಋಷೀಣಾಂ ದೇವತಾನಾಂ ಚ ಸಮ್ಭವಂ ವಸುಧಾತಲೇ । (132.5 ಭವಿಷ್ಯಪರ್ವ)

ರುದ್ರ ಸಾಧ್ಯ ವಿಶ್ವೇದೇವ, ಎಲ್ಲಾ ಪರ್ವತಾಭಿಮಾನಿ ದೇವತೆಗಳು, ಸಮುದ್ರಾಭಿಮಾನಿ ದೇವತೆಗಳು, ನದ್ಯಭಿಮಾನಿ ದೇವತೆಗಳು, ಗ್ರಹಗಳು, ಕಾಲಾಭಿಮಾನಿ ದೇವತೆಗಳು, ಸ್ಥಾವರ ಎಲ್ಲವೂ ಇದೆ. **'ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನಕುತ್ರಚಿತ್'**[1] ತಿಳಿದುಕೊಳ್ಳಿ ಶೀಮನ್ಮಹಾಭಾರತ, ಶೀಮನ್ಮಹಾಭಾರತ ತಾತ್ಪರ್ಯ ನಿರ್ಣಯ ಇವುಗಳ ಪಠಣ ಪಾರಾಯಣದಿಂದ ಬರುವ ಫಲ ಅನೇಕ ವಿಶ್ವಕೋಶ ಅಂತ ಕರೆಯತ್ತಾರಲ್ಲ ಇದು ನಿಜವಾದ ವಿಶ್ವಕೋಶ. **'ಓಂ ವಿಶ್ವಂ ವಿಷ್ಣುರ್ವಷಟ್ಕಾರೋ'**[2] ಸರ್ವೋತ್ತಮನಾದ ವಿಶ್ವನ ಕೋಶ ಇದು, ಆ ಭಗವದ್ಭಕ್ತರು ಯಾರೆಲ್ಲ ಇದ್ದಾರೆ ಆ ಭಕ್ತ ವಿಶ್ವದ ಕೋಶ ಇದು ಅಂತಹ ವಿಶ್ವಕೋಶ ಇದು ಮಹಾಭಾರತ. ಹೀಗಾಗಿ ಇದರ ಪಠಣದಿಂದ ಎಲ್ಲ ಪಾಪಗಳ ಪರಿಹಾರವಾಗುತ್ತದೆ.

ತೇಷಾಂ ಶ್ರುತಿಪ್ರತಿಷ್ಠಾನಾಂ ನಾಮಕರ್ಮಾನುಕೀರ್ತನಾತ್ ।

ಕೃತ್ವಾಪಿ ಪಾತಕಂ ಘೋರಂ ಸದ್ಯೋ ಮುಚ್ಯೇತ ಮಾನವಃ ॥ (132.10 ಭವಿಷ್ಯಪರ್ವ)

ಇದರ ಶ್ರವಣವನ್ನು ಮಾಡಿ ಯಥೇಚ್ಛವಾಗಿ ದಾನಗಳನ್ನು ಮಾಡಬೇಕು ಗೋದಾನ, ರತ್ನದಾನ ತನ್ನ ಯೋಗ್ಯತಾನುಸಾರವಾಗಿ ಏನೆಲ್ಲ ದಾನ ಮಾಡಬಹುದೋ ಕನ್ಯಾ ದಾನಾದಿಗಳನ್ನು ಮಾಡಬೇಕು, ಅಂಭ್ರಣೀ ಸಮೇತರಾದ ವೇದವ್ಯಾಸ ದೇವರು, ಲಕ್ಷ್ಮೀನಾರಾಯಣ ಹಾಗೂ ಎಲ್ಲ ದೇವತೆಗಳು ಎಲ್ಲರ ಪೂಜೆಯನ್ನು

1. 18.5.38 ಮಹಾಭಾರತ; 2. 1 ವಿಷ್ಣುಸಹಸ್ರನಾಮ



ವಿಶೇಷವಾಗಿ ಮಾಡಬೇಕು. ಈ ಸಂಹಿತ ಶ್ರೀಮನ್ಮಹಾಭಾರತ ಗ್ರಂಥದ ಪೂಜೆಯನ್ನು ಮಾಡಬೇಕು, ಏನು ಅಂದಿನಿಂದ ವೇದವ್ಯಾಸ ದೇವರು ಏನು ಗಣಪತಿಯಿಂದ ಬರಿಸಿದರೋ ಮಹಾಭಾರತವನ್ನ ಆ ಪುಸ್ತಕ ಆನಂತರ ಅದೇ ಕ್ರಮದಲ್ಲಿ ಏನು ಋಷಿಗಳು, ಮುನಿಗಳೆಲ್ಲ ತಾವು ಆ ಪುಸ್ತಕವನ್ನು ಬರೆಯುತ್ತಾ ಬಂದರಲ್ಲ.

ಸಂಹಿತಾಪುಸ್ತಕಾನ್ ರಾಜನ್ ಪ್ರಯತಃ ಶಿಷ್ಟಸಮ್ಮತಃ । (132.79 ಭವಿಷ್ಯಪರ್ವ)

ಅಂತಹ ಪುಸ್ತಕವನ್ನು ಇಟ್ಟು ಆ ಪುಸ್ತಕವನ್ನ ಗಂಧ ಮಾಲ್ಯಾ ಅರ್ಚನಾದಿಗಳನ್ನು ಮಾಡುತ್ತಾ ಪೂಜೆ ಮಾಡಬೇಕು ಅಂತ ಹೇಳುತ್ತಾರೆ, ಪುಸ್ತಕಗಳೇ ಇರಲಿಲ್ಲ ಅಂತ ಹೇಳುವುದು ಎಷ್ಟು ತಪ್ಪು ಆಗುತ್ತದೆ ಅಂತ ಅರ್ಥ ಮಾಡಿಕೊಳ್ಳಿ. ಇದಲ್ಲದೇ ಬೇಕಾದಷ್ಟು ವಸ್ತ್ರದಾನ ಹಿರಣ್ಯದಾನ ಗೋದಾನ ತ್ರಿಪಲ ಸ್ವರ್ಣದಾನ ಶಕ್ತಿ ಇದ್ದರೆ, ಇಲ್ಲದೆ ಇದ್ದರೆ ಯಥಾಶಕ್ತಿ ಸುವರ್ಣದಾನ ಇದೆಲ್ಲ ಮಾಡಿದರೆ ಅತಿರಾತ್ರ ಯಾಗವನ್ನು ಮಾಡಿದ ಫಲ, ದರ್ಶ ಪೂರ್ಣಮಾಸ ಯಾಗಾದಿಗಳನ್ನ ನಿರಂತರವಾಗಿ ಮಾಡಿದ್ದರ ಫಲ ಅವನಿಗೆ ಬರುತ್ತೆ. ಶ್ರೀಮದಾಚಾರ್ಯರು ಹೇಳುತ್ತಾರೆ **'ಭಾರತಾನ್ ನ ವಿರಾಗಾಯ ಭಾರತಾನ್ ನ ವಿಮುಕ್ತಯೇ'**[1] ಅಂತ ಭಾಗವತ ತಾತ್ಪರ್ಯದಲ್ಲಿ ವೈರಾಗ್ಯ ಸಾಧನವಾದದ್ದು ಮಹಾಭಾರತಕ್ಕಿಂತ ಶ್ರೇಷ್ಠವಾದದ್ದು ಇನ್ನೊಂದು ಇಲ್ಲ, ಮೋಕ್ಷ ಸಾಧನವಾದದ್ದು ಮಹಾಭಾರತಕ್ಕಿಂತ ಶ್ರೇಷ್ಠವಾದದ್ದು ಇನ್ನೊಂದು ಇಲ್ಲ ಅನ್ನುತ್ತಾರೆ. ಆ ಮಾತನ್ನೂ ಹರಿವಂಶ ಹೇಳುತ್ತದೆ

ಭಾರತಂ ಶೃಣುಯಾನ್ನಿತ್ಯಂ ಭಾರತಂ ಪರಿಕೀರ್ತಯೇತ್ ।
ಭಾರತಂ ಭವನೇ ಯಸ್ಯ ತಸ್ಯ ಹಸ್ತಗತೋ ಜಯಃ ॥ (132.91 ಭವಿಷ್ಯಪರ್ವ)

ಯಾರ ಮನೆಯಲ್ಲಿ ಮಹಾಭಾರತದ ಪುಸ್ತಕ ಇದ್ದರೆ ಜಗಳ ಆಗುತ್ತದೆ ಅಂತ ಕೆಲವರು ಮಹಾಭಾರತದ ಪುಸ್ತಕವನ್ನೇ ಮನೆಯಲ್ಲಿ ಇಟ್ಟುಕೊಳ್ಳುವುದಿಲ್ಲ ತಪ್ಪು ಅದು, ಮಹಾಭಾರತ ಪುಸ್ತಕ ಯಾರ ಮನೆಯಲ್ಲಿ ಇರುತ್ತೋ ಅವರಿಗೆ ಎಲ್ಲ ಕಾರ್ಯಗಳಲ್ಲಿ ಜಯವಾಗುವುದು ನಿಶ್ಚಿತ.

ಭಾರತಂ ಪರಮಂ ಪುಣ್ಯಂ ಭಾರತೇ ವಿವಿಧಾಃ ಕಥಾಃ ।
ಭಾರತಂ ಸೇವ್ಯತೇ ದೇವೈರ್ಭಾರತಂ ಪರಿಕೀರ್ತಯೇತ್ ॥ (132.92 ಭವಿಷ್ಯಪರ್ವ)

ಭಾರತಂ ಸರ್ವಶಾಸ್ತ್ರಾಣಾಮುತ್ತಮಂ ಭರತರ್ಷಭ । (132.93 ಭವಿಷ್ಯಪರ್ವ)

ಶ್ರೀಮದಾಚಾರ್ಯರು ಹೇಳುತ್ತಾರೆ **'ಭಾರತಂ ಸರ್ವಶಾಸ್ತ್ರೇಷು'** ಅಂತ ನಿರ್ಣೀಯವಾದ ಸಕಲ ಶಾಸ್ತ್ರಗಳಲ್ಲಿ ಭಾರತ ಉತ್ತಮ ಅಂತ ಆ ಮಾತನ್ನು ಹರಿವಂಶ ತಿಳಿಸಿಕೊಡುತ್ತ ಇದೆ **'ಭಾರತಾತ್ ಪ್ರಾಪ್ಯತೇ ಮೋಕ್ಷ'**[2] ಇಂತಹ ಭಾರತವನ್ನು ಚೆನ್ನಾಗಿ ಅಧ್ಯಯನ ಮಾಡಿದರೆ ಮೋಕ್ಷವಾಗುವುದು ನಿಶ್ಚಿತ. **'ಭಾರತಾನ್ ನ ವಿಮುಕ್ತಯೇ'** ಅಂತ ಏನು ಶ್ರೀಮದಾಚಾರ್ಯರು ಹೇಳುತ್ತಾರೋ ಭಾರತಕ್ಕಿಂತಲೂ ಮುಖ್ಯ ಸಾಧನವಾದದ್ದು ಇನ್ನೊಂದಿಲ್ಲ ಅಂತ ಆ ಮಾತನ್ನು ನಾವಿಲ್ಲಿ ಹರಿವಂಶದಲ್ಲಿ ಕಾಣುತ್ತೇವೆ. ಕೊನೆಗೆ ಮೇಲಿಂದ ಮೇಲೆ ಶ್ರೀಮದಾಚಾರ್ಯರು ಹೇಳುವಂತಹ ಮಾತು ಸಕಲ ಶಾಸ್ತ್ರಗಳ ಮಹಾ ತಾತ್ಪರ್ಯ ಪರಮಾತ್ಮನ ಸರ್ವೋತ್ತಮತ್ವವನ್ನು ಪ್ರತಿಪಾದನೆ ಮಾಡುವುದರಲ್ಲಿ ಇದೆ ಅನ್ನುವುದನ್ನು ಎಷ್ಟು ಸ್ಪಷ್ಟವಾಗಿ ಹೇಳುತ್ತಾರೆ.

1. 3.5.2 ಭಾಗವತ ತಾತ್ಪರ್ಯ ; 2. 132.93 ಭವಿಷ್ಯಪರ್ವ

ವೇದೇ ರಾಮಾಯಣೇ ಪುಣ್ಯೇ ಭಾರತೇ ಭರತರ್ಷಭ ।

ಆದೌ ಚಾನ್ತೇ ಚ ಮಧ್ಯೇ ಚ ಹರಿಃ ಸರ್ವತ್ರ ಗೀಯತೇ ॥ (132.95 ಭವಿಷ್ಯಪರ್ವ)

ಮಹಾಭಾರತ ಇದು ವಿಷ್ಣು ಸರ್ವೋತ್ತಮತ್ವವನ್ನು ಹೇಳುವುದಿಲ್ಲ ಬೇರೆ ದೇವತೆಗಳ ಉತ್ತಮತ್ವವನ್ನು ಹೇಳುತ್ತದೆ ಅಂತ ಎಷ್ಟೋ ಜನ ತಪ್ಪಾಗಿ ತಿಳಿದು ವ್ಯಾಖ್ಯಾನವನ್ನು ಮಾಡುತ್ತಾರೆ ಆದರೆ ಮಹಾಭಾರತವೇ ತನ್ನ ಮಾತಿನ ವ್ಯಾಖ್ಯಾನವನ್ನು ತಾನೇ ಮಾಡುತ್ತದೆ.

ವೇದೇ ರಾಮಾಯಣೇ ಪುಣ್ಯೇ ಭಾರತೇ ಭರತರ್ಷಭ ।

ಆದೌ ಚಾನ್ತೇ ಚ ಮಧ್ಯೇ ಚ ಹರಿಃ ಸರ್ವತ್ರ ಗೀಯತೇ ॥ (132.95 ಭವಿಷ್ಯಪರ್ವ)

ಹಾಗೆ ಪ್ರಾರಂಭವಾಗಿದೆ ವಾಸುದೇವ ಕಥಾಮ್ಮೀಮಾಂ ನಾರಾಯಣನ ಕಥೆಯನ್ನು ಹೇಳುತ್ತೇನೆ ಅಂತ ಪ್ರಾರಂಭ ಮಾಡುತ್ತಾರೆ ಕೊನೆಗೂ ಹಾಗೆ ಉಪಸಂಹಾರವನ್ನು ಮಾಡುತ್ತ ಆದಿ ಮಧ್ಯಾಂತದಲ್ಲಿ ಭಗವಂತನ ಮಹಿಮೆಯೇ ಪ್ರತಿಪಾದಿತವಾಗಿದೆ ಅಂತ ಮಹಾಭಾರತವೇ ಹೇಳುತ್ತಾ ಇದೆ. ಶ್ರೀಮದಾಚಾರ್ಯರು ಅದನ್ನು ತಾತ್ಪರ್ಯ ನಿರ್ಣಯದಲ್ಲಿ ತೋರಿಸಿಕೊಟ್ಟಿದ್ದಾರೆ **'ಯಸ್ಯ ಪ್ರಸಾದಜೋ ಬ್ರಹ್ಮಾ ರುದ್ರಶ್ಚ ಕ್ರೋಧ ಸಂಭವಃ'**[1] ಅಂತ ಇತ್ಯಾದಿಯಾಗಿ ಭಗವಂತನ ಸರ್ವೋತ್ತಮತ್ವವನ್ನ ಸರ್ವದೇವತಾ ನಿಯಾಮಕತ್ವವನ್ನ ಮಹಾಭಾರತದ ಕೊನೆಯಲ್ಲಿ, ಮಧ್ಯದಲ್ಲಿ **'ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ'**[2] ಅಂತ ಇತ್ಯಾದಿಯಾಗಿ ಆದಿ ಮಧ್ಯಾಂತಗಳಲ್ಲಿ ಪದೇ ಪದೇ ಪದೇ ಪದೇ ಪದೇ ಆ ಭಗವಂತನ ಮಹಿಮೆಯನ್ನು ಹೇಳಿದ್ದಾರೆ.

ಯತ್ರ ವಿಷ್ಣುಕಥಾ ದಿವ್ಯಾಃ ಶ್ರುತಯಶ್ಚ ಸನಾತನಾಃ ।

ತಚ್ಛ್ರೋತವ್ಯಂ ಮನುಷ್ಯೇಣ ಪರಂ ಪದಮಿಹೇಚ್ಛತಾ ॥ (132.96 ಭವಿಷ್ಯಪರ್ವ)

ಅಂತಹ ಭಗವಂತನ ಮಹಿಮೆಯನ್ನು ಎಲ್ಲಿ ವಿಶೇಷವಾಗಿ ಕೊಂಡಾಡಿದ್ದಾರೆ ಅಂತಹ ಮಹಾಭಾರತವನ್ನ, ರಾಮಾಯಣವನ್ನ, ಪಂಚರಾತ್ರಗಳನ್ನ, ಸಾತ್ವಿಕ ಪುರಾಣಗಳನ್ನ ಕೇಳಬೇಕು ಸಜ್ಜನರು, ಪುನಃ ಪುನಃ ಕೇಳಬೇಕು.

ಏತತ್ ಪವಿತ್ರಂ ಪರಮಮೇತದ್ ಧರ್ಮನಿದರ್ಶನಮ್ ।

ಏತತ್ ಸರ್ವಗುಣೋಪೇತಂ ಶ್ರೋತವ್ಯಂ ಭೂತಿಮಿಚ್ಛತಾ ॥ (132.97 ಭವಿಷ್ಯಪರ್ವ)

ಕ್ರಿಯತೇಽಸಾರಸಂಸಾರೇ ವಾಞ್ಛದ್ಭಿರ್ವ ಕಾರಣಮ್ ।

ಹರಿವಂಶಸ್ಯ ಶ್ರವಣಮಿತಿ ದ್ವೈಪಾಯನೋಽಬ್ರವೀತ್ ॥ (132.98 ಭವಿಷ್ಯಪರ್ವ)

ಅಸಾರವಾದ ಈ ಸಂಸಾರದೊಳಗೆ ಇದೊಂದು ದೊಡ್ಡ ಸಾರ ಅಂದರೆ ಅದು ಈ ಮಹಾಭಾರತ ಅದರಲ್ಲಿಯೂ ಈ ಹರಿವಂಶ ಭಗವಂತನ ಮಹಿಮೆಯನ್ನು ಪ್ರತಿಪಾದನ ಮಾಡುವಂತಹ ಇದನ್ನು ಕೇಳಿದರೆ ಎಲ್ಲ ಇಷ್ಟಾರ್ಥಗಳ ಪ್ರಾಪ್ತಿ ಆಗುತ್ತದೆ. ಸಾವಿರ ಅಶ್ವಮೇಧ ಯಾಗಗಳು, ನೂರಾರು ವಾಜಪೇಯಿ ಯಾಗಗಳನ್ನು ಮಾಡಿದರೆ ಏನು ಫಲವೋ ಆ ಫಲಗಳನ್ನು ಪಡೆಯಬಹುದು.

1. 12.328.12 ಮಹಾಭಾರತ ; 2. 7.7 ಭ ಗೀತಾ



ಅಜರಮಮರಮೇಕಂ ಧ್ಯೆಯಮಾದ್ಯನ್ತಶೂನ್ಯಂ
ಸಗುಣಮಗುಣಮಾದ್ಯಂ ಸ್ಥೂಲಮತ್ಯನ್ತಸೂಕ್ಷ್ಮಮ್ ।
ನಿರುಪಮಮನುಮೇಯಂ ಯೋಗಿನಾಂ ಜ್ಞಾನಗಮ್ಯಂ
ತ್ರಿಭುವನಗುರುಮೀಶಂ ತ್ವಾಂ ಪ್ರಪನ್ನೋಽಸ್ಮಿ ವಿಷ್ಣೋ ॥ (132.100 ಭವಿಷ್ಯಪರ್ವ)

ಅಂತ ವೈಶಂಪಾಯನರು ಆ ವಿಷ್ಣುವಿಗೆ ಶರಣು ಹೋಗುತ್ತಾ ಇದ್ದಾರೆ. ಸತ್ವ ರಜೋ ತಮೋಗುಣಗಳನ್ನು ಮೀರಿದಂತಹ ಜ್ಞಾನಾನಂದಾದಿ ಅನಂತ ಕಲ್ಯಾಣ ಗುಣ ಪರಿಪೂರ್ಣನಾದಂತಹ ಅತೀ ಸೂಕ್ಷ್ಮನಾದ, ಅತೀ ಸ್ಥೂಲನಾದ ಸರ್ವತ್ರ ವ್ಯಾಪ್ತನಾದಂತಹ ನಿನಗೆ ನಾನು ಶರಣು ಬರುತ್ತಾ ಇದ್ದೇನೆ.

ಸರ್ವಸ್ತರತು ದುರ್ಗಾಣಿ ಸರ್ವೋ ಭದ್ರಾಣಿ ಪಶ್ಯತು ।
ಸರ್ವೇಷಾಂ ವಾಞ್ಛಿತಾ ಅರ್ಥಾ ಭವನ್ತ್ವಸ್ಯ ಚ ಪಾರಣಾತ್ ॥ (132.101 ಭವಿಷ್ಯಪರ್ವ)

ಎಲ್ಲರೂ ಕಷ್ಟಗಳನ್ನು ದಾಟಲಿ, ಎಲ್ಲರೂ ಮಂಗಲವನ್ನು ಹೊಂದಲಿ, ಎಲ್ಲರ ಅಪೇಕ್ಷಿತಗಳು ಇಷ್ಟಾರ್ಥಗಳೆಲ್ಲ ಪೂರ್ಣವಾಗಲಿ. ಅವರವರಿಗೆ ಅಪೇಕ್ಷಿತವಾಗ ಲೌಕಿಕವಾದ ಅರ್ಥಗಳು ಸರಿ ಮುಖ್ಯವಾಗಿ ಆ ಭಗವಂತನ ಪ್ರಾಪ್ತಿಗೆ ಬೇಕಾದಂತಹ ಜ್ಞಾನ ಭಕ್ತಿ ವಿರಕ್ತಿಗಳು ಹಾಗೂ ಇನ್ನಿತರ ಏನೇನು ಸಾಧನೆಗಳು ಬೇಕೋ ಸದ್ಗುರುಗಳ ಸಮಾಗಮ, ಸಚ್ಛಾಸ್ತ್ರಗಳ ಅಧ್ಯಯನ ಈ ಎಲ್ಲ ಇಷ್ಟಾರ್ಥಗಳು ಕೂಡ ಪೂರ್ಣವಾಗಲಿ ಎಂಬುದಾಗಿ ಪ್ರಾರ್ಥನೆಯನ್ನು ವೈಶಂಪಾಯನರು ನಮ್ಮೆಲ್ಲರ ಪರವಾಗಿ ಪರಮಾತ್ಮನ ಪಾದಾರವಿಂದಗಳಲ್ಲಿ ಮಾಡುತ್ತಾ ಇದ್ದಾರೆ.

ಜನಮೇಜಯ ಪುನಃ ಆ ಭಗವಂತನ ಮಹಾಮಹಿಮೆಯನ್ನು ಕೇಳುವುದಕ್ಕೆ ಪ್ರಶ್ನೆ ಮಾಡುತ್ತಾನೆ. ತ್ರಿಪುರಾಸುರರ ಸಂಹಾರವನ್ನು ರುದ್ರ ದೇವರು ಮಾಡಿ **ತ್ರಿಪುರಾರೀ** ಅಂತ ಪ್ರಸಿದ್ಧರಾದರು. ಅಂತಹ ತ್ರಿಪುರಾರಿಗಳಾದ ರುದ್ರ ದೇವರ ಮಹಿಮೆ ಅವರಿಂದ ಆ ತ್ರಿಪುರಾಸುರ ಸಂಹಾರವನ್ನು ಮಾಡಿಸಿದ ಪರಮಾತ್ಮನ ಮಹಿಮೆಯನ್ನು ತಿಳಿಸಬೇಕು ಅಂತ ಹೇಳಿದಾಗ ಸಪ್ತಮಸ್ಕಂಧ ಭಾಗವತದಲ್ಲಿಯೂ ಈ ಕಥೆ ಬರುತ್ತದೆ ನರಸಿಂಹಾವತಾರದ ನಂತರದಲ್ಲಿ. ಮಯಾಸುರ ಬೆಳ್ಳಿಯ ಕಬ್ಬಿಣದ ಮೂರು ಪುರಗಳನ್ನು ಮಾಡುತ್ತಾನೆ ಎಲ್ಲರೂ ರುದ್ರ ದೇವರ ವರದಿಂದ ಅವಧ್ಯರಾಗಿರುವಂಥವರೇ, ಭಾರೀ ಭಾರೀ ಪರಾಕ್ರಮಿಗಳು ಅವರೆಲ್ಲರನ್ನ ಸಂಹಾರ ಮಾಡಬೇಕಾಗಿದೆ. ರುದ್ರ ದೇವರನ್ನು ಬಿಟ್ಟರೆ ಇನ್ಯಾರೂ ಸಂಹಾರ ಮಾಡುವ ಹಾಗಿಲ್ಲ ನೀವು ಅವರಿಗೆ ಶರಣು ಹೋಗಿ ಅಂತ ಹೇಳುತ್ತಾರೆ ಬ್ರಹ್ಮ ದೇವರು, ಸರಿ ಅಂತ ರುದ್ರ ದೇವರ ಹತ್ತಿರ ಎಲ್ಲ ದೇವತೆಗಳು ಬರುತ್ತಾರೆ. ಅವನು ಈ ದೇವಯಾನಾ ಪಿತೃಯಾನಾ ಅಂತ ಇರುತ್ತಾವಲ್ಲ ಸಕಾಮ ಕರ್ಮವನ್ನು ಮಾಡುವಂಥವರಿಗೆ, ನಿಷ್ಕಾಮ ಕರ್ಮವನ್ನು ಮಾಡುವಂಥವರಿಗೆ ಯೋಗ್ಯವಾದಂತಹ ಏನು ಧೂಮಾಧಿ ಮಾರ್ಗಗಳು ಅರ್ಚಿರಾದಿ ಮಾರ್ಗಗಳು ಅಂತ ಇವೆ ಆ ಎಲ್ಲ ಮಾರ್ಗಗಳನ್ನೇ ನಿರೋಧ ಮಾಡಿಬಿಟ್ಟಿದ್ದರಂತೆ ಇವರು ತ್ರಿಪುರಾಸುರರು. ಸಜ್ಜನರ ಉದ್ಧಾರವಾಗುವುದು ಹೇಗೆ ಅವರವರಿಗೆ ಯೋಗ್ಯವಾದ ಗತಿಗಳನ್ನು ಹೊಂದುವುದು ಹೇಗೆ ಎಲ್ಲರೂ ಕೂಡ, ಗತಿಹೀನರಾಗಿದ್ದಾರಲ್ಲ ಅಂತ ದೇವತೆಗಳು ಶರಣು ಹೋದರೆ ರುದ್ರ ದೇವರಿಗೆ ಕೇಳಿ ಅಂತ ಹೇಳಿದಾಗ ರುದ್ರ ದೇವರು ಬಂದಿದ್ದಾರೆ, ಭಾರೀ ಭಾರೀ ಘೋರವಾದ ಯುದ್ಧವನ್ನು ಮಾಡಿ ರುದ್ರ ದೇವರು ಎಲ್ಲರನ್ನೂ ಸಂಹಾರ ಮಾಡಿದರು.

ರುದ್ರ ದೇವರು ಸಂಹಾರ ಮಾಡಬೇಕು ಮತ್ತೆ ಅವರೆಲ್ಲರನ್ನು ಮಯಾಸುರ ಒಂದು ರಸಾಯನದ ದೊಡ್ಡ ಬಾವಿಯನ್ನು ಮಾಡಿದ್ದ ಅಲ್ಲಿ ಅವರನ್ನು ಎಸೆದು ಬಿಟ್ಟರೆ ಮತ್ತೆ ಎಲ್ಲರೂ ಎದ್ದು ಬರುತ್ತಿದ್ದರು. ಇವರು ಸಂಹಾರ

ಮಾಡಬೇಕು ಅವರು ಬದುಕಿ ಬರಬೇಕು ಯಾವಾಗ ಮುಗಿಯುವುದು ಯುದ್ಧ ಇದು ಬಹಳ ದೊಡ್ಡ ಚಿಂತೆಯಾಗಿದೆ ಆಗ ಪರಮಾತ್ಮ ತಾನು ಸ್ವತಃ ಆಕಳಿನ ರೂಪವನ್ನು ತೆಗೆದುಕೊಂಡಿದ್ದಾನೆ, ಬ್ರಹ್ಮ ದೇವರನ್ನ ಕರು ಮಾಡಿಕೊಂಡಿದ್ದಾನೆ. ಆ ರಸಾಯನವನ್ನ ಯಾರೂ ತೆಗೆದುಕೊಂಡು ಹೋಗಬಾರದು ಅಂತ ರಕ್ಷಕರನ್ನ ಸುತ್ತಲೂ ನಿಲ್ಲಿಸಿದ್ದಾನೆ ಮಯಾಸುರ, ಆ ಕರುವನ್ನು ಕರೆದುಕೊಂಡು ಆಕಳು ಬಂದು ರಸಾಯನವನ್ನು ಕುಡಿಯುತ್ತಾ ಇದೆ ಅವರಿಗೆ ಏನು ಎಚ್ಚರವಿಲ್ಲ ಕಣ್ಣಿನಲ್ಲಿ ನೋಡುತ್ತಾ ಇದ್ದಾರೆ. ಎಚ್ಚರ ಇಲ್ಲ ಅಂದರೆ ಕಣ್ಣು ತೆರೆದಿದ್ದಾರೆ ನೋಡುತ್ತಾ ಇದ್ದಾರೆ ಆಕಳು ಬಂತು ರಸಾಯನವನ್ನು ಕುಡಿಯುತ್ತಾ ಇದೆ ಗೊತ್ತಾಗುತ್ತಾ ಇದೆ ಆದರೆ ತಡೆಯಬೇಕು ಅನ್ನುವ ಬುದ್ಧಿ ಬರುತ್ತಾ ಇಲ್ಲ. **'ಧಿಯೋ ಯೋನಃ ಪ್ರಚೋದಯಾತ್'** ಪರಮಾತ್ಮ ಸಂಪೂರ್ಣ ಬಾವಿ ಖಾಲಿ ಮಾಡಿದ ಏನಿಲ್ಲ ಅಲ್ಲಿ ರಸಾಯನ, ಹೋಗಿಬಿಟ್ಟ ಅದೃಶ್ಯನಾದ ಆಮೇಲೆ ನೋಡುತ್ತಾರೆ ಅಯ್ಯೋ ರಸಾಯನವೇ ಇಲ್ಲ ಅಂತ. ಮಯಾಸುರ ಅಂದ ನನ್ನ ಕೈ ಮೀರಿ ಹೋಯಿತು ಏನೋ ಕಷ್ಟಪಟ್ಟು ಶ್ರಮಪಟ್ಟು ಅದನ್ನು ತಯಾರು ಮಾಡಿದ್ದೆ ಭಾರೀ ನನ್ನ ವಿದ್ಯೆಯನ್ನೆಲ್ಲ ಉಪಯೋಗಿಸಿ ರಸಾಯನವನ್ನ, ರಸಾಯನ ಇಲ್ಲ ಅಂದರೆ ಇನ್ನು ಸತ್ತವರನ್ನು ಬದುಕಿಸುವುದಕ್ಕೆ ನನಗೆ ಬೇರೆ ದಾರಿ ಇಲ್ಲ ಇನ್ನು ದೇವರ ಇಚ್ಛೆ ಏನಾಗುತ್ತೋ ಆಗಲಿ ಅಂದ.

ರುದ್ರ ದೇವರು ಯುದ್ಧವನ್ನು ಮಾಡುತ್ತಾ ಇದ್ದಾರೆ ಎಲ್ಲರನ್ನು ಸಂಹಾರ ಮಾಡುತ್ತಾ ಇದ್ದಾರೆ ಈ ಸಂದರ್ಭದಲ್ಲಿ ರುದ್ರ ದೇವರ ರಥ ಭೂಮಿಯಲ್ಲಿ ಸಿಕ್ಕಿಕೊಂಡು ಹೋಯಿತು ಆ ರಥನೇ ಮುಂದೆ ಹೋಗುತ್ತಾ ಇಲ್ಲ, ಆ ಸಂದರ್ಭದಲ್ಲಿ ನೋಡಿ, ಮತ್ತೆ ದೇವರೇ ಎತ್ತಾಗಿ ಬಂದ ಇದು ಭಾಗವತದಲ್ಲಿ ಬಂದಿಲ್ಲ, ರಸಾಯನವನ್ನ ಕುಡಿದ ಕಥೆ ಹರಿವಂಶದಲ್ಲಿ ಬಂದಿಲ್ಲ ಅಲ್ಲಿ ಆಕಳು ಇಲ್ಲಿ ಎತ್ತು, ಎತ್ತಾಗಿ ಬಂದು ತನ್ನ ಎರಡೂ ಕೋಡುಗಳಿಂದ ಆ ಭೂಮಿಯಲ್ಲಿ ಸಿಕ್ಕ ರುದ್ರ ದೇವರ ರಥವನ್ನ ಎತ್ತಿ ಮೇಲೆ ನಿಲ್ಲಿಸುತ್ತಾನೆ ಪರಮಾತ್ಮ ಆ ರಥ ಮುಂದೆ ಹೋಗುವುದಕ್ಕೆ ಅನುಕೂಲ ಮಾಡಿ ಕೊಡುತ್ತಾನೆ. ಅಷ್ಟು ಮಾತ್ರ ಅಲ್ಲ ಶ್ರೀಮದ್ಭಾಗವತ ಹೇಳುತ್ತದೆ ಪ್ರಾಧನಿಕ ಯುದ್ಧಕ್ಕೆ ಸಂಬಂಧಪಟ್ಟ ಏನೇನು ಇತ್ತೋ ರಥ, ಕುದುರೆ, ಅಸ್ತ್ರ, ಧ್ವಜ, ಸಾರಥಿ, ಲಗಾಮು, ರಥದ ಚಕ್ರಗಳು ಎಲ್ಲದರೊಳಗೂ ದೇವರು ತಾನು ಪ್ರವೇಶ ಮಾಡಿದ್ದಾನೆ ಹೇಗೆ ಸಮುದ್ರಮಥನ ಕಾಲದಲ್ಲಿ ಎಲ್ಲಾ ಕಡೆಗೆ ಪ್ರವೇಶ ಮಾಡಿದ ಹಾಗೆ ಎಲ್ಲ ಕಡೆಗೂ ತಾನು ಪ್ರವೇಶ ಮಾಡಿ ತನ್ನ ತೇಜಸ್ಸನ್ನಿಟ್ಟು ರುದ್ರ ದೇವರಿಂದ ಯುದ್ಧವನ್ನು ಮಾಡಿಸಿ ಅವರಿಗೆ ಗೆಲುವನ್ನು ತಂದುಕೊಟ್ಟು **'ತ್ರಿಪುರಾರೀ'** ಅನ್ನುವಂತಹ ದೊಡ್ಡ ಬಿರುದನ್ನು ಭಗವಂತ ಅವರಿಗೆ ಕರುಣಿಸಿದ. ಆ ರೀತಿ ನಮಗೆ ಆದಿದೈವಿಕ ಆದಿಭೌತಿಕ ಆಧ್ಯಾತ್ಮಿಕವಾದಂತಹ ಯಾವುದೇ ತರಹದ ತಾಪಗಳು ಬಂದರೂ ಆ ತಾಪತ್ರಯಗಳನ್ನ ತ್ರಿಪುರರನ್ನ ರುದ್ರ ದೇವರಿಂದ ಸಂಹಾರ ಮಾಡಿಸಿದ ಪರಮಾತ್ಮ, ತಾಪತ್ರಯಗಳಿಂದ ಒದ್ದಾಡುವಂತಹ ನಮ್ಮೆಲ್ಲರನ್ನೂ ಕೂಡ ಇದೇ ರೀತಿ ಆ ಭಗವಂತ ರಕ್ಷಣೆ ಮಾಡುತ್ತಾನೆ ಅಂತ ತಿಳಿಸಿಕೊಡುತ್ತಾರೆ. ಆ ತ್ರಿಪುರಾಸುರರನ್ನು ಸಂಹಾರ ಮಾಡಿದಾಗ ಎಲ್ಲರೂ ಮೊದಲು ರುದ್ರ ದೇವರನ್ನು ಸ್ತುತಿ ಮಾಡಿದರೆ ನಂತರದಲ್ಲಿ ಆ ರುದ್ರ ದೇವರಲ್ಲಿ ನಿಂತು ಸಂಹಾರ ಮಾಡಿಸಿದ ವಿಷ್ಣುವಿನ ಸ್ತುತಿಯನ್ನು ಮಾಡಿದ್ದಾರೆ.

ವಿಷ್ಣುರೇವ ಮಹಾಯೋಗೀ ಯೋಗೇನ ಪ್ರಸ್ಮಯನ್ನಿವ ।
ಸ್ತೂಯತೇ ಬ್ರಹ್ಮಸದೃಶೈರ್ಋಷಿಭಿಃ ಶಂಕರೇಣ ಚ ॥ (133.83 ಭವಿಷ್ಯಪರ್ವ)

ರುದ್ರ ದೇವರು ಋಷಿಗಳು ಮುನಿಗಳು ದೇವತೆಗಳು ಎಲ್ಲರೂ ಪರಮಾತ್ಮನನ್ನ ವಿಷ್ಣುವನ್ನ ಸ್ತೋತ್ರ ಮಾಡಿದ್ದಾರೆ ನೀನೇ ಇಷ್ಟು ದೊಡ್ಡ ವಿಜಯವನ್ನು ರುದ್ರ ದೇವರಿಗೆ ತಂದು ಕೊಟ್ಟಿದ್ದಿ ಮಹಾನುಭಾವ ಅಂತ.

ಆ ಹರಿವಂಶದಲ್ಲಿ ಮೊದಲು ಆದಿ ಸೃಷ್ಟಿಯನ್ನು ಹೇಳಿ ಭೂತಗಳ ಸೃಷ್ಟಿ, ಪೃಥು ಚಕ್ರವರ್ತಿಯ ಚರಿತ್ರೆ, ಮನುಗಳ ಚರಿತ್ರೆ, ವೈವಸ್ವತ ಮನವಿನ ವಂಶ, ಧುಂಧುಮಾರನನ್ನ ಕುವಲಾಶ್ವನ ಮೂಲಕ ದೇವರು ಸಂಹಾರ ಮಾಡಿಸಿದ್ದು, ಗಾಲವರ ಉತ್ಪತ್ತಿ, ಇಕ್ಷ್ವಾಕು ವಂಶ, ಪಿತೃಕಲ್ಪ, ಸೋಮ ಬುಧರ ಉತ್ಪತ್ತಿ, ಅಮಾವಸುವಿನ ವಂಶ, ಇಂದ್ರ ದೇವರ ವಿಶೇಷವಾಗಿ ಇರುವಂತಹ ಪ್ರತಿಷ್ಠೆ, ದಿವೋದಾಸನ ಪ್ರತಿಷ್ಠೆ, ತ್ರಿಶಂಖುವಿನ ಚರಿತ್ರೆ, ಯಯಾತಿ ಕುರು ವಂಶ ಹೀಗೆಲ್ಲ ಹೇಳುತ್ತಾ ಶ್ರೀಕೃಷ್ಣ ಪರಮಾತ್ಮನ ಆ ಸ್ಯಮಂತಕ ಮಣಿಯನ್ನ ಅಪಹಾರ ಮಾಡಿದ್ದರ ಅಪವಾದವನ್ನ ಪರಿಹಾರ ಮಾಡಿಕೊಂಡದ್ದು, ತಾರಕಾಮಯ ಯುದ್ಧ ಹಾಗೂ ದುರ್ಗಾ ದೇವಿ ಆ ಕಾಲನೇಮಿ ಹಾಗೂ ಬ್ರಹ್ಮ ದೇವರ ಎಲ್ಲರ ಮಾತನ್ನ ಅವಧ್ಯರಾಗಿರಿ ಅಂತ ವರವನ್ನ ಬ್ರಹ್ಮ ದೇವರು ಕೊಟ್ಟಿರುತ್ತಾರೆ, ಹಿರಣ್ಯಕಶಿಪು ನಿಮ್ಮ ತಂದೆಯಿಂದಲೇ ನೀವು ಸಾಯಬೇಕು ಅಂತ ಶಾಪ ಕೊಟ್ಟದ್ದು ಅವುಗಳನ್ನೆಲ್ಲ, ಯೋಗ ನಿದ್ರಾ ದುರ್ಗಾ ದೇವಿ ಹೇಗೆ ಯೋಜನ ಮಾಡಿದಳು ಅನ್ನುವುದು, ದೇವತೆಗಳೆಲ್ಲ ಅಂಶಾವತಾರ ಮಾಡಿದ ಕಥೆ ಹೀಗೆ ಹರಿವಂಶ ಪರ್ವದಲ್ಲಿ ವರ್ಣನೆ ಮಾಡಿದ್ದಾರೆ.

ವಿಷ್ಣು ಪರ್ವದಲ್ಲಿ ನಾರದರ ವಾಚಸ್ತುತಿ, ಆರ್ಯಾಸ್ತವ ದುರ್ಗಾ ದೇವಿಯ ಸ್ತೋತ್ರ, ಶ್ರೀಕೃಷ್ಣಾವತಾರ, ಶ್ರೀಕೃಷ್ಣ ಪರಮಾತ್ಮನ ನಾನಾ ವಿಧವಾದ ಲೀಲೆಗಳು ಪೂತನಾ ಸಂಹಾರ, ಶಕಟಾಸುರನ ಸಂಹಾರ, ಯಮಲಾರ್ಜುನರ ಉದ್ಧಾರ ಹಾಗೂ ಕಾಲಿಯ ನಾಗ, ಗೋವರ್ಧನ ಪರ್ವತದ ಉದ್ಧಾರ, ಅರಿಷ್ಟಾಸುರ ನಾನಾ ವಿಧವಾದ ಅಸುರರ ಸಂಹಾರ ಹಾಗೂ ಅಕ್ರೂರನ ಆಗಮನ, ನಾಗಲೋಕದ ದರ್ಶನ, ಧನುರ್ಭಂಗ, ಕುವಲಯಾಪೀಡ ವಧ, ಚಾಣೂರ ಮುಷ್ಟಿಕರ ವಧ ಕಂಸ ಸಂಹಾರ, ಉಗ್ರಸೇನ ಪಟ್ಟಾಭಿಷೇಕ, ಯಾದವರಿಗೆ ಸಮಾಧಾನವನ್ನು ಮಾಡಿದ್ದು, ಗುರುಕುಲ ವಾಸ ಆಮೇಲೆ ಜರಾಸಂಧನನ್ನ ಸೋಲಿಸಿದ್ದು, ಗೋಮಂತ ಪರ್ವತದ ಮೇಲೆ ಜರಾಸಂಧಾದಿಗಳ ಆಕ್ರಮಣ, ಗೋಮಂತ ಪರ್ವತದ ರಕ್ಷಣ, ಜರಾಸಂಧಾದಿಗಳನ್ನು ಸೋಲಿಸಿದ್ದು, ಶೃಗಾಲ ವಾಸುದೇವನ ಸಂಹಾರ, ಯಮುನಾ ದೇವಿಯನ್ನು ಬಲರಾಮ ದೇವರು ಆಕರ್ಷಣೆ ಮಾಡಿದ್ದು, ಕಾಲಯವನನ ಸಂಹಾರ, ರುಕ್ಮಿಣಿ ವಿವಾಹ, ಬಲರಾಮ ದೇವರ ನಾನಾ ವಿಧವಾದ ಪರಾಕ್ರಮಗಳು, ನರಕಾಸುರನ ಸಂಹಾರ, ದ್ವಾರಕಾ ಪಟ್ಟಣದ ನಿರ್ಮಾಣ, ಷಟ್ಪುರದಲ್ಲಿ ಇರುವಂತಹ ಅಸುರರ ಸಂಹಾರ, ಸಮುದ್ರದಲ್ಲಿ ಯಾತ್ರೆ ಆಲ್ಲಿ ವಿವಿಧ ವಿಚಿತ್ರವಾದಂತಹ ಕ್ರೀಡೆಗಳು ಇವುಗಳೆಲ್ಲವನ್ನ ವಿಷ್ಣು ಪರ್ವದಲ್ಲಿ ವರ್ಣನೆ ಮಾಡಿದ್ದಾರೆ.

ಭವಿಷ್ಯ ಪರ್ವದಲ್ಲಿ ನಾನಾ ವಿಧವಾದಂತಹ ಪರಮಾತ್ಮನ ವರಾಹಾವತಾರ, ನರಸಿಂಹಾವತಾರ, ವಾಮನಾವತಾರದ ವರ್ಣನೆ, ಕೃಷ್ಣನ ಕೈಲಾಸ ಯಾತ್ರೆ, ಪೌಂಡ್ರಕನ ವಧ, ಹಂಸ-ಡಿಭಿಕರ ವಧ, ತ್ರಿಪುರಾಸುರರ ಸಂಹಾರ ಇಷ್ಟೆಲ್ಲವನ್ನ ಈ ಹರಿವಂಶದಲ್ಲಿ ಹೇಳಿದ್ದಾರೆ ಅಂತ. ಕೊನೆಯ ಹಿಂದಿನ ಅಧ್ಯಾಯದಲ್ಲಿ ಹರಿವಂಶ ವೃತ್ತಾಂತಗಳ ಸಂಗ್ರಹವನ್ನ ಒಂದು ಅಧ್ಯಾಯದಿಂದ ವೈಶಂಪಾಯನರು ಏನೆಲ್ಲ ತಾವು ಶ್ರವಣ ಮಾಡಿರುತ್ತಾರೋ ಅದನ್ನು ತಿಳಿಸಿಕೊಟ್ಟಿದ್ದಾರೆ.

ಸಂಕ್ಷೇಪ ವಿಸ್ತರಾಭ್ಯಾಂ ಚ ಕಥಯಂತಿ ಮನೀಷಿಣಃ ।
ಬಹುವಾರ ಶ್ರುತೇಸ್ತಸ್ಯ ಫಲಬಾಹುಲ್ಯ ಕಾರಣಾತ್ ॥

ಅಂತ ಸಂಕ್ಷೇಪವಾಗಿ ವೈಶಂಪಾಯನರು ಆ ಎಲ್ಲ ವೃತ್ತಾಂತವನ್ನ ಜನಮೇಜಯನಿಗೆ ಮತ್ತೆ ನೆನಪು ಮಾಡಿ ಕೊಟ್ಟಿದ್ದಾರೆ. ಆಮೇಲೆ ಹೇಳುತ್ತಾರೆ ಕಾಯಿಕ ವಾಚಿಕ ಮಾನಸಿಕವಾದ ಎಲ್ಲ ಪಾಪಗಳು ಕೂಡ ಈ ಹರಿವಂಶದ ಶ್ರವಣದಿಂದ ಪರಿಹಾರವಾಗುತ್ತದೆ.

ಅಷ್ಟಾದಶಪುರಾಣಾನಾಂ ಶ್ರವಣಾದ್ ಯತ್ ಫಲಂ ಭವೇತ್ । (135.3 ಭವಿಷ್ಯಪರ್ವ)
ತತ್ ಫಲಂ ಸಮವಾಪ್ನೋತಿ ವೈಷ್ಣವೋ ನಾತ್ರ ಸಂಶಯಃ ॥ (135.4 ಭವಿಷ್ಯಪರ್ವ)

ಹದಿನೆಂಟು ಪುರಾಣಗಳನ್ನು ಶ್ರವಣ ಮಾಡಿದರೆ ಏನು ಫಲವೋ ಅದು ಹರಿವಂಶ ಪುರಾಣದ ಶ್ರವಣದಿಂದ ಬರುತ್ತದೆ.

ಶ್ಲೋಕಾರ್ಧಂ ಶ್ಲೋಕಪಾದಂ ವಾ ಹರಿವಂಶಸಮುದ್ಭವಮ್ । (135.4 ಭವಿಷ್ಯಪರ್ವ)
ಶೃಣ್ವನ್ತಿ ಶ್ರದ್ಧಯಾ ಯುಕ್ತಾ ವೈಷ್ಣವಂ ಪದಮಾಪ್ನುಯುಃ ॥ (135.5 ಭವಿಷ್ಯಪರ್ವ)

ಒಂದು ಅರ್ಧ ಶ್ಲೋಕ ಒಂದು ಪಾದ ಶ್ಲೋಕ ಕೇಳಿದರೂ ಪರಮಾತ್ಮನ ಅನುಗ್ರಹವಾಗುತ್ತದೆ,ಅವನ ಸಾನ್ನಿಧ್ಯ ಪ್ರಾಪ್ತವಾಗುತ್ತದೆ ಅಂದರೆ ಸಮಗ್ರ ಹರವಂಶವನ್ನ ಶ್ರವಣ ಮಾಡಿದರೆ ಎಷ್ಟು ಪುಣ್ಯ ಬರುತ್ತದೆ ಅಂತ ಹೇಳುವುದಕ್ಕೆ ಸಾಧ್ಯ ಇಲ್ಲ ಇದನ್ನು ಕೇಳುವುದು ಬಹಳ ಕಷ್ಟ ಅನ್ನುತ್ತಾರೆ.

ಜಮ್ಬೂದ್ವೀಪಂ ಸಮಾಶ್ರಿತ್ಯ ಶ್ರೋತಾರೋ ದುರ್ಲಭಾಃ ಕಲೌ ॥ (135.5 ಭವಿಷ್ಯಪರ್ವ)

ಇಡೀ ಜಂಬೂದ್ವೀಪದೊಳಗೆ ಕೆಲವರೇ ಶ್ರವಣ ಮಾಡಬಹುದು ಬಹಳ ಜನರಿಗೆ ಇದನ್ನು ಶ್ರವಣ ಮಾಡುವ ಭಾಗ್ಯವೂ ಸಿಗುವುದಿಲ್ಲ.

ಸ್ತ್ರೀಭಿಶ್ಚ ಪುತ್ರಕಾಮಾಭಿಃ ಶ್ರೋತವ್ಯಂ ವೈಷ್ಣವಂ ಯಶಃ ॥ (135.6 ಭವಿಷ್ಯಪರ್ವ)
ದಕ್ಷಿಣಾ ಚಾತ್ರ ದೇಯಾ ವೈ ನಿಷ್ಕತ್ರಯಸುವರ್ಣಕಮ್ । (135.7 ಭವಿಷ್ಯಪರ್ವ)

ಪುತ್ರರ ಅಪೇಕ್ಷೆ ಇರುವಂತಹ ಸ್ತ್ರೀಯರು ಇದನ್ನು ಶ್ರವಣ ಮಾಡಬೇಕು, ಭಕ್ತಿಯಿಂದ ಶ್ರವಣ ಮಾಡಿ ವಿಶೇಷವಾಗಿ ದಾನ ಧರ್ಮಾಧಿಗಳನ್ನ ನಾನಾ ವಿಧವಾದ ಆಭರಣಾದಿಗಳನ್ನೆಲ್ಲ ತಮ್ಮ ಶಕ್ತ್ಯಾನುಸಾರ ದಾನವನ್ನು ಮಾಡಬೇಕು.

ಶೃಣೋತಿ ಶ್ರಾವಯೇಚ್ ವಾಪಿ ಹರಿವಂಶಂ ತು ಯೋ ನರಃ ।
ಸರ್ವಯಾ ಪಾಪನಿರ್ಮುಕ್ತೋ ವೈಷ್ಣವಂ ಪದಮಾಪ್ನುಯಾತ್ ॥ (135.11 ಭವಿಷ್ಯಪರ್ವ)

ಪಿತೄನುದ್ಧರತೇ ಸರ್ವಾನೇಕಾದಶಸಮುದ್ಭವಾನ್ ।
ಆತ್ಮಾನಂ ಸಸುತಂ ಚೈವ ಸ್ವಿಯಂ ಚ ಭರತರ್ಷಭ ॥ (135.12 ಭವಿಷ್ಯಪರ್ವ)

ತಾನು ಮಾತ್ರ ಉದ್ಧಾರ ಹೊಂದುವುದಲ್ಲ ತಮ್ಮ ಪಿತೃಗಳ ಉದ್ಧಾರವಾಗುತ್ತದೆ, ಮಕ್ಕಳ ಉದ್ಧಾರ ಎಲ್ಲರನ್ನೂ ಉದ್ಧಾರ ಮಾಡಿ ತಾನೂ ಉದ್ಧಾರವನ್ನು ಹೊಂದುತ್ತಾನೆ ಶ್ರವಣ ಮಾಡಿದಂತಹ ವ್ಯಕ್ತಿ. ದಶಾಂಶ ಹೋಮವನ್ನೂ ಕೂಡ ಮಾಡಬೇಕು.

ಯಸ್ಯ ಸ್ಮರಣಮಾತ್ರೇಣ ಸರ್ವಪಾಪೈಃ ಪ್ರಮುಚ್ಯತೇ ।
ಅಪುತ್ರಃ ಪುತ್ರಮಾಪ್ನೋತಿ ಅಧನೋ ಧನಮಾಪ್ನುಯಾತ್ ॥ (135.14 ಭವಿಷ್ಯಪರ್ವ)



ಹರಿವಂಶದ ಸ್ಮರಣೆ ಮಾಡುವ ಮಾತ್ರದಿಂದಲೂ ಪುತ್ರ ಪ್ರಾಪ್ತಿಯಾಗುತ್ತದೆ, ಧನ ಪ್ರಾಪ್ತಿಯಾಗುತ್ತದೆ, ಅಶ್ವಮೇಧಾದಿ ಯಾಗಗಳನ್ನ ಮಾಡಿದ್ದರ ಫಲ ಅವನಿಗೆ ಸಿಗುತ್ತೆ, ಬ್ರಹ್ಮಹತ್ಯಾದಿಗಳನ್ನು ಮಾಡಿದ ಪಾಪಗಳೆಲ್ಲ ಪರಿಹಾರವಾಗುತ್ತದೆ.

ಬ್ರಹ್ಮಹಾ ಭ್ರೂಣಹಾ ಗೋಘ್ನಃ ಸುರಾಪೋ ಗುರುತಲ್ಪಗಃ ।
ಸಕೃತ್ಪುರಾಣಶ್ರವಣಾತ್ ಪೂತೋ ಭವತಿ ನಾನ್ಯಥಾ ॥ (135.16 ಭವಿಷ್ಯಪರ್ವ)

ಅಂತ ಇದರ ಫಲಶ್ರುತಿಯನ್ನು ಹೇಳಿ ಕೊನೆಗೆ ಹೇಳುತ್ತಾರೆ.

ಇದಂ ಮಯಾ ತೇ ಪರಿಕೀರ್ತಿತಂ ಮಹ –
ಚ್ಛ್ರೀಕೃಷ್ಣಮಾಹಾತ್ಮ್ಯಮಪಾರಮದ್ಭುತಮ್ ।
ಶೃಣ್ವನ್ ಪಠನ್ನಾಶು ಸಮಾಪ್ನುಯಾತ್ ಫಲಂ
ಯಚ್ಚಾಪಿ ಲೋಕೇಷು ಸುದುರ್ಲಭಂ ಮಹತ್ ॥ (135.17 ಭವಿಷ್ಯಪರ್ವ)


ಈ ಶ್ರೀಕೃಷ್ಣ ಪರಮಾತ್ಮನ ಮಹಾತ್ಮ್ಯವನ್ನು ಏನು ಹರಿವಂಶದ ಮೂಲಕ ನಾನು ಏನು ತಿಳಿಸಿಕೊಟ್ಟಿದ್ದೇನೆ ಇದರ ಶ್ರವಣ ಮಾಡಿದರೂ, ಪಠಣ ಮಾಡಿದರೂ ಕೂಡ ಅತ್ಯುತ್ತಮವಾಗಿರುವಂತಹ ಆ ಭಗವಂತನ ಪದ ಆ ಪರಮಾತ್ಮನ ಸ್ಥಾನ ಅವನಿಗೆ ಸಿಗುತ್ತೆ ಉತ್ತಮವಾದ ಜ್ಞಾನ ಲಾಭವಾಗಿ, ಜ್ಞಾನ ದ್ವಾರಾ ಆ ಭಗವಂತನ ಪದದ ಪ್ರಾಪ್ತಿಯಾಗುತ್ತದೆ ಎಂಬ ಮಾತನ್ನು ವೈಶಂಪಾಯನರು ತಿಳಿಸುತ್ತಾ ಇದ್ದಾರೆ ವೇದವ್ಯಾಸ ದೇವರು ಈ ಹರಿವಂಶದ ಅದ್ಭುತವಾದ ಮಹಿಮೆಯನ್ನು ವರ್ಣನೆ ಮಾಡುತ್ತಾರೆ. ಇಂತಹ ನಿರ್ಣೀಯವಾದ ಸಕಲ ಶಾಸ್ತ್ರಗಳಲ್ಲಿ ಅತ್ಯುತ್ತಮವಾದಂತಹ ಶ್ರೀಮನ್ಮಹಾಭಾರತ ಅದರಲ್ಲಿ ಬರುವಂತಹ ಈ ಹರಿವಂಶ ಖಿಲಭಾಗ ಅತೀ ಶ್ರೇಷ್ಠವಾದ ಆ ಪರಮಾತ್ಮನ ದಿವ್ಯವಾದ ಮಹಿಮೆಗಳನ್ನ ವರ್ಣನೆ ಮಾಡುತ್ತದೆ. ಮಹಾಭಾರತದ ಎಲ್ಲ ಪರ್ವಗಳಲ್ಲಿಯೂ ಅದ್ಭುತವಾದ ಪರಮಾತ್ಮನ ಮಹಿಮೆ ಇದ್ದೇ ಇದೆ ಅದರಲ್ಲಿಯೂ ವಿಶೇಷವಾಗಿ ಹರಿವಂಶದೊಳಗೆ ವಿಷ್ಣುವಿನ ಮಹಿಮೆಯನ್ನೇ ಹೇಳುವುದಕ್ಕೆ ಹೊರಟಂತಹ ವಿಶೇಷವಾದ ಅಧ್ಯಾಯಗಳು ಕಥೆಗಳು ಇದರಲ್ಲಿ ನೀವೆಲ್ಲ ಕೇಳಿದ್ದೀರಿ. ಸಕಲ ದೇವತೆಗಳಿಗಿಂತಲೂ ಭಗವಂತನ ಉತ್ತಮತ್ವ, ಇಡೀ ಜಗತ್ತಿನ ಸೃಷ್ಟ್ಯಾದಿ ಕಾರಣತ್ವ, ಆ ಪರಮಾತ್ಮನು ಭಕ್ತರ ಮೇಲೆ ಮಾಡುವಂತಹ, ದೇವತೆಗಳ ಮೇಲೆ ಮಾಡುವಂತಹ ಅನುಗ್ರಹ ಇವುಗಳೆಲ್ಲವನ್ನ ಅತ್ಯಂತ ಉತ್ಕೃಷ್ಟವಾದ ರೀತಿಯಲ್ಲಿ ಈ ಹರಿವಂಶ ನಮಗೆ ತಿಳಿಸಿಕೊಡುತ್ತದೆ.

॥ ಹರಯೇ ನಮಃ ಶ್ರೀಕೃಷ್ಣಾರ್ಪಣಮಸ್ತು ॥

ಹರಿವಂಶ (2)
ಧರ್ಮನನ್ನು 13 ಹೆಣ್ಣುಮಕ್ಕಳು ಮದುವೆಯಾದರು.
ಅಗ್ನಿಯನ್ನು ಒಬ್ಬ ಮಗಳು ಮದುವೆಯಾದಳು.
ಪಿತೃಸ್ವನನ್ನು ಒಬ್ಬ ಮಗಳು ಮದುವೆಯಾದಳು.
ದಕ್ಷಪ್ರಜಾಪತಿ ಮತ್ತು ಪ್ರಸೂತಿ
16 ಹೆಣ್ಣುಮಕ್ಕಳು
ಬೇರೆ ಮಹಾದೇವನನ್ನು ಒಬ್ಬ ಮಗಳು ಮದುವೆಯಾದಳು.
8 ಹೆಂಡತಿಯರು
ಸತಿ
ಊರ್ಜಾ
ವಸೂ
ಲಂಬಾ
ಭಾನು
ಮರುತ್ವತಿ
ಭೀಮಿ
ಯಾಮಿ
8 ರುದ್ರರು
ರುದ್ರ
ಭೂಮ
ಶರ್ವ
ಲಂಬಾ
ಭಾನು
ಮರುತ್ವತಿ
ಭೀಮಿ
ಯಾಮಿ
ವಿಶ್ವಕರ್ಮನ ಮಗಳು
ಇಂದ್ರನ ಮಗಳು
ಪ್ರಿಯವ್ರತ
ಅಗ್ನೀಧ್ರ
ನಾಭಿ
ಋಷಭ
ಮಗ : ಭರತ

ಹರಿವಂಶ (3)
ಋಷಿ ಕರ್ದಮ ಮತ್ತು ದೇವಹೂತಿ
ಹೆಣ್ಣು ಮಕ್ಕಳು
ಕಲಾ
ಅನಸೂಯ
ಶ್ರದ್ಧಾ
ಹವಿರ್ಭು
ಗತಿ
ಕ್ರಿಯಾ
ಉರುಂಧತಿ
ಖ್ಯಾತಿ
ಶಾಂತಿ
ಗಂಡು ಮಕ್ಕಳು
ಕಪಿಲ
ವಸುದೇವ
ಋಷಿ ಮರೀಚಿ
ಋಷಿ ಅತ್ರಿ
ಋಷಿ ಅಂಗೀರಸ
ಋಷಿ ಪುಲಸ್ತ್ಯ
ಋಷಿ ಪುಲಹ
ಋಷಿ ಕ್ರತು
ಋಷಿ ವಸಿಷ್ಠ
ಋಷಿ ಭೃಗು
ಋಷಿ ಅಥರ್ವ

ಹರಿವಂಶ (4)
ಋಷಿ ಕರ್ದಮ ಮನಸ್ಸು ದೇವಹೂತಿ
ಮಗಳು: ಕಲಾ
ಮಗಳು: ಶ್ರದ್ಧಾ
ಮಗಳು: ಹವಿರ್ಭು
ಮಗಳು: ಗತಿ
ಮಗಳು: ಶಾಂತಿ
ಋಷಿ ಮರೀಚಿ
ಮಗ: ಋಷಿ ಕಶ್ಯಪ
ಋಷಿ: ಅಂಗೀರಸ
ಮಗ: ದೇವಗುರು ಬೃಹಸ್ಪತಿ
ಋಷಿ: ಪುಲಸ್ತ್ಯ
ಮಗ: ಋಷಿ ಅಗಸ್ತ್ಯ
ಮಗ: ಋಷಿ ವಿಶ್ರವಸು
ಮಗ: ಕುಬೇರ
ವಿಶ್ರವಸು + ಪುಂಡಶಿ ಕೇಶಿನೀ
ಗಂಡುಮಕ್ಕಳು: ರಾವಣ, ಕುಂಭಕರ್ಣ, ವಿಭೀಷಣ
ಮಗ: ಚಕ್ರಾಚಾರ್ಯ


ಹರಿವಂಶ (5)
ಸ್ವಾಯಂಭುವ ಮನು
ಶತರೂಪಾ
ಮಗ :
ಉತ್ತಾನಪಾದ
ಮಗ :
ಧ್ರುವ
ರಾಜ : ಭಯಾನಕ
ವೇನ
ಮಹಾರಾಜ ಪೃತು
ಮಗ : ಪೃಥು
(ಇವನಿಂದ ಭೂಮಿಗೆ ಪೃಥ್ವಿ ಎಂಬ ಹೆಸರು ಬಂದಿದೆ)
ಗಂಡು ಮಕ್ಕಳು :
ಪ್ರಚೇತರು (10 ಜನ)
ಅಸಿಕ್ನಿ
ಮಗ : ದಕ್ಷ
ಹೆಣ್ಣು ಮಕ್ಕಳು :
60 ಜನ
10 ಹೆಣ್ಣುಮಕ್ಕಳು
(ಧರ್ಮನನ್ನು
ಮದುವೆಯಾದರು)
17 ಹೆಣ್ಣು ಮಕ್ಕಳು
ಋಷಿಮುನಿ ಕಶ್ಯಪನನ್ನು
ಮದುವೆಯಾದರು.
27 ಹೆಣ್ಣು ಮಕ್ಕಳು
ದೇವ ಚಂದ್ರನನ್ನು
ಮದುವೆಯಾದರು.
6 ಹೆಣ್ಣು ಮಕ್ಕಳು
ತಲಾ ಎರಡು ಹೆಣ್ಣು ಮಕ್ಕಳಂತೆ -
ಋಷಿಮುನಿ ಭೂತ , ಋಷಿಮುನಿ ಅಂಗೀರಸ,
ಋಷಿಮುನಿ ಕೃಶಾಶ್ವರನ್ನು ಮದುವೆಯಾದರು.
ಋಷಿ ಕರ್ದಮ
ಮತ್ತು ದೇವಹೂತಿ
ಮಗಳು:
ಅನುಸೂಯಾ
ಋಷಿ : ಅತ್ರಿ
ಗಂಡು ಮಕ್ಕಳು:
ಚಂದ್ರ
ದತ್ತಾತ್ರೇಯ
ದುರ್ವಾಸ

ಹರಿವಂಶ (7)
ಕಶ್ಯಪ ಮುನಿ
13 ಜನ ಪತ್ನಿಯರು
ಅದಿತಿ
ದಿತಿ
ದನು
ಕಷ್ಟ
ಅರಿಷ್ಟ
ಸುರಸ
ಇಲ
ಮುನಿ
ಕ್ರೋಧವಶ
ತಾಮ್ರಾ
ಸುರಭಿ
ವಿನತ
ಕದ್ರು
ಯಕ್ಷರು ಮತ್ತು ರಾಕ್ಷಸರ ತಾಯಿ
ಗಂಧರ್ವರ ತಾಯಿ
ಮನುಷ್ಯರು ದೈತ್ಯರು (ರಾಕ್ಷಸರು) ಪಿರಣ್ಯಕ್ಷ
100 ಜನ ಮಕ್ಕಳು ದಾನವರು ವಿಪ್ರಚಿತ್ತಿ
ಗಂಡು ಮಕ್ಕಳು ಡಾಹು ಕೇತು
ಮಗ - ಪ್ರಹ್ಲಾದ ಮಗಳು ಸಿಂಹಿಕಾ
ವಿರೋಚನಾ
ರಾಜ ಬಲಿ
ಗಂಡು ಮಕ್ಕಳು (12 ಜನ) ಹೇಮಚಂಗಳು ಅದಿತ್ಯರು
ವಿವಸ್ವಾನ್
ಅರ್ಯಮಾ
ಪೂಷಾ
ತ್ವಷ್ಟಾ
ಸವಿತಾ
ಭಗ
ಧಾತಾ
ವಿಷ್ಣು
ವರುಣಿ
ಮಿತ್ರ
ಅಂಶ
ಇಂದ್ರ
ಗಂಡು ಮಕ್ಕಳು ಖ್ಯಾದ್ದಡೆದ ಮನು
ಯಮರಾಜ
ಯಮುನೀ
ಖಚ್ಚಿನ ಕುಮಾರರು


ಹರಿವಂಶ (8)
ಕಶ್ಯಪ ಮುನಿ
13 ಜನ ಹೆಂಡತಿಯರು
ಅದಿತಿ
ದಿತಿ
ದನು
ಕಷ್ಟ
ಅರಿಷ್ಟ
ಸುರಸ
ಇಲ
ಮುನಿ
ಕ್ರೋಧವಶ
ತಾಮ್ರ
ಸುರಭೀ
ವಿನತ
ಕದ್ರು
ಹಾವಿನ ತಾಯಿ
ಮನುಷ್ಯ ಗಣಗಳ ತಾಯಿ
ಉಷ್ಟ್ರಾದಿ ತಾಯಿ
ನಾಗಗಳ ತಾಯಿ
ಅಪಾಯಕಾರಿ ಹೆಣ್ಣುಮಕ್ಕಳು
ಗೂಬೆಗಳು, ಪಾರಿವಾಳಗಳು, ರಣಹದ್ದುಗಳು
ಮುಂತಾದವುಗಳಿಗೆ ಜನ್ಮ ನೀಡಿದರು
ದನ ಮತ್ತು ಎಮ್ಮೆಗಳ ತಾಯಿ
ಗರುಡ ಮತ್ತು ಅರುಣರವರ ತಾಯಿ (ಸೂರ್ಯನ ರಥ)
ಸರ್ಪಗಳ ತಾಯಿ
ಅದಿ ಶೇಷ, ವಾಸುಕಿ, ತಕ್ಷಕ

ಹರಿವಂಶ (೨)
ಸೂರ್ಯ ವಂಶ
ಕಶ್ಯಪ ಮುನಿ ಮತ್ತು ಅದಿತಿ
ವಿವಸ್ವನ್ನು (ಸೂರ್ಯ)
ಮನು (ವೈವಸ್ವತ ಮನು)
100 ಮಕ್ಕಳಲ್ಲಿ ಒಬ್ಬ ಇಕ್ಷ್ವಾಕು
ಸಂಜ್ಞಾ
ಮನು ಕಾಕುಟ್ಸ್ಥ
ರಾಜ ಕುಬಲಾಶ್ವ
ರಾಜ ಧೃಢಾಶ್ವ
ರಾಜ ತ್ರಯರುಣಿ
ರಾಜ ತ್ರಿಬಂಧನ
ರಾಜ ಹರಿಶ್ಚಂದ್ರ
ರಾಜ ಬಾಹು
ರಾಜ ಸಾಗರ
2ನೇ ಹೆಂಡತಿ ಸುಮತಿ
60,000 ಜನ ಗಂಡು ಮಕ್ಕಳು
1ನೇ ಹೆಂಡತಿ ಕೇಶಿನಿ
ರಾಜ ಪಾಂಚಜನ
ರಾಜ ಅಸಮಂಜ್
ರಾಜ ದಿಲೀಪ
ರಾಜ ಭಗೀರಥ
ರಾಜ ರಘು
ರಾಜ ಅಜ
ರಾಜ ದಶರಥ
ದೇವ ಶ್ರೀರಾಮಚಂದ್ರ



ಚಂದ್ರ ವಂಶ

ಹರಿವಂಶ (10)



ಕೃಪೆ - ಉಲ್ಲೇಖ:
Roots-Written by
Shri Kadambi Srinivasan,
Published by Tirumala
Tirupati Devasthanams,
Tirupati.
(Referred and modified)